ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ.

(೧)

ವೀರಶೈವರಿಗೆ ಮುಖ್ಯಧರ್ಮಗಳೆನಿಸಿದ ಷಟ್‌ಸ್ಥಲಗಳ ವಿಷಯವು ಕಾಮಿಕಾದ್ಯಾಗಮಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ. ಮುಕ್ತಿಸಾಧಕವೂ ಯಾವಜ್ಜೀವಕರ್ತವ್ಯವೂ ಸತ್ಯವೂ ಆದ ಲಿಂಗಧಾರಣವ್ರತವೊಂದರ ಹೊರತು ಉಳಿದ ಭಸ್ಮರುದ್ರಾಕ್ಷಧಾರಣಾದಿ ಧರ್ಮಗಳೂ ಸತ್ಯಮೈತ್ರ್ಯಾದಿ ಸದಾಚರಣೆಗಳೂ ಸಾಮಾನ್ಯಶೈವರಿಗಿರುವಂತೆ ವೀರಶೈವರಿಗೂ ಸಾಧಾರಣಗಳಾಗಿಯೇ ಇರುತ್ತವೆ. ಆದುದರಿಂದ ಶಿವಾಗಮಗಳಲ್ಲಿ ಮೊದಮೊದಲು ಶೈವಸಾಧಾರಣಗಳಾದ ಕ್ರಿಯಾಚರಣೆಗಳು ಪ್ರತಿಪಾದಿಸಲ್ಪಟ್ಟು, ಅಂತ್ಯದಲ್ಲಿ ವೀರಶೈವ ಮತೋಚಿತನಾದ ಲಿಂಗಧಾರಣವೂ ಷಟ್‌ಸ್ಥಲಗಳೂ ಪ್ರತಿಪಾದಿಸಲ್ಪಟ್ಟಿವೆ. ವ್ಯಾಸಮಹರ್ಷಿಗಳೂ ಸಹ ಸ್ಕಾಂದಾದಿ ಶಿವಪುರಾಣಗಳಲ್ಲಿ ಸಮಸ್ತ ಶೈವರಿಗೂ ಸಾಮಾನ್ಯಗಳಾದ ಧರ್ಮಗಳನ್ನು ಪ್ರತಿಪಾದಿಸುತ್ತ ಯಾವ ಸಂದರ್ಭಗಳಲ್ಲಿ ಸಾಮಾನ್ಯಶೈವಕ್ಕೂ ವೀರಶೈವಕ್ಕೂ ಭೇದವಿರುವುದೋ ಆ ಸಂದರ್ಭಗಳಲ್ಲಿ ಮಾತ್ರ ವೀರಶೈವಮತದ ವಿಶೇಷಧರ್ಮಗಳನ್ನು ಪ್ರತ್ಯೇಕವಾಗಿ ಪ್ರತಿಪಾದಿಸಿರುತ್ತಾರೆ. ಸ್ಕಾಂದಪುರಾಣಾಂತರ್ಗತವಾದ ಅಗಸ್ತ್ಯಸಂಹಿತೆಯ ಹಾಲಾಸ್ಯಮಾಹಾತ್ಮ್ಯವೆಂಬ ೧೯ ನೆಯ ಅಧ್ಯಾಯದಲ್ಲಿ ಕೇವಲ ಸಾಮಾನ್ಯ ಶೈವಧರ್ಮಗಳು ಪ್ರತಿಪಾದಿಸಲ್ಪಟ್ಟಿದ್ದರೂ ಮಹಾಲಿಂಗಪೂಜೆಗೆ ಯಾರು ಅಧಿಕಾರಿಗಳು ಎಂಬ ವಿಷಯವನ್ನು ಬೋಧಿಸುವ ಸಂದರ್ಭದಲ್ಲಿ—

"ದೀಕ್ಷಾವಿಹೀನಾವಿಪ್ರಾಶ್ಚ ಮಹಾಲಿಂಗಸ್ಯ ತಸ್ಯತು | ಅರ್ಚನಾಯಾ ಮನರ್ಹಾಶ್ಚ ಕ್ಷತ್ರಿಯಾದ್ಯಾಶ್ಚ ...

[illegible]

ಗಳಲ್ಲಿ ಬಿಂದುನಾದ ಸಮನ್ವಿತಗಳಾದ ಮತ್ತು 'ನ'ಕಾರವೇ ಆದಿಯಾಗಿ 'ಯ' ಕಾರವೇ ಅಂತ್ಯವಾಗಿರುವ ಪಂಚಾಕ್ಷರೀ ಮಂತ್ರದ ಮೂಲವರ್ಣಗಳನ್ನು ಕಲ್ಪಿಸಿ, ಮಧ್ಯಕಲಶದಲ್ಲಿ ಈಶಾನಮೂರ್ತಿಯನ್ನೂ, ಮುಂಭಾಗದ ಕಲಶದಲ್ಲಿ ತತ್ಪುರುಷಮೂರ್ತಿಯನ್ನೂ, ಬಲಭಾಗದ ಕಲಶದಲ್ಲಿ ಅಘೋರಮೂರ್ತಿಯನ್ನೂ, ಎಡಭಾಗದ ಕಲಶದಲ್ಲಿ ವಾಮದೇವಮೂರ್ತಿಯನ್ನೂ, ಪಶ್ಚಿಮಭಾಗದ ಕಲಶದಲ್ಲಿ ಸದ್ಯೋಜಾತ ಮೂರ್ತಿಯನ್ನೂ ರಕ್ಷಾಭಿಧಾನ, ಮುದ್ರಾಬಂಧನಾದಿಗಳ ದ್ವಾರಾ ಅಭಿಮಂತ್ರಿಸಿ ಶಿವಾಗ್ನಿಯಲ್ಲಿ ಹೋಮವನ್ನು ಮಾಡಿ ಆರಂಭಿಸಬೇಕೆಂದು ಕೇವಲ ವೀರಶೈವರಲ್ಲಿ ಮಾತ್ರ ವಿಶೇಷವಾಗಿ ರೂಢಿಯಲ್ಲಿರುವ ಪಂಚಕಲಶಸ್ಥಾಪನ ವಿಧಿಯು ವರ್ಣಿಸಿರುತ್ತಾನೆ. ಈ ಪಂಚಕಲಶಸ್ಥಾಪನ ವಿಧಿಯು ಲಿಂಗಪುರಾಣದ ಉತ್ತರಭಾಗದ ಶಿವದೀಕ್ಷಾ ಲಿಂಗಧಾರಣಕಥನ ನಾಮಕ ೨೧ ನೆಯ ಅಧ್ಯಾಯದಲ್ಲಿರುವ,

[illegible]

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯ ಮತ್ತು ಮರುಲಾರಾಧ್ಯರ ಜಯಂತಿ ಮಹೋತ್ಸವಗಳು.

ಹೋಟಗಿ.

ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವಾದರೂ ಗುರುಸಾರ್ವಭೌಮರ ಜಯಂತಿಮಹೋತ್ಸವಗಳು ಬಹಳ ವೈಭವದಿಂದ ಇಲ್ಲಿಯ ಸ್ಥವದವರಿಂದ ನೆರವೇರಿಸಲ್ಪಟ್ಟವು. ತಾ|| ೨೯-೪-೩೦ ಮಂಗಳವಾರ ಮೊದಲ್ಗೊಂಡು ಇಲ್ಲಿಯ ಮಹಾಮಹಿಮಾನ್ವಿತರೂ ಪ್ರಸಿದ್ಧಪುರುಷರೂ ಆಗಿದ್ದ ಮೂಲಸ್ವಾಮಿಗಳವರ ಪೀಠಕ್ಕೆ ರುದ್ರಾಭಿಷೇಕವೂ, ಶ್ರೀಮಜ್ಜಗದ್ಗುರು ಪಂಚಾಚಾರ್ಯರ ವಿಗ್ರಹಕ್ಕೆ ವಿಧ್ಯುಕ್ತಪೂಜೆಯೂ ಗಣಸಂತೃಪ್ತಿಯೂ ನಡೆದು, ಪ್ರಾತಃಕಾಲ ಸಾಯಂಕಾಲಗಳಲ್ಲಿ ಪಂಚಾಚಾರ್ಯರ ಭಜನೆಯೂ ನಡೆಯುತ್ತಿದ್ದು ತಾ|| ೧-೫-೩೦ (ಗುರುವಾರ) ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಜಯಂತಿಯ ಬಗ್ಗೆ ಸರ್ವರಿಗೂ ಇಲ್ಲಿಯ ಶ್ರೀಗಳು ಬೋಧಿಸಿದರು. ತಾ|| ೩-೫-೩೦ ವೈಶಾಖ ಶು|| ೫ ರುದ್ರಾಭಿಷೇಕವು ಸಮಾಪ್ತಿಗೊಳಿಸಿ ಗಣತೃಪ್ತಿಯು ನೆರವೇರಿಸಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ಪಂಚಾಚಾರ್ಯರ ಭಾವಚಿತ್ರವನ್ನು ವಿಧ್ಯುಕ್ತವಾಗಿ ಪೂಜಿಸಿ ಅಂದವಾದ ಆಂದೋಲಿಕೆಯಲ್ಲಿ ಮಂಡಿಸಿ ಇಲ್ಲಿಯ ತಾರಾಬಾಯಿ ತಂದೆ ಪುಂಡಲೀಕಪ್ಪಾ ಪಾಟೀಲ ಇವರು ಭಕ್ತಿಪುರಸ್ಸರವಾಗಿ ಅತ್ಯಂತ ಸುಂದರವಾಗಿ ನಿರ್ಮಿಸಿದ ಪೂವಸಾಲೆಯನ್ನು ಅಲಂಕರಿಸಿ ಪಂಚಾಚಾರ್ಯ ಭಜನಾಸಂಘದವರ ಮಂಗಲ ಗುರುಸ್ತುತಿಗಳಿಂದಲೂ ಜನರ ಜಯಘೋಷಗಳಿಂದಲೂ, ಸುಮಂಗಲೆಯರು ಹಾಡುವ ಕೋಲಿನಪದ ಮಂಗಳಾರತಿಗಳಿಂದಲೂ, ತಾಳ, ಮೃದಂಗ, ಕೊಳಲು, ನಗಾರಿ, ಬಾಜಾ ಇತ್ಯಾದಿ ವಾದ್ಯಗಳಿಂದಲೂ ...

[illegible]

(ಸಶೇಷ)

M. D. Basavappa.

ಮಾಹೇಶ್ವರಾರಾಧನ ದೇವಾಲಯಗಳ ರಕ್ಷಣೆಗಾಗಿಯೇ ಅರ್ಪಿಸುತ್ತಾನೆ. ಪ್ರತಿವರ್ಷವೂ ಬುಂದೇ ಬೇಸನ್ನಿನ ಊಟವನ್ನೇ ಮಾಹೇಶ್ವರರಿಗೆ ಮಾಡಿಸುವಂತೆ ಈ ವರ್ಷವಾದರೂ ಮಾಡಿದಾಗ್ಯೆ ಇಲ್ಲಿಯ ಪಟ್ಟಾಧೀಶರು ಇನ್ನು ಮೇಲೆ ನೀನು ದೇಶೀ ಸಕ್ಕರೆಯಿಂದಲೇ ಬುಂದೇ ಬೇಸನ್ ಮಾಡುವುದಲ್ಲದೆ ಮಾಹೇಶ್ವರರಿಗೆ ಖಾದೀವಸ್ತ್ರಗಳ ದಾನವನ್ನೇ ಮಾಡಬೇಕೆಂದು ಭೀಮಣ್ಣನಿಗೆ ಉಪದೇಶವನ್ನಿತ್ತರು. ಅದಕ್ಕೆ ಭೀಮಣ್ಣನು ಮುಂದಿನ ವರ್ಷ ಹಾಗೆಯೇ ಮಾಡುವೆನೆಂದು ಒಪ್ಪಿ ಪಂಚಾಚಾರ್ಯ ಪ್ರಭೆಗೆ 1 ರೂಪಾಯಿಯನ್ನು ಮಹಾ ಸ್ವಾಮಿಗಳ ವಶಕ್ಕೆ ಕೊಟ್ಟನು.

ಮಲ್ಲಯ್ಯಾ ಬೃಹನ್ಮಠ ಕಿಂಕರ,
ಹೋಟಗಿ.

ಬಾಣಾವರ.

ಇದೇ ಪ್ರಮೋದನಾಮ ಸಂವತ್ಸರದ ವೈಶಾಖ ಶು|| ೩ (ತಾ|| 1-5-1930) ನೇ ಗುರುವಾರ ಬಾಣಾವಾರದ ಮ|| ರಾ|| ಮೈಸೂರ ಮಾದಪ್ಪಶೆಟ್ಟರು ತಮ್ಮ ಗೃಹದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಯಿಸಿದರು. ಈ ಕಾರ್ಯಭಾಗವನ್ನು ನಡೆಯಿಸಬೇಕೆಂಬುವಷ್ಟರಲ್ಲಿ ಮಾದಪ್ಪಶೆಟ್ಟರ ಮಹಾಪತಿವ್ರತೆಯರಿಗೂ ಮತ್ತು ಅವರ ಜ್ಯೇಷ್ಠ ಪುತ್ರ ನಾಗರಾಜನೆಂಬ ಬಾಲಕನಿಗೂ ಸಹಾ ತುಂಬಾ ಕಾಯಿಲೆಯಾಗಿ ಜಯಂತ್ಯುತ್ಸವವು ನಿಲ್ಲುವದೇನೋ ಎಂದು ಭಕ್ತಜನರ ಮನಸ್ಸು ಅಸಮಾಧಾನ ಹೊಂದುತ್ತಲಿದ್ದರೂ ಕೂಡ ಮಾದಪ್ಪಶೆಟ್ಟರು ಸರ್ವವೂ ಗುರುಕಟಾಕ್ಷವೆಂದೇ ಕಾರ್ಯಕ್ರಮಗಳನ್ನು ನಡೆಯಿಸುತ್ತಲೇ ಬಂದರು. ಆದರೆ ಆಚಾರ್ಯರಲ್ಲಿದ್ದ ಮಾದಪ್ಪಶೆಟ್ಟರ ನೈಜಭಕ್ತಿಯಿಂದಲೂ ಗುರುಕಟಾಕ್ಷದಿಂದಲೂ ಈರ್ವರಿಗೂ ಕಾಯಿಲೆಯು ಗುಣವಾಗಿ ಇವರ ಮಾತೃಶ್ರೀಯವರು ಸರ್ವಕಾರ್ಯವನ್ನೂ ಉಲ್ಲಾಸದಿಂದ ಮಾಡಿದರು. ಮತ್ತು ಬಾಲಕನು ಭಜನಾಸಂಘದ ...

[illegible]

ಗಣಾರಾಧನೆಯನ್ನೂ ಸಹ ಮಾಡಿಸಿದರು. ಸಾಯಂಕಾಲ ಭಜನಾಸಂಘದವರಿಂದ ಭಜನೆಯನ್ನು ಮಾಡಿಸಿ ಮಂಗಳಾರತಿಯಾದ ನಂತರ ಸೇರಿದ ಸಭಿಕರೆಲ್ಲರಿಗೂ ಗಂಧಪುಷ್ಪ ತಾಂಬೂಲಾದಿಗಳು ಕೊಟ್ಟು ತಮ್ಮ ಕಾರ್ಯಭಾಗವನ್ನು ಪೂರೈಸಿದರು. ಸದರಿ ನಂಜುಂಡಶೆಟ್ಟರು ವಯೋವೃದ್ಧರಾಗಿಯೂ ದೊಡ್ಡ ಕುಟುಂಬಿಗಳಾಗಿಯೂ ಇದ್ದು ಗುರುಕಾರ್ಯವನ್ನು ನೈಜವಾದ ಭಕ್ತಿಯಿಂದ ಆಚರಿಸುತ್ತಿರುವುದರಿಂದ ಇವರಿಗೂ ಇವರ ಕುಟುಂಬವರ್ಗಕ್ಕೂ ಶ್ರೀ ಜಗದ್ಗುರು ದಾರುಕಾಚಾರ್ಯರು ಸಕಲ ಸಂಪತ್ತನ್ನು ಕೊಡಲೆಂದು ಹಾರೈಸುವ,

ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಭಜನಾಸೇವಾಸಂಘದ ಚೀಫ್ ಸೆಕ್ರೆಟರಿ,
Y. M. Sajjan Shetty.

ಹುಬ್ಬಳ್ಳಿ.

[illegible]

ರಲ್ಲೆಲ್ಲ ಉತ್ಸವಕ್ಕೆ ಬರಲು ಡಂಗುರವನ್ನು ಹೊಡಿಸಿದರು. ಮಧ್ಯಾಹ್ನದಲ್ಲಿ ಮಹಾಗಣಾರಾಧನೆಯು ಜರುಗಿತು. ಸಾಯಂಕಾಲ ೫ ಘಂಟೆಗೆ ಸರಿಯಾಗಿ ಜನಸ್ತೋಮವು ಭಯಭಕ್ತಿಯೊಡನೆ ಮಠಕ್ಕೆ ಆಗಮಿಸಿತು. ಅನಂತರ ಮಠದ ಶ್ರೀಗಳವರಿಂದ ಪುರಾಣಪ್ರವಚನವು ಸಾಂಗವಾಗಿ ಜರುಗಿಸಲ್ಪಟ್ಟಿತು. ನಲವಡಿ ಶ್ರೀಕಂಠಶಾಸ್ತ್ರಿಗಳು ಅಗಾಧಮಹಿಮಾಶಾಲಿಯಾದ ಶ್ರೀ ದಾರುಕಾಚಾರ್ಯರ ಲೀಲಾ ಕಥನಗಳನ್ನು ಬಹು ಮನೋಹರವಾಗಿ ಕೀರ್ತನೆ ಮಾಡಿ, ಶ್ರೋತೃಜನರ ಭಕ್ತಿವರ್ಧನಗೈಸಿದರು. ವೀರಶೈವಮತಸ್ಥಾಪಕರಾದ ಜಗದಾಚಾರ್ಯರ ಅವತಾರೋತ್ಸವಗಳು ಸರ್ವತೋಮುಖವಾಗಿ ನಡೆಯಬೇಕಾದುದು ಅತ್ಯವಶ್ಯಕವಾದುದೆಂಬ ಬಗ್ಗೆ ಶ್ರೀ|| ವೇ|| ಶಾಂತವೀರಾರ್ಯರು ಸಿಕಾಸಿಮಠ ದಾವಣಗೆರೆ ಇವರು ಭಾಷಣಮಾಡಿದರು. ಅನಂತರ ಸತ್ತಿಗೇರಿ ಪಟ್ಟದ ಶ್ರೀಗಳು ತಾತ್ಕಾಲಿಕ ಭಾಷಣಮಾಡಿದರು. ಅನಂತರ ಪಂಚವಣ್ಣಿಗೆ ...

[illegible]

... ಪದ್ಯಗಳನ್ನು ಹೇಳಿದನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಲಕ್ಷ್ಮೇಶ್ವರ.

ಇದೇ ವೈಶಾಖ ಶು|| ೫ ಶನಿವಾರ ಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ದಾರುಕಾರಾಧ್ಯ ಶಿವಾಚಾರ್ಯರ ಜಯಂತಿಯ ನಿಮಿತ್ತವಾಗಿ ಮಧ್ಯಾಹ್ನ ರಾ|| ಗಂಗಪ್ಪಾ ಹೂವಿನ ಇವರಿಂದ ಲಿಂಗೋದ್ಭವ ರಜತಮೂರ್ತಿಗೆ ಪಂಚಾಮೃತಸ್ನಾನ ಷೋಡಶೋಪಚಾರ ಪೂಜೆಯೂ ಗಣಾರಾಧನೆಯೂ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಅದೇ ದಿವಸ ಇದೇ ಶಾಖಾನುಯಾಯಿಗಳಾದ ಮ|| ರುದ್ರಪ್ಪನವರು ಉಪ್ಪಿನ ವೇ|| ಲಡಿಮಪ್ಪನವರು ಲಿಂಬೈಯ್ಯಸ್ವಾಮಿಮಠ ಮುಂತಾದವರು ಈಗಿನ ಜಗದ್ಗುರು ಉಜ್ಜಯಿನೀ ಜಗದ್ಗುರುಗಳಾದ ಸಿದ್ಧಲಿಂಗಮಹಾಸ್ವಾಮಿಗಳ ಭಾವಪಟದ ಪೂಜೆ ಹಾಗೂ ಗಣಾರಾಧನೆಯನ್ನು ಬಹಳ ಅಟ್ಟಹಾಸದಿಂದ ನಡೆಯಿಸಿದುದಲ್ಲದೆ ಆ ದಿವಸವೆಲ್ಲಾ ಎತ್ತ ನೋಡಿದರತ್ತ ಗುರುಮಹಾತ್ಮೆಯ ಕಥನವೇ ಕೇಳಬರುತ್ತಿತ್ತು. 2 ವರ್ಷಗಳಿಗಿಂತ ಈ ಸಾರೆ ಜನರಲ್ಲಿ ಗುರುಭಕ್ತಿಯು ಹೆಚ್ಚು ತಲೆದೋರಿದಂತಾಯಿತು. ಇದು ನಮ್ಮ ಮತದ ಏಳಿಗೆಯ ಚಿಹ್ನವೇಸರಿ. ಅನಂತರ ಸಾಯಂಕಾಲ 7 ಘಂಟೆಯವರೆಗೆ ಆಂದೋಳಿಕೆಯಲ್ಲಿ ಪೂಜಿತ ಲಿಂಗೋದ್ಭವಮೂರ್ತಿಯನ್ನೂ ಕೃಪಾಕಟಾಕ್ಷ ಮಾತ್ರದಿಂದ ಉದ್ಧರಿಸುತ್ತಿರುವ ಸದ್ಯದ ಉಜ್ಜಯಿನೀ ಸಿಂಹಾಸನಾಧೀಶ್ವರರ ಭಾವಪಟಗಳನ್ನು ವಾದ್ಯವೈಭವದೊಡನೆ ಮೆರೆಯಿಸಿ ಹೊಸದಾಗಿ ಕಟ್ಟಿಸಿದ ಗದ್ದುಗೆಯ ಮಠದಲ್ಲಿ ...

[illegible]

ಜಿ. ಪಿ. ಹಾಲೇವಾಡೇಮಠ, ಲಕ್ಷ್ಮೇಶ್ವರ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಮೇ ತಾ|| ೧೨ನೇ ಸೋಮವಾರ

ಮಹಾತ್ಮಾಗಾಂಧಿ.

ಅದ್ವೇಷ್ಟಾ ಸರ್ವಭೂತಾನಾಂ | ಮೈತ್ರಃ ಕರುಣ ಏವಚ |
ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ||

ಯಾರನ್ನೂ ದ್ವೇಷಿಸದೆ ಸರ್ವಪ್ರಾಣಿಗಳನ್ನೂ ಸ್ನೇಹಭಾವದಿಂದ ಕಾಣುತ್ತ ಪ್ರಾಣಿಗಳಲ್ಲಿ ಸ್ವಭಾವಸಿದ್ಧವಾದ ಕರುಣಾರಸವನ್ನು ಬೀರುತ್ತ ಅಹಂಕಾರ ಮಮಕಾರಗಳನ್ನು ದೂರೀಕರಿಸಿ ಸುಖದಲ್ಲಿ ಹಿಗ್ಗದೆ ದುಃಖದಲ್ಲಿ ತಗ್ಗದೆ ಸರ್ವದಾ ಶಾಂತಿರಸಯುಕ್ತನಾಗಿ ಸಂಪೂರ್ಣ ಸ್ವಾರ್ಥತ್ಯಾಗವನ್ನು ಮಾಡಿ ಭಗವದ್ಧ್ಯಾನನಿಷ್ಠನಾಗಿ ಯಾವನು ಲೋಕಕಲ್ಯಾಣವನ್ನು ಮಾಡುತ್ತಿರುವನೋ ಅವನಲ್ಲಿಯೇ ಮಹಾತ್ಮ ಎಂಬ ಶಬ್ದವು ವ್ಯವಹರಿಸಲ್ಪಡುವುದಲ್ಲದೆ ಸಂಕುಚಿತಾತ್ಮರಲ್ಲಿ ವ್ಯವಹರಿಸಲ್ಪಡುವುದಿಲ್ಲವು. ಪ್ರಕೃತದಲ್ಲಿ ನಮ್ಮ ಭರತಖಂಡದಲ್ಲಿ ಅಂತಹ ಅಸಾಧಾರಣವಾದ ಸಾಮರ್ಥ್ಯವನ್ನು ಪಡೆದವರೆಂದರೆ ಈಗ ಪ್ರಭುತ್ವದವರಿಂದ ದಸ್ತಗಿರಿ ಮಾಡಲ್ಪಟ್ಟಿರುವ ಮಹಾತ್ಮಾ ಗಾಂಧಿಯವರೇ ಎಂದು ಪ್ರಪಂಚವೆಲ್ಲಾ ಹೇಳುತ್ತಿರುವುದು. ಈ ಮಹಾತ್ಮರು ಪರಿಶುದ್ಧಳಾದ ಭಾರತಮಾತೆಯನ್ನು ಪಾರತಂತ್ರ್ಯದಿಂದ ತಪ್ಪಿಸಿ ಎಂದಿನಂತೆ ಸುಖಸಂಪತ್ತುಳ್ಳವಳನ್ನಾಗಿ ಮಾಡಲು ಅನೇಕ ವರ್ಷಗಳಿಂದ ತಮ್ಮ ತನುಮನೋಧನಗಳನ್ನೆಲ್ಲಾ ಸೂರೆಮಾಡಿ ಅತ್ಯಂತ ಪವಿತ್ರವಾದ ವೈರಾಗ್ಯವನ್ನವಲಂಬಿಸಿ ಸ್ವರಾಜ್ಯಸಾಕ್ಷಾತ್ಕಾರಕ್ಕಾಗಿ ಹಗಲಿರುಳೂ ಸತ್ಯಾಗ್ರಹರೂಪವಾದ ಕಠಿಣತರ ತಪಶ್ಚರ್ಯವನ್ನು ಮಾಡುತ್ತಿರುವುದು ಸರಿಯಷ್ಟೆ. ಇದುವರೆಗೂ ಈ ಮಹಾಶಯರ ಸ್ವರಾಜ್ಯಸಾಧಕವಾದ ತಪಶ್ಚರ್ಯಗಳು ಕೇವಲ ಶಾಂತಮಯವಾಗಿಯೇ ನಡೆಯುತ್ತಲಿವೆ. ಇವರು ಈಗಣ ಪ್ರಭುತ್ವವೇ ಶ್ರೇಯಸ್ಕರವೆಂದೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೇ ಭಾರತೀಯರ ಧ್ಯೇಯವೆಂದೂ ಭಾರತೀಯರಿಗೆ ಪ್ರಭುತ್ವದವರ ಸಂಬಂಧವು ಯಾವಾಗಲೂ ಇರಬೇಕೆಂದೂ ತಮ್ಮ ನೈಜವಾದ ಅಭಿಪ್ರಾಯವನ್ನು ಪ್ರಕಾಶಪಡಿಸುತ್ತ ಪ್ರಭುತ್ವದವರಲ್ಲಿ ದೈನ್ಯವನ್ನವಲಂಬಿಸಿದ್ದರೂ ಅದೊಂದೂ ಫಲಕಾರಿಯಾಗದಿರೋಣದರಿಂದ ಮಹಾತ್ಮರು ಇನ್ನು ದೈನ್ಯದಿಂದ ಕಾರ್ಯಸಾಧನವು ಆಗಲಾರದೆಂದು ದೃಢನಿಶ್ಚಯಗೊಂಡು, ಬೆಣ್ಣೆಯು ನಮ್ಮ ಕೈಯಲ್ಲಿ ಸಿದ್ಧವಾಗಿರುವಾಗ ತುಪ್ಪಕ್ಕೆ ಏಕೆ ಹಂಬಲಿಸಬೇಕೆಂಬ ಗಾದೆಯಂತೆ ಸಂಪೂರ್ಣ ಸ್ವರಾಜ್ಯವನ್ನು ಪಡೆದುಕೊಳ್ಳುವ ಸ್ವತಂತ್ರಶಕ್ತಿಯು ನಮ್ಮ ಕೈಯಲ್ಲಿರುವಾಗ ಕಿಂಚಿತ್ತಾದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕಾಗಿ ಪ್ರಯತ್ನಿಸುವುದು ಉಚಿತವಲ್ಲವೆಂದು ನಿರ್ಧರಿಸಿ ವೀರಪ್ರತಿಜ್ಞೆಯನ್ನು ಮಾಡಿ ಪ್ರಥಮತಃ ಲವಣಶಾಸನೋಲ್ಲಂಘನ ಕಾರ್ಯವನ್ನು ಪ್ರಾರಂಭಿಸಲು ಸಂಕಲ್ಪಿಸಿ ದಶದಿಕ್ಕುಗಳಲ್ಲಿಯೂ ಪ್ರಸ್ಥಾನಭೇರಿಯನ್ನು ಹೊಡೆಯಿಸಿ ಪ್ರಭುತ್ವದವರಿಗೂ ತಿಳುಹಿಸಿ ಅಜೇಯವಾದ ಶಾಂತಿಯೆಂಬ ಮಹಾಖಡ್ಗವನ್ನು ಕೈಯಲ್ಲಿ ಧಾರಣಮಾಡಿ ಅಹಿಂಸಾಯುದ್ಧವನ್ನು ಮಾಡಲು ಸಿದ್ಧರಾಗಿ ತಮ್ಮಂತೆ ಕೇವಲ ಅಹಿಂಸಾಮೂರ್ತಿಮಯವಾದ ಸ್ವಯಂಸೇವಕರೊಂದಿಗೆ ಕಳೆದ ಮಾರ್ಚಿ 12 ರಲ್ಲಿ ಪ್ರಯಾಣವನ್ನು ಬೆಳೆಸಿ ಏಪ್ರಿಲ್ 6 ಕ್ಕೆ ಸಂಕಲ್ಪಿತವಾದ ದಂಡಿಯೆಂಬ ಗ್ರಾಮವನ್ನು ಸೇರಿದರು. ಅಲ್ಲಿ ನಿಶ್ಚಯಿಸಿದ ಮುಹೂರ್ತಕ್ಕೆ ಸರಿಯಾಗಿ ಲವಣಶಾಸನೋಲ್ಲಂಘನವನ್ನು ಮಾಡಿದರು. ಪ್ರಯಾಣಕಾಲದಲ್ಲಿ ದಾರಿಯುದ್ದಕ್ಕೂ ಮಹಾತ್ಮರ ವೀರಸಂದೇಶವನ್ನು ಕೇಳಿ ಸ್ತ್ರೀಯರೂ ಪುರುಷರೂ ಮಕ್ಕಳೂ ಆದಿಯಾಗಿ ಲಕ್ಷೋಪಲಕ್ಷ ಜನಗಳು ನಾನುಮುಂದೆ ತಾನುಮುಂದೆಂದು ಅಹಿಂಸಾಸಮರದಲ್ಲಿ ಕಂಕಣಬದ್ಧರಾದರು. ಅಸಂಖ್ಯೇಯ ಗ್ರಾಮಾಧಿಕಾರಿಗಳು ತಮ್ಮತಮ್ಮ ಅಧಿಕಾರಗಳಿಂದ ನಿವೃತ್ತಿಯನ್ನು ಪಡೆದರು. ಸಾಮಾನ್ಯವಾಗಿ ಭರತಖಂಡದಲ್ಲಿರುವವರೆಲ್ಲರೂ ಪ್ರಥಮತಃ ಮಹಾತ್ಮರು ಪ್ರಾರಂಭಿಸುವುದನ್ನೇ ಎದುರುನೋಡುತ್ತಲಿದ್ದು ಮಹಾತ್ಮರು ಎಂದು ಲವಣಶಾಸನವನ್ನು ಮುರಿದರೆಂದು ತಿಳಿಯಿತೋ ಅಂದಿನಿಂದಲೂ ಹುಚ್ಚುಹೊಳೆಯು ಹರಿಯುವಂತೆ ಪ್ರಪಂಚದಲ್ಲಿರುವ ಲಕ್ಷಾವಧಿ ಭಾರತೀಯರು ಮಹಾತ್ಮರ ಆಜ್ಞಾಮಾಲಿಕೆಯನ್ನು ಶಿರಸಾಮಾನ್ಯಮಾಡಿ ಸ್ವತಂತ್ರವಾಗಿ ಉಪ್ಪನ್ನು ತಯಾರುಮಾಡಲು ಉಪಕ್ರಮಿಸಿದರು. ಅನೇಕ ಕಡೆಗಳಲ್ಲಿ ಮಹಾತ್ಮರ ಸಂದೇಶದಂತೆ ವಿದೇಶ ವಸ್ತ್ರಗಳನ್ನು ಬಹಿಷ್ಕರಿಸಿ ಗಾಂಧಿಬಟ್ಟೆಗಳಿಗೆ ಪುರಸ್ಕಾರವನ್ನಿತ್ತರು. ಅನೇಕ ಕಡೆಗಳಲ್ಲಿ ಮದ್ಯಪಾನವನ್ನು ನಿರೋಧಿಸಿದರು. ಅಂತೂ ಅಲ್ಪವಾಗಿ ಪ್ರಾರಂಭಿಸಿದ ಈ ಮಹಾತ್ಮರ ಸಮರವಾತಾವರಣವೆಂಬ ಅಗ್ನಿಲೇಶವು ಸ್ವಲ್ಪದಿವಸಗಳಲ್ಲಿಯೇ ಮಹಾಪ್ರಲಯಾಗ್ನಿಯಂತೆ ಎಲ್ಲೆಲ್ಲಿಯೂ ವ್ಯಾಪಿಸಿ ಪ್ರಪಂಚವನ್ನೇ ಅಲ್ಲೋಲಕಲ್ಲೋಲವನ್ನಾಗಿ ಮಾಡಿತು. ಪ್ರಭುತ್ವದವರು ತಮಗೆ ಅನಿಷ್ಟಕಾರಿಯಾದ ಈ ಶಾಸನೋಲ್ಲಂಘನವನ್ನು ಸಹಿಸದೆ ಭಾರತೀಯರಲ್ಲಿ ಮಹಾತ್ಮರಂತೆ ಅತ್ಯಂತ ಮುಖಂಡರಾದ ಸಾವಿರಾರುಜನ ಮಹಾಶಯರನ್ನು ದಸ್ತಗಿರಿಮಾಡಿ ಶಿಕ್ಷೆಗೊಳಪಡಿಸಿದರು. ಆದರೂ ಈ ಅಹಿಂಸಾಯುದ್ಧವು ಶಾಂತವಾಗದೆ ಉರಿಯುವ ಯಜ್ಞಕುಂಡದಲ್ಲಿ ತುಪ್ಪವನ್ನೆರಚುವಂತೆ ಮತ್ತಿಷ್ಟು ಹೆಚ್ಚುತ್ತಲೇ ಬಂದಿತಲ್ಲದೆ ಸ್ವಲ್ಪವೂ ಶಾಂತವಾಗಲಿಲ್ಲವು. ಇಂತಹ ಅಹಿಂಸಾಯುದ್ಧಕ್ಕೆ ಸೂತ್ರಧಾರಿಗಳಾದ ಮಹಾತ್ಮ ಗಾಂಧಿಯವರನ್ನು ಸೆರೆಹಿಡಿದರೆ ಈ ಶಾಸನೋಲ್ಲಂಘನ ಕಾರ್ಯವು ಶಾಂತವಾಗಬಹುದೆಂದು ಪ್ರಭುತ್ವದವರು ಊಹಿಸಿ ಮಹಾತ್ಮರನ್ನು ಸಹ ದಸ್ತಗಿರಿಮಾಡಿದರು. ಮಹಾತ್ಮರಾದರೋ ನನ್ನನ್ನು ಈಗಲೋ ನಾಳೆಯೋ ಸೆರೆಹಿಡಿಯುವರೆಂದು ನಿಶ್ಚಯಮಾಡಿ ಸಿದ್ಧರೇ ಆಗಿದ್ದರು. ಇದರಿಂದ ಜಗತ್ತಿನಲ್ಲಿ ಇಮ್ಮಡಿಯಾದ ಕೋಲಾಹಲವುಂಟಾಗುವಂತೆ ಭಾಸವಾಗುತ್ತಲಿದೆ. ಮಹಾತ್ಮರ ದಸ್ತಗಿರಿಯಾದಂದಿನಿಂದಲೂ ಎಲ್ಲಿ ನೋಡಿದರೂ ಮಹಾತ್ಮರ ಜಯಜಯಕಾರವೇ ಕೇಳಬರುತ್ತಲಿದೆ. ಎಲ್ಲಿನೋಡಿದರೂ ಹರಿತಾಳದ ಧ್ವನಿಗಳೇ ಕೇಳಿಬರುತ್ತಲಿವೆ. ಮಹಾತ್ಮರನ್ನು ಸೆರೆಹಿಡಿದರೆಂಬ ಕರ್ಣಕಠೋರವಾದ ಶಬ್ದವನ್ನು ಕೇಳಿದೊಡನೆಯೇ ಪ್ರತಿಯೊಂದು ಊರಿನವರು ಆ ದಿವಸವೆಲ್ಲಾ ಅಂಗಡಿಗಳನ್ನು ಮುಚ್ಚಿ ತಮ್ಮ ಅಸಮಾಧಾನವನ್ನು ತೋರ್ಪಡಿಸಿದರು. ಮಹಾತ್ಮರೇನೋ ಸುಖದುಃಖಗಳಲ್ಲಿಯೂ ಮಿತ್ರಶತ್ರುಗಳಲ್ಲಿಯೂ ಸಮಭಾವವುಳ್ಳವರಾದುದರಿಂದ ಸದಾ ಸಂತೋಷಚಿತ್ತವುಳ್ಳವರಾಗಿದ್ದರೂ ಭಾರತಮಾತೆಯನ್ನೇ ತಲೆಯಮೇಲೆ ಕುಳ್ಳಿರಿಸಿ ನರ್ತನವನ್ನು ಮಾಡುತ್ತಿದ್ದ ಮಹಾತ್ಮರ ದಸ್ತಗಿರಿ ಎಂಬ ಅಪಶಬ್ದವು ಭಾರತೀಯರಿಗೆಲ್ಲಾ ಹಾಹಾಕಾರವನ್ನು ಹುಟ್ಟಿಸುತ್ತಿರುವದು. ಸತ್ಯಾಗ್ರಹದ ಮುಖಂಡರಾದ ಗಾಂಧಿಯವರನ್ನು ಸೆರೆಮನೆಯಲ್ಲಿ ಇರಿಸುವುದರಿಂದ ಪ್ರಭುತ್ವದವರ ಇಷ್ಟದಂತೆ ಈಗ ಪ್ರಾರಂಭವಾಗಿರುವ ಅಹಿಂಸಾಸಮರದ ವೇಗವು ನಿಲ್ಲುವಂತೆ ಕಾಣಲಿಲ್ಲ. ಇವರು ಸೆರೆಹಿಡಿಯಲ್ಪಡದೆ ಅಹಿಂಸಾಮಯವಾದ ಸಮರಾಂಗಣದಲ್ಲಿದ್ದರೆ ಮಹಾತ್ಮರ ಸತ್ಯಸಂಕಲ್ಪಕ್ಕೆ ವಿರೋಧವನ್ನುಂಟುಮಾಡಿ ಮಹಾತ್ಮರ ಆತ್ಮವನ್ನು ನೋಯಿಸಬಾರದೆಂಬ ಒಂದು ಭಯವಾದರೂ ಭಾರತೀಯ ಜನಾಂಗದಲ್ಲಿ ಬೇರೂರಿ ನಿಂತಿರುತ್ತಿದ್ದಿತು. ಇದಕ್ಕೆ ಪ್ರತಿಯಾಗಿ ಇನ್ನು ಏನೇನು ವಿಷಮಸಂಘಟನೆಗಳು ಜನಾಂಗದಲ್ಲಿ ಅಂಕುರಿಸುವುವೋ ಎಂದು ಅನೇಕರು ಭಯಗೊಂಡಿರುವರು. ಭಾರತೀಯರನ್ನು ಧರ್ಮವಿರುದ್ಧವಾಗಿ ಅಚೆ ಈಚೆಗೆ ಹೋಗದಂತೆ ಮಹಾತ್ಮರ ಆಜ್ಞೆಯೆಂಬ ಬೇಲಿಯು ತಡೆಮಾಡಿದ್ದಿತು. ಈ ಮಹಾತ್ಮರ ಸಂಸರ್ಗದಿಂದ ಅನೇಕ ಜನ ಮುಖಂಡರು ಭ್ರಮರಕೀಟನ್ಯಾಯದಿಂದ ಮಹಾತ್ಮರನ್ನು ಅನುಸರಿಸಿದ್ದಾರೆ. ಅವರಲ್ಲಿ ಪ್ರಾಯಶಃ ಅನೇಕರು ಸೆರೆಹಿಡಿಯಲ್ಪಟ್ಟದ್ದರಿಂದ ಇನ್ನು ಯಾವ ಪರಿಸ್ಥಿತಿಗೆ ಬರುವುದೆಂಬುದನ್ನು ಹೇಳಲು ಸಾಧ್ಯವಿಲ್ಲಾ. ಆದರೆ ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಅಹಿಂಸಾಯುದ್ಧದಲ್ಲಿ ಮುಖ್ಯ ಸೇನಾನಾಯಕರಾದ ಮಹಾತ್ಮರ ಸ್ಥಾನಕ್ಕೆ ಸರ್ದಿಪ್ರಕಾರ ಇನ್ನೂ ಅನೇಕ ಮಹೋದಯರು ನಿಂತಿರುವುದರಿಂದ ಇನ್ನು ಈ ಯುದ್ಧವು ಅವಿಶ್ರಾಂತವಾಗಿಯೇ ನಡೆಯಬಹುದೆಂದು ಈಗಿನ ಚರ್ಯದಿಂದ ತಿಳಿಯಬಹುದಾಗಿದೆ. ಈ ವಿಷಮಸಮಸ್ಯವು ಅನೇಕ ವರ್ಷಗಳಿಂದಲೂ ಬಂದಿರುವುದರಿಂದಲೂ ದಿನೇದಿನೇ ಅಭಿವೃದ್ಧಿಯಾಗುತ್ತಿರುವುದರಿಂದಲೂ ಭಾರತೀಯರಿಗೆ ಬರಬರುತ್ತ ತಮ್ಮ ಹಕ್ಕು ಬಾಧ್ಯತೆಗಳು ಗೊತ್ತಾಗಿ ಎಲ್ಲರೂ ಏಕಕಂಠದಿಂದ ಪ್ರಯತ್ನೋನ್ಮುಖರಾಗುತ್ತ ಬಂದಿರುವುದರಿಂದಲೂ ಇನ್ನಾದರೂ ಪ್ರಭುತ್ವದವರು ತಮ್ಮಲ್ಲಿದ್ದ ಔದಾರ್ಯವನ್ನು ಕಾರ್ಯತಃ ಪ್ರಕಾಶಪಡಿಸಿ ಈ ದುರ್ಘಟವಾದ ಸಮಸ್ಯವನ್ನು ಸಂಪೂರ್ಣಮಾಡಿ ಭಾರತೀಯರನ್ನು ಸಂತೋಷಪಡಿಸಿ ಸಂಭವಿಸಿದ ಈ ಕ್ಷೋಭೆಯನ್ನು ಜಾಗ್ರತೆಯಾಗಿ ತಪ್ಪಿಸುವುದುಚಿತವಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ 7 ನೆಯ ತಾರೀಕಿನ ದಿವಸ ದಿವಾನ್ ಸಾಹೇಬರವರು ರಾಜಧಾನಿಗೆ ಆಗಮಿಸಿ ಪುನಃ ನೀಲಗಿರಿಗೆ ಪ್ರಯಾಣಮಾಡಿರುತ್ತಾರೆ.

ಶ್ರೀಮದ್ಯುವರಾಜ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರ ಉಪನಯನಮಹೋತ್ಸವವು ಇದೇ ತಿಂಗಳು 23 ನೆಯ ತಾರೀಖಿನ ದಿವಸ ನೆರವೇರುವದೆಂದು ಕೇಳುತ್ತೇವೆ.

ಮೈಸೂರು ದೇಶದ ಬ್ರಿಟಿಷ್ ರೆಸಿಡೆಂಟರ್‌ರವರು ಕಳೆದ ಸೋಮವಾರ ವಾಯುವ್ಯಸರಹದ್ದಿನ ಚೀಫ್ ಕಮಿಷನರ ಅಧಿಕಾರವನ್ನು ವಹಿಸಿದರೆಂತಲೂ ಇವರ ಅಧಿಕಾರವನ್ನು ಕೊಡಗಿನ ಕಮಿಷನರ್‌ರವರು ವಹಿಸಿರುವರೆಂದೂ ಕೇಳುತ್ತೇವೆ.

ರಾಜಧಾನಿಯಲ್ಲಿ ಮೂರುನಾಲ್ಕು ದಿವಸಗಳಿಂದಲೂ ಸೂರ್ಯರಶ್ಮಿಯೇ ಇಲ್ಲದಂತೆ ಮೋಡವು ಕವಿದು ಭಾರಿ ಮಳೆಯು ಬಂದು ಕೆರೆಕಟ್ಟೆಗಳೆಲ್ಲಾ ತುಂಬಿ ಹರಿಯುತ್ತಲಿವೆ. ಮನೆಗಳು ಅನೇಕವಾಗಿ ಬಿದ್ದು ಬಡವರಿಗೆ ಬಹಳ ತೊಂದರೆಗಳು ಸಂಭವಿಸಿರುತ್ತವೆ. ನಿನ್ನೆಯ ದಿವಸದಿಂದ ಶಾಂತವಾಗಿರುತ್ತದೆ. ಈ ಮಳೆಯು ಎಲ್ಲಾ ದೇಶಗಳಲ್ಲಿಯೂ ಆಗಿದೆಯೆಂದು ಕೇಳುತ್ತೇವೆ.

ಕಳೆದವಾರ ನಮ್ಮ ಪತ್ರಿಕೆಯ ಒಳದೇಶದ ವೃತ್ತಾಂತದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಸ್ಥಾನಕ್ಕೆ ಶ್ರೀ|| ಎಚ್. ಸಿ. ದಾಸಪ್ಪನವರು ಒಬ್ಬ ಉಮೇದುವಾರರಾಗಿ ನಿಂತಿರುತ್ತಾರೆಂದು ಕೈತಪ್ಪಿ ಬಿದ್ದಿರುವದರಿಂದ ಶ್ರೀ|| ಬಿ. ಎಸ್. ಪುಟ್ಟಸ್ವಾಮಿಯವರು, ಶ್ರೀ|| ಲಿಂಗೇಗೌಡರು ಮತ್ತು ಶ್ರೀ|| ಬಿ. ಮಲ್ಲಣ್ಣನವರು ಉಮೇದುವಾರರಾಗಿ ನಿಂತಿರುತ್ತಾರೆಂದು ನಮ್ಮ ಪತ್ರಿಕಾವಾಚಕರು ಓದಿಕೊಳ್ಳತಕ್ಕದ್ದು.

ಮೈಸೂರು ರಾಜಧಾನಿಯ ಪ್ರಸಿದ್ಧ ಪೌರಾಣಿಕರಾದ ಶ್ರೀ|| ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳು ಇದೇ ಪ್ರಮೋದ ಚೈತ್ರದಿಂದ ನೂತನವಾಗಿ ಪ್ರಕಟಿಸಲಾರಂಭಿಸಿರುವ "ಕರ್ನಾಟಕ ಶಂಕರವಿಜಯ" ವೆಂಬ ಗದ್ಯಪದ್ಯಾತ್ಮಕ ಮಾಸಪತ್ರಿಕೆಯ ಪ್ರತಿಯೊಂದನ್ನು ನಮಗೆ ಕಳುಹಿಸಿರುತ್ತಾರೆ. ಇದರಲ್ಲಿ ಶ್ರೀ ಆದಿಶಂಕರಾಚಾರ್ಯರ ಜೀವನ ಚರಿತ್ರವು ಲಲಿತವಾದ ಶೈಲಿಯಲ್ಲಿ ಮನೋಹರವಾಗಿ ಪ್ರತಿಪಾದಿಸಲ್ಪಡುತ್ತಿರುವದು. ಭಾಷಾಭಿಮಾನಿಗಳು ಈ ಮಾಸಪತ್ರಿಕೆಗೆ ವಿಶೇಷ ಪ್ರೋತ್ಸಾಹವನ್ನು ಕೊಡಲೆಂದು ಹಾರೈಸುತ್ತೇವೆ.

ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಿದ ವಿಷಯವು ತಿಳಿದಕೂಡಲೇ ಬೆಂಗಳೂರು ನಗರದವರೆಲ್ಲರೂ 5ನೆಯ ತಾರೀಖು ಸೋಮವಾರದ ದಿವಸ ಪ್ರಚಂಡ ಹರತಾಳವನ್ನು ಆಚರಿಸಿದರು. ಸಾಯಂಕಾಲ ಧರ್ಮಾಂಬುಧಿ ಕೆರೆಯ ಮೈದಾನದಲ್ಲಿ ಶ್ರೀ|| ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ 10-15 ಸಾವಿರ ಜನದ ಸಭೆ ಸೇರಿತು. ಈ ಸಭೆಗೆ ಗುಜರಾಥ ಸ್ತ್ರೀಯರು ಮತ್ತು ಬಾಲಕರು ರಾಷ್ಟ್ರಧ್ವಜಗಳನ್ನು ಹಿಡಿದು, ರಾಷ್ಟ್ರಗೀತೆಗಳನ್ನು ಹಾಡುತ್ತ ಬಂದಿದ್ದರು. ಶ್ರೀ|| ವೀರಣ್ಣಗೌಡ, ಶ್ರೀ|| ಸೀತಾರಾಮಶಾಸ್ತ್ರೀ, ಶ್ರೀ|| ಅಶ್ವತ್ಥನಾರಾಯಣರಾವ್, ಶ್ರೀ|| ತಾತಾಚಾರ್ಯಶರ್ಮ, ಶ್ರೀಮತಿ ದೇಶಾಯಿರವರೇ ಮೊದಲಾದ ಅನೇಕರು ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿ, ಕಡೆಯಲ್ಲಿ ಪರದೇಶೀ ವಸ್ತ್ರಗಳ ದಹನಕಾರ್ಯವನ್ನು ನೆರವೇರಿಸಿದರು.

ಕಳೆದ 6 ನೆಯ ತಾರೀಖು ಮಂಗಳವಾರದ ದಿವಸ ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿಮಾಡಿದ

ವಿಷಯವು ರಾಜಧಾನಿಗೆ ತಿಳಿದೊಡನೆ ಕಾಂಗ್ರೆಸ್ ಕಮಿಟಿಯವರು ಆದಿನ ಮತ್ತು ಮರುದಿನ ಸಾಯಂಕಾಲ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗಸಭೆಯನ್ನೂ ಬುಧವಾರ ಹರತಾಳವನ್ನೂ ಆಚರಿಸಿ ಮಂಗಳವಾರ ಸಾಯಂಕಾಲ ಟೌನ್‌ಮೈದಾನದಲ್ಲಿ ನೂರಾರು ಜನರು ಸೇರಿ ಮಹಾತ್ಮರ ದಸ್ತಗಿರಿ ವಿಷಯದಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಬುಧವಾರ ಪ್ರಾತಃಕಾಲ ಕೆಲವು ಜನ ಸ್ವಯಂಸೇವಕರು ರಾಷ್ಟ್ರೀಯ ಬಾವುಟಗಳನ್ನು ಹಿಡಿದು ನಗರದಲ್ಲೆಲ್ಲ ಭಜನೆಯನ್ನು ಮಾಡಿದರು. ಹಿಂದುಗಳೆಲ್ಲರೂ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿ ಅನೇಕರು ಈ ಹರತಾಳದಲ್ಲಿ ಭಾಗಿಗಳಾಗಿದ್ದರು. ಆ ದಿನ ಜಗಚ್ಚಕ್ಷುವಾದ ದಿನಮಣಿಯು ಸಹ ಅಸಮಾಧಾನವನ್ನು ತೋರಿಸಿದನೋ ಎನ್ನುವಂತೆ ತನ್ನ ಕಿರಣಗಳನ್ನೆಲ್ಲಾ ಸಂಕೋಚಮಾಡಿಕೊಂಡಿದ್ದನು. ಮಳೆಯು ಸುರಿಯುತ್ತಲೇ ಇತ್ತು. ಆದರೂ ಸಾವಿರಾರು ಜನರು ಮಧ್ಯಾಹ್ನ ಟೌನ್‌ಹಾಲ್ ಮೈದಾನದಲ್ಲಿ ಸಭೆಸೇರಿದ್ದರು. ಮ|| ವೆಂಕಟಕೃಷ್ಣಯ್ಯನವರೇ ಮೊದಲಾದವರು ಸಮಯೋಚಿತವಾದ ಭಾಷಣವನ್ನು ಮಾಡಿ ನೆರೆದಿದ್ದ ಜನರಿಂದ ಪರದೇಶೀ ವಸ್ತ್ರಗಳನ್ನು ಸಂಗ್ರಹಿಸಿ ದಹನಮಾಡಿದರು. ಅನೇಕಜನರು ಫಂಡಿನ ಗೋಲಕಕ್ಕೆ ಶಕ್ತ್ಯನುಸಾರ ಸಹಾಯಮಾಡಿದರು. ನಿನ್ನೆ (ಭಾನುವಾರ) ಸಾಯಂಕಾಲ ಪುನಃ ಟೌನ್‌ಹಾಲಿನಲ್ಲಿ ಪ್ರಚಂಡಸಭೆಯು ಸೇರಿತ್ತು. ಶ್ರೀ|| ಸೀತಾರಾಮಶಾಸ್ತ್ರಿಗಳೇ (ವೀರಕೇಸರಿ ಪತ್ರಿಕೆಯ ಸಂಪಾದಕರು) ಮೊದಲಾದವರು ಪರದೇಶೀವಸ್ತ್ರ ಬಹಿಷ್ಕಾರ, ಮದ್ಯಪಾನನಿಷೇಧ, ದೇಶಸೇವೆ ಮುಂತಾದ ವಿಷಯಗಳಲ್ಲಿ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ವೃದ್ಧಪಿತಾಮಹರೆನಿಸಿದ ಮ|| ಎಂ. ವೆಂಕಟಕೃಷ್ಣಯ್ಯನವರು ಅಗ್ನಿದೇವನಿಗೆ ಸಮರ್ಪಿಸಿದ ರುಮಾಲನ್ನು ಸಭಿಕರಲ್ಲೊಬ್ಬರು ಹರಾಜುಹಾಕಿ ಬಂದ ಹಣವನ್ನು ಸ್ವಾತಂತ್ರ್ಯಸಂಗ್ರಾಮದ ಫಂಡಿಗೆ ಕೊಡಬೇಕೆಂದು ಸೂಚಿಸಿದರು. ಅದರಂತೆ ಹರಾಜು ಹಾಕಲು ಸಭಿಕರಲ್ಲೊಬ್ಬರು ನೂರು ರೂಪಾಯಿಗಳಿಗೆ ಅದನ್ನು ತೆಗೆದುಕೊಂಡರು. ಪುನಃ ಹರಾಜಿಗೆ ಕೊಟ್ಟರು. ಎರಡನೆಯ ಸಾರಿ 5 ರೂಪಾಯಿಗಳಿಗೆ ಹರಾಜು ಹಾಕಲ್ಪಟ್ಟ ಅನಂತರ ಸಭಿಕರಿತ್ತ ಇತರ ಪರದೇಶೀ ವಸ್ತ್ರಗಳ ಜೊತೆಯಲ್ಲಿ ದಹಿಸಲ್ಪಟ್ಟಿತು. ಈ ದಿನ ಸಾಯಂಕಾಲವೂ ಸಭೆ ಸೇರುವದು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಹಾತ್ಮಾ ಗಾಂಧಿಯವರ ದಸ್ತಗಿರಿ.

ಮಹಾತ್ಮ ಗಾಂಧಿಯವರು ಕಳೆದ 5 ನೆಯ ತಾರೀಖು ಪ್ರಾತಃಕಾಲ 1 ಘಂಟೆಯ ಸಮಯದಲ್ಲಿ "ಕರಡಿ" ಕ್ಯಾಂಪಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಡಿಸ್ಟ್ರಿಕ್ಟ್‌ಮಾಜಿಸ್ಟ್ರೇಟರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್, ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್ ಹಾಗೂ 20 ಜನ ಸಶಸ್ತ್ರರಾದ ಪೋಲೀಸರೊಡನೆ ಜಲಾಲಪುರದಿಂದ ಹೊರಟು ರಾತ್ರಿ 12-45 ಘಂಟೆಗೆ ಕರಾಡಿಯನ್ನು ತಲಪಿದರು. ಅವರು ಒಂದು ಎಲೆಕ್ಟ್ರಿಕ್ ಕ್ಯದೀಪವನ್ನು ಮಾತ್ರ ತೆಗೆದುಕೊಂಡು ನೆಟ್ಟಗೆ ಮಹಾತ್ಮರು ನಿದ್ರಿಸುತ್ತಿದ್ದ ಮಂಚದ ಬಳಿಗೆ ಹೋದರು. ದೀಪವನ್ನು ಮಹಾತ್ಮರ ಕಡೆಗೆ ತೋರಿಸಿದಕೂಡಲೇ ಅವರು ಎಚ್ಚತ್ತರು. ಪೋಲೀಸರು ಮಂಚದಸುತ್ತಲೂ ನಿಂತಿರುವದನ್ನು ಕಂಡು ಮಹಾತ್ಮರು "ನನ್ನನ್ನು ಅಪೇಕ್ಷಿಸಿಬಂದಿರಾ?" ಎಂದು ಕೇಳಲು, ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟರು ಹೌದೆಂದೂ, "ನಿಮ್ಮನ್ನು ದಸ್ತಗಿರಿಮಾಡಲು ನಮಗೆ ಅಪ್ಪಣೆಯಾಗಿರುವದೆಂದೂ ಹೇಳಿದರು. ಮಹಾತ್ಮರು" "ಹಲ್ಲುಗಳನ್ನು ಉಜ್ಜಿಕೊಂಡು ಬರುವವರೆಗೆ ಅವಕಾಶವುಂಟೆ" ಎಂದು ಕೇಳಲು, ಡಿ|| ಪೋಲೀಸ್ ಸೂಪರಿಂಟೆಂಡೆಂಟರು "ಅದಕ್ಕೆ ಯಾವ ಅಡ್ಡಿಯೂ ಇಲ್ಲ" ವೆಂದರು. ಮಹಾತ್ಮರು ಒಂದು ಬ್ರಷ್ಷಿನಿಂದ ಹಲ್ಲುಗಳನ್ನು ತಿಕ್ಕಿಕೊಳ್ಳುತ್ತಿರುವಾಗ ಎಲ್ಲ ಸ್ವಯಂಸೇವಕರು ಅಲ್ಲಿ ಕೂಡಿದರು. ಆಗ ಮಹಾತ್ಮರು ನನ್ನನ್ನು ಯಾವ ಕಾರಣದಿಂದ ದಸ್ತಗಿರಿಮಾಡಿಗಿರೆಂದು ಕೇಳಲು, ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟರು ತಾವು ತಂದಿದ್ದ ವಾರಂಟನ್ನು ಓದಿ ಹೇಳಿದರು. ಅಷ್ಟರಲ್ಲಿ ರಾತ್ರಿ 1 ಘಂಟೆಯಾಯಿತು. ಮ್ಯಾಜಿಸ್ಟ್ರೇಟರು ಮಹಾತ್ಮರಿಗೆ ಜಾಗ್ರತೆಯಾಗಿ ಹೊರಡಲು ಸಿದ್ಧರಾಗುವಂತೆ ಹೇಳಲು, ಮಹಾತ್ಮರು ಅದರಂತೆಯೇ ಸಿದ್ಧರಾಗಿ ತಮ್ಮ ಸ್ವಯಂಸೇವಕರಲ್ಲಿ ಒಬ್ಬರಾದ ಪಂಡಿತ ಖರೇಯವರನ್ನು ಕುರಿತು ತಮಗೆ ಅತ್ಯಂತ ಪ್ರೀತಿಯಾದ ಗೀತಾ ಶ್ಲೋಕವನ್ನು ಹಾಡುವಂತೆ ಹೇಳಿದರು. "ಯಾವನು ಇತರರ ಕಷ್ಟಗಳನ್ನು ಅರಿಯಬಲ್ಲನೋ ಅವನು ನಿಜವಾದ ವೈಷ್ಣವಯು" ಎಂಬ ಶ್ಲೋಕವು ಹಾಡಲ್ಪಟ್ಟಿತು. ಆ ಮೇಲೆ ಎಲ್ಲ ಸ್ವಯಂಸೇವಕರೂ ಒಬ್ಬೊಬ್ಬರಾಗಿ ಮಹಾತ್ಮರಿಗೆ ವಂದಿಸಿ ಅವರಿಗೆ ಜಯವನ್ನು ಕೋರಿದರು. ಒಬ್ಬ ಸ್ವಯಂಸೇವಕನು "ಶ್ರೀ ಕಸ್ತೂರಿಬಾಯಿಗಾಂಧಿಯವರಿಗೆ ಏನಾದರೂ ವಿಶೇಷ ವರ್ತಮಾನವನ್ನು ಹೇಳುವಿರಾ?" ಎಂದು ಕೇಳಲು ಮಹಾತ್ಮರು "ವಿಶೇಷವೇನು? ಅವಳು ವೀರನಾರಿಯು" ಎಂದರು. ಅನಂತರ ಮಹಾತ್ಮರು ವೈಸ್ರಾಯರಿಗೆ ಬರೆದಿದ್ದ ಒಂದು ಪತ್ರವನ್ನೂ ಸ್ವಯಂಸೇವಕರಿಗೆ ಒಂದು ಪತ್ರವನ್ನೂ ಕೊಟ್ಟರು. ಅಷ್ಟರಲ್ಲಿ 1-10 ಘಂಟೆಯಾಗಿದ್ದು ಪೋಲೀಸರು ಮಹಾತ್ಮರನ್ನು ಒಂದು ಮೋಟಾರ್ ಲಾರಿಯಲ್ಲಿ ಕೂರಿಸಿಕೊಂಡು ಕರೆದುಕೊಂಡು ಹೋದರು.

ಪೋಲೀಸರು ಮಹಾತ್ಮರನ್ನು ಮೋಟಾರ್‌ಕಾರಿನಲ್ಲಿ ಕರೆತಂದು ನವಸಾರಿ ಸ್ಟೇಷನ್ನಿನ ಹತ್ತಿರ ಗುಜರಾಥ್ ಮೇಲ್‌ಟ್ರೇನಿನ ಸ್ಪೆಷಲ್ ಕಂಪಾರ್ಟ್‌ಮೆಂಟಿನಲ್ಲಿ ಬೊಂಬಾಯಿಗೆ 23 ಮೈಲಿಗಳ ದೂರದಲ್ಲಿರುವ ಬೋರಿವ್ಲಿಗೆ ಕರೆದೊಯ್ದರು. ಅಲ್ಲಿಂದ ಮೋಟಾರಿನಲ್ಲಿ ಹೊರಟು ಎರವಾಡಾ ಜೈಲಿಗೆ 10-35 ನಿಮಿಷಕ್ಕೆ ತಲಪಿದರು. ಮಹಾತ್ಮರ ದಸ್ತಗಿರಿ ವಾರ್ತೆಯು ಎಲ್ಲ ಕಡೆಗೂ ಬಹು ಶೀಘ್ರವಾಗಿ ಹಬ್ಬಿ ಎಲ್ಲಾ ಕಡೆಗಳಲ್ಲೂ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಹಿಂದೂಸ್ಥಾನದ ಸರಕಾರದವರು ಹಿಂದೆ ರದ್ದುಪಡಿಸಿದ್ದ ಪ್ರೆಸ್‌ಆರ್ಡಿನೆನ್ಸ್‌ಆಕ್ಟನ್ನು ವೈಸ್ರಾಯರವರು ಪುನಃ ಜಾರಿಗೆ ತಂದದ್ದರಿಂದ ಲಾಹೋರ್ ನಗರದ ನೂರಾರು ಜನ ಪತ್ರಿಕಾಕರ್ತರು, ಮುದ್ರಣಕಾರರು ಹಾಗೂ ಲೇಖಕರು ಕಪ್ಪುಬಾವುಟಗಳನ್ನು ಹಿಡಿದು ಊರಿನಲ್ಲೆಲ್ಲ ದೊಡ್ಡ ಮೆರವಣಿಗೆಯನ್ನು ಮಾಡಿದರು.

ಹಿಂದೂಸ್ಥಾನದ ಸರಕಾರದವರು ಕಾರಾಗೃಹವಾಸಿಗಳಾಗಿರುವ ಮಹಾತ್ಮಾ ಗಾಂಧಿಜಿಯವರ ಪೋಷಣೆಗಾಗಿ ತಿಂಗಳು ಒಂದಕ್ಕೆ 100 ರೂ. ಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ವಿದೇಶೀವಸ್ತ್ರ ಬಹಿಷ್ಕಾರದ ದೆಸೆಯಿಂದ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮತ್ತು ಜಪಾನ್ ದೇಶಗಳಲ್ಲಿ ವಿಶೇಷ ಹಾಹಾಕಾರವೆದ್ದಿರುವದು. ಇದನ್ನು ಯಾವುದಾದರೂ ಉಪಾಯದಿಂದ ತಡೆಯಬೇಕೆಂದು ಒಬ್ಬ ಪಾರ್ಲಿಮೆಂಟ್ ಮೆಂಬರು ಭಾರತಸೆಕ್ರೆಟರಿಯವರಿಗೆ ಸೂಚಿಸಿರುವರು.

ಕಳೆದ 6 ನೆಯ ತಾರೀಖಿನ ದಿವಸ ದೇಹಲಿಯಲ್ಲಿ ಸುಮಾರು ಒಂದು ಲಕ್ಷ ಜನರು (ಇದರಲ್ಲಿ 3000 ಜನ ಸ್ತ್ರೀಯರಿದ್ದರು.) ಕೂಡಿ ಮೆರವಣಿಗೆ ಹೋಗುತ್ತಿರುವಾಗ್ಗ ಜನರಲ್ ಪೋಸ್ಟ್ ಆಫೀಸಿನ ಹತ್ತಿರದಲ್ಲಿ ಕೆಲವರು ಡೆಪ್ಯುಟಿಕಮಿಷನರು ಮತ್ತು ಸೀನಿಯರ್ ಪೋಲೀಸ್ ಸೂಪರಿಂಟೆಂಡೆಂಟರೂ ಕುಳಿತಿದ್ದ ಮೋಟಾರ್‌ಕಾರನ್ನು ಮುರಿದು ಡೆಪ್ಯುಟಿಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ದೇವಿದಯಾಳರವರನ್ನು ಸಹ ಹೊಡೆಯಲು ಪ್ರಯತ್ನಿಸಿದರು. ಅಷ್ಟರಲ್ಲಿ ಪೋಲೀಸರು 4 ಮೋಟಾರ್ ಲಾರಿಗಳಲ್ಲಿ ಬಂದು ಗುಂಪನ್ನು ಚದುರಿಸಿದರು. ಅನೇಕರಿಗೆ ತುಂಬಾ ಘಾಯಗಳಾದವು. ಅದೇ ಸಮಯದಲ್ಲಿ ಸಿವಿಲ್‌ಕೋರ್ಟಿನ ಬಳಿಯಲ್ಲಿಯೂ ಮತ್ತೊಂದು ಗಲಾಟೆಯು ನಡೆಯಿತು. ಅಲ್ಲಿ ಸ್ತ್ರೀ ಸತ್ಯಾಗ್ರಹಿಗಳ ಎಂಟು ಗುಂಪಿನವರು ಬಹಿಷ್ಕಾರ ಚಳುವಳಿಯನ್ನು ಮಾಡುತ್ತಿದ್ದು ಅಲ್ಲಿಂದ ಹೊರಡದೆ ಮುಷ್ಕರಹಿಡಿದರು. ಲಾಯರುಗಳು ಮಧ್ಯಸ್ಥಿಕೆ ಮಾಡಿದರೂ ನಡೆಯಲಿಲ್ಲ. ಆಗ ಪೋಲೀಸರು ನುಗ್ಗಿ ಬಲಾತ್ಕಾರವಾಗಿ ಗುಂಪನ್ನು ಚದುರಿಸಿದರು. ಸುಮಾರು 30 ಜನರಿಗೆ ವಿಶೇಷ ಘಾಯಗಳಾಗಿರುವದಾಗಿ ತಿಳಿದುಬಂದಿದೆ. ಪೋಲೀಸ್‌ಸ್ಟೇಷನ್ನಿನ ಸಮೀಪದಲ್ಲಿ ಸಹ ಜನರ ಗಲಾಟೆಯು ವಿಶೇಷವಾಗಿದ್ದು ಪೋಲೀಸರು ಅವರನ್ನು ಚದುರಿಸಲು ಗುಂಡನ್ನು ಹಾರಿಸಿದರು. ಇದರಿಂದ ಅನೇಕ ಜನಗಳಿಗೆ ವಿಶೇಷ ಘಾಯಗಳಾಗಿವೆ.

ಕಳೆದ 7ನೇ ತಾರೀಖಿನ ದಿವಸ ಸೋಲಾಪುರದಲ್ಲಿ ಸತ್ಯಾಗ್ರಹಿಗಳು ಮದ್ಯಪಾನ ನಿಷೇಧ ಕಾರ್ಯವನ್ನು ಮಾಡುತ್ತಿರುವಾಗ್ಗ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಜಗಳಹತ್ತಿ ಅಷ್ಟಕ್ಕೆ ಸಮಾಧಾನವಾಯಿತು. ಮರುದಿನ (8ನೇ ತಾ||) 11 ಘಂಟೆಯ ಸಮಯದಲ್ಲಿ ಕೆಲವು ಜನ ಸತ್ಯಾಗ್ರಹಿಗಳು ತಾಳೇಮರಗಳನ್ನು ಕಡಿಯುತ್ತಿರುವಾಗ್ಗ ಪುನಃ ಪೋಲೀಸರೊಡನೆ ಜಗಳವು ಪ್ರಾರಂಭವಾಯಿತು. ಕೂಡಲೆ ಡಿ|| ಮ್ಯಾಜಿಸ್ಟ್ರೇಟರು ಅಲ್ಲಿಗೆ ಹೋಗಿ ಜನಗಳಿಗೆ ಚದರುವಂತೆ ಆಜ್ಞಾಪಿಸಿದರು. ಜನಗಳಾರೂ ಚದರಿಹೋಗಲಿಲ್ಲವು. ಪೋಲೀಸರು ಗುಂಡುಹಾರಿಸಿದರು. ಇದರಿಂದ ಸುಮಾರು 25 ಜನರು ಸತ್ತರು. ನೂರಾರು ಜನರಿಗೆ ಘಾಯವಾಯಿತು. ಇದರಿಂದ ಜನರು ರೇಗಿ ಊರಿನಲ್ಲಿ ನುಗ್ಗಿ ಆ|| ಪೋಲೀಸು ಠಾಣ್ಯಗಳನ್ನೂ, ಡಿ|| ಮ್ಯಾಜಿಸ್ಟ್ರೇಟ್ ಕೋರ್ಟನ್ನೂ ಬೆಂಕಿಯನ್ನು ಹಚ್ಚಿ ಸುಟ್ಟಿದ್ದಲ್ಲದೆ 5-6 ಜನ ಪೋಲೀಸರನ್ನು ಜೀವಸಹಿತ ಸುಟ್ಟುಬಿಟ್ಟರು. ಅಧಿಕಾರಿಗಳು ಮಿಲಿಟರಿ ಸೈನ್ಯವನ್ನು ಕರೆಕಳುಹಿಸಿರುವರು. ಈ ಅನಾಹುತಕ್ಕೆ ಹೆದರಿ ಸುಮಾರು 150 ಜನ ಯೂರೋಪಿಯನರೂ, ಸ್ತ್ರೀಯರೂ ಮತ್ತು ಹುಡುಗರು ಊರನ್ನು ಬಿಟ್ಟು ಸ್ಪೆಷಲ್ ಟ್ರೇನಿನಲ್ಲಿ ಪುಣೆಗೆ ಓಡಿಹೋಗಿರುತ್ತಾರೆ. ಪೋಲೀಸ್ ಸೂಪರಿಂಟೆಂಡೆಂಟರು ಹಾಗೂ ಇತರ ದೊಡ್ಡದೊಡ್ಡ ಹುದ್ದೇದಾರರು ಸಹ ತಮ್ಮ ಹೆಂಗಸರು ಮಕ್ಕಳನ್ನು ಪುಣೆಗೆ ಕಳುಹಿಸಿರುತ್ತಾರೆ. ಜನರು ಪೋಲೀಸರನ್ನು ಸಿಕ್ಕಿದಕಡೆಗಳಲ್ಲಿ ಹೊಡೆದು ಘಾಯಪಡಿಸಿರುತ್ತಾರೆ. ಮರುದಿವಸ ಮಿಲಟರಿಯವರು ಮಿಷನ್ ಗನ್ನುಗಳ ಸಮೇತ ಸೋಲಾಪುರವನ್ನು ಪ್ರವೇಶಿಸಿ ಜನರನ್ನು ಚದುರಿಸಿ ಅನಾಹುತವನ್ನು ತಪ್ಪಿಸಿದರು.

ಪರದೇಶೀವಸ್ತ್ರ ಬಹಿಷ್ಕಾರ ಚಳುವಳಿಯ ದೆಸೆಯಿಂದ ಇಂಗ್ಲೆಂಡಿನ ಬಟ್ಟೆಯ ವ್ಯಾಪಾರವು ಸಂಪೂರ್ಣವಾಗಿ ನಿಂತು, ಎಲ್ಲ ಮುಖ್ಯಮುಖ್ಯ ಗಿರಣಿಗಳೂ ನಿಂತುಹೋಗಿರುವವು. ಕೂಲಿಕಾರರಲ್ಲಿ ವಿಶೇಷ ಹಾಹಾಕಾರವೆದ್ದಿರುವದು.

ಮಹಾತ್ಮರವರು ದಸ್ತಗಿರಿಮಾಡಲ್ಪಟ್ಟ ವರ್ತಮಾನವನ್ನು ಕೇಳಿದ ಕೂಡಲೇ ಅಮೇರಿಕಾ, ಆಫ್ರಿಕಾ ಮತ್ತು ಜಪಾನ್‌ದೇಶಗಳಲ್ಲಿರುವ ಭಾರತೀಯರೆಲ್ಲರೂ ಹರತಾಳವನ್ನಾಚರಿಸಿದರು.

ಮಹಾತ್ಮಾ ಗಾಂಧಿಯವರ ಸಂದೇಶ.

"ನನ್ನನ್ನು ದಸ್ತಗಿರಿ ಮಾಡಿದರೆ ಯಾರೂ ಭಯಪಡುವ ಕಾರಣವಿಲ್ಲ. ಈ ಸ್ವಾತಂತ್ರ್ಯಸಂಗ್ರಾಮವನ್ನು ಯಾವಾಗಲೂ ಜಗದೀಶ್ವರನೇ ನಡೆಯಿಸುತ್ತಿರುವನು. ಜಗದೀಶ್ವರನು ಎಲ್ಲರ ಹೃದಯದಲ್ಲಿಯೂ ವಾಸಮಾಡಿಕೊಂಡಿರುವನು. ಭಾರತಸ್ವಾತಂತ್ರ್ಯದಲ್ಲಿ ನಮಗೆ ಶ್ರದ್ಧೆಯಿರುವದಾದರೆ ಅವನು ನಾವಿದ್ದಲ್ಲಿಗೆ ಓಡಿಬರುವನು. ಅವನೇ ನಮಗೆ ಮುಂದಿನ ಮಾರ್ಗವನ್ನು ತೋರಿಸುವನು. ಪ್ರತಿಯೊಂದು ಊರಿನವರೂ ಕಾಯಿದೆಯ ವಿರುದ್ಧವಾಗಿ ಉಪ್ಪನ್ನು ತಯಾರಿಸಲು ಸಿದ್ಧರಾಗಬೇಕು. ಸ್ತ್ರೀಯರು ಮದ್ಯಪಾನ ನಿಷೇಧ ಮತ್ತು ಪರದೇಶೀವಸ್ತ್ರ ಬಹಿಷ್ಕಾರ ಕಾರ್ಯವನ್ನು ಕೈಕೊಳ್ಳಬೇಕು. ಪ್ರತಿಯೊಂದು ಮನೆಯಲ್ಲಿಯೂ ರಾಟೆಯಿಂದ ನೂಲನ್ನು ಮಾಡಿ ಪರದೇಶೀ ವಸ್ತ್ರಗಳನ್ನು ಸುಡಬೇಕು. ಅಸ್ಪೃಶ್ಯತೆಯನ್ನು ಬಿಡಬೇಕು. ಸರ್ಕಾರೀ ನೌಕರರು ರಾಜೀನಾಮೆಯನ್ನು ಕೊಟ್ಟು ದೇಶಸೇವೆಯಲ್ಲಿ ತೊಡಗಬೇಕು. ಅಂದರೆ ಸ್ವರಾಜ್ಯವು ನಾವು ಕೂತಲ್ಲಿಗೆ ತಾನಾಗಿಯೇ ಬರುವದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕೇಲೂರು.

ವಿಜಾಪೂರ ಜಿಲ್ಲಾ ತಾಲೂಕ ಹುನಗುಂದ ಪೋಸ್ಟ ಅಮೀನ ಗಡ ಪೈಕಿ ಕೇಲೂರು ಹಿರೇಮಠ ಶ್ರೀ ಪಟ್ಟದ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಬಸವಯ್ಯನವರು ಹಿರೇಮಠ ಗುರುಶಾಂತಯ್ಯನವರು ಶ್ರೀಮಂತ ಮುಂಟಿಪಾ ಕಿಡಿಗಣ್ಣಪಾ ಪಾಡಗೌಡ್ರ ಸರ್. ಪಾಡಗೌಡ್ರ ಮುಂಟಿಪಾ ಸರ್. ಪಾಡಗೌಡ್ರ ಗಾಡೀವಾಲಕ ಸಂಗಪ್ಪಾ ಹೆಡ್‌ಮಾಸ್ತರ ಮುಂತಾದ ಸಮಸ್ತ ದೈವದವರು ಕೇರಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಜಯಂತಿಮಹೋತ್ಸವವನ್ನು ವೈ|| ಶು|| 3 ಗುರುವಾರದ ದಿವಸ ಸಾಂಗವಾಗಿ ನಡೆಯಿಸಿದರು. ರುದ್ರಾಭಿಷೇಕ ಆರಾಧನೆ ವಗೈರೆ ಕಾರ್ಯಗಳು ನಡೆದು ಸಾಯಂಕಾಲ 6 ಘಂಟೆಗೆ ಜಗದಾಚಾರ್ಯರ ಉತ್ಸವವು ಹೊರಟು ಭಕ್ತಿ ಅಪಾತ್ರಗಿರಿ ಚೌರಿ ಚಾಮರ ಕಲಶ ಭಾಜ ಭಜಂತ್ರಿ ಭಜನಾ ಇವುಗಳೊಡಗೂಡಿ ಅಲಂಕೃತವಾದ ಬೀದಿಗಳಲ್ಲಿ ಹೊರಟು ಶ್ರೀ ಶಿವಾನಂದ ಶಿವಾಚಾರ್ಯರ (ಉರ್ಫ) ಮುಂಟೀ ಸ್ವಾಮಿಗಳ ಗದ್ದುಗೆಯವರಿಗೆ ಉತ್ಸವವು ಹೋಗಿ ಅಲ್ಲಿ ಕಾಯಿ ಕರ್ಪೂರವಾಗಿ ಪುನಃ ಮಠಕ್ಕೆ ಬಂದು ಅಲ್ಲಿ ಉಪನ್ಯಾಸ ಮತ್ತು ಗಾನ ವಗೈರೆ ನಡೆದು ಜಗದ್ಗುರು ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ದಿಗ್ಗಾವಿ.

ಸಕಲ ಮಾನವಪ್ರಾಣಿಗಳು ಜಗನ್ನಿಯಾಮಕನಾದ ಪರಮಾತ್ಮನ ಸೇವೆಯಂತೆ ಗುರುಸೇವೆಯನ್ನು ಸಹ ಮಾಡಿ ಧನ್ಯರಾಗುವುದು ಮಾನವಕರ್ತವ್ಯವಾಗಿರುವುದರಿಂದ ಸಮಸ್ತ ವೀರಶೈವರು ಪ್ರತಿ ವರುಷದಲ್ಲಿಯೂ ಜರಗಿಸುವ ಜಗದಾಚಾರ್ಯರ ಜಯಂತಿಯನ್ನು ಸದರೀ ಗ್ರಾಮದ ಬೃಹನ್ಮಠಾಧೀಶರಾದ ಶ್ರೀ|| ಷ|| ಬ್ರ|| ಷಟ್ಸ್ಥಲ ಬ್ರಹ್ಮ ರಾದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಭಕ್ತರ ಇಚ್ಛಾನುಸಾರವಾಗಿ ತಮ್ಮ ಮಠದಲ್ಲಿ ನೆರವೇರಿಸಲಿಕ್ಕೆ ಅಪ್ಪಣೆಕೊಡಿಸಿದ ಮೇರೆಗೆ ವೈಶಾಖ ಶುದ್ಧ ಪಂಚಮಿ ಶನಿವಾರ ಪ್ರಾತಃಕಾಲಕ್ಕೆ ಶ್ರೀ ಜಗದ್ಗುರು [illegible] ಮೂರ್ತಿಗೆ ನೇಮೋಕ್ತ ಪೂಜಾಸಮಾರಂಭವು ಶ್ರೀ [illegible] ನೆರವೇರಿಸಲ್ಪಟ್ಟಿತು. ಆ ಮೇಲೆ ಮಧ್ಯಾಹ್ನಕ್ಕೆ [illegible] ವಾಹೇಶ್ವರ ಭಕ್ತವರ್ಗಕ್ಕೆ ಅನ್ನಸಂತರ್ಪಣೆ ಮಾಡಲ್ಪಟ್ಟು ನಂತರ ರಾತ್ರಿ ೮ ಗಂಟೆಗೆ ಮೆರವಣಿಗೆಯನ್ನು ವಾದ್ಯವಿಶೇಷ ಸಂಭ್ರಮದೊಡನೆ ನೆರವೇರಿಸಿದರು. ಈ ಕಾರ್ಯಕ್ಕೆ ಕೆರವಳ್ಳಿ ಭೀಮನಹಳ್ಳಿ ಅಲ್ಲಿಪೆನಕನಹಳ್ಳಿ ಇವೇ ಮೊದಲಾದ ಗ್ರಾಮಗಳಿಂದ ಭಕ್ತಮಾಹೇಶ್ವರ ವರ್ಗವು ಆಗಮಿಸಿದ್ದರು. ಇದೇಪ್ರಕಾರವಾಗಿ ಪ್ರತಿಯೊಂದು ಗ್ರಾಮದಲ್ಲಿರತಕ್ಕ ಗುರುಸ್ಥಲ ಮಠಾಧಿಕಾರಿಗಳು ಮತ್ತು ಶುದ್ಧ ಸಂಪ್ರದಾಯದ ವೀರಶೈವರು ಆಚಾರ್ಯರ ಜಯಂತಿಯನ್ನು ಮಾಡಬೇಕು. ಮತ್ತು ಸದರೀ ಶ್ರೀಗಳವರಿಂದ ತಮ್ಮ ಮನಸ್ಸಂಕಲ್ಪವು ಜಗದಾಚಾರ್ಯರ ಕೃಪೆಯಿಂದ ಪೂರ್ತಿ ಮಾಡಿದ್ದಕ್ಕಾಗಿ ಪ್ರಭಾಪೋಷಣಕ್ಕೆ ೧ ರೂಪಾಯಿಯು ತೆಗೆಯಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀ ವೀರೇಶಾಯನಮಃ

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಾಲಯದ ಪಂಚಕಮಿಟಿಯಿಂದ ಪ್ರಕಟಣೆ.

ನಮ್ಮ ದೇವಸ್ಥಾನದ ಗಡ್ಡಿಯ ತೇರು ಹೊಸದಾಗಿ ಗದಗ ಶಹರದಲ್ಲಿ 3-4 ಸಹಸ್ರ ರೂಪಾಯಿಗಳ ವೆಚ್ಚದಿಂದ ತಯಾರಾಗಿರುತ್ತದೆ. ಸದರಿ ತೇರನ್ನು ಸದ್ಯಕ್ಕೆ ಇಲ್ಲಿಗೆ ತರಬೇಕಾಗಿದ್ದು ತೇರಿನ ಭದ್ರವಾದ ಒಂದು ಹೊಸ ಮನೆಯನ್ನು ತಯಾರು ಮಾಡಿಸುವದು ಅವಶ್ಯವಿದೆ. ಈ ತೇರುಮನೆಯ ಖರ್ಚಿಗೆ ಒಂದು ಸಾವಿರ ರೂಪಾಯಿ ಅಂದಾಜು ಮಾಡಲ್ಪಟ್ಟಿದೆ. ಶ್ರೀ ದೇವಸ್ಥಾನಕ್ಕೆ ಖಾಯಂ ಉತ್ಪತ್ತಿಯು ಇಂಥ ಹೆಚ್ಚಿಗೆ ಖರ್ಚುಗಳಿಗೆ ಸಾಕಾಗುವಷ್ಟು ಇಲ್ಲದಿರುವುದರಿಂದ ಈ ಹಣವನ್ನು ಗ್ರಾಮಾನುಗ್ರಾಮಗಳಲ್ಲಿ ವರ್ಗಣಿರೂಪವಾಗಿ ಕೂಡಿಸಲು ನಿರ್ಧರಿಸಿ ಈಗಾಗಲೆ ಒಂದೆರಡು ಗ್ರಾಮಗಳಿಗೆ ಹೋಗಿ ವರ್ಗಣಿಮಾಡಿಕೊಂಡು ಬಂದಿರುವೆವಲ್ಲದೆ ಇನ್ನು ಕೆಲವು ಗ್ರಾಮಗಳಿಗೆ ಇಷ್ಟರಲ್ಲಿ ಹೊರಡತಕ್ಕವರಿದ್ದೇವೆ. ಧರ್ಮಾಭಿಮಾನಿಗಳು ಈ ಮಹತ್ತರವಾದ ಕಾರ್ಯಕ್ಕೆ ತ್ರಿಕರಣಶುದ್ಧಿಯಿಂದ ತಮ್ಮ ತಮ್ಮ ಶಕ್ತ್ಯನುಸಾರ ಸಹಾಯಮಾಡಿ ಸ್ಥಾನಾಧಿಪತಿಯಾದ ಶ್ರೀ ಸ್ವಾಮಿಯ ಕೃಪೆಗೂ ಲೋಕೋತ್ತರವಾದ ಕೀರ್ತಿಗೂ, ಶಿವಾಚಾರ್ಯರ ಪ್ರೀತಿಗೂ ಪಾತ್ರರಾಗಬೇಕೆಂದು ಹಾರೈಸುತ್ತೇವೆ. ನಮ್ಮ ದೇವಾಲಯದ ಹೆಸರಿನಿಂದ ಯಾರಾದರೂ ವರ್ಗಣಿಗೆ ಬಂದುದಾದರೆ ಶ್ರೀ ದೇವಸ್ಥಾನದ ಮೊಹರು ಮಾಡಿದ ಪ್ರಿಂಟೆಡ್ ಪಾವತಿಯಿಲ್ಲದೆ ಯಾರೂ ಹಣ ಕೊಡಬಾರದು.

ತೇರುಮನೆಯ ಬಗ್ಗೆ ಸಹಾಯಮಾಡಿದವರ ಯಾದಿ—

ರೂಪಾಯಿ 150 ಶಿಮ್ಮತ್ತಿನಲ್ಲಿ 10 ಪೂಟಿನ 50 ಹಗದು ಘಟ್ಟರಡ್ಡಿಹಾಳ ಶ್ರೀಮಂತ ಸಂಗರಡ್ಡಿ ಸಂಗಪ್ಪನವರು (ವಾಗ್ದಾನ)

ಇನ್ನು ಮುಂಡರಗಿ ಗ್ರಾಮದ ವರ್ಗಣಿಯಾದಿ—

ವೇ| ಸಂಗಪ್ಪಯ್ಯನವರು ಶೆಟ್ರ ೧೫ ರೂ., ವೇ| ಅಂದಾನಯ್ಯನವರು, ಹೊಸಳ್ಳಿಮಠ ೫ ರೂ., ವೇ| ಸಂಗಯ್ಯನವರು, ಕಾಗನೂರು ೧೦ ರೂ., ವೇ| ಗುರುಸಿದ್ದಯ್ಯನವರು, ಹೊಸ್ಸಾಪುರ ಹಿರೇಮಠ ೧೨ ರೂ., ವೇ| ಬಸವಲಿಂಗಯ್ಯನವರು. ಕಾಗೆನೂರು ೫ ರೂ., ಮ|ರಾ| ರಂಗಪ್ಪನವರು, ಇಲಿಕ್ಕಿರು ೮ ರೂ., ಮ|ರಾ| ವೀರಭದ್ರಪ್ಪನವರು, ಕೊಪ್ಪಳ ೧೦ ರೂ., ಮ|ರಾ| ಅಂದಾನಪ್ಪನವರು ಶಿರಿ ೫ ರೂ., ಮ|ರಾ| ಗುರುಸಿದ್ದಪ್ಪ, ಕಾಚಾದಿ ೫ ರೂ., ಮ|ರಾ| ತಿರಕಪ್ಪ, ಕಾತರಕಿ ೫ ರೂ., ಮ|ರಾ| ಕಲ್ಲಪ್ಪ, ಬೆಲ್ಲದ ೫ ರೂ., ಮ|ರಾ| ದುಂಡಪ್ಪ, ನವಲೂರು ೫ ರೂ., ಮ|ರಾ| ಅಂದಾನಪ್ಪ, ಪಟ್ವಾಲಿ ೫ ರೂ., ಮ|ರಾ| ಅಂದಾನಪ್ಪ, ಅಗ್ಗದ ೫ ರೂ., ಸದರಿ ಗ್ರಾಮದ ಚಿಲ್ಲರೆ ವರ್ಗಣಿ ೮೦ ರೂ.

ಇನ್ನು ಇತರ ಗ್ರಾಮದವರ ಯಾದಿ—

ವೇ| ಸಿದ್ಧರಾಮಯ್ಯನವರು ವಸ್ತ್ರದ, ಕವಲೂರು ೫ ರೂ., ವೇ| ರುದ್ರಯ್ಯನವರು ಹಿರೇಮಠ, ಯರೇಹಂಚಿನಾಳ ೫ ರೂ., ಮ| ರಾ| ಗದಿಗೆಪ್ಪ ಗೌಡ್ರ ತಲಾರಿ ಕುಲಕರ್ಣಿ, ಚ್ಯಾಗಿನಕೇರಿ ೫ ರೂ., ಮ| ರಾ| S. M. ಮುದಕವಿ ಗದಗಭಾಗ ೩ ನೇ ಸೂಪರ್‌ವೈಜರ್ ಡಿಸ್ಟ್ರಿಕ್ಟ ಸ್ಕೂಲ್ ಬೋರ್ಡ್, ಧಾರವಾಡ ವಾಗ್ದಾನ ೫ ರೂ., ವೇ| ಕೋಟಯ್ಯನವರು ಶಿವಪ್ಪಯ್ಯನಮಠ, ಗದಗ ೫ ರೂ. ಇನ್ನು ಇತರ ಇಮಾರತಿಯ ಜೀರ್ಣೋದ್ಧಾರಕ್ಕಾಗಿ ಸಹಾಯಮಾಡಿದವರ ಯಾದಿ—

ವೇ| ಹಮ್ಮಿಗಿ ಕಣ್ವಿಮಠದ ಸೋಮಯ್ಯನವರು, (ವಾಗ್ದಾನ) ೫೦ ರೂ. ಹಮ್ಮಿಗಿ ನಾಗಭೂಷಣ ಮಠದ ಶರಭಯ್ಯನವರು, ೨೦ ರೂ. ಶಿಮ್ಮತ್ತಿನ ಕಟ್ಟಿಗೆಯಸಾಮಾನು, ಹಮ್ಮಿಗಿ ಗ್ರಾಮದ ವಾಲ್ಮೀಕ ಜಾತಿಯ ಯಲ್ಲವ್ವ ತಲಾರಿ ಎಂಬ ವೇಶ್ಯಾಂಗನೆಯು ೩೦ ರೂ. ವಾಗ್ದಾನಮಾಡಿ ೧೦ ರೂ. ಶಿಮ್ಮತ್ತಿನ ಭಾಂಡೀ ಸಾಮಾನುಗಳನ್ನು ದೇವಸ್ಥಾನಕ್ಕೆ ಒಪ್ಪಿಸಿರುತ್ತಾಳೆ.

ಇನ್ನು ಈ ವರುಷ ಜಾತ್ರೆಯ ಕಾಲದಲ್ಲಿ ಅಂದರೆ ತಾರೀಖು 6-4-30 ನೇ ದಿವಸ ಕೂಡಿದ ಜನರಲ್ ಕಮಿಟಿಯಲ್ಲಿ ಪ್ರತಿವರ್ಷ ಚೈತ್ರ ಶು| ೧ ರಿಂದಾ ಶು| ೫ ರ ವರೆಗೆ ನಡೆಯುವ ಶ್ರೀ ಸ್ವಾಮಿಯ ರುದ್ರಾಭಿಷೇಕದ ಖರ್ಚಿಗಾಗಿ ವರ್ಷಾಶನ ರೂಪವಾಗಿ ಕೊಡಲೊಪ್ಪಿದವರು.

ವೇ| ಶರಬಸಯ್ಯನವರು, ಕಲ್ಲಿಮಠ ಗದಗ, ೫ ರೂ. ಮ|ರಾ| ದೊಡ್ಡವೀರಪ್ಪನವರು, ಭಂಗಾರಶೆಟ್ಟಿ ಗದಗ. ೫ ರೂ. ಗುರುಬಸಪ್ಪನವರು, ಹುಬ್ಬಳ್ಳಿ ಗದಗ ೫ ರೂ., ಶಂಬಸಪ್ಪ, ಇಟಗಿ ಶಹಪೂರಪೇಟೆ ೫ ರೂ., ಭಂಗಾರಶೆಟ್ರು, ದಂಬಳ ೫ ರೂ., ರಾಚಪ್ಪನವರು, ಕೊಪ್ಪಳ ಮುಂಡರಗಿ ೫ ರೂ., ಸಂಗಪ್ಪನವರು, ಸಂಗರಡ್ಡಿ ಘಟ್ಟರಡ್ಡಿಹಾಳ ೫ ರೂ., ಸೋಮನಗೌಡ್ರ ಮಾಲಿ ಪಾಟೀಲ ಅಳವಂಡಿ ೫ ರೂ., ಗುರುಬಸವನ ಗೌಡ್ರ ಪಾಟೀಲ, ಹೊಳಗುಂದಿ ೫ ರೂ., ಶರವೀರಪ್ಪನವರು ಭದ್ರಪ್ಪನವರು (ಶಾನಭೋಗರ) ಹೊಳಗುಂದಿ ೫ ರೂ.,

ಈ ಮಹಾಶಯರುಗಳಿಗೆಲ್ಲಾ ಸ್ಥಾನಾಧಿಪತಿಯಾದ ಶ್ರೀ ವೀರೇಶನು ನಿತ್ಯಸುಖವನ್ನುಂಟುಮಾಡಲಿ.

ಪ್ರಸಿಡೆಂಟ
S. V. Kubasada

ಹಮ್ಮಿಗಿ.

ಶಿರಾ ತಾಲ್ಲೂಕು ಕಳ್ಳಂಬೆಳ್ಳ.

ಈ ಗ್ರಾಮದಲ್ಲಿ ಮಿಡಲ್ ತರಗತಿಗಳನ್ನು ಈಗಿನ ಸ್ಕೀಮಿನ ರೀತ್ಯಾ ಸೆಂಟ್ರಲ್ ಸ್ಕೂಲನ್ನಾಗಿ ಏರ್ಪಡಿಸಿ ತುಮ್ಕೂರು ಬಳ್ಳಾರಿ ರೋಡಿನಲ್ಲಿರುವ ಮುಸಾಫರ್ ಖಾನೆಯಲ್ಲಿ 18-6-29 ರಿಂದ ಸ್ಥಾಪಿಸಲ್ಪಟ್ಟಿಲಾಗಾಯ್ತು 103 ಮಂದಿ ವ್ಯಾಸಂಗಿಗಳಾಗುತ್ತಾ ಮಿಡಿಲ್ ಸ್ಕೂಲಿನ ಮಂಜೂರಾತಿಬಗ್ಗೆ ಸರ್ಕಾರದವರೊಂದಿಗೆ ಪ್ರಾರ್ಥಿಸಿದ ಮೇರೆಗೆ 1930 ನೇ ಮೇ ತಿಂಗಳಿಂದ 3ನೇ ವರ್ಷದ ತರಗತಿಯು ಆರಂಭಿಸಲ್ಪಡುವುದು. ಪರಸ್ಥಳದ ಈ ಕೆಳಗೆ ಕಂಡ ಪಂಗಡದ ಬಾಲಕರಿಗೆ ಮುಫತ್ತಾಗಿ ಆಸ್ಕೋದಕಗಳಿಗೆ ಏರ್ಪಡಿಸಿರುತ್ತೆಯಾಗಿ ಮಿಡಲ್ 3 ನೇ ವರ್ಷದ ತರಗತಿಗೆ ಸೇರಲು ಅರ್ಹರಾದ ಬಾಲಕರು ಮೇ ಮಾಹೆ 22 ನೇ ತಾರೀಖಿನೊಳಗಾಗಿ ಈ ಕೆಳಗಿನ ವಿಳಾಸದಾರರಿಗೆ ದರಖಾಸ್ತುಮಾಡಿಕೊಳ್ಳುವುದು.

ಕುಂಚಿಟಿಗರ ಬಾಲಕರು 30 ಮಂದಿಗಳಿಗೆ.
ಲಿಂಗಾಯಿತರು 5 ಮಂದಿಗಳಿಗೆ
ಬ್ರಾಹ್ಮಣರು 5 ಮಂದಿಗಳಿಗೆ.

ಚಿಕ್ಕಮಾದೇಗೌಡ,
ಗ್ರಾಮಪಂಚಾಯಿತಿ ಛೇರ್ಮನ್.

ನಮ್ಮಲ್ಲಿಯ ಹತ್ತಿಯ ಕೈಗಾರಿಕೆಯ ಸ್ಮಶಾನಯಾತ್ರೆ.

೮-೧೦ ಸಾವಿರ ವರ್ಷಗಳಿಂದಲೂ ಹಿಂದೂದೇಶವು ಹತ್ತಿಯ ಕೈಗಾರಿಕೆಗೆ ತವರುಮನೆ. ವೈದಿಕಕಾಲದಲ್ಲಿ, ಮುಂದೆ ರಾಮಾಯಣ ಮಹಾಭಾರತ ಕಾಲಗಳಲ್ಲಿ ಕೂಡ ನಮ್ಮಲ್ಲಿ ಹತ್ತಿಯಿಂದ ಬಟ್ಟೆಮಾಡುವ ಕೈಗಾರಿಕೆಯು ಅತ್ಯಂತ ಊರ್ಜಿತಸ್ಥಿತಿಯಲ್ಲಿತ್ತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಈಗ ನಾವು ಹೇಗೆ ನಮಗೆ ಬೇಕಾಗುವ ಒಂದು ತುಣುಕು ಅರಿವೆಯನ್ನೂ ಪರದೇಶದಿಂದಲೇ ತರಿಸುತ್ತೇವೋ ಹಾಗೆ ಆ ಕಾಲಕ್ಕೆ ಪರದೇಶದವರೆಲ್ಲರೂ ನಮ್ಮ ದೇಶದಿಂದ ಅರಿವೆ ತರಿಸಿಕೊಳ್ಳುತ್ತಿದ್ದರು. ಮತ್ತು ಆ ಅರಿವೆಗಳಿಗೆ ಬಹಳ ದುಡ್ಡು ಸಿಗುತ್ತಿದ್ದುದರಿಂದ ನಾವು ಆಗ ಸಾವುಕಾರರಿದ್ದೆವು. ದುಡಿಯದೆ ಸಾಹುಕಾರರಾಗಬೇಕೆಂದರೆ ಯಾರೂ ಆಗಲಾರರು; ಆದ್ದರಿಂದ ನಾವು ಈಗ ಬಡವರಾಗಿರುವೆವು; ಇರಲಿ, ಮುಂದೆ ಮೌರ್ಯಚಂದ್ರಗುಪ್ತರ ಕಾಲಕ್ಕೆ ನಮ್ಮ ಹತ್ತಿಯ ಕೈಗಾರಿಕೆಯನ್ನು ನೋಡಿ ಗ್ರೀಕರು ಕಲಿತರು; ಮಿ|| ಪಿರಾರ್ಡನೆಂಬುವ 16 ನೇ ಶತಮಾನದಲ್ಲಿದ್ದವನೊಬ್ಬನು ಹೇಳುವದೇ "ಕೇಪ ಆಫ್ ಗುಡ್ ಹೋಪದಿಂದ ಕಾಮುಶ್ಚಾಟಕಾದ ವರೆಗೆ ಪ್ರತಿಯೊಬ್ಬ ಹೆಂಗಸು, ಗಂಡಸು, ಮಕ್ಕಳ ಮೈಮೇಲೆ ಹಿಂದೂದೇಶದಲ್ಲಾದ ಅರಿವೆಗಳೇ ಇದ್ದವು" ಈ ಕೈಗಾರಿಕೆಯ ವಾಸನೆ ಹಿಡಿದುಕೊಂಡೇ ಯುರೋಪದ ಪ್ರಯಾಣಿಕರಾದ ವರ್ತಕರು ಅನೇಕ ಸಮುದ್ರಗಳನ್ನು ದಾಟಿ ಬರುವ ಸಾಹಸಮಾಡಿದರು; ಅದೇ ಕೈಗಾರಿಕೆಯ ವಾಸನೆ ಹಿಡಿದು ಇದನ್ನು ಹೀಗೇ ಜೀವಂತವಿರಗೊಟ್ಟರೆ, ತಾವು ಬಾಳುವದು ಕಷ್ಟವಾಗುವದೆಂದು 18 ನೇ ಶತಮಾನದೊಳಗೆ ಬ್ರಿಟಿಷರು ನಮ್ಮಲ್ಲಿಯ ಪ್ರವೀಣರಾದ ನೂಲುಗಾರರ ಹೆಬ್ಬೆಟ್ಟುಗಳನ್ನು ಕಡಿದು, ಆ ಕೈಗಾರಿಕೆಯನ್ನು ಕೊಂದು ಯುರೋಪ ಅಮೇರಿಕಗಳಿಗೆ ಹೋಗುವ ನಮ್ಮಲ್ಲಿಯ ಅರಿವೆಗಳ ಮೇಲೆ ಭಾರವಾದ ಜಕಾತಿ ಹಾಕಿ ಅವು ಅತ್ತಕಡೆಗೆ ಹೋಗದಂತೆ ಮಾಡಿ, ನಮ್ಮ ಕೈಗಾರಿಕೆಯ ಶ್ಮಶಾನಯಾತ್ರೆಯನ್ನೇ ಹೊರಡಿಸಿದರು; ಅದರ ಸಂಗಡವೇ ನಮ್ಮಲ್ಲಿಯ ಹಡಗಿನ ಕೈಗಾರಿಕೆ, ಹಡಗಿನ ವ್ಯಾಪಾರ ಇವು ಉಪವಾಸಬಿದ್ದವು; ನಮ್ಮಲ್ಲಿಯ ಪ್ರತಿಯೊಂದು ಕೈಗಾರಿಕೆಗಳನ್ನು ಹಾಳುಮಾಡಲು ಬ್ರಿಟಿಷರು ಸ್ವತಂತ್ರ-ವ್ಯಾಪಾರ ಪದ್ಧತಿಯನ್ನು ನಡಿಸಿದರು; ಹಿಂದುಸ್ಥಾನದೊಳಗಿನ ಕೈಗಾರಿಕೆಗೆ ಸರಕಾರದವರ ಸಹಾಯವಿಲ್ಲ; ಜನರಿಗೆ ಬುದ್ಧಿಯಿಲ್ಲ. ಇಂಥ ಸ್ಥಿತಿಯಲ್ಲಿ ನಮ್ಮ ಕೈಗಾರಿಕೆಗಳು ಸಾಯದೆ ಉಳಿಯುವದೆಂತು?

ಇದು ನಮ್ಮ ಕೈಗಾರಿಕೆಯ ಹಾಳುಗಳೆ ಆಯಿತು; ಇನ್ನು ನಮ್ಮಲ್ಲಿ ಹುಟ್ಟುವ ಬಣ್ಣದ, ತೊಗಲಿನ, ಔಷಧ ಇವೇ ಮುಂತಾದ ಕೈಗಾರಿಕೆಗಳು ಹೇಗೆ ಹಾಳಾದವೆಂದರೆ, ಅವಕ್ಕೆ ಇಲ್ಲಿ ಆಸ್ಪದ ಸಿಗದ್ದರಿಂದ, ಅವೆಲ್ಲವೂ ಪರದೇಶದ ದಾರಿ ಹಿಡಿದವು; ಪರದೇಶದ ಸಾಹಸಿಗಳಾದ ವರ್ತಕರು ಇಲ್ಲಿಗೆ ಬಂದು ಇಲ್ಲಿ ಯಾರೂ ಕೇಳದೆ ಬಿದ್ದಿರುವ ಕಚ್ಚಾ ಸರಕುಗಳನ್ನೆಲ್ಲ ಮನಬಂದಂತೆ ಹಡಗು ತುಂಬಿಕೊಂಡು ಪರದೇಶಕ್ಕೊಯ್ದು ಅವುಗಳಿಂದ ಅಲ್ಲಿ ಒಳ್ಳೇ ಸಿದ್ಧಸರಕುಗಳನ್ನು ಮಾಡಿ ನಮ್ಮ ದೇಶಕ್ಕೆ ಕಳುಹಿಸಲಾರಂಭಿಸಿದರು. 50 ವರ್ಷಗಳಾಚೆ ಇದ್ದ ಮಿ|| ಸ್ಪ್ರಾಚೀ ಎಂಬುವ ಕಂದಾಯ ಮಂತ್ರಿಗಳು ಈ ಬಗ್ಗೆ ಬರೆಯುವಾಗ ಅಂದದ್ದು—ಮನುಷ್ಯನಿಗೆ ಬೇಕಾಗುವ ಪ್ರತಿಯೊಂದು ಉಪಯೋಗದ ಸಾಮಾನುಗಳು ಹಿಂದುಸ್ಥಾನದಲ್ಲಿ ಆಗುವಷ್ಟು ಕಚ್ಚಾ ಸರಕುಗಳು ಇಲ್ಲಿ ಸಿಗುವವು.

ಈ ಮೇರೆಗೆ ಹಿಂದುಸ್ಥಾನವು ಜಗತ್ತಿನಲ್ಲಿ ಹತ್ತಿಯ ಹುಟ್ಟುವಳಿಯಲ್ಲಿ ಎರಡನೇ ದೇಶವಾಗಿದೆ. 50 ಲಕ್ಷ ಹತ್ತಿಯ ಗಂಟುಗಳಾಗುವಷ್ಟು ನಮ್ಮಲ್ಲಿ ಪ್ರತಿವರ್ಷ ಹತ್ತಿ ಹುಟ್ಟುತ್ತದೆ. ನಮ್ಮ ದೇಶದ ಜನರಿಗೆ ಬೇಕಾಗುವ ಅರಿವೆಯಲ್ಲಿಯ ಅರ್ಧಕರ್ಧ ಅರಿವೆಯು ನಮ್ಮಲ್ಲಿಯ ಗಿರಣಿಗಳಲ್ಲಿ ಹುಟ್ಟುತ್ತದೆ. ಮಿಕ್ಕದ್ದೆಲ್ಲ ಪರದೇಶದಿಂದ ಬರುತ್ತದೆ. ಇದನ್ನಷ್ಟು ನಾವು ನಮ್ಮ ಕೈಯಿಂದಾಗಲಿ, ನಮ್ಮ ಗಿರಣಿಗಳಿಂದಾಗಲಿ ಹುಟ್ಟಿಸಲು ಪ್ರಯತ್ನಿಸಿದರೆ ನಮ್ಮ ಕೆಲಸವಾಯಿತು. ಇಷ್ಟಾದರೆ, ನಮ್ಮಲ್ಲಿಯ ದುಡ್ಡು ನಮ್ಮಲ್ಲಿಯ ಕೂಲಿ ನಮ್ಮಲ್ಲಿಯ ಅಗ್ಗಳತೆ ಬೆಳೆದು ಪ್ರತಿ ವರ್ಷ 60 ಕೋಟಿ ರೂಪಾಯಿಗಳ ಹರಿಯುವ ಹೊಳೆಯು ನಿಂತು ಹೋಗುವದು. ಆದುದರಿಂದ ಪ್ರತಿಯೊಬ್ಬ ಹಿಂದೂವು ಈ ವೇಳೆಯಲ್ಲಿ ಎಚ್ಚರವಾಗಿ ತನ್ನ ಅರಿವೆ ತಾನೇ ಹುಟ್ಟಿಸಲಿಕ್ಕೆ ಬೇಕು. ಆದಾಗದಿದ್ದರೆ ಕೊನೆಗೆ ಗಿರಣಿಯ ಅರಿವೆಯನ್ನಾದರೂ ಕೊಳ್ಳಲಿಕ್ಕೆ ಪ್ರತಿಜ್ಞೆ ಮಾಡಲಿಕ್ಕೇ ಬೇಕು.

ಸಂ. ಕ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧ ವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಂಕೋಲಿ, ಕ್ಷೀರಕಾಂಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೦ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ತೊಲೆಯ ಶೀಶೆ ೧ ಕ್ಕೆ ೧೨ ಆಣೆ ೫೬ ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಡಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[54] (೮೪೮) ಗಂಜೀಪೇಟೆ, ಪೂನಾಸಿಟಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥಹ ಕಠಿನತರ ಆಹಾರವನ್ನಾದರೂ ಜೀರ್ಣಗೊಳಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಹೊಸ ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುವಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[4] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಾಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನೆಸಲ್ಲಿರಿ.

ಅಂದ ಮೇಲೆ—ಮಲೇರಿಯಾದಜ್ವರ, ಪದೇ ಪದೇ ನಿಯಮಿತ ದಿವಸಗಳ ಜ್ವರ, ಹಾಗೂ ಜ್ವರದ ಬೆಳೆಯೋಹರೆ ಮೊದಲಾದ ರೋಗಪೀಡಿತರಾದರಿಗೆ ಔಷಧಗಳಲ್ಲೆಲ್ಲಾ ಶಿರೋಮಣಿ!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (೪೦) **'ಸುಡುಸುಡು!'** (೫೦) ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಗುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [40]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸೆಕ್ಕದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋದು, ಪಿತ್ತವಿಕಾರ ನಿದ್ದೆಯು ಬಾರದೆ ಇರೋದು ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಪಪುಷ್ಪ, ಶಾಲಿಮಕಂದ, ಮಧುಕಂದ, ಜಪಾಕಂಧ, ಶಾಲೀಮಲೀಕಂದ, ಅಶ್ವಕಂದ ಶ್ವೇತಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಪಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ಪನಲೀಬೀಜ, ಚಿಕಣದಪಂಚಾಂಗ, ಅಡವೀ ಎಳ ನಪಂಚಾಂಗ, ಜಮಿಪತ್ರಿ, ಪಿಶಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಜಾಬಮಿಶ್ರಿ, ಕಾಲಾ [illegible] ಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಜೋರಿ, ಮುಂಗಲೇಬೇದಾಣೆ, ಮರ್ದಾನೀಕಟ್ಟಿಗೆ, ಶತಾವರಿ, ಸಕೀ [illegible] ಕಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿಲಾ [illegible] ಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತು [illegible] ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14. ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು, ಸೀಸೆ 1 ಕ್ಕೆ 4 ರೂಪಾಯಿಗಳು. [44]

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳಿ, ಪಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದಿರೋದು, ದಟ್ಟನೋದ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಒಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತನಿರಾಮೂಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[33] ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮುಖಂ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ನೋಡರಿಸೀಸೆ ಪುಗಸಟ್ಟೆ ಕಳುಹಿಸಲಾಗದೀತು.



(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುಹಬಸವ ಅಂಡ್ ಕಂಪನಿ ಲಿಮಿಟೆಡ್,
[45] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ ನೇ ಮೇ ೧೯೩೦ [ಸಂಚಿಕೆ ೩.

ಪ್ರಕಟನೆ.

ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯ ಕೃಪಾಪೋಷಿತ ಸಂಸ್ಕೃತ ಪಾಠಶಾಲಾ ಫ್ರೀ ಬೋರ್ಡಿಂಗಿಗೆ ಸೇರಲಪೇಕ್ಷಿಸುವ ವೀರಶೈವ ವಿದ್ಯಾರ್ಥಿಗಳು ತಮ್ಮ ಸ್ಥಳೀಯ ದೊಡ್ಡಮನುಷ್ಯರ ಸರಟಿಫಿಕೇಟ್ ನೊಂದಿಗೆ ಅಪ್ಲಿಕೇಷನನ್ನು ೧೯೩೦ ನೇ ಮೇ ತಾ॥ ೩೦ ರ ವಳಗೆ ತಲಪುವಂತೆ ಈ ಕೆಳಗಿನ ಅಡ್ರಸ್ಸಿಗೆ ಹಾಕಿಕೊಳ್ಳತಕ್ಕದ್ದು. ಅಪ್ಲಿಕೇಷನ್ನಿನಲ್ಲಿ ವಿದ್ಯಾರ್ಥಿಯ ವಯಸ್ಸು ಈ ತನಕವರವಿಗೂ ನಡೆದಿರುವ ವಿದ್ಯಾಭ್ಯಾಸವೂ ನಮೂದಿರಬೇಕು.

ದೇಶದ ಸಿದ್ಧಬಸಪ್ಪಸೆಟ್ರು,
ಬೆಂಗಳೂರು ಸಿಟಿ, 13-5-30. ಮಹಂತಿನ ಮಠ, ಚಿಕ್ಕಪೇಟೆ.

ಸದ್ಗುರು ಪ್ರಭಾವ.

ಗದಗ ಮುನಸಿಪಲ್ ಕೌನ್ಸಿಲರ್ ವೇ॥ ಹಿರೇಮಠದ ಚನವೀರಯ್ಯನವರ ಚಿ॥ ಗಳಾದ ಗಂಗಮ್ಮ ವ ಬಸವಂಣೆಮ್ಮ ಈ ಉಭಯ ಕನ್ಯಾರತ್ನಗಳ ವಿವಾಹವು ಶುದ್ಧ ಸಾಂಪ್ರದಾಯಿಕತತ್ವಕ್ಕನುಸರಿಸಿ ಗದಗ ಶಹರದಲ್ಲಿ ಜರುಗಿತು. ಗಂಗಮ್ಮನನ್ನು ನರಗುಂದ ಬುರಲಕಟ್ಟಿ ಹಿರೇಮಠದ ಕರಿಬಸಯ್ಯನವರ ಸುಪುತ್ರ ಚಿ॥ ರಂಕರಯ್ಯನಿಗೂ ಬಸವಂಣೆಮ್ಮನನ್ನು ಬ್ಯಾಡಿಗಿ ಶಿ॥ ರುದ್ರಯ್ಯನವರು ಹನಗೋಡಿಮಠದ ಇವರ ಮೊಮ್ಮಗನಾದ ಮುದೇನೂರ ಹಿರೇಮಠದ ಮರಿದೇವಯ್ಯನವರ ಸುಪುತ್ರ ಚಿ॥ ಸದಾಶಿವಯ್ಯನಿಗೂ ಕೊಡುವಂತೆ ಜಗತ್ಪೂಜ್ಯರಾದ ಪಂಚಾಚಾರ್ಯರ ಕೃಪಾಬಲದಿಂ ನಿಶ್ಚಿತವಾಗಿ ಈ ಪೈಕಿ ಬ್ಯಾಡಿಗಿ ಶಿ॥ ಹನಗೋಡಿ ಮಠದ ರುದ್ರಯ್ಯನವರೊಬ್ಬರು ಕನ್ಯಾನಿಶ್ಚಯಕಾಲದಲ್ಲಿ ಈ ಲಗ್ನಗಳು ಷಟ್ಸ್ಥಲಕಸ್ಥಾಪನಾಪೂರ್ವಕ ಜರುಗಬೇಕೆಂದು ಪ್ರಸ್ತಾಪಿಸಲು ಅದಕ್ಕೆ ವೇದಮೂರ್ತಿ ಚನವೀರಯ್ಯನವರು ಒಡಂಬಡದೆ ಮಠಸ್ಥಾಪನಾಚಾರ್ಯರಿಂದುಕ್ತವಾಗಿ ಪ್ರಾರಂಭದಿಂದ ನಡೆಯುತ್ತ ಬಂದ ಪದ್ಧತಿಯ ಪ್ರಕಾರ ಪಂಚಕಲಶಸ್ಥಾಪನೆಯಿಂದಲೇ ಮಾಡುವದಾದರೆ ಕನ್ಯಾ ಕೊಡುವೆನೆಂದು ಉತ್ತರವನ್ನು ಕೊಡಲು ವರನ ಪಕ್ಷದವರಾದ ಹನಗೋಡಿ ಮಠದವರು ಕಬೂಲಮಾಡಿದ್ದರಿಂದ ಈ ಮಂಗಲಪ್ರದ ಶುಭಕಾರ್ಯವು ಇದೇ ವೈಶಾಖ ಶು॥ ೧೨ ಶುಕ್ರವಾರ ಪಂಚಕಲಶಸ್ಥಾಪನಾ ಪೂರ್ವಕ ವಿಧಿವತ್ತಾಗಿ ಜರುಗಿತು. ಈ ಸಮಾರಂಭಕ್ಕೆ ದಾವಣಗೇರಿ ಮೈಸೂರು ಮಠದ ವೇ॥ ವೀರಭದ್ರಯ್ಯನವರು ಬ್ಯಾಡಿಗಿ ಮ॥ ಶ್ರೀಮಂತ ಶೆಟ್ಟರ ಮುರಿಗೆಪ್ಪನವರು ಮ॥ ಕಬ್ಬೂರ ದಾನಪ್ಪನವರು ತಾ॥ ಹನಗೋಡಿ ಮಠದ ರುದ್ರಯ್ಯನವರು ರಾ॥ ಪೈಪಾಶಿಯವರು ಹಾವೇರಿ ರಾ॥ ಗುಂಜೆಟ್ಟಿಯವರು ಮೊದಲಾದ ಅನೇಕ ಪ್ರಮುಖ ಜನರು ಆಗಮಿಸಿದ್ದರಿಂದ ಲಗ್ನಮಂಟಪವು ವಿಶೇಷ ಶೋಭಾಯಮಾನವಾಗಿದ್ದಿತು. ಅಕ್ಷತಾರೋಪಣಾನಂತರ ವರನ ಪಕ್ಷದವರು ನಾಲ್ಕು ನಾಲ್ಕು ರೂಪಾಯಿಗಳಂತೆ ಎಂಟು ರೂಪಾಯಿಗಳು, ವಧುವಿನ ಪಕ್ಷದ ವೇ॥ ಚನವೀರಯ್ಯನವರಿಂದ 2 ರೂಪಾಯಿಗಳು ಹೀಗೆ ಅಂತೂ ಹತ್ತು ರೂಪಾಯಿಗಳು ವೇ॥ ಪುರದಯ್ಯನವರು ಮುಳಗುಂದ ಹಿರೇಮಠ ಇವರ ಪ್ರೋತ್ಸಾಹದಿಂದ ವೀರಶೈವಧರ್ಮಪ್ರಚಾರಕ್ಕಾಗಿ ಅವಿಶ್ರಾಂತ ಶ್ರಮಪಡುವ ಶ್ರೀ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣೆಗೆ ಕಳುಹಿಸಲ್ಪಟ್ಟಿತು. ಈ ಶುಭಕಾರ್ಯವು ಮಹಾಸಂಭ್ರಮದಿಂದ ಜರಗಿತು. ಯಾವ ಜಗದಾಚಾರ್ಯರು ಕೇವಲ ತಮ್ಮ ತಪಃಪ್ರಭಾವದಿಂದ ಭಕ್ತಾದಿಗಳ ಹೃದಯಾಂಧಕಾರವನ್ನು ದೂರಮಾಡಿ ಈ ಶುದ್ಧಸಾಂಪ್ರದಾಯದ ಬೀಜಾರೋಪಣವನ್ನು ಭಿನ್ನ ಭಿನ್ನ ಅಭಿಪ್ರಾಯದ ಭೂಮಿಕೆಯಲ್ಲಿ ನೆರಿಗೊಳಿಸಿ ಫಲಪ್ರದವಾಗುವಂತೆ ಅನುಗ್ರಹಿಸುತ್ತಿರುವರೋ ಆ ಮಹಿಮಾಶಾಲಿಗಳು ಶಾಸ್ತ್ರಕ್ಕನುಸಾರವಾದ ಇಂತಹ ಆಸ್ತಿಕ್ಯಬುದ್ಧಿಯನ್ನು ಸಕಲರಿಗೂ ಅನುಗ್ರಹಿಸಲೆಂದು ಪ್ರಾರ್ಥಿಸುವ.

ಓರ್ವ ಪ್ರತ್ಯಕ್ಷದರ್ಶಿ ಗದಗ.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ರಂಭಾಪುರೀ ಜಗದ್ಗುರುಗಳ ಆಗಮನ.

ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟ ಚಿಕ್ಕಮಗಳೂರು ಟೌನ್ ಭಕ್ತಮಾಹೇಶ್ವರರ ಪ್ರಾರ್ಥನಾ ಮೇರೆಗೆ ಶ್ರೀ ಜಗದ್ಗುರು ರಂಭಾಪುರೀ (ಬಾಳೇಹೊನ್ನೂರು) ವೀರಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಸವಾರಿಯು ಈ ಚಿಕ್ಕಮಗಳೂರು ಟೌನಿಗೆ ಇದೇ ಪ್ರಮೋದೂತಸಂವತ್ಸರದ ಜ್ಯೇಷ್ಠ ಶುದ್ಧ ೪ನೇ (ತಾ॥ 31-5-30) ಶನಿವಾರ ಬೆಳಿಗ್ಗೆ 8 ಗಂಟೆಗೆ ಸಕಲ ಬಿರುದಾವಳಿಗಳೊಡನೆ ಉತ್ಸವಪೂರ್ವಕವಾಗಿ ಬಿಜಯಂಗೈಸುತ್ತಾದಪ್ಪಯುಕ್ತ ಸಮಸ್ತ ಭಕ್ತಮಂಡಲಿಯು ಈ ಮಹೋತ್ಸವಕ್ಕೆ ಭಾಗಿಗಳಾಗಿ ಶ್ರೀ ಜಗದ್ಗುರುಗಳವರ ದರ್ಶನಾಶೀರ್ವಾದಕ್ಕೆ ಪಾತ್ರರಾಗಿ ಕೃತಾರ್ಥರಾಗಬೇಕಾಗಿ ಪ್ರಾರ್ಥಿಸಲ್ಪಟ್ಟಿರುತ್ತದೆ.

ಟಿ. ಬಿ. ಮಲ್ಲೇಗೌಡ,
ಕಾಫಿಪ್ಲಾಂಟರ್ ಮತ್ತು ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರ್
ಸ್ವಾಗತಸಂಘಾಧ್ಯಕ್ಷರು.
ಚಿಕ್ಕಮಗಳೂರು.

ಕಾರ್ಯದರ್ಶಿಗಳು.
ಯಂ. ಪಿ. ಚಂದಯ್ಯ,
ಯಂ. ಸಿ. ರುದ್ರಪ್ಪ.

ಯಂ. ಸಿದ್ಧಲಿಂಗಪ್ಪ ಶೆಟ್ಟಿ,
ಕಾಫೀಪ್ಲಾಂಟರು, ಉಪಾಧ್ಯಕ್ಷರು.
ಚಿಕ್ಕಮಗಳೂರು.

ವಿ. ಸೂಚನೆ.—ಈ ಚಿಕ್ಕಮಗಳೂರು ಟೌನಿಗೆ ಸಮೀಪದಲ್ಲಿ ಬಾಬಾಬುಡನ್ ಗಿರಿ ಶೀತಾಳಯ್ಯನಗಿರಿ ಮುಳ್ಳಯ್ಯನಗಿರಿ ಕಲ್ಹತ್ತಿಗಿರಿ ಶ್ರೀ ಪಿವಾಗಾಸ್ವಾಮಿ ಮಠ ಮುಂತಾದ ನೋಡತಕ್ಕ ಯಾತ್ರಾಸ್ಥಳಗಳು ಇರುತ್ತವೆ. ಶ್ರೀ ಜಗದ್ಗುರುಗಳವರ ಮೂಲಪೀಠವು ಈ ಡಿಸ್ಟ್ರಿಕ್ಟಿನಲ್ಲಿರುತ್ತೆ. ಈ ಸ್ಥಳಗಳಿಗೆಲ್ಲಾ ಪ್ರಯಾಣದ ಸೌಕರ್ಯಕ್ಕೆ ತುಂಬಾ ಅನುಕೂಲವಾಗಿರುತ್ತೆ. ಕಡೂರು ರೈಲ್ವೆ ಸ್ಟೇಷನ್ನಿಗೆ ಚಿಕ್ಕಮಗಳೂರು 25 ಮೈಲು ಇರುತ್ತೆ. ಪ್ರತಿ ರೈಲಿಗೂ ಬಸ್ ಕನೆಕ್ಷನ್ ಇರುತ್ತೆ. ಹೆಚ್ಚು ಸಂಗತಿಗಳನ್ನು ಸೆಕ್ರೆಟರಿಯವರಿಗೆ ಬರಸಿ ತಿಳಿದುಕೊಳ್ಳಬಹುದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಯಂತಿಮಹೋತ್ಸವಗಳು.

ಮೆಣಸಿಗಿ.

ಪ್ರತಿ ವರ್ಷವೂ ಪದ್ಧತಿಯಂತೆ ರಾಮದುರ್ಗ ಸಂಸ್ಥಾನ ಪೈಕಿ ಮೆಣಸಿಗಿ ಎಂಬ ಗ್ರಾಮದಲ್ಲಿ ವೀರಶೈವ ತರುಣಸಂಘದ ವತಿಯಿಂದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವು ವೈಶಾಖ ಶುದ್ಧ ಪಂಚಮಿ ದಿವಸ ಬಹು ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ತಳಿರು ತೋರಣಗಳಿಂದ ಬೀದಿಗಳು ಶೃಂಗರಿಸಲ್ಪಟ್ಟಿದ್ದವು. ಪ್ರತಿಯೊಬ್ಬರೂ ತಮ್ಮ ತಮ್ಮ ಉದ್ಯೋಗವನ್ನು ಬಿಟ್ಟು ಭಕ್ತಿಯಿಂದ ಶ್ರೀ ಜಗದಾಚಾರ್ಯರ ಕಾರ್ಯವನ್ನು ನೆರವೇರಿಸಿದರು. ಈ ದಿವಸ ಗಣಾರಾಧನೆಯು ನಡೆದುದಲ್ಲದೆ ಉತ್ಸವಕಾಲಕ್ಕೆ ವೀರಶೈವ ಧರ್ಮಾಭಿಮಾನಿ ಆಬಾಲವೃದ್ಧರೆಲ್ಲರೂ ಅತ್ಯುಲ್ಲಾಸದಿಂದ ಟೊಂಕಕಟ್ಟಿ ನಿಂತಿದ್ದರು. ಮಂಗಲವಾದ್ಯದಿಂದಲೂ ಭಜನೆಯ ಮೇಳದಿಂದಲೂ ಪಂಚಾಚಾರ್ಯರ ಜಯಘೋಷದಿಂದಲೂ ಮೆರವಣಿಗೆಯು ಮಾಡಲ್ಪಟ್ಟಿತು. ಮೆರವಣಿಗೆಯು ಮುಗಿದಮೇಲೆ ಜಗದಾಚಾರ್ಯರ ವಿಷಯವಾಗಿ ಸಮಾಜಸೇವಕ ಅಮ್ರುತಗೋಳಪ್ಪ ಅಣ್ಣೇರಿ ಇವರು ಭಾಷಣವನ್ನು ಮಾಡಿದರು. ಇದರಂತೆ ಪ್ರತಿಯೊಂದು ವೀರಶೈವ ಸಂಘದವರು ಜಗದ್ಗುರುಗಳ ಜಯಂತ್ಯುತ್ಸವವನ್ನು ಮಾಡಿ ಯಶಸ್ವಿಗಳಾಗಬೇಕೆಂದು ಆಶಿಸುತ್ತೇವೆ.

ಕಾರ್ಯದರ್ಶಿ
ಶಿವಪ್ಪ ಅರಳಿ ಮೆಣಸಿಗಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಹಿರೇಹಡಗಲಿ.

ಬಳ್ಳಾರಿ ಡಿ॥ ಹೂವಿನ ಹಡಗಲಿ ತಾ॥ ಹಿರೇಹಡಗಲಿ ಗ್ರಾಮದ ಧರ್ಮಸುಧಾರಕಮಂಡಳಿಯ ಪ್ರಮುಖರಾದ ಮ॥ ರಾ॥ ಶಿವರುದ್ರಗೌಡರು ಪುರಾಣಿಕ ಮಠದ ಪರಮೇಶ್ವರಯ್ಯನವರು ಹಾಕಂಡಿ ಬಸವನಗೌಡರು ಬಾಗಳಿ ಕೊಟ್ರಬಸಪ್ಪ ಶೀಲವಂತರ ಅಣ್ಣವೀರಪ್ಪ ಮಳಿ॥ ಪಲ್ಲಿಪ್ಪ ಮುಂತಾದವರು ವೈಶಾಖ ಶು॥ ೫ ದಿವಸ ಪ್ರತಿಯೊಬ್ಬರೂ ತಮ್ಮ ತಮ್ಮ ಮಂದಿರಗಳನ್ನು ನಾನಾ ವಿಧದಿಂದಲಂಕರಿಸಿ ಗುರುಜಂಗಮಾರಾಧನೆಗಳನ್ನು ಮಾಡಿ ಸಾಯಂಕಾಲ ೪ ಗಂಟೆಗೆ ಶ್ರೀ ಜಗದ್ಗುರು ದಾರುಕಾಚಾರ್ಯರ ಭಾವಪಟವನ್ನು ಪೂಜೆಗೈದು ಪಲ್ಲಕ್ಕಿಯೊಳು ಮೂರ್ತಗೊಳಿಸಿ ಭಜನಾಸಂಘದಿಂದಲೂ ವಾದ್ಯವೈಭವಗಳಿಂದಲೂ ಉತ್ಸವವು ಮುಖ್ಯ ಬೀದಿಗಳಲ್ಲಿ ಹೊರಟು ಕೋಟೆಯಲ್ಲಿರುವ ಶ್ರೀ ನಂದೀಶ್ವರಾಲಯಕ್ಕೆ ತಲ್ಪಿತು. ಬಳಿಕ ವೇ॥ ಹಿ. ಎಂ. ವಿರೂಪಾಕ್ಷಶಾಸ್ತ್ರಿಗಳವರು ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಜಯಂತಿಮಹೋತ್ಸವಗಳನ್ನು ವೈಶಾಖ ಫಾಲ್ಗುಣಮಾಸಗಳಲ್ಲಿ ಅತ್ಯಂತ ಸಂಭ್ರಮದಿಂದ ಮಾಡುವದು ಪ್ರತಿಯೊಬ್ಬ ಲಿಂಗಾಂಗಿಯ ಮುಖ್ಯಧರ್ಮವೆಂತಲೂ ಮತ್ತು ಪ್ರತಿಯೊಂದು ಮನೆಯಲ್ಲಿ ಜಗದಾಚಾರ್ಯರ ಸ್ಮರಣ ಶ್ರವಣಗಳು ಕ್ಷಣೇಕ್ಷಣೇ ಆಗುವಂತೆ ಇನ್ನು ಮುಂದೆ ತಮ್ಮ ತಮ್ಮ ಮಕ್ಕಳಿಗೆ ಸೋಮನಾಥ, ರೇಣುಕದೇವ, ಮರುಳಸಿದ್ಧ, ವಾಮದೇವ, ರೇವಣಸಿದ್ಧ, ಪಂಡಿತಾರಾಧ್ಯ, ಶ್ರೀ ಶೈಲನಾಥ, ವಿಶ್ವನಾಥ, ಸದ್ಯೋಜಾತಮೂರ್ತಿ ಎಂಬ ಪವಿತ್ರ ನಾಮಕರಣಗಳನ್ನು ಮಾಡಿ ಕರೆಯತಕ್ಕದೆಂದು ಬೋಧಮಾಡಿದ ತರುವಾಯ ಮಂಗಲಾರತಿಯಾಗಿ ಫಲಾಶೀರ್ವಾದಗಳು ನಡೆದು ಕಾರ್ಯವು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀಮದ್ವೀರಶೈವ ಧರ್ಮಸುಧಾರಣೇಸಭಾ

ಬೇಗೂರು.

ವೀರಶೈವಮತಬಾಂಧವರೇ! "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ" ಎಂಬ ವಾಕ್ಯದಂತೆ ದೊಡ್ಡವರು ಯಾವ ಆಚಾರದಿಂದ ನಡೆಯುವರೋ ಸಣ್ಣವರೂ ಅದನ್ನೇ ಕಲಿತುಕೊಳ್ಳುವರು. ಹಿರಿಯರು ಯಾವುದಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರೋ ಮುಂದಿನ ಚಿಕ್ಕವರೂ ಅದನ್ನೇ ಪ್ರಮಾಣವೆಂದು ಮಾನಿಸುವರು. ಆದರೆ ಹಿಂದಿನದೆಂದು ಎಲ್ಲವೂ ಪ್ರಮಾಣವೆಂದು ತಿಳಿಯಲಿಕ್ಕೆ ಬರುವದಿಲ್ಲ. ಈಗಿನದೆಂದು ತಿರಸ್ಕರಿಸಲಿಕ್ಕೂ ಬರುವದಿಲ್ಲ. ಕಾಲಮಾನಕ್ಕನುಸರಿಸಿ ಅನ್ವಯವ್ಯತಿರೇಕಗಳಿಂದ ಕೆಲಕೆಲವು ವಿಷಯಗಳ ಹಾಸೋಪದಾನಗಳನ್ನು ಸ್ವೀಕರಿಸಲೇ ಬೇಕಾಗುವದು. ಈಗಿನ ನವನಾಗರೀಕತೆಯ ಸಮಯಕ್ಕೆ ಕೆಲವು ಹಿಂದಿನ ಕೃತಿಗಳು ವಿರೋಧಕರಗಳಾಗಿರುವವು. ಅವುಗಳನ್ನು ಜೋರಿನಿಂದ ಬಿಡಲೇಬೇಕಾಗುವದು. ಕೆಲವು ಹೊಸ ನಿಯಮಗಳನ್ನು ಸ್ವೀಕರಿಸಲೇಬೇಕಾಗುವದು. ಅಂದರೆ ನಿಷಿದ್ಧನಿಯಮಗಳನ್ನು ದೂರೀಕರಿಸಿ ಉತ್ತಮ ನಿಯಮಗಳನ್ನು ಅನುಸರಿಸಬೇಕಾಗುವದು. ಇದರಿಂದ ಪ್ರತಿಯೊಂದು ವ್ಯಕ್ತಿಯ ಮತ್ತು ಸಮಾಜದ ಸುಧಾರಣೆಯಾಗುವದು. ಎಲ್ಲಿಯವರೆಗೆ ಮನುಷ್ಯನಿಗೆ ವಿದ್ಯಾಸಂಸ್ಕಾರಗಳಿರುವದಿಲ್ಲವೋ ಅಲ್ಲಿಯವರೆಗೆ ತಮ್ಮಲ್ಲಿಯ ತಪ್ಪು ತಡೆಗಳು ತಿಳಿಯುವದಿಲ್ಲ. ವಿದ್ಯಾಪ್ರಕಾಶದಿಂದ ಅವಿದ್ಯಾತಮಸ್ಸು ನಷ್ಟವಾದರೆ ನಿಜವಿಷಯವು ದೃಗ್ಗೋಚರವಾಗುತ್ತದೆ. [illegible] ಧಕಾರದಲ್ಲಿ ಶಿಕ್ಷ ದಿಗ್ಭ್ರಾಂತನಾದವನಿಗೆ [illegible] ಸಹಾಯವು ಬೇಕಾಗುವದೋ ಹಾಗೆಯೇ ಅಜ್ಞಾನ[illegible]ದಲ್ಲಿ ಮುಳುಗಿದವನಿಗೆ ಶಾಸ್ತ್ರಪ್ರಕಾಶವು ಬೇಕೇಬೇಕು. ಆದವ ಪ್ರತ್ಯೇಕ ಮನುಷ್ಯನು ಪ್ರತಿಕ್ಷಣದಲ್ಲಿ ಬುದ್ಧಿವರ್ಧಕಗಳೂ ಹಿತಮಾರ್ಗಬೋಧಕಗಳೂ ಆದ ಶಾಸ್ತ್ರೀಯ ಗ್ರಂಥಗಳನ್ನು ಓದುತ್ತಿರಬೇಕು. ಹೇಗೆಹೇಗೆ ಉತ್ತಮ ಗ್ರಂಥಗಳನ್ನು ಓದುವನೋ ಹಾಗೆಹಾಗೆ ವಿಜ್ಞಾನಿಯಾಗುತ್ತ ಹೋಗುವನು. ವಿಜ್ಞಾನಿಯು ಸುಖವಿಶೇಷ (ಮೋಕ್ಷ) ವನ್ನು ಪಡೆಯುವನೆಂದು ಬೇರೆ ಬರೆಯಲವಶ್ಯಕತೆಯಿಲ್ಲ. ಹಿಂದಿನಕಾಲದಲ್ಲಿ ಈಗಿನಂತೆ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳಿಲ್ಲದ್ದರಿಂದ ಬಹು ಜನರು ಹೀನಾವಸ್ಥೆಯಲ್ಲಿದ್ದರು. ದೈವಯೋಗದಿಂದ ಈಗಮಾತ್ರ ಆ ಹೀನಾವಸ್ಥೆಯು ನಷ್ಟವಾಗಿ ಅನುಕೂಲತೆಯ ವಾತಾವರಣದಿಂದ ಎಲ್ಲಿ ನೋಡಿದರೂ ವಿದ್ಯಾಭ್ಯಾಸದ ಲಾಟಿಯು ಒತ್ತರದಿಂದ ತಿರುಗಿ ಎಂತಹ ಕಾಡುಜನರಾದರೂ ಸುಧಾರಣಾಶಿಖರವನ್ನೇರುತ್ತಿರುವರು. ಇದು ಭಾವೀಜಗತ್ಕಲ್ಯಾಣದ ಶುಭಶಕುನವೇ ಸರಿ. ಆದರೆ ವಿದ್ಯಾಭ್ಯಾಸಮಾಡಿದ ಮಾತ್ರಕ್ಕೆ ಮನುಷ್ಯನು ಉತ್ತಮನೆಂದು ಹೇಳಲಿಕ್ಕೆ ಬರುವದಿಲ್ಲ. ಕನ್ನಡಿಯ ಸಹಾಯದಿಂದ ಮುಖಲಕ್ಷಣವನ್ನು ತಿಳಿಯುವಂತೆ ವಿದ್ಯಾಸಹಾಯದಿಂದ ತನ್ನ ಸಮಾಜದಲ್ಲಿಯ ವ್ಯಸನಗಳನ್ನು ತಿಳಿದು ಅವನ್ನು ದೂರಮಾಡಿದರೆ ವಿದ್ಯೆಯು ಸಾರ್ಥಕವಾಗುವದಲ್ಲದೇ ತಾನೂ ಸಮಾಜವೂ ಉನ್ನತಾವಸ್ಥೆಯನ್ನೈದುವದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡಿಯು ನಿರ್ಮಲವಿರುವದಲ್ಲದೇ ಕಣ್ಣುಗಳು ಸಹ ಸ್ವಚ್ಛವಾಗಿದ್ದರೂ ಮುಖದಲ್ಲಿಯ ವ್ಯಂಗ್ಯವನ್ನು ತಿಳಿದು ಸುಧಾರಿಸದಿದ್ದರೆ ಪಶುವಿಗಿಂತಲೂ ಹೆಚ್ಚೇನೂ ಆಗುವದಿಲ್ಲ. "ಸಾಕ್ಷರಾವಿಪರೀತಾಶ್ಚೇದ್ರಾಕ್ಷಸಾಏವಕೇವಲಂ" ಎಂಬಂತೆ ಸಾಕ್ಷರ (ಕಲಿತವ) ರು ವಿಪರೀತರಾದರೆ ಅಂದರೆ ಅಡ್ಡಮಾರ್ಗ ಹಿಡಿದರೆ ರಾಕ್ಷಸರೇ ಆಗುವರು (ಸಾಕ್ಷರಾ+ರಾ-ಕ್ಷ-ಸಾ) ಅಕ್ಷರಾಭ್ಯಾಸದ ಕಾರಣವು ದಯಾಧರ್ಮಗಳಿಂದ ಕೂಡಿ ಆತ್ಮೋನ್ನತಿಯನ್ನು ಮಾಡಿಕೊಳ್ಳುವದಕ್ಕಿರುವದಲ್ಲದೆ ಪರಪೀಡೆಗಾಗಿರುವದಿಲ್ಲ. ಕೇವಲ ಅಕ್ಷರಾಭ್ಯಾಸದಿಂದಲೇ ಮನುಷ್ಯನ ಉನ್ನತಿಯಾಗುವದಿಲ್ಲ "ಲೋಕೇಗುರುತ್ವಂ ವಿಪರೀತತಾಂಚ ಸ್ವಚೇಷ್ಟಿತಾನ್ಯೇವ ನರಂ ನಯಂತಿ" ಎಂಬಂತೆ ಉನ್ನತಿಯನ್ನಾಗಲಿ ಅವನತಿಯನ್ನಾಗಲಿ ಪಡೆಯಬೇಕಾದರೆ ತನ್ನಲ್ಲಿರುವ ಶುಭಾಶುಭ ಕೃತಿಗಳೇ ಕಾರಣಗಳಾಗಿರುವವಲ್ಲದೆ ಬೇರೊಂದಲ್ಲ. ಶುಭಾಶುಭಗಳ ತಾರತಮ್ಯವನ್ನು ತಿಳಿಯುವದಕ್ಕಾಗಿಯೇ ದೇವರು ಮನುಷ್ಯನ ಕೈಯಲ್ಲಿ ಶಾಸ್ತ್ರದರ್ಪಣವನ್ನು ಕೊಟ್ಟಿರುವನು. ಅಂದರೆ ಅದರ ಸಾರ್ಥಕತೆಯಾಗಿ ಮಾನವಜನ್ಮದ ಉದ್ಧಾರವಾಗಬೇಕೆನ್ನುವದೇ ಮಥಿತಾರ್ಥವು. ಇಂತಹ ಈಗಿನ ನವಸುಧಾರಣೆಯ ವಾತಾವರಣಕ್ಕೆ ಮೈಯೊಡ್ಡಿ ಸುಖಶಾಂತಿಗಳನ್ನು ಪಡೆಯದ ಸಮಾಜಗಳೇ ಇಲ್ಲ. ಆದರೆ "ದೃಷ್ಟಂ ಕಿಮಪಿ ಲೋಕೇಽಸ್ಮಿನ್ನ ನಿರ್ದೋಷಂ ನನಿರ್ಗುಣಂ" ಎಂಬಂತೆ ಕೆಲವು ಮೂಲೆಯಲ್ಲಿರುವ ಶಾಸ್ತ್ರಗಂಥರಹಿತರಾದ ನಾವೇ ಧನ್ಯರೆಂದು ಮೆರೆಯುವ ಗರ್ವಿತ ಕೂಪಮಂಡೂಕಗಳು ಇನ್ನೂ ತಮ್ಮ ಹಳೇ ಜಗಿಯನ್ನು ಬಿಡಲೊಲ್ಲವು. ಈ ಜಗಿಯನ್ನು ಕೆತ್ತಬೇಕಾದರೆ ಪರಶಿವನ ಕೈಯಲ್ಲಿಯ ಮೂರು ಮುಖದ ಶೂಲವೇ ಬೇಕಾಗುವದೋ ಏನೋ? ಅಥವಾ ಪಾಪಪುಣ್ಯಗಳ ವಿಚಾರವನ್ನು ಮಾಡುವ ಯಮರಾಜನೇ ಈ ಅಧರ್ಮಿಗಳನ್ನು ಪುಣ್ಯಮಯವಾದ ಈ ಭೂಲೋಕದಿಂದ ಕಿತ್ತೊಗೆಯಬೇಕಾಗಿರುವದು. ಇವೆಲ್ಲ ರಗಳೆಗೆ ಮೂಲವೆಂದರೆ ಕೆಲವು ಕಲಿತ ಮೂರ್ಖರು ಕೇವಲ ತಾಮಸೀಕೃತ ಹಿಂಸಾಕರ್ಮವನ್ನು ಮಾಡುವದೇ ಹೌದು. ಎಲ್ಲ ಪ್ರಸಿದ್ಧ ಸ್ಥಳಗಳಲ್ಲಿ ಈ ಹಿಂಸೆಯು ತಡೆಯಲ್ಪಟ್ಟಿದ್ದರೂ "ಮಳೆಯ ನೀರು ನಿಂತರೂ ಮರದ ನೀರು ನಿಲ್ಲದಂತೆ" ಇನ್ನೂ ಮೂಲೆಮುಂಗಾಟೆಗಳಲ್ಲಿ ಈ ರಾಕ್ಷಸೀಕೃತ್ಯವು ಮುಂದುವರಿಯಲಿಕ್ಕೆ ಹನಿ ಇಕ್ಕುತ್ತಲೇ ಇರುವದು. ಮಾಂಸಾಹಾರಿಗಳು ಸಹ ಈ ಕ್ರೂರಕೃತ್ಯವನ್ನು ಬಿಟ್ಟಿರುವಾಗ ಉತ್ತಮವರ್ಣದವರು ಈ ರಾಕ್ಷಸೀಕೃತ್ಯಕ್ಕೆ ಕೈಕೊಡುವದೆಂದರೆ ಕಲಿರಾಜನ ಕೈಸಾಧನೆಯಲ್ಲದೇ ಮತ್ತೇನು? ಹಿಂದಿನಿಂದ ಹಿರಿಯರು ಮಾಡುತ್ತಬಂದಿರುವರು. ನಾವಾದರೂ ಮಾಡುವವರೇ ಎಂದು ದಡದಾರಿಯನ್ನು ತೋರಿಸುವರು. ಇದೆಂತಹ ಮೂಢತನವು? ಹಿಂದೆ ನಮ್ಮಪ್ಪನು ಬಡವನಿದ್ದರೆ ನಾವೂ ಬಡವರೇ ಇರಬೇಕೇ? ಈ ಮಹಾಶಯರ ಹೃದಯಕೋಶದಲ್ಲಿ ಕರುಣಾಳುವಾದ ದೇವರು ದಯಾ, ಧರ್ಮ, ಸಹಾನುಭೂತಿ ಎಂಬ ಶಬ್ದಗಳನ್ನು ಬರೆಯಲು ಮರೆತಿರಬಹುದೇನು? ಈ ಹಿಂಸೆಯು ನಡೆಯಬೇಕಾದರೆ ದೇವಿಯ ಮುಂದೆಯೇ ಬಹುಶಃ ನಡೆಯುವದು. ಯಾವ ದೇವಿಯು ಜಗಜ್ಜನನಿಯೆನಿಸಿಕೊಂಡು ಪುಣ್ಯಮಾರ್ಗದಿಂದ ನಡೆಯುತ್ತಿರುವ ತನ್ನ ಅಖಿಲಪುತ್ರರ ಬಾಲಲೀಲೆಗಳನ್ನು ನೋಡುತ್ತಿರುವಳೋ? ಅಂತಹ ಪರಮಬಂಧುವಾದ ತಾಯಿಯೇ ಇಂತಹ ಹಿಂಸಾಕರ ಅಸುರೀಲೀಲೆಗಳ ಪ್ರಚಂಡತಾಂಡವವನ್ನು ನೋಡುವಳೆಂದರೆ ಕಲಿರಾತ್ರಿಯಲ್ಲಿಯ ಕುಕರ್ಮಜಾಗರಣದಿಂದ ಆ ಲೋಕಮಾತೆಯ ದಿವ್ಯನೇತ್ರಗಳು ಸಹ ಮಬ್ಬುಗವಿದಿರಬಹುದೇನು? ಮಹಿಷಾಸುರನೆಂದರೆ ದೇವಿಯ ಗಂಡನೆಂದೂ ಯಾವದೋ ಒಂದು ಕಾರಣದಿಂದ ತನ್ನ ಗಂಡನನ್ನೇ ತಾನು ಕಡಿದು ತೃಪ್ತಳಾದಳೆಂದೂ ತನ್ಮೂಲಕ ಕೋಣಗಳ ಬಲಿಯನ್ನು ಕೊಟ್ಟರೆ ದೇವಿಯು ಪ್ರಸನ್ನಳಾಗುವಳೆಂದೂ ಒಂದು ಗ್ರಾಮ್ಯಕಥೆಯನ್ನು ಹೇಳುವರು. ಆಹಹ ಇದೆಂತಹ ದಿವ್ಯಚರಿತ್ರವು? ಲೋಕಾನುಗ್ರಹಾರ್ಥವಾಗಿ ಮಹಾದೇವಿಯು ದಿವ್ಯರೂಪಧಾರಿಣಿಯಾಗಿ ಭೂತಲಾಂತರಿಕ್ಷಗಳಲ್ಲಿ ಅವಕಾಶವಿಲ್ಲದಂತೆ ವಿರಾಡ್ರೂಪವನ್ನು ಧರಿಸಿ, ಶುಂಭ, ನಿಶುಂಭ, ರಕ್ತಬೀಜ, ಮಹಿಷಾಸುರಾದಿ ಮಹಾಪರಾಕ್ರಮಿಗಳಾದ ರಾಕ್ಷಸರನ್ನು ಸಂಹರಿಸಿ ಸಕಲ ಬ್ರಹ್ಮಾಂಡಕ್ಕೆ ಸೌಖ್ಯವೃಷ್ಟಿಯನ್ನು ಸುರಿಸಿದ ದೇವಿಯ ಮಹತ್ವವೆತ್ತ? ಈ ಜನರು ಅವಲಪಿಸುವ ದುಷ್ಟಚರಿತ್ರವೆತ್ತ? ಅಯ್ಯೋ ಮಹಾಜನರೇ ಇನ್ನಾದರೂ ಕಣ್ದೆರೆಯಿರಿ. ದೇವಿಯೆ? ನೀನಾದರೂ ಇವರನ್ನು ದಾರಿಗೆ ಹಚ್ಚಬಾರದೇ? ದಡ್ಡಮಕ್ಕಳಮೇಲೆ ಮಾತೆಯ ಮಮತೆಯು ವಿಶೇಷವಾಗಿದ್ದು ಪ್ರೀತಿಯಿಂದ ಕಾಪಾಡುವಂತೆ ಜಗದಂಬೆಯೇ? ಅಜ್ಞಮಕ್ಕಳಂತಿರುವ ಕೋಣ, ಕುರಿ, ಕೋಳಿ ಮುಂತಾದವುಗಳ ಮೇಲೆ ನಿನ್ನ ದಯಾರ್ದ್ರದೃಷ್ಟಿಯನ್ನು ಬೀರಬಾರದೇ? ದಡ್ಡಮಕ್ಕಳಗೋಳನ್ನು ಬಿಡಿಸಬಾರದೇ? ನಿರಪರಾಧಿಗಳಾದ ಪ್ರಾಣಿಗಳ ಪೀಡೆಯು ನಿನಗೆ ಪ್ರಿಯವಾದುದೇ? ದುಷ್ಟರ ದುರಾಚಾರವನ್ನು ಸುಮ್ಮನೇ ನೋಡುತ್ತಿರುವೆಯಲ್ಲ? ಅಧರ್ಮವು ನಿನಗೂ ಬೇಕಾಯಿತೇ? ಹಾಯ್ ಹಾಯ್ ತಾಯಿಯೇ? ನೀನೇ ನಿನ್ನ ಹಸ್ತದಿಂದ ಮರುಳುಮಕ್ಕಳಿಗೆ ವಿಷವಿಡುವದು ಯೋಗ್ಯವೇ? ತಾಯಿಯು ಮುನಿದರೆ ಮಕ್ಕಳೆಲ್ಲಿ ಬದುಕಬೇಕು? ನಿರಪರಾಧಿಗಳೂ, ಸರ್ವದಾ ಪರೋಪಕಾರ್ಯಕ್ಕೆ ತಮವನ್ನು ಸವಿಸುವವೂ. ಆದ ಮೂಕಪ್ರಾಣಿಗಳನ್ನು ನೀನು ಬಲಿಯನ್ನು ಕೊಳ್ಳುವದಕ್ಕಿಂತಲೂ ದುರ್ಮಾರ್ಗಿಗಳಾದ ಜನರನ್ನು ನಿನ್ನ ಕೈಯಲ್ಲಿಯ ಕೂರಲಗಿನಿಂದ ಕೊರೆಯಬಾರದೇ? ಏಕೆ, ನಿನ್ನಲ್ಲಿ ಇದ್ದ ಹಿಂದಿನ ಮಹಾಸಾಮರ್ಥ್ಯವು ಕಾಲಕ್ರಮದಿಂದ ಕಳೆಗುಂದಿರುವದೇನು? ದೇವತೆಗಳ ಯಜ್ಞಭಾಗಗಳನ್ನ ಪಹರಿಸಿದ ಪುರಾಣಕಾಲದ ರಾಕ್ಷಸರ ಸಂಹಾರಕ್ಕೆ ಭವ್ಯರೂಪವನ್ನು ಧರಿಸಿದ ನೀನು ಈಗಿನ ಈ ನರರಾಕ್ಷಸರನ್ನು ಸಂಹರಿಸಲಿಕ್ಕೆ ಇಲ್ಲವೇ ತಿದ್ದಲಿಕ್ಕೆ ಅಷ್ಟೇನು ಶ್ರಮವಹಿಸುವ ಕಾರಣವೇ ಇಲ್ಲ. ಭ್ರೂಭಂಗಮಾತ್ರದಿಂದಲೇ ಸರ್ವವೂ ಸುವ್ಯವಸ್ಥಿತವಾಗುವದು. ದೇವೀ? ಎಲ್ಲವೂ ನಿನ್ನ ಕೈಯಲ್ಲಿಯೇ ಇರುವದು. ಕೊಲ್ಲುವವಳೂ ನೀನೆ? ಕಾಯುವವಳೂ ನೀನೆ? ಮೂಕರನ್ನು ಮೂಲೆಗೊತ್ತಬೇಡ. ಬುದ್ಧಿಕಲಾಕೌಶಲ್ಯಗಳಲ್ಲಿ ಅವುಗಳನ್ನು ಹಿಂದಿಟ್ಟಿದ್ದರೂ ಸುಖವೆಂಬುದು ಎಲ್ಲ ಪ್ರಾಣಿಗಳಲ್ಲಿ ಸಮನಾಗಿ ಹಂಚಲ್ಪಡಬೇಕಲ್ಲವೇ? ಅಡವಿಯ ಹುಲ್ಲು ತಿಂದು ಮಡುವಿನ ನೀರನ್ನು ಕುಡಿದು ಎಡಬಿಡದೆ ದುಡಿದು ಮನುಷ್ಯರಿಗೆ ಕಡುಸುಖವನ್ನೀಯುವ ಪರೋಪಕಾರಿಗಳಾದ ಬಡಮೂಕ ಜೀವರಾಶಿಯನ್ನು ಪೀಡಿಸದಿರೆಂದು ಬೇಡುತ್ತೇವೆ. ಇರಲಿ ವಾಚಕಮಹಾಶಯರೇ? ಪ್ರಭೆಯಲ್ಲಿ ಪ್ರಸಿದ್ಧಪಡಿಸಿದಂತೆ ಎಪ್ರಿಲ್ ತಾ|| 4-5-30 ನೇ ಇಸ್ವಿ ಈ ದಿವಸಗಳಲ್ಲಿ ಧಾರವಾಡ ಜಿಲ್ಲಾ ಕಲಘಟಗಿ ತಾಲೂಕು ಪೈಕಿ ಬೇಗೂರಲ್ಲಿ 2 ನೆಯ ಶ್ರೀಮದ್ವೀರಶೈವ ಧರ್ಮಸುಧಾರಣೇಸಭೆಯು ಹುಬ್ಬಳ್ಳಿ ತಾಲೂಕು ಪೈಕಿ ಪಾಲೀಕೊಪ್ಪದ "ಪುಣ್ಯಾಶ್ರಮ ಶ್ರೀ ರೇಣುಕಬಾಗ" ನಿವಾಸಿಗಳಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಿಸಲ್ಪಟ್ಟಿತು. ಈ ಸಭೆಯ ಮುಖ್ಯ ಉದ್ದೇಶವೆಂದರೆ ಮೇಲೆ ವರ್ಣಿಸಿದ ಹಿಂಸಾಕರ್ಮವನ್ನು ದೂರೀಕರಿಸುವದಲ್ಲದೆ ಬೇರೊಂದಿಲ್ಲ. ಸದರಿ ಗ್ರಾಮದಲ್ಲಿ ದುರ್ಗವ್ವ ದ್ಯಾಮವ್ವ ಎಂಬ ಎರಡು ದೇವತೆಗಳಿರುವವು. ಈ ದೇವತೆಗಳ ತೃಪ್ತಿಗೋಸ್ಕರ ಈ ಊರ ಜನರು ಕೋಣ ಕುರಿ ಮೊದಲಾದ ಜೀವಬಲಿಯನ್ನು ಕೊಡಲು ಕಟಿಬದ್ಧರಾಗಿರುವರು. ಇವರಲ್ಲಿ 18 ಆಣೆ ಭಾಗ ವೀರಶೈವರೇ ಇರುವರೆಂದು ದುಃಖದಿಂದಲೂ, ನಾಚಿಕೆಯಿಂದಲೂ ಬರೆಯಬೇಕಾಗುವದು. ಮದ್ಯಪಾನದಿಂದ ಇಲ್ಲವೆ ಹಾಗೆಯೇ ಆವೇಶಪೂರ್ಣರಾಗಿ ದೇವರನ್ನುಹೇಳುವ ಚಾಂಡಾಲ ಸ್ತ್ರೀಪುರುಷರು ಗದ್ದರಿಸಿ ಬೊಗಳುವ ಹಿಂಸೆಗೆ ಅನುಕೂಲವಾದ ವಾಕ್ಯಗಳೇ ಇವರಿಗೆ ಪ್ರಚಂಡಪ್ರಮಾಣಗಳಾಗಿರುವವು. ತಿನಸುಬಕ್ಕರು ತಮಗೆ ಬೇಕಾದದ್ದನ್ನು ಹೇಳದೆ ಮತ್ತೇನು ಮಾಡಿಯಾರು? "ತಂಡುಲಹರಣಾರ್ಥಂ ಪುನಃ ಪುಣ್ಯಾಹವಾಚನಂ ಕರಿಷ್ಯೇ" ಎಂಬಂತೆ ಈಗಿನ ಸ್ವಾರ್ಥಿಗಳ ಪೋಷಣವು ಧರ್ಮದ ಹೆಸರಿನಿಂದಲೇ ನಡೆಯಬೇಕಾಗಿರುವದು. ಈ ಪ್ರಾಣಿಬಲಿಯನ್ನು ಕೊಡದಿದ್ದರೆ ಊರಿಗೆ ಪೀಡೆಯು ಬರುವದಂತೆ? ಜ್ಞಾನಹೀನ ಪಶುಪಕ್ಷಿಗಳನ್ನು ಬಲಿಕೊಡುವದಕ್ಕಿಂತಲೂ ವಿವೇಕಸಂಪನ್ನನೂ ಸರ್ವಜೀವಿಗಳಲ್ಲಿ ಹೆಚ್ಚಿನವನೂ ಆದ ನರನ ಬಲಿಯನ್ನು ಕೊಟ್ಟರೆ ದೇವತೆಯು ಮತ್ತಿಷ್ಟು ತೃಪ್ತಳಾಗುವಳಲ್ಲವೇ? ಈ ವರ್ಷ ಸದರಿ ಊರಲ್ಲಿ ನಡೆಯಬೇಕಾದ ಜಾತ್ರೆಯು ಎರಡು ಸಾವಿರಕ್ಕೆ ಕಡಿಮೆ ಇಲ್ಲದಷ್ಟು ರೂಪಾಯಿಗಳನ್ನೂ, 400 ರೂಪಾಯಿ ಕಿಮ್ಮತ್ತಿನ ಕಾಳುಗಳನ್ನೂ, ಕೆಲವು ಮೂಕ ಪ್ರಾಣಿಗಳನ್ನು ನುಂಗುವ ಹವಣಿಕೆಯಲ್ಲಿರುತ್ತದೆ. ಇದೆಂತಹ ಧರ್ಮ? ರೊಕ್ಕಕೊಟ್ಟು ಪಾಪವನ್ನು ಗಳಿಸುವದೆಂದರೆ ಅಮೃತವನ್ನು ಬಿಟ್ಟು ವಿಷವನ್ನು ಕುಡಿದಂತೆಯಲ್ಲವೇ? ಪವಿತ್ರಮನಸ್ಕರಾಗಿ ಶಿವ, ಶಕ್ತಿ, ವಿಷ್ಣು ಮೊದಲಾದ ದೇವತೆಗಳನ್ನು ಸಾತ್ವಿಕೋಪಚಾರಗಳಿಂದಲೂ, ಭಜನಾ, ನಾಮಸ್ಮರಣಾದಿಗಳಿಂದಲೂ, ಪುರಾಣಕೀರ್ತನಗಳಿಂದಲೂ ಪೂಜಿಸಿ ಮುಕ್ತಿಯನ್ನು ಪಡೆಯುವದನ್ನು ಬಿಟ್ಟು ಕೇವಲ ತಾಮಸೀವೃತ್ತಿಯಿಂದ ಹಿಂಸಾಕರ್ಮವಂಗೈದು ಸುಖಿಗಳಾಗುವೆವೆಂದರೆ ಒರಳಲ್ಲಿ ತಲೆಯನ್ನಿಟ್ಟು ಪೆಟ್ಟು ಹತ್ತಬಾರದೆಂಬಂತೆಯೇ ಸರಿ? ಪಾವನವಾದ ಲಿಂಗಾಂಗ ಸಾಮರಸ್ಯವಾದ ಶಿವೋಪಾಸನೆಯೆತ್ತ? ಸರ್ವಾನರ್ಥಕಾರಿಯಾದ ಈ ಅಸುರೀ ಲಾಲಸೆಯೆತ್ತ? ನಮ್ಮ ಸಮಾಜದ ಕಿಲುಬು ಕೀಳುವ ಸಮಯವು ಸವಿಪಕ್ಕೆ ಬಂದಿದ್ದರೂ ಕನಕಮ್ಮಗರೂಪಧಾರಿಯಾದ ಮಾರೀಚಲೀಲೆಯನ್ನು ಬಿಡಲೊಲ್ಲದಾಗಿದೆ. ಇಂಥ ಛಿದ್ರಗಳಿಂದಲೇ ಸಮಾಜವು ದುರ್ಭಗವಾಗಿ ಕಾಣುತ್ತದೆ. ಇದೆಲ್ಲಕ್ಕೆ ವಿದ್ಯೆಯ ಅಭಾವವೇ ಮೂಲವಾಗಿರುವದು. ಈ ಸರ್ವಾನರ್ಥವನ್ನು ತಪ್ಪಿಸುವ ಸದುದ್ದೇಶದಿಂದಲೇ ಊರ ಕೆಲವು ಜನರಿಂದ ಈ ಸಭೆಯು ಕರೆಯಲ್ಪಟ್ಟಿತು. ತಾ|| 4-4-30 ನೇ ಶುಕ್ರವಾರ ಮಧ್ಯಾಹ್ನ 3 ಕ್ಕೆ ಸರಿಯಾಗಿ ಸದರಿ ಗ್ರಾಮದೇವತೆಯ ಗುಡಿಯಲ್ಲಿಯೇ ಸಭೆಯು ನಡೆದು ರಾ|| ತಿಪ್ಪಯ್ಯಾ ಕಲಘಟಗಿ ಮತ್ತು ಶ್ರೀ|| ಜ|| ಪಂ|| ಧ|| ಸಂ|| ಸೆಕ್ರೆಟರಿ ಉಳವಪ್ಪಾ ಎಲಿವಾಳ ಹಿರೇಹೊನ್ನೀಹಳ್ಳಿ ಇವರು ಮಾತಾಡಿದಮೇಲೆ ಅಧ್ಯಕ್ಷರಾದ ಶ್ರೀಗಳು "ಸಾಮಾನ್ಯಧರ್ಮ" "ಮಾನವೀಯ ಉದ್ಧಾರ" ಈ ವಿಷಯದ ಬಗ್ಗೆ ಮಾತಾಡಿದರು. ಅನಂತರ ಆಚಾರ್ಯರ ಮಂಗಲವು ಮಾಡಲ್ಪಟ್ಟು ತ್ರಿವಾರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು.

ಮರುದಿವಸ ತಾ|| 5-4-30 ನೇ ಶನಿವಾರ ದಿವಸ ಈಶ್ವರ ದೇವಾಲಯದಲ್ಲಿ ಉದಯದ 9 ಘಂಟೆಗೆ ಶ್ರೀ ಲಿಂಗಾಭಿಷೇಕವು ನಡೆದು 12 ಕ್ಕೆ ಮುಗಿದು ಗಣಾರಾಧನೆಯಾದನಂತರ ಮಧ್ಯಾಹ್ನ 3 ಕ್ಕೆ ಪುನಃ ಸಭೆಯು ನಡೆಯಿತು. ಈ ದಿವದ ಸಭೆಗೆ ಪ್ರಾಣಿದಯಾ ಸಂಘದ ಉತ್ಪಾದಕರಾದ ಹುಬ್ಬಳ್ಳಿಯ ಸುಪ್ರಸಿದ್ಧ ಕೇಶಕರಮಹೀಪೇತಸೀ ಇವರು ತಮ್ಮ ಪರಿವಾರದೊಡನೆ ಬಂದಿದ್ದರಲ್ಲದೆ ದಾವಣಗೇರಿ ವಿರಕ್ತಮಠದ ವೇ|| ಶಾಂತವೀರಾರ್ಯರು ಆಗಮಿಸಿದ್ದರು. ಮೊದಲು ಪ್ರಾಣಿದಯಾಸಂಘದವರು:—ಸರ್ವಥಾ ಹಿಂಸೆಯನ್ನು ಮಾಡಬಾರದೆಂದೂ. ಪಶುಗಳಿಗೂ ನಮಗೂ ಇರುವ ಈಶ್ವರೀಸಂಬಂಧವನ್ನೂ, ಪಶುಗಳಿಂದ ನಮಗಾಗುವ ಮಹೋಪಕಾರವನ್ನೂ ಬಹು ಸರಸವಾಗಿ ಬೋಧಿಸಿದರಲ್ಲದೆ ಮನುಷ್ಯ ಮೊದಲು ಮಾಡಿ ಸರ್ವಪ್ರಾಣಿಗಳು ದೇವರ ಮಕ್ಕಳಾಗಿರುವದರಿಂದಲೂ, ಸರ್ವಪ್ರಾಣಿಗಳು ಪರಸ್ಪರ ಬಂಧುಗಳಾಗಿರುವದರಿಂದಲೂ ಯಾವದೇ ಒಂದು ಪ್ರಾಣಿಯನ್ನು ಹಿಂಸಿಸಿದರೆ ಬಂಧುಹತ್ಯದೋಷವು ಬರುವದೆಂದೂ, ಹಿಂಸೆಯು ಕೇವಲ ನರಕನಗರದ ಹೆಬ್ಬಾಗಿಲವಾಗಿರುವದೆಂದೂ ಹೇಳಿದರು. ಆ ಮೇಲೆ ಸದರೀ ಗ್ರಾಮದ ಶಾಲಾಮಾಸ್ತರರು ವೀರಶೈವ ಧರ್ಮದ ಬಗ್ಗೆ ಮಾತಾಡಿದನಂತರ ವೇ|| ವಿರಕ್ತಮಠದ ಶಾಂತವೀರಾರ್ಯರು ಈವಾಗ್ಗೆ ಕೈಕೊಂಡ ಈ ಹಿಂಸಾಕಾರ್ಯವು ಅಶಾಸ್ತ್ರೀಯವೆಂದೂ, ಪ್ರತಿಯೊಬ್ಬರೂ ಈ ದಾನವಲೀಲೆಯನ್ನು ಬಿಡಲೇಬೇಕೆಂದೂ ಬಹಳ ಆವೇಶದಿಂದ ಹೇಳಿದರು. ಆಮೇಲೆ ಅಧ್ಯಕ್ಷರು "ಅಹಿಂಸಾಯಾಃ ಪರಂ ತಪಃ" ಎಂಬ ವಾಕ್ಯವನ್ನು ಮೊದಲುಮಾಡಿ ಹಿಂಸೆಯು ಮೋಕ್ಷನಿರೋಧವೆಂದೂ, ಇದು ಎಲ್ಲರಿಗೂ ಬೇಡಾದದ್ದಲ್ಲದೇ ಎಷ್ಟೋ ಕಡೆಯಲ್ಲಿ ಈ ನೀಚಾಚಾರವು ಬಲವಾಗಿ ನಿಲ್ಲಿಸಲ್ಪಟ್ಟಿರುವದೆಂದೂ ಹೇಳಿದಲ್ಲದೇ ಹಿಂಸೆಯಿಂದ ಪರಿತ್ಯವಾದ ವೀರಶೈವಧರ್ಮಕ್ಕಾಗುವ ಅನರ್ಥ ಮತ್ತು ಹಿಂಸಾ, ವೀರಶೈವಧರ್ಮ, ಇವುಗಳ ತಾರತಮ್ಯವನ್ನೂ ನಿಜವಾದ ದೇವಿಯ ಚರಿತ್ರವನ್ನೂ 2 ತಾಸುಗಳ ಪರ್ಯಂತರ ಹೇಳಿದರು. ಈ ಸಭೆಗೆ ಆಜೂಬಾಜೂ ಗ್ರಾಮಗಳ ಜನರು ವಿಶೇಷವಾಗಿ ಸೇರಿದ್ದರು. ಈ ಹೊತ್ತಿನ ವಿಷಯವನ್ನು ಕೇಳಿದ ಸರ್ವರೂ "ನಾವು ಹಿಂಸೆಯನ್ನು ಮಾಡುವದಿಲ್ಲ, ನೋಡುವದಿಲ್ಲ" ಎಂದು ಹಿಡಿಕೊಡುವದಲ್ಲದೇ ಕೆಲವು ಠರಾವುಗಳು ಪಾಸು ಮಾಡಲ್ಪಟ್ಟವು. ಸದರೀ ಗ್ರಾಮದ ಜನರು ಮುಕ್ಕಲ್ಲು ಮೊದಲಾದ ಗ್ರಾಮಗಳಲ್ಲಾಗುವಂತೆ ಸಾತ್ವಿಕಜಾತ್ರೆಯನ್ನು ಮಾಡಿದರೆ ಸರ್ವರಿಗೂ ಸುಖವು ದೊರೆಯುವದಲ್ಲದೇ ತಾವು ಪಾಪಕ್ಕೆಂದು ಶೇಖರಿಸಿದ ದ್ರವ್ಯಧಾನ್ಯಗಳನ್ನು ಯಾವದಾದರೊಂದು ವಿದ್ಯಾಸಂಸ್ಥೆಗೆ ಉಪಯೋಗಿಸಿದರೆ ಪುಣ್ಯಬರುವದಲ್ಲದೇ ಆಚಂದ್ರಾರ್ಕವಾಗಿ ಇವರ ಕೀರ್ತಿಯು ಉಳಿಯುವದು. ಸದರೀ ಜನರಿಗೆ ದೇವರು ಸುಬುದ್ಧಿಯನ್ನು ಕೊಡಲೆಂದೂ; ಸಭೆಯ ದೆಸೆಯಿಂದ ತ್ರಿಕರಣಪೂರ್ವಕವಾಗಿ ಸೇವೆಮಾಡಿದ ಬೇಗೂರ ಜನರಿಗೂ, ಹಿರೇ

ಯವರನ್ನು ಕೂಡಲೇ ಬಂಧವಿಮೋಚನೆ ಮಾಡಬೇಕೆಂದು ಬ್ರಿಟಿಷ್ ಮುಖ್ಯಮಂತ್ರಿಗಳಾದ ಮಿ|| ರಾಂಸೆ ಮ್ಯಾಕ್ಡೊನಾಲ್ಡರವರಿಗೆ ತಂತೀ ಮೂಲಕ ವಿಜ್ಞಾಪಿಸಿಕೊಂಡಿರುವರು.

ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಿದ ಸಮಯದಲ್ಲಿ ಬೊಂಬಾಯಿನಲ್ಲಿ ಆಚರಿಸಿದ ಹರತಾಳದ ಮೆರವಣಿಗೆಗೆ [illegible] ಜನರು ಸೇರಿ

ಪಡಬೇಕೆಂದು ಈ ಸಭೆಯು ಬೇಡುತ್ತದೆ.

2. ಈ ಮತದ ಸನಾತನ ತತ್ವಗಳನ್ನು ಸರಳ-ಸ್ಪಷ್ಟ ಶೈಲಿಲ್ಲಿ ಬರೆದು ಅಜ್ಞಸುಜ್ಞರಿಗೆ ತಿಳಿಯುವಂತೆ ಪ್ರಸಾರಪಡಿಸಬೇಕೆಂದು ಸದರೀ ಮತದ ಪಂಡಿತರನ್ನು ಈ ಸಭೆಯು ಕೋರುತ್ತದೆ.

3. ಅಹಿಂಸಾತತ್ವವನ್ನು ಪಾಲಿಸಲು ಸಮಸ್ತ ವೀರಶೈವರು ಕಟಿಬದ್ಧರಾಗುವದಲ್ಲದೇ ಇತರರಿಗೂ ಕೂಡ ಈ ತತ್ವವನ್ನು ತಿಳಿಸಿ ಸರ್ವಪ್ರಕಾರದಿಂದಾಗತಕ್ಕ ಅನರ್ಥಗಳನ್ನು ನಿವಾರಿಸಬೇಕೆಂದು ಈ ಸಭೆಯು ಆಶಿಸುತ್ತದೆ.

4. ಈ ಮತದ ಗುರುಗಳು ಸ್ವಾರ್ಥತ್ಯಾಗಿಗಳಾಗಿ ವೀರಶೈವಮತದ ತತ್ವಗಳನ್ನು ಬೀರುವದಕ್ಕೋಸ್ಕರ ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಸಂಚಾರಮಾಡಿ ಗ್ಲಾನಿಹೊಂದುತ್ತಿರುವ ಧರ್ಮವನ್ನು ಪುನರುಜ್ಜೀವನಗೊಳಿಸಬೇಕು.

5. ದುರ್ಗವ್ವ-ದ್ಯಾಮವ್ವ ಮೊದಲಾದ ದೇವೀ ಜಾತ್ರೆಗಳಲ್ಲಿ ಪ್ರಾಣಿಹಿಂಸೆಯು ಸ್ವಲ್ಪವಾದರೂ ಜರುಗಕೂಡದೆಂದೂ, ಸಾತ್ವಿಕೋಪಚಾರಗಳಿಂದಲೇ ಜಾತ್ರೆಯು ನಡೆಯಬೇಕೆಂದೂ ಈ ಸಭೆಯು ನಿರ್ಧರಿಸುತ್ತದೆ.

6. ಈ ನಮ್ಮ ಸಭೆಗೆ ಅಕಸ್ಮಾತ್ತಾಗಿ ಹುಬ್ಬಳ್ಳಿಯಿಂದ ಆಗಮಿಸಿದ ಜೀವದಯಾಸಂಘದ ಗೃಹಸ್ಥರನ್ನೂ, ದಾವಣಗೆರೆ ವಿರಕ್ತಮಠದ ವೇ|| ಶಾಂತವೀರಾರ್ಯರನ್ನೂ ಈ ಸಭೆಯು ಅಭಿನಂದಿಸುತ್ತದೆ.

7. ಹೋಳೀಹುಣ್ಣಿಮೆಯಲ್ಲಿ ನಡೆಯುವ ಅತ್ಯಾಚಾರಗಳನ್ನು ನಿಷೇಧಿಸುವ ಬಗ್ಗೆ ಪಾಲೀಕೊಪ್ಪದ "ಪುಣ್ಯಾಶ್ರಮ ಶ್ರೀರೇಣುಕಭಾಗ" ದಲ್ಲಿ ನೆರವೇರಿದ 1 ನೆಯ ಶ್ರೀಮದ್ವೀರಶೈವ ಧರ್ಮಸುಧಾರಣೇ ಸಭೆಯಲ್ಲಿ ಪಾಸಾದ ಠರಾವುಗಳನ್ನು ತೀವ್ರ ಪ್ರಸಾರಮಾಡಲು ಈ ಸಭೆಯು ಅನುಮೋದನವನ್ನೀಯುತ್ತದೆ.

8. ಈ ಮತದ ಸುಧಾರಣೆಯ ಬಗ್ಗೆ ಅಲ್ಲಲ್ಲಿ ಚಿಕ್ಕ ಪುಟ್ಟ ಸಭೆಗಳನ್ನು ನೆರವೇರಿಸುವ ಏರ್ಪಾಡನ್ನು ಪಾಲೀಕೊಪ್ಪದ ಶ್ರೀಗಳವರು ಕೈಕೊಂಡಿದ್ದಕ್ಕಾಗಿ ಸರ್ವ ವೀರಶೈವರು ಅಭಿನಂದನವನ್ನು ಮಾಡುವದಲ್ಲದೆ ಸರ್ವತ್ರ ಇದೇ ಪ್ರಕಾರದ ಕಾರ್ಯಗಳು ಜಾರಿಯಲ್ಲಿ ಬರಬೇಕೆಂದೂ ಈ ಎರಡೂ ಸಭೆಗಳಲ್ಲಿ ಪಾಸಾದ ಠರಾವುಗಳನ್ನು ಸರ್ವರೂ ಅಂಗೀಕರಿಸತಕ್ಕದ್ದೆಂದೂ ಈ ಸಭೆಯು ಸೂಚಿಸುತ್ತದೆ.

ಓರ್ವ ಸಮಾಜಹಿತೈಷಿ.

ಶ್ರೀ ಗುರುಭ್ಯೋನಮಃ.

ಶ್ರೀ ಜಗದ್ಗುರು ಪಂಚಾಚಾರ್ಯ ಧರ್ಮಾರ್ಥ ವಾಚನಾಲಯದ ಮೂರನೇ ಅಧಿವೇಶನವು.

ಮಧುವನಹಳ್ಳಿ.

ತಾ|| 31-3-30 ನೆಯ ಪ್ರಮೋದನಾಮ ಸಂವತ್ಸರದ ಚೈತ್ರ ಶುದ್ಧ ಪಾಡ್ಯಮಿ ಶುಭದಿವಸ ಮ|| ರಾ|| ಯಜಮಾನ್ ಎಂ. ಬಸವಲಿಂಗಪ್ಪನವರ ಮನೆಯಲ್ಲಿ ಈ ಸಭೆಯು ಮತೀಯ ಪುರಪ್ರಮುಖರುಗಳಿಂದ ನಡೆಯಿಸಲ್ಪಟ್ಟಿತು. ಆವಾಗ ಮೊದಲು ಮಹಾರಾ|| ಜಿ. ಗುರುಶಾಂತಪ್ಪನವರು ಧರ್ಮಾರ್ಥವಾಚನಾಲಯಗಳ ಅವಶ್ಯಕತೆ ಮತ್ತು ತರುಣರ ಕರ್ತವ್ಯ. ಈ ವಿಚಾರವಾಗಿ ರಸಭರಿತವಾದ ಭಾಷಣವನ್ನು ಮಾಡಿದನಂತರ ಸಭಾಕಾರ್ಯಕ್ರಮಗಳ ಪ್ರಚಾರದಲ್ಲಿ ಮುಂದಿನ ತೀರ್ಮಾನಗಳು ಪಾಸುಮಾಡಲ್ಪಟ್ಟವು.

ಈ ಸುದಿವಸದ ಸಭೆಯಲ್ಲಿ ಮ|| ರಾ|| ಶೆಟ್ರು ಜಡೇಬಸಪ್ಪನವರು ಅಧ್ಯಕ್ಷರಾಗಿದ್ದು ಕಾರ್ಯಕ್ರಮಗಳನ್ನು ಜರುಗಿಸಬೇಕೆಂದು ಮ|| ರಾ|| ತಾಳ್ವಾಡಿ ಮಾದಪ್ಪನವರು ಸೂಚಿಸಿದ್ದನ್ನು ಮ|| ರಾ|| ಸಾವುಕಾರ್ ಬಸವಲಿಂಗಪ್ಪನವರು ಅನುಮೋದಿಸಲು ಸರ್ವರ ಕರತಾಳದೊಡನೆ ಮ|| ರಾ|| ಜಡೇ ಬಸಪ್ಪನವರು ಆಗ್ರಾಸನವನ್ನು ವಹಿಸಿದರು.

ಸದರಿ ವಾಚನಾಲಯದ ಸೆಕ್ರೆಟರಿಗಳಾದ ಮ|| ರಾ|| ಎಂ. ಚೆನ್ನಬಸಪ್ಪನವರು ವರ್ಷಾಂತರ ರಿಪೋರ್ಟನ್ನು ಓದಿ ಹೇಳಿ ತರುವಾಯ ಸರ್ವರ ಅನುಮತಿಯಿಂದ ಅದು ರಿಕಾರ್ಡುಮಾಡಲ್ಪಟ್ಟಿತು.

ಸದ್ಯದ ವಾಚನಾಲಯದ ಸ್ಥಳಸಂಕೋಚವನ್ನು ತೃತಪಡಿಕೊಂಡ ತರುವಾಯ ಮ|| ರಾ|| ತಾಳ್ವಾಡಿ ಮಾದಪ್ಪನವರು ತಾವಾಗಿ ಉದಾರಮನಸ್ಸಿನಿಂದ ತಮ್ಮ ನೂತನ ಗೃಹದ ಒಂದು ಕೊಠಡಿಯನ್ನು ಉಚಿತವಾಗಿ ಬಿಟ್ಟುಕೊಡುವುದಾಗಿ ವಾಗ್ದಾನಮಾಡಿದ್ದನ್ನು ಬಹಳ ಸಂತೋಷದಿಂದ ರಿಕಾರ್ಡು ಮಾಡಲಾಯಿತು.

ಪ್ರಸಿದ್ಧ ಇಂಗ್ಲೀಷ್ ಪತ್ರಿಕೆಯಾದ 'ಹಿಂದು'ವನ್ನು ತರಿಸುವದರಿಂದ ವಿಷಯಗ್ರಹಣವಾಗುವುದನ್ನೂ, ರಾಜಾಂಗಭಾಷೆಯ ಅಭಿವೃದ್ಧಿಯನ್ನೂ ಮ|| ಜಿ. ಗುರುಶಾಂತಪ್ಪನವರು ಯುಕ್ತಿಯುಕ್ತವಾಗಿ ವಿವರಿಸಿ, ಅದನ್ನು ತರಿಸಲು ಬಾಲ್ಯಾವಸ್ಥೆಯಲ್ಲಿರುವ

ಯಾ ಸರಕಾರದೊಡನೆ ದೀರ್ಘವಾದ ಆಲೋಚನೆಯನ್ನು ಮಾಡಿ, ಮಿ|| ಗಾಂಧಿಯವರನ್ನು ಸುಮ್ಮನೆ ಬಿಟ್ಟಿದ್ದರೆ ಭರತಖಂಡಕ್ಕೆ ಅಪಾರವಾದ ಹಾನಿಯು ಸಂಭವಿಸುವದೆಂದು ನಿರ್ಧರಿಸಿದರು. ಹಾಗೂ ಸದ್ಯದ ವಿದ್ಯಮಾನಗಳನ್ನು ಪರಿಶೀಲಿಸಿ. ಅವರನ್ನು 1327 ನೆಯ ಇಸವಿಯ 25 ನೆಯ ರೆಗ್ಯುಲೇಷನ್ನಿಗನುಸಾರವಾಗಿ ದಸ್ತಗಿರಿಮಾಡಿ, ಸರಕಾರದವರ ಅಭಿಪ್ರಾಯವಿರುವವರೆಗೆ ನಿರ್ಬಂಧದಲ್ಲಿರಿಸಬೇಕೆಂದು ತೀರ್ಮಾನಮಾಡಿರುತ್ತಾರೆ. ಅವರ ಬಂಧನಕಾಲದಲ್ಲಿ ಅವರ ಆರೋಗ್ಯ ಮತ್ತು ಸೌಖ್ಯಕ್ಕೆ ಬೇಕಾದ ಸಮಸ್ತ ಏರ್ಪಾಡುಗಳೂ ಮಾಡಲ್ಪಡುವುವು.

ತಯಾಬ್ಜಿಯವರ ಸ್ಥಾನಕ್ಕೆ ಬಂದ ಶ್ರೀಮತಿ ಸರೋಜಿನೀ ದೇವಿಯರು ಕಳೆದ 15ನೇ ತಾರೀಖಿನ ದಿವಸ ಪ್ರಾತಃಕಾಲ ಉಂಟಾಡಿ ಶಿಬಿರದಿಂದ 50 ಜನ ಸ್ವಯಂಸೇವಕರೊಡಗೂಡಿ ೧|| ಮೈಲಿನಲ್ಲಿರುವ ದರ್ಶನದ ಉಪ್ಪಿನ ಕಾರ್ಖಾನೆಯಮೇಲೆ ದಾಳಿಯಿಡಲು ವಿಜಯಯಾತ್ರೆಯನ್ನು ಬೆಳೆಸಿದರು. ಆಕ್ಷಣದಲ್ಲಿಯೇ ಆಯುಧಧಾರಿಗಳಾದ ಪೋಲೀಸಿನವರು ಶ್ರೀಮತಿಯವರಿಗೆ ಮುಂದೆ ಹೆಜ್ಜೆಯಿಡಲು ಅವಕಾಶವನ್ನು ಕೊಡದೆ ತಡೆದಿರುತ್ತಾರೆ. ಸೇನಾಧಿನಾಯಕಿಯರಾದ ಶ್ರೀಮತಿಯವರು ಸ್ವಯಂಸೇವಕರೊಂದಿಗೆ ಬಿಸಿಲುಬೇಗೆಯನ್ನದೆ ಹಗಲಿರುಳೂ ಭಜನೆಯನ್ನು ಮಾಡುತ್ತ ಅಲ್ಲಿಯೇ ನಿಂತುಬಿಟ್ಟಿರುತ್ತಾರೆ. ಆ ದಿವಸವೆಲ್ಲಾ ಪೋಲೀಸಿನವರು ಆಹಾರಾದಿಸಾಮಗ್ರಿಗಳೂ ಸಹ ಹೋಗದಂತೆ ತಡೆಮಾಡಿದ್ದರು. ಮರುದಿವಸ ಆಹಾರವನ್ನು ಕೊಡಬಹುದೆಂದು ಹುಕುಂ ಮಾಡಿದರು. ಶ್ರೀಮತಿಯವರು ನಾವು ಈಗ ಮಹಾತ್ಮರ ಮೇಲ್ಪಂಗ್ತಿಯನ್ನನುಸರಿಸಿ ಕೇವಲ ಶಾಂತಿಸಂಗ್ರಾಮಕ್ಕಾಗಿ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಿಡಲಾರೆವು. ನಾವು ಆತ್ಮಯಜ್ಞಕ್ಕೆ ಸಿದ್ಧರಾಗಿದ್ದೇವೆಂದು ಅಲ್ಲಿಯೇ ನಿಂತುಬಿಟ್ಟಿರುತ್ತಾರೆ. ಪೋಲೀಸಿನವರು ಸಹ ಇವರೊಂದಿಗೆ ತಾವೂ ಸತ್ಯಾಗ್ರಹವ್ರತವನ್ನವಲಂಬಿಸಿ ಸುತ್ತುಕಟ್ಟಿನಿಂತಿರುತ್ತಾರೆ.

ಸೊಲ್ಲಾಪುರದಲ್ಲಿ ಮುನ್ಸಿಪಲ್ ಪ್ರೆಸಿಡೆಂಟರನ್ನು ದಸ್ತಗಿರಿ ಮಾಡಿರುತ್ತಾರೆ. ಇನ್ನೂ ಕೆಲವು ದಿವಸ ಮಿಲಿಟೇರಿಯವರು ಅಲ್ಲಿಯೇ ಇರಬೇಕೆಂದು ವೈಸ್‌ರಾಯರು ಅಪ್ಪಣೆಯನ್ನಿತ್ತರು.

ಸ್ವೀಕಾರ.

ಧಾರವಾಡ ಡಿ|| ಶಿರೋಳ ಹಿರೇಮಠ ವೇ|| ಪಂಚಾಕ್ಷರಯ್ಯನವರು ನೆರವೇರಿಸಿದ ಮಾಹೇಶ್ವರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ 10 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿಕ್ಕಮಗಳೂರು ನಿವಾಸಿಗಳಾದ ಮ|| ಚಂದ್ರಪ್ಪ ಶೆಟ್ಟರು ನೂತನ ಗೃಹಪ್ರವೇಶಕಾಲದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 3 ರೂ., ಸದರಿ ತಾಲೂಕು ಗಾಳಿಪೂಜೆ ಯಾನೆ ದೇವರಹಳ್ಳಿ ಪಟೇಲ್ ಮ|| ಮಲ್ಲೇಗೌಡರು ತಮ್ಮ ಚಿರಂಜೀವಿಗೆ ಅಸ್ವಸ್ಥವಾಗಿದ್ದ ಬಾಯಿಬೇನೆಯು ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 4 ರೂ., ಹಾಗೂ ಮುಗುಳುವಳ್ಳಿ ಗ್ರಾಮದ ಮ|| ರಾ|| ವೀರೇಗೌಡರ ಪುತ್ರ ಚಿ|| ಸಂಜಪ್ಪನಿಗೂ ಬಿಗಡೇನಹಳ್ಳಿ ಗ್ರಾಮದ ಮ|| ರಾ|| ಪುಟ್ಟಣ್ಣಶೆಟ್ಟರ ಪುತ್ರಿ ಚಿ|| ಸೌ|| ರುದ್ರಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ಸಮರ್ಪಿಸಿದ 3 ರೂ. ಒಟ್ಟು 9 ರೂ. ಗಳು ವೇ|| ಮಠದ ಮುಪ್ಪಿನಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾಲ್ಲೂಕು ಭಾವಿಹಳ್ಳಿ ಗ್ರಾಮದ ಮ|| ರಾ|| ದಳಶೆಟ್ಟಿ ಕೊಟ್ರಪ್ಪನವರ ಮಗ ಚಿ|| ಬಸಪ್ಪನಿಗೆ ಮ|| ರಾ|| ಬೆಸ್ತೂರು ಗುರುಸಿದ್ದಪ್ಪನವರ ಪುತ್ರಿ ಚಿ|| ಸೌ|| ಗುಬ್ಬವ್ವನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಕಾಲದಲ್ಲಿ ಮ|| ರಾ|| ಕದರಮಂಡಿಗಿ ಪರಮೇಶ್ವರಪ್ಪನವರ ದ್ವಾರಾ ತೆಗೆಯಿಸಿದ ರೂ. 3 ಹಾಗೂ ಸದರಿ ಭಾವಿಹಳ್ಳಿ ಗ್ರಾಮದ ಮ|| ರಾ|| ಕೊರ್ಲಗಟ್ಟಿ ಕಲ್ಲಪ್ಪನವರ ಮಗ ಚಿ|| ಬಸಪ್ಪನಿಗೆ ಮ|| ರಾ|| ಕೆಂಚಿಡಿ ಶಿದ್ದಪ್ಪನವರ ಮಗಳು ಚಿ|| ಸೌ|| ಅವುರವ್ವನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಕಾಲದಲ್ಲಿ ಮ|| ರಾ|| ಕದರಮಂಡಗಿ ಪರಮೇಶ್ವರಪ್ಪನವರ ದ್ವಾರಾ ತೆಗೆಯಿಸಿದ ರೂ. 2 ಹಾಗೂ ಬಾಚಿಗೊಂಡನಹಳ್ಳಿ ಮ|| ರಾ|| ರಾಯರಾಳು ಲಿಂಗಪ್ಪನವರಿಗೆ ಮ|| ರಾ|| ಭಾವಿಹಳ್ಳಿ ಪವಾಡಿ ವೀರಪ್ಪನವರ ಮಗಳು ಚಿ|| ಸೌ|| ಕೊಟ್ರವ್ವನನ್ನು ಕೊಟ್ಟು ವಿವಾಹವನ್ನು ನಡೆಯಿಸಿದ ಕಾಲದಲ್ಲಿ ಸದರಿ ಪರಮೇಶ್ವರಪ್ಪನವರ ದ್ವಾರಾ ತೆಗೆಸಿರುವ 1 ರೂ. ಒಟ್ಟು 6 ರೂಪಾಯಿಗಳು ಮ|| ರಾ|| ಎಸ್. ಬಿ. ಸಣ್ಣ ಕೋಟೆಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಚಳಗೇರಿ ಗ್ರಾಮದ ಅರಳೆಲೆ ಕಟ್ಟಿಮನೆ ಹಿರೇಮಠದ ವೀರಸಂಗಪ್ಪನವರು ಶಿವಾಧೀನರಾದ ಕಾಲದಲ್ಲಿ ಶ್ರೀ|| ಷ|| ಬ್ರ|| ಸಂಗಮೇಶ್ವರ ಪಟ್ಟದ ಸ್ವಾಮಿಗಳು, ಹಿರೇಹಡಗಲಿ ಇವರ ಅಭಿಪ್ರಾಯದಂತೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಹಾಗೂ ಸದರಿ ಚಳಗೇರಿಯಲ್ಲಿ ನೆರವೇರಿದ ಜಗದಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಮ|| ರಾ|| ಚನ್ನಪ್ಪಗೌಡರು ಪೋಲೀಸ್‌ಪಾಟೀಲ ಇವರು ಸಮರ್ಪಿಸಿದ 1 ರೂ. ಮತ್ತು ಹೊಳೆಆಲೂರು ಗ್ರಾಮದ ಮ|| ರಾ|| ಹೊಳೆಯಪ್ಪಾ ಶಿರಬಡಿಗಿ ಇವರ ಪುತ್ರ ಚಿ|| ಯಮುನಪ್ಪನಿಗೆ ಮ|| ರಾ|| ವೀರಪ್ಪಾ ಕಡಿವಾಲಮಾಸಗಟ್ಟಿ ಇವರ ಪುತ್ರಿ ಚಿ|| ಸೌ|| ಹೊಳೆಯವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ 2 ರೂ. ಗಳು ಒಟ್ಟು 5 ರೂ. ಗಳು ಶ್ರೀ|| ರೇವಣಸಿದ್ಧಯ್ಯನವರು ಭಿಕ್ಷಾವರ್ತಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಕಲಘಟಗಿ ಗ್ರಾಮದ ವೇ|| ಶಿವಲಿಂಗಾರ್ಯ ಮೂಲಿಮಠ ಇವರ ಪುತ್ರಿ ಚಿ|| ಸೌ|| ವೀರವ್ವನ ಲಗ್ನಕಾಲದಲ್ಲಿ ತೆಗೆಯಿಸಿದ 1 ರೂ., ಹಾಗೂ ಶಿರಹಟ್ಟಿ ತಾಲೂಕು ಯಳವತ್ತಿ ನಿವಾಸಿಗಳಾದ ವೇ|| ಶಾಸ್ತ್ರೀಯಯ್ಯನವರು ಚಿಕ್ಕಮಠ ಇವರ ಪುತ್ರ ಚನ್ನಬಸಯ್ಯನವರ ವಿವಾಹ ಸಮಯದಲ್ಲಿ ತೆಗೆಯಿಸಿದ 2 ರೂ. ಒಟ್ಟು 3 ರೂ. ಗಳು ಶ್ರೀ|| ಷ|| ಬ್ರ|| ಬಟ್ಟೂರು ಬೃಹನ್ಮಠಾಧ್ಯಕ್ಷರ ದ್ವಾರಾ ತಲ್ಪಿರುತ್ತವೆ.

ಧಾರವಾಡಜಿಲ್ಲಾ ಗದಗ ತಾಲೂಕು ಹುಯ್ಲಗಿ ಗ್ರಾಮದ ಕುಂಬಾರ ಭರಮವ್ವನು ಶಿವಾಧೀನವಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಗುರುಭಕ್ತಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಉತ್ತಂಗಿ ಹಾಲುಮಠದ ಸಾ|| ಬಟಲಿಂಗಪ್ಪನ ಪತ್ನಿ ಮಸುಳವ್ವನ ಮಗ ಗುಡ್ಡಪ್ಪನ ಪುತ್ರ ಚನ್ನಬಸಪ್ಪನ ವಿವಾಹಸಮಯದಲ್ಲಿ ಮ|| ರಾ|| ಶಿವನಾಗಪ್ಪನವರ ಸೂಚನೆಯಮೇರೆ ಶಿ|| ಮಠದ ರೇವಪ್ಪಶಾಸ್ತ್ರಿಗಳು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಶ್ರೀ ಮಠದ ವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಕಾಶೀಕ್ಷೇತ್ರ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠದಲ್ಲಿ ಶ್ರೀ ಜಗದ್ಗುರು ಏಕೋರಾಮಶಿವಾಚಾರ್ಯರ ಜಯಂತಿಮಹೋತ್ಸವನಿಮಿತ್ತ ಸಮರ್ಪಿಸಿದ 2 ರೂ. ಗಳು ವೇ|| ಶ್ರೀ ಶಿವಕುಮಾರಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಬೇಲೂರು ಕಲ್ಲುಮಠದಲ್ಲಿ ನೆರವೇರಿದ ಶಿವಲಿಂಗ ಪ್ರತಿಷ್ಠಾಮಹೋತ್ಸವಕಾಲದಲ್ಲಿ ಸಮರ್ಪಿಸಿದ 1 ರೂ. ಮ|| ರಾ|| ಎಚ್. ಎಸ್. ಶಿವಪ್ಪನವರ ದ್ವಾರಾ ತಲ್ಪಿರುತ್ತದೆ.

ಸೋಲಾಪುರ ಡಿ|| ಹೋಟಗಿ ನಿವಾಸಿಗಳಾದ ಮ|| ರಾ|| ಭೀಮಣ್ಣಾನವರು ಚರಶೃಷ್ಟಿಮಾಡಿಸಿದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಹೋಟಗಿ ಬೃಹನ್ಮಠದ ಪಟ್ಟಾಧ್ಯಕ್ಷರ ದ್ವಾರಾ ತಲ್ಪಿರುತ್ತದೆ.

ಚಿತ್ರದುರ್ಗ ಡಿ|| ಚಳ್ಳಕೆರೆ ತಾಲೂಕು ಕೋಟೆ ಚನ್ನಮಲ್ಲಿಕಾರ್ಜುನಸ್ವಾಮಿಗಳು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀಮದ್ವೀರಶೈವ ಧರ್ಮಸುಧಾರಣೀಸಭಾ

ಬೇಗೂರು.

ವೀರಶೈವಮತಬಾಂಧವರೇ! "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ" ಎಂಬ ವಾಕ್ಯದಂತೆ ದೊಡ್ಡವರು ಯಾವ ಆಚಾರದಿಂದ ನಡೆಯುವರೋ ಸಣ್ಣವರೂ ಅದನ್ನೇ ಕಲಿತುಕೊಳ್ಳುವರು. ಹಿರಿಯರು ಯಾವುದಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರೋ ಮುಂದಿನ ಚಿಕ್ಕವರೂ ಅದನ್ನೇ ಪ್ರಮಾಣವೆಂದು ಮಾನಿಸುವರು. ಆದರೆ ಹಿಂದಿನವೆಂದು ಎಲ್ಲವೂ ಪ್ರಮಾಣವೆಂದು ತಿಳಿಯಲಿಕ್ಕೆ ಬರುವದಿಲ್ಲ. ಈಗಿನವೆಂದು ತಿರಸ್ಕರಿಸಲಿಕ್ಕೂ ಬರುವದಿಲ್ಲ. ಕಾಲಮಾನಕ್ಕನುಸರಿಸಿ ಅನ್ಯಯುವ್ಯತಿರೇಕಗಳಿಂದ ಕೆಲಕೆಲವು ವಿಷಯಗಳ ಹಾನೋಪಾದಾನಗಳನ್ನು ಸ್ವೀಕರಿಸಲೇ ಬೇಕಾಗುವದು. ಈಗಿನ ನವನಾಗರೀಕತೆಯ ಸಮಯಕ್ಕೆ ಕೆಲವು ಹಿಂದಿನ ಕೃತಿಗಳು ವಿರೋಧಕರಗಳಾಗಿರುವವು. ಅವುಗಳನ್ನು ಜೋರಿನಿಂದ ಬಿಡಲೇಬೇಕಾಗುವದು. ಕೆಲವು ಹೊಸ ನಿಯಮಗಳನ್ನು ಸ್ವೀಕರಿಸಲೇಬೇಕಾಗುವದು. ಅಂದರೆ ನಿಷಿದ್ಧ ನಿಯಮಗಳನ್ನು ದೂರೀಕರಿಸಿ ಉತ್ತಮ ನಿಯಮಗಳನ್ನು ಅನುಸರಿಸಬೇಕಾಗುವದು. ಇದರಿಂದ ಪ್ರತಿಯೊಂದು ವ್ಯಕ್ತಿಯ ಮತ್ತು ಸಮಾಜದ ಸುಧಾರಣೆಯಾಗುವದು. ಎಲ್ಲಿಯವರೆಗೆ ಮನುಷ್ಯನಿಗೆ ವಿದ್ಯಾಸಂಸ್ಕಾರಗಳಿರುವದಿಲ್ಲವೋ ಅಲ್ಲಿಯವರೆಗೆ ತಮ್ಮಲ್ಲಿಯ ತಪ್ಪುತಡೆಗಳು ತಿಳಿಯುವದಿಲ್ಲ. ವಿದ್ಯಾಪ್ರಕಾಶದಿಂದ ಅವಿದ್ಯಾತಮಸ್ಸು ನಷ್ಟವಾದರೆ ನಿಜಮಸಿಯವು ದೃಗ್ಗೋಚರವಾಗುತ್ತದೆ. ಗಾಢಾಂಧಕಾರದಲ್ಲಿ ಶಿಕ್ಕಿ ದಿಗ್ಭ್ರಾಂತನಾದವನಿಗೆ ಹೇಗೆ ಪ್ರಕಾಶದ ಸಹಾಯವು ಬೇಕಾಗುವದೋ ಹಾಗೆಯೇ ಅಜ್ಞಾನಾಂಧಕಾರದಲ್ಲಿ ಮುಳುಗಿದವನಿಗೆ ಶಾಸ್ತ್ರಪ್ರಕಾಶವು ಬೇಕೇಬೇಕು. ಆತಏವ ಪ್ರತ್ಯೇಕ ಮನುಷ್ಯನು ಪ್ರತಿಕ್ಷಣದಲ್ಲಿ ಬುದ್ಧಿವರ್ಧಕಗಳೂ ಹಿತಮಾರ್ಗಬೋಧಕಗಳೂ ಆದ ಶಾಸ್ತ್ರೀಯ ಗ್ರಂಥಗಳನ್ನು ಓದುತ್ತಿರಬೇಕು. ಹೇಗೆಹೇಗೆ ಉತ್ತಮ ಗ್ರಂಥಗಳನ್ನು ಓದುವನೋ ಹಾಗೆಹಾಗೆ ವಿಜ್ಞಾನಿಯಾಗುತ್ತ ಹೋಗುವನು. ವಿಜ್ಞಾನಿಯು ಸುಖವಿಶೇಷ (ಮೋಕ್ಷ) ವನ್ನು ಪಡೆಯುವನೆಂದು ಬೇರೆ ಬರೆಯಲವಶ್ಯಕತೆಯಿಲ್ಲ. ಹಿಂದಿನಕಾಲದಲ್ಲಿ ಈಗಿನಂತೆ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳಿಲ್ಲದ್ದರಿಂದ ಬಹು ಜನರು ಹೀನಾವಸ್ಥೆಯಲ್ಲಿದ್ದರು. ದೈವಯೋಗದಿಂದ ಈಗಮಾತ್ರ ಆ ಹೀನಾವಸ್ಥೆಯು ನಷ್ಟವಾಗಿ ಅನುಕೂಲತೆಯ ವಾತಾವರಣದಿಂದ ಎಲ್ಲಿ ನೋಡಿದರೂ ವಿದ್ಯಾಭ್ಯಾಸದ ರಾಟಿಯು ಒತ್ತರದಿಂದ ತಿರುಗಿ ಎಂತಹ ಕಾಡುಜನರಾದರೂ ಸುಧಾರಣಾಶಿಖರವನ್ನೇರುತ್ತಿರುವರು. ಇದು ಭಾವೀಜಗತ್ಕಲ್ಯಾಣದ ಶುಭಶಕುನವೇ ಸರಿ. ಆದರೆ ವಿದ್ಯಾಭ್ಯಾಸಮಾಡಿ ದಾಕ್ಷಿಣ್ಯಕ್ಕೆ ಮನುಷ್ಯನು ಉತ್ತಮನೆಂದು ಹೇಳಲಿಕ್ಕೆ ಬರುವದಿಲ್ಲ. ಕನ್ನಡಿಯ ಸಹಾಯದಿಂದ ಮುಖಲಕ್ಷಣವನ್ನು ತಿಳಿಯುವಂತೆ ವಿದ್ಯಾಸಹಾಯದಿಂದ ತನ್ನ ಸಮಾಜದಲ್ಲಿಯ ವ್ಯತ್ಯಾಸಗಳನ್ನು ತಿಳಿದು ಅವನ್ನು ದೂರಮಾಡಿದರೆ ವಿದ್ಯೆಯು ಸಾರ್ಥಕವಾಗುವದಲ್ಲದೇ ತಾನೂ ಸಮಾಜವೂ ಉನ್ನತಾವಸ್ಥೆಯನ್ನೈದುವದರಲ್ಲಿ ಯಾವ ಸಂದೇಹವೂ ಇಲ್ಲ. ಕನ್ನಡಿಯು ನಿರ್ಮಲವಿರುವದಲ್ಲದೇ ಕಣ್ಣುಗಳು ಸಹ ಸ್ವಚ್ಛವಾಗಿದ್ದರೂ ಮುಖದಲ್ಲಿಯ ವ್ಯಂಗ್ಯವನ್ನು ತಿಳಿದು ಸುಧಾರಿಸದಿದ್ದರೆ ಪಶುವಿಗಿಂತಲೂ ಹೆಚ್ಚೇನೂ ಆಗುವದಿಲ್ಲ. "ಸಾಕ್ಷರಾವಿಪರೀತಾಶ್ಚೇದ್ರಾಕ್ಷಸಾಏವಕೇವಲಂ" ಎಂಬಂತೆ ಸಾಕ್ಷರ (ಕಲಿತವ) ರು ವಿಪರೀತರಾದರೆ ಅಂದರೆ ಅಡ್ಡಮಾರ್ಗ ಹಿಡಿದರೆ ರಾಕ್ಷಸರೇ ಆಗುವರು (ಸಾಕ್ಷರಾ—ರಾ-ಕ್ಷ-ಸಾ) ಅಕ್ಷರಾಭ್ಯಾಸದ ಕಾರಣವು ದೇಶೋಧರ್ಮಗಳಿಂದ ಕೂಡಿ ಆತ್ಮೋನ್ನತಿಯನ್ನು ಮಾಡಿಕೊಳ್ಳುವದಕ್ಕಿರುವದಲ್ಲದೆ ಪರಪೀಡೆಗಾಗಿರುವದಿಲ್ಲ. ಕೇವಲ ಅಕ್ಷರಾಭ್ಯಾಸದಿಂದಲೇ ಮನುಷ್ಯನ [illegible]ಗುವದಿಲ್ಲ "ಲೋಕೇಗುರುತ್ವಂ ವಿಪರೀತತಾಂಚ ಸ್ವಚೇಷ್ಟಿತಾನ್ಯೇವ ನರಂ ನಯಂತಿ" ಎಂಬಂತೆ ಉನ್ನತಿಯನ್ನಾಗಲಿ ಅವನತಿಯನ್ನಾಗಲಿ ಪಡೆಯಬೇಕಾದರೆ ತನ್ನಲ್ಲಿರುವ ಶುಭಾಶುಭ ಕೃತಿಗಳೇ ಕಾರಣಗಳಾಗಿರುವವಲ್ಲದೆ ಬೇರೊಂದಲ್ಲ. ಶುಭಾಶುಭಗಳ ತಾರತಮ್ಯವನ್ನು ತಿಳಿಯುವದಕ್ಕಾಗಿಯೇ ದೇವರು ಮನುಷ್ಯನ ಕೈಯಲ್ಲಿ ಶಾಸ್ತ್ರದರ್ಪಣವನ್ನು ಕೊಟ್ಟಿರುವನು. ಅಂದರೆ ಅದರ ಸಾರ್ಥಕತೆಯಾಗಿ ಮಾನವೀಜನ್ಮದ ಉದ್ಧಾರವಾಗಬೇಕೆನ್ನುವದೇ ಮಥಿತಾರ್ಥವು. ಇಂತಹ ಈಗಿನ ನವಸುಧಾರಣೆಯ ವಾತಾವರಣಕ್ಕೆ ಮೈಯೊಡ್ಡಿ ಸುಖಶಾಂತಿಗಳನ್ನು ಪಡೆಯದ ಸಮಾಜಗಳೇ ಇಲ್ಲ. ಆದರೆ "ದೃಷ್ಟ್ವಂಕಿಮಪಿ ಲೋಕೇಸ್ಮಿನ್ನನಿರ್ದೋಷಂ ನನಿರ್ಗುಣಂ" ಎಂಬಂತೆ ಕೆಲವು ಮೂಲೆಯಲ್ಲಿರುವ ಶಾಸ್ತ್ರಗಂಧರಹಿತರಾದ ನಾವೇ ಧನ್ಯರೆಂದು ಮೆರೆಯುವ ಗರ್ವಿತ ಕೂಪಮಂಡೂಕಗಳು ಇನ್ನೂ ತಮ್ಮ ಹಳೇ ಜಿಗಿಯನ್ನು ಬಿಡಲೊಲ್ಲವು. ಈ ಜಿಗಿಯನ್ನು ಕಿತ್ತಬೇಕಾದರೆ ಪರಶಿವನ ಕೈಯಲ್ಲಿಯ ಮೂರು ಮುಖದ ಶೂಲವೇ ಬೇಕಾಗುವದೋ ಏನೋ? ಅಥವಾ ಪಾಪಪುಣ್ಯಗಳ ವಿಚಾರವನ್ನು ಮಾಡುವ ಯಮರಾಜನೇ ಈ ಅಧರ್ಮಗಳನ್ನು ಪುಣ್ಯಮಯವಾದ ಈ ಭೂಲೋಕದಿಂದ ಕಿತ್ತೊಗೆಯಬೇಕಾಗಿರುವದು. ಇವೆಲ್ಲ ರಗಳೆಗೆ ಮೂಲವೆಂದರೆ ಕೆಲವು ಕಲಿತ ಮೂರ್ಖರು ಕೇವಲ ತಾಮಸೀಕೃತ ಹಿಂಸಾಕರ್ಮವನ್ನು ಮಾಡುವದೇ ಹೌದು. ಎಲ್ಲ ಪ್ರಸಿದ್ಧ ಸ್ಥಳಗಳಲ್ಲಿ ಈ ಹಿಂಸೆಯು ತಡೆಯಲ್ಪಟ್ಟಿದ್ದರೂ "ಮಳೆಯ ನೀರು ನಿಂತರೂ ಮರದ ನೀರು ನಿಲ್ಲದಂತೆ" ಇನ್ನೂ ಮೂಲೆ ಮುಂಗಾಟಿಗಳಲ್ಲಿ ಈ ರಾಕ್ಷಸೀಕೃತ್ಯವು ಮುಂದುವರಿಯಲಿಕ್ಕೆ ಹನಿ ಇಳ್ಳುತ್ತಲೇ ಇರುವದು. ಮಾಂಸಾಹಾರಿಗಳು ಸಹ ಈ ಕ್ರೂರಕೃತ್ಯವನ್ನು ಬಿಟ್ಟಿರುವಾಗ ಉತ್ತಮವರ್ಗದವರು ಈ ರಾಕ್ಷಸೀಕೃತ್ಯಕ್ಕೆ ಕೈಕೊಡುವದೆಂದರೆ ಕಲಿರಾಜನ ಕೈಸಾಧನೆಯಲ್ಲದೇ ಮತ್ತೇನು? ಹಿಂದಿನಿಂದ ಹಿರಿಯರು ಮಾಡುತ್ತಬಂದಿರುವರು. ನಾವಾದರೂ ಮಾಡುವವರೇ ಎಂದು ರಹದಾರಿಯನ್ನು ತೋರಿಸುವರು. ಇದೆಂತಹ ಮೂಢತನವು? ಹಿಂದೆ ನಮ್ಮಪ್ಪನು ಬಡವನಿದ್ದರೆ ನಾವೂ ಬಡವರೇ ಇರಬೇಕೇ? ಈ ಮಹಾಶಯರ ಹೃದಯಕೋಶದಲ್ಲಿ ಕರುಣಾಳುವಾದ ದೇವರು ದಯಾ, ಧರ್ಮ, ಸಹಾನುಭೂತಿ ಎಂಬ ಶಬ್ದಗಳನ್ನು ಬರೆಯಲು ಮರೆತಿರಬಹುದೇನು? ಈ ಹಿಂಸೆಯು ನಡೆಯಬೇಕಾದರೆ ದೇವಿಯು ಮುಂದೆಯೇ ಬಹುಶಃ ನಡೆಯುವದು, ಯಾವ ದೇವಿಯು ಜಗಜ್ಜನನಿಯೆನಿಸಿಕೊಂಡು ಪುಣ್ಯಮಾರ್ಗದಿಂದ ನಡೆಯುತ್ತಿರುವ ತನ್ನ ಅಖಿಲಪುತ್ರರ ಬಾಲಲೀಲೆಗಳನ್ನು ನೋಡುತ್ತಿರುವಳೋ? ಅಂತಹ ಪರಮಬಂಧುವಾದ ತಾಯಿಯೇ ಇಂತಹ ಹಿಂಸಾಕರ ಅಸುರೀಲೀಲೆಗಳ ಪ್ರಚಂಡತಾಂಡವವನ್ನು ನೋಡುವಳೆಂದರೆ ಕಲಿರಾತ್ರಿಯಲ್ಲಿಯ ಕುಕರ್ಮಾಕಾಗ್ರತ್ತಲೆಯಿಂದ ಆ ಲೋಕಮಾತೆಯ ದಿವ್ಯನೇತ್ರಗಳು ಸಹ ಮಬ್ಬುಗವಿದಿರಬಹುದೇನು? ಮಹಿಷಾಸುರನೆಂದರೆ ದೇವಿಯು ಗಂಡನೆಂದೂ ಯಾವದೋ ಒಂದು ಕಾರಣದಿಂದ ತನ್ನ ಗಂಡನನ್ನೇ ತಾನು ಕಡಿದು ತೃಪ್ತಳಾದಳೆಂದೂ ತನ್ನೂ ಲಕ ಕೋಣಗಳ ಬಲಿಯನ್ನು ಕೊಟ್ಟರೆ ದೇವಿಯು ಪ್ರಸನ್ನಳಾಗುವಳೆಂದೂ ಒಂದು ಗ್ರಾಮ್ಯಕಥೆಯನ್ನು ಹೇಳುವರು, ಅಹಹ ಇದೆಂತಹ ದಿವ್ಯಚರಿತ್ರವು? ಲೋಕಾನುಗ್ರಹಾರ್ಥವಾಗಿ ಮಹಾದೇವಿಯು ದಿವ್ಯರೂಪಧಾರಿಣಿಯಾಗಿ ಭೂತಲಾಂತರಿಕ್ಷಗಳಲ್ಲಿ ಅವಕಾಶವಿಲ್ಲದಂತೆ ವಿರಾಡ್ರೂಪವನ್ನು ಧರಿಸಿ, ಶುಂಭ, ನಿಶುಂಭ, ರಕ್ತಬೀಜ, [illegible] ಮಹಾಪರಾಕ್ರಮಿಗಳಾದ ರಾಕ್ಷಸರನ್ನು ಸಂ[illegible] ಬ್ರಹ್ಮಾಂಡಕ್ಕೆ ಸೌಖ್ಯವೃಷ್ಟಿಯನ್ನು ಸುರಿಸಿದ ದೇವಿ[illegible]ಚರಿತ್ರವೆತ್ತ? ಈ ಜನರು ಅವಲಂಬಿಸುವ ಮಸ್ಯಚರಿತ್ರವೆತ್ತ? ಅಯ್ಯೋ ಮಹಾಜನರೇ ಇನ್ನಾದರೂ ಕಣ್ತೆರೆಯಿರಿ. ದೇವಿಯೇ? ನೀನಾದರೂ ಇವರನ್ನು ದಾರಿಗೆ ಹಚ್ಚಬಾರದೇ? ದಡ್ಡಮಕ್ಕಳಮೇಲೆ ಮಾತೆಯ ಮಮತೆಯು ವಿಶೇಷವಾಗಿದ್ದು ಪ್ರೀತಿಯಿಂದ ಕಾಪಾಡುವಂತೆ ಜಗದಂಬೆಯೇ? ಅಜ್ಞಮಕ್ಕಳಂತಿರುವ ಕೋಣ, ಕುರಿ, ಕೋಳಿ ಮುಂತಾದವುಗಳ ಮೇಲೆ ನಿನ್ನ ದಯಾದ್ರ್ದೃಷ್ಟಿಯನ್ನು ಬೀರಬಾರದೇ? ದಡ್ಡಮಕ್ಕಳಗೋಳನ್ನು ಬಿಡಿಸಬಾರದೇ? ನಿರಪರಾಧಿಗಳಾದ ಪ್ರಾಣಿಗಳ ಪೀಡೆಯು ನಿನಗೆ ಪ್ರಿಯವಾದುದೇ? ದುಷ್ಟರ ದುರಾಚಾರವನ್ನು ಸುಮ್ಮನೇ ನೋಡುತ್ತಿರುವೆಯಲ್ಲ? ಅಧರ್ಮವು ನಿನಗೂ ಬೇಕಾಯಿತೇ? ಹಾಯ್ ಹಾಯ್ ತಾಯಿಯೇ? ನೀನೇ ನಿನ್ನ ಹಸ್ತದಿಂದ ಮರುಳುಮಕ್ಕಳಿಗೆ ವಿಷವಿಡುವದು ಯೋಗ್ಯವೇ? ತಾಯಿಯು ಮುನಿದರೆ ಮಕ್ಕಳೆಲ್ಲಿ ಬದುಕಬೇಕು? ನಿರಪರಾಧಿಗಳೂ, ಸರ್ವದಾ ಪರೋಪಕಾರ್ಯಕ್ಕೆ ತನುವನ್ನು ಸವಿಸುವವೂ, ಆದ ಮೂಕಪ್ರಾಣಿಗಳನ್ನು ನೀನು ಬಲಿಯನ್ನು ಕೊಳ್ಳುವದಕ್ಕಿಂತಲೂ ದುರ್ಮಾರ್ಗಿಗಳಾದ ಜನರನ್ನು ನಿನ್ನ ಕೈಯಲ್ಲಿಯ ಕೂರಲಗಿನಿಂದ ಕೊರೆಯಬಾರದೇ? ಏಕೆ, ನಿನ್ನಲ್ಲಿ ಇದ್ದ ಹಿಂದಿನ ಮಹಾಸಾಮರ್ಥ್ಯವು ಕಾಲಕ್ರಮದಿಂದ ಕಳೆಗುಂದಿರುವದೇನು? ದೇವತೆಗಳ ಯಜ್ಞಭಾಗಗಳನ್ನ ಹರಿಸಿದ ಪುರಾಣಕಾಲದ ರಾಕ್ಷಸರ ಸಂಹಾರಕ್ಕೆ ಭವ್ಯರೂಪವನ್ನು ಧರಿಸಿದ ನೀನು ಈಗಿನ ಈ ನರರಾಕ್ಷಸರನ್ನು ಸಂಹರಿಸಲಿಕ್ಕೆ ಇಲ್ಲವೇ ತಿದ್ದಲಿಕ್ಕೆ ಅಷ್ಟೇನು ಶ್ರಮವಹಿಸುವ ಕಾರಣವೇ ಇಲ್ಲ. ಭ್ರೂಭಂಗಮಾತ್ರದಿಂದಲೇ ಸರ್ವವೂ ಸುವ್ಯವಸ್ಥಿತವಾಗುವದು. ದೇವೀ! ಎಲ್ಲವೂ ನಿನ್ನ ಕೈಯಲ್ಲಿಯೇ ಇರುವದು. ಕೊಲ್ಲುವವಳೂ ನೀನೆ? ಕಾಯುವವಳೂ ನೀನೆ? ಮೂಕರನ್ನು ಮೂಲೆಗೊತ್ತಬೇಡ. ಬುದ್ಧಿಕಲಾಕೌಶಲ್ಯಗಳಲ್ಲಿ ಅವುಗಳನ್ನು ಹಿಂದಿಟ್ಟಿದ್ದರೂ ಸುಖವೆಂಬುದು ಎಲ್ಲ ಪ್ರಾಣಿಗಳಲ್ಲಿ ಸಮನಾಗಿ ಹಂಚಲ್ಪಡಬೇಕಲ್ಲವೇ? ಅಡವಿಯ ಹುಲ್ಲು ತಿಂದು ಮಡುವಿನ ನೀರನ್ನು ಕುಡಿದು ಎಡಬಿಡದೆ ದುಡಿದು ಮನುಷ್ಯರಿಗೆ ಕಡುಸುಖವನ್ನೀಯುವ ಪರೋಪಕಾರಿಗಳಾದ ಬಡಮೂಕ ಜೀವರಾಶಿಯನ್ನು ಪೀಡಿಸದಿರೆಂದು ಬೇಡುತ್ತೇನೆ. ಇರಲಿ ವಾಚಕಮಹಾಶಯರೇ? ಪ್ರಭೆಯಲ್ಲಿ ಪ್ರಸಿದ್ಧಪಡಿಸಿದಂತೆ ಎಪ್ರಿಲ್ ತಾ|| 4-5-30 ನೇ ಇಸ್ವಿ ಈ ದಿವಸಗಳಲ್ಲಿ ಧಾರವಾಡ ಜಿಲ್ಹಾ ಕಲಘಟಗಿ ತಾಲೂಕು ಪೈಕಿ ಬೇಗೂರಲ್ಲಿ 2 ನೆಯ ಶ್ರೀಮದ್ವೀರಶೈವ ಧರ್ಮಸುಧಾರಿಣೀಸಭೆಯು ಹುಬ್ಬಳ್ಳಿ ತಾಲೂಕು ಪೈಕಿ ಪಾಲೀಕೊಪ್ಪದ "ಪುಣ್ಯಾಶ್ರಮ ಶ್ರೀ ರೇಣುಕಬಾಗ" ನಿವಾಸಿಗಳಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಿಸಲ್ಪಟ್ಟಿತು. ಈ ಸಭೆಯ ಮುಖ್ಯ ಉದ್ದೇಶವೆಂದರೆ ಮೇಲೆ ವರ್ಣಿಸಿದ ಹಿಂಸಾಕರ್ಮವನ್ನು ದೂರೀಕರಿಸುವದಲ್ಲದೆ ಬೇರೊಂದಿಲ್ಲ. ಸದರಿ ಗ್ರಾಮದಲ್ಲಿ ದುರ್ಗವ್ವ ದ್ಯಾಮವ್ವ ಎಂಬ ಎರಡು ದೇವತೆಗಳಿರುವವು. ಈ ದೇವತೆಗಳ ತೃಪ್ತಿಗೋಸ್ಕರ ಈ ಊರ ಜನರು ಕೋಣ ಕುರಿ ಮೊದಲಾದ ಜೀವಬಲಿಯನ್ನು ಕೊಡಲು ಕಟಿಬದ್ಧರಾಗಿರುವರು. ಇವರಲ್ಲಿ 18 ಆಣೆ ಭಾಗ ವೀರಶೈವರೇ ಇರುವರೆಂದು ದುಃಖದಿಂದಲೂ, ನಾಚಿಕೆಯಿಂದಲೂ ಬರೆಯಬೇಕಾಗುವದು. ಮದ್ಯಪಾನದಿಂದ ಇಲ್ಲವೇ ಹಾಗೆಯೇ ಆವೇಶಪೂರ್ಣರಾಗಿ ದೇವರನ್ನುಹೇಳುವ ಚಾಂಡಾಲ ಸ್ತ್ರೀಪುರುಷರು ಗದ್ದರಿಸಿ ಬೊಗಳುವ ಹಿಂಸೆಗೆ ಅನುಕೂಲವಾದ ವಾಕ್ಯಗಳೇ ಇವರಿಗೆ ಪ್ರಚಂಡಪ್ರಮಾಣಗಳಾಗಿರುವವು. ತಿನಸುಬಕ್ಕರು ತಮಗೆ ಬೇಕಾದದ್ದನ್ನು ಹೇಳದೆ ಮತ್ತೇನು ಮಾಡಿಯಾರು? "ತಂದುಲಹರಣಾರ್ಥಂ ಫಣಿ ಪುಣ್ಯಾಹವಾಚನಂ ಕರಿಷ್ಯೇ" ಎಂಬಂತೆ ಈಗಿನ ಸ್ವಾರ್ಥಿಗಳ ಮೋಸತನವು ಧರ್ಮದ ಹೆಸರಿನಿಂದಲೇ ನಡೆಯಬೇಕಾಗಿರುವದು. ಈ ಪ್ರಾಣಿಬಲಿಯನ್ನು ಕೊಡದಿದ್ದರೆ ಊರಿಗೆ ಪೀಡೆಯು ಬರುವದಂತೆ? ಜ್ಞಾನಹೀನ ಪಶು ಪಕ್ಷಿಗಳನ್ನು ಬಲಿಕೊಡುವದಕ್ಕಿಂತಲೂ ವಿವೇಕಸಂಪನ್ನನೂ ಸರ್ವ[illegible] ಕೊಟ್ಟರೆ ದೇ[illegible]

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಹಾತ್ಮರ ದಸ್ತಗಿರಿಯಾದನಂತರ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳುತನವನ್ನು ವಹಿಸಿದ್ದ ಮಿ|| ಅಬ್ಬಾಸ್ ತಾಯಬ್ಜಿಯವರು ದರ್ಶನದ ಉಪ್ಪಿನ ಕಾರ್ಖಾನೆಯಮೇಲೆ ದಾಳಿಯನ್ನಿಡಲು ಹೊರಟಾಗ 59 ಜನ ಸ್ವಯಂಸೇವಕರ ಸಮೇತ ದಸ್ತಗಿರಿಮಾಡಲ್ಪಟ್ಟು 6 ತಿಂಗಳ ಕಾರಾಗೃಹವಾಸಕ್ಕೆ ಗುರಿಯಾದರು. ಈ ಮುಂದಾಳುತನದ ಛಾರ್ಜನ್ನು ಸದ್ಯಃ ಶ್ರೀಮತಿ ಸರೋಜಿನಿನಾಯ್ಡುರವರು ವಹಿಸಿರುವರು.

ಬಾರ್ಡೋಲಿ ಸತ್ಯಾಗ್ರಹ ಎಂಬ ಪತ್ರಿಕೆಯಲ್ಲಿ ಸೂರತ್ ಡಿಸ್ಟ್ರಿಕ್ಟಿನಲ್ಲಿ ಇದುವರೆಗೆ 24,993 ತಾಳೆಯಮರಗಳನ್ನು ಕಡಿದುಹಾಕಿರುವದಾಗಿ ಪ್ರಸಿದ್ಧಪಡಿಸಲ್ಪಟ್ಟಿರುತ್ತದೆ.

ಬೆಂಗಳೂರಿನ ಶ್ರೀ|| ಚೂನಿಲಾಲ್ ಬಿ. ದೇಸಾಯಿ, ಜಯಂತಿಲಾಲ್ ಠಾಕೂರ್ ಮೊದಲಾದ ಇನ್ನೂ ಕೆಲವು ಗುಜರಾತೀ ವ್ಯಾಪಾರಿಗಳು ಶ್ರೀನಂದಗೌರೀದೇವಿಯವರೇ ಮೊದಲಾದ ಕೆಲವು ಸ್ತ್ರೀಯರೊಡನೆ (ಕಳೆದ 12 ನೆಯ ತಾರೀಖಿನ ದಿವಸ) ಬಟ್ಟೆಯವ್ಯಾಪಾರಿಗಳಿಂದ ಪರದೇಶೀ ವಸ್ತ್ರ ಬಹಿಷ್ಕಾರದ ವಚನವನ್ನು ಪಡೆಯಲು ಹೊರಟರು. ಇವರು ಪ್ರತಿಯೊಂದು ಅಂಗಡಿಗೂ ಹೋಗಿ ಪರದೇಶೀವಸ್ತ್ರಗಳನ್ನು ಬಹಿಷ್ಕರಿಸಬೇಕೆಂದು ಬೋಧಿಸಿದರು. ಇವರ ಅಭಿಪ್ರಾಯದಂತೆ ನಡೆಯುವದಾಗಿ ಅನೇಕ ವರ್ತಕರು ಒಪ್ಪಿಕೊಂಡರು. ಬೆಂಗಳೂರಿನ ದೊಡ್ಡ ಪರದೇಶೀವಸ್ತ್ರ ವ್ಯಾಪಾರಿಗಳಾದ ಮೆಸ್ಸರ್ಸ್ ಕಪೂರ್ ಚಂದ್ ಅಂಡ್ ಕಂಪೆನಿಯವರು ಯುರೋಪಿಗೆ ಸಿಲ್ಕಿನ ಬಟ್ಟೆಗಳಿಗೆ ಕೊಟ್ಟಿದ್ದ ದೊಡ್ಡ ಆರ್ಡರನ್ನು ಕೂಡಲೇ ರದ್ದುಪಡಿಸಿದರು. ಮೆಸ್ಸರ್ಸ್ ಸಹಾಬ್ರದರ್ಸ್, ರತಿಲಾಲ್ ಅಂಡ್ ಕಂಪೆನಿ, ಕಪೂರ್ ಚಂದ್ ಅಂಡ್‌ಕೋ, ಚಬಿಲ್‌ದಾಸ್ ದಯಾಭಾಯ್, ಧರ್ಮಜಿಭಾಯ್ ಜವೇರ್‌ಚಂದ್, ಛೋಟಮಲ್ ನವಲ್‌ಜಿ ಅಂಡ್ ಕಂಪೆನಿ, ಎ. ಅಮೀಚಂದ್ ಅಂಡ್ ಕಂಪೆನಿ, ಎಸ್. ಬಿ. ಅಮಲೋಕಚಂದ್, ಮಮುಲ್ ರಾಜಜಿ, ಭಗವಾನ್‌ದಾಸ್ ಮತ್ತು ಕೆ. ಜೆ. ಮೆಹತಾರವರೇ ಮೊದಲಾದ ಮುಖ್ಯಮುಖ್ಯ ವರ್ತಕರು ಇಲ್ಲಿಂದ 6 ತಿಂಗಳುಗಳವರೆಗೆ ಪರದೇಶೀ ವಸ್ತ್ರಗಳನ್ನು ತರಿಸುವದಿಲ್ಲವೆಂದು ಪ್ರತಿಜ್ಞಾಪತ್ರಿಕೆಗೆ ರುಜುಮಾಡಿದರು. ಬೆಂಗಳೂರು ನಗರದ ಪರದೇಶೀವಸ್ತ್ರ ಬಹಿಷ್ಕಾರ ಕಮಿಟಿಯ ಮೆಂಬರರಾದ ಶ್ರೀ|| ಎಸ್. ವೆಂಕಟೇಶಯ್ಯನವರು ಎಲ್ಲ ವರ್ತಕರನ್ನೂ ಕಂಡು ಮಾತನಾಡಿದನಂತರ ಪ್ರತಿಜ್ಞಾಪತ್ರಿಕೆಗೆ ರುಜು ಹಾಕಲು ತಿರಸ್ಕರಿಸುವವರ ಅಂಗಡಿಗಳ ಮುಂದೆ ಪರದೇಶೀವಸ್ತ್ರ ಬಹಿಷ್ಕಾರ ಕಾರ್ಯವನ್ನು ಪ್ರಾರಂಭಿಸುವರು.

ಕಳೆದ 13ನೆಯ ತಾರೀಖಿನ ದಿವಸ ಕಲ್ಕತ್ತೆಯ ಪೋಲೀಸರು ಬಂಗಾಳಾ ಪ್ರೊವಿನ್ಶಿಯಲ್ ಕಾಂಗ್ರೆಸ್ ಕಮಿಟಿಯ ಆಫೀಸಿನಮೇಲೆ ದಾಳಿಯಿಟ್ಟು ಸತ್ಯಾಗ್ರಹ ಕಮಿಟಿಯ ಪ್ರೆಸಿಡೆಂಟರಾದ ಮಿ|| ಪೂರ್ಣಚಂದ್ರದಾಸ್‌ರವರನ್ನೂ 40 ಜನ ಸತ್ಯಾಗ್ರಹಿಗಳನ್ನೂ ದಸ್ತಗಿರಿ ಮಾಡಿರುವದಲ್ಲದೆ, ಸತ್ಯಾಗ್ರಹಿಗಳಿಗೆ ಸೇರಿದ ಕೆಲವು ಪದಾರ್ಥಗಳನ್ನೂ ರಾಷ್ಟ್ರೀಯ ಬಾವುಟವನ್ನೂ ತೆಗೆದುಕೊಂಡು ಹೋದರು. ಅದೇ ಸಮಯದಲ್ಲಿ ಕಾರ್ಪೊರೇಷನ್ ಬೀದಿಯಲ್ಲಿರುವ ಬ್ರಾಂಚ್ ಕಾಂಗ್ರೆಸ್ ಕಮಿಟಿಯಮೇಲೂ ಪೋಲೀಸರು ಇದೇರೀತಿಯಾಗಿ ದಾಳಿಯಿಟ್ಟು ಅಲ್ಲಿಯೂ ಸುಮಾರು 40 ಜನ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿರುತ್ತಾರೆ.

ಸುಮಾರು 100-150 ಜನ ಅಮೇರಿಕೆಯ ಪಾದ್ರಿಗಳು ಜಗತ್ತಿನ ಶಾಂತ್ಯರ್ಥವಾಗಿ ಮಹಾತ್ಮಾ ಗಾಂಧಿಯವರನ್ನು ಕೂಡಲೇ ಬಂಧವಿಮೋಚನೆ ಮಾಡಬೇಕೆಂದು ಬ್ರಿಟಿಷ್ ಮುಖ್ಯಮಂತ್ರಿಗಳಾದ ಮಿ|| ರಾಂಸೆ ಮ್ಯಾಕ್ಡೊನಾಲ್ಡರವರಿಗೆ ತಂತೀ ಮೂಲಕ ವಿಜ್ಞಾಪಿಸಿಕೊಂಡಿರುವರು.

ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಿದ ಸಮಯದಲ್ಲಿ ಬೊಂಬಾಯಿನಲ್ಲಿ ಆಚರಿಸಿದ ಹರತಾಳದ ಮೆರವಣಿಗೆಗೆ ಸುಮಾರು 5 ಲಕ್ಷ ಜನರು ಸೇರಿದ್ದರು. ಮೆರವಣಿಗೆಯು ಸುಮಾರು ೧|| ಮೈಲಿ ಉದ್ದವಾಗಿದ್ದಿತು.

ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಬೊಂಬೈ ಸರ್ಕಾರದವರು ಈ ಕೆಳಗೆ ಕಂಡಂತೆ ಪ್ರಸಿದ್ಧಪಡಿಸಿರುತ್ತಾರೆ.

ಇದೇ ಮೇ 5ನೆಯ ತಾರೀಖಿನ ದಿವಸ ಶ್ರೀ ಮೋಹನದಾಸ ಕರಮಚಂದ ಗಾಂಧಿಯವರನ್ನು ದಸ್ತಗಿರಿ ಮಾಡಿ ಎರವಾಡಾ ಜೈಲಿನಲ್ಲಿಟ್ಟಿರುತ್ತೇವೆ. ಮಹಾತ್ಮಾ ಗಾಂಧಿಯವರು ಮುಂದಾಳುಗಳಾಗಿ ನಿಂತು ಪ್ರಾರಂಭಮಾಡಿರುವ ಸತ್ಯಾಗ್ರಹ ಚಳವಳಿಯು ಎಲ್ಲೆಲ್ಲಿಯೂ ಕಾಯಿದೆಭಂಗದ ಹಾಗೂ ಅಶಾಂತತೆಯ ಬೊಬ್ಬಾಟವನ್ನು ಎಬ್ಬಿಸಿ, ಭರತಖಂಡದ ಪ್ರತಿಭಾಗದಲ್ಲೂ ಶಾಂತಿಭಂಗವನ್ನು ಮಾಡುತ್ತಲಿದೆ. ಈ ಚಳವಳಿಯು ಅಹಿಂಸಾತ್ಮಕರೂಪವಾದುದೆಂದು ಸಾಂಬ್ಳಿಟ್ಟಿರುವದಾದರೂ, ಹಿಂದೆ ನಡೆದ ಚಳುವಳಿಗಳಂತೆ ಅನೇಕ ಗಲಾಟೆಗಳಿಗೆ ಕಾರಣವಾಗಿರುವದು. ಮಿ|| ಗಾಂಧಿಯವರು ಈ ಗಲಾಟೆಗಳನ್ನು ಕಂಡು ಬಹಳವಾಗಿ ವಿಷಾದಪಟ್ಟರೂ ಅವರ ತುಂಟ ಹಿಂಬಾಲಕರ ಮನಸ್ಸಿನಮೇಲೆ ಅದರಿಂದ ಯಾವುದೊಂದು ಪರಿಣಾಮವೂ ಆಗದೆ, ಅವರನ್ನು ಹತೋಟಿಗೆ ತರುವದು ಮಿ|| ಗಾಂಧಿಯವರಿಂದ ಆಗದ ಕೆಲಸವೆಂದು ವಿಶದವಾಗುತ್ತಿರುವುದು. ಅಹಮದಾಬಾದಿನಿಂದ ದಂಡಿಗೆ ಹೋಗುವಾಗ್ಗೆ ಇವರು ಪ್ರಯಾಣಮಾಡಿದ ಗುಜರಾಥದಲ್ಲಿ ಇವರ ಚಳವಳಿಯ ಪರಿಣಾಮವು ಚೆನ್ನಾಗಿ ಕಂಡುಬರುತ್ತಿರುವುದು. ಈ ಪ್ರಾಂತದಲ್ಲಿ ಅದರಲ್ಲಿಯೂ ಕೈರಾ ಮತ್ತು ಸೂರತ ಡಿಸ್ಟ್ರಿಕ್ಟಿನ ಕೆಲಕೆಲ ತಾಲೂಕುಗಳಲ್ಲಿ ಮಿ|| ಗಾಂಧಿ ಮತ್ತು ಅವರ ಅನುಯಾಯಿಗಳು ಕ್ರೂರವಾದ ಬಹಿಷ್ಕಾರಚಳುವಳಿಯನ್ನು ಪ್ರಾರಂಭಿಸಿ, ಅನೇಕ ಜನ ಪಟೇಲರು ರಾಜೀನಾಮೆ ಕೊಡುವಂತೆ ಮಾಡಿರುತ್ತಾರೆ. ಇದರಿಂದ ರಾಜ್ಯಾಡಳಿತಕ್ಕೆ ವಿಶೇಷತೊಂದರೆಯಾಗಿರುತ್ತದೆ. ಸರಕಾರಕ್ಕೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದ ಪ್ರಜೆಗಳ ವಿಷಯದಲ್ಲಿಸಹ ಈ ಬಹಿಷ್ಕಾರವನ್ನು ಮುಂದುವರಿಸಿರುತ್ತಾರೆ. ಇವರು ಕೈಗೊಂಡ ಉಪ್ಪಿನಕಾಯಿದೆ ಭಂಗದಿಂದಲಾಗಲಿ ಮದ್ಯಪಾನನಿಷೇಧ, ಪರದೇಶೀವಸ್ತ್ರಬಹಿಷ್ಕಾರ ಮುಂತಾದ ಕಾರ್ಯಗಳಿಂದಲಾಗಲಿ ತಮ್ಮ ಇಚ್ಛಿತಫಲವು ದೊರೆಯದಿರುವದನ್ನು ಕಂಡು ಮಿ|| ಗಾಂಧಿಯವರು ಗ್ರಾಮಸ್ಥರಿಗೆ ಕಂದಾಯವನ್ನು ಕೊಡದಂತೆ ಪ್ರೇರಿಸಿದರು. ಹಾಗೂ ಸ್ವಲ್ಪ ದಿವಸಗಳ ಮುಂಚೆ ದರ್ಶನ ಅಥವಾ ಚರ್ವಾಡಾದಲ್ಲಿರುವ ಉಪ್ಪಿನಕಾರ್ಖಾನೆಯ ಮೇಲೆ ದಾಳಿಯಿಟ್ಟು ಅಲ್ಲಿರುವ ಉಪ್ಪನ್ನು ವಶಪಡಿಸಿಕೊಳ್ಳಬೇಕೆಂಬ ತಮ್ಮ ಅಭಿಪ್ರಾಯವನ್ನು ಪ್ರಕಾಶಗೊಳಿಸಿದರು. ಸದರಿ ಉಪ್ಪಿನಕಾರ್ಖಾನೆಗಳು ಸರಕಾರಕ್ಕೆ ಸೇರದೆ ಖಾಸಗಿ ಜನಗಳದಾಗಿರುವವು. ಯಾವ ಕಾರಣದಿಂದಲೇ ಆಗಲಿ ಇಂಥ ದಾಳಿಗೆ ಬಲವನ್ನು ಉಪಯೋಗಿಸಬೇಕಾಗುವದು. ಅದನ್ನು ತಪ್ಪಿಸಲು ಉಪ್ಪು ತಯಾರುಮಾಡುವವರೂ ಹಾಗೂ ಪೋಲೀಸರೂ ತಮ್ಮ ಬಲವನ್ನು ಉಪಯೋಗಿಸಬೇಕಾಗುವದು. ಮಿ|| ಗಾಂಧಿಯವರು ಅಹಮದಾಬಾದನ್ನು ಬಿಟ್ಟಾರಭ್ಯ ಮುಂಬಯಿ ಗವರ್ನಮೆಂಟಿನವರು ಅತ್ಯಂತ ಶಾಂತತೆಯಿಂದಎಲ್ಲವನ್ನೂ ಸಹಿಸಿಕೊಂಡು ಬಂದರು. ಹಿಂಸೆಯು ತಲೆದೋರದಿರುವ ಪಕ್ಷದಲ್ಲಿ ಮಿ|| ಗಾಂಧಿಯವರು ಕೈಕೊಂಡಿರುವ ಉಪ್ಪಿನ ಕಾಯಿದೆ ಭಂಗದ ಚಳವಳಿಯು ಸ್ವಲ್ಪದಿವಸದಲ್ಲಿಯೇ ನಿಂತುಹೋಗುವದೆಂದು ಭಾವಿಸಿ ಸರಕಾರವು ಹೆದರಿ ನನ್ನು ನಿರುವದೆಂಬ ಅಪಕೀರ್ತಿಯನ್ನು ಸಹ ಗಮನಿಸದೆ, ಇದುವರೆಗೆ ಸುಮ್ಮನಿದ್ದುದಾಯಿತು. ಆದರೆ ಇದುವರೆಗೆ ನಡೆದಿರುವ ವಿದ್ಯಮಾನಗಳನ್ನು ನೋಡಿದರೆ, ಮಿ|| ಗಾಂಧಿಯವರ ಚಳುವಳಿಯನ್ನು ತಡೆಯದಿದ್ದರೆ ಹಿಂದಿನ ಅಸಹಕಾರ ಚಳವಳಿಯಂತೆ ಈಗಲೂ ಅನರ್ಥಕಾರಿಯಾಗುವದೆಂದು ಸ್ಪಷ್ಟವಾದ್ದರಿಂದ, ಬೊಂಬಾಯಿ ಸರಕಾರದವರು ಇಂಡಿಯಾ ಸರಕಾರದೊಡನೆ ದೀರ್ಘವಾದ ಆಲೋಚನೆಯನ್ನು ಮಾಡಿ, ಮಿ|| ಗಾಂಧಿಯವರನ್ನು ಸುಮ್ಮನೆ ಬಿಟ್ಟಿದ್ದರೆ ಭರತಖಂಡಕ್ಕೆ ಅಪಾರವಾದ ಹಾನಿಯು ಸಂಭವಿಸುವದೆಂದು ನಿರ್ಧರಿಸಿದರು. ಹಾಗೂ ಸದ್ಯದ ವಿದ್ಯಮಾನಗಳನ್ನು ಪರಿಶೀಲಿಸಿ, ಅವರನ್ನು 1827 ನೆಯ ಇಸವಿಯ 25 ನೆಯ ರೆಗ್ಯುಲೇಷನ್ನಿಗನುಸಾರವಾಗಿ ದಸ್ತಗಿರಿಮಾಡಿ, ಸರಕಾರದವರ ಅಭಿಪ್ರಾಯವಿರುವವರೆಗೆ ನಿರ್ಬಂಧದಲ್ಲಿರಿಸಬೇಕೆಂದು ತೀರ್ಮಾನಮಾಡಿರುತ್ತಾರೆ. ಅವರ ಬಂಧನಕಾಲದಲ್ಲಿ ಅವರ ಆರೋಗ್ಯ ಮತ್ತು ಸೌಖ್ಯಕ್ಕೆ ಬೇಕಾದ ಸಮಸ್ತ ಏರ್ಪಾಡುಗಳೂ ಮಾಡಲ್ಪಡುವುವು.

ತಯಾಬ್ಜಿಯವರ ಸ್ಥಾನಕ್ಕೆ ಬಂದ ಶ್ರೀಮತಿ ಸರೋಜಿನೀ ದೇವಿಯವರು ಕಳೆದ 15ನೇ ತಾರೀಖಿನ ದಿವಸ ಪ್ರಾತಃಕಾಲ ಉಂಟಾಡಿ ಶಿಬಿರದಿಂದ 50 ಜನ ಸ್ವಯಂಸೇವಕರೊಡಗೂಡಿ ೧|| ಮೈಲಿನಲ್ಲಿರುವ ದರ್ಶನದ ಉಪ್ಪಿನ ಕಾರ್ಖಾನೆಯಮೇಲೆ ದಾಳಿಯಿಡಲು ವಿಜಯಯಾತ್ರೆಯನ್ನು ಬೆಳೆಸಿದರು. ಆಕ್ಷಣದಲ್ಲಿಯೇ ಆಯುಧಧಾರಿಗಳಾದ ಪೋಲೀಸಿನವರು ಶ್ರೀಮತಿಯವರಿಗೆ ಮುಂದೆ ಹೆಜ್ಜೆಯಿಡಲು ಅವಕಾಶವನ್ನು ಕೊಡದೆ ತಡೆದಿರುತ್ತಾರೆ. ಸೇನಾಧಿನಾಯಕಿಯರಾದ ಶ್ರೀಮತಿಯವರು ಸ್ವಯಂಸೇವಕರೊಂದಿಗೆ ಬಿಸಿಲುಬೇಗೆಯನ್ನದೆ ಹಗಲಿರುಳೂ ಭಜನೆಯನ್ನು ಮಾಡುತ್ತ ಅಲ್ಲಿಯೇ ನಿಂತುಬಿಟ್ಟಿರುತ್ತಾರೆ. ಆ ದಿವಸವೆಲ್ಲಾ ಪೋಲೀಸಿನವರು ಆಹಾರಾದಿಸಾಮಗ್ರಿಗಳೂ ಸಹ ಹೋಗದಂತೆ ತಡೆಮಾಡಿದ್ದರು. ಮರುದಿವಸ ಆಹಾರವನ್ನು ಕೊಡಬಹುದೆಂದು ಹುಕುಂ ಮಾಡಿದರು. ಶ್ರೀಮತಿಯವರು ನಾವು ಈಗ ಮಹಾತ್ಮರ ಮೇಲ್ಪಂಕ್ತಿಯನ್ನನುಸರಿಸಿ ಕೇವಲ ಶಾಂತಿಸಂಗ್ರಾಮಕ್ಕಾಗಿ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಿಡಲಾರೆವು. ನಾವು ಆತ್ಮಯಜ್ಞಕ್ಕೆ ಸಿದ್ಧರಾಗಿದ್ದೇವೆಂದು ಅಲ್ಲಿಯೇ ನಿಂತುಬಿಟ್ಟಿರುತ್ತಾರೆ. ಪೋಲೀಸಿನವರು ಸಹ ಇವರೊಂದಿಗೆ ತಾವೂ ಸತ್ಯಾಗ್ರಹವ್ರತವನ್ನವಲಂಬಿಸಿ ಸುತ್ತುಕಟ್ಟಿನಿಂತಿರುತ್ತಾರೆ.

ಸೊಲ್ಲಾಪುರದಲ್ಲಿ ಮುನ್ಸಿಪಲ್ ಪ್ರೆಸಿಡೆಂಟರನ್ನು ದಸ್ತಗಿರಿ ಮಾಡಿರುತ್ತಾರೆ. ಇನ್ನೂ ಕೆಲವು ದಿವಸ ಮಿಲಿಟೇರಿಯವರು ಅಲ್ಲಿಯೇ ಇರಬೇಕೆಂದು ವೈಸ್‌ರಾಯರು ಅಪ್ಪಣೆಯನ್ನಿತ್ತರು.

ಶ್ರೀಮನ್ಮಹಾರಾಜರವರ ಸವಾರಿಯು ಕಳೆದ 15 ನೆಯ ತಾರೀಖು ಗುರುವಾರ ದಿವಸ ನೀಲಗಿರಿಯಿಂದ ರಾಜಧಾನಿಗೆ ದಯಮಾಡಿಸಿತು.

ಸ್ವೀಕಾರ.

ಧಾರವಾಡ ಡಿ|| ಶಿರೋಳ [illegible]ಮಠ ವೇ|| ಪಂಚಾಕ್ಷರಯ್ಯನವರು ನೆರವೇರಿಸಿದ ಮಾಹೇಶ್ವರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 10 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿಕ್ಕಮಗಳೂರು ನಿವಾಸಿಗಳಾದ ಮ|| ಚಂದ್ರಪ್ಪಶೆಟ್ಟರು ನೂತನ ಗೃಹಪ್ರವೇಶಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂ., ಸದರಿ ತಾಲೂಕು ಗಾಳಿಪೂಜೆ ಯಾನೆ ದೇವರಹಳ್ಳಿ ಪಟೇಲ್ ಮ|| ಮಲ್ಲೇಗೌಡರು ತಮ್ಮ ಚಿರಂಜೀವಿಗೆ ಪ್ರಾಪ್ತವಾಗಿದ್ದ ಖಾಯಿಲೆಯು ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 4 ರೂ., ಹಾಗೂ ಮುಗುಳುವಳ್ಳಿ ಗ್ರಾಮದ ಮ|| ರಾ|| ವೀರೇಗೌಡರ ಪುತ್ರ ಚಿ|| ಸಂಜಪ್ಪನಿಗೂ ಬಿಗದೇವನಹಳ್ಳಿ ಗ್ರಾಮದ ಮ|| ರಾ|| ಪುಟ್ಟಣ್ಣಶೆಟ್ಟರ ಪುತ್ರಿ ಚಿ|| ಸೌ|| ರುದ್ರಮ್ಮನಿಗೂ ನಡೆದ ವಿವಾಹ ಸಮಯದಲ್ಲಿ ಸಮರ್ಪಿಸಿದ 3 ರೂ. ಒಟ್ಟು 9 ರೂ. ಗಳು ವೇ|| ಮಠದ ಮುಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಹುವಿನಹಡಗಲಿ ತಾಲೂಕ. ಭಾವಿಹಳ್ಳಿ ಗ್ರಾಮದ ಮ|| ರಾ|| ದಕಾಶೆಟ್ಟಿ ಕೊಟ್ರಪ್ಪನವರ ಮಗ ಚಿ|| ಬಸಪ್ಪನಿಗೆ ಮ|| ರಾ|| ಪಿಸ್ನೂರು ಗುರುಸಿದ್ದಪ್ಪನವರ ಪುತ್ರಿ ಚಿ|| ಸೌ|| ಗುಬ್ಬವ್ವನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಕಾಲದಲ್ಲಿ ಮ|| ರಾ|| ಕದರಮಂಡಿಗಿ ಪರಮೇಶ್ವರಪ್ಪನವರ ದ್ವಾರಾ ತೆಗೆಯಿಸಿದ ರೂ. 3 ಹಾಗೂ ಸದರಿ ಭಾವಿಹಳ್ಳಿ ಗ್ರಾಮದ ಮ|| ರಾ|| ಕೊರ್ಲಗಟ್ಟಿ ಕಲ್ಲಪ್ಪನವರ ಮಗ ಚಿ|| ಬಸಪ್ಪನಿಗೆ ಮ|| ರಾ|| ಕಂಜೆದೆ ಶಿದ್ದಪ್ಪನವರ ಮಗಳು ಚಿ|| ಸೌ|| ಅಮರವ್ವನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಕಾಲದಲ್ಲಿ ಮ|| ರಾ|| ಕದರಮಂಡಗಿ ಪರಮೇಶ್ವರಪ್ಪನವರ ದ್ವಾರಾ ತೆಗೆಯಿಸಿದ ರೂ. 2 ಹಾಗೂ ಬಾಸಗೊಂಡನಹಳ್ಳಿ ಮ|| ರಾ|| ರಾಯರಾಳು ಲಿಂಗಪ್ಪನವರಿಗೆ ಮ|| ರಾ|| ಭಾವಿಹಳ್ಳಿ ನವಾಡಿ ವೀರಪ್ಪನವರ ಮಗಳು ಚಿ|| ಸೌ|| ಕೊಟ್ರವ್ವನನ್ನು ಕೊಟ್ಟು ವಿವಾಹವನ್ನು ನಡೆಯಿಸಿದ ಕಾಲದಲ್ಲಿ ಸದರಿ ಪರಮೇಶ್ವರಪ್ಪನವರ ದ್ವಾರಾ ತೆಗೆಸಿಯಿದ 1ರೂ. ಒಟ್ಟು 6 ರೂಪಾಯಿಗಳು ಮ|| ರಾ|| ಎಸ್. ಬಿ. ಸಣ್ಣ ತೋಟಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಚಳಗೇರಿ ಗ್ರಾಮದ ಅರಳೆಲೆ ಕಟ್ಟಿಮನೆ ಹಿರೇಮಠದ ವೀರಸಂಗಪ್ಪನವರು ಶಿವಾಧೀನರಾದ ಕಾಲದಲ್ಲಿ ಶ್ರೀ|| ಷ|| ಬ್ರ|| ಸಂಗಮೇಶ್ವರ ಪಟ್ಟದಸ್ವಾಮಿಗಳು, ಹಿರೇಹಡಗಲಿ ಇವರ ಅಭಿಪ್ರಾಯದಂತೆ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಹಾಗೂ ಸದರಿ ಚಳಗೇರಿಯಲ್ಲಿ ನೆರವೇರಿದ ಜಗದಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಮ|| ರಾ|| ಚನ್ನಪ್ಪಗೌಡರು ಪೋಲೀಸ್‌ಪಾಟೀಲ ಇವರು ಸಮರ್ಪಿಸಿದ 1 ರೂ. ಮತ್ತು ಹೊಳಲೂರು ಗ್ರಾಮದ ಮ|| ರಾ|| ಹೊಳೆಯಪ್ಪ ಶಿರಬಡಿಗಿ ಇವರ ಪುತ್ರ ಚಿ|| ಯಮುನಪ್ಪನಿಗೆ ಮ|| ರಾ|| ವೀರಪ್ಪಾ ಕಡಿವಾಲಮಾಸಗಟ್ಟಿ ಇವರ ಪುತ್ರಿ ಚಿ|| ಸೌ|| ಹೊಳೆಯವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ 2 ರೂ. ಗಳು ಒಟ್ಟು 5 ರೂ. ಗಳು ಶ್ರೀ|| ರೇವಣಸಿದ್ಧಯ್ಯನವರು ಭಿಕ್ಷಾವರ್ತಿ ಹಿರೇಮಠ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಕಲಘಟಗಿ ಗ್ರಾಮದ ವೇ|| ಶಿವಲಿಂಗಾರ್ಯ ಮೂಲಿಮಠ ಇವರ ಪುತ್ರಿ ಚಿ|| ಸೌ|| ವೀರವ್ವನ ಲಗ್ನಕಾಲದಲ್ಲಿ ತೆಗೆಯಿಸಿದ 1 ರೂ., ಹಾಗೂ ಶಿರಹಟ್ಟಿ ತಾಲೂಕು ಯಳವತ್ತಿ ನಿವಾಸಿಗಳಾದ ವೇ|| ಸಾತ್ವೀರಯ್ಯನವರು ಚಿಕ್ಕಮಠ ಇವರ ಪುತ್ರ ಚನ್ನಬಸಯ್ಯನವರ ವಿವಾಹ ಸಮಯದಲ್ಲಿ ತೆಗೆಯಿಸಿದ 2 ರೂ. ಒಟ್ಟು 3 ರೂ. ಗಳು ಶ್ರೀ|| ಷ|| ಬ್ರ|| ಬಟ್ಟೂರು ಬೃಹನ್ಮಠಾಧ್ಯಕ್ಷರ ದ್ವಾರಾ ತಲ್ಪಿರುತ್ತವೆ.

ಧಾರವಾಡಜಿಲ್ಲಾ ಗದಗ ತಾಲೂಕು ಹಮ್ಮಿಗಿ ಗ್ರಾಮದ ಕುಂಬಾರ ಧರಮವ್ವನು ಶಿವಾಧೀನವಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಗುರುಭಕ್ತಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಉತ್ತಂಗಿ ಹಾಲುಮಠದ ಸಾ|| ಬಟಲಿಂಗಪ್ಪನ ಪತ್ನಿ ಮಹುಳವ್ವನ ಮಗ ಗುಡ್ಡಪ್ಪನ ಪುತ್ರ ಚನ್ನಬಸಪ್ಪನ ವಿವಾಹಸಮಯದಲ್ಲಿ ಮ|| ರಾ|| ಶಿವನಾಗಪ್ಪನವರ ಸೂಚನೆಯಮೇರೆ ಶಿ|| ಮಠದ ರೇವಪ್ಪಶಾಸ್ತ್ರಿಗಳು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ. ಗಳು ಶ್ರೀ ಮಠದ ವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಕಾಶೀಕ್ಷೇತ್ರ ಶ್ರೀ ಜಗದ್ಗುರು ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪೀಠದಲ್ಲಿ ಶ್ರೀ ಜಗದ್ಗುರು ವಿಶ್ವೇಶ್ವರಾಮಶಿವಾಚಾರ್ಯರ ಜಯಂತಿಮಹೋತ್ಸವನಿಮಿತ್ತ ಸಮರ್ಪಿಸಿದ 2 ರೂ. ಗಳು ವೇ|| ಶ್ರೀ ಶಿವಕುಮಾರಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಬೆಳಗೂಡು ಕಲ್ಲುಮಠದಲ್ಲಿ ನೆರವೇರಿದ ಶಿವಲಿಂಗ ಪ್ರತಿಷ್ಠಾಮಹೋತ್ಸವಕಾಲದಲ್ಲಿ ಸಮರ್ಪಿಸಿದ 1 ರೂ. ಮ|| ರಾ|| ಎಚ್. ಎಸ್. ಶಿವಪ್ಪನವರ ದ್ವಾರಾ ತಲ್ಪಿರುತ್ತದೆ.

ಸೋಲಾಪೂರ ಡಿ|| ಹೋಟಗಿ ನಿವಾಸಿಗಳಾದ ಮ|| ರಾ|| ಭೀಮಣ್ಣನವರು ಬರಕೃಪ್ತಿಮಾಡಿಸಿದ [illegible]ದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 [illegible]ಯಿಯು ಶ್ರೀ|| ಷ|| ಬ್ರ|| ಹೋಟಗಿ ಬೃಹನ್ಮಠದ ಪಟ್ಟಾಧ್ಯಕ್ಷರ ದ್ವಾರಾ ತಲ್ಪಿರುತ್ತದೆ.

ಚಿತ್ರದುರ್ಗ ಡಿ|| ಚಳ್ಳಕೆರೆ ತಾಲೂಕು ಕೋಟೆ ಚನ್ನಮಲ್ಲಿಕಾರ್ಜುನಸ್ವಾಮಿಗಳು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಸಂ.—

ಉದಾರಿಗಳು ಮತ್ತು ಸದ್ಯದ ಸ್ಥಿತಿ.

(ಮೇ 14 ನೆಯ ತಾರೀಖಿನ "ಹಿಂದೂ" ಪತ್ರಿಕೆಯಿಂದ)

ಬುಧವಾರ ದಿವಸ ಮುಂಬಯಿಯಲ್ಲಿ ಸೇರುವ "ಅಖಿಲಪಕ್ಷಗಳ ಪರಿಷತ್ತು" ಭರತಖಂಡದ ಉದಾರಪಕ್ಷದವರು ಸರಕಾರಕ್ಕೆ ಕೊಡುವ ಕೊನೆಯ ಎಚ್ಚರಿಕೆಯಾಗಿರುವದು. ಇದು ದುಂಡುಮೇಜಿನ ಪರಿಷತ್ತಿನಿಂದ ಏನಾದರೂ ಅನುಕೂಲವಾಗುವಂತೆ ಮಾಡಲಪೇಕ್ಷಿಸುತ್ತಿರುವ ಹಾಗೂ ಕಾಂಗ್ರೆಸ್ ಪಕ್ಷದವರಿಗಿಂತಲೂ ಅಧಿಕ ಸರಳ ಮಾರ್ಗಾವಲಂಬಿಗಳಾದ ದೇಶಭಕ್ತರ ಕೊನೆಯ ಪ್ರಯತ್ನವಾಗಿರುವದು. ಭಾರತಸ್ವಾತಂತ್ರ್ಯಾಪೇಕ್ಷಿಗಳೂ ಹಾಗೂ ಅದರ ವಿರೋಧಿಗಳೂ ಸಹ ಇದನ್ನು ಒಂದೊಂದು ವಿಧವಾಗಿ ಆಕ್ಷೇಪಿಸಬಹುದಾದರೂ, ಭರತಖಂಡದ ರಾಜಕೀಯ ಚರಿತ್ರೆಯಲ್ಲಿ ಮನಸ್ಸುಳ್ಳ ಪ್ರತಿಯೊಬ್ಬರೂ ಇದಕ್ಕೆ ವಿಶೇಷ ಗಮನ ಕೊಡಬೇಕಾಗಿರುವದು. ಕಾಂಗ್ರೆಸ್ಸಿನವರಂತೆ ಉದಾರಪಕ್ಷದವರು ಸಹ ದೇಹಲಿಯ ಪ್ರಸಿದ್ಧಪತ್ರಿಕೆಯನ್ನು ಸಾಧ್ಯವಾದಷ್ಟು ಅನುಮೋದಿಸಿದರು. ಸೌಮ್ಯಪಕ್ಷದವರಿಗೆ ಅದರಿಂದ ಜಯವೇ ದೊರೆತಂತಾಗಿತ್ತು. ಆ ಸಂದರ್ಭದಲ್ಲಿ ಇಂಡಿಯಾ ಗವರ್ನಮೆಂಟಿನವರು ತಮ್ಮ ವರ್ತನವನ್ನು ಬದಲಾಯಿಸುವರೆಂದು ಎಲ್ಲರೂ ತಿಳಿದಿದ್ದರು. ಆದರೆ ಈಗ ಕೆಲವು ತಿಂಗಳುಗಳಿಂದ ನಡೆದಿರುವ ವಿದ್ಯಮಾನಗಳನ್ನು ಪರಿಶೀಲಿಸಿದರೆ ಆ ಆಶೆಯು ನಿರಾಶೆಯಾಗಿ, ರಾಜ್ಯಾಡಳಿತವು ಉತ್ತಮ ಸ್ಥಿತಿಗೆ ತಿರುಗುವದಕ್ಕೆ ಬದಲಾಗಿ, ಪೂರ್ವದ ಸ್ಥಿತಿಗೆ ತಿರುಗಿರುವದೆಂಬುದನ್ನು ಹೇಳದಿರಲಾಗದು. ಈ ಬದಲಾವಣೆಗೆ ಕಾಯಿದೆಭಂಗದ ಚಳುವಳಿಯೂ ಸ್ವಲ್ಪಮಟ್ಟಿಗೆ ಕಾರಣೀಭೂತವಾಗಿರುವದು. ಆದರೆ ಇಂಡಿಯಾ ಗವರ್ನಮೆಂಟಿನವರು ಏನುಮಾಡಬಹುದಾಗಿತ್ತೆಂಬುದಕ್ಕೂ ಕೆಲವು ವಾರಗಳಿಂದ ಅವರು ನಡೆಸುತ್ತಿರುವ ದಬ್ಬಾಳಿಕೆಗೂ ಒಂದಕ್ಕೊಂದಕ್ಕೆ ಬಹಳ ವ್ಯತ್ಯಾಸವು ಕಂಡುಬರುವದು. ಸರಕಾರದವರು ದೇಶದ ಜನಗಳ ರಾಜಕೀಯ ಮತ್ತು ನ್ಯಾಯವಾದ ಬೇಡಿಕೆಗಳನ್ನು ತಿಳಿದುಕೊಳ್ಳಲು ನಿಜವಾದ ಮನಸ್ಸಿನಿಂದ ಪ್ರಯತ್ನಿಸುತ್ತಿದ್ದರೆ ಅವರ ದಬ್ಬಾಳಿಕೆಯನ್ನೆಲ್ಲವನ್ನೂ ನಾವು ಮರೆತುಬಿಡುತ್ತಿದ್ದೆವು.

ಆದುದರಿಂದ ಭರತಖಂಡದ ಸೌಮ್ಯಪಕ್ಷದವರು ಸಹ ಭಯಾಸ್ಪದರಾಗಿ ಸಭೆ ಸೇರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಸರ್ಕಾರವು ಅವರಿಗೆ ಯಾವ ಅನುಕೂಲತೆಗಳನ್ನೂ ಮಾಡಿಲ್ಲ. ಸದ್ಯಃ ಅವರ ನಿರ್ಧಾರವೆಲ್ಲಾ ನಿರಾಶೆಯೆಂಬ ಮರಳ್ಗಾಡಿನಲ್ಲಿದ್ದಂತಾಗಿರುವದು. ಇಂದಿನ ಸ್ಥಿತಿಯೇನಾಗಿರುವದು? ಮಿ|| ಬೆನ್ನರವರು ಇಂಡಿಯಾ ಸರ್ಕಾರವನ್ನು ಅಲ್ಲಿರುವ ವ್ಯಕ್ತಿಯ ವಶದಲ್ಲಿ ಬಿಟ್ಟುಬಿಟ್ಟಿರುವರು. ಲಾರ್ಡ್ ಅರ್ವಿನ್ನರಲ್ಲಿ ತಮಗಿರುವ ಮಿತ್ರತ್ವ ಮತ್ತು ನಂಬುಗೆಯ ಮೇಲೆ ದೃಷ್ಟಿಯಿಟ್ಟು, ಭರತಖಂಡದ ವಿಷಯದಲ್ಲಿ ಸಿಮ್ಲಾದಿಂದ ಬರುವ ಸೂಚನೆಗಳಂತೆ ಸ್ವಲ್ಪವೂ ತಪ್ಪದೆ ನಡೆಯುತ್ತಿರುವರು. ಲಾರ್ಡ್ ಅರ್ವಿನ್ನರಾದರೋ, "ಸೆಕ್ರೆಟರಿ ಆಫ್ ಸ್ಟೇಟ" ರವರ ಬೆಂಬಲವನ್ನು ಕಳೆದುಕೊಂಡು, ಎಂದಿನಂತೆ ತಮ್ಮ ಹಿಂದಿನ ಮಾರ್ಗಕ್ಕೆ ಬಿದ್ದು ರಾಜ್ಯಾಡಳಿತದ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳ ಕೈಯ್ಯ ಗೊಂಬೆಯಾಗಿರುವರು. ಕಳೆದ ನವಂಬರಿನಲ್ಲಿ ವೈಸರಾಯರ ಪ್ರಸಿದ್ಧಪತ್ರಿಕೆಯು ಹೊರಗೆ ಬಂದುದರಿಂದಲೂ, ಈ ಅಧಿಕಾರಿಗಳು ಭರತಖಂಡಕ್ಕೆ ಇನ್ನು ಸ್ವಲ್ಪವೂ ಬಗ್ಗಕೂಡದೆಂದೇ ನಿರ್ಧರಿಸಿಕೊಂಡು ಅದರಂತೆ ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಲಾರಂಭಿಸಿದರೆಂದು ಧಾರಾಳವಾಗಿ ಹೇಳಬಹುದು. ಇಂಡಿಯಾ ಗೌರ್ನಮೆಂಟಿನವರು (ಚಿಕ್ಕದೊಡ್ಡ ಅಧಿಕಾರಿಗಳು ಸಹ) ಮನುಷ್ಯ ಪ್ರಯತ್ನದಲ್ಲಿ ಸಾಧ್ಯವಾದಷ್ಟು ಪ್ರಯತ್ನಮಾಡಿ, ವೈಸ್ರಾಯರವರ ಉದ್ದೇಶವು ನೆರವೇರದಂತೆ ಮಾಡಬೇಕೆಂದು ನಿರ್ಧರಿಸಿಕೊಂಡರು. ಇವರು ಸಮಯವನ್ನು ಕಾದಿದ್ದು ಡಿಸೆಂಬರು 23 ನೆಯ ತಾರೀಖಿನ ದಿವಸ, ಕಾರ್ಯಕರೆನ್ಸ್ ಚದರಿದಾಗ, ತಮಗುಂಟಾದ ಸಂತೋಷವನ್ನು ಬಹಿರಂಗಪಡಿಸಿದರು. ಲಾಹೋರಿನ ಕಾಂಗ್ರೆಸ್ ಅಧಿವೇಶನವು ಅವರಿಗೆ ಪರಮಸಂತೋಷವನ್ನುಂಟುಮಾಡಿತು. ಆದರೆ ಸಾರ್ವತ್ರಿಕ ಕಾಯಿದೆಭಂಗದ ಚಳವಳಿಯನ್ನು ಪ್ರಾರಂಭಿಸಬೇಕೆಂದು ಮಹಾತ್ಮರು ಮಾಡಿದ ಪ್ರಯತ್ನವು ಅವರಿಗೆ ಸ್ವಲ್ಪ ಅಸಮಾಧಾನವನ್ನುಂಟುಮಾಡಿತು. ಮಹಾತ್ಮರ ಪ್ರತಿಯೊಂದು ಕಾರ್ಯವನ್ನೂ ಅವರು ಕುತೂಹಲದಿಂದ ನಿರೀಕ್ಷಿಸುತ್ತ ಬಂದರೂ ಮಹಮ್ಮದೀಯರ ವರ್ತನವನ್ನು ಕಂಡು ಸಂತೋಷಿಸಿದರು. ಸೌಮ್ಯಪಕ್ಷದವರ ವಿಷಯದಲ್ಲಿ, ವೈಸ್ರಾಯರು ಒಂದೆರಡು ಸವಿಮಾತುಗಳನ್ನಾಡಿದರೆ ಅವರು ಸುಮ್ಮನಾಗುವರೆಂದು ನಂಬಿದರು. ಈಗ್ಗೆ ೩-೪ ವಾರಗಳ ಹಿಂದೆ ಅಂದರೆ—ಮಹಾತ್ಮರ ವಿನಾ ಇತರ ಚಿಕ್ಕಪುಟ್ಟ ಮುಂದಾಳುಗಳೆಲ್ಲರೂ ದಸ್ತಗಿರಿ ಮಾಡಲ್ಪಟ್ಟು ಕಾಂಗ್ರೆಸ್ ಪಕ್ಷವು ನಿರ್ಬಲವಾಗಿರುವದನ್ನು ಕಂಡು, ಅವರು ತಮ್ಮ ಶಕ್ತಿಯನ್ನು ಈಗ ಪ್ರಯೋಗಿಸೋಣವೆಂದು ನಿರ್ಧರಿಸಿದರು. ಸೈನ್ಯಶಾಖೆಯವರು ಪ್ರಸ್ತಾಪವನ್ನೆತ್ತಿ ಯುಕ್ತಿಯುಕ್ತವಾಗಿ, ಹೀಗೆಯೇ ಇನ್ನೂ ಕೆಲವುಕಾಲ (ವೈಸ್ರಾಯರು) ಸುಮ್ಮನಿದ್ದರೆ ಇಂಡಿಯಾದ ಮುಂದಿನ ಪರಿಣಾಮಕ್ಕೆ ನಾವು (Generals—ಸೈನ್ಯಾಧಿಕಾರಿಗಳು) ಜವಾಬ್ದಾರರಾಗುವದಿಲ್ಲವೆಂದು ವೈಸ್ರಾಯರಿಗೆ ವಿವರಿಸಿ ಹೇಳಿದುದಲ್ಲದೆ ಚಿತ್ತಗಾಂಗ್ ಮತ್ತು ಕರಾಚಿಯ ವಿಷಯಗಳನ್ನು ಬೇಕಾದಷ್ಟು ಬೆಳೆಯಿಸಿ ಹೇಳಿದರು. ಪೆಷಾವರದ ವಿಷಯದಲ್ಲಿ ಬೇಕಾದಷ್ಟು ಟೀಕೆಯೂ, ರಾಜಕೀಯ ಪರಿಸ್ಥಿತಿಯು ಅತ್ಯಂತ ಭೀಕರರೂಪದಲ್ಲಿ ಕಾಣುವಂತೆ ಭಯಂಕರ ಕಥೆಗಳೂ ಹೇಳಲ್ಪಟ್ಟವು. ಮುಂದಿನ ಪರಿಣಾಮಕ್ಕೆ ಹೆದರದೆ ಮಹಾತ್ಮಾ ಗಾಂಧಿಯವರನ್ನು ದಸ್ತಗಿರಿ ಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಆಗ ಲಾರ್ಡ್ ಅರ್ವಿನರವರು ಹಿಂದಿನಂತೆ ತಮ್ಮ ಸ್ವಾಭಾವಿಕವಾದ ರಾಜಕೀಯ ದುರ್ಬಲತೆಯಿಂದ ಸ್ವಸ್ಥವಾಗಿ [illegible]. ತಮ್ಮ ಬೆರಳುಗಳನ್ನು ಆಡಿಸಿ, ಜನರನ್ನು [illegible] ಮಾಡಬೇಕೆಂಬ ತಮ್ಮ ಉದ್ದೇಶವನ್ನು ಮಾತ್ರ ಬಾಯಿನಿಂದ ಹೇಳುತ್ತಲೇ ಇದ್ದರು. 15 ದಿನಗಳಿಂದೀಚೆಗೆ ಲಾರ್ಡ್ ಅರ್ವಿನ್ನರವರ ಪರಮಮಿತ್ರರೂ ಸಹ "ಆಗಲಿ, ಅವರು(ವೈಸ್ರಾಯರು) ತಮ್ಮ ಮಹತ್ವದ ಪರಿಷತ್ತಿನ ವಿಷಯವಾಗಿ ಮಾತನಾಡುತ್ತಲೇ ಇರಲಿ! ಅಲ್ಲಿಗೆ ನಮ್ಮಂತೆಯೇ ಮಾತನಾಡುವ ನಮ್ಮ ಕೆಲವು ಮಿತ್ರರವಿನಾ ಬೇರೆ ಯಾರೂ ಹೋಗುವಂತಿಲ್ಲ. ಅದು ಈಗಲೇ ಸತ್ತಂತಾಗಿರುವದು. ಮತ್ತೂ ಇದರಿಂದ ಸೈಮನ್ ಕಮಿಷನ್ನಿನ ಮಾರ್ಗಕ್ಕೆ ನಿರಾತಂಕವಾಗುವುದು. ಈ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಮಾತೆಲ್ಲವೂ ಬರಿಯಹುಚ್ಚೇ ಸರಿ! ಸ್ವಾತಂತ್ರ್ಯಪಕ್ಷವು ಸದ್ಯಃ ಸ್ವಲ್ಪ ಓಡಾಡುತ್ತಿರುವುದು. ಅವರಿಗೆ ನಮ್ಮ ದಬ್ಬಾಳಿಕೆಯು ಇನ್ನೂ ಒಂದೆರಡು ಉದಾಹರಣೆಗಳನ್ನು ಮಾತ್ರ ಕೊಟ್ಟರೆ, ಭರತಖಂಡದ ಭವಿಷ್ಯ ವಿಷಯದಲ್ಲಿ ನಾವೇನೂ ಹೆದರಬೇಕಾಗಿಲ್ಲ" ಎಂದು ಹೇಳುತ್ತಿರುವರು.

ಈ ಮಾತಿನಲ್ಲಿ ಬಹಳಮಟ್ಟಿಗೆ ನಿಜವಿರುವುದೆಂದು ನಾವುಸಹ ಒಪ್ಪುವೆವು. ಇಷ್ಟೇ ಅಲ್ಲ: ಭರತಖಂಡದ ಭಾರವನ್ನು ವಹಿಸಿರುವವರು (ಲಾರ್ಡ್ ಅರ್ವಿನ್ನರನ್ನು ಬಿಟ್ಟು) ತಮಗೆ ಸಾಧ್ಯವಾಗುವದಾದರೆ ಭರತಖಂಡದ ಸ್ವರಾಜ್ಯಪ್ರಾಪ್ತಿಗೆ ಸ್ವಲ್ಪವೂ ಅವಕಾಶಕೊಡುವ ಅಭಿಪ್ರಾಯವುಳ್ಳವರಾಗಿಲ್ಲವೆಂದು ಖಂಡಿತವಾಗಿ ಹೇಳಬಹುದಾಗಿದೆ. ಸದ್ಯಃ ಸರ್ಕಾರದ ದಬ್ಬಾಳಿಕೆಯು ಫಲಕಾರಿಯಾಗಿರುವುದು. ಆದರೆ ಇದೇ ಸ್ಥಿತಿಯು ಶಾಶ್ವತವಾಗಿರುವುದೆಂದು ನಾವು ನಂಬುವುದಾದರೆ ನಮ್ಮ ದೇಶಕ್ಕಾಗಿ ನಾವೇ ನಾಚಿಕೊಳ್ಳಬೇಕಾಗುವದು. ಈ ಅಧಿಕಾರಿಗಳು ಸ್ವಲ್ಪವೂ ಮುಂದಾಲೋಚನೆ ಇಲ್ಲದವರು. ಆದುದರಿಂದಲೇ ಅವರು ತಮ್ಮ ಸರ್ವನಾಶದ ಮಾರ್ಗವನ್ನು ತಾವೇ ಭರದಿಂದ ನಿರ್ಮಿಸಿಕೊಳ್ಳುತ್ತಿರುವರು.

ದಬ್ಬಾಳಿಕೆಯಿಂದ ಸರ್ಕಾರವು ಹೊಂದುವ ಪ್ರತಿಯೊಂದು ಜಯವನ್ನೂ, ಭಾರತೀಯರು ತಮ್ಮ ಸ್ವಾತಂತ್ರ್ಯಸಂಪಾದನೆಯ ಪ್ರಯತ್ನದಲ್ಲಿ ಮುಂದಿಟ್ಟ ಒಂದೊಂದು ಹೆಜ್ಜೆಯೆಂದೇ ನಾವು ಭಾವಿಸುವೆವು. ಇಂದು ನಡೆಯುತ್ತಿರುವ (ಸೈನ್ಯದ ಬಲದಿಂದ ಜನರನ್ನು ಅಧೀನಪಡಿಸಿಕೊಳ್ಳುವ) ಈ ವಿಧವಾದ ಪ್ರಯತ್ನವು ಹೇಯವಾಗಿರುವುದು. ಏಕೆಂದರೆ—ಅದರಿಂದ ಪ್ರಪಂಚದಲ್ಲಿ ರಾಷ್ಟ್ರವನ್ನು ಅಧೀನಪಡಿಸಿಕೊಳ್ಳುವದೆಂಬ ಅತ್ಯಸಾಧ್ಯವಾದ ಕಾರ್ಯವನ್ನು ಕೈಕೊಂಡಿರುವದು. ಮಹಾತ್ಮಾ ಗಾಂಧಿಯವರ ಈ ಚಳವಳಿಯಿಂದ ಭರತಖಂಡದ ದೇಶಾಭಿಮಾನವು ಎಂದಿಗಿಂತಲೂ ಹೆಚ್ಚು ಬಲವಾಗಿ ಬೇರೂರಿರುವುದು. ಗಾಂಧಿಯವರ ತತ್ವಗಳನ್ನು ನಾವೆಂದೂ ಒಪ್ಪುವವನಲ್ಲ. ಅವರ ತತ್ವಗಳಂತೆ ವರ್ತಿಸುವುದರಿಂದ ಆಗುವ ಅನರ್ಥಪರಂಪರೆಗಳನ್ನು ಕುರಿತು ನಾವು ಎಷ್ಟೋವೇಳೆ ಟೀಕೆಯನ್ನು ಮಾಡಿರುವೆವು. ಆದರೂ ಅವರ ಪ್ರಯತ್ನ ವಿಶೇಷದಿಂದ ಭರತಖಂಡದ ದೇಶಾಭಿಮಾನವು, ಈ ವರ್ಷದ ಆದಿಯಿಂದಲೂ, ಆಶ್ಚರ್ಯಕರವಾದ ರೀತಿಯಲ್ಲಿ ಮುಂದುವರಿದಿರುವುದೆಂಬುದನ್ನು ನಾವು ನಿಸ್ಸಂಕೋಚವಾಗಿ ಒಪ್ಪಿಕೊಳ್ಳುವೆವು. ಈ ದೇಶಾಭಿಮಾನವನ್ನು ಈಗಲೂ ಲಾಭಕರವಾದ ಮತ್ತು ಶಾಂತವಾದ ಮಾರ್ಗದಲ್ಲಿ ತಿರುಗಿಸಬಹುದೆಂದು ನಾವು ನಂಬುವೆವು. ಈಗಲೂ ಬ್ರಿಟಿಷ್ ಸರಕಾರದವರು ನಿಜವಾದ ಕಾರ್ಯಕಾರೀ ದೃಷ್ಟಿಯಿಂದ ಭರತಖಂಡದ ಸಮಸ್ಯಾಪೂರ್ತಿಗೆ ಅನುಕೂಲವಾದ ಯಾವುದಾದರೊಂದು ಮಾರ್ಗವನ್ನು ಹುಡುಕುವುದಾದರೆ, ಭರತಖಂಡದ ಹೆಚ್ಚಿನ ಭಾಗದ ರಾಜಕೀಯಪಕ್ಷದ ಜನರು ಸಾಮಂತ ಸ್ವರಾಜ್ಯದಿಂದ ಪೂರ್ಣ ತೃಪ್ತರಾಗುವರೆಂದು ಧಾರಾಳವಾಗಿ ಹೇಳಬಹುದು. ಆದರೆ ಬ್ರಿಟಿಷ್ ಸರಕಾರದವರು ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವವಿಷಯದಲ್ಲಿ ನಿಸ್ಪೃಹತ್ವವುಳ್ಳವರಾಗಿರುವೆವೆಂಬುದನ್ನು ಜನರಿಗೆ ಚೆನ್ನಾಗಿ ತಿಳಿಯುವಂತೆ ಮಾಡಬೇಕು. ಸದ್ಯಃ ಭರತಖಂಡದ ಸೈನ್ಯ ಮತ್ತು ಇತರ ಅಧಿಕಾರಗಳಲ್ಲಿರುವ ಬ್ರಿಟಿಷ್ ಸರಕಾರದ ಪ್ರತಿನಿಧಿಗಳು ಗ್ರೇಟ್ ಬ್ರಿಟನ್ ದೇಶದ ಘನವಾದ ವಚನಗಳನ್ನು ಕಿಂಚಿತ್ತಾದರೂ ಸಾರ್ಥಕಗೊಳಿಸುವ ಉದ್ದೇಶವುಳ್ಳವರಾಗಿಲ್ಲವೆಂದು ಚೆನ್ನಾಗಿ ತೋರಿಬರುವುದು. ಆದುದರಿಂದ ಸದ್ಯದ ಸ್ಥಿತಿಯೆಂದರೆ, ಗ್ರೇಟ್ ಬ್ರಿಟನ್ ದೇಶದ ಜನಗಳು ತಮ್ಮಿಂದ ಸಂಬಳವನ್ನು ತೆಗೆದುಕೊಳ್ಳುವ ನೌಕರರಿಂದಲೂ ಮತ್ತೂ ಪ್ರತಿನಿಧಿಗಳಿಂದಲೂ ತಾವು ಹೇಗೆ ಮೋಸಹೋಗುತ್ತಿರುವೆವೆಂಬುದನ್ನು ಎಂದಿಗೆ ತಿಳಿದುಕೊಳ್ಳುವರೋ ಎಂಬ ಪ್ರಶ್ನೆಯೇ ಆಗಿರುತ್ತದೆ.

ಕೂಲಿಕಾರಸರಕಾರದವರು ನಾಳೆಯದಿವಸ ಭಾರತ ಸಮಸ್ಯೆಯ ವಿಷಯದಲ್ಲಿ ದೇಶದಲ್ಲೆಲ್ಲ ಒಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸುವದಾದರೆ, ಎಲ್ಲರೂ ಏಕವಾಕ್ಯದಿಂದ ಸ್ವರಾಜ್ಯವನ್ನು ಕಲ್ಪಿಸಿಕೊಡುವಂತೆ ಹೇಳುವರೆಂದು ನಾವು ಧೃಢವಾಗಿ ನಂಬಿರುತ್ತೇವೆ. ಇದನ್ನು ಶಿಪಾಯಿಗಳೂ ಮತ್ತು ಆಡಳಿತಗಾರರೂ ಅರಿಯರು. ಆದುದರಿಂದ ಧೊರೆಗಳಾಗಲಿ ಶಿಪಾಯಿಗಳಾಗಲಿ ಅಥವಾ ಅಧಿಕಾರಿಗಳಾಗಲಿ ಬ್ರಿಟಿಷ್ ಪ್ರಜಾಸತ್ತಾತ್ಮಕ ರಾಜ್ಯಾಡಳಿತವು ಈ ದಬ್ಬಾಳಿಕೆಯನ್ನು ಎಂದಿಗೂ ಸಹಿಸುವದಿಲ್ಲವೆಂಬುದನ್ನು ಕಾಲವು ಮೀರಿಹೋಗುವದರೊಳಗಾಗಿ, ಅರಿತುಕೊಳ್ಳುವದು ಒಳ್ಳೆಯದೆಂದು ನಾವು ಎಚ್ಚರಿಕೆ ಕೊಡುತ್ತೇವೆ. ಬ್ರಿಟಿಷ್ ಪ್ರಜೆಗಳಿಗೆ ತಮ್ಮ ಉದ್ದೇಶಗಳು ಭರತಖಂಡದಲ್ಲಿರುವ ತಮ್ಮ ನೌಕರರಿಂದ ಹೇಗೆ ಅಲಕ್ಷಿಸಲ್ಪಡುತ್ತಿರುವವೆಂಬುದು ಒಂದು ಸಾರೆ ತಿಳಿದಮಾತ್ರಕ್ಕೇ ಈ ಸಮೂಹವೇ ಆಚೆಗೆ ತಳ್ಳಲ್ಪಡುವದು. ಸೈನ್ಯದ ಮುಖ್ಯಾಧಿಕಾರಿಗಳು ತಾವು ಟಪಾಲ್ ಆಫೀಸಿನ ಕಾರಕೂನನಿಗಿಂತಲೂ ಹೆಚ್ಚಿನ ದರ್ಜೆಯವರಲ್ಲವೆಂಬುದನ್ನು ತಿಳಿಯಲೆಂದು ಆಶಿಸುತ್ತೇವೆ. ಇವರೀರ್ವರೂ ರಾಜ್ಯದ ಸೇವಕರಾಗಿರುವರು. ಹೀಗಿದ್ದು ತಮ್ಮ ತಮ್ಮ ಯಜಮಾನರನ್ನೇ ತುಳಿಯುವ ಅವಕಾಶವು ಅವರಿಗೆಂದಿಗೂ ದೊರೆಯುವಂತಿಲ್ಲ. ಈ ವಿಷಯವು ಎಂದಿಗೆ ಬಹಿರಂಗವಾಗುವದೋ ಮತ್ತು ಬ್ರಿಟಿಷ್ ಜನಗಳು ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಎಂದಿಗೆ ತಿಳಿದುಕೊಳ್ಳುವರೋ ಎಂಬುದೇ ಸದ್ಯದ ಪ್ರಶ್ನೆಯಾಗಿರುವದು. ಇಂಗ್ಲಿಷ್ ರಾಜಕೀಯ ಸಮಾಜಗಳು ಇಂಡಿಯಾ ಸರಕಾರದ ಸದ್ಯದ ಸ್ಥಿತಿಯು ಬಹಳ ಶೋಚನೀಯವಾಗಿರುವದೆಂದು ಆಗಲೇ ಅರಿತುಕೊಳ್ಳುತ್ತಿರುವದೇ ಈ ಪ್ರಶ್ನೆಗೆ ಉತ್ತರವಾಗಿದೆ. ಆಶಾಭಂಗವು ನಿರಾಶೆಗೂ, ನಿರಾಶೆಯು ಅಸಮಾಧಾನಕ್ಕೂ ಅವಕಾಶವನ್ನು ಕೊಡುವದು.

ದುಂಡುಮೇಜಿನ ಪರಿಷತ್ತು (ಇದರ ಕಾರಣಕರ್ತರು ತಮ್ಮ ಉದ್ದೇಶವನ್ನು ಸುಲಭವಾದ ಮತ್ತು ವಿಶದವಾಗಿ ಅರ್ಥವಾಗುವಂಥ ಭಾಷೆಯಲ್ಲಿ ಪ್ರಕಟಪಡಿಸದಿರುವದರಿಂದ) ನಿಷ್ಫಲವಾಗಿ ಪರಿಣಮಿಸುವದಾದರೆ, ಭರತಖಂಡದ ರಾಜಕೀಯ ಪರಿಷತ್ತುಗಳಿಗೂ, ಇಂಡಿಯಾ ಆಫೀಸಿನ ರಾಜಕೀಯ ಸಂಬಂಧವಾದ ತಿಳುವಳಿಕೆಗೂ ಮಧ್ಯದಲ್ಲಿ ಏನೋ ಪ್ರಬಲವೂ ವಿಷಾದಕರವೂ ಅಪಾಯಕರವೂ ಆದ ವ್ಯತ್ಯಾಸವಿರುವದೆಂದು ನಿಸ್ಸಂದೇಹವಾಗಿ ಹೇಳಬಹುದು. ಇಂಗ್ಲೀಷ್ ಜನರು ಭರತಖಂಡದಲ್ಲಿ ಬೆಳೆಯುತ್ತಿರುವ ಅಪಾಯಕರವಾದ ಸ್ಥಿತಿಯನ್ನು ಇನ್ನೂ ಅರಿತಿರುವದಿಲ್ಲ. ಸದ್ಯಃ ಅವರು ದಂಗೆಗಳು ಮತ್ತು ಲೂಟಿಗಳ ಕಥೆಗಳನ್ನು ಮಾತ್ರ ಕೇಳುತ್ತಿರುವರು. ಬರಬರುತ್ತ (ಶುಭಸ್ಯಶೀಘ್ರಂ) ಅವರು ಆಡಳಿತಗಾರರ ಹಾಗೂ "ಹೋಂಡಿಪಾರ್ಟ್‌ಮೆಂಟಿನ" ತತ್ವದಿಂದ ಅಪಾರ ಹಣವು ವೆಚ್ಚವಾಗುತ್ತಿರುವದೆಂಬುದನ್ನೂ ಅದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲವೆಂಬುದನ್ನೂ, ವ್ಯಾಪಾರವು ಕಡಿಮೆಯಾಗುತ್ತ ಅಶಾಂತತೆಯು ಹೆಚ್ಚುವದನ್ನೂ ಕಾಣುವರು. ಅತ್ಯಾಶ್ಚರ್ಯದಿಂದ ಅರೆಯಲ್ಪಡುತ್ತಿರುವ ಭರತಖಂಡವನ್ನು ಕಂಡು ಇದುವರೆಗೆ ತಾವು ಕೇಳುತ್ತಿದ್ದ ಕಥೆಗಳು ನಿಜ್ಜವೇ ಎಂದು ಆಶ್ಚರ್ಯಪಡಲಾರಂಭಿಸುವರು. ಲಾರ್ಡ್ ಅರ್ವಿನ್ ಮತ್ತು ಮಿ|| ಬೆನ್ನರ ಮೇಲೆ ಸದ್ಯದ ಜವಾಬ್ದಾರಿಯು ಅಪಾರವಾಗಿರುವದು. ಜನರು ಈಗ ಅವರನ್ನು ನಂಬಿರುವರು. ಆದರೆ ನಿಜವಾದ ವಿದ್ಯಮಾನಗಳು ಹೊರಪಟ್ಟಹಾಗೆ ಈ ನಂಬುಗೆಯೂ ನಾಶವಾಗಿ ತಕ್ಕಡಿಯಲ್ಲಿ ತೂಕಮಾಡಲ್ಪಟ್ಟಂತೆ ಅನೇಕ ವಿಷಯಗಳಲ್ಲಿ ಆಕ್ಷೇಪಣೆಗೆ ಗುರಿಯಾಗುವರು. "ಸರ್ವಪಕ್ಷಗಳ ಪರಿಷತ್ತಿ"ನವರು ಇಂಗ್ಲೆಂಡಿಗೆ ಕಳುಹಿಸುವ ಸಂದೇಶವು ಬ್ರಿಟಿಷ್ ಜನಗಳಿಗೆ ಮೊದಲನೆಯ ಘೋರವಾರ್ತೆಯಾಗಿರುವದು. ಲಾರ್ಡ್ ಅರ್ವಿನ್ನರು ತಮ್ಮ ತತ್ವಕ್ಕೆ ಭರತಖಂಡದ ಸೌಮ್ಯಪಕ್ಷದವರ ಬೆಂಬಲವಿರುವದೆಂದು ತಿಳಿದಿರುವರು. ಇದು ನಿರಾಧಾರವೂ ಮತ್ತು ಅಪಾಯಕರವೂ ಆಗಿರುವದು. ದಿನಗಳು ಕಳೆದಹಾಗೆಲ್ಲ ಸರಕಾರದೊಡನೆ ಯಾರೂ ಸಹಕರಿಸದಂತಾಗುವದು. ಲಾರ್ಡ್ ಅರ್ವಿನ್ನರು ನಿರ್ವಾಹವಿಲ್ಲದೆ ಮುಂದೆ ಒಂದು ಭರತಖಂಡದ ಕೋರಿಕೆಗಳನ್ನು ಪೂರೈಸಬೇಕಾಗುವದು. ಅಥವಾ ಭಾರತೀಯರಿಗಿಂತಲೂ ಹೆಚ್ಚಿನ ಗುಂಡುಗಳು ನಮ್ಮಲ್ಲಿರುವವೆಂದು ಹೇಳಿಕೊಳ್ಳುತ್ತಿರುವವರ ಕೈಗೊಂಬೆಯಾಗಿಯೇ ಇರಬೇಕಾಗುವದು. ದಬ್ಬಾಳಿಕೆಯನ್ನು ನಡೆಯಿಸುತ್ತಲೇ ಇದ್ದು, ಸಮಾಧಾನಪಡಿಸುವದು ಎಂದಿಗೂ ಸಾಧ್ಯವಿಲ್ಲ. ಇದನ್ನು ಮಿ|| ಬೆನ್ನರವರು ಎಷ್ಟು ಜಾಗ್ರತೆ ಅರಿಯುವರೋ ಅಷ್ಟು ಜಾಗ್ರತೆ ಭರತಖಂಡದ ಮತ್ತು ಗ್ರೇಟ್‌ಬ್ರಿಟನ್ನಿನ ಮುಂದಿನ ಪರಿಣಾಮವೂ ಒಳ್ಳೆಯದಾಗಿರುವದು.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೋಷಾ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[5] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುಸರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ, ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [41]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಕಟೆ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ನಸಪುಷ್ಪ, ಕಾಲಿಮಕಂದ, ಮಧುಕಂದ, ಜಪಾಕಂಧ, ಕಾಲೀಮಲೀಕಂದ, ಅಶ್ವಕಂದ ಶ್ರೇಷ್ಠಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಟಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕತಬೀಜ, ಸಾಗಬೀಜ, ಬಾಳಬೀಜ, ಭೋಕರೀ ಬೀಜ, ಪಿವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಸಾಪತ್ರಿ, ಮದನಮಸ್ತ, ರಕನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಪಾ, ಬೀಜಬಂದ, ಹರಣಖೋರಿ, ಮುಂಗಲೀ ಬೇದಾಣೆ, ಮರ್ದಾಸೀಕಟ್ಟಿಗೆ, ಶತಾವರಿ, ಸರಿಗೀಮಗಜ, ಆಲದಹಾಲು, ನಾಕೇರಿಭಾತಾ, ಗೋಕುರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸ್ಸಾ, ಅವಳಕಾಟಿ, ಸಿರಾಜಿಕ, ಜಾಜೀಕಾಯಿ, ರೂಮನಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಗೂಳ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [45]

ನಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿಚ್ಚು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾಧವಿರೋಣ, ದಟ್ಟಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಧಣಿಗೆ 3 ರೂಪಾಯಿಗಳು. ಪತ್ತೆ:—**ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧುತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ೮. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿ... ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[34] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು,

(Registered Trade Mark)

ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ನೂದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[46] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ ನೇ ಮೇ ೧೯೩೦ [ಸಂಚಿಕೆ ೪.

ಸೂಚನೆ.

ನಾವು ಹೊಸದಾಗಿ ಕಂಪನಿ ಓಪನ್ ಮಾಡಿರುವುದರಿಂದ ಸ್ಟೇಷನರಿ ವ್ಯಾಪಾರಿಗಳೂ, ಪುಸ್ತಕ ವ್ಯಾಪಾರಿಗಳೂ, ವಾಚ್‌ಕಂಪನಿಯವರೂ, ರಬ್ಬರ್‌ಸ್ಟಾಂಪು ಕಂಪನಿಯವರೂ, ಔಷಧವ್ಯಾಪಾರಿಗಳೂ, ನವೀನ ಕೈಗಾರಿಕೆಯ ಸಾಮಾನುಗಳ ವ್ಯಾಪಾರಿಗಳೂ ಮುಂತಾದ ಕಂಪನಿಯವರು ದಯವಿಟ್ಟು ಈ ಕೆಳಗಿನ ನಮ್ಮ ಅಡ್ರೆಸ್ಸಿಗೆ ತಮ್ಮ ಕಂಪನಿಯ ಕ್ಯಾಟಲಾಗು ಅಥವಾ ಕ್ರಯದಪಟ್ಟಿ ಕಳುಹಿಸಿದರೆ ಬೇಕಾದ ಮಾಲಿಗೆ ಆರ್ಡರ್ ಕೊಡೋಣವಾಗುತ್ತೆ.

ಶಿವಾನಂದಸ್ಟೋರ್.
Holagundi. (Via) Kottur.
Dt Bellary.

ಜಾಹಿರ ನೋಟೀಸ್.

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲ್ಲೂಕು ಶ್ರೀ ತ್ರಿಕಾಕಬಾಳು ಗ್ರಾಮದಲ್ಲಿರುವ ಶ್ರೀ ಶ್ರೀ ವ್ಯಾಸರಾಯ ಸ್ವಾಮಿಗಳ ಮಠಕ್ಕೆ ಸೇರಿದ 101ನೇ ನಂಬರು, 4-85 ಎಕರೆ, 6-10-9 ಆಕಾರವುಳ್ಳ ಸಾಗುವಳಿಯಾಗುತ್ತಿದ್ದ ಜಮೀನನ್ನು, ಸರಕಾರದವರು ಸದರಿ ಗ್ರಾಮಕ್ಕೆ ಮನೆಗಳನ್ನು ಕಟ್ಟುವುದಕ್ಕಾಗಿ ರಿಜರ್ವ್ ಮಾಡಿಸಿರುತ್ತಾರೆ. ಈ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲಪೇಕ್ಷಿಸುವವರು ಈ ಕೆಳಗೆ ಕಂಡ ಅಡ್ರೆಸ್ಸಿನವರ ಸಂಗಡ ಪತ್ರವ್ಯವಹಾರ ನಡೆಯಿಸಿ, ಅವರಿಂದ ಅಪ್ಪಣೆಯನ್ನು ಪಡೆಯತಕ್ಕದ್ದು. ಹಾಗೆ ಅಪ್ಪಣೆಯಿಲ್ಲದೆ ಸದರೀ ಜಾಗವನ್ನು ಆಕ್ರಮಿಸಿಕೊಳ್ಳುವವರು ಮದ್ರಾಸ್ ಕ್ರಿಮಿನಲ್ ಆಕ್ಟು 144ನೆಯ ಸೆಕ್ಷನ್ ಪ್ರಕಾರ ಶಿಕ್ಷೆಗೆ ಗುರಿಪಡಿಸಲ್ಪಡುತ್ತಾರಲ್ಲದೆ, ಅವರಿಂದ ಮಾಲೀಕರಿಗೆ ಉಂಟಾಗುವ ಎಲ್ಲನಷ್ಟಕ್ಕೂ ಅವರೇ ಗುರಿಯಾಗುತ್ತಾರೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

(Sd.) **ಪಿ. ವಿ. ರಾಮರಾವ್,**
ತಾ|| 25-5-1930. ಸಬ್ ಏಜಂಟ್,
ಶ್ರೀ ವ್ಯಾಸರಾಯಸ್ವಾಮಿ ಮಠ.

ಸ್ವೀಕಾರ.

ಬಳ್ಳಾರಿ ಡಿ|| ರಾಯದುರ್ಗ ತಾಲೂಕು ಕಲ್ಲುಹೊಳೆಮಠದ ವೇ|| ಕಲ್ಲುಹೊಳೆಯಪ್ಪಯ್ಯನವರು ಪ್ರಭಾಪೋಷಣಕ್ಕೋಸ್ಕರ **500** ರೂ. ಗಳನ್ನು ಸಮರ್ಪಿಸಿರುತ್ತಾರೆ.

ಕುಂದುಗೋಳ ತಪ್ಪಲದ ಮ|| ರಾ|| ಸಂಗನ ಬಸಪ್ಪನವರ ಪುತ್ರ ಚಿ|| ಗವಿಗಪ್ಪನಿಗೆ ಮ|| ರಾ|| ಅಕ್ಕಿಆಲೂರು ಕಿಟ್ಟುರ ಚನ್ನವೀರಪ್ಪನವರ ಪುತ್ರಿ ಕುಂ|| ಸೌ|| ಪುಟ್ಟವ್ವನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನ ಕಡೆಯಿಂದ ಸಮರ್ಪಿಸಲ್ಪಟ್ಟ **5** ರೂ. ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ **5** ರೂ. ಹಾಗೂ ಬೊಮ್ಮನಹಳ್ಳಿ ಮ|| ರಾ|| ಬೈಲಪ್ಪನವರ ಬಸಪ್ಪನವರ ಪುತ್ರ ಚಿ|| ಪಕ್ಕೀರಪ್ಪನಿಗೆ ಅಕ್ಕಿಆಲೂರು ಮ|| ರಾ|| ಬೆಲ್ಲದ ಗದಿಗಪ್ಪನವರ ಪುತ್ರಿ ಕುಂ|| ಸೌ|| ಪುಟ್ಟವ್ವನನ್ನು ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ವರನಕಡೆಯಿಂದ ಸಮರ್ಪಿಸಲ್ಪಟ್ಟ ರೂ. **1-4-0** ವಧುವಿನ ಕಡೆಯಿಂದ ಸಮರ್ಪಿಸಲ್ಪಟ್ಟ ರೂ. **1-4-0** ಒಟ್ಟು **12-8-0** ರೂಪಾಯಿಗಳು ಆಲೂರು ಕಿಟ್ಟುರ ಮ|| ರಾ|| ಚನ್ನವೀರಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ನಿವಾಸಿಗಳಾದ ಮ|| ರಾ|| ಶೇಡಗಾರ್ ರುದ್ರಪ್ಪನವರ ಪುತ್ರಿ ಕುಂ|| ಸೌ|| ರುದ್ರಮ್ಮನನ್ನು ಅರಸೀಕೆರೆ ಮ|| ರಾ|| ಬಿ. ಕೆ. ಕೊಟ್ಟೂರಪ್ಪನವರ ತಮ್ಮ ಚಿ|| ಷಡಕ್ಷರಪ್ಪನಿಗೂ, ಸದರಿ ರುದ್ರಪ್ಪನವರ ತಮ್ಮ ಮ|| ರಾ|| ಚನ್ನಯ್ಯನವರ ಪುತ್ರಿ ಸೌ|| ಪಾರ್ವತಮ್ಮನನ್ನು ಮ|| ರಾ|| ಕಡೂರು ಸಿದ್ದಪ್ಪನವರ ಪುತ್ರ ಚಿ|| ರುದ್ರಪ್ಪನಿಗೂ ಹಾಗೂ ಸದರಿ ರುದ್ರಪ್ಪನವರ ತಮ್ಮ ಮ|| ರಾ|| ಚನ್ನಯ್ಯನವರ ಮಗ ಚಿ|| ಕೊಟ್ಟೂರಪ್ಪನಿಗೆ ಅರಸೀಕೆರೆ ಮ|| ರಾ|| ಬಿ. ಕೆ. ಕೊಟ್ಟೂರಪ್ಪನವರ ಪುತ್ರಿ ಸೌ|| ಪಾರ್ವತಮ್ಮನನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **6** ರೂ. ಗಳು ಶ್ರೀ|| ಮಳಲಿಮಠದ ನಾಗಾರ್ಜುನಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ತೋರಣಗಲ್ಲು ನಿವಾಸಿಗಳಾದ ಮ|| ರಾ|| ಅಂಗಡಿ ರುದ್ರಪ್ಪನವರ ಲಗ್ನದಲ್ಲಿ ಅವರ ಅಣ್ಣಂದಿರಾದ ಮ|| ರಾ|| ದೊಡ್ಡಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂ. ಗಳು ಮ|| ರಾ|| ಶ್ರೀಮಂತ ಗುಗ್ರಿಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ರಾಯದುರ್ಗ ತಾಲೂಕು ಕಲ್ಲುಹೊಳೆಗ್ರಾಮದಲ್ಲಿ ನೆರವೇರಿದ ವೇ|| ಲಕ್ಷ್ಮೀಶ್ವರ ಹಿರೇಮಠದ ಕಾಶಪ್ಪಯ್ಯನವರ ಪುತ್ರ ಚಿ|| ನೀಲಸೋಮಯ್ಯನ ದೀಕ್ಷಾ ಸಮಯದಲ್ಲಿ **1** ರೂ. ವೇ|| ಗಂಗಾಧರಯ್ಯನವರ ಪುತ್ರ ಚಿ|| ಸಿದ್ಧಯ್ಯನ ದೀಕ್ಷಾ ಸಮಯದಲ್ಲಿ **1** ರೂ. ಹಾಗೂ ವೇ|| ಒಂಕಾಪುರ ಅದವಾನಿಮಠದ ಗುರುಪಾದಯ್ಯನವರ ಪುತ್ರ ಚಿ|| ಕೊಟ್ರಯ್ಯನ ದೀಕ್ಷಾ ಸಮಯದಲ್ಲಿ **1** ರೂ. ಒಟ್ಟು **3** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಶಿವಮೊಗ್ಗ ತಾಲ್ಲೂಕು ಗಾಜನೂರು ಹೊಳೆಮಠದ ವೇ|| ಚಂದಪ್ಪಯ್ಯನವರ ಪುತ್ರ ಚಿ|| ಮುರುಗಾರ್ಧ್ಯನಿಗೆ ಕೆಸವಿನಕಟ್ಟೆ ಮ|| ರಾ|| ಚನ್ನವೀರಯ್ಯನವರ ಪುತ್ರಿ ಕುಂ|| ಸೌ|| ಹಾಲಮ್ಮನನ್ನು ಕೊಟ್ಟು ನಡೆಯಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ **2** ರೂಪಾಯಿಗಳು ವೇ|| ಮಳಲಿಮಠದ ನಂಜುಂಡಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ನೈಜಾಮ ಇಲಾಖಾ ಗುಲಬುರ್ಗಾ ತಾಲ್ಲೂಕು ಕಲ್ಲೂರು ವಾಸಿಗಳಾದ ವೇ|| ಸಿದ್ಧಬಸಯ್ಯ ಉತ್ತಂಗಿಮಠ ಇವರಿಗೆ ವೇ|| ಅಂದಾನಯ್ಯ ಹಿರೇಮಠ ಸಾ|| ಹಿರೇಅಳಗೂಡು ಇವರ ಪುತ್ರಿ ಕುಂ|| ಸೌ|| ಸಾವಿತ್ರವ್ವನನ್ನು ಕೊಟ್ಟು ಮಾಡಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿಗಳು ಮ|| ರಾ|| ಸದಾಶಿವಗೌಡಾ ಪೋಲೀಸ್ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ತುಂಕೂರಿನಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿ ಪ್ಲೀಡರ್ ಮ|| ರಾ|| ಜಿ. ಕೆ. ಗುರುಸಂಗಾರ್ಯರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ನಗರದ ಇಜ್‌ಕಂಟ್ರ್ಯಾಕ್ಟ್ ಇನ್ಸ್‌ಪೆಕ್ಟರ್ ವೇ|| ಜಿ. ಕೆ. ರುದ್ರಾರಾಧ್ಯರು ತಮ್ಮ ದ್ವಿತೀಯಪುತ್ರನ ನಾಮಕರಣಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಹೊಸಪೇಟೆ ತಾಲೂಕು ಮೆಟ್ರಿಗ್ರಾಮನಿವಾಸಿಗಳಾದ ವೇ|| ಓವಾರ್ಯಮಠದ ನಿರ್ವಾಣಯ್ಯನವರ ಪುತ್ರ ಚಿ|| ಚಂದ್ರಶೇಖರಯ್ಯ ಹಾಗೂ ಕಂಪ್ಲಿ ಬೋರ್ಡ್ ಸ್ಕೂಲ್ಮಾಸ್ಟರ್ ಕುರುಗೋಡುಮಠದ ವೇ|| ಈಶ್ವರಯ್ಯನವರ ಪುತ್ರ ಚಿ|| ವೀರಭದ್ರಯ್ಯ ಇವರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಗುಲಬುರ್ಗಾ ಡಿ|| ತೊಣಸ್ಥಿರು ಗ್ರಾಮದ ಸಾರಂಗಮಠಕ್ಕೆ ಪಟ್ಟಾಧಿಕಾರವಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ಮ|| ರಾ|| ಭೀಮರಾವ್ ಮಾಲೀಪಾಟೀಲ್ ಇವರ ದ್ವಾರಾ ತಲ್ಪಿರುತ್ತವೆ.

ನಿಜಾಮ ಇಲಾಖಾ ಹುಮನಾಬಾದ ತಾಲೂಕು ರಾಜೇಸೂರ ಗ್ರಾಮವಾಸಿಗಳಾದ ಮ|| ರಾ|| ಗದಗಪ್ಪಾ ಸಜ್ಜನಶೆಟ್ಟಿ ಇವರ ಪುತ್ರಿ ಕುಂ|| ಸೌ|| ರತ್ನಮ್ಮನ ವಿವಾಹ ಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **1** ರೂ. ಯು ಮ|| ರಾ|| ಸಿದ್ಧರಾಮಯ್ಯನವರು ಭಂಗಿ ಇವರ ದ್ವಾರಾ ತಲುಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಏಕೋರಾಮಾಚಾರ್ಯ ದಾರುಕಾಚಾರ್ಯ ಜಯಂತಿಗಳು.
ಶ್ರೀ ವಿಶ್ವಾರಾಧ್ಯ ಗುರುಕುಲ ಕಾಶೀ.

ಇದೇ ಪ್ರಮೋದೂತಸಂವತ್ಸರದ ವೈಶಾಖ ಶುದ್ಧ ಅಕ್ಷತ್ರತೀಯಾ ಗುರುವಾರ (1-5-1930) ಪ್ರಾತಃಕಾಲದ 6 ಘಂಟೆಗೆ ಶ್ರೀ ಗುರುಕುಲವಾಸಿಗಳಾದ ಸಕಲರೂ ಗಂಗಾಸ್ನಾನ ಶಿವಾರ್ಚನೆಗಳಿಂದ ಶುದ್ಧರಾಗಿ ವೇ|| ಪಂ|| ಶಿವಕುಮಾರಸ್ವಾಮಿಗಳ ಕೊಠಡಿಯಲ್ಲಿ ಸಮ್ಮಿಲಿತರಾಗಿ ವಿಧ್ಯುಕ್ತ ಷೋಡಶೋಪಚಾರಗಳಿಂದ ಶ್ರೀ ಜಗದ್ಗುರು ಏಕೋರಾಮಶಿವಾಚಾರ್ಯ ಪೂಜಾಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಭಕ್ತಿಪರವಶರಾದ ಪಂ|| [illegible] ಗಳವರು ತತ್ಕಾಲದಲ್ಲಿಯೇ ಈ ಪದ್ಯಗಳನ್ನು ರಚಿಸಿ [illegible] ಸುರಾಗವಾಗಿ ಹಾಡಿದರು.

ಕಂ|| ಹಿಮವತ್ಪರ್ವತವಾಸಿಯೊ
ಉಮೆಯೊಡನೆ ವಿಹಾರವಾಳ್ದ ಶ್ರೀ ಜಗದೀಶಂ |
[illegible]
[illegible] ||೧||
[illegible] ||೨||
[illegible] ||೩||

ಇದಾದ ತರುವಾಯ ಶ್ರೀ ಶಿವಕುಮಾರಸ್ವಾಮಿಗಳವರು "ಏಕೋರಾಮ ಗುರುಂ ವಂದೇ" ಎಂಬ ವಾಕ್ಯವು [illegible] ಪ್ರತಿಯೊಂದು ಪಾದದ ಕೊನೆಯ ಅಕ್ಷರದಿಂದ ವೃತ್ತವಾಗುವಂತೆ ಶ್ಲೋಕಗಳನ್ನು ರಚಿಸಿ ಕರ್ಣಾನಂದವಾಗುವಂತೆ ಹಾಡಿದರು.

[illegible]

ಅನಂತರದಲ್ಲಿ ಸದರಿ ಶ್ರೀಗಳು ಮೃಷ್ಟಾನ್ನಭೋಜನದಿಂದ ಸಕಲರನ್ನು ತೃಪ್ತಿಗೊಳಿಸಿದರು. ಪುನಃ ರಾತ್ರಿ 8 ಘಂಟೆಗೆ ಗುರುಭಜನೆಯು ಆರಂಭವಾಗಿ ಸಕಲ [illegible] ಪಾವನವೂ ಜಯಂತ್ಯುತ್ಸವವೂ ಸಮಾಪ್ತವಾಯಿತು. [illegible]

ವೈಶಾಖ ಶು|| [illegible] ಪ್ರಾತಃಕಾಲ 6 ಘಂಟೆಗೆ [illegible] ಸರ್ವಜನರು ಮಹೋತ್ಸವವನ್ನು ನೋಡಿ ಕೃತಾರ್ಥರಾದರು. [illegible] ಶ್ರೀ ಶಿವಕುಮಾರಸ್ವಾಮಿಗಳವರು "ಶ್ರೀ ದಾರುಕಗುರುಂ ವಂದೇ" ಎಂಬ ವಾಕ್ಯವು ಶ್ಲೋಕಗಳಿಂದ ವ್ಯಕ್ತವಾಗುವಂತೆ ಆಗಿನಿಂದಾಗಲೇ ಈ ಶ್ಲೋಕಗಳನ್ನು ರಚಿಸಿ ಹಾಡಿದರು.

[illegible] ದಾರುಕಂ ||೧||

ಗುರ್ವಿಂ ಭಕ್ತಿಲತಾಂ ಪ್ರರೋಹ್ಯ ಹೃದಯೇ ಸದ್ಭಾವದಿವ್ಯೋದಕೈಃ
ರೋಚಿಷ್ಣು ಪ್ರಭವಾರ್ತಿಹಾರಿ ಸುಖದಂ ನಿತ್ಯಾತ್ಮರೂಪಂ ಫಲಂ |
ಪ್ರಾಪಯ್ಯಂ ನಿಗಮೈಕವೇದ್ಯಮುಚಿತಂ ಭುಕ್ತ್ವಾ ತದೀಯಂಜನೋ
ಹಿತ್ವಾ ನಿತ್ಯಸುಖಾಕರಂ ಜಗದಿದಂ ಪ್ರಾಪ್ನೋತಿ ಶೈವಂ ಪದಂ ||೨||

ಅನಂತರದಲ್ಲಿ ಸಕಲ ಮಿತ್ರಮಂಡಲಿಯೂ ಮೃಷ್ಟಾನ್ನಭೋಜನದಿಂದ ತೃಪ್ತಿಗೊಳಿಸಲ್ಪಟ್ಟಿತು. ಸಾಯಂಕಾಲ 7 ಗಂಟೆಗೆ ಭಜನೆಯು ಆರಂಭವಾಗಿ ಬಹು ಸಂಭ್ರಮದಿಂದ ನೆರವೇರಿತು. ಅಂತ್ಯದಲ್ಲಿ ಶ್ರೀ ವೇ|| ಪಂ|| ವಾಗೀಶಶಿವಾಚಾರ್ಯರು ಮುದೇನೂರು ಇವರು ಈ ಪದ್ಯವನ್ನು ರಚಿಸಿ ಹಾಡಿದರು.

ಕಂ|| ಈ ಪರಿಯೊಳ್ ಜನರೆಲ್ಲರ್
ಪಾವನ ಪರಿಕರಿಪ ಗುರುಜಯಂತಿಯ ನೆಸಗಲ್ |
ಕಾಪಕ್ಕ ಯುವರೀದಾಗಿರಿ
[illegible] ||೧||

ಆ ಬಳಿಕ ಆಚಾರ್ಯಜಯಘೋಷದೊಡನೆ ಜಯಂತ್ಯುತ್ಸವವು ಸಮಾಪ್ತಿಯಾಯಿತು.

ಇದೇ ರೀತಿಯಾಗಿ ಸಕಲ ವೀರಶೈವರೂ ಮಾನವಜನ್ಮೋದ್ಧಾರಕ್ಕೆ ಮೂಲಕಾರಣರಾದೀ ಆಚಾರ್ಯರ ಜಯಂತ್ಯುತ್ಸವವನ್ನು ಆನಂದಭಕ್ತಿಯಿಂದಾಚರಿಸಿ ಸಕಲೇಷ್ಟಾರ್ಥಫಲಗಳನ್ನು ಹೊಂದಲೆಂದು ಹಾರೈಸುವ,

ರುದ್ರಾರಾಧ್ಯ ಶರ್ಮಾ.

ಶ್ರೀ ಜಗದ್ಗುರು ಪಂಚಕಾಯನಮಃ

ಶ್ರೀ ಜಗದಾಚಾರ್ಯರವರ ಜಯಂತಿ ಮಹೋತ್ಸವಗಳು,

ತುಮಕೂರು.

ಶ್ರೀಮದ್ವೀರಶೈವ ಮಠಸ್ವಾಮಿಗಳು ಶ್ರೀ ಕಾಂಚಿಮೂತೀಯ [illegible] ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಯವರು [illegible] ಕಾಲ್ಗುಣ ಶುದ್ಧ ಚತುರ್ದಶಿ ಗುರುವಾರ (13-3-30) ಪ್ರಾತಃಕಾಲಕ್ಕೆ ಶ್ರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ರೇಣುಕಶಿವಾಚಾರ್ಯ ಭಗವತ್ಪಾದರವರ ಲಿಂಗೋದ್ಭವಮೂರ್ತಿಯ [illegible]

[illegible]

ಶ್ರೀ ಜಯಂತಿಮಹೋತ್ಸವಕ್ಕಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ [illegible] ಮ|| ರಾ|| ಟಿ. ಎನ್. ವೆಂಕಟೇಶಯ್ಯನವರು [illegible]

[illegible]

ವಾಗಿ ಆನಂದವನ್ನುಂಟುಮಾಡಿತು. ಸಿವಿಲ್‌ಕೋರ್ಟಿನ ಬಳಿಗೆ ಮಹೋತ್ಸವವು ಬಿಜಯಂಗೈಯ್ಯಲು ಕೋರ್ಟುಗಳಲ್ಲಿದ್ದ ವಕೀಲರುಗಳು ಮಹೋತ್ಸವ ದರ್ಶನಕುತೂಹಲದಿಂದ ಹೊರಗೆ ಬಂದ ಕಾರಣ ಉತ್ಸವವನ್ನು ನಿಲ್ಲಿಸಬೇಕಾಯಿತು. ಸದ್ಗುರೂ ಜಗದಾಚಾರ್ಯರವರ ಅಗಾಧವಾದ ಮಹಿಮೆಗಳನ್ನು ವಿಸ್ತಾರವಾಗಿ ಕೇಳಿ ಆನಂದಕಂದಲಿತಹೃದಯರಾದರು. ಆಗ ಮುಂದಲಿಯ ಜನರಲ್ ಸೆಕ್ರೆಟರಿಗಳಾದ ಮ|| ರಾ|| ಪ್ಲೀಡರ್ ಜಿ. ಕೆ. ಗುರುಸಂಗಾಪ್ಪನವರು ಮತ್ತು ಕಾರ್ಯದರ್ಶಿಗಳಾದ ಮ|| ರಾ|| ಟಿ. ಪಿ. ಶಿವಯ್ಯನವರು ವಕೀಲರ ಸಂಘದ ಅಧ್ಯಕ್ಷರಿಗೂ ಸೆಕ್ರೆಟರಿಗಳಿಗೂ ಪುಷ್ಪಮಾಲಿಕೆಗಳನ್ನು ಹಾಕಿ ಸಕಲ ವಕೀಲರುಗಳ ಆಭಾರವನ್ನು ಮನ್ನಿಸಿ ಶ್ರೀ ಜಗದಾಚಾರ್ಯರವರ ಫಲಪ್ರಸಾದಗಳನ್ನು ಕೊಡಲು ಸದ್ಗುರೂ ಸಮಾಜದವರನ್ನು ವಂದಿಸಿ ತೆರಳಿದರು. ಸ್ವಮತದ ಅಡ್ವೋಕೇಟರುಗಳಾದ ಮ|| ರಾ|| ಎಸ್. ಚೆನ್ನಪ್ಪ ಬಿ.ಎ., ಬಿ.ಎಲ್., ರವರು ಮ|| ರಾ|| ಜಿ. ಮುದ್ದಪ್ಪ ಬಿ.ಎ., ಬಿ.ಎಲ್. ರವರು ಸಹ ಶ್ರೀ ಜಗದ್ಗುರು ಸಾರ್ವಭೌಮರವರ ದರ್ಶನಾದಿಗಳಿಂದ ಧನ್ಯರಾಗಿ [illegible] ರಾತ್ರಿ ಎಲೆಕ್ಟ್ರಿಕ್ ದೀಪೋತ್ಸವದಿಂದ ಶ್ರೀ ಗುರುಮಠಕ್ಕೆ ಮಹಾಮಂಗಳ ನೀರಾಜನಾನಂತರ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಘೋಷದಿಂದ ಮಹೋತ್ಸವವು ಸಮಾಪ್ತವಾಯಿತು.

ಶ್ರೀ ಗುರುಪದಕಿಂಕರ
H. S. ಸೋಮಶೇಖರಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ದಾರುಕಾಚಾರ್ಯರ ಜಯಂತಿ ಮಹೋತ್ಸವವು.

ಬಂಕಾಪುರ.

ಪ್ರತಿವರ್ಷದ ಪದ್ಧತಿಯಂತೆ ವೈಶಾಖ ಶು|| ೫ ಶನಿವಾರ ಪ್ರಾತಃಕಾಲದಲ್ಲಿ ಶ್ರೀ ಜಗದ್ಗುರು ದಾರುಕಾಚಾರ್ಯರ ಭಾವಚಿತ್ರಕ್ಕೆ [illegible]

[illegible]

ಉತ್ಸವಭಾಗಿ.

ಶ್ರೀಮದೇಕೋರಾಮ ಜಗದಾಚಾರ್ಯ ಜಯಂತ್ಯುತ್ಸವ.

ಶ್ರೀ ಹಿಮವತ್ಕೇದಾರ ಮಹಾಸಂಸ್ಥಾನ ಉಖಾಮಠದಲ್ಲಿ ತಾ|| 1-5-30 ನೇ ತೃತೀಯಾ ದಿವಸ ಜಗದಾಚಾರ್ಯರ ಜಯಂತಿಮಹೋತ್ಸವವು ಬಹು ಆಟ್ಟಹಾಸದಿಂದ ನೆರವೇರಿತು. [illegible]

[illegible]

ಪ್ರತ್ಯಕ್ಷದರ್ಶಿ.

ವಿದ್ಯಾಫಂಡಿಗೆ ಸಹಾಯ.

ಬಳ್ಳಾರಿ ಡಿ|| ಹಿರೇಹಡಗಲಿ ಹೊಸ[illegible] ಗೌಡರಾದ ಕೊಂ ವೀರಭದ್ರಪ್ಪ (ಹಾಲಿವಸ್ತಿ [illegible]) ಇವರು ವೇ|| ಪಿ. ಎಂ. ವಿರೂಪಾಕ್ಷಶಾಸ್ತ್ರಿಗಳವರ ಸದ್ಬೋಧಶ್ರವಣ ಮಾಡಿ ಉದಾರಬುದ್ಧಿಯಿಂದ ಕೊಟ್ಟೂರು ಗ್ರಾಮದಲ್ಲಿ ಉಜ್ಜಯಿನೀ ಜಗದ್ಗುರುಗಳವರಿಂದ ಸ್ಥಾಪಿತವಾಗಿರುವ "ಶ್ರೀ ದಾರುಕಾಚಾರ್ಯ ಸಂಸ್ಕೃತ ಪಾಠಶಾಲಾ" ವಿದ್ಯಾಫಂಡಿಗೆ 50 ರೂಪಾಯಿಗಳನ್ನು ಕೊಡಲು ನಿಶ್ಚಯಿಸಿ ಶ್ರೀಮದ್ಬಟಕ್ಷೇತ್ರ ಮಧ್ಯ ವಿರಾಜಮಾನವಾದ ಸದ್ಧರ್ಮಸಿಂಹಾಸನಾಧೀಶರೂ ಪರಮಪೂಜ್ಯರೂ ಪರಶಿವಾವತಾರಿಗಳೂ ಆದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೆ ತಾ|| 7-5-1930 ದಿವಸ ಬಂದು ಸದರಿ ರೂಪಾಯಿಗಳನ್ನು ಅರ್ಪಿಸಿ ಫಲಾಶೀರ್ವಾದಗಳಂ ಪಡೆದು ವಿದ್ಯಾದಾನ ಫಲಕ್ಕೆ ಭಾಗಿಯಾದರು. ಮತ್ತು ಇದಲ್ಲದೆ ಇವರು ಧಾರವಾಡ ಡಿ|| ತುಂಗಭದ್ರಾನದೀ ತೀರದಲ್ಲಿ ಅತ್ಯಂತ ಪ್ರಸಿದ್ಧಿಯಾದ ಸಿಂಗ್ಯಾಲೂರು ಶ್ರೀ ವೀರಭದ್ರಸ್ವಾಮಿಗಿರಿಯಲ್ಲಿ 500 ರೂ. ಖರ್ಚಿನಿಂದ ಒಂದು ನೂತನವಾದ ಉಗ್ರಾಣವನ್ನು ಕಟ್ಟಿಸಿದ್ದಾರೆ. ಇದು ಯಾತ್ರಿಕರಿಗೆ ಅನೇಕ ತರಹ ಪ್ರಯೋಜನಕಾರಿಯಾಗಿದೆ. ಇವರಂತೆ ಇನ್ನುಳಿದ ಮಹನೀಯರು ಉದಾರಬುದ್ಧಿಯುಳ್ಳವರಾಗಿ ಇಂಥ ಸತ್ಕಾರ್ಯಗಳನ್ನು ಮಾಡುತ್ತ ಮುಕ್ತಿಗೆ ಪಾತ್ರರಾಗಲೆಂದು ಹಾರೈಸುತ್ತೇನೆ.

ಪಿ. ಎಂ. ಶಿವಾನಂದಯ್ಯ.

ಶ್ರೀ ಜಗದ್ಗುರು ಕೇದಾರಪೀಠಾಧಿಪತಿಗಳ ಶುಭಾಗಮನ.

ತಾ|| ೨೮-೪-೩೦ ನೆಯ ದಿವಸ ಶ್ರೀ ಜಗದ್ಗುರುಗಳು ಮಹಾಸಂಸ್ಥಾನ ಉಖಾಮಠಕ್ಕೆ ಆಗಮಿಸಿದರು. ಸಂಸ್ಥಾನದ ಯಾವತ್ತು ಗ್ರಾಮದ ಪಟೇಲ್ ಪಟವಾರಿ ಮುಂತಾದ ಪ್ರಜೆಗಳು ಹಾಗೂ ಸಂಸ್ಥಾನ ಮಿಡಲ್‌ಸ್ಕೂಲ್ ಮಾಸ್ತರರು ವಿದ್ಯಾರ್ಥಿಗಳು ಮಹಾ ವಿದ್ಯಾಲಯ (ಸಂಸ್ಕೃತ ಕಾಲೇಜು) ವಿದ್ಯಾರ್ಥಿಗಳು [illegible]

[illegible]

ಧ್ಯಾನಸಿಂಹಪ್ರಧಾನ

ಶ್ರೀ ಕೇದಾರನಾಥಪ್ರಸ್ಥಾನವೂ ಪೂಜಾ ಪ್ರಾರಂಭವೂ.

ತಾ|| 29-4-30 ನೆಯ ದಿವಸ ರಾವಲಿಂಗಕರ್ಮ[illegible] ವಾಮೇಶ್ವರಪೂಜಕರು ಶ್ರೀ ಕೇದಾರ ಸಿಂಹಾಸನ ಉಖಾಮಠ [illegible]

[illegible]

ಇದುವರೆಗೆ ಭರತಖಂಡದ ರಾಜಕೀಯ ಚಳವಳಿಯಲ್ಲಿ ಪ್ರವೇಶ ಮಾಡದಿದ್ದ ಭರತಖಂಡದ ಕವಿಶ್ರೇಷ್ಠರಾದ ಡಾಕ್ಟರ್ ರವೀಂದ್ರನಾಥಟಾಗೂರ್‌ರವರು ಭರತಖಂಡದ ಸದ್ಯದ ಸ್ಥಿತಿಯ ವಿಷಯವಾಗಿ ಈ ರೀತಿ ಹೇಳಿರುತ್ತಾರೆ—

"ನಾನು ಚಿಕ್ಕವನಾಗಿದ್ದಾಗ ಆಂಗ್ಲದೇಶದವರ ವಿದ್ಯೆ, ಮಾನವಕೋಟಿಯಲ್ಲಿ ಅವರಿಗಿರುವ ವಿಶ್ವಾಸ, ನ್ಯಾಯ, ಸ್ವಾತಂತ್ರ್ಯ ಇತ್ಯಾದಿ ಅಮೂಲ್ಯಗುಣಗಳನ್ನು ನೋಡಿ ಭಾರತೀಯರು ಆನಂದಭರಿತರಾಗಿದ್ದರು. ಈಗಲಾದರೋ ಆಂಗ್ಲೇಯರು ಸರ್ವ ಪ್ರಯತ್ನಗಳಿಂದ ತಮ್ಮ ಕೈಗಾರಿಕೆಯನ್ನು ಮಾತ್ರ ಮುಂದುವರಿಸುತ್ತಿರುವ ಸ್ವಾರ್ಥತೆಯಿಂದ ತಮ್ಮ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವರು. ಸದ್ಯಃ ಒದಗಿರುವ ಕಷ್ಟಪರಂಪರೆಗಳು ದೂರವಾಗಬೇಕಾದರೆ ಪೂರ್ವಪಶ್ಚಿಮದೇಶಗಳ ಮುಖಂಡರು ಸೇರಿಗೂಡಿ, ಸರ್ವಸಮ್ಮತವೂ, ನ್ಯಾಯಸಮ್ಮತವೂ ಆದ ತೀರ್ಮಾನವನ್ನು ಮಾಡಬೇಕು. ಏಕೆಂದರೆ ಪೂರ್ವದೇಶೀಯರು ಈಗಲೂ, ತಮ್ಮ ಮನಸ್ಸಿನಲ್ಲಿ ಪಾಶ್ಚಿಮಾತ್ಯರ ನಾಗರಿಕತೆಯ ವಿಷಯವನ್ನು ಗೌರವಿಸುವರು. ಆದರೆ ಈಗಿನ ಚಳವಳಿಯು ಮಾತ್ರ ದಬ್ಬಾಳಿಕೆಯಿಂದಲೂ ಬಲಪ್ರದರ್ಶನದಿಂದಲೂ ಅಡಗುವಂತಿಲ್ಲ. ಉಭಯಪಕ್ಷದವರೂ ವಿಶಾಲಮಾನಸರಾಗಿ ಏಕಮತ್ಯದಿಂದ ಕೂಡುವದಾದರೇನೇ ಈ ಗಲಾಟೆಗಳು ನಿಲ್ಲುವವು. ಸೊಲ್ಲಾಪುರದಲ್ಲಿ ಉಂಟಾಗಿರುವ ಗಲಭೆಯನ್ನು ಅಡಗಿಸುವ ನೆವದಿಂದ ಸೈನ್ಯದವರು ಯಾರೂ ಗಾಂಧಿ ಟೋಪಿಗಳನ್ನು ಹಾಕಿಕೊಳ್ಳದಂತೆ ನಿರ್ಬಂಧ ಮಾಡುತ್ತಿರುವರು. ಇದರಿಂದ ಭಾರತೀಯರಿಗೆ ಆಗುವ ಶಾರೀರಕ ವ್ಯಥೆಯು ಅತ್ಯಲ್ಪವಾದರೂ, ಮಹಾತ್ಮರ ಹೆಸರನ್ನು ಅತ್ಯಂತ ಪೂಜ್ಯಬುದ್ಧಿಯಿಂದ ಗೌರವಿಸುವ ಕೋಟ್ಯಾವಧಿ ಭಾರತೀಯರಿಗೆ ಸಹಿಸಲಾರದಂಥ ಮಾನಸಿಕ ವ್ಯಥೆಯುಂಟಾಗುವದು. ಸದ್ಯಃ ಭರತಖಂಡದಲ್ಲಿ ತಲೆದೋರಿರುವ ಹಿಂಸಾತ್ಮಕ ಗಲಾಟೆಗಳನ್ನು ಕಂಡು ನಾವುಗಳು ನಾಚಿಕೊಳ್ಳುವಂತೆ, ಆಂಗ್ಲೇಯರ ದಬ್ಬಾಳಿಕೆಯನ್ನು ಕಂಡು ಇಂಗ್ಲಂಡಿನ ಉತ್ತಮಪಕ್ಷದವರು ಸಹ ನಾಚಿಕೊಳ್ಳುವರು."

ಕಳೆದ 14 ನೆಯ ತಾರೀಖಿನ ದಿವಸ 400-500 ಜನ ಸ್ವಯಂಸೇವಕರು ರತ್ನಾಗಿರಿ ಡಿಸ್ಟ್ರಿಕ್ಟಿಗೆ ಸೇರಿದ ಶಿರೋಡದಲ್ಲಿದ್ದ ಉಪ್ಪಿನ ಕೋಠಿಯನ್ನು ಲೂಟಿಮಾಡಿದರು. ಪೋಲೀಸರು 200 ಕ್ರಿಂತಲೂ ಹೆಚ್ಚು ಸ್ವಯಂಸೇವಕರನ್ನು ದಸ್ತಗಿರಿಮಾಡಿರುತ್ತಾರೆ. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಪ್ರೊಫೆಸರ್ ಕೇಳಕರವರ ಮೊದಲಾದ ಮುಖಂಡರಿಗೆ ಉಪ್ಪಿನಕೋಠಿಯನ್ನು ಲೂಟಿಮಾಡುವ ಪ್ರಯತ್ನವನ್ನು ಮುಂದುವರಿಸಿದರೆ ಎಚ್ಚರಿಕೆಯನ್ನು ಕೊಟ್ಟರೂ ಸಹ ಅದನ್ನು ಯಾರೂ ಗಮನಿಸಲಿಲ್ಲ. ಸತ್ಯಾಗ್ರಹಿಗಳು ಬೇರೆ ಬೇರೆ ಗುಂಪುಗಳಾಗಿ ಕೋಠಿಯ ಮೇಲೆ ನುಗ್ಗಿದರು. ಇದರಿಂದ ಪೋಲೀಸರೊಡನೆ ಕೈ ಕೈ ಹತ್ತಿ ಅನೇಕರಿಗೆ ತುಂಬಾ ಗಾಯಗಳಾದುವು.

ವೇದಾರಣ್ಯದ ಉಪ್ಪಿನ ಸತ್ಯಾಗ್ರಹಿಗಳ ಮುಖಂಡರಾದ ಶ್ರೀ|| ಕೆ. ಎಸ್. ಸುಬ್ರಹ್ಮಣ್ಯಂರವರು ಇಬ್ಬರು ಸ್ವಯಂಸೇವಕರೊಡನೆ ದಸ್ತಗಿರಿಮಾಡಲ್ಪಟ್ಟು ಒಂದು ವರ್ಷ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿರುವರು.

ಅಹಮದಾಬಾದಿನ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮಿ|| ಮೊರಾರ್ಜಿ ದೇಸಾಯಿಯವರೂ, ಉತ್ತರದಸ್ಕ್ರೋಯ್ ತಾಲೂಕು ಲೋಕಲ್ ಬೋರ್ಡಿನ ಪ್ರೆಸಿಡೆಂಟರಾದ ಮಿ|| ಸೋರಾಭಾಯ್ ಪಟೇಲ್‌ರವರೂ, ಸಂಯುಕ್ತ ಸಂಸ್ಥಾನಗಳ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಮೆಂಬರರಾದ ಮಿ|| ಬಾಬುಗಂಗಾಪ್ರಸಾದರಾಯ್ ಮತ್ತು ಬಾಬುನಾರಾಯಣಪ್ರಸಾದಗೌಡರವರೂ, ಹಾಗೂ ಮಧ್ಯ ಪ್ರಾಂತ್ಯಗಳ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ಮಿ|| ಎಂ. ಕೆ. ಗೋಪಾಲ್‌ಕರ್ ಮತ್ತು ಮಿ|| ಎಸ್. ಭಾರ್ಗವರವರು ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು. ಮಿ|| ಮೊರಾರ್ಜಿ ದೇಸಾಯಿಯವರು ತಾವು ರಾಜೀನಾಮೆಯನ್ನು ಕೊಟ್ಟ ವಿಷಯವಾಗಿ ಬರೆದ ಪತ್ರದಲ್ಲಿ "ತನ್ನ ದೇಶಬಂಧುಗಳಾದ ಸಾವಿರಾರು ಜನ ವೀರರು ದೇಶಮಾತೆಯ ಸಲುವಾಗಿ ಆಹುತಿಯಾಗುತ್ತಿರುವದನ್ನು ಕಣ್ಣಾರೆ ನೋಡಿಯೂ, ಸ್ವಾಭಿಮಾನ ಮತ್ತು ಸ್ವದೇಶಾಭಿಮಾನವುಳ್ಳ ಯಾವ ಭಾರತೀಯನೂ ಸುಮ್ಮನಿರಲಾರನು" ಎಂಬುದಾಗಿ ಬರೆದಿರುವರು.

ಸೊಲ್ಲಾಪುರದಲ್ಲಿ ಗುಂಡು ಹೇಗೆ ಅಡ್ಡಾತಿಡ್ಡಾ ಹಾರಿದವು?

ದಂಡಿನ ಬಲವು ಬಂದ ಕೂಡಲೆ ಪೋಲೀಸರು, ಸೋಲ್ಜರರು ಅಥವಾ ದೇಶೀ ಸೈನಿಕರು ಯಾರೇ ಇರಲಿ ದಂಗೆಯನ್ನು ಮುರಿಯಬೇಕೆಂದು ಊರ ತುಂಬ ಗುಂಡಿನ ಮಳೆ ಸುರಿಸಿದರು. ಈ ಕೃತಿಯು ತೀರ ಅವಿಚಾರ ಮತ್ತು ನಿರ್ದಯದ್ದಾಗಿತ್ತೆಂದು ಮುಂದೆ ಕೊಟ್ಟ ಕೆಲವು ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

೧. ಗಣಪತ ಬಾಳಕೃಷ್ಣ ಜಿಂಜೆ—ಇವರು ಟಕೀಕರ ಮನೆಗೆ ಬೊಮ್ಮನಹಳ್ಳಿಯಿಂದ ಬಂದಿದ್ದರು. ಪಂಢರಪುರಕ್ಕೆ ಹೋಗುವದಕ್ಕಾಗಿ ಜನ್ನೆಯಿಳಿಯುತ್ತಿದ್ದಾಗ ಕಾಲಿಗೆ ಗುಂಡು ಬಡಿಯಿತು.

೨. ಮೆಕಾವಿಕ ಥಿಯೇಟರದಲ್ಲಿ ಎಲ್ಲಕ್ಕೂ ಮೇಲಿನ ಪಾವಟಿಗೆಯ ಮೇಲೆ ಕುಳಿತಿದ್ದ ಉಜ್ಜಯಿನಿಯ ಭೋಗಿರಿಬಾವಾ ಎಂಬವರ ಆರವತ್ತು ವರ್ಷದ ಒಬ್ಬ ಗೋಸಾವಿ ಮುದುಕನ ಕಾಲಿಗೆ ಗುಂಡು ಬಡಿಯಿತು.

೩. ಪಾಂಜರಪೋಳದಲ್ಲಿರುವ ಸ್ವಾಮಿಗೆ ಒಂದೂಕೆ ತಾತ್ಯಾ ಎಂಬವನಿಗೆ ಒಂದರ ಮೇಲೊಂದರಂತೆ ಮೂರು ಸಾರೆ ಗುಂಡು ಹಾಕಿ, ಅವನನ್ನು ಕೊಂದರು.

೪. ಕುಂಬಾರ ಆಗಸಿಯಲ್ಲಿ ಒಬ್ಬ ಮುಸಲಮಾನ ಕಟಕನೂ ಬೇರೊಂದು ಬಂದ ಒಬ್ಬ ಹಿಂದೂ ಮನುಷ್ಯನೂ ಕೌಲಕ್ಕೆ ಹೋಗುತ್ತಿದ್ದರು. ದಾರಿಯಲ್ಲಿಯೇ ಇವರನ್ನು ಗುಂಡಿನಿಂದ ಗಾಯಪಡಿಸಿದರು.

೫. ಶುಕ್ರವಾರ ಪೇಟೆಯಲ್ಲಿ ಶೇಟ ಹೀರಾಚಂದ ವಾಲಚಂದ ಇವರ ೧೩-೧೪ ವರ್ಷದ ಹುಡುಗನು ಮೂರನೆಯ ಅಂತಸ್ತಿನ ಮೇಲೆ ನಿಂತಿದ್ದನು. ಅಲ್ಲೇ ಗುಂಡು ತಾಕಿ ಸತ್ತನು.

೬. ವರಿಂಗ ಗಿರಣಿಯ ವ್ಯವಸ್ಥಾಪಕರನ್ನು ಆಟ್ಟದ ಮೇಲೆ ನಿಂತಾಡುತ್ತ ಕುಳಿತಾಗ, ಅತನ ತಲೆಯ ಮೇಲಿಂದ ಗುಂಡು ಹಾದು ಗೋಡೆಯೊಳಗೆ ತೂತು ಮಾಡಿತು.

೭. ಸಕ್ಕರಿಪೇಟೆಯಲ್ಲಿ ಬಣಗಾರರ ಒಬ್ಬ ಹೆಣ್ಣು ಮಗಳು ತಂಬಿಗೆ ತೆಗೆದುಕೊಂಡು ಹೋಗುತ್ತಿದ್ದಾಗ ಗುಂಡು ಬಡೆಯಿತು.

೮. ಭಡಂಗೆ ಎಂಬ ಆರೆ ಹುಚ್ಚನು ಕಟ್ಟೆಯ ಮೇಲೆ ಕುಳಿತಾಗ ಗುಂಡು ತಗಲಿತು.

೯. ಜೋಡಬಾವಿಯ ಪೇಟೆಯಲ್ಲಿ ಮಲ್ಲಿಕಾರ್ಜುನ ಸ್ವಾಮಿಯವರು ಒಂದು ಅಂಗಡಿಯಲ್ಲಿ ಕಿಂತಾಗ ಗುಂಡು ಬಡಿಯಿತು.

೧೦. ಮೆಕಾವಿಕ ಥಿಯೇಟರದ ಒಳಗಿನದರಲ್ಲಿರುವ ಒಂದು ಕೋಣೆಯಲ್ಲಿ ಕುಳಿತಿದ್ದ ಸುಂದರಾಬಾಯಿ [illegible] ಬಾಯಿಯು ಎದೆ ಮತ್ತು ತೋಳಿಗೆ ಗುಂಡುಗಳು ಬಡಿದವು.

೧೧. ಇದೇ ಥಿಯೇಟರದ ಹತ್ತಿರುವ ಚಹಾದ ಅಂಗಡಿಯಲ್ಲಿ ಚಹಾ ಕುಡಿಯುತ್ತ ಕೂತಿದ್ದ ಬಾಬುರಾವ ಶೇರೆ ಎಂಬವರಿಗೆ ಗುಂಡು ಬಡೆಯಿತು.

೧೨. ಒಂದು ಊಟದ ಮನೆಯಲ್ಲಿ ಬಾಗಿಲ ಹಾಕಿಕೊಂಡು ಜನರು ಊಟಕ್ಕೆ ಕುಳಿತಿದ್ದರು. ಬಾಗಿಲಿಗೆ ಗುಂಡು ಹೊಡೆದರು. ಗುಂಡು ಬಾಗಿಲೊಳಗಿಂದ ಹಾದು ಮಹೋತ್ಸಾಹ ಕೃಷ್ಣ ಜಾಧವ ರೆಂಬವರ ಬಲತೊಡೆಯನ್ನು ಸವರಿ ಎರಡೋಡೆಯಿಂದ ಪಾರಾಗಿ ಹೋಯಿತು.

ಈ ಪ್ರಕಾರ ಅನಾಯಕತನ ಮಾಡಿದ್ದೂ ಸಹ ಗಾಯವಾದಂಥ ಜನರ ವಿಷಯವಾಗಿ ಅಧಿಕಾರಿಗಳು ಯಾವ ಉಪಾಯವನ್ನೂ ಮಾಡಲಿಲ್ಲವೆಂದು ಅಲ್ಲಿಯ ಕರ್ಮಯೋಗಿ ಪತ್ರದಲ್ಲಿ ಬರೆದಿದೆ.

ಉಪ್ಪಿನ ಹುಳುವಿನ ಮಹಿಮೆ.

ಸೊಲ್ಲಾಪುರ ಪಟ್ಟಣವನ್ನು ಉತ್ತರ ೭೦ ಹಕೀಮತ್ತಿನಿಂದ ತಮ್ಮ ವಶಕ್ಕೆ ತಂದುಕೊಂಡವರ ಕನ್ನಾಂತರದ ಪಿಯರ್ ಸಾಹೇಬರು ಒಂದು ಜಾಹೀರನಾಮ ತೆಗೆದು, ಯಾರಾದರೂ ರಾಷ್ಟ್ರೀಯ ನಿಶಾನಿ ಅಥವಾ ಅದಕ್ಕೆ ಸಮಾನವಾದಂಥ ನಿಶಾನೆ ಹಿಡಿದುಕೊಂಡು ಬಂದರೆ ಹತ್ತು ವರ್ಷಗಳ ತನಕ ಶಿಕ್ಷೆ ವಿಧಿಸಲ್ಪಡುವದೆಂದು ಸಾರಿಸಿದ್ದಾರೆ.

(ವಿಜಯ.)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಜಗದ್ಗುರು ಏಕೋರಾಮಾಚಾರ್ಯ ದಾರುಕಾಚಾರ್ಯ ಜಯಂತಿಗಳು. ಶ್ರೀ ವಿಶ್ವಾರಾಧ್ಯ ಗುರುಕುಲ ಕಾಶೀ.

ಇದೇ ಪ್ರಮೋದೂತಸಂವತ್ಸರದ ವೈಶಾಖ ಶುದ್ಧ ಅಕ್ಷತ್ಕತೀಯಾ ಗುರುವಾರ (1-5-1930) ಪ್ರಾತಃಕಾಲದ 6 ಘಂಟೆಗೆ ಶ್ರೀ ಗುರುಕುಲವಾಸಿಗಳಾದ ಸಕಲರೂ ಗಂಗಾಸ್ನಾನ ಶಿವಾರ್ಚನೆಗಳಿಂದ ಪರಿಪೂತರಾಗಿ ವೇ|| ಪಂ|| ಶಿವಕುಮಾರಸ್ವಾಮಿಗಳ ಕೊಠಡಿಯಲ್ಲಿ ಸಂಮಿಲಿತರಾಗಿ ವಿಧ್ಯುಕ್ತ ಷೋಡಶೋಪಚಾರಗಳಿಂದ ಶ್ರೀ ಜಗದ್ಗುರು ಏಕೋರಾಮಶಿವಾಚಾರ್ಯ ಪೂಜಾಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಭಕ್ತಿಪರವಶರಾದ ಪಂ|| ಚಿದರಿಮಠದ ವೀರಭದ್ರಶಾಸ್ತ್ರಿಗಳವರು ತತ್ಕಾಲದಲ್ಲಿಯೇ ಈ ಪದ್ಯಗಳನ್ನು ರಚಿಸಿ ಶ್ರುತಿಮಧುರವಾಗುವಂತೆ ಹಾಡಿದರು.

ಕಂ|| ಹಿಮವತ್ಪರ್ವತದಾಧಿಯೊ
ಳುಮೆಯೊಡನೆ ವಿಹಾರವಮಾಳ್ಪ ಶ್ರೀ ಜಗದೀಶಂ |
ಶಮದಮಗುಣಗಳ ಸಮಗೊಲಿ
ದಮರತ್ವವೀಯಲೆಂದು ಹಾರೈಸುವೆನಾಂ ||೧||

ಶ್ರಮಮುಂಟೆ? ನಿನ್ನ ಭಕ್ತಿಯ
ಸುಮಗುಚ್ಛಗಳಿಂದ ಪೂಜೆಗೈಯುವಜನಕಂ |
ಕ್ಷಮವರಿಯದೊಡಂ ತವಪದ
ಕಮಲಕೆ ಭ್ರಮರಾಯಮಾನನಾದನೆ ಧನ್ಯಂ ||೨||

ರಾಮನೆ ಏಕೋರಾಮನೆ
ಕಾಮಿತದಾಯಕನೆ ನಿನ್ನ ಜನ್ಮದ ತಿಥಿಯಂ
ನೇಮದೆ ನಡೆಸಿದ ಕಾಶೀ
ಧಾಮದೊಳಿರುತಿರ್ಪ " ಶಿವಕುಮಾರನೆ " ಧನ್ಯಂ ||೩||

ಇದಾದಕೂಡಲೆ ಶ್ರೀಶಿವಕುಮಾರಸ್ವಾಮಿಗಳವರು **"ಏಕೋರಾಮ ಗುರುಂ ವಂದೇ"** ಎಂಬ ವಾಕ್ಯವು ಶ್ಲೋಕಗಳ ಪ್ರತಿಯೊಂದು ಪಾದದ ಮೊದಲಿನ ಅಕ್ಷರದಿಂದ ವ್ಯಕ್ತವಾಗುವಂತೆ ತತ್ಕಾಲದಲ್ಲಿಯೇ ಈ ಶ್ಲೋಕಗಳನ್ನು ರಚಿಸಿ ಕರ್ಣಾನಂದವಾಗುವಂತೆ ಹಾಡಿದರು.

ಏಕಾಗ್ರೇಣ ಸಮಾಧಿನಾ ಶಿವಪದೇ ವಿನ್ಯಸ್ತಚಿತ್ತಂ ಸದಾ
ಕೋಶಂ ವಿಶ್ವಸುಬಿಸ್ವ ನಿರ್ಜಿತಭವಂ ವೈರಾಗ್ಯಪೀಠಾಧಿಪಂ |
ರಾಜನ್ನ ಪ್ರವರಾಳಿ ಮೌಲಿವಿಲಸತ್ಪಾದೌತ್ಯ ಭಾಸ್ವತ್ಪದಂ
ಮಧ್ಯಾಹ್ನಾರ್ಕಮರೀಚಿಭಾಸುರತನುಂ ವಂದೇ ಗುರುಂ ಯೋಗಿನಂ ||೧||

ಗುರ್ವಾರಾಧನತತ್ಪರೋ ಭುವಿ ನರಸ್ಸತ್ಕರ್ಮಣಾ ಪ್ರೇರಿತ
ರುಂಧ್ಯಾತ್ಸುಪ್ರಪಲೇಷು ತತ್ತ್ವಪದಮಂ ಶಾಸ್ತ್ರಂಪ್ರಮು ಧ್ಯಾನವರಾತ್ |
ವಂದ್ಯಃ ಶ್ರೀಪತಿ ಮುಖ್ಯನಿರ್ಜರಗಣೈರ್ಹೋತಾ ಚರಜನ್ಮನಾ
ದೇವೇ ಸರ್ಗಸುಖಾಕರೇ ಪರಶಿವೇ ಸಾಯುಜ್ಯಮೇತಿ ಧ್ರುವಂ ||೨||

ಅನಂತರದಲ್ಲಿ ಸದರಿ ಶ್ರೀಗಳು ಮೃಷ್ಟಾನ್ನಭೋಜನದಿಂದ ಸಕಲರನ್ನು ತೃಪ್ತಿಗೊಳಿಸಿದರು. ಪುನಃ ರಾತ್ರಿ 8 ಘಂಟೆಗೆ ಗುರುಭಜನೆಯು ಆರಂಭವಾಗಿ ಸಕಲ ಶಿಷ್ಯಜನಗಳೂ ಗುರುಭಕ್ತಿ ಮಹಿಮಾಂಬುಧಿಯಲ್ಲಿ ಲೀನರಾಗುವಂತೆ ಸಕಲವಾದ್ಯಗಳಿಂದೊಡಗೂಡಿದ ಜಗದ್ಗುರು ನಾಮಸಂಕೀರ್ತನ ಪುರಸ್ಸರವಾದ ದಿವ್ಯಸಂಗೀತವಾದನಂತರ ಆಚಾರ್ಯರ ಜಯಘೋಷದೊಡನೆ ಜಯಂತಿ ಮಹೋತ್ಸವವು ಸಮಾಪ್ತವಾಯಿತು. ಇದೇ ಸಮಯದಲ್ಲಿ ಶ್ರೀ|| ಶಿವಕುಮಾರಸ್ವಾಮಿಗಳವರು ಪ್ರಭಾಪೋಷಕರಿಗಾಗಿ 2ರೂ. ಗಳನ್ನಿತ್ತಿಸಿದರು.

ವೈಶಾಖ ಶು|| ಪಂಚಮಿ ಶನಿವಾರ ಪ್ರಾತಃಕಾಲ 6 ಗಂಟೆಗೆ ವೇ|| ಪಂ|| ವಾಮದೇವಶಾಸ್ತ್ರಿಗಳು ಹಿರೇಮಠ ಉಪ್ಪಿನ ಬೆಟಗೇರಿ. ವೇ|| ಪಂ|| ನೀಲಕಂಠಶಾಸ್ತ್ರಿಗಳು ಹಿರೇಮಠ ಭಾನಾಪುರ (ಕಾವ್ಯತೀರ್ಥ) ವೇ|| ಪಂ|| ಶಿವದೇವಶಾಸ್ತ್ರಿಗಳು ಹಿರೇಮಠ ಕಪ್ಪಗಿ. ಈ ಮೂರುಜನಗಳಿಂದ ನೆರವೇರಿಸಲ್ಪಟ್ಟ ಶ್ರೀ ದಾರುಕಜಯಂತಿ ಮಹೋತ್ಸವಕ್ಕೆ ಸಕಲರೂ ಸಮ್ಮಿಲಿತರಾಗಿ ಗುರುಪೂಜೆಯನ್ನು ಷೋಡಶೋಪಚಾರಗಳಿಂದ ಮಾಡುತ್ತಿರುವ ಸಮಯದಲ್ಲಿ ಶ್ರೀ|| ಪಂ|| ಶಿವಕುಮಾರಸ್ವಾಮಿಗಳವರು "ಶ್ರೀದಾರುಕಗುರೋಃ ನಾಹಿ" ಎಂಬ ವಾಕ್ಯವು ಶ್ಲೋಕಗಳಪಾದಾದ್ಯಕ್ಷರಗಳಿಂದ ವ್ಯಕ್ತವಾಗುವಂತೆ ಆಗಿಂದಾಗಲೇ ಈ ಶ್ಲೋಕಗಳನ್ನು ರಚಿಸಿ ಹಾಡಿದರು.

ಶ್ರೀಕಂಠಾಸ್ಯಜಮುಕ್ತ ಸೂತ್ರರಚಿತಾಲಂಕಾರಭಾಸ್ವದ್ಗಲಂ
ದಾರ್ಢ್ಯೇನಾಸ್ತಿಕವಾದಿಭೂಧರಕಠೀರ್ವಜಾಯಮಾನಂ ಪರಂ |
ರುಗ್ಣೈಃಕೈವಮಶೇಷದಾಕುಮುವನಾ ಶಿವ್ಯಾಂತರವಿನ್ಯಪದಂ
ಕಲ್ಯಾಣಾಯ ದಧಾನ ಮದ್ಭುತತನುಂ ವಂದೇ ಗುರುಂ ದಾರುಕಂ ||೧||

ಗುರ್ವೀಂ ಭಕ್ತಿಲತಾಂ ಪ್ರರೋಹ್ಯ ಹೃದಯೇ ಸದ್ಭಾವದಿಪ್ಯೋದಕೈಃ
ರೋಚಿಷ್ಣು ಪ್ರಭವಾತಿಹಾರಿ ಸುಖದಂ ನಿತ್ಯಾತ್ಮರೂಪಂ ಫಲಂ |
ಪಾಪಘ್ನಂ ನಿಗಮೈಕವೇದ್ಯಮನಿಶಂ ಭುಕ್ತ್ವಾ ತದೀಯಂಜನೋ
ಹಿತ್ವಾಽನಿತ್ಯಸುಖಾಕರಂ ಜಗದಿದಂ ಪ್ರಾಪ್ನೋತಿ ಶೈವಂ ಪದಂ ||೨||

ಅನಂತರದಲ್ಲಿ ಸಕಲ ಮಿತ್ರಮಂಡಲಿಯೂ ಮೃಷ್ಟಾನ್ನಭೋಜನದಿಂದ ತೃಪ್ತಿಗೊಳಿಸಲ್ಪಟ್ಟಿತು. ಸಾಯಂಕಾಲ 7 ಗಂಟೆಗೆ ಭಜನೆಯು ಆರಂಭವಾಗಿ ಬಹು ಸಂಭ್ರಮದಿಂದ ನೆರವೇರಿತು. ಅಂತ್ಯದಲ್ಲಿ ಶ್ರೀ ವೇ|| ಪಂ|| ವಾಗೀಶಶಿವಾಚಾರ್ಯರು ಮುದೇನೂರು ಇವರು ಈ ಪದ್ಯವನ್ನು ರಚಿಸಿ ಹಾಡಿದರು.

ಕಂ|| ಈ ಪರಿಯೊಳ್ ಜನರೆಲ್ಲರ್
ಪಾವನ ಪರಿಪರಿಪ ಗುರುಜಯಂತಿಯ ನೆಸಗಲ್ |
ತಾ ಪತ್ರಯವಳಿದಾಗಿ
ಜಾಪತಿಯುರುಕೃಪೆಗೆ ಪಾತ್ರರಪ್ಪರ್ ಧರೆಯೊಳ್ ||೧||

ಆ ಬಳಿಕ ಆಚಾರ್ಯಜಯಘೋಷದೊಡನೆ ಜಯಂತ್ಯುತ್ಸವವು ಸಮಾಪ್ತಿಯಾಯಿತು.

ಇದೇ ರೀತಿಯಾಗಿ ಸಕಲ ವೀರಶೈವರೂ ಮಾನವಜನ್ಮೋದ್ಧಾರಕ್ಕೆ ಮೂಲಕಾರಣವಾದೀಆಚಾರ್ಯರ ಜಯಂತ್ಯುತ್ಸವವನ್ನು ಅನನ್ಯಭಕ್ತಿಯಿಂದಾಚರಿಸಿ ಸಕಲೇಷ್ಟಾರ್ಥಗಳನ್ನು ಹೊಂದಬೇಕೆಂದು ಹಾರೈಸುವ,

ರುದ್ರಾರಾಧ್ಯ ಶರ್ಮಾ.

ಶ್ರೀ ಜಗದ್ಗುರು ಪಂಚಕಾಯನಮಃ

ಶ್ರೀ ಜಗದಾಚಾರ್ಯರವರ ಜಯಂತಿ ಮಹೋತ್ಸವಗಳು,

ತುಮಕೂರು.

ಶ್ರೀಮದ್ವೀರಶೈವ ಮತಸ್ಥಾಪಕರೂ ಶ್ರೀ ಸಾಂಬಮೂರ್ತಿಯ ಪಂಚವದನೋದ್ಭೂತರೂ ಆದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳನ್ನು ತುಂಕೂರಿನ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಯವರು ಆಯಾಯ ಮಿತಿಗಳಲ್ಲಿ ಅತಿಭಕ್ತಿಯಿಂದ ಆಚರಿಸಿದರು. ಮಹಾಶಿವರಾತ್ರಿಯ ದಿವಸ ಜಗದ್ಗುರು ಪಂಡಿತಾರಾಧ್ಯರ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರ ಭಾವಚಿತ್ರಗಳಿಗೆ ವಿಧ್ಯುಕ್ತವಾಗಿ ಅರ್ಚನೆಯು ನಡೆಯಿಸಲ್ಪಟ್ಟು ಶ್ರೀ ಜಗದ್ಗುರು ರೇಣುಕವಿಜಯ ಮಹಾಪುರಾಣವು ಶ್ರವಣಮಾಡಲ್ಪಟ್ಟಿತು. ಫಾಲ್ಗುಣ ಶುದ್ಧ ಚತುರ್ದಶಿ ಗುರುವಾರ (13-3-30) ಪ್ರಾತಃಕಾಲಕ್ಕೆ ಶ್ರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ರೇಣುಕಶಿವಾಚಾರ್ಯ ಭಗವತ್ಪಾದರವರ ಲಿಂಗೋದ್ಭವಮೂರ್ತಿಯನ್ನು ದಿವ್ಯಪೀಠದಲ್ಲಿ ಮೂರ್ತಗೊಳಿಸಿ ಮಹಾ ರುದ್ರಾಭಿಷೇಕವು ಸಾಂಗವಾಗಿ ನಡೆದನಂತರ ಮಹಾಚಾರ್ಯರವರು ಶ್ರೀ ಸೋಮೇಶ್ವರಲಿಂಗದಲ್ಲಿ ಅವತಾರವಮಾಡಿದ ಪವಿತ್ರ ಚರಿತ್ರವು ಓದಲ್ಪಟ್ಟಿತು. ಈ ಮೊದಲೇ ಈ ಊರಿನ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಯವರು ಪಟ್ಟಣದಲ್ಲೆಲ್ಲಾ ಕರಪತ್ರಗಳ ಮೂಲಕ ಪ್ರಸಿದ್ಧಪಡಿಸಿದಂತೆ ಮಹಾಜನವು ಪುರವೀಥಿಗಳನ್ನು ತಳಿರುತೋರಣಗಳಿಂದಲೂ ಕದಳಿಕಂಬಗಳಿಂದಲೂ ಶೃಂಗರಿಸಿ ಶ್ರೀಮದಾಚಾರ್ಯರವರ ಮಹೋತ್ಸವವು ರಾಜವೀಥಿಗಳಲ್ಲಿ ಬರುವದನ್ನೇ ಎದುರು ನೋಡುತ್ತಿದ್ದರು. ಸಕಲ ದೇವಾಲಯಗಳು ಮನೋಹರವಾಗಿ ಅಲಂಕರಿಸಲ್ಪಟ್ಟದ್ದಲ್ಲದೆ ಶ್ರೀ ವೀರೇಶನ ದೇವಾಲಯದಲ್ಲೂ ಇತರ ಎಲ್ಲಾ ಶಿವಾಲಯಗಳಲ್ಲೂ ಸೇವಾಮಂಡಲಿಯವರು ವಿಶೇಷಾರ್ಚನೆಗಳಿಗೆ ಸುವ್ಯವಸ್ಥೆಗೊಳಿಸಿದ್ದರು.

ಶ್ರೀಜಯಂತಿಮಹೋತ್ಸವಕ್ಕಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯ ಪೂಜ್ಯಪಾದರವರ ಲಿಂಗೋದ್ಭವಮೂರ್ತಿಯ ಭಾವಚಿತ್ರವನ್ನು ಈ ಊರಿನ ಸುಪ್ರಸಿದ್ಧ ಚಿತ್ರಕಲಾನಿಪುಣರಾದ ಮ|| ರಾ|| ಟಿ. ಎಸ್. ವೆಂಕಟೇಶಯ್ಯನವರು ವಿಶೇಷವಾಗಿ ಅತ್ಯಂತ ಸುಂದರವಾಗಿ ತಯಾರಿಸಿದ್ದ ಭಾವಚಿತ್ರಕ್ಕೆ ಅರಳೇಪೇಟೆ ದೇಶದ ಶ್ರೀ ನಂದೀಶ್ವರಾಲಯದಲ್ಲಿ ವಿಧ್ಯುಕ್ತಪ್ರಕಾರ ಷೋಡಶೋಪಚಾರದಿಂದ ಮಹಾ ಪೂಜಾದಿಗಳು ಸಾಂಗವಾದ ನಂತರ ದೇಶದ ಯಜಮಾನರಾದ ಮ|| ರಾ|| ಭೋಜಪನಾಡಪ್ಪನವರು ಈ ಹಬ್ಬಕ್ಕಾಗಿ ಸ್ವಂತಖರ್ಚಿನಿಂದ ತಯಾರಿಸಿದ್ದ ನೂತನವಾದ ಮುತ್ತಿನಚಿತ್ರ ಮಂಟಪದಲ್ಲಿ ಬಿಜಯ್ಗೈಸಿ ಸುವಾಸಿತ ಪುಷ್ಪಮಾಲಿಗಳಿಂದ ಅಲಂಕರಿಸಲ್ಪಟ್ಟು ಪ್ರೇಕ್ಷಕರ ಚಿತ್ತಾಕರ್ಷವಂಗೈಯುತಾ ಶ್ರೀಮನ್ಮಹಾದೇವನೇ ದಯಮಾಡಿಸಿರುವನೋ ಎಂಬಂತೆ ವಿರಾಜಿಸುತ್ತಿದ್ದ ಪೂಜ್ಯಪಾದರವರ ಮಹೋತ್ಸವವು ಪ್ರಾತಃಕಾಲ 8½ ಗಂಟೆಗೆ ದೇವಾಲಯದಿಂದ ಭಕ್ತಮಾಹೇಶ್ವರರ ಜಯಘೋಷದಿಂದಲೂ ಮಂಜುಳವಾದ್ಯನಿನಾದಗಳಿಂದಲೂ ನಂದಿಧ್ವಜಾದಿ ಸಕಲ ಬಿರುದಾವಳಿಗಳಿಂದಲೂ ಕೂಡಿ ಪ್ರಸ್ಥಾನಂಗೈಯ್ಯಲು ರಸ್ತೆಗಳ ಉಭಯಪಾರ್ಶ್ವದಲ್ಲೂ ಸುಮಂಗಲಿಯರು ಎಡಬಿಡದೆ ಫಲಪುಷ್ಪಾರತಿಗಳನ್ನು ಸಮರ್ಪಿಸಿ ಮಹಾಚಾರ್ಯರ ದರ್ಶನಾಶೀರ್ವಾದದಿಂದ ಕೃತಕೃತ್ಯರಾಗಿ ಧನ್ಯರಾಗುತ್ತಿದ್ದರು. ಜನಸ್ತೋಮವು ಹೆಜ್ಜೆಹೆಜ್ಜೆಗೂ ಹೆಚ್ಚುತ್ತಿದ್ದ ಕಾರಣ ಉತ್ಸವವು ಬಹಳ ನಿಧಾನವಾಗಿ ಸಾಗುತ್ತಿದ್ದಿತು. ಮಹೋತ್ಸವವು ಚಿಕ್ಕಪೇಟೆಗೆ ದಯಮಾಡಿಸುವಲ್ಲಿ ಸೇವಾಸಮಾಜದವರಿಗೆ ಅದಿನವೇ ಲಭಿಸಿದ ವಿಜಯವಾರ್ತೆಯು ಹರಡಿ ಮಹೋತ್ಸವದ ಶೋಭೆಯು ದ್ವಿಗುಣ

ಮನಸ್ಕರಾಗಿದ್ದರು. ಅಧಿಕಾರಿಗಳಾದರೂ ದಾಳಿಯನ್ನು ತಡೆಯಲು ತಕ್ಕ ಸನ್ನಾಹವನ್ನು ಮಾಡಿಕೊಂಡಿದ್ದರು. 19 ನೆಯ ತಾರೀಖಿನ ರಾತ್ರಿಯಲ್ಲಿ ಸಶಸ್ತ್ರರಾದ 100 ಜನ ಪೋಲೀಸರು ದರ್ಶನಕ್ಕೆ ಬಂದು ಸಿದ್ಧವಾಗಿದ್ದು ಪ್ರೇಕ್ಷಕರನ್ನು ಸಹ ಕೋಠಿಯ ಸಮೀಪಕ್ಕೆ ಬರದಂತೆ ತಡೆದಿದ್ದರು. ಜನಗಳು ವಿಶೇಷವಾಗಿ ಮುಂದು ಮುಂದಕ್ಕೆ ನುಗ್ಗುತ್ತಿದ್ದುದರಿಂದ ಅಧಿಕಾರಿಗಳು ಅವರನ್ನು ದೊಣ್ಣೆಗಳಿಂದ ಹೊಡೆದು ಹಿಂದಕ್ಕೆ ನೂಕುತ್ತಿದ್ದರು. ಇದರಿಂದ ಸುಮಾರು 12 ಜನರಿಗೆ ವಿಶೇಷ ಗಾಯಗಳಾದುವು.

21 ನೆಯ ತಾರೀಖಿನ ಪ್ರಾತಃಕಾಲ ದಾಳಿಗೆ ಪ್ರಾರಂಭವಾಯಿತು. ದಕ್ಷಿಣ ಆಫ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರ ಜತೆಗಾರರಾಗಿದ್ದ 60 ವರ್ಷ ವಯಸ್ಸಿನ ಇಮಾಮಸಾಹೇಬರು 1800 ಸ್ವಯಂಸೇವಕರೊಡನೆ ಮುಂದುವರಿದರು. ಅವರೊಡನೆ " ಸಂಗ್ರಾಮ ಕೂಟ " ದ ಮೆಂಬರರಾದ ಶ್ರೀ ಮಣಿಲಾಲ್‌ಗಾಂಧಿ, ಪ್ಯಾರೇಲಾಲ್ ಮತ್ತು ನರಹರಿ ಪರೀಖರವರೂ ಇದ್ದರು. ಶ್ರೀಮತಿ ಸರೋಜಿನೀನಾಯ್ಡುರವರು ಎಲ್ಲರನ್ನೂ ಆಶೀರ್ವದಿಸಿದನಂತರ ಸ್ವಯಂಸೇವಕರು ಬೇರೆ ಬೇರೆ ಗುಂಪಾಗಿ ಹೊರಟು ಉಪ್ಪಿನ ಕೋಠಿಗಳನ್ನು ಮುತ್ತಿದರು. ಪೋಲೀಸರು ಕೋಠಿಗಳ ಒಳಗೂ ಹೊರಗೂ ಸಿದ್ಧವಾಗಿದ್ದು ಸ್ವಯಂಸೇವಕರು ತಂತಿಯ ಬೇಲಿಯ ಸಮೀಪಕ್ಕೆ ಬಂದ ಕೂಡಲೇ ಅವರನ್ನು ದೊಣ್ಣೆಗಳಿಂದ ಹೊಡೆಯಲಾರಂಭಿಸಿದರು. ತಲೆ, ಕಾಲು, ಬೆನ್ನು, ಮೈ ಕೈಗಳ ಮೇಲೆ ದೊಣ್ಣೆಯ ಏಟುಗಳು ಒಂದೇ ಸಮನೆ ಬೀಳುತ್ತಿದ್ದರೂ ಸ್ವಯಂಸೇವಕರು ಜ್ಞಾನತಪ್ಪಿ ಕೆಳಕ್ಕೆ ಬೀಳುವವರೆಗೂ ಮುಂದುವರಿಯುತ್ತಲೇ ಇದ್ದರು. ಸ್ವಲ್ಪ ಅವಧಿಯೊಳಗಾಗಿ 50 ಜನ ಸ್ವಯಂಸೇವಕರು ಜ್ಞಾನತಪ್ಪಿ ಬಿದ್ದರು. ಅವರನ್ನೆಲ್ಲಾ ಕ್ಯಾಂಪಿಗೆ ಹೊತ್ತುಕೊಂಡುಹೋಗಿ ಉಪಚರಿಸುತ್ತಿದ್ದರು. ಸಾವಿರಾರು ಜನರು ಗಂಡಸರು, ಹೆಂಗಸರು ಮತ್ತು ಮಕ್ಕಳು ಕೆಲವು ಫರ್ಲಾಂಗುಗಳ ದೂರದಲ್ಲಿಯೇ ನಿಂತು ನೋಡುತ್ತಿದ್ದರು. ಸ್ವಯಂಸೇವಕರು ಕೋಠಿಯನ್ನು ತಲಪಿದ ಸ್ವಲ್ಪ ಹೊತ್ತಿನೊಳಗಾಗಿ ಇಮಾಂಸಾಹೇಬರೂ ಮಣಿಲಾಲ್ ಗಾಂಧಿ ಮತ್ತು ನರಹರಿಪರೀಖ ಈ ಮೂವರೂ ದಸ್ತಗಿರಿಮಾಡಲ್ಪಟ್ಟರು. ಮಿ|| ಮಣಿಲಾಲ್‌ಗಾಂಧಿಯವರಿಗೆ 4 ದೊಣ್ಣೆಯ ಏಟುಗಳು ಬಿದ್ದಿದ್ದವು. ಮಿ|| ನರಹರಿ ಪರೀಖರವರಿಗೆ ತಲೆಯ ಮೇಲೆ ಒಂದು ಏಟು ಬಿದ್ದು ಜ್ಞಾನತಪ್ಪಿ ಬಿದ್ದರು. ಅವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿದರು. ಒಂದು ಗಂಟೆಯೊಳಗಾಗಿ ಅಲ್ಲಿಯ ಬಯಲು ಪ್ರದೇಶವೆಲ್ಲವೂ ನೆಟ್ಟುತಿಂದ ಸ್ವಯಂಸೇವಕರಿಂದ ತುಂಬಿಹೋಗಿದ್ದಿತು. ಪೋಲೀಸರು ದಯಾಶೂನ್ಯರಾಗಿ ಸ್ವಯಂಸೇವಕರನ್ನು ಹೊಡೆಯುತ್ತಿದ್ದುದನ್ನು ಕಂಡು ಪ್ರೇಕ್ಷಕರಲ್ಲಿ ಅನೇಕರು ಕಂಪಿತಮಾನಸರಾಗಿ ಅಲ್ಲಿಂದ ಹೊರಟುಹೋದರು. ಅಲ್ಲಿಯವರೆಗೆ ಕ್ಯಾಂಪಿನಲ್ಲಿಯೇ ಇದ್ದ ಶ್ರೀಮತಿ ಸರೋಜಿನೀನಾಯ್ಡುರವರು ನಡೆದಿದ್ದ ಮಾನವನ್ನು ನೋಡಲು ಕೋಠಿಯ ಸಮೀಪಕ್ಕೆ ಬಂದರು. ಪೋಲೀಸರು ಅವರನ್ನು ಕೂಡಲೇ ದಸ್ತಗಿರಿಮಾಡಿ "ಕಸ್ಟಂಸ್ ಹೌಸ್" ಗೆ ಕರೆದೊಯ್ದರು. 8-30 ಗಂಟೆಯ ಸಮಯಕ್ಕೆ ಸುಮಾರು 100 ಜನ ಸ್ವಯಂಸೇವಕರು ಗಾಯಹೊಂದಿದ್ದರು. ಸ್ವಲ್ಪಹೊತ್ತು ದಾಳಿಯು ನಿಂತಿದ್ದು ಪುನಃ ಪ್ರಾರಂಭವಾಯಿತು. 10-30 ಗಂಟೆಯವರೆಗೆ ಈ ಗಲಾಟೆಯು ಮುಂದುವರಿಯಿತು. ಒಟ್ಟಿನಲ್ಲಿ ಸುಮಾರು 300 ಜನ ಸ್ವಯಂಸೇವಕರು ಗಾಯಹೊಂದಿದರು. ಸೈನ್ಯಾಧಿಕಾರಿಗಳು ಬಂದು ಅವರನ್ನು ಎಲ್ಲಿಗೋ ಕರೆದುಕೊಂಡು ಹೋಗಿರುವರು. ಹೊಸಬರು ಯಾರೂ ಅಲ್ಲಿಗೆ ಬರದಂತೆ ಮಿಲಿಟರಿಯವರು ಕಾವಲಾಗಿರುವರು.

ಒಳದೇಶದ ವೃತ್ತಾಂತಗಳು.

ಬೆಂಗಳೂರು ಡಿ|| ಬಿಡದಿ ಪ್ರೈಮರಿ ಬಾಯ್ಸ್ ಸ್ಕೂಲ್ ಹೆಡ್ಮಾಸ್ಟರಾದ ಮ|| ರಾ|| ಜಿ. ಹೊನ್ನಗಂಗಪ್ಪನವರು ರಚಿಸಿರುವ " ಸಚಿತ್ರ ಕರ್ನಾಟಕ ಗುಣಿತಾಕ್ಷರಬೋಧೆ " ಯ ಕಾಪಿಯೊಂದನ್ನು ನಮಗೆಳು

ಹಿಸಿರುತ್ತಾರೆ. ಇದು ದಪ್ಪಅಕ್ಷರಗಳಿಂದ ಎರಡು ಬಣ್ಣಗಳಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿರುವದಲ್ಲದೆ, ಮಕ್ಕಳ ಅಕ್ಷರಾಭ್ಯಾಸಕ್ಕೆ ತುಂಬಾ ಉಪಯೋಗವಾಗಿದೆ.

ಕಳೆದ 23 ನೆಯ ತಾರೀಖು ಶುಕ್ರವಾರ ಶ್ರೀಮದ್ಯುವರಾಜ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರ ಉಪನಯನ ಮಹೋತ್ಸವವು ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆದಿವಸ ಸಾಯಂಕಾಲ ರಾಜಕುಮಾರರು ಉಚಿತಪರಿವಾರದೊಡನೆ ಮೆರವಣಿಗೆಯಿಂದ ದೇವಸ್ಥಾನಗಳಿಗೆ ಹೋಗಿಬರುತ್ತಾರೆ.

ಶ್ರೀರಂಗಪಟ್ಟಣದ ಪ್ರಸಿದ್ಧ ಬೇಸಾಯಗಾರರೂ ಮತ್ತು ಗೌರ್ನಮೆಂಟ್ ಆನರರಿ ಉಪನ್ಯಾಸಕರೂ ಆದ ಮ|| ರಾ|| ಸಿದ್ಧಲಿಂಗಯ್ಯದೇವರನ್ನು ಸರಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೂ ಮತ್ತು ಪ್ರಜಾಪ್ರತಿನಿಧಿಸಭೆಗೂ ಒಬ್ಬ ವಿಶೇಷ ಸಭಾಸದರನ್ನಾಗಿ ಮಾಡಿರುವರೆಂದು ತಿಳಿಸಲು ಸಂತೋಷಿಸುತ್ತೇವೆ. ಸರಕಾರದವರು ತಾವಾಗಿಯೇ ಇವರನ್ನು ಚುನಾಯಿಸಿರುವದಕ್ಕೆ ಇವರಲ್ಲಿರುವ ಆಧುನಿಕ ವ್ಯವಸಾಯನೈಪುಣ್ಯ, ಪ್ರಜಾಸೇವಾಧುರಂಧರತೆ, ಗಂಭೀರವಾದ ವಾಕ್ಪಟುತೆ ಹಾಗೂ ಸೌಜನ್ಯ ಇವುಗಳೇ ಕಾರಣಗಳಾಗಿರುತ್ತವೆ.

ರಾಜಧಾನಿಯ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಕಾರಕೂನರಾಗಿರುವ ಶ್ರೀ|| ಶ್ರೀಕಂಠಯ್ಯನವರ 1½ ವರ್ಷದ ಗಂಡುಮಗುವಿಗೆ ಅಂಗಿಯನ್ನು ತೊಡಿಸುವಾಗ ಅದರಲ್ಲಿ ಒಂದು ದೊಡ್ಡಚೇಳು ಸುಮಾರು 30-40 ಮರಿಗಳನ್ನು ಹಾಕಿದ್ದು, ಅವುಗಳೆಲ್ಲವೂ ಏಕಕಾಲದಲ್ಲಿಯೇ ಮಗುವನ್ನು ಕಚ್ಚಿದ್ದರಿಂದ ಸ್ವಲ್ಪ ಅವಧಿಯೊಳಗಾಗಿ ಮಗುವಿನ ಮೈಯೆಲ್ಲವೂ ಕಪ್ಪಾಗುತ್ತ ಬಂದಿತು. ಕೂಡಲೇ ರಾಜಧಾನಿಯ ಮಿಷನ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಮಾಡಿಸಿ, ಒಬ್ಬ ಮಂತ್ರಗಾರನಿಂದ ಮಂತ್ರವನ್ನು ಹಾಕಿಸಿದ ಮೇಲೆ ಸ್ವಲ್ಪ ಗುಣವಾಯಿತು. ಮಗುವು ಮರುದಿವಸ ಪ್ರಾತಃಕಾಲದವರೆಗೆ ಹುಷಾರಾಗಿದ್ದು 7 ಘಂಟೆಯ ಸಮಯದಲ್ಲಿ ವಾಯುವು ಬಂದು ಮೃತಪಟ್ಟಿತು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ದರ್ಶನಾ ಉಪ್ಪಿನ ಕಾರ್ಖಾನೆಯ ಮೇಲೆ ದಾಳಿಯಿಡಲು ಹೊರಟಿದ್ದ ಶ್ರೀ|| ಸರೋಜಿನೀನಾಯ್ಡುರವರೇ ಮೊದಲಾದ ಸತ್ಯಾಗ್ರಹಿಗಳು ಪೋಲೀಸರೊಡನೆ ಸುಮಾರು 28 ಗಂಟೆಗಳ ವರೆಗೆ ಬಯಲಿನಲ್ಲಿಯೇ ಕುಳಿತಿದ್ದರು. ಅನಂತರ ಅಧಿಕಾರಿಗಳು ಬಹಳವಾಗಿ ಆಲೋಚನೆ ಮಾಡಿ ಎಲ್ಲರನ್ನೂ ದಸ್ತಗಿರಿಮಾಡಿ, ಅವರು ಕುಳಿತಿದ್ದ ಸರ್ಕಾರೀ ಕಾಂಪೌಂಡಿನಿಂದ ಹೊರಕ್ಕೆ ಕರೆತಂದು ಬಿಟ್ಟುಬಿಟ್ಟರು. ಶ್ರೀಮತಿ ಸರೋಜಿನೀನಾಯ್ಡುರವರು ಅಲ್ಲಿಂದ ಉಂಟಾಡಿ ಆಶ್ರಮಕ್ಕೆ ಹೋದರು. ಉಪ್ಪಿನಕಾರ್ಖಾನೆಯ ಮೇಲೆ ದಾಳಿಯನ್ನಿಡಲು ಸ್ವಯಂಸೇವಕರು ಬೆಳಗಿನಿಂದಲೂ ಆಶ್ರಮದಲ್ಲಿ ಸಮಯವನ್ನು ಕಾಯುತ್ತಿದ್ದು ಎರಡು ಮೂರು ಗುಂಪಾಗಿ ನುಗ್ಗಿದರು. ಪೋಲೀಸರಿಗೂ ಸ್ವಯಂಸೇವಕರಿಗೂ ಕೈಕೈಹತ್ತಿ 9 ಜನ ಸ್ವಯಂಸೇವಕರಿಗೆ ಗಾಯಗಳಾದುವು. ಪೋಲೀಸರು ಉಪ್ಪಿನರಾಶಿಗಳ ಕಡೆಗೆ ನುಗ್ಗುತ್ತಿದ್ದ ಇತರ ಸತ್ಯಾಗ್ರಹಿಗಳನ್ನು ತಡೆದು ಒಟ್ಟಿ 224 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು.

ಕಳೆದ 18 ನೆಯ ತಾರೀಖಿನ ದಿವಸ ಮುಂಬಯಿ ನಗರದಲ್ಲಿರುವ ವಡಲಾ ಉಪ್ಪಿನ ಕಾರ್ಖಾನೆಯ ಮೇಲೆ ದಾಳಿಮಾಡಲು ಯತ್ನಿಸಿದ ಸುಮಾರು 300ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿದರು. ಇವರೆಲ್ಲರನ್ನೂ ಮೋಟಾರ್ ಲಾರಿಗಳಲ್ಲಿ ಕುಳ್ಳಿರಿಸಿಕೊಂಡು ಸೆರೆಮನೆಗೆ ಒಯ್ಯುತ್ತಿದ್ದಾಗ ಸುಮಾರು 50 ಜನ ಸತ್ಯಾಗ್ರಹಿಗಳು ಮೋಟಾರ್ ಲಾರಿಗಳಿಂದ ಹೊರಗೆ ಹಾರಿ, ದಸ್ತಗಿರಿಯಾಗದಿದ್ದ ಇತರ ಸತ್ಯಾಗ್ರಹಿಗಳೊಡನೆ ಸೇರಿ ವಡಲಾದ ಕಡೆಗೆ ಓಡಿದರು. ಪೋಲೀಸರು ಅವರ ಹಿಂದೆಯೇ ಹೋಗಿ ವಡಲಾ ಕಾರ್ಖಾನೆಯನ್ನು ಪ್ರವೇಶಿಸುತ್ತಿದ್ದ 400 ಜನ ಸ್ವಯಂಸೇವಕರನ್ನು ದಸ್ತಗಿರಿಮಾಡಿದರು.

ಇದುವರೆಗೆ ಭರತಖಂಡದ ರಾಜಕೀಯ ಚಳವಳಿಯಲ್ಲಿ ಪ್ರವೇಶ ಮಾಡದಿದ್ದ ಭರತಖಂಡದ ಕವಿಶ್ರೇಷ್ಠರಾದ ಡಾಕ್ಟರ್ ರವೀಂದ್ರನಾಥಟಾಗೂರ್‌ರವರು ಭರತಖಂಡದ ಸದ್ಯದ ಸ್ಥಿತಿಯ ವಿಷಯವಾಗಿ ಈ ರೀತಿ ಹೇಳಿರುತ್ತಾರೆ—

" ನಾನು ಚಿಕ್ಕವನಾಗಿದ್ದಾಗ ಆಂಗ್ಲದೇಶದವರ ವಿದ್ಯೆ, ಮಾನವಕೋಟಿಯಲ್ಲಿ ಅವರಿಗಿರುವ ವಿಶ್ವಾಸ, ನ್ಯಾಯ, ಸ್ವಾತಂತ್ರ್ಯ ಇತ್ಯಾದಿ ಅಮೂಲ್ಯಗುಣಗಳನ್ನು ನೋಡಿ ಭಾರತೀಯರು ಆನಂದಭರಿತರಾಗಿದ್ದರು. ಈಗಲಾದರೋ ಆಂಗ್ಲೇಯರು ಸರ್ವ ಪ್ರಯತ್ನಗಳಿಂದ ತಮ್ಮ ಕೈಗಾರಿಕೆಯನ್ನು ಮಾತ್ರ ಮುಂದುವರಿಸುತ್ತಿರುವ ಸ್ವಾರ್ಥತೆಯಿಂದ ತಮ್ಮ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವರು. ಸದ್ಯಃ ಒದಗಿರುವ ಕಷ್ಟಪರಂಪರೆಗಳು ದೂರವಾಗಬೇಕಾದರೆ ಪೂರ್ವಪಶ್ಚಿಮದೇಶಗಳ ಮುಖಂಡರು ಸಭೆಗೂಡಿ, ಸರ್ವಸಮ್ಮತವೂ, ನ್ಯಾಯಸಂಮತವೂ ಆದ ತೀರ್ಮಾನವನ್ನು ಮಾಡಬೇಕು. ಏಕೆಂದರೆ ಪೂರ್ವದೇಶೀಯರು ಈಗಲೂ, ತಮ್ಮ ಮನಸ್ಸಿನಲ್ಲಿ ಪಾಶ್ಚಿಮಾತ್ಯರ ನಾಗರೀಕತೆಯ ಔನ್ನತ್ಯವನ್ನು ಗೌರವಿಸುವರು. ಆದರೆ ಈಗಿನ ಚಳವಳಿಯು ಮಾತ್ರ ದಬ್ಬಾಳಿಕೆಯಿಂದಲೂ ಬಲಪ್ರದರ್ಶನದಿಂದಲೂ ಅಡಗುವಂತಿಲ್ಲ. ಉಭಯಪಕ್ಷದವರೂ ವಿಶಾಲಮಾನಸರಾಗಿ ಏಕಮತ್ಯದಿಂದ ಕೂಡುವವರಾದರೇನೇ ಈ ಗಲಾಟೆಗಳು ನಿಲ್ಲುವವು. ಸೊಲ್ಲಾಪುರದಲ್ಲಿ ಉಂಟಾಗಿರುವ ಗಲಭೆಯನ್ನು ಅಡಗಿಸುವ ನೆವದಿಂದ ಸೈನ್ಯದವರು ಯಾರೂ ಗಾಂಧಿ ಟೋಪಿಗಳನ್ನು ಹಾಕಿಕೊಳ್ಳದಂತೆ ನಿರ್ಬಂಧ ಮಾಡುತ್ತಿರುವರು. ಇದರಿಂದ ಭಾರತೀಯರಿಗೆ ಆಗುವ ಶಾರೀರಕ ವ್ಯಥೆಯು ಅತ್ಯಲ್ಪವಾದರೂ, ಮಹಾತ್ಮರ ಹೆಸರನ್ನು ಅತ್ಯಂತ ಪೂಜ್ಯಬುದ್ಧಿಯಿಂದ ಗೌರವಿಸುವ ಕೋಟ್ಯವಧಿ ಭಾರತೀಯರಿಗೆ ಸಹಿಸಲಾರದಷ್ಟು ಮಾನಸಿಕ ವ್ಯಥೆಯುಂಟಾಗುವದು. ಸದ್ಯಃ ಭರತಖಂಡದಲ್ಲಿ ತಲೆದೋರಿರುವ ಹಿಂಸಾತ್ಮಕ ಗಲಾಟೆಗಳನ್ನು ಕಂಡು ನಾವುಗಳು ನಾಚಿಕೊಳ್ಳುವಂತೆ, ಆಂಗ್ಲೇಯರ ದಬ್ಬಾಳಿಕೆಯನ್ನು ಕಂಡು ಇಂಗ್ಲೆಂಡಿನ ಉತ್ತಮಪಕ್ಷದವರು ಸಹ ನಾಚಿಕೊಳ್ಳುವರು."

ಕಳೆದ 14 ನೆಯ ತಾರೀಖಿನ ದಿವಸ 400-500 ಜನ ಸ್ವಯಂಸೇವಕರು ರತ್ನಾಗಿರಿ ಡಿಸ್ಟ್ರಿಕ್ಟಿಗೆ ಸೇರಿದ ಶಿರೋಡದಲ್ಲಿದ್ದ ಉಪ್ಪಿನ ಕೋಠಿಯನ್ನು ಲೂಟಿಮಾಡಿದರು. ಪೋಲೀಸರು 200 ಕ್ಕಿಂತಲೂ ಹೆಚ್ಚು ಸ್ವಯಂಸೇವಕರನ್ನು ದಸ್ತಗಿರಿಮಾಡಿರುತ್ತಾರೆ. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರವರು ಪ್ರೊಫೆಸರ್ ಕೇಸ್ಕಾಂಬಿ ಮೊದಲಾದ ಮುಖಂಡರಿಗೆ ಉಪ್ಪಿನಕೋಠಿಯನ್ನು ಲೂಟಿಮಾಡುವ ಪ್ರಯತ್ನವನ್ನು ಮುಂದುವರಿಸದಂತೆ ಎಚ್ಚರಿಕೆಯನ್ನು ಕೊಟ್ಟರೂ ಸಹ ಅದನ್ನು ಯಾರೂ ಗಮನಿಸಲಿಲ್ಲ. ಸತ್ಯಾಗ್ರಹಿಗಳು ಬೇರೆ ಬೇರೆ ಗುಂಪುಗಳಾಗಿ ಕೋಠಿಯ ಮೇಲೆ ನುಗ್ಗಿದರು. ಇದರಿಂದ ಪೋಲೀಸರೊಡನೆ ಕೈ ಕೈ ಹತ್ತಿ ಅನೇಕರಿಗೆ ತುಂಬಾ ಗಾಯಗಳಾದುವು.

ವೇದಾರಣ್ಯದ ಉಪ್ಪಿನ ಸತ್ಯಾಗ್ರಹಿಗಳ ಮುಖಂಡರಾದ ಶ್ರೀ|| ಕೆ. ಎಸ್. ಸುಬ್ರಹ್ಮಣ್ಯಂರವರು ಇಬ್ಬರು ಸ್ವಯಂಸೇವಕರೊಡನೆ ದಸ್ತಗಿರಿಮಾಡಲ್ಪಟ್ಟು ಒಂದು ವರ್ಷ ಕಠಿಣ ಸಜೆಗೆ ಗುರಿಮಾಡಲ್ಪಟ್ಟಿರುವರು.

ಅಹಮುದಾಬಾದಿನ ಕಲೆಕ್ಟರವರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮಿ|| ಮೊರಾರ್ಜಿ ದೇಸಾಯಿರವರೂ, ಉತ್ತರದಸ್ಕ್ರೋಯ್ ತಾಲೂಕು ಲೋಕಲ್ ಬೋರ್ಡಿನ ಪ್ರೆಸಿಡೆಂಟರಾದ ಮಿ|| ಸೂರಾಭಾಯ್ ಪಟೇಲ್‌ರವರೂ, ಸಂಯುಕ್ತ ಸಂಸ್ಥಾನಗಳ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಮೆಂಬರರಾದ ಮಿ|| ಬಾಬುಗಂಗಾಪ್ರಸಾದರಾಯ್ ಮತ್ತು ಬಾಬುನಾರಾಯಣಾಗಿಂರವರೂ, ಹಾಗೂ ಮಧ್ಯಪ್ರಾಂತಗಳ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರರಾದ ಮಿ|| ಎಂ. ಕೆ. ಗೊಪಾಲ್‌ಕರ್ ಮತ್ತು ಮಿ|| ಎಸ್. ಭಾರ್ಗವರವರು ತಮ್ಮ ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು. ಮಿ|| ಮೊರಾರ್ಜಿ ದೇಸಾಯಿರವರು ತಾವು ರಾಜೀನಾಮೆಯನ್ನು ಕೊಟ್ಟ ವಿಷಯವಾಗಿ ಬರೆದ ಪತ್ರದಲ್ಲಿ " ನನ್ನ ದೇಶಬಂಧುಗಳಾದ ಸಾವಿರಾರು ಜನ ವೀರರು ದೇಶಮಾತೆಯ ಸಲುವಾಗಿ ಆಹುತಿಯಾಗುತ್ತಿರುವದನ್ನು ಕಣ್ಣಾರೆ ನೋಡಿಯೂ, ಸ್ವಾಭಿಮಾನ ಮತ್ತು ಸ್ವದೇಶಾಭಿಮಾನವುಳ್ಳ ಯಾವ ಭಾರತೀಯನೂ ಸುಮ್ಮನಿರಲಾರನು " ಎಂಬುದಾಗಿ ಬರೆದಿರುವರು.

ಸೊಲ್ಲಾಪೂರದಲ್ಲಿ ಗುಂಡು ಹೇಗೆ ಅವ್ಯಾಹತವಾಗಿ ಹಾರಿದವು?

ದಂಡಿನ ಬಲವು ಬಂದ ಕೂಡಲೆ ಪೋಲೀಸರು, ಸೋಲ್ಜರು ಅಥವಾ ದೇಶೀ ಸೈನಿಕರು ಯಾರೇ ಇರಲಿ ದಂಗೆಯನ್ನು ಮುರಿಯಬೇಕೆಂದು ಊರ ತುಂಬ ಗುಂಡಿನ ಮಳೆ ಸುರಿಸಿದರು. ಈ ಕೃತಿಯು ತೀರ ಅವಿಚಾರ ಮತ್ತು ನಿರ್ದಯದ್ದಾಗಿತ್ತೆಂದು ಮುಂದೆ ಕೊಟ್ಟ ಕೆಲವು ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

೧. ಗಣಪತ ಬಾಳಕೃಷ್ಣ ಟೆಂಬೆ—ಇವರು ಟಿಳೀಕರರ ಮನೆಗೆ ಬೊಮ್ಮನಹಳ್ಳಿಯಿಂದ ಬಂದಿದ್ದರು. ಪಂಢರಪೂರಕ್ಕೆ ಹೋಗುವದಕ್ಕಾಗಿ ಜಿನ್ನಿಯಿಂದಿಳಿಯುತ್ತಿದ್ದಾಗ ಕಾಲಿಗೆ ಗುಂಡು ಬಡಿಯಿತು.

೨. ಮೆಕಾನಿಕ ಥಿಯೇಟರದಲ್ಲಿ ಎಲ್ಲಕ್ಕೂ ಮೇಲಿನ ಪಾವಟಿಗೆಯ ಮೇಲೆ ಕುಳಿತಿದ್ದ ಉಜ್ಜಯಿನಿಯ ಭೋಲೆಗಿಂಬಾವಾ ಎಂಬವರ ಅರವತ್ತು ವರ್ಷದ ಒಬ್ಬ ಗೋಸಾವಿ ಮುದುಕನ ಕಾಲಿಗೆ ಗುಂಡು ಬಡೆಯಿತು.

೩. ಪಾಂಜರಪೋಳದಲ್ಲಿರುವ ಸ್ಟ್ಯಾಂಡಿಗೆ ಬಂದಂಥ ತಾತ್ಯಾ ಎಂಬವನಿಗೆ ಒಂದರ ಮೇಲೊಂದರಂತೆ ಮೂರು ಸಾರೆ ಗುಂಡು ಹಾಕಿ, ಅವನನ್ನು ಕೊಂದರು.

೪. ಕುಂಬಾರ ಅಗಸಿಯಲ್ಲಿ ಒಬ್ಬ ಮುಸಲಮಾನ ಕಟುಕನೂ ಬೇರೂರಿಂದ ಬಂದ ಒಬ್ಬ ಹಿಂದೂಮನುಷ್ಯನೂ ಶೌಚಕ್ಕೆ ಹೋಗುತ್ತಿದ್ದರು. ದಾರಿಯಲ್ಲಿಯೇ ಇವರನ್ನು ಗುಂಡಿನಿಂದ ಗಾಯಪಡಿಸಿದರು.

೫. ಶುಕ್ರವಾರ ಪೇಟೆಯಲ್ಲಿ ಶೇಟ ಹಿರಾಚಂದ ವಾಲಚಂದ ಇವರ ೧೩-೧೪ ವರ್ಷದ ಹುಡುಗನು ಮೂರನೆಯ ಅಂತಸ್ತಿನ ಮೇಲೆ ನಿಂತಿದ್ದನು. ಅಲ್ಲೇ ಗುಂಡು ತಾಕಿ ಸತ್ತನು.

೬. ನರಸಿಂಗ ಗಿರಣಿಯ ಮ್ಯಾನೇಜರನು ಅಟ್ಟದ ಮೇಲೆ ಮಲಗಿದಾಗ ಕುಳಿತಾಗ, ಆತನ ತಲೆಯ ಮೇಲಿಂದ ಗುಂಡು ಹಾದು ಗೋಡೆಯೊಳಗೆ ತೂತು ಮಾಡಿತು.

೭. ಸಕ್ಕರೆಪೇಟೆಯಲ್ಲಿ ಬಡಗಾರರ ಒಬ್ಬ ಹೆಣ್ಣುಮಗಳು ತಂಬಿಗೆ ತೆಗೆದುಕೊಂಡು ಹೋಗುತ್ತಿದ್ದಾಗ ಗುಂಡು ಬಡೆಯಿತು.

೮. ಧಡಂಗೆ ಎಂಬ ಆರೆ ಹುಚ್ಚನು ಕಟ್ಟೆಯ ಮೇಲೆ ಕುಳಿತಾಗ ಗುಂಡು ತಗಲಿತು.

೯. ಜೋಡಬಾವಿಯ ಪೇಟೆಯಲ್ಲಿ ಮಲ್ಲಿಕಾರ್ಜುನ ಸ್ವಾಮಿಯವರು ಒಂದು ಅಂಗಡಿಯಲ್ಲಿ ನಿಂತಾಗ ಗುಂಡು ಬಡೆಯಿತು.

೧೦. ಮೆಕಾನಿಕ ಥಿಯೇಟರದ ಒಳಂಗಳದಲ್ಲಿರುವ ಒಂದು ಕೋಣೆಯಲ್ಲಿ ಕುಳಿತಿದ್ದ ಸುಂದರಲಿಂಗರೆಂಬವರ ಪತ್ನಿ ಸೀತಾಬಾಯಿಯ ಎದೆ ಮತ್ತು ತೊಡೆಗೆ ಗುಂಡುಗಳು ತಾಕಿವೆ.

೧೧. ಇದೇ ಥಿಯೇಟರದ ಹತ್ತಿರುವ ಚಹಾದ ಅಂಗಡಿಯಲ್ಲಿ ಚಹಾ ಕುಡಿಯುತ್ತ ಕೂತಿದ್ದ ಬಾಬುರಾವ ಶೇರೆ ಎಂಬವರಿಗೆ ಗುಂಡು ಬಡೆಯಿತು.

೧೨. ಒಂದು ಊಟದ ಮನೆಯಲ್ಲಿ ಬಾಗಿಲ ಹಾಕಿಕೊಂಡು ಜನರು ಊಟಕ್ಕೆ ಕುಳಿತಿದ್ದರು. ಬಾಗಿಲಕ್ಕೆ ಗುಂಡು ಹೊಡೆದರು. ಗುಂಡು ಬಾಗಿಲದೊಳಗಿಂದ ಹಾದು ಮನೋಹರ ಕೃಷ್ಣ ಜಾಧವರೆಂಬವರ ಬಲತೊಡೆಯನ್ನು ಸವರಿ ಎಡತೊಡೆಯಿಂದ ಪಾರಾಗಿ ಹೋಯಿತು.

ಈ ಪ್ರಕಾರ ಅಪಾಯಕರನ ಮಾಡಿದರೂ ಸಹ ಗಾಯವಾದಂಥ ಜನರ ವಿಷಯವಾಗಿ ಅಧಿಕಾರಿಗಳು ಯಾವ ಉಪಾಯವನ್ನೂ ಮಾಡಲಿಲ್ಲೆಂದು ಅಲ್ಲಿಯ ಕರ್ಮಯೋಗಿ ಪತ್ರದಲ್ಲಿ ಬರೆದಿದೆ.

ಲಷ್ಕರೀ ಹುಕುಮಿನ ಮಹಿಮೆ.

ಸೊಲ್ಲಾಪೂರ ಪಟ್ಟಣವನ್ನು ಲಷ್ಕರೀ ಹುಕುಮತ್ತಿನಿಂದ ತಮ್ಮ ವಶಕ್ಕೆ ತಂದುಕೊಂಡನಂತರ ಕಮಾಂಡರಾದ ಪಿಯರ್ಸ್ ಸಾಹೇಬರು ಒಂದು ಜಾಹೀರನಾಮೆ ತೆಗೆದು, ಯಾರಾದರೂ ರಾಷ್ಟ್ರೀಯ ನಿಶಾನೆ ಅಥವಾ ಅದಕ್ಕೆ ಸಮಾನವಾದಂಥ ನಿಶಾನೆ ಹಿಡಿದುಕೊಂಡು ಬಂದರೆ ಹತ್ತುವರ್ಷಗಳ ಸಖತ ಶಿಕ್ಷೆ ವಿಧಿಸಲ್ಪಡುವದೆಂದು ಸಾರಿಸಿದ್ದಾರೆ.

(ವಿಜಯ.)

ಅತ್ಯವಶ್ಯವಾದ ಕೆಲವು ಗೃಹಚಿಕಿತ್ಸೆಗಳು.

ಮೂಗಿನಲ್ಲಿ ರಕ್ತ ಸುರಿಯುವುದು, ಹಲ್ಲುನೋವು, ಮತ್ತು ಕಿವಿಬೇನೆ.

ಕೆಲವು ಮಕ್ಕಳಿಗೂ, ಯುವಕರಿಗೂ, ವಿಶೇಷವಾಗಿ ಹೆಣ್ಣು ಹುಡುಗಿಯರಿಗೆ ಮೂಗಿನಲ್ಲಿ ಆಗಾಗ್ಗೆ ರಕ್ತವು ಸುರಿಯುವುದುಂಟು. ದೇಹದ ಬೆಳವಳಿಕೆಗೆ ಸಂಬಂಧಪಟ್ಟು, ದೇಹದಲ್ಲಿ ತೋರುವ ಕೆಲವು ವ್ಯಾಧಿಗಳು ಇದಕ್ಕೆ ಕಾರಣವು. ಆದುದರಿಂದ ಸಾಮಾನ್ಯವಾಗಿ ಇಪ್ಪತ್ತು ವಯಸ್ಸಿಗೆ ಮೇಲ್ಪಟ್ಟವರಲ್ಲಿ ಇದು ಕಾಣಿಸಿಕೊಳ್ಳುವುದಿಲ್ಲ. ಯೌವನಪ್ರಾಪ್ತವಾದಾಗಲೂ ಈ ವ್ಯಾಧಿಯಿದ್ದಲ್ಲಿ ಇದು ಯಾವುದಾದರೂ ರಕ್ತರೋಗಚಿಹ್ನೆಯೆಂದಾಗಲಿ, ಯಾವುದಾದರೂ ಮುಖ್ಯಾಂಗಗಳ ವ್ಯಾಧಿಯ ಪರಿಣಾಮವೆಂದಾಗಲಿ ಭಾವಿಸಬಹುದು. ಕೆಲವು ಸಂದರ್ಭಗಳಲ್ಲಿ ವ್ಯಾಧಿಯು ಅಪಾಯಕರವಾದುದೇ ಇಲ್ಲವೇ ಎಂಬುದನ್ನು ನಿರ್ಧರಿಸಲು, ವ್ಯಾಧಿಗ್ರಸ್ತರನ್ನು ವೈದ್ಯರ ಮೂಲಕ ಪರೀಕ್ಷೆ ಮಾಡಿಸುವುದೊಳ್ಳೆಯದು. ಸಾಧಾರಣವಾಗಿ ಮೂಗಿನಲ್ಲಿ ರಕ್ತಸುರಿಯುವುದರಿಂದ ಅಪಾಯವಿಲ್ಲದಿದ್ದರೂ, ಮಹಾಕಷ್ಟವಾಗುವುದು. ಮತ್ತು ಆ ರಕ್ತವನ್ನು ನಿಲ್ಲಿಸುವುದೇ ಆ ಸಂಕಟಪರಿಹಾರಕ್ಕೆ ತಕ್ಕ ಚಿಕಿತ್ಸೆ.

ಸಾಮಾನ್ಯವಾಗಿ ಎಲ್ಲಾ ರಕ್ತಸ್ರಾವವನ್ನು ನಿಲ್ಲಿಸುವುದಕ್ಕೂ ಆ ಸ್ಥಳವನ್ನು ಬಲವಾಗಿ ಒತ್ತಿಹಿಡಿಯುವುದೇ ಸುಲಭೋಪಾಯವು. ಮೂಗಿನಿಂದ ಸುರಿಯುವ ರಕ್ತಕ್ಕೂ ಇದೇ ಉಪಾಯವನ್ನು ಅನುಸರಿಸಬಹುದು. ಒಂದು ಕರವಸ್ತ್ರವನ್ನು ತೆಗೆದುಕೊಂಡು, ಅದರ ಕೊನೆಯೊಂದನ್ನು ಸಣ್ಣಬತ್ತಿಯಾಗಿ ಸುತ್ತಿ ಮೂಗಿನೊಳಕ್ಕೆ ಬಿಟ್ಟು, ಸ್ವಲ್ಪಹೊತ್ತು ಹಾಗೆಯೇ ನಿಲ್ಲಿಸಬೇಕು. ಆ ಮೊದಲನೆಯ ಬಟ್ಟೆಯನ್ನು ತೆಗೆದೊಡನೆ, ಮತ್ತೊಂದು ಬಟ್ಟೆಯನ್ನು ಒಳಕ್ಕೆ ಬಿಡಲು ಸಿದ್ಧಪಡಿಸಿಕೊಳ್ಳಬೇಕು. ಸಾಮಾನ್ಯವಾಗಿ ರಕ್ತಸ್ರಾವವನ್ನು ನಿಲ್ಲಿಸಲು ಇದೇ ಉಪಾಯವು. ಕೆಲವರು ಮೂಗಿಗೆ ನೀರನ್ನು ಸೇದಿಸುವುದುಂಟು. ನೀರನ್ನು ಸುರಿದರೆ ರಕ್ತವು ಕಟ್ಟಿಕೊಳ್ಳುವುದಕ್ಕೆ ಅಡ್ಡಿಯಾಗುವುದರಿಂದ ನೀರನ್ನು ಸುರಿಯಬಾರದು. ಇನ್ನೂ ರಕ್ತವು ಸುರಿಯುತ್ತಿದ್ದರೆ, ಪಟಿಕ, ಟಾನಿನ್ ಅಥವಾ ಉಪ್ಪು ಮಿಶ್ರಿತವಾದ ಯಾವುದಾದರೊಂದು ದ್ರಾವಕವನ್ನು ಮೂಗಿನೊಳಕ್ಕೆ ಸಿರಿಂಜ್ ಮಾಡಬಹುದು.

ಇಂತಹ ಸಂದರ್ಭಗಳಲ್ಲಿ ರೋಗಿಯ ಮೈಯನ್ನು ಸರಿಯಾದ ಸ್ಥಿತಿಯಲ್ಲಿಡುವುದು ಬಹಳ ಮುಖ್ಯವು. ಅವನನ್ನು ಒಂದು ಕುರ್ಚಿಯ ಮೇಲೆ ಕುಳ್ಳಿರಿಸಿ ಎರಡು ಕೈಗಳನ್ನೂ ತಲೆಯಮೇಲಕ್ಕೆ ಎತ್ತಿರಬೇಕು. ಕತ್ತಿನಸುತ್ತಲೂ ಯಾವವಿಧವಾದ ಬಂಧನವೂ ಇರಕೂಡದು. ಕತ್ತಿನ ಹಿಂಭಾಗ, ಮುಂದಲೆ, ಮೂಗಿನ ಮಧ್ಯಭಾಗದ ಮೂಳೆ, ಮುಂತಾದ ಪ್ರದೇಶಗಳಿಗೆ ತಂಪನ್ನು ಕೊಡಬೇಕು.

ರಕ್ತವು ಒಂದುಸಲ ಸುರಿಯುವುದಕ್ಕೂ, ಮತ್ತೊಂದುಸಲಕ್ಕೂ ನಡುವೆ ಯಾವುದಾದರೂ ಬಲವರ್ಧಕವಾದ ಟಾನಿಕ್ಕನ್ನು ಉಪಯೋಗಿಸಬೇಕು. ಆಹಾರ, ನಿರ್ಮಲವಾದ ಗಾಳಿ, ವ್ಯಾಯಾಮ, ಮತ್ತು ವಿಶ್ರಾಂತಿ ಇವುಗಳ ವಿಷಯದಲ್ಲಿ ಮುಖ್ಯವಾಗಿ ಗಮನವಿಡಬೇಕು.

ಹಲ್ಲುನೋವು.

ಈಗಿನ ಹಲ್ಲುನೋವು ಸರ್ವಸಾಧಾರಣವಾದ ವ್ಯಾಧಿಯಾಗಿದೆ. ಆದರೂ ಅದನ್ನು ನಿವಾರಣೆ ಮಾಡಲು ಹಲವು ಉಪಾಯಗಳಿವೆ. ಪ್ರಾಯಶಃ ಇದಕ್ಕೆ ಹಲ್ಲುಗಳ ವಿಷಯದಲ್ಲಿರುವ ಅನಾದರಣೆಯೇ ಕಾರಣವು. ಹಲ್ಲುಗಳನ್ನು ಚೆನ್ನಾಗಿ ತೊಳೆಯದೆ, ಅವಶ್ಯವಿದ್ದಾಗಲೂ ಚಿಕಿತ್ಸೆಗಾಗಿ ದಂತವೈದ್ಯರಬಳಿಗೆ ಹೋಗದೆ ಸುಮ್ಮನಿರುವುದೇ ಈ ಅಲಕ್ಷ್ಯದ ಸೂಚನೆಗಳು. ತಾಯಿ ತಂದೆಗಳೂ, ಮಕ್ಕಳೂ, ಒಳ್ಳೆಯ ಆಹಾರವನ್ನು ಸೇವಿಸಿ ಬಾಯಲ್ಲಿ ಅವಯವಗಳ ಆರೋಗ್ಯಕ್ಕೆ ಗಮನಕೊಟ್ಟು, ವರ್ಷಕ್ಕೆ ಕನಿಷ್ಠ ಎರಡುಸಲವಾದರೂ ದಂತವೈದ್ಯರ ಸಲಹೆಯನ್ನು ಕೇಳುತ್ತಿದ್ದರೆ, ಅನೇಕರ ಮನೆಗಳಲ್ಲಿ ಹಲ್ಲುನೋವಿನ ಬಾಧೆಯೇ ಇರುವುದಿಲ್ಲ.

ಹಲ್ಲುನೋವು ಪ್ರಾರಂಭಿಸಿದೊಡನೆಯೇ, ಹಲ್ಲು ಕೊಳೆತು ಹಲ್ಲಿನ ಒಳಭಾಗಕ್ಕೂ, ನರಕ್ಕೂ ಆ ದೋಷವು ವ್ಯಾಪಿಸಿದೆಯೆಂದು ಸೂಚಿಸುವುದು. ಹಲ್ಲುಗಳ ಹೊರಭಾಗದಿಂದಲೇ ಮೊದಲು ಈ ವ್ಯಾಧಿಯು ಪ್ರಾರಂಭಿಸುವುದು. ತಿಂದ ಆಹಾರದ ಚೂರುಗಳು ಹಲ್ಲುಸಂದುಗಳಲ್ಲಿ ಅಂಟಿಕೊಂಡು, ಅವುಗಳಲ್ಲಿ ಕ್ರಿಮಿಗಳು ಹುಟ್ಟುವುವು. ಆ ಕ್ರಿಮಿಗಳು ವಿಷದ್ರಾವಕವೊಂದನ್ನು ತಯಾರುಮಾಡುವುವು. ಆ ದ್ರಾವಕವು ಹಲ್ಲಿನ ಮೇಲುಭಾಗದಲ್ಲಿರುವ "ಎನಾಮಲ್" ಎಂಬ ಗಟ್ಟಿಪದರವನ್ನು ತಿಂದುಬಿಡುವುದರಿಂದ, ಕ್ರಿಮಿಗಳು ಹಲ್ಲಿನ ಒಳಭಾಗದಲ್ಲಿರುವ "ಡೆಂಟೈನ್" ಎಂಬ ಪ್ರದೇಶಕ್ಕೂ ಪ್ರವೇಶಿಸುವುವು. ಇಷ್ಟು ಕೆಲಸಗಳು ನಡೆಯುವಾಗಲೂ ನಮಗೆ ಯಾವ ವಿಧವಾದ ಬಾಧೆಯೂ ಕಾಣದು. ವೈದ್ಯರಿಗೆ ತೋರಿಸದಿದ್ದರೆ ಹಲ್ಲು ಕೊಳೆಯುವುದಕ್ಕೆ ಪ್ರಾರಂಭಿಸುವುದೆಂಬುದುಕೂಡಾ ಆ ಮನುಷ್ಯನಿಗೆ ತೋರುವುದಿಲ್ಲ. ಈ ಕ್ರಿಮಿಗಳು ಹಲ್ಲುಗಳ ಮಧ್ಯಭಾಗದಲ್ಲಿರುವ ನರಗಳಿಗೂ, ರಕ್ತನಾಳಗಳಿಗೂ ಪ್ರವೇಶಿಸಿದೊಡನೆಯೇ, ಬಹಳ ನೋವಾಗುವುದು. ಆದರೆ ಆ ಮೇಲೆ ಆ ಹಲ್ಲುಗಳನ್ನು ಕಿತ್ತುಹಾಕಿಸಬೇಕು. ಅಥವಾ ಆ ನರಗಳನ್ನು ಕೊಲ್ಲಬೇಕು. ಹಾಗಿಲ್ಲದಿದ್ದರೆ, ಅವನು ಜೀವಾವಧಿ ದುರ್ಬಲವಾದ ಹಲ್ಲನ್ನು ಹೊಂದಿರಬೇಕಾಗುವುದು.

ಆದುದರಿಂದ, ಹಲ್ಲುನೋವು ಕಾಣಿಸಿಕೊಂಡಮೇಲೆ ಅದನ್ನು ಗುಣಪಡಿಸಲು ಪ್ರಯತ್ನಿಸುವುದಕ್ಕಿಂತ, ಹಲ್ಲುನೋವೇ ಬಾರದಂತೆ ನೋಡಿಕೊಳ್ಳುವುದು ಮುಖ್ಯವು. ಹಲ್ಲುಗಳನ್ನು ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಳ್ಳಲು ಪ್ರಾರಂಭದೆಸೆಯಲ್ಲಿಯೇ ಸ್ವಲ್ಪ ಶ್ರಮವನ್ನು ವಹಿಸಿದರೆ, ಮುಂದೆ ಬಹಳ ಒಳ್ಳೆಯ ಗುಣವು ಕಾಣಿಸುವುದು. ಇದರಿಂದ ಯಾವ ವಿಧವಾದ ಬಾಧೆಯೂ ಇಲ್ಲದೆ ಸುಖವಾಗಿರಬಹುದು. ಜೀರ್ಣಶಕ್ತಿಯು ಹೆಚ್ಚುವುದು. ಮತ್ತು ದೊಡ್ಡತನಕ್ಕೆ ಶರೀರದ ಎಲ್ಲಾ ಅವಯವಗಳೂ ಸಂಪೂರ್ಣಾರೋಗ್ಯಸ್ಥಿತಿಗೆ ಬಂದು ದೇಹಕ್ಕೆ ಸುಖವಾಗುವುದು. ಎಲ್ಲಾ ತರದ ವ್ಯಾಧಿಗಳೂ ದ್ರವ್ಯನಷ್ಟಕ್ಕೆ ಕಾರಣವಾಗುವುದರಿಂದ, ಹಲ್ಲುಗಳು ಆರೋಗ್ಯಸ್ಥಿತಿಯಲ್ಲಿದ್ದಲ್ಲಿ ವ್ಯರ್ಥವಾಗಿ ಕಾಲವೂ, ದ್ರವ್ಯವೂ ಕಳೆದುಹೋಗಲು ಅವಕಾಶವು ತಪ್ಪುವುದು.

ಹಲ್ಲುನೋವು ಕಾಣಿಸಿಕೊಂಡಾಗಲೆಲ್ಲಾ ಕೆಟ್ಟುಹೋದ ಹಲ್ಲನ್ನು ಚೆನ್ನಾಗಿ ಪರೀಕ್ಷಿಸಿ, ಅದರಲ್ಲಿ ಕೊಳೆತ ಭಾಗವೆಲ್ಲವನ್ನೂ ತೆಗೆದುಹಾಕಬೇಕು. "ಕಾರ್ಬೊಲೈಜ್ಡ್ ರೆಸಿನ್" ಎಂಬ ಪದಾರ್ಥವು ಸಮೀಪದಲ್ಲೇ ಸಿಕ್ಕುವಂತಿದ್ದರೆ, ಆ ಹಲ್ಲಿನಲ್ಲಿರುವ ರಂಧ್ರದ ಆಕೃತಿಗೆ ಸರಿಯಾಗಿ ಹತ್ತಿಯನ್ನು ಸುತ್ತಿ ಆ ದ್ರಾವಕದಲ್ಲಿ ಅದ್ದಿ ರಂಧ್ರಕ್ಕೆ ಸರಿಯಾಗಿಡಬೇಕು. ಹೀಗೆ ಇದನ್ನು ಹಲವು ಗಂಟೆಗಳಕಾಲ ಆ ರಂಧ್ರದಲ್ಲಿಯೇ ಇರಿಸಿ ಆಗಾಗ್ಗೆ ಹತ್ತಿಯನ್ನು ಬದಲಾಯಿಸುತ್ತಿರಬೇಕು.

ಕಾರ್ಬೊಲೈಜ್ಡ್ ರೆಸಿನ್ ದೊರಕದಿದ್ದರೆ, ಲವಂಗದ ಎಣ್ಣೆಯನ್ನು ಉಪಯೋಗಿಸಬಹುದು. ಆದರೆ, ಲವಂಗದ ಎಣ್ಣೆಯು ಅಷ್ಟು ಪ್ರಯೋಜನಕಾರಿಯಲ್ಲ. ಕೊಳೆತ ಹಲ್ಲಿನ ಉಭಯಪಾರ್ಶ್ವಗಳಲ್ಲಿಯೂ ಇರುವ ಮಾಂಸಖಂಡಗಳ ಮೇಲೆ ಸ್ವಲ್ಪ ದೂರಕ್ಕೆ ಟಿಂಚರ್ ಅಯೋಡಿನ್ನು ಸವರುವುದರಿಂದಲೂ ಬಹಳ ಗುಣವುಂಟು.

ಎಲ್ಲಾ ಸಂದರ್ಭಗಳಲ್ಲಿಯೂ ಸಾಧ್ಯವಾದಷ್ಟು ಬೇಗನೆ ದಂತವೈದ್ಯರ ಬಳಿಗೆ ಹೋಗಿ, ಹಲ್ಲಿಗೂ, ಬಾಯಿಗೂ ತಕ್ಕ ಚಿಕಿತ್ಸೆಗಳನ್ನು ಮಾಡಿಸಿ ವ್ಯಾಧಿಯನ್ನು ಸಂಪೂರ್ಣವಾಗಿ ಗುಣಪಡಿಸಿಕೊಳ್ಳುವುದು ಮೇಲು. ಹಲ್ಲು ಕೆಡುವುದರಿಂದ ಹಲವು ವೇಳೆ ಕಣ್ಣುಗಳೂ ಕೆಟ್ಟುಹೋಗುವ ಸಂಭವವುಂಟು.

ದಂತವ್ರಣಗಳು.

ಹಲ್ಲುನೋವು ಕಾಣಿಸಿದಮೇಲೆ ಕೆಲವು ಸಮಯಗಳಲ್ಲಿ ಹಲ್ಲಿನಲ್ಲಿ ಹುಣ್ಣಾಗುವುದುಂಟು. ಬಾಯಲ್ಲಿ ಹಲ್ಲು ಕೊಳೆತರೆ, ಅಥವಾ ಹುಳುಬಿದ್ದರೆ, ಈ ವ್ರಣಗಳೇಳುವುದು ನಿಶ್ಚಯವು. ಹಲ್ಲುನೋವಿಗೆ ಕೂಡಲೇ ಚಿಕಿತ್ಸೆಮಾಡಿಸದಿದ್ದರೆ, ಅಲ್ಲಿನ ನರಗಳು ಸತ್ತು, ಕೊನೆಗೆ ಕೀವು ಹಿಡಿಯುವುದು. ಅಂತಹ ಹಲ್ಲುಗಳು ಬಾಯಲ್ಲಿರಲು ಅವಕಾಶಕೊಟ್ಟರೆ, ಕಾಲಕ್ರಮದಿಂದ ದೊಡ್ಡಕ್ಕೆ ದೇಹಾರೋಗ್ಯವೇ ಕೆಟ್ಟುಹೋಗುವುದು. ದೀರ್ಘಕಾಲದ ವಾತರೋಗ ಮುಂತಾದ ಕಠಿಣ ವ್ಯಾಧಿಗಳಿಗೆ ಇಂತಹ ಹೊಲಸು ಬಾಯೇ ಮೂಲಕಾರಣವೆನಿಸುವುದು. ಹಲ್ಲಿನಲ್ಲಿ ಅಥವಾ ಹಲ್ಲಿನ ಬೇರಿನಲ್ಲಿ ಕೀವು ಹಿಡಿದರೆ ಅಲ್ಲಿ ಹುಣ್ಣಾಗುವುದು. ಕೆಲವುವೇಳೆ ಛಳಿಹಿಡಿದರೆ ಅಥವಾ ಮೈ ಬಲಹೀನವಾಗಿದ್ದರೆ, ಆ ತೊಂದರೆಯು ಹೆಚ್ಚಾಗಿ ತೋರಿಬರುವುದು. ಆಗಾಗ ಹಲ್ಲು ಬೇನೆ ಕಾಣಿಸುವುದು. ಒಸಡುಗಳಲ್ಲಿಯೂ, ದವಡೆಗಳಲ್ಲಿಯೂ ಏನೋ ಉಪದ್ರವವಿದ್ದಂತೆ ತೋರುವುದು. ನೋವಿದ್ದ ಹಲ್ಲು ಬೇರೆ ಎಲ್ಲಾ ಹಲ್ಲುಗಳಿಗಿಂತಲೂ, ಉದ್ದವಾಗಿಯೋ, ದಪ್ಪನಾಗಿಯೋ, ಇದ್ದಂತೆ ಕಾಣುವುದು ಆ ಹಲ್ಲಿಗೆ ಯಾವುದಾದರೂ ಸ್ವಲ್ಪ ಮಾತ್ರ ತಗುಲಿದರೂ ಬಹಳ ನೋವಾಗುವುದು. ಒಂದೆರಡು ದಿನಗಳವರೆಗೆ ಹೀಗಿದ್ದು, ಆ ಮೇಲೆ ನೋವು ಸಂಕಟಹೋಗಿ, ಆ ಸ್ಥಳದಲ್ಲಿ ಮೊದಲಿದ್ದ ಮೈ ಮುಕ್ತವೂ ಹೋಗಿ, ಆ ನೋವಿದ್ದ ಹಲ್ಲಿನ ಸುತ್ತುಮುತ್ತಿನ ಭಾಗವೆಲ್ಲ ಬಾತುಕೊಳ್ಳುವುದು. ಇದು ಹೆಚ್ಚು ಬಾಧೆಯಿಲ್ಲದೆ ಸಾಧಾರಣವಾಗಿದ್ದರೂ ಇರಬಹುದು. ಕೆಲವುವೇಳೆ ಮುಖವೆಲ್ಲಾ ಊದಿಕೊಂಡು, ಬಾಯಿಮುಚ್ಚಿಹೋಗಿ, ಯಾವುದನ್ನೂ ತಿನ್ನುವುದಕ್ಕಿಲ್ಲದಂತೆ ಬಹಳ ಶ್ರಮ ಬಲಬಾಧೆಗೂ ಕಾರಣವಾಗಬಹುದು. ತಕ್ಕ ಚಿಕಿತ್ಸೆಮಾಡದಿದ್ದರೆ ಒಂದು ವಾರದವರೆಗೆ ಅನ್ನಾಹಾರಗಳೇ ಇಲ್ಲದಂತೆ ಸಂಕಟಪಡಬೇಕಾಗುವುದು. ಆ ಮೇಲೆ ತಾನಾಗಿ ವ್ರಣದ ಗಡ್ಡೆಯು ಒಡೆದು, ನೋವೂ ಕಡಿಮೆಯಾಗುವುದುಂಟು. ಆದರೆ, ಇಷ್ಟರಲ್ಲಿ ಮನುಷ್ಯನ ದೇಹಾರೋಗ್ಯವು ಸಂಪೂರ್ಣವಾಗಿ ಕೆಟ್ಟುಹೋಗುವುದು. ಇದಕ್ಕೆ ಚಿಕಿತ್ಸೆ ಬಹಳ ಸುಲಭವೆಂಬುದಾಗಿ ಕುರಿತು ಇದಕ್ಕೆ ಮೊದಲೇ ನಾವು ಸೂಚಿಸಿರುವೆವು. ಬಾಯನ್ನು ಅಲಕ್ಷ್ಯವಾಗಿ ಬಿಟ್ಟರೆಹೊರತು ಹಲ್ಲಿನಲ್ಲಿ ಹುಣ್ಣೇಳುವ ಸಂಭವವೇ ಇಲ್ಲವು.

ವ್ರಣವಿದ್ದಹಾಗೆ ತೋರಿದೊಡನೆ ಆ ಹಲ್ಲನ್ನು ಕೀಳಿಸುವುದೇ ಉತ್ತಮಚಿಕಿತ್ಸೆ. ಇದರಿಂದ ಬಹುಬೇಗನೆ ನೋವು ತಗ್ಗುವುದು. ಹಲ್ಲನ್ನು ಕೀಳಿಸುವುದು ಅಪಾಯಕರವೆಂಬುದನ್ನು ಯಾರೂ ನಂಬಬಾರದು. ಬೇರೆ ಚಿಕಿತ್ಸೆಗಳೇನೂ ಇದಕ್ಕೆ ಇಷ್ಟು ಪ್ರಯೋಜನಕಾರಿಗಳಲ್ಲ. ಬಾಯಿಯೊಳಕ್ಕೆ ಶಾಖಕೊಡುವುದು ಹಿಟ್ಟನ್ನು ಕಡದಿ ಕಟ್ಟುವುದು ಈ ಮುಂತಾದ ಚಿಕಿತ್ಸೆಗಳೆಲ್ಲ ಬೇಗನೆ ಕಟ್ಟಿಯನ್ನು ಒಡೆಯುವಹಾಗೆ ಮಾಡಲು ಅನುಕೂಲಿಸಬಹುದು. ಆದರೆ ಬಾಯಹೊರಗೆ ಗಲ್ಲದ ಮೇಲೆ ಒತ್ತನೆಯನ್ನು ಕೊಡಲೇಬಾರದು. ಏಕೆಂದರೆ ಹಾಗೆ ಕೊಟ್ಟರೆ ಆ ವ್ರಣದ ಕಟ್ಟಿಯು ಹೊರಗಡೆಗಾಗಿ ಒಂದು ಒಡೆದು, ಅದರಿಂದ ಜೀವಾವಧಿ ಮುಖದಲ್ಲಿ ವಿಕಾರವು ನಿಲ್ಲಲು ಅವಕಾಶವಾಗುವುದು. ಈ ಹಲ್ಲುಹುಣ್ಣು ಗುಣವಾಗಿ ದೇಹವು ಚೇತರಿಸಿಕೊಳ್ಳುವಾಗ ಒಳ್ಳೇ ಬಲವರ್ಧಕವಾದ ಟಾನಿಕ್ಕುಗಳನ್ನು ಸೇವನೆ ಮಾಡಬೇಕು.

ಕಿವಿಬೇನೆ.

ಕರ್ಣೇಂದ್ರಿಯವು ನಮ್ಮ ದೇಹದಲ್ಲಿ ಬಹುಸೂಕ್ಷ್ಮವಾದ ಅವಯವವೆನಿಸಿದೆ. ಹಲ್ಲುಗಳಲ್ಲಿ ಹೇಗೋ ಕಿವಿಯಲ್ಲಿಯೂ ಮಕ್ಕಳಿಗೆ ಆಗಾಗ ನೋವು ಕಾಣಿಸುವುದು. ಕಿವಿಬೇನೆಯನ್ನು ಬಹಳ ಶ್ರದ್ಧೆಯಿಂದ ಗಮನಿಸಿ, ಒಡನೆಯೇ ಚಿಕಿತ್ಸೆ ಮಾಡಬೇಕು. ಕಿವಿಬೇನೆಯನ್ನು ಅಲಕ್ಷ್ಯವಾಗಿ ಬಿಟ್ಟರೆ ಕಿವುಡಾಗುವುದಲ್ಲದೆ, ಕಿವಿಗೆ ಸಮೀಪದಲ್ಲಿರುವ ಮಿದುಳು ಮುಂತಾದುವುಗಳಿಗೆಲ್ಲ ಇದರಿಂದ ಅಪಾಯವುಂಟು.

ಕಿವಿಬೇನೆಯೆಂಬುದು ಪ್ರಾಯಶಃವಾಗಿ ಶೀತದೋಷದಿಂದಲೂ, ದೇಹದೌರ್ಬಲ್ಯದಿಂದಲೂ ಕಾಣಿಸುವುದು. ಜ್ವರಮುಂತಾದ ಇತರ ವ್ಯಾಧಿಗಳೊಡನೆ ಇದೂ ಕಲೆತುಬರುವುದುಂಟು.

ಹಲ್ಲುಗಳಲ್ಲಿ ಹೇಗೋ ಹಾಗೆ ಕಿವಿಗಳಲ್ಲಿಯೂ ಬೇನೆಯು ಕಂಡುಬಂದಾಗ ಒಳಗೆ ವ್ರಣಗಳು ಏಳುವ ಸೂಚನೆಯುಂಟು. ಇಂತಹ ಸ್ಥಿತಿಯಲ್ಲಿ ದುಸ್ಸಹವಾದ ಬಾಧೆಯು ತೋರುವುದು. ಈ ಸಂದರ್ಭಗಳಲ್ಲಿ ಒಳಗಿನ ವ್ರಣವು ಚೆನ್ನಾಗಿ ಪಕ್ವವಾಗಿ ಕಿವಿಯ ಪರೆಯನ್ನು ಭೇದಿಸಿಕೊಂಡು ಒಡೆದುಹೋದರೆ ಹೊರತು, ನೋವು ಶಾಂತವಾಗಲಾರದು. ಕಟ್ಟಿಯು ಒಡೆದಕೂಡಲೆ ನೋವು ಬಿಟ್ಟುಹೋಗುವುದು. ಕಿವಿಯನ್ನು ಶುದ್ಧವಾಗಿಡದಿದ್ದರೆ, ಸೊಂಕು ವ್ರಣಗಳು ಮೇಲೆಮೇಲೆ ಏಳುತ್ತಿರುವುವು. ವ್ರಣವು ಸಂಪೂರ್ಣವಾಗಲಾರದು, ಆಗ ಕಿವಿಯು ಸಂಪೂರ್ಣವಾಗಿ ಕಿವುಡಾಗಿಯೇ ಹೋಗುವುದು.

ಇದರ ನಿವಾರಣೆಗಾಗಿ, ಕಿವಿಯೊಳಗಿನ ವ್ರಣವು ಪಕ್ವವಾಗುತ್ತ ಬಂದಾಗಲೇ ಡಾಕ್ಟರ್ ಮೂಲಕವಾಗಿ ಕಿವಿಯ ಪರೆಯಮೇಲೆ ಶಸ್ತ್ರಚಿಕಿತ್ಸೆಯಿಂದ ಹುಣ್ಣನ್ನು ಸೀಳಿಬಿಡುವುದೊಳ್ಳೆಯದು. ಇದರಿಂದ ಬೇಗನೆ ಗುಣವಾಗುವುದು. ಹೀಗೆ ಮಾಡುವುದಕ್ಕೆ ಇಷ್ಟವಿಲ್ಲದಿದ್ದರೆ ಕಿವಿಯನ್ನು ಆಗಾಗ ಶುದ್ಧಮಾಡುತ್ತಿರಬೇಕು. ಆಗ ಹುಣ್ಣು ಒಡೆದರೂ ಆ ಕಶ್ಮಲದ ಸೊಂಕು ನಿಲ್ಲಲು ಅವಕಾಶವಿರುವುದಿಲ್ಲ.

ಹಾಗೆ ಶುದ್ಧಮಾಡಬೇಕಾದರೆ ರೋಗಿಯನ್ನು ಮಲಗಿಸಿಟ್ಟು, ೨೦ಕ್ಕೆ ಒಂದರಂತೆ ಕಾರ್ಬಾಲಿಕ್ ಮಿಶ್ರವುಳ್ಳ ಉಷ್ಣವಾದ ದ್ರಾವಕವನ್ನು ಕಾಲು ಘಂಟೆಯ ಹೊತ್ತಿನ ವರೆಗೆ ಕಿವಿಯಲ್ಲಿ ತುಂಬಿಡಬೇಕು. ಆಮೇಲೆ ಮೃದುವಾದ "ಸಿಯಾನೈಡ್ ಗಾಜ್" ಎಂಬ ಹತ್ತಿಯನ್ನು ಸಣ್ಣ ಬತ್ತಿಯಾಗಿ ಮಾಡಿ ೨೦ಕ್ಕೆ ಒಂದರಷ್ಟು ಪ್ರಮಾಣದ "ಫರ್ ಕ್ಲೋರೈಡ್ ಆಫ್ ಮರ್ಕ್ಯುರಿ" ದ್ರಾವಕದಲ್ಲಿ ಆ ಬತ್ತಿಯನ್ನದ್ದಿ, ಚೆನ್ನಾಗಿ ಹಿಂಡಿಬಿಟ್ಟು ಅದನ್ನು ಕಿವಿಯೊಳಗೆ ದೂಡಿಡಬೇಕು. ಆಮೇಲೆ ಕಿವಿಯ ಮೇಲುಭಾಗಕ್ಕೆಲ್ಲ ಹತ್ತಿಯಿಂದಾಗಲಿ, ಕುಪಟದಿಂದಾಗಲಿ ಬಿಸಿಬಿಸಿಯಾಗಿ ಒತ್ತನೆ ಕೊಡಬೇಕು. ಕಿವಿಬೇನೆಯು ಆರಂಭಿಸಿದೊಡನೆ ಈ ಚಿಕಿತ್ಸೆ ಮಾಡಬೇಕು. ಇದರಿಂದ ೮ ಅಥವಾ ೧೦ ಘಂಟೆಗಳ ಕಾಲದೊಳಗಾಗಿ ಗುಣವು ಕಾಣದಿದ್ದರೆ, ಅಲ್ಲಿ ಕಟ್ಟಿಯೇಳುವುದೆಂದು ನಿರ್ಧರವಾಗಿ ತಿಳಿಯಬಹುದು. ಆಗ ಹಿಂದೆ ಹೇಳಿದಂತೆ ಡಾಕ್ಟರ ಮೂಲಕವೇ ಆ ವ್ರಣವನ್ನು ಒಡೆಯುವುದಕ್ಕೆ ಪ್ರಯತ್ನಿಸಬೇಕು.

ಆ ಚಂ.

ಶ್ರೀ ಕೇದಾರನಾಥ ಶಿವತತ್ತ್ವಗ್ರಂಥಮಾಲಾಯಾ ದ್ವಿತೀಯಪುಷ್ಪಮ್.

ಶ್ರೀಶೈವಭಾಷ್ಯೋಪೇತ

ಪುರುಷಸೂಕ್ತಮ್.

ಅಯಿ ಶಿವತತ್ತ್ವಜ್ಞಶಿರೋಮಣಯಃ!

ಸುವಿದಿತಮೇವ ಶ್ರೀಮತಾಂ ವಿದುಷಾಮಾಬಾಲವೃದ್ಧಾನಾಂ ವೈದಿಕಾನಾಮಗ್ರಜನ್ಮನಾಂ ಯದ್ವೇದೇಷು ಪ್ರಧಾನತಮಂ ಪುರುಷಸೂಕ್ತಮಿತಿತದೇತತ್ ನಾತಪಾರಾಯಣಾದಿಷು ದ್ವಿಜನ್ಮಮಂದಿರೇಷು ಭಾರತೇ ವಿಪುಲೇ ಸರ್ವತೋ ವರೀವರ್ತೀತಿ. ಗ್ರಂಥೋಯಂ ಯಥಾನುಪತ್ತ್ಯೂರ್ಣಾಸ್ತ್ಯೈವ ಶ್ರೀ ವೃಷಭೇಂದ್ರ ಪಂಡಿತ ಶಿವಾಚಾರ್ಯ ಪ್ರಣೀತಭಾಷ್ಯಮಪಿ ವೈದುಷ್ಯಪ್ರಾಚುರ್ಯೇಣ ವಿರಾಜತೇ ಭಾಷ್ಯಭೂಷಿತ ಮೇತತ್ಸೂಕ್ತಂ ಶ್ರೀ ವೀರಶೈವಸಿದ್ಧಾಂತಸ್ಥಾಪನಾಚಾರ್ಯ ಶ್ರೀ ದಾರುಕಾಚಾರ್ಯ ಧರ್ಮಪೀಠಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಭಗವತ್ಪಾದೈಃ ಪ್ರತ್ಯಹಂ ಶ್ರೀ ರುದ್ರಾಭಿಷೇಕಾದೌ ವಿನಿಯುಜ್ಯತೇ। ಸರ್ವೇಷಾಂ ಶೈವಾನಾಂ ಕಲ್ಯಾಣಾಯ ಶಾಸ್ತ್ರಾಂ ಪಂಡಿತ ಶ್ರೀ ಚಿದ್ಘನಶಿವಾಚಾರ್ಯೇಣ ಸಂಶೋಧ್ಯ ಮುದ್ರಾಪಿತಮೇತತ್ಪುಸ್ತಕಂ ಸಮಾಜಜ್ಞಾಂ (ಆರ್ಡರಾಂ) ಸಂಪ್ರೇಷ್ಯ ಪುಸ್ತಮಾಸ್ವಾದಯಂತು। ಮೂಲ್ಯಮಸ್ಯಾಣಕ್ಕಷ್ಟ ಮಾಣಕ ಚತುಷ್ಟಯಮೇವ ನಿಶ್ಚಿತಮಿತಿ। ರೂಪ್ಯಕಮೇಕಂ ವಿನಾ(ಆರ್ಡರ್) ನಸ್ವೀಕ್ರಿಯತ ಇತಿ ಚ।

ನಿವೇದಕಃ,

ಶ್ರೀ ಕೇದಾರನಾಥ ಶಿವತತ್ತ್ವಗ್ರಂಥಮಾಲಾ ವ್ಯವಸ್ಥಾಪಕಃ

ಪೋ|| ಓಖಿಮಠ ಜಿ. ಗಢವಾಲ, ಯು. ಪಿ.

ಶುದ್ಧವನಸ್ಪತಿಗಳು.

ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತಮಹಾವಿದ್ಯಾಲಯ (ಕಾಲೇಜ)ದ ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದಲ್ಲಿ ದೊರೆಯುತ್ತಿರುವ ಸುಪ್ರಸಿದ್ಧ ಶುದ್ಧವನಸ್ಪತಿಗಳು ದೊರೆಯುತ್ತಿರುವುವು. ಎಲ್ಲಿಯೂ ದೊರೆಯದಿರುವ ಮೇಧಾ, ಮಹಾಮೇಧಾ, ಋದ್ಧಿ, ಸಿದ್ಧಿ, ಜೀವಕ, ಋಷಭಕ ಕಾಕೋಲಿ, ಕ್ಷೀರಕಾಕೋಲಿ (ಅಷ್ಟವರ್ಗೌಷಧಗಳು) ಎಂಬ "ಜಡೀಬೂಟೀ" ವನಮೂಲಿಕೆಗಳು ನಮ್ಮಲ್ಲಿ ದೊರೆಯುವವು. ೧ ತೊಲೆಗೆ ೪ ಆಣೆ ಮಾತ್ರ.

ಶುದ್ಧಶಿಲಾಜಿತ ಎಂಬ ಮಹಾಮಹಾ ರೋಗನಿವಾರಕ ವೀರ್ಯವರ್ಧಕ ರಕ್ತಶೋಧಕ ಗುಣಗಳುಳ್ಳ ಹಿಮಾಲಯದ ಶಿಲೆಗಳಲ್ಲಿ ಜನಿಸುವ ಕೈಲಾಸೀಯ ಮಹೌಷಧರತ್ನವು. ೧ ತೊಲೆಗೆ ೧ ರೂ. ೮ ಆಣೆ.

ವಿಶುದ್ಧಶಿಲಾಜಿತ ೧ ತೊಲೆಗೆ ೩ ರೂಪಾಯಿ.

ಶುದ್ಧ ಕಸ್ತೂರಿ ಹಿಮಾಲಯಪರ್ವತಪ್ರದೇಶಗಳಲ್ಲಿ ಸಂಚರಿಸುವ ಕಸ್ತೂರಿ ಮೃಗಗಳ ನಾಭಿಗಳನ್ನು ಭಿಲ್ಲರು ತರುವರು. ಅದೇ ಪರಿಶುದ್ಧವಾದ ಕಸ್ತೂರಿಯು. ೧ ತೊಲೆಗೆ ೪೦ ರೂಪಾಯಿಗಳಿಂದ ೬೦ ರೂಪಾಯಿಗಳ ವರೆಗಿರುವದು. ಅನೇಕರು ಬೇರೆ ಬೇರೆ ಪದಾರ್ಥಗಳಿಂದ ಮಿಶ್ರವಾದ ಅಶುದ್ಧಕಸ್ತೂರಿಯನ್ನು ಶುದ್ಧಕಸ್ತೂರಿಯೆಂದು ಮೋಸಗೊಳಿಸಿ ಮಾರುತ್ತಿರುವರು. ಅವರ ಮೋಸಕ್ಕೆ ಒಳಗಾಗಬಾರದೆನ್ನುವದೇ ಈ ಮಹೌಷಧಾಲಯದ ಮುಖ್ಯೋದ್ದೇಶವಾಗಿದೆ. ಪೂರ್ವದಲ್ಲಿ ಮಹರ್ಷಿಗಳು ಹಿಮಾಲಯದಲ್ಲಿ ದೊರೆಯುವ ಶುದ್ಧವನಸ್ಪತಿಗಳನ್ನು ಸೇವಿಸಿ ಬಹುಕಾಲ ಜೀವಿಸುತ್ತಿದ್ದರು. ಪಾಶ್ಚಾತ್ಯರೂ ಸಹ ಈ ಹಿಮಾಲಯದಲ್ಲಿ ದೊರೆಯುವ ಮಹೌಷಧಗಳ ಪರಮಫಲವನ್ನು ಪಡೆಯಲಾರಂಭಿಸಿದರು. ಭಾರತೀಯರು ಹಿಮಾಲಯದಲ್ಲಿ ದೊರೆಯುವ ಅಮೂಲ್ಯ ಮಹೌಷಧಿಗಳ ಮಾಹಾತ್ಮ್ಯವನ್ನು ತಿಳಿದುಕೊಂಡು ಸುಖಿಗಳಾಗಲೆಂಬ ಸದುದ್ದೇಶದಿಂದ ಕೇದಾರಪೀಠಾಧಿಪತಿಗಳಾದ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಈ ಮಹೌಷಧಾಲಯವನ್ನು ಸ್ಥಾಪಿಸಿರುವರು.

ಗೃಹಮಾತೆಯು ೧ ಕೊಳೆಯ ಶೀಶೆ ೧ ಕ್ಕೆ ೧೨ ಆಣೆ. [illegible] ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್ ೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಗೊಳಿಸುವುದು.

ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪುಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ

ಪೋಸ್ಟ ಓಖಿಮಠ, ಜಿ|| ಗಢವಾಲ ಯು. ಪಿ.

ಮತ್ತು

ಹಿಮಾಲಯ ಅಷ್ಟವರ್ಗ ಔಷಧಾಲಯ

[56] (೮೪೮) ಗಂಜೀಪೇಟೆ, ಪೂನಾಸಿಟಿ

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಬಿಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಹಾಗೂ ಗಡಿಯಾರದ ಸರದಲ್ಲಿ ಹಾಕಿಕೊಳ್ಳುವದಕ್ಕೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವ ಗುರುಭಕ್ತರೂ ಅವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೫೦ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯು ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[6] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"**ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು**"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಗಳಲ್ಲೆಲ್ಲಾ **ಶಿರೋಮಣಿ !**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [42]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗ್) ಕ್ಕೆಯಿದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ## ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ನಿರಡಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ.] ## ವಜ್ರಾಂಗ ಸುಂದರಪಾಕ. [ಸ್ಟಾರ್

ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಬಲ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪ್ರಮೇಹ, [illegible] ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ಸದ್ದೆಯು ಬಾರದ ನರಿಯಾಗ ಮುಂತಾದ ರೋಗಗಳು ಹೋಗಿ ವಿಶೇಷ [illegible] ಶೀಘ್ರ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ ಧಾರಣಶಕ್ತಿಯು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮೋದ್ದೀಪನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ ತಕ್ಕಷ್ಟು, ತಾಲಿಮಖಂಡ, ಮಧುಕಂಡ, ಅಜಾಶೃಂಗಿ, ರಾಲೀಮಲೀಕಂಡ, ಅಶ್ವಕಂಡ, ಕ್ರೌಂಚಕಂಡ, ಮುಸಳೀಕಂಡ ಸೇಮಲೀಕಂಡ, ದ್ವೀಪಾಂತರವಚಾಕಂಡ, ಕನಚಬೀಜ, ಸಮುದ್ರಶೋಕಬೀಜ, ಕರಬೀಜ, ನಾಗಬೀಜ, ತಾಳಬೀಜ, ಘೋಕರೀಬೀಜ, ನವಲಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಶಮಿಪತ್ರಿ, ಪಿಶಾಪತ್ರಿ, ಮಬನಮಸ್ತ, ರತನಪುರುಷ, ಕಮರಕಸ, ಕಥಿನ್ಯಾಗೊಂದ, ಪಂಚಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಳೀ, ಬೀಜಬಂದ, ಹರಣಖೋರಿ, ಮುಂಗಲೀ ಬೀದಾಣೆ, ಮರ್ದಾಕೋಳ್ಗೆ, ಶತಾವರಿ, ಸತೀಗಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೀಜ, ಅಮ್ಮತಸತ್ವ, ಇಸಬಗೋಲ ಭುಸ, ಅಮಳಕಾಟ, ಸಿಂಜಿಗ, ಜಾಯಿಕಾಯಿ, ರೂಮಿಮಸ್ತಕಿ, ವಂಶಲೋಚನ, ಪದಧಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು.

[46]

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟೀ, ಜಿಕ್ಕ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರದರೋಗ, ದಟ್ಟಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ನಿರಡಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಮ್. ಹೊಸಮನೆ,

[35] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿಪಿ. ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್

[47] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ ನೇ ಜೂನ್ ೧೯೩೦ [ಸಂಚಿಕೆ ೫.

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ಮ|| ರಾ|| ಅಕ್ಕಿ ಸಣ್ಣಚನ್ನಬಸಪ್ಪನವರ ಪುತ್ರಿ ಚಿ|| ಸೌ|| ಗಂಗಮ್ಮನನ್ನು ಮ|| ರಾ|| ಅಮ್ಮನಕೇರಿ ಶೆಟ್ಟಿ ಸಿದ್ಧಲಿಂಗಪ್ಪನವರ ಪುತ್ರ ಚಿ|| ಹುಲ್ಲುಬಸಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 3 ರೂ. ಸದರೀ ಗ್ರಾಮದ ಮ|| ರಾ|| ಕರ್ಲಿ ಅಜ್ಜಪ್ಪನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ಸೊಕ್ಕೆ ಮ|| ರಾ|| ಅಲಬೂರು ಲಿಂಗಪ್ಪನವರ ಪುತ್ರ ಚಿ|| ಕೊಟ್ರಬಸಪ್ಪನಿಗೆ ಕೊಟ್ಟು ನಿಶ್ಚಯ ಮಾಡಿದ ಸಮಯದಲ್ಲಿ 2 ರೂ. ಸದರೀ ಗ್ರಾಮದ ಭಾವಿಕಟ್ಟಿ ಬಸಪ್ಪನವರ ಪುತ್ರಿ ಸೌ|| ಚನ್ನಮ್ಮನನ್ನು ಮ|| ರಾ|| ಜವಳಿ ನಾಗಪ್ಪನವರ ಪುತ್ರ ಚನ್ನಬಸಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಸದರಿ ಗ್ರಾಮದ ಮ|| ರಾ|| ಕರ್ಲಿಲಿಂಗಪ್ಪನವರ ಪುತ್ರಿ ಸೌ|| ಶಾಂತಮ್ಮನನ್ನು ಸೊಕ್ಕೆ ಮಲ್ಲಪ್ಪನವರ ಪುತ್ರ ಗಿರಿಯಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಸದರಿ ಗ್ರಾಮದ ವೇ|| ಬಾನುಕೋಟಿ ಮಠದ ಶಿವಯ್ಯನಿಗೆ ಹರಪನಹಳ್ಳಿ ಶಂಕರೋಡಿ ವೀರಾಪಪ್ಪನವರ ಪುತ್ರಿ ಚಿ|| ಸೌ|| ಕೊಟ್ರಮ್ಮನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಮ|| ರಾ|| ಕೊಟ್ಟೂರು ಚಟ್ಟಿರಿಕೆ ಶಿವಬಸಪ್ಪನವರ ಪುತ್ರಿ ಸೌ|| ಶಾಂತಮ್ಮನನ್ನು ಹಿರೇಹಡಗಲಿ ಶಿವಪುರದ ವೀರಪ್ಪನವರ ಪುತ್ರ ಗುರುಬಸಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಸದರಿ ಗ್ರಾಮದ ಆಗಡಿ ಹಿರೇಮಠದ ವೇ|| ಗುರುಸಿದ್ಧಯ್ಯನವರ ಪುತ್ರಿ ಸೌ|| ಚಂದ್ರಮ್ಮನನ್ನು ಹೊಳಗುಂದಿ ಹಿರೇಮಠದ ವೇ|| ದೊಡ್ಡಯ್ಯನವರ ಪುತ್ರ ಚಿ|| ಮಹಾಲಿಂಗಯ್ಯನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 3 ರೂ. ಒಟ್ಟು 17 ರೂ. ಗಳು ವೇ|| ಮಿ|| ಜಾಗಟಗೇರಿ ಚನ್ನಬಸಯ್ಯನವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾ|| ಸೆಟ್ಟೂರು ಗ್ರಾಮದ ವೇ|| ನಾರಕಂಠಮಠದ ಚಂದಯ್ಯನವರ ಪುತ್ರ ಚಿ|| ಶಂಕರಯ್ಯನೆಂಬ ವಟುವಿಗೆ ವೈಶಾಖ ಬಹುಳ ೧೦ ದಿವಸ ನೆರವೇರಿಸಿದ ಮಾಹೇಶ್ವರ ದೀಕ್ಷಾ ಸಮಯದಲ್ಲಿ ಸಮರ್ಪಿಸಿದ 5 ರೂ. ಗಳು ಹಾಗೂ ಸದರಿ ಗ್ರಾಮದ ವಿರಕ್ತಮಠದ ವೇ|| ನಂಜುಂಡಶಾಸ್ತ್ರಿಗಳವರ ಪುತ್ರ ಚಿ|| ಮಹಾದೇವಯ್ಯನೆಂಬ ವಟುವಿಗೆ ವೈಶಾಖ ಬಹುಳ ೭ ದಿವಸ ನೆರವೇರಿಸಿದ ದೀಕ್ಷಾ ಸಮಯದಲ್ಲಿ ಸಮರ್ಪಿಸಿದ 4 ರೂ. ಗಳು ಮತ್ತು ಒಂದು ಎತ್ತಿಗೆ ಪ್ರಾಪ್ತವಾಗಿದ್ದ ರೋಗವು ಜಗದಾಚಾರ್ಯರ ಪ್ರಾರ್ಥನೆಯ ಮೇರೆಗೆ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ಒಟ್ಟು 10 ರೂ. ಗಳು ವೇ|| ವಿರಕ್ತಮಠದ ನಂಜುಂಡಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹಂಪಸಾಗರ ಗ್ರಾಮದ ಮ|| ರಾ|| ಬೆಲ್ಲದ ಶರಪ್ಪನವರಿಗೆ ಕೊಪ್ಪಳದ ಮ|| ರಾ|| ಲಿಂಗಲಬಂಡಿ ಬಸೆಟ್ಟೆಪ್ಪನವರ ಪುತ್ರಿ ಸೌ|| ಕೊಟ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಮ|| ರಾ|| ಶೆಟ್ರಿ ಸರೂರ ಶರಣಪ್ಪನವರ ಅಭಿಪ್ರಾಯದಮೇರೆಗೆ ವರನಕಡೆಯಿಂದ ಸಮರ್ಪಿಸಿದ 5 ರೂ. ವಧುವಿನ ಕಡೆಯಿಂದ ಸಮರ್ಪಿಸಿದ 2 ರೂ. ಒಟ್ಟು 7 ರೂ. ಗಳು ಮ|| ರಾ|| ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿಕಾರಿಪುರ ತಾಲೂಕು ಗಾಮದ ಆರಾಧ್ಯಮಠದ ವೇ|| ಜುಮ್ಮಯ್ಯನವರ ತಮ್ಮಂದಿರಾದ ಬಸವಲಿಂಗಪ್ಪಗೌಡರ ಪುತ್ರ ಚಿ|| ತೋಟಪ್ಪಯ್ಯನಿಗೆ ಧಾರವಾಡ ಡಿ|| ನಾಗವಂದ ಹಿರೇಮಠದ ವೇ|| ಶಿವಲಿಂಗಪ್ಪಯ್ಯನವರ ಪುತ್ರಿ ಸೌ|| ವೀರಬಸಮ್ಮನನ್ನೂ ಹಾಗೂ ಅಗ್ರಜರಾದ ಮ|| ರಾ|| ನಾಗಲಿಂಗಪ್ಪಗೌಡರ ಪುತ್ರ ಚಿ|| ಸಿದ್ಧಲಿಂಗಪ್ಪಯ್ಯನಿಗೆ ಚಿಕ್ಕ ಜೋಗೀಹಳ್ಳಿಮಠದ ಕಾಮಭೋಗ ವೇ|| ಶಾಂತಪ್ಪಯ್ಯನವರ ಪುತ್ರಿ ಸೌ|| ಶಾಂತಮ್ಮನನ್ನೂ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 5 ರೂ. ಗಳು ವೇ|| ಮಾಸೂರು ಹಿರೇಮಠದ ಚನ್ನವೀರಾರಾಧ್ಯಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾಲೂಕು ಹರವಿನ ಗುಂಡಿ ಮ|| ರಾ|| ಪುಟ್ಟೇಗೌಡರ ಪುತ್ರಿ ಸೌ|| ಸಿದ್ಧಮ್ಮನನ್ನು ಎಲಗೋಡಿಗೆ ಮ|| ರಾ|| ಅಣ್ಣೇಗೌಡರ ಪುತ್ರ ಚಿ|| ಅಣ್ಣೇಗೌಡನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ. ಹಾಗೂ ಆಲ್ದೂರು ಹೋಬಳಿ ಸತ್ತೀಹಳ್ಳಿ ಮ|| ರಾ|| ಪುಟ್ಟಸ್ವಾಮಿಗೌಡರ ಪುತ್ರಿ ಸೌ|| ಲಿಂಗಮ್ಮನನ್ನು ಹಾಂದಿಪಟೇಲ್ ಮ|| ರಾ|| ತಿಮ್ಮೇಗೌಡರ ಪುತ್ರ ಚಿ|| ದ್ಯಾವೇಗೌಡನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಸಮರ್ಪಿಸಿದ 2 ರೂ. ಒಟ್ಟು 4 ರೂ. ಗಳು ಮ|| ರಾ|| ಕೆಳಗೂರು ವೀರಪ್ಪಗೌಡರವರ ದ್ವಾರಾ ತಲ್ಪಿರುತ್ತವೆ.

ತುಂಕೂರು ಟೌನ್ನಲ್ಲಿರುವ ಮ|| ರಾ|| ಬೆಳ್ಳಾವಿ ಹುಚ್ಚವೀರಪ್ಪನವರ ಪುತ್ರ ಚಿ|| ವೀರಪ್ಪನಿಗೆ ಮೈಸೂರುದೇಶದ ಶೆಟ್ಟಿಕೋರಿ ಚಂ|| ಬಸವಪ್ಪಶೆಟ್ಟರ ಪುತ್ರಿ ಚಿ|| ಸೌ|| ರೇವಮ್ಮಯನ್ನು ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 4 ರೂ. ಗಳು. ಮ|| ರಾ|| ಬೆಂಗಳೂರುದೇಶದ ಶೆಟ್ರು ಸಿದ್ಧಬಸವಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಚಿಳವಣಿಕಿಗ್ರಾಮದ ಮ|| ರಾ|| ಶಿರೋಳ ವೀರಪ್ಪನವರ ಪುತ್ರ ಚಿ|| ತಿರುಕಪ್ಪನಿಗೆ ಗಂಗಾಪುರಗ್ರಾಮದ ಮ|| ರಾ|| ಮಲ್ಲಾಪುರದ ಬಸಪ್ಪನವರ ಪುತ್ರಿ ಸೌ|| ವೆಂಕಮ್ಮನನ್ನೂ, ಹಾಗೂ ಶಿರೋಳಗ್ರಾಮದ ಮ|| ರಾ|| ತಿರಕನಗೌಡರ ನಾಗಪ್ಪನವರ ಪುತ್ರ ಚಿ|| ವೀರಪ್ಪನಿಗೆ ಮೇಲ್ಕಂಡ ಮಲ್ಲಾಪುರದ ಬಸಪ್ಪನವರ ಪುತ್ರಿ ಸೌ|| ಬಸಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 3½ ರೂ. ಗಳು ವೇ|| ಶಿರೋಳ ಹಿರೇಮಠದ ಪಂಚಾಕ್ಷರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಗದಗ ಶಹರದಲ್ಲಿರುವ ಮ|| ರಾ|| ಉಮಚಿಗಿ ರುದ್ರಗೌಡರ ಸಹೋದರ ಚಿ|| ಲಿಂಗನಗೌಡನಿಗೆ ಜಕ್ಕಲಿಗ್ರಾಮದ ಮ|| ರಾ|| ಪಾಟೀಲ ಬಾಲಪ್ಪಗೌಡರ ಪುತ್ರಿ ಸೌ|| ಕಳಕಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನು ಸಮರ್ಪಿಸಿದ 2 ರೂ. ವಧುವು ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ಮುಳಗುಂದ ಹಿರೇಮಠದ ವೇ|| ಪುರದಯ್ಯನವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಬಾಣಾವಾರ ಹಿರೇಮಠದ ವೇ|| ವೀರಭದ್ರಸ್ವಾಮಿಯವರ ಜ್ಯೇಷ್ಠ ಪುತ್ರ ಓಂಕಾರಪ್ಪನಿಗೆ ಮುಸಕನೂರು ಮಠದ ವೇ|| ಸಣ್ಣನಂಜಪ್ಪದೇವರ ಬಸಪ್ಪದೇವರ ಪುತ್ರಿ ಸೌ|| ದೊಡ್ಡಮಹಾದೇವಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಹಾಗೂ ಸದರಿಯವರ ಶಿಷ್ಯರಾದ ದಾವಣಗೇರಿ ಪಾನಾವಳಿ ವೀರಮ್ಮ ನಂಜಪ್ಪ ಇವರು ತಮ್ಮ ಗುರುಗಳ ಶ್ರೇಯಃಪ್ರಾರ್ಥನೆಗಾಗಿ ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು ಜ|| ಶಂ|| ಭ|| ಸೆಕ್ರೆಟರಿ ಸಜ್ಜನಶೆಟ್ಟಿ ವಿರೂಪಾಕ್ಷಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಬೆಟಗೇರಿಯಲ್ಲಿರುವ ಮ|| ರಾ|| ಕುಯಿಲಗೋಳ ಲಿಂಗಪ್ಪನವರ ಪುತ್ರಿ ಸೌ|| ಚನ್ನಮ್ಮನನ್ನು ಮುಳಗೂಂದಗ್ರಾಮದ ಮ|| ರಾ|| ಬಂಡಿ ಸಿದ್ಧಪ್ಪನವರ ಪುತ್ರ ಚಿ|| ರಾಮಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದ ಸಮಯದಲ್ಲಿ ಮ|| ರಾ|| ಗದಗಿನ ಚನ್ನಬಸವಪ್ಪನವರು ವರನ ಕಡೆಯಿಂದ ಸಮರ್ಪಿಸಿದ 2 ರೂ. ವಧುವಿನ ಕಡೆಯಿಂದ ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ಮ|| ರಾ|| ನಾಲಪ್ಪಗೌಡಾ ಹಿರೇಮನಿ ಪಾಟೀಲ ಇವರ ದ್ವಾರಾ ತಲ್ಪಿರುತ್ತವೆ.

ಗದಗಶಹರದ ಮ| ರಾ| ತಳಗಲ್ಲ ರಾಚಪ್ಪನವರ ಪುತ್ರ ಚಿ| ವೀರಪ್ಪನಿಗೆ ಮ| ರಾ| ಗುಗ್ರಿ ವೀರಪ್ಪನವರ ಪುತ್ರಿ ಸೌ| ವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2-6-0 ಗಳು ಮ| ರಾ| ವಿಲೇಜ್ ಮರ್ಚಂಟ್ ಸಿಫರಾದ ಬೆಂಗಿನಕಾಯಿ ಗುರಪ್ಪನವರ ದ್ವಾರಾ ತಲ್ಪಿರುತ್ತವೆ.

ಗದಗ ಶಹರನಿವಾಸಿಗಳಾದ ಮ|| ರಾ|| ತಳಕಲ್ಲ ರಾಚಪ್ಪನವರ ಪುತ್ರಿ ಸೌ| ಗುರುಶಾಂತಮ್ಮನನ್ನು ಗಂಗಾವತಿ ಗ್ರಾಮದ ಮ| ರಾ| ಗುಂಜಳ್ಳಿ ಸಣ್ಣನಾಗಪ್ಪನವರ ಪುತ್ರ ಚಿ| ಪಂಪ್ಪಣ್ಣಪ್ಪನಿಗೆ ಕೊಟ್ಟು ನೆರವೇರಿಸಿದ ನಿಶ್ಚಯಸಮಯದಲ್ಲಿ ವರನ ಕಡೆಯಿಂದ ತೆಗೆಯಿಸಿದ 2 ರೂ. ಗಳು ಶ್ರೀ ಷ|| ಬ್ರ|| ಪ್ರಭುದೇವರ ಮಠದ ಪಟ್ಟದಸ್ವಾಮಿಗಳವರ ದ್ವಾರಾ [illegible]ರುತ್ತವೆ.

ಗದಗ ತಾಲೂಕು ಮುಳಗುಂದ ಹಿರೇಮಠದ ವೇ|| ಪಟ್ಟದಯ್ಯನವರು ತಮ್ಮ ಪುತ್ರ ಚಿ|| ಸಿದ್ಧಲಿಂಗಯ್ಯನ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಟೌನ್ ನಿವಾಸಿಗಳಾದ ಮ|| ರಾ|| ಸವದತ್ತಿ ಮುಳಗೆಪ್ಪಣ್ಣನವರು ತಮ್ಮ ಪುತ್ರಿಯ ನಿಶ್ಚಯಪ್ರಸ್ತದಲ್ಲಿ ಪ್ರಭಾ[illegible]ಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀ|| ಷ|| [illegible]ಗೇರಿ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ [illegible]

ರಾಯಚೂರು ತಾಲೂಕು ಕುಕನೂರು ಹಿರೇಮಠದ ವೇ|| ರೂಳಯ್ಯನವರು ತಮ್ಮ ಪಾತ್ರನ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ದಾವಣಗೇರಿ ಜಯಲಕ್ಷ್ಮಿ ನಾಟಕ ಕಂಪೆನಿಯ ಮ್ಯಾನೇಜರಾದ ಮ|| ರಾ|| ಕಂಚಿಕೇರಿ ಕೊಟ್ರಬಸಪ್ಪನವರಿಗೆ ಮ|| ರಾ|| ಹಮ್ಮಿಗಿ ಗುರುಭಕ್ತರೆಸರಿಯವರು ರೇಣುಕವಿಜಯಗ್ರಂಥವನ್ನು ನಾಟಕರೂಪವಾಗಿ ಆಡಲು ಉಚಿತವಾಗಿ ಕೊಟ್ಟ ಸಂತೋಷಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಕೊಟ್ಟೂರು ಗ್ರಾಮದ ವೇ|| ಪ್ರಭುವದೇವರ ಮಠದ ಮರುಳಸಿದ್ಧಯ್ಯನವರು ತಮ್ಮ ವಿವಾಹ ಸಮಯದಲ್ಲಿ 1-8-0 ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಡಿ|| ಸಿಗ್ಗಲಿ ಹಿರೇಮಠದ ಚನ್ನಯ್ಯನ ಮತ್ತು ಅಡಿವಮ್ಮ ಈ ಉಭಯರ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಲಕ್ಷ್ಮೇಶ್ವರ ಹಿರೇಮಠದ ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ತುಂಕೂರು ಮಂಡಿ ಜಿ. ಎಸ್. ಅಂಕಲೀಶಯ್ಯನವರ ಪುತ್ರಿ ಸೌ|| ಪಾರ್ವತಮ್ಮನನ್ನು ಸದರಿ ಗ್ರಾಮದ ಮ|| ರಾ|| ಸಿ. ಎಚ್. ಸಿದ್ಧಪ್ಪಯ್ಯನವರ ಪುತ್ರ ಚಿ|| ಸಿದ್ಧಲಿಂಗಪ್ಪನವರಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಮೈಸೂರು ದೇಶದ ಶೆಟ್ರು ಕೋರಿ ಚಂ|| ಬಸಪ್ಪಶೆಟ್ಟರ ದ್ವಾರಾ ತಲ್ಪಿರುತ್ತದೆ.

ಕಪ್ಪಲಿಗ್ರಾಮದ ಮ|| ರಾ|| ಮುದುಕನಗೌಡರ ದೇವಗೌಡರ ಪುತ್ರ ಚಿ|| ತಮ್ಮನಗೌಡನಿಗೆ ಕೊಣ್ಣೂರು ತಿಮ್ಮರಡ್ಡೆಪ್ಪನವರ ಪುತ್ರಿ ಸೌ|| ಗಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಪಂಚಾಕ್ಷರ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಹರಪನಹಳ್ಳಿಯಲ್ಲಿ ನೆರವೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವದ ಸಮಯದಲ್ಲಿ ಭಜನಾಸಂಘದವರು ಸಮರ್ಪಿಸಿದ 1 ರೂ. ಯು ಜಿ. ಎಸ್. ಕಾಳಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂ.—

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀ ಕೇದಾರನಾಥ ಸನಾತನಧರ್ಮ ಮಹಾ ವಿದ್ಯಾಲಯ (ಸಂಸ್ಕೃತ ಕಾಲೇಜ) ಪಂಚಮವಾರ್ಷಿಕಾಧಿವೇಶನ, ಆಯುರ್ವೇದಸಮ್ಮೇಲನ, ಕವಿಸಮ್ಮೇಲನ.

ಶ್ರೀ ಹಿಮವತ್ಕೇದಾರ ಮಹಾಸಂಸ್ಥಾನ ಉಷಾಮಠದಿಂದ ಭರತಖಂಡದ ಸಮಸ್ತ ಸನಾತನಧರ್ಮಪ್ರೇಮಿಗಳಿಗೂ ಶ್ರೀ ಪಂಡಿತವರ್ಯರಿಗೂ ಛಾತ್ರಗಣಕ್ಕೂ ಶ್ರೀಮಂತ ಶ್ರೇಷ್ಠಿ ಸಾಹುಕಾರ ಮುಂತಾದ ಮಹಾಶಯರಿಗೂ ಈ ಮೂಲಕ ಶ್ರುತಪಡಿಸುವುದೇನಂದರೆ—ಅಸ್ತಿಕದರ್ಶನ (ಶಾಸ್ತ್ರ) ಗಳಲ್ಲಿ ನಿಗಮಾಗಮ ಪುರಾಣೇತಿಹಾಸ ಪ್ರಸಿದ್ಧವಾದ ಶಕ್ತಿ ವಿಶಿಷ್ಟಾದ್ವೈತ (ವೀರಶೈವ) ಸಿದ್ಧಾಂತವನ್ನು ಸ್ಥಾಪಿಸಿದ ಶ್ರೀ ೧೦೮ ಜಗದ್ಗುರು ಘಂಟಾಕರ್ಣ ಶಿವಾಚಾರ್ಯರು ಭೂಮಂಡಲದಲ್ಲಿ ಶಿವಲಿಂಗಮುಖದಿಂದ ಅವತರಿಸಿ ಹಿಮವತ್ಕೇದಾರ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿರುವದು ಜಗದ್ವಿಖ್ಯಾತವಾಗಿದೆಯಷ್ಟೆ! ಇಂಥ ದುರ್ಗಮ ಪ್ರದೇಶದಲ್ಲಿ ಅಧಿಪತ್ಯವನ್ನು ಸ್ಥಿರಗೊಳಿಸಿರುವುದು ಪ್ರಮಥರ ಅಘಟಿತ ಘಟನ ಸಾಮರ್ಥ್ಯದ್ಯೋತಕವಾಗಿದೆ. ಈ ಪೀಠಾಧಿಪತ್ಯವನ್ನು ಸುಮಾರು ೮ ವರ್ಷಗಳಿಂದ ವಹಿಸಿದ ಕರ್ನಾಟಕದಲ್ಲಿ ಜನ್ಮವೆತ್ತಿದ ವೀರಮಾಹೇಶ್ವರಾಗ್ರಗಣ್ಯ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಭಗವತ್ಪಾದರ ಪ್ರಭಾವದಿಂದ ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಈ ಪೀಠವು ಹೆಚ್ಚು ಪ್ರಸಿದ್ಧಿಯಾಗಿರುವುದು ಸರ್ವಜನ ವಿದಿತವೇ ಆದೆ. ಈ ಜಗದ್ಗುರುಗಳು ಪೀಠಾರೋಹಣ ಮಾಡಿ ಕರ್ನಾಟಕದ ದೇಶವಾದ ಬಳ್ಳಾರಿ ಪ್ರಾಂತದಲ್ಲಿ ಮೊಟ್ಟಮೊದಲು ದಿಗ್ವಿಜಯ ಮಾಡಿ ಲೇಟ್ ಶ್ರೀ ೧೦೮ ಜಗದ್ಗುರು ವಿಶ್ವಲಿಂಗ ಶಿವಾಚಾರ್ಯ ಭಗವತ್ಪಾದಾಚಾರ್ಯವಾದರ ಕಾಲದಲ್ಲಿದ್ದ ವಿಶೇಷವಾದ ಋಣವನ್ನು ಪರಿಹರಿಸಿದರು. ಬಳ್ಳಾರಿ ವಿದ್ಯಾಫಂಡಿಗೆ ೧೦ ಸಾವಿರಕ್ಕೆ ಮೇಲ್ಪಟ್ಟು ಧನವನ್ನೂ ಹಾಗೂ ಮಂದಿರಗಳನ್ನೂ ಸಹಾಯಮಾಡಿದ್ದಾರೆ. ತಮ್ಮ ಸಂಸ್ಥಾನವನ್ನಂತೂ ಬಹಳ ಅಭಿವೃದ್ಧಿಗೆ ತಂದರು. ಪಂಚಾಚಾರ್ಯಪ್ರಭಾ ಪತ್ರಿಕೆಗೆ ೫ ಸಾವಿರ ರೂಪಾಯಿಗಳನ್ನು ಸಹಾಯಮಾಡಿ ಧರ್ಮಪ್ರಭಾವವನ್ನು ಲೋಕದಲ್ಲಿ ಪ್ರಚಾರಗೊಳಿಸಿದರು. ಇನ್ನು ನೈಜಾಮದಲ್ಲಿ ಈಗಲೂ ತಮ್ಮ ದಿಗ್ವಿಜಯವನ್ನು ಮಾಡುತ್ತಲೇ ಇದ್ದು ಅಲ್ಲಿಯೂ ವಿದ್ಯಾಫಂಡಿಗೆ ಸಹಾಯ ಮಾಡುತ್ತಿರುವರು. ಈ ಹಿಮಾಲಯ ಪ್ರದೇಶವು ಸದ್ಯ ಬಹಳ ಹಿಂದು ಬಿದ್ದಿದ್ದು ಶ್ರೀ ಜಗದಾಚಾರ್ಯರ ಕೃಪಾಬಲದಿಂದ ಸ್ಕೂಲ್, ಮಿಡಲ್‌ಸ್ಕೂಲ್, ಸಂಸ್ಕೃತ ವಿದ್ಯಾಲಯ, ಆಯುರ್ವೇದ ವಿದ್ಯಾಲಯ, ಸ್ಥಾಪನೆಗಳ ದ್ವಾರಾ ಸರ್ವತೋಮುಖವಾಗಿ ಉನ್ನತಸ್ಥಿತಿಯನ್ನು ಪಡೆಯುತ್ತಲಿದೆ. ಆ ಮಹಾಕಾರ್ಯಗಳಲ್ಲೊಂದಾದ ಮಹಾವಿದ್ಯಾಲಯದ ಪಂಚಮಾಧಿವೇಶನವು ಶ್ರೀ ಜಗದ್ಗುರು ಮಹಾಸಂಸ್ಥಾನದ ದರಬಾರದಲ್ಲಿ ಈ ಕೆಳಗೆ ಕಂಡ ಮೇರೆಗೆ ನೆರವೇರುವುದು. ಆದಕಾರಣ ಸಮಸ್ತ ವಿದ್ಯಾಪ್ರೇಮಿಗಳು ತಮ್ಮ ತಮ್ಮ ಸಮ್ಮತಿಯನ್ನು ಪತ್ರದ್ವಾರಾ ಅಥವಾ ಶುಭಾಗಮನ ದ್ವಾರಾ ತಿಳಿಸಿ ಈ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ನಿವೇದನವು.

ಕಾರ್ಯಕ್ರಮ.

ತಾ|| ೧-೬-೩೦ ನೆಯ ದಿವಸ ಪ್ರಾತಃಕಾಲ ೮ ಘಂಟೆಗೆ ಹವನ, ವೇದಪಾಠ, ಮಧ್ಯಾಹ್ನ ೨ ಘಂಟೆಗೆ ಸಭಾಕಾರ್ಯ ಪ್ರಾರಂಭ, ಶಾಂತಿಪಾಠ, ಸಭಾಪತಿ ನಿರ್ವಾಚನ, (ಪಂ|| ಧನಶ್ಯಾಮದಿವರಿ ವಕೀಲ್ ಚಮೋಲಿ.)

೧. ಭಜನ, ೨. ಸಂಸ್ಕೃತ ವಿದ್ಯಾಲಯ (ಸಂಸ್ಕೃತ ಕಾಲೇಜ) ಉದ್ದೇಶವರ್ಣನ, ೩. ವಾರ್ಷಿಕರಿಪೋರ್ಟ, ೪. ಪರೀಕ್ಷೋತ್ತೀರ್ಣ ಛಾತ್ರಗಣಕ್ಕೆ ಪಾರಿತೋಷಿಕವಿತರಣ, ೫. ವ್ಯಾಖ್ಯಾನ ಪ್ರಸ್ತಾವ ವಗೈರೆ.

ತಾ|| ೨-೬-೩೦ ನೆಯ ದಿವಸ ಪ್ರಾತಃಕಾಲ ಆಯುರ್ವೇದಿಕ ಸಮ್ಮೇಲನ.

೧. ಮಂಗಲಾಚರಣ, ೨. ಸಭಾಪತಿ ನಿರ್ವಾಚನ (ಪಂ|| ಚಿದಾನಂದವೈದ್ಯಭೂಗೊರಾ-ಬಾಮಸಾ), ೩. ಹಿಮಾಲಯದ ಪ್ರಸಿದ್ಧ ವನಸ್ಪತಿಗಳ ಪ್ರದರ್ಶನ, ೪. ಆಯುರ್ವೇದ ವಿಷಯಕ ಭಾಷಣ ಪ್ರಸ್ತಾವ. ಮಧ್ಯಾಹ್ನ ೨ ಘಂಟೆಯಿಂದ ಕವಿಸಮ್ಮೇಲನ. ಸಭಾಪತಿ (ಪಂ|| ಚಿದ್ಘನಶಿವಾಚಾರ್ಯರು ಕಾಶೀ)

೧. ಮಂಗಲಾಚರಣ, ೨. ಸಭಾಪತಿನಿರ್ವಾಚನ, ೩. ಸಮಸ್ಯಾಪೂರ್ತಿ (ಹಿಂದೀ) ನಿಜಜಹಾಸುಖಶಾಂತಿಬನೀರಹೆ | ಧರ್ಮ ಸನಾತನಮಾನರಿ || ಸಮಸ್ಯಾಪೂರ್ತಿ (ಸಂಸ್ಕೃತ) ಭವ್ಯಂ ಭಾರತಭೂತಲಮ್ ೨ ಕೇದಾರಪೀಠಂ ಜಯೇತ್.

ನಿಬಂಧಗಳು—೧. ಮೂರ್ತಿಪೂಜಾ. ೨. ಸಂಸ್ಕೃತಭಾಷಾ. ೩. ಹಿಂದೀಭಾಷಾ. ಇತ್ಯಾದಿ ಕಾರ್ಯಕ್ರಮಾನುಸಾರವಾಗಿ ಈ ಅಧಿವೇಶನವು ಬಹು ವೈಭವಪೂರ್ವಕವಾಗಿ ಜರುಗುವುದು. ಹಿಮಾಲಯ ಜಡೀಬೂಟಿ (ವನಸ್ಪತಿಗಳ) ಪ್ರದರ್ಶನವಿದ್ದುದರಿಂದ ಈ ಕಾಲದಲ್ಲಿ ಅಪೂರ್ವ ಅಪರಿಚಿತ ವನಸ್ಪತಿಗಳ ಪರಿಚಯವು ಆಗುವದು. ಯಾರು ಯಾವ ವಿಷಯದಲ್ಲಿ ಉತ್ತೀರ್ಣರಾಗುವರೋ ಅವರಿಗೆ ಉಪಾಧಿಪ್ರದಾನವಾಗುವುದು. ಆದಕಾರಣ ಇಚ್ಛೆಯುಳ್ಳವರು ಮೇಲ್ಕಂಡ ವಿಷಯಗಳ ಮೇಲೆ ನಿಬಂಧ ಹಾಗೂ ಸಮಸ್ಯಾಪೂರ್ತಿಗಳನ್ನು ಬರೆದು ಕಳುಹಿಸಬಹುದು. ಅಥವಾ ಸಮಕ್ಷಮ ಉಪಸ್ಥಿತರಾಗಬಹುದು. ಕಳೆದ ವರ್ಷದ ವಿದ್ವಾಂಸರಿಗೆ ಸ್ವರ್ಣಪದಕವಿತರಣವಾಗುವುದು. ಆದ್ದರಿಂದ ಈ ಅಪೂರ್ವ ಅಧಿವೇಶನದಲ್ಲಿ ವಿದ್ಯಾಧರ್ಮಾಭಿಮಾನಿಗಳು ಭಾಗವಂ ಗ್ರಹಿಸಬೇಕಾಗಿ ಸೂಚನೆ.

ಧ್ಯಾನಸಿಂಹಪ್ರಧಾನ,
ಶ್ರೀ ಕೇದಾರನಾಥ ಧರ್ಮಮಹಾವಿದ್ಯಾಲಯ,
(ಸಂಸ್ಕೃತಕಾಲೇಜು)
ಪೋ|| ಓಖಿಮಠ ಡಿ|| ಗಢವಾಲ, ಯು. ಪಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸನ್ಮಾರ್ಗದಲ್ಲಿ ನಡೆಯಬೇಕು.

ಚರಾಚರಾತ್ಮಕವಾದೀಪ್ರಪಂಚ ಸ್ಥಿತಿಯು ಒಂದೇ ವಿಧವಾಗಿರದೆ ಮೂಲಧರ್ಮವು ಉನ್ನತಿ ಮತ್ತು ಅವನತಿಯನ್ನು ಹೊಂದುತ್ತಿರುವುದು ಸಕಲರಿಗೂ ತಿಳಿದ ಅಂಶವೇ ಆಗಿದೆ. ಧರ್ಮೋನ್ನತಿಗೆ ವಿಚಾರವೂ ಅವನತಿಗೆ ಅವಿಚಾರವೂ ಮೂಲಕಾರಣಗಳಾಗಿವೆ. ಪ್ರಪಂಚದಲ್ಲಿರತಕ್ಕ ಸಕಲ ಜೀವರಾಶಿಗಳೊಳಗೂ ಮಾನವನೇ ಶ್ರೇಷ್ಠನಾಗಿದ್ದಾನೆ. ಇವನಿಗಿರತಕ್ಕ ಜ್ಞಾನಾಧಿಕ್ಯವೇ ಇವನ ಶ್ರೇಷ್ಠತ್ವಕ್ಕೆ ಕಾರಣವಾಗಿರುತ್ತದೆ. ಇನ್ನುಳಿದ ಪ್ರಾಣಿವರ್ಗದಂತೆ ಮೌಢ್ಯದಿಂದ ನಡೆಯದೆ ವಿವೇಕದಿಂದ ನಡೆದು ದೈವಕೃಪೆಗೆ ಪಾತ್ರನಾಗುವುದೇ ಮನುಷ್ಯನ ಮುಖ್ಯಧರ್ಮವಾಗಿರುತ್ತದೆ. ಈ ಮಾನವವರ್ಗಕ್ಕೆ ಜಗನ್ನಿಯಾಮಕನು ಜ್ಞಾನವನ್ನಾಶೀರ್ವದಿಸಿ ಆ ಜ್ಞಾನವನ್ನು ಪ್ರಯೋಗಿಸತಕ್ಕ ವಿಧಾನವನ್ನು ವೇದಾಗಮಾದಿ ಶಾಸ್ತ್ರಗಳ ಮೂಲಕ ತಿಳುಹಿಸಿರುತ್ತಾನೆ. ಪ್ರತಿಯೊಬ್ಬ ಮಾನವನೂ ಜಗತ್ಕರ್ತನ ಇಚ್ಛೆಗೆ ವಿರೋಧವಿಲ್ಲದಂತೆ ಸನ್ಮಾರ್ಗದಲ್ಲಿ ನಡೆಯಬೇಕಾಗಿರುತ್ತದೆ. ಪರಮಾತ್ಮನ ಸಂದೇಶಗಳಾಗಿರುವ ವೇದಾಗಮಾದಿಗಳು ವರ್ಣಾಶ್ರಮ ಧರ್ಮಗಳನ್ನು ಬೋಧಿಸಿ ಸನ್ಮಾರ್ಗದಲ್ಲಿ ನಡೆಯತಕ್ಕ ವಿಧಾನವನ್ನು ಸೂಚಿಸುತ್ತವೆ. ಈ ಧರ್ಮದಿಂದ ನಡೆಯತಕ್ಕವರೇ ಅಸ್ತಿಕಮತಾವಲಂಬಿಗಳೆನಿಸಿಕೊಳ್ಳುತ್ತಾರೆ. ಹಾಗೆ ನಡೆಯದವರನ್ನು ನಾಸ್ತಿಕರೆಂದು ಪಾಷಂಡಿಗಳೆಂದೂ ಧರ್ಮಲಂಡರೆಂದೂ ಶಾಸ್ತ್ರವು ವಿಧಿಸುತ್ತದೆ. ಅಸ್ತಿಕ ಮತಗಳೊಳಗೆ ವೀರಶೈವ ಮತವೂ ಒಂದಾಗಿದೆ. ಈ ಮತವನ್ನು ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದುದಯಿಸಿದ ಜಗತ್ಪೂಜ್ಯರಾದ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಸ್ಥಾಪನ ಮಾಡಿರುತ್ತಾರೆ. ಶ್ರೀಮತ್ಪಂಚಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಯಾವ ಈ ವೀರಶೈವಮತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳೂ, ಬ್ರಹ್ಮಚರ್ಯ ಗೃಹಸ್ಥ ವಾನಪ್ರಸ್ಥ ಸನ್ಯಾಸ ಎಂಬ ನಾಲ್ಕು ಆಶ್ರಮಗಳೂ, ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಭಸ್ಮ ರುದ್ರಾಕ್ಷಿ ಮಂತ್ರಗಳೆಂಬ ಅಷ್ಟಾವರಣಗಳೂ, ಪಂಚಾಚಾರಗಳೂ ಲಿಂಗಾಂಗಸಾಮರಸ್ಯಬೋಧಕವಾದ ಷಟ್‌ಸ್ಥಲಮಾರ್ಗವೂ ಬೋಧಿಸಲ್ಪಟ್ಟಿರುತ್ತವೆ. ವೀರಶೈವ ಧರ್ಮದ ಸಕಲ ವರ್ಣದವರೂ ಸರ್ವಾಶ್ರಮದವರೂ ಶ್ರೀಮಜ್ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಪಾದಾಶ್ರಿತರಾಗಿರಬೇಕಲ್ಲದೆ ಅನ್ಯಥಾ ಮಾರ್ಗವೇ ಇಲ್ಲ. ಹೀಗಿದ್ದಾಗ್ಯೂ, ಈಗಣ ಪರಿಸ್ಥಿತಿಯಲ್ಲಿ ಕೆಲಜನ ಅಜ್ಞರು ಶಾಸ್ತ್ರಮರ್ಯಾದೆಯನ್ನೂ ಲೌಕಿಕ ಧರ್ಮವನ್ನೂ ಸಹ ಮೀರಿ ದೈವದತ್ತವಾದ ವಿಚಾರವನ್ನು ದೂರ ಮಾಡಿ ಅಜ್ಞಾನಸಾಗರದಲ್ಲಿ ಮುಳುಗಿ ದಡವನ್ನು ಕಾಣದೆ ಕಡಬಡಿಸ ಹತ್ತಿರುವರಲ್ಲದೆ ತಮ್ಮಂತೇ ಇತರರನ್ನೂ ಸಹ ಕೆಳೆದು ಮುಳುಗಿಸಬೇಕೆಂದು ದುರ್ವಾದದಿಂದ ಸತತ ಪ್ರಯತ್ನವನ್ನು ಸರ್ವತೋಮುಖವಾಗಿ ಮಾಡುತ್ತಿದ್ದಾರೆ. ಈರೀತಿ ಮಾಡಲು ಅವರಿಗೆ ದುಸ್ಸಂಸ್ಕಾರವೇ ಕಾರಣವಾಗಿರುತ್ತದೆ. ಈಗ ನಮ್ಮ ಸಮಾಜದ ದುರ್ದೈವದಿಂದ ಗುರುವಿರಕ್ತರೆಂಬ ಎರಡು ಪಂಗಡಗಳು ಪ್ರಜ್ವಲಿಸಿ ಇಡೀ ಸಮಾಜವನ್ನೇ ದಹಿಸುತ್ತಿವೆ ಎನ್ನುವುದು ಜಗತ್ಪ್ರಸಿದ್ಧವಾಗಿದೆ. ಶ್ರೀಮದ್ರಂಭಾಪುರೀ ಜಗದ್ಗುರು ಮಹಾಸಂಸ್ಥಾನವು ಸರ್ಕೀಟು ಹೊರಟನಂತರ ಈ ಬೆಂಕಿಯ ಜ್ವಾಲೆಯು ವಿಶೇಷವಾಗಿದೆ ಎನ್ನುವುದು ನಮ್ಮಗೆಗೆ ನಿರ್ಧಾರವಾಗಿರುವುದು. ಈ ಬೆಂಕಿಯು 700 ವರುಷಗಳಿಂದಲೂ ಸಮಾಜಕ್ಕೆ ಹತ್ತಿ ಸುಡುತ್ತ ಬರುತ್ತಿರುವುದಾಗಿದೆ ಎಂದು ಈ ಕೆಳಗೆ ತೋರಿಸುವ ಮಹನೀಯರ ಭಾಷಣದಿಂದ ಸ್ಪಷ್ಟವಾಗಿ ತೋರಿಬರುತ್ತದೆ. 1908 ನೆಯ ಇಸ್ವಿಯಲ್ಲಿ ಬಾಗಲಕೋಟೆಯಲ್ಲಿ ನೆರವೇರಿದ 4 ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ರಾ|| ಮಲ್ಲಿಕಾರ್ಜುನಪ್ಪ ಕಲ್ಯಾಣಶೆಟ್ಟಿ ಬಿ.ಎ., ಎಂಬವರು "ವೀರಶೈವ ಧಾರ್ಮಿಕ ಇತಿಹಾಸ ಪ್ರಸಿದ್ಧಿಸುವ ಅವಶ್ಯಕತೆ" ಎಂಬ ವಿಷಯದ ಮೇಲೆ ಭಾಷಣವನ್ನು ಮಾಡುವಾಗ್ಗೆ ಮೊದಲು ವೀರಶೈವಮತವು ವೇದಾಗಮೋಪನಿಷತ್ಪ್ರತಿಪಾದ್ಯವಾದದ್ದೆಂದೂ ಹಾಗೂ ವ್ಯಾಸಮಹರ್ಷಿಯು ತನ್ನ ಕಾಲದಲ್ಲಿ ಯಾವತ್ತು ಧರ್ಮದವರನ್ನು ಏಕತ್ರರನ್ನಾಗಿ ಮಾಡಲು ಯತ್ನಿಸಿದನೆಂದೂ ಭಾಷಣ ಮಾಡಿ ಅಂತ್ಯದಲ್ಲಿ ಈ ಕೆಳಗೆ ಬರೆದ ಪ್ರಕಾರ ಭಾಷಣವನ್ನು ಮಾಡಿರುತ್ತಾರೆ. ಅದೇನಂದರೆ—

"ಇಂಥ ಐಕ್ಯವನ್ನುಂಟುಮಾಡುವಕಾಲದಲ್ಲಿ ಕೂಡ ಶಿವಭಕ್ತಿಯೇ ಉತ್ತಮಧರ್ಮವೆಂದು ವೇದೋಪನಿಷತ್ತುಗಳನ್ನು ಬಲ್ಲ ವೈದಿಕರು ತಿಳಿದು ಚತುರಾಶ್ರಮಗಳಲ್ಲಿ ಅಂತ್ಯಾಶ್ರಮವಾದ ಸನ್ಯಾಸವೃತ್ತಿಯಲ್ಲಿ ಪೂರ್ವಜಾತಿಯ ಸ್ಮರಣವನ್ನೂ ಅಭಿಮಾನವನ್ನೂ ತೊರೆದು ನಿರಭಿಮಾನದಿಂದ ನಿಜವಾದ ಧರ್ಮಾಚರಣೆಯ ದೀಕ್ಷೆಯನ್ನು ಪಡೆದು ಪ್ರಸಾದ ಪ್ರಾಪ್ತಿಗೋಸುಗ ಮೃತ್ತಿಕಾಲಿಂಗವನ್ನು ಮಾಡಿ ಪೂಜಿಸಿ ಪ್ರಸಾದವನ್ನು ಗ್ರಹಿಸುತ್ತಿದರು. ಇಂಥ ಸನ್ಯಾಸಿಗಳು ಪಟ್ಟಣಕ್ಕೆ ಪಂಚರಾತ್ರಿ ಹಳ್ಳಿಗೆ ಒಂದು ರಾತ್ರಿಯಂತೆ ಸಂಚರಿಸುವ ಸ್ಥಿತಿಯಲ್ಲಿ ಇನ್ನೊಂದು ವಸ್ತುವಿನ ಪರವೆಯನ್ನು ತೊರೆದರೂ, ಮೃತ್ತಿಕಾಲಿಂಗವು ಭಿಕ್ಷಾನ್ನವನ್ನು ಪ್ರಸಾದವನ್ನಾಗಿ ಮಾಡಲು ಅಗತ್ಯವಿದ್ದಾಗಿ ತೋರಿತು. ಹೋದ ಹೋದ ಹೊಸ ಜಾಗದಲ್ಲಿ ಒಂದೊಂದು ಲಿಂಗವನ್ನು ಮಾಡುವುದಕ್ಕಿಂತ ಒಂದು ಸ್ಥಳದಲ್ಲಿ ಮಾಡಿದ ಲಿಂಗವನ್ನೇ ಇನ್ನೊಂದು ಸ್ಥಳಕ್ಕೆ ಒಯ್ಯುವದು ಅವರಿಗೆ ಹೆಚ್ಚು ಸಮಂಜಸವಾಗಿ ಕಂಡಿರಬಹುದು! ಹೀಗೆ ಅವರೂ **ಪಂಚಾಚಾರ್ಯರ** ವಂಶಜರಂತೆ ಲಿಂಗಧಾರಣಯುತರಾಗಹತ್ತಿದರು. ಪೂರ್ವದಿಂದ ಬಂದ ಪಂಚಾಚಾರ್ಯರ ವಂಶಜರು ಗುರುಪೀಠಗಳನ್ನಲಂಕರಿಸಿದ ಮಾಹೇಶ್ವರರೆಂಬ ಅಭಿಧಾನವಾಂತಿರಲು, ಲಿಂಗಧಾರಣಯುತರಾದ ಚತುರ್ಥಾಶ್ರಮದ ಸನ್ಯಾಸಿಗಳು ಅತಿಥಿಗಳಾದ್ದರಿಂದ ಗತ್ಯರ್ಥಸೂಚಕ **ಜಂಗಮ-ಚರ**ರೆಂಬ ಹೆಸರುಳ್ಳವರಾಗಿ ತಮ್ಮ ಸನ್ಯಾಸಿಗಳ ಕುರುಹುಗಳನ್ನು ಸುಧಾರಣೆಗಳನ್ನೂ **ವೀರಶೈವ**ರಲ್ಲಿ ಸೇರಿಸಲುದ್ಯುಕ್ತರಾದರು. ಮತ್ತು ವಿಶಾಲದೃಷ್ಟಿಯಿಂದ ಸರ್ವರೂ ಸಮವೆಂದು ಅಲಿಂಗಿಗಳಿಗೂ ಕೂಡ ಲಿಂಗಧಾರಣದ ಉಪದೇಶವನ್ನು ಮಾಡಿ ಅನೇಕರನ್ನು ತಮ್ಮಲ್ಲಿ ಸೇರಿಸಿಕೊಂಡು **"ಲಿಂಗಾಯತ"** ಎಂಬ ಸಮಾಜವನ್ನು ಕಲ್ಪಿಸಿದಂತೆ ತೋರುತ್ತದೆ. ಆದರೂ ಲಿಂಗಧಾರಣವು ಈ ಸನ್ಯಾಸಿಗಳಿಂದಲೇ ಆರಂಭವಾಯಿತೆಂದು ತಿಳಿಯಲಾಗದು. ಯಾಕಂದರೆ ಮೇಲೆ ಹೇಳಿದಂತೆ ವೇದದ ಆದಿಯಲ್ಲಿಯೂ ಕೂಡ ಲಿಂಗಧಾರಣವೇ ನಿಜವಾದ ಧರ್ಮವೆಂದು ಸ್ವೀಕರಿಸಲ್ಪಟ್ಟದ್ದರಿಂದಲೂ, ಉಪನಿಷತ್ಕಾಲದಲ್ಲಿ ಲಿಂಗಧಾರಿಗಳು **"ಧೀರ"** ರೆಂದು ಅರಿಯಲ್ಪಟ್ಟಿದ್ದರಿಂದಲೂ ಮಧ್ಯದಲ್ಲಿಯೇ ಲಿಂಗಧಾರಣವು ಆರಂಭಿಸಲ್ಪಟ್ಟಿತೆನ್ನುವದು ಅಸಮಂಜಸವಾಗಿದೆ. ಉತ್ತಮಾಶ್ರಮದಲ್ಲಿ ಪೂರ್ವದ ಧರ್ಮಾಚರಣೆಯನ್ನು ನಿರಭಿಮಾನದಿಂದ ಸ್ವೀಕರಿಸುವದು ಯುಕ್ತವಾಗಿ ತೋರಿದ್ದರಿಂದ ಕ್ವಚಿದ್ಯೋಚರಿಸುತ್ತಿದ್ದ ಲಿಂಗಧಾರಿಗಳ ಸಂಖ್ಯೆಯು ಈ ಸನ್ಯಾಸಿಗಳಿಂದಲೂ ಅವರ ಉಪದೇಶದಿಂದಲೂ ಬೆಳೆಯಲಾರಂಭವಾಯಿತು. ಬೇರೆ ಬೇರೆ ವ್ಯವಸಾಯಗಳನ್ನು ಮಾಡುವ ಅಲಿಂಗಿಗಳಿಗೂ ಕೂಡ ಈ ಸನ್ಯಾಸಿಗಳು ಲಿಂಗಧಾರಣವನ್ನು ಬೋಧಿಸಿದ್ದರಿಂದ ಅಲಿಂಗಿಗಳು ಲಿಂಗಾಯತ ದೀಕ್ಷೆಯನ್ನು ಪಡೆದರೆಂಬುವದಕ್ಕೆ ಈಗಿರುವ ಉದ್ಯೋಗಸೂಚಕ ಲಿಂಗಾಯತರ ಬೇರೆ ಬೇರೆ ಪಂಗಡಗಳೇ ಪ್ರಮಾಣಗಳಾಗಿವೆ. ಕಲ್ಯಾಣದಲ್ಲಿ ಪ್ರಭವಿಸಿದ ಬಸವೇಶ್ವರನ ಮೇಲೆ ವರ್ಣಸಂಕರದ ಅಪರಾಧ ಬರಲು ಅವನು ಹೇಳಿದ್ದೇನೆಂದರೆ—ವೇದಬೋಧಿತ ಜಾತಿಗಳು ಎರ | ಡಾದಿಯಲಿ ವರ್ತಕ ನಿವರ್ತಕ | ವಾದವವು ಭವಕರ್ಮಸಂಸ್ಕಾರಪ್ರವರ್ತಕನೂ || ಆದಿಶಿವಸಂಸ್ಕಾರದಾತನು | ಮೇದಿನಿಯೊಳು ನಿವರ್ತಕಶ್ರುತಿ | ವೇದಿತಾರ್ಥಚರಿತೆಗೆಳರುತಿರೆ ಮೊನ್ನೆ ಹುಟ್ಟಿದಿರ್ದಾಕುಲಂಗಳ ಮಾತವೇತಕೆ || ಇತಿ ೫೫ನೆಯ ಸಂಧಿ ಬಸವಪುರಾಣ—ಪೂರ್ವದಲ್ಲಿ ಅಲಿಂಗಿಯಾಗಿದ್ದು ಅನಂತರ ಲಿಂಗಧಾರಣವನ್ನು ಪಡೆದ ಜನರಿಗೂ ಪೂರ್ವದಿಂದಲೇ ಲಿಂಗಧಾರಣ ಸಂಪನ್ನರಾದ ಆಚಾರ್ಯರ ವಂಶಿಕರಿಗೂ ಮಧ್ಯದಲ್ಲಿ ವೈಮನಸ್ಯವಿದ್ದಂತೆ ತೋರುತ್ತದೆ. ಯಾಕೆಂದರೆ ೧೨ ನೆಯ ಶತಮಾನದಲ್ಲಿ ಬಸವೇಶ್ವರನು ಅಲಿಂಗಿಯಿದ್ದನಂತರ ಲಿಂಗಧಾರಣವನ್ನು ಹೊಂದಿದನಾದುದರಿಂದ ತನ್ನಂತೆ ಧರ್ಮಾಂತರಮಾಡಿದ ಬಹುಜನ ಲಿಂಗವಂತರನ್ನು ಕೂಡಿಕೊಂಡು ಒಗ್ಗಟ್ಟು ಮಾಡಿಕೊಂಡು **ಪಂಚಸಿಂಹಾಸನಗಳಿಗೆ ಪ್ರತಿಸ್ಪರ್ಧಿ** ಯಾದುದೆಂದು ಶೂನ್ಯಸಿಂಹಾಸನವನ್ನು ಸ್ಥಾಪಿಸಿ ಅದಕ್ಕೆ ತನ್ನಂತೆ **ಧರ್ಮಾಂತರಮಾಡಿದ ಅಲ್ಲಮ ಪ್ರಭುದೇವರನ್ನು** ಪಟ್ಟಗಟ್ಟಲು ಅನೇಕರು ಕುಪಿತರಾಗಿ ಬಸವೇಶ್ವರರನ್ನು ಬಿಟ್ಟು ಹೋದರೆಂದು ಪ್ರಭುಲಿಂಗಲೀಲೆಯ ಮೇಲಿಂದ ತಿಳಿದುಬರುತ್ತದೆ ಪ್ರಭುದೇವರ ತರುವಾಯ ಬಸವೇಶ್ವರನ ಅಳಿಯನಾದ ಚೆನ್ನಬಸವೇಶ್ವರನನ್ನು ಪಟ್ಟಗಟ್ಟಲು ಪೂರ್ವದ ಲಿಂಗಧಾರಿಗಳ ವಂಶಜರು ಅತಿಕುಪಿತರಾಗಿ ಪರಸ್ಪರ ವ್ಯಾಜ್ಯವು ಹೆಚ್ಚಿತು. ಈ ವ್ಯಾಜ್ಯವೇ ಶೂನ್ಯಸಿಂಹಾಸನವು ಕಲ್ಯಾಣ ಪಟ್ಟಣದಿಂದ ಸ್ಥಾನಾಂತರ ಹೊಂದಲಿಕ್ಕೆ ಕಾರಣವಾಯಿತೆಂದು ತೋರುತ್ತದೆ ಮುಂದೆ ಚೆನ್ನಬಸವೇಶ್ವರನ ತರುವಾಯ ಪೂರ್ವಿಕರಾದ ಪಂಚಾಚಾರ್ಯರ ವಂಶಜರಲ್ಲಿ ಬ್ರಹ್ಮಚಾರಿಗಳಾಗಿದ್ದವರನ್ನೇ ಅಧಿಪತಿಗಳನ್ನಾಗಿ ಮಾಡಲು ಈ ವ್ಯಾಜ್ಯವು ತಗ್ಗುತ್ತ ಎಲ್ಲರೂ ಏಕಭಾವದಿಂದ ಒಬ್ಬರನ್ನೊಬ್ಬರು ಸೇರಲಾಸ್ಪದವಾಗಿ ಮತ್ತೆ ಐಕ್ಯವು ಈ ಸಮಾಜದಲ್ಲಿ ನೆಲೆಗೊಳ್ಳಲಿಕ್ಕೆ ಕಾರಣವಾಯಿತು." ಈ ಯಥಾರ್ಥವಿಷಯವನ್ನು ಅತ್ಯವಶ್ಯಕವಾಗಿ ಪರಿಶೀಲಿಸಬೇಕಾಗಿದೆ.

ನಿಜಸ್ಥಿತಿಯು ಹೀಗಿರುವಲ್ಲಿ ಕೆಲವು ಜನ ಲಿಂಗಾಯತರು ತಮ್ಮ ತಮ್ಮ ಮನಬಂದಂತೆ ಗುರುಗಳನ್ನು ಮಾಡಿಕೊಂಡು "ಅಬದ್ಧೋವಾ ಸುಬದ್ಧೋವಾ ಕಂಠೀಪುತ್ರೋ ವಿನಾಯಕಃ" ಎಂಬುಕ್ತಿಯಂತೆ ವೇದಾಗಮಗಳಿಗೆ ವಿರುದ್ಧವಾದ ಕೆಲವು ಕಲ್ಪಿತ ಕಾದಂಬರಿಗಳನ್ನು ಮಾಡಿಕೊಂಡು ಮನಬಂದಂತೆ ನರ್ತಮಾನಪತ್ರಗಳಲ್ಲಿ ಬರೆಯುವುದು, ಹಸ್ತಪತ್ರಿಕೆಗಳನ್ನು ಹರಡುವುದು, ಅದನ್ನೇ ಆ ಸಮುದಾಯದಲ್ಲೊಬ್ಬರು ಸ್ತೋತ್ರಮಾಡುವುದು, ಉಳಿದವರು ಆನಂದಪಡುವುದೇ ಅವರ ಅದ್ಯಕರ್ತವ್ಯವಾಗಿರುತ್ತದೆ. ಇದರಿಂದ ಸಮಾಜದಲ್ಲಿ ಅನೇಕ ತಪ್ಪುಮಾರ್ಗಗಳು ಹುಟ್ಟಿ ಸಮಾಜವು ಕೆಡಲಿಕ್ಕೆ ಮಾರ್ಗವಾಗುತ್ತದೆ ವೀರಶೈವಬಾಂಧವರೇ ಸತ್ಯವನ್ನು ಶೋಧಿಸಿರಿ! ನಿಜಗುರುವನ್ನು ಬಿಡಬೇಡಿರಿ! ಬ್ರಾಹ್ಮಣ್ಯವನ್ನು ವ್ಯಕ್ತಪಡಿಸತಕ್ಕ ಗೋತ್ರಸೂತ್ರಗಳನ್ನು ಮರೆಯಬೇಡಿರಿ! ವರ್ಣಾಶ್ರಮಧರ್ಮವನ್ನು ಮೀರಿ ನಡೆಯಬೇಡಿರಿ! ವಂದನ, ನಿಂದನ, ಶಿಕ್ಷಾ, ರಕ್ಷಾ, ಮೋಕ್ಷಾದಿಗಳಿಗೂ ವೀರಶೈವಬ್ರಾಹ್ಮಣೋಕ್ತ ಸರ್ವ ಕರ್ಮಗಳಿಗೂ ಮೂಲಕಾರಣರಾದ ಶ್ರೀಮತ್ಪೂಜ್ಯಪಾದರಾದ ಜಗದ್ಗುರು ಪಂಚಪೀಠಾಧಿಪತಿಗಳಲ್ಲಿ ಅಚಲವಾದ ಭಕ್ತಿ ತತ್ಪರರಾಗಿರಿ! ಸರ್ವರೂ ಸಮಾಜೋದ್ಧಾರಮಾಡಿರಿ! ಸತ್ಯವು ನಿತ್ಯವಾಗಲಿ! ಭಗವತ್ಪಾದರ ಭಕ್ತರಿಗೆ ಜಯವಾಗಲಿ.

ಸುಜನವಿಧೇಯ
ಬಿ. ಪಿ. ಪ್ರಸನ್ನಯ್ಯ, ಬಿಜಾಪುರ.

ಶ್ರೀ ಜಗದ್ಗುರು ಶ್ರೀ ಶಿವಾನಂದ ಶಿವಾಚಾರ್ಯ ರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಶುಭಾಗಮನ.

ತಾ|| 26-5-1930, ಬಾಣಾವರ.

ಕಡೂರ ತಾಲ್ಲೂಕು ಪಂಚನಹಳ್ಳಿ ಮೊಕ್ಕಾಮಿನಿಂದ ತೊಗರಿಹಂಕಲು ಮುಕ್ಕಾಮಿಗೆ ಮ|| ರಾ|| ಟಿ. ಬಿ. ಮಲ್ಲೇಗೌಡರು ಕಾಫಿಪ್ಲಾಂಟರ ಇವರ ಪ್ರಾರ್ಥನೆ ಮೇರೆಗೆ ದಿಗ್ವಿಜಯವಂ ಗೈಯಲು ಮಾರ್ಗವಶಾತ್ ಅರಸೀಕೆರೆ ತಾ|| ಬಾಣಾವರ ಬೀರೂರು ರಸ್ತೆಯಲ್ಲಿ ದಯಮಾಡಿಸುವ ಟಾಯಿಮು ಬಾಣಾವರ ಶ್ರೀ ಜಗದ್ಗುರು ಭಜನಾಸಂಘದ ಚಾಲಕರಾದ ಪ್ರೆಸಿಡೆಂಟ ಕೆ. ಎಂ. ಬಸವಾರಾಧ್ಯರು, ಟ್ರಜರರ ಹಿರೇಮಠದ ಜಿ. ವೀರಭದ್ರಸ್ವಾಮಿಗಳು, ಜಾಯಿಂಟಸೆಕ್ರೆಟರಿಗಳು, ಪಂಡಿತ ಕರಿಬಸವಶಾಸ್ತ್ರಿಗಳು, ಎಂ. ಮಾದಪ್ಪನವರು, ಕೆ. ಎಂ. ಗಂಗಾಧರಯ್ಯನವರು, ಚೀಫ ಸೆಕ್ರೆಟರಿ ವಿರೂಪಾಕ್ಷಪ್ಪನವರು, ಯಜಮಾನ್ ನಂಜುಂಡಶೆಟ್ಟರು, ಮಲ್ಲಪ್ಪಶೆಟ್ಟರು ವಗೈರೆ ಸದ್ಭಕ್ತಾದಿಗಳು ಬನ್ನೈಸಿಕೊಂಡು ಮಹಾ|| || ಸನ್ನಿಧಿಯವರಿಂದ ಶ್ರೀಮುಖವನ್ನು ಹೊಂದಿ ಮುನಸಿಪಾಲಿಟಿ ಕಚೇರಿ ಬಳಿ ಚೌಕದ ರಸ್ತೆಯಲ್ಲಿ ತಳಿರುತೋರಣಾದಿ ಕದಳೀಸ್ತಂಭಗಳಿಂದಲೂ ಬಾವುಟಾ ವಗೈರೆ "ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದ ಮಹಾಸ್ವಾಮಿನಾಂ ಶುಭಾಗಮನಂ" ಬೋರ್ಡ ಹಚ್ಚಿ ನೇತ್ರಾನಂದಕರವಾಗಿ ರಚಿಸಿದ್ದ ಹಸರುವೇಣಿ ಮಂಟಪದಲ್ಲಿ ಭಜನಾಸಂಘದವರು ವಾದ್ಯವೈಭವದೊಡನೆ ಹಿರೇಮಠದವರು ಸಮಾಜದವರು ಸ್ಥಳ ಬಾಜು ಗ್ರಾಮಾಂತರಗಳ ಸೋಮುವಾರ ಮಹಾಜನರು ಮತ್ತು ಮುನಸಿಪಾಲಿಟಿ ವೈಸ್ ಪ್ರೆಸಿಡೆಂಟರು ಪಟೇಲರು ಕಾದಿದ್ದು ಮಹಾಸ್ವಾಮಿಯವರ ಸವಾರಿಯು ದಯಮಾಡಿಸಿದ ಕೂಡಲೆ ವಾದ್ಯವೈಭವಾದಿ ಬಾಲಕ ಸೇವಾದಳದ ಭಜನೆಯು ಭೋರ್ಗರೆಯುತ್ತಿರುವಲ್ಲಿ ಶ್ರೀ ಜಗದ್ಗುರು ಪರ್ವತಸಂಸ್ಥಾನ ಏಜಂಟರ ಮೂಲಕ ಸ್ಥಳದ ಪ್ರಮುಖರ ಪಂಚಿಯವು ಇಸ್ತಕಬಾಲು ಹಾರ ತುರಾಯಿಯು ಹಿರೇಮಠದ ದೈವದವರಿಂದ ಒಪ್ಪಿಸಲ್ಪಟ್ಟಿತು. ಶ್ರೀ ಜಗದ್ಗುರುಗಳವರು ಹಸನ್ಮುಖಿಗಳಾಗಿ ಸೇರಿದ ಭಕ್ತಾದಿಗಳಿಗೆಲ್ಲಾ ದರ್ಶನಾಶೀರ್ವಾದವನ್ನಿತ್ತು ಹಿರೇಮಠದ ನೂತನ ವಧೂವರರಿಂದ ದರ್ಶನ ಕಾಣಿಕೆಯನ್ನು ಅಂಗೀಕರಿಸಿ ಫಲಾಶೀರ್ವಾದಗಳಂ ದಯಪಾಲಿಸಿ ಭಜನಾಸಂಘದವರ ಜಯಧ್ವನಿ ಕರತಾಡನ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷದೊಡನೆ ಸ್ವಾರಿಯು ಮುಂದಕ್ಕೆ ದಯಮಾಡಿಸಿತು. ದರ್ಶನಕ್ಕಾಗಿ ಸಾವಿರಾರು ಜನ ಪ್ರೇಕ್ಷಕರು ಸೇರಿದ್ದರು. ಭಜನಾಸಂಘದವರಿಗೆ ತಾ|| 31-5-1930 ರ ಚಿಕ್ಕಮಗಳೂರು ಮಹೋತ್ಸವಕ್ಕೆ ಹಾಜರಾಗಬೇಕೆಂದು ಅಪ್ಪಣೆಯಾಗಿರುವ ಮೇರೆ ಹೊರಡತಕ್ಕವರಾಗಿರುತ್ತಾರೆಂದು ತಿಳಿಯುವ.

ಎಂ. ಎಚ್. ನಂಜುಂಡಗೌಡ,
ಗುರುಭಕ್ತ.

ಅನ್ನಸತ್ರ ಪ್ರಾರಂಭಮಹೋತ್ಸವ ಬಳ್ಳಾರಿ.

ಹಿಂದೂದೇಶದಲ್ಲಿ ಪ್ರತಿಯೊಂದು ಸಮಾಜವು ತನ್ನ ಉನ್ನತಿಯ ಬಗ್ಗೆ ಪ್ರಯತ್ನಿಸುತ್ತಿರುವದು ಸರ್ವಶ್ರುತವಾಗಿರುವದು. ಅಂತೆಯೇ ವೀರಶೈವ ಸಮಾಜದ ಉನ್ನತಿಗಾಗಿ ಉದಾರ ಹೃದಯರಾದ ಅನೇಕ ವೀರಶೈವ ಪ್ರಮುಖರು ಸಮಾಜೋನ್ನತಿಯ ಕಾರ್ಯಗಳಲ್ಲಿ ಮುಂದುವರಿದಿರುವರು. ಅವರಂತೆಯೇ ಸಮಾಜಾಭಿವೃದ್ಧಿಯ ಕಾರ್ಯದ ಪುಣ್ಯದಲ್ಲಿ ಭಾಗಿಗಳಾಗಿರುವ ಸತ್ಯಸಂಕಲ್ಪದಿಂದ ಮ|| ರಾ|| ಕುಪ್ಪಗಲ್ಲು ಅಯ್ಯಪ್ಪನವರು. ಬಳ್ಳಾರಿಯಲ್ಲಿ ಸುಮಾರು ೧೦ ಸಹಸ್ರ ರೂಪಾಯಿಗಳ ಖರ್ಚಿನಿಂದ ವಿಶಾಲವಾದ ಮಂದಿರವನ್ನು ಕ್ರಯಕ್ಕೆ ತೆಗದುಕೊಂಡು ಆ ಮಂದಿರದಲ್ಲಿ ಧಾರ್ಮಿಕವಿದ್ಯಾಪ್ರಸಾರಕ್ಕಾಗಿ ಜ್ಯೋತಿಷವೈದಿಕ ಪಾಠಶಾಲೆಯನ್ನು ಕಳೆದ ಸಂವತ್ಸರದ ಮಾರ್ಗಶಿರಮಾಸದಲ್ಲಿ ಸ್ಥಾಪಿಸಿರುವರು.

ವಿದ್ಯಾದಾನದ ಜೊತೆಯಲ್ಲಿ ಬಡವಿದ್ಯಾರ್ಥಿಗಳಿಗೆ ಅನ್ನದಾನ ಮಾಡುವದು ಪರಮಪುಣ್ಯವೆಂದು ತಿಳಿದು ಸದರಿ ಅಯ್ಯಪ್ಪನವರು ಆ ಮಂದಿರದಲ್ಲಿ ಇದೇ ಸಂವತ್ಸರದ ವೈಶಾಖ ಬ|| ೧೦ ತಾ|| 23-5-30 ದಿವಸ ಅನ್ನಸತ್ರವನ್ನು ಪ್ರಾರಂಭಿಸಿದರು. ಈ ಅನ್ನಸತ್ರದ ಪ್ರಾರಂಭಮಹೋತ್ಸವಕ್ಕೆ ಜಗದ್ವಂದ್ಯರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರು ಆಂದೋಲಿಕಾರೋಹಣಗೈದು ಸಮಸ್ತಬಿರುದಾವಳಿಗಳೊಡನೆ ಆಗಮಿಸಿದರು. ಈ ಮಹೋತ್ಸವದಲ್ಲಿ ಗುರುಭಕ್ತಿಶೀಲರೆಲ್ಲರೂ ಭಾಗಿಗಳಾಗಿ ಗುರುಸಾರ್ವಭೌಮರ ಶುಭಾಶೀರ್ವಾದಗಳಿಗೆ ಪಾತ್ರರಾದರು. ೧೨ ಘಂಟೆಯಿಂದ ಸಾಯಂಕಾಲ ೫ ಘಂಟೆಯವರೆಗೆ ಮಹಾಸ್ವಾಮಿಗಳವರ ಶ್ರೀ ಪಾದಪೂಜೆಯೂ ಗಣಾರಾಧನೆಯೂ ನೆರವೇರಿದವು. ಸಾಯಂಕಾಲ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭಿಸಲ್ಪಟ್ಟಿತು. ಗುರುದೇವಸ್ತೋತ್ರಗಳಾದನಂತರ ಬ್ರಾ|| ನಾಗೇಶಶಾಸ್ತ್ರಿ ಸರ್ವದರ್ಶನತೀರ್ಥ ಇವರು ಅನ್ನಸತ್ರದ ಕರ್ತ್ಯರ ಉದ್ದೇಶಗಳನ್ನೆಲ್ಲಾ ವಿವರಿಸಿ ಹೇಳಿದರು. ಆ ಮೇಲೆ ವೇ|| ಪಂಡಿತ ಕೊಂಗವಾಡದ ವೀರಭದ್ರಶಾಸ್ತ್ರಿಗಳು ಮ|| ರಾ|| ಆರ್. ರಂಗನಾಥಂ ಮೊದಲಿಯಾರ್ ಎಂ. ಎಲ್ ಸಿ. ಮೊದಲಾದವರು ಪ್ರಸ್ತಕೋಚಿತವಾದ ಭಾಷಣಗಳನ್ನು ಮಾಡಿದುದಲ್ಲದೆ ಅಯ್ಯಪ್ಪನವರ ದಾನಕಾರ್ಯವನ್ನು ವಿಶೇಷರೀತಿಯಿಂದ ಕೊಂಡಾಡಿದರು. ಆ ಮೇಲೆ ಶ್ರೀಗಳವರು ತಮ್ಮ ದಿವ್ಯವಾಣಿಯಿಂದ ದಾನ ಈಶ್ವರಪೂಜೆ ಮೊದಲಾದ ಧರ್ಮತತ್ವಗಳ ಮರ್ಮವನ್ನು ಬೋಧಿಸಿ ಸರ್ವರಲ್ಲಿಯೂ ಧರ್ಮಜಾಗ್ರತಿಯನ್ನುಂಟುಮಾಡಿದರು. ಅನಂತರ ಮಂಗಳವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಮೇಟಿ ದೊಡ್ಡಪ್ಪ, ಬಳ್ಳಾರಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ದೀಕ್ಷೋಪನಯನಮಹೋತ್ಸವ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೮೫೨ ವೈಶಾಖ ಬ|| ೭ ಚಂದ್ರವಾರ ದಿವಸ ಕುಂದಗೋಳ ತಾಲೂಕ ದೇವನೂರು ಹಿರೇಮಠದ ವೇ|| ಫಕೀರಯ್ಯನವರ ಪುತ್ರ ಹಾಗೂ ಕುಸೂಗಲ್ ಸಿದ್ಧಗಿರಿ ಮಠದ ವೇ|| ಧೂಳಯ್ಯನವರ ಮೊಮ್ಮಗನಾದ ಚಿ|| ಸೋಮಶೇಖರಶರ್ಮನ ಉಪನಯನ ಕಾರ್ಯವು ಹುಬ್ಬಳ್ಳಿತಾಲೂಕು ಕುಸೂಗಲ್ಲ ಮುಕ್ಕಾಮಿನಲ್ಲಿ ಸದರಿ ಧೂಳಯ್ಯನವರ ಮಠದಲ್ಲಿ ಹುಬ್ಬಳ್ಳಿ ಹಳೇಯೂರು ಬೃಹನ್ಮಠದ ಶ್ರೀ ಪಟ್ಟದೊಡೆಯರ ಅಧ್ಯಕ್ಷತೆಯಲ್ಲಿಯೂ, ಹುಬ್ಬಳ್ಳಿಯ ಮಠದ ಶಿವಪೂಜಯ್ಯನವರ ಪೌರೋಹಿತ್ಯದಲ್ಲಿಯೂ ವಿಧಾನೋಕ್ತವಾಗಿ ಆಚರಿಸಲ್ಪಟ್ಟಿತು. ಗಣಾರಾಧನೆಯು ಆಗಿ ಸಾಯಂಕಾಲ 8 ಘಂಟೆಗೆ ಸರಿಯಾಗಿ ಬ್ರಹ್ಮಚರ್ಯಾಶ್ರಮವನ್ನು ವಹಿಸಿದ ಚಿ|| ಸೋಮಶೇಖರಶರ್ಮನ ಪಲ್ಲಕ್ಕಿಮಹೋತ್ಸವವು ಅನೇಕ ವಾದ್ಯಗಳಿಂದಲೂ ಧ್ವಜ ಛತ್ರ ಚಾಮರಗಳಿಂದಲೂ, ಒಳ್ಳೆ ಅಟ್ಟಹಾಸದಿಂದ ಪುರದ ಮುಖ್ಯ ಬೀದಿಗಳಲ್ಲಿ ಸಾಗಿ 10 ಘಂಟೆಗೆ ತಿರುಗಿ ಮಠದ ಮುಂದಣ ಸಭಾಮಂಟಪಕ್ಕೆ ಆಗಮಿಸಿತು. ಬಳಿಕ ಸಭಾಮಂಟಪದಲ್ಲಿ ಶ್ರೀ ಪಟ್ಟದೊಡೆಯರ ಸಮ್ಮುಖದಲ್ಲಿ ನೆರೆದ ಸಭೆಯಲ್ಲಿ ವೇ|| ಸಿದ್ಧರಾಮಯ್ಯನವರು ಬೆಂತೂರು ಶಾಲಾ ಮಾಸ್ತರ ಇವರು "ಸಗುರೋರಧಿಕಂ" ಈ ವಿಷಯದ ಮೇಲೆ ಸರ್ವೋತ್ತಮವಾದ ಭಾಷಣಮಾಡಿದರು. ಹುಬ್ಬಳ್ಳಿಯ ಐವಳ್ಳಿ ಚನ್ನಪ್ಪನವರೆಂಬ ಸದ್ಭಕ್ತರು ಗುರುಭಕ್ತಿಯ ವಿಷಯಕ್ಕೆ ಭಾಷಣ ಮಾಡಿದನಂತರ ಶ್ರೀ ಜಗದ್ಗುರು ಉಜ್ಜಯಿನೀ ಮಹಾಸ್ವಾಮಿಗಳವರ ಸನ್ನಿಧಿಗೆ ಗುರುಕಾಣಿಕೆಯಾಗಿ ಐದು ರೂಪಾಯಿಗಳನ್ನೂ, ಪ್ರಭಾಪತ್ರಿಕೆಯ ಪೋಷಣೆಗಾಗಿ ಎರಡು ರೂಪಾಯಿಗಳನ್ನೂ ಕಳುಹಿಸಬೇಕೆಂದು ಗೊತ್ತುಪಡಿಸಿ. "ಶ್ರೀಮತ್ಪಂಚಾಚಾರ್ಯ ಗುರು ಮಹಾರಾಜರ" ಜಯಘೋಷದೊಡನೆ ಸಭಾವಿಸರ್ಜನೆಯಾಯಿತು.

ಪಂಚಾಚಾರ್ಯರ ಪಾದಧೂಳಿ
ಡಿ. ಎನ್. ಹಿರೇಮಠ, ಕುಸೂಗಲ್ಲ.

ವಿವಾಹಮಹೋತ್ಸವ.

ಕೊಟ್ಟೂರು.

ಇದೇ ವೈಶಾಖ ಬ|| ೭ ಸೋಮವಾರ ಕೊಟ್ಟೂರು ನಿವಾಸಿಗಳಾದ ಪ್ರಭುವಡೆಯರ ಮಠದ ಶಿವಲಿಂಗಯ್ಯನವರ ಪುತ್ರರಾದ ಮರುಳಸಿದ್ಧಯ್ಯನವರ ಕಲ್ಯಾಣಕಾರ್ಯವು ವಿಜೃಂಭಣೆಯಿಂದ ನಡೆಯಿತು. ಗ್ರಾಮಾಂತರಗಳಿಂದ ವಿಶೇಷವಾಗಿ ಜನಗಳು ಆಗಮಿಸಿದ್ದರು. ಅಹೋರಾತ್ರಿಯಲ್ಲಿಯೂ ಅನ್ನಸಂತರ್ಪಣಕಾರ್ಯವು ನಡೆಯಿತು. ವಿವಾಹಮಂಟಪವು ಪುಷ್ಪಮಾಲಿಕೆಗಳಿಂದಲೂ ಕಲ್ಪಿತವಾದ ಲತಾವೇಣಗಳಿಂದಲೂ ಮನೋಹರವಾಗಿ ಕಂಗೊಳಿಸುತ್ತಿತ್ತು. ಪ್ರತಿದಿವಸವೂ ಸಂಗೀತಕಾಲಕ್ಷೇಪವು ಮತಸಂಬಂಧವಾದ ಭಾಷಣಗಳೂ ನಡೆಯುತ್ತಲೇ ಇದ್ದವು. ವಿವಾಹಕಾಲದಲ್ಲಿ ಇಲ್ಲಿಯ ವಿದ್ಯಾಫಂಡಿಗೂ ಹಾಗೂ ಪ್ರಭೆಗೂ ಪೋಷಣದ್ರವ್ಯವು ತಗೆಯಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಪಟ್ಟಾಭಿಷೇಕಮಹೋತ್ಸವವು.

ದೊಣ್ಣೂರು.

ಗುಲಬರ್ಗಾ ಜಿಲ್ಲಾ ಪೈಕಿ ದೊಣ್ಣೂರ ಹಿರೇಸಾರಂಗಮಠವು ಶ್ರೀ ಜಗದ್ಗುರು ದಾರುಕಶಾಖಾನ್ವಿತವಾಗಿರುವದು. ಸದರಿ ಮಠಕ್ಕೆ ಸಂಬಂಧಪಟ್ಟ ಮಠಗಳು ಕಲಗುರ್ತಿ, ಕೋರವಾರ, ಟೆಂಗಳಿ, ತೊಸಸಿನಹಳ್ಳಿ, ಮಲಗಾಣ, ಗುಂಡಗುರ್ತಿ, ಕಲ್ಲಬೇನೂರ ಮೊದಲಾದ ಗ್ರಾಮಗಳಲ್ಲಿ ಇರುವವು. ಆ ಮಠಗಳೆಲ್ಲವೂ ಆಯಾಯ ಗ್ರಾಮಗಳಲ್ಲಿ ಹಿರೇಮಠಗಳೇ ಆಗಿರುವುವಲ್ಲದೆ ಸಾರಂಗಮಠಗಳೆಂದು ಕರೆಯುವ ರೂಢಿಯುಂಟು. ಪ್ರತಿಯೊಂದು ಮಠಕ್ಕೆ ಸರಕಾರ ಇನಾಮ ಜಮೀನುಗಳೂ ಸಹ ಉಂಟು. ಮೇಲೆ ಕಾಣಿಸಿದ ಗ್ರಾಮಗಳ ಸಮಸ್ತ ಸದ್ಭಕ್ತರು ಪ್ರತಿಯೊಂದು ಶುಭಾಶುಭಕಾರ್ಯಗಳಲ್ಲಿ ಮರ್ಯಾದೆಯನ್ನು ಸದರಿ ಮಠಗಳಿಗೇನೇ ಸಮರ್ಪಿಸುವರು. ಇವೆಲ್ಲ ಮಠಗಳಿಗೆ ಒಬ್ಬರೇ ಅಧಿಕಾರಿಗಳಾಗುವರು. ಆ ಅಧಿಕಾರಿಗಳು ದೊಣ್ಣೂರು ಅಥವಾ ಕೋರವಾರದಲ್ಲಿ ವಾಸಮಾಡುತ್ತಿರುವರು. ದೂರದಲ್ಲಿದ್ದ ಈ ಮಠದ ಶಿಷ್ಯರ ಮನೆಗಳು ಗಲತಿ ಆಗಿ ಹೋಗಿರುವವು. ಯಾರಾದರೂ ಅಪರಿಚಿತಶಿಷ್ಯರಿದ್ದರೆ ಪತ್ರವ್ಯವಹಾರ ಮಾಡಿಗುರುಕೃಪೆಗೆ ಪಾತ್ರರಾಗಬೇಕು.

ಕೆಲವು ದಿವಸಗಳಿಂದೀಚೆಗೆ ಮಠಕ್ಕೆ ಅಧಿಕಾರಿಗಳು ಯಾರೂ ಇದ್ದಿಲ್ಲ. ಶಕೆ 1852 ಫಾಲ್ಗುಣ ಬಹುಳ 10 ಸೋಮವಾರ ಶುಭಮುಹೂರ್ತದಲ್ಲಿ ದೊಣ್ಣೂರ ಹಿರೇಸಾರಂಗಮಠದಲ್ಲಿ ಸರ್ವಹಕ್ಕು ಸಹಿತ ಚರಪಟ್ಟಾಧಿಕಾರವನ್ನು ಸೋಲಾಪೂರ ಕಾಶೀ ಮೊದಲಾದ ಸ್ಥಳಗಳಲ್ಲಿ ಕಾವ್ಯತೀರ್ಥಪರೀಕ್ಷೆಯವರೆಗೆ ಅಭ್ಯಾಸ ಮಾಡಿ ವಿದ್ವಾಂಸರೂ ಮತ್ತು ಸದ್ವಂಶೀಯರೂ ಆದ ಶಿವಕುಮಾರ ದೇವರು ಕುಂದರಗಿ ಇವರಿಗೆ ಸಮಸ್ತ ಗ್ರಾಮಗಳ ಭಕ್ತರ ಅನುಮತಿಯ ಮೇರೆಗೆ ಸದರಿ ಮಠದ ದೇಶಿಕೇಂದ್ರ ಗುರುಪಾದಸ್ವಾಮಿಗಳು ಕೊಡಿಸಿದರು. ಅಧಿಕಾರಕೊಡುವ ಸಮಾರಂಭವು ಅತಿ ವಿಜೃಂಭಣೆಯಿಂದ ನೆರವೇರಿತು. ಆ ಕಾಲಕ್ಕೆ ಮಲಕೂಡ, ದಿಗ್ಗಾವಿ, ಪಾಳೆ, ಹಾಲಕೂಡ, ಕೇರಳ್ಳಿ, ಹೆಬ್ಬಾಳ ಮೊದಲಾದ ಗ್ರಾಮಗಳ ಷ|| ಬ್ರ|| ಚರಪಟ್ಟಾಧಿಕಾರಿಗಳು ದಯಮಾಡಿಸಿದ್ದರು. ಇನ್ನೂ ಅನೇಕ ಗ್ರಾಮಗಳ ದೇಶಿಕ ಮೂರ್ತಿಗಳು ಭಕ್ತಜನಗಳೂ ಆಗಮಿಸಿದ್ದರು. ಇನ್ನು ಮುಂದೆ ಈ ಮಠದ ಶಿಷ್ಯರೆಲ್ಲರೂ ಗುರುಗಳಲ್ಲಿ ಭಕ್ತಿಯಿಂದ ವರ್ತಿಸಿ ದರ್ಶನವನ್ನು ತೆಗೆದುಕೊಂಡು ಧನ್ಯರಾಗಬೇಕೆಂದು ಕೋರುವ,

ಓರ್ವ ಗುರುಭಕ್ತ.

ವಿವಾಹಮಹೋತ್ಸವ.

ತುಂಕೂರು.

ಇದೇ ಪ್ರಮೋದಸಂವತ್ಸರದ ವೈಶಾಖ ಬಹುಳ ೭ ಸೋಮವಾರ ತಾ|| 19-5-30 ದಿವಸ ತುಂಕೂರಲ್ಲಿರುವ ಲೇಟ್ ಬೆಳ್ಳಾವಿ ಹುಚ್ಚಪ್ಪನವರ ದ್ವಿತೀಯ ಪುತ್ರ ಚಿ|| ಸ|| ವೀರಶೆಟ್ಟಪ್ಪನೆಂಬ ವರನಿಗೆ ಮೈಸೂರು ರಾಜಧಾನಿಯಲ್ಲಿರುವ ದೇಶದ ಶೆಟ್ರು ಕೋರಿ ಮ|| ರಾ|| ಚನ್ನಬಸವಪ್ಪಶೆಟ್ಟರವರ ದ್ವಿತೀಯಪುತ್ರಿ ಹ|| ಕುಂ|| ಕೋ|| ಚಿ|| ಸೌ|| ರೇವಮ್ಮನೆಂಬ ಕನ್ಯಾರತ್ನವನ್ನು ಕೊಟ್ಟು ವಿವಾಹಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿತು. ಈ ಮಂಗಲಮಹೋತ್ಸವಕ್ಕೆ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳವರು ಆಶೀರ್ವಾದಪತ್ರಿಕೆಯನ್ನು ಕನ್ಯೆಯ ತಂದೆಯವರಿಗೆ ದಯಪಾಲಿಸಿದ್ದರು. ಈ ಮಹೋತ್ಸವಕ್ಕಾಗಿ ಬೆಂಗಳೂರುದೇಶದ ಶೆಟ್ರು ಮ|| ರಾ|| ಸಿದ್ಧಬಸವಪ್ಪಶೆಟ್ಟರು ಮ|| ರಾ|| ದೊಡ್ಡಸಿದ್ದಪ್ಪಶೆಟ್ಟರು, ಮ|| ರಾ|| ಅಪ್ಪಾಜಪ್ಪನವರು ಹಾಗೂ ಸ್ಥಳೀಯ ಶೆಟ್ರು ಯಜಮಾನರು ಮೊದಲಾದ ಅನೇಕ ಜನ ಪ್ರಮುಖರು ಆಗಮಿಸಿದ್ದರು. ಯಾವತ್ತು ಕಾರ್ಯಗಳು ವಿಧ್ಯುಕ್ತಪ್ರಕಾರವಾಗಿ ನೆರವೇರಿದುವು. ಈ ಮಂಗಲಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ನೂತನದಂಪತಿಗಳು ನಾಲ್ಕು ರೂಪಾಯಿಗಳನ್ನು ಸಮರ್ಪಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು. ಅಸಾಧಾರಣ ಗುರುಭಕ್ತಿನಿಷ್ಠರಾದ ನೂತನ ದಂಪತಿಗಳಿಗೂ ಹಾಗೂ ಕಾರ್ಯಕರ್ತ್ಯರಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಸಕಲ ಸನ್ಮಂಗಲಗಳನ್ನು ಕರುಣಿಸಲೆಂದು ಹಾರೈಸುವ,

ಓರ್ವ ಪ್ರತ್ಯಕ್ಷದರ್ಶಿ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜೂನ್ ತಾ|| ೨ನೇ ಸೋಮವಾರ

ಉಪ್ಪಿನ ಚಳವಳಿಯು.

ಲೋಕವಿಖ್ಯಾತರಾದ ಮಹಾತ್ಮಾಗಾಂಧಿಯವರು ಭಾರತಸ್ವಾತಂತ್ರ್ಯಕ್ಕಾಗಿ ಉಪ್ಪಿನ ಚಳವಳಿಯನ್ನು ಪ್ರಾರಂಭಮಾಡಿ 3 ತಿಂಗಳುಗಳಾಗುತ್ತ ಬಂದವು. ಬ್ರಿಟಿಷ್ ಸರಕಾರದವರು ನಾನಾರೀತಿಯಿಂದ ಭಾರತೀಯರ ಸರ್ವಸ್ವವನ್ನು ಹರಣಮಾಡುತ್ತಿರುವದರಿಂದ ಅದನ್ನು ತಪ್ಪಿಸಿ ಭರತಖಂಡವನ್ನು ಮೊದಲಿನಂತೆ ಸರ್ವಸ್ವಶಾಲಿಯನ್ನಾಗಿ ಮಾಡಬೇಕೆನ್ನುವದೇ ಮಹಾತ್ಮರ ಸತ್ಯಸಂಕಲ್ಪವಾಗಿದೆ. ಹಿಂದುಸ್ಥಾನದಲ್ಲಿ ಎಲ್ಲಿಬೇಕಲ್ಲಿ ಉಪ್ಪು ಪುಕ್ಕಟೆಯಾಗಿ ದೊರೆಯುತ್ತಿರುವಾಗ ಬ್ರಿಟಿಷ್ ಸರಕಾರದವರು ಈ ಉಪ್ಪಿನ ವಿಷಯದಲ್ಲಿ ಪ್ರಜೆಗಳಿಗೆ ಸೌಲಭ್ಯವನ್ನು ಕೊಡದೆ ಅಸಾಧಾರಣವಾದ ನಿರ್ಬಂಧವನ್ನಿಟ್ಟು ಇದರ ಮೇಲೆ ಅಸಾಧ್ಯವಾದ ಕರವನ್ನು ಹಾಕಿ ಇದರಿಂದ ೭ ಕೋಟಿ ರೂಪಾಯಿಗಳನ್ನು ಸಂಪಾದಿಸಿಕೊಳ್ಳುತ್ತಿರುವರು. ಇದರಂತೆಯೇ ಮದ್ಯ ಮೊದಲಾದವುಗಳಿಂದ ಅಪಾರ ದ್ರವ್ಯವನ್ನು ಗಳಿಸುತ್ತಿರುವರು. ಈ ಯಾವತ್ತು ಪದಾರ್ಥಗಳಿಗೋಸ್ಕರ ಪ್ರತಿವರ್ಷ ಭಾರತೀಯರ ಕೈಯಿಂದ ಅಬ್ಜಗಟ್ಲೆ ರೂಪಾಯಿಗಳು ವಿದೇಶದವರ ಬಾಯಲ್ಲಿ ಬೀಳುತ್ತಿರುವ ವಿಷಯವು ಜಗತ್ತಿಗೆಲ್ಲಾ ತಿಳಿದದ್ದೇ ಆಗಿದೆ. ಇವೆಲ್ಲವುಗಳನ್ನು ತಪ್ಪಿಸಿ ಭಾರತೀಯರಿಗೆ ಸಕಲವಿಧದಿಂದಲೂ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಸದಿಚ್ಛೆಯಿಂದ ಮಹಾತ್ಮರವರು ಈಗ್ಯೆ ೨೦-೩೦ ವರ್ಷಗಳಿಂದ ದೇಹಶ್ರಮವನ್ನು ಲೆಕ್ಕಿಸದೆ ಅಹೋರಾತ್ರಿ ಹೆಣಗಾಡುತ್ತಿರುವ ವಿಷಯವು ಲೋಕವಿಸ್ರುತವೇ ಆದೆ. ಸದ್ಯಃ ಮಹಾತ್ಮರ ಈ ಉಪ್ಪಿನ ಚಳವಳಿಯನ್ನು ತಡೆಯುವದಕ್ಕಾಗಿ ಸರಕಾರವರು ನಾನಾರೀತಿಯಿಂದ ಪ್ರಯತ್ನಪಡಹತ್ತಿದ್ದಾರೆ. ಇದಕ್ಕಾಗಿ ಭರತಖಂಡಕ್ಕೆ ತಿಲಕಸ್ವರೂಪರಾಗಿರುವ ಮಹಾತ್ಮರು, ಜವಾಹಿರಲಾಲನೆಹರು, ಅಬ್ಬಾಸತಯ್ಯಬಜಿ, ಟಿ. ಪ್ರಕಾಶಂ, ಸರೋಜಿನೀನಾಯುಡು, ಕಮಲಾಬಾಯಿ ಚಟ್ಟೋಪಾಧ್ಯಾಯ, ಸತ್ಯವತೀದೇವಿ ಮೊದಲಾದ ವೀರಸ್ತ್ರೀಪುರುಷರನ್ನೂ ಹಾಗೂ ಸಾವಿರಾರು ಜನ ಸ್ವಯಂಸೇವಕರನ್ನೂ ಸೆರೆಮನೆಯ ವಶವರ್ತಿಗಳನ್ನಾಗಿ ಮಾಡಿಬಿಟ್ಟಿದ್ದಾರೆ. ಸರಕಾರದವರು ಈ ರೀತಿಯಾಗಿ ವರ್ತಿಸೋಣದರಿಂದ ಜನರು ಇದಕ್ಕೆ ಹೆದರದೆ ಇನ್ನೂ ಹೆಚ್ಚು ಧೈರ್ಯದಿಂದ ಈ ಸ್ವಾತಂತ್ರ್ಯಸಂಗ್ರಾಮದಲ್ಲಿ ಭಾಗಿಗಳಾಗಹತ್ತಿರುವರು. ಈ ಚಳವಳಿಯಿಂದ ಸರಕಾರಕ್ಕೂ ಹಾಗೂ ಪ್ರಜೆಗಳಿಗೂ ಅಪಾರವಾದ ನಷ್ಟವು ಸಂಭವಿಸಿರುವದೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಪ್ರತಿದಿನದಲ್ಲಿಯೂ ಸಾವಿರಾರು ಜನ ಸತ್ಯಾಗ್ರಹಿಗಳು ಪ್ರಾಣದ ಭೀತಿಯಿಲ್ಲದೆ ಈ ಚಳವಳಿಯನ್ನು ಮುಂದುವರಿಸಹತ್ತಿದ್ದಾರೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ ಇಂಥ ಚಳವಳಿಯು ಹಿಂದೆ ಯಾವಕಾಲದಲ್ಲಿಯೂ ನಡೆದಿದ್ದಿಲ್ಲವೆಂದೂ, ಮುಂದೆ ಇನ್ನೂ ಹೆಚ್ಚುತ್ತ ಹೋಗುವದೆಂದೂ ಕಂಡು ಬರುತ್ತದೆ. ಮಹಾತ್ಮರಂತೂ ಈ ಚಳವಳಿಯ ವಿಷಯದಲ್ಲಿ ಬಹು ಕಠಿಣಮನಸ್ಕರಾಗಿದ್ದಾರೆ. ಸರಕಾರದವರೂ ಸಹ ಕಠಿಣವೃತ್ತಿಯನ್ನೇ ಅವಲಂಬಿಸಿ ಶಸ್ತ್ರಾಸ್ತ್ರಗಳನ್ನು ಉಪಯೋಗಿಸ ಹತ್ತಿದ್ದಾರೆ. ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾದರೂ ಚಳವಳಿಯು ಶಾಂತಿಯಾಗುವ ಮಾರ್ಗವನ್ನವಲಂಬಿಸದೆ ಈ ವಿಷಯದಲ್ಲಿ ಕಠಿಣವ್ರತವನ್ನು ಧಾರಣಮಾಡಿದಂತೆ ಕಂಡುಬರುತ್ತದೆ. ಹೀಗಾದಮೇಲೆ ಈ ಚಳವಳಿಯ ಪರಿಣಾಮವು ಎಲ್ಲಿಗೆ ಬರುವದೋ ಎಂದು ಲಕ್ಷಾಂತರ ಜನರು ಚಿಂತಾಕ್ರಾಂತರಾಗಿ ಆಲೋಚಿಸಹತ್ತಿರುವರು. ಪ್ರಜೆಗಳ ಸುಖದುಃಖಗಳನ್ನರಿತು ರಾಜ್ಯಪರಿಪಾಲನ ಮಾಡುವದು ಸರ್ವಪ್ರಭುಗಳ ಕರ್ತವ್ಯವಾಗಿದೆ. ಇದನ್ನು ಬ್ರಿಟಿಷ್ ಪ್ರಭುಗಳು ಚಿತ್ತದಲ್ಲಿ ತಂದುಕೊಂಡು ಭಾರತೀಯರಿಗೆ ಸಕಲವಿಧದಿಂದಲೂ ಸುಖವನ್ನುಂಟುಮಾಡಿಕೊಡುವ ಕಾರ್ಯವನ್ನು ಕೈಕೊಳ್ಳಬೇಕಲ್ಲದೆ ಅನ್ಯಥಾ ಮಾರ್ಗದಲ್ಲಿ ಪ್ರವೇಶಿಸುವುದು ಅವರಿಗೆ ಎಷ್ಟೂ ಭೂಷಣವಲ್ಲವೆಂದು ಹೇಳಬಹುದಾಗಿದೆ. ಆದುದರಿಂದ ಬ್ರಿಟಿಷ್‌ಸರಕಾರದವರು ಯುರೋಪ್, ಆಫ್ರಿಕಾ, ಅಮೆರಿಕಾ, ಏಶಿಯಾ ಈ ನಾಲ್ಕೂ ಖಂಡಗಳಲ್ಲಿ ವಾಸಿಸಿರುವ ಸಕಲ ಜನಾಂಗದವರಿಂದಲೂ ಅಸಾಧಾರಣಸತ್ಪುರುಷರೆಂದು ಸದಾ ಹೊಗಳಿಸಿಕೊಳ್ಳಲ್ಪಡುತ್ತಿರುವ ಮಹಾತ್ಮಾಗಾಂಧಿಯವರನ್ನು ಬಂಧನದಿಂದ ಬಿಡುಗಡೆಮಾಡಿ ರೌಂಡ್‌ಟೇಬಲ್ ಪರಿಷತ್ತಿಗೆ ಅವರನ್ನು ಆಹ್ವಾನಿಸಿಕೊಂಡು ಸಾಧಕಬಾಧಕ ವಿಷಯಗಳನ್ನು ಚರ್ಚಿಸಿ ಭರತಖಂಡದ ಯೋಗಕ್ಷೇಮವನ್ನು ನಿರ್ಣಯಿಸಿ ಸಕಲ ಪ್ರಜೆಗಳ ಮನಸ್ಸಿಗೆ ಶಾಂತಿಯನ್ನುಂಟುಮಾಡಿ ಸರ್ವರ ಚಿರಕೃತಜ್ಞತೆಗೆ ಪಾತ್ರರಾಗಬೇಕೆಂದೂ ಜಗನ್ನಿಯಾಮಕನಾದ ಪರಮೇಶ್ವರನು ಸದ್ಯಃ ಭರತಖಂಡಕ್ಕೊದಗಿರುವ ದುಃಖಸ್ಥಿತಿಯನ್ನು ದೂರ ಮಾಡಿ ಈ ಖಂಡದ ಮೇಲೆ ಅಸದೃಶವಾದ ತನ್ನ ಕೃಪಾಮೃತವನ್ನು ಬೀರಬೇಕೆಂದೂ ಭಜಿಸುತ್ತೇವೆ.

ವಡಲಾ ಉಪ್ಪಿನಕೋಠಿಯಮೇಲೆ ದಾಳಿ.

ಮುಂಬಯಿ ಮೇ 26.

ಮಿ|| ಜಾರ್ಜ್ ಸ್ಲೊಕೊಂಬ್‌ರವರು ಕಳೆದ ಎರಡು ಭಾಸುವಾರಗಳಲ್ಲಿ ಸ್ವಯಂಸೇವಕರು ವಡಲಾ ಉಪ್ಪಿನ ಕಾರ್ಖಾನೆಯ ಮೇಲೆ ದಾಳಿಯಿಟ್ಟಿದುದನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಬಂದರು. ಅವರು ತಮ್ಮ "ಡೇಲಿ ಹೆರಾಲ್ಡ್" ಪತ್ರಿಕೆಗೆ ಎರಡು ಮಹತ್ವದ ಲೇಖಗಳನ್ನು ಬರೆದು ಕಳುಹಿಸಿರುವರು. ಅದನ್ನು ಮಿ|| ಸ್ಲೊಕೊಂಬ್‌ರವರು ಈರೀತಿಯಾಗಿ ವರ್ಣಿಸಿರುತ್ತಾರೆ.

ಈದಿನ ಮುಂಬಯಿಗೆ ಕೆಲವು ಮೈಲುಗಳ ದೂರದಲ್ಲಿರುವ ವಡಲಾದಲ್ಲಿ ನಡೆದ ದಾಳಿಯನ್ನು ನಾನು ಕಣ್ಣಾರೆನೋಡಿದೆನು. ಮಿ|| ಗಾಂಧಿಯವರ ಹಿಂಬಾಲಕರು ಉಪ್ಪಿನಕಾಯಿದೆಯ ವಿರುದ್ಧವಾಗಿ ಕೈಕೊಂಡ ಪ್ರಯತ್ನಗಳಲ್ಲಿ ಇದೇ ಎಲ್ಲಕ್ಕಿಂತ ದೊಡ್ಡದು. ಕಾಂಗ್ರೆಸ್ಸಿನವರು ದಾಸರ್ಮ್ಮದಂತೆ ವರ್ತಿಸುವದನ್ನು ಬಿಟ್ಟು ಸಮಯವನ್ನು ಕಾಯ್ದು ನುಗ್ಗಲಾರಂಭಿಸಿರುವರು. ವಡಲಾ ಕೋಠಿಯಮೇಲೆ ನಿನ್ನೆಯ ದಿನ ದಾಳಿಯಿಡಬೇಕೆಂದಿದ್ದ ಏರ್ಪಾಡು ಕಡೆಯಲ್ಲಿ ನಿಲ್ಲಿಸಲ್ಪಟ್ಟಿತು. ಇದರಿಂದ ಅನೇಕ ಜನ ಪೋಲೀಸರು ಉಪ್ಪಿನ ಕೋಠಿಯಲ್ಲಿ ವ್ಯರ್ಥಾ ಕಾದುಕೊಂಡಿದ್ದಂತಾಯಿತು.

ರಾತ್ರಿಯಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಸಣ್ಣ ಸಣ್ಣ ಗುಂಪುಗಳಾಗಿ ಕೋಠಿಯ ಸಮೀಪಕ್ಕೆ ಬಂದು ಬೆಳಗಾಗುತ್ತಲೇ ನಿರ್ಬಂಧವಿದ್ದ ಪ್ರದೇಶದ ಕಡೆಗೆ ನುಗ್ಗಿದರು. ಅಲ್ಲಿ ಇನ್ನೂ ಶುದ್ಧಿಯಾಗದಿದ್ದ ಉಪ್ಪಿನ ರಾಶಿಗಳು ಇದ್ದುವು. ನಾನು ಸಮೀಪದ ಗುಡ್ಡದ ಮೇಲೆ ನಿಂತಿದ್ದೆನು. ಆಗ ನನ್ನ ಕಣ್ಣಿಗೆ ಕಾಣಿಸಿದ ನೋಟವು ಮಾನವನ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದಾಗಿದ್ದಿತು. ಬಿಸಿಲಿನ ತಾಪವು ವಿಶೇಷವಾಗಿದ್ದಿತು. ಒಂದು ದೊಡ್ಡ ಬಯಲುಪ್ರದೇಶದ ಸುತ್ತಲೂ ತಿರಿಗೆಯ ಪೋಲೀಸರು ಪಿಸ್ತೂಲುಗಳನ್ನೂ, ಮುಂಬಯಿನಗರದ ಪೋಲೀಸರು ದೊಣ್ಣೆಗಳನ್ನೂ ಹಿಡಿದುಕೊಂಡು ಸುತ್ತಲೂ ಓಡಾಡುತ್ತಿದ್ದರು. ಅಲ್ಲಲ್ಲೇ ಬಿಳಿಯ ಉಡುಪನ್ನು ಧರಿಸಿದ್ದ ಒಬ್ಬೊಬ್ಬ ಯುರೋಪಿಯನ್ ಸಾರ್ಜೆಂಟ್ ಅಥವಾ ಖಾಕಿ ಉಡುಪನ್ನು ಧರಿಸಿದ್ದ ಯುರೋಪಿಯನ್ ಆಫೀಸರನ್ನು ಗುರ್ತಿಸಬಹುದಾಗಿತ್ತು.

ಕೋಠಿಯ ಹೊರಭಾಗದಲ್ಲಿ ಕ್ಷಣಾಕ್ಷಣಕ್ಕೂ ಮುಂದುವರಿಯುತ್ತಲೇ ಇದ್ದ ಬಿಳಿ ವಸ್ತ್ರಧಾರಿಗಳಾದ ಸ್ವಯಂಸೇವಕರ ಸಣ್ಣ ಸಣ್ಣ ಗುಂಪುಗಳು ಕಾಣಿಸುತ್ತಿದ್ದುವು. ಉಪ್ಪುನೀರಿನ ಕಟ್ಟೆಗಳ ಸುತ್ತಲೂ ಒಂದು ದೊಡ್ಡ ಬಚ್ಚಲಿರುವದು. ಸ್ವಯಂಸೇವಕರು ಈ ಬಚ್ಚಲಿನ ಹೊರಭಾಗದಲ್ಲಿ ಸೋಮಾರಿತನದಿಂದಲೂ ಸಾವಕಾಶವಾಗಿಯೂ ಬರುತ್ತಿದ್ದವರು ಇದ್ದಕ್ಕಿದ್ದ ಹಾಗೆಯೇ ಕೆಸರಿನ ಬಚ್ಚಲಲ್ಲಿ ನುಗ್ಗಿ ಉಪ್ಪಿನ ರಾಶಿಗಳ ಕಡೆಗೆ ನೋಗುತ್ತಿದ್ದರು. ಇದನ್ನೇ ಕಾಯುತ್ತಿದ್ದ ದೇಶೀಯ ಪೋಲೀಸರೂ ಹಾಗೂ ಯುರೋಪಿಯನ್ ಅಧಿಕಾರಿಗಳೂ ಸ್ವಯಂಸೇವಕರ ಕಡೆಗೆ ನುಗ್ಗುತ್ತಿದ್ದರು. ಪ್ರಾಯಶಃ ಸ್ವಯಂಸೇವಕರು ಉಪ್ಪನ್ನು ತುಂಬಕೊಳ್ಳುತ್ತಿದ್ದಾಗ ಪೋಲೀಸರು ಯಾರೂ ಅವರನ್ನು ಪ್ರತಿಬಂಧಿಸುತ್ತಿರಲಿಲ್ಲ. ಆದರೆ ಅವರು ಉಪ್ಪು ಸಮೇತರಾಗಿ ಪುನಃ ಹೊರಕ್ಕೆ ಹೊರಡುವಾಗ್ಗೆ ಪೋಲೀಸರು ಅವರನ್ನು ದಸ್ತಗಿರಿಮಾಡಿ ಪೋಲೀಸ್ ಲಾರಿಯಲ್ಲಿ ಕುಳ್ಳಿರಿಸಿಕೊಂಡು ಸೆರೆಮನೆಗೆ ಒಯ್ಯುತ್ತಿದ್ದರು. ದಸ್ತಗಿರಿಯಾದ ಸ್ವಯಂಸೇವಕರನ್ನು ಕರೆದೊಯ್ಯುವಾಗ್ಗೆ ನೂರಾರು ಜನ ಪ್ರೇಕ್ಷಕರು ಅವರಿಗೆ ಜಯಘೋಷವನ್ನು ಮಾಡುತ್ತಿದ್ದರು.

ಅನಂತರ ನಾನು ಗುಡ್ಡದಿಂದ ಇಳಿದು ಕೋಠಿಯ ಸಮೀಪಕ್ಕೆ ಹೋದೆನು. ಒಂದು ಗುಂಪಿನ ಸ್ವಯಂಸೇವಕರು ಒಂದಾವರ್ತಿ ನಿರ್ವಿಘ್ನವಾಗಿ ಉಪ್ಪನ್ನು ಲೂಟಿ ಮಾಡಿ ಬಂದಿದ್ದು, ಎರಡನೆಯಸಾರೆ ನುಗ್ಗಲು ತಮ್ಮ ಮುಖಂಡನ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದರು. ಬಿಸಲಿನ ತಾಪವನ್ನು ಲಕ್ಷಿಸದೆ ಅವರು ವಿನೋದವಾಗಿ ಮಾತನಾಡುತ್ತ ಕುಳಿತಿದ್ದರು. ಹತ್ತು ಗಜಗಳ ಸಮೀಪದಲ್ಲಿ ನೀಲಿಯ ಉಡುಪುಗಳನ್ನು ಧರಿಸಿದ್ದ ಒಂದು ಸಾಲು ಪೋಲೀಸರೂ, ಇಬ್ಬರು ಯುರೋಪಿಯನ್ ಆಫೀಸರರೂ ಬಿಸಲಿನಲ್ಲಿ ಚಿಂತೆಯಿಂದ ಮಾತನಾಡುತ್ತ ನಿಂತಿದ್ದರು. ಕುಳಿತಿದ್ದ ಸ್ವಯಂಸೇವಕರನ್ನು ನಾನು ಮಾತನಾಡಿಸಿದೆನು. ಅವರೆಲ್ಲರೂ ತರುಣರು. ಅವರಲ್ಲಿ ಒಬ್ಬನಿಗೆ 13 ವರ್ಷ ವಯಸ್ಸಾಗಿದ್ದಿತು. ಅವರ ಮುಖವು ಗಂಭೀರಭಾವವನ್ನು ತಾಳಿದ್ದಿತು. ದೇಶಸೇವೆಯೆಂಬ ಪವಿತ್ರಕಾರ್ಯದಲ್ಲಿ ಅವರೆಲ್ಲರೂ ಪ್ರಾಣಗಳನ್ನೊಪ್ಪಿಸಲು ಸಿದ್ಧರಾಗಿದ್ದರು. ಅವರೆಲ್ಲರೂ, ಬುದ್ಧಿವಂತರಾಗಿಯೂ ಸಂತೋಷಭರಿತರಾಗಿಯೂ ಲಕ್ಷಣವಂತರಾಗಿಯೂ ಇದ್ದರು. ತಾವು ದಸ್ತಗಿರಿಗೆ ಭಯಪಡತಕ್ಕವರಲ್ಲವೆಂದೂ, ಆದರೆ ಪೋಲೀಸರು ತಮ್ಮ ಮೇಲೆ ಬಲಪ್ರದರ್ಶನ ಮಾಡುವದು ನ್ಯಾಯವಲ್ಲವೆಂದೂ ಹೇಳಿದರು.

ಹೀಗೆ ಒಂದು ಘಂಟೆಯಕಾಲವು ಕಳೆದನಂತರ ಪ್ರೇಕ್ಷಕರ ಪ್ರೋತ್ಸಾಹಬಲದಿಂದ ಕೆಲವು ಸ್ವಯಂಸೇವಕರು ಉಪ್ಪಿನ ರಾಶಿಗಳ ಕಡೆಗೆ ಮತ್ತೆ ನುಗ್ಗಿದರು. ಕೆಸರಿನ ಬಚ್ಚಲಲ್ಲಿ ಹಾದು, ತಮ್ಮ ಚೀಲಗಳಲ್ಲಿ ಉಪ್ಪನ್ನು ತುಂಬಿಕೊಂಡನಂತರ ಸ್ವಯಂಸೇವಕರು ಹಿಂತಿರುಗಿಬಂದರು. ಇಷ್ಟರಲ್ಲಿ ಕೆಲವು ಬಿಳಿ ಆಫೀಸರರು ಸತ್ಯಾಗ್ರಹಿಗಳನ್ನು ಅಟ್ಟಿಸಿಕೊಂಡು ಬಂದರು. ಜಯಘೋಷವನ್ನು ಮಾಡುತ್ತಿದ್ದ ಪ್ರೇಕ್ಷಕರ ಮಧ್ಯದಲ್ಲಿ ಒಬ್ಬ ಸ್ಥೂಲಶರೀರಿಯಾದ ಸಾರ್ಜಂಟನು ಒಬ್ಬ ತರುಣಸತ್ಯಾಗ್ರಹಿಯನ್ನು ಹಿಡಿದು ಬೀಳಿಸಿದುದು ಎಲ್ಲರಿಗೂ ವ್ಯಸನಕರವಾಗಿದ್ದಿತು.

ಇಂಥ ಆವೇಶಭರಿತರಾದ ಸತ್ಯಾಗ್ರಹಿಗಳ ಹಾಗೂ ಪ್ರೇಕ್ಷಕರ ಮಧ್ಯದಲ್ಲಿ ನಿಂತು ತನ್ನ ದೇಶದ ರಾಜ್ಯಾಡಳಿತದ ಪ್ರತಿನಿಧಿಗಳು ಈ ವಿಧವಾದ ತೊಡಕಿನ ಕಾರ್ಯದಲ್ಲಿ ತೊಡಗಿರುವದನ್ನು ನೋಡಿದರೆ ಯಾವ ಆಂಗ್ಲೇಯನಿಗಾದರೂ ನಾಚಿಕೆಯಾಗದಿರದು. ಇಂದಿನ ಮತ್ತು ಇತರ ಸತ್ಯಾಗ್ರಹದ ದೆಸೆಯಿಂದ ದಸ್ತಗಿರಿಯಾಗಬಹುದಾದ ಜನರಿಗಾಗಿ, ಮುಂಬಯಿಯ ಹೊರಭಾಗದಲ್ಲಿರುವ "ವೊರ್ಲಿ" ಯಲ್ಲಿರುವ ಸರ್ಕಾರಿ ಕಟ್ಟಡಗಳನ್ನು 6,000 ಖೈದಿಗಳಿಗೆ ಸಾಕಾಗುವಂತೆ ಅನುಕೂಲಮಾಡಿಸಿದ್ದರು. ಈ ಕಟ್ಟಡಗಳ ಸುತ್ತಲೂ ಮುಳ್ಳಿನತಂತಿಯ ಬೇಲಿಯನ್ನು ಹಾಕಿ ಅದಕ್ಕೆ ಎಲೆಕ್ಟ್ರಿಕ್ ಕರೆಂಟನ್ನು ಬಿಟ್ಟಿದ್ದರು. ಸ್ವಲ್ಪಹೊತ್ತಿನೊಳಗಾಗಿ ಆ ಕಟ್ಟಡಗಳ ಕಿಟಿಕಿಗಳಲ್ಲೆಲ್ಲ ಕೇವಲ ಗಾಂಧಿಯ ಟೊಪ್ಪಿಗೆಗಳು ಕಾಣುತ್ತಿದ್ದವಲ್ಲದೆ "ಯೂನಿಯನ್ ಜಾಕಿನ ಅಂತ್ಯವಾಗಲಿ" ಎಂಬ ಕೂಗು ಕೇಳಿಬರುತ್ತಿತ್ತು. ಪ್ರೇಕ್ಷಕಾಭಿಮಾನಿಗಳ ಗುಂಪಿನಲ್ಲಿ "ಸರ್" ಪದವೀಧರರಾದ ಮುಂಬಯಿಯ ಒಬ್ಬ ಪ್ರಸಿದ್ಧ ಗಿರಿಣಿಮಾಲಕರ ಪತ್ನಿಯಿದ್ದಳು. ಈ ನಾರೀಮಣಿಯು ಆ ಸರಕಾರಿ ಕಟ್ಟಡಗಳಲ್ಲಿ ಸೆರೆಯಾಗಿರುವ ಜನರ ಸ್ಥಿತಿಯನ್ನೂ, ಉಪ್ಪಿನ ತೆರಿಗೆಯಿಂದ ಭರತಖಂಡದ ಬಡಪ್ರಜೆಗಳಿಗೆ ಆಗಿರುವ ತೊಂದರೆಯನ್ನೂ ಹೇಳಲಾರಂಭಿಸಲು, ಬಡತನದಿಂದ ಕೃಶರಾಗಿ ಕಂಗೆಟ್ಟಿದ್ದ ಕೆಲವು ಕೂಲಿಕಾರರು ತಮ್ಮ ಪತ್ನೀಪುತ್ರರೊಡನೆ ಮುಂದೆ ಬಂದು ಆ ನಾರೀಮಣಿಯ ಬಾಯಲ್ಲಿ ಹೊರಟ ಸ್ವರಾಜ್ಯವು ನಮ್ಮ ಜನ್ಮಸಿದ್ಧವಾದ ಹಕ್ಕಾಗಿರುವದು; ಅದಕ್ಕಾಗಿಯೇ ನಾವು ಹುಟ್ಟಿರುವೆವು; ಬೇಕಾದರೆ ಅದಕ್ಕೆ ನಮ್ಮ ಪ್ರಾಣಗಳನ್ನು ಒಪ್ಪಿಸುವೆವು ಎಂಬ ಶಬ್ದಗಳನ್ನು ಕೇಳಿ ಅದನ್ನು ತಾವೂ ಒಪ್ಪಿಕೊಂಡವರಂತೆ ತಲೆಯನ್ನು ಅಲ್ಲಾಡಿಸುತ್ತಿದ್ದರು. ನಾನು ಭರತಖಂಡಕ್ಕೆ ಬಂದಂದಿನಿಂದ ಇದಕ್ಕಿಂತಲೂ

ಹೆಚ್ಚಿನ ಹೃದಯದ್ರಾವಕವಾದ ಯಾವ ಮಾತುಗಳನ್ನೂ ಕೇಳಿರುವದಿಲ್ಲ.

ವಡಲಾಕೋಠಿಯ ಮೇಲೆ ಎರಡನೆಯ ದಾಳಿಯು ಕಳೆದ ಭಾಸುವಾರ ಜರುಗಿತು. ಅದನ್ನು ನೋಡಲು ಮಿ|| ಸ್ಲೊಕೊಂಬ್‌ರವರು ಮುಂಚಿತವಾಗಿಯೇ ಬಂದು ಕಾದಿದ್ದರು. ಮಿ|| ಸ್ಲೊಕೊಂಬ್‌ರವರು ಇದರ ಸಂಬಂಧವಾಗಿ ಈ ರೀತಿ ಬರೆದಿರುತ್ತಾರೆ.—

"ಮುಂಬಯಿಗೆ 5 ಮೈಲು ದೂರದಲ್ಲಿರುವ ವಡಲಾಕೋಠಿಯಮೇಲೆ ಈದಿನ ನಡೆದ ದಾಳಿಯನ್ನು ನೋಡಿದರೆ ಬ್ರಿಟಿಷರು ಇಂಡಿಯಾದಲ್ಲಿ ಅಚರಿಸಬಹುದಾದ ಎರಡು ಮಾರ್ಗಗಳು ಮಾತ್ರ ಉಳಿದಿರುವವೆಂದು ನನ್ನ ಮನಸ್ಸಿಗೆ ಚೆನ್ನಾಗಿ ದೃಢವಾಯಿತು. ಅವರು ನಿರ್ದಾಕ್ಷಿಣ್ಯವಾಗಿ ಭರತಖಂಡದ ಅದ್ಯಂತದಲ್ಲೂ ಲಷ್ಕರೀಕಾಯಿದೆಯನ್ನು ಜಾರಿಗೆ ತಂದು ಕೇವಲ ತಮ್ಮ ಬಂದೂಕ ಮತ್ತು ಮಿಷಿನ್ ಗನ್‌ಗಳಿಂದ ತಮ್ಮ ಕಾಯಿದೆಮರ್ಯಾದೆಯನ್ನು ಉಳಿಸಿಕೊಳ್ಳಬೇಕು ಇಲ್ಲವೆ ಮಿ|| ಗಾಂಧಿಯವರ ಉಪದೇಶದಂತೆ ಎದ್ದಿರುವ ಈ ರಾಜಕೀಯ ಚಳವಳಿಯನ್ನು ಶಾಂತಪಡಿಸುವ ಮಹತ್ಪ್ರಯತ್ನವನ್ನು ಕೂಡಲೇ ಮಾಡುವದಕ್ಕೋಸ್ಕರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಿಷ್ಪಕ್ಷಪಾತವಾದ ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿ ಹಿಂದೂಸ್ಥಾನಕ್ಕೆ ಸಾಮಂತ ಸ್ವರಾಜ್ಯವನ್ನು ಕೊಡುವದರ ಸಲುವಾಗಿ ದುಂಡುಮೇಜಿನ ಪರಿಷತ್ತನ್ನು ಕೂಡಿಸಿ, ಅಸಹಕಾರ ಚಳವಳಿಯನ್ನು ನಿಲ್ಲಿಸಿ ಪರಿಷತ್ತಿಗೆ ಬರುವಂತೆ ಮಿ|| ಗಾಂಧಿಯವರಿಗೆ ಆಮಂತ್ರಣವನ್ನು ಕೊಡಬೇಕು.

ಕಳೆದ ಭಾಸುವಾರದ ದಾಳಿಯೇ ಈ ದಿನ ಹೆಚ್ಚಿನ ಆಕಾರದಿಂದ ಮುಂದುವರಿಸಲ್ಪಟ್ಟಿತು. ಆದರೆ ಈಸಾರೆ ಪ್ರೇಕ್ಷಕರು ಸ್ವಯಂಸೇವಕರೊಡನೆ ಬಹಿಷ್ಕೃತಪ್ರದೇಶಕ್ಕೆ ನುಗ್ಗಿದುದರಿಂದ ಆ ಅಪಾರ ಜನಸ್ತೋಮವನ್ನು ತಡೆಯುವದು ಪೋಲೀಸರಿಗೆ ಅಸಾಧ್ಯವಾಯಿತು. ಅಲ್ಲಿ ಒಟ್ಟು 250 ಜನ ದೇಶೀಯ ಪೋಲೀಸರೂ, ಮುಂಬಯಿ ನಗರದ ಪೋಲೀಸು ಸೂಪರಿಂಟೆಂಡೆಂಟರ ಕೈಕೆಳಗೆ 20 ಜನ ಯುರೋಪಿಯನ್ ಆಫೀಸರುಗಳೂ ಮತ್ತು ಸಾರ್ಜೆಂಟರೂ ಬಂದಿದ್ದರು. ಸುಮಾರು 20 ಜನ ಪೋಲೀಸರ ಬಳಿಯಲ್ಲಿ ಬಂದೂಕುಗಳೂ ಇತರರ ಬಳಿಯಲ್ಲಿ ಕೇವಲ ದೊಣ್ಣೆಗಳೂ ಮಾತ್ರ ಇದ್ದುವು. ಪೋಲೀಸ್ ಕಮಿಶನರಾದ ಮಿ|| ಹೀಲಿಯವರು ದೂರದಿಂದ ಎಲ್ಲವನ್ನೂ ನೋಡುತ್ತಿದ್ದರು.

100 ಜನ ಸ್ವಯಂಸೇವಕರು ಈ ದಿನ ಬೆಳಗ್ಗೆ 9 ಗಂಟೆಗೆ ಮೊದಲನೆಯ ದಾಳಿಯನ್ನು ಪ್ರಾರಂಭಿಸಿದರು. ಅದರಲ್ಲಿ ಮೊನ್ನೆ ಮೊನ್ನೆ ಪ್ರಪಂಚವನ್ನೆಲ್ಲಾ ಕಾಲ್ನಡಗೆಯಲ್ಲಿಯೇ ಸುತ್ತಿಕೊಂಡು ಬಂದು ಪ್ರಸಿದ್ಧಿಹೊಂದಿದ ಕೆಲವು ಪಾರ್ಸಿತರುಣರೂ ಹಾಗೂ ಕೆಲವು ಪಾರ್ಸಿ ವಿದ್ಯಾರ್ಥಿಗಳೂ ಇದ್ದರು. ಇವರು ದಸ್ತಗಿರಿಯಾಗ ಅಥವಾ ಗಾಯಹೊಂದಿದ ಕೂಡಲೇ ಪ್ರೇಕ್ಷಕರ ಸಮೂಹದಿಂದ ಬೇರೆಯವರು ಬಂದು ಅವರ ಸ್ಥಳಗಳನ್ನು ಆಕ್ರಮಿಸುತ್ತಿದ್ದರು. ಆ ಅಪಾರವಾದ ಜನಸ್ತೋಮವನ್ನು ತಡೆಯುವುದು ಪೋಲೀಸರಿಗೆ ಅಸಾಧ್ಯವಾಗಿ ಅವರು ಕೇವಲ ತಮ್ಮ ಸಮೀಪದಲ್ಲಿದ್ದವರನ್ನು ಮಾತ್ರ ಹೊಡೆದು ಬಡೆದು ಓಡಿಸುತ್ತಿದ್ದರು. ಯುರೋಪಿಯನ್ ಪೋಲೀಸರ ಸ್ಥಿತಿಯು ಬಹಳ ಶೋಚನೀಯವಾಗಿತ್ತು. ಅವರು ಮೊದಲಿನಿಂದ ಕಡೆಯವರೆಗೂ ಅಸಾಧಾರಣವಾದ ತಾಳ್ಮೆಯನ್ನೇ ವ್ಯಕ್ತಪಡಿಸುತ್ತಿದ್ದರು. ಅವರು ಸಾಧ್ಯವಾದಷ್ಟುಮಟ್ಟಿಗೆ ಸ್ವಯಂಸೇವಕರಿಗೆ ಅಪಾಯಕರವಾದ ಸ್ಥಳಗಳಲ್ಲಿ ಪೆಟ್ಟು ಬೀಳದಂತೆ ನೋಡಿಕೊಳ್ಳುತ್ತಿದ್ದರು.

ಕೆಲವು ಸಮಯಗಳಲ್ಲಿ 50-60 ಜನ ಸ್ವಯಂಸೇವಕರು ಒಟ್ಟಿಗೆ ಉಪ್ಪಿನ ರಾಶಿಗಳ ಕಡೆಗೆ ನುಗ್ಗಿ ಉಪ್ಪನ್ನು ಲೂಟಿಮಾಡುತ್ತಿದ್ದರು. ಆ ಸಮಯದಲ್ಲಿ ಉಪ್ಪಿನ ರಾಶಿಗಳೆಲ್ಲವೂ ಕಿತ್ತಾಡುತ್ತಿದ್ದ ಸ್ವಯಂಸೇವಕರಿಂದ ತುಂಬಿ, ವಿಚಿತ್ರರೀತಿಯಿಂದ ತೋರುತ್ತಿದ್ದುವು. ಮೊದಲು 5-6 ಜನ ಯುರೋಪಿಯನ್ ಸಾರ್ಜೆಂಟರ ತಡೆಯಿಲ್ಲದ ಪ್ರಹಾರಗಳಿಂದಲೇ ಈ ಗುಂಪು ಚದರಿಹೋಗಬಹುದೆಂದು ತೋರಿತು. ಆದರೆ ಸತ್ಯಾಗ್ರಹಿಗಳಲ್ಲಿ ಹೆಚ್ಚು ಜನರು ಶಾಂತತೆಯಿಂದ ಆ ಏಟುಗಳನ್ನು ಸಹಿಸಿಕೊಂಡು, ತಮ್ಮ ಚೀಲಗಳಿಗೆ ಉಪ್ಪನ್ನು ತುಂಬಿಕೊಂಡೇ ಹೋಗುತ್ತಿದ್ದರು. ಕೆಲವರು ಸ್ವಲ್ಪಹೊತ್ತು ಓಡಾಡಿ, ಆ ಏಟುಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿ, ಕಡೆಗೆ ಭಗ್ನಮನೋರಥರಾಗಿ ಓಡಿಹೋಗುತ್ತಿದ್ದರು.

ಈ ಸಮಯದಲ್ಲಿ ಪ್ರೇಕ್ಷಕರ ಗುಂಪಿನಿಂದ ಕಲ್ಲಿನ ಸುರಿಮಳೆಯಾಗಿ ಕೆಲವು ಸಾರ್ಜಂಟರಿಗೆ ಗಾಯಗಳಾದುವು. ಸ್ವಯಂಸೇವಕರು ಮಾತ್ರ ಕಡೆಯವರೆಗೂ ಅಹಿಂಸಾತ್ಮಕರಾಗಿಯೇ ಇದ್ದರು. ಅಷ್ಟರಲ್ಲಿ ಪ್ರೇಕ್ಷಕರು ಕಲ್ಲು ಎಸೆಯುತ್ತಿದ್ದವರಲ್ಲಿ ಒಬ್ಬನನ್ನು ಹಿಡಿದು ಬಡೆಯುತ್ತಿರುವಲ್ಲಿ ಸ್ವಯಂಸೇವಕರು ಅವನ ಹೆಸರನ್ನು ಗುರುತು ಹಾಕಿಕೊಂಡು ಅವನನ್ನು ಓಡಿಸಿಬಿಟ್ಟರು.

ದಾಳಿಯು ನಡೆದ 3 ಗಂಟೆಗಳ ಅವಧಿಯಲ್ಲಿ ನಾನು ಅನೇಕ ಭೀಕರವಾದ ಮತ್ತು ವಿನೋದಕರವಾದ ವಿದ್ಯಮಾನಗಳನ್ನು ನೋಡಿದೆನು. ಪ್ರೇಕ್ಷಕರಲ್ಲಿ ಅನೇಕರು ಒಬ್ಬೊಬ್ಬರೇ ಕೆಸರಿನ ಬಚ್ಚಲನ್ನು ದಾಟಿ, ಚೀಲಗಳಲ್ಲಿ ಉಪ್ಪನ್ನು ತುಂಬಿಕೊಂಡು ಪೋಲೀಸರ ಕೈಗೆ ಸಿಕ್ಕದೆ ಹಿಂತಿರುಗಿ ಓಡಿಬರುತ್ತಿದ್ದರು.

ಹೀಗೆ ಅಟ್ಟಿಸಿಕೊಂಡು ಬರುತ್ತಿದ್ದ ಒಬ್ಬ ಬಿಳೀ ಸಾರ್ಜಂಟನು ನೀರಿನ ಹತ್ತಿರಕ್ಕೆ ಬಂದಾಗ ಮುಗ್ಗರಿಸಿ 5 ಅಡಿ ಆಳವಾದ ನೀರಿನಲ್ಲಿ ಬಿದ್ದು ಅಪಹಾಸ್ಯಕ್ಕೆ ಗುರಿಯಾದನು. ಇನ್ನೊಬ್ಬ ಸುಮಾರು 20 ವರುಷ ವಯಸ್ಸಿನ ತರುಣಆಫೀಸರನು ಸ್ವಯಂಸೇವಕರು ತನ್ನ ಕೈಯಿಂದ ತಪ್ಪಿಸಿಕೊಂಡು ಹೋದಾಗಲೆಲ್ಲ ಜಯಘೋಷ ಮಾಡುತ್ತಿದ್ದ ಪ್ರೇಕ್ಷಕರಿಗೆ ತನ್ನ ಟೋಪಿಯನ್ನು ತೆಗೆದು ಅಭಿವಂದಿಸುತ್ತಿದ್ದನು. ಪದೇ ಪದೇ ಬೀಳುತ್ತಿದ್ದ ಕಲ್ಲುಗಳನ್ನೂ, ಬಿಸಲಿನ ತಾಪವನ್ನೂ, ಪ್ರತಿಕ್ಷಣವೂ ಭೀಕರರೂಪವನ್ನು ತಾಳುವಂತೆ ತೋರುತ್ತಿದ್ದ ಆ ದಾಳಿಯನ್ನೂ, ವಡಲಾದಲ್ಲಿ ನೆರೆದಿದ್ದ ಆ 20,000 ಜನಗಳ ಮನದಲ್ಲಿ ಬೇರೂರಿದ್ದ ರಾಜಕೀಯ ಕಾರಣಗಳನ್ನೂ ಪರಿಗಣಿಸದಿರುವದಾದರೆ ಇಂದಿನ ನೋಟವು ಕೇವಲ ವಿನೋದಾರ್ಥವಾಗಿ ಏರ್ಪಡಿಸಿದ್ದ ಒಂದು ಅಪೂರ್ವ ಕೂಟದಂತೆ ತೋರುತ್ತಿತ್ತು. ಕೋಪಗೊಂಡ ತೋಟದ ಯಜಮಾನನ ಎದುರಿಗೆ ಸೇಬಿನ ಹಣ್ಣುಗಳನ್ನು ಸೂರೆ ಮಾಡುತ್ತಿದ್ದ ತುಂಟಬಾಲಕರ ಸಮೂಹದಂತೆ ಇಂದಿನ ನೋಟವು ವಿಚಿತ್ರವಾಗಿ ತೋರುತ್ತಿತ್ತು.

ಸತ್ಯಾಗ್ರಹಿಗಳ ಜಯವನ್ನು ಜಯಘೋಷಗಳಿಂದ ಪ್ರೋತ್ಸಾಹಿಸುತ್ತಿದ್ದ ಪ್ರೇಕ್ಷಕರ ದೃಷ್ಟಿಯಿಂದ ಭಾವಿಸುವದಾದರೆ ಸ್ವಯಂಸೇವಕರು, ದೇಶಸೇವೆಯೆಂಬ ಪವಿತ್ರಕಾರ್ಯದಲ್ಲಿ ಆತ್ಮಯಜ್ಞವನ್ನು ಮಾಡಲು ಸಿದ್ಧರಾಗಿದ್ದ ಮಹಾವೀರರಂತೆಯೂ, ಉಪ್ಪಿನಕೋಠಿಯನ್ನು ರಕ್ಷಿಸುತ್ತಿದ್ದ ಆ ಪೋಲೀಸರು ರಾಕ್ಷಸರೂಪವಾದ ರಾಜ್ಯಾಡಳಿತದ ಏಜಂಟರಂತೆಯೂ ಕಾಣಿಸುತ್ತಿದ್ದರು.

ಒಬ್ಬ ಸ್ತ್ರೀಯಳು ಇದ್ದಕ್ಕಿದ್ದ ಹಾಗೆ ಜನರ ಗುಂಪಿನಿಂದ ಹೊರಟು ತಂತಿಯ ಬೇಲಿಯನ್ನು ಹತ್ತಿಹೋಗಿ ತನ್ನ ಸೀರೆಯ ಸೆರಗಿನ ತುಂಬಲೂ ಉಪ್ಪನ್ನು ಕಟ್ಟಿಕೊಂಡು ಬಂದಳು. ಆಕೆಯ ಗಂಭೀರಭಾವವೂ, ತಾನು ತೆಗೆದುಕೊಂಡು ಬಂದ ಉಪ್ಪಿನ ಸಂಬಂಧವಾದ ಪವಿತ್ರಭಾವನೆಯೂ ಎಲ್ಲರ ಮನಸ್ಸನ್ನು ಆಕರ್ಷಿಸುವಂತಿತ್ತು!

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಉದಾರಪಕ್ಷದವರೂ ಬಿಹಾರ್ ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಮೆಂಬರರೂ ಎಕ್ಸ್-ಡೆಪ್ಯುಟಿಪ್ರೆಸಿಡೆಂಟರೂ ಆದ ಮಿ|| ಚೌಧರಿಭಗವತ್ಪ್ರಸಾದ ಮಹಾಪಾತ್ರರವರು ಸರಕಾರದ ದಬ್ಬಾಳಿಕೆಯನ್ನು ಕಂಡು ತಮ್ಮ ಕೌನ್ಸಿಲ್ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಕೃಷ್ಣನಗರದ ಮುಖ್ಯಮುಖ್ಯರಾದ 7 ಜನ ವಕೀಲರು ಶ್ರೀಮತಿ ಸರೋಜಿನಿನಾಯ್ಡುರವರ ದಸ್ತಗಿರಿ ಸಂಬಂಧವಾಗಿ ಹರತಾಳವನ್ನು ಆಚರಿಸಿ ಮೆರವಣಿಗೆಯನ್ನು ಮಾಡಿದರೆಂಬ ಅಪರಾಧದ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು.

ಲಕ್ನೋದಲ್ಲಿ ಪೋಲೀಸರು ಸ್ವಯಂಸೇವಕರ ಮೇಲೆ ನಡೆಯಿಸಿದ ದಬ್ಬಾಳಿಕೆಯನ್ನು ನಿಷೇಧಿಸಿ, ಪಂಡಿತ ರಾಮಬಿಹಾರಿ ತಿವಾರಿಯವರು ತಮ್ಮ ಕೌನ್ಸಿಲ್ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು. ಇವರು ಗವರ್ನರರಿಗೆ ಕಳುಹಿಸಿದ ರಾಜಿನಾಮೆಯ ಪತ್ರದಲ್ಲಿ "ಇಂಥ ದಬ್ಬಾಳಿಕೆಯು ಜಗತ್ತಿನ ಚರಿತ್ರೆಯಲ್ಲಿಯೇ ಅಪೂರ್ವವಾದುದೆಂದು" ಬರೆದಿರುತ್ತಾರೆ.

ಸೊಲ್ಲಾಪುರದಲ್ಲಿ ಜಾರಿಯಲ್ಲಿರುವ ಲಷ್ಕರೀಕಾಯಿದೆಯ ಸಂಬಂಧವಾಗಿ ಸತ್ಯಾಗ್ರಹವನ್ನು ನಡೆಯಿಸಲು ಮಹಾರಾಷ್ಟ್ರದ "ಸಂಗ್ರಾಮಕಟಿ" ವು 3 ಗುಂಪು ಸ್ವಯಂಸೇವಕರನ್ನು ಕಳುಹಿಸಲು ನಿಶ್ಚಯ ಮಾಡಿರುವದೆಂದು ಮುಂಬೈ ಕಾಂಗ್ರೆಸ್ ಹಸ್ತಪತ್ರಿಕೆಯಲ್ಲಿ ಪ್ರಕಟವಾಗಿರುವದು. ಈ ಮಧ್ಯೆ, ಸೊಲ್ಲಾಪುರದ ಲಷ್ಕರೀಕಾಯಿದೆಯನ್ನು ಪ್ರತಿಭಟಿಸಲು ವಿಲ್ಲೆಪರ್ಲೆಯಿಂದ 27 ಜನ ಸ್ವಯಂಸೇವಕರು ಪುಣೆಗೆ ಹೊರಟಿರುವರು. ಇಷ್ಟರಲ್ಲಿಯೇ ಬೊಂಬಾಯಿ ಕಾಂಗ್ರೆಸ್‌ಕಮಿಟಿಯವರು 37 ಜನ ಸ್ವಯಂಸೇವಕರನ್ನು ಸೊಲ್ಲಾಪುರಕ್ಕೆ ಕಳುಹಿಸುವರು.

ಕಳೆದ ಮೇ 28 ನೆಯ ತಾರೀಖಿನ ದಿವಸ ಪೋಲೀಸರು ಉಂಟಾಡಿಯಲ್ಲಿ ಕ್ಯಾಂಪ್ ಮಾಡಿಕೊಂಡು 65 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಇವರನ್ನು ಠಾಂದ್ರಕ್ಕೆ ಕರೆತಂದು ಅನಂತರ ಬಿಟ್ಟುಬಿಟ್ಟರು.

ಮುಂಬಯಿ ಕಾಂಗ್ರೆಸ್ಸಿನವರು ಇದುವರೆಗೆ 4,600 ಸ್ವಯಂಸೇವಕರನ್ನು ಸೇರಿಸಿರುವರು. ಅದರಲ್ಲಿ 150 ಜನ ಪಾರ್ಸಿಯವರೂ, 250 ಜನ ಮಹಮ್ಮದೀಯರೂ ಸೇರಿರುತ್ತಾರೆ.

ಖೈರಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಪ್ರಸಿದ್ಧಪತ್ರಿಕೆಯಲ್ಲಿ ಇದುವರೆಗೆ 1824 ಜನ ಗ್ರಾಮಾಧಿಕಾರಿಗಳು ರಾಜೀನಾಮೆಯನ್ನು ಕೊಟ್ಟಿರುವರೆಂದೂ, 6953 ಜನ ಸ್ವಯಂಸೇವಕರು ಸೇರಿರುವರೆಂದೂ ಪ್ರಸಿದ್ಧವಾಗಿದೆ.

ಕಳೆದ ಮೇ 29ನೆಯ ತಾರೀಖಿನ ದಿವಸ ಬುಲ್ಸಾರದಿಂದ ದರ್ಶನಾಕ್ಕೆ ಬಂದ 100 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿ ಮಾಡಿ, ಡುಂಗಾರಿಗೆ ಕರೆದೊಯ್ದರು. ಅಲ್ಲಿ 25 ಜನರನ್ನು ವಿಚಾರಣೆಮಾಡಿ ಪ್ರತಿಯೊಬ್ಬರಿಗೂ ಆರು ತಿಂಗಳು ಕಠಿಣ ಸಜೆಯನ್ನು ವಿಧಿಸಿದರು.

ಪೆಷಾವರ್ ಗಲಾಟೆಗಳಿಂದ ಜನರಿಗಾದ ದುಃಖನಿವಾರಣೆ ಮಾಡಲು ಪಂಡಿತ ಮದನಮೋಹನ ಮಾಲವೀಯರವರು ಹೊರಟರು. ಸರ್ಕಾರದವರು ಅವರನ್ನೂ ಅವರ ಪರಿವಾರವನ್ನೂ ಜಿಲಾಬಾದ್ ರೈಲ್ವೇ ಸ್ಟೇಷನ್ನಿನಲ್ಲಿ ದಸ್ತಗಿರಿ ಮಾಡಿ (೨೭ನೇ ತಾ|) ಕಂಬಲ್ ಪುರಕ್ಕೆ ತಂದು ಬಿಟ್ಟು "ಹೊರಟುಹೋಗಿ" ಅಂದರು. ಪಂಡಿತರು ಮುಂದೇನು ಮಾಡುವರೋ ನೋಡಬೇಕು.

ವೀರಮಾತೆಯರಾದ—1. ಶ್ರೀಮತಿ ರುಕ್ಮಿಣೀಲಕ್ಷ್ಮೀಪತಿಗೆ 1 ವರ್ಷ, ೨. ಶ್ರೀಮತಿ ಕಮಲಾದೇವಿಗೆ 9 ತಿಂಗಳು, 3. ಶ್ರೀಮತಿ ಸರೋಜಿನೀದೇವಿಗೆ 1 ವರ್ಷ, 4. ದುರ್ಗಾಬಾಯಿಗೆ 6 ತಿಂಗಳು, ೫. ಶ್ರೀಮತಿ ಕಮಲಾದೇವಿಗೆ 6 ತಿಂಗಳು, 6. ಶ್ರೀಮತಿ ಸತ್ಯವತೀದೇವಿಗೆ 6 ತಿಂಗಳು ಈ ಪ್ರಕಾರ ಶಿಕ್ಷೆಯು ವಿಧಿಸಲ್ಪಟ್ಟಿತು.

ಕಾಂಗ್ರೆಸ್ಸಿಗೆ ಹಣಕೊಟ್ಟರೆ 6 ತಿಂಗಳ ಶಿಕ್ಷೆ, ೧೦೦ ರೂಪಾಯಿಗಳ ಜುಲ್ಮಾನೆಯಾಗುವುದೆಂದು ಬಂಗಾಳ ಸರಕಾರದ ಆಜ್ಞೆಯುಂಟಾಗಿರುವುದು.

ದರಸನಾಕ್ಕೆ ಹೋಗಲು 11,000 ಸ್ವಯಂಸೇವಕರು ಸಿದ್ಧರಾಗಿದ್ದಾರೆ. ಪಡೆಪಡೆಗಳಾಗಿ ಕಾಲ್ನಡಗೆಯಿಂದ ಬರುವ ಸತ್ಯಾಗ್ರಹಿಗಳನ್ನು ಪೋಲೀಸರು ಲಾಠಿಗಳಿಂದ ಹೊಡೆದು, ಹಲವರನ್ನು ದಸ್ತಗಿರಿ ಮಾಡಿ, ಶಿಕ್ಷೆಗೆ ಗುರಿಮಾಡುತ್ತಿದ್ದಾರೆ.

ಮುಂಬಯಿ ವಿಠಲದಾಸ ಚಂದನದಾಸ ವಲ್ಲಭನೆಂಬ 18 ವಯಸ್ಸಿನ ಸ್ವಯಂಸೇವಕನು ವಡಾಲಾದಲ್ಲಿ ಸತ್ಯಾಗ್ರಹ ಮಾಡುತ್ತಿರಲು ಸಾರ್ಜಂಟನೊಬ್ಬನು ಅವನ ಮೂಳೆ ಮುರಿದನು. ಆಸ್ಪತ್ರೆಯಲ್ಲಿ ಆರೈಕೆ ಪಡೆದು ಪುನಃ ಸತ್ಯಾಗ್ರಹಕ್ಕೆ ಸಿದ್ಧನಾಗಿ, ರೈಲು ಹತ್ತಿದನು. ನಿತ್ರಾಣದಿಂದ ಸತ್ತನು. ಈ ವೀರನ ಸ್ಮಶಾನಯಾತ್ರೆಗೆ 2 ಲಕ್ಷ ಜನರು ಸೇರಿದ್ದರು.

ಮುಂಬಯಿಯ ಪ್ರಸಿದ್ಧ ಅಡ್ವೋಕೇಟರಾದ ಶ್ರೀ ಭುಲಾಭಾಯಿ ದೇಸಾಯಿಯವರು ಸ್ವರಾಜ್ಯ ಫಂಡಿಗೆ 5 ಲಕ್ಷ ರೂ. ಗಳನ್ನು ಕೊಟ್ಟಿರುವರು.

ಶ್ರೀಮತಿ ಸತ್ಯವತಿಗೆ ಆರುತಿಂಗಳು ಶಿಕ್ಷೆ.

ನ್ಯೂ ಡೆಲ್ಲೀ, ಮೇ ೨೭.

ಸ್ವಾಮಿ ಶ್ರದ್ಧಾನಂದರ ಮೊಮ್ಮಗಳಾದ ಶ್ರೀಮತಿ ಸತ್ಯವತಿಯವರಿಗೆ ಆರು ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿರುವರು.

ಕೋರ್ಟಿನಲ್ಲಿ ಶ್ರೀಮತಿ ಸತ್ಯವತಿಯವರ ಹೇಳಿಕೆ.

ನಾನೊಬ್ಬ ಗೌರವಸ್ಥ ಕುಟುಂಬದವಳು. ನನಗೆ ಇಬ್ಬರು ಮಕ್ಕಳಿರುವರು. ಸಾಮಾನ್ಯವಾಗಿ ಮನೆಯಲ್ಲಿ ಇರುವುದೇ ನಮ್ಮ ಹೆಂಗಸರ ಕರ್ತವ್ಯ! ಆದರೆ ನಮ್ಮ ಮಾತೃಭೂಮಿಗೆ ಪ್ರಾಣಗಳನ್ನು ನಮ್ಮವರು ಒಪ್ಪಿಸುತ್ತಿರುವ ಈ ವಿಷಮಕಾಲದಲ್ಲಿ ನಾನು ಮನೆಯಲ್ಲಿರದೆ ದೇಶಸೇವೆಗೆ ಹೊರಟೆನು. ನನ್ನಂತೆಯೇ ನನ್ನ ಸಹೋದರಿಯರೂ ಸಹೋದರರೂ ಲಕ್ಷಾಂತರ ಜನರು ಪ್ರಾಣಗಳನ್ನು ಒಪ್ಪಿಸಲು ಸಿದ್ಧರಿರುವರು. ರಾಜದ್ರೋಹಕರವಾದ ಭಾಷಣಗಳನ್ನು ನಾನು ಮಾಡಿದೆನಂತೆ! ಅದಕ್ಕಾಗಿ ಜುಲ್ಮಾನೆ ಕೊಡಬೇಕಂತೆ! ಈಗಿನ ಸರ್ಕಾರದ ಪದ್ಧತಿಯು ಎಲ್ಲಿಯವರೆಗೆ ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ನಾನು ರಾಜದ್ರೋಹದ ಭಾಷಣವನ್ನು ಮಾಡುವುದೇ ಉಚಿತ! ಕೋಟ್ಯಂತರ ಭಾರತೀಯರು ಭರತಖಂಡದ ಸ್ವಾತಂತ್ರ್ಯಕ್ಕೆ ಇಂದು ಸೊಂಟ ಕಟ್ಟಿರುವರು. ಅದರಲ್ಲಿ ನಾನು ಒಬ್ಬಳು. ಸ್ಥಿತಿಗಳು ಬಹಳ ವಿಷಮಕ್ಕೆ ಬಂದಿರುವುದರಿಂದಲೆ ಈ ಗುಲಾಮಗಿರಿಯನ್ನು ತಡೆಯಲಾರದೆ, ಸ್ತ್ರೀಯರುಗಳಾದ ನಾವುಗಳು ರಣರಂಗಕ್ಕೆ ನಮ್ಮ ಸಹೋದರರೊಂದಿಗೆ ಹೊರಟಿರುವೆವು. ಭಾರತೀಯ ಸ್ತ್ರೀಯರಾದ ನಾವುಗಳು ಆಚಾರವಂತರು! ಶೀಲತೆಯಿಂದ ನಡೆದುಕೊಳ್ಳುವೆವು. ಭಯ ಭೀತಿ ಮಾನ ಮರ್ಯಾದೆಗಳಿಗೆಲ್ಲಾ ಅಂಜುವೆವಾದರೂ ನಮ್ಮ ದೇಶಕ್ಕೋಸ್ಕರ ಪ್ರಾಣ ಒಪ್ಪಿಸಲು ಹೊರಟಿರುವೆವು. ರಾಣಿ ಲಕ್ಷ್ಮೀಬಾಯಿಯ ಕಾಲಕ್ಕೂ ಈ ಕಾಲಕ್ಕೂ ಮಧ್ಯೆ ಸ್ತ್ರೀಯರು ರಣರಂಗಕ್ಕೆ ಹೊರಟಿದ್ದಿಲ್ಲ. ಶಾಂತಿಯಿಂದ ನಾವುಗಳು ಜಯಪ್ರದ ಹೊಂದಲು ಈಗ ಹೊರಟಿರುವೆವು. ನಮ್ಮಗಳಿಗೆ ಚಿತ್ರಹಿಂಸೆಯನ್ನು ಮಾಡುತ್ತಿರುವ ಸರ್ಕಾರವು ಶೀಘ್ರದಲ್ಲಿಯೇ ಕೊನೆಗಾಣುವುದು. ನಾವು ಜಯಶೀಲರಾಗಲೇಬೇಕು.

ಯರವಡಾ ಜೈಲಿನಿಂದ ಮಹಾತ್ಮರು ಬರೆದ ಪತ್ರಗಳು.

ಕುವರಿ ಸ್ಲೇಡ್‌ಳಿಗೆ:—

ಜೈಲಿನಿಂದ ನಾನು ಬರೆಯುತ್ತಿರುವುದು ಇದೇ ಪ್ರಥಮ ಪತ್ರ! ಅದರಲ್ಲೂ ಮೌನವ್ರತದ ದಿನ ಬರೆಯುತ್ತಿರುವುದು ಒಂ ಪ್ರಥಮ! ಇಲ್ಲಿ ನಾನು ಸಂಪೂರ್ಣ ಸುಖದಿಂದ ಇದ್ದೇನೆ. ಬಹಳದಿನಗಳಿಂದಲೂ ನನಗೆ ವಿಶ್ರಾಂತಿ ಇಲ್ಲದೆ ಹೋಗಿತ್ತು. ಅದಕ್ಕೆ ಸಂಪೂರ್ಣ ಅವಕಾಶವು ಈಗ ದೊರೆತಿದೆ. ಹೊರಗೆ ಬಯಲಿನಲ್ಲಿ ಮಲಗಿಕೊಳ್ಳಲು ನನಗೆ ಅವಕಾಶವು ದೊರೆತಿದೆ. ಆದರಿಂದ ಬಹಳ ಚೆನ್ನಾಗಿ ನಿದ್ರೆಯು ಬರುತ್ತಿದೆ. ಆಹಾರವೂ ಕೂಡ ನನ್ನ ಇಷ್ಟದಂತೆಯೇ ನಿರ್ಣಯಿಸಲ್ಪಟ್ಟಿದೆ.

ನೀವು ಬಹಳ ಬುದ್ಧಿವಂತಿಕೆಯಿಂದ ಪ್ಯಾಕ್ ಮಾಡಿ ಕಳುಹಿಸಿದ ರಾಟೆಯು ತಲುಪಿತು. ಅದನ್ನು ನೋಡಿ ಪರಮಾನಂದವಾಯಿತು. ನೀವು ಕಳುಹಿಸಿರುವ ಪುಸ್ತಕಗಳು ನನಗೆ ಬೇಕಾಗಿರಲಿಲ್ಲ. ನಾನು ಬೇರೆ ಪುಸ್ತಕಗಳನ್ನು ಕೇಳಿದ್ದೆನು. ಆದರೂ ಚಿಂತೆಯಿಲ್ಲ. ನನಗೆ ನೂಲುವ ಉದ್ಯೋಗವು ಸಾಕಾದಷ್ಟು ದೊರೆತಿದೆ. ನೀವು ಕಳುಹಿಸಿದ ಹತ್ತಿಹಿಂಜುವ ಬಿಲ್ಲನ್ನು ದಾರಿಯಲ್ಲಿ ಅಧಿಕಾರಿಗಳು ಕಳೆದುಬಿಟ್ಟರಂತೆ! ಹೋದರೆ ಹೋಗಲಿ: ಬೇಕಾದಷ್ಟು ಹಿಂಜಿರುವಹತ್ತಿಯೇ ಇರುವಾಗ ಅದರ ಯೋಚನೆ ಈಗಲೇ ಏತಕ್ಕೆ? ಆಶ್ರಮದ ಟಪ್ಪಾಲನ್ನೂ ಮತ್ತೂ ವಾರಕ್ಕೊಂದು ನಿಮ್ಮಿಂದ ಯೋಗಕ್ಷೇಮ ಪತ್ರವನ್ನೂ ಇಲ್ಲಿಗೆ ಕಳುಹಿಸಬಹುದೆಂದು ಕೋರುತ್ತೇನೆ.

ನನಗೆ ದೊರೆಯುವಷ್ಟು ಕಾಲವನ್ನೆಲ್ಲಾ ರಾಟೆಯಲ್ಲಿ ನೂಲುವುದಕ್ಕೇ ನಾನು ಉಪಯೋಗಿಸುತ್ತಿದ್ದೇನೆ. ರಾಟೆಯಲ್ಲಿ ವೇಗವೇ ನನಗಿಲ್ಲವೆಂದು ತೋರುತ್ತದೆ. ಒಂದು ಘಂಟೆಗೆ ೩೦ ಸುತ್ತು ಕೂಡ ನೂಲುವುದು ನನ್ನ ಕೈಯಿಂದ ಆಗುವದಿಲ್ಲ. ಮೊದಲನೆಯ ದಿನ ೧೬೦ ಸುತ್ತು ನೂಲುವುದಕ್ಕೆ ಏಳುಘಂಟೆಯು ಹಿಡಿಯಿತು. ಅಷ್ಟು ಹೊತ್ತಿಗೆ ನನಗೆ ಸಾಕಾಗಿಹೋಯಿತು. ಬಹಳ ವೇಗದಿಂದ ನೂಲುವದನ್ನು ನಾನು ಕಲಿಯಲೇ ಬೇಕು. ಆದರಿಂದ ಪುಸ್ತಕಗಳೇನೂ ಈಗ ನನಗೆ ಬೇಕಿಲ್ಲ. ಜೈಲಿನ ಅಧಿಕಾರಿಗಳೆಲ್ಲರೂ ನನ್ನನ್ನು ಬಹಳ ದಯೆಯಿಂದಲೂ ಮತ್ತು ಎಚ್ಚರಿಕೆಯಿಂದಲೂ ಕಾಣುತ್ತಿರುವರು. ನನ್ನ ಪ್ರೀತಿ ನಿಮಗೆ ಇರಲಿ.

ಯರವಡಾ, ಇತಿ.
೧೨-೫-೩೦. ಬಾಪು.

ಆಶ್ರಮನಿವಾಸಿಗಳಿಗೆ:—

"ನಾನು ಆರೋಗ್ಯವಾಗಿದ್ದೇನೆ. ಮಾಮೂಲಿನಂತೆ ಬೆಳಗಿನ ಝಾವ ೪ ಘಂಟೆಯ ಹೊತ್ತಿಗೆ ಇಲ್ಲೂ ಏಳುತ್ತಿದ್ದೇನೆ. ನನಗೆ ಒಂದು ದೀಪವು ಕೊಡಲ್ಪಟ್ಟಿದೆ. ಭಗವದ್ಗೀತೆಯನ್ನು ಮೊದಲಿನಂತೆ ಪ್ರತಿ ದಿನವೂ ಪಠಿಸುತ್ತಿದ್ದೇನೆ. ಬಹಳದಿನಗಳಿಂದಲೂ ವಿಶ್ರಾಂತಿಯು ಇಲ್ಲದೆ ಬಹಳ ದಣಿದಿದ್ದೆನು. ಈಗ ವಿಶ್ರಮಿಸಿಕೊಳ್ಳುತ್ತಿದ್ದೇನೆ. ಆಹಾರದ ನಿರ್ಣಯು ನನ್ನ ಇಷ್ಟದಂತೆಯೇ ಮಾಡಲ್ಪಟ್ಟಿದೆ. ಆಡಿನ ಹಾಲನ್ನು ನನ್ನ ಎದುರಿನಲ್ಲಿಯೇ ಕರೆಯುಸುತ್ತಿದ್ದಾರೆ. ನನ್ನ ಊಟದ ಪಾತ್ರೆಗಳನ್ನು ತೊಳೆಯುಲು ಪ್ರತ್ಯೇಕವಾಗಿ ಒಬ್ಬರು ಇದ್ದಾರೆ. ಸದ್ಯಕ್ಕೆ ಮೂರು ಪೌಂಡು ಹಾಲನ್ನು ತೆಗೆದುಕೊಳ್ಳುತ್ತಿದ್ದೇನೆ. ತಣ್ಣೀರೇ ನನಗೆ ಬಹಳ ಹಿತಕರವಾಗಿ ಕಾಣುತ್ತದೆ. ಅದನ್ನೇ ನಾನು ಸ್ನಾನಕ್ಕೆ ಉಪಯೋಗಿಸುತ್ತಿದ್ದೇನೆ. "ಈ ದೇಹವನ್ನು ತಣ್ಣೀರಿನಲ್ಲೇ ಸ್ನಾನಮಾಡಿಸಲು ಅವಕಾಶವಿರುವಾಗ ಬಿಸಿನೀರು ಏತಕ್ಕೆ" ಎಂದು ನನ್ನ ಭಾವನೆ. ನನಗೆ ಬೇಕಾಗುವ ಎಲ್ಲ ಅನುಕೂಲಗಳನ್ನೂ ಸರ್ಕಾರದವರು ಕಲ್ಪಿಸಿಕೊಟ್ಟಿದ್ದಾರೆ.

ಹಣ್ಣನ್ನು ಕಳುಹಿಸಲು ಇಷ್ಟಪಡುವ ಸ್ನೇಹಿತರನ್ನು ಸಂಬೋಧಿಸಿ, "ಈ ಕಾಲದಲ್ಲಿ ಒಬ್ಬರ ಎಚ್ಚರಿಕೆಯನ್ನು ಇನ್ನೊಬ್ಬರು ಅಷ್ಟೊಂದು ಗಮನಿಸಬೇಕಾಗಿಲ್ಲ. ನಮ್ಮಲ್ಲಿ ಹಣವಿಲ್ಲ. ಅದರಲ್ಲೂ ವಿಶೇಷ ಖರ್ಚುಗಳಿಗೆ ಹಣವನ್ನು ಒಬ್ಬರೂ ಉಪಯೋಗಿಸಬಾರದೆಂದು ನನ್ನ ಭಾವನೆ."

ನೂಲುವ ವಿಚಾರದಲ್ಲಿ ಮಾತ್ರ ನಾನು ಬಹಳ ಕೃಶನುವಾಗಿದ್ದೇನೆ. ಒಂದು ಹ್ಯಾಂಕಿನಷ್ಟು ನೂಲನ್ನು ಪ್ರತಿನಿತ್ಯವೂ ತೆಗೆಯುತ್ತಿದ್ದೇನೆ. ರಾಟೆಯಲ್ಲಿ ನೂಲುವ ವೇಗವು ನನಗೆ ಕಮ್ಮಿಯಾಗಿದೆ. ವಾರ್ಡಾದಲ್ಲಿ ಅರ್ಧ ಘಂಟೆಗೆ ೮೦ ಸುತ್ತು ನೂಲುವರೆಂದು ನಾನು ಕೇಳಿದ್ದೇನೆ. ಅದೆಷ್ಟು ಎಂಬುದನ್ನು ಸರಿಯಾಗಿ ವಿಚಾರಿಸಿ ನನಗೆ ಬರೆಯಿರಿ.

ಧರ್ಮಪತ್ನಿಯವರಾದ ಕಸ್ತೂರಿಬಾಯಿಯವರಿಗೆ:—

ನನ್ನ ದಸ್ತಗಿರಿ ಆಗುವುದಕ್ಕೆ ಹಿಂದಿನ ದಿನ ನಿನ್ನನ್ನು ಮತ್ತು ಇತರ ಸಹೋದರಿಯರನ್ನು ನೋಡಿದ್ದೆನು. ಆದಿನ ನಾವು ಎಷ್ಟು ಸಂತೋಷದಿಂದ ಇದ್ದೆವು. ನೀವು ವಾಸಿಸುವ ಮನೆಯವರೆಗೂ ನಿಮ್ಮ ಸಂಗಡ ನಾನು ನಡೆದುಕೊಂಡು ಬಂದದ್ದು ಎಷ್ಟು ಹಿತವಾಗಿದ್ದಿತು. ನಮ್ಮ ಮೇಲೆ ದೇವರ ಕೃಪೆ ಇದೆ. ಆಕಾಶದಿಂದ ಮಳೆಯು ಸುರಿಯುವಂತೆ ದೇವರ ದಯೆಯು ನಮ್ಮ ಮೇಲೆ ಧಾರೆಯಾಗಿ ಸುರಿಯುತ್ತಿದೆ. ನೀವು ಯಾರೂ ನನ್ನ ವಿಚಾರವನ್ನು ಹಚ್ಚಿಕೊಳ್ಳಬೇಡಿರಿ; ಗಾಬರಿ ಪಡಬೇಡಿರಿ; ಭಯಪಡಬೇಡಿರಿ.

ಪುತ್ರರಾದ ದೇವೀದಾಸ್ ಗಾಂಧಿಯವರಿಗೆ:—

ನೀನು ಎಲ್ಲಿರುವಿಯೋ ನನಗೆ ಗೊತ್ತಿಲ್ಲ. ಜಗದೀಶ್ವರನು ನಮ್ಮನ್ನೆಲ್ಲಾ ರಕ್ಷಿಸುತ್ತಿದ್ದಾನೆ. ಅದರಿಂದ ಒಬ್ಬರಿಗೊಬ್ಬರು ಸುಮ್ಮನೆ ಏಕೆ ಚಿಂತಿಸಬೇಕು? ಅದರಿಂದ ಆ ಚಿಂತೆಯೇ ಬೇಡ.

ಶ್ರೀಮತಿ ಸರೋಜಿನೀನಾಯುಡುರವರಿಗೆ ಶಿಕ್ಷೆ.

ಬುಲ್ಸಾರು ಮೇ ೨೨

ತಾ|| ೨೨-೫-೩೦ ನೆಯ ದಿವಸ ಶ್ರೀಮತಿ ಸರೋಜಿನೀದೇವಿಯವರಿಗೆ ಒಂಬತ್ತು ತಿಂಗಳು ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು.

ಕೋರ್ಟಿನಲ್ಲಿ ಶ್ರೀಮತಿ ಸರೋಜಿನೀದೇವಿಯವರ ಹೇಳಿಕೆ.

ಬಿಲ್ಮೋರಾ ಮೇ ೨೧

ದಾಸ್ಸಾನದ ಧರ್ಮಯುದ್ಧದ ಕೆಲಸಕ್ಕೆ ಹೃದಯಪೂರಿತವಾದ ವಿಶ್ವಾಸದಿಂದ ನಾನಾಗಿಯೇ ಕೈಹಾಕಿದ್ದೇನೆ. ನಿನ್ನೆಯ ಆ ಪೋಲೀಸರ ಕ್ರೂರ ಹೊಡೆತದಲ್ಲಿ ನಾನೂ ಏಟುತಿಂದು ಭಾಗಿಯಾಗಕೂಡದೆಂದು ನನಗೆ ಸತ್ಯಾಗ್ರಹ ಕಮಿಟಿಯವರು ಹುಕುಂ ಮಾಡಿದ್ದರು. ನಾನು ಹೆಂಗಸೆಂದೂ, ಹೆಂಗಸರ ಮುಂದೆ ಸತ್ಯಾಗ್ರಹಿಗಳು ಹೋದರೆ ಅವರಿಗೆ ಪುರುಷತ್ವವಿಲ್ಲವೆಂದು ಜನಗಳು ಭಾವಿಸುವರೆಂದೂ, ಆದರಿಂದ ಅವರನ್ನು ನಾನು ಮುಂದಾಳಾಗಿ ಕರೆದುಕೊಂಡು ಹೋಗಕೂಡದೆಂದೂ, ಸತ್ಯಾಗ್ರಹಿಗಳು ನಿನ್ನೆ ಹಟಹಿಡಿದರು. ಆದರಿಂದ ನಾನು ಬಹಳ ದೂರದಲ್ಲಿಯೇ ಸತ್ಯಾಗ್ರಹಿಗಳ ಹಿಂದೆ ನಿಲ್ಲಬೇಕಾಯಿತು. ವಾಲಂಟಿಯರುಗಳು ದೊಣ್ಣೆ ಹೊಡೆತಗಳಿಂದ ಮೂರ್ಛೆಗೊಂಡು ಒಬ್ಬೊಬ್ಬರಾಗಿ ಕೆಳಗೆ ಬೀಳುತ್ತಿದ್ದರೂ, ಮಿಕ್ಕವರು ಧೈರ್ಯದಿಂದ ಏಟಿಗೆ ತಲೆಯೊಡ್ಡಿ ಶಾಂತತೆಯಿಂದ ರಾಮನಾಮವನ್ನು ಹೇಳಿಕೊಂಡು ಮುಂದಕ್ಕೆ ನುಗ್ಗುತ್ತಿದ್ದರು. ಇಂಥ ವೀರರನ್ನು ನೋಡಿ ನನಗೆ ಪರಮಾನಂದವಾಗಿ ನಾನೂ ಕೂಡ ಅವರಂತೆ ಆಗಬೇಕೆಂಬ ಆಶೆಹುಟ್ಟಿ ಸ್ವಲ್ಪದೂರ ಉತ್ತರದಿಕ್ಕಿನ ಕಡೆಗೆ ಹೋಗುತ್ತಿದ್ದೆನು. ಅಲ್ಲಿ ಪೋಲೀಸರ ಕ್ರೌರ್ಯವು ಅಸಾಧ್ಯವಿತ್ತು. ಅಷ್ಟು ಹೊತ್ತಿಗೆ ನನ್ನನ್ನು ದಸ್ತಗಿರಿಮಾಡಿಬಿಟ್ಟರು.

ಶ್ರೀ ಸರೋಜಿನೀದೇವಿಯವರು ತಮ್ಮ ಕುಮಾರಿ ಪದ್ಮಜಾದೇವಿಗೆ ಬರೆದ ಪತ್ರ.

ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಈ ಸ್ಥಳಕ್ಕೆ ನಾನು ಬಂದಾಗ ಇಲ್ಲಿ ಇಷ್ಟೊಂದು ತಮಾಷೆ ಆಗುತ್ತದೆಂದು ನಾನು ಎಂದಿಗೂ ಭಾವಿಸಿರಲಿಲ್ಲ. ನಾನು ಬರುವಮಾರ್ಗದಲ್ಲೆಲ್ಲಾ ಜನಗಳ ಗುಂಪು ತಂಡೋಪತಂಡವಾಗಿ ನೆರೆದಿದ್ದಿತು. ದಾರಿಯುದ್ದಕ್ಕೂ ಹೂವಿನ ಹಾರಗಳು ನನಗೆ ಅರ್ಪಿಸಲ್ಪಡುತ್ತಿದ್ದವು. ನಾನು ಎಂದೂ ನೋಡದ ಹಾಳುಸಂದಿಗೊಂದಿಗಳನ್ನೆಲ್ಲಾ ಸುತ್ತಿಕೊಂಡು ೩೦೦ ಜನ ವಾಲಂಟಿಯರುಗಳಿದ್ದ ಬಿಡಾರಕ್ಕೆ ಬಂದೆನು. ಪ್ರಾರ್ಥನೆಗಳೂ ರಾಷ್ಟ್ರಗೀತೆಗಳೂ ರಾಷ್ಟ್ರಧ್ವಜದ ವಂದನೆಗಳೂ ಆದ ತರುವಾಯ ಶ್ರೀಮತಿ ಕಸ್ತೂರಿಬಾಯಿಗಾಂಧೀಯವರು ನಮ್ಮನ್ನು ಹರಿಸಿದರು. ಅನಂತರ ನಾನು ಸೇವಾದಳದ ಪಡೆಯನ್ನು ಉಪ್ಪಿನ ಕಾರ್ಖಾನೆಗೆ ಕರೆದುಕೊಂಡು ಬಂದೆನು. ಇಲ್ಲಿಂದ ತಮಾಷೆ ಪ್ರಾರಂಭವಾಯಿತು. ಅಲ್ಲಿ ಪೋಲೀಸರು ತಂಡೋಪತಂಡವಾಗಿ ಬಂದು ಕೋವಿಗಳು ದೊಣ್ಣೆಗಳು ಇತ್ಯಾದಿ ಎಲ್ಲಾ ತರಹದ ಆಯುಧಗಳನ್ನು ಹಿಡಿದುಕೊಂಡು ನಿಂತಿದ್ದರು. ತತ್‌ಕ್ಷಣವೇ ನಮ್ಮ ಸುತ್ತಲೂ ಮುತ್ತಿದರು. "ನಿಮ್ಮೊಂದಿಗೆ ನಾವೂ ಸಹ ನೀವು ಇರುವವರೆಗೆ ಸತ್ಯಾಗ್ರಹ ಮಾಡುತ್ತೇವೆ." ಎಂದು ಕಲೆಕ್ಟರ್‌ರವರು ಬಹಳ ಜಾಣತನದಿಂದ ಹೇಳಿದರು. ತತ್‌ಕ್ಷಣವೇ ನಾನು ಪಕ್ಕದ ಒಂದು ಗುಡಿಸಲಿನಿಂದ ಒಂದು ಕುರ್ಚಿ ತರುವಂತೆ ಹೇಳಿಕಳುಹಿಸಿ ರಸ್ತೆಯ ಮಧ್ಯದಲ್ಲಿ ಇಲ್ಲಿಯೇ ಕುಳಿತಿದ್ದೇನೆ. ನನ್ನ ವಾಲೀಂಟಿಯರುಗಳೆಲ್ಲರೂ, ಪ್ರೆಸ್ ಪ್ರತಿನಿಧಿಗಳೂ, ಜನಗಳೂ ಎಲ್ಲರೂ ಕುಳಿತಿದ್ದೇವೆ. ಅಧಿಕಾರಿಗಳು ಮಾತ್ರ ಪೋಲೀಸಿನವರ ಗುಂಪಿನ ಸುತ್ತಲೂ ಹಿಂದಕ್ಕೂ ಮುಂದಕ್ಕೂ ಓಡಾಡುತ್ತಿರುವರು. ಸ್ಟೇಷನ್ನಿನಲ್ಲಿ ಒಂದು ಪೋಲೀಸ್ ಸೆಲೂನ್ ಇದೆ. ಪ್ರಾಯಶಃ ಅದು ನನ್ನನ್ನು ಕರೆದುಕೊಂಡು ಹೋಗಲು ಬಂದಿರಬಹುದು. ಈ ಮಧ್ಯೆ ಯಾರೋ ಪುಣ್ಯಾತ್ಮರು ನನಗೆ ಒಂದು ಕೊಡೆಯನ್ನು ಕೊಟ್ಟರು. ಕೆಲವು ಪುಸ್ತಕಗಳನ್ನು ತರಬೇಕೆಂದು ನಾನು ಹೇಳಿ ಕಳುಹಿಸಿದ್ದೇನೆ. ಇಲ್ಲೇ ನಾನು ಬಹಳ ಹೊತ್ತಿನವರೆಗೂ ಕುಳಿತುಕೊಳ್ಳಬೇಕೆಂಬ ನಿಯಾಮಕವಿದೆಯೆಂದು ಭಾವಿಸಿದ್ದೇನೆ. ಇದುವರಗೇನೋ ತಮಾಷೆಯಾಗಿಯೇ ಇದೆ. ಇನ್ನು ಕೆಲವು ಘಂಟೆಗಳಲ್ಲಿ ಏನಾಗುತ್ತದೆಂಬುದು ನನಗೆ ಬೇರೆ ಗೊತ್ತಿಲ್ಲ ಪ್ರೇಮವಿರಲಿ!

ಇತಿ ಸರೋಜಿನಿದೇವಿ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಫಲಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡತಕ್ಕದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ, ಗನೋರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಸೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿ ರಹಕ್ಕೆ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಡಿಶೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಫ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಹೊಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಬೇಕಾಗಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಪೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[7] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂತ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲಿ. **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [43]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಚ] ## ವಜ್ರಾಂಗ ಸುಂದರಪಾಕ. [ಸ್ಪರ್ಶ

ಧಿಕ್ಕರಿಸಿದರೆ, ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಪುಷ್ಪ, ಕಾಲಿಮಕಂದ, ಮಧುಕಂದ, ಜಪಾಕಂಧ, ಕಾಲೀಮಲೀಕಂದ, ಅಶ್ವಕಂದ ಕ್ಷೀರಕಂದ, ಮುಸಳೀಕಂದ ಸೇವಂತಿಕಂದ, ದ್ವೀಪಾಂತರವಚಾಕಂದ, ಕೌಂಚಬೀಜ, ಸಮುದ್ರಶೋಕದಬೀಜ, ತಗಬೀಜ, ಸಾಗಬೀಜ, ಬಾಳಬೀಜ, ಭೋಕರೀಬೀಜ, ಪಮೇಲಬೀಜ, ಚಿಕಣಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಜಮಿಪತ್ರಿ, ಪಿಸಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೇ ಬೇದಾಣ, ಮರ್ದಾನಿಕಟ್ಟಿಗೆ, ಶತಾವರಿ, ಸಕೇಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜೀನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜೀನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [47]

ಪಿನಸಿಗೆ ನ್ರಾಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಸಿಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಶಬಾರವಿರೋಣ, ಪಡ್ಸಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಜಬ್ಬಲ್‌ಪುರ (ಮಧ್ಯಪ್ರಾಂತ್ಯ) ದಲ್ಲಿ ವಿದೇಶೀವಸ್ತ್ರ ಬಹಿಷ್ಕಾರ ಚಳವಳಿಯು ಬಹು ವಿಚಿತ್ರವಾಗಿ ನಡೆಯುತ್ತಿದೆ. 110 ಕತ್ತೆಗಳನ್ನು ತಂದು ಅವುಗಳಿಗೆ ಹ್ಯಾಟು, ಬೂಟು, ನೆಕ್‌ಟೈ, ಸುಲೋಚನಗಳನ್ನು ಹಾಕಿ ಸಿಂಗರಿಸಿ ಊರತುಂಬಾ ಮೆರವಣಿಗೆ ಮಾಡಿದರು. ದೊಡ್ಡ ಕತ್ತೆಗಳ ಹಣೆಗೆ 'ಸರ್' ಎಂಬ ಹಲಗೆ, ಇನ್ನು ಹಲವುಗಳಿಗೆ 'ರಾವ್‌ಬಹದ್ದೂರ್' 'ರಾವ್‌ಸಾಹೇಬ್' 'ಖಾನ್‌ಬಹದ್ದೂರ್' ಮುಂತಾದ ಬಿರುದುಗಳ ಹಲಗೆಗಳನ್ನು ಹಚ್ಚಿದ್ದರಂತೆ!

ಮುಂಬಯಿಯಲ್ಲಿ ವ್ಯಾಪಾರಿ ಜನರೆಲ್ಲರೂ ಕೂಡಿ ಒಂದು ಪ್ರಚಂಡ ಮೆರವಣಿಗೆಯನ್ನು ತೆಗೆದಿರಲು ಅದಕ್ಕೆ ಪೋಲೀಸರು ಪ್ರತಿಬಂಧಪಡಿಸಿದರು. ಕೂಡಲೆ ನೆರೆದ ಜನರೆಲ್ಲ ಬೀದಿಯಲ್ಲಿಯೇ ಕುಳಿತು ಬಿಟ್ಟರು. ನಾಲ್ಕು ತಾಸುಗಳ ವರೆಗೆ ದಾರಿಯು ಬಂದಾಯಿತು. ಇದನ್ನು ಕೇಳಿ ಪೋಲೀಸ ಕಮಿಶನ ಸಾಹೇಬರಾದ ಹೇಲೀಸಾಹೇಬರು ಅಲ್ಲಿಗೆ ಬಂದು ಅವರು ಗೊತ್ತುಪಡಿಸಿದ ಸ್ಥಲಕ್ಕೆ ಮೆರವಣಿಗೆ ಒಯ್ಯಲು ಅಪ್ಪಣೆಯನ್ನು ಕೊಟ್ಟರು.

ಶ್ರೀ|| ಕಸ್ತೂರಿಬಾಯಿ ಗಾಂಧಿಯವರು ಮಹಾತ್ಮರ ದರ್ಶನಕ್ಕಾಗಿ ಎರವಡಾ ತುರಂಗಕ್ಕೆ ಹೋಗಿದ್ದು ಮಹಾತ್ಮರು ಆಡಿನ ಹಾಲನ್ನು ಕುಡಿಯುತ್ತಾರೆಂದೂ, ಮತ್ತು ಖಜೂರಿ, ದ್ರಾಕ್ಷಿ, ಸಂತ್ರೆ ಮುಂತಾದವುಗಳನ್ನು ತೆಗೆದುಕೊಳ್ಳುವರೆಂದೂ, ದಿವಸಕ್ಕೆ ೬ ತಾಸು ನೂಲುವರೆಂದೂ, ಲೇಖನ ವ್ಯವಸಾಯವನ್ನು ಸಧ್ಯ ಮಾಡುವದಿಲ್ಲವೆಂದೂ, ಅವರಿಗೆ 2 ವರ್ತಮಾನ ಪತ್ರಗಳನ್ನು ಓದಲು ಕೊಡುವರೆಂದೂ, ಅವರ ವ್ಯವಸ್ಥೆಗಾಗಿ ಒಬ್ಬ ಮನುಷ್ಯನನ್ನು ನೇಮಿಸಿರುವರೆಂದೂ ಪ್ರಸಿದ್ಧಿಸಿದ್ದಾರೆ.

ತಾ|| 28 ನೆಯ ಮೇ ಇಲ್ಲವೆ 4 ನೆಯ ಜುಲೈ ಅಥವಾ 10 ನೆಯ ಜುಲೈ ದಿವಸ ಮಹಾತ್ಮಾ ಗಾಂಧಿಯವರ ಬಿಡುಗಡೆಯಾಗುವ ಚಿನ್ಹವು ತೋರುವದೆಂದೂ, ಜೂನ್ ಅಖೈರ ವರೆಗೆ ಧಡಪಡಶಾಹಿಯು ನಡೆಯುವದೆಂದೂ, ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯು ಜುಲೈ 28 ಕ್ಕೆ ಆಗುವದೆಂದೂ ಕರಾಚಿಯ ಒಬ್ಬ ಪ್ರಸಿದ್ಧ ಜ್ಯೋತಿಷ್ಯನು ಪ್ರಸಿದ್ಧಿಸಿದ್ದಾನೆ.

ಅಸೆಂಬ್ಲಿಯ ಮೊದಲಿನ ಅಧ್ಯಕ್ಷರಾದ ಮಿ|| ವ್ಹಿ. ಜೆ. ಪಟೇಲ ಇವರು ಲಾಹೋರಕ್ಕೆ ಹೋದಾಗ್ಗೆ ಅವರ ಸ್ವಾಗತಕ್ಕಾಗಿ ಸ್ಟೇಶನದ ಮೇಲೆ 70 ಸಾವಿರ ಜನರು ನೆರೆದಿದ್ದು ಅವರ ಅಪೂರ್ವ ಸ್ವಾಗತವು ಮಾಡಲ್ಪಟ್ಟಿತು.

ಪೇಶಾವರ ದಂಗೆಯ ಸಮಯದಲ್ಲಿ 18ನೆಯ ರಾಯಲ್ ಗಢವಾಲ ರೈಫಲ್ಸಿನ 2ನೆಯ ಪಟಾಲಮಿನವರು ಮೇಲಧಿಕಾರಿಗಳ ಅಪ್ಪಣೆಯ ವಿರುದ್ಧವಾಗಿ ವರ್ತಿಸಿದರೆಂದು ವಿಚಾರಣೆಯಿಂದ ತಿಳಿದು ಬಂದಿದ್ದರಿಂದ ಅವರ ವಿಚಾರಣೆಯು ಲಷ್ಕರಿ ಕಾಯಿದೆಯಿಂದ ಆಗುವದೆಂದು ಪ್ರಕಟವಾಗಿದೆ.

ಕಾರಾಗೃಹದಲ್ಲಿ ಮಹಾತ್ಮಜಿಯವರ ದರ್ಶನ

ಮಹತ್ವದ ೪ ಮುಖ್ಯ ಕರಾರುಗಳು

ಸರಕಾರಕ್ಕೆ ಎಚ್ಚರಿಕೆ

"ಡೇಲಿ ಹೆರಾಲ್ಡ್" ಪತ್ರಿಕಾ ಪ್ರತಿನಿಧಿಯ ಸಂಭಾಷಣ

ಈಗ ಇಂಗ್ಲಂಡದಲ್ಲಿ ಅಧಿಕಾರಾರೂಢವಾದ ಲೇಬರ್ ಪಕ್ಷದ ಮುಖಪತ್ರವಾದ "ಡೇಲಿ ಹೆರಾಲ್ಡ್" ಪತ್ರಿಕೆಯ ಚಾಲಕರು ಹಿಂದೂಸ್ಥಾನಕ್ಕೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿದ್ದಾರೆ. ಆ ಪ್ರತಿನಿಧಿಯು ಈಗ ಮುಂಬಯಿಯಲ್ಲಿದ್ದಾರೆ. ಇವರು ತಾ|| ೧೫ ಮತ್ತು ತಾ|| ೨೦ ಕ್ಕೆ ಯರವಾಡಾ ಕಾರಾಗೃಹಕ್ಕೆ ಹೋಗಿ, ಸರಕಾರದ ಅಪ್ಪಣೆಯಿಂದ ಮಹಾತ್ಮಜಿಯವರ ಸಂದರ್ಶನ ಮಾಡಿಕೊಂಡು ಸಂಭಾಷಣೆ ಮಾಡಿದರು. ಆಗ ರಾವುಂಡ್ ಟೇಬಲ್ ಕಾನ್‌ಫರನ್ಸ್, ಡೋಮಿನಿಯನ್ ಸ್ಟೇಟಸ್, ಮಹಾತ್ಮಜಿಯವರ ೧೧ ಬೇಡಿಕೆಗಳು ಇವೇ ಮೊದಲಾದವುಗಳನ್ನು ಕುರಿತು ಮಹಾತ್ಮಜಿಯವರಿಗೆ ಪ್ರಶ್ನೆ ಮಾಡಿದರು.

ಮಹಾತ್ಮಾಜಿಯವರು ಬಂಧನದಲ್ಲಿದ್ದ ಮೇಲೆ ಇದೇ ಅವರ ಮೊದಲನೆಯ ಸಂಭಾಷಣೆಯು. ಮತ್ತು ಇದು ಬಹಳ ಮಹತ್ವದಾದುದೂ ಆಗಿದೆ. ಈ ಸಂಭಾಷಣೆಯ ಕಾಲಕ್ಕೆ ಯರವಡಾ ಜೇಲ್ ಸೂಪರಿಂಟೆಂಡೆಂಟ್, ಕಾರಾಗೃಹ ಖಾತೆಯ ಇನ್‌ಸ್ಪೆಕ್ಟರ್ ಜನರಲ್ ಮತ್ತು ಪುಣೆಯ ಕಲೆಕ್ಟರ ಈ ಮೂವರು ಯುರೋಪಿಯನ್ ಸರಕಾರಿ ಅಧಿಕಾರಿಗಳು ಹಾಜರಿದ್ದರು.

ಡೇಲಿ ಹೆರಾಲ್ಡ್ ಪತ್ರಿಕಾ ಪ್ರತಿನಿಧಿ ಮಿ|| ಸ್ಲೋಕೋಂ ಇವರು ಮಂಗಳವಾರ ದಿವಸ ಮುಂಬಯಿಯಿಂದ ಪುಣೆಗೆ ಬಂದು, ಸ್ಟೇಶನ್ನಿಂದ ನೆಟ್ಟಗೆ ಎರವಡಾಕ್ಕೆ ಹೋದರು. ಅಲ್ಲಿ ೪-೫ ತಾಸಿನ ವರೆಗೆ ಮಹಾತ್ಮಾಜಿಯವರ ಸಂಗಡ ಸಂಭಾಷಣೆ ಮಾಡಿದರು. ಇವರು ತಮ್ಮ ಸಂಭಾಷಣೆಯನ್ನು ಕುರಿತು ಒಂದು ವಿಸ್ತೃತ ಲೇಖವನ್ನು "ಡೇಲಿ ಹೆರಾಲ್ಡ್" ಪತ್ರಿಕೆಗೆ ಕಳುಹಿಸಿದ್ದಾರೆ. ಮಿ|| ಸ್ಲೋಕೋಂ ಇವರು ಹೇಳುವದೇನಂದರೆ—

"ಮಹಾತ್ಮಾಜಿಯವರನ್ನು ರಾಜಕೀಯ ಬಂದೀವಾನರೆಂದು ಕೈಸೆರೆ ಮಾಡಿದೆ. ಪುಣೆಯಿಂದ ಸ್ವಲ್ಪ ದೂರದಲ್ಲಿರುವ ಎರವಡಾ ಕಾರಾಗೃಹದಲ್ಲಿಟ್ಟಿದ್ದಾರೆ. ಇದರಲ್ಲಿ ರಾಜಕೀಯ ಕೈದಿಗಳೂ, ಇತರ ಸಾಮಾನ್ಯ ಕೈದಿಗಳೂ ಇದ್ದಾರೆ. ಆದರೆ ಅವರಲ್ಲಿ ಯಾರಿಗೂ ಸಿಗದ ಮತ್ತು ಸಿಗಲು ಸಾಧ್ಯವಿಲ್ಲದ ಅನೇಕ ಸೌಲಭ್ಯಗಳು ಮಹಾತ್ಮಾಜಿಯವರಿಗೆ ಸಿಕ್ಕಿವೆ. ಮಹಾತ್ಮಾಜಿಯವರನ್ನು ಕೈಸೆರೆ ಮಾಡಿದ ಮೇಲೆ ಇದುವರೆಗೆ ನನ್ನ ಹೊರತು ಯಾರಿಗೂ ಅವರ ಸಂಭಾಷಣೆಯ ಲಾಭವು ದೊರೆತಿಲ್ಲ. ಮಹಾತ್ಮಾಜಿಯವರು ಇರುವ ಕೋಣೆಯ ಬಾಗಿಲ ಮುಂದೆ ವಿಶಾಲವಾದ ಮತ್ತು ಅಗಲವಾದ ಒಂದು ಕಟ್ಟೆಯಿದೆ.

ನೂಲುವ ರಾಟೆಯು.

ಮಹಾತ್ಮಾಜಿಯವರ ಕೋಣೆಯಲ್ಲಿ ಬಹು ಪ್ರಮುಖ ಸ್ಥಳದಲ್ಲಿ ಕಾಣುತ್ತದೆ. ಮತ್ತು ಮಹಾತ್ಮಾಜಿಯವರ ಹಾಸಿಗೆಯ ಹತ್ತರ ಬಿದ್ದಿದ್ದ ಪುಸ್ತಕಗಳಲ್ಲಿ ಬನಿಯನ್ ಇವರ "ಪಿಲ್‌ಗ್ರಿಂ ಪ್ರೋಗ್ರೆಸ್" ಎಂಬ ಪುಸ್ತಕವಿದೆ. ಇದನ್ನು ಮಹಾತ್ಮಾಜಿಯವರು ಆಗಾಗ್ಗೆ ಓದುತ್ತಿರಬೇಕೆಂದು ತಿಳಿಯುತ್ತದೆ. ಈ ಪುಸ್ತಕವನ್ನು ಬನಿಯನ್ ಎಂಬ ದೊಡ್ಡ ಇಂಗ್ಲಿಷ್ ಗೃಹಸ್ಥನು ಕಾರಾಗೃಹದಲ್ಲಿರುವಾಗ ಬರೆದಿದ್ದಾನೆ. ಮಹಾತ್ಮಾಜಿಯವರು ಪ್ರತಿನಿತ್ಯವೂ ಬಹಳ ನಸುಕಿನಲ್ಲೆದ್ದು ರಾಟೆಯಲ್ಲಿ ನೂಲುತ್ತಾ ಕೂಡುತ್ತಾರೆ. ಮತ್ತು ನಡುನಡುವೆ ಏಕಾಗ್ರಚಿತ್ತದಿಂದ ವಿಚಾರಮಗ್ನರಾಗುತ್ತಾರೆ. ಹಿಂದುಸ್ಥಾನದೊಳಗಿನ ಕೋಟ್ಯವಧಿ ಜನರು ಯಾರನ್ನು ಮಹಾತ್ಮನೆಂದು ಕರೆಯುತ್ತ ಅತ್ಯಂತ ವಂದ್ಯನೆಂದು ತಿಳಿಯುತ್ತಾರೆಯೋ, ಆ ಮಹಾತ್ಮಾಜಿಯವರ ಕಾರ್ಯಕ್ರಮವು ಈ ಪ್ರಕಾರವಾಗಿ ನಡೆದಿದೆ.

ನಾನು ಅವರ ಕೋಣೆಯ ಹತ್ತರ ಹೋಗಲು, ಅವರು ನನ್ನ ಭೇಟಿಗಾಗಿ ಹೊರಗೆ ಬಂದರು. ಅವರ ಮುಖದ ಮೇಲೆ ಸ್ಮಿತಹಾಸ್ಯವು ತೋರುತ್ತಿದ್ದಿತು. ನಾನು ಮಹಾತ್ಮಾಜಿಯವರ ಸಂದರ್ಶನವನ್ನು ಎರಡು ಸಾರೆ ತೆಗೆದುಕೊಂಡೆನು. ಸಂಭಾಷಣೆಯು ಅವರ ಕೋಣೆಯ ಹೊರಗಿನ ಕಟ್ಟೆಯ ಮೇಲೆ ನಡೆಯಿತು. ಆಗ ಮಹಾತ್ಮಜಿಯವರು ತಮ್ಮ ವೀರಮಂಡಿಗಾಲು ಹಾಕಿಕೊಂಡು ಕಡಸದೆ, ಬೆತ್ತದ ಕುರ್ಚಿಯ ಮೇಲೆ ಕುಳಿತುಕೊಂಡು ನನ್ನ ಸಂಗಡ ಮಾತಾಡಿದರು. ಅವರು ಪದ್ಧತಿಯಂತೆ ಬರೆಗಲೆಯಿಂದ ಇದ್ದರು. ಉಟ್ಟುಕೊಳ್ಳುವ ಒಂದು ಸಣ್ಣ ಖಾದಿವಸ್ತ್ರದ ಹೊರತು ಅವರ ಮೈಮೇಲೆ ಬೇರೆ ಯಾವ ಅರಿವೆಯೇನೂ ಇರಲಿಲ್ಲ.

ಮಹಾತ್ಮಾಜಿಯವರ ಸಂಗಡ ೫ ತಾಸು ಸಂಭಾಷಣೆ ಆಯಿತು. ಅದರಲ್ಲಿ ಎರಡು ಸಂಗತಿಗಳು ಮಾತ್ರ ನನಗೆ ಪ್ರಾಮುಖ್ಯವಾಗಿ ಕಂಡುಬಂದವು. ಅವು ಪ್ರೇಮ ಮತ್ತು ತಿರಸ್ಕಾರ. ಅಖಿಲ ಮಾನವ ಜಾತಿಯ ಮೇಲೆ ಅವರ ಪ್ರೇಮವು ಹೇಗಿದೆಯೋ ಹಾಗೆಯೇ ಹಿಂದೂಸ್ಥಾನದ ಮೇಲೆಯೂ ಅವರ ನಿರತಿಶಯವಾದ ಪ್ರೇಮವಿದೆ. ಅದರಂತೆ ಹಿಂದೂಸ್ಥಾನದ ಮೇಲೆ ಇರುವ ಬ್ರಿಟಿಷ್ ವರ್ಚಸ್ಸು ಕೂಡ ಅತ್ಯಂತ ಕೆಟ್ಟ ಮತ್ತು ದುಷ್ಟ ಸಂಗತಿಯಾಗಿದೆ ಎಂದು ಅವರು ತಿಳಿದು ಅದನ್ನು ತೀವ್ರತರವಾಗಿ ತಿರಸ್ಕರಿಸುತ್ತಾರೆ. ಹಿಂದೂಸ್ಥಾನದಲ್ಲಿರುವ ಇಂಗ್ಲಿಷರು ಬಹಳ ಜುಲುಮಿಯವರಿದ್ದು ಅವರ ವರ್ಚಸ್ಸಿನಿಂದಲೇ ಈ ದೇಶದ ರಾಜ್ಯಾಧಿಕಾರವು ಬಹಳ ಕೆಟ್ಟುಹೋಗಿದೆ. ಮತ್ತು ಭಾರತೀಯರು ಬಹಳ ದುಃಖಿತರಾಗಿದ್ದಾರೆ. ಎಂದು ಅವರ ಅಭಿಪ್ರಾಯವಾಗಿದೆ. ಆದರೂ ಕೂಡ ವ್ಯಕ್ತಿಶಃ ಯಾವ ಇಂಗ್ಲಿಷ್ ಮನುಷ್ಯನ ಬಗ್ಗೆಯಾದರೂ ಅವರಲ್ಲಿ ಬಹಳ ಆದರವಿದೆ. ವೈಸರಾಯರ ಬಗ್ಗೆಯಂತೂ ಅವರಲ್ಲಿ ಆದರವು ತುಂಬಿತುಳುಕುತ್ತಿದೆ.

ಬ್ರಿಟನ್ನದ ಶ್ರೇಷ್ಠ ಮಿತ್ರರು.

ಬ್ರಿಟಿಷ್ ರಾಷ್ಟ್ರದ ಇತಿಹಾಸ, ಬ್ರಿಟಿಷ್ ಜನರ ಸ್ವಭಾವ ಮತ್ತು ಬ್ರಿಟಿಷ್ ರಾಜ್ಯಪದ್ಧತಿ ಇವುಗಳಲ್ಲಿಯ ಅನೇಕ ಸಂಗತಿಗಳು ಮಹಾತ್ಮಜಿಯವರಿಗೆ ಸೇರುತ್ತವೆ. ಹಿಂದೂಸ್ಥಾನಕ್ಕೆ ಒಮ್ಮೆ ಸ್ವಾತಂತ್ರ್ಯವನ್ನು ಕೊಟ್ಟ ಮೇಲೆ ಗ್ರೇಟ್‌ಬ್ರಿಟನ್ನಿಗೆ ಮಹಾತ್ಮಜಿಯವರಂತಹ ಮತ್ತೊಬ್ಬ ನಿಸ್ಸೀಮ ಮಿತ್ರರೇ ಹಿಂದುಸ್ಥಾನದಲ್ಲಿ ಸಿಗುವರು ಕಾರಣವಾಗಿದೆ. ಹಿಂದೂಸ್ಥಾನಕ್ಕೆ ಬ್ರಿಟಿಷ್ ಸಾಮ್ರಾಜ್ಯ ಸಂಘದಲ್ಲಿ ಒಮ್ಮೆ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟರೆ, ಮಹಾತ್ಮಜಿಯವರು ಈಗ ಹೇಗೆ ಭಾರತರಾಷ್ಟ್ರಕ್ಕೆ ವಂದ್ಯರಾದ ಮಹಾಪುರುಷರಾಗಿದ್ದಾರೆಯೋ, ಹಾಗೆಯೇ ಅವರು ಬ್ರಿಟಿಷ್‌ಸಾಮ್ರಾಜ್ಯಕ್ಕೂ ವಂದ್ಯ ಪುರುಷರಾಗುವರು.

ಸರಕಾರಕ್ಕೂ, ಸರ್ವ ಜಗತ್ತಿಗೂ ಮಹಾತ್ಮಜಿ ಇವರ ಸಂದೇಶ.

ಬ್ರಿಟಿಷ್ ಸರಕಾರಕ್ಕೂ, ಸರ್ವ ಜಗತ್ತಿಗೂ ಮಹಾತ್ಮಜಿಯವರ ಸಂದೇಶವೇನೆಂದರೆ—"ಒಪ್ಪಂದದ ಚರ್ಚೆ ಮಾಡಲು ನಾನು ಸಿದ್ಧನಿದ್ದೇನೆ ಮತ್ತು ಇಚ್ಛಿಸುತ್ತೇನೆ." ಆದರಂತೆ ಒಪ್ಪಂದದ ಚರ್ಚೆಗೆ ಪ್ರಾಸ್ತಾವಿಕವೆಂದು ಗಾಂಧಿಜಿಯವರು ಯಾವ ೧೧ ಕರಾರುಗಳನ್ನು ಈ ಮೊದಲು ಹಾಕಿದ್ದರೋ, ಅವುಗಳಲ್ಲಿ ಕೇವಲ ನಾಲ್ಕೇ ಕರಾರುಗಳನ್ನು ಮಾತ್ರ ಕಾಯಂ ಇಟ್ಟು, ಉಳಿದವುಗಳ ವಿಚಾರವನ್ನು ಚರ್ಚೆಯ ಕಾಲಕ್ಕೆ ಮಾಡಲು ಗಾಂಧಿಜಿಯವರು ಸಿದ್ಧರಿದ್ದಾರೆ.

ಸ್ವಾತಂತ್ರ್ಯದ ಸಾರವು

ಯಾವುದರಲ್ಲಿದೆಯೋ, ಅಂತಹ ಡೊಮಿನಿಯನ್ ಸ್ಟೇಟಸ್ಸನ್ನು ಹಿಂದುಸ್ಥಾನಕ್ಕೆ ಕೊಡಲು ಸರಕಾರವು ಒಂದು ವೇಳೆ ಒಪ್ಪುವದಾದರೆ, ಈ ಕೆಳಗಿನ ಕರಾರುಗಳ ಮೇಲೆ ಗಾಂಧಿಜಿಯವರು ಒಪ್ಪಂದದ ಚರ್ಚೆ ಮಾಡಲು ಸಿದ್ಧರಿದ್ದಾರೆ.

ಮುಖ್ಯವಾದ ೪ ಕರಾರುಗಳು.

ಒಪ್ಪಂದದ ಚರ್ಚೆಗೆ ಸಿದ್ಧರಾಗುವದಕ್ಕೆ ಮಹಾತ್ಮಾಜಿಯವರು ಈ ಪ್ರಕಾರ ಮುಖ್ಯವಾದ ನಾಲ್ಕು ಕರಾರುಗಳನ್ನು ಹಾಕಿದ್ದಾರೆ—

೧. ರಾವುಂಡ್ ಟೇಬಲ್ ಕಾನ್‌ಫರೆನ್ಸಿನ ಕಾರ್ಯಕ್ಷೇತ್ರದಲ್ಲಿ ಹಿಂದುಸ್ಥಾನಕ್ಕೆ ಪೂರ್ಣ ಸ್ವಾತಂತ್ರ್ಯದ ಸಾರವು ಯಾವುದರಲ್ಲಿದೆಯೋ, ಅಂತಹ ರಾಜ್ಯಘಟನೆಯನ್ನು ಕೊಡುವ ವಿಷಯವು ಸಮಾವೇಶವಾಗಬೇಕು.

೨. ಉಪ್ಪಿನ ಕಾಯಿದೆ ರದ್ದು ಮಾಡುವದು, ಸಂಪೂರ್ಣ ಮದ್ಯಪಾನ ಪ್ರತಿಬಂಧ, ಮತ್ತು ಪರದೇಶಿ ಅರಿವೆಗೆ ಬಹಿಷ್ಕಾರ ಇವುಗಳನ್ನು ವ್ಯಚಾರದಲ್ಲಿ ತರಬೇಕು.

೩. ಕಾಯಿದೆ ಭಂಗ ಚಳವಳಿಯಲ್ಲಿ ಕೊನೆಯವರೆಗೆ ಸೇರಿದ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು.

೪. ಈ ಮೊದಲು ಪ್ರಕಟಿಸಿದ ೧೧ ಕರಾರುಗಳಲ್ಲಿ ಯಾವವು ಉಳಿಯುತ್ತವೆಯೋ, ಆ ೭ ಕರಾರುಗಳನ್ನು ರಾವುಂಡ್ ಟೇಬಲ್ ಪರಿಷತ್ತಿನಲ್ಲಿ ವಿಚಾರಮಾಡಬೇಕು.

ಕಾಯಿದೆಭಂಗ ಮಾಡುವ ಜನರಿಗೂ, ಸರಕಾರಕ್ಕೂ ನಡೆದ ಈ ವಾದದಲ್ಲಿ ಸರಕಾರವು ಎಂದಾದರೂ ತನ್ನ ಪರಾಭವವನ್ನು ಒಪ್ಪಿಕೊಂಡೀತೇ? ಎಂದು ನಾನು ಅವರಿಗೆ ಪ್ರಶ್ನೆ ಮಾಡಲು, ಮಹಾತ್ಮಾಜಿಯವರು ಸ್ವಲ್ಪ ನಕ್ಕು "ನಾನು ಆಶಾವಾದಿಯಿದ್ದೇನೆ. ಈ ಚಳವಳಿಯು ಅವ್ಯವಹಾರ್ಯವೆಂದೂ, ಇದು ಯಶಸ್ವಿಯಾಗುವದು ಶಕ್ಯವಿಲ್ಲೆಂದೂ ಅನೇಕರು ಟೀಕಿಸುತ್ತಾರೆ. ಆದರೆ ನನ್ನ

ಕಳೆದ ೪೦ ವರ್ಷಗಳ ಅನುಭವ

ವು ಇದರ ವಿರುದ್ಧವಾಗಿದೆ. ಹೀಗಿದ್ದರೂ ಕೂಡ ನಾನು ಒಪ್ಪಂದಕ್ಕೆ ಸಿದ್ಧನಿದ್ದೇನೆ. ಬಹಳವೇಕೆ? ಇದುವರೆಗಿನ ನನ್ನ ಆಯುಷ್ಯವೆಲ್ಲವೂ ಒಪ್ಪಂದದ ಪ್ರಕರಣಗಳಿಂದಲೇ ತುಂಬಿದೆ. ಫಲದಿಂದಲೇ ವೃಕ್ಷವನ್ನು ಗುರ್ತಿಸಬೇಕಾಗುವದು. ನಮಗೆ ಸಮಾಧಾನಕಾರಕವಾದ ರಾಜ್ಯಪದ್ಧತಿಯು ದೊರೆಯುವವರೆಗೆ ನಾವು ಈ

ಭಾರತ ಸ್ವಾತಂತ್ರ್ಯ ಯುದ್ಧ

ವನ್ನು ಒಳ್ಳೇ ಹುರುಪಿನಿಂದ ನಡೆಯಿಸುವೆವು. ಮತ್ತು ಅದಕ್ಕಾಗಿ ಕಾರಾಗೃಹಗಳನ್ನೆಲ್ಲ ತುಂಬಿಸುವೆವು. ದೇಹಾರ್ಪಣ ಮಾಡಲು ಕೂಡ ಸಿದ್ಧರಾಗಿ, ಈ ಚಳವಳಿಯನ್ನು ಸತತವಾಗಿ ಮುಂದೆ ಸಾಗಿಸುವೆವು. ಈ ಪ್ರಕಾರವಾಗಿ ರಾಜ್ಯಭಾರವನ್ನು ನಡೆಯಿಸುವದು ಸರಕಾರಕ್ಕೆ ಅಶಕ್ಯವಾಗುವಂತೆ ಮಾಡುವೆವು. ಆ ಮೇಲೆಯಾದರೂ ಒಪ್ಪಂದದ ಪ್ರಶ್ನೆಯು ಬಂದೇ ಬರುವದು. ಇದು ನನಗೆ ಗೊತ್ತಿದೆ. ಈಗಲೂ ಒಪ್ಪಂದಮಾಡಿಕೊಳ್ಳಲು ನಾನು ಸಿದ್ಧನಿದ್ದೇನೆ. ಆದರೆ ಭಾರತೀಯರು ಯಾವ ಕಷ್ಟನಷ್ಟಗಳನ್ನು ಅನುಭವಿಸಬೇಕಾಗಿದೆಯೋ, ಅವುಗಳನ್ನು ನಿವಾರಿಸಲು ರಾಷ್ಟ್ರದ ಆಕಾಂಕ್ಷೆ ಮತ್ತು ಬೇಡಿಕೆಗಳನ್ನು ಕಡಿಮೆ ಮಾಡುವದು ನಮಗೆ ಶಕ್ಯವಿಲ್ಲ." ಎಂದು ಹೇಳಿದರು.

ನಿವಾರಣೋಪಾಯ.

ಮಿ|| ಸ್ಲೋಕೋಂ ಇವರು ಒಂದು ಕಡೆಗೆ ಹೇಳುವದೇನಂದರೆ—"ಮೇಲೆ ಯಾವ ನಾಲ್ಕು ಕರಾರುಗಳನ್ನು ಕೊಟ್ಟಿದೆಯೋ, ಅವುಗಳನ್ನು ಸರಕಾರವು ಮಾನ್ಯಮಾಡಿದರೆ, ಮಹಾತ್ಮಜಿಯವರು

ಈ ಕಾಯಿದೆ ಭಂಗ ಚಳವಳಿಯನ್ನು

ನಿಲ್ಲಿಸಲು ಕಾಂಗ್ರೆಸ್ಸಿಗೆ ಸಲಹೆ ಕೊಟ್ಟು ರಾವುಂಡ್ ಟೇಬಲ್ ಪರಿಷತ್ತಿನಲ್ಲಿ ಭಾಗ ತೆಗೆದುಕೊಳ್ಳಲು ಸಿದ್ಧರಿದ್ದಾರೆ."

ಸರಕಾರಕ್ಕೆ ಎಚ್ಚರಿಕೆ.

ಈ ಪ್ರಕಾರ "ಡೇಲಿ ಹೆರಾಲ್ಡ್" ಪತ್ರಿಕೆಯ ಪ್ರತಿನಿಧಿ ಮಿ|| ಸ್ಲೋಕೋಂ ಇವರು ಎಲ್ಲ ವಿಷಯವನ್ನು ವಿವರಿಸಿ, ಕೊನೆಗೆ ಹೇಳುವದೇನೆಂದರೆ—"ಮಹಾತ್ಮ ಗಾಂಧಿಯವರ ಸಹಕಾರತೆಯು ದೊರೆತರೆ ಮಾತ್ರ ರಾವುಂಡ್ ಟೇಬಲ್ ಪರಿಷತ್ತಿನ ಯೋಜನೆಗೆ ಮೂರ್ತಸ್ವರೂಪವು ಬರುವದು ಶಕ್ಯವಿದೆ. ಬ್ರಿಟಿಷ್ ಸರಕಾರದ ಹೇತುವಿನ ಬಗ್ಗೆ ಮಹಾತ್ಮಾಜಿಯವರಿಗೆ ಯಾವ ಸಂಶಯವಿದೆಯೋ ಅದನ್ನು ಬ್ರಿಟಿಷ್ ಸರಕಾರವು ಮೊದಲು ತೆಗೆದುಹಾಕಬೇಕು. ಅಂದರೇನೇ ಗಾಂಧಿಜಿಯವರು ಒಪ್ಪಂದಕ್ಕೆ ಸಿದ್ಧರಾಗುವರು. ಆದರೆ ಹಾಗೆ ಮಾಡದೆ ಸರಕಾರವು ಕಾಂಗ್ರೆಸ್ಸನ್ನೂ, ಮಹಾತ್ಮಜಿಯವರನ್ನೂ ಉಪೇಕ್ಷಿಸಿ, ಮೊಳೆಗೊಸ್ತುವ ಮರಾಸ್ತ್ರವನ್ನು ಹಿಡಿದರೆ, ಈಗಿನದಕ್ಕಿಂತಲೂ ಹೆಚ್ಚು ಕಳವಳಕರವಾದ ಪರಿಸ್ಥಿತಿಯುಂಟಾಗುವದು ನಿಂದಿತವು. ಸರಕಾರವು ಜಾತಿವಿಷಯಕ ಜಗಳಕ್ಕೆ "ಫಾಜೀಲ" ಮಹತ್ವ ಕೊಡುವ ತಪ್ಪು ಮಾಡುತ್ತಿದೆ. ಆದರೆ ಮಹಾತ್ಮ ಗಾಂಧಿಯವರೊಡನೆ ಒಪ್ಪಂದಮಾಡಿಕೊಳ್ಳುವದರಿಂದಲೇ ಈ ಜಾತಿವಿಷಯಕ ಪ್ರಶ್ನೆಯನ್ನು ಬಿಡಿಸುವದು ಸುಲಭವಾಗುವದೆಂಬುದನ್ನು ಸರಕಾರವು ಲಕ್ಷ್ಯದಲ್ಲಿಡುವದು ಅವಶ್ಯಕವಾಗಿದೆ." (ಲೋಕಮತ.)

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಯಾತ್ಸದಾ ಲೋಕಮುಂ ||

ಸಂಪಾದಕರು— ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ ನೇ ಜೂನ್ ೧೯೩೦ [ಸಂಚಿಕೆ ೬.

ವಿವಾಹಮಹೋತ್ಸವವು.

ಹಲ್ಕೂರು.

ಅರಸೀಕೆರೆ ತಾಲೂಕು ಹಲ್ಕೂರು ಗ್ರಾಮದ ಸಾಹುಕಾರ್ ಧರ್ಮಧುರಂಧರ ಮ|| ರಾ|| ಮರುಳಸಿದ್ಧಪ್ಪನವರು ಮತ್ತು ಸಾಹುಕಾರ್ ಮ|| ರಾ|| ರುದ್ರಪ್ಪನವರು ಕಳೆದ ತಿಂಗಳು ತಾರೀಕು 31-5-30 ನೆಯ ಶನಿವಾರ ತಮ್ಮ ತಮ್ಮ ಸುಪುತ್ರಿಯರಾದ ಚಿ|| ಸೌ|| ಅನ್ನಪೂರ್ಣಮ್ಮ ಮತ್ತು ಚಿ|| ಸೌ|| ಪಾರ್ವತಮ್ಮ ಎಂಬವರನ್ನು ಕ್ರಮವಾಗಿ ಹೊಸಂತೆ ಬ್ರಹ್ಮಶೆಟ್ಟರ ಮ|| ರಾ|| ಸಿದ್ಧಲಿಂಗಪ್ಪನವರ ಸುಪುತ್ರ ಮ|| ರಾ|| ಹೆಚ್. ಮಹಂತಪ್ಪ ಬಿ.ಎ., ಇವರಿಗೂ ಮತ್ತು ನೇಮತಿ ಮ|| ರಾ|| ಕೇಣಿ ಹಾಲಪ್ಪನವರ ಸುಪುತ್ರ ಬಿ.ಎ., ತರಗತಿಯಲ್ಲಿರುವ ಮ|| ರಾ|| ಕೆ. ಜಯದೇವಪ್ಪನವರಿಗೂ ಕೊಟ್ಟು ವಿವಾಹಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಯಿಸಿದರು. ಧಾರಾಮುಹೂರ್ತದ ಸಮಯದಲ್ಲಿ ಪ್ರತಿವರರಿಗೂ ಅತ್ಯಾನಂದದಿಂದ ಎರಡೆರಡು ಸಾವಿರ ರೂಪಾಯಿಗಳ ವರದಕ್ಷಿಣೆಯನ್ನೂ ಮತ್ತೂ ಪುತ್ರಿಯರಿಗೋಸ್ಕರ ಎರಡೆರಡು ಸಾವಿರ ರೂಪಾಯಿ ಬೆಲೆಬಾಳುವ ಕನಕಾಭರಣಗಳನ್ನೂ ಸಹಾಸ್ತೀಯವಾಗಿ ಕೊಟ್ಟು ತಮ್ಮ "ಧರ್ಮಧುರಂಧರ" ಎಂಬ ಪ್ರಶಸ್ತಿಗೆ ಒಪ್ಪುವಂತೆ ಒಟ್ಟು 10-12 ಸಾವಿರ ರೂಪಾಯಿಗಳನ್ನು ಸದ್ವಿನಿಯೋಗಮಾಡಿ ವಿವಾಹಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಈ ವಿವಾಹಕ್ಕೆ ಶ್ರೀ|| ಹೊಳೇಹೊನ್ನೂರು ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರೂ, ತಾವರೆಕೆರೆ ಪಟ್ಟಾಧ್ಯಕ್ಷರೂ ಮತ್ತು ದೊಡ್ಡಗುಣಿ ಶ್ರೀಗಳವರೂ ಮೊದಲಾಗಿ ಅನೇಕ ಪೂಜ್ಯಪಾದರು ದಯಮಾಡಿಸಿದ್ದರು. ಇವರುಗಳ ಬಂಧುಗಳಾದ ಮ|| ರಾ|| ಯಜಮಾನ್ ಶಾಂತಪ್ಪಶೆಟ್ಟರು, ಸಾಹುಕಾರ್ ಮ|| ರಾ|| ಸಿದ್ಧರಾಮಪ್ಪನವರು, ಮ|| ರಾ|| ಗೊಡಚಿಪ್ಪನವರು ಮತ್ತು ಮ|| ರಾ|| ಶ್ರೀಕಂಠಪ್ಪನವರು ಮೊದಲಾದವರು ಆಗಮಿಸಿದ್ದರು. ಮುಹೂರ್ತಕಾಲಕ್ಕೆ ಸರಿಯಾಗಿ ಅನೇಕ ಅಧಿಕಾರಿಗಳೂ ಮತ್ತು ದೊಡ್ಡ ದೊಡ್ಡ ಮನುಷ್ಯರುಗಳೂ ಆಗಮಿಸಿದ್ದರು. ಈ ಶುಭಸಮಯದಲ್ಲಿ ವಧೂವರರ ಶ್ರೇಯೋಭಿವೃದ್ಧಿಗೋಸ್ಕರ ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಮಹಾಸನ್ನಿಧಿಯವರು ಫಲ ಮಂತ್ರಾಕ್ಷತೆಪೂರ್ವಕವಾದ ಶ್ರೀಮುಖವನ್ನು ಸಕಾಲಕ್ಕೆ ಸರಿಯಾಗಿ ದಯಪಾಲಿಸಿದ್ದು ಸ್ತುತ್ಯವಾದ ವಿಷಯವಾಗಿದೆ. ಮೈಸೂರು ದಿವಾನರಾದ ಮೆ|| ಸರ್. ಮಿರ್ಜಾ ಇಸ್ಮಾಯಿಲ್ ಬಿ.ಎ., ರವರು ಮತ್ತು ಹಾಸನ ಡಿ|| ಡೆಪ್ಯುಟಿ ಕಮಿಷನರಾದ ಮೆ|| ಅಬ್ದುಲ್ ವಾಜಿದ್ ಬಿ.ಎ., ಇವರು ಮತ್ತು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರಾದ ಮೆ|| ಹಿರಣ್ಣಯ್ಯನವರು ಮತ್ತು ಇನ್ನೂ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳು ವಧೂವರರಿಗೆ ಶ್ರೇಯಸ್ಸನ್ನು ಕೋರಿ ಪತ್ರಗಳನ್ನು ಕಳುಹಿಸಿದ್ದರು. ಸಾಹುಕಾರ್ ಧರ್ಮಧುರಂಧರ ಮ|| ರಾ|| ಮರುಳಸಿದ್ದಪ್ಪನವರ ಮತ್ತು ಇವರ ಅಳಿಯಂದಿರಾದ ಸಾಹುಕಾರ್ ಮ|| ರಾ|| ರುದ್ರಪ್ಪನವರ ಔದಾರ್ಯವು ಉಳಿದ ಐಶ್ವರ್ಯವಂತರಿಗೆ ಉದಾಹರಣೆಯಾಗಿದೆ. ಇವರಿಗೂ ಮತ್ತು ವಧೂವರರುಗಳಿಗೂ ಶ್ರೀ ಜಗದಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಸ್ವೀಕಾರ.

ಹಾಸನ ಡಿ|| ಅರಸೀಕೆರೆ ತಾಲೂಕು ಹಲ್ಕೂರು ಗ್ರಾಮನಿವಾಸಿಗಳಾದ ಧರ್ಮಧುರಂಧರ ಸಾಹುಕಾರ್ ಮ| ರಾ| ಮರುಳಸಿದ್ಧಪ್ಪಶೆಟ್ಟರವರ ಪುತ್ರಿ ಚಿ| ಸೌ| ಅನ್ನಪೂರ್ಣಮ್ಮನನ್ನು ಸಾಗರದ ತಾಲೂಕು ಹೊಸಸಂತೆ ಗ್ರಾಮದ ಮ| ರಾ| ಬ್ರಹ್ಮಶೆಟ್ಟರ ಮ| ಸಿದ್ಧಲಿಂಗಪ್ಪಶೆಟ್ಟರವರ ಪುತ್ರರಾದ ಮ| ರಾ| ಮಹಾಂತಪ್ಪ ಬಿ. ಎ., ಎಂಬವರಿಗೆ ಕೊಟ್ಟು ಹಾಗೂ ಸದರಿ ಗ್ರಾಮದ ಮ| ರಾ| ಸಾಹುಕಾರ್ ರುದ್ರಪ್ಪಶೆಟ್ಟರವರ ಪುತ್ರಿ ಚಿ| ಸೌ| ಪಾರ್ವತಮ್ಮನನ್ನು ಹೊನ್ನಾಳಿ ತಾಲೂಕು ನ್ಯಾಮತಿ ಗ್ರಾಮದ ಮ| ರಾ| ಕೇಣೀಹಾಲಪ್ಪನವರ ಪುತ್ರರಾದ ಮ| ರಾ| ಜಯದೇವಪ್ಪನವರಿಗೆ ಕೊಟ್ಟು ಜ್ಯೇಷ್ಠಶುದ್ಧ ೪ ಶನಿವಾರದ ದಿವಸ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಶ್ರೀ ಷ| ಬ್ರ| ಹೊಳೆಹೊನ್ನೂರು ಪುರಾಣಮಠದ ಪಟ್ಟದಸ್ವಾಮಿಗಳವರ ಹಾಗೂ ತ್ಯಾವನಗಿಮಠದ ಶ್ರೀ ಷ| ಬ್ರ| ಪಟ್ಟದಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 25 ರೂ. ಗಳು ಮ| ರಾ| ಶ್ರೀಮಂತ ನರಸಿಂಹರಾಜಪುರದ ಯಜಮಾನ್ ಇಂ.ಬಿ. ಶಾಂತಪ್ಪಶೆಟ್ಟರವರ ದ್ವಾರಾ ತಲ್ಪಿರುತ್ತವೆ.

ಕೊಪ್ಪಳ ತಾಲೂಕು ಮುದ್ದಾಬಳ್ಳಿ ಗ್ರಾಮದ ವೇ| ಹಿರೇಮಠದ ಕೊಟ್ರಬಸವಯ್ಯನವರ ಪುತ್ರ ಚಿ| ಗುರುಬಸವಾರ್ಯನಿಗೆ ಕಾತರಕಿ ಹಿರೇಮಠದ ವೇ| ಪಟ್ಟದಪ್ಪಯ್ಯನವರ ಪುತ್ರಿ ಸೌ| ಮಹಾದೇವಮ್ಮನನ್ನು ಮತ್ತು ಮುದ್ದಾಬಳ್ಳಿ ಹಿರೇಮಠದ ವೇ| ವೀರಸಂಗಯ್ಯನವರ ಪುತ್ರ ಚಿ| ಬಸವಾರ್ಯನಿಗೆ ಉಪ್ಪಿನಬೆಟಗೇರಿ ವೇ| ಅರಳೆಲೆಮಠದ ಮಹಾಂತಯ್ಯನವರ ಪುತ್ರಿ ಸೌ| ಸಿದ್ಧವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಉಪ್ಪಿನಬೆಟಗೇರಿ ಶಾಲೀಮಠದ ವೇ| ಕೊಟ್ರಯ್ಯನವರ ಪ್ರೋತ್ಸಾಹದ ಮೇರೆಗೆ ವಧೂವರರಿಂದ ತೆಗೆಯಿಸಿದ 3 ರೂ. ಮುದ್ದಾಬಳ್ಳಿ ಹಿರೇಮಠದ ವೇ| ಕೊಟ್ರಬಸಯ್ಯನವರ ಪುತ್ರ ಚಿ| ಮಹಾದೇವಯ್ಯನಿಗೆ ಉಪ್ಪಿನಬೆಟಗೇರಿ ಅರಳೆಲೆಮಠದ ಮಹಾಂತಯ್ಯನವರ ಪುತ್ರಿ ಚಿ| ಸೌ| ಗಿರಿಜವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂ. ಮುದ್ದಾಬಳ್ಳಿ ಬಸವನಗೌಡರ ಹನುಮಂಗೌಡರ ಪುತ್ರ ಚಿ| ಲಿಂಗನಗೌಡನಿಗೆ ಮ| ರಾ| ಹಾಳಕೇರಿ ಸುಬ್ಬನಗೌಡರ ಗಿರಿಯಪ್ಪಗೌಡರ ಪುತ್ರಿ ಸೌ| ನೀಲವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಮುದ್ದಾಬಳ್ಳಿ ಪೋಲೀಸ್ ಪಾಟೀಲ್ ಮ| ರಾ| ಬಸವನಗೌಡರ ಪ್ರೋತ್ಸಾಹದ ಮೇರೆಗೆ ತೆಗೆಯಿಸಿದ 2 ರೂ. ಕಾತರಕಿ ಮ| ರಾ| ನಾರದಪ್ಪ ಬಸಪ್ಪನವರ ಪುತ್ರ ಚಿ| ಹೊಳೆಬಸಪ್ಪನಿಗೆ ಮ| ರಾ| ಕುರಡಗಿ ಕುಂದಗೋಳ ತೋಟಪ್ಪನವರ ಪುತ್ರಿ ಸೌ| ಗಂಗವ್ವನನ್ನೂ ಸದರಿ ಚನ್ನಬಸಪ್ಪನವರ ದ್ವಿತೀಯಪುತ್ರ ಚಿ| ಕೊಟ್ರಪ್ಪನಿಗೆ ಸದರೀ ತೋಟಪ್ಪನವರ ಪುತ್ರಿ ಸೌ| ವೀರಬಸಮ್ಮನನ್ನೂ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ತೆಗೆಯಿಸಿದ 2 ರೂ. ಮ| ರಾ| ಉಪ್ಪಿನಬೆಟಗೇರಿ ಬೆಳ್ಳುಳ್ಳಿ ಮುರುಕಪ್ಪನವರು ತಮಗೆ ಜಗದಾಚಾರ್ಯರ ಕೃಪೆಯಿಂದ ಉಂಟಾದ ಫಲಪ್ರಾಪ್ತಿಯ ಆನಂದಕ್ಕೋಸ್ಕರ ಸಮರ್ಪಿಸಿದ 1 ರೂ. ಮ| ರಾ| ಕಾತರಕಿ ಹುರಕಡ್ಲಿ ಶಾಂತಪ್ಪನವರಿಗೆ ಪುತ್ರರತ್ನವು ಉದಯಿಸಿದ ಸಂತೋಷಕ್ಕಾಗಿ ಮ| ರಾ| ಲಕ್ಕುಂಡಿ ಸಣ್ಣಬಸಪ್ಪನವರ ಪ್ರೋತ್ಸಾಹದ ಮೇರೆಗೆ ಸಮರ್ಪಿಸಿದ 1 ರೂ. ಒಟ್ಟು 10 ರೂ. ಗಳು ವೇ| ಬನ್ನಿಕೊಪ್ಪ ಹಿರೇಮಠದ ಶಿವಯ್ಯನವರು ಸ್ಕೂಲ್‌ಮಾಸ್ಟರ್ ಕಾತರಕಿ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ| ಕೊಟ್ಟೂರು ಗ್ರಾಮದ ಮ| ರಾ| ಕೋರುಕಣದ ನಾಗಪ್ಪನವರ ಪುತ್ರಿ ಸೌ| ನಾಗವ್ವನನ್ನು ಬೆಣ್ಣೆಹಳ್ಳಿಗ್ರಾಮದ ಸೊಬಹಳ್ಳಿ ಮ| ರಾ| ತವಳಪ್ಪನವರ ಪುತ್ರ ನಾಗಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವಧೂವರರಿಂದ ಸಮರ್ಪಿಸಿದ 3 ರೂ., ಹಾಗೂ ಸದರೀ ಕೊಟ್ಟೂರು ಗ್ರಾಮದ ಮ| ರಾ| ಕೋರುಕಣದ ಬಣಕಾರ ಚನ್ನಬಸಪ್ಪನವರ ಪುತ್ರಿ ಸೌ| ಕೆಂಚವ್ವನನ್ನು ಮ| ರಾ| ಕೋರುಕಣದ ಸಿದ್ಧಲಿಂಗಪ್ಪನವರ ಪುತ್ರ ಮರುಳಸಿದ್ದಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 3 ರೂ. ಒಟ್ಟು 6 ರೂ. ಗಳು ವೇ| ಮ| ಮ| ಜಾಗಟಗೇರಿ ಚನ್ನಬಸವಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ರಾಮದುರ್ಗ ಸಂಸ್ಥಾನ ತೊಣಶಿಗಿ ಗ್ರಾಮದ ಮ|| ರಾ|| ಭರಮಗೌಡರು ದ್ಯಾಮನಗೌಡರ ಇವರು ತಮ್ಮ ಪುತ್ರಿ ಕುಂ|| ಸೌ|| ಸಾವಿತ್ರವ್ವನನ್ನು ಭೋಗಾಪುರಗ್ರಾಮದ ಮ|| ರಾ|| ವೀರಪ್ಪ ಕುಲಕರಣಿ ಇವರ ಪುತ್ರ ವಿರೂಪಾಕ್ಷಪ್ಪನಿಗೂ, ಇನ್ನೊಬ್ಬ ಪುತ್ರಿ ಕುಂ|| ಸೌ|| ಯಲ್ಲವ್ವನನ್ನು ಬೆಟಗೇರಿಗ್ರಾಮದ ಮ|| ರಾ|| ಫಕೀರಗೌಡರ ಪುತ್ರ ದ್ಯಾವನಗೌಡನಿಗೂ ಮತ್ತು ತಮ್ಮಂದಿರಾದ ಮ|| ರಾ|| ಫಕೀರಗೌಡರ ಪುತ್ರಿ ಕುಂ|| ಸೌ|| ಲಿಂಗವ್ವನನ್ನು ಸದರಿ ಬೆಟಗೇರಿ ಮ|| ರಾ|| ಫಕೀರಗೌಡರ ಇನ್ನೊಬ್ಬ ಪುತ್ರ ನೀಲಪ್ಪಗೌಡನಿಗೂ, ಮ|| ರಾ|| ಕೊಟ್ರಗೌಡರ ಚಿ|| ದ್ಯಾಮನಗೌಡನಿಗೆ ಕೊಕಟಬಾಳಗ್ರಾಮದ ಮ|| ರಾ|| ಮರುಳಸಿದ್ಧಪ್ಪ ಭಂಗಿ ಇವರ ಸುಪುತ್ರಿ ಸೌ|| ಅಂದಾನವ್ವನನ್ನು ಇವರ ಇನ್ನೊಬ್ಬ ಪುತ್ರಿ ಸೌ|| ಪಾರ್ವತವ್ವನನ್ನು ಬಾಚೆಲಾಪೂರ ಗ್ರಾಮದ ಮ|| ರಾ|| ಫಕೀರಗೌಡರ ಪುತ್ರ ಹನುಮಂತಗೌಡನಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಮ|| ರಾ|| ಭರಮಗೌಡರು ಸಮರ್ಪಿಸಿದ 5 ರೂಪಾಯಿಗಳು ವೇ|| ಶಿರೋಳ ಪಂಚಾಕ್ಷರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಬೆಳಗಾಂವಿ ಡಿ| ಗೋಕಾಕ ತಾಲೂಕು ಕೇಸಪ್ಪನಹಟ್ಟಿ ಹಿರೇಮಠದ ಶ್ರೀ| ಷ| ಬ್ರ| ಪಟ್ಟದ ಚಂದ್ರಶೇಖರಸ್ವಾಮಿಗಳವರ ಪಟ್ಟಾಭಿಷೇಕ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ತೆಗೆಯಿಸಿದ 5 ರೂ ಗಳು ಮ| ರಾ| ಸಂಗನಗೌಡ ಪಾಟೀಲ ಗರಗ ಇವರ ದ್ವಾರಾ ತಲ್ಪಿರುತ್ತವೆ.

ಕಾನ್‌ಕಾನ್‌ಹಳ್ಳಿ ತಾಲೂಕು ಹಾರೋಹಳ್ಳಿ ಗ್ರಾಮದ ಮ| ರಾ| ಪಟೇಲ್ ಚನ್ನವೀರಯ್ಯನವರು ತಮ್ಮ ಪುತ್ರ ಚಿ| ನಂಜುಂಡಪ್ಪನವರಿಗೆ ನೆಲಮಂಗಲದ ಮ| ರಾ| ಗಂಗಣ್ಣನವರ ಪುತ್ರಿ ಚಿ| ಸೌ| ರುದ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಮ| ರಾ| ಶೆಟ್ರಿ ಗುಬ್ಬಿಯಪ್ಪನವರ ದ್ವಾರಾ ತಲ್ಪಿರುತ್ತವೆ.

ಕೊಟ್ಟೂರು ಗ್ರಾಮನಿವಾಸಿಗಳಾದ ವೇ|| ಮ|| ಮ|| ಜಾಗಟಗೇರಿ ಚನ್ನವೀರಪ್ಪಯ್ಯನವರು ಬಟ್ಟೆಗಳ ಖರೀದಿಗಾಗಿ ಯಮ್ಮಿಗನೂರಿಗೆ ಹೋಗುತ್ತಿದ್ದಾಗ್ಗೆ ಬಳ್ಳಾರಿ ಸ್ಟೇಷನ್ನಿನಲ್ಲಿ ಒಬ್ಬ ಕಳ್ಳಕೋರನು ಅವರ ಕೋಟಿನ ಒಳಜೇಬಿನಲ್ಲಿದ್ದ 700 ರೂ. ನೋಟುಗಳಿಂದ ಕೂಡಿದ ಪಾಕೀಟನ್ನು ಮಾಯೆಯಿಂದ ಕತ್ತರಿಸುವಷ್ಟರಲ್ಲಿ ಗುರುವಿನ ಅನುಗ್ರಹದಿಂದ ಅದೇ ಸಮಯದಲ್ಲಿ ನಡೆಯುವರು ಜೇಬಿನಲ್ಲಿ ಕೈಹಾಕಲು ಕೆಳಗೆ ಬೀಳುತ್ತಿದ್ದ ಪಾಕೀಟು ಹಸ್ತಗತವಾದ ಸಂತೋಷಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ರಾಮದುರ್ಗಸಂಸ್ಥಾನಕ್ಕೆ ಸೇರಿದ ಕಲ್ಲೂರಗ್ರಾಮದ ಶ್ರೀ|| ಲಿಂಗಬಸಯ್ಯನವರು ಪೂಜಾರ ಇವರು ತಮ್ಮ ಪುತ್ರ ಚಿ|| ಸೊಲಬಯ್ಯನಿಗೆ ಮಾಳವಾಡಗ್ರಾಮದ ಮ|| ರಾ|| ಪರಯ್ಯನವರು ಪೂಜಾರ ಇವರ ಪುತ್ರಿ ಕುಂ|| ಸೌ|| ಬಸವಂತವ್ವನನ್ನು ತಂದು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣೆಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ಪಂಚಾಕ್ಷರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಉತ್ತಂಗಿ ಗ್ರಾಮದ ಹಾಲುಮಠದ ಚನ್ನಪ್ಪನ ವಿವಾಹಸಮಯದಲ್ಲಿ ಮ|| ರಾ|| ಕಾಸುಭೋಗರ ಶಿವನಾಗಪ್ಪನವರ ಅಭಿಪ್ರಾಯದ ಮೇರೆಗೆ ತೆಗೆಯಿಸಿದ 1 ರೂ. ವೇ|| ಮಠದ ವೀರಪ್ಪಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಮುಳುಗುಂದ ಹಿರೇಮಠದ ಪಟ್ಟದಯ್ಯನವರ ಪುತ್ರ ಚಿ|| ಸಿದ್ಧಲಿಂಗಯ್ಯನಿಗೆ ಇಂಗಳಳ್ಳಿ ಹಿರೇಮಠದ ಚನ್ನಬಸವಯ್ಯನವರ ಪುತ್ರಿ ಸೌ|| ಶಂಕರವ್ವನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಗುರುಸ್ವಾಮಿಮಠದ ಶಿವಲಿಂಗಾರ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ. ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನವು.

ಚಿಕ್ಕಮಗಳೂರು ಸರ್ವಭಕ್ತಮಂಡಲಿಯ ಪ್ರಾರ್ಥನಾನುಸಾರವಾಗಿ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯರವರು ತಾ|| 26-5-30 ರಲ್ಲಿ ಪಂಚನಹಳ್ಳಿಯಿಂದ ತೊಗರಿಹಂಕಲಿಗೆ ದಯಮಾಡಿ ಶ್ರೀಮಾನ್ ಕಾಫೀ ಪ್ಲಾಂಟರ್ ಟಿ. ಬಿ. ಮಲ್ಲೇಗೌಡರು ಭಕ್ತಿಪುರಸ್ಸರವಾಗಿ ಮಾಡಿದ ಸೇವೆಯನ್ನು ಕೈಕೊಂಡು ನಾಲ್ಕು ದಿವಸಗಳವರೆಗೂ ಅಲ್ಲಿಯೇ ಶಿವಲಿಂಗಪೂಜಾನುಷ್ಠಾನದಲ್ಲಿದ್ದು ಮತ್ತೆ ತಾ|| 30-5-30 ರಲ್ಲಿ ಮಾವಿನಹಳ್ಳಿ ಪುಟ್ಟ ಚಿಕ್ಕಗೌಡರ ಸೇವೆಯನ್ನು ಕೈಕೊಂಡು ನಿಶ್ಚಯವಾಗಿದ್ದ ಮೇರೆಗೆ ತಾ|| 31-5-30 ಶನಿವಾರ ಬೆಳಗ್ಗೆ 8 ಘಂಟೆಗೆ ಸರಿಯಾಗಿ ಚಿಕ್ಕಮಗಳೂರು ಟವನ್ನಿಗೆ ಚತುರಂಗಬಲದೊಡನೆ ಸಕಲ ಬಿರುದಾವಳಿಸಮೇತ ದಯಮಾಡಿಸಿದರು. ಪುರವೀಧಿಗಳು ಅಲಂಕರಿಸಲ್ಪಟ್ಟಿದ್ದುವು. ನಿಲ್ದಾಣದಲ್ಲಿ ಸಮಸ್ತ ಪೌರರು ಇಸ್ತಕಬಾಲಸಮೇತ ಭಗವತ್ಪಾದರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದರು. ಆ ಕಾಲಕ್ಕೆ ಮೆ|| ಡೆಪ್ಯುಟಿಕಮಿಷನರ್ ಸಾಹೇಬರವರೂ ಮ್ಯಾಜಿಸ್ಟ್ರೇಟರೂ, ಪೋಲೀಸ ಸೂಪರಿಂಡೆಂಟಸಾಹೇಬರೂ, ಪೋಲೀಸ ಇನಸ್ಪೆಕ್ಟರ್ ಸಾಹೇಬರೂ, ಪೋಲೀಸ್ ಸಬ್ ಇನಸ್ಪೆಕ್ಟರೂ, ಮುನಿಸಿಪಲ್ ಪ್ರೆಸಿಡೆಂಟರೂ ಮುಂತಾದ ಸರಕಾರೀ ಅಧಿಕಾರಿಗಳೂ ಆಗಮಿಸಿದ ಕೂಡಲೆ ವಂದನಾದ್ಯುಪಚಾರಗಳೊಡನೆ ಸತ್ವರ ಪಂಚಿಯವಾಗಿ ಉತ್ಸವವು ಪ್ರಚಲಿತವಾಯಿತು. ಸರ್ವ ವಾದ್ಯಗಳೂ ಮೊಳಗುತ್ತಿದ್ದುವು. ಹರಿಹರ, ದಾವಣಗೆರೆ, ಸೇವುತಿ, ಬಿರೂರು, ತರಿಕೆರೆ, ಬೆಂಗಳೂರು ಮುಂತಾದ ಸ್ಥಳಗಳಿಂದ ಆಗಮಿಸಿದ ಮಹಾಜನಸಮುದಾಯವು 7-8 ಸಾವಿರದ ವರೆಗಿದ್ದಿತು. ಪೋಲೀಸ ಉಸ್ತುವಾರಿಯೂ ಸರಿಯಾಗಿದ್ದಿತು. ವೈದಿಕರ ವೇದಘೋಷವೂ ಭಜಕರ ಮಂಜುಲಗಾನದಿಂದ ಮಾಡಲ್ಪಡುವ ಗುರುಪ್ರಭಾವಘಟಿತಭಜನವೂ ಪರಾಕುಗಳೂ ಸುಶ್ರಾವ್ಯವಾಗಿ ಉದ್ಘೋಷಿಸಲ್ಪಡುತ್ತಿದ್ದುವು. ಪ್ರತಿ ಗೃಹಾಂಗಣದಲ್ಲಿಯೂ ಸುವಾಸಿನಿಯರು ನೀರಾಜನವೆತ್ತಿ ಫಲಾಶೀರ್ವಾದವಂಪಡೆಯುತ್ತಿದ್ದರು. ಎತ್ತನೋಡಿದರತ್ತ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವೇ ತುಂಬಿಹೋಗಿದ್ದಿತು. ಸರ್ಕಾರದ ಸುವ್ಯವಸ್ಥೆಯಿಂದ ಉತ್ಸವವು ಪುರವೀಧಿಗಳೆಲ್ಲೆಲ್ಲ ಶಾಂತವಾಗಿ ನಡೆದು ಬಿಡಾರಕ್ಕೆ ಸವಾರಿಯು ದಯಮಾಡಿಸಿ ಅಲಂಕೃತವಾದ ಮಂಟಪದಲ್ಲಿ ಶೋಭಿಸುತ್ತಿರುವ ಸಿಂಹಾಸನಾರೋಹಣವನ್ನು ಮಾಡಿದ ಕೂಡಲೆ ಕರತಾಡನಗಳಾಗಿ ಮಹಾಶಯರು ತಮ್ಮ ತಮ್ಮ ಉಚಿತಸ್ಥಾನಗಳಲ್ಲಿ ಕುಳಿತರು. ಬಳಿಕ ಶ್ರೀ ಜಗದ್ಗುರುಗಳವರು ತಮ್ಮ ಪ್ರಸಾದವಾಣಿಯಿಂದ ಸರ್ವಜನಸಮ್ಮತವಾಗಿ ಧರ್ಮಾವಲಂಬನೆಯು ಉಭಯಲೋಕಸುಖಕ್ಕೂ ಕಾರಣವಾಗಿರುವದರಿಂದ ಸರ್ವರೂ ಧರ್ಮದಲ್ಲಿ ಉತ್ಕಟೇಚ್ಛೆಯುಳ್ಳವರಾಗಿ ಸಕಲ ಮನೋರಥಗಳನ್ನು ಪಡೆಯಲೆಂದು ಆಶೀರ್ವಾದಿಸಿ ಅಪ್ಪಣೆಯನ್ನು ಕೊಟ್ಟ ಕೂಡಲೆ ಸಭೆಯು ವಿಸರ್ಜಿತವಾಯಿತು. ಬಳಿಕ ಸಾಯಂಕಾಲದಲ್ಲಿ ಯಥಾಪ್ರಕಾರ ಶ್ರೀ ಸನ್ನಿಧಾನದಲ್ಲಿ ಸಭೆಯು ನೆರೆಯಿತು. ಸಭೆಗೆ ಎಲ್ಲ ಸರಕಾರೀ ಅಧಿಕಾರಿಗಳೂ ಪೌರರೂ ಪರಸ್ಥಳದವರೂ ಆಗಮಿಸಿದ್ದರು. ಆ ಕಾಲಕ್ಕೆ ಕವಿರತ್ನ ಕೀರ್ತನಕೇಸರಿ ಪದವೀಧರರಾದ ತುಮಕೂರು ಶಿವಮೂರ್ತಿಶಾಸ್ತ್ರಿಗಳ ಸುಶ್ರಾವ್ಯವಾದ ಕೀರ್ತನವಾಯಿತು. ಸದರಿ ಶಾಸ್ತ್ರಿಗಳಿಂದ ಕೀರ್ತನದ ಕೊನೆಯಲ್ಲಿ ಜಗದ್ಗುರುಗಳ ವಿಷಯವಾಗಿ ರಚಿಸಿದ್ದ ಪದ್ಯಗಳು ಪಠಿಸಲ್ಪಟ್ಟುವು. ಪುನಃ ಗುರುಸಾರ್ವಭೌಮರು ಭಕ್ತಿಪ್ರಭಾವವನ್ನು ವಿವರಿಸಿ ಬೋಧಿಸಿ ಆಶೀರ್ವದಿಸಿರು. ಪೂಜಾಕಾಲವು ಸಮೀಪಿಸಿದ್ದರಿಂದ ಆಚಾರ್ಯಜಯಘೋಷದೊಡನೆ ಸಭೆಯು ವಿಸರ್ಜಿತವಾಯಿತು. ನಿತ್ಯದಲ್ಲಿಯೂ ಮಹಾಸನ್ನಿಧಾನದಲ್ಲಿ ಧರ್ಮಬೋಧೆಯು ನಡೆಯುತ್ತಿರುವದು. ಚಿಕ್ಕಮಗಳೂರು ಟವನ್ ಪ್ರಮುಖರಾದ ವೇ|| ಮಠದ ನಂಜಪ್ಪಯ್ಯನವರು, ಶ್ರೀಮಾನ್ ಕಾಫಿಪ್ಲಾಂಟರ್ ಟಿ. ಬಿ. ಮಲ್ಲೇಗೌಡರು, ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರ್ ತೊಗರಿಹಂಕಲ ಎಂ. ಸಿದ್ಧಲಿಂಗಪ್ಪ ಶೆಟ್ಟರು, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ ಕಾಫಿಪ್ಲಾಂಟರ್ ಎಂ. ಪಿ. ಚಂದಪ್ಪನವರು, ಸ್ಕೂಲ್‌ಮಾಸ್ಟರ್ ಸಿ. ಆರ್. ಮಹಾಂತಪ್ಪ ಶೆಟ್ಟರು, ಕಾಫಿಪ್ಲಾಂಟರ್ ಎಂ. ಸಿ. ರುದ್ರಪ್ಪ ಶೆಟ್ಟರು, ಸಿ. ಆರ್. ಶಿವಾಗಣಪ್ಪ ಶೆಟ್ಟರು, ಕಾಫಿಪ್ಲಾಂಟರ್, ಸಿ. ಕೆ. ಮಲ್ಲಪ್ಪ ಶೆಟ್ಟರು, ಸಿ. ಆರ್. ಮಲ್ಲಪ್ಪ ಶೆಟ್ಟರು, ಹೆಚ್. ಎಂ. ದೇವೇಗೌಡರು ಕಾಫಿಪ್ಲಾಂಟರ್ ಮುಂತಾದ ಮಹಾಶಯರು ಶ್ರೀ ಜಗದ್ಗುರುಗಳನ್ನು ಬಿಜಯಮಾಡಿಸಿಕೊಂಡು ಬಂದು ತನುಮನೋಧನಗಳಿಂದ ಸೇವೆಯನ್ನು ಮಾಡುತ್ತಿರುವರು. ಈ ಗುರುಭಕ್ತರಿಗೆ ಜಗದಾಚಾರ್ಯರು ಸಕಲ ಇಷ್ಟಾರ್ಥಗಳನ್ನು ಕರುಣಿಸಲೆಂದು ಅನನ್ಯಭಾವದಿಂದ ಬೇಡುತ್ತೇವೆ.

ಮಹಾಸ್ವಾಮಿಗಳವರ ದಿವ್ಯಸನ್ನಿಧಿಯಲ್ಲಿ ಭಕ್ತಿಭಾವದಿಂದೊಪ್ಪಿಸಿದ ಸ್ತವನಕುಸುಮಮಂಜರಿ.

ಕಂದ || ಸೋಮೇಶಲಿಂಗಜನ್ಮಂ |
ಕಾಮಾರಿನಿಭಾಂಗನಮಿತಕರುಣಾಪಾಂಗಂ
ಕಾಮಿತವನಿತ್ತು ಕೃಪೆಯಿಂ |
ಸ್ವಾಮಿ ಶ್ರೀ ರೇಣುಕಾರ್ಯನೋವುಗೆವರೆಯಂ ||೧||

ತಿಳಿಯದೆಗುರುವಿನ ಮಹಿಮಾ |
ವಳಿಯಂ ಪರಿಕಿಪೆನೆಂದು ಬಗೆವಾಮೂಢಂ ||
ಪೊಳೆಯುವಕೆಂಡಕೆದುಡುಕುವ |
ತಿಳಿವಿಲ್ಲದ ಬಾಲನಂತೆ ದುಃಖಿಪನದರಿಂ ||೨||

ವೃತ್ತ || ಪರಿಪರಿದುಃಖಜಾಲಕೆಡೆಯಪ್ಪ ಮಹಾಭವ ಪಾಲಿಯೊಳೆರಂ |
ಹರಿಯದೆ ನಿತ್ಯಸೌಖ್ಯಕೆ ವಿರೋಧವ ನೀಯುವ ದುರ್ಗುಣಾಳಿಯಂ ||
ತೊರೆಯದೆ ಸದ್ಗುರೂತ್ತಮನಸೇವೆಯೆ ಸರ್ವಶುಭಂಗಳೀವುದೆಂ |
ದರಿಯದೆ ಪಾಳ್ದರೇಕೆ ಗುರುಕಾರ್ಯಕೆ ಭಂಗವನಯ್ಯೊ ಪಾಪಿಗಳ್ ||೩||

ಭೋ|| ಷ|| ಗುರುವೇ ನಿನ್ನ ಚರಣಕಮಲ | ಕೆರಗಿ ಸಕಲ ದುರಿತಗಳನೆ | ತೊರೆದು ಹರನ ಪದವಪಡೆದು ಬಾಳ್ವುದೊಲ್ಲದೆ || ಗುರುವಿರೋಧಕಾರ್ಯಗಳನೆ | ಪರಮಪಾಪಿಚಂದ್ರನಂತೆ | ಧರಿಯ ಮನುಜರೇಕೆ ಮಾಡಿ ನೋಯುವರೋ ||೪||

ಕವಿಶಿವಮೂರ್ತಿಯೇನಿಪ್ಪಾ |
ಶಿವಕವಿಗಳ ದಾಸನೋರ್ವನತಿಭಕ್ತಿಯೊಳೀ ||
ಸುವಿಮಲಕುಸುಮಾಂಜಲಿಯಂ |
ಶಿವಯೋಗಿವರೇಣ್ಯರೇಣುಕಾರ್ಯಂಗಿತ್ತಂ ||೫||

ಶಿವಮೂರ್ತಿಶಾಸ್ತ್ರಿ, ತುಮಕೂರು.

ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವು.

ಧಾರವಾಡ ಜಿಲ್ಹಾ ಗದಗ ತಾ|| ಶಿಂಗಟಾಲೂರ ವೇ|| ಗುಂಡಯ್ಯನವರು ಹಿರೇಮಠದಲ್ಲಿ ಧರ್ಮಸುಧಾರಕಮಂಡಳಿಯ ಪ್ರಮುಖರಾದ ಪಟೇಲ ಹೊಸಳ್ಳಿ ಪುರವರ್ಗ ಹಿರೇಮಠ ಕೊಟ್ರಪ್ಪ ಮಾನಶೆಟ್ಟಿ, ದೇವೇಂದ್ರಗೌಡ ಪಾಟೀಲ, ವೀರಭದ್ರಪ್ಪಾ ಗಡಾದ, ಗೋವಿಂದಪ್ಪಾ ಕೊಪ್ಪದ, ಯಲ್ಲಪ್ಪಾ ಅಂಗಡಿ, ಲಿಂಗನಗೌಡ ಹಾಲನಗೌಡ್ರ, ಚೆನ್ನವೀರಯ್ಯ ಮಾರುಳದ ಹಿರೇಮಠ ಇತರ ಪ್ರಮುಖಜನರು ವೈಶಾಖ ಶುದ್ಧ ೫ ದಿವಸ ಕೂಡಿ ಜಗದ್ಗುರು ದಾರುಕಾಚಾರ್ಯರ ಭಾವಚಿತ್ರಕ್ಕೆ ಬೆಳಗ್ಗೆ ಷೋಡಶೋಪಚಾರಪೂಜೆ ಸಾಯಂಕಾಲ 6 ಘಂಟೆಗೆ ಜಗದ್ಗುರುಗಳವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಭಜನಾಮೇಳದಿಂದಲೂ ವಾದ್ಯವೈಭವಗಳಿಂದಲೂ ಉತ್ಸವವನ್ನು ಬಹು ವೈಭವದಿಂದ ನೆರವೇರಿಸಿದರು. ಉತ್ಸವವು ತುಂಗಭದ್ರಾತೀರಕ್ಕೆ ಹೋಗಿ ಕಾಯಿಕರ್ಪೂರ ಆದನಂತರ ಪೂರ್ವಸ್ಥಾನಕ್ಕೆ ಬಂದು ತಲ್ಪಿತು. ಅನಂತರ ವೇ|| ಗುಂಡಯ್ಯನವರು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ವೈಶಾಖ, ಮಾಘ, ಫಾಲ್ಗುಣ ಮಾಸಗಳಲ್ಲಿ ಪ್ರತಿಯೊಬ್ಬ ವೀರಶೈವರು ತಪ್ಪದೆ ಮಾಡಬೇಕೆಂದು ಸರ್ವ ಸಭಿಕರಿಗೂ ಬೋಧಿಸಿದರು. ಅನಂತರ ಶ್ರೀ ದಾರುಕಾಚಾರ್ಯರ ಸ್ತೋತ್ರ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಪ್ರ|| ಕೊಟ್ರಯ್ಯ, ಉತ್ತಂಗಿ.

ಕಲ್ಯಾಣಮಹೋತ್ಸವ.

ಅರಸೀಕೆರೆ ತಾ|| ಬಾಣಾವರದ ವೇ|| ಹಿರೇಮಠದ ಗುರುಪಾದದೇವರು ವೀರಭದ್ರಸ್ವಾಮಿಯವರ ಜ್ಯೇಷ್ಠ ಪುತ್ರ ಓಂಕಾರಶರ್ಮನೆಂಬ ವರನಿಗೂ, ಮನಕತ್ತೂರ ಮಠದ ವೇ|| ಸಣ್ಣನಂಜಪ್ಪದೇವರ ಬಸಪ್ಪದೇವರ ಪುತ್ರಿ ದೊಡ್ಡ ಮಹಾದೇವಮ್ಮನೆಂಬ ವಧುವಿಗೂ ತಾ|| 18-5-1930 ನೇ ಭಾನುವಾರ ದಿವಸ ವೇ|| ಮೂಡನಳ್ಳಿ ಹಿರೇಮಠದ ಕಂಬಸವಶಾಸ್ತ್ರಿಗಳವರ ಪೌರೋಹಿತ್ಯದಿಂದ ವಧುವಿಗೆ ವಿಧ್ಯುಕ್ತಪ್ರಕಾರ ವೇ|| ಕೊಂಡಜ್ಜಿ ಹಿರೇಮಠದ ಬಸವಾರಾಧ್ಯರಿಂದ ಶಿವದೀಕ್ಷಾ ಸಂಸ್ಕಾರವು ನಡೆದು ಪಾಣಿಗ್ರಹಣಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿದರು. ಆಗ್ಗೆ ಬಾಣಾವರ ಪಂಚಾಚಾರ್ಯರ ಭಜನಾಸಂಘದವರ ಭಜನೆಯು ಶ್ರೀ ಜಗದ್ಗುರು ಪತ್ರಿಕಾಸಂಸ್ಥಾನ ಏಜಂಟರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಭಜನಾಸಂಘದ ಚಾಲಕರು ಚಿಕ್ಕಮಕ್ಕಳಾದ ಎಂ. ನಾಗರಾಜು, ಗಿರಿಜಾ ಎಂಬುವ ಬಾಲಕ ಬಾಲಕಿಯರಿಗೆ ಜಗದ್ಗುರುಗಳವರ ಅವತಾರ ಮಹಿಮೆಯನ್ನು ಉಪನ್ಯಾಸ ಮೂಲಕ ಬೋಧಿಸಲು ತರಪೇತು ಮಾಡಿರುವದು ಆಶ್ಚರ್ಯದಾಯಕವಾಗಿರುತ್ತದೆ. ಈ ಕಲ್ಯಾಣಮಹೋತ್ಸವ ಕಾಲದಲ್ಲಿ ನೂತನ ವಧೂವರರಿಂದ ಪ್ರಭಾಪತ್ರಿಕೆಯ ಪೋಷಣೆಯ ಬಗ್ಗೆ 2 ರೂಪಾಯಿಗಳೂ ಭಜನಾಸಂಘದ ಫಂಡಿಗಾಗಿ 2 ರೂಪಾಯಿಗಳೂ ಏಜಂಟರವರ ಸೂಚನೆಯ ಮೇರೆಗೆ ತೆಗೆಯಿಸಲ್ಪಟ್ಟುವು. ತಾ|| 19-5-30 ನೇ ರಾತ್ರಿ ನೂತನ ವಧೂವರರ ಮೆರವಣಿಗೆಯು ಸಾವಿರಾರು ಮಹಾಜನ ಪ್ರೇಕ್ಷಕಸಂದಣೆಯಿಂದ ಪೇಟೆ ಕೋಟೆಗಳಲ್ಲಿ ಛತ್ರ ಚಾಮರಾದಿ ವಾದ್ಯವೈಭವದೊಡನೆ ಹೊರಟಿತು. ಹಿರೇಮಠಕ್ಕೆ ಸೇರಿದ ಭಕ್ತಾದಿಗಳು ತಮ್ಮ ತಮ್ಮ ಗೃಹಗಳ ಮುಂಭಾಗದಲ್ಲಿ ನೂತನವಧೂವರರಿಗೆ ಗುರುಮರ್ಯಾದೆಯ ಪ್ರಕಾರ ಸುಮಂಗಲೆಯರಿಂದ ಮಂಗಲಾರತಿ ಕಾಯಿ ಕರ್ಪೂರಾದಿ ವಿನಿಯೋಗದಿಂದ ಗುರುಭಕ್ತಿಯನ್ನು ಪ್ರದರ್ಶನಮಾಡುತ್ತಿದ್ದರು. ಉತ್ಸವವಾದ ಮೇಲೆ ಸೋಮವಾರು ಮಹಾಜನರಿಂದ ವಧೂವರರಿಗೆ ಆಹೇರು (ಮುಯ್ಯು) ಗಳು ಮಾಡಲ್ಪಟ್ಟವು. ಆ ಸಮಯದಲ್ಲಿ ಬಾಣಾವರದ ಹಾಲುಮಠದ ಹೊಸ ವಂಥಪ್ಪ ಗಡಿ ಪ್ರಮುಖರಾದ ಸೋಮೇಗೌಡ್ರು, ಬುಕ್ಕನ ಹುಚ್ಚೇಗೌಡ್ರು, ಜಡೇರಯ್ಯನವರ ಸಮೇತ ವಾದ್ಯವೈಭವದೊಡನೆ ಆರ್ಯ ಪದ್ಧತಿಯಂತೆ ಗುರುಭಕ್ತಿನಿಷ್ಠರಾಗಿ ನೂತನ ವಧೂವರರಿಗೆ ಕ್ಷೀರಪಾಲು ವಗೈರೆ ಫಲಪುಷ್ಪಾದಿಗಳಿಂದ ಕಾಣಿಕೆ ಒಪ್ಪಿಸಿ, ತೀರ್ಥಪ್ರಸಾದ ಸೇವನೆಯಿಂದ ಫಲಾಶೀರ್ವಾದಕ್ಕೆ ಪಾತ್ರರಾದರು. ಮುನಿಸಿಪಾಲಿಟಿ ಕೌನ್ಸಿಲ್ ಮೆಂಬರರು ವೈಸ್‌ಪ್ರೆಸಿಡೆಂಟರು, ಪೋಲೀಸ್ ಆಫೀಸರು, ಪಟೇಲ, ಶಾನುಭೋಗರು ಮುಂತಾದ ಪುರಪ್ರಮುಖರಿಗೆಲ್ಲಾ ಗೌರವ ಫಲತಾಂಬೂಲಾದಿಗಳು ಒಪ್ಪಿಸಲ್ಪಟ್ಟುವು. ಸಂಘದ ಪ್ರೆಸಿಡೆಂಟರು ಕೆ ಯಂ. ಬಸವಾರಾಧ್ಯರು ಜಾಯಿಂಟ ಸೆಕ್ರೆಟರಿಗಳಾದ ಎಂ. ಮಾದಯ್ಯಶೆಟ್ಟರು, ಕೆ ಯಂ. ಗಂಗಾಧರಯ್ಯನವರು, ಎಂ. ವಿರೂಪಾಕ್ಷಯ್ಯನವರು, ಮಲ್ಲಯ್ಯಶೆಟ್ಟರು, ಯಜಮಾನ ನಂಜುಂಡಶೆಟ್ಟರ ಪುತ್ರ ಬಸಪ್ಪಶೆಟ್ಟರು, ಬಿ. ಪುಟ್ಟಯ್ಯಶೆಟ್ಟರು ಮುಂತಾದ ಪೇಟೆ ಕೋಟೆ ಸಮಾಜದವರೆಲ್ಲಾ ಉತ್ಸಾಹದಿಂದ ಕಾರ್ಯವನ್ನು ನೆರವೇರಿಸಿದರು. ಇವರಿಗೆ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಕೋರುವ,

ಗರ್ಜೆ ಮಾದಾಪುರದ ಹಿರೇಮಠದ ಲ್ಯಾಂಡಹೋಲ್ಡರ,
ಎಂ. ಸಿ. ಮರುಳಾರಾಧ್ಯ.

ಮೇಲ್ಕಂಡ ವಿವಾಹಮಹೋತ್ಸವಕ್ಕೆ ಗುರುಭಕ್ತಿನಿಷ್ಠರಾಗಿ ದಾವಣಗೇರಿಯಿಂದ ಬಂದಿದ್ದ ಬಾನಾವೇ ವೀರಮ್ಮ ನಂಜಪ್ಪ ಇವರು ನೂತನ ವಧೂವರರಾದ ನಮ್ಮ ಗುರುಗಳ ಶ್ರೇಯಃಪ್ರಾರ್ಥನೆಗಾಗಿ ತಾ|| 21-5-30 ನೇ ದಿವಸ ಪ್ರಸಿದ್ಧ ಮಹಿಮರಾದ ಶ್ರೀ ಸಿದ್ಧಮಲ್ಲಾರಾಧ್ಯರ ಗವಿಮಠದಲ್ಲಿ ಮಧ್ಯಾಹ್ನ ನೂರಾರು ಭಕ್ತಮಾಹೇಶ್ವರರಿಗೆ ಮೃಷ್ಟಾನ್ನದಿಂದ ತೃಪ್ತಿಪಡಿಸಿದ ಸ್ಮರಣಾರ್ಥವಾಗಿ ಭಜನಾಸಂಘದ ಫಂಡಿಗೆ 4 ರೂಪಾಯಿಗಳನ್ನು ಸಮರ್ಪಿಸಿದರು. ಈ ಗುರುಭಕ್ತಿನಿರತರಿಗೆ ಜಗದೀಶನು ಸನ್ಮಂಗಲವನ್ನುಂಟುಮಾಡಲಿ.

V. M. Sajjen Shetty,
Banavar.

ತಿರ್ಯಗಾಂದೋಲಿಕಾ ಮಹೋತ್ಸವವು.

ಕೊಪ್ಪಳ ಜಿಲ್ಹಾ ಪೈಕಿ ಯರೇಹಂಚಿನಾಳ ಗ್ರಾಮದಲ್ಲಿ ಶ್ರೀ ಹಿಮವತ್ಕೇದಾರ ಏಕೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಚರಪಟ್ಟಾಧ್ಯಕ್ಷ ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳ ಮುಕ್ಕಾಂ ಇದ್ದು ಒಂದು ತಿಂಗಳಾಯಿತು. ಸದರಿ ಗ್ರಾಮದ ಮ|| ರಾ|| ರೇವಪ್ಪಾ ಕವಡರ ಇವರು ಮಹಾಸನ್ನಿಧಿಗೆ ಬಿನ್ನಹಮಾಡಿ ಗ್ರಾಮ ಪ್ರಮುಖರ ಇಚ್ಛೆಯ ಮೇರೆಗೆ ತಿರ್ಯಗಾಂದೋಲಿಕಾ ಮಹೋತ್ಸವವನ್ನು ಮಾಡುವದಾಗಿ ಬಿನ್ನೈಸಿದ ಪ್ರಕಾರ ಮಹಾಸನ್ನಿಧಿಯು ಒಪ್ಪಿಕೊಂಡು ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಮೂರ್ತಮಾಡಿದನಂತರ ಪಂಚಾಚಾರ್ಯರ ಜಯಘೋಷದೊಡನೆ ಛತ್ರ ಬಿರುದಾವಳಿ ಚತುರಂಗಬಲ ಸಹಿತ ಪುರಬೀದಿಯಲ್ಲಿ ಮಹೋತ್ಸವವು ವಿಜೃಂಭಣೆಯಿಂದ ಹೊರಟಿತು. ಈ ಉತ್ಸವದಲ್ಲಿ ಎಲ್ಲ ಮತದವರು ಏಕಭಾವದಿಂದ ಸೇವೆ ಮಾಡಿದ್ದು ಮಹಾಸನ್ನಿಧಿಯ ಪ್ರಭಾವವೇ ಸರಿ! ಮಹೋತ್ಸವವು ವೈಭವದಿಂದ ಸ್ವಸ್ಥಾನಕ್ಕೆ ತಲ್ಪಿದ ನಂತರ ಮಹಾಸ್ವಾಮಿಗಳು ಪಂಚಾಚಾರ್ಯರ ಜಯಘೋಷದೊಡನೆ ಸಿಂಹಪೀಠದಲ್ಲಿ ಮೂರ್ತಮಾಡಿದ ಬಳಿಕ ಆಸ್ಥಾನವಿದ್ವಾನ್ ವೇ|| ಪಂ|| ಅನ್ನದಾನಶಾಸ್ತ್ರಿಗಳು ಯರೇಹಂಚಿನಾಳ ಇವರು ಈ ಹೊತ್ತಿನ ದಿವಸ ಏಕೋರಾಮಾರಾಧ್ಯರ ಜಯಂತಿ ವೈ|| ಶು|| ೩ ಇರೋಣದರಿಂದ ಮಹಾಸನ್ನಿಧಿಯು ಇದೇ ಸಮಯಕ್ಕೆ ಪ್ರಾಪ್ತವಾದದ್ದು ನಮ್ಮ ಭಾಗ್ಯೋದಯವೆಂದೂ ಜಗದಾಚಾರ್ಯರು ಅನಂತ ಮಹಿಮೆಗಳ ದ್ವಾರಾ ವೀರಶೈವಮತವನ್ನುದ್ಧರಿಸಿದರೆಂದೂ ಸರ್ವರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಆ ಮೇಲೆ ಸರ್ವರೂ ಫಲಾಶೀರ್ವಾದಗಳನ್ನು ಪಡೆದು ಶ್ರೀ ಜಗದಾಚಾರ್ಯರ ಜಯಘೋಷದೊಡನೆ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

S. B. ಪಂ|| ಹಿರೇಮಠ

ಶ್ರೀಮಜ್ಜಗದ್ಗುರು ಮರುಳಾರಾಧ್ಯಾಯನಮಃ.

ಪಟ್ಟಾಭಿಷೇಕಮಹೋತ್ಸವವು.

ಬೆಳಗಾವ ಡಿ|| ಗೋಕಾಕ ತಾಲೂಕು ಕೇಸಪ್ಪನಹಟ್ಟಿ ಹಿರೇಮಠದ ಶ್ರೀ ರಾಚಯ್ಯ ಪಟ್ಟದಸ್ವಾಮಿಗಳು ತಮ್ಮ ವಂಶದ ಗರಗದ ಹೆಡ್‌ಮಾಸ್ತರ ಉಳವಯ್ಯನವರ ಸುಪುತ್ರ ಚಂದ್ರಶೇಖರಪ್ಪಯ್ಯನವರಿಗೆ ಪಟ್ಟಾಧಿಕಾರ ಕೊಡುವ ಮಹೋತ್ಸವವನ್ನು ಹಾಲಕೇರಿ ಶ್ರೀ ಪಟ್ಟದಸ್ವಾಮಿಗಳು, ಶ್ರೀ ಹತ್ತರಕಿ ಪಟ್ಟದ ಸ್ವಾಮಿಗಳು, ಶ್ರೀ ಅಮರಗೋಳ (ಅಣ್ಣಿಗೇರಿ) ಪಟ್ಟದಸ್ವಾಮಿಗಳು, ಶ್ರೀ ಸುತಗಟ್ಟಿ ಪಟ್ಟದಸ್ವಾಮಿಗಳು ಇವರಿಂದ ಶ್ರೀನೃಪಶಾಲಿವಾಹನಶಕೆ ೧೮೫೨ ಪ್ರಮೋದನಾಮಸಂವತ್ಸರದ ವೈಶಾಖ ಬ|| ೧೩ ರವಿವಾರ ಸಾಯಂಕಾಲ ಸುಮುಹೂರ್ತದಲ್ಲಿ ಹಿರೇಮಠದಲ್ಲಿ ಕರ್ತೃಗದ್ದುಗೆಯ ಸಂಮುಖದಲ್ಲಿ ವಿಧ್ಯುಕ್ತಪ್ರಕಾರವಾಗಿ ಸಾಂಗಗೊಳಿಸಿದರು. ಆ ಸಂಭ್ರಮವು ಭಕ್ತರ ಮನಸ್ಸನ್ನು ಆನಂದಸಾಗರದಲ್ಲಿ ಮುಳುಗಿಸಿತು. ಪೂಜಾಸಮಾಪ್ತಿಯಾದನಂತರ ಕೇಸಪ್ಪನಹಟ್ಟಿ ಶ್ರೀ ರಾಚಯ್ಯ ಪಟ್ಟದಸ್ವಾಮಿಗಳು ಶ್ರೀ ಚಂದ್ರಶೇಖರಯ್ಯನವರಿಗೆ ಪಟ್ಟಾಧಿಕಾರ ಕೊಟ್ಟರು. ಅದೇ ಕಾಲಕ್ಕೆ ಶ್ರೀರಾಚಯ್ಯ ಪಟ್ಟದಸ್ವಾಮಿಗಳ ತಮ್ಮಂದಿರಾದ ಚನಬಸಯ್ಯ ಇವರು ತಮ್ಮ ಮಗನಾದ ಮಳೆಯಯ್ಯನಿಗೆ ಅಯ್ಯಾಚಾರ ಮಾಡಿಸಬೇಕೆಂದು ಸ್ವಾಮಿಗಳ ಸಮೂಹಕ್ಕೆ ಬಿನ್ನೈಸಲು ಅವರು ಒಪ್ಪಿ ಹೊಸದಾಗಿ ಪಟ್ಟಾಧಿಕಾರ ಹೊಂದಿದ ಶ್ರೀ ಚಂದ್ರಶೇಖರ ಪಟ್ಟದ ಸ್ವಾಮಿಗಳಿಂದ ಆ ಕಾರ್ಯವನ್ನು ಸಾಂಗಗೊಳಿಸಿದರು. ಮತ್ತು ಕೆಲವು ವಟುಗಳಿಗೆ ದೀಕ್ಷಾಕಾರ್ಯವು ಧರ್ಮಾರ್ಥವಾಗಿ ಮಾಡಲ್ಪಟ್ಟಿತು. ಅನಂತರ ಮೆರವಣಿಗೆಯ ಕಾರ್ಯವು ಪೂರೈಸಲ್ಪಟ್ಟಿತು. ಮಾರನೇ ದಿವಸ ಗಣಾರಾಧನೆಯು ಅತಿವೈಭವದಿಂದ ಜರುಗಿತು. ಸಹಸ್ರಾವಧಿ ಜನರಿಗೆ ಅನ್ನಸಂತರ್ಪಣೆಯು ನೆರವೇರಿ ಮಂಗಲಕಾರ್ಯಕ್ಕೆ ಮತ್ತಷ್ಟು ಮಂಗಲವನ್ನೇ ಹೆಚ್ಚಿಸಿತು. ಜಗದ್ಗುರುವಾದ ಮರುಳಸಿದ್ಧಸ್ವಾಮಿಯು ನೂತನಪಟ್ಟದಸ್ವಾಮಿಗಳಿಗೆ ಸದಾ ಮಂಗಲವನ್ನೀಯಲಿ.

ವೀರಪ್ಪ ದಾನಪ್ಪ ಅಂಗಡಿ.

ಬೆಟ್ಟದಪುರದ ಶ್ರೀ ಚಿಕ್ಕವೀರದೇಶಿಕೇಂದ್ರಸ್ವಾಮಿ ಫ್ರೀ ಬೋರ್ಡಿಂಗ್‌ಹೋಂ ಫಂಡು, ಮೈಸೂರು.

ತಲಕಾಡು ಮ|| ಗುರುನಂಜಪ್ಪನವರ ಪ್ರೇಮಪುತ್ರಿ ಸೌ|| ಮುದ್ದಮ್ಮನಿಗೂ ಡಿಟೋ ಗ್ರಾಮದ ನಂಜಪ್ಪನವರ ಕುಮಾರ ಶಂಭುಲಿಂಗಪ್ಪನಿಗೂ ನಡೆದ ವಿವಾಹದಲ್ಲಿ ಮ|| ಗುರುನಂಜಪ್ಪನವರಿಂದ ಮ|| ಪಿ. ಮಲ್ಲಣ್ಣನವರ ಮೂಲಕ ಬಂದದ್ದು 5 ರೂ. ಮೈಸೂರು ಮ|| ಎಂ. ಚಂದ್ರಶೇಖರಯ್ಯನವರ ಪುತ್ರಿ ಸೌ|| ನಾಗಮ್ಮನಿಗೂ ಬೆಂಗಳೂರು ಮ|| ಮಲ್ಲಶೆಟ್ಟಪ್ಪನವರ ಶಿವಪ್ಪನಿಗೂ ನಡೆದ ಲಗ್ನದಲ್ಲಿ ಮ|| ಚಂದ್ರಶೇಖರಪ್ಪನವರಿಂದ ಮ|| ಪಿ. ಮಲ್ಲಣ್ಣನವರ ಮೂಲಕ ಬಂದದ್ದು 5 ರೂ. ಮೈಸೂರು ಶಿವಪ್ಪನವರ ಪುತ್ರಿ ಸೌ|| ಶಿವನಂಜಮ್ಮನಿಗೂ ಹೊಳೆನರಸೀಪುರದ ಮ|| ನಂಜಪ್ಪನವರ ಪುತ್ರ ರಾ|| ನಂಜುಂಡಪ್ಪನಿಗೂ ನಡೆದ ಲಗ್ನದಲ್ಲಿ ಬಂದದ್ದು 5 ರೂ. ಬೆಂಗಳೂರು ಮ|| ವೀರಣ್ಣನವರ ಪುತ್ರ ವಿಶ್ವನಾಥಪ್ಪನಿಗೂ ಮ|| ಸುಲಬೆಲೆ ಕಾಮಣ್ಣನವರ ಪುತ್ರಿ ಸೌ|| ಪುಟ್ಟಮ್ಮಣ್ಣಿಗೂ ನಡೆದ ಲಗ್ನದಲ್ಲಿ ಮ|| ಕೋವಿ ಗುರುಮಲ್ಲಯ್ಯನವರ ಮಕ್ಕಳು ಮ|| ಮಲ್ಲಪ್ಪನವರಿಂದ ಬಂದದ್ದು 5 ರೂ. ಮೇಲ್ಕಂಡ ಮ|| ವೀರಭದ್ರಪ್ಪನವರಿಂದ ಅವರ ಅಣ್ಣನವರ ಮಗಳು ನೀಲಮ್ಮನಿಗೂ ಕೊಳಲಪೇಟೆ ಮಲ್ಲಪ್ಪನವರಿಗೂ ನಡೆದ ಲಗ್ನದಲ್ಲಿ ಬಂದದ್ದು 5 ರೂ.

ಮೇಲ್ಕಂಡ ಮೊಬಲಗನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಮೈಸೂರು
6-6-30.

ಪಿ. ಎನ್. ಸಂಗಪ್ಪ,
ಆನರರಿ ಸೆಕ್ರೆಟರಿ,
ಬಿ. ಎಸ್. ಸಿ. ಡಿ. ಫ್ರೀ ಬೋರ್ಡಿಂಗ್ ಹೋಂ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪ್ರಕಟನೆ.

ವಿದ್ಯಾಪಕ್ಷಪಾತಿಗಳಾದ ಸಮಾಜಬಂಧುಗಳೇ!

ವೀರಶೈವಗುರುವಂಶೋದ್ಭವರಾದ ಪಂ|| ವಿರೂಪಾಕ್ಷಶಾಸ್ತ್ರೀ ಗಾವರವಾಡಮಠ ಪೋಷ್ಟ ಬಳಗಾನೂರು ಜಿಲ್ಲಾ ಧಾರವಾಡ ಇವರು ಶ್ರೀ ಕ್ಷೇತ್ರ ಕಾಶಿಯಲ್ಲಿ ೮-೧೦ ವರ್ಷಗಳ ವರೆಗೆ ಇದ್ದು ಜ್ಯೋತಿಷ, ವ್ಯಾಕರಣ, ಸಾಹಿತ್ಯಾದಿ ವಿಷಯಗಳಲ್ಲಿ ಉತ್ತೀರ್ಣರಾಗಿ ವಿದ್ಯಾರತ್ನ ಕಾವ್ಯತೀರ್ಥಾದಿ ಪದವಿಗಳನ್ನು ಹೊಂದಿ ದೇಶಕ್ಕೆ ಬಂದು ಶ್ರೀ ಕ್ಷೇತ್ರ ಕಪ್ಪಡಿಸಂಗಮ, ತಾಳೀಕೋಟೆ, ಬಳಗಾನೂರು ಮೊದಲಾದ ಪ್ರಸಿದ್ಧ ಸ್ಥಲಗಳಲ್ಲಿ ಅಧ್ಯಾಪಕತ್ವವನ್ನು ವಹಿಸಿ ಕೀರ್ತಿಶಾಲಿಗಳಾಗಿರುವರು. ಪಂಡಿತರಲ್ಲಿ ಅಭ್ಯಾಸಮಾಡಿದವರ ಪೈಕಿ ಕೆಲವರು ಅನ್ಯತ್ರ ಅಧ್ಯಾಪಕತ್ವವನ್ನು ವಹಿಸಿರುವರು. ಪೂರ್ವೋಕ್ತಸಂಸ್ಥೆಗಳು ಕೆಲವು ಅನನುಕೂಲತೆಯ ಮೂಲಕ ಬಂದಾದ್ದರಿಂದ ಕಾರ್ಯಾನಿವೃತ್ತರಾಗಿ ಮನೆಯಲ್ಲಿದ್ದಾಗ್ಯೂ, ಪಂ|| ಮಹಾಶಯರು ಛಾತ್ರಪ್ರೇಮವುಳ್ಳವರಾದ್ದರಿಂದ ಸದ್ಯಃ ಕೆಲವು ಉಚ್ಚತರಗತಿಯ ವಿದ್ಯಾರ್ಥಿಗಳು ಇವರಲ್ಲಿದ್ದು ಅಭ್ಯಾಸಮಾಡುತ್ತಲಿರುವರು. ಆದ್ದರಿಂದ ವಿದ್ಯಾಭಿಮಾನಿಗಳಾದೀ ಪಂಡಿತರಿಗೆ ಸಂಪೂರ್ಣಾಶ್ರಯವಿತ್ತು ವಿದ್ಯಾಭಿವೃದ್ಧಿಯನ್ನು ಮಾಡಿ ಶ್ರೇಯೋಭಾಗಿಗಳಾಗಲೆಂದು ಪ್ರತಿಯೊಬ್ಬ ಆಸ್ತಿಕನುತಾನುಯಾಯಿಗಳಲ್ಲಿ ವಿನಂತಿಮಾಡಿಕೊಳ್ಳುವದಲ್ಲದೆ ಇಷ್ಟವಿದ್ದವರು ಸದರಿಯವರೊಡನೆ ಪತ್ರವ್ಯವಹಾರ ಮಾಡಬೇಕೆಂದು ಕೋರುವ,

ಓರ್ವ ವಿದ್ಯಾರ್ಥಿ.

ಟೀ, (ಚಹಾ) ಕಾಫಿ, ಮತ್ತು ಕೋಕೋ ಇವುಗಳ ವಿಷಯದಲ್ಲಿ ಕೆಲವು ಪ್ರಸಿದ್ಧ ಡಾಕ್ಟರುಗಳ ಅಭಿಪ್ರಾಯಗಳು.

ಒಂದು ಬಟ್ಟಲು ಟೀ ಅಥವಾ ಕಾಫಿಯನ್ನು ತೆಗೆದುಕೊಂಡರೆ ಅದರಲ್ಲಿ 2½ ಗ್ರೇನಷ್ಟು ಕಾಫೀನ್ ಎಂಬ ಅಪಾಯಕರವಾದ ವಸ್ತುವಿರುವುದು. ಒಂದುಬಗೆಯ ಬೀಳುಪುಡಿಯ ರೂಪದಲ್ಲಿ ಇವುಗಳನ್ನು ಎಲ್ಲಾ ಔಷಧಿಯ ಅಂಗಡಿಗಳಲ್ಲಿಯೂ ಮಾರುವರು. ಕೊಕೇನಂತೆಯೇ ಇದೂ ನಮ್ಮ ಶಕ್ತ್ಯುತ್ಸಾಹವನ್ನು ಮೊದಲು ಸ್ವಲ್ಪ ಹೆಚ್ಚಿಸಿದರೂ, ಸ್ವಲ್ಪ ಹೊತ್ತಾದ ಮೇಲೆ ಅವುಗಳನ್ನು ಬಹಳಮಟ್ಟಿಗೆ ತಗ್ಗಿಸುವುದರಿಂದ, ಆ ಶಕ್ತ್ಯುತ್ಸಾಹಗಳನ್ನು ತಿರುಗಿ ಪೂರ್ವಸ್ಥಿತಿಗೆ ತರಲು ಮತ್ತಾವುದಾದರೂ ಔಷಧಪದಾರ್ಥಗಳನ್ನು ಸೇವಿಸಬೇಕಾಗುವುದು. ಈ ಪಾನೀಯಗಳಲ್ಲಿ, ವಿಶೇಷವಾಗಿ ಟೀಯಲ್ಲಿ "ಟಾನಿಕ್ ಆಸಿಡ್" ಎಂಬ ಕೆಟ್ಟ ಅಮ್ಲವಸ್ತುವಿರುವುದು. ಇದು ಜೀರ್ಣಶಕ್ತಿಯನ್ನು ಬಹಳಮಟ್ಟಿಗೆ ಕಡಿಮೆಮಾಡುವುದು. ಕಾಫೀನ್ ಎಂಬುದು ಬಹಳ ಸುಲಭವಾಗಿ ನೀರಿನಲ್ಲಿ ಕರಗತಕ್ಕದ್ದಾದುದರಿಂದ, ಟೀಯನ್ನು ಹಯಾರಿಸಿದ ಕ್ಷಣವೇ ಆ ಸಾರವು ಆ ನೀರಿನಲ್ಲಿ ಕರಗುವುದು. ಎಂದರೆ, ಮೂರು ನಿಮಿಷಗಳ ಕಾಲದಲ್ಲಿಯೇ ಇಪ್ಪತ್ತು ನಿಮಿಷಗಳಲ್ಲಿ ಕರಗಬಹುದಾದಷ್ಟು ಪ್ರಮಾಣವು ಕರಗುವುದು. "ಟಾನಿನ್" ಎಂಬ ವಸ್ತುವು ಅಷ್ಟು ಸುಲಭವಾಗಿ ಕರಗದಿದ್ದರೂ, ಕೆಲವು ನಿಮಿಷಗಳಲ್ಲಿಯೇ ಅದರ ಸಾರವೆಲ್ಲವೂ ಬಹಳಮಟ್ಟಿಗೆ ನೀರಿಗೆ ಬರುವುದು. ಟೀಯಲೆಯನ್ನು ಬಹಳ ಕಾಲ ಬೇಯಿಸಿದುದಕ್ಕೂ, ಮುಂದಾಗಿ ಎತ್ತುವುದಕ್ಕೂ ಆಹಾರದಲ್ಲಿ ತೋರಿಬರುವ ರುಚಿವ್ಯತ್ಯಾಸಕ್ಕೆ ಟಾನಿನ್ ಕಾರಣವಲ್ಲ, ಅದು ಟೀಯ ಸ್ವಭಾವಗುಣವು.

ಒಬ್ಬನಿಗೆ ರಕ್ತದಲ್ಲಿ ಮೂತ್ರದ್ರಾವಕವು ವಿಶೇಷವಾಗಿ ಸೇರಿದ್ದು, ಆತನು ಬಳಲಿ ದಣಿದಿರುವಾಗ, ಒಂದು ಬಟ್ಟಲು ಟೀಯನ್ನು ಕುಡಿದರೆ, ಒಡನೆ ಆ ಶ್ರಮವು ಪರಿಹಾರವಾದಂತಾಗುವುದು. ಮತ್ತು ಆ ರಕ್ತದಲ್ಲಿರುವ ಮೂತ್ರದ್ರಾವಕವು ಅದೃಶ್ಯವಾದಂತಾಗಿ, ರಕ್ತವು ಶುದ್ಧವಾಗುವುದರಿಂದ, ಬಾಧೆಯು ನಿವಾರಣೆಯಾಗುವುದು. ಸ್ವಲ್ಪ ಹೊತ್ತು ಕಳೆದಮೇಲೆ ರಕ್ತನಾಳಗಳಲ್ಲಿ ಸೇರಿದ್ದ ಆ ದ್ರಾವಕವೆಲ್ಲ ತಿರುಗಿ ರಕ್ತಕ್ಕೆ ಬರುವುದು. ಅಲ್ಲದೆ, ಟೀಯಲ್ಲಿರುವ ಮೂತ್ರದ್ರಾವಕವೂ ಅದರೊಡನೆ ಸೇರುವುದು. ಇದರಿಂದ ಆತನಿಗೆ ಮೊದಲಿಗಿಂತ ಬಾಧೆಯು ಇನ್ನೂ ಹೆಚ್ಚಿ ಟೀ, ಕಾಫಿ, ಹೊಗೆಸೊಪ್ಪು, ಮದ್ಯ ಮುಂತಾದ ಮಾದಕ ದ್ರವ್ಯಗಳನ್ನು ಉಪಯೋಗಿಸಬೇಕಾಗುವುದು. ಈ ರೀತಿಯಲ್ಲಿ ನಿರುತ್ಸಾಹ, ಅತೃಪ್ತಿ, ಚಪಲಭಾವ, ಅಜೀರ್ಣ, ನಿದ್ರಾಭಂಗ, ಮಲಬದ್ಧತೆ, ಕ್ಷಯ, ಮುಂತಾದ ವ್ಯಾಧಿಗಳಿಗೆ ಟೀಯೇ ಕಾರಣವಾಗಿ, ಕ್ರಮೇಣ ಮತ್ತೇರುತ್ತ ಸಿಸ್ತಕ್ಕೂ ಮೂಲವಾಗುವುದು. ಈ ಕೆಟ್ಟಗುಣಗಳಲ್ಲಿ ಕಾಫಿ, ಕೋಕೋ ಮುಂತಾದವೂ ಟೀಗೆ ಸಮಾನವೇ.

ಡಾಕ್ಟರ್ ಜೆ. ಬಾಟ್ಲಿಟ್ಯಾಕ್ ಎಂಬುವರು "ಹೆಂಡದ ಗಡಿಗೆಗಳಿಂದಲೂ, ವಿಸ್ಕಿ ಬಾಟಲ್‌ಗಳಿಂದಲೂ, ಲೋಕಕ್ಕೆ ಆಗುತ್ತಿರುವ ಅಪಾಯಗಳು ಹೆಚ್ಚೋ, ಟೀಯ ಪಾತ್ರೆಯಿಂದಾಗುವ ಅಪಾಯವು ಹೆಚ್ಚೋ, ಎಂಬುದು ಸಂಶಯಾಸ್ಪದ"ವೆಂದು ಬರೆದಿರುವರು.

ಆನರಬಲ್ ಆರ್. ರಸಲ್ ಎಂಬುವರು "ಟೀ ಮತ್ತು ಕಾಫಿಯಲ್ಲಿರುವ ಮಾದಕಗುಣವು ಇನ್ನೂ ಅನೇಕರಿಗೆ ತಿಳಿಯದು. ಈ ಪಾನೀಯಗಳು ಜನರ ದೇಹಶಕ್ತಿಯನ್ನು ಕ್ರಮೇಣ ತಗ್ಗಿಸುತ್ತ ಬರುವುದಲ್ಲದೆ, ಅವರ ನರಗಳು, ಮಿದುಳು, [illegible] ಮಗಳು, ಪಿತ್ತಕೋಶ, ಮೇದೋಜೀರಕ ಮು[illegible]ವಗಳ ಶಕ್ತಿಯನ್ನು ತಗ್ಗಿಸಿ, ಅವರನ್ನು ದುರ್ಬಲ[illegible]ವುದು. ಕಡಿಮೆಯ ಪ್ರಮಾಣದಲ್ಲಿ ಸೇವಿಸಿದರೂ ಇದ[illegible] ಸಮಯಗಳಲ್ಲಿ ನಿದ್ರೆಯನ್ನು ಕೆಡಿಸುವುದು. ಸಹಜವಾದ ದುರ್ಬಲವುಳ್ಳವರಾಗಲಿ, ಇದರ ಸೇವನೆಯಲ್ಲಿ ವಿಶೇಷ ಅಭ್ಯಾಸವುಳ್ಳವರಾಗಲಿ, ಇದನ್ನು ಹೆಚ್ಚು ಪ್ರಮಾಣದಲ್ಲಿ ಕುಡಿದರೂ ಅವರಿಗೆ ಮಾತ್ರ ತತ್ಕಾಲಕ್ಕೆ ಬಾಧಕವೇನೂ ತೋರದಿರಬಹುದು. ಆದರೆ ಅವು ದೇಹದ ಒಳಭಾಗದಲ್ಲಿಯೇ ಕೆಲಸಮಾಡುತ್ತ ಬಂದು ಅವರಿಗೆ ಸ್ವಲ್ಪ ವಯಸ್ಸಾದಮೇಲೆ ಅದರ ದುರ್ಗುಣಗಳು ಅಜೀರ್ಣ, ನರಗಳ ಬಾಧೆ, ಮಿದುಳಿನ ಬಾಧೆ, ಕಿವಿಬಾಧೆ, ವಿಷಹುಣ್ಣು ಮುಂತಾದ ವ್ಯಾಧಿಗಳ ರೂಪದಲ್ಲಿ ಕಾಣಿಸುವುವು," ಎಂದು ಬರೆದಿರುವರು.

ಡಾಕ್ಟರ್ ಬಾಕ್ ಎಂಬವರು "ನಮ್ಮ ಕಾಲದಲ್ಲಿ ನರಗಳ ದುರ್ಬಲತೆ ಮತ್ತು ಬುದ್ಧಿಮಾಂದ್ಯ ಮುಂತಾದುವು ಜನರಲ್ಲಿ ವಿಶೇಷವಾಗಿ ಕಾಣಿಸುತ್ತಿರುವುದಕ್ಕೆ, ಟೀ ಮತ್ತು ಕಾಫಿಗಳೇ ಕಾರಣವೆಂದೂ, ಅವುಗಳ ಸೇವನೆಯಿಂದ ಜನರ ಜೀರ್ಣಾಶಯಗಳು ಕೆಟ್ಟುಹೋಗಿ, ಅದರ ಫಲವು ಮಿದುಳಿನ ಮೇಲೆ ಕಾಣಿಸುವುದೆಂದೂ ಬರೆದಿರುವರು.

ಡಾಕ್ಟರ್ ಎ. ಬ್ರೈಸ್ ಎಂಬವರು "ಟೀ ಕುಡಿಯುವದನ್ನು ಅಭ್ಯಾಸಮಾಡಿಕೊಂಡಿರುವವರಲ್ಲಿಯೇ ಪ್ರಾಯಕವಾಗಿ ಮುಂದೆ ಮುಂದೆ ನಿಶಾಸ್ವಭಾವವು ಕಾಣಿಸುವುದು. ಆದರೆ ಇವರು ಮದ್ಯಪಾನಮಾಡಿದವರಂತೆ ಬೀದಿಗಳಲ್ಲಿ ಬಿದ್ದು ಹೊರಳಾಡದಿದ್ದರೂ ಹೃದಯದ ಬಲಹೀನತೆ, ಮೇಲುಸಿರು, ನರಗಳ ಬಲಹೀನತೆ, ತಲೆನೋವು, ಕಿವಿಗಳಲ್ಲಿ ಶಬ್ದ, ಅಜೀರ್ಣ, ಮಲಬದ್ಧತೆ ಮುಂತಾದ ಅನೇಕ ಮನೋವ್ಯಾಧಿಗಳಿಗೂ, ದೇಹದುರ್ಬಲತೆಗಳಿಗೂ ಕಾರಣವಾಗಬಹುದು." ಎಂದು ಬರೆದಿರುವರು.

ಮತ್ತೊಬ್ಬ ವೈದ್ಯರು "ನನ್ನ ಜೀವಮಾನದಲ್ಲಿ ಸುಮಾರು ಇಪ್ಪತ್ತು ವರುಷಗಳು ಕಳೆದುಹೋದಮೇಲೆಯೇ ಟೀಯನ್ನು ಸೇವಿಸುವದರಿಂದಾಗುವ ಅಪಾಯವು ನನಗೆ ತಿಳಿಯಿತು." ಎಂದು ಬರೆದಿರುವರು.

ಆರೋಗ್ಯಶಾಸ್ತ್ರ ದೃಷ್ಟಿಯಿಂದ ಮಧ್ಯಾಹ್ನ ಕಾಲದಲ್ಲಿ ಟೀಯನ್ನು ಸೇವಿಸುವುದು ಬಹಳ ಅಪಾಯಕಾರಕವು. ಬೆಳಗ್ಗಿನ ಆಹಾರವು ಸಂಪೂರ್ಣವಾಗಿ ಜೀರ್ಣವಾಗುವುದಕ್ಕೆ ಮೊದಲೇ, ಕೆಲವರು ಬೆಣ್ಣೆ ಸವರಿ ಹುರಿದ ರೊಟ್ಟಿಯನ್ನು ಬಹಳ ಹೊತ್ತು ಕುದಿಸಿದ ಟೀಯೊಡನೆ ಸೇವಿಸುವರು. ಹೊಟ್ಟೆಯಲ್ಲಿ ಆಗ ಹಸಿವು ವಿಶೇಷವಾಗಿಲ್ಲದಿರುವುದರಿಂದ, ಅಜೀರ್ಣವು ತಪ್ಪದೆ ಪ್ರಾರಂಭವಾಗುವುದು. ಮತ್ತು ಹೊಟ್ಟೆಯಲ್ಲಿ ಆಹಾರವು ಹುಳಿತು, ರಾತ್ರಿಯ ಊಟದಲ್ಲಿಯೂ ಜಿಹಾಸೆಯನ್ನು ಹುಟ್ಟಿಸುವುದು. ಇದರಿಂದ ಮೂರು ಊಟದ ಫಲವೂ ಕೆಡುವುದು. ರಸದ ಭಾಗವೇ ಹೆಚ್ಚಾಗಿರುವ ಯಾವುದಾದರೂ ಹಣ್ಣುಗಳನ್ನು ಸೇವಿಸುವುದು ಬಹಳ ಉತ್ತಮವು. (ಅ. ಚಂ.)

ಭಾರತೀಯ ದೊಡ್ಡ ಮನುಷ್ಯರ ಹೇಳಿಕೆ.

ಬುಲ್ಸಾರ, ಜೂನ್ ೩.

ಭಾರತೀಯರಲ್ಲಿ ಪ್ರಸಿದ್ಧ ಪುರುಷರಾದ ಕೆ. ನಟರಾಜನ್, ಜೆ. ಕೆ. ದೇವಧರ್‌ರವರು ಮತ್ತು ಬೊಂಬಾಯಿ ಕೋರ್ಟಿನಲ್ಲಿ ಜಡ್ಜಿಗಳಾದ ಮಿ|| ಹುಸೇನ್ ತಯಾಬ್ಜಿರವರು ದಾರ್ಶನಾ ಕುರುಕ್ಷೇತ್ರದ ಧರ್ಮಯುದ್ಧವನ್ನು ಕಣ್ಣಾರೆ ನೋಡಿ ಬರೆಯುವುದೇನೆಂದರೆ—

ಮಿಲಿಟರಿಯವರು, ಪೋಲೀಸರು ಅಲ್ಲಿ ನೆರೆದಿದ್ದ ಪ್ರೇಕ್ಷಕರಿಗೂ ಜನಗಳಿಗೂ ಸಿಕ್ಕಹಾಗೆ ರಕ್ತ ಸುರಿಯುವವರೆಗೂ ಒಡೆಯುತ್ತಿದ್ದಾರೆಂಬ ಸುದ್ದಿಯ ನಿಜಾಂಶವನ್ನು ಪರೀಕ್ಷಿಸಲು ನಾವುಗಳು ದಾರ್ಶನಾಕ್ಕೆ ಬಂದೆವು. ಇಲ್ಲಿ ಈದಿನ ಪ್ರತಿಯೊಂದನ್ನೂ ನೋಡಿದೆವು. ಕೊಲೆಪಾತಕರನ್ನೂ ಕೂಡ ಹೊಡೆಯಲು ಪೋಲೀಸಿನವರಿಗೆ ಅಧಿಕಾರವಿಲ್ಲ. ಅವರು ಅಪರಾಧಿಗಳಿಗೆ ಬಳೆಗಳನ್ನು ತೊಡಿಸಿ ಜೈಲಿಗೆ ಹಾಕುವ ತಮ್ಮ ಕೆಲಸವನ್ನು ಬಿಟ್ಟು, ಕ್ರೂರತನದ ಕೆಲಸವನ್ನು ಮಾಡುತ್ತಿರುವರು. ರಕ್ತ ಸುರಿಯುವವರೆಗೂ ಸತ್ಯಾಗ್ರಹಿಗಳನ್ನು ಹೊಡೆಯುತ್ತಿರುವರು. ಅಲ್ಲಿ ನೋಡಲು ನೆರೆದಿದ್ದ ಜನಗಳನ್ನು ಪಠೋಣ್ಯಸವಾರರು ಮೊಳೆಗಳು ಮುರಿಯುವಹಾಗೆ ಹೊಡೆಯುವರು. ಇದು ಪರಮ ನೀಚತನವು. ಯಾವ ಸರ್ಕಾರಕ್ಕೂ ಇದು ನ್ಯಾಯವಲ್ಲವು. ಅಲ್ಲಿ ಡಾಕ್ಟರರು ದೇಶಸೇವೆ ಮಾಡಲು ಧರ್ಮಾರ್ಥವಾಗಿ ಚಿಕಿತ್ಸೆ ಮಾಡುತ್ತಿರುವರು. ಜನಗಳು ಸಹಾನುಭೂತಿಯಿಂದ ಸತ್ಯಾಗ್ರಹಿಗಳಿಗೆ ಏನುಬೇಕಾದರೂ ಕೊಡಲು ಸಿದ್ಧರಿರುವರು. ಖಾಸಗೀ ಜಾಗೆಯಮೇಲೆ ನಿಂತಿದ್ದ ಮಹಾಜನಗಳನ್ನು ಸವಾರರು ಅಟ್ಟಿಕೊಂಡು ಬಂದು ಹೊಡೆಯುತ್ತಿರುವರು. ಸತ್ಯಾಗ್ರಹದ ಆಸ್ಪತ್ರೆಯಲ್ಲಿ ನೂರಾರು ಜನರು ಗಾಯಹೊಂದಿ ಚಿಕಿತ್ಸೆಯನ್ನು ಹೊಂದುತ್ತಿರುವರು. ನೋಡಲು ನಿಂತಿದ್ದ ಏನೂ ತಿಳಿಯದ ಜನಗಳನ್ನು ಸವಾರರು ಸಿಕ್ಕಹಾಗೆ ಸದೆಬಡಿಯುತ್ತಿರುವರು. ಆದರೆ ಜನಗಳು ಯಾರೂ ಹಿಂತಿರುಗಿ ಕೈಮಾಡುತ್ತಿರಲಿಲ್ಲವು. ಏಟುಗಳನ್ನು ತಿಂದರೂ, ಮೈಯಲ್ಲಿ ರಕ್ತವು ಸುರಿಯುತ್ತಿದ್ದರೂ, ಕೆಳಗೆ ಮೂರ್ಛಿತರಾಗಿ ಬಿದ್ದಿದ್ದರೂ ಸತ್ಯಾಗ್ರಹಿಗಳೂ ಮತ್ತು ಜನಗಳೂ ಶಾಂತರಾಗಿದ್ದುದನ್ನು ನೋಡಿ ನಮಗೆ ಪರಮಾಶ್ಚರ್ಯವೂ, ಸಂತೋಷವೂ ಆಯಿತು. ಪೂರ್ಣ ದೇಶಾಭಿಮಾನದಿಂದಲೂ, ಸತ್ಯದಿಂದಲೂ, ಧರ್ಮದಿಂದಲೂ, ದೃಢನಿಶ್ಚಯದಿಂದಲೂ, ಸುಶಿಕ್ಷಣದಿಂದಲೂ ಇಲ್ಲಿ ಎಲ್ಲರೂ ಕೆಲಸ ಮಾಡುತ್ತಿರುವರು. ಸತ್ಯಕ್ಕೂ ಧರ್ಮಕ್ಕೂ ಎಂದಿದ್ದರೂ ಜಯವು ಬರಲೇಬೇಕು.

ವಿದ್ಯಾವಂತರ ಸಮ್ಮೇಳನ.

ಬೊಂಬಾಯಿ, ಜೂನ್ ೩.

ಬಿ.ಎ. ಎಂ.ಎ. ಇತ್ಯಾದಿ ಪರೀಕ್ಷೆಗಳನ್ನು ಪಾಸು ಮಾಡಿಕೊಂಡು ವಿದ್ಯಾವಂತರಾಗಿರುವ ಬೊಂಬಾಯಿಯ ತರುಣರು ಈ ದಿನ ಸಭೆ ಸೇರಿ ಇನ್ನು ಮುಂದೆ ವಂತರು ಯಾರೂ ಪರದೇಶೀ ಬಟ್ಟೆ [illegible] ಹಾಕಕೂಡದೆಂದೂ "ಕಾಂಗ್ರೆಸ್ಸಿನವರ [illegible]ತ್ತದಲ್ಲಿ ಜಯಪ್ರದ ಹೊಂದುವವರಿಗೆ ಸರ್ಕಾ[illegible]ಸ್ಥೆಗಳಿಗೆ ಯಾರೂ ಸೇರಕೂಡದೆಂದೂ ಹಾಗೂ ಕೌನ್ಸಿಲ್ ಚುನಾವಣೆಗಳಿಗೆ ನಿಲ್ಲಕೂಡದೆಂದೂ ನಿಶ್ಚಯಿಸಿರುವರು.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜೂನ್ ತಾ|| ೯ನೇ ಸೋಮವಾರ

ಶ್ರೀಮನ್ಮಹಾರಾಜರವರ ೪೭ನೆಯ ವರ್ಷದ ವರ್ಧಂತೀ ಮಹೋತ್ಸವ.

ಸಾಕ್ಷಾತ್ ಧರ್ಮಾವತಾರಿಗಳಾದ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರ 47 ನೆಯ ವರ್ಷದ ವರ್ಧಂತಿಮಹೋತ್ಸವವು ಈ ತಿಂಗಳು 7ನೆಯ ತಾರೀಖಿನ ದಿವಸ ಅತ್ಯಂತ ವೈಭವದಿಂದ ನೆರವೇರಿತು. ಮಹಾಪ್ರಭುಗಳು ಪ್ರಾತಃಕಾಲದಲ್ಲಿ ಮಂಗಲಸ್ನಾನವನ್ನಾಚರಿಸುವ ಕಾಲಕ್ಕೆ ಪದ್ಧತಿಯಮೇರೆಗೆ ಆಯುರ್ವರ್ಷಸಂಖ್ಯೆಯನ್ನು ಸೂಚಿಸುವ 47 ಗುಂಡುಗಳು ಹಾರಿಸಲ್ಪಟ್ಟವು. ಸಂಧ್ಯಾವಂದನಾದಿ ನಿತ್ಯಕರ್ಮಗಳು ಪೂರೈಸಿದಮೇಲೆ ಪ್ರಭುಗಳು ರಾಜಸಭೋಚಿತಗಳಾದ ನೂತನವಸ್ತ್ರಾಭರಣಗಳಿಂದಲಂಕೃತರಾಗಿ ಜಯಭೇರಿಯು ಜಯಧ್ವನಿಯನ್ನು ಮಾಡುತ್ತಿರಲು, ಪ್ರಮುಖ ಪ್ರಜಾವೃಂದವು ಜಯಜಯಕಾರವನ್ನೆಸಗುತ್ತಿರಲು, ಕಲ್ಯಾಣಮಂಟಪದಲ್ಲಿ ರಾರಾಜಿಸುತ್ತಿರುವ ಭದ್ರಪೀಠವನ್ನಲಂಕರಿಸಿದರು. ಸಚಿವರೂ, ಉಪಸಚಿವರೂ, ರಾಜಪುತ್ರರೂ, ರಾಜಬಂಧುಗಳೂ, ಪೌರವೃದ್ಧರೂ, ಸರಕಾರೀ ಮುಖ್ಯ ಮುಖ್ಯ ಅಧಿಕಾರಿಗಳೂ, ವೈದಿಕರೂ, ವಿದ್ವಾಂಸರೂ, ಮಹಾವಿದ್ವಾಂಸರೂ, ಧರ್ಮಾಧಿಕಾರಿಗಳೂ, ಇನ್ನುಳಿದ ಪ್ರಮುಖಪ್ರಜೆಗಳೂ ಅಸಾಧಾರಣವಾದ ರಾಜಭಕ್ತಿ ಚಿಹ್ನಗಳಿಂದೊಡಗೂಡಿ ಸಭೆಯಲ್ಲಿ ಸಾಲ್ಗೂಡಿದು ಕುಳಿತಿದ್ದರು. ರಾಜಬಂಧುಗಳೂ, ಪ್ರಜಾಪ್ರಮುಖರೂ, ದೊಡ್ಡ ದೊಡ್ಡ ಸರಕಾರೀ ಅಧಿಕಾರಿಗಳೂ, ಭಯಭಕ್ತಿಯುತರಾಗಿ ನಜರು ಮುಜರೆಗಳನ್ನು ಸಮರ್ಪಿಸಿದರು. ಬಳಿಕ ಸಂಗೀತಕಲಾಕೋವಿದರ ಸಂಗೀತವು ನಡೆದು ಸಭಿಕರಿಗೆ ಗಂಧಪುಷ್ಪಾದಿಗಳು ಹಂಚಲ್ಪಟ್ಟ ಮೇಲೆ ಸೈನಿಕರ ಮರ್ಯಾದೆಯು ಸೇನಾಪದ್ಧತಿಯಂತೆ ನೆರವೇರಿತು. ತದನಂತರ ನಾನಾವಿಧಗಳಾದ ವಾದ್ಯಗಳು ಜಯಧ್ವಾನದೊಡನೆ ಘೋರ್ಗರೆಯುತ್ತಿರಲು ಪ್ರಭುಸ್ವಾರಿಯು ಚಿತ್ತೈಸಿತು. ಅಲ್ಲಿಗೆ ಪ್ರಾತಃಕಾಲದಲ್ಲಿ ನಡೆಯಬೇಕಾಗಿದ್ದ ಯಾವತ್ತು ಸತ್ಕ್ರಿಯೆಗಳು ಪೂರ್ತಿಗೊಂಡವು. ಬಳಿಕ ಮಧ್ಯಾಹ್ನ 5½ ಘಂಟೆಗೆ ಸರಿಯಾಗಿ ಮಹಾಪ್ರಭುಗಳು, ಯುವರಾಜರು ಹಾಗೂ ಭಾವೀಪ್ರಭು ಶ್ರೀಮಜ್ಜಯಚಾಮರಾಜ ಒಡೆಯರವರು ಭವ್ಯವಸ್ತ್ರಾಭರಣಾದಿಗಳಿಂದಲಂಕೃತರಾಗಿ ರತ್ನಾದ್ಯಾಭರಣಾದಿಗಳಿಂದಲಂಕೃತಗಳಾದ ದಿವ್ಯಾಶ್ವಗಳನ್ನಾರೋಹಣಮಾಡಿಕೊಂಡು ಅರಮನೆಯಿಂದ ದೊಡ್ಡಪೇಟೆಯ ಮಾರ್ಗವಾಗಿ ಬಿಜಯಂಗೈಸಿದರು. ಮುಂದೆಮುಂದೆ ಅನುಕ್ರಮವಾಗಿ ಭವ್ಯಾಲಂಕಾರಗಳಿಂದ ಭೂಷಿತಗಳಾಗಿದ್ದ ಗಜಗಳೂ, ನಾನಾತರಹದ ವೇಷಭೂಷಿತರಾದ ಸವಾರರಿಂದ ರಂಜಿಸುತ್ತಿರುವ ಅಸಂಖ್ಯಾತಗಳಾದ ಅಶ್ವಗಳೂ, ನಾನಾತರಹದ ಶಸ್ತ್ರಗಳಿಂದ ಭೂಷಿತರಾದ ಸೈನಿಕರೂ, ಸಕಲ ರಾಜಬಿರುದುಗಳನ್ನು ಧರಿಸಿಕೊಂಡು ಮಂದಗಮನದಿಂದ ಮುಂದೆಮುಂದೆ ಸಾಗುತ್ತಿರುವ ಕಾಲಾಳುಗಳೂ, ಅಸಾಧಾರಣವಾದ ಭಕ್ತಿಭಾವದಿಂದ ಪಾದಚಾರಿಗಳಾಗಿದ್ದ ರಾಜಬಂಧುಗಳೂ, ಸರಕಾರೀ ಅಧಿಕಾರಿಗಳೂ, ಪುರಪ್ರಮುಖರೂ ಭಯಭಕ್ತಿಯುತರಾಗಿ ಸಾಲ್ಗೂಡಿದು ಹೋಗುತ್ತಿದ್ದರು. ಮಹಾಪ್ರಭುಗಳ ವರ್ಧಂತಿಮಹೋತ್ಸವವನ್ನು ನೋಡಬೇಕೆಂಬ ಉತ್ಕಟೇಚ್ಛೆಯಿಂದ ಆಗಮಿಸಿದ್ದ ಲಕ್ಷಾಂತರ ಪ್ರಜೆಗಳು ರಾಜಮಾರ್ಗದ ಉಭಯಪಾರ್ಶ್ವಗಳಲ್ಲಿಯೂ ಕಿಕ್ಕಿರಿದು ನಿಂತಿದ್ದು ಪ್ರಭುದರ್ಶನದಿಂದುಂಟಾದ ಮಹಾನಂದವನ್ನು ಜಯಧ್ವನಿಯ ಮೂಲಕವಾಗಿಯೂ, ಕರತಾಡನ ಮೂಲಕವಾಗಿಯೂ ಕ್ಷಣಕ್ಷಣಕ್ಕೂ ತೋರ್ಪಡಿಸುತ್ತಿದ್ದರು. ಪೇಟೆಯುದ್ದಕ್ಕೂ ಪುರಪ್ರಮುಖರು ಅಲ್ಲಲ್ಲಿ ಪ್ರಾಚೀನಪದ್ಧತಿಗನುಸಾರವಾಗಿ ಮಹಾಪ್ರಭುಗಳಿಗೂ ಯುವರಾಜರವರಿಗೂ ಹಾರತುರಾಯಿಗಳನ್ನರ್ಪಿಸಿ ಪುಷ್ಪವೃಷ್ಟಿಗರೆಯುತ್ತ ಪ್ರಭುಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗುತ್ತಿದ್ದರು. ಈ ತರಹದ ಅಸಾಧಾರಣವಾದ ವೈಭವದೊಡನೆ ಈ ವರ್ಧಂತಿವಿಜಯೋತ್ಸವವು ಸಾಯಂಕಾಲ 7-30 ಘಂಟೆಗೆ ದೊಡ್ಡಬಂಗಲೆಯನ್ನು ತಲಪಿತು. ಮಹಾಪ್ರಭುಗಳೂ ಭಾವೀಪ್ರಭುಗಳೂ ಹಾಗೂ ಶ್ರೀಮದ್ಯುವರಾಜರವರೂ ಅಶ್ವಗಳಿಂದಿಳಿದು ಬಂಗಲೆಯಲ್ಲಿ ಸ್ವಲ್ಪಕಾಲದವರೆಗೆ ವಿಶ್ರಾಂತಿಸೌಖ್ಯವನ್ನು ಹೊಂದಿ ಸೈನಿಕರ ಕವಾಯಿತು ಮೊದಲಾದವುಗಳನ್ನು ಪರಾಮರ್ಶಿಸಿ ಚತುರಂಗಬಲದೊಡನೆ ಬಿಜಯಂಗೈಸಿದರು. ಬರುವಾಗ್ಗೆ ಅಶ್ವಗಳನ್ನಾರೋಹಣಮಾಡದೆ ಮಹಾಪ್ರಭುಗಳು ಹಾಗೂ ಶ್ರೀಮದ್ಯುವರಾಜರವರು ಭವ್ಯವಾದ ಮೋಟಾರಿನಲ್ಲಿ ವಿಜಯೋತ್ಸವವನ್ನು ಬೆಳೆಯಿಸಿದರು. ಈ ವರ್ಷ ಹೊಸದಾಗಿ ದೊಡ್ಡಪೇಟೆಯ ರಾಜಮಾರ್ಗವು ವಿದ್ಯುದ್ದೀಪಾವಳಿಗಳಿಂದ ವಿಶೇಷ ಶೃಂಗರಿಸಲ್ಪಟ್ಟದ್ದಿತು. ಈ ದೀಪೋತ್ಸವವನ್ನು ವರ್ಣಿಸಲು ಸಹಸ್ರಮುಖಗಳುಳ್ಳ ಆದಿಶೇಷನಿಂದಲೂ ಸಹ ಅಸಾಧ್ಯವೆಂದು ಬರೆದರೆ ಅತಿಶಯೋಕ್ತಿಯೆನಿಸಲಾರದು. ರಾತ್ರಿ ಸಮಯದಲ್ಲಿ ನೆರವೇರಿದ ಈ ಮಹೋತ್ಸವವಂತೂ ಪ್ರೇಕ್ಷಕರ ಮನಸ್ಸನ್ನು ಆನಂದಾಬ್ಧಿಯಲ್ಲಿ ಮುಳುಗಿಸಿತ್ತು. ಈ ರೀತಿಯಾಗಿ ಅಸಾಧಾರಣವಾದ ವೈಭವದೊಡನೆ ಈ ವಿಜಯೋತ್ಸವವು 10 ಘಂಟೆಯ ಸಮಯಕ್ಕೆ ರಾಜಗೃಹವನ್ನು ಬಂದು ಸೇರಿತು. ಈ ವರ್ಷದ ವರ್ಧಂತೀ ಮಹೋತ್ಸವಕ್ಕಾಗಿ ಬ್ರಿಟಿಷ್ ರೆಸಿಡೆಂಟರೂ, ಇನ್ನುಳಿದ ಸುಪ್ರಸಿದ್ಧ ಐರೋಪ್ಯಾಧಿಕಾರಿಗಳೂ, ತಿರುವಾಂಕೂರು ಸಂಸ್ಥಾನದ ಮಹಾರಾಜರವರೂ, ಕಪರ್ಥಲ ಸಂಸ್ಥಾನದ ಮಹಾರಾಣಿಯವರೂ, ವೆಂಕಟಗಿರಿ ಸಂಸ್ಥಾನದ ಮಹಾರಾಜರವರೂ, ರಾಮನಾಡಿನ ರಾಜರವರೂ, ಸರ್ ಪದವೀಧರರಾದ ಇನ್ನೂ ಕೆಲವು ಮಹೋದಯರೂ ಅತಿಥಿಗಳಾಗಿ ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಗಿತ್ತು. ಒಟ್ಟಿಗೆ ಈ ವರ್ಷದ ವರ್ಧಂತೀ ಮಹೋತ್ಸವವು "ನಭೂತೋ ನ ಭವಿಷ್ಯತಿ" ಎಂಬ ವಾಕ್ಯಾನುಸಾರವಾಗಿ ಅತ್ಯಂತ ವೈಭವದಿಂದ ನೆರವೇರಿತು. ಭರತಖಂಡದಲ್ಲಿರತಕ್ಕ ಸಮಸ್ತ ದೇಶೀಯ ಸಂಸ್ಥಾನಗಳಲ್ಲಿ ನಮ್ಮ ಸಂಸ್ಥಾನವು ಮೊದಲನೆಯ ಸಂಸ್ಥಾನವೆಂದು ಖ್ಯಾತಿಗೊಂಡಿರುವದಕ್ಕೆ ಮಹಾಪ್ರಭುಗಳವರ ಸತ್ಯರಾಜ್ಯಪರಿಪಾಲನವೇ ಮೂಲಕಾರಣವಾಗಿದೆಯೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ತಮ್ಮ ರಾಜ್ಯದಲ್ಲಿರತಕ್ಕ ಸಕಲ ಪ್ರಜೆಗಳನ್ನು ಪುತ್ರಪ್ರೇಮಭಾವದಿಂದ ಪರಿಪಾಲಿಸುತ್ತಿರುವ ನಮ್ಮ ಮಹಾಪ್ರಭುಗಳವರಿಗೆ ಶ್ರೀ ಜಗದಾಚಾರ್ಯರು ಅಖಂಡಾಯುಷ್ಯವನ್ನನುಗ್ರಹಿಸಿ ರಕ್ಷಿಸಲೆಂದು ಅನನ್ಯಭಕ್ತಿಭಾವದಿಂದ ಭಜಿಸುತ್ತೇವೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಡುಂಗಾರಿ ಮತ್ತು ಉಂಟಾಡಿಯಲ್ಲಿರುವ ಭಾರೀ ಉಪ್ಪಿನ ವರ್ತಕರು ಈ ಲಾಗಾಯಿತು 6 ತಿಂಗಳವರೆಗೆ ದಾಸ್ವಾಣದಲ್ಲಿರುವ ಸರ್ಕಾರಿ ಉಪ್ಪಿನಕೋಠಿಯಿಂದ ಉಪ್ಪನ್ನು ಕೊಂಡುಕೊಳ್ಳುವದಿಲ್ಲವೆಂದು ತೀರ್ಮಾನಿಸಿಕೊಂಡಿರುವರು. ಹಾಗೂ ಉಪ್ಪನ್ನು ಕೊಳ್ಳಲು ಬರುವ ಚಿಲ್ಲರೇ ವರ್ತಕರನ್ನು ಡುಂಗಾರಿಯಲ್ಲಿ ತಡೆಯುತ್ತಿರುವರು.

ಕಳೆದ 3ನೆಯ ತಾರೀಖಿನ ದಿವಸ ಮುಂಬಯಿಯ ಸಮೀಪದಲ್ಲಿರುವ ವೋರ್ಲಿಯಲ್ಲಿ ಇನ್ನೂ ವಿಚಾರಣೆಯಿಲ್ಲದೆ ಬಂಧನದಲ್ಲಿಡಲ್ಪಟ್ಟಿರುವ ಸತ್ಯಾಗ್ರಹಿಗಳಿಗೂ ಪೋಲೀಸರಿಗೂ ಹೊಡೆದಾಟವು ನಡೆದು ಸುಮಾರು 12 ಜನರಿಗೆ ವಿಶೇಷ ಗಾಯಗಳಾದವು. ಆ ದಿನ ಪ್ರಾತಃಕಾಲ ಕೆಲವು ಜನ ಶಿಪಾಯಿಗಳು ಕಾರಾಗೃಹದ ಸುತ್ತಲೂ ಇರುವ ಮುಳ್ಳಿನ ತಂತಿಯ ಬೇಲಿಯನ್ನು ಮತ್ತಷ್ಟು ಬಲಪಡಿಸುತ್ತಿರುವಲ್ಲಿ ಸಮೀಪದ ಗ್ರಾಮವಾಸಿಗಳಾದ ಕೆಲವು ಜನ ಹೆಂಗಸರು ಅದನ್ನು ನಿಷೇಧಿಸಿ ಕಡೆಗೆ ಕೆಲಸಕ್ಕೆ ಅಡಚಣೆಯಾಗುವಂತೆ ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಆಗ ಶಿಪಾಯಿಗಳು ಮತ್ತು ಪೋಲೀಸರು ಅವರನ್ನು ಬಲಾತ್ಕಾರವಾಗಿ ದೂರ ಕಳುಹಿಸಿದರು. ಇದನ್ನು ಕಂಡು ಬಂಧನದಲ್ಲಿದ್ದ ಸತ್ಯಾಗ್ರಹಿಗಳು ಕೋಪಗೊಂಡು ಒಟ್ಟಿಗೆ ಪೋಲೀಸರ ಕಡೆಗೆ ನುಗ್ಗಿ ಬೇಲಿಯ ಬಹು ಭಾಗವನ್ನು ಕಿತ್ತುಹಾಕಿದರು. ಪೋಲೀಸರು ನುಗ್ಗಿ ಎಲ್ಲರನ್ನೂ ಪುನಃ ಕಟ್ಟಡಗಳೊಳಗೆ ಕಳುಹಿಸಿದರು. ಸಾಯಂಕಾಲ 5 ಘಂಟೆಯ ಸಮಯದಲ್ಲಿ ಪೋಲೀಸ್ ಕಮಿಷನರ್‌ರವರು ತಾವೇ ಖುದ್ದು ನಿಂತು ಬೇಲಿಯನ್ನು ಪುನಃ ಕ್ರಮಪಡಿಸುತ್ತಿದ್ದರು. ಆಗ ಕಾರಾಗೃಹದ ಕಡೆಯಿಂದ ಒಂದು ಕಲ್ಲು ಒಬ್ಬ ಶಿಪಾಯಿಗೆ ತಗಲಿ ಅವನ ಟೋಪಿಯು ಕೆಳಕ್ಕೆ ಬಿದ್ದಿತು. ಇದೇ ಕಾರಣದಿಂದ ಗಲಾಟೆಯಾಗಿ ಸತ್ಯಾಗ್ರಹಿಗಳೆಲ್ಲರೂ ಹೊರಕ್ಕೆ ನುಗ್ಗಿದರು. ಪೋಲೀಸರು ಎಲ್ಲರನ್ನು ದೊಣ್ಣೆಗಳಿಂದ ಹೊಡೆದರು. ಸುಮಾರು 12 ಜನರಿಗೆ ವಿಶೇಷ ಗಾಯಗಳಾಗಿ ಕೆಲವರು ಜ್ಞಾನತಪ್ಪಿ ಬಿದ್ದರು. ಮಿಲಿಟರಿ ಸೈನ್ಯವನ್ನು ಕರೆಯಿಸಿದ ನಂತರ ಎಲ್ಲವೂ ಶಾಂತವಾಯಿತು ಏಟು ತಿಂದವರಲ್ಲಿ 25 ಜನರನ್ನು ಕಾಂಗ್ರೆಸ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ.

ದಾಸ್ವಾಣದ ಉಪ್ಪಿನಕೋಠಿಯ ಮೇಲೆ ದಾಳಿಯನ್ನಿಡಲು ಲಾಹೋರಿನಿಂದ 24 ಜನ ಸತ್ಯಾಗ್ರಹಿಗಳು ಹೊರಟರು. ಸಿ. ಪಿ. ಮರಾಠಿ ಸಂಗ್ರಾಮ ಕೂಟದವರು ನಾಗಪುರದಿಂದ 11 ಜನ ಸ್ವಯಂಸೇವಕರನ್ನು ಕಳುಹಿಸಿರುವರು.

ಜೂನ್ 5 ನೇ ತಾರೀಖಿನ ದಿವಸ ವಡಲಾ ದಾಳಿಯಲ್ಲಿ ದಸ್ತಗಿರಿಮಾಡಲ್ಪಟ್ಟ ಸತ್ಯಾಗ್ರಹಿಗಳಲ್ಲಿ 140 ಜನರನ್ನು ವಿಚಾರಣೆಮಾಡಿ ಪ್ರತಿಯೊಬ್ಬರಿಗೂ 3 ತಿಂಗಳ ಕಠಿಣಸಜೆಯನ್ನು ವಿಧಿಸಿದರು. ಬಳಿಕ 25 ಜನರು ಕೇವಲ ವಿನೋದಾರ್ಥವಾಗಿ ದಾಳಿಯಿಟ್ಟವರೆಂದು ಭಾವಿಸಿ ಅವರಿಗೆ ಒಂದು ದಿನ ಸಾದಾ ಸಜೆಯನ್ನು ವಿಧಿಸಿದರು. ಆದರೆ ಅವರೆಲ್ಲರೂ ಏಕವಾಕ್ಯದಿಂದ ಆ ಆಜ್ಞೆಯನ್ನು ನಿಷೇಧಿಸಿ ತಮಗೂ ಇತರರಂತೆಯೇ ಶಿಕ್ಷೆಯನ್ನು ವಿಧಿಸದಿದ್ದರೆ ಮರುದಿನ ಪುನಃ ವಡಲಾ ಕೋಠಿಯ ಮೇಲೆ ದಾಳಿಯನ್ನಿಡುವದಾಗಿ ಹೇಳಿದರು.

ಮಹಾರಾಷ್ಟ್ರ ಫಾರೆಸ್ಟ್ ಕಾಯಿದೆ ಸತ್ಯಾಗ್ರಹ ಕಮಿಟಿಯ ಪ್ರೆಸಿಡೆಂಟರಾದ ಮಿ|| ರಾಮಕೃಷ್ಣದಾಸ ಮಹಾರಾಜರವರು ಕಳೆದ 5 ನೇ ತಾರೀಖಿನ ದಿವಸ ಅಹಮದ ನಗರದಲ್ಲಿ ದಸ್ತಗಿರಿಮಾಡಲ್ಪಟ್ಟು ವಿಚಾರಣೆಗಾಗಿ ಸಂಗಮದ್ರಿಗೆ ಒಯ್ಯಲ್ಪಟ್ಟರು.

ಕಾಶಿಯಲ್ಲಿ ಉಪವಾಸವ್ರತವನ್ನು ಹಿಡಿದಿದ್ದ, "ಸಿ" ತರಗತಿಯ 12 ಜನ ರಾಜಕೀಯ ಕೈದಿಗಳಿಗೆ ಇನ್ನು ಮುಂದೆ ಉತ್ತಮವಾದ ಆಹಾರವು ಕೊಡಲ್ಪಡುವದೆಂದು ಜೈಲ್ ಸೂಪರಿಂಟೆಂಡೆಂಟರವರು ವಚನವಿತ್ತಿರುವದರಿಂದ ಅವರು ಉಪವಾಸ ವ್ರತವನ್ನು ತ್ಯಜಿಸಿದರು.

ಬೀರಾರು ಕಾಂಗ್ರೆಸ್ ಮತ್ತು ಸಂಗ್ರಾಮಕೂಟದ ಪ್ರೆಸಿಡೆಂಟರಾದ ಮಿ|| ವಾಮನರಾವ್ ಜೋಶಿಯವರಿಗೆ 3 ವರ್ಷದ ಕಠಿಣಸಜೆ 400 ರೂ. ಜುಲ್ಮಾನೆಯು ವಿಧಿಸಲ್ಪಟ್ಟಿತು.

ಬೆನಾರಸ್ ತಹಶೀಲ್ ಸತ್ಯಾಗ್ರಹಿಗಳ ಕ್ಯಾಪ್ಟನ್ನರಾದ ಮಿ|| ಹೇಮನಾರ್ಕಂಡೆ ಸಿಂಗ್‌ರವರು ಉಪ್ಪಿನ ಕಾಯಿದೆ ಭಂಗಮಾಡಿದ ಅಪರಾಧಕ್ಕಾಗಿ 6 ತಿಂಗಳ ಕಠಿಣಸಜೆ, 300 ರೂ. ಜುಲ್ಮಾನೆ ತಪ್ಪಿದರೆ ಇನ್ನೊಂದು ತಿಂಗಳ ಸಜೆಗೆ ಗುರಿಯಾಗಿರುವರು.

ಭರತವರ್ಷದ ವರ್ತಕರ ಕೂಟದ ಕಮಿಟಿಯವರು ಲೆಜಿಸ್ಲೆಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿಯಲ್ಲಿರುವ ತಮ್ಮ ಪ್ರತಿನಿಧಿಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಆಲೋಚಿಸುತ್ತಿರುವರು.

ಬಿಹಪೂರದಲ್ಲಿ ಗಾಂಧಿ ಆಶ್ರಮವು ಉಪ್ಪಿನ ಸತ್ಯಾಗ್ರಹಿಗಳ ಕಾರ್ಯಸ್ಥಾನವಾಗಿರುವದರಿಂದ ಶಾಸನ ವಿರುದ್ಧವಾದ ಕೂಟವಾಗಿರುವದೆಂದು ಪೋಲೀಸರು ಸಾರಿರುವರು.

ಕಳೆದ 5ನೆಯ ತಾರೀಖಿನ ದಿವಸ ಬೊಂಬಾಯಿನಲ್ಲಿ "ಗಾಂಧಿ ದಿನ"ವು ಆಚರಿಸಲ್ಪಟ್ಟಿತು. ಈ ಸಂಬಂಧವಾಗಿ ತೆಗೆದ ಮೆರವಣಿಗೆಯು ಸುಮಾರು 1 ಮೈಲಿ ಉದ್ದವಾಗಿದ್ದು, ಅದರಲ್ಲಿ ಕೇಸರಿ ಬಣ್ಣದ ಖಾದಿ ಸೀರೆಗಳನ್ನುಟ್ಟ ಹೆಂಗಸರೇ ಮುಖಂಡರಾಗಿದ್ದರಲ್ಲದೆ ಸಾವಿರಾರುಜನ ಪಠಾಣರು, ಮುಸಲ್ಮಾನರು, ಗುಜರಾಥೀ ವರ್ತಕರು, ಸಿಕ್ಕರು ಮತ್ತು ಮುಲ್ತಾನಿಯವರು ಭಾಗಿಗಳಾಗಿದ್ದರು. ಮೆರವಣಿಗೆಯು ಕಾಂಗ್ರೆಸ್ ಭವನದಿಂದ ಹೊರಟು ಸ್ಯಾಂಡ್ ಹರ್ಸ್ಟ ರೋಡ್, ಭೇಂಡಿಬಜಾರ್, ಪೈಧಾನಿ, ಕಾಲ್ಬಾದೇವಿ ಮತ್ತು ಹಾರನ್‌ಬಿ ರೋಡುಗಳಲ್ಲಿ ಹಾದು, ಎಸ್‌ಪ್ಲನೇಡ್ ಮೈದಾನವನ್ನು ಸೇರಿತು. ಅಲ್ಲಿ ಒಂದು ದೊಡ್ಡ ಸಭೆಯು ಮಾಡಲ್ಪಟ್ಟಿತು. ಒಂದು ದೊಡ್ಡ ಮೋಟರಿನಲ್ಲಿ ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದ ಮಹಾತ್ಮರ ಒಂದು ದೊಡ್ಡ ಪಟವೇ ಮೆರವಣಿಗೆಯ ಮುಖ್ಯ ನೋಟವಾಗಿದ್ದಿತು. ಅನೇಕರು ಮೆರವಣಿಗೆಯಲ್ಲಿ ತಕಲಿಗಳಿಂದ ನೂಲುತ್ತ ಬರುತ್ತಿದ್ದರು. 30 ಗಿರಣಿಗಳು ಮುಚ್ಚಲ್ಪಟ್ಟು, ಸುಮಾರು 65,000 ಕೂಲಿಕಾರರು ಉತ್ಸವದಲ್ಲಿ ಭಾಗಿಗಳಾಗಿದ್ದರು. ಜೇಕಬ್ ಸಾಸೂನ್ ಗಿರಣಿಯ ಕೂಲಿಕಾರರು ಹೊರಗೆ ಬಂದು ಉತ್ಸವದಲ್ಲಿ ಸೇರಲೆಂದು, 200 ಜನ ಕೂಲಿಕಾರರು ಸದರಿ ಗಿರಣಿಯಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು. ಗಲಾಟೆಯನ್ನು ಚದರಿಸಲು ಬಂದ ಇಬ್ಬರು ಪೋಲೀಸ್ ಅಧಿಕಾರಿಗಳಿಗೂ ಕಲ್ಲಿನ ಏಟುಗಳು ಬಿದ್ದವು. ಕಾಟೋವಾರ್ಕ್‌ಜಿ ಗಿರಣಿಯ ಮುಂಭಾಗದಲ್ಲಿ 3000 ಕೂಲಿಕಾರರು ಇದೇ ರೀತಿ ಗಲಾಟೆ ಮಾಡಲು ಪೋಲೀಸರು ಬಂದು ಜನವನ್ನು ಚದರಿಸಿದರು.

ನಿನ್ನೆಯ ದಿವಸ ಸಾಯಂಕಾಲ 1000 ಪಾರ್ಸೀ ತರುಣರು ಮುಂಬೈನಗರದಲ್ಲೆಲ್ಲ ಬೈಸಿಕಲ್‌ಗಳ ಮೇಲೆ ಮೆರವಣಿಗೆ ತೆಗೆಯುವವರಿದ್ದರೆಂದು ಪ್ರಕಟವಾಗಿದೆ.

ದೆಹಲಿಯ ಮುಸಲ್ಮಾನರು ಜಮೆಯುತ್‌ಉಲ್ಮಾ ಕೂಟಕ್ಕೆ ಸ್ವಯಂಸೇವಕರಾಗಿ ಸೇರುತ್ತಿರುವರು. ಇದುವರೆಗೆ 100 ಜನರು ಸೇರಿದ್ದು, ಸಭೆಯವರು ಮದ್ಯಪಾನನಿಷೇಧ ಕಾರ್ಯವನ್ನು ಪ್ರಾರಂಭಿಸಲು ಯೋಚಿಸುತ್ತಿರುವರು. ಜಮೆಯುತ್-ಉಲ್‌ಮಾ-ಇ-ಹಿಂದ್ ಸೆಕ್ರೆಟರಿಯವರಾದ ಮೌಲಾನಾ ಅಹಮದ್ ಸಯದ್‌ರವರು ತಮ್ಮ ರುಜುವಿರುವ ದೊಡ್ಡ ದೊಡ್ಡ ಬೋರ್ಡುಗಳಲ್ಲಿ ಮುಸಲ್ಮಾನರೆಲ್ಲರೂ ಏಕಮತ್ಯದಿಂದ ಪರದೇಶೀ ವಸ್ತ್ರವನ್ನು ಬಹಿಷ್ಕರಿಸಬೇಕೆಂದೂ, ಎಲ್ಲರೂ ಸ್ವದೇಶೀ ವಸ್ತ್ರ ಮತ್ತು ಸ್ವದೇಶೀ ಪದಾರ್ಥಗಳು ಉಪಯೋಗಿಸಬೇಕೆಂದೂ ಪ್ರಕಟಿಸುತ್ತಿರುವರು. ದೆಹಲಿಯ ಅರೇಬಿಕ್ ಸ್ಕೂಲುಗಳ ವಿದ್ಯಾರ್ಥಿಗಳು ಒಂದು ಸಂಘವನ್ನು ಸ್ಥಾಪನಮಾಡಿ ಜಮೆಯುತ್ ಉಲ್‌ಮಾ ಸಭೆಯ ಬಹಿಷ್ಕಾರ ಚಳುವಳಿಗೆ ತಾವು ಸಂಪೂರ್ಣ ಸಹಾಯಮಾಡುವದಾಗಿ ವಚನವಿತ್ತಿರುವರು.

ಇದೇ ತಿಂಗಳು 6 ನೇ ತಾರೀಖಿನ ದಿವಸ ಕೈರಾ ಪಂಚಮಹಲ್‌ಗಳು, ತಿರುವಾಂಕೂರು, ಕರ್ನಾಟಕ, ಕರಾಚಿ ಮುಂತಾದ ಸ್ಥಳಗಳಿಂದ ಕಳುಹಿಸಲ್ಪಟ್ಟಿದ್ದ 167 ಜನ ಸ್ವಯಂಸೇವಕರು ದಾಸ್ವಾಣ ಉಪ್ಪಿನಕೋಠಿಯ ಮೇಲೆ ಕಡೆಯ ದಾಳಿಯನ್ನಿಟ್ಟರು. ಬಹಿಷ್ಕೃತ ಪ್ರದೇಶವನ್ನು ಪ್ರವೇಶಿಸಿ ಸ್ವಲ್ಪ ದೂರ ಮುಂದುವರಿಯುವಷ್ಟರಲ್ಲಿ ಪೋಲೀಸರು ಬಂದು ತಡೆಯಲು ಎಲ್ಲ ಸ್ವಯಂಸೇವಕರೂ ಕುಳಿತುಬಿಟ್ಟರು. ಪೋಲೀಸರು ಚದರುವಂತೆ ಹೇಳಲು ಕೆಲವರು ಹಿಂತಿರುಗಿದರು. ಪೋಲೀಸರು ಸ್ವಲ್ಪಹೊತ್ತು ಕಳೆದ ನಂತರ ದೊಣ್ಣೆಗಳಿಂದ ಹೊಡೆದು ಗುಂಪನ್ನು ಚದರಿಸಿದರು. ಅನೇಕರಿಗೆ ಗಾಯಗಳಾಗಿವೆ.

ರಾವ್‌ಸಾಹೇಬ್ ಪದವಿಯನ್ನು ತ್ಯಜಿಸಿದ ಶ್ರೀ|| ಗಿರೀಂದ್ರನಾಥರಾಯ್ ಚೌಧುರಿಯವರು ಇಂಡಿಯನ್ ಪೀನಲ್ ಕೋಡಿನ 117ನೆಯ ಸೆಕ್ಷನ್ ಮೇರೆ ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ.

ಪಂಡಿತ ಗುರ್ತುರವರ ಪತ್ರ.

ಸಂಯುಕ್ತ ಸಂಸ್ಥಾನಗಳ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರರಾದ ಪಂಡಿತ ಇಕ್ಬಾಲ್ ನಾರಾಯಣಗುರ್ತುರವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟು ಗವರ್ನರಿಗೆ ಈ ಕೆಳಗೆ ಕಂಡ ಪತ್ರವನ್ನು ಬರೆದಿರುತ್ತಾರೆ:—

"ಭರತಖಂಡದಲ್ಲಿ ಈಚೆಗೆ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಸರ್ಕಾರದವರು ದಬ್ಬಾಳಿಕೆಯಲ್ಲಿ ನೆಟ್ಟಮನಸ್ಸುಳ್ಳವರಾಗಿರುವರೆಂದೂ, ಸದ್ಯಃ ಜನದಲ್ಲಿ ಬೇರೂರಿರುವ ಅಸಮಾಧಾನಕ್ಕೆ ಕಾರಣವನ್ನು ತಿಳಿದು ಧೈರ್ಯವಾಗಿ ವರ್ತಿಸುವದನ್ನು ಬಿಟ್ಟು ದಬ್ಬಾಳಿಕೆಯನ್ನು ಮುಂದುವರಿಸಿದರೆ ಹೆಚ್ಚಿನ ದ್ವೇಷಕ್ಕೂ ಗಲಾಟೆಗೂ ಅವಕಾಶವಾಗುವದೆಂದು ಹೇಳುವ ದೇಶಹಿತೈಷಿಗಳ ಎಚ್ಚರಿಕೆಯ ನುಡಿಗಳಿಗೆ ಸರಕಾರವು ಕಿವಿಗೊಡುವ ಇಷ್ಟವುಳ್ಳದ್ದಾಗಿಲ್ಲವೆಂದೂ ಸ್ಪಷ್ಟವಾಗುವದು. ಇತ್ತ ನಮ್ಮ ದೇಶೀಯರಾದರೋ ಇದುವರೆಗೆ ಅನುಭವಿಸಿದ ಹಾಗೂ ಸದ್ಯಃ ಅನುಭವಿಸುತ್ತಿರುವ ಕಷ್ಟಪರಂಪರೆಗಳನ್ನು ನೆನೆಸಿಕೊಂಡು ಈಗಿನ ಸ್ಥಿತಿಗೆ ಎಂದಿಗೂ ಬಗ್ಗಬಾರದೆಂದು ನಿರ್ಧರಿಸಿರುವರು. ಈ ಕಾರಣದಿಂದ ಸದ್ಯಃ ಸ್ಥಿತಿಯು ದಿನದಿನಕ್ಕೆ ವಿಷಮಾವಸ್ಥೆಗೆ ಬರುತ್ತಿರುವದು.

ಕಾಯಿದೆಯ ಗೌರವವನ್ನು ಉಳಿಸಬೇಕಾದುದು ಅವಶ್ಯಕವಾದುದೇ ಸರಿ! ಆದರೂ ಅದರ ಜೊತೆಯಲ್ಲಿ ಕೆಲವು ಮುಖ್ಯ ವಿಷಯಗಳನ್ನು ಯೋಚಿಸಬೇಕಾಗುವದು. ದೂಷ್ಯವೂ, ದುರಾಗ್ರಹಭರಿತವೂ ಆದ ಕಾಯಿದೆಗಳನ್ನು ಬಹುಕಾಲದವರೆಗೆ ಜಾರಿಯಲ್ಲಿ ಇಟ್ಟಿರುವದೇಕೆ? ಕೋಪದ ಭರದಲ್ಲಿ ಜನಸಾಮಾನ್ಯದ ಜನ್ಮಸಿದ್ಧವಾದ ಸ್ವಾತಂತ್ರ್ಯಕ್ಕೆ ಕುಂದನ್ನು ತರುವ ಕಾಯಿದೆಗಳನ್ನು ಸೃಷ್ಟಿಸುವದಕ್ಕಿಂತಲೂ ಉತ್ತಮಮಾರ್ಗವು ಸರ್ಕಾರಕ್ಕೆ ಗೋಚರವಾಗುವದಿಲ್ಲವೇ? ದೀರ್ಘಾಲೋಚನೆಯುಳ್ಳವರೂ, ನಾಗರಿಕರೂ, ಆದ ಪ್ರಜೆಗಳು ಕಾಯಿದೆಭಂಗಕ್ಕೆ ಎಂದೂ ಸಮ್ಮತಿಸಲಾರರು. ಈಗಿನ ಅಸಹಕಾರ ಚಳವಳಿಯನ್ನೂ, ತತ್ಸಂಬಂಧವಾದ ಕೆಲವು ಮೇರೆ ಮೀರಿದ ವರ್ತನೆಗಳನ್ನೂ, ಆಕ್ಷೇಪಣೀಯವಾದ ಕೆಲವುಕಾರ್ಯಕ್ರಮಗಳನ್ನೂ ಎಷ್ಟೋ ವಿಧವಾಗಿ ಆಕ್ಷೇಪಿಸಬಹುದಾದರೂ ಈ ಚಳವಳಿಯು ದುಷ್ಟ ಜನರ ದುರಾಲೋಚನೆಯಿಂದ ಮಾಡುವ ಕಾಯಿದೆಭಂಗವಾಗಿದೆ. "ಕಾಯಿದೆ ಮತ್ತು ಶಾಂತಿ" ಎಂಬ ನೆವದಿಂದ ಭಾರತೀಯರ ಮನಸ್ಸಿನಲ್ಲಿ ಉತ್ಪನ್ನವಾಗಿರುವ ಸ್ವಾಭಾವಿಕವಾದ ಸ್ವಾತಂತ್ರ್ಯಾಭಿಲಾಷೆಯನ್ನು ಸ್ವಾಭಿಮಾನಪೂರಿತವಾದ ದಬ್ಬಾಳಿಕೆಯಿಂದ ನಾಶಮಾಡಲೆತ್ನಿಸುವ ಸರ್ಕಾರವನ್ನು ಧೈರ್ಯವಾಗಿ ಎದುರಿಸುವ ಸ್ಪರ್ಧೆಯಾಗಿರುವದು.

ತನ್ನ ಜವಾಬ್ದಾರಿಯೇನೆಂಬುದನ್ನು ಅರಿಯದೆ ದಬ್ಬಾಳಿಕೆಯಿಂದ ಕೂಡಿದ ಸರ್ಕಾರದ ಈ ವಿಧವಾದ ಮಿತಿಮೀರಿದ ಕಾಯಿದೆಯೇ ಈ ವಿಷಮಸ್ಥಿತಿಗೆ ಮೂಲಕಾರಣವಾಗಿರುವದು. ಈಗಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ಆಲೋಚನಾಪರನಾದ ಭಾರತೀಯನ ಮನಸ್ಸಿನಲ್ಲಿಯೂ ಬಹಳ ಯೋಚನೆಯೂ ಹಾಗೂ ಕಷ್ಟವೂ ತಲೆದೋರಿರುವದು. ತನ್ನ ಆತ್ಮಕ್ಕೆ ತೋರಬಹುದಾದ ಮಾರ್ಗದಲ್ಲಿ ಸದ್ಯದ ಚಳವಳಿಯಲ್ಲಿ ನಂಬಿಕೆಯು ಸಾಲದಂತಾದರೆ ಆಗ ಅವನೂ ಚಳವಳಿಯಲ್ಲಿ ಸೇರದೆ ಸ್ವಸ್ಥವಾಗಿರಬೇಕಾಗುವದು. ಇದೇ ಸಂದರ್ಭದಲ್ಲಿ ಸರಕಾರದ ವರ್ತನವು ಇನ್ನೂ ಹೆಚ್ಚು ಅಸಮರ್ಪಕವಾಗಿ ಕಂಡುಬಂದರೆ ಆಗ ಅವನೇನು ಮಾಡಬೇಕು? ಚಳವಳಿಯಿಂದ ದೂರಾದಂತೆ ಸರಕಾರದಿಂದಲೂ ಅವನು ದೂರವಾಗಲೇಬೇಕಲ್ಲವೇ? ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಮೆಂಬರಾದ ನಾನು ಈ ಪ್ರಶ್ನದ ವಿಷಯದಲ್ಲಿ ನನ್ನ ಅಂತರಾತ್ಮನಿಗೆ ಸರಿಯಾದ ಉತ್ತರವನ್ನು ಕೊಡಬೇಕಾದುದು ನನ್ನ ಕರ್ತವ್ಯವೆಂದು ಭಾವಿಸಿದೆನು. ಕೆಲವು ನೂತನ ಕಾಯಿದೆಗಳನ್ನು ನಿರ್ಮಾಣಮಾಡಿರುವದನ್ನೂ ಅತ್ಯಲ್ಪವಾದ ಕಾರಣಗಳಿಗೆಲ್ಲಾ ಲಷ್ಕರೀಕಾಯಿದೆಯ ಉಪಯೋಗ ಮಾಡುವದನ್ನೂ ನೋಡಿದರೆ ಸರಕಾರದವರು ನ್ಯಾಯವಿಧಾಯಕಸಭೆಯನ್ನು ತಾವೇ ಲಕ್ಷಿಸದೆ ಈ ಸಭೆಯು ಕಾಯಿದೆಯ ಮೇಲೆ ಇಟ್ಟಿರುವ ನಿರ್ಬಂಧಗಳಿಗಾಗಿ ಅಸಮಾಧಾನ ಹೊಂದಿರುವರೆಂಬುದನ್ನು ವ್ಯಕ್ತಪಡಿಸುವದು. ಕಾಯಿದೆಯು ಏಕಪಕ್ಷವಾದುದಲ್ಲ. ಕಾಯಿದೆಯು ಪ್ರಜೆಗಳಿಗೆ ಹೇಗೋ ಹಾಗೆ ಸರ್ಕಾರಕ್ಕೂ ಅದರ ಅಧಿಕಾರಿಗಳಿಗೂ ಮತ್ತು ಪೋಲೀಸರಿಗೂ ಸಮನಾಗಿ ಅನ್ವಯಿಸುವುದು. ಆದರೆ ಸರಕಾರದ ಸದ್ಯದ ವರ್ತನದಲ್ಲಿ ತಮ್ಮ ಜವಾಬ್ದಾರಿಗೆ ತಕ್ಕ ಗೌರವಪೂರಿತವಾದ ನಡವಳಿಕೆಯೂ, ಇದುವರೆಗೆ ತಮ್ಮ ಮೇಲೆ ಹೊರಿಸಲ್ಪಟ್ಟ ಕಷ್ಟಪರಂಪರೆಗಳಿಗಾಗಿ ಕುಪಿತರಾಗಿರುವ ಕೇವಲ ಶಾಂತಸ್ವಭಾವದವರೂ, ಪ್ರೀತಿಭರಿತರೂ ಆದ ಜನರನ್ನು ಸಮಾಧಾನಪಡಿಸುವ ನಿಷ್ಕಪಟಪ್ರಯತ್ನವೂ ಕಂಡುಬರುವದಿಲ್ಲವಾಗಿ ನಾನು ಇಂಥ ಸರಕಾರದ ಸಹವಾಸವನ್ನು ತಪ್ಪಿಸಿಕೊಳ್ಳಬೇಕೆಂದು ನಿರ್ಧರಿಸಿ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ನನ್ನ ಸದಸ್ಯತ್ವಕ್ಕೆ ಈ ಮೂಲಕ ರಾಜೀನಾಮೆಯನ್ನು ಕೊಟ್ಟಿರುತ್ತೇನೆ."

ಭರತಖಂಡದ ಸರ್ವಾಧಿಕಾರಿಗಳ ಹೇಳಿಕೆ.

ಲಂಡನ್, ಜೂನ್ ೩.

ಇಂಡಿಯಾ ಸರ್ಕಾರದ ಸರ್ವಾಧಿಕಾರಿಗಳಾದ ಮಿ|| ವೆಜ್‌ವುಡ್ ಬೆನ್‌ರವರು ಈಗಿನ ಸಾಮ್ರಾಜ್ಯ ಸಭೆಯಲ್ಲಿ ಹೇಳಿದ್ದೇನೆಂದರೆ—

ಈಗ ಭರತಖಂಡದಲ್ಲಿ ಸ್ಥಿತಿಗಳು ವಿಷಮದಲ್ಲಿವೆ. ಕಟ್ಟಳೆ ಮತ್ತು ವ್ಯವಸ್ಥೆಯನ್ನು ಮುರಿಯುವುದು ಕೆಲವರ ಧ್ಯೇಯವಾಗಿದೆ. ಇದು ಭಾರತೀಯರಿಗೆ ಹಿತವನ್ನುಂಟುಮಾಡುವುದಿಲ್ಲ. ಯಾವ ಸರ್ಕಾರಕ್ಕೇ ಆಗಲಿ ಕಟ್ಟಳೆ ಮತ್ತು ಕಾನೂನು ಜನಗಳಿಂದ ಮರ್ಯಾದಿಸಲ್ಪಡುವವರೆಗೂ, ಆ ಸರಕಾರವು ಜನಗಳನ್ನು ಶಾಂತಿಯಿಂದ ಇಡಲಾರದು. ಆ ದೇಶಕ್ಕೆ ಅಲ್ಲಿಯವರೆಗೆ ಕ್ಷೇಮವಿಲ್ಲವು. ಆರೀತಿ ಕಟ್ಟಳೆ, ವ್ಯವಸ್ಥೆ ಮತ್ತು ಕಾನೂನಿಗೆ ಮರ್ಯಾದೆಯನ್ನು ಭರತಖಂಡದಲ್ಲಿ ಇಂದು ಯಾರು ಕೊಡುವದಿಲ್ಲವೋ ಅವರಿಗೆಲ್ಲಾ ಶಿಕ್ಷೆಯನ್ನು ಇಂಡಿಯಾ ಸರ್ಕಾರದವರು ಕೊಡುತ್ತಿದ್ದಾರೆ. ಇದು ನ್ಯಾಯವಾಗಿಯೇ ಇದೆ.

ಭರತಖಂಡದಲ್ಲಿ ಪ್ರತಿಯೊಂದನ್ನೂ ಸುವ್ಯವಸ್ಥೆ ಮಾಡಿ ಭಾರತೀಯರಿಗೆ ಪ್ರತಿಯೊಂದನ್ನೂ ಬಿಟ್ಟುಕೊಡಬೇಕೆಂದು ನನಗೆ ಆಶೆಯಿದೆ. ಭರತಖಂಡಕ್ಕೆ ಅಂತರ್ಗತ ಸ್ವರಾಜ್ಯವನ್ನು ಕೊಡುವುದೇ ಬ್ರಿಟಿಷರ ಧ್ಯೇಯ! ಕಾನೂನು ಮೂಲಕ ಶಾಂತಿಯಾಗಿ ಪ್ರತಿಯೊಂದನ್ನೂ ಏರ್ಪಡಿಸಿ ಭಾರತೀಯರಿಗೆ ಆ ಹಕ್ಕುಗಳನ್ನು ಕೊಡಬೇಕೆಂದಿರುವ ಈ ನಮ್ಮ ಪವಿತ್ರಧ್ಯೇಯಕ್ಕೆ ಭಾರತೀಯರೆಲ್ಲರೂ ಸಹಕರಿಸಬೇಕು.

ರಷ್ಯಾ.

ಲಂಡನ್ ಜೂನ್ ೨

ರಷ್ಯಾದೇಶದ ಚಳವಳಿಗಾರರು ಭರತಖಂಡದಲ್ಲಿ ಸೇರಿಕೊಂಡು ಗಲಭೆ ನಡೆಯಿಸುತ್ತಿರುವರೆಂದೂ ಅದನ್ನು ಮೊಟ್ಟಮೊದಲು ನಿಲ್ಲಿಸಬೇಕೆಂದೂ ಲಂಡನ್ ಪಾರ್ಲಿಮೆಂಟರಿ ಮೆಂಬರರು ಈದಿನ ಅಭಿಪ್ರಾಯಪಟ್ಟಿರುವರು.

ಮಿ|| ಅಭಯಂಕರ್‌ರವರಿಗೆ ಕಠಿಣಸಜಾ.

ಮಿ|| ಎಂ. ವಿ. ಅಭಯಂಕರ್‌ರವರಿಗೆ ಎರಡುವರ್ಷ ಕಠಿಣಸಜೆಯೂ ೧೫೦೦ ರೂಪಾಯಿ ಜುಲ್ಮಾನೆಯೂ, ಜುಲ್ಮಾನೆ ತಪ್ಪಿದರೆ ೬ ತಿಂಗಳು ಮತ್ತೆ ಕಠಿಣಸಜೆಯೂ ವಿಧಿಸಲ್ಪಟ್ಟಿರುವದು.

ಬಿರುದಿಗೆ ಬಹಿಷ್ಕಾರ ಕೊಟ್ಟರು.

ಮಿ|| ತ್ರಿಭುವನದಾಸ್ ಮಾಳ್ವೀರವರು ತಮಗೆ ಬಂದಿದ್ದ ಕೈಸರ್ ಇ. ಹಿಂದ್ ಬಿರುದಿನ ಚಿನ್ನದ ಪದಕವನ್ನು ಸರ್ಕಾರಕ್ಕೆ ವಾಪಸು ಕಳುಹಿಸಿ "ಶಾಂತಿಯುತರಾದ ಸತ್ಯಾಗ್ರಹಿಗಳಿಗೆ ನೀವು ಹೊಡೆಯುತ್ತಿರುವಿರಿ. ಇದನ್ನು ನೋಡಿ ನನಗೆ ಅಸಹ್ಯಹುಟ್ಟಿತು. ನಿಮ್ಮೊಂದಿಗೆ ನನಗೆ ಸಹಕಾರಬೇಡ" ಎಂದು ಗೌರ್ನರ್‌ರವರಿಗೆ ಅದರೊಂದಿಗೆ ಪತ್ರವನ್ನು ಬರೆದಿರುವರು.

೧೫ ಲಕ್ಷ ರೂಪಾಯಿಗಳು ಅಗ್ನಿಗೆ ಆಹುತಿ.

ಡೆಲ್ಲಿ ಜೂನ್ ೪

ನಿನ್ನೆ ರಾತ್ರಿ ಹತ್ತುಘಂಟೆಗೆ ಡೆಲ್ಲಿಯಲ್ಲಿ ಒಂದು ಮನೆಗೆ ಬೆಂಕಿ ಹತ್ತಿ ಸುತ್ತಮುತ್ತಲಿದ್ದ ೧೩ ಅಂಗಡಿಗಳನ್ನು ಭಸ್ಮಮಾಡಿ ನ್ಯಾಷನಲ್ ಬ್ಯಾಂಕ್ ಕಟ್ಟಡವನ್ನು ಸಂಪೂರ್ಣ ನಾಶಮಾಡಿತು. ಪೋಲೀಸಿನವರೂ ಹಾಗೂ ಮಿಲಿಟರಿಯವರೂ ಯಾರೂ ಸಹಾಯಕ್ಕೆ ಬರಲಿಲ್ಲ. ಕಾಂಗ್ರೆಸ್ಸಿನ ವಾಲಂಟಿಯರುಗಳು ತುಂಬಾ ಶ್ರಮಪಟ್ಟು ಬೆಂಕಿಯನ್ನು ಆರಿಸಿದರು. ಇಲ್ಲದಿದ್ದರೆ ಆ ಪೇಟೆಯ ಬೀದಿಯು ನಷ್ಟವಾಗಬೇಕಾಗಿದ್ದಿತು. ಒಟ್ಟು ೧೫ ಲಕ್ಷ ರೂಪಾಯಿಗಳ ನಷ್ಟವಾಗಿದೆ.

ಮಹಮ್ಮದೀಯರು ಕಾಂಗ್ರೆಸ್ಸಿಗೆ ಸೇರಿದರು.

ಬೊಂಬಾಯಿ ಜೂನ್ ೩

ಬೊಂಬಾಯಿಯಲ್ಲಿ ಲಕ್ಷೋಪಲಕ್ಷ ಮಹಮ್ಮದೀಯರು ಕಾಂಗ್ರೆಸ್ಸಿಗೆ ಸೇರಿದರು. ಇನ್ನು ಮುಂದೆ ಸರಕಾರದೊಂದಿಗೆ ಅಸಹಕರಿಸಬೇಕೆಂದು ನಿಶ್ಚಯಿಸಿ ಈ ದಿನ ಒಂದು ಮೈಲು ಉದ್ದದವರೆಗೆ ಕೇವಲ ಮಹಮ್ಮದೀಯರ ಮೆರವಣಿಗೆಯೊಂದನ್ನು ಏರ್ಪಡಿಸಿ ಕಾಂಗ್ರೆಸ್ಸಿಗೆ ಜಯವಾಗಲೆಂದು ಹಾಡಿದರು.

ಭರತಖಂಡದ ಗಟ್ಟಿಯಾದ ಕೂಗು.

(ರೆವರೆಂಡ್ ಅಂಡರ್‌ಸ್ವೂರವರ ಎಚ್ಚರಿಕೆ.)

ಕಲ್ಕತ್ತೆಯಲ್ಲಿ 30 ವರ್ಷಗಳ ವರೆಗೆ ಮಿಷನರಿಯಾಗಿದ್ದ ರೆವರೆಂಡ್ ಹರ್ಬರ್ಟ್ ಅಂಡರ್‌ಸ್ವೂರವರು ಕ್ವಾಕ್ಷ್ ಟ್ರೆ ಹಾಲಿನಲ್ಲಿ ಭರತಖಂಡದ ವಿಷಯದಲ್ಲಿ ಈ ರೀತಿಯಾಗಿ ಹೇಳಿರುವರು. "ಇಂದಿನ ಭರತಖಂಡದ ಗಟ್ಟಿಯಾದ ಕೂಗೆಂದರೆ, ತನ್ನ ಅಸ್ಮದೊಡನೆ ತನಗೆ ಸೂಕ್ತತೋರಿದ ರೀತಿಯಲ್ಲಿ ವರ್ತಿಸುವ ಸ್ವಾತಂತ್ರ್ಯಪೇಕ್ಷೆಯೇ ಆಗಿರುವದು. ಭಾರತೀಯರ ದೃಷ್ಟಿಯಿಂದ, ಪಾಶ್ಚಿಮಾತ್ಯರ ನಾಗರೀಕತೆಯಿಂದ ಕೂಡಿದ ಬ್ರಿಟಿಷರ ಆಳ್ವಿಕೆಯು, ಪೂರ್ವದೇಶೀಯರ ತತ್ವಗಳಿಗೆ ವಿರೋಧವಾದ ಅಧಿಕಾರದರ್ಪವನ್ನೂ ಸ್ವಾಭಿಮಾನ ಪೂರ್ಣವಾದ ವೈಭವವನ್ನೂ ತಂದಿರುವದು. ಮಿ|| ಗಾಂಧಿ, ಮಿ|| ರಾಜಗೋಪಾಲಾಚಾರಿ ಮೊದಲಾದವರು ಭರತಖಂಡದಲ್ಲಿ ಈ ಕೇಡುಗಳನ್ನು ತಪ್ಪಿಸಬೇಕಾದರೆ ಸಾಮ್ರಾಜ್ಯ ಸಂಬಂಧವನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳುವದೇ ಉತ್ತಮವಾದ ಮಾರ್ಗವೆಂದು ಭಾವಿಸಿದರು."

ಲಾರ್ಡ್ ರೋಥರ್‌ಮೇರ್ ಮತ್ತು ಲಾರ್ಡ್ ಇಂಚ್ ಕೇಪ್‌ರವರು ಈ ವಿಷಯವಾಗಿ ಇನ್ನೂ ಸ್ಪಷ್ಟವಾಗಿ ಹೇಳಿರುವರು.

"ಭರತಖಂಡವನ್ನು ಕಳೆದುಕೊಳ್ಳುವದೆಂದರೆ ನಾವು ನಮ್ಮ ಸುವರ್ಣದ ಗಣಿಯನ್ನು ಕಳೆದುಕೊಂಡಂತೆಯೇ ಸರಿ. ಬ್ರಿಟಿಷರಲ್ಲಿ ಭಾರತೀಯರಿಗೆ ತಲೆದೋರಿರುವ ಅಪನಂಬಿಕೆಗೆ ನಮ್ಮ ವ್ಯಾಪಾರಸಂಬಂಧವಾದ ದುರಾಶೆಯೇ ಕಾರಣವಾಗಿರುವದು. ಭರತಖಂಡದ ಸದ್ಯದ ವಿದ್ಯಮಾನಗಳ ಹಾಗೂ ಅಸಹಕಾರಚಳವಳಿಯ ವಿಷಯದಲ್ಲಿ ಯಾರು ಏನು ಹೇಳಿದರೂ, ಬ್ರಿಟಿಷರ ಆಳ್ವಿಕೆಯ ವಿಷಯದಲ್ಲಿ ಅದರಲ್ಲಿಯೂ ಮದ್ಯಪಾನ ಮತ್ತು ತತ್ಸಂಬಂಧವಾದ ವಿಷಯಗಳಲ್ಲಿ ಭಾರತೀಯರು ಮಾಡುತ್ತಿರುವ ಆಕ್ಷೇಪಣೆಯು ಕೇವಲ ನ್ಯಾಯವಾಗಿದೆ."

ವಡಾಲಾ ಕಾರ್ಖಾನೆಯ ಮೇಲೆ 15,000 ಜನರ ದಾಳಿ. ಶ್ರೀಮತಿ ಮುನಷಿಯವರ ದಸ್ತಗಿರಿ.

ಮುಂಬಯಿ, ಜೂನ ೧.

ಈ ದಿನ ವಡಾಲಾಕೋಠಿಯ ಮೇಲೆ ನಡೆದ ದಾಳಿಯಲ್ಲಿ ಸುಮಾರು 25 ಜನರಿಗೆ ಅಲ್ಪಸ್ವಲ್ಪ ಗಾಯಗಳಾದವು. ಮಿ|| ಕೆ. ಎಂ. ಮುನಷಿಯವರ ಪತ್ನಿಯವರಾದ ಶ್ರೀಮತಿ ಮುನಷಿ ಹಾಗೂ ಶ್ರೀಮತಿ ಹರಮ್‌ಜೀ ... ಮೊದಲಾದ 9 ಜನ ಸ್ತ್ರೀಯರು ದಸ್ತಗಿರಿ ಮಾಡಲ್ಪಟ್ಟರು. ಈ ದಾಳಿಯಲ್ಲಿ ಕೇವಲ ಸ್ವಯಂಸೇವಕರು ಮಾತ್ರವೇ ಅಲ್ಲದೆ ಹೊರಗಿನ ಜನರೂ ಸೇರಿದ್ದು ಒಟ್ಟು 15,000 ಜನರು ದಾಳಿಯಲ್ಲಿ ಭಾಗಿಗಳಾಗಿದ್ದರು. ...

ಪೋಲೀಸ್ ಸಾರ್ಜಂಟರವರ ನಷ್ಟ. ಸೋಲಾಪುರದ ವಿಚಿತ್ರ ವಿದ್ಯಮಾನ.

ದುಂಡು ಮೇಜಿನ ಪರಿಷತ್ತು.

ಬಹಿಷ್ಕಾರ ಚಳವಳಿ. ಮಿ|| ಸ್ಲೋಕೊಂಬರವರ ಪತ್ರಗಳು.

ದಾರ್ಸ್ವಾ ಕೋಠಿಯ ಮೇಲೆ ದಾಳಿ.

ಪೊಲೀಸರ ನೂತನ ಕಾರಾಗೃಹಕ್ಕೆ ನೂತನ ನಾಮಕರಣ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ...

ಶಿಲಾಜಿತ—...

ಕಸ್ತೂರಿ—...

ಗೃಹವನಾತೇಯು—...

ಹಿಮಾಲಯನ್ ಬಾಮ್—...

ಆಯುರ್ವೇದ ಮಹೌಷಧಾಲಯ, ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ. [58]

ಲಿಂಗೋತ್ಪತ್ತಿ ಲಾಕೆಟ್ಸ್.

...

ವ್ಯವಸ್ಥಾಪಕರು, ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಧೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ತರಿಸಿ ನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[8] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು—ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೇರಿಯಾಜ್ವರ, ಪದೇ ಪದೇ ನಿಯಮಿತ ದಿವಸಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುದು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [44]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪಟ್ಟಿ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿಗಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಥಿಕ್ಕರಿಸಿದರ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋದು, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋದು, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋದು, ಪಿತ್ತವಿಕಾರ ನಿದ್ರೆಯು ಬಾರದೆ ಇರೋದು ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರಸಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಹಸಪುಷ್ಪ, ... ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣವಾಗುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು. ... [48]

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—... **ನಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ಬೆಲೆ ೧ ಕ್ಕೆ	ರೂ. ಆ. ಪೈ. ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೩ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೇ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೩ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೩ ಆಣೆ
ವೀರಶೈವಮತವಿಮಾಂಸಾ	೩ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೩ ಆಣೆ ೭ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡ್ಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[36] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೮-೦

ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[48] ಪೋ. ಬಾ. ೫೧೦, ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪವಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾ ಪಾಲಿಪ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಜೂನ್ ೧೯೩೦ [ಸಂಚಿಕೆ ೭.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಮ್ಯಾನೇಜರ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪೋಲೀಸರ ಅತ್ಯಾಚಾರ.

ಮೇ ತಾ|| 15 ರಿಂದ ಜೂನ್ ತಾ|| 6 ರ ವರೆಗೆ ನಡೆದ ಧಾರಸಾನ್‌ದ ಸತ್ಯಾಗ್ರಹದಲ್ಲಿ 2,500 ಜನ ಸತ್ಯಾಗ್ರಹಿಗಳು ಸೇರಿದ್ದರು. ಸ್ವಯಂಸೇವಕರಿಗೆ ಪೋಲೀಸರು ನಾನಾ ಪ್ರಕಾರವಾಗಿ ಹಿಂಸೆಕೊಟ್ಟರು. ಸ್ವಯಂಸೇವಕರು ಎಚ್ಚರವಾಗಿದ್ದಾರೋ ಹೇಗೆಂಬುದನ್ನು ಪೋಲೀಸರು ಮುಳ್ಳು ಸೂಜಿಗಳನ್ನು ಚುಚ್ಚಿ ನೋಡುತ್ತಿದ್ದರು. ಅವರನ್ನು ಬತ್ತಲೆಮಾಡಿ ಅಂಡಗಳನ್ನು ಹಿಚುಕುತ್ತಿದ್ದರು. ಅವರನ್ನು ಉಪ್ಪಿನ ರಾಡಿ ನೀರಿನಲ್ಲಿ ದೂಡಿ ಕೆಡವುತ್ತಿದ್ದರು. ಬಾಯಿ ಮೂಗುಗಳಲ್ಲಿ ಉಪ್ಪಿನ ನೀರನ್ನು ತುಂಬುತ್ತಿದ್ದರು. ಲಾಠಿಪ್ರಹಾರಗಳನ್ನು ಎಚ್ಚರದಪ್ಪುವವರೆಗೂ ಮಾಡುತ್ತಿದ್ದರು. ಹೀಗೆ ನಾನಾ ಹಿಂಸೆಗಳಿಗೆ 2,300 ಜನರು ಈಡಾದರು. ಇವರಲ್ಲಿ 900 ಜನರನ್ನು ಆಸ್ಪತ್ರೆಯಲ್ಲಿಟ್ಟು ಶುಶ್ರೂಷೆಮಾಡಬೇಕಾಯಿತು. ಅಲ್ಲದೆ, 229 ಜನರು ಕಾರಾಗೃಹವನ್ನು ಸೇರಿದ್ದಾರೆ.

ಇಷ್ಟಾದರೂ ಸ್ವಯಂಸೇವಕರ ಉತ್ಸಾಹಭಂಗವಾಗಲಿಲ್ಲ. ಹೊಡೆತ ತಿಂದವರು ಎದ್ದು ಮುಂದೆ ಹೋಗುತ್ತಿದ್ದರು. ಈಗ ಮಳೆಗಾಲ ಬಂದ್ದದ್ದರಿಂದ ಈ ಧಾಸಾನ್ ಸತ್ಯಾಗ್ರಹವನ್ನು ನಿಲ್ಲಿಸಬೇಕಾಯಿತು. ಇನ್ನು ಮೇಲೆ ಸ್ವಯಂಸೇವಕರು ಹೊಸದಾಗಿ ಹೊರಟ ಆರ್ಡಿನನ್ಸ್‌ಗಳ ವಿರುದ್ಧ ಪಿಕೆಟಿಂಗ್ ಮತ್ತು ಕರನಿರಾಕರಣೆಯ ಚಳವಳಿಯನ್ನು ಹಳ್ಳಿ ಹಳ್ಳಿಗೆ ಹೋಗಿ ನಡಸುವವರಿದ್ದಾರೆ.

ಸ್ವೀಕಾರ.

ಶಿವಮೊಗ್ಗ ಡಿ|| ಶಿಕಾರಿಪುರದಲ್ಲಿರುವ ವೇ|| ಮ|| ಮ|| ಪುರಾಣದ ಸಿದ್ಧರಾಮಯ್ಯನವರ ಪುತ್ರಿ ಸೌ|| ಶಿವನಾಗಮ್ಮನನ್ನು ಅಜ್ಜವಡೆಯರ ಮಠದ ವೇ|| ಗುರುಸಿದ್ಧಯ್ಯನವರ ಪುತ್ರ ಚಿ|| ರೇವಣಸಿದ್ಧಯ್ಯನಿಗೆ, ವೇ|| ಕೊಟ್ರಪ್ಪಯ್ಯನವರ ಪುತ್ರಿ ಸೌ|| ಮುರಿಗಮ್ಮನನ್ನು ಸುಣ್ಣದಕೊಪ್ಪದ ಕಾ|| ಮ|| ವೇ|| ಶಿವಲಿಂಗಪ್ಪಯ್ಯನವರ ಪುತ್ರ ಚಿ|| ಚನ್ನಬಸವಯ್ಯನಿಗೆ ದಾವಣಗೆರೆ ವೇ|| ಸಂಗಪ್ಪಯ್ಯನವರ ಪುತ್ರಿ ಸೌ|| ಚನ್ನವೀರವ್ವನನ್ನು, ಪುರಾಣದ ವೇ|| ವೀರಬಸಯ್ಯನವರ ಪುತ್ರ ಚಿ|| ಚನ್ನವೀರಯ್ಯನಿಗೆ ಮಲ್ಲೂರು ಕಲ್ಯಾಣಮಠದ ವೇ|| ಶಾಂತವೀರಯ್ಯನವರ ಪುತ್ರಿ ಸೌ|| ವೀರಬಸವ್ವನನ್ನು, ವೇ|| ಸಂಗಪ್ಪಯ್ಯನವರ ಪುತ್ರ ಚಿ|| ದಾನಯ್ಯನಿಗೆ, ನಾಗವಂದದ ಮ|| ರಾ|| ಹೊಳಿಬಸಪ್ಪನವರ ಪುತ್ರಿ ಚಿ|| ಸೌ|| ಹೊಳೆಯವ್ವನನ್ನು, ಶಿಕಾರಿಪುರದ ಮ|| ರಾ|| ಗುರುಶಾಂತಶಾಸ್ತ್ರಿಗಳವರ ಪುತ್ರ ಚಿ|| ಸದಾಶಿವಶಾಸ್ತ್ರಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 5 ರೂ. ಗಳು ಮ|| ರಾ|| ತಂಕಲಕೋಟೆ ಚನ್ನಬಸಪ್ಪನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಡಿ|| ಹೊನ್ನಾಳಿಗ್ರಾಮದ ಮ|| ರಾ|| ಅಂದಾನಿ ಚನ್ನಪ್ಪನವರ ದತ್ತಪುತ್ರ ಚಿ|| ಸಂಗಪ್ಪನಿಗೆ ದೊಡ್ಡತ್ತಿನಹಳ್ಳಿ ಮ|| ರಾ|| ಶಾಂತಪ್ಪನವರ ಗುರುಪಾದಪ್ಪನವರ ಪುತ್ರಿ ಸೌ|| ದೇವೀರಮ್ಮನನ್ನೂ, ಮ|| ರಾ|| ಮಾಸಡಿ ಗುರುಶಾಂತಪ್ಪನವರ ಪುತ್ರ ಚಿ|| ಗುರುಸಿದ್ಧಪ್ಪನಿಗೆ ಮ|| ರಾ|| ಅಂದಾನಿ ಗುರುಪಾದಪ್ಪನವರ ಪುತ್ರಿ ಸೌ|| ಚನ್ನವ್ವನನ್ನೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಸಮರ್ಪಿಸಿದ 2 ರೂ. ಹಾಗು ಮ|| ರಾ|| ಹೊನ್ನಾಳಿನಂದಿ ಮುರಿಗಿ ರುದ್ರಪ್ಪನವರ ಪುತ್ರ ಚನ್ನಬಸವಪ್ಪನ ಧರ್ಮಪತ್ನಿ ಸೌ|| ಚನ್ನವ್ವನ ಋತುಶಾಂತಿ ಸಮಯದಲ್ಲಿ ಸಮರ್ಪಿಸಿದ 2 ರೂ. ಒಟ್ಟು 4 ರೂಪಾಯಿಗಳು ಮ|| ರಾ|| ನಂದಿ ಮುರಗಿ ರುದ್ರಪ್ಪನವರ ದ್ವಾರಾ ತಲ್ಪಿರುತ್ತವೆ.

ತೀರ್ಥಹಳ್ಳಿ ತಾಲೂಕು ಕಂಕಳಲೆ ಗ್ರಾಮದ ಮ|| ರಾ|| ವೀರಪ್ಪಗೌಡರ ಪುತ್ರಿ ಸೌ|| ಚನ್ನಮ್ಮನನ್ನು ಮುಳ್ಳೂರು ಗ್ರಾಮದ ಮ|| ರಾ|| ವೀರಪ್ಪಗೌಡರ ಪುತ್ರ ಚಿ|| ವೀರಪ್ಪಗೌಡನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ವರನಕಡೆಯಿಂದ ಸಮರ್ಪಿಸಿದ 2 ರೂ. ವಧುವಿನ ಕಡೆಯಿಂದ ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ವೇ|| ಉದ್ಯಾನೇವರಮಠದ ಪ್ರಭುದೇವರ ಚಂ|| ಶಿವಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ತಾಲೂಕು ಅದರಗುಂಚಿಗ್ರಾಮದ ಮ|| ರಾ|| ಕೋಟಿದ ರಾಚಪ್ಪನವರಿಗೆ ಲಕ್ಷ್ಮೇಶ್ವರಗ್ರಾಮದ ಮ|| ರಾ|| ಕಲ್ಲೂರು ಚನ್ನಬಸವಪ್ಪನವರ ಪುತ್ರಿ ಸೌ|| ಪಾರ್ವತವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವಸಮಯದಲ್ಲಿ ಸಮರ್ಪಿಸಿದ 2 ರೂ. ಹಾಗೂ ಮ|| ರಾ|| ಘಟಿಗೆಣ್ಣನವರ ಬಸೇರಪ್ಪನವರ ಪುತ್ರ ಚಿ|| ಶಿವ[illegible] ಮ|| ರಾ|| ಬಾಗೇವಾಡಿ ಲಿಂಗಪ್ಪನವರ ಪುತ್ರಿ ಸೌ|| [illegible]ನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮ[illegible]ಲ್ಲಿ ಸಮರ್ಪಿಸಿದ 1 ರೂ. ಒಟ್ಟು 3 ರೂ. ಗಳು ಲಕ್ಷ್ಮೇಶ್ವರದ ವೇ|| ಹಿರೇಮಠದ ಶಾಂತಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಹೊನ್ನಾಳಿ ತಾಲೂಕು ಚನ್ನಿಕಟ್ಟೆಮಠದ ವೇ|| ವೀರಪ್ಪಯ್ಯನವರ ಪುತ್ರಿ ಸೌ|| ಗಿರಿಜಮ್ಮನನ್ನು ನೇಮತಿ ಕೋಹಳ್ಳಿಮಠದ ವೇ|| ರುದ್ರಪ್ಪಯ್ಯನವರ ಪುತ್ರ ಚಿ|| ಈಶ್ವರಯ್ಯನಿಗೂ ಹಾಗೂ ಕುಂಸಿ ತಾಲೂಕು ಮಲ್ಲಾಪುರಮಠದ ವೇ|| ಮರಿದೇವರ ಪುತ್ರಿ ಸೌ|| ನೀಲಮ್ಮನನ್ನು ಸೋಗಿಲು ಕೋಹಳ್ಳಿಮಠದ ಕೊಟ್ಟೂರು ವೇ|| ಬಸವಯ್ಯನವರ ಪುತ್ರ ಚಿ|| ಶಿವಲಿಂಗಯ್ಯನಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಬೆಳಗುತ್ತಿ ಪಿ. ಎಲ್. ಹೆಡ್ಮಾಸ್ಟರ್ ವೇ|| ಕೆ. ಎಸ್. ಚನ್ನಯ್ಯನವರ ದ್ವಾರಾ ತಲ್ಪಿರುತ್ತವೆ.

ಬಿಜಾಪುರ ಡಿ|| ಹುನಗುಂದ ತಾ|| ದಾಸಬಾಳು ಗ್ರಾಮದ ವೇ|| ಗಂಗಾಧರ ಮಠದ ಗಂಗಾಧರಯ್ಯನವರ ಪುತ್ರ ವೇ|| ಸಜ್ಜಗುಣಾರ್ಯರಿಗೆ ಚರಪಟ್ಟಾಧಿಕಾರಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ನಿಜಾಮರಾಜ್ಯಕ್ಕೆ ಸೇರಿದ ತಾಂಡೂರು ಪರುಣಸಂಭುದೇವರು ವೀರಶೈವಸನಾತನತ್ವವೆಂಬ ಗ್ರಂಥವನ್ನು ಬರೆಯುವ ಸಮಯದಲ್ಲಿ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರ ಭಾಷಣವು ತಮ್ಮ ಕಾರ್ಯಕ್ಕೆ ವಿಶೇಷವಾಗಿ ಸಹಾಯವಾಯಿತೆಂಬ ಸಂತೋಷದಿಂದ ಅತ್ಯಂತ ಭಕ್ತಿಪೂರ್ವಕವಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚನ್ನರಾಯಪಟ್ಟಣದಲ್ಲಿರುವ ಮ|| ರಾ|| ಬೆಳಗೋಡು ಬೆಳ್ಳಿ ಸಿದ್ದಪ್ಪನವರ ಪುತ್ರ ಚಿ|| ಮರುಳಸಿದ್ಧಪ್ಪನಿಗೆ ಮ|| ರಾ| ಸಿಂಗಾಪುರದ ಬಸೆಟ್ಟಪ್ಪನವರ ಪುತ್ರಿ ಸೌ| ಮಂಜಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹದಲ್ಲಿ ವಧೂವರರಿಂದ ತೆಗೆಯಿಸಿದ 1-8-0 ಯು ಮ| ರಾ| ಬೆಳಗೋಡು ಜೆ. ಪುಟ್ಟಸ್ವಾಮಪ್ಪನವರ ದ್ವಾರಾ ತಲ್ಪಿರುತ್ತದೆ.

ಗದಗ ತಾಲೂಕು ಹೊಂಬಳಗ್ರಾಮದ ಗಂಗಾಮಠದ ಮ|| ರಾ|| ನಾಗಾವಿ ಶಿರಕಪ್ಪನವರ ಪುತ್ರ ಚಿ| ವಿರೂಪಾಕ್ಷಪ್ಪನ ಲಗ್ನದಲ್ಲಿ ವೇ| ಹಿರೇಮಠದ ವೀರಭದ್ರಯ್ಯನವರು ತೆಗೆಯಿಸಿದ 1 ರೂ. ಯು ಮ| ರಾ| ಬಳಗೇರಿ ಚನ್ನಬಸಪ್ಪನವರ ದ್ವಾರಾ ತಲ್ಪಿರುತ್ತದೆ.

ಬೆಂಗಳೂರು ಡಿ| ಬಿಡದಿ ಗ್ರಾಮದ ಮ| ರಾ| ಸಾಹುಕಾರ್ ಸಿದ್ಧಮಲ್ಲಪ್ಪನವರ ಪುತ್ರ ಚಿ| ಬಿ. ಸಿ. ಮಲ್ಲಪ್ಪನಿಗೆ ತಿಪಟೂರು ಮ| ರಾ| ಸಿದ್ಧಪ್ಪನವರ ಪುತ್ರಿ ಚಿ| ಸೌ| ರೇವಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 1 ರೂ. ಯು. ಮ| ರಾ| ಬಿ. ಸಿ. ರೇವಣ್ಣಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಮೈಸೂರು ತಾಲೂಕು ಮರಟ್ಟಿಕ್ಯಾತನಹಳ್ಳಿ ಗ್ರಾಮದ ಮ| ರಾ| ಮರಿಶೆಟ್ಟಿರವರ ಚಿ| ಚಿಕ್ಕಶಿವನಂಜಪ್ಪನಿಗೆ ಮೈಸೂರು ಹಳೇ ಅಗ್ರಹಾರದಲ್ಲಿರುವ ಮ| ರಾ| ಭೋಗ ನಂಜಪ್ಪನವರ ಸೊಸೆ ಚಿ| ಸೌ| ಗೌರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಕಳೆದ 13 ನೆಯ ತಾರೀಖಿನ ದಿವಸ ಲಾಹೋರಿನಲ್ಲಿ ಮದ್ಯಪಾನನಿಷೇಧ ಚಳವಳಿಯನ್ನು ಮಾಡುತ್ತಿದ್ದ 14 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಮರುದಿನ ಅದೇ ಅಪರಾಧ[illegible]ಮೇಲೆ ಮತ್ತೆ 11 ಜನರನ್ನು ದಸ್ತಗಿರಿಮಾಡಿ ಅವರಲ್ಲಿ 14 ಜನರನ್ನು ಅದೇದಿನ ವಿಚಾರಣೆಮಾಡಿ 6 ತಿಂಗಳ ಕಠಿನಸಜೆ ಮತ್ತು 100 ರೂ. ಜುಲ್ಮಾನೆಯನ್ನು ವಿಧಿಸಿದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಅರಸೀಕೆರೆ ತಾಲ್ಲೋಕು ದಿಬ್ಬೂರುಗ್ರಾಮದ ಹೊಸಸ್ಕೂಲ್ ಕಟ್ಟಡದಲ್ಲಿ

ಶ್ರೀಮನ್ಮಹಾರಾಜರವರ ವರ್ಧಂತೀಮಹೋತ್ಸವ ಸಮಾರಂಭ.

ಪ್ರತ್ಯಕ್ಷದೇವರಂತೆ ನಮ್ಮಗಳನ್ನು ಪರಿಪಾಲಿಸುತ್ತಿರುವ ಶ್ರೀಮನ್ಮಹಾರಾಜಾಧಿರಾಜ ಸರ್ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ...

ಮ|ರಾ| ಚಿಕ್ಕೇಗೌಡರು ಎಲ್ಲ ಜನಾಂಗವೂ ಏಕಮತ್ಯದಿಂದ ಇದ್ದು ತಮ್ಮ ಮಕ್ಕಳನ್ನು ಸರಿಯಾಗಿ ಸ್ಕೂಲಿಗೆ ಕಳುಹಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು ಮುಖ್ಯಕರ್ತವ್ಯವೆಂತಲೂ ಮತ್ತು ಈ ಸ್ಕೂಲು 16 ವರ್ಷಕಾಲದಿಂದಲೂ ಸಾಧಾರಣವಾಗಿದ್ದು ಈಗಿನ ಹೆಡ್ಮಾಸ್ಟರ ಕಾಲದಲ್ಲಿ ಕೇವಲ ಉತ್ತಮಸ್ಥಿತಿಯಲ್ಲಿ ಬಂದು ಮುಂದೆ ವರ್ನಾಕ್ಯುಲರ್ ಮಿಡ್ಲ್ ಸ್ಕೂಲ್ ಆಗುವಂತಿದೆ. ಹುಡುಗರ ಸಂಖ್ಯೆಯಾದರೂ 70 ರ ಮೇಲಿದೆ. 300 ರೂಪಾಯಿನ ಸಾಮಾನುಗಳನ್ನು ಗೌರ್ನಮೆಂಟಿನವರು ಸಹಾಯಮಾಡಿದ್ದಾರೆ. ಇಬ್ಬರು ಮಾಸ್ಟರಿದ್ದಾರೆ. ಕೆಲಸ ನಡೆಯುವುದು ಕಷ್ಟ. ಸರ್ಕಾರದವರು ಇನ್ನೊಬ್ಬರನ್ನು ಕಳುಹಿಸಿಕೊಟ್ಟರೆ ಇನ್ನೂ ತೃಪ್ತಿಕರವಾಗಿ ನಡೆಯುತ್ತಿತ್ತೆಂಬುದಾಗಿ ಸ್ವಾರಸ್ಯವಾಗಿ ಹೇಳಿ ಬಹುಮಾನ ಹಂಚಿದರು. ಬಳಿಕ ಶ್ರೀಮನ್ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನೆ ಮಾಡಿ ಪುಷ್ಪತಾಂಬೂಲಾದಿಗಳನ್ನು ಕೊಟ್ಟು ಮಕ್ಕಳಿಗೆ ಮಿಠಾಯಿಯನ್ನು ಹಂಚಿದರು. ಸಭೆಯು ಮುಕ್ತಾಯವಾಯಿತು.

ಒಬ್ಬ ಪ್ರೇಕ್ಷಕ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು.

ಜಗದಾಚಾರ್ಯ ಪಾದಕಿಂಕರನಾದ, ಮರಿಲಿಂಗಗೌಡಾ ಮುಲ್ಕೀ ಪಾಟೀಲ, ಚಳಗೇರಿ.

ನಮಃ ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯಃ.

ಶ್ರೀ ಜಗದಾಚಾರ್ಯ ಜಯಂತಿಮಹೋತ್ಸವ.

ಹೊಳಲಕೆರೆ.

ವನ್ನು ಸೇರಿದರು. ಈ ಕಾರ್ಯದಲ್ಲಿ ಮರಿಯಪ್ಪಾ ಕೋಳೇರಿ, ರಾ|| ಗಡಿಗೆಪ್ಪಾ ಬೀರನೂರು, ಹುಚ್ಚಯ್ಯ ಮಠಪತ್ತಿ ಇವರು ಯಾವತ್ತೂ ಕಾರ್ಯಗಳನ್ನು ಅತಿ ಭಕ್ತಿಯಿಂದ ಸಾಂಗಗೊಳಿಸಿದ್ದು ಇವರ ಭಕ್ತಿಯನ್ನು ಪ್ರಕಟಿಸುತ್ತದೆ.

ಆಚಾರ್ಯಪದಕಿಂಕರ,
ರೇವಣಸಿದ್ಧಯ್ಯ ಭಿಕ್ಷಾವರ್ತಿ, ಹಿರೇಮಠ,
ಹೊಳಲೂರು.

ದೊಡ್ಡಬಳ್ಳಾಪುರದ ತಾಲ್ಲೂಕು ಸಿದ್ದತಿಮ್ಮನಹಳ್ಳಿಯ ಚಪ್ಪಲಮ್ಮನ ಜಾತ್ರೆ.

ಮೇ ಮಾಹೆ 27-28 ರಲ್ಲಿ ವಿಧಾಪೂರ್ವಕವಾಗಿ ಮೇಲ್ಕಂಡ ಮಾರೀ ಜಾತ್ರೆಯನ್ನು ನಡೆಸುತ್ತಾರೆಂಬುದಾಗಿ ತಿಳಿದು ಆ ಕಾಲದಲ್ಲಿ ...

ಹೆಚ್. ಆರ್. ರಾಜಾರಾವ್,
ಎನ್. ವಡಂಗೌಡ,
ಎಂ. ಕೆಂಗಪ್ಪ.

ತಾ|| 28-5-30.

ಸವಾಡಿಸಿ ಕಲ್ಲನ್ನು ತಲೆಯ ಮೇಲೆ ಹೊಂಗಿಸಿ ಶಕ್ತಿಯಿಂದ ಆಳೆಯ ಹೊಕ್ಕಳಿಗೆ ಚುಚ್ಚಿ ಹಿಂದುಹಿಂದಕ್ಕೆ ನೂಕಿಕೊಂಡು ಹೋಗುತ್ತಾ ವೀರಬಾಟಿಯಿಂದ ಛಟಛಟನೆ ಬಾಸುಂಡೆಗಳು ಮೂಡುವಂತೆ ಪ್ರಹರಿಸುತ್ತಿದ್ದನು. ಆಳೆಯಾದರೋ ಈ ಹಿಂಸೆಯನ್ನು ಸಹಿಸಲಾರದೆ ಅಯ್ಯೋ! ಅವ್ವಾ !! ಎಂದು ಕಿರಿಚಿಕೊಳ್ಳುತ್ತಿತ್ತು. ಇಂಥ ವಿಚಿತ್ರವಾದ ಪೈಶಾಚಕೃತ್ಯಗಳನ್ನು ಕಣ್ಣಾರೆ ನೋಡುವ ದುಸ್ಥಿತಿಗೆ ಪರಿತಪಿಸುತ್ತಾ ಎನೂ ದಿಕ್ಕುತೋಚದೆ ದಯಾಪ್ರೇಮಿಗಳೆಲ್ಲರೂ ದಿಗ್ಭ್ರಮೆಯನ್ನು ಹೊಂದಿದರು. ನಮ್ಮ ಗ್ರಾಮಗಳು ಎಂದಿಗೆ ಉದ್ಧಾರವಾಗಬೇಕೋ ನಮ್ಮ ಘನವಾದ ಸರ್ಕಾರಕ್ಕೆ ಮತ್ತು ನಮ್ಮ ಪ್ರಜಾಪ್ರತಿನಿಧಿಗಳಿಗೆ ಎಂದಿಗೆ ದಯಾಂಕುರವಾಗುವುದೋ ಪರಮಾತ್ಮನೇ ಬಲ್ಲ. ಹಾಗೂ ಹೀಗೂ ಯಾವ ವಿಧವಾದ ಪ್ರತ್ಯಕ್ಷ ವಧಾಕಾರ್ಯವೂ ಆಗದೆ ಸಂತುಹೋಯಿತು. ಈ ಪುಣ್ಯಕಾರ್ಯಕ್ಕಾಗಿ ಜಾಡ್ರಿಯವರಿಗೆ ನೆರವಾಗಿ ಸಹಾಯಮಾಡಿದ—

ಹೆಚ್ಚಾಗಿ ಧಾರ್ಮಿಕದೃಷ್ಟಿಯನ್ನಿಟ್ಟು ರಾಜ್ಯವನ್ನು ಪರಿಪಾಲಿಸುತ್ತಿರುವದರಿಂದ ಎಲ್ಲ ಪ್ರಜೆಗಳ ಜನ್ಮಾಂತರ ಪುಣ್ಯಪುಂಜವೇ ಮೂರ್ತೀಭವಿಸಿದಂತಿರುವ ರಾಜರ್ಷಿಗಳೆನಿಸಿದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರು ಸಪುತ್ರಸಾನುಜರಾಗಿ ಚಿರಕಾಲ ವಿಜಯಾಭಯಾಯುರಾರೋಗ್ಯ ಕೀರ್ತಿಪ್ರತಿಷ್ಠಾದ್ಯಖಿಲಾಭೂತಪೂರ್ವಸಂಪತ್ತುಗಳಿಂದ ಜಗತ್ತಿನಲ್ಲಿ ಮೆರೆಯುತ್ತಿರಲೆಂದೂ ಈ ಪವಿತ್ರವಾದ ಯದುವಂಶವು ಭೂಮಿಯಲ್ಲಿ ಸೂರ್ಯಚಂದ್ರರಿರುವವರೆಗೂ ಅವಿಚ್ಛಿನ್ನವಾದ ಸಕಲ ಸಂಪತ್ತಿನಿಂದ ಮೆರೆಯಲೆಂದೂ ಮೈಸೂರು ರಾಜ್ಯವು ಇತೋಪ್ಯತಿಶಯವಾಗಿ ಪ್ರಜಾಭಿವೃದ್ಧಿಯಿಂದ ವಿಸ್ತೀರ್ಣವಾಗಲೆಂದೂ ಸಕಲ ಪ್ರಜೆ ...

ಯಂ. ಸಿ. ರುದ್ರಪ್ಪ, ಚಿಕ್ಕಮಗಳೂರು.

ನಮ್ಮನ್ನಾಳುವ ಶ್ರೀಮನ್ಮಹೀಶೂರ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರರವರ

ವರ್ಧಂತ್ಯುತ್ಸವಸಮಾರಂಭವು

ಚಿಕ್ಕಮಗಳೂರು.

ದುಂಡುಮೇಜಿನ ಪರಿಷತ್ತು.

ಮಿ|| ಸ್ಲೋಕೋಂಬರವರ ವಿಮರ್ಶೆ

ಮುಂಬಯಿ ಜೂನ್ 6.

ದೇಶದಿಯ ಗಿರಣಿ ಕೂಲಿಕಾರರ ಮುಷ್ಕರವು ಇನ್ನೂ ಮುಂದುವರಿಯುತ್ತಲೇ ಇರುವದು. ಕೂಲಿಯವರು ದೊಡ್ಡ ದೊಡ್ಡ ಗುಂಪುಗಳಾಗಿ ಬೀದಿಗಳಲ್ಲಿ ತಿರುಗುತ್ತಲೇ ಇರುವರು. ದಾಸ್ಕಾರದಲ್ಲಿ ಹದಿನೈದು ದಿವಸಗಳಿಂದ ಪ್ರತಿನಿತ್ಯವೂ ಹಿಂದೂ ಮುಸಲ್ಮಾನರಿಗೆ ಹೊಡೆದಾಟವಾಗಿ ಅನೇಕರು ಸಾಯುತ್ತಿರುವುದಲ್ಲದೆ ಗಾಯ ಹೊಂದುತ್ತಿರುವರು. ಇದರಿಂದ ಪಟ್ಟಣವೆಲ್ಲವೂ ಹಾಳುಬಿದ್ದಿರುವದು. ದರೋಡೆಖೋರರ ಹೆದರಿಕೆಯಿಂದ ವರ್ತಕರು ಅಂಗಡಿಗಳನ್ನು ಮುಚ್ಚಿ ಪ್ರತಿದಿನವೂ ಸಾವಿರಾರು ಜನರು ಊರನ್ನು ಬಿಟ್ಟು ಹೋಗುತ್ತಿರುವರು. ಸದ್ಯ ಅಲ್ಲಿ ಕ್ಷಾಮವು ತಲೆದೋರುತ್ತಿರುವದು.

ರಂಗೂನಿನಲ್ಲಿಯೂ ಕೂಲಿಯವರ ಗಲಭೆಯು ಮುಂದುವರಿದಿರುವದು.

[6 ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ

೧೯೩೦ ನೇ ಜೂನ್ ತಾ|| ೧೬ನೇ ಸೋಮವಾರ

ಕರ್ಮಫಲ.

ಮನುಷ್ಯನು ದುಷ್ಕರ್ಮಾಚರಣೆಯಿಂದ ಬಂಧವನ್ನು ಪಡೆದು ನಾನಾವಿಧ ಕಷ್ಟಗಳನ್ನನುಭವಿಸುವನೆಂದೂ ಸುಕರ್ಮಾಚರಣೆಯಿಂದ ಉತ್ತಮವಾದ ಜನ್ಮಗಳನ್ನು ಪಡೆದು ನಾನಾವಿಧ ಸುಖಗಳನ್ನನುಭವಿಸಿ ನಿತ್ಯಸುಖಿಯಾಗುವನೆಂದೂ ಹಿಂದೆ ಪ್ರಕಟಿಸಿದ್ದವಷ್ಟೆ! ಅಂದರೆ ಇದರಿಂದ ಸುಖಕ್ಕೂ ದುಃಖಕ್ಕೂ ಅವರವರ ಸುಕರ್ಮ ದುಷ್ಕರ್ಮಗಳೇ ಕಾರಣವೆಂದು ಸ್ಪಷ್ಟವಾಯಿತು. ನಾವು ಮಾಡುವ ಸುಕರ್ಮ ದುಷ್ಕರ್ಮಗಳು ಕ್ಷಣಿಕಗಳಾಗಿರುತ್ತವೆ. ನಾವು ಎಂದು ಕರ್ಮಗಳನ್ನು ಮಾಡುತ್ತೇವೆಯೋ ಅಂದೇ ಆ ಕರ್ಮಗಳು ನಷ್ಟಗಳಾಗಿಹೋಗುತ್ತವೆ. ಈಗ ಒಂದು ಯಜ್ಞಕರ್ಮವನ್ನು ಪ್ರಾರಂಭಿಸಿದರೆ ಅದೇ ದಿವಸವೋ ಅಥವಾ ಕೆಲವು ದಿವಸಗಳ ಮೇಲೆಯೋ ಆ ಕರ್ಮವು ನಷ್ಟವಾಗಿಹೋಗುವುದು. ಒಂದು ಹಿಂಸಾದಿ ನೀಚಕರ್ಮವನ್ನು ಪ್ರಾರಂಭಿಸಿದರೆ ಅದು ಆ ಹಿಂಸೆಯಾದೊಡನೆಯೇ ಸಮಾಪ್ತಿಯಾಗುತ್ತದೆ. ನಾವು ಮಾಡತಕ್ಕ ಪಾಪಕರ್ಮಗಳಾಗಲಿ, ಪುಣ್ಯಕರ್ಮಗಳಾಗಲಿ ಒಂದು ಕರ್ಮವೂ ತಮ್ಮ ತಮ್ಮ ಸುಫಲ ದುಷ್ಫಲಗಳನ್ನು ಕೊಡುವವರೆಗೂ ಇರುವುದಿಲ್ಲವು. ಈಗ ಒಂದು ಪುಣ್ಯಕರ್ಮವನ್ನು ಮಾಡಿದರೆ ಅದು ಮುಂದೆ ಎಷ್ಟೋ ದಿವಸಗಳ ಮೇಲೆ ತನ್ನ ಫಲವನ್ನು ಕೊಡುವುದು. ಒಂದು ಪಾಪಕರ್ಮವನ್ನು ಮಾಡಿದರೆ ಅದು ಮುಂದೆ ಎಷ್ಟೋ ದಿವಸಗಳ ಮೇಲೆ ತನ್ನ ದುಷ್ಫಲವನ್ನು ಕೊಡುವದು. ಹೀಗಿರುವುದರಿಂದ ಬಂಧಮೋಕ್ಷಗಳೆಂಬ ಫಲಗಳಿಗೆ ಆಯಾಯ ದುಷ್ಕರ್ಮ ಸುಕರ್ಮಗಳೇ ಕಾರಣಗಳೆಂದು ಹೇಳಲು ಪ್ರಪಂಚದಲ್ಲಿ ಸಾಮಾನ್ಯವಾಗಿ ವಿರೋಧವೇ ಕಂಡುಬರುತ್ತದೆ. ಏಕಂದರೆ ಕಾರಣವೆಂಬುವುದು ಕಾರ್ಯದ ಪೂರ್ವದಲ್ಲಿಯೇ ಇರಬೇಕೆಂಬ ನಿಯಮವಿರುತ್ತದೆ. ಕಾರಣವು ನಷ್ಟವಾದರೆ ಕಾರ್ಯವೂ ಸಹ ನಷ್ಟವಾಗಲೇ ಬೇಕು. ಹೊಗೆಯು ಎಲ್ಲಿರುವುದೋ ಅಲ್ಲಿಯೇ ಬೆಂಕಿಯು ಇದ್ದೇ ಇರುವಂತೆ, ದುಃಖರೂಪವಾದ ಬಂಧವನ್ನಾಗಲಿ, ಸುಖರೂಪವಾದ ಮುಕ್ತಿಯನ್ನಾಗಲಿ ಪಡೆಯಬೇಕಾದರೆ ಇವಕ್ಕೆ ಕಾರಣಗಳಾದ ಪುಣ್ಯಪಾಪಕರ್ಮಗಳು ಅವುಗಳ ಹಿಂದೆಯೇ ಇರಬೇಕಾಗುವುದು. ಬೀಜವೇ ಇಲ್ಲದ ಮೇಲೆ ವೃಕ್ಷವು ಎಲ್ಲಿಂದ ಬರಬೇಕು? ಲೋಕದಲ್ಲಿ ಕರ್ಮಗಳನ್ನು ಮಾಡಿ ಅನೇಕ ವರ್ಷ ಪರ್ಯಂತ ಎಲ್ಲರಂತೆ ತಾನೂ ಇದ್ದು ಎಲ್ಲರಂತೆ ತಾನೂ ದೇಹತ್ಯಾಗವನ್ನು ಮಾಡುತ್ತಾನೆ. ತಾನು ಹಿಂದೆ ಹಿಂದೆ ಮಾಡಿದ ಹಿಂಸಾದಿ ದುಷ್ಕರ್ಮಗಳಾಗಲಿ, ಭಗವದ್ಭಜನಾದಿ ಸುಕರ್ಮಗಳಾಗಲಿ ಒಂದೂ ಇವನ ಸಂಗಡ ಇರುವುದಿಲ್ಲವು. ಆ ಕರ್ಮಗಳೆಲ್ಲವೂ ಆಗಾಗಲೇ ನಷ್ಟಗಳಾಗಿಯೇ ಹೋಗಿರುತ್ತವೆ. ಇಂಥ ನಷ್ಟಗಳಾಗಿ ಹೋಗುವ ಸುಕರ್ಮ ದುಷ್ಕರ್ಮಗಳು ಆತ್ಮನ ಬಂಧಮೋಕ್ಷಗಳಿಗೆ ಹೇಗೆ ಕಾರಣಗಳಾದವು? ಎಂಬ ಆಕ್ಷೇಪವು ಅನೇಕರಲ್ಲಿ ಹುಟ್ಟುವುದು ಸ್ವಾಭಾವಿಕವೇ ಆಗಿದೆ. ಶಾಸ್ತ್ರಕಾರರು ಇಂಥ ಆಕ್ಷೇಪಗಳಿಗೆ ಅವಕಾಶವಿಲ್ಲದಂತೆ ನಾನಾವಿಧಗಳಾದ ಯುಕ್ತಿ ಪ್ರಮಾಣಗಳಿಂದ ಸಮರ್ಥನೆಯನ್ನು ಮಾಡಿರುತ್ತಾರೆ. "ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ" ಜೀವನು ಯಾವ ಪುಣ್ಯಪಾಪಕರ್ಮಗಳನ್ನಾಚರಿಸುವನೋ ಅಂಥ ಪುಣ್ಯಪಾಪಕರ್ಮಾನುಸಾರವಾದ ಹೀನೋತ್ತಮ ಫಲಗಳನ್ನು ಅನುಭವಿಸುತ್ತಾನೆಂದು ಶ್ರುತಿದೇವಿಯು ಕರ್ಮಾನುಗುಣವಾದ ಫಲವನ್ನು ಜೀವನಿಗೆ ವಿಧಿಸಿರುವುರುವುದರಿಂದ ಈ ಸ್ಥೂಲದೇಹಸಹಕೃತವಾದ ಜೀವಾತ್ಮರು ಮಾಡುವ ಸುಕರ್ಮ ದುಷ್ಕರ್ಮಗಳು ಆಗಲೇ ನಷ್ಟಗಳಾಗುತ್ತಿದ್ದರೂ ಆತ್ಮನಲ್ಲಿ ಆಯಾಯ ಕರ್ಮಗಳ ಸಂಸ್ಕಾರವೊಂದನ್ನು ಹುಟ್ಟಿಸಿ ತಾವು ನಷ್ಟವಾಗುತ್ತವೆ. ಆ ಕರ್ಮಗಳು ನಷ್ಟವಾದರೂ ಕರ್ಮವಾಸನೆಯು ಮಾತ್ರ ಆಯಾಯ ಆತ್ಮರಲ್ಲಿ ಸಂಬಂಧಿಸಿಯೇ ಇರುತ್ತದೆ. ಈ ವಾಸನೆಯನ್ನೇ ಶಾಸ್ತ್ರಕಾರರು ಅಪೂರ್ವ ಎಂದು ಕರೆಯುತ್ತಾರೆ. ಲೋಕದಲ್ಲಿ ಒಂದು ಭರಣಿಯಲ್ಲಿ ಕಸ್ತೂರಿಯನ್ನಿಟ್ಟು ಆಮೇಲೆ ಆ ಕಸ್ತೂರಿಯನ್ನು ತೆಗೆದುಹಾಕಿದರೂ ಸಹ ಕಸ್ತೂರಿಯ ವಾಸನೆಯು ಮಾತ್ರ ಆ ಭರಣಿಯಲ್ಲಿ ಬಹುಕಾಲದವರೆಗೆ ಇದ್ದೇ ಇರುವುದನ್ನು ನಾವು ನೋಡುತ್ತಲಿದ್ದೇವೆ. ಆಯಾಯ ಕರ್ಮಗಳೆಲ್ಲವೂ ನಷ್ಟವಾದರೂ ಆ ಕರ್ಮಗಳ ವಾಸನೆಯೂ ಮಾತ್ರ ಅನುರೂಪವಾದ ಆತ್ಮನಲ್ಲಿ ಸೇರಿಕೊಂಡು ಅದು ಫಲ ಕೊಡುವವರೆಗೂ ನಷ್ಟವಾಗದೆ ಬಟ್ಟೆಗೆ ಹತ್ತಿದ ಗಂಧದಂತೆ ಬಹುಕಾಲದವರೆಗೂ ಇದ್ದು, ಎಂದು ಆತ್ಮನಿಗೂ ದೇಹಕ್ಕೂ ವಿಯೋಗವಾಗುವುದೋ ಅಂದು ಮೇಣದ ಉಂಡೆಯೊಳಗೆ ಅಡಗಿರುವ ಸುವರ್ಣ ರೇಣುಗಳಂತೆ ಆ ಆತ್ಮರಲ್ಲಿ ಅಡಗಿರುವ ಆಯಾಯ ಸುಕರ್ಮ ದುಷ್ಕರ್ಮವಾಸನೆಯೆಂಬ ಅಪೂರ್ವವು ಲಘುವಾಗಿರುವ ಆಯಾಯ ಆತ್ಮರನ್ನು ಪುನಃ ದುಃಖರೂಪಬಂಧನದಲ್ಲಾಗಲಿ ಪರಮಾತ್ಮೈಕ್ಯವೆಂಬ ಸುಖರೂಪಮುಕ್ತಿಯಲ್ಲಾಗಲಿ ಸೇರಿಸುತ್ತದೆ. ಇದರಿಂದ ಬಂಧಮೋಕ್ಷಗಳಿಗೆ ಅವರವರು ಮಾಡಿದ ಸುಕರ್ಮ ದುಷ್ಕರ್ಮಗಳೇ ಕಾರಣವೆಂದು ಸಿದ್ಧವಾಗುತ್ತದೆ. ಆದರೆ ಆ ಕರ್ಮಗಳಿಗೂ ಬಂಧಮೋಕ್ಷಗಳೆಂಬ ಫಲಗಳಿಗೂ ಮಧ್ಯೆ ಅಪೂರ್ವವೆಂಬುವುದೊಂದು ಹುಟ್ಟುವುದರಿಂದ ಆ ಅಪೂರ್ವದ್ವಾರಾ ಕರ್ಮಗಳು ಕಾರಣಗಳಾಗುತ್ತವಲ್ಲದೆ ಸಾಕ್ಷಾತ್ತಾಗಿಯೇ ಕಾರಣಗಳಾಗುವುದಿಲ್ಲವು. ಜನ್ಮಾಂತರಗಳನ್ನೂ ದೇವರನ್ನೂ ಒಪ್ಪದಿದ್ದ ಪ್ರತ್ಯಕ್ಷಪ್ರಮಾಣವಾದಿಗಳಾದ ಚಾರ್ವಾಕಾದಿ ನಾಸ್ತಿಕಮತೀಯರು ಮಾತ್ರ ಯಾರಿಗೆ ಯಾವ ಹಿಂಸೆಯಾದರೂ ಸರಿಯೇ ಸುಖವಾದರೂ ಸರಿಯೇ ತನ್ನ ದೇಹವಿರುವವರೆಗೆ ಸುಖವಾಗಿದ್ದರೆ ಅದನ್ನೇ ಸ್ವರ್ಗಸುಖವೆಂದೂ ದುಃಖವಾಗಿದ್ದರೆ ಅದನ್ನೇ ನರಕದುಃಖವೆಂದೂ ಭಾವಿಸುತ್ತಾರೆ. ಅಂಥವರಿಗೆ ಪುಣ್ಯಪಾಪಗಳೆಂಬ ವಿಭಾಗವೇ ಇರುವುದಿಲ್ಲವು. ದೇವರುಂಟು ಗುರುಗಳುಂಟು ಪರಲೋಕವುಂಟು ಬಂಧಮೋಕ್ಷಗಳುಂಟೆಂದು ಒಪ್ಪುವ ವೇದಮತಾವಲಂಬಿಗಳಾದವರು ಮಾತ್ರ "ರಮಣೀಯಚರಣಾಃ ರಮಣೀಯಾಂ ಯೋನಿಮಾಪದ್ಯಂತೆ" ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹೇಳಿದ ಜನ್ಮಾಂತರಗಳನ್ನು ಒಪ್ಪಿಯೇ ಒಪ್ಪುವುದರಿಂದ ಬಂಧಮೋಕ್ಷಗಳಿಗೂ ಸುಕರ್ಮದುಷ್ಕರ್ಮಗಳಿಗೂ ಅಪೂರ್ವದ್ವಾರಾ ಕಾರ್ಯಕಾರಣಭಾವವನ್ನು ಅಂಗೀಕರಿಸಿಯೇ ತೀರಬೇಕು. ಮತ್ತು "ಅತ್ಯುತ್ಕಟೈಃ ಪುಣ್ಯಪಾಪೈರಿಹೈವ ಫಲಮಶ್ನುತೆ" ಎಂಬ ವಾಕ್ಯಾನುಸಾರವಾಗಿ ಬಹಳ ಉತ್ಕಟವಾದ ಪುಣ್ಯಪಾಪಗಳನ್ನು ಮಾಡಿದರೆ ಅವುಗಳ ಫಲವನ್ನು ಈ ದೇಹವಿರುವಾಗಲೇ ಅನುಭವಿಸುವುದಲ್ಲದೆ ಮುಂದಣ ಜನ್ಮಗಳಲ್ಲಿಯೂ ಅನುಭವಿಸಬೇಕಾಗುವುದು. ಆದರೆ ಈ ಕ್ರಮವು ನಿಯತವಲ್ಲವು. ಆತ್ಮಸಹಕೃತವಾದ ಒಂದು ದೇಹವು ಹಳೆಬಟ್ಟೆಯು ಹರಿದುಹೋದಹಾಗೆಲ್ಲಾ ಮುಂದುಮುಂದೆ ಹೊಸ ಬಟ್ಟೆಗಳನ್ನು ಧರಿಸುವಂತೆ ಒಬ್ಬ ಆತ್ಮನು ತಾನುಮಾಡಿದ ಸುಕೃತ ದುಷ್ಕೃತಗಳಿಗನುಸಾರವಾಗಿ ಮುಂದೆಮುಂದೆ ಅನೇಕ ಜನ್ಮಗಳನ್ನು ಧರಿಸುತ್ತ ಹೋಗುವನು. ಅಂತಹ ಐಹಿಕಫಲಾಪೇಕ್ಷೆಯಿಲ್ಲದೆ ಶಿವಪ್ರೀತಿಗಾಗಿ ಶಿವಯಜನ ಶಿವಭಜನಾದಿ ಸುಕರ್ಮಗಳನ್ನಾಚರಿಸುತ್ತಲಿದ್ದರೆ ಅಂಥ ಕರ್ಮಾಚರಣೆಗಳಿಂದ ಆತ್ಮನು ಪುನಃ ದೇಹಧಾರಣಮಾಡದೆ ದುಂಬಿಯು ಅವಿಚ್ಛಿನ್ನವಾದ ಭ್ರಮರಚಿಂತನದಿಂದ ತನ್ನ ಪೂರ್ವರೂಪವನ್ನು ತ್ಯಾಗಮಾಡಿ ಭ್ರಮರಾಕಾರವನ್ನು ಹೊಂದಿ ಭ್ರಮರನಿಷ್ಠ ಸೌಖ್ಯವನ್ನನುಭವಿಸುವಂತೆ ಜೀವರಲ್ಲಿದ್ದ ಅಲ್ಪಾಂಶಗಳಾದ ಕಿಂಚಿಜ್ಞತ್ವಾದಿಗಳೆಲ್ಲವೂ ನಷ್ಟವಾಗಿ ಸರ್ವಜ್ಞತ್ವಾದಿ ಅನಂತಕಲ್ಯಾಣಗುಣವಿಶಿಷ್ಟನಾದ ಪರಮಾತ್ಮಸ್ವರೂಪನೇ ತಾನಾಗಿ ನಿತ್ಯಸುಖಿಯಾಗುವನು. ಹಾಗೆ ಕರ್ಮಗಳಿಗೂ ಬಂಧಮುಕ್ತಿಗಳಿಗೂ ಅಪೂರ್ವದ್ವಾರಾ ಕಾರ್ಯಕಾರಣಗಳನ್ನು ಭಾರತೀಯ ರೀತಿಯಾಗಿ ಅಂಗೀಕಾರ ಮಾಡದಿದ್ದಲ್ಲಿ "[illegible] ಜ್ಯೋತಿಷ್ಟೋಮೇನಸ್ವರ್ಗಕಾಮೋಯಜೇತ" ಎಂಬ ವಾಕ್ಯದಂತೆ ಒಬ್ಬನು ಸ್ವರ್ಗಸಾಧನವಾದ ಜ್ಯೋತಿಷ್ಟೋಮಯಾಗವನ್ನು ಮಾಡಿದಮೇಲೆ ಎಷ್ಟೋ ವರ್ಷಗಳವರೆಗೆ ಬದುಕಿಯೇ ಇದ್ದು ದೇಹಾತ್ಮವಿಯೋಗಾನಂತರ ಆ ಆತ್ಮನಿಗೆ ಸ್ವರ್ಗಸಿದ್ಧಿಯು ಆಗದೆ ಹೋಗಬೇಕಾಗುವುದು. ಆಗ ನಲ ನಹುಷಾದಿ ಚಕ್ರವರ್ತಿಗಳು ಯಜ್ಞಯಾಗಾದಿಗಳನ್ನು ಮಾಡಿ ಸ್ವರ್ಗಸಿದ್ಧಿಯನ್ನು ಪಡೆದರೆಂದೂ ಅನೇಕರು ದುಷ್ಕರ್ಮಾಚರಣೆಗಳನ್ನು ಮಾಡಿ, ನರಕದುಃಖಗಳನ್ನು ಅನುಭವಿಸಿದರೆಂದೂ ಪ್ರಸಿದ್ಧಗಳಾದ ಇತಿಹಾಸಗಳಿಗೆಲ್ಲಾ ವಿರೋಧವುಂಟಾಗುವುದಲ್ಲದೆ, ದೈವ ಗುರುಗಳಲ್ಲಿ ಭೀತಿಯೇ ತಪ್ಪುವುದರಲ್ಲಿ ಸಂದೇಹವಿಲ್ಲವು. ಆದ್ದರಿಂದ "ರಮಣೀಯಚರಣಾಃ ರಮಣೀಯಾಂ ಯೋನಿಮಾಪದ್ಯಂತೇ ಕಪಾಯಚರಣಾಃ ಕಪಾಯಾಂಯೋನಿಂ" ಇತ್ಯಾದ್ಯನಂತ ಶ್ರುತಿಗಳ ಪ್ರಮಾಣದಿಂದಲೂ, ಪ್ರತ್ಯಕ್ಷಾನುಭವಾದಿಗಳಿಂದಲೂ, ಬಂಧಮೋಕ್ಷಗಳಿಗೆ ಅವರವರು ಮಾಡಿದ ಸುಕರ್ಮ ದುಷ್ಕರ್ಮಗಳೇ ಕಾರಣವು. ಈಶ್ವರನು ಕಾರಣನಲ್ಲನೆಂದು ತಿಳಿದು ಪ್ರತಿಯೊಬ್ಬ ಆಸ್ತಿಕಪಂಥಾನುಯಾಯಿಯೂ ಬಂಧಹೇತುವಾದ ಪಾಪಕರ್ಮಗಳಲ್ಲಿ ಮನಸ್ಸನ್ನಿಡದೆ ಮುಕ್ತಿಹೇತುವಾದ ದೈವಗುರುಯಜನ ಭಜನಾದಿ ಸುಕರ್ಮಗಳನ್ನಾಚರಿಸಿ ಸಂಸಾರವೆಂಬ ಚಕ್ರವನ್ನು ತಪ್ಪಿಸಿಕೊಂಡು ದೇವರ ಅನುಗ್ರಹಕ್ಕೆ ಪಾತ್ರನಾಗಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ಕಳೆದ 13ನೆಯ ತಾರೀಖು ಶುಕ್ರವಾರ ರಾಜಧಾನಿಯ ಜಗನ್ಮೋಹನಬಂಗಲೆಯಲ್ಲಿ ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಯಿತು.

ಈಸಾರೆ ನಡೆದ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರವರ ಚುನಾವಣೆಯಲ್ಲಿ ರಾಜಧಾನಿಯ ಅಡ್ವೊಕೇಟರಾದ ಶ್ರೀ|| ಬಿ. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ರವರು ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು.

ಭರತಖಂಡದ ಚಕ್ರವರ್ತಿ ಸಾರ್ವಭೌಮರವರ ವರ್ಷ ವರ್ಧಂತಿಯ ಸಮಯದಲ್ಲಿ ಡಾ|| ಆರ್. ಶಾಮಶಾಸ್ತ್ರಿಗಳವರಿಗೆ "ಮಹಾಮಹೋಪಾಧ್ಯಾಯ" ಎಂಬ ಬಿರುದೂ, ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರೊಫೆಸರಾದ ಮಿ|| ಬಿ. ವೆಂಕಟೇಶಾಚಾರ್ಯರಿಗೆ "ರಾವ್ ಬಹದ್ದೂರ್" ಎಂಬ ಬಿರುದೂ ದಯಪಾಲಿಸಲ್ಪಟ್ಟಿರುವವೆಂಬುದನ್ನು ತಿಳುಹಿಸಲು ಸಂತೋಷಿಸುತ್ತೇವೆ.

ರಾಜಧಾನಿಗೆ ಎರಡು ಆಕಾಶವಿಮಾನಗಳು ಬಂದು ನಿನ್ನೆ ಭಾನುವಾರದಿಂದ ನಗರದ ಮೇಲೆ ಹಾರಾಡುತ್ತಿರುವವು. ಅದರಲ್ಲಿ ಕುಳಿತು ಸಂಚರಿಸಲಿಚ್ಛಿಸುವವರು ಹತ್ತು ರೂಪಾಯಿಗಳನ್ನೂ 12 ವರ್ಷಕ್ಕಿಂತಲೂ ಚಿಕ್ಕವಯಸ್ಸಿನವರು 5 ರೂಪಾಯಿಗಳನ್ನೂ ಕೊಡಬೇಕು. ಅನೇಕ ಜನರು ಕುಳಿತುಕೊಂಡು ಸಂಚರಿಸುತ್ತಿರುವರು. ಈ ವಿಮಾನಗಳು ರಾಜಧಾನಿಯಲ್ಲಿ 1 ವಾರದವರೆಗೆ ಮಾತ್ರ ನಿಲ್ಲುವವು.

ಈ ಸಾರೆ ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕಸಭೆಗೆ ಮ|| ರಾ|| ಪಾಮಡಿ ಸುಬ್ಬರಾಮಶೆಟ್ಟರು, ಮ|| ರಾ|| ಬಾಗಮನೆ ಬ್ಯಾಟೇಗೌಡರು, ಮ|| ರಾ|| ಸಿ. ವಿ. ರಾಜಗೋಪಾಲ್‌ರವರು, ಮ||ರಾ|| ಬಿ. ಎಲ್. ಬೈಯಣ್ಣನವರು, ಮ|| ರಾ|| ಕೆ. ಚಂಗಲರಾಯರೆಡ್ಡಿಯವರು, ಮ|| ರಾ|| ಬೇಲೂರು ಶ್ರೀನಿವಾಸಯ್ಯಂಗಾರ್ರವರು, ಮ|| ರಾ|| ಜಿ. ಚೆನ್ನಪ್ಪನವರು ಮತ್ತು ಮ|| ರಾ|| ಎಚ್. ಚೆನ್ನಪ್ಪನವರು ಮೆಂಬರರಾಗಿ ಚುನಾಯಿಸಲ್ಪಟ್ಟರು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಅಹಮದಾಬಾದಿನಿಂದ ಮಹಾತ್ಮಾ ಗಾಂಧಿಯವರೊಡನೆ ಹೊರಟಿದ್ದ ಸ್ವಯಂಸೇವಕರಲ್ಲೊಬ್ಬರಾದ ಮಿ|| ಪಿ. ಕೃಷ್ಣನ್‌ನಾಯರ್‌ರವರು ಕಳೆದ 12 ನೆಯ ತಾರೀಖಿನ ದಿನ ದಸ್ತಗಿರಿ ಮಾಡಲ್ಪಟ್ಟಿರುವರು.

ಪರದೇಶೀವಸ್ತ್ರಬಹಿಷ್ಕಾರ ಕಾರ್ಯವು ಎಲ್ಲೆಲ್ಲೂ ಅತ್ಯಂತ ಜೋರಿನಿಂದ ಸಾಗಿರುವದು. ಕಳೆದ 12 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಪ್ರಾರಂಭವಾಗಬೇಕಾಗಿದ್ದ ಮದ್ಯಪಾನನಿಷೇಧ ಕಾರ್ಯವು ಮೊಹರಂ ಹಬ್ಬದ ದೆಸೆಯಿಂದ ಬುಧವಾರ ಪ್ರಾರಂಭಿಸಲ್ಪಟ್ಟಿತು.

250 ಜನ ಸ್ವಯಂಸೇವಕರು ಸುಮಾರು 120 ಮದ್ಯದ ಅಂಗಡಿಗಳ ಮುಂದೆ (ಒಂದೊಂದು ಅಂಗಡಿಯ ಮುಂದೆ ಇಬ್ಬರಂತೆ) ನಿಂತು ಬಂದವರಿಗೆ ಬಹಿಷ್ಕಾರ ವಿಷಯವಾಗಿ ಉಪದೇಶ ಮಾಡುತ್ತಿದ್ದರು. ಸುಮಾರು 2 ಘಂಟೆಗಳವರೆಗೆ ಯಾವ ಅಂಗಡಿಗಳಲ್ಲಿಯೂ ವ್ಯಾಪಾರವಾಗಲಿಲ್ಲ, ಹಾಗೂ ಇಬ್ಬರು ಕೂಲಿಕಾರರು ಒಳಗೆ ಹೋಗಲೆಳಿಸಲು ಸ್ವಯಂಸೇವಕರು ಅಂಗಡಿಗಳ ಬಾಗಲಲ್ಲಿ ಕುಳಿತುಬಿಟ್ಟರು. ಅನಂತರ ಮದ್ಯಪಾಯಿಗಳು ಹಿಂತಿರುಗಿದರು. ಪೋಲೀಸರು ತಟಸ್ಥರಾಗಿದ್ದರು.

ಕಳೆದ 14 ನೆಯ ತಾರೀಖಿನ ದಿವಸ ಲಾಹೋರಿನಲ್ಲಿ ಮದ್ಯಪಾನ ನಿಷೇಧ ಚಳವಳಿಯ ಸಮಯದಲ್ಲಿ ಒಂದು ವಿಚಿತ್ರ ವಿಷಯವು ನೆರವೇರಿತು. ಒಬ್ಬ ಸಿಕ್ ತರುಣನು ಮದ್ಯ ಕೊಂಡುಕೊಳ್ಳುವದಕ್ಕಾಗಿ ಮೋಟಾರಿನಲ್ಲಿ ಬಂದನು. ಬಾಗಿಲಲ್ಲಿ ಕೈಕಟ್ಟಿಕೊಂಡು ನಿಂತಿದ್ದ ಸ್ವಯಂಸೇವಕರು ಮದ್ಯಪಾನಮಾಡದಿರುವಂತೆ ಪುನಃ ಪುನಃ ಪ್ರಾರ್ಥಿಸಿದರು. ಆದರೂ ಆತನು ಕೇಳದೆ ಬಲಾತ್ಕಾರವಾಗಿ ಒಳಗೆ ಹೋಗಿ ಎರಡು ಬಾಟ್ಲಿ ದೇಶೀಯ ಮದ್ಯವನ್ನು ತೆಗೆದುಕೊಂಡು ಬಂದನು. ಮೋಟಾರಿನಲ್ಲಿ ಕುಳಿತುಕೊಂಡು ಹೊರಡುವಷ್ಟರಲ್ಲಿ ಸ್ವಯಂಸೇವಕರು ಅವನ ಮೋಟಾರಿನ ಮುಂಭಾಗದಲ್ಲಿ ಅಡ್ಡಡ್ಡಲಾಗಿ ಮಲಗಿಬಿಟ್ಟರು. ಪೋಲೀಸರು ಆ ಇಬ್ಬರೂ ಸತ್ಯಾಗ್ರಹಿಗಳನ್ನು ದಸ್ತಗಿರಿಮಾಡಲು ಮತ್ತಿಬ್ಬರು ಸತ್ಯಾಗ್ರಹಿಗಳು ಮುಂದೆ ಬಂದು ಮಲಗಿದರು. ಪೋಲೀಸರು ಅವರನ್ನೂ ದಸ್ತಗಿರಿಮಾಡಿದರು. ಇದನ್ನೆಲ್ಲಾ ನೋಡಿ ಸಿಕ್‌ತರುಣನು ಕೋಪದಿಂದ ಹಿಂತಿರುಗಿ ಅಂಗಡಿಗೆ ಹೋಗಿ ಮದ್ಯವನ್ನು ವಾಪಸ್‌ಕೊಟ್ಟನು. ಅಂಗಡಿಯವನು ಅದನ್ನು ವಾಪಸು ತೆಗೆದುಕೊಳ್ಳದೆ ಹೋಗಲು ಸಿಕ್ ತರುಣನು ಕೋಪದಿಂದ ಕೈಯಲ್ಲಿದ್ದ ಬಾಟ್ಲಿಯನ್ನು ನೆಲದ ಮೇಲೆ ಎಸೆದು ಒಡೆದುಹಾಕಿದುದಲ್ಲದೆ, ಮದ್ಯವನ್ನು ಕೊಂಡುಕೊಂಡುದಕ್ಕಾಗಿ ತನಗೆ ಪಶ್ಚಾತ್ತಾಪವಾಗಿರುವದೆಂದು ಸ್ವಯಂಸೇವಕರಿಗೆ ಹೇಳಿದನು. ಅನಂತರ ಸಬ್‌ಇನ್ಸ್‌ಪೆಕ್ಟರ್‌ರವರು ಆ ಸಿಕ್‌ತರುಣನನ್ನೂ ಅವನ ಮೋಟಾರ್ ಡ್ರೈವರನನ್ನೂ ದಸ್ತಗಿರಿಮಾಡಿದರು. ಬಹಿಷ್ಕಾರಚಳವಳಿಯು ಮರುದಿನ ಎಂದಿನಂತೆ ಪ್ರಾರಂಭಿಸಲ್ಪಟ್ಟಿತು.

ದಾಸ್ಕಾರ್ದಲ್ಲಿ ಭಯಂಕರ ನೋಟ.

(8 ನೆಯ ತಾರೀಖಿನ "ಸಂಡೇ ಟೈಂಸ್" ಪತ್ರಿಕೆಯಿಂದ)

ಜೂನ್ 1 ನೆಯ ತಾರೀಖಿನ ದಿವಸ ದಾಸ್ಕಾರ್‌ದಲ್ಲಿ ನಡೆದ ವಿದ್ಯಮಾನಗಳ ವಿಷಯವಾಗಿ "ಯಂಗ್ ಇಂಡಿಯಾ" ಪತ್ರಿಕೆಯು ಈ ರೀತಿಯಾಗಿ ಪ್ರಕಟಮಾಡಿರುವದು—

ಈ ದಿವಸ ಪ್ರಾತಃಕಾಲ ಖೇಡಾ, ಅಹಮದಾಬಾದ, ಬ್ರೋಚ್ ಮತ್ತು ವೀರಂಗಂ ಮೊದಲಾದ ಪ್ರದೇಶಗಳಿಂದ ಬಂದು ಸೇರಿದ್ದ 162 ಜನ ಸ್ವಯಂಸೇವಕರು ಉಪ್ಪಿನಕೋಠಿಗಳ ಮೇಲೆ ದಾಳಿಯಿಡಲು ಪ್ರಯತ್ನಿಸಿದರು. ಅವರಲ್ಲಿ ಕೆಲವರು ಉಂಟಾಡಿಯ ಸಮೀಪದಲ್ಲಿರುವ ಕೋಠಿಗೂ, ಬ್ರೋಚಿನಿಂದ ಬಂದಿದ್ದ ಇತರರು ಶಿಬಿರಕ್ಕೆ ಒಂದು ಮೈಲು ದೂರದಲ್ಲಿದ್ದ ಮತ್ತೊಂದು ಕೋಠಿಗೂ ಹೊರಟರು.

ಸ್ವಯಂಸೇವಕರು ಕೋಠಿಗಳ ಸಮೀಪಕ್ಕೆ ಹೋದಕೂಡಲೆ, ಪೋಲೀಸರು ಸಾಲಾಗಿ ನಿಂತು ಉರಿಯುತ್ತಿದ್ದ ಬಿಸಲಿನಲ್ಲಿ ಎಲ್ಲರನ್ನೂ ಸುಮಾರು 45 ನಿಮಿಷಗಳ ವರೆಗೆ ತಡೆದರು. ಮಿ|| ಇಸ್ಮಾಯಿಲ್ ದೇಸಾಯಿಯವರು ಮೊದಲನೆಯ ದೊಣ್ಣೆಯ ಏಟನ್ನು ಪ್ರಯೋಗಿಸಿದರು. ಅನಂತರ ಪೋಲೀಸರು ನುಗ್ಗಿದರು. ಮಧ್ಯಾಹ್ನ ಸುಮಾರು 12 ಘಂಟೆಯ ವೇಳೆಗೆ ಹೆಚ್ಚು ಕಡಿಮೆ ಎಲ್ಲ ಸ್ವಯಂಸೇವಕರೂ ಗಾಯಹೊಂದಿದ್ದರು.

ದೊಣ್ಣೆಯ ಪ್ರಯೋಗವಾದ ಮೇಲೆ ಬಿದ್ದವರನ್ನು ಕೈಕಾಲುಗಳನ್ನು ಹಿಡಿದು ದರದರನೆ ಎಳೆದುಕೊಂಡು ಹೋಗುವದು ಸರ್ವಸಾಮಾನ್ಯವಾದ ವಿಷಯವಾಗಿರುವದು. ಸ್ವಯಂಸೇವಕರು ದಯಾದಾಕ್ಷಿಣ್ಯವಿಲ್ಲದೆಯೂ, ಅತ್ಯಂತ ಕ್ರೂರವಾಗಿಯೂ ಬಡಿಯಲ್ಪಟ್ಟರು. ಗಾಯಪಟ್ಟವರು ಉಂಟಾಡಿ ಶಿಬಿರದ ಮತ್ತು ಬುಲ್ಸಾರ ಆಸ್ಪತ್ರೆಗಳಿಗೆ ಒಯ್ಯಲ್ಪಟ್ಟರು. ಒಟ್ಟಿನಲ್ಲಿ 115 ಜನರಿಗೆ ಗಾಯಗಳಾಗಿರುವವು. ಅವರಲ್ಲಿ 25 ಜನರಿಗೆ ವಿಶೇಷ ಗಾಯಗಳಾಗಿರುವವು. 15 ಜನರಿಗೆ ಪ್ರಜ್ಞೆ ತಪ್ಪಿದ್ದಿತು. ಒಬ್ಬ ಸತ್ಯಾಗ್ರಹಿಯು ರಕ್ತವನ್ನು ಕಾರುತ್ತಿದ್ದನು. ಇಬ್ಬರಿಗೆ ವಾಯುರೋಗವು ಬರುತ್ತಿತ್ತು.

ಒಬ್ಬ ಸಾರ್ಜಂಟನು ಒಬ್ಬ ಸ್ವಯಂಸೇವಕನ ಬಟ್ಟೆಗಳನ್ನೆಲ್ಲಾ ಬಿಚ್ಚಿ ಅವನ ಆಸನಕ್ಕೆ ದೊಣ್ಣೆಯನ್ನು ನುಗ್ಗಿಸಿದನು. ಸ್ವಯಂಸೇವಕನು ಅದನ್ನು ತೆಗೆದುಹಾಕುವ ಪ್ರಯತ್ನ ಮಾಡಲು, ಪಿಶಾಚರೂಪನಾದ ಆ ಸಾರ್ಜಂಟನು ಆ ರಾಕ್ಷಸೀಕೃತ್ಯವನ್ನು ಮತ್ತಷ್ಟು ಮುಂದುವರಿಸಿದನು. ಅನೇಕ ಸ್ವಯಂಸೇವಕರು ಇದೇ ರೀತಿ ಹಿಂಸಿಸಲ್ಪಟ್ಟು ಅಪಾಯ ಪ್ರದೇಶಗಳಲ್ಲಿ ಹೊಂದಿದ ಗಾಯಗಳಿಂದ ನರಳುತ್ತಿರುವರು. ಒಬ್ಬನ ರಹಸ್ಯಾಂಗವು ಊದಿ, ಅನೇಕ ಘಂಟೆಗಳ ವರೆಗೆ ಪ್ರಜ್ಞೆ ತಪ್ಪಿ ಬಿದ್ದಿದ್ದನು. ಅಧಿಕಾರಿಗಳು ಇಷ್ಟಕ್ಕೆ ಸುಮ್ಮನಾಗದೆ, ಭಾವನಗರದ "ಅನಿರುದ್ಧ" ನೆಂಬ ಒಬ್ಬ ತರುಣ ಸ್ವಯಂಸೇವಕನ ಶರೀರಕ್ಕೆ "ಬಾಬೂಲ್" ಮುಳ್ಳುಗಳನ್ನು ಚುಚ್ಚಿದರು. ಶಿಬಿರದ ಆಸ್ಪತ್ರೆಯ ಡಾಕ್ಟರುಗಳು ಆ ಮುಳ್ಳುಗಳನ್ನು ತೆಗೆದುಹಾಕಿದರು. ಮುಳ್ಳುಗಳನ್ನು ತೆಗೆದಮೇಲೆ ಗಾಯಗಳಿಂದ ರಕ್ತವು ಉಕ್ಕಿ ಉಕ್ಕಿ ಬರುತ್ತಿತ್ತು. ಮತ್ತು ಅವನು ಸ್ಮೃತಿತಪ್ಪಿದ್ದನು. ವಿಶೇಷ ಗಾಯಹೊಂದಿ ಬಿದ್ದಿದ್ದ ಇಬ್ಬರು ಸ್ವಯಂಸೇವಕರು ಸಾಯಂಕಾಲದ ಮೇಲೆ ಮುಳ್ಳಿನ ಬೇಲಿಗಳ ಹತ್ತಿರ ಬಿದ್ದಿದ್ದರು. ಅವರಲ್ಲಿ ಒಬ್ಬನಿಗೆ ಸುಮಾರು 40 ದೊಣ್ಣೆಯ ಏಟುಗಳು ಬಿದ್ದಿದ್ದುವು. ದಯಾಶೂನ್ಯರಾಗಿ ಅವರನ್ನು ದರದರನೆ ಎಳೆದು ತಂದಿದ್ದರೂ ಅವರು ಬೇರೆ ಹಿಮ್ಮೆಟ್ಟಿರಲಿಲ್ಲ. ಈ ಮನೋನಿಶ್ಚಯವು ಸಾರ್ಜಂಟನ ಕೋಪವನ್ನು ಹೆಚ್ಚಿಸಿತು. ಆಗ ಸಾರ್ಜೆಂಟನ ಅಪ್ಪಣೆಯ ಮೇರೆಗೆ ಪೋಲೀಸರು ಉಪ್ಪುಮಣ್ಣನ್ನು ಬಚ್ಚಲಿನ ನೀರಿನಲ್ಲಿ ಕದರಿ ಅದನ್ನು ಅವರ ತಲೆಗಳ ಮೇಲೆ ಸುರಿದರು. ಆಮೇಲೆ ಜ್ಞಾನ ತಪ್ಪಿ ಬಿದ್ದಿದ್ದ ಸ್ವಯಂಸೇವಕರನ್ನು ಅಧಿಕಾರಿಗಳು ಸರಕಾರಿ ಆಸ್ಪತ್ರೆಗೆ ಎತ್ತಿಕೊಂಡು ಹೋದರು. ಅವರಿಗೆ ಪುನಃ ಜ್ಞಾನೋದಯವಾಗಲು 3 ಘಂಟೆಗಳು ಕಳೆದುವು. ಎಚ್ಚರವಾದಮೇಲೆ ಮನೆಗೆ ಹೋಗುವಿರೋ? ಎಂದು ಕೇಳಲು, ಸ್ವಯಂಸೇವಕರು ಅದಕ್ಕೆ ಒಪ್ಪದಿರಲು ಪೋಲೀಸರು ಪುನಃ 10-15 ದೊಣ್ಣೆಯ ಏಟುಗಳನ್ನು ಕೊಟ್ಟು ದರದರನೆ ಎಳೆದುತಂದು, ಬೇಲಿಯ ಸಮೀಪದಲ್ಲಿ ಬಿಸಾಡಿ ಹೋದರು. ಸಾಯಂಕಾಲ 6 ಘಂಟೆಯ ಸಮಯದಲ್ಲಿ ಅವರನ್ನು ಶಿಬಿರಕ್ಕೆ ಕರೆದುಕೊಂಡು ಹೋದರು.

ವೀರಂಗಂದಲ್ಲಿ ಪ್ರಸಿದ್ಧಿ ಹೊಂದಿದ ಮಿ|| ನೀಲ್‌ರವರಂತೆ ಇಲ್ಲಿಯ ಅಧಿಕಾರಿಗಳ ವರ್ತನಗಳೂ ಭೀಕರವಾಗಿರುವವು. ಮಿ|| ನೀಲ್‌ರವರ ಪೌರುಷವೇ ಇಲ್ಲಿಯೂ ವ್ಯಕ್ತಪಡಿಸಲ್ಪಟ್ಟಿರುವದು. ಗಾಯಹೊಂದಿದವರಲ್ಲಿ ಕೆಲವರ ಹೇಳಿಕೆಗಳನ್ನು ಈ ಕೆಳಗೆ ಕೊಟ್ಟಿರುತ್ತೇವೆ.

1. ಆಲಂಷಾ ಮತ್ತು ನೇರೆ ಕೆಲವು ಬಿಳೀ ಅಧಿಕಾರಿಗಳು ಭಾರವಾದ ಬೂಟ್ಸುಗಳನ್ನು ಹಾಕಿಕೊಂಡು ಒಬ್ಬ ಸ್ವಯಂಸೇವಕನ ಎದೆಯನ್ನು ಮನಃಪೂರ್ತಿಯಾಗಿ ಮೆಟ್ಟಿದರು. ಈ ರಣನರ್ತನದಿಂದ ಆ ಸ್ವಯಂಸೇವಕನಿಗೆ ಉಸಿರಾಡುವದು ಸಹ ಕಷ್ಟವಾಗಿ ಹೋಗಿತ್ತು.

2. ಇನ್ನೊಬ್ಬನ ಬಟ್ಟೆಗಳನ್ನೆಲ್ಲಾ ಬಿಚ್ಚಿ ಆಲಂಷಾನು ಅಪಾಯಪ್ರದೇಶಕ್ಕೆ 3 ಸಾರೆ ಒದ್ದನು. ಎದೆ, ಮೊಣಕೈ ಮತ್ತು ಬೆನ್ನಿನ ಮೇಲೆ ಅನೇಕ ದೊಣ್ಣೆಯ ಏಟುಗಳು ಬಿದ್ದಿರುವವು.

3. ಮೇ 21 ನೆಯ ತಾರೀಖಿನ ದಾಳಿಯಲ್ಲಿ ಭಾಗವಹಿಸಿದ್ದ ಸ್ವಯಂಸೇವಕನೊಬ್ಬನು ರಣಾಂಗಣವನ್ನು ಈದಿನ ಪುನಃ ಪ್ರವೇಶಿಸಿದನು. ಅಧಿಕಾರಿಯೊಬ್ಬನಿಗೆ ಇದರಿಂದ ಮಿತಿಮೀರಿದ ಕೋಪವುಂಟಾಗಿ "ಈ ಸಾರೆ ನಿನ್ನ ಮೂಗನ್ನೇ ಚಚ್ಚಿಬಿಡುವೆನು" ಎಂದು ಹೇಳಿ ಮೂಗಿನಮೇಲೆ ಬಲವಾಗಿ ಹೊಡೆದನು. ತತ್‌ಕ್ಷಣವೇ ಮೂಗಿನಿಂದ ರಕ್ತವು ಸೋರಿತು. ಅನಂತರ ಕತ್ತಿನ ಮೇಲೆ ಒಂದು ಏಟುಬೀಳಲು ಸ್ವಯಂಸೇವಕನು ನೆಲಕ್ಕೆ ಉರುಳಿದನು. ಅನಂತರ ನಾಲ್ಕು ಜನ ಪೋಲೀಸರು ಅವನನ್ನು ಎತ್ತಿಹಿಡಿದರು. ಒಬ್ಬ ಆಫೀಸರನು ತನ್ನ ದೊಣ್ಣೆಯನ್ನು ಸ್ವಯಂಸೇವಕನ ಆಸನದಲ್ಲಿ ದೂಡಿದನು. ಈತನು 2 ಘಂಟೆಗಳಕಾಲ ನಿಶ್ಚೇಷ್ಟಿತನಾಗಿದ್ದನು.

4. ಇನ್ನೊಬ್ಬ ಸ್ವಯಂಸೇವಕನು ಎದೆಯಮೇಲೆ ಬಿದ್ದ ಬಲವಾದ ದೊಣ್ಣೆಯ ಏಟುಗಳಿಂದ ಅತ್ಯಂತ ಅಪಾಯಸ್ಥಿತಿಯಲ್ಲಿರುವನು. ಉಸಿರಾಡುವದು ಸಹ ಕಷ್ಟವಾಗಿರುವದು. ಎದೆಯನೋವು ವಿಶೇಷವಾಗಿರುವದಲ್ಲದೆ ತಲೆಯಮೇಲೆ ಬಲವಾದ ಪೆಟ್ಟು ಬಿದ್ದಿರುವದು. ಅವನ ಮೈಮೇಲೆ ಅನೇಕ ಪೆಟ್ಟುಗಳು ಬಿದ್ದಿರುವವಲ್ಲದೆ 2 ಘಂಟೆಗಳ ಕಾಲ ಪ್ರಜ್ಞೆ ತಪ್ಪಿದನು. ಒಬ್ಬ ಏರೋಪ್ಯ ಅಧಿಕಾರಿಯು ಅವನ ಎರಡು ಕಾಲುಗಳ ಮಧ್ಯೆ ಒಂದು ದೊಣ್ಣೆಯನ್ನಿಟ್ಟು ಮತ್ತೊಂದು ಬೆತ್ತದಿಂದ ಅವನ ಲಂಗೋಟಿಯನ್ನು ಬಿಚ್ಚಿಸಿದನು. ಆದರೆ ಸ್ವಯಂಸೇವಕನ ಚತುರತನದಿಂದ ಅಪಾಯಪ್ರದೇಶಕ್ಕೆ ಏಟು ಬೀಳಲವಕಾಶವಾಗಲಿಲ್ಲ. ಅವನ ಷರ್ಟುಗಳೆಲ್ಲವೂ ಹರಿದು ಬೆನ್ನಿನ ಮೇಲೂ ಹೊಟ್ಟೆಯ ಮೇಲೂ ಅನೇಕ ಏಟುಗಳು ಬಿದ್ದಿರುವವು. ಅಹಮದಾಬಾದ್ ಸ್ವಯಂಸೇವಕರ ಕ್ಯಾಪ್ಟನ್ನರಾದ ಮಿ|| ಸೋಮನಾಥ ಮಂಗಳದಾಸರವರು ಇನ್ನೂ ಅಜ್ಞಾನಾವಸ್ಥೆಯಲ್ಲಿ ಇರುವರು. ಬುದ್ಧಿಭ್ರಮಣೆಹೊಂದಿ "ಅಂತ್ಯ! ಅಂತ್ಯ!" ಎಂದು ಕೂಗಿಕೊಳ್ಳುತ್ತಿರುವರು.

ಗಾಯಪಟ್ಟ ಸ್ವಯಂಸೇವಕರಿಗೆ ಚಿಕಿತ್ಸೆಯನ್ನು ಮಾಡಿದ ಕಾಂಗ್ರೆಸ್‌ಕಮಿಟಿ ಆಸ್ಪತ್ರೆಯ ಡಾಕ್ಟರ್ ಭಾಸ್ಕರ್ ಪಟೇಲ್ ಎಂ. ಡಿ. ಯವರು ಜೂನ್ 1 ನೆಯ ತಾರೀಖಿನ ದಿವಸ ಈ ರೀತಿಯಾಗಿ ಬರೆದಿರುವರು.

ಈ ದಿವಸ 2 ಘಂಟೆಯ ಸಮಯದಲ್ಲಿ 23 ಜನ ಘಾಯಹೊಂದಿದ ಸ್ವಯಂಸೇವಕರನ್ನು ಆಸ್ಪತ್ರೆಗೆ ಕರೆದರು. ಅಲ್ಲಿಂದ ಇಲ್ಲಿಯವರೆಗೆ (ಈ ವಿಷಯವನ್ನು ಬರೆಯುವವರೆಗೆ) ಗಾಯಹೊಂದಿದ ಸ್ವಯಂಸೇವಕರನ್ನು ತರುತ್ತಲೇ ಇರುವರು. ಇದುವರೆಗೆ 60 ಜನರು ಆಸ್ಪತ್ರೆಗೆ ದಾಖಲಾಗಿರುವರು. ವಿಶೇಷ ಗಾಯಹೊಂದಿ ಬಹಳ ಅಪಾಯಸ್ಥಿತಿಯಲ್ಲಿರುವ 30 ಜನ ಸ್ವಯಂಸೇವಕರು ಇನ್ನೂ ಉಂಟಾಡಿ ಶಿಬಿರದಲ್ಲಿಯೇ ಬಿದ್ದಿರುವರೆಂದು ನನಗೆ ತಿಳುಹಿಸಿರುತ್ತಾರೆ.

ಚಿಕಿತ್ಸೆಹೊಂದುತ್ತಿರುವವರಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಗಾಯಪಟ್ಟಿರುತ್ತಾನೆ. ಒಬ್ಬನು ಜನನಾಂಗವು ಊದಿ ಸಹಿಸಲಾರದಷ್ಟು ಯಾತನೆಯನ್ನು ಅನುಭವಿಸುತ್ತಿರುವನು. ಕೆಲವರಿಗೆ ಕುದುರೆಯ ತುಳಿತ ಮಾತ್ರವಲ್ಲದೆ ಪೋಲೀಸು ಸವಾರರ ದೊಣ್ಣೆಗಳ ಏಟುಗಳೂ ಬಿದ್ದಿರುವವು. ಹೊಟ್ಟೆಯಮೇಲೆ ಒದ್ದಿದ್ದರಿಂದ ಕೆಲವರು ನರಳುತ್ತಿರುವರು. ಈ ಶಿಕ್ಷೆಯು ಸ್ವಯಂಸೇವಕರಿಗೆ ದೊಣ್ಣೆಯ ಪೆಟ್ಟುಗಳಿಗಿಂತಲೂ ಹೆಚ್ಚಿನ ಬಾಧೆಯನ್ನುಂಟುಮಾಡಿರುವದು. ಹಾಗೂ ಅನೇಕನು ಷನಾಗಿರುವದು. ದರದರನೆ ಎಳೆದುಕೊಂಡುಬಂದಿರುವದರಿಂದ ಅನೇಕ ಸ್ವಯಂಸೇವಕರ ಶರೀರವೆಲ್ಲಾ ತರಿದು ಹೋಗಿರುವದು. ಕೆಲವರ ಮೈಮೇಲೆ ಮುಳ್ಳುಗಳು ಚುಚ್ಚಲ್ಪಟ್ಟಿರುವವು."

ಸೊಲ್ಲಾಪುರದಲ್ಲಿ ನಾಲ್ವರಿಗೆ ಮರಣದಂಡನೆ.

ತಾ|| 8 ಕ್ಕೆ ಸೊಲ್ಲಾಪುರದಲ್ಲಿ ನಡೆದ ದಂಗೆಯ ಕಾಲಕ್ಕೆ ಪೋಲೀಸಚೌಕಿ ಸುಟ್ಟು, ಇಬ್ಬರು ಪೋಲೀಸರ ಕೊಲೆಮಾಡಿದ ಆರೋಪದ ಮೇಲೆ ಸೆ|| ಜಡ್ಜ ಮಿ|| ವಾಡಿಯಾ ಇವರು ತಾ|| 6 ಕ್ಕೆ ಮಿ|| ಮಲ್ಲಪ್ಪ ಧನಶೆಟ್ಟಿ, ಶ್ರೀ ಕಿಸನ ಸಾರಡಾ, ಜಗನ್ನಾಥ ಸಿಂಧೆ, ಎ. ಕುರ್ಬಾನ ಹುಸೇನ ಈ ನಾಲ್ವರಿಗೆ ಮರಣದಂಡನೆಯ ಶಿಕ್ಷೆಯನ್ನು ವಿಧಿಸಿದರು. ಈ ಶಿಕ್ಷೆಯ ವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಲ್ಪಟ್ಟಿದೆ. ಈ ನಾಲ್ಕು ಜನರನ್ನು ಕೂಡಲೆ ಯರವಡಾ ಪುಣೆ ಜೇಲಿಗೆ ರವಾನಿಸಿದರು. ಮುಂದೆ ಹಾಯಕೋರ್ಟಿನಲ್ಲಿ ಈ ಶಿಕ್ಷೆಯು ರದ್ದಾಗದಿದ್ದರೆ, ಯರವಡಾ ಜೈಲಿನಲ್ಲಿಯೇ ಇವರಿಗೆ ಫಾಶಿಯು ಕೊಡಲ್ಪಡುವದು.

ಸಂಬಂಧವೂ ಇಲ್ಲವೆಂದೂ, ತಮ್ಮ ಅನುಯಾಯಿಗಳು ಸಂಪೂರ್ಣ ಅಹಿಂಸಾತ್ಮಕರಾಗಿ ವರ್ತಿಸುವರೆಂದು ಪ್ರಮಾಣಮಾಡಿರುವರೆಂದೂ, ಅದರಂತೆಯೇ ಅವರು ನಡೆಯುವರೆಂದೂ ಬರೆದಿರುವದಾಗಿ ಕೇಳಿರುವೆನು.

ಅಸಹಕಾರ ಚಳುವಳಿಯನ್ನು ಸಂಪೂರ್ಣವಾಗಿ ಅಡಗಿಸುವವರೆಗೆ ಚಳವಳಿಯ ಮುಖಂಡರೊಡನೆ ಯಾವ ವ್ಯವಹಾರವನ್ನೂ ಮಾಡುವದಿಲ್ಲವೆಂದು ಅಧಿಕಾರಿಗಳು ಸಂಕಲ್ಪಮಾಡಿರುವದರಿಂದ ಮಿ|| ಗಾಂಧಿಯವರ ಮೇಲ್ಕಂಡ ಪತ್ರಕ್ಕೆ ಯಾವ ಸದುತ್ತರವೂ ಬರುವದಿಲ್ಲವೆಂಬುದು ಸಿದ್ಧವಾದ ಮಾತಾಗಿರುವದು.

ಮಳೆಗಾಲವು ಪ್ರಾಪ್ತವಾದ ಕೂಡಲೇ ಉಪ್ಪಿನ ಕಾಯಿದೆ ಭಂಗದ ಚಳವಳಿಯು ನಿರ್ವಾಹವಿಲ್ಲದೆ ನಿಂತುಹೋಗುವದು. ಆದರೆ ಇದಕ್ಕಿಂತಲೂ ಮಹತ್ವದ ಮತ್ತು ಹೆಚ್ಚಿನ ಅನರ್ಥಕಾರಿಯಾದ ಮತ್ತೊಂದು ಚಳುವಳಿಯು ಅಂದರೆ ಕಂದಾಯದ ಸತ್ಯಾಗ್ರಹವು ಪ್ರಾರಂಭವಾಗುವಂತೆ ತೋರುವದು. ಈ ಭೂಕಂದಾಯದ ಉತ್ಪತ್ತಿಯು ಭರತಖಂಡದ ಒಟ್ಟು ಉತ್ಪತ್ತಿಯಲ್ಲಿ ಸುಮಾರು ಅರ್ಧಭಾಗವಾಗಿರುತ್ತದೆ. ಬಾರ್ಡೋಲಿ ಡಿಸ್ಟ್ರಿಕ್ಟಿನಲ್ಲಿ ಈ ಚಳವಳಿಯು ಆಗಲೇ ಪ್ರಾರಂಭವಾಗಿ, 25 ಗ್ರಾಮಗಳ (ತೆಂಗೆಯನ್ನು ವಸೂಲುಮಾಡುವ) ಅಧಿಕಾರಿಗಳು ಎಲ್ಲ ರಿಕಾರ್ಡುಗಳನ್ನೂ ಸರಕಾರಕ್ಕೆ ಒಪ್ಪಿಸಿಬಿಟ್ಟಿರುವರು. ಅನಂತರ ಪೋಲೀಸರು, ಕಂದಾಯವನ್ನು ಕೊಡದಿದ್ದವರ ಜಮಿನುಗಳನ್ನು ಜಪ್ತಮಾಡುವದಾಗಿ ರೈತರಿಗೆ ನೋಟೀಸ್ ಕೊಡಲು ಆ ಗ್ರಾಮಗಳಿಗೆ ಹೋದಾಗ ಆ ಗ್ರಾಮಗಳಲ್ಲಿ ಯಾರೂ ಜನರೇ ಇರಲಿಲ್ಲ.

ಈ ವರ್ಷದ ಕಂದಾಯದ ಬಹು ಭಾಗವು ಆಗಲೇ ವಸೂಲು ಮಾಡಲ್ಪಟ್ಟಿರುವದರಿಂದ, ಈ ಹೊಸಚಳವಳಿಯಿಂದ ಮುಂದಿನ ಡಿಸೆಂಬರು ತಿಂಗಳವರೆಗೆ ವಿಶೇಷ ಫಲವೇನೂ ಆಗುವಂತಿಲ್ಲ. ಆದರೆ ಆ ವೇಳೆಗೆ ಈ ಚಳವಳಿಯೇನಾದರೂ ಫಲಕಾರಿಯಾಗುವದಾದರೆ ಸರಕಾರವು ಹಣದ ಅಭಾವದಿಂದ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುವದೆಂದು ಒಬ್ಬ ದೊಡ್ಡ ಅಧಿಕಾರಿಗಳೇ ಈದಿನ ನನಗೆ ಹೇಳಿದರು. ಚಳವಳಿಯಂತೂ ಯಾವ ಕಾರಣದಿಂದಲೂ ನಿಲ್ಲದೆ ದಿನದಿನಕ್ಕೆ ಪ್ರಬಲವಾಗುತ್ತಿರುವಂತೆಯೇ ಕಾಣುತ್ತಿರುವದು. ಆದರೂ ಕಂದಾಯದ ಚಳವಳಿಯಿಂದ ಹೆಚ್ಚಿನ ಅನರ್ಥಗಳು ಸಂಭವಿಸುವದರೊಳಗಾಗಿ, ಚಳವಳಿಯು ಹೇಗಾದರೂ ನಿಲ್ಲಿಸಲ್ಪಡುವದೆಂದು ನಾವು ಆಶಿಸಬೇಕಾಗಿದೆ.

ಇದರಿಂದ ಇನ್ನೂ ಕೆಲವು ವಾರಗಳೊಳಗಾಗಿ ಮಹಮ್ಮದೀಯರ ಮನಸ್ಸು ಗಾಂಧಿಯವರ ಚಳವಳಿಯ ವಿಷಯದಲ್ಲಿ ಆಶ್ಚರ್ಯಕರವಾದ ಪ್ರಮಾಣದಲ್ಲಿ ಬದಲಾಯಿಸಬಹುದಾಗಿದೆ. ಸದ್ಯ: "ಜಮೀಯತ್-ಉಲ್-ಉಲೇಮಾ" ಎಂಬ ಮಹಮ್ಮದಿಯರ ದೊಡ್ಡ ಸಂಘವು ಬಹಿರಂಗವಾಗಿ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿರುವದಾದರೂ, ಮಹಮ್ಮದೀಯ ಮುಖಂಡರು ಇನ್ನೂ ತಟಸ್ಥರಾಗಿಯೇ ಇರುವರು. ಈಚೆಗೆ ಉಪ್ಪಿನ ಕೋಠಿಗಳ ಮೇಲೆ ನಡೆದ ದಾಳಿಗಳಲ್ಲಿ ಒಬ್ಬೊಬ್ಬ ಮಹಮ್ಮದೀಯರೂ ಭಾಗವಹಿಸಿರುವರು. ಈ ಸಂದರ್ಭದಲ್ಲಿ ಏಟುತಿಂದ ಅನೇಕ ಮಹಮ್ಮದೀಯರನ್ನು ಕಾಂಗ್ರೆಸ್ ವೈದ್ಯಶಾಲೆಯಲ್ಲಿ ನಾನು ನೋಡಿದೆನು. ಆದುದರಿಂದ ಅಲ್ಪಸಂಖ್ಯಾಕರಾದರೂ, ಬಲಿಷ್ಠರಾದ ಈ ಸಮಾಜದಲ್ಲಿ ಚಳವಳಿಯ ವಿಷಯವಾಗಿ ಉಂಟಾಗಬಹುದಾದ ತತ್ತ್ವಭೇದಗಳನ್ನು ಅಧಿಕಾರಿಗಳು ಅತ್ಯಂತ ಕುತೂಹಲದಿಂದ ನಿರೀಕ್ಷಿಸುವರು.

ಸದ್ಯ: ಮಹಮ್ಮದೀಯ ಸಮಾಜವು ಹಾಗೂ ಹಳ್ಳಿಯ ಜನರು ಈ ಚಳವಳಿಯ ವಿಷಯದಲ್ಲಿ ತಟಸ್ಥಭಾವದಿಂದಿರುವದರಿಂದ ಅಧಿಕಾರಿಗಳು ತಮ್ಮ ನಡವಳಿಕೆಯಲ್ಲಿ ಬಹಳ ನಂಬುಗೆಯನ್ನಿಟ್ಟುಕೊಂಡಿರುವರು. ಆದರೆ ಪೇಶಾವರ, ಮುಂಬಯಿ ಮತ್ತು ಲಕ್ನೋ ನಗರಗಳಲ್ಲಿ ಈಚೆಗೆ ನಡೆದ ವಿದ್ಯಮಾನಗಳು ಮಹಮ್ಮದೀಯರ ಮನಸ್ಸನ್ನು ವಿಶೇಷವಾಗಿ ಕಲಕಿಬಿಟ್ಟಿರುವವು.

ಗಾಂಧಿಯವರ ಚಳವಳಿಯು ಹಳ್ಳಿಹಳ್ಳಿಗೂ ವ್ಯಾಪಿಸಿರುವದೆಂಬುದು ಚೆನ್ನಾಗಿ ನಿದರ್ಶನಕ್ಕೆ ಬರುತ್ತಿರುವದು. ನಾನು ಇಲ್ಲಿಗೆ ಬರುತ್ತಾ ಪಂಜಾಬಿನ ಡಿಸ್ಟ್ರಿಕ್ಟುಗಳಲ್ಲಿ ಪ್ರತಿಯೊಂದು ಹಳ್ಳಿಯಲ್ಲೂ ಒಬ್ಬೊಬ್ಬರ ತಲೆಯ ಮೇಲೆ ಜನಪ್ರಿಯವಾದ ಗಾಂಧಿಟೋಪಿಗಳನ್ನು ನೋಡುತ್ತಿದ್ದೆನು. ಕೇವಲ ರಾಜನಿಷ್ಠವಾದ ಈ ಸಿಮ್ಲಾನಗರದಲ್ಲಿಯೂ ಸಹ ಪೇಟೆಗಳಲ್ಲಿ 6 ಜನರಿಗೆ ಒಬ್ಬರಂತೆ ಈ ಕಾಂಗ್ರೆಸ್ ಪಕ್ಷದ ನಿಶಾನೆಗಳನ್ನು ಬಹಿರಂಗವಾಗಿ ಧರಿಸುವರು. ಆಸ್ಟ್ರೇಲಿಯಾದಿಂದ ಬರುವ ಗೋಧಿಯ ಪೈಪೋಟಿಯಿಂದ ತಮ್ಮ ಬೆಳೆಗೆ ಸರಿಯಾದ ಬೆಲೆಯಾಗದಿರುವದಕ್ಕೆ ಸರಕಾರವೇ ಕಾರಣವೆಂದು ಹಳ್ಳಿಯವರು ಭಾವಿಸಿರುವರು. ಭರತಖಂಡದ ಪ್ರಜೆಗಳಲ್ಲಿ ಹೆಚ್ಚಿನ ಜನರಿಗೆ ವ್ಯವಸಾಯದಿಂದ ಅಲ್ಪ ಸಂಪಾದನೆಯಾಗುವದರಿಂದ ಕೇವಲ ಅಲ್ಪವಾದ ಉಪ್ಪಿನತೆರಿಗೆಯೂ, ಹೆಚ್ಚು ಭಾರವಾದ ಭೂಕಂದಾಯವೂ ಅವರ ಆಕ್ಷೇಪಣೆಗಳಿಗೆ ಕಾರಣಗಳಾಗಿರುವವು.

ಈ ತೊಂದರೆಗಳ ಜೊತೆಗೆ ದೊಡ್ಡ ಕೈಗಾರಿಕೆಗಳಿರುವ ಪಟ್ಟಣಗಳಲ್ಲಿ ಸರಿಯಾದ ಕೂಲಿಯು ಸಹ ದೊರೆಯದೆ ಇರುವದರಿಂದ ಹಳ್ಳಿಗಳಲ್ಲಿ ಮಿ|| ಗಾಂಧಿಯವರ ಅನುಯಾಯಿಗಳು ಹರಡುತ್ತಿರುವ ಅಸಮಾಧಾನ ಮತ್ತು ಅವಿಶ್ವಾಸದ ಬೀಜಗಳು ಹಳ್ಳಿಗಳಲ್ಲಿ ಚೆನ್ನಾಗಿ ಮೊಳಕೆಯೇಳಲು ಕಾರಣವಾಗಿರುವದು.

ಪ್ರೆಸ್ ಕಾನೂನು ಪುನರ್ಜೀವನವನ್ನು ಹೊಂದಿದ ಮೇಲೆ ಸುಮಾರು 40 ವೃತ್ತಪತ್ರಿಕೆಗಳು ನಿಂತುಹೋಗಿರುವವಾದರೂ, ಭರತಖಂಡವನ್ನೆಲ್ಲಾ ಆವರಿಸಿಕೊಂಡಿರುವ ರಾಷ್ಟ್ರೀಯ ಚಳುವಳಿಗೆ ಸಂಬಂಧಪಟ್ಟ ವರ್ತಮಾನಗಳು ಹಳ್ಳಿಗಳಿಗೆ ಹರಡುವದು ಮಾತ್ರ ತಪ್ಪಲಿಲ್ಲ. ಈ ವರ್ತಮಾನಗಳು ಮೊದಲಿಗಿಂತಲೂ ಈಗ ಹೆಚ್ಚು ಭೀಕರಸ್ವರೂಪದಿಂದ ಹಬ್ಬುತ್ತಿರುವವು. ಪೂರ್ವದಲ್ಲಿ ಯಾವದಾದರೊಂದು ದೇಶೀಯ ಪತ್ರಿಕೆಯ ಆಧಾರದಿಂದ ಭರತಖಂಡದ ವಿದ್ಯಮಾನಗಳನ್ನು ತನ್ನ ಹಳ್ಳಿಯವರಿಗೆಲ್ಲಾ ತಿಳುಹಿಸುತ್ತಿದ್ದ (ವಿದ್ಯಾವಂತನಾದ) ಹಳ್ಳಿಯವನು ಸದ್ಯ: ಪ್ರತಿ ಊರಿನಲ್ಲೂ ಗುಪ್ತರೀತಿಯಲ್ಲಿ ಪ್ರಕಟವಾಗುವ ಕಾಂಗ್ರೆಸ್ ಹಸ್ತಪತ್ರಿಕೆಗಳ ಆಧಾರದ ಮೇಲೂ, ಹಾಗೂ ಹಾರಿಕೆಯ ಸುದ್ದಿಗಳ ಮೇಲೂ, ತನ್ನ ಊರಿನವರಿಗೆ ವಿಷಯಗಳನ್ನು ತಿಳಿಯಪಡಿಸುವನು.

ಆದುದರಿಂದ ಪತ್ರಿಕಾ ಕಾನೂನನ್ನು ಪುನರುಜ್ಜೀವನಗೊಳಿಸಿದುದು ಹೆಚ್ಚಿನ ಅನರ್ಥಕ್ಕೆ ಕಾರಣವಾಗಿರುವದು; ಮತ್ತು ಸರಕಾರದವರು ಪತ್ರಿಕೆಗಳ ಮೇಲೆ ಒಡ್ಡಿರುವ ಈ ಅನರ್ಥಕಾರಿಯಾದ ನಿರ್ಬಂಧವನ್ನು ಜಾಗ್ರತೆಯಾಗಿಯೇ ತಕ್ಕಮಟ್ಟಿಗೆ ಕಡಿಮೆ ಮಾಡುವರೆಂದು ವರ್ತಮಾನ ಕೇಳುತ್ತೇನೆ.

ಅಧಿಕಾರಿಗಳಿಗೂ ರಾಷ್ಟ್ರೀಯ ಪಕ್ಷದವರಿಗೂ ಪ್ರಾಪ್ತವಾಗಿರುವ ಈ ಸಂಗ್ರಾಮದಲ್ಲಿ ಯೂರೋಪಿಯನ್ನರ ಮೇಲೆ ದಿನದಿನಕ್ಕೆ ಹೆಚ್ಚುತ್ತಿರುವ ದ್ವೇಷವೂ, ಹಾಗೂ ಬ್ರಿಟಿಷ್ ಪದಾರ್ಥಗಳ ಬಹಿಷ್ಕಾರವೂ ಅತ್ಯಂತ ಮುಖ್ಯವಾದ ವಿಷಯಗಳಾಗಿವೆ. ನಾನು ಈ ದಿನ ಇಂಡಿಯಾದಲ್ಲಿ ಲಾಂಕಾಷೈರಿನ ಬಟ್ಟೆಗಳ ವ್ಯಾಪಾರದಲ್ಲಿ ಪ್ರಮುಖನಾದ ಒಬ್ಬ ಪಂಜಾಬಿ ವರ್ತಕನನ್ನು ಕಂಡಿದ್ದೆನು. ಆತನು ತನ್ನಲ್ಲಿ ಸದ್ಯ: 13,50,000 ರೂ. ಗಳ ಬೆಲೆಯುಳ್ಳ ಬಟ್ಟೆಬರೆಗಳು ಇರುವವೆಂದೂ ಸದ್ಯದ ಸ್ಥಿತಿಯಲ್ಲಿ ಅವುಗಳನ್ನು ಮಾರುವದು ಅಸಾಧ್ಯವಾಗಿರುವದೆಂದೂ, ಆದರೂ ರಾಷ್ಟ್ರೋದ್ಧಾರದ ಉದ್ದೇಶದಿಂದ ತನಗೆ ಸಂಭವಿಸುವ ನಷ್ಟವನ್ನು ಸಂತೋಷದಿಂದ ಒಪ್ಪಿಕೊಳ್ಳುವೆನೆಂದೂ ಹೇಳಿದನು. ಅಸಹಕಾರ ಚಳವಳಿಯಲ್ಲಿ ಅನಿವಾರ್ಯವಾಗಿ ಒದಗುವ ಕಾಯಿದೆ ಭಂಗವನ್ನು ಅಡಗಿಸುವದರಲ್ಲಿ ಅಧಿಕಾರಿಗಳು ಒಂದು ವೇಳೆ ಜಯಶಾಲಿಗಳಾದರೂ, ಸದ್ಯ: ಸಂಪೂರ್ಣವಾಗಿ ನಿಂತುಹೋಗಿರುವ ಬ್ರಿಟಿಷ್ ಪದಾರ್ಥಗಳ ವ್ಯಾಪಾರವನ್ನು ಮಾತ್ರ ಎಂದಿನಂತೆ ಸ್ಥಾಪಿಸುವದು ಅಸಾಧ್ಯವಾದ ಕಾರ್ಯವೆಂದೇ ತೋರುವದು. ಈ ಕಾರಣದಿಂದಲಾದರೂ ಸರಕಾರದವರು ಜಾಗ್ರತೆಯಾಗಿ ತಮ್ಮ ಕಣ್ಣುಗಳನ್ನು ತೆರೆದು, ಈಗಿನ ದಬ್ಬಾಳಿಕೆಯಿಂದ ಈ ಎರಡು ರಾಷ್ಟ್ರಗಳಿಗೂ ಕ್ರಮಪಡಿಸಲಸಾಧ್ಯವಾದ ದ್ವೇಷಭಾವವು ಉತ್ಪನ್ನವಾಗುವದಕ್ಕೆ ಪೂರ್ವದಲ್ಲಿಯೇ ಉಭಯರಿಗೂ ಸಮಾಧಾನಕರವಾದ ಒಪ್ಪಂದವನ್ನು ಮಾಡಿಕೊಳ್ಳುವದು ಉತ್ತಮವಾಗಿರುವದು.

ಮಿ|| ಗಾಂಧಿಯವರು ಕಾರಾಗೃಹದಲ್ಲಿ ನನ್ನೊಡನೆ ಹೇಳಿದ ಷರತ್ತುಗಳಿಗೆ ಸರಕಾರದವರು ಒಪ್ಪದೆ ಹೊರತು ಕಾಂಗ್ರೆಸ್ಸಿನವರು ದುಂಡುಮೇಜಿನ ಪರಿಷತ್ತಿನಲ್ಲಿ ಸಹಕರಿಸುವಂತಿಲ್ಲ. ಅದರಂತೆ ಉದಾರಪಕ್ಷದವರಾದರೂ ಲಂಡನ್ ಕಾನ್ಫರೆನ್ಸಿನಲ್ಲಿ (ಸ್ವರಾಜ್ಯವನ್ನು ಯಾವಾಗ ಕೊಡಬೇಕೆಂದಲ್ಲ) ಸ್ವರಾಜ್ಯದಲ್ಲಿರಬೇಕಾದ ಆಡಳಿತಪದ್ಧತಿಯನ್ನು ತೀರ್ಮಾನಿಸುವದಾಗಿ ವಚನವಿತ್ತ ಹೊರತು ಲಂಡನ್ನಿಗೆ ಹೋಗುವಂತಿಲ್ಲ.

ಇನ್ನು ಮಹಮ್ಮದೀಯರಲ್ಲಿ "ಜಮೆಯತ್-ಉಲ್-ಉಲೇಮಾ" ಕೂಟವು ಆಗಲೇ ಕಾಂಗ್ರೆಸ್ ಪಕ್ಷವನ್ನು ಸೇರಿರುವದು. ಮಿ|| ಜಿನ್ನಾರವರ ಷರತ್ತುಗಳಾದರೂ ಮಿ|| ಗಾಂಧಿಯವರ ಷರತ್ತುಗಳಿಗೆ ವಿಶೇಷ ವಿರೋಧವಾಗಿರುವದಿಲ್ಲ.

ಮಿ|| ಗಾಂಧಿ ಮತ್ತು ಮಿ|| ಜಿನ್ನಾ ಇವರೀರ್ವರೂ ಇಂಪೀರಿಯಲ್ ಮತ್ತು ಇಂಡಿಯಾ ಸರಕಾರದವರು ಅನವಶ್ಯಕವಾಗಿ ಎತ್ತಿ ಎತ್ತಿ ಆಡುತ್ತಿರುವ ಮುಸಲ್ಮಾನರೇ ಮೊದಲಾದ ಅಲ್ಪಸಂಖ್ಯಾಕಪ್ರಜೆಗಳ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಸಹಾನುಭೂತಿಯುಳ್ಳವರಾಗಿರುತ್ತಾರೆ. ಬ್ರಿಟಿಷರು ಕೊಡುವ ಸ್ವರಾಜ್ಯದ ಪದ್ಧತಿಯನ್ನು ಎಲ್ಲ ಪಕ್ಷದವರಿಗೂ ಸ್ಪಷ್ಟವಾಗಿ ತಿಳಿಸಿದಲ್ಲಿ ಮೇಲ್ಕಂಡ ವಿಷಯವು ಒಂದು ವಾರದೊಳಗಾಗಿ ಸರ್ವಸಮ್ಮತವಾಗಿರುವಂತೆ ತೀರ್ಮಾನಿಸಲ್ಪಡುವದು.

ಕೆಲವುದಿವಸಗಳಿಂದೀಚೆಗೆ ವೈಸ್ರಾಯರವರು ಒಬ್ಬಿಬ್ಬರು ಉದಾರಪಕ್ಷದ ಮುಖಂಡರೊಡನೆ ದುಂಡುಮೇಜಿನ ಪರಿಷತ್ತಿನ ವಿಷಯವಾಗಿ ಪ್ರಸ್ತಾಪಿಸುತ್ತಿರುವರೆಂದು ಕೇಳಿರುವೆನು. ಅವರಲ್ಲಿ ಒಬ್ಬರು ಸದ್ಯದ ಸ್ಥಿತಿಯಲ್ಲಿ ದುಂಡುಮೇಜಿನ ಪರಿಷತ್ತಿನ ವಿಷಯವನ್ನೆತ್ತುವದರಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಸದರೀ ಸಭೆಗೆ ಕಾಂಗ್ರೆಸ್ ಪ್ರತಿನಿಧಿಗಳಾರೂ ಬರುವದಿಲ್ಲವೆಂದೂ ಪರಿಷತ್ತಿನಲ್ಲಿ ಯಾವರೀತಿಯಾದ ಸ್ವರಾಜ್ಯವನ್ನು ಕೊಡಬೇಕೆಂಬ ವಿಷಯವನ್ನೇ ಚರ್ಚಿಸುವದಾಗಿ ವಚನವನ್ನು ಕೊಡದಿದ್ದರೆ ಉದಾರಪಕ್ಷದವರೂ ಸಹ ಬರುವದಿಲ್ಲವೆಂದೂ ಹೇಳಿರುವರು.

ಆದುದರಿಂದ ಸದ್ಯದ ರಾಜಕೀಯ ಚಳವಳಿಯಲ್ಲಿ ಅತ್ಯವಶ್ಯಕವಾಗಿ ಗಮನಿಸಬೇಕಾದ ಪ್ರಶ್ನೆಯು ಇದೊಂದೇ ಆಗಿರುವದು. "ನಮಗೆ ಸ್ವಾಮಂತಸ್ವರಾಜ್ಯವನ್ನು ಕೊಡುವಿರೋ? ಅಥವಾ ಅದರ ಆಕಾರವನ್ನು ಮಾತ್ರ ತೋರಿಸುವಿರೋ? ನಮಗೆ ಸ್ವಾಮಂತಸ್ವರಾಜ್ಯವನ್ನು ಕೊಟ್ಟರೆ ಅದನ್ನು ನಾವು ಐದು, ಹತ್ತು, ಐವತ್ತು ಅಥವಾ ಮತ್ತೆಷ್ಟು ವರ್ಷಗಳಲ್ಲಿ ಅನುಭವಿಸತಕ್ಕದ್ದು?" ದುಂಡುಮೇಜಿನ ಪರಿಷತ್ತಿನ ಹಣೆಯಬರಹವು ಮೇಲ್ಕಂಡ ಪ್ರಶ್ನೆಗಳಿಗೆ ಬ್ರಿಟಿಷರು ಕೊಡುವ ಉತ್ತರವನ್ನೇ ಅವಲಂಬಿಸಿರುವದು. ಸದ್ಯ: ಭರತಖಂಡದಲ್ಲಿ ನಾವು ಕೊಟ್ಟ ವಚನದಂತೆ ನಿಸ್ಸಂಶಯವಾಗಿ ನಡೆಯುವೆನೆಂಬ ನಂಬುಗೆಯನ್ನು ಜನಗಳಲ್ಲಿ ಉಂಟುಮಾಡದಿದ್ದುದರಿಂದ ಪ್ರಾರಂಭವಾಗಿರುವ ಈ ಚಳವಳಿಯು ಭರತಖಂಡಕ್ಕೂ ಬ್ರಿಟಿಷರಿಗೂ ಇರುವ ಸಂಬಂಧವನ್ನೇ ಸಂಪೂರ್ಣವಾಗಿ ನಾಶಮಾಡುವಂತೆ ತೋರುತ್ತಿರುವದು. ಈ ವಿಷಮಸ್ಥಿತಿಯು ಸಮಾಪ್ತಿಯಾದರೂ ಮೇಲ್ಕಂಡ ಪ್ರಶ್ನೆಗಳಿಗೆ ದೊರೆಯುವ ಉತ್ತರವನ್ನೇ ಅವಲಂಬಿಸಿರುವದು.

ವಕೀಲರ ಹೀನ ದೀನಾವಸ್ಥೆ.

ಒಬ್ಬ ವಕೀಲರೇ ಹೇಳಿದ ಕರ್ಮಕಥೆ.

ಪುಣೆಯಲ್ಲಿ ಅಹಮ್ಮದನಗರದ ವಕೀಲರಾದ ಶ್ರೀ ಗಾಯಕೋವರಿ ಎಂಬವರ ಭಾಷಣ.—

ತೇಜಸ್ವಿಯಾದ ಕಾಯದೆಭಂಗದಲ್ಲಿ ವಕೀಲರು ಸೇರುವದು ಹಿತವಾದರೂ, ಉದರಪೋಷಣೆಯ ಒಂದು ಚಿಂತೆಯ ಪ್ರಶ್ನೆಯಾಗುತ್ತದೆ. 1920 ರಲ್ಲಾಗುತ್ತಿದ್ದಷ್ಟು ಟೀಕೆಯು ಈಗಾಗುವದಿಲ್ಲ. ವಕೀಲರ ಸತ್ವಹರಣವು ಅತಿಶಯವಾಗಿದ್ದು, ಸತ್ಯಾಗ್ರಹಿಗಳ ಆತಿಥ್ಯ ಸತ್ಕಾರಮಾಡುವದಕ್ಕೆ ಸಹ ಹೆದರಿಕೆಯಾಗುತ್ತದೆ. ಸತ್ಯಾಗ್ರಹದ ಸಭೆಗೆ ಹೋಗಲು ಅಂಜಿಕೆ ಬರುತ್ತದೆ.

ಪೂರ್ವಕಾಲದಲ್ಲಿ ಕಾಯದೆ ಮಾಡುವದು ಕೆಲವು ಋಷಿಗಳ ಕಡೆಗಿತ್ತು. ರಾಜನೀತಿಯ ಕೆಲಸ ಮಾಡುವದು ಪವಿತ್ರವೆಂದು ತಿಳಿಯುತ್ತಿದ್ದರು. ಋಷಿಗಳು ಬರೇ ಕಾಯದೆ ಮಾಡುತ್ತಿದ್ದಿಲ್ಲ. ಅರಸನ ಮೇಲೆ ತಮ್ಮ ವರ್ಚಸ್ಸು ಕೂಡ್ರಿಸುತ್ತಿದ್ದರು. ಹಿಂದೂ ಧರ್ಮಶಾಸ್ತ್ರವನ್ನು ಬ್ರಾಹ್ಮಣರು ಬರೆದಿರುತ್ತಾರೆ. ಆಚಾರ ವಿಚಾರ ಮತ್ತು ರೂಢಿಯ ಮುಂದೆ ಅರಸನು ತಲೆಬಾಗಿಸಿ ನಡೆಯುವನು. ಸಾರಾಂಶ ಋಷಿಗಳು ಕಾಯದೆ ಪಂಡಿತರಿದ್ದರು. ರಾಜನು ಅವರ ಮಂತ್ರದಿಂದ ರಾಜ್ಯಕಾರಭಾರ ಮಾಡುತ್ತಿದ್ದನು. ರೋಮನ ಇತಿಹಾಸ ನೋಡಿರಿ. ಸಿಥಾರಸನಂಥ ಪ್ರಖ್ಯಾತ ವಕೀಲನು ಸ್ವಾತಂತ್ರ್ಯಪ್ರಿಯನಾಗಿದ್ದನು. ಎಲ್ಲ ಚಳವಳಿಗಳ ಜನಕತ್ವವು ವಕೀಲರ ಕಡೆಗಿದ್ದು, ಅವರೇ ಮುಂದಾಳುಗಳಾಗಿರುತ್ತಿದ್ದರು. ರೋಮ ರಾಜ್ಯದಲ್ಲಿ ವಕೀಲರೇ ಕಾಯದೆಯ ಪಾಯಾ ಹಾಕಿದರು. ಆದರೆ ನಮ್ಮ ದೇಶದ ಪರಿಸ್ಥಿತಿಯು ತೀರ ಭಿನ್ನವಾಗಿರುತ್ತದೆ. ವಕೀಲರು ಶ್ರೀಮಂತರೆಂದು ಜನರಲ್ಲಿ ಕಲ್ಪನೆಯಾಗಿರುವದೊಂದೇ ಕ್ಷೇಮ. ಅದ್ದರಿಂದಲೇ ನಮ್ಮ ಸ್ಥಿತಿಯು ತಕ್ಕಮಟ್ಟಿಗೆ ನೆಟ್ಟಗಿರುತ್ತದೆ. ಸದ್ಯ: ವಕೀಲರ ದೆಸೆಯಿಂದ ತುಸು ಆದರವಿದ್ದರೂ, ಸಹಾನುಭೂತಿಯು ಕಡಿಮೆಯಾಗಿರುತ್ತದೆ. ವಕೀಲರು ಬೇರೆಯವರಂತೆ ವ್ಯವಹಾರಸ್ಥರಾದ್ದರಿಂದ ಇವರ ವಿಷಯಕವಾದ ಲೋಕಾದರವು ಇಳಿತರಕ್ಕೆ ಹತ್ತಿದೆ.

ಇಂದು ನಾವು ಸ್ವತಂತ್ರರಿಲ್ಲ. ಪಕ್ಷಕಾರರ ದೆಸೆಯಿಂದ ನಮ್ಮ ವ್ಯವಸಾಯವನ್ನು ಮಾರಾಟಕ್ಕೆ ಹಚ್ಚಿರುತ್ತೇವೆ. ಖಟ್ಲೆಯು ಸುಳ್ಳೆಂದು ಪೂರಾ ಗೊತ್ತಿದ್ದರೂ, ಪಕ್ಷಕಾರನ ದೆಸೆಯಿಂದ ಖಟ್ಲೆ ನಡಿಸುತ್ತೇವೆ. ದರೋಡೆಗಾರರನ್ನು ದೋಷಮುಕ್ತ ಮಾಡಿಸುವದಕ್ಕೆ ಪ್ರಯತ್ನಿಸುತ್ತೇವೆ. ಆದರೆ ನಮ್ಮಿಂದ ಸ್ವಾರ್ಥತ್ಯಾಗಿಯನ್ನು ಬಿಡಿಸುವದಕ್ಕಾಗುವದಿಲ್ಲವಲ್ಲ!! ಮೊಟ್ಟಮೊದಲು ಕಾಯದೆಭಂಗದಲ್ಲಿಯೇ ವಕೀಲರ ಸಂಬಂಧವುಂಟಾಗುತ್ತದೆ. ನೋಡಿರಿ. ನನ್ನ ಮನೆಯ ಮುಂದೇ ದಿನಾಲು ಸಭೆಗಳಾಗುತ್ತವೆ. ಪ್ರಾತಃಕಾಲದಲ್ಲಿ ನಗರಸಂಕೀರ್ತನೆಯು ನನ್ನ ಮನೆಯ ಮುಂದೇ ಹಾದುಹೋಗುತ್ತದೆ. ಆದರೆ ಅದರಲ್ಲಿ ನನಗೆ ಸೇರಲಿಕ್ಕಾಗುವದಿಲ್ಲ. ಅದರಲ್ಲಿ ಸೇರಿದರೆ ನನ್ನ ಕುಟುಂಬ ಪೋಷಣೆಯು ಮೂರ್ತಿಮಂತ ನನ್ನೆದುರಿಗೆ ನಿಲ್ಲುತ್ತದೆ. ಸದ್ಯ: ವಕೀಲರ ಅವಸ್ಥೆಯು ಸರಕಾರೀ ಕಾಮದಾರರಿಗಿಂತ ಹೆಚ್ಚು ಶೋಚನೀಯವಾಗಿರುತ್ತದೆ. ಮೂಲತಃ ನೋಡಿದರೆ ವಕೀಲರ ಹೊಟ್ಟೆಗೆ ಹಾಕುವಂಥವರು ಪ್ರಜರಾಗಿದ್ದಾರೆ. ಪ್ರಜರ ಹಕ್ಕುಗಳು ಧ್ವಂಸವಾಗುತ್ತಿರುವಾಗ ಅವರ ಹಕ್ಕುಗಳ ಸಂರಕ್ಷಣೆಗಾಗಿ ನಮ್ಮಿಂದೇನೂ ಆಗುವದಿಲ್ಲೆಂದು ನಿಟ್ಟುಸುರು ಹಾಕುವದು ಶ್ರೇಯಸ್ಕರವಲ್ಲ. ನಾವು ರಾಷ್ಟ್ರದ ರಥ ಸಾಗಿಸುವಂಥವರಾಗಿದ್ದೆವು. ಅರಸನನ್ನು ಮಾಡುವಂಥ ಕಿಂಗ ಮೇಕರರಾಗಿದ್ದೆವು. ಆದರೆ ಈಗ ಸರಕಾರದ ಹೆಂಡತಿಯಾಗಿ ಸಂಸಾರ ಹೇಳಿದಂತೆ ಪತಿವ್ರತಾಧರ್ಮ ಪಾಲಿಸಬೇಕಾಗುತ್ತದೆ. ಜನರ ಮುಂದೆ ಕಯ್ಯೊಡ್ಡೋಣವೂ, ಕೋರ್ಟಿನಲ್ಲಿ ಒದಿಸಿಕೊಳ್ಳುವದೂ ನಮ್ಮ ಹಣೆಬರಹವಾಗಿದೆ. ಏನಾದರೂ ಸೇಚು ಬಂದು ಸನದು ಎಲ್ಲಿ ರದ್ದಾಗುವದೋ ಎಂಬ ಭಯವಂತೂ ಹಗಲಿರುಳು ಮನಸ್ಸಿನಲ್ಲಿ ಕುದಿಯುತ್ತದೆ. ಸ್ವಾರ್ಥತ್ಯಾಗ ಮತ್ತು ಸತ್ಯನಿಷ್ಠೆ ಇವೆರಡೇ ಗುಣಗಳ ಮೇಲೆ ನಮ್ಮ ವ್ಯವಸಾಯ ಸಾಗಿಸತಕ್ಕದ್ದು. ಫ್ರಾನ್ಸ್, ಅಮೇರಿಕಾ ಮತ್ತು ಬೇರೆ ದೇಶಗಳಲ್ಲಿಯ ವಕೀಲ ಸಂಘಗಳ ನಿಯಮಗಳನ್ನು ತಕ್ಕೊಳ್ಳಿರಿ. ದಬ್ಬಾಳಿಕೆಯಿಂದ ಪ್ರಜರ ಮೇಲೆ ಹೇರಿದ ಕಾಯದೆಯ ವಿರೋಧಮಾಡುವದು ವಕೀಲರ ಕರ್ತವ್ಯಕರ್ಮವಾಗಿರುತ್ತದೆ. ಅಮೇರಿಕೆಯ ಅಬ್ರಾಹಮ ಲಿಂಕನನು ವಕೀಲನೇ ಆಗಿದ್ದನು. ಆತನು ಸತ್ಯಕ್ಕಾಗಿ ತನ್ನ ಹಕ್ಕು ನಡಸಿದನು. ಅದ್ದರಿಂದ ನಾವು ದಬ್ಬಾಳಿಕೆಯ ಕಾಯಿದೆಯನ್ನು ಮುರಿಯಲು ಸಿದ್ಧರಾಗಬೇಕು ಮತ್ತು ಅದಕ್ಕಾಗಿ ಬರುವ ಪ್ರಾಯಶ್ಚಿತ್ತವನ್ನು ಭೋಗಿಸಲು ಸಿದ್ಧರಾಗಬೇಕು. ಈ ದೃಷ್ಟಿಯಿಂದ ಕಾಯಿದೆಭಂಗ ಮಾಡಲು ಸಿದ್ಧರಾಗಬೇಕು. ಯೋಗ್ಯ ಕಾಯಿದೆಯನ್ನು ಅಮಲಿನಲ್ಲಿ ತರಿಸುವದೂ, ಅದಕ್ಕೆ ಬೆಂಬಲ ಕೊಡುವದೂ ವಕೀಲರ ಕರ್ತವ್ಯಕರ್ಮವಾಗಿರುತ್ತದೆ. ಇಂಥ ಉತ್ಪನ್ನ ಕಡಿಮೆಯಾಯಿತು. ಕಾರಣ ಪ್ರತಿಯೊಬ್ಬ ಮನುಷ್ಯನು ಕರ ಕೊಡಿಯಬೇಕು. ವಿನಾಯಿತಿಯ ಅನ್ನ ಕೊಡಬೇಕೆಂದು ಕಾಯಿದೆ ಮಾಡಿದರೆ, ಅದನ್ನು ಮನ್ನಿಸುವರೇನು? ಇಂಥ ವಿಚಿತ್ರ ಕಾಯಿದೆಗಳಿಗೆ ತಲೆದೂಗುವದೆಂದರೆ ದೇಶದ್ರೋಹವಾಗುತ್ತದೆ. ನಾವು ಸರಕಾರದ ನವಕರರಲ್ಲ, ವಕೀಲರಿದ್ದೇವೆಂದು ತಿಳಿದೇ ಕಾಯಿದೆಭಂಗದಲ್ಲಿ ಸೇರತಕ್ಕದ್ದು. ವಕೀಲರು ಇದರಲ್ಲಿ ಸೇರದಿದ್ದರೆ ಚಳವಳಿಯು ಇವರ ದೆಸೆಯಿಂದ ನಿಲ್ಲುವದಿಲ್ಲೆಂಬದನ್ನೂ ತಿಳಿಯಬೇಕು. ಸೇರದಿದ್ದರೆ ಅಸಹಾಯರಾಗುವರು.

ವಿಜಯ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ— ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ, ಗನೋರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು. [59]

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟು ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಗೊಳಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂದ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಿಷ್ಠ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಸಮಾಸಕ್ಕೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[9] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಣ್ಣಗಳಿರಾ! ಅಕ್ಕಗಳಿರಾ!

ಕೊಡಗಿನ **ಗುಡು ಗುಡು— ಸುಡು ಸುಡು** ಜ್ವರದ ಪೀಡೆಗಳಿಂದ ಕಡುನರಳುತ್ತಿರುವಿರಾದರೆ,

ಮಲೇರಿಯಾನ ಕಂಪನಿಯವರ ಮಲೇರಿಯಾನವು

"ಬಿಡು! ಓಡು! ಎಂದು ಗದರಿಸಿ ಓಡಿಸಬಲ್ಲುದು"—ಎಂಬುದನ್ನು ನೆನಪಿನಲ್ಲಿಡಿರಿ.

ಅಂದ ಮೇಲೆ—ಮಲೆನಾಡಜ್ವರ, ಪದೇ ಪದೇ ನಿಯಮಿತ ದಿನಗಳ ಜ್ವರ, ಹಾಗೂ ಜ್ವರಗಡ್ಡೆ ಬೆಳೆಯೋಣವೇ ಮೊದಲಾದ ರೋಗಪೀಡಿತರಾದವರಿಗೆ ಔಷಧಿಗಳಲ್ಲೆಲ್ಲಾ **ಶಿರೋಮಣಿ!**

ಮಲೇರಿಯಾನ ಸರ್ವಜ್ವರಸಂಹಾರಿಣಿ

ಇದನ್ನೇ ತರಿಸಿಕೊಂಡು ಸೇವಿಸಿರಿ. ಇದರ ಸೇವನೆಯಿಂದ ಅದೆಂತಹ ಜ್ವರಗಳಾಗಲೀ, **'ಕೊಡಗಿನ ಗುಡುಗುಡು!'** (ಛಳಿ) **'ಸುಡುಸುಡು!'** (ಉರಿ) **ಜ್ವರಗಳಾಗಲಿ, ಜ್ವರಗಡ್ಡೆಗಳಾಗಲಿ** ಖಂಡಿತವಾಗಿಯೂ ಸಂಪೂರ್ಣ ಬಿಟ್ಟೋಡುವುವು.

ಇಂದೇ ದೃಢನಂಬುಗೆಯಿಂದ

ಮಲೇರಿಯಾನ ಕಂಪನಿಯವರ ಮಲೇರಿಯಾನ

ತರಿಸಿಕೊಂಡು ಕುಡಿಯಿರಿ. [45]

ಕ್ರಯ 8 ಔನ್ಸಿಗೆ ರೂ. 1—8—0; ½ ಡಜನಿಗೆ ರೂ. 8—8—0; 1 ಡಜನಿಗೆ ರೂ. 16—8—0.

ನಮ್ಮ ಕಂಪೆನಿಯಲ್ಲಿ ಸಿಗುವ ಇನ್ನೂ ಇತರ ಮದ್ದುಗಳ ವಿವರಣೆ ಇರುವ ಪುಸ್ತಕ (ಕೆಟಲಾಗಿಗೆ) ಕ್ರಯದ ಪಟ್ಟಿಗೆ ಬರೆಯಿರಿ.

ಮಲೇರಿಯಾನ ಕಂಪನಿ, ನಂಬ್ರ 1 ಮಂಗಳೂರು, ದ. ಕ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ನ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ.] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಬಾಯಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧನಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ ತಳಭಸ್ಮ, ಕಾಲಿಮುಸಂದ, ಮಧುಕಂದ, ಜಟಾಕಂಧ, ಸಾಲೀಮಲೀಕಂದ, ಆಶ್ವಕಂದ ಶ್ರೀಷ್ಟಕಂದ, ಮುಸಳೀಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಣಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ನವಲೀಬೀಜ, ಚಿಕಣಿಪಪಂಚಾಂಗ, ಆಡವೀ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಸಾಪತ್ರಿ, ಮದನಮಸ್ತ, ಲಕನಪುರುಷ, ಕಮುತಕಸ, ಕಫಿದ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾನಾ, ಬೀಜಬಂದ, ಹರಣಖೋರಿ, ಮುಂಗಳೇಪೀದಾಗಿ, ಮರ್ದಪೀಕಟ್ಟಿಗೆ, ಶತಾವರಿ, ಸತೀಗಮಗಜ, ಅಲವಹಾಲು, ವಾಕೇರಿಭಾತಾ, ಗೋಖರು, ಆಡವೀಬೆಂಡಿಬೀಜ, ಅಮ್ಮತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಸಿಂಗಾಡಿ, ಜಾಜೀಕಾಯಿ, ರೂಮೀಮಸ್ತಕಿ, ವಂಶಲೋಚನ, ವರಧಾರಾ, ಕೇಸರಿ ದಾಲಚಿನ್ನಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮು ಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ಪಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಸಕ್ಕರೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ.—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [49]

ಹಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿತ್ತು, ರಕ್ತ, ಸೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಪಾಂಡರೋಗ, ದಬ್ಬಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. **ಪತ್ತೆ—ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ
ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನು
ಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು
ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶ್ರುತಿಸಾರಭಾಷ್ಯ (ಸಂಸ್ಕೃತ) (ಶಿವಪೂಜಾ ಶಿವಲಿಂಗಯೋಗೀಂದ್ರ ವಿರಚಿತ)	೫ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[37] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ವೈದಿಕವಾಙ್ಮಯರಹಸ್ಯ.

ಈ ಗ್ರಂಥವು ವಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಶಂಭುಲಿಂಗಶಿವಾಚಾರ್ಯರಿಂದ ರಚಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ವೇದಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿವಸರ್ವೋತ್ತಮತ್ವ ವಿಷಯವೂ ಹಾಗೂ ಪ್ರಮಥರ ವಿಷಯವೂ ಬಹು ವಿಶದವಾಗಿ ಪ್ರತಿಪಾದಿಸಲ್ಪಟ್ಟಿದೆ. ಗ್ರಂಥಕರ್ತರು ಲೋಕೋಪಕಾರಕ್ಕಾಗಿ ಸದರಿ ಗ್ರಂಥವನ್ನು ಬಹು ಶ್ರಮವಹಿಸಿ ಸುಲಭವಾದ ಕನ್ನಡಭಾಷೆಯಿಂದ ರಚಿಸಿದ್ದಾರೆ. ಈ ಗ್ರಂಥವು ಈ ಮೊದಲು ಪ್ರಭಾಪತ್ರಿಕೆಯಲ್ಲಿ ಪ್ರಕಟವಾಗಿದೆ. ಅನೇಕ ಜನ ವೀರಶೈವರು ಈ ಅಮೂಲ್ಯಗ್ರಂಥವನ್ನು ಪುಸ್ತಕರೂಪವಾಗಿ ಮುದ್ರಿಸಿ ಪ್ರಸಿದ್ಧಪಡಿಸಬೇಕೆಂದು ಸೂಚಿಸಿದ ಮೇರೆಗೆ ಮುದ್ರಿಸಲ್ಪಟ್ಟಿದೆ. ಸುಲಭವಾದ ಕನ್ನಡಭಾಷೆಯಿಂದ ಬರೆಯಲ್ಪಟ್ಟಿರುವ ಈ ಅಮೂಲ್ಯಗ್ರಂಥವನ್ನು ಪ್ರತಿಯೊಬ್ಬ ವೀರಶೈವರು ತರಿಸಿಕೊಂಡು ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕಾಗಿ ಕೋರಿಕೆ.

ಬೆಲೆ ೪ ಆಣೆ.

ಪಂಚಾಚಾರ್ಯ ಪ್ರಭಾ ಆಫೀಸ್,
ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳ

(Registered Trade Mark)

ಯೋಗ್ಯತಾಪತ್ರ
ಳನ್ನು ಕೊಟ್ಟಿರು
ರು. ಪ್ರಸಿದ್ಧವಾ
ಈ ನಶ್ಯದ ಪು
ಯಿಂದ ಸ್ವಸ್ಥ
ವ ವ್ಯಾಧಿಗಳು ಯ
ವವೆಂದರೆ:—ಪಿನ
ಒಂಟಿ ತಲೆನೋ
ತಲೆಯಲ್ಲಿನ ರೋಗ
ಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳ
ಬಲದೋಷ ಮೊದಲಾದ ವ್ಯಾಧಿಗಳು ಪರಿಹಾರವಾ
ವಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೭ ವ್ಯಾಧಿಗಳ
ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು
ಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗ
ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯ
ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು.
ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂ
ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ
ಪುಸಪಟ್ಟಿ ಕಳುಹಿಸಲಾದೀತು.
ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ
ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆ
[49] ಪೋ. ಬಾ. ೫೧೧. ಮದರಾ

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಜೂನ್ ೧೯೩೦ [ಸಂಚಿಕೆ ೮.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಸದ್ಯಃ ಎಲ್ಲೆಲ್ಲಿಯೂ ಪರದೇಶೀ ಮಾಲುಗಳ ಬಹಿಷ್ಕಾರ ಮತ್ತು ಮದ್ಯಪಾನನಿಷೇಧದ ಚಳವಳಿಯು ಭರದಿಂದ ಸಾಗಿರುವದು. ಬಹಿಷ್ಕಾರದ ಚಳವಳಿಯು ಕಾಯಿದೆಗೆ ವಿರೋಧವಾದದ್ದೆಂಬ ಹೊಸ ಕಾನೂನೊಂದನ್ನು ವೈಸರಾಯರು ನೂತನವಾಗಿ ಜಾರಿಯಲ್ಲಿ ತಂದಿರುವದರಿಂದ ಪೋಲೀಸರು ಪ್ರತಿನಿತ್ಯವೂ ಅನೇಕಜನ ಸತ್ಯಾಗ್ರಹಿಗಳನ್ನು ದಸ್ತಗಿರಿಮಾಡುತ್ತಿರುವರು. ಈ ಸಂಬಂಧದಲ್ಲಿ ಮುಂಬಯಿಯ ಪೋಲೀಸರು 16 ನೆಯ ತಾರೀಖಿನ ದಿವಸ 66 ಜನರನ್ನೂ, 17 ನೆಯ ತಾರೀಖಿನ ದಿವಸ 17 ಜನರನ್ನೂ, 18 ನೆಯ ತಾರೀಖಿನ ದಿವಸ 23 ಜನರನ್ನೂ, 19 ನೆಯ ತಾರೀಖಿನ ದಿವಸ 32 ಜನರನ್ನೂ ದಸ್ತಗಿರಿಮಾಡಿರುವರು. ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೂ 4 ತಿಂಗಳ ಕಠಿಣಸಜೆಯನ್ನು ವಿಧಿಸಿರುವರು. ಯೂರೋಪಿಯನ್ನರ ಪಾವುಗಳ ಮುಂದೆ ಚಳವಳ ನಡೆಯಿಸುವವರನ್ನು ಮಾತ್ರ ದಸ್ತಗಿರಿ ಮಾಡುತ್ತಿರುವರಲ್ಲದೆ ದೇಶೀಯವರ್ತಕರ ಅಂಗಡಿಗಳ ಮುಂದೆ ಚಳವಳ ನಡೆಯಿಸುವವರನ್ನು ದಸ್ತಗಿರಿಮಾಡುವದಿಲ್ಲ.

ಮುಂಬಯಿ ಕಾಂಗ್ರೆಸ್ ಕೂಟದವರ ಪ್ರಾರ್ಥನೆಯ ಮೇರೆಗೆ ಪಂಡಿತ ಮೋತೀಲಾಲ್ ನೆಹರೂರವರು 18 ನೆಯ ತಾರೀಖಿನ ಪ್ರಾತಃಕಾಲ ತಮ್ಮ ಪತ್ನಿ, ಸೊಸೆ (ಜವಾಹರಲಾಲ್ ನೆಹರೂರವರ ಪತ್ನಿ) ಮತ್ತು ಮಗಳೊಡನೆ ಮುಂಬಯಿಗೆ ಬಂದರು. ಶ್ರೀ|| ವಿಠಲಭಾಯಿ ಪಟೇಲ್, ಮಿಸೆಸ್. ಪೆರಿನ್ ಕ್ಯಾಪ್ಟನ್, ಮಿಸೆಸ್. ಮುನಷಿ ಮತ್ತು ಶ್ರೀ|| ಲಾಲಾ ಶಂಕರಲಾಲ್ ಮೊದಲಾದವರು ಸ್ಟೇಷನ್ನಿನಲ್ಲಿ ಕಾದಿದ್ದು ಪಂಡಿತರಿಗೆ ಸುಸ್ವಾಗತವನ್ನು ಬಯಸಿದರು. ಪಂಡಿತರ ದರ್ಶನಕ್ಕಾಗಿ ಸ್ಟೇಷನ್ನಿನ ಬಳಿಯಲ್ಲಿ ಜನಸ್ತೋಮವು 1 ಮೈಲುವರೆಗೆ ತುಂಬಿದ್ದಿತು. ಪಂಡಿತರಿಗೆ ಪುಷ್ಪಮಾಲಿಕೆಗಳನ್ನರ್ಪಿಸಿ, ಮೆರವಣಿಗೆ ಮಾಡಿ ಕರೆದುಕೊಂಡುಹೋದರು. ಈ ಉತ್ಸವದಲ್ಲಿ 2 ಲಕ್ಷ ಜನರು ಸೇರಿದ್ದರು.

17 ನೆಯ ತಾರೀಖಿನ ದಿವಸ ಕಲ್ಕತ್ತೆಯಲ್ಲಿ ಬಹಿಷ್ಕಾರದ ಚಳವಳಿಯನ್ನು ನಡೆಯಿಸುತ್ತಿದ್ದ 22 ಜನ ಸ್ವಯಂಸೇವಕರನ್ನು ಪೋಲೀಸರು ದಸ್ತಗಿರಿಮಾಡಿರುವರು. ಸ್ತ್ರೀ ಸ್ವಯಂಸೇವಕಿಯರನ್ನು ಮಾತ್ರ ದಸ್ತಗಿರಿ ಮಾಡಿರುವದಿಲ್ಲ. 18 ನೆಯ ತಾರೀಖಿನ ದಿವಸ 28 ಜನರನ್ನು ದಸ್ತಗಿರಿಮಾಡಿದರು.

ಇದೇ ತಿಂಗಳು 27 ನೆಯ ತಾರೀಖಿನ ದಿವಸ ಸತ್ಯಾಗ್ರಹಚಳವಳಿಯಲ್ಲಿ ಪ್ರಥಮಾಹುತಿಯಾದ ಶ್ರೀ|| ವಲ್ಲಭಭಾಯಿ ಪಟೇಲರು ಕಾರಾಗೃಹದಿಂದ ಬಿಡಲ್ಪಡುವರೆಂದು ಪ್ರಕಟವಾಗಿದೆ.

ಪುಣೆಯ ಕ್ರೈಸ್ತಸೇವಾಸಂಘದವರು ತಮ್ಮ ಸಂಘದ ಮೆಂಬರರನ್ನು ಸ್ಥಳೀಯ ಕಾಂಗ್ರೆಸ್ ಕಮಿಟಿಯವರು ಕೈಕೊಂಡಿರುವ ಮದ್ಯಪಾನನಿಷೇಧದ ಚಳವಳಿಯ ಸಹಾಯಕ್ಕೆ ಕಳುಹಿಸಿರುವರು.

ರಾಜಕೀಯ ಕೈದಿಯಾಗಿರುವ ಮಿ|| ಕಾಕಾಕಾಳೇಲ್ಕರರವರನ್ನು ಸಾಬರಮತಿ ಜೈಲಿನಿಂದ ಬೇರೆಕಡೆಗೆ ಸಾಗಿಸಿರುವರು. ಅವರನ್ನು ಎರವಾಡಾ ಜೈಲಿನಲ್ಲಿ ಮಹಾತ್ಮರ ಜೊತೆಯಲ್ಲಿರಿಸುವದಾಗಿ ವರ್ತಮಾನವಿದೆ.

ಪೂನಾ ಮುನಿಸಿಪಲ್ ಕೌನ್ಸಿಲ್ಲಿನವರು ಬೊಂಬಾಯಿಯ ಸರಕಾರಕ್ಕೆ ಮದ್ಯಪಾನ ವಿಷಯದಲ್ಲಿ ಅವರ ತತ್ವವೇನೆಂಬುದನ್ನು ಸ್ಪಷ್ಟವಾಗಿ ಒಂದು ತಿಂಗಳೊಳಗಾಗಿ ಪ್ರಕಟಿಸದಿದ್ದರೆ ಮದ್ಯಪಾನ ನಿಷೇಧಚಳವಳಿಯ ಕಾರ್ಯವನ್ನು ಕೈಕೊಳ್ಳುವದಾಗಿ (ಸರಕಾರಕ್ಕೆ) ತಿಳಿಸಿರುವರು.

ಕಳೆದ ಜನವರಿಯಲ್ಲಿ "ಸ್ವಾತಂತ್ರ್ಯದಿನಾಚರಣೆ" ಯ ಸಂಬಂಧವಾಗಿ ಮೆರವಣಿಗೆಯನ್ನು ಹೊರಡಿಸಿದ ಅಪರಾಧದ ಮೇಲೆ ಒಂದು ವರ್ಷಕಠಿಣ ಕಾರಾಗೃಹವಾಸಕ್ಕೆ ಗುರಿಯಾಗಿರುವ ಮೂದಲಿಯಾರದ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ಮಿ|| ಸುರೇಂದ್ರ ಮೋಹನ ಘೋಷರು ಇದೇ ಜೂನ್ 13ನೆಯ ತಾರೀಖಿನಿಂದ ಇತರ 4 ಜನ ರಾಜಕೀಯ ಕೈದಿಗಳೊಡನೆ ಉಪವಾಸವ್ರತವನ್ನು ಕೈಕೊಂಡಿರುವರು. ಜೈಲ್ ಅಧಿಕಾರಿಗಳ ಅಸಮರ್ಪಕವಾದ ವರ್ತನವೇ ಇದಕ್ಕೆ ಕಾರಣವಾಗಿದೆ.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಕಳೆದ ತಿಂಗಳು ಜಲಾಲ್‌ಪುರ ತಾಲೂಕಿನ 30 ಹಳ್ಳಿಗಳಲ್ಲಿ ಮದ್ಯಪಾನನಿಷೇಧ ಚಳವಳಿಯನ್ನು ಮಾಡುತ್ತ ಸಂಚಾರಮಾಡಿದರು. ಇದುವರೆಗೆ 30,000 ತಾಳೇಮರಗಳನ್ನು ಕಡಿಸಿಹಾಕಿರುವರು. ಅನೇಕ ಮದ್ಯದ ಅಂಗಡಿಗಳು ಮುಚ್ಚಲ್ಪಟ್ಟಿರುವವಲ್ಲದೆ ಕೂಲಿಯವರೆಲ್ಲರೂ ಮದ್ಯಪಾನವನ್ನು ಸಂಪೂರ್ಣವಾಗಿ ಬಿಟ್ಟಿರುವರು.

ಇದೇ ಜೂನ್ 16 ನೆಯ ತಾರೀಖಿನ ದಿವಸ ಸರಕಾರದವರು ಪೂನಾ ಡಿಸ್ಟ್ರಿಕ್ಟಿನ ಮದ್ಯದ ಅಂಗಡಿಗಳನ್ನು ಹರಾಜುಮಾಡಿದರು. ಹರಾಜಿಗೆ 30 ಜನರು ಹೋಗಿದ್ದರು. ಒಟ್ಟು 56 ಅಂಗಡಿಗಳಲ್ಲಿ 4 ಅಂಗಡಿಗಳು ಮಾತ್ರ 2000 ರೂ. ಗಳಿಗೆ ಹರಾಜು ಮಾಡಲ್ಪಟ್ಟವು. ಕಳೆದ ವರ್ಷ ಈ ಡಿಸ್ಟ್ರಿಕ್ಟಿನಲ್ಲಿ ಮದ್ಯದ ಅಂಗಡಿಗಳಿಂದ 3,00,000 ರೂಪಾಯಿಗಳ ಆದಾಯವು ಬಂದಿತ್ತು.

ಸೈಮನ್ ರಿಪೋರ್ಟಿನ ಎರಡನೆಯ ಭಾಗವು ಪ್ರಕಟವಾದನಂತರ ಕಾಂಗ್ರೆಸ್ಸಿನವರು ಅಸಹಕಾರ ಚಳವಳಿಯನ್ನು ನಿಲ್ಲಿಸುವದಾದರೆ ಸರಕಾರದವರು ನೂತನವಾಗಿ ಜಾರಿಗೆ ತಂದಿರುವ ಕಾಯಿದೆಗಳನ್ನು ರದ್ದುಪಡಿಸುವದಲ್ಲದೆ ರಾಜಕೀಯ ಕೈದಿಗಳೆಲ್ಲರನ್ನೂ ಬಿಟ್ಟುಬಿಡುವರೆಂದು "ಸ್ಟೇಟ್ಸ್‌ಮನ್" ಪತ್ರಿಕಾ ಪ್ರತಿನಿಧಿಗಳು ಬರೆದಿರುತ್ತಾರೆ.

ಸ್ವೀಕಾರ.

ಧಾರವಾಡ ಡಿ|| ಹಾವೇರಿ ಟೌನ್ ನಿವಾಸಿಗಳಾದ ಮ|| ರಾ|| ಎರಿಶೀಮೆ ರಾಚಪ್ಪನವರು ತಮ್ಮ ತೃತೀಯಪೌತ್ರನ ಲಿಂಗಧಾರಣ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಶಿವಮೊಗ್ಗ ಡಿ|| ಶಿಕಾರಿಪುರ ತಾಲೂಕು ಕಡೆನಂದಿಹಳ್ಳಿ ಗ್ರಾಮದ ಮ|| ರಾ|| ಬಿ. ಹಂಪಪ್ಪ ಇವರು ತಮ್ಮ ವಿವಾಹಮಹೋತ್ಸವ ಸಮಯದಲ್ಲಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕಳೆದ 18 ನೆಯ ತಾರೀಖು ಮಧ್ಯಾಹ್ನ 4-೩೦ ಘಂಟೆಯ ಸಮಯದಲ್ಲಿ ಮದರಾಸಿನ ರಾಯಪುರಂ ಸೇತುವೆಯ ಹತ್ತಿರ ಮೆಸ್ಸರ್ಸ್ ಮ್ಯಾಸೆ ಅಂಡ್ ಕಂಪೆನಿಯ ಸಮೀಪದಲ್ಲಿದ್ದ ಬರ್ಮಾ ಆಯಿಲ್ ಕಂಪೆನಿಯ ಪೆಟ್ರೋಲ್ ಎಣ್ಣೆಯ ಟ್ಯಾಂಕಿಗೆ ಬೆಂಕಿ ಬಿದ್ದು 2 ಲಕ್ಷ ರೂಪಾಯಿಗಳ ನಷ್ಟಸಂಭವಿಸಿರುವದು. ಬೆಂಕಿಯನ್ನು ಆರಿಸಲು 18 ಘಂಟೆಗಳಕಾಲ ಹಿಡಿಯಿತು.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ

ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ.

(ಬಡ್ಜೆಟ್ ಅಧಿವೇಶನ.)

1930 ನೆಯ ಇಸವಿ ಜೂನ್ ತಿಂಗಳು 13 ನೆಯ ತಾರೀಖು.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ,

ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರು ಕೃಪೆಮಾಡಿ ರಾಜಕೀಯ ಸುಧಾರಣೆಗಳನ್ನು ಅನುಗ್ರಹಿಸಿದ ಮೇಲೆ, ಈ ಸಭೆಯು ಇಲ್ಲಿಗೆ ಮೂರುಸಾರಿ ಪುನರ್ವ್ಯವಸ್ಥೆಯಾದ ಹಾಗಾಯಿತು. ಹೀಗೆ ಮೂರನೆಯಸಾರಿ ಏರ್ಪಟ್ಟಿರುವ ಈ ಸಭೆಯ ಮೊಟ್ಟಮೊದಲನೆಯ ಅಧಿವೇಶನವು ಈಗ ನಡೆಯುವುದಾಗಿದೆ. ಈ ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಆದರ ಪೂರ್ವಕವಾಗಿ ಬರಮಾಡಿಕೊಳ್ಳುವ ಗೌರವವೂ ಸುಯೋಗವೂ, ನನಗೆ ದೊರೆತಿವೆ. ತಮ್ಮೆಲ್ಲರಿಗೂ—ಅದರಲ್ಲಿಯೂ ವಿಶೇಷವಾಗಿ ಈ ಸಭೆಗೆ ಹೊಸದಾಗಿ ಸದಸ್ಯರಾಗಿ ಬಂದಿರುವವರೆಲ್ಲರಿಗೂ—ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸುತ್ತೇನೆ. ದೇಶಸೇವೆಯ ದೀಕ್ಷೆಯನ್ನು ವಹಿಸಿ ಉತ್ಸಾಹದಿಂದ ಕೆಲಸಮಾಡಲು, ಈ ಸಭೆಯ ಅಧಿವೇಶನಗಳಿಂದ ತಮಗೆ ಮತ್ತಷ್ಟು ಹೆಚ್ಚಿನ ಸ್ಫೂರ್ತಿಯುಂಟಾಗುತ್ತದೆ. ಈ ಸಭೆಯಲ್ಲಿ ತಮಗೆ ಲಭಿಸುವ ಅನುಭವವೂ, ತಿಳವಳಿಕೆಯೂ, ಸಾಮಾನ್ಯವಾದವುಗಳಲ್ಲ. ಮೈಸೂರು ಸಂಸ್ಥಾನದ ಪ್ರಜಾವರ್ಗಕ್ಕೆ ಸೇರಿದವರಾಗಿಯೂ, ದೇಶವತ್ಸಲರಾದ ಪ್ರಜಾಮುಖಂಡರಾಗಿಯೂ, ಇರುವ ತಾವೆಲ್ಲರೂ ತಮ್ಮ ಕರ್ತವ್ಯಗಳನ್ನು ಸಾಂಗವಾಗಿ ನೆರವೇರಿಸಿ, ತನ್ಮೂಲಕ ತಮ್ಮ ಮನಸ್ಸಿಗೆ ಹೆಚ್ಚಿನ ಹರ್ಷವನ್ನೂ, ತಮ್ಮ ದೇಶಬಾಂಧವರಿಗೆ ಅತ್ಯಧಿಕವಾದ ಪ್ರಯೋಜನಗಳನ್ನೂ, ದೊರೆಯಿಸಲು ಅವುಗಳಿಂದ ಅಮೋಘವಾದ ಸಹಾಯವು ಲಭಿಸುತ್ತದೆಂದು ಧಾರಾಳವಾಗಿ ಹೇಳಬಹುದಾಗಿದೆ.

ಮಹನೀಯರೆ, ಇದಿಷ್ಟೂ ಈ ಸಭೆಯವರ ಕರ್ತವ್ಯಗಳನ್ನು ಕುರಿತ ವಿಚಾರವಾಯಿತು. ಆದರೆ ಈ ಸಂಬಂಧದಲ್ಲಿ ನಾವು ಮತ್ತೊಂದು ಅಂಶವನ್ನೂ ಗಮನಿಸಬೇಕು; ಪ್ರಜಾವರ್ಗದವರ ಮೇಲೆ ಕೂಡ, ನಾನಾ ಜವಾಬ್ದಾರಿಗಳ ಹೊರೆಯೂ ಇದ್ದೇ ಇದೆ. ಪ್ರಜೆಗಳೂ ನಾನಾ ವಿಧವಾದ ಕರ್ತವ್ಯಗಳನ್ನು ನೆರವೇರಿಸಬೇಕಾಗಿದೆ. ಇದನ್ನು ತಾವೂ ಒಪ್ಪಿಯೇ ಒಪ್ಪುವಿರೆಂದು ನಾನು ನಂಬಿದ್ದೇನೆ. ಗಂಡಸಾಗಲಿ, ಹೆಂಗುಸಾಗಲಿ ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಒಂದಲ್ಲದಿದ್ದರೆ ಮತ್ತೊಂದು ಬಗೆಯಾಗಿ ತಮ್ಮ ದೇಶಬಾಂಧವರಿಗೆ ಸೇವೆಯನ್ನರ್ಪಿಸಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ಅವರವರ ಶಕ್ತಿಸಾಮರ್ಥ್ಯಗಳಿಗನುಸಾರವಾಗಿಯೂ, ಅವರವರಿಗೆ ಲಭಿಸುವ ಸಮಯ ಸನ್ನಿವೇಶಗಳಿಗೆ ತಕ್ಕಂತೆಯೂ, ತನಗೆ ಸೇವೆಯನ್ನರ್ಪಿಸಬೇಕೆಂಬುದಾಗಿ ದೇಶಮಾತೆಯು ನಿರೀಕ್ಷಿಸುತ್ತಿದ್ದಾಳೆ. "ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ | ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ||" ಎಂಬುದಾಗಿ ಗೀತಾವಾಕ್ಯವಿದೆ. ಪತ್ರವನ್ನಾಗಲಿ, ಪುಷ್ಪವನ್ನಾಗಲಿ, ಫಲವನ್ನಾಗಲಿ, ಕೊನೆಗೆ ಉದಕವನ್ನಾಗಲಿ, ತಮಗೆ ಸಾಧ್ಯವಿರುವ ಯಾವುದನ್ನೇ ಆಗಲಿ, ಯಾರೇ ಭಕ್ತಿಪೂರ್ವಕವಾಗಿ ಸಮರ್ಪಿಸಿದರೂ ಭಗವಂತನು ಅದನ್ನು ಆದರದಿಂದ ಸ್ವೀಕರಿಸುತ್ತಾನಂತೆ. ದೇಶಮಾತೆಯೂ ಇದೇ ರೀತಿಯಲ್ಲಿ ಯಾರು ಯಾವ ಸೇವೆಯನ್ನು ಪ್ರೀತಿಭಕ್ತಿಗಳಿಂದ ಸಮರ್ಪಿಸಿದರೂ, ತನ್ನ ಅಮೃತಹಸ್ತದಿಂದ ಅದನ್ನು ಸ್ವೀಕರಿಸಲು ಸಿದ್ಧವಾಗಿ ನಿಂತಿದ್ದಾಳೆ. ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಯಥಾಶಕ್ತಿಯಾಗಿ ಸಂಸ್ಥಾನಕ್ಕೆ ತಮ್ಮ ಸೇವೆಯನ್ನರ್ಪಿಸಿ ಕೃತಾರ್ಥರಾಗಬೇಕಾದುದು ಯುಕ್ತವಾಗಿದೆ. ಈ ಸಭೆಯ ಕಾರ್ಯಗಳಲ್ಲಿ ಭಾಗಿಗಳಾಗಿ ಇಲ್ಲಿ ದೊರೆಯುವ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುವವರೆಲ್ಲರ ಮನಸ್ಸಿನಲ್ಲಿಯೂ ಇಂತಹ ಕರ್ತವ್ಯಬುದ್ಧಿಯು ಖಚಿತವಾಗಿ ನೆಲೆಗೊಳ್ಳುತ್ತದೆ. ಇದು ಈ ಸಭೆಯಿಂದ ದೊರೆಯುವ ಅಸಾಧಾರಣವಾದ ಪ್ರಯೋಜನವಲ್ಲವೆ?

ಈ ಸಲದ ಅಧಿವೇಶನದಲ್ಲಿ ದೊಡ್ಡದೊಂದು ವಿಶೇಷವುಂಟು. ಮಹಿಳೆಯರು ಇಲ್ಲಿ ಸದಸ್ಯರಾಗಿರುವ ಸಂತೋಷಕರವಾದ ಪುಣ್ಯೋದಯವು ಈ ಸಭೆಗೆ ದೊರೆತುದು ಇದೇ ಮೊಟ್ಟಮೊದಲನೆಯ ಸಾರಿ. ಈ ಸಭೆಗೆ ಇಂತಹ ಸುಯೋಗವು ದೊರೆತುದಕ್ಕಾಗಿ ನಾವೆಲ್ಲರೂ ಆನಂದಿಸಬಹುದಾಗಿದೆ. ಅವರಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸಿ ಸಂತೋಷವನ್ನು ಸೂಚಿಸುವದರಲ್ಲಿ ತಾವೆಲ್ಲರೂ ಮುಕ್ತಕಂಠದಿಂದ ನನ್ನ ಅಭಿಪ್ರಾಯವನ್ನು ಅನುಮೋದಿಸಿ ನನ್ನೊಡನೆ ಸೇರುವಿರೆಂದು ನಂಬಿದ್ದೇನೆ. ಮಹಿಳೆಯರು ಸದಸ್ಯರಾಗಿರುವದರಿಂದ ನಮಗೆ ಅನೇಕ ಪ್ರಯೋಜನಗಳಿರುವದೇ, ನಾನು ಅವರನ್ನು ಇಷ್ಟು ಆದರದಿಂದ ಸ್ವಾಗತಪೂರ್ವಕವಾಗಿ ಬರಮಾಡಿಕೊಳ್ಳಲು ಮುಖ್ಯಕಾರಣವಾಗಿದೆ. ಪುರುಷರಿಗೆ ತಿಳಿಯದ ಅನೇಕ ವಿಚಾರಗಳಲ್ಲಿ ಸ್ತ್ರೀಯರಿಗೆ ಆಲೋಚನೆಯುಂಟು. ಅವುಗಳಲ್ಲಿ ಅವರು ಸಲಹೆ ಹೇಳಬಲ್ಲರು. ಅಲ್ಲದೆ, ತೊಂದರೆಗೊಳಗಾದವರ ವಿಷಯದಲ್ಲಿಯೂ, ಕಷ್ಟವನ್ನನುಭವಿಸುತ್ತಿರುವವರ ವಿಷಯದಲ್ಲಿಯೂ ಕನಿಕರದಿಂದ ಅನುತಾಪಪಡುವ ದೆಂತು, ಸ್ತ್ರೀಯರಿಗೆ ಪ್ರಕೃತಿಸಿದ್ಧವಾಗಿ ಬಂದಿರುವ ವಿಶೇಷಗುಣವಾಗಿದೆ. ಆದಕಾರಣ, ಪುರುಷರ ಪರಾಮರ್ಶದ ಜೊತೆಗೆ ಸ್ತ್ರೀಯರ ವಿವೇಚನೆಯೂ ಸೇರಿದರೆ, ಕರುಣೆಯ ಸನಿರಸದಿಂದ ಕೂಡಿದ ತೀರ್ಮಾನವೇ ನೊರೆಯುಲುಮುಕೊಲಿಸುತ್ತದೆ. ಮಹಿಳೆಯರು ಇಲ್ಲಿ ಸಭಿಕರಾಗಿರುವ ವಿಚಾರದಲ್ಲಿ ನಾವು ಸಂತೋಷಿಸಲು ಇದೇ

ಅಲ್ಲದೆ ಮತ್ತೊಂದು ಕಾರಣವೂ ಉಂಟು. ಮೈಸೂರು ಸಂಸ್ಥಾನದಲ್ಲೇ ಆಗಲಿ, ಅಥವಾ ಒಟ್ಟು ಭರತಖಂಡದಲ್ಲೇ ಆಗಲಿ ಅಭ್ಯುದಯವನ್ನು ಪಡೆಯುವ ಪ್ರಯತ್ನದಲ್ಲಿ ಸ್ತ್ರೀಪುರುಷರೀರ್ವರೂ ಸೌಹಾರ್ದಭಾವದಿಂದ ಸಹಕರಿಸಿ ವರ್ತಿಸಬೇಕು. ಸ್ತ್ರೀಯರ ಸಹಾಯವೂ ಅವಲಂಬನವೂ ಇಲ್ಲದೆ ಹೋದರೆ, ಕೇವಲ ಪುರುಷರು ಮಾತ್ರವೇ ಸೇರಿ ಎಷ್ಟೇ ಪ್ರಯತ್ನಿಸಿದರೂ, ದೇಶೋನ್ನತಿ ಸಾಧನೆಯೆಂಬ ದಿವ್ಯರಥವೆಂದಿಗೂ ಸುಸೂತ್ರವಾಗಿ ಮುಂದುವರಿದು ತನ್ನ ನೆಲೆಯನ್ನು ಸೇರುವಂತಿಲ್ಲ.

ನಾವು ಅಧಿವೇಶನವನ್ನು ನಡೆಯಿಸುವ ಈಗಿನ ಸಮಯವಾದರೂ ಎಂತಹುದು ನೋಡಿ! ಪ್ರಪಂಚವನ್ನೇ ದಿಂಡುಗೆಡಿಸಿ ಕಳವಳವನ್ನುಂಟುಮಾಡುತ್ತಿರುವ ಸನ್ನಿವೇಶಗಳಿಂದ ಇಂದು ಒಟ್ಟು ಮನುಷ್ಯತ್ವವೇ ಬಳಲುತ್ತಿದೆ. ಇದಕ್ಕೇನು ಕಾರಣ? "ಅರ್ಥಾಃ ಬಹಿಶ್ಚರಾಃ ಪ್ರಾಣಾಃ" ಎಂಬಂತೆ ಲೋಕವ್ಯವಹಾರದಲ್ಲಿ ಹಣವೇ ಮನುಷ್ಯರ ಹೊರಗಿನ ಪ್ರಾಣ; ಎಲ್ಲ ಸುಖಸಾಧನೆಗಳಿಗೂ ಅದೇ ಮೂಲ. ಆ ಹಣವನ್ನು ಸಂಪಾದಿಸಲು ಕೈಗಾರಿಕೆಗಳನ್ನು ಹೂಡಿ ವಸ್ತುರಚನೆಮಾಡಿ ವ್ಯಾಪಾರವನ್ನು ನಡೆಯಿಸುವುದೇ ಮುಖ್ಯ ಮಾರ್ಗ. ನಾನಾದೇಶಗಳವರೂ ಈ ಮಾರ್ಗವನ್ನವಲಂಬಿಸಿ ಕೆಲಸ ಮಾಡತೊಡಗಿದರು. ಈಚೆಗೆ ಅವರು ಗಿರಾಕಿಯನ್ನು ನೋಡಿಕೊಂಡು ತಕ್ಕಷ್ಟು ಸಾಮಾನುಗಳನ್ನು ರಚಿಸುವದನ್ನು ಬಿಟ್ಟು, ಅವರೆಲ್ಲರೂ ಅಪರಿಮಿತವಾಗಿ ವಸ್ತುರಚನೆಗೆ ಉಪಕ್ರಮ ಮಾಡಿದರು. ಇದರಿಂದ ಒಟ್ಟು ಪರಿಸ್ಥಿತಿಯೇ ಹದಗೆಟ್ಟು, ಎಲ್ಲಿ ನೋಡಿದರೂ ಹಾಹಾಕಾರಕ್ಕೆ ಪ್ರಾರಂಭವಾಯಿತು. ಒಂದೊಂದು ಕೈಗಾರಿಕೆಯು ಹೀಗೆ ಮಿತಿಮೀರಿ ನಡೆಯುತ್ತಿದೆ. ಒಂದು ಕಡೆ ಬೆಳ್ಳಿಯೋ, ತವರವೋ, ತಾಮ್ರವೋ ಯಾವದೋ ಒಂದು ಲೋಹದ ರಾಶಿ. ತೋಡಿದಷ್ಟೂ ಗಣಿಗಳಲ್ಲಿ ಅದುರು ದೊರೆಯುತ್ತದೆ. ಕೆಲಸ ಮಾಡಲು ಯಂತ್ರದ ಮೇಲೆ ಯಂತ್ರವಿದೆ. ಇನ್ನೇನು? ಗಿರಾಕಿಯಿದೆಯೇ ಎನ್ನುವ ಯೋಚನೆಯೇ ಇಲ್ಲದೆ ರಾಶಿರಾಶಿ ಲೋಹಗಳು ಮಾತ್ರವೇ ಅಲ್ಲದೆ, ಇತರ ಎಲ್ಲ ವಸ್ತುಗಳ ವಿಚಾರದಲ್ಲಿಯೂ ಹೀಗೆಯೇ ನಡೆಯುತ್ತಿದೆ. ಒಂದುಕಡೆ ಮಿತಿಮೀರಿ ಗೋಧಿಯನ್ನೂ, ಕಡಲೆಕಾಯನ್ನೂ, ಬೆಳೆಯುವುದು; ಒಂದುಕಡೆ ತೇಯಿಲೆಯನ್ನೂ, ಕಾಫಿಯನ್ನೂ, ರಬ್ಬರನ್ನೂ, ಉಣ್ಣೆಯನ್ನೂ ಮಿತಿಯೇ ಇಲ್ಲದೆ ಸಿದ್ಧಗೊಳಿಸುವದು; ಇತರ ಕಡೆ ಇತರ ವಸ್ತುಗಳನ್ನು ರಾಶಿರಾಶಿಯಾಗಿ ರಚಿಸುವದು; ಕೊನೆಗೆ ಗಿರಾಕಿಯಿಲ್ಲದೆ ಕಳವಳಪಡುವದು; ಹೀಗಾಗಿದೆ ಇಂದಿನಸ್ಥಿತಿ! ಬೆಳಗೆದ್ದರೆ ಯಾವ ವರ್ತಮಾನ ಪತ್ರಿಕೆಗಳಲ್ಲಿ ನೋಡಿದರೂ ಇದೇ ವಿಧದ ವಾರ್ತೆಯೇ! "ಇಂದು ಬೊಂಬಾಯಿಯ ಗಿರಣಿಗಳಲ್ಲಿ ರಚಿಸಲ್ಪಟ್ಟ ಬಟ್ಟೆಯು ಗಿರಾಕಿಯಿಲ್ಲದೆ ತಂಡತಂಡವಾಗಿ ಉಳಿದು ಹೋಗಿದೆ." "ಇಂದು ಲಾಂಕಾಷೈರಿನಲ್ಲಿ ಬಟ್ಟೆಗಳ ರಾಶಿಯು ಹಾಗೆಯೇ ಬಿದ್ದಿದೆ." "ಈಗ ಅಮೆರಿಕಾ ಖಂಡದವರು ಮೋಟಾರು ಬಂಡಿಗಳನ್ನು ಮಿತಿಮೀರಿ ತಯಾರಿಸಿ ಮೂಲೆಮೂಲೆಗೂ ತುಂಬುತ್ತಿದ್ದಾರೆ." ಎಂಬ ವಾರ್ತೆಗಳು! ಯಾವ ವರ್ತಮಾನ ಪತ್ರಿಕೆಯಲ್ಲಿ ನೋಡಿದರೂ ಇಂತಹ ವಾರ್ತೆಯೇ ಇರುತ್ತದೆ. ಬಳಕೆಗೆ ಬೇಕಾದ ಪದಾರ್ಥಗಳ ಮಾತಂತು ಹೀಗಾಯಿತಲ್ಲ. ಆ ಪದಾರ್ಥಗಳ ರಚನೆಗೆ ಬೇಕಾದ ಮೂಲವಸ್ತುಗಳಂತಿರುವ ರಸಾಯನ ವಸ್ತುಗಳು ಕೂಡ, ಕೇಳುವವರೇ ಗತಿಯಿಲ್ಲದಷ್ಟು ಹೆಚ್ಚಿನ ಪ್ರಮಾಣದಲ್ಲಿ ರಚಿಸಲ್ಪಡುತ್ತಿವೆ. ಕೈಗಾರಿಕೆಗಳ ಕಾರ್ಖಾನೆಗಳವರು ಹೆಚ್ಚು ಜನರನ್ನು ನೇಮಿಸಿ ಈರೀತಿ ಹುರುಪಿನಿಂದ ಕೆಲಸವನ್ನೇನೋ ನಡೆಯಿಸಿಬಿಡುತ್ತಾರೆ. ಆ ಬಳಿಕ ತಮ್ಮ ವಸ್ತುಗಳಿಗೆ ಗಿರಾಕಿಯಿಲ್ಲದಂತಾದೊಡನೆಯೆ, ಅವರು ಪೇಚಾಡಲು ಪ್ರಾರಂಭಿಸುತ್ತಾರೆ. ಕೊನೆಗೆ ನಿರ್ವಾಹವಿಲ್ಲದೆ ಸ್ವಲ್ಪ ಕಾಲ ಆಯಾ ಕೈಗಾರಿಕೆಯನ್ನೇ ನಿಲ್ಲಿಸಿ ಬಡ ಕೆಲಸಗಾರರನ್ನು ಮನೆಗೆ ಕಳುಹಿಸುತ್ತಾರೆ. ಈಗಿನ ಕಷ್ಟವನ್ನು ಕೇಳಬೇಕೆ? ಎಲ್ಲಿ ನೋಡಿದರೂ ನಿರುದ್ಯೋಗವೆಂಬ ಹಸಿದ ತೋಳನಿಂದ ಖಂಡವನ್ನೇ ಕೀಳಿಸಿಕೊಳ್ಳುತ್ತಿರುವಂತೆ ತೋರುವ ಜನಸಮೂಹ! ಎಲ್ಲಿ ನೋಡಿದರೂ, ಮಾಡಲು ಕೆಲಸ ದೊರೆಯದೆ, ಹೊಟ್ಟೆಗೆ ಅನ್ನವಿಲ್ಲದೆ, ತೊಳಲಿ ಬಳಲುವ ಬಡಕೂಲಿಯವರ ಕಾತರ ಸ್ವರದ ಹಾಹಾಕಾರ! ಇಷ್ಟಾಯಿತು. ಬಂಡವಾಳವನ್ನು ಹಾಕಿರುವ ಕಾರ್ಖಾನೆಯ ಯಜಮಾನರಿಗೆ ತಾನೆ ಸುಖವುಂಟೆ? ಇಲ್ಲ; ನಿಶ್ಚಯವಾಗಿಯೂ ಇಲ್ಲ. ಹಾಕಿದ ಬಂಡವಾಳಕ್ಕೆ ಬಡ್ಡಿಯಿಲ್ಲ; ಮಾಡಿದ ಪದಾರ್ಥಗಳನ್ನು ಕೇಳುವವರಿಲ್ಲ; ಹಣ ಸಂಪಾದನೆಗೆ ದಾರಿಯಿಲ್ಲ; ಇದು ಅವರ ಕಷ್ಟ. ಹೀಗೆ ಒದಗಿರುವ ವಿಷಮಸ್ಥಿತಿಯಿಂದ ಪಾರಾಗುವ ಮಾರ್ಗವನ್ನು ನಮ್ಮಲ್ಲಿ ಮೇಧಾವಿಗಳೆನಿಸಿದವರೆಲ್ಲರೂ ಹುಡುಕುತ್ತಿದ್ದೇವೆ. ಆದರೂ ಈ ಸಮಸ್ಯೆಯನ್ನು ಬಗೆಹರಿಸುವ ಉಪಾಯವು ಬೇರೆ ಒಬ್ಬರಿಗೂ ತೋರಿಬಂದಿಲ್ಲ. ಹೆಚ್ಚೇಕೆ? ಇದೊಂದು ಚಕ್ರಭ್ರಮಣ ಕೋಟೆ. ಸುತ್ತಿದಷ್ಟೂ, ಸುತ್ತುದುದೊಂದೇ ಫಲವೇ ಹೊರತು, ಹೊರಗೆ ಬರಲು ಅವಕಾಶವೇ ದೊರೆಯುತ್ತಿಲ್ಲದು. ಕೋಟೆಯಿಂದ ಪಾರಾಗುವ ಮಾರ್ಗವು ಗೋಚರವಾಯಿತೆಂದು ಬಗೆದು, ಬಾಗಿಲನ್ನು ದಾಟಿದರೂ, ಬರುವುದೇನೋ ಮೊದಲು ಹೊರಟ ಸ್ಥಳಕ್ಕೆ ಮಾತ್ರವೇ! ಈಗಿನ ಈ ವಿಷಮ ಸಮಸ್ಯೆಯನ್ನು ಬಗೆಹರಿಸುವ ಮಾರ್ಗವನ್ನು ಹುಡುಕುತ್ತಿರುವ ಮೇಧಾವಿಗಳ ಪಾಡೂ ಹೀಗೆಯೇ ಆಗಿದೆ.

ಈ ಬಗೆಯ ವಿಷಮಸ್ಥಿತಿಯಿಂದ ಹುಟ್ಟಿದ ಬಂಡಮಾರುತನ ಹೊಡೆತಕ್ಕೆ ಪ್ರಪಂಚದಲ್ಲಿರುವ ನಾನಾ ದೇಶಗಳ ಸರ್ಕಾರಗಳವರೂ ಸಿಕ್ಕಿ ತೊಂದರೆಪಡುತ್ತಿದ್ದಾರೆ. ಇದರ ತಾಪವೀಯು ಸರ್ಕಾರಗಳನ್ನೂ ಹಿಂಡುತ್ತಿದೆ. ಯೂರೋಪಿನ ಘೋರಯುದ್ಧದ ತರುವಾಯ ಹನ್ನೆರಡನೆಯ ಸಂವತ್ಸರದಲ್ಲಿ ಕೂಡ, ಬ್ರಿಟಿಷ್ ಸರ್ಕಾರದವರು ಒಂದು ಪೌಂಡಿಗೆ 4 ಷಿಲಿಂಗ್ 6 ಪೆನ್ನಿಗಳಂತೆ ನಿರ್ವಾಹವಿಲ್ಲದೆ ವರಮಾನದ ತೆರಿಗೆಯನ್ನು ಪುನಃ ಹೆಚ್ಚಿಸಬೇಕಾಯಿತು. ಎಂದರೆ, ನಮ್ಮ ದೇಶದ ನಾಣ್ಯಕ್ಕೆ ತೆರಿಗೆಯನ್ನು ರೂಪಾಂತರಗೊಳಿಸಿದರೆ, ಪ್ರತಿಯೊಂದು ರೂಪಾಯಿಗೂ 3½ ಆಣೆಗಳಿಗೆ ಮೇಲ್ಪಟ್ಟು ವರಮಾನದ ತೆರಿಗೆಯನ್ನು ವಿಧಿಸಿದಂತಾಯಿತು. ಇಂಡಿಯಾ ಸರ್ಕಾರದವರು ಕೂಡ, ತಮ್ಮ ಆಯವ್ಯಯಗಳನ್ನು ಸಮತೂಕಕ್ಕೆ ತರುವದಕ್ಕಾಗಿ ಹೊಸ ತೆರಿಗೆಗಳನ್ನು ಹಾಕಿ ಹಣವನ್ನೊದಗಿಸಿಕೊಳ್ಳಬೇಕಾಯಿತು. ಅಷ್ಟೇ ಅಲ್ಲ, ಅವರು ಶೇಕಡ ಆರಕ್ಕಿಂತಲೂ ಹೆಚ್ಚು ಬಡ್ಡಿಯನ್ನು ಕೊಟ್ಟು ಇಂಗ್ಲೆಂಡಿನಿಂದ ಸಾಲವನ್ನು ಪಡೆಯಬೇಕಾಯಿತು. ಹೀಗೆ ಹೆಚ್ಚಿನ ಬಡ್ಡಿಯನ್ನು ಕೊಡಬೇಕಾದುದು ಯುದ್ಧವಾದ ತರುಣದಲ್ಲಿಯ ತಾತ್ಕಾಲಿಕವಾದ ವಿಶೇಷ ಲಕ್ಷಣವೆಂದು ನಾವು ಭಾವಿಸಿದ್ದೆವು. ಆದರೆ, ಈಗಲೂ ಸಹ, ಇಂತಹ ವಿಷಮಪರಿಸ್ಥಿತಿಯ ಪರಿಹಾರವಾಗದೆ ಹಾಗೆಯೇ ಇರುವದು ಶೋಚನೀಯವಾಗಿದೆ.

ನಮ್ಮ ದೇಶದಲ್ಲಿ ಮತ್ತೆ ಹೊಸತೆರಿಗೆ ಯಾವದನ್ನೂ ಹಾಕದೆ, ಮುಂದಣ ವರುಷದ ಆಯವ್ಯಯಗಳನ್ನು ಸಮತೂಕದಲ್ಲಿಟ್ಟು ಆಯವ್ಯಯದ ಅಂದಾಜುಪಟ್ಟಿಯನ್ನು ರಚಿಸಿದ್ದೇವೆ. ಹೀಗೆ ಮಾಡುವದು ಸಾಧ್ಯವಾದುದಕ್ಕಾಗಿ ನಾನು ಹರ್ಷಿಸುತ್ತೇನೆ. ಆದರೂ, ಹೆಚ್ಚು ಹಣವೇನೊ ತೀರ ಅವಶ್ಯವಾಗಿದೆ. ಹೀಗಿದ್ದರೂ ಕೂಡ, ನಾವು ಯಾವ ಹೊಸತೆರಿಗೆಯನ್ನೂ ಹಾಕದೆಯೇ ಆಯವ್ಯಯಗಳನ್ನು ಅನುಗೂಡಿಸಿ ಹೊಂದಿಕೆಮಾಡಿದ್ದೇವೆ. ನಾವು ಈಗ ಮತ್ತೊಂದು ಸಾಲವನ್ನು ತೆಗೆಯುವವರಾಗಿದ್ದೇವೆಂಬುದೇನೋ ನಿಜ. ಅದರ ವಿಷಯವು ಇಷ್ಟರಲ್ಲೇ ಪ್ರಕಟವಾಗುತ್ತದೆ. ಆದರೆ ಆಯವ್ಯಯಗಳನ್ನು ಸಮಸ್ಥಿತಿಯಲ್ಲಿಟ್ಟು ಕಾಪಾಡಿಕೊಳ್ಳುವದಕ್ಕಾಗಿ ನಾವು ಈ ಸಾಲವನ್ನೆತ್ತುವದಿಲ್ಲ. ಮುಂದಣ ನವಂಬರು ತಿಂಗಳ ಹೊತ್ತಿಗೆ ಅವಧಿಯು ಪೂರೈಸುವ ಹಿಂದಣ ಸಾಲವನ್ನು ತೀರಿಸುವದಕ್ಕಾಗಿಯೇ, ಈ ಹೊಸ ಸಾಲದ ಹಣದಲ್ಲಿ ಹೆಚ್ಚು ಭಾಗದ ಮೊತ್ತವು ವಿನಿಯೋಗವಾಗುತ್ತದೆ. ಈ ಹೊಸಸಾಲದ ಹಣವು ಈಗ ನಾವು ಕೊಡುತ್ತಿರುವದಕ್ಕಿಂತಲೂ ಕಡಿಮೆ ದರದ ಬಡ್ಡಿಯಲ್ಲಿ ನಮಗೆ ದೊರೆಕೀತೆಂದು ನಂಬಿ ನಿರೀಕ್ಷಿಸುತ್ತಿದ್ದೇವೆ. ಮುಂದಣಸಾಲಿನ ಆಯವ್ಯಯದ ಅಂದಾಜನ್ನು ಸಮತೂಕಕ್ಕೆ ತರುವದರಲ್ಲಿ ನಮಗೆ ಬಹಳ ಕಷ್ಟವಾಯಿತೆಂಬ ಅಂಶವನ್ನು, ಸ್ವಲ್ಪವೂ ಮುಚ್ಚುಮರೆಯಿಲ್ಲದೆ ತಮಗೆ ತಿಳಿಸಲಿಚ್ಛಿಸುತ್ತೇನೆ. ನಮ್ಮ ಹುಟ್ಟುವಳಿಗೂ ವೆಚ್ಚಕ್ಕೂ ಅಲ್ಲಿಗಲ್ಲಿಗೆ ಸಮವಾಗಿದೆಯೇ ಹೊರತು, ಭಾರಿ ಮೊಬಲಗಿನ ಉಳಿತಾಯವೇನೂ ಕಂಡುಬಂದಿಲ್ಲ. ವೆಚ್ಚವು ಕಳೆದು ಎಲ್ಲೋ ಅಲ್ಪಸ್ವಲ್ಪ ಮೊಬಲಗು ಮಾತ್ರವೇ ಉಳಿಯುತ್ತದೆ. ಎಂದರೇನಾಯಿತು? ನಮಗೆ ಬರುವಷ್ಟು ಹುಟ್ಟುವಳಿಯನ್ನೂ ವಿನಿಯೋಗಿಸಿ ನಾವು ಆಡಳಿತವನ್ನು ನಿರ್ವಹಿಸುತ್ತಿದ್ದೇವೆಂದೇ ಅರ್ಥವಾಯಿತು. ಹೀಗೆ ಮಾಡಲೇಬೇಕಾಗಿ ಬಂದಿದೆ. ಅದಕ್ಕಾಗಿ ಪೇಚಾಡಬೇಕಾದ ಅವಶ್ಯಕತೆಯೂ ಇಲ್ಲ. ಏಕೆಂದರೆ, ಸಾಮಾನ್ಯವಾಗಿ ಎಲ್ಲ ದೇಶಗಳ ಸರ್ಕಾರಗಳ ಕಾರ್ಯಕಲಾಪಗಳೂ ದಿನದಿನವೂ ವೃದ್ಧಿಹೊಂದಿ ಸೆಳ್ಳಾಗುತ್ತ ಬರುತ್ತಿವೆ. ಅದರಲ್ಲಿಯೂ ಮುಖ್ಯವಾಗಿ ನಮ್ಮ ಸರ್ಕಾರದಲ್ಲಂತು, ಬಗೆಬಗೆಯ ಕಾರ್ಯಕಲಾಪಗಳೂ ಹೊಸಹೊಸದಾಗಿ ಪ್ರಾರಂಭವಾಗುತ್ತಲೇ ಇವೆ. ಹೊಸ ಕೆಲಸವನ್ನು ಆರಂಭಿಸಿ ನಡೆಯಿಸಬೇಕೆಂದರೆ, ಹೆಚ್ಚು ಹಣವು ವೆಚ್ಚವಾಗಲೇ ಬೇಕು. ಹೀಗೆ ಹೆಚ್ಚು ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಅನೇಕ ಸರ್ಕಾರಗಳವರು ತಮ್ಮ ತಮ್ಮ ದೇಶಗಳಲ್ಲಿ ಹೊಸತೆರಿಗೆಗಳನ್ನೂ ಹಾಕಿಯೇ ಇದ್ದಾರೆ. ಹಾಗೆ ಮಾಡಿದಲ್ಲದೆ, ಪರಿಣಾಮವಾಗಲಾರದಾದ ಕಾರಣ, ಯತ್ನವಿಲ್ಲದೆ ಅವರು ಆ ರೀತಿ ಮಾಡಿದ್ದಾರೆ. ಏಕೆಂದರೆ, ಈಗಿನಕಾಲದಲ್ಲಿ ನಾಗರಿಕತೆಯ ನೂತನ ಸನ್ನಿವೇಶಗಳಿಗನುಗುಣವಾಗಿ ಹೊಂದಿಕೆಯಿಂದ ನಾನಾ ಕಾರ್ಯಗಳನ್ನೂ ನೆರವೇರಿಸದೆ ಹೋದರೆ ಯತ್ನವೇ ಇಲ್ಲ. ಯಾವ ದೇಶದವರು ಹೇಗೆ ಬೇಕಾದರೂ ಮುಂದುವರಿಯಲೆಂಬುದಾಗಿ ಉಪೇಕ್ಷೆಯಿಂದಲೋ, ಅಥವಾ ಅವರಂತೆ ಮಾಡುವದು ನಮ್ಮಿಂದ ಸಾಧ್ಯವೇ ಎಂಬ ಅನುಮಾನದಿಂದಲೋ, ಸುಮ್ಮನೆ ಕುಳಿತಿದ್ದರೆ ಪರಿಣಾಮವಾಗೆದು. ಓಡುವ ಕುದುರೆಗಳ ಜೊತೆಗೆ ಓಡದೆ ಹಿಂದೆ ಬೀಳುವ ಕುದುರೆಗೆ ಸೋಲಿನ ಹೊರೆಯು ಸಿದ್ಧವಾಗಿ ಕಾದಿರುವದು. ಈಗ ಯಾವ ಕಾರ್ಯಕ್ಷೇತ್ರದಲ್ಲಿ ನೋಡಿದರೂ ಸ್ಪರ್ಧೆಯ ಪ್ರವಾಹ. ಎಲ್ಲಿ ನೋಡಿದರೂ ಪ್ರತ್ಯಹದಲ್ಲಿಯೂ ಕೈಗಾರಿಕೆಯ ಉದ್ಯಮಗಳಲ್ಲಿ ನವೀನರೀತಿಗಳಲ್ಲಿ ಪುನರ್ವ್ಯವಸ್ಥೆಗಳು ನಡೆಯುತ್ತಿವೆ. ಅಷ್ಟೇ ಅಲ್ಲ. ಇಂದು ಒಂದು ವಿಧದಲ್ಲಿ ಒಂದು ವಸ್ತುವು ರಚಿಸಲ್ಪಡುತ್ತಿದ್ದರೆ, ನಾಳೆಯೇ ಅದರ ರಚನೆಯು ಮತ್ತೂ ಸುಲಭವೆಚ್ಚದಲ್ಲಿ ಸಾಗುವಂತಹ ಹೊಸಮಾರ್ಗಗಳನ್ನು ಪರಿಶೋಧಕರು ಕಂಡುಹಿಡಿಯುತ್ತಿರುವರು. ಆಯಾ ಕಾಲಕ್ಕೆ ತಕ್ಕಂತೆ ಅವುಗಳನ್ನೆಲ್ಲ ಅವಲಂಬಿಸಿ ಉಪಯೋಗಿಸಿಕೊಂಡು ಕೆಲಸಮಾಡಿದವರು ಗೆಲ್ಲುವರು. ಉಳಿದವರು ಎಕ್ಕಟ್ಟು ಮೂಲೆಯನ್ನು ಸೇರುವರು. ಇದರ ಮೇಲೋ, ಸ್ಪರ್ಧೆಯ ಪ್ರವಾಹದಲ್ಲಿ ಹಲವರು ಒಟ್ಟುಗೂಡಿ ತಮ್ಮ ತಮ್ಮ ಕೈಗಾರಿಕೆಯ ಸಂಘಗಳು ಮತ್ತು ಸಂಸ್ಥೆಗಳಿಗೇ ಇತರ ಅದೇ ವಿಧದ ಸಂಘಗಳಿಗಿಂತಲೂ, ಸಂಸ್ಥೆಗಳಿಗಿಂತಲೂ ಹೆಚ್ಚು ಲಾಭವು ಬರುವಂತೆ ವ್ಯವಸ್ಥೆಗಳನ್ನು ಏರ್ಪಡಿಸಿಕೊಳ್ಳುತ್ತಲೇ ಇದ್ದಾರೆ. ಪ್ರಪಂಚದ ನಾನಾದೇಶಗಳಲ್ಲಿಯೂ ಹೀಗೆ ನಡೆಯುತ್ತಿದೆ. ಇದರ ಪರಿಣಾಮವೇನೆನ್ನುವಿರಿ? ಯಾವುದಾದರೂ ಕೈಗಾರಿಕೆಯವರು ಇಂತಹ ಸಮಯ ಸನ್ನಿವೇಶಗಳಿಗೆ ತಕ್ಕಂತೆ ತಾವೂ ವರ್ತಿಸದೆ ಹೋದರೆ, ಅವರ ಕೈಗಾರಿಕೆಯು ಹಿಂದೆ ಬಿದ್ದು ಅವರು ಮುಳುಗಿಯೇ ಹೋಗುವರು. ಆದಕಾರಣ, ನಿರಾತಂಕವಾಗಿ ತಮತಮಗೆ ತೋರಿದಂತೆ ಜನರು ಕೆಲಸಮಾಡುವ ಕಾಲವು ಹೋಯಿತು. ಈಗಿರುವದೇನು? ಇತರರು ಮಾಡುವ ಇಂತಹ ಪ್ರಯತ್ನಗಳೆಲ್ಲವನ್ನೂ ಎದುರಿಸಿ, ಯಾವ ದಶತ್ತು ಸಗ್ಗದಂತೆ ಸಾಧನಸಂಪತ್ತುಗಳ ವಜ್ರಕವಚವನ್ನೇರ್ಪಡಿಸಿಕೊಂಡು, ಸಂತತವೂ ಸ್ಥಿರಪ್ರಯತ್ನವನ್ನೆಸಗಿ ಕಾರ್ಯಸಾಧನೆ ಮಾಡುತ್ತ ಗೆಲವಿನ ಲಗ್ಗೆಯನ್ನು ಸಾಧಿಸಬೇಕು. ಇಲ್ಲವೇ, ಸ್ಪರ್ಧೆಯ ಪ್ರವಾಹದಲ್ಲಿ ರಭಸದಿಂದ ಕೈಯನ್ನು ಬೀಸಲಾರದೆ ಸೋತು ಹಿಮ್ಮೆಟ್ಟಿ ಕೊನೆಗೆ ಮುಳುಗಿಯೇ ಹೋಗಿ ಕೆಸರನ್ನು ಕಚ್ಚಬೇಕು. ಈ ಬಗೆಯದು ಇಂದಿನ ಪರಿಸ್ಥಿತಿ!

1929-30ನೆಯ ಸಾಲಿನ ಆಯವ್ಯಯಗಳ ವಿಚಾರ.

ಮುಂದಣವರುಷದ ಆಯವ್ಯಯಗಳ ವಿಚಾರವನ್ನು ತಮಗೆ ಶ್ರುತಪಡಿಸುವದಕ್ಕೆ ಮೊದಲು, ಎಂದಿನಂತೆ ಚಾಲ್ತಿವರುಷದ ಹುಟ್ಟುವಳಿಯ ಮತ್ತು ಬಂಡವಾಳದ ವೆಚ್ಚದ ಜಮಾಖರ್ಚುಗಳನ್ನು ಕುರಿತು ಸಂಕ್ಷೇಪವಾಗಿ ಕೆಲವು ಸಂಗತಿಗಳನ್ನು ಸೂಚಿಸುವೆನು.

ಚಾಲ್ತಿಸಾಲಿನ ಆಯವ್ಯಯದ ಅಂದಾಜಿನ "ಬಡ್ಜೆಟ್ಟು" ಪಟ್ಟಿಯನ್ನು ಈಗ್ಗೆ ಒಂದು ವರುಷದ ಹಿಂದೆ ರಚಿಸಿದ್ದೆವಷ್ಟೆ. 3 ಕೋಟಿ 71 ಲಕ್ಷ ರೂಪಾಯಿಗಳು ಹುಟ್ಟುವಳಿಯಾಗಬಹುದೆಂಬುದಾಗಿ ಆಗ್ಗೆ ಅಂದಾಜುಮಾಡಲಾಗಿದ್ದಿತು. ಅಲ್ಲದೆ, ವಾರ್ಷಿಕ ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ ಬಾಬುಗಳಿಗಾಗಿ ಸುಮಾರು ಅಷ್ಟೇ ಮೊಬಲಗನ್ನು ವೆಚ್ಚಕ್ಕಾಗಿ ಒದಗಿಸಲಾಗಿದ್ದಿತು.

ಆಯವ್ಯಯಗಳ ವಿಚಾರದಲ್ಲಿ ಇದುವರೆಗೆ ದೊರೆತಿರುವ ವಿವರಗಳಿಗನುಸಾರವಾಗಿ ನೋಡಿದರೆ, ಬಡ್ಜೆಟ್ಟಿನ ಮೇರೆಗೆ ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚಾಗಿ 3 ಲಕ್ಷ ರೂಪಾಯಿಗಳು ಹುಟ್ಟುವಳಿಯಾಗುವವೆಂದು ತೋರಿಬಂದಿದೆ. ವೆಚ್ಚವೂ ಕೂಡ ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತ 3 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಬಹುದು.

ನಮ್ಮ ನಿರೀಕ್ಷೆಗಿಂತಲೂ ಹೆಚ್ಚು ಹುಟ್ಟುವಳಿಯು ಬರುವಂತೆ ತೋರುತ್ತಿರುವ ಮುಖ್ಯವಾದ ಬಾಬುಗಳು ಯಾವುವೆಂದರೆ:— ಜಮೀನು ಕಂದಾಯ, ಫಾರೆಸ್ಟು, ಎಕ್ಸೈಜು, ಬೆಂಗಳೂರು ದಂಡಿನ ಹುಟ್ಟುವಳಿಬಾಬು, ಬಡ್ಡಿ, ರಸ್ತೆಗಳಬಾಬು, ವಿದ್ಯುಚ್ಛಕ್ತಿಯಬಾಬು, ಇವುಗಳು. ಈ ಬಾಬುಗಳಿಂದ 8½ ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಬರುವಂತಿದೆ. ಆದರೆ, ಉಳಿದ ಕೆಲವು ಬಾಬುಗಳಲ್ಲಿ ಹುಟ್ಟುವಳಿಯು ನಾವು ನಿರೀಕ್ಷಿಸಿದ್ದುದಕ್ಕಿಂತ ಕಡಿಮೆಬಿದ್ದುದರಿಂದ, ಒಟ್ಟಿನಲ್ಲಿ 3 ಲಕ್ಷ ರೂಪಾಯಿಗಳ ಹೆಚ್ಚು ಹುಟ್ಟುವಳಿಯು ಮಾತ್ರವೇ ಬರುವ ಸಂಭವವುಂಟಾಗಿದೆ. ಹುಟ್ಟುವಳಿಯು ಹೀಗೆ ಕಡಿಮೆಬಿದ್ದ ಬಾಬುಗಳು ಯಾವುವೆಂದರೆ:- ವರಮಾನದ ತೆರಿಗೆ, ಸ್ಟಾಂಪು, ವಿವಿಧಬಾಬುಗಳು, ಮತ್ತು ರೈಲ್ವೆಯಬಾಬು—ಇವುಗಳೇ. ಗಣಿಗಳಬಾಬಿನ ಹುಟ್ಟುವಳಿಯೂ ಕಡಿಮೆಬೀಳುವಂತಾಯಿತು. ಏಕೆಂದರೆ, ಚಿನ್ನದಗಣಿಗಳಲ್ಲಿ ಕೆಲಸಗಾರರ ಮುಷ್ಕರವು ನಡೆದಕಾರಣ ಆಗ ಚಿನ್ನದ ಉತ್ಪತ್ತಿಯು ಕಡಿಮೆಯಾಗಿ ಅದಕ್ಕನುಗುಣವಾಗಿ ಸರ್ಕಾರಕ್ಕೆ ಬರುವ ರಾಜಾಯವೂ ತಗ್ಗಲು ಕಾರಣವಾಯಿತು. ಅಲ್ಲದೆ, ಕೆಲಸಗಾರರ ಮುಷ್ಕರದ ದೆಸೆಯಿಂದ, ಗಣಿಗಳಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದುದೂ ಕಡಿಮೆಯಾಗಿ ಅದರಿಂದಲೂ ಸರ್ಕಾರದವರ ಹುಟ್ಟುವಳಿಯು ತಗ್ಗಿತು. ಹೀಗಾಗದೆ ಹೋಗಿದ್ದಲ್ಲಿ, ಇನ್ನೂ ಉತ್ತಮವಾದ ಪರಿಸ್ಥಿತಿಯೇ ಇರುತ್ತಿದ್ದಿತು.

ವೆಚ್ಚವು ನಾವು ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಾದುದಕ್ಕೆ, ಘನವೆತ್ತ ವೈಸ್ರಾಯರವರು ಕಳೆದ ನವಂಬರು ತಿಂಗಳಿನಲ್ಲಿ ದಯಮಾಡಿದ್ದಾಗ ನಡೆದ ಏರ್ಪಾಡುಗಳೇ ಮುಖ್ಯಕಾರಣ.

ಅಂತು, ಒಟ್ಟಿನಲ್ಲಿ 1929-30 ನೆಯ ಸಾಲಿನ ವೆಚ್ಚವು ಕಳೆದು 30,000 ರೂ. ಗಳು ಉಳಿಯುವುದಾಗಿ ತೋರಿಬಂದಿದೆ.

1929-30 ನೆಯ ಸಾಲಿನಲ್ಲಿ ನಡೆದ ಮೂಲಧನದ ವೆಚ್ಚ.

1929-30 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಮೂಲಧನದ ಕಾಮಗಾರಿಗಳಿಗೆ 93 ಲಕ್ಷ ರೂಪಾಯಿಗಳು ವೆಚ್ಚವಾಗಬೇಕೆಂಬುದಾಗಿ ನಿಷ ಪೇಮಾಡಿದ್ದೆವು. ಈ ರೀತಿ ಆಯವ್ಯಯಗಳ ಪಟ್ಟಿಯನ್ನು ರಚಿಸಿದಾಗ್ಗೆ ಚಾಲ್ತಿಸಾಲಿನಲ್ಲಿ ಒಂದು ಸಾಲವನ್ನು ತೆಗೆಯುವ ಸಂಭವವೂ ಇದ್ದುದರಿಂದ, ಈ ಕಾಮಗಾರಿಗಳನ್ನು ಇನ್ನು ಶೀಘ್ರವಾಗಿ ನೆರವೇರಿಸಿಬಿಡುವುದೇ ಯುಕ್ತವೆಂದು ಆಗ್ಗೆ ತೋರಿದ್ದಿತು. ಆದರೆ, ಈಚಿನ ವಿದ್ಯಮಾನಗಳ ಬಗೆಯೇ ಬದಲಾವಣೆ ಹೊಂದಿತು. ಅದಕ್ಕೆ ಈ ದೇಶದವರಾಗಲಿ, ಅಥವಾ ಒಟ್ಟು ಇಂಡಿಯಾ ದೇಶದವರಾಗಲಿ ಪೂರ್ತಿಯಾಗಿ ಹೊಣೆಯಲ್ಲ. ಅವರ ಪ್ರಯತ್ನಕ್ಕೆ ಮೀರಿ ಕೇವಲ ಹೊರದೇಶಗಳಿಗೆ ಸಂಬಂಧಪಟ್ಟ ಕೆಲವು ಕಾರಣಗಳಿಂದಲೂ, ಇತರ ಕೆಲವು ಸನ್ನಿವೇಶಗಳಿಂದಲೂ, ಹಣದ ಓಡಾಟವೇ ಕಡಿಮೆಯಾಗಿ, ಸಾಲಸೋಲಗಳು ಸುಲಭ ಬಡ್ಡಿಯ ದರಗಳಲ್ಲಿ ದೊರೆಯುವುದೇ ದುರ್ಲಭವಾಯಿತು. ಆದಕಾರಣ, ಇಂತಹ ವಿದ್ಯಮಾನಗಳಿರುವಾಗ ನಮ್ಮ ದೇಶದಲ್ಲಿ ಮೂಲಧನದ ಕಾರ್ಯಕಲಾಪಗಳನ್ನು ಆ ಮೊದಲೇ ನಿರ್ಧರಿಸಿದ್ದ ಪ್ರಮಾಣದಲ್ಲಿ ಮುಂದುವರಿಸದೆ, ತೀರ ಅವಶ್ಯವಾದವುಗಳನ್ನು ಮಾತ್ರ ನೆರವೇರಿಸುವುದೇ ವಿವೇಕಯುತವಾದ ವರ್ತನೆಯೆಂಬುದಾಗಿ ಸರ್ಕಾರದವರು ತೀರ್ಮಾನಿಸಿದರು. ಅದಕ್ಕನುಗುಣವಾಗಿ ಕಾರ್ಯಕ್ರಮದ ಪಟ್ಟಿಯನ್ನು ಬದಲಾಯಿಸಲಾಯಿತು. ಕೆಲವು ಕಾಮಗಾರಿಗಳನ್ನು ಮಾಮೂಲಿತವಾಡಿ ಸದ್ಯಕ್ಕೆ ಕೈಬಿಡಲಾಯಿತು. ಇದರಿಂದ ವೆಚ್ಚವು 8 ಲಕ್ಷ ರೂಪಾಯಿಗಳು ಕಡಿಮೆಯಾಯಿತು. ಆದರೆ, ಬೆಂಗಳೂರಿಗೆ ಸಮೃದ್ಧವಾಗಿ ನೀರನ್ನೊದಗಿಸುವುದಕ್ಕಾಗಿ ತಿಪ್ಪಗೊಂಡನಹಳ್ಳಿಯ ಬಳಿಯಲ್ಲಿ ದೊಡ್ಡದೊಂದು ಜಲಾಶಯವನ್ನು ನಿರ್ಮಿಸುವ ಕಾಮಗಾರಿಯನ್ನು ಮಾತ್ರ ಪ್ರಾರಂಭಿಸಿಯೇ ತೀರಬೇಕೆಂಬುದಾಗಿ ಸರ್ಕಾರದವರಿಗೆ ತೋರಿತು. ಚಾಲ್ತಿಸಾಲಿನಲ್ಲಿ ಅದಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಅವರು ಮಂಜೂರುಮಾಡಿ, ಆ ಕಾಮಗಾರಿಯನ್ನು ಉಪಕ್ರಮಗೊಳಿಸಿದರು. ಇದೆಲ್ಲದರ ಪರಿಣಾಮವಾಗಿ ಚಾಲ್ತಿಸಾಲಿನಲ್ಲಿ ಮೂಲಧನದ ಕಾಮಗಾರಿಗಳಿಗಾಗಿ ನಾವು 90 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಬೇಕಾಗುತ್ತದೆ.

1930-31 ನೆಯ ಸಾಲಿನ ಹುಟ್ಟುವಳಿಯ ವಿಚಾರ.

ಇನ್ನು ಮುಂದಣ ಸಾಲಿನ "ಬಡ್ಜೆಟ್ಟಿನ" ಮೇರೆಗೆ ನಿರ್ಧಾರವಾಗಿರತಕ್ಕ ಆಯವ್ಯಯಗಳ ಅಂದಾಜುಗಳನ್ನು ಕುರಿತು ನಾನು ಪ್ರಸ್ತಾಪಿಸುವೆನು. ಮುಂದಣ ವರುಷ 3 ಕೋಟಿ 79¾ ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂಬುದಾಗಿ ಅಂದಾಜುಮಾಡಿದ್ದೇವೆ. ವಾರ್ಷಿಕ ಹುಟ್ಟುವಳಿಯಿಂದಲೇ ವೆಚ್ಚಕ್ಕೆ ಹಣವನ್ನೊದಗಿಸಬೇಕಾದ ಬಾಬುಗಳಿಗಾಗಿ ಮುಂದಣ ಸಾಲಿನಲ್ಲಿ 3 ಕೋಟಿ 79¼ ಲಕ್ಷ ರೂಪಾಯಿಗಳನ್ನು ವಿನಿಯೋಗಿಸಬೇಕಾಗಬಹುದೆಂದು ನಿರ್ಧರಿಸಲಾಗಿದೆ. ಹುಟ್ಟುವಳಿಯಿಂದ ಈ ವೆಚ್ಚವು ಕಳೆದು ಒಟ್ಟಿನಲ್ಲಿ ಅರ್ಧ ಲಕ್ಷ ರೂಪಾಯಿಗಳ ಉಳಿತಾಯವು ಕಂಡುಬರುತ್ತದೆ. ವಾರ್ಷಿಕ ಹುಟ್ಟುವಳಿಯಿಂದಲೇ ವಹಿಸಬೇಕಾದ ಈ ವೆಚ್ಚದ ಜೊತೆಗೆ, ಎಂದಿನಂತೆ ನೀರಾವರಿಯ ಬಂಡವಾಳದ ನಿಧಿಯಿಂದ 6½ ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಉಪಯೋಗಿಸಬೇಕೆಂದೂ ಗೊತ್ತಾಗಿದೆ.

ಮುಂದಣ ವರುಷದ ಆಯವ್ಯಯಗಳ ವಿಚಾರವಾಗಿ ಫೈನಾನ್ಷಿಯಲ್ ಸೆಕ್ರೆಟರಿಯವರು ಸಾದರುಮಾಡಿರುವ ಮೆಮೊರಾಂಡಮಿನಲ್ಲಿ ಎಲ್ಲ ತಪಶೀಲು ವಿವರಗಳನ್ನೂ ಅವರು ವಿಶದವಾಗಿ ತಿಳಿಸಿದ್ದಾರೆ. ಅದನ್ನು ತಾವೆಲ್ಲರೂ ಪರಾಂಬರಿಸಿಯೇ ಇರಬೇಕೆಂದು ನಂಬಿದ್ದೇನೆ. ಆದಕಾರಣ, ಕೇವಲ ಪ್ರಾಮುಖ್ಯವಾದ ಅಂಶಗಳನ್ನು ಮಾತ್ರ, ಅತಿ ಸಂಕ್ಷೇಪವಾಗಿ ಇಲ್ಲಿ ಸೂಚಿಸುವೆನು.

ಜಮೀನು ಕಂದಾಯ, ಎಕ್ಸೈಜುಬಾಬು, ರಸ್ತೆಗಳಬಾಬು ಮತ್ತು ವಿದ್ಯುಚ್ಛಕ್ತಿಯ ಇಲಾಖೆ, ಇವುಗಳಿಂದ ಹೆಚ್ಚು ಮೊಬಲಗು ಹುಟ್ಟುವಳಿಯಾಗುವಂತೆ ನಿರೀಕ್ಷಿಸಲಾಗಿದೆ.

ಜಮೀನು ಹಕ್ಕುಗಳ ದಾಖಲಾತಿ ಶಿಸ್ತಿನಿಂದ (ಎಂದರೆ, ರಿಕಾರ್ಡ್ ಆಫ್ ರೈಟ್ಸ್ ಶಿಸ್ತಿನಿಂದ) ನಾವು ನಿರೀಕ್ಷಿಸಿದ್ದುದಕ್ಕಿಂತ ಚೆನ್ನಾಗಿಯೇ ಕೆಲಸವು ನಡೆದಿದೆ. ಜನಗಳಿಗೆ ಈ ಶಿಸ್ತಿನಲ್ಲಿ ವಿಶೇಷ ಆದರವುಂಟಾಗಿದೆ. ಅನೇಕ ಸ್ಥಳಗಳಲ್ಲಿ ಅದನ್ನು ಆಚರಣೆಗೆ ತರಬೇಕೆಂಬುದಾಗಿ ಪ್ರಜೆಗಳೇ ಕೇಳುತ್ತಿದ್ದಾರೆ. ಮುಂದಣ ಸಾಲಿನಲ್ಲಿ ಸಾಧ್ಯವಾದಷ್ಟು ತಾಲೂಕುಗಳಲ್ಲಿ ಅದನ್ನು ಆಚರಣೆಗೆ ತರಲಾಗುವುದು. ಈ ಮೊದಲೇ ಈ ಶಿಸ್ತನ್ನು ಆಚರಣೆಗೆ ತಂದಿರುವುದರ ಸಂಬಂಧದಲ್ಲಿ ಸರ್ಕಾರಕ್ಕೆ ಬರಬೇಕಾದ "ಫೀಜು" ಮೊಬಲಗುಗಳು ಬಹಳ ಭಾರಿಯಾಗಿ ಬಾಕಿ ಉಳಿದಿವೆ. ಅವುಗಳನ್ನು ವಸೂಲುಮಾಡುವ ಪ್ರಯತ್ನವು ಜರಗುತ್ತಿದೆ. ಈ ಶಿಸ್ತಿನ ಸಂಬಂಧದಲ್ಲಿ ಮುಂದಣ ವರುಷ 4 ಲಕ್ಷ ರೂ. ಗಳ ಹುಟ್ಟುವಳಿಯು ಬರಬಹುದೆಂಬುದಾಗಿ ರೆವೆನ್ಯೂ ಕಮೀಷನರವರು ಅಂದಾಜುಮಾಡಿದ್ದಾರೆ. ಜಮೀನು ಹಕ್ಕುಗಳ ದಾಖಲಾತಿ ಕೆಲಸದ ಸಂಬಂಧದಲ್ಲಿ ತಾತ್ಕಾಲಿಕವಾಗಿ ನೇಮಕಮಾಡುವ ಸಿಬ್ಬಂದಿಯ ಸಂಬಳಕ್ಕೂ, ಜಮೀನುಗಳನ್ನು ಪೋತು ಮಾಡುವುದರಲ್ಲಿ ಕೂಲಿಯವರಿಗೆ ಹಣವನ್ನು ಕೊಡುವುದೇ ಮುಂತಾದ ವೆಚ್ಚಗಳಿಗೂ, ಸುಮಾರು ಎರಡು ಲಕ್ಷ ರೂಪಾಯಿಗಳು ವಿನಿಯೋಗವಾಗುತ್ತವೆ. ಉಳಿದ ಹಣವು ಜಮೀನು ಕಂದಾಯದ ಹುಟ್ಟುವಳಿಗೆ ಸೇರುತ್ತದೆ.

ಎಕ್ಸೈಜು ಹಕ್ಕುಗಳ ಹರಾಜಿನಲ್ಲಿ ಸ್ಪರ್ಧೆಯು ಹೆಚ್ಚಿರುವುದರಿಂದ, ಈ ಬಾಬಿನಲ್ಲಿ ಹೆಚ್ಚು ಹುಟ್ಟುವಳಿಯು ಬರುವಂತೆ ತೋರುತ್ತದೆ. ಜನರು ಮದ್ಯಪಾನ ಮಾಡುವುದನ್ನು ತಪ್ಪಿಸಲು ಸಾಧಕವಾಗುವ ಯುಕ್ತವಾದ ಎಲ್ಲ ಸಲಹೆಗಳಿಗೂ ಉತ್ತೇಜನ ಕೊಟ್ಟು, ಸರ್ಕಾರದವರು ಸಂತತವೂ ಸಹಾಯಮಾಡುತ್ತ ಬಂದಿದ್ದಾರೆ. ಆದಾಗ್ಯೂ, ಸಂಪೂರ್ಣವಾಗಿ ಮದ್ಯಪಾನವನ್ನು ನಿರೋಧಗೊಳಿಸುವ ಕಾಲವು ಈಗ ಸದ್ಯದಲ್ಲೇ ಬರುವಂತಿಲ್ಲವೆಂಬುದನ್ನೇನೋ ಒಪ್ಪಲೇಬೇಕಾಗಿದೆ. ಮದ್ಯಪಾನದಿಂದ ಆಗುವ ಕೇಡುಗಳನ್ನು ಜನರಿಗೆ ತಿಳಿಸಿ ಮನಗಾಣಿಸುವ ಪ್ರಯತ್ನವನ್ನು ಕೈಕೊಂಡು ವಿಶೇಷವಾಗಿ ಕೆಲಸ ನಡೆಯಿಸಬೇಕಾದುದು ಅವಶ್ಯಕ. ಆ ಬಳಿಕ ಮದ್ಯಪಾನ ನಿಷೇಧದ ತೀರ್ಮಾನವು ಸಫಲವಾದೀತೇ ಹೊರತು, ಒಮ್ಮಿಂದೊಮ್ಮೆಗೇ ಕಡುಕಠಿನವನ್ನು ನಿಲ್ಲಿಸಹೊರಟರೆ, ಅದರಿಂದ ನಮ್ಮ ಉದ್ದೇಶವೆಂದಿಗೂ ಈಡೇರಲಾರದು.

ಸಂಸ್ಥಾನದಲ್ಲಿ ಮೋಟಾರು ಬಸ್ಸುಗಳ ಸಂಚಾರವು ಹೆಚ್ಚಿ, ಜನಗಳಿಗೆ ಆ ಮೂಲಕ ಸಂಚಾರ ಸೌಕರ್ಯಗಳು ಹೇರಳವಾಗಿ ಲಭಿಸಿವೆ. ಸುಂಕದಕಟ್ಟೆಗಳಿಂದಲೂ, ಮೋಟಾರು ಲೈಸೆನ್ಸುಗಳಿಂದಲೂ, ಹೆಚ್ಚು ಹುಟ್ಟುವಳಿಯು ಬಂದಿರುವುದರಿಂದ ಇದು ಚೆನ್ನಾಗಿ ವ್ಯಕ್ತವಾಗುತ್ತದೆ. ಇಂಡಿಯಾ ಸರ್ಕಾರದವರು 1929 ನೆಯ ಇಸವಿ ಏಪ್ರಿಲ್ 1 ನೆಯ ತಾರೀಖಿನಿಂದ ಪೆಟ್ರೋಲಿನ ಮೇಲೆ ಗ್ಯಾಲನ್ ಒಂದಕ್ಕೆ ಎರಡು ಆಣೆಗಳಂತೆ ಹೆಚ್ಚಿಗೆ ತೆರಿಗೆಯನ್ನು ವಿಧಾಯಕಮಾಡಿದ್ದಾರಷ್ಟೆ. ಅದರಿಂದ ಎಂದಿಯನ ಹುಟ್ಟುವಳಿಯಲ್ಲಿ ನಮ್ಮ ಸಂಸ್ಥಾನಕ್ಕೆ ಸಲ್ಲಬೇಕಾದ ಭಾಗದ ಮೊತ್ತವನ್ನು ಕೊಡಬೇಕೆಂಬುದಾಗಿ ಬಿನ್ನವಿಸಿ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದೇವೆ. ಆ ಮೊಬಲಗು ದೊರೆತಾಗ್ಗೆ ಅದನ್ನು ರಸ್ತೆಯ ನಿಧಿಗೆ (Road Fund) ಸೇರಿಸಿ, ಸಂಸ್ಥಾನದಲ್ಲಿರುವ ನಾನಾರಸ್ತೆಗಳನ್ನೂ ಉತ್ತಮಗೊಳಿಸುವದಕ್ಕಾಗಿ ಅದನ್ನು ವೆಚ್ಚಮಾಡಲಾಗುತ್ತದೆ.

ವಿದ್ಯುಚ್ಛಕ್ತಿಯ ಬಾಬಿನಿಂದ ಹುಟ್ಟುವಳಿಯು ಒಂದೇ ಸಮನಾಗಿ ಹೆಚ್ಚುತ್ತಿರುವದನ್ನು ಕಂಡು ತಮಗೆ ಸಂತೋಷವಾಗಿರಬಹುದು. ಮುಂದಣ ವರುಷ ಮೈಸೂರಿನಲ್ಲಿ ಹೆಚ್ಚು ವಿದ್ಯುಚ್ಛಕ್ತಿಯು ಉಪಯೋಗಿಸಲ್ಪಡುವ ಸಂಭವವಿದೆ. ಬೆಂಗಳೂರಿನಲ್ಲಿರುವ ಗಿರಣಿಗಳಲ್ಲಿಯೂ, ಇತರ ಕಾರ್ಖಾನೆಗಳಲ್ಲಿಯೂ ಇನ್ನೂ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಬಳಸುವ ನಿರೀಕ್ಷೆಯೂ ಇದೆ. ಇತರ ಊರುಗಳಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವದರಿಂದಲೂ, ವಿದ್ಯುಚ್ಛಕ್ತಿಯ ಸಹಾಯದಿಂದ ನೀರಾವರಿಗಾಗಿ ಬಾವಿಗಳಿಂದ ನೀರನ್ನೆತ್ತುವ "ಪಂಪು"ಗಳೆಂಬ ಯಂತ್ರಸಾಧನಗಳ ಉಪಯೋಗದಿಂದಲೂ, ವಿದ್ಯುಚ್ಛಕ್ತಿಯ ಬಳಕೆಯು ಹೆಚ್ಚಾಗುತ್ತದೆ. ಹೀಗೆ ಈ ಮೂರು ವಿಧಾನಗಳಿಂದಲೂ ವಿದ್ಯುಚ್ಛಕ್ತಿಯ ಬಳಕೆಯು ಹೆಚ್ಚುವಂತಿರುವ ಕಾರಣ, ಮುಂದಣ ಸಾಲಿನಲ್ಲಿ ಎರಡು ಲಕ್ಷ ರೂಪಾಯಿಗಳಷ್ಟು ಹೆಚ್ಚು ಹುಟ್ಟುವಳಿಯು ಬರಬಹುದೆಂಬುದಾಗಿ ಅಂದಾಜು ಮಾಡಿದ್ದೇವೆ.

ಕಬ್ಬಿಣದ ಕಾರ್ಖಾನೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಮೂಲಧನದ ವೆಚ್ಚಕ್ಕೆಂಬುದಾಗಿ ಹತ್ತು ಲಕ್ಷ ರೂಪಾಯಿಗಳ ಮೊತ್ತವು ಬಡ್ಜೆಟ್ಟಿನಲ್ಲಿ ನಮೂದಾಗಿದೆ. ವೆಚ್ಚದ ಬಾಬುಗಳಲ್ಲಿ ವಿಶೇಷರೀತಿಯಲ್ಲಿ ವಿವರಿಸಬೇಕಾದ ಅವಶ್ಯಕತೆಯಿರುವದು. ಈ ಮೊತ್ತದ ವಿಚಾರದಲ್ಲಿ ಮಾತ್ರವೇ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ 1929-30 ನೆಯ ಸಾಲಿನಲ್ಲಿ 2½ ಲಕ್ಷ ರೂಪಾಯಿಗಳ ಲಾಭವು ಬರಬಹುದೆಂಬುದಾಗಿ ನಿರೀಕ್ಷಿಸಿದ್ದೆವು. ಈ ಮೊತ್ತವನ್ನು "ಡಿಪ್ರೀಸಿಯೇಷನ್ ಫಂಡ್" ಎಂಬ ಸವೆತಲು ಭರ್ತಿನಿಧಿಗೆ ಸೇರಿಸಬೇಕೆಂದು ಉದ್ದೇಶಿಸಿದ್ದೆವು. ಆದರೆ, ಇದುವರೆಗೆ ದೊರೆತಿರುವ ಆಯವ್ಯಯಗಳ ಲೆಕ್ಕಗಳಿಂದ ನೋಡುವಲ್ಲಿ, ಚಾಲ್ತಿಸಾಲಿನಲ್ಲಿ ಒಂದು ಲಕ್ಷ ರೂಪಾಯಿಗಳ ನಷ್ಟವು ಸಂಭವಿಸುವಂತೆ ತೋರುತ್ತದೆ. ಈ ನಷ್ಟವು ಬಹುಮಟ್ಟಿಗೆ 1929 ನೆಯ ಇಸವಿ ಡಿಸೆಂಬರು 31 ನೆಯ ತಾರೀಕಿಗೆ ಹಿಂದಣ ಆರು ತಿಂಗಳ ಅವಧಿಯಲ್ಲಿ ಸಂಭವಿಸಿತು. ಅಲ್ಲಿಂದ ಈಚೆಗೆ ಕಾರ್ಖಾನೆಯ ಕಾರ್ಯಕಲಾಪಗಳು ಉತ್ತಮಗೊಂಡಿವೆಯೆಂಬುದಾಗಿ ತಿಳಿಯಬಂದಿದೆ. ಸಾಮಾನುಗಳನ್ನು ಸಾಗಿಸುವದಕ್ಕಾಗಿ ಪಾವತಿಯಾದ ಹಾಸಲುಗಳ ಸಂಬಂಧದಲ್ಲಿ ರೈಲ್ವೆ ಕಂಪನಿಗಳಿಂದ ನಮ್ಮ ಕಾರ್ಖಾನೆಗೆ ಸೇರಿಯಾದ ಕೆಲವು ಮೊತ್ತಗಳು ಹಿಂದಕ್ಕೆ ಬರಬೇಕೆಂಬುದಾಗಿ ಕೇಳಲಾಗಿದೆ. ಹೆಚ್ಚು ಪ್ರಮಾಣದಲ್ಲಿ ಸಾಮಾನುಗಳನ್ನು ಸಾಗಿಸಿದರೆ ಹಾಸಲು ಕಡಿಮೆ ದರದಲ್ಲಿ ಬೀಳುವಂತೆ ವಿಧಾಯಕವಾಗಿರುವದೇ ಇದಕ್ಕೆ ಕಾರಣ. ಆ ಮೊತ್ತಗಳನ್ನು ರೈಲ್ವೆಗಳವರು ಹಿಂದಕ್ಕೆ ಕೊಟ್ಟು ಅವುಗಳನ್ನು ಭರ್ತಿಹಾಕಿದರೆ, ಈ ನಷ್ಟವು ಸಂಭವಿಸುವುದಿಲ್ಲವೆಂದೂ ತಿಳಿಯಬಂದಿದೆ. ಆದಕಾರಣ, ಕಾರ್ಖಾನೆಯ ಆಯವ್ಯಯಗಳು ಅಲ್ಲಿಗಲ್ಲಿಗೆ ಸರಿಹೋಗಿ ಲಾಭವೂ, ನಷ್ಟವೂ, ಎರಡೂ ಇಲ್ಲದೆ ಸಮಸ್ಥಿತಿಯಿರುವದೆಂದೇ, 1929-30 ನೆಯ ಸಾಲಿನ ತಿದ್ದುಪಾಟು ಅಂದಾಜಿನಲ್ಲಿ ಕೂಡ ಮತ್ತೆ ಸೂಚಿಸಿದ್ದೇವೆ.

ಬೆಂಗಳೂರಿಗೆ ಶುದ್ಧವಾದ ನೀರನ್ನೊದಗಿಸಲು ತಿಪ್ಪಗೊಂಡನಹಳ್ಳಿಯ ಬಳಿಯಲ್ಲಿ ಅಣೆಯ ಕಾಮಗಾರಿಯು ಆರಂಭವಾಗಿದೆಯಷ್ಟೆ. ಇದರ ಸಂಬಂಧದಲ್ಲಿ ಬೇಕಾಗುವ ಭಾರಿ ಭಾರಿ ಕಬ್ಬಿಣದ ಕೊಳಾಯಿಗಳು ಭದ್ರಾವತಿ ಕಾರ್ಖಾನೆಯಲ್ಲಿ ಎರಕವಾಗುತ್ತವೆ. ಮುಂದಣ ಸಾಲಿನಲ್ಲಿ ಒಟ್ಟು 7,200 ಟನ್ನುಗಳ ತೂಕದ ಕೊಳಾಯಿಗಳನ್ನು ರಚಿಸಬೇಕೆಂದು ಬಡ್ಜೆಟ್ಟಿನಪ್ರಕಾರ ಏರ್ಪಾಡುಮಾಡಿದೆ ಅಲ್ಲದೆ ಕಂಬಿಯ ಕೆಳಕ್ಕೆ ಹಾಕಲು ರೈಲ್ವೆಗಳಿಗೆ ಬೇಕಾದ ಪೀಡು ಕಬ್ಬಿಣದ "ಸ್ಲೀಪರು"ಗಳೂ ಭದ್ರಾವತಿಯಲ್ಲಿ ತಯಾರಾಗುತ್ತವೆ. ಕೃಷ್ಣರಾಜಸಾಗರದಲ್ಲಿ ಕಟ್ಟಪ್ಪಾದ ಮಟ್ಟಕ್ಕಿಂತ ನೀರು ಹೆಚ್ಚಿದರೆ ಕೋಡಿಯ ಬಳಿಯಲ್ಲಿ ತೂಬಿನ ಬಾಗಿಲುಗಳು ತಾವಾಗಿಯೇ ತೆರೆದುಕೊಂಡು, ಹೆಚ್ಚು ನೀರು ಹರಿದುಹೋದ ಬಳಿಕ ಅವು ತಾವಾಗಿಯೇ ಮುಚ್ಚಿಕೊಳ್ಳುವ ತೂಬಿನ ಯಂತ್ರಗಳನ್ನಿಡುವುದು ಅವಶ್ಯಕವಾಗಿದೆ. ಇವುಗಳೂ ಸಹ ಭದ್ರಾವತಿಯಲ್ಲಿಯೇ ತಯಾರಾಗುತ್ತವೆ. ಈ ಮೂರು ಬಾಬುಗಳ ಸಾಮಾನುಗಳೂ ತಯಾರಾಗಬೇಕೆಂಬುದಾಗಿ ಮುಂದಣ ವರುಷದ ಆಯವ್ಯಯಗಳ ಅಂದಾಜಿನ ಪ್ರಕಾರ ಏರ್ಪಾಡು ನಡೆದಿದೆ. 1930-31 ನೆಯ ಸಾಲಿನಲ್ಲಿ ಕಬ್ಬಿಣದ ಕಾರ್ಖಾನೆಯಿಂದ, ಅಲ್ಲಿಯ ವೆಚ್ಚವು ಕಳೆದು 46,000 ರೂಪಾಯಿಗಳ ಲಾಭವು ಬರಬಹುದೆಂಬದಾಗಿ ನಿರೀಕ್ಷಿಸಲಾಗಿದೆ. ಈ ರೀತಿ ಲಾಭವು ಬಂದಲ್ಲಿ ಅದನ್ನು ಸವೆತಲು ಭರ್ತಿನಿಧಿಗೆ ಹಾಕಲಾಗುತ್ತದೆ.

ಮೇಲೆ ಹೇಳಿದಂತೆ ಭಾರಿ ಭಾರಿ ಕೊಳಾಯಿಗಳಿಗೂ, ತೂಬಿನ ಯಂತ್ರಸಾಧನಗಳಿಗೂ ವಿಶೇಷವಾಗಿ ಗಿರಾಕಿಯು ದೊರೆತಿರುವುದರಿಂದ, ಮತ್ತೆ ಸ್ವಲ್ಪ ಮೂಲಧನದ ವೆಚ್ಚವನ್ನಿಟ್ಟು, ಇವುಗಳನ್ನು ಎರಕಹೊಯ್ಯುವ ಏರ್ಪಾಡನ್ನು ಮಾಡುವದು ಅವಶ್ಯಕವಾಗಿದೆ. ಕೃಷ್ಣರಾಜಸಾಗರದ ಕೋಡಿಯ ಬಳಿಯಲ್ಲಿ ಜೋಡಣೆಗೊಳಿಸಬೇಕಾಗಿರುವ ಈ ತೂಬಿನ ಯಂತ್ರಸಾಧನಗಳ ಎರಕವು ಕೇವಲ ವಿಶೇಷ ಸ್ವಭಾವದ ಕಾರ್ಯ. ಇದನ್ನು ನೆರವೇರಿಸಲು ತಕ್ಕ ಸಲಕರಣೆಗಳನ್ನೊದಗಿಸುವದಕ್ಕಾಗಿ ಭದ್ರಾವತಿಯ ಎರಕದ ಕಾರ್ಖಾನೆಯಲ್ಲಾಗಲಿ, ಅಥವಾ ಯಂತ್ರಶಾಲೆಯಲ್ಲಾಗಲಿ, ಇದುವರೆಗೆ ಯಾವದೊಂದು ಏರ್ಪಾಡೂ ನಡೆದಿರಲಿಲ್ಲ. ಇಷ್ಟಕ್ಕೂ ಅದು ಈಗ ನಡೆಯಬೇಕಾಗಿದೆಯೇ ಹೊರತು, ಇದುವರೆಗೆ ನಡೆಯಬೇಕಾದ ಪ್ರಸಕ್ತವೇ ಇರಲಿಲ್ಲ. ಈ ವಿಧದ ತೂಬಿನ ಯಂತ್ರಸಾಧನಗಳೂ ಹೆಚ್ಚು ಸಂಖ್ಯೆಯಲ್ಲಿ ತಯಾರಾಗಬೇಕಾಗಿದೆ. ಉತ್ತಮ ವಿಧದ ಎರಕದ ಕೆಲಸಕ್ಕೆ ನಮ್ಮ ಕಾರ್ಖಾನೆಯ ಕಬ್ಬಿಣವು ತಕ್ಕುದಾಗಿದೆ. ಆದಕಾರಣ, ನೀರಾವರಿಯ ಜಲಾಶಯಗಳಿಗೆ ಉಪಯೋಗಿಸಲು ಹೊರಗಿನ ಪ್ರಾಂತಗಳವರೂ ಈ ತೂಬಿನ ಯಂತ್ರಸಾಧನಗಳನ್ನು ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದಲೇ ತರಿಸಿಕೊಳ್ಳುವರೆಂದು ನಂಬಿದ್ದೇವೆ. ಸಣ್ಣಸಣ್ಣ ಕೊಳಾಯಿಗಳನ್ನು, ಅದರಲ್ಲಿಯೂ ಮುಖ್ಯವಾಗಿ ಮೂರು ಅಂಗುಲಗಳ ಮತ್ತು ನಾಲ್ಕು ಅಂಗುಲಗಳ ವ್ಯಾಸರೇಖೆಯುಳ್ಳ

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ

೧೯೩೦ ನೇ ಜೂನ್ ತಾ|| ೨೩ನೆಯ ಸೋಮವಾರ

ದುಂಡುಮೇಜಿನ ಪರಿಷತ್ತು.

ಸದ್ಯಃ ಭರದಿಂದ ಸಾಗಿರುವ ರಾಷ್ಟ್ರೀಯ ಸ್ವಾತಂತ್ರ್ಯಸಮರದ ಫಲವು ಏನಾಗುವದೆಂಬುದನ್ನು ಈಗಲೇ ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಭರತಖಂಡವಂತೂ ಸ್ವಾತಂತ್ರ್ಯದ ಜಯಭೇರಿಯನ್ನು ಹೊಡೆದು ಈ ಮಹತ್ಪ್ರಯತ್ನದಲ್ಲಿ ತನ್ನ ಸರ್ವಸ್ವವನ್ನೂ ಅರ್ಪಿಸಿ ಸ್ವಾತಂತ್ರ್ಯವನ್ನು ಸಂಪಾದಿಸುವೆನೆಂಬ ಧೃಢಪ್ರತಿಜ್ಞೆಯನ್ನು ಮಾಡಿಬಿಟ್ಟಿರುವದು. ಇದಕ್ಕೋಸ್ಕರ ಭರತಖಂಡಕ್ಕೆ ಶಿಖಾರತ್ನಪ್ರಾಯರಾದ ಮಹಾತ್ಮಾ ಗಾಂಧಿ, ಜವಾಹಿರಲಾಲನೆಹರೂ ಮೊದಲಾದ ಸಹಸ್ರಾರು ಜನ ದೇಶಭಕ್ತರು ಕಾರಾಗೃಹವಾಸಿಗಳಾದರಲ್ಲದೆ ಅನೇಕರು ತಮ್ಮ ಪ್ರಾಣಗಳನ್ನೇ ಒಪ್ಪಿಸಿದರು. ಅಸಾಧಾರಣವಾದ ಈ ಆತ್ಮಯಜ್ಞದಿಂದ ಸದ್ಯದ ರೀತಿಯು ದಿನ ದಿನಕ್ಕೆ ವಿಷಮಸ್ಥಿತಿಗೆ ಬರುತ್ತಿದ್ದರೂ ಆಳರಸರು ಭಾರತೀಯರ ಹಿತಕರವಾದ ಮಾರ್ಗದಲ್ಲಿ ಮಾತ್ರ ಇನ್ನೂ ವರ್ತಿಸದಿರುವದನ್ನು ನೋಡಿದರೆ ವ್ಯಸನವೆನಿಸುತ್ತದೆ. ರಾಜ್ಯಸೂತ್ರಧಾರಿಗಳು ತಮ್ಮ ತತ್ತ್ವವನ್ನು ಸ್ವಲ್ಪವೂ ಬದಲಾಯಿಸದೆ ಭರತಖಂಡಕ್ಕೆ ಸ್ವರಾಜ್ಯಕೊಡುವ ವಿಷಯವನ್ನು ದುಂಡುಮೇಜಿನ ಪರಿಷತ್ತಿನಲ್ಲಿ ಚರ್ಚಿಸುವದಾಗಿಯೂ, ಸರಕಾರಕ್ಕೆ ವಿರೋಧವಾಗಿ ವರ್ತಿಸುವವರನ್ನು ಶಿಕ್ಷಿಸುವದಾಗಿಯೂ ಮುಕ್ತಕಂಠದಿಂದ ಸಾರುತ್ತಿರುವರು. ಉಭಯಪಕ್ಷದವರೂ ಸೇರಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡುವವರೆಗೂ ಈ ಚಳವಳಿಯು ನಿಲ್ಲುವಂತಿಲ್ಲ. ಅದಕ್ಕಾಗಿಯೇ ಈ ದುಂಡುಮೇಜಿನ ಪರಿಷತ್ತು ಏರ್ಪಡಿಸಲ್ಪಟ್ಟಿರುವುದು. ಕೂಲಿಕಾರ ಸರಕಾರದವರು ಭರತಖಂಡದ ವಿಷಯವಾಗಿ ಅಂತರಂಗದಲ್ಲಿ ಸಂಪೂರ್ಣಸಹಾನುಭೂತಿಯುಳ್ಳವರಾಗಿದ್ದರೂ, ಅಧೈರ್ಯದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ತಮ್ಮ ನಿಜವಾದ ಅಭಿಪ್ರಾಯವನ್ನು ಬಹಿರಂಗಪಡಿಸದೆ ಹಾಗೂ ಈಗಿನ ಚಳವಳಿಯ ಮೂಲಕಾರಣವನ್ನೂ, ಅದರ ಮಹತ್ವವನ್ನೂ ಅರಿತುಕೊಳ್ಳದೆ ದೇಶಹಿತಕಾಂಕ್ಷಿಗಳಾದ ಸಾವಿರಾರು ಜನ ಮುಂದಾಳುಗಳನ್ನು ಸೆರೆಮನೆಯಲ್ಲಿ ದೂಡಿರುವರು.

ಇತ್ತ ಕಾಂಗ್ರೆಸ್‌ಪಕ್ಷದವರಾದರೋ, ಈಗಿನ ಆಡಳಿತ ಪದ್ಧತಿಯಿಂದ ಬ್ರಿಟಿಷರ ವ್ಯಾಪಾರವು ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತ ಭರತಖಂಡದ ಕೈಗಾರಿಕೆಗಳು ನಾಶವಾಗುತ್ತಿರುವದನ್ನೂ ಪರದೇಶಿಬಟ್ಟೆಯ ಹಾಗೂ ಇತರಸಾಮಾನುಗಳ ವ್ಯಾಪಾರ ಮತ್ತು ಮದ್ಯದಿಂದ ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿಗಳು ಪರದೇಶಗಳಿಗೆ ಹೋಗುತ್ತಿರುವದನ್ನೂ ನೋಡಿ, ಹೀಗೆಯೇ ಇನ್ನೂ ಕೆಲವು ಕಾಲ ನಡೆದರೆ ಭರತಖಂಡವು ಅತ್ಯಂತ ಹೀನಾವಸ್ಥೆಗೆ ಬರುವದೆಂಬುದನ್ನರಿತು ಅತ್ಯಂತ ಜಾಗ್ರತೆಯಾಗಿ ಸ್ವಾತಂತ್ರ್ಯ ಸಂಪಾದನೆಯನ್ನು ಮಾಡುವದೇ ಸರ್ವೋತ್ತಮವಾದ ಉಪಾಯವೆಂದು ನಿರ್ಧರಿಸಿ, ಈ ವಿಷಯದಲ್ಲಿ ಮುಂತವಾಗಿಯೇ ಸರಕಾರಕ್ಕೆ ತಕ್ಕ ಎಚ್ಚರಿಕೆಯನ್ನು ಕೊಟ್ಟು ಅಸಹಕಾರ ಸತ್ಯಾಗ್ರಹವನ್ನು ಪ್ರಾರಂಭಿಸಿರುವರು. ದುಂಡುಮೇಜಿನ ಪರಿಷತ್ತಿನಲ್ಲಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಲ್ಲಿರಬೇಕಾದ ಆಡಳಿತದ ಸಿಸ್ತನ್ನು ಚರ್ಚಿಸಿ ಆದ ರಂತೆ ಒಡನೆಯೇ ಸ್ವರಾಜ್ಯವನ್ನು ಕೊಡಬೇಕೆಂದೂ ಮದ್ಯಪಾನ ಮತ್ತು ಪರದೇಶೀವಸ್ತ್ರ ವ್ಯಾಪಾರಕ್ಕೆ ಇರುವ ಪ್ರೋತ್ಸಾಹವನ್ನು ಕಡಿಮೆಮಾಡಿ, ಸ್ವದೇಶೀ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕೆಂದೂ, ಉಪ್ಪಿನ ಮೇಲಿನ ತೆರಿಗೆಯನ್ನು ರದ್ದುಮಾಡಬೇಕೆಂದೂ, ರಾಜಕೀಯ ಕೈದಿಗಳನ್ನೆಲ್ಲಾ ಬಿಟ್ಟುಬಿಡಬೇಕೆಂದೂ, ಇಲ್ಲವಾದರೆ ಕಾಂಗ್ರೆಸ್ ಪಕ್ಷದವರು ಪರಿಷತ್ತಿನಲ್ಲಿ ಭಾಗವಹಿಸುವದಿಲ್ಲವೆಂದೂ ಹೇಳುತ್ತಿರುವರು.

ಭರತಖಂಡದಲ್ಲಿ ಕಾಂಗ್ರೆಸ್‌ಪಕ್ಷ, ಲಿಬರಲ್‌ಪಕ್ಷ, ಉಗ್ರಪಕ್ಷ, ಮಹಮ್ಮದೀಯ, ಹಿಂದೂಮಹಾಸಭೆ ಇತ್ಯಾದಿ ನಾನಾಪಕ್ಷಗಳಿರುವವು. ಇವುಗಳಲ್ಲಿ ಕಾಂಗ್ರೆಸ್ ಪಕ್ಷವೇ ಭರತಖಂಡದಲ್ಲಿ ಹೆಚ್ಚಿನ ಬಲವುಳ್ಳದ್ದಾಗಿರುವುದು. ಲಿಬರಲ್ ಮತ್ತು ಹಿಂದೂಮಹಾಸಭೆಯ ಪಕ್ಷದವರು ಪ್ರಥಮದಲ್ಲಿ ಮಹಾತ್ಮರ ಅಸಹಕಾರ ಚಳವಳಿಯನ್ನು ಅನುಮೋದಿಸದಿದ್ದರೂ, ಈಚೆಗೆ ಸರಕಾರದ ದಬ್ಬಾಳಿಕೆಯನ್ನು ಕಂಡು ಅವರೂ ಸಹ ಕಾಂಗ್ರೆಸ್ ಪಕ್ಷವನ್ನು ಸೇರುತ್ತಿರುವರು. ಪಂಡಿತ ಮದನಮೋಹನ ಮಾಳವೀಯ, ಶ್ರೀ|| ವಿಠಲಭಾಯಿ ಪಟೇಲ್ ಮೊದಲಾದವರು ಸಂಪೂರ್ಣವಾಗಿ ಕಾಂಗ್ರೆಸ್‌ಪಕ್ಷವನ್ನು ವಹಿಸಿ, ಮಹಾತ್ಮರನ್ನು ಬಿಟ್ಟು ನಡೆಯುವ ದುಂಡುಮೇಜಿನ ಪರಿಷತ್ತಿಗೆ ಹೋಗುವದಾದರೆ ಘೋರಪಾಪವನ್ನು ಮಾಡಿದಂತಾಗುವದೆಂದೂ, ಸರಕಾರದವರು ರಾಜಕೀಯ ಕೈದಿಗಳನ್ನೆಲ್ಲಾ ಬಿಟ್ಟು ಪರಿಷತ್ತಿನಲ್ಲಿ ಸ್ವರಾಜ್ಯದ ಆಡಳಿತಪದ್ಧತಿಯನ್ನು ಚರ್ಚಿಸುವದಾಗಿ ವಚನಕೊಡುವವರೆಗೂ ಯಾರೂ ಪರಿಷತ್ತಿಗೆ ಹೋಗಕೂಡದೆಂದೂ ಹೇಳುತ್ತಿರುವರು. ಈ ಚಳವಳಿಗೆ ವಿರುದ್ಧವಾಗಿದ್ದ ಮುಸಲ್ಮಾನರೂ ಸಹ ಸರಕಾರದ ವರ್ತನವನ್ನು ನೋಡಿ ರಾಷ್ಟ್ರೀಯಪಕ್ಷವನ್ನು ವಹಿಸುತ್ತಿರುವರು. ಮಹಮ್ಮದೀಯ ಸಮಾಜದಲ್ಲಿ ಅತ್ಯಂತ ಮುಖ್ಯವಾದ "ಜಮೆಯತ್-ಉಲ್-ಉಲೇಮಾ" ಎಂಬ ಸಂಘವು ಕಾಂಗ್ರೆಸ್‌ಪಕ್ಷವನ್ನು ವಹಿಸಿರುವದು. ಭರತಖಂಡವನ್ನೆಲ್ಲಾ ಸಂಪೂರ್ಣವಾಗಿ ಆವರಿಸಿಕೊಂಡು ಪ್ರಪಂಚದ ಎಲ್ಲ ಕಡೆಗಳಲ್ಲೂ ಜನರ ಕುತೂಹಲವನ್ನು ಹೆಚ್ಚಿಸುತ್ತ ದಿನದಿನಕ್ಕೆ ಪ್ರವರ್ಧಮಾನವಾಗುತ್ತಿರುವ ಈ ಚಳವಳಿಯು ಶೀಘ್ರವಾಗಿ ಕೊನೆಗಾಣದಿದ್ದರೆ ಮುಂದೆ ಸಂಭವಿಸಬಹುದಾದ ಅನರ್ಥವನ್ನು ಈಗಲೇ ಅರಿಯುವದು ಸಾಧ್ಯವಿಲ್ಲ. ಈ ಮಧ್ಯೆ ಇಂಡಿಯಾ ಸರಕಾರದವರು ಕಾಂಗ್ರೆಸ್ ಪಕ್ಷದವರು ಅಸಹಕಾರಚಳವಳಿಯನ್ನು ನಿಲ್ಲಿಸಿ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವ ವಿಷಯದಲ್ಲಿ ಮಹಾತ್ಮರೊಡನೆ ಆಲೋಚಿಸುತ್ತಿರುವರೆಂದು ವರ್ತಮಾನವಿರುವದು. ಈಗಾಗಲೇ ಸರಕಾರದವರು ದುಂಡುಮೇಜಿನ ಪರಿಷತ್ತಿಗೆ ಭರತಖಂಡದಿಂದ 50 ಜನ ಪ್ರತಿನಿಧಿಗಳನ್ನು ಚುನಾಯಿಸುವದಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುವದು. (ಅದರ ತಪ್ಸೀಲ್ ಪಟ್ಟಿಯನ್ನು 5 ನೆಯ ಪುಟದಲ್ಲಿ ಪ್ರಕಟಿಸಿರುತ್ತೇವೆ) ಇದೇ ಪತ್ರಿಕೆಯಲ್ಲಿ ಈ ಕೆಳಗೆ ಪ್ರಸಿದ್ಧಪಡಿಸಿರುವ ಡಾಕ್ಟರ್ ರವೀಂದ್ರನಾಥಟಾಗೂರರವರ ಭಾಷಣದಲ್ಲಿ ಕಂಡಂತೆ ಉಭಯಪಕ್ಷದವರು ಕಲೆತು ಸರ್ವಸಮ್ಮತವಾದ ತೀರ್ಮಾನಗಳನ್ನು ಮಾಡಿದ ಹೊರತು ಈ ಚಳವಳಿಯು ನಿಲ್ಲುವಂತಿಲ್ಲ. ಅಂಥ ಸುಯೋಗವು ಜಾಗ್ರತೆಯಾಗಿ ಒದಗಿ ದುಂಡುಮೇಜಿನ ಪರಿಷತ್ತಿನಿಂದ ಭರತಖಂಡಕ್ಕೆ ಸ್ವಾತಂತ್ರ್ಯವು ದೊರೆಯುವಂತೆ ಅನುಗ್ರಹಿಸಲೆಂದು ಆ ಜಗದೀಶ್ವರನನ್ನು ಪ್ರಾರ್ಥಿಸುತ್ತೇವೆ.

ಡಾ|| ರವೀಂದ್ರನಾಥಟಾಗೂರರವರ ಮಹತ್ತ್ವದ ಭಾಷಣ.

ಭರತಖಂಡದ ಕವಿಶ್ರೇಷ್ಠರೆಂದು ಪ್ರಸಿದ್ಧಿಹೊಂದಿರುವ ಡಾಕ್ಟರ್ ರವೀಂದ್ರನಾಥ ಟಾಗೂರರವರು ಭರತಖಂಡದ ಸದ್ಯದಸ್ಥಿತಿಯ ವಿಷಯವಾಗಿ ಕಳೆದ ಮೇ 24 ನೆಯ ತಾರೀಖಿನ ದಿವಸ ಲಂಡನ್ನಿನ "ಸೊಸೈಟಿ ಆಫ್ ಫ್ರೆಂಡ್ಸ್"ನ ವಾರ್ಷಿಕ ಸಮ್ಮೇಳನದಲ್ಲಿ ಮಾಡಿದ ಮಹತ್ವದ ಭಾಷಣವನ್ನು "ದಿ ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯು ಮೇ 26 ನೆಯ ತಾರೀಖಿನ ಸಂಚಿಕೆಯಲ್ಲಿ ಈ ಕೆಳಗೆ ಕಂಡಂತೆ ಪ್ರಕಟಮಾಡಿರುತ್ತದೆ.

"ಅನೇಕ ವರ್ಷಗಳ ಹಿಂದೆ ಮಹಾತ್ಮಾಗಾಂಧಿಯವರು ಶಾಂತಿನಿಕೇತನಕ್ಕೆ ಬಂದಿದ್ದರು. ಭರತಖಂಡದ ಹಕ್ಕೆಂದು ಅವರು ಅಪೇಕ್ಷಿಸುತ್ತಿರುವ "ಸ್ವರಾಜ್ಯ" ವೆಂದರೆ ಏನೆಂಬುದಾಗಿ ನಾನು ಕೇಳಿದೆನು. ಆ ಪ್ರಶ್ನೆಗೆ ಅವರು ಸರಿಯಾದ ಉತ್ತರವನ್ನು ಹೇಳದೆ, ತಾವು ಬ್ರಿಟಿಷ್ ಜನರಲ್ಲಿ ನೈಜವಾದ ಗೌರವವನ್ನಿಟ್ಟಿರುವದಾಗಿ ಹೇಳಿದರು. ನನ್ನ ಪ್ರಶ್ನೆಗೆ ಅವರ ಉತ್ತರವು ಅಸಂಬದ್ಧವಾಗಿರುವಂತೆ ತೋರುವದಾದರೂ, ಬ್ರಿಟಿಷರ ರಾಜಕೀಯ ಸಂಬಂಧವನ್ನು ತಪ್ಪಿಸಿಕೊಳ್ಳದೆ ಸರ್ವಸಮ್ಮತವಾಗಿದ್ದು ಉಭಯ ದೇಶೀಯರಿಗೂ ಸಮಾನಗೌರವಗಳುಳ್ಳ ಸ್ವಾತಂತ್ರ್ಯವನ್ನು ಹೊಂದುವದೇ ಸ್ವರಾಜ್ಯವೆಂದು ಅವರ ಉತ್ತರದ ಅಭಿಪ್ರಾಯವಾಗಿರುವದು.

ಆದರೆ ಮಹಾತ್ಮಾಗಾಂಧಿಯವರಿಗೆ ಸರ್ಕಾರದಲ್ಲಿದ್ದ ನಂಬುಗೆಯು ಈಗ ನಾಶವಾಗಿರುವದು. ಅವರ ಅಭಿಪ್ರಾಯದಂತೆ ಪರಸ್ಪರ ಅರಿತು ವರ್ತಿಸುವ ಮಾರ್ಗವು ಮುಚ್ಚಿಹೋಗಿರುವದು. ಈಗಿನ ವೈಸರಾಯರು ಆಂಗ್ಲೇಯ ದೊಡ್ಡಮನುಷ್ಯರಲ್ಲಿ ಉತ್ತಮತರಗತಿಯವರಾಗಿದ್ದು ನಿಷ್ಪಕ್ಷಪಾತಿಗಳೂ ಪ್ರಜೆಗಳ ಹಿತಕಾಂಕ್ಷಿಗಳೂ ಆಗಿದ್ದರೂ, ಈ ವಿಷಮಸ್ಥಿತಿಯು ಪ್ರಾಪ್ತವಾಗಿರುವದಕ್ಕೆ ಇಂಡಿಯಾ ಸರಕಾರದಲ್ಲಿ ಯಾವನೋರ್ವ ವ್ಯಕ್ತಿಗೂ ಅವಕಾಶವಿಲ್ಲದಿರುವದೇ ಕಾರಣವಾಗಿರುವದು. ಈಗಿನ ಆಡಳಿತ ಪದ್ಧತಿಯ ಹುಳುಕು ಮುಚ್ಚುವ ಪ್ರಯತ್ನಗಳಿಂದ ಯಾವ ಪ್ರಯೋಜನವೂ ಇಲ್ಲ. ಸದ್ಯಃ ತಲೆಕೆಳಗಾಗಿ ಅನರ್ಥಸೂಚಕವಾಗಿರುವ ಈ ವಿಷಮಸ್ಥಿತಿಯ ತೂಕವನ್ನು ಸಮಸ್ಥಿತಿಗೆ ತರಬೇಕಾದರೆ ಆಡಳಿತದ ಅಸ್ತಿಭಾರದಲ್ಲಿಯೇ ಅವಶ್ಯಕವಾದ ತಿದ್ದುಪಡಿಗಳನ್ನು ಮಾಡಬೇಕಾಗಿರುವದು.

ಭರತಖಂಡದ ಆಡಳಿತವು ಬಹಳ ಗೋಜಬಿಜಿಯಾದ ಯಂತ್ರದಿಂದ ನಡೆಯುತ್ತಿರುವದು. ಈ ಯಂತ್ರ ಚಾಲಕರು ಪ್ರಜಾಹಿತವೆಂಬುದನ್ನೇ ಅರಿಯದೆ ಕೇವಲ ಶಕ್ತಿನಿರ್ಮಾಣದಲ್ಲಿ ಮಾತ್ರ ಅನುಭವಹೊಂದಿದವರಾಗಿರುವರು. ಅನೇಕ ಶಾಖೋಪಶಾಖೆಗಳಿಂದಲೂ ನೂರಾರು ದರ್ಜೆಗಳ ಅಧಿಕಾರಿಗಳಿಂದಲೂ ಕೂಡಿ ನಡೆಯುತ್ತಿರುವ ಈ ಆಡಳಿತ ಪದ್ಧತಿಯಿಂದ ಯಂತ್ರ ಚಾಲಕರಿಗೆ ಭರತಖಂಡದ ಜನರ ನಿಜಸ್ಥಿತಿಯೇ ತಿಳಿಯದಂತಾಗಿದೆ. ಹೀಗಾಗಿ ಈ ಯಂತ್ರ ಚಾಲಕರು ಸಾವಿರಾರು ಮೈಲುಗಳ ದೂರದಲ್ಲಿರುವ ಸಹೋದರ ಜನಾಂಗವನ್ನು ಯಂತ್ರವನ್ನು ನಡೆಯಿಸುವಂತೆ, ಅನೇಕ ಶಕ್ತಿಯುತವಾದ ಸಾಧನೆಗಳಿಂದಲೂ, ಹಿಡಿಗಳಿಂದಲೂ ಚಕ್ರಗಳಿಂದಲೂ, ಆಳುತ್ತಿರುವರು. ಆಶ್ರಿತಜನಾಂಗವು ಎಂದಿನವರೆಗೆ ನಿರ್ಜೀವಪದಾರ್ಥದಂತೆ ಯಂತ್ರ ನಿರ್ಮಿತ ಕಾಯಿದೆಗೆ ತಲೆ ಬಗ್ಗುವದೋ ಅಲ್ಲಿಯವರೆಗೆ ಈ (ಆಡಳಿತ) ಯಂತ್ರವು ಸಮರ್ಪಕವಾದ ಫಲಗಳನ್ನು ಕೊಡುವುದು. ಈ ಅಚ್ಚುಕಟ್ಟಾದ ಸಿಸ್ತುಗೊಳಿಸಿದ ಆಡಳಿತಪದ್ಧತಿಗೆ ಕಾರಣೀಭೂತರೂ, ಜವಾಬ್ದಾರರೂ ಆದ ಜನರು, ಬಹುದೂರ ಸಮುದ್ರ ಮಧ್ಯದಲ್ಲಿ ವಾಸಿಸುತ್ತ ಏನೂ ಬೆಳೆಯದ ಬಂಜರು ಬೈಲಿನಂತೆ, ಯಾವಗದ್ದಲವೂ ಇಲ್ಲದ ಆ ಅಪಾರ ಪ್ರದೇಶ (ಭರತಖಂಡ) ದ ಶಾಂತಿಯನ್ನು ನೋಡಿ, ಸಂತೋಷಿಸುತ್ತ, ಸ್ಥಳೀಯ ಅಧಿಕಾರಿಯಲ್ಲಿ ನೆಲಸಿರುವ ವಿಶ್ವಾಸದಲ್ಲಿಯೇ ನಂಬಿಕೆಯುಳ್ಳವರಾಗಿ, ಪೂರ್ವದೇಶಗಳಲ್ಲಿ ಪ್ರಥಮಸ್ಥಾನವನ್ನು ಪಡೆದವರೆಂಬ ಹೆಮ್ಮೆಯಿಂದ ಸ್ವಸ್ಥಚಿತ್ತರಾಗಿರುವರು.

ಈ ಮಧ್ಯೆ ಯುರೋಪದ ತೀಕ್ಷ್ಣಸಂಬಂಧವು ನಿದ್ರಿಸುತ್ತಿದ್ದ ಭರತಖಂಡವನ್ನು ಮೆಲ್ಲಗೆ ಎಚ್ಚರಗೊಳಿಸಿತು. ಆದರೆ ಶತಮಾನದ ಹಿಂದೆ ನಿರ್ಮಿಸಲ್ಪಟ್ಟ ಆಡಳಿತ ಯಂತ್ರವು ಮಾತ್ರ ತನ್ನ ಸ್ವಾಭಾವಿಕವಾದ ಅಲಕ್ಷ್ಯಭಾವದಿಂದ ನಿಜಸ್ಥಿತಿಯ ಕಡೆಗೆ ಲಕ್ಷ್ಯಕೊಡದೆ ಹಿಂದು ಮುಂದು ಕಾಣದ ಕುರುಡನಂತೆ ಭರತಖಂಡದಲ್ಲಿ ಎದ್ದಿರುವ ರಾಜಕೀಯ ಜಾಗೃತಿಯನ್ನು ತಡೆಯಲು ಪ್ರಯತ್ನಿಸುತ್ತಿರುವದು. ಇದಕ್ಕಿಂತಲೂ ಉತ್ತಮಮಾರ್ಗವು ಆ ಯಂತ್ರಕ್ಕೆ ಗೋಚರಿಸುವಂತೆಯೇ ಇಲ್ಲ. ಬಹುಕಾಲದಿಂದ ತಡೆಯಿಲ್ಲದೆ ಗೌರವಿಸಲ್ಪಟ್ಟಿದ್ದ ಆಡಳಿತ ಯಂತ್ರದ ಕಾಯಿದೆಗೆ ಸದ್ಯಃ ಯಾರೂ ಗೌರವಿಸದಿರುವದನ್ನು ಕಂಡು ಯಂತ್ರಚಾಲಕಪ್ರವೀಣನು ಕೋಪದಿಂದ ಕುದಿಯಲಾರಂಭಿಸಿರುವನು. ಈ ಯಂತ್ರಚಾಲಕಪ್ರವೀಣನಿಗೆ ಇತರರಂತೆ ತಾನೂ ಒಬ್ಬ ಮನುಷ್ಯನೇ ಹೊರ್ತು ಯಂತ್ರವಲ್ಲವೆಂಬುದನ್ನು ತಿಳಿಯಪಡಿಸಬೇಕೆಂಬುದೇ ಮಹಾತ್ಮರ ಪ್ರಯತ್ನವಾಗಿರುವದು. ನನ್ನ ದೇಶದಲ್ಲಿ ಪ್ರತಿಕ್ಷಣವೂ ಸಾವಿರಾರು ಜನರು ನಿಷ್ಕಾರಣವಾಗಿ ಕಷ್ಟಗಳನ್ನು ಸಹಿಸುತ್ತಿರುವರೆಂಬುದನ್ನು ನಾನು ಬಲ್ಲೆನು. ಯಂತ್ರನಿರ್ಮಿತ ಸರಕಾರವು ನಿಜಸ್ಥಿತಿಯನ್ನು ಕಣ್ಣುಬಿಟ್ಟು ನೋಡದೆ ತನ್ನ ಕೋಪವನ್ನು ಮಾತ್ರ ಹೊರಚೆಲ್ಲುತ್ತಿರುವದು. ಇಂಥ ಸಂದರ್ಭದಲ್ಲಿ ಕನಿಕರವನ್ನು ವ್ಯಕ್ತಪಡಿಸಲು ಮನಗೆ ಇಷ್ಟವಿಲ್ಲ; ಏಕೆಂದರೆ, ಮಾನವರ ಚರಿತ್ರೆಯಲ್ಲಿ ಮಾನವನಿಗೂ ಯಂತ್ರಕ್ಕೂ ಹೊಡೆದಾಟಗಳು ಆಗುತ್ತಲೇ ಇರುವವು. ಈ ಭಯಂಕರ ಸಮರದಲ್ಲಿ ಕೇವಲ ನಿಮ್ಮ ಆತ್ಮಯಜ್ಞದಿಂದಲೇ ಆ ಯಂತ್ರಬಲವನ್ನು ಗೆಲ್ಲಬೇಕಾಗಿರುವುದು.

ಈ ವಿಷಮಸ್ಥಿತಿಗೆ ನಿಮ್ಮಲ್ಲಿಯ ಮುಂದಾಳುಗಳು ಕಾರಣರಲ್ಲವೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಆದುದರಿಂದಲೇ "ಯಂತ್ರ" ವೆಂದು ನಾನು ಪದೇ ಪದೇ ಹೇಳುತ್ತಿರುವೆನು. ನಿಮ್ಮ ಜನಾಂಗದವರಲ್ಲಿರುವ ದಯಾದಾಕ್ಷಿಣ್ಯಸ್ವಭಾವಗಳಲ್ಲಿ ನಾನು ತುಂಬಾ ನಂಬುಗೆಯನ್ನಿಟ್ಟಿರುವೆನು. ಸದ್ಯಃ ಭಾರತೀಯರ ಮನಸ್ಸಿನಲ್ಲಿ ಉತ್ಪನ್ನವಾಗಿರುವ ಸ್ವಾತಂತ್ರ್ಯ ಸಂಪಾದನೆಯ ಅಭಿಲಾಷೆಗೆ ನೀವೇ ಮೂಲಪ್ರೇರಕರಾಗಿರುತ್ತೀರಿ. ಅದಕ್ಕಾಗಿ ನಾವು ನಿಮಗೆ ಗೌರವವನ್ನು ಕೊಡಲೇ ಬೇಕಾಗಿದೆ. ನಮ್ಮವರಲ್ಲಿ ಇಂದು ಜನಿಸಿರುವ ಧೈರ್ಯ, ಹಾಗೂ ಕಷ್ಟಪರಂಪರೆಗಳನ್ನು ಸಹಿಸುವ ಸ್ಥೈರ್ಯವನ್ನು ನೋಡಿ ನೀವು ಸಹ ವಿಸ್ಮಿತರಾಗದೆ ಇರಲಾರಿರಿ. ನಾವು ಸಹಿಸುವ ಕಷ್ಟಪರಂಪರೆಗಳಿಂದ ನಮ್ಮ ಸ್ವಾತಂತ್ರ್ಯಾಭಿಲಾಷೆಯು ನಿಮ್ಮ ಮನಸ್ಸಿಗೆ ಸ್ಪಷ್ಟವಾಗಿ ತಿಳಿದಕೂಡಲೇ ಈ ಚಳವಳಿಗೆ ನೀವು ಸಹ ಸಂಪೂರ್ಣ ಸಹಾನುಭೂತಿಯನ್ನು ತೋರಿಸುವಿರೆಂದು ನಾನು ಧೃಡವಾಗಿ ನಂಬಿರುತ್ತೇನೆ. ನೀವು ಹೊಡೆಯುವ ಪೆಟ್ಟುಗಳನ್ನು ಹಿಂತಿರುಗಿಸುವದಕ್ಕೂ, ನೀವು ಮಾಡುವ ನಿಂದೆಗೆ ಸರಿಯಾದ ಪ್ರತ್ಯುತ್ತರಕೊಡುವದಕ್ಕೂ ಶಕ್ತರಲ್ಲದ ಜನಾಂಗದವರ ಮೇಲೆ ಕೋಪದ ಭರದಲ್ಲಿ ನೀವು ನಡೆಯಿಸುತ್ತಿರುವ ದಬ್ಬಾಳಿಕೆಯಿಂದ ಅಂತರ್ಯದಲ್ಲಿಯೇ ನೀವು ಸಹ ಸಂತಾಪಪಡುವಿರೆಂದು ನಾನು ಧೃಡವಾಗಿ ಹೇಳಬಲ್ಲೆನು. ಏಕೆಂದರೆ ನಿಮ್ಮನ್ನು ಈ ಉನ್ನತಸ್ಥಿತಿಗೆ ತಂದಿರುವ ನಿಮ್ಮ ಸ್ವಾಭಾವಿಕಗುಣಗಳನ್ನು ಎಂದಿಗೂ ಸಂಪೂರ್ಣವಾಗಿ ನಾಶಮಾಡಿಕೊಳ್ಳಲಾರಿರಿ. ಇದೆಲ್ಲವನ್ನೂ ಅರಿತೇ ಮಹಾತ್ಮಾಗಾಂಧಿಯವರು ಮಾನವಕೋಟಿಗೆ ಜನ್ಮಸಿದ್ಧವಾದ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕೆ ನಿಮ್ಮನ್ನೇ ತಮ್ಮ ಪಕ್ಷ ವಹಿಸುವಂತೆ ಕೇಳಿರುವರು. ಆದುದರಿಂದ ಪೂರ್ವ ಪಶ್ಚಿಮದೇಶೀಯರಾದ ನಾವೀರ್ವರೂ ಒಟ್ಟುಗೂಡಿ ಆಡಳಿತಯಂತ್ರವು ಅನುಕೂಲವಾಗಿದ್ದಾಗ ಮಾತ್ರ ಒಳ್ಳೆಯದೆಂಬುದನ್ನು ಅರಿತು ಸರ್ವಸಮ್ಮತವಾದ ಒಪ್ಪಂದಕ್ಕೆ ಬರುವಂತಾಗಲೆಂದು ಹಾರೈಸುತ್ತೇನೆ."

ರಾವುಂಡ್‌ಟೇಬಲ್ ಪರಿಷತ್ತಿನ ಸಭಾಸದರು.

ರಾವುಂಡ್ ಟೇಬಲ್ ಪರಿಷತ್ತಿನ ಪ್ರತಿನಿಧಿಗಳ ಹೆಸರುಗಳ ಯಾದಿಯನ್ನು ಮಾಡುವುದು ಸಿಮುಲಾದಲ್ಲಿ ನಡೆದಿದೆಯೆಂದೂ, ಹಿಂದುಸ್ಥಾನದ ಪರವಾಗಿ ಈ ಕೆಳಗೆ ಕಂಡ ೮೯ ಜನ ಪ್ರತಿನಿಧಿಗಳನ್ನು ಚುನಾಯಿಸತಕ್ಕವರುವರೆಂದೂ ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬ್ರಿಟಿಶ ಹಿಂದುಸ್ಥಾನದ	ಪ್ರತಿನಿಧಿ	೫೭
ಸಂಸ್ಥಾನಗಳಿಂದ	"	೧೬
ಯುರೋಪಿಯನ್ ಮತ್ತು ಆಂಗ್ಲೋ ಇಂಡಿಯನ್	"	೧೩
ಬ್ರಹ್ಮದೇಶ	"	೩
	ಒಟ್ಟು	೮೯

ಈ ಸಭಾಸದರ ಪಕ್ಷಗಳಂತೆ ಯಾದಿಯು ಈ ಪ್ರಕಾರ ಇದೆ:—

೧. ಬ್ರಿಟಿಷ್ ಹಿಂದೂಸ್ಥಾನ ಕಾಂಗ್ರೆಸ್.

ಮಹಾತ್ಮಾಗಾಂಧಿ, ಪಂ|| ಮೋತೀಲಾಲ ನೆಹರು ಮಿ|| ವಿ. ಜೆ. ಪಟೇಲ, ಪಂ|| ಜವಾಹರಲಾಲ ನೆಹರು ಡಾ|| ಅನಸಾರಿ ಮತ್ತು ಮಿ|| ಜೆ. ಎಮ್. ಸೇನಗುಪ್ತ,.

ಪ್ರಾಗತಿಕ.

ಸರ್ ತೇಜಬಹಾದೂರ ಸಪ್ರು, ಸರ್ ಪಿ. ಎಸ್. ಶಿವಸ್ವಾಮಿ ಅಯ್ಯರ, ನೈ|| ನಾ|| ವ್ಹಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ, ಸರ್ ಚಿಮಣಲಾಲ ಸೆಟಲವಾಡ ಮತ್ತು ಮಿ|| ಸಿ. ವೈ. ಚಿಂತಾಮಣಿ.

ಹಿಂದೂ ಮಹಾಸಭಾ.

ಪಂ|| ಮದನಮೋಹನಮಾಲವಿಯಾ, ರಾ|| ನ. ಚಿ. ಕೇಳಕರ, ಡಾ|| ಮುಂಜೆ.

ಮುಸಲಮಾನ.

ನಾ|| ಆಗಾಖಾನ, ಬ್ಯಾ|| ಜಿನ್ನಾ, ಸರ್ ಅಲ್ಲೀ ಇಮಾಮ, ಮೌ|| ಮಹಮದ ಅಲ್ಲಿ, ಸರ್ ಅಬದುರಹೀಮ, ಸರ್ ಫಾಜಲಹುಸೇನ, ಮೌ|| ಜಾಫರಅಲ್ಲಿ ಮತ್ತು ಮಿ|| ಫಜಲೂಲ ಹಕ್ಕ.

ಶೀಖ.

ಸರ್ ಸುಂದರಸಿಂಗಮಜಿಥಾ ಮತ್ತು ಸರದಾರ ಶಾರ್ದೂಲಸಿಂಗ ಕವೀಶ್ವರ.

ಹಿಂದೀ ಕ್ರಿಶ್ಚಿಯನ್.

ಮಿ|| ರಂಗಸ್ವಾಮಿ ಮತ್ತು ಬ್ಯಾ|| ಜೋಸೆಫ ಬಾಪ್ಟಿಸ್ಟಾ.

ಪಾರ್ಶಿ.

ಸರ್ ಸಿ. ಪಿ. ಸೆಠನಾ ಮತ್ತು ಮಿ|| ಕೆ. ಎಫ್. ನರಿಮನ್.

ಬ್ರಾಹ್ಮಣೇತರ.

ಮಿ|| ವಿ. ರಾಮಸ್ವಾಮಿ ಮುದಲಿಯಾರ, ಮಿ|| ಷಣ್ಮುಖಂಚೆಟ್ಟಿ.

ವ್ಯಾಪಾರಿಸಂಘ.

ಸರ್ ಪುರುಷೋತ್ತಮದಾಸ ಠಾಕೂರದಾಸ, ಲಾಲಾ ಹರಕಿಸನಲಾಲ, ಸರ್ ಇಬ್ರಾಹಿಮ ರಹಿಮತುಲ್ಲಾ ಅಥವಾ ಸರ್ ರಾಜೇಂದ್ರನಾಥ ಮುಕರ್ಜಿ.

ಕೂಲಿಕಾರ ವರ್ಗ.

ರಾ|| ನಾ. ಮ. ಜೋಶಿ.

೨. ಸಂಸ್ಥಾನಗಳು.

ಬಿಕಾನೇರದ ಮಹಾರಾಜರು, ಅಲಹಾಬಾದದ ಮಹಾರಾಜರು, ಕಾಶ್ಮೀರ ಮಹಾರಾಜರು, ನವಾನಗರದ ಜಾಮಸಾಹೇಬ, ಭೋಪಾಳದ ನವಾಬ, ಸರ್ ಮಿರ್ಜಾ ಇಸ್ಮಾಯಿಲ್ (ಮೈಸೂರು), ಸರ್ ಅಕಬರ ಹೈದರಿ (ಹೈದರಾಬಾದ), ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಕರ್ನಲ್ ಹಸ್ಕರ್.

೩. ಆಂಗ್ಲೋ ಇಂಡಿಯನ್ ಮತ್ತು ಯೂರೋಪಿಯನ್.

ಸರ್ ಡಾರ್ಶಿ ಲಿಂಡಸೆ, ಕರ್ನಲ್ ಕಾಫರ್ಡ ಮತ್ತು ಕರ್ನಲ್ ಗಿಡನೆ.

೪. ಬ್ರಹ್ಮದೇಶ.

ಮಾಗ ಟಾಕೆ ಕಿ, ಯು. ಬಾ. ಪೋ.

"ಸೋಲಾಪೂರದಿನ" ದ ಆಚರಣೆ. ಪೋಲೀಸರ ನಿರ್ಬಂಧ.

ಮುಂಬಯಿ ಜೂನ್. 12.

ಕಾಂಗ್ರೆಸ್ ಕಮಿಟಿಯವರು ಈ ದಿನ ನಡೆಯಿಸಬೇಕೆಂದು ತೀರ್ಮಾನಿಸಿರುವ "ಸೊಲಾಪೂರದಿನ" ದ ಮೆರವಣಿಗೆಯನ್ನು ಪೋಲೀಸರು ಪ್ರತಿಬಂಧಿಸುವರು. ಪೋಲೀಸ್ ಕಮಿಶನರಾದ ಮಿ|| ಡ್ಯಾನಿಯಲ್ ಹೀಲಿಯವರು ಉತ್ಸವವನ್ನು ನಿಲ್ಲಿಸಬೇಕೆಂದು ಅಪ್ಪಣೆಮಾಡಿರುವರು. ಸೂಪರಿಂಟೆಂಡೆಂಟ ಗುಡಿಯರ್‌ರವರು ಇನ್ಸ್‌ಪೆಕ್ಟರ್ ಲಾಯರ್ನ್ಸ್‌ರೊಡನೆ ಬಂದು ಆರ್ಡರನ್ನು ಜಾರಿಮಾಡಿದರು. ಪೋಲಿಸರು ಕಾಂಗ್ರೆಸ್ ಕಮಿಟಿಯ ವೈಸ್‌ಪ್ರೆಸಿಡೆಂಟರಾದ ಶ್ರೀಮತಿ ಮುನಷಿಯವರನ್ನು ವಿಚಾರಿಸಿದರು. ಆದರೆ ಆ ಸಮಯದಲ್ಲಿ ಅವರು ಅಲ್ಲಿರಲಿಲ್ಲ.

ಸಾಯಂಕಾಲದ ವೇಳೆಗೆ ನೂರಾರು ದೊಡ್ಡ ಮತ್ತು ಚಿಕ್ಕ ಚಿಕ್ಕ ಮೆರವಣಿಗೆಗಳು ಮುಂಬಯಿಬೀದಿಗಳಲ್ಲಿ ಗಿಜಿಗಿಜಿಸುತ್ತಿದ್ದವು. ಜನರನ್ನು ಚದರಿಸಲು ಪೋಲೀಸರು ದೊಣ್ಣೆಗಳಿಂದ ಹೊಡೆದುದರಿಂದ ಸುಮಾರು 30 ಜನರಿಗೆ ಗಾಯಗಳಾಗಿರುವವು. ಈಸ್ಟಲ್ಯಾಂಕಾಷೈರು ರೆಜಿಮೆಂಟಿನವರು ಒಂದು ಕಂಪನಿಯ ಶಿಪಾಯಿಗಳು ಪೋಲೀಸ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಸಿದ್ಧರಾಗಿ ಕಾದಿದ್ದರು.

ಮುಖ್ಯವಾದ ಮೆರವಣಿಗೆಯಲ್ಲಿ "ಸಂಗ್ರಾಮಕೂಟ" ದ ನೂತನ ಪ್ರೆಸಿಡೆಂಟರಾದ ಮಿ|| ಕಪಾಡಿಯಾರವರು 3 ಬಣ್ಣದ ರಾಷ್ಟ್ರೀಯಬಾವುಟವನ್ನು ಹಿಡಿದು ನೂರು ಜನ ಸ್ತ್ರೀ ಸ್ವಯಂಸೇವಕಿಯರೊಡನೆ 5 ಘಂಟೆಗೆ ಕಾಂಗ್ರೆಸ್ ಗೃಹದಿಂದ ಹೊರಟರು. ಸ್ವಲ್ಪ ದೂರ ಹೋಗುವದರೊಳಗಾಗಿ ಡೆಪ್ಯುಟಿ ಕಮಿಶನರಾದ ಮಿ|| ಕೋಟ್ಸ್‌ವರ್ಥರವರು ಆರು ಜನ ಆಫೀಸರು ಮತ್ತು 50 ಜನ ಪೋಲೀಸರೊಡನೆ ಬಂದು ಉತ್ಸವವನ್ನು ತಡೆದರು. ಸತ್ಯಾಗ್ರಹಿಗಳು ಮುಂದುವರಿಯದೆ ಹಾಗೂ ಹಿಮ್ಮೆಟ್ಟದೆ ಅಲ್ಲೇ ನಿಂತುಬಿಟ್ಟರು.

ಈ ಮಧ್ಯೆ ನೂರಾರು ಸಣ್ಣ ಸಣ್ಣ ಮೆರವಣಿಗೆಗಳು ನಗರದ ಎಲ್ಲ ಕಡೆಗಳಿಂದಲೂ ಹೊರಟು ಪೋಲೀಸರು ಇಲ್ಲದಿರುವ ಬೀದಿಗಳನ್ನೇ ಸುತ್ತಿಕೊಂಡು ಎಸ್ಪ್ಲನೇಡ್ ಮೈದಾನವನ್ನು ಸೇರಿ ಅಲ್ಲಿ ಒಂದು ದೊಡ್ಡ ಸಭೆಯನ್ನು ಮಾಡಿದರು. ಮುಸಲ್ಮಾನರಿಂದ ಕೂಡಿದ 1000 ಜನರ ಒಂದು ಉತ್ಸವವು ಕಾಲಬಾದೇವಿರೋಡ್ ಮತ್ತು ಪ್ರಿನ್ಸೆಸ್ ಸ್ಟ್ರೀಟಿನ ಮಧ್ಯ ಮೂಲೆಯಲ್ಲಿ ತಡೆಯಲ್ಪಟ್ಟಿತು. ಮೂರನೆಯ ಉತ್ಸವವು ಹಾರ್ನಬಿ ರೋಡಿನ ಮುಖಾಂತರವಾಗಿ (ರಾತ್ರಿ 8 ಘಂಟೆಯ ಸಮಯಕ್ಕೆ) ಬೋರೀಬಂದರಕ್ಕೆ ಬಂದಾಗ ಪೋಲೀಸರು ಅವರನ್ನೆಲ್ಲ ದೊಣ್ಣೆಗಳಿಂದ ಹೊಡೆದು ಅನೇಕರಿಗೆ ಗಾಯಪಡಿಸಿದರು. ಹದಿನೈದು ನಿಮಿಷಗಳನಂತರ ಸೂಪರಿಂಟೆಂಡೆಂಟ್ ಹೋಂರನರು ಅಲ್ಲಿಗೆ ಬಂದು ಜನರಿಗೆ ಚದರುವಂತೆ ಆಜ್ಞಾಪಿಸಿದರು. ಅದಕ್ಕೆ ಯಾರೂ ಒಪ್ಪದಿರಲು ಪೋಲೀಸರು ದೊಣ್ಣೆಗಳಿಂದ ಹೊಡೆದು ಸುಮಾರು 5 ಜನರಿಗೆ ಗಾಯಪಡಿಸಿದರು. ಆ ಮೇಲೆ ಪೋಲೀಸರು ಹಿಮ್ಮೆಟ್ಟಿ ವಿಲ್ಸನ್ ಹೈಸ್ಕೂಲಿನ ಮುಂಭಾಗದಲ್ಲಿ ಕೂಡಿದರು. ರಾತ್ರಿ 9 ಘಂಟೆಗೆ ಧೋಬಿತಲಾವಿನಲ್ಲಿ ಸೇರಿದ್ದ ಪೋಲೀಸರೆಲ್ಲ ಹಿಂತಿರುಗಿದರು. 10 ಘಂಟೆಯ ಸಮಯಕ್ಕೆ ಶಿಪಾಯಿಗಳು ಹಿಂತಿರುಗಿದರು. ರಾತ್ರಿ ಹನ್ನೆರಡು ಗಂಟೆಯಾದನಂತರ ಕಾಂಗ್ರೆಸ್ ಗೃಹದ ಮುಂಭಾಗದಲ್ಲಿ ನಿಂತಿದ್ದ ಪೋಲೀಸರೂ ಹೊರಟುಹೋದರು. ಅಲ್ಲಿಯವರೆಗೂ ಸ್ಥಳವನ್ನು ಬಿಟ್ಟು ಅಗಲದೇ ಇದ್ದ ಮೆರವಣಿಗೆಯು ಅನಂತರ ಉದ್ದೇಶಿಸಿದ ರಸ್ತೆಗಳನ್ನೆಲ್ಲಾ ಸುತ್ತಿ ಎಸ್ಪ್ಲನೇಡ್ ಮೈದಾನವನ್ನು ತಲಪಿತು. ಲ್ಯಾಮಿಂಗ್‌ಟನ್ ರೋಡ್ ಗಿರಗಾಂವ್ ಬ್ಯಾಂಕ್‌ರೋಡ್ ಮೊದಲಾದ ಮುಖ್ಯ ಮುಖ್ಯ ಬೀದಿಗಳಲ್ಲಿ ನೂರಾರು ಜನರು ಕಾದಿದ್ದು ಲ್ಯಾಮಿಂಗ್ ಟನ್ ರೋಡನ್ನು ದಾಟುವದರೊಳಗಾಗಿ ಸುಮಾರು 25,000 ಜನರು ಕೂಡಿದರು. ಮೆರವಣಿಗೆಯು ಎಸ್ಪ್ಲನೇಡ್ ಮೈದಾನವನ್ನು ಸೇರಿದಮೇಲೆ ಸಭೆಯಾಯಿತು.

ವಿಮರ್ಶೆ.

ರಾಜಧಾನಿಯ ಟ್ರೇನಿಂಗ್ ಕಾಲೇಜಿನ ಅಸಿಸ್ಟೆಂಟರಾದ ಮ|| ರಾ|| ಬಿ. ನಾರಾಯಣಸ್ವಾಮಿರಾವ್, ಬಿ.ಎ., ಇವರು ರಚಿಸಿರುವ ಹುಲಿಶಿಕಾರಿ ಮತ್ತು ಪೃಥ್ವಿರಾಜ-ಜಯಚಂದ ಎಂಬೆರಡು ಮಕ್ಕಳ ನಾಟಕಗಳ ಪುಸ್ತಕವನ್ನು ನಮಗೆ ಕಳುಹಿಸಿರುತ್ತಾರೆ. ಈ ನಾಟಕಗಳನ್ನು ಶ್ರೀಮದ್ಯುವರಾಜಕುಮಾರರಾದ ಶ್ರೀ ಜಯಚಾಮರಾಜಒಡೆಯರ್ ಬಹದ್ದೂರ್‌ರವರು ರಾಜಸಮ್ಮುಖದಲ್ಲಿ ಅಭಿನಯಿಸಿರುತ್ತಾರೆ. ಈ ನಾಟಕಗಳು ಎಲ್ಲ ಮಕ್ಕಳಿಗೂ ಉಪಯೋಗವಾಗುವಂತೆ ಸುಲಭವೂ, ಮನೋಹರವೂ, ಶುದ್ಧವೂ ಆದ ಶೈಲಿಯಲ್ಲಿ ಬರೆಯಲ್ಪಟ್ಟಿರುವವು. ಭಾಷಾಭಿಮಾನಿಗಳೆಲ್ಲರೂ ಈ ಪುಸ್ತಕವನ್ನು ತಮ್ಮ ಮಕ್ಕಳಿಗೆ ತಂದುಕೊಟ್ಟು ಗ್ರಂಥಕರ್ತರ ಉದ್ದೇಶವು ಸಫಲವಾಗುವಂತೆ ಮಾಡಲೆಂದು ಹಾರೈಸುತ್ತೇವೆ. ಕ್ರಯ 1ಕ್ಕೆ 4 ಆಣೆ.

ಈ ಪುಸ್ತಕವು ಭೀಮಸೇನರಾವ್, 351. ಡಿ. ಸುಬ್ಬಯ್ಯಾರೋಡ್, ಮೈಸೂರು. ಇವರಲ್ಲಿ ದೊರೆಯುತ್ತದೆ.

ಕಳೆದ 17 ನೆಯ ತಾರೀಖು ಮಂಗಳವಾರ ಲಂಡನ್ನಿನಲ್ಲಿ ಅಘೋಷಪೂರ್ವವಾದ ಬಿರುಗಾಳಿಯೆದ್ದು ಒಂದು ಘಂಟೆಯ ಕಾಲದೊಳಗಾಗಿ 2 ಅಂಗುಲ ಮಳೆಯಾಯಿತು. ಸಿಡಿಲು ಬಡಿದು ಅನೇಕ ಕಟ್ಟಡಗಳು ನಾಶವಾಗಿರುವವು. 6-7 ಜನರು ಸತ್ತರು. ಅನೇಕ ಕಟ್ಟಡಗಳಿಗೆ ನೀರು ನುಗ್ಗಿ ವಿಶೇಷ ನಷ್ಟವನ್ನು ಮಾಡಿರುವದು.

[೩ನೆಯ ಪುಟದಿಂದ ಮುಂದೆ ಸಾಗಿದುದು]

ಕೊಳಾಯಿಗಳನ್ನು, ಕೇಳುವವರಿಗೆ ಸಕಾಲದಲ್ಲಿ ತಯಾರಿಸಿಕೊಡುವದು ಕಾರ್ಖಾನೆಯವರಿಗೆ ಈಗ ಸಾಧ್ಯವಿಲ್ಲದೆ ಇದೆ. ಈ ನ್ಯೂನತೆಯನ್ನು ಪರಿಹರಿಸಿಕೊಳ್ಳುವುದಕ್ಕೂ ತಕ್ಕ ಸಾಧನ ಸಲಕರಣೆಗಳನ್ನೊದಗಿಸಿಕೊಳ್ಳಬೇಕಾಗಿದೆ. ತುಂಬ ಭಾರಿ ಭಾರಿ ಪ್ರಮಾಣದಲ್ಲಿ ವಿಶೇಷ ವಿಧದ ಬಗೆಬಗೆಯ ಕೊಳಾಯಿಗಳನ್ನೂ ಎರಕ ಹೊಯ್ಯುವ ಭಾಗದಲ್ಲಿ ಕೂಡ ಇದೇರೀತಿ ತಕ್ಕಂತೆ ಸಲಕರಣೆಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಬೀದು ಕಬ್ಬಿಣದಲ್ಲಿ "ಸ್ಲೀಪರು" ಗಳನ್ನು ಮಾಡುವುದಕ್ಕೆ ತೀರ ಅವಶ್ಯವಾದಷ್ಟು ಸಲಕರಣೆಗಳನ್ನು ಮಾತ್ರವೇ ಇಲಾಖೆಯವರು ಈಗ ತರಿಸಿಕೊಂಡಿದ್ದಾರೆ. ಈ "ಸ್ಲೀಪರು" ಗಳನ್ನು ಕ್ರಯಕ್ಕೆ ತೆಗೆದುಕೊಳ್ಳುವುದಾಗಿ ಮೈಸೂರು ರೈಲ್ವೆಯವರು ಬರೆದಿದ್ದಾರೆ. ಇತರ ರೈಲ್ವೆಗಳಿಂದಲೂ ಇವಕ್ಕೆ ಗಿರಾಕಿಯು ಬರಬಹುದೆಂದು ಭಾವಿಸಿದ್ದೇವೆ. ಮುಂದಣ ಕಾಲದಲ್ಲಿ ಕಾರ್ಖಾನೆಯ ಉಪಯೋಗಕ್ಕೆ ತಕ್ಕಷ್ಟು ಸೌದೆಯನ್ನು ಒದಗಿಸಿಕೊಳ್ಳುವುದಕ್ಕಾಗಿ, ಮತ್ತೆ ಕೆಲವು ಮೈಲಿಗಳವರೆಗೆ ಟ್ರಾಂವೆ ಲೈನನ್ನು ಬಡಾಯಿಸುವದು ಅವಶ್ಯಕವೆಂಬುದಾಗಿ ಫಾರೆಸ್ಟು ಇಲಾಖೆಯವರು ತಿಳಿಸಿದ್ದಾರೆ. ಹೊಸದಾಗಿ ಏರ್ಪಡಿಸಿರುವ ಕೊಳಾಯಿ ಎರಕದ ಕಾರ್ಖಾನೆಯಲ್ಲಿ ಕೆಲಸ ನಡೆಯಿಸುವುದಕ್ಕೂ, ಮತ್ತು ಈ ಕಾರ್ಖಾನೆಯಲ್ಲಿ ನೆರವೇರಿಸಲು ಉದ್ದೇಶಿಸಿರುವ ಮತ್ತು ನೆರವೇರಿಸಬೇಕೆಂದು ಪರ್ಯಾಲೋಚಿಸುತ್ತಿರುವ ಇತರ ಕೆಲವು ಕಾರ್ಯಕಲಾಪಗಳನ್ನು ನಡೆಯಿಸುವುದಕ್ಕೂ, ಹೆಚ್ಚು ಶಕ್ತಿಯನ್ನೊದಗಿಸಿಕೊಳ್ಳಬೇಕಾಗಿದೆ. ಹೆಚ್ಚು ಹಣವು ಪೋಲಾಗದೆ ಮಿತವ್ಯಯಕ್ಕೆ ಅವಕಾಶವಿರುವಂತೆ ಈಗಿರುವ ಸಾಧನಗಳಿಂದಲೇ ಆ ರೀತಿ ಮಾಡುವುದು ಸುತರಾಂ ಸಾಧ್ಯವಿಲ್ಲ. ಆದಕಾರಣ, "ಸಕ್ಷನ್‌ಗ್ಯಾಸ್ ಪ್ಲ್ಯಾಂಟ್" ಯಂತ್ರವನ್ನು ತರಿಸಿಕೊಂಡೋ, ಅಥವಾ ಕಾರ್ಖಾನೆಗೆ ಸಮೀಪದಲ್ಲಿ ಜಲಪಾತದ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿಕೊಂಡೋ, ಇವಕ್ಕೆ ಅವಶ್ಯವಾದಷ್ಟು ಶಕ್ತಿಯನ್ನು ಒದಗಿಸಿಕೊಳ್ಳಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ಈ ವಿಭಾಗಗಳನ್ನೆಲ್ಲವನ್ನೂ ನೆರವೇರಿಸುವ ಉದ್ದೇಶದಿಂದ ಕಾರ್ಖಾನೆಯ ಕಾರ್ಯನಿರ್ವಾಹಕ ಮಂಡಲಿಯವರು ಮುಂದಣ ವರುಷಕ್ಕೆ ಮೂಲಧನದ ವೆಚ್ಚಕ್ಕಾಗಿ 10ಲಕ್ಷ ರೂಪಾಯಿಗಳು ಮುಂಜೂರಾಗಬೇಕೆಂದು ಕೇಳಿದ್ದಾರೆ. ಈ 10 ಲಕ್ಷ ರೂಪಾಯಿಗಳ ವಿನಿಯೋಗ ವಿಧಾನವು ಯಾವುದೆಂದರೆ :—

ಟ್ರಾಂವೆಗಳ ಬಡಾವಣೆಗೆ 1½ ಲಕ್ಷ ರೂ. ಗಳು, ಕೊಳಾಯಿ ಎರಕದ ಕಾರ್ಖಾನೆಯ ಬಡಾವಣೆಗೆ 1 ಲಕ್ಷ ರೂ. ಗಳು, ಇತರ ವಸ್ತುಗಳ ಎರಕದ ಕಾರ್ಖಾನೆ ಬಡಾವಣೆಗೆ ½ ಲಕ್ಷ ರೂ. ಗಳು, "ಸ್ಲೀಪರು" ಗಳ ಎರಕದ ಕಾರ್ಖಾನೆಗೆ ಹೆಚ್ಚಿಗೆ ಸಲಕರಣೆಗಳು ½ ಲಕ್ಷ ರೂ. ಗಳು, ಯಂತ್ರಶಾಲೆಯ ಬಡಾವಣೆಗೆ 1½ ಲಕ್ಷ ರೂ. ಗಳು, ಹೆಚ್ಚಿಗೆ ಶಕ್ತಿಯನ್ನು ಒದಗಿಸಿಕೊಳ್ಳುವುದಕ್ಕೆ 4 ಲಕ್ಷ ರೂ. ಗಳು, ಕಬ್ಬಿಣದ ಭಟ್ಟಿ ಯಂತ್ರಕ್ಕೆ ನಡೆಯಬೇಕಾದ ಸಣ್ಣ ಪುಟ್ಟ ಕಾಮಗಾರಿಗಳಿಗೂ ಮತ್ತು ಭದ್ರಾವತಿಯ ನಿವಾಸಿಗಳಿಗೆ ಸೌಕರ್ಯಗಳನ್ನು ಹೆಚ್ಚಿಸುವ ಕಾಮಗಾರಿಗಳಿಗೂ 1 ಲಕ್ಷ ರೂ. ಜುಮ್ಲಾ 10 ಲಕ್ಷ ರೂಪಾಯಿಗಳು.

ಈ ಕಾರ್ಖಾನೆಯಲ್ಲಿ ಕೆಲಸ ನಡೆಯಿಸುವ ವೆಚ್ಚಕ್ಕೋಸ್ಕರವಾಗಿ ಒದಗಿಸಿರುವ ಮುಂಗಡದ ಮೊತ್ತದಲ್ಲಿ ಮುಂದಣ ವರುಷ 10 ಲಕ್ಷ ರೂಪಾಯಿಗಳ ಮೊಬಲಗು ಅನುಕೂಲವಾಗಿ ಒದಗುವುದೆಂಬ ನಿರೀಕ್ಷೆಯಿದೆ. ಮೂಲಧನದ ಚಾಲ್ತಿ ವೆಚ್ಚಗಳಿಗೋಸ್ಕರ ಒದಗಿಸಿದ್ದ ಮೊತ್ತದಿಂದ ದೊರೆಯುವಂತಿರುವ ಈ ಮೊಬಲಗನ್ನು ಮೇಲೆ ಸೂಚಿಸಿದ ಕಾರ್ಯಗಳಿಗೆ ವಿನಿಯೋಗಿಸಬೇಕೆಂಬದಾಗಿ ಉದ್ದೇಶಿಸಲಾಗಿದೆ

ಸಾಧನೋಪಾಯಗಳು.

1921 ನೆಯ ಇಸವಿಯಲ್ಲಿ ಶೇಕಡ 7 ರಂತೆ ಬಡ್ಡಿಯನ್ನು ಗೊತ್ತುಮಾಡಿ ಸರ್ಕಾರದವರು ಸಾಲವನ್ನು ತೆಗೆದಿದ್ದರಷ್ಟೆ. ಆ ಸಾಲದ ಅವಧಿಯು ಮುಗಿದುಹೋಗುವುದರಿಂದ 1931 ನೆಯ ಇಸವಿ ನವೆಂಬರು ತಿಂಗಳು ಒಂದನೆಯ ತಾರೀಖಿಗೆ ಅದನ್ನು ತೀರಿಸಬೇಕಾಗಿದೆ. ಈ ವಿಚಾರವು ತಮ್ಮೆಲ್ಲರಿಗೂ ವೇದ್ಯವಾಗಿಯೇ ಇದೆ. ಈ ಸಾಲವನ್ನು ಸುಲಭದರದ ಬಡ್ಡಿಯುಳ್ಳ ದೀರ್ಘಾವಧಿಯ ಹೊಸ ಸಾಲಕ್ಕೆ ಪರಿವರ್ತನಗೊಳಿಸಬೇಕೆಂಬ ವಿಷಯವು ಕೆಲವುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಸೇವಿಂಗ್ಸ್ ಬ್ಯಾಂಕುಗಳಲ್ಲಿ ಐದು ವರ್ಷಗಳ ಕಾಲ ಹಿಂದಕ್ಕೆ ಕೇಳದೆ ಹಣವನ್ನು ಠೇವಣಿಮಾಡಿದರೆ ವರುಷಕ್ಕೆ ಶೇಕಡ 5 ರಂತೆ ಬಡ್ಡಿಯನ್ನು ಸಲ್ಲಿಸುವಂತೆ ಗೊತ್ತುಮಾಡಿ ಒಂದು ಹೊಸ ಏರ್ಪಾಡನ್ನು 1928 ನೆಯ ಇಸವಿ ಜನವರಿ ತಿಂಗಳಿಂದ ಆಚರಣೆಗೆ ತಂದೆವು. ಅಲ್ಲದೆ ಈ ಠೇವಣಿಗಳನ್ನು ಹೊಸ ಸಾಲಪತ್ರಗಳ ರೂಪಕ್ಕೆ ಪರಿವರ್ತನಗೊಳಿಸಿಕೊಳ್ಳುವುದಕ್ಕೂ ಠೇವಣಿದಾರರಿಗೆ ಅನುಮತಿಯನ್ನು ಕೊಡಲಾಗುವುದೆಂದು ಕೂಡ ತಿಳಿಸಿದ್ದೆವು. ಈ ವಿಷಯವನ್ನು ಈಗ ತಮ್ಮ ನೆನಪಿಗೆ ತರಬಹುದಾಗಿದೆ. ಈ ಐದುವರುಷಗಳ ಅವಧಿಯ ಠೇವಣಿಗೆ ಇದುವರೆಗೆ 66 ಲಕ್ಷ ರೂಪಾಯಿಗಳು ಬಂದಿವೆ. ಸಮಯ ಸನ್ನಿವೇಶಗಳು ಸರಿಯಾಗಿವೆಯೆಂದು ತೋರಿದೊಡನೆಯೇ ಸರ್ಕಾರದವರು ಹೊಸಸಾಲವನ್ನೆತ್ತುವ ಪ್ರಯತ್ನವನ್ನು ಪ್ರಾರಂಭಮಾಡುವರು. ಅಲ್ಲದೆ ಜನರು ನಗದು ಹಣವನ್ನಾಗಲಿ, ಹಿಂದಣ ಸಾಲಪತ್ರಗಳನ್ನಾಗಲಿ ಅಥವಾ ಐದು ವರುಷದ ಠೇವಣಿ ಹಣವನ್ನಾಗಲಿ, ಕೊಟ್ಟು ಈ ಹೊಸಸಾಲದ ಪತ್ರಗಳನ್ನು ಪಡೆಯಬಹುದೆಂದು ಸರ್ಕಾರದವರು ಆಗ್ಗೆ ಪ್ರಕಟಿಸುವರು. ಈ ಸಾಲದ ಷರತ್ತುಗಳನ್ನೂ, ವಿಧಿನಿಯಮಗಳನ್ನೂ ಮುಂದೆ ಯಥಾಕಾಲದಲ್ಲಿ ಪ್ರಕಟಿಸುವೆವು.

ಈ ಹೊಸಸಾಲದ ದೆಸೆಯಿಂದ ಬಡ್ಡಿಯರೂಪದಲ್ಲಾಗಲಿ, ವಾರ್ಷಿಕ ಹುಟ್ಟುವಳಿಯ ಮೇಲೆ ಯಾವುದೊಂದು ಹೆಚ್ಚಿಗೆ ದೇಣಿಯು ಹೊರೆಯೂ ಬೀಳುವುದಿಲ್ಲ. ಶೇಕಡ 7 ರಂತೆ ಬಡ್ಡಿಯುಳ್ಳ ಹಿಂದಣ ಸಾಲದ ಮೇಲುಬಡ್ಡಿ, ಆ ಸಾಲವನ್ನು ತೀರಿಸುವುದಕ್ಕಾಗಿ ಏರ್ಪಡಿಸಿರುವ ತೀರ್ವೆಯ ನಿಧಿ—ಇವೆರಡಕ್ಕೂ ಸೇರಿ ವಾರ್ಷಿಕ ಹುಟ್ಟುವಳಿಯಿಂದ 29 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಇದಲ್ಲದೆ, ಆ ಸಾಲ ತೀರ್ವೆಯ ಮೇಲೆ ವರ್ಷಕ್ಕೆ ಸುಮಾರು 5 ಲಕ್ಷ ರೂಪಾಯಿಗಳ ಬಡ್ಡಿಯು ಬರುತ್ತದೆ. ಇದನ್ನು ಯಾವಾಗ ಬೇಕಾದರೂ ನಗದಿಗೆ ಮಾರ್ಪಡಿಸಲಾಗುವ ರೂಪದಲ್ಲಿ ಇಟ್ಟಿದ್ದೇವೆ. ಈ ಎರಡು ಮೊತ್ತಗಳೂ ಸೇರಿ ವರುಷ ಒಂದಕ್ಕೆ 34 ಲಕ್ಷ ರೂಪಾಯಿಗಳ ವರಮಾನವು ಸಿದ್ಧವಾದಂತಾಯಿತು. ಹೊಸ ಸಾಲದ ಮೊಬಲಗಿನ ಮೇಲಣ ಬಡ್ಡಿಗೂ ಮತ್ತು ಆ ಸಾಲವನ್ನು ತೀರಿಸಲು ಏರ್ಪಡಿಸುವ ನಿಧಿಗೂ, ಪ್ರತಿವರ್ಷವೂ ಸಂದಾಯವಾಗಬೇಕಾದ ಮೊತ್ತಗಳನ್ನು ಈ 34 ಲಕ್ಷ ರೂಪಾಯಿಗಳಿಂದ ಪಾವತಿಮಾಡಲು ಅನುಕೂಲವಾಗುತ್ತದೆ.

ಪೊಗದಿಯ ವಿಚಾರ.

ಈ ಸಂಸ್ಥಾನದಿಂದ ಈಗ್ಗೆ 125 ವರುಷಗಳಿಗೆ ಮೇಲ್ಪಟ್ಟ ಕಾಲದಿಂದಲೂ ಪೊಗದಿಯ ಹಣವು ಸಲ್ಲುತ್ತಾ ಇದೆ. ಆಧುನಿಕ ಸ್ಥಿತಿಗಳಲ್ಲಿ ಈ ರೀತಿ ಪೊಗದಿಯನ್ನು ಕೊಡುವುದು ಯುಕ್ತವಾಗಿರುವಂತೆ ತೋರುವದಿಲ್ಲ. ಈ ಅಭಿಪ್ರಾಯವನ್ನು ತಾವೂ ಅನುಮೋದಿಸುವಿರೆಂಬುದಾಗಿ ನಾನು ನಂಬಿದ್ದೇನೆ. ಭಾರತೀಯರ ಸನ್ಮಿತ್ರರೂ, ಶ್ರೇಷ್ಠರಾದ ರಾಜನೀತಿಜ್ಞರೂ, ಆಗಿರುವ ಲಾರ್ಡ್ ಅರ್ವಿನ್‌ರವರು ಈ ಭಾಗದಲ್ಲಿ ಕೇವಲ ಆಸಕ್ತಿಯನ್ನು ವಹಿಸಿ, ಈಗ್ಗೆ ಸುಮಾರು ಮೂರು ವರುಷಗಳ ಹಿಂದೆ ಪೊಗದಿಯ ಹಣದಲ್ಲಿ 10½ ಲಕ್ಷ ರೂಪಾಯಿಗಳು ಕಡಿಮೆಯಾಗಲು ಮಾರ್ಗವನ್ನು ಕಲ್ಪಿಸಿ ಉಪಕಾರಮಾಡಿದರು. ಈ ವಿಷಯದಲ್ಲಿ ನ್ಯಾಯಪಕ್ಷಪಾತದಿಂದ ವರ್ತಿಸಿ ಈ ರೀತಿ ಪೊಗದಿಯನ್ನು ಕಡಿಮೆಮಾಡಿಸಿಕೊಟ್ಟುದಕ್ಕಾಗಿ ಆ ಮಹನೀಯರಿಗೆ ನಾವು ನಿರಂತರವೂ ಕೃತಜ್ಞರಾಗಿರುತ್ತೇವೆ. ಸಂಸ್ಥಾನದಿಂದ ಇಂಡಿಯಾ ಸರ್ಕಾರಕ್ಕೆ ಸಲ್ಲಬೇಕಾದ ಮೊಬಲಗುಗಳಾವವು. ಇಂಡಿಯಾ ಸರ್ಕಾರದಿಂದ ಸಂಸ್ಥಾನಕ್ಕೆ ಬರಬೇಕಾದ ಮೊಬಲಗುಗಳಾವವು. ಎಂಬಿವೇ ಮುಂತಾದ ವಿಚಾರಗಳೆಲ್ಲವೂ ವ್ಯವಸ್ಥೆಯಾಗುವ ಕಾಲವು ಸಮೀಪಿಸುತ್ತಿದೆ. ಇದರ ಪರಿಣಾಮವಾಗಿ ಪೊಗದಿಯ ಹಣವೇ ಪೂರ್ತಿಯಾಗಿ ತಪ್ಪಿಹೋಗುವದೆಂದು ಹಾರೈಸುವೆನು. ತಮ್ಮ ಭಾವನೆಯೂ ಇದೇ ರೀತಿಯಲ್ಲಿದೆಯೆಂದು ನಂಬಿದ್ದೇನೆ. ಇಂಡಿಯಾ ಸರ್ಕಾರದವರೊಡನೆ ಮುಂದೆ ನಡೆಯುವ ಹಣಕಾಸಿನ ಸಂಬಂಧವಾದ ವ್ಯವಹರಣೆಯು ಏರ್ಪಾಡಿನ ಮೇರೆಗೆ ಇತರರೊಡನೆ ಮೈಸೂರು ಸಂಸ್ಥಾನದವರೂ ಯುಕ್ತವಾದ ಮೊಬಲಗನ್ನು ಮಾತ್ರವೇ ಸಲ್ಲಿಸುವಂತಾಗುವುದೆಂದೂ, ಈಗಿನಂತೆ ಹೆಚ್ಚು ಮೊತ್ತಗಳನ್ನು ಕೊಡಬೇಕಾದ ಅವಶ್ಯಕತೆಯೇ ತಪ್ಪಿಹೋಗಿ ನಮಗೆ ಅನುಕೂಲವಾಗುವದೆಂದೂ ನಂಬಿದ್ದೇನೆ. ಇಂಡಿಯಾದೇಶದಲ್ಲಿ ಯಾವ ವಿಧದ ಆಡಳಿತ ವ್ಯವಸ್ಥೆಯು ಏರ್ಪಟ್ಟರೂ, ಇದು ಮಾತ್ರ ಖಂಡಿತವಾಗಿ ನೆರವೇರುವದೆಂದು ನಾನು ಹಾರೈಸುವೆನು. ಈಗ ಸಂಸ್ಥಾನದಿಂದ ಇಂಡಿಯಾ ಸರ್ಕಾರಕ್ಕೆ ಸಲ್ಲುತ್ತಿರುವ ಹೆಚ್ಚಿಗೆ ಮೊಬಲಗೆಲ್ಲಾ ಆಗ್ಗೆ ನಮಗೇ ಉಳಿತಾಯವಾಗಿ, ನಮ್ಮ ದೇಶದ ಆಡಳಿತವು ಉತ್ತಮವಾಗುವದಕ್ಕೂ, ಕೈಗಾರಿಕೆಗಳು ಸುವ್ಯವಸ್ಥಿತವಾಗಿ ನಡೆದು ಪುರೋಭಿವೃದ್ಧಿಯುಂಟಾಗುವದಕ್ಕೂ, ಅನುಕೂಲವಾಗುತ್ತದೆ. ಹೀಗೆ ನಮಗೆ ಹೆಚ್ಚಿಗೆ ಮೊಬಲಗು ವೆಚ್ಚಕ್ಕೆ ಒದಗಲು ಎಷ್ಟೇ ತಡವೆಂದರೂ ಮೂರು ವರುಷಗಳಿಗಿಂತ ಹೆಚ್ಚು ಕಾಲ ಸಾವಕಾಶವೆಂದಿಗೂ ಆಗಲಾರದು. ಆದಕಾರಣ, ತಾವೆಲ್ಲರೂ ಈ ಸಭೆಯ ಸದಸ್ಯರಾಗಿರುವ ಈಗಿನ ಅವಧಿಯೊಳಗಾಗಿಯೇ ಈ ಹಣವೂ ನಮ್ಮ ಕೈಸೇರುವಂತಾಗುವದೆಂದೂ, ಅಭ್ಯುದಯ ಸಾಧಕವಾಗುವಂತೆ ಅದನ್ನು ವಿನಿಯೋಗಿಸುವ ಕಾರ್ಯದಲ್ಲಿ ತಾವೂ ಭಾಗಿಗಳಾಗುವ ಸುಯೋಗವುಂಟಾಗುವದೆಂದೂ, ಹಾರೈಸುತ್ತೇನೆ.

ಇಂಡಿಯಾದೇಶದ ರಾಜಕೀಯ ಪರಿಸ್ಥಿತಿ.

ಮಹಿಳೆಯರೇ, ಮಹಾಶಯರೇ ಇಂಡಿಯಾದೇಶದ ರಾಜಕೀಯ ಪರಿಸ್ಥಿತಿಯು ನಾವು ಅತ್ಯವಶ್ಯವಾಗಿ ಗಮನಿಸಬೇಕಾದ ಪ್ರಾಮುಖ್ಯವಿಚಾರವಾಗಿದೆ. ಅದನ್ನು ಕುರಿತು ನಾನು ಒಂದೆರಡು ಮಾತುಗಳನ್ನು ಹೇಳುವೆನು. ಇಂದಿನ ರಾಜಕೀಯ ಪರಿಸ್ಥಿತಿಯು ಕ್ಷೋಭೆಗೊಂಡ ಸಮುದ್ರದಂತಾಗಿದೆ. "ಮುಂದೇನು ನಡೆಯುವದೋ, ಮುಂದೇನು ನಡೆಯುವದೋ" ಎಂಬುದಾಗಿ ನಾವು ತವಕದಿಂದಲೂ, ಕುತೂಹಲದಿಂದಲೂ ತಳಮಳಗೊಳ್ಳುವಂತಾಗಿದೆ. ಇಂಡಿಯಾದೇಶವು ಈಗ ಕೇವಲ ಸಂದಿಗ್ಧವಾಗಿ ಮುಗ್ಗಟ್ಟಿಗೆ ಬಂದಿರುವ ವಿಷಮಸ್ಥಿತಿಯ ವಾತಾವರಣದಿಂದ ಕೂಡಿದೆ. ಈಗಿನ ಶೋಚನೀಯವಾದ ಪರಿಸ್ಥಿತಿಯು ಕೊನೆಗೆ ಯಾವ ವಿಧದಲ್ಲಿ ಪರ್ಯವಸಾನಗೊಳ್ಳುವದೆಂಬುದನ್ನು ಯಾರೂ ಹೇಳುವಂತಿಲ್ಲ. ಉತ್ತಮರೀತಿಯಲ್ಲಿ ಎಲ್ಲವೂ ಸುಮುಖವಾಗಿ ಪರಿಣಾಮಹೊಂದಲೆಂಬುದಾಗಿ ಹಾರೈಸುವದು ಮಾತ್ರವೇ ಸಾಧ್ಯ. ನಾನಾ ಸಂಸ್ಥಾನಗಳಲ್ಲಿಯೂ ಇರುವ ನಮಗೂ, ನಮ್ಮ ನಮ್ಮ ದೇಶಗಳ ಸುತ್ತಮುತ್ತಲೂ ಬ್ರಿಟಿಷ್ ಇಂಡಿಯಾದಲ್ಲಿ ಜರುಗುತ್ತಿರುವ ಘಟನಾವಳಿಗಳಿಗೂ ಪ್ರತ್ಯಕ್ಷವಾಗಿ ಯಾವುದೊಂದು ಸಂಬಂಧವೂ ಇಲ್ಲದಿರಬಹುದು. ಆದರೂ, ಅವುಗಳ ಪರಿಣಾಮಫಲದಿಂದ ಮಾತ್ರ ನಾವು ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಇಂಡಿಯಾದೇಶದ ಇತರ ಪ್ರಾಂತಗಳವರಂತೆಯೇ ನಾವೂ ಅವುಗಳ ಫಲಿತಾಂಶವನ್ನು ತಪ್ಪದೆ ಅನುಭವಿಸಲೇ ಬೇಕಾಗುವದು.

ಈಗ ನಡೆಯುತ್ತಿರುವ ಹೋರಾಟದಲ್ಲಿ ಉಭಯಪಕ್ಷದವರೂ ಸಮುದ್ದೇಶದಿಂದಲೇ ಕೂಡಿದ್ದಾರೆ. ಉಭಯಪಕ್ಷದವರೂ ಭರತಖಂಡದ ಹಿತಚಿಂತಕರಾಗಿ, ಭರತಖಂಡದ ಅಭ್ಯುದಯವನ್ನೇ ಕೋರಿ, ಭರತಖಂಡದ ಪುರೋಭಿವೃದ್ಧಿಗೆ ಮಾರ್ಗವನ್ನು ಕಲ್ಪಿಸಲು ತೀವ್ರಾಸಕ್ತಿಯಿಂದ ಕೂಡಿದ್ದಾರೆ. ಹೀಗಿದ್ದೂ, ಇಂದಿನ ರಾಜಕೀಯ ಕ್ಷೇತ್ರದಲ್ಲಿ ಇಂತಹ ವಿಷಮಪರಿಸ್ಥಿತಿಯುಂಟಾಗಿದೆಯಲ್ಲಾ— ಎಂದು ನನ್ನ ಮನಸ್ಸಿಗೆ ವಿಷಾದವಾಗುತ್ತದೆ. ಪರಿಣಾಮದಲ್ಲಿ ಪಡೆಯಬೇಕಾದ ಕಾರ್ಯಸಿದ್ಧಿಯು ಸ್ವಲ್ಪವೇನೋ ಎಲ್ಲರ ಮನೋನೇತ್ರಗಳಿಗೂ ಗೋಚರಿಸುತ್ತ, ಕಂಗೊಳಿಸುತ್ತಿದೆ. ಅದನ್ನು ನಮಗೆ ದೊರೆಯಿಸಲು ಹೊರಟಿರುವ ಉಭಯ ಪಕ್ಷಗಳವರಲ್ಲಿ ಒಂದುಕಡೆಗೆ ನೋಡೋಣವೆ? ಸ್ವದೇಶಪ್ರೇಮದಿಂದ ಅನುಪ್ರಾಣಿತರಾಗಿ, ಭಾರತವರ್ಷದ ಭಾವೋನ್ನತಿಯೇ ಮೂರ್ತಿವತ್ತಾಗಿ ರೂಪವನ್ನು ತಳೆದುಬಂದಂತೆ ತೋರುವ ಮಹನೀಯರು ನಾಯಕರಾಗಿ ನಿಂತಿದ್ದಾರೆ. ಅವರಿಗೆ ಇಂಡಿಯಾದೇಶದಲ್ಲಿ ಆಸೇತು ಹಿಮಾಚಲ ಪರ್ಯಂತವಾಗಿ ಪ್ರವಾಹತರಂಗಗಳಂತೆ ಎಲ್ಲೆಡೆಗಳನ್ನೂ ವ್ಯಾಪಿಸಿ ದಿನದಿನಕ್ಕೂ ವೃದ್ಧಿಹೊಂದುತ್ತಿರುವ ಜನದ ಜಾಗೃತಿಯ ಆಶಯಗಳನ್ನೂ, ಆಶೋತ್ತರಗಳನ್ನೂ ಭಾವಪೂರಿತವಾದ ಧೀರವಾಣಿಯಿಂದ ಸೂಚಿಸಲು ಅವರಷ್ಟು ಸಮರ್ಥರಾದವರು ಮತ್ತಾರೂ ಇಲ್ಲವೆಂದು ಹೇಳಬಹುದಾಗಿದೆ. ಇಂತಹವರು ಒಂದು ಪಕ್ಷವನ್ನವಲಂಬಿಸಿ ನಿಂತಿದ್ದಾರೆ. ಮತ್ತೊಂದು ಕಡೆಗೆ ನೋಡಿದರೆ, ಉನ್ನತಿಯನ್ನು ಸಾಧಿಸಿರುವ ದೊಡ್ಡದೊಂದು ಜನಾಂಗದ ಯೋಗ್ಯಪ್ರತಿನಿಧಿಯೆನಿಸಿರುವ ವಿವೇಕಶಾಲಿಗಳೂ, ಗೌರವಾನ್ವಿತರೂ, ರಾಜನೀತಿಜ್ಞರೂ ಆದ ಮಹನೀಯರೊಬ್ಬರು ಪ್ರಧಾನಪುರುಷರಾಗಿ ನಿಂತಿದ್ದಾರೆ. ಅವರು ಉದಾರಭಾವನೆಯುಳ್ಳ ಸಹೃದಯರೆಂಬುದೂ, ಅವರಿಗೆ ಭರತಖಂಡದ ವಿಷಯದಲ್ಲಿ ವಿಶೇಷ ಪ್ರೇಮವುಂಟೆಂಬುದೂ, ಸರ್ವಾನುಮತದಿಂದ ಅಂಗೀಕೃತವಾದ ಅಂಶಗಳಾಗಿವೆ. ಈಗ ಎದುರಾಳಿಗಳಾಗಿ ನಿಂತಿರುವ ಉಭಯಪಕ್ಷಗಳವರೂ ಸಮಾಧಾನಹೊಂದಿ ಸೌಹಾರ್ದಭಾವದಿಂದ ಒಮ್ಮತವಾದೊಂದು ತೀರ್ಮಾನಕ್ಕೆ ಬರುವಂತೆ ಮಾಡುವುದು ಅಸಾಧ್ಯವಾಗಿರಲಾರದು. ಭಾರತೀಯರೇ ಆಗಲಿ, ಭಾರತೀಯರಲ್ಲದವರೇ ಆಗಲಿ, ಯಾರೇ ಆಗಲಿ ಈ ದೇಶದ ರಾಜಕೀಯ ವಿಚಾರಗಳಲ್ಲಿ ಅದರ ಘನತೆ ಗೌರವಗಳಿಗೆ ಲೋಪವಿಲ್ಲದಂತಹ ಸದ್ವ್ಯವಸ್ಥೆಯು ಶಾಂತಿಸಮಾಧಾನಗಳಿಂದ ನಡೆಯುವುದಕ್ಕೆ ಪ್ರತಿಬಂಧಕವನ್ನುಂಟುಮಾಡಿ, ಈ ದೇಶವು ಅನೇಕ ವರ್ಷಗಳಕಾಲ ಅವ್ಯವಸ್ಥೆಗೂ, ಕ್ಷೋಭೆಗೂ, ಗುರಿಯಾಗಲು ಕಾರಣರಾಗುವುದಾದರೆ, ಅವರನ್ನೆಂದಿಗೂ ಭಾರತೀಯರು ಕ್ಷಮಿಸುವುದು ಸಾಧ್ಯವಿಲ್ಲ. ಇಂಡಿಯಾದೇಶಕ್ಕೆ ಸ್ವರಾಜ್ಯವನ್ನು ಕೊಡುವುದೇ, ರಾಜಕೀಯ ಸುಧಾರಣೆಗಳನ್ನು ನಡೆಯಿಸುವುದರಲ್ಲಿ ಪರಿಣಾಮದ ತಮ್ಮ ಗುರಿಯೆಂಬುದಾಗಿ ಬ್ರಿಟಿಷ್ ಸರ್ಕಾರದವರು ಕಂಠೋಕ್ತವಾಗಿ ಹೇಳಿದ್ದಾರೆ. ಆದಕಾರಣ, ಸಾಧ್ಯವಾದಷ್ಟು ಶೀಘ್ರವಾಗಿ ಇಂಡಿಯಾದೇಶಕ್ಕೆ ಸ್ವರಾಜ್ಯವು ಲಭಿಸುವಂತೆ ಮಾಡುವ ಬಗೆ ಹೇಗೆಂಬುದೇ, ಲಂಡನ್ ನಗರದಲ್ಲಿ ನಡೆಯುವ "ರೌಂಡ್‌ಟೇಬಲ್ ಕಾನ್‌ಫರೆನ್ಸ್" ಎಂಬ ಚಕ್ರಗೋಷ್ಠಿಯಲ್ಲಿ ಜರಗುವ ಮುಖ್ಯಕಾರ್ಯವೆಂದು ನನ್ನ ಮನಸ್ಸಿಗೆ ತೋರುತ್ತದೆ. ಇದೇ ಸಂಬಂಧದಲ್ಲಿ ನಾವು ಮತ್ತೊಂದು ಅಂಶವನ್ನೂ ಗಮನಿಸಬೇಕು. ರಾಜ್ಯಾಡಳಿತ ಸ್ವಾತಂತ್ರ್ಯವಿರುವ ಸ್ವರಾಜ್ಯವು ನಮ್ಮ ದೇಶಕ್ಕೂ ಲಭಿಸಿತೆಂದೇ ಇಟ್ಟುಕೊಳ್ಳೋಣ. ಅಮೂಲ್ಯವಾದ ಆ ಭಾಗ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದೇ ನಮಗೆ ಬಾರದೆ ಹೋದಮೇಲೆ ಅದು ಲಭಿಸಿತಾನೆ ಫಲವೇನು? ಹೀಗೆಂದಮಾತ್ರವೇ ಅದು ಬರಕೂಡದೆಂದು ಅರ್ಥವಲ್ಲ. ಅವಶ್ಯವಾಗಿಯೂ ಅದನ್ನು ಪಡೆಯುವ ಪ್ರಯತ್ನಮಾಡಿ ಅದು ದೊರೆಯುವದನ್ನು ಭರವಸೆಪಡಿಸಿಕೊಳ್ಳೋಣ. ಆದರೆ, ಆ ರೀತಿ ಮಾಡುವುದರಲ್ಲಿ ನಾವು ಮತ್ತೊಂದು ಮುಖ್ಯ ವಿಚಾರಕ್ಕೂ ಗಮನ ಕೊಟ್ಟೇ ಕೊಡಬೇಕು. ನಾವು ಹೊರಟಿರುವದು ಮಹಾಯಾತ್ರೆಗೆ. ಯಾತ್ರಾರ್ಥಿಗಳಾದ ನಮ್ಮಲ್ಲಿರುವವರೋ ಏಕಮತ್ಯವಿಲ್ಲದೆ ಭಿನ್ನಾಭಿಪ್ರಾಯಗಳಿಂದ ಕೂಡಿದ ಬಗೆಬಗೆಯ ಪಂಗಡಗಳವರು! ಆದಕಾರಣ, ಎಲ್ಲರೂ ಸೌಹಾರ್ದಭಾವದಿಂದ ಕೂಡಿ ಒಮ್ಮತಸಮ್ಮತವಾಗಿ ವರ್ತಿಸುತ್ತ, ಕ್ರಮವರಿತು ಮುಂದುವರಿಯುತ್ತ, ನಮ್ಮ ನಿರ್ದಿಷ್ಟಸ್ಥಾನವಾದ ಪುಣ್ಯಕ್ಷೇತ್ರವನ್ನು ಸೇರುವದು ಖಂಡಿತವಾಗುವಂತೆ ಒಳ್ಳೆಯ ವ್ಯವಸ್ಥೆಯನ್ನೇರ್ಪಡಿಸಿಕೊಂಡು ಜಾಗರೂಕತೆಯಿಂದ ನೋಡಿಕೊಳ್ಳುವದೂ ನಮ್ಮ ಕರ್ತವ್ಯವಲ್ಲವೆ? ಅಲ್ಲದೆ, ಯಾತ್ರಾರ್ಥಿಗಳಾಗಿ ಹೊರಟಿರುವ ನಾವೆಲ್ಲರೂ ನಮ್ಮ ಯಾತ್ರಾಸ್ಥಾನಕ್ಕೆ ನೇರವಾಗಿ ನಮ್ಮನ್ನು ಕರೆದೊಯ್ಯುವ ಸರಿಯಾದ ಮಾರ್ಗದಲ್ಲಿ ಹೋಗುವದು ಖಂಡಿತವಾಗುವಂತೆಯೂ ನಾವು ತಂಡತಂಡವಾಗಿ ವಿಭಾಗವಾಗಿ ಸೀಳುದಾರಿಗಳನ್ನು ಹಿಡಿದು ನಮ್ಮ ಉದ್ದಿಷ್ಟಾರ್ಥಕ್ಕೇ ಭಂಗವನ್ನು ತಂದುಕೊಳ್ಳದಂತೆಯೂ ನೋಡಿಕೊಳ್ಳುವದೂ ಸಹ, ನಮ್ಮ ಕರ್ತವ್ಯವಲ್ಲವೆ? ಇಂಡಿಯಾದೇಶದ ಸ್ಟೇಟ್ ಸೆಕ್ರೆಟರಿಯವರು ಹೇಳಿರುವಂತೆ ಅವಶ್ಯವಾದ ರಕ್ಷಣ ಸಾಧನಗಳೊಳಗೆ ಈ ದೇಶಕ್ಕೆ "ಡೊಮಿನಿಯನ್ ಸ್ಟೇಟಸ್" ಎಂಬ ಸಾಮ್ರಾಜ್ಯಾಂತರ್ಗತ ಸ್ವರಾಜ್ಯರೂಪದ ರಾಜ್ಯಾಡಳಿತ ವ್ಯವಸ್ಥೆಯು ಲಭಿಸಲು ಸಾಧ್ಯವಾಗುವಂತೆ ಲಂಡನ್ ನಗರದಲ್ಲಿ ನಡೆಯುವ ಚಕ್ರಗೋಷ್ಠಿಯಲ್ಲಿ ತೀರ್ಮಾನವಾಗುವದಾದರೆ, ಭಾರತೀಯರಲ್ಲಿ ದೇಶಾಭಿಮಾನಿಗಳಾಗಿರುವವರು ಪ್ರತಿಯೊಬ್ಬರೂ ಅದರಿಂದ ಸಂತುಷ್ಟರಾಗಿ ಹರ್ಷಗೊಳ್ಳಲೇಬೇಕು.

ಭಾರತೀಯರಲ್ಲಿ ನಾನಾ ಪ್ರಾಂತಗಳವರೂ ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಂಡು ಒಟ್ಟಿಗೆ ಸೇರುವಂತಾಗುವದಕ್ಕೂ, ಅವರಲ್ಲಿ ನೆಲೆಗೊಂಡಿರುವ ಈ ವಿಧದ ಏಕೀಭಾವವು ವೃದ್ಧಿಹೊಂದುತ್ತ ಬಂದಿರುವದಕ್ಕೂ, ಅವಕಾಶವನ್ನು ಕಲ್ಪಿಸಿ ಅನುಕೂಲಮಾಡಿಕೊಟ್ಟಿರುವ ಸಾಧನಗಳಲ್ಲಿ ಬ್ರಿಟಿಷರ ಸಂಬಂಧವೂ, ಇಂಗ್ಲಿಷ್ ಭಾಷೆಯೂ, ಅತ್ಯಂತ ಪ್ರಾಮುಖ್ಯವಾದವುಗಳು. ಇಂದು ಜನಪದಭಾವವು ಈ ದೇಶದ ಏಕೀಕರಣ ಲಕ್ಷಣವೆನಿಸುವಂತಾದುದಕ್ಕೆ ಕಾರಣವೂ ಅವುಗಳೇ. ಇಂಡಿಯಾದೇಶದಲ್ಲಿ ಜನಪದಭಾವವು ಅಂಕುರಿಸಿ ಅಭಿವೃದ್ಧಿಯಾಗುವಂತೆ ಕೃಷಿಮಾಡಿ ಪರಿಪೋಷಿಸಿದವೂ ಅವುಗಳೇ. ಅದಕ್ಕೆ ಪ್ರತಿಯಾಗಿ ಅವುಗಳಷ್ಟೇ ಸತ್ವವುಳ್ಳ ಬೇರೆ ಸಾಧನಗಳನ್ನು ಹೊಂದಿಸಿಕೊಂಡಲ್ಲದೆ ಅವುಗಳನ್ನು ಪರಿತ್ಯಜಿಸುವದೆಂದಿಗೂ, ಇಂಡಿಯಾದೇಶಕ್ಕೆ ಶ್ರೇಯಸ್ಕರವಲ್ಲ. ಆದರೆ ಹೀಗೆ ಪ್ರತ್ಯೇಕ ಸಾಧನಗಳನ್ನು ಹೊಂದಿಸಿಕೊಳ್ಳುವ ಕಾರ್ಯವು, ಕೋರಿದೊಡನೆಯೇ ಒಂದೆರಡು ದಿನಗಳಲ್ಲೇ ಸಿದ್ಧಿಸತಕ್ಕ ಸಾಧಾರಣ ಕಾರ್ಯವಲ್ಲ. ನಾವು ಅತ್ಯವಶ್ಯವಾಗಿ ಗಮನಿಸಬೇಕಾದ ಸಾರತರವಾದ ಕೆಲವು ಸಂಗತಿಗಳೂ, ವಿಚಾರ ಯೋಗ್ಯವಾದ ಕೆಲವು ವಿಷಯಗಳೂ ಇವೆ. ಅವುಗಳನ್ನು ಉಪೇಕ್ಷಿಸಿದರೆ ನಮ್ಮ ದೇಶಕ್ಕೆ ಶ್ರೇಯಸ್ಸಾಗುವ ಸಂಭವವೇ ಇಲ್ಲ. ನಮಗೆ ಅತ್ಯಂತ ಶೀಘ್ರವಾಗಿ ಸ್ವರಾಜ್ಯವು ಲಭಿಸಬೇಕೆಂಬ ಹುರುಪಿನಲ್ಲಿ ವರ್ತಿಸುತ್ತಿರುವ ನಮ್ಮ ದೇಶಬಾಂಧವರು ಕೆಲವರಂತೆ ನಾವೂ ಆಚರಿಸದೆ ಎಚ್ಚರಿಕೆಯಿಂದಿರೋಣ. ಸ್ವದೇಶಾಭಿಮಾನದ ಉತ್ಸಾಹವು ಎಷ್ಟೇ ಅನರ್ಘ್ಯವಾದುದೆಂದರೂ, ಅದೊಂದರ ಸಹಾಯದಿಂದಲೇ ಭಾರತೀಯರು ಇಂದು ತಮ್ಮ ಮನೋರಥ ಸಿದ್ಧಿಯನ್ನು ಪಡೆಯುವದು ಸಾಧ್ಯವಿಲ್ಲ. ಅದನ್ನು ಪಡೆಯಲು ಇತರ ಗುಣಗಳೂ ಆವಶ್ಯಕ. ನಾನು ಈ ರೀತಿ ನುಡಿಯುತ್ತಿರುವದಕ್ಕಾಗಿ ನಮ್ಮ ದೇಶಬಾಂಧವರು ಯಾರೊಬ್ಬರೂ ನನ್ನ ಆಶಯವನ್ನು ತಪ್ಪಾಗಿ ತಿಳಿದುಕೊಂಡು ವಿಪರೀತ ಭಾವನೆಗೆ ಅವಕಾಶ ಕೊಡುವುದಿಲ್ಲವೆಂದು ನಂಬಿದ್ದೇನೆ. ಭಾವ ಪ್ರಪಂಚದ ಪರಿಸ್ಥಿತಿಯೇ ಬೇರೆ. ಅದನ್ನು ಆಶ್ರಯಿಸಿ ಅದರಲ್ಲಿ ಸುತ್ತಾಡುವುದಕ್ಕೂ, ವ್ಯವಹಾರ ಪ್ರಪಂಚದ ವಾಸ್ತವಿಕ ವಿದ್ಯಮಾನಗಳನ್ನು ಗ್ರಹಿಸಿ ವರ್ತಿಸುವುದಕ್ಕೂ, ಪರಸ್ಪರಸಂಬಂಧವೆಂಬುದು ಸುತರಾಂ ಇಲ್ಲ. ನಾವು ಕೇವಲ ಭಾವಗತಿಗೆ ವಶವರ್ತಿಗಳಾಗಿ ಉತ್ಸಾಹದಿಂದ ಕೂಡಿದ್ದ ಮಾತ್ರವೇ, ವ್ಯವಹಾರ ಪ್ರಪಂಚದಲ್ಲಿ ಇಂದು ಒದಗಿರುವ ವಿಷಮ ಪರಿಸ್ಥಿತಿಯ ಕ್ಲಿಷ್ಟಸಮಸ್ಯೆಗಳನ್ನು ಬಗೆಹರಿಸಲು ಅಷ್ಟರಿಂದಲೇ ಯಾವುದೊಂದು ಸಹಾಯವೂ ಆಗುವುದಿಲ್ಲ. ಆದರೂ, ಈಗಿರುವ ವಿಷಮಸ್ಥಿತಿಯೇ ನೆಲೆಗೊಂಡು, ಎಷ್ಟೆಷ್ಟು ಹೆಚ್ಚು ಕಾಲ ಕ್ಷೋಭೆಗೆ ಅವಕಾಶವಿದ್ದರೆ ಅಷ್ಟಷ್ಟು ಅಧಿಕವಾದ ಅನರ್ಥಪರಂಪರೆಗಳು ಸಂಭವಿಸುವ ಅಪಾಯವುಂಟು. ಏಕೆಂದರೆ, ಇಂಡಿಯಾದೇಶದಲ್ಲಿ ಅಸಮಾಧಾನವೂ, ಅತೃಪ್ತಿಯೂ, ಅಧಿಕಾರಿ ವರ್ಗದವರಲ್ಲಿ ತಿರಸ್ಕಾರ ಬುದ್ಧಿಯೂ, ಮತ್ತು ನ್ಯಾಯ ನಿಬಂಧನೆಗಳನ್ನು ಮೀರಿ ನಡೆಯುವ ಮನೋವೃತ್ತಿಯೂ, ಒಮ್ಮೆ ಜನಸಾಮಾನ್ಯದವರ ಮನಸ್ಸನ್ನು ಆವರಿಸಿ ವ್ಯಾಪಿಸಿದವೆಂದರೆ, ಆ ಬಳಿಕ ಅವು ಯಾವ ವಿಧದ ಉಗ್ರರೂಪವನ್ನು ತಳೆದು ಎಂತಹ ಅನಾಹುತಗಳಿಗೆ ಕಾರಣವಾಗುತ್ತವೆಂಬುದನ್ನು ಹೇಳುವದು ಊಹೆಗೂ ಕೂಡ ಸಾಧ್ಯವಿಲ್ಲ.

ಭರತಖಂಡದ ಭಾಗ್ಯಸೂತ್ರ ರಕ್ಷಣೆಯ ಭಾರವನ್ನು ವಹಿಸಿರುವವರೆಲ್ಲರೂ ಎದುರು ಪಕ್ಷದವರ ಮನೋಭಾವಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದಲೂ, ಉದಾರ ಹೃದಯದಿಂದಲೂ ಕೂಡಿ ಪರಾಮರ್ಶೆ ಮಾಡುವ ಮಟ್ಟಿಗೆ ವಿವೇಕವನ್ನೂ, ತಾಳ್ಮೆಯನ್ನೂ, ತೀವ್ರಾಸಕ್ತಿಯನ್ನೂ, ಭಗವಂತನು ಅವರೆಲ್ಲರಿಗೂ ದಯಪಾಲಿಸಲೆಂದು ಪ್ರಾರ್ಥಿಸೋಣ. ಭರತಖಂಡದ ರಾಜಕೀಯ ಸಮಸ್ಯೆಯು ಶಾಂತಿ ಸಮಾಧಾನಗಳಿಂದ ತೃಪ್ತಿಕರವಾಗಿ ಇತ್ಯರ್ಥವಾಗದಂತೆ ಅಡಚಣೆಯುಂಟಾಗುವದಕ್ಕೆ ಅವಕಾಶವೇ ಇಲ್ಲದಂತೆ ಮಾಡಲು ಎಲ್ಲರೂ ಒಮ್ಮನಸ್ಸಿನಿಂದಲೂ, ಸ್ಥಿರಬುದ್ಧಿಯಿಂದಲೂ ವರ್ತಿಸುವಂತಾಗಲೆಂಬುದಾಗಿ ಹಾರೈಸೋಣ.

ಭಾರತೀಯರ ಹಿತಕಾಂಕ್ಷಿಗಳಾಗಿ ಇಂಗ್ಲೆಂಡಿನಲ್ಲಿರುವ ಸನ್ಮಿತ್ರರ ಸಂಘದವರು "ಭರತಖಂಡದ ಅಂತರಾತ್ಮವೇ ಕನಸನ್ನು ಕಾಣುತ್ತ ನಿಂತಿರುವಂತೆ ತೋರುತ್ತದೆ. ಇದರ ಪರಿಣಾಮ ಫಲವಾಗಿ ಸ್ವಾತಂತ್ರ್ಯದ ನವಯುಗವೊಂದು ಮತ್ತೆ ಆವಿರ್ಭವಿಸುತ್ತದೆ. ಇಂಡಿಯಾದೇಶಕ್ಕೂ, ಇಂಗ್ಲೆಂಡಿಗೂ, ಎರಡಕ್ಕೂ, ಅದರಿಂದ ಮಂಗಳವಾಗಿ ಶ್ರೇಯೋಲಾಭವಾಗುತ್ತದೆ." ಎಂಬುದಾಗಿ ಸೂಚಿಸಿದ್ದಾರೆ. ಅವಶ್ಯವಾಗಿ ಈ ರೀತಿ ಶ್ರೇಯೋಲಾಭವಾಗಲೆಂದು ನಾವೂ ಹಾರೈಸೋಣ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬುದಕ್ಕನುಸಾರವಾಗಿ ನಮ್ಮ ದೇಶವು ಸ್ವರ್ಗಕ್ಕಿಂತಲೂ ಹೆಚ್ಚೆಂಬುದಾಗಿ ಭಾವಿಸಿ ಪ್ರೀತಿಸಬೇಕಾದುದು ಧರ್ಮವಾದರೂ, ಅದಕ್ಕಿಂತ ಸ್ವಲ್ಪ ಕಡಿಮೆಯಾಗಿ ನಾವು ಪ್ರೀತಿಸಬೇಕಾದ ದೇಶವೆಂದರೆ, ಅದು ಇಂಗ್ಲೆಂಡ್‌ದೇಶವೇ. ಏಕೆಂದರೆ, ಬ್ರಿಟಿಷರ ಆಳಿಕೆಯನ್ನು ಆಕ್ಷೇಪಿಸಿ ಎಷ್ಟೋ ಸಂಗತಿಗಳನ್ನು ಹೇಳಲು ಒಂದುವೇಳೆ ಸಾಧ್ಯವಿದ್ದರೂ, ಅವರ ಪ್ರಭುತ್ವದಿಂದ ನಮಗೆ ಅನೇಕ ಉಪಕಾರಗಳಾಗಿವೆಯೆಂಬುದನ್ನು ಮರೆಯದೆ, ಇಂಗ್ಲೆಂಡಿನ ವಿಷಯದಲ್ಲಿ ಪ್ರೀತಿ ಕೃತಜ್ಞತೆಗಳನ್ನು ತೋರ್ಪಡಿಸಬೇಕಾದುದು ಅವಶ್ಯಕ. ಭರತಖಂಡದ ಇಂದಿನ ವಿಷಮಸಂಕಟದ ಅಂಧಕಾರವು ಪರಿಹಾರವಾಗಿ, ಈ ಎರಡು ದೇಶಗಳಿಗೂ ಶುಭದಾಯಕವಾದ ಸಖ್ಯಂಗಳದ ಮುಂಬೆಳಗು ತಲೆದೋರಿ, ಸಮ್ರಾಟ ಸರ್ವತೋಮುಖವಾದ ಶ್ರೇಯೋಲಾಭವಾಗುವಂತೆ ಪರಮಕಾರುಣಿಕನಾದ ಭಗವಂತನು ಅನುಗ್ರಹಿಸಲೆಂಬುದಾಗಿ ನಾವೆಲ್ಲರೂ ಸಂತತವೂ ಪ್ರಾರ್ಥಿಸೋಣ! ಯಥಾಶಕ್ತಿಯಾಗಿ ನಮ್ಮ ಕರ್ತವ್ಯವನ್ನು ನಿರಂತರವೂ ಪರಿಪಾಲಿಸಿ ಕೃತಾರ್ಥರಾಗೋಣ!

ಮೈಸೂರು, ಮಿರ್ಜಾ ಮಹಮ್ಮದ್ ಇಸ್ಮಾಯಿಲ್,
ತಾ|| 13-6-1930. ಮೈಸೂರು ಸಂಸ್ಥಾನದ ದಿವಾನರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಯಾಮವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[10] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ?
ಕಂಗೆಡಬೇಡಾ ! ಮರುಗಬೇಡಾ !! ಗುಣದ ಮದ್ದು ಯಾವದೆಂದು ನೋಡಾ !!!
ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ ? ಇಗೋ ? "ಮಲೇರಿಯಾನ" ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅನ್ನಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ ? ಕಂಪೆನಿಯ ಸಿರಪು "ಪುಲ್ಲಭೋಜ" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಶಕ್ತಿಗೊಳ್ಳುವ ಇಚ್ಛೆ ಉಂಟಾ ? ಕಂಪೆನಿಯ ಸಿರಪು "ಸೆಬೀನ ಸೆಪೀಯ" ಮತ್ತು ಕಂಪೆನಿಯ ಸಿರಪು "ವಿಬುರ್ನೋವ" ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ನಿರೀಕ್ಷಿಸುತ್ತೀಯಾ ? ಹಾಗಾದರೆ ಕಂಪೆನಿಯ ಸಿರಪು "ಸರ್ಸಲಿಮಗ" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖಾತ್ರಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಯ ಸಿರಪು "ಮೆಸಿಭೋಜ" ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೊಮಿಯೋಪತಿ ಮದ್ದುಗಳೂ ಟಿಕ್ಕು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅವುಗಳ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[46] ಮಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ!
ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಸ್ನಾಕ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಸಕಪುಷ್ಪ, ಸಾಲಿಮಕಂದ, ಮಧುಕಂದ, ಜಪಾಕಂಥ, ಸಾಲೀಮಲೀಕಂದ, ಅಶ್ವಕಂದ ಶ್ರೀಷ್ಯಕಂದ, ಮುಸಳೀಕಂದ ಶೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಕಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಹವಲೀಬೀಜ, ಚಿಕಣದಪಂಚಾಂಗ, ಅದವೀ ಎಳ್ಳಿನಪಂಚಾಂಗ, ಜಮಿಪತ್ರಿ, ವಿಶಾಪತ್ರಿ, ಮದನಮಸ್ತ, ರಕನಪುರುಷ, ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಖೋರಿ, ಮುಂಗಲೀಬೇದಾಣೆ, ಮುರ್ದಾಸೀಕಟ್ಟಿಗೆ, ಶತಾವರಿ, ಸಕೀರಿಮಗಜ, ಆಲದಹಾಲು, ವಾಕೇರಿಭಾತಾ, ಗೋಖುರು, ಅದವೀಬೆಂಡಿಬೀಜ, ಅಮೃತಸತ್ವ, ಇಸಬಗೋಳ ಭುಸ್ಸಾ, ಆವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಆದರಮೇಲೆ ಸ್ವಲ್ಪ ಕಾಸಿದ 20 ತೊಲೆ ತೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚ ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು [50]

ಸಿಸಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹಿಕ್ಕಾ, ದಮ್ಮ, ಕೀವು, ಹುಣ್ಣು, ಮುಗ್ರಫ, ಕ್ರಿಮಿ, ನಾಕಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ—ನೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೫ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೭ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೫ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೫ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ	೫ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ	೨ ಆಣೆ
ವಿವಾಹವಿಧಿ	೫ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೨ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೭ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[38] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧನಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವವು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ವಿಷಯವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.



(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[50] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಜೂನ್ ೧೯೩೦ [ಸಂಚಿಕೆ ೯.

WANTED

Candidates desiring to serve in Government, Railway and Canal Departments. Full particulars and Railway Fare Certificate on 2 annas Stamps.

Apply to:— (1)
IMPERIAL TELEGRAPH COLLEGE,
NAI SARAK, DELHI.

ಸ್ವೀಕಾರ.

ರಾಯಚೂರು ಡಿ|| ಗಂಗಾವತಿ ತಾಲೂಕು ಹಿರೇಜಂತಗಲ್ ನಿವಾಸಿಗಳಾದ ಮ|| ರಾ|| ಬಲಕುಂದಿ ಶಿವರುದ್ರಪ್ಪನವರ ಪುತ್ರ ಚಿ|| ಘಟ್ಟೆಪ್ಪನಿಗೆ ಮ|| ರಾ|| ಹಾವಣ್ಣನವರ ಪುತ್ರಿ ಚಿ|| ಸೌ|| ಸೋಮವ್ವನನ್ನು ಕೊಟ್ಟು ವೈಶಾಖ ಬಹುಳ ಶದಿಗೆ ಗುರುವಾರ ದಿವಸ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂ. ಗಳು ಮ|| ರಾ|| ಎಲಬುರಗಿ ವೀರಪ್ಪನವರ ದ್ವಾರಾ ತಲ್ಪಿರುತ್ತವೆ.

ತುಂಕೂರು ಟೌನಿನಲ್ಲಿರುವ ಮ|| ರಾ|| ಕಂಠಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ಶಿವಮೊಗ್ಗಾ ಸಿದ್ಧಪ್ಪನವರ ಸಹೋದರ ಚಿ|| ಚೌಡಯ್ಯನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ದೇಶದ ಯಜಮಾನ್ ಭೋಜಪವಾಡಪ್ಪನವರ ದ್ವಾರಾ ತಲ್ಪಿರುತ್ತವೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮುಣಶಿಗಿ ಗ್ರಾಮದ ಮ|| ರಾ|| ಗುರಪ್ಪ ಮಲಿಯಪ್ಪನವರ ಇವರ ಪುತ್ರಿ ಕುಂ|| ಸೌ|| ಶಿವವ್ವನನ್ನು ಹೊಸೂರು ಗ್ರಾಮದ ಮ|| ರಾ|| ಕಳಕಪ್ಪಾ ಮುತ್ತಾಳ ಇವರ ಪುತ್ರ ಚಿ|| ಮಲ್ಲಪ್ಪನಿಗೆ, ಹಾಗೂ ಸದರಿ ಗುರಪ್ಪನವರ ಪುತ್ರ ಚಿ|| ಘಟೇರಪ್ಪನಿಗೆ ಸದರಿ ಹೊಸೂರ ಗ್ರಾಮದ ಕಳಕಪ್ಪಾ ಮುತ್ತಾಳ ಇವರ ಪುತ್ರಿ ಸೌ|| ಬಸವ್ವನನ್ನು ತಂದು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 3½ ರೂಪಾಯಿಗಳು ಮ|| ರಾ|| ಶಿವಪ್ಪನವರು ಅರಳಿ ಇವರ ದ್ವಾರಾ ತಲ್ಪಿರುತ್ತವೆ.

ಗುಲಬಗಾ ಡಿ|| ಮುಧೋಳದ ಮ|| ರಾ|| ಬೀಜಗುಂದಿ ಗುಂಡಪ್ಪನವರ ಪುತ್ರನ ಲಗ್ನದಲ್ಲಿ ಸಮರ್ಪಿಸಿದ 2 ಹಾಲಿ ರೂ. ಹಾಗೂ ಮ|| ರಾ|| ಶಿವರುದ್ರಪ್ಪ ವಕೀಲ ಇವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯಲ್ಲಿ ಸಮರ್ಪಿಸಿದ 1 ಹಾಲಿ ರೂ. ಒಟ್ಟು 3 ಹಾಲಿ ರೂ. (2 ರೂ. 8 ಆಣೆ) ಗಳು ಬಿದರ ಪಾಠಶಾಲಾಧ್ಯಕ್ಷರಾದ ವೇ|| ಬಸವರಾಜಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಕಂಟೋನ್ಮೆಂಟ್ ನಿವಾಸಿಗಳಾದ ಶ್ರೈ|| ಯಜಮಾನ್ ಆ|| ರುದ್ರಪ್ಪನವರ ಮಕ್ಕಳು ಯಜಮಾನ್ ಬಿ. ರಾಚಪ್ಪನವರ ಪುತ್ರಿ ಸೌ|| ಗಂಗಮ್ಮನನ್ನು ಮ|| ರಾ|| ರುದ್ರಪ್ಪನವರ ಪುತ್ರ ಚಿ|| ಸಿ. ಆರ್. ಲಿಂಗಪ್ಪನವರಿಗೆ ಕೊಟ್ಟು ವಿವಾಹಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೆಂಗಳೂರು ಸಿಟಿ ಮಾಮೂಲ್‌ಪೇಟೆಯಲ್ಲಿರುವ ಮ|| ರಾ|| ಜಿ. ಗಂಗಪ್ಪನವರು ವಿಶ್ವೇಶ್ವರಪುರದಲ್ಲಿ ನೂತನವಾಗಿ ಕಟ್ಟಿಸಿರುವ ಶ್ರೀ ಶಿವಾನಂದ ಸದನದಲ್ಲಿ ತಮ್ಮ ಪುತ್ರ ಚಿ|| ಮರಿಗಂಗಪ್ಪನಿಗೆ ದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ವರ್ತಮಾನಸಂಗ್ರಹ.

ಕಳೆದ ಒಂ[illegible]ದಲ್ಲಿ ಬ್ರಿಟಿಷ್‌ದೇಶದ ನಿರುದ್ಯೋಗಿಗಳ ಸಂಖ್ಯೆಯು 18,85,300 ರಿಂದ 19,95, 300 ಕ್ಕೆ ಏರಿದೆ.

ಶ್ರೀಮದ್ಬರೋಡಾ ಮಹಾರಾಜರವರು ಸೀಮೆಗೆ ತೆರಳಬೇಕೆಂದು ಬೊಂಬಾಯಿಗೆ ದಯಮಾಡಿಸಿದ್ದವರು ಭರತಖಂಡದಲ್ಲಿ ಸದ್ಯಃ ಮುಂದುವರಿಯುತ್ತಿರುವ ರಾಷ್ಟ್ರೀಯಚಳವಳಿಯನ್ನು ನೋಡಿ ಪರದೇಶಪ್ರಯಾಣವನ್ನು ನಿಲ್ಲಿಸಿ ಬೆಂಗಳೂರಿಗೆ ಹಿಂತಿರುಗಿ ಬಂದಿರುವರೆಂದು ವರ್ತಮಾನವದೆ.

ಕಳೆದ 24 ನೆಯ ತಾರೀಖಿನ ದಿವಸ ರಂಗೂನ್ ಜೈಲಿನಲ್ಲಿ ಖೈದಿಗಳು ದಂಗೆಯೆದ್ದು ಪೋಲೀಸರಿಗೂ ಖೈದಿಗಳಿಗೂ 2 ಗಂಟೆಗಳ ಕಾಲ ಗುಂಡಿನಯುದ್ಧವಾಯಿತು. ಇದರಿಂದ ಇಬ್ಬರು ಕಾವಲು ಶಿಪಾಯಿಗಳೂ, ಇಬ್ಬರು ಮಿಲಿಟರಿ ಪೋಲೀಸರೂ, ಒಬ್ಬ ಮೋಟಾರು ಡ್ರೈವರನೂ ಮತ್ತು 40 ಜನ ಖೈದಿಗಳೂ ಸತ್ತರು. 11 ಜನ ಜೈಲಿನಧಿಕಾರಿಗಳಿಗೂ 6 ಜನ ಖೈದಿಗಳಿಗೂ ಗುಂಡಿನೇಟುಗಳು ಬಿದ್ದಿರುವುವು.

ಬಿಜಾಪುರ ಬೃಹನ್ಮಠಾಧ್ಯಕ್ಷರಾದ ಶ್ರೀ ಶಂಭುಲಿಂಗಶಿವಾಚಾರ್ಯರು ಅಕ್ಕಲಕೋಟೆಯಲ್ಲಿ ಕಳೆದ 15 ದಿವಸಗಳಿಂದಲೂ ಶ್ರೀ ರೇಣುಕವಿಜಯದಮೇಲೆ ಉಪನ್ಯಾಸಗಳನ್ನು ಮಾಡುತ್ತಿರುವರು. ಸರ್ವ ಮತೀಯರೂ ಅವರ ಅನುಕೂಲ್ಯವಾದ ಉಪನ್ಯಾಸಗಳನ್ನು ಕೇಳಿ ಆನಂದಭರಿತರಾಗುತ್ತಿರುವರು. ಕಳೆದ 26 ನೆಯ ತಾರೀಖು ಗುರುವಾರದಿವಸ ಅಕ್ಕಲಕೋಟೆ ಮಹಾರಾಣಿಯವರು ರಾಜಕುಮಾರರೊಡನೆ ಉಪನ್ಯಾಸಕ್ಕೆ ದಯಮಾಡಿಸಿ ಸಂತುಷ್ಟರಾದುದಲ್ಲದೆ ಶ್ರೀ ಶಂಭುಲಿಂಗ ಶಿವಾಚಾರ್ಯರನ್ನು ಭಕ್ತಿಯಿಂದ ಪೂಜಿಸಿ, ದಕ್ಷಿಣಾದಿಗಳನ್ನು ಸಮರ್ಪಿಸಿದರೆಂದು ತಿಳಿದುಬರುತ್ತದೆ.

ಶ್ರೀರಂಗಪಟ್ಟಣದ ತಾಲೂಕು ಕೊಡಿಯಾಲದ ಶ್ರೈ|| ಸಾಹುಕಾರ್ ಚಿಕ್ಕದಾಸಪ್ಪನವರ ಪುತ್ರರಾದ ಮ|| ರಾ|| ಸಾಹುಕಾರ್ ಸಿ. ಲಕ್ಷ್ಮಯ್ಯನವರು ಕೊಡಿಯಾಲದಲ್ಲಿ 8,000 ರೂ. ಗಳನ್ನು ವೆಚ್ಚಮಾಡಿ ಕಟ್ಟಿಸಿರುವ ಪಾಠಶಾಲಾಕಟ್ಟಡದ ಮಹೋತ್ಸವವು ಬರುವ ಜುಲೈ 5 ನೆಯ ತಾರೀಖು ಭಾನುವಾರ ದಿವಸ ಮೈಸೂರುಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಡೈರಕ್ಟರರಾದ ಶ್ರೀಯುತ ಎ. ಆರ್. ವಾಡಿಯಾ ಬಿ. ಎ., ಬಾರ್-ಆಟ್-ಲಾ ರವರಿಂದ ನೆರವೇರಿಸಲ್ಪಡುವದು. ಇದೇ ಸಮಯದಲ್ಲಿ ದಿವಂಗತರಾದ ಚಿಕ್ಕದಾಸಪ್ಪನವರ ಸ್ಮಾರಕ ಶಿಲಾಶಾಸನಪ್ರತಿಷ್ಠೆಯೂ ಹಾಗೂ ಅವರ ಭಾವಚಿತ್ರದ ಅನಾವರಣವೂ ಸಹ ನೆರವೇರುವದು.

ನಾಸಿಕಜಿಲ್ಲೆಯಲ್ಲಿ ನಾನಾ ಮುಕುಂದ ಉರ್ಫ್ ನಾನಾ ಫಡಾರೀ ಎಂಬೋರ್ವ ಪುಂಡನು ಪ್ರಬಲನಾಗಿದ್ದಾನೆ. ಇವನು ಗಾಂಧೀತತ್ವವನ್ನು ಸ್ವೀಕಾರಮಾಡಿ, ಗಾಂಧಿಟೋಪ್ಪಿಗೆಯನ್ನು ಹಾಕುವನು. ಮಹಾತ್ಮರು ತನ್ನನ್ನು ವನಗಾವಲದ ರಾಜನನ್ನಾಗಿ ನೇಮಿಸಿದ್ದಾರೆಂದು ಹೇಳುವನು. ಕಾರಣವಿಲ್ಲದೆ ಜನರಿಗೆ ತೊಂದರೆ ಕೊಡುವದಿಲ್ಲ. ಮಾರವಾಡಿಗಳ ಮೇಲೆ ಬಹಳ ಸಿಟ್ಟು. ಇವನು ತನ್ನ ಕೋಳೀಜಾತಿಯ ಜನರನ್ನು ಪರಿಪರಿಯಿಂದ ಪೀಡಿಸುವದನ್ನು ಸಹನಮಾಡದೆ, ಇವರ ಸಮಾಚಾರ ತಕೆಳ್ಳುವನು. ಹಗಲು ರಾತ್ರಿ ಎಂಬ ಭೇದವಿಲ್ಲದೆ ಅಡವಿಯಿಂದ ಊರೊಳಗೆ ಬರುವನು. ಇಗತಪುರಿಯಲ್ಲಿ ಒಬ್ಬ ಮಾರವಾಡಿಯ ಮನೆಯಲ್ಲಿ ಮದುವೆ ನಡೆದಿತ್ತು. ಅನೇಕಜನರು ಕೂಡಿದಾಗ ಇವನು ಆ ಮನೆಯನ್ನು ಹೊಕ್ಕು, ದರೋಡೆಮಾಡಿ ಆಭರಣಗಳನ್ನು ತೆಗೆದುಕೊಂಡು, ಖಾತೆ-ಕಿರ್ದಿ ಮುಂತಾದ ಲೆಕ್ಕಪತ್ರದ ಪುಸ್ತಕಗಳನ್ನು ಸುಟ್ಟು, ಇಬ್ಬರು ಸಾಹುಕಾರರ ಮೂಗು ಕೊಯ್ದು ನಿರ್ಭಯದಿಂದ ತನ್ನ ದಾರೀ ಹಿಡಿದನು. ತಾನು ವನರಾಜನೆಂದು ಹೇಳಿಸಿಕೊಳ್ಳುತ್ತಿದ್ದುದರಿಂದ ಅಡವಿಖಾತೆಯವರನ್ನು ಕಂಡರೆ ಸಿಟ್ಟು ಬಹಳ. ಒಬ್ಬ ಅಮಲದಾರನು ತನ್ನ ದೃಷ್ಟಿಗೆ ಬಿದ್ದ ಕೂಡಲೆ ಆತನಿಗೆ ರಿವಾಲ್ವರು, ಜಂಬಿಯಾ, ಕತ್ತಿ, ಬರ್ಚಿ ಮುಂತಾದ ಭಯೋತ್ಪಾದಕಗಳಾದ ಆಯುಧಗಳನ್ನು ತೋರಿಸಿ, ಆತನ ಮೈಮೇಲಿನ ವನಗಾವಲಖಾತೆಯ ಎಲ್ಲ ಅರಿವೆ ಮತ್ತು ಬೂಟು ತೆಗೆದುಕೊಂಡು ತನ್ನ ಹಳೇ ಬೂಟು ಕೊಟ್ಟು, ಆವನನ್ನು ಹಿಂದಿರುಗಿ ಕಳುಹಿಸಿದನು. ಒಮ್ಮೆ ಈತನನ್ನು ಪೋಲೀಸರು ಹಿಡಿಯಹೋದರು. ತನ್ನ ಗುಡಿಸಲ ಆಟೋಪಿನಲ್ಲಿ ಒಬ್ಬ ಸಿಪಾಯಿಯು ಬಂದ ಕೂಡಲೆ, ಆವನನ್ನು ಗುಂಡಿನಿಂದ ಹೊಡೆದು, ದಟ್ಟವಾದ ಮಳ್ಳಿನಲ್ಲಿ ಸೇರಿಕೊಂಡು ಮಾಯವಾದನು. ಇದೇ ಪ್ರಕಾರ ಇವನ ಪುಂಡಾಟಿಕೆಯು ನಡೆದಿದೆ. ಪೋಲೀಸರು ಇವನನ್ನು ಹುಡುಕಲು ಹೊರಟಿದ್ದು, ಹಿಡಿದುಕೊಟ್ಟವರಿಗೆ ಐದುನೂರು ರೂಪಾಯಿಗಳ ಇನಾಮು ಕೊಡುತ್ತೇವೆಂದು ಜಾಹೀರಮಾಡಿದ್ದಾರೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಮಾನವ ಧರ್ಮ.

(ಲೇಖಕರು—ಶಾ|| ವೃಷಭಲಿಂಗಶಾಸ್ತ್ರಿಗಳು, ಆರಾಧ್ಯಮಠ ಕುಣಿಕೇನಹಳ್ಳಿ, ಬಿಜಾಪುರ.)

ಪ್ರಾಣಿಗಳಲ್ಲಿ ಮನುಷ್ಯನು ವಿವೇಕಬಲದಿಂದ ಉತ್ತಮಜನ್ಮನೆಂದು ಹೇಳಿಸಿಕೊಳ್ಳುವನು. ಉಚ್ಚ ನೀಚಗಳ ವಿಚಾರಮಾಡುವ ಶಕ್ತಿಯು ಮನುಷ್ಯನಿಗಲ್ಲದೆ ಇತರ ಪ್ರಾಣಿಗಳಿಗಿಲ್ಲ. ದೇವರು ಜಗತ್ತನ್ನು ಸೃಜಿಸುವಾಗ್ಗೆ ಉಚ್ಚ ನೀಚಮಾರ್ಗಗಳಿಗನುಸರಿಸಿ ಎರಡು ಪ್ರಾಪ್ತಿಸ್ಥಾನಗಳನ್ನು ಕಲ್ಪಿಸಿರುವನು. ಅವಕ್ಕೆ ಸ್ವರ್ಗವೆಂತಲೂ ನರಕವೆಂತಲೂ ಹೆಸರುಗಳಿರುತ್ತವೆ. ಪ್ರಾಣಿಗಳ ಕರ್ಮಕ್ಕೆ ಇವು ಫಲಭೂತಗಳಾಗಿರುವದರಿಂದ ಮನುಷ್ಯನು ವಿಚಾರದಿಂದ ತನ್ನ ಕರ್ತವ್ಯವನ್ನು ಸುಧಾರಿಸಿಕೊಳ್ಳಬೇಕು.

> ವ್ರಜನ್ತ್ಯಧಃ ಪ್ರಯಾತ್ಯುಚ್ಚೈರ್ನರಃ ಸ್ವೈರೇವ ಚೇಷ್ಟಿತೈಃ |
> ಅಧಃಕೂಪಸ್ಯ ಖನಕ ಊರ್ಧ್ವಂ ಪ್ರಾಸಾದಕಾರಕಃ ||೧||

ಈ ಪ್ರಮಾಣದಮೇಲಿಂದ ಯಾವ ಮನುಷ್ಯನು ತನ್ನ ಶಕ್ತಿಯ ಗೌರವವನ್ನು ನೋಡದೆ ನೀಚಕಾರ್ಯಗಳನ್ನು ಮಾಡುವನೋ ಅವನು ಅಧೋಗತಿ (ನರಕ) ಯನ್ನು ಹೊಂದುವನು. ಯಾವನು ಉತ್ತಮಕಾರ್ಯವನ್ನು ಮಾಡುವನೋ ಅವನು ಊರ್ಧ್ವಗತಿ (ಸ್ವರ್ಗ) ಯನ್ನು ಹೊಂದುವನು. ಹೇಗೆಂದರೆ—ಬಾವಿಯನ್ನಗಿಯುತಕ್ಕವನು ತನ್ನ ಕೆಲಸವು ಕೆಳಗಿನದಿರುವದರಿಂದ ಮೇಲಕ್ಕೆ ಬರದೆ ಕೆಳಗೇ ಹೋಗುತ್ತಾನೆ. ಉಪ್ಪರಿಗೆಯನ್ನು ಕಟ್ಟುವ ಮನುಷ್ಯನು ತನ್ನ ಕೆಲಸವು ಮೇಲಿನದಿರುವದರಿಂದ ಕೆಳಕ್ಕೆ ಬರದೆ ಮೇಲೆಯೇ ಹೋಗುತ್ತಾನೆ. ಇದು ಪ್ರತ್ಯಕ್ಷಾನುಭವಸಿದ್ಧವಾದದ್ದಿರುತ್ತದೆ. ಮನಸ್ಸಿಗೆ ಬಂದಹಾಗೆ ಇಂದ್ರಿಯಗಳನ್ನು ಹರಿಬಿಡುವದು ನಾಶಹೇತುವಾಗಿರುವದು. ಆದ್ದರಿಂದ ಮನುಷ್ಯನು ಸ್ವೇಚ್ಛಾಚಾರಿಯಾಗಿ ವರ್ತಿಸಬಾರದು. ವಿಚಾರದಿಂದ ನಡೆದವನೇ ಇಹಲೋಕ ಪರಲೋಕಗಳೆರಡರಲ್ಲಿಯೂ ಸುಖಪಡುವನು. ಸ್ಥಲವನ್ನು ಗೆದ್ದು ಪರಸ್ಥಲವನ್ನು ಗೆದಿಯಬೇಕೆಂದು ಒಂದು ಗಾದೆಯುಂಟು. ಯಾವಾತನು ತನ್ನ ಸ್ಥಲದಲ್ಲಿ ಸದ್ಗುಣಗಳಿಂದ ಗೌರವಕ್ಕೆ ಪಾತ್ರನಾಗುವನೋ ಅವನು ಪರಸ್ಥಲದಲ್ಲಿಯೂ ಗೌರವಕ್ಕೆ ಪಾತ್ರನಾಗುವನು. ಇದರಂತೆ ಈ ಲೋಕದಲ್ಲಿ ಯಾವನು ತನ್ನಾಶ್ರಮಕ್ಕೆ ತಕ್ಕ ನಡತೆಯನ್ನು ಕೈಕೊಂಡು ನಡೆಯುವನೋ ಆತನು ಪರಲೋಕದಲ್ಲಿ ಮರ್ಯಾದೆಯನ್ನು ಹೊಂದುವನು. ಬ್ರಹ್ಮಚರ್ಯವೆಂತಲೂ ಗೃಹಸ್ಥವೆಂತಲೂ ವಾನಪ್ರಸ್ಥವೆಂತಲೂ ಯತಿಯೆಂತಲೂ ನಾಲ್ಕಾಶ್ರಮಗಳಿರುತ್ತವೆ. ದೇವರಿಂದ ಈ ನಾಲ್ಕು ಮಾರ್ಗಗಳು ತೋರಿಸಲ್ಪಟ್ಟಿರುವವು. ಆಯಾ ಆಶ್ರಮದವರು ತಮ್ಮ ತಮ್ಮ ಧರ್ಮಪದ್ಧತಿಗಳನ್ನನುಸರಿಸಿ ನಡೆದು ಶುದ್ಧರಾಗಬೇಕೆಂದು ವಿಹಿತವಾಗಿರುತ್ತದೆ. ಯಾರು ತಮ್ಮಾಶ್ರಮಮಾರ್ಗದಿಂದ ಜಾರುತ್ತಾರೋ ಅವರು ಎರಡೂ ಲೋಕಕ್ಕೂ ಹೊರತಾಗುವರೆಂದು ಕಟ್ಟಳೆಯುಂಟು. ಬ್ರಹ್ಮಚರ್ಯಾಶ್ರಮಿಯೆಂದರೆ ವಿವಾಹವಾಗುವದಕ್ಕಿಂತಲೂ ಪೂರ್ವದಲ್ಲಿ ತನ್ನ ಗುರುವಿನಿಂದ ಧರ್ಮಶಾಸ್ತ್ರದಲ್ಲಿ ಹೇಳಿದ ಪ್ರಕಾರ ಧರ್ಮಸಂಸ್ಕಾರವನ್ನು ಹೊಂದಿ ವೇದಾಧ್ಯಯನ ಸಂಪನ್ನನಾಗಿ ಗುರುಸನ್ನಿಧಿಯಲ್ಲಿ ಸೇವೆಯನ್ನು ಮಾಡುತ್ತ ಧರ್ಮತತ್ವವನ್ನು ತಿಳಿಯತಕ್ಕ ಶಿಷ್ಯನೆಂದರ್ಥವು. ಗೃಹಸ್ಥನೆಂದರೆ, ಪೂರ್ವೋಕ್ತ ಬ್ರಹ್ಮಚಾರಿಯು ಗುರುಕುಲವಾಸವನ್ನು ಮಾಡಿ ಗುರುವಿನ ಅಪ್ಪಣೆಯನ್ನು ಪಡೆದು ತನ್ನ ಗೃಹಕ್ಕೆ ಬಂದು ಕುಲಗೋತ್ರಾದಿಗಳಿಂದ ತನಗೆ ಅನುರೂಪಮನೆತನದ ಸಲ್ಲಕ್ಷಣ ಕನ್ಯೆಯನ್ನು ವಿವಾಹವಾಗಿ ಗೃಹಸ್ಥಾಶ್ರಮಕ್ಕೆ ಹೇಳಿದ ಆಚಾರಗಳನ್ನು ಆಚರಿಸುತ್ತ ಕುಟುಂಬರಕ್ಷಣೆಯನ್ನು ಮಾಡಿಕೊಂಡು ಹೋಗತಕ್ಕವನಿರುವನು. ವಾನಪ್ರಸ್ಥನೆಂದರೆ, ಸಂಸಾರಸುಖವನ್ನನುಭವಿಸಿ ಅಂತ್ಯದಲ್ಲಿ ವೈರಾಗ್ಯವು ಹುಟ್ಟಿ ಪ್ರಬುದ್ಧನಾದ ಪುತ್ರನಿಗೆ ಗೃಹಕೃತ್ಯಭಾರವನ್ನೊಪ್ಪಿಸಿ ಹೆಂಡತಿಯಿಂದ ಕೂಡಿಕೊಂಡಾಗಲಿ ಆಕೆಯ ಸಮ್ಮತಿಯನ್ನು ತೆಗೆದುಕೊಂಡಾಗಲಿ ವನವಾಸಿಯಾಗಿ ಕೇವಲ ಪರಲೋಕದ ಚಿಂತೆಯಿಂದ ಕಾಲವನ್ನು ಕಳೆಯತಕ್ಕವನು. ಯತಿಯೆಂದರೆ, ಬ್ರಹ್ಮಚರ್ಯಾಶ್ರಮಿಯು ಗುರುಕುಲವಾಸವನ್ನು ಮಾಡುತ್ತ ವೈರಾಗ್ಯವು ಸಂಜನಿಸಿ ಜಗತ್ತನ್ನೂ ಜಗತ್ತಿನ ಭೋಗವನ್ನೂ ತೃಣಸಮಾನವನ್ನಾಗಿ ತಿಳಿದು ತತ್ವ ಸಂಸ್ಕಾರದಿಂದ ಸನ್ಯಾಶ್ರಮದಲ್ಲಿ ಧರ್ಮಜಾಗ್ರತೆಯಿಂದ ಕಾಲಕಳೆಯತಕ್ಕವನು. ಈ ಆಶ್ರಮಗಳಿಗೆ ವಿಶೇಷ ಧರ್ಮಗಳಿರುತ್ತವೆ. ಅವುಗಳನ್ನು ವಿಸ್ತರಿಸುವದು ಇಲ್ಲಿ ಪ್ರಸ್ತುತವಲ್ಲ. ಈ ಲೇಖದ ಉದ್ದೇಶವೇನಂದರೆ ಮನುಷ್ಯನು ಸತ್ಯಾದಿ ಸದ್ಗುಣಗಳಿಂದ ಕೂಡಿ ಯೋಗ್ಯನೆನಿಸಿಕೊಳ್ಳಬೇಕೆಂದಿರುವದು. ನಾವು ಒಳ್ಳೆಯವರಾಗುವದಕ್ಕೆ ಸತ್ಯ, ಬ್ರಹ್ಮಚರ್ಯ, ಅಸ್ತೇಯ, ಪರೋಪಕಾರ, ದಯಾ, ಕ್ಷಮಾ, ರಾಜನಿಷ್ಠೆ ಇತ್ಯಾದಿ ಸದ್ಗುಣಗಳು ಅವಶ್ಯವಾಗಿ ಬೇಕಾಗುತ್ತವೆ. ಅವುಗಳನ್ನು ಇಲ್ಲಿ ಪ್ರಸ್ತಾಪಿಸುವದು ಯುಕ್ತವಾಗಿರುವದು. **ಸತ್ಯ**—ಭೂತಹಿತಕ್ಕಾಗಿ ಇದ್ದಕ್ಕಿದ್ದಹಾಗೆ ನುಡಿಯುವದಕ್ಕೆ ಸತ್ಯವೆನ್ನುತ್ತಾರೆ. ಇದು ಬಹಳ ಮಹತ್ವದ್ದಿರುವದು. ಇದರಿಂದಲೇ ಈ ಜಗತ್ತಿನ ಕಾರ್ಯದ ಮಂಗಲವೆಂದು ಹೇಳಲು ಅಭ್ಯಂತರವಿಲ್ಲ. ಈ ವಿಷಯದಲ್ಲಿ "ಸರ್ವಂ ಸತ್ಯೇ ಪ್ರತಿಷ್ಠಿತಂ" ಎಂದು ಪ್ರಮಾಣವಿರುವದು. ಪುರಾಣವೆಂತಲೂ ಇತಿಹಾಸವೆಂತಲೂ ನಮಗೆ ಕರ್ತವ್ಯಮಾರ್ಗಗಳನ್ನು ತೋರಿಸುವ ಸಾಧನಗಳಲ್ಲಿ ಇವು ಎರಡು ಸಾಧನಗಳಾಗಿವೆ. ಅವುಗಳಿಂದ ಹೇಳಲ್ಪಟ್ಟವರು ಸತ್ಯವಂತರೇ ಇರುವರು. ಆದ್ದರಿಂದ ಅವರ ಚರಿತ್ರಗಳು ನಮ್ಮಗಳಿಗೆ ಆನಂದಾದ್ಭುತಗಳನ್ನುಂಟು ಮಾಡುವಂಥವುಗಳಾಗಿವೆ. ಸತ್ಯವಂತರಲ್ಲಿ ವಿಶ್ವಾಸವಿಟ್ಟಂತೆ ಸತ್ಯವಿಲ್ಲದವರಲ್ಲಿ ವಿಶ್ವಾಸವನ್ನಿಡಲು ಯಾರೂ ಒಪ್ಪುವದಿಲ್ಲ. ಸಾಮಾನ್ಯವಾಗಿ ಒಂದು ಪಶುವು ಕೂಡ ಸತ್ಯಕ್ಕೇ ಮೋಹಿಸುವದಾಗಿದೆ. ಆಹಾರವನ್ನು ತೋರಿಸಿ ಬಂದಕೂಡಲೆ ಬಡಿಯುವ ಪುರುಷನನ್ನು ಯಾವ ಪ್ರಾಣಿಯೂ ನಂಬುವದಿಲ್ಲ. ಸತ್ಯವಂತನ ಸಾತ್ವಿಕ ಕಳೆಯನ್ನು ನೋಡಿಯೇ ಪ್ರಾಣಿಗಳು ಆತನನ್ನು ಹಿಂಬಾಲಿಸುತ್ತವೆ. ಸತ್ಯವಂತನೊಡನೆ ವ್ಯವಹರಿಸುವದು ಉತ್ತರೋತ್ತರ ಲಾಭಕ್ಕೆ ಹೇತುವಾಗಿರುವದು. ಸತ್ಯವಂತನು ಸತ್ಯಯೋಗಿಗಳ ಸಮ್ಮೇಲನದಿಂದ ಹೆಚ್ಚು ಗೌರವವನ್ನು ಪಡೆಯುವನು. ಒಂದು ವ್ಯಾಪಾರದ ಉದಾಹರಣೆಯನ್ನು ತೆಗೆದುಕೊಳ್ಳಿರಿ! ನಾವು ವ್ಯಾಪಾರವನ್ನು ಮಾಡಬೇಕಾದರೆ ಪ್ರಾಮಾಣಿಕತೆಯು ಅವಶ್ಯಕವಾದದ್ದಿರುತ್ತದೆ. ಖರೀದಿಮಾಡುವವರೂ ಮಾಲುಕೊಡತಕ್ಕವರೂ ಯಾರಿಗ್ಯಾರೋ ಇರುವದರಿಂದ ವ್ಯವಹಾರವು ನಂಬುಗೆಯಿಂದಲೇ ಆಗತಕ್ಕದ್ದಿರುವದು. ಲಕ್ಷಾಂತರ ರೂಪಾಯಿಗಳ ವ್ಯವಹಾರವು ನಡೆದಿರುವಾಗ ಅಳತೆ ಮುಂತಾದುವುಗಳಲ್ಲಿ ವ್ಯತ್ಯಾಸವಾದರೆ ಮಾಲಿನವರು ನಂಬುವದಿಲ್ಲ. ಮತ್ತೊಮ್ಮೆ ಮಾಲು ಕಳುಹಿಸುವದೂ ಇಲ್ಲ. ಇದರಂತೆ ಗಿರಾಕಿಗಳು ಬರದೇ ಹೋದರೆ ಯಜಮಾನನ ಲಾಭವು ಕೆಡುವದಲ್ಲದೆ ಲೋಕದಲ್ಲಿ ಕೀರ್ತಿಯೂ ಉಳಿಯಲಾರದು. ನೌಕರರೂ ಸತ್ಯವಂತರಾಗಿಯೇ ಇರಬೇಕು. ಯಜಮಾನನ ಪ್ರಾಣವೇ ಇವರ ಕೈಯಲ್ಲಿರುತ್ತದೆ ಇವರು ಮೋಸಗಾರರಾದರೆ ಯಜಮಾನನಿಗೆ ವಿಪತ್ತು ಬರುವದಕ್ಕೆ ಎಷ್ಟು ಹೊತ್ತು ಬೇಕು? ಶ್ರೀಮಂತನೂ ನೌಕರರೂ ಮಾಲುಕೊಡತಕ್ಕವರೂ ಸತ್ಯವಂತರೇ ಇದ್ದ ಪಕ್ಷದಲ್ಲಿ ವಿಪುಲವಾಗಿ ಲಾಭವನ್ನು ಪಡೆಯಬಹುದು. ಇಲ್ಲವಾದರೆ ಲಾಭ ಬರುವದು ಹಾಗಿರಲಿ, ಮೂಲಧನವೂ ಲೋಪಹೊಂದಲು ಸಂದೇಹವೇನು? ವ್ಯವಹಾರವೂ ಸತ್ಯವಿಲ್ಲದೆ ಹೋದಲ್ಲಿ ಬಹುಕಾಲ ನಡೆಯದು. ಸಮಯಬಂದರೆ ಬೇಗ್ಗೆ ಆರಂಭಿಸಿದ್ದು ಸಾಯಂಕಾಲದೊಳಗಾಗಿ ಕೆಟ್ಟರೂ ಕೆಡಬಹುದು. ಪ್ರಾಮಾಣಿಕತೆಯಿಲ್ಲದಿದ್ದರೆ ದೇಶಾಂತರದಲ್ಲಿಟ್ಟ ಕಂಪನಿಗಳು ಒಂದು ಕಾಸನ್ನು ಕಾಣದೆ ಹೋದಾವು! ಪ್ರಮಾಣಿಕತೆಯಿಂದ ಎಷ್ಟೋ ಕಂಪನಿಗಳು ವೃದ್ಧಿಯನ್ನು ಹೊಂದಿ ಬಡಜನಗಳ ಉಪಜೀವನ ಮಾರ್ಗಗಳಾಗಿ ಈಗಲೂ ಯಶಸ್ಸನ್ನು ಹೊಂದಿ ಸಾಗುತ್ತಿರುವವು. ಅಪ್ರಾಮಾಣಿಕತೆಯಿಂದ ಕೆಲವು ಹೆಸರನ್ನೇ ಕಳಕೊಂಡಿರುವವು. ಆದ್ದರಿಂದ ಸತ್ಯವು ಬಹುಕಾಲ ಆಶ್ರಯಿಸಿದವರಿಗೆ ಸುಖಕೊಡುವದಾಗಿದೆ. ನಮ್ಮನ್ನಾಳುವ ಚಕ್ರವರ್ತಿಗಳನ್ನು ಯಾರುತಾನೇ ಕಂಡಿದ್ದಾರೆ? ಅವರ ಆಜ್ಞೆಯೇ ಸರ್ವಭೂಮಿಯನ್ನು ವಶಮಾಡಿಕೊಂಡು ನಿಷ್ಕಂಟಕವಾಗಿದ್ದು ನಮ್ಮನ್ನು ಪಾಲಿಸುವದಾಗಿದೆ. ಇದು ಸತ್ಯದ ಮಹತ್ವವೇ ಸರಿ. "ಸತ್ಯಪೂತಾಂ ವದೇದ್ವಾಗೀಂ" ಎಂದಿರೋಣದರಿಂದ ಸತ್ಯದಿಂದ ವಿಶೇಷ ಮಂಗಲವೆಂದು ನಿಶ್ಚಯಿಸಿ ಯಾವಾಗಲೂ ಸತ್ಯವನ್ನೇ ಮಾತನಾಡುತ್ತಿರಬೇಕು. ಮನುಷ್ಯನಿಗೆ ನಾಲಿಗೆಯೇ ಮುಖ್ಯವು. ಕೋಥಿಸಿ ಮಾಡಿದ ಕಂಚಿನ ಘಂಟೆಗೆ ನಾಲಿಗೆಯನ್ನು ಹಾಕದಿದ್ದಲ್ಲಿ ಆ ಘಂಟೆಯು ಉಪಯೋಗವಾಗುವದಿಲ್ಲ. ಅದರಂತೆ ಸತ್ಕುಲದಲ್ಲಿ ಹುಟ್ಟಿದ್ದರೂ ನಾಲಿಗೆಯು ಸತ್ಯಪೂತವಾಗದಿದ್ದಲ್ಲಿ ಅವನ ಜನ್ಮವು ವ್ಯರ್ಥವಿರುವದು. ಸತ್ಯಕ್ಕೆ ಜಯವಿದ್ದಂತೆ ಸುಳ್ಳಿಗೆ ಜಯವು ದೊರೆಯಲಾರದು. ಸುಳ್ಳು ಆಯುಷ್ಯವನ್ನೂ ಗೌರವವನ್ನೂ ಉಪಜೀವನವನ್ನೂ ನಂಬುಗೆಯನ್ನೂ ಸಂಪೂರ್ಣವಾಗಿ ನಾಶಮಾಡುತ್ತದೆ. ಸುಳ್ಳಾಡತಕ್ಕವನನ್ನು ಯಾರೂ ನಂಬುವದಿಲ್ಲ. ಸತ್ಯವು ದೇವರ ಸ್ವರೂಪವಾಗಿದೆ. ಯಾವನು ಸತ್ಯವನ್ನಾಡುತ್ತಾನೋ ಅವನು ದೇವರಂತೆ ಭಾವಿಸಲ್ಪಡುವನು. ಸುಳ್ಳಾಡತಕ್ಕವನು ದೈವದ್ರೋಹಿಯೆಂದು ತಿಳಿಯಲ್ಪಡುವನು. ಆದ್ದರಿಂದ ಮನುಷ್ಯನು ಸತ್ಯವಂತನಾಗಬೇಕು. ಇನ್ನು **ಬ್ರಹ್ಮಚರ್ಯ**ವೆಂದರೆ—

> ಕರ್ಮಣಾ ಮನಸಾ ವಾಚಾ ಸರ್ವಾವಸ್ಥಾಸು ಸರ್ವದಾ |
> ಸರ್ವತ್ರ ಮೈಥುನತ್ಯಾಗೋ ಬ್ರಹ್ಮಚರ್ಯಂ ಪ್ರಚಕ್ಷತೇ ||

ಈ ಪ್ರಮಾಣದ ಮೇಲಿಂದ ಶರೀರದಿಂದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಸರ್ವಾವಸ್ಥೆಗಳಲ್ಲಿಯೂ ಮೈಥುನಪರಿತ್ಯಾಗವನ್ನು ಮಾಡುವಿಕೆಗೆ ಬ್ರಹ್ಮಚರ್ಯವೆನ್ನುತ್ತಾರೆ. ಸುಖವು ಮನುಷ್ಯನಿಗೆ ಬೇಕಾದದ್ದೇ ಇರುವದು. ಸುಖಸಂಪಾದನೆಯು ಶಕ್ತಿಯನ್ನವಲಂಬಿಸಿರುತ್ತದೆ. ಶಕ್ತಿಪಾತದಿಂದ ಮನುಷ್ಯನು ಕ್ಷೀಣದಶೆಗೆ ಬರುವನೆಂಬುದನ್ನು ಹೇಳಬೇಕಾದುದಿಲ್ಲ. ಶಕ್ತಿಯು ಇರುವ ವರೆಗೆ ಮನುಷ್ಯನು ನಿರಾಯಾಸದಿಂದ ಕಾರ್ಯವನ್ನು ಮಾಡುವನು. ಹಸಿವು ತೃಷೆಗಳನ್ನೂ ಲಕ್ಷಿಸದೆ ಇರುವದೂ ಉಂಟು. ಇದು ಶಕ್ತಿಮಹತ್ವವೇ ಇರುತ್ತದೆ. ಶಕ್ತಿಯೆಂದರೆ ಬಿಂದುವೆಂದರ್ಥ? ಅದರ ಮಹತ್ವವನ್ನು ವರ್ಣಿಸುವದು. ಸಾವಿರ ಹೆಡೆಗಳುಳ್ಳ ಆದಿಶೇಷನಿಗೂ ಆಗದು. ಆದ್ದರಿಂದ ಬಿಂದುವನ್ನು ಪಡೆಯುವದು ಅತ್ಯವಶ್ಯಕವಿರುತ್ತದೆ. ಇದನ್ನು ಮಹಾತ್ಮರಾಂಕಿತ್ತಿಗಳು ಸಾಧಿಸಿ ತೋರಿಸಿರುತ್ತಾರೆ. ಆತ್ಮಯಾರೆನ್ನುವ ಸಂಗತಿ ಯಾವುದುಂಟೋ ಅದು ಬಿಂದುನಿಗ್ರಹದ ಶಕ್ತಿಯೆಂದು ತಿಳಿಯಬೇಕು. ಬಿಂದುವಿಗೆ ರೇತಸ್ಸು, ವೀರ್ಯ, ಉತ್ಪತ್ತಿಬೀಜ, ಜೀವನಸತ್ವ ಮುಂತಾದ ಪರ್ಯಾಯನಾಮಗಳಿರುವವು. ಈ ಬಿಂದುವು ಮನುಷ್ಯನ ಶರೀರದಲ್ಲಿದ್ದು ನಾಡಿ, ಸ್ನಾಯು, ಬುದ್ಧಿ ಮುಂತಾದವುಗಳಿಗೆ ಬಲವನ್ನು ಕೊಡುವದಾಗಿದೆ. ಇದರಿಂದಲೇ ರಕ್ತಾಭಿಸರಣವೂ ಇರುವದು. ಬಿಂದುವಿದ್ದರೇ ನಮ್ಮ ಶರೀರವು ಬಲವುಳ್ಳದ್ದಾಗಿರುತ್ತದೆ. ಮತ್ತು ಆರೋಗ್ಯದಿಂದಲೂ ಬಾಳುತ್ತದೆ. ಬಿಂದುಶಕ್ತಿಯು ಕಡಿಮೆಯಾಗುತ್ತ ಬಂದಂತೆ ಶರೀರಶಕ್ತಿಯೊಡನೆ ಬುದ್ಧಿಶಕ್ತಿಯೂ ಸಡಲುತ್ತ ಬರುವದು. ನಾವು ಯೌವನದಲ್ಲಿ ರೋಗಗಳನ್ನು ಅನುಭವಿಸುವದಕ್ಕೆ ಬಿಂದುವಿನ ಶಕ್ತಿಯನ್ನು ಕಳಕೊಂಡದ್ದೇ ಕಾರಣ! ಈ ಬಗ್ಗೆ,

> ಯಾವದ್ಬಿಂದುಃ ಸ್ಥಿರೋ ದೇಹೇ ತಾವತ್ಕಾಲಭಯಂ ಕುತಃ |
> ಬಿಂದುಶ್ಚಲತಿ ಯಸ್ಯಾಂಗೇ ಚಿತ್ತಂ ತಸ್ಯೈವ ಚಂಚಲಂ ||

ಎಂದು ಪ್ರಮಾಣಗಳಿರುವವು. ಬಿಂದುವು ನಮ್ಮಿಂದ ಎಲ್ಲಿಯವರೆಗೂ ರಕ್ಷಿಸಲ್ಪಡುತ್ತದೆಯೋ ಅಲ್ಲಿಯವರೆಗೂ ಬಲ, ತೇಜಸ್ಸು, ಕಾರ್ಯದಲ್ಲಿ ಉಲ್ಲಾಸ, ಬುದ್ಧಿಯ ವಿಕಾಸ ಇವುಗಳು ವೃದ್ಧಿಯನ್ನು ಹೊಂದುತ್ತವೆ. ಪೂರ್ವಕಾಲದಲ್ಲಿ ಮುನಿಗಳು, ರಾಜಾಧಿರಾಜರು ಮುಂತಾದವರು ಬಿಂದುನಿಗ್ರಹಶಕ್ತಿಯಿಂದಲೇ ಅಸಾಧ್ಯಕಾರ್ಯಗಳನ್ನು ಮಾಡಿ ತೋರಿಸಿದ ಬಗ್ಗೆ ಈಗಲೂ ಬೇಕಾದಷ್ಟು ಉದಾಹರಣೆಗಳು ಪ್ರತ್ಯಕ್ಷವಾಗಿವೆ. ಈ ಅಪೂರ್ವಪ್ರಭಾವವಿಶಿಷ್ಟವಾದ ಬಿಂದುವು ಸಹಜಸಿದ್ಧ ಅಮೂಲ್ಯವಾದ ರತ್ನವೆಂದು ತಿಳಿಯಬೇಕು.

ಈ ಬಿಂದುರತ್ನದ ಪ್ರಕಾಶವು ಶರೀರವನ್ನು ವ್ಯಾಪಿಸಿ, ಇರುವ ಸ್ಥಳವನ್ನೂ ವ್ಯಾಪಿಸಿ ಮುಟ್ಟಿದ ಪದಾರ್ಥಗಳನ್ನೂ ವ್ಯಾಪಿಸಿ ಬಳಿಕ ಇರುವ ಲೋಕವನ್ನೂ ಹಾಗೇ ಪರಲೋಕವನ್ನೂ ವ್ಯಾಪಿಸಿ ಸರ್ವತ್ರ ಪೂಜ್ಯತೆಯನ್ನು ಪಡೆದಿರುವದು. ಈ ಬಿಂದುನಿಗ್ರಹದ ಶಕ್ತಿಯು ಪರಲೋಕ ದೇವರೆಂಬ ಹೆಸರನ್ನು ಉಳಿಸಿರುವದು. ಇದೊಂದನ್ನು ಸಂಪಾದಿಸಿದರೆ ಸಕಲ ಲೋಕಗಳು ತನ್ನಧೀನವಾಗುವವಲ್ಲದೆ ದೇವರೇ ತಾನಾಗುವದರಿಂದ ಜಗನ್ಮಾನ್ಯನೆನಿಸುವನು. ಆದ್ದರಿಂದ ಬಿಂದುನಿಗ್ರಹ ಬ್ರಹ್ಮಚರ್ಯವನ್ನು ಪರಿಪಾಲನ ಮಾಡುವದು ಶ್ರೇಯಸ್ಸಿಗೆ ಕಾರಣವಿರುತ್ತದೆ. ಸರ್ವರಿಗೂ ಬ್ರಹ್ಮಚರ್ಯವಿರಬೇಕಷ್ಟೆ! ಗೃಹಸ್ಥನು ಬ್ರಹ್ಮಚರ್ಯವುಳ್ಳವನಾಗಿದ್ದರೆ ಜಗತ್ತಿನ ಕಾರ್ಯವು ಹೇಗೆ ನಡೆಯುವದೆಂದರೆ:—ಗೃಹಸ್ಥನಿಗೆ ಹೀಗೆ ಬ್ರಹ್ಮಚರ್ಯವು ಶಾಸ್ತ್ರದಲ್ಲಿ ವಿಧಿಸಲ್ಪಟ್ಟಿರುವದು. ಸ್ತ್ರೀ ಋತುದಿನಗಳು ಹದಿನಾರು ಇರುತ್ತವೆ ಅವುಗಳಲ್ಲಿ ಮೊದಲಿನ ಮೂರು ದಿನಗಳು ಭೋಗಕ್ಕೆ ನಿಷಿದ್ಧಗಳಾಗಿರುವವು. ಉಳಿದ ದಿನಗಳು ಗರ್ಭಧಾರಣಕ್ಕೆ ಹೇಳುವವುಗಳಾಗಿವೆ. ಅದರಲ್ಲಿಯೂ ಬೆಸದಿನಗಳು ಸ್ತ್ರೀಯುತ್ಪತ್ತಿಗೆ ಕಾರಣಗಳೆಂದೂ ಸಮದಿನಗಳು ಪುರುಷೋತ್ಪತ್ತಿಗೆ ಕಾರಣಗಳೆಂದೂ ಪ್ರಮಾಣವಿದೆ ಇದನ್ನು ತಿಳಿದುಕೊಂಡು ಉಕ್ತವಾದ ಋತುಕಾಲದಲ್ಲಿಯೇ ತನ್ನ ಪತ್ನಿಯಲ್ಲಿ ಮಾತ್ರ ಭೋಗಾಪೇಕ್ಷೆಯುಳ್ಳವನಾಗಿರಬೇಕು. "ನಪರದಾರಾನ್ ಗಚ್ಛೇತ್" ಎಂದು ಶ್ರುತಿಪ್ರಮಾಣವಿರುವದರಿಂದ ಪರಸ್ತ್ರೀಯನ್ನು ಕಾಮಿಸದಿದ್ದರೆ ಗೃಹಸ್ಥನಿಗೆ ಇದೇ ಬ್ರಹ್ಮಚರ್ಯವೆಂದು ಶಾಸ್ತ್ರಸಿದ್ಧಾಂತವಿರುವದು. ಇದರಂತೆ ಗೃಹಸ್ಥನು ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡಿದರೆ ಅವನ ದೇಹಸ್ಸು ಬಲಿಷ್ಠವಾಗಿ ಹುಟ್ಟುವ ಸಂತತಿಯೂ ಬಲಿಷ್ಠವಾಗುವದು. ಮತ್ತು ಲೋಕದಲ್ಲಿ ಬಿಂದುನಿಗ್ರಹವುಳ್ಳವನು ಸತ್ಯವಂತನೆಂದು ಯಶಸ್ಸನ್ನು ಪಡೆದು ಪರಲೋಕದಲ್ಲಿ ದಿವ್ಯಸುಖಭಾಗಿಯಾಗುತ್ತಾನೆ. ಬ್ರಹ್ಮಚರ್ಯವು ಅಂಗೋಪಾಂಗಗಳ ಭೇದದಿಂದ ವಿಶೇಷ ವಿಸ್ತಾರಕ್ಕೆ ಕಾರಣವಾಗುವದೆಂದು ತಿಳಿದು ಸಂಕ್ಷೇಪತಃ ಇಲ್ಲಿ ಪ್ರಸ್ತಾಪಿಸಿದ್ದಾಗಿರುವದು. ಎಲ್ಲರೂ ಬ್ರಹ್ಮಚರ್ಯವನ್ನು ಪರಿಪಾಲನೆಮಾಡಿ ಪರಿಶುದ್ಧಾತ್ಮರಾಗಬೇಕೆಂದು ಮುಖ್ಯಾಭಿಪ್ರಾಯವಿದೆ.

ಅಸ್ತೇಯ—ಕಳವು ಮಾಡದಿರುವಿಕೆ, ಇದು ಮನುಷ್ಯನನ್ನು ಘನತೆಗೊಯ್ಯುವದಾಗಿದೆ. ಸತ್ಯದಿಂದ ದುಡಿದುಣ್ಣುವವನನ್ನು ಎಲ್ಲರೂ ಮೋಹಿಸುವರು ಈತನಿಗೆ ಯಾವ ಆಕ್ಷೇಪಣೆಯೂ ಇರುವದಿಲ್ಲ. ಕದಿಯುವ ಗುಣವಿದ್ದವನು ಕದ್ದವನೊಡನೆ ಎಂದಾದರೂ ಆರೋಪಿಯೇ ಆಗುತ್ತಾನೆ. ಇಂಥವನಿಗೆ ಸ್ವತಂತ್ರತೆಯಿಂದ ಕೆಲಸವನ್ನು ಮಾಡುವದಕ್ಕೆ ಅವಕಾಶವಿರುವದಿಲ್ಲ. ಕದ್ದುಣ್ಣುವವನ ಬಾಳ್ವೆಯು ಸರ್ವಾತ್ಮನಾನಿಂದ್ಯವಾಗಿರುತ್ತದೆ ನಾನು ಶ್ರೀಮಂತನಾಗಬೇಕೆಂದು ಧನಧಾನ್ಯಗಳನ್ನು ಕದ್ದರೆ ಕದ್ದ ಪದಾರ್ಥವು ಬಹುದಿನ ಇರಲಾರದು. ಅನ್ಯಾಯದ್ರವ್ಯಕ್ಕೆ ಅಲ್ಪಾಯುಷ್ಯವೆಂದು ಧರ್ಮಶಾಸ್ತ್ರದಲ್ಲಿ ತಿಳಿಯಬರುತ್ತದೆ. ಪ್ರಭುಗಳು ಸೆರೆಮನೆಗಳನ್ನು ಮಾಡಿರುವದು ಕಳವು ಮುಂತಾದ ದುಷ್ಟಗುಣಗಳುಳ್ಳವರ ಶಿಕ್ಷೆಗೋಸುಗವೇ ಇರುತ್ತವೆ. ದೇವರ ಕೃಪೆಯಿಂದಲೂ ಹಿರಿಯರಿಂದಲೂ ಪ್ರಯತ್ನದಿಂದಲೂ ಎಷ್ಟು ತನಗೆ ದೊರತಿದೆಯೋ ಅದು ತನಗೆ ಹಿತವನ್ನು ಕೊಡುತ್ತದೆ. ಚೋರತನವು ಪಾಪಕ್ಕೆ ಕಾರಣವೆಂದು ಭಾವಿಸಿ ಅದನ್ನು ದೂರಮಾಡುವದು ಮನುಷ್ಯನ ಕರ್ತವ್ಯಕರ್ಮವಾಗಿರುವದು. ಕುದುಗು ಮೇಯುವ ದನದ ಸ್ಥಿತಿಯನ್ನು ಯಾರುತಾನೇ ಕಾಣರು? ದೊಡ್ಡಿಯಲ್ಲಿ ಮೇವಿಲ್ಲದೆ ಕೊರಗಿ ಹರಾಜಿನಲ್ಲಿ ಕಡಮೆ ಕಿಮ್ಮತ್ತಿಗೆ ಗುರಿಯಾಗಿ ಕಲಿತ ಗುಣಕ್ಕೆ ಗುದ್ದಿಯನ್ನು ಕಟ್ಟಿಕೊಂಡು ಕುದುಗು ದನವೆಂದು ಎಲ್ಲರೂ ಕಣ್ಣಿಟ್ಟು ಕಾಯುವಂತೆ ಮಾಡಿಕೊಳ್ಳುವ ಅವಸ್ಥೆಗೆ ಗುರಿಯಾಗುವದು ಮನುಷ್ಯನಿಗೆ ನಿಂದ್ಯವು.

> ಕರ್ಮಣಾ ಮನಸಾ ವಾಚಾ ಪರದ್ರವ್ಯೇಷು ನಿಸ್ಪೃಹಾ |
> ಅಸ್ತೇಯಮಿತಿಸಂಪ್ರೋಕ್ತಮೃಷಿಭಿಸ್ತತ್ವದರ್ಶಿಭಿಃ ||

ಎಂದಿರೋಣದರಿಂದ ಕಾಯದಿಂದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಪರದ್ರವ್ಯದ ಇಚ್ಛೆಯನ್ನು ತೊರೆದು ಸತ್ಯಪ್ರಯತ್ನದಿಂದ ದುಡಿದು ಸುಖಪಡುವದು ಕರ್ತವ್ಯವಾಗಿದೆ.

(ಸಶೇಷ.)

ವಿವಾಹಮಹೋತ್ಸವ ಮತ್ತು ಗುರುಪ್ರಭಾವ.

ಶಿಕಾರಿಪುರ ತಾ|| ಗಾಮದ ಆರಾಧ್ಯಮಠದ ವೇ|| ಜುಮ್ಮನ ಬಸಯ್ಯಗೌಡರ ಗೃಹದಲ್ಲಿ ವೇ|| ಬಸವಲಿಂಗಪ್ಪಯ್ಯಗೌಡರ ಪುತ್ರ ಚಿ|| ಕೋಟಿಪ್ಪಯ್ಯನಿಗೆ ಧಾರವಾಡ ಡಿ|| ನಾಗವಂದ ಹಿರೇಮಠದ ವೇ|| ಶಿವಲಿಂಗಪ್ಪಯ್ಯನವರ ಪುತ್ರಿ ಸೌ|| ವೀರಬಸವ್ವನನ್ನು, ನಾಗಲಿಂಗಪ್ಪಯ್ಯಗೌಡರ ಪುತ್ರ ಸಿದ್ಧಲಿಂಗಪ್ಪಯ್ಯನಿಗೆ, ಚಿಕ್ಕಜೋಗೀಹಳ್ಳಿ ಮಠದ ಸ್ಥಾನುಭೋಗರ ಶಾಂತಪ್ಪಯ್ಯನವರ ಪುತ್ರಿ ಸೌ|| ಶಾಂತವ್ವನನ್ನೂ ಧಾರವಾಡ ಡಿ|| ನಾಗವಂದ ಹಿರೇಮಠದ ವೇ|| ಶಿವಲಿಂಗಪ್ಪಯ್ಯನವರ ಪುತ್ರ ಚಿ|| ಸಿದ್ಧಪ್ಪಯ್ಯನಿಗೆ, ಧಾರವಾಡ ಡಿ|| ದೂದೀಹಳ್ಳಿ ಕಾರ್ಜೀಹಳ್ಳಿ ಹಿರೇಮಠದ ವೇ|| ನೀಲಕಂಠಪ್ಪಯ್ಯನವರ ಪುತ್ರಿ ಸೌ|| ಬೂದೆವ್ವನನ್ನು ತಡ್ಡಭಟ್ಟಿದ ಮಠದ ವೇ|| ವಿರುಪಾಕ್ಷಪ್ಪಯ್ಯನವರ ಜ್ಯೇಷ್ಠಪುತ್ರ ಚಿ|| ವೀರಪ್ಪಯ್ಯನಿಗೆ ಮಾದನಳ್ಳಿ ಮಠದ ವೇ|| ಬಸವಲಿಂಗಪ್ಪಯ್ಯನವರ ಪುತ್ರಿ ಸೌ|| ಶಿವಲಿಂಗವ್ವನನ್ನು ತಂದು, ವಿವಾಹಮಹೋತ್ಸವವು ಅತಿ ವೈಭವದಿಂದ ನೆರವೇರಿತು. ಈ ಸಮಯದಲ್ಲಿ ದೇಸಾಯಿ ಪುಟ್ಟಯ್ಯನವರ ಪುತ್ರ ಚಿ|| ರಾಜಶೇಖರಪ್ಪಯ್ಯನಿಗೆ ಭದ್ರಾಪುರದ ಕನ್ಯೆಯನ್ನು ತಂದು ಧರ್ಮಾರ್ಥವಾಗಿ ವಿವಾಹ ನೆರವೇರಿತು. ಇದು ಅತ್ಯಂತ ಪುಣ್ಯಪ್ರದವೂ ಕೀರ್ತಿಪ್ರದವೂ ಆಗಿದೆ. ಈ ಲಗ್ನಗಳಿಗೆ ||ಶ್ರೀ ಷ|| ರಟ್ಟಿಹಳ್ಳಿ ಕಬ್ಬಿಣಕಂತಿ ಮಠಾಧ್ಯಕ್ಷ ಮಹಾಸ್ವಾಮಿಗಳವರು, ಶ್ರೀ|| ಷ|| ಅಲಲೂರು ಚರಮೂರ್ತಿಸ್ವಾಮಿಗಳವರು ಆಗಮಿಸಿದ್ದರು. ಧಾರವಾಡ ಡಿ|| ಹಿರೇಕೇರಿ ತಾ|| ಮಾಸೂರು ಹಿರೇಮಠದ ವೇ|| ಚನ್ನವೀರಾರಾಧ್ಯಶಾಸ್ತ್ರಿಗಳು ಪುಣ್ಯಾಹ, ನಾಂದಿ, ಪಂಚಕಲಶಸ್ಥಾಪನ, ಅಕ್ಷತಾರೋಪಣ, ಸಪ್ತಪದೀ, ನಾಕಬಲಿ, ಹೋಮ ಮೊದಲಾದ ಕಾರ್ಯಗಳನ್ನು ವೇದೋಕ್ತರೀತ್ಯಾ ನೆರವೇರಿಸಿದರು. ಈ ಕಾರ್ಯಕ್ಕೆ ಸೀಮತಿ ರಾ|| ದೊಡ್ಡ ತಮ್ಮಪ್ಪನವರು, ಮಣಿಹೊಸೂರು ರಾ|| ನಾಗಲಿಂಗಪ್ಪಗೌಡರು, ಮಾಸೂರು ರಾ|| ಕಂಬಸಪ್ಪಗೌಡರು, ಮಲಂದೂರು ರಾ|| ಬಸಪ್ಪಗೌಡರು, ರಟ್ಟಿಹಳ್ಳಿ ವೇ|| ಬಸವಪ್ಪಯ್ಯನವರು, ಮಾಸೂರು ವೇ|| ಪರಮೇಶ್ವರಯ್ಯನವರು, ನಾಗವಂದ ಹಿರೇಮಠದ ವೇ|| ಚನ್ನಪ್ಪಯ್ಯನವರು ಅಲ್ಲದೆ ದೂದಿಹಳ್ಳಿ, ಮಾದನಳ್ಳಿ, ರಾಂಪುರ, ಸಾಗರ, ಶಿಕಾರಿಪುರ, ಭದ್ರಾಪುರ ವಗೈರೆ ಗ್ರಾಮಗಳ ಜನಗಳು ಆಗಮಿಸಿದ್ದರು. ಆ ಕಾಲಕ್ಕೆ ವೇ|| ಜುಮ್ಮನ ಬಸಯ್ಯಗೌಡರು ಶ್ರೀ ಗುರುಗಳ ಅಪ್ಪಣೆಯ ಮೇರೆಗೆ ಪಂಚಾಚಾರ್ಯಪ್ರಭಾಪೋಷಣಕ್ಕೆ ಮೂರು ರೂಪಾಯಿಗಳನ್ನು ತೆಗೆಯಿಸಿದರು. ಸದರಿ ಗೌಡರ ಜುಮ್ಮನ ಬಸಯ್ಯನವರು ತಮ್ಮ ಮನೆಯ ಹೋರಿಗೆ ಪ್ರಯಾಣದಲ್ಲಿ ವಿಶೇಷ ಕಾಯಿಲೆಯಾಗಿ ಅರಣ್ಯದಲ್ಲಿ ಔಷಧಿಯು ಏನೂ ಸಿಗದೆ ಹೋಗಿ ರೇಣುಕರ ಪ್ರಾರ್ಥನೆಯಿಂದ ಮಣ್ಣನ್ನು ದೊಳಕಭಾವನೆಯಿಂದ ಮೈಗೆ ಸವರಿದರು. ತತ್ಕ್ಷಣವೇ ಗುಣವಾಗುತ್ತ ಬಂದು ಊರನ್ನು ಸೇರಿದರು. ಈ ಬಗ್ಗೆ ಆ ಸಮಯಕ್ಕೆ ತೆಗೆದ ಎರಡು ರೂಪಾಯಿಗಳನ್ನು ಅರ್ಪಿಸಿ ವೇ|| ಚನ್ನವೀರಶಾಸ್ತ್ರಿಗಳ ಕಡೆಗೆ ಕೊಟ್ಟರು. ಇವರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳವರ ೩ ನೆಯ ವಾರ್ಷಿಕ ಗಣಾರಾಧನೆ, ಬೆಟ್ಟದಪುರ.

ಇದೇ ಜೂನ್ 11 ನೆಯ ತಾರೀಖು ಬುಧವಾರ ದಿವಸ ಬೆಟ್ಟದಪುರದ ಶ್ರೀ ಚಿಕ್ಕವೀರ ದೇಶಿಕೇಂದ್ರ ಮಹಾಸ್ವಾಮಿಗಳವರ 3 ನೆಯ ವಾರ್ಷಿಕ ಮಹಾಗಣಾರಾಧನೆಯೂ, ತತ್ಸಂಬಂಧವಾದ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶಿವಕಥೆ ಮತ್ತು ಮತಸಂಬಂಧವಾದ ಉಪನ್ಯಾಸಗಳೂ ಬಹಳ ವಿಜೃಂಭಣೆಯಿಂದ ನೆರವೇರಿದುವು. 3-4 ಸಾವಿರ ಜನ ಭಕ್ತಮಾಹೇಶ್ವರರೂ ಇತರರೂ ಆಗಮಿಸಿದ್ದರು. ಈ ಕಾರ್ಯಕ್ಕೆ ರಾಜಧಾನಿಯ ವೀರಶೈವ ಮಹಾಶಯರು ಸಾಮಾನು ಹಾಗೂ ದ್ರವ್ಯವನ್ನು ಈ ಕೆಳಗೆ ಕಂಡಂತೆ ಮ|| ರಾ|| ಬಿ. ಮಲ್ಲಣ್ಣನವರ ಮೂಲಕ ರವಾನಿಸಿಕೊಟ್ಟಿರುತ್ತಾರೆ. ಇದಲ್ಲದೆ, ಎಡಕೊರೆ ರಾಮಂದೂರು ಮತ್ತು ಹರಳಳ್ಳಿ ಮೊದಲಾದ ಗ್ರಾಮದ ಭಕ್ತಾದಿಗಳು ಸಹ ಈ ಕಾರ್ಯಕ್ಕೆ ವಿಶೇಷ ಸಹಾಯವನ್ನು ಮಾಡಿರುತ್ತಾರಾಗಿ ಈ ಮಹಾಶಯರೆಲ್ಲರನ್ನೂ ಜಗದ್ಗುರು ಪಂಚಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ರಾಜಧಾನಿಯಲ್ಲಿ ಸಹಾಯ ಮಾಡಿದ ಮಹಾಶಯರ ಪಟ್ಟಿ—

ಮ|| ರಾ|| ಬೆಜವಾಡದ ವೀರಭದ್ರಪ್ಪನವರು ಅಗ್ರಹಾರ ಸಕ್ಕರೆ ಮಣ 2 ಕ್ಕೆ 10-11-0, ಮ| ರಾ| ಬೆಜವಾಡದ ಬಸಪ್ಪನವರು ಬೂರಾಸಕ್ಕರೆ ಮಣ 2 ಕ್ಕೆ 7-2-0, ಮ| ರಾ| ಕಂಬಮಲ್ಲಣ್ಣನವರು ಬೂರಾಸಕ್ಕರೆ ಮಣ 2 ಕ್ಕೆ 7-2-0, ಮ| ರಾ| ಬಿಳುಸೂಲಿ ಸುಬ್ಬಣ್ಣನವರು ಬೂರಾಸಕ್ಕರೆ ಮಣ 3 ಕ್ಕೆ 10-11-0, ಮ| ರಾ| ಹಳ್ಳಿ ಮಲ್ಲಣ್ಣನವರು ಶ್ರೀರಾಂಪೇಟೆ 2-0-0, ಮ| ರಾ| S. S. ಕಾಳನಾಗಪ್ಪನವರು, ಹೆಸರುಕಾಳು ಸೇರು 25 ಕ್ಕೆ 4-4-0, ಹಲಸಂದೆ 25 ಸೇರಿಗೆ 4-4-0, ಮ| ರಾ| ಬೆಟ್ಟದಪುರದ ನಾಗಣ್ಣನವರು, ಚವರ್ ಮಠದ ಬೀದಿ ನಗದು 5-0-0, ಶ್ರೀ| ಹೂಸೂರಮ್ಮ ಕೊಂಗರಿಬೀದಿ, ಬೇಳೆ 50 ಸೇರಿಗೆ 11-12-0, ಮ| ರಾ| ಹಳ್ಳದಕೇರಿ ಕಾ. ನಾ. ಮಕ್ಕಳು ವೀರಣ್ಣನವರು ಬೆಣ್ಣೆ ಕಾಯಿಸಿದ ತುಪ್ಪ ಟಿನ್ 1 ಕ್ಕೆ 36-12-0, ಮ| ರಾ| ಡಿ. ಯಜಮಾನ್ ಲಿಂಗಣ್ಣನವರು ತುಪ್ಪ ಮಣ 1 ಕ್ಕೆ 28-8-0, ಮ| ರಾ| ಪಿ. ಮಲ್ಲಣ್ಣ ಪುಟ್ಟಸ್ವಾಮಯ್ಯ ತುಪ್ಪ ಟಿನ್ 1 ಕ್ಕೆ 36-12-0, ಮ| ರಾ| ಕೆ. ರಾಮಣ್ಣನವರು ರವೆ ಮೂಟೆ 1 ಕ್ಕೆ 18-8-0, ಹ| ರುದ್ರಪ್ಪ ಚಂದ್ರಶೇಖರಯ್ಯ, ಹಸೀ ಕಡಲೆ ಮೂಟೆ 1 ಕ್ಕೆ 12-6-0, ಸಂ| ಸಂಗಪ್ಪ ಸುಬ್ಬಣ್ಣನವರು ಬೇಳೆ 100 ಸೇರಿಗೆ 22-8-0, ಮ| ರಾ| ಬಿ. ಎಸ್. ಸುಬ್ಬಣ್ಣನವರು ಬೇಳೆ 50 ಸೇರಿಗೆ 11-12-0, ಮ| ರಾ| ಪಿ. ಬಿ. ಕರಬಸಪ್ಪ, ಕಸಕಸೆ ಮಣ 1 ಕ್ಕೆ 4-8-0, ಮ| ರಾ| ಎಂ. ಬಸವಣ್ಣ ಮುದ್ದಪ್ಪ ಬೇಳೆ 50 ಸೇರಿಗೆ 11-12-0, ಮ| ರಾ| ಬೆಂಗಳೂರು ಸುಬ್ಬಣ್ಣನವರು ಒಳ್ಳೆಣ್ಣೆ ಟಿನ್ 2 ಕ್ಕೆ 12-0-0, ಮ| ರಾ| ಸುಬ್ಬಣ್ಣ, ಲಿಂಗಣ್ಣ, ವೀರಭದ್ರಪ್ಪ ಉಪ್ಪು ಮೂಟೆ 1 ಕ್ಕೆ 6-2-0, ಮ| ರಾ| ಟಿ. ಮಲ್ಲಪ್ಪ ಸಂತೇಪೇಟೆ ಬೇಳೆ 25 ಸೇರಿಗೆ 5-12-0, ಮ| ರಾ| ಎಚ್. ಪಿ. ಶಂಭುಲಿಂಗಪ್ಪನವರು, 7-8-0, ಮ| ರಾ| ಆ|| ಮಲ್ಲಣ್ಣನವರು, 2-0-0, ಮ| ರಾ| ಗುರುಮಲ್ಲಯ್ಯನವರ ಮಕ್ಕಳು ಬಸವಣ್ಣನವರು ಬೂರಾಸಕ್ಕರೆ ಮಣ 12 ಕ್ಕೆ 42-12-0.

ಪಿ. ಮಲ್ಲಣ್ಣ.

ದೀಕ್ಷಾಮಹೋತ್ಸವ.

ಬೆಂಗಳೂರು ಸಿಟಿ ಮಾಮೂಲಪೇಟೆ ಜಿ. ಗಂಗಪ್ಪನವರು ತಮ್ಮ ಪುತ್ರ ಚಿ|| ಮರಿಗಂಗಪ್ಪನೆಂಬ ಬಾಲಕನ ದೀಕ್ಷಾಮಹೋತ್ಸವವನ್ನು ವಿಶ್ವೇಶ್ವರಪುರದಲ್ಲಿ ತಾವು ನೂತನವಾಗಿ ಕಟ್ಟಿಸಿರುವ ಶಿವಾನಂದಭವನದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿಸಿದರು. ವೀರಸಿಂಹಾಸನಾನುವರ್ತಿಗಳಾದ ಮಳಲಿಮಠದ ಶ್ರೀ ನಾಗಾರ್ಜುನಸ್ವಾಮಿಗಳು ಆಗಮಿಸಿ ಅಧ್ಯಕ್ಷತೆಯನ್ನು ವಹಿಸಿ ಈ ಸಂಸ್ಕಾರವನ್ನು ಸಾಂಗವಾಗಿ ನೆರವೇರಿಸಿದ್ದು ಸರ್ವರಿಗೂ ಮೇಲ್ಪಂಕ್ತಿಯಾಗಿದೆ. ಅನೇಕರು ತಮ್ಮ ತಮ್ಮ ಮಕ್ಕಳಿಗೆ ಕಾಲವನ್ನರಿತು ದೀಕ್ಷಾ ಸಂಸ್ಕಾರವನ್ನು ಮಾಡದೆ ವಿವಾಹಾದಿಗಳನ್ನು ಮಾತ್ರ ವಿಜೃಂಭಣೆಯಿಂದ ಮಾಡುವುದುಂಟು. ವೀರಶೈವಮತಕ್ಕೆ ಮುಖ್ಯ ಸಂಸ್ಕಾರವೆನಿಸಿದ ಈ ಸಂಸ್ಕಾರವನ್ನು ಬಿಟ್ಟು ಮಿಕ್ಕ ಯಾವ ಸಂಸ್ಕಾರಗಳನ್ನು ಮಾಡಿದರೂ ಎಲ್ಲವೂ ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುತ್ತದೆ. ಮತ್ತು ಅದು ಉತ್ತಮವರ್ಗದ ಪದ್ಧತಿಯಲ್ಲ. ವೀರಶೈವಮತಕ್ಕೆ ದೀಕ್ಷಾ ಸಂಸ್ಕಾರವೇ ಪ್ರಧಾನವಾದ ಸಂಸ್ಕಾರವಾಗಿದೆ. ಪ್ರತಿಯೊಬ್ಬ ವೀರಶೈವನೂ ತಪ್ಪದಂತೆ ತಮ್ಮ ತಮ್ಮ ಮಕ್ಕಳಿಗೆ ವಿವಾಹಾದಿಸಂಸ್ಕಾರಗಳನ್ನು ಮಾಡಲಿಕ್ಕೆ ಎಷ್ಟು ಆತುರಪಡುವನೋ ಅದಕ್ಕಿಂತಲೂ ವಿಶೇಷವಾದ ಆತುರತೆಯಿಂದ ವೀರಶೈವಮತಕ್ಕೆ ಅತ್ಯಂತ ಮುಖ್ಯವಾದ ಈ ಸಂಸ್ಕಾರವನ್ನು ತಮ್ಮ ತಮ್ಮ ವಂಶಗುರುಗಳಿಂದ ಮಾಡಿಸಿ ಮ| ರಾ| ಗಂಗಪ್ಪನವರಂತೆ ಧನ್ಯರಾಗತಕ್ಕದ್ದು. ಈ ಉತ್ಸವಕಾಲದಲ್ಲಿ ಮ| ರಾ| ಗಂಗಪ್ಪನವರು ಮಠಸ್ಥಾಪಕರ ಜ್ಞಾಪಕಾರ್ಥವಾಗಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ತೆಗೆದಿರುತ್ತಾರೆ. ಈ ವಟುವಿಗೆ ಶ್ರೀ ರೇಣುಕನು ಅನಂತಮಂಗಲವನ್ನುಂಟುಮಾಡಲಿ.

ಪ್ರತ್ಯಕ್ಷದರ್ಶಿ.

ಬಿಡಾಡಿಜಂಗಮ.

ಶಿಷ್ಯಸಾಂಪ್ರದಾಯವಿಲ್ಲದ ಒಬ್ಬಾನೊಬ್ಬ ಬಿಡಾಡಿಜಂಗಮನು ನಮ್ಮ ಬಳ್ಳಾರಿಗೆ ಬಂದು ಮಠದವನೆಂದು ಹೇಳಿಕೊಳ್ಳುತ್ತ ಶುದ್ಧಸಾಂಪ್ರದಾಯದ ಮಠದವರನ್ನೆಲ್ಲಾ ಕೆಡಿಸಹತ್ತಿರುವನು. ವೈದಿಕಮಾರ್ಗವನ್ನು ತಿರಸ್ಕರಿಸುತ್ತಿರುವನು. ಶಿವಾಧಾರಿಗಳನ್ನು ಕಂಡರಂತೂ ಇವನು ಹೆಂಡಕುಡಿದ ಚಂಡಾಲನಂತೆ ಉನ್ಮತ್ತನಾಗಿ ಅಮಂಗಲಮಾತುಗಳನ್ನಾಡ ತೊಡಗುವನು. ಇದು ಕ್ಷುದ್ರಬೀಜದ ಪ್ರಭಾವವಾಗಿದೆ. "ಯಥಾಬೀಜ ಸ್ತಥಾಂಕುರಃ" ಎಂಬ ನೀತಿಯಂತೆ ಇವನು ವರ್ತಿಸುತ್ತಿರುವನು. ಹೀಗೆ ವರ್ತಿಸುವದೇ ಇವನಿಗೆ ಭೂಷಣವಾಗಿದೆ, ಆದರೆ ಶುದ್ಧಸಾಂಪ್ರದಾಯದ ಮಠದವರು ಈ ರಂಡಾಪುತ್ರನ ಸಹವಾಸದಲ್ಲಿ ಬಿದ್ದು ಕೆಡದೆ ತಮ್ಮ ಧರ್ಮವನ್ನು ಕಾಯ್ದುಕೊಳ್ಳಬೇಕೆಂದು ಇಚ್ಛಿಸುತ್ತೇನೆ.

ಓರ್ವ ಸ್ಥಳಿಕ.

ಪೂವಳ್ಳಿ (ಹೂಲಿ) ಪಂಚವಣ್ಣಿಗಿ ಬೃಹನ್ಮಠ ಧರ್ಮಾರ್ಥಸಂಸ್ಥೆಗೆ ಉದಾರ ಸಹಾಯ.

ಉಗರಗೊಳ್ಳದ ಶ್ರೀಮಂತ ಗೋವಿಂದಗೌಡರು ಶಿವರಾತಿ (ಸ್ವಪ್ನಸಿ) ಸವದತ್ತಿ ತಾಲೂಕ ಲೋ|| ಬೋ|| ಪ್ರೆಸಿಡೆಂಟ ಇವರು ಇಲ್ಲಿಯ ಗ್ರಂಥಪ್ರಸಾರದ ಸಹಾಯಕ್ಕಾಗಿ (೩೧೧) ರೂಪಾಯಿಗಳನ್ನು ಮತ್ತು ಶ್ರೀಮಂತ ಲಿಂಗನಾಯಕ ಮರಕುಂಬಿ ಪಾಟೀಲರವರು (೧೦೧) ರೂಪಾಯಿಗಳನ್ನು ಒಪ್ಪಿಸಿದರು. ಮತ್ತು ಈ ಸಂಸ್ಥೆಗೆ ಇಲ್ಲಿಯ ಶ್ರೀಯುತ ಬಸವಣ್ಣೆಪ್ಪ ಮಲ್ಲಣ್ಣವರ (ಸಜ್ಜನ) ಈತನು (೨ ಎಕರೆ) ಭೂಮಿಯನ್ನು ತಮ್ಮ ತಂದೆಯಾದ ಕೈ|| ವಾ|| ವೀರಭದ್ರಪ್ಪ ಇವರ ವಾಗ್ದಾನದಂತೆ ದಾನವಾಗಿ ಕೊಟ್ಟು ಸರಕಾರದಲ್ಲಿ ರಜಿಸ್ಟರ ಸಹ ಮಾಡಿಸಿದನು. ಇವರಿಗೆ ಪೂವಳ್ಳಿ ಶ್ರೀ ಸಿದ್ಧನಂಜೇಶ್ವರನು ಮಂಗಲವನ್ನೀಯಲಿ!

ಸೆಕ್ರೆಟರಿ ಜಗದ್ಗುರು ವಿಶ್ವಾರಾಧ್ಯ ವಾಚನಾಲಯ, ಹೂಲಿ ಡಿ|| ಬೆಳಗಾಂವ.

ಸ್ವಾತಂತ್ರ್ಯಸಂಗ್ರಾಮ.

ಡಾ|| ರವೀಂದ್ರನಾಥ ಟಾಗೂರವರ ಹೇಳಿಕೆ

ಬರ್ಮಿಂಗ್‌ಹ್ಯಾಂ ನಗರದಲ್ಲಿರುವ "ದಿ ಮ್ಯಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯ ಬಾತ್ಮೀದಾರರು ಈ ರೀತಿ ಬರೆದಿರುತ್ತಾರೆ.

"ಕವಿಶ್ರೇಷ್ಠರಾದ ರವೀಂದ್ರನಾಥಟಾಗೋರರವರು ಆಕ್ಸ್‌ಫರ್ಡಿನಲ್ಲಿರುವ ಮ್ಯಾಂಚೆಸ್ಟರ್ ಕಾಲೇಜಿನಲ್ಲಿ ಉಪನ್ಯಾಸ ಮಾಡುವದಕ್ಕಾಗಿ ಭರತಖಂಡದಿಂದ ಇಂಗ್ಲೆಂಡ ದೇಶಕ್ಕೆ ಬಂದಿರುವರು. ಈ ಕವಿಶ್ರೇಷ್ಠರು ಭರತಖಂಡವನ್ನು ಬಿಟ್ಟಾಗಲೇ ಅಲ್ಲಿಯ ವಿದ್ಯಮಾನಗಳು ಅತಿ ವಿಷಮಾವಸ್ಥೆಗೆ ಬಂದಿದ್ದವು. ಆದರೆ ಡಾಕ್ಟರ್ ಟಾಗೂರರವರು ಇಂಗ್ಲೆಂಡಿಗೆ ಬಂದಂದಿನಿಂದ ಆ ವಿಷಯದಲ್ಲಿ ಬಹಿರಂಗವಾಗಿ ಯಾವ ಅಭಿಪ್ರಾಯವನ್ನೂ ಹೇಳಿರುವದಿಲ್ಲ. ಅವರು ನನ್ನ ಮೇಲೆ ದಯೆಯಿಟ್ಟು, ತಮ್ಮ ಅಭಿಪ್ರಾಯವನ್ನು ಈ ಮುಂದೆ ಹೇಳುವಂತೆ ವ್ಯಕ್ತಗೊಳಿಸಿರುವರು.

"ನಾವು ಚಿಕ್ಕವರಾಗಿದ್ದಾಗ ನಾಗರೀಕತೆಯ ಉನ್ನತ ಶಿಖರವನ್ನೇರಿ, ವಿಜ್ಞಾನಶಾಸ್ತ್ರದಲ್ಲಿ ಪ್ರವೀಣತೆಯನ್ನು ಹೊಂದಿರುವ ಯೂರೋಪು ಖಂಡದ ವಿಷಯದಲ್ಲಿಯೂ ಮುಖ್ಯವಾಗಿ ಈ ನಾಗರೀಕತೆಯನ್ನು ನಮ್ಮ ಮನೆಗಳ ಬಾಗಿಲುಗಳವರೆಗೂ ತಂದ ಇಂಗ್ಲೆಂಡ್ ದೇಶದ ವಿಷಯದಲ್ಲಿಯೂ, ಅತ್ಯಂತ ಪೂಜ್ಯಭಾವದಿಂದ ಕೂಡಿದ್ದೆವು. ಆಗ ನಾವು ಇಂಗ್ಲೆಂಡನ್ನು ನಮ್ಮ ತರುಣಪ್ರಾಣಗಳಿಗೆ ನೂತನವಾಗಿ ಉತ್ಸಾಹವನ್ನು ತುಂಬುತ್ತಿದ್ದ ಪ್ರಸಿದ್ಧವಾದ ಅವರ ಭಾಷಾ ವೈಖರಿಯಿಂದ ಅರಿಯುತ್ತಿದ್ದೆವು. ನಾವು ಅಭ್ಯಾಸಮಾಡುತ್ತಿದ್ದ ಗ್ರಂಥಗಳ ಮತ್ತು ಕಾವ್ಯಗಳ ಗ್ರಂಥಕರ್ತೃಗಳು ಪರಸ್ಪರಪ್ರೇಮ ಮತ್ತು ಸ್ವಾತಂತ್ರ್ಯಗಳ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯುಳ್ಳವರಾಗಿದ್ದರು.

ಈ ಅಪಾರ ಭಾಷಾವೈಖರಿಯು ದಂಗೆಯಕಾಲ (Revolution Period) ದಿಂದಲೂ ನಡೆದುಬಂದಿರುವುದು. "ವರ್ಡ್ಸ್‌ವರ್ತ್" ಕವಿಯು ತನ್ನ ಸಾಂಗತ್ಯಗಳಲ್ಲಿ ಮನೋಹರವಾಗಿ ವರ್ಣಿಸಿರುವ ಮಾನವಸ್ವಾತಂತ್ರ್ಯ ವಿಷಯವನ್ನು ಓದಿ ನಾವು ಅತ್ಯಾನಂದಪಡುತ್ತಿದ್ದೆವು. "ಷೆಲ್ಲಿ" ಕವಿಯು ಯೌವನದ ಸ್ವಾಭಾವಿಕವಾದ ಉತ್ಸಾಹದಿಂದ ಕೂಡಿ, ಮತಾಧಿಕಾರಿಗಳಿಂದ ಉಂಟಾಗುತ್ತಿರುವ ತೊಂದರೆಗಳನ್ನು ಪ್ರತಿಭಟಿಸಿ, ಎಲ್ಲ ದಬ್ಬಾಳಿಕೆಯನ್ನೂ ಆತ್ಮಯಜ್ಞದಿಂದ ಧೈರ್ಯವಾಗಿ ಜಯಿಸಬೇಕೆಂದು ಬರೆದಿರುವ ವಾಕ್ಯಗಳನ್ನು ಓದಿ ಆನಂದಭರಿತರಾಗುತ್ತಿದ್ದೆವು.

ಇವೆಲ್ಲವೂ ನಮ್ಮ ತಾರುಣ್ಯದ ವಿಚಾರತರಂಗಗಳನ್ನು ಅಭಿವೃದ್ಧಿಗೊಳಿಸಿದುವು. ಮತ್ತು ನಾವು ಪರದೇಶೀಯರ ಅಧಿಕಾರದ ಮೇಲೆ ಪ್ರತಿಭಟಿಸುವುದಾದರೆ, ಪಾಶ್ಚಿಮಾತ್ಯರು ನಮ್ಮ ವಿಷಯದಲ್ಲಿ ಸಂಪೂರ್ಣ ಸಹಾನುಭೂತಿಯನ್ನು ತೋರಿಸುವರೆಂದು ನಾವು ನಂಬಿದ್ದೆವು. ನಮ್ಮ ಸ್ವಾತಂತ್ರ್ಯ ಸಂಪಾದನೆಯ ಪ್ರಯತ್ನದಲ್ಲಿ ನಮಗೆ ಇಂಗ್ಲೆಂಡಿನ ಸಹಾಯವು ಸಂಪೂರ್ಣವಾಗಿರುವುದೆಂದು ನಂಬಿದ್ದೆವು.

ಈ ಮಧ್ಯೆ, ನಮ್ಮ ನಿಜಸ್ಥಿತಿಯು ಸ್ವಲ್ಪ ಸ್ವಲ್ಪವಾಗಿ ನಮಗೆ ಗೋಚರವಾಗಲಾರಂಭಿಸಿತು. ನಮ್ಮ ಸಂಬಂಧವು ಸ್ವಾತಂತ್ರ್ಯಭರಿತವಾಗಿದೆ. ಪರಾಧೀನವಾಗಿರುವದನ್ನು ಮನಗಂಡೆವು. ಇದರಿಂದ ನಮ್ಮ ತಾರುಣ್ಯದವಿಚಾರತರಂಗಗಳು ಬಹಳಮಟ್ಟಿಗೆ ನಾಶವಾದುವಲ್ಲದೆ ಆಂಗ್ಲೇಯ ಆಡಳಿತಗಾರರಲ್ಲಿ ನಮಗಿದ್ದ ಅಸಾಧಾರಣವಾದ ಪೂಜ್ಯಭಾವವೂ ಕಡಿಮೆಯಾಗಲಾರಂಭವಾಯಿತು. ಪಾಶ್ಚಿಮಾತ್ಯರು ತಮ್ಮ ದೇಶೀಯ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವದರಲ್ಲಿ ನ್ಯಾಯಾನ್ಯಾಯಗಳನ್ನು ಪರಿಗಣಿಸತಕ್ಕವರಲ್ಲವೆಂಬ ನಮಗೆ ಚೆನ್ನಾಗಿ ತಿಳಿಯಿತು. ಇದು ನಮ್ಮ ಅಸಮಾಧಾನವನ್ನು ಮತ್ತಷ್ಟು ಹೆಚ್ಚಿಸಿತು. ನವಶತಮಾನದಲ್ಲಿ ಆದರಲ್ಲಿಯೂ ಬೋಯರಯುದ್ಧವು ಮುಗಿದ ನಂತರ ಈ ದುಃಸ್ವಭಾವವು ಹೆಚ್ಚುತ್ತ ಬಂದಿರುವುದರಿಂದ, ಮೊದಲೇ ನಮ್ಮ ಮನಸ್ಸಿನಲ್ಲಿ ಬೇರೂರಿದ್ದ ಸಂತಾಪವು ಹೆಚ್ಚಲವಕಾಶವಾಯಿತು.

ಪೂರ್ವದೇಶಗಳಿಗೆ ಬಹುದೂರದಲ್ಲಿರುವ ಇಂಗ್ಲೆಂಡಿನ ನಿವಾಸಿಗಳು ಏಷ್ಯಾಖಂಡದಲ್ಲಿ ತಾವು ಪೂರ್ವದಲ್ಲಿ ಸಂಪಾದಿಸಿದ್ದ ನೈತಿಕದ ಉನ್ನತಸ್ಥಾನವನ್ನು ಸದ್ಯಃ ಸಂಪೂರ್ಣವಾಗಿ ಕಳೆದುಕೊಂಡಿರುವರೆಂಬುದನ್ನು ಅರಿತುಕೊಳ್ಳಬೇಕಾಗಿದೆ. ಮೊದಲಿನಂತೆ ಈಗಲೂ, ನ್ಯಾಯಸಮ್ಮತವಾದ ವರ್ತನೆಗೂ ಸರ್ವಸಮ್ಮತಗಳಾದ ಉಚ್ಚತತ್ವಗಳ ಪ್ರೋತ್ಸಾಹಕ್ಕೂ ಆದರ್ಶಪ್ರಾಯರಾಗಿರುವರೆಂದು ಪ್ರಪಂಚದಲ್ಲಿ ಯಾರೂ ಭಾವಿಸುವುದಿಲ್ಲ. ಬ್ರಿಟಿಷರು ಪಾಶ್ಚಿಮಾತ್ಯ ಭಿನ್ನತ್ವವನ್ನೂ, ಪರದೇಶಗಳಲ್ಲಿ ತಮ್ಮ ವ್ಯಾಪಾರವನ್ನೂ ಅಭಿವೃದ್ಧಿಗೊಳಿಸುವುದರಲ್ಲಿ ಮಾತ್ರವೇ ಮುಂದಾಳುಗಳಾಗಿರುವರು.

ಇದರಿಂದ ಯೂರೋಪ್ ಖಂಡಕ್ಕೆ ನೈತಿಕರೀತಿಯಿಂದ ದೊಡ್ಡ ಅಪಜಯವಾದಂತೆಯೇ ಸರಿ! ಏಷ್ಯಾಖಂಡವು ತನ್ನ ಅತಿಮುಖ್ಯವಾದ ಹಕ್ಕುಬಾಧ್ಯತೆಗಳನ್ನು ಪರಾಧೀನದಿಂದ ರಕ್ಷಿಸಿಕೊಳ್ಳಲು ಸಾಕಾದಷ್ಟು ಶಾರೀರಕ ಶಕ್ತಿಯಿಲ್ಲದಿರುವದಾದರೂ, ಪೂರ್ವದಲ್ಲಿ ಮೇಲುದೃಷ್ಟಿಯಿಂದ ನೋಡುತ್ತಿದ್ದ ಯೂರೋಪ್ ಖಂಡವನ್ನು ಸದ್ಯಃ ಕೀಳುದೃಷ್ಟಿಯಿಂದ ನೋಡುತ್ತಿರುವುದು.

ಈ ನೂತನ ದೃಷ್ಟಿಯು ಬಹು ಕಾಲದ ವರೆಗೆ ಪರಿಹರಿಸಲಸಾಧ್ಯವಾದ ಅನೇಕ ವೈಷಮ್ಯಗಳಿಗೆ ಕಾರಣವಾಗಿರುವುದು. ಯೂರೋಪಿನ ರಾಷ್ಟ್ರಗಳು ಬೆಳೆಯುತ್ತಿರುವ ಈ ಅವಿಶ್ವಾಸದ ಅಪಾಯವನ್ನು ಸರಿಯಾಗಿ ಅರಿತುಕೊಳ್ಳದೆ, ಯಂತ್ರನಿರ್ಮಿತ ಪರಿಹಾ

[6ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ

೧೯೩೦ ನೇ ಜೂನ್ ತಾ|| ೩೦ನೆಯ ಸೋಮವಾರ

ವೈದಿಕಮತಗಳು.

ನಮ್ಮ ಭಾರತವರ್ಷದಲ್ಲಿ ವೇದಗಳ ಆಧಾರದಿಂದ ಅನಂತ ಮತಗಳು ಹುಟ್ಟಿರುತ್ತವೆ. ಈ ವೈದಿಕಮತಗಳೊಳಗೆ ಕೆಲ ಮತಗಳು ವೇದಗಳಲ್ಲಿ ಹೇಳಿದ ಮಂತ್ರಗಳೆಲ್ಲಕ್ಕೂ ಅನುಕೂಲಗಳಾಗಿಲ್ಲವು. ಯಾವ ಮತಗಳು ವೇದಾಧಾರದಿಂದ ಹುಟ್ಟಿರುತ್ತವೆಯೋ ಆ ಮತಗಳೆಲ್ಲವೂ ವೇದದ ಒಂದು ಭಾಗಕ್ಕೂ ಪ್ರತಿಕೂಲವಾಗದೆ ಅನುಕೂಲಗಳಾಗಿರಬೇಕಾದುದು ನ್ಯಾಯವಾಗಿದೆ. ವೇದಾಧಾರದಿಂದ ಹುಟ್ಟಿದ್ದರೂ ಆ ವೇದದ ಕೆಲವು ವಾಕ್ಯಗಳಿಗೆ ಪ್ರಾಮಾಣ್ಯವನ್ನು ಹೇಳಿ ಕೆಲವು ವಾಕ್ಯಗಳಿಗೆ ಅಪ್ರಾಮಾಣ್ಯವನ್ನು ಹೇಳುವುದಾದರೆ ವೇದಸಾಮಾನ್ಯಕ್ಕೂ ಪ್ರಾಮಾಣ್ಯವನ್ನು ಒಪ್ಪಿದಂತಾಗುವುದಿಲ್ಲ. ಅಲ್ಲಿಗೆ ವೇದದ ಆಧಾರದಿಂದ ಹುಟ್ಟಿದುವೆಂದು ಹೇಳುವುದೇ ಅಸಮಂಜಸವಾಗುತ್ತದೆ. ಹಾಗೆ ವೇದದ ಏಕದೇಶವನ್ನು ಅಂಗೀಕಾರಮಾಡಿ ವೇದೋಕ್ತಮತಗಳೆಂದು ಹೇಳುವ ಪಕ್ಷದಲ್ಲಿ ಪ್ರಪಂಚದಲ್ಲಿರುವ ಅವೈದಿಕಮತಗಳಿಗೂ ಸಹ ವೈದಿಕಮತಗಳೆಂದೇ ಹೇಳಬೇಕಾಗುವುದು. ಸಾಮಾನ್ಯವಾಗಿ ಅವೈದಿಕಮತಗಳೊಳಗೂ ದೇವರುಂಟು; ಪರಲೋಕವುಂಟು; ಜನ್ಮಾಂತರಗಳುಂಟು; ಪುಣ್ಯಪಾಪಗಳುಂಟು; ವರ್ಣಾಶ್ರಮಗಳುಂಟು; ಎಂದು ಹೇಳುವ ಮತಗಳು ಅನೇಕವಾಗಿರುತ್ತವೆ. ಇನ್ನೂ ಎಷ್ಟೋಮತಗಳಲ್ಲಿ ದೇವರಿಲ್ಲ; ಪರಲೋಕವಿಲ್ಲ; ಜನ್ಮಾಂತರವಿಲ್ಲ; ಪುಣ್ಯಪಾಪಗಳಿಲ್ಲ; ಸುಖವೇ ಸ್ವರ್ಗ; ದುಃಖವೇ ನರಕ; ಎಂದು ಹೇಳುವ ಮತಗಳೂ ಸಹ ಅನೇಕವಾಗಿರುತ್ತವೆ. ವೇದಾಧಾರದಿಂದ ಹುಟ್ಟದಿರುವ ಇಂಥ ಮತಗಳು ಸಹ ವೇದದಲ್ಲಿ ಹೇಳಿದ ಕೆಲವು ಅಂಶಗಳನ್ನು ಒಪ್ಪುವಮಾತ್ರದಿಂದ ವೇದೋಕ್ತಮತಗಳೆಂದೇ ಹೇಳಬೇಕಾಗುವ ಪ್ರಸಂಗವು ಬರುವುದು. ಸಾಂಖ್ಯ ಯೋಗ ವೈಶೇಷಿಕಾದಿ ಮತಗಳು ಸಹ ಕೆಲವು ಭಾಗದಲ್ಲಿ ವೇದಸಮ್ಮತಗಳಾಗಿದ್ದರೂ ಕೆಲವು ಮುಖ್ಯಭಾಗಗಳಲ್ಲಿ ವೇದವಿರುದ್ಧಗಳಾಗಿರುವುದರಿಂದ ಇವು ವೇದವಿರುದ್ಧಮತಗಳೆಂದೇ ಆರ್ಯರು ನಿಶ್ಚಯಿಸಿರುವರು. ಸಾಂಖ್ಯಮತಪ್ರವರ್ತಕನಾದ ಕಪಿಲಮಹರ್ಷಿಯು ವೇದದಲ್ಲಿ ಹೇಳಿರುವಂತೆ ಈಶ್ವರನೇ ಜಗತ್ಕರ್ತೃವೆಂದು ಹೇಳುವುದನ್ನು ಬಿಟ್ಟು ಜಡವಾದ ಪ್ರಕೃತಿಯೇ ಜಗತ್ಕರ್ತ್ರಿಯೆಂದು ಹೇಳುತ್ತಾನೆ. ಹೀಗೆ ಹೇಳುವುದರಿಂದ "ಯತೋವಾ ಇಮಾನಿಭೂತಾನಿ ಜಾಯಂತೆ" ಪರಶಿವನಿಂದಲೇ ಚರಾಚರಾತ್ಮಕವಾದ ಜಗತ್ತು ಹುಟ್ಟಿತೆಂಬವೇ ಮುಂತಾದ ಶ್ರುತಿವಾಕ್ಯಗಳಿಗೂ ಮತ್ತು ಪರಶಿವನ ರೂಪಗುಣವಿಭೂತ್ಯಾದಿಗಳನ್ನು ಹೇಳುವ "ಊರ್ಧ್ವರೇತಂವಿರೂಪಾಕ್ಷಂ" ಮುಂತಾದ ಶ್ರುತಿವಾಕ್ಯಗಳಿಗೂ ಪ್ರಯೋಜನವೇ ಇಲ್ಲದಂತಾಗುವುದು. ಚೇತನಸಹಾಯವಿಲ್ಲದಿದ್ದರೆ ಜಡವಾದ ಪ್ರಕೃತಿಯಿಂದ ಚೇತನಾಚೇತನರೂಪವಾದ ಜಗತ್ತು ಹುಟ್ಟುವ ಸಂಭವನೇ ಇಲ್ಲವು. ಅಲ್ಲದೆ ಪ್ರಕೃತಿಗೆ ಜಗದಾಕಾರವಾಗಿ ಪರಿಣಮಿಸುವ ಸಾಮರ್ಥ್ಯವೂ ಇಲ್ಲವು. ಹೀಗೆ ಸಾಂಖ್ಯಮತದಲ್ಲಿ ಪ್ರಕೃತಿಕರ್ತೃತ್ವವನ್ನು ಬಿಟ್ಟರೆ ಸಾಧಾರಣವಾಗಿ ಉಳಿದ ಲಕ್ಷಣಗಳು ವೇದಕ್ಕೆ ಅನುಕೂಲಗಳಾಗಿಯೇ ಇರುತ್ತವೆ. ಮತ್ತು ಯೋಗಮತಪ್ರವರ್ತಕನಾದ ಪತಂಜಲಿ ಋಷಿಯು ಸಹ ಸಾಂಖ್ಯಮತದಂತೆ ಪ್ರಕೃತಿಯೇ ಜಗತ್ಕರ್ತ್ರಿಯೆಂದು ಹೇಳುವನಲ್ಲದೆ ಈಶ್ವರನನ್ನು ನಿಮಿತ್ತಕಾರಣವನ್ನಾಗಿ ಒಪ್ಪುತ್ತಾನೆ. ಹೀಗೆ ಹೇಳುವುದರಿಂದ ತ್ರಿವಿಧಕಾರಣತ್ವವನ್ನು ಈಶ್ವರನಿಗೆ ಹೇಳುವ ಶ್ರುತಿವಾಕ್ಯಗಳು ವ್ಯರ್ಥಗಳಾಗಿ ಹೋಗುತ್ತವೆ. ವೇದವಿರುದ್ಧವಾದ ಈ ಅಂಶವೊಂದನ್ನು ಬಿಟ್ಟು ಯೋಗಶಾಸ್ತ್ರದಲ್ಲಿ ಹೇಳಿದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಗಳೆಲ್ಲವೂ ವೇದಕ್ಕೆ ಅತ್ಯಂತ ಅನುಕೂಲಗಳಾಗಿಯೇ ಇರುತ್ತವೆ. ಇದರಂತೆ ನ್ಯಾಯ ವೈಶೇಷಿಕಮತ ಪ್ರವರ್ತಕರೂ ಸಹ ವೇದೋಕ್ತವಾದ ಈಶ್ವರನನ್ನು ಜಗತ್ಕಾರಣನೆಂದು ಹೇಳದೆ, ಪರಮಾಣುವೇ ಜಗತ್ಕಾರಣವೆಂದು ಹೇಳುತ್ತಾರೆ. ಮತ್ತು ಈಶ್ವರನನ್ನು ನಿಮಿತ್ತಕಾರಣನನ್ನಾಗಿ ಅಂಗೀಕಾರಮಾಡುವುದಲ್ಲದೆ, ಆಪ್ತವಾಕ್ಯದಿಂದ ಈಶ್ವರಸಿದ್ಧಿಯನ್ನು ಮಾಡದೆ ಅನುಮಾನದಿಂದ ಈಶ್ವರಸಿದ್ಧಿಯನ್ನು ಮಾಡುತ್ತಾರೆ. ಇಂಥ ಅಂಶಗಳ ಹೊರತು ಸಾಮಾನ್ಯವಾಗಿ ಮಿಕ್ಕ ಅಂಶಗಳೆಲ್ಲವೂ ವೇದಾನುಕೂಲಗಳಾಗಿಯೇ ಇರುತ್ತವೆ.

ಹೀಗೆ ವೇದದಲ್ಲಿ ಕೆಲವು ಮುಖ್ಯಾಂಶಗಳಿಗೆ ವಿರೋಧವಾಗಿರುವದರಿಂದ ಸಾಂಖ್ಯ, ಯೋಗ, ವೈಶೇಷಿಕಾದಿ ಮತಗಳು ಅವೈದಿಕಗಳೆಂದು ಪೂರ್ವಾಚಾರ್ಯರು ನಿರಾಕರಿಸಿರುವುದರಿಂದ ಆ ಮತಗಳಲ್ಲಿ ಅಮೃತೋಪಮಾನವಾದ ಅನಂತವಿಷಯಗಳಿದ್ದರೂ ವಿಷಸಮ್ಮಿಶ್ರವಾದ ಅನ್ನದಂತೆ ವೈದಿಕ[illegible] ಸರ್ವಥಾ ತ್ಯಾಜ್ಯಗಳೇ ಆಗಿರುತ್ತವೆ. ಇನ್ನು [illegible] ಮತಗಳು ಈಶ್ವರನೇ ಜಗತ್ಕರ್ತೃವೆಂದು ಹೇಳಿದಂತೆ ವೇದದ ಏಕದೇಶದಲ್ಲಿಯೇ ಪ್ರಾಮಾಣ್ಯವನ್ನು ಒಪ್ಪಿ ಏಕದೇಶದಲ್ಲಿ ಒಪ್ಪದಿರುವುದರಿಂದ ಅವುಗಳೂ ಸಹ ವೇದೈಕದೇಶೀಯಮತಗಳೆನಿಸುತ್ತವೆ. "ದ್ವಾಸುಪರ್ಣಾಸಯುಜಾ" ಎಂಬೀ ಮಂತ್ರವು ದೇಹವೆಂಬ ವೃಕ್ಷವನ್ನು ಪರಮಾತ್ಮ ಜೀವಾತ್ಮರೆಂಬ ಎರಡು ಪಕ್ಷಿಗಳು ಆಶ್ರಯಮಾಡಿಕೊಂಡಿರುವವೆಂದೂ, ಅವುಗಳಲ್ಲಿ ಜೀವನೆಂಬ ಪಕ್ಷಿಯು ಕರ್ಮಾನುಗುಣವಾದ ಸುಖದುಃಖವೆಂಬ ಬೀಜವನ್ನು ತಿನ್ನುತ್ತದೆಂದೂ, ಪರಮಾತ್ಮನೆಂಬ ಪಕ್ಷಿಯು ಸುಖದುಃಖಗಳನ್ನೊಂದನ್ನೂ ಅನುಭವಿಸದೆ ಎಲ್ಲ ಕಡೆಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತದೆಂದೂ, ಜೀವಾತ್ಮನಿಗಿಂತ ಪರಮಾತ್ಮನು ಅತ್ಯಂತ ಭಿನ್ನಸ್ವರೂಪನೆಂದೂ ಬೋಧಿಸುತ್ತದೆ. "ತತ್ತ್ವಮಸಿ, ಅಹಂಬ್ರಹ್ಮಾಸ್ಮಿ, ಅಯಮಾತ್ಮಾಬ್ರಹ್ಮ" ಇತ್ಯಾದ್ಯನಂತಶ್ರುತಿಗಳು ಪರಮಾತ್ಮನು ಜೀವನಿಗಿಂತ ಭಿನ್ನನಲ್ಲನೆಂದೂ, ಜೀವನು ಪರಮಾತ್ಮನಿಗೆ ಅಭಿನ್ನನೆಂದೂ ಬೋಧಿಸುತ್ತವೆ. ಇನ್ನು ಕೆಲವು ಮಂತ್ರಗಳು ಪರಮಾತ್ಮನು ನಿರ್ಗುಣಸ್ವರೂಪನೆಂದೂ, ಕೆಲವು ಮಂತ್ರಗಳು ಅನಂತಕಲ್ಯಾಣಗುಣಸ್ವರೂಪನೆಂದೂ ಬೋಧಿಸುತ್ತವೆ. ಅವುಗಳಲ್ಲಿ ಭೇದಬೋಧಕವಾಕ್ಯಗಳು ಮಾತ್ರದ್ವೈತಸಿದ್ಧಾಂತಕ್ಕೆ ಅನುಕೂಲಗಳಾಗಿವೆಯೇ ಹೊರತು ಅದ್ವೈತಸಿದ್ಧಾಂತಕ್ಕೆ ಅನುಕೂಲಗಳಾಗಿಲ್ಲವು. "ಅಹಂಬ್ರಹ್ಮಾಸ್ಮಿ" ಮೊದಲಾದ ವಾಕ್ಯಗಳು ಅದ್ವೈತಮತವನ್ನು ಸಹಕರಿಸುತ್ತವೆಯೇ ಹೊರತು ದ್ವೈತಮತವನ್ನು ಸಹಕರಿಸುವುದಿಲ್ಲವು. ವೈದಿಕಮತಗಳೆಲ್ಲಕ್ಕೂ ಪರಮಪ್ರಮಾಣಗಳೆಂದು ಅಂಗೀಕೃತಗಳಾಗಿರುವ ವೇದಗಳಲ್ಲಿಯೇ ಕೆಲವು ಭಾಗವು ಪ್ರಮಾಣವೆಂದೂ ಕೆಲವು ಭಾಗವು ಅಪ್ರಮಾಣವೆಂದೂ ಹೇಳುವುದಾದರೆ ಅಂಥ ಪವಿತ್ರವಾದ ಶ್ರುತಿದೇವಿಯಲ್ಲಿ ಸಂಕೋಚವನ್ನು ಕಲ್ಪಿಸಿದಂತಾಗುತ್ತದೆ. ಹೀಗೆ ವೇದದ ಏಕದೇಶದಲ್ಲಿ ಪ್ರಾಮಾಣ್ಯವನ್ನೂ ಏಕದೇಶದಲ್ಲಿ ಅಪ್ರಾಮಾಣ್ಯವನ್ನೂ ಹೇಳುವುದರಿಂದ ವೇದದಲ್ಲಿರುವ ಶಬ್ದಶಕ್ತಿಯು ಸಹ ಕುಂಠಿತವಾಗುತ್ತದೆ. ಆದ್ದರಿಂದ ಶ್ರೀ ರೇಣುಕಾದಿಭಗವತ್ಪಾದರು ಭೇದಾಭೇದರೂಪವಾದ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿ ಶ್ರುತಿಪ್ರತಿಪಾದಿತಗಳಾದ ದ್ವೈತಾದ್ವೈತವಾಕ್ಯಗಳಿಗೂ ಸಗುಣ ನಿರ್ಗುಣವಾಕ್ಯಗಳಿಗೂ ವಿರೋಧಪರಿಹಾರವನ್ನು ಮಾಡಿ ಅಕ್ಕತಂಗಿಯರಂತಿರುವ ಎಲ್ಲ ಶ್ರುತಿವಾಕ್ಯಗಳಿಗೂ ಪರಸ್ಪರ ಸ್ನೇಹಾಭಿವೃದ್ಧಿಯನ್ನು ಬೆಳೆಯಿಸಿ ಪರಮಾತ್ಮನೆಂಬ ಪತಿಯಲ್ಲಿ ಅನುರಾಗವನ್ನು ಹುಟ್ಟಿಸಿರುತ್ತಾರೆ. ಈ ರೀತಿಯಾಗಿ ಜಗನ್ಮಾನ್ಯವಾಗಿರುವ ಈ ಸಿದ್ಧಾಂತದ ಸ್ವರೂಪವನ್ನು ಸಕಲರೂ ತಿಳಿದುಕೊಂಡು ಪರಶಿವನ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಸೆರೆಮನೆಯಲ್ಲಿ ದಬ್ಬಾಳಿಕೆಯ ಪ್ರತಿಧ್ವನಿ.
ಪತ್ರಿಕಾಪ್ರತಿನಿಧಿಗಳು ಪಂಡಿತರನ್ನು ಕಂಡರು.

ತಾ|| 19-6-30.

ಪಂಡಿತರನ್ನು ಕಾಣಲಿಕ್ಕೆಬಂದ ಪತ್ರಿಕಾಪ್ರತಿನಿಧಿಗಳ ಮುಂದೆ ಪಂಡಿತರು ಅಂದದ್ದೇನಂದರೆ:—ಕಾಂಗ್ರೆಸ್ಸದ ಕೂಗಿಗೆ ರಾಷ್ಟ್ರವು ಕೊಟ್ಟ ಪ್ರತ್ಯುತ್ತರವನ್ನು ಕೇಳಿ ನನಗೆ ಆನಂದವಾಗುತ್ತದೆ. ನಾನು ಮುಂದಾವ ಬಗೆಯ ದಾರಿಯನ್ನು ಹಿಡಿಯಬಹುದೆಂಬುದರ ವಿಷಯವಾಗಿ ನೀವು ನನ್ನನ್ನು ಕೇಳುತ್ತೀರಿ. ನನ್ನ ಧೋರಣದ ವಿಷಯವಾಗಿ ಪತ್ರಿಕಾಪ್ರತಿನಿಧಿಗಳ ಮುಂದಾಗಲಿ ನನ್ನ ಮಿತ್ರಮಂಡಳಿಯ ಮುಂದಾಗಲಿ ನಾನು ಏನನ್ನೂ ಹೇಳುವದಿಲ್ಲ. ವಿಶಿಷ್ಟ ಕಾರ್ಯಭಾಗದಲ್ಲಿ ನಿಮ್ಮ ಧೋರಣೆಯೇನುಂಟೆಂದು ಪ್ರಾಯಿಮ್ ಮಿನಿಸ್ಟರನನ್ನು ಕೇಳಿದರೆ ಅವನೇನು ಹೇಳಬೇಕು? ಪಾರ್ಲಮೆಂಟಿನ ಮೆಂಬರರ ಮತಾನುಮತಗಳ ವಿಷಯವಾಗಿ ವಿಚಾರಿಸಬಹುದು. ಆದರೆ ತನ್ನ ಧೋರಣೆಯ ವಿಷಯವಾಗಿ ತಾನೇ ಹೊಣೆಗಾರನಾದ ಮನುಷ್ಯನು ತನ್ನ ಧೋರಣೆಯನ್ನೆಂದೂ ಹೊರಗೆಡವಲಾರನು. ಕಾಂಗ್ರೆಸ್ಸಿನ ಕಾರ್ಯಕರ್ತರು ಸಾಯಮನ್ ಸಮಿತಿಯ ವರದಿಯನ್ನು ಗಣನೆಗೆ ತರುವದಿಲ್ಲ. ವರ್ಕಿಂಗ ಕಮಿಟಿಯು ಮುಂದಿನ ವಾರದಲ್ಲಿ ಕೂಡುವದು. ನನಗೆ ದುಂಡು ಮೇಜಿನ ಪರಿಷತ್ತಿಗೆ ಬರಬೇಕೆಂದು ಆಮಂತ್ರಣವು ಬಂದಿರುವದಿಲ್ಲ; ಅಲ್ಲದೆ ಈಗಿನ ಪರಿಸ್ಥಿತಿಯಲ್ಲಿ ಅಂಥ ಆಮಂತ್ರಣವನ್ನು ನಾನು ಸ್ವೀಕರಿಸುವದೂ ಇಲ್ಲ. ನನಗೆ ಒಂದು ವೇಳೆ ಆಮಂತ್ರಣವೇ ಬರುವದಿದ್ದರೆ, ಕೆರವು ಬಿದ್ದಿರುವ ಬಾದಶಹರ ಅನೇಕ ಸೆರೆಮನೆಗಳಲ್ಲೊಂದಕ್ಕೆ ಬರಬೇಕೆಂಬರ್ಥದ ಆಮಂತ್ರಣವು ಬರಬಹುದು.

ತೂಕವು ಕಡಿಮೆಯಾಗಿದೆ.

ಪಂ|| ಜವಾಹಿರಲಾಲರ ವಿಷಯವಾಗಿ ಪ|| ಮೋತೀಲಾಲರು ನುಡಿದದ್ದೇನಂದರೆ :—'ಅ' ವರ್ಗದ ಕೈದಿಗಳಂತೆ ಸೆರೆಮನೆಯಲ್ಲಿರುವ ಜವಾಹೀರನ ತೂಕವು ಕಡಿಮೆಯಾಗಿದೆ. ತನ್ನ ಸ್ವದೇಶಬಾಂಧವರ ಮೇಲೆ ಸರಕಾರವು ನಡೆಯಿಸಿರುವ ದಬ್ಬಾಳಿಕೆ 'ಲಾಠೀ ರಾಜ' ಮುಂತಾದುವುಗಳ ನಿಷೇಧಾರ್ಥವಾಗಿ ತನಗೆ ಕೊಡಲ್ಪಟ್ಟಿರುವ ಪ್ರತ್ಯೇಕ ಸೌಕರ್ಯಗಳನ್ನು ಜವಾಹೀರನು ನಿರಾಕರಿಸಿರುವನು.

ಜವಾಹೀರನು ಮನೆಯಿಂದ ಏನನ್ನೂ ತರಿಸಿಕೊಳ್ಳುವದಿಲ್ಲ. ಕೆಲವು ದಿವಸಗಳವರೆಗೆ ನಾವು ಅವನಿಗೆ ಹಣ್ಣುಗಳನ್ನು ಕಳುಹಿಸುತ್ತಿದ್ದೆವು. ಆದರೆ ತನ್ನ ಸ್ವದೇಶಬಾಂಧವರನ್ನು ಹೇಗೆ ನಡೆಯಿಸಿಕೊಳ್ಳುತ್ತಿರುವರೆಂಬುದು ಅವನಿಗೆ ತಿಳಿದುಬಂದೊಡನೆಯೇ ಫಲಗಳನ್ನು ಕೂಡ ಕಳಿಸಬೇಡಿರೆಂದು ಹೇಳಿರುವನು. ಅವನಿಗೆ ಅಂಗ್ಲೋ ಇಂಡಿಯನ್ (ಸರಕಾರೀಪಕ್ಷದ) ವೃತ್ತಪತ್ರಗಳನ್ನೂ ಸಹ ಕೊಡುವದಿಲ್ಲ. ಹಿಂದೀಭಾಷೆಯ ವಾರಪತ್ರವೊಂದನ್ನು ಮಾತ್ರ ಕೊಡುವರು. ಇದರಲ್ಲಿ ಸುದ್ದಿಗಳೇನೂ ಇರುವದಿಲ್ಲ. ಅವನಿಗೆ ಕೆಲವು ಪುಸ್ತಕಗಳನ್ನು ಕೊಟ್ಟಿರುವರಲ್ಲದೆ ಸ್ವಂತ ವಸ್ತ್ರಗಳನ್ನು ಧರಿಸಲು ಅನುಮತಿಯನ್ನು ಕೊಟ್ಟಿರುವರು. ಅವನ ತಾಯಿಗೂ ನನಗೂ ಹಾಗೂ ಅವನ ಹೆಂಡತಿಗೂ ತಿಂಗಳಲ್ಲಿ ಎರಡೇ ಸಾರೆ ಅವನನ್ನು ಕಂಡುಬರಲು ಪರವಾನಿಗೆಯುಂಟು.

ಹಿಂದೂ ನಿವಾಸಿಗಳೇ! ಲೋಕವಿಖ್ಯಾತನಾದ ನಿಮ್ಮ ತರುಣ ರಾಷ್ಟ್ರವೀರನು ನಿಮಗಾಗಿ ಈಪರಿ ಕಾರಾಗೃಹದಲ್ಲಿ ಕೊಳೆಯುತ್ತಿರಲು ನೀವು ನೀಚಸ್ವಾರ್ಥಕ್ಕಾಗಿ ಬಡಿದಾಡಿದರೆ ಜಗತ್ತಿನ ಜನರು ನಿಮಗೆ ಏನನ್ನಬಹುದು? ನಿಮ್ಮ ಸಂತತಿಯು ಯಾವ ಮೋರೆಯಿಂದ ನಿಮ್ಮ ಹೆಸರನ್ನೆತ್ತಬಹುದು.

ರವಿವಾರ.

ತಾ|| 20-6-30.

ಕಾಂಗ್ರೆಸ್ಸ ಮುಸ್ಲೀಮ ಪಕ್ಷದವರು ಜಮೆಯುತ ಉಲ್ ಉಲೇಮಾದ ಆಜ್ಞೆಯ ಮೇರೆಗೆ ಪೆಶಾವರದ ದಿನವನ್ನಾಚರಿಸಿ ಇಂದು ಮುಂಬಯಿಯಲ್ಲಿ ಒಂದು ಪ್ರಚಂಡಸಭೆಯನ್ನು ಏರ್ಪಡಿಸಿದ್ದರು. ಈ ಸಭೆಗೆ ಸಾವಿರಾರು ಹಿಂದೂ ಮುಸಲ್ಮಾನಪ್ರಮುಖರು ಬಂದಿದ್ದರು. ಸ್ತ್ರೀಯರಾದರೂ ವಿಶೇಷವಾಗಿ ಕೂಡಿದ್ದರು. ಮಿ|| ಹಾಜಿನೂರಮಹಮ್ಮದರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇವರು ಪಂಡಿತರಿಗೆ ತನ್ನ ಪಕ್ಷದ ಪರವಾಗಿ ಸ್ವಾಗತವನ್ನು ಮಾಡಿ ಆಮೇಲೆ ನುಡಿದದ್ದೇನಂದರೆ :—ಖಿಲಾಫತ್ ಡೇಲೀಪತ್ರವು ರಾವುಂಡಟೇಬಲ್ ಪರಿಷತ್ತಿನಲ್ಲಿ ನೆಹರೂವರದಿಯ ವಿವೇಚನೆಯಾಗುವದೆಂಬ ಮಾತಿನ ಅರ್ಥವನ್ನು ವಿಪರೀತವಾಗಿ ಕಲ್ಪಿಸಿ ಮಹಮ್ಮದೀಯರ ಮನಸಿನಲ್ಲಿ ವಿಕಲ್ಪವನ್ನುಂಟುಮಾಡಿರುವದು. ಆದ್ದರಿಂದ ಪಂಡಿತರು ಈ ತಪ್ಪುತಿಳುವಳಿಕೆಯನ್ನು ದೂರಮಾಡಬೇಕೆಂದು ಪಂಡಿತರನ್ನು ಪ್ರಾರ್ಥಿಸಿದರು. ಆಮೇಲೆ ಪಂಡಿತರು ನುಡಿದದ್ದೇನಂದರೆ:—

ಲಾಹೋರ ಕಾಂಗ್ರೆಸ್ಸಿನಲ್ಲಿಯೂ ಹಾಗೂ ವರ್ಕಿಂಗ ಕಮಿಟಿಯಲ್ಲಿಯೂ ನೆಹರೂವರದಿಯನ್ನು ರದ್ದುಮಾಡಿ ಹಿಂದುಸ್ಥಾನದೊಳಗಿನ ಸರ್ವಮತಾನುಯಾಯಿಗಳಿಗೆ ಸಮ್ಮತವಾಗದ ಯಾವ ರಾಜ್ಯಪದ್ಧತಿಯನ್ನೂ ಕಾಂಗ್ರೆಸ್ಸು ಮನ್ನಿಸಲಾರದೆಂದು ನಿರ್ಧರಿಸಲ್ಪಟ್ಟಿರುವ ಗೊತ್ತುವಳಿಯನ್ನು ನಿಮ್ಮ ಮುಂದೆ ಮತ್ತೊಮ್ಮೆ ಉಚ್ಚರಿಸಿ ಈ ಗೊತ್ತುವಳಿಯ ಒಂದು ಶಬ್ದವೂ ಕೂಡ ಉಲ್ಲಂಘಿಸಲ್ಪಡಲಾರದೆಂದು ನಾನು ವೈಯಕ್ತಿಕವಾಗಿಯೂ ಹಾಗೂ ರಾಷ್ಟ್ರೀಯಸಭೆಯ ಅಧ್ಯಕ್ಷಸ್ಥಾನದಿಂದಲೂ ಸಾರಿ ಹೇಳುತ್ತೇನೆ. ಇನ್ನು ಮೇಲಾದರೂ ನನ್ನ ಮಹಮ್ಮದೀಯ ಬಂಧುಗಳು ರಾಷ್ಟ್ರೀಯಸಭೆಯು ತಮಗೆ ಮೋಸಮಾಡೀತೆಂಬ ತಪ್ಪುತಿಳುವಳಿಕೆಯನ್ನು ಬಿಟ್ಟುಕೊಡಬೇಕೆಂದು ಬಿನ್ನವಿಸುತ್ತೇನೆ.

ಪಂಡಿತರ ಈ ಆಶ್ವಾಸನವನ್ನು ಕೇಳಿ ಸಭೆಯಲ್ಲಿ ನೆರೆದ ಮುಸಲ್ಮಾನರು 'ಅಲ್ಲಾ ಹೋ ಅಕಬರ' ಎಂದು ಘನಗಂಭೀರವಾದ ಸ್ವರದಿಂದ ಘೋಷಿಸಿದರು. ಆ ಮೇಲೆ ಮೋತೀಲಾಲರು ಸರಹದ್ದಿನ ಪ್ರಾಂತಗಳಲ್ಲಿ ತಾವು ಕಣ್ಣುಟ್ಟ ಕಂಡ ಕೆಲವು ಸಂಗತಿಗಳನ್ನು ವರ್ಣಿಸಿದರು. ಮೋತೀಲಾಲರ ಗೆಳೆಯರೆನಿಸುವ ಹಾಗೂ ಈಗ ಸೆರೆಮನೆಯಲ್ಲಿರುವ ಅಬ್ದುಲ್ ಗಫೂರ್ ಖಾನರವರು ಪೆಶಾವರದಲ್ಲಿ ಪಠಾಣರನ್ನು ಯಾವ ಬಗೆಯಿಂದ ತಯಾರಿಸಿರುವರೆಂಬುದನ್ನು ತಿಳುಹಿಸಿದರು. ಖಾನರನ್ನು ಸರಕಾರದವರು ಹಿಡಿದಾಗ್ಗೆ 50 ಸಾವಿರ ಜನ ಪಠಾಣರು ಪೋಲೀಸರನ್ನು ಸುತ್ತುಗಟ್ಟಿದ್ದರಂತೆ! ಆದರೆ ಅವರ ನಾಯಕರಾದ ಗಫೂರಖಾನರು ಆಜ್ಞೆಯನ್ನಿತ್ತ ಮೇರೆಗೆ ಚಕಾರಶಬ್ದವನ್ನುಚ್ಚರಿಸದೆ, ಪೋಲೀಸರಮೇಲೆ ಬೀಳದೆ ಹಿಂತಿರುಗಿದರಂತೆ! ಈ ಅಗಾಧಕೃತಿಗಳೆಲ್ಲ ಮಹಾತ್ಮರ ಅಹಿಂಸಾತತ್ವೋಪದೇಶದ ಫಲವೆಂದು ನುಡಿದರು. ಮಹಾತ್ಮರ ಉಪದೇಶದ ಪರಿಣಾಮವು ಪಠಾಣರ ಮೇಲೆ ಈ ಪ್ರಮಾಣದಿಂದ ಆದೀತೆಂದು ಸ್ವತಃ ಮಹಾತ್ಮರಾದರೂ ಯೋಚಿಸಿರಲಿಲ್ಲ.

ಸರಹದ್ದಿನ ಪ್ರಾಂತಗಳಿಗೆ ಹೋದಾಗ ಪಂಡಿತರ ಅನುಭವಕ್ಕೆ ಬಂದ ಮತ್ತೊಂದುಸಂಗತಿಯನ್ನು ವಿವರಿಸಿದರು. ನಾನು ಆ ಪ್ರಾಂತದ ಒಂದು ಹಳ್ಳಿಗೆ ಹೋದಾಗ ಭವ್ಯಾಕೃತಿಯ ಪಠಾಣನೋರ್ವನು ಬಂದು ನನ್ನ ಹೆಸರನ್ನು ಕೇಳಿದನು. ನಾನು ನನ್ನ ಹೆಸರನ್ನು ಹೇಳಲು ಅವನು ನನ್ನನ್ನು ಜವಾಹೀರಲಾಲನೆಂದು ತಿಳಿದು ಒಡಲಲ್ಲಿ ನಿಲ್ಲದೆ ಹೊರಚಲ್ಲುವ ಉಲ್ಲಾಸದಿಂದ ನನ್ನನ್ನು ಎತ್ತಿದನು. ಆದರೆ ನನ್ನ ವೃದ್ಧಾಪ್ಯವನ್ನು ಚೆನ್ನಾಗಿ ನೋಡಿದ ಮೇಲೆ ಅವನ ತಪ್ಪು ಅವನಿಗೆ ಹೊಳೆಯಿತು.

ಕ. ಟಾ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಬೊಂಬಾಯಿಯಲ್ಲಿ ಮೂರು ತಿಂಗಳ ಕಾಲದ ವರೆಗೆ ಎಲ್ಲ ಕಾರ್ಯಕ್ರಮಗಳನ್ನೂ ನಿಲ್ಲಿಸಿ, ಎಲ್ಲ ಅಂಗಡಿಗಳನ್ನೂ ಮುಚ್ಚಿ ಅಪೂರ್ವವಾಗ ಹರತಾಳವನ್ನು ಆಚರಿಸಬೇಕೆಂದು ಏರ್ಪಾಡಾಗುತ್ತಿರುವುದು. ಈಗಾಗಲೇ ಅನೇಕ ಪರದೇಶೀವಸ್ತ್ರ ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿಬಿಟ್ಟಿರುವರು.

ಪಂಡಿತ ಮದನಮೋಹನಮಾಳವೀಯರವರು ತಮ್ಮ ಪುತ್ರ ಪಂಡಿತ ಗೋವಿಂದಮಾಳವೀಯ, ಮಿ|| ಗೋಸ್ವಾಮಿ ಗಣೇಶದತ್ತರವರು ಮತ್ತು ಸೇವಾಸಮಿತಿಯ ಆರ್ಗನೈಜಿಂಗ್ ಸೆಕ್ರೆಟರಿಗಳಾದ ಮಿ|| ಎಸ್. ಆರ್. ಭಾರತೀಯರೊಡನೆ ಪಂಜಾಬಿನ ಪ್ರವಾಸವನ್ನು ಪೂರೈಸಿ ಕಳೆದ 24 ನೆಯ ತಾರೀಖಿನ ದಿವಸ ದೆಹಲಿಗೆ ಬಂದರು. ಪಂಡಿತರು ಪಂಜಾಬಿನಲ್ಲಿ 5 ವಾರಗಳವರೆಗಿದ್ದು 31 ದೊಡ್ಡ ಸಭೆಗಳಲ್ಲಿ ಭಾಷಣ ಮಾಡಿರುವರು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರೈಲಿನಲ್ಲಿ ಪ್ರಯಾಣ ಮಾಡುವಾಗ, ಮಧ್ಯಮಾರ್ಗದಲ್ಲಿ ಸಿಕ್ಕುವ ಸ್ಟೇಷನ್ನುಗಳಲ್ಲಿ ಕೂಡಿದ್ದ 40 ಸಭೆಗಳಲ್ಲಿ ಮಾತನಾಡಿದರು. ಸುಮಾರು 5,00,000 ಜನರೊಂದಿಗೆ ಸಂಭಾಷಣೆ ಮಾಡಿರುವರು. ಮೇಲ್ಕಂಡ ಸಭೆಗಳಿಗೆ ಅನೇಕ ಸ್ತ್ರೀಯರು ಬಂದಿದ್ದರಲ್ಲದೆ, ಕೆಲವು ಸಭೆಗಳು ಕೇವಲ ಸ್ತ್ರೀಯರುಗಳಿಗಾಗಿಯೇ ಏರ್ಪಡಿಸಿದುವುಗಳಾಗಿದ್ದುವು. ಒಟ್ಟು 75,000 ಜನ ಸ್ತ್ರೀಯರು ಪಂಡಿತರ ಭಾಷಣಗಳನ್ನು ಕೇಳಿರುವರು. ತರುಣ ಮಾಳವೀಯರವರು ಹಾಗೂ ಗೋಸ್ವಾಮಿ ಗಣೇಶದತ್ತರವರು ಅನೇಕ ಸಭೆಗಳಲ್ಲಿ ಭಾಷಣಮಾಡಿರುವರಲ್ಲದೆ ಅವರ ಉಪನ್ಯಾಸಕ್ಕಾಗಿಯೇ ಕೆಲವು ಸಭೆಗಳು ಏರ್ಪಡಿಸಲ್ಪಟ್ಟಿದ್ದುವು. ಪಂಡಿತ ಗೋವಿಂದ ಮಾಳವೀಯವರು, ಪ್ರಸಿದ್ಧ ಹೊಂದಿದ ತಮ್ಮ ತಂದೆಯಂತೆ ದೊಡ್ಡ ದೊಡ್ಡ ಸಭೆಗಳಲ್ಲಿ ಅತ್ಯುತ್ಸಾಹಕರವಾದ ಭಾಷಣಗಳನ್ನು ಮಾಡಿರುವರು. ಪಂಡಿತ ಮಾಳವೀಯರವರು ಇದುವರೆಗೆ ಭರತಖಂಡದ ಅನೇಕ ಭಾಗಗಳಲ್ಲಿ ಸಂಚರಿಸಿರುವರು. ಇವರ ಭಾಷಣಗಳ ಪ್ರಭಾವದಿಂದ ಪರದೇಶೀವಸ್ತ್ರಬಹಿಷ್ಕಾರ ಚಳವಳಿಯು ಅತ್ಯುಗ್ರಸ್ವರೂಪವನ್ನು ತಾಳುತ್ತ ಬಂದಿರುವದು.

ಮಂಗಳೂರಿನ ಆನರೆರಿ ಮ್ಯಾಜಿಸ್ಟ್ರೇಟರಾದ ಮ|| ರಾ|| ಎಸ್. ಇ. ವರ್ಮಾರವರು ಸರ್ಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಕಳೆದ 21 ನೆಯ ತಾರೀಖಿನ ದಿವಸ ಬೊಂಬಾಯಿಯಲ್ಲಿ ಸಭೆಸೇರಿದ್ದ ಸ್ವಯಂಸೇವಕರನ್ನು ಪೋಲೀಸರು ದೊಣ್ಣೆಗಳಿಂದ ಹೊಡೆದು ಚದರಿಸಿದರು. ಸುಮಾರು 250 ಜನಗಳು ಗಾಯಹೊಂದಿರುವರು.

ಪಾಟ್ನಾಕ್ಕೆ ಸೇರಿದ ದಾವುದ್‌ನಗರದಲ್ಲಿ ಮೂರು ಜನ ಸ್ವಯಂಸೇವಕರು ಒಂದು ಮದ್ಯದ ಅಂಗಡಿಯ ಮುಂದೆ ಮದ್ಯಪಾನನಿಷೇಧ ಚಳವಳಿಯನ್ನು ನಡೆಯಿಸುತ್ತಿರುವಲ್ಲಿ, ಪೋಲೀಸರು ಆ ಮೂವರನ್ನೂ ದಸ್ತಗಿರಿ ಮಾಡಿದರು. ಮದ್ಯದ ಅಂಗಡಿಯ ಯಜಮಾನನು ಸರ್ಕಾರದ ವರ್ತನೆಯನ್ನು ಖಂಡಿಸಿ ಸ್ವಯಂಸೇವಕರನ್ನು ಕೂಡಲೇ ಬಿಡುಗಡೆ ಮಾಡದಿದ್ದರೆ ಅಂಗಡಿಯನ್ನು ಸಂಪೂರ್ಣವಾಗಿ ಮುಚ್ಚಿಬಿಡುವುದಾಗಿ ಹೇಳಲು ಪೋಲೀಸರು ಅದರಂತೆ ಆ ಮೂವರನ್ನು ಬಿಟ್ಟುಬಿಟ್ಟರು.

ಜೂನ್ 19 ನೆಯ ತಾರೀಖಿನಿಂದ 27ರ ವರೆಗೆ ಭರತಖಂಡದಲ್ಲಿ ಪರದೇಶೀವಸ್ತ್ರಬಹಿಷ್ಕಾರ, ಮದ್ಯಪಾನನಿಷೇಧವೇ ಮೊದಲಾದ ಚಳವಳಿಗಳಿಂದ ಈ ಕೆಳಗೆ ಕಂಡಂತೆ ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟಿರುವರು.

ಜೂನ್	19	ಕಲ್ಕತ್ತಾ	44	ಜನ
,,	,,	ಗೋಗುಲಪಲ್ಲಿ	5	,,
,,	20	ಮಂಗಳೂರು	25	,,
,,	21	,,	28	,,
,,	,,	ನಾಗಪೂರ	6	,,
,,	,,	ಉಟಕಮಂಡ್	19	,,
,,	,,	ಬೊಂಬಾಯಿ	24	,,
,,	,,	ಕುಂಭಕೋಣಂ	10	,,
,,	,,	ಎಲ್ಲೂರು	22	,,
,,	22	ಕುಂಭಕೋಣಂ	22	,,
,,	,,	ತಿರುಚನಾಪಲ್ಲಿ	6	,,
,,	,,	ತಾಡೆಪಲ್ಲಿಗುಡೆಂ	7	,,
,,	,,	ಕಲ್ಕತ್ತಾ	22	,,
,,	,,	ಪೆಂಡಪಾಡು	17	,,
,,	,,	ಕಲ್ಲಿಕೋಟೆ	5	,,
,,	,,	ಗೊಂಗಿಪುಡಿ	10	,,
,,	23	ತಿರುಚನಾಪಲ್ಲಿ	23	,,
,,	,,	ಎಲ್ಲೂರು	6	,,
,,	,,	ನೆಲ್ಲೂರು (ಸ್ತ್ರೀಯರು)	7	,,
,,	,,	ಮದ್ರಾಸ್	23	,,
,,	,,	ಬೊಂಬಾಯಿ	18	,,
,,	,,	ಗಣಪವರಂ	4	,,
,,	,,	ಬಹಾರಂಪೂರ	9	,,
,,	,,	ಲಕ್ನೋ	7	,,
,,	,,	ತ್ರಿಪಾಡಿ	7	,,
,,	,,	ಗುಂಟೂರು	3	,,
,,	,,	ಪೆದಪುಲಿಪಾರು	5	,,
,,	24	ತೆನಾಲಿ	4	,,
,,	,,	ಎಲ್ಲೂರು	8	,,
,,	,,	ನೆಲ್ಲೂರು (ಸ್ತ್ರೀಯರು)	4	,,
,,	,,	ಭೀಮವರಂ	4	,,
,,	,,	ಪಾಟ್ನಾ ಒಬ್ಬಸ್ತ್ರೀ ಮತ್ತು	7	,,
,,	,,	ಬಹಾರಂಪೂರ	5	,,
,,	,,	ಮಂಗಳೂರು	25	,,
,,	25	ಕಲ್ಕತ್ತಾ ಶ್ರೀ|| ದೇಶಭಕ್ತ ಸಿ. ಆರ್. ದಾಸ್ ರವರ ಸಹೋದರಿ ಮತ್ತು ಇಬ್ಬರು ಸ್ತ್ರೀಯರು.		
,,	,,	ಅಲಹಾಬಾದ	3	,,
,,	,,	ಅಹಮದಾಬಾದ(ವಿದ್ಯಾರ್ಥಿ)	2	,,
,,	,,	ಕಪುಕರಂ	4	,,
,,	,,	ತಿರುಚನಾಪಲ್ಲಿ	75	,,
,,	,,	ಬನಾರಿಸ್	3	,,
,,	,,	ಅಮೃತಸರ	4	,,
,,	,,	ನೆಲ್ಲೂರು	7	,,
,,	,,	ತಾಡೆಪಲ್ಲಿಗುಡೆಂ	5	,,
,,	26	ಅಹಮದಾಬಾದ(ವಿದ್ಯಾರ್ಥಿ)	30	,,
,,	,,	ಲಾಹೋರ್	30	,,
,,	,,	ಕೊಟ್ಟಾಯಂ	13	,,
,,	,,	ಬೊಂಬಾಯಿ	8	,,
,,	,,	ಬನಾರಿಸ್	17	,,
,,	,,	ತಿರುಚನಾಪಲ್ಲಿ	2	,,
,,	27	ಅಹಮದಾಬಾದ್	3	,,
,,	,,	ತೆನಾಲಿ	23	,,
,,	,,	ಬೊಂಬಾಯಿ	7	,,
,,	,,	ಮಧುರೆ	4	,,
,,	28	ಕೊಯಮುತ್ತೂರು	8	,,
		ಒಟ್ಟು	634	

ಇಷ್ಟೇ ಅಲ್ಲದೆ ಇನ್ನೂ ಅನೇಕ ಮುಖಂಡರುಗಳೂ ಮತ್ತು ಸ್ವಯಂಸೇವಕರು ದಸ್ತಗಿರಿಮಾಡಲ್ಪಟ್ಟಿರುವರು.

ತಂಜಾವೂರಿನ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾದ ಶ್ರೀ|| ಇ. ಪದ್ಮಗಿರೀಶ ಅಯ್ಯರವರು ತ್ರಿವಾಡಿಯಲ್ಲಿ, ಪೋಲೀಸರಿಂದ ದಸ್ತಗಿರಿಮಾಡಲ್ಪಟ್ಟಿದ್ದ ಡಾ|| ಟಿ. ಎ. ಅಮುದಯ್ಯಂಗಾರ್ಯರ ಮತ್ತು ಇತರ 4 ಜನ ಸ್ವಯಂ ಸೇವಕರ ವಿಚಾರಣೆಯನ್ನು ನಡೆಯಿಸಿದರು. ಮ್ಯಾಜಿಸ್ಟ್ರೇಟರ ಪ್ರಶ್ನೆಗಳಿಗೆ ಉತ್ತರವಾಗಿ, 4 ಜನ ಸ್ವಯಂಸೇವಕರು ತಮ್ಮ ಹೆಸರು "ವಂದೇ ಮಾತರಂ" ಎಂದೂ, ತಮ್ಮ ತಂದೆಯ ಹೆಸರು ಮಹಾತ್ಮಾ ಗಾಂಧಿಯೆಂದೂ, ವಾಸಸ್ಥಾನವು ಭರತಮಾತೆಯೆಂದೂ, ಉದ್ಯೋಗವು ಸತ್ಯವೆಂದೂ ಉತ್ತರವನ್ನು ಕೊಟ್ಟರು. ಮ್ಯಾಜಿಸ್ಟ್ರೇಟರು ಡಾ|| ಅಮುದಯ್ಯಂಗಾರ್ಯರಿಗೆ ಒಂದು ವರ್ಷ ಕಠಿಣ ಸಜೆಯನ್ನೂ ಇಬ್ಬರು ಸ್ವಯಂಸೇವಕರಿಗೆ 6 ತಿಂಗಳ ಕಠಿಣ ಸಜೆಯನ್ನೂ ಇನ್ನಿಬ್ಬರಿಗೆ 2 ವರ್ಷ ಸಜೆಯನ್ನೂ ವಿಧಿಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಕೀರ್ತನ.

ಅನೇಕ ರಾಜಾಧಿರಾಜರಿಂದ ಅಸಾಧಾರಣವಾದ ಗೌರವವನ್ನು ಪಡೆದು ಜಗದ್ವಿಖ್ಯಾತಳಾಗಿರುವ 12 ವರ್ಷದ ಯದುಗಿರಿಕುಮಾರಿಯೆಂಬ ಶ್ರೀವೈಷ್ಣವ ಬ್ರಾಹ್ಮಣ ಬಾಲಿಕೆಯು ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರ ಅಪ್ಪಣೆಯಮೇರೆಗೆ ನಿನ್ನೆಯ ದಿವಸ ರಾಜಧಾನಿಯ ಚಮನಪುರದ ಬೀದಿಯಲ್ಲಿರುವ ಶ್ರೀ ಕಪಿಲಮಲ್ಲಿಕಾರ್ಜುನಸ್ವಾಮಿ ಮಠದಲ್ಲಿ ಮೇಲ್ಕಂಡ ಜಗದಾಚಾರ್ಯರ ಕೀರ್ತನವನ್ನು "ನಭೂತೋ ನಭವಿಷ್ಯತಿ" ಎಂಬಂತೆ ಮಾಡಿದಳು. ಜಗದಾಚಾರ್ಯರ ಕೆಲವು ಲೀಲೆಗಳನ್ನು ಬಹು ಹೃದಯಂಗಮವಾಗಿ ವರ್ಣಿಸಿದಳು. ಈಕೆಯ ಕೀರ್ತನಸರಣಿಯನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಪ್ರಪಂಚದಲ್ಲಿರುವ ಸಕಲ ಕೀರ್ತನಕಾರರು ಈ ಬಾಲಿಕೆಯಿಂದ ಅನೇಕ ಗುಣಗಳನ್ನು ಕಲಿಯಬೇಕಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ರಾಜಧಾನಿಯ ವೀರಶೈವರು ಮುಂದಿನ ರವಿವಾರ (ತಾ|| 6-7-30) ನೆಯ ದಿವಸ ಈ ಬಾಲಿಕೆಯಿಂದ ಮತ್ತೊಮ್ಮೆ ಜಗದಾಚಾರ್ಯರ ಕೀರ್ತನವನ್ನು ಮಾಡಿಸಿ ವಿಶೇಷವಾದ ಮರ್ಯಾದೆಯನ್ನು ಮಾಡತಕ್ಕವರಿದ್ದಾರೆ. ಇಂಥ ಚಿಕ್ಕವಯಸ್ಸಿನಲ್ಲಿ ಈಕೆಗೆ ಕೀರ್ತನಮಾಡುವ ಅದ್ಭುತಶಕ್ತಿಯು ಪ್ರಾಪ್ತವಾಗಿರುವದು ದೈವೀಕೃಪೆಯೆಂದೇ ಹೇಳಬೇಕಾಗಿದೆ. ಅಸಾಧಾರಣಗುಣಗಣಭೂಷಿತಳಾದ ಈ ಬಾಲಿಕೆಗೆ ಜಗದಾಚಾರ್ಯರು ಪೂರ್ಣಾಯುರಾರೋಗ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಹಾರೈಸುತ್ತೇವೆ.

[3ನೇ ಪುಟದಿಂದ ಮುಂದೆ ಸಾಗಿದುದು.]

ಕೋಪಾಯಗಳನ್ನು ಹುಡುಕುವುದರಲ್ಲಿಯೇ ಆಸಕ್ತರಾಗಿರುವವು. ಪ್ರಪಂಚದಲ್ಲಿ ಶಾಂತಿಸ್ಥಾಪನೆ ಮಾಡಲು, ಎಲ್ಲ ದೊಡ್ಡ ದೊಡ್ಡ ಜನಾಂಗದವರೂ ಏಕಮನಸ್ಸಿನಿಂದ ಕೂಡಿ ಮಾಡುವ ವಿಷಯವನ್ನೇ ಪ್ರಸ್ತಾಪಿಸುತ್ತಿರುವರೇ ಹೊರತು ಈಗಿನ ಅಶಾಂತಿಗೆ ಈ ದೊಡ್ಡ ದೊಡ್ಡ ಜನಾಂಗದವರೇ ಕಾರಣರಾಗಿರುವರೆಂಬುದನ್ನೂ ತಮ್ಮ ವರ್ಣಭೇದದಿಂದ ಪೂರ್ವದೇಶೀಯರನ್ನು ಸಂಪೂರ್ಣವಾಗಿ ಅಲಕ್ಷಿಸುತ್ತಿರುವರೆಂಬುದನ್ನೂ ಮರೆತಿರುವರು. ತಮ್ಮ ದುರಭಿಮಾನ ಮತ್ತು ಸ್ವಪ್ರತಿಷ್ಠೆಗಳಿಂದ ಎಂದಾದರೊಂದು ದಿನ ಪ್ರಪಂಚವೇ ನಾಶವಾಗುವ ಸ್ಥಿತಿಯು ಬರಬಹುದೆಂಬುದನ್ನು ಅವರು ತಿಳಿಯುವದೇ ಇಲ್ಲ.

ಮೇಲೆ ಹೇಳಿದ ವಿದ್ಯಮಾನಗಳು ನನಗೆ ದಿನದಿನಕ್ಕೆ ಚೆನ್ನಾಗಿ ಮನವರಿಕೆಯಾಗುತ್ತಿರುವವು. ಆದರೂ ಇಂಗ್ಲೆಂಡಿನಲ್ಲಿ ಅನೇಕರು ಸದ್ಯದ ವಿಷಮಸ್ಥಿತಿಯ ಪರಿಹಾರಕ್ಕೆ ಏನುಮಾಡಬೇಕೆಂದು ನನ್ನನ್ನು ಅನೇಕಸಾರೆ ಕೇಳಿರುವರು. ಆಂತರಿಕ ಸಂಬಂಧವು ಸಂಪೂರ್ಣವಾಗಿ ಕೆಟ್ಟುಹೋಗಿರುವುದರಿಂದ ಕೇವಲ ಬಾಹ್ಯೋಪಚಾರಗಳಿಂದ ಯಾವ ಪ್ರಯೋಜನವೂ ಆಗುವದಿಲ್ಲವೆಂಬುದೇ ಮೇಲ್ಕಂಡ ಪ್ರಶ್ನೆಗಳಿಗೆ ನನ್ನ ಉತ್ತರವಾಗಿರುವುದು. ಆದುದರಿಂದ ಸರಿಯಾದ ಪರಿಹಾರೋಪಾಯವನ್ನು ಸೂಚಿಸಲು ನನ್ನಿಂದ ಸಾಧ್ಯವಿಲ್ಲ. ಮನಸ್ಸು, ಉದ್ದೇಶ ಮತ್ತು ಹೃದಯಗಳಲ್ಲಿ ಸಂಪೂರ್ಣ ಬದಲಾವಣೆಯನ್ನು ಮಾಡುವದೇ ಸರ್ವೋತ್ತಮವಾದ ಉಪಾಯವೆಂದು ನನಗೆ ತೋರುವುದು. ಸ್ಪಷ್ಟವೂ, ಗೌರವಯುಕ್ತವೂ ಆದ ತೀರ್ಮಾನವು ಬೇಕಾದರೆ ಪೂರ್ವ ಮತ್ತು ಪಶ್ಚಿಮ ದೇಶಗಳ ರಾಜಕಾರಣಪಟುಗಳು ಸಭೆಸೇರಬೇಕು. ಉಭಯ ಪಕ್ಷದವರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ನಿರ್ಬಂಧ, ಅಸೂಯೆ, ಅನುಮಾನ, ಸ್ವಪ್ರತಿಷ್ಠೆ ಮತ್ತು ವರ್ಣಭೇದಗಳಿಲ್ಲದೆ ಧೈರ್ಯದಿಂದ ಪ್ರಕಟಿಗೊಳಿಸಬಹುದಾದ ಸನ್ನಿವೇಶವು ದೊರೆಯುವದಾದರೆ ಆಗ ಸಮಾಧಾನದ ಪ್ರಸ್ತಾಪಗಳನ್ನೆತ್ತಲು ಅವಕಾಶವು ದೊರೆಯುವುದು.

ಈ ಮಧ್ಯೆ ಪೂರ್ವದೇಶದಲ್ಲಿ ಜನ್ಮಧಾರಣಮಾಡಿರುವ ನಾವು ನಮ್ಮ ಮನೋಮಂದಿರಗಳಲ್ಲಿ ಪರೋಪಕ್ಕರ ನಾಗರೀಕತೆಯ ಮಹತ್ವವನ್ನು ಇನ್ನೂ ಗೌರವಿಸುತ್ತಲೇ ಇರುವೆವೆಂಬುದನ್ನು ಪಾಶ್ಚಿಮಾತ್ಯರು ಚೆನ್ನಾಗಿ ತಿಳಿದಿರಲಿ. ನಮ್ಮ ಅಪಮಾನವಾಗುವ ಸಂದರ್ಭಗಳಲ್ಲಿ ನಾವು ಈ ವಿಷಯವನ್ನು ತಿರಸ್ಕರಿಸುವೆವಾದರೂ ನಮ್ಮ ಮನಸ್ಸಿನಲ್ಲಿ (ಬ್ರಿಟಿಷರ ನಾಗರೀಕತೆಯ ಮಹತ್ವವನ್ನು) ನಾವು ಒಪ್ಪಿಕೊಳ್ಳುವೆವು. ಪೂರ್ವದೇಶದ ತರುಣಜನಾಂಗವು ಪಾಶ್ಚಿಮಾತ್ಯರ ಉತ್ತಮವಿಷಯಗಳನ್ನು ಕಲಿಯಲು ಕುತೂಹಲವುಳ್ಳದಾಗಿರುವದು. ರಾಷ್ಟ್ರೀಯಸ್ವಾತಂತ್ರ್ಯಭಿಲಾಷೆಯಿಂದ ಪಾಶ್ಚಿಮಾತ್ಯರ ಸಂಬಂಧವನ್ನು ಕಳೆದುಕೊಳ್ಳಲು ನಾವು ಪ್ರಯತ್ನಿಸುವೆವಾದರೂ ನಿಜವಾಗಿಯೂ ನಾವು ಪಾಶ್ಚಿಮಾತ್ಯರಿಗೆ ಅಸಾಧಾರಣವಾದ ಗೌರವವನ್ನೇ ಕೊಡುತ್ತಿರುವೆವು. ಏಕೆಂದರೆ ಈ ನಮ್ಮ ಸ್ವಾತಂತ್ರ್ಯಸಂಪಾದನೆಯ ಪ್ರಯತ್ನದ ಮೂಲಕವಾಗಿ ನಮ್ಮನ್ನು ನಿದ್ರೆಯಿಂದ ಎಚ್ಚರಗೊಳಿಸಿದ ಪಾಶ್ಚಿಮಾತ್ಯರ ವಿದ್ಯೆಯ ಮಹತ್ವವನ್ನು ಒಪ್ಪಿಕೊಳ್ಳುತ್ತಿರುವೆವು. ಪೂರ್ವದಲ್ಲಿ ನಾವು ಅನುಭವಿಸಿದ ಭಾಷಣಸ್ವಾತಂತ್ರ್ಯವೇ ಮೊದಲಾದವುಗಳಿಂದ ನಮ್ಮ ಧೈರ್ಯವು ಹೆಚ್ಚಿತು. ಆದುದರಿಂದ ಬ್ರಿಟಿಷ್ ದೇಶದವರು ಈಗ ನಮ್ಮಲ್ಲಿ ಉತ್ಪನ್ನವಾಗಿರುವ ಸ್ವಾತಂತ್ರ್ಯಭಿಲಾಷೆಯನ್ನು ಚೆನ್ನಾಗಿ ಫಲಿಸುವಂತೆ ಮಾಡಿ ಸಂತೋಷಿಸಬೇಕಾದುದೇ ಅವರ ಧರ್ಮವಾಗಿರುವದು. ಆಂಗ್ಲೇಯರು ಸದ್ಯಃ ಒದಗಿರುವ ತೊಂದರೆಗಳೊಂದನ್ನೂ ಮನಸ್ಸಿನಲ್ಲಿ ತಾರದೆ ಭರತಖಂಡದ ವಿಷಯದಲ್ಲಿ ವಿಶಾಲ ಮನಸ್ಕರಾಗಿ ನ್ಯಾಯಸಮ್ಮತವಾದ ಮಾರ್ಗದಲ್ಲಿ ವರ್ತಿಸಬೇಕು.

ಏಕೆಂದರೆ, ಈಗ ಪ್ರಾಪ್ತವಾಗಿರುವ ವಿಷಮಸ್ಥಿತಿಯನ್ನು ದಬ್ಬಾಳಿಕೆಯಿಂದಲೂ, ಬಲಪ್ರದರ್ಶನದಿಂದಲೂ ಅಡಗಿಸುವದು ಎಂದಿಗೂ ಸಾಧ್ಯವಿಲ್ಲ. ಕೇವಲ ಪ್ರೀತಿವಿಶ್ವಾಸಗಳಿಂದಲೇ ನಿಜವಾದ ಏಕಮತ್ಯವುಂಟಾಗಬಲ್ಲದು. ಸರಕಾರದವರು ನಿಜವಾದ ವಿದ್ಯಮಾನಗಳನ್ನು ಇಲ್ಲಿಗೆ (ಇಂಗ್ಲೆಂಡಿಗೆ) ತಿಳಿಯದಂತೆ ಮರೆಮಾಜುತ್ತಿರುವರಾದರೂ ಭರತಖಂಡದಿಂದ ಇಲ್ಲಿಗೆ ಬರುವವರಿಂದ ಅಲ್ಪಸ್ವಲ್ಪ ವರ್ತಮಾನಗಳು ತಿಳಿಯುತಲೇ ಇರುವವು. ಸಂಪೂರ್ಣ ಅಹಿಂಸಾತ್ಮಕರಾಗಿ ವರ್ತಿಸುವವರನ್ನು ಸಹ ಅವಮಾನಕರವಾದ ರೀತಿಯಲ್ಲಿ ಶಿಕ್ಷಿಸುವರೆಂದು ಕೇಳುತ್ತಿರುವೆವು. ಎಲ್ಲ ಕಾಯಿದೆಭಂಗಗಳನ್ನೂ ಮೀರಿದ, ಮಾನವರ ಧರ್ಮವನ್ನು ತಾವೇ ಮೀರಿನಡೆಯುತ್ತಿರುವ ಸರಕಾರವು ತಮ್ಮ ದಬ್ಬಾಳಿಕೆಯನ್ನು "ಕಾಯಿದೆಯ ಮರ್ಯಾದೆ ಮತ್ತು ಶಾಂತಿಸ್ಥಾಪನೆ" ಎಂಬ ದೊಡ್ಡ ದೊಡ್ಡ ಹೆಸರುಗಳಿಂದ ಕರೆಯುತ್ತಿರುವರು. ಲಕ್ಷ್ಮಣರೇ ಕಾಯಿದೆಯ ನೆಪದಿಂದ ಸೊಲ್ಲಾಪುರದಲ್ಲಿ ಜನರ ತಲೆಯ ಮೇಲಿನ ಗಾಂಧಿಟೋಪಿಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವದು ಸರಕಾರದ ದಬ್ಬಾಳಿಕೆಯ ಉದಾಹರಣೆಗಳಲ್ಲಿ ಒಂದಾಗಿರುವದು. ಮಹಾತ್ಮಾ ಗಾಂಧಿಯವರ ನಾಮವನ್ನು ಅತ್ಯಂತ ಪೂಜ್ಯಭಾವದಿಂದ ಗೌರವಿಸುವ ಭಾರತೀಯರಿಗೆ ಇದರಿಂದಾಗುವ ಶಾರೀರಕ ವ್ಯಥೆಯು ಅತ್ಯಲ್ಪವಾದರೂ, ಅದರಿಂದಾಗುವ ಮಾನಸಿಕ ವ್ಯಥೆಯು ಮಾತ್ರ ವಿಶೇಷವಾಗಿರುವದು. ಇಂಥ ದ್ವೇಷ ಜನಕಗಳಾದ ವಿದ್ಯಮಾನಗಳು ಹೆಚ್ಚುವದಾದರೆ, ಆಳರಸರು ಮುಂದೆ ಹೆಚ್ಚಿನ ದಂಡವನ್ನೇ ತೆರಬೇಕಾಗುವದು. ಏಕೆಂದರೆ ಸಹಾಯಕೊಡುವರ ಮತ್ತು ದುರ್ಬಲರ ಕೂಗು ಎಂದಿಗೂ ನಿಷ್ಫಲವಾಗುವದಿಲ್ಲ. ಎಂದಾದರೊಂದು ದಿನ ಸಂಧಿಸಮಾಧಾನಗಳನ್ನು ಮಾಡಲೇಬೇಕಾಗುವದು. ಆದುದರಿಂದಲೇ ಇಂಗ್ಲೆಂಡಿನ ಪ್ರಾಜ್ಞರಾದ ಮುಖಂಡರು ಈಗಲೇ ಎಚ್ಚತ್ತು, ಹೆಚ್ಚಿನ ಅನರ್ಥಗಳಿಗೆ ಅವಕಾಶಕೊಡದೆ ಸರ್ವಸಮ್ಮತವಾದ ತೀರ್ಮಾನವನ್ನು ಮಾಡುವರೆಂದು ನಂಬಿರುತ್ತೇನೆ.

ಆಕಸ್ಮಿಕ ಗೃಹಚಿಕಿತ್ಸೆಗಳು.

ಮಯಕ, ಮೂರ್ಛೆ, ಒದರಾಟ ಮುಂತಾದುವು.

ಸಾಮಾನ್ಯವಾಗಿ ಜನರು ಇದ್ದಕ್ಕಿದ್ದ ಹಾಗೆ ಪ್ರಜ್ಞೆ ತಪ್ಪುವದನ್ನು ಅನೇಕವೇಳೆ ನೋಡಬಹುದು. ಇದಕ್ಕೆ ದೇಹದೊಳಗಿನ ವ್ಯಾಧಿಯೊಂದೇ ಕಾರಣವಲ್ಲ. ಭಾವೋದ್ರೇಕ, ಚಳುಕು, ಪೆಟ್ಟು ಬೀಳುವದು, ದೇಹದಲ್ಲಿ ರಕ್ತವು ಕಡಿಮೆಯಾಗುವದು, ಇವೇ ಮುಂತಾಗಿ ಈ ವ್ಯಾಧಿಗೆ ಹೃದಯದ ಕಾರ್ಯಗಳನ್ನು ತಡೆದು ನಿಲ್ಲಿಸುವ ಹಲವು ಕಾರಣಗಳುಂಟು. ಕೆಲವು ಸಮಯಗಳಲ್ಲಿ ಇದಕ್ಕೆ ಹೃದಯರೋಗವೇ ಕಾರಣವಾಗಬಹುದು.

ಪ್ರಜ್ಞೆತಪ್ಪಿ ಒದರಾಡುವದೆಂಬ ಶಬ್ದವು ಸಾಮಾನ್ಯವಾಗಿ ರೂಢಿಯಲ್ಲಿದ್ದರೂ, ಈ ಎರಡು ಶಬ್ದಗಳನ್ನೂ ಈ ರೀತಿಯಾಗಿ ಸೇರಿಸಿ ಉಪಯೋಗಿಸುವುದು ತಪ್ಪು. ಏಕೆಂದರೆ, ಮೂರ್ಛೆಗೂ, ಒದರಾಟಕ್ಕೂ ಜ್ಞಾನಶೂನ್ಯತೆಯೊಂದು ಹೊರತು ಬೇರೆ ಸಾಮಾನ್ಯಲಕ್ಷಣಗಳೊಂದೂ ಇಲ್ಲ. ಪ್ರಜ್ಞೆತಪ್ಪುವದಕ್ಕೆ ಕಾರಣವು ಯಾವುದೇ ಆಗಿದ್ದರೂ ಅದು ಮರಣಕ್ಕೆ ಸಮಾನವಾದ ತೋರಿಕೆ. ಪ್ರಜ್ಞೆ ತಪ್ಪಿದ ಮನುಷ್ಯನ ಹೃದಯಚಲನವು ಸಂಪೂರ್ಣವಾಗಿ ಅಥವಾ ಬಹಳ ಮಟ್ಟಿಗೆ ನಿಂತುಹೋಗುವುದು. ಆದರೂ ಹಾಗೆ ಪ್ರಜ್ಞೆತಪ್ಪುವುದೇನೂ ಹೆಚ್ಚು ಅಪಾಯಕಾರಿಯಲ್ಲ. ಸ್ವಲ್ಪ ಹೊತ್ತಿನೊಳಗಾಗಿ ಯಾವ ಚಿಕಿತ್ಸೆಯೂ ಇಲ್ಲದೆಯೇ ಪುನಃ ಹೃದಯಚಲನೆಗೆ ಪ್ರಾರಂಭವಾಗುವದುಂಟು.

ಪ್ರಜ್ಞೆ ತಪ್ಪುವುದರಿಂದ ಆಗುವ ಅಪಾಯಗಳು.

ಯುವತಿಯರೂ, ಸಣ್ಣ ಹುಡುಗಿಯರೂ ಹೆಚ್ಚಾಗಿ ಭಾವೋದ್ರೇಕದಿಂದ ಮೂರ್ಛಿತರಾಗುವರು. ಕೆಲವು ಸಮಯಗಳಲ್ಲಿ ಮಿತಿಮೀರಿ ಮಾತನಾಡುವದು, ಅಧಿಕರಕ್ತವನ್ನು ನೋಡುವದು, ಆಕಸ್ಮಿಕಭೀತಿ, ಈ ಮುಂತಾದುವು ಪ್ರಜ್ಞೆತಪ್ಪುವದಕ್ಕೆ ಕಾರಣಗಳಾಗುವುವು. ಅಂಥಾ ಸಂದರ್ಭಗಳಲ್ಲಿ, ಹೃದಯದ ಕಾರ್ಯವು ನಿಂತುಹೋದರೂ ಅಷ್ಟೇನೂ ಭಯಪಡಬೇಕಾಗಿಲ್ಲ. ಅಂಥವರಿಗೆ ಬೆಂಕಿ, ನೀರು ಮುಂತಾದುವುಗಳಲ್ಲಿ ಯಾವ ಅಪಾಯವು ಸಂಭವಿಸುವುದೋ ಎಂಬ ಭಯವೊಂದೇ ಮುಖ್ಯವಾಗಿರಬೇಕಾದುದು. ಈ ವಿಷಯಗಳಲ್ಲಿ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು.

ಪ್ರಜ್ಞೆ ತಪ್ಪಿದಕಾಲದಲ್ಲಿ, ಹೃದಯದ ಕಾರ್ಯವು ಕಡಿಮೆಯಾಗುವದರಿಂದ, ರಕ್ತವು ತಕ್ಕ ಪ್ರಮಾಣದಲ್ಲಿ ಮಿದುಳಿಗೆ ಪ್ರವೇಶಿಸಲು ಅನುಕೂಲವಿಲ್ಲದಂತಾಗಿ ಪ್ರಜ್ಞೆ ತಪ್ಪುವದು.

ಪ್ರಜ್ಞೆತಪ್ಪುವದಕ್ಕೆ ಮೊದಲು ರೋಗಿಗೆ ಶಕ್ತಿಯು ಕಡಿಮೆಯಾಗುವದು, ಮತ್ತು ಆತನ ತಲೆ ತಿರುಗುವುದಕ್ಕೆ ಪ್ರಾರಂಭವಾಗುವದು. ಆದರೆ, ಪ್ರಾರಂಭದಲ್ಲಿ ಯಾವಾಗಲೂ ಇದೇ ಸೂಚನೆಯು ಕಾಣುವದೆಂಬ ನಿರ್ಧಾರವಿಲ್ಲ. ಕೆಲವರು ಯಾವ ಸೂಚನೆಯೂ ಇಲ್ಲದೆ ಪ್ರಜ್ಞೆತಪ್ಪಿ ಕೆಳಗೆ ಬಿದ್ದು ಬಿಡುವರು. ಮುಖವು ಕಳೆಗುಂದಿ ನೈಬಿಡುವದು. ನಾಡಿಯೂಟವು ನಿಂತುಹೋಗುವದು, ಅಥವಾ ನಾಡಿಯಲ್ಲಿ ಶಕ್ತಿಯು ಕಡಿಮೆಯಾಗುವದು. ಉಸಿರಿನ ವಿಷಯದಲ್ಲಿಯೂ ಹಾಗೆಯೇ ಕಣ್ಣು ಗುಡ್ಡೆಗಳು ಸಿಕ್ಕಿಕೊಂಡಂತಾಗುವದು, ಮಾಂಸಖಂಡಗಳು ಸಡಿಲವಾಗಿ ಒಟ್ಟಕ್ಕೆ ದೇಹವೇ ಸೋತುಹೋಗುವದು.

ಮೂರ್ಛೆಗೆ ಚಿಕಿತ್ಸೆ.

ರೋಗಿಗೆ ಪ್ರಜ್ಞೆ ತಪ್ಪಿರಲಿ, ಇಲ್ಲದಿರಲಿ, ಆತನ ತಲೆಯನ್ನು ಮಾತ್ರ ಸ್ವಲ್ಪ ತಗ್ಗಿಸಿಟ್ಟು, ಬೆನ್ನು ಮಗ್ಗುಲಾಗಿ ಮಲಗಿಸಿದರೆ, ರಕ್ತವು ಮಿದುಳಿಗೆ ಧಾರಾಳವಾಗಿ ಹರಿಯಲು ಅನುಕೂಲವಾಗುವದು. ಕತ್ತು, ಎದೆ, ಹೊಟ್ಟೆ ಮುಂತಾದ ಭಾಗಗಳಲ್ಲಿರುವ ಬಟ್ಟೆಯನ್ನು ಸಡಿಲಿಸಿ, ಅವನ ಮೇಲೆ ನಿರ್ಮಲವಾದ ಗಾಳಿಯು ಬೀಸುವಂತೆ ಮಾಡಬೇಕು. ಉಪ್ಪುಗಳನ್ನು ಮೂಸಿಸುವುದು, ತಲೆಗೆ ತಣ್ಣೀರನ್ನೆರಚುತ್ತುವುದು, ಮುಖದ ಮೇಲೆ ಗಾಳಿ ಬೀಳುವಂತೆ ಬೀಸುವುದು, ಇವೇ ಮುಂತಾದುವುಗಳಿಂದ ಬಹಳ ಜಾಗ್ರತೆಯಾಗಿ ಜ್ಞಾನೋದಯವಾಗುವದು.

ಪುನಃ ಪ್ರಜ್ಞೆಯು ಬಂದೊಡನೆಯೇ ರೋಗಿಗೆ ನೀರನ್ನು ಅಥವಾ ಹಾಲನ್ನು ಕುಡಿಸಬೇಕು. ವೈದ್ಯರು ಹೇಳದಹೊರತು ಸಾರಾಯಿ ಮೊದಲಾದ ಮಾದಕದ್ರವ್ಯಗಳನ್ನು ಪಾನಮಾಡಿಸಬಾರದು. ಆಡಿಗಡಿಗೆ ಮೂರ್ಛೆಬೀಳುವವರ ದೇಹದಲ್ಲಿ ಯಾವುದಾದರೂ ರೋಗವಿರುವದೇ ಎಂದು ಆಗಾಗ್ಗೆ ವೈದ್ಯರಿಂದ ಪರೀಕ್ಷೆ ಮಾಡಿಸುತ್ತಿರಬೇಕು. ಆಕಸ್ಮಾತ್ತಾಗಿ ಜ್ಞಾನ ತಪ್ಪುವವರು ನಿತ್ಯ ಜೀವನದಲ್ಲಿ ಬಹಳ ಜಾಗರೂಕರಾಗಿರಬೇಕು. ಮತ್ತು ಯಾವ ಕಾರಣದಿಂದ ಜ್ಞಾನತಪ್ಪುವದೋ ಆ ಕಾರಣಗಳಿಗೆ ಅವಕಾಶ ಕೊಡಕೂಡದು.

ಅಪಸ್ಮಾರ ಅಥವಾ ಬೀಳುವ ರೋಗ.

ಇದು ಮಿದುಳಿನ ಸಂಬಂಧವಾದ ವ್ಯಾಧಿ. ಯೌವನದಲ್ಲಿ ಪ್ರಾರಂಭಿಸಿ ವೃದ್ಧವಯಸ್ಸಿನವರೆಗೂ ಇರುವುದು. ಈ ರೋಗದಿಂದ ಮೂರ್ಛೆಬೀಳುವವರನ್ನು ನಾವು ಆಗಾಗ ನೋಡಬಹುದು. ಕೆಲವು ಸಂದರ್ಭಗಳಲ್ಲಿ ಇದರ ಸೂಚನೆಯು ಮುಂದಾಗಿ ತಲೆದೋರಿದರೂ, ಹಲವು ವೇಳೆಗಳಲ್ಲಿ ಯಾವ ಸೂಚನೆಯೂ ಕಾಣಿಸುವದಿಲ್ಲ. ಕೆಲವು ಸಮಯಗಳಲ್ಲಿ ಇದ್ದಕ್ಕಿದ್ದ ಹಾಗೆ ರೋಗದ ಸಲಾರಂಭಿಸುವದೇ ಪ್ರಥಮಸೂಚನೆ. ಒಡನೆ ಮು[illegible] ಕೆಳಗೆ ಬೀಳುವರು.

ಯಾವ ಕಾಲದಲ್ಲಿಯಾದರೂ, ಯಾವ ಸ್ಥಳದಲ್ಲಿಯಾದರೂ ಎಷ್ಟು ಕಾಲದವರೆಗಾದರೂ ಈ ಮೂರ್ಛೆಯಿರಬಹುದು. ಒಂದು ಸಲ ಮೂರ್ಛೆ ಬಂದು, ಬಿಟ್ಟೊಡನೆಯೇ ತಿರುಗಿ ಮೂರ್ಛೆ ಬರುವದೂ ಉಂಟು. ಮಿಕ್ಕ ಕೆಲವು ಸಮಯಗಳಲ್ಲಿ ಒಂದು ಸಲ ಮೂರ್ಛೆ ಬರುವುದಕ್ಕೂ, ಮತ್ತೊಂದು ಸಲ ಮೂರ್ಛೆ ಬರುವುದಕ್ಕೂ ನಡುವೆ ಹಲವು ವಾರಗಳು ಅಥವಾ ತಿಂಗಳುಗಳು ಬಿಡುವವು.

ಇದ್ದಕ್ಕಿದ್ದ ಹಾಗೆ ಜ್ಞಾನವು ಹೋಗಿ, ದೇಹಚಲನೆಯು ನಿಂತುಹೋದಂತಾಗುವದೇ ಮೂರ್ಛಾರೋಗದ ಪ್ರಥಮಸೂಚನೆಗಳು. ಹೀಗೆ ದೇಹಚಲನೆಯು ನಿಂತೊಡನೆಯೇ, ಕೈಕಾಲುಗಳಲ್ಲಿ ಚಳುಕು ಕಾಣಿಸಿಕೊಳ್ಳುವದು, ಮುಖವು ಊದಿಕೊಂಡಂತಾಗುವದು. ಉಸಿರು ವೇಗವಾಗಿ ಹೊರಡುವದು, ಮತ್ತು ಬಾಯಿ ಮೂಗುಗಳಲ್ಲಿ ನೊರೆಯು ಹೊರಡುವದುಂಟು. ಮೊದಲು, ಜ್ಞಾನತಪ್ಪಿದುದಕ್ಕೆ ಚಿಕಿತ್ಸೆ ಮಾಡಬೇಕು. ರೋಗಿಯು ತನ್ನ ದೇಹಕ್ಕೆ ಅಪಾಯಮಾಡಿಕೊಳ್ಳದಂತೆ ಅವನನ್ನು ಎಚ್ಚರದಿಂದ ನೋಡಿಕೊಳ್ಳಬೇಕು. ಇವೇ ಈ ರೋಗದ ಪ್ರಥಮಚಿಕಿತ್ಸೆಗಳು. ರೋಗಿಯ ಉಡುಪುಗಳೆಲ್ಲವನ್ನೂ ಸಡಲಿಸಿ, ನಿರ್ಮಲವಾದ ಗಾಳಿಯು ಧಾರಾಳವಾಗಿ ಬೀಸಲು ಅವಕಾಶವನ್ನೇರ್ಪಡಿಸಬೇಕು. ಅನೇಕ ಸಂದರ್ಭಗಳಲ್ಲಿ ರೋಗಿಯನ್ನು ಅವನು ಬಿದ್ದಿರುವೆಡೆಯಲ್ಲಿಯೇ ಬಿಟ್ಟಿರುವದೊಳ್ಳೆಯದು. ಒದರಾಟವನ್ನು ಬಲಾತ್ಕಾರವಾಗಿ ತಡೆದು ನಿಲ್ಲಿಸಿದರೆ ಅಪಾಯಕ್ಕೆ ಕಾರಣವಾಗಬಹುದು. ಆದ್ದರಿಂದ ಮೆಲ್ಲಗೆ ನಿಲ್ಲಿಸಬೇಕು. ಬಾಯಲ್ಲಿ ಸುರಿಯುತ್ತಿರುವ ನೊರೆಯನ್ನು ಒರೆಸಿ, ರೋಗಿಯು ನಾಲಗೆಯನ್ನು ಕಚ್ಚಿಕೊಳ್ಳದಂತೆ ಹಲ್ಲುಗಳ ಮಧ್ಯದಲ್ಲಿ ಬಟ್ಟೆಯ ಚೆಂಡನ್ನು ಸುತ್ತಿಡಬೇಕು.

ಮೂರ್ಛೆ ತಿಳಿದು ಪುನಃ ಜ್ಞಾನವು ಬಂದೊಡನೆಯೇ ಆ ರೋಗಿಯನ್ನು ಮನೆಗೆ ಕರೆದುಕೊಂಡು ಹೋಗಿ ವಿಶ್ರಾಂತಿಗೆ ಅವಕಾಶವನ್ನೇರ್ಪಡಿಸಬೇಕು. ಅನಂತರದಲ್ಲಿ ಆ ರೋಗದ ಸೂಚನೆಗಳು ಕಾಣಿಸಿಕೊಂಡಾಗಲೆಲ್ಲ, ರೋಗಿಗೆಳೊಡನೆ ಯಾರಾದರೂ ಬ್ಬರು ಹೋಗುತ್ತಿರುವುದೊಳ್ಳೆಯದು. ಸಾಧ್ಯವಾದಮಟ್ಟಿಗೂ ಈ ರೋಗದ ಬಾಧೆಯನ್ನು ನಿವಾರಣೆ ಮಾಡಲು ಉತ್ತಮರಾದ ವೈದ್ಯರ ಸಲಹೆಗಳನ್ನು ಕೇಳಬೇಕು.

ಸೂತಿಕಾವಾಯು ಮತ್ತು ಅವಕ್ಕೆ ಸಂಬಂಧಪಟ್ಟ ಚೇಷ್ಟೆಗಳು.

ಬಲಹೀನತೆಯಿಂದ ತಲೆದೋರುವ ಈ ವ್ಯಾಧಿಯಲ್ಲಿ, ಸಾಮಾನ್ಯವಾಗಿ ಜ್ಞಾನವು ಹೋಗುವದಿಲ್ಲ. ರೋಗಿಗಳು ಅರಚಿಕೊಳ್ಳುವರು, ನಗುವರು, ಅಥವಾ ಅಳುವರು, ಮತ್ತು ಕೈಕಾಲುಗಳನ್ನು ಒದರುತ್ತಿದ್ದರೂ, ಅವರು ತಾವಾಗಿಯೇ ಉದ್ದೇಶಪೂರ್ವಕವಾಗಿ ಬಡಿಯುವಂತೆ ತೋರುವದು. ಈ ಸೂಚನೆಗಳು ಸಾಧಾರಣವಾಗಿ ಸ್ತ್ರೀಯರಲ್ಲಿ ಹೆಚ್ಚಾಗಿ ಕಾಣಿಸುವದು. ಇದರಿಂದ ಅಪಾಯವಿಲ್ಲ. ಇದಕ್ಕೆ ಮುಖದಮೇಲೆ ನೀರನ್ನೆರಚುವದು, ಗದರಿಸಿ ಮಾತನಾಡುವದು, ಇವೇ ಮುಖ್ಯ ಚಿಕಿತ್ಸೆಗಳು. ಬಲಹೀನತೆಯಿಂದ ಬರುವ ಮೂರ್ಛೆಗೆ, ಒಂದು ಸಲ ಮೂರ್ಛೆ ಹೋಗುವದಕ್ಕೂ, ಮತ್ತೊಂದು ಸಲ ಮೂರ್ಛೆ ಹೋಗುವದಕ್ಕೂ ಮಧ್ಯಕಾಲದಲ್ಲಿ ದೇಹದ ಶಕ್ತಿಯು ಹೆಚ್ಚುವದಕ್ಕಾಗಿ ಟಾನಿಕ್ಕುಗಳನ್ನು ಕುಡಿಸುತ್ತಿರಬೇಕು.

ಮಿದುಳಿನ ರಕ್ತನಾಳವು ಒಡೆಯುವುದು.

ಇದು ಬಹಳ ಅಪಾಯಕಾರಿ. ಹೀಗೆ ಮೂರ್ಛೆಬಿದ್ದವರ ಕೆಲವು ಸಂದರ್ಭಗಳಲ್ಲಿ ಇದು ಮೊದಮೊದಲು ಮಾದಕದ್ರವ್ಯ ಸೇವನೆಗೆ ಸಮಾನವಾಗಿ ತೋರಿ ಆ ಮೇಲೆ ಅಪಾಯಕಾರಣವಾಗುವದು. ಇದು ಸಾಮಾನ್ಯವಾಗಿ ವಯಸ್ಸಾದವರಲ್ಲಿ ಕಾಣಿಸಿಕೊಳ್ಳುವುದು. ಮತ್ತು ಮಿದುಳಿನಲ್ಲಿರುವ ರಕ್ತನಾಳವು ಒಡೆದು ಹೋಗುವದೇ ಇದಕ್ಕೆ ಕಾರಣವು. ಇದು ಒಡನೆ ಬಹಳ ಪ್ರಬಲವಾಗಿ ಕಾಣಿಸಿಕೊಂಡರೆ "Apoplexy" ಎನಿಸಿಕೊಳ್ಳುವದು. ಇದಕ್ಕೂ, ಮಿಕ್ಕ ಮೂರ್ಛೆಗಳಿಗೂ ವ್ಯತ್ಯಾಸವೇನೆಂದರೆ ಇದು ಸ್ವಲ್ಪ ವಯಸ್ಸಾದ ಮೇಲೆ ಬರುವದು. ಇದು ಬಂದರೆ ಉಸಿರನ್ನು ಬಲಾತ್ಕಾರದಿಂದ ಎಳೆದುಬಿಡುವಂತಾಗುವದು, ಅಥವಾ ಗೊರಕೆ ಬರುವದು, ಮುಖಕ್ಕೆ ರಕ್ತವು ನುಗ್ಗಿದಂತಾಗುವದು. ನಾಡಿಯು ತನ್ನ ಶಕ್ತಿಯೆಲ್ಲವನ್ನೂ ಬಿಟ್ಟು ನಿಧಾನವಾಗಿ ಬಡಿಯುವದು, ಚರ್ಮವು ಬಿಸಿಯಾಗುವದು.

ಜ್ಞಾನತಪ್ಪಿದಾಗ ಚಿಕಿತ್ಸೆ ಮಾಡುವಂತೆಯೇ ಇದಕ್ಕೂ ಚಿಕಿತ್ಸೆ ಮಾಡಬೇಕು. ಆದರೆ, ರೋಗಿಯ ತಲೆಯನ್ನು ಮಾತ್ರ ಸ್ವಲ್ಪ ಎತ್ತರಿಡಬೇಕು. ಸಾಧ್ಯವಾದರೆ ತಲೆಗೆ ಮಂಜುಗಡ್ಡೆ ಅಥವಾ ತಣ್ಣೀರಿನಲ್ಲಿ ನೆನೆಸಿದ ಚೀಲವನ್ನು ಕಟ್ಟಬೇಕು. ಕಾಲಿಗೆ ಶಾಖವನ್ನೂ ಕೊಡಬೇಕು. ಮಾದಕ ದ್ರವ್ಯಗಳನ್ನು ಕೊಡಬಾರದು ಮತ್ತು ತಿನ್ನುವದಕ್ಕೆ ಯಾವನನ್ನೂ ಕೊಡಬಾರದು. ರೋಗಿಯನ್ನು ಸ್ವಲ್ಪವೂ ಕದಲಿಸದಂತಿರಿಸಿ ವೈದ್ಯರಿಂದ ಚಿಕಿತ್ಸೆ ಮಾಡಿಸಬೇಕು.

ಅನೇಕ ಗಂಟೆಗಳು ಅಥವಾ ದಿವಸಗಳವರೆಗೂ ಪುನಃ ಜ್ಞಾನವು ಬರುವದೇ ಇಲ್ಲ. ವ್ಯಾಧಿಯು ಪ್ರಬಲವಾಗಿದ್ದಲ್ಲಿ, ರೋಗಿಯು ಹಲವು ವಾರಗಳವರೆಗೂ ಹಾಸಿಗೆಯಲ್ಲಿಯೇ ಬಿದ್ದುಕೊಂಡಿರಬೇಕಾಗುವದು. ಈ ಸ್ಥಿತಿಯಲ್ಲಿ ಚಿಕಿತ್ಸೆಮಾಡಿಸುವದೂ ಕಷ್ಟಸಾಧ್ಯವೇ. ಮತ್ತು ವಾಯುಚೇಷ್ಟೆಯು ಸ್ವಲ್ಪಮಟ್ಟಿಗೆ ಯಾವಾಗಲೂ ಇದ್ದೇ ಇರುವದು.

ಆರೋಗ್ಯಚಂದ್ರಿ[illegible]

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೃತ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ, ಗೂನೇರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. I ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು. [60]

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಸಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ. ಜೌಗು ನೀರು ಪ್ರದೇಶಗಳಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಜನ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತಿದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರುತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಸಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[11] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ?

ಕಂಗೆಡಬೇಡಾ ! **ಮರುಗಬೇಡಾ !!** **ಗುಣದ ಮದ್ದು ಯಾವದೆಂದು ನೋಡಾ !!!**

ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳೆದಿರುವ ರೋಗ ಸಂಪೂರ್ಣ ಗುಣವಾಗಬೇಕೇ? ಇಗೋ? **"ಮಲೇರಿಯಾನ"** ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅಪ್ರಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ? ಕಂಪೆನಿಯ ಸಿರಪು **"ಪುಲ್ಸಥೂಜ"** ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಪಡಿಸಿಗೊಳ್ಳುವ ಇಚ್ಛೆ ಉಂಟೇ? ಕಂಪೆನಿಯ ಸಿರಪು **"ಸೆಬೀನ ಸೆಸೀಯ"** ಮತ್ತು ಕಂಪೆನಿಯ ಸಿರಪು **"ವಿಬುರ್ನೋವ"** ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ಬಯಸುತ್ತೀಯಾ? ಹಾಗಾದರೆ ಕಂಪೆನಿಯ ಸಿರಪು **"ಸರ್ಸಲಿಮಗ"** ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ರನ್ನ ಪಾತ್ರ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಯ ಸಿರಪು **"ನೆಸಿಥೂಜ"** ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೊಮಿಯೋಪತಿ ಮದ್ದುಗಳೂ ಬಿಸ್ಕು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅವುಗಳ ಪಾಕಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[47] **ಮಲೇರಿಯಾನ ಕಂಪನಿ,** (ಪಂಪನಕಟ್ಟೆ), ಮಂಗಳೂರು

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ರಜ] **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.** [ಸ್ಪರ್ಧೆ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ದೌರ್ಬಲ್ಯಕ್ಕೆ ನಾಶ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಪವೃಷ್ಟ, ಶಾಲಿಮಕಂದ, ಮಧುಕಂದ, ಜಟಾಕಂಧ, ಶಾಲೀಮುಲೀಕಂದ, ಅಶ್ವಕಂದ ಕ್ರೌಂಚಕಂದ, ಮುಸಳೇಕಂದ ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಕಠಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ನಿವಳೀಬೀಜ, ಚಿಕಣದಪಂಚಾಂಗ, ಅಡವಿ ಎಳ್ಳಿನಪಂಚಾಂಗ, ಕಮಿಪತ್ರಿ, ಪಿಠಾಪತ್ರಿ, ಮದನಮಸ್ತ, ರಸಪುರುಷ, ಕಮರಕಸ, ಕಥಿಲಾಗೋಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋಗಿ, ಮುಂಗಲೀ ಬೇದಾಣೆ, ಮರ್ದಾನಕಟ್ಟಿಗೆ, ಬಹಾದರಿ, ಪಠೀಮುಗಜ, ಆಲಪಾಲು, ಪಾಕೇರಿಭಾತಾ, ಗೋಖುರು, ಅಡವಿಬೆಂಡಿಬೇರು, ಅಮೃತಸತ್ವ, ಇಸಬಗೋಳ ಭುಸಾ, ಆವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಿ, ವಂಶಲೋಚನ, ವರಧಾರಾ, ಕೇಸರಿ ಮೂಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಹಸಿ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [51]

ಪಿನಸಿಗ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಒಕ್ಕು, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಜಾತಬಾರದಿರೋಣ, ದಟ್ಟಿನೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು|| ಪೋ|| ಮಿರಜ.**

ಸರದಾರ್ ವಲ್ಲಭಭಾಯಿ ಪಟೇಲರವರು.

ಭಾರತಸ್ವಾತಂತ್ರ್ಯಸಂಗ್ರಾಮದಲ್ಲಿ ಪ್ರಥಮಾಹುತಿಯಾಗಿದ್ದ ಸರದಾರ್ ವಲ್ಲಭಭಾಯಿ ಪಟೇಲ್‌ರವರು ಕಳೆದ ಜೂನ್ 26 ನೆಯ ತಾರೀಖು ಗುರುವಾರ ಮಧ್ಯಾಹ್ನ 12 ಘಂಟೆಗೆ ಸಾಬರಮತಿ ಕಾರಾಗೃಹವಾಸದಿಂದ ಬಿಡುಗಡೆಯನ್ನು ಹೊಂದಿದರು. ಸರದಾರರು ಕೂಡಲೇ ಮಹಾತ್ಮರ ಆಶ್ರಮಕ್ಕೆ ಮೋಟಾರಿನಲ್ಲಿ ಹೊರಟರು. ಆಶ್ರಮವಾಸಿಗಳಾದ ಮಿಸ್ ಬೆಹ್ನ್ ಮೊದಲಾದವರನ್ನು ಕಂಡು ಸ್ವಲ್ಪಹೊತ್ತು ವಿಶ್ರಮಿಸಿಕೊಂಡ ನಂತರ, ಅವರು, ಅಹಮದಾಬಾದ್ ನಗರದಲ್ಲಿರುವ ಡಾಕ್ಟರ್ ಕಣುಗರವರ ಬಂಗಲೆಗೆ ಹೋದರು. ಸರದಾರರು ಬಿಡುಗಡೆಹೊಂದಿದ ವರ್ತಮಾನವು ನಗರದಲ್ಲೆಲ್ಲ ಬಹು ಜಾಗ್ರತೆಯಾಗಿ ಹಬ್ಬಿ, ಸಾವಿರಾರು ಜನರು ಸರದಾರರ ದರ್ಶನಕ್ಕಾಗಿ ಡಾಕ್ಟರರ ಬಂಗಲೆಯ ಸುತ್ತಲೂ ನೆರೆದರು.

ಕಾಂಗ್ರೆಸ್ ಕಮಿಟಿಯವರು ಕೂಡಲೇ ಒಂದು ಮೆರವಣಿಗೆಯನ್ನು ತೆಗೆಯಬೇಕೆಂದು ನಿರ್ಧರಿಸಿದರು. ಅನೇಕ ಸಹಸ್ರಜನಗಳಿಂದ ಕೂಡಿದ ಒಂದು ದೊಡ್ಡ ಉತ್ಸವವು ರೈಲ್ವೆಸ್ಟೇಷನ್ನಿನಿಂದ ಮುಖ್ಯ ಮುಖ್ಯ ಬೀದಿಗಳಲ್ಲಿ ಹೊರಟಿತು. ಸರದಾರರು 4 ಕುದುರೆಗಳನ್ನು ಹೂಡಿದ ಗಾಡಿಯಲ್ಲಿ ಕುಳಿತುಕೊಂಡು, ಅತ್ಯುತ್ಸಾಹದಿಂದ ಜಯಘೋಷವನ್ನು ಮಾಡುತ್ತ ಪುಷ್ಪಮಾಲಿಕೆಗಳನ್ನು ಅರ್ಪಿಸುತ್ತ ಪುಷ್ಪವೃಷ್ಟಿಗರೆಯುತ್ತ ಬರುತ್ತಿರುವ ಜನಸ್ತೋಮದ ಸುಖಾಗಮನವನ್ನು ನಗುಮುಖದಿಂದ ಸ್ವೀಕರಿಸುತ್ತಿದ್ದರು.

3½ ತಿಂಗಳುಗಳ ಕಾರಾಗೃಹವಾಸದಿಂದ ಸರದಾರರ ದೇಹಸ್ಥಿತಿಯು ಚೆನ್ನಾಗಿರಲಿಲ್ಲವೆಂದು ತೋರುತ್ತಿತ್ತು. ಉತ್ಸವವು 3 ಘಂಟೆಗಳ ಕಾಲ ಸುತ್ತಿ ನದೀತೀರವನ್ನು ಸೇರಿತು. ಸುಮಾರು ಒಂದು ಲಕ್ಷ ಜನರು ಅಲ್ಲಿ ನೆರೆದಿದ್ದು, ಪಟೇಲರ ಜಯಘೋಷವನ್ನು ಮಾಡಿದರು.

ಸರದಾರರು ಅಲ್ಲಿ ನೆರೆದಿದ್ದ ಜನರನ್ನು ಕುರಿತು ಈ ಮುಂದೆ ಹೇಳುವಂತೆ ಭಾಷಣಮಾಡಿದರು.

"ನನ್ನಿಂದ ನೀವು ಯಾವ ಸಲಹೆಯನ್ನಾಗಲಿ, ಸೂಚನೆಯನ್ನಾಗಲಿ ನಿರೀಕ್ಷಿಸುವಂತಿಲ್ಲ. ಏಕೆಂದರೆ ನಾನು ಈ ಸಂಗ್ರಾಮವು ಪ್ರಾರಂಭವಾಗುವದಕ್ಕೆ ಪೂರ್ವದಲ್ಲಿಯೇ ದಸ್ತಗಿರಿಮಾಡಲ್ಪಟ್ಟೆನು. ದೇಶದಲ್ಲಿ ಏನು ನಡೆಯುತ್ತಿರುವದೆಂಬುದೇ ನನಗೆ ತಿಳಿಯದಾಗಿದೆ. ಆದರೆ ದೇಶದ ಮುಖಂಡರೆಲ್ಲರೂ ಕಾರಾಗೃಹವಾಸಿಗಳಾಗಿರುವವನ್ನು ನೋಡಿ, ಬಹಳ ಸಂತೋಷಿಸುತ್ತೇನೆ. ಗುಜರಾಥದೇಶದ ಅಹಿಂಸೆ, ಧೈರ್ಯ, ಚಾತುರ್ಯ ಮತ್ತು ಆತ್ಮಯಜ್ಞ ಇವುಗಳನ್ನು ನೋಡಿ ನಾನು ಅವರನ್ನು ಅಭಿನಂದಿಸುತ್ತೇನೆ. ಗುಜರಾಥದೇಶದ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತನಂತರ ನನ್ನ ಕೈಲಾದ ಅಲ್ಪಸೇವೆಯನ್ನು ಮಾಡುವೆನು.

ಅನೇಕರು ಜೈಲುಗಳ ಸ್ಥಿತಿಗತಿಗಳನ್ನು ತಿಳಿಯಲು ಕುತೂಹಲವುಳ್ಳವರಾಗಿರಬಹುದು. ಅಲ್ಲಿ ಯಾರ ತಲೆಗಳನ್ನೂ ಒಡೆಯುವದಿಲ್ಲ. ಅಲ್ಲಿ ಯಾವ ಕಷ್ಟವೂ ಇಲ್ಲ. ಒಂದು ದುಡ್ಡಿನ ಖರ್ಚಿನಿಂದ ಸಂಪೂರ್ಣ ಸೌಖ್ಯವನ್ನು ಅನುಭವಿಸುವಂತಿದೆ. (ನಗು). ಕಾಂಗ್ರೆಸ್ಸಿನ ಅಧ್ಯಕ್ಷನೂ ಪ್ರಪಂಚದ ಅದ್ವಿತೀಯ ಪುರುಷನೂ ಕಾರಾಗೃಹದಲ್ಲಿರುವಾಗ, ನಾವುಗಳು ಕಾರಾಗೃಹದ ಹೊರಗಡೆಯಲ್ಲಿ ಊಟಮಾಡುವದನ್ನು ಮಣ್ಣು ತಿಂದಂತೆಯೂ, ಮೃದುವಾದ ಹಾಸಿಗೆಯಮೇಲೆ ಮಲಗುವದನ್ನು ಸ್ಮಶಾನದಲ್ಲಿ ಚಿತೆಯಮೇಲೆ ಮಲಗಿದಂತೆಯೂ ಭಾವಿಸಬೇಕಾಗುವದು. ನಾನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿದುದಕ್ಕಾಗಿ ನನ್ನನ್ನು ಉಚಿತವಾದ ಮೋಟೆಲಿಗೆ (ಕಾರಾಗೃಹಕ್ಕೆ) ಕಳುಹಿಸಿದರು. ಸರಕಾರವು ಈ ದಿನ ಸಾಯಂಕಾಲದ ಊಟಕ್ಕೆ ಎರಡು ರೊಟ್ಟಿಗಳನ್ನು, ನಾಳೆ ಬೆಳಗಿನ ಉಪಹಾರಕ್ಕೆ ಒಂದು ದುಡ್ಡಿನ ಗಂಜಿಯನ್ನೂ ಕೊಡಬೇಕಾಗಿರುವುದು. ನನಗೆ ಕಾರಾಗೃಹವನ್ನು ಬಿಟ್ಟು ಬರಲು ಅತಿಶಯ ವ್ಯಸನವೆನಿಸಿತು. ಕಾರಾಗೃಹವಾಸವು ಕಷ್ಟವೆಂದು ಭಾವಿಸುವದು ಶುದ್ಧ ಮೂರ್ಖತನವೇ ಸರಿ!

ಸರಕಾರವು ಕುಪಿತವಾಗುವದೆಂದು ನಾನು ಭಾವಿಸಿದ್ದೇನೆ. ಬಿರುಗಾಳಿಯ ಹಾವಳಿಯು ಮುಗಿದನಂತರ ಶಾಂತತೆಯು ಪ್ರಾಪ್ತವಾಗುವಂತೆ ಸರಕಾರದ ಆವೇಶವು ಮುಗಿದನಂತರ ಶಾಂತತೆಯು ನೆಲಸುವದು. ನಾನು ಕೇವಲ ಗುಂಡಿನೇಟುಗಳನ್ನು ನಿರೀಕ್ಷಿಸಿದ್ದೆನೇ ಹೊರತು ತಲೆಯಮೇಲೆ ದೊಣ್ಣೆಯ ಪೆಟ್ಟುಗಳನ್ನು ನಿರೀಕ್ಷಿಸಿರಲಿಲ್ಲ. ಅದು ಈಗ ಪ್ರಾರಂಭವಾಗಿರುವುದು.

ಈ ದಿನ ಸಾಯಂಕಾಲ ನಾನು ಯಾವ ಭಾಷಣವನ್ನೂ ಮಾಡಕೂಡದೆಂದೂ, ಹಾಗೆ ಮಾಡುವದಾದರೆ ಪುನಃ ಕಾರಾಗೃಹಕ್ಕೆ ಹೋಗಬೇಕಾಗಿ ಬರುವುದೆಂದೂ ನನಗೆ ಉಪದೇಶಮಾಡಿರುವರಲ್ಲದೆ ಈ ಸಭೆಗೂ ಸಹ ಹೋಗಕೂಡದೆಂದೂ ನನಗೆ ಹೇಳಿರುವರು. ಈ ದಿನವೇ ಪುನಃ ನನ್ನನ್ನು ದಸ್ತಗಿರಿಮಾಡುವದಾಗಿ ಸಹ ಹೇಳಿರುವರು. ಆದರೆ ನನ್ನ ಹಸ್ತದಲ್ಲಿ "ಕಾರಾಗೃಹದಗೆರೆ" ಯೇ ಇರುವುದಿಲ್ಲ. ನಾನೆಂದೂ ಕಾರಾಗೃಹವನ್ನು ಅರಿತವನಲ್ಲ. ಕೋಪದ ಮೇರೆಯನ್ನು ಮೀರಿರುವ ಯಾವ ಶಕ್ತಿಯೂ ನನ್ನನ್ನು ಕಾರಾಗೃಹದಲ್ಲಿ ಹಾಕಲಾರದು. ಕಾರಾಗೃಹಕ್ಕೆ ಹೋಗುವವರನ್ನು ಕಂಡು ಯಾರೂ ದುಃಖಿಸಬಾರದು. ನಾನು ಕಾರಾಗೃಹದಿಂದ ಹೊರಡುವಾಗ ಜೈಲಿನ ಅಧಿಕಾರಿಗೆ ನನ್ನ ಕೋಣೆಯನ್ನು ಖಾಲಿಯಾಗಿಯೇ ಇಟ್ಟಿರುವಂತೆ ಹೇಳಿಬಂದಿರುವೆನು. ನಾನು ಕ್ಷಿಪ್ರದಲ್ಲಿಯೇ ಆ ಕೋಣೆಗೆ ಹೋಗುವೆನು. ಇಲ್ಲವಾದರೆ ನಾವೆಲ್ಲರೂ ಸ್ವತಂತ್ರರಾಗುವೆವು."

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಾಹಿರಾತ್.

ಹಾಲತುಳ್ಳಿ ಬೃಹನ್ಮಠದ ಪಟ್ಟದ ಚನ್ನಬಸವಸ್ವಾಮಿಗಳವರಿಂದ—

ಭರತಖಂಡದಲ್ಲಿ ವೀರಶೈವಮತವು ಜಗದಾದಿಯಿಂದಲೂ ಪ್ರಸಿದ್ಧವಾಗಿದ್ದರೂ ವಿದ್ಯೆಯಿಲ್ಲದೆ ಅನೇಕರು ಇತ್ತೀಚೆಗೆ ಪರಮತೀಯರ ಕೈವಶರಾಗಿ ವೈದಿಕಧರ್ಮವನ್ನು ಬಿಟ್ಟು ಶೂದ್ರರಂತೆ ನಿಯಮಶೂನ್ಯರಾಗಿ ವೇದಾಧ್ಯಯನ ರಹಿತರಾಗಿ ವಿಧಿನಿಷೇಧಗಳನ್ನತಿಕ್ರಮಿಸಿರುತ್ತಾರೆ. ಇದನ್ನು ಕಂಡು ಬೊಂಬಾಯಿ ಗೌರ್ನಮೆಂಟಿನವರು ಖಾನೇಷುಮಾರಿಯ ಲಿಸ್ಟಿನಲ್ಲಿ ವೀರಶೈವರೆಲ್ಲರನ್ನು ಶೂದ್ರರ ಪಂಕ್ತಿಯಲ್ಲಿ ಸೇರಿಸಿದ್ದರು. ಆಗ್ಗೆ ಅನೇಕಜನ ಪಂಡಿತಾಗ್ರಣಿಗಳು ಗೌರ್ನಮೆಂಟಿನ ಕೂಡ ವಾದವನ್ನು ಮಾಡಿ ತಮ್ಮಲ್ಲಿರುವ ಬ್ರಾಹ್ಮಣ್ಯವನ್ನು ಹೃದಯಂಗಮವಾಗುವಂತೆ ಸಿದ್ಧಯಿಗೊಳಿಸಿದ್ದರು. ಅದರಂತೆ ನೈಜಾಮ ಇಲಾಖೆಯ ಮುಖ್ಯ ಕ್ಷೇತ್ರವಾದ ಪರಳಿಗ್ರಾಮದಲ್ಲಿ ವೈಜನಾಥಜ್ಯೋತಿರ್ಲಿಂಗರುದ್ರಾಭಿಷೇಕ ವಿಷಯವಾಗಿ ವ್ಯಾಜ್ಯವು ನಡೆದು ಹೈಕೋರ್ಟ ಕಚೇರಿಯನ್ನೇರಿ ಅಲ್ಲಿ ಅಲಿಂಗಿಬ್ರಾಹ್ಮಣರಿಗೂ ಲಿಂಗಿಬ್ರಾಹ್ಮಣರಿಗೂ ನಡೆದ ಅನೇಕ ಶಾಸ್ತ್ರಾರ್ಥಗಳನ್ನು ರಾಯ ಬಾಲಮುಕುಂದಸಾಹೇಬರು ಕ್ರೋಡೀಕರಿಸಿ ನಮ್ಮ ನ್ಯಾಯನ ನೈಜಾಮ ಆಸಫ್‌ಜಾ ಸಾ|| ರಾಜರ ಮುಂದೆ ಇಡಲು ಅವರು 3 ವರ್ಷಗಳಿಂದ ಶೋಧನಮಾಡಿ, ಅಲಿಂಗಿಬ್ರಾಹ್ಮಣರಂತೆ ಲಿಂಗಿಗಳೂ ಯೂ ಬ್ರಾಹ್ಮಣರಿದ್ದಾರೆಂದು ಫೈಸಲನ್ನು ಬರೆದು ಲಿಂಗಿಬ್ರಾಹ್ಮಣ್ಯವನ್ನು ಹೊರಗೆ ಹಾಕಿರುವ ವರ್ತಮಾನವು ಪ್ರತಿಯೊಬ್ಬನಿಗೂ ತಿಳಿದೇ ಇರುತ್ತದೆ. ಬ್ರಾಹ್ಮಣ್ಯಕ್ಕೆ ಮುಖ್ಯಚಿಹ್ನವೆನಿಸಿದ ಶಿಖಾಧಾರಣವು ಅನೇಕ ವೇದಾಗಮಪುರಾಣೋಪನಿಷತ್ತುಗಳಿಂದ ಸಿದ್ಧವಾಗುವದರಿಂದ ಅಂತಹ ಪವಿತ್ರ ಶಿವಸಿದ್ಧಾಂತದ ಆಜ್ಞೆಯಂತೆ ಬಿದರಜಿಲ್ಲೆಯ ಕೆಲವು ಅಧಿಕಾರಿಗಳು ಸದ್ಭಕ್ತಮಹಾಶಯರು ಶಿಖಾಧಾರಿಗಳಾಗಿದ್ದಾರೆ. ಈ ಮಧ್ಯೆ ನಮ್ಮ ಪ್ರಾಂತದಲ್ಲಿರುವ ಕೆಲವು ವಿರಕ್ತರೂ ಅವರ ಅನುಯಾಯಿಗಳೂ ಶಿಖಾಧಾರಣವು ಕೂಡದೆಂದು ಮೂಢರಿಗೆ ದುರ್ಬೋಧ ಮಾಡುತ್ತ ಮನಸ್ವಿಯಾಗಿ ಗುಲ್ಲೆಯನ್ನೆಬ್ಬಿಸಿ ಧರ್ಮಕ್ಕೆ ಲೋಪವನ್ನುಂಟುಮಾಡುತ್ತಲಿದ್ದಾರೆ. ಎಲೈ ಶಿಖಾವಿರೋಧಿಗಳೇ! ರಾವಬಹದ್ದೂರ ವಾರದಮಲ್ಲಪ್ಪನವರು ಛಾಪಿಸಿದ ವೀರಶೈವರ ಖಾನೇಷುಮಾರಿ ಎಂಬ ಗ್ರಂಥವನ್ನು ನೋಡಿ ಸಂಶಯಪರಾಧವನ್ನು ಮಾಡಿಕೊಂಡು ನಿಮ್ಮ ಅನುಯಾಯಿಗಳಿಗೆ ಶಿಖಾಧಾರಿಗಳಾಗಿರೆಂದು ಬೋಧಿಮಾಡಿರಿ. ಇಷ್ಟಕ್ಕೂ ನಿಮಗೆ ಸಮಾಧಾನವಿಲ್ಲದ ಪಕ್ಷದಲ್ಲಿ ಒಂದುಸಾವಿರ ರೂಪಾಯಿ ಸರತ್ತಿನಿಂದ ೧೦ ರೂಪಾಯಿ ಸ್ಟಾಂಪಿನ ಮೂಲಕ ಶಿವರುದ್ರಪ್ಪ ವಕೀಲ ಬಿದರ ಇವರ ವಿಳಾಸಕ್ಕೆ ಬರೆದು ಎಚ್ಚರಮಾಡಿರಿ. ನೀವು ವಾದದಲ್ಲಿ ಲಿಂಗಿಬ್ರಾಹ್ಮಣರಿಗೆ ಶಿರೋಮುಂಡನವನ್ನು ಸಿದ್ಧಮಾಡಿದರೆ ನಾವು ನಿಮಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ಕೊಡುತ್ತೇವೆ. ಇದೇ ನಿಶ್ಚಯ. ವ್ಯರ್ಥವಾಗಿ ಸನ್ಯಾಸಿಗಳಂತೆ ಶಿರೋಮುಂಡನವನ್ನು ಬೋಧಮಾಡಿ ಧರ್ಮಬಾಹಿರರಾಗಬೇಡಿರಿ! ಧರ್ಮಭೀರುಗಳಾಗಿರಿ!! ವೇದವಿರೋಧಿಗಳಾಗಬೇಡಿರಿ!!! ಇದರ ಜವಾಬನ್ನು ಕಾರ್ತಿಕ ಶು|| ಪಾಡ್ಯದೊಳಗಾಗಿ ತಿಳುಹಿಸಿರಿ. ವಾಯಿದೆ ಮೀರಿ ಬಂದ ಜವಾಬು ರದ್ದಾಗುವದು.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರಿ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ :—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[51] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು. REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೭ನೇ ಜುಲೈ ೧೯೩೦ [ಸಂಚಿಕೆ ೧೦.

WANTED

Candidates desiring to serve in Government, Railway and Canal Departments. Full particulars and Railway Fare Certificate on 2 annas Stamps.

Apply to:— (2)

IMPERIAL TELEGRAPH COLLEGE,
NAI SARAK, DELHI.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರಿ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ೪ ಆಣೆ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವಿಚಿತ್ರ ಸೃಷ್ಟಿ !

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕು ಕಾಮಲಾಪುರದ ಇಂಗಳಗಿ ಕಾಶಿಂಸಾಬ ಎಂಬಾತನ ಪತ್ನಿಯು ಕಳೆದ ಜೂನ್ 26 ನೆಯ ತಾರೀಖು ರಾತ್ರಿ ಎರಡು ಮುಖಗಳು, ನಾಲ್ಕು ಕೈಗಳು ಮತ್ತು 3 ಕಾಲುಗಳಿದ್ದ ಸುಂದರವಾದ ಒಂದು ಗಂಡು ಮಗುವನ್ನು ಹಡೆದಳೆಂದೂ, ಶಿಸುವು ಜನಿಸಿದ ಕೂಡಲೇ ಮೃತ್ಯುವಶವಾಯಿತೆಂದೂ ಒಬ್ಬ ಬಾತ್ಮೀದಾರರು ತಿಳುಹಿಸುತ್ತಾರೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಪೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ | ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ||

ಪ್ರಶಂಸಾಪತ್ರಿಕೆ.

ಮೈಸೂರು ಸಂಸ್ಥಾನಕ್ಕೆ ಸೇರಿದ ಮೇಲುಕೋಟೆ ನಿವಾಸಿಗಳಾದ ಶ್ರೀಯುತ ಕೆ. ಪಾರ್ಥಸಾರಥಿ ಅಯ್ಯಂಗಾರ್ಯರ ಪುತ್ರಿ ೧೩ ವರ್ಷ ವಯಸ್ಸಿನ **ಯದುಗಿರಿ** ಕುಮಾರಿಯು ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಅಪ್ಪಣೆಯ ಮೇರೆಗೆ ವೀರಶೈವಮತಸ್ಥಾಪಕರಾದ **ಶ್ರೀಜಗದ್ಗುರು ರೇಣುಕಾಚಾರ್ಯರ** ಪವಿತ್ರಚರಿತ್ರವನ್ನು ಭಕ್ತಿರಸಭರಿತವಾದ ಧನ್ಯಸರಣಿಯಿಂದಲೂ, ಭಾವಗಮ್ಯವಾದ ಬೋಧೆಯಿಂದಲೂ, ಸರಸಸಂಗೀತದಿಂದಲೂ, ವಿವಿಧ ವಿನೋದಪ್ರಯೋಪಕಥೆಗಳಿಂದಲೂ ಕೀರ್ತನರೂಪದಿಂದ ಬೋಧಿಸಿ ಸಕಲ ಸಾಮಾಜಿಕರನ್ನು ಆನಂದಕುಂದಿಲಹೃದಯರನ್ನಾಗಿ ಮಾಡಿದ್ದಾಳೆ. ಈ ಬಾಲಿಕೆಯಲ್ಲಿ ಸ್ವಭಾವಸಿದ್ಧವಾಗಿ ಮನೆಮಾಡಿಕೊಂಡಿರುವ ಶುದ್ಧವಾಣಿ, ಸರಸಸಂಗೀತ, ಕರ್ಣಾನಂದಕರಕೀರ್ತನಶೈಲಿ, ಕಥಾಕಥನಪದ್ಧತಿ, ಸಮಯೋಚಿತವರ್ಣನ, ರಸಭಾವ, ಗೀರ್ವಾಣವಾಣೀವೈಖರಿ, ಬುದ್ಧಿಚಾತುರಿ ಮೊದಲಾದ ದಿವ್ಯಗುಣಗಳನ್ನು ಕಂಡು ಸಂತುಷ್ಟಮನಸ್ಕರಾಗಿ ಶಾರದಾಂಶಶಾಲಿನಿಯಾದ ಈ ಬಾಲಿಕೆಗೆ

ಅಭಿನವಶಾರದೆ

ಎಂಬ ನೈಸರ್ಗಿಕವಾದ ಬಿರುದನ್ನು ಸುವರ್ಣಪದಕದಲ್ಲಿ ಉಟ್ಟಂಕಿಸಿ ದಯಪಾಲಿಸಿದ್ದೇವೆ. ಅಸಾಧಾರಣ ಸದ್ಗುಣಮಣಿಗಣಭೂಷಿತೆಯಾದ ಈ ಅಭಿನವಶಾರದೆಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನನುಗ್ರಹಿಸಿ ರಕ್ಷಿಸಲೆಂದು ಪ್ರಾರ್ಥಿಸುತ್ತೇವೆ.

ಮೈಸೂರು, ತಾ|| ೬-೭-೧೯೩೦. } ರಾಜಧಾನಿಯ ವೀರಶೈವಮಂಡಲಿ

ಪ್ರಶಂಸಾಪದ್ಯಗಳು.

ಶ್ರೀಮತಿ ಬಾಲಭಾರತಿ ಯದುಗಿರಿಕುಮಾರಿಯು
ಶ್ರೀ ರೇಣುಕಾಚಾರ್ಯರ ಚರಿತ್ರವನ್ನು ಕೀರ್ತಿಸಿದ
ಸಮಯದಲ್ಲಿ ರಾಜಧಾನಿಯ ವೀರಶೈವ
ಮಂಡಲಿಯವರು ಪುರಸ್ಕರಿಸಿದುದು.

ಅರೀಪ್ರತಿಭಾಶಾಲಿನಿ |
ಅರೀಸಂಸ್ಕಾರಶೋಭಿತೆ ವಚನವಿದ್ಯಾ ||
ಪಾರಂಗತೆಯೆವಳೀಗಳ್ |
ನಾರೀಜನರೊಳ್ಗೆ ಗೈದಿದಾ ಸರಸತಿಯೋ ||

ಧರೆಯೊಳ್ ಯದುಗಿರಿದೇವನ |
ಕರುಣಾರಸಸಿಂಧುವೋ ಮತಸುಧಾರಣೆಯಂ ||
ಹರಹಿದ ರಾಮಾನುಜನಾ |
ಪರತರತತ್ತ್ವಸುಧೆಯೋ ಯದುಗಿರಿಕುಮಾರೀ ||

ಎಳೆತನದೊಳ್ ಜನರ ಮನವ |
ಸೊಲಿಸುತೆ ಗಾಯನ ಕಲೆಯಿನತುಳವೈಖರಿಯಿಂ ||
ವಿಲಸಿತೆ ಯೀಬಾಲಿಕೆ ತಾಂ |
ಸಲೆತೀಯಲ್ **ಬಾಲಭಾರತಿ**ಯೆನಿಸದಿಹಳೇ ||

ಭಾರತಕೋಕಿಲೆಯೆನಿಸಲ್ |
ವೀರಸತಿ ಕವಿಕುಲಮಾನಿನಿ ಸರೋಜಿನಿ ತಾಂ |
ಸಾರತರ ಕಥನದಿಂದಿವ |
ಳಾರಯೆ **ಕರ್ಣಾಟಕೋಕಿಲೆ** ಸಹಜಮಿಳೆಯೊಳ್ ||

ವಿಬುಧಂ **ಕಾಶೀನಾಥಂ** |
ಸಭೆಯೊಳಧಿಕಪೀಠದೊಳಿರೆಯೀಬಾಲಿಕೆ ತಾಂ ||
ಸಭಿಕರ್ಗೆ ಮನಂಗೊಳಿಸುತ |
ಲಭಿಮತ ಗುರು**ರೇಣುಕಕಥನ**ಮನೊರೆದೆಸೆವಳ್ ||

ಹೋಲಿಕೆಯಿಲ್ಲದ ಕಥನಮ |
ನಾಲಿಸಿ ಮಹಿಶೂರ ವೀರಶೈವಜನಂಗಳ್ ||
ತಾಳುತೆಮೋದಮನಿತ್ತರ್ |
ಬಾಲೆಗೆ **ಅಭಿನವಶಾರದೆ** ಯೆಂಬೀಬಿರುದಂ ||

ಯದುಕುಲಕೃಷ್ಣನರೇಂದ್ರನ |
ಪದಪಿನ ರಾಜ್ಯದ ಸುಕೀರ್ತಿಚಂದ್ರಿಕೆಯೋ ನೀಂ ||
ಮುದಮಂ ಬೀರುತೆ ಸುಖಸಂ |
ಪದವೆರಸೀ ಭುವಿಯೊಳೆ ಚಿರಕಾಲಂ ಬಾಳ್ ||

ಕನ್ನಡನಾಡಿನೊಳೊಪ್ಪುವ |
ಸನ್ನುತ ಬಾಲಿಕೆಗೆ ವೀರಶೈವಜನಂಗಳ್ ||
ಮನ್ನಣೆಗೈವಾಸಮಯದೆ |
ಕನ್ನಡಿಗಂ **ಶಂಕರಾಖ್ಯಕವಿ**ಯಿದನೊರೆವಂ ||

ಮೈಸೂರು, ತಾ|| 6-7-1930. } ರಚಿಸಿದವರು :— ಗುಂ. ಚಿ. ಶಂಕರಪ್ಪ, ಮೈಸೂರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಗುರುನಿವಾಸ ಸಂಸ್ಕೃತ ವಿದ್ಯಾನಿಲಯವು.

ಬಳ್ಳಾರಿ.

ಶ್ರೀಮದಸಗೋಡು ಪಟ್ಟಾಧ್ಯಕ್ಷ ಶ್ರೀ ರುದ್ರಮುನಿ ಶಿವಾಚಾರ್ಯರು ಧಾರ್ಮಿಕ ವಿದ್ಯಾಭಿವೃದ್ಧಿಯೇ ಸಮಾಜಾಭಿವೃದ್ಧಿಯ ಮೂಲಕಾರಣವೆಂದು ತಿಳಿದು ಧಾರ್ಮಿಕ ವಿದ್ಯಾಭಿವೃದ್ಧಿಗೆ ಸಾಧನವಾದ ಒಂದು ಸಂಸ್ಕೃತ ವಿದ್ಯಾನಿಲಯವನ್ನು ವೀರಶೈವ ಸಮಾಜದ ಕೇಂದ್ರಸ್ಥಾನದಲ್ಲಿ ಸ್ಥಾಪಿಸುವ ಸತ್ಸಂಕಲ್ಪವುಳ್ಳವರಾಗಿದ್ದರು. ಇವರ ಸಂಕಲ್ಪಾನುಸಾರವಾಗಿ ಪ್ರಮೋದೂತ ಸಂ|| ರದ ಜೇಷ್ಠ ಬ|| 12 ಸೋಮವಾರ ಸಾಯಂಕಾಲ 6 ಗಂಟೆಯ ಸಮಯಕ್ಕೆ ಬಳ್ಳಾರಿ ಸಕ್ಕರೆ ಕರಡೆಪ್ಪನವರ ಚಾವಡಿಯಲ್ಲಿ ಬಳ್ಳಾರಿಯ ವೀರಶೈವ ಪ್ರಮುಖರು ಸಭೆಗೂಡಿ ಕೆಳಗೆ ಕಂಡಂತೆ ತೀರ್ಮಾನಗಳನ್ನು ಮಾಡಿದರು.

1 ಈ ಸಕ್ಕರೆ ಕರಡೆಪ್ಪನವರ ಚಾವಡಿಯಲ್ಲಿ ಸಂಸ್ಕೃತ ವಿದ್ಯಾನಿಲಯವಿರತಕ್ಕದ್ದು.

2 ಈ ಸಂಸ್ಕೃತ ವಿದ್ಯಾನಿಲಯಕ್ಕೆ "ಗುರುನಿವಾಸ ಸಂಸ್ಕೃತ ವಿದ್ಯಾನಿಲಯ" ವೆಂಬ ಹೆಸರು ಇರತಕ್ಕದ್ದು.

3 ಈ ವಿದ್ಯಾನಿಲಯವು ಮೇಲ್ಕಂಡ ಶ್ರೀಗಳವರಿಂದ ಸ್ಥಾಪಿಸಲ್ಪಟ್ಟಿದ್ದೆಂದು ಭಾವಿಸತಕ್ಕದ್ದು.

೪ ಈ ವಿದ್ಯಾನಿಲಯವು ಎಲ್ಲ ಪ್ರಾಂತದ ವೀರಶೈವರ ಧನ ಧಾನ್ಯಾದಿ ಸಹಾಯದಿಂದ ನಡೆಯತಕ್ಕದ್ದು.

5 ಈ ಚಾವಡಿಯಲ್ಲಿ ವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಧರ್ಮಾರ್ಥ ಭೋಜನಾಲಯವು ಇರತಕ್ಕದ್ದು.

6 ಈ ವಿದ್ಯಾನಿಲಯ ಮತ್ತು ಭೋಜನಾಲಯದ ಸುವ್ಯವಸ್ಥೆಗಾಗಿ ಒಂದು ಕಾರ್ಯನಿರ್ವಾಹಕರ ಕಮಿಟಿ ಇದ್ದು, ಆ ಕಮಿಟಿಯ ಸರ್ವಾಧಿಕಾರವು ಸದರಿ ಶ್ರೀಗಳವರಿಗೆ ಇರತಕ್ಕದ್ದು.

ಆದರೆ ಶ್ರೀಗಳವರು ಈ ವರ್ಷದಲ್ಲಿ ರಾ|| ಶ್ರೀ|| ಕೊಂಡ ಕುಂದಿ ಭೋಗೇಶಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ, ರಾ|| ಶ್ರೀ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರನ್ನು ಕೋಶಾಧ್ಯಕ್ಷರನ್ನಾಗಿಯೂ ನಿಯಮಿಸಿರುವರು.

ಸಂಸ್ಕೃತ ವಿದ್ಯಾರ್ಥಿಗಳಿಗೆ ಸೂಚನೆ.

ಈ ವಿದ್ಯಾನಿಲಯದಲ್ಲಿ ಮದ್ರಾಸು ಯೂನಿವರ್ಸಿಟಿಯ ವಿದ್ವಾನ್ ಮತ್ತು ಶಿರೋಮಣಿ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ಪಾಠಕ್ರಮಗಳು ಏರ್ಪಡಿಸಲ್ಪಟ್ಟಿವೆ.

ಈ ಕ್ರಮವನ್ನನುಸರಿಸಿ ಅಭ್ಯಾಸಮಾಡಲಪೇಕ್ಷಿಸುವ ವಿದ್ಯಾರ್ಥಿಗಳು ಇದೇ ಸಂ|| ರದ ಶ್ರಾವಣಮಾಸದೊಳಗಾಗಿ ಬಂದು ಸೇರತಕ್ಕದ್ದು. ಸೇರಲಿಚ್ಛಿಸುವ ವಿದ್ಯಾರ್ಥಿಗಳು ಅಧ್ಯಾಪಕರಿಂದ ಮೊದಲು ಪರೀಕ್ಷಿಸಲ್ಪಟ್ಟು ಯೋಗ್ಯರೆಂದು ಕಂಡಲ್ಲಿ ಸೇರಿಸಲ್ಪಡುವರು.

ವಿದ್ಯಾನಿಲಯದ ಕಾರ್ಯದರ್ಶಿ.

ಸೈಮನ್ ಸಪ್ತಕದ ವರದಿ.

ಸರ್ ತೇಜ್ ಬಹದ್ದೂರ್ ಸಪ್ರೂರವರ ಆಕ್ಷೇಪಣೆ.

(ಜೂನ್ 30 ನೇ ತಾರೀಖಿನ "ಹಿಂದೂ" ಪತ್ರಿಕೆಯಿಂದ)

ಸಿಮ್ಲಾ ಜೂನ್ 28.

ಸರ್ ತೇಜ್ ಬಹದ್ದೂರ್ ಸಪ್ರೂರವರು ಡಾಲ್‌ಹೌಸಿಯಿಂದ ಇಲ್ಲಿಗೆ ಬಂದಕೂಡಲೇ ಸೈಮನ್ ವರದಿಯನ್ನು ಪರೀಕ್ಷಿಸಿ, "ಇದು ಅಸಮಾಪನವಾದ ರಾಜಕೀಯ ಬೂಟಾಟಿಕೆ ಮತ್ತು ಕುತಂತ್ರವಾಗಿರುವದು" ಎಂದು ಹೇಳಿರುವರು. ಈ ವರದಿಯಿಂದ ಭರತಖಂಡದಲ್ಲಿ ಉಂಟಾಗಿರುವ ಅಭಿಪ್ರಾಯಕ್ಕೂ ಇಂಗ್ಲೆಂಡಿನಲ್ಲಿ ಉಂಟಾಗಿರುವ ಅಭಿಪ್ರಾಯಕ್ಕೂ ಬಹಳ ವ್ಯತ್ಯಾಸವಿರುವದೆಂದು ಒತ್ತಿ ಹೇಳಿರುವರು. ತಮ್ಮ ಅಭಿಪ್ರಾಯವನ್ನು ಅವರು ಈ ರೀತಿ ವಿವರಿಸಿರುವರು.

"ಭರತಖಂಡದಲ್ಲಿ ಸೈಮನ್ ವರದಿಯನ್ನು ಯಾರೂ ಹೊಗಳುವಂತೆ ಕಂಡುಬರುವದಿಲ್ಲ. ಇದಕ್ಕೆ ಬದಲಾಗಿ ಉದ್ದೇಶಪೂರ್ವಕವಾಗಿ ಮೊದಲನೆಯ ಭಾಗವನ್ನು ಹದಿನೈದು ದಿವಸಗಳ ಮುಂಚಿತವಾಗಿ ಪ್ರಕಟಗೊಳಿಸಿರುವದೆಂದು ಚೆನ್ನಾಗಿ ಅರಿತುಕೊಂಡಿರುವರು. ಕಮಿಟಿಯವರು ಭಾರತೀಯರ ಅಭಿಪ್ರಾಯಗಳು ಮತ್ತು ಸೂಚನೆಗಳು ಹಣ್ಣಾಗಾಗುವದಕ್ಕೂ, ಅದೇ ಸಮಯದಲ್ಲಿ ಭಾರತೀಯರು ವರದಿಯ ವಿಷಯದಲ್ಲಿ ಮಾಡಬಹುದಾದ ಆಕ್ಷೇಪಣೆಗಳಿಗೆ ವಿರುದ್ಧವಾಗಿ, ಇಂಗ್ಲೀಷ್, ಫ್ರೆಂಚ್ ಮತ್ತು ಅಮೇರಿಕೆಯವರ ಮನಸ್ಸನ್ನು (ವರದಿಗೆ ಅನುಕೂಲವಾಗಿ) ತಿರುಗಿಸುವದಕ್ಕೂ 15 ದಿವಸಗಳ ಅವಕಾಶವನ್ನು ಅಪೇಕ್ಷಿಸಿದರೆಂದು ಹೇಳಬಹುದು.

ಈ ಉಪಾಯವು ಇಂಗ್ಲೀಷ್ ಮತ್ತು ಅನ್ಯದೇಶಗಳ ಪತ್ರಿಕಾಕರ್ತರಿಗೆ ಭಾರತೀಯರ ವಿರುದ್ಧವಾಗಿ ಟೀಕೆಮಾಡಲು ವಿಶೇಷ ಅವಕಾಶವನ್ನು ಕಲ್ಪಿಸಿಕೊಟ್ಟಿತು. ರೋಥರ್‌ಮಿಯರ್ ಮತ್ತು ಬೀವರ್‌ಬ್ರೂಕ್ ಪಕ್ಷದ ಪತ್ರಿಕಾಕರ್ತರು, ಭಾರತ ಸ್ವಾತಂತ್ರ್ಯೋದ್ಯಮಕ್ಕೆ ಪ್ರಥಮದಿಂದಲೂ ವಿರೋಧವಾಗಿ ವರ್ತಿಸುತ್ತಿರಲು, ಕಮಿಟಿಯವರ ಈ ತಂತ್ರವು ಇವರ ವಿರೋಧ ವರ್ತನಕ್ಕೆ ಮತ್ತಷ್ಟು ಪ್ರೋತ್ಸಾಹಗೊಳಿಸಿತು. ಈ ಭಾರತಶತ್ರುಗಳು ಇದರಿಂದ ಲಾರ್ಡ್ ಅರ್ವಿನ್ನರ ಪ್ರಸಿದ್ಧಪತ್ರಿಕೆಯಿಂದ ಉಂಟಾಗಿದ್ದ (ಅಲ್ಪಸ್ವಲ್ಪ) ಸದಭಿಪ್ರಾಯವನ್ನು ನಾಶಮಾಡಿದರಲ್ಲದೆ ಭಾರತ ರಾಷ್ಟ್ರೀಯ ಹಕ್ಕುಬಾಧ್ಯತೆಗಳೂ, ಹಾಗೂ, ಕಳೆದ ನವಂಬರಿನ ಪ್ರಸಿದ್ಧಪತ್ರಿಕೆಯಲ್ಲಿ ಕಂಡುಬಂದಿದ್ದ ಲಾರ್ಡ್ ಅರ್ವಿನ್ ಮತ್ತು ಮಿ|| ಬೆನ್ನರವರ ತತ್ತ್ವಗಳು ಸಂಪೂರ್ಣವಾಗಿ ತಿರಸ್ಕರಿಸಲ್ಪಡುವಂತೆ ಮಾಡಿರುವರು. ವರದಿಯಲ್ಲಿ ಉಪಯೋಗಿಸಿರುವ ಶಬ್ದಗಳು ಓದುವವರಿಗೆ ವಿಶೇಷ ಘಾತುಕಗಳಾಗಿಯೂ, ಆಕ್ಷೇಪಣೀಯಗಳಾಗಿಯೂ ತೋರದಿದ್ದರೂ ಅದನ್ನು ಮಿಸ್ ಮೇಯೋಳ ತತ್ತ್ವವನ್ನೇ ನುಂಗುವರೀತಿಯುವದಾಗಿ ಹೇಳಬಹುದು. ಆದರೆ ಈ ದುಷ್ಟಪಟ್ಟಿಗಳು ಗೌರವಯುಕ್ತವಾದ ಹೊದದಾಟಕ್ಕೂ ರಾಜನೀತಿಗೂ ವಿರೋಧವಾಗಿರುವವು. ಇದರಿಂದ ಸರ್ ಜಾನ್ ಸೈಮನ್ ಮತ್ತು ಅವರ ಜೊತೆಗಾರರು ಅರಿಯದ ಪ್ರಪಂಚವನ್ನು ನೋಡಗೊಳಿಸುವದಕ್ಕಾಗಿ ಭರತಖಂಡದ ಮಿತ್ರರಂತೆ ವೇಷಹಾಕಿರುವ ಭಾರತಶತ್ರುಗಳೆಂದೂ, ಏಕಪಕ್ಷವನ್ನು ಹಿಡಿದು ವರ್ತಿಸುವವರೆಂದೂ ಭಾವಿಸಲ್ಪಡುವರು.

ನಾನು ಓದಿರುವ ಸಂಪೂರ್ಣ ವರದಿಯು ಭೀಕರ ಸ್ವರೂಪವುಳ್ಳದ್ದೆಂದೂ ರಾಜನೀತಿ ರಹಿತವಾದುದೆಂದೂ ಧಾರಾಳವಾಗಿ ಹೇಳುವೆನು. ಇದಕ್ಕಿಂತಲೂ ಈಗಿನ ಸುಧಾರಣೆಗಳೆಲ್ಲವನ್ನೂ ಹೊಡೆದುಹಾಕಿ, ಮಾಂಟಫರ್ಡರ ಸುಧಾರಣೆಯ ಪೂರ್ವಸ್ಥಿತಿಯನ್ನು ಅನುಸರಿಸಬೇಕೆಂದು ಹೇಳಿದ್ದರೆ ಕಮಿಟಿಯವರು ಹೆಚ್ಚು ಧೈರ್ಯಶಾಲಿಗಳೆಂದೂ, ಮುಚ್ಚುಮರೆಯಿಲ್ಲದೆ ವರ್ತಿಸುವವರೆಂದೂ ಹೇಳಿಸಿಕೊಳ್ಳುತ್ತಿದ್ದರು.

ಅವರು ಬಾಯಲ್ಲಿ ನಮಗೆ ಸ್ವರಾಜ್ಯವನ್ನು ಕೊಡುವದಾಗಿ ಹೇಳಿ ಗವರ್ನರ ಕೈಗೆ ಕೋರಡಾ ಕೊಟ್ಟಿರುವರು. ಸಂಸ್ಥಾನಿಕ ಸರಕಾರಗಳಲ್ಲಿ ನಮಗೆ ಸಮಾನವಾದ ಜವಾಬ್ದಾರಿಯನ್ನು ಕೊಡುವದಾಗಿ ಹೇಳಿ ಮಂತ್ರಿಗಳನ್ನು ಚುನಾಯಿಸುವ ಅಧಿಕಾರವನ್ನು ಗವರ್ನರಿಗೆ ವಹಿಸಿರುವದಲ್ಲದೆ ಕಾಯಿದೆ ಮತ್ತು ಹಣಕಾಸಿನ ಮೇಲೆ ಅಧಿಕಾರವನ್ನು ಹೊಂದಿರುವ ಇಬ್ಬರು ಅಧಿಕಾರಿಗಳ ಸಹಾಯವನ್ನು ಅವರಿಗೆ ಕೊಟ್ಟಿರುವರು. ಸರ್ವಪಕ್ಷೀಯರಿಂದ ಕೂಡಿದ ಅಸೆಂಬ್ಲಿಯೊಂದನ್ನು ನಮಗೆ ಕರುಣಿಸುವರಾದರೂ ಆ ಅಸೆಂಬ್ಲಿಗೆ ಇರಬೇಕಾದ ಅಧಿಕಾರ ಮತ್ತು ಜವಾಬ್ದಾರಿಯನ್ನು ಮಾತ್ರ ವಹಿಸಿರುವದಿಲ್ಲ. ಸಾರ್ವತ್ರಿಕ ಚುನಾವಣೆಯಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಗಳಿಂದ ಕೂಡಿದ ಈಗಿನ ಅಸೆಂಬ್ಲಿಯನ್ನು ರದ್ದುಪಡಿಸಿರುವರು. ಏಕೆಂದರೆ ಅದು ಅವರಿಗೆ ಭಯವನ್ನು ಹುಟ್ಟಿಸುತ್ತಿರುವದು.

ವೈಸ್ರಾಯರಿಗೆ ತಮ್ಮ ಮಂತ್ರಿಗಳನ್ನು ತಾವೇ ಚುನಾಯಿಸಿಕೊಳ್ಳುವ ಅಧಿಕಾರವನ್ನು ವಹಿಸಿ ತನ್ಮೂಲಕ ಸಾಮ್ರಾಜ್ಯಾಂತರ್ಗತ ರಾಜ್ಯಭಾರವನ್ನು ಸ್ಥಾಪಿಸಬೇಕೆಂದು ಸೂಚಿಸಿರುವರು. ಆದರೆ ಈ ಮಂತ್ರಿಗಳನ್ನು ಅಧಿಕಬಲವುಳ್ಳ ಪಕ್ಷದಿಂದ ಚುನಾಯಿಸುವಂತಿಲ್ಲ. ಹಾಗೂ ಆ ಮಂತ್ರಿಗಳು ನ್ಯಾಯವಿಧಾಯಕ ಸಭೆಗೆ ಜವಾಬ್ದಾರರಾಗುವಂತಿಲ್ಲ.

ಭರತಖಂಡವು ಶತ್ರುಗಳಿಂದ ರಕ್ಷಿಸಲ್ಪಡುವದು ಇಂಗ್ಲೆಂಡ ಸರಕಾರದ ಕರ್ತವ್ಯವೆಂದು ಹೇಳಿ ಆ ಸಂಬಂಧವಾದ ಸಂಪೂರ್ಣ ಅಧಿಕಾರವನ್ನು ವೈಸ್ರಾಯರಿಗೆ ವಹಿಸಿರುವರು. ಆದರೆ ಸಾಮ್ರಾಜ್ಯದ ಸರಕಾರದ ಆ ಕರ್ತವ್ಯಪಾಲನೆಗೆ ಬೇಕಾದ ಹಣವನ್ನು ಮಾತ್ರ ಅಸೆಂಬ್ಲಿಯವರೇ ಒದಗಿಸಬೇಕು. ಹಾಗೂ, ಅಸೆಂಬ್ಲಿಯವರು ತಮ್ಮದೊಂದು ಸೈನ್ಯವನ್ನು ಏರ್ಪಡಿಸಬೇಕೆಂದಿದ್ದರೆ ಅದಕ್ಕೆ ಬೇಕಾದ ಹೆಚ್ಚಿನ ಹಣವನ್ನೂ ಜನಗಳಿಂದ ತೆರಿಗೆಯ ರೂಪವಾಗಿ ವಸೂಲ್ಮಾಡಬಹುದು. ಸ್ಟೇಟ್ ಸೆಕ್ರೆಟರಿಯವರು ಎಂದಿನಂತೆ ದೊಡ್ಡ ಮೊಹರಾಗಿಯೇ ಇರಬೇಕು. ರಾಜರುಗಳನ್ನು ಸೈಮನ್ನರ ಕೋಣೆಗೆ ಬರುವಂತೆ ಆಹ್ವಾನಿಸಿರುವರು. ಅಲ್ಪಸಂಖ್ಯಾತ ಜನಾಂಗದವರು ತಮ್ಮ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳಬಹುದು. ಆದರೆ ಇತರ ಬಲಿಷ್ಠಪಕ್ಷದವರೊಡನೆ ಅವರಿಗಿರುವ ಅಸಮಾಧಾನಗಳನ್ನು ಅವರವರೇ ಪರಿಹರಿಸಿಕೊಳ್ಳಬೇಕು."

ಸರ್ ತೇಜ್‌ಬಹದ್ದೂರ್ ಸಪ್ರೂರವರು "ಇದು ಬ್ರಿಟಿಷರ ರಾಜನೀತಿ ತತ್ತ್ವದ ಮಾದರಿಯಾಗಿದೆ. ಇದನ್ನು ಅಸಮಾನವಾದ ರಾಜಕೀಯ ಬೂಟಾಟಿಕೆ ಮತ್ತು ಕುತಂತ್ರವೆಂದು ಹೇಳಲು ನಾನು ಸ್ವಲ್ಪವೂ ಹಿಂಜರಿಯುವುದಿಲ್ಲ. ಇಷ್ಟೇ ಅಲ್ಲ. ಅಶ್ರದ್ಧೆಯಿಂದ ಕೂಡಿರುವ ಹಾಗೂ ಕೋಪದಿಂದ ಕೂಡಿದ್ದರೂ ಶಾಂತವಾಗಿರುವ ಭರತಖಂಡದ ಮತ್ತು ಇಲ್ಲಿಯ ವಿದ್ಯಮಾನಗಳನ್ನು ಸರಿಯಾಗಿ ಅರಿಯದ ಪ್ರಪಂಚದಲ್ಲಿಡಲು ಇದು ಬಹಳ ಅಪಾಯಕರವಾದ ವರದಿಯಾಗಿರುವುದು. ಲಾರ್ಡ್ ಅರ್ವಿನ್ನರೂ ಮತ್ತು ಮಿ|| ವೆಡ್ಜ್‌ವುಡ್‌ಬೆನ್ನರು ಪದೇ ಪದೇ ಹೇಳುತ್ತಿರುವ "ಸಾಮ್ರಾಜ್ಯಾಂತರ್ಗತ ಸ್ವರಾಜ್ಯ" ಎಂಬ ಶಬ್ದವೇ ಕಮಿಟಿಯರಿಂದ ಹೊರದೂಡಲ್ಪಟ್ಟಿರುವದು.

ಸರ್ ತೇಜ್‌ಬಹದ್ದೂರ್ ಸಪ್ರೂರವರು ಅನಂತರ ಇದಕ್ಕೂ ದುಂಡುಮೇಜಿನ ಪರಿಷತ್ತಿಗೂ ಇರುವ ಸಂಬಂಧವನ್ನು ವಿವರಿಸಿರುವರು.

"ಕಾನ್ಫರೆನ್ಸಿನ ಪರಿಸ್ಥಿತಿಗಳೇನು? ಕಾನ್ಫರೆನ್ಸಿನಲ್ಲಿ ನಡೆಯಬೇಕಾದ ಕಾರ್ಯಕಲಾಪಗಳ ವಿಷಯದಲ್ಲಿ ಸರಕಾರಕ್ಕೂ, ವಿಧ ವಿಧ ಪಕ್ಷಗಳ ಮುಖಂಡರಿಗೂ ಪೂರ್ವಭಾವಿಯಾಗಿ ಯಾವ ಒಪ್ಪಂದವೂ ಬೇಡವೇ? ಸಧ್ಯದ ರಾಜಕೀಯ ಸ್ಥಿತಿಗೆ ಸಂಬಂಧಪಟ್ಟವರೆಲ್ಲರನ್ನೂ ನಾನು ಎಚ್ಚರಿಸುವದೇನಂದರೆ, ಎಂದಿನ ವರೆಗೆ ಕಾನ್ಫರೆನ್ಸಿನಲ್ಲಿ ಸರ್ ಜಾನ್ ಸೈಮನ್ನರ ಸಲಹೆಗಳನ್ನು ಮಾತ್ರ ಒಪ್ಪಿಕೊಳ್ಳುವರೆಂಬ ಭಾವನೆಯು ದೇಶದಲ್ಲಿರುವದೋ, ಎಂದಿನ ವರೆಗೆ ನಿಜವಾದ ಸ್ವರಾಜ್ಯ ತತ್ತ್ವಗಳ ಮೇಲೆ ಸ್ಥಾಪಿಸಲ್ಪಟ್ಟ ಸಾಮ್ರಾಜ್ಯಾಂತರ್ಗತ ರಾಜ್ಯಾಧಿಕಾರವು ದೂರದಲ್ಲಿಯೇ ಇರುವದೋ ಅಲ್ಲಿಯ ವರೆಗೆ ಸಧ್ಯದ ಸ್ಥಿತಿಯು ಕೊನೆಗಾಣುವಂತಿಲ್ಲ. ಸರಕಾರವು ಸ್ಪಷ್ಟವಾಗಿ ಮಾತನಾಡದೆ ಮೌನವಾಗಿಯೇ ಇರುವದಾದರೆ ಕಾಂಗ್ರೆಸ್ಸಿನ ಮುಖಂಡರೂ ಮೌನವಾಗಿರುವದನ್ನು ನಾನು ಆಕ್ಷೇಪಿಸಲಾರೆನು."

ಇಂಗ್ಲೆಂಡ ಸರಕಾರವು ಹೆಚ್ಚು ಧೈರ್ಯದಿಂದ ವರ್ತಿಸುವದಾದರೆ, ಈಗಲೂ ಈ ವಿಷಮಸ್ಥಿತಿಯನ್ನು ಕೊನೆಗಾಣಿಸಬಹುದು. ಇದರಿಂದ ಕೂಲಿಕಾರ ಸರಕಾರದ ಪ್ರಾಣಕ್ಕೆ ಅಪಾಯಗಳು ಸಂಭವಿಸಬಹುದು. ಆದರೆ ಇದರಿಂದ ಸಾಮ್ರಾಜ್ಯಕ್ಕೆ ಹೆಚ್ಚಿನ ಅಪಾಯಗಳು ಸಂಭವಿಸುವವು. ಏಕೆಂದರೆ ಇಂಗ್ಲೆಂಡಿನ ನಿಷ್ಕಪಟ ಸ್ವಭಾವದಲ್ಲಿ ನಂಬಿಕೆಯನ್ನಿಟ್ಟು ಸಾಮ್ರಾಜ್ಯದಲ್ಲಿ (ಸ್ವಾತಂತ್ರ್ಯದಿಂದ ಕೂಡಿದ) ಗೌರವವಾದ ಸ್ಥಾನವನ್ನು ಪಡೆಯಬೇಕೆಂಬ ಭರತಖಂಡದ ಆಶೆಯೆಂಬ ಬಂಡೆಯ ಮೇಲೆ ಈ ಸಾಮ್ರಾಜ್ಯವು ಬೇರೂರಿರುವುದು. ಭಾರತೀಯರ ಈ ನಂಬುಗೆಯು ನಾಶವಾದರೆ, ಮುಂದಿನ ಪರಿಣಾಮವು ಬಹಳ ಭೀಕರವಾಗುವದು. ಆದುದರಿಂದ ಭರತಖಂಡದ ರಾಜಕೀಯ ಪಕ್ಷವು ಒಪ್ಪದಿರುವ ಯಾವ ಆಡಳಿತ ಪದ್ಧತಿಯು ಭರತಖಂಡದಲ್ಲಿ ಬಹುಕಾಲ ನೆಲಸಿರಲಾರದೆಂಬುದನ್ನು ಅಧಿಕಾರಿಗಳು ಅರಿಯುವರೆಂದು ಭಾವಿಸುತ್ತೇನೆ. ಒಂದು ವೇಳೆ ಯಾವುದಾದರೊಂದು ಆಡಳಿತ ಪದ್ಧತಿಯನ್ನು ಬಲಾತ್ಕಾರದಿಂದ ಸ್ಥಾಪಿಸಿದರೆ, ಈ ದೇಶದಲ್ಲಿ ಕೆಲವು ತಿಂಗಳುಗಳಿಂದಲೂ ಸರಕಾರವನ್ನು ಪ್ರತಿಭಟಿಸುತ್ತಿರುವ ಉತ್ಸಾಹವು ಆ ನೂತನ ಆಡಳಿತವನ್ನೂ ಪ್ರತಿಭಟಿಸಿ, ಮುರಿಯದಿರುವದೇ? ಒಂದು ಕಡೆ ಜನರು ಅಸಹಕಾರ ಚಳವಳಿಯನ್ನು ನಿರಾಕ್ಷೇಪ್ಯವಾಗಿ ಆಕ್ಷೇಪಿಸುತ್ತ ಕಾಂಗ್ರೆಸ್ಸಿನವರೂ ಹಾಗೂ ಸರಕಾರವು ತಮ್ಮ ತತ್ತ್ವಗಳನ್ನು ಬದಲಾಯಿಸಬೇಕೆಂದು ಘಂಟಾಘೋಷವಾಗಿ ಹೇಳುತ್ತಿರುವರು. ಮತ್ತೊಂದು ಕಡೆಯಲ್ಲಿ ಕಮಿಟಿಯವರು ತಮ್ಮ ವರದಿಯನ್ನು ಒಪ್ಪಿಸಲು ಅತಿ ದೀರ್ಘಕಾಲವನ್ನು ತೆಗೆದುಕೊಂಡು, ದುಃಖಪೂರಿತ ಮುದ್ರೆಗಳಿಂದ ಕೂಡಿರುವರು. ಇತ್ತ ಸರಕಾರದವರೋ ಭರತಖಂಡದಲ್ಲಿ ತಮ್ಮ ನಿಜವಾದ ಉದ್ದೇಶವೇನೆಂಬುದನ್ನು ಬಹಿರಂಗ ಪಡಿಸದೆ, ಪುನಃ ಪುನಃ ದುಂಡುಮೇಜಿನ ಪರಿಷತ್ತಿನ ಬಾಗಿಲು ಇನ್ನೂ ತೆರೆದಿರುವದೆಂದೂ ನಾವು ಮಾತ್ರ ಆ ಬಾಗಿಲಿನಲ್ಲಿ ಹಾದು ಹೋದರೆ, ಕಮಿಟಿಯವರು ಮೂರ್ಖತೆಯನ್ನೂ ಮತ್ತು ಕಷ್ಟಗಳನ್ನೂ ಕ್ರಮಪಡಿಸಬಹುದೆಂದೂ ಹೇಳುತ್ತಿರುವರು."

"ಈಗಲಾದರೂ ಲಾರ್ಡ್ ಅರ್ವಿನ್ನರು ತಮ್ಮ ಅಧಿಕಾರ ಬಲವನ್ನು ಜ್ಞಾಪಕಕ್ಕೆ ತಂದುಕೊಂಡು ತಮ್ಮ ಉದ್ದೇಶವೇನೆಂಬುದನ್ನು ಧೈರ್ಯವಾಗಿ ಬಹಿರಂಗಪಡಿಸುವರೇ? ಅಥವಾ ಒಂದು ಕಾಲದಲ್ಲಿ ಮಹಮ್ಮದೀಯರಲ್ಲೂ, ಒಂದುಕಾಲದಲ್ಲಿ ವರ್ತಕರಲ್ಲಿಯೂ ಮತ್ತೊಂದು ಸಮಯದಲ್ಲಿ ಹಿಂದುಳಿದವರಲ್ಲಿಯೂ ನಂಬುಗೆಯನ್ನಿಟ್ಟುಕೊಂಡು ಕಡೆಗೆ ಹಿಂದುಮುಂದಾಲೋಚನೆಯಿಲ್ಲದೆ ತಮ್ಮ ಪ್ರಯತ್ನಗಳು ಯಾವ ಫಲವನ್ನೂ ಬಿಡದೆ, ತಮ್ಮ ಮಿತ್ರರ ಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗುತ್ತಿರುವದನ್ನು ಕಂಡು ಬೆಚ್ಚಿಬೆರಗಾಗುತ್ತಿರುವ ವಿರೋಧ ಪಕ್ಷದವರ ಕುತಂತ್ರಗಳಿಗೇ ಮರುಳಾಗುವರೋ?"

ಭರತಖಂಡದಲ್ಲಿರುವ ಆಂಗ್ಲೇಯರಲ್ಲಿ ವಿಜ್ಞಾಪನೆ.

ಸಮಾಧಾನಕ್ಕೆ ದಾರಿ.

ಮಿ|| ಎಚ್. ಬೀಡನ್‌ಬ್ಯಾಂಕ್ಸರವರು ಜುಲೈ 1 ನೆಯ ತಾರೀಖಿನ ದಿವಸ ನಾಗಪೂರದಿಂದ "ಟೈಂಸ್ ಆಫ್ ಇಂಡಿಯಾ" ಪತ್ರಿಕೆಗೆ ಈ ರೀತಿ ಬರೆದಿರುತ್ತಾರೆ.

"ಸಧ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಈ ದೇಶದಲ್ಲಿರುವ ಯೂರೋಪಿಯನ್ನರು ಏನುಮಾಡಬೇಕೆಂಬ ವಿಷಯದಲ್ಲಿ ಈ ಕೆಳಗೆ ಕಂಡ ಅಭಿಪ್ರಾಯವನ್ನು ದಯವಿಟ್ಟು ಪ್ರಕಟಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಮೊನ್ನೆ ಮೊನ್ನೆ ತಮ್ಮ "ಟೈಂಸ್ ಆಫ್ ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟವಾದ "ಛೇಂಬರ್ ಆಫ್ ಕಾಮರ್ಸ್" ಸಂಘದ ಪ್ರೆಸಿಡೆಂಟರು "ಇಂಡಿಯನ್ ಮರ್ಚೆಂಟ್ಸ್ ಛೇಂಬರ್" ಸಂಘದ ಪ್ರೆಸಿಡೆಂಟರಿಗೆ ಬರೆದ ಪತ್ರದಲ್ಲಿ ಭರತಖಂಡದ ನ್ಯಾಯವಾದ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಆಂಗ್ಲೇಯ ವರ್ತಕ ಪಕ್ಷದವರಿಗೆ ಇರುವ ಸಹಾನುಭೂತಿಯು ಚೆನ್ನಾಗಿ ವಿವರಿಸಲ್ಪಟ್ಟಿರುವದು. "ಯೂರೋಪಿಯನ್ ಅಸೋಸಿಯೇಷನ್ನಿ"ನ ಕಲ್ಕತ್ತೆಯ ಉಪಸಂಘದಲ್ಲಿ ಮಿ|| ಟಿ. ಛಾಪ್‌ಮನ್-ಮಾಟಿಮರ್‌ರವರು ಸಹ ಯೂರೋಪಿಯನ್ನರೂ ಭಾರತೀಯರೂ ಪರಸ್ಪರ ಅರಿತು ವರ್ತಿಸಬೇಕೆಂದೂ, ಅವರಲ್ಲಿಯೂ ಭಾರತೀಯರ ಶತ್ರು...

ಸ್ವಾತಂತ್ರ್ಯಸಂಗ್ರಾಮದ ವಿಷಯವಾಗಿ ಮಾತನಾಡುತ್ತಾ, ಭರತಖಂಡದ ರಾಜಕೀಯ ಕೈದಿಗಳನ್ನು ಬಿಟ್ಟಹೊರತು, ಯಾವ ಸಮಾಧಾನವೂ ಆಗುವಂತಿಲ್ಲವೆಂದೂ, ಸರಕಾರದ ದುಜ್ಞಾಳಿಕೆಯು ಕೇವಲ ಅನ್ಯಾಯವಾದದ್ದೆಂದೂ, ಈ ವಿಷಯದಲ್ಲಿ ಎಡಭಾಗದ ಕೂಲಿಕಾರರ ಪಕ್ಷದವರು ಸರ್ಕಾರಕ್ಕೆ ವಿರೋಧವಾಗಿ ಮತಕೊಡುವರೆಂದೂ ಹೇಳಿರುವರು.

ಮೊನ್ನೆ ಮೊನ್ನೆ ಸರಕಾರದಿಂದ ಕೈಸರ್-ಇ-ಹಿಂದೀ ರಜತಪದಕವನ್ನು ಪಡೆದಿದ್ದ ಮಿ|| ಲಕ್ಷ್ಮೀದಾಸ್ ಪೀತಾಂಬರರವರು ಸರಕಾರದ ದುಜ್ಞಾಳಿಕೆಯನ್ನು ನಿಷೇಧಿಸಿ ಪದಕವನ್ನು ಹಿಂತಿರುಗಿ ಕಳುಹಿಸಿರುವರು.

ಸರದಾರ್ ವಲ್ಲಭಭಾಯ್ ಪಾಟೀಲ್‌ರವರು ಜುಲೈ 1ನೆಯ ತಾರೀಖಿನ ದಿವಸ ಅಹಮದಾಬಾದಿನಿಂದ ಮುಂಬಯಿಗೆ ಬಂದರು. ಕಾಂಗ್ರೆಸ್ ಮುಖಂಡರು ಅವರನ್ನು ಉತ್ಸವಪೂರ್ವಕವಾಗಿ ಕಾಂಗ್ರೆಸ್ ಸದನಕ್ಕೆ ಕರೆದುಕೊಂಡು ಹೋದರು. ಉತ್ಸವದಲ್ಲಿ ಒಂದು ಲಕ್ಷ ಜನರು ಭಾಗಿಗಳಾಗಿದ್ದರು.

ಜುಲೈ 2 ನೆಯ ತಾರೀಖಿನ ದಿವಸ ಮುಂಬಯಿಯ ಹಾರ್ನಬಿರೋಡಿನಲ್ಲಿರುವ ಮೆಸ್ಸರ್ಸ್. ವೈಟವೇ ಲೇಡ್ಲಾ ಕಂಪೆನಿಯ ಮುಂದೆ ಸ್ವಯಂಸೇವಕರು ಬಹಿಷ್ಕಾರ ಚಳವಳಿಯನ್ನು ಮಾಡುತ್ತಿದ್ದಾಗ ಪೋಲೀಸರು ನೆರೆದಿದ್ದ ಗುಂಪನ್ನು ದೊಣ್ಣೆಗಳಿಂದ ಹೊಡೆದು ಚದರಿಸಲು ಪ್ರಯತ್ನಿಸಿದರು. ಎಂಟು ಜನರಿಗೆ ಘಾಯಗಳಾಗಿರುವವು.

ಸರ್ ಜಮ್‌ಶೇಟ್ಜಿ ಜೀಜೀಭಾಯ್‌ರವರು ಕಾಂಗ್ರೆಸ್ ಆಸ್ಪತ್ರೆಗೆ 10,000 ರೂ. ಗಳನ್ನು ಕೊಟ್ಟಿರುವರು.

ಪಂಡಿತ ಮೋತೀಲಾಲರ ದಸ್ತಗಿರಿಯನ್ನೂ, ಕಾಂಗ್ರೆಸ್‌ವರ್ಕಿಂಗ್ ಕಮಿಟಿಯು ಕಾಯಿದೆಗೆ ವಿರೋಧವಾದ ಕೂಟವೆಂದು ಸರಕಾರದಿಂದ ಬಹಿಷ್ಕರಿಸಲ್ಪಟ್ಟಿರುವದನ್ನೂ ನೋಡಿ ಪಂಡಿತ ಮದನಮೋಹನಮಾಳವೀಯರವರು ಸಂಪೂರ್ಣವಾಗಿ ಕಾಂಗ್ರೆಸ್‌ಪಕ್ಷವನ್ನು ವಹಿಸಿರುವದಾಗಿ ಆಕ್ಟಿಂಗ್ ಪ್ರೆಸಿಡೆಂಟರಾದ ಸರದಾರ್ ವಲ್ಲಭಭಾಯ್ ಪಾಟೀಲ್‌ರವರಿಗೆ ಟೆಲಿಗ್ರಾಮ್ ಕೊಟ್ಟಿದ್ದರು. ಸರದಾರರಿಗೆ ಆ ತಂತಿಯು ತಲಪಲೇ ಇಲ್ಲ! ಸರದಾರರು ವೃತ್ತಪತ್ರಿಕೆಗಳಲ್ಲಿ ಈ ವಿಷಯವನ್ನು ಓದಿಕೊಂಡು, ಪಂಡಿತನ್ನು ವರ್ಕಿಂಗ್ ಕಮಿಟಿಯ ಮೆಂಬರರಾಗಿ ನೇಮಿಸಿಕೊಂಡಿರುವರು.

ಮುಂಬಯಿಯ ಚಿನ್ನ ಬೆಳ್ಳಿ ವ್ಯಾಪಾರಸ್ಥರೆಲ್ಲರೂ ಸಭೆಸೇರಿ ಇನ್ನುಮುಂದೆ ಇಂಗ್ಲಂಡಿನಿಂದ ಯಾರೂ ಚಿನ್ನ ಬೆಳ್ಳಿಯನ್ನು ತರಿಸಕೂಡದೆಂದು ಕಟ್ಟುಮಾಡಿಕೊಂಡಿರುವರು.

ಕಳೆದವಾರ ಈ ಕೆಳಗೆ ಕಂಡಂತೆ 500 ಜನ ಸ್ವಯಂ ಸೇವಕರು ಮತ್ತು ಮುಖಂಡರು ದಸ್ತಗಿರಿಮಾಡಲ್ಪಟ್ಟಿರುವರು.

ಮುಂಬಯಿ 79, ವೈಮೂಸಿಂಗ್ 51, ತಣುಕು 39, ಕಲ್ಕತ್ತಾ 37, ಎಲ್ಲೂರು 35, ಕೊಯಮತ್ತೂರು 27, ದೆಹಲಿ, 36 ಲಕ್ನೊ 27, ಅಲಹಾಬಾದ್ 26, ತಿರುಚನಾಪಲ್ಲಿ 21, ಕ್ವಿಲಾನ್ 21, ನೆಲ್ಲೂರು 21, ತ್ರಿವಾಡಿ 18, ಕುಂಭಕೋಣಂ 17, ರೇಪಳ್ಳಿ 14, ಬನಾರಿಸ್ 13, ಕವಾಲಿ 13, ಬಾಪಟ್ಲಾ 13, ಕಲ್ಲೀಕೋಟೆ 11, ಭೀಮವರಂ 10, ಪಾಯನೂರು 10, ಲಾಹೋರ್ 11, ಕಡಲೂರು 7, ರಾಜಮಹೇಂದ್ರಿ 6, ಮಂಗಳೂರು 6. ಕಿಶೋರಗಂಜ 5, ತಾಡೇಪಲ್ಲಿಗುಡೆಂ 5, ಮಚಲೀಪಟ್ಟಣ 4, ನರಸರಾವ್‌ಪೇಟೆ 4, ಅಮೃತಸರ 3, ಕೊಪ್ಪೂರು 3, ಮಧುರೆ 2, ಆಂಗೋಲೆ 2. ಗುಂಟೂರು 2, ಬರಹಾಂಪೂರ 1, ಒಟ್ಟು 500.

ಇತಿಹಾಸವನ್ನು ಗೋಕುಹಾಕಬೇಡಿರಿ! ಗಣಿತಪ್ರಶ್ನಗಳನ್ನು ಬಿಡಿರಿ; ಸ್ವಾತಂತ್ರ್ಯದ ಪ್ರಶ್ನೆಯನ್ನು ಬಿಡಿಸಿರಿ.

ಮುಂಬಯಿ ವಿದ್ಯಾರ್ಥಿಗಳ ಸಭೆಯಲ್ಲಿ ಪಂ|| ಮೋತೀಲಾಲರು ನುಡಿದದ್ದೇನಂದರೆ:—

ಕೆಲವು ಪುಸ್ತಕಗಳನ್ನು ಗೋಕಹಾಕಿ ಪರೀಕ್ಷೆಗಳನ್ನು ಪಾಸಾದರೆ ಶಿಕ್ಷಣಪಡೆದಂತಾಗಲಿಲ್ಲ. ಸ್ವಾತಂತ್ರ್ಯಕ್ಕಾಗಿ ಹೂಡಿರುವ ಸಮರಾಂಗಣದಲ್ಲಿ ಧುಮುಕಿ ನಿಮ್ಮ ಸಾಹಸದಿಂದ ಸ್ವಾತಂತ್ರ್ಯವನ್ನು ಬೇಡುತ್ತಿರುವ ಭಾರತಮಾತೆಯ ನಿಜವಾದ ಪುತ್ರರೆನಿಸಿಕೊಂಡರೆ ಮಾತ್ರ ನಿಜವಾದ ಶಿಕ್ಷಣ ಪಡೆದಂತಾಗುವದು. ಈ ಬಗೆಯ ಶಿಕ್ಷಣವನ್ನೇ ಇಂದು ಭಾರತವರ್ಷದ ತರುಣರು ಪಡೆಯಬೇಕು. ಇಂದಿನ ತರುಣರೇ ನಾಳಿನ ನಾಗರೀಕರು. ರಾಷ್ಟ್ರದ ಭವಿಷ್ಯವು ತರುಣರ ಕೈಯಲ್ಲಿರುತ್ತದೆ. ಇದು ನಿಮಗೆ ಹೊಳೆಯದಿದ್ದರೆ ಎಷ್ಟು ಮಾತಾಡಿದರೂ ವ್ಯರ್ಥವೇ ಸರಿ.

ರಾಷ್ಟ್ರದ ಭವಿಷ್ಯವು ತರುಣರ ಕೈಯಲ್ಲಿರುವದೆಂಬ ಮಾತು ನಿಮಗೆ ಹೊಳೆದಿದ್ದರೆ ನೀವು ಇಲ್ಲಿಯವರೆಗೆ ನಿಮ್ಮ ರಾಷ್ಟ್ರಕ್ಕಾಗಿ ಏನುಮಾಡಿರುವಿರೆಂಬುದನ್ನು ನನಗೆ ತಿಳುಹಿಸಿರಿ. ಅಸಹಕಾರಚಳವಳಿಯು ಭರದಲ್ಲಿದ್ದಾಗ ವಿದ್ಯಾರ್ಥಿಗಳಿಗೆ ಸರಕಾರೀ ಶಾಲೆಗಳನ್ನು ಬಿಡಬೇಕೆಂದು ರಾಷ್ಟ್ರಮುಖಂಡರು ಉಪದೇಶಿಸಿದ್ದು ನಿಮಗೆ ಗೊತ್ತಿರಬಹುದು. ಆ ಸಮಯದಲ್ಲಿ ಮುಂದೆ ಕಲಿಯಬೇಕೆನ್ನುವವರಿಗೆ ರಾಷ್ಟ್ರೀಯ ಶಾಲೆಗಳನ್ನೇರ್ಪಡಿಸುವೆವೆಂದು ರಾಷ್ಟ್ರಮುಖಂಡರು ಆಶ್ವಾಸನವನ್ನಿತ್ತಿದ್ದರು. ಆದರೆ ಈಸಲ ನಾವು ನಿಮಗೆ ಶಾಲೆ ಕಾಲೇಜುಗಳನ್ನು ಬಿಡಿರೆಂದು ಹೇಳಿದರೂ ನಿಮ್ಮ ಮುಂದಿನ ಶಿಕ್ಷಣದ ಬಗ್ಗೆ ಬೇರೆ ವ್ಯವಸ್ಥೆಯನ್ನು ಮಾಡುತ್ತೇವೆಂದು ನಾವು ಹೇಳುವದಿಲ್ಲ. ಇದಕ್ಕೆ ಕಾರಣವು ಮೇಲೆಯೇ ಇದೆ. ಇದು ಯುದ್ಧದ ಸಮಯವು. ಈ ಕಾಲದಲ್ಲಿ ನೀವು ಸಮರಾಂಗಣದಲ್ಲಿ ನಿಂತು ಸ್ವಾತಂತ್ರ್ಯಕ್ಕಾಗಿ ಹೋರಾಡುವದು ನಿಮ್ಮ ಕರ್ತವ್ಯವು. ಅಲ್ಲದೆ ವಿದ್ಯಾಭ್ಯಾಸಕ್ಕಾಗಲೀ ಅಥವಾ ಸ್ವಂತ ಬೇರೆ ಕೆಲಸಗಳಿಗಾಗಲೀ ನಿಮಗೆ ಸಮಯವಾದರೂ ದೊರೆಯುವದೆಲ್ಲಿಂದ? ಸ್ವಾತಂತ್ರ್ಯಕ್ಕಾಗಿ ಹೂಡಿರುವ ಯುದ್ಧವನ್ನು ಅತ್ಯುತ್ಸಾಹದಿಂದ ನಡೆಯಿಸುವದೊಂದೇ ಹಿಂದೀಯರಾದ ನಾವು ಈಗ ಮಾಡತಕ್ಕ ಕೆಲಸ.

ಮಹಾಯುದ್ಧದ ಸಮಯದಲ್ಲಿ.

ಮಹಾಯುದ್ಧದ ಸಮಯದಲ್ಲಿ ಯುರೋಪಖಂಡದ ವಿದ್ಯಾರ್ಥಿಗಳೇನುಮಾಡಿದರೆಂಬುದು ನಿಮಗೆಲ್ಲರಿಗೂ ಗೊತ್ತಿರುವದರಿಂದ ನಾನು ವರ್ಣಿಸುವ ಆವಶ್ಯಕತೆಯಿಲ್ಲ. ಆಕ್ಸ್‌ಫರ್ಡ್ ಕೇಂಬ್ರಿಡ್ಜ್ ಮುಂತಾದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಆ ಸಮಯದಲ್ಲಿ ಅಭ್ಯಾಸಪರೀಕ್ಷೆಗಳ ಮೋರೆ ನೋಡಲಿಲ್ಲ. ಅವೆಲ್ಲವುಗಳನ್ನು ಮೂಲೆಗೊತ್ತಿ ತಮ್ಮ ಮಾತೃಭೂಮಿಯ ಮಾನಕಾಯುವದಕ್ಕಾಗಿ ಸಮರಾಂಗಣದ ಕಡೆಗೆ ಧಾವಿಸಿದರು. ರಣಾಂಗಣಕ್ಕೆ ಹೋದ ಇವರಲ್ಲಿ ಎಷ್ಟೋ ಜನರು ಮರಳಿಬಂದರು. ತಿರುಗಿ ಬಂದವರಲ್ಲಿ ಎಷ್ಟೋ ಜನರು ಅಂಗಾಂಗಗಳನ್ನು ಕಳೆದುಕೊಂಡು ಮೂಲೆ ಗುಂಪಾದರು. ಯಾತಕ್ಕಾಗಿ? ತಮ್ಮ ಮಾತೃಭೂಮಿಯ ಮಾನ ಕಾಯುವದಕ್ಕಾಗಿ! ಹಿಂದುಸ್ಥಾನವಾದರೂ ತನ್ನ ಮಕ್ಕಳಿಂದ ಇದೇ ಬಗೆಯ ಸ್ವಾರ್ಥತ್ಯಾಗವನ್ನು ಬಯಸುತ್ತದೆ.

ಈಗ ನಾನು ಸದ್ಯದ ಸ್ವಾತಂತ್ರ್ಯಸಮರದ ಅರ್ಥವನ್ನು ಹೇಳುತ್ತೇನೆ. ಇದೇ ಕೊನೆಯ ಯುದ್ಧ. ಇದರಲ್ಲಿ ನೀವು ಗೆದ್ದರೆ ನಿಮ್ಮ ದೇಶವು ಸ್ವತಂತ್ರವಾಗುವದು. ಇಲ್ಲವಾದರೆ ಶತಮಾನಗಳ ಪರ್ಯಂತರ ನೀವು ಪಾರತಂತ್ರ್ಯಸಂಕಟದಲ್ಲಿ ಉರುಳಾಡುವಿರಿ. ಇದು ಸುಧಾರಣೆಗಳಿಗಾಗಿ ಹೂಡಿದ ಯುದ್ಧವಲ್ಲ. ನಮ್ಮ ದೇಶದ ಒಡೆತನಕ್ಕಾಗಿ ಹೂಡಿದ ಸಂಗ್ರಾಮವು. ಇಂಥ ಪ್ರಸಂಗಗಳು ಮನುಷ್ಯನ ಇತಿಹಾಸದಲ್ಲಿ ವಿರಲವಾಗಿ ಬರುತ್ತವೆ. ಪ್ರಸಂಗವೇನೋ ನಿಮ್ಮ ಮುಂದೆ ಬಂದಿದೆ. ಅದರ ಉಪಯೋಗವನ್ನಾದರೂ ಮಾಡಿಕೊಳ್ಳಿರಿ; ಇಲ್ಲವೇ ಕಣ್ಣುಮುಚ್ಚಿಕೊಂಡು ಸುಮ್ಮನೇ ಕುಳಿತುಕೊಳ್ಳಿರಿ. ಆದರೆ ಈಗ ತೋರಿಸಿದ ನಿಮ್ಮ ದೌರ್ಬಲ್ಯವೇ ನಿಮ್ಮ ಸಂತತಿಯ ಕೈಕಾಲುಗಳಿಗೆ ಪಾರತಂತ್ರ್ಯದ ಸಂಕೋಲೆಗಳನ್ನು ತೊಡಿಸುವದೆಂಬುದನ್ನು ಲಕ್ಷ್ಯದಲ್ಲಿಡಿರಿ. ಇತಿಹಾಸದಲ್ಲಿ ನಿಮ್ಮ ವಿಷಯವಾಗಿ ಏನೆಂದು ಉಲ್ಲೇಖಿಸುವರು ಬಲ್ಲಿರಾ? ಸ್ವದೇಶದ ಪಾರತಂತ್ರ್ಯಪಾಶವನ್ನು ಹರಿಯಲು ಬಂದ ಸುಪ್ರಸಂಗವನ್ನು ವ್ಯರ್ಥವಾಗಿ ಕಳೆದುಕೊಂಡಿರೆಂದು ಉಲ್ಲೇಖಿಸಲ್ಪಡುವದು. ಈ ಪ್ರಕಾರ ನಿಮ್ಮ ಹೆಸರಿಗೆ ಕುಂದನ್ನುಂಟುಮಾಡಿಕೊಳ್ಳಲಿಚ್ಛಿಸುವಿರೋ?

ಸ್ವಾತಂತ್ರ್ಯ ಅಥವಾ ಅಭ್ಯಾಸ.

ನನಗೆ 70 ವರ್ಷ ವಯಸ್ಸಾಗುತ್ತ ಬಂದಿತು. ನಾನಿನ್ನು ಹಿಂದೆ ಬಾಳಿದಂತೆ ಮುಂದೆ ಬಾಳುವದಿಲ್ಲ. ಆದರೆ ಸಾಯುವ ಪೂರ್ವದಲ್ಲಿ ನನ್ನ ದೇಶವು ಸ್ವತಂತ್ರವಾದುದನ್ನು ನೋಡುತ್ತೇನೆಂದು ನನಗೆ ನಿಶ್ಚಯವಾಗಿ ಅನಿಸುತ್ತದೆ. ನನಗಿಷ್ಟು ಭರವಸೆಯುಂಟಾಗಲು ಕಾರಣವೇನಂದರೆ ನನ್ನ ದೇಶಬಾಂಧವರು ಬೇಕಾದಾಗ ಸ್ವಾರ್ಥತ್ಯಾಗಮಾಡಲು ಸಿದ್ಧರಿರುವರು.

ನಿರ್ದಿಷ್ಟಧ್ಯೇಯವನ್ನು ಹೊಂದುವವರೆಗೆ ನಾನು ಸುಮ್ಮನೇ ಕೂಡ್ರುವದಿಲ್ಲ. ಈಗ ನಿಮ್ಮನ್ನು ಕೇಳುತ್ತೇನೆ:—ಸ್ವದೇಶದ ಸ್ವಾತಂತ್ರ್ಯ ಗಳಿಸುವ ಗುಹ್ಯದಂಥ ಪ್ರಶ್ನೆಯು ನಿಮ್ಮ ಮುಂದೆ ನಿಂತಿರಲು ಇನ್ನೂ ನೀವು ಗಣಿತಶಾಸ್ತ್ರದೊಳಗಿನ ಹುರುಳಿಲ್ಲದ ಪ್ರಶ್ನೆ ಪ್ರಮೇಗಳನ್ನೇ ಬಿಡಿಸುತ್ತ ಕೋಣೆಗಳಲ್ಲಿ ಕುಳಿತುಕೊಳ್ಳುವಿರೋ? ನಿಮ್ಮ ದೇಶದ ನೂತನವಾದ ಇತಿಹಾಸವು ನಿಮ್ಮ ಕಣ್ಮುಂದೆಯೇ ಸಿದ್ಧವಾಗುತ್ತಿರಲು ಅದನ್ನು ಬಿಟ್ಟು ಅಮ್ಮನ ಕಥೆಗಳಂತೆ ಹಳೆಯವಾಗಿರುವ ಇತಿಹಾಸಗಳನ್ನೇ ಗೋಕುಹಾಕುವಿರೋ? ನಿಮ್ಮ ಸ್ವದೇಶಬಂಧು ಭಗಿನಿಯರ ಎಲುಬುಗಳು ಮುರಿಯುತ್ತಿರಲು ತಲೆಗಳು ಒಡೆಯುತ್ತಿರಲು ನೀವಿನ್ನೂ ನುಸಿಗಳಂತೆ ಪುಸ್ತಕಗಳಲ್ಲಿಯೇ ಕುಳಿತುಕೊಂಡಿರುವಿರೋ?

ಬ್ರಿಟಿಷರ ಸತ್ತ್ವಯ ಕೊನೆ.

ಯುರೋಪದ ರಾಷ್ಟ್ರಗಳು ಅದರಲ್ಲಿಯೂ ಬ್ರಿಟನ್ನವು ತನ್ನ ದೇಶದ ಹೆಣ್ಣುಮಕ್ಕಳಿಗೆಷ್ಟು ಮರ್ಯಾದೆಯನ್ನು ಕೊಡುತ್ತಿತ್ತೆಂಬುದನ್ನು ಬಲ್ಲೆನು. ಆದರೆ ಅದೇ ದೇಶದವರು ಅಥವಾ ಅವರ ಪ್ರತಿನಿಧಿಗಳು ಹಿಂದೂ ಸ್ತ್ರೀಯರ ಪಾವಿತ್ರ್ಯವನ್ನು ಕೆಡಿಸುತ್ತಿರುವದನ್ನು ನೋಡಿದರೆ ಬ್ರಿಟಿಷರ ವಿನಾಶಕಾಲವು ಸಮೀಪಿಸಿರುವದೆಂದು ನಿಶ್ಚಯವಾಗಿ ಅನಿಸದಿರಲಾರದು.

ಕ. ಬಾ.

ಸ್ವೀಕಾರ.

ಧಾರವಾಡ ಡಿ|| ಹಾನಗಲ್ಲ ತಾ|| ಬಮ್ಮನಹಳ್ಳಿಯಲ್ಲಿರುವ ಮ|| ರಾ|| ಚನ್ನಬಸಪ್ಪ ಸುಕಾಲಿ ಇವರ ಪುತ್ರ ಚಿ|| ಮುರಿಗಪ್ಪನಿಗೆ ಮ|| ರಾ|| ಹೊಳಲದ ಚನ್ನಬಸಪ್ಪನವರ ಪುತ್ರಿ ಚಿ|| ಸೌ|| ಶಿವವ್ವನನ್ನೂ, ಸದರಿ ಮ|| ರಾ|| ಹೊಳಲದ ಚನ್ನಬಸಪ್ಪನವರ ಪುತ್ರ ಚಿ|| ಗುರುಸಿದ್ಧಪ್ಪನಿಗೆ ಹಾವೇರಿಯಲ್ಲಿರುವ ಮ|| ರಾ|| ಯರೇಶೀಮೆ ಬಸವಲಿಂಗಪ್ಪನವರ ಪುತ್ರಿ ಚಿ|| ಸೌ|| ಮಹಾದೇವವ್ವನನ್ನೂ ಕೊಟ್ಟು ನೆರವೇರಿಸಿದ ಸಮಯದಲ್ಲಿ ವಧೂವರರಿಂದ ಸಮರ್ಪಿಸಿದ **3** ರೂ. ಗಳು ಹಾಗೂ ಗಡ ಹಿಂಗ್ಲೇಜದ ಮ|| ರಾ|| ವೀರಪ್ಪಾ ಕೋರಿ ವಕೀಲ ಇವರ ಪುತ್ರ ಶಂಕರಪ್ಪನಿಗೆ ಅಥಣಿ ಮ|| ರಾ|| ಸಿದ್ಧಲಿಂಗಪ್ಪನವರ ಪುತ್ರಿ ಚಿ|| ಸೌ|| ಪಾರ್ವತವ್ವನನ್ನೂ, ಗಡ ಹಿಂಗ್ಲೇಜದ ಮ|| ರಾ|| ವೀರಪ್ಪಾ ಯರಟೆ ವಕೀಲ ಇವರ ಪುತ್ರ ಚಿ|| ಗುರುಪಾದಪ್ಪನಿಗೆ ಮ|| ರಾ|| ಚನ್ನಮಲ್ಲಪ್ಪ ಅಣ್ಣಾ ಕಂಕಣವಾಡಿ ಇವರ ಪುತ್ರಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವರನ ಕಡೆಯಿಂದ ಸಮರ್ಪಿಸಲ್ಪಟ್ಟ **2** ರೂ. ಒಟ್ಟು **5** ರೂ. ಗಳು ಬಂಕಾಪುರದ ಶ್ರೀ|| ಷ|| ಬ್ರ|| ಅರಳೆಲೆ ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯುಲೆಂದು ಹಾರೈಸುತ್ತೇವೆ. ಸಂ.—

ಸುಭದ್ರಮ್ಮನವರ ಸಾಕ್ಷಶೂಲ.

ಪೆರಂಬದೂರು ಶ್ರೀಮತಿ ಸುಭದ್ರಮ್ಮನವರು ಬೆಜವಾಡದ ಗಾಂಧೀ ಮೈದಾನದಲ್ಲಿ ೩೧-೫-೩೦ ನೇ ದಿನ ಭಾಷಣಮಾಡುತ್ತ ಇನ್ನು ಪೋಲೀಸಿನವರು ನೌಕರಿಯಲ್ಲಿರಲು ಧರ್ಮವಲ್ಲ. ಅವರಿಗೂ ಅಂತರಂಗದಲ್ಲಿ ವ್ಯಸನವಾಗುತ್ತಿದೆ. ಅವರು ಗೇಳಿದ್ದೇ ಸಾಕು. ಎಂಬುದಾಗಿ ಹೇಳಿದ ಅಪರಾಧಕ್ಕೆ ಗುರಿಯಾದರೆಂದು ೧೩ ನೇ ತಾರೀಖಿನದಿನ ವಿಚಾರಣೆ ನಡೆಯಿಸಿ, ಆಕೆಗೆ ೬ ತಿಂಗಳು ಸಾದಾ ಶಿಕ್ಷೆ ವಿಧಿಸಿದರು. ಆಗ ಸಂತೋಷದಿಂದ ಶ್ರೀಮತಿ ಸುಭದ್ರಮ್ಮನವರು ಹೀಗೆ ಹೇಳಿದರು—

"ನನ್ನ ಯೋಗ್ಯತಾನುಸಾರವಾಗಿ ಮೂರುತಿಂಗಳಿಂದ ನಾನು ದೇಶಸೇವೆ ಮಾಡುತ್ತಿದ್ದೇನೆ. ಸರಕಾರದವರೀಗ ನನ್ನನ್ನು ಗೌರವಿಸಿರುವರು. ಸಂತೋಷ! ಭರತಖಂಡದ ಸ್ಥಿತಿಯು ಎಲ್ಲರಿಗೂ ಗೊತ್ತು. ಸರಕಾರದವರಾದರೋ ರಾಷ್ಟ್ರೀಯ ಚಳವಳಿಯನ್ನು ಧ್ವಂಸ ಮಾಡಲು ಬೇಕಾದ ಸಾಹಸವನ್ನು ಮಾಡುತ್ತಿದ್ದಾರೆ. ಈಗಲೂ ನನ್ನ ಸೋದರ ಸೋದರಿಯರು ತಮ್ಮ ಕರ್ತವ್ಯವನ್ನು ಅರಿತು, ಆತ್ಮಯಜ್ಞಕ್ಕೆ ಸಿದ್ಧರಾಗದೆ ಹೋದರೆ, ಭರತಖಂಡವು ನರಕಕ್ಕೆ ಬಿದ್ದಂತೆಯಾಗಿ ಶತಮಾನಗಳ ವರೆಗೂ ತಲೆಯೆತ್ತುವಂತಿಲ್ಲ. ನನ್ನ ಪೋಲೀಸು ಬಾಂಧವರಿಗೂ, ಮ್ಯಾಜಿಸ್ಟ್ರೇಟ್ ಬಾಂಧವರಿಗೂ ಈ ಕರ್ತವ್ಯವು ಬಿಟ್ಟಿದ್ದಲ್ಲ. ಅವರು ನಿಜವಾದ ಭಾರತೀಯರೆನಿಸಿ ಕೂಡಲೇ ತಮ್ಮ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಟ್ಟು, ದೇಶಸೇವೆಗೆ ಅನುವಾಗಬೇಕು. ದೇವರು ಅವರಿಗೆ ಸದ್ಬುದ್ಧಿಯನ್ನೂ, ದೇಶವಾತ್ಸಲ್ಯವನ್ನೂ ಕರುಣಿಸಲಿ."

ಸುಭದ್ರಮ್ಮನವರು ಇಂಟರ್‌ಮೀಡಿಯೆಟ್ ಪರೀಕ್ಷೆ ಮಾಡಿದ್ದಾರೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಿ|| ಜಾರ್ಜ್ ಸ್ಲೋಕೊಂಬ್‌ರವರ ಪತ್ರಗಳು.

ಸೈಮನ್ ವರದಿ.

ಸೈಮನ್ ವರದಿಯು ಭರತಖಂಡದ ಸರ್ವಪಕ್ಷದವರಿಂದಲೂ ನಿಷೇಧಿಸಲ್ಪಡುತ್ತಿರುವದಾದರೂ ಅದರಿಂದ ಸದ್ಯದ ಚಳವಳಿಗೆ ಸಹಾಯವಾದಂತಾಯಿತೇ ಹೊರತು ಪ್ರತಿಕೂಲವೇನೂ ಇಲ್ಲ. ಮಿ|| ಗಾಂಧಿಯವರು ಪ್ರಾರಂಭಿಸಿದ ಭರತಖಂಡದ ಏಕಮತ್ಯದ ಕಾರ್ಯವನ್ನು ಸೈಮನ್ ವರದಿಯು ಪೂರ್ಣಗೊಳಿಸಿತು. ಭಾರತ ಚರಿತ್ರೆಯಲ್ಲಿ ಯಾವ ವಿಷಯವೂ ಹೀಗೆ ಸಂಪೂರ್ಣವಾಗಿ ಬಹಿಷ್ಕರಿಸಲ್ಪಟ್ಟಿರಲಿಲ್ಲ. ಕಾಂಗ್ರೆಸ್‌ಪಕ್ಷದವರು ವರದಿಯನ್ನು ಪೂರ್ವಭಾವಿಯಾಗಿಯೇ ನಿಷೇಧಿಸಿದ್ದರಿಂದ ವರದಿಯು ಬ್ರಿಟಿಷರ ಮಾತಿನಲ್ಲಿ ಅವರಿಗಿದ್ದ ಅಪನಂಬಿಕೆಯನ್ನು ಮತ್ತಷ್ಟು ಹೆಚ್ಚಿಸಿತು. ಆದರೆ ವೈಸರಾಯರು ಯಾರ ಸಹಾನುಭೂತಿಯಲ್ಲಿ ಸಂಪೂರ್ಣ ಭರವಸೆಯನ್ನಿಟ್ಟಿದ್ದರೋ ಮತ್ತು ಯಾರ ಸಹಾನುಭೂತಿಯಿಂದ ದುಂಡುಮೇಜಿನ ಪರಿಷತ್ತನ್ನು ಕೂಡಿಸಲವಕಾಶವಿದ್ದಿತೋ ಅಂಥ ಇತರ ಪಕ್ಷದ ಮುಖಂಡರೂ ಸಹ ವರದಿಯನ್ನು ಅತಿ ತೀವ್ರವಾಗಿ ಖಂಡಿಸಿರುವರು. ಸೈಮನ್ ವರದಿಯ ಸೂಚನೆಗಳು ವೈಸ್ರಾಯರ ಮತ್ತು ಗವರ್ನರರ ಅಧಿಕಾರಗಳನ್ನು ಹೆಚ್ಚಿಸುವದೆಂದೂ, ಅದರಿಂದ ಭರತಖಂಡವು ಸದ್ಯ ಅನುಭವಿಸುತ್ತಿರುವ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುವದೆಂದೂ, ಸೈನ್ಯದಲ್ಲಿ ಭಾರತೀಯರನ್ನು ಸೇರಿಸುವ ವಿಚಾರವು ಬಹಳ ಮುಂದಿನ ಕಾಲದ ಮಾತೆಂದೂ, ಮಧ್ಯವರ್ತಿ ಸರಕಾರವು ನ್ಯಾಯವಿಧಾಯಕಸಭೆಗೆ ಅಧೀನವಾಗಿರದೆ ಹಾಗೂ ಅದರ ಮೆಂಬರುಗಳು ಸೆಕ್ರೆಟರಿ ಆಫ್ ಸ್ಟೇಟ್‌ರವರ ಅಧಿಕಾರಕ್ಕೂ ಸಹ ಒಳಪಡದೆ ಕೇವಲ ವೈಸರಾಯರಿಗೆ ಮಾತ್ರ ಅಧೀನರಾಗಿರುವದರಿಂದ, ಅವರು ತಮ್ಮ ಮನಸ್ಸುಬಂದಂತೆ ವರ್ತಿಸಲು ಅವಕಾಶವಾಗುವದೆಂದೂ ಎಲ್ಲರೂ ನಂಬಿರುವರು.

ಬೊಂಬಾಯಿಯ ವಿದ್ಯಮಾನಗಳು.

ಮಿ|| ಗಾಂಧಿಯವರ ಚಳವಳಿಯು ಪ್ರಾರಂಭವಾದಂದಿನಿಂದಲೂ, ಮೊನ್ನೆ ಬೊಂಬಾಯಿಯಲ್ಲಿ ನಡೆದ ಭೀಕರ ವಿದ್ಯಮಾನಗಳು ಎಂದೂ ಜರುಗಿರಲಿಲ್ಲ. ಅದರಿಂದ ಸಂಪೂರ್ಣ ಭರತಖಂಡವೇ ವಿಷಾದಿಸುತ್ತಿರುವದಲ್ಲದೆ, ಆಂಗ್ಲೋ ಇಂಡಿಯನ್ನರ ಪತ್ರಿಕೆಯೂ ಸಹ ಅದನ್ನು "ಬೊಂಬಾಯಿಯ ದುರ್ದಿನ" ವೆಂದು ವರ್ಣಿಸಿರುವದು. ಅವಸರವಸರವಾಗಿ ಒಂದು ಸಭೆಯನ್ನು ಕೂಡಿಸಿ, ಅದರಲ್ಲಿ ದೊಡ್ಡ ದೊಡ್ಡ ಪದವೀಧರರಾದ ಅನೇಕ ಭಾರತೀಯರ ಪತ್ನೀ ಪುತ್ರಿಯರು ಸೇರಿ ಮೋರೀರಾಣಿಯವರಿಗೆ ಸದ್ಯದ ಸ್ಥಿತಿಯನ್ನು ಖಂಡಿಸಿ ಒಂದು ತಂತೀವರ್ತಮಾನವನ್ನು ಕಳುಹಿಸಬೇಕೆಂದೂ ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಕರಿಯ ಬಾವುಟಗಳನ್ನು ಹಿಡಿದು ಶಾಂತವಾದ ಮೆರವಣಿಗೆಯನ್ನು ಹೊರಡಿಸಬೇಕೆಂದೂ ತೀರ್ಮಾನಿಸಲ್ಪಟ್ಟಿತು. ಹಾಗೂ ಭರತಖಂಡದ ಎಲ್ಲ ವರ್ತಕಸಂಘದವರೂ ಒಂದು ತಿಂಗಳವರೆಗೂ ಪೂರ್ಣ ಹರತಾಳವನ್ನು ಆಚರಿಸಬೇಕೆಂದು ಆಲೋಚಿಸುತ್ತಿರುವರು.

ಎಸ್ಪ್ಲನೇಡ್ ಮೈದಾನದಲ್ಲಿ ಪ್ರತಿನಿತ್ಯವೂ ನಡೆಯುತ್ತಿದ್ದ ಕಾಂಗ್ರೆಸ್ ಸ್ವಯಂಸೇವಕರ ಕವಾಯತನ್ನು ಪೋಲೀಸರು ತಡೆಯಲೆತ್ನಿಸಿದುದೇ ನಗರದ ಈ ಅಶಾಂತತೆಗೆ ಕಾರಣವಾಯಿತು. ಈ ಸ್ವಯಂಸೇವಕರು ತರುಣ ಸ್ಕೌಟುಗಳಂತೆ ಉಡುಪುಗಳನ್ನು ಧರಿಸಿ ಇಂಗ್ಲೀಷ್ ತರುಣ ಸ್ಕೌಟುಗಳಿಗಿಂತಲೂ ಸ್ವಲ್ಪ ಹೆಚ್ಚು ವಯಸ್ಸಿನವರಾಗಿರುವರು. ಇವರು ಕೈಯಲ್ಲಿ ದೊಣ್ಣೆ ಅಥವಾ ಮತ್ತಾವ ಆಯುಧವನ್ನೂ ಹೊಂದಿರುವದಿಲ್ಲ. ಅವರ ಕವಾತವೆಂಬುವದು ಕೆಂಪು ಬಿಳುಪು ಮತ್ತು ಹಸುರು ಬಣ್ಣಗಳಿಂದ ಕೂಡಿದ ರಾಷ್ಟ್ರೀಯ ಬಾವುಟದ ಮುಂದೆ ಸಾಲಾಗಿ ನಿಂತು ಅದನ್ನು ವಂದಿಸುವದೇ ಆಗಿರುವದು. 500 ಜನ ಸ್ವಯಂಸೇವಕರೂ, ಪ್ರೇಕ್ಷಣೀಯವಾದ ಹಳದಿಯ ಬಣ್ಣದ ಸೀರೆಗಳನ್ನುಟ್ಟ ಅನೇಕ ಸ್ತ್ರೀಯರೂ ಮತ್ತು ಅನೇಕ ಜನ ಸಹಾನುಭೂತಿಯುಳ್ಳ ಪ್ರೇಕ್ಷಕರೂ ಕೂಡಿ, ಪ್ರಾತಃಕಾಲ 6 ಗಂಟೆಗೆ "ಕಾಂಗ್ರೆಸ್ ಹಾಲ್" ನಿಂದ ಹೊರಟರು. (ಕಾಂಗ್ರೆಸ್ ಸಭೆಗಳನ್ನೂ ರಾಷ್ಟ್ರೀಯ ಧ್ವಜಾಭಿನಂದನವನ್ನೂ ನಡೆಯಿಸುತ್ತ) ದೊಡ್ಡ ಮೈದಾನಕ್ಕೆ ಬಂದಾಗ, ಅಲ್ಲಿ ದೊಣ್ಣೆಗಳನ್ನು ಹಿಡಿದಿದ್ದ 700 ಜನ ಕಾನ್‌ಸ್ಟೆಬಲ್ಲರು 75 ಜನ ಆಫೀಸರು ಮತ್ತು ಸಾರ್ಜಂಟರು ಮತ್ತು 50 ಜನ ಕುದುರೆ ಸವಾರರು ಇವರಿಂದ ಕೂಡಿದ ದೊಡ್ಡ ಪೋಲೀಸರ ಸೈನ್ಯವು ಮೈದಾನವನ್ನು ಆಕ್ರಮಿಸಿರುವದನ್ನು ನೋಡಿದರು. ಸಾವಿರಾರುಜನರು ನೋಡುತ್ತಿದ್ದ ಹಾಗೆಯೇ ಸ್ವಯಂಸೇವಕರು ಅನೇಕಕಡೆಗಳಿಂದ ಮೈದಾನವನ್ನು ಪ್ರವೇಶಿಸಲು ಪ್ರಯತ್ನಿಸಿ, ಅನೇಕರು ಸವಾರರಿಂದ ಹೊಡೆಯಲ್ಪಟ್ಟರು. ಅನೇಕರು ನೆಲಕ್ಕೆ ಉರುಳಿದರು. ಅನೇಕರು ತುಳಿಯಲ್ಪಟ್ಟರು. ಅದೇ ಸಮಯದಲ್ಲಿ ಪೋಲೀಸರು ನೆರೆದಿದ್ದ ಜನರ ಮೇಲೆ ನುಗ್ಗಿ ದೊಣ್ಣೆಗಳಿಂದ ಹೊಡೆದು ಅವರನ್ನು ಚದರಿಸಲು ಪ್ರಯತ್ನಿಸಿದರು. ಇದರಿಂದ ಅನೇಕ ಗಂಡಸರೂ, ಹೆಂಗಸರೂ ಗಾಯಹೊಂದಿದರು. ಜನರು ಸಿಕ್ಕಿದ ಕಡೆಗೆ ಓಡಲಾರಂಭಿಸಿದರು. ಆದರೆ ಸ್ವಯಂಸೇವಕರು ಮಾತ್ರ ತಮ್ಮ ಸ್ಥಳವನ್ನು ಬಿಟ್ಟು ಕದಲಿಲ್ಲ. ಪೋಲೀಸರ ದೊಣ್ಣೆಯ ಏಟುಗಳ ಸುರಿಮಳೆಯಿಂದ ಸ್ವಯಂಸೇವಕರ ಗುಂಪು ಒಡೆಯಲಾರಂಭಿಸಿದರೂ, ಅವರು ಪುನಃ ಪುನಃ ಗುಂಪು ಸೇರಿ ಪೋಲೀಸರು ರಾಷ್ಟ್ರೀಯ ಬಾವುಟಗಳನ್ನು ಕಿತ್ತುಕೊಳ್ಳದಂತೆ ರಕ್ಷಿಸುತ್ತಿದ್ದರು. ಅನಂತರ ಭರತಖಂಡದ ... ನಮ್ಮ ಅಪಕೀರ್ತಿಯು ಎಂದೆಂದಿಗೂ ಅಳಿಸಿಹೋಗದಂಥ ಒಂದು ವಿದ್ಯಮಾನವು ನಡೆಯಿತು.

ಸ್ವಯಂಸೇವಕರಲ್ಲಿ 20 ಜನ ತರುಣ ಸಿಕ್ಕರು ದೊಣ್ಣೆಗಳಿಂದ ಹೊಡೆಯುತ್ತಿದ್ದ ಪೋಲೀಸರ ಮತ್ತು ಸಿಕ್ಕಿದ ಹಾಗೆ ಓಡಿಹೋಗುತ್ತಿದ್ದ ಜನರ ಮಧ್ಯದಲ್ಲಿ ಧೈರ್ಯವಾಗಿ ನಿಂತು ತಮ್ಮ ರಾಷ್ಟ್ರೀಯ ಬಾವುಟವನ್ನು ರಕ್ಷಿಸುತ್ತಿದ್ದರು. ಆ ಗುಂಪನ್ನು ಚದುರಿಸಬೇಕೆಂಬ ಪೋಲೀಸರ ಪ್ರಥಮ ಪ್ರಯತ್ನವು ವಿಫಲವಾಗುವವೇಳೆಗೆ 30 ಜನ ಸ್ತ್ರೀ ಸ್ವಯಂಸೇವಕರು ಆ ಸಿಕ್ಕರ ಗುಂಪಿನ ಸುತ್ತಲೂ ನಿಂತು, ಆ ಸಿಕ್ ತರುಣರನ್ನು ಹೊಡೆಯುವದಕ್ಕೆ ಬದಲಾಗಿ ತಮ್ಮನ್ನು ಹೊಡೆಯುವಂತೆ ಸಾರ್ಜಂಟರಿಗೆ ಹೇಳಿದರು. ಪೋಲೀಸು ಅಧಿಕಾರಿಗಳು ಅವರಿಗೆ ಅಲ್ಲಿಂದ ಹೊರಟು ಹೋಗುವಂತೆ ಹೇಳಲು ಅವರು ಹೋಗುವದಿಲ್ಲವೆಂದರು. ಆ ಉತ್ಸಾಹದಿಂದ ಅನೇಕ ಸ್ತ್ರೀಯರ ಕಣ್ಣುಗಳಲ್ಲಿ ಧಾರಾಪೂರ್ವಕವಾಗಿ ನೀರು ಸುರಿಯುತ್ತಿತ್ತು. ಸ್ವಲ್ಪ ಹೊತ್ತು ವಾಗ್ವಾದವು ನಡೆದನಂತರ, ಯೂರೋಪಿಯನ್ ಸಾರ್ಜಂಟರೂ ಮತ್ತು ಪೋಲೀಸರೂ ಆ ತರುಣ ಸಿಕ್ ಸ್ವಯಂಸೇವಕರ ಮೇಲೆ ನುಗ್ಗಿದರು. ಆಗಿನ ನೋಟವು ವರ್ಣಿಸಲಸಾಧ್ಯವಾಗಿದ್ದಿತು. ಕೆಲವು ಪೋಲೀಸರು ಸ್ತ್ರೀಸ್ವಯಂಸೇವಕರ ರಟ್ಟೆಗಳನ್ನು ಹಿಡಿದು ಎಳೆಯಲೆತ್ನಿಸಿದರು. ಇತರರು ಸಿಕ್ಕರನ್ನು ದೊಣ್ಣೆಗಳಿಂದ ಹೊಡೆದರು. ಸ್ತ್ರೀ ಸ್ವಯಂಸೇವಕರು ಸ್ವಲ್ಪವೂ ಧೈರ್ಯಗುಂದದೆ ಮೇಲಿಂದಮೇಲೆ ತಲೆ ಮತ್ತು ಹೆಗಲುಗಳ ಮೇಲೆ ಬೀಳುತ್ತಿದ್ದ ದೊಣ್ಣೆಯಪೆಟ್ಟುಗಳನ್ನು ಲಕ್ಷಿಸದೆ ಪುನಃ ಪುನಃ ಪೋಲೀಸರಿಗೂ ಸಿಕ್ಕರಿಗೂ ಮಧ್ಯೆ ಬರುತ್ತಿದ್ದರು. ಒಬ್ಬ ಸಾರ್ಜಂಟನು ಕೆಲವು ಪೋಲೀಸರೊಡಗೂಡಿ ಒಬ್ಬ ಸ್ತ್ರೀಯಳ ಕಯ್ಯಲ್ಲಿದ್ದ ರಾಷ್ಟ್ರೀಯಬಾವುಟವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಆದರೆ ಆ ವೀರನಾರೀಮಣಿಯು ರಾಷ್ಟ್ರೀಯ ಬಾವುಟವನ್ನು ಪೋಲೀಸರ ವಶಪಡಿಸದೆ, ಅಲ್ಲಿಂದ ತಪ್ಪಿಸಿಕೊಂಡು ಹೊರಟುಹೋದಳು. ಈ ವಿಷಾದಕರವಾದ ಗಲಾಟೆಯಲ್ಲಿ ಸುಮಾರು 200 ಜನ ಗಂಡಸರೂ ಅನೇಕ ಹೆಂಗಸರೂ ಗಾಯಹೊಂದಿದರು. ಹೆಚ್ಚಿನ ಪೆಟ್ಟುಗಳನ್ನು ಹೊಂದಿದ ನೂರಾರು ಜನ ಗಂಡಸರೂ 12 ಜನ ಹೆಂಗಸರೂ, ಕಾಂಗ್ರೆಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಪೋಲೀಸರಲ್ಲಿ ಯಾರಿಗೂ ಅಪಾಯವಾಗಲಿಲ್ಲ. ಅಪಾಯವಾಗುವಂತೆಯೂ ಇರಲಿಲ್ಲ. ಈ ಲಾಠೀಪ್ರಹಾರವು ತಮ್ಮ ತಮ್ಮ ಮನೆಯ ಕಿಟಕಿಗಳಲ್ಲಿ ನಿಂತು ನೋಡುತ್ತಿದ್ದ ಅತ್ಯಂತ ಆಶ್ಚರ್ಯವಂತರಾದ ಹಿಂದೂ ಮತ್ತು ಪಾರ್ಶೀ ವರ್ತಕರ ಕಣ್ಣುಗಳ ಮುಂದೆಯೇ ನಡೆಯಿತು.

ಗುಜರಾಥದ ಕಂದಾಯನಿರಾಕರಣ ಚಳವಳಿ.

ಗುಜರಾಥ ದೇಶದ ಹಳ್ಳಿಗಳಲ್ಲಿ ಮಿ|| ಗಾಂಧಿಯವರ ಕಂದಾಯ ನಿರಾಕರಣ ಚಳವಳಿಯು ಆಗಲೇ ಪ್ರಾರಂಭಿಸಲ್ಪಟ್ಟಿರುವದು. ಅನೇಕ ಗ್ರಾಮಗಳಲ್ಲಿ ಭೂಕಂದಾಯವನ್ನು ವಸೂಲ್ಮಾಡುವ ಗ್ರಾಮಾಧಿಕಾರಿಗಳು ಅಸಹಕಾರಚಳವಳಿಯ ವಿಷಯದಲ್ಲಿ ತಮಗಿರುವ ವಿಶ್ವಾಸದಿಂದಲೋ ಅಥವಾ ತಮ್ಮ ಗ್ರಾಮದವರಿಂದ ಬಹಿಷ್ಕರಿಸಲ್ಪಡುವೆನೆಂಬ ಭೀತಿಯಿಂದಲೋ ತಮ್ಮ ಕೆಲಸಗಳಿಗೆ ರಾಜೀನಾಮೆಯನ್ನು ಕೊಟ್ಟಿರುವರು. ಏಕೆಂದರೆ, ಭರತಖಂಡದ ಗ್ರಾಮಾಂತರಗಳಲ್ಲಿ ಸಾಮಾಜಿಕ ಬಹಿಷ್ಕಾರವು ಅತ್ಯಂತ ತೀವ್ರವಾದ ಆಯುಧವಾಗಿರುವದು. ಡಿಸ್ಟ್ರಿಕ್ಟ್ ಅಧಿಕಾರಿಗಳು ಕಂದಾಯ ಕೊಡದಿದ್ದವರ ಮೇಲಿನ ಆಕ್ರೋಶವನ್ನು ತೀರಿಸಿಕೊಳ್ಳಲು, ಅವರ ಭೂಮಿಗಳನ್ನೂ, ಪಾತ್ರೆ ಪದಾರ್ಥಗಳೇ ಮೊದಲಾದ ಎಲ್ಲ ವಸ್ತುಗಳನ್ನೂ ಜಪ್ತಮಾಡುವದಾಗಿ ಪ್ರಸಿದ್ಧಿಪಡಿಸಿರುವರು. ಕಂದಾಯ ಕೊಡದಿದ್ದ ಹಳ್ಳಿಗಳಿಗೆ ರೆವಿನ್ಯೂ ಆಫೀಸರುಗಳು ಬರುವರೆಂದ ಮಾತ್ರಕ್ಕೆ ಅಲ್ಲಿ ಓಡಾಟವು ಪ್ರಾರಂಭವಾಗುವದು. ಊರ ಹೊರಗೆ ಮರಗಳಲ್ಲಿ ಕುಳಿತು ಕಾಯುತ್ತಿರುವ ಕಾವಲುಗಾರರು ಸರಕಾರೀ ಅಧಿಕಾರಿಗಳು ಬರುವದನ್ನು ಕಂಡಕೂಡಲೇ ತಮಟೆಗಳನ್ನು ಬಡಿಯುವರು. ಕೂಡಲೇ ಆ ಗ್ರಾಮವಾಸಿಗಳೆಲ್ಲರೂ, ಮನೆಗಳಿಗೆ ಬೀಗವನ್ನು ಹಾಕಿ ಪಾಳುಬಿದ್ದಂತಿರುವ ತಿನ್ನುವದಕ್ಕೆ ಏನೂ ಸಿಕ್ಕದಿರುವ ಹಳ್ಳಿಯನ್ನು ಬಿಟ್ಟು, ತಮ್ಮ ಹೆಂಡರುಮಕ್ಕಳೊಡನೆ ಹೊಲಗಳಿಗೆ ಹೋಗಿಬಿಡುವರು. ಅಧಿಕಾರಿಗಳಿಗೆ ಕುಡಿಯುವದಕ್ಕೆ ನೀರು ಸಹ ಸಿಕ್ಕದಂತೆ ಗ್ರಾಮದ ಬಾವಿಯನ್ನು ಹಲಗೆಗಳಿಂದ ಮುಚ್ಚಿ ಬೀಗ ಹಾಕಿ ಹೋಗಿಬಿಡುವರು. ತಿನ್ನುವದಕ್ಕೂ, ಕುಡಿಯುವದಕ್ಕೂ ಏನೂ ಸಿಕ್ಕದಿರುವ ಜನಶೂನ್ಯವಾದ ಆ ಹಳ್ಳಿಗೆ ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ಬರುವ ಅಧಿಕಾರಿಗಳ ಅವಸ್ಥೆಯು ಹೇಳತೀರದು. ಸೂರತ್, ಪೂನಾ ಮತ್ತು ಬೊಂಬಾಯಿ ನಗರಗಳಲ್ಲಿ ಪೋಲೀಸರ ವಿಷಯದಲ್ಲಿ ಪ್ರಾರಂಭವಾಗಿರುವ ಸಾಮಾಜಿಕ ಬಹಿಷ್ಕಾರವು ಮಿ|| ಗಾಂಧಿಯವರ ಚಳವಳಿಯಲ್ಲಿ ದಿನ ದಿನಕ್ಕೆ ಪ್ರಬಲವಾಗುತ್ತಿರುವ ಮುಖ್ಯ ಕಾರ್ಯಭಾಗಗಳಲ್ಲಿ ಒಂದಾಗಿರುವದು. ಅನೇಕ ತೊಡಕುಗಳಿಂದ ಕೂಡಿದ ಭಾರತ ಸಮಾಜದಲ್ಲಿ ಜಾತಿ ಮತ್ತು ಮತವು ಅತ್ಯಂತ ಮುಖ್ಯವಾದ ವಿಷಯಗಳಾಗಿರುವವು. ಗ್ರಾಮಾಧಿಕಾರಿಯಾಗಲಿ, ಅಥವಾ ಮತ್ತೆ ಯಾವನಾದರೂ ಕಡಮೆ ದರ್ಜೆಯ ಸರಕಾರೀ ಅಧಿಕಾರಿಯು ಕಾಂಗ್ರೆಸ್ ನಿಯಮವನ್ನು ಮೀರಿ ಭೂಕಂದಾಯವನ್ನು ವಸೂಲು ಮಾಡುವದರಲ್ಲಿಯಾಗಲೀ ಅಥವಾ ಪರದೇಶೀ ವಸ್ತ್ರ ಬಹಿಷ್ಕಾರ ಮತ್ತು ಮದ್ಯಪಾನನಿಷೇಧದ ಚಳವಳಿಗಳನ್ನು ನಿಲ್ಲಿಸಲು ಸರಕಾರವು ನೂತನವಾಗಿ ಹೊರಡಿಸಿರುವ ಕಾಯಿದೆಗಳನ್ನು ಜಾರಿಗೆ ತರುವದಕ್ಕಾಗಲೀ ಸಹಾಯಮಾಡಿದುದಾದರೆ ಕೂಡಲೇ ಇಡೀ ಗ್ರಾಮವೇ ಅವನನ್ನು ಬಹಿಷ್ಕರಿಸುವದು. ಮಿತ್ರರು ಕೈಬಿಡುವರು. ವರ್ತಕರು ಆಹಾರಪದಾರ್ಥಗಳನ್ನೇ ಕೊಡುವದಿಲ್ಲ; ಸೇವಕರೆಲ್ಲರೂ ಅವನ ನೌಕರಿಯನ್ನು ಬಿಡುವರು. ಅವನ ಪತ್ನೀಪುತ್ರರೂ ಸಹ ಅವನ ವಿಷಯದಲ್ಲಿ ಅಲಕ್ಷ್ಯಭಾವದಿಂದ ವರ್ತಿಸಲಾರಂಭಿಸುವರು. ಅಂಥವರ ಮನೆಯಲ್ಲಿ ನಡೆಯುವ ಲಗ್ನ, ಜನನ, ಮರಣಾದಿ ಕಾರ್ಯಗಳಿಗೂ ಸಹ ಯಾರೂ ಹೋಗುವದಿಲ್ಲ. ಪೌರೋಹಿತ್ಯವನ್ನು ಮಾಡಿಸಬೇಕಾದ ಬ್ರಾಹ್ಮಣನು ಸಹ ಅವರನ್ನು ಬಹಿಷ್ಕರಿಸಿಬಿಡುವನು. ಹೀಗೆ ಅವನ ಜೀವನವೇ ಅತ್ಯಂತ ಕಷ್ಟವಾಗಿ ಪರಿಣಮಿಸುವದು. ಭಾರತಸ್ವಾತಂತ್ರ್ಯಸಂಪಾದನೆಗಾಗಿ ಮಿ|| ಗಾಂಧಿಯವರು ಸಿದ್ಧಗೊಳಿಸಿರುವ ಶಾಂತವಾದ ಮತ್ತು ರಕ್ತಪಾತವನ್ನು ಮಾಡದಿರುವ ಈ ನೂತನಶಸ್ತ್ರದ ಅತ್ಯಮೃತಶಕ್ತಿಯು ಭೇದಿಸಲಸಾಧ್ಯವಾಗಿರುವದು.

ಕಾಂಗ್ರೆಸ್ ಸಂಸ್ಥೆಗಳು.

ಅಸಹಕಾರಚಳವಳಿಯು ದಿನದಿನಕ್ಕೆ ಪ್ರಬಲವಾಗುತ್ತಿರುವದು. ಮದ್ರಾಸಿನ ಕಾರಾಗೃಹಗಳಲ್ಲಿ ಈಗಾಗಲೇ ಸಾವಿರಾರು ಜನ ರಾಜಕೀಯ ಕೈದಿಗಳಿರುವರು. ಮತ್ತು ಗುಂಟೂರು, ಪಶ್ಚಿಮಕೃಷ್ಣಾ, ಗೋದಾವರಿ ಮತ್ತು ಬೆಜವಾಡ (ಆಂಧ್ರದೇಶ) ಈ ಪ್ರದೇಶಗಳಲ್ಲಿರುವ ಕಾಂಗ್ರೆಸ್ ಸಂಸ್ಥೆಗಳು ಕಾಯಿದೆಗೆ ವಿರುದ್ಧವಾದವುಗಳೆಂದು ಮದ್ರಾಸ್ ಸರಕಾರದವರು ಹೊಸದಾಗಿ ಪ್ರಸಿದ್ಧಪಡಿಸಿರುವದರಿಂದಲೇ ಆ ಪ್ರಾಂತದಲ್ಲಿ ಗಾಂಧಿ ಚಳವಳಿಗೆ ಎಷ್ಟರಮಟ್ಟಿಗೆ ಪ್ರೋತ್ಸಾಹವಿರುವದೆಂಬುವದು ವ್ಯಕ್ತವಾಗುವದು. ಸರಕಾರದವರ ದುರದೃಷ್ಟವೋ ಎನ್ನುವಂತೆ ಚಳವಳಿಯನ್ನು ಅಡಗಿಸಲು ಅವರು ಮಾಡುವ ಅವಸಾನದ ಪ್ರಯತ್ನಗಳೆಲ್ಲವೂ ಕಾಂಗ್ರೆಸ್ಸಿನ ಪ್ರಯತ್ನವಿಶೇಷಗಳಿಗೆ ಮತ್ತಷ್ಟು ಪ್ರೋತ್ಸಾಹವನ್ನೇ ಕೊಡುತ್ತಿರುವವು. ಬಹಿಷ್ಕಾರ ಚಳವಳಿಗೆ ಸಂಬಂಧಪಟ್ಟ ನೂತನ ಕಾನೂನುಗಳು ಜಾರಿಗೆ ಬರುವದಕ್ಕೆ ಪೂರ್ವದಲ್ಲಿ, ಆ ಚಳವಳಿಯು ಜನರ ಮನಸ್ಸಿನಲ್ಲಿ ಸ್ವಲ್ಪವಾದರೂ ಕುತೂಹಲವನ್ನಾಗಲೀ ಉತ್ಸಾಹವನ್ನಾಗಲೀ ಹುಟ್ಟಿಸಿರಲಿಲ್ಲ. ಆದರೆ ಆ ಕಾನೂನುಗಳು ಇಡೀ ಜನಾಂಗವನ್ನೇ ಪ್ರತಿಭಟಿಸಿ ನಿಂತು ಅವರಲ್ಲಿ ಸರಕಾರಕ್ಕೆ ವಿರುದ್ಧವಾದ ಭಾವನೆಯನ್ನು ಹುಟ್ಟಿಸಿ, ಚಳವಳಿಯು ಸರ್ವತೋಮುಖವಾಗಿ ಬೆಳೆಯಲು ಅವಕಾಶವನ್ನು ಕೊಟ್ಟವು.

ಮೊನ್ನೆ ಮೊನ್ನೆ ಬೊಂಬಾಯಿಯಲ್ಲಿ ಪೋಲೀಸರು ಉತ್ಸವಗಳನ್ನೂ, ಕವಾಯತುಗಳನ್ನೂ ತಡೆಯಲೆತ್ನಿಸಿದರು. ಇದೇ ರೀತಿಯಲ್ಲಿ ಪರಿಣಮಿಸಿರುವದು. ಎಸ್‌ಪ್ಲನೇಡ್ ಮೈದಾನದಲ್ಲಿ ನಡೆದ ಭಯಂಕರ ವಿದ್ಯಮಾನಗಳಿಂದ ಜನರ ಮನಸ್ಸಿನಲ್ಲಿ ಉಂಟಾಗಿರುವ ಅತೃಪ್ತಿಯನ್ನು ನಗರದ ಮುಖ್ಯಸ್ಥರೆಲ್ಲರೂ ಸರ್ ಇ. ಹಾಟ್ಸನ್ನರವರಿಗೆ ವಿಶದವಾಗಿ ತಿಳಿಯಪಡಿಸಿದರು. ಆದರೆ ಜನರು ಕಾಯಿದೆಭಂಗವನ್ನು ನೋಡಲು ಗುಂಪುಕೂಡಿದಾಗ (ಇಲ್ಲಿ ಕಾಯಿದೆಭಂಗವೆಂದರೆ ಉತ್ಸವಗಳನ್ನೂ, ಶಸ್ತ್ರಧಾರಿಗಳಲ್ಲದ ಸ್ವಯಂಸೇವಕರ ಕವಾತುಗಳನ್ನೂ ಮಾಡಕೂಡದೆಂಬ ಪೋಲೀಸರ ಆಜ್ಞೆಯನ್ನು ಮೀರುವದೇ ಆಗಿರುವದು) ಅವರನ್ನು ದೊಣ್ಣೆಗಳಿಂದ ಹೊಡೆದೋಡಿಸುವದರಲ್ಲಿ ಯಾವ ತಪ್ಪೂ ಇಲ್ಲವೆಂಬ ಅಧಿಕಾರಿಗಳ ಅಭಿಪ್ರಾಯವು ಮಾತ್ರ ಸ್ವಲ್ಪವೂ ಬದಲಾಯಿಸಲಿಲ್ಲ. ಮೊನ್ನೆ ಮೊನ್ನೆ ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ಅಧಿಕಾರಕ್ಕೆ ರಾಜೀನಾಮೆಯನ್ನು ಕೊಟ್ಟ ಒಬ್ಬ ಮುಂಬಯಿ ಕೌನ್ಸಿಲ್ ಮೆಂಬರರು, ಗುಜರಾಥದ ಕಾಲೇಜಿನ ಮುಂದೆ ವಿದ್ಯಾರ್ಥಿಗಳು ಚಳವಳಿಯನ್ನು ನಡೆಯಿಸಿದ ಸಮಯದಲ್ಲಿ ಪೋಲೀಸರು ಮಾಡಿದ ಲಾಠೀ ಪ್ರಹಾರದ ಚರಿತ್ರೆಯನ್ನು ಚೆನ್ನಾಗಿ ವರ್ಣಿಸಿದರು. ಇದರಿಂದ ವಿದ್ಯಾರ್ಥಿಗಳ ಚಳವಳಿಯು ಹೆಚ್ಚುವಂತೆ ತೋರುವದು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ, ಗೂನೇರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು. [61]

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸಬಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗಬೇಕಲ್ಲದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥಹ ಕಠಿನತರ ಆಹಾರವಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗಡೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಹೊಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[12] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀರಾ?

ಕಂಗೆಡಬೇಡಾ !   ಮರುಗಬೇಡಾ !!   ಗುಣದ ಮದ್ದು ಯಾವದೆಂದು ನೋಡಾ !!!

ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳೆದಿರುವ ರೋಗ ಸಂಪೂರ್ಣ ಗುಣವಾಗಬೇಕೇ ? ಇಗೋ ! "**ಮಲೇರಿಯಾನ**" ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅನ್ನ ಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೇ ? ಕಂಪೆನಿಯ ಸಿರಪು "**ಪುಲ್ಸಥೂಜ**" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಶಕ್ತಿಗೊಳ್ಳುವ ಇಚ್ಛೆ ಉಂಟಾ ? ಕಂಪೆನಿಯ ಸಿರಪು "**ಸೆಬೀನ ಸೆಪೀಯ**" ಮತ್ತು ಕಂಪೆನಿಯ ಸಿರಪು "**ವಿಬುರ್ನೋನ**" ಎಂಬವುಗಳನ್ನು ದಿಕ್ಷಾಸದಿಂದ ಸೇವಿಸಿಕೊಳ್ಳಿ. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ಹಿರೀಕ್ಷಿಸುತ್ತೀಯಾ ? ಹಾಗಾದರೆ ಕಂಪೆನಿಯ ಸಿರಪು "**ಸರ್ಸಲಿಮಗ**" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖ್ಯಾತಿ ಗುಣದ ಬಲವನ್ನೇ ತೋರಿಸಿ ರೋಗದ ತಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಯ ಸಿರಪು "**ವೆಸಿಥೂಜ**" ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೊಮೆಯೋಪತಿ ಮದ್ದುಗಳೂ ಟಿಕ್ಚು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅವುಗಳ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ಸೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[48] **ಮಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.**

ಸತ್ಯದ ಜಗತ್ತು]   ## ೧೦೦೦ ರೂಪಾಯಿ ಇನಾಮು   [ಅದೇನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ತಕಪುಷ್ಪ, ಸಾಲಿಮಕಂದ, ಮಧುಕಂದ, ಜಪಾಕಂಧ, ತಾಲೀಮಲೀಕಂದ, ಅಶ್ವಕಂದ ಶ್ವೇತಕಂದ, ಮುಸಳೀಕಂದ, ಶೀವನೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ಶಣಬೀಜ, ನಾಗಬೀಜ, ಬಾಳಬೀಜ, ಭೋಕರೀ ಬೀಜ, ಪವಳೀಬೀಜ, ಚಿಕಣದಪಂಚಾಂಗ, ಅಡವೀ ಎಳ್ಳಿನಪಂಚಾಂಗ, ಹಮಿಪತ್ರಿ, ವಿರಾಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಥಿಲ್ಯಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ತಾಲೀಮಖಾನಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದನೀಕಟ್ಟಿಗೆ, ಶತಾವರಿ, ಸಕೀನಮಗಜ, ಆಲದಹಾಲು, ದಾಕೇರಿಭಾತಾ, ಗೋಖಿರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಲ ಭುಸ್ಸಾ, ಅವಳಕಾಟಿ, ಸಿಲಾಜಿತ, ಜಾಜೀಕಾಯಿ, ರೂಮಾಮಸ್ತಿ, ವಂಶಲೋಚನ, ವರಧಾರಾ, ಕೇಸರಿಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಸೂಕ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ. 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [52]

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ತ, ರಕ್ತ, ಕೀವು, ಹುಣ್ಣು, ದುರ್ಗಂಧ, ಕ್ರಿಮಿ, ಪಾಪಬಾರದಿರೋಣ, ದಟ್ಟಿಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. **ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ... ಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧೨ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೧ ಆಣೆ
ಬಸವಧ್ವಾಂತ ದಿವಾಕರ	೪ ಆಣೆ
ಬಸವಾದಿ ಸಿಜತತ್ವದರ್ಪಣ ೩ನೆಯ ಆವೃತ್ತಿ	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೩ ಆಣೆ
ವೀರಶೈವಾಚಾರವಿಧಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ	೧೦ ಆಣೆ
ವಿವಾಹವಿಧಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತವಿಮಾಂಸಾ	೪ ಆಣೆ
ವೈದಿಕಪಾಷ್ಟ್ಯಯರಹಸ್ಯ	೨ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೮ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೨ ಆಣೆ ೬ ಪೈ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೨ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾನೂರು ಬೃಹಸ್ಪತ್ಯಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲಿನ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[39] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[52] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಸಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೪ ನೇ ಜುಲೈ ೧೯೩೦ [ಸಂಚಿಕೆ ೧೧.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪ್ರಕಟನೆ.

ಸೊಲ್ಲಾಪುರದಲ್ಲಿರುವ ಶ್ರೀಮದ್ವೀರಶೈವ **ವಾರದ ಸಂಸ್ಕೃತ ಪಾಠಶಾಲೆಯು** ತಾ|| ೧೦-೬-೩೦ ಈ ದಿವಸ ಪ್ರಾರಂಭಿಸಲ್ಪಡುವದು. ವಿದ್ಯಾರ್ಥಿಗಳು ಆ ತಾರೀಖಿಗೆ ಬರಬೇಕು.

ಜಗದೀಶಶಾಸ್ತ್ರೀ ನಾಲ್ವಾರ,
ಪ್ರಧಾನಾಧ್ಯಾಪಕ, ಸೋಲಾಪುರ.

ಗುರುಸೇವೆ.

ಹಾಸನ ಡಿ|| ಅರಸೀಕೆರೆ ತಾಲೂಕು ದಿಬ್ಬೂರು ನಿವಾಸಿಗಳಾದ ಮ|| ರಾ|| ಎ. ಚನ್ನಪ್ಪನವರು ಅಸಾಧಾರಣ ಗುರುಭಕ್ತರಿದ್ದು, ಈಗ 5-6 ತಿಂಗಳುಗಳಿಂದಲೂ ಅನೇಕ ಕಡೆಗಳಲ್ಲಿ ಸಂಚಾರಮಾಡಿ ನಮ್ಮ "ಪಂಚಾಚಾರ್ಯಪ್ರಭಾ" ಪತ್ರಿಕೆಗೆ ಅನೇಕ ಹೊಸ ಚಂದಾದಾರರನ್ನು ಕೂಡಿಸಿದ್ದಲ್ಲದೆ, "ರೇಣುಕವಿಜಯ" ಗ್ರಂಥಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟು ಅನೇಕ ಪ್ರತಿಗಳು ಖರ್ಚಾಗುವಂತೆ ಮಾಡಿರುತ್ತಾರೆ. ಈ ಗುರುಭಕ್ತಶ್ರೇಷ್ಠರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕರುಣಿಸಲೆಂದೂ, ಎಲ್ಲ ಗುರುಭಕ್ತರೂ ಇವರಂತೆಯೇ ಪ್ರಭೆಗೆ ಪ್ರೋತ್ಸಾಹವನ್ನು ಕೊಡುವವರಾಗಲೆಂದೂ ಹಾರೈಸುತ್ತೇವೆ.

ಸಂ.—

ಸ್ವೀಕಾರ.

ಕೊಪ್ಪಳ ಡಿ|| ಹಲಿಗೇರಿ ಹಿರೇಮಠದ ವೇ|| ಸಿದ್ಧಾಂತಿ ಬಸವಯ್ಯನವರು ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೆಂಗಳೂರು ಕಂಟೋನ್ಮೆಂಟ್ ನಿವಾಸಿಗಳಾದ ಕೈ|| ಯಜಮಾನ್ ಆ|| ರುದ್ರಪ್ಪನವರ ಮಕ್ಕಳು ಯಜಮಾನ್ ಬಿ. ರಾಚಪ್ಪನವರ ಪುತ್ರಿ ಸೌ|| ಗಂಗಮ್ಮನನ್ನು ಮ|| ರಾ|| ರುದ್ರಪ್ಪನವರ ಪುತ್ರ ಚಿ|| ಸಿ. ಆರ್. ನಾಗಪ್ಪನವರಿಗೆ ಕೊಟ್ಟು ವಿವಾಹಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

(ಈ ಸ್ವೀಕಾರದ ಹಣವು ಮೊದಲೇ ಪ್ರಸಿದ್ಧವಾಗಿದ್ದು ವರನ ಹೆಸರು ತಪ್ಪು ಬಿದ್ದುದರಿಂದ ಪುನಃ ಪ್ರಕಟಿಸಿದೆ.)

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಹಾತ್ಮಾ ಗಾಂಧಿಯವರು ಜೈಲಿನಲ್ಲಿ ಎರಡು ತಿಂಗಳುಗಳನ್ನು ಕಳೆದುದರ ಜ್ಞಾಪಕಾರ್ಥವಾಗಿ ಕಳೆದ ಜೂನ್ 5 ನೆಯ ತಾರೀಖಿನ ದಿವಸ ಪೂನಾದಲ್ಲಿ 500 ಜನರಿಂದ ಕೂಡಿದ ಒಂದು ಉತ್ಸವವು ಎರವಾಡಾ ಜೈಲಿಗೆ ಹೊರಟಿತು. ಬಂಡ್‌ಗಾರ್ಡನ್ ಸೇತುವೆಯ ಮೇಲೆ ಪೋಲೀಸರು ಉತ್ಸವವನ್ನು ತಡೆಯಲು, ಮುಖಂಡರು ಯಾವ ಗಲಾಟೆಯನ್ನೂ ಮಾಡದೆ ಹೋಗುವದಾಗಿ ಅಧಿಕಾರಿಗಳನ್ನು ಪ್ರಾರ್ಥಿಸಿದರು. ಪೋಲೀಸ್ ಸೂಪರಿಂಟೆಂಡೆಂಟರು ಮತ್ತು ಮ್ಯಾಜಿಸ್ಟ್ರೇಟರು ಅವರ ಪ್ರಾರ್ಥನೆಯನ್ನು ಲಾಲಿಸದೆ ಉತ್ಸವವು ಅಕ್ರಮವಾದದ್ದೆಂದು ಹೇಳಲು, ಜನರು ಹಿಮ್ಮೆಟ್ಟದೆ ಸ್ವಸ್ಥವಾಗಿ ಅಲ್ಲಿಯೇ ಕುಳಿತುಬಿಟ್ಟರು. ಅಪಾರ ಮಳೆಯು ಸುರಿಯುತ್ತಿದ್ದರೂ ಲಕ್ಷ್ಯ ಸದೆ ಜನರು ಕದಲಲಿಲ್ಲ. ಸಾಯಂಕಾಲದ ಹೊತ್ತಿಗೆ ಜನರು ವಿಶೇಷವಾಗಿ ಸೇರಿ 5000 ದ ವರೆಗೆ ಅಲ್ಲಿ ನೆರೆದರು. ಕತ್ತಲಾದಮೇಲೆ ಜನರು ರಸ್ತೆಯಲ್ಲಿ ರಾಶಿರಾಶಿಯಾಗಿ ಬಿದ್ದಿದ್ದ ಕಲ್ಲುಗಳನ್ನು ತೆಗೆದುಕೊಂಡು ಅರ್ಕಿ ಮತ್ತು ಎರವಾಡಾಕ್ಕೆ ಹೋಗುತ್ತಿದ್ದ ಯೂರೋಪಿಯನ್ನರ ಮೋಟಾರುಗಳ ಮೇಲೆ ಎಸೆಯಲಾರಂಭಿಸಿದರು. ಅಲ್ಲದೆ ಅಲ್ಲಿದ್ದ ಪೋಲೀಸರಮೇಲೆ "ಬಂಡ್" ತೋಟದಲ್ಲಿದ್ದ ಹೂವಿನ ಕುಂಡಗಳನ್ನೆತ್ತಿ ಎಸೆಯಲಾರಂಭಿಸಿದರು. ಕ್ಯಾಪ್ಟನ್ ಬ್ಲೇಕ್ ಎಂಬವರ ಮೋಟಾರ್ ಗಾಡಿಯ ಮುಂಭಾಗದ ಗಾಜು ಒಡೆದು ಒಳಗಿದ್ದ ಅವರ ಪತ್ನಿಯು ಮೂರ್ಛೆಹೋದಳು. ರಾತ್ರೆ 12ಘಂಟೆಯ ಹೊತ್ತಿಗೆ ಜನರ ಗಲಾಟೆಯು ಮಿತಿಮೀರಿತು. ಪೋಲೀಸರ ತಡೆಯನ್ನು ಲಕ್ಷ್ಯಸದೆ ಜನರು ನುಂದುವರಿಯಲು ಪ್ರಯತ್ನಿಸಿದರು. ಆಗ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರು ಜನಗಳನ್ನು ದೊಣ್ಣೆಗಳಿಂದ ಚದರಿಸುವಂತೆ ಆಜ್ಞೆಮಾಡಲು ಪೋಲೀಸರು ಆದರಂತೆ ಜನಗಳಮೇಲೆ ನುಗ್ಗಿ ಅರ್ಧ ಘಂಟೆಯೊಳಗಾಗಿ ಎಲ್ಲರನ್ನೂ ಚದರಿಸಿದರು. ರಸ್ತೆಯಲ್ಲಿ ಎಲ್ಲಿ ನೋಡಿದರೂ ಗಾಂಧೀಟೋಪಿಗಳೂ ರಾಷ್ಟ್ರೀಯ ಬಾವುಟಗಳೂ ಬಿದ್ದಿದ್ದವು. ಕೆಲವು ಜನರಿಗೂ ಪೋಲೀಸರಿಗೂ ಅಲ್ಪ ಸ್ವಲ್ಪ ಏಟುಗಳು ಬಿದ್ದಿರುವವು. ಯಾರಿಗೂ ವಿಶೇಷ ಗಾಯಗಳಾಗಿಲ್ಲ.

ಕಳೆದ 10 ನೆಯ ತಾರೀಖಿನ ದಿವಸ 8000 ಜನರು ಎಲ್ಲಾ ಮೆಂಬರರಾದ ಮಿ|| ಆಣೆಯವರ ಮುಂದಾಳುತನದಲ್ಲಿ ಅರಣ್ಯಖಾತೆಯ ಕಾಯಿದೆಗಳನ್ನು ಭಂಗಮಾಡಲು ಇಯೋಟ್‌ಮಲ್ ನಗರದಿಂದ ಹೊರಟಿರುವರು. ಇವರ ಜೊತೆಯಲ್ಲಿ, ಕೊಡಲಿಗಳು, ಪೆಟ್ಟುಬಿದ್ದವರನ್ನು ಸಾಗಿಸುವ "ಅಂಬ್ಯುಲೆನ್ಸ" ಕಾರುಗಳು, ಔಷಧಿ, ಮೊದಲಾದ ಸರ್ವ ಸಾಮಗ್ರಿಗಳು ಸಿದ್ಧವಾಗಿರುವವು.

ಲಿಬರಲ್ ಪಕ್ಷದ ನಾಯಕರಲ್ಲಿ ಒಬ್ಬರೂ, ಮಹಾತ್ಮಾ ಗಾಂಧಿಯವರ ಅಹಿಂಸಾತ್ಮಕ ಅಸಹಕಾರ ಚಳವಳಿಗೆ ವಿರೋಧಿಗಳೂ ಆಗಿದ್ದ ಡಾಕ್ಟರ್ ಅನಿಬೆಸಂಟರವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಮಿ|| ವಲ್ಲಭಭಾಯಿ ಪಟೇಲರವರಿಗೆ ತಮ್ಮನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರಾಗಿ ತೆಗೆದುಕೊಳ್ಳಬೇಕೆಂದು ಲಂಡನ್ನಿನಿಂದ ತಂತೀವರ್ತಮಾನವನ್ನು ಕಳುಹಿಸಿರುವರು. ಮಿ|| ವಲ್ಲಭಭಾಯಿ ಪಟೇಲರವರು, ಡಾ|| ಅನಿಬೆಸೆಂಟರವರನ್ನು ಅಭಿನಂದಿಸಿ, ಅವರನ್ನು ಮೆಂಬರಾಗಿ ತೆಗೆದುಕೊಳ್ಳಲು ಒಪ್ಪಿ, ಪ್ರತ್ಯುತ್ತರವನ್ನು ಕಳುಹಿಸಿರುವರು.

ಬೊಂಬಾಯಿಯಲ್ಲಿ "ಬಹಿಷ್ಕಾರ ವಾರ" ದ ಕಾರ್ಯಕ್ರಮಗಳು ಜುಲೈ 6 ನೆಯ ತಾರೀಖಿನ ದಿವಸ ಪೂರೈಸಿದವು. ಮಿ|| ವಲ್ಲಭಭಾಯಿಯವರ ಆಗಮನವು ಜನರಲ್ಲಿ ಹೆಚ್ಚಿನ ಉತ್ಸಾಹವನ್ನುಂಟುಮಾಡಿತ್ತು. ಊರಿನ ಎಲ್ಲ ಕಡೆಗಳಲ್ಲಿಯೂ ಎಲ್ಲಿ ನೋಡಿದರೂ "ಬ್ರಿಟಿಷ್ ಮಾಲುಗಳನ್ನು ಬಹಿಷ್ಕರಿಸಿರಿ" ಎಂದು ದಪ್ಪ ದಪ್ಪ ಅಕ್ಷರಗಳಿಂದ ಬರೆಯಲ್ಪಟ್ಟಿರುವ ನೋಟೀಸುಗಳೂ, ರಾಷ್ಟ್ರೀಯ (ಮೂರು ಬಣ್ಣದ) ಬಾವುಟಗಳೂ ಕಾಣಿಸುವವು. 4 ಲಕ್ಷಕ್ಕಿಂತಲೂ ಹೆಚ್ಚು ಜನರು ಸ್ವದೇಶೀ ಪಕ್ಷಕ್ಕೆ ಮತಕೊಟ್ಟಿರುವರು. ಈ ಸಂದರ್ಭದಲ್ಲಿ ದೇಶಸೇವಕ ಸಂಘದವರು ಅಸಾಧಾರಣವಾದ ಉತ್ಸಾಹದಿಂದ ಕೆಲಸಮಾಡಿರುವರು. ಬೊಂಬಾಯಿ ನಗರದಲ್ಲಿರುವ 211 ಸೆಂಡದ ಅಂಗಡಿಗಳಲ್ಲಿ 204 ಅಂಗಡಿಗಳು ಸ್ವಯಂಸೇವಕರಿಂದ "ಪಿಕೆಟ" ಮಾಡಲ್ಪಟ್ಟಿರುವವು. ಈ ಸಂದರ್ಭದಲ್ಲಿ ಸ್ಕೂಲ್ ವಿದ್ಯಾರ್ಥಿಗಳು ವಿಶೇಷವಾಗಿ ಕೆಲಸಮಾಡಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಮಾನವ ಧರ್ಮ.

(ಲೇಖಕರು—ಪಂ|| ವೃಷಭಲಿಂಗಶಾಸ್ತ್ರಿಗಳು, ಆರಾಧ್ಯಮಠ ಸುಣ್ಣಕಲ್ಲು, ಬಿದರಿ.)

(ಹಿಂದಿನಿಂದ ಮುಂದೆಸಾಗಿದುದು.)

ಲ್ಲಿ ಪ್ರಾಣಿಗಳ ಉಪಭೋಗ ಪದಾರ್ಥಗಳು ಸರ್ವತ್ರ ಇರುತ್ತವೆ. ಹೊಟ್ಟೆಗೆ ಬೇಕಾದುದು ಮಕ್ಕಳ್ಳಬ್ಬರಿಗೂ ದೊರಕಾಗಿರುವದು. ಒಟ್ಟನು ತೆಗೆದುಕೊಳ್ಳಲ್ 3 ಸರಿ ...ಬಯಸುವನು. ಈ ಮಳೆ ಉಭಯರಿಗೂ ಕಲಹವು ಉತ್ಪನ್ನವಾಗಿ ಆಗುವ ಅನರ್ಥಗಳಿಗೆ ಮಿತಿಯುಲ್ಲ. ಇಂಥವುಗಳನ್ನು ನಿರೋಧಿಸಿ ಪ್ರಜೆಗಳಲ್ಲಿ ಅನ್ಯೋನ್ಯಪ್ರೀತಿಯುಂಟಾಗುವಂತೆ ಮಾಡುವದು ರಾಜರ ಕಾರ್ಯವಾಗಿರುತ್ತದೆ. ನಾವು ವೈರಿಗಳಿಂದಲೂ ಚೋರರಿಂದಲೂ ಪ್ರಾಣಿಹಿಂಸಕರಿಂದಲೂ ದುಷ್ಟಮೃಗಗಳಿಂದಲೂ ಪಾರಾಗಿ ಸುಖಿಗಳಾಗಬೇಕಾದರೆ ಚಕ್ರವರ್ತಿಗಳ ಬಲದಿಂದಲೆಂದು ಹೇಳಲು ಅಡ್ಡಿಯಿಲ್ಲ. ನಮಗೆ ಯಾವ ತರಹದ ಭೀತಿಯೂ ಆಗದಂತೆ ರಕ್ಷಣೆಯನ್ನು ಮಾಡುವದು ಸಾರ್ವಭೌಮರ ಕಾರ್ಯವಾಗಿರುವದು. ಅದ್ದರಿಂದಲೇ ನಾವು ಮನೆಯವರನ್ನು ಮರೆತು ದೇಶಾಂ...

ಎಂಟು ಮಕ್ಕಳನ್ನೂ ಕಟ್ಟಿಸಿಕೊಟ್ಟಿರುತ್ತಾರೆ. ಇವರು ಧರ್ಮಶ್ರದ್ಧರೂ, ದಾನಶೀಲರೂ, ಸತ್ಯಶೀಲರೂ ಆಗಿರುತ್ತಾರೆ.

ತಾ|| 5-7-30 ರಲ್ಲಿ ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಶ್ರೀಯುತ ಎ. ಆರ್. ವಾಡಿಯಾ ಬಿ.ಎ. ಬಾರ್-ಅಟ್-ಲಾರವರನ್ನು ಪ್ರಾರ್ಥಿಸಿ ಅವರಿಂದ ಸಾಹುಕಾರ್ ಚಿಕ್ಕದಾಸಪ್ಪನವರ ಸ್ಮಾರಕಶಿಲಾ ಪ್ರತಿಷ್ಠೆಯನ್ನೂ ಅವರ ಭಾವಚಿತ್ರದ ಅನಾವರಣ ಮಹೋತ್ಸವವನ್ನೂ ಅತಿ ವಿಜೃಂಭಣೆಯಿಂದ ನಡೆಸಿದರು. ಬಹಳ ದೂರ ದೇಶದಿಂದ ಅತಿಥಿಗಳು ದಯಮಾಡಿಸಿದ್ದರು. ಇವರಲ್ಲಿ ಮುಖ್ಯರಾದವರ ಪೈಕಿ ಮದರಾಸ್ ನಗರದ ಸಾ|| ಜವಾಹಿರ್ ದಾಸ್ ಗೋಕುಲದಾಸರು, ಬೆಂಗಳೂರು ನಗರದ ಸಾ|| ಹರಿಯಣ್ಣನವರು, ಮ|| ರಾ|| ಸಜ್ಜನರಾಯರೂ ಸಾ|| ...

ಅಭಿನಂದನ.

ಮೈಸೂರು ದೇಶದ ಮಾದರೀಗ್ರಾಮದ ಮಿಡಲ್ ಸ್ಕೂಲಿನ ಪೋಷಕರ ಸ್ಮಾರಕಶಿಲಾಪ್ರತಿಷ್ಠೆ ಮತ್ತು ಅವರ ಭಾವಚಿತ್ರದ ಅನಾವರಣ ಸಮಾರಂಭ.

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ.ಜಿ.ಬಿ.ಇ. ಯವರ ವರ್ಧಂತ್ಯುತ್ಸವ ಸಮಾರಂಭವು.

ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲೂಕು ಗಡೀಹಳ್ಳಿ ಗೌರ್ನಮೆಂಟ್ ಪ್ರೈಮರಿಸ್ಕೂಲಿನಲ್ಲಿ ಸನ್ 1930 ನೇ ಇಸ್ವಿ ಜೂನ್ ತಾರೀಖು 7 ನೆಯ ಶನಿವಾರ ದಿವಸ ಸ್ಕೂಲ್ ಹೆಡ್‌ಮಾಸ್ಟರ್ ಬಿ. ರುದ್ರಯ್ಯನವರು ಗ್ರಾಮಪಂಚಾಯ್ತಿ ಛೇರ್‌ಮನ್ ಪಿ. ರಾಮಪ್ಪನವರು ಮಲ್ಲಿಕಾರ್ಜುನಪ್ಪನವರಿಂದಲೂ, ಪಿ. ರಂಗಪ್ಪನವರಿಂದಲೂ, ದೊಡ್ಡಮಲ್ಲಪ್ಪನವರೇ ಮೊದಲಾದ ಗ್ರಾಮಸ್ಥರಿಂದಲೂ ಸ್ಕೂಲ್ ವಿದ್ಯಾರ್ಥಿಗಳ ಉದಾರಬುದ್ಧಿಯಿಂದಲೂ ...

ದುಂಡುಮೇಜಿನ ಪರಿಷತ್ತು.

ಈ ತಿಂಗಳು 9 ನೆಯ ತಾರೀಖಿನದಿವಸ ಶ್ರೀನಿವಾಸಶಾಸ್ತ್ರಿಯವರು ಸಿಮ್ಲಾದಲ್ಲಿ ಮಾಡಿದ ಭಾಷಣದ ಸಾರಾಂಶ.

ವಿನಗೆ ಆಜ್ಞೆ ಮಾಡಿತು. ಅದರಂತೆ ನಾವು ಪ್ರಸಿದ್ಧಪಡಿಸಿರುವೆವು. ಅದು ಯಾವ ಕಾರಣದಿಂದಲೂ ಬದಲಾಯಿಸುವಂತಿಲ್ಲ.

ದುಂಡುಮೇಜಿನ ಪರಿಷತ್ತು ಗ್ರೇಟುಬ್ರಿಟನ್ನಿನ ಮತ್ತು ಭರತಖಂಡದ ಮುಖ್ಯ ಮುಖ್ಯ ಮುಖಂಡರಿಂದ ಕೂಡಿದ್ದು ಪಾರ್ಲಿಮೆಂಟಿಗೆ ಒಪ್ಪಿಸುವ ಸಲಹೆಗಳ ವಿಷಯಗಳಲ್ಲಿ ನಿರ್ಬಂಧವಿಲ್ಲದೆ ಚರ್ಚೆಗೆ ಅವಕಾಶಕೊಡುವದು. ಈ ಭಾರತ ಸಮಸ್ಯಾ ಪೂರ್ತಿಗೆ ಸೈಮನ್ ವರದಿಯು ಅತ್ಯಂತ ಪ್ರಾಮುಖ್ಯವಾದ ವಿಷಯವಾಗಿರುವದೆಂಬುದನ್ನು ಯಾವ ಪಕ್ಷಪಾತಿಯಾದ ಮನುಷ್ಯನೂ ತಿರಸ್ಕರಿಸಲಾರನು. ಪರಿಷತ್ತಿನಲ್ಲಿ ವರದಿಯ ವಿಷಯವಾಗಿ ಆಗಬಹುದಾದ ತೀರ್ಮಾನವನ್ನು ಯಾರೂ ಆಕ್ಷೇಪಿಸಲವಕಾಶವಿಲ್ಲ. ಆದರೆ ಅದರ ವಿಷಯದಲ್ಲಿ ಸರಿಯಾದ ಚರ್ಚೆಗೆ ಅವಕಾಶಕೊಡದಿದ್ದರೆ ಇಂಡಿಯಾ ಸರಕಾರವು ತಮ್ಮ ಕರ್ತವ್ಯವನ್ನು ಮರೆತಂತಾಗುವದು. ...

ಘರ್ಷಣೆಗಳನ್ನು ನಿಲ್ಲಿಸಬಹುದು. ಇದಕ್ಕಾಗಿ ಈಗ ಎರಡು ಮಾರ್ಗಗಳು ಉಳಿದಿರುವವು. ಒಂದು ಮಾರ್ಗವು ದ್ವೇಷ, ನಿರಾಶೆ ಮತ್ತು ಅನರ್ಥಪರಂಪರೆಗಳಿಗೂ, ಮತ್ತೊಂದು ಮಾರ್ಗವು ಭಾರತ ಸ್ವಾತಂತ್ರ್ಯಸಂಪಾದನೆಗೂ ಕರೆದೊಯ್ಯುವದು. ಈ ಸಂದರ್ಭದಲ್ಲಿ ಭರತಖಂಡವು ಸರಿಯಾದ ಮಾರ್ಗವನ್ನೇ ಅನುಸರಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

(ಆಂಗ್ಲಸ್ತ್ರೀಯಳ ಅಭಿಪ್ರಾಯ.)

ಪ್ರಸಿದ್ಧ ಆಂಗ್ಲಪತ್ರಿಕಾಪ್ರಕಾಶಿಯಾದ "ಲೇಬರ್ ಮಂತ್ಲಿ" ...

[6ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ

೧೯೩೦ ನೇ ಜುಲೈ ತಾ|| ೧೪ನೆಯ ಸೋಮವಾರ

ಶಕ್ತಿವಿಶಿಷ್ಟಾದ್ವೈತಮತ.

ದ್ವೈತ, ಅದ್ವೈತ, ವಿಶಿಷ್ಟಾದ್ವೈತಾದಿ ಮತಗಳಂತೆ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತವೂ ಸಹ ಒಂದು ಪ್ರತ್ಯೇಕ ವೈದಿಕಮತವಾಗಿದ್ದರೂ ಕೆಲವು ಕಾಲದಿಂದೀಚೆಗೆ ಸಂಸ್ಕೃತವಿದ್ಯೆಯನ್ನು ಕಲಿಯದೆ ಇದ್ದ ಕೆಲ ವೀರಶೈವರು ದೇಶಭಾಷೆಯಲ್ಲಿರುವ ಅದ್ವೈತಪರವಾದ ಪಂಚದಶಿ, ವಿಚಾರಸಾಗರ, ವಾಸಿಷ್ಠ, ಜ್ಞಾನಸಿಂಧು ಮುಂತಾದ ಗ್ರಂಥಗಳನ್ನು ನೋಡುತ್ತ ಬಂದಿದ್ದರಿಂದ ಮಾಯಾದ್ವೈತಸಿದ್ಧಾಂತವೇ ವೀರಶೈವಸಿದ್ಧಾಂತವೆಂದು ಭ್ರಮಿಸಿ ಪವಿತ್ರವೂ, ಸಕಲಶ್ರುತಿಸಮ್ಮತವೂ, ಅತ್ಯಂತ ಸನಾತನವೂ ಆದ ತಮ್ಮ ಶಕ್ತಿವಿಶಿಷ್ಟಾದ್ವೈತತತ್ತ್ವವನ್ನು ತ್ಯಜಿಸುತ್ತ ಹೆಸರಿಗೆ ಮಾತ್ರ ಲಿಂಗಧಾರಿಗಳೆನಿಸುತ್ತ ಬಂದಿರುತ್ತಾರೆ. ಪ್ರಾಯಶಃ ಪ್ರಪಂಚದಲ್ಲಿ ಯಾರಿಗೆ ಯಾವ ಭಾಷೆಯ ಪರಿಚಯವಿರುತ್ತದೆಯೋ ಆ ಭಾಷೆಯ ಗ್ರಂಥಗಳನ್ನು ಓದುವುದರಿಂದ ಅವುಗಳಲ್ಲಿ ಅಭಿಮಾನವು ಹುಟ್ಟುವುದು ಸ್ವಭಾವವಾಗಿದೆ. ಲೋಕದಲ್ಲಿ ಆಯಾಯ ಮತದ ಪಂಡಿತರು ತಮ್ಮ ತಮ್ಮ ದೇಶಭಾಷೆಗಳಲ್ಲಿ ತಮ್ಮ ತಮ್ಮ ಮತಗ್ರಂಥಗಳನ್ನು ಬರೆದು ಪ್ರಸಿದ್ಧಪಡಿಸುತ್ತ ಬಂದಿದ್ದರಿಂದ ಆಯಾಯ ಗ್ರಂಥಕಾರರ ಕೀರ್ತಿಯೂ ಮತಪ್ರವರ್ತಕರಾದ ಆಚಾರ್ಯರ ಮಹತ್ವವೂ ಜನಗಳಲ್ಲಿ ಬೇರೂರಿರುವುದು. ಪೂರ್ವದಿಂದಲೂ ಸಂಸ್ಕೃತಭಾಷೆಯಲ್ಲಿದ್ದ ಅದ್ವೈತಗ್ರಂಥಗಳನ್ನು ಆ ಮತದ ಪಂಡಿತರನೇಕರು ದೇಶಭಾಷೆಗೆ ಪರಿವರ್ತನೆಮಾಡುತ್ತ ಬಂದಿದ್ದರಿಂದ ಪ್ರಾಯಶಃ ಯಾರ ಕೈಯಲ್ಲಿ ನೋಡಿದರೂ ಅದ್ವೈತಗ್ರಂಥಗಳೇ ಕಾಣುತ್ತವೆ. ಕೆಲಕಾಲದಿಂದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ತಿಳಿದ ವೀರಶೈವಪಂಡಿತರು ಈ ಸಮಾಜದಲ್ಲಿ ಕಡಿಮೆಯಾಗುತ್ತ ಬಂದಿದ್ದರಿಂದ ಸಂಸ್ಕೃತಭಾಷೆಯಲ್ಲಿದ್ದ ಗ್ರಂಥಗಳು ಹುಳುಗಳ ಪಾಲಾಗುತ್ತ ಬಂದುವಲ್ಲದೆ ದೇಶಭಾಷೆಗಳಲ್ಲಿ ಪರಿವರ್ತನೆಯಾಗುವುದಂತೂ ದೂರೇ ಉಳಿಯಿತು. ಕೆಲವು ಪಂಡಿತರು ಮಿಂಚಿನಹುಳುಗಳಂತೆ ಅಲ್ಲಲ್ಲಿಯೇ ಇದ್ದರೂ ಅವರು ಸಿದ್ಧಾಂತಗ್ರಂಥಗಳನ್ನು ನೋಡದೆ ಕೇವಲ ಕಾವ್ಯ ನಾಟಕಾದಿಗಳನ್ನು ಓದುವ ಭರದಲ್ಲಿಯೇ ಕಾಲವನ್ನು ಕಳೆಯುತ್ತ ತಮ್ಮ ತಮ್ಮ ಗೃಹಕೃತ್ಯವನ್ನು ಮಾತ್ರ ನಿರ್ವಾಹಮಾಡಿಕೊಂಡು ಇಹಲೋಕಯಾತ್ರೆಯನ್ನು ಮುಗಿಸಿದರು. ಮಠಾಧಿಕಾರಿಗಳೆಂಬುವರು ಕೆಲಕಾಲದಿಂದ ಸಂಸ್ಕೃತದ ಗಂಧವನ್ನೇ ಅರಿಯದೆ ಕೇವಲ ಕರಣಹಸಿಗೆ, ಮಂತ್ರಗೋಪ್ಯ, ಮಿಶ್ರಾರ್ಪಣ ಮುಂತಾದವುಗಳನ್ನೇ ಅವಲಂಬಿಸಿ ವೀರಶೈವಸಿದ್ಧಾಂತಾನುಸಾರವಾಗಿ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ತಮ್ಮ ತಮ್ಮ ಭಕ್ತರಿಗೆ ಸರಿಯಾಗಿ ಬೋಧಿಸದೆ ಬಂದರು. ಇನ್ನು ಕೆಲವರು ತಮ್ಮ ಕೈಗೆ ಯಾವ ಯಾವ ದೇಶಭಾಷೆಯ ಗ್ರಂಥಗಳು ಸಿಕ್ಕುತ್ತವೆಯೋ ಆ ಗ್ರಂಥಗಳನ್ನೇ ಓದಿ ಅಲ್ಲಿರುವುದೆಲ್ಲವೂ ತಮ್ಮ ಮತಕ್ಕೆ ಸಂಬಂಧಪಟ್ಟದ್ದೇ ಎಂದು ತಿಳಿಯುತ್ತ, ವೀರಶೈವಸಿದ್ಧಾಂತಾನುಗುಣವಾದ ಉಪಾಸನಾ ಮಾರ್ಗವನ್ನೂ ಜ್ಞಾನಮಾರ್ಗವನ್ನೂ ಬಿಡುತ್ತ ಬಂದರು. ಇದರಿಂದ ಪ್ರಾಯಶಃ ಎಲ್ಲಿ ನೋಡಿದರೂ ವಾಗದ್ವೈತದ ಆಡಂಬರವೇ ಹೆಚ್ಚಿ ಗುರುಶಿಷ್ಯಭಾವವು ಹಿಂದುಮುಂದಾಗಿ ಅಧರ್ಮಕ್ಕೆ ಅವಕಾಶವುಂಟಾಯಿತು. ಕೆಲವರು ಕನ್ನಡದಲ್ಲಿರುವ ನಿಜಗುಣರ ಆರು ಪುಸ್ತಕಗಳನ್ನು ಓದಿ ಇವೇ ಷಟ್‌ಶಾಸ್ತ್ರಗಳೆಂದು ಭ್ರಮಿಸಿ ಈ ಗ್ರಂಥಗಳಲ್ಲಿರುವ ಶಕ್ತಿವಿಶಿಷ್ಟಾದ್ವೈತಮತದ ಹಾಗೂ ಅದ್ವೈತಮತದ ವೈಲಕ್ಷಣ್ಯವಂತಿಳಿಯಲು ಶಕ್ತಿಸಾಲದೆ ಅಲ್ಲಿ ಹೇಳಿದುದೆಲ್ಲ ವೀರಶೈವಮತತತ್ತ್ವವೆಂದೇ ತಿಳಿಯುತ್ತ ಸ್ವಮತಕ್ಕೆ ವಿರೋಧಿಗಳಾದರು. ಬೇರೆ ಕೆಲವು ಪಂಡಿತರು ಆ ಮತೀಯರ ಎಳ್ಗೆಗಾಗಿ ಕನ್ನಡದಲ್ಲಿ ಬರೆದಿರುವ ವಿಚಾರಸಾಗರ, ಪಂಚದಶಿ, ವಾಸಿಷ್ಠ ಮುಂತಾದ ಗ್ರಂಥಗಳನ್ನು ಓದಿ ಮಾಯಾದ್ವೈತವೇ ವೀರಶೈವಸಿದ್ಧಾಂತವೆಂದು ಹೇಳುತ್ತ ಸ್ವಧರ್ಮಕ್ಕೆ ವಿರೋಧಿಗಳಾದರು. ಹೀಗೆ ವೀರಶೈವಸಿದ್ಧಾಂತ ಗ್ರಂಥಗಳು ದೇಶಭಾಷೆಯಲ್ಲಿಲ್ಲದ್ದರಿಂದಲೂ, ಕನ್ನಡಕ್ಕೆ ಪರಿವರ್ತಿಸುವ ಪಂಡಿತರ ಸಂಖ್ಯೆಯು ಕಡಿಯಾಗುತ್ತ ಬಂದುದರಿಂದಲೂ ಶ್ರೀ ರೇಣುಕಾದಿ ಭಗವತ್ಪಾದರಿಂದ ಪ್ರತಿಷ್ಠಿತವಾದ ಅಪ್ರಾಕೃತ ಶಿವಧರ್ಮಾನುಷ್ಠಾನಗಳು ಬಿಲವಾಗುತ್ತ ಪ್ರಾಕೃತ ನಿಯಮಗಳು ಸಮಾಜದಲ್ಲಿ ಹೆಚ್ಚುತ್ತ ಬಂದವು. ಲೋಕದಲ್ಲಿ ಮೂಢಜನಗಳು ತಾವು ಏನನ್ನು ಓದುತ್ತಾರೆಯೋ ಮತ್ತೊಬ್ಬರಿಂದ ಏನನ್ನು ಕೇಳುತ್ತಾರೆಯೋ ಅದೆಲ್ಲಾ ನಮ್ಮ ಮತದ್ದೇ ಎಂದು ತಿಳಿಯುವದು ರೂಢಿಯಾಗಿ ಬಂದಿರುತ್ತದೆ. ಇದರಿಂದ ಪೂರ್ವಾಚಾರ್ಯರ ಮಹಾವಾಕ್ಯೋಪದೇಶಗಳ ಬಿಗಿಯು ಸಡಿಲಾಗುತ್ತ ಬಂದಿತು. ಪ್ರಾಯಶಃ ಅಂಥ ಮೂಢರ ಕೈಗಳಲ್ಲಿ ಎಲ್ಲಿನೋಡಿದರೂ ಅನ್ಯಧರ್ಮಪ್ರತಿಪಾದಕಗಳಾದ ವಿಚಾರಸಾಗರಾದಿ ಗ್ರಂಥಗಳೇ ನರ್ತನಮಾಡುತ್ತಲಿವೆ. ಈ ಮತದಲ್ಲಿ ಅಲ್ಪಸ್ವಲ್ಪ ತಿಳಿದವರಾಗಿದ್ದರೂ ಅವರೂ ಸಹ ವೀರಶೈವರಿಗೆ ಲಿಂಗಧಾರಣ ಲಿಂಗಪೂಜೆಗಳು ಮಾತ್ರ ಬೇರೆಯೇ ಹೊರತು ಮಿಕ್ಕವುಗಳೆಲ್ಲವೂ ಅದ್ವೈತಾನುಭವವೇ ಎಂದು ಅಭಿನಿವೇಶವುಳ್ಳವರಾಗಿದ್ದಾರೆ. ಇತ್ತೀಚೆಗೆ ಸಮಾಜದಲ್ಲಿ ಅನೇಕರು ಸಂಸ್ಕೃತಭಾಷಾಧುರೀಣರಾಗಿ ಕೆಲವೆಡೆಯಲ್ಲಿ ಬೇರೂರಿ ನಿಂತಿರುವ ಈ ವಿಷಮಸಂಸ್ಕಾರವನ್ನು ಬದಲಾಯಿಸಿ ಸ್ವಧರ್ಮಶ್ರದ್ಧೆಯನ್ನು ಹುಟ್ಟಿಸುವದಕ್ಕಾಗಿ ತಾವು ವೀರಶೈವ ಸಿದ್ಧಾಂತವನ್ನು ಚನ್ನಾಗಿ ತಿಳಿದುಕೊಂಡು ಆ ಮೂಲಗ್ರಂಥಗಳನ್ನು ಕನ್ನಡಭಾಷೆಯಲ್ಲಿ ಪರಿವರ್ತನೆಮಾಡುವುದರಲ್ಲಿ ತೊಡಗಿ ಎಷ್ಟೋ ಗ್ರಂಥಗಳನ್ನು ಹೊರಗೆಡವಿ ಮಾಯಾದ್ವೈತಕ್ಕೂ ಶಿವಾದ್ವೈತಕ್ಕೂ ಇರುವ ತಾರತಮ್ಯವನ್ನು ತಿಳುಹಿಸುತ್ತ ಬಂದಿರುವುದು ಆಚಾರ್ಯಭಗವತ್ಪಾದರ ಅನುಗ್ರಹವೆಂದೇ ಹೇಳಬೇಕಾಗಿದೆ. ಇದರಿಂದ ಈಗ ಎಷ್ಟೋ ಕಡೆಗಳಲ್ಲಿ ಅಸಂಸ್ಕೃತರಾದ ಜನಗಳು ಕಣ್ಣು ತೆರೆದು ಸ್ವಸಿದ್ಧಾಂತದಲ್ಲಿ ಹೇಳಿದ ಧರ್ಮಗಳನ್ನು ತಿಳಿದುಕೊಂಡು ಹಿಂದೆ ತಿಳಿದುಕೊಂಡಿದ್ದ ವಿಧರ್ಮಗಳನ್ನು ಬಿಡುತ್ತ ಬಂದಿರುವರು.

ವೀರಶೈವಮತಕ್ಕೂ ಅದ್ವೈತಮತಕ್ಕೂ ಏನೂ ಸಂಬಂಧವಿಲ್ಲ. ಆದ್ಯಂತದಲ್ಲೂ ಇವೆರಡಕ್ಕೂ ವೈಯಧಿಕರಣ್ಯವಿದೆಯೇ ಹೊರತು ಒಂದರಲ್ಲೂ ಸಾಮಾನಾಧಿಕರಣ್ಯವೇ ಇರುವದಿಲ್ಲ. ಈ ಮತಗಳ ಮೂಲಕರ್ತೃಗಳೇ ಬೇರೆ ಬೇರೆಯಾಗಿದ್ದಾರೆ. ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತಕ್ಕೆ ಶ್ರೀ ರೇಣುಕಾದಿ ಪಂಚಾಚಾರ್ಯರು ಕರ್ತೃಗಳಾದರೆ, ಅದ್ವೈತಮತಕ್ಕೆ ಶಂಕರಾಚಾರ್ಯರು ಕರ್ತೃಗಳಾಗಿದ್ದಾರೆ. ರೇಣುಕಾದ್ಯಾಚಾರ್ಯರು ಜ್ಞಾನಕರ್ಮ ಸಮುಸಮುಚ್ಚಯದಿಂದ ಮುಕ್ತಿಯೆಂದು ಹೇಳಿದರೆ ಶಂಕರಾಚಾರ್ಯರು ಜ್ಞಾನವೊಂದರಿಂದಲೇ ಮುಕ್ತಿಯೆನ್ನುತ್ತಾರೆ. ಪಂಚಾಚಾರ್ಯರು ಜಗತ್ತು ಸತ್ಯವೆಂದರೆ ಶಂಕರಾಚಾರ್ಯರು ಮಿಥ್ಯೆಯೆನ್ನುತ್ತಾರೆ. ಪಂಚಾಚಾರ್ಯರು ಬ್ರಹ್ಮವು ಸರ್ವಜ್ಞತ್ವಾದಿ ಕಲ್ಯಾಣಗುಣವಿಶಿಷ್ಟವೆಂದರೆ ಶಂಕರಾಚಾರ್ಯರು ನಿರ್ವಿಶೇಷವೆಂದು ಹೇಳುತ್ತಾರೆ. ಪಂಚಾಚಾರ್ಯರು ಶ್ರುತಿಗಳಲ್ಲಿ ಹೇಳಿದ ಭೇದ, ಅಭೇದಗಳೆರಡೂ ಪಾರಮಾರ್ಥಿಕವೆಂದರೆ ಶಂಕರಾಚಾರ್ಯರು ಅಭೇದವೊಂದೇ ಪಾರಮಾರ್ಥಿಕವೆನ್ನುವರು. ರೇಣುಕಾದ್ಯಾಚಾರ್ಯರು ಶಿವಯೋಗದಿಂದ ಮುಕ್ತಿಯೆಂದರೆ ಶಂಕರಾಚಾರ್ಯರು ವಿಚಾರದಿಂದಲೇ ಮುಕ್ತಿಯೆನ್ನುವರು. ರೇಣುಕಾದ್ಯಾಚಾರ್ಯರು ಸರ್ವಕಾರಣನಾದ ಮಹೇಶ್ವರನೊಬ್ಬನನ್ನೇ ಪಾತಿವ್ರತ್ಯಧರ್ಮದಿಂದ ಅರ್ಚಿಸಬೇಕೆಂದು ವಿಧಿಸಿದ್ದರೆ ಇವರು ಆದಿತ್ಯಾದಿ ಪಂಚದೇವತೆಗಳ ಪೂಜೆಯನ್ನು ವಿಧಿಸಿರುವರು. ರೇಣುಕಾದ್ಯಾಚಾರ್ಯರು ಅಂತಃಕರಣವೃತ್ತಿಗಳು ನಿತ್ಯಗಳೆಂದರೆ ಇವರು ಅನಿತ್ಯಗಳೆನ್ನುತ್ತಾರೆ. ರೇಣುಕಾದ್ಯಾಚಾರ್ಯರು ಶಕ್ತಿಯು ಬ್ರಹ್ಮಾಭಿನ್ನವಾದುದರಿಂದ ಮುಕ್ತಿದಶೆಯಲ್ಲಿ ಸ್ವರೂಪತಃ ನಷ್ಟವಾಗದೆ ತನಗೆ ಮೂಲಭೂತವಾದ ಶಿವಶಕ್ತಿಯಲ್ಲಿ ಲೀನವಾಗುತ್ತದೆಂದು ಹೇಳಿದರೆ ಇವರು ಬ್ರಹ್ಮಜ್ಞಾನದಿಂದ ಅವಿದ್ಯೆಯು ಸ್ವರೂಪತಃ ನಷ್ಟವೇ ಆಗುತ್ತದೆಂದು ಹೇಳುತ್ತಾರೆ. ರೇಣುಕಾದ್ಯಾಚಾರ್ಯರು ಜಗತ್ತು ಬ್ರಹ್ಮದ ಪರಿಣಾಮವೆಂದರೆ ಇವರು ವಿವರ್ತವೆನ್ನುವರು. ರೇಣುಕಾದ್ಯಾಚಾರ್ಯರು ಚಿತ್‌ಶಕ್ತಿಯ ಸಂಕೋಚರೂಪವಾದ ಚಿತ್ತವಿಶಿಷ್ಟನೇ ಜೀವನೆಂದು ಹೇಳಿದರೆ ಇವರು ಅಂತಃಕರಣದಲ್ಲಿ ಪ್ರತಿಫಲಿಸಿದ ಬ್ರಹ್ಮವೇ ಜೀವವೆಂದು ಹೇಳುತ್ತಾರೆ. ರೇಣುಕಾದ್ಯಾಚಾರ್ಯರು ಚಿತ್ತವಿಕಾಸದಿಂದ ಶಿವತ್ವಪ್ರಾಪ್ತಿಯೆಂದು ಹೇಳಿದರೆ ಇವರು ಚಿತ್ತಾದಿಗಳು ನಾಶವಾಗಿ ಪರಮಾನಂದಪ್ರಾಪ್ತಿಯೇ ಮುಕ್ತಿಯೆಂದು ಹೇಳುವರು. ರೇಣುಕಾದ್ಯಾಚಾರ್ಯರು ತಮ್ಮ ಸಿದ್ಧಾಂತಕ್ಕೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವೆಂದರೆ ಇವರು ಅದ್ವೈತಸಿದ್ಧಾಂತವೆಂದು ಕರೆಯುವರು. ಹೀಗೆ ಎಲ್ಲಾ ವಿಷಯಗಳಲ್ಲಿಯೂ ವೈಲಕ್ಷಣ್ಯವೇ ಕಂಡುಬರುವದರಿಂದ ಅದ್ವೈತಮತಕ್ಕೂ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತಕ್ಕೂ ಮೇರುಸರ್ಷಪದಷ್ಟು ವ್ಯತ್ಯಾಸವಿದ್ದರೂ ಇದೊಂದನ್ನೂ ಪರ್ಯಾಲೋಚಿಸದೆ ಅಲ್ಲಲ್ಲಿಯೇ ಹೇಳಲ್ಪಟ್ಟ ಕೆಲ ಅದ್ವೈತಪರಗಳಾದ ವಾಕ್ಯಗಳನ್ನು ಕಿವಿಯಿಂದ ಕೇಳಿದ ಮಾತ್ರವೆ ಪೂರ್ವಾಪರಪ್ರಕರಣವನ್ನು ನೋಡದೆ ಈ ವೀರಶೈವಮತವನ್ನು ಅದ್ವೈತಸಿದ್ಧಾಂತದಲ್ಲಿ ಅಂತರ್ಭಾವಮಾಡಿದರೆ ಆಚಾರ್ಯಭಗವತ್ಪಾದರಿಂದ ಹೇಳಲ್ಪಟ್ಟ ಮುಕ್ತಿಸಾಧನಗಳಾದ ಭಕ್ತಮಹೇಶಾದಿ ಷಟ್‌ಸ್ಥಲಾಚರಣೆಗಳೂ, ನೂರೊಂದು ಸ್ಥಲಗಳೂ, ಅಷ್ಟಾವರಣಗಳೂ ಮಾಂಸಪಿಂಡನಿವೃತ್ತಿಪೂರ್ವಕ ಮಂತ್ರಪಿಂಡತ್ವ ಪ್ರಾಪ್ತಿರೂಪವಾದ ಶಿವದೀಕ್ಷಾಪೂರ್ವಕ ಲಿಂಗಧಾರಣಮಹಾವ್ರತವೂ ಇತ್ಯಾದಿಗಳಿಗೆಲ್ಲಾ ಅರ್ಥವಿಲ್ಲದಂತಾಗುವುದು. ಇವುಗಳನ್ನೆಲ್ಲಾ ಮರೆತು ತಮ್ಮ ಗುರುಗಳ ಮಾರ್ಗಕ್ಕೆ ವಿರುದ್ಧವಾಗಿ ತಪ್ಪುಮಾರ್ಗದಲ್ಲಿ ಕಾಲಿಡುವ ಇಂಥ ಜನಗಳ ಮಹೋಪಕಾರಕ್ಕಾಗಿ ಈಗಿನ ಕೆಲ ಜನ ವೀರಶೈವಪಂಡಿತರು ಸಂಸ್ಕೃತಭಾಷೆಯಲ್ಲಿರುವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಾಭಿಪ್ರಾಯವನ್ನು ಕರ್ನಾಟಕಭಾಷೆಯಲ್ಲಿ ಪ್ರಸಿದ್ಧಗೊಳಿಸಿ ಅನ್ಯಗ್ರಂಥಾವಲೋಕನದಿಂದುಂಟಾದ ಭ್ರಮೆಯನ್ನು ಹೋಗಲಾಡಿಸಿ ಲಿಂಗಿಧರ್ಮವು ಪ್ರಚಾರದಲ್ಲಿ ಬರುವಂತೆ ಮಾಡುತ್ತಿರುವರು. ಈ ಮಹೋದಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಅನುಗ್ರಹವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು ಹೈಕೋರ್ಟ್ ಜಡ್ಜರು.

ಶ್ರೀಮಾನ್. ಸಿ. ಮಹಾದೇವಯ್ಯನವರು.

ವೀರಶೈವ ಜನಾಂಗದಲ್ಲಿ ಇದುವರೆಗೆ ಎಲ್ಲಿಯೂ ಯಾರೂ ಪಡೆಯದಿರುವ "ಹೈಕೋರ್ಟ್ ಜಡ್ಜ್" ಸ್ಥಾನವು ಮೇಲ್ಕಂಡ ಮಹೋದಯರಿಗೆ ಪ್ರಾಪ್ತವಾದುದನ್ನು ಕಂಡು ಭರತಖಂಡದಲ್ಲಿರುವ ಸಮಸ್ತ ಜನಾಂಗದವರು ಸಂತೋಷಸಾಗರದಲ್ಲಿ ಲೋಲಾಡುತ್ತಿದ್ದಾರೆ. ಈ ಮಹೋದಯರಿಗೆ ಅಸದೃಶವಾದ ಈ ಮಹಾನ್ಯಾಯಾಧೀಶಸ್ಥಾನವು ಪ್ರಾಪ್ತವಾಗುವದಕ್ಕೆ ಇವರಲ್ಲಿ ನೈಸರ್ಗಿಕವಾಗಿರುವ ಕಾಯಿದೆಪಾಂಡಿತ್ಯ, ಕಾರ್ಯದಕ್ಷತೆ, ಸಾರಾಸಾರವಿಚಾರಶೀಲತೆ, ದೂರದೃಷ್ಟಿ ಮೊದಲಾದ ಸದ್ಗುಣಗಳೇ ಮೂಲಕಾರಣಗಳಾಗಿವೆಯೆಂದು ಧಾರಾಳವಾಗಿ ಹೇಳಬಹುದಾಗಿದೆ. ಇದನ್ನೆಲ್ಲ ಅರಿತೇ ಸಾಕ್ಷಾದ್ಧರ್ಮಾವತಾರಿಗಳಾದ ನಮ್ಮ ಶ್ರೀಮನ್ಮಹಾರಾಜರವರು ಈ ಮಹೋದಯರಿಗೆ ಅನುಗುಣವಾದ ಈ ಮಹಾಸ್ಥಾನಾಧಿಪತ್ಯವನ್ನನುಗ್ರಹಿಸಿರುವರು. ಧರ್ಮಪ್ರಭುಗಳು ದಯಾದೃಷ್ಟಿಯನ್ನಿಟ್ಟು ಈ ಮಹೋದಯರಿಗೆ ಮಹಾನ್ಯಾಯಾಧೀಶಾಧಿಪತ್ಯವನ್ನು ದಯಪಾಲಿಸುವದಕ್ಕಾಗಿ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಪ್ರಭುಸನ್ನಿಧಿಯಲ್ಲಿ ತಮ್ಮ ಚಿರಕೃತಜ್ಞತೆಯನ್ನರ್ಪಿಸುತ್ತಾರೆ. ಅಸದೃಶಗುಣಗಣಭೂಷಿತರಾದ ಈ ಮಹೋದಯರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಜೈಲಿನಲ್ಲಿ ಪಂಡಿತ ಜವಾಹರಲಾಲನೆಹರೂರವರನ್ನು ಇರಿಸಿದ್ದ ಕೊಠಡಿಗೆ ಪಂಡಿತ ಮೋತೀಲಾಲನೆಹರು ಮತ್ತು ಡಾಕ್ಟರ್ ಅಹಮದ್ ಇವರನ್ನು ಕರೆದೊಯ್ದರು. ತಂದೆಮಕ್ಕಳಿಬ್ಬರೂ ಜೈಲಿನಲ್ಲಿಯೇ ಸದ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಬಹಳ ಹೊತ್ತು ಮಾತನಾಡಿದರು.

ವೈಸರಾಯರ ಭಾಷಣ.

ಮುಖಂಡರ ಮತ್ತು ಪತ್ರಿಕಾಕರ್ತರ ಅಭಿಪ್ರಾಯಗಳು.

ಹೊಸ ವಿಷಯವೇನೂ ಇಲ್ಲ.

"ವೈಸರಾಯರು ಭಾಷಣದಲ್ಲಿ ಹಿಂದಿನ ವೈಸರಾಯರೂ ಮತ್ತು ಸ್ಟೇಟ್ ಸೆಕ್ರೆಟರಿಗಳೂ ಹೇಳುತ್ತಿದ್ದ ಸಾಮ್ರಾಜ್ಯಾಧಿಪತ್ಯದ ತತ್ತ್ವವನ್ನೇ ಮತ್ತೊಂದು ಸಾರೆ ಒತ್ತಿ ಹೇಳಿರುವರು. ದುಂಡುಮೇಜಿನ ಪರಿಷತ್ತು ಸಫಲವಾಗಬೇಕಾದರೆ ಸರ್ವಪ್ರಯತ್ನದಿಂದಲೂ ಭಾರತೀಯರ ಮನಸ್ಸಿನಲ್ಲಿ ಉತ್ಪನ್ನವಾಗಿರುವ ನಿರಾಧಾರಗಳಾದ ಅನುಮಾನಗಳು ಇಲ್ಲದಂತೆ ಮಾಡಬೇಕು. ಕಾನ್ಫರೆನ್ಸ್ ಮತ್ತು ಸೈಮನ್‌ವರದಿಯ ವಿಷಯವಾಗಿ ಸರ್ವರನ್ನು ತವಾದ ಒಪ್ಪಂದವಾದ ಹೊರತು ಯಾವ ತೀರ್ಮಾನವನ್ನೂ ಮಾಡುವದಕ್ಕಾಗುವದಿಲ್ಲ."

—ಲಂಡನ್ ಟೈಮ್ಸ್.

ಪರಿಣಾಮವು ಭೀಕರವಾಗುವದು.

"ವೈಸರಾಯರ ಭಾಷಣವೇನೋ ಸಮರ್ಪಕವಾಗಿಯೇ ಇರುವದು. ಸೈಮನ್‌ವರದಿಯು ಸರಕಾರದ, ಪರಿಷತ್ತಿನ ಅಥವಾ ಪಾರ್ಲಿಮೆಂಟಿನ ಕೈಗಳನ್ನು ಕಟ್ಟಿರುವದಿಲ್ಲ. ಆದರೆ ಸೈಮನ್‌ವರದಿಯು ಸೂಚನೆಗಳೇ ಕಡೆಯ ತೀರ್ಮಾನವೆಂದು ಭಾವಿಸುವದಾದರೆ ಈಗಿನ ಚಳವಳಿಯ ಪರಿಣಾಮವು ಭೀಕರವಾಗುವದು. ಈ ಅನರ್ಥಪರಂಪರೆಯು ನಿಲ್ಲಬೇಕಾದರೆ ಉಭಯ ದೇಶೀಯರಿಗೂ ಏಕಮತ್ಯವುಂಟಾಗುವಂತೆ ಮಾಡಬೇಕಾದುದು ಅತ್ಯವಶ್ಯಕವಾಗಿದೆ."

—ಡೇಲಿ ಹೆರಾಲ್ಡ್.

ಭರತಖಂಡವನ್ನು ಕಳೆದುಕೊಳ್ಳುವ ಮಾರ್ಗವನ್ನು ಹಿಡಿದಿರುವರು.

"ಇನ್ನೇನು? ಸೈಮನ್‌ವರದಿಯನ್ನು ಕಚಡಾ ಪುಟ್ಟಿಗೆ ಹಾಕುವದು ನಿಶ್ಚಯವಾದಂತಾಯಿತು. ಲಾರ್ಡ್ ಅರ್ವಿನ್ನರು ಭರತಖಂಡವನ್ನು ಶೀಘ್ರವಾಗಿ ಕಳೆದುಕೊಳ್ಳುವ ಮಾರ್ಗವನ್ನು ಹಿಡಿದಿರುವರು."

—ಡೇಲಿಮೇಲ್.

ಏನೂ ಪ್ರಯೋಜನವಿಲ್ಲ!

"ಪಂಡಿತ ಮೋತೀಲಾಲ್ ನೆಹರೂರವರಂಥವರನ್ನು ದುಂಡುಮೇಜಿನ ಪರಿಷತ್ತಿಗೆ ಬನ್ನಿರೆಂದು ಕರೆಯುವದರಿಂದ ಏನೂ ಪ್ರಯೋಜನವಿಲ್ಲ. ಧಾರಾಳತನ, ಪ್ರೀತಿ, ವಿಶ್ವಾಸಗಳನ್ನು ಮಾತಿನಲ್ಲಿ ಬೇಕಾದಷ್ಟು ತೋರಿಸಬಹುದು. ಆದರೆ ಕಾರ್ಯತಃ ಮಾಡಿ ತೋರಿಸದಿದ್ದರೆ ಅವುಗಳಿಂದ ಏನೂ ಪ್ರಯೋಜನವಾಗುವಂತಿಲ್ಲ! ಕಾಂಗ್ರೆಸ್ ಮುಖಂಡರ ಬೇಡಿಕೆಗಳನ್ನು ಬ್ರಿಟಿಷ್ ಪಾರ್ಲಿಮೆಂಟಿನವರು ಎಂದಿಗೂ ಒಪ್ಪುವಂತಿಲ್ಲ. ಇತ್ತ ಕಾಂಗ್ರೆಸ್ ಪಕ್ಷದವರು ಸುಲಭವಾಗಿ ಸಮಾಧಾನ ಹೊಂದುವಂತೆಯೂ ಇಲ್ಲ. ಆದರ ಮುಖಂಡರು ಲಂಡನ್ನಿನ ಪ್ರಯಾಣಕ್ಕಾಗಲಿ, ಬಕಿಂಗ್‌ಹ್ಯಾಂ ಅರಮನೆಯ ಆಮಂತ್ರಣಕ್ಕಾಗಲಿ ಅಥವಾ ಮುಖ್ಯ ಮಂತ್ರಿಯವರ ಔತಣಕ್ಕಾಗಲಿ ಮನಸೋತು ತಮ್ಮ ತತ್ತ್ವವನ್ನು ಎಂದಿಗೂ ಬದಲಾಯಿಸುವಂತಿಲ್ಲ."

—ದಿ ಮ್ಯಾಂಚೆಸ್ಟರ್ ಗಾರ್ಡಿಯನ್.

ಕಾರ್ಯತಃ ಮಾಡಿ ತೋರಿಸಬೇಕು.

"ವೈಸರಾಯರು ಪರಿಷತ್ತಿನಲ್ಲಿ ಬೇಕಾದ ವಿಷಯಗಳನ್ನು ಚರ್ಚಿಸಿ ಉಭಯದೇಶೀಯರಿಗೂ ಸಮ್ಮತವಾದ ಹಾಗೂ ಗೌರವಯುಕ್ತವಾದ ತೀರ್ಮಾನಗಳನ್ನು ಮಾಡಬಹುದೆಂದು ಸ್ಪಷ್ಟವಾಗಿ ಹೇಳಿರುವರು. ಅವರು ರಾಷ್ಟ್ರೀಯ ಚಳವಳಿಯಲ್ಲಿ ನಿಷ್ಕಾರಣವಾಗಿ ಪೆಟ್ಟುಗಳನ್ನು ತಿಂದು ನಿರಪರಾಧಿಗಳ ವಿಷಯವಾಗಿ ತಮ್ಮ ವಿಷಾದವನ್ನು ವ್ಯಕ್ತಪಡಿಸಿರುವರು. ವೈಸರಾಯರು ಇದನ್ನು ಕಾರ್ಯತಃ ಆಚರಣೆಗೆ ತಂದು, ಅಧಿಕಾರಿಗಳು ಎಚ್ಚರಿಕೆಯಿಂದಲೂ, ದಯಾದಾಕ್ಷಿಣ್ಯಗಳಿಂದಲೂ ವರ್ತಿಸುವಂತೆ ಮಾಡಿ ತೋರಿಸಬೇಕು. ಕಾಯಿದೆಯನ್ನೂ ಶಾಂತಿಯನ್ನೂ ರಕ್ಷಿಸಬೇಕಾದುದು ಸರಕಾರದ ಕರ್ತವ್ಯವಾಗಿರುವದು. ಆದರೆ ಅದಕ್ಕಾಗಿ ನೂರಾರು ಜನರ ತಲೆಗಳನ್ನೊಡೆಯುವದೂ, ಗಾಂಧಿಟೋಪಿಯನ್ನು ಧರಿಸಿದವರನ್ನೂ ಅಹಿಂಸಾತ್ಮಕರೂ ಶಾಂತರೂ ಆದ ಬಹಿಷ್ಕಾರ ಚಳವಳಿಗಾರರನ್ನೂ ಮತ್ತು ದೊಡ್ಡ ದೊಡ್ಡ ಮನೆತನದ ಸ್ತ್ರೀಯರನ್ನೂ ಕಾರಾಗೃಹವಾಸಕ್ಕೆ ಗುರಿಪಡಿಸುವದು ಇವೇ ಮೊದಲಾದ ಮಿತಿಮೀರಿದ ವರ್ತನೆಗಳು ಕಾಂಗ್ರೆಸ್‌ಪಕ್ಷದವರ ಅಸಮಾಧಾನವನ್ನೂ ಹಟವನ್ನೂ ಹೆಚ್ಚಿಸುವವಲ್ಲದೆ, ಅವರ ಪಕ್ಷವನ್ನೂ ಬಲಪಡಿಸುವದು."

—ಸರ್ ಚಿಮನಲಾಲ್ ಸೆಟಲವಾಡ.

ವೈಸರಾಯರ ಉಪಾಯಗಳೆಲ್ಲವೂ ಮುಗಿದುವು.

"ವೈಸರಾಯರು ಸಮಾಧಾನಪಡಿಸಲು ಮಾಡಿದ ಪ್ರಯತ್ನಗಳೆಲ್ಲವೂ ಮುಗಿದು, ಈಗ ನಿಸ್ಸಹಾಯಕರಾಗಿರುವರು. ವೈಸರಾಯರ ಮತ್ತು ಕೂಲಿಕಾರ ಸರಕಾರದ ಕಷ್ಟಗಳನ್ನು ನೋಡಿ ಎಲ್ಲರೂ ವಿಷಾದಪಡುತ್ತಿರುವರು. ಆದರೆ ಭರತಖಂಡದ ಕಷ್ಟಗಳು ಎಲ್ಲಕ್ಕಿಂತಲೂ ದೊಡ್ಡದಾಗಿರುವುವು. ಸರಕಾರವು ಯಾವ ನಿಬಂಧನೆಗಳನ್ನು ಹಾಕಿಸದೆ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿ ಮುಂದಿನ ಶಾಂತಿಸಮಾಧಾನಗಳಿಗೆ ಅವಕಾಶವನ್ನು ಕಲ್ಪಿಸಬೇಕು. ಹಾಗೆ ಮಾಡದಿದ್ದರೆ ಮಿ|| ಗಾಂಧಿ ಮತ್ತು ಪಂಡಿತ ಮೋತೀಲಾಲ್ ನೆಹರೂ ಮೊದಲಾದವರು ಪರಿಷತ್ತಿಗೆ ಹೋಗುವಂತಿಲ್ಲ. ರಾಜಕೀಯ ಕೈದಿಗಳನ್ನು ನಿಬಂಧನೆಗಳ ಮೂಲಕ ಕ್ಷಮಿಸುವದಾದರೆ ಸದ್ಯದ ಪರಿಸ್ಥಿತಿಯು ಮತ್ತಷ್ಟು ವಿಷಮವಾಗುವದು."

—ನರಸಿಂಹಚಿಂತಾಮಣಿ ಕೇಳಕರ್.

ಪರಿಷತ್ತಿಗೆ ಯಾರೂ ಹೋಗುವದಿಲ್ಲ.

"ವೈಸರಾಯರ ದರ್ಪಯುಕ್ತ ಭಾಷಣವು ಸದ್ಯದ ವಿಷಮಸ್ಥಿತಿಗೆ ಸ್ವಲ್ಪವೂ ಅನುಕೂಲವಾಗಿಲ್ಲ. ಭರತಖಂಡದ ಮುಖಂಡರನ್ನು ಬಿಡುಗಡೆಮಾಡಿ, ನೂತನ ಕಾಯಿದೆಗಳನ್ನೂ, ಲಾಠೀರಾಜನನ್ನೂ ಕೊನೆಗಾಣಿಸುವವರೆಗೆ ಪರಿಷತ್ತಿಗೆ ಯಾರೂ ಹೋಗುವದಿಲ್ಲ."

ಲಾಲಜೀ ನಾರಾಯಣಜೀ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಬೊಂಬಾಯಿ ಸಿಟಿಯಲ್ಲಿ ಭರದಿಂದ ಸಾಗಿರುವ ಮದ್ಯಪಾನ ನಿಷೇಧ ಚಳವಳಿಯು ದೆಸೆಯಿಂದ ಈ ವರ್ಷ ಸರಕಾರಕ್ಕೆ 3 ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿರುವದು.

ಮಹಾತ್ಮಾ ಗಾಂಧಿಯವರ ಧರ್ಮಪತ್ನಿಯವರಾದ ಶ್ರೀಮತಿ ಕಸ್ತೂರಿಬಾಯಿಯವರು 500 ಜನ ಸ್ವಯಂಸೇವಕಿಯರೊಡನೆ ಸೂರತದಲ್ಲಿ ಪರದೇಶೀ ವಸ್ತ್ರಬಹಿಷ್ಕಾರಕಾರ್ಯವನ್ನು ಕೈಕೊಂಡಿರುವರು.

ಸ್ವಾತಂತ್ರ್ಯಸಂಗ್ರಾಮದ ಪ್ರಾರಂಭ ಸಮಯದಲ್ಲಿ ಭರತಖಂಡಕ್ಕೆ ಬಂದಿದ್ದ ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾ ಮೊದಲಾದ ವಿದೇಶೀ ವೃತ್ತಪತ್ರಿಕಾಪ್ರತಿನಿಧಿಗಳು ತಮ್ಮ ತಮ್ಮ ದೇಶಗಳಿಗೆ ಹಿಂತಿರುಗಿದರು.

ಮುಂಬಯಿಯ 500 ಜನ ಶೇಂದಿ ಇಳಿಸುವವರು ಕಳೆದ 7 ನೆಯ ತಾರೀಖಿನ ದಿವಸ ದಾದರಿನಲ್ಲಿರುವ ಧುರುಹಾಲಿನಲ್ಲಿ ಸಭೆಸೇರಿ ಇನ್ನು ಮುಂದೆ ತಾವು ಎಂದೂ ಶೇಂದಿ ಇಳಿಸುವದಿಲ್ಲವೆಂದೂ ಈ ಒಪ್ಪಂದವನ್ನು ಮೀರಿ ವರ್ತಿಸುವವರನ್ನು ಬಹಿಷ್ಕರಿಸಬೇಕೆಂದೂ ತೀರ್ಮಾನಿಸಿಕೊಂಡಿರುವರು.

ಲೆಜಿಸ್ಲೇಟಿವ್ ಕೌನ್ಸಿಲ್‌ಮೆಂಬರರಾದ ಡಾಕ್ಟರ್ ಬಿ. ಎಸ್. ಮುಂಜೆ ಮಿ|| ಕೆ. ಸಿ. ರಾಯ್‌ರವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಕಲ್ಕತ್ತೆಯಲ್ಲಿ ಜುಲೈ 8 ನೆಯ ತಾರೀಖಿನ ದಿವಸ 100 ಜನ ಸ್ವಯಂಸೇವಕಿಯರು ಮತ್ತು 400 ಜನ ಸ್ವಯಂಸೇವಕರು "ಲಾ" ಪರೀಕ್ಷೆಯು ನಡೆಯಬೇಕಾಗಿದ್ದ ಧಾರಗಂಗಾ ಕಟ್ಟಡಗಳ ಮುಂದೆ ನಿಂತು ವಿದ್ಯಾರ್ಥಿಗಳೊಬ್ಬರೂ ಒಳಕ್ಕೆ ಹೋಗದಂತೆ ತಡೆದುಬಿಟ್ಟರು. ಪರೀಕ್ಷೆಯು ನಿಲ್ಲಿಸಲ್ಪಟ್ಟಿತು.

ಜುಲೈ 8 ನೆಯ ತಾರೀಖಿನ ದಿವಸ ಪೋಲೀಸರು ಮುಂಬಯಿಯ "ರಾಷ್ಟ್ರೀಯಗೃಹ" ಮತ್ತು "ಜಿನ್ನಾ ಹಾಲ್" ಗಳ ಮೇಲೆ ದಾಳಿಯಿಟ್ಟು ಅಲ್ಲಿ ದೊರೆತ ಸೈಕ್ಲೋಸ್ಟೈಲ್ ಯಂತ್ರಗಳನ್ನೂ ಕಾಂಗ್ರೆಸ್ ಪತ್ರಿಕೆಯ ಪ್ರತಿಗಳನ್ನೂ ಕೆಲವು ನೋಟೀಸುಗಳನ್ನೂ ಜಪ್ತುಮಾಡಿ ತೆಗೆದುಕೊಂಡು ಹೋದರು. ಪೋಲೀಸರು ಹೊರಟುಹೋದ ಅರ್ಧ ಘಂಟೆಯೊಳಗಾಗಿ ಎಂದಿನಂತೆ ನೂತನ ಕಾಂಗ್ರೆಸ್‌ಪತ್ರಿಕೆಯು ಹೊರಟು ಬೀದಿಗಳಲ್ಲಿ ಮಾರಲ್ಪಟ್ಟಿತು.

"ಯಂಗ್ ಇಂಡಿಯಾ" ಮತ್ತು "ನವಜೀವನ" ಪತ್ರಿಕೆಗಳನ್ನು ಪ್ರಿಂಟ್‌ಮಾಡಿ ಪ್ರಸಿದ್ಧಪಡಿಸುತ್ತಿದ್ದ ಮಹಾತ್ಮಾ ಗಾಂಧಿಯವರ "ನವಜೀವನ" ಪ್ರೆಸ್ಸನ್ನು ನೂತನ ಕಾಯಿದೆಗನುಸಾರವಾಗಿ ಜಾಮೀನಿನ ಹಣವನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಸರಕಾರದವರು ಜಪ್ತುಮಾಡಿರುವರು. ಪ್ರೆಸ್ಸಿನ ಕಿಂಮತ್ತು ಸುಮಾರು 40,000 ರೂ. ಗಳಾಗುವದು.

ಜುಲೈ 11 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ "ಗಾರವಾಲಿ ದಿನ" ದ ಆಚರಣೆಯ ಸಂಬಂಧವಾಗಿ ಪೋಲೀಸ್ ಕಮಿಶನರ ಆಜ್ಞೆಗೆ ವಿರೋಧವಾಗಿ ಉತ್ಸವವನ್ನು ತೆಗೆಯಲು, ಪೋಲೀಸರು ಜನರನ್ನು ದೊಣ್ಣೆಗಳಿಂದ ಹೊಡೆದು ಚದರಿಸಿದರು. ಒಟ್ಟು 520 ಜನರಿಗೆ ಪೆಟ್ಟುಗಳು ಬಿದ್ದಿರುವವು. 30 ಜನರಿಗೆ ವಿಶೇಷ ಗಾಯಗಳಾಗಿರುವವು. 3 ಜನರು ಅಪಾಯಸ್ಥಿತಿಯಲ್ಲಿರುವರು. ಇವರಲ್ಲಿ 150 ಜನರನ್ನು ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿ ಇಟ್ಟುಕೊಂಡಿರುವರು.

ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಮಿ|| ಡಿ. ಸಿ. ಮೋದಿಯವರೂ, ವೈಸ್ ಪ್ರೆಸಿಡೆಂಟರಾದ ಡಾ|| ಮಹಮದ್‌ಗೌರ್‌ರವರೂ ದಸ್ತಗಿರಿಮಾಡಲ್ಪಟ್ಟಿರುವರು. ದಸ್ತಗಿರಿಯಾದ ಪ್ರೆಸಿಡೆಂಟರ ಸ್ಥಾನಕ್ಕೆ ಸರ್ ಮನೂಭಾಯಿ ಮೆಹತಾರವರ ಪುತ್ರಿಯೂ, ಡಾಕ್ಟರ್ ಜೀವರಾಜ ಮೆಹತಾರವರ ಧರ್ಮಪತ್ನಿಯೂ ಆದ ಶ್ರೀಮತಿ ಹಂಸಾಮೆಹತಾರವರು ಚುನಾಯಿಸಲ್ಪಟ್ಟಿರುವರು.

ಕಳೆದವಾರ ಈ ಕೆಳಗೆ ಕಂಡಂತೆ 745 ಜನ ಸ್ವಯಂಸೇವಕರು ಮತ್ತು ಮುಖಂಡರು ದಸ್ತಗಿರಿ ಮಾಡಲ್ಪಟ್ಟಿರುವರು. ಇವರಲ್ಲಿ ಅನೇಕರು ಸ್ತ್ರೀಯರಿರುವರು. ದೆಹಲಿ 182, ಲಾಹೋರ್ 96, ಮೈಮನ್‌ಸಿಂಗ್ 62, ವೆಲ್ಲೂರು 54, ಕಲ್ಕತ್ತಾ 51, ಕೊಯಮುತ್ತೂರು 28, ಕಲ್ಲಿಕೋಟೆ 27, ಪೂನಾ 25, ನೆಲ್ಲೂರು 21, ಮುಂಬಯಿ 14, ನೈನಿಟಾಲ್ 13, ಎಲ್ಲಮಾಪಲ್ಲಿಂ 13, ಅಹಮದಾಬಾದ 12, ತಂಜಾವೂರು 12, ಕಡಲೂರು 12, ಪೊಲ್ಲಾಚಿ 10, ತಿರುಚನಾಗಲ್ಲಿ 9, ಬೆಜವಾಡ 9, ಬಹರಾಂಪೂರ 8, ಬೀಮವರಂ 7, ಟುಟಿಕಾರ್ನ (ತುತ್ತುಕುಡಿ) 6, ಗುಡಿಯಾತ್ತಂ 6, ನಾಗಪೂರ 6, ಚಿದಂಬರಂ 5, ಪಾಯನೂರು 5, ಪೆಶಾವರ 5, ಗುಂಡ್ಲಪೆಲ್ಲೂರು 4, ಕೋಯಿಲ್‌ಪಟ್ಟಿ 4, ರಾಜಮಹೇಂದ್ರಂ 4, ಕೊವ್ವೂರು 3, ತಾಡೇಪಲ್ಲಿಗುಡೆಂ 3, ಗುಂಟೂರು 3, ಮಚಲೀ ಪಟ್ಟಣ 3, ಲೂಧಿಯಾನ 2, ರಾಜೋಲೆ 2, ಪಾರ್ವತೀಪುರ 2, ಮಾಲ್ದಾ 1, ಕನ್ನಾನೂರು 1, ಮಧುರೆ 1, ಧನ್‌ಬಾದ 1, ಜೆಸ್ಸೂರು 1, ಅಂಬಾಲಾ 1, ರಾಂಚಿ 1 ಒಟ್ಟು 745.

ಗಾಂಧಿಯವರ ಪ್ರಕೃತಿ.

ಗಾಂಧಿಯವರ ಪ್ರಕೃತಿಯ ಬಗ್ಗೆ ನಾನಾ ಸುದ್ದಿಗಳು ಹರಡಿದ್ದುವು. ಆದರೆ ಈಗ ಅವರ ಪ್ರಕೃತಿಯು ಚೆನ್ನಾಗಿದೆ ಎಂದು ತಿಳಿಯುತ್ತದೆ. 2 ಪೌಂಡು ಮಾತ್ರ ತೂಕವು ಕಡಿಮೆಯಾಗಿದೆ. ಇವರು ಯಾವಾಗಲೂ ಆನಂದಮುಖಮುದ್ರೆಯುಳ್ಳವರಾಗಿರುತ್ತಾರೆ. ಅವರು ತಮ್ಮ ವೇಳೆಯನ್ನು ಅದಷ್ಟು ತಕಲಿಯ ಮೇಲೆ ನೂಲು ತೆಗೆಯುವದರಲ್ಲಿಯೇ ಕಳೆಯುತ್ತಾರೆ. ದಿನಾಲು ಒಂದು ತಾಸು ಟೊಪ್ಪಿಗೆಗಳನ್ನು ಹೊಲಿಯುತ್ತಿರುವರು. ಜೂನ್ ತಿಂಗಳ ತಾ|| 26 ರಿಂದ ಶ್ರೀ ಕಾಕಾ ಕಾಲೇಲಕರ ಇವರನ್ನು ಮಹಾತ್ಮಾಜಿಯವರ ಹತ್ತಿರ ಇಟ್ಟಿದ್ದಾರೆ. ಮೊದಲು ಸರಕಾರವು ಮಹಾತ್ಮಾಜಿಯವರಿಗೊಬ್ಬ ಸಹವಾಸಿಯನ್ನೂ ಕೊಡಲು ಒಪ್ಪಿರಲಿಲ್ಲ. ಕೊನೆಗೆ ಅದಕ್ಕೊಪ್ಪಿ ಮಿ|| ಕಾಲೇಲಕರ ಇವರನ್ನು ಕೊಟ್ಟಿದೆ. ಮಹಾತ್ಮಾಜಿಯವರು ನೂಲುವದನ್ನು ಬಿಟ್ಟು ಉಳಿದ ವೇಳೆಯಲ್ಲಿ ಸ್ವಲ್ಪ ಓದುತ್ತಿರುವರು. ಕಾಲೇಲಕರರಿಂದ ಮರಾಠಿ ಭಾಷೆಯನ್ನು ಕಲಿಯುತ್ತಿರುವರಲ್ಲದೆ ಭಗವದ್ಗೀತೆಯ ಶ್ಲೋಕಗಳನ್ನು ಕಂಠಪಾಠಮಾಡುತ್ತಿರುವರು.

[3ನೇ ಪುಟದಿಂದ ಮುಂದುವರಿದುದು.]

ಮಹಮ್ಮದೀಯರು ಹಿಂದುಗಳಿಗೆ ವಿರೋಧಿಗಳಾಗಿಯೇ ಇರುವರು. ಅಂದಮಾತ್ರಕ್ಕೆ ಮಹಮ್ಮದೀಯರು ಸ್ವಾತಂತ್ರ್ಯಸಂಪಾದನೆಗೆ ವಿರೋಧಿಗಳಾಗಿರುವರೆಂದು ಭಾವಿಸುವದು ಶುದ್ಧ ತಪ್ಪು. ನೆನ್ನೆ ಮೊನ್ನೆ ಪ್ರಸಿದ್ಧ ಮಹಮ್ಮದೀಯ ಮುಖಂಡರೊಬ್ಬರು ನನ್ನ ಮಿತ್ರರೊಬ್ಬರೊಡನೆ "ನಾವು ಗಾಂಧಿಯವರ ಈಗಿನ ಚಳವಳಿಯನ್ನು ಸರ್ವಥಾ ಒಪ್ಪುವದಿಲ್ಲ; ಆದರೆ ಗಾಂಧಿಯವರು ಈ ಪ್ರಪಂಚದಲ್ಲಿ ಕ್ರೈಸ್ತ ಅಥವಾ ಬುದ್ಧನಿಗಿಂತಲೂ ಹೆಚ್ಚಿನ ಯೋಗ್ಯತೆಯುಳ್ಳವರೆಂಬುದನ್ನು ಮಾತ್ರ ನಿಜವಾಗಿ ನಂಬುವೆವು" ಎಂದು ಹೇಳಿರುವರು.

ನಿಜ ಸ್ಥಿತಿಯನ್ನು ಸರಿಯಾಗಿ ಅರಿತುಕೊಳ್ಳದೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುವದಾದರೆ, ಮುಂದೆ ಅದಕ್ಕಾಗಿ ನಾವು ವಿಶೇಷ ದುಃಖವನ್ನೂ, ಕಷ್ಟನಷ್ಟಗಳನ್ನೂ ಅನುಭವಿಸಬೇಕಾಗುವುದು.

ಬ್ರಿಟಿಷ್ ದೇಶವು ಮಾತ್ರ ಭರತಖಂಡದ ವಿಷಯದಲ್ಲಿ ಈ ರೀತಿ ಮೋಸಹೋಗದಿರಲೆಂದು ಹಾರೈಸುತ್ತೇನೆ."

೧೨ ಜನ ಸತ್ಯಾಗ್ರಹಿಗಳು ನೈನೆತ್ತರವನ್ನಿತ್ತರು.

ಬೊಂಬಾಯಿಯಲ್ಲಿ ಧಾಕಸ್ತ್ರಾಕ ಎಂಬ ಮರಾಠಾ ಸತ್ಯಾಗ್ರಹಿಯು ಪೋಲೀಸರ ಲತ್ತಾಪ್ರಹಾರದಿಂದ ವಿಶೇಷ ಗಾಯಗೊಂಡಿದ್ದನು. ಪೋಲೀಸರ ಕಡತದಿಂದ ಕವಳಿಹತ್ತಿ ಅವನು ಬಕ್ಕಬೋರಲಾಗಿ ನೆಲಕ್ಕೆ ಬೀಳಲು ಮತ್ತೆ ಪೋಲೀಸರು ಬಡಿಗೆಯ ನೊನೆಯಿಂದ ಚುಚ್ಚಿದರು. ಅಂದಿನಿಂದ ಅವನ ಮೈಯೊಳಗಿಂದ ವಿಶೇಷ ರಕ್ತಸ್ರಾವವಾಗುತ್ತಿತ್ತು. ಆದರೂ ಕೆಲವು ದಿವಸಗಳವರೆಗೆ ಅವನ ಸ್ಥಿತಿಯು ಚನ್ನಾಗಿತ್ತು. ಈಗ ಪುನಃ ರಕ್ತಸ್ರಾವವು ಸುರುವಾಗಿದೆ. ಅವನ ಸ್ಥಿತಿಯು ಬಹಳ ಚಿಂತಾಜನಕವಾದುದಾಗಿತ್ತು. ಕೇವಲ ಆಕ್ಸಿಜನ್ನದ ಮೇಲೆಯೇ ಅವನನ್ನಿಡಬೇಕಾಯಿತು. ಸೂಜಿಯ ಮುಖಾಂತರ (ಇಂಜಕ್ಷನ್ನಿನಿಂದ) ಈ ಸತ್ಯಾಗ್ರಹಿಯ ಮೈಯಲ್ಲಿ ಮನುಷ್ಯರಕ್ತವನ್ನು ತುಂಬಿದ ಹೊರತು ಇವನು ಬದುಕುವ ಆಶೆ ಇಲ್ಲೆಂದು ಡಾಕ್ಟರರು ಅಭಿಪ್ರಾಯಪಟ್ಟರು. ಇದನ್ನು ಕೇಳಿದಕೂಡಲೇ ಮೃತ್ಯು ಮುಖದಲ್ಲಿ ಬಿದ್ದಿರುವ ತಮ್ಮ ಸ್ವದೇಶಬಾಂಧವನನ್ನು ಉಳಿಸಿಕೊಳ್ಳಲು 10-12 ಜನ ಸ್ವಯಂಸೇವಕರೂ, ಒಬ್ಬ ನಾರೀಮಣಿಯೂ ತಮ್ಮ ನೈನೆತ್ತರವನ್ನು ಕೊಡಲು ಸಿದ್ಧರಾದರು. ಆದರೆ ಡಾಕ್ಟರರು ಇವರಲ್ಲಿ ಮಿ|| ಜಿ. ಕೆ. ಬುರುಚಾ, ಚಿಮನಲಾಲ ಗಾಂಧಿ ಹಾಗೂ ಜೀವಾಜಿ ಕಾಪರಕರರನ್ನು ಆರಿಸಿಕೊಂಡು ಅವರ ನೈನೆತ್ತರವನ್ನು ತೆಗೆದುಕೊಂಡು ರೋಗಿಯ ಮೈಯಲ್ಲಿ ತುಂಬಿದರು.

ಮುಸಲಮಾನ ಮಹಿಳೆಗೆ ಕಠಿಣಶಿಕ್ಷೆ.

ಮುಂಬೈ ಹೈಕೋರ್ಟಿನ ಜಡ್ಜರಾಗಿದ್ದ ಮತ್ತು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದ ದಿವಂಗತ ಬದ್ರುದ್ದಿನ ತಯ್ಯಬಜಿ ಇವರ ಮಗಳೂ, ಬಡೋದೆಯಲ್ಲಿ ಚೀಫ್‌ಜಡ್ಜರಾಗಿದ್ದ, ಈಗ ಕಾರಾಗೃಹದಲ್ಲಿರುವ ಅಬ್ಬಾಸತಯಬಜಿ ಇವರ ತಂಗಿಯೂ, ಮುಂಬೈಯ ಪ್ರಸಿದ್ಧ ಡಾ|| ಲುಕಮಾನಿ ಇವರ ಪತ್ನಿಯೂ ಆದ ಶ್ರೀಮತಿ ಸನಾಬಾಯಿ ಎಂಬ ೬೫ ವರ್ಷ ವಯಸ್ಸಿನ ಮುಸಲಮಾನ ಮಹಿಳೆಯು ಚೆಂಬೂರ ಎಂಬಲ್ಲಿ ಮದ್ಯದಂಗಡಿಯ ಮುಂದೆ ಕೆಲಸ್ತ್ರೀಯರನ್ನು ಕೂಡಿಕೊಂಡು ಪಿಕೆಟಿಂಗ್ ಮಾಡಿದ ಆರೋಪದ ಮೇಲೆ ತಾ|| 7 ಕ್ಕೆ ಹಿಡಿಯಲ್ಪಟ್ಟರು. ಇವರಿಗೆ 4 ತಿಂಗಳ ಕಠಿಣಶಿಕ್ಷೆ ಮತ್ತು 100 ರೂ. ದಂಡವನ್ನೂ, ದಂಡ ಕೊಡದಿದ್ದರೆ ೧ ತಿಂಗಳ ಕಠಿಣಶಿಕ್ಷೆಯನ್ನೂ ವಿಧಿಸಿದರು.

ಸೊಲ್ಲಾಪುರದ ಪರಿಸ್ಥಿತಿ.

55 ಲಕ್ಷ ರೂ. ದ್ರವ್ಯನಷ್ಟ.

ಕಳೆದ ತಾ|| 2 ಕ್ಕೆ ಮುಂಬೈ ಸರಕಾರವು ಸೊಲ್ಲಾಪುರದ ಪರಿಸ್ಥಿತಿಯನ್ನು ಕುರಿತು ಒಂದು ಪತ್ರವನ್ನು ಪ್ರಕಟಿಸಿದ್ದು ಅದರ ಮುಖ್ಯಾಂಶವನ್ನು ಇಲ್ಲಿ ಕೊಟ್ಟಿದೆ.

ಸೊಲ್ಲಾಪುರದ ದಂಗೆಯಿಂದ ಅಲ್ಲಿ ಹೆಚ್ಚು ಪೋಲೀಸರನ್ನು ಇಡಬೇಕಾಗಿದೆ. ಅದಕ್ಕಾಗಿ ಪ್ರತಿವರ್ಷ 1 ಲಕ್ಷ ರೂ. ಖರ್ಚು ಬರುವುದು. ಈ ಹಣವನ್ನು ದಂಗೆಯಲ್ಲಿ ಸೇರಿದ ಅಥವಾ ದಂಗೆಗೆ ಜವಾಬದಾರರೆಂದು ಕಂಡುಬಂದ ಜನರಿಂದ ವಸೂಲುಮಾಡಲಾದೀತು. ಆಸ್ತಿಪಾಸ್ತಿಗೆ ಆದ ನಷ್ಟ ಸಂಬಂಧವಾಗಿ ಜನರಿಂದ ಇದುವರೆಗೆ 55 ಲಕ್ಷ ರೂ. ಗಳ ಬೇಡಿಕೆಯು ಬಂದಿದೆ. ವಿಚಾರಣೆಮಾಡಿ ಯೋಗ್ಯ ಕಂಡ ರಕಮನ್ನು ಕೊಡಲಾದೀತು.

ದಂಗೆಯಾದಮೇಲೆ ಲಷ್ಕರೀಕಾಯಿದೆಯಿಂದ ಊರಲ್ಲಿ ಶಾಂತತೆಯುಂಟಾಗಿದೆ. 144 ನೆಯ ಕಲಮಿನ ಬಜಾವಣೆಯು ಈಗ ಅಗತ್ಯವಾಗಿದೆ. ಲಷ್ಕರಿ ಕಾಯದೆ ಪ್ರಕಾರ ರಾಷ್ಟ್ರಧ್ವಜಕ್ಕೆ ಪ್ರತಿಬಂಧ ಮಾಡಿತ್ತು. ಸತ್ಯಾಗ್ರಹಿ ಸ್ವಯಂಸೇವಕರಿಗೆ ಬತ್ತಲೆ ಹೊಡೆಯುವದು ಮೊದಲಾದ ಆರೋಪಗಳೆಲ್ಲಾ ಸುಳ್ಳು ಇರುತ್ತವೆ. 181 ರಲ್ಲಿ 152 ಜನ ಸತ್ಯಾಗ್ರಹಿಗಳನ್ನು ಬಿಟ್ಟುಕೊಟ್ಟಿದೆ. 25 ಜನರಮೇಲೆ ಮಾತ್ರ ಖಟ್ಲೆ ಮಾಡಿದೆ. ಎಷ್ಟೋ ಸತ್ಯಾಗ್ರಹಿಗಳು ವಿದ್ಯಾರ್ಥಿಗಳು ಇದ್ದು, ಅವರಿಗೆ ಏನೂ ಗೊತ್ತಿರುವದಿಲ್ಲ.

ಮೇ ತಾ|| 7 ಮತ್ತು 8 ರಲ್ಲಿ ದಂಗೆ, ಕೊಲೆ, ಬೆಂಕಿ ಹಚ್ಚುವದಾದ ಮೇಲೆ ತಾ|| 12ಕ್ಕೆ ಲಷ್ಕರಿ ಕಾಯದೆಯು ಬಂದಿತು. ಲಷ್ಕರಿ ಕೋರ್ಟಿನ ಮುಂದೆ 75 ಜನರ ವಿಚಾರಣೆಯಾಯಿತು. 28 ಜನರಿಗೆ ಎಚ್ಚರಿಕೆ ಕೊಟ್ಟು ಬಿಟ್ಟಿತು. ಮೊಹರಂ ಆಗಲಿಲ್ಲ. ಅದಕ್ಕೆ ಮುಸಲಮಾನರು ತಕರಾರು ಮಾಡಿಲ್ಲ. ಅವರು ದಂಗೆಯಲ್ಲಿ ಸೇರಿರಲಿಲ್ಲ. ಪತ್ರಿಕೆಗಳಲ್ಲಿ ಸುಳ್ಳುಸುದ್ದಿಗಳು ಬಹಳ ಬಂದಿವೆ. ಸೋಲ್ಜರರು ಯಾವ ಪ್ರಕಾರದ ಅತ್ಯಾಚಾರ ಮಾಡಿಲ್ಲ. ಆ ಬಗ್ಗೆ ಈ ವರೆಗೆ ಒಂದೂ ತಕರಾರು ಬಂದಿಲ್ಲ. ದಂಗೆಯಾದ ಮೇಲೆ ಪೋಲೀಸರು ಇದ್ದಿಲ್ಲ. ಲಷ್ಕರ ಬರುವ ಮುಂಚೆ ಕೆಲವುಕಡೆ ಕಳುವು ತುಡುಗು ಆಗಿರಬಹುದು. ಏಕೆಂದರೆ, ಜನರು ಮನೆಬಿಟ್ಟು ಹೋಗಿದ್ದರು. ದಂಗೆಯಲ್ಲಿ ಇಬ್ಬರು ಪೋಲೀಸರು ಸತ್ತರು. 31 ಜನರು ಗಾಯಹೊಂದಿದರು. ಗೋಲೀಬಾರಿನಿಂದ 11 ಹಿಂದೂ, 1 ಮುಸಲಮಾನ ಸತ್ತರು; 27 ಹಿಂದು, 1 ಮುಸಲಮಾನ ಗಾಯಹೊಂದಿದರು.

ವರ್ಕಿಂಗ ಕಮಿಟಿಯ ಗೊತ್ತುವಳಿಗಳು.

ಕಳೆದ ತಿಂಗಳ 27 ನೆಯ ತಾರೀಖಿನ ದಿವಸ ಅಲಹಾಬಾದಿನಲ್ಲಿ ಕೂಡಿದ ಕಾಂಗ್ರೆಸ್ಸಿನ ವರ್ಕಿಂಗ ಕಮಿಟಿಯಲ್ಲಿ ಗೊತ್ತಾದ ಕೆಲವು ನಿರ್ಣಯಗಳು:—

1. ಅಹಮ್ಮದಾಬಾದ ಗಿರಣಿಯವರು ಬಟ್ಟೆಯನ್ನು ಪೂರೈಸುವ ಬಗ್ಗೆ ಅಧ್ಯಕ್ಷರೊಡನೆ ಮಾಡಿಕೊಂಡ ಕರಾರುಗಳಿಗೆ ಈ ಸಭೆಯು ಸಮ್ಮತಿಯನ್ನು ಕೊಡುತ್ತದೆ. ಅದರಂತೆ ಮುಂಬಯಿ ಕೆಲವು ಗಿರಣಿಯವರು ಒಪ್ಪಿಕೊಂಡ ಬಗ್ಗೆ ಈ ಮಂಡಳಕ್ಕೆ ಸಂತೋಷವಾಗುತ್ತದೆ.

2. ಪರದೇಶಿಬಟ್ಟೆಯ ವ್ಯಾಪಾರವನ್ನೆಲ್ಲ ಜುಲೈ 15ನೇ ತಾರೀಖಿನೊಳಗಾಗಿ ನಿಲ್ಲಿಸಬೇಕೆಂದು ಈ ಮಂಡಳವು ಅಪೇಕ್ಷಿಸುತ್ತದೆ.

3. ಬ್ರಿಟಿಷ್ ಸರಕುಗಳನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

4. ರಾಷ್ಟ್ರೀಯ ಚಳವಳಿಯನ್ನು ಬಗ್ಗುಬಡಿಯಲಿಕ್ಕೆ ಯತ್ನಿಸಿದ ಅಧಿಕಾರಿಗಳಿಗೂ ಮತ್ತು ಅವರಿಗೆ ಸಹಾಯಕಾರಿಗಳಾದವರಿಗೂ ಸಾಮಾಜಿಕ ಬಹಿಷ್ಕಾರ ಹಾಕಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

5. ಸ್ವತಂತ್ರವಾದ ನ್ಯಾಯಮಂಡಲದಿಂದ ನ್ಯಾಯವಾದವುಗಳಾಗಿವೆಯೆಂದು ನಿರ್ಣಯಿಸಲ್ಪಡುವವುಗಳನ್ನು ಬಿಟ್ಟುಕೊಟ್ಟು ಉಳಿದ ಸಾಲವನ್ನೆಲ್ಲ ಅಲ್ಲಗಳೆಯುವ ಬಗ್ಗೆ 1922 ಮತ್ತು 1929 ಸಾಲಿನಲ್ಲಿ ಆದ ಕಾಂಗ್ರೆಸ ತೀರ್ಪಿನಕಡೆಗೆ ಹಿಂದೀಯರ ಮನ ಎಳೆಯುವದಲ್ಲದೆ ಹೊಸದಾಗಿ ಬಾಂಡುಗಳನ್ನು ಕೊಂಡುಕೊಳ್ಳಬಾರದಾಗಿ ಈ ಸಭೆಯು ಸೂಚಿಸುತ್ತದೆ.

6. ರೂಪಾಯಿಯಲ್ಲಿ ಬೆಳ್ಳಿಯು ಅದರ ಬೆಲೆಯ 1/3 ದಷ್ಟು ಇರುವದರಿಂದ ಸರಕಾರದವರಿಂದ ಬರತಕ್ಕದ್ದನ್ನು ರೂಪಾಯಿಗಳ ರೂಪದಲ್ಲಾಗಲಿ ನೋಟುಗಳ ರೂಪದಲ್ಲಾಗಲಿ ಪಡೆಯದೆ ಬಂಗಾರ ರೂಪದಿಂದ ಸ್ವೀಕರಿಸಬೇಕೆಂದು ಈ ಸಭೆಯು ಸೂಚಿಸುತ್ತದೆ.

7. ಈಗಿನ ಚಳವಳಿಯ ಕಾಲೇಜ ವಿದ್ಯಾರ್ಥಿಗಳು ಭಾಗ ತೆಗೆದುಕೊಳ್ಳಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

8. ಸರಕಾರದವರಿಂದ ಕಾಂಗ್ರೆಸ್ಸು ಬೇಕಾಯದೇಶೀರ ಸಂಸ್ಥೆಯೆಂದು ಸಾರಲ್ಪಟ್ಟದ್ದರಿಂದ ಎಲ್ಲ ಕಾಂಗ್ರೆಸ ಕಮಿಟಿಯವರೂ ಸರಕಾರದವರ ಈ ಆಜ್ಞೆಯನ್ನು ಮನ್ನಿಸದೆ ಮೊದಲಿನಂತೆ ಕೆಲಸ ಸಾಗಿಸಬೇಕೆಂದು ಈ ಸಭೆಯು ಸೂಚಿಸುತ್ತದೆ.

9. ಜೂನ ತಿಂಗಳ 7 ನೇ ತಾರೀಖಿಗೆ ಸೇರಿದ ಈ ಮಂಡಲದಲ್ಲಿ ಸೈನಿಕರು ಮತ್ತು ಪೋಲೀಸರು ಇವರ ಕರ್ತವ್ಯದ ಬಗ್ಗೆ ಗೊತ್ತಾದ 6 ನೇ ಗೊತ್ತುವಳಿಯನ್ನು ಜಪ್ತಮಾಡಲು ಸಂಯುಕ್ತಪ್ರಾಂತದ ಗವರ್ನರರು ಕೊಟ್ಟ ಆಜ್ಞೆಯು ಈ ಮಂಡಲಕ್ಕೆ ಆಶ್ಚರ್ಯವನ್ನುಂಟುಮಾಡಿದೆ. ಆದರೂ ಸರಕಾರದವರು ಹೊರಡಿಸಿದ ಆಜ್ಞೆಯನ್ನು ದುರ್ಲಕ್ಷಿಸಿ ಮೊದಲಿನ ಠರಾವು ಎಲ್ಲೆಡೆಯಲ್ಲಿಯೂ ತಿಳಿದುಬರುವ ಹಾಗೆ ಮಾಡಬೇಕಾಗಿ ಈ ಸಭೆಯು ಕಾಂಗ್ರೆಸ್ ಸಂಸ್ಥೆಗಳಿಗೆ ಸೂಚಿಸುತ್ತದೆ.

10 ಸರಕಾರದವರ ಅತ್ಯಾಚಾರಗಳಿಗೆ ಎದೆಗೊಟ್ಟ ಜನರನ್ನು ಈ ಸಭೆಯು ಅಭಿನಂದಿಸುವದಲ್ಲದೆ, ಈ ಸ್ವಾತಂತ್ರ್ಯ ಸಮರವನ್ನು ಕೊನೆಯ ವರೆಗೆ ಸಾಗಿಸುವರೆಂಬುದಾಗಿ ಸರಕಾರಕ್ಕೆ ಕೊಟ್ಟ ಎಚ್ಚರಿಕೆಯನ್ನು ಮತ್ತಿಷ್ಟು ದೃಢಪಡಿಸುತ್ತದೆ.

ಶ್ರೀ ವಲ್ಲಭಭಾಯಿಯವರ ಹೇಳಿಕೆ.

ಮುಂಬಯಿಗೆ ವಲ್ಲಭಭಾಯಿ ಪಟೇಲರು ಬಂದ ಕಾಲಕ್ಕೆ ಅಲ್ಲಿ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದೇನಂದರೆ—ಮೊದಲಿಗೆ ಈ ಚಳವಳಿಯು ಸರಕಾರಕ್ಕೆ ಮೂರ್ಖತನದ್ದೆಂದು ತೋರಿತು. ಆದರೆ ಈಗ್ಗೆ ಅದು ನಿಜವಾದ ಯುದ್ಧವಾಗಿಯೇ ಪರಿಣಮಿಸಿದೆ. ಇದರಲ್ಲಿ ಮುಂಬಯಿಯು ಶ್ರೇಷ್ಠ ಸ್ಥಾನವನ್ನು ಪಡೆದಿದೆ. ಸರಕಾರದವರು ಲಷ್ಕರೀ ಕಾಯದೆಯನ್ನು ಅಮಲಿನಲ್ಲಿ ತಂದರೆ ಹೇಗೆಂದು ಜನರು ವಿಚಾರಿಸತೊಡಗಿದ್ದಾರೆ. ಆದರೆ ಸದ್ಯಃ ಕಾಯದೆಯ ರಾಜ್ಯವಂತೂ ಹೋಗಿದೆ. ಆದರೆ ಸಿಮಲೆಯಿಂದ ಹೊರಡತಕ್ಕ ಆರ್ಡಿನನ್ಸಗಳಿಂದ ರಾಜ್ಯಕಾರಭಾರ ನಡೆದಿದೆ. ಈಗ್ಗೆ ಗುಪ್ತರೀತಿಯಿಂದ ದೇಶದಲ್ಲಿ ಲಷ್ಕರಿ ಕಾಯದೆಯು ಪ್ರಾರಂಭವಿದ್ದು ಅದು ಪ್ರಕಟವಾಗಿ ಎಂದು ಹೊರಗೆ ಬರುವದೋ ಅದು ಆನಂದದ ದಿವಸವೆಂದು ತಿಳಿಯತಕ್ಕದ್ದು. ಈ ಹೊತ್ತಿನ ದಿವಸ ನಮ್ಮ ದೇಶದ ಮಹಾತ್ಮಪುರುಷನು ತುರಂಗದಲ್ಲಿ ಕುಳಿತಿರುವನು. ಮತ್ತು ಆತನ ಪ್ರಾಣಪ್ರಿಯರಾದ ನಾಲ್ಕು ಮಂದಿ ಮಕ್ಕಳು ಸೆರೆಮನೆಯಲ್ಲಿರುವರು. ಆತನ ವೀರಪತ್ನಿಯು ಹಗಲುರಾತ್ರಿಯನ್ನದೆ ದೇಶಕಾರ್ಯ ಮಾಡುತ್ತಿರುವಳು. ಇಂಥ ಸ್ಥಿತಿಯಲ್ಲಿ ಎಲ್ಲಿಯ ಶಾಂತತೆ? ಎಲ್ಲಿಯ ಕಾಲೇಜು? ಎಲ್ಲಿಯ ವ್ಯವಹಾರ? ಈಗ್ಗೆ ನಿಮಗೆ ಬೇಡಿಕೊಳ್ಳುವದೇನಂದರೆ; ಇನ್ನು ಮುಂದೆ ನೀವು ಹೆಚ್ಚಾಗಿ ಶಾಂತತೆಯನ್ನು ಕಾಯಬೇಕು. ಬಾಯಿಂದ ಅತ್ಯಾಚಾರದ ಮಾತುಗಳನ್ನಾಡಕೂಡದು. ಹಿಂದಿನಿಂದ ಲಷ್ಕರಿ ಕಾಯದೆಯು ಬಂದರೂ ಬರಲಿ, ಅದಕ್ಕೇನು ಹೆದರುವ ಕಾರಣವಿಲ್ಲ.

ಶ್ರೀ ವಿಠಲಭಾಯಿಯವರ ಹೇಳಿಕೆ.

ಪಂಡಿತ ಮೋತಿಲಾಲರನ್ನು ಬಂಧಿಸಿದ ಕಾಲಕ್ಕೆ ಮುಂಬಯಿಯಲ್ಲಿ ಕೂಡಿದ ಸಭೆಯಲ್ಲಿ ಶ್ರೀ ವಿಠಲಭಾಯಿ ಪಟೇಲರು ಹೇಳಿದ್ದೇನಂದರೆ—ಪಂ|| ಮೋತಿಲಾಲರನ್ನೂ, ಡಾ|| ಸಯ್ಯದ ಅಹಮ್ಮದರನ್ನೂ ಬಂಧಿಸುವದರಿಂದ ಆಗುವದೇನು? ಇದರಿಂದ ರಾಷ್ಟ್ರಸಭೆಯ ಕೆಲಸಕ್ಕೆ ಹೆಚ್ಚು ಪ್ರೋತ್ಸಾಹ ಬರುವುದೇ ಸತ್ಯವು. ಪ್ರತಿ ದಿವಸ ಬಂಧನಗಳೂ, ಶಿಕ್ಷೆಗಳೂ ನಡೆದಿವೆ. ಆದರೂ ಜನರು ಹೆದರುವದಿಲ್ಲ. ಈಗಿನ ಚಳವಳಿಯನ್ನು ತುಗ್ಗಿಸಲಿಕ್ಕೆ ಸರಕಾರದವರು ಶಿಕ್ಷೆಕೊಡುವದು, ಬಡಿಗೆಗಳಿಂದ ಹೊಡೆಯುವದು, ಬರ್ಚಿಗಳಿಂದ ತಿವಿಯುವದು, ಗುಂಡು ಹಾರಿಸುವದು ಈ ಪ್ರಕಾರ ನಾಲ್ಕು ಉಪಾಯಗಳನ್ನು ಮಾಡುವರು. ಆದರೆ ಶಿಕ್ಷೆಗೂ ಬಡಿಗೆಯ ಏಟುಗಳಿಗೂ ಹೆದರುವದಿಲ್ಲೆಂದು ಭಾರತೀಯರು ತೋರಿಸಿರುವರು. ಇನ್ನು ಗುಂಡಿಗಾದರೂ ಹಿಂದೆಗೆಯುವದಿಲ್ಲೆಂದು ತೋರಿಸುವದು ಮಾತ್ರ ಉಳಿದಿದೆ. ಆದ್ದರಿಂದ ಪ್ರಾಣದ ಪರವಿ ಇಲ್ಲದವರೇ ಈಗಿನ ಚಳವಳಿಯಲ್ಲಿ ಮುಂದಾಗುವದೇ ಅವಶ್ಯವಿದೆ. ನಾನು ಅಸೆಂಬ್ಲಿಯ ಪದಕ್ಕೆ ಶರಣು ಹೊಡೆದೆನು. ದೇಶದೊಳಗೆಲ್ಲ ಸಂಚರಿಸಿ ರಾಷ್ಟ್ರೀಯ ಕೆಲಸಗಾರರನ್ನು ಕಂಡುಕೊಂಡು, ಅವರೊಡನೆ ರಾಷ್ಟ್ರೀಯ ಕಾರ್ಯಕ್ರಮದ ಬಗ್ಗೆ ವಿಚಾರವಿನಿಮಯ ಮಾಡಿದೆನು. ಆದರೂ ನನಗೆ ಸೆರೆಮನೆಯ ಮನ್ನಣೆಯು ದೊರೆಯುದ್ದಕ್ಕಾಗಿ ವಿಷಾದಪಡಬೇಕಾಗಿದೆ. ಇಲ್ಲಿಯವರೆಗೆ ಜನರ ಮೇಲೆ ಮಹಾತ್ಮರ ವರ್ಚಸ್ಸು ಇತ್ತು. ಆದರೆ ಈಗ್ಗೆ ಸರಕಾರದವರ ನಿರ್ದಯೆಯಿಂದ ಮತ್ತು ಮಹಾತ್ಮರ ಬಂಧನದಿಂದ ಅದು ದಿನೆ ದಿನೆ ಕಡಿಮೆಯಾಗಹತ್ತಿದೆ. ಈ ದೋರಣವನ್ನು ಮ... ಸರಕಾರದವರು ಸ್ವೀಕರಿಸಿದರೆ ಇದರಿಂದ ಬಹಳ ...ಗುವದೆಂಬುದನ್ನು ಅವರು ಪೂರ್ಣ ಲಕ್ಷ್ಯದಲ್ಲಿಡತಕ್ಕದ್ದು.

WANTED

Candidates desiring to serve in Government, Railway and Canal Departments. Full particulars and Railway Fare Certificate on 2 annas Stamps.

Apply to:— (3)

IMPERIAL TELEGRAPH COLLEGE,
NAI SARAK, DELHI.

ಶುದ್ಧ ವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ, ಗೂನೇರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೩೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು. [62]

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗದಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯುಳ್ಳದ್ದಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರ ಆಹಾರವನ್ನಾದರೂ ಜೀರ್ಣೇಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಮನಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಹಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಫ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಹೊಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಪ್ರಿಯರಿಗೂ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿದೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಮಾತಿಗೂ ವೈದ್ಯರುಗಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರ.

ಪ್ರತಿದಿನವೂ ಸರ್ಟಿಫಿಕೇಟುಗಳು ಅಪೇಕ್ಷವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ಚಿತ್ರದಾದ ವ್ಯಾಪಾರದ ಗುರುತನ್ನು ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[13] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ?

ಕಂಗೆಡಬೇಡಾ! ನರುಗಬೇಡಾ!! ಗುಣದ ಮದ್ದು ಯಾವದೆಂದು ನೋಡಾ!!!

ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ!!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ? ಇಗೋ! "**ಮಲೇರಿಯಾನ**" ಎಂಬ ಪ್ರಧಾನ ಮದ್ದನ್ನು ಸೇವಿಸು. ಕ್ರಯ 1—8—0

ಅನ್ನಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ? ಕಂಪೆನಿಂದು ಸಿದ್ಧ "**ಪುಲ್ಸಥೂಜ**" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 5—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಕಟ್ಟಿಗೊಳ್ಳುವ ಇಚ್ಛೆ ಉಂಟಾ? ಕಂಪೆನಿಂದು ಸಿದ್ಧ "**ಸೆಬೀನ ಸೆಪೀಯ**" ಮತ್ತು ಕಂಪೆನಿಂದು ಸಿದ್ಧ "**ವಿಬುರ್ನೊನ**" ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ನಿರೀಕ್ಷಿಸುತ್ತೀಯಾ? ಹಾಗಾದರೆ ಕಂಪೆನಿಂದು ಸಿದ್ಧ "**ಸರ್ಸಲಿಮಗ**" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖಾತ್ರಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಂದು ಸಿದ್ಧ "**ವೆಸಿಥೂಜ**" ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೋಮಿಯೋಪಥಿ ಮದ್ದುಗಳೂ ಟಿಸ್ಸು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅವುಗಳ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[49] **ಮಲೇರಿಯಾನ ಕಂಪನಿ,** (ಹಂಪನಕಟ್ಟೆ), ಮಂಗಳೂರು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ತಾಕತು ಬಯಸುವಂಥವರು ತಕ್ಕೊಂಡು ಅನುಭವಿಸಿರಿ. (52) ವನಸ್ಪತಿ-ಶತಪುಷ್ಪ, ಶಾಲಿಮಕಂದ, ಮುಸಕಂದ, ಜಿಹಾಕಂಧ, ಶಾಲೀಮಲೀಕಂದ, ಅಶ್ವಕಂದ ಶ್ವೇತಕಂದ, ಮುಸಳೀಕಂದ ಸೇಮರೀಕಂದ ದ್ವೀಪಾಂತರವಚಾಕಂದ, ಕಮಲಬೀಜ, ಸಮುದ್ರಶೋಕದಬೀಜ, ತಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಸವೇಬೀಜ ಚಿಕಣದಪಂಚಾಂಗ, ಅದೇ ಎಳ್ಳಿನಪಂಚಾಂಗ, ಜಮಪತ್ರಿ, ಪಿಶಾಪತ್ರಿ, ಮಪನಮಸ್ತ, ರಕಸಪುರುಷ ಕಮರಕಸ, ಕಥಿಲ್ಯಾಗೊಂದ, ಪಂಜಾಬಮಿಶ್ರಿ, ಸಾಲಾಮಿಶ್ರಿ, ಸಫೇತಮಿಶ್ರಿ, ಕಾಲೀಮುಸಾಣಾ, ಬೀಜಬಂದ, ಹರಣಬೋರಿ, ಮುಂಗಲೀಬೇದಾಣೆ, ಮರ್ದಾನಕಟ್ಟಿಗೆ, ಶತಾವರಿ, ಸಕೀನಮಗಜ, ಆಲದಹಾಲು, ವಾಕೇರಿಭಾತಾ, ಗೋಖರು, ಅಡವೀಬೆಂಡಿಬೇರು, ಅಮೃತಸತ್ವ, ಇಸಬಗೋಲ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಿಮಸ್ತಿಕಿ, ವಂಶಲೋಚನ, ವರಧಾರಾ, ಕೇಸರಿ ಯಾಲಕ್ಕಿ, ಕಲ್ಲುಸಕ್ಕರೆ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲೆ ಆಕಳ ಎಮ್ಮೆಯ ಅಥವಾ ಆಡಿನ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ, 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [4]

ಪಿನಸಿಗೆ ಪ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಹುಣ್ಣು, ರಕ್ತ, ಕೀವು, ಸಂಬ್ಲು, ದುರ್ಗಂಧ, ಕ್ರಿಮಿ, ನಾಸಾಬಾಧಿರೋಗ, ದಮ್ಮುರೋಗ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ 21 ದಿವಸ ಸಾಕಾಗುವಷ್ಟು 5 ತೊಲಿಯ 1 ಭರಣಿಗೆ 3 ರೂಪಾಯಿಗಳು. ಪತ್ತೆ:—**ಮಾಲಿಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೭×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಸೋಪಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವನಿರ್ಣಯ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[40] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ನಮೂದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[1] ಪೋ. ಬಾ. ೫೧೦. ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ ನೇ ಜುಲೈ ೧೯೩೦ [ಸಂಚಿಕೆ ೧೨.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರಕ್ಷಾಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ೪ ಆಣೆ.

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

WANTED

Candidates desiring to serve in Government, Railway and Canal Departments. Full particulars and Railway Fare Certificate on 2 annas Stamps.

Apply to:— (4)

IMPERIAL TELEGRAPH COLLEGE,
NAI SARAK, DELHI.

ಗೀತಾಪ್ರವಚನ.

ಅಕ್ಕಲಕೋಟೆ.

ಇದೇ ಜುಲೈ 10ನೆಯ ತಾರೀಖು ಗುರುವಾರ ದಿವಸ ಜೋಶಿಬುವಾ ಇವರ ಮಠದಲ್ಲಿರುವ ಶ್ರೀ ಸ್ವಾಮಿ ಮಹಾರಾಜರ ದೇವಾಲಯದಲ್ಲಿ ವ್ಯಾಸಪೂರ್ಣಿಮಾ ನಿಮಿತ್ತವಾಗಿ ಬ್ರಾಹ್ಮಣ ಮಂಡಳಿಯ ಪರವಾಗಿ ಶ್ರೀ ಶಂಭುಲಿಂಗಶಿವಾಚಾರ್ಯರು ಬಿಜಾಪೂರಕರ ಇವರು ಗೀತೆಯ ಮೇಲೆ ಮನೋಹರವಾದ ಉಪನ್ಯಾಸವನ್ನು ಮಾಡಿದರು. ಅಕ್ಕಲಕೋಟೆಯ ಸಮಸ್ತ ಮತೀಯರೂ ಉಪನ್ಯಾಸಕ್ಕೆ ಆಗಮಿಸಿ ಶ್ರೀ ಶಂಭುಲಿಂಗಶಿವಾಚಾರ್ಯರ ಅಮೂಲ್ಯವಾದ ಉಪನ್ಯಾಸವನ್ನು ಕೇಳಿ ಆನಂದಸಂದೋಹಭರಿತ ರಾದರು. ಉಪನ್ಯಾಸಾನಂತರ ಪ್ರಖ್ಯಾತರಾದ ಶಾಸ್ತ್ರೀ ಪಂಢರೀನಾಥ ಪುರಾಣಿಕ ಬುವಾ ಇವರು ಶ್ರೀ ಶಂಭುಲಿಂಗಸ್ವಾಮಿಗಳ ದಿವ್ಯಜ್ಞಾನೋಪದೇಶದ ಲಾಭವಾದದ್ದಕ್ಕಾಗಿ ಅವರನ್ನು ಅಭಿನಂದಿಸಿ ಭಗವಾ ವಸ್ತ್ರ ಮತ್ತು ದಕ್ಷಿಣೆಯನ್ನು ಸಮರ್ಪಿಸಿದರು. ಆಮೇಲೆ ಸಭೆಯು ವಿಸರ್ಜಿತವಾಯಿತು.

ಓರ್ವ ಪ್ರೇಕ್ಷಕ.

ಸ್ವೀಕಾರ.

ಬೆಂಗಳೂರು ಹೆಂಚಿನ ಕಾರ್ಖಾನೆ ಮ|| ರಾ|| ಬುಳ್ಳಪ್ಪನವರ ಕೆ. ಸಂಜುಂಡಪ್ಪನವರ ಪುತ್ರಿ ಚಿ|| ಸೌ|| ಮಲ್ಲಮ್ಮನನ್ನು ಚಿ|| ರಾ|| ವಾಲಾಜಿ ಸಿದ್ಧರಾಮಪ್ಪನವರು ಬಿ.ಎ., ಇವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮಂಡಿ ವರ್ತಕರು ವೇ|| ಎಸ್. ರುದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ದೊಡ್ಡಬಳ್ಳಾಪುರದ ವೇ|| ಬಸವಾರಾಧ್ಯರ ಪುತ್ರಿ ಶ್ರೀ|| ಸರ್ವಮಂಗಳಾದೇವಿಯವರ ಪುಣ್ಯಾತಿಥಿಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಕೆಗಿಯಿಸಿದ 1 ರೂ. ಯು ಮ|| ರಾ|| ಎಚ್. ಜಿ. ರುದ್ರಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಂ.—

ರೌಂಡ್‌ಟೇಬಲ್ ಸಮ್ಮೇಳನಕ್ಕೆ ದೇಶೀಯ ಸಂಸ್ಥಾನಗಳಿಂದ ಪಾಟಿಯಾಲಾ, ಬಿಕಾನೇರ್, ಧೋಲ್‌ಪುರ, ಆಲ್ವಾರ್, ಕಾಶ್ಮೀರ್ ಮಹಾರಾಜರುಗಳೂ ಭೂಪಾಲಿನ ನವಾಬರೂ, ಸಾಂಗ್ಲೀಸಂಸ್ಥಾನಿಕರೂ, ಹೈದ್ರಾಬಾದ ಅಕ್ಬರ್ ಹೈದರೀಯವರೂ, ಮೈಸೂರಿನ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರೂ, ಮನುಭಾಯಿ ಮೇಥಾ, ಕರ್ನಲ್ ಹಾಸ್ಕರ್, ಪ್ರಭಾಶಂಕರ್ ಪಟ್ಟಾಣಿ ಈ ೧೩ ಜನರು ಮೆಂಬರಾಗಿ ಚುನಾಯಿಸಲ್ಪಟ್ಟರು.

ಜುಲೈ 14 ನೆಯ ತಾರೀಖಿನಲ್ಲಿ ಮೈಮನ್ ಸಿಂಗಿನಲ್ಲಿ ಹಿಂದೂಮುಸಲ್ಮಾನರಲ್ಲಿ ಹೊಡದಾಟವಾಗಿ 10-12 ಜನ ಹಿಂದೂಗಳು ಸತ್ತಿರುವರು. ಪೋಲೀಸರು ಸುಮಾರು 60 ಜನರನ್ನು ದಸ್ತಗಿರಿಮಾಡಿರುವರು.

ಜುಲೈ 15 ನೇ ತಾರೀಖಿನ ದಿವಸ ಕೆಲವು ಮಹಮ್ಮದೀಯರು ಸಾಕೋಪುರ, ಅಮ್ಜಿಯು, ಟಿಟೂಲಿಯಾ, ಶಿಲಾಪಿ ಮೊದಲಾದ ಗ್ರಾಮಗಳಲ್ಲಿರುವ ಹಿಂದೂ ವ್ಯಾಪಾರಸ್ಥರ ಮನೆಗಳನ್ನು ಲೂಟಿಮಾಡಿ, ಬೆಂಕಿಹಚ್ಚಿ ಸುಟ್ಟುಬಿಟ್ಟರು. ಅದೇ ರಾತ್ರಿ ಬಾಸ್ತಾ, ಚರ್ಮ ಬಾಲಿ, ಮತ್ತು ದಕ್ಷಿಣ ಶೆತ್ತಿರಬಜಾರ ಗ್ರಾಮಗಳಲ್ಲಿನ ಹಿಂದೂ ಜನರ ಮನೆಗಳು ಲೂಟಿಮಾಡಲ್ಪಟ್ಟವು. ಪೋಲೀಸು ದರೋಡೆಕೋರರ ಮೇಲೆ ಗುಂಡು ಹಾರಿಸಿ ಮತ್ತು ಜನರನ್ನು ಕೊಂದು, ಕೆಲವರನ್ನು ದಸ್ತಗಿರಿಮಾಡಿರುವರು.

ಪಾರ್ಲಿಮೆಂಟಿನ ಸಭೆಯಲ್ಲಿ ಅಶಾಂತಿ.

ಭರತಖಂಡದ ವಿಚಾರವಾಗಿ ವಿಶೇಷ ಚರ್ಚೆ.

ಲಂಡನ್ ಜುಲೈ 17.

ಈ ದಿನ ಪಾರ್ಲಿಮೆಂಟ್ ಸಭೆಯಲ್ಲಿ ಭರತಖಂಡದ ವಿಚಾರವಾಗಿ ಈ ರೀತಿ ಚರ್ಚೆಯಾಗಿ ಮೆಂಬರುಗಳಲ್ಲಿ ಭರತಖಂಡಕ್ಕೆ ಸ್ವಲ್ಪ ಸ್ವಾತಂತ್ರ್ಯ ಕೊಡುವ ವಿಚಾರದಲ್ಲೇ ಭಿನ್ನಾಭಿಪ್ರಾಯ ಬಂದು ಇಬ್ಬರು ಮುಖಂಡರು ಸಭೆಯಿಂದ ಹೊರಗೆ ಹೊರಟು ಹೋದರು.

ಮಿ|| ಬ್ರೇಲ್‌ಫರ್ಡ್—ಪ್ರಾಚೀನ ಪಂಗಡದವರು ಭರತಖಂಡವನ್ನು ಗುಲಾಮಗಿರಿಯಲ್ಲೇ ಇಟ್ಟಿರಬೇಕೆಂದು ಎಲ್ಲಿಯವರೆಗೆ ಅಭಿಪ್ರಾಯಪಡುವರೋ ಅಲ್ಲಿಯವರೆಗೆ ಅವರನ್ನು ನಾವು ಹೊರತನದಿಂದ ಎದುರಿಸಿ ಭಾರತೀಯರು ಕೇಳುವ ನ್ಯಾಯವಾದ ಹಕ್ಕುಗಳನ್ನು ಕೊಡಬೇಕು. ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಅವರು ನಿಷ್ಕರ್ಷಿಸುವ (ಭರತಖಂಡದಲ್ಲಿ ರಾಜಕೀಯ ಸೂತ್ರವನ್ನು) ಜಾರಿಗೆ ತರಲು ಅಧಿಕಾರ ಕೊಡಬೇಕು. ಇಲ್ಲದಿದ್ದರೆ ಅನಾಯಕತ್ವವು ಸಂಭವಿಸಬಹುದು.

ಅಲ್‌ವಿಂಟರ್‌ಟನ್‌ರು—ಭರತಖಂಡಕ್ಕೆ ಜವಾಬ್ದಾರೀ ಸರ್ಕಾರವನ್ನು ನಾವು ಕೊಟ್ಟ ಕೂಡಲೇ ಭರತಖಂಡದಲ್ಲಿರುವ ಬ್ರಿಟಿಷ್ ಸೈನ್ಯವನ್ನು ಕರೆಯಿಸಿಕೊಳ್ಳಬೇಕಾಗುವುದು. ಅಲ್ಲಿಂದ ಮುಂದಕ್ಕೆ ಏನಾಗುವುದೆಂಬುದನ್ನು ಯಾರೂ ಹೇಳಲಾರರು.

ಮಿ|| ಬ್ರಾಕ್‌ವೇ—ಭಾರತಮಾತೆಯನ್ನು ಬದ್ಧಶೃಂಖಲೆಗಳಿಂದ ಬಿಡಿಸಲು 5000 ಹೆಂಗಸರೂ ಗಂಡಸರೂ ಕಾರಾಗೃಹವಾಸವನ್ನು ಸೇರಿರುವಾಗ ಸಂಧಾನಮಾರ್ಗಗಳೆಲ್ಲವೂ ವಿಫಲವಾದುವೆಂದೇ ನಾನು ಭಾವಿಸುತ್ತೇನೆ.

ಮುಖ್ಯಮಂತ್ರಿ ಮಿ|| ಮೆಕ್ಡೊನಾಲ್ಡ್—ಸರ್ಕಾರದೊಂದಿಗೆ ಸಹಕರಿಸಲು ಭಾರತೀಯರು ಲಕ್ಷಾಂತರಮಂದಿ ಇರುವಾಗ ಸಂಧಾನಮಾರ್ಗಗಳೆಲ್ಲಾ ನಿಷ್ಫಲವಾದವೆಂದು ಮೆಂಬರು ಹೇಳುವುದು ತಪ್ಪು.

ಮೆಂಬರುಗಳು—ಮಿ|| ಬ್ರಾಕ್ವೇಯವರನ್ನು ಆಚೆಗೆ ತಳ್ಳಿ. ಅವರು ಆಂಗ್ಲೇಯರ ಪರವಾಗಿ ಮಾತಾಡುವುದಿಲ್ಲ.

ಮಿ|| ಬೆಕೆಟ್—ಭರತಖಂಡದ ವಿಚಾರವಾಗಿ ನಮ್ಮಲ್ಲೇ ಕಲಹವಾಡುವುದು ಅಸಹ್ಯವಾಗಿದೆ.

ಮಿ|| ಬ್ರೈಟ್—ಇಂಗ್ಲೆಂಡಿನ ಗಾಜಕೀಯ ಮೂರು ಪಂಗಡದವರು ಭರತಖಂಡದ ವಿಚಾರದಲ್ಲಿ ಒಂದು ಗೂಢಸಭೆಯನ್ನು ಸೇರಿಸಿಕೊಂಡು ನಿಷ್ಕರ್ಷಿಸುವುದು ಒಳ್ಳೆಯದೆಂದು ತೋರುತ್ತದೆ.

ಭರತಖಂಡದ ಸರ್ಕಾರದ ಪ್ರತಿನಿಧಿ—ಮಿ|| ಬೆನ್‌ರು—ರೌಂಡ್ ಟೇಬಲ್ ಸಮ್ಮೇಳನದಲ್ಲಿ ಇಂಗ್ಲೆಂಡಿನ ಮೂರು ರಾಜಕೀಯ ಪಂಗಡದ ಪ್ರತಿನಿಧಿಗಳು ಮೆಂಬರಾಗಿ ಇರಬೇಕೆಂದು ಎಲ್ಲರೂ ಒಟ್ಟಿಗೆ ತೀರ್ಮಾನಮಾಡಬೇಕೆಂದು ಕೆಲವು ಪತ್ರಿಕೆಗಳು ಬರೆಯುವುವು. ಆ ವಿಚಾರದಲ್ಲಿ ನಾನು ಏನೂ ಹೇಳಲಾರೆ.

ಮಿ|| ವೂಂಡಡ್—ಬರ್ಮಾದೇಶವನ್ನು ಭರತಖಂಡದಿಂದ ಬೇರೆ ಮಾಡುವುದು ಒಳ್ಳೆಯದಲ್ಲವೇ?

ಮಿ|| ಬೆನ್—ಅದನ್ನು ಈಗಲೇ ನಿಷ್ಕರ್ಷಿಸುವುದು ಚೆನ್ನಾಗಿಲ್ಲವೆಂದು ತೋರುತ್ತದೆ.

ಈ ಸಂದರ್ಭದಲ್ಲಿ ಮಿ|| ಬೆಕೆಟ್ ಎಂಬವರು ಪಾರ್ಲಿಮೆಂಟಿನ ಅಧ್ಯಕ್ಷರ ಅಧಿಕಾರದ ದಂಡವನ್ನು ಎತ್ತಿಕೊಂಡು ಹೊರಗೆ ಬಂದರು. ಪೋಲೀಸಿನವರು ಅವರನ್ನು ತಡೆದು ಅದನ್ನು ಕಿತ್ತುಕೊಂಡರು. ಈ ಮೆಂಬರಿಗೂ ಉಚ್ಚಾಟನೆಯಾಯಿತು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಪುರಜನಮಹಾಸಭಾ ಪ್ರೊಸೀಡಿಂಗ್ಸ್.

ಶಿವಮೊಗ್ಗಾ.

ತಾ|| 5-7-30 ರಲ್ಲಿ ಪ್ರಕಟವಾದಂತೆ ಶಿವಮೊಗ್ಗಾ ಪುರಪ್ರಮುಖರೂ, ಅಧಿಕಾರಿಗಳೂ ಪುರಮಂದಿರ (ಟೌನ್‌ಹಾಲ್) ದಲ್ಲಿ ತಾ|| 7-7-30 ನೆಯ ಸೋಮವಾರ ಸಾಯಂಕಾಲ 5½ ಗಂಟೆಗೆ ಮಹಾಸಭೆ ಸೇರಿದರು. ಮುಖ್ಯವಾಗಿ ಮ|| ಡೆಪ್ಯುಟಿಕಮಿಷನರ್ ಶ್ರೀಮಾನ್ ಜಿ. ರುದ್ರಪ್ಪನವರು ಮ|| ರಾ|| ಸಬ್‌ಜಡ್ಜರಾದ ಶ್ರೀಮಾನ್ ಸಿ. ನಾರಾಯಣಸ್ವಾಮಿನಾಯುಡುಯವರು, ಡಿಸ್ಟ್ರಿಕ್ಟ್ ಎಜ್ಯುಕೇಷನ್ ಆಫೀಸರ್ ಕೆ. ರಾಮಸ್ವಾಮಯ್ಯನವರು, ಟ್ರೆಜರಿ ಆಫೀಸರ್ ಎ. ಸಿ. ಶಿವಾರ್ಗಡಗೌಡರು, ಸರ್ವೇ ಸೂಪರಿಂಟೆಂಡೆಂಟ್ ನರಸಿಂಹಯ್ಯನವರು ಮೊದಲಾದ ಅಧಿಕಾರಿವರ್ಗದವರೂ, ಎಚ್. ಸಿದ್ದಯ್ಯ, ಬಿ.ಎ., ಎಲ್‌ಎಲ್.ಬಿ., ಎಂ.ಎಲ್.ಸಿ. ಯವರು, ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು, ಅಡ್ವೊಕೇಟ್ ಎಚ್. ಕೆ. ನರಸಿಂಹಾಚಾರ್ಯರು, ಎಸ್. ಸೀತಾರಾಮಯ್ಯನವರು, ಪ್ಲೀಡರ್ ಎ. ಅನಂತಯ್ಯನವರು ಮೊದಲಾದ ಪುರಪ್ರಮುಖರೂ ಆಯುರ್ವೇದ ಯುನಾನಿವೈದ್ಯರೂ ಸೇರಿದ್ದರು.

ಧರ್ಮಸುಧಾರಕಸಭಾ, ಗುಜಮಾಗಡಿ.

ಧರ್ಮವು ಸುಧಾರಣೆಯಲ್ಲಿ ಅಗ್ರಸ್ಥಾನವನ್ನು ಹೊಂದುತ್ತದೆಂಬುದಕ್ಕೆ ಏನೂ ಸಂದೇಹವಿಲ್ಲ.

ಕನ್ನಡಶಾಲಾ ಹೆಡ್‌ಮಾಸ್ತರ ಪಕೀರಪ್ಪ,
ಗುಜಮಾಗಡಿ.

ಶ್ರೀಮತಿ ಸರ್ವಮಂಗಳಾದೇವಮ್ಮನವರ ನಿಧನ.

ಇವರು ದೊಡ್ಡಬಳ್ಳಾಪುರದ ರಿಟೈರ್ಡ್ ಹೆಡ್‌ಮಾಸ್ತರಾದ ವೇ|| ಬ್ರ|| ಬಸವಾರಾಧ್ಯರ ಸುಪುತ್ರಿಯಾಗಿ ಜನಿಸಿ ಬಾಲ್ಯದಿಂದಲೂ, ಸುಶೀಲ ಸುನೀತಿಗಳನ್ನು ಅನುಸರಿಸಿ ಬೆಳೆಯುತ್ತ ಬಂದು ಮೈಸೂರು ದೇಶೀಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾದರೂ, ಅಪ್ಪರ್‌ಸೆಕಂಡರೀ ಪರೀಕ್ಷೆಗಿಂತಲೂ ಹೆಚ್ಚು ಭಾಷಾಜ್ಞಾನ ಮೊದಲಾದ ಯೋಗ್ಯತೆಯನ್ನು ಸಂಪಾದಿಸಿ ಮಾರ್ಗಂಭಗಳನ್ನು ವ್ಯಾಸಂಗಮಾಡಿ ಸ್ತ್ರೀ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದರು. ಇವರು ಹುಣಸೂರು ತಾಲೂಕು ಪೋಲೀಸ್ ಇನ್ಸ್‌ಪೆಕ್ಟರ್ ಮ|| ರಾ|| ಸಿದ್ಧವೀರಯ್ಯನವರ ಧರ್ಮಪತ್ನಿಯವರಾಗಿ ಶಿವದೀಕ್ಷಾ ಸಂಪನ್ನತ್ವದಿಂದ ಶಿವಪೂಜಾನಿಷ್ಠೆ ಗುರುಜಂಗಮರಲ್ಲಿ ಪ್ರೇಮವುಳ್ಳವರಾಗಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಮುಂತಾದ ಮಹನೀಯರುಗಳು ಪ್ರಸಿದ್ಧ ವೈದಿಕಮನೆತನದಲ್ಲಿ ಜನ್ಮಿಸಿದ ಈ ಸಾಧ್ವೀಮಣಿಯ ವೇದಪಾಠವನ್ನು ಕೇಳಿ ಬಹಳ ಸಂತುಷ್ಟರಾಗಿದ್ದರು. ಮತ್ತು ಸೋಲಾಪುರದ ಮಹಿಳಾಜ್ಞಾನಮಂದಿರದವರಿಂದ ವಿದ್ಯಾವಿಷಯಕವಾದ ಬಹುಮಾನ ಪದಕವನ್ನು ಪಡೆದವರಾಗಿದ್ದು ತಮ್ಮ 31 ನೆಯ ವಯಸ್ಸಿನಲ್ಲಿ 19-6-30 ನೇ ಗುರುವಾರ ಶಿವೈಕ್ಯವನ್ನು ಹೊಂದಿದರೆಂಬ ವಿಷಯವನ್ನು ವಿಷಾದದಿಂದ ತಿಳಿಸುತ್ತೇನೆ. ಇವರ ಅಪರಕ್ರಿಯಾದಿಗಳು ನಿಕರಣೆಯಿಂದ ನಡೆದುವು. ಇವರಿಗೆ 10 ವರ್ಷದ ಒಂದು ಗಂಡುಮಗುವಿರುತ್ತದೆ. ಈ ಮೃತರ ಆತ್ಮಕ್ಕೂ ಇವರ ಕುಟುಂಬವರ್ಗಕ್ಕೂ ಪರಮೇಶ್ವರನು ಶಾಂತಿಯನ್ನು ಕರುಣಿಸಲೆಂದು ಕೋರುತ್ತೇನೆ

H. G. Rudrappa,
Dodballapur.

ಮರಿಮಲ್ಲಪ್ಪನವರ ಧರ್ಮದ ಫಂಡು.

ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಮುಂದೆ ಕಾಲೇಜುಗಳಲ್ಲಿ ಓದತಕ್ಕ ಮೈಸೂರು ದೇಶದ ವೀರಶೈವಮತದ ಬಡವಿದ್ಯಾರ್ಥಿಗಳು ಇದೇ ಜುಲೈ ಆಖೈರ್ ಒಳಗಾಗಿ ಕಲ್ಪಿತವಾದ ಫಾರಂಮಿನಲ್ಲಿ ಸದರೀ ಫಂಡಿನ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಗುಜರಾಯಿಸಿಕೊಳ್ಳಬಹುದು. ಫಾರಂ ಬೇಕಾಗಿದ್ದಲ್ಲಿ ಅರ್ಧ ಅಣೆ ಸ್ಟಾಂಪನ್ನು ಶಿಕ್ರೆಟರಿಯವರಿಗೆ ಕಳುಹಿಸಿಕೊಡಬೇಕು.

T. S. Siddappa L. M. & S.
Secretary.
Marimallappa's Charities,
Vanivilas Road, Mysore.

ಸ್ವದೇಶೀ ವಸ್ತುಪ್ರದರ್ಶನಾಲಯದ ಪ್ರಾರಂಭೋತ್ಸವ.

ಇದೇ ಜುಲೈ 14 ನೆಯ ತಾರೀಖಿನ ದಿವಸ ಆಚಾರ್ಯ ಪಿ. ಸಿ. ರೇರವರು ಮದರಾಸಿನ ಗೋಖಲೆಹಾಲಿನಲ್ಲಿ ಸ್ವದೇಶೀವಸ್ತುಪ್ರದರ್ಶನಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ರಾಜಕೀಯ ಸಂಘವಿಲ್ಲ.

ಭರತಖಂಡದ ವ್ಯಾಪಾರದ ಸ್ಥಿತಿ.

ಮುಂದಿನ ಕರ್ತವ್ಯ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಠರಾವುಗಳು.

ರಾಮಾದೇವಿಯವರು.

ಕಲ್ಕತ್ತಾ ಪಟ್ಟಣದ ರಾಮಾದೇವಿಯವರು ಸುಮಾರು 50 ವರ್ಷದ ಸ್ತ್ರೀಯರಾಗಿರುತ್ತಾರೆ. ಬಜಾರುಗಳಲ್ಲಿ ಪರದೇಶೀ ಬಟ್ಟೆಗಳನ್ನು ಉಪಯೋಗಿಸತಕ್ಕವರಿಗೆ ದೇವರು ಶಿಕ್ಷೆಯನ್ನು ಮಾಡುವನೆಂದು ಬೋಧಿಸುತ್ತಾ ಬಹಳ ಗಲಾಟೆಯನ್ನು ಮಾಡಿದರು. ಮ್ಯಾಜಿಸ್ಟ್ರೇಟರ ಮುಂದೆ ಇವರು ವಿಚಾರಣೆಗೆ ಗುರಿಮಾಡಲ್ಪಟ್ಟರು. ತನ್ನ ಮೇಲೆ ಹೊರಿಸಲ್ಪಟ್ಟ ಆಪಾದನೆಯನ್ನು ಆಕೆಯು ಒಪ್ಪಿಕೊಂಡಳು. "ನಾನು ಧರ್ಮರಕ್ಷಣೆಗೋಸ್ಕರ ಕೆಲಸ ಮಾಡುತ್ತಿದ್ದೇನೆ. ನನಗೆ ಶಿಕ್ಷೆ ಮಾಡುವುದಾದರೆ ಬಲವಾದ ಶಿಕ್ಷೆ ಕೊಡಿ. ನನ್ನನ್ನು ಗಲ್ಲಿಗೆ ಹಾಕಿಬಿಡಿ ನನ್ನನ್ನು ಜೈಲಿಗೆ ಕಳುಹಿಸಬೇಡಿ" ಎಂದು ಆಕೆಯು ಮ್ಯಾಜಿಸ್ಟ್ರೇಟರನ್ನು ಪ್ರಾರ್ಥಿಸಿದಳು. ಇನ್ನು ಮೇಲೆ ಈ ಅಪರಾಧವನ್ನು ಮಾಡುವುದಿಲ್ಲವೆಂದು ವಾಗ್ದಾನಮಾಡುತ್ತೀಯಾ ಎಂದು ಮ್ಯಾಜಿಸ್ಟ್ರೇಟರು ಕೇಳಿದರು.

ನನ್ನ ಪ್ರಾಣವು ಇರುವವರೆಗೂ ಧರ್ಮಕ್ಕೆ ಬಂದಿರತಕ್ಕ ಗ್ಲಾನಿಯು ತಪ್ಪುವವರೆಗೂ ನಾನು ಎಂದಿಗೂ ನನ್ನ ಕೆಲಸವನ್ನು ಬಿಡುವುದಿಲ್ಲ. ಬ್ರಿಟಿಷ್ ಧರ್ಮಕ್ಕೆ ಬಂದಿರತಕ್ಕ ಗ್ಲಾನಿಯು ಹೋದರೆ ಆಗ ಸತ್ಯಾಗ್ರಹವನ್ನು ನಾನು ಬಿಡುತ್ತೇನೆ ಎಂದು ಹೇಳಿದಳು. ದೇಶಬಂಧುಗಳಾದ ಗಂಡಸರು ಆಕೆಯ ಸತ್ಯಸಂಕಲ್ಪವನ್ನು ಅನುಸರಿಸುವುದು ಶ್ರೇಯಸ್ಕರವಾದದ್ದು. ಒಂದು ಕೋಟಿ ಜನ ಸ್ತ್ರೀಯರು ಈ ಸಂಕಲ್ಪದಿಂದ ಹೊರಟರೆ ಅನತಿ ಸಮಯದಿಂದಲೇ ಇಂಡಿಯಾದೇಶದ ಗುಲಾಮಗಿರಿಯು ತಪ್ಪುವುದು.

ವೈಸರಾಯರ ಭಾಷಣ.

ಸರದಾರ್ ವಲ್ಲಭಭಾಯಿ ಪಾಟೀಲರ ಅಭಿಪ್ರಾಯ.

"ಸಂಗ್ರಾಮವನ್ನು ಕೊನೆಮುಟ್ಟಿಸಬೇಕು."

"ವೈಸರಾಯರ ಭಾಷಣದಲ್ಲಿ ಕಾಂಗ್ರೆಸ್ಸಿನ ತತ್ತ್ವವನ್ನು ಬದಲಾಯಿಸಲು ಅವಕಾಶಕೊಡುವಂಥ ಯಾವ ವಿಷಯವೂ ಇಲ್ಲ. ನನ್ನ ಅಭಿಪ್ರಾಯದಲ್ಲಿ ಉದಾರಪಕ್ಷದವರು ಸಹ ಇದರಿಂದ ತಮ್ಮ ತತ್ತ್ವವನ್ನು ಬದಲಾಯಿಸುವ ಕಾರಣವಿಲ್ಲ. ಅವರ ಅಭಿಲಾಷೆಯೂ ಆಗತ್ಯವಾದ ನಿಬಂಧನೆಗಳನ್ನು ಮಾಡಿ ಕೂಡಲೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡಬೇಕೆಂಬುದೇ ಆಗಿರುವದು. ಇದೇ ವಿಷಯವನ್ನು ದುಂಡುಮೇಜಿನ ಪರಿಷತ್ತಿನಲ್ಲಿ ಚರ್ಚಿಸಲಾಗುವದೆಂಬ ಭರವಸೆಯನ್ನು ಕೊಡಬೇಕೆಂದು ಅವರೂ ಹೇಳುತ್ತಲೇ ಇರುವರು. ಇದನ್ನು ಸ್ಪಷ್ಟವಾಗಿ ತಿಳಿಯಪಡಿಸಿ, ಉದಾರಪಕ್ಷದವರ ಮನಸ್ಸಿಗೆ ಸಮಾಧಾನವನ್ನುಂಟುಮಾಡುವದು ವೈಸರಾಯರಿಗೆ ಬಹಳ ಸುಲಭವಾದ ಕಾರ್ಯವಾಗಿದ್ದಿತು. ಆದರೆ ವೈಸರಾಯರು ಲಂಡನ್ನಿನ ಪರಿಷತ್ತಿನಲ್ಲಿ ಬ್ರಿಟಿಷದೇಶದ ಪ್ರತಿನಿಧಿಗಳು ಯಾವರೀತಿ ಚರ್ಚಿಸಿ ತೀರ್ಮಾನ ಮಾಡುವರೋ ಅದರಂತೆ ನಡೆಯುವೆವೆಂಬ ವಿಷಯವನ್ನು ಸ್ಪಷ್ಟವಾಗಿ ಅಡಿಕೋರಿಸಿರುವರು. ಈ ಚರ್ಚೆಯು ಪರಿಸಮಾಪ್ತಿಯೇನಾಗುವದೆಂಬುದು ಬ್ರಿಟಿಷರ ರಾಜನೀತಿಯನ್ನು ಅರಿತವರೆಲ್ಲರಿಗೂ ಚೆನ್ನಾಗಿ ವ್ಯಕ್ತವಾಗುವದು. ಆದುದರಿಂದ ದುಂಡುಮೇಜಿನ ಪರಿಷತ್ತಿಗೆ ಹೋಗುವವರೆಲ್ಲರೂ ಕಾಲಕ್ರಮದಲ್ಲಿ ನಿರಾಶೆಯನ್ನು ಹೊಂದುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಆದುದರಿಂದ ಈ ಸ್ವಾತಂತ್ರ್ಯ ಸಂಗ್ರಾಮವನ್ನು ಕೊನೆಮುಟ್ಟುವವರೆಗೂ ಮುಂದುವರಿಸಬೇಕೆಂದು, ಎಲ್ಲ ಕಾಂಗ್ರೆಸ್ ಕಮಿಟಿಗಳಿಗೂ, ಕಾಂಗ್ರೆಸ್ ಪಕ್ಷದವರಿಗೂ ಹಾಗೂ ಜನಸಾಮಾನ್ಯಕ್ಕೂ ವಿಜ್ಞಾಪಿಸಿಕೊಳ್ಳುವೆನು. ಜನಾಂಗವೆಲ್ಲವೂ ದಯಾಶೂನ್ಯವಾದ ದಬ್ಬಾಳಿಕೆಗೂ, ಇದುವರೆಗೆ ಮಾಡಿದುದಕ್ಕಿಂತಲೂ ಹೆಚ್ಚಿನ ಆತ್ಮಯಜ್ಞಕ್ಕೂ ಸಿದ್ಧವಾಗಬೇಕು. ದೇವರ ಮೇಲೆ ಭಾರವನ್ನು ಹಾಕಿ ನಮ್ಮ ತತ್ತ್ವದ ನ್ಯಾಯಾನ್ಯಾಯಗಳಲ್ಲಿ ದೃಷ್ಟಿಯಿಟ್ಟು, ಇತರ ವಿಧಗಳಾದ ಯಾವ ಅಡಚಣೆಗಳಿಗೂ ಅವಕಾಶಕೊಡದೆ ಈ ಸಂಗ್ರಾಮವನ್ನು ಪೂರ್ಣಮಾಡಬೇಕು."

ಪಂಚಾಚಾರ್ಯ ಪ್ರಭಾ

೧೯೩೦ ನೇ ಜುಲೈ ತಾ|| ೨೧ನೆಯ ಸೋಮವಾರ

ವೀರಶೈವ ಮಹಿಳೆಯರು

ಪ್ರಪಂಚದಲ್ಲಿ ಅವರವರ ಮತಧರ್ಮಗಳಾಗಲಿ ಸಾಮಾನ್ಯಧರ್ಮಗಳಾಗಲಿ ಪ್ರಕಾಶವನ್ನು ಹೊಂದಬೇಕಾದರೆ ಸ್ತ್ರೀಯರೇ ಮೂಲಕಾರಣೀಭೂತರೆಂದು ಹೇಳಬಹುದು. ಸ್ತ್ರೀಯರು ಧರ್ಮಿಷ್ಠರಾದರೆ ಅವರ ಗರ್ಭದಲ್ಲಿ ಜನಿಸುವ ಪುತ್ರರೂ ಧರ್ಮಿಷ್ಠರಾಗುವರು. ಅವರು ಅಧರ್ಮಿಗಳಾದರೆ, ಪುತ್ರರೂ ಅಧರ್ಮಿಗಳಾಗುವರು. ಪ್ರಾಯಶಃ ಮಕ್ಕಳು ತಮ್ಮ ಶೈಶವಾವಸ್ಥೆಯು ಕಳೆಯುವವರೆಗೂ ತಮ್ಮ ತಾಯಿತಂದೆಗಳವರ ಸಮೀಪದಲ್ಲಿಯೇ ಕಾಲವನ್ನು ಕಳೆಯುತ್ತಿದ್ದರೂ ತಾಯಿಯಿಂದ ವಿಶೇಷವಾಗಿ ಶಿಕ್ಷಣವನ್ನು ಹೊಂದುತ್ತಿರುವರು. ಮಕ್ಕಳ ಬುದ್ಧಿಯು ಬಾಲ್ಯಾವಸ್ಥೆಯಲ್ಲಿ ಅತ್ಯಂತ ಕೋಮಲವಾಗಿರುವುದರಿಂದ ಯಾವಾಗಲೂ ಮಕ್ಕಳ ಹತ್ತಿರದಲ್ಲೇ ಇರುತ್ತಿರುವ ತಮ್ಮ ತಮ್ಮ ತಾಯಂದಿರುಗಳು ಯಾವ ರೀತಿಯಿಂದ ಶಿಕ್ಷಣವನ್ನು ಮಕ್ಕಳಿಗೆ ಕೊಡುತ್ತಾರೆಯೋ ಮತ್ತು ದಿನಚರ್ಯದಲ್ಲಿ ತಾಯಿಯ ನಡೆನುಡಿಗಳು ಹೇಗೆ ಹೇಗೆ ಇರುತ್ತವೆಯೋ ಹಾಗೆಯೇ ಅನುಕರಣವನ್ನು ಮಾಡುವದು ಮಕ್ಕಳ ಸ್ವಭಾವವಾಗಿರುವದು. ನವನವೋನ್ಮೇಷಶಾಲಿನಿಯಾದ ಮಕ್ಕಳ ಬುದ್ಧಿಯು ದುಃಶೀಲೆಯಾದ ತಾಯಿಯ ಸಂಸರ್ಗದಿಂದ ಕಲುಷಿತವಾಗುತ್ತದೆ. ಸುಶೀಲೆಯಾದ ತಾಯಿಯ ಸಂಸರ್ಗದಿಂದ ನಿರ್ಮಲವಾಗುತ್ತದೆ. "ಸಂಸರ್ಗಜಾ ದೋಷಗುಣಾ ಭವಂತಿ" ಎಂಬಂತೆ ಯಾರಿಗೆ ಯಾವ ಸಂಸರ್ಗವು ವಿಶೇಷವಾಗಿರುವುದೋ ಅದಕ್ಕನುಗುಣವಾದ ಬುದ್ಧಿಯು ಹುಟ್ಟುವದು ಲೋಕಾನುಭವಸಿದ್ಧವಾಗಿರುವಲ್ಲಿ ಏನೊಂದೂ ತಿಳಿಯದ ಅತಿ ಸ್ವಚ್ಛವಾದ ಬುದ್ಧಿಯುಳ್ಳ ಮಕ್ಕಳ ವಿಷಯದಲ್ಲಿ ಕೇಳುವುದೇನು? ಪ್ರಪಂಚದಲ್ಲಿ ಮಹಾವೀರರಾದ ಪುತ್ರರನ್ನು ಹೆತ್ತವರೂ ಸ್ತ್ರೀಯರೇ! ವಿದ್ವಾಂಸರನ್ನು ಹೆತ್ತವರೂ ಸ್ತ್ರೀಯರೇ! ಬ್ರಹ್ಮಸಾಕ್ಷಾತ್ಕಾರವುಳ್ಳ ಮಹಾಯೋಗಿಗಳನ್ನು ಹೆತ್ತವರೂ ಸ್ತ್ರೀಯರೇ! ಲೋಕಕಂಟಕರಾದ ಮಹಾದುಷ್ಟರನ್ನು ಹೆತ್ತವರೂ ಸ್ತ್ರೀಯರೇ! ಮಹಾಮೂರ್ಖರನ್ನು ಹೆತ್ತವರೂ ಸ್ತ್ರೀಯರೇ! ಸಾರ್ವಭೌಮ ಪದವಿಯನ್ನು ಅನುಭವಿಸುವ ಮಹಾರಾಜರನ್ನು ಹೆತ್ತವರೂ ಸ್ತ್ರೀಯರೇ! ಹೀಗೆ ಸಕಲ ಮಾನವರ ಉತ್ಪತ್ತಿಗೂ ಸ್ತ್ರೀಯರೇ ಕಾರಣಭೂತರಾದ್ದರಿಂದ ಕಾರಣದಲ್ಲಿರುವ ಗುಣಗಳು ಕಾರ್ಯದಲ್ಲಿಯೂ ಬರಬೇಕಾಗುವುದರಿಂದ ಭಾರತೀಯರು ಧಾರ್ಮಿಕರಾಗಿ ಧೈರ್ಯಶೌರ್ಯ ವಿನಯಾದಿಗಳಿಂದ ಶೋಭಿಸಬೇಕಾದರೆ ಜನನಿಯರಾದ ಸ್ತ್ರೀಯರು ಧಾರ್ಮಿಕಾದಿ ಗುಣಸಂಪನ್ನರೇ ಆಗಿರಬೇಕು. ತಾಯಿಯು ನೀತ್ಯಾಚಾರ ವಿಹೀನಳಾದರೆ ಮಕ್ಕಳೂ ಸಹ ನೀತ್ಯಾಚಾರಶೂನ್ಯರಾಗುತ್ತಾರೆಂಬುವಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಆರ್ಯಮಹಿಳೆಯರು ತಾವು ಯಾವ ಮತದಲ್ಲಿ ಜನ್ಮವನ್ನು ಧರಿಸಿರುತ್ತಾರೆಯೋ ಆ ಮತದ ಧರ್ಮಕರ್ಮಗಳ ಸ್ವಭಾವವನ್ನು ಚೆನ್ನಾಗಿ ತಿಳಿದು ಸಂಸ್ಕಾರವತಿಯರಾಗಿ ಅದರಂತೆಯೇ ಅನುಷ್ಠಿಸುತ್ತ ಬಂದರೆ ಭಾವಿಪ್ರಜೆಗಳಾದ ಅವರವರ ಮಕ್ಕಳೂ ಸಹ ತಮ್ಮ ತಮ್ಮ ಮತಧರ್ಮಗಳಲ್ಲಿ ಶ್ರದ್ಧೆಯುಳ್ಳವರಾಗುವುದರಿಂದ ಮೋಕ್ಷಸಂಪಾದನಾರ್ಥವಾಗಿ ಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಆಯಾಯ ಮತಗಳು ಸಹ ಉಜ್ವಲಸ್ಥಿತಿಗೆ ಬರುವುವಲ್ಲದೆ, ಪ್ರಪಂಚವಿರುವವರೆಗೂ ಆಯಾಯಮತಗಳು ಅಭಿವೃದ್ಧಿಯನ್ನು ಹೊಂದುತ್ತಲೇ ಹೋಗುವವು. ಆರ್ಯಮಹಿಳೆಯರು ತಮ್ಮ ಮತಧರ್ಮಗಳನ್ನು ತ್ಯಜಿಸುತ್ತಬಂದರೆ ಕ್ರಮಕ್ರಮವಾಗಿ ಆಯಾಯ ಧರ್ಮಗಳು ನಾಶವಾಗುವುದರಿಂದ ಮತಗಳು ನಾಮಾವಶೇಷವಾಗುವವು. ಪ್ರಕೃತದಲ್ಲಿ ವೀರಶೈವಮತವು ವೇದಾಗಮಸಮ್ಮತವಾಗಿ ಶ್ರೀ ರೇಣುಕಾದಿಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟಿದ್ದರೂ ನಮ್ಮ ವೀರಶೈವ ಆರ್ಯಮಹಿಳೆಯರಲ್ಲಿ ಪರಮಪವಿತ್ರವಾದ ವೀರಶೈವ ಧರ್ಮಾಚರಣೆಗಳು ಬರಬರುತ್ತ ಕಡಿಮೆಯಾದುದರಿಂದ ಅವರ ಪವಿತ್ರಗರ್ಭಾಂಬುಧಿಯಲ್ಲಿ ಹುಟ್ಟುವ ವೀರಶೈವ ಬಾಲಕರೂ ಸಹ ಸ್ವಧರ್ಮಶೂನ್ಯರಾಗುತ್ತ ಬಂದಿರುತ್ತಾರೆ. ವೀರಶೈವಮತದ ಎಷ್ಟೋ ಜನ ಮಹಿಳೆಯರು ಸಂಸ್ಕಾರಶೂನ್ಯರಾಗಿಯೂ, ಆಚಾರಶೂನ್ಯರಾಗಿಯೂ, ಗುರುಭಕ್ತಿಶೂನ್ಯರಾಗಿಯೂ, ಲಿಂಗನಿಷ್ಠಾಶೂನ್ಯರಾಗಿಯೂ, ಧರ್ಮಾಧರ್ಮಜ್ಞಾನಶೂನ್ಯರಾಗಿಯೂ ಇರುವುದರಿಂದ ಅಂಥ ಮಹಿಳೆಯರ ಗರ್ಭದಲ್ಲಿ ಜನಿಸಿದ ವೀರಶೈವ ಬಾಲಕರೂ ಸಹ ಅವರ ಸಂಸರ್ಗದಿಂದ ಯಾವುದೊಂದೂ ಮತಧರ್ಮಾನುಷ್ಠಾನವಿಲ್ಲದೆ ಅಶಿಕ್ಷಿತರಾಗಿ ಅಸಂಸ್ಕೃತರಾಗಿ ಹೆಸರಿಗೆ ಮಾತ್ರ ವೀರಶೈವರೆನಿಸಿಕೊಳ್ಳುತ್ತ ಬಂದದ್ದರಿಂದ ಮತಸ್ಥಾಪಕರಾದ ಮಹಾಚಾರ್ಯರ ಉದ್ದೇಶಕ್ಕೇನೇ ಕಳಂಕವನ್ನು ತಂದೊಡ್ಡಿದಂತಾಗಿದೆ. ಅನೇಕ ಕಡೆಗಳಲ್ಲಿ ವೀರಶೈವ ಮಹಿಳೆಯರಲ್ಲಿ ಗುರುಲಿಂಗ ಪೂಜಾಧಿಕಾರವನ್ನುಂಟುಮಾಡುವ ಸ್ತ್ರೀಪುರುಷ ಸಾಮಾನ್ಯವಾದ ಶಿವದೀಕ್ಷೆಯೇ ನಡೆಯದೆ ಹುಟ್ಟಿದಂದಿನಿಂದಲೂ ಅಸಂಸ್ಕೃತರಾಗಿಯೇ ಇರುತ್ತಾರೆ. ಇಂಥ ಅಸಂಸ್ಕೃತರು ಶಿವಲಿಂಗವನ್ನು ಮುಟ್ಟುವುದಕ್ಕೂ ಪೂಜಿಸುವುದಕ್ಕೂ ಅಧಿಕಾರಿಗಳಾಗುವುದಿಲ್ಲ. ಯದ್ಯಪಿ ಲೋಕಾಭಿರಾಮವಾಗಿ ಪೂಜಿಸುತ್ತಿದ್ದರೂ ತಾವು ಹುಟ್ಟಿದಾಗ ಧರಿಸಿದ ಲಿಂಗವು ಕೇವಲ ಶಯನಾವಸ್ಥೆಯಲ್ಲಿರುವುದರಿಂದ ಅಂಥ ಲಿಂಗವನ್ನು ಪೂಜಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ಶಯನಾವಸ್ಥೆಯಲ್ಲಿದ್ದ ಆ ಶಿವಲಿಂಗವು ಅಭಿಮುಖವಾಗಬೇಕಾದರೆ ನಮ್ಮ ವೀರಶೈವ ಮಹಿಳೆಯರು ವಿವಾಹಪೂರ್ವದಲ್ಲಿಯೇ ತಮ್ಮ ತಮ್ಮ ಗೋತ್ರಗುರುವಿನಿಂದ ಮತಸಂಸ್ಕಾರವೆನಿಸಿದ ಶಿವದೀಕ್ಷೆಯನ್ನು ಪಡೆದು ಪರಿಶುದ್ಧರಾಗಿ ಶಿವಲಿಂಗನಿಷ್ಠ ಧರ್ಮಸೂಕ್ಷ್ಮಗಳನ್ನು ತಿಳಿಯಬೇಕು. ಸಂಸ್ಕಾರಶೂನ್ಯಳಾದ ಸ್ತ್ರೀಯಳು ಮಾಡಿದ ಪಾಕವಂತೂ ಶಿವಲಿಂಗಕ್ಕೆ ನಿಷೇಧವೆನಿಸುವುದು. ದೀಕ್ಷಿತರಾದ ಜನಗಳು ಅಂಥ ಪಾಕವನ್ನು ಭುಂಜಿಸಲೇ ಕೂಡದೆಂದೂ ಒಂದುವೇಳೆ ಶಿವಲಿಂಗಕ್ಕೆ ಅರ್ಪಿಸಿ ಭುಂಜಿಸಿದ್ದಾದರೆ ಆ ಪಾಕಗ್ರಹಣದಿಂದ ಘೋರವಾದ ಪಾಪವೇ ಸಂಘಟಿಸುವುದೆಂದೂ ಧರ್ಮಶಾಸ್ತ್ರಕಾರರು ನಿರ್ಣಯಗೊಳಿಸಿರುತ್ತಾರೆ. ಅಲ್ಲದೆ ಅನೇಕ ಕಡೆಗಳಲ್ಲಿ "ಸರ್ವಸ್ಮಿನ್ನಪಿಕರ್ಮಣಿ ಸ್ನಾನಸ್ಯೈವಪ್ರಾಥಮಿಕತ್ವಾತ್" ಎಂಬಂತೆ ಪ್ರಥಮಕರ್ಮವೆನಿಸಿದ ಸ್ನಾನವಿಧಿಯನ್ನೇ ಅನುಸರಿಸುವುದಿಲ್ಲ. ಹೀಗೆ ಸ್ನಾನಮಾಡದೆ ಅಶುದ್ಧಳಾಗಿ ಪಾಕವನ್ನು ಮಾಡಿಟ್ಟರೆ ಅಂಥ ದುಷ್ಟಪಾಕವನ್ನು ಸ್ನಾನಾದಿಕರ್ಮಗಳಿಂದ ಪರಿಶುದ್ಧರಾದ ಲಿಂಗಾಂಗಿಗಳು ತಮ್ಮ ಶಿವಲಿಂಗಕ್ಕೆ ಅರ್ಪಿಸುವುದೆಂತು? ಅರ್ಪಣವಿಧಿಯನ್ನು ಮಾಡಿದ್ದಾದರೆ ಶಿವನು ತುಷ್ಟಿಪಡುವುದಕ್ಕೆ ಬದಲು ವ್ಯಾಕೋಪವುಳ್ಳವನಾಗುವುದಿಲ್ಲವೇ? ಇಂಥ ಅಸಂಸ್ಕೃತರೂ ಧರ್ಮ ಶೂನ್ಯರೂ ಆದಮಹಿಳೆಯರ ಗರ್ಭದಲ್ಲಿ ಹುಟ್ಟುವ ಸಂತತಿಯಾದರೂ ಹೇಗೆತಾನೇ ಸಂಸ್ಕಾರಕ್ಕೆ ಅರ್ಹವಾದೀತು? ಇಂಥವರಿಗೆ ಕ್ರಿಯಾನಿಷ್ಠೆಯಾದರೂ ಹೇಗೆ ಹುಟ್ಟೀತು? ಆಯಾ ಮತಧರ್ಮಗಳು ಆಯಾಯ ಮತೀಯರ ಗೃಹಗಳಲ್ಲಿ ವಂಶಾನುಕ್ರಮವಾಗಿ ನಡೆದುಕೊಂಡು ಬರಬೇಕಾದರೆ ಆರ್ಯಮಹಿಳೆಯರೇ ಮೂಲಭೂತರಾಗಿದ್ದಾರೆ. ಪುರುಷರು ಒಂದು ಕಡೆಗೆ ನಿಯತರಾಗಿ ಇರದಿರೋಣದಿಂದ ಮಕ್ಕಳ ಸುಧಾರಣೆಗೆ ಅಷ್ಟು ಕಾರಣಭೂತರಾಗುವುದಿಲ್ಲ. ಮಹಿಳೆಯರಾದರೋ ಇಂಥ ಭಾವಿಪ್ರಜೆಗಳಾಗುತ್ತಿರುವ ಮಕ್ಕಳನ್ನು ನವಮಾಸವು ತುಂಬುವವರೆಗೂ ತಮ್ಮ ಗರ್ಭಕೋಶದಲ್ಲಿರಿಸಿ ತಮ್ಮ ಅನ್ನರಸದಿಂದ ಪೋಷಿಸುವುದಲ್ಲದೆ ಪ್ರಸವಿಸಿದಮೇಲೂ ಆ ತಾಯಿಯ ಲಾಲನಪಾಲನಾದಿಗಳು ಎಡಬಿಡದೆ ನಡೆಯುವುದರಿಂದ ತಾಯಿಯಲ್ಲಿ ಯಾವ ಯಾವ ನಡೆನುಡಿಗಳಿರುವುವೋ ಅವುಗಳೇ ಮಕ್ಕಳಿಗೆ ಪ್ರಯತ್ನವಿಲ್ಲದೆ ಸಂಬಂಧಿಸಿಕೊಂಡು ಬರುತ್ತವೆ. ಆದ್ದರಿಂದ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳಿಗೂ ಸ್ತ್ರೀಯರೇ ಮೂಲಕಾರಣರಾಗಿದ್ದಾರೆ. "ಭಾರ್ಯಾಮೂಲಂತ್ರಿವರ್ಗಸ್ಯಭಾರ್ಯಾಮೂಲಂ ತರಿಷ್ಯತಃ" ಎಂದು ಧರ್ಮಶಾಸ್ತ್ರವೂ ಇದೇ ಅರ್ಥವನ್ನು ಸ್ಪಷ್ಟವಾಗಿ ಬೋಧಿಸುತ್ತದೆ. ಹೀಗೆ ಐಹಿಕಾಮುಷ್ಮಿಕಫಲಪ್ರಾಪ್ತಿಗೆ ಮೂಲಕಾರಣರಾದ ವೀರಶೈವ ಮತದ ಮಹಿಳೆಯರಿಂದಲೇ ರೇಣುಕಾದಿ ಭಗವತ್ಪಾದರಿಂದ ಪ್ರತಿಷ್ಠಿತಗಳಾದ ವೀರಶೈವಧರ್ಮ ಕರ್ಮಗಳ ನಿಯಮಗಳು ನಿರ್ವಾಹವಾಗಬೇಕಾಗಿರುವುದರಿಂದ ಪ್ರತಿಯೊಬ್ಬ ಲಿಂಗಾಂಗಿನಿಯಾದ ಆರ್ಯಮಹಿಳೆಯು ತನ್ನ ಮತಧರ್ಮಗಳನ್ನು ಚೆನ್ನಾಗಿ ತಿಳಿದು ಅದರಂತೆ ತಾನೂ ನಡೆಯುವುದಲ್ಲದೆ ಉತ್ತರೋತ್ತರ ತನ್ನ ಪವಿತ್ರ ಗರ್ಭಾಂಬುಧಿಯಲ್ಲಿ ಹುಟ್ಟುವ ಮಕ್ಕಳಿಗೂ ತನ್ನ ನಡವಳಿಕೆಯನ್ನೇ ಬೋಧಿಸುತ್ತ ಬಂದಲ್ಲಿ ಭ್ರಮರಕೀಟ ನ್ಯಾಯದಂತೆ ಮಕ್ಕಳೂ ಸಹ ಸ್ವಧರ್ಮದಲ್ಲಿ ಶ್ರದ್ಧೆಯುಳ್ಳವರಾಗುವದರಿಂದ ಮಹಾಚಾರ್ಯರ ಉದ್ದೇಶವು ಫಲಿಸುವುದಲ್ಲದೆ "ಏಕೇನ ಜನ್ಮನಾ ಮುಕ್ತಿಃ" ಎಂಬ ಆ ಮಹಾಚಾರ್ಯರ ವಾಕ್ಯವು ಅನ್ವರ್ಥವಾಗುವುದು. ಆದ್ದರಿಂದ ಕೆಲವುಕಡೆ ವೀರಶೈವ ಮಹಿಳೆಯರಲ್ಲಿ ಬೇರೂರಿ ನಿಂತಿರುವ ದುಷ್ಟ ನಿಯಮಗಳು ಹೊರಟುಹೋಗಿ ಪರಮಪವಿತ್ರವಾದ ವೀರಶೈವ ಧರ್ಮ, ಕರ್ಮನಿಯಮಗಳು ಅವರ ಪವಿತ್ರಹೃದಯ ಕ್ಷೇತ್ರದಲ್ಲಿ ಅಂಕುರಿಸುವಂತೆ ಭಗವತ್ಪಾದರು ಅನುಗ್ರಹಿಸಲಿ.

ಒಳದೇಶದ ವೃತ್ತಾಂತಗಳು.

ಈ ವಾರದ ಪತ್ರಿಕೆಯ ಜೊತೆಯಲ್ಲಿ ಬಳ್ಳಾರಿ ಜಿಲ್ಲಾ ಹರಪನಹಳ್ಳಿ ಭಾರತಜ್ಯೋತಿಷ್ಯವೈದ್ಯಾಲಯದ ಜಾಹೀರುನೋಟೀಸುಗಳನ್ನು ಹಂಚಿರುತ್ತೇವೆ.

ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಸವಾರಿಯು ಇದೇ ಜುಲೈ 30 ನೆಯ ತಾರೀಖಿನ ದಿವಸ ಅರಸೀಕೆರೆ ತಾಲೂಕು ಹುಲ್ಕೂರಿಗೆ ದಯಮಾಡಿಸುವದರಿಂದ ಆ ಕಾಲಕ್ಕೆ ಸಮಸ್ತರೂ ಹುಲ್ಕೂರಿಗೆ ಬಂದು ಶ್ರೀ ಜಗದ್ಗುರುಗಳ ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಧರ್ಮಧುರಂಧರ ಮ|| ರಾ|| ಮರುಳಸಿದ್ಧಪ್ಪನವರು ಪ್ರಾರ್ಥಿಸುತ್ತಾರೆ.

ಕಳೆದ ತಿಂಗಳು 19 ನೆಯ ತಾ|| ನಲ್ಲಿ ಮೈಸೂರು ಅರಮನೆಯ ಕೃಷ್ಣಸ್ವಾಮಿ ದೇವಸ್ಥಾನದ ಪೂಜಾರಿ ರಂಗಸ್ವಾಮಿಭಟ್ಟನೆಂಬುವನು ಸದರೀ ದೇವರ ಸುಮಾರು 9000 ರೂಪಾಯಿ ಬೆಲೆಬಾಳುವ ಸಾಮಾನುಗಳನ್ನು ಕದ್ದನು. ಈ ಬಗ್ಗೆ ಪೋಲೀಸರು ತನಿಖೆ ಮಾಡಿ, ಬೆಂಗಳೂರು ಮೈಸೂರು ಮದ್ರಾಸು ಪ್ರಾಂತಗಳಿಂದ ಒಟ್ಟು ಎಂಟುಸಾವಿರ ರೂಪಾಯಿ ಬೆಲೆ ಬಾಳುವ ಸಾಮಾನುಗಳನ್ನು ಪತ್ತೆಮಾಡಿರುವರು. ಅಪರಾಧಿಯು ಕೋರ್ಟಿನಲ್ಲಿ ಬಿಕ್ಕಿ ಬಿಕ್ಕಿ ಅಳುತ್ತ ತನ್ನ ಸ್ಟೇಟ್‌ಮೆಂಟನ್ನು ಹೇಳುವಾಗ, ತಾನು ಕದ್ದದ್ದು ಉಂಟೆಂದು [illegible]ಕೊಂಡನು. ಯಾವುದೋ ಒಂದು ದುರಾಲೋಚನೆಯು ಅವನ ಮನಸ್ಸಿಗೆ ಹೊಳೆದುದರಿಂದ ಅವನು ಆ ರೀತಿ ಕಳುವುಮಾಡಿದನೆಂದು ತಾನೇ ಒಪ್ಪಿಕೊಳ್ಳುವಾಗ ಸಾಕ್ಷಿಗಳ ವಿಚಾರಣಾದಿಗಳು ಈ ಮೊಕದ್ದಮೆಗೆ ಅನಾವಶ್ಯಕವೆಂದು ಸ್ವತಃ ಅಪರಾಧಿಯೇ ಅಭಿಪ್ರಾಯಪಟ್ಟನು. ಈ ಮೊಕದ್ದಮೆಯಲ್ಲಿ ಅಪರಾಧಿಯು ತಾನು ಅಪರಾಧಿಯೆಂದು ಒಪ್ಪಿಕೊಂಡಿದ್ದರೂ ಕೋರ್ಟಿನ ನಿಯಮಗಳನ್ನು ಅನುಸರಿಸಿ ಕೆಲವು ಸಾಕ್ಷಿಗಳನ್ನಾದರೂ ವಿಚಾರಿಸುವುದುಅಗತ್ಯವೆಂದೂ, 16 ನೆಯ ತಾ|| ನಿಂದ ದಿನಂ ಪ್ರತಿ 3-4 ದಿವಸಗಳವರೆಗೆ ಈ ಮೊಕದ್ದಮೆಯನ್ನು ನಡೆಯಿಸಿ ಅನಂತರ ಶೀಘ್ರ ತೀರ್ಪು ಕೊಡಲ್ಪಡುವುದೆಂದೂ ಮೈಸೂರು ಸಿಟಿಮ್ಯಾಜಿಸ್ಟ್ರೇಟರು ಹೇಳಿದರು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಹಾತ್ಮಾಗಾಂಧಿಯವರು ಜೈಲಿನಲ್ಲಿ ದಿವಸಕ್ಕೆ 500 ಗಜ ನೂಲನ್ನು ನೂಲುತ್ತಿರುವರು. ಅವರು ಜೈಲಿನಿಂದ ತಮ್ಮಸ್ನೇಹಿತರಿಗೆ ಈ ರೀತಿ ಪತ್ರ ಬರೆದಿರುವರು—ನಾನು ಆರೋಗ್ಯವಾಗಿದ್ದೇನೆ. 375 ಸುತ್ತುಗಳನ್ನು ಚರಕದಲ್ಲಿ ನೂಲಬೇಕಾದರೆ ನನಗೆ ಈಗ ಆಯಾಸವಾಗುತ್ತಿದೆ. ಇದರ ಕಾರಣವೇನೆಂಬುದನ್ನು ಕಂಡುಹಿಡಿಯಲು ನಾನು ಪ್ರಯತ್ನಿಸುತ್ತಿದ್ದೇನೆ. ತಕಲಿಯಿಂದ ನೂಲುವ ವೇಗವು ಬಹಳ ಕಡಿಮೆಯಾಗಿದೆ. ಭರತಖಂಡದಲ್ಲಿ ಭಾರತಮಾತೆಗೋಸ್ಕರ ಕಷ್ಟಪಡುತ್ತಿರುವವರಿಗೆಲ್ಲಾ ನಾನು ಬರೆಯಬೇಕಾದುದೇನೂ ಇರು

ವುದಿಲ್ಲ. ಏಕೆಂದರೆ, ಅವರ ಯೋಚನೆಯೇ ನನ್ನ ಮನಸ್ಸಿನಲ್ಲಿ ಹಗಲಿರುಳೂ ಬಾಧಿಸುತ್ತಿದೆ.

ಮಿ|| ದುಗ್ಗಾರಾಜು ರಘುಪತಿರಾಯರು ಗಾಂಧೀ ಟೋಪಿಯನ್ನು ಹಾಕಿಕೊಂಡು ಬೀದಿಯಲ್ಲಿ ತಿರುಗಾಡಿದ್ದಕ್ಕೆ ಅವರನ್ನು ಪೋಲೀಸಿನವರು ದಸ್ತಗಿರಿಮಾಡಿರುವರು.

ಗುಂಟೂರಿನ ಲಾಯರುಗಳ ಸಮ್ಮೇಳನದವರು ಗಾಂಧೀ ಟೋಪಿಗಳ ಮೇಲಿರುವ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅರ್ಜಿ ಹಾಕಿದ್ದರು. ಮ್ಯಾಜಿಸ್ಟ್ರೇಟರು ಆ ಮೊಬದ್ದಮೆಯನ್ನೇ ದಾಖಲುಮಾಡದೆ ಅರ್ಜಿಯನ್ನು ನಿರಾಕರಿಸಿದರು. ಅರ್ಜೀದಾರರು ಹೈಕೋರ್ಟಿನಲ್ಲಿ ಈಗ ವಾದ ಹೂಡಿರುವರು.

ಶ್ರೀಮತಿ ಚಂದ್ರಮಣಿದೇವಿ ಎಂಬುವರು 144 ನೇ ಸೆಕ್ಷನನ್ನು ವಿರೋಧಪಡಿಸಲು ಬರಹಾಂಪೂರಿನ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಪೋಲೀಸರು ಅವರನ್ನು ದಸ್ತಗಿರಿಮಾಡಿದರು. ಆ ವೀರರಮಣಿಗೆ ಆರು ತಿಂಗಳು ಸಾದಾ ಶಿಕ್ಷೆಯು ವಿಧಿಸಲ್ಪಟ್ಟಿತು.

ಸೋಲಾರ್‌ಪೇಟೆ, ಎಲ್ಲೂರು, ಮಚ್ಲೀಪಟ್ಟಣ, ವಿಶಾಖಪಟ್ಟಣ ಈ ಪ್ರಾಂತಗಳಲ್ಲಿ ಸಾರ್ವಜನಿಕ ಸಭೆಗಳನ್ನು ಸೇರಿಸಲು ಅವಕಾಶವೇ ಇಲ್ಲ. ಜನಗಳು ಇದನ್ನು ವಿರೋಧಿಸಿ ಸತ್ಯಾಗ್ರಹ ಮಾಡಿ ಜೈಲಿಗೆ ಹೋಗುತ್ತಿರುವರು.

ನಾಗಪುರದ ವ್ಯವಸಾಯದ ಮಂತ್ರಿಗಳಾದ ಮಿ|| ಆರ್. ಎಂ. ದೇಶಮುಖರವರು ತಮ್ಮ ಮಂತ್ರಿತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು. ರಾಜೀನಾಮೆಯ ಪತ್ರದಲ್ಲಿ ಸದ್ಯದ ಸ್ಥಿತಿಯಲ್ಲಿ ಸರಕಾರದ ನೌಕರಿಯನ್ನು ಮಾಡುವದು ಅಸಾಧ್ಯವೆಂದು ಬರೆದಿರುವರು.

ಇಂಡಿಯಾ ಸರಕಾರದ ಎಕ್ಸ್ ಲಾ ಮೆಂಬರರಾದ ಸರ್ ಅಲಿ ಇಮಾಂರವರು ಸಂಪೂರ್ಣ ಕಾಂಗ್ರೆಸ್ ಪಕ್ಷವನ್ನು ವಹಿಸಿರುವರು.

ಸೊಲ್ಲಾಪುರದ ಗಲಭೆಗಳಲ್ಲಿ ಇಬ್ಬರು ಪೋಲೀಸ್ ಕಾನ್ಸ್‌ಟೇಬಲರ ಮರಣಕ್ಕೆ ಕಾರಣರೆಂದು ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದ ಶ್ರೀ ಕಿಸನ್ ಶಾರದಾ, ಜಗನ್ನಾಥ ಶಿಂಧೆ, ಅಬ್ದುಲ್‌ರಸೂಲ್, ಕುರ್ಬಾನ ಹುಸೇನ ಮತ್ತು ಮಲ್ಲಪ್ಪಧನಶೆಟ್ಟಿ ಈ ನಾಲ್ಕು ಜನರು ಮುಂಬಯಿ ಚೀಫ್‌ಜಸ್ಟಿಸ್ ಬ್ಲೂಮೆಂಟ ಮತ್ತು ಜಸ್ಟಿಸ್ ಮಡಗಾಂವಕರ ಇವರ ಮುಂದೆ ಅಪೀಲು ಮಾಡಿಕೊಂಡಿರಲು ನ್ಯಾಯಾಧೀಶರು ಮೊದಲು ಮೂವರನ್ನು ಸಂಪೂರ್ಣ ರುಜುವಾತು ದೊರೆಯಲಿಲ್ಲವೆಂದು ಬಿಡುಗಡೆ ಮಾಡಿ ನಾಲ್ಕನೆಯವರಾದ ಮಲ್ಲಪ್ಪ ಧನಶೆಟ್ಟಿ ಇವರಿಗೆ ಫಾಶೀಶಿಕ್ಷೆಯನ್ನು ಕಾಯಂಮಾಡಿರುತ್ತಾರೆ.

ಮುಂಬಯಿಯ ಹತ್ತಿಬಟ್ಟೆಗಳ ಕೈಗಾರಿಕೆಯು ಅತ್ಯಂತ ವಿಷಮಸ್ಥಿತಿಗೆ ಬಂದಿರುವದು. ಗಿರಣಿಗಳಲ್ಲಿ ಹೆಚ್ಚುಭಾಗದ ಬಟ್ಟೆಬರೆಗಳು ಬಿಕರಿಯಾಗದೆ ನಿಂತುಹೋಗುತ್ತಿರುವದರಿಂದ ಮುಂದಕ್ಕೆ ಕೆಲಸವನ್ನು ನಡೆಯಿಸುವದೇ ಅಸಾಧ್ಯವಾಗುತ್ತಿರುವದು. ಸದ್ಯ ನೂರು ಗಿರಣಿಗಳು ಮುಚ್ಚಲ್ಪಟ್ಟಿರುವವು. ಇನ್ನು ಮೂರು ಗಿರಣಿಗಳು ಆಗಸ್ಟ 1 ನೆಯ ತಾರೀಖಿನಿಂದ ಮುಚ್ಚುವದಾಗಿ ಪ್ರಸಿದ್ಧಪಡಿಸಿರುವವು. ಅಲ್ಲದೆ ಇನ್ನೂ 14 ಗಿರಣಿಗಳು ಮುಚ್ಚುವವೆಂದು ಭಾವಿಸಲ್ಪಟ್ಟಿದೆ. ಇದರಿಂದ 70,000 ಕೂಲಿಯವರಿಗೆ ಕೆಲಸವಿಲ್ಲದೆ ಹೋಗುವದು.

ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಸದ್ಯದ ರಾಜಕೀಯ ಚಳವಳಿಯಿಂದ ಪ್ರಾಪ್ತವಾಗಿರುವ ವಿಷಮಸ್ಥಿತಿಯನ್ನು ನಿಲ್ಲಿಸಲು, ಮಹಾತ್ಮ ಗಾಂಧಿ, ಪಂಡಿತ ಮೋತಿಲಾಲ್‌ನೆಹರು ಮತ್ತು ಪಂಡಿತ ಜವಾಹರಲಾಲ್‌ನೆಹರೂ ಈ ಮೂವರೊಡನೆ ಏಕಾಂತವಾಗಿ ಚರ್ಚಿಸಬಯಸಿದೆಂದು ವೈಸ್ರಾಯರು ಅಪ್ಪಣೆಯನ್ನಿತ್ತಿರುವರು. ಇದಕ್ಕಾಗಿ ಇದರಿಯವರು ಸಿಮ್ಲಾದಿಂದ ಎರವಾಡಾಕ್ಕೆ ಮುಖಂತ್ರರ ದರ್ಶನಕ್ಕೆ ಹೊರಟಿರುವರು.

ಜುಲೈ 14 ನೆಯ ತಾರೀಖಿನ ದಿವಸ ಪಾರ್ಲಿಮೆಂಟಿನ ಹೌಸ್ ಅಫ್ ಕಾಮರ್ನ್ಸಿನಲ್ಲಿ ಮಿ|| ಫೆನ್ನರ್ ಬ್ರಾಕ್ವೆಯವರು ಗಾಂಧಿಟೋಪಿಯನ್ನು ಧರಿಸಿದರು.

ಕಲ್ಕತ್ತೆಯ ಶಾಲೆಗಳ ಮುಂದೆ ವಿದ್ಯಾರ್ಥಿಗಳ ಚಳವಳಿಯು ದಿನದಿನಕ್ಕೆ ಹೆಚ್ಚುತ್ತಿರುವದು. ಜುಲೈ 14 ನೆಯ ತಾ|| ನ ದಿವಸ ಪೋಲೀಸರು ಸತ್ಯಾಗ್ರಹವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ದೊಣ್ಣೆಗಳಿಂದ ಹೊಡೆದು ಚದುರಿಸಿದರು. ಸ್ಕಾಟಿಸ್‌ಚರ್ಚ್ ಕೊಲಿಜಿಯೇಟ್ ಸ್ಕೂಲ್ ಮುಂಭಾಗದಲ್ಲಿ ಸತ್ಯಾಗ್ರಹಿಗಳಿಗೂ ಕೆಲವು ವಿದ್ಯಾರ್ಥಿಗಳಿಗೂ ಕೈಕೈಹತ್ತಿ ಇಬ್ಬರು ಉಪಾಧ್ಯಾಯರಿಗೆ ಏಟುಗಳು ಬಿದ್ದಿರುವವು.

ಲಾಹೋರ್ ಡಿಸ್ಟ್ರಿಕ್ಟಿಗೆ ಸೇರಿದ ಷೇಕ್‌ಪುರದಲ್ಲಿ ಕಂದಾಯದ ಸತ್ಯಾಗ್ರಹವು ಪ್ರಾರಂಭಿಸಲ್ಪಟ್ಟಿರುವದು. ಈ ಸಂಬಂಧದಲ್ಲಿ ಪೋಲೀಸರು "ಗಾಜಿ" ಗ್ರಾಮದಲ್ಲಿ 40 ಜನರನ್ನು ದಸ್ತಗಿರಿ ಮಾಡಿ 4 ರಿಂದ 6 ತಿಂಗಳವರೆಗೆ ಕಠಿಣಸಜೆಯನ್ನು ವಿಧಿಸಿರುವರು. ಅದರಲ್ಲಿ ಇಬ್ಬರು ಗ್ರಾಮಾಧಿಕಾರಿಗಳೂ ಸೇರಿರುವರು.

ಗುಂಟೂರಿನಲ್ಲಿ ಗಾಂಧಿಟೋಪಿಯನ್ನು ಧರಿಸಿದವರನ್ನೆಲ್ಲಾ ಹೊಡೆಯುತ್ತಲೂ, ದಸ್ತಗಿರಿ ಮಾಡುತ್ತಲೂ ಇರುವರು.

ಜುಲೈ 15 ನೆಯ ತಾರೀಖಿನ ದಿವಸ ಕಾಂಚಿಯ ಪೋಲೀಸರು ಕೆಲವು ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡುವ ಸಂದರ್ಭದಲ್ಲಿ ಜನರು ಪೋಲೀಸರಮೇಲೆ ಬಿದ್ದು ಹೊಡೆದದ್ದರಿಂದ ಒಬ್ಬ ಸಬ್ ಇನ್ಸ್‌ಪೆಕ್ಟರ್ ಮತ್ತು ಇಬ್ಬರು ಕಾನ್ಸ್‌ಟೆಬಲರಿಗೆ ಏಟುಗಳು ಬಿದ್ದಿರುವವು.

ಸರದಾರ ವಲ್ಲಭಭಾಯಿ ಪಟೇಲರವರು ಅಹಮದಾಬಾದಿನ ಬಟ್ಟೆಗಳ ವ್ಯಾಪಾರಗಾರರಿಗೆ 16 ನೆಯ ತಾರೀಖಿನೊಳಗಾಗಿ ಪರದೇಶೀವಸ್ತ್ರಗಳ ವ್ಯಾಪಾರವನ್ನು ನಿಲ್ಲಿಸಬೇಕೆಂದು ತಿಳುಹಿಸಿದ್ದರು. ಪಂಕುವಾ ಮತ್ತು ಮಾಸ್ಕರೆ ಮಾರ್ಕೆಟ್ಟಿನ ಮಹಾಜನರೆಲ್ಲರೂ ಅದಕ್ಕೆ ಒಪ್ಪಿ ಪರದೇಶೀವಸ್ತ್ರಗಳ ವ್ಯಾಪಾರವನ್ನು ನಿಲ್ಲಿಸಿದರು. ಇತರರು ಮಾತ್ರ ಅದಕ್ಕೆ ಯಾವ ಗಮನವನ್ನೂ ಕೊಡಲಿಲ್ಲವಾಗಿ ಸ್ವಯಂಸೇವಕರು 16 ನೆಯ ತಾರೀಖಿನ ದಿವಸ ಬಹಿಷ್ಕಾರ ಚಳವಳಿಗೆ ಪ್ರಾರಂಭಿಸಿದರು. ಸತ್ಯಾಗ್ರಹದಲ್ಲಿ ಶ್ರೀಮತಿ ಅಂಬಾಲಾಲ್ ಸಾರಾಭಾಯಿಯವರೇ ಮೊದಲಾದ ಪ್ರಸಿದ್ಧ ಗಿರಣಿ ಮಾಲಿಕರ ಮನೆಯ ಹೆಣ್ಣುಮಕ್ಕಳು ಭಾಗವಹಿಸಿರುವರು.

ಜುಲೈ 16 ನೇ ತಾ|| ನ ದಿವಸ ಕಲ್ಕತ್ತೆಯ ಪೋಲೀಸರು ವಿದ್ಯಾರ್ಥಿಗಳನ್ನು ಪುನಃ ದೊಣ್ಣೆಗಳಿಂದ ಹೊಡೆದು ಅನೇಕ ಹುಡುಗರಿಗೆ ಗಾಯಪಡಿಸಿದರು. 5 ಹುಡುಗರನ್ನು ದಸ್ತಗಿರಿಮಾಡಿರುವರು. ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಗಳು ಇದರಿಂದ ಕುಪಿತರಾಗಿ ಒಟ್ಟಿಗೆ ಕಾಲೇಜನ್ನು ಬಿಟ್ಟುಹೋಗಿರುವರು.

ಮುಂಬಯಿ ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಗಿರಣಿಯವರ ಪ್ರತಿನಿಧಿಯಾದ ಮಿ|| ಶಂಕರಭಾಯಿ ಭಾಲಾಭಾಯಿರವರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವರು.

ಪಶ್ಚಿಮಗೋದಾವರಿ ಡಿಸ್ಟ್ರಿಕ್ಟಿನ ಉಪ್ಪಿನ ಇಲಾಖೆಯಲ್ಲಿ ಸಬ್‌ಇನ್ಸ್‌ಪೆಕ್ಟರಾಗಿದ್ದ ಮಿ|| ಪಿ. ದುರ್ಗಾಪ್ರಸಾದರಾಯರು ತಮ್ಮ ನೌಕರಿಗೆ ರಾಜೀನಾಮೆಯನ್ನು ಕೊಟ್ಟಿರುವರು.

ಮಹಾತ್ಮಾಗಾಂಧಿಯವರ ಶಿಷ್ಯಳಾದ ಮಿಸ್. ಸ್ಲೇಡ್ (ಮೀರಾಬಾಯಿ) ರವರು ಖಾದಿಪ್ರಚಾರಕ್ಕೋಸ್ಕರ ಮುಂಬಯಿ, ಅಲಹಾಬಾದ, ಪಾಟ್ನಾ, ಕಲ್ಕತ್ತಾ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಸಂಚಾರ ಹೊರಡುವರು.

ಕೂಲರ್ ರೆಸಿಡೆಂಟ ಮ್ಯಾಜಿಸ್ಟ್ರೇಟರು ಬಹಿಷ್ಕಾರ ಚಳವಳಿಯ ಅಪರಾಧಕ್ಕಾಗಿ ಲೇಟ ಜಸ್ಟಿಸ್ ಬದ್ರುದ್ದೀನ್ ತಾಯಬ್ಜಿಯವರ ಮಗಳಾದ 65 ವರ್ಷದ ಶ್ರೀಮತಿ ಉಕ್ತಾನಿಯವರಿಗೆ ವಿಧಿಸಿದ 4 ತಿಂಗಳ ಕಠಿಣಸಜೆಯನ್ನು ಮುಂಬಯಿ ಗೌರ್ನರವರು ರದ್ದುಪಡಿಸಿ ಸಾದಾ ಸಜೆಯನ್ನು ವಿಧಿಸಿದುದಲ್ಲದೆ, ಅವರನ್ನು "ಎ" ತರಗತಿಯ ಕೈದಿಯನ್ನಾಗಿ ಪರಿಗಣಿಸಬೇಕೆಂದು ಆಜ್ಞೆಮಾಡಿರುವರು.

ವಿಜಾಪುರದ ಸ್ತ್ರೀ ಚಳವಳಿಗಾರರ ಮುಖಂಡರಾದ ಶ್ರೀಮತಿ ಚಾರುಸುಶೀಲಾದೇವಿಯವರೂ, ವಿಹಾರತ್ತಿನ ಸ್ತ್ರೀ ಸ್ವಯಂಸೇವಕಿಯರ ಕ್ಯಾಪ್ಟನ್ನರಾದ ಶ್ರೀಮತಿ ಊರ್ಮಿಳಾದೇವಿಯವರೂ ದಸ್ತಗಿರಿಮಾಡಲ್ಪಟ್ಟಿರುವರು.

ರಾಷ್ಟ್ರೀಯ ಸಭೆಯ ಆಕ್ಟಿಂಗ್ ಪ್ರೆಸಿಡೆಂಟರಾದ ಸರದಾರ್ ವಲ್ಲಭಭಾಯಿ ಪಟೇಲ್‌ರವರು ಪಂಡಿತ ಜವಾಹರಲಾಲ್ ನೆಹರೂರವರ ಪತ್ನಿ ಶ್ರೀಮತಿ ಕಮಲಾನೆಹರೂರವರನ್ನು ಕಾಂಗ್ರೆಸ್ ವರ್ಕಿಂಗ್‌ಕಮಿಟಿಯ ಮೆಂಬರರನ್ನಾಗಿ ಚುನಾಯಿಸಿಕೊಂಡಿರುತ್ತಾರೆ.

ಕಳೆದವಾರ ಈ ಕೆಳಗಿ ಕಂಡಂತೆ 750 ಜನ ಸತ್ಯಾಗ್ರಹಿಗಳು ದಸ್ತಗಿರಿಮಾಡಲ್ಪಟ್ಟಿರುವರು.

ದೆಹಲಿ 114, ಕಲ್ಕತ್ತ 102, ಪಿಶಾವರ್ 102, ಲಾಹೋರ್ 77, ಮುಂಬಯಿ 69, ಮಧುರೆ 34, ಇಯೋಟ್‌ಮಲ್ 29, ಪ್ರಸಾದ 25, ಅಹಮದಾಬಾದ 20, ಗುಡಿವಾಡ 19, ಗುಂಟೂರು 19, ನೆಲ್ಲೂರು 15, ದೇಪಳ್ಳಿ 14, ಮೈಮನ್‌ಸಿಂಗ್ 14, ಎಲ್ಲೂರು 11, ಅಲಹಾಬಾದ್ 10, ರಾಜಮಹೇಂದ್ರಂ 10, ಬಹರಾಂಪೂರ 6, ಕಣಿಗಿರಿ 6, ಸಿಮ್ಲಾ 5, ಪಾಯನೂರು 5, ತಿರುಚನಾಪಳ್ಳಿ 2, ಕೊಯಮತ್ತೂರು 2, ಕಡಲೂರು 1, ಹೈದರಾಬಾದ(ಸಿಂಧ್) 1, ಮಿರ್ಜಾಪುರ 1, ಚಿತಗಾಂಗ್ 1, ಜುಮ್ಲಾ 750.

ವಿಜಾಪುರದಲ್ಲಿ ಐದುಜನ ಸ್ವಯಂಸೇವಕರಿಗೆ ಶಿಕ್ಷೆ.

ತಾ|| 14-7-30 ನೇ ದಿವಸ 2 ಘಂಟೆಗೆ ಮೆ|| ಮಾಮಲೇದಾರ ಸಾಹೇಬ ತಾಲೂಕ ವಿಜಾಪುರ ಇವರ ಕೋರ್ಟಿನ ಮುಂದೆ ಖಟ್ಲೆಯ ವಿಚಾರಣೆಯು ನಡೆಯಿತು. ಅನೇಕ ಜನರು ನೋಡಲಿಕ್ಕೆ ನೆರೆದಿದ್ದರು. ಮೊದಲಿಗೆ 1. ಬಾಲಪ್ಪ 2. ಪೊಂಕಸೆ 3. ನಿಕಮ ಈ ಮೂವರು ಆರೋಪಿಗಳು ಹಾಜರಾದರು. 4. ದೇಶಪಾಂಡೆ. 5. ವೆಂಕಟರಾಮಯ್ಯ ಇವರು ಹಾಜರಿದ್ದಿದ್ದಿಲ್ಲ. ಆದರೂ ಆ ಮೂವರ ಸಂಬಂಧವಾಗಿ ಖಟ್ಲೆಯ ವಿಚಾರಣೆಯು ನಡೆಯಿತು. ಮೊದಲಿಗೆ ಮಾಮಲೇದಾರ ಸಾಹೇಬರು ನೀವು ಇದೇ ತಿಂಗಳ 1 ನೇ ತಾ|| ನ ದಿವಸ 5, 7 ನೇ ತಾ|| ನ ದಿವಸ 12, ಮತ್ತು 8 ನೇ ತಾ|| ನ ದಿವಸ 5 ಸರಕಾರಿ ಸಿಂದಿಗಿಡಗಳನ್ನು ಕಡಿದಿರೆಂಬ ಬಗ್ಗೆ ಇ. ಪಿ. ಕೋಡ 426 ಕಲಮಿನ ಪ್ರಕಾರ ನಿಮ್ಮ ಮೇಲೆ ಆರೋಪವಿರುವದೆಂದು ಹೇಳಿದರು. ಆರೋಪಿಗಳ ಜವಾಬು ಕೆಳಗೆ ಕೊಟ್ಟಿರುವದು.

1. ಬಾಲಪ್ಪ—ನನ್ನ ಹೆಸರು ಸತ್ಯಾಗ್ರಹಿ, ತಂದೆಯ ಹೆಸರು ಅಜ್ಞಾ, ನೂಲುತೆಗೆಯುವುದೇ ನನ್ನ ಉದ್ಯೋಗ, ಇರುವುದು ಸದ್ಯಕ್ಕೆ ವಿಜಾಪುರ, ನಾವು ಸರಕಾರಿ ಗಿಡಗಳನ್ನು ಕಡಿದಿಲ್ಲ. ಇದಕ್ಕಿಂತಲೂ ಹೆಚ್ಚಿಗೇನೂ ಹೇಳುವುದಿಲ್ಲ ಎಂದು ಹೇಳಿದರು.

2. ಪೊಂಕಸೆ—ನನ್ನ ಹೆಸರು ತಕಲಿ, ತಂದೆಯ ಹೆಸರು ಚರಕಾ, ಸತ್ಯಾಗ್ರಹವೇ ನನ್ನ ಉದ್ಯೋಗ, ಈಗ್ಗೆ ಇರುವದು ವಿಜಾಪುರ, ನಾವು ಸರಕಾರಿ ಗಿಡ ಕಡಿದಿಲ್ಲ. ಹೆಚ್ಚಿಗೇನೂ ಹೇಳುವದಿಲ್ಲ ಎಂದು ಹೇಳಿದರು.

3. ವಿಠೋಬಾ—ನನ್ನ ಹೆಸರು ವಿಠೋಬಾ ತಂದೆಯ ಹೆಸರು ಲಕ್ಷ್ಮಣ ಅಡ್ಡಹೆಸರು ನಿಕಮ ನನ್ನ ಉದ್ಯೋಗ ಸಿಂದಿಗಿಡ ಕಡಿಯುವ ವ್ಯವಹಾರ, ಇರುವದು ವಿಜಾಪುರ, ನಾನು 1 ನೇ ತಾರೀಖಿನ ದಿವಸ ಸಿಂದಿಗಿಡ ಕಡಿಯುವ ಸ್ಥಲದಲ್ಲಿ ಹಾಜರಿದ್ದೆ. ಸರಕಾರಿ ಗಿಡ ಕಡಿದಿಲ್ಲ. ಉಳಿದ ಎರಡು ದಿವಸ ನಾನು ಅಲ್ಲಿ ಹಾಜರಿಲ್ಲ. ಇದಕನ್ನಾ ಹೆಚ್ಚಿಗೇನೂ ಹೇಳುವುದಿಲ್ಲ ಎಂದು ಹೇಳಿದರು.

ಉಪ್ಪಿನ ತೆರಿಗೆಯ ವಿಮರ್ಶೆ.

(ಜುಲೈ 16 ನೆಯ ತಾ|| ನ 'ಹಿಂದೂ' ಪತ್ರಿಕೆಯಿಂದ)

ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ ನೂತನವೂ ಲೋಕಪ್ರಸಿದ್ಧವೂ ಆಗಿರುವ ಉಪ್ಪಿನ ಸತ್ಯಾಗ್ರಹ ಚಳವಳಿಯು ಭಾರತೀಯರು ಮತ್ತು ಭರತಖಂಡವನ್ನಷ್ಟೇ ಅಲ್ಲ! ನಾಗರೀಕ ಪ್ರಪಂಚದ ಮನಸ್ಸನ್ನೆಲ್ಲ ತನ್ನ ಕಡೆಗೆ ಸೆಳೆದಿರುವ ಈ ಸಂದರ್ಭದಲ್ಲಿ ಮಿ|| ಜಾರ್ಜ ಕಾಸರ್‌ರವರು 1853 ನೆಯ ಇಸವಿಯಲ್ಲಿ ಲಂಡನ್ನಿನಲ್ಲಿ ಬರೆದು ಪ್ರಸಿದ್ಧಪಡಿಸಿರುವ "ಭರತಖಂಡದ ಮೂರು ಆಧಿಪತ್ಯಗಳು" ಎಂಬ ಪುಸ್ತಕದಿಂದ ಉಪ್ಪಿನ ತೆರಿಗೆಯ ವಿಷಯವಾದ ಕೆಲವು ವಿಷಯಗಳನ್ನು ಎತ್ತಿ ಬರೆಯಲಪೇಕ್ಷಿಸುತ್ತೇನೆ. ಸದರೀ ಪುಸ್ತಕದ 286 ಮತ್ತು 287 ನೆಯ ಪುಟಗಳಲ್ಲಿ ಅವರು ಈ ರೀತಿಯಾಗಿ ಬರೆದಿರುವರು.

"ಈಗ ನಾನು ಮಾನವನಿಂದ ವಿಧಿಸಲ್ಪಟ್ಟಿರುವ ತೆರಿಗೆಗಳಲ್ಲಿ ಅತ್ಯಂತ ಅನ್ಯಾಯವೂ, ಅರಾಜಕೀಯವೂ ಆದ ಉಪ್ಪಿನತೆರಿಗೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವೆನು. ಭರತಖಂಡದ ಹವೆಯಲ್ಲಿ ಸಸ್ಯಾಹಾರದಿಂದ ಜೀವಿಸುವ ಅಲ್ಲಿಯ ನಿವಾಸಿಗಳು ಆರೋಗ್ಯದಿಂದಿರಬೇಕಾದರೆ ಉಪ್ಪನ್ನು ವಿಶೇಷ ಉಪಯೋಗಿಸಬೇಕು. ಆದರೆ ಆ ಉಪ್ಪಿಗೆ 82 ಪೌಂಡುಗಳ ಮಣ 1 ಕ್ಕೆ ಸುಮಾರು 3 ರೂ. 8 ಆಣೆಗಳಂತೆ ತೆರಿಗೆಯು ಹಾಕಲ್ಪಟ್ಟಿರುವದು. ಈ ತೆರಿಗೆಯು ಕಲ್ಕತ್ತಾದಲ್ಲಿ ಉಪ್ಪಿನ ಅಸಲು ಖರೀದಿಯ 400 ರಷ್ಟು ಆಗುವದು. ಇದರ ಜೊತೆಗೆ ದೊಡ್ಡ ವ್ಯಾಪಾರಿಗಳ ಮತ್ತು ಚಿಲ್ಲರೆ ವ್ಯಾಪಾರಿಗಳ ಲಾಭ, ಸಾಗಿಸುವ ಖರ್ಚು, ಹಾಗೂ ಇತರ ದಳ್ಳಾಳಿಗಳ ಲಾಭ, ಸುಂಕ ಮೊದಲಾದ ಖರ್ಚುಗಳನ್ನೆಲ್ಲ ಸೇರಿಸಿದರೆ, ಉಪಯೋಗಿಸುವ ಜನರ ಕೈಯನ್ನು ಸೇರುವ ವೇಳೆಗೆ ಅದರ ಖರೀದಿಯು ಅಸಲು ಖರೀದಿಯ ಸುಮಾರು 1000 ದಷ್ಟು ಆಗುವದು. ಈ ಪದಾರ್ಥವು ಪಟ್ಟಣಗಳಲ್ಲಿ ವಾಸಮಾಡುವ ಶ್ರೀಮಂತರಿಗಿಂತಲೂ ಹಳ್ಳಿಗಳಲ್ಲಿ ವಾಸಮಾಡುವ ಬಡಜನರಿಗೆ ಹೆಚ್ಚು ಅವಶ್ಯಕವಾಗಿರುತ್ತವೆ. ಏಕೆಂದರೆ ಶ್ರೀಮಂತರಿಗೆ ಪಟ್ಟಣಗಳಲ್ಲಿ ಊಟಕ್ಕೆ ಇತರ ಅನೇಕ ಪದಾರ್ಥಗಳು ದೊರೆಯುವವು. ಅಲ್ಲದೆ ಬಡವರ ಮತ್ತು ಶ್ರೀಮಂತರ ಊಟದ ಪದಾರ್ಥಗಳಲ್ಲಿ ಅನೇಕ ವ್ಯತ್ಯಾಸವಿರುವದರಿಂದ ಶ್ರೀಮಂತರಿಗೆ ಬಡವರಷ್ಟು ಉಪ್ಪಿನ ಅವಶ್ಯಕತೆಯಿರುವದಿಲ್ಲ.

ಹೀಗೆ ಮಿತಿಮೀರಿದ ಖರೀದಿಯೊಂದೇ ಅಲ್ಲದೆ ಬಡಜನರಿಗೆ ಮಾಡಿರುವ ಅನ್ಯಾಯಗಳು ಇನ್ನೂ ಅನೇಕಗಳಾಗಿರುವವು. ಉಪ್ಪಿನ ತೂಕವನ್ನು ಹೆಚ್ಚಿಸಲು ಪ್ರತಿಯೊಬ್ಬ ವ್ಯಾಪಾರಿಯೂ ಸ್ವಲ್ಪ ಸ್ವಲ್ಪ ಮರಳನ್ನು ಸೇರಿಸುವನು. ಕಲ್ಕತ್ತೆಯಲ್ಲಿರುವ ಮೊದಲನೆಯ ವ್ಯಾಪಾರಿಯು ಶೇಕಡಾ 10 ಪಾಲಿನಷ್ಟು ಮರಳನ್ನು ಬೆರೆಸುವನು; ಅನಂತರ ವರ್ತಕರಿಗೆ ಉಪ್ಪನ್ನು ಒದಗಿಸಿಕೊಡುವ ಏಜೆಂಟನು ತಾನೂ ಶೇಕಡಾ 10 ಪಾಲಿನಷ್ಟು ಮರಳನ್ನು ಬೆರೆಸುವನು. ಮೂರನೆಯ ವ್ಯಾಪಾರಿಯು ಮೊದಲನೆ ಎರಡನೆಯವನಂತೆ ತಾನೂ ಸ್ವಲ್ಪ ಮರಳನ್ನು ಬೆರೆಸುವನು; ಹೀಗಾಗಿ ಕಡೆಗೆ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವ ವೇಳೆಗೆ ಉಪ್ಪೆಲ್ಲವೂ ಕಪ್ಪಾಗಿ ಅರ್ಧ ಮರ್ಧ ಮಣ್ಣಿನಿಂದ ಕೂಡಿ, ಅದರ ಸ್ವಾಭಾವಿಕ ರುಚಿಯೂ ಬಹಳಮಟ್ಟಿಗೆ ಕಡಿಮೆಯಾಗಿ ಹೋಗಿರುವದು. ಈ ಮೋಸಪರಂಪರೆಗಳು ಅತ್ಯಂತ ಸಿಸ್ತಿನಿಂದ ನಡೆಯುವವು. ಆದುದರಿಂದ ಯಾವನಾದರೊಬ್ಬ ಸತ್ಯವಂತನಾದ ವರ್ತಕನು ಇತರರಿಗಿಂತ ಸ್ವಚ್ಛವಾದ ಉಪ್ಪನ್ನು ಮಾರಲೆತ್ನಿಸಿದರೆ ವರ್ತಕರೆಲ್ಲರೂ ಅವನಮೇಲೆ ತಿರುಗಿನಿಂತು ದೇಶೀಯ ಪೋಲೀಸರ ಸಹಾಯದಿಂದ ಅವನ ಸರ್ವನಾಶಕ್ಕೇ ಉದ್ಯುಕ್ತರಾಗುವರು.

ಇದರಿಂದ ಅಪಾರ ಆದಾಯವಿರುವದರಿಂದ ಅದನ್ನು ಬಿಟ್ಟುಬಿಡುವದಕ್ಕೆ ಸಾಧ್ಯವಿಲ್ಲವೆಂಬುದೇ ಈ ತೆರಿಗೆಯನ್ನು ಹಾಕಿರುವದಕ್ಕೆ ಸಬೂಬಾಗಿರುವದು. ದುಷ್ಟ ತೆರಿಗೆಗಳನ್ನು ಹಾಕುವ ಪ್ರಪಂಚದ ಎಲ್ಲಾ ಸರಕಾರಗಳೂ ಅನೇಕ ಶತಮಾನಗಳಿಂದಲೂ ಇದೇ ಮಾತುಗಳನ್ನು ಹೇಳುತ್ತಿರುವವು. ಘನಸೊಂದಿದ ಕಂಪೆನಿಯು ನೌಕರರ ಅಪಾರ ಸಂಬಳಗಳನ್ನು ನೋಡಿದರೆ ಈ ತೆರಿಗೆಯನ್ನು ತೆಗೆದುಹಾಕುವದು ಅಸಾಧ್ಯವೆಂದು ಚೆನ್ನಾಗಿ ವ್ಯಕ್ತವಾಗುವದು. ಪ್ರಾರಂಭದಲ್ಲಿ 15,00,000 ರೂ. ಗಳು ಮಾತ್ರ ಉತ್ಪತ್ತಿಯಾಗುತ್ತಿದ್ದ ಈ ತೆರಿಗೆಯಿಂದ ಸದ್ಯಃ 4,87,50,000 ರೂ. ಗಳು ಉತ್ಪತ್ತಿಯಾಗುತ್ತಿರುವವು. ಹೆಸರಿಗೆ ಮಾತ್ರ ಕೆಲಸವುಳ್ಳ ಕಮ್ಯಾಂಡರ್-ಇನ್-ಚೀಫರುಗಳು ಕೆಲವು ವರ್ಷಗಳಲ್ಲಿಯೇ 7-8 ಲಕ್ಷ ರೂಪಾಯಿಗಳವರೆಗೆ ಗಳಿಸುವರು. ಇನ್ನು ಭಾರತೀಯ ಅಧಿಕಾರಿಗಳ ಸಂಬಳಗಳಾದರೂ ನಾಗರೀಕತೆಯಿಂದ ಕೂಡಿ ಅಭಿವೃದ್ಧಿ ಹೊಂದುತ್ತಿರುವ ಯಾವ ರಾಜ್ಯದಲ್ಲಿ ಕೊಡುವದಕ್ಕಿಂತಲೂ ಅನೇಕ ಪಾಲು ಹೆಚ್ಚಾಗಿರುವದು. ಮೇಲಾಗಿ ಹೋಂ ಗವರ್ನಮೆಂಟಿನ (ಇಂಗ್ಲಂಡಿನ ಸರಕಾರ) ಬೂಟಾಟಿಕೆಯ ಆಟವಂತೂ ಮಿತಿಮೀರಿದ ವೆಚ್ಚದಿಂದ ನಡೆಯುತ್ತಲೇ ಇರುವದು. ಆಂದಮೇಲೆ ಉಪ್ಪಿನ ತೆರಿಗೆಯು ಎಷ್ಟೇ ಅನ್ಯಾಯವಾದುದಾದರೂ, ದೇಶದ ಕೈಗಾರಿಕೆಯು ಎಷ್ಟೇ ನಾಶಹೊಂದುತ್ತಿದ್ದರೂ ಅದನ್ನು ತೆಗೆದುಹಾಕುವದು ಅಸಾಧ್ಯವಾಗಿ ಪರಿಣಮಿಸಿರುವದು.

ಇನ್ನು ಇದರ ಫಲವಾಗಿ ಜನರು ಅನುಭವಿಸುತ್ತಿರುವ ಕಷ್ಟಗಳು, ಉಪ್ಪಿನ ಅಧಿಕಾರಿಗಳ ದಬ್ಬಾಳಿಕೆ, ನಿರ್ದಯತ್ವ ಮತ್ತು ಮೋಸಗಳ ವಿಷಯವನ್ನು ವರ್ಣಿಸುತ್ತಾ ಹೋಗುವುದಾದರೆ, ಈ ಗ್ರಂಥವನ್ನು ಬರೆಯುವ ನನ್ನ ಉದ್ದೇಶವನ್ನು ಮೀರಿವರ್ತಿಸಿದಂತಾಗುವದು. ಅಲ್ಪಸ್ವಲ್ಪವಾದ ಅಧಿಕಾರಬಲದಿಂದ ಕೂಡಿದ ಜನರು ದೇಶದ ಬಡವರ ವಿಷಯದಲ್ಲಿ ಎಷ್ಟು ನಿರ್ದಯತನದಿಂದ ವರ್ತಿಸುವರೆಂಬ ವಿಷಯದಲ್ಲಿ ಸಾಕಾದಷ್ಟು ಹೇಳಿರುವೆನು. ಈ ಮೋಸಪರಂಪರೆಗಳು ನಾನಾಮಾರ್ಗಗಳಲ್ಲಿ ಬೆಳೆದು ಹೋಗಿರುವವು. ಉಪ್ಪಿನ ಇಲಾಖೆಯಲ್ಲಿ ಅತ್ಯಂತ ಕಡೆಯ ದರ್ಜೆಯ ನೌಕರಿಯನ್ನು ಸಂಪಾದಿಸಲು ದೇಶೀಯರು ಯುರೋಪಿಯನ್ ಅಧಿಕಾರಿಗಳಿಗೆ ಭಾರೀ ಲಂಚವನ್ನು ಕೊಡುವದೇ ಇದಕ್ಕೆ ಒಳ್ಳೇ ನಿದರ್ಶನವಾಗಿರುವದು. 35 ರೂಪಾಯಿಗಳ ಸಂಬಳ ದೊರೆಯುವ ನೌಕರಿಗಳನ್ನು 500 ರೂ. ಗಳ ಲಂಚವನ್ನು ಕೊಟ್ಟವರಿಗೆ ಕೊಟ್ಟಿರುವರು. ಅಂದರೆ ಆ ನೌಕರಿಗೆ ಬಂದವನು ಅದರಿಂದ ಸ್ವಂತಕ್ಕೆ 500 ರೂ. ಗಳ ಹೆಚ್ಚಿನ ಲಾಭಸಂಪಾದಿಸುವದರಲ್ಲಿ ಆಶ್ಚರ್ಯವೇನೂ ಇಲ್ಲ.

ಇವುಗಳೆಲ್ಲವೂ ನಮಗೆ ನಾಚಿಕೆಯನ್ನುಂಟುಮಾಡುತ್ತಿರುವವು. ಅನೇಕಶತಮಾನಗಳಿಂದಲೂ ಸ್ವಾತಂತ್ರ್ಯದ ಉಪದೇಶಕರೆಂದೂ, ಈ ಭೂಮಂಡಲದ ನಾನಾರಾಜ್ಯಗಳಲ್ಲಿ ರಾಷ್ಟ್ರೀಯ ತತ್ವಗಳಿಗೆ ಮಾದರಿಯಾದವರೆಂದೂ ಹೇಳಿಕೊಳ್ಳುತ್ತಿರುವ ನಾವು ಇಂದಿನವರೆಗೂ ಈ ಅಸಹ್ಯಕರಗಳಾದ ಮೋಸಕೃತ್ಯಗಳಿಗೆ ಅವಕಾಶಕೊಟ್ಟಿರುವದನ್ನು ನೆನೆಸಿಕೊಂಡರೆ ಅಭಿಮಾನಪೂರ್ಣನಾದ ಯಾವ ಆಂಗ್ಲೇಯನಾದರೂ ನಾಚಿಕೆಯಿಂದ ತಲೆ ಬಗ್ಗಿಸದಿರನು."

ಆರ್. ಮಾಧವರಾವ್, ಬಿ.ಎ., ಬಿ.ಎಲ್.
ಕುಂಭಕೋಣಂ, ಜುಲೈ 12.

ನಿದ್ರೆ.

ಆರೋಗ್ಯಶಾಲಿಯಾದ ಮನುಷ್ಯನು ತನ್ನ ಜೀವಮಾನದಲ್ಲಿ ಮೂರನೆಯ ಒಂದು ಭಾಗವನ್ನು ನಿದ್ರೆಯಲ್ಲಿ ಕಳೆಯುವನು ಪ್ರಕೃತಿನಿಯಮಕ್ಕನುಗುಣವಾಗಿ, ಒಂದು ದಿವಸದ ಇಪ್ಪತ್ತು ನಾಲ್ಕು ಗಂಟೆಗಳಲ್ಲಿ ಎಂಟು ಗಂಟೆಗಳ ಕಾಲವು ನಿದ್ರೆಗಾಗಿ ವಿನಿಯೋಗವಾಗಬೇಕು. ನಿದ್ರೆಯ ಪ್ರಾಮುಖ್ಯವನ್ನು ಸೂಚಿಸಲು ಈ ಒಂದು ವಿಷಯವೇ ಸಾಕಾಗಿದೆ. ಊಟ, ವ್ಯಾಯಾಮ ಮುಂತಾದ ನಮ್ಮ ದಿನಚರ್ಯೆಯ ಕೆಲಸಗಳೆಲ್ಲವನ್ನೂ ಹದಿನಾರು ಗಂಟೆಗಳ ಕಾಲದೊಳಗಾಗಿ ಮಾಡಿ, ಮಿಕ್ಕ ಎಂಟು ಗಂಟೆಗಳ ಕಾಲವನ್ನು ದೇಹಕ್ಕೂ ಬುದ್ಧಿಗೂ, ವಿಶ್ರಾಂತಿ ಕೊಡಲು ಉಪಯೋಗಿಸಬೇಕು.

ಚಟುವಟಿಕೆಯಿಂದ ಕೆಲಸ ಮಾಡುವವನ್ನು ನಿದ್ರೆ ಬರುವುದಕ್ಕಾಗಿ ಕಷ್ಟಪಡಬೇಕಾದುದಿಲ್ಲ. ಚೆನ್ನಾಗಿ ನಿದ್ರೆ ಬರಲು ಸಹಕಾರಿಗಳಾದ ಕೆಲವು ಕಾರಣಗಳನ್ನು ಈ ಕೆಳಗೆ ಕೊಟ್ಟಿದೆ.

(1) ಮಲಗುವುದಕ್ಕೆ ಮುಂಚೆ ಬಯಲಿನಲ್ಲಿ ಸಂಚರಿಸುವುದರಿಂದ ಜಾಗ್ರತೆಯನಾಗಿಯೂ, ಸುಖವಾಗಿಯೂ ನಿದ್ರೆ ಬರುವುದು.

(2) ಮಲಗಿದಾಗ ನಿದ್ರೆಯಿಂದ ಅಧಿಕಪ್ರಯೋಜನವನ್ನು ಪಡೆಯಬೇಕಾದರೆ, ಕೈಕಾಲುಗಳೆಲ್ಲವನ್ನೂ ಧಾರಾಳವಾಗಿ ನೀಡಿ ಮಲಗಬೇಕು.

(3) ಮಲಗುವುದಕ್ಕೆ ಹೋಗುವಾಗ ಮೈಮೇಲಿನ ಉಡುಪುಗಳ ಜೊತೆ, ಬೇರೆ ಯಾವುದೂ ಎಂದರೆ ಚಿಂತೆ, ಆಯಾಸ ಮುಂತಾದುವೊಂದೂ ಮನಸ್ಸಿನಲ್ಲಿರಲು ಅವಕಾಶಕೊಡಬಾರದು. ವಿಶ್ರಾಂತಿಗೂ, ಚಿಂತೆಗೂ ಪರಸ್ಪರ ಸಂಬಂಧವೇ ಇಲ್ಲ. ಇವೆರಡೂ ಕೇವಲ ವಿರುದ್ಧಸ್ವಭಾವವುಳ್ಳವು.

(4) ರಾತ್ರಿ ಹೊದ್ದುಕೊಂಡು ಮಲಗುವುದೆಂದರೆ ಹೊದಿಕೆಯು ದಪ್ಪನಾಗಿಯೂ, ಭಾರವಾಗಿಯೂ ಇರಬೇಕೆಂದಲ್ಲ. ಹಗುರವಾದ ಉಣ್ಣೆಯ ಬಟ್ಟೆಯನ್ನು ಹೊದ್ದುಕೊಂಡು ಮಲಗಿದರೆ, ನಮ್ಮ ಆಯಾಸವೆಲ್ಲವೂ ಚೆನ್ನಾಗಿ ನೀಗಿ, ಒಳ್ಳೆಯ ವಿಶ್ರಾಂತಿಸುಖವು ಲಭಿಸುವುದು.

(5) ನಿದ್ರೆಗೆ ಯಾವಾಗಲೂ ಗಾಳಿಯು ಧಾರಾಳವಾಗಿ ಬೀಸುತ್ತಿರಬೇಕು. ಮನೆಯೊಳಗೆ ಶೀತವಾಗದಂತೆ ಯಾವಾಗಲೂ ಕಿಟಿಕಿಯೊಂದನ್ನು ಚೆನ್ನಾಗಿ ತೆರೆದಿಟ್ಟು ಆ ಕೊಠಡಿಯಲ್ಲಿ ಮಲಗಿದರೆ ಸುಖವಾಗಿ ನಿದ್ರೆಯು ಬರುವುದು.

(6) ಮಲಗುವುದಕ್ಕೆ ಸ್ವಲ್ಪ ಮುಂಚೆ ಊಟಮಾಡುವುದು ಬಹಳ ಕೆಟ್ಟ ಪದ್ಧತಿ. ಹಾಗೆ ಊಟಮಾಡುವುದರಿಂದ, ಜೀರ್ಣಾವಯವಗಳಿಗೆ ವಿಶ್ರಾಂತಿಸುಖವು ಲಭಿಸದೆ ಹೋಗುವುದು.

(7) ನಮ್ಮ ಶರೀರದ ನೆಲೆಯು ನಾವು ಮಲಗುವ ರೀತಿಯನ್ನನುಸರಿಸುವುದು. ಫಿಲಿಪ್‌ಲೂಯಿಸ್‌ರವರು ದೇಹದ ನೆಲೆಯನ್ನು ಕುರಿತು ಹೇಳಿರುವ ಹತ್ತು ವಿಧಿಗಳಲ್ಲಿ, ಮೈ ಕೈಕಾಲುಗಳನ್ನು ನೀಡಿಕೊಂಡು ಅಂಗತ್ತನಾಗಿ ಮಲಗಬೇಕೆಂಬುದೊಂದಾಗಿದೆ.

ಜೀವಿತಕಾಲದಲ್ಲಿ ಮೂರನೆಯ ಒಂದು ಭಾಗವು ನಿದ್ರೆಗಾಗಿ ವಿನಿಯೋಗವಾಗಬೇಕೆಂದಿರುವುದರಿಂದ, ಅಷ್ಟು ಕಾಲವೂ ನಮ್ಮ ದೇಹದ ನೆಲೆಗಾಗಿಯೇ ನಮ್ಮ ಮೂರನೆಯ ಒಂದುಭಾಗ ಶಕ್ತಿಯು ವಿನಿಯೋಗವಾಗಬೇಕೆಂಬುದು ಸ್ಪಷ್ಟವು.

ಆರೋಗ್ಯಚಂದ್ರಿಕೆ.

ಸಚಿತ್ರ ರೇಣುಕವಿಜಯ.

ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಭೂಮಂಡಲದಲ್ಲಿ ಅವತರಿಸಿ ೧೪೦೦ ವರ್ಷಗಳ ವರೆಗೆ ಇದ್ದು, ಅನೇಕಾನೇಕಾದ್ಭುತ ಲೀಲೆಗಳನ್ನು ಮಾಡಿ ಜಗದುದ್ಧಾರಮಾಡಿರುವ ವಿಷಯವು ಸುಪ್ರಸಿದ್ಧವೇ ಅದೆ. ಈ ಮಹನೀಯರು ಮಾಡಿರುವ ಯಾವತ್ತು ಲೀಲೆಗಳ ನಿಜಸ್ವರೂಪವನ್ನು ತೋರಿಸುವ ಗ್ರಂಥಗಳು ಈ ಹೊತ್ತಿನ ವರೆಗೆ ಎಲ್ಲಿಯೂ ಮುದ್ರಿಸಲ್ಪಡದಿರುವದು ವೀರಶೈವ ಮತಕ್ಕೆ ಒಂದು ತರದ ಕಲಂಕವೆಂದೇ ಹೇಳಬೇಕಾಗಿದೆ. ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಪೂರ್ವಾಚಾರ್ಯರು ಬರೆದ ರೇಣುಕವಿಜಯ ಗ್ರಂಥವನ್ನೇ ಚಿಕ್ಕಮಕ್ಕಳು ಸಹ ಓದಿ ತಿಳಿದುಕೊಳ್ಳುವಂತೆ ಕನ್ನಡದಲ್ಲಿ ವಚನರೂಪವಾಗಿ ಪರಿವರ್ತಿಸಿದ್ದಾಗಿದೆ. ಈ ಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರ ಯಾವತ್ತು ಲೀಲೆಗಳು ವಿಶದವಾಗಿ ವರ್ಣಿಸಲ್ಪಟ್ಟಿರುವವಲ್ಲದೆ, ಆಯಾ ಕಥಾಸಂದರ್ಭಾನುಸಾರವಾಗಿ ಅಲ್ಲಲ್ಲಿ ಆಚಾರ್ಯರ ಲೀಲಾಬೋಧಕಗಳಾದ ಅತ್ಯಂತ ಸುಂದರ ಭಾವಚಿತ್ರ (ಫೋಟೋ) ಗಳು ಜೋಡಿಸಲ್ಪಟ್ಟಿವೆ. ಒಟ್ಟಿಗೆ ಈ ಗ್ರಂಥದಲ್ಲಿ ೧೩ ಭಾವ[illegible]ಳಿವೆ. ಈ ಗ್ರಂಥದ ಮನೋಹರತ್ವವನ್ನು ಎಷ್ಟು ವರ್ಣಿಸಿದರೂ ಅಲ್ಪವೇ ಎಂದು ಹೇಳಬಹುದು. ಈ [illegible] ಪೀಠಿಕೆಯಲ್ಲಿ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸಿದ ವಿಷಯ[illegible]ಪೂರ್ವದಲ್ಲಿ ಆ ಪೀಠದವರು ಬರೆದ ಹಾಗೂ ಅನ್ಯರು ಬರೆದ ಅನೇಕ ಗ್ರಂಥಾಧಾರಗಳಿಂದ ಸಪ್ರಮಾಣವಾ[illegible]ಪ್ರತಿಪಾದಿಸಲ್ಪಟ್ಟಿದೆ. ಇಂತಹ ಅನೇಕಾನೇಕ ಮಹತ್ವ ವಿಷಯಗಳಿಂದೊಡಗೂಡಿದ ಈ ಸರ್ವೋತ್ತಮ ಗ್ರಂಥವನ್ನು ವೀರಶೈವಮತದ ಪ್ರತಿಯೊಬ್ಬ ಶ್ರೀಮಂತರೂ, ಧೀಮಂತರೂ, ಅಧಿಕಾರಿಗಳೂ, ವಿದ್ಯಾರ್ಥಿಗಳೂ, ವ್ಯಾಪಾರಿಗಳೂ, ಬಾಲಕರೂ, ಸ್ತ್ರೀಯರೂ ಪ್ರತಿಯೊಬ್ಬರೂ ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಬೆಲೆ ೧ ರೂಪಾಯಿ. ಮುಂಗಡವಾಗಿ ಹಣಕಳುಹಿಸುವವರು ಪೋಸ್ಟ್ ಖರ್ಚಿಗಾಗಿ ೪ ಆಣೆ ಸೇರಿಸಿ ೧ ರೂ. ೪ ಆಣೆ ಕಳುಹಿಸಬೇಕು.

ಮ್ಯಾನೇಜರ್.
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ.ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂತಾದಿ ಹಾಗೂ ಧನ್ವಂತರಿ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರಸವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹವಾತೆಯು—೧ ಶೀಶೆಗೆ ೧೨ ಆಣೆ (೫೬.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು. [63]

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭಕ್ತವೃಂದದಲ್ಲಿ ಪ್ರತಿಯೊಬ್ಬ ಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಖರ್ಚು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನವಾದ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೋಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಶೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[14] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ?

ಕಂಗೆಡಬೇಡಾ ! ಮರುಗಬೇಡಾ !! ಗುಣದ ಮದ್ದು ಯಾವದೆಂದು ನೋಡಾ !!!

ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ ? ಇಗೋ ? "**ಮಲೇರಿಯಾನ**" ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅನೇಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ ? ಕಂಪೆನಿಯ ಸಿದ್ಧ "**ಪುಲ್ಸಭೂಜ**" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಪಡಿಸಿಕೊಳ್ಳುವ ಇಚ್ಛೆ ಉಂಟಾ ? ಕಂಪೆನಿಯ ಸಿದ್ಧ "**ಸೆಬೀನ ಸೆಪೀಯ**" ಮತ್ತು ಕಂಪೆನಿಯ ಸಿದ್ಧ "**ವಿಬುರ್ನೋರ್ವ**" ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ಪರೀಕ್ಷಿಸುತ್ತೀಯಾ ? ಹಾಗಾದರೆ ಕಂಪೆನಿಯ ಸಿದ್ಧ "**ಸರ್ಸಲಿಮಗ**" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖ್ಯಾತಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಯ ಸಿದ್ಧ "**ಮೆಸಿಭೂಜ**" ಎಂಬುವದೇ ಎಂದು [illegible] ಬಾಟ್ಲಿಗೆ 3—8—0

ಹೋಮಿಯೋಪತಿ ಮದ್ದುಗಳೂ ಟಿಕ್ಚರು ಅವುಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಶ್ಮಗಳೂ, ಕನ್ನಡಕಗಳೂ ಅವುಗಳ ಪಾಸಾಟಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[50] **ಮಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಆದೇನು ನೋಡೋಣ!

ನಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕೀರ್ತಿದಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ರೀಡೆಯನ್ನು ಕಾಯ್ದು ಕೊಳ್ಳಿರಿ.

ಧಾತುಜನ್ಯ ವಿಕಾರ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀ ಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಉಷ್ಣತೆ, ಎದೆನೋವು, ಮೂಲವ್ಯಾಧಿ, ಹಳೇ ಪಡಿಶ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತ್ತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಹೆಚ್ಚುತ್ತದೆ. ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ಶರೀರಸಂಪತ್ತು ಮತ್ತು ರತಿಸುಖ ಬಯಸುವಂಥವರು ಪಕ್ಕಾಗಿ ಅನುಭವಿಸಿರಿ. (52) ವನಸ್ಪತಿ-ತಗರಪುಷ್ಪ, ತಾಲಿಮಕಂದ, ಮಧುಕಂದ, ಜವಾಕಂದ, ಕಾಲೀಮುಲೀಕಂದ, ಅಶ್ವಗಂಧ, ಶ್ವೇತಕಂದ, ಮುಸಳೀಕಂದ, ಸೇವರೀಕಂದ, ದ್ವೀಪಾಂತರವಚಾಕಂದ, ಕವಚಬೀಜ, ಸಮುದ್ರಶೋಕದಬೀಜ, ತಾಬೀಜ, ನಾಗಬೀಜ, ಬಾಳಬೀಜ, ಭೋಕರೀಬೀಜ, ಜವಳೀಬೀಜ, ಚಿಕಣದರಂಚಾಂಗ, ಅದವೀ ಎಳ್ಳಿನಪಂಚಾಂಗ, ಜಾಯಿಪತ್ರಿ, ಪಿಂಪಳಪತ್ರಿ, ಮದನಮಸ್ತ, ರತನಪುರುಷ, ಕಮರಕಸ, ಕಫಿಲ್ಯಾಗೊಂದ, ಪಂಚಾಬಮಿಶ್ರಿ, ಸಾಲಾಮಿಶ್ರಿ, ಸಫೇದಮಿಶ್ರಿ, ಕಾಲೀಮುಸಾಳಾ, ಬೀಜಬಂದ, ಹಂಸರಾಜೀರಿ, ಮುಂಗಲೀ ಬೇದಾಣೆ, ಮರ್ದಾನಕಟ್ಟಿಗೆ, ಶತಾವರಿ, ಸಕೀರ್ಮಗಜ, ಅಲದಹಾಲು, ವಾಕೇರಿಭಾತಾ, ಗೋಖುರು, ಅಡವೀಬೆಂಡಿಬೀರು, ಅಮೃತಸತ್ವ, ಇಸಬಗೋಳ ಭುಸಾ, ಅವಳಕಾಟಿ, ಶಿಲಾಜಿತ, ಜಾಜೀಕಾಯಿ, ರೂಮಾಮಸ್ತಕಿ, ವಂಶಲೋಚನ, ವರಧಾರಾ, ಕೇಶರಿಯಾಲಚ್ಚಿ, ಕಲ್ಲುಸಕ್ಕರಿ, ಈ ಜಿನಸುಗಳಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಮತ್ತು 50 ಜಿನಸು ಹಾಕಿಲ್ಲೆಂದು ಸಿದ್ಧಮಾಡಿಕೊಟ್ಟವರಿಗೆ 1000 ರೂಪಾಯಿ ಇನಾಮುಕೊಡುವೆವು. ಮುಂಜಾನೆ 2 ತೊಲಿಯ ಮತ್ತು ರಾತ್ರಿ ಭೋಜನಾನಂತರ 2 ತೊಲಿಯ ಒಂದು ವಡಿಯನ್ನು ತಕ್ಕೊಂಡು, ಅದರಮೇಲೆ ಸ್ವಲ್ಪ ಕಾಸಿದ 20 ತೊಲಿ ಹಾಲ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. 21 ದಿವಸ ಸಾಕಾಗುವಷ್ಟು ಈ ಪಾಕದ 84 ತೊಲ, ಡಬ್ಬಿಗೆ 5 ರೂ. 3 ಡಬ್ಬಿಗೆ 14, ರೂ. 6 ಡಬ್ಬಿಗೆ 27 ರೂ. ವಿ. ಪಿ. ಖರ್ಚು ಬೇರೆ. 3 ಡಬ್ಬಿಗಳನ್ನು ತಕ್ಕೊಂಡರೆ ಪೂರ್ಣ ಗುಣಬರುವದು.

ಕೇವಲ ಸ್ವಪ್ನಾವಸ್ಥೆ—ಈ ವಿಕಾರಕ್ಕೆ 7 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 3 ರೂಪಾಯಿಗಳು.

ಪ್ರಮೇಹ (ಪರಮಾ) ಬೇಕಾದಂಥ ಹಳೇ ಹಾಗೂ ಹೊಸ ಪ್ರಮೇಹವಿದ್ದರೂ 24 ತಾಸುಗಳಲ್ಲಿ ಗುಣ, 5 ದಿವಸ ಸಾಕಾಗುವಷ್ಟು ಸೀಸೆ 1 ಕ್ಕೆ 4 ರೂಪಾಯಿಗಳು. [2]

ಪಿನಸಿಗೆ ವ್ರಣವಲ್ಲಿ ಧೂಮ್ರಪಾನ—ಮೂಗಿನೊಳಗಿನ ಗುಂಟಾಳ, ಪಿತ್ತ, ರಕ್ತ, ಸೀವು, ಹುಣ್ಣು, ದುರ್ಗಂಧ, ಕ್ರಿಮಿ, ನಾಸಬಾರದಿರೋಣ, ದಮ್ಮಸೋಣ ಇವೇ ಮೊದಲಾದ ವಿಕಾರಗಳಿಗೆ 3 ದಿವಸಗಳಲ್ಲಿ ಗುಣ. 21 ದಿವಸ ಸಾಕಾಗುವಷ್ಟು 5 ತೊಲಿಯ 1 ಪುಡಿಕೆಗೆ 3 ರೂಪಾಯಿಗಳು. ಪತ್ತೆ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು ಪೋ. ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ) .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು) .... ೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ) .... ೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ) .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ .... ೪ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾವು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲಿನ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳು ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸುಖಪ್ರದವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆಯಲು ಬಹು ... ಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಲವ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
[41] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾದ ರೋಗ-ತಾಪತ್ರಯಗಳನ್ನು ... ರು. ಪ್ರಸಿದ್ಧವಾದ ಈ ನಶ್ಯದ ... ಯಿಂದ ಸ್ವಸ್ಥವಾ... ವ ವ್ಯಾಧಿಗಳು ... ವವೆಂದರೆ:—... ಒಂಟಿ ತಲೆನೋವು ... ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮಾರುಬಟ್ಟೆನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ... ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ... ಪುಗಸಟ್ಟೆ ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪...
ಡಜ಼ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ...

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ... ಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್
[2] ಪೋ. ಬಾ. ೫೧೦. ಮದ್ರಾಸ್

ಮೈಸೂರು ...ಯ ಹೈಕೋರ್ಟ್ ಜಡ್ಜರಾದ
ಶ್ರೀಯುತ ಸಿ. ಮಹಾದೇವಯ್ಯನವರು.

... ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರಕ್ಷಾಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ನಾನಾವಿಧ ಊದುಬತ್ತಿಗಳು, ಪರಿಮಳದ ಕಾಂಗ ಧೂಪದ ಕಡ್ಡಿ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಾಶಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಶ್ವಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸೂಚನೆ.

ವೀರಶೈವ ವಿದ್ಯಾರ್ಥಿಯರಿಗೆ ಉಚಿತವಾಗಿ ಅದಿನಮನೆಗಳ ಏರ್ಪಾಡುಮಾಡಿ ಆ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿ ಅನೇಕ ದಿವಸಗಳಾದಾಗ್ಯೂ ಯಾರೂ ಬಾರದೆ ಇರುವದರಿಂದ ಇನ್ನು ಮುಂದೆ ವಿದ್ಯಾರ್ಥಿಯರಿಗೆ ವೇತನವನ್ನು ಕೊಡುವ

...ರ್ಯಾಃ ಪ್ರಸೀದಂತು REGISTERED No. M. 2266

...ರ್ಯಪ್ರಭಾ

...ಧಾನಿಯಲ್ಲಿ ಪ್ರಕಟಿಸಲ್ಪಡುವುದು.

...ಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
...ಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

... ಶಿರಸಿ ಗುರುಶಾಂತಶಾಸ್ತ್ರಿಗಳು.

... ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

...ತಾ|| ೨೮ ನೇ ಜುಲೈ ೧೯೩೦ [ಸಂಚಿಕೆ ೧೩.

...ದ ಅಥವಾ ಇಂಗ್ಲೀಷು ... ಉತ್ತೀರ್ಣರಾಗಿ ಹೆಚ್ಚಿನ ... ವಿದ್ಯಾರ್ಥಿನಿಯರು 1930 ...ಕ್ಕಿಂತೊಳಗಾಗಿ ವೇತನಕ್ಕೆ ...

...ಂದಲೂ ಓದುವ ವಿಷಯ ...ವಾಗಿಯೂ ಸರ್ಟಿಫಿಕೇಟು ...ಕು.

...ನೆ ಟಿ. ಎಸ್. ಘಟ್ಟಿಮ್ಮ, ...ಡು ಮೈಸೂರು.

...ರ.

ಶಿವಮೊಗ್ಗ ಡಿ|| ಶಿರಾಳಕೊಪ್ಪದ ಮ|| ರಾ|| ಪಾಟೀಲ್ ಮುರಿಗೇಂದ್ರಪ್ಪಗೌಡರ ಜ್ಯೇಷ್ಠ ಪುತ್ರಿ ಚಿ|| ಸೌ|| ಮಹಾದೇವಮ್ಮನನ್ನು ದೇಪೀಕೊಪ್ಪದ ಮ|| ರಾ|| ಪಾಟೀಲ್ ಚಂದಪ್ಪಗೌಡರಿಗೂ, ದ್ವಿತೀಯಪುತ್ರಿ ಚಿ|| ಸೌ|| ಸರ್ವಮಂಗಳೆಯನ್ನು ಕವಡಿ ಪಾಟೀಲ್ ಮ|| ರಾ|| ಸಂದ್ಯಪ್ಪಗೌಡರಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ. ಸಂ.—

ಸ್ವಾತಂತ್ರ್ಯಸಂಗ್ರಾಮವಾರ್ತೆ.

ನೂತನ ಬಹಿಷ್ಕಾರ ಕಾಯಿದೆಯ ಪ್ರಕಾರವಾಗಿ ಶಿಕ್ಷೆಗೆ ಗುರಿಯಾಗಿದ್ದ ಕಲ್ಕತ್ತೆಯ ಮಿ|| ಜಗದ್ಬಂಧು ಪಾಂಡೆಯವರು ತನ್ನ ತಲೆಯ ಮೇಲಿದ್ದ ಗಾಂಧಿ ಟೋಪಿಯನ್ನು ಜಾಯಿಂಟ ಮ್ಯಾಜಿಸ್ಟ್ರೇಟರಾದ ಮಿ|| ಟೇಲರ್‌ರವರು ತಲೆಯ ಮೇಲಿಂದ ತೆಗೆಯಿಸಿ ಸುಟ್ಟರೆಂದೂ, ಅದಕ್ಕಾಗಿ 99-15-0 ರೂ. ಗಳ ಪರಿಹಾರ ದ್ರವ್ಯವನ್ನು ಕೊಡಿಸಬೇಕೆಂದೂ ಕೋರ್ಟಿನಲ್ಲಿ ದಾವಾ ಹೂಡಿರುವರು.

ಮುಂಬಯಿ ಇಂಪ್ರೂವ್‌ಮೆಂಟ ಟ್ರಸ್ಟಿನವರು ತಮ್ಮ ಕಟ್ಟಡಗಳನ್ನು ಇನ್ನು ಮುಂದೆ ಮದ್ಯದ ವ್ಯಾಪಾರಗಾರರಿಗೆ ಬಾಡಿಗೆಗೆ ಕೊಡಕೂಡದೆಂದು ತೀರ್ಮಾನಿಸಿರುವರು.

ವೈಸರಾಯರು ನೂತನವಾಗಿ ಹೊರಡಿಸಿರುವ ಪ್ರೆಸ್ ಆರ್ಡಿನೆನ್ಸಿಗನುಸಾರವಾಗಿ 131 ವೃತ್ತಪತ್ರಿಕಾಕಾರರು 500 ರೂ. ಲಾಗಾಯಿತು 5,000 ರೂ. ಗಳವರೆಗೆ ಜಾಮೀನು ಕೇಳಲ್ಪಟ್ಟರು. ಅದರಲ್ಲಿ 83 ಪತ್ರಿಕೆಗಳು ಜಾಮೀನನ್ನು ಕೊಡದೆ ಇದ್ದುದರಿಂದ ಬಂದಾಗಿರುವವು. 4-6 ಪತ್ರಿಕಾಕರ್ತರು ಸರಕಾರದ ನೋಟೀಸನ್ನು ನಿರಾಕರಿಸಿ ಜಾಮೀನನ್ನು ಕೊಡದೆ ಪತ್ರಿಕೆಯನ್ನು ಹೊರಡಿಸುತ್ತಲೇ ಇರುವರು. ಕೆಲವು ನೂತನ ಪತ್ರಿಕಾಕರ್ತರು ಜಾಮೀನನ್ನು ಕೊಡಲಾರದೆ ಪತ್ರಿಕೆಯನ್ನು ಹೊರಡಿಸುವದನ್ನೇ ನಿಲ್ಲಿಸಿರುವರು.

ಜುಲೈ 25 ನೆಯ ತಾರೀಖಿನ ದಿವಸ ಪೋಲೀಸರು ಅಹಮದಾಬಾದ ಕಾಂಗ್ರೆಸ್ ಆಫೀಸನ್ನು ಜಪ್ತಮಾಡಿ ಅಲ್ಲಿದ್ದ ಹಳೆಪತ್ರಿಕೆಗಳು ಮತ್ತು ನೋಟೀಸುಗಳನ್ನೆಲ್ಲಾ ತೆಗೆದುಕೊಂಡು ಹೋಗಲು, ಈ ಮಧ್ಯೆ ಒಬ್ಬ ಪೋಲೀಸ್ ಕಾನ್‌ಸ್ಟೆಬಲನು ಕಾಂಗ್ರೆಸ್ ಆಫೀಸಿನ ಮೇಲೆ ಇಟ್ಟಿದ್ದ ರಾಷ್ಟ್ರೀಯ ಬಾವುಟವನ್ನು ತೆಗೆದು ಸುಟ್ಟನು. ಜನರು ಅತ್ಯಂತ ದುಃಖದಿಂದ ಬಾವುಟವನ್ನು ಸುಟ್ಟ ಬೂದಿಯನ್ನೇ ಹೊತ್ತುಕೊಂಡು ಅದ್ಭುತವಾದ ಮೆರವಣಿಗೆಮಾಡಿದರು.

ಜುಲೈ 17 ನೆಯ ತಾರೀಖಿನ ದಿವಸ ಪಾರ್ಲಿಮೆಂಟಿನಿಂದ ಸಸ್ಪೆಂಡ್ ಮಾಡಲ್ಪಟ್ಟ ಮಿ|| ಬೆಕೆಟರವರು ಈ ರೀತಿಯಾಗಿ ಹೇಳಿರುವರು. "ನಾನು ಮತ್ತು ಮಿ|| ಬ್ರಾಕ್ವೇರವರು ಭರತಖಂಡದ ಅಶಾಂತಿಯನ್ನು ನೋಡಿ ಬಹಳ ಆಲೋಚನಾಪರರಾಗಿರುತ್ತೇವೆ. ಪಂ|| ಮೋತೀಲಾಲ್ ಮತ್ತು ಜವಾಹರಲಾಲ್‌ರವರು ಇಲ್ಲಿದ್ದಾಗ ನಾವು ಅವರೊಡನೆ ಬಹಳ ಮಿತ್ರತ್ವದಿಂದ ವರ್ತಿಸುತ್ತಿದ್ದೆವು. ಆಗ ನನಗೆ ಭಾರತೀಯರ ಮನಸ್ಸು ನಮ್ಮವರಿಗಿಂತಲೂ ಹೆಚ್ಚು ಭೂತದಯಾ ಪಶ್ಚಾತ್ತಾಪಭರಿತವಾದುದೆಂಬುದನ್ನು ಅರಿತೆನು. ದಕ್ಷಿಣ ಆಫ್ರಿಕೆಯಲ್ಲಿ ನಾನು ಮಿ|| ಮಣಿಲಾಲ್ ಗಾಂಧಿಯವರನ್ನು ಭೆಟ್ಟಿಯಾಗಿದ್ದೆನು. ಆಗ ನಾವೀರ್ವರೂ ಮಿತ್ರರಂತಿದ್ದೆವು. ಇಂಗ್ಲೆಂಡಿನಲ್ಲಿ ನನ್ನ ಮಿತ್ರರಾರಾದರೂ ಕಾರಾಗೃಹವಾಸಿಗಳಾದರೆ ನನ್ನ ಕೈಲಾದ ಪ್ರಯತ್ನಗಳೆಲ್ಲವನ್ನೂ ಮಾಡಿ ಅವರಿಗೆ ಹಿತವನ್ನು ಬಯಸುತ್ತಿದ್ದೆನು. ಪಂ|| ಜವಾಹರಲಾಲ್ ಮತ್ತು ಪಂ|| ಮೋತೀಲಾಲರನ್ನು ನನ್ನ ದೇಶೀಯ ಮಿತ್ರರಂತೆಯೇ ಭಾವಿಸಿರುವೆನು. ಭರತಖಂಡದ ಸದ್ಯದಸ್ಥಿತಿಯ ವಿಷಯವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸುವಂತೆ ನಮ್ಮ ಕೈಲಾದ ಪ್ರಯತ್ನಗಳೆಲ್ಲವನ್ನೂ ಮಾಡಿದೆವು. ಆದರೆ ಮುಂಭಾಗದ ಮೂರು ನಾಲ್ಕು ಕುರ್ಚಿಗಳನ್ನು ಆಕ್ರಮಿಸಿರುವ ಲೇಬರ್ ಕನ್ಸರ್ವೆಟಿವ್ ಮತ್ತು ಲಿಬರಲ್ ಮುಖಂಡರು ಆ ವಿಷಯಕವಾದ ಚರ್ಚೆಗೆ ಅವಕಾಶವನ್ನು ಕೊಡದೆ ತಮ್ಮ ದಬ್ಬಾಳಿಕೆಯನ್ನೇ ಮುಂದುವರಿಸಬೇಕೆಂದು ನಿರ್ಧರಿಸಿಕೊಂಡಿರುವರು. ಕೂಲಿಕಾರ ಸರಕಾರದವರು ಭರತಖಂಡದ ವೀರಪುತ್ರರೆನಿಸಿದ 5000 ಜನ ಸತ್ಯಾಗ್ರಹಿಗಳನ್ನು ಕಾರಾಗೃಹಕ್ಕೆ ಹಾಕಿರುವದನ್ನೂ, ಪೆಶಾವರ್, ಸೋಲಾಪೂರ, ಕಲ್ಕತ್ತಾ, ಮುಂಬಯಿಗಳಲ್ಲಿ ನಡೆಯುತ್ತಿರುವ ಅಮಾನುಷಕೃತ್ಯಗಳನ್ನೂ ನೆನಸಿಕೊಂಡರೆ ನನ್ನ ಮೈ ನಡುಗಲಾರಂಭಿಸುವದು. ನಮ್ಮ ಸರ್ವಪ್ರಯತ್ನಗಳೂ ವಿಫಲವಾದುವು. ಇನ್ನು ಇದರ ನಿಜಸ್ಥಿತಿಯು ಬ್ರಿಟಿಷ್ ಪ್ರಜೆಗಳೆಲ್ಲರಿಗೂ ತಿಳಿಯುವಂತೆ ಮಾಡಿ, ಕಾರಾಗೃಹವಾಸಿಗಳಾದ ಆ ವೀರಾಧಿವೀರರಿಗೆ ನಮ್ಮ ನಿಷ್ಕಪಟವಾದ ಸಹಾನುಭೂತಿಯನ್ನು ತಿಳುಹಿಸುವ ಮಾರ್ಗವೊಂದೇ ನಮಗುಳಿಯಿತು. ಅದ್ದರಿಂದಲೇ ಈ ದಿನ ನಾವು ಪಾರ್ಲಿಮೆಂಟಿನಲ್ಲಿ ಹಾಗೆ ವರ್ತಿಸಿದೆವು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಸಿಸ್ಟೆಂಟ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮನೋಹರವಾದ ಫೋಟೋ

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ,
ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦,
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೆ
ಫೋಟೋ ಸೈಜು ೧೪×೧೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡು
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮ
ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋ
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗ
ಗ್ರಹಿಸುವ
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶ
ಕುಳಿತುಕೊಂಡಿರುವ ಫೋ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ....
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋ
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋ

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಿಲ
ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿ

ಮ್ಯಾನೇಜರ್—ಪಂಚಾಚಾರ್ಯಪ್ರಭಾ

ಸರ್ವೋತ್ತಮವಾದ ಗ್ರಂಥ

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

[41] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗುವುದಿಲ್ಲ.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೮-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸುಲಭವಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[2] ಪೋ. ಬಾ. ೫೧೦. ಮದರಾಸು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ ನೇ ಜುಲೈ ೧೯೩೦ [ಸಂಚಿಕೆ ೧೩.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಕೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ದಶಾಂಗಾದಿ ಊದುಬತ್ತಿಗಳು, ಪರಿಮಳದಶಾಂಗ ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಾಶಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದಿರದು. ಮತ್ತು ನಮ್ಮಲ್ಲಿ ಅತ್ಯಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸೂಚನೆ.

ವೀರಶೈವ ವಿದ್ಯಾರ್ಥಿಗಳಿಗೆ ಉಚಿತವಾಗಿ ಅಶನವಸನಗಳಿಗೆ ಏರ್ಪಾಡುಮಾಡಿ ಆ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿ ಅನೇಕ ದಿನಗಳಾದಾಗ್ಯೂ, ಯಾರೂ ಬಾರದೆ ಇರುವದರಿಂದ ಇನ್ನು ಮುಂದೆ ವಿದ್ಯಾರ್ಥಿಗಳುಗಳಿಗೆ ವೇತನವನ್ನು ಕೊಡುವದಾಗಿ ನಿರ್ಧರಿಸಿದೆ. ಆದುದರಿಂದ ಕನ್ನಡ ಅಥವಾ ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಹೆಚ್ಚಿನ ತರಗತಿಯಲ್ಲಿ ಓದುವ ಬಡ ವೀರಶೈವ ವಿದ್ಯಾರ್ಥಿಗಳು 1930 ನೆಯ ಇಸವಿ ಆಗಸ್ಟು ತಿಂಗಳ ಅಖೈರಿನೊಳಗಾಗಿ ವೇತನಕ್ಕೆ ಅರ್ಜಿಯನ್ನು ಬರೆದುಕೊಳ್ಳಬಹುದು.

ಶ್ರದ್ಧೆಯಿಂದಲೂ, ಚಟುವಟಿಕೆಯಿಂದಲೂ ಓದುವ ವಿಷಯವಾಗಿಯೂ ಮತ್ತು ಬಡತನದ ವಿಷಯವಾಗಿಯೂ ಸರ್ಟಿಫಿಕೇಟುಗಳನ್ನು ಅರ್ಜಿಯ ಸಂಗಡ ಕಳುಹಿಸಬೇಕು.

ಡಾ|| ಟಿ. ಎನ್. ಸಿದ್ಧಪ್ಪನವರ ಮನೆ ಟಿ. ಎನ್. ಪುಟ್ಟಪ್ಪ,
ವಾಣಿವಿಳಾಸ ರೋಡು ಮೈಸೂರು.

ಸ್ವೀಕಾರ.

ಶಿವಮೊಗ್ಗ ಡಿ|| ಶಿರಾಳಕೊಪ್ಪದ ಮ|| ರಾ|| ಪಾಟೀಲ್ ಮುರಿಗೇಂದ್ರಪ್ಪಗೌಡರ ಜ್ಯೇಷ್ಠ ಪುತ್ರಿ ಚಿ|| ಸೌ|| ಮಹಾದೇವಮ್ಮನನ್ನು ದೇಪೀಕೊಪ್ಪದ ಮ|| ರಾ|| ಪಾಟೀಲ್ ಚಂದಪ್ಪಗೌಡರಿಗೂ, ದ್ವಿತೀಯಪುತ್ರಿ ಚಿ|| ಸೌ|| ಸರ್ವಮಂಗಳೆಯನ್ನು ಕವಡಿ ಪಾಟೀಲ್ ಮ|| ರಾ|| ನಂದ್ಯಪ್ಪಗೌಡರಿಗೂ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಸ್ವಾತಂತ್ರ್ಯಸಂಗ್ರಾಮವಾರ್ತೆ.

ನೂತನ ಬಹಿಷ್ಕಾರ ಕಾಯಿದೆಯ ಪ್ರಕಾರವಾಗಿ ಶಿಕ್ಷೆಗೆ ಗುರಿಯಾಗಿದ್ದ ಕಲ್ಕತ್ತೆಯ ಮಿ|| ಜಗದ್ಬಂಧು ಪಾಂಡೆಯವರು ತಮ್ಮ ತಲೆಯ ಮೇಲಿದ್ದ ಗಾಂಧಿ ಟೋಪಿಯನ್ನು ಜಾಯಿಂಟ ಮ್ಯಾಜಿಸ್ಟ್ರೇಟರಾದ ಮಿ|| ಟೇಲರ್‌ರವರು ತಲೆಯ ಮೇಲಿಂದ ತೆಗೆಯಿಸಿ ಸುಟ್ಟರೆಂದೂ, ಅದಕ್ಕಾಗಿ 99-15-0 ರೂ. ಗಳ ಪರಿಹಾರ ದ್ರವ್ಯವನ್ನು ಕೊಡಿಸಬೇಕೆಂದೂ ಕೋರ್ಟಿನಲ್ಲಿ ದಾವಾ ಹೂಡಿರುವರು.

ಮುಂಬಯಿ ಇಂಪ್ರೂವ್‌ಮೆಂಟ ಟ್ರಸ್ಟಿನವರು ತಮ್ಮ ಕಟ್ಟಡಗಳನ್ನು ಇನ್ನು ಮುಂದೆ ಮದ್ಯದ ವ್ಯಾಪಾರಗಾರರಿಗೆ ಬಾಡಿಗೆಗೆ ಕೊಡಕೂಡದೆಂದು ತೀರ್ಮಾನಿಸಿರುವರು.

ವೈಸರಾಯರು ನೂತನವಾಗಿ ಹೊರಡಿಸಿರುವ ಪ್ರೆಸ್ ಆರ್ಡಿನನ್ಸಿನನುಸಾರವಾಗಿ 131 ವೃತ್ತಪತ್ರಿಕಾಕಾರರು 500 ರೂ. ಲಾಗಾಯಿತು 5,000 ರೂ. ಗಳವರೆಗೆ ಜಾಮೀನು ಕೇಳಲ್ಪಟ್ಟರು. ಅದರಲ್ಲಿ 83 ಪತ್ರಿಕೆಗಳು ಜಾಮೀನನ್ನು ಕೊಡದೆ ಇದ್ದುದರಿಂದ ಬಂದಾಗಿರುವವು. 4-6 ಪತ್ರಿಕಾಕರ್ತರು ಸರಕಾರದ ನೋಟೀಸನ್ನು ನಿರಾಕರಿಸಿ ಜಾಮೀನನ್ನು ಕೊಡದೆ ಪತ್ರಿಕೆಯನ್ನು ಹೊರಡಿಸುತ್ತಲೇ ಇರುವರು. ಕೆಲವು ನೂತನ ಪತ್ರಿಕಾಕರ್ತರು ಜಾಮೀನನ್ನು ಕೊಡಲಾರದೆ ಪತ್ರಿಕೆಯನ್ನು ಹೊರಡಿಸುವದನ್ನೇ ನಿಲ್ಲಿಸಿರುವರು.

ಜುಲೈ 25 ನೆಯ ತಾರೀಖಿನ ದಿವಸ ಪೋಲೀಸರು ಅಹಮದಾಬಾದ ಕಾಂಗ್ರೆಸ್ ಆಫೀಸನ್ನು ಜಪ್ತಿ ಮಾಡಿ ಅಲ್ಲಿದ್ದ ಹಳೆಪತ್ರಿಕೆಗಳು ಮತ್ತು ನೋಟೀಸುಗಳನ್ನೆಲ್ಲಾ ತೆಗೆದುಕೊಂಡು ಹೋಗಲು, ಈ ಮಧ್ಯೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲನು ಕಾಂಗ್ರೆಸ್ ಆಫೀಸಿನ ಮೇಲೆ ಇಟ್ಟಿದ್ದ ರಾಷ್ಟ್ರೀಯ ಬಾವುಟವನ್ನು ತೆಗೆದು ಸುಟ್ಟನು. ಜನರು ಅತ್ಯಂತ ದುಃಖದಿಂದ ಬಾವುಟವನ್ನು ಸುಟ್ಟ ಬೂದಿಯನ್ನೇ ಹೊತ್ತುಕೊಂಡು ಅದ್ಭುತವಾದ ಮೆರವಣಿಗೆಮಾಡಿದರು.

ಜುಲೈ 17 ನೆಯ ತಾರೀಖಿನ ದಿವಸ ಪಾರ್ಲಿಮೆಂಟಿನಿಂದ ಸಸ್ಪೆಂಡ್ ಮಾಡಲ್ಪಟ್ಟ ಮಿ|| ಬೆಕೆಟರವರು ಈ ರೀತಿಯಾಗಿ ಹೇಳಿರುವರು. ' ನಾನು ಮತ್ತು ಮಿ|| ಬ್ರಾಕ್ವೇರವರು ಭರತಖಂಡದ ಅಶಾಂತಿಯನ್ನು ನೋಡಿ ಬಹಳ ಆಲೋಚನಾಪರರಾಗಿರುತ್ತೇವೆ. ಪಂ|| ಮೋತೀಲಾಲ್ ಮತ್ತು ಜವಾಹರಲಾಲ್‌ರವರು ಇಲ್ಲಿದ್ದಾಗ ನಾವು ಅವರೊಡನೆ ಬಹಳ ಮಿತ್ರತ್ವದಿಂದ ವರ್ತಿಸುತ್ತಿದ್ದೆವು. ಆಗ ನನಗೆ ಭಾರತೀಯರ ಮನಸ್ಸು ನಮ್ಮವರಿಗಿಂತಲೂ ಹೆಚ್ಚು ಭೂತದಯಾ ಪಶ್ಚಾತ್ತಾಪಭರಿತವಾದುದೆಂಬುದನ್ನು ಅರಿತೆನು. ದಕ್ಷಿಣ ಆಫ್ರಿಕೆಯಲ್ಲಿ ನಾನು ಮಿ|| ಮಣಿಲಾಲ್ ಗಾಂಧಿಯವರನ್ನು ಭೆಟ್ಟಿಯಾಗಿದ್ದೆನು. ಆಗ ನಾವೀರ್ವರೂ ಮಿತ್ರರಂತಿದ್ದೆವು. ಇಂಗ್ಲೆಂಡಿನಲ್ಲಿ ನನ್ನ ಮಿತ್ರರಾರಾದರೂ ಕಾರಾಗೃಹವಾಸಿಗಳಾದರೆ ನನ್ನ ಕೈಲಾದಪ್ರಯತ್ನಗಳೆಲ್ಲವನ್ನೂ ಮಾಡಿ ಅವರಿಗೆ ಹಿತವನ್ನು ಬಯಸುತ್ತಿದ್ದೆನು. ಪಂ|| ಜವಾಹರಲಾಲ್ ಮತ್ತು ಪಂ|| ಮೋತೀಲಾಲರನ್ನು ನನ್ನ ದೇಶೀಯ ಮಿತ್ರರಂತೆಯೇ ಭಾವಿಸಿರುವೆನು. ಭರತಖಂಡದ ಸದ್ಯದಸ್ಥಿತಿಯ ವಿಷಯವನ್ನು ಪಾರ್ಲಿಮೆಂಟಿನಲ್ಲಿ ಚರ್ಚಿಸುವಂತೆ ನಮ್ಮ ಕೈಲಾದ ಪ್ರಯತ್ನಗಳೆಲ್ಲವನ್ನೂ ಮಾಡಿದೆವು. ಆದರೆ ಮುಂಭಾಗದ ಮೂರು ನಾಲು ಕುರ್ಚಿಗಳನ್ನು ಆಕ್ರಮಿಸಿರುವ ಲೇಬರ್ ಕನ್ಸರ್ವೆಟಿವ್ ಮತ್ತು ಲಿಬರಲ್ ಮುಖಂಡರು ಆ ವಿಷಯಕವಾದ ಚರ್ಚೆಗೆ ಅವಕಾಶವನ್ನು ಕೊಡದೆ ತಮ್ಮ ದಬ್ಬಾಳಿಕೆಯನ್ನೇ ಮುಂದುವರಿಸಬೇಕೆಂದು ನಿರ್ಧರಿಸಿಕೊಂಡಿರುವರು. ಕೂಲಿಕಾರ ಸರಕಾರದವರು ಭರತಖಂಡದ ವೀರಪುತ್ರರೆನಿಸಿದ 5000 ಜನ ಸತ್ಯಾಗ್ರಹಿಗಳನ್ನು ಕಾರಾಗೃಹಕ್ಕೆ ಹಾಕಿರುವದನ್ನೂ, ಪೆಷಾವರ್, ಸೋಲಾಪುರ, ಕಲ್ಕತ್ತಾ, ಮುಂಬಯಿಗಳಲ್ಲಿ ನಡೆಯುತ್ತಿರುವ ಅಮಾನುಷಕೃತ್ಯಗಳನ್ನೂ ನೆನಸಿಕೊಂಡರೆ ನನ್ನ ಮೈ ನಡುಗಲಾರಂಭಿಸುವದು. ನಮ್ಮ ಸರ್ವಪ್ರಯತ್ನಗಳೂ ವಿಫಲವಾದುವು. ಇನ್ನು ಇದರ ನಿಜಸ್ಥಿತಿಯು ಬ್ರಿಟಿಷ್ ಪ್ರಜೆಗಳೆಲ್ಲರಿಗೂ ತಿಳಿಯುವಂತೆ ಮಾಡಿ, ಕಾರಾಗೃಹವಾಸಿಗಳಾದ ಆ ವೀರಾಧಿವೀರರಿಗೆ ನಮ್ಮ ನಿಷ್ಕಪಟವಾದ ಸಹಾನುಭೂತಿಯನ್ನು ತಿಳುಹಿಸುವ ಮಾರ್ಗವೊಂದೇ ನಮಗುಳಿಯಿತು. ಆದ್ದರಿಂದಲೇ ಈ ದಿನ ನಾವು ಪಾರ್ಲಿಮೆಂಟಿನಲ್ಲಿ ಹಾಗೆ ವರ್ತಿಸಿದೆವು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪತ್ರವ್ಯವಹಾರ.

ಪತ್ರೇದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ತಿರ್ಯಗಾಂದೋಲಿಕೋತ್ಸವ ಕುರಡಗಿ.

ಧಾರವಾಡ ಜಿಲ್ಲಾ ರೋಣ ತಾಲೂಕು ಪೈಕಿ ಕುರಡಗಿ ಗ್ರಾಮಕ್ಕೆ ಶ್ರೀ ಹಿಮವತ್ಕೇದಾರ ವಿಶೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಶ್ರೀ ೧೧೦೮ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯ ಮಹಾಸ್ವಾಮಿಗಳು ನೀರಲಗಿಯಿಂದ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರಕ್ಕೆ ತಾ|| 28-6-30 ನೇ ದಿವಸ ತಮ್ಮ ಸಿಬ್ಬಂದಿ ಸಮೇತವಾಗಿ ದಯಮಾಡಿಸಿದರು. ಕೂಡಲೇ ಗ್ರಾಮದ ಪ್ರಮುಖರಾದ ವೇ|| ಕಲ್ಲೂರು ವೀರಯ್ಯನವರು, ಕೊಂಗೋಡ ಹಿರೇಮಠ ಸಂಗೀತ ವಿದ್ವಾನ್ ಸಿದ್ಧಲಿಂಗಾಚಾರ್ಯ ಗವಾಯಿಗಳು, ಪೋಲೀಸ ಪಾಟೀಲ ಮಲ್ಲನಗೌಡರು, ಪಾಟೀಲ ಕಲ್ಲನಗೌಡರು, ಅಯ್ಯನಗೌಡರ ವೀರನಗೌಡರು, ಕಳಕನಗೌಡರು, ಅಯ್ಯನಗೌಡರ ಹೆಡ್ಮಾಸ್ತರರು, ಸವಡಿ ಗುರಪ್ಪನವರು, ರಡ್ಡೇರ ವೀರಪ್ಪನವರು, ಬೋರಗಸ್ತಿ ಲಿಂಗಪ್ಪನವರು ಇವರೇ ಮೊದಲಾದ ಪ್ರಮುಖರು ಮಹಾಸ್ವಾಮಿಗಳವರನ್ನು ಸಂಸ್ಥಾನ ಪದ್ಧತಿ ಮೇರೆಗೆ ಮಹೋತ್ಸವದಿಂದ ಕರೆದುಕೊಂಡು ಬಂದು ವೀರಭದ್ರದೇವಸ್ಥಾನದಲ್ಲಿ ಇಳಿಸಿದರು. ಗ್ರಾಮದ ಭಕ್ತ ಮಾಹೇಶ್ವರರು ಕಾಣಿಕೆಯನ್ನು ಸಮರ್ಪಿಸಿದ್ದಲ್ಲದೆ ದಿನೇ ದಿನೇ ಮಹಾಸ್ವಾಮಿಗಳವರ ಅಮೃತವಾಣಿಯಿಂದ ಸಮಸ್ತ ಭಕ್ತರು ಶಿವಸಿದ್ಧಾಂತೋಪದೇಶವನ್ನು ಕೇಳುತ್ತಲೇ ಇರುವರು. ಮಹಾಸ್ವಾಮಿಗಳವರ ತಪೋನಿಷ್ಠತೆಯನ್ನೂ ಬ್ರಹ್ಮಚರ್ಯದ ತೇಜಸ್ಸನ್ನೂ ದಯಾದಾಕ್ಷಿಣ್ಯಾದಿ ಗುಣಗಳನ್ನೂ ನೋಡಿ ಭಕ್ತಮಾಹೇಶ್ವರರು ಮಹಾಸ್ವಾಮಿಗಳವರನ್ನು ವರ್ಣಿಸುತ್ತ ಈ ಹೊತ್ತಿಗೆ ನಾವು ಧನ್ಯರಾದೆವೆಂದು ಪರಸ್ಪರ ಮಾತಾಡುವದನ್ನು ನೋಡಿದರೆ ಇದು ಜಗದ್ಗುರುಗಳವರ ಮಹತ್ವವೇ ಎಂದು ಹೇಳಬೇಕಾಗಿದೆ. ಕುರುಡಗಿಗ್ರಾಮದ ಪಂಚಾಚಾರ್ಯ ಭಜನಾಸಂಘದ ಪ್ರಮುಖರಾದ ಅಯ್ಯನಗೌಡರ ಕಳಕನಗೌಡ, ಅಯ್ಯನಗೌಡರ ಚನ್ನಪ್ಪಗೌಡ, ಗುಗ್ಗರಿ ವೀರಪ್ಪ, ಜಕ್ಕನಗೌಡರ ರುದ್ರಗೌಡ, ರಾಮಣ್ಣನವರ ವೀರಪ್ಪ, ಕಂಬಾರ ನೀಲಪ್ಪ ಇವರೇ ಮೊದಲಾದ ಪ್ರಮುಖರು ಶ್ರೀ ಜಗದ್ಗುರುಗಳಿಗೆ ಬಿನ್ನಹವಿಟ್ಟು ತಿರ್ಯಗಾಂದೋಲಿಕೋತ್ಸವವನ್ನು ಸಮಸ್ತ ಬಿರುದಾವಳಿಗಳಿಂದ ನಡೆಯಿಸಿದರು. ಈ ಮಹೋತ್ಸವಕ್ಕೆ ಬೆನಕೊಪ್ಪ, ಬೇಲೇರಿ, ಗುಜಮಾಗಡಿ, ಸವಡಿ, ಹಡಗಲಿ, ಸೀಲಗಿ ಮೊದಲಾದ ಗ್ರಾಮದವರು ಭಜನಾಮೇಳಗಳನ್ನು ತೆಗೆದುಕೊಂಡುಬಂದು ಗುರುಸೇವೆಯನ್ನು ಮಾಡಿ ಧನ್ಯರಾದರು. ಬಜಾರವು ತಳಿರುತೋರಣಗಳಿಂದಲೂ ರಂಗವಲ್ಲ್ಯಾದಿಗಳಿಂದಲೂ ಶೃಂಗರಿಸಲ್ಪಟ್ಟಿದ್ದಿತು. ಬಜಾರದಲ್ಲಿ ಉತ್ಸವವು ಹೋದ ಕೂಡಲೆ ಸೀಮಂತಿನಿಯರು ಮಹಾಸ್ವಾಮಿಗಳವರಿಗೆ ಆರತಿಯನ್ನು ಬೆಳಗುತ್ತ ತಮ್ಮಲ್ಲಿರುವ ಗುರುಭಕ್ತಿಯನ್ನು ವ್ಯಕ್ತಗೊಳಿಸುತ್ತಿದ್ದರು. ಉತ್ಸವವು ಸುರಕ್ಷಿತವಾಗಿ ಹಿರೇಮಠಕ್ಕೆ ಬಂದ ಕೂಡಲೇ ಸರ್ವಭಕ್ತರು ಜಯಜಯಕಾರ ಮಾಡುತ್ತಿರಲು ಮಹಾಸ್ವಾಮಿಗಳವರು ಸಿಂಹಾಸನದಮೇಲೆ ಮೂರ್ತಮಾಡಿದರು. ಬಳಿಕ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಪೀಠಿಕಾಭಾಷಣವನ್ನು ಕಾಶೀಕ್ಷೇತ್ರ ಗುರುಕುಲವಾಸಿಗಳಾದ ವೇ|| ಪಂ|| ಶಿವದೇವಶಾಸ್ತ್ರಿಗಳು ಕುಷ್ಟಗಿ ಇವರು ಮಾಡಿದರು. ಆಮೇಲೆ ಬಾಪೂಸಾಹೇಬ ಸವಡಿ ಇವರು ಮತ್ತು ಕುರಡಗಿ ಕನ್ನಡಶಾಲೆಯ ಅಯ್ಯನಗೌಡ್ರ ಹೆಡ್ಮಾಸ್ತರರು ಭಾಷಣಗಳನ್ನು ಮಾಡಿದರು. ಆ ಮೇಲೆ ಸರ್ವಸಭಿಕರ ಪ್ರಾರ್ಥನೆಯ ಮೇರೆಗೆ ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನದ ಅವಾಕ್ಕರಾದ ಶ್ರೀ|| ಷ|| ಬ್ರ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರು ಇವರು ಭಕ್ತಸ್ತ್ರೀಪುರುಷರು ಗುರುಭಕ್ತಿಸಂಪನ್ನರಾಗಿ ಶಿವದೀಕ್ಷಾಸಂಸ್ಕಾರವನ್ನು ಹೊಂದಿ ಗುರು ಕೊಟ್ಟ ಇಷ್ಟಲಿಂಗವನ್ನು ಬಿಡದಲೆ ಸದಾ ದೇಹದಲ್ಲಿ ಧರಿಸಿ ಶಿವಪೂಜಾನಿಷ್ಠರಾಗುವದಲ್ಲದೆ ಗುರುಸೇವಾನಿಷ್ಠರಾಗಿ ಕೃತಾರ್ಥರಾಗಬೇಕೆಂಬ ವಿಷಯಗಳ ಮೇಲೆ ಅನೇಕ ಶಾಸ್ತ್ರಸಂಬಂಧ ಉದಾಹರಣೆಗಳನ್ನು ಕೊಟ್ಟು ಒಳ್ಳೇ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇವರ ಭಾಷಣವನ್ನು ಸರ್ವರೂ ಕೇಳಿ ಸಂತೋಷಪಟ್ಟರೆಂದು ಬರೆದರೆ ಅತಿಶಯೋಕ್ತಿಯಾಗಲಾರದು. ಆಮೇಲೆ ಶ್ರೀ ಜಗದ್ಗುರುಗಳು ಇಲ್ಲಿ ಕೂಡಿರುವ ಸಮಸ್ತ ಭಕ್ತರು ಗುರುಭಕ್ತಿಸಂಪನ್ನರಾಗಿ ಧರ್ಮಭ್ರಷ್ಟತೆಯನ್ನು ಹೊಂದದೆ ಧರ್ಮಜಾಗ್ರತರಾಗಿ ಮೋಕ್ಷಪದವಿಗೆ ಪಾತ್ರರಾಗಬೇಕೆಂದು ತಮ್ಮ ಅಮೃತವಾಣಿಯಿಂದ ಬೋಧಮಾಡಿದರು. ಆಮೇಲೆ ಬಂದಿರುವ ಭಕ್ತರ ಆಭಾರವನ್ನು ಮತ್ತು ಸಂಸ್ಥಾನದ ಮುನಷಿ ವೇ|| ಕೊಟ್ರಾರಾಧ್ಯ ಹಿರೇಮಠ ನೆಲ್ಲುಕುದರಿ ಇವರು ಉತ್ಸವದಲ್ಲಿ ಮತ್ತು ಸಭಾಕಾರ್ಯದಲ್ಲಿ ಯಾವತರಹದ ಗದ್ದಲವಾಗಬಾರದೆಂಬ ಬಗ್ಗೆ ಸಂಸ್ಥಾನ ಸಿಬ್ಬಂದಿಯನ್ನು ಸುವ್ಯವಸ್ಥೆಯಿಂದ ಇಟ್ಟಬಗ್ಗೆ ಸಭೆಯಲ್ಲಿ ಇವರ ಆಭಾರವನ್ನು ಹೆಡ್ಮಾಸ್ತರರು ಮನ್ನಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಕಾರ ಮಾಡಿ ಸರ್ವಭಕ್ತರೂ ತಮ್ಮಲ್ಲಿರುವ ಗುರುಭಕ್ತಿಯನ್ನು ವ್ಯಕ್ತಗೊಳಿಸಿದರು. ಗುರುಭಕ್ತರೇ! ಕುರಡಗಿ ಭಕ್ತಮಾಹೇಶ್ವರರು ಶ್ರೀ ಜಗದ್ಗುರುಗಳವರ ಸೇವೆಯನ್ನು ಮಾಡಿ ಗುರುಕಾಣಿಕೆಯನ್ನು ಕೊಟ್ಟು ಗುರುಭಕ್ತರೆಂಬ ಹೆಸರನ್ನು ಹ್ಯಾಗೆ ಪಡೆದುಕೊಂಡರೋ ನೀವೂ ಸಹ ಅವರಂತೆ ಗುರುಭಕ್ತಿಯಿಂದ ನಡೆದು ಧನ್ಯರಾಗಿರೆಂದು ಕೋರುವ,

ಅಯ್ಯನಗೌಡ್ರ ವೀರನಗೌಡ್ರು, ಕುರಡಗಿ.

ಕೋಆಪರೇಟಿವ್ ಸೊಸೈಟಿಯ 16 ನೆ ವಾರ್ಷಿಕ ಮಹಾಸಭಾ ಮತ್ತು ವಸ್ತುಪ್ರದರ್ಶನ.

ಹಿರಿಯೂರು ತಾಲ್ಲೂಕು, ಮರಡಿಹಳ್ಳಿ.

ಈ ಸಭೆಯು ತಾ|| 21-7-30ನೇ ಸೋಮವಾರ 3 ಘಂಟೆಯಿಂದ ವ್ಯವಸಾಯದ ಇನ್ಸ್‌ಪೆಕ್ಟರ್ ಮ|| ರಾ|| ರಂಗಸ್ವಾಮಯ್ಯಂಗಾರರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರಂಭದಲ್ಲಿ ಬಾಲಕಬಾಲಕಿಯರ ಮಂಗಳಗೀತಾ ದೇವತಾಪ್ರಾರ್ಥನೆಯಾದ ಮೇಲೆ ಸಭಾ ಪ್ರಾರಂಭವಾಗಿ ಅಧ್ಯಕ್ಷರ ಭಾಷಣಾನಂತರ ಸೆಕ್ರೆಟರಿಯವರಿಂದ ರಿಪೋರ್ಟು ಓದಲ್ಪಟ್ಟಿತು. ತರುವಾಯ ಶ್ರೀ ವಾಸುದೇವಭಟ್ಟರು ಸಹಕಾರದ ವಿಷಯದಲ್ಲಿಯೂ ಮ|| ರಾ|| ಟಿ. ವಿ. ಶೀಬಯ್ಯನವರು ವಿದ್ಯಾಭ್ಯಾಸದ ವಿಷಯದಲ್ಲಿಯೂ, ವೈದ್ಯವಿದ್ವಾನ್ ಡಿ. ಹೆಚ್. ಎಂ. ಪಂಡಿತರು 21ನೆಯ ಭಾರತವೈದ್ಯಸಮ್ಮೇಳನಕ್ಕೆ ಸಹಾಯಮಾಡಬೇಕೆಂಬ ವಿಷಯದಲ್ಲಿಯೂ ಶಾಸ್ತ್ರವಾದ ಭಾಷಣಗಳನ್ನು ಮಾಡಿದ ನಂತರ ಕೆಲವು ಠರಾವುಗಳು ಪಾಸಾದುವು. ವಸ್ತುಪ್ರದರ್ಶನವು ಸೊಸೈಟಿಕಟ್ಟಡದಲ್ಲಿಯೇ ಮೇಲ್ಕಂಡ ಅಧ್ಯಕ್ಷರವರಿಂದಲೆ ತೆರೆಯಲ್ಪಟ್ಟಿತು. 28 ನೆಯ ಸಾಲಿನಲ್ಲಿ ಚಿತ್ರದುರ್ಗದಲ್ಲಿ ನಡೆದ ವಸ್ತುಪ್ರದರ್ಶನದಲ್ಲಿದ್ದಂತೆ ಕಣ್ಣಿಗೆ ಹೊಳಪನ್ನುಂಟುಮಾಡುವ ವಿದೇಶೀಯ ಮಣಿಸರಗಳಿಂದಲಂಕರಿಸಲ್ಪಟ್ಟ ಅನ್ಯಪದಾರ್ಥಗಳಿಲ್ಲದಿದ್ದರೂ ಬಹು ಶ್ರಮಸಾಧ್ಯವಾಗಿ ಏರ್ಪಡಿಸಿದ ವ್ಯವಸಾಯ ಮತ್ತು ಕೈಗಾರಿಕೆ ಪ್ರದರ್ಶನಗಳಲ್ಲಿರುವಂತೆ ಸ್ಥಳೀಯ ವಿಧವಿಧವಾದ ಧಾನ್ಯಗಳೂ, ರೈತರಿಗೆ ಬೇಕಾದ ಅನೇಕತರಹದ ಬೀಜಗಳೂ, ಹೆಣ್ಣುಮಕ್ಕಳಿಂದ ತಯಾರಿಸಲ್ಪಟ್ಟ ವಿಧವಿಧವಾದ ಕಸೂತಿಕೆಲಸಗಳೂ, ಮತ್ತು ನಯವಾದ ದಾರಗಳೂ ಮನಸ್ಸನ್ನಾಕರ್ಷಿಸುತ್ತಿದ್ದವು. ಸೊಪ್ಪೆ ಕೊರೆಯುವ ಸಾಧನ, ಕೊಬ್ಬರಿ ತುರಿಯುವ ಯಂತ್ರ, ಇತರ ವಿಧವಾದ ಕಬ್ಬಿಣದ ಸಾಮಾನುಗಳು, ಚರಕಗಳು, ಅನೇಕ ವಿಧ ಅಲಭ್ಯ ವನಸ್ಪತಿಗಳು, ಕಾರ್ಡುಬೋರ್ಡಿನಿಂದ ತಯಾರಿಸಿದ ಮೋಟಾರು ಮತ್ತು ವಿಮಾನಯಂತ್ರದ ರಚನೆಯೇ ಮೊದಲಾದ ಸುಮಾರು 1000ಕ್ಕೆ ಮೇಲ್ಪಟ್ಟು ಪದಾರ್ಥಗಳು ಪ್ರದರ್ಶಿಸಲ್ಪಟ್ಟಿದ್ದನ್ನು ನೋಡಿ ಅಧ್ಯಕ್ಷರು ತಮ್ಮ ಉಪಸಂಹಾರಭಾಷಣದಲ್ಲಿ ಇಲ್ಲಿ ಇನ್ನೊಂದು ನೂತನ ರೀತಿಯಲ್ಲಿ ಎಗ್ಜಿಬಿಷನ್ ನಡೆಯುವದೆಂದು ಮೊದಲೇ ತಿಳಿದಿದ್ದರೆ ವ್ಯವಸಾಯದ ನೂತನ ಕ್ರಮಗಳನ್ನು ಬೋಧಿಸುವ ಅನೇಕ ಸಾಮಾನುಗಳನ್ನು ಕಳುಹಿಸಲು ಏರ್ಪಡಿಸಬಹುದಾಗಿತ್ತು. ಮುಂದಿನ ವರುಷ ವಸ್ತುಪ್ರದರ್ಶನವನ್ನು ಇನ್ನೂ ವಿಶೇಷ ಉತ್ಸಾಹದಿಂದ ನಡೆಸಬೇಕೆಂತಲೂ ವ್ಯವಸಾಯದ ಇಲಾಖೆಯ ಸಾಮಾನುಗಳನ್ನು ಅತ್ಯವಶ್ಯಕವಾಗಿ ಆಗ ತಂದಿಡಿಸಲು ಏರ್ಪಾಡುಮಾಡಬೇಕಾಗಿ ಕೇಳಿಕೊಳ್ಳಬೇಕೆಂತಲೂ ಅಪ್ಪಣೆಕೊಡಿಸಿದುದು ಚಿನ್ನಕ್ಕೆ ಪರಿಮಳ ಕೊಟ್ಟಂತಿತ್ತು. ಇದಾದ ಮೇಲೆ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಸಭಾಕಾರ್ಯವು ಮುಗಿಸಲ್ಪಟ್ಟಿತು.

ಪ್ರತ್ಯಕ್ಷ ದರ್ಶಿ.

ಮಾಗಳದ ದೇವಿಯ ಜಾತ್ರೆಯಲ್ಲಿ ಪ್ರಾಣಿವಧೆಯು ನಿಲ್ಲಿಸಲ್ಪಟ್ಟಿತು.

ಬಳ್ಳಾರಿ ಡಿ|| ಹೂವಿನಹಡಗಲಿ ತಾ|| ಮಾಗಳಗ್ರಾಮದ ಅಸ್ಪೃಶ್ಯರು (ಮಾದಿಗರು) ತಮ್ಮ ಕೇರಿಯ ದುರಗವ್ವನ ಜಾತ್ರೆಯನ್ನು ಬಹುಕಾಲದಿಂದ ನೆರವೇರಿದ ಅಧರ್ಮಪದ್ಧತಿಯ ಮೇರೆಗೆ ಕುರಿ, ಕೋಣ ವಗೈರೆ ಮೂಕಪ್ರಾಣಿಗಳನ್ನು ಬಲಿಕೊಡುವಂತೆ ಇದೇ ಆಷಾಢ ಶುದ್ಧ ೭ ಮಿತಿಗೆ ಮಾಡಲು ನಿಶ್ಚಯಿಸಿದ್ದರು. ಅಷ್ಟರಲ್ಲಿ ಈ ಸಂಗತಿಯು ಈ ಗ್ರಾಮದೊಳಗಿನ ಸಂದಿಗೊಂದಿಗಳಲ್ಲಿ ಹಬ್ಬಿತು. ಕೂಡಲೆ ಇಲ್ಲಿರುವ "ಅಹಿಂಸಾ ಪರಮೋಧರ್ಮಃ" ಎಂಬ ಉದಾತ್ತ ತತ್ವವೇತ್ತರಾದ ಜೈನಬಾಂಧವರು ಇನ್ನುಳಿದ ಸವಜನದ ಪ್ರಮುಖರನ್ನು ಬರಮಾಡಿಕೊಂಡು ಆಲೋಚಿಸಿ ಅಸ್ಪೃಶ್ಯಜನರನ್ನು ಕರೆಯಿಸಿ ತಮ್ಮ ಧೀರೋದಾತ್ತ ವಾಣಿಯಿಂದ ಅಸ್ಪೃಶ್ಯರಿಗೆ ಪ್ರಾಣಿಗಳ ವಧೆಯನ್ನು ಮಾಡಬೇಡಿರಿ; ಪ್ರಾಣಿಗಳ ವಧೆಯನ್ನು ಮಾಡಿದರೆ ನಿಮಗೂ ಅಲ್ಲದೆ ಗ್ರಾಮಕ್ಕೂ ಭಯಂಕರವಾದ ಪೀಡೆಯು ತಪ್ಪದು. ನಿಮ್ಮ ಸಂಕಲ್ಪದಂತೆ ದೇವಿಯ ಜಾತ್ರೆಯನ್ನು ಮಾಡಿದರೆ ದೇವಿಯು ಎಂದಿಗೂ ತೃಪ್ತಳಾಗಲಾರಳು. ನೀವು ದೇವಿಯನ್ನು ಒಲಿಸಿಕೊಂಡು ಇಷ್ಟಾರ್ಥವನ್ನು ಪೂರೈಸಿಕೊಳ್ಳಬೇಕಾಗಿದ್ದರೆ ಕೇವಲ ಅಹಿಂಸಾರೂಪವೂ ಸಾತ್ವಿಕಮಯವೂ ಆದ ಹಣ್ಣುಕಾಯಿಗಳನ್ನು ದೇವಿಗೆ ಅರ್ಪಿಸಿ ಅನ್ನಸಂತರ್ಪಣೆಯನ್ನು ಮಾಡಿರಿ ಎಂದು ಬೋಧಿಸಲು ಪ್ರತಿಯೊಂದರಲ್ಲಿಯೂ ಹಿಂದುಳಿದ ಸಮಾಜದವರೆಂದು ಹೇಳಿಸಿಕೊಳ್ಳುವ ಅಸ್ಪೃಶ್ಯರು ಕೂಡಲೆ ತಮ್ಮ ಸಮ್ಮತಿಯನ್ನು ಕೊಟ್ಟು ಅದೇ ಮೇರೆಗೆ ಸಾತ್ವಿಕರೂಪವಾಗಿ ದೇವಿಯ ಜಾತ್ರೆಯನ್ನು ಮಾಡಿದರು. ಈಗಿನ ವಿಚಾರಕ್ರಾಂತಿಯ ಕಾಲದಲ್ಲಿ ಈ ರೀತಿ ಮಾಡಿದ ನಮ್ಮ ಗ್ರಾಮದ ಯಾವತ್ತೂ ಸಮಾಜಬಾಂಧವರ ಸಾಹಸವು ಅಹಿಂಸಾರೂಪವಾಗಿ ಅಸ್ಪೃಶ್ಯರು ನಡೆಯಿಸಿದ ದೇವಿಯ ಜಾತ್ರೆಯ ಮಹೋತ್ಸವವೂ ಸರ್ವರಿಗೂ ಮಾರ್ಗದರ್ಶಕವಾಗಿದೆ. ಇದರಂತೆ ಪ್ರತಿಯೊಂದು ಸಮಾಜಬಾಂಧವರು ತಮ್ಮ ತಮ್ಮ ಗ್ರಾಮದೇವತೆಯ ಜಾತ್ರೆಯನ್ನು ಸಾತ್ವಿಕರೀತಿಯಿಂದ ನಡೆಯಿಸಿ ಇಹಪರದಲ್ಲಿ ಸುಖಭಾಗಿಗಳಾಗಬೇಕಲ್ಲದೆ "ಅಹಿಂಸಾ ಪರಮೋಧರ್ಮಃ" ಎಂಬ ಜಯಭೇರಿಯನ್ನು ಜಗತ್ತಿನಲ್ಲಿ ಹೊಡೆಯಿಸಿ ಸನ್ಮಾರ್ಗದರ್ಶಿಗಳಾಗಬೇಕೆಂದು ಪ್ರಾರ್ಥಿಸುವ,

ಚಂದ್ರಪ್ಪಾ ಜವಳಿ ಹಮ್ಮಿಗಿ.

ಅಭಿನಂದನೆ.

ಮೈಸೂರ್ ಗೌರ್ನಮೆಂಟ ಲಾ ಸೆಕ್ರೆಟರಿಗಳಾದ ಮ|| ರಾ|| ಪಿ. ಮಹಾದೇವಯ್ಯನವರು ಬಿ.ಎ., ಬಿ.ಎಲ್., ಇವರು ಮೈಸೂರ್ ಹೈಕೋರ್ಟಿನ ಅಡಿಷನಲ್ ಜಡ್ಜರಾಗಿ ನೇಮಿಸಲ್ಪಟ್ಟ ಸಂತೋಷಾರ್ಥವಾಗಿ ದಾವಣಗೆರೆ ವೀರಶೈವ ಮಹಾಜನರು ಇಲ್ಲಿಯ ವೇ|| ಹಿರೇಮಠದ ಮಹಾಲಿಂಗಪ್ಪಯ್ಯನವರ ಭವ್ಯಪಟಾಂಗಣದಲ್ಲಿ ಸಭೆಸೇರಿದರು. ಶ್ರೀಮಾನ್ ಟಿ. ಎಂ. ಓಂಕಾರಪ್ಪಯ್ಯನವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಮ|| ರಾ|| ಸಾಹುಕಾರ್ ಮಾಗಾನಹಳ್ಳಿ ಷಡಕ್ಷರಪ್ಪನವರು ಸೂಚಿಸಲು ಸರ್ವರೂ ಕರತಾಡನೆಯ ಮೂಲಕ ಅನುಮೋದನೆಯನ್ನಿತ್ತರು. ಅನಂತರ ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದರು. ಅನಂತರ ವೇ|| ನಿರಾನಿಮಠದ ಶಾಂತವೀರಾಚಾರ್ಯರು ಶ್ರೀಮಾನ್ ಪಿ. ಮಹಾದೇವಯ್ಯನವರಿಂದ ಈವರೆಗೆ ನೆರವೇರಿಸಲ್ಪಟ್ಟ ಅನೇಕ ಕಾರ್ಯಗಳ ವಿಷಯವನ್ನು ವಿವರಿಸಿ ಹೇಳಿದ್ದಲ್ಲದೆ ವೀರಶೈವಸಮಾಜದ ಮತ್ತು ಧರ್ಮಾಭಿವೃದ್ಧಿಯ ವಿಷಯದಲ್ಲಿ ಇವರಲ್ಲಿರುವ ಅಮೂಲ್ಯವಾದ ನೈಸರ್ಗಿಕಗುಣಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಅನಂತರ ಈ ಕೆಳಗೆ ವಿವರಿಸಲ್ಪಟ್ಟ ಠರಾವುಗಳು ಸರ್ವಾನುಮತಿಯಿಂದ ಪಾಸಾದವು.

1. ಲಾ ಸೆಕ್ರೆಟರಿಗಳಾದ ಮೆ|| ಪಿ. ಮಹದೇವಯ್ಯನವರು ಬಿ.ಎ., ಬಿ.ಎಲ್., ಇವರು ಮೈಸೂರು ಹೈಕೋರ್ಟ್ ಅಡಿಷನಲ್ ಜಡ್ಜರಾಗಿ ನೇಮಿಸಲ್ಪಟ್ಟದ್ದರಿಂದ ನಾವುಗಳು ತುಂಬಾ ಸಂತೋಷಪೂರ್ವಕ ಅಭಿವಂದಿಸುತ್ತೇವೆಂದು ಮ|| ರಾ|| ಯಜಮಾನ ಬೆಳ್ಳುಡಿ ವೀರಪ್ಪನವರು ತಂದ ಠರಾವು ಸರ್ವಾನುಮತಿಯಿಂದ ಅಂಗೀಕರಿಸಲ್ಪಟ್ಟಿತು.

2. ವೃತ್ತಪತ್ರಿಕೆಗಳಿಗೂ ಮ|| ರಾ|| ಶ್ರೀಮಾನ್ ಪಿ. ಮಹಾದೇವಯ್ಯನವರಿಗೂ ಬರೆದು ಕಳುಹಿಸುವ ಅಧಿಕಾರವು ಅಧ್ಯಕ್ಷರಿಗೆ ವಹಿಸಲ್ಪಟ್ಟಿತು.

ತಾ|| 21-7-30

ಟಿ. ಎಂ. ಓಂಕಾರಪ್ಪಯ್ಯ, ದಾವಣಗೆರೆ.

ತಪ್ಪುಮಾತಿಗೆ ಕಪ್ಪುಹತ್ತುವದೇ ನಿಜ!

ಮುಸಿಗಿ ಗ್ರಾಮದ ಈ ವರ್ಷ ಬಸವಜಯಂತ್ಯುತ್ಸವದ ಲೇಖವನ್ನು "ಸ್ವಾರ್ ಪತ್ರಿಕೆಯಲ್ಲಿ" ಪ್ರಕಟಿಸಿ ಅದರಲ್ಲಿ ವೀರಶೈವರೊಳಗೆ ಮನಸ್ತಾಪವುಂಟಾಗುವಂತಹ ತಪ್ಪುಮಾತೊಂದನ್ನು ಬರೆದಿರುತ್ತಾರೆ. ಆದರೆ ಲೇಖಕನ ಹೆಸರನ್ನು ಮಾತ್ರ ಬರೆದಿಲ್ಲ. ಲೇಖಕರು ಅಲ್ಲದವಾತಿನ ಗೊಂದಲಕ್ಕೆ ಹೋಗಿ ವಾದಾಪವಾದಗಳಿಗೀಡಾಗಬಾರದೆಂದು ಅದನ್ನು ಇಲ್ಲಿ ತಿಳಿಸುತ್ತೇವೆ:—

ಬಸವಜಯಂತ್ಯುತ್ಸವದಲ್ಲಿ ಧಿಧಾರಿಗಳಾಗಿ ಭಾಗತೆಗೆದುಕೊಂಡವರೊಳಗೊಬ್ಬರಾದ "ವಸ್ತ್ರದ ಮಲಕಾಜಯ್ಯನವರಿಗೆ ಮಠದ ಮಲಕಾಜಯ್ಯನವರೆಂದು ಬರೆದಿರುತ್ತಾರೆ ಇದು ಶುದ್ಧ ತಪ್ಪಾದ ಮಾತಾಗಿದೆ. ಯಾತಕ್ಕೆಂದರೆ ಗತವರ್ಷ ಅಶ್ವಯುಜ ಮಾಸದಲ್ಲಿ ಕೇದಾರದ ಶ್ರೀ ಜಗದ್ಗುರುಗಳು ಗ್ರಾಮಕ್ಕೆ ಬಿಜಯಂಗೈಸಿ ಮುಕ್ಕಾಂಮಾಡಿದಾಗ್ಗೆ ಮುಸಿಗಿ ಗ್ರಾಮದ ಮಠಗಳ ಸಂಬಂಧಚರ್ಚೆಯು ನಡೆದಾಗ ಸದರಿ ವಸ್ತ್ರದ ಮಲಕಾಜಯ್ಯ ಹಾಗೂ ಲಿಂಗಸೂಗೂರು ಅಮರಪ್ಪಶಾಸ್ತ್ರಿ ಈ ಉಭಯರು ಶ್ರೀ ಸನ್ನಿಧಿಯಲ್ಲಿ ಈ ಗ್ರಾಮಕ್ಕೆ ಮಠದವರಲ್ಲನೆಂದು ಕಬೂಲಿಕೊಟ್ಟಿದ್ದಾರೆ. ಇದಲ್ಲದೆ ಗ್ರಾಮದ ಶೆಟ್ಟಿಯಾದ ಲಿಂಗಶೆಟ್ಟಿಯವರಾದಿಯಾಗಿ ಮೇಲಿನ ಉಭಯರು ಮಠದವರಲ್ಲವೆಂದು ಸಾಕ್ಷಿ ಹೇಳಿದ್ದಾರೆ. ಇಷ್ಟಲ್ಲದೆ ಶ್ರೀ ಜಗದ್ಗುರು ಪೀಠಾಚಾರ್ಯರ ಅಪ್ಪಣೆಯಿಲ್ಲದೆ ಗ್ರಾಮದ ಮಠದವರಾದಿಯಾಗಿ ಸಮಸ್ತ ದೈವದವರ ಒಪ್ಪಿಗೆಯಿಲ್ಲದೆ ಲಿಂಗಮುದ್ರಾಸ್ಥಾಪನಾದಿಕಾರಣಗಳಿಲ್ಲದೆ ಮನಬಂದಂತೆ ಮಠಗಳೆಂದು ಕಲ್ಪಿಸಿಕೊಳ್ಳುವದು ನಿಜವಾಗಿ ತಪ್ಪಾಗುವದಲ್ಲದೆ ಸಮಾಜದ ಅನೈಕ್ಯಕ್ಕೆ ಕಾರಣವಾಗುವದು. ಇಂಥ ಪ್ರಸಂಗಗಳಿಗೆ ಯಾರೂ ಆಶ್ರಯ ಕೊಡಬಾರದೆಂದು ಶ್ರೀ ಸನ್ನಿಧಿಯವರು ಅಪ್ಪಣೆಕೊಡಿಸಿದರು. ಹೀಗೆ ನಡೆದಿದ್ದಲ್ಲದೆ ಮುದಗಲ್ಲ ಮುಕ್ಕಾಮಿನಿಂದ ವಸ್ತ್ರದ ಮಲಕಾಜಯ್ಯ ಅಮರಪ್ಪಶಾಸ್ತ್ರಿ ಇವರಿಗೆ ಮುಸಿಗಿಗ್ರಾಮದ ಶೀರಸ್ತೆದಾರರು ಮಠದವರೆಂದು ಕರೆಯಬಾರದೆಂದು ಹುಕುಮವನ್ನು ದಯಪಾಲಿಸಿದ್ದಾರೆ. ಹೀಗಿದ್ದು ಯಾರೋ ಒಬ್ಬರು ತಮ್ಮ ಹೆಸರನ್ನು ತೋರಿಸದೆ ಮಠದ ಮಲಕಾಜಯ್ಯನವರೆಂದು ಬರೆದುಕೊಂಡದ್ದನ್ನು ನೋಡಿ ಆಶ್ಚರ್ಯವುಂಟಾಗುತ್ತದೆ. ಈ ಊರವರು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಗಳನ್ನು ಮಾಡದೆ ಕೈಬಿಟ್ಟಿರುವದೊಂದು ತುಂಬಾ ವ್ಯಸನದ ಸಂಗತಿಯಾಗಿದೆ. ಸಮಾಜದಲ್ಲಿ ಇಂಥ ಅಲ್ಲದ ಸಾಗ್ನಸ (ಮಠ ಮುಂತಾದವು)ಗಳನ್ನು ಯಾರೂ ಪ್ರಚುರಪಡಿಸಬಾರದೆಂದು ನಮ್ಮ ಸೂಚನೆ.

ತಾ|| 23-7-30

ಹಿರೇಮಠದ ಸಿದ್ಧಲಿಂಗಯ್ಯ ಸಾ|| ಮುಸ್ಕಿ.

ಜಾಹೀರಾತು.

ಸವಣೂರ ಸಂಸ್ಥಾನ ಪೈಕಿ ಮಾದಾಪೂರ ಗ್ರಾಮದ ಹಿರೇಮಠದಲ್ಲಿ ಸಂಸ್ಕೃತ ಪಾಠಶಾಲೆಯು ಸ್ಥಾಪನವಾಗತಕ್ಕದ್ದದೆ. ಅದಕ್ಕೆ ಒಬ್ಬ ಶಾಸ್ತ್ರಿಗಳು ಬೇಕಾಗಿದೆ. ಪ್ರಥಮಕ್ಕೆ ತಿಂಗಳಿಗೆ ೨೦ ರೂಪಾಯಿ ಕೊಡಲಾಗುತ್ತದೆ. ಅಲ್ಲದೆ ಇತರ ಸವಲತ್ತು ಕೂಡ ಒದಗಿಸಿಕೊಡಲಾಗುವದು. ವಿಶೇಷ ಮಾಹಿತಿಯು ಒಗ್ಗೆ ಕೆಳಗೆ ಬರೆದ ಪತ್ತೆಗೆ ಪತ್ರವ್ಯವಹಾರ ಮಾಡಬೇಕು.

ಮಹಾದೇವಪ್ಪ ಕುಂಬಾರ,
ಪೋಸ್ಟ ಮುಕ್ಕಾಂ, ಬಂಕಾಪೂರ,
ಜಿಲ್ಲಾ ಧಾರವಾಡ.

ಮ|| ಆನವಟ್ಟಿ ರಾಮರಾಯರು "ನೀತಿಸುಧಾರಸ" ಎಂಬ ಹೆಸರಿನಿಂದ ಶೋಭಿಸುತ್ತಿರುವ ಷಟ್ಪದೀರೂಪವಾದ ಅನೇಕ ಪದ್ಯಗಳನ್ನು ರಚಿಸಿರುತ್ತಾರೆ ಈ ಪದ್ಯಗಳು ಲಲಿತವೂ, ಗಾಂಭೀರ್ಯವೂ, ಸರ್ವಜನೋಪಯುಕ್ತವೂ ನೀತಿಬೋಧಕವೂ ಆದುದರಿಂದ ನಮ್ಮ ಪತ್ರಿಕಾವಾಚಕರ ಅವಗಾಹನೆಗಾಗಿ ಪ್ರತಿವಾರವೂ ಸ್ವಲ್ಪಸ್ವಲ್ಪವಾಗಿ ಮುದ್ರಣ ಮಾಡಿಸುತ್ತ ಬರುತ್ತೇವೆ. ವಾಚಕರು ಈ ಪದ್ಯಗಳಲ್ಲಿ ಬರುವ ನೀತಿಗಳನ್ನು ತಿಳಿದು ಈ ಕವಿಗಳ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಕೋರುತ್ತೇವೆ. ಸಂ.—

೧, ಧೈರ್ಯ.

[ಮ|| ಆನವಟ್ಟಿ ರಾಮರಾಯರಿಂದ.]

ಭಾ|| ಕ್ಷಿತಿಯೊಳುದ್ಭವಿಸಿರ್ಪ ಮನುಜಂ |
ಸತತ ಕಷ್ಟವ ತಾಳಿ ಕೊರಗುತ |
ಮಿತಿಯ ಮೀರಿದ ದುಃಖಕೊರತೆಗಳಾಂತು ಜೀವಿಪನು ||
ಅತಿಶಯದ ಸುಖಪಾನಲಾಶಿಸೆ |
ಜತನದಿಂ ಜೀವಿತದಕಾಲದೆ |
ಹಿತದೆ ಧೈರ್ಯವಬಿಡದೆ ತಾಳುವುದೋತು ಮಾನವಗೆ ||೧||

ಹೊರೆಯಹೊರುತಂ ಹಸಿವುತೃಷೆಯಿಂ |
ದಿರುತ ಅತಿತಾಪವನು ತಾಳುತ |
ಭರದಬಿಸಿಲೊಳು ಸಿತತಮಯವಾಗಿರುವ ಕಾನನದೆ ||
ಚರಿಸುತಿರ್ಪೊಂಟೆಯ ತೆರದಿಂದೆ |
ಮೆರೆದ ಧೈರ್ಯದೊಳಳಲುಸೈಸುವ |
ಪುರುಷನೇ ಕಷ್ಟಗಳವಾರಿಸಿ ಧರೆಯೊಳೆಸೆಯುವನು ||೨||

ಧನಕೆ ಧೀರತೆಯಾಂತ ಪುರುಷಂ |
ಧನದ ಹೀನತೆಗಿಷತು ಲೆಕ್ಕಿಸ |
ದನುದಿನಂ ತನಗೊದಗಿದಳಲಂ ವಾರಿಸಿಕೊಳ್ಳುವ ||
ಮನದ ದಾರ್ಢ್ಯವ ಹಿಂಗದಂತೆಯೆ |
ಘನತರದ ಸಾಹಸವು ಜೀವಿತ |
ಮೆನುತ ಸೌಖ್ಯದ ಪಥದ ಬೇರೆಯ ವಿಕಾಂದಿರುತಿಹನು ||೩||

ಜಲಧಿತಡಿಯೊಳು ಬಂಡೆಯಂದದಿ |
ನಿಲುತ ತನ್ನಾವರಿಸುತೈತಹ |
ವಿಲಯಗೈಸುವ ಕಷ್ಟತಿದಿರಾಗಿಸುತ ಚಿತ್ತವನು ||
ನಿಲಿಸುತೊಂದುಸ್ಥಾಯಿಯೊಳು ಭೂ |
ತಲದೆ ಗಿರಿಶಿಖರದೊಳೆ ಕಾಣಿಸಿ |
ಚಲಿಸದಿಹ ಗೃಹದಂತೆ ಶಿರವೆತ್ತಿರುತ ಬಾಳುವನು ||೪||

ಎದರು ಬಂದೊದಗಿರ್ದಕಾಲದೆ |
ದೃಢತರದೆ ಚಿತ್ತವನು ನಿಲಿಸೈ |
ಮಿಡಿವೆನೆಂಬಾ ಭಯವಬಿಡುತೀಂ ರಣದೆನಿಲ್ಲುತಲೆ ||
ಕಡಿದರಿಗಳಂ ಜಯವನೊಂದುತ |
ಬಿಡದೆಕೀರ್ತಿಕಿರೀಟವಾನುತ |
ಕಡೆಗೆ ರಾಜನತೆರದೆ ರಾಜಿಪೆತಳೆಯೆ ಧೈರ್ಯವನು ||೫||

ಘನತರದ ದೃಢಚಿತ್ತದಿರಲೇಂ |
ಮನದೆ ಸಂಕೋಚವನುತಾಳ್ದಿದೆ |
ಮನುಜ ತಾನೇನಮುಕಾಸ್ಪದವಹನು ಹಿಂಜರಿದು ||
ಅನುವರಿತು ನಡೆದುದಿರೆ ಸಂಭ್ರಾ |
ವನೆಯನಾಸದೆ ತುಚ್ಛನಿವನೆಂ |
ದೆನಿಸಿಕೊಳ್ಳುತ ದುಃಖದಿಂ ಮೃತಜೀವಿಯಾಗಿರುತ ||೬||

ಪವನಸುಳಿವಿಗೆ ತೃಣಮದಗಲುತ |
ನವಕದಲಿ ತಾದೂರಕೆಸಂದಿ |
ರುವ ಪರಿಯೊಳಳಲಂಗೆ ತಾಗುರಿಯಾಗುತಳುತಿರುತ ||
ಭುವಿಯೊಳಗೆ ವರ್ತಿಸುವ ಸನ್ಮಾ |
ರ್ಗವನು ತಿಳಿಯದೆ ಮತಿಯೊಳೀವಿಕ |
ಲವಂತಾಳ್ದಿದೆ ಹಂದೆಯಂದದಿ ಜೀವಿಸಿರ್ಪನಲೆ ||೭||

ತಣ್ಣೀರಿನ ಸ್ನಾನದಿಂದ ರಕ್ತಕ್ಕಾಗುವ ಪ್ರಯೋಜನ.

"ಪಿಸಿಕಲ್ ಥೀರಾಪ್ಯುಟಿಕ್" ಎಂಬ ಪತ್ರಿಕೆಗೆ ಡಾಕ್ಟರ್ ವೈಧೇಬಾಚ್ ಎಂಬುವರು ಬರೆದ ಲೇಖನದಲ್ಲಿ, ನೀರಿನ ಚಿಕಿತ್ಸೆಯಿಂದ ದೇಹದ ರಕ್ತಸಂಚಾರಕ್ಕೆ ಬಹಳ ಗುಣವುಂಟೆಂದು ಬರೆದಿರುವರು. ವಿಯೆನ್ನಾ ನಗರದ ವಿಂಟರ್‌ನಿಟ್ಜ್ ಶಾಲೆಯಲ್ಲಿ, ಆರೋಗ್ಯಶಾಲಿಗಳಾಗಿದ್ದ ವಿದ್ಯಾರ್ಥಿಗಳ ಮೇಲೆ ಮಾಡಿದ ಶೋಧನೆಗಳಿಂದ, ತಣ್ಣೀರಿನಲ್ಲಿ ಚೆನ್ನಾಗಿ ಮೈತಿಕ್ಕಿ ಅಲ್ಪಕಾಲ ಸ್ನಾನ ಮಾಡಿದರೂ, ರಕ್ತದಲ್ಲಿ 10 ಲಕ್ಷದಿಂದ 15 ಲಕ್ಷದ ವರೆಗೆ ಕೆಂಪು ರಕ್ತಕಣಗಳೂ, ಮೂರರಷ್ಟು ಬಿಳಿಯ ರಕ್ತಕಣಗಳೂ, ಶೇಕಡಾ 20 ಅಥವಾ 25 ಭಾಗ "ಹೇಮೋಗ್ಲಾಬಿ" ನೂ ಹೆಚ್ಚುವುದಾಗಿ ತಿಳಿದುಬಂದಿದೆ.

ಶೀತಳ ವಸ್ತುಸ್ಪರ್ಶದಿಂದ ರಕ್ತದಲ್ಲಿ ಸಂಚಾರವೇಗವು ಹೆಚ್ಚಿ, ಅದರೊಳಗಿನ ಜೀವಕಣಗಳೂ, ಅಧಿಕವಾಗುವುವು. ನಾಲ್ಕಾರು ವಾರಗಳು ಈ ಚಿಕಿತ್ಸೆಯನ್ನು ನಡೆಸಿದರೆ, ಕೆಂಪುರಕ್ತಕಣಗಳೂ, ಹೇಮೋಗ್ಲಾಬಿನೂ ಬಹಳ ಹೆಚ್ಚುವುವು. ಈ ಚಿಕಿತ್ಸೆಯನ್ನು ಬಿಡದೆ ಮಾಡುತ್ತಿದ್ದರೆ, ಅಸ್ಥಿಪಂಜರದ ಕಾರ್ಯವೂ, ರಕ್ತವನ್ನು ತಯಾರಿಸಲು ಸಹಕಾರಿಗಳಾದ ರಕ್ತನಾಳಗಳ ಕಾರ್ಯವೂ ಹೆಚ್ಚುವುವು.

"ಗುಡ್ ಹೆಲ್ತ್".

ಪರದೇಶೀಯ ವಸ್ತ್ರಗಳನ್ನು ಬಹಿಷ್ಕರಿಸಿರಿ! ಕರ್ನಾಟಕ ವ್ಯಾಪಾರಸ್ಥರಿಗೆ ಬಿನ್ನಹ.

ನಾವು ಪರದೇಶೀಯ ಬಟ್ಟೆಗಳಿಗೂ ಮತ್ತು ಪರದೇಶೀ ನೂಲಿನಿಂದ ಸಿದ್ಧವಾಗುವ ಎಲ್ಲ ತರದ ಬಟ್ಟೆಗಳಿಗೂ ಬಹಿಷ್ಕಾರ ಹಾಕಲೇಬೇಕು. ಇಡೀ ಹಿಂದುಸ್ಥಾನದಲ್ಲಿ ಕಾಂಗ್ರೆಸ ಕಾರ್ಯಕಾರಿಮಂಡಲ (ವರ್ಕಿಂಗ ಕಮಿಟಿ) ದ ಗೊತ್ತುವಳಿಗನುಸರಿಸಿ ಅಂತಹ ಬಟ್ಟೆಗಳನ್ನು ಮಾರಗೊಡಬಾರದೆಂದು ನಡೆಸಿರುವ ಕಾರ್ಯದ ವಿಷಯವು ಸರ್ವರಿಗೂ ತಿಳಿದಿದ್ದಾಗಿದೆ. ಅದಕ್ಕನುಸಾರವಾಗಿ ಕರ್ನಾಟಕದಲ್ಲಿಯೂ ಈ ಕೆಲಸವು ಪ್ರಾರಂಭವಾಗಿದೆ. ಕರ್ನಾಟಕದಲ್ಲಿಯ ವ್ಯಾಪಾರಸ್ಥರು ನಿಜವಾಗಿಯೂ ತಾಯ್ನಾಡಿನ ಅಭಿಮಾನಿಗಳಿದ್ದರೆ ಅಥವಾ ಸ್ವದೇಶ ಪ್ರೇಮವು ಅವರಲ್ಲಿ ಉಕ್ಕೇರುತ್ತಿದ್ದರೆ, ಅವರು ಪರದೇಶದಿಂದ ಬಂದ ಅರಿವೆಗಳನ್ನೂ, ಪರದೇಶೀ ನೂಲಿನಿಂದ ಸಿದ್ಧವಾದ ಅರಿವೆಗಳನ್ನೂ, ಅಥವಾ ಅಂಥವರಲ್ಲಿ ತಯಾರಾದ ನೂಲನ್ನು ತರಿಸಿ ಇಲ್ಲಿಯೇ ಕೈಮಗ್ಗಗಳಿಂದ ನೇಯಲ್ಪಟ್ಟ ಬಟ್ಟೆಗಳನ್ನೂ ಮಾರಾಟ ಮಾಡಬಾರದು, ವ್ಯಾಪಾರಸ್ಥರು ನಿಜವಾಗಿಯೂ ದೇಶಪ್ರೇಮಿಗಳೆಂಬುದನ್ನು ನಾವು ಬಲ್ಲೆವು. ಅವರಿಗೆ ಇರತಕ್ಕ ಸಂಕಟಗಳೇನೆಂಬುದನ್ನೂ ಬಲ್ಲೆವು: ಆದರೆ ಪ್ರತಿಯೊಬ್ಬನು ಸ್ವಂತದ ತೊಂದರೆಗಳನ್ನೂ ಸಂಕಟಗಳನ್ನೂ ನೋಡುತ್ತ ಕುಳಿತರೆ ರಾಷ್ಟ್ರದ ಅಹಿತವನ್ನು ನಾವೆಲ್ಲರೂ ಕೂಡಿ ಮಾಡಿದಂತಾಗುತ್ತದೆ. ಆದಕಾರಣ ಸದ್ಯಕ್ಕೆ ತಮ್ಮಲ್ಲಿರತಕ್ಕ ಪರದೇಶೀಯ ಅರಿವೆಯನ್ನು ಬದಿಗಿಟ್ಟು ಸ್ವದೇಶೀಯ ಮಾಲನ್ನು ತರಿಸಿ ವ್ಯಾಪಾರಮಾಡಬೇಕು. ತಮಗಾಗುವ ಹಾನಿಯನ್ನು ಸಹಿಸಲು ಶಕ್ಯವಿಲ್ಲದಿದ್ದಲ್ಲಿ ಕನಿಷ್ಠಪಕ್ಷಕ್ಕೆ ಕಾಂಗ್ರೆಸ್ಸಿನವರು ಪುನಃ ಹೇಳುವವರೆಗಾದರೂ ಬದಿಗಿಡಬೇಕೆಂದು ನಾವು ಎಲ್ಲ ವ್ಯಾಪಾರಸ್ಥರಿಗೆ ವಿನಂತಿಮಾಡಿಕೊಳ್ಳುತ್ತೇವೆ.

ಕಾಂಗ್ರೆಸ್ಸಿನವರು ಮಾಡಿದ ಸವಿನಯ ಸೂಚನೆಗಳಿಗೆ ವ್ಯಾಪಾರಸ್ಥರು ಮಾನಕೊಡದೆ ಇದ್ದರೆ ಸ್ವಾತಂತ್ರ್ಯದ ಸಲುವಾಗಿ ತಮ್ಮ ಪ್ರಾಣವನ್ನರ್ಪಿಸಲು ಸಿದ್ಧರಾದ ಕರ್ನಾಟಕ ಸತ್ಯಾಗ್ರಹ ಮಂಡಲದವರಿಗೆ, ದುರ್ದೈವದಿಂದ ತಮ್ಮ ಪ್ರಾಂತದೊಳಗಿನ ಎಲ್ಲ ಸ್ವಯಂಸೇವಕರನ್ನು ಇಂತಹ ಅಂಗಡಿಗಳೆದುರಿಗೆ ನಿಲ್ಲಿಸಿ, ಪರದೇಶಿಯ ಬಟ್ಟೆಗಳ ವ್ಯಾಪಾರವನ್ನು ನಿಲ್ಲಿಸುವ ಕಾರ್ಯವನ್ನು ಪಿಕೆಟಿಂಗಿನದ್ವಾರದಿಂದಾಗಲೀ ಅಥವಾ ಇತರ ಮಾರ್ಗದಿಂದಾಗಲೀ ಏರ್ಪಾಡು ಮಾಡುವದರಲ್ಲಿ ಬರುವದು. ವ್ಯಾಪಾರಸ್ಥರು ಅಂತಹ ಪ್ರಸಂಗವನ್ನು ತರಗೊಡಬಾರದೆಂದೂ, ಸ್ವದೇಶದಲ್ಲಿ ಜನ್ಮತಾಳಿದ ಸ್ವದೇಶ ಪ್ರೇಮಿಗಳಾದ ಸ್ವಯಂಸೇವಕರನ್ನು ಸೆರೆಮನೆಗೆಳೆಯಲು ಪ್ರಯುಕ್ತಿಸಬಾರದೆಂದೂ ಅದರಿಂದ ತಮಗೊದಗುವ ಅಪಕೀರ್ತಿಯನ್ನು ಕಟ್ಟಿಕೊಳ್ಳಬಾರದೆಂದೂ ನಾವು ಬಿನ್ನಹ ಮಾಡಿಕೊಳ್ಳುತ್ತೇವೆ.

ಈ ಸಂದರ್ಭದಲ್ಲಿ ನಾವು ನಮ್ಮ ಪ್ರಾಂತದಲ್ಲಿಯ ಎಲ್ಲ ಭಗಿನಿಯರೆದುರಿಗೆ ಇದೇ ಸಂಗತಿಯನ್ನು ಇಡಬೇಕಾಗಿದೆ. ಹುಬ್ಬಳ್ಳಿ, ಧಾರವಾಡ, ಗದಗ, ಬೆಟಗೇರಿ, ಶಹಪೂರ, (ಬೆಳಗಾಂವಿ.) ಗುಳೇದಗುಡ್ಡ ಬಾಗಲಕೋಟಿ, ಮುಂತಾದ ಸ್ಥಳಗಳಲ್ಲಿ ದೊರೆಯುವಂತಹ ಸೀರೆ, ಖಣಗಳನ್ನು ದೊರಕಿಸಲು ಯತ್ನಿಸಬೇಕು. ಅವು ದೊರೆಯದೇ ಇದ್ದ ಪಕ್ಷಕ್ಕೆ ದೇಶೀಯ ಗಿರಣಿಗಳ ನೂಲಿನಿಂದ ಸಿದ್ಧವಾದ ಸೀರೆ ಖಣಗಳನ್ನೇ ಉಪಯೋಗಿಸಬೇಕೆಂದು ನಮ್ಮ ಆಗ್ರಹಪೂರ್ವಕ ಸೂಚನೆ ಅದೆ.

ಮೋಸಹೋದೀರಿ! ಆಯಾ ಊರಿನ ಕಾಂಗ್ರೆಸ ಕಮಿಟಿಯ ಮುದ್ರೆ ಇಲ್ಲದೆ ಇರುವಂತಹ ಗಿರಣಿಯ ನೂಲಿನಿಂದ ಸಿದ್ಧವಾಗುವ ಬಟ್ಟೆಗಳನ್ನು ಯಾವ ವ್ಯಾಪಾರಸ್ಥರೂ ಕೊಳ್ಳತಕ್ಕದ್ದಲ್ಲ. ಸ್ವದೇಶಾಭಿಮಾನಿಗಳಾದಂಥ ಮುಂಬಯಿ, ಪುಣೆ, ಅಹಮದಾಬಾದ, ನಾಗಪೂರ ಮುಂತಾದ ಸ್ಥಳಗಳಲ್ಲಿಯ ವ್ಯಾಪಾರಸ್ಥರು ನಮ್ಮಲ್ಲಿಯ ಕಾಂಗ್ರೆಸ್ಸ ಕಮೀಟಿಗಳ ಮುದ್ರೆಗಳಿಲ್ಲದೆ ಇರುವ ಇಲ್ಲಿಯ ಸೀರೆ ಖಣಗಳನ್ನು ತರಿಸಬಾರದೆಂದು ನಾವು ಅವುಗಳಿಗೆ ಆಗ್ರಹಪೂರ್ವಕ ಸೂಚನೆ ಮಾಡಿದ್ದೇವೆ.

ಎಚ್ಚರಾಗಿರಿ! ಬಟ್ಟೆಗಳನ್ನು ಸಿದ್ಧಮಾಡಲಿಚ್ಛಿಸುವವರು ಕಾಂಗ್ರೆಸ್ಸ್ ಕಮಿಟಿಯವರು ಹೇಳುವ ಗಿರಣಿಗಳೊಳಗಿನಿಂದ ತರಿಸಬೇಕು ಮತ್ತು ಅದರಿಂದಲೇ ಸೀರೆ, ಖಣಗಳನ್ನು ನೇಯಿಸಬೇಕು. ಇದರ ಸಲುವಾಗಿ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳುವವನು ಅವಶ್ಯವಿದ್ದರೆ ನಮಗೆ ಸ್ವತಃ ಬಂದು ಭೆಟ್ಟಿಯಾಗತಕ್ಕದ್ದು.

ನಾ. ಸು. ಹರ್ಡೀಕರ ಅಧ್ಯಕ್ಷ,
ಕರ್ನಾಟಕ ಸತ್ಯಾಗ್ರಹಮಂಡಲ ಹುಬ್ಬಳ್ಳಿ.

ಜರ್ಮನಿಯ ಪುನರ್ಜನ್ಮ.

"ಆಧುನಿಕ ಇತಿಹಾಸ" (Current History) ಎಂಬ ಪತ್ರದಲ್ಲಿ ಜಾರ್ಜ ವ್ಯಾಕ್ಸ್ ರೀಕನ್ ಸಾಹೇಬರು ಆಶ್ಚರ್ಯವಾದ ಜರ್ಮನಿಯ ಪುನರ್ಜನ್ಮದ ವಿಷಯದಲ್ಲಿ ಬರೆದದ್ದು ಮನನೀಯವಾಗಿದೆ:—

"ಜರ್ಮನಿಯೆಂದರೆ ಅರ್ಥಶಾಸ್ತ್ರದ ಇತಿಹಾಸದಲ್ಲಿಯ ಒಂದು ವಸ್ತುಪಾಠವಾಗಿದೆ. ಅದು ಮಹಾಯುದ್ಧದ ಹೊಡೆತದಿಂದ ಬಲು ಸೋತುಹೋಗಿತ್ತು. ಶಾರೀರಿಕ ನಾಶಕ್ಕೂ ಆರ್ಥಿಕ ನಾಶಕ್ಕೂ ಮಿತಿಯೇ ಇದ್ದಿಲ್ಲ! ಅದರಿಂದೊದಗಿದ ಜನತೆಯಲ್ಲಿಯ ಹೀನಸ್ಥಿತಿಯಂತೂ ಹೇಳಲಾಸಲ್ಲ! ದೇಶದ ತುಂಬ ದಾರಿದ್ರ್ಯವು ಮನೆಮಾಡಿತ್ತು. ರಾಜ್ಯತಂತ್ರದಲ್ಲಂತೂ ವ್ಯವಸ್ಥೆ ಉಳಿಯಲಿಲ್ಲ. ಇಂಥ ಪರಿಸ್ಥಿತಿಯಲ್ಲೂ ಕೂಡ ಅಲ್ಲಿಯ ರಾಷ್ಟ್ರೀಯ ಪಕ್ಷವು ಸ್ವಲ್ಪಕಾಲದಲ್ಲಿಯೇ ಪುನಃ ಮೊದಲಿನ ಉರ್ಜಿತ ಸ್ಥಿತಿಯನ್ನು ಕಂಡದ್ದು ಮಹದಾಶ್ಚರ್ಯವಲ್ಲವೇ? ಜರ್ಮನಿಯ ಯೋಗ್ಯತೆಗೂ, ಜರ್ಮನರ ಶೀಲಕ್ಕೂ ಇದು ಭೂಷಣವೇ!

ಜರ್ಮನರ ಈ ಪರಾಕ್ರಮದಿಂದ ಕಲಿತುಕೊಳ್ಳುವ ಪಾಠವೇನು? ಮುಂದರಿದ ಯಾವದೇ ರಾಷ್ಟ್ರವಾಗಲಿ, ಸಮಾಜವಾಗಲಿ ಯುದ್ಧ, ಸೈನ್ಯ ಮುಂತಾದ ಹೊರಗಿನ ಉಪಕ್ರಮಗಳನ್ನು ಬದಿಗಿಟ್ಟು, ಕೇವಲ ದೇಶದೊಳಗೇ ಇದ್ದ ಸಾಮಗ್ರಿಗಳನ್ನು ವ್ಯವಸ್ಥಿತವಾಗಿ ಉಪಯೋಗಿಸಿಕೊಂಡರೆ ಆರ್ಥಿಕ ಉನ್ನತಿಯನ್ನೂ ಸುಖಸೌಕರ್ಯಗಳನ್ನೂ ಸಹಜವಾಗಿ ಹೊಂದಬಹುದೆಂಬ ತತ್ವವನ್ನೇ ಪ್ರತಿಪಾದಿಸುವದಿಲ್ಲವೇ?

ಜ್ಞಾನವೃದ್ಧಿಯು ಜರ್ಮನಿಯಲ್ಲಿ ಹೆಚ್ಚಾಗಿದೆ. ಅದರ ಸಂಸ್ಕೃತಿಯಂತೂ ಮೇಲಾದದ್ದೆಂಬುದರಲ್ಲಿ ಸಂದೇಹವೇ ಇಲ್ಲ. ಸರ್ವಶ್ರುತವಾಗಿ ಸೈನ್ಯಬಾಹೆಗೆ ಅಳತೆಗೆಟ್ಟು ಕೊಟ್ಟ ಮಹತ್ವದಿಂದಾಗಲಿ, ಇಲ್ಲವೆ ಸರ್ವಶ್ರೇಷ್ಠವಾದ ಕೈಸರ ಮತ್ತು ಅವನ ವೀರಸಂಘದ ಪ್ರಾಬಲ್ಯದಿಂದಾಗಲಿ, ಸಂಗೀತದಲ್ಲಿಯೂ, ಬುದ್ಧಿಯಲ್ಲಿಯೂ ಒಂದು ಕಾಲಕ್ಕೆ ಜರ್ಮನಿಯು ಪಡೆದ ಅಗ್ರಗಣ್ಯತ್ವವು ಕಳೆಗುಂದಿತ್ತು. ಸೈನ್ಯಪ್ರಾಧಾನ್ಯದಿಂದ ರಾಷ್ಟ್ರಜೀವವೇ ಉಸುರುಗಟ್ಟಿದಂತಾಗಿತ್ತು. ಅದೇ ಈಗಿನ ಹೊಸ ಜರ್ಮನಿಯಲ್ಲಿ ಹಿಂದಿದ್ದ ಸ್ವಂತ ಒಡೆತನದ ಶಾಲೆಗಳನ್ನು ತೆಗೆದುಹಾಕಿದ್ದರಿಂದ, ಎಲ್ಲರೂ ಶಿಕ್ಷಣವನ್ನು ಕೊಡುವದು ಸುಲಭವಾಗಿದೆ. ಅದ್ದರಿಂದ ಈಗಾಗಲೇ ಇಡೀ ಯೂರೋಪಖಂಡದಲ್ಲಿ ಜರ್ಮನಿಯು ಸಾಹಿತ್ಯಸಮೃದ್ಧಿಯ ಹೆಸರನ್ನು ಪಡೆಯಲಾರಂಭಿಸಿದೆ. ತರುಣರ ಸಂಘಗಳು ಮತ್ತು ಆಟ ನೋಟಗಳಲ್ಲಿಯ ಅವರ ಪ್ರಗತಿಯು ಕೂಡ ರಾಷ್ಟ್ರಸಂಘಟನೆಗೆ ಸಹಾಯಕರವೇ ಆಗಿವೆ. ಕಾಯದೆಯ ಬಂಧನೆಯಿಲ್ಲದೇನೇ ಹೆಂಡಕುಡಿಯುವ ಪ್ರಮಾಣವು ೧೦೦ ಕ್ಕೆ ೨೫ ರಂತೆ ಕಡಿಮೆಯಾಗಲಿಕ್ಕೂ ಒಂದು ವೇಳೆ ಇದೇ ಸಂಗತಿಯು ಕಾರಣವಾಗಿರಬಹುದು.

ಸೈನಿಕ ವೃತ್ತಿಯನ್ನು ಬಿಟ್ಟದ್ದರಿಂದಲೇ, ಜರ್ಮನಿಯು ವಿಶೇಷ ಪ್ರಮಾಣದಲ್ಲಿ ಪ್ರಜಾಧಿಪತ್ಯವನ್ನೊಪ್ಪಿಕೊಂಡಿದೆ. ವ್ಯಾಪಾರೋದ್ಯೋಗದ ಸಂಘಗಳಲ್ಲಿ, ಭಾಂಡವಲಗಾರರಿಗೂ, ದುಡಿಯುವ ಆಳುಮಕ್ಕಳಿಗೂ ಸಮಾನ ಹಕ್ಕುಗಳೇ ಇಡಲ್ಪಟ್ಟಿವೆ. ಕ್ರುಪ್ಪದಂಥ ಕಾರಖಾನೆಗಳಲ್ಲಿಯೂ, ಆಳುಮಕ್ಕಳಿಗೆ ವಿಚಾರದ ಸಂಧಿಯಿದೆ. ಅದೇ ಅಮೇರಿಕೆಯಲ್ಲಿ ಬಲುದೊಡ್ಡದಾದ ಹೆನರಿಫೋರ್ಡನೆಂಬುವವರ ಮೋಟಾರ ಕಾರಖಾನೆಯಲ್ಲಿ ಮಾತ್ರ ದುಡಿಯುವವರದೇನೂ ನಡೆಯುವದಿಲ್ಲ. ಕಳೆದ ವರ್ಷದಲ್ಲಿ ೧೦೦ ಕ್ಕೆ ೩೫ ರಂತೆ ಜರ್ಮನಿಯು ಆದಗಂಟಿನ ಹಣವು ಹೆಚ್ಚಿರುವದು. ವ್ಯಾಪಾರೋಪಯುಕ್ತವಾದ ಹಡಗುಪಡೆಯಲ್ಲಿ ನಾಲ್ಕು ಅಂಶದಷ್ಟು ಜೀರ್ಣೋದ್ಧಾರವಾಗಿರುತ್ತದೆ. ಈ ಮೊದಲು ಕೂಡ ವ್ಯಾಪಾರೋದ್ಯುಕ್ತವಾದ ಹಡಗು ಪಡೆಯು ಇಷ್ಟು ಇದ್ದಿಲ್ಲ! ಇದರಿಂದ ಜರ್ಮನಿಯ ಆರ್ಥಿಕ ಉನ್ನತಿಯು ಸ್ಪಷ್ಟವಾಗುವದಿಲ್ಲವೇ?

ಇದೇ ರೀತಿಯಾಗಿ ಸದ್ಯದ ರಾಷ್ಟ್ರದೋರಣೆಗಳನ್ನು ಫ್ರಾನ್ಸ ಮತ್ತು ಜರ್ಮನ ದೇಶಗಳು ಇನ್ನೊಂದು ೧೦ ವರ್ಷಗಳವರೆಗೆ ನಡೆಯಿಸಿದರೆ, ಜರ್ಮನಿಯು ಫ್ರಾನ್ಸವನ್ನು ವ್ಯಾಪಾರದಲ್ಲಿಯೂ, ಸಂಪತ್ತಿಯಲ್ಲಿಯೂ ಸಹಜವಾಗಿ ಹಿಮ್ಮೆಟ್ಟುವದಲ್ಲದೆ ಸಂಸ್ಕೃತಿಯನ್ನೂ ಲೋಕಹಿತವನ್ನೂ ಹೆಚ್ಚಿಸಬಹುದು. ಇಷ್ಟೇ ಅಲ್ಲ ವೈಮಾನಿಕ ಶಾಸ್ತ್ರದಲ್ಲಿಯೂ ರಸಾಯನಶಾಸ್ತ್ರದಲ್ಲಿಯೂ ಶ್ರೇಷ್ಠತೆಯಿಂದ ಫ್ರಾನ್ಸಕ್ಕಿಂತಲೂ ಜರ್ಮನಿಯೇ ಬಲಾಢ್ಯವಾಗದೆ ಇರಲಾರದು.

ಅಖಿಲ ಜಗತ್ತಿಗೂ ಜರ್ಮನಿಯ ಈ ಪುನರ್ಜನ್ಮದಿಂದ ಒಂದು ಮಹತ್ವದ ತತ್ವವು ಪ್ರತಿಪಾದಿಸಲ್ಪಟ್ಟಿದೆ. ಅದೇನಂದರೆ ಆಧುನಿಕ ಶೋಧಗಳಿಂದಲೂ, ಉದ್ಯಮಶೀಲತೆಯಿಂದಲೂ ಯಾವದೇ ಬುದ್ಧಿಪ್ರಧಾನ ಜನಾಂಗವು ತನಗೆ ಬೇಕಾದ ಸುಖಸೌಕರ್ಯಗಳನ್ನು ಸ್ವಲ್ಪಕಾಲದಲ್ಲಿಯೇ ಪಡೆಯಬಹುದು. ಇನ್ನೊಂದು ಮಾತು ವಿಶೇಷವಿದೆ. ಅವರು ತಮ್ಮ ಮಾನಸಿಕ ಶಕ್ತಿಯನ್ನು ಮಾತ್ರ ಸರಿಯಿಲ್ಲದ ಸೈನಿಕ ವೃತ್ತಿಯಲ್ಲಿರಿಸದೆ ಕೇವಲ ಶುದ್ಧ ಮತ್ತು ಸ್ವತಂತ್ರ ಬುದ್ಧಿಯಿಂದ ಪ್ರಯುಕ್ತಿಸಬೇಕು. ಅಂದರೆ ಎಷ್ಟು ಕಷ್ಟಗಳಾಗಿದ್ದರೂ ಅವೆಲ್ಲವು ಬೇಗನೆ ದೂರಾಗಿ ರಾಷ್ಟ್ರದ ಅಭ್ಯುದಯವೂ ಪ್ರಜೆಯ ಹಿತವೂ ಸುಲಭಸಾಧ್ಯವಾಗುವುವು.

ಪಂಚಾಚಾರ್ಯ ಪ್ರಭಾ

೧೯೩೦ ನೇ ಜುಲೈ ತಾ|| ೨೮ನೆಯ ಸೋಮವಾರ

ಮೈಸೂರು ಸೀನಿಯರ್ ಹೈಕೋರ್ಟ್ ಜಡ್ಜರಾದ ಶ್ರೀಮಾನ್ ಪಿ. ಮಹಾದೇವಯ್ಯನವರು.

ಭರತಖಂಡದಲ್ಲಿ ವೀರಶೈವರ ಜನಸಂಖ್ಯೆಯು 35 ಲಕ್ಷದ ವರೆಗಿರುವುದು ಸರ್ವರಿಗೂ ವೇದ್ಯವಾದ ವಿಷಯವಾಗಿದೆ. ಇಷ್ಟಿದ್ದಾಗ್ಯೂ ಈ ಮತೀಯರು ವೈದಿಕ ಲೌಕಿಕವಿದ್ಯೆಗಳಲ್ಲಿ ವಿಶೇಷವಾಗಿ ಹಿಂದುಳಿದಿದ್ದಾರೆ. ಆದರೆ ಪರಮೇಶ್ವರನ ಕೃಪಾವಿಶೇಷದಿಂದ ಈಗೀಗ ಅನೇಕಾನೇಕಜನರು ಈ ಉಭಯ ವಿದ್ಯೆಗಳಲ್ಲಿಯೂ ಪಾರಂಗತರಾಗುತ್ತಿರುವದನ್ನು ನೋಡಿ ಸಂತೋಷಪಡಬೇಕಾಗಿದೆ. ಈಗಿನಕಾಲದಲ್ಲಿ ಮಾನವನ ಉನ್ನತಿಗೆ ರಾಜಕೀಯಭಾಷೆಯಾದ ಇಂಗ್ಲಿಷ್ ಭಾಷೆಯೇ ಮುಖ್ಯಸಾಧನವಾಗಿರುವದರಿಂದ ಈ ರಾಜಕೀಯ ಭಾಷೆಯಲ್ಲಿ ಅನೇಕಾನೇಕ ಜನ ವೀರಶೈವರು ಉತ್ತೀರ್ಣತೆಯನ್ನು ಪಡೆಯುತ್ತ ಕೆಲಕಾಲದಿಂದೀಚೆಗೆ ರಾಜಕೀಯೋದ್ಯೋಗಗಳಲ್ಲಿ ಸೇರ್ಪಡೆಯಾಗುತ್ತಿರುವರು. ಆದರೂ ಈವರೆಗೆ ಯಾರೂ ರಾಜಕೀಯೋನ್ನತಸ್ಥಾನವನ್ನು ಹೊಂದಿ ಈ ಮತಕ್ಕೆ ಭೂಷಣವನ್ನುಂಟುಮಾಡಲಿಲ್ಲ. ದಿವಾನ್‌ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಕೆ. ಟಿ. ಸಿ. ಐ. ಇ. ಈ ಮಹೋದಯರು ಮಾತ್ರ ಈ ಮೊದಲು ಮೈಸೂರುದೇಶದ ಪ್ರಥಮಸಚಿವಸ್ಥಾನಾಧಿಪತ್ಯವನ್ನು ವಹಿಸಿ ಈ ಮತಕ್ಕೆ ವಿಶೇಷವಾದ ಗೌರವವನ್ನುಂಟುಮಾಡಿದರು. ಸದ್ಯಕ್ಕೆ ಮೇಲ್ಕಂಡ ಮಹೋದಯರು ಈ ಹೊತ್ತಿನವರೆಗೂ ಯಾರಿಂದಲೂ ಸಂಪಾದಿಸಲಶಕ್ಯವಾಗಿದ್ದ ಹೈಕೋರ್ಟ್ ಜಡ್ಜ್‌ಸ್ಥಾನಾಧಿಪತ್ಯವನ್ನು ಪಡೆದಿರುವದನ್ನು ಕಂಡು ಭರತಖಂಡದಲ್ಲಿರುವ ಸಮಸ್ತ ವೀರಶೈವರು ಆನಂದಸಾಗರದಲ್ಲಿ ಲೋಲಾಡುತ್ತಿದ್ದಾರೆ. ಅಸಾಧಾರಣವಾದ ಕಾಯಿದೆ ಪಾಂಡಿತ್ಯದಿಂದಲೂ, ಕಾರ್ಯನಿರ್ವಾಹಕಶಕ್ತಿಯಿಂದಲೂ ಅಸದೃಶವಾದ ಪದವನ್ನು ಪಡೆದಿರುವ ಈ ಮಹೋದಯರ ಸಚ್ಚರಿತ್ರವನ್ನು ಭರತಖಂಡದಲ್ಲಿರುವ ಸಮಸ್ತ ವೀರಶೈವರಿಗೆ ತೋರ್ಪಡಿಸಬೇಕೆಂಬ ಸದಿಚ್ಛೆಯಿಂದ ಸಂಕ್ಷೇಪವಾಗಿ ವಿವರಿಸುತ್ತೇವೆ.

ಈ ಮಹೋದಯರ ಪೂರ್ವಜರು ಮೊದಲು ಟೀಪೂ ಸುಲ್ತಾನನ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ ವಾಸವಾಡುತ್ತಿದ್ದರು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಕಾಲದಲ್ಲಿ ಮೈಸೂರು ರಾಜಧಾನಿಗೆ ಆಗಮಿಸಿ, ಮಂಡಿಮೊಹಲ್ಲಾದಲ್ಲಿ ವಾಸಮಾಡಹತ್ತಿದರು. ಆಗ್ಗೆ ಸರ್ವ ವೀರಶೈವರ ಕೋರಿಕೆಯ ಮೇರೆಗೆ ಇವರ ಮನೆತನದವರು ಮಂಡಿಮೊಹಲ್ಲಾಕ್ಕೆ ಯಜಮಾನರಾಗಿ ಆರಿಸಲ್ಪಟ್ಟರು. ಇವರ ತಂದೆಯವರು ಮಂಡಿ ಪುಟ್ಟಣ್ಣನವರೆಂಬ ಹೆಸರಿನಿಂದ ಶೋಭಿತರಾಗಿ ರಾಜಧಾನಿಯ ಸುಶಿಕ್ಷಿತ ಪ್ರಮುಖಮಂಡಲಿಯಲ್ಲಿ ಪರಿಗಣಿಸಲ್ಪಟ್ಟಿದ್ದರಲ್ಲದೆ, ಆ ಕಾಲದಲ್ಲಿ ಇವರು ಸುಪ್ರಸಿದ್ಧ ವಕೀಲರಾಗಿದ್ದರು. ಇವರು ಅಸಾಧಾರಣ ಧರ್ಮಾಭಿಮಾನಿಗಳಾಗಿದ್ದು ಶಿವಪೂಜಾಲೋಲರಾಗಿದ್ದರು. ಸದರಿಯವರು ಶ್ರೀಮತಿ ಪುಟ್ಟತಾಯಮ್ಮನೆಂಬ ಸಾಧ್ವೀಶಿರೋಮಣಿಯನ್ನು ವಿವಾಹಿತರಾಗಿ ಸುಖದಿಂದಿರುತ್ತಿರಲು ಮಹಾಶಿವಭಕ್ತಿ ಗುರುಭಕ್ತಿನಿಷ್ಠಾಗರಿಷ್ಠರಾದ ಶ್ರೀಮತಿ ಪುಟ್ಟತಾಯಮ್ಮನವರ ಗರ್ಭಾಂಬುಧಿಯಿಂದ ಶುಕ್ಲಪಕ್ಷದ ಪೂರ್ಣಚಂದ್ರನಂತೆ ಈ ಮಹೋದಯರು ತಾ|| 26-3-1875 ನೆಯ ದಿವಸ ಶುಭಮುಹೂರ್ತದಲ್ಲಿ ಆವಿರ್ಭವಿಸಿದರು. ಅಸಾಧಾರಣ ಮೇಧಾವಿಗಳಾದ ಮ||ರಾ|| ಪುಟ್ಟಣ್ಣನವರು 5 ನೆಯ ವರ್ಷದಲ್ಲಿ ಇವರಿಗೆ ಮಾತೃಭಾಷಾಶಿಕ್ಷಣವನ್ನು ಕೊಡಿಸುವದಕ್ಕೋಸ್ಕರ ಇವರನ್ನು ಕನ್ನಡಶಾಲೆಯಲ್ಲಿ ಸೇರಿಸಿದರು. ಕೆಲವು ದಿನಗಳಾದಮೇಲೆ ಈಗಿನಕಾಲದ ಪರಿಸ್ಥಿತಿಯನ್ನು ಆಲೋಚಿಸಿ ರಾಜಕೀಯ ಭಾಷೆಯಾದ ಇಂಗ್ಲೀಷ್ ವಿದ್ಯೆಯನ್ನು ಕಲಿಸಿ ಇವರನ್ನು ಅಭಿವೃದ್ಧಿಗೆ ತರಬೇಕೆಂಬ ಸದುದ್ದೇಶದಿಂದ ಇಂಗ್ಲೀಷ್ ಸ್ಕೂಲಿಗೆ ಸೇರಿಸಿದರು. ಇವರು ಪ್ರತಿವರ್ಷವೂ ತಮ್ಮ ಮೇಧಾಬಲದಿಂದ ಪ್ರತಿಯೊಂದು ಕ್ಲಾಸಿನಲ್ಲಿಯೂ ಉತ್ತೀರ್ಣತೆಯನ್ನು ಪಡೆಯುತ್ತ, ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ರಾಜಧಾನಿಯಲ್ಲಿರುವ ಮಹಾರಾಜ ಕಾಲೇಜನ್ನು ಸೇರಿದರು. ಅಲ್ಲಿ ಇವರು ಎಫ್. ಎ. ಪರೀಕ್ಷೆಯಲ್ಲಿ ಮೈಸೂರು ಪ್ರಾವಿನ್ಸಿಗೆ ಫಸ್ಟ್‌ಕ್ಲಾಸಿನಲ್ಲಿ ಎರಡನೆಯವರಾಗಿ ಉತ್ತೀರ್ಣರಾದರು. ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾದ ಮೆ|| ರ್ಡೆಹ್ಯಾಂರವರು ಇವರ ಬುದ್ಧಿಕೌಶಲ್ಯವನ್ನು ಕಂಡು "ಸ್ಪೆಷಲ್ ಪ್ರೈಜ್ ಸ್ಕಾಲರ್‌ಷಿಪ್ಪ"ನ್ನು ಕೊಡುತ್ತಿದ್ದರು. ಈ ರೀತಿಯಾಗಿ ಇವರು ದಿನೇದಿನೇ ಉಚ್ಚ ಶಿಕ್ಷಣವನ್ನು ಪಡೆಯುತ್ತ ಬಿ.ಎ., ಪರೀಕ್ಷೆಯಲ್ಲಿ ಪಾಸಾದರು. ಬಿ.ಎ. ಪರೀಕ್ಷೆಯಾದನಂತರ ಮೆ|| ಜೆ. ವೀಯರ್ ಎಂಬ ಹೆಸರಿನ ಪ್ರಿನ್ಸಿಪಾಲರವರು ಇವರ ಬುದ್ಧಿವೈಭವವನ್ನು ಕಂಡು ಕೆಲವು ಕಾಲದ ವರೆಗೆ ಸದರಿ ಕಾಲೇಜಿನಲ್ಲಿ ಇವರನ್ನು ಉಪಾಧ್ಯಾಯರನ್ನಾಗಿ ನೇಮಿಸಿಕೊಂಡರು. ಆಮೇಲೆ ಇವರು ಇಷ್ಟಕ್ಕೆ ತೃಪ್ತರಾಗದೆ ಲಾ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಬೇಕೆಂಬ ಸದಿಚ್ಛೆಯಿಂದ ಮದ್ರಾಸ್ ಪಟ್ಟಣಕ್ಕೆ ಹೋಗಿ ಲಾ ಶಿಕ್ಷಣವನ್ನು ಪ್ರಾರಂಭಿಸಿದರು. ಅಲ್ಲಿ ಎರಡು ವರ್ಷಗಳ ವರೆಗಿದ್ದು ಬಿ.ಎಲ್. ಪದವಿಯನ್ನು ಪಡೆದರು. ಅಲ್ಲಿಂದ ತುಮಕೂರಿಗೆ ಬಂದು ವಕೀಲವೃತ್ತಿಯನ್ನು ಕೈಕೊಂಡರು. ಆಗ್ಗೆ ಈ ಮಹೋದಯರು ತುಮಕೂರು ಟೌನಿನಲ್ಲಿ "ಶ್ರೀ ಕೃಷ್ಣರಾಜೇಂದ್ರ ಅಸೋಸಿಯೇಷನ್" ಎಂಬ ಹೆಸರಿನಿಂದ ಒಂದು ಸಂಘವನ್ನು ಸ್ಥಾಪಿಸಿ ಆ ಸಂಘಕ್ಕೆ ಮೂಲಧನವನ್ನೇರ್ಪಡಿಸಿ, ಅದರ ವೃದ್ಧ್ಯಂಶದಿಂದ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ಪಾಸಾದ ವಿದ್ಯಾರ್ಥಿಗೆ ಬಹುಮಾನವನ್ನು ಕೊಡಬೇಕೆಂದು ನಿಬಂಧನವನ್ನು ಮಾಡಿದರು. ಅದರಂತೆ ಆ ನಿಬಂಧನವು ಈ ವರೆಗೂ ಅವಿಚ್ಛಿನ್ನವಾಗಿ ನಡೆದುಕೊಳ್ಳುತ್ತ ಬಂದಿರುವದು. ಅಲ್ಲದೆ ವೀರಶೈವಮತದ ಪುನರುಜ್ಜೀವನಕ್ಕೋಸ್ಕರ ಸ್ಥಾಪಿಸಲ್ಪಟ್ಟ "ಅಖಿಲ ಭಾರತ ವೀರಶೈವ ಮಹಾಸಭೆ"ಯನ್ನು ಪ್ರಥಮತಃ ಧಾರವಾಡದಲ್ಲಿ ನಡೆಯಿಸುವದಕ್ಕೆ ಯೋಗ್ಯವಾದ ಸಲಹೆಗಳನ್ನು ಕೊಟ್ಟು ಸದರಿ ಸಭೆಗೆ ಪ್ರಥಮ ಚಾಲಕರೆನಿಸಿಕೊಂಡರು. ಸದರಿ ಮಹಾಸಭೆಯು ಆಚಂದ್ರಾರ್ಕವಾಗಿ ನಡೆಯಲೆಂಬ ಸದುದ್ದೇಶದಿಂದ ಆ ಸಭೆಯ ವಿಷಯದಲ್ಲಿ ಎಷ್ಟೋ ಸುಧಾರಣಾಮಾರ್ಗಗಳನ್ನು ಏರ್ಪಡಿಸಿದರು. ವೀರಶೈವಮತಸ್ಥಾಪನಾಚಾರ್ಯರಾದ ಶ್ರೀಮದುಜ್ಜಯಿನೀ ಧರ್ಮಪೀಠದ ಜಗದ್ಗುರುಗಳವರು ದೇಶಮಧ್ಯದಲ್ಲಿ ಸಂಚರಿಸುತ್ತ, ತುಮಕೂರು ಡಿ|| ಚಿಕ್ಕನಾಯಕನಹಳ್ಳಿ ಗ್ರಾಮಕ್ಕೆ ದಯಮಾಡಿಸಲು, ಆಗ್ಗೆ ಅಲ್ಲಿಯ ಕೆಲ ಜನ ಅನ್ಯಮತೀಯರು ತಮ್ಮ ಗ್ರಾಮದಲ್ಲಿ ಸದರಿ ಶ್ರೀಗಳವರು ಉತ್ಸವಪೂರ್ವಕವಾಗಿ ಬರಕೂಡದೆಂದು ತಕರಾರು ಮಾಡಲು, ಆಗ್ಗೆ ಈ ಮಹೋದಯರು ಈ ವಿಷಯದಲ್ಲಿ ಚೀಫ್‌ಕೋರ್ಟಿನ ವರೆಗೆ ಹೋಗಿ ಕಡೆಗೆ ಶ್ರೀಗಳವರಂತೆ ಆ ಕಾರ್ಯವನ್ನು ಜಯಶಾಲಿಯನ್ನಾಗಿ ಮಾಡಿಸಿಕೊಟ್ಟರು. ಹುಬ್ಬಳ್ಳಿಯಲ್ಲಿರುವ ಮೂರು ಸಾವಿರ ಮಠದ ಉತ್ಸವದ ವಿಷಯದಲ್ಲಿ ಬಹು ದೊಡ್ಡದಾದ ವ್ಯಾಜ್ಯವು ಉತ್ಪನ್ನವಾಗಲು ಆಗ್ಗೆ ಅಲ್ಲಿಯ ಮಹಾ ಜನಗಳು ತುಮಕೂರಿನಿಂದ ಇವರನ್ನು ಬರಮಾಡಿಕೊಂಡು ಇವರ ದ್ವಾರಾ ವ್ಯಾಜ್ಯವನ್ನು ನಡೆಯಿಸಿದರು. ಕೂಡಲಿ ಶೃಂಗೇರಿ ಮಠದವರ ಕಡೆಗೆ 18 ಜನ ಲಾಯರರಿದ್ದರು. ಅವರೆಲ್ಲರಿಗೂ ಇವರೊಬ್ಬರೇ ಸಮಾಧಾನವನ್ನು ಹೇಳುತ್ತ ತಾವು ಕೈಕೊಂಡಕಾರ್ಯವನ್ನು ಜಯಪ್ರದವನ್ನಾಗಿ ಮಾಡಿದರು. ಇದರಂತೆ ಗದಗ, ಚಿತ್ರದುರ್ಗ ಮೊದಲಾದ ಅನೇಕ ಮಠಗಳ ಉತ್ಸವಾದಿಗಳಿಗೆ ಪ್ರಾಪ್ತವಾಗಿದ್ದ ಎಡರುಗಳನ್ನು ತಮ್ಮ ಬುದ್ಧಿಪ್ರಭಾವದಿಂದ ಕೋರ್ಟಿನ ದ್ವಾರಾ ಹೋಗಲಾಡಿಸಿ, ಆಯಾ ದೇಶಗಳಲ್ಲಿ ಅಸದೃಶವಾದ ಕೀರ್ತಿಗೌರವಗಳನ್ನು ಸಂಪಾದಿಸಿದರು. 1901 ನೆಯ ಇಸವಿಯಲ್ಲಿ ನೆರವೇರಿದ ಸೆನ್ಸಸ್ (ಜನಪರಿಗಣನೆಯ) ಕಾಲದಲ್ಲಿ ಸೆನ್ಸಸ್ ಸೂಪರಿಂಟೆಂಡೆಂಟರಾಗಿದ್ದ ಲೇಟ್ ದಿವಾನ್ ಆನಂದರಾಯರವರಲ್ಲಿ ವೀರಶೈವಮತವಿಷಯವಾಗಿ ಆಸ್ಥಾನ ಮಹಾವಿದ್ವಾನ್ ಕರ್ಣಾಟಕಭಾಷಾರಕ್ಷ ಶ್ರೀಮಾನ್ ಪಿ. ಆರ್. ಕರಿಬಸವಶಾಸ್ತ್ರಿಗಳವರ ಸಹಾಯವಿಶೇಷವನ್ನು ತೆಗೆದುಕೊಂಡು 7-8 ದಿವಸಗಳ ವರೆಗೆ ವಿಶೇಷವಾದ ಚರ್ಚೆಯನ್ನು ನಡೆಯಿಸಿ ವೀರಶೈವಮತದ ವಿಷಯದಲ್ಲಿದ್ದ ಅವರ ಅಸಮಂಜಸಾಭಿಪ್ರಾಯವನ್ನು ದೂರಮಾಡಿ, ಮತಸಿದ್ಧಾಂತರೀತ್ಯಾ ಸರಿಯಾದ ರಿಕಾರ್ಡನ್ನು ಮಾಡಿಸಿ ಮೈಸೂರು ದೇಶದ ವೀರಶೈವರ ಚಿರಕೃತಜ್ಞತೆಗೆ ಪಾತ್ರರಾದರು. ಆ ಕಾಲದಲ್ಲಿ ಇವರು ಹೇಳಿರುವ ವಿಷಯಗಳು ಸೆನ್ಸಸ್ ರಿಪೋರ್ಟಿನಲ್ಲಿ ಮುದ್ರಣಗೊಳಿಸಲ್ಪಟ್ಟಿರುವವು. ಬೆಂಗಳೂರು ಪಟ್ಟಣಕ್ಕೆ ಬಂದು ಹೋಗತಕ್ಕ ದೂರದೇಶದ ಜನರಿಗೆ ತೊಂದರೆಯಾಗುತ್ತಿದ್ದುದನ್ನು ಕಂಡು ಈ ತೊಂದರೆಯನ್ನು ಆದಷ್ಟುಮಟ್ಟಿಗೆ ದೂರಮಾಡಬೇಕೆಂಬ ಸದ್ವಿವೇಕಬುದ್ಧಿಯಿಂದ ಮಹತ್ತರವಾದ ಧರ್ಮಛತ್ರವನ್ನು ಕಟ್ಟಿಸಿ ಕೀರ್ತಿಶಾಲಿಗಳಾಗಿಹೋಗಿರುವ ರಾವ್ ಬಹದ್ದೂರ್ ಗುಬ್ಬಿ ತೋಟದಪ್ಪನವರ ಛತ್ರಕ್ಕೆ ಇವರು ಟ್ರಸ್ಟಿಗಳಾಗಿ ಹತ್ತು ಜನ ವಿದ್ಯಾರ್ಥಿಗಳ ವಾಸಕ್ಕೋಸ್ಕರ ಕೋಣೆಗಳನ್ನು ಅಭಿವೃದ್ಧಿಪಡಿಸುವಂತೆ ಸಲಹೆಯನ್ನು ಕೊಟ್ಟು ಅದಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿ ವಿದ್ಯಾದಾನದ ಫಲಕ್ಕೆ ಪಾತ್ರರಾದರು. ಬೀರೂರಲ್ಲಿ ನೆರವೇರಿದ 9ನೆಯ ವೀರಶೈವಮಹಾಸಭೆಯು ನಡೆಯುವ ಸಮಯದಲ್ಲಿ ಕಾರಣಾಂತರದಿಂದ ಅನೇಕವಿಧವಿಘ್ನಗಳು ಪ್ರಾಪ್ತಗಳಾಗಲು, ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಪ್ರೋತ್ಸಾಹದಿಂದಲೂ ಹಾಗೂ ತಮ್ಮ ಮಿತ್ರವರ್ಯರಾದ ಮೆ|| ಎಚ್. ಕೆ. ವೀರಬಸವಯ್ಯನವರ ಸಹಾಯವಿಶೇಷದಿಂದಲೂ ಪ್ರಾಪ್ತಗಳಾಗಿದ್ದ ಆ ಯಾವತ್ತೂ ವಿಘ್ನಗಳನ್ನು ಸುಲಭವಾಗಿ ದೂರಮಾಡಿ ಮಹಾಸಭೆಯು ಸುರಕ್ಷಿತವಾಗಿ ನೆರವೇರುವಂತೆ ಮಾಡಿದರು. ಬೀರೂರು ಟೌನ್ ನಿವಾಸಿಗಳಾದ ಶ್ರೀಮಂತ ಪಟ್ರೆ ಚಂ|| ವೀರಪ್ಪಯ್ಯನವರ ಕೋರಿಕೆಯಂತೆ ಅವರ ಮನೆತನದ ವಿಭಾಗದಲ್ಲಿ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರೊಂದಿಗೆ ಸರಿಯಾದ ಸಲಹೆಯನ್ನು ಕೊಟ್ಟು ಅದರಂತೆ ಕಾರ್ಯವನ್ನು ನಡೆಯಿಸಿ ಶ್ರೀಮಂತ ಪಟ್ರೆ ಚನ್ನವೀರಪ್ಪಯ್ಯನವರಿಂದಲೂ, ಹಾಗೂ ಚಂ|| ವೀರಪ್ಪಯ್ಯನವರ ಪತ್ನಿಯವರಾದ ಶ್ರೀಮತಿ ರುದ್ರಮ್ಮನವರಿಂದಲೂ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೋಸ್ಕರ 25,000 ರೂ. ಗಳನ್ನು ಕೊಡಿಸಿ ವಿಖ್ಯಾತಕೀರ್ತಿಶಾಲಿಗಳಾದರು. ಬಡವರೂ, ಯೋಗ್ಯರೂ, ಕುಶಲರೂ ಆಗಿದ್ದು, ಲಾ ಅಭ್ಯಾಸಮಾಡುತ್ತಿರುವ ವಿದ್ಯಾರ್ಥಿಗಳಿಗೋಸ್ಕರ ತಮ್ಮ ತಂದೆಯವರ ಸ್ಮಾರಕವಾಗಿ ಪ್ರತಿವರ್ಷವೂ ಸ್ಕಾಲರ್‌ಷಿಪ್ಪನ್ನು ಕೊಡುತ್ತಿರುವರು. ಈಗ ಕೆಲವು ದಿವಸಗಳ ಹಿಂದೆ ಲೋಕವಿಖ್ಯಾತವಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಧರ್ಮಪೀಠವು ಅಧಿಕಾರಿಗಳಿಲ್ಲದೆ ಅನಾಯಕವಾಗಿರಲು ಆ ಗುರುಪೀಠಕ್ಕೆ ಯೋಗ್ಯರಾದವರನ್ನು ಅಧಿಕಾರಿಗಳನ್ನಾಗಿಮಾಡುವ ವಿಷಯದಲ್ಲಿ ಸರ್. ಕೆ. ಪಿ. ಪುಟ್ಟಣ್ಣಶೆಟ್ಟರವರ ಸಹಾಯದೊಂದಿಗೆ ಯೋಗ್ಯಸಲಹೆಗಳನ್ನಿತ್ತು ಅನಾಯಕವಾಗಿದ್ದ ಗುರುಪೀಠವನ್ನು ಸನಾಯಕವನ್ನಾಗಿ ಮಾಡಿ ಗುರುಸಾರ್ವಭೌಮನಾದ ಶ್ರೀ ರೇಣುಕನ ಕೃಪೆಗೆ ಪೂರ್ಣ ಪಾತ್ರರಾದರು. ಈ ಮಹೋದಯರು ಮಾಡಿರುವ ಈ ಯಾವತ್ತು ವಿಷಯಗಳನ್ನು ಪರಿಶೀಲಿಸಿ ನೋಡಿದರೆ, ಇವರ ಬುದ್ಧಿವೈಭವವೂ, ಶಕ್ತಿಸಾಹಸಗಳೂ, ಗುರುದೈವಭಕ್ತಿಯೂ ಎಷ್ಟರಮಟ್ಟಿಗಿರಬಹುದೆನ್ನುವುದು ಸರ್ವರಿಗೂ ಒಡೆದು ತೋರುವಂತಿದೆ. ಇವರು ಆದಿಯಲ್ಲಿ ಕೆಲವು ವರ್ಷಗಳ ವರೆಗೆ ಅತ್ಯುತ್ತಮರೀತಿಯಿಂದ ವಕಾಲತ್ತು ನಡೆಯಿಸುತ್ತಿದ್ದುದನ್ನು ನೋಡಿ, ಮೈಸೂರು ಸರಕಾರದವರು ಇವರಿಗೆ ಪ್ರಥಮದಲ್ಲಿ "ಮುನ್ಸೀಫ್" ಸ್ಥಾನವನ್ನು ದಯಪಾಲಿಸಿದರು. ಈ ಅಧಿಕಾರದಲ್ಲಿ ಕೆಲವು ದಿವಸಗಳನ್ನು ಕಳೆದು, ಆ ಮೇಲೆ "ಸಬ್‌ಜಡ್ಜ" ಸ್ಥಾನವನ್ನು ಸ್ವೀಕರಿಸಿದರು. ಈ ಅಧಿಕಾರದಲ್ಲಿಯೂ ಕೆಲವು ದಿವಸಗಳನ್ನು ಕಳೆಯಲು ಘನ ಸರಕಾರದವರು ವಿಲಕ್ಷಣವಾದ ಇವರ ವಿದ್ವತ್ಪ್ರಭಾವವನ್ನು ನೋಡಿ, "ಸೆಷನ್ ಜಡ್ಜ್" ಪೀಠವನ್ನಲಂಕರಿಸುವಂತೆ ಮಾಡಿದರು. ಇವರು ಕೆಲವು ದಿವಸ ಶಿವಮೊಗ್ಗ ಡಿ|| ಸೆಷನ್ ಜಡ್ಜರಾಗಿಯೂ, ಕೆಲವು ದಿವಸ ಮೈಸೂರು ಡಿ|| ಸೆಷನ್‌ಜಡ್ಜರಾಗಿಯೂ ಅತ್ಯುತ್ತಮರೀತಿಯಿಂದ ಕಾರ್ಯವನ್ನು ನಿರ್ವಹಿಸಿದರು. ಕಾಯಿದೆ ಪಾಂಡಿತ್ಯಪೂರಿತಗಳಾದ ಇವರ ಅಮೂಲ್ಯ ಜಡ್ಜ್‌ಮೆಂಟುಗಳನ್ನೂ, ಇವರ ಅಸಾಧಾರಣವಾದ ಕಾಯಿದೆಪಾಂಡಿತ್ಯವನ್ನೂ ಕಂಡು ದಯಾಳುಗಳಾದ ಮೈಸೂರು ಸರಕಾರದವರು "ಲಾ ಸೆಕ್ರೆಟರಿ" ಎಂಬ ಉನ್ನತವಾದ ಸ್ಥಾನವನ್ನಲಂಕರಿಸುವಂತೆ ಮಾಡಿದರು. ಇವರು ಲಾ ಸೆಕ್ರೆಟರಿಯವರಾಗಿದ್ದ ಸಮಯದಲ್ಲಿ ದಾವಣಗೆರೆಯೊಳಗೆ ಹಿಂದೂ ಮುಸಲ್ಮಾನರಲ್ಲಿ ಭಯಂಕರವಾದ ವೈಷಮ್ಯವುಂಟಾಗಲು, ಮೆ|| ದಿವಾನ್ ಸಾಹೇಬರವರೊಂದಿಗೆ ಅಲ್ಲಿಗೆ ಹೋಗಿ ಹಿಂದೂ ಮುಸಲ್ಮಾನರಲ್ಲಿ ಪ್ರಾಪ್ತವಾಗಿದ್ದ ವೈಷಮ್ಯವನ್ನು ಸುಲಭವಾಗಿ ಹೋಗಲಾಡಿಸಿ, ಶಾಂತಿಸ್ಥಾಪನೆಯನ್ನು ಮಾಡಿದರು. ಇವರು ಬಹು ಮಹತ್ವವಾದ ತಮ್ಮ "ಲಾ ಸೆಕ್ರೆಟರಿ" ಕಾರ್ಯವನ್ನು ಅತ್ಯಂತ ಉತ್ಸಾಹದಿಂದಲೂ, ದಕ್ಷತೆಯಿಂದಲೂ ನಡೆಯಿಸುತ್ತಿದ್ದುದನ್ನು ಕಂಡು ಸಾಕ್ಷಾತ್ ಧರ್ಮಾವತಾರಿಗಳಾದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರು ಇವರ ಯೋಗ್ಯತೆಗೆ ಅತ್ಯಂತಭೂಷಣವಾಗುವಂತಹ "ಹೈಕೋರ್ಟ್ ಜಡ್ಜ್" ಎಂಬ ಮಹೋನ್ನತಸ್ಥಾನವನ್ನು ದಯಪಾಲಿಸಿರುವರು. ಇಂಥ ಮಹಾಪದವಿಯನ್ನು ಬ್ರಿಟಿಷ್ ಇಂಡಿಯಾದಲ್ಲಿರತಕ್ಕ ವೀರಶೈವರಾಗಲಿ ನೇಟಿವ್ ಸ್ಟೇಟುಗಳಲ್ಲಿರತಕ್ಕ ವೀರಶೈವರಾಗಲಿ ಯಾರೂ ಈ ಹೊತ್ತಿನವರೆಗೆ ಅನುಭವಿಸಿಲ್ಲ. ಇಂಥ ಮಹೋನ್ನತ ಪದವಿಯು ಪ್ರಾಪ್ತವಾಗಿರುವದಕ್ಕೆ ಇವರಲ್ಲಿ ಸ್ವಾಭಾವಿಕವಾಗಿ ವಾಸಮಾಡಿಕೊಂಡಿರುವ ರಾಜಕೀಯ ಪಾಂಡಿತ್ಯ, ನ್ಯಾಯಾನ್ಯಾಯ ವಿಮರ್ಶನಶಕ್ತಿ, ಬುದ್ಧಿಕೌಶಲ, ಕಾರ್ಯದಕ್ಷತೆ, ಸಹನಶೀಲತೆ, ನಿಸ್ಪೃಹತೆ, ನಿಷ್ಪಕ್ಷಪಾತತೆ, ಗುರುದೇವಭಕ್ತಿ, ರಾಜಭಕ್ತಿ ಮೊದಲಾದ ದಿವ್ಯಗುಣಗಳೇ ಕಾರಣಗಳಾಗಿವೆಯೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಇಂಥ ಅಸದೃಶ ಗುಣಗಣಭೂಷಿತರಾದ ಈ ಮಹೋದಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಅಸಿತರಸಾಧಾರಣವಾದ ಆಯುರಾರೋಗ್ಯ ಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದೂ, ಇವರ ಪುತ್ರಪೌತ್ರಾದಿಗಳೂ ಇಂತಹ ಉನ್ನತೋನ್ನತಸ್ಥಾನಗಳನ್ನು ಅಲಂಕರಿಸುವಂತೆ ಅನುಗ್ರಹಿಸಲೆಂದೂ ಆ ಪೂಜ್ಯಪಾದರನ್ನು ಅನುಪಮವಾದ ಭಕ್ತಿಭಾವದಿಂದ ಭಜಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಸಿಟಿ ಮ್ಯುನಿಸಿಪಾಲಿಟಿಯವರು ನಗರದ ಮುಖ್ಯಮುಖ್ಯ ಬೀದಿಗಳಿಗೆ ಟಾರುಹಾಕುವದಕ್ಕಾಗಿ 2½ ಲಕ್ಷ ರೂ. ಗಳನ್ನು ಮಂಜೂರುಮಾಡಿರುವರು.

ಮೈಸೂರು ದೇಶದ ಹೈಕೋರ್ಟ್ ಜಡ್ಜರಾದ ಮೆ|| ಶ್ರೀಮಾನ್ ಪಿ. ಮಹಾದೇವಯ್ಯನವರ ಭಾವಚಿತ್ರಪಟವನ್ನು ಈ ವಾರದ ಪತ್ರಿಕೆಯ ಸಂಗಡ ನಮ್ಮ ಚಂದಾದಾರರಿಗೆಲ್ಲ ಕಳುಹಿಸಲಾಗಿದೆ.

ರಾಜಧಾನಿಯ ದೊಡ್ಡ ಹೊಲಗೇರಿಯ ನಿವಾಸಿಗಳು ಇನ್ನು ಮುಂದೆ ಯಾರೂ ಮದ್ಯಪಾನ ಮಾಡಕೂಡದೆಂದು ತಮ್ಮ ತಮ್ಮಲ್ಲಿಯೇ ಕಟ್ಟುಮಾಡಿಕೊಂಡಿರುವರು. ಈ ಸಂದರ್ಭದಲ್ಲಿ ಕಲಹವುಂಟಾಗಿ ಮದ್ಯದ ಅಂಗಡಿಯಲ್ಲಿ ಮದ್ಯಮಾರುತ್ತಿದ್ದವನನ್ನು ಕೊಂದುಹಾಕಿರುವರು. ಪೋಲೀಸರು ಕೆಲವರನ್ನು ದಸ್ತಗಿರಿಮಾಡಿ ವಿಚಾರಣೆಗೆ ಗುರಿಪಡಿಸಿರುವರು.

ಬೆಂಗಳೂರಲ್ಲಿ 1930 ನೆಯ ಇಸವಿ ಮಾರ್ಚ 1ನೆಯ ತಾರೀಖಿನ ದಿವಸ ಪದ್ಮನಾಭನು ಎಂಬ ಹೆಂಗಸು 25 ದಿನಗಳ ಹೆಣ್ಣುಕೂಸನ್ನು ಬಾವಿಗೆ ಎಸೆದು ಶಿಶುಹತ್ಯೆ ಮಾಡಿರುವಳು. ಅಪರಾಧಿಗೆ 3 ಮಕ್ಕಳಿದ್ದವು. ತನ್ನ ಗಂಡನು ಮತ್ತು ತಾನು ಬಹಳ ಬಡವರಾದ್ದರಿಂದ ಈ ನಾಲ್ಕನೆಯ ಕೂಸನ್ನು ಸಾಕುವುದು ಭಾರವೆಂದು ಅಪರಾಧಿಯು ಮಗುವಿನ ಅಂಗಿ ಒಟ್ಟೆಗಳನ್ನು ಬಿಚ್ಚಿ ರೇಶಮಿಯ ಕಾರಖಾನೆಯಲ್ಲಿರತಕ್ಕ ಬಾವಿಗೆ ಮಗುವನ್ನು ಎಸೆದಳು. ಇದು ಅಲ್ಲಿದ್ದವರಿಗೆ ಗೊತ್ತಾಗಿ ಅವರು ಅಪರಾಧಿಯನ್ನು ವಿಚಾರಿಸಲು, ಅಪರಾಧಿಯು ತನಗೆ ಮಗುವೇ ಇಲ್ಲವೆಂದೂ ತಾನು ಬಾವಿಗೆ ಏನನ್ನೂ ಎಸೆಯಲಿಲ್ಲವೆಂದೂ ಜವಾಬು ಕೊಟ್ಟಳು. ಆದರೂ ಅನುಮಾನದಿಂದ ಈ ವರ್ತಮಾನವು ಪೋಲೀಸರಿಗೆ ತಿಳುಹಿಸಲ್ಪಟ್ಟಿತು. ಅವರು ಪ್ರತಿಯೊಂದನ್ನೂ ತನಿಖೆಮಾಡಿ ಸದರಿ ಹೆಂಗಸನ್ನು ಅಪರಾಧಿಸ್ಥಾನಕ್ಕೆ ತಂದಿರುವರು. ಅಪರಾಧಿಯು ಸೆಷನ್‌ಜಡ್ಜರಲ್ಲಿ ನಾನು ಒಂದು ತರಹ ಹುಚ್ಚಿನಿಂದ ಮಗುವನ್ನು ಬಾವಿಗೆ ಎಸೆದುಬಿಟ್ಟೆನೆಂದೂ, ನನಗೆ ಆಗ ಜ್ಞಾನವೇ ಇದ್ದಿಲ್ಲವೆಂದೂ, ನಾನು ಏನು ಮಾಡುತ್ತೇನೆಂಬುದೇ ಗೊತ್ತಿರಲಿಲ್ಲವೆಂದೂ, ಪೋಲೀಸರ ವಶಕ್ಕೆ ನಾನು ಸಿಕ್ಕಮೇಲೆ ನನಗೆ ಜ್ಞಾನಬಂದಿತೆಂದೂ. ನನಗೆ ಒಂದು ತರಹ ಮೆದಳಿನ ರೋಗವಿರುವದೆಂದೂ ಹೇಳಲು, ಜಡ್ಜರು ಯಾವತ್ತೂ ವಿಷಯಗಳನ್ನೂ ತಿಳಿದುಕೊಂಡು "ಅಪರಾಧಿಯು ಬಡಹೆಂಗಸು: ಗಂಡನು ನಿರುದ್ಯೋಗಿ; ಆದರಿಂದ ಆವಳು ಸ್ವಾಭಾವಿಕವಾಗಿಯೇ ಮಗುವನ್ನು ಸಾಕಲಾರದೆ ಒಂದು ತರಹ ಬುದ್ಧಿಭ್ರಮಣೆಯಿಂದ ಈ ಕೆಲಸವನ್ನು ಮಾಡಿರಬಹುದು. ಆದರಿಂದ ಈ ಮೊಕದ್ದಮೆಯು ಹೈಕೋರ್ಟಿಗೆ ಹೋಗಬೇಕೆಂದು ನಾನು ತೀರ್ಪುಕೊಟ್ಟಿದ್ದೇನೆ" ಎಂದು ಹೇಳಿದರು. ಈ ವಿಷಯದಲ್ಲಿ ಕೋರ್ಟಿನವರ ಸಹಾಯಕ್ಕೆಂದು ಇದ್ದ ಮೂರು ಜನ ಅಸೆಸರರು ಅಪರಾಧಿಯು ತಪ್ಪಿತಸ್ಥಳಲ್ಲವೆಂದು ತೀರ್ಪುಕೊಟ್ಟರು. ಮೊಕದ್ದಮೆಯು ಹೈಕೋರ್ಟಿಗೆ ಹಾಕಲ್ಪಟ್ಟಿತು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಬೊಂಬಾಯಿ ಮುನಿಸಿಪಲ್ ಕಾರ್ಪೋರೇಷನ್ನಿನವರು ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿರುವ ತೆಂಗಿನಮರಗಳಲ್ಲಿ ಹೆಂಡವನ್ನಿಳಿಸಲು ಅವಕಾಶಕೊಡಬಾರದೆಂದು ತೀರ್ಮಾನಿಸಿರುವರು.

ಬೊಂಬಾಯಿ ಕಲೆಕ್ಟರವರು ಕಳೆದ 22 ನೆಯ ತಾ|| ಮಂಗಳವಾರದ ದಿವಸ 84 ಹೆಂಡದ ಅಂಗಡಿಗಳ ಹರಾಜನ್ನು ಮಾಡಲು ಏರ್ಪಡಿಸಿದ್ದರು. ಹರಾಜಿಗೆ ಸ್ವಯಂಸೇವಕರು ಪ್ರತಿಬಂಧನಾಗದಂತೆ ನೂರಾರು ಜನ ಪೋಲೀಸರ ಕಾವಲನ್ನಿರಿಸಿದ್ದರು. ಆದರೆ ದೇಶಸೇವಕರು ಹರಾಜಿಗೆ ಬರುವದಿಲ್ಲವೆಂದು ಪೂರ್ವಭಾವಿಯಾಗಿಯೇ ಕಂಟ್ರಾಕ್ಟರುಗಳಿಂದ ವಚನವನ್ನು ಪಡೆದಿದ್ದುದರಿಂದ ಹರಾಜಿಗೆ ಅವರೊಬ್ಬರೂ ಹೋಗಲಿಲ್ಲ. ಎಕ್ಸೈಜು ಡಿಪಾರ್ಟಮೆಂಟಿನವರು ಟೆಂಡರುಗಳ ಮೂಲಕ ಎರಡು ಅಂಗಡಿಗಳ ಲೈಸೆನ್ಸನ್ನು ಮಾತ್ರ ಬಿಟ್ಟಿ ಕಂಟ್ರಾಕ್ಟರಿಗೆ ಕೊಟ್ಟಿರುವರು. ಮೊನ್ನೆ ಮೊನ್ನೆ ನಡೆದ ಕೂಲಿಯವರ ಮುಷ್ಕರದಿಂದಲೂ, ಸ್ವಯಂಸೇವಕರ ಚಳವಳಿಯಿಂದಲೂ, ಮದ್ಯಪಾನಮಾಡುವವರ ಸಂಖ್ಯೆಯು ಶೇಕಡಾ 80 ರಷ್ಟು ಕಡಿಮೆಯಾಗಿರುವದು. ಕಳೆದ ವರ್ಷ ಕೊಟ್ಟಿದ್ದ ಲೈಸೆನ್ಸು ಆಗಸ್ಟ 1 ನೆಯ ತಾರೀಖಿಗೆ ಮುಗಿದುಹೋಗುವದರಿಂದ ಯಾವುದಾದರೂ ಮಾರ್ಗದಿಂದ ಕಂಟ್ರಾಕ್ಟರುಗಳು ಅಂಗಡಿಗಳನ್ನು ವಹಿಸಿಕೊಳ್ಳುವಂತೆ ಮಾಡಬೇಕೆಂದು ಸರಕಾರದವರು ವಿಶೇಷ ಪ್ರಯತ್ನ ಮಾಡುತ್ತಿರುವರು.

ಡಾಕಾ ವಿಶ್ವವಿದ್ಯಾನಿಲಯದ ಮಿ|| ಅಜಿತ್‌ಭಟ್ಟಾಚಾರ್ಯನೆಂಬ ವಿದ್ಯಾರ್ಥಿಯು ಜುಲೈ 22 ನೆಯ ತಾ||ನ ದಿವಸ ಡಾಕಾ ಇಂಟರ್ ಮೀಡಿಯೇಟ್ ಕಾಲೇಜಿನ ಮುಂದೆ ಬಹಿಷ್ಕಾರ ಚಳವಳಿಯನ್ನು ಮಾಡುತ್ತಿದ್ದಾಗ್ಗೆ ಪೋಲೀಸರಿಂದ ಹೊಡೆಯಲ್ಪಟ್ಟು, ಮರುದಿನ ಮೃತಪಟ್ಟನು. ಇದರಿಂದ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಒಂದು ವಾರದವರೆಗೆ ಕಾಲೇಜಿಗೆ ಹೋಗುವದನ್ನು ನಿಲ್ಲಿಸಿರುವರು.

ಆಲಿಪೂರ ಸೆಂಟ್ರಲ್ ಜೈಲಿನಲ್ಲಿರುವ ಮಿ|| ಸುಭಾಷ್‌ಚಂದ್ರಬೋಸರವರೇ ಮೊದಲಾದ ಸುಮಾರು 200 ಜನ ರಾಜಕೀಯ ಕೈದಿಗಳು ಅವರ ಪೈಕಿ 16 ಜನರನ್ನು 'ಸಿ' ತರಗತಿಯಲ್ಲಿಟ್ಟಿರುವರೆಂಬ ಕಾರಣದಿಂದ ಉಪವಾಸವ್ರತವನ್ನು ಕೈಕೊಂಡಿರುವರು.

ಕರಾಚಿ ಡಿ|| ಶಿಕಾರಿಪುರದಲ್ಲಿ ಕಳೆದ 20 ನೆಯ ತಾ|| ಭಾನುವಾರ ದಿವಸ ಕೆಲವು ಸತ್ಯಾಗ್ರಹಿಗಳು ಲೈಸೆನ್ಸ್‌ದಾರರಿಗೆ ಹೆಂಡವನ್ನು ಕೊಡಲು ತೆಗೆದುಕೊಂಡು ಹೋಗುತ್ತಿದ್ದ ಗಾಡಿಗಳನ್ನು ತಡೆದರು. ಸತ್ಯಾಗ್ರಹಿಗಳು ಲಾಖೀಗೇಟಿನ ಹತ್ತಿರ ಹೆಂಡದ ಪಿಪಾಯಿಗಳ ಮೇಲೆ ಮಲಗಿ, ಅವುಗಳನ್ನು ಸಾಗಿಸದಂತೆ ಪೋಲೀಸರಿಗೂ ಮತ್ತು ಎಕ್ಸೈಜ್ ಅಧಿಕಾರಿಗಳಿಗೂ ಅಡ್ಡಿಮಾಡಿದರು. ಪೋಲೀಸರು ಸತ್ಯಾಗ್ರಹಿಗಳನ್ನು ದೊಣ್ಣೆಗಳಿಂದ ಹೊಡೆದು ಅನೇಕರಿಗೆ ಗಾಯಪಡಿಸಿದರು. ಜನರು ಗುಂಪುಕೂಡಿ, ಹೆಂಡದ ಪಿಪಾಯಿಗಳಿಗೆ ಬೆಂಕಿಯನ್ನು ಹಚ್ಚಿದರು. ಉರಿಯು ಗಂಗಾದೇವಿಯೆಂಬ ಸ್ತ್ರೀಯಳಿಗೆ ತಗಲಿ ಆಕೆಯ ಮೈಕೈಗಳೆಲ್ಲಾ ಸುಟ್ಟುಹೋದವು. ಕೂಡಲೆ ಜನರು ಆಕ್ರೋಶದಿಂದ ಪಿಪಾಯಿಗಳನ್ನೆಲ್ಲಾ ಒಡೆದುದಲ್ಲದೆ, ಲೆಖ್ಖದ ಮತ್ತು ಬಿಲ್ ಪುಸ್ತಕಗಳನ್ನೆಲ್ಲಾ ಸುಟ್ಟುಬಿಟ್ಟರು.

ಲಾಹೋರಿನ 150 ಜನ ಜವಳಿ ವರ್ತಕರು ಇನ್ನು ಮುಂದೆ ಪರದೇಶೀ ವಸ್ತ್ರಗಳನ್ನು ವಿಕ್ರಯಿಸುವದಿಲ್ಲವೆಂದು ಪ್ರತಿಜ್ಞಾಪತ್ರಿಕೆಗೆ ರುಜುಮಾಡಿರುವರು.

25 ನೆಯ ತಾರೀಖಿನ ದಿವಸ ಲೂಧಿಯಾನಾದಲ್ಲಿ ಬಾಲಭಾರತಸಭೆ, ಮುಸ್ಲಿಂ ನ್ಯಾಷನಲ್ ಕಾರ್ಪ್ ಮತ್ತು ಕಾಂಗ್ರೆಸ್ ಸ್ತ್ರೀಪುರುಷ ಸ್ವಯಂಸೇವಕರು ಉತ್ಸವವನ್ನು ಮಾಡಿಕೊಂಡು ಹೋಗುತ್ತಿದ್ದಾಗ ಪೋಲೀಸರು ದೊಣ್ಣೆಗಳಿಂದ ಹೊಡೆದರು. 40 ಜನರಿಗೆ ಪೆಟ್ಟುಗಳು ಬಿದ್ದಿರುವವು.

ವೈಸರಾಯರಿಂದ ಅವಕಾಶವನ್ನು ಪಡೆದು ಎರವಾಡಾ ಜೈಲಿಗೆ ಹೋಗಿದ್ದ ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಜುಲೈ 23 ಮತ್ತು 24 ನೆಯ ತಾರೀಖುಗಳಲ್ಲಿ ಮಹಾತ್ಮರನ್ನು ಕಂಡು ಸದ್ಯದ ರಾಜಕೀಯ ಚಳವಳಿಯ ವಿಷಯವಾಗಿ ಚರ್ಚಿಸಿದರು. ಮಹಾತ್ಮರು ಪಂಡಿತ ಮೋತೀಲಾಲ್ ಮತ್ತು ಪಂಡಿತ ಜವಾಹರಲಾಲ್ ನೆಹರೂರವರಿಗೆ ಒಂದು ಪತ್ರವನ್ನು ಬರೆದು ಕೊಟ್ಟು ಕಳುಹಿಸಿರುವರು. ಅವರವರು ಚರ್ಚಿಸಿದ ವಿಷಯಗಳೂ, ಹಾಗೂ ಮಹಾತ್ಮರು ಬರೆದುಕೊಟ್ಟ ಪತ್ರದ ವಿಷಯವೂ ಇನ್ನೂ ಹೊರಬಿದ್ದಿಲ್ಲ. ಈ ವಿಷಯವನ್ನು ಬಹು ಜನರು ಆತುರತೆಯಿಂದ ಎದುರುನೋಡುತ್ತಿರುವರು.

ಬೊಂಬಾಯಿ ಕಾಂಗ್ರೆಸ್ ಅಧಿಕಾರಿಗಳು ಕೊಟ್ಟಿದ್ದ ನೋಟೀಸಿಗನುಸಾರವಾಗಿ, "ನೇಟಿವ್ ಪೀಸ್ ಗುಡ್ಸ್ ಅಸೋಸಿಯೇಷನ್" ಮತ್ತು "ಸೊಸೈಟಿ ಆಫ್ ಕ್ಲಾತ್‌ಮರ್ಚಂಟ್ಸ"ದ ಮೆಂಬರರು, ಸದ್ಯದ ಸ್ಥಿತಿಗಳನ್ನು ವಿಮರ್ಶಿಸಿ ನಿನ್ನೆಯದಿವಸದಿಂದ ಬೊಂಬಾಯಿಯ ಎಲ್ಲ ಅಂಗಡಿಗಳನ್ನೂ ಮುಚ್ಚಿ ದೀರ್ಘಕಾಲದ ಹರತಾಳವನ್ನು ಪ್ರಾರಂಭಿಸಿರುವರು. ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಪ್ರಾರಂಭಿಸಿರುವ ಈ ದೀರ್ಘಕಾಲದ ಹರತಾಳವನ್ನು ಸರಕಾರದವರು ರಾಷ್ಟ್ರದ ಬೇಡಿಕೆಗಳನ್ನು ಪೂರೈಸಿಕೊಡುವವರೆಗೂ ನಿಲ್ಲಿಸಕೂಡದೆಂದು ಸದರಿ ಮೆಂಬರರು ತೀರ್ಮಾನಿಸಿರುವರು.

ಜುಲೈ 24 ನೆಯ ತಾರೀಖಿನದಿವಸ ಕೆಲವು ಜನ ಸ್ವಯಂಸೇವಕರು ಹೌರಾಕ್ಕೆ ಸೇರಿದ ಸಂಧ್ಯಾಬಜಾರದಲ್ಲಿದ್ದ ಸರೋಜಿನೀದಾಸೀ ಎಂಬವಳು ಇಟ್ಟಿದ್ದ ಮದ್ಯದ ಅಂಗಡಿಯನ್ನು ಸುಟ್ಟುಬಿಟ್ಟರು. ಫೈರ್‌ಬ್ರಿಗೇಡಿನವರು ಬಹು ಜಾಗ್ರತೆಯಾಗಿ ಬೆಂಕಿಯನ್ನು ಆರಿಸಿ ಹೆಚ್ಚಿನ ಅನರ್ಥಗಳಾಗದಂತೆ ಮಾಡಿದರು. ಪೋಲೀಸರು 12ಜನರನ್ನು ದಸ್ತಗಿರಿ ಮಾಡಿರುವರು.

ಲಾಹೋರ್ ಡಿಸ್ಟ್ರಿಕ್ಟಿಗೆ ಸೇರಿದ ಷೇಕ್‌ಪುರದಲ್ಲಿ ಕಂದಾಯ ನಿರಾಕರಣ ಚಳವಳಿಯನ್ನು ಮಾಡಿದ ಸುಮಾರು 60 ಜನರಿಗೆ 3 ತಿಂಗಳಿಂದ ಆರುತಿಂಗಳುಗಳ ವರೆಗೆ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿರುವರು.

ಚಕ್ರವರ್ತಿ ಸಾರ್ವಭೌಮರವರು ತಮ್ಮ ಭವ್ಯವಾದ "ಸೆಂಟ್‌ಜೇಮ್ಸ್" ಅರಮನೆಯಲ್ಲಿ ದುಂಡುಮೇಜಿನ ಪರಿಷತ್ತನ್ನು ನಡೆಯಿಸಬಹುದೆಂದು ಅಪ್ಪಣೆಯನ್ನು ದಯಪಾಲಿಸಿರುವರು.

ಬೊಂಬಾಯಿಯ 45,000 ಜನ ವರ್ತಕರು ಪರದೇಶೀ ವಸ್ತ್ರಬಹಿಷ್ಕಾರ ಚಳವಳಿಗೆ ಸಮ್ಮತಿಯನ್ನು ಕೊಟ್ಟು ಪ್ರತಿಜ್ಞಾ ಪತ್ರಿಕೆಗೆ ರುಜುಹಾಕಿರುವರು. ಸೀಮೆಯಿಂದ ಬಂದ 90,000 ಬಟ್ಟೆಯ ಬೇಲುಗಳು ಬಂದರದಲ್ಲಿ ಹಾಗೆಯೇ ಬಿದ್ದಿರುವವು.

ಕಳೆದವಾರ ಈ ಕೆಳಗೆ ಕಂಡ 650 ಜನ ಸತ್ಯಾಗ್ರಹಿಗಳು ದಸ್ತಗಿರಿಮಾಡಲ್ಪಟ್ಟಿರುವರು.

ಸಿಮ್ಲಾ 132, ಮುಂಬಯಿ 88, ಲಾಹೋರ್ 69, ಸಿಮ್ಲಾ 64, ಅಹಮದಾಬಾದ 51, ಮಧುರೆ 51, ಇಯೋಟ್‌ಮಲ್ 41, ಎಲ್ಲಾಯಪಾಳ್ಯಂ 22, ಗುಂಟೂರು 20, ಸೇಲಂ 19, ಮೀರತ್ 18, ಕೊಯಮತ್ತೂರು 11, ಎಲ್ಲೂರು 11, ಕಡಲೂರು 9, ಕಲ್ಲಿಕೋಟೆ 8, ಸೂಲೂರ್‌ಪೇಟೆ 6, ಅಲಹಾಬಾದ 5, ನಾಗಪೂರ 5, ಬಿಜಾಪುರ 4, ತಿರುತ್ತಣಿ 3, ಕಾಂಜೀವರಂ 3, ತುತ್ತುಕುಡಿ 3, ಬರ್ಹಾಂಪೂರ 2, ನಿಡವೋಲೆ 2, ನೆಲ್ಲೂರು 1, ಪೆಶ್ಶಾರು 1, ಕರೈಕುಡಿ 1 ಜುಮ್ಲಾ 650

ಸ್ವಾತಂತ್ರ್ಯಸಂಗ್ರಾಮ.

ವಿದ್ಯಾಶಾಲೆಗಳ ಬಹಿಷ್ಕಾರ.

ಅಲಹಾಬಾದ ಮ್ಯಾಜಿಸ್ಟ್ರೇಟರ ಉಪದೇಶ.

ಅಲಹಾಬಾದ ಜುಲೈ 22.

ನಿನ್ನೆಯದಿವಸ ಕೆಲವು ಸತ್ಯಾಗ್ರಹಿಗಳು ಮೂಡರ್ನ ಹೈಸ್ಕೂಲ್ ಕಾಂಪೌಂಡಿನಲ್ಲಿ ಬಹಿಷ್ಕಾರ ಚಳವಳಿಯನ್ನು ಮಾಡಿ, ರಾಷ್ಟ್ರೀಯ ಧ್ವಜಾರೋಹಣಮಾಡಲು ಪ್ರಯತ್ನಿಸಲು ಪೋಲೀಸರು 5 ಜನರನ್ನು ಸ್ವರಾಜ್ಯಭವನದಲ್ಲಿ ದಸ್ತಗಿರಿಮಾಡಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ|| ಬ್ರಾಂಫರ್ಡರವರ ಮುಂದೆ ವಿಚಾರಣೆಗೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಅವರೆಲ್ಲರಿಗೂ ಈ ಕೆಳಗೆ ಕಂಡಂತೆ ಉಪದೇಶಮಾಡಿ ಬಿಟ್ಟುಬಿಟ್ಟರು.

"ನಾನು ನಿಮ್ಮನ್ನು 448 ಮತ್ತು 447 ನೇ ಸೆಕ್ಷನ್‌ಗಳ ಪ್ರಕಾರವಾಗಿ ಚಾರ್ಜು ಮಾಡಿರುತ್ತೇನೆ. ದಸ್ತಗಿರಿಯಾಗಿರುವ ಖೈದಿಗಳಿಗೆ ಶಿಕ್ಷೆಯನ್ನು ವಿಧಿಸುವಾಗ ನಾನೆಂದೂ ಹೀಗೆ ಉಪನ್ಯಾಸ ಮಾಡುವದಿಲ್ಲ. ಆದರೆ ನಾನು ನಿಮ್ಮೆಲ್ಲರನ್ನೂ ಬಿಡುಗಡೆ ಮಾಡಬೇಕೆಂದು ಉದ್ದೇಶಿಸಿರುವದರಿಂದ ಈ ಸಂದರ್ಭದಲ್ಲಿ ನಿಮಗೆ ನಾಲ್ಕಾರು ನ್ಯಾಯವಾದ ಮಾತುಗಳನ್ನು ಹೇಳಲು ಪ್ರಯತ್ನಪಟ್ಟಿರುತ್ತೇನೆ. [illegible]

[illegible]

ಸರ್ಕಾರದ ದಬ್ಬಾಳಿಕೆ.

[illegible]

ಸೊಲ್ಲಾಪುರದ ಕೊಲೆಯ ಅಪೀಲಿನಲ್ಲಿ ನ್ಯಾಯಮೂರ್ತಿ ಮಡಗಾವಕರರ ತೀರ್ಪು.

[illegible]

... ಆ ಗುಂಪಿನಲ್ಲಿದ್ದರೆಂಬುದು ಸಂಶಯಾಸ್ಪದವಾಗಿದೆ. ಆದ್ದರಿಂದ ಈ ಮೂವರು ಆರೋಪಿಗಳಿಗೆ ಸಂಶಯದ ಫಾಯದೆ ಕೊಟ್ಟು, ಅವರ ಶಿಕ್ಷೆಯನ್ನು ರದ್ದುಮಾಡುತ್ತೇನೆ. ಧನಶೆಟ್ಟಿಯು ಆರೋಪಿತನಾಗಿದ್ದು, ಆತನ ಶಿಕ್ಷೆಯನ್ನು ಖಾಯಂ ಮಾಡುತ್ತೇನೆ.

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀರಿಯಾ?

ಕಂಗೆಡಬೇಡಾ! ಮರುಗಬೇಡಾ!! ಗುಣದ ಮದ್ದು ಯಾವದೆಂದು ನೋಡಾ!!!

ಮಲೇರಿಯಾನ ಕಂಪೆನಿಯ ಮದ್ದನ್ನು ಒಮ್ಮೆ ನೋಡಾ!!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ? ಇಗೋ? "**ಮಲೇರಿಯಾನ**" ಎಂಬ ಪ್ರಾಣದ ಮದ್ದನ್ನು ಸೇವಿಸು ಕ್ರಯ 1—8—0

ಅನ್ನಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ? ಕಂಪೌಂಡು ಸಿರಪು "**ಪುಲ್ಸಪೂಜ**" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಕಗೊಳ್ಳುವ ಇಚ್ಛೆ ಉಂಟಾ? ಕಂಪೌಂಡು ಸಿರಪು "**ಸೆಬೀನ ಸೆಪೀಯ**" ಮತ್ತು ಕಂಪೌಂಡು ಸಿರಪು "**ವಿಬುರ್ನ್ನೂರ್ನ**" ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ತರಗಳ ರೋಗಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ಸಿರಿಕ್ಕಿ ಸುತ್ತೀಯಾ? ಹಾಗಾದರೆ ಕಂಪೌಂಡು ಸಿರಪು "**ಸರ್ಸಲಿನುಗ**" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ಕನ್ನ ಸಾತ್ತ್ವ ಗುಣದ ಬಲವನ್ನಿತ್ತೇ ತೋರಿಸಿ ರೋಗದ ಸಹಮೂಲವನ್ನೇ ಕಿತ್ತೆಸೆಯಬೇಕಾದರೆ ಮದ್ದು ಕಂಪೌಂಡು ಸಿರಪು "**ನೆಸಿಶೂಜ**" ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

[illegible]

[51]

ಮಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿ [illegible]

ಶಿಲಾಜಿತ—[illegible]

ಕ್ರಯ ... ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—[illegible]

ಗೃಹನಾಶೆಯು—[illegible]

ಹಿಮಾಲಯನ್ ಬಾಮ್—[illegible]

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ... ಮಹೌಷಧಾಲಯದ ಲಿಸ್ಟು ತರಿಸಿಕೊಳ್ಳುವುದು.

ನಮ್ಮ ಅಡ್ರೆಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

[illegible]

ವ್ಯವಸ್ಥಾಪಕ

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[15] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಹಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಬೇಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ತೇಜಕ, ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೋತ್ತೇ [illegible]

[illegible]

ಕಿಮ್ಮತ್ತು ೩॥ ರೂಪಾಯಿ. ॥ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [1]

ಪತ್ತೆ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಬೇಚಕ್ಕೆ ಸಾಫಾಗಿ ಹಸಿವು, ಶಕ್ತಿ, ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ [illegible] [1]

ಸ್ತ್ರೀರೋಗ ನಿವಾರಣ ಚೂರ್ಣ.

[illegible]

ಪತ್ತೆ:—**ವೈದ್ಯ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು) .... ೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ) .... ೨ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೩ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ .... ೪ ಆಣೆ
ವೀರಶೈವಮತವಿಮರ್ಶಾ .... ೨ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಲ್ಪವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[42] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೬-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[3] ಪೋ. ಬಾ. ೫೧೦. ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಶಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ ನೇ ಆಗಸ್ಟು ೧೯೩೦ [ಸಂಚಿಕೆ ೧೪.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ

ಹಲ್ಲೂರು.

ಶ್ರೀ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಚಿಕ್ಕಮಗಳೂರಿಗೆ ದಯಮಾಡಿಸಿದ್ದ ಸಂಗತಿಯು ಸರ್ವತ್ರ ವಿಶ್ರುತವಾಗಿರುವುದಷ್ಟೆ! ಆ ಪಟ್ಟಣದಿಂದ ತಮ್ಮ ಶ್ರೀ ಸಂಸ್ಥಾನಮಠಕ್ಕೆ ದಯಮಾಡಿಸಿ ಎಲ್ಲವನ್ನೂ ಪರಾಮರ್ಶಿಸಿ ಪುನಃ ಚಿಕ್ಕಮಗಳೂರಿಗೆ ಆಗಮಿಸಿ ಆ ಪ್ರಾಂತದ ಭಕ್ತಮಾಹೇಶ್ವರರನ್ನು ದರ್ಶನಾಶೀರ್ವಾದಗಳಿಂದ ಕೃತಕೃತ್ಯರನ್ನಾಗಿ ಮಾಡಿದರು. ಏತನ್ಮಧ್ಯೆ ಬಾಬಾಬುಡನ್‌ಗಿರಿ ದತ್ತಾತ್ರಯಪೀಠದ ಗೌಪಾಬಾದ್ರಿಯವರು ಶ್ರೀ ಸನ್ನಿಧಾನವನ್ನು ತಮ್ಮಲ್ಲಿಗೆ ದಯಮಾಡಿಸಿಕೊಂಡು ಹೋಗಬೇಕೆಂಬ ಸಂಕಲ್ಪದಿಂದ ಅಪ್ಪಣೆಯನ್ನು ತೆಗೆದುಕೊಂಡು ತಮ್ಮ ಸ್ಥಾನವನ್ನು ತಳಿರುತೋರಣಗಳಿಂದಲಂಕರಿಸಿ ವಾದ್ಯವೈಭವದಿಂದ ನಿರೀಕ್ಷಿಸಿಕೊಂಡಿರುವ ವೇಳೆಗೆ ಶ್ರೀ ಜಗದ್ಗುರುಗಳವರು ಆಸ್ಥಾನಪಂಡಿತರು ಮೊದಲಾದ ತಮ್ಮ ಪರಿವಾರದೊಡನೆ ಸಕಾಲಕ್ಕೆ ದಯಮಾಡಿಸಿ ಅವರ ಆದರಪುರಸ್ಸರವಾದ ಮರ್ಯಾದೆಯನ್ನು ಕೈಕೊಂಡು ಆನಂದಕಂದಳಿತಹೃದಯರಾಗಿ ಸ್ವಸ್ಥಾನಕ್ಕೆ ದಯಮಾಡಿಸಿ ಕೆಲವು ದಿವಸಗಳವರೆಗೆ ಆಯಾಯ ಗ್ರಾಮಗಳ ಭಕ್ತರ ಪ್ರಾರ್ಥನೆಯಿಂದ ಸಕಲ ಸನ್ನಾಹದೊಡನೆ ದಯಮಾಡಿಸಿ ಚತುರಾಶ್ರಮಿಗಳ ಸೇವೆಯನ್ನು ಕೈಕೊಂಡು ಸರ್ವರಿಂದಲೂ ವಂದ್ಯರಾಗಿರುತ್ತಿರಲು ಅರಸೀಕೆರೆ ತಾಲೂಕು ಪೈಕಿ ಶ್ರೀಮಂತರಿಂದಲಂಕೃತವಾದ ಹಲ್ಲೂರುಗ್ರಾಮದ ಭಕ್ತರು ಅಪೇಕ್ಷಿಸಿದ್ದರಿಂದ ಜುಲೈ ತಾ|| 30 ಕ್ಕೆ ಸರಿಯಾಗಿ ಹಲ್ಲೂರಿಗೆ ತಮ್ಮ ಚತುರಂಗ ಬಲದೊಡನೆ ಸಕಲ ಬಿರುದಾವಳಿ ಸಮೇತ ದಯಮಾಡಿಸಿದರು. ಯಜಮಾನ್ ಶಿದ್ಧರಾಮಶೆಟ್ಟರು ಶ್ರೀಮಾನ್ ಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರು, ಶಿದ್ರಾಮಶೆಟ್ಟರ ಪುತ್ರ ಗೊಡಚಪ್ಪಶೆಟ್ಟರು, ರುದ್ರಪ್ಪಶೆಟ್ಟರು ಪುಳಿಯಾರು ಮರುಳಪ್ಪನವರು, ಸಿದ್ಧಮಲ್ಲಪ್ಪಶೆಟ್ಟರ [illegible]ಚಪ್ಪಶೆಟ್ಟರು, ಪಟೇಲ್ ರಂಗೇಗೌಡರು ಮುಂತಾದ ಪ್ರಮುಖ ಮಹಾಶಯರು ಚಪ್ಪರ ತಳಿರುತೋರಣಗಳಿಂದ ಪುರವನ್ನಲಂಕರಿಸಿ ತಮ್ಮ ಆಪ್ತೇಷ್ಟಮಿತ್ರಬಂಧುಬಾಂಧವರೊಡನೆ ಇಸ್ತಕವಾಲಸಹಿತ ಮಾರ್ಗದಲ್ಲಿ ಕಾದುಕೊಂಡಿದ್ದು ಸವಾರಿಯು ದಯಮಾಡಿಸಿದ ಕೂಡಲೆ ಸರ್ವರ ಪರಿಚಯ ಮಾಡಿಕೊಟ್ಟು ಪ್ರಾರ್ಥಿಸಿದಮೇರೆಗೆ ಶ್ರೀ ಜಗದ್ಗುರುಗಳವರು ಶೃಂಗರಿಸಿದ ಪಲ್ಲಕ್ಕಿಯಲ್ಲಿ ಮೂರ್ತಮಾಡಿದರು. ಕೂಡಲೆ ಸಕಲ ವಾದ್ಯಗಳು ಭೋರ್ಗರೆದವು. ಭಜನೆಯು, ಪರಾಕುಗಳೂ, ಆಚಾರ್ಯ ಜಯಘೋಷವೂ ಕಿವಿಗಿಂಪಾಗಿ ಉಗ್ಘಡಿಸಲ್ಪಡುತ್ತಿದ್ದವು. ಉತ್ಸವಕ್ಕೆ ಪ್ರಾಯಃ ಎರಡು ಸಾವಿರದ ಮೇಲೆಯೇ ಜನರು ಸೇರಿದ್ದರು. ಸಕಾಲಕ್ಕೆ ಕಂಬಾಗರದ ಶ್ರೀ ಶಿವಾನಂದಾಶ್ರಮದ ಪಟ್ಟದಸ್ವಾಮಿಗಳೂ ಮತ್ತು ಬಳುಲ ನೀರಲ ಹೊನ್ನವಳ್ಳಿ ಕಾರ್ಚವಳ್ಳಿ ಮಾದೀಹಳ್ಳಿ ಹಲ್ಲೂರುಮಠಗಳ ಶ್ರೀ ಪಟ್ಟದಸ್ವಾಮಿಗಳೂ ಆಗಮಿಸಿದ್ದರು. ಉತ್ಸವವು ಎಲ್ಲ ಬೀದಿಗಳಲ್ಲಿಯೂ ಒಳ್ಳೇ ವಿಜೃಂಭಣೆಯಿಂದ ಜರುಗಿ ಸಿಂಹಾಸನದಿಂದಲಂಕೃತವಾದ ಪ್ರಧಾನಮಂಟಪಕ್ಕೆ ಬಂದಕೂಡಲೆ ಶ್ರೀ ಜಗದ್ಗುರುಗಳವರು ಪಲ್ಲಕ್ಕಿಯಿಂದ ಇಳಿದು ಸಿಂಹಾಸನವನ್ನಾರೋಹಿಸಿದರು. ಪ್ರೇಕ್ಷಕರು ಜಯಘೋಷದೊಡನೆ ಕರತಾಡನವನ್ನು ಮಾಡಿ ಸ್ವಸ್ವೋಚಿತಸ್ಥಾನದಲ್ಲಿ ಕೂತರು. ಬಳಿಕ ಪೌರಾಣಿಕಶ್ರೇಷ್ಠ ಸುಣಕಲ್ಲ ಬಿದರೆ ಆರಾಧ್ಯಮಠದ ಬಸವಲಿಂಗಶಾಸ್ತ್ರಿಗಳು ಗುರುಸೇವೆಯಿಂದಾಗುವ ಲಾಭವನ್ನು ಸೂಚಿಸಿ ಇಂಥ ಲಾಭಕ್ಕೆ ಆದ ಹಲ್ಲೂರು ಸಮಸ್ತ ದೈವದವರ ಧನ್ಯತ್ವವನ್ನು ಕೊಂಡಾಡಿದರು. ಶ್ರೀ ಜಗದ್ಗುರುಗಳವರು ಹಲ್ಲೂರ ಸೇವಾಸತ್ಕಾರವನ್ನು ನೋಡಿ ಆನಂದಿಸಿ ಇನ್ನರಂತೆ ಗುರುಭಕ್ತಿಯಿಂದ ಇತೋಪ್ಯತಿಶಯವಾಗಿ ಸುಖಿಗಳಾಗಲಿ ಎಂದು ಆಶೀರ್ವದಿಸಿದರು. ಶ್ರೀಮಾನ್ ಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರು ನಮ್ಮ ಪ್ರಾರ್ಥನೆಯನ್ನು ಚಿತ್ತಕ್ಕೆ ತಂದು ಮಹಾಪಾದವು ದಯಮಾಡಿಸಿ ಭಕ್ತರೆಲ್ಲರನ್ನು ದರ್ಶನಾಶೀರ್ವಾದಗಳಿಂದ ಪುನೀತರನ್ನಾಗಿ ಮಾಡಿದ್ದಕ್ಕೆ ಉಂಟಾದ ಸಂತೋಷವನ್ನು ಪ್ರದರ್ಶಿಸಿದರು. ಪೂಜಾಕಾಲವಾದ್ದರಿಂದ ಶ್ರೀ ಭಗವತ್ಪಾದರು ಸಭಾವಿಸರ್ಜನಕ್ಕೆ ಅಪ್ಪಣೆಯನ್ನು ಕೊಟ್ಟು ತಮ್ಮ ಬಿಡಾರಕ್ಕೆ ವಾದ್ಯವೈಭವದಿಂದ ದಯಮಾಡಿಸಿದರು. ಪುನಃ ಸಾಯಂಕಾಲ ನಾಲ್ಕು ಘಂಟೆಗೆ ಪ್ರಧಾನಮಂಟಪದಲ್ಲಿಯೇ ಶ್ರೀ ಸನ್ನಿಧಾನದಲ್ಲಿ ಸಭೆಯು ನೆರೆಯಿತು. ಸದರಿ ಬಿದರೆ ಬಸವಲಿಂಗಶಾಸ್ತ್ರಿಗಳು ಭಕ್ತಿಪ್ರಭಾವವನ್ನು ಉದಾಹರಣಪೂರ್ವಕವಾಗಿ ಉಪನ್ಯಸಿಸಿದರು. ಪುನಃ ಜಗದ್ಗುರುಗಳವರು ಇದೇ ವಿಷಯವನ್ನು ವಿಸ್ತರಿಸಿ ವೀರಶೈವ ಧರ್ಮತತ್ವವನ್ನು ಸುಲಭಶೈಲಿಯಿಂದ ಅಪ್ಪಣೆ ಕೊಡಿಸಿ ಸರ್ವರನ್ನೂ ಭಕ್ತಿನಮ್ರರನ್ನಾಗಿ ಮಾಡಿದರು. ನಿತ್ಯದಲ್ಲಿಯೂ ಸನ್ನಿಧಾನದಲ್ಲಿ ಪುರಾಣವು ಜರಗುತ್ತಿರುವದರಿಂದ ಈ ನಿಮಿತ್ತವಾಗಿ ಸಭಾವಿಸರ್ಜನಕ್ಕೆ ಅಪ್ಪಣೆ ಕೊಟ್ಟು ಬಿಡಾರಕ್ಕೆ ದಯಮಾಡಿಸಿದರು. ಬಂದ ಜನಗಳಿಗೆ ಆತಿಥ್ಯವನ್ನು ಒಳ್ಳೇ ಮುತವರ್ಜಿಯಿಂದ ಮಾಡಿ ಹಲ್ಲೂರ ಭಕ್ತರು ಯಶಸ್ವಿಗಳಾಗಿ ಮುಂದಿನ ಗ್ರಾಮಗಳ ಭಕ್ತರಿಗೆ ಮಾರ್ಗದರ್ಶಕರಾಗಿ ಆಚಾರ್ಯಕೃಪೆಗೆ ಪಾತ್ರರಾದರು. ಈ ಮಹಾಶಯರಿಗೆ ಜಗದ್ಗುರು ಪಂಚಾಚಾರ್ಯರು ಸನ್ಮಂಗಲವನ್ನೀಯಲಿ ಎಂದೂ ಇಂಥ ಧರ್ಮದ ಸುಗ್ಗಿಯು ಪ್ರತಿಯೊಂದು ಗ್ರಾಮಕ್ಕೆ ಒದಗಲಿ ಎಂದೂ ಹಾರೈಸುವೆನು.

ಓರ್ವ ಗುರುಭಕ್ತ.

ಕಾಂಗ್ರೆಸ್ ವರ್ಕಿಂಗ್‌ಕಮಿಟಿಯ ತೀರ್ಮಾನಗಳು.

ಮುಂಬಯಿ ಜುಲೈ 30.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈ ದಿನ ಮಧ್ಯಾಹ್ನ 3 ಘಂಟೆಗೆ ಸ್ಯಾಂಡ್ ಹರ್ಸ್ಟ್ ರೋಡಿನಲ್ಲಿರುವ ರಾಂಮ್ಯಾನ್ಷನ್ನಿನಲ್ಲಿ ಸೇರಿತು. ಮಿ|| ವಲ್ಲಭಭಾಯ್ ಪಟೇಲ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮಿ|| ಜಯರಾಮದಾಸ್ ದೌಲತ್‌ರಾಂ, ಪಂಡಿತ ಮದನಮೋಹನಮಾಲವೀಯ, ಡಾಕ್ಟರ್ ಹರ್ಡೀಕರ್, ಮೆಸ್ಸರ್ಸ್ ಟಿ. ಎ. ಕೆ. ಶರ್ವಾಣಿ, ದೀಪನಾರಾಯಣಸಿಂಗ್, ಲಾಲಾದುನೀಚಂದ ಮತ್ತು ಪಾತ್ರಿದಾಸ್ ತ್ರಿಕಂಜಿಯವರು ಹಾಜರಿದ್ದರು. ಮಿಸಸ್ ಜವಾಹರಲಾಲ್‌ನೆಹರು ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರು ಮುಂಬಯಿಗೆ ನಾಳೆ ಬರುವರು. ಮಿ|| ವಿಠಲಭಾಯ್ ಪಾಟೀಲ್ ಮತ್ತು ಡಾಕ್ಟರ್ ಬಿ. ಸಿ. ರಾಯರವರು ಬೇರೆ ಕಾರ್ಯವಿದ್ದುದರಿಂದ ಬರಲಿಲ್ಲ.

ಕಮಿಟಿಯವರು 5 ಘಂಟೆಗಳ ಕಾಲ ಚರ್ಚೆಮಾಡಿ, ಮುಂದೆ ಬರುವ ಸೆಂಟ್ರಲ್ ಮತ್ತು ಪ್ರಾವಿನ್ಷಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್ ಚುನಾವಣೆಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿದರು. ಅನಂತರ ಕಮಿಟಿಯು ಮುಂದಿನ ಸಭೆಯನ್ನು ಗುರುವಾರ 11 ಘಂಟೆಗೆ ಅಡ್ಜರ್ನ್‌ಮಾಡಿದರು.

ಸಭೆಯು ನಡೆಯುತ್ತಿದ್ದ ಸ್ಥಳಕ್ಕೆ ಯಾರೂ ಬರದಂತೆ ತಕ್ಕ ಏರ್ಪಾಡುಗಳು ಮಾಡಲ್ಪಟ್ಟಿದ್ದುವು. ಅಲ್ಲಿಗೆ ಬರುವವರ ವಿಧ್ವಮಾನಗಳನ್ನೆಲ್ಲಾ ಸರಿಯಾಗಿ ಅರಿತುಕೊಳ್ಳುತ್ತ ಕಾಂಗ್ರೆಸ್ ಸ್ವಯಂಸೇವಕರು ಸುತ್ತಲೂ ಕಾವಲಿದ್ದರು.

ಸಭೆಯು ಮುಕ್ತಾಯವಾಗುವವರೆಗೆ ಕುತೂಹಲದಿಂದ ಜನರು ರಸ್ತೆಯಲ್ಲಿ ಕಾದುಕೊಂಡಿದ್ದರು. ಸಭೆಯು ನಡೆದ 5 ಘಂಟೆಗಳ ಕಾಲವನ್ನು ಕಳೆಯಲು ಜನರು ಮಧ್ಯೆ ಮಧ್ಯೆ ರಾಷ್ಟ್ರೀಯಗೀತೆಗಳನ್ನು ಹಾಡುತ್ತಿದ್ದರು.

ಸಭೆಯು ಮುಗಿದ ಮೇಲೆ ರಾತ್ರಿ 8 ಘಂಟೆಗೆ ಮುಖಂಡರು ಒಬ್ಬೊಬ್ಬರಾಗಿ ಹೊರಗೆ ಬಂದ ಕೂಡಲೇ ಜನರು ಜಯಘೋಷ ಮಾಡಲಾರಂಭಿಸಿದರು.

ಕೆಲವು ಪತ್ರಿಕಾಪ್ರತಿನಿಧಿಗಳು ಕಮಿಟಿಯಲ್ಲಿ ನಡೆದ ಚರ್ಚೆಗಳ ವಿಷಯವನ್ನು ತಿಳಿಯಲು ಬಹಳ ಪ್ರಯತ್ನಪಟ್ಟರು. ಆದರೆ ಮುಖಂಡರು ಸಂಪೂರ್ಣ ಮೌನಧಾರಿಗಳಾಗಿದ್ದರು. ಕಡೆಗೆ ಕಾಂಗ್ರೆಸ್ ವರ್ಕಿಂಗ್‌ಕಮಿಟಿಯ ಸೆಕ್ರೆಟರಿಯವರು ಈ ಕೆಳಗೆ ಕಂಡ ವಿಷಯವನ್ನು ಪ್ರಕಟಪಡಿಸಿದರು.

"ವರ್ಕಿಂಗ್ ಕಮಿಟಿಯವರು ಸಂಪ್ರದಾಯಾನುಸಾರವಾದ ವಿಷಯಗಳನ್ನು ಚರ್ಚಿಸಿದನಂತರ ಈ ಕೆಳಗೆ ಕಂಡಂತೆ ಸರ್ವಾನುಮತದಿಂದ ತೀರ್ಮಾನಿಸಿರುವರು.

ಲಾಹೋರ್ ಕಾಂಗ್ರೆಸ್ಸಿನಲ್ಲಿ ತೀರ್ಮಾನಿಸಿದ್ದಂತೆ, ಹಾಗೂ ಸದ್ಯದ ಚಳವಳಿಯು ಸಂಪೂರ್ಣ ಫಲಪ್ರದವಾಗುವಂತೆ ಮಾಡಲು ದೇಶದ ಸರ್ವಶಕ್ತಿಯೂ ಚಳವಳಿಯ ಪಕ್ಷಕ್ಕೆ ತಿರುಗುವಂತೆ, ಭಾರತೀಯರು, ಮುಂದೆ ನಡೆಯಲಿರುವ ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ಚುನಾವಣೆಗಳಿಗೆ ಉಮೇದುವಾರರಾಗಿಲ್ಲದೆ, ಹಾಗೂ ಓಟುಗಳನ್ನು ಕೊಡದೆ ಇಟಸ್ಥರಾಗಿರಬೇಕೆಂದು, ದೇಶಾಭಿಮಾನಿಗಳಾದ ಸಮಸ್ತಭಾರತೀಯರನ್ನು ಈ ಸಭೆಯು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

ಅಲ್ಲದೆ ಎಲ್ಲ ಕಾಂಗ್ರೆಸ್ ಕಮಿಟಿಯವರೂ, ತಮ್ಮ ತಮ್ಮ ಸರಹದ್ದುಗಳಲ್ಲಿನ ಜನರಾರೂ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿಗೆ ಉಮೇದುವಾರರಾಗಿ ನಿಲ್ಲದಂತೆಯೂ, ಯಾರೂ ಓಟುಗಳನ್ನು ಕೊಡದಂತೆಯೂ ಶಾಂತಿಯಿಂದ ಬಹಿಷ್ಕಾರ ಚಳವಳಿಯನ್ನು ನೆರವೇರಿಸಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ"

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ

ಲೇಖಕ:—ಎಂ. ವಿ. ಬಸವಪ್ಪ, ಹಂ|| ಕ್ಲಾರ್ಕ್, ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು.

(2 ನೆಯ ಸಂಚಿಕೆಯಿಂದ ಮುಂದುವರಿದುದು)

ಸನಾತನವಾದ ವೀರಶೈವಮತವು ಸ್ಕಾಂದಾದ್ಯಷ್ಟಾದಶ ಪುರಾಣಗಳಲ್ಲಿ ಸಂದರ್ಭಾನುಸಾರವಾಗಿ ಅಲ್ಲಲ್ಲಿ ಪ್ರತಿಪಾದಿಸಲ್ಪಟ್ಟಿದ್ದರೂ ಈಗ ಮುದ್ರಿತವಾಗಿರುವ ಪುರಾಣ ಭಾಗಗಳಲ್ಲಿ ಎಲ್ಲಿಯೂ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿಲ್ಲವು. ಸ್ಕಾಂದಪುರಾಣದ ಸಂಹಿತಾಭಾಗಗಳಲ್ಲಿ ಈ ಮತವೂ ಹಾಗೂ ಮತಧರ್ಮಗಳೂ ವಿಸ್ತಾರವಾಗಿ ಪ್ರತಿಪಾದಿಸಲ್ಪಟ್ಟಿವೆ. ಈ ಸಂಹಿತೆಗಳು ಭರತಖಂಡದ ಅನೇಕ ಲೈಬ್ರರಿಗಳಲ್ಲಿ ದೊರೆಯುತ್ತಿದ್ದರೂ ಇದುವರೆಗೆ ಯಾರೂ ಈ ಭಾಗಗಳನ್ನು ಸಂಪೂರ್ಣವಾಗಿ ಮುದ್ರಣಗೊಳಿಸದಿರುವುದು ಶೋಚನೀಯವಾದ ವಿಷಯವಾಗಿದೆ. ಸ್ಕಾಂದಪುರಾಣದ **ಕುಮಾರಸಂಹಿತೆಯ** ಶೀರ್ಘಯಾತ್ರಾಖಂಡದಲ್ಲಿ

ಲಿಂಗಧಾರಣಕಂ ನಾಮ ವ್ರತಂ ಮಾಹೇಶ್ವರಾಭಿಧಮ್ | ಯೇ ಧಾರಣಂ ಪ್ರಕುರ್ವನ್ತಿ ತೇಯಾನ್ತಿ ಪರಮಾಂಗತಿಮ್ || ವ್ರತಂ ಪಾಶುಪತಂ ನಾಮ ಶಿವಲಿಂಗಾರ್ಚನಂ ಶುಭಮ್ | ಷಾಟ್ಕಾಲಿಕಂ ತ್ರಿಕಾಲಂ ವಾ ಹ್ಯೈಕಕಾಲಂ ಮಹೇಶ್ವರಮ್ || ಯೇ ಪೂಜಯನ್ತಿ ವಿಪ್ರರ್ಷೇ ತೇ ಯಾನ್ತಿ ಶಿವಮಂದಿರಮ್ | ಲಿಂಗಂ ಶಿವೋ ಭವೇತ್ ಕ್ಷೇತ್ರಮಂಗಂ ಸಂಯೋಗ ಆಶ್ರಯಃ || ತಸ್ಮಾಲ್ಲಿಂಗಾಂಗಸಂಯುಕ್ತೋ ಯೋಽಪಿ ಸೋಽತ್ಯಾಶ್ರಮೀ ಭವೇತ್ ||

ಲಿಂಗಧಾರಣರೂಪವಾದ ವ್ರತವು ಮಾಹೇಶ್ವರನಾಮಕನಾದುದು; ಯಾರು ಲಿಂಗಧಾರಣವನ್ನು ಮಾಡಿಕೊಳ್ಳುವರೋ ಅವರು ಸದ್ಗತಿಯನ್ನು ಹೊಂದುವರು. ಶಿವಲಿಂಗಾರ್ಚನರೂಪವಾದ ವ್ರತವು ಪಾಶುಪತವ್ರತವೆನಿಸುವುದು. ಪ್ರತಿನಿತ್ಯವೂ ಆರು ಕಾಲಗಳಲ್ಲಾಗಲಿ, ಮೂರು ಕಾಲಗಳಲ್ಲಾಗಲಿ ಅಥವಾ ಒಂದು ಕಾಲದಲ್ಲಾಗಲಿ ಯಾರು ಮಹೇಶ್ವರನನ್ನು ಪೂಜಿಸುವರೋ ಅವರು ಶಿವಲೋಕವನ್ನು ಹೊಂದುವರು. ಲಿಂಗವು ಶಿವಸ್ವರೂಪವಾಗಿಯೂ, ಅಂಗವು ಆ ಲಿಂಗಸ್ಥಾಪನೆಗೆ ಯೋಗ್ಯವಾದ ಕ್ಷೇತ್ರಸ್ವರೂಪವಾಗಿಯೂ, ಆ ಲಿಂಗಾಂಗಳ ಸಂಯೋಗವೇ ಆಶ್ರಯರೂಪವಾಗಿಯೂ ಇರುವುದು. ಆದುದರಿಂದ ಲಿಂಗಾಂಗ ಸಂಯುಕ್ತನಾದ ಮಾನವನು ಅತ್ಯಾಶ್ರಮಿಯೆನಿಸಿಕೊಳ್ಳುವನು. ಎಂದು ಉಕ್ತವಾಗಿರುವುದು. ಈ ಅಧ್ಯಾಯದಲ್ಲಿ ಶಿವಲಿಂಗಧಾರಣಪೂರ್ವಕವಾದ ಲಿಂಗಪೂಜಾವ್ರತಕ್ಕೆ "ಪಾಶುಪತವ್ರತ, ಶಾಂಭವವ್ರತ, ಶಿರೋವ್ರತ" ಮೊದಲಾದ ಪರ್ಯಾಯನಾಮಗಳು ಹೇಳಲ್ಪಟ್ಟಿವೆ.

ಈ ಶ್ರೇಷ್ಠವಾದ ವ್ರತವು ಕೇವಲ ಲಿಂಗಧಾರಿಗಳಿಂದಲೇ ಆಚರಿಸಲ್ಪಡತಕ್ಕದೆಂದು ಲಿಂಗಪುರಾಣದಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ. ಲಿಂಗಪುರಾಣ ಪೂರ್ವಭಾಗದ ಶೈವಮಹಿಮಾವರ್ಣನಾಮಕ 32 ನೆಯ ಅಧ್ಯಾಯದಲ್ಲಿ—

ಯೇಹಿ ಮಾಂಭಸ್ಮನಿರತಾ ಭಸ್ಮನಾ ದಗ್ಧಕಿಲ್ಬಿಷಾಃ| ಯಥೋಕ್ತಕಾರಿಣೋ ದಾಂತಾ ವಿಪ್ರಾ ಧ್ಯಾನಪರಾಯಣಾಃ ||೭|| ಮಹಾದೇವಪರಾ ನಿತ್ಯಂ ಚರಂತೋಹ್ಯೂರ್ಧ್ವರೇತಸಃ | ಅರ್ಚಯಂತಿ ಮಹಾದೇವಂ ವಾಙ್ಮನಃಕಾಯಸಂಯುತಾಃ ||೮|| ರುದ್ರಲೋಕಮನುಪ್ರಾಪ್ಯ ನಿವರ್ತಂತೇನತೇ ಪುನಃ | ತಸ್ಮಾದೇತದ್ವ್ರತಂ ದಿವ್ಯಮವ್ಯಕ್ತಂ ವ್ಯಕ್ತಲಿಂಗಿನಃ ||೯||

ಯಾವಾಗಲೂ ಭಸ್ಮಧಾರಣಸಂಪನ್ನರಾಗಿ ಆ ಭಸ್ಮದಿಂದ ಸುಡಲ್ಪಟ್ಟ ಮಲತ್ರಯವುಳ್ಳವರೂ, ವಿಧ್ಯುಕ್ತಕರ್ಮಾಚರಣಾಸಕ್ತರೂ, ಉದಾರಹೃದಯರೂ, ಧ್ಯಾನಾಸಕ್ತರೂ, ಯಾವಾಗಲೂ ಪರಶಿವನ ಸೇವೆಯಲ್ಲೇ ಕಾಲವನ್ನು ಕಳೆಯತಕ್ಕವರೂ, ತ್ರಿಕರಣಪೂರ್ವಕವಾಗಿ ದೇವದೇವನಾದ ಪರಶಿವನನ್ನು ಅರ್ಚಿಸತಕ್ಕವರೂ ಆದ ಬ್ರಾಹ್ಮಣಶ್ರೇಷ್ಠರು ಊರ್ಧ್ವರೇತಸ್ಕರಾಗಿ ರುದ್ರಲೋಕವನ್ನು ಹೊಂದಿ ಅಲ್ಲಿಂದ ಪುನಃ ಹಿಂದಿರುಗುವುದಿಲ್ಲ. ಆದುದರಿಂದ ಅತ್ಯಂತ ಗೂಢವಾದ ಈ ವ್ರತವು ಬಾಹ್ಯಲಿಂಗಧಾರಣಸಂಪನ್ನರಾದ ವ್ಯಕ್ತಲಿಂಗಳಿಗೆ ಶ್ರೇಷ್ಠವಾದುದು ಎಂದು ಪರಮಾತ್ಮನು ಉಪದೇಶಿಸಿರುತ್ತಾರೆ.

ಸ್ಕಾಂದಪುರಾಣಾಂತರ್ಗತ ಶಂಕರಸಂಹಿತೆಯ ಉತ್ತರಭಾಗದ ವೀರಮಾಹೇಶ್ವರ ಪ್ರಶಂಸಾನಾಮಕ ೮೧, ೮೨, ೮೩, ೮೪, ೮೫, ೮೬, ಈ ಅಧ್ಯಾಯಗಳಲ್ಲಿ "ಶರಪೀಠಪ್ರಾಶಸ್ತ್ಯ, ಲಿಂಗಧಾರಿಗುರೂಪದೇಶ, ಲಿಂಗಧಾರಣದೀಕ್ಷಾವಿಧಾನ, ವೀರಶೈವಾಚಾರನಿರೂಪಣ, ಲಿಂಗಾಂಗಯೋಗತತ್ವನಿರೂಪಣ, ಪದಾಧಿಕ್ಯ, ಅಷ್ಟಾವರಣಪಂಚಾಚಾರಷಟ್‌ಸ್ಥಲಾದಿಗಳ ನಿರೂಪಣ" ಮೊದಲಾದ ಧರ್ಮಗಳು ಸ್ಕಂದೇಶ್ವರಸಂವಾದ ರೂಪವಾಗಿ ಪ್ರತಿಪಾದಿಸಲ್ಪಟ್ಟಿವೆ.

ವೀರಶೈವಮತದ ಗ್ರಂಥಕಾರರು ಈ ಸಂಹಿತೆಯನ್ನು ಅತ್ಯಂತ ಪ್ರಮಾಣೀಭೂತವಾದದ್ದನ್ನಾಗಿ ಅಂಗೀಕರಿಸಿ ಇದರಲ್ಲಿರುವ ಶ್ಲೋಕಗಳನ್ನು ತಮ್ಮ ಗ್ರಂಥಗಳಲ್ಲಿ ಪ್ರಮಾಣವಚನಗಳನ್ನಾಗಿ ಉದಾಹರಿಸಿರುತ್ತಾರೆ. ಅಲ್ಲದೆ ಶೈವಮತಾವಲಂಬಿಗಳಾದ ಸ್ಮಾರ್ತಾದ್ವೈತಮತೀಯ ವಿದ್ವಾಂಸರೂ ಸಹ ತಮ್ಮಿಂದ ರಚಿತವಾದ ಶೈವಗ್ರಂಥಗಳಲ್ಲಿಯೂ, ವ್ಯಾಖ್ಯಾನಗಳಲ್ಲಿಯೂ ಈ ಸಂಹಿತೆಯ ವಾಕ್ಯಗಳನ್ನು ಪ್ರಮಾಣಗಳನ್ನಾಗಿ ಉದಾಹರಿಸಿರುತ್ತಾರೆ. ಸಿದ್ಧಾಂತಶಿಖಾಮಣಿ ಮೊದಲಾದ ಇತರ ನಾಲ್ಕು ಗ್ರಂಥಗಳೊಡನೆ ಈ ಸಂಹಿತೆಯನ್ನು ತಂಜಾವೂರಿನಲ್ಲಿ ಸ್ವಾಮಿಯವರು "ಶೈವಸಿದ್ಧಾಂತಪಂಚಕ" ಎಂಬ ಹೆಸರಿನಿಂದ ತೆಲುಗು ಲಿಪಿಯಲ್ಲಿಯೂ, ಮೈಸೂರಿನ ಶೈ|| ವಾ|| ವೈ. ವೀರಸಂಗಪ್ಪನವರು ಕನ್ನಡಲಿಪಿಯಲ್ಲಿಯೂ, ಶೈ|| ವಾ|| ರಾವ್‌ಬಹದ್ದೂರ್ ಶ್ರೀಮಂತ ನಾರದ ಮಲ್ಲಪ್ಪನವರು ದೇವನಾಗರಲಿಪಿಯಲ್ಲಿಯೂ ಮುದ್ರಣಗೊಳಿಸಿರುತ್ತಾರೆ.

ಈ ಸಂಹಿತೆಯ ೮೧ ನೆಯ ಅಧ್ಯಾಯದ ಅಂತ್ಯದಲ್ಲಿ—

"ಇತಿ ಪರಮರಹಸ್ಯಂ ವತ್ಸ ವೇದಾಂತಸಾರಂ ಸಕಲಸುರಮುನೀಂದ್ರೈರಾದೃತಂ ಭಕ್ತಿಮದ್ಭಿಃ | ಕಥಿತಮಖಿಲದುಃಖಧ್ವಂಸಕಂ ತುಭ್ಯಮೇತತ್ತ್ವಮಪಿ ಕಥಯಧರ್ಮಂಪ್ರಾಣಲಿಂಗೈಕ್ಯಭಾಜೇ ||೭೨||"

ಎಲೈ ಕುಮಾರಸ್ವಾಮಿಯೇ! ಪರಮರಹಸ್ಯವೂ, ವೇದಾಂತಸಾರಭೂತವೂ, ಭಕ್ತಿಸಂಪನ್ನರಾದ ಸಕಲ ದೇವತೆಗಳಿಂದಲೂ ಋಷಿಗಳಿಂದಲೂ ಆಶ್ರಯಿಸಲ್ಪಟ್ಟುದೂ, ದುಃಖಧ್ವಂಸಕವೂ ಆದ ಈ ವೀರಶೈವಧರ್ಮವನ್ನು ನಿನಗೆ ತಿಳುಹಿಸಿರುತ್ತೇನೆ. ನೀನಾದರೂ ಈ ಧರ್ಮವನ್ನು ಲಿಂಗಾಂಗಸಾಮರಸ್ಯಜ್ಞಾನವನ್ನಪೇಕ್ಷಿಸುವ ಮುಮುಕ್ಷುಗಳಿಗೆ ಬೋಧಿಸು." ಎಂದು ಪರಮಾತ್ಮನು ಉಪದೇಶಿಸಿರುತ್ತಾನೆ.

೮೩ ನೆಯ ಅಧ್ಯಾಯದ ಮಧ್ಯಭಾಗದಲ್ಲಿ :—

ಯಾವತ್ಪ್ರಾರಬ್ಧಕರ್ಮೋತ್ಥ ಸಂಸಾರಃಪ್ರತಿಭಾಸತೇ ತಾವತ್ಕುರ್ವೀತ ಕರ್ಮಾಣಿ ವೇದತಂತ್ರೋದಿತಾನಿಚ ||೭೨||

ಇತ್ಯಾದಿ ಶ್ಲೋಕಗಳಲ್ಲಿ ಲಿಂಗಧಾರಣಸಂಪನ್ನನಾದ ಗೃಹಸ್ಥಾಶ್ರಮಿಯು ಎಲ್ಲಿಯವರೆಗೆ ಪೂರ್ವಜನ್ಮಕೃತ ಕರ್ಮರೂಪವಾದ ಸಂಸಾರ ವಾಸನೆಯು ತನ್ನನ್ನು ಅಂಟಿಕೊಂಡಿರುವದೋ ಅಲ್ಲಿಯವರೆಗೂ ವೇದಾಗಮಗಳಲ್ಲುಕ್ತಗಳಾದ ಸಂಧ್ಯಾದಿ ನಿತ್ಯಕರ್ಮಗಳನ್ನೂ ಪಂಚಾಚಾರಾದಿ ಮತಧರ್ಮಗಳನ್ನೂ ಆಚರಿಸಬೇಕೆಂದು ವಿಧಿಸಿ. ಈ ಮತವು "ಇತರ ಮತಗಳಂತೆ ಕೇವಲ ಜ್ಞಾನವೊಂದನ್ನಾಗಲಿ ಕೇವಲ ಕರ್ಮವೊಂದನ್ನಾಗಲಿ ಪ್ರಧಾನವನ್ನಾಗಿ ಅಂಗೀಕರಿಸದೆ ಜ್ಞಾನಕ್ರಿಯೆಗಳೆರಡನ್ನೂ ಅಂಗೀಕರಿಸಿರುವುದರಿಂದ

ಅನೇನ ಸದೃಶಂ ಧರ್ಮಂ ನಪಶ್ಯಾಮಿ ಷಡಾನನ | ವೇದತಂತ್ರಪುರಾಣೇಷು ಸತ್ಯಂ ಸತ್ಯಂ ಮಯೋದಿತಮ್ ||೭೬||

ಎಲೈ ಕುಮಾರಸ್ವಾಮಿಯೇ! ಈ ಮತಕ್ಕೆ ಸಮಾನವಾದ ಮತವೇ ಇಲ್ಲ; ವೇದಾಗಮ ಪುರಾಣಗಳಲ್ಲಿ ನನ್ನಿಂದ ಹೇಳಲ್ಪಟ್ಟಿರುವುದೇ ಸತ್ಯವು ಎಂದು ಉಪದೇಶಮಾಡಿರುತ್ತಾನೆ.

(ಸಶೇಷ.)

ಪುಣ್ಯತಿಥಿ.

ಮುಧೋಳ.

ನಿಜಾಮ್ ಇಲಾಖೆಯಲ್ಲಿರುವ ಮುಧೋಳ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಮಹಾಂತಸ್ವಾಮಿಗಳ ಸದ್ಗುರುಗಳಾದ ಶ್ರೀ|| ಷ|| ಬ್ರ|| ಶಿವಲಿಂಗ ಶಿವಾಚಾರ್ಯರ ಪುಣ್ಯತಿಥಿಯ ಮಹೋತ್ಸವವು ಕಳೆದ ಆಷಾಢಮಾಸದಲ್ಲಿ ಅತಿ ಸಭ್ರಮದಿಂದ ನೆರವೇರಿಸಲ್ಪಟ್ಟಿತು. ಆಷಾಢ ಬ|| ೧೧ ಮಂಗಳವಾರ ಸಾಯಂಕಾಲದಲ್ಲಿ ಶ್ರೀ ಪಂಚಾಚಾರ್ಯರ ಭಜನಾಸಂಘದ ಬಾಲಕರು ತಮ್ಮ ಮಧುರವಾದ ಗಾನದಿಂದ ಆನಂದಪಡಿಸಿದರು. ಬ|| 12 ಬುಧವಾರ ಪ್ರಾತಃಕಾಲ ಶ್ರೀ ಶಿವಲಿಂಗ ಶಿವಾಚಾರ್ಯರ ಗದ್ದುಗೆಯ ಮೇಲೆ ಸ್ಥಾಪಿಸಲ್ಪಟ್ಟ ಶಿವಲಿಂಗಕ್ಕೆ ಶ್ರೀ ಶಿವರುದ್ರದೇಶಿಕ ಮಹಾದೇವದೇಶಿಕ ಓಂಕಾರಶರ್ಮ ಬಸವರಾಜಶರ್ಮ ಮಲ್ಲಿನಾಥಶರ್ಮ ಸೋಮನಾಥಶರ್ಮ ಡಿಗ್ಗಿ ಮೊದಲಾದ ವಿದ್ಯಾರ್ಥಿಗಳಿಂದ ಶಾಲಾಧ್ಯಾಪಕರೊಡನೆ ವಿಧ್ಯುಕ್ತವಾಗಿ ರುದ್ರಾಭಿಷೇಕವು ಮಾಡಲ್ಪಟ್ಟಿತು. ಅನಂತರ ಧೂರಿಜಂಗಮಾಷ್ಟಕಂತಾಂ ಅನ್ನುವಂತೆ ಡಿಗ್ಗಿ, ಹೊಳಸಂಬರ, ಕೊಡಿಗ್ಯಾಳ, ಬೆಣಗುಂದಿ ಇವೇ ಮೊದಲಾದ ಸುತ್ತಲಿನ ಎಡಬಲ ಹಳ್ಳಿಗಳಿಂದ ಆಗಮಿಸಿದ ಭಕ್ತಮಾಹೇಶ್ವರ ವರ್ಗಕ್ಕೆ ಮೃಷ್ಟಾನ್ನ ಭೋಜನದಿಂದ ತೃಪ್ತಿಗೊಳಿಸಲ್ಪಟ್ಟಿತು. ಶ್ರೀ|| ಷ|| ಶಿವಲಿಂಗ ಶಿವಾಚಾರ್ಯರ ಗುಣಕಥನ ಬಗ್ಗೆ ೪|| ಘಂಟೆಗೆ ಸಭೆಯು ಪ್ರಾರಂಭಿಸಲ್ಪಟ್ಟು ಪ್ರಥಮತಃ 1. ಶ್ರೀಗಳ ಭಾವಚಿತ್ರಕ್ಕೆ ಸಂಸ್ಕೃತ ವಿದ್ಯಾರ್ಥಿಗಳಿಂದ ಪೂಜಾದಿಕಾರ್ಯವು ಆಚರಿಸಲ್ಪಟ್ಟಿತು. 2. ಶ್ರೀಗಳ ಪುಣ್ಯತಿಥಿಗೆ ಆಗಮಿಸಿದ ಶ್ರೀ|| ಷ|| ಬ್ರ|| ಹಾಲಹಳ್ಳಿ ಪಟ್ಟದದೇವರು ಶ್ರೀ|| ಷ|| ಬ್ರ|| ಕಮತಾಣ ಪಟ್ಟದದೇವರು ಶ್ರೀ|| ಷ|| ಜಾಪತಿ ಪಟ್ಟದೇವರು ಶ್ರೀ|| ಷ|| ಪಟ್ಟದೇವರು ಭಾಲ್ಕಿ ಇವರೇ ಮೊದಲಾದ ಪಟ್ಟಾಧಿಕಾರಿಗಳು ಭಕ್ತರ ಭಕ್ತಿಗೆ ಯೋಗ್ಯಗಳಾದ ಅಷ್ಟಾವರಣಗಳ ವಿಷಯಕವಾಗಿ ಚೆನ್ನಾಗಿ ಬೋಧಿಸಿದರು. ಆ ಮೇಲೆ ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವಂದಲಿ ದಾಸೋಹಮಠದ ವೇ|| ವಿರೂಪಾಕ್ಷ ಶಾಸ್ತ್ರಿಗಳು ಶ್ರೀಗಳ ಅದ್ಭುತವಾದ ಚರಿತ್ರವನ್ನು ಶ್ರೋತೃಗಳಿಗೆ ಆನಂದವಾಗುವ ಹಾಗೆ ಬೋಧಿಸಿದರು. ಅನಂತರ ಬ್ರಹ್ಮಚರ್ಯ, ಅಹಿಂಸಾ ಸಂಘಟನ, ಈ ವಿಷಯಗಳ ಮೇಲೆ ಇಂಗ್ಲೀಷ ವಿದ್ಯಾರ್ಥಿಗಳಾದ ಮಾಧವರಾವ, ನೀಲಕಂಠರಾವ ಬಸನಾಳ ಮ ಚನ್ನಬಸವಪ್ಪ ನಾಗಭೂಷಣಪ್ಪ ನೀಲಕಂಠಪ್ಪ ಮೊದಲಾದ ವಿದ್ಯಾರ್ಥಿಗಳ ಮತ್ತು ಸಂಸ್ಕೃತ ವಿದ್ಯಾರ್ಥಿಗಳ ಸಂವಾದರೂಪಗಳಾದ ಭಾಷಣಗಳು ಮನೋಹರವಾಗಿ ಜರುಗಿದವು. ಇಂಗ್ಲೀಷ ಶಾಲಾಮಾಸ್ತರ ಮಿ|| ರಾಚಯ್ಯಶರ್ಮ ಉದಗೀರಕರ ಇವರು ಶ್ರೀ ಭಗವತ್ಪಾದ ಪಂಚಾಚಾರ್ಯರಲ್ಲೊಬ್ಬರಾದ ಏಕೋರಾಮಾರಾಧ್ಯರ ಇತಿಹಾಸಕ್ಕೂ ಶ್ರೀಗಳ ಇತಿಹಾಸಕ್ಕೂ ದೃಷ್ಟಾಂತ ಕೊಟ್ಟು ಹೇಳಿದರು. ಶ್ರೀಮಂತ ಶಾಮಲಾಲ ವಕೀಲ ಉದಗೀರ ಇವರು ಬ್ರಹ್ಮಚರ್ಯ ವಿಷಯಕವಾಗಿ ಶಾಸ್ತ್ರದಿಂದಲೂ ವೈದಿಕದೃಷ್ಟಿಯಿಂದಲೂ ವೇದಸೂಕ್ತಗಳಿಂದಲೂ ಹಿಂದೀಭಾಷೆಯಲ್ಲಿ ಹೇಳಿದರು. ತದನಂತರ ಬಾರ್ಸಿಯಲ್ಲಿ ಪ್ರಕಟಿಸಲ್ಪಡುವ 'ವೀರಪ್ರಭಾ' ಎಂಬ ವಾರಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ "ಗುರುಶಿಷ್ಯರ ಸಂವಾದ" ವೆಂಬ ಮರಾಠೀಲೇಖನವನ್ನು ಮಿ|| ಶಂಕರಪ್ಪ ಹಡಗಿ ಇವರು ಚೆನ್ನಾಗಿ ಓದಿಹೇಳಿದರು. ತದನಂತರ ಶ್ರೀ ಪಂಚಾಚಾರ್ಯರ ಭಜನಾಸಂಘದ ಬಾಲಕರು ಶ್ರೀ ಪಂಚಾಚಾರ್ಯರ ಮಂಗಲವನ್ನು ಮಾಡಲು ಶ್ರೀ ಶಿವಲಿಂಗ ಶಿವಾಚಾರ್ಯರ ಜಯಘೋಷದೊಡನೆ ಈ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಸಭೆಯ ವ್ಯವಸ್ಥಾಪಕರು
ಮಠದ ವೇ|| ಹಾವಪ್ಪನವರು
ಮ|| ಗುಂಡಪ್ಪ ಮ ಭೀಮಣ್ಣ ಬಿಸಗುಂಡಿ
ಮ|| ಅಂಬಿರಾವ ಖಂಡೆ ಮ|| ಶಕ್ತಿ ಮಹಾದಪ್ಪ
ಮ|| ವಿಶ್ವನಾಥಪ್ಪ ಗುರುಬಸಪ್ಪ ಖಿಡಕಿ

ಶ್ರೀ ಕ್ಷೇತ್ರಕಾಶೀ ವಿಶ್ವಾರಾಧ್ಯಪೀಠಾಧೀಶ ಶ್ರೀ ಜಗದ್ಗುರು ರಾಜೇಶ್ವರಶಿವಾಚಾರ್ಯ ಮಹಾಸ್ವಾಮಿಗಳ ಪುಣ್ಯತಿಥಿ ಸಮಾರಂಭವು.

ಪ್ರತಿ ವರ್ಷದ ಪದ್ಧತಿಯ ಮೇರೆಗೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾಪೀಠದಲ್ಲಿ ಇದೇ ಪ್ರಮೋದೂತಸಂವತ್ಸರದ ಆಷಾಢ ಕೃ|| ೭ ತಾ|| 18-7-30 ನೆಯ ಶುಕ್ರವಾರ ಪ್ರಾತಃಕಾಲ 7 ಘಂಟೆಗೆ ನಾನಾವಿಧ ಶಿಲ್ಪ ಕೌಶಲ್ಯದಿಂದಲೂ ತಳಿರುತೋರಣ ರಂಭಾಸ್ತಂಭಗಳಿಂದಲೂ ಅಲಂಕೃತವಾದ ಶ್ರೀ ರಾಜೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಸಮಾಧಿ ಮಂದಿರದಲ್ಲಿ ಗುರುಕುಲ ವಿದ್ಯಾರ್ಥಿಗಳು ನಮಕ ಚಮಕ ಪುರುಷಸೂಕ್ತಗಳಿಂದ ಶ್ರೀಗಳವರ ಸಮಾಧಿಯ ಮೇಲೆ ಸ್ಥಾಪಿತವಾಗಿರುವ ಶಿವಲಿಂಗಕ್ಕೆ ಏಕಾದಶ ಮಹಾರುದ್ರಾಭಿಷೇಕವನ್ನು ವಿಧ್ಯುಕ್ತವಾಗಿ ಮಾಡಿದರು. ಮಧ್ಯಾಹ್ನ 12 ಘಂಟೆಗೆ ಷಡ್ರಸೋಪೇತ ಭಕ್ಷ್ಯಭೋಜ್ಯಗಳಿಂದ ಸಕಲರೂ ಸಂತೃಪ್ತರಾದರು. ಆ ಮೇಲೆ ಸಾಯಂಕಾಲ 8 ಘಂಟೆಗೆ ದೀಪಾವಳಿಯಿಂದಲೂ ನಾನಾವಿಧ ಪುಷ್ಪಮಾಲೆಗಳಿಂದಲೂ ರಂಜಿತವಾದ ಶ್ರೀ ಪೂಜ್ಯಪಾದರ ಸಮಾಧಿಮಂದಿರದಲ್ಲಿ ಶ್ರೀಮದಾಚಾರ್ಯ ಭಗವತ್ಪಾದರವರ ಭಜನೆಯು ಪ್ರಾರಂಭವಾಯಿತು. ಅನೇಕ ಭಕ್ತರು ಸಂದರ್ಶನಾರ್ಥವಾಗಿ ಆಗಮಿಸಿದ್ದರು. ಆದಿಯಲ್ಲಿ ಶ್ರೀ|| ವೇ|| ಪಂ|| ಗೊಬ್ಬೂರು ವೃಷಭಲಿಂಗಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ ಪದಗಳನ್ನು ಹಾರ್ಮೋನಿಯಂ ವಾದ್ಯದೊಡನೆ ಮಧುರವಾಗಿ ಹಾಡಿ ಶ್ರೋತೃಗಳ ಕರ್ಣಗಳಿಗೆ ಅಮೃತಪಾನವನ್ನು ಮಾಡಿಸಿದರು. ಆ ಮೇಲೆ ರುದ್ರಾಭಿಷೇಕ ಕಾಲದಲ್ಲಿ ಮುಖ್ಯ ವೈದಿಕರಾಗಿದ್ದ ಶ್ರೀ|| ವೇ|| ಪಂ|| ಚಿದಿರೇಮಠದ ವೀರಭದ್ರಶಾಸ್ತ್ರಿಗಳು ವೇದತೀರ್ಥ ಇವರು ತಮ್ಮ ಶ್ರುತಿಮಧುರವಾದ ಗಾನದಿಂದ ಸಕಲರನ್ನೂ ಆನಂದಗೊಳಿಸಿದರು. ಅನಂತರ ಬೆಂಗಳೂರು ಶ್ರೀ|| ವೇ|| ಪಂ|| ಶಿವಕುಮಾರಸ್ವಾಮಿಗಳವರು ತಮ್ಮಿಂದ ರಚಿಸಲ್ಪಟ್ಟ ಸ್ತೋತ್ರಪಂಚಕವನ್ನು ಕರ್ಣಾನಂದವಾಗುವಂತೆ ಹಾಡಿದರು. ಮತ್ತು ಮುದೇನೂರು ಶ್ರೀ|| ವೇ|| ಪಂ|| ವಾಗೀಶಶಿವಾಚಾರ್ಯರು ತಾವು ರಚಿಸಿದ ಕಂದಪದ್ಯಗಳನ್ನು ಶ್ರಾವ್ಯವಾಗಿ ಹಾಡಿದರು. ಆ ಪದ್ಯಗಳನ್ನು ಕೆಳಗೆ ಕೊಟ್ಟಿದೆ. ಕಡೆಯಲ್ಲಿ ಗುರುಕುಲವಿದ್ಯಾರ್ಥಿಗಳು ಶ್ರೀಗಳವರ ಪವಿತ್ರ ಗುಣಗಾನವನ್ನು ಮಾಡಿ ಶ್ರೀ ಜಗದ್ಗುರು ರಾಜೇಶ್ವರ ಶಿವಾಚಾರ್ಯ ಮಹಾರಾಜಕೀ ಜೈ, ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾರಾಜಕೀ ಜೈ, ಶ್ರೀ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾರಾಜಕೀ ಜೈ, ಎಂಬ ಜಯಘೋಷದೊಡನೆ ಭಜನಾಸಮಾರಂಭವು ಸಮಾಪ್ತಿಗೊಳಿಸಲ್ಪಟ್ಟಿತು.

ಶಿವಕುಮಾರರಚಿತ ರಾಜೇಶ್ವರಪಂಚಕಂ.

ಶ್ರೀಮದ್ವಿಶ್ವಗುರುಂ ಭವಾದ್ರಿಕುಲಿಶಂ ವಿದ್ಯಾರ್ಥಿಚಿಂತಾಮಣಿಂ | ಸ್ವೈಃ ನಾನುಪದೇಶದಾನವಿಧಿನಾ ಸಂತೃಪ್ತವಿದ್ವಜ್ಜನಂ || ಶಿಷ್ಯಾನುಗ್ರಹವಾಂಛಯಾ ಸುಮಹಿತೇ ಸುಜ್ಞಾನಸಿಂಹಾಸನೇ | ರಾಜಂತಂ ಸತತಂ ಸ್ಮರಾಮಿ ಮನಸಾ "**ರಾಜೇಶ್ವರಂ**" ಯೋಗಿನಂ ||೧||

ಲಿಂಗಾಂಗೈಕ್ಯವಿಚಾರಚಾರುಚರಿತೋಽನಂಗಾದ್ವಿದೂರಂಗತಃ | ಗಂಗಾ ತುಂಗೆ ತರಂಗ ನಿರ್ಮಲವಿಭೂತ್ಯಾಲೇಪಿತಾಂಗೋಜ್ವಲಃ || ಭಂಗೇ ಭಂಗುರ ಸಂಸೃತಿಪ್ರಬಲಮಾತಂಗಸ್ಯ ಸಿಂಹೋ ಮಹಾನ್ | ಭೃಂಗಸ್ಯಂಶರ ಪಾದಪದ್ಮಯುಗಳೇ "**ರಾಜೇಶ್ವರೋ**" ರಾಜತೇ ||೨||

ವಿಶ್ವಾರಾಧ್ಯಜಗದ್ಗುರೂತ್ತಮ ಮಹಾಪಂಚಾರ್ಣವೇ ಭಾಗ್ಯತೋ | ಜಾತಂ ರತ್ನಮಲೌಕಿಕಂ ಸುವಿಮಲಂ "**ರಾಜೇಶ್ವರಾ**" ಖ್ಯಂ ಮಹತ್ || ತದ್ವೀಪ್ತ್ಯಾಽಖಿಲ ವೀರಶೈವಜನತಾಽವಿದ್ಯಾಂಧಕಾರೋಭುವಿ | ನಶ್ಯೇದಿತ್ಯಮಲಾಂತರಂಗಸದನೇ ಸ್ವರ್ಣಾರ್ಥ್ಯತಂ ತದ್ಧೃವಂ ||೩||

ಪಾಪವ್ರಾತ ವಿಧೂತತಾಪಸಪರಿವ್ರಾಜಂ ಪರಂ ತ್ಯಾಗಿನಂ | ರಾಗದ್ವೇಷ ಮುಖಾರಿವರ್ಗದಮನೇನಾಯತ್ತಶಾಂತಿವ್ರತಂ || ಭಕ್ತೇಪ್ಸಾರ್ಥಸುರದ್ರುಮಂ ಶಿವಮಹಾಸಾಯುಜ್ಯಯೋಕ್ಷ್ಯಂಗತಂ | ವಂದೇ ನಿತ್ಯಸುಖಾಕರಂ ಯತಿವರಂ "**ರಾಜೇಶ್ವರಂ**" ಯೋಗಿನಂ ||೪||

ಜಯಜಯ ಗುರುರಾಜ ಸ್ವಾಂತಸದ್ಮೇ ನರಾಣಾಂ| ಜಯಜಯ ಭುವಿದಿವ್ಯಜ್ಯೋತಿಮನ್ ವಿಶ್ವವಂದ್ಯ || ಜಯಜಯ ವರವಿಶ್ವಾರಾಧ್ಯಪೀಠಾಧಿನಾಥ | ಜಯಜಯ ಮತಿದಾತಾ ಯೋಗಿ "**ರಾಜೇಶ್ವರ**"ತ್ವಂ ||೫||

ವಾಗೀಶ ರಚಿತ ಪದ್ಯತ್ರಯಂ.

ಕಂ|| ವಿಶ್ವಾರಾಧ್ಯರ ಕಾಲದೆ |
ವಿಶ್ವವು ನಿಜಧರ್ಮಪಥವನನುಸರಿಸಿದಪೋಲ್ ||
ವಿಶ್ವವನುಪಂದ್ಯನೆ ಶ್ರೀ "ರಾ |
ಜೇಶ್ವರ" ತವಸಮಯದೊಳಗು ಮನುಸರಿಸಿತುಮು ||೧||
"**ರಾಜೇಶ್ವರ**" ಯತಿರಾಜಂ |
ತೇಜೋನ್ವಿತ ಮೋಕ್ಷಪದದೆ ರಾಜಿಪನೆಂದುಂ ||
ಸೋಜಿಗಮಾಗಿಹ ನುತಿಯಂ |
ದ್ವಿಜನರತಿ ಭಕ್ತಿಯಿಂದ ಪಾಡಿಪರ್ಗೆಂ ||೨||
ನಾನುಂ ತವಪದ ನುತಿಯೊಳ್|
ಲೀನಂ ಶಿವಯೋಗಿವರ್ಯ "**ರಾಜೇಶ್ವರನೆ**" ||
ಜ್ಞಾನಂ ಎನಗುದಯಿಸಿ ಬಹು |
ಮಾನಂ ಶಿವಮತಕೆ ದೊರೆಯಲಾಶೀರ್ವದಿಸೈ ||೩||

ಓರ್ವ ಗುರುಕುಲವಿದ್ಯಾರ್ಥಿ.
ಶ್ರೀ ಕ್ಷೇತ್ರಕಾಶೀ.

ಶ್ರೀ ಜಗದ್ಗುರು ಪಂಚಾಚಾರ್ಯರಃ ಪ್ರಸೀದಂತು.

ಪ್ರಕಟನೆ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನದ ವೃಷ್ಟಿಸೂತ್ರಕ್ಕೊಳಪಟ್ಟ ಹಿರೇಸಾರಂಗಮಠ, ದೊಣ್ಣೂರು ತಾಲೂಕ ಚಿತಾಪುರ ಜಿಲ್ಲಾ ಗುಲಬರ್ಗಾ ಈ ಮಠದ ಸರ್ವಹಕ್ಕು ಸಮೇತ ಚರಪಟ್ಟಾಧಿಕಾರವನ್ನು ಸ್ವೀಕರಿಸಿದ ಶಿವಕುಮಾರ ಶಿವಾಚಾರ್ಯರು ನೈಜಾಮಪ್ರಾಂತೀಯ ವೀರಶೈವಸಮಾಜದ ಮತ್ತು ತಮ್ಮ ಗ್ರಾಮದ ಸದ್ಯಃ ಪರಿಸ್ಥಿತಿಯನ್ನು ಪರಿಶೀಲಿಸಿ ಸಮಸ್ತ ಜನರಲ್ಲಿ ತಮ್ಮ ಧಾರ್ಮಿಕ ಕೃತ್ಯಗಳಿಂದ ಧರ್ಮಾಂಕುರವನ್ನು ಬೆಳೆಸುತ್ತಿರುವರು. ಈಗ ಶ್ರಾವಣಮಾಸದಲ್ಲಿ ದೊಣ್ಣೂರ ಮುಕ್ಕಾಮಿನೊಳಗೆ ಶ್ರೀ ಭಗವತ್ಪಾದ ಜಗದಾಚಾರ್ಯ ಮರುಲಾರಾಧ್ಯರ ಪ್ರೀತ್ಯರ್ಥವಾಗಿ ಶ್ರೀ ಭಗವತ್ಪಾದರ ಮೂರ್ತಿಗೆ ವಿಧ್ಯುಕ್ತ ರುದ್ರಾಧ್ಯಯನದೊಡನೆ ಪೂಜೆಯನ್ನು ಅತಿ ವಿಜೃಂಭಣೆಯಿಂದ ಪ್ರತಿನಿತ್ಯದಲ್ಲಿ ನಡೆಯಿಸುತ್ತಿರುವದಲ್ಲದೆ ಪ್ರತಿನಿತ್ಯ ಸಾಯಂಕಾಲಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರ ಮಹತ್ವದ ಬಗ್ಗೆಯೂ ಧರ್ಮಜಾಗೃತಿಯ ಬಗ್ಗೆಯೂ ಉಪದೇಶಮಾಡಿಸುತ್ತಿರುವರು. ಆದ್ದರಿಂದ ಮತಾಭಿವೃದ್ಧಿಕಾರ್ಯದಲ್ಲಿ ತೊಡಗಿರುವ ಈ ಶ್ರೀಗಳವರ ಬಗ್ಗೆ ಇಡೀ ಸಾರಂಗಮಠದ ಶಿಷ್ಯಪ್ರಶಿಷ್ಯರೂ ಇತರರೂ ಧನ್ಯವಾದವನ್ನರ್ಪಿಸುತ್ತಿರುವರು. ಇದೇ ಪ್ರಕಾರ ಶ್ರೀ ಜಗದ್ಗುರು ಪಂಚಾಚಾರ್ಯರು ಶ್ರೀಗಳವರಲ್ಲಿ ಸ್ವಾತ್ಮಕರ್ತವ್ಯತಾಬುದ್ಧಿಯನ್ನು ಹೆಚ್ಚಿಸಲೆಂದು ಬೇಡಿಕೊಳ್ಳುವುದಲ್ಲದೆ ದೊಣ್ಣೂರು ಅಥವಾ ಕೋರವಾರ ಸಾರಂಗಮಠದ ಶಿಷ್ಯರು ದೂರದಲ್ಲಿದ್ದು ಅಪರಿಚಿತರಾಗಿದ್ದರೆ ಈ ಶುಭಸಮಯದಲ್ಲಾದರೂ ಬಂದು ಗುರುಗಳ ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುವೆನು.

ಓರ್ವ ಸಾರಂಗಮಠದ ಶಿಷ್ಯ.

ನಾಗಮಂಗಲದ ಶ್ರೀ ವೀರಭದ್ರಸ್ವಾಮಿ ರಥೋತ್ಸವ.

ಶ್ರೀಮನ್ ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಕೃಪಾಬಲದಿಂದಲೂ ದೇಶಮಧ್ಯದಲ್ಲಿರುವ ಅನೇಕ ಭಕ್ತರುಗಳ ಸಹಾಯದಿಂದಲೂ ನಡೆದುಕೊಂಡು ಬರುತ್ತಲಿರುವ ನಾಗಮಂಗಲದ ಶ್ರೀ ವೀರಭದ್ರಸ್ವಾಮಿಯವರ ರಥೋತ್ಸವವು ಪದ್ಧತಿ ಪ್ರಕಾರ ಈ ವರ್ಷವೂ ನಡೆಯುವುದರಿಂದ ಆಸ್ತಿಕಮಹಾಜನಂಗಳು ಈ ಮಹೋತ್ಸವಕ್ಕೆ ಆಗಮಿಸಿ ಸ್ವಾಮಿಸೇವೆಗೆ ಭಾಗಿಗಳಾಗಿ ಧನ್ಯರಾಗಬೇಕೆಂದು ಕೋರುತ್ತೇನೆ.

ಕಾರ್ಯಕ್ರಮ.

ಈ ಸಂವತ್ಸರ ಭಾದ್ರಪದ ಶುದ್ಧ ೧೫ ಸೋಮವಾರ ಅಂಕುರಾರೋಪಣವೂ, ಈ ಬ|| ೧ ಮಂಗಳವಾರ ಧ್ವಜಾರೋಹಣ, ಕಲಶಸ್ಥಾಪನ, ಕೌತುಕಧಾರಣವು ಈ ಬ|| ೨ ಬುಧವಾರ ವೃಷಭವಾಹನವು ಈ ಬ|| ೩ ಗುರುವಾರ ಮಂಟಪೋತ್ಸವವು ಈ ಬ|| ೧೩ ಶನಿವಾರದ ವರೆಗೆ ತ್ರಿಪುರಸಂಹಾರಲೀಲೆ, ಪುಷ್ಪಪಲ್ಲಕ್ಕಿ, ಪಲ್ಲಕ್ಕಿ ಉತ್ಸವ ಮೊದಲಾದ ೧೨ ಉತ್ಸವಗಳು, ಈ ಬ|| ೧೪ ಭಾನುವಾರ ದಕ್ಷಾಧ್ವರ ದಕ್ಷಬ್ರಹ್ಮಸಂಹಾರ, ಈ ಬ|| ೩೦ ಸೋಮವಾರ ನಿತ್ಯಪುಣ್ಯಾಹ, ಹೋಮ, ಕಲ್ಯಾಣಮಹೋತ್ಸವ, ಆಶ್ವೀಜ ಶು|| ೧ ಮಂಗಳವಾರ ರಥೋತ್ಸವ, ರಾತ್ರಿ ಅಗ್ನಿಕುಂಡೋತ್ಸವ, ಆಶ್ವೀಜ ಶು|| ೨ ಬುಧವಾರ ಬಲಿಯೋತ್ಸವ, ಗಜವಾಹನೋತ್ಸವ, ಭಕ್ತರ ಸೇವೆಗಳು ಈ ಶು|| ೩ ಗುರುವಾರ ವಸಂತೋತ್ಸವ, ದೋಲೋತ್ಸವ, ಈ ಶು|| ೪ ಶುಕ್ರವಾರ ತೀರ್ಥಸ್ನಾನ, ಮಂದಾಸನ, ಶೇಷ, ನಂದಿ, ಭೂತ, ನವಿಲು, ಅಶ್ವ, ಹುಲಿ ಈ ಉತ್ಸವಗಳು, ರಾಜೋಪಚಾರ, ಆಶೀರ್ವಾದಗಳು.

ದೇವಸ್ಥಾನದ ವಿಚಾರಣಕರ್ತ,
ನಾಗಮಂಗಲೈಯ್ಯ ಮ ತಮ್ಮಯ್ಯ.

ಮ|| ಅನವಟ್ಟಿ ರಾಮರಾಯರಿಂದ ರಚಿತವಾದ ನೀತಿಸುಧಾರಸದಲ್ಲಿ ಮಾನವ ವರ್ಗದಿಂದ ಅವಶ್ಯೋಪಾದೇಯವಾಗಿರುವ ಧೈರ್ಯವಿಷಯಕಗಳಾದ ಕೆಲ ಪದ್ಯಗಳನ್ನು ಹಾಕಿದ್ದು ಮ ಸರಿಯಷ್ಟೆ. ಈ ಸಂಚಿಕೆಯಲ್ಲಿ ಅಂಥ ಮಾನವವರ್ಗಕ್ಕೆ ಕೋಪವೆಂಬುವುದು ಸರ್ವಾನರ್ಥವನ್ನುಂಟುಮಾಡುತ್ತದೆ. ಕೋಪವನ್ನು ಬಿಟ್ಟಿರುವವನು ಯುಕ್ತನಾಗಿ ಬಾಳುವನೆಂಬ ವಿಷಯದಿಂದೊಡಗೂಡಿರುವ ಪದ್ಯಗಳನ್ನು ಕೊಟ್ಟಿರುತ್ತೇವೆ.

ನೀತಿಸುಧಾರಸ.

ಕೋಪ.

ಭರದೆ ಬೀಸಿ ಸಮೂಲಕರುಗಳ |
ನುರುಳಿಸುತೆ ಸೃಷ್ಟಿಗೆ ವಿಕಾರದ |
ಸಿರದೆಗೈವಾ ಚಂಡಮಾರುತನಂತೆ ತೀವ್ರದೊಳು ||
ಮೆರೆವ ಜನಪದಗಳ ವಿನಾಶಕೆ |
ಗುರಿಯಗೈಸುತೆ ಕುಪಿತ ಮನುಜನು |
ನೆರೆಯುವರನೆಲ್ಲ ಪಳಗೆದೆಯಾಗಿಸುತೆ ನಂದಿಪನು ||೧||

ಪಿಸ್ಸೊಳಿರುವಾ ಲೋಪಗಳನೇ |
ಮುನ್ನ ಮೇ ಯೋಚಿಸುವ ಮನುಜನೆ! |
ಸನ್ನು ತಾತ್ವಕನೆನಿಸಿ ಲೋಕಕೆ ಹಿತವನೊದವಿಸುತೆ ||
ಬನ್ನಕೆಡೆಯಾಗಿರುವ ಮಾನವ |
ರನ್ನು ಪಿರುಕಿಸುತವರ ತಪ್ಪನು |
ಮನ್ನಿಸುತೆ ಸಂಪನ್ನನೆಂಬುವ ಪೆಸರನಾನುವುದು ||೨||

ಇದರ ತತ್ವವನರಿತು ಕಿವಿಸಿಗೆ |
ಹೃದಯದಲ್ಲಿ ಡೆಗುಡುವೆಯಾದೊಡೆ |
ಹದಪವಾದಾ ಬಾಳಮದು ನಿನ್ನುರಕೆ ಚಾಚಿರುವ ||
ವಿಧಮುದೆನ್ನುತ ಬಗೆಗೆ ತರುತಂ |
ಸದಮರಾಗಿಹ ಮಿತ್ರಮಂಡಲಿ |
ಗಮನೆ ನಾಶಕೆ ಕತ್ತರವೆನುತಂ ಪಚೆಗಮರಿಯುವುದು ||೩||

ಇನಿಸು ಕೋಪವು ಲೇಪಿಸದಪರಿ |
ಮನವು ಶಾಂತಿಯೊಳಿರುವ ತೆರದಿಂ |
ದನುದಿನಂ ಪಾಲಿಸಿ ಸುಜ್ಞಾನಕ್ಕೆ ಮಾರ್ಗವದು ||
ಅನುದಿನ ಜ್ಞಾಪಕಕೆ ತಾರದೆ |
ಘನವಿರೋಧಿಯು ಮೆಂಬರಿಯದಿಹ |
ಮನುಜ ಸದ್ಗುಣಾಧಿಯಾಗಸಲೆ ರಾಜಿಪನು ||೪||

ಕುಪಿತನಾದೊಡೆ ವಿಕಲಮತಿಯಿಂ |
ದ ಪರಿಪರಿಯಾಚಿಸಮಲ್ಲದೆ |
ನಿಜ ಕುಕಾರ್ಯಗಳೆಸಗಿ ಮತಿಶೂನ್ಯತೆಯನೊಂದುತಲಿ ||
ವಿಫಲತೆಯನಾಂತಿಂದ್ರಿಯಗಳಿಂ |
ತಪಿತ ಜೀವನ್ಮಂಗೆ ದೃಷ್ಟಾಂ |
ತಪಡಿಸುವ ದರ್ಶಕನೆನಿಸಿ ಜೀ ಬಾಳ್ವ ದೇನಹುದು ||೫||

ಆವ ಸತ್ಕಾರ್ಯಂಗಳಂ ನೀ |
ನಾವಗಂ ನೆಗಳದೆಯೆ ರೋಷದೆ |
ಸಾವಧಾನದೊಳಂ ನಿಧಾನಿಸದಂತೆ ರಚಿಸಿದೊಡೆ ||
ನಾವಿಕನು ದೊರೆವಟ್ಟಿ ಮಧ್ಯದೆ |
ನಾವೆಯನು ತಾನಡಿಸುತಂತ್ಯದೆ |
ಸಾವ ಕೀರ್ತಿ ಸುತಿಷ್ಠ ಮಾನವನಂತೆ ಜೀವಿಪೆಯೊ ||೬||

ಕೋಪವಂ ತಗ್ಗಿಸುವ ಮಾರ್ಗವ |
ನೀ ಪರಿಯೊಳಂ ಕಾಣದಾಗುತೆ |
ತಾಪಪಡುವುದರಿಂತ ಕಿವಿಸಿದ ಮಾರ್ಗ ಹಾನಿಯದು ||
ಲೇಪವಾಗದ ತೆರದೆನಗ್ಗಿಸಿ |
ರೂಪಿನೋವನೆಯೊಂದಿಸದೆ ಲೋ |
ಕಾಪವಾದಕೆ ಬೆದರಿ ನಡೆದೊಡೆ ಮಾನ್ಯನೆನಿಸುವೆಯೊ ||೭||

ನಿಂದೆನುಡಿಗಳ ಕೇಳದೊಡನೆಯೆ |
ಮಂದಮತಿ ತಾ ಕೋಪವಾನುತೆ |
ಸಂದಪೂರ್ವದ ಗುಣಗಳೆಲ್ಲವ ತಾನು ತೋರಿಸುವ ||
ಮುಂದೆ ದೂಷಣೆಗಯ್ಯುತಿಂಲಾ |
ನಂದದಿಂದಾಲಿಸುತೆ ಸದುನೆ |
ಹಿಂದಿಗೆಳೆವನೆ ಮಂದಹಾಸಗಳಿಂದೆ ತೋರಿಪನು ||೮||

ಹಗೆಯತೀರಿಸಿಕೊಳ್ವೆನೆಂಬುವ |
ಬಗೆಯು ನಿನ್ನಯ ಮನಕೆತಾರದೆ |
ಸೊಗವ ಸಾರ್ಚುತೆ ನಿನ್ನ ಮರವಂ ಕಲುಷವೊಂದಿಸದೆ ||
ಜಗಕೆದೋಷವನೀಡಿ ಸೌಖ್ಯವ |
ನಗುವ ನಿನ್ನಂತರದೆ ಮರೆಯ |
ಸುಗುಣಕಲೆಗಳ ವಿವಿಧಪಡಿಸುತೆ ಸತತವರ್ಧಿಪುದು ||೯||

ನನ್ನ ಕಣ್ಣಿಗೆ ಕಾಣ್ಬ ತಪ್ಪನು |
ಮನ್ನಿಸುವುದೇ ಯೋಗ್ಯಮೆನೆಸಂ |
ಪನ್ನಮತಿಗಳ ಭಾವವಿರುವುದನೋಡಿ ನಡೆಯುದಲೆ ||
ಭಿನ್ನಭಾವದೆ ಕೇಡನೆಸಗುವೆ |
ನೆನ್ನ ಕಲಿಯೋಚಿಪಗೆ ಜವದೊಳು |
ಮುನ್ನ ಮೆಯೆ ಹಾನಿತನಗಾಗುವುದೆಂದು ಭಾವಿಪುದು ||೧೦||

ಮೃದುವಚನಗಳಪಾದೆಕೋಪಿಗೆ |
ಮುದದೊಳಾಪಿಗಿಹಿಗಿದ ವಹ್ನಿಯೊ |
ಳುದಕವಂ ಸೇಚನೆಯಗೈದಾ ಪರಿಯದಾಗುತಲೆ ||
ಹದನದಿಂದಲೆ ಶಾಂತಿಗೊಳಿಸುತೆ |
ಮದದೆ ಗರ್ವವಪಡುವ ವೈರಿಯು |
ಸದಯಸಖನಾಗಿಸುವ ಸುವಚನಮಹಿಮೆ ಹೆಚ್ಚಳವು ||೧೧||

ಕಿವಿಸಿನಿಂ ಸದ್ವಸ್ತುಗಳಚಯ |
ಮಿಸಿತು ತನ್ನಯ ಸೌಖ್ಯಕಾಸ್ಪದ |
ಮೆನಿಸದಲೆ ತಾಪೋಪಶಕದಿಂ ನೋಡು ಮಾನವನೆ ||
ಘನತೆಯೂನದ ಮೂಢನೊಬ್ಬನೆ |
ಹನನಗೊಳಿಸುವ ಕೋಪತಾಪಗ |
ಳನಿತು ಕಾಳುತೆ ಸತತವೇ ಗುದಿಗೊಂಡು ಜೀವಿಪನು ||೧೨||

ಎಲ್ಲಿ ಕೋಪವು ಕಾಣಬರ್ಪುದೊ |
ಅಲ್ಲಿ ದೋಷವು ಸೇರಿಸಿ ನಿಧಿಯುವ |
ದಲ್ಲದೆಯೆ ಬೇರಲ್ಲವೆಂಬರು ಸತತ ಕೋವಿದರು ||
ಸಲ್ಲಲಿತಮನುಮಾರ್ಗವೆನೆದಿರೆ |
ಬಲ್ಲಿದನುತಾನೆಂಬವೆಮ್ಮೆಗೆ |
ಸಿಲ್ಲದಲೆ ತಾನೆಸೆವಕಾರ್ಯಕೆ ಮರುಕಪಡವಿಹನು ||೧೩||

ಭಾರತಸ್ವಾತಂತ್ರ್ಯಸಂಗ್ರಾಮ.

ಮಿ|| ಸಪ್ರೂ ಮತ್ತು ಮಿ|| ಜಯಕರ್‌ರವರ ಹೇಳಿಕೆ.

ಅಹಮ್ಮದಾಬಾದ್ ಜುಲೈ ೨೮

ಶ್ರೀ|| ಸಪ್ರೂ ಮತ್ತು ಜಯಕರ್‌ರವರು ಬರೆಯುವುದೇನೆಂದರೆ—

ನೈನಿಟಾಲ್ ಜೈಲಿನಲ್ಲಿ ಪಂಡಿತ ಮೋತಿಲಾಲ್ ನೆಹರೂರವರನ್ನು ಮತ್ತು ಪಂಡಿತ ಜವಾಹಿರಿಲಾಲ್ ನೆಹರೂರವರನ್ನು ನಾವುಗಳು ನಿನ್ನೆ ನಾಲ್ಕುವರೆಘಂಟೆ ಕಾಲವೂ ಈ ದಿನ ನಾಲ್ಕು ಘಂಟೆ ಕಾಲವೂ ಒಟ್ಟು ಎಂಟೂವರೆ ಘಂಟೆಗಳ ಕಾಲ ಭೇಟಿ ಮಾಡಿದೆವು. ರೌಂಡು ಟೇಬಲ್ ಸಮ್ಮೇಳನದ ವಿಷಯವಾಗಿ ಈಚೆಗೆ ಅಧಿಕಾರ ವರ್ಗದವರು ಹೇಳಿರುವ ಸಮಾಧಾನದ ಮಾತುಗಳನ್ನೆಲ್ಲಾ ನಾವು ಅವರಿಗೆ ತಿಳಿಸಿದೆವು. ಭರತಖಂಡದ ಈಗಿನ ಸ್ಥಿತಿಯನ್ನೂ ವ್ಯಾಪಾರವು ಕಮ್ಮಿಯಾಗಿರುವುದರಿಂದ ಹಣದ ಮಾರ್ಕೆಟ್ ಬಹಳ ಬಿಗಿಯಾಗಿರುವುದನ್ನೂ ಅವರಿಗೆ ತಿಳಿಸಿದೆವು. ವ್ಯಾಪಾರದ ಸ್ಥಿತಿಗತಿಗಳು ಹೀಗೆಯೇ ಇದ್ದರೆ ಭರತಖಂಡದ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ವರ್ತಕರು ಪಾಪರ್ ಆಗುವ ಸ್ಥಿತಿಗೆ ಶೀಘ್ರದಲ್ಲಿಯೇ ಬರಬಹುದೆಂಬ ವಿಚಾರವನ್ನು ಅದರಿಂದ ಹೇಗಾದರೂ ಈಗಿನ ಸ್ಥಿತಿಯನ್ನು ಉತ್ತಮಪಡಿಸುವ ಅವಶ್ಯಕತೆಯನ್ನು ನಾವು ಅವರಿಗೆ ತಿಳಿಸಿದೆವು. ಅವರು ಎಲ್ಲವನ್ನು ಕೂಲಂಕುಷವಾಗಿ ನಮ್ಮೊಂದಿಗೆ ವಿಚಾರಮಾಡಿ ಅವರ ಅಭಿಪ್ರಾಯಗಳನ್ನು ನಮಗೆ ಸ್ಪಷ್ಟವಾಗಿ ತಿಳಿಸಿದರು. ಮಹಾತ್ಮಾಗಾಂಧೀಯವರ ಪತ್ರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಅವರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ ಒಂದು ಪತ್ರವನ್ನು ನಮ್ಮ ಕೈಯಲ್ಲಿ ಕೊಟ್ಟಿರುವರು. ಈ ಪತ್ರವನ್ನು ನಾವು ಮಹಾತ್ಮರಿಗೆ ಶೀಘ್ರದಲ್ಲಿಯೇ ತಲ್ಪಿಸಿ ಅನಂತರ ನಮ್ಮ ರಾಯಭಾರಿಯ ಮಾತುಕತೆಗಳ ತಿರುಳನ್ನು ಮಹಾಜನಗಳಿಗೋಸ್ಕರ ಬಹಿರಂಗ ಪಡಿಸುವೆವು. ಈ ಮಧ್ಯೆ ಮಹಾಜನಗಳು ಮತ್ತು ಪತ್ರಿಕಾಪ್ರತಿನಿಧಿಗಳು ನಮ್ಮ ಸಂಧಾನದ ಅಭಿಪ್ರಾಯಗಳನ್ನು ತಿಳಿಯದೆ ಇರುವ ಕೊಂಚರಿಯನ್ನು ಸಮಾಧಾನದಿಂದ ಅನುಭವಿಸುತ್ತಿರುವುದಕ್ಕಾಗಿ ನಾವು ಅವರಿಗೆ ಹೃತ್ಪೂರ್ವಕವಾಗಿ ವಂದಿಸುವೆವು.

ಮಿ|| ಬ್ರಾಕ್‌ವೇರವರು.

ಲಂಡನ್ ಜುಲೈ ೨೮

ಈ ದಿವಸ ಪಾರ್ಲಿಮೆಂಟ್ ಸಭೆಯಲ್ಲಿ ಮಿ|| ಫೆನ್ನರ್ ಬ್ರಾಕ್‌ವೇರವರು ಸಪ್ರೂ ಜಯಕರ್‌ರವರ ಶಾಂತಿ ಸಂಧಾನದ ಪ್ರಯತ್ನಗಳ ವಿಚಾರವಾಗಿ ಭಾಷಣಮಾಡುತ್ತಾ ಹೇಳಿದ್ದೇನೆಂದರೆ—

ಸಪ್ರೂ ಜಯಕರ್‌ರವರು ಮೊದಲು ಗಾಂಧೀಯವರನ್ನು ನೋಡುವುದು. ಅವರಿಂದ ಪತ್ರ ತೆಗೆದುಕೊಳ್ಳುವುದು, ಅದನ್ನು ನೆಹರೂರವರಿಗೆ ತಲುಪಿಸುವುದು ಅಲ್ಲಿ ಜೈಲಿನಲ್ಲಿ ಅವರೊಂದಿಗೆ ಚರ್ಚಿಸುವುದು, ಅಲ್ಲಿಂದ ಪತ್ರವನ್ನು ತೆಗೆದುಕೊಂಡುಬರುವುದು, ಅದನ್ನು ಗಾಂಧೀಯವರಿಗೆ ತಲುಪಿಸುವುದು ಇವೆಲ್ಲಾ ಪಜೀತಿಗಿಂತ ಪಂಡಿತ ಮೋತೀಲಾಲ ನೆಹರೂ, ಜವಾಹರಿಲಾಲ ನೆಹರೂ, ಗಾಂಧೀ, ಮವಾಳ ಪಂಗಡದ ಮುಖ್ಯ ಪ್ರತಿನಿಧಿಗಳೂ ಇವೆಲ್ಲರನ್ನು ಸಭೆ ಸೇರಿಸಿ ಒಂದು ತೀರ್ಮಾನಕ್ಕೆ ಬರುವಂತೆ ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುವುದನ್ನು ಇಂಗ್ಲೆಂಡ್ ಸರ್ಕಾರದವರು ಗಮನಿಸುವರೇ?

ಇಂಗ್ಲೆಂಡ್ ಸರ್ಕಾರ—ನಿಮ್ಮ ಭಿನ್ನಹವನ್ನು ಇಂಡಿಯಾ ಸರ್ಕಾರದವರು ಆಲೋಚಿಸುವಂತೆ ನಾವು ಅವರಿಗೆ ಹುಕುಂ ಮಾಡಿ ಬರೆಯುವೆವು.

[6ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ

೧೯೩೦ ನೇ ಆಗಸ್ಟ ತಾ|| ೪ನೆಯ ಸೋಮವಾರ

ಸತ್ಯಾಗ್ರಹವೂ ವೀರಶೈವರೂ.

ಕೆಲವು ತಿಂಗಳುಗಳಿಂದ ನಮ್ಮ ಭರತಖಂಡದಲ್ಲಿ ಭಾರತಸ್ವಾತಂತ್ರ್ಯಸಮರವು ನಡೆಯುತ್ತ ಕಾಡುಗಿಚ್ಚಿನಂತೆ ಸಣ್ಣಸಣ್ಣ ಹಳ್ಳಿಪಳ್ಳಿಗಳಲ್ಲಿಯೂ ಸಹ ಪ್ರಜ್ವಲಿಸಹತ್ತಿರುತ್ತದೆ. ದೊಡ್ಡದೊಡ್ಡ ಪಟ್ಟಣಗಳಲ್ಲಂತೂ ಪ್ರಳಯಾಕಾರದ ರುದ್ರನಂತೆ ಬರಬರುತ್ತ ಕರಾಳರೂಪವನ್ನು ಧರಿಸುತ್ತಲಿದೆ. ಅಹಿಂಸಾಮಯ ಯುದ್ಧದಲ್ಲಿ ಮಹಾಚತುರರೂ ಸ್ವಾರ್ಥತ್ಯಾಗಿಗಳೂ ಆಗಿರುವ ಅಸಂಖ್ಯಾಕ ಭಾರತಪುತ್ರರು ರಾಜಬಂಧನಕ್ಕೊಳಗಾಗಿ ನಿರಶನವ್ರತದಿಂದ ಉತ್ಕ್ರಮಣಾವಸ್ಥೆಯನ್ನು ಹೊಂದುತ್ತಲಿರುವರು. ಈಗಲೂ ಅನಂತಮಹಾಪುರುಷರು ಈ ಆಂದೋಳನದಲ್ಲಿ ನಾನು ಮುಂದು ತಾನು ಮುಂದು ಎಂದು ಸತ್ಯಾಗ್ರಹಸಮರಾಂಗಣವನ್ನು ಪ್ರವೇಶಿಸಿ ಅಹಿಂಸೆಯೆಂಬ ಖಡ್ಗವನ್ನು ಧರಿಸಿ ಆತ್ಮಯಜ್ಞಕ್ಕೆ ಅಭಿಮುಖರಾಗುತ್ತಿರುವರು. ಈ ಸಂಸ್ಕಾರಾಂಕುರವು ಈಗಿನ ನವತರುಣರ ಮತ್ತು ವೀರನಾರಿಯರ ಹೃದಯಕ್ಷೇತ್ರದಲ್ಲಿ ಮೆಲ್ಲಮೆಲ್ಲನೆ ಉದಯಿಸುತ್ತ ಬಂದದ್ದರಿಂದ ಶಿಶುಗಳಾದಿಯಾಗಿ ವೃದ್ಧರವರೆಗೂ ಭಾರತಸ್ತ್ರೀಪುರುಷರೆಲ್ಲರೂ ಪ್ರಾರಂಭವಾಗಿರುವ ಶಾಂತಿಮಯ ಯುದ್ಧದಲ್ಲಿ ಬದ್ಧದೀಕ್ಷೆಯುಳ್ಳವರಾಗುತ್ತ ಬಂದರು. ಇನ್ನು ಇದು ಫಲವಾಗುವವರೆಗೂ ತಮ್ಮ ಕಾರ್ಯದಿಂದ ಹಿಂದಿರುಗಲಾರರು. ಭಾರತಮಾತೆಯ ಗರ್ಭವಾಸವನ್ನು ಮಾಡಿದ ಕೋಟ್ಯಧೀಶ್ವರರೂ, ಅತುಲವಿದ್ಯಾಧಿಕರೂ, ವೀರನಾರಿಯರೂ, ನವತರುಣರೂ ಸಹ ಧರ್ಮಯುದ್ಧದಲ್ಲಿ ಸಿದ್ಧರಾಗಿರುವರು. ಪ್ರತಿಯೊಬ್ಬ ಭಾರತೀಯನಲ್ಲಿಯೂ ಸ್ವದೇಶವಾತ್ಸಲ್ಯವೆಂಬುವುದು ಕ್ಷಣೇಕ್ಷಣೇ ಹೆಚ್ಚುತ್ತಲೇ ಇರುವುದು. ಯಾರು ನೋಡಿದರೂ ಸ್ವರಾಜ್ಯಸಾಧನಸೂಚಕವಾದ ಸ್ವದೇಶವಸ್ತ್ರಧಾರಣರೂಪವಾದ ಮುದ್ರೆಯನ್ನು ಧರಿಸಲು ತ್ವರೆಪಡುತ್ತಲಿರುವರು. ಇದರಲ್ಲಿ 35 ಲಕ್ಷ ಜನಸಂಖ್ಯೆಯುಳ್ಳ ವೀರಶೈವಸಮಾಜವಾದರೂ ಇಂತಹ ಭಾರತಮಾತೆಯ ನಿಜಮುದ್ರೆಯೊಳಗೆ ಒಂದನ್ನಾದರೂ ಧರಿಸಿದಂತೆ ಕಂಡುಬರಲಿಲ್ಲ. ಇಂಥ ವೀರಶೈವಸಮಾಜದಮೇಲೆ ಗುರುತ್ವವನ್ನು ಮಾಡುವ ಮಾಹೇಶ್ವರರ ಸಂಖ್ಯೆಯಾದರೂ ಹೇರಳವಾಗಿರುವುದು. ಭಾರತಧರ್ಮವನ್ನು ಉಪದೇಶಿಸುವುದಕ್ಕಾಗಿ ಪಟ್ಟಚರಾಧಿಪತಿಗಳ ಸಂಖ್ಯೆಯಾದರೂ 2-3 ಸಾವಿರದ ಮೇಲೆಯೇ ಇರಬಹುದು. ಇವರೆಲ್ಲರೂ ಭಾರತಪುತ್ರರೆಂಬ ಅಭಿಮಾನವನ್ನು ವಹಿಸಿ ಪ್ರಥಮತಃ ಭಾರತಮಾತೆಗುಂಟಾದ ಕ್ಷಯಿಷ್ಣುತೆಯನ್ನು ಪರಿಹರಿಸಿಕೊಂಡು ಆಮೇಲೆ ತಮ್ಮ ತತ್ತ್ವೋಪದೇಶಸೂತ್ರವನ್ನು ಅವಲಂಬಿಸುವುದುತ್ತಮವಾಗಿದೆ. ಮೊದಲು ಆಧಾರವು ಭದ್ರವಾದರೆ ಆಧೇಯಗಳು ಭದ್ರವಾಗೇ ಆಗುವವು. ಸರ್ವಧರ್ಮಗಳಿಗೂ ಆಧಾರವಾದ ಭಾರತಮಾತೆಯು ಪರಾಧೀನಳಾಗಿರುವಲ್ಲಿ ಇನ್ನು ಭಾರತಧರ್ಮಗಳನ್ನು ಉದ್ಧರಿಸಲು ಅವಕಾಶವೆಲ್ಲಿ? ಭಾರತಧರ್ಮಗಳೇ ಉದ್ಧಾರವಾಗದಿದ್ದರೆ ಭಾರತ ಧರ್ಮಾಂತರ್ಗತವಾದ ಮತಧರ್ಮಗಳೆಂತು ಉದ್ಧಾರವಾಗುವವು? ಅದ್ದರಿಂದ ಈಗ ಪ್ರಸಕ್ತವಾಗಿರುವ ಅಹಿಂಸಾಮಯ ಸತ್ಯಾಗ್ರಹ ವ್ರತದಲ್ಲಿ ಸರ್ವರೂ ತಮ್ಮತಮ್ಮ ಶಕ್ತಿಪಾತವನ್ನು ಮೀರದಂತೆ ಭಾಗವನ್ನು ವಹಿಸಲೇಬೇಕಾಗಿದೆ. ದೀರ್ಘರೋಗಿಯಾದ ಭಾರತಮಾತೆಯ ಚಿಕಿತ್ಸೆಯಲ್ಲಿ ಆತುರರಾಗಿರುವದು ಭಾರತೀಯರಿಗೆ ನಿಜಧರ್ಮವೇ ಆಗಿದೆ. ಇದರಲ್ಲಿ ಯಾರಿಗೂ ಯಾವ ವಿಧವಾದ ದೋಷವೂ ಬರಲಾರದು. ಸತ್ಯಾಗ್ರಹವ್ರತವೆಂದರೆ ಕಾಯಿದೆಭಂಗವನ್ನು ಮಾಡಿ ಎಲ್ಲರೂ ಸೆರೆಮನೆಗೀಡಾಗುವುದೊಂದೇ ಎಂದು ಅರ್ಥವಲ್ಲ. ಸತ್ಯಾಗ್ರಹವು ನಾನಾ ವಿಧವಾಗಿದೆ. ಪರದೇಶದ ವಸ್ತ್ರಗಳನ್ನು ಅಶುಚಿಪದಾರ್ಥದಂತೆ ತುಚ್ಛೀಕರಿಸಿ ಪರಮಪವಿತ್ರಗಳಾದ ಪುಷ್ಪಗಳಂತೆ ಇರುವ ಸ್ವದೇಶೀವಸ್ತ್ರಗಳನ್ನೇ ಧರಿಸಬೇಕೆಂಬ ವೀರಪ್ರತಿಜ್ಞೆಯನ್ನು ಮಾಡುವುದೂ ಸತ್ಯಾಗ್ರಹವ್ರತವೇ! ನಮ್ಮ ಕೈಯಿಂದ ನೂತ ನೂಲಿನಿಂದ ತಯಾರಾದ ವಸ್ತ್ರಗಳಿಗೆ ಕಾವಿಯನ್ನು ಹಾಕಿ ಅವುಗಳನ್ನೇ ಧರಿಸುತ್ತೇವೆ, ಅವುಗಳನ್ನೇ ಉಡುತ್ತೇವೆ, ಅವುಗಳನ್ನೇ ನಮ್ಮ ಶಿವಲಿಂಗದ ವಸ್ತ್ರಗಳನ್ನಾಗಿ ಮಾಡಿಕೊಳ್ಳುತ್ತೇವೆ. ಮಹಿಳೆಯರಿಗೂ ಅಂಥ ಶೀರೆಗಳನ್ನೇ ತರುತ್ತೇವೆ. ಈಗ ಮಹಾ ರಾಕ್ಷಸನಂತೆ ಆಕರಾಳವಿಕರಾಳವಾಗಿ ಒಳಗೂ ಹೊರಗೂ ನುಗ್ಗಿ ಲೂಟಿಮಾಡುತ್ತಿರುವ ಪರದೇಶೀ ಬಟ್ಟೆಗಳನ್ನು ಖಂಡಿತವಾಗಿಯೂ ಉಪಯೋಗಿಸುವದಿಲ್ಲವೆಂದು ಪ್ರತಿಜ್ಞೆಯನ್ನು ಮಾಡುತ್ತಿರುವದು ಸತ್ಯಾಗ್ರಹವ್ರತವೇ! ಎಲಬು ಮಗ್ಗೈರೆ ದುಷ್ಟವಸ್ತುಮಿಶ್ರಿತವಾದ ಜಾವ್ಸನ್ ಸಕ್ಕರೆ ಮೊದಲಾದವುಗಳನ್ನು ತಿನ್ನುವುದಿಲ್ಲವೆಂದು ಪ್ರತಿಜ್ಞೆಮಾಡುವದು ಸತ್ಯಾಗ್ರಹವ್ರತವೇ! ಸೇಂದಿ ಕುಡಿಯುವವರ ಮೇಲೂ ಪರದೇಶೀವಸ್ತ್ರಗಳನ್ನು ತರಿಸುವವರ ಮೇಲೂ ಬಲಾತ್ಕಾರದಿಂದ ನಿರೋಧಮಾಡುತ್ತಿರುವದು ಸತ್ಯಾಗ್ರಹವ್ರತವೇ! ಮಹಾವೀರನಾದ ಬಲರಾಮನಂತೆ ಕೊಡಲಿಯನ್ನು ಹೆಗಲಮೇಲಿರಿಸಿಕೊಂಡು ಕಾಡನ್ನು ಪ್ರವೇಶಿಸಿ ತಮ್ಮತಮ್ಮ ಹದ್ದಿನಲ್ಲಿರುವ ಸೇಂದಿ ಮರಗಳನ್ನು ನೆಲಕ್ಕುರುಳಿಸಿ ಜಯಭೇರಿಯನ್ನು ಹೊಡೆದುಕೊಂಡು ಬರುತ್ತಿರುವದೂ ಸತ್ಯಾಗ್ರಹವ್ರತವೇ! ಭಾರತಧ್ವಜಧಾರಿಗಳಾಗಿ ಏಕಮುಖದಿಂದ ಹರತಾಳವನ್ನು ಮಾಡುವದೂ ಸತ್ಯಾಗ್ರಹವ್ರತವೇ! ಅಲ್ಲಲ್ಲಿ ಸಭೆ ಸೇರಿ ಎಲ್ಲರೂ ಅಹಿಂಸಾಮಯ ಸತ್ಯಾಗ್ರಹದಲ್ಲಿ ಭಾಗಿಗಳಾಗಬೇಕೆಂದು ಪ್ರೋತ್ಸಾಹಿಸುವುದೂ ಸತ್ಯಾಗ್ರಹವ್ರತವೇ! ಆದರೆ ಈಗಣ ವಾತಾವರಣದಲ್ಲಿ ಸತ್ಯಾಗ್ರಹವ್ರತಗಳಲ್ಲಿ ಅವನವನ ಶೌರ್ಯ ಧೈರ್ಯಗಳಿಗನುಗುಣವಾಗಿ ಯಾವುದಾದರೊಂದು ಸತ್ಯಾಗ್ರಹವ್ರತವನ್ನು ಭಾರತೀಯನೆನಿಸಿಕೊಳ್ಳುವವನು ಆಚರಿಸಲೇಬೇಕು. ಆದರೆ ಇವುಗಳಲ್ಲಿ ಯಾವ ವ್ರತಗಳನ್ನಾಚರಿಸಿದರೂ ಈ ವ್ರತಗಳೆಲ್ಲವೂ ಅಹಿಂಸಾತ್ಮಕವಾಗಿರಬೇಕಲ್ಲದೆ ಹಿಂಸಾಕಾರಿಯಾಗಿರಕೂಡದೆಂಬುವುದೇ ಸತ್ಯಾಗ್ರಹವ್ರತದ ಮುಖ್ಯಮಾರ್ಗವಾಗಿರುವದು. ಈ ಮಾರ್ಗವನ್ನು ಮೀರುವವರು ಸತ್ಯಾಗ್ರಹಿಗಳೆಂದು ಹೇಳಲು ಆಗುವುದಿಲ್ಲ. ಎಲ್ಲರೂ ಸತ್ಯಾಗ್ರಹ ಸಮರಾಂಗಣವನ್ನು ಪ್ರವೇಶಮಾಡಬೇಕಾಗಿಲ್ಲ. ವೀರಶೈವರಲ್ಲಿ ಅಹಿಂಸಾತ್ಮಕವಾದೀ ವ್ರತವನ್ನು ಪ್ರತಿಯೊಬ್ಬ ಪಟ್ಟಾಧಿಪತಿಗಳಾಗಲಿ, ಚರಪತಿಗಳಾಗಲಿ, ವಿರಕ್ತರಾಗಲಿ, ಗೃಹಸ್ಥಾಶ್ರಮಧಾರಿಗಳಾದ ಗುರುವರ್ಗದ ಸ್ತ್ರೀಪುರುಷರಾಗಲಿ, ಅವರವರ ಮಕ್ಕಳುಮರಿಗಳಾಗಲಿ ಕೊನೆಗೆ ಕುಂಟ ಕುರುಡರಾಗಲಿ ಎಲ್ಲರೂ ತಮ್ಮ ಮನೆಗಳಲ್ಲಿ ಸುಮ್ಮನೆ ಕುಳಿತುಕೊಂಡೇ ಈ ಸತ್ಯಾಗ್ರಹವ್ರತವನ್ನಾಚರಿಸಬಹುದಾಗಿದೆ. ಈ ಸತ್ಯಾಗ್ರಹವ್ರತದಿಂದ ಯಾರಿಗೇನೂ ತೊಂದರೆಗಳಿಲ್ಲವು. ಇಂಥ ಸತ್ಯಾಗ್ರಹವ್ರತದಿಂದ ಅಭೀಷ್ಟವು ಸಿದ್ಧವಾಗುವದು. ಸಾವಿರಾರುಜನ ಗುರುವರ್ಗದವರೂ ಹಾಗೂ ಲಕ್ಷೋಪಲಕ್ಷ ಜನ ಶಿಷ್ಯರೂ ಹೀಗೆ ಕಠಿನವ್ರತವನ್ನಾಚರಿಸುವುದರಿಂದ "ಯಥಾಗುರುಸ್ತಥಾಶಿಷ್ಯಃ" ಎಂಬಂತೆ ಶಿಷ್ಯವರ್ಗವು ಕೂಡ ಈಗ ಉಪಯೋಗಿಸುತ್ತಿರುವ ಪರದೇಶೀಯ ಉಡುಪುಗಳನ್ನು ಬಿಟ್ಟು ಸ್ವದೇಶೀ ಉಡುಪುಗಳನ್ನು ಧರಿಸುತ್ತಾರೆಂಬುವಲ್ಲಿ ಅನುಮಾನವೇನೂ ಇಲ್ಲ. ತಾವು ದುಡಿದ ದುಡ್ಡನ್ನು ಕೊಟ್ಟು ತಮ್ಮ ದೇಶದ ವಸ್ತ್ರಗಳನ್ನು ತಾವು ಧರಿಸಲು ಸಂಕೋಚಪಟ್ಟು ಶೋಕಾದ ಮಲ್ಲಿಗೇನೇ ತಿಳುಗಾವಿಯನ್ನದ್ದಿ ಅಲಂಕಾರ ಚತುರರಾದರೆ ಈಗ ಸತ್ಯಾಗ್ರಹಕುಂಡದಲ್ಲಿ ಆತ್ಮಯಜ್ಞವನ್ನು ಮಾಡುತ್ತಲಿದ್ದ ಮಹಾ ಮಹಾ ದೇಶಭಕ್ತರನ್ನು ನೋಡಿದರೂ ಕುರುಡನಂತೆಯೂ, ಕೇಳಿದರೂ ಬಧಿರನಂತೆಯೂ ಇದ್ದಂತಾಗುವುದು. ಇದರಿಂದ ತಮ್ಮ ಮಾತೃಭೂಮಿಗೆ ಕೃತಜ್ಞತೆಯನ್ನು ತೋರಿಸದಂತಾಗದೆ ಕೃತಘ್ನತಾಕೋಟಿಯಲ್ಲಿ ಸೇರಿದಂತಾಗುತ್ತದೆ. ಅದ್ದರಿಂದ ವೀರಶೈವಸಮಾಜದ ಮೇಲೆ ಗುರುತ್ವವನ್ನು ನಾಡುವ ಮಾಹೇಶ್ವರ ವರ್ಗವೂ ಹಾಗೂ ಶಿಷ್ಯವರ್ಗವೂ ಇನ್ನಾದರೂ ಕಣ್ತೆರೆದು ಯಾರಿಗೊಂದೂ ಅಪಾಯವಿಲ್ಲದ ಅಹಿಂಸಾರೂಪವಾದ ಶ್ರಮವಿಲ್ಲದ ಈಗಿನಷ್ಟು ದ್ರವ್ಯ ವ್ಯಯವಿಲ್ಲದೆ ಕೂತಲ್ಲಿಯೇ ನಿರ್ವಹಿಸಲು ಸಾಧ್ಯವಾದ ಭಾರತಮಾತೆಯ ಸಂತೋಷಕ್ಕೆ ಮುಖ್ಯ ಸಾಧನವಾದ ಇದ್ದೆಡೆಯಲ್ಲಿಗೆ ಸ್ವರಾಜ್ಯವನ್ನು ತಂದು ಕೊಡಿಸುವ ಖಾದಿ ವಸ್ತ್ರಗಳನ್ನೇ ಅಪಾದಮಸ್ತಕದವರೆಗೂ ಧರಿಸುವ ಮಹಾವ್ರತವನ್ನೊಂದು ಆಚರಿಸುತ್ತ ಇದರ ಜೊತೆಯಲ್ಲಿ ವೀರಶೈವಮತಕ್ಕೆ ಅತ್ಯಂತ ವಿರುದ್ಧವಾದ ವಿದೇಶದ ಸಕ್ಕರೆಯಿಂದ ಮಾಡಿದ ಹೋಳಿಗೆ ಮುಂತಾದ ಸೀ ಪದಾರ್ಥಗಳನ್ನು ದೂರಮಾಡಿ ಮಹಾಪವಿತ್ರ ಭಾರತಕ್ಷೇತ್ರದಲ್ಲಿ ಬೆಳೆದ ಕಬ್ಬಿನ ರಸದಿಂದ ತಯಾರಾದ ಸಕ್ಕರೆಬೆಲ್ಲಗಳಿಂದ ಬೇಕಾದಷ್ಟು ಭಕ್ಷ್ಯಭೋಜ್ಯಗಳನ್ನು ಮಾಡಿಸಿ ನಾಲಿಗೆ ರುಚಿಯನ್ನು ತೀರಿಸಿಕೊಳ್ಳುತ್ತ ತಮ್ಮ ತಮ್ಮ ಹೆಣ್ಣುಮಕ್ಕಳಿಗೆ ಪರದೇಶದ ಗಾಜಿನ ಬಳೆ ಮುಂತಾದ ಪದಾರ್ಥಗಳನ್ನು ತಂದುಕೊಡದೆ ಸ್ವದೇಶೀ ವಸ್ತುಗಳನ್ನೇ ಉಪಯೋಗಿಸುತ್ತ ಇದಕ್ಕೆ ವಿರುದ್ಧವರ್ತನವುಳ್ಳ ಶಿಷ್ಯರ ಮನೆಗಳಲ್ಲಿ ಭೋಜನವನ್ನು ಮಾಡುವುದಿಲ್ಲವೆಂದು ವೀರಪ್ರತಿಜ್ಞೆಯನ್ನು ಮಾಡುತ್ತ ಬಂದಲ್ಲಿ ಈಗ ಪ್ರಾರಂಭವಾಗಿರುವ ಸತ್ಯಾಗ್ರಹ ಸಮರಾಂಗಣದಲ್ಲಿ ಧುಮುಕಿರುವ ಮಹಾವೀರರ ಸ್ವರಾಜ್ಯಸಾಧನೆಯ ಮಹಾಕಾರ್ಯದಲ್ಲಿ ಅಲ್ಪ ಸ್ವಲ್ಪ ಭಾಗಿಗಳಾದಂತಾಗಿ ಅವರ ಭಾವವನ್ನು ಎಲ್ಲರೂ ಹಂಚಿಕೊಂಡರೆ ಭಾರತಮಾತೆಯು ತನ್ನ ಪುತ್ರರೆಲ್ಲರಲ್ಲಿಯೂ ಸಮಾನವಾದ ಪ್ರೀತಿಯುಳ್ಳವಳಾಗುವಳು. ಸದ್ಯಃ ಬಂದೊದಗಿರುವ ವಿಪತ್ತನ್ನು ಪರಿಹಾರಮಾಡಿಕೊಳ್ಳುವುದು ಸರ್ವರಿಗೂ ಉತ್ತಮವಾದ್ದರಿಂದ ಆಚಾರ್ಯಭಗವತ್ಪಾದರು ನಮ್ಮ ಮತಕ್ಕೆ ಅತ್ಯಂತ ವಿರುದ್ಧವಾದ ಪರದೇಶೀವಸ್ತು ಬಹಿಷ್ಕಾರದಲ್ಲಿ ಒಮ್ಮನಸ್ಸಿನಿಂದ ಸರ್ವರಲ್ಲಿ ಪ್ರವೃತ್ತಿಯನ್ನುಂಟುಮಾಡುವುದಲ್ಲದೆ ಸ್ವದೇಶೀ ವಸ್ತ್ರಗಳನ್ನೇ ಧರಿಸುವಂತೆ ಸದ್ಬುದ್ಧಿಯನ್ನುಂಟುಮಾಡಲೆಂದು ಕೋರುತ್ತೇವೆ.

ಶ್ರೀಮನ್ಮಹಾರಾಜರವರ ಕ್ಷೇತ್ರಯಾತ್ರೆ. ಕೇದಾರನಾಥ ಮಹಾಸಂಸ್ಥಾನ.

ಶ್ರೀಮನ್ಮಹಾರಾಜರವರು ಯಾತ್ರಾರ್ಥಿಗಳಾಗಿ ಉತ್ತರದೇಶಕ್ಕೆ ಪ್ರಯಾಣಮಾಡಿರುವ ವಿಷಯವು ಸರ್ವರಿಗೂ ವಿದಿತವಾಗಿರುವದಷ್ಟೇ! ಮಹಾಪ್ರಭುಗಳು ಈ ತಿಂಗಳ ಆರನೆಯ ತಾರೀಖು ಬುಧವಾರ ದಿವಸ ಹಿಮವತ್ಪರ್ವತದಲ್ಲಿ ಪರಿಶೋಭಿಸುತ್ತಿರುವ ಶ್ರೀಮದ್ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಪವಿತ್ರ ಪೀಠದ ದರ್ಶನಕ್ಕಾಗಿ ಹೋಗಿ ಅಲ್ಲಿ 9 ನೆಯ ತಾರೀಖಿನ ವರೆಗೆ ವಾಸಮಾಡುವರೆಂದೂ, 9 ನೆಯ ತಾರೀಖಿನ ದಿವಸ ಸದರಿ ಪೀಠಾಧೀಶ್ವರರ ಅಧಿಪತ್ಯಕ್ಕೊಳಪಟ್ಟಿರುವ ಶ್ರೀ ಕೇದಾರನಾಥ ಜ್ಯೋತಿರ್ಲಿಂಗದ ದರ್ಶನಕ್ಕೋಸ್ಕರ ಪ್ರಯಾಣಮಾಡುವರೆಂದೂ, ಸದ್ಯಃ ಆ ಪೀಠಾಧೀಶ್ವರರಾದ ಶ್ರೀ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಮೊಕ್ಕಾಂ ಅಲ್ಲಿಯೇ ಇರುವದರಿಂದ ಮಹಾಪ್ರಭುಗಳಿಗೋಸ್ಕರ ಅಲ್ಲಿ ಸರಿಯಾದ ಏರ್ಪಾಟುಗಳು ತ್ವರೆಯಿಂದ ನಡೆಯುತ್ತಿರುವವೆಂದೂ ದೇವಸ್ಥಾನದ ಅರ್ಚಕರಾದ ರಾಮಲಿಂಗಶರ್ಮ ಎಂಬವರು ತಿಳುಹಿಸುತ್ತಾರೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮದ್ಯಪಾನ ನಿಷೇಧ.

ಮುಂಬಯಿ ಜುಲೈ 31.

ಬೊಂಬಾಯಿಯ ಮದ್ಯದ ವ್ಯಾಪಾರಿಗಳಾರೂ ಮುಂದಿನ ವರ್ಷದ ಲೈಸೆನ್ಸುಗಳನ್ನು ತೆಗೆದುಕೊಂಡಿರುವದಿಲ್ಲ. ನಾಳೆಯಿಂದ ಬೊಂಬಾಯಿಯಲ್ಲಿ ಮದ್ಯವೇ ಇಲ್ಲದಂತಾಗುವದು. ಲೈಸೆನ್ಸ್‌ದಾರರು ಸರಕಾರಕ್ಕೆ ಕಳೆದ ವರ್ಷ ಕೊಟ್ಟಷ್ಟು ಹಣವನ್ನೇ ಕೊಡಲು ಒಪ್ಪಲಿಲ್ಲ. ಸರಕಾರದವರಾದರೂ ಕಡಿಮೆ ಹಣಕ್ಕೆ ಒಪ್ಪಲಿಲ್ಲ. ಅಲ್ಲದೆ ಸರಕಾರದವರು ಟೌನ್‌ಹಾಲಿನಲ್ಲಿ ಹರಾಜು ನಡೆಯಿಸಿದಾಗ್ಗೆ ದೇಶಸೇವಕರ ಚಳವಳಿಯಿಂದ ಯಾರೂ ಹರಾಜಿಗೆ ಹೋಗಲಿಲ್ಲ. ಸರಕಾರದವರು ಟೆಂಡರ್‌ಗಳ ಮುಖಾಂತರ 208 ಲೈಸೆನ್ಸ್‌ಗಳ ಪೈಕಿ 34 ಲೈಸೆನ್ಸ್‌ಗಳನ್ನು ಮಾತ್ರ ಕೊಟ್ಟಿರುವರು. ಅದೂ ಸಹ ಎಂದೂ ಈ ವ್ಯಾಪಾರವನ್ನೇ ಮಾಡದಿದ್ದ ಹೊಸಬರಿಂದ ತೆಗೆದುಕೊಳ್ಳಲ್ಪಟ್ಟಿರುವದು. ಈ 34 ಜನಗಳಿಗೆ ಎಲ್ಲಿಯೂ ಅಂಗಡಿಗಳೇ ಇಲ್ಲದಿರುವದರಿಂದ ಅವರ ವ್ಯಾಪಾರಕ್ಕೆ ಕಠಿಣಪ್ರಸಂಗವೇ ಪ್ರಾಪ್ತವಾಗುವದು. ಕೆಲವು ಅಂಗಡಿಗಳನ್ನು ತೆಗೆದುಕೊಳ್ಳಲು ಬೇಕಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿರುವರು. ಅಂತೂ ಅವರ ವ್ಯಾಪಾರ ಪ್ರಾರಂಭವಾಗಲು ಕೆಲವು ದಿನಗಳು ಕಳೆಯಬೇಕು. ನಾಳೆಯಿಂದ ಅಲ್ಲಿಯವರೆಗೆ ಮುಂಬಯಿಯಲ್ಲಿ ಮದ್ಯವೇ ದೊರೆಯುವಂತಿಲ್ಲ.

ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ನಿನವರು ಶ್ರೀಮತಿ ಅವಂತಿಕಾಬಾಯಿ ಗೋಖಲೆಯವರ ಸಲಹೆಯಂತೆ ಕಾರ್ಪೋರೇಷನ್ನಿನ ಮೆಂಬರರು ಹಾಗೂ ನೌಕರರೆಲ್ಲರೂ ಇನ್ನು ಮುಂದೆ ಸ್ವದೇಶೀ ಬಟ್ಟೆಗಳನ್ನೇ ಉಪಯೋಗಿಸತಕ್ಕದ್ದೆಂದು ತೀರ್ಮಾನಿಸಿರುವರು.

ಕಲ್ಕತ್ತೆಯ ಇಂಟರ್‌ಮೀಡಿಯೇಟ್ ಹಾಗೂ ಲಾ ಪರೀಕ್ಷೆಗಳು ಸತ್ಯಾಗ್ರಹಿಗಳ ಚಳವಳಿಯಿಂದ 4 ನೆಯ ಸಾರೆ ಮುಂದುವರಿಸಲ್ಪಟ್ಟವು.

ಅಹಿಂಸಾತ್ಮಕ ಕಾಯಿದೆ ಭಂಗದ ಚಳವಳಿಯು ಎಷ್ಟರಮಟ್ಟಿಗೆ ಮುಂದುವರಿದಿರುವದೆಂಬ ವಿಷಯವಾಗಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯವರು ಇದುವರೆಗೆ 21 ಜನ ವರ್ಕಿಂಗ್ ಕಮಿಟಿಯ ಮೆಂಬರರು ಮತ್ತು ಎಕ್ಸ್ ಪ್ರೆಸಿಡೆಂಟರು ಕಾರಾಗೃಹವಾಸಿಗಳಾಗಿರುವರೆಂದೂ, 30 ಕಾಂಗ್ರೆಸ್ ಕಮಿಟಿಗಳೂ ಮತ್ತು ತತ್ಸಂಬಂಧವಾದ ಸಂಘಗಳೂ, ಹಾಗೂ ಸಂಯುಕ್ತ ಪ್ರಾಂತ್ಯಗಳಲ್ಲಿರುವ ನವಜೀವನ ಭಾರತ ಸಭೆಗಳೂ ಸಹ ಅಕ್ರಮಕೂಟಗಳೆಂದು ಪ್ರಸಿದ್ಧಪಡಿಸಲ್ಪಟ್ಟಿರುವವೆಂದೂ, ಸುಮಾರು ಒಂದುನೂರು ನಗರಗಳಲ್ಲಿ 144 ನೆಯ ಸೆಕ್ಷನ್ ಜಾರಿಗೆ ತರಲ್ಪಟ್ಟಿರುವದೆಂದೂ ಪ್ರಸಿದ್ಧಮಾಡಿರುವರು.

ಮುಂಬಯಿಯ ಮಂಗಳದಾಸ್ ಮಾರ್ಕೇಟಿನ ಬಟ್ಟೆಯ ವ್ಯಾಪಾರಿಗಳು ಕಾಂಗ್ರೆಸ್ಸಿನ ಪರದೇಶೀವಸ್ತ್ರಬಹಿಷ್ಕಾರಕ್ಕೆ ಒಪ್ಪದಿದ್ದುದರಿಂದ ಅಲ್ಲಿ ಇದುವರೆಗೆ ಬಹಿಷ್ಕಾರ ಚಳವಳಿಯು ನಡೆಯುತ್ತಲೇ ಇತ್ತು. ಕಳೆದ 30 ನೆಯ ತಾರೀಖಿನ ದಿವಸ ವರ್ತಕರೆಲ್ಲರೂ, 3 ದಿನಗಳ ವರೆಗೆ ವ್ಯಾಪಾರವನ್ನು ನಿಲ್ಲಿಸಿ, ಕಾಂಗ್ರೆಸ್ ಪ್ರೆಸಿಡೆಂಟರವರೊಡನೆ ರಾಜಿಯ ಪ್ರಸ್ತಾಪವನ್ನು ಎತ್ತಿದುದರಿಂದ, ಸ್ವಯಂಸೇವಕರು ಅಲ್ಲಿಯ ಚಳವಳಿಯನ್ನು ನಿಲ್ಲಿಸಿರುವರು.

ಸೊಲ್ಲಾಪುರದ ಮೊಕದ್ದಮೆಯಲ್ಲಿ ಅಪರಾಧಿಗಳಾಗಿದ್ದ 4 ಜನರು ತಮಗೆ ವಿಧಿಸಲ್ಪಟ್ಟಿದ್ದ ಮರಣದಂಡನೆಯನ್ನು ರದ್ದುಪಡಿಸಬೇಕೆಂದು ಮುಂಬಯಿ ಹೈಕೋರ್ಟಿನಲ್ಲಿ ಅಪ್ಪೀಲುಮಾಡಿಕೊಂಡಿರಲು, ಚೀಫ್ ಜಸ್ಟಿಸ್‌ರವರು ಮತ್ತು ಜಸ್ಟಿಸ್‌ಮಡಗಾಂವಕರ್ರವರು, ಮೊದಲನೆಯ ಅಪರಾಧಿಯಾದ ಧನಶೆಟ್ಟಿಯವರಿಗೆ ಫಾಶೀ ಶಿಕ್ಷೆಯನ್ನು ಕಾಯಂಮಾಡಿ ಇತರ ಮೂವರ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾಗಲು ಜಸ್ಟಿಸ್ ಬೇಕರ್‌ರವರ ಅಭಿಪ್ರಾಯವನ್ನು ಕೇಳಿದ್ದರು. ಜಸ್ಟಿಸ್ ಬೇಕರ್‌ರವರು ವಿಚಾರಣೆ ನಡೆಯಿಸಿ ಉಳಿದ ಮೂವರಿಗೂ ಫಾಶೀಶಿಕ್ಷೆಯನ್ನು ಕಾಯಂಮಾಡಿದರು. ಧನಶೆಟ್ಟಿಯವರು ಪ್ರೀವಿಕೌನ್ಸಿಲ್ಲಿಗೆ ಅಪೀಲುಮಾಡಿರುವರು.

ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್ ಸಭೆಯವರು ಕಾಂಗ್ರೆಸ್ ಆಸ್ಪತ್ರೆಗೆ 2,500 ರೂ. ಗಳನ್ನು ಕೊಡಬೇಕೆಂದು ತೀರ್ಮಾನಿಸಿರುವರು.

ಜುಲೈ 30 ನೆಯ ತಾರೀಖಿನದಿವಸ ಕಲ್ಕತ್ತೆಯ ಬೂರ್ ಬಜಾರಿನಲ್ಲಿ ಪರದೇಶೀವಸ್ತ್ರಬಹಿಷ್ಕಾರ ಚಳವಳಿಯನ್ನು ಮಾಡುತ್ತಿದ್ದ 8 ಜನ ಸ್ತ್ರೀಯರನ್ನು ಪೋಲೀಸರು ದಸ್ತಗಿರಿಮಾಡಿದರು. 4 ನೆಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವರನ್ನು ವಿಚಾರಣೆಮಾಡಿ ಅವರಲ್ಲಿ ನಾಲ್ಕು ಜನರಿಗೆ 6 ವಾರಗಳ ಸಾದಾ ಸಜೆಯನ್ನು ವಿಧಿಸಿದರು. ಅದೇ ದಿನ ಬೆಳಗಿನ ಝಾವ 3 ಘಂಟೆಯ ಸಮಯದಲ್ಲಿ ಪೋಲೀಸರು ದಕ್ಷಿಣಕಲ್ಕತ್ತಾ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಆಫೀಸಿನ ಮೇಲೆ ದಾಳಿಯನ್ನಿಟ್ಟು, 7 ಜನ ಸ್ವಯಂ ಸೇವಕರನ್ನು ದಸ್ತಗಿರಿಮಾಡಿದರು.

ಅಲಹಾಬಾದ ವಿಶ್ವವಿದ್ಯಾನಿಲಯದ ಮುಂದೆ ನಡೆಯುತ್ತಿದ್ದ ಬಹಿಷ್ಕಾರ ಚಳವಳಿಯು ಕೆಲವು ದಿವಸಗಳ ವರೆಗೆ ನಿಲ್ಲಿಸಲ್ಪಟ್ಟಿದ್ದುದು, ಜುಲೈ 30 ನೆಯ ತಾರೀಖಿನ ದಿವಸ ಪುನಃ ಪ್ರಾರಂಭಿಸಲ್ಪಟ್ಟಿತು. ಜುಲೈ 31 ನೆಯ ತಾರೀಖಿನ ದಿವಸ ನಗರದ ಎಲ್ಲಾ ಶಾಲೆಗಳ ಚಿಕ್ಕ ಹುಡುಗರು "ಆರ್ಟ್ ಮತ್ತು ಸೈನ್ಸ್ ಕಾಲೇಜು" ಗಳನ್ನು ಮುತ್ತಿ, ಕಾಲೇಜನ್ನು ಯಾರೂ ಯಾವ ಕಡೆಯಿಂದಲೂ ಪ್ರವೇಶಿಸದಂತೆ ತಡೆದುಬಿಟ್ಟರು. ಯೂನಿವರ್ಸಿಟಿಯ ರೆಜಿಸ್ಟ್ರಾರ್ರಿಗೂ ಒಳಗೆ ಪ್ರವೇಶಿಸಲು ಅವಕಾಶದೊರೆಯಲಿಲ್ಲ. ಕಾಂಗ್ರೆಸ್ ಆಫೀಸಿನ ಕಾರಕೂನರು ಮತ್ತು ಅಧಿಕಾರಿಗಳಿಗೆ ಮಾತ್ರ ಒಳಗೆ ಪ್ರವೇಶಿಸಲವಕಾಶವಿತ್ತು. ಯೂನಿವರ್ಸಿಟಿಯ ಪ್ರಾಕ್ಟರ್‌ರಾದ ಮಿ|| ಎಸ್. ಕೆ. ರುದ್ರರವರು ಮಧ್ಯಸ್ಥಿಕೆ ಮಾಡಲು ಪ್ರಯತ್ನಿಸಿದರು. ಅನಂತರ ಮಧ್ಯಾಹ್ನ 12-15 ಘಂಟೆಯ ಹೊತ್ತಿಗೆ ಕಾಂಗ್ರೆಸ್ ಕಮಿಟಿಯ ಮುಖಂಡರಾದ ಮಿ|| ಮಂಜರ್ ಅಲಿ ಶೋಕತಾರವರು ವೈಸ್‌ಚಾನ್ಸಲರವರನ್ನು ಕಂಡು ಮಾತನಾಡಿದರು. ಅವರೀರ್ವರ ಚರ್ಚೆಯು ಗುಪ್ತವಾಗಿ ನಡೆದರೂ, ಯಾವ ತೀರ್ಮಾನವೂ ಆಗಲಿಲ್ಲವೆಂದು ತೋರುವದು. ಯೂನಿವರ್ಸಿಟಿಯ ಅಧಿಕಾರಿಗಳು ಈ ವಿಷಮಸ್ಥಿತಿಯಲ್ಲಿ ಬಹು ಎಚ್ಚರಿಕೆಯಿಂದ ವರ್ತಿಸುತ್ತಿರುವದರಿಂದ, ಇದುವರೆಗೆ ಯಾವ ಅನರ್ಥವೂ ಸಂಭವಿಸಿರುವದಿಲ್ಲ. ಅನಂತರ ಪ್ರಿನ್ಸಿಪಾಲ್ ಪ್ರಾಕ್ಟರು ಮತ್ತು ವೈಸ್‌ಛಾನ್ಸಲರೇ ಮೊದಲಾದ ಮುಖ್ಯ ಮುಖ್ಯ ಅಧಿಕಾರಿಗಳು ಪುನಃ ಸಭೆ ಸೇರಿ, ಸತ್ಯಾಗ್ರಹಿಗಳನ್ನು ಯಾವ ವಿಧದಲ್ಲಿಯೂ ಪ್ರತಿಭಟಿಸಕೂಡದೆಂದು ತೀರ್ಮಾನಿಸಿದರು. ಆ ಮೇಲೆ ಮೆಸ್ಸರ್ಸ್. ರುದ್ರ (ಪ್ರಾಕ್ಟರ್‌ರವರು) ಮತ್ತು ಡೇವಿಡ್ (ರೆಜಿಸ್ಟ್ರಾರ್) ರವರು ಶ್ರೀಮತಿ ಕಮಲಾ ನೆಹರೂ (ಪಂಡಿತ ಜವಾಹರಲಾಲ್ ನೆಹರೂರವರ ಧರ್ಮಪತ್ನಿ) ಮತ್ತು ಶ್ರೀಮತಿ ಕೃಷ್ಣಾ ನೆಹರು. (ಪಂಡಿತ ಜವಾಹರಲಾಲ್ ನೆಹರೂರವರ ಸಹೋದರಿ) ಇವರೊಡನೆ ಚಳವಳಿಯ ಉದ್ದೇಶವನ್ನು ಕುರಿತು ಚರ್ಚಿಸಿದರು. ಅದರಿಂದ ಕಾಂಗ್ರೆಸ್ಸಿನವರಿಗೆ ಕಾಲೇಜಿನ ವಿಷಯದಲ್ಲಿ ಯಾವ ಅಸಮಾಧಾನವಿಲ್ಲವೆಂದೂ ಕಾಂಗ್ರೆಸ್ ಸ್ವಯಂಸೇವಕರನ್ನು ಸೇರಿಸಿಕೊಳ್ಳಲು ವಿಶ್ವವಿದ್ಯಾನಿಲಯವನ್ನೇ ಮೂಲಸ್ಥಾನವನ್ನಾಗಿ ಮಾಡಿಕೊಳ್ಳಬೇಕೆಂಬುವದೇ ಚಳವಳಿಯ ಉದ್ದೇಶವೆಂದೂ, ಆದಕ್ಕಾಗಿ 3-4 ತಿಂಗಳವರೆಗೆ ವಿಶ್ವವಿದ್ಯಾನಿಲಯವನ್ನು ಮುಚ್ಚುವದು ಅವಶ್ಯಕವಾಗಿರುವದೆಂದೂ ತಿಳಿಯಬಂದಿತು. ಕಡೆಗೆ ಶ್ರೀಮತಿ ಕಮಲಾ ಜವಾಹರಲಾಲ್ ನೆಹರೂರವರು ಮೇಲ್ಕಂಡ ವಿಷಯವನ್ನು ವೈಸ್‌ಛಾನ್ಸಲರೊಡನೆ ಚರ್ಚಿಸಲು ಮಿ|| ಶೋಕತಾರವರನ್ನು ಕಳುಹಿಸಿಕೊಡುವದಾಗಿ ಹೇಳಿ ಹೊರಟುಹೋದರು. ವಿಶ್ವವಿದ್ಯಾನಿಲಯದ ಹೆಚ್ಚಿನಭಾಗ ವಿದ್ಯಾರ್ಥಿಗಳಿಗೆ ಕಾಲೇಜನ್ನು ಬಿಡುವದಕ್ಕಾಗಲಿ, ಕಾಲೇಜನ್ನು ಮುಚ್ಚುವದಕ್ಕಾಗಲಿ ಇಷ್ಟವಿಲ್ಲ. ಆದರೆ ಕಾಂಗ್ರೆಸ್ಸಿನವರಿಗೆ ವಿರೋಧವಾಗಿ ವರ್ತಿಸುವದಕ್ಕೆ ಅವರ ಮನಸ್ಸು ಒಪ್ಪುವದಿಲ್ಲವಾದ್ದರಿಂದ, ನಿರ್ವಾಹವಿಲ್ಲದೆ ಸುಮ್ಮನಿರಬೇಕಾಗಿರುವದು. ಸದ್ಯಃ ವಿಶ್ವವಿದ್ಯಾನಿಲಯವು ಮುಚ್ಚಿರುವದು.

ಶ್ರೀ ಕಾಶೀಕ್ಷೇತ್ರದಲ್ಲಿ ವಿರಾಜಿಸುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ (ಜಂಗಮವಾಡೀಮಠ) ದಲ್ಲಿ ಅಭ್ಯಾಸಮಾಡುತ್ತಿರುವ ಸಂ|| ಚಿ|| ಮ|| ವೀರಭದ್ರಶರ್ಮರವರು **ವೇದತೀರ್ಥ** ಪರೀಕ್ಷೆಯಲ್ಲಿ ಪಾಸಾಗಿರುವರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ.

ಈ ವಾರದ ಪತ್ರಿಕೆಯ ಸಂಗಡ ಮದರಾಸ್ ವಾಸೆ ಪುಸ್ತಕಶಾಲೆಯ "ಗೃಹಸ್ಥಾಶ್ರಮ ರಹಸ್ಯಗಳು" ಎಂಬ ಗ್ರಂಥದ ಜಾಹೀರಾತುಗಳನ್ನು ನಮ್ಮ ಚಂದಾದಾರರಿಗೆಲ್ಲ ಹಂಚಿರುತ್ತೇವೆ.

ಸ್ವೀಕಾರ.

ಧಾರವಾಡ ಡಿ|| ಹಮ್ಮಿಗಿ ಗ್ರಾಮದಲ್ಲಿ ವೈಶಾಖ ಶುದ್ಧ ೫ ದಿವಸ ನೆರವೇರಿದ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಮ|| ರಾ|| ಗುರುಭಕ್ತ ಕೇಸರಿಯವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ತಿಲಕರ ವಾರ್ಷಿಕೋತ್ಸವ.

ಪಂಡಿತ ಮದನಮೋಹನ ಮಾಲವೀಯ ಮತ್ತು ಸರದಾರ ವಲ್ಲಭಭಾಯಿ ಪಟೇಲರ ದಸ್ತಗಿರಿ.

ಮುಂಬಯಿ, ಆಗಸ್ಟ್ 1.

ಲೋಕಮಾನ್ಯ ಬಾಲಗಂಗಾಧರತಿಲಕರವರ ವಾರ್ಷಿಕೋತ್ಸವವು ಸಾಯಂಕಾಲ 4 ಘಂಟೆಗೆ ಸರಿಯಾಗಿ ಕಾಂಗ್ರೆಸ್ ಗೃಹದಿಂದ ಶ್ರೀಮತೀ ಹಂಸಾಮೆಹ್ತಾ (ಪ್ರೆಸಿಡೆಂಟ್) ಮತ್ತು ಮಿ|| ಪಿ. ಆರ್. ಲೇಲಿ ವೈಸ್‌ಪ್ರೆಸಿಡೆಂಟ್ ಇವರ ಮುಂದಾಳುತನದಲ್ಲಿ ಹೊರಟಿತು. ಪಂಡಿತ ಮದನಮೋಹನ ಮಾಳವೀಯರವರು ತಮ್ಮ ಪುತ್ರರಾದ ಮಿ|| ಗೋವಿಂದಕಾಂತ ಮಾಳವೀಯರೊಡನೆ ಗಿರಗಾಂವದಲ್ಲಿ ಉತ್ಸವಕ್ಕೆ ಬಂದರು. ಉತ್ಸವವು ಹಾರ್ನಬಿ ಮತ್ತು ಕ್ರಾಫರ್ಡ್ ರಸ್ತೆಗಳ ಜಂಕ್ಷನ್ನಿನ ಮುಂದೆ ಕಾರ್ಪೋರೇಷನ್ ಬಿಲ್ಡಿಂಗಿಗೆ ಬಂದಿತು. ಮುಂದೆ ಹಾರ್ನಬಿ ರಸ್ತೆಯು [illegible]ಟ್ಟು, ಎಸ್ಪ್ಲನೇಡ ಮೈದಾನಕ್ಕೆ ಹೋಗ [illegible] ದಾರಿಯನ್ನು ಮಾತ್ರ ಬಿಟ್ಟಿರುವದನ್ನು ಕಂಡು, ಉತ್ಸವದ ಜೊತೆಯಲ್ಲಿ ಬಂದಿದ್ದವರೆಲ್ಲರೂ ಅಲ್ಲಿಯೇ ರಾಷ್ಟ್ರೀಯಗೀತೆಗಳನ್ನು ಹಾಡುತ್ತಾ ಕುಳಿತುಬಿಟ್ಟರು. ಪಂಡಿತ ಮಾಳವೀಯರವರು ಶುಭ್ರವಾದ ಖಾದಿಯನ್ನು ಧರಿಸಿ ಎಲ್ಲ ಸ್ವಯಂಸೇವಕರಿಗೂ ಶಾಂತರೀತಿಯಿಂದ ವರ್ತಿಸಬೇಕೆಂದು ಉಪದೇಶ ಮಾಡುತ್ತಿದ್ದರು. ರಾತ್ರಿ 8 ಘಂಟೆಯ ಸಮಯಕ್ಕೆ ಸರದಾರ್ ವಲ್ಲಭಭಾಯ್‌ರವರು ಅಲ್ಲಿಗೆ ಬಂದರು. ಉತ್ಸವವಲ್ಲಿ ಹೊರಡುವಾಗ್ಗೆ ಒಂದುಸಾವಿರ ಜನರು ಮಾತ್ರ ಇದ್ದದ್ದು, 5-30 ರ ಸಮಯಕ್ಕೆ 10 ಸಾವಿರವಾಗಿದ್ದಿತು. ಪೋಲೀಸ್ ಕಮಿಷನರ್ ಮಿ|| ಹೀಲಿಯವರು ಸ್ವತಃ 50 ಜನ ಪೋಲೀಸ್ ಸವಾರರೊಡನೆ ಉತ್ಸವವನ್ನು ತಡೆದಿದ್ದರು. ಅವಶ್ಯಬಿದ್ದರೆ ಇರಲೆಂದು 19 ನೆಯ ಹೈದರಾಬಾದ್ ರೆಜಿಮೆಂಟ್ ಒಂದು ಹತ್ತಿರದಲ್ಲಿಯೇ ಸಿದ್ಧವಾಗಿದ್ದಿತು. ರಾತ್ರಿ 8-30 ಘಂಟೆ ಸಮಯಕ್ಕೆ ಸ್ವಯಂಸೇವಕರಿಗೆ ಅದ್ದಲ್ಲಿಯೇ ಆಲ್ಪಾಹಾರವು ಕೊಡಲ್ಪಟ್ಟಿತು. ಈ ಮಧ್ಯೆ ಪಂಡಿತರಿಗೂ ಸೂಪರಿಂಟೆಂಡೆಂಟ ಗಾರ್ಡನ್‌ರವರಿಗೂ ವಿನೋದಕರ ಸಂಭಾಷಣೆಯು ಜರುಗಿತು. ರಸ್ತೆಗಳಲ್ಲಿ ಹೋಗುವುದು ಜನಸಾಮಾನ್ಯಕ್ಕೆ ಜನ್ಮಸಿದ್ಧವಾದ ಹಕ್ಕಾಗಿರುವದೆಂದೂ, ಹೀಗೆ ಉತ್ಸವವನ್ನು ತಡೆಯುವದರಿಂದ ತಾವಾಗಿ ಗಲಾಟೆಯನ್ನು ಪ್ರಾರಂಭಿಸಿದಂತಾಗುವದೆಂದೂ, ಉತ್ಸವವು ಅಕ್ರಮವಾದುದೆಂದು ಪೋಲೀಸರಿಗೆ ತೋರಿಬಂದರೆ ತಮ್ಮೆಲ್ಲರನ್ನೂ ದಸ್ತಗಿರಿ ಮಾಡಬಹುದೆಂದೂ ಪಂಡಿತರು ಪ್ರತಿಭಟಿಸಿದರು.

ಗಾರ್ಡನ್—ನೀವೆಷ್ಟುಕಾಲ ಹೀಗೆಯೇ ನಿಂತಿರುವಿರಿ!

ಪಂಡಿತಜಿ—ಪ್ರಾತಃಕಾಲದ ವರೆಗೂ ನಾವಿಲ್ಲಿಯೇ ನಿಂತಿರುವೆವು. ಆದರೆ ನೀವು ಮಾತ್ರ ಹಾಗೆ ನಿಂತಿರಲಾರಿರಿ. ಇಂಗ್ಲೆಂಡಿಗೆ ನೀವು ಹಿಂತಿರುಗಿ ಹೋಗಲೇಬೇಕು.

ಗಾರ್ಡನ್—ನನಗೆ 50 ವರ್ಷಗಳಾದನಂತರ ನಾನು ಹೋಗುವೆನು.

ಪಂಡಿತಜಿ—ಶತ್ರುಗಳಂತೆ 50 ವರ್ಷಗಳಾದನಂತರ ಹೋಗುವದಕ್ಕಿಂತಲೂ ಮಿತ್ರರಂತೆ ಈಗಲೇ ಹೊರಟುಹೋಗುವದು ಮೇಲು.

ಗಾರ್ಡನ್—ಉತ್ಸವಗಳ ಮುಂದುಗಡೆ ಹೆಂಗಸರನ್ನು ಕಳುಹಿಸುವದು ಶುದ್ಧ ಹೇಡಿತನವಾಗಿರುವದು.

ಪಂಡಿತಜಿ—ನಿಮ್ಮ ಕೈಯಲ್ಲಿರುವ ಅಧಿಕಾರವನ್ನು ದುರುಪಯೋಗಪಡಿಸುತ್ತಿರುವ ನೀವೇ ಹೇಡಿಗಳು! ಇಂಗ್ಲೆಂಡಿನ ಸ್ತ್ರೀ ಓಟರುಗಳನ್ನೂ, ಅವರು ಹೇಗೆ ನಿಮ್ಮನ್ನು ಜಯಿಸಿದರೆಂಬುದನ್ನೂ ಸ್ವಲ್ಪ ಜ್ಞಾಪಕಕ್ಕೆ ತಂದುಕೊಳ್ಳಿರಿ.

ಗಾರ್ಡನ್—ನಾನು ಇಂಡಿಯಾ ಸರಕಾರದ ಆಜ್ಞೆಯಂತೆ ಕೆಲಸ ಮಾಡುತ್ತಿದ್ದೇನೆ.

ಪಂಡಿತಜಿ—ಆ ಆಜ್ಞೆಯು ತಪ್ಪಾಗಿರುವದು. ಮತ್ತು ಅದನ್ನು ಪ್ರತಿಭಟಿಸುವದೇ ನನ್ನ ಕರ್ತವ್ಯ.

ರಾತ್ರಿ ಹತ್ತು ಘಂಟೆಯ ಹೊತ್ತಿಗೆ ಅಲ್ಲಿದ್ದ ಪೋಲೀಸರು ಹೊರಟುಹೋಗಿ ಬೇರೆ ಪೋಲೀಸರು ಬಂದರು. ಹೀಗೆಯೇ ರಾತ್ರಿಯೆಲ್ಲಾ ಕಳೆಯಿತು.

ಮುಂಬಯಿ ಆಗಸ್ಟ್ 2.

ಬೆಳಿಗ್ಗೆ 6-30 ಕ್ಕೆ ಸರಿಯಾಗಿ, ಹೋಂ ಮೆಂಬರು ಸರ್ ಅರ್ನೆಸ್ಟ್ ಹಾಟ್ಸನ್‌ರವರು ಪುಣೆಯಿಂದ ಬಂದರು. ಕಮಿಷನರ್ ಹೀಲಿಯವರು ಹಾಟ್ಸನ್‌ರವರೊಡನೆ ಸ್ವಲ್ಪಹೊತ್ತು ಮಾತನಾಡಿದನಂತರ ಮಿ|| ವಲ್ಲಭಭಾಯಿ ಪಟೇಲರವರ ಸಮೀಪಕ್ಕೆ ಬಂದು ಉತ್ಸವವನ್ನು ಕೂಡಲೇ ಚದರಿಸದಿದ್ದರೆ ಎಲ್ಲರನ್ನೂ ದಸ್ತಗಿರಿಮಾಡುವದಾಗಿ ಹೇಳಿದರು. ಮಿ|| ವಲ್ಲಭಭಾಯಿ ಪಟೇಲ್‌ರವರು ಅಲ್ಲಿದ್ದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಇತರ ಮೆಂಬರುಗಳೊಡನೆ ಸ್ವಲ್ಪ ಹೊತ್ತು ಯೋಚಿಸಿ ಎಲ್ಲರೂ ದಸ್ತಗಿರಿಗೆ ಸಿದ್ಧವಾಗಿರುವುದಾಗಿ ಹೇಳಿದರು. ಅನಂತರ ಪೋಲೀಸರು ಪಂಡಿತ ಮಾಳವೀಯ, ಟಿ. ಎ. ಕೆ. ಶೇರ್ವಾಣಿ, ಜಯರಾಮದಾಸ್ ದೌಲತ್‌ರಾಂ, ಡಾಕ್ಟರ್ ಹರ್ಡೀಕರ್ ಮತ್ತು ವಲ್ಲಭಭಾಯಿ ಪಟೇಲ ಈ 5 ಜನರನ್ನೂ, ಸುಮಾರು 50 ಜನ ಸ್ತ್ರೀಯರನ್ನೂ ದಸ್ತಗಿರಿಮಾಡಿ ಮೋಟಾರ್ ಲಾರಿಗಳಲ್ಲಿ ಕರೆದುಕೊಂಡು ಹೋದರು. ದಸ್ತಗಿರಿಯಾದ ಸ್ತ್ರೀಯರೊಳಗೆ ಮಿ|| ವಲ್ಲಭಭಾಯಿ ಪಟೇಲರವರ ಮಗಳು ಶ್ರೀಮತಿ ಮಣಿಬೆನ್‌ರವರೂ ಒಬ್ಬರಾಗಿರುವರು.

[೬ನೇ ಪುಟವನ್ನು ನೋಡಿ]

[3ನೇ ಪುಟದಿಂದ ಮುಂದುವರಿದುದು.]

ಸರ್ ಅಲ್ಫ್ರೆಡ್ ವಾಟ್ಸ್‌ನರವರು—ಗಾಂಧಿಯವರು ಜೈಲಿನಲ್ಲಿರುವಾಗ ಸಂಧಾನದ ಮಾತುಗಳನ್ನು ಆಡುವುದು ಸರ್ಕಾರದ ಬಲಹೀನತೆಯ ಪ್ರದರ್ಶನವಲ್ಲವೇ ?

ಅಧ್ಯಕ್ಷರು—ಸಂಧಾನದ ಟೈಮಿನಲ್ಲಿ ಅಶುದ್ಧವಾಕ್ಯಗಳನ್ನು ಮೆಂಬರುಗಳು ಆಡಬಾರದು.

ಶಾಂತಿಸಂಧಾನ.

(ಜುಲೈ 30 ನೆಯ ತಾರೀಖಿನ "ಇಂಡಿಯನ್ ಡೇಲಿ ಮೇಲ್ ಪತ್ರಿಕೆ" ಯಲ್ಲಿ "ಸ್ಪೆಕ್ಟೇಟರ್"ರವರು ಈ ರೀತಿ ಬರೆದಿರುತ್ತಾರೆ.)

ಅಲಹಾಬಾದಿನ ವರ್ತಮಾನಗಳು ಬಹಳ ಸಮರ್ಪಕವಾಗಿರುವವು. ಸರ್. ತೇಜ್‌ಬಹದ್ದೂರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಪಂಡಿತ ಮೋತೀಲಾಲ್ ನೆಹರೂ ಮತ್ತು ಪಂಡಿತ ಜವಾಹರಲಾಲ್ ನೆಹರೂರವರೊಡನೆ ಮತ್ತೆ 4 ಘಂಟೆಗಳಕಾಲ ಚರ್ಚಿಸಿದರು. ಉಭಯ ಪಂಡಿತರೂ ಮಹಾತ್ಮರಿಗೆ ಬರೆದುಕೊಟ್ಟಿರುವ ಕಾಗದಗಳನ್ನು ಮಿ|| ಜಯಕರ್‌ರವರು ನಾಳೆಯಬೆಳಗ್ಗೆ ಪುಣೆಗೆ ತೆಗೆದುಕೊಂಡು ಹೋಗುವರು. ಅಂದರೆ ಮಿ|| ಜಯಕರ್‌ರವರು ಮಿ|| ಗಾಂಧಿಯವರನ್ನು ನಾಳೆಯದಿವಸ ಪುನಃ ನೋಡುವರೆಂದ ಹಾಗಾಯಿತು. ಡಾ|| ಸಪ್ರೂರವರು ಪುನಃ ಎರವಾಡಾ ಜೈಲಿಗೆ ಹೋಗುವ ಅವಶ್ಯಕತೆಯಿಲ್ಲವೆಂದು ಹೇಳುವದನ್ನು ನೋಡಿದರೆ ಶಾಂತಿಸಂಧಾನದ ಪ್ರಯತ್ನಗಳು ಬಹಳ ಸಮರ್ಪಕವಾಗಿ ನಡೆದಿರುವವೆಂದು ಹೇಳಬಹುದಾಗಿದೆ. ಡಾ|| ಸಪ್ರೂರವರು ತಾವು ಮತ್ತು ಮಿ|| ಜಯಕರ್‌ರವರು ಈ ಸಂದರ್ಭದಲ್ಲಿ ಹೇಳಬಹುವಾದ ವಿಷಯಗಳನ್ನೆಲ್ಲಾ ಹೇಳಿರುವದರಿಂದ, ಕಡೆಯ ತೀರ್ಮಾನವು ಕಾಂಗ್ರೆಸ್ಸಿನ ಮೂರುಜನ ಮುಖಂಡರ ಕೈಯ್ಯಲ್ಲಿರುವದೆಂದೂ ಅಥವಾ ಕಾರಾಗೃಹವಾಸಿಗಳಾಗಿರುವ ಮೇಲ್ಕಂಡ ರಾಜಕೀಯ ಮುಖಂಡರಿಗೆ ತಮ್ಮ ಮನದ ಅಭಿಪ್ರಾಯವನ್ನು ಸಂಪೂರ್ಣವಾಗಿಯೂ ಸ್ಪಷ್ಟವಾಗಿಯೂ ತಿಳಿಯಪಡಿಸಿರುವದರಿಂದ ಹೆಚ್ಚಿಗೆ ಮತ್ತೇನೂ ಹೇಳಬೇಕಾಗಿಲ್ಲವೆಂದೂ ಅಭಿಪ್ರಾಯಪಡುವಂತೆ ತೋರುವದು. ಎಲ್ಲಾ ಆದರೂ ಸದ್ಯದ ಸ್ಥಿತಿಗತಿಗಳನ್ನು ಪರಿಶೀಲಿಸಿ ನೋಡಿದರೆ ಶಾಂತಿಸಂಧಾನಪ್ರಯತ್ನಗಳ ಒಂದು ಭಾಗವು ಸಂಪೂರ್ಣವಾಗಿ ಮುಗಿದು ಮಿ|| ಗಾಂಧಿಯವರೂ ಹಾಗೂ ಉಭಯ ನೆಹರೂರವರು ಸರ್ವಸಮರ್ಪಕವಾದ ಶಾಂತಿಸಂಧಾನಕ್ಕೆ ಒಪ್ಪಿರುವರೆಂದು ಧಾರಾಳವಾಗಿ ಹೇಳಬಹುದಾಗಿದೆ.

ಆದರೆ ಯಾವ ರೀತಿಯಲ್ಲಿ ಈ ಸಂಧಾನವು ನೆರವೇರುವದೆಂಬುದನ್ನು ಈಗಲೇ ಹೇಳಲು ಪ್ರಯತ್ನಿಸುವದರಿಂದ ಯಾವ ಪ್ರಯೋಜನವೂ ಇಲ್ಲ. ಮಿ|| ಜಯಕರ್ ಮತ್ತು ಸರ್ ತೇಜ್ ಬಹದ್ದೂರ್ ಸಪ್ರೂರವರು ಯಾವ ಯಾವ ವಿಷಯಗಳ ಆಧಾರದ ಮೇಲೆ ಮಿ|| ಗಾಂಧಿಯವರೊಡನೆ ಶಾಂತಿಸಂಧಾನವನ್ನು ನಡೆಯಿಸುತ್ತಿರುವರೆಂಬುದನ್ನೂ ಈಗಲೇ ಊಹಿಸಿ ಹೇಳುವದು ಅಸಾಧ್ಯವಾಗಿರುವದಲ್ಲದೆ, ಹಾಗೆ ಮಾಡುವದರಿಂದ ನಂಬಿಕೆಗೆ ದ್ರೋಹ ತಂದಂತಾಗುವದು. ಅಸಾಧ್ಯವಾದ ಷರತ್ತುಗಳನ್ನು ಹೇಳಿ ಶಾಂತಿಸಂಧಾನವು ಸಂಪೂರ್ಣ ನಿಷ್ಪ್ರಯೋಜನಕಾರಿಯಾಗುವಂತೆ ಮಾಡುವದು ಮಿ|| ಗಾಂಧಿ ಮತ್ತು ಅವರ ಕಡೆಯವರಿಗೆ ಅಸಾಧ್ಯವಾದ ಕಾರ್ಯವೇ ಆಗಿರುವದು. ಆದರೆ ಮಹಾತ್ಮರವರು ಹಾಗೆಂದಿಗೂ ಮಾಡಲಾರರೆಂದೇ ನನಗೆ ತೋರುವದು. ಮಿ|| ಗಾಂಧಿಯವರು ಮಹಾಚತುರರಾದ ರಾಜಕೀಯ ತತ್ವಜ್ಞರಾಗಿರುವರು. ಜೊತೆಗೆ ರಾಜಕೀಯ ತತ್ವಜ್ಞರಲ್ಲಿ ಅಪ್ರತಿಮ ಪ್ರತಿಭಾಶಾಲಿಗಳಾದ ಪಂಡಿತ ಮೋತೀಲಾಲನೆಹರೂರವರು ಇರುವದರಿಂದ ಮಹಾತ್ಮರು ಶಾಂತಿಸಂಧಾನ ಪ್ರಯತ್ನಕ್ಕೆ ಕಿವಿಗೊಡದಿರರು. ಹೀಗೆ ಶಾಂತಿಯ ಪ್ರಯತ್ನವನ್ನು ಮಾಡುವದೇ ನಿಶ್ಚಯವಾದರೆ ಕಾಂಗ್ರೆಸ್ ಪಕ್ಷದವರು ಬೇಕಾದಷ್ಟು ಪ್ರತಿಭಟಿಸಿದರೂ ಪ್ರತಿಭಟಿಸಬಹುದು. ಬಾರ್ಡೋಲಿಯಿಂದ ಅಸಮಾಧಾನಕರಗಳಾದ ವರ್ತಮಾನಗಳು ಆಗಲೇ ಕೇಳಿ ಬರುತ್ತಿರುವವು. ಬರ್ಡೋಲಿಯ ಮಿ|| ವಲ್ಲಭಬಾಯಿ ಪಾಟೀಲರವರ ಆಜ್ಞೆಯನ್ನು ಮೀರಿ ನಡೆಯುವಂತೆಯೇ ಇಲ್ಲ. ಈ ವಿಷಯದಲ್ಲಿ ಮಿ|| ವಲ್ಲಭಬಾಯಿಯವರು ವಿಶೇಷ ಅಭಿಮಾನವನ್ನು ಹೊಂದಿರುವರು. ಆದರೆ ಅನಿವಾರ್ಯ ಪಕ್ಷವು ಪ್ರಾಪ್ತವಾಗುವವರೆಗೂ ನಮ್ಮ ಸರ್ವ ಶಕ್ತಿಯನ್ನು ಉಪಯೋಗಿಸುವದು ಜಾಣತನವಲ್ಲ. ಎಲ್ಲ ಮುಖಂಡರಿಗಿಂತಲೂ ಮಿ|| ಪಟೇಲರು ಮಹಾತ್ಮರ ವಿಶೇಷ ಪ್ರೀತಿಗೆ ಪಾತ್ರರೆಂದು ಕೇಳಿರುವೆನು. ಹೀಗಿರುವಲ್ಲಿ ಅವರೆಂದೂ ಮಹಾತ್ಮರ ಮಾತಿಗೆ ಪ್ರತಿಹೇಳಲಾರರು. ಆದರೆ ಇತರ ತರುಣರ ವಿಷಯವೇ ಬೇರೆ. ಈ ಶಾಂತಿಸಂಧಾನಕ್ಕೆ ಮಿ|| ಗಾಂಧಿಯವರು ಒಪ್ಪಿದವಾದರೆ ಅವರ ಪಕ್ಷದ ಅನೇಕಜನರು ಪ್ರತಿಭಟಿಸುವದರಲ್ಲಿ ಸಂದೇಹವೇನೂ ಇಲ್ಲ.

ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯ.

ಸರ್ ಫ್ರಾನ್ಸಿಸ್ ಯಂಗ್ ಹಸ್ಬಂಡ್‌ರವರು "ದಿ ಸ್ಪೆಕ್ಟೇಟರ್" ಪತ್ರಿಕೆಯಲ್ಲಿ ಈ ರೀತಿ ಬರೆದಿರುವರು—

ಭರತಖಂಡವು ಪ್ರಪಂಚದಲ್ಲಿ ಗೌರವಯುಕ್ತವಾದ ಸ್ಥಾನವನ್ನು ಅಪೇಕ್ಷಿಸುವದು. ಆದುದರಿಂದಲೇ ಅದು "ಡೊಮಿನಿಯನ್ ಸ್ಟೇಟಸ್" ಎಂಬ ಶಬ್ದವನ್ನು ಬಲವಾಗಿ ಹಿಡಿದುಕೊಂಡಿತು. ಕೆನಡಾ ಮತ್ತು ಆಸ್ಟ್ರೇಲಿಯಾದೇಶಗಳು ಹೊಂದಿರುವಂಥ ಗೌರವಸ್ಥಾನವನ್ನೇ ಭರತಖಂಡವೂ ಅಪೇಕ್ಷಿಸುವದು.

ಈ ಸ್ಥಾನವನ್ನು ಭರತಖಂಡವು ತಾನೇ ಸಂಪಾದಿಸಿಕೊಳ್ಳಬೇಕು. ಕಳೆದ 20-30 ವರ್ಷಗಳಿಂದಲೂ ಭರತಖಂಡವು ಆ ಮಾರ್ಗವಾಗಿ ಮುಂದುವರಿಯುತ್ತ ತನಗೊಂದು ದೊಡ್ಡ ಸ್ಥಾನವನ್ನು ನಿರ್ಮಿಸಿಕೊಳ್ಳುತ್ತಿರುವದು. ಅದರ ಪುತ್ರರೇ ಆ ಸ್ಥಾನವನ್ನು ಸಂಪಾದಿಸುತ್ತಿರುವರು. ಟಾಗೋರ್‌ರವರಂತಹ ಕವಿಶ್ರೇಷ್ಠರೂ ಗಾಂಧಿಯವರಂತಹ ಸಾಧುವರೇಣ್ಯರೂ, ಶ್ರೀನಿವಾಸಶಾಸ್ತ್ರಿಯವರಂತಹ ರಾಜನೀತಿತತ್ವಜ್ಞರೂ, ರಾಧಾಕೃಷ್ಣನ್‌ರವರಂತಹ ವೇದಾಂತಶಾಸ್ತ್ರಪ್ರವೀಣರೂ, ಸರ್ ಜಗದೀಶಬೋಸ್‌ರವರಂತಹ ರಸಾಯನಶಾಸ್ತ್ರಪಟುಗಳೂ, ದುಲೀಪರಂತಹ ಕ್ರಿಕೆಟ್ ಆಟದಲ್ಲಿ ನಿಪುಣರೂ ಇವರೆಲ್ಲರೂ ಈ ದೊಡ್ಡ ಪ್ರಪಂಚದಲ್ಲಿ ಭರತಖಂಡಕ್ಕೊಂದು ದೊಡ್ಡ ಹೆಸರನ್ನು ಸಂಪಾದಿಸುತ್ತಿರುವರು.

ಭರತಖಂಡದ ಈ ಪ್ರಯತ್ನದಲ್ಲಿ ನಾವೂ ಸಾಕಾದಷ್ಟು ಸಹಾಯ ಮಾಡಬಲ್ಲೆವು. ಭರತಖಂಡದ ಗೌರವ ಸಂಪಾದನೆಗೆ ಬೇಕಾದ ಪ್ರಯತ್ನಗಳನ್ನೆಲ್ಲ ನಾವೇ ಮಾಡಬೇಕು. ಏಕೆಂದರೆ ಭರತಖಂಡದ ಅಭ್ಯುದಯವೇ ನಮ್ಮ ಅಭ್ಯುದಯವಾಗಿರುವದು. ನಿಜವಾಗಿಯೂ ನಾವು ಭರತಖಂಡಕ್ಕೆ ಅನೇಕ ಉಪಕಾರಗಳನ್ನು ಮಾಡಿರುವೆವು. ಭರತಖಂಡಕ್ಕೆ ಜವಾಬ್ದಾರೀ ಸರಕಾರವು ದೊರೆಯುವಂತೆ ಮಾಡುವದೇ ನಮ್ಮ ಉದ್ದೇಶವಾಗಿರುವದೆಂದು ಸಾರಿ ಸಾರಿ ಹೇಳಿರುವೆವಲ್ಲದೆ ಆ ಸಂಬಂಧವಾಗಿ ಅನೇಕ ಮಹತ್ವದ ಪ್ರಯತ್ನಗಳನ್ನು ಮಾಡಿರುವೆವು. ಇದುವರೆಗೆ ನಾವು ಮಾಡಿರುವ ಸುಧಾರಣೆಗಳಿಗಿಂತಲೂ ಹೆಚ್ಚಾಗಿ ನಾವೇನಾದರೂ ಮಾಡಬಲ್ಲೆವೇ ಎಂಬುದೇ ಸದ್ಯದ ಪ್ರಶ್ನೆಯಾಗಿರುವದು. ಹೌದು ಮಾಡಬಲ್ಲೆವು. ಭರತಖಂಡಕ್ಕೆ ಜವಾಬ್ದಾರೀ ಸರ್ಕಾರವು ದೊರೆಯುವಂತೆ ಮಾಡುವೆನೆಂದು ನಾವು ಆಗಲೇ ಹೇಳಿರುವೆವು. ಆದರೆ ಅದನ್ನು ನಾವು ಹೇಳುವಾಗಲೆಲ್ಲ "ಸಾಮ್ರಾಜ್ಯದಲ್ಲಿ" ಎಂಬ ಶಬ್ದವನ್ನು ಸೇರಿಸಿ ಹೇಳುವೆವು. ಅದರ ಜೊತೆಗೆ "ಭರತಖಂಡವು ಸಮ್ಮತಿಸಿದರೆ" ಎಂಬ ಶಬ್ದಗಳನ್ನೂ ಸೇರಿಸಬೇಕೆಂಬುದೇ ನನ್ನ ಅಭಿಪ್ರಾಯವು. ಭರತಖಂಡದ ಸಮ್ಮತಿಯನ್ನು ಕೇಳದೇ ಅದನ್ನು ನಾವೇ ಹೇಳುವದು ಅಷ್ಟು ಸಮಂಜಸವಾಗಿ ತೋರುವದಿಲ್ಲ. ಕಳೆದ ಘೋರಯುದ್ಧದ ಸಮಯದಲ್ಲಿ ಭರತಖಂಡವು ಸಾಮ್ರಾಜ್ಯಕ್ಕೆ ಮಾಡಿರುವ ಅಪಾರ ಸಹಾಯವನ್ನು ನಾವು ಕೃತಜ್ಞತೆಯಿಂದ ಸ್ಮರಿಸಿ, ಸಾಮ್ರಾಜ್ಯದಲ್ಲಿರುವ ಭಾಗವನ್ನು ಅವರ ಸಮ್ಮತಿಗೇ ಒಳಪಡಿಸಬೇಕು. ಜವಾಬ್ದಾರೀ ಸರ್ಕಾರದ ಭಾರವನ್ನು ವಹಿಸಿ, ತಮ್ಮ ರಾಜ್ಯಭಾರವನ್ನು ತಾವೇ ನಿರ್ವಹಿಸುವ ಶಕ್ತಿಯನ್ನು ಹೊಂದಿದ ಮೇಲೆ, ಸಾಮ್ರಾಜ್ಯದಲ್ಲಿಯೇ ಇರಬೇಕೆಂದು ಅವರ ಇಚ್ಛೆಗೆ ವಿರುದ್ಧವಾಗಿ ನಾವೆಂದೂ ಅವರನ್ನು ಬಲಾತ್ಕಾರಪಡಿಸಲಾರೆವು. ಅಂದ ಮೇಲೆ ಆ ವಿಷಯವನ್ನು ಈಗಲೇ ಏಕೆ ಒಪ್ಪಿಕೊಳ್ಳಬಾರದು ? "ಸಾಮ್ರಾಜ್ಯದಲ್ಲಿ" ಎಂಬ ಶಬ್ದವನ್ನು ಬಿಟ್ಟು ಓದಬಾರದೇಕೆ ?

ಆದುದರಿಂದ ಸದ್ಯಃ ಜಾರಿಯಲ್ಲಿರುವ "ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್"ನ ಪೀಠಿಕೆಯಲ್ಲಿರುವ "ನಮ್ಮ ಸಾಮ್ರಾಜ್ಯದ ಒಂದು ಅವಶ್ಯಕವಾದಭಾಗವಾಗಿ" ಎಂಬ ಶಬ್ದಗಳನ್ನು ನೂತನವಾಗಿ ತಯಾರಾಗಲಿರುವ "ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್"ನ ಪೀಠಿಕೆಯಲ್ಲಿ ಸೇರಿಸಬಾರದೆಂಬುದೇ ನನ್ನ ಸಲಹೆಯಾಗಿರುವದು. ಇದಕ್ಕೆ ಬದಲಾಗಿ "ಭರತಖಂಡವು ಜವಾಬ್ದಾರೀ ಸರಕಾರವನ್ನು ಹೊಂದಿದ ಮೇಲೆ, ಸಾಮ್ರಾಜ್ಯದಲ್ಲಿ ಇರುವ ಅಥವಾ ಇಲ್ಲದಿರುವ ತೀರ್ಮಾನವನ್ನು ಭರತಖಂಡದ ರಾಜರು ಮತ್ತು ಪ್ರಜೆಗಳೇ ಮಾಡಿಕೊಳ್ಳತಕ್ಕದ್ದು" ಎಂದು ಸೇರಿಸಬೇಕು.

ಇದರಿಂದ ಬಹಳ ತೊಂದರೆಗಳು ಸಂಭವಿಸುವವೆಂದು, ಅನೇಕರು ಆಕ್ಷೇಪಿಸಬಹುದು. ಆದರೆ ಭರತಖಂಡದಲ್ಲಿ ತೊಂದರೆಯು ಸಂಭವಿಸದಂತೆ ಏನುಮಾಡುವದಕ್ಕೂ ಸಾಧ್ಯವಿಲ್ಲ. ಏನೂ ಮಾಡದೆ ಸುಮ್ಮನಿರುವದು ಮತ್ತಷ್ಟು ಅಪಾಯಕ್ಕೆ ಕಾರಣವಾಗುವದು. ಆದುದರಿಂದ ನಾವು ನ್ಯಾಯವಾದ ಕಾರ್ಯವನ್ನೇ ಮಾಡಬೇಕು. ನ್ಯಾಯವಾದ ಕಾರ್ಯವೆಂದರೆ, ಯಾವುದರಿಂದ ಹೆಚ್ಚಿನ ಭಾಗ ಒಳ್ಳೆಯದಾಗುವದೋ ಅದೇ ಆಗಿರುವದು. ಅಂದರೆ ಯಾವುದು ಉಭಯ ರಾಷ್ಟ್ರಗಳಿಗೂ ಕೀರ್ತಿಯನ್ನು ತರುವದೋ ಅದೇ ನ್ಯಾಯವಾದ ಕಾರ್ಯವಾಗಿರುವದು. ಹೀಗೆ ಉಭಯ ದೇಶೀಯರಿಗೂ ಗೌರವವುಂಟಾಗಬೇಕಾದರೆ, ಇಂಗ್ಲೆಂಡ್ ದೇಶವು ಭರತಖಂಡವನ್ನು ಯಾವಾಗಲೂ ತನ್ನ ಅಧೀನದಲ್ಲಿಯೇ ಇಟ್ಟುಕೊಂಡಿರಬೇಕೆಂಬ ಅಭಿಪ್ರಾಯವನ್ನು ಹೊಂದಿಲ್ಲವೆಂದೂ, ಭರತಖಂಡವು ಬೇಕಿದ್ದರೆ ತನ್ನ ಖುದ್ದು ರಾಜಿಯಿಂದ ಸಾಮ್ರಾಜ್ಯದಲ್ಲಿ ಸೇರಿರಬಹುದೇ ಹೊರ್ತು ಅದಕ್ಕೆ ಯಾರ ನಿರ್ಬಂಧವೂ ಇಲ್ಲವೆಂದೂ ಸ್ಪಷ್ಟವಾಗಿ ತಿಳಿಯಪಡಿಸಬೇಕು.

ಮುಖ್ಯವಾಗಿ ಭರತಖಂಡದ ಶ್ರೇಯಸ್ಸೇ ನಮ್ಮ ಶ್ರೇಯಸ್ಸಾಗಿರುವದು. ಉನ್ನತಿ ಅವನತಿಗಳನ್ನು ನಾವೀರ್ವರೂ ಒಟ್ಟಿಗೆ ಅನುಭವಿಸುವೆವು.

೧೫ ವರ್ಷದ ಹುಡುಗನಿಗೂ ಮ್ಯಾಜಿಸ್ಟ್ರೇಟರಿಗೂ ಸಂವಾದ.

ಬೆಳಗಾಂವ ಡಿ|| ಯಮಕನಮರ್ಡಿಯಲ್ಲಿ ೧೫ ವರ್ಷದ ಜೈನಧರ್ಮೀಯ ಯುವಕನೊಬ್ಬನು ಸೇಂದಿಗಿಡಗಳನ್ನು ಕಡಿದನು ; ಅವನಿಗೂ ಪೋಲೀಸರಿಗೂ ಕೆಳಗಿನಂತೆ ಸಂಭಾಷಣೆ ನಡೆಯಿತು.

ಪೋಲೀಸ್ ಇನ್‌ಸ್ಪೆಕ್ಟರ—ನಿನ್ನ ಹೆಸರೇನು ?

ಉ—ಶ್ರೀಮಂಧರಕಲ್ಲೋಳೀ ಭೋಸಕೆ.

ಪ್ರ—ಉದ್ಯೋಗ ಏನು ?

ಉ—ಮಹಾತ್ಮಾ ಗಾಂಧಿಯವರ ಅಪ್ಪಣೆಯಂತೆ ಶಾಲೆಯನ್ನು ಬಿಟ್ಟು ರಾಷ್ಟ್ರಕಾರ್ಯಮಾಡುವದು ! ಸರಕಾರೀ ಕಾಯದೆಗಳನ್ನು ಧಿಕ್ಕರಿಸಿ, ಸರಕಾರೀ ಮತ್ತು ಮಾಲಕೀ ಸ್ಥಳಗಳೊಳಗಿನ ಸೇಂದೀ ಗಿಡಗಳನ್ನು ಕಡಿಯುವದು.

ಹು—ನೀನು ಇನ್ನೂ ಸಣ್ಣವನಿರುವಿ. ನೀನು ಅರಿಯದವರಾಗಲೀ ಅಥವಾ ಬೇರೆ ಸಮಂಜಸ ಜನರಾಗಲೀ ನೀನು ಮಾಡಿದ ಅಪರಾಧದ ಬಗ್ಗೆ ಏನಾದರೊಂದು ಮಾತಹೇಳಿದರೆ, ನೀನು ಮಾಡುವಿಯೋ ಇಲ್ಲವೋ ?

ಉ—ಯೋಗ್ಯವಿದ್ದರೆ ಕೇಳುವೆನು, ಇಲ್ಲದಿದ್ದರೆ ಇಲ್ಲ ?

ಬಳಿಕ ಪೋಲೀಸರು ಅವನಮೇಲೆ ಖಟ್ಲೇ ಹಾಕಿ ೨ ನೇ ವರ್ಗ ಮ್ಯಾಜಿಸ್ಟ್ರೇಟರ ಕಡೆಗೆ ಕಳುಹಿದರು. ಮ್ಯಾಜಿಸ್ಟ್ರೇಟರು ಆ ಹುಡುಗನಿಗೆ ಪ್ರಶ್ನೆ ಮಾಡಿದರು.

ಪ್ರ—ಸೇಂದೀಗಿಡಗಳನ್ನು ಯಾಕೆ ಕಡಿದಿ ?

ಉ—ಜನರು ಸೇಂದೀ ಕುಡಿದು ಕೆಡುತ್ತಾರೆ ? ಅದಕ್ಕಾಗಿ ಕಡಿದೆ.

ಪ್ರ—ನೀನು ಕಡಿದ ಗಿಡಗಳಿಂದ ಏನುಕಾರ್ಯವಾದೀತು ?

ಉ—ಅಷ್ಟೇ ನಮ್ಮ ಕಾರ್ಯಕ್ಕೆ ಅನುಕೂಲವಾಗುವದು.

ಪ್ರ—ನಿನಗೆ ೫೦ ರೂಪಾಯಿ ದಂಡಮಾಡಿದ್ದೇನೆ.

ಉ—ನಾನು ದಂಡಕೊಡುವದಿಲ್ಲ.

ಮ್ಯಾ—ಹಾಗಾದರೆ ೩ ತಿಂಗಳು ಸಾದಾ ಬೈದು ಭೋಗಿಸು.

ಉ—ಮಹಾತ್ಮಾ ಗಾಂಧೀಕೀ ಜಯ.

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ ?

ಕಂಗೆಡಬೇಡಾ ! ಮರುಗಬೇಡಾ !! ಗುಣದ ಮದ್ದು ಯಾವದೆಂದು ನೋಡಾ !!!

ಮಲೇರಿಯಾನ ಕಂಪೆನಿಯ ಮದ್ದನ್ನು ಒನ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ ? ಇಗೋ ? **"ಮಲೇರಿಯಾನ"** ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅನ್ನಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ ? ಕಂಪೆನಿಯೊಂದು ಸಿರಪು **"ಪುಲ್ಸಥೂಜ"** ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಿಷ್ಠಗೊಳ್ಳುವ ಇಚ್ಛೆ ಉಂಟಾ ? ಕಂಪೆನಿಯೊಂದು ಸಿರಪು **"ಸೆಬೀನ ಸೆಪೀಯ"** ಮತ್ತು ಕಂಪೆನಿಯೊಂದು ಸಿರಪು **"ವಿಬುರ್ನ್ನೋರ್ವ"** ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ನಿರೀಕ್ಷಿಸುತ್ತೀಯಾ ? ಹಾಗಾದರೆ ಕಂಪೆನಿಯೊಂದು ಸಿರಪು **"ಸರ್ಸಲಿಮಗ"** ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲ ತನ್ನ ಖಾತ್ರಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೆನಿಯೊಂದು ಸಿರಪು **"ವೆಸಿಥೂಜ"** ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೋಮಿಯೋಪತಿ ಮದ್ದುಗಳೂ ಟಿಕ್ಕು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಿಕಗಳೂ ಅವುಗಳ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[52]

ಮಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.

ಶ್ರೀ ರುದ್ರವಿಲಾಸ ಬುಕ್‌ಡಿಪೊ, ಗದಗ.

ಇಲ್ಲಿ ದೊರೆಯುವ

ಸಚಿತ್ರ ಶ್ರೀ ದೇವೀಪುರಾಣವು.

ಇದನ್ನು

ಶಿ. ಮೂ. ಸಿದ್ಧಲಿಂಗಾರ್ಯ ಸಾಲಿಮಠ, ರೋಣ.

ಇವರು ಚೆನ್ನಾಗಿ ಪರಿಶೋಧಿಸಿ ಇದರ ಪೂಜಾವಿಧಿ, ಕಠಿಣ ಶಬ್ದಗಳಿಗೆ ಅರ್ಥ, ಸಹವಾಗಿ ಬರೆದು, ಬೇರೆ ಬೇರೆ ಪುಟಗಳಿಂದಲೂ, ದಪ್ಪ ಕಾಗದಗಳಲ್ಲಿ ದೊಡ್ಡ ಅಕ್ಷರಗಳಿಂದಲೂ, ಕೆಲವು ಚಿತ್ರಗಳಿಂದಲೂ, ಅಚ್ಚುಗೊಳಿಸಿ, ಪ್ರಸಿದ್ಧಪಡಿಸಿರುವರು. ಇದು ಸರ್ವರಿಗೂ ಪಾರಾಯಣಕ್ಕೆ ಬಹು ಯೋಗ್ಯವಾಗಿರುತ್ತದೆ. ಇದರಲ್ಲಿರುವ ೫೦ ವಿಷಯಗಳನ್ನು ಕೆಳಗೆ ವಿವರಿಸಿದೆ.

೧ ಶ್ರೀ ದೇವಿಮಹಾತ್ಮೆಯ ಪೂಜಾವಿಧಾನವು. ೨ ಸ್ನಾನಮಾಡುವ ಕ್ರಮವು. ೩ ಅನುಷ್ಠಾನಕ್ಕೆ ಕೂಡ್ರುವ ದಿಕ್ಕುಗಳು. ೪ ಹಾಸುವ ಆಸನಂಗಳ ಭೇದವು. ೫ ಕೂಡ್ರುವ ಆಸನಕ್ರಮ. ೬ ಅನುಷ್ಠಾನ ಮಾಡುವ ಕ್ರಮವು. ೭ ವಿಭೂತಿ ಮಾಡುವ ಕ್ರಮವು. ೮ ವಿಭೂತಿ ವಿಧಾನ ಗೋಚರ ಚಕ್ರವು. ೯ ವಿಭೂತಿ ಧಾರಣ ಸ್ಥಾನಗಳು. ೧೦ ರುದ್ರಾಕ್ಷಿ ಧಾರಣ ಫಲಗಳು. ೧೧ ದೇವತಾರ್ಚನ ಭೇದವು. ೧೨ ದೇವತಾರಾಧನ ಫಲಕ್ರಮವು. ೧೩ ದೇವತಾರ್ಚನಾ ಕ್ರಮವು. ೧೪ ಅಷ್ಟೋಪಚಾರ ಪೂಜೆಯ ಕ್ರಮವು. ೧೫ ಅಷ್ಟವಿಧಾರ್ಚನೆಯ ಮಂತ್ರಗಳು. ೧೬ ಜಪಮಾಲಿಕಾ ಲಕ್ಷಣವು. ೧೭ ಮಂತ್ರಪಲ್ಲವಂಗಳ ಫಲಕ್ರಮವು. ೧೮ ಜಪಾರಂಭದಲ್ಲಿ ಧ್ಯಾನಿಸುವ ಧ್ಯಾನಮೂರ್ತಿ ಭೇದ ಫಲಗಳು. ೧೯ ದೇವೀಮಹಾತ್ಮೆಯ ಪೂಜಾವಿಧಾನವು. ೨೦ ದೀಪಸ್ಥಾಪನ ಕ್ರಮವು. ೨೧ ಪೂರ್ಣಕುಂಭ ಯಂತ್ರಸ್ಥಾಪನ ಕ್ರಮವು. ೨೨ ಯಂತ್ರೋಪ್ರಾಣಪ್ರತಿಷ್ಠಾ ದೇವತಾ ಸ್ಥಾಪನಾದಿ ಪೂಜಾವಿಧಾನವು. ೨೩ ದೇವತಾರ್ಚನಾ ಮಂತ್ರವು. ೨೪ ದಶಾವರಣ ದೇವತಾಯಂತ್ರವು. ೨೫ ನವಾರ್ಣವ ಯಂತ್ರವು. ೨೬ ಸರಸ್ವತಿಪೂಜೆಯು. ೨೭ ಶಾಪೋದ್ಧಾರ ಮಂತ್ರಜಪವು. ೨೮ ಉತ್ಕೀಲನ ಮಂತ್ರಜಪವು. ೨೯ ಕೂಷ್ಮಾಂಡ ಬಲಿಕ್ರಮವು. ೩೦ ನವಾರ್ಣವ ಮಂತ್ರನ್ಯಾಸಕ್ರಮವು. ೩೧ ದೇವೀಮಹಾತ್ಮೆಯ ಚರಿತ್ರತ್ರಯನ್ಯಾಸಕ್ರಮವು. ೩೨ ದೇವೀಮಹಾತ್ಮೆಯ ಗ್ರಂಥಪಠನ ಕ್ರಮವು. ೩೩ ಶ್ರೀ ದೇವೀ ಕುಂಭಾಷ್ಟಕ ಮಂತ್ರವು. ೩೪ ಕುಂಭಾಷ್ಟಕ ಮಂತ್ರಸಿದ್ಧಿ ಫಲಕ್ರಮವು. ೩೫ ಕಾಳಿಕಾ ಬೀಜ ಮಂತ್ರಾಷ್ಟಕ. ೩೬ ಇಚ್ಛಾಫಲಪ್ರಾಪ್ತಿಗೆ ಸಂಗ್ರಹಕ್ರಮವು. ೩೭ ಉತ್ತರನ್ಯಾಸವಿಧಿ. ೩೮ ಅನ್ನಸಂತರ್ಪಣ ಕ್ರಮ. ೩೯ ದೇವೀಮಹಾತ್ಮೆಯ ೧ನೇ ಚರಿತ್ರವು. (ಪೀಠಿಕಾಧ್ಯಾಯದಿಂದ ೩ನೇ ಅಧ್ಯಾಯ ಸಂಪೂರ್ಣ) ೪೦ ದೇವೀಮಹಾತ್ಮೆಯ ೨ನೇ ಚರಿತ್ರವು. (೪ನೇ ಅಧ್ಯಾಯದಿಂದ ೯ನೇ ಅಧ್ಯಾಯ ಸಂಪೂರ್ಣ) ೪೧ ದೇವೀಮಹಾತ್ಮೆಯ ೩ ನೇ ಚರಿತ್ರವು (೧೦ನೇ ಅಧ್ಯಾಯದಿಂದ ೧೮ ನೇ ಅಧ್ಯಾಯ ಸಂಪೂರ್ಣ) ೪೨ ಮಂಗಳಾರತಿ ಪದವು. ೪೩ ಮಂಗಲ ನೀರಾಜನವು. ೪೪ ಪುಷ್ಪಾಂಜಲಿಯು. ೪೫ ಪ್ರದಕ್ಷಿಣೆಯು. ೪೬ ನಮಸ್ಕಾರವು. ೪೭ ಪ್ರಾರ್ಥನೆಯು. ೪೮ ಅರ್ಘ್ಯಪ್ರದಾನವು. ೪೯ ವಿಸರ್ಜನ ಪೂಜೆಯು. ೫೦ ಕಠಿಣ ಶಬ್ದಗಳ ಅರ್ಥವು.

ಈ ಪ್ರಕಾರ ಐವತ್ತು ಮಹತ್ವದ ವಿಷಯಗಳಿಂದೊಡಗೂಡಿದ ಈ ದೇವೀಮಹಾತ್ಮೆಯ ಎರಡನೇ ಆವೃತ್ತಿಯ ಪ್ರತಿಗಳು ಖರ್ಚಾಗಿ ಇನ್ನು ಸ್ವಲ್ಪವೇ ಶಿಲ್ಕು ಉಳಿದಿರುತ್ತವೆ. ಬೇಕಾದವರು ತೀವ್ರವಾಗಿ ತರಿಸಿಕೊಳ್ಳಬೇಕು.

ಕ್ರಯ ಐದು ರೂಪಾಯಿ 5-0-0

ವಿಳಾಸ—**ಎಸ್. ಸಿ. ಸಾಲಿಮಠ ಎಂಡ ಸನ್ಸ,**

ಬುಕ್‌ಸೆಲರ್ಸ ಎಂಡ ರಬ್ಬರ ಸ್ಟ್ಯಾಂಪ ಮೇಕರ್ಸ,

ಗದಗ ಸಿಟಿ.

ಪೋಸ್ಟ ಗದಗ. ಜಿಲ್ಲಾ ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿಣತರ ಆಹಾರವಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಹೊಟ್ಟೆರಿ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದ ಕೂಕಲ್ಲೇ ಕೂತಿರಬೇಕಾದವರಿಗೂ, ಭೋಗಪಟ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[16] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ !

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ವರ್ಣ

ಧಿಕ್ಕರಿಸದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪುತನ, ಕೈಕಾಲು ಮೂತ್ರ ಉರಿಯೋಣ, ಉಪ್ಪಳ, ಪಿತ್ತಾಂಶ, ಹಳೇ ಪರಮೂ, ಗರಮಿದೋಷ ಯಾವ ತರದ ರೋಗದಿಂದ ಎಷ್ಟು ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯುಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದು ಇಲ್ಲ. ೪೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೫ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [2]

ಪತ್ತೆ :— **ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಮಿರ್ಜೆಯಲ್ಲಿಯ ಪ್ರಸಿದ್ಧವೈದ್ಯ ...ಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗ್ಯರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [2]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ. ಮುಟ್ಟು ಕುಕುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮಿದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಶುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :— **ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ತಿಲಕರ ವಾರ್ಷಿಕೋತ್ಸವ.

[5ನೇ ಪುಟದಿಂದ ಮುಂದುವರಿದುದು.]

ಅನಂತರ ಕಮಿಶನರು ಪೋಲೀಸರನ್ನೆಲ್ಲ ಕ್ರಾಫರ್ಡ್ ರಸ್ತೆಯಲ್ಲಿ ಸಾಲಾಗಿ ನಿಲ್ಲಿಸಿ, ಜನರನ್ನು ಚೆದರುವಂತೆ ಆಜ್ಞೆಮಾಡಿದರು. ಅಲ್ಲಿ ಒಟ್ಟು 300 ಜನ ಸ್ವಯಂಸೇವಕರಿದ್ದರು. ಅವರೆಲ್ಲರೂ ನೆರೆದಿದ್ದ ಜನರನ್ನು ಪೋಲೀಸರಿರುವ ಕಡೆಗೆ ತಳ್ಳಿ, ದೊಣ್ಣೆಯ ಪೆಟ್ಟುಗಳನ್ನು ತಿನ್ನಲು ಸಿದ್ಧರಾಗಿ ರಸ್ತೆಯಲ್ಲಿ ಕುಳಿತರು.

500 ಜನ ಪೋಲೀಸ್ ಕಾನ್‌ಸ್ಟೇಬಲರೂ ಮತ್ತು 50 ಜನ ಅಧಿಕಾರಿಗಳು ಸ್ವಯಂಸೇವಕರ ಮೇಲೆ ನುಗ್ಗಿ ಹೊಡೆದರು. ಅನೇಕರು ಹಿಮ್ಮೆಟ್ಟಿದರು. ಅನೇಕರು ನೆಲಕ್ಕೆ ಉರುಳಿದರು. 8-10 ನಿಮಿಷಗಳೊಳಗಾಗಿ ಜನವು ಸಂಪೂರ್ಣವಾಗಿ ಚೆದರಿತು. ಹೋಂ ಮೆಂಬರರು ಜಿ. ಐ. ಪಿ. ರೈಲ್ವೇ ಆಫೀಸಿನ ಮೇಲ್ಮಾಳಿಗೆಯಲ್ಲಿ ನಿಂತು ಇದನ್ನೆಲ್ಲಾ ನೋಡುತ್ತಿದ್ದರು. ಇತ್ತ ಉತ್ಸಾಹಭರಿತರಾದ ಪ್ರೇಕ್ಷಕರು ಶಾಂತರೀತಿಯಿಂದ ದೊಣ್ಣೆಯ ಏಟುಗಳನ್ನು ಸಹಿಸಿಕೊಂಡಿದ್ದ ಸ್ವಯಂಸೇವಕರನ್ನು ಪ್ರೋತ್ಸಾಹಿಸುತ್ತಲೂ, ಪೋಲೀಸರನ್ನು ಜರಿಯುತ್ತಲೂ ಇದ್ದರು.

ಒಬ್ಬ ಸಿಕ್ ಸ್ವಯಂಸೇವಕನು ರಾಷ್ಟ್ರೀಯ ಬಾವುಟವನ್ನು ಹಿಡಿದು ಕದಲದೆಯೇ ನಿಂತಿದ್ದನು. ಒಬ್ಬ ಪೋಲೀಸ್ ಸಾರ್ಜೆಂಟನು ಅದನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದನು. ಆದರೆ ಸ್ವಯಂಸೇವಕನು ದೊಣ್ಣೆಯೇಟುಗಳು ಬಿದ್ದು, ನೆಲಕ್ಕೆ ಬೀಳುವವರೆಗೂ, ಬಾವುಟವನ್ನು ಪೋಲೀಸರ ವಶಪಡಿಸಲಿಲ್ಲ.

8-30 ಘಂಟೆಯ ಹೊತ್ತಿಗೆ ಪ್ರಾರ್ಥಿಗಳನ್ನು ಕರಿಸಿಕೊಂಡುಬರಲು ಹೋಗಿದ್ದ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಶ್ರೀಮತೀ ಹಂಸಾಮೆಹ್ತಾರವರು ಅಲ್ಲಿಗೆ ಬಂದು ನಡೆದ ವಿದ್ಯಮಾನಗಳನ್ನೆಲ್ಲಾ ಅರಿತು, ಡೆಪ್ಯುಟಿಕಮಿಶನರ ಬಳಿಗೆ ಹೋಗಿ "ನನ್ನನ್ನು ದಸ್ತಗಿರಿಮಾಡುವಹಾಗಿದ್ದರೆ, ಈಗಲೇ ಮಾಡಿರಿ" ಎಂದರು. ಡೆಪ್ಯುಟಿಕಮಿಶನರು, ಆ ವಿಷಯವನ್ನು ತಾವಿನ್ನೂ ನಿರ್ಧರಿಸಿಲ್ಲವೆಂದೂ, ಹಾಗೆ ದಸ್ತಗಿರಿ ಮಾಡುವ ಪ್ರಸಕ್ತಿ ಬಂದರೆ ಸಾಯಂಕಾಲದೊಳಗಾಗಿ ದಸ್ತಗಿರಿಮಾಡುವದಾಗಿಯೂ ಹೇಳಿದರು. 9 ಘಂಟೆಯ ಹೊತ್ತಿಗೆ ಕಾವಲಿದ್ದ ಪೋಲೀಸರೆಲ್ಲರೂ ಹೊರಟುಹೋದರು.

ಕಾಲುಘಂಟೆಯು ಕಳೆದನಂತರ ಉತ್ಸವದಲ್ಲಿ ಭಾಗವಹಿಸಿದ್ದವರಪೈಕಿ ಇನ್ನೂ ಅಲ್ಲಲ್ಲಿಯೇ ಉಳಿದುಕೊಂಡಿದ್ದ ನೂರಾರು ಜನರು ಒಟ್ಟಿಗೆ ಕೂಡಿ, ರಾಷ್ಟ್ರೀಯ ಗೀತೆಗಳನ್ನು ಹಾಡುತ್ತಾ, ಪೋಲೀಸರು ತಡೆದಿದ್ದ ಹಾರ್ನ್‌ಬಿ ರಸ್ತೆಯಲ್ಲಿಯೇ ಉತ್ಸವ ಹೊರಟರು. ಅಲ್ಲಿಂದ ಫ್ಲೋರ್‌ಫೌಂಟನ್ನಿನವರೆಗೆ ಹೋಗಿ, ಎಸ್ಪ್ಲನೇಡ್ ರೋಡ್, ಗಿರಗಾಂವ್‌ರೋಡ್‌ಗಳ ಮುಖಾಂತರವಾಗಿ ಕಾಂಗ್ರೆಸ್ ಗೃಹವನ್ನು ಕಲುಪಿದರು. ಪೋಲೀಸರು ಪುನಃ ಉತ್ಸವವನ್ನು ತಡೆದು ಹೊಡೆದರೆ, ಪೆಟ್ಟುಬಿದ್ದವರನ್ನು ಸಾಗಿಸಲು ರೆಡ್ ಕ್ರಾಸ್ ಸಂಘದ ಜನರು ಅಂಬ್ಯುಲೆನ್ಸ್‌ಕಾರ್ ಸಮೇತರಾಗಿ ಉತ್ಸವದ ಹಿಂದೆಯೇ ಹೋಗುತ್ತಿದ್ದರು. ಆದರೆ ಎರಡನೆಯ ಉತ್ಸವಕ್ಕೆ ಪ್ರತಿಬಂಧಕವೇನೂ ಆಗಲಿಲ್ಲ.

ಮುಖಂಡರ ವಿಚಾರಣೆ.

ಮುಂಬಯಿ, ಆಗಸ್ಟ್ 2.

ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ|| ದಸ್ತೂರರವರು ಈ ದಿನ 11-30 ಘಂಟೆಗೆ ಮಿ|| ವಲ್ಲಭಭಾಯಿ ಪಟೇಲ್ ಪಂಡಿತ ಮದನಮೋಹನಮಾಳವೀಯ, ಮಿ|| ಶೇರ್ವಾಣಿ, ಮಿ|| ಜಯರಾಮದಾಸ್ ಮತ್ತು ಇತರರ ವಿಚಾರಣೆಯನ್ನು ನಡೆಯಿಸಿದರು.

ಮೇಲ್ಕಂಡವರನ್ನೆಲ್ಲಾ ಇಂಡಿಯನ್ ಪೀನಲ್‌ಕೋಡಿನ 143 ಮತ್ತು 188 ನೆಯ ಸೆಕ್ಷನ್‌ಗಳಿಗನುಸಾರವಾಗಿ ಅಕ್ರಮಕೂಟವನ್ನು ನಡೆಯಿಸಿದರೆಂದು ಛಾರ್ಜುಮಾಡಿರುವರು.

ಪ್ರಾಸಿಕ್ಯೂಟಿಂಗ್ ಅಧಿಕಾರಿಗಳು ಕೋರ್ಟಿಗೆ ಎಲ್ಲ ವಿದ್ಯಮಾನಗಳನ್ನೂ ವಿಶದಪಡಿಸಿದನಂತರ, ಸೂಪರಿಂಟೆಂಡೆಂಟ್ ಹೋಂದವರ ಸಾಕ್ಷೀ ತನಿಖೆಯನ್ನು ನಡೆಯಿಸಿದರು. ಅನಂತರ ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ ಕ್ರಾಸ್-ಎಗ್ಜಾಮಿನ್ ಮಾಡಬಹುದೆಂದು ಹೇಳಿದರು. ಪಂಡಿತರ ವಿನಹ ಇತರರಾರೂ ಅದಕ್ಕೆ ಒಪ್ಪಲಿಲ್ಲ. ಪಂಡಿತರು ನಡೆದ ವಿದ್ಯಮಾನಗಳೆಲ್ಲವೂ ಕಾಯಿದೆಗೆ ವಿರೋಧವಾಗಿರುವವೆಂದು ಹೇಳಿ ಹಿಂದೆ ಎಂದಾದರೂ ಹಾರ್ನ್‌ಬಿ ರೋಡಿನಲ್ಲಿ ಉತ್ಸವಗಳನ್ನು ತೆಗೆಯಲು ಅವಕಾಶವನ್ನು ಕೊಟ್ಟಿದ್ದಿತೇ? ಎಂದು ಕೇಳಿದರು. ಮಿ|| ಹೋಂದವರು ಒಂದೆರಡುಸಾರೆ ಹಾಗೆ ಅವಕಾಶವನ್ನು ಕೊಟ್ಟಿತ್ತೆಂದು ಹೇಳಿದರು. ಪಂಡಿತರು ಕೋರ್ಟಿಯಲ್ಲಿರುವ ಹಿಂದೂಗಳ ಸಂಖ್ಯೆಯೆಷ್ಟೆಂದು ಪ್ರಶ್ನೆಮಾಡಲು, ಮ್ಯಾಜಿಸ್ಟ್ರೇಟರು ಆ ಪ್ರಶ್ನೆಗೆ ಅವಕಾಶ ಕೊಡಲಿಲ್ಲ. ಪಂಡಿತರು ಮುಂದೆ ಏನೂ ಹೇಳಲಿಲ್ಲ.

ಮ್ಯಾಜಿಸ್ಟ್ರೇಟರು ಅನಂತರ ಪ್ರಾಸಿಕ್ಯೂಷನ್ ಕೌನ್ಸಲರಾದ ಮಿ|| ಕಾಡಾವಾಲಾರವರನ್ನು ಕುರಿತು, ಶ್ರೀಮತಿ ಹಂಸಾಮೆಹ್ತಾರವರಿಗೆ ಹಾರ್ನ್‌ಬಿ ರೋಡಿನಲ್ಲಿ ಉತ್ಸವವನ್ನು ಹೊರಡಿಸಕೂಡದೆಂದು ಕಮಿಶನರವರು ಒಂದು ಕಾಗದವನ್ನು ಬರದಿದ್ದರೇ ಹೊರತು, ಅದು ನ್ಯಾಯಬದ್ಧವಾದ ಅಪ್ಪಣೆಯಲ್ಲವೆಂದು ಹೇಳಿದರು. ಮಿ|| ಕಾಡಾವಾಲಾರವರು ಕಮಿಶನರವರು ಬರೆದ ಕಾಗದವೇ ಅಪ್ಪಣೆಯಾಗಿತ್ತೆಂದು ಹೇಳಿದರು. ಮ್ಯಾಜಿಸ್ಟ್ರೇಟರು ಕಮಿಶನರು ಬರೆದ ಕಾಗದವನ್ನೇ ಅಪ್ಪಣೆಯೆಂದು ಭಾವಿಸುವದು ಸಾಧ್ಯವಿಲ್ಲವೆಂದೂ, ಸದರೀ ಕಾಗದವನ್ನೇ ಅಪ್ಪಣೆಯೆಂದು ಭಾವಿಸಬೇಕಾದರೆ ಸಾಕಾದಷ್ಟು ಪ್ರಮಾಣಗಳನ್ನು ಕೊಡಬೇಕೆಂದೂ ಹೇಳಿ. ವಿಚಾರಣೆಯನ್ನು ಅದೇ ದಿನ ಮಧ್ಯಾಹ್ನ 3-30 ಘಂಟೆಗೆ ಅಡ್ಜರ್ನ್‌ಮಾಡಿದರು.

ಅಹಮದಾಬಾದಿನ ಕಾಂಗ್ರೆಸ್ ಕಮಿಟಿಯವರು ಆಗಸ್ಟ್ 11 ನೆಯ ತಾರೀಖಿನಿಂದ 18 ನೆಯ ತಾರೀಖಿನವರೆಗೆ "ಕಾಂಗ್ರೆಸ್ ವಾರವನ್ನು" ಆಚರಿಸಬೇಕೆಂದು ತೀರ್ಮಾನಿಸಿರುವರು.

ಹಿಂದೆಯೇ ಪ್ರಸಿದ್ಧಪಡಿಸಿದ್ದಂತೆ ಇದೇ ಆಗಸ್ಟ್ 1 ನೆಯ ತಾರೀಖಿನಿಂದ ಮುಂಬಯಿನ 7 ಗಿರಣಿಗಳು ನಿಂತುಹೋದವು. ಇದರಿಂದ 13,000 ಜನರಿಗೆ ಕೆಲಸವಿಲ್ಲದೆ ಹೋಗಿರುವದು.

ಮಹಾತ್ಮರು ಪಂಡಿತ ಮೋತೀಲಾಲ್ ಮತ್ತು ಜವಾಹರಲಾಲ್ ನೆಹರೂರವರಿಗೆ ಬರೆದುಕೊಟ್ಟಿದ್ದ ಪತ್ರದೊಡನೆ ಸರ್ ಸಪ್ರೂ ಮತ್ತು ಜಯಕರ್‌ರವರು ಅಲಹಾಬಾದಿಗೆ ಹೋಗಿ ನೆಹರೂರವರನ್ನು ಕಂಡು 2 ದಿನಗಳವರೆಗೆ ಚರ್ಚಿಸಿದರು. ನೆಹರೂರವರು ಮಹಾತ್ಮರವರಿಗೆ ಎರಡು ಪತ್ರಗಳನ್ನು ಬರೆದುಕೊಟ್ಟರು. ಜಯಕರ್‌ರವರು ಸದರೀ ಪತ್ರಗಳೊಡನೆ ಪುನಃ ಎರವಾಡಾಕ್ಕೆ ಹೋಗಿ ಮಹಾತ್ಮರೊಡನೆ ಚರ್ಚೆಮಾಡಿ, ನೆಹರೂರವರಿಗೆ ಮಹಾತ್ಮರೊಡನೆ ಎರವಾಡಾ ಜೈಲಿನಲ್ಲಿ ಪರಸ್ಪರ ಕಲೆತು ಸಂಭಾಷಣೆಮಾಡಲು ಅವಕಾಶವನ್ನು ಕೊಡಬೇಕೆಂದು ವೈಸರಾಯರಿಗೆ ಪತ್ರವನ್ನು ಬರೆದಿರುವರು.

ತಿಲಕ ವಾರ್ಷಿಕೋತ್ಸವ ಸಂಬಂಧದಲ್ಲಿ ಮುಂಬಯಿನ ಪೋಲೀಸರು ಜನರನ್ನು ದೊಣ್ಣೆಗಳಿಂದ ಹೊಡೆದು ಚದುರಿಸಿದಾಗ 275 ಜನರಿಗೆ ಘಾಯಗಳಾಗಿರುವವು. ಅದರಲ್ಲಿ 171 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ಮುಂಬಯಿ ಜುಲೈ 30.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪಂಡಿತ ಮದನಮೋಹನ ಮಾಲವೀಯರೊಡನೆ ಮಿ|| ವಲ್ಲಭಭಾಯ್ ಪಾಟೀಲರವರ ಅಧ್ಯಕ್ಷತೆಯಲ್ಲಿ ಗುಪ್ತಸಭೆಯನ್ನು ಮಾಡಿದರು. ಸಭೆಯು 2-3 ದಿವಸಗಳವರೆಗೆ ಮುಂದುವರಿಯುವದೆಂದು ಊಹಿಸಲ್ಪಟ್ಟಿರುವದು. ಚರ್ಚಿಸಲ್ಪಡುವ ವಿಷಯಗಳಾವುವನ್ನೂ ಬಹಿರಂಗಪಡಿಸದೇ ಇರುವರಾದರೂ, ಸಧ್ಯದ ಅಹಿಂಸಾತ್ಮಕ ಕಾಯಿದೆ ಭಂಗದ, ಮುಖ್ಯವಾಗಿ ಕಂದಾಯ ನಿರಾಕರಣದ ಚಳವಳಿಯನ್ನು ಅದ್ಭುತರೀತಿಯಲ್ಲಿ ಮುಂದುವರಿಸಲು ಏನುಮಾಡಬೇಕೆಂಬುದನ್ನು ಚರ್ಚಿಸುತ್ತಿರುವದಾಗಿ ತಿಳಿದುಬಂದಿದೆ.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ರಜುವಾರು ಊದುಬತ್ತಿಗಳು, ಪರಿಮಳದ್ರವ್ಯ ಕುಂಕುಮ ಹೊಸತೂ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬತ್ತಿಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಜನರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಕ್ಕಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಅರಾಕಪೂರದ ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ. 2

ಕೆ. ಬಸಪ್ಪ ಮತ್ತು ವೈ. ಬಸಪ್ಪ,

ಸುಗಂಧವ್ಯಾಪಾರಿಗಳು,

2 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಏನ್. ಹೊಸಮನೆ,

[42] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಪಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:— ಪಿನಶಿ, ಒಂಟಿತಲೆನೋವು,



ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[3] ಪೋ. ಬಾ. ೫೧೧. ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ ನೇ ಆಗಸ್ಟು ೧೯೩೦ [ಸಂಚಿಕೆ ೧೫.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರುಕೂಡ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪಟ್ಟಾಭಿಷೇಕಸಮಾರಂಭ, ಬಾರ್ಶಿ.

ಬಾರ್ಶಿಯಲ್ಲಿರುವ ದಪಿಂವಡಿಕರ ಮಠದಲ್ಲಿ ೩೦ ವರ್ಷಗಳಿಂದ ಪಟ್ಟಾಧಿಕಾರಿಗಳಿಲ್ಲದೆ ಇದ್ದ ಕಾರಣ ಶ್ರೀಗುರುವರಸಿದ್ಧ ಶಿವಾಚಾರ್ಯರ ಶಿಷ್ಯರಾದ ವೇ|| ದೇಶಿಕ ಸಂಗಯ್ಯನವರು 10-12 ವರ್ಷಗಳ ಪರ್ಯಂತ ಕಷ್ಟವನ್ನು ಸಹಿಸಿ ಪೂರ್ವದಂತೆಯೇ ಮಠವನ್ನು ಊರ್ಜಿತಸ್ಥಿತಿಗೆ ತರಬೇಕೆಂಬ ಸದಿಚ್ಛೆಯಿಂದ ಮೊದಲು ಮಾಡಿದ ಸಾಲವನ್ನು ಕಳೆದು, ಮಠಸಂಬಂಧಿ ಮನೆ, ಅಂಗಡಿ ಜಾಗಗಳನ್ನು ತಮ್ಮ ಸ್ವಾಧೀನಮಾಡಿಕೊಂಡು ಯಾವ ಬಾಧಕವಿಲ್ಲದಂತೆ ಮಾಡಿ ಇದೇ ಪ್ರಮೋದ ಸಂವತ್ಸರದ ಶಕೆ ೧೮೫೨ ಶ್ರಾವಣ ಶುದ್ಧ ೫ ಬುಧವಾರ ೪-೫೬ ಬ್ರಾಹ್ಮೀಮುಹೂರ್ತ ಮಿಥುನಲಗ್ನ ಸಿಂಹಾಂಶದಲ್ಲಿ ವಿದ್ವಾನ್ ಶರಣಯ್ಯ ಎಂಬ ವಟುವಿಗೆ ಪಟ್ಟಚರಾಧಿಕಾರವನ್ನು ಧರ್ಮಶಾಸ್ತ್ರಪ್ರಕಾರ ಕೊಟ್ಟು ಧನ್ಯರಾದರು.

ಶ್ರಾವಣ ಶುದ್ಧ ೪ ಮಂಗಳವಾರ ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ವೈದಿಕಮಂಡಳಿಯು ಮಠದಿಂದ ಶಿವನಾಮವನ್ನು ಜ್ಞಾಪಿಸುತ್ತ ಮಠಕ್ಕೆ ಬಂದು ಶ್ರೀಮದ್ವೈಸಲಿಂಗ ಚಕ್ರವರ್ತಿ ಚರಪಟ್ಟಾಧಿಕಾರಿ ಶ್ರೀ ಗುರುವರಸಿದ್ಧ ಶಿವಾಚಾರ್ಯರ ಗಾದಿಪೀಠಕ್ಕೆ ಶ್ರೀ ರುದ್ರೈಕಾದಶವರ್ತನೆಗಳಿಂದ ಅಭಿಷೇಕವನ್ನು ಮಾಡಿ ಷೋಡಶೋಪಚಾರಗಳಿಂದ ಪೂಜಿಸಿದರು. ೧೨ ಘಂಟೆಗೆ ಗಣಸಮಾರಾಧನೆಯನ್ನು ಮಾಡಿಸಿ ದಕ್ಷಿಣತಾಂಬೂಲಾದಿಗಳನ್ನು ಕೊಟ್ಟು ಜಂಗಮವೃಂದಕ್ಕೆ ತೃಪ್ತಿಪಡಿಸಿದರು. ಇದೇ ದಿವಸ ರಾತ್ರಿ ೧೦ ಘಂಟೆಗೆ ಶ್ರೀ ಪಟ್ಟಾಭಿಷೇಕ ಪೂರ್ವಾಂಗವಾದ ಗಣಪತಿ, ವರುಣಕಲಶ, ಮಂಟಪ ದೇವತಾ, ನಾಂದೀ, ಪುಣ್ಯಾಹವಾಚನ, ಸ್ವಸ್ತಿವಾಚನ ಪಂಚಕಲಶಸ್ಥಾಪನ ಮೊದಲಾದ ಕ್ರಿಯೆಗಳು ನೆರವೇರಿದವು. ಈ ಪೂರ್ವಾಂಗ ವಿಧಿಯು ಮುಗಿದ ನಂತರ ಶ್ರೀ ಗುರುಮೂರ್ತಿ ರುದ್ರಪಶುಪತಿಸ್ವಾಮಿಗಳು ದಯಮಾಡಿಸಿ ಸ್ನಾನ ಪೂಜಾದಿಗಳನ್ನು ತೀರಿಸಿಕೊಂಡು ಬಂದು ಭದ್ರಮಂಟಪವನ್ನಲಂಕರಿಸಿದರು. ತದನಂತರ ಧರ್ಮಾರ್ಥ ದೀಕ್ಷಾದಿ ಸಂಸ್ಕಾರವನ್ನು ಹೊಂದಲಿಚ್ಛಿಸಿ ಬಂದ ಸದ್ಭಕ್ತ ಮಾಹೇಶ್ವರಮಂಡಳಿಗೆ ದೀಕ್ಷಾಸಂಸ್ಕಾರವು ನೆರವೇರಿತು. ಅನಂತರ ಆಚಾರ್ಯರು ವಟುವಿಗೆ ಸ್ನಾನ, ಪಂಚಗವ್ಯಪ್ರಾಶನ ಕೌತುಕಬಂಧನ ಪ್ರಾಣಾಯಾಮಾದಿಗಳನ್ನು ಮಾಡಿಸಿ ಸ್ವಶಾಖೋಕ್ತವಾಗಿ ವೈದಿಕಮಂಡಳಿಯ ವೇದಘೋಷದೊಡನೆ ಏಕಾದಶರುದ್ರಾವರ್ತನೆಗಳಿಂದ ಶಂಖದಿಂದ ಪಟ್ಟಾಭಿಷೇಕವನ್ನು ಮಾಡಿ ಅನಂತರ ಅಭಿಷಿಕ್ತವಸ್ತ್ರಗಳನ್ನು ತೆಗಿಸಿ ಅಂತು, ಕೌಪೀನ, ಕಾಷಾಯಾದಿವಸ್ತ್ರಗಳಿಂದಲಂಕರಿಸಿ ವಿಭೂತಿರುದ್ರಾಕ್ಷಿಗಳನ್ನು ಧಾರಣಮಾಡಿಸಿ ಬಿಲ್ವದಂಡವನ್ನು ಕೈಯಲ್ಲಿ ಕೊಟ್ಟು ಸ್ವಶಾಖೋಕ್ತಮಂತ್ರೋಪದೇಶವನ್ನು ಮಾಡಿ ದಂಡಕಮಂಡಲು, ಶಂಖ, ಚಾಮರ, ಶ್ವೇತಛತ್ರ, ಆಸನ ಮೊದಲಾದುವುಗಳನ್ನು ಕೊಟ್ಟು ಪಟ್ಟಾಭಿಷಿಕ್ತರಿಗೆ ಸಾಷ್ಟಾಂಗವನ್ನು ಮಾಡಿದರು. ಯಾವತ್ತೂ ಸದ್ಭಕ್ತಮಾಹೇಶ್ವರರು ನಮಸ್ಕರಿಸಿದರು. ಅನಂತರ ಪಟ್ಟಾಭಿಷಿಕ್ತರ ಹಸ್ತವನ್ನು ಹಿಡಿದುಕೊಂಡು ಸ್ವಸ್ತಿವಾಚನವೇದಘೋಷಗಳೊಡನೆ ಬಂದು ಭದ್ರಮಂಟಪಪೀಠದಲ್ಲಿ ಕುಳಿತು "ಪಟ್ಟಂ ಶಿರಸಿ ಬಧ್ನೀಯಾತ್ ಪಂಚಾಸನಗತಸ್ಯ ಚ |" ಎಂಬ ಉಕ್ತಿಗನುಸರಿಸಿ ಪೀಠಾರೂಢರಾದ ಶಿಷ್ಯೇಂದ್ರನಿಗೆ ಮಸ್ತಕದಲ್ಲಿ ಶ್ರೀ ಶಿವಾಚಾರ್ಯಪಟ್ಟವನ್ನು ಕಟ್ಟಿ "ಶ್ರೀವರಸಿದ್ಧ ಶಿವಾಚಾರ್ಯ" ಎಂಬ ನಾಮವನ್ನಿಟ್ಟು ಮಂಗಲವನ್ನು ಮಾಡಿ ಆಶೀರ್ವದಿಸಿದರು. ಅನಂತರ ಆ ಸಭೆಯಲ್ಲಿ ಪರಮಪೂಜ್ಯ ಪರಂಜ್ಯೋತಿ ರಾಚಲಿಂಗಸ್ವಾಮಿ ಪಟ್ಟಾಧಿಕಾರಿಗಳು ಮುಣ್ನೂರ ಮಠದ ಪಂಡಿತ ಮಲ್ಲಿಕಾರ್ಜುನಶಾಸ್ತ್ರಿಗಳು, ದೇವಳಲಿ ಮುದಾರುದ್ರಶಾಸ್ತ್ರಿಗಳು ಇವರು ಧರ್ಮಸಂಬಂಧಿ ಸಮಯೋಚಿತವಾಗಿ ಅತ್ಯುತ್ಕೃಷ್ಟಭಾಷಣಗಳನ್ನು ಮಾಡಿದರು. ಅನಂತರ ಶ್ರೀವರಸಿದ್ಧ ಶಿವಾಚಾರ್ಯ ಪಟ್ಟಚರಾಧಿಕಾರಿಗಳು ಯಥಾಶಕ್ತಿ ಧರ್ಮಸಂಬಂಧಿಕಾರ್ಯವನ್ನು ಮಾಡುತ್ತೇವೆಂದು ಅಭಿವಚನವನ್ನಿತ್ತನಂತರ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ಹೋಮಕಾರ್ಯವು ನೆರವೇರಿತು. ಆ ಮೇಲೆ ವರಸಿದ್ಧ ಶಿವಾಚಾರ್ಯರ ಪಲ್ಲಕ್ಕಿಯ ಮೆರವಣಿಗೆಯು ಪ್ರಾತಃಕಾಲ 9 ಘಂಟೆಗೆ ಮಠದಿಂದ ಹೊರಟು ಗ್ರಾಮದ ಬಾಜಾರಾದಿಗಳಲ್ಲಿ ಅನೇಕ ಸಂಭ್ರಮದೊಡನೆ ಬರುವಕಾಲಕ್ಕೆ ಅಲ್ಲಲ್ಲಿ ಸುವಾಸಿನಿಯರು ಆರತಿಯನ್ನೂ ಸದ್ಭಕ್ತರು ಆಹೇರ ಮೊದಲಾದವುಗಳನ್ನೂ ಮಾಡಿ ನಮಸ್ಕರಿಸುತ್ತಿದ್ದರು. ಈ ಪ್ರಕಾರ ಅತಿ ವೈಭವದೊಡನೆ ಮೆರವಣಿಗೆಯು ತಿರುಗಿ 12 ಘಂಟೆಗೆ ಮಠಕ್ಕೆ ಬಂದು ತಲ್ಪಿತು. ಬಳಿಕ ಶ್ರೀ ಗಾದಿಸ್ವಾಮಿ ಪೀಠಕ್ಕೆ ಶ್ರೀ ರುದ್ರಾಭಿಷೇಕ ಪೂಜಾದಿಗಳನ್ನು ಮಾಡಿಸಿ ಗಣಸಮಾರಾಧನೆಯನ್ನು ಅತಿ ವಿಜೃಂಭಣೆಯಿಂದ ಮಾಡಿಸಿದರು. ಸಾಯಂಕಾಲ 5 ಘಂಟೆಗೆ ವಿಶೇಷ ಚರ್ಚಿಸಲ್ಪಟ್ಟು ಪತ್ರಿಕಾಲೇಖನವು ಪೂರ್ಣಗೊಂಡಿತು. ಶ್ರಾವಣಶುದ್ಧ 7 ಶುಕ್ರವಾರ ಗ್ರಾಮದ ಸಮಸ್ತ ಭಕ್ತಮಾಹೇಶ್ವರ ಮಹಾಗಣಸಮಾರಾಧನೆಯು ಮಾಡಲ್ಪಟ್ಟು ಪಟ್ಟಾಧಿಕಾರಿಗಳಿಗೂ ವೈದಿಕರಿಗೂ ಸುವರ್ಣ, ಮುದ್ರೆ, ದಕ್ಷಿಣಸಂಭಾವನಾದಿಗಳನ್ನು ಅವರವರ ಯೋಗ್ಯತಾನುಸಾರವಾಗಿ ಕೊಟ್ಟು ಮರ್ಯಾದೆಯನ್ನು ಮಾಡುವವರಲ್ಲಿ ಬಂದಿತು. ಈ ಮಹೋತ್ಸವಸಮಾರಂಭವಂ ಮಾಡಿಸಿದ ಶ್ರೀ ವೇದಮೂರ್ತಿ ದಪಿಂವಡಿ ಮಠಾಧ್ಯಕ್ಷ ಶ್ರೀ ಸಂಗಯ್ಯಮಹಾಸ್ವಾಮಿಗಳಿಗೆ ಶರೀರಾರೋಗ್ಯವಾಗಲೆಂದು ಶ್ರೀ ಜಗದಾಚಾರ್ಯರನ್ನು ಪ್ರಾರ್ಥಿಸುತ್ತೇವೆ. ಈ ಸಮಯದಲ್ಲಿ ಪಂಚಾಚಾರ್ಯಪ್ರಭಾ ಪೋಷಣೆಗೋಸ್ಕರ 5 ರೂ.ಗಳನ್ನು ಸಮರ್ಪಿಸಬೇಕೆಂದು ಪಂ|| ಮಲ್ಲಿಕಾರ್ಜುನಶಾಸ್ತ್ರಿಗಳು ಸೂಚಿಸಲು ಶ್ರೀ ಸಂಗಯ್ಯಸ್ವಾಮಿಗಳು ಅದರಂತೆ ಸಮರ್ಪಿಸಿದರು.

ಪ್ರತ್ಯಕ್ಷದರ್ಶಿ,

ಸಂಗಯ್ಯ ಗುರುಮೂರ್ತಿಸ್ವಾಮಿಮಠ,

ಕಡಬಗಾಂವ ಬಾರ್ಶಿ.

ಸ್ವೀಕಾರ.

ಶಿವಮೊಗ್ಗ ಡಿ|| ಹಾರ್ನಹಳ್ಳಿ ಗ್ರಾಮನಿವಾಸಿಗಳಾದ ಮ|| ರಾ|| ದುಮ್ಮಿ ಮುರಿಗಪ್ಪನವರ ಸಹೋದರ ಮ|| ರಾ|| ಸಂಧ್ಯಪ್ಪನವರ ಪುತ್ರ ಚಿ|| ಚನ್ನಬಸವಪ್ಪನಿಗೆ ನೇಮತಿ ಗ್ರಾಮನಿವಾಸಿಗಳಾದ ಮ|| ರಾ|| ಹಳ್ಳೂರು ರುದ್ರಪ್ಪನವರ ಪುತ್ರಿ ಚಿ|| ಸೌ|| ರುದ್ರಮ್ಮನನ್ನು ತಂದು, ಸದರಿ ಸಂಧ್ಯಪ್ಪನವರ ಪುತ್ರಿ ಸೌ|| ಗಂಗಮ್ಮನನ್ನು ನೇಮತಿ ವಾಸಿ ದಾವಣಗೆರೆ ಮ|| ರಾ|| ಪಟ್ಟೇದ ಚನ್ನಬಸವಪ್ಪನವರ ಪುತ್ರ ಚಿ|| ಬಸಪ್ಪನಿಗೆ ಕೊಟ್ಟು, ಸದರಿ ಮುರಿಗಪ್ಪನವರ ಸಹೋದರ ಮ||ರಾ|| ಸೋದೆಪ್ಪನವರ ಪುತ್ರಿ ಚಿ|| ಸೌ|| ನೀಲಮ್ಮನನ್ನು ಹಲ್ಕೂರಲ್ಲಿರುವ ತರೀಕೆರೆ ಮ|| ರಾ|| ಶ್ರೀಕಂಠಪ್ಪನವರ ಪುತ್ರ ಚಿ|| ಬಸಪ್ಪನಿಗೆ ಕೊಟ್ಟು ಹಾಗೂ, ಸದರಿಯವರ ಸಹೋದರನ ಪುತ್ರ ಚಿ|| ಗುರುಸಿದ್ಧಪ್ಪನಿಗೆ ಮ|| ರಾ|| ವಿರುಪಣ್ಣನವರ ಪುತ್ರಿ ಸೌ|| ಚನ್ನಮ್ಮನನ್ನು ತಂದು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ **8** ರೂ. ಗಳು ಮ|| ರಾ|| ನೇಮತಿ ಶೆಟ್ರ ಚನ್ನಪ್ಪಶೆಟ್ಟರ ದ್ವಾರಾ ತಲ್ಪಿರುತ್ತವೆ.

ಸೋಲಾಪೂರ ಡಿ|| ಬಾರ್ಸಿ ಟೌನಿನಲ್ಲಿರುವ ದಪಿವಡಕರ ಮಠಕ್ಕೆ ಚರಪಟ್ಟಾಧಿಕಾರವಾದ ಮಹೋತ್ಸವಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ **5** ರೂ. ಗಳು ವೇ|| ಪಂಡಿತ ಮುಣ್ನೂರು ಮಲ್ಲಿಕಾರ್ಜುನಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹುವ್ವಿನಹಡಗಲಿ ನಿವಾಸಿಗಳಾದ ಮ|| ರಾ|| ಸೊಪ್ಪಿನ ಬಸವಲಿಂಗಪ್ಪನವರು ಶುಕ್ಲ ಸಂ|| ಕಾರ್ತಿಕ ಶುದ್ಧ ೧ ದಿವಸ ತಮ್ಮ ಅಂಗಡಿಯಲ್ಲಿ ಧನಲಕ್ಷ್ಮೀ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ವೇ|| ಗಂ|| ಮಠದ ಗವಿಯಯ್ಯನವರ ಪ್ರೋತ್ಸಾಹದ ಮೇರೆಗೆ ತೆಗೆಯಿಸಿದ **1** ರೂ. ಯು ಮಿಡಲ್‌ಸ್ಕೂಲ್ ಕನ್ನಡ ಪಂ|| ವೇ|| ಕೊಟ್ರಪ್ಪಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಚಿಕ್ಕನರಗುಂದ ನಿವಾಸಿಗಳಾದ ಮ|| ರಾ|| ಸಪ್ಪಡ್ಲ ಬಸಪ್ಪನವರಿಗೆ ಜಗದಾಚಾರ್ಯರ ಆಶೀರ್ವಾದ ಬಲದಿಂದ ಕಾರ್ಯವು ನೆರವೇರಿದ ಸಂತೋಷಕ್ಕಾಗಿ **1** ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಜಪಾನಿಯರು ಭಾರತೀಯರ ಸ್ವಾತಂತ್ರ್ಯಸಂಗ್ರಾಮದಲ್ಲಿ ಸಹಾನುಭೂತಿಯನ್ನು ಸೂಚಿಸುತ್ತಿರುವರೆಂದು 'ಆನಾಯಿ' ಪತ್ರಿಕೆಯು ತಿಳಿಸುತ್ತದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ

ಲೇಖಕ:—ಎಂ. ವಿ. ಬಸವಪ್ಪ, ಹಂ|| ಕ್ಯಾರ್ಕ್, ಗಾರ್ನ್ಮೆಂಟ್ ಓರಿಯಂಟಲ್ ಲೈಬ್ರೆರಿ, ಮೈಸೂರು.

(ಹಿಂದಿನಿಂದ ಮುಂದುವರಿದುದು)

೮೬ ನೆಯ ಅಧ್ಯಾಯದ ಆದಿಯಲ್ಲಿ

ವಕ್ಷ್ಯಾಮಿ ಧೃತಲಿಂಗಸ್ಯಾಚರಣಂ ಶ್ರುತಿಸಂಮತಮ್ | ಸ್ಮೃತಿ ತಂತ್ರಪುರಾಣೇಷು ಪ್ರಸಿದ್ಧಂ ಶೇಷನಾಸತಃ ||೧|| ಶ್ರುತ್ಯಾಗಮೋದಿತಂ ಧರ್ಮಂ ನಿತ್ಯನೈಮಿತ್ತಿಕಾತ್ಮಕಮ್ | ಕುರ್ಯಾಲ್ಲಿಂಗಾಂಗಸಂಬಂಧೀ ಬ್ರಾಹ್ಮಣಃ ಕಾಮವರ್ಜಿತಃ ||೨|| ವಿಧ್ಯುಕ್ತಕರ್ಮಾನುಷ್ಠಾನಾಚ್ಚಿತ್ತಶುದ್ಧಿರ್ಭವೇದ್ಧ್ರುವಮ್ | ಚಿತ್ತಶುದ್ಧ್ಯಾ ಭವೇದ್ಭಕ್ತಿರ್ಭವತ್ಯವ್ಯಭಿಚಾರಿಣೀ ||೩|| ತಯಾ ಸಂಜಾಯತೇ ಜ್ಞಾನಂ ನಿತ್ಯತ್ವಜ್ಞಾನಮಾತ್ಮನಃ ತಸ್ಮಾನ್ಮೋಕ್ಷಸ್ತತೋ ಕರ್ಮ ವಿಧ್ಯುಕ್ತಂ ಸಮ್ಯಗಾಚರೇತ್ ||೪|| ತಸ್ಮಾದಾಚಾರಸಹಿತೋ ಭಕ್ತೋ ಮಾಹೇಶ್ವರೋ ಜನಃ | ಪೂಜಯೇದ್ಗುರುಣಾ ದತ್ತಮಿಷ್ಟಲಿಂಗಮತಂದ್ರಿತಃ ||೫||

ಎಲೈ ಷಣ್ಮುಖನೇ! ಲಿಂಗಧಾರಿಯು ನಿತ್ಯವೂ ಆಚರಿಸಬೇಕಾದ ವೈದಿಕಾಚಾರಗಳನ್ನು ಹೇಳುತ್ತೇನೆ. ಈ ಧರ್ಮಗಳು ಸ್ಮೃತ್ಯಾಗಮ ಪುರಾಣಗಳಲ್ಲಿ ಪ್ರಸಿದ್ಧವಾಗಿರುತ್ತವೆ. ಲಿಂಗಾಂಗಸಂಗಿಯಾದ ಬ್ರಾಹ್ಮಣನು ವೇದಾಗಮಗಳಲ್ಲುಕ್ತಗಳಾದ ನಿತ್ಯನೈಮಿತ್ತಿಕ ಕರ್ಮಗಳನ್ನು ನಿಷ್ಕಾಮಬುದ್ಧಿಯಿಂದ ಆಚರಿಸಬೇಕು. ವಿಧ್ಯುಕ್ತಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯೂ, ಚಿತ್ತಶುದ್ಧಿಯಿಂದ ದೃಢತರವಾದ ಭಕ್ತಿಯೂ, ಭಕ್ತಿಯಿಂದ ಜೀವನ ಅಜ್ಞಾನವು ನಾಶವಾಗಿ ದಿವ್ಯಜ್ಞಾನವೂ, ಜ್ಞಾನದಿಂದ ಶಾಶ್ವತ ಶಿವಸಾಯುಜ್ಯರೂಪವಾದ ಮೋಕ್ಷವೂ ಲಭಿಸುತ್ತದೆ. ಆದುದರಿಂದ ವಿಧ್ಯುಕ್ತಕರ್ಮಗಳನ್ನು ತಪ್ಪದೆ ಆಚರಿಸಬೇಕು. ಈ ರೀತಿಯಾದ ಆಚಾರಗಳಿಂದ ಕೂಡಿದ ಭಕ್ತಮಾಹೇಶ್ವರರು ಗುರುದತ್ತವಾದ ಇಷ್ಟಲಿಂಗವನ್ನು ಎಡಬಿಡದೆ ಪೂಜಿಸಬೇಕು. ಎಂದು ಬೋಧಿಸಿರುವನು. ಈ ಶ್ಲೋಕಗಳ ಅಭಿಪ್ರಾಯದಿಂದ ವೀರಶೈವ ಬ್ರಾಹ್ಮಣನು ಶ್ರುತಿ, ಸ್ಮೃತಿ, ಆಗಮ ಮೊದಲಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ವರ್ಣಾಶ್ರಮ ಧರ್ಮಸೂಚಕಗಳಾದ ನಿತ್ಯನೈಮಿತ್ತಿಕ ಕರ್ಮಗಳನ್ನೂ ಪಂಚಾಚಾರಾದಿಮತಸೂಚಕಕರ್ಮಗಳನ್ನೂ ತಪ್ಪದೆ ಆಚರಿಸಬೇಕೆಂದು ವ್ಯಕ್ತವಾಗುತ್ತದೆ. ಶಾಸ್ತ್ರಗಳು ಹೀಗೆ ಬೋಧಿಸುತ್ತಿದ್ದರೂ ಕೆಲವು ಜನ ಮಂದಮತಿಗಳು ಈ ಶಾಸ್ತ್ರಗಳೊಂದನ್ನೂ ನೋಡದೆ ವೀರಶೈವಮತದಲ್ಲಿ ವರ್ಣಾಶ್ರಮಗಳೇ ಇಲ್ಲ. ವೀರಶೈವರಿಗೆ ಲಿಂಗಪೂಜೆಯೊಂದರ ಹೊರತು ಉಳಿದ ಜಾತಿಸೂಚಕಗಳಾದ ಕರ್ಮಗಳೊಂದೂ ಇಲ್ಲವೆಂದು ಹೇಳುತ್ತ ತಮ್ಮ ನಾಸ್ತಿಕವಾದವನ್ನು ಸಮರ್ಥನಗೊಳಿಸುವದಕ್ಕೋಸ್ಕರ ಲಿಂಗಾರ್ಚನೆ ಮತ್ತು ಶೈವಮತದ ಮಾಹಾತ್ಮ್ಯವನ್ನು ವರ್ಣಿಸುವ ಶ್ಲೋಕಗಳನ್ನು ಉದಾಹರಿಸುತ್ತ ಆ ಶ್ಲೋಕಗಳು ಯಾವ ಸಂದರ್ಭದಲ್ಲಿ ಏತಕ್ಕೋಸ್ಕರ ಹೇಳಲ್ಪಟ್ಟಿವೆ ಎಂಬುದನ್ನು ಲಕ್ಷಿಸದೆ ಅವುಗಳಿಗೆ ಅಪಾರ್ಥಗಳನ್ನು ಕಲ್ಪಿಸಿಕೊಂಡು ತಾವೂ ಕೆಡುತ್ತಿರುವರಲ್ಲದೆ ಅನ್ಯರನ್ನೂ ಸಹ ಕೆಡಿಸುತ್ತಿರುವರು. ಇಂಥವರು ಈ ಸಂಹಿತೆಯನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ತಮ್ಮ ನಾಸ್ತಿಕವಾದದಿಂದ ದೂರರಾಗಬೇಕೆಂದು ಇಚ್ಛಿಸುತ್ತೇನೆ.

ವ್ಯಾಸಮಹರ್ಷಿಪ್ರಣೀತವಾದಭವಿಷ್ಯೋತ್ತರಪುರಾಣಾಂತರ್ಗತ ಶೈವಸಂಹಿತೆಯ ವ್ಯಾಸಜೈಮಿನಿಸಂವಾದ ನಾಮಕ ಅಧ್ಯಾಯದಲ್ಲಿ ಜೈಮಿನಿಮಹರ್ಷಿಯು ತನ್ನ ಗುರುಗಳಾದ ವ್ಯಾಸರನ್ನು ಕುರಿತು ಸರ್ವರಿಂದಲೂ ಪೂಜ್ಯನಾದ ದೇವನು ಯಾರು? ಆತನ ಪೂಜೆಯನ್ನು ಹೇಗೆ ಮಾಡಬೇಕು? ಪೂಜಾಯೋಗ್ಯಗಳಾದ ಸ್ಥಳಗಳಾವುವು? ಎಂದು ಪ್ರಶ್ನೆಮಾಡಲು ಅದಕ್ಕೆ ವ್ಯಾಸಮಹರ್ಷಿಗಳು

ಇತಿಹಾಸೇಷು ವೇದೇಷು ಪುರಾಣೇಷು ಪುರಾತನೈಃ ಮಹರ್ಷಿಭಿರ್ಮಹಾದೇವೋ ಮಹನೀಯಃ ಪ್ರತಿಷ್ಠಿತಃ || ಪೂಜಾ ತಸ್ಯ ಚ ದೇವಸ್ಯ ಮಯಾ ಸಂಕಥ್ಯತೇಽಧುನಾ | ರತ್ನಸೌವರ್ಣರಜತಪೀಠೇವಾ ಚಂದ್ರಕಾಂತಕೇ || ಸ್ಫಾಟಿಕೇ ಶೈಲಜೇವಾಪಿ ಸ್ಥಾಪಯೇಲ್ಲಿಂಗರೂಪಿಣಮ್ | ಉಪಚಾರಪರತ್ವಾಚ್ಚ ಶಿವಸ್ಯೈತಾಶ್ಚ ಪ್ರಕಲ್ಪಯೇತ್ || ಉಪಚಾರಾನ್ ಸಮರ್ಪ್ಯಾಥ ಸ್ತುತ್ವಾ ನತ್ವಾ ಚ ಧಾರಯೇತ್ ||

ಇತಿಹಾಸ ಶ್ರುತಿಪುರಾಣಗಳಲ್ಲಿ ಪುರಾತನರಾದ ಮಹರ್ಷಿಗಳಿಂದ ಮಹಾದೇವನೇ ಶ್ರೇಷ್ಠನೂ, ಪೂಜ್ಯನೂ ಆದ ದೇವನೆಂದು ಪ್ರತಿಪಾದಿಸಲ್ಪಟ್ಟಿರುತ್ತಾನೆ. ಆ ಪರಮಾತ್ಮನ ಪೂಜೆಯು ನನ್ನಿಂದ ಈಗ ಹೇಳಲ್ಪಡುವುದು. ರತ್ನ, ಸುವರ್ಣ, ರಜತ ಇವುಗಳಿಂದ ರಚಿತವಾದ ಪೀಠದಲ್ಲಾಗಲಿ, ಚಂದ್ರಕಾಂತಶಿಲೆ, ಸ್ಫಟಿಕಶಿಲೆ ಶ್ರೀಶೈಲಶಿಲೆಗಳಿಂದ ನಿರ್ಮಿತವಾದ ಪೀಠದಲ್ಲಾಗಲಿ ಲಿಂಗರೂಪಿಯಾದ ಪರಶಿವನನ್ನು ಸ್ಥಾಪಿಸಬೇಕು. ಪೂಜಾದ್ಯುಪಚಾರಗಳನ್ನು ಸಮರ್ಪಿಸಿದ ಮೇಲೆ ಪರಮಾತ್ಮನಿಗೆ ಸ್ತೋತ್ರಪ್ರದಕ್ಷಿಣ ನಮಸ್ಕಾರಾದಿಗಳನ್ನು ಸಮರ್ಪಿಸಿ ಅನಂತರ ಧರಿಸಿಕೊಳ್ಳಬೇಕು. ಎಂದು ಹೇಳಿ,

ತಥಾಽಗಸ್ತ್ಯಾದಿಮುನಯೋ ದುರ್ವಾಸೋ ನಂದಿಕೇಶ್ವರಃ | ಮಹಾಕಾಲೋ ದಧೀಚಿಶ್ಚ ಪಾಣಿನಿಶ್ಚ ಕಣಾದಕಃ || ಸ್ಕಂದೋ ಭೃಂಗಿರಿಟಿರ್ವೀರಭದ್ರಸ್ತು ಪ್ರಮಥಾದಯಃ | ಅಜೋ ಹರಿಃ ಸಹಸ್ರಾಕ್ಷೋ ಬಾಣಾಸುರದಶಾನನೌ || ವಸಿಷ್ಠರುರುವಾಲ್ಮೀಕಿ ಭರದ್ವಾಜಾತ್ರಿಗೌತಮಾಃ | ಏತೇ ಪರಮಶೈವಾಶ್ಚ ಭಜಂತಿ ಪರಯಾ ಮುದಾ || ಪ್ರಸಾದಸೇವನಾದ್ಧ್ಯಾನಾದರ್ಚನಾದ್ಧಾರಣಾದಪಿ ||

ಅಗಸ್ತ್ಯ, ದೂರ್ವಾಸ, ನಂದಿಕೇಶ್ವರ, ಮಹಾಕಾಲ, ದಧೀಚಿ, ಪಾಣಿನಿ, ಕಣಾದ ಮೊದಲಾದ ಮಹರ್ಷಿಗಳೂ ಸ್ಕಂದ, ಭೃಂಗಿರಿಟಿ, ವೀರಭದ್ರ ಮೊದಲಾದ ಪ್ರಮಥಪುಂಗವರೂ, ಬ್ರಹ್ಮ, ವಿಷ್ಣು, ಇಂದ್ರ, ಬಾಣಾಸುರ, ರಾವಣ, ವಸಿಷ್ಠ, ರುರು, ವಾಲ್ಮೀಕಿ, ಭರದ್ವಾಜ, ಅತ್ರಿ, ಗೌತಮ ಮೊದಲಾದ ಪರಮಶೈವರೂ ಲಿಂಗಪ್ರಸಾದಸೇವನ, ಲಿಂಗಧ್ಯಾನ, ಲಿಂಗಾರ್ಚನ, ಲಿಂಗಧಾರಣ ಮೊದಲಾದವುಗಳಿಂದ ಪರಶಿವನನ್ನು ಅತ್ಯಂತ ಭಕ್ತಿಯಿಂದ ಸೇವಿಸುತ್ತಿರುವರು.

ಬ್ರಹ್ಮವಿಷ್ಣುಸುರೇಶಾದಿದೇವತಾಃ ಪರಯಾ ಮುದಾ | ಶಿರೋಭಿರ್ಧಾರಯಂತ್ಯೇತೇ ಶಿವಲಿಂಗಮಹರ್ನಿಶಮ್ || ಅಕ್ಷಪಾದಾದಯಃ ಸರ್ವಾಃ ಶಕ್ತಯಃ ಪರಯಾ ಮುದಾ | ಧಾರಯಂತ್ಯಲಿಕಾಗ್ರೇಷು ಶಿವಲಿಂಗಂ ಚ ಸಾದರಮ್ || ವಿನಿರ್ಭಿದ್ಯ ತಥಾ ಗಾತ್ರಂ ವಿವರೇ ಲೋಹಪಾತ್ರಕೇ | ಶಿವಲಿಂಗಂ ವಿನಿಕ್ಷಿಪ್ಯ ಪೂಜಯಂತಿ ಚ ರಾಕ್ಷಸಾಃ || ಕಂಠೇಷು ಹರಕಂಠಾದಿ ಮುನಯೋ ಮನವಸ್ತಥಾ | ಸರ್ವದಾ ಶಿವಲಿಂಗಂ ತು ಧಾರಯಂತಿ ಯಜಂತಿ ಚ ||

ವಿಷ್ಣುಬ್ರಹ್ಮೇಂದ್ರಾದಿ ದೇವತೆಗಳು ಅತ್ಯಂತಪ್ರೀತಿಯಿಂದ ಶಿವಲಿಂಗವನ್ನು ಯಾವಾಗಲೂ ಮಸ್ತಕದಲ್ಲಿ ಧರಿಸಿಕೊಂಡಿರುತ್ತಾರೆ. ಅಕ್ಷಪಾದಾದಿ ಮಹರ್ಷಿಗಳೂ, ಲಕ್ಷ್ಮಿ, ಸರಸ್ವತಿ ಪಾರ್ವತಿ ಮೊದಲಾದ ಶಕ್ತಿಯರೂ ತಮ್ಮ ತಮ್ಮ ಅಳಿಕಾಗ್ರಗಳಲ್ಲಿ ಶಿವಲಿಂಗವನ್ನು ಧರಿಸಿಕೊಂಡಿರುವರು. ರಾಕ್ಷಸರು ತಮ್ಮ ದೇಹವನ್ನು ಭಾಗಮಾಡಿ ಅಲ್ಲಿ ಲೋಹದ ಕರಡಿಗೆಗಳನ್ನು ಸೇರಿಸಿ ಅಲ್ಲಿ ಶಿವಲಿಂಗವನ್ನಿಟ್ಟುಕೊಂಡು ಪೂಜಿಸುತ್ತಿರುವರು. ಹರಕಂಠಾದಿ ಮುನಿಗಳೂ ಮನುಗಳೂ ಯಾವಾಗಲೂ ಕಂಠದಲ್ಲಿ ಶಿವಲಿಂಗವನ್ನು ಧರಿಸಿಕೊಂಡು ಅದನ್ನು ಪೂಜಿಸುತ್ತಾರೆ." ಎಂದು ಬೋಧಿಸಿರುವರು.

ಮೇಲೆ ವಿವರಿಸಿದ ಪುರಾಣವಚನಗಳನ್ನು ಪರಿಶೀಲಿಸಿದರೆ ಪ್ರಪಂಚದಲ್ಲಿ ಶಿವಲಿಂಗಧಾರಣ, ಶಿವಲಿಂಗಪೂಜಾರೂಪವಾದ ಪಾಶುಪತವ್ರತವೇ ಮುಕ್ತಿದಾಯಕವಾದ ಶ್ರೇಷ್ಠವ್ರತವೆಂದೂ ಪ್ರಾಚೀನಕಾಲದಲ್ಲಿ ದೇವದಾನವ ಮಹರ್ಷಿಗಳು ಈ ವ್ರತದ ಪ್ರಭಾವವನ್ನರಿತು ಈ ವ್ರತವನ್ನು ತಾವೂ ಆಚರಿಸುತ್ತ ಇತರರಿಗೂ ಬೋಧಿಸುತ್ತಿದ್ದರೆಂದೂ ಕಂಡುಬರುತ್ತದೆ.

(ಸಶೇಷ.)

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಪಂಚಾಚಾರ್ಯಸೇವಾಮಂಡಲಿ, ತುಮಕೂರು.

(೩ ವರ್ಷದ ಸಾರಾಂಶ)

ವೀರಶೈವ ಸಮಾಜಬಾಂಧವರಲ್ಲಿ ಸವಿನಯ ಪ್ರಾರ್ಥನೆ.

ಪ್ರಿಯಬಾಂಧವರೇ ;

ಶ್ರೀಮದ್ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಕೀರ್ತನ, ಸೇವಾ, ಧಾರ್ಮಿಕಸುಧಾರಣ, ವಿದ್ಯಾಪ್ರೋತ್ಸಾಹ ಮೊದಲಾದ ಪುರೋಭಿವೃದ್ಧಿಗಳು ಮುಖ್ಯೋದ್ದೇಶಗಳಾಗಿ ಭರತಖಂಡದ ನಾನಾ ಭಾಗಗಳಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಗಳು ಸ್ಥಾಪಿತವಾಗಿರುವಂತೆ ಈ ಊರಿನಲ್ಲೂ ಮೇಲ್ಕಂಡ ಸಂಘವು ಇದೇ ಸಮುದ್ದೇಶದಿಂದ ಸ್ಥಾಪಿಸಲ್ಪಟ್ಟಿದೆ. ಈಗ ಅದ್ವಿತೀಯಾರೂಢರಾಗಿ ಸರ್ವಜನಮಾನ್ಯರಾಗಿ ಶ್ರೀ ಪರಶಿವಾಂಶದಿಂದಲೂ ತಮ್ಮ ಶಾಂತಿದಾಂತಿ ತಪೋಮಹಿಮಾಬಲದಿಂದ ಶ್ರೀಮದಭಿನವ ರೇಣುಕಾಚಾರ್ಯರೆಂದು ಜಗನ್ಮಾನ್ಯರಾಗಿ ದಿಗ್ವಿಜಯಂಗೈಯುತ್ತಾ ಶಿಷ್ಯಕೋಟಿಯನ್ನುದ್ಧಾರಮಾಡುತ್ತಿರುವ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶರಾಗಿ, ಶಿಷ್ಯರ ದಂಡನ ಖಂಡನ ದೀಕ್ಷಾ ರಕ್ಷಾ ಮೋಕ್ಷಾದಿಗಳಿಗೆ ಅಧಿಕರ್ತೃಗಳಾಗಿರುವ ಶ್ರೀ ಜಗದಾಚಾರ್ಯ ಶ್ರೀ 108 ಜಗದ್ಗುರು ಶ್ರೀ ಶಿವಾನಂದರಾಜ ದೇಶಿಕೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಪರಮಪವಿತ್ರವಾದ ದಿವ್ಯಸ್ವಾರಿಯನ್ನು ಈ ತುಮಕೂರಿಗೆ ಆದಷ್ಟು ತೀವ್ರ ಚಿತ್ತೈಸಿಕೊಂಡುಬಂದು ಶ್ರೀ ಪೂಜ್ಯಪಾದರ ಅನರ್ಘಸೇವೆಯಿಂದ ಧನ್ಯರಾಗಬೇಕೆಂದು ಮತ್ತು ಶ್ರೀಮದಾಚಾರ್ಯರವರ ಪಂಚಜಯಂತಿ ಮಹೋತ್ಸವಗಳನ್ನು ಪುರಾಣಶ್ರವಣ ಕೀರ್ತನಾದಿಗಳನ್ನು ಹೆಚ್ಚು ಪ್ರಸಾರಕ್ಕೆ ತಂದು ಸದಾಚಾರನಿಷ್ಠರಾಗಲೆಂದು ಈ ಮಂಡಲಿಯು ನಿರ್ದುಷ್ಟವಾಗಿ ಸ್ಥಾಪಿಸಲ್ಪಟ್ಟಿದೆ. ಈ ಸಂಘದ ಉದ್ದೇಶಗಳೆಲ್ಲಾ ಮೊದಲೇ ಶ್ರೀ ಪಂಚಾಚಾರ್ಯಪ್ರಭಾದಲ್ಲಿ ಪ್ರಸಿದ್ಧವಾಗಿವೆ. ಅದರಂತೆ ಈ ಊರಲ್ಲಿ ಈ ಮಂಡಲಿಯಿಂದ ಈಗ್ಗೆ 3 ವರ್ಷಗಳಿಂದಲೂ ಶ್ರೀ ಜಗದಾಚಾರ್ಯರವರ ಮತ್ತು ಸಮಾಜದ ಸೇವೆಯನ್ನು ಹಲವು ವಿಧವಾಗಿ ಮಾಡುತ್ತಲಿದೆ. ಪುರಾಣಶ್ರವಣ, ಭಜನ, ಕೀರ್ತನಗಳು ಶ್ರಾವಣ, ಗಜಾನನಹಬ್ಬ ದಸರಾ, ಕಾರ್ತೀಕ ಮಾಸಗಳಲ್ಲಿ ಭಕ್ತಿಯಿಂದ ನಡೆಯುತ್ತಾ ಇದೆ. ಶ್ರೀ ಜಗದ್ಗುರು ಪಂಚಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರಗಳು, ಲಿಂಗೋತ್ಪತ್ತಿ ಲಾಕೆಟ್ಟುಗಳು ಹಂಚಲ್ಪಟ್ಟಿವೆ. ಭಜನಾಪುಸ್ತಕಗಳು ಧಾರ್ಮಿಕಗ್ರಂಥಗಳು ಸಮಾಜಬಂಧುಗಳಲ್ಲಿ ಉಚಿತವಾಗಿ ಪ್ರಸಾರಮಾಡಲ್ಪಟ್ಟಿವೆ. ಶ್ರೀ ಜಯಂತಿಹಬ್ಬಗಳು ಅತ್ಯಂತ ಭಕ್ತಿಯಿಂದ ನಡೆಸಲ್ಪಡುತ್ತಾ ಇವೆ. ಕೀರ್ತನಕರಪತ್ರಗಳು ಪ್ರಕಾಶಿತವಾಗಿವೆ. ಪಂಚಾಚಾರ್ಯಪ್ರಭಾ ಪತ್ರಿಕಾಸೇವೆಯು ನಡೆಯುತ್ತಲಿದೆ. ಮುಖ್ಯವಾಗಿ ಈ ಊರಲ್ಲಿ ಸರ್ಕಾರಿ ಗ್ರ್ಯಾಂಟ್ ಇನ್ ಏಡ್ ವೀರಶೈವ ಹಾಸ್ಟಲನ್ನು ಕಟ್ಟುವುದಕ್ಕೆ ಹಣಸಂಗ್ರಹಕ್ಕೂ ಎಲ್ಲಾ ಕಾರ್ಯಭಾಗಕ್ಕೂ 6 ವರ್ಷಕಾಲ ಸೆಕ್ರೆಟರಿಗಳಾಗಿದ್ದು ಶಿವಪ್ರೀತ್ಯರ್ಥವಾಗಿ ಸ್ವಾರ್ಥನಷ್ಟದಿಂದ ಬಹಳ ಪ್ರಯತ್ನಪಟ್ಟು ಅವಿಶ್ರಾಂತಶ್ರಮದಿಂದ ಉಭಯಪಕ್ಷದ ಮಹಾಜನಗಳ ಪ್ರೋತ್ಸಾಹಸಾನುಭೂತಿಯಿಂದ ಹಾಸ್ಟಲ್ ಕಾರ್ಯವನ್ನು ಪೂರೈಸಿದ ಮತ್ತು ತಮ್ಮ ಬಾಲ್ಯಾರಭ್ಯದಿಂದಲೂ ವೀರಶೈವಸಮಾಜದ ವಿದ್ಯಾಪ್ರೋತ್ಸಾಹಕ್ಕಾಗಿ ದುಡಿಯುತ್ತಿರುವ ಪ್ಲೀಡರ್ ಶ್ರೀಯುತ ಜಿ. ಕೆ. ಗುರುಸಂಗಾರ್ಯರು ಈ ಸಂಘದ ಆನರರಿ ಸೆಕ್ರೆಟರಿಗಳಾಗಿದ್ದಾರೆ. ಇವರ ಬಂಧುಗಳಲ್ಲಿ ಯಾರೋ ವಿಘ್ನಸಂತೋಷಿಗಳು ಅಸೂಯೆಯಿಂದ ಇವರ ಧರ್ಮಸೇವೆಗಳಿಗೆ ಅಡಚಣೆಗಳನ್ನು ತಂದಾಗ್ಯೂ ಇವರ ಧರ್ಮಸಂಕಲ್ಪಕ್ಕೆ ಎಂದಿಗೂ ಚ್ಯುತಿಬರಲಾರದು. ಸದ್ಯಃ ಈ ಊರು ವೀರಶೈವ ಸರ್ಕಾರಿ ಹಾಸ್ಟಲಿನ (Grant-in-aid) ಪ್ರೆಸಿಡೆಂಟರಾಗಿರುವ ಶ್ರೀಮಾನ್ ಕೆ. ರೇವಣ್ಣನವರು ದೆಹರಾಡೂನ್‌ನಿಂದ ಪರೀಕ್ಷೆಯಲ್ಲಿ ಶ್ರೇಷ್ಠತಮವಾಗಿ ಉತ್ತೀರ್ಣರಾಗಿ ದಯಮಾಡಿದವೇಳೆ ತುಮಕೂರಿನವರಾಗಿ ಅಭಿನಂದನಸಭೆಯನ್ನು ಮಾಡಿ ಈ ಮಹಾಶಯರನ್ನು ಬಹುಮಾನಿಸಿರುತ್ತಾರೆ. ಸಮಾಜಾಭಿಮಾನಿಗಳಾಗಿ ಕೀರ್ತಿಶಾಲಿಯರಾದ ಕೈ. ಶ್ರೀಯುತರಾದ ವೇ|| ಬಿ. ಬಸವಾರಾಧ್ಯರವರ ಸದುಪದೇಶದಿಂದಲೂ ಮತ್ತು ಈಗ್ಗೆ ಸುಮಾರು 25 ವರ್ಷಗಳಲ್ಲಿ ಈ ಊರಲ್ಲಿ ವೀರಶೈವಧರ್ಮಭಿಮಾನಿಗಳಲ್ಲಿ ಅಗ್ರಗಣ್ಯರಾಗಿದ್ದ ಮಹಾಶಯರು ಕಲಿಸಿದ ವಿದ್ಯಾಬುದ್ಧಿಯಿಂದಲೂ ಇವರ ಸಮಾಜಸೇವಾನುಭವವು ಮಿಗಿಲಾಗಿದೆ. ಹಾಸ್ಟಲ್ ಆಗುವುದಕ್ಕೆ ಮೊದಲು ಇವರ ಉದಾರಾಶ್ರಯ ಪ್ರೋತ್ಸಾಹಗಳಿಂದಲೂ ವೇತನಗಳಿಂದಲೂ ಬಹುಮಾನಗಳಿಂದಲೂ ಉಪಕೃತರಾದ ಅನೇಕ ಬಡವೀರಶೈವತರುಣರು ಈಗಲೂ ಇವರ ಉಪಕಾರ ಸ್ಮರಣೆಯನ್ನು ಮಾಡುತ್ತಿದ್ದಾರೆ. ಸದ್ಯಃ ಅಮೇರಿಕಾದಲ್ಲಿ ಪ್ರೌಢವ್ಯಾಸಂಗದಲ್ಲಿರುವ ಶ್ರೀ|| ವೇ|| ಎಂ. ಸಿದ್ಧಲಿಂಗಯ್ಯ, ಬಿ.ಎ., ಯವರು ಮತ್ತು ಈಗ ತುಮಕೂರಲ್ಲಿ ಪ್ಲೀಡರಾಗಿರುತ್ತಾ ಹೊರಪೇಟೆ ವೀರಶೈವ ತರುಣಸಂಘದ ಮೂಲಕ ಜನಾಂಗದ ಏಳಿಗೆಯನ್ನು ಬಯಸುತ್ತಿರುವ ಶ್ರೀಯುತ ಟಿ. ಗುರುಪಂಚಯ್ಯ, ಬಿ.ಎ., ಬಿ.ಎಲ್., ರವರೇ ಮೊದಲಾದ ಅನೇಕರು ಶ್ರೀಯುತ ಆರ್ಯರವರಿಂದ ಉಪಕೃತರಾದ ವಿದ್ಯಾರ್ಥಿಗಳಾಗಿ ಸಮಾಜಸೇವೆಗೆ ಇಂಬುಗೊಡುತ್ತಿರುವುದು ಸಂತೋಷಪಡತಕ್ಕದ್ದಾಗಿದೆ.

ಬಾಲ್ಯಾರಭ್ಯದಿಂದಲೂ ವಿದ್ಯಾದಾನ, ಸದಾಚಾರ, ಸಮಾಜಸುಧಾರಣೆ, ಪರೋಪಕಾರಾದಿಗಳಿಂದ ಜನಾಂಗದ ಏಳಿಗೆಗೆ ಸಹಾಯಕರಾಗಿರುವ ಶ್ರೀ ಗುರುಸಂಗಾರ್ಯರೇ ಈ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿಗೆ ಕೇವಲ ಧರ್ಮಬುದ್ಧಿಯಿಂದ ಆನರರಿ ಸೆಕ್ರೆಟರಿಗಳಾಗಿರುವದರಿಂದ ಈ ಸಂಘವು ಇನ್ನೂ ಮಿಗಿಲಾಗಿ ಅಭಿವೃದ್ಧಿಗೆ ಬರುವದೆಂಬ ಭರವಸೆಯಿದೆ. ಇವರು ಹಿಂದೆ ವೀರಶೈವಸಂಘ, ವೀರಶೈವಸಮಾಜ, ವೀರಶೈವಸೇವಾಮಂಡಲಿ, ಗುಬ್ಬಿ ವೀರಶೈವ ಸೇವಾಸಮಾಜ ತುಮಕೂರು, ವೀರಶೈವ ಪ್ರಾಂತಿಕಸಭಾ ಮೊದಲಾದ ಅನೇಕ ಸಂಘಗಳಿಗೆ ಸುಮಾರು 25 ವರ್ಷಗಳಿಂದಲೂ ಸೆಕ್ರೆಟರಿಗಳಾಗಿರುತ್ತ ಧಾರ್ಮಿಕವಿದ್ಯಾ ಸುಧಾರಣೆಗಳಲ್ಲಿ ಅನುಭವಶಾಲಿಗಳಾಗಿರುತ್ತಾ ಸಂಸ್ಕೃತವಿದ್ಯಾಭ್ಯಾಸದ ಪರಿಣಾಮವಾಗಿ ಹಲವು ಸಂಸ್ಕೃತ ಕನ್ನಡ ವೀರಶೈವ ಧರ್ಮಗ್ರಂಥಗಳನ್ನೂ ಉಪನಿಷತ್ತುಗಳನ್ನೂ ವ್ಯಾಸಂಗಮಾಡಿ ಧಾರ್ಮಿಕ ತತ್ವಗಳನ್ನು ಬಲ್ಲವರಾಗಿ ತಮ್ಮ ಹಿರಿಯರಂತೆಯೇ ಸದಾಚಾರನಿಷ್ಠರಾಗಿರುವದರಿಂದ ಇವರ ಪ್ರೋತ್ಸಾಹದಿಂದ ಈ ಮಂಡಲಿಗೆ ಸಮಾಜಸೇವೆಮಾಡಲು ವಿಶೇಷ ಅವಕಾಶವಿದೆ. ಈ ಊರಲ್ಲಿರುವ ಬಾಲಭಜನಾಸಂಘ, ಕೋಟೆ ವೀರಶೈವ ತರುಣಸಂಘ, ಹೊರಪೇಟೆ ವೀರಶೈವ ತರುಣಸಂಘ ಎಂಬ ಇತರ ಸಂಘಗಳಂತೆ ಇದೂ ಒಂದು ಸಂಘವಾಗಿದ್ದರೂ ಇದು ಯಾವ ಪಕ್ಷವನ್ನೂ ವಹಿಸದೆ ವೀರಶೈವ ಸಮಾಜಬಾಂಧವರೆಲ್ಲರೂ ಶ್ರೀ ಜಗದ್ಗುರುಗಳವರ ಈ ಸೇವಾಕಾರ್ಯದಲ್ಲಿ ಸಹಾಯಕರಾಗಿ ಮೆಂಬರುಗಳಾಗಿ ಐಕಮತ್ಯವು ಹೆಚ್ಚಲೆಂಬುದೇ ಅನುಭವಶಾಲಿಗಳಾದ ನಮ್ಮ ಸೆಕ್ರೆಟರಿಗಳ ಘನತರವಾದ ಸದುದ್ದೇಶವಾಗಿರುತ್ತದೆ. ಅದರಂತೆ ಸರ್ವರನ್ನೂ ಸಮಭಾವನೆಯಿಂದ ಉಭಯಪಕ್ಷಗಳಿಂದಲೂ ಮೆಂಬರುಗಳನ್ನಾಗಿ ಸೇರಿಸಿಕೊಂಡು ಮಂಡಲಿಯು ಸತ್ಕಾರ್ಯಗಳನ್ನು ನಡೆಯಿಸುತ್ತಿದ್ದಾರೆ. ಈ ಮಂಡಲಿಗೆ ಸರ್ವರೂ ಒಂದೇ ಆಗಿರುತ್ತಾರೆ ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದಲ್ಲ. ಪೂಜ್ಯಪಾದರಾದ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸೇವೆಯೇ ಘನತರವಾದ ಉದ್ದೇಶವಾಗಿದೆ. 3 ವರ್ಷ ಗತಿಸಿದ್ದರಿಂದ ಈ ಮಂಡಲಿಗೆ ಕಳೆದ ಉಗಾದಿಯಿಂದಲೂ ಹೊಸಮೆಂಬರುಗಳು ನೇಮಿತರಾಗಿ ಸೇವಾಕಾರ್ಯದಲ್ಲಿ ವಿಶೇಷಾಸಕ್ತಿಯುಳ್ಳವರಾಗಿದ್ದಾರೆ. ಸಕಲ ಬಾಂಧವರೂ ಈ ಮಂಡಲಿಗೆ ಭೇದಭಾವಗಳಿಲ್ಲದೆ ಅತ್ಯಮಿತಾತರಾಗಿ ಸಹಾಯಕರಾಗಲು ಸವಿನಯಪ್ರಾರ್ಥನೆ.

ಈ ಶ್ರಾವಣಮಾಸದಲ್ಲಿ ಆಚಾರ್ಯಪುಂಗವರಾದ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಅಪಾರಮಹಿಮಾಪ್ರದರ್ಶಕವಾದ ಶ್ರೀ ಜಗದ್ಗುರು ರೇಣುಕವಿಜಯ ಮಹಾಪುರಾಣಶ್ರವಣವು, ಪ್ರತಿ ಸೋಮವಾರ ಸಾಯಂಕಾಲ ಭಜನಾ, ಉಪನ್ಯಾಸಗಳು ಈ ಸೇವಾಮಂಡಲಿಯಿಂದ ನಡೆಯಿಸಲ್ಪಡುತ್ತಾಗಿ ಈ ಸತ್ಕಾರ್ಯಕ್ಕೆ ಸಮಾಜದ ಸರ್ವ ಬಂಧುಗಳು ಭಾಗಿಗಳಾಗಿ ಶ್ರೀ ಸಾಂಬಮೂರ್ತಿಯ ಕೃಪೆಗೆ ಪಾತ್ರರಾಗಲು ಮಂಡಲಿಯ ಸವಿನಯಪ್ರಾರ್ಥನೆ.

ತಾ|| 20-7-30.
ಅಧ್ಯಕ್ಷ—ಪಿ. ಹೆಚ್. ವೀರಪ್ಪ,
ಉಪಾಧ್ಯಕ್ಷ—ಹೆಚ್. ಯಸ್. ಯೆಸ್.
ಉಪಕಾರ್ಯದರ್ಶಿ—ಸೋಮಶೇಖರಯ್ಯ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕುಷ್ಟಗಿಯಲ್ಲಿ ಸಭೆಯು.

ತಾರೀಖು ೨೪-೭-೩೦ ನೇ ದಿವಸ ಮೊದಲೇ ಗೊತ್ತುಮಾಡಿದ ಪ್ರಕಾರ ಸಾಯಂಕಾಲ ೬ ಘಂಟೆಗೆ ಸಭೆಯು ಪ್ರಾರಂಭವಾಯಿತು. ಸಭೆಯಲ್ಲಿ ಗುರುಲಿಂಗಯ್ಯನವರು ಹಿರೇಮಠ, ಕಳಕಯ್ಯನವರು ಹಿರೇಮಠ, ಮ|| ರಾ|| ಹಾವೇರಿ ಶಿವಲಿಂಗಪ್ಪನವರು, ತುರಕಾಣಿ ಶಿದ್ದಪ್ಪನವರು ಯಲಬುರ್ಗಿ ಮುದಕಪ್ಪನವರು, ನಂದಿಕೋಲ ಕಳಕಯ್ಯನವರು, ರುದ್ರಪ್ಪ ಶೆಟ್ರು, ಕೋಮಟಿಗ ಭೀಮಣ್ಣನವರು, ನಾಯಕವಾಡಿಯ ಕರಿಬಸಪ್ಪನವರು, ಮಂಗಳೂರು ಅಮರಪ್ಪನವರು, ನಾಯಕವಾಡಿಯ ಫಕೀರಪ್ಪನವರು, ಕೆಲೂರ ಲಿಂಗಪ್ಪನವರೇ ಮೊದಲಾದ ಪ್ರಮುಖರು ಬಂದಿದ್ದರು. ಸ್ತ್ರೀಪುರುಷರು ಕೂಡಿ ನಾಲ್ಕೈದುನೂರು ಜನರು ಕಲಿತಿದ್ದರು. ಸರ್ವರ ಅಭಿಪ್ರಾಯದಂತೆ ವೇ|| ಶಿವದೇವಶಾಸ್ತ್ರಿಗಳು ಕಾವ್ಯತೀರ್ಥ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ತಮ್ಮ ಗಂಭೀರವಾಣಿಯಿಂದ ಸರ್ವರ ಮನವೊಲಿಯುವಂತೆ ವೀರಶೈವಮತದ ಪ್ರಾಚೀನತ್ವವನ್ನು ವೇದಾಗಮೋಪನಿಷತ್ಪುರಾಣೇತಿಹಾಸಗಳಿಂದ ಪ್ರತಿಪಾದಿಸಿದ್ದಲ್ಲದೆ. ಪ್ರತಿಯೊಬ್ಬ ಹಿಂದುವಿಗೆ **ಶಿಕ್ಷಣವು** ಮುಖ್ಯ ಲಕ್ಷಣವಾಗಿರುವದು ವೀರಶೈವರಿಗಂತೂ ಅವಶ್ಯವಾಗಿ ಇರಲಿಕ್ಕೇಬೇಕೆಂದೂ, ಸ್ತ್ರೀಯರಿಗೆ ಪಟ್ಟಿಯನ್ನು ಬುಚ್ಚಿಸುವದು ಆಯೋಗ್ಯವೂ ಆಶಾಸ್ತ್ರೀಯವೂ ಎಂದೂ ಅನೇಕೋದಾಹರಣೆಗಳಿಂದ ತಿಳಿಹೇಳಿದರು. ಅನಂತರ ಶ್ರೀಕೇದಾರ ಜಗದ್ಗುರುಗಳ ಅಮಾತ್ಯರಾದ ವೇ|| ಸಿದ್ಧಲಿಂಗಪ್ಪಯ್ಯನವರು ಪುರಗಿಹಿರೇಮಠ ಇವರು ಸಂಸವಾಣಿಯಿಂದ ಪ್ರತಿಯೊಂದು ಸಮಾಜದ ಏಳ್ಗೆಗೆ ಸ್ತ್ರೀಯರೇ ಮುಖ್ಯಕಾರಣರಾದ್ದರಿಂದ ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸಿದರೆ ಆಚಾರವಿಚಾರಗಳು ಸುಧಾರಿಸಿ ತೀವ್ರವಾಗಿಯೇ ಸಮಾಜದ ಉನ್ನತಿಯಾಗುವದೆಂಬುದಾಗಿ ಒಳ್ಳೇ ಪರಿಣಾಮಕರವಾಗಿ ಉಪದೇಶಮಾಡಿದರು. ಆ ಮೇಲೆ ಅಧ್ಯಕ್ಷರು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಮಹಿಮೆಯನ್ನು ಹೇಳಿದ್ದಲ್ಲದೆ ನಿತ್ಯದಲ್ಲಿ ಭಕ್ತಿಯಿಂದ ಪೂಜಿಸಬೇಕೆಂಬಪೇಕ್ಷೆಯುಳ್ಳ ಗುರುಭಕ್ತಿಧುರೀಣರು ಶ್ರೀ ಜಗದ್ಗುರುಗಳ ಭಾವಪಟಗಳನ್ನು ಬೇಡಬೇಕೆಂದು ಹೇಳಲು, ಸರ್ವರೂ ಭಕ್ತಿಯುತರಾಗಿ ಭಾವಪಟವನ್ನು ಬೇಡಲು ಅವರಿಗೆ ಕೊಟ್ಟು ಅನಂತರ ಆಶೀರ್ವಾದವನ್ನು ಮಾಡಿದರು. ಮ|| ರಾ|| ನಾಯಕವಾಡಿಯರ ಫಕೀರಪ್ಪನವರು ಎದ್ದುನಿಂತು ನಮ್ಮ ಗುರುಗಳಾದ ವೇ|| ಪಂ|| ಶಿವದೇವಶಾಸ್ತ್ರಿಗಳು ಕಾಶಿಯಲ್ಲಿ ಅಧ್ಯಯನಮಾಡಿ ಪಂಡಿತರಾಗಿರುವದರಿಂದ ಇವರನ್ನು ನಮ್ಮ ಮಠಕ್ಕೆ (ಕುಷ್ಟಗಿಯಳಮಲಿ ಹಿರೇಮಠಕ್ಕೆ) ಪಟ್ಟಾಧಿಕಾರಿಗಳನ್ನಾಗಿ ಮಾಡಬೇಕೆಂಬ ಅಪೇಕ್ಷೆಯಿರುವದು. ಇದಕ್ಕೆ ನಿಮ್ಮಭಿಪ್ರಾಯವೇನೆಂದು ಕೇಳಲು ಸರ್ವರೂ ಸಮ್ಮತಿಯನ್ನಿತ್ತರು. ಶ್ರೀ ಜಗದ್ಗುರುಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟನಂತರ ವೈಶಾಖಮಾಸಕ್ಕೆ ಅಧಿಕಾರ ಮಾಡಬೇಕೆಂದು ನಿರ್ಧರಿಸಲ್ಪಟ್ಟಿತು.

ಗುರುಭಕ್ತ
ವೀರಪ್ಪನವರು, ತುರಕಾಣಿ.

ಬೊಂಬಾಯಿಯಲ್ಲಿ ಕಾಂಗ್ರೆಸ್‌ಮುಖಂಡರ ವಿಚಾರಣೆ.

ಮಿ|| ಹೋಂ ಮತ್ತು ಮಿ|| ಹೀಲೀಯವರ ಸಾಕ್ಷಿ.

ಪಂ|| ಮಾಳವೀಯರವರ ಹೇಳಿಕೆ.

ಮುಂಬಯಿ, ಆಗಸ್ಟ್ 2.

ಮುಂಬಯಿ ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಅಕ್ರಮಕೂಟದ ಮೆಂಬರರೆಂದು ವಿಚಾರಣೆಗೆ ಗುರಿಪಡಿಸಲ್ಪಟ್ಟ 5 ಜನ ಕಾಂಗ್ರೆಸ್ ವರ್ಕಿಂಗ್‌ಕಮಿಟಿಯ ಮೆಂಬರರ ಪೈಕಿ ಪಂಡಿತ ಮಾಳವೀಯರವರು ಮಾತ್ರ ವಿಚಾರಣೆಯಲ್ಲಿ ಭಾಗವಹಿಸಿದರು. ಈ ದಿವ ಸೂಪರಿಂಟೆಂಡೆಂಟರಾದ ಹೋಂರವರ ಸಾಕ್ಷಿ ವಿಚಾರಣೆಯು ಮಾತ್ರ ನಡೆಯಿತು.

ಪಂಡಿತಜೀ—ಉತ್ಸವವನ್ನು ಎಲ್ಲಿ ತಡೆದಿರಿ?

ಮಿ|| ಹೋಂ—ಪೋಲೀಸರು ಕ್ವೀನ್ಸ್‌ರೋಡ್ ಮತ್ತು ಹಾರ್ನ್‌ಬಿ ರಸ್ತೆಗಳು ಕೂಡುವ ಸ್ಥಳದಲ್ಲಿದ್ದರು.

ಪಂಡಿತಜೀ—ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಹೇಳಿರಿ.

ಮಿ|| ಹೋಂ—ಪೋಲೀಸರು ಉತ್ಸವವನ್ನು ಕ್ವೀನ್ಸ್‌ರೋಡ್ ರಸ್ತೆಯಲ್ಲಿ ತಡೆದರು.

ಪಂಡಿತಜೀ—ಉತ್ಸವವು ಕ್ವೀನ್ಸ್‌ರೋಡ್ ರಸ್ತೆಯಲ್ಲಿ ಬರದಂತೆ ನೀವು ತಡೆಯಲಿಲ್ಲವೇ?

ಮಿ|| ಹೋಂ—ಇಲ್ಲ.

ಪಂಡಿತಜೀ—ಉತ್ಸವವು ಹಾರ್ನ್‌ಬಿರೋಡಿನಲ್ಲಿ ಹೋಗದಂತೆ ತಡೆದುದಕ್ಕೆ ಕಾರಣವೇನು?

ಮ್ಯಾಜಿಸ್ಟ್ರೇಟ—ಕಮಿಷನರು ಆರೀತಿ ಅಪ್ಪಣೆಮಾಡಿದ್ದರು. ಅದರ ವಿಷಯವಾಗಿ ಮಿ|| ಹೋಂರವರಿಗೆ ಏನೂ ಗೊತ್ತಿಲ್ಲ.

ಪಂಡಿತಜೀ—ಹಾಗಾದರೆ ಕಮಿಷನರನ್ನು ಬರಮಾಡಿ.

ಮ್ಯಾಜಿಸ್ಟ್ರೇಟ—ಅಗತ್ಯವಿಲ್ಲ. ಕಮಿಷನರ ಅಧಿಕಾರದಲ್ಲಿ ನಿಮಗೆ ನಂಬಿಕೆಯಿಲ್ಲದಿದ್ದರೆ ಹೈಕೋರ್ಟಿಗೆ ಹೋಗಬಹುದು.

ಪಂಡಿತಜೀ—ಕಮಿಷನರು ಹೀಗೆ ಅಪ್ಪಣೆಮಾಡಲು ಸರಿಯಾದ ಕಾರಣಗಳಿದ್ದವೇ ಎಂಬುದನ್ನು ನೀವು ವಿಚಾರಿಸಲೇಬೇಕು. ಆ ಅಪ್ಪಣೆಯು ನ್ಯಾಯವಾದುದಲ್ಲ. ಅದು ಶುದ್ಧ ಮೂರ್ಖತನದ ಅಪ್ಪಣೆಯು. ಅದನ್ನು ಧಿಕ್ಕರಿಸಲು ನನಗೆ ಸಂಪೂರ್ಣ ಅಧಿಕಾರವುಂಟು.

ಮ್ಯಾಜಿಸ್ಟ್ರೇಟ—ಮೂರ್ಖತನದ ಎಂಬ ಶಬ್ದವನ್ನು ನೀವು ಉಪಯೋಗಿಸಕೂಡದು. ಮೂರ್ಖತನದ ಅಪ್ಪಣೆಯು ಅಪ್ಪಣೆಯೆನಿಸಲಾರದು.

ಪಂಡಿತ—ಅಪ್ಪಣೆಯು ಕಾಯಿದೆಯ ಪ್ರಕಾರವೇ ಇದ್ದರೂ, ಮೂರ್ಖತನದ್ದಾಗಿರಬಹುದು.

ಮ್ಯಾಜಿಸ್ಟ್ರೇಟ—ನೀವು ಆ ಶಬ್ದವನ್ನು ಉಪಯೋಗಿಸಬಾರದು.

ಪಂಡಿತ—ಈ ಅಪ್ಪಣೆಯು ನ್ಯಾಯವಿಲ್ಲದ್ದು. ಅನುಪಯೋಗವಾದದ್ದೂ ಆಗಿರುವದು, ಇದನ್ನು ಕೋರ್ಟಿನಲ್ಲಿ ರುಜುವಾತುಮಾಡಿಕೊಡಲು ಸಿದ್ಧನಾಗಿರುವ ಯಾವ ಪ್ರಜೆಯು ಬೇಕಾದರೂ ಅಂಥ ಅಪ್ಪಣೆಯನ್ನು ಧಿಕ್ಕರಿಸಬಹುದು.

ಕಡೆಗೆ ಮ್ಯಾಜಿಸ್ಟ್ರೇಟರು ಆ ಪ್ರಶ್ನೆಗೆ ಅವಕಾಶಕೊಡಲಿಲ್ಲ.

ಪಂಡಿತರು (ಪುನಃ)—ಮಹಾತ್ಮರು ದಸ್ತಗಿರಿಯಾದ ಮೇಲೆ ಹಾರ್ನ್‌ಬಿರೋಡಿನಲ್ಲಿ ಉತ್ಸವವನ್ನು ಮಾಡಲು ಅವಕಾಶವನ್ನು ಕೊಟ್ಟಿದ್ದುದು ನಿಮಗೆ ಗೊತ್ತೇ?

ಮಿ|| ಹೋಂ—ಗೊತ್ತುಂಟು.

ಪಂಡಿತಜೀ—ಹಾರ್ನ್‌ಬಿರೋಡಿನಲ್ಲಿ ಉತ್ಸವವನ್ನು ತೆಗೆಯುವಂತೆ ಇದುವರೆಗೆ ಎಷ್ಟು ಸಾರೆ ತಡೆದಿರುವಿರಿ!

ಮಿ|| ಹೋಂ—ನನಗೆ ತಿಳಿದಮಟ್ಟಿಗೆ ಇದೇ ಮೊದಲನೆಯ ಸಾರೆ.

ಮ್ಯಾಜಿಸ್ಟ್ರೇಟ—ಈ ಪ್ರಶ್ನೆಗಳು ಕೇಸಿಗೆ ಸಂಬಂಧಪಟ್ಟವುಗಳಲ್ಲ! ಅವುಗಳಿಗೆ ನಾನು ಅವಕಾಶಕೊಡುವದಿಲ್ಲ.

ಪಂಡಿತಜೀ—ಕೋಟೆಯ ಪ್ರಾಂತದಲ್ಲಿ ವಾಸಿಸುವ ಹಿಂದೂ ಜನಗಳ ಸಂಖ್ಯೆಯೆಷ್ಟು?

ಮ್ಯಾಜಿಸ್ಟ್ರೇಟ—ಈ ಪ್ರಶ್ನೆಗೂ ನಾನು ಅವಕಾಶ ಕೊಡುವದಿಲ್ಲ.

ಪಂಡಿತರು ಮುಂದೆ ಏನೂ ಪ್ರಶ್ನೆಮಾಡಲಿಲ್ಲ.

ಅನಂತರ ಮ್ಯಾಜಿಸ್ಟ್ರೇಟರು "ಸಂಗ್ರಾಮಕೂಟ" ದ ಪ್ರೆಸಿಡೆಂಟರಾದ ಮಿಸೆಸ್ ಹಂಸಾಮೆಹತಾರವರಿಗೆ ಕಮಿಷನರವರು ಬರೆದ ಪತ್ರವು ಸಾಮಾನ್ಯವಾದ ಒಂದು ವಿಜ್ಞಾಪನಾಪತ್ರಿಕೆಯಂತೆ ಇರುವದೆಂದೂ ಹಿಂದೆ ಯಾವಾಗಲಾದರೂ ಇಂಥ ಪತ್ರಗಳೇ ಕ್ರಮಪ್ರಕಾರವಾದ ಅಪ್ಪಣೆಯಂತೆ ಭಾವಿಸಲ್ಪಟ್ಟಿದ್ದರೆ ಅದಕ್ಕೆ ತಕ್ಕ ರುಜುವಾತುಗಳನ್ನು ಕೊಡಬೇಕೆಂದೂ ಪ್ರಾಸಿಕ್ಯೂಟರವರಿಗೆ ಹೇಳಿ ವಿಚಾರಣೆಯನ್ನು ಮಧ್ಯಾಹ್ನ 3-30 ಕ್ಕೆ ಮುಂದುವರಿಸಿದರು.

3-30 ಘಂಟೆಗೆ ಪ್ರಾಸಿಕ್ಯೂಟರವರು ತಮಗೆ ವಾದಮಾಡಲು ಸೋಮವಾರದವರೆಗೆ ಅವಕಾಶಕೊಡಬೇಕೆಂದು ಕೇಳಿಕೊಂಡರು.

ಮಿ|| ಪಟೇಲ್ ಮತ್ತು ಮಾಳವೀಯರವರು ಇದಕ್ಕೆ ತಕರಾರು ಮಾಡಿದರು. ಮ್ಯಾಜಿಸ್ಟ್ರೇಟರು ಅವಕಾಶವನ್ನು ಕೊಟ್ಟರು. ಅನಂತರ ಪೋಲೀಸ್ ಕಮಿಷನರವರು ಕರೆಯಿಸಲ್ಪಟ್ಟರು. ಕಮಿಷನರವರು ನಡೆದ ವಿದ್ಯಮಾನಗಳನ್ನು ತಿಳುಹಿಸಿ, ಆದಿನ ಪ್ರಾತಃಕಾಲ ತಾವು ಮಿ|| ಪಟೇಲರವರಿಗೆ ರಸ್ತೆಯಲ್ಲಿ ಜನರ ಮತ್ತು ಗಾಡಿಗಳ ಸಂಚಾರಕ್ಕೆ ಅಡ್ಡಿಯಾಗಿರುವದರಿಂದ ಉತ್ಸವವನ್ನು ಚದರಿಸುವಂತೆ ಹೇಳಿದರೆಂದೂ, ಮಿ|| ಪಟೇಲರವರು ಅದರಂತೆ ನಡೆಸದೆ ಇಬ್ಬಿಬ್ಬರು ನಾಲ್ಕು ನಾಲ್ಕು ಜನರಂತೆ ಹಾರ್ನ್‌ಬಿರೋಡಿನಲ್ಲಿ ಉತ್ಸವಮಾಡಿಕೊಂಡು ಹೋಗಲು ಅವಕಾಶಕೊಡಬೇಕೆಂಬು ಹೇಳಲು, ತಾವು ಅದಕ್ಕೆ ಒಪ್ಪದೆ ಉತ್ಸವವು ಅಕ್ರಮಕೂಟವೆಂದು ನಿರ್ಧರಿಸಬೇಕಾಯಿತೆಂದೂ ಹೇಳಿದರು.

ಪಂಡಿತಜೀ—ಉತ್ಸವವನ್ನು ತೆಗೆದವರಾರು?

ಕಮಿಷನರ್—ಸಂಗ್ರಾಮಕೂಟದವರು.

ಪಂಡಿತಜೀ—ವರ್ಕಿಂಗ್‌ಕಮಿಟಿಯ ಮೆಂಬರರು ಇದಕ್ಕೆ ಕಾರಣಭೂತರೆಂದು ನೀವು ತಿಳಿದಿರುವಿರಾ?

ಕಮಿಷನರ್—ಅದು ನನಗೆ ತಿಳಿಯದು.

ಮ್ಯಾಜಿಸ್ಟ್ರೇಟ—ಮುಂದಿನ ವಿಚಾರಣೆಯು ಸೋಮವಾರ ನಡೆಯುವದು. ನೀವು ಜಾಮೀನ್ ಕೊಡುವಿರಾ?

ಮುಖಂಡರು—ಇಲ್ಲ.

ಮುಂಬಯಿ, ಆಗಸ್ಟ್ 4.

ಮುಂದುವರಿಸಲ್ಪಟ್ಟ ವಿಚಾರಣೆಯು ಈದಿನ 11-40 ಕ್ಕೆ ಸರಿಯಾಗಿ ಪ್ರಾರಂಭವಾಯಿತು. ವಿಚಾರಣೆಯು ಪ್ರಾರಂಭವಾಗುವದಕ್ಕೆ ಬಹಳ ಹೊತ್ತಿಗೆ ಮುಂಚೆಯೇ ಕೋರ್ಟಿನಲ್ಲಿ ನೂರಾರು ಸ್ತ್ರೀಯರೂ, ವಕೀಲರೂ ಮತ್ತು ಮುಖ್ಯ ಮುಖ್ಯ ಪ್ರಜಾಪ್ರಮುಖರೂ ಹಾಜರಿದ್ದರು. ಮಿ|| ವಿಠಲಭಾಯಿ ಪಟೇಲ್ ಶ್ರೀಮತಿ ಕಸ್ತೂರಿಬಾಯಿಗಾಂಧಿ, ಶ್ರೀಮತಿ ಕಮಲಾ ಜವಾಹರಲಾಲ್‌ನೆಹರೂ ಮತ್ತು ಶ್ರೀಮತಿ ಹಂಸಾಮೆಹತಾರವರು ಬಂದಿದ್ದರು ಮುಖಂಡರನ್ನು 11-30 ಕ್ಕೆ ಸರಿಯಾಗಿ ಕೋರ್ಟಿಗೆ ಕರೆತಂದು ಮುಂಭಾಗದಲ್ಲಿಯ ಕುರ್ಚಿಗಳ ಮೇಲೆ ಕುಳ್ಳಿರಿಸಿದರು. ಪಂಡಿತ ಮಾಳವೀಯರವರ ಬಲಭಾಗದಲ್ಲಿ ಸರದಾರ್ ವಲ್ಲಭಭಾಯಿಯವರೂ, ಎಡಭಾಗದಲ್ಲಿ ಮಿ|| ವಿಠಲಭಾಯಿಯವರೂ ಕುಳಿತಿದ್ದರು.

ಮ್ಯಾಜಿಸ್ಟ್ರೇಟರು ಬಂದಕೂಡಲೇ ಪಂಡಿತ ಮಾಳವೀಯರವರು ಪೋಲೀಸರು ಉತ್ಸವವನ್ನು ಚದರಿಸಿದ ಸಮಯದಲ್ಲಿ ಮ್ಯಾಜಿಸ್ಟ್ರೇಟರು ಅಲ್ಲಿಯೇ ಇದ್ದರೆಂದು ವೃತ್ತಪತ್ರಿಕೆಗಳಲ್ಲಿ ಬಂದಿರುವ ವರ್ತಮಾನವು ನಿಜವೇ? ಎಂದು ಮ್ಯಾಜಿಸ್ಟ್ರೇಟರನ್ನು ಪ್ರಶ್ನೆಮಾಡಿದರು. ಮ್ಯಾಜಿಸ್ಟ್ರೇಟರು ತಾವು 7-30 ಘಂಟೆಯವರೆಗೆ ಮಾತ್ರ ಇದ್ದರೆಂದು ಹೇಳಿದರು. ಪಂಡಿತ ಮಾಳವೀಯರವರ ಮುಂದೆ ಮೇಜಿನ ಮೇಲೆ ಕಾಯಿದೆ ಪುಸ್ತಕಗಳ ಒಂದು ರಾಶಿಯಿದ್ದಿತು. ಮಾಳವೀಯರವರು ಆ ರಾಶಿಯ ಹಿಂದೆ ನಿಂತು ಉತ್ಸವವು ರಾತ್ರಿಯೆಲ್ಲಾ ರಸ್ತೆಯಲ್ಲಿಯೇ ನಿಂತಿತ್ತೆಂದೂ, ಮರುದಿನ ಪ್ರಾತಃಕಾಲ ಕಮಿಷನರವರು ಪುಣೆಯಿಂದ ಆಗತಾನೇ ಬಂದ ಹೋಂ ಮೆಂಬರ್ ಅರ್ನೆಸ್ಟ್ ಹಾಟ್ಸನ್‌ರವರೊಡನೆ ವಿಚಾರಮಾಡಿದನಂತರ ಜನರನ್ನು ಬಲಾತ್ಕಾರವಾಗಿ ಹೊಡೆದು ಚದರಿಸಿದರೆಂದೂ, ಹೋಂ ಮೆಂಬರವರ ಅಪ್ಪಣೆಯ ಪ್ರಕಾರ ಹೀಗೆ ಮಾಡಿದರೇ? ಎಂಬುದನ್ನು ತಿಳಿಯಬೇಕಾಗಿರುವದರಿಂದ ಸದರಿ ಸರ್ ಅರ್ನೆಸ್ಟ್ ಹಾಟ್ಸನ್‌ರವರನ್ನು ಕೋರ್ಟಿಗೆ ಕರೆಯಿಸಿ ವಿಚಾರಿಸಬೇಕೆಂದೂ ಕೇಳಿದರು.

ಸರದಾರ್ ವಲ್ಲಭಭಾಯಿ ಪಟೇಲ್ ಮತ್ತು ಇತರ ಮುಖಂಡರು ಈ ವಿಚಾರಣೆಗಳಿಂದ ವೃಥಾ ಕಾಲಹರಣವಾಗುತ್ತಿರುವದೆಂದೂ ಅಲ್ಲಿಯವರೆಗೆ ಮನುಷ್ಯರ ವಾಸಕ್ಕೆ ಯೋಗ್ಯವಲ್ಲದ ಪೋಲೀಸ್ ಲಾಕಪ್ಪಿನಲ್ಲಿರುವದು ಸಾಧ್ಯವಲ್ಲವೆಂದೂ ಈ ಚರ್ಚೆಗಳಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಹೇಳಿದರು.

ಮ್ಯಾಜಿಸ್ಟ್ರೇಟ—ಮಿ|| ಮಾಳವೀಯರವರೇ! ನಿಮ್ಮ ಪಕ್ಷವು ತೀರ ದುರ್ಬಲವಾಗಿರುವದು.

ಪಂಡಿತಜೀ—ಪ್ರತಿಯೊಬ್ಬ ಅಪರಾಧಿಗೂ ತನ್ನ ಪಕ್ಷವನ್ನು ಹಿಡಿದು ವಾದಿಸುವ ಅಧಿಕಾರವು ಸಂಪೂರ್ಣವಾಗಿರುವದು. ನನ್ನ ಜೊತೆಯವರ ಇಚ್ಛೆಗೆ ವಿರೋಧವಾಗಿಯಾದರೂ ನಾ ಇದನ್ನು ಚರ್ಚಿಸುವೆನು.

ಮ್ಯಾಜಿಸ್ಟ್ರೇಟ—ಕಮಿಷನರ್ ಮಿ|| ಹೀಲಿಯವರು ತಾವು ಸರ್ ಇ. ಹಾಟ್ಸನ್‌ರವರೊಡನೆ ಮಾತನಾಡಿದುದುಂಟೆಂದು ಒಪ್ಪಿಕೊಂಡರೆ ನಿಮಗೆ ಸಮಾಧಾನವಾಗುವದೇ?

ಪಂಡಿತಜೀ—ಸರ್ ಇ. ಹಾಟ್ಸನ್‌ರವರನ್ನು ಕರೆಯಿಸುವದೇ ಉತ್ತಮವಾಗಿ ತೋರುವದು.

ಮ್ಯಾಜಿಸ್ಟ್ರೇಟ—ಮೊದಲು ಮಿ|| ಹೀಲಿಯವರನ್ನು ವಿಚಾರಣೆಮಾಡುವೆವು. ಅದರಿಂದ ನಿಮಗೆ ಸಮಾಧಾನವಾಗದಿದ್ದರೆ, ಆ ಮೇಲೆ ಪುನಃ ಯೋಚಿಸಲಾಗುವದು.

ಅದರಂತೆ ಕೂಡಲೇ ಮಿ|| ಹೀಲಿಯವರಿಗೆ ಹೇಳಿಕಳುಹಿಸಿದರು.

ಪಂಡಿತಜೀ—(ಸೂಪರಿಂಟೆಂಡೆಂಟ್ ಮಿ|| ಹೀಲಿಯವರನ್ನು ಕುರಿತು) ಸರ್ ಇ. ಹಾಟ್ಸನ್‌ರವರಿಗೆ ಕೂಡಲೇ ಮುಂಬಯಿಗೆ ಬರುವಂತೆ ನೀವು ತಂತೀವರ್ತಮಾನವನ್ನು ಕಳುಹಿಸಿದ್ದಿರಾ?

ಮಿ|| ಹೀಲಿ—ಇಲ್ಲ. ಅವರೆ ಮರುದಿವಸ ಅವರು ಮುಂಬಯಿಗೆ ಬರುವರೆಂಬುದು ಮಾತ್ರ ನನಗೆ ತಿಳಿದಿದ್ದಿತು!

ಪಂಡಿತಜೀ—ಸರ್ ಅರ್ನೆಸ್ಟ್‌ರವರು ಶನಿವಾರ ಪ್ರಾತಃಕಾಲ ಮುಂಬಯಿಗೆ ಏತಕ್ಕೆ ಬಂದರೆಂಬುದನ್ನು ನೀವು ಬಲ್ಲಿರಾ?

ಮಿ|| ಹೀಲಿ—ಅವರು ಈ ಗಲಾಟೆಯುಸಲುವಾಗಿಯೇ ಬಂದರು.

ಪಂಡಿತಜೀ—ಸರ್ ಇ. ಹಾಟ್ಸನ್‌ರವರಿಗೆ ವರ್ತಮಾನವನ್ನು ಕಳುಹಿಸಿದವರಾರೆಂಬುದನ್ನು ನೀವು ಹೇಳಬಲ್ಲಿರಾ?

ಮ್ಯಾಜಿಸ್ಟ್ರೇಟ—ಅದು ಗುಟ್ಟಾದ ವರ್ತಮಾನವಾದರೆ ಅದನ್ನು ತಿಳುಹಿಸುವ ಆಗತ್ಯವಿಲ್ಲ.

[6ನೇ ಪುಟವನ್ನು ನೋಡಿ.]

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ರಮಣೀಯ ಊದುಬತ್ತಿಗಳು, ಪರಿಮಳದ್ರವ್ಯಗಳು ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಷ್ಟಸುಗಂಧ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾಲದಲ್ಲಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬಜಾರು ಧಾರಣೆಯಂತೆ ದವಾಖಿಸಲಾಗುತ್ತೆ.

ಕ್ಯಾಟಲಾಗು ಉಚಿತ. 2

ಕೆ. ಬಸಪ್ಪ ಮತ್ತು ವೈ. ಬಸಪ್ಪ,

3 ಸುಗಂಧವ್ಯಾಪಾರಿಗಳು,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಆಗಸ್ಟ ತಾ|| ೧೧ನೆಯ ಸೋಮವಾರ

ವರ್ಣಾಶ್ರಮಪ್ರಕಾಶಿಕಾ.

ಶ್ರೀಗುರುವಿನಿಂದ ಯಾವನು ದೀಕ್ಷೆಯನ್ನು ಪಡೆಯುವನೋ ಅವನು ತನ್ನ ಪೂರ್ವಜಾತಿ ಕುಲಾಶ್ರಮಗಳಿಂದ ಬಿಡಲ್ಪಡುವನು. ಅಂಥ ದೀಕ್ಷಿತನಾದ ಮಾನವನಿಗೆ ಬ್ರಾಹ್ಮಣಾದಿ ವರ್ಣವ್ಯವಹಾರವಾಗಲಿ, ಬ್ರಹ್ಮಚರ್ಯಾದಿ ವ್ಯವಹಾರವಾಗಲಿ ಒಂದೂ ಇಲ್ಲವೆಂದು ಕೆಲವರು ಹೇಳಲು ಆರಂಭಮಾಡಿರುತ್ತಾರೆ. ಈ ವಿಷಯದಲ್ಲಿ ನಾನಾವಿಧಗಳಾದ ಕಟ್ಟಿಗೆಗಳು ಬೆಂಕಿಯಲ್ಲಿ ಸುಟ್ಟುಹೋದನಂತರ ಆ ಕಟ್ಟಿಗೆಗಳ ಪೂರ್ವಜಾತಿಗಳೆಲ್ಲವೂ ನಷ್ಟವಾಗಿ ಬೆಂಕಿಯೇ ಆಗುವಂತೆ ಶಿವದೀಕ್ಷೆಯನ್ನು ಹೊಂದಿದಮೇಲೆ ತನ್ನ ಪೂರ್ವಜಾತಿ ಕುಲಗಳೆಲ್ಲವೂ ನಷ್ಟವಾಗಿ ಶಿವಸ್ವರೂಪನೇ ಆಗುತ್ತಾನೆಂಬ ಅರ್ಥವುಳ್ಳ "ಯಥೇಂಧನೇಷು ದಗ್ಧೇಷು ಕೋವಾಭೇದಃ ಪ್ರಕೀರ್ತ್ಯತೇ" ಮುಂತಾದ ಸಿದ್ಧಾಂತದಲ್ಲಿ ಅಲ್ಲಲ್ಲಿಯೇ ಹೇಳಲ್ಪಟ್ಟ ಕೆಲಶ್ಲೋಕಗಳನ್ನು ಮಾತ್ರ ತೆಗೆದುಕೊಂಡು ಪ್ರಕರಣವನ್ನು ವಿಚಾರ ಮಾಡದೆಯೂ ಪೂರ್ವಾಪರ ಸಂದರ್ಭಗಳನ್ನು ವಿಚಾರ ಮಾಡದೆಯೂ ತಮ್ಮ ಉದ್ದಿಷ್ಟಸಾಧನೆಗಳನ್ನು ಮಾಡಲುಪಕ್ರಮಿಸಿದ್ದಾರೆ. ಹೀಗೆ ತಮತಮಗುಚಿತಗಳಾದ ಶ್ಲೋಕಗಳನ್ನು ಮಾತ್ರ ಪ್ರಮಾಣವನ್ನಾಗಿ ಸ್ವೀಕರಿಸುತ್ತ ತಮ್ಮ ಉದ್ದಿಷ್ಟಕ್ಕೆ ಭಂಗಕಾರಿಗಳಾದ ಶ್ಲೋಕಗಳನ್ನು ಕೈಸಂದಿಯಲ್ಲಿ ಬಿಡುತ್ತಬಂದರೆ ಇದು ಶಾಸ್ತ್ರಮರ್ಯಾದೆಯನ್ನು ಅತಿಕ್ರಮಿಸಿದಂತಾಗುತ್ತದೆಯಲ್ಲದೆ ಇದರಿಂದೇನೂ ಸಿದ್ಧಿಸಿದಂತಾಗುವುದಿಲ್ಲ. ಶಾಸ್ತ್ರದಲ್ಲಿ ವಿಧಿವಾದನೆಂತಲೂ ಅರ್ಥವಾದವೆಂತಲೂ ಎರಡು ಭಾಗಗಳುಂಟು. ಮಕ್ಕಳಿಗೆ ಔಷಧ ಸೇವನೆಯಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವುದಕ್ಕಾಗಿ ಭಕ್ಷ್ಯಭೋಜ್ಯಾದಿಗಳಲ್ಲಿ ಔಷಧಿಯನ್ನು ಸೇರಿಸಿಕೊಡುವಂತೆ ಉತ್ತರೋತ್ತರ ಮುಕ್ತಿಸಂಪಾದನೆಗೆ ಅಂಗವೆನಿಸಿದ ಶಿವದೀಕ್ಷಾದಿಗಳಲ್ಲಿ ಮಾನವರಿಗೆ ಪ್ರವೃತ್ತಿಯನ್ನು ಹುಟ್ಟಿಸುವುದಕ್ಕಾಗಿ ಸಿದ್ಧಾಂತ ಗ್ರಂಥಗಳಲ್ಲಿ "ಯಥೇಂಧನೇಷು ದಗ್ಧೇಷು" ಮುಂತಾದ ಪ್ರರೋಚಕವಾಕ್ಯಗಳು ಹೇಳಲ್ಪಟ್ಟಿರುತ್ತವೆ. ಇಂಥವುಗಳು ವಿಧಿವಾಕ್ಯಗಳೆಂದು ಹೇಳಲು ಆಗುವುದಿಲ್ಲ. ಪ್ರಕರಣಾನುಸಾರವಾಗಿ ಆಯಾಯ ವಸ್ತುವಿನ ಪ್ರಶಂಸೆಯನ್ನು ಮಾಡುವುದರಲ್ಲಿಯೇ ಅರ್ಥವಾದಕ್ಕೆ ತಾತ್ಪರ್ಯವಲ್ಲದೆ ತನ್ನ ವಾಕ್ಯಾರ್ಥದಲ್ಲಿ ಪ್ರಾಮಾಣ್ಯವಿಲ್ಲವು. ಯಥೇಂಧನೇಷು ದಗ್ಧೇಷು "ನತತ್ರ ಜಾತಿಭೇದೋಸ್ತಿ" ಮುಂತಾದ ವಾಕ್ಯಗಳು ಕೇವಲ ಅರ್ಥವಾದಗಳಲ್ಲದೆ ವಿಧಿವಾದಗಳಲ್ಲವು. ದೀಕ್ಷಾಪ್ರಕರಣದಲ್ಲಿ ಹೇಳಿದ ಇಂಥ ವಾಕ್ಯಗಳಂತೆ ಲಿಂಗಧಾರಣ ಪ್ರಕರಣ ಭಸ್ಮಧಾರಣ ಪ್ರಕರಣರುದ್ರಾಕ್ಷಧಾರಣ ಪ್ರಕರಣ ಮಂತ್ರಪ್ರಕರಣಗಳಲ್ಲಿಯೂ ಹೇಳಲ್ಪಟ್ಟಿರುತ್ತವೆ. ಅವುಗಳಲ್ಲಿ ಕೆಲವನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ತೋರಿಸಬೇಕಾಗಿದೆ. "ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚೈವೇತ್ಯಜಾತಯಃ| ಲಿಂಗಧಾರಣಮಾತ್ರೇಣ ಶಿವಾ ಏವ ನಸಂಶಯಃ" ಯಾರು ಗುರುವಿನಿಂದ ಶಿವಲಿಂಗವನ್ನು ಪಡೆಯುತ್ತಾರೆಯೋ ಅವರು ಬ್ರಾಹ್ಮಣರಾಗಲಿ ಕ್ಷತ್ರಿಯರಾಗಲಿ ವೈಶ್ಯರಾಗಲಿ ಶೂದ್ರರಾಗಲಿ ಅಂತ್ಯಜರಾಗಲಿ ಎಲ್ಲರೂ ಶಿವಸ್ವರೂಪರೇ ಆಗಿರುವರೆಂಬಲ್ಲಿ ಯಾವ ಸಂಶಯವೂ ಇಲ್ಲ. ಈ ಶ್ಲೋಕದಲ್ಲಿ "ಲಿಂಗಧಾರಣಮಾತ್ರೇಣ" ಎಂಬ ಪದವಿರುವುದರಿಂದ ಲಿಂಗಸಂಬಂಧವಾದ ಯಾವ ಅನುಷ್ಠಾನವೂಬೇಕಿಲ್ಲ. ಲಿಂಗಧಾರಣವೊಂದರಿಂದಲೇ ಶಿವಸ್ವರೂಪತ್ವಸಿದ್ಧಿಯುಂಟಾಗುವುದೆಂದು ಸ್ಪಷ್ಟಾರ್ಥವಾಗುತ್ತದೆ. ಮತ್ತು "ಸಕೃದುಚ್ಚಾರಮಾತ್ರೇಣ ಪಂಚಾಕ್ಷರ ಮಹಾಮನೋಃ| ಸರ್ವೇಷಾಮಪಿ ಜಂತೂನಾಂ ಸರ್ವಪಾಪಕ್ಷಯೋಭವೇತ್" ಯಾರು ತಮ್ಮ ಜನ್ಮಾವಧಿಯಲ್ಲಿ ಒಂದಾಸಾರೆ ಪಂಚಾಕ್ಷರಮಹಾಮಂತ್ರವನ್ನು ಉಚ್ಚರಿಸುವರೋ ಅವರು ಸರ್ವ ಪಾಪಗಳಿಂದ ಬಿಡಲ್ಪಟ್ಟವರಾಗಿ ಪರಿಶುದ್ಧಾತ್ಮರಾಗುವರು. ಮತ್ತು "ಬ್ರಹ್ಮಹಾ ಮದ್ಯಪಾಯೀಚ ಸ್ವರ್ಣಹೃದ್ಗುರುತಲ್ಪಗಃ| ಮಾತೃಹಾ ಪಿತೃಹಾಚೈವ ಭ್ರೂಣಹಾ ಕೃತಘಾತಕಃ| ರುದ್ರಾಕ್ಷಧಾರಣಾದೇವ ಮುಚ್ಯತೇ ಸರ್ವಪಾತಕೈಃ||" ಯಾರು ರುದ್ರಾಕ್ಷವನ್ನು ಧರಿಸುತ್ತಾರೆಯೋ ಅವರು ಬ್ರಹ್ಮಹತ್ಯವನ್ನು ಮಾಡಿರಲಿ, ಮದ್ಯಪಾಯಿಗಳಾಗಿರಲಿ, ಗುರುಪತ್ನೀಲೋಲರಾಗಿರಲಿ, ಮಾತೃಪಿತೃಹತ್ಯಾದಿಗಳನ್ನು ಮಾಡಿರಲಿ ಈ ಎಲ್ಲ ಪಾಪಗಳಿಂದ ಬಿಡುಗಡೆಯನ್ನು ಹೊಂದುವರು. ಮತ್ತು "ತಥಾಚೇತ್‌ಭಸ್ಮನಾ ಕುರ್ಯಾತ್ ಸ ರುದ್ರೋನಾತ್ರ ಸಂಶಯಃ" ಯಾರು ಭಸ್ಮಧಾರಿಗಳೋ ಅವರು ಸಾಕ್ಷಾದ್ರುದ್ರರೆಂಬಲ್ಲಿ ಏನೂ ಸಂಶಯವಿಲ್ಲ. ಹೀಗೆ ಸಿದ್ಧಾಂತಶಿಖಾಮಣ್ಯಾದಿ ಗ್ರಂಥಗಳಲ್ಲಿ ಪ್ರಕರಣವಶದಿಂದ ಆಯಾಯ ಭಸ್ಮರುದ್ರಾಕ್ಷಾದಿ ವಸ್ತುಗಳನ್ನು ಬೇಕಾದಷ್ಟು ಕೊಂಡಾಡಿರುವರು. ಇಂಥ ವಾಕ್ಯಗಳೆಲ್ಲವೂ ಮೋಕ್ಷಾಂಗವೆನಿಸಿದ ದೀಕ್ಷಾ ಲಿಂಗಧಾರಣ ರುದ್ರಾಕ್ಷಧಾರಣಭಸ್ಮಧಾರಣಾದಿಗಳಲ್ಲಿ ಮುಮುಕ್ಷು ಪುರುಷರಿಂದ ಅವಶ್ಯೋಪಾದೇಯವೆಂಬುದನ್ನು ತಿಳುಹಿಸುವುದಕ್ಕಾಗಿಯೇ ಆಯಾಯ ವಸ್ತುಗಳ ಪ್ರಶಂಸಾಕರವಾದ ವಾಕ್ಯಗಳಲ್ಲದೆ ವಿಧಿವಾಕ್ಯಗಳಲ್ಲವು. ಹಾಗೆ ಇಂಥ ವಾಕ್ಯಗಳನ್ನು ವಿಧಿವಾಕ್ಯಗಳೆಂದೇ ಅರ್ಥಮಾಡುವ ಸಂದರ್ಭದಲ್ಲಿ ಶಿವದೀಕ್ಷೆಯನ್ನು ಹೊಂದಿದ ಮೇಲೆ ವೀರಶೈವನಿಂದ ಅವಶ್ಯಕವಾಗಿ ಆಚರಿಸಲ್ಪಡಬೇಕಾದ ಬಹುದುರ್ಗಮವಾದ ಬ್ರಹ್ಮವಿದ್ಯಾಂಗವಾದ ಷಟ್‌ಸ್ಥಲಾಚರಣಗಳು ಅವಶ್ಯಕಗಳಲ್ಲವೆಂದೇ ಹೇಳಬೇಕಾಗುತ್ತದೆ. ಶಿವದೀಕ್ಷೆಯಾದ ಉತ್ತರಕ್ಷಣವೇ ರುದ್ರಸ್ವರೂಪವು ಸಿದ್ಧಿಸಿದಮೇಲೆ, ಪುನಃ ರುದ್ರತ್ವಪ್ರಾಪ್ತಿಗಾಗಿ ಷಟ್‌ಸ್ಥಲೋಪಾಸನಾಮಾರ್ಗವು ಪಿಷ್ಟಪೇಷಣದಂತೆ ಪುನರುಕ್ತಿಯಾಗುತ್ತದೆ. ಲಿಂಗಧಾರಣವೊಂದರಿಂದಲೇ ಶಿವತ್ವಸಿದ್ಧಿಯುಂಟಾದ ಮೇಲೆ ಪುನಃ ಲಿಂಗಸಂಬಂಧವಾದ ಕ್ರಿಯಾನುಷ್ಠಾನವೇಕೆ? ಭಸ್ಮಧಾರಣವೊಂದರಿಂದಲೇ ರುದ್ರತ್ವಪ್ರಾಪ್ತಿಯಾದ ಮೇಲೆ ಮುಂದಣ ಉಪಾಸನಾಮಾರ್ಗಗಳೆಂದೇನು? ರುದ್ರಾಕ್ಷಧಾರಣವೊಂದರಿಂದಲೇ ಸರ್ವಪಾಪಕ್ಷಯವಾದಮೇಲೆ ಪುನಃ ಪಾಪಕ್ಷಯಕರವಾದ ಉಪಾಸನಾಮಾರ್ಗವನ್ನೇಕೆ ಅನುಸರಿಸಬೇಕು? ಅಷ್ಟಷ್ಟರಿಂದಲೇ ಕೃತಕೃತ್ಯನಾಗಿ ಹೋದಮೇಲೆ ಶಿವದೀಕ್ಷಾಪೂರ್ವಕವಾಗಿ ಲಿಂಗವನ್ನು ಧರಿಸಿದನಂತರ ಮುಕ್ತಿಸಿದ್ಧಿಗಾಗಿ ಗುರುವಿನ ಅಜ್ಞೆಯಂತೆ ಯಾವಜ್ಜೀವವೂ ತಾನು ಅಂಗೀಕರಿಸಿದ ಅಪ್ರಾಕೃತವ್ರತಗಳು ಲೋಪವಾಗದಂತೆ ನಡೆಯಿಸುತ್ತ ಮೆಲ್ಲಮೆಲ್ಲನೆ ಷಟ್‌ಸ್ಥಲಮಾರ್ಗವನ್ನು ಹೊಂದಿ ಶಿವಸ್ವರೂಪವನ್ನು ಪಡೆಯುವನು. ಈ ಮಧ್ಯೆ ವ್ರತ ಲೋಪವಾದರೆ ಪತಿತನಾಗುವನೆಂಬ ವಾಕ್ಯಗಳಿಗೆ ಅರ್ಥವಿಲ್ಲದಂತಾಗುವುದಿಲ್ಲವೆ? ತಾನು ಕ್ರಮವಾಗಿ ಹೊಂದಬೇಕಾದ ಸ್ಥಿತಿಯನ್ನು ಮೊದಲೇ ಹೊಂದಿದ ಮೇಲೆ ಮುಂದಣ ಪ್ರಯತ್ನವೇಕೆ? ನಿಧಿಯನ್ನು ನೋಡುವುದಕ್ಕಾಗಿ ಅಂಜನವು ಬೇಕು. ಮೊದಲು ನಿಧಿಯೇ ತನ್ನ ಕೈವಶವಾದ ಮೇಲೆ ಅಂಜನಾದಿಗಳೇತಕ್ಕೆ? ಮತ್ತು ಶಿವದೀಕ್ಷೆಯಾದ ಉತ್ತರಕ್ಷಣದಲ್ಲಿಯೇ ಮಾಯಾಗ್ರಂಥಿಯು ಬಿಚ್ಚಿಹೋದ ಮೇಲೆ ಆ ಕ್ಷಣದಲ್ಲಿಯೇ ಅಮಂಗಲವಾದ ಕೋಪತಾಪಗಳು ಹೊರಟುಹೋಗಿ ಶಿವನ ಸರ್ವಜ್ಞತ್ವಾದಿ ಕಲ್ಯಾಣ ಗುಣಗಳು ಉದಯಿಸಲೇಬೇಕಾಗುವದು. ಇದರ ಮುಂದೆ ತಾನು ಸಾಧಿಸಬೇಕಾದ ಪುರುಷಾರ್ಥವೇನೂ ಉಳಿದಂತಾಗಲಿಲ್ಲ. ಹೀಗೆ ಹೇಳಲು ಅನುಭವ ವಿರೋಧವೂ ಶಾಸ್ತ್ರವಿರೋಧವೂ ಆಗುವುದು. ಶಿವದೀಕ್ಷೆಯಾದಮಾತ್ರದಿಂದ ಶಿವನಾಗುತ್ತಾನೆ. ಲಿಂಗಧಾರಣಮಾತ್ರದಿಂದ ಶಿವನಾಗುತ್ತಾನೆ. ಭಸ್ಮಧಾರಣಮಾತ್ರದಿಂದ ರುದ್ರನಾಗುತ್ತಾನೆ. ರುದ್ರಾಕ್ಷಧಾರಣಮಾತ್ರದಿಂದ ಪರಿಶುದ್ಧಾತ್ಮನಾಗುತ್ತಾನೆ. ಒಂದೇಸಾರೆ ಮಂತ್ರವನ್ನುಚ್ಚರಿಸುವುದರಿಂದ ಸರ್ವಪಾಪಗಳಿಂದ ಬಿಡುಗಡೆಯಾಗುತ್ತಾನೆ. ಮೊದಲಾದ ಪ್ರಶಂಸಾವಾಕ್ಯಗಳೊತ್ತಟ್ಟಿಗಿರಲಿ ಇವೇ ಗ್ರಂಥಗಳಲ್ಲಿ ಶಿವನ ಧ್ಯಾನದಲ್ಲಿ ಪ್ರವೃತ್ತಿಯನ್ನು ಹುಟ್ಟಿಸುವ ಅವಸರದಲ್ಲಿ "ಅಪಿವಾ ಯಶ್ಚಂಡಾಲಶ್ಶಿವೇತಿ ವಾಚಂ ವದೇತ್ತೇನ ಸಹ ಸಂವಸೇತ್ ತೇನ ಸಹ ಸಂವಿಶೇತ್ ತೇನ ಸಹಭುಂಜೀತ" ಯಾರು ಶಿವ ಎಂದು ಬಾಯಿಯಲ್ಲಿ ಉಚ್ಚರಿಸುವರೋ ಅವರು ಚಂಡಾಲರಾದರೂ ಅವರ ಜೊತೆಯಲ್ಲಿ ತಿರುಗಾಡು. ಅವರ ಜೊತೆಯಲ್ಲಿ ಮಲಗು. ಅವರ ಜೊತೆಯಲ್ಲಿ ಊಟಮಾಡು ಎಂಬ ಶ್ರುತ್ಯರ್ಥವನ್ನು ಸಹ ಸಿದ್ಧಾಂತಶಿಖಾಮಣ್ಯಾದಿ ಗ್ರಂಥಗಳಲ್ಲಿ ಉದಾಹರಿಸಿರುವರು. ಇಂಥ ವಾಕ್ಯಗಳನ್ನು ಶಿವನಾಮೋಚ್ಚರಣವು ಎಲ್ಲರಿಂದಲೂ ಉಪಾದೇಯವೆಂದು ಗ್ರಹಿಸದೆ ವಿಧಿವಾಕ್ಯಗಳೆಂದೇ ಅರ್ಥಮಾಡುತ್ತಹೋದರೆ ಅರ್ಥವಾದಕ್ಕೆ ಜಲಾಂಜಲಿಯನ್ನು ಕೊಡುವ ಪ್ರಸಕ್ತಿಯು ಬಂದೊದಗುವದು. ಮತ್ತು ಲಿಂಗಧಾರಣವಿಲ್ಲದಿದ್ದರೂ ಕೇವಲ ಶಿವನಾಮವನ್ನು ಉಚ್ಚರಿಸುವವರೊಡನೆಯೂ ಕೇವಲ ಭಸ್ಮಧಾರಿಗಳೊಡನೆಯೂ ಕೇವಲ ರುದ್ರಾಕ್ಷಧಾರಿಗಳೊಡನೆಯೂ ಕೇವಲ ಮಂತ್ರೋಚ್ಚಾರಕರೊಡನೆಯೂ ಯಾವ ಭೇದವನ್ನೆಣಿಸದೆ ಸವ್ಯವಹಾರಾದಿಗಳನ್ನೂ ಮಾಡಬೇಕಾಗುವದು. ಆದ್ದರಿಂದ ಸಿದ್ಧಾಂತ ಗ್ರಂಥಗಳಲ್ಲಿ ಇಂಥ ಶ್ಲೋಕಗಳು ಎಲ್ಲಿದ್ದರೂ ಆ ಶ್ಲೋಕಗಳೆಲ್ಲವೂ ಮೋಕ್ಷಾಂಗವೆನಿಸಿದ ದೀಕ್ಷಾ ಲಿಂಗಧಾರಣ ಭಸ್ಮರುದ್ರಾಕ್ಷ ಮಂತ್ರಗಳ ಸ್ವತಃ ಸಿದ್ಧವಾದ ಪಾವಿತ್ರ್ಯವನ್ನು ಹೇಳುವುದಕ್ಕಾಗಿಯಲ್ಲದೆ ತಮ್ಮ ಪೂರ್ವಜಾತಿ ಕುಲಾಶ್ರಮಗಳನ್ನು ಕಳೆಯುವುದಕ್ಕಲ್ಲವೆಂದೇ ತಿಳಿಯಬೇಕಾಗಿದೆ. ಇಂಥ ಪ್ರರೋಚಕ ವಾಕ್ಯಗಳು ಈ ವೀರಶೈವ ಸಿದ್ಧಾಂತದಲ್ಲಿ ಮಾತ್ರ ಇರದೆ ದ್ವೈತಾದಿ ಸಕಲ ಸಿದ್ಧಾಂತಗ್ರಂಥಗಳಲ್ಲಿಯೂ ಕಂಡುಬರುತ್ತವೆ. ವೈಷ್ಣವ ದೀಕ್ಷೆಯನ್ನು ಪಡೆದು ತಪ್ತಮುದ್ರಾದಿಗಳನ್ನು ಧರಿಸಿದ ಯಾವನೊಬ್ಬನು ದಾಸನಾಗಿದ್ದರೂ ಅವನನ್ನು ಸಾಕ್ಷಾದ್ವಿಷ್ಣುವೆಂದೇ ತಿಳಿಯಬೇಕೆಂದು ಹೇಳಲ್ಪಟ್ಟಿದ್ದರೂ ಅವುಗಳೆಲ್ಲವೂ ಮುದ್ರಾದಿಗಳ ಪಾವಿತ್ರ್ಯವನ್ನು ಪ್ರತಿಪಾದಿಸುತ್ತವೆಯಲ್ಲದೆ ಅವರವರಲ್ಲಿರುವ ಜಾತಿಕುಲಾಶ್ರಮಗಳ ಭಂಗವನ್ನು ಮಾಡಲು ಪ್ರವರ್ತಿಸವು. ಇದರಂತೆ "ಯಥೇಂಧನೇಷು ದಗ್ಧೇಷು" ಮುಂತಾದ ದೀಕ್ಷಾಪ್ರಕರಣದ ವಾಕ್ಯಗಳು ಅರ್ಥವಾದಗಳಲ್ಲದೆ ತನ್ನ ಕುಲಕ್ರಮದಿಂದ ಬಂದ ಜಾತ್ಯಾಶ್ರಮಗಳನ್ನು ನಾಶಪಡಿಸಿ ವೀರಶೈವಮತಸ್ಥರನ್ನೆಲ್ಲಾ ಒಂದೇ ಕೂಟಕ್ಕೆ ಸೇರಿಸಲು ಅವಕಾಶವನ್ನು ಕೊಡುವ ವಿಧಿವಾಕ್ಯಗಳಲ್ಲವೆಂದು ತಿಳಿಯುವುದೇ ಶಾಸ್ತ್ರಮರ್ಯಾದೆಯೂ ಲೋಕಮರ್ಯಾದೆಯೂ ಆಗಿರುತ್ತದೆ. ಈ ವಿಷಯದಲ್ಲಿ ತಿಳುಹಿಸಬೇಕಾದ ಕೆಲವಂಶಗಳನ್ನು ಮುಂದೆ ಪ್ರಕಟಿಸುತ್ತೇವೆ.

ಸ್ವಾತಂತ್ರ್ಯಸಂಗ್ರಾಮವಾರ್ತೆ.

ಅಸಹಕಾರ ಸತ್ಯಾಗ್ರಹ ಚಳವಳಿಯ ದೆಸೆಯಿಂದ ಕಳೆದ 2 ತಿಂಗಳಲ್ಲಿ ಎಕ್ಸೈಜ್ ಡಿಪಾರ್ಟಮೆಂಟಿನಲ್ಲಿ 30 ಲಕ್ಷ, ಸ್ಟಾಂಪ್ ರಿಜಿಸ್ಟ್ರೇಷನ್ ಮೊದಲಾದ ಬಾಬುಗಳಲ್ಲಿ 16 ಲಕ್ಷ, ಒಟ್ಟು 46 ಲಕ್ಷ ರೂಪಾಯಿಗಳು ಸರಕಾರದ ಉತ್ಪತ್ತಿಯಲ್ಲಿ ಕಡಿಮೆಯಾಗಿರುವದೆಂದೂ, ಪೋಲೀಸ್ ಮತ್ತು ಕಾರಾಗೃಹದ ಬಾಬುಗಳಲ್ಲಿ ಖರ್ಚು ಹೆಚ್ಚಾಗಿರುವದೆಂದೂ, ಇದಕ್ಕಾಗಿಯೇ 31 ಲಕ್ಷ ರೂಪಾಯಿಗಳ ಖರ್ಚನ್ನು ಕಡಿಮೆ ಮಾಡಲಾಗಿದೆಯೆಂದೂ, ಚಳವಳಿಯು ಇನ್ನೂ ಕೆಲವು ಕಾಲ ಹೀಗೆಯೇ ನಡೆದರೆ ಹಣದ ಅಡಚಣೆಯು ಹೆಚ್ಚುವದೆಂದೂ ಸರಕಾರದವರ ಪ್ರಕಟನಾಪತ್ರಿಕೆಯಿಂದ ತಿಳಿದುಬರುತ್ತದೆ.

ಲಿವರಪೂಲದಿಂದ ಜುಲೈ 30 ನೆಯ ತಾರೀಖಿನ ದಿವಸ ರಂಗಪುರದ ರೈಲ್ವೆ ಸ್ಟೇಷನ್ನಿಗೆ 200 ಮೂಟೆಗಳ ಉಪ್ಪು ಬಂದಿರುವದು. ಸ್ವಯಂಸೇವಕರ ಚಳವಳಿಯಿಂದ ಸದರಿ ಮೂಟೆಗಳನ್ನು ಸಾಗಿಸುವದಕ್ಕೆ ಗಾಡಿ ಮತ್ತು ಕೂಲಿ ಯಾವದೂ ದೊರೆಯಲಿಲ್ಲ. ಕಡೆಗೆ ಅಧಿಕಾರಿಗಳು ಸ್ವಯಂಸೇವಕರ ಮುಖಂಡರನ್ನೆಲ್ಲ ದಸ್ತಗಿರಿ ಮಾಡಿದರು.

ವಿದ್ಯಾರ್ಥಿಗಳ ಬಹಿಷ್ಕಾರ ಚಳವಳಿಯ ಫಲವಾಗಿ ನಾಗಪುರದ ಎಲ್ಲಾ ಶಾಲೆಗಳೂ ಸಂಪೂರ್ಣವಾಗಿ ಮುಚ್ಚಲ್ಪ[illegible]ವವು.

ಕಣಾ[illegible] 'ಸ್ವಾತಂತ್ರ್ಯವಾರ' ದ ಕಾರ್ಯಕ್ರಮದಂತೆ [illegible]ಸಹಳ್ಳಿಯ 29 ಜನ ಸ್ವಯಂಸೇವಕರು ಡಾಕ್ಟರ್ ರಾಮರಾಯರ ಮುಂದಾಳುತನದಲ್ಲಿ ಹೊರಟು 29 ಶೇಂದೀ ಮರಗಳನ್ನು ಕಡಿದರು. ಪೋಲೀಸರು ಎಲ್ಲರನ್ನೂ ಬಿಟ್ಟುಬಿಟ್ಟರು.

ಬಂಗಾಳಕ್ಕೆ ಸೇರಿದ ಪೀಪಾರಿಹಿಯೂ ಮತ್ತು ದುಧಿಯಾಪಾಹಳ್ಳಿಯ ನಿವಾಸಿಗಳು ಚೌಕಿದಾರಿ ಕಂದಾಯವನ್ನು ಕೊಡಲು ನಿರಾಕರಿಸಿದುದರಿಂದ ಡಿಸ್ಟ್ರಿಕ್ಟ ಪೋಲೀಸ್ ಸೂಪರಿಂಟೆಂಡೆಂಟರವರು ಒಂದು

ದೊಡ್ಡ ಪೋಲೀಸ್ ಗುಂಪು ಸಮೇತರಾಗಿ ಸದರಿ ಹಳ್ಳಿಗಳ ಮೇಲೆ ದಾಳಿಯಿಟ್ಟು, ದನಕರುಗಳನ್ನು ಅನೇಕ ಪದಾರ್ಥಗಳನ್ನೂ ಜಪ್ತಿಮಾಡಿ ಮಾರಿದರು. ಮುಝುಪಾಲಿಯಾ ಠಾಣಾಕ್ಕೆ ಸೇರಿದ ಆರು ಹಳ್ಳಿಯವರು ಚೌಕಿದಾರಿಕಂದಾಯವನ್ನು ಕೊಡದೆ ನಿಲ್ಲಿಸಿರುತ್ತಾರೆ.

ಪಂಡಿತ ಮದನಮೋಹನಮಾಳವೀಯರವರು ಮ್ಯಾಜಿಸ್ಟ್ರೇಟರು ತಮಗೆ ವಿಧಿಸಿದ ಶಿಕ್ಷೆಯ ವಿಷಯದಲ್ಲಿ ತಮ್ಮ ಪುತ್ರರೊಡನೆ ಈರೀತಿಯಾಗಿ ಹೇಳಕಳುಹಿಸಿದರು.—"ಮ್ಯಾಜಿಸ್ಟ್ರೇಟರು ನನ್ನ ವಿಷಯದಲ್ಲಿ ತಪ್ಪು ಅಭಿಪ್ರಾಯವನ್ನು ಪಟ್ಟಿರುವರು. ಇವರು ಶಿಕ್ಷೆಯನ್ನು ವಿಧಿಸುವಾಗ್ಗೆ ನನಗೂ ಮತ್ತು ನನ್ನ ಇತರ ಸಹೋದ್ಯೋಗಿಗಳಿಗೂ ಪಕ್ಷಪಾತ ಮಾಡಿರುವದು ಶುದ್ಧ ತಪ್ಪಾಗಿರುತ್ತದೆ. ಹಾಗೆ ಪಕ್ಷಪಾತವನ್ನು ಮಾಡಲೇಬೇಕಾಗಿದ್ದರೆ, ನಾನು ಎಲ್ಲರಿಗಿಂತಲೂ ವೃದ್ಧನಾಗಿದ್ದರೂ ಎಲ್ಲರಿಗಿಂತ ಹೆಚ್ಚಿನ ಶಿಕ್ಷೆಯನ್ನೇ ನನಗೆ ವಿಧಿಸಬೇಕಾಗಿತ್ತು. ನನ್ನ ಅಭಿಪ್ರಾಯದಲ್ಲಿ ಕಮಿಶನರ ಆಜ್ಞೆಯು ದುರಹಂಭಾವದಿಂದಲೂ, ಕ್ರೂರತ್ವದಿಂದಲೂ, ಅನ್ಯಾಯದಿಂದಲೂ ಕೂಡಿದ್ದುದರಿಂದ ಅದನ್ನು ಉಲ್ಲಂಘಿಸುವದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ನಂಬಿ ಆಜ್ಞೆಯನ್ನು ಉಲ್ಲಂಘಿಸಿದೆನೇ ಹೊರತು, ಆಜ್ಞೆಯು ಕಾಯಿದೆಬದ್ಧವಾದದೇ ಅಲ್ಲವೇ ಎಂಬುದನ್ನು ಪರೀಕ್ಷಿಸುವದಕ್ಕಾಗಿ ಅಲ್ಲ. ಅವಶ್ಯಕಬಿದ್ದರೆ, ಇನ್ನು ಇಪ್ಪತ್ತು ಸಾರೆಗಳಾದರೂ ನಾನು ಇದೇ ರೀತಿ ಮಾಡುವೆನು."

ಈ ತಿಂಗಳು 5 ನೇ ತಾರೀಖಿನಲ್ಲಿ ಕಲ್ಕತ್ತಾ ಕಾರ್ಪೋರೇಷನ್ನಿನಲ್ಲಿ ಗೊಂದಲವೇ ಗೊಂದಲ. ಆಲ್‌ಡರ್‌ಮೆನ್ನನ ಚುನಾವಣೆಯಾಗಬೇಕಾಗಿತ್ತು. ಜೈಲಿನಲ್ಲಿರುವ ಶ್ರೀಯುತ ಜೆ. ಎಂ. ಸೇನಗುಪ್ತ ಮತ್ತು ಸುಭಾಷಚಂದ್ರಬೋಸರೇ ಉಮೇದವಾರರುಗಳು. ಗಲಾಟೆಯಾಗುತ್ತದೆಂದು ಚೀಫ್ ಎಗ್ಜಿಕ್ಯೂಟಿವ್ ಆಫೀಸರ್‌ರವರು ಕಾಂಪೌಂಡಿನ ಬಾಗಿಲಿಗೆ ಬೀಗ ಹಾಕಿಸಿದರು. ಆದರೂ ಜನಗಳು ಗೋಡೆಯನ್ನು ಹತ್ತಿ ಒಳಗೆ ಧುಮಿಕಿ ಗ್ಯಾಲರಿಗಳಲ್ಲಿ ಕುಳಿತುಕೊಂಡರು. ಶ್ರೀ ಸೇನಗುಪ್ತರಿಗೇ ಓಟನ್ನು ಕೊಡಿ ಎಂದು ಗಲಾಟೆಮಾಡಿದರು. ಡೆಪ್ಯುಟಿ ಮೇಯರರಾದ ಎಸ್. ಕೆ. ಬಸು ಎಂಬವರು ಎದ್ದು ಮಾತಾಡಲು ಆರಂಭಿಸಿದಾಗ ಅವರ ಮೇಲೆ ಜೋಡು ಬಿತ್ತು. ಗಲಾಟೆಯಾಗಿ ಸಭೆಯು ನಡೆಯಲೇ ಇಲ್ಲ.

ಕಾಳವಣ ಮತ್ತು ಬಾಗಲಾಣ ಈ ತಾಲೂಕಿನಲ್ಲಿ ಬಲ್ಲೀ ಜೋರಿನಿಂದ ಅಡವಿಯ ಸತ್ಯಾಗ್ರಹ ಪ್ರಾರಂಭವಾಗಿದೆ. ಕಾಳವಣ ತಾಲೂಕಿನಲ್ಲಿಯ ಒಕ್ಕಲಿಗರ ಪ್ರಚಂಡ ಸಭೆಯು ಕೂಡಿತ್ತು. ಅಜಮಾಸು 35 ಸಾವಿರ ಜನರು ನೆರೆದಿದ್ದರು. 100 ಜನ ಪಾಟೀಲರು ಕೆಲಸಕ್ಕೆ ಶರಣುಹೊಡೆದರು. ಬಾಗಲಾಣದಲ್ಲಿ ಸತ್ಯಾಗ್ರಹಮಾಡಿದ್ದರಿಂದ ಬಹಳೇ ಜನರು ಸೆರೆಮನೆಗೆ ತೆರಳಿದ್ದಾರೆ.

ಮುಂಬಯಿ ಮುನಸಿಪಾಲಟಿಯ ಕಾರ್ಪೋರೇಶನದ ಸಭೆಯಲ್ಲಿ ಸೌ|| ಅವಂತಿಕಾಬಾಯಿ ಗೋಖಲೆ ಇವರು ಮುನಸಿಪಾಲಟಿಯ ಯಾವತ್ತೂ ಕೆಲಸಗಾರರು ಸ್ವದೇಶದ ಬಟ್ಟೆಯನ್ನೇ ಧರಿಸಬೇಕೆಂಬ ಠರಾವನ್ನು ತಂದರು. ಅದಕ್ಕೆ ಮಿಸ್. ಲೋಟವಾಲಾ ಇವರು ಅನುಮೋದನವನ್ನಿತ್ತರು. ಇದರ ಮೇಲೆ ರಾ|| ಬ|| ಆಸವಲೆ ಇವರು ನೌಕರರ ಪ್ರಕಾರ ಕಾರ್ಪೋರೇಶನದ ಯಾವತ್ತೂ ಸಭಾಸದರು ಸ್ವದೇಶದ ಅರಿವೆಯನ್ನು ಧರಿಸಬೇಕೆಂಬ ಉಪಸೂಚನೆ ತಂದರು. ಸೌ|| ಅವಂತಿಕಾಬಾಯಿ ಗೋಖಲೆ ಇವರು ಸಮ್ಮತಿಸಿದರು. ಆ ನಂತರ ಸ್ವಲ್ಪ ಚರ್ಚೆಯಾಗಿ ದುರಸ್ತಿಮಾಡಿದ ಆ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಸಾತಾರೆಯ ಕುಲಕರ್ಣಿ ಎಂಬ ಓರ್ವ ವಿದ್ಯಾರ್ಥಿಯು ಕಾಯಿದೆಭಂಗದಲ್ಲಿ ಸಿಕ್ಕು ಯರವಾಡೆಯ ಜೈಲಿನಲ್ಲಿದ್ದಾನೆ. ಈತನಿಗೆ ತಂದೆಯು ಅಪ್ಪಾ, ಮಗನೇ! ನೀನು ಸರಕಾರದ ಕ್ಷಮೆ ಬೇಡಿಕೊಂಡು ಕಾಲೇಜಿನಲ್ಲಿ ಸೇರು ಎಂದು ಪ್ರೀತಿಯಿಂದ ಪತ್ರವನ್ನು ಬರೆದಿದ್ದನು. ಅದನ್ನು ನೋಡಿ ಜೇಲರರು ಆನಂದದಿಂದ ಈ ಪತ್ರವನ್ನು ಕುಲಕರ್ಣಿಯ ಕೈಯ್ಯಲ್ಲಿ ಕೊಟ್ಟರು. ಇದನ್ನು ನೋಡಿ ಈತನು ಚಕಿತನಾಗಿ ತನ್ನ ತಂದೆಯು ಸ್ವರ್ಗಸ್ಥನಾಗಿದ್ದಾನೆ. ಇದು ಯಾರೋ ಬರೆದ ಕೃತ್ರಿಮಪತ್ರವೆಂದು ಹೇಳಿದನಂತೆ!

ಕಾಂಗ್ರೆಸ್‌ಮುಖಂಡರ ಸಂದೇಶ.

ಮುಂಬಯಿ ಆಗಸ್ಟ 7.

ಪಂಡಿತ ಮದನಮೋಹನ ಮಾಳವೀಯರವರು ಭಾರತೀಯರಿಗೆ ಕೆಳಗಿನ ಸಂದೇಶವನ್ನು ಕಳುಹಿಸಿರುವರು.

"ನನ್ನ ದೇಶಬಾಂಧವರೇ ಮತ್ತು ಭಗಿನಿಯರೇ! ಇದು ನಮ್ಮ ಪರೀಕ್ಷೆಯಕಾಲವಾಗಿರುವದು. ಈ ನಮ್ಮ ಭರತಖಂಡದಲ್ಲೆಲ್ಲ ಕಂಡುಬರುತ್ತಿರುವ ಸ್ವಾತಂತ್ರ್ಯ ಸಂಪಾದನೆಯ ಪ್ರಯತ್ನಗಳನ್ನೂ, ಅದಕ್ಕಾಗಿ ಜನರು ಮಾಡುತ್ತಿರುವ ಸ್ವಾರ್ಥತ್ಯಾಗವನ್ನು ನೋಡಿದರೆ ನಮ್ಮ ರಾಷ್ಟ್ರೀಯ ಗೌರವಕ್ಕೂ, ರಾಷ್ಟ್ರೀಯ ಉನ್ನತಿಗೂ ಶತ್ರುರೂಪವಾಗಿರುವ ಸದ್ಯದ ದುಷ್ಟಸರಕಾರ ಪದ್ಧತಿಯು ಜಾಗ್ರತೆಯಾಗಿ ಕೊನೆಗೊಂಡು, ಸ್ವರಾಜ್ಯವು ಪ್ರಾಪ್ತವಾಗಿ, ಆಂಗ್ಲೇಯರು ತಮ್ಮ ದೇಶದಲ್ಲಿ ತಾವೇ ಯಜಮಾನರಾಗಿರುವಂತೆ ನಾವೂ ನಮ್ಮ ದೇಶದಲ್ಲಿ ಯಜಮಾನರಾಗುವೆವು. ಈ ಪ್ರಯತ್ನವನ್ನು ಬಿಡದೆ ಮುಂದುವರಿಸಿರಿ! ಎಲ್ಲ ಪರೀಕ್ಷೆಗಳಿಗೂ ಎದೆಗೊಡಿರಿ. ಈ ನಮ್ಮ ಮಾತೃಭೂಮಿಯ ಸೇವೆಯಲ್ಲಿ ಬಂದೊದಗುವ ಕಷ್ಟಪರಂಪರೆಗಳನ್ನು ಸಂತೋಷದಿಂದ ಅನುಭವಿಸಿರಿ! ನಮ್ಮ ಉದ್ದೇಶವು ಕೈಗೂಡುವವರೆಗೂ, ಜನರ ಬೆಂಬಲವು ಕಡಿಮೆಯಾದರೂ ಸ್ವಾತಂತ್ರ್ಯಸಂಗ್ರಾಮವು ಮಾತ್ರ ಬಲಹೀನವಾಗದಿರಲಿ! ಎಲ್ಲಕ್ಕಿಂತಲೂ ಮೇಲಾಗಿ, ಪರದೇಶೀಯ ವಸ್ತ್ರಬಹಿಷ್ಕಾರವನ್ನೂ, ಖಾದಿ, ಮತ್ತು ಸ್ವದೇಶೀಯ ವಸ್ತುಗಳ ಪ್ರೋತ್ಸಾಹವನ್ನೂ ಹೆಚ್ಚಿಸಿರಿ. ನಮ್ಮ ಮಾತೃಭೂಮಿಯು ಪುನಃ ಸ್ವತಂತ್ರವಾಗಿ ನಮ್ಮ ಗೌರವವೂ, ನಮ್ಮ ದೇಶೀಯರ ಸೌಖ್ಯವೂ ಹೆಚ್ಚಿ ಪ್ರಪಂಚದ ಜನಾಂಗಗಳಲ್ಲಿ ಗೌರವಯುಕ್ತವಾದ ಸ್ಥಾನವು ದೊರೆಯುವದಕ್ಕೆ ಬೇಕಾದ ಎಲ್ಲ ಕಷ್ಟಪರಂಪರೆಗಳನ್ನೂ ಹಿಂಜರಿಯದೆ ಸಹಿಸಿರಿ."

ಸರದಾರ್ ವಲ್ಲಭಭಾಯಿ ಪಟೇಲ್‌ರವರು ಮುಂಬಯಿಯ ಪ್ರಜೆಗಳನ್ನು ಕುರಿತು ಈ ರೀತಿಯಾಗಿ ಹೇಳಿರುವರು.

ನನ್ನ ಮಿತ್ರರನ್ನು ಅಗಲುವದಕ್ಕೆ ಪೂರ್ವದಲ್ಲಿ ಈ ನಗರದ ಪ್ರಜೆಗಳು ಲೋಕಮಾನ್ಯ ತಿಲಕರ ವಾರ್ಷಿಕೋತ್ಸವದ ಪವಿತ್ರಕಾರ್ಯವನ್ನು ಆಚಂದ್ರಾರ್ಕವಾಗಿ ಕೀರ್ತಿಯುಂಟಾಗುವ ರೀತಿಯಲ್ಲಿ ನೆರವೇರಿಸಿದುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆ ದಿನ ರಾತ್ರಿ ಬೋರಿಬಂದರಿನಲ್ಲಿ ನಡೆದ ಎಂದೆಂದಿಗೂ ಮರೆಯಲಾಗದ ವಿದ್ಯಮಾನಗಳಲ್ಲಿ ನಮಗೂ ಮತ್ತು ವರ್ಕಿಂಗ್‌ಕಮಿಟಿಯ ಇತರ ಮೆಂಬರರಿಗೂ ಭಾಗವಹಿಸುವ ಪುಣ್ಯವು ಲಭಿಸಿದುದಕ್ಕಾಗಿ ನನಗೆ ತುಂಬಾ ಗೌರವಾಸ್ಪದವಾಯಿತು. ದೊಣ್ಣೆಯ ಪೆಟ್ಟುಗಳು ಬೀಳುವದಕ್ಕೆ ಮುಂಚೆಯೇ ನನ್ನನ್ನು ದಸ್ತಗಿರಿ ಮಾಡಿ, ಜನರ ಕಷ್ಟಗಳೊಳಗೆ ನನಗೆ ಭಾಗವಹಿಸಲು ಅವಕಾಶ ದೊರೆಯದೆ ಹೋದುದಕ್ಕಾಗಿ ತುಂಬಾ ವಿಷಾದಿಸುವೆವು. ಇದುವರೆಗೆ ದೊಣ್ಣೆಯ ಪೆಟ್ಟುಗಳಿಗೆ ಹೆದರದೆ ಧೈರ್ಯವಾಗಿ ಎದುರಿಸಿ, ಆಗಸ್ಟ 2ನೆಯ ತಾರೀಖಿನ ಭೀಕರ ಲಾಠೀ ಪ್ರಹಾರಗಳನ್ನು ಆಶ್ಚರ್ಯಕರವಾದ ಶಾಂತಿಯಿಂದ ಸಹಿಸಿದ ಮುಂಬಯಿ ಸ್ವಯಂಸೇವಕರ ವಿಷಯದಲ್ಲಿ ನನಗೆ ವಿಶೇಷವಾದ ಗೌರವಬುದ್ಧಿಯುಂಟಾಗಿರುವದು.

ಮುಂಬಯಿ ನಗರವಾಸಿಗಳ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸುವ ಪ್ರಯತ್ನದಲ್ಲಿ ತನ್ನ ಪ್ರಾಣಗಳನ್ನೇ ಒಪ್ಪಿಸಿದ ಸ್ವಯಂಸೇವಕರ ಕ್ಯಾಪ್ಟನ್ನರಾದ ಮಿ|| ಹರಗೋವಿಂದ ಲಾಲಜಿಯವರನ್ನು ನಾವು ಅತ್ಯಂತ ಗೌರವದಿಂದ ವಂದಿಸುವೆವು. ಮುಂಬಯಿ ನಗರದ ಕೆಲಸಗಾರರು, ಸ್ವಯಂಸೇವಕರು ಮತ್ತು ಪ್ರಜೆಗಳು ಇನ್ನು ಮುಂದೆಯೂ ಸಹ ಈ ರಾಷ್ಟ್ರೀಯ ಕಾರ್ಯದಲ್ಲಿ ಇದೇರೀತಿ ಭಾಗವಹಿಸಿ, ಸಮಸ್ತ ಭರತಖಂಡದ ಧೈರ್ಯ, ಕಾರ್ಯಕ್ರಮ ಶಾಂತ್ಯಾದಿಗುಣಗಳಿಗೆ ಆದರ್ಶಪ್ರಾಯರಾಗಿರುವರೆಂದು ಸಂಪೂರ್ಣ ನಂಬಿರುತ್ತೇನೆ.

ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿರುವ ನಮ್ಮ ದೇಶಬಾಂಧವರಿಗೂ ಮತ್ತು ಭಗಿನಿಯರಿಗೂ ನಾನು ಹೆಚ್ಚಿಗೆ ಹೇಳಬೇಕಾದುದೇನೂ ಇಲ್ಲ. ಕಾಂಗ್ರೆಸ್ಸಿನವರು ತಮ್ಮ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ವಿಶದಪಡಿಸುವರು. ಆ ಕಾರ್ಯಕ್ರಮಗಳನ್ನು ದೃಢಪ್ರತಿಜ್ಞೆಯಿಂದ ನಡೆಯಿಸಬೇಕೆಂಬುದೇ ನಮ್ಮ ಅಭಿಲಾಷೆಯಾಗಿರುವದು. ಇನ್ನು ಮುಂದೆ ಇದುವರೆಗೆ ನಾವು ಅನುಭವಿಸಿದ ಕಷ್ಟಗಳಿಗಿಂತಲೂ ಹೆಚ್ಚಿನ ಕಷ್ಟಗಳನ್ನು ಅನುಭವಿಸಬೇಕಾಗುವದೆಂಬುದನ್ನು ಪ್ರತಿಯೊಬ್ಬರೂ ಚೆನ್ನಾಗಿ ಅರಿತುಕೊಳ್ಳಬೇಕು. ಇನ್ನು ಮುಂದೆ ಮಧ್ಯವರ್ತಿಕಾರ್ಯಕಾರಿಮಂಡಲಿಯಿಂದ ಹೆಚ್ಚಿನ ಸಲಹೆಗಳು ದೊರೆಯಲಾರವು. ಇನ್ನು ಮುಂದೆ ಅವಕಾಶಗಳು ಒದಗಿದಂತೆ ಸರ್ವ ಪ್ರಯತ್ನಗಳಿಂದಲೂ ಸತ್ಯಾಗ್ರಹವನ್ನು ಮುಂದುವರಿಸಬೇಕು. ಲಾಠಿಯ ಪ್ರಹಾರಗಳನ್ನೂ ಮತ್ತು ಗುಂಡಿನ ಏಟುಗಳನ್ನೂ ಅನುಭವಿಸಿದ ಹಾಗೆಲ್ಲಾ ಕ್ರಮವಾಗಿ ನಮಗಿರುವ ಮೃತ್ಯುವಿನ ಭಯವು ದೂರವಾಗುವದು. ಈ ಮಾರ್ಗದಿಂದ ನಮ್ಮ ಇಚ್ಛಿತಫಲವು ಬಹು ಜಾಗ್ರತೆಯಾಗಿ ದೊರೆಯುವದು. ಈ ಸ್ವಾತಂತ್ರ್ಯೋದ್ಯಮದಲ್ಲಿ ದೊಣ್ಣೆಯ ಪೆಟ್ಟುಗಳನ್ನು ಮತ್ತು ಗುಂಡಿನ ಏಟುಗಳನ್ನು ಧೈರ್ಯವಾಗಿ ಎದುರಿಸಿ, ಸರಕಾರದ ನಿಜವಾದ ಸ್ವಭಾವವು ಬಹಿರಂಗವಾಗುವಂತೆ ಮಾಡಬೇಕು.

ಮಿ|| ಜಯರಾಮದಾಸರವರ ಸಂದೇಶ.

"ಸಂಗ್ರಾಮವನ್ನೂ ಕಾಯಿದೆಭಂಗವನ್ನೂ, ಅಹಿಂಸಾತ್ಮಕ ಸತ್ಯಾಗ್ರಹವನ್ನೂ ಸಂಪೂರ್ಣವಾಗಿ ಮುಂದುವರಿಸಿರಿ! ಸ್ವಾತಂತ್ರ್ಯವು ಶೀಘ್ರವಾಗಿ ಲಭಿಸುವದು.

ಮಹಮ್ಮದೀಯರಿಗೆ ಮಿ|| ಶರ್ವಾನಿಯವರ ಸಂದೇಶ.

"ಮುಸ್ಲಿಂಜನಾಂಗದ ಹೃದಯವು ದೃಢವಾದುದೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಅವರು ತಮ್ಮ ಹಿಂದೂ ಸಹೋದರರ ಪಕ್ಷವನ್ನು ಎಂದೂ ಬಿಡುವದಿಲ್ಲ. ಭರತಖಂಡದ ಸ್ವಾತಂತ್ರ್ಯವು, ಈ ದೇಶಕ್ಕೆ ಮಾತ್ರವಲ್ಲ, ಇತರ ಮುಸ್ಲಿಂ ದೇಶಗಳ ಸ್ವಾತಂತ್ರ್ಯಕ್ಕೂ ಅವಶ್ಯಕವಾಗಿರುವದು. ಆದುದರಿಂದ ಕಾಂಗ್ರೆಸ್‌ಪಕ್ಷವನ್ನು ವಹಿಸುವದು ಪ್ರತಿಯೊಬ್ಬ ಮಹಮ್ಮದೀಯನ ಕರ್ತವ್ಯವಾಗಿರುವದು.

ಸರದಾರ್ ವಲ್ಲಭಭಾಯಿಪಟೇಲ್‌ರವರು ಮೌಲಾನಾ ಅಬ್ದುಲ್‌ಕಲಾಂ ಆಜದ್‌ರವರನ್ನು ಮುಂದಿನ ಕಾಂಗ್ರೆಸ್ ಪ್ರೆಸಿಡೆಂಟರನ್ನಾಗಿ ನೇಮಿಸಿರುತ್ತಾರೆ.

ಮೆ|| ಕೆ. ಎಂ. ಮುನ್ಶಿ ಮಿ|| ಜಮುನಾದಾಸ ದ್ವಾರಕದಾಸರವರೇ ಮೊದಲಾದ ಕೆಲವು "ಎ" ತರಗತಿಯ ಕೈದಿಗಳನ್ನು ಎರವಾಡಾದಿಂದ ನಾಸಿಕದ ಜೈಲಿಗೆ ಕರೆದುಕೊಂಡು ಹೋಗಿ ಎರವಾಡಾ ಜೈಲಿನಲ್ಲಿ ಏಳು ಕೊಠಡಿಗಳನ್ನು ಖಾಲಿಮಾಡಿರುತ್ತಾರೆ. ಅವುಗಳಲ್ಲಿ ಎರಡು ಕೊಠಡಿಗಳನ್ನು ಪಂಡಿತ ಮೋತೀಲಾಲ್ ಮತ್ತು ಪಂಡಿತ ಜವಾಹರಲಾ[illegible] ನೆಹರೂರವರಿಗಾಗಿ ರಿಜರ್ವ್ ಮಾಡಿರುತ್ತಾರೆ. ಸದ್ಯದಲ್ಲಿಯೇ ಪಂಡಿತ ಮಾಳವೀಯ ಮತ್ತು ಸರದಾರ್ ವಲ್ಲಭಭಾಯಿಯವರನ್ನು ಪುಣೆಗೆ ಕರೆತರುವರೆಂದು ಸುದ್ದಿಯಿದೆ.

ಬೆಂಗಳೂರು ನಗರದಲ್ಲಿ ಮೊನ್ನೆ 4ನೆಯ ತಾರೀಖಿನ ದಿವಸ ಬೆಳಗ್ಗೆ ದೇಶೀಯ ಪಾಠಶಾಲಾ ಬಾಲಕರು ಮಾಲವೀಯ ಮುಂತಾದ ದೇಶಭಕ್ತರ ದಸ್ತಗಿರಿಯಾದುದಕ್ಕಾಗಿ ಗಲಾಟೆಯನ್ನು ಮಾಡಿದರು. ಇದರಲ್ಲಿ ವಿಶ್ವೇಶ್ವರ ಪುರದ ಶಾಲಾಬಾಲಕರೂ ಸಹ ಭಾಗವಹಿಸಿದ್ದರು. ಹೈಸ್ಕೂಲುಗಳಿಗೆ ಹೋಗಿ ಅಲ್ಲಿರುವ ವಿದ್ಯಾರ್ಥಿಗಳನ್ನು ಕರೆಯಲಾರಂಭಿಸಿದರು. ಮಧ್ಯಾಹ್ನ ಸಮಯದಲ್ಲಿ ಒಂದು ಪೋಲೀಸಿನವರ ತಂಡವು ಬಂದಿತು. ವಿದ್ಯಾರ್ಥಿಗಳ ಮೇಲೆ ಲಾಠಿಪ್ರಯೋಗಕ್ಕೆ ಆರಂಭವಾಯಿತು. ಪೋಲೀಸಿನವರು ಶಾಲೆಯೊಳಗೆ ನುಗ್ಗಿ ಉಪಾಧ್ಯಾಯರೆದುರಿಗೆ ವಿದ್ಯಾರ್ಥಿಗಳನ್ನು ಪ್ರಹರಿಸಿದರು. ಈ ಮಧ್ಯೆ ಉಪಾಧ್ಯಾಯರಿಗೂ ಸ್ವಲ್ಪ ಪ್ರಹಾರಗಳಾದವೆಂದು ಕೇಳುತ್ತೇವೆ. ಈಗ ಉಪಾಧ್ಯಾಯರು ಪೆಟ್ಟಿನಿಂದ ಅಂದಾಜು 25 ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಸಾಗಿಸಿರುವರು.

ಪೋಲೀಸಿನವರು ಚಿಕ್ಕ ವಿದ್ಯಾರ್ಥಿಗಳ ಮೇಲೆ ನಡೆಯಿಸಿದ ಅತ್ಯಾಚಾರದಿಂದ ಖತಿಗೊಂಡ ಬೆಂಗಳೂರಿನ ಪ್ರೌಢವಿದ್ಯಾರ್ಥಿಗಳೆಲ್ಲರೂ ಸೇರಿ 5 ನೆಯ ತಾರೀಖಿನ ದಿವಸ ಮುಷ್ಕರಹಿಡಿದುದರಿಂದ ಎಲ್ಲ ಕಾಲೇಜುಗಳೂ ಬಂದಾಗಿದ್ದುವಂತೆ. ಅದೇ ದಿವಸ ಸಾಯಂಕಾಲ ಗಾಂಧೀ ಮೈದಾನದಲ್ಲಿ ಸಭೆಯನ್ನು ನಡೆಯಿಸಿ ಪೋಲೀಸಿನವರು ಚಿಕ್ಕ ಬಾಲಕರ ಮೇಲೆ ನಡೆಯಿಸಿದ ಅಕ್ರಮಗಳನ್ನು ಪ್ರಮುಖರನೇಕರು ನಿಷೇಧಿಸಿದರಂತೆ.

ಕಾಂಗ್ರೆಸ್ ಮುಖಂಡರ ವಿಚಾರಣೆ.

[3ನೇ ಪುಟದಿಂದ ಮುಂದೆ ಸಾಗಿದುದು.]

ಪಂಡಿತಜಿ—ಸರ್ ಅರ್ನೆಸ್ಟ್‌ರಿಗೆ ವರ್ತಮಾನ ಕೊಟ್ಟವರಾರೆಂಬುದನ್ನು ನೀವು ಬಲ್ಲಿರಾ ?

ಮಿ|| ಹೀಲಿ—ಬಲ್ಲೆನು.

ಪಂಡಿತಜಿ—ಅವರ ಹೆಸರನ್ನು ಕೋರ್ಟಿಗೆ ತಿಳುಹಿಸುವಿರಾ ?

ಮ್ಯಾಜಿಸ್ಟ್ರೇಟ—ಈ ಪಶ್ನೆಗೆ ನಾನು ಅವಕಾಶ ಕೊಡಲಾರೆನು.

ಪಂಡಿತಜಿ—ಸರ್ ಅರ್ನೆಸ್ಟ್‌ರವರನ್ನು ನೀವೆಲ್ಲಿ ಸಂಧಿಸಿದಿರಿ ?

ಮಿ|| ಹೀಲಿ—6-30 ಘಂಟೆಗೆ ವಿಕ್ಟೋರಿಯಾ ಟರ್ಮಿನಸ್ ಸ್ಟೇಷನ್ನಿನಲ್ಲಿ ಅವರನ್ನು ಎದುರ್ಗೊಂಡು ಇಬ್ಬರೂ ಜಿ. ಐ. ಪಿ. ಸ್ಟೇಷನ್ ಕಟ್ಟಡದ ಮೇಲ್ಭಾಗಕ್ಕೆ ಹೋದೆವು.

ಪಂಡಿತರು—ನಿಮ್ಮೊಡನೆ ಬೇರೆಯಾರಿದ್ದರು ?

ಮಿ|| ತಾಣಾವಾಲಾ (ಪಬ್ಲಿಕ್ ಪ್ರಾಸಿಕ್ಯೂಟರ್)—ಅದನ್ನೆಲ್ಲ ತಾವು ಕೇಳಕೂಡದು.

ಮ್ಯಾಜಿಸ್ಟ್ರೇಟ್—ಹೌದು ಅದನ್ನೆಲ್ಲ ಕೇಳಕೂಡದು.

ಪಂಡಿತರು—ಹೀಗೆಯೇ ಮಾಡಬೇಕೆಂಬ ವಿಷಯವಾಗಿ ನೀವು ಸರ್ ಇ. ಹಾಟ್ಸನ್‌ರವರೊಡನೆ ಚರ್ಚಿಸಿದಿರಾ ?

ಮಿ|| ಹೀಲಿ—ಅದು ನನಗೆ ಜ್ಞಾಪಕವಿಲ್ಲ.

(ಈ ಉತ್ತರವನ್ನು ಕೇಳಿ ಎಲ್ಲರೂ ನಕ್ಕರು)

ಪಂಡಿತರು—ಮಿ|| ಹೀಲಿಯವರೇ ಹೇಗಾದರೂ ಮಾಡಿ ಜ್ಞಾಪಿಸಿಕೊಳ್ಳಿ. ವಿಷಯವು ಬಹಳ ಮುಖ್ಯವಾದುದು. ಉತ್ಸವವು ಹಾರ್ನ್‌ಬಿರೋಡಿನಲ್ಲಿ ಪ್ರವೇಶಿಸುವ ವಿಷಯವಾಗಿ ನೀವು ಸರ್. ಇ. ಹಾಟ್ಸನ್‌ರವರೊಡನೆ ಚರ್ಚಿಸಿದಿರಾ ?

ಮಿ|| ಹೀಲಿ—ಇಲ್ಲ.

ಪಂಡಿತರು—ಸರ್. ಇ. ಹಾಟ್ಸನ್‌ರವರು ಯಾವಾಗ ಅಲ್ಲಿಂದ ಹೊರಟು ಹೋದರು ? ಜನರನ್ನೆಲ್ಲ ಚದರಿಸುವವರೆಗೆ ಅವರು ಅಲ್ಲಿಯೇ ಇದ್ದರೇ ?

ಮಿ|| ಹೀಲಿ—ಹೌದು, ಕಡೆಯವರೆಗೂ ಇದ್ದರು.

ಪಂಡಿತರು—ನೀವು ಜನರನ್ನು ಚದರಿಸಲು ಆಜ್ಞೆಮಾಡುವದಕ್ಕೆ ಪೂರ್ವದಲ್ಲಿ ಆ ವಿಷಯವಾಗಿ ನಿಮಗೂ ಸರ್ ಅರ್ನೆಸ್ಟ್‌ರವರಿಗೂ ನಡೆದ ಸಂಭಾಷಣೆಯೇನೆಂಬುದನ್ನು ತಿಳಿಸುವಿರಾ ?

ಮ್ಯಾಜಿಸ್ಟ್ರೇಟ್—ಈ ಪ್ರಶ್ನೆಯು ಅಸಂಬದ್ಧವಾದುದು. ಅವರು ಹವಾ ಮುಂತಾದ ವಿಷಯಗಳನ್ನು ಚರ್ಚಿಸಿರಬಹುದು.

ಪಂಡಿತರು—ಹವೆಯ ವಿಷಯವನ್ನು ಚರ್ಚಿಸುವದಕ್ಕಾಗಿ ಸರ್. ಅರ್ನೆಸ್ಟ್‌ರವರು ಪುಣೆಯಿಂದ ಇಷ್ಟು ದೂರ ಬಂದಿರಲಿಲ್ಲ. ಮಿ|| ಹೀಲಿಯವರೇ, ಸರ್. ಅರ್ನೆಸ್ಟ್‌ರವರೊಡನೆ ನೀವೇನು ಮಾತನಾಡಿದಿರಿ ? ಹೇಳಿ !

ಮಿ|| ಹೀಲಿ—ಜನರನ್ನು ಚದರಿಸಬಹುದೇ ? ಎಂದು ಕೇಳಿದೆನು.

ಪಂಡಿತರು—ಬಲಾತ್ಕಾರವಾಗಿ ಜನರನ್ನು ಚದರಿಸಲು ಅವರು ಸಮ್ಮತಿಯನ್ನು ಕೊಟ್ಟರೇ ?

ಮಿ|| ಹೀಲಿ—ಮುಖಂಡರನ್ನೂ ಸ್ತ್ರೀಯರನ್ನೂ ನಾನು ಬಲಾತ್ಕಾರವಾಗಿ ಚದರಿಸಲಿಲ್ಲ.

ಪಂಡಿತರು—ನಾನೂ ಹಾಗೆ ಹೇಳಲಿಲ್ಲ. ನೀವು ನನಗೂ ಕೆಲವು ಲಾಠಿಯ ಏಟುಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು.

ಮ್ಯಾಜಿಸ್ಟ್ರೇಟರು—ನೀವು ಹೀಗೆಲ್ಲ ಹೀಯಾಳಿಸಬಾರದು.

ಪಂಡಿತಜಿ—ಸ್ತ್ರೀಯರನ್ನೂ ಮುಖಂಡರನ್ನೂ ಬಿಟ್ಟು ಇತರರನ್ನು ಮಾತ್ರ ಬಲಾತ್ಕಾರವಾಗಿ ಚದರಿಸುವ ವಿಷಯದಲ್ಲಿ ಸರ್ ಇ. ಹಾಟ್ಸನ್‌ರವರು ಸಮ್ಮತಿಸಿದರೇ ?

ಮಿ|| ಹೀಲಿ—ಹೌದು. ನನ್ನ ನಡವಳಿಕೆಯನ್ನು ಅವರು ಒಪ್ಪಿಕೊಂಡರು.

ಪಂಡಿತರು—ಈ ವಿಷಯದಲ್ಲಿ ನೀವು ಸರ್. ಇ. ಹಾಟ್ಸನ್‌ರವರ ಸಮ್ಮತಿಯನ್ನೇಕೆ ಕೇಳಿದಿರಿ ?

ಮಿ|| ಹೀಲಿ—ನನ್ನ ಜವಾಬ್ದಾರಿಯ ಭಾರವನ್ನು ಇನ್ನೊಬ್ಬರೂ ವಹಿಸಲೆಂದು ನಾನು ಅಪೇಕ್ಷಿಸಿದೆನು.

ಪಂಡಿತರು—ಹಾಗಾದರೆ ಸರ್ ಇ. ಹಾಟ್ಸನ್‌ರವರು ಸಮ್ಮತಿಸದಿದ್ದರೆ ನೀವು ಜನರನ್ನು ಬಲಾತ್ಕಾರವಾಗಿ ಚದರಿಸುತ್ತಿರಲಿಲ್ಲವೇ ?

ಮಿ|| ಹೀಲಿ—ಇಲ್ಲ.

ಪಂಡಿತರು (ಪುನಃ)—ಶುಕ್ರವಾರ ರಾತ್ರಿ ಸರ್. ಇ. ಹಾಟ್ಸನ್‌ರವರಿಗೆ ವರ್ತಮಾನ ಕಳುಹಿಸಿದವರಾರು ?

ಮ್ಯಾಜಿಸ್ಟ್ರೇಟ—ಆ ಪ್ರಶ್ನೆಯನ್ನು ನೀವು ಕೇಳಕೂಡದು.

ಪಂಡಿತರು—ಮಿ|| ಹೀಲಿಯವರ ಜ್ಞಾಪಕಶಕ್ತಿಯು ಬಹಳ ಕಡಿಮೆಯಾಗಿದೆ. ಆದುದರಿಂದ ನೀವು ಸರ್. ಇ. ಹಾಟ್ಸನ್‌ರವರನ್ನು ಕರೆಯಿಸಿ ವಿಚಾರಣೆಮಾಡಬೇಕು.

ಮ್ಯಾಜಿಸ್ಟ್ರೇಟ—ಅದೆಂದಿಗೂ ಸಾಧ್ಯವಿಲ್ಲ.

ಅನಂತರ ಪಂಡಿತ ಮಾಳವೀಯವರು ತಮ್ಮ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಪಡೆದು ತಾವೇ ಓದಿ ಹೇಳಿದರು. ಅದರಲ್ಲಿ ಪಂಡಿತರು, ತಮ್ಮನ್ನು ದಸ್ತಗಿರಿಮಾಡಿರುವ ಮುಂಬೈ ಪೋಲೀಸ್ ಆಕ್ಟಿನ 23 (1.ಬಿ) ನೆಯ ಸೆಕ್ಷನ್ನಿನ ಪ್ರಕಾರವಾಗಿ ಕಮಿಶನರವರ ಪತ್ರವನ್ನು ಆಜ್ಞೆಯೆಂದು ಭಾವಿಸಲಾಗುವದಿಲ್ಲವೆಂದೂ, ಕಮಿಶನರವರು ತಮಗೂ ಮಿ|| ವಲ್ಲಭಭಾಯಿಯವರಿಗೂ ಉತ್ಸವವನ್ನು ನಡೆಸುವಂತೆ ಮಾಡಿದ ಆಜ್ಞೆಯ ವಿಷಯದಲ್ಲಿ ಮಿ|| ವಲ್ಲಭಭಾಯಿಯವರು ಉತ್ಸವವನ್ನು ತೆಗೆಯಲು ಕಾರಣರಲ್ಲವೆಂದೂ, ಮೇಲಾಗಿ ಆರ್ಡರಿನಲ್ಲಿ ಉತ್ಸವವನ್ನು ನಿಲ್ಲಿಸುವದಕ್ಕೆ ಕಾರಣಗಳನ್ನೂ, ಹಾಗೆ ನಿಲ್ಲಿಸಿದುದರಿಂದ ಆದ ಅನರ್ಥಗಳನ್ನೂ ಸರಿಯಾಗಿ ರುಜುವಾತು ಮಾಡಲಿಲ್ಲವೆಂದೂ, ಆಜ್ಞೋಲ್ಲಂಘನೆಯ ಅಪರಾಧಕ್ಕೆ 127 ನೆಯ ಸೆಕ್ಷನ್ನಿನನುಸಾರವಾಗಿ 100 ರೂಪಾಯಿಗಳ ದಂಡವನ್ನು ಮಾತ್ರ ವಿಧಿಸಬೇಕೆಂದೂ, ಈ ಹೇಳಿಕೆಯನ್ನು ತಾವು ಬಿಡುಗಡೆಹೊಂದಲು ಹೇಳಿದುದಾಗಿರದೆ, ಶಾಂತಿರಕ್ಷಣೆಯ ಭಾರವನ್ನು ವಹಿಸಿರುವ ಅಧಿಕಾರಿಗಳು ಕಾಯಿದೆಯನ್ನು ಯಾವರೀತಿಯಲ್ಲಿ ದುರುಪಯೋಗಪಡಿಸುವರೆಂಬುದನ್ನು ವಿಶದಪಡಿಸಲು ಹೇಳಿದುದಾಗಿಯೂ ಹೇಳಿದರು.

ಅನಂತರ ಪಬ್ಲಿಕ್ ಪ್ರಾಸಿಕ್ಯೂಟರಾದ ಮಿ|| ತಾಣಾವಾಲಾರವರು, ಕಮಿಶನರವರ ಪತ್ರವೇ ಅಪ್ಪಣೆಯೆಂದೂ, 143 ನೆಯ ಸೆಕ್ಷನ್ನಿನ ಪ್ರಕಾರವಾಗಿ ಎಲ್ಲರಿಗೂ 6 ತಿಂಗಳ ಕಾರಾಗೃಹವಾಸವನ್ನು ವಿಧಿಸಬೇಕೆಂದೂ ವಾದಿಸಿದರು. ಪಂಡಿತ ಮಾಳವೀಯರವರು ಪುನಃ ಮೇಲಕ್ಕೆದ್ದು, ಅಸಾಧಾರಣವಾದ ವಾಗ್ಝರಿಯಿಂದ 2 ಘಂಟೆಗಳಕಾಲ ಮುಂದೆ ಹೇಳುವಂತೆ ವಾದಿಸಿದರು.

“ಉತ್ಸವವು ಬೀದಿಯಲ್ಲಿ ಹೋಗಬಹುದೆಂದು ನಾವು ಯಾರೂ ಹೇಳುವದಿಲ್ಲ. ಆದರೆ ಪೋಲೀಸ್ ಕಾಯಿದೆಯು ಪ್ರಜೆಗಳ ಸೌಖ್ಯಕ್ಕಾಗಿ ಏರ್ಪಟ್ಟಿರುವದೇ ಹೊರ್ತು, ಪ್ರಜೆಗಳ ಜನ್ಮಸಿದ್ಧವಾದ ಹಕ್ಕುಬಾಧ್ಯತೆಗಳನ್ನು ಕಾಲಿನಿಂದ ತುಳಿಯುವದಕ್ಕಾಗಿ ಅಲ್ಲ. ಹಾರ್ನ್‌ಬಿರೋಡಿನಲ್ಲಿ ಉತ್ಸವವನ್ನು ಮಾಡಿಕೊಂಡು ಹೋಗಕೂಡದೆಂದು ಶ್ರೀಮತಿ ಹಂಸಾ ಮೆಹತಾರವರಿಗೆ ಆರ್ಡರು ಕಳುಹಿಸಿದಾಗ, ಈ ಅಡ್ಡಿಗೆ ಕಾರಣವೇನೆಂದು ಕೇಳಲು, ಸೂಪರಿಂಟೆಂಡೆಂಟ್ ಜೋಂಸರವರು ಯಾವಕಾರಣವನ್ನೂ ತಿಳಿಸಲಾರದೆ ಹೋದರು. ಉತ್ಸವದಿಂದ ಜನರಿಗೂ ಗಾಡಿಗಳ ಸಂಚಾರಕ್ಕೂ ತೊಂದರೆಯಾಗುವ ಹಾಗಿದ್ದರೆ, ಕಮಿಶನರವರು 5-30 ಘಂಟೆಯಿಂದ 7-30 ಘಂಟೆಯವರೆಗೆ ಉತ್ಸವಮಾಡಕೂಡದೆಂದು ಹೇಳಬಹುದಾಗಿದ್ದಿತು. ಕಮಿಶನರವರು ಹಾರ್ನ್‌ಬಿರೋಡಿನಲ್ಲಿ ಬೆಳಿಗ್ಗೆ 9-30 ಘಂಟೆಯಿಂದ ರಾತ್ರಿ 7-30 ಘಂಟೆಯವರೆಗೆ ಗಲಾಟೆಯಿರುವದೆಂದು ಹೇಳಿದರು. ಉತ್ಸವವು ಮಳೆಯನ್ನು ಲಕ್ಷಿಸದೆ ರಾತ್ರಿಯೆಲ್ಲ ಅಲ್ಲಿಯೇ ಕಾದುಕೊಂಡಿದ್ದಿತು. ದೊಡ್ಡ ದೊಡ್ಡ ಮನೆತನದ ಸ್ತ್ರೀಯರು ಮಳೆಗಾಳಿಗಳನ್ನು ಲಕ್ಷಿಸದೆ ರಾತ್ರಿಯೆಲ್ಲಾ ಅಲ್ಲಿಯೇ ಕುಳಿತಿದ್ದರು. ಇಷ್ಟಾದರೂ ಕಮಿಶನರು ಯಾರನ್ನೂ ಹೋಗುವಂತೆ ಹೇಳಲಿಲ್ಲ. ಅಪ್ಪಣೆಯು ಅನ್ಯಾಯವಾದುದು. ಅದರಲ್ಲಿಯೂ, ಅಡ್ಡಿಪಡಿಸಲ್ಪಟ್ಟದ್ದು ಪ್ರದೇಶವನ್ನು ತಲುಪುವದಕ್ಕೆ ಮುಂಚೆಯೇ ತಡೆಯುವದು, ಮತ್ತೂ ಅನ್ಯಾಯವಾದುದು. ಜನರು ಮತ್ತು ಗಾಡಿಗಳ ಸಂಚಾರಕ್ಕೆ ಅಡಚಣೆಯಾಗುವದೆಂಬುದೇ ಆ ಅಡ್ಡಿಗೆ ಕಾರಣವಾಗಿದ್ದರೆ, ಅರ್ಧರಾತ್ರಿಯಾದನಂತರ ರಸ್ತೆಯಲ್ಲಿ ಜನಸಂಚಾರವೇ ಇಲ್ಲದ ಸಮಯದಲ್ಲಿ ಉತ್ಸವಕ್ಕೆ ಮುಂದುವರಿಯಲು ಅವಕಾಶವನ್ನೇಕೆ ಕೊಡಲಿಲ್ಲ ? ಮರುದಿವಸ ಪ್ರಾತಃಕಾಲ, ಜನಸಂಚಾರವು ಇನ್ನೂ ಪ್ರಾರಂಭವಾಗದಿದ್ದ ಸಮಯದಲ್ಲಿ ಮಿ|| ವಲ್ಲಭಭಾಯಿ ಪಟೇಲರವರು ಯಾರಿಗೂ ತೊಂದರೆಯಾಗದಂತೆ, ಹಾರ್ನ್‌ಬಿರೋಡಿನಲ್ಲಿ ಇಬ್ಬಿಬ್ಬರಾಗಿ ಕೆಲವು ನಿಮಿಷಗಳಲ್ಲಿ ಹೊರಟುಹೋಗುವದಾಗಿ ಹೇಳಿದರು. ಕಮಿಶನರವರು ಅದಕ್ಕೂ ಸಹ ಒಪ್ಪದೆ ಹೋದರು. ಇದರಿಂದ ಕಮಿಶ... ಅಪ್ಪಣೆಯು ಪ್ರಜೆಗಳ ಜನ್ಮಸಿದ್ಧವಾದ ಹಕ್ಕುಗಳನ್ನು ...ತ್ತಿಸುತ್ತಿತ್ತೆಂಬುದು ಸ್ಪಷ್ಟವಾಗುವದು. “ಡಿಸೆ” ಯವ ಕಾನ್ಸ್ಟಿಟ್ಯೂಷನಲ್ ಕಾಯಿದೆ” ಎಂಬ ಗ್ರಂಥದಲ್ಲಿ ‘ರಸ್ತೆಗಳಲ್ಲಿ ಹೋಗುವದು ಪ್ರತಿಯೊಬ್ಬ ಪ್ರಜೆಯಹಕ್ಕಾಗಿರುವದು. ಈ ಹಕ್ಕಿಗೆ ವಿರೋಧವಾಗಿ ಸೆಕ್ರೆಟರಿ ಆಫ್ ಸ್ಟೇಟ್‌ರವರು ಅಪ್ಪಣೆಮಾಡಿದರೂ, ಅದು ಅಕ್ರಮವಾದ ಆಜ್ಞೆಯೆನಿಸುವದೇ ಹೊರ್ತು, ಆ ಆಜ್ಞೆಯನ್ನು ವಿಚಾರಿ ನಡೆದ ಪ್ರಜೆಯು ಅಪರಾಧಿಯಾಗಲಾರನು’ ಎಂದು ವಿಶದವಾಗಿ ಹೇಳಿರುವದು.

ಕಮಿಶನರಿಗೆ ಜನರಿಗೆ ಅವಶ್ಯಕವಾದ ಅನುಕೂಲಗಳನ್ನು ಕಲ್ಪಿಸಿಕೊಡುವ ಅಧಿಕಾರವು ಮಾತ್ರ ಇರುವದು. ಜನರ ಮತ್ತು ಗಾಡಿಗಳ ಸಂಚಾರಕ್ಕೆ ಅಡಚಣೆಯಾಗುವಂತಿದ್ದರೆ, ಇಂಥ ರಸ್ತೆಯಲ್ಲಿಯೇ ಹೋಗಬೇಕೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಆದರೆ ಮುಂಬಯಿ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ತೀರ್ಮಾನಿಸುವ ಅಧಿಕಾರವು ಅವರಿಗಿರುವದಿಲ್ಲ. ತಮಗಿರುವ ಅಧಿಕಾರವನ್ನು ಪ್ರಜೆಗಳಿಗೆ ತೊಂದರೆಯಾಗುವಂತೆ ಎಂದೂ ಉಪಯೋಗಿಸಕೂಡದು. ನಾನೆಂದೂ ಅವರ ಅಂಥ ಆಜ್ಞೆಯನ್ನು ಪಾಲಿಸುವದಿಲ್ಲ. ನನ್ನ ದಾರಿಯಲ್ಲಿ ಅಡ್ಡಿ ಬರಲು ಕಮಿಶನರಿಗೆ ಯಾವ ಅಧಿಕಾರವೂ ಇಲ್ಲ. ಜನ ಸಂಚಾರಕ್ಕೆ ತೊಂದರೆಯಾಗುವದೆಂದು ಹೇಳುವ ಅಧಿಕಾರವು ಅವರಿಗಿರುವದು. ಜನರ ಸಂಚಾರವು ಮುಗಿದಕೂಡಲೇ ಅವರ ಅಧಿಕಾರವೂ ಮುಗಿದುಹೋಗುವದು. ತಮ್ಮ ಆಜ್ಞೆಯನ್ನು ಬದಲಾಯಿಸುವ ಅಧಿಕಾರವೂ ಅವರಿಗಿರುವದು. ಉತ್ಸವವು ನಿಂತ ಸ್ಥಳದಲ್ಲಿ ಅವರೂ ಇದ್ದರು. ಆದರೆ ಬೆಳಗಿನಝಾವದಲ್ಲಿ ಜನರ ಸಂಚಾರವಿಲ್ಲದಿದ್ದಾಗ ಸಹ ಅವರು ಉತ್ಸವವು ಮುಂದೆ ಹೊರಡಲು ಅವಕಾಶಕೊಡಲಿಲ್ಲ. ಇದರಿಂದ ಅವರು ಕಾಯಿದೆಯ ತತ್ತ್ವವನ್ನೇ ಮೀರಿ ನಡೆದಂತಾಯಿತು. “ನನ್ನ ಆಜ್ಞೆಯನ್ನೇ ಪಾಲಿಸಲಿಲ್ಲ” ವೆಂದು ಅವರು ಹೇಳುವರು. ಇದಕ್ಕೆ ಅಧಿಕಾರದ ದರ್ಪವೆಂದು ಹೆಸರು. ಅಧಿಕಾರಿಗಳು ಈ ದರ್ಪವನ್ನು ಈ ದೇಶದಲ್ಲಿ ಮಾತ್ರ ತೋರಿಸುವರು. ಈ ಅಧಿಕಾರಿಗಳನ್ನು ದುಷ್ಟಶಿಕ್ಷಣದಿಂದ ಕೆಡಿಸಲ್ಪಟ್ಟ ಮೂರ್ಖ ಬಾಲಕರಿಗೆ ಹೋಲಿಸಬಹುದು.

ಆಜ್ಞೋಲ್ಲಂಘನೆಗೆ 100 ರೂ. ಗಳ ದಂಡವನ್ನು ಮಾತ್ರ ವಿಧಿಸಬಹುದು. ಇದನ್ನು ಕಮಿಶನರು ಚೆನ್ನಾಗಿ ಅರಿತಿದ್ದರೂ, ನಿಷ್ಕಾರಣವಾಗಿ ಪೋಲೀಸರ ಸೈನ್ಯವನ್ನು ಕರೆತಂದು ಶಾಂತರೀತಿಯಿಂದ ನಿಂತಿದ್ದ ಪ್ರಜೆಗಳನ್ನು ಕ್ಷುಲ್ಲಕಕಾಯಿದೆಯ ನೆಪವಾಡಿಕೊಂಡು, ದೊಣ್ಣೆಗಳಿಂದ ಹೊಡೆದರು.

ಈ ನಗರದಲ್ಲಿ ಪ್ರತಿನಿತ್ಯ ಪ್ರಾತಃಕಾಲದಲ್ಲಿ ಅನೇಕ ಉತ್ಸವಗಳು ಹೊರಡುವವು. ಸಾವಿರಾರು ಜನರು ಪ್ರತಿನಿತ್ಯವೂ ಉತ್ಸವಮಾಡಿಕೊಂಡು, ತಮ್ಮ ಮಾತೃಭೂಮಿಯ ಬಂಧವಿಮೋಚನೆಯಾಗಲೆಂದು ರಾಷ್ಟ್ರೀಯಗೀತೆಗಳನ್ನು ಹಾಡುತ್ತಾ ಹೋಗುವರು. ಇಂಥ ಉತ್ಸವಗಳಾವುವನ್ನೂ ಇದುವರೆಗೆ ಪೋಲೀಸರು ತಡೆದಿರುವದಿಲ್ಲ. ಇವುಗಳಿಂದ ಜನಸಂಚಾರಕ್ಕೆ ತೊಂದರೆಯಾಗುವದೆಂದೂ ಅವರು ಹೇಳುವದಿಲ್ಲ. ಹೀಗಿರುವಲ್ಲಿ ಕಮಿಶನರವರು ಮಾಡಿದ ಈ ಆಜ್ಞೆಯು ನ್ಯಾಯವಾದುದೇ ಎಂಬುದನ್ನು ಕೋರ್ಟಿನವರೇ ಊಹಿಸಬಹುದಾಗಿದೆ.”

ಮ್ಯಾಜಿಸ್ಟ್ರೇಟರು ಕೇಸಿನ ವಿಚಾರಣೆಯನ್ನು 11 ನೆಯ ತಾ|| ಸೋಮವಾರಕ್ಕೆ ಮುಂದುವರಿಸಿರುವದಾಗಿಯೂ ಸಾಧ್ಯವಾದರೆ ಅದಕ್ಕೂ ಮುಂಚಿತವಾಗಿಯೇ ತೀರ್ಮಾನವನ್ನು ಹೇಳುವದಾಗಿಯೂ ಹೇಳಿದರು. ಅಪರಾಧಿಗಳಾರೂ ಜಾಮೀನ್ ಕೊಡಲು ಒಪ್ಪಲಿಲ್ಲ.

ಮುಂಬಯಿ ಆಗಸ್ಟ್ 7.

ಈ ದಿನ ಮಧ್ಯಾಹ್ನ 1-40 ಘಂಟೆಗೆ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕಾಂಗ್ರೆಸ್ ಮುಖಂಡರ ವಿಚಾರಣೆಯ ತೀರ್ಮಾನವನ್ನು ಹೇಳಿದರು.

ಮ್ಯಾಜಿಸ್ಟ್ರೇಟರು ಪಂಡಿತ ಮದನಮೋಹನ ಮಾಳವೀಯ, ಶ್ರೀಮತಿ ಮಣಿಬೆನ್ ಪಟೇಲ್, ಶ್ರೀಮತಿ ರತ್ನಬೆನ್ ಮತ್ತು ಇನ್ನೂ ಇಬ್ಬರು ಸೀಸ್ತ್ರೀಯರಿಗೆ ಪ್ರತಿಯೊಬ್ಬರಿಗೂ 100 ರೂ. ಗಳ ಜುಲ್ಮಾನೆಯನ್ನೂ ತಪ್ಪಿದಲ್ಲಿ 15 ದಿನಗಳ ಸಾದಾಕಾರಾಗೃಹವಾಸದ ಶಿಕ್ಷೆಯನ್ನೂ ವಿಧಿಸಿದರು.

ಸರದಾರ್ ವಲ್ಲಭಭಾಯಿ ಪಟೇಲ್, ಮಿ|| ಜಯರಾಮದಾಸ್ ದೌಲತ್‌ರಾಂ, ಮಿ|| ಕಿಡ್ವಾಯಿ ಮತ್ತು ಡಾ|| ಹರ್ಡೀಕರ್ ಇವರಿಗೆ ಪ್ರತಿಯೊಬ್ಬರಿಗೂ 3 ತಿಂಗಳ ಸಾದಾಸಜೆಯನ್ನು ವಿಧಿಸಿದರು.

ತೀರ್ಮಾನವನ್ನು ಹೇಳುವಾಗ್ಗೆ ಮ್ಯಾಜಿಸ್ಟ್ರೇಟರು ಪಂಡಿತ ಮದನಮೋಹನ ಮಾಳವೀಯರು ತೀರ ವೃದ್ಧರಾಗಿರುವದರಿಂದಲೂ, ಹಾಗೂ ಅವರು ಉದ್ದೇಶಪೂರ್ವಕವಾಗಿ ಕಾಯಿದೆಭಂಗವನ್ನು ಮಾಡದೆ ಸಾರ್ವಜನಿಕಕಾರಣಗಳಿಂದ ಕಾಯಿದೆಭಂಗವನ್ನು ಮಾಡಿರುವದರಿಂದಲೂ ಮೇಲ್ಕಂಡಂತೆ ಶಿಕ್ಷೆಯನ್ನು ವಿಧಿಸಿರುವದಾಗಿ ಹೇಳಿರುವರು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗ್ಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಗೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[3]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿಸುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಆಗಕ ಮತ್ತು ಅಕಸ್ ಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವುದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೬೦ ವರ್ಷದ ಸ್ತ್ರೀಯರಿಗಾದರೂ ಪಾತ್ರೆಯಿಂದ ಗರ್ಭಧಾರಣೆಯಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶ್ರೀ ರುದ್ರವಿಲಾಸ ಬುಕ್‌ಡಿಪೋ, ಗದಗ.

ಇಲ್ಲಿ ದೊರೆಯುವ

ಸಚಿತ್ರ ಶ್ರೀ ದೇವೀಪುರಾಣವು.

ಇದನ್ನು

ಶಿ. ಮೂ. ಶಿದ್ಧಲಿಂಗಾರ್ಯ ಸಾಲಿಮಠ, ರೋಣ.

ಇವರು ಚೆನ್ನಾಗಿ ಪರಿಶೋಧಿಸಿ ಇದರ ಪೂಜಾವಿಧಿ, ಕಠಿಣ ಶಬ್ದಗಳಿಗೆ ಅರ್ಥ, ಸಹವಾಗಿ ಬರೆದು, ಬೇರೆ ಬೇರೆ ಪುಟಗಳಿಂದಲೂ, ದಪ್ಪ ಕಾಗದಗಳಲ್ಲಿ ದೊಡ್ಡ ಅಕ್ಷರಗಳಿಂದಲೂ, ಕೆಲವು ಚಿತ್ರಗಳಿಂದಲೂ, ಅಚ್ಚುಗೊಳಿಸಿ, ಪ್ರಸಿದ್ಧಪಡಿಸಿರುವರು. ಇದು ಸರ್ವರಿಗೂ ಪಾರಾಯಣಕ್ಕೆ ಬಹು ಯೋಗ್ಯವಾಗಿರುತ್ತದೆ. ಇದರಲ್ಲಿರುವ ೫೦ ವಿಷಯಗಳನ್ನು ಕೆಳಗೆ ವಿವರಿಸಿದೆ.

೧ ಶ್ರೀ ದೇವಿಮಹಾತ್ಮೆಯ ಪೂಜಾವಿಧಾನವು. ೨ ಸ್ನಾನಮಾಡುವ ಕ್ರಮವು. ೩ ಅನುಷ್ಠಾನಕ್ಕೆ ಕೂಡ್ರುವ ದಿಕ್ಕುಗಳು. ೪ ಹಾಸುವ ಆಸನಂಗಳ ಭೇದವು. ೫ ಕೂಡ್ರುವ ಆಸನಕ್ರಮ. ೬ ಅನುಷ್ಠಾನ ಮಾಡುವ ಕ್ರಮವು. ೭ ವಿಭೂತಿ ಮಾಡುವ ಕ್ರಮವು. ೮ ವಿಭೂತಿ ವಿಧಾನ ಗೋಚರ ಚಕ್ರವು. ೯ ವಿಭೂತಿ ಧಾರಣ ಸ್ಥಾನಗಳು. ೧೦ ರುದ್ರಾಕ್ಷಿ ಧಾರಣ ಫಲಗಳು. ೧೧ ದೇವತಾರ್ಚನ ಭೇದವು. ೧೨ ದೇವತಾರಾಧನ ಫಲಕ್ರಮವು. ೧೩ ದೇವತಾರ್ಚನಾ ಕ್ರಮವು. ೧೪ ಅಷ್ಟೋಪಚಾರ ಪೂಜೆಯ ಕ್ರಮವು. ೧೫ ಅಷ್ಟವಿಧಾರ್ಚನೆಯ ಮಂತ್ರಗಳು. ೧೬ ಜಪಮಾಲಿಕಾ ಲಕ್ಷಣವು. ೧೭ ಮಂತ್ರಪಲ್ಲವಂಗಳ ಫಲಕ್ರಮವು. ೧೮ ಜಪಾರಂಭದಲ್ಲಿ ಧ್ಯಾನಿಸುವ ಧ್ಯಾನಮೂರ್ತಿ ಭೇದ ಫಲಗಳು. ೧೯ ದೇವೀಮಹಾತ್ಮೆಯ ಪೂಜಾವಿಧಾನವು. ೨೦ ದೀಪಸ್ಥಾಪನ ಕ್ರಮವು. ೨೧ ಪೂರ್ಣಕುಂಭ ಯಂತ್ರಸ್ಥಾಪನ ಕ್ರಮವು. ೨೨ ಯಂತ್ರೇಪ್ರಾಣಪ್ರತಿಷ್ಠಾ ದೇವತಾ ಸ್ಥಾಪನಾದಿ ಪೂಜಾವಿಧಾನವು. ೨೩ ದೇವತಾರ್ಚನಾ ಮಂತ್ರವು. ೨೪ ದಶಾವರಣ ದೇವತಾಯಂತ್ರವು. ೨೫ ನವಾರ್ಣವ ಯಂತ್ರವು. ೨೬ ಸರಸ್ವತಿಪೂಜೆಯು. ೨೭ ಶಾಪೋದ್ಧಾರ ಮಂತ್ರಜಪವು. ೨೮ ಉತ್ಕೀಲನ ಮಂತ್ರಜಪವು. ೨೯ ಕೂಷ್ಮಾಂಡ ಬಲಿಕ್ರಮವು. ೩೦ ನವಾರ್ಣವ ಮಂತ್ರನ್ಯಾಸಕ್ರಮವು. ೩೧ ದೇವೀಮಹಾತ್ಮೆಯ ಚರಿತ್ರತ್ರಯನ್ಯಾಸಕ್ರಮವು. ೩೨ ದೇವೀಮಹಾತ್ಮೆಯ ಗ್ರಂಥಪಠನ ಕ್ರಮವು. ೩೩ ಶ್ರೀ ದೇವೀ ಕುಂಭಾಷ್ಟಕ ಮಂತ್ರವು. ೩೪ ಕುಂಭಾಷ್ಟಕ ಮಂತ್ರಸಿದ್ಧಿ ಫಲಕ್ರಮವು. ೩೫ ಕಾಳಿಕಾ ಬೀಜ ಮಂತ್ರಾಷ್ಟಕ. ೩೬ ಇಚ್ಛಾಫಲಪ್ರಾಪ್ತಿಗೆ ಸಂಗ್ರಹಕ್ರಮವು. ೩೭ ಉತ್ತರನ್ಯಾಸವಿಧಿ. ೩೮ ಅನ್ನಸಂತರ್ಪಣ ಕ್ರಮ. ೩೯ ದೇವೀಮಹಾತ್ಮೆಯ ೧ನೇ ಚರಿತ್ರವು. (ಪೀಠಿಕಾಧ್ಯಾಯದಿಂದ ೩ನೇ ಅಧ್ಯಾಯ ಸಂಪೂರ್ಣ) ೪೦ ದೇವೀಮಹಾತ್ಮೆಯ ೨ನೇ ಚರಿತ್ರವು. (೪ನೇ ಅಧ್ಯಾಯದಿಂದ ೯ನೇ ಅಧ್ಯಾಯ ಸಂಪೂರ್ಣ) ೪೧ ದೇವೀಮಹಾತ್ಮೆಯ ೩ ನೇ ಚರಿತ್ರವು (೧೦ನೇ ಅಧ್ಯಾಯದಿಂದ ೧೮ ನೇ ಅಧ್ಯಾಯ ಸಂಪೂರ್ಣ) ೪೨ ಮಂಗಳಾರತಿ ಪದವು. ೪೩ ಮಂಗಲ ನೀರಾಜನವು. ೪೪ ಪುಷ್ಪಾಂಜಲಿಯು. ೪೫ ಪ್ರದಕ್ಷಿಣೆಯು. ೪೬ ನಮಸ್ಕಾರವು. ೪೭ ಪ್ರಾರ್ಥನೆಯು. ೪೮ ಅರ್ಘ್ಯಪ್ರದಾನವು. ೪೯ ವಿಸರ್ಜನ ಪೂಜೆಯು. ೫೦ ಕಠಿಣ ಶಬ್ದಗಳ ಅರ್ಥವು.

ಈ ಪ್ರಕಾರ ಯಾವತ್ತು ಮಹತ್ವದ ವಿಷಯಗಳಿಂದೊಡಗೂಡಿದ ಈ ದೇವೀಮಹಾತ್ಮೆಯ ಎರಡನೇ ಆವೃತ್ತಿಯ ಪ್ರತಿಗಳು ಖರ್ಚಾಗಿ ಇನ್ನು ಸ್ವಲ್ಪವೇ ಶಿಲ್ಕು ಉಳಿದಿರುತ್ತವೆ. ಬೇಕಾದವರು ತೀವ್ರವಾಗಿ ತರಿಸಿಕೊಳ್ಳಬೇಕು.

ಕ್ರಯ ಐದು ರೂಪಾಯಿ 5-0-0

ವಿಳಾಸ—**ಎಸ್. ಸಿ. ಸಾಲಿಮಠ ಎಂಡ ಸನ್ಸ,**

ಬುಕ್‌ಸೇಲರ್ಸ ಎಂಡ ರಬ್ಬರ ಸ್ಟಾಂಪ ಮೇಕರ್ಸ,

[2] **ಗದಗ ಸಿಟಿ.**

ಪೋಷ್ಟ ಗದಗ. ಜಿಲ್ಲಾ ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲು ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿಣತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಬೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಸುಮಾಸಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[17] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ಧಿಕ್ಕರಿಸದೆ. ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ರಜಿ] ### ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುಪತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆಗೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದು ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[3]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ ?

ಕಂಗೆಡಬೇಡಾ ! ಮರುಗಬೇಡಾ !! ಗುಣದ ಮದ್ದು ಯಾವದೆಂದು ನೋಡಾ !!!

ಮುಲೇರಿಯಾನ ಕಂಪೆನಿಯ ಮದ್ದನ್ನು ಒನ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ ? ಇಗೋ ! “**ಮುಲೇರಿಯಾನ**” ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅಗ್ನಿಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಒಳ್ಳೇ ಆರೋಗ್ಯದಲ್ಲಿ ಬಾಳಬೇಕೋ ? ಕಂಪೌಂಡು ಸಿರಪು “**ಪುಲ್ಸಫೂಜ**” ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಿಷ್ಠಗೊಳ್ಳುವ ಇಚ್ಛೆ ಉಂಟಾ ? ಕಂಪೌಂಡು ಸಿರಪು “**ಸೆಬೀನ ಸೆಪೀಯ**” ಮತ್ತು ಕಂಪೌಂಡು ಸಿರಪು “**ವಿಬುರ್ನೊರ್ವ**” ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ಹಾರೈಸುತ್ತೀಯಾ ? ಹಾಗಾದರೆ ಕಂಪೌಂಡು ಸಿರಪು “**ಸರ್ಸಪರಿಲ್ಲ**” ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖಾತ್ರಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲವನ್ನೇ ತೆಗೆದುಹಾಕುವ ಮದ್ದು ಕಂಪೌಂಡು ಸಿರಪು “**ವೆಸಿಕೂಜ**” ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೋಮಿಯೋಪಥಿ ಮದ್ದುಗಳೂ ಟಿಂಕ್ಚರು ಅವುಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅಪೂರ್ವ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ಒಂದು ಪುಸ್ತಕ ಉಚಿತವಾಗಿ ಕಳುಹಿಸಲಾಗುವದು.

[53] **ಮುಲೇರಿಯಾನ ಕಂಪನಿ, (ಹಂಪನಕಟ್ಟೆ), ಮಂಗಳೂರು.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೮—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣನಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೧ ಆಣೆ
ಬಸವಧ್ವಾಂತ ದಿವಾಕರ	೪ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ)	೧೦ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೨ ಆಣೆ
ವೀರಶೈವಮತಮೀಮಾಂಸಾ	೪ ಆಣೆ
ವೈದಿಕವಾಙ್ಮಯರಹಸ್ಯ	೨ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೮ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೨ ಆಣೆ ೬ ಪೈ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೨ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಶನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅನುಕೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳು ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[44] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಸ್ವಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[5] ಪೋ. ಬಾ. ೫೧೧. ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ ನೇ ಆಗಸ್ಟು ೧೯೩೦ [ಸಂಚಿಕೆ ೧೬.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮೈಸೂರು ಶ್ರೀಮನ್ಮಹಾರಾಜರವರ ಶುಭಾಗಮನ.

ಕೇದಾರನಾಥ ಮಹಾಸಂಸ್ಥಾನ, ಓಖಿಮಠ.

ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಶುಭಾಗಮನವು ಉಷಾಮಠಕ್ಕೆ ಈ ತಿಂಗಳು 6 ನೆಯ ತಾರೀಖಿನ ದಿವಸ ಆಗುವದೆಂಬ ವಿಷಯವು ಈ ಮೊದಲೇ ಪ್ರಭಾಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದಿತಷ್ಟೇ! ಅದರಂತೆ ಪ್ರಾತಃಕಾಲ 8 ಘಂಟೆಗೆ ಶ್ರೀಮನ್ಮಹಾರಾಜರವರ ಸವಾರಿಯು ಸಮಸ್ತ ರಾಜಾಧಿಕಾರಿಗಳೊಡನೆ ಉಷಾಮಠಕ್ಕೆ ದಯಮಾಡಿಸಿತು. ಉಷಾಮಠದ ಬೀದಿಗಳು ಚಿತ್ರವಿಚಿತ್ರಗಳಾದ ಮಹಾದ್ವಾರಗಳಿಂದಲೂ, ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಹಿಮಾಲಯದಲ್ಲಿ ಬೆಳೆಯುವ ನಾನಾ ತರಹದ ಮನೋಹರ ಪುಷ್ಪಗುಚ್ಛಗಳಿಂದಲೂ, ಧ್ವಜಗಳಿಂದಲೂ ಬಹು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು. ಪ್ರಾತಃಕಾಲ 6 ಘಂಟೆಗೆ ಸರಿಯಾಗಿ ಮಹಾಸಂಸ್ಥಾನದ ಪಾರುಪತ್ತೇಗಾರರೂ, ಅಧಿಕಾರಿಗಳೂ, ಜಗದ್ಗುರು ನೀಲಕಂಠ ಮಿಡಲ್‌ಸ್ಕೂಲಿನ ಮಾಸ್ತರರೂ, ವಿದ್ಯಾರ್ಥಿಗಳೂ, ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯದ ಸಂಸ್ಕೃತ ಜ್ಯೋತಿಷ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಆಯುರ್ವೇದ ಮಹಾವಿದ್ಯಾಲಯದ ಪಂಡಿತರೂ, ವಿದ್ಯಾರ್ಥಿಗಳೂ ಹಾಗೂ ಮುಖ್ಯಮುಖ್ಯ ಪ್ರಜೆಗಳೂ ಸಕಲ ವಾದ್ಯವೈಭವದೊಡನೆ ಮಹಾಸವಾರಿಯ ಆಗಮನಮಾರ್ಗನಿರೀಕ್ಷಣೆಯಲ್ಲಿದ್ದರು. ಮಹಾಪ್ರಭುಗಳವರ ಸವಾರಿಯು ದಯಮಾಡಿಸಿದ ಕೂಡಲೇ ಸರ್ವರೂ ಮಹಾಪ್ರಭುಗಳ ಜಯಜಯಕಾರದೊಡನೆ ಆನಂದೋದ್ರೇಕದಿಂದ ಪುಷ್ಪವೃಷ್ಟಿಗರೆದರು. ಪಂಡಿತರು ಮತ್ತು ವಿದ್ಯಾರ್ಥಿಗಳು ಮಹಾಪ್ರಭುಗಳ ಕೀರ್ತಿಯನ್ನು ಸಂಸ್ಕೃತ ಮತ್ತು ಹಿಂದೀ ಕವಿತಾರೂಪದಿಂದ ಬಹು ಮನೋಹರವಾಗಿ ಕೀರ್ತಿಸುತ್ತ, ಪ್ರಭುಗಳಿಗೆ ಸುಸ್ವಾಗತವನ್ನು ಬಯಸಿದರು. ಆ ಸಮಯದ ದೃಶ್ಯವು ಅತಿ ಮನೋಹರವಾಗಿಯೂ ಅಸದೃಶವಾಗಿಯೂ ಒಪ್ಪುತ್ತಿತ್ತು. ಪ್ರಭುಗಳು ವಿಶ್ವಾಸಪೂರಿತವಾದ ಸರ್ವರ ಉತ್ಸಾಹವನ್ನು ನೋಡಿ ಬಹು ಸಂತೋಷಗೊಂಡು ಸರ್ವರ ಕುಶಲವನ್ನೂ ಪ್ರಶ್ನಿಸಿ, ಅನಂತರ ತಮಗಾಗಿ ರಚಿತವಾಗಿದ್ದ ಬಿಡಾರಕ್ಕೆ ಸರ್ವರ ಜಯಜಯಕಾರದೊಡನೆ ದಯಮಾಡಿಸಿದರು. ಮುಂದೆ ನಡೆದ ವಿಷಯಗಳನ್ನು ಪುನಃ ಪ್ರಕಟಿಸುವದಾಗುವದು. "ಸತ್ಯಮೇವೋದ್ಧರಾಮ್ಯಹಂ" ಎಂಬ ಭಗವದುಕ್ತಿಯಂತೆ ರಾಜ್ಯವನ್ನು ಪರಿಪಾಲಿಸುತ್ತ ಭರತಖಂಡದಲ್ಲಿ ರಾಜರ್ಷಿಗಳೆಂದು ಸರ್ವರಿಂದಲೂ ಹೊಗಳಿಸಿಕೊಳ್ಳಲ್ಪಡುತ್ತಿರುವ ಮಹಾಪ್ರಭುಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಓಖೀಮಠ, ಅರ್ಚಕ,
ತಾ|| 6-8-30. ಜಯಲಿಂಗ.

ವಂದೇಮಾತರಂ.

ಹಬ್ಬದ ಉಬ್ಬು ಬೇಡ.

ಮುಂದೆ ಬರುವ ಗಣೇಶನಹಬ್ಬವನ್ನು ಇದುವರೆಗೆ ಮಾಡುತ್ತ ಬಂದಂತೆ ಇನ್ನು ಮುಂದೆ ಮಾಡಬೇಡಿರಿ. ಇದು ಮದ್ದು ಪಟಾಕಿಯ ಮೆರವಣಿಗೆಯನ್ನು ಹೂಡಿ ಉತ್ಸವದಿಂದ ಕಳುಹಿಸುವ ದಿವಸವಲ್ಲ! ನಾನೆಷ್ಟು ದರಿದ್ರಾವಸ್ಥೆಯಲ್ಲಿರುವೆವು? ಎಂಥ ಪಾರತಂತ್ರ್ಯದ ಬಂಧನದಲ್ಲಿರುವೆವು? ನಮ್ಮ ಜೀವನವು ಹೇಗೆ ನಡೆದಿದೆ? ಇವೇ ಮೊದಲಾದ ವಿಷಯಗಳನ್ನು ವಿಚಾರಿಸಿನೋಡಿರಿ. ಪರದೇಶದ ಮದ್ದು ಪಟಾಕಿಗಳಗೋಸ್ಕರ ನಿಷ್ಪ್ರಯೋಜನವಾಗಿ ದುಡ್ಡು ಹಾಕಬೇಡಿರಿ. ಹೀಗೆ ಮಾಡುವುದರಿಂದ ಗಣಪತಿಯು ನಿಮಗೆ ಪ್ರಸನ್ನನಾಗುವದಿಲ್ಲ. ಗಣಪತಿಗೆ ಪರದೇಶಿ ಬಣ್ಣ ಬ್ಯಾಗಡಿಗಳನ್ನು ಹಚ್ಚದೆ ಶುದ್ಧ ಸ್ವದೇಶಿಯ ವಸ್ತುಗಳಿಂದಲೇ ತಯಾರಿಸಿ ಪೂಜಿಸಬೇಕು. ಈಗಿನ ಸ್ವಾತಂತ್ರ್ಯಸಮರಸಮಯದಲ್ಲಿ ಹಬ್ಬಗಳ ಉಬ್ಬಾಟದ ಆಡಂಬರವನ್ನು ಖಂಡಿತ ಬಿಡಬೇಕೆಂದು ಕೋರಿಕೆ.

ಪಂಚಾಕ್ಷರಶಾಸ್ತ್ರೀ, ಶಿರೋಳ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಬಳ್ಳಿಯವರ ಬಲಾತ್ಕಾರವಾದ ಉಪದೇಶ.

ಬಸವನಿಂದ ಪ್ರಸಿದ್ಧಿ ಹೊಂದಿದ ಕಲ್ಯಾಣ ಪ್ರಾಂತಕ್ಕೆ ನಾನು ಹೋಗಿದ್ದೆನು. ಆ ಪ್ರಾಂತದಲ್ಲಿ ಎಲ್ಲಿ ನೋಡಿದರೂ ಎಲ್ಲಿ ಕೇಳಿದರೂ "ಶಿವಾ ಶಿವಾ" ಎಂಬ ಶಬ್ದಗಳೇ ಕೇಳಬರುತ್ತವೆ. ಅದಕ್ಕೆ ಕಾರಣ ಆ ಪ್ರಾಂತದಲ್ಲಿ ಹೆಸರಾದ ಬಳ್ಳಿಯ ಚನ್ನಬಸವ ಪಟ್ಟದ್ದೇವರಂತೆ! ಇವರು (ಭಕ್ತರನ್ನು ಉದ್ಧಾರ ಮಾಡಲಿಕ್ಕೆ ಹೊರಟ ಚನ್ನಬಸದೇವರಂತೆ!) ಶಿವ ಶಿವ! ಲಿಂಗಬ್ರಾಹ್ಮಣರಿಗೆ ಶಿವಾಧಾರಣವು ಯಾವ ಗ್ರಂಥದಲ್ಲಿಯೂ ಹೇಳಿಲ್ಲ; ಪ್ರಮಾಣಗಳಂತೂ ಮೊದಲೇ ಇಲ್ಲ; ಈಗಿರುವ ಪಂಡಿತರು ಶ್ಲೋಕಗಳನ್ನು ರಚನೆಮಾಡಿ ಭಕ್ತರಿಗೆ ಉಪದೇಶ ಮಾಡುವದಲ್ಲದೆ ಅವರಲ್ಲಿರುವ ಭಕ್ತಿಯನ್ನು ನಷ್ಟಗೊಳಿಸಹತ್ತಿದ್ದಾರೆಂದು ಹಳ್ಳಿಹಳ್ಳಿಗಳಲ್ಲಿರುವ ತಮ್ಮ ತಮ್ಮ ಶಿಷ್ಯರುಗಳಿಗೆ ಬೋಧಿಸುವಲ್ಲದೆ ಇತರ ಭಕ್ತರಿಗೂ ಸಹ ಬೋಧಿಸುತ್ತಾರಂತೆ! "ಜಾತಿಜಂಗಮನಾಗಬೇಕಲ್ಲದೆ ನೀತಿಜಂಗಮನಾಗಬಾರದು." ಎಂಬ ಕಾಡಸಿದ್ಧೇಶ್ವರ ವಚನದಂತೆ ಜಾತಿಜಂಗಮನಾಗಬೇಕಾದರೆ ಹಿಂದಿನ ಜನ್ಮದಲ್ಲಿ ಬಹು ಪುಣ್ಯವನ್ನು ಮಾಡಿರಬೇಕು. ಪಟ್ಟದ್ದೇವರೇ! ನೀವು ಭಕ್ತರಿಗೆ ಧರ್ಮಗ್ರಂಥಗಳೆಂದು ಬೋಧಿಸುವ ಕನ್ನಡ ಪುಸ್ತಕಗಳು ಧರ್ಮಗ್ರಂಥಗಳೇನು? ಪ್ರಾಚೀನಗಳಾದ ಸಂಸ್ಕೃತ ಧರ್ಮಗ್ರಂಥಗಳೇ ನಿಮಗೆ ಗೋಚರವಿಲ್ಲದ ಪಕ್ಷದಲ್ಲಿ ಭಕ್ತಕೋಟಿಯನ್ನು ಉದ್ಧಾರಮಾಡುವ ಬಗೆಹೇಗೆ? ಭೋ ಸ್ವಾಮಿನ್! ದುರುಳವಿರಕ್ತರ ಉಪದೇಶಕ್ಕೆ ಬಲಿಬಿದ್ದು ಭಗವತ್ಪಾದ ರೇಣುಕರ ಕೃಪೆಗೆ ದೂರರಾಗಬೇಡಿರಿ. "ಶಿವಾಹೀನಸ್ಯ ಭಕ್ತಸ್ಯ ನಚವಕ್ತ್ರಾವಲೋಕನಂ" ಎಂದು ಪಾರಮೇಶ್ವರಾಗಮವು ಸಿಂಹ ಗರ್ಜನೆಮಾಡುವದನ್ನು ನೀವು ಕೇಳಿಲ್ಲವೇ? ನಿಮ್ಮಗಳಿಗೆ ಸಂಶಯವಾಗಿದ್ದರೆ ಧರ್ಮಪೀಠಾಧೀಶ್ವರರ ಕೃಪೆಗೆ ಪಾತ್ರರಾಗಿ ಈ ವಿಷಯವನ್ನು ತಿಳಿದುಕೊಂಡು ಧನ್ಯರಾಗಿರಿ. ನೀವು ಅನ್ಯಾಯವಾಗಿ ಅವೈದಿಕತತ್ವವನ್ನು ಬೋಧಿಸಿದರೆ ಆ ಧರ್ಮದ್ರೋಹವು ನಿಮ್ಮನ್ನು ಎಂದಿಗೂ ಬಿಡಲಿಕ್ಕಿಲ್ಲ. ಇನ್ನಾದರೂ ಧರ್ಮಗ್ರಂಥಗಳನ್ನು ನೋಡಿ ಧರ್ಮಮಾರ್ಗದಿಂದ ವರ್ತಿಸಬೇಕೆಂದು ಕೋರುವ,

ಓರ್ವ ವೀರಶೈವ.

ಪೆಷಾವರ್ ಡಿಸ್ಟ್ರಿಕ್ಟಿನಲ್ಲಿ ಆಫ್ರಿದಿ ಜನಾಂಗದವರ ಗಲಾಟೆಯು ಹತೋಟಿಮೀರಿ ಬಂದಿರುವದರಿಂದ ಆ ಪ್ರಾಂತದಲ್ಲೆಲ್ಲಾ ಲಷ್ಕರೀ ಕಾಯಿದೆಯನ್ನು ಜಾರಿಯಲ್ಲಿ ತಂದಿರುವದಾಗಿ ವೈಸರಾಯರು ಒಂದು ನೂತನ ಆರ್ಡಿನೆನ್ಸನ್ನು ಹೊರಡಿಸಿರುತ್ತಾರೆ.

ಬಳ್ಳಾರಿ ಪ್ರಾಂತದ ವೀರಶೈವರು ತಮ್ಮ ಪತಿಯಿಂದ ಮಿ|| ಕೊಮಾರರೆಡ್ಡಿ, ಬಿ.ಎ., ಬಿ.ಎಲ್., ಇವರನ್ನು ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮೆಂಬರಾಗಲು ಉಮೇದುವಾರರನ್ನಾಗಿ ನಿಲ್ಲಿಸಿರುವುದರಿಂದ ಇವರಿಗೆ ಸರ್ವ ವೀರಶೈವರೂ ತಮ್ಮ ಮತಗಳನ್ನು ಕೊಟ್ಟು ಜಯಶೀಲರನ್ನಾಗಿ ಮಾಡಬೇಕೆಂದು ಕೋರುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತಂಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೩ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತವಿಮಾಂಸಾ	೩ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೩ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೩ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅನುಕೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗಸೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ವೇಳೆಯಿಂದ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ಪಷ್ಟವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳು ಲೋಪವಾಗಿ ಹೋಗಿರುವದರಿಂದ ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದ ಇತರರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
[44] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರೆಲೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜ಼ನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[5] ಪೋ. ಬಾ. ೫೧೦, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ ನೇ ಆಗಸ್ಟು ೧೯೩೦ [ಸಂಚಿಕೆ ೧೬.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ನಡೆಸಿ ಧನ್ಯರಾಗಬೇಕೆಂದು ಹೇಳುವದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮೈಸೂರು ಶ್ರೀಮನ್ಮಹಾರಾಜರವರ ಶುಭಾಗಮನ.

ಕೇದಾರನಾಥ ಮಹಾಸಂಸ್ಥಾನ, ಓಖೀಮಠ.

ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಶುಭಾಗಮನವು ಉಷಾಮಠಕ್ಕೆ ಈ ತಿಂಗಳು 6 ನೆಯ ತಾರೀಖಿನ ದಿವಸ ಆಗುವದೆಂಬ ವಿಷಯವು ಈ ಮೊದಲೇ ಪ್ರಭಾಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದಿತಷ್ಟೇ! ಅದರಂತೆ ಪ್ರಾತಃಕಾಲ 8 ಘಂಟೆಗೆ ಶ್ರೀಮನ್ಮಹಾರಾಜರವರ ಸವಾರಿಯು ಸಮಸ್ತ ರಾಜಾಧಿಕಾರಿಗಳೊಡನೆ ಉಷಾಮಠಕ್ಕೆ ದಯಮಾಡಿಸಿತು. ಉಷಾಮಠದ ಬೀದಿಗಳು ಚಿತ್ರವಿಚಿತ್ರಗಳಾದ ಮಹಾದ್ವಾರಗಳಿಂದಲೂ, ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಹಿಮಾಲಯದಲ್ಲಿ ಬೆಳೆಯುವ ನಾನಾ ತರಹದ ಮನೋಹರ ಪುಷ್ಪಗುಚ್ಛಗಳಿಂದಲೂ, ಧ್ವಜಗಳಿಂದಲೂ ಬಹು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದುವು. ಪ್ರಾತಃಕಾಲ 6 ಘಂಟೆಗೆ ಸರಿಯಾಗಿ ಮಹಾಸಂಸ್ಥಾನದ ಪಾರುಪತ್ತೇಗಾರರೂ, ಅಧಿಕಾರಿಗಳೂ, ಜಗದ್ಗುರು ನೀಲಕಂಠ ಮಿಡಲ್‌ಸ್ಕೂಲಿನ ಮಾಸ್ಟರರೂ, ವಿದ್ಯಾರ್ಥಿಗಳೂ, ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯದ ಸಂಸ್ಕೃತ ಜ್ಯೋತಿಷ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಆಯುರ್ವೇದ ಮಹಾವಿದ್ಯಾಲಯದ ಪಂಡಿತರೂ, ವಿದ್ಯಾರ್ಥಿಗಳೂ ಹಾಗೂ ಮುಖ್ಯಮುಖ್ಯ ಪ್ರಜೆಗಳೂ ಸಕಲ ವಾದ್ಯವೈಭವದೊಡನೆ ಮಹಾಸವಾರಿಯ ಆಗಮನಮಾರ್ಗನಿರೀಕ್ಷಣೆಯಲ್ಲಿದ್ದರು. ಮಹಾಪ್ರಭುಗಳವರ ಸವಾರಿಯು ದಯಮಾಡಿಸಿದ ಕೂಡಲೇ ಸರ್ವರೂ ಮಹಾಪ್ರಭುಗಳ ಜಯಜಯಕಾರದೊಡನೆ ಆನಂದೋದ್ರೇಕದಿಂದ ಪುಷ್ಪವೃಷ್ಟಿಗರೆದರು. ಪಂಡಿತರು ಮತ್ತು ವಿದ್ಯಾರ್ಥಿಗಳು ಮಹಾಪ್ರಭುಗಳ ಕೀರ್ತಿಯನ್ನು ಸಂಸ್ಕೃತ ಮತ್ತು ಹಿಂದೀ ಕವಿತಾರೂಪದಿಂದ ಬಹು ಮನೋಹರವಾಗಿ ಕೀರ್ತಿಸುತ್ತ, ಪ್ರಭುಗಳಿಗೆ ಸುಸ್ವಾಗತವನ್ನು ಬಯಸಿದರು. ಆ ಸಮಯದ ದೃಶ್ಯವು ಅತಿ ಮನೋಹರವಾಗಿಯೂ ಆಸದೃಶವಾಗಿಯೂ ಒಪ್ಪುತ್ತಿತ್ತು. ಪ್ರಭುಗಳು ವಿಶ್ವಾಸಪೂರಿತವಾದ ಸರ್ವರ ಉತ್ಸಾಹವನ್ನು ನೋಡಿ ಬಹು ಸಂತೋಷಗೊಂಡು ಸರ್ವರ ಕುಶಲವನ್ನೂ ಪ್ರಶ್ನಿಸಿ, ಅನಂತರ ತಮಗಾಗಿ ರಚಿತವಾಗಿದ್ದ ಬಿಡಾರಕ್ಕೆ ಸರ್ವರ ಜಯಜಯಕಾರದೊಡನೆ ದಯಮಾಡಿಸಿದರು. ಮುಂದೆ ನಡೆದ ವಿಷಯಗಳನ್ನು ಪುನಃ ಪ್ರಕಟಿಸುವದಾಗುವದು. "ಸತ್ಯಮೇವೋದ್ಧರಾಮ್ಯಹಂ"ಎಂಬ ಭಗವದುಕ್ತಿಯಂತೆ ರಾಜ್ಯವನ್ನು ಪರಿಪಾಲಿಸುತ್ತ ಭರತಖಂಡದಲ್ಲಿ ರಾಜರ್ಷಿಗಳೆಂದು ಸರ್ವರಿಂದಲೂ ಹೊಗಳಿಸಿಕೊಳ್ಳಲ್ಪಡುತ್ತಿರುವ ಮಹಾಪ್ರಭುಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಓಖೀಮಠ, ಅರ್ಚಕ,
ತಾ|| 6-8-30. ಜಯಲಿಂಗ.

ವಂದೇಮಾತರಂ.

ಹಬ್ಬದ ಉಬ್ಬು ಬೇಡ.

ಮುಂದೆ ಬರುವ ಗಣೇಶನಹಬ್ಬವನ್ನು ಇದುವರೆಗೆ ಮಾಡುತ್ತ ಬಂದಂತೆ ಇನ್ನು ಮುಂದೆ ಮಾಡಬೇಡಿರಿ. ಇದು ಮದ್ದು ಪಟಾಕಿಯ ಮೆರವಣಿಗೆಯನ್ನು ಹೂಡಿ ಉತ್ಸವದಿಂದ ಕಳುಹಿಸುವ ದಿವಸವಲ್ಲ! ನಾವೆಷ್ಟು ದರಿದ್ರಾವಸ್ಥೆಯಲ್ಲಿರುವೆವು? ಎಂಥ ಪಾರತಂತ್ರ್ಯದ ಬಂಧನದಲ್ಲಿರುವೆವು? ನಮ್ಮ ಜೀವನವು ಹೇಗೆ ನಡೆದಿದೆ? ಇವೇ ಮೊದಲಾದ ವಿಷಯಗಳನ್ನು ವಿಚಾರಿಸಿನೋಡಿರಿ. ಪರದೇಶದ ಮದ್ದು ಪಟಾಕಿಗಳಿಗೋಸ್ಕರ ನಿಷ್ಪ್ರಯೋಜನವಾಗಿ ದುಡ್ಡು ಹಾಕಬೇಡಿರಿ. ಹೀಗೆ ಮಾಡುವುದರಿಂದ ಗಣಪತಿಯು ನಿಮಗೆ ಪ್ರಸನ್ನನಾಗುವದಿಲ್ಲ. ಗಣಪತಿಗೆ ಪರದೇಶಿ ಬಣ್ಣ ಬ್ಯಾಗಡಿಗಳನ್ನು ಹಚ್ಚದೆ ಶುದ್ಧ ಸ್ವದೇಶಿಯ ವಸ್ತುಗಳಿಂದಲೇ ತಯಾರಿಸಿ ಪೂಜಿಸಬೇಕು. ಈಗಿನ ಸ್ವಾತಂತ್ರ್ಯಸಮರಸಮಯದಲ್ಲಿ ಹಬ್ಬಗಳ ಉಬ್ಬಾಟದ ಆಡಂಬರವನ್ನು ಖಂಡಿತ ಬಿಡಬೇಕೆಂದು ಕೋರಿಕೆ.

ಪಂಚಾಕ್ಷರಶಾಸ್ತ್ರೀ, ಶಿರೋಳ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಬಳ್ಳಿಯವರ ಬಲಾತ್ಕಾರವಾದ ಉಪದೇಶ.

ಬಸವನಿಂದ ಪ್ರಸಿದ್ಧಿ ಹೊಂದಿದ ಕಲ್ಯಾಣ ಪ್ರಾಂತಕ್ಕೆ ನಾನು ಹೋಗಿದ್ದೆನು. ಆ ಪ್ರಾಂತದಲ್ಲಿ ಎಲ್ಲಿ ನೋಡಿದರೂ ಎಲ್ಲಿ ಕೇಳಿದರೂ "ಶಿಖಾ ಶಿಖಾ" ಎಂಬ ಶಬ್ದಗಳೇ ಕೇಳಬರುತ್ತವೆ. ಅದಕ್ಕೆ ಕಾರಣ ಆ ಪ್ರಾಂತದಲ್ಲಿ ಹೆಸರಾದ ಬಳ್ಳಿಯ ಚನ್ನಬಸವ ಪಟ್ಟದ್ದೇವರಂತೆ! ಇವರು (ಭಕ್ತರನ್ನು ಉದ್ಧಾರ ಮಾಡಲಿಕ್ಕೆ ಹೊರಟ ಚನ್ನಬಸದೇವರಂತೆ!) ಶಿವ ಶಿವ! ಲಿಂಗಬ್ರಾಹ್ಮಣರಿಗೆ ಶಿಖಾಧಾರಣವು ಯಾವ ಗ್ರಂಥದಲ್ಲಿಯೂ ಹೇಳಿಲ್ಲ; ಪ್ರಮಾಣಗಳಂತೂ ಮೊದಲೇ ಇಲ್ಲ; ಈಗಿರುವ ಪಂಡಿತರು ಶ್ಲೋಕಗಳನ್ನು ರಚನೆಮಾಡಿ ಭಕ್ತರಿಗೆ ಉಪದೇಶ ಮಾಡುವದಲ್ಲದೆ ಅವರಲ್ಲಿರುವ ಭಕ್ತಿಯನ್ನು ನಷ್ಟಗೊಳಿಸುತ್ತಿದ್ದಾರೆಂದು ಹಳ್ಳಿಹಳ್ಳಿಗಳಲ್ಲಿರುವ ತಮ್ಮ ತಮ್ಮ ಶಿಷ್ಯರುಗಳಿಗೆ ಬೋಧಿಸುವದಲ್ಲದೆ ಇತರ ಭಕ್ತರಿಗೂ ಸಹ ಬೋಧಿಸುತ್ತಾರಂತೆ! "ಜಾತಿಜಂಗಮನಾಗಬೇಕಲ್ಲದೆ ನೀತಿಜಂಗಮನಾಗಬಾರದು." ಎಂಬ ಶಾಡಸಿದ್ಧೇಶ್ವರ ವಚನದಂತೆ ಜಾತಿಜಂಗಮನಾಗಬೇಕಾದರೆ ಹಿಂದಿನ ಜನ್ಮದಲ್ಲಿ ಬಹು ಪುಣ್ಯವನ್ನು ಮಾಡಿರಬೇಕು. ಪಟ್ಟದ್ದೇವರೇ! ನೀವು ಭಕ್ತರಿಗೆ ಧರ್ಮಗ್ರಂಥಗಳೆಂದು ಬೋಧಿಸುವ ಕನ್ನಡ ಪುಸ್ತಕಗಳು ಧರ್ಮಗ್ರಂಥಗಳೇನು? ಪ್ರಾಚೀನಗಳಾದ ಸಂಸ್ಕೃತ ಧರ್ಮಗ್ರಂಥಗಳೇ ನಿಮಗೆ ಗೋಚರವಿಲ್ಲದ ಪಕ್ಷದಲ್ಲಿ ಭಕ್ತಕೋಟಿಯನ್ನು ಉದ್ಧಾರಮಾಡುವ ಬಗೆಹೇಗೆ? ಭೋ ಸ್ವಾಮಿನ್! ದುರುಳವಿರಕ್ತರ ಉಪದೇಶಕ್ಕೆ ಬಲಿಬಿದ್ದು ಭಗವತ್ಪಾದ ರೇಣುಕರ ಕೃಪೆಗೆ ದೂರರಾಗಬೇಡಿರಿ. "ಶಿಖಾಹೀನಸ್ಯ ಭಕ್ತಸ್ಯ ನಟವತ್ಪ್ರತಿಲೋಕನಂ" ಎಂದು ಪಾರಮೇಶ್ವರಾಗಮವು ಸಿಂಹಗರ್ಜನೆಮಾಡುವದನ್ನು ನೀವು ಕೇಳಲ್ಲವೇ? ನಿಮ್ಮಗಳಿಗೆ ಸಂಶಯವಾಗಿದ್ದರೆ ಧರ್ಮಪೀಠಾಧೀಶ್ವರರ ಕೃಪೆಗೆ ಪಾತ್ರರಾಗಿ ಈ ವಿಷಯವನ್ನು ತಿಳಿದುಕೊಂಡು ಧನ್ಯರಾಗಿರಿ. ನೀವು ಅನ್ಯಾಯವಾಗಿ ಅವೈದಿಕತತ್ವವನ್ನು ಬೋಧಿಸಿದರೆ ಆ ಧರ್ಮದ್ರೋಹವು ನಿಮ್ಮನ್ನು ಎಂದಿಗೂ ಬಿಡಲಿಕ್ಕಿಲ್ಲ. ಇನ್ನಾದರೂ ಧರ್ಮಗ್ರಂಥಗಳನ್ನು ನೋಡಿ ಧರ್ಮಮಾರ್ಗದಿಂದ ವರ್ತಿಸಬೇಕೆಂದು ಕೋರುವ,

ಓರ್ವ ವೀರಶೈವ.

ಪೆಷಾವರ್ ಡಿಸ್ಟ್ರಿಕ್ಟಿನಲ್ಲಿ ಅಫ್ರಿದಿ ಜನಾಂಗದವರ ಗಲಾಟೆಯು ಹತೋಟಿಮೀರಿ ಬಂದಿರುವದರಿಂದ ಆ ಪ್ರಾಂತದಲ್ಲೆಲ್ಲಾ ಲಷ್ಕರೀ ಕಾಯಿದೆಯನ್ನು ಜಾರಿಯಲ್ಲಿ ತಂದಿರುವದಾಗಿ ವೈಸರಾಯರು ಒಂದು ನೂತನ ಆರ್ಡಿನೆನ್ಸನ್ನು ಹೊರಡಿಸಿರುತ್ತಾರೆ.

ಬಳ್ಳಾರಿ ಪ್ರಾಂತದ ವೀರಶೈವರು ತಮ್ಮ ಪಕ್ಷದ ವಿ. ಕೊಮಾರರೆಡ್ಡಿ, ಬಿ.ಎ., ಬಿ.ಎಲ್., ಇವರನ್ನು ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮೆಂಬರಾಗಲು ಉಮೇದುವಾರರನ್ನಾಗಿ ನಿಲ್ಲಿಸಿರುವದರಿಂದ ಇವರಿಗೆ ಸರ್ವ ವೀರಶೈವರೂ ತಮ್ಮ ಮತಗಳನ್ನು ಕೊಟ್ಟು ಜಯಶೀಲರನ್ನಾಗಿ ಮಾಡಬೇಕೆಂದು ಕೋರುತ್ತೇವೆ.

ಶ್ರೀ ಜಗದ್ಗುರು

೧ ಮುಖಪುಟ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಆಗಸ್ಟ್ ತಾ|| ೧೮ನೆಯ ಸೋಮವಾರ

ವರ್ಣಾಶ್ರಮಪ್ರಕಾಶಿಕಾ.

ಕಳೆದವಾರದ ಸಂಚಿಕೆಯಲ್ಲಿ ವರ್ಣಾಶ್ರಮಧರ್ಮಗಳ ವಿಷಯವನ್ನು ಸಂಕ್ಷೇಪವಾಗಿ ತೋರಿಸಿರುವೆವಷ್ಟೆ! ಸದ್ಯಃ ಅದೇ ವಿಷಯವನ್ನೇ ಮುಂದುವರಿಸುತ್ತೇವೆ. ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಪದೇಶಿಸುವ ಸಮಯದಲ್ಲಿ— "ಶಿವಸಂಸ್ಕಾರಯೋಗೇನ ಶಿವಧರ್ಮಾನುಷಂಗಿಣಾಂ| ಪ್ರಾಕೃತಾನಾಂ ನಧರ್ಮೇಷು ಪ್ರವೃತ್ತಿರುಪಪದ್ಯತೇ||" ಯಾರು ಶ್ರೀ ಗುರುವಿನಿಂದ ಶಿವದೀಕ್ಷೆಯನ್ನು ಪಡೆದು ಅಪ್ರಾಕೃತಗಳಾದ ಶಿವಧರ್ಮಗಳನ್ನು ಅಂಗೀಕರಿಸುವರೋ ಅವರು ಪ್ರಾಕೃತಗಳಾದ ಪೈತಾಮಹಧರ್ಮಗಳಲ್ಲಿ ಪ್ರವೃತ್ತಿಸುವುದಿಲ್ಲವೆಂದು ಉಪದೇಶಿಸಿದ್ದರಿಂದ ಶಿವದೀಕ್ಷೆಯನ್ನು ಪಡೆದವರು ಪ್ರಾಕೃತವರ್ಣಾಶ್ರಮಧರ್ಮಗಳನ್ನು ತ್ಯಜಿಸಿ ಅಪ್ರಾಕೃತಗಳಾದ ವರ್ಣಾಶ್ರಮ ಧರ್ಮಗಳನ್ನು ಅನುಷ್ಠಿಸುವುದಕ್ಕೆ ಪ್ರಾರಂಭಿಸುತ್ತಾರೆಂದು ಸಿದ್ಧವಾಗುತ್ತದೆ. ಇದರಿಂದ ವರ್ಣಾಶ್ರಮಗಳು ಅಪ್ರಾಕೃತ ಪ್ರಾಕೃತಗಳೆಂದು ಎರಡು ವಿಧವಿದ್ದಂತಾಯಿತು. ಶಿವದೀಕ್ಷೆಯನ್ನು ಪಡೆದ ಮಾನವನು ಪೈತಾಮಹ (ಪ್ರಾಕೃತ) ಧರ್ಮಗಳನ್ನು ಬಿಟ್ಟು ಶಿವಧರ್ಮ(ಅಪ್ರಾಕೃತ) ಧರ್ಮಗಳನ್ನು ಅನುಷ್ಠಿಸಬೇಕೆಂದು ಸಿದ್ಧವಾಗುವುದರಿಂದ ವೀರಶೈವರಿಗೆ ಪ್ರಾಕೃತ ವರ್ಣಾಶ್ರಮಗಳಿಲ್ಲನೆಂದು ಹೇಳಬಹುದಲ್ಲದೆ, ಅಪ್ರಾಕೃತವರ್ಣಾಶ್ರಮಗಳಿಲ್ಲವೆಂದು ಎಂದೂ ಹೇಳಲಾಗುವುದಿಲ್ಲ. ಈ ಅಭಿಪ್ರಾಯವನ್ನು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯ ಪೂರ್ವಾಶ್ರಮನಿರಸನಸ್ಥಳದಲ್ಲಿ "ಏಕು ದ್ವಾಃ ಪ್ರಾಕೃತಾಶ್ಚೇತಿ ದ್ವಿವಿಧಾಮಾನುಷಾಃಸ್ಮೃತಾಃ| ಶಿವಸಂಸ್ಕಾರಿಣಃ ಶುದ್ಧಾಃ ಪ್ರಾಕೃತಾ ಇತರೇ ಮತಾಃ || ವರ್ಣಾಶ್ರಮಾದಿ ಧರ್ಮಾಣಾಂ ವ್ಯವಸ್ಥಾಪಿ ದ್ವಿಧಾ ಮತಾ | ಏಕಾಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾಪರಾ || ಶಿವೋಕ್ತಧರ್ಮನಿಷ್ಠಾತು ಶಿವಾಶ್ರಮನಿಷೇವಿಣಾಂ | ಶಿವಸಂಸ್ಕಾರಹೀನಾನಾಂ ಧರ್ಮಃ ಪೈತಾಮಹಃಸ್ಮೃತಃ ||" ಮನುಷ್ಯರಲ್ಲಿ ಶುದ್ಧರೆಂತಲೂ ಪ್ರಾಕೃತರೆಂತಲೂ ಎರಡುಪ್ರಕಾರವುಂಟು. ಶಿವದೀಕ್ಷಾಸಂಸ್ಕಾರಿಗಳೇ ಶುದ್ಧರು; ಶಿವದೀಕ್ಷಾವಿಹೀನರೇ ಪ್ರಾಕೃತರು. ಅಪ್ರಾಕೃತವರ್ಣಾಶ್ರಮಧರ್ಮಗಳು ಶಿವನಿಂದ ಹೇಳಲ್ಪಟ್ಟಿವೆಯೆಂದೂ, ಪ್ರಾಕೃತವರ್ಣಾಶ್ರಮಧರ್ಮಗಳು ಬ್ರಹ್ಮನಿಂದ ಹೇಳಲ್ಪಟ್ಟಿವೆಯೆಂದೂ ಪ್ರತಿಪಾದಿಸಿರುವುದರಿಂದ "ಯಥೇಂಧನೇಷು ದಗ್ಧೇಷು" ಮುಂತಾದ ದೀಕ್ಷಾಪ್ರಕರಣದಲ್ಲಿ ಹೇಳಲ್ಪಟ್ಟ ಶ್ಲೋಕಾರ್ಥವು ಪ್ರಾಕೃತವರ್ಣಾಶ್ರಮಧರ್ಮಗಳನ್ನು ತೊಲಗಿಸಿ ಅಪ್ರಾಕೃತವರ್ಣಾಶ್ರಮಗಳನ್ನು ಸಿದ್ಧಮಾಡುವುದರಿಂದ ಶಿವದೀಕ್ಷಾಸಂಸ್ಕಾರವು ವರ್ಣಾಶ್ರಮಗಳನ್ನು ವಿಶೇಷತಃ ಮಂಡನಮಾಡುವುದಲ್ಲದೆ ಖಂಡನಮಾಡಲಾರದು. ಅಸ್ತು! ಪಾರಮೇಶ್ವರಾಗಮದಮೇಲೆ ಹುಟ್ಟಿರುವ ವೀರಶೈವ ಧರ್ಮಶಿರೋಮಣಿಯ ದ್ವಿತೀಯ ಪರಿಚ್ಛೇದದಲ್ಲಿ "ಪಾಷಾಣಾದಿಕೃತಂಲಿಂಗಂ ಯದ್ವತ್ಪೂಜ್ಯಂ ಪ್ರತಿಷ್ಠಿತಂ | ನೀಚವಂಶೋದ್ಭವಶ್ಚಾಪಿ ಭಕ್ತಿಶ್ಚೇದ್ದೀಕ್ಷಿತೇ ತಥಾ ||" ಇತ್ಯಾದಿ. ಲಿಂಗವು ಕಲ್ಲಿನಿಂದ ಮಾಡಲ್ಪಟ್ಟಿದ್ದರೂ ಹೇಗೆ ಪೂಜ್ಯವಾಗುವುದೋ ಹಾಗೆ ಶ್ರೀ ಗುರುವಿನಿಂದ ಶಿವದೀಕ್ಷೆಯನ್ನು ಪಡೆದ ಮಾನವರು ನೀಚಕುಲದಲ್ಲಿ ಹುಟ್ಟಿದ್ದರೂ ಪೂಜ್ಯತೆಯನ್ನು ಹೊಂದುವರು. ನದಿಗಳು ಸಮುದ್ರವನ್ನು ಸೇರಿದ ಮೇಲೆ ಸಮುದ್ರಾಕಾರವನ್ನು ಹೊಂದುವಂತೆಯೂ, ಸಿದ್ಧರಸದ ಸಂಬಂಧದಿಂದ ತಾಮ್ರವು ಸುವರ್ಣಭಾವವನ್ನು ಹೊಂದುವಂತೆಯೂ ಶೈವದೀಕ್ಷೆಯಾದ ಮೇಲೆ ಜಾರರಾಗಲಿ ಚೋರರಾಗಲಿ, ಚಂಡಾಲರಾಗಲಿ ಅವರೆಲ್ಲರೂ ಶಿವತ್ವಸಿದ್ಧಿಯನ್ನು ಪಡೆಯುವರಲ್ಲದೆ ಮರಳಿ ಪಶುತ್ವಾವಸ್ಥೆಯನ್ನು ಪಡೆಯಲಾರರೆಂದು ಶಿವದೀಕ್ಷಾ ಲಿಂಗಧಾರಣಾಪ್ರಭಾವವನ್ನು ಹೇಳಿ, ಆ ಮೇಲೆ "ಏವಂಚ ನತತ್ರಜಾತಿಭೇದೋಽಸ್ತೀತಿ ವಚನಾನಾಂ ಲಿಂಗಾಂಗಸಾಮರಸ್ಯ ಸ್ವರೂಪ ಜೀವನ್ಮುಕ್ತಿಸಂಪನ್ನ ಶಿವಾರೂಢಪರತ್ವಂ" ದೀಕ್ಷಿತನಾದವನು ಜಾತಿಭೇದವನ್ನು ಮಾಡಲಾಗದೆಂಬ ವಚನಗಳೆಲ್ಲವೂ ಲಿಂಗಾಂಗಸಾಮರಸ್ಯಸಿದ್ಧಿಯನ್ನು ಪಡೆದ ಜೀವನ್ಮುಕ್ತನಾದ ಲಿಂಗಾರೂಢನನ್ನು ಬೋಧಿಸುತ್ತವಲ್ಲದೆ ದೀಕ್ಷಿತರಾದವರನ್ನೆಲ್ಲ ಬೋಧಿಸುವುದಿಲ್ಲವೆಂದು ಸಮಾಧಾನವನ್ನು ಹೇಳಿ, ಮುಂದೆ "ಯೇಶಿವಜ್ಞಾನಹೀನಸ್ಸೈರುಕ್ತವಕ್ಷ್ಯಮಾಣಬಹಿರಾಚಾರಾಂಸ್ತ್ಯಕ್ತ್ವಾ ಸ್ವೇಚ್ಛಾಚಾರಪರೈರದೀಕ್ಷಿತೈಃ ಸ್ವಾಪಕೃಷ್ಟಜಾತಿಭಿಃ ಲಿಂಗಧಾರಣಮಾತ್ರಶಾಲಿಭಿಃ ಸಂಪ್ರದಾಯ ಶುದ್ಧವೀರಶೈವಮತಾನುಗಾಬ್ರಾಹ್ಮಣಾದಯಃ ನತತ್ರಜಾತಿಭೇದೋಽಸ್ತೀತ್ಯಾದಿ ವಚನ ಪ್ರಮಾಣೈಕಶರಣಾ ಅಭೇದಬುದ್ಧ್ಯಾ ಭೋಜನಾದಿಕಸಂಬಂಧಂ ಕುರ್ವಂತಿ ತೇ ಶಿವೋಕ್ತಾಂ ಜಾತಿಮರ್ಯಾದಾಂ ಯೋತೀತ್ಯಭುವಿವರ್ತತೇ | ಸ ಚಂಡಾಲ ಇತಿಜ್ಞೇಯಸ್ಸರ್ವಕರ್ಮಬಹಿಷ್ಕೃತಃ | ಇತಿ ವಚನಾವಗತಪ್ರತ್ಯವಾಯ ಬದ್ಧಾ ದೇಹಾಂತೇ ನರಕಯಾತನಾಮನುಭವಂತೀತಿದಿಕ್ ||" ದೃಢತರವಾದ ಜೀವನ್ಮುಕ್ತಾವಸ್ಥೆಯನ್ನು ಪಡೆಯದಿದ್ದರೂ ದೀಕ್ಷೆಯಾದ ಮೇಲೆ ವರ್ಣಾಶ್ರಮಗಳು ಹೊರಟುಹೋದವೆಂದು ಅಂದುಕೊಂಡು ಶಾಸ್ತ್ರೀಯಗಳಾದ ವರ್ಣಾಶ್ರಮಾಚಾರಗಳನ್ನು ತ್ಯಜಿಸಿ ಜಾತಿಯಿಲ್ಲ, ಕುಲವಿಲ್ಲ, ಆಶ್ರಮವಿಲ್ಲ, ಸ್ತ್ರೀ ಭೇದವಿಲ್ಲ, ಪುರುಷಭೇದವಿಲ್ಲ, ಎಲ್ಲರೂ ಶಿವಸ್ವರೂಪಿಗಳೇ ಆಗುತ್ತಾರೆಂದು ಹೇಳಿಕೊಳ್ಳುತ್ತ ಸ್ವೇಚ್ಛಾಚಾರಿಗಳಾಗಿ ವರ್ಣಾಶ್ರಮನಿಷ್ಠನೂ ವಿಶಿಷ್ಟಕುಲಸಮುತ್ಪನ್ನನೂ ಆದ ಗುರುವಿನಿಂದ ಸಂಸ್ಕಾರವನ್ನು ಪಡೆಯದೆ ನೆಪಮಾತ್ರಕ್ಕೆ ಲಿಂಗವನ್ನು ಧರಿಸಿಕೊಂಡು ಇರುವ ಹೀನಜಾತಿಯವರೊಡನೆ ದೀಕ್ಷಿತರಾದ ವಂಶಾನುಕ್ರಮವಾಗಿ ಬಂದ ವೀರಶೈವಬ್ರಾಹ್ಮಣರು "ನ ತತ್ರ ಜಾತಿಭೇದೋಽಸ್ತಿ" ಮುಂತಾದ ವಚನಗಳನ್ನು ಮುಂದುವರಿಸಿಕೊಂಡು ಎಲ್ಲ ಲಿಂಗಧಾರಿಗಳೂ ಒಂದೇ ಎಂದು ಅಭೇದಬುದ್ಧಿಯನ್ನಿಟ್ಟು ಭೋಜನಾದಿ ವ್ಯವಹಾರಗಳನ್ನು ಯಾರು ಬೆಳೆಯಿಸುವರೋ ಅಂಥವರು "ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯಭುವಿವರ್ತತೇ | ಸ ಚಂಡಾಲ ಇತಿಜ್ಞೇಯಸ್ಸರ್ವಕರ್ಮಬಹಿಷ್ಕೃತಃ ||" ಎಂಬ ವಚನದಂತೆ ಮಹಾದೋಷಯುಕ್ತರಾಗಿ ಕೊನೆಯಲ್ಲಿ ನರಕಯಾತನೆಯನ್ನು ಸುಭವಿಸುವರೆಂದು ಪ್ರತಿಪಾದಿಸಲ್ಪಟ್ಟಿದೆ. ಹೀಗೆ ತಮಗೆ ವಿರುದ್ಧಗಳಾದ ಮುಂದಣ ವಾಕ್ಯಗಳನ್ನು ಬಿಟ್ಟು ಪೂರ್ವಪಕ್ಷಸ್ಥಾನವಾದ "ಚೋರಾ ಜಾರಾ ಸ್ತಥಾ ವೇಶ್ಯಾ ಶ್ಚಂಡಾಲಕುಲಸಂಭವಾಃ | ಮಲ್ಲಿಂಗಧಾರಣಾದೇವ ಮದ್ರೂಪಾ ಏವ ತೇ ಶಿವೇ ||" ಮುಂತಾದ ಲಿಂಗಧಾರಣಪ್ರಶಂಸಾಪರವಾದ ವಚನಗಳನ್ನೇ ಮುಂದುವರಿಸಿದರೆ ಸಿದ್ಧಾಂತಕ್ಕೆ ಅನುಕೂಲವಾಗಿ ನಡೆದಂತಾಗುವುದಿಲ್ಲ. ಇದರಿಂದ ವೀರಶೈವರಲ್ಲಿ ವರ್ಣಗಳಿಲ್ಲ, ಆಶ್ರಮಗಳಿಲ್ಲ, ಕುಲವಿಲ್ಲ, ಜಾತಿಯಿಲ್ಲವೆಂದು ಮದದಿಂದ ಮನಬಂದಂತೆ ಮಾತನಾಡುವ ಛಲವಾದಿಗಳು ತಮ್ಮ ಅಕ್ರಮವಾದ ಛಲವಾದವನ್ನು ಬಿಟ್ಟು ಕುಲವಾದವನ್ನು ಹಿಡಿದು ಪೂರ್ವಜರಂತೆ ತಮ್ಮ ತಮ್ಮ ಕುಲದ ಕಟ್ಟಳೆಗಳಿಗನುಸಾರವಾಗಿ ನಡೆದು ಶಿವಶಾಸ್ತ್ರನಿಯಾಮಕನಾದ ಶ್ರೀ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಇಹಪರಸುಖಸಂಪತ್ತುಗಳನ್ನು ಹೊಂದಿ ಧನ್ಯರಾಗಬೇಕೆಂದು ಆಶಿಸುತ್ತೇವೆ.

ಸ್ವಾತಂತ್ರ್ಯಸಂಗ್ರಾಮವಾರ್ತೆ.

ಗಾಂಧೀಟೋಪಿಗಳನ್ನು ಹಾಕಕೂಡದೆಂದು ಮನ್ನಾ ಮಾಡಿದ್ದ ಗುಂಟೂರು ಮ್ಯಾಜಿಸ್ಟ್ರೇಟ್ ಮಿ|| ಸ್ಟೊಯರ್ಟ್‌ರಿಗೆ ಮದ್ರಾಸ್ ಹೈಕೋರ್ಟಿನವರು ಚೆನ್ನಾಗಿ ಮಂಗಳಾರತಿಯನ್ನು ಮಾಡಿದರು. ಇಂತಹ ಆರ್ಡರುಗಳೇ ಶಾಂತಿಭಂಗಕ್ಕೆ ಕಾರಣವೆಂಬುದಾಗಿ ನ್ಯಾಯಾಧೀಶರು ತೀರ್ಪು ಕೊಟ್ಟಿರುವರು.

ಲಕ್ನೋ ಮತ್ತು ಕಾಶಿಯಲ್ಲಿ ಪಿಕೆಟಿಂಗಿನ ಮಹತ್ವದಿಂದ ವಿಶ್ವವಿದ್ಯಾನಿಲಯದ ಕೆಲಸಗಳೆಲ್ಲವೂ ನಿಲ್ಲಿಸಲ್ಪಟ್ಟಿರುವವು.

ಕಲ್ಕತ್ತೆಯ "ನಾರೀಸತ್ಯಾಗ್ರಹ ಸಮಿತಿ" ಯ ಪ್ರೆಸಿಡೆಂಟರಾದ ಶ್ರೀಮತಿ ಇಂದುಬಾಲದೇವಿಯು ಬಹಿಷ್ಕಾರ ಚಳವಳಿಯನ್ನು ನಡೆಯಿಸಿದ ಅಪರಾಧಕ್ಕಾಗಿ 4 ತಿಂಗಳ ಕಠಿಣ ಕಾರಾಗೃಹವಾಸಕ್ಕೆ ಗುರಿಯಾದಳು.

ಪಂಡಿತ ಮೋತೀಲಾಲ್ ಮತ್ತು ಜವಾಹರಲಾಲ್ ನೆಹರೂರವರನ್ನು ಅಲಹದಾಬಾದಿನಿಂದ ಎರವಾಡಾ ಜೈಲಿಗೆ ಕರೆತರಲು ಸ್ಪೆಷಲ್ ಟ್ರೈನ್ ಒಂದನ್ನು ಏರ್ಪಡಿಸಿದ್ದರು. ಇದರಿಂದ ಮಧ್ಯಪ್ರಾಂತದ ಸರ್ಕಾರಕ್ಕೆ 5,000 ರೂ. ಗಳಿಗಿಂತಲೂ ಹೆಚ್ಚು ಖರ್ಚಾಯಿತು. ಪಂಡಿತ ನೆಹರೂರವರು ತಮ್ಮನ್ನು ಹಿಂತಿರುಗಿ ಅದೇ ಜೈಲಿಗೆ ಕರೆದುಕೊಂಡು ಹೋಗಬೇಕೆಂದು ಹೇಳಿರುವರು. ಇದರಿಂದ ಮುಂಬಯಿ ಸರ್ಕಾರಕ್ಕೆ ಪುನಃ 5,000 ರೂ. ಗಳು ಖರ್ಚಾಗುವವು.

ಕಳೆದ ಆಗಸ್ಟ 13 ನೆಯ ತಾರೀಖು ರಾತ್ರಿ ದೆಹಲಿಯಲ್ಲಿ ಮದ್ಯಪಾನನಿಷೇಧ ಚಳವಳಿಯನ್ನು ಮಾಡುತ್ತಿದ್ದ 13 ಜನ ದೊಡ್ಡದೊಡ್ಡ ಮನೆತನದ ಸ್ವಯಂಸೇವಕಿಯರೂ, ಇತರ 66 ಜನರೂ ದಸ್ತಗಿರಿ ಮಾಡಲ್ಪಟ್ಟರು. ಒಂದು ವಾರದಿಂದಲೂ ದೆಹಲಿಯಲ್ಲಿ ಯಾವ ಮದ್ಯದಂಗಡಿಯ ಬಾಗಿಲೂ ತೆರೆಯದೆ ಇದ್ದದ್ದು, ಆ ದಿನ ಸರದಾರ್ ಬಜಾರಿನಲ್ಲಿ ಒಂದು ಮದ್ಯದ ಅಂಗಡಿಯು ತೆರೆಯಲ್ಪಟ್ಟಿತು. ಕೂಡಲೇ ಸ್ವಯಂಸೇವಕಿಯರು ಅಂಗಡಿಯ ಮುಂದೆ ಬೆಳಗಿನಿಂದ ಸಾಯಂಕಾಲದವರೆಗೂ ಚಳವಳಿಯನ್ನು ಮಾಡಿದರು. ಸಾಯಂಕಾಲವಾದಮೇಲೆ ದೆಹಲಿಯ ಮದ್ಯ ವ್ಯಾಪಾರಿಗಳೆಲ್ಲರೂ ಸದರಿ ಅಂಗಡಿಯಲ್ಲಿ ಸೇರಿ ಏನೋ ಚರ್ಚೆಯನ್ನು ಮಾಡಿ, ಹಿಂತಿರುಗಿ ತಮ್ಮ ತಮ್ಮ ಮನೆಗಳಿಗೆ ಹೋಗುವಾಗ್ಗೆ ಸ್ವಯಂಸೇವಕರು ಅವರನ್ನು ಎಲ್ಲಿಗೂ ಹೋಗದಂತೆ ತಡೆದರು. ಇದರಿಂದ ಆ ವ್ಯಾಪಾರಿಗಳೆಲ್ಲರೂ ಅಲ್ಲಿಯೇ ನಿಲ್ಲಬೇಕಾಗಿ ಬಂತು. ರಾತ್ರೆಯ 11 ಘಂಟೆಯ ವೇಳೆಗೆ ಸಾವಿರಾರು ಜನರು ಅಂಗಡಿಯ ಸುತ್ತಲೂ ಕೂಡಿದರು. ಕಡೆಗೆ ಪೋಲೀಸರು ಬಂದು ಜನರನ್ನು ಚದುರಿಸಬೇಕಾಯಿತು. ಸ್ವಯಂಸೇವಕಿಯರೂ ಕೆಲವು ಜನರೂ ಮಾತ್ರ ಅಲ್ಲೇ ರಸ್ತೆಯಲ್ಲಿ ಕುಳಿತರು. ಪೋಲೀಸರು ಅವರನ್ನೆಲ್ಲ ದಸ್ತಗಿರಿ ಮಾಡಿ ಕರೆದುಕೊಂಡು ಹೋದಮೇಲೆ, ಮದ್ಯವ್ಯಾಪಾರಿಗಳು ಸುರಕ್ಷಿತವಾಗಿ ತಮ್ಮ ಮನೆಗಳಿಗೆ ತೆರಳಿದರು.

ಇದೇ ಆಗಸ್ಟ 15 ನೇ ತಾರೀಖಿನ ದಿವಸ ಅಹಮದಾಬಾದಿನ ಸರ್ಕಾರೀ ಹೆಣ್ಣು ಮಕ್ಕಳ ಹೈಸ್ಕೂಲಿನ ವಿದ್ಯಾರ್ಥಿನಿಯರು, ಅಧಿಕಾರಿಗಳೊಡನೆ ಹೊಡೆದಾಡಿ, ಶಾಲೆಯ ಮೇಲೆ ಹತ್ತಿ ರಾಷ್ಟ್ರೀಯ ಬಾವುಟವನ್ನೇರಿಸಿದರು. ಅನೇಕ ಹೆಣ್ಣುಮಕ್ಕಳಿಗೆ ಪೆಟ್ಟುಗಳು ಬಿದ್ದಿರುವವು.

ಮದರಾಸ್ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರಾದ ಮಿ|| ಸಿ. ಬಿ. ಕನ್ನಿಂಗ್‌ಹ್ಯಾಂರವರು ಕಳೆದ ಏಪ್ರಿಲ್ 22 ಮತ್ತು 27 ನೇ ತಾರೀಖಿನ ದಿವಸ ಮದರಾಸಿನಲ್ಲಿ ನಡೆದ ಸತ್ಯಾಗ್ರಹ ಕಾಲಕ್ಕೆ ತೃಪ್ತಿಕರವಾಗಿ ಕೆಲಸ ಮಾಡಿದ ಪೋಲೀಸ್ ಕಾನ್ಸ್‌ಟೇಬಲರು, ಇನ್ಸ್‌ಪೆಕ್ಟರ್‌ಗಳು ಮತ್ತು ಕೆಲವು ಖಾಸಗಿ ಜನಗಳಿಗೆ ಬಹುಮಾನಗಳನ್ನು ಕೊಡಬೇಕೆಂದು ಶಿಫಾರಸ್‌ಮಾಡಿರಲು, ಮದರಾಸ್ ಸರಕಾರದವರು ಅದಕ್ಕಾಗಿ 12,200 ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವರು.

ಶಾಂತಿಸಂಧಾನದ ಪ್ರಯತ್ನಗಳು.
ಯರವಾಡಾ ಜೈಲಿನಲ್ಲಿ.

ಪೂನಾ 13 ನೇ ಆಗಸ್ಟ.

ಯರವಾಡಾ ಜೈಲಿನಲ್ಲಿ ಶಾಂತಿಸಂಧಾನದ ಬಗ್ಗೆ ಮಾತುಕಥೆಗಳು ಈದಿನ 5 ಘಂಟೆಗಳ ಕಾಲದವರೆಗೆ ನಡೆದವು. ಮಹಾತ್ಮಾಗಾಂಧಿಯವರೂ, ಪಂಡಿತ ಜವಾಹಿರಲಾಲನೆಹರೂರವರೂ, ಸರ್ ತೇಜ್‌ಬಹದ್ದೂರ್ ಸಪ್ರೂರವರೂ, ಪಂಡಿತ ಮೋತೀಲಾಲನೆಹರೂರವರೂ, ಮಿ|| ಎಂ. ಆರ್. ಜಯಕರರವರೂ, ಸರ್ದಾರ್ ವಲ್ಲಭಾಯಿ ಪಟೇಲರವರೂ ಶ್ರೀಮತಿ ಸರೋಜಿನಿದೇವಿಯವರೂ ಹಾಜರಿದ್ದರು.

ಸರ್ ತೇಜ್‌ಬಹದ್ದೂರ್ ಸಪ್ರೂರವರೂ ಮಿ|| ಎಂ. ಆರ್. ಜಯಕರ್‌ರವರೂ ಜೈಲಿನೊಳಗೆ ಈ ದಿವಸ ಪ್ರಾತಃಕಾಲ 11½ ಘಂಟೆಗೆ ಹೋದರು. ಮಧ್ಯಾಹ್ನ 3-45 ಘಂಟೆಗೆ ಜೈಲಿನ ಸೂಪರಿಂಟೆಂಡೆಂಟ್‌ರವರಾದ

ಮೇಜರ್ ಮಾರ್ಟಿನ್‌ರವರು ಹೊರಕ್ಕೆ ಬಂದು ಸ್ತ್ರೀ ಬಂದಿಗಳು ಇರುವ ಜೈಲಿನ ಹತ್ತಿರ ಕಾರನ್ನು ನಡೆಸಿಕೊಂಡು ಹೋದರು. ಅದೇ ಕಾರಿನಲ್ಲಿ ಸರ್ ಸಪ್ರೂರವರು ಮತ್ತು ಜಯಕರವರು ಪೂನಾದಿಂದ ಬಂದಿಳಿದಿದ್ದರು. ಸ್ವಲ್ಪ ಹೊತ್ತಾದ ಮೇಲೆ ಜೈಲಿನ ಸೂಪರಿಂಟೆಂಡೆಂಟರು ವಾಪಸು ಬಂದರು. ಅವರ ಜೊತೆಯಲ್ಲಿ ಶ್ರೀಮತಿ ಸರೋಜಿನಿದೇವಿಯವರೂ ಇದ್ದರು. ದೇವಿಯವರು ನೀಲವರ್ಣದ ಸೀರೆಯನ್ನು ಮಾಮೂಲು ಪ್ರಕಾರ ಉಟ್ಟಿದ್ದರು. ಆ ಹುಬ್ಬು ಗಂಟಿನ ಮರ್ಯಾದೆ ಪೂರ್ವಕವಾದ ವ್ಯಕ್ತಿಯ ಪಕ್ಕದಲ್ಲಿ ಹಸನ್ಮುಖಯುಕ್ತವಾದ ಮತ್ತು ಉಲ್ಲಾಸದಿಂದ ಕೂಡಿದವರಾಗಿ ಮೋಟಾರಿನಲ್ಲಿ ಕುಳಿತಿದ್ದರು.

ಜೈಲಿನ ಬಾಗಿಲು ಬಳಿ ಶ್ರೀಮತಿ ದೇವಿಯವರು ನಕ್ಕರು. ಚುರುಕಾದ ಹೆಜ್ಜೆಯಿಂದ ಜೈಲಿನೊಳಗೆ ಪ್ರವೇಶಿಸಿದರು. ಜೈಲಿನ ಸೂಪರಿಂಟೆಂಡೆಂಟರು ಹೋದರು. ಇಪ್ಪತ್ತು ನಿಮಿಷಗಳು ಆದಮೇಲೆ ಸರ್ ಸಪ್ರೂರವರು ಹೊರಗೆ ಬಂದು ಪತ್ರಿಕಾಕರ್ತರಿಗೆ ಈರೀತಿಯಾಗಿ ಹೇಳಿದರು.—"ಮಹಾತ್ಮಾಜಿಯವರೊಂದಿಗೂ ರಾಷ್ಟ್ರೀಯ ಮುಖಂಡರೊಂದಿಗೂ ರಾಜಕೀಯ ವಿಷಯವಾಗಿ ಮಾತುಕಥೆಗಳು ಈ ದಿನವೂ ನಡೆಯುವುವು. ಈದಿನ ಮಧ್ಯಾಹ್ನ 3 ಘಂಟೆಗೆ ಸಂಭಾಷಣೆಯು ಪುನಃ ಪ್ರಾರಂಭವಾಗುವುದು."

ಮಹಾತ್ಮಾಜಿಯವರೊಂದಿಗೆ ಸಂಭಾಷಣೆಯನ್ನು ನಡೆಯಿಸುವುದಕ್ಕೆ ಮುಂಚೆ ಸರ್ ಸಪ್ರೂರವರು ಮತ್ತು ಮಿ|| ಜಯಕರ್‌ರವರು ಸರ್ಕಾರದ ಹೋಂಮೆಂಬರ್ ಸರ್ ಅರ್ನೆಸ್ಟ್ ಹಾಟ್ಸನ್‌ರವರನ್ನು ಅವರ ಬಂಗಲೆಯಲ್ಲಿ ಕಂಡಿದ್ದರು. ಭಾಷಣಗಳಾದನಂತರವೂ ಸಪ್ರೂರವರು ಹೋಂಮೆಂಬರುಗಳೊಂದಿಗೆ ಮಾತುಕಥೆಗಳನ್ನು ನಡೆಯಿಸಿದರು.

ಪುಣೆ, ಆಗಸ್ಟ 14.

ಮುಖಂಡರ ಸಭೆಯು ಈದಿವಸ ಸರಿಯಾಗಿ 3 ಘಂಟೆಗೆ ಪ್ರಾರಂಭವಾಯಿತು. ಮಿ|| ಜಯಕರ್ ಮತ್ತು ಸರ್ ತೇಜ್ ಬಹದ್ದೂರ್ ಸಪ್ರೂರವರು ಜೈಲಿನಿಂದ ಹೊರಕ್ಕೆ ಬಂದಾಗ್ಗೆ ನಾಳೆ ಬೆಳಗ್ಗೆ 11-30 ಘಂಟೆಗೆ ಪುನಃ ಸಭೆಯು ಸೇರುವುದಾಗಿ ಹೇಳಿದರು. 4-40 ಘಂಟೆಗೆ ಶ್ರೀಮತಿ ಸರೋಜನಿದೇವಿಯವರು ಜೈಲಿನಿಂದ ಹೊರಕ್ಕೆ ಬಂದರು. ಅವರು ಹಳದಿಯ ಸೀರೆಯನ್ನುಟ್ಟು ಸಂತೋಷದಿಂದಿದ್ದರು. ಮುಖಂಡರ ಸಭೆಯು ಜೈಲ್ ಕಟ್ಟಡದ ಮೊದಲನೆಯ ಅಂತಸ್ತಿನಲ್ಲಿರುವ ಜೈಲು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ನಡೆಯಿತು. ಶ್ರೀಮತಿ ಸರೋಜಿನೀ ದೇವಿಯವರು ಹೊರಕ್ಕೆ ಬರುವುದಕ್ಕೆ ಸ್ವಲ್ಪ ಮುಂಚೆ, ಮಿ|| ಜಯರಾಮದಾಸ್ ಮತ್ತು ಡಾಕ್ಟರ್ ಮಹಮದ್‌ರವರು ಜೈಲು ಕಟ್ಟಡದ ಪಶ್ಚಿಮ ಭಾಗದ ಕಿಟಕಿಯಲ್ಲಿ ನಿಂತಿದ್ದರು. ಜೈಲಿನ ಹೊರಗಡೆಯಲ್ಲಿ ಕೆಲವು ಜನ ಪತ್ರಿಕಾಕರ್ತರೂ ಮತ್ತು ಪ್ರೇಕ್ಷಕರೂ ಕಾದಿದ್ದರು. ಮಿ|| ಜಯರಾಮದಾಸ್‌ರವರು ಅವರ ವಂದನೆಗಳನ್ನು ಸ್ವೀಕರಿಸಿ, ತಮ್ಮ ಕರವಸ್ತ್ರವನ್ನು ಅಲ್ಲಾಡಿಸಿದರು. ಪಂಡಿತ ಜವಾಹರಲಾಲರವರು ಕ್ಷಣಕಾಲ ಕಿಟಕಿಯಲ್ಲಿ ನಿಂತು ಹೊರಗೆ ನಿಂತಿದ್ದ ಜನರನ್ನು ಕಂಡು ನಕ್ಕರು. ಅವರ ಕೈಯಲ್ಲಿ ಕೆಲವು ಕಾಗದಗಳಿದ್ದವು.

ಮಿ|| ಜಯಕರ್‌ರವರು ಅನಂತರ ಕಿಟಕಿಯನ್ನು ಬಿಟ್ಟು ಪೂರ್ವದಿಕ್ಕಿನ ಕಡೆಗೆ ಹೋದರು. 5 ನಿಮಿಷಗಳಾದನಂತರ, ಮುಂಬಯಿಯ ಜನರಲ್ ಕೋಟ್ಸ್ ಕಂಪೆನಿಯವರು ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರ ಉಪಯೋಗಾರ್ಥವಾಗಿ ಕೊಟ್ಟಿರುವ ದೊಡ್ಡ ಮೋಟಾರು ಜೈಲಿನ ಬಾಗಲಿಗೆ ಬಂದು ನಿಂತಿತು. ಶ್ರೀಮತಿ ಸರೋಜನೀ ದೇವಿಯವರು ನಗುತ್ತ ಜೈಲಿನಿಂದ ಹೊರಕ್ಕೆ ಬಂದು ಮೋಟರಿನಲ್ಲಿ ಕುಳಿತರು. ಜೈಲ್ ಸೂಪರಿಂಟೆಂಡೆಂಟರಾದ ಮಿ|| ಮಾರ್ಟಿನ್‌ರವರೂ ಅವರ ಪಕ್ಕದಲ್ಲಿ ಕುಳಿತುಕೊಂಡರು. ಅನಂತರ ಮೋಟಾರು ಹೊರಟಿತು. ಕೆಲವು ನಿಮಿಷಗಳಾದನಂತರ ಮಿ|| ಮಾರ್ಟಿನ್‌ರವರೊಬ್ಬರೇ ಮೋಟಾರಿನಲ್ಲಿ ಹಿಂತಿರುಗಿದರು.

5 ನಿಮಿಷಗಳಾದನಂತರ ಮಿ|| ಜಯಕರ್ ಮತ್ತು ಸರ್ ತೇಜಬಹದ್ದೂರ್ ಸಪ್ರೂರವರು ಕೆಳಕ್ಕೆ ಬಂದು, ಸ್ವಲ್ಪಹೊತ್ತು ಮಿ|| ಮಾರ್ಟಿನ್‌ರವರೊಡನೆ ಮಾತನಾಡುತ್ತಿದ್ದರು. ಅವರಿಬ್ಬರೂ ಸಂತೋಷವಾಗಿಯೇ ಇದ್ದರು. ಅನಂತರ ಅವರೀರ್ವರೂ ಮೋಟಾರಿನಲ್ಲಿ ಪತ್ರಿಕಾಕರ್ತರ ಸಮೀಪಕ್ಕೆ ಬಂದು, "ನಾವೆಲ್ಲರೂ ನಾಳೆ ಪುನಃ ಸೇರುವೆವು. ಈದಿನ ನಾವು ಒಂದೂವರೆ ಘಂಟೆಗಳಕಾಲ ಚರ್ಚಿಸಿದೆವು. ಚರ್ಚೆಯು ನಾಳೆ ಮುಂದುವರಿಸಲ್ಪಡುವುದು" ಎಂದು ಹೇಳಿದರು. ಪತ್ರಿಕಾಪ್ರತಿನಿಧಿಗಳು ಮಾಡಿದ ಪ್ರಶ್ನೆಗಳಿಗೆ ಉತ್ತರವಾಗಿ ಸರ್ ತೇಜ್ ಬಹದ್ದೂರ್ ಸಪ್ರೂರವರು, ಶಾಂತಿಸಂಧಾನದ ಚರ್ಚೆಯು ನಾಳೆಯೇ ಮುಗಿಯುವುದೆಂದು ಹೇಳಲಾಗುವುದಿಲ್ಲವೆಂದೂ ಸಂಧಾನದ ಫಲಿತಾಂಶವೂ ಸಹ ಹೀಗೆಯೇ ಆಗುವುದೆಂದು ಈಗಲೇ ಹೇಳಲು ಸಾಧ್ಯವಿಲ್ಲವೆಂದೂ ಹೇಳಿದರು.

ಮುಖಂಡರು ತೀರ್ಮಾನದ ಉತ್ತರವನ್ನು ಹೇಳಿದ ನಂತರ ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರು ವೈಸರಾಯರವರನ್ನು ಕಾಣುವರು.

ಸೂಪರಿಂಟೆಂಡೆಂಟರ ಆಫೀಸು ಕೊಠಡಿಯು ವಿಶಾಲವಾಗಿದ್ದು, ಮುಖಂಡರ ಸಭೆಗಾಗಿ ಉಚಿತ ರೀತಿಯಲ್ಲಿ ಅನುಕೂಲಮಾಡಲ್ಪಟ್ಟಿದ್ದಿತು. ಮುಖಂಡರು ಮತ್ತು ಶಾಂತಿಸ್ಥಾಪಕರು ಕುಳಿತುಕೊಳ್ಳಲು ಸುತ್ತಲೂ ಸೋಫಾಗಳನ್ನು ಮತ್ತು ಮೆತ್ತನೆಯ ಕುರ್ಚಿಗಳನ್ನೂ ಹಾಕಿ ಮಧ್ಯದಲ್ಲಿ ವರ್ತುಲಾಕಾರವಾದ ಮೇಜನ್ನು ಹಾಕಿರುವರು. ಜೈಲಿನಲ್ಲಿಯೇ ತಯಾರಾದ ಅಂದವಾದ ರತ್ನಗಂಬಳಿಯೊಂದನ್ನು ನೆಲದ ಮೇಲೆ ಹಾಸಿರುವರು.

ಪಂಡಿತ ಮೋತೀಲಾಲ ನೆಹರೂರವರು ಸದ್ಯಃ ಆರೋಗ್ಯವಾಗಿರುವರು. ಇದುವರೆಗೂ ತಂದೆ ಮಕ್ಕಳಾದ ಪಂಡಿತ ಮೋತೀಲಾಲ್ ಮತ್ತು ಪಂಡಿತ ಜವಾಹರಲಾಲ ನೆಹರೂರವರು ಬೇರೆ ಬೇರೆ ಕೊಠಡಿಗಳಲ್ಲಿಡಲ್ಪಟ್ಟಿದ್ದರು. ಇಂದಿನಿಂದ ತಂದೆಮಕ್ಕಳಿಬ್ಬರೂ ಒಟ್ಟಿಗೆ ಇರುವರು.

ಪುಣೆ ಆಗಸ್ಟ 15.

ಶಾಂತಿಸಂಧಾನದ ಚರ್ಚೆಯು ಈ ದಿನ ಪೂರೈಸಿತು. ಮುಖಂಡರ ಸಭೆಯು 11-30 ಘಂಟೆಗೆ ಪ್ರಾರಂಭವಾಗಬೇಕಾಗಿದ್ದಿತು. ಆದರೆ ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರು 11-55 ಘಂಟೆಗೆ ಜೈಲಿಗೆ ಬಂದರು. ಸೂಪರಿಂಟೆಂಡೆಂಟ್ ಮಿ|| ಮಾರ್ಟಿನ್‌ರವರು ಅವರನ್ನು ಮರ್ಯಾದೆಯಿಂದ ಎದುರ್ಗೊಂಡು ಜೈಲಿನ ಹೆಬ್ಬಾಗಿಲನ್ನು ತೆರೆಯಿಸಿ, ಬಹು ಗೌರವದಿಂದ ಸಭೆಯು ನಡೆಯುವ ಕೊಠಡಿಗೆ ಕರೆದುಕೊಂಡು ಹೋದರು. ನಿನ್ನೆಯದಿವಸ ಪಂಡಿತ ಜವಾಹರಲಾಲ್ ಮೊದಲಾದವರು ನಿಂತಿದ್ದು ಹೊರಗಿನ ಜನರಿಗೆ ಕಾಣಿಸಿಕೊಂಡ ಪಶ್ಚಿಮಭಾಗದ ಕಿಟಕಿಯು ಈ ದಿವಸ ಮುಚ್ಚಲ್ಪಟ್ಟಿದ್ದಿತು.

ಮುಖಂಡರ ಚರ್ಚೆಯು ಸುಮಾರು 2-30 ಘಂಟೆಗೆ ಮುಗಿಯಿತು. 2-40 ಘಂಟೆಗೆ ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಜೈಲಿನಿಂದ ಹೊರಟರು. ಸರ್ ಸಪ್ರೂರವರು ಬೇರೆ ಕಾರ್ಯದ ಸಲುವಾಗಿ ಈ ದಿನ ಮಧ್ಯಾಹ್ನ 3-30 ಘಂಟೆಗೆ ಮುಂಬಯಿಗೆ ಹೊರಡುವರು. ಮಿ|| ಜಯಕರ್‌ರವರೂ ಅವರ ಜೊತೆಯಲ್ಲಿಯೇ ಮುಂಬಯಿಗೆ ಹೊರಡುವರು. ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಹೇಳಿದ ಮಾತುಗಳಿಂದ ಮುಖಂಡರು ತಮ್ಮ ಹೇಳಿಕೆಗಳನ್ನೆಲ್ಲ ಒಂದು ಪತ್ರದಲ್ಲಿ ಬರೆದು ಅದನ್ನು ವೈಸರಾಯರಿಗೆ ತಲುಪಿಸುವಂತೆ ಸರ್ ಸಪ್ರೂರವರಕೈಯ್ಯಲ್ಲಿ ಕೊಟ್ಟಿರುವರು.

ಇದೇ ದಿನ ಮಧ್ಯಾಹ್ನ ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರು ಮಹಾತ್ಮರು ಮೊದಲಾದವರೊಡನೆ ಸುಮಾರು 2½ ಘಂಟೆಗಳ ಕಾಲ ಚರ್ಚಿಸಿದನಂತರ ಹೊರಕ್ಕೆ ಬಂದು "ಇದುವರೆಗೆ ನಾವು ಕಾಂಗ್ರೆಸ್ ಮುಖಂಡರೊಡನೆ 3 ಸಾರೆ (3 ದಿನಗಳು) ವಿಷಯಗಳನ್ನೆಲ್ಲ ಚರ್ಚಿಸಿದೆವು. ಅವರು ತಮ್ಮ ಸ್ಥಿತಿಗತಿಗಳನ್ನೆಲ್ಲ ವಿವರಿಸಿ ಒಂದು ಪತ್ರವನ್ನು ಬರೆದುಕೊಟ್ಟಿರುವರು. ಸದರಿ ಪತ್ರವನ್ನು ಮುಖಂಡರ ಅಭಿಪ್ರಾಯದಂತೆ ನಾವು ವೈಸ್ರಾಯರಿಗೆ ತಲುಪಿಸುವೆವು. ಅನಂತರ ನಾವೂ ವೈಸರಾಯರ ಬಳಿಗೆ ಹೋಗಿಬರುವೆವು ಎಂದು ಹೇಳಿದರು. ಸರ್ ಸಪ್ರು ಮತ್ತು ಮಿ|| ಜಯಕರ್‌ರವರು ಸೋಲ್ಲಾಪೂರ ಸ್ಪೆಷಲ್ ಟ್ರೈನಿನಲ್ಲಿ ಮುಂಬಯಿಗೆ ಹೊರಟುಹೋದರು.

ಕಬೀರ ಲೀಲಾ.

ಕರ್ಣಾಟಕನಾಟಕಕಲಾಕೋವಿದರೆಂದು ಲೋಕದಲ್ಲೆಲ್ಲಾ ಖ್ಯಾತಿಗೊಂಡಿರುವ ಮ|| ರಾ|| ಗುಬ್ಬಿ ವೀರಣ್ಣನವರು ಸ್ಥಾಪಿಸಿರುವ ಬಾಲಕ ನಾಟಕಮಂಡಳಿಯವರು ರಾಜಧಾನಿಗೆ ಆಗಮಿಸಿ ಈಗ್ಯೆ 3-4 ತಿಂಗಳುಗಳಿಂದ ಅನೇಕಾನೇಕ ನಾಟಕಗಳನ್ನಭಿನಯಿಸುತ್ತ ಲೋಕಪ್ರಿಯರಾಗಿದ್ದಾರೆ. ಈ ಕಂಪನಿಯವರು ನಿನ್ನೆಯದಿವಸ "ಕಬೀರ ಲೀಲಾ" ಎಂಬ ನೂತನ ನಾಟಕವನ್ನಭಿನಯಿಸಿದರು. ಈ ನಾಟಕವನ್ನು ಮ|| ರಾ|| ಬಿ. ಭೀಮರಾಜು ಎಂಬ ಕರ್ಣಾಟಕಾಂಧ್ರೋಭಯಭಾಷಾಕವಿಗಳು ರಚಿಸಿರುವರು. ಸದರಿ ಕವಿಗಳು ನಾಟಕಲಕ್ಷಣಾನುಸಾರವಾಗಿ ಸಂದರ್ಭಕ್ಕನುಸರಿಸಿ ರಸಭಾವಗಳನ್ನು ಬಹು ಮನೋಹರವಾಗಿ ನಿಯೋಜಿಸಿರುತ್ತಾರೆ. ನಾಟಕ ರಚನೆಯು ಸರ್ವಾಂಗಸುಂದರವಾಗಿದೆ. ಈ ನಾಟಕವನ್ನಾಡತಕ್ಕ ಬಾಲಕರಾದರೋ ನಾಟ್ಯತತ್ವವನ್ನನುಸರಿಸಿ ಸಹೃದಯಹೃದಯಾಹ್ಲಾದಕರವಾಗುವಂತೆ ಅಭಿನಯಿಸುತ್ತಾರೆ. ಪಾತ್ರಗಳನ್ನು ವಹಿಸುವವರಲ್ಲೆಲ್ಲಾ ಕಬೀರನ ಪಾತ್ರವನ್ನು ವಹಿಸುವ ನರಸಿಂಹಮೂರ್ತಿ ಎಂಬ ಕೇವಲ ೮ ವರ್ಷದ ಬಾಲಕನ ಪಾತ್ರವು ಅತ್ಯಂತ ಶ್ಲಾಘನೀಯವಾಗಿದೆ. ಈ ಬಾಲಕನು ತನ್ನ ಯೋಗ್ಯತೆಗೆ ಮೀರಿ ಅಭಿನಯಿಸುವದನ್ನು ನೋಡಿದರೆ ಇದು ಪೂರ್ವಜನ್ಮ ಸಂಸ್ಕಾರದ ಫಲವೆಂದೇ ಹೇಳಬೇಕಾಗಿದೆ. ಕೃಷ್ಣನ ಪಾತ್ರವನ್ನು ಬೇರೊಬ್ಬರಿಗೆ ವಹಿಸುವದು ಉತ್ತಮ! ಸೀನರಿಗಳಂತೂ ಬಹು ಪ್ರೇಕ್ಷಣೀಯಗಳಾಗಿವೆ. ಒಟ್ಟಿಗೆ ನಾಟಕವು ಸರ್ವಾಂಗಸುಂದರವಾಗಿರುವದರಿಂದ ಸದರಿ ಕಂಪನಿಯವರಿಗೆ ಪ್ರೋತ್ಸಾಹವನ್ನೀಯುವದು ಮಹಾಜನರ ಪ್ರಥಮ ಕರ್ತವ್ಯವಾಗಿದೆ.

ಸ್ವೀಕಾರ.

ಗದಗ ಶಹರ ನಿವಾಸಿಗಳಾದ ಮ|| ರಾ|| ಇಂಗಳಳ್ಳಿ ರಾಚಪ್ಪನವರು ಶ್ರಾವಣ ಬಹುಳ ೫ ದಿವಸ ತಮ್ಮ ಗೃಹದಲ್ಲಿ ನೆರವೇರಿಸಿದ ಗಣಾರಾಧನೆಯ ಸಮಯದಲ್ಲಿ ತಮ್ಮ ಗುರುಗಳಾದ ವೇ|| ಗುರುಸ್ವಾಮಿ ಮಠದ ಶಿವಲಿಂಗಾರ್ಯರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ಮ|| ರಾ|| ಹಂಚಿನಹಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ತಂಬ್ರಹಳ್ಳಿಯಲ್ಲಿ ನೆರವೇರಿದ ಗುರುಭಜನಾಸಪ್ತಕದ ಸಮಾರಂಭ ಗಣಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು ಮ|| ರಾ|| ಚಿಲಗೋಡು ಮರಿಸಿದ್ದನಗೌಡರ ದ್ವಾರಾ ತಲ್ಪಿರುತ್ತದೆ.

ಬೆಳಗಾಂವ ಡಿ|| ಮುತ್ತನಾಳ ಗ್ರಾಮದ ಮ|| ರಾ|| ಪಾಟೀಲ ಬಸವನಗೌಡರ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು ಸದರಿ ಗ್ರಾಮದ ಬೃಹನ್ಮಠದ ಶ್ರೀ ಪಟ್ಟಾಧ್ಯಕ್ಷರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ತುಮ್ಮಿನಕಟ್ಟೆಗ್ರಾಮದ ಮ|| ರಾ|| ಅಣಜಿ ನಂಜುಂಡಪ್ಪನವರ ಪುತ್ರಿ ಸೌ|| ಮಹಾದೇವಕ್ಕನನ್ನು ಮ|| ರಾ|| ಸೊರಬದ ಉಪ್ಪಿನ ಚಿನ್ನಪ್ಪನವರ ಪುತ್ರ ಚಿ|| ವೀರಭದ್ರಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ಸದರಿ ಗ್ರಾಮದ ಪಂಚಾಚಾರ್ಯ ಭಜನಾಸಂಘದವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ. ಸಂ.—.

ಪಂಡಿತ ಮಾಳವೀಯರವರ ಭಾಷಣ.

ನನಗೆ ಜೈಲೇ ಪವಿತ್ರಸ್ಥಳ. ನಾನು ಅಲ್ಲಿಗೆ ಹೋಗಲೇಬೇಕು.

ಪಂಡಿತ ಮಾಳವೀಯರವರು ತಮ್ಮ ಬಿಡುಗಡೆಯ ವಿಚಾರದ ಬಗ್ಗೆ ಬೊಂಬಾಯಿಯ ಪ್ರಚಂಡ ಸಭೆಯಲ್ಲಿ ಉದ್ದೇಶಿಸಿದ್ದೇನೆಂದರೆ—

ಜುಲ್ಮಾನೆ ಕೊಟ್ಟವ ಮಿತ್ರದ್ರೋಹಿ.

ಯಾರೋ ನನ್ನ ಪರವಾಗಿ ಜುಲ್ಮಾನೆಯನ್ನು ಕೊಟ್ಟು ನಾನು ಜೈಲಿನಿಂದ ಹೊರಗೆ ಬರುವಂತ ನನ್ನ ಇಷ್ಟಕ್ಕೆ ವಿರುದ್ಧವಾಗಿ ಮಾಡಿರುವವರು. ಇವರು ನಿಜವಾಗಿಯೂ ಮಿತ್ರದ್ರೋಹಿಗಳು. ಏಕೆಂದರೆ, ನಾನು ಸ್ಪಷ್ಟವಾಗಿ ಮ್ಯಾಜಿಸ್ಟ್ರೇಟರಿಗೆ "ದಯವಿಟ್ಟು ಯಾರಾದರೂ ನನ್ನ ಪರವಾಗಿ ಜುಲ್ಮಾನೆ ಕೊಡಲು ಬಂದರೆ ಅದನ್ನು ತೆಗೆದುಕೊಳ್ಳಬೇಡಿರೆಂದು ಹೇಳಿದ್ದೆನು. ಏಕೆಂದರೆ ಈ ಅನ್ಯಾಯದ ಸರ್ಕಾರಕ್ಕೆ ಒಂದು ಕಾಸನ್ನೂ ಕೊಡಬಾರದೆಂದು ನಾನು ಪ್ರತಿಜ್ಞೆ ಮಾಡಿದ್ದೆನು. ಇದನ್ನು ತಿಳಿದೂ ತಿಳಿದು ನನಗೆ ದ್ರೋಹಮಾಡಿರುವಾತನು ಮಿತ್ರದ್ರೋಹಿಯಲ್ಲದೆ ಮತ್ತೇನು? ಆಗಲಿ! ನಾನು ಇನ್ನೊಂದುಸಾರೆ ಪೋಲೀಸರ ಆಜ್ಞೆಯನ್ನುಲ್ಲಂಘಿಸಿ ಜೈಲನ್ನು ಸೇರಿಯೇ ಸೇರುವೆನು. ಇದೇ ನನ್ನ ದೃಢಪ್ರತಿಜ್ಞೆ. ಲಕ್ಷಾಂತರಜನ ನನ್ನ ಪವಿತ್ರಸ್ನೇಹಿತರು ಜೈಲಿನಲ್ಲಿರುವಾಗ ನಾನು ಹೊರಗೆ ಇರುವುದು ನನ್ನ ಆತ್ಮಕ್ಕೆ ತೃಪ್ತಿಯಾಗುವುದಿಲ್ಲ. ದೇಶಸೇವೆಯಲ್ಲೇ ನಾನು ಮಡಿಯಬೇಕು. ಇಲ್ಲದೆ ಹೋದರೆ ಈ ಸರ್ಕಾರಕ್ಕೆ ವಿರುದ್ಧವಾಗಿ ನಮ್ಮ ಅಸಹಕಾರವರ್ತನೆಯಿಂದ ಜೈಲನ್ನು ಸೇರಬೇಕು. ಈ ಎರಡೇ ಮಾರ್ಗಗಳು ದೇಶಭಕ್ತರಾದ ಪ್ರತಿಯೊಬ್ಬ ಭಾರತೀಯರಿಗೂ ಲಕ್ಷ್ಯವಾಗಿರಬೇಕೆಂಬುದೇ ನನ್ನ ಮತ! ಇದನ್ನು ನಾನು ಅನುಸರಿಸಿಯೇ ಅನುಸರಿಸುವೆನು.

ನನಗೇ ನಾಚಿಕೆಯಾಗುತ್ತಿದೆ.

ಸರ್ದಾರರೂ ಮತ್ತು ಇತರ ಸಹೋದರಿಯರೂ ನನ್ನೊಂದಿಗೆ ಜೈಲನ್ನು ಸೇರಿದಾಗ್ಯೂ, ನಾನು ಅವರನ್ನು ಬಿಟ್ಟು ಹೊರಗೆ ಬಂದುದು ನನಗೇ ನಾಚಿಕೆಯಾಗುತ್ತಿದೆ. ನಾನು ಎಷ್ಟೋ ಪ್ರಯತ್ನಪಟ್ಟೆನು. ಜೈಲಿನ ಸೂಪರಿಂಟೆಂಡೆಂಟರು ನನ್ನನ್ನು ಬಲವಂತದಿಂದ ಆಚೆಗೆ ಕಳುಹಿಸಿಬಿಟ್ಟರು. ನನ್ನ ಬದಲು ಯಾರೋ ಜುಲ್ಮಾನೆಯನ್ನು ಕೊಟ್ಟಿರುವುದರಿಂದ ನಾನು ಜೈಲನ್ನು ಬಿಟ್ಟು ಹೋಗಲೇಬೇಕೆಂದೂ ಹಾಗೆ ಹೋಗದಿದ್ದರೆ ಸೂಪರಿಂಟೆಂಡೆಂಟರಿಗೆ ಅಕ್ರಮದಿಂದ ಜೈಲಿನಲ್ಲಿಟ್ಟುಕೊಂಡಿದ್ದಕ್ಕಾಗಿ ಶಿಕ್ಷೆ ಆಗುವುದೆಂದೂ ಅವರು ನನಗೆ ತಿಳಿಸಿ ಬಲವಂತದಿಂದ ನನ್ನನ್ನು ಆಚೆಗೆ ಕಳುಹಿಸಿಕೊಟ್ಟರು. ಆದರೂ ಯತ್ನವಿಲ್ಲದೆ ಹೊರಟುಬಂದೆನು. ಹೊರಡುವುದಕ್ಕಿಂತ ಮುಂಚೆ ಸರ್ದಾರರನ್ನೂ ಮತ್ತು ಎಲ್ಲರನ್ನೂ ಕಂಡಿದ್ದೆನು. ಅವರು ನಾನು ಹೊರಗೆಹೋಗಿ ಕೆಲಸ ಮಾಡಬೇಕೆಂಬ ತಮ್ಮ ಅಭಿಪ್ರಾಯವ ... ಹೇಳಿದರು. ಇನ್ನೊಂದುಸಾರೆ ಪೋಲೀಸಿನವರ ಆಜ್ಞೆಯನ್ನುಲ್ಲಂಘಿಸಿ ಜೈಲಿಗೆ ನಾನು ಹೋಗಿಯೇ ಹೋಗುತ್ತೇನೆ. ಏಕೆಂದರೆ ಆ ಪೋಲೀಸರ ಹುಕುಂ ಅನ್ಯಾಯವಾದುದು ಮತ್ತು ಕ್ರೂರತನದಿಂದ ಕೂಡಿದುದು. ಈ ಹುಕುಮನ್ನು ಉಲ್ಲಂಘಿಸುವುದು ನನ್ನ ಕರ್ತವ್ಯ. ಅದರಂತೆ ನಾನು ಮಾಡಿಯೇ ಮಾಡುತ್ತೇನೆ. ಮ್ಯಾಜಿಸ್ಟ್ರೇಟರ ತೀರ್ಪು ಕುಚೇಷ್ಟಿತವಾದ ತೀರ್ಪು. ಇದನ್ನು ವಿರೋಧಿಸಲು ಜೈಲಿಗೆ ನಾನು ಹೋಗಲೇಬೇಕು.

ಶ್ರೀಭಗವದ್ಗೀತೆಯ ಅಂತ್ಯದಲ್ಲಿ ಪಾರ್ಥನು ಶ್ರೀ ಕೃಷ್ಣಪರಮಾತ್ಮನಿಗೆ "ನಷ್ಟೋ ಮೋಹಃ" ಎಂದು ಹೇಳಿದಂತೆ 40-50 ವರ್ಷಗಳಿಂದಲೂ ನನ್ನನ್ನು ಆವರಿಸಿದ್ದ ಮೋಹವು ಇಂದು ಬಿಟ್ಟು ಹೋಯಿತು. ಇಂದು ನನಗೆ ನಿಜವಾದ ಜ್ಞಾನೋದಯವಾಯಿತು. ನಾನು ಬ್ರಿಟಿಷರ ಮಿತ್ರತ್ವದಲ್ಲಿ ವಿಶ್ವಾಸವನ್ನಿಟ್ಟಿದ್ದೆನು. ಅವರಿಂದ ನಮಗೆ ಕಡೆಗಾದರೂ ಒಳ್ಳೆಯದಾಗುವುದೆಂದು ಭಾವಿಸಿದ್ದೆನು. ನಮಗೆ ಅವರು ನ್ಯಾಯವನ್ನು ಮಾಡಿ ಸ್ವರಾಜ್ಯವನ್ನು ಕೊಡುವರೆಂದು ನಂಬಿದ್ದೆನು. ಮಹಾತ್ಮಾ ಗಾಂಧಿಯವರು ನನಗೆ ಎಷ್ಟೋ ಸಾರೆ ಎಚ್ಚರಿಕೆಯನ್ನು ಕೊಟ್ಟಿದ್ದರು.

ಆದರೆ ಅದು ನನ್ನ ಮನಸ್ಸಿಗೆ ಹತ್ತಿರಲಿಲ್ಲ. ಈಗ ಮೂರು ವರ್ಷಗಳ ಹಿಂದೆ ಬ್ರಿಟಿಷ್ ಸರಕಾರದವರು ಬಿಳಿಯ ಕಮಿಷನ್ನನ್ನು ನೇಮಿಸಿದಾಗಲೇ ನನ್ನ ವಿಶ್ವಾಸವು ಸಡಿಲಿತು. ಮುಂಬಯಿಯ ಇಂದಿನ ದೃಶ್ಯವನ್ನು ನೋಡಿಯಂತೂ ಪ್ರಪಂಚದಲ್ಲಿ ಯಾವ ಆಡಳಿತವೂ ಬ್ರಿಟಿಷರ ಇಂಡಿಯಾದ ಆಡಳಿತದಷ್ಟು ಪಾಪಭೂಯಿಷ್ಠವಾದುದಾಗಿಲ್ಲವೆಂಬ ಮನವರಿಕೆಯು ನನಗೆ ಉಂಟಾಯಿತು.

"ಈ ಸಂದರ್ಭದಲ್ಲಿ ನಾವೆಲ್ಲರೂ ಮಹಾತ್ಮಾ ಗಾಂಧಿಯವರ ಕಾರ್ಯಕ್ರಮವನ್ನು ಕೊನೆಗಾಣಿಸಬೇಕು. ಇಂದು ನಮ್ಮ ದೇಶದಲ್ಲಿ ಹರಿಯುತ್ತಿರುವ ಧೈರ್ಯ, ಉತ್ಸಾಹ, ಸ್ವಾರ್ಥತ್ಯಾಗಗಳ ಪ್ರವಾಹವನ್ನು ನೋಡಿದರೆ ಸರ್ವಶಕ್ತನಾದ ಮತ್ತು ಸರ್ವಾಂತರ್ಯಾಮಿಯಾದ ಪರಮಾತ್ಮನೇ ಈ ನಮ್ಮ ಸ್ವರಾಜ್ಯಧರ್ಮಯುದ್ಧದ ಹಿಂದಿರುವಂತೆ ಕಾಣುವುದು. ಇಂದು ನಮ್ಮ ನಾರೀಮಣಿಯರೂ, ಹಸುಳೆಯರಾದ ಬಾಲಕರೂ ಯುದ್ಧಾಂಗಣಕ್ಕೆ ಬಂದು ಏನನ್ನೂ ಅಪೇಕ್ಷಿಸದೆ ಸರ್ವಸ್ವವನ್ನು ತ್ಯಾಗಮಾಡಿ ... ಅನುಭವಿಸುತ್ತಿರುವ ... ಗಿರುವುದನ್ನು ಕಂಡು ನನ್ನ ಮನವು ಅರಳಿರುವುದು. ಭಾರತಮಾತೆಯು ಪಾರತಂತ್ರ್ಯದ ಶೃಂಖಲೆಗಳು ಚೂರುಚೂರಾಗಿ ಕಳಚಿಬಿದ್ದು ಸ್ವಾತಂತ್ರ್ಯಯುಗವು ಉದಯಿಸುವ ಅರುಣೋದಯದ ಕಾಂತಿಯು ಕಾಣುಬರುತ್ತಿರುವದು.

ಭಾರತೀಯರೇ! "ಈ ಸಮಯದಲ್ಲಿ ಅಡಿಯನ್ನು ಹಿಂದಿಡಬೇಡಿರಿ; ನಿಮ್ಮ ತಲೆಗಳನ್ನು ಪೋಲೀಸರು ಲಾಠಿಗಳಿಂದ ಚೂರುಚೂರು ಮಾಡಲಿ; ನಿಮ್ಮ ರಕ್ತವು ಧಾರಾಪ್ರವಾಹವಾಗಿ ಹರಿಯಲಿ; ಧೈರ್ಯಗುಂದಬೇಡಿರಿ; ಮಹಾತ್ಮರ ತಪಸ್ಸು ನಿಮಗೆ ಹಿಂದಿತವಾಗಿಯೂ ಜಯವನ್ನು ಕೊಡುವುದು."

ಶ್ರೀ ವಿಠಲಭಾಯಿ ಪಟೇಲರಭಾಷಣ.

ನನ್ನ ರಕ್ತವು ಕುದಿಯುತ್ತಿದೆ. ಭರತಖಂಡದಲ್ಲಿ ನಾವು ಜೈಲಿನ ಹೊರಗೆ ಇರುವುದು ಇದ್ದಹಾಗೆಯೇ ಅಲ್ಲ. ಜೈಲಿನಲ್ಲಿ ನಮಗೋಸ್ಕರ ಹೊಡೆದಾಡುವ ಲಕ್ಷಾಂತರ ಜನ ನಮ್ಮ ಸಹೋದರ ಸಹೋದರಿಯರು ಕಷ್ಟದೆಸೆಯಲ್ಲಿರುವಾಗ ನಾವು ಈರೀತಿ ಸುಖಲೋಲರಾಗಿರುವುದು ಮಹಾ ಲಜ್ಜಾಸ್ಪದವಾಗಿದೆ. ನಮ್ಮ ದೇಶದ ಶತ್ರುವಾಗಿ ಈ ಸರ್ಕಾರವು ಪರಿಣಮಿಸಿದೆ. ನಮ್ಮ ಬಂಧುಗಳೆಲ್ಲರನ್ನೂ ಜೈಲಿಗೆ ಹಾಕಿದೆ. ಬ್ರಿಟಿಷ್‌ನವರ ವಸ್ತುಗಳಲ್ಲಿ ಒಂದು ಚೂರನ್ನೂ ಕೊಳ್ಳದೆ ಅವರ ವಸ್ತುಗಳನ್ನೆಲ್ಲಾ ಬಹಿಷ್ಕರಿಸಿ ಅವರ ಜೇಬುಗಳನ್ನು ಬರಿದು ಮಾಡಿದರೆ ಅಂದು ಅವರು ಕಣ್ಣು ತೆರೆಯುವರು. ತಾವು ಮಾಡುತ್ತಿರುವ ಅನ್ಯಾಯವನ್ನು ಲಕ್ಷಿಸುವರು. ಇದು ಆದಹೊರತು ನಮ್ಮವರು ಜೈಲಿನಿಂದ ಬಿಡುಗಡೆ ಮಾಡಲ್ಪಡುವುದಿಲ್ಲವೆಂದು ಬೊಂಬಾಯಿಯ ಒಂದು ಪ್ರಚಂಡ ಸಭೆಯ ಮುಂದೆ ಭಾಷಣ ಮಾಡುತ್ತ ಹೇಳಿದರು.

ಜೈಲಿನಲ್ಲಿ ಇಪ್ಪತ್ತೈದುಸಾವಿರ ಜನರು.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು ಸತ್ಯಾಗ್ರಹದ ಪ್ರತಿಯೊಂದು ವಿಚಾರವನ್ನೂ ಸರಿಯಾಗಿ ಲೆಖ್ಖಪತ್ರದಲ್ಲಿಟ್ಟಿರುವದು. ಅದರ ಪ್ರಕಾರ ಭರತಖಂಡದಲ್ಲಿ ಸ್ವಾತಂತ್ರ್ಯ ಸ್ಥಾಪನೆಗೋಸ್ಕರ ಮಹಾತ್ಮಾ ಗಾಂಧಿಯವರ ಸತ್ಯಾಗ್ರಹವು ಪ್ರಾರಂಭವಾದಂದಿನಿಂದ ಇದುವರೆಗೆ ಜೈಲಿನಲ್ಲಿ ಕಾರಾಗೃಹವಾಸವನ್ನು ಅನುಭವಿಸಿದವರ ಸಂಖ್ಯೆಯು ಈಪ್ರಕಾರ ಇರುವುದೆಂದು ಸತ್ಯವಾಗಿ ತಿಳುಹಿಸಲ್ಪಟ್ಟಿದೆ.

ಅಜ್ಮೀರ್ 50, ಆಂಧ್ರ (29ನೇ ಜುಲೈವರೆಗೆ) 3,000, ಅಸ್ಸಾಂ 50, ಬೀಹಾರ್ (25ನೇ ಜುಲೈವರೆಗೆ) 4,150, ಬಂಗಾಳ 6,000, ಬೇರಾರ್ 125, ಬರ್ಮಾ 125, ಹಿಂದೂಸ್ತಾನಿ ಮಧ್ಯರಾಷ್ಟ್ರಗಳು 100, ಮಧ್ಯರಾಷ್ಟ್ರಗಳು ಮರಾಠೀ 150, ಬೊಂಬಾಯಿನಗರ (ವಾಡಲಾ ಉಪ್ಪಿನ ಕಾರ್ಖಾನೆಗಾಗಿ ದಸ್ತಗಿರಿ ಮಾಡಲ್ಪಟ್ಟವರ ವಿನಾ) 1ನೇ ಆಗಸ್ಟವರೆಗೆ 1,759, ಡೆಲ್ಲಿ 400, ಗುಜರಾಥ 961, ಕರ್ನಾಟಕ 450, ಕೇರಳಾ 200, ಮಹಾರಾಷ್ಟ್ರ (28ನೇ ಜುಲೈವರೆಗೆ) 1,000, ಈಶಾನ್ಯ ಪ್ರಾಂತ್ಯಗಳು 600, ಪಂಜಾಬು 3,500, ಸಿಂಧ್ 68, ತಮಿಳುನಾಡು (ಮದ್ರಾಸ್ ನಗರವನ್ನು ಸೇರಿಸಿಲ್ಲ) 690, ಸಂಯುಕ್ತ ಪ್ರಾಂತ್ಯಗಳು (23ನೇ ಜುಲೈವರೆಗೆ) 1,700, ಉತ್ಕಲಾ (4ನೇ ಜುಲೈವರೆಗೆ 350, ಒಟ್ಟು 25,325.

ಶಾಂತಿಸಂಧಾನ.

ಮಿ|| ವಿಠಲಭಾಯಿ ಪಟೇಲರವರ ಹೇಳಿಕೆ.

ಇದೇ ಆಗಸ್ಟ 13ನೆಯ ತಾರೀಖಿನ ದಿವಸ ಮಿ|| ವಿಠಲಭಾಯಿ ಪಟೇಲರವರು ಮುಂಬಯಿ ಕೊವಾಸ್ಜಿ ಜಹಾಂಗೀರ್ ಹಾಲಿನಲ್ಲಿ ನೆರೆದಿದ್ದ ಪಾರ್ಶಿಜನಗಳ ಸಭೆಯಲ್ಲಿ "ಶಾಂತಿಸಂಧಾನ" ದ ವಿಷಯವಾಗಿ ಈ ರೀತಿ ಉಪನ್ಯಾಸಮಾಡಿದರು.

"ನನಗೆ ಶಾಂತಿಯುಬೇಕು. ಗಾಂಧೀಜಿಯವರಿಗೂ ಶಾಂತಿಯು ಬೇಕು. ಮೋತೀಲಾಲ್‌ನೆಹರೂರವರಿಗೂ ಹಾಗೂ ರಾಷ್ಟ್ರೀಯಸಭೆಗೆ ಸೇರಿದವರೆಲ್ಲರಿಗೂ ಶಾಂತಿಯೇ ಬೇಕಾಗಿರುವದು. ಆದರೆ ಅದು ಗೌರವಯುಕ್ತವಾದ ಶಾಂತಿಯಾಗಿರಬೇಕು. ನಾರ್ವಾವಿರುವ ನಮ್ಮ ದೇಶೀಯರು ಕಾರಾಗೃಹದಲ್ಲಿರುವಾಗ ಪ್ರತಿನಿತ್ಯವೂ ಹೊಸಹೊಸ ದಸ್ತಗಿರಿಗಳೂ ಮನೆಗಳ ಜಪ್ತಿಯೂ ದೊಣ್ಣೆಯಪೆಟ್ಟುಗಳೂ ನಡೆಯುತ್ತಿರುವಾಗ ಶಾಂತಿಯಸಲುವಾಗಿ ಯೋಚಿಸುವದು ಹೇಗೆ? ನನ್ನ ಅಭಿಪ್ರಾಯದಲ್ಲಿ ಸರಕಾರವು ಶಾಂತಿಯಾಗಲೆಂಬ ಅಭಿಲಾಷೆಯನ್ನು ಯಾವ ರೀತಿಯಲ್ಲಿಯೂ ವ್ಯಕ್ತಪಡಿಸಿರುವದಿಲ್ಲ. ಸ್ಥಿತಿಗಳು ಮಿತಿಮೀರಿ ಅನಿವಾರ್ಯವಶಕ್ಕೆ ಪ್ರಾಪ್ತವಾಗುವವರೆಗೆ ಅದೆಂದಿಗೂ ಹಾಗೆ ಮಾಡುವದಿಲ್ಲ. ಇನ್ನು ನಾವು ಲಂಡನ್ನಿನ ಪರಿಷತ್ತಿಗೆ ಹೋಗಬೇಕಾದರೆ ಬ್ರಿಟಿಷ್ ಸರಕಾರವು ಒಂದು ನಿಯಮಿತವಾದ ಅವಧಿಯು ಕಳೆದನಂತರ ರಾಜ್ಯಾಡಳಿತಭಾರವನ್ನು ನಮಗೆ (ಭಾರತೀಯರಿಗೆ) ಸಂಪೂರ್ಣವಾಗಿ ವಹಿಸಿಬಿಡುವೆವೆಂದು ಸರಿಯಾದ ಭರವಸೆಯನ್ನು ಕೊಡಬೇಕು. ಸೈನ್ಯದಮೇಲಿನ ಅಧಿಕಾರವಿಲ್ಲದೆ "ಡೊಮಿನಿಯನ್ ಸ್ಟೇಟಸ್" ಅಥವಾ "ಸ್ವರಾಜ್ಯ" ಎಂಬ ಶಬ್ದಗಳಿಂದ ಯಾವ ಪ್ರಯೋಜನವೂ ಇಲ್ಲ. ಸರಕಾರವು ಈ ಅಧಿಕಾರಬದಲಾವಣೆಗೆ ಒಂದು ಗೊತ್ತಾದ ಅವಧಿಯನ್ನು ಗೊತ್ತುಮಾಡಲಿ! ಅಂದರೆ ನಮ್ಮಲ್ಲಿ ಬಹುಜನರಿಗೆ ಸಂಪೂರ್ಣ ಸ್ವಾತಂತ್ರ್ಯಾಭಿಲಾಷೆಯೇ ಇರುವದಾದರೂ ಸದ್ಯ ಆ ವಿಷಯವಾಗಿ ಪ್ರಸ್ತಾಪಿಸುವದನ್ನು ನಿಲ್ಲಿಸುವೆವು. ಇಷ್ಟೇ ಅಲ್ಲ. ನಮ್ಮ "ಸಾಮ್ರಾಜ್ಯಾಂತರ್ಗತಸ್ವರಾಜ್ಯ" ಪದ್ಧತಿಯು ಇತರ ಸಾಮ್ರಾಜ್ಯಗಳಂತೆ ಬೇಕಾದಾಗ ಬ್ರಿಟಿಷರ ಸಂಬಂಧವನ್ನೇ ತಪ್ಪಿಸಿಕೊಳ್ಳುವಂತೆ ಇರಬೇಕು. ಸ್ವಾತಂತ್ರ್ಯದ ತಿರುಳಿಲ್ಲದೆ ಮಹಾತ್ಮಾ ಗಾಂಧಿಯವರಾಗಲಿ ಪಂಡಿತ ನೆಹರೂರವರಾಗಲಿ ರಾಜಿಯ ಪ್ರಸ್ತಾಪಗಳಿಗೆ ಸಮ್ಮತಿಸುವದಿಲ್ಲವೆಂದು ನಾನು ಸಂಪೂರ್ಣ ನಂಬಿರುತ್ತೇನೆ.

ಆದರೆ ಈ ಸಂದರ್ಭದಲ್ಲಿ ನಾವು ಮಾಡಬೇಕಾದ ಕಾರ್ಯಗಳು ಅನೇಕವಾಗಿರುವವು. ನಮ್ಮಲ್ಲಿ ಅನೇಕರಿಗೆ ಅಹಿಂಸಾತ್ಮಕ ಕಾಯಿದೆಭಂಗದ ಸತ್ಯಾಗ್ರಹದಲ್ಲಿ ನಂಬಿಕೆಯಿಲ್ಲದಿರುವದಾದರೂ ಭಾರತ ಸ್ವಾತಂತ್ರ್ಯಸಂಪಾದನೆಯಲ್ಲಿ ನಿರತರಾಗಿರುವ ರಾಷ್ಟ್ರೀಯಸಭೆಯನ್ನು ಸ್ವದೇಶೀವ್ರತವನ್ನು ಕೈಕೊಳ್ಳುವದರ ಮೂಲಕವಾಗಿ ನೀವೆಲ್ಲರೂ ಪ್ರೋತ್ಸಾಹಿಸುವದಾದರೆ ನಾವು ಬಹು ಜಾಗ್ರತೆಯಾಗಿ ಸ್ವರಾಜ್ಯವನ್ನು ... ಸುವೆವು. ನಿಮ್ಮ ಪಂಗಡದವರೆಲ್ಲರೂ ಖಾದಿಯನ್ನೇ ... ಸುವವರಾದರೆ ಭರತಖಂಡದ ಸ್ವಾತಂತ್ರ್ಯವು ಬಹಳ ... ಲ್ಲವೆಂದೇ ಹೇಳಬೇಕಾಗುವದು. ಆದರೆ ನೀವುಗಳೆಲ್ಲರೂ ಬ್ರಿಟಿಷ್ ಪದಾರ್ಥಗಳನ್ನೂ, ಮುಖ್ಯವಾಗಿ ಬ್ರಿಟಿಷ್ ಬಟ್ಟೆಗಳನ್ನೂ ಕನಿಷ್ಠಪಕ್ಷ ಒಂದು ವರ್ಷದ ವರೆಗಾದರೂ ಬಹಿಷ್ಕರಿಸುವದಾದರೆ ಆ ಅವಧಿಯಲ್ಲಿ ನಮಗೆ ಸ್ವರಾಜ್ಯವು ನಿಸ್ಸಂದೇಹವಾಗಿ ಲಭಿಸುವದು."

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ರಮಣೀಯವಾದ ಊದುಬತ್ತಿಗಳು, ಸಾಮಳದಕಾಂಗ ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಷ್ಟಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲನೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಪೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಟಕ್ಕೆ ಸಾಧ್ಯಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸುದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [3]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ಸೊಂಟದಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತಿ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುವಾಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ನಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶ್ರೀ ರುದ್ರವಿಲಾಸ ಬುಕ್‌ಡಿಪೊ, ಗದಗ.
ಇಲ್ಲಿ ದೊರೆಯುವ

ಸಚಿತ್ರ ಶ್ರೀ ದೇವೀಪುರಾಣವು.

ಇದನ್ನು

ಶಿ. ಮೂ. ಸಿದ್ಧಲಿಂಗಾರ್ಯ ಸಾಲಿಮಠ, ರೋಣ.

ಇವರು ಚನ್ನಾಗಿ ಪರಿಶೋಧಿಸಿ ಇದರ ಪೂಜಾವಿಧಿ, ಕಠಿಣ ಶಬ್ದಗಳಿಗೆ ಅರ್ಥ ಸಹವಾಗಿ ಬರೆದು, ಬೇರೆ ಬೇರೆ ಫೋಟೋಗಳಿಂದಲೂ, ದಪ್ಪ ಕಾಗದಗಳಲ್ಲಿ ದೊಡ್ಡ ಅಕ್ಷರಗಳಿಂದಲೂ, ಕೆಲವು ಚಿತ್ರಗಳಿಂದಲೂ, ಅಚ್ಚುಗೊಳಿಸಿ, ಪ್ರಸಿದ್ಧಪಡಿಸಿರುವರು. ಇದು ಸರ್ವರಿಗೂ ಪಾರಾಯಣಕ್ಕೆ ಬಹು ಯೋಗ್ಯವಾಗಿರುತ್ತದೆ. ಇದರಲ್ಲಿರುವ ೫೦ ವಿಷಯಗಳನ್ನು ಕೆಳಗೆ ವಿವರಿಸಿದೆ.

೧ ಶ್ರೀ ದೇವಿಮಹಾತ್ಮೆಯ ಪೂಜಾವಿಧಾನವು. ೨ ಸ್ನಾನಮಾಡುವ ಕ್ರಮವು. ೩ ಅನುಷ್ಠಾನಕ್ಕೆ ಕೂಡ್ರುವ ದಿಕ್ಕುಗಳು. ೪ ಹಾಸುವ ಆಸನಂಗಳ ಭೇದವು. ೫ ಕೂಡ್ರುವ ಆಸನಕ್ರಮ. ೬ ಅನುಷ್ಠಾನ ಮಾಡುವ ಕ್ರಮವು. ೭ ವಿಭೂತಿ ಮಾಡುವ ಕ್ರಮವು. ೮ ವಿಭೂತಿ ವಿಧಾನ ಗೋಚರ ಚಕ್ರವು. ೯ ವಿಭೂತಿ ಧಾರಣ ಸ್ಥಾನಗಳು. ೧೦ ರುದ್ರಾಕ್ಷಿ ಧಾರಣ ಫಲಗಳು. ೧೧ ದೇವತಾರ್ಚನ ಭೇದವು. ೧೨ ದೇವತಾರಾಧನ ಫಲಕ್ರಮವು. ೧೩ ದೇವತಾರ್ಚನಾ ಕ್ರಮವು. ೧೪ ಅಷ್ಟೋಪಚಾರ ಪೂಜೆಯ ಕ್ರಮವು. ೧೫ ಅಷ್ಟವಿಧಾರ್ಚನೆಯ ಮಂತ್ರಗಳು. ೧೬ ಜಪಮಾಲಿಕಾ ಲಕ್ಷಣವು. ೧೭ ಮಂತ್ರಪಲ್ಲವಂಗಳ ಫಲಕ್ರಮವು. ೧೮ ಜಪಾರಂಭದಲ್ಲಿ ಧ್ಯಾನಿಸುವ ಧ್ಯಾನಮೂರ್ತಿ ಭೇದ ಫಲಗಳು. ೧೯ ದೇವೀಮಹಾತ್ಮೆಯ ಪೂಜಾವಿಧಾನವು. ೨೦ ದೀಪಸ್ಥಾಪನ ಕ್ರಮವು. ೨೧ ಪೂರ್ಣಕುಂಭ ಯಂತ್ರಸ್ಥಾಪನ ಕ್ರಮವು. ೨೨ ಯಂತ್ರೋಪ್ರಾಣಪ್ರತಿಷ್ಠಾ ದೇವತಾ ಸ್ಥಾಪನಾದಿ ಪೂಜಾವಿಧಾನವು. ೨೩ ದೇವತಾರ್ಚನಾ ಮಂತ್ರವು. ೨೪ ದಶಾವರಣ ದೇವತಾಯಂತ್ರವು. ೨೫ ನವಾರ್ಣವ ಯಂತ್ರವು. ೨೬ ಸರಸ್ವತಿಪೂಜೆಯು. ೨೭ ಶಾಪೋದ್ಧಾರ ಮಂತ್ರಜಪವು. ೨೮ ಉತ್ಕೀಲನ ಮಂತ್ರಜಪವು. ೨೯ ಕೂಷ್ಮಾಂಡ ಬಲಿಕ್ರಮವು. ೩೦ ನವಾರ್ಣವ ಮಂತ್ರನ್ಯಾಸಕ್ರಮವು. ೩೧ ದೇವೀಮಹಾತ್ಮೆಯ ಚರಿತ್ರತ್ರಯನ್ಯಾಸಕ್ರಮವು. ೩೨ ದೇವೀಮಹಾತ್ಮೆಯ ಗ್ರಂಥಪಠನ ಕ್ರಮವು. ೩೩ ಶ್ರೀ ದೇವೀ ಕುಂಭಾಷ್ಟಕ ಮಂತ್ರವು. ೩೪ ಕುಂಭಾಷ್ಟಕ ಮಂತ್ರಸಿದ್ಧಿ ಫಲಕ್ರಮವು. ೩೫ ಕಾಳಿಕಾ ಬೀಜ ಮಂತ್ರಾಷ್ಟಕ. ೩೬ ಇಚ್ಛಾಫಲಪ್ರಾಪ್ತಿಗೆ ಸಂಗ್ರಹಕ್ರಮವು. ೩೭ ಉತ್ತರನ್ಯಾಸವಿಧಿ. ೩೮ ಅನ್ನಸಂತರ್ಪಣ ಕ್ರಮ. ೩೯ ದೇವೀಮಹಾತ್ಮೆಯ ೧ನೇ ಚರಿತ್ರವು. (ಪೀಠಿಕಾಧ್ಯಾಯದಿಂದ ೩ನೇ ಅಧ್ಯಾಯ ಸಂಪೂರ್ಣ) ೪೦ ದೇವೀಮಹಾತ್ಮೆಯ ೨ನೇ ಚರಿತ್ರವು. (೪ನೇ ಅಧ್ಯಾಯದಿಂದ ೯ನೇ ಅಧ್ಯಾಯ ಸಂಪೂರ್ಣ) ೪೧ ದೇವೀಮಹಾತ್ಮೆಯ ೩ ನೇ ಚರಿತ್ರವು (೧೦ನೇ ಅಧ್ಯಾಯದಿಂದ ೧೮ ನೇ ಅಧ್ಯಾಯ ಸಂಪೂರ್ಣ) ೪೨ ಮಂಗಳಾರತಿ ಪದವು. ೪೩ ಮಂಗಲ ನೀರಾಜನವು. ೪೪ ಪುಷ್ಪಾಂಜಲಿಯು. ೪೫ ಪ್ರದಕ್ಷಿಣೆಯು. ೪೬ ನಮಸ್ಕಾರವು. ೪೭ ಪ್ರಾರ್ಥನೆಯು. ೪೮ ಅರ್ಘ್ಯಪ್ರದಾನವು. ೪೯ ವಿಸರ್ಜನ ಪೂಜೆಯು. ೫೦ ಕಠಿಣ ಶಬ್ದಗಳ ಅರ್ಥವು.

ಈ ಪ್ರಕಾರ ಯಾವತ್ತು ಮಹತ್ವದ ವಿಷಯಗಳಿಂದೊಡಗೂಡಿದ ಈ ದೇವೀಮಹಾತ್ಮೆಯ ಎರಡನೇ ಆವೃತ್ತಿಯ ಪ್ರತಿಗಳು ಖರ್ಚಾಗಿ ಇನ್ನು ಸ್ವಲ್ಪವೇ ಶಿಲ್ಕು ಉಳಿದಿರುತ್ತವೆ. ಬೇಕಾದವರು ತೀವ್ರವಾಗಿ ತರಿಸಿಕೊಳ್ಳಬೇಕು.

ಕ್ರಯ ಐದು ರೂಪಾಯಿ 5-0-0

ವಿಳಾಸ—**ಎಸ್. ಸಿ. ಸಾಲಿಮಠ ಎಂಡ ಸನ್ಸ,**
ಬುಕ್‌ಸೇಲರ್ಸ್ ಎಂಡ ರಬ್ಬರ ಸ್ಟ್ಯಾಂಪ ಮೇಕರ್ಸ,
[3] **ಗದಗ ಸಿಟಿ.**
ಪೋಸ್ಟ ಗದಗ. ಜಿಲ್ಲಾ ಧಾರವಾಡ.

ಲಿಂಗೋತ್ಪತ್ತಿ ಲಾಕೆಟ್ಸ.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ಮ್ಯಾನೇಜರ

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವಿಕಾರವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನಂಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ಪದಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂದ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[18] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ರಜಿ] ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುಪುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಕೌಟಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗು... ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ತಪ್ಪ... ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಸೆಟ್ಟಿಗೆ ಕಡಿಮೆ ಕಳುಹಿಸಲಾಗದು. [4]

ಪತ್ತೆ :—ಮಾಲಕವೈದ್ಯ ಸಿ. ಎಸ್. ಕಾಪಸೆ, ಮು. ಪೋ. ಮಿರಜ.

ಅಸಾಧ್ಯರೋಗವೆಂದು ನಿರಾಶೆಪಟ್ಟು ಇನ್ನೂ ಯೋಚಿಸುತ್ತೀಯಾ?

ಕಂಗೆಡಬೇಡಾ! ಮರುಗಬೇಡಾ !! ಗುಣದ ಮದ್ದು ಯಾವದೆಂದು ನೋಡಾ !!!

ಮಲೇರಿಯಾನ ಕಂಪೆನಿಯ ಮದ್ದನ್ನು ಒನ್ಮೆ ನೋಡಾ !!!!

ಮಲೆ ಜ್ವರ, ಗಡ್ಡೆ ಬೆಳದಿರುವ ರೋಗ ಸಂಪೂರ್ಣ ಗುಣವಾಗಬೇಕೇ? ಇಗೋ? "**ಮಲೇರಿಯಾನ**" ಎಂಬ ಪ್ರಧಾನ ಮದ್ದನ್ನು ಸೇವಿಸು ಕ್ರಯ 1—8—0

ಅನ್ನಕೋಶದ ರೋಗವು ಗುಣವಾಗಿ ಜೀರ್ಣದ ಬಲವು ಹೆಚ್ಚಾಗಿ ಬಲು ಆರೋಗ್ಯದಲ್ಲಿ ಬಾಳಬೇಕೋ? ಕಂಪೌಂಡು ಸಿರಪು "**ಪುಲ್ಸಫೂಜ**" ಎಂಬ ಅಮೃತವನ್ನು ಕುಡಿ. ಕ್ರಯ ಬಾಟ್ಲಿಗೆ ರೂ. 3—8—0

ಗರ್ಭಕೋಶದ ರೋಗಗಳು ಗುಣವಾಗಿ ಗರ್ಭಕೋಶದ ಅವಯವಗಳು ಬಲಶಕ್ತಿಗೊಳ್ಳುವ ಇಚ್ಛೆ ಉಂಟಾ? ಕಂಪೌಂಡು ಸಿರಪು "**ಸೆಬೀನ ಸೆಪೀಯ**" ಮತ್ತು ಕಂಪೌಂಡು ಸಿರಪು "**ವಿಬುರ್ನೋವ**" ಎಂಬವುಗಳನ್ನು ವಿಶ್ವಾಸದಿಂದ ಸೇವಿಸಿಕೊಳ್ಳು. ಕ್ರಯ ಬಾಟ್ಲಿಗಳಿಗೆ 3—8—0

ರಕ್ತ ಶುದ್ಧಿಯಾಗಿ, ಚರ್ಮ, ಮಾಂಸ, ನರಗಳ ಕೊಳಕುಗಳು ಶುದ್ಧಿಯಾಗಿ ಆರೋಗ್ಯಜೀವನವನ್ನು ನಿರೀಕ್ಷಿಸುತ್ತೀಯಾ? ಹಾಗಾದರೆ ಕಂಪೌಂಡು ಸಿರಪು "**ಸರ್ಸಲಿಮಗ**" ಎಂಬ ಮದ್ದನ್ನು ಸೇವಿಸುವಂತೆ ಜಾಗ್ರತೆಮಾಡು ಕ್ರಯ ಬಾಟ್ಲಿಗೆ 3—8—0

20 ತರದ ಪ್ರಮೇಹರೋಗಗಳ ಮೇಲೆ ತನ್ನ ಖಾತ್ರಿ ಗುಣದ ಬಲವನ್ನೇ ತೋರಿಸಿ ರೋಗದ ಸಹಮೂಲನನ್ನೇ ತೆಗೆದುಹಾಕುವ ಮದ್ದು ಕಂಪೌಂಡು ಸಿರಪು "**ವೆಸಿಫೂಜ**" ಎಂಬುವದೇ ಎಂದು ತಿಳಿ. ಬಾಟ್ಲಿಗೆ 3—8—0

ಹೊಮಿಯೋಪತಿ ಮದ್ದುಗಳೂ ಟಿಕ್ಕು ಲವಣಗಳ ಔಷಧಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿದೆ. ಎಲ್ಲಾ ನಮೂನೆವಾರು ದೃಷ್ಟಿ ಚಕ್ರಗಳೂ, ಕನ್ನಡಕಗಳೂ ಅವುಗಳ ನಾನಾಬಗೆಯ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ. ಹೆಚ್ಚಿನ ವಿಷಯಗಳ ತಿಳುವಳಿಕೆಯ ಬಗ್ಗೆ ಹೊಸದಾಗಿ ಛಾಪಿಸಿರುವ ಆರೋಗ್ಯಭಾಗ್ಯದ ನೀತಿ ಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ ಕಳುಹಿಸಲಾಗುವದು.

[2] **ಮಲೇರಿಯಾನ ಕಂಪನಿ,** (ಹಂಪನಕಟ್ಟೆ), ಮಂಗಳೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ ೦—೨—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ) .... ೧೩ ಆಣೆ
ಗೋತ್ರಸೂತ್ರಪಟ ೭ನೆಯ ಆವೃತ್ತಿ .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ) .... ೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ .... ೪ ಆಣೆ
ಬಸವಧ್ವಾಂತ ದಿವಾಕರ .... ೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ .... ೩ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ .... ೧ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೨ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ .... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ .... ೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು) .... ೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯ ಪ್ರಭಾಕರಂ .... ೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ .... ೪ ಆಣೆ
ವೀರಶೈವಮತವಿಮಾಂಸಾ .... ೩ ಆಣೆ
ವೈದಿಕಸಾಮ್ರಾಜ್ಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ .... ೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ) .... ೩ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ) .... ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೩ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ) .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒನ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ,
[45] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[6] ಪೋ. ಬಾ. ೫೧೦, ಮದರಾಸು

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೫ ನೇ ಆಗಸ್ಟು ೧೯೩೦ [ಸಂಚಿಕೆ ೧೭.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರಕ್ಷಸ್ವರೂಪವಾಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ೪ ಆಣೆ.

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮದ್ರಾಸು ವೀರಶೈವ ಮಹಾಜನಸಂಘದ ಪ್ರಕಟನ ಪತ್ರಿಕಾ.

ನಮ್ಮ ಮದ್ರಾಸು ಶಾಸನಸಭೆಗೆ ಅಭ್ಯರ್ಥಿಯ ಚುನಾವಣೆ.

ಇದೇ ತಾ|| 31-7-30 ರಲ್ಲಿ ಇದುವರೆವಿಗೂ ಪ್ರಸಿದ್ಧಿಗೊಳಿಸಿದಂತೆ ಬಳ್ಳಾರಿ ಶ್ರೀಮಠ ಹೀರದ ಸೂಗಮ್ಮನವರ ಛತ್ರಿಯಲ್ಲಿ ಮದ್ರಾಸು ವೀರಶೈವ ಮಹಾಜನಸಂಘದ ಜನರಲ್‌ಮೀಟಿಂಗು ನೆರೆವಿದ್ದಿತು. ಸಂಘದ ಪ್ರೆಸಿಡೆಂಟರಾದ ಮ|| ರಾ|| ತೊಗರಿ ವೀರಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮುಂದೆ ಸೆಪ್ಟಂಬರ್ ತಿಂಗಳು 9ನೆಯ ತಾರೀಕು ಮಂಗಳವಾರದಲ್ಲಿ ಜರುಗುವ ಮದ್ರಾಸು ಶಾಸನಸಭೆಯ ಚುನಾವಣೆಗೆ ಮ|| ರಾ|| ಡಿ. ಕುಮಾರರೆಡ್ಡಿ ಬಿ.ಎ., ಬಿ.ಎಲ್ ವಕೀಲರು ಬಳ್ಳಾರಿ ಇವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರವಾಯಿತು. ಮ|| ರಾ|| ಕುಮಾರರೆಡ್ಡಿಯವರು ಆರು ವರ್ಷಗಳಿಂದ ವಕೀಲ ಕೆಲಸವನ್ನು ಮಾಡುತ್ತಲಿರುವರಲ್ಲದೆ ಈ ವರಿವಿಗೂ ತಾಲೂಕು ಬೋರ್ಡು, ಜಿಲ್ಲಾ ಬೋರ್ಡು ಎಜುಕೇಷನಲ್ ಕೌನ್ಸಿಲ್ ಮುಂತಾದ ಸಂಸ್ಥೆಗಳ ಮೂಲಕ ಸಮಾಜಸೇವೆಯನ್ನೂ ಮಾಡುತ್ತಲಿರುವರು. ಮತ್ತು ಬಳ್ಳಾರಿ ತಾಲೂಕು ಬೋರ್ಡು ಪ್ರೆಸಿಡೆಂಟರಾಗಿ ಮತ್ತು ವಿಶ್ವವಿದ್ಯಾಲಯದ ಮೆಂಬರಾಗಿ ಕೆಲಸಮಾಡಿರುತ್ತಾರೆ. ವೀರಶೈವ ಮಹಾಜನಸಂಘದ ತೀರ್ಮಾನದಂತೆ ಸಮಾಜದವರೆಲ್ಲರೂ ಮ|| ರಾ|| ಕುಮಾರರೆಡ್ಡಿಯವರಿಗೆ ತಮ್ಮ ಓಟುಗಳನ್ನು ಕೊಡುವುದಾಗಿಯೂ ಮತ್ತು ತಮ್ಮ ತಮ್ಮ ಪ್ರಾಂತಗಳಲ್ಲಿ ಅವರಿಗೆ ಹೆಚ್ಚು ಓಟುಗಳು ದೊರೆಯುವಂತೆ ಶಕ್ತಿಮೀರಿ ಪ್ರಯತ್ನಮಾಡಿ ಸಮಾಜದ ಗೌರವವನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತೇವೆ.

ಬಳ್ಳಾರಿ, ಶಿವಾಚನ್ನಬಸಪ್ಪ,
ತಾ|| 1-8-30. ಕಾರ್ಯದರ್ಶಿ.

ಮೈಸೂರು ಶ್ರೀಮನ್ಮಹಾರಾಜರವರ ಯಾತ್ರೆ.

ಶ್ರೀ ಕೇದಾರನಾಥ.

ಮಹಾಪ್ರಭುಗಳು ತಾ|| 6-8-30 ರಲ್ಲಿ ಶ್ರೀ ಜಗದ್ಗುರು ಕೇದಾರ ಮಹಾಸಂಸ್ಥಾನದ ಆತಿಥ್ಯವನ್ನು ಸ್ವೀಕರಿಸಿ 11 ಘಂಟೆಯ ಸುಮಾರಕ್ಕೆ ಘಾಟೂ ಗ್ರಾಮಕ್ಕೆ ಮುಕ್ಕಾಂ ಮಾಡಿ ತಾ|| 7-8-30 ರಲ್ಲಿ ಗೌರೀಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿಂದ 8 ನೆಯ ತಾರೀಖಿನ ದಿವಸ ಶ್ರೀ ಕೇದಾರಕ್ಷೇತ್ರಕ್ಕೆ ದಯಮಾಡಿಸಿದರು. ಶ್ರೀಮನ್ಮಹಾರಾಜರವರ ಸ್ವಾಗತದ ವ್ಯವಸ್ಥೆಗಾಗಿ ಶ್ರೀ ಜಗದ್ಗುರು ಕೇದಾರ ಮಹಾಸನ್ನಿಧಿಯಿಂದ ಸಂಸ್ಥಾನದ ಮ್ಯಾನೇಜರ್ ಸಾಹೇಬರು ಮತ್ತು ಸರಕಾರದವತಿಯಿಂದ ತಹಶೀಲದಾರ ಸಾಹೇಬರು ರೆವಿನ್ಯೂ ಇನ್ಸ್‌ಪೆಕ್ಟರ ಸಾಹೇಬರು ರಿಗ್ಯೂಲರ ಇನ್ಸ್‌ಪೆಕ್ಟರ ಸಾಹೇಬರು ಮೊದಲಾದವರು ದಯಮಾಡಿಸಿದ್ದರು. ಜಗದ್ಗುರು ಸಂಸ್ಥಾನದ ವತಿಯಿಂದ ತಯಾರಿಸಲ್ಪಟ್ಟ ಚಿತ್ರವಿಚಿತ್ರ ಮಂಟಪಗಳಿಂದಲೂ, ಸಾಲು ಸಾಲಾಗಿ ನಿಲ್ಲಿಸಿರುವ ಝುಂಡಾತೋರಣಗಳಿಂದಲೂ ಹಿಮಾಲಯದ ನಾನಾ ತರದ ಪುಷ್ಪಮಾಲಿಕೆಗಳಿಂದ ಅಲಂಕೃತಗಳಾದ ಸ್ತಂಭಗಳಿಂದಲೂ ಶೋಭಿಸುತ್ತಿರುವ ಮಂಟಪಗಳ ಮಧ್ಯದಲ್ಲಿ ಶ್ರೀಮನ್ಮಹಾರಾಜರವರ ಸವಾರಿಯು ಜಯಜಯಕಾರಶಬ್ದಗಳೊಡನೆ ದಯಮಾಡಿಸುವ ದೃಶ್ಯವು ಅತ್ಯಂತ ಮನೋಹರವಾಗಿತ್ತು. ನಾನಾದೇಶಗಳ ಯಾತ್ರಿಕರು ಶ್ರೀಮನ್ಮಹಾರಾಜರವರ ದರ್ಶನವನ್ನು ಮಾಡಿ ತಾವು ಧನ್ಯರೆಂದು ಅನ್ನುತ್ತಿದ್ದರು. ಶ್ರೀಮನ್ಮಹಾರಾಜರವರಿಗಾಗಿ ಶ್ರೀಮಜ್ಜಗದ್ಗುರು ಮಹಾಸಂಸ್ಥಾನದ ವತಿಯಿಂದ ತಯಾರಿಸಲ್ಪಟ್ಟ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರು ದಯಮಾಡಿಸಿದರು. ಇದೇ ದಿವಸವೇ ಮಹಾರಾಜರ ತಿಲಕೋತ್ಸವ[illegible] ಮಹಾಪ್ರಭುಗಳಿಗೆ ಜಗದ್ಗುರುಗಳು ಸಂಸ್ಥಾನದ ಪದ್ಧತಿಯಪ್ರಕಾರ ಆಶೀರ್ವಾದವನ್ನು ಮಾಡಿದರು. ಜಗದ್ಗುರುಗಳು ಈ ದಿನ 1 ಘಂಟೆಯವರೆಗೆ ಮಹಾಪ್ರಭುಗಳ ಸಂಗಡ ಸಂಭಾಷಣೆಗಳನ್ನು ಮಾಡಿದರು. 9ನೆಯ ತಾರೀಖಿನ ದಿವಸ ಮಹಾಪ್ರಭುಗಳು ಗಜದಾನ, ಅಶ್ವದಾನ, ಭೂದಾನ, ಗೋದಾನ, ದೀಪದಾನ ಮೊದಲಾದ ಮಹಾದಾನಗಳನ್ನು ಅತ್ಯಂತಭಕ್ತಿಯಿಂದ ಮಾಡಿದರು. 11 ನೆಯ ತಾರೀಖಿನ ದಿವಸ ಶ್ರಾವಣಸೋಮವಾರವಾದ್ದರಿಂದ ಪ್ರಭುಗಳ ಶ್ರೀ ಕೇದಾರನಾಥನ ಪೂಜೆಯನ್ನು ರುದ್ರಾಭಿಷೇಕಪೂರ್ವಕ ಸಹಸ್ರ ಬಿಲ್ವದಳಗಳಿಂದಲೂ, ಸಹಸ್ರ ಕಮಲಪುಷ್ಪಗಳಿಂದಲೂ ವಿಧ್ಯುಕ್ತವಾಗಿ ಮಾಡಿ, ಆಮೇಲೆ ಶ್ರೀ ಜಗದ್ಗುರುಗಳವರಿಂದ ಆಶೀರ್ವಾದವನ್ನು ಪಡೆದರು. 12 ನೆಯ ತಾರೀಖಿನ ದಿವಸ ಪ್ರಭುಗಳ ಸವಾರಿಯು ಕೈಲಾಸಪರ್ವತಗಳ ದರ್ಶನಕ್ಕೆ ದಯಮಾಡಿಸಿತ್ತು. ಈ ದಿನವೇ ಶ್ರೀ ಜಗದ್ಗುರುಗಳವರು ಶ್ರೀ ಸಂಸ್ಥಾನ ಉಷಾಮಠಕ್ಕೆ ಪ್ರಯಾಣವನ್ನು ಬೆಳೆಸಿದರು.

ಅರ್ಚಕ, ಜಯಲಿಂಗ.

ಮೈಸೂರು ದೇಶದ ಸಚಿವೋತ್ತಮರಾದ ಮಿರ್ಜಾ ಎಂ. ಇಸ್ಮಾಯಿಲ್ಲರ ಪುತ್ರಿಯಾದ ಮಹತಾಬ್‌ಬೇಗಮ್ಮರನ್ನು ಮಿ|| ಆಗಾಮಹಮ್ಮದ್ ಖಲೀಲ್ ಶಿರಾಜಿಯವರ ಪುತ್ರರಾದ ಮಿ|| ಆಗಾಮಹಮದ್ ಅಮಿನ್‌ರವರಿಗೆ ಕೊಟ್ಟು ಬೆಂಗಳೂರಲ್ಲಿರುವ ಕಾರಲ್‌ಟನ್ ಮಂದಿರದಲ್ಲಿ ಕಳೆದ ಇಪ್ಪತ್ತೊಂದನೆಯ ತಾ|| ನ ದಿವಸ ಸಾಯಂಕಾಲ ಸಮಯದಲ್ಲಿ ಬಹು ಸಂಭ್ರಮದಿಂದ ವಿವಾಹಕಾರ್ಯವು ಜರುಗಿತು. ಈ ವಿವಾಹಮಹೋತ್ಸವಕ್ಕೆ ಶ್ರೀ ಯುವರಾಜರವರೂ, ರೆಸಿಡೆಂಟರೂ, ತಿರುವಾಂಕೂರು ಮತ್ತು ಸೊಂಡೂರಿನ ಮಹಾರಾಜರವರೂ, ಮೈಸೂರು ಸಂಸ್ಥಾನದ ಮುಖ್ಯ ಮುಖ್ಯ ಅಧಿಕಾರಿಗಳೂ ದಯಮಾಡಿಸಿದ್ದರು.

ಸ್ವೀಕಾರ.

ಧಾರವಾಡ ಡಿ|| ಹುಲಗೂರು ನಿವಾಸಿಗಳಾದ ಮ|| ರಾ|| ಸಂಗಪ್ಪ ಅಡಿವೆಪ್ಪ ಅತ್ತೀಗೇರಿ ಇವರಿಗೆ ಬಹು ದಿವಸಗಳಿಂದ ಪುತ್ರರೇ ಇಲ್ಲದೆ ಇದ್ದು ಇವರ ಪ್ರಾರ್ಥನೆಯ ಮೇರೆ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಶೀರ್ವಾದದಿಂದ ಪುತ್ರೋತ್ಸವವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 5 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಶಿವಮೊಗ್ಗ ಡಿ|| ನೇಮತಿ ವಾಸಿಗಳಾದ ಮ|| ರಾ|| ಸಾಗರದ ಹಾಲಪ್ಪನವರ ಪುತ್ರ ಚಿ|| ಸೌ|| ಸಣ್ಣವೀರಮ್ಮನನ್ನು ಮಾದಿಹಳ್ಳಿ ಮ|| ರಾ|| ಹಡಗಲಿ ಸಮಂತ್ರಿ ಶಿವಲಿಂಗಪ್ಪನವರ ಪುತ್ರ ಚಿ|| ಪ್ರಭಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ಸರಾಫ್ ವ್ಯಾಪಾರಿಗಳಾದ ಮ|| ರಾ|| ಎಚ್. ಸಂಪಣ್ಣನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ನಿವಾಸಿಗಳಾದ ಅಸವಾಲ ಹಿರೇಮಠದ ವೇ|| ಶಾಂತಯ್ಯನವರ ಪುತ್ರಿ ಚಿ|| ಬಸವ್ವನು ಲಿಂಗೈಕ್ಯಳಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀ ಷ|| ಬ್ರ|| ಚರಪಟ್ಟಾಧ್ಯಕ್ಷರು ಹನ್ನೆರಡುಮಠ ಇವರ ದ್ವಾರಾ ತಲ್ಪಿರುತ್ತವೆ.

ಶ್ರೀ ಜಗದ್ಗುರು ಕೇದಾರಸಂಸ್ಥಾನದಲ್ಲಿ ಭಡೀ ಕೆಲಸಮಾಡುತ್ತಿದ್ದ ಅಳ್ಳಿಮಹದೇವಪ್ಪನು ಶಿವೈಕ್ಯನಾದ ಸಮಯದಲ್ಲಿ, ಸಮರ್ಪಿಸಿದ 2 ರೂ. ಗಳು ಚಿಕ್ಕಮಣ್ಣೂರು ಶ್ರೀಗಳವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಬಾಣಾವಾರ ಕೊಂಡಜ್ಜಿಮಠದ ವೇ|| ಬಸವಾರಾಧ್ಯರ ಧರ್ಮಪತ್ನಿ ಸೌ|| ಹೈಮಾವತಿ ದೇವಿಯರಿಗೆ ಗರ್ಭಾಷ್ಟದೀಕ್ಷಾಸಂಸ್ಕಾರವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು. ಮ|| ರಾ|| ವಿರೂಪಾಕ್ಷಪ್ಪ ಸಜ್ಜನಶೆಟ್ಟಿ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಸಂ.—

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವೀರಶೈವ ಸನಾತನತ್ವ

ಲೇಖಕ:—ಎಂ. ಡಿ. ಬಸವಪ್ಪ, ಪಂ|| ಕ್ವಾರ್ಟರ್, ಗೌರ್ನಮೆಂಟ್ ಓರಿಯಂಟಲ್ ಲೈಬ್ರೆರಿ, ಮೈಸೂರು.

(ಹಿಂದಿನಿಂದ ಮುಂದುವರಿದುದು)

ವೀರಶೈವ ಗ್ರಂಥಕಾರರಲ್ಲೊಬ್ಬರಾದ ಜ್ಯೋತಿರ್ನಾಥ ಶಿವಾಚಾರ್ಯರು ತಮ್ಮಿಂದ ರಚಿತವಾದ "ಶೈವರತ್ನಾಕರ"ವೆಂಬ ಗ್ರಂಥದ ಪ್ರಥಮಾಧ್ಯಾಯದಲ್ಲಿ—

ಶ್ರೀಮದ್ವೀರಶೈವಾಚಾರನಿರತೈಸ್ತ್ವದೀಕನಿಷ್ಠಾಪರೈಃ ಸದಾಲಿಂಗಸನ್ನಿಹಿತೈಸ್ತು ಲಿಂಗಪಾದೋದಕಪ್ರಸಾದೋಪಭೋಗಸಾಧನೈಃ ಶಿವಭಕ್ತೈಃ ಸಕಲಶ್ರುತಿಸ್ಮೃತೀತಿಹಾಸಾಗಮಪುರಾಣೋಕ್ತಪ್ರಕಾರೇಣ ಶ್ರೀ ನಂದಿನಾಥ ವೀರಕ ವೀರಭದ್ರ ಭೃಂಗಿ ರಿಟಿ ಪುಷ್ಪದಂತಾಂಡಾಭರಣ ರುಂಡಾಭರಣ ದಂಡಪಾಣಿ ಚಂಡೇಶ್ವರ ದಾರುಕ ರೇಣುಕ ವೀರಕರ್ಣ ವಿಜಯಕರ್ಣ ಭೀಮಕರ್ಣ ಶಂಖುಕರ್ಣ (ಘಂಟಾಕರ್ಣ) ಗೋಕರ್ಣ ಸುಕೇತುರುರೂಪಮನ್ಯು ಭೃಗು ದಧೀಚಿ ಗೌತಮಾದಿ ಪ್ರಮಥಗಣೈಃ ಪುರಾತನ ಭಕ್ತಗಣೈಶ್ಚೈವಮನುಷ್ಠಿತತ್ವಾದ್ವಯಮಪಿ ತೇಷಾಂ ಮಾರ್ಗಮೇವಾವಲಂಬ್ಯ ಶ್ರುತ್ಯರ್ಥಯಂತಸ್ತಮೇವಾರ್ಥಂ ತೈರೇವಶ್ಲೋಕೈಸ್ಸಾರಮುದ್ಧೃತ್ಯ ಶ್ರೀ ವೀರಶೈವಮಾರ್ಗಾವಲಂಬಿನಾಂ ಮಾಹೇಶ್ವರಾಣಾಂ ಸುಪ್ರಬೋಧಾಯ ಶೈವರತ್ನಾಕರಂ ವಕ್ಷ್ಯಾಮಃ ||೬೪||

ವೀರಶೈವಾಚಾರನಿರತರೂ, ಯಾವಾಗಲೂ ಲಿಂಗಸನ್ನಿಹಿತರೂ, ಲಿಂಗಪಾದೋದಕ ಪ್ರಸಾದಗಳ ಸೇವನೆಯಲ್ಲಿ ಆಸಕ್ತರೂ, ಶಿವಭಕ್ತರೂ, ಸಕಲ ಶ್ರುತಿ ಸ್ಮೃತಿ ಇತಿಹಾಸ ಪುರಾಣ ಮತ್ತು ಆಗಮಗಳಲ್ಲಿ ಹೇಳಲ್ಪಟ್ಟಿರುವವರೂ ಆದ ಶ್ರೀ ನಂದಿನಾಥ, ವೀರಕ, ವೀರಭದ್ರ, ಭೃಂಗಿರಿಟಿ, ಪುಷ್ಪದಂತ, ಅಂಡಾಭರಣ, ರುಂಡಾಭರಣ, ದಂಡಪಾಣಿ, ಚಂಡೇಶ್ವರ, ದಾರುಕ, ರೇಣುಕ, ವೀರಕರ್ಣ, ವಿಜಯಕರ್ಣ, ಭೀಮಕರ್ಣ, ಶಂಖುಕರ್ಣ ಅಥವಾ ಘಂಟಾಕರ್ಣ, ಗೋಕರ್ಣ, ಸುಕೇತು, ರುರು, ಉಪಮನ್ಯು, ಭೃಗು, ದಧೀಚಿ, ಗೌತಮ ಮೊದಲಾದ ಪ್ರಮಥಪುಂಗವರಿಂದಲೂ, ಪುರಾತನ ಭಕ್ತಸಮೂಹದಿಂದಲೂ ಅನುಷ್ಠಿಸಲ್ಪಟ್ಟಿರುವುದರಿಂದ ನಾವುಗಳೂ ಆ ಮಹಾತ್ಮರ ಮಾರ್ಗವನ್ನೇ ಅವಲಂಬಿಸಿ ಆಯಾಯ ಶ್ರುತಿ, ಸ್ಮೃತಿ, ಪುರಾಣಾಗಮಗಳಲ್ಲಿರುವ ವಿಷಯಗಳನ್ನು ಅವುಗಳಲ್ಲಿ ಹೇಳಲ್ಪಟ್ಟಿರುವ ಶ್ಲೋಕಗಳಿಂದಲೇ ಸಾರವನ್ನು ಗ್ರಹಿಸಿ ವೀರಶೈವ ಮಾರ್ಗಾವಲಂಬಿಗಳಾದ ಮಾಹೇಶ್ವರರ ಬೋಧನಾರ್ಥವಾಗಿ ಶೈವರತ್ನಾಕರವನ್ನು ಹೇಳುತ್ತೇವೆ" ಎಂದು ಉಲ್ಲೇಖಿಸಿರುತ್ತಾರೆ. ಇದರಿಂದ ಮೇಲೆ ಉಕ್ತರಾದ ನಂದ್ಯಾದಿ ಗೌತಮಾಂತರಾದ ಸಕಲ ಮಹಿಮರೂ ವೀರಶೈವ ಮಾರ್ಗಾವಲಂಬಿಗಳಾಗಿದ್ದರೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಹಾಗೂ ವೀರಶೈವರು ಜಾತಕರ್ಮ ದೀಕ್ಷಾಲಿಂಗಧಾರಣಾದಿ ಷೋಡಶಕರ್ಮಗಳನ್ನು ನೆರವೇರಿಸುವಾಗ ನಾಂದಿಸಮಾರಾಧನಾಸಂದರ್ಭದಲ್ಲಿ ಮೇಲೆ ಹೇಳಿದ ಪ್ರಮಥಗಣವನ್ನು ಆವಾಹಿಸಿ ಷೋಡಶೋಪಚಾರಗಳಿಂದ ಪೂಜಿಸುವ ವಿಷಯವು ಪ್ರಯೋಗಗ್ರಂಥಗಳಲ್ಲಿರುವದಲ್ಲದೆ ರೂಢಿಯಲ್ಲಿಯೂ ಇರುವುದು. ಈ ಮಹಾತ್ಮರ ವಿಷಯವು ಶಿವಪುರಾಣಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಇವರಲ್ಲಿ ಅನೇಕರು ತಮ್ಮ ಯೋಗಬಲದಿಂದ ಅನೇಕ ಮಹಿಮೆಗಳನ್ನು ತೋರಿಸಿ ತಮ್ಮ ಸಿದ್ಧಾಂತವನ್ನು ಜಗತ್ತಿಗೆಲ್ಲ ಹರಡಿ ಯೋಗಾಚಾರ್ಯರೆಂಬ ಹೆಸರಿನಿಂದ ವಿಖ್ಯಾತರಾಗಿರುತ್ತಾರೆ.

ಸಮಸ್ತ ಜಗತ್ತಿನ ಸೃಷ್ಟಿ ಸ್ಥಿತಿಲಯಗಳ ಕರ್ತನೂ ಅನಾದಿಮೂರ್ತಿಯೂ ಆದ ಪರಶಿವನು ಪ್ರತಿಯೊಂದು ಕಲ್ಪದ ಆದಿಯಲ್ಲಿ ಧರ್ಮ ಸಂರಕ್ಷಣಾರ್ಥವಾಗಿ ಯೋಗಾಚಾರ್ಯರ ರೂಪದಿಂದ ಅವತರಿಸಿ ಆಯಾಯಮನ್ವಂತರಗಳಲ್ಲಿ ಪ್ರಸಿದ್ಧರಾದ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸಿರುವ ವಿಷಯವು ಸ್ಕಾಂದಲೈಂಗ್ಯ ಶಿವಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ.

ಸ್ಕಾಂದಪುರಾಣಾಂತರ್ಗತ ಕೌಮಾರಿಕಾಖಂಡದ ಯೋಗಾಚಾರ್ಯ ಮಹಿಮಾವರ್ಣನನಾಮಕ ೪೦ ನೆಯ ಅಧ್ಯಾಯದಲ್ಲಿ—

ಆದ್ಯೋಶ್ವೇತಃ ಕಲೌರುದ್ರಃ ಸುತಾರಸ್ತಾರಣಸ್ತಥಾ | ಸುಹೋತ್ರಃ ಕಂಕಣಶ್ಚೈವ ಲೋಕಾಕ್ಷಿಶ್ಚ ಮಹಾಮುನಿಃ ||೨೧೨|| ಜೈಗೀಷವ್ಯೋಮಹಾತೇಜಾ ಭಗವಾನ್ ದಧಿವಾಹನಃ | **ಋಷಭಶ್ಚ** ಮುನಿರ್ಧೀಮಾನ್ ಉಗ್ರಶ್ಚಾತ್ರಿಸ್ಸುಬಾಲಕಃ ||೨೧೩|| **ಗೌತಮೋ** ವೇದಶೀರ್ಷಶ್ಚ **ಗೋಕರ್ಣ**ಶ್ಚ ಶಿಖಂಡಿಭೃತ್ | ಗುಹಾವಾಸೀ ಜಟಾಮಾಸೀ ಅಟ್ಟಹಾಸಶ್ಚ **ದಾರುಕಃ** ||೨೧೪|| ಲಾಂಗಲೀ ನಂಯಥಿವಾ ಶೂಲೀ ದಂಡೀ ಮುಂಡೀಶ್ವರಸ್ಸ್ವಯಮ್ | ಸಹಿಷ್ಣುಸ್ಸೋಮಶರ್ಮಾಚ ನಕುಲೀಶೋ ಜಗದ್ಗುರುಃ ||೨೧೫|| ಕಾಯಾವರೋಹಣೋ ಭಾವೀತ್ಯಾದ್ಯಾಯೋಗೇಶ್ವರಾಃ ಕ್ರಮಾತ್ | ಏತೇ ಸಂಕ್ಷಿಪ್ಯ ವಕ್ಷ್ಯಂತಿ ಶಿವಧರ್ಮಂ ಯುಗೇ ಯುಗೇ ||೨೧೬||

ಪರಮಾತ್ಮನು ಶ್ವೇತ, ಸುತಾರ, ತಾರಣ, ಸುಹೋತ್ರ, ಕಂಕಣ, ಕಂಕ, ಲೋಕಾಕ್ಷಿ, ಜೈಗೀಷವ್ಯ, ದಧಿವಾಹನ, ಋಷಭ, ಉಗ್ರ, ಅತ್ರಿ, ಸುಬಾಲಕ, ಗೌತಮ, ವೇದಶೀರ್ಷ, ಗೋಕರ್ಣ, ಗುಹಾವಾಸಿ, ಶಿಖಂಡಿಭೃತ್, ಜಟಾಮಾಸಿ ಅಟ್ಟಹಾಸ, ದಾರುಕ, ಲಾಂಗಲಿ, ಶೂಲಿ ದಂಡಿ ಮುಂಡೀಶ್ವರ, ಸಹಿಷ್ಣು, ಸೋಮಶರ್ಮ, ನಕುಲೀಶ ಎಂಬ ೨೮ ರೂಪದಿಂದ ಅವತರಿಸಿ ಪ್ರತಿಯೊಂದು ಅವತಾರದಲ್ಲಿಯೂ ನಾಲ್ವರು ಮುನಿಪುಂಗವರಿಗೆ ಶಿವತತ್ವವನ್ನು ಪದೇಶಿಸಿರುತ್ತಾನೆ. ಈ ಯೋಗಾಚಾರ್ಯರಲ್ಲಿ **ಋಷಭ, ಗೌತಮ**ರೆಂಬವರೂ ವೀರಶೈವ ಮಹರ್ಷಿಗಳಾಗಿಯೂ **ಗೋಕರ್ಣ, ದಾರುಕ**ರೆಂಬವರೂ ವೀರಶೈವಮತಸ್ಥಾಪನಾಚಾರ್ಯರಾಗಿಯೂ ಇರುತ್ತಾರೆ. ಇವರಲ್ಲಿ ಋಷಭಾಚಾರ್ಯರಿಗೆ ಪರಾಶರ, ಗರ್ಗ, ಭಾರ್ಗವ, ಅಂಗಿರಸ ಎಂಬ ನಾಲ್ವರು ಶಿಷ್ಯರೂ, ಗೌತಮಾಚಾರ್ಯರಿಗೆ ಅತ್ರಿ, ದವಶದ, ಶ್ರವಣ, ಶ್ರವಿಷ್ಟ ಎಂಬ ನಾಲ್ವರು ಶಿಷ್ಯರೂ, ಗೋಕರ್ಣಾಚಾರ್ಯರಿಗೆ ಕಾಶ್ಯಪ, ಉಶನಾ, ಚ್ಯವನ, ಬೃಹಸ್ಪತಿ ಎಂಬ ನಾಲ್ವರು ಶಿಷ್ಯರೂ, ದಾರುಕಾಚಾರ್ಯರಿಗೆ ಪ್ಲಕ್ಷ, ದಾರ್ಭಾಯಣಿ, ಕೇತುಮಾನ್, ಗೌತಮ ಎಂಬ ನಾಲ್ವರು ಶಿಷ್ಯರೂ ಇದ್ದರೆಂದು ಶಿವಪುರಾಣದ ಈ ಕೆಳಗೆ ಉದಾಹೃತಗಳಾದ ಶ್ಲೋಕಗಳಿಂದ ತಿಳಿದುಬರುತ್ತದೆ.

ತದಾಪ್ಯಹಂ ಭವಿಷ್ಯಾಮಿ ಋಷಭೋನಾಮನಾಮತಃ | ತತ್ರಾಪಿಮಮತೇಪುತ್ರಾಃ ಭವಿಷ್ಯಂತಿಮಹೌಜಸಃ ||೪೪|| ಪರಾಶರಶ್ಚ ಗರ್ಗಶ್ಚ ಭಾರ್ಗವಾಂಗಿರಸೋ ತದಾ | ಭವಿಷ್ಯಂತಿ ಮಹಾತ್ಮಾನೋಬ್ರಾಹ್ಮಣಾವೇದಪಾರಗಾಃ ||

ಲಿಂಗಪುರಾಣ ಪೂರ್ವಭಾಗ ೨೪ ನೆಯ ಅಧ್ಯಾಯ.

ಯದಾವ್ಯಾಸಸ್ತು ರಕ್ಷಾಖ್ಯಃ ಪರ್ಯಾಯೇತು ಚತುರ್ದಶೇ | ವಂಶ ಆಂಗೀರಸೇ ತತ್ರ ಭವಿತಾಹಂಚ ಗೌತಮಃ ||೧೦|| ತತ್ರಾಪಿ ಮಮತೇ ಪುತ್ರಾ ಭವಿಷ್ಯಂತಿ ಕಲೌ ತದಾ | ಅತ್ರಿರ್ದಶವದಶ್ಚೈವಶ್ರವಣೋಥಶ್ರವಿಷ್ಟಕಃ ||೧೧||

ತದಾಯೋಗಪ್ರದಾನಾಯ ಗೋಕರ್ಣೋ ಭವಿತಾಹ್ಯಯಮ್ ||೧೫|| ತತ್ರೈವ ಚ ಸುಪುಣ್ಯಂಚ ಗೋಕರ್ಣಂನಾಮತದ್ವನಮ್ | ತತ್ರಾಪಿಯೋಗಿನಃ ಪುತ್ರಾ ಭವಿಷ್ಯಂತ್ಯಂಬುಸಂಮಿತಾಃ ||೧೬|| ಕಶ್ಯಪೋಹ್ಯುಶನಶ್ಚೈವ ಚ್ಯವನೋಽಥ ಬೃಹಸ್ಪತಿಃ | ತೇಪಿತೇನೈವ ಮಾರ್ಗೇಣ ಗಮಿಷ್ಯಂತಿ ಶಿವಾಲಯಂ ||೧೭||

ಏಕವಿಂಶೇಯುಗೇ ತಸ್ಮಿನ್ ವ್ಯಾಸೋವಾಚ ಶ್ರವಾಯದಾ | ತದಾಹಂದಾರುಕೋನಾಮತಸ್ಮಾದ್ಧಾರುವನಂಶುಭಮ್ ||೨೮|| ತತ್ರಾಪಿ ಮಮತೇ ಪುತ್ರಾ ಭವಿಷ್ಯಂತಿ ಸುಯೋಗಿನಃ ಪ್ಲಕ್ಷೋದಾರ್ಭಾಯಣಿಶ್ಚೈವ ಕೇತುಮಾನ್ ಗೌತಮಸ್ತಥಾ ||೨೯||

ಶಿವಪುರಾಣ ಶತರುದ್ರಸಂಹಿತಾ 5 ನೆಯ ಅಧ್ಯಾಯ.

ಏತೇ ಪಾಶುಪತಾಃ ಶಿಷ್ಯಾ ಭಸ್ಮೋದ್ಧೂಲಿತವಿಗ್ರಹಾಃ | ರುದ್ರಾಕ್ಷಮಾಲಾಭರಣಾಃ ತ್ರಿಪುಂಡ್ರಾಂಕಿತಮಸ್ತಕಾಃ ||೫೪|| ಶಿಷ್ಯಾ ಧರ್ಮರತಾಸ್ಸರ್ವೇ ವೇದವೇದಾಂಗಪಾರಗಾಃ | ಲಿಂಗಾರ್ಚನರತಾ ನಿತ್ಯಂ ಬಾಹ್ಯಾಭ್ಯಂತರತಸ್ಥಿತಾಃ ||೫೫|| ಭಕ್ತ್ಯಾ ಮಯಿಚ ಯೋಗೇನ ಧ್ಯಾನನಿಷ್ಠಾ ಜಿತೇಂದ್ರಿಯಾಃ | ಸಂಖ್ಯಯಾ ದ್ವಾದಶಾಧಿಕ್ಯ ಶತಂಚ ಗುಣಿತಾಬುಧೈಃ ||೫೬||

ಪರಮಾತ್ಮನ ಶಿಷ್ಯರಾದ ಇವರು ಪಾಶುಪತರೂ, ಭಸ್ಮೋದ್ಧೂಲಿತ ವಿಗ್ರಹರೂ, ರುದ್ರಾಕ್ಷ ತ್ರಿಪುಂಡ್ರಧಾರಿಗಳೂ, ಶಿವಧರ್ಮಾಸಕ್ತರೂ, ವೇದವೇದಾಂಗ ಪಾರಂಗತರೂ, ಪ್ರತಿನಿತ್ಯವೂ ಶರೀರದ ಒಳಗೂ ಹೊರಗೂ ಇರುವ ಪ್ರಾಣಲಿಂಗ ಇಷ್ಟಲಿಂಗಗಳ ಅರ್ಚನೆಯಲ್ಲಿ ಆಸಕ್ತರೂ, ಧ್ಯಾನನಿಷ್ಠರೂ, ಜಿತೇಂದ್ರಿಯರೂ ಆಗಿದ್ದರೆಂದು ಉಕ್ತವಾಗಿದೆ.

ಸ್ಕಾಂದಪುರಾಣಾಂತರ್ಗತ ಶಂಕರಸಂಹಿತೆಯ ೮೫ ನೆಯ ಅಧ್ಯಾಯದಲ್ಲಿ ಉಕ್ತವಾಗಿರುವ ಪಿಂಗಳನ ಕಥೆಯಲ್ಲಿ ಭರತಖಂಡದಲ್ಲಿರತಕ್ಕ ಪ್ರಸಿದ್ಧ ಶಿವಕ್ಷೇತ್ರಗಳಲ್ಲೊಂದಾದ ಶ್ರೀ ಶೈಲಕ್ಷೇತ್ರದಲ್ಲಿ ವೀರಶೈವಮತಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ಧೇನುಕರ್ಣಾಚಾರ್ಯರಿಂದ ಸ್ಥಾಪಿತವಾದ ಸೂರ್ಯಸಿಂಹಾಸನಮಠದಲ್ಲಿ **ಸದಾನಂದ ಶಿವಾಚಾರ್ಯ**ರೆಂಬವರು ಗುರುಗಳಾಗಿದ್ದರೆಂದೂ ಉಕ್ತವಾಗಿದೆ. ಆ ಕಥೆಯಲ್ಲಿ—ಕುಶಸ್ಥಲವೆಂಬ ಪಟ್ಟಣದಲ್ಲಿ ವೇದವೇದಾಂಗ ಪಾರಂಗತನೂ, ಶಿವಪೂಜಾಪರಾಯಣನೂ, ಪ್ರಾಣಲಿಂಗಾಂಗ ಸಂಬಂಧಿಯೂ, ಶಿವಭಕ್ತಾರ್ಚನಪ್ರಿಯನೂ ಆದ **ಶ್ವೇತ**ನೆಂಬ ಬ್ರಾಹ್ಮಣೋತ್ತಮನಿಗೆ ಕೇವಲ ದುರಾಚಾರಿಯೂ ಶಿವಪೂಜಾವಿಮುಖನೂ, ಗುರುದೇವತೆಗಳ ನಿಂದಕನೂ ಅವಹೇಳನ ಮಾಡುವುದರಲ್ಲಿಯೂ ಶಿವಭಕ್ತರನ್ನು ಹಿಂಸಿಸುವುದರಲ್ಲಿಯೂ ಆಸಕ್ತನೂ, ಅತ್ಯಂತ ಮೂರ್ಖನೂ ಆದ **ಪಿಂಗಳ**ನೆಂಬ ಓರ್ವ ಪುತ್ರನಿದ್ದನೆಂದೂ ಆ ದುಷ್ಟನಿಗೆ ತಂದೆಯು ಎಷ್ಟು ವಿಧದಿಂದ ಧರ್ಮೋಪದೇಶವನ್ನು ಮಾಡಿದರೂ ಕೇಳದೆ ಕೇವಲ ದುರಾಚಾರದುಷ್ಕೃತ್ಯಗಳಲ್ಲೇ ಆಸಕ್ತನಾಗಿದ್ದು ಕೊನೆಗೆ ತನ್ನ ದುರಾಚಾರದ ಫಲವಾಗಿ "ಅತ್ಯುತ್ಕಟೈಃ ಪುಣ್ಯಪಾಪೈರಿಹೈವಫಲಮಶ್ನುತೆ" ಎಂಬ ಉಕ್ತಿಗನುಸಾರವಾಗಿ ಅತ್ಯಂತ ಕ್ರೂರವಾದ ವ್ಯಾಧಿಯಿಂದ ಪೀಡಿತನಾಗಿ ಸಂಕಟಪಡುತ್ತಿರುವ ಸಮಯದಲ್ಲಿ ಪುತ್ರವಾತ್ಸಲ್ಯಶೀಲನಾದ ಶ್ವೇತನು ತನ್ನ ಮಿತ್ರನಾದ ಹರಪ್ರಿಯನೆಂಬ ಲಿಂಗಿಬ್ರಾಹ್ಮಣನನ್ನು ಕಂಡು ತನ್ನ ಮಗನ ದುಷ್ಟಗುಣಗಳನ್ನೂ ಅದರ ಫಲವಾಗಿ ಅವನು ಅನುಭವಿಸುತ್ತಿರುವ ಭಯಂಕರ ರೋಗಗಳನ್ನೂ ತಿಳುಹಿಸಿ ತನ್ನ ಮಗನನ್ನು ಸನ್ಮಾರ್ಗಕ್ಕೆ ತರುವ ಉಪಾಯವನ್ನು ತಿಳುಹಿಸೆಂದು ಕೇಳಲು ಆಗ್ಗೆ ಹರಪ್ರಿಯನು ಕೇವಲ ಶಿವದ್ರೋಹದಿಂದ ಪ್ರಾಪ್ತವಾಗಿರುವ ವ್ಯಾಧಿಯು ಶಿವಯೋಗಿಗಳ ಅನುಗ್ರಹಾಶೀರ್ವಾದಗಳಿಂದ ಗುಣವಾಗಬೇಕಲ್ಲದೆ ಮತ್ತಾವ ಕಾರಣದಿಂದಲೂ ಗುಣವಾಗುವಂತಿಲ್ಲವೆಂದೂ ಅಂತಹ ಶಿವಯೋಗಿಯು ದ್ವಾದಶಜ್ಯೋತಿರ್ಲಿಂಗಗಳಲ್ಲೊಂದಾದ ಶ್ರೀ ಮಲ್ಲಿಕಾರ್ಜುನ ಲಿಂಗದ ನಿವಾಸಸ್ಥಳವಾಗಿಯೂ, ಪೂರ್ವದಲ್ಲಿ ಶಿವಜ್ಞಾನಪ್ರಾಪ್ತಿಗೋಸ್ಕರ ನಾರಾಯಣನಿಂದಲೂ, ಬ್ರಹ್ಮನಿಂದಲೂ ತಪಸ್ಸು ಮಾಡಲ್ಪಟ್ಟ ಪವಿತ್ರಕ್ಷೇತ್ರವಾಗಿಯೂ, ದರ್ಶನಮಾತ್ರದಿಂದಲೇ ಸಕಲ ಪ್ರಾಣಿಗಳ ಪಾಪವನ್ನು ನಾಶಗೊಳಿಸಿ ಶಾಶ್ವತವಾದ ಮೋಕ್ಷಪದವಿಯನ್ನು ಕೊಡತಕ್ಕುದಾಗಿಯೂ ಇರುವ,

"ತಸ್ಮಿಂಚ್ಛ್ರೀ ಪರ್ವತೇಪುಣ್ಯೇ ಸಂಸಾರಾಮಯಭೇಷಜೇ | ಆಸ್ತೇ ಲಿಂಗಾಂಗಸಂಬಂಧೀ ಸದಾನಂದಾಹ್ವಯೋಮುನಿಃ ||೯೧|| ಸರ್ವೋಪನಿಷದರ್ಥಜ್ಞಃ ಶಿವಧ್ಯಾನಪರಾಯಣಃ | ಭಸ್ಮಾವಲಿಪ್ತಸರ್ವಾಂಗೋ ರುದ್ರಾಧ್ಯಾಯಜಪಾಶ್ರಿಯಃ ||೯೨|| ರುದ್ರಾಕ್ಷಮಾಲಾಭರಣೋ ಧೃತಪಾಶುಪತವ್ರತಃ | ಅತಿವರ್ಣಾಶ್ರಮಿಯೋಗೀ ಜೀವನ್ಮುಕ್ತೋ ಜಗದ್ಗುರುಃ ||೯೩|| ತಂ ಸದಾನಂದನಾಮಾನಂ ಶಂಕರಧ್ಯಾನಲಾಲಸಂ | ಸದಾ ನಿರಸ್ತಕುಹಕಂ ವಿಪ್ರ ಸಹ ಪುತ್ರೇಣಪೂಜಯ ||೯೪|| ತಸ್ಯಪ್ರಸಾದಾತ್ತೇ ಪುತ್ರೋ ಗಚ್ಛೇನ್ನೀರೋಗತಾಂ ಧ್ರುವಮ್ | ತಸ್ಮಾದುತ್ತಿಷ್ಠ ಗಚ್ಛತ್ವಂ ಶ್ರೀ ಪರ್ವತಮತಂದ್ರಿತಃ ||೯೫||

ಆ ಶ್ರೀಶೈಲಕ್ಷೇತ್ರದಲ್ಲಿ ಲಿಂಗಾಂಗಸಂಬಂಧಿಯೂ, ಸಕಲೋಪನಿಷತ್ತುಗಳ ಅರ್ಥವನ್ನು ತಿಳಿದವನೂ, ಶಿವಧ್ಯಾನಪರಾಯಣನೂ, ಭಸ್ಮದಿಂದ ಲಿಪ್ತನಾದ ಸರ್ವಾಂಗಗಳುಳ್ಳವನೂ ರುದ್ರಾಧ್ಯಾಯಪರಾಯಣನೂ, ರುದ್ರಾಕ್ಷಮಾಲಾಭರಣನೂ, ಪಾಶುಪತವ್ರತಾಸಕ್ತನೂ, ಅತಿ ವರ್ಣಾಶ್ರಮಿಯೂ ಜೀವನ್ಮುಕ್ತನೂ, ಜಗದ್ಗುರುಪದಾಸ್ಪದನೂ ಆದ **ಸದಾನಂದ**ನೆಂಬ ಶಿವಯೋಗೀಶ್ವರನು ವಾಸವಾಗಿರುತ್ತಾನೆ. ಆ ಮುನಿಪುಂಗವನನ್ನು ನೀನು ನಿನ್ನ ಪುತ್ರನೊಡನೆ ಪೂಜಿಸು. ಆ ಮಹಿಮನ ಅನುಗ್ರಹದಿಂದ ನಿನ್ನ ಮಗನು ರೋಗದಿಂದ ಬಿಡುಗಡೆಯನ್ನು ಹೊಂದುತ್ತಾನೆಂದು ಉಪದೇಶಿಸಿದನೆಂದೂ ಅನಂತರ ಶ್ವೇತನು ಹರಪ್ರಿಯನ ಉಪದೇಶದಂತೆ ಸದಾನಂದ ಶಿವಾಚಾರ್ಯರನ್ನು ಪೂಜಿಸಲು ಪಿಂಗಳನಿಗೆ ಪ್ರಾಪ್ತವಾಗಿದ್ದ ಭಯಂಕರವ್ಯಾಧಿಯು ಗುಣವಾದುದಲ್ಲದೆ ಆ ಶಿವಯೋಗೀಶ್ವರರ ಉಪದೇಶದಿಂದ ಪಿಂಗಳನು ದಿವ್ಯಜ್ಞಾನಿಯಾದನೆಂದೂ ಉಕ್ತವಾಗಿದೆ.

ಆದುದರಿಂದ ಪುರಾಣಕರ್ತರಾದ ವ್ಯಾಸಮಹರ್ಷಿಗಳ ಕಾಲದಲ್ಲಿ ವೀರಶೈವ ಮತವು ಅತ್ಯಂತಪೂಜ್ಯವಾಗಿ ಪರಿಗಣಿಸಲ್ಪಟ್ಟಿದ್ದುದಲ್ಲದೆ ಆಚಾರ್ಯಪೀಠಗಳು ಅತ್ಯಂತ ಮಹಿಮಾಶಾಲಿಗಳಾದ ಗುರುಪುಂಗವರಿಂದ ವಿರಾಜಿಸುತ್ತಿದ್ದವೆಂದೂ ಪೀಠಾಚಾರ್ಯರೇ ಜಗದ್ಗುರುಗಳಾಗಿ ಮೆರೆಯುತ್ತಿದ್ದರೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ.

(ಸಶೇಷ.)

ದುಃಖವಾರ್ತೆ.

ಶ್ರೀ ಜಗದ್ಗುರು ಕೇದಾರಸಂಸ್ಥಾನದಲ್ಲಿ ಈಗ ೮-೧೦ ವರ್ಷಗಳಿಂದ ಚಿಕ್ಕ ಕೆಲಸದಲ್ಲಿದ್ದು ಗುರುಸೇವಾತತ್ಪರರಾಗಿದ್ದ ಸಿಂಧನೂರು ತಾಲೂಕು ಚನ್ನಳ್ಳಿ ಗ್ರಾಮದ ಅಳ್ಳಿ ಮಹಾದೇವಪ್ಪನೆಂಬ ಸದ್ಭಕ್ತನು ಇದೇ ಶ್ರಾವಣ ಬ|| ೭ ಶ|| ೧೬-೮-೩೦ ನೆಯ ಶನಿವಾರ ಪ್ರಾತಃಕಾಲಕ್ಕೆ ಶಿವನಾಮವನ್ನು ಸ್ಮರಿಸುತ್ತ ಗದಗ ತಾಲೂಕು ಪೈಕಿ ಲಕ್ಕುಂಡಿ ಗ್ರಾಮದಲ್ಲಿ ಶಿವಾಧೀನನಾದನು. ಇಲ್ಲಿಯ ಪ್ರಮುಖರಾದ ವೇ|| ವೀರಯ್ಯನವರು ಹಿರೇಮಠ, ಪೋಲೀಸ್ ಪಾಟೀಲ ಬಸವನಗೌಡರು, ಕಣವಿಹಳ್ಳಿ ಬಸಪ್ಪನವರು ಸಂಸ್ಥಾನದ ಯಾವತ್ತೂ ಸಿಬ್ಬಂದಿಯೂ ಕೂಡಿ ಸಿಂಹ ಅಂತ್ಯೇಷ್ಟಿಯ ಕಾರ್ಯವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಈತನು ಪ್ರಾಣಬಿಟ್ಟ ಕೂಡಲೆ ಸಂಸ್ಥಾನದ ಅವಾತ್ಯರಾದ ಚಿಕ್ಕಮಣ್ಣೂರು ಶ್ರೀಗಳು ಹಾಗೂ ಸಂಸ್ಥಾನದ ಮುನಷಿ ಹೆಚ್. ಎಂ. ಕೊಟ್ರಾರಾಧ್ಯರು ಸಂಸ್ಥಾನದ ಯಾವತ್ತೂ ದರ್ಬಾರ ಕಾರ್ಯಗಳನ್ನು ತಟಸ್ಥಮಾಡಿದರು. ಸದರಿ ಭಕ್ತಶ್ರೇಷ್ಠನ ಆತ್ಮಕ್ಕೆ ಶ್ರೀ ಜಗದ್ಗುರು ಪಂಚಾಚಾರ್ಯರು ಶಾಂತಿಯನ್ನೀಯಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ.

ಕೊಪ್ಪಳ ಜಿಲ್ಲೆಯ ಶಿಕ್ಷಕರೇ ಇತ್ತ ಗಮನಿಸುವಿರೇನು?

ಮಹಾಶಯರೇ! ಏದ್‌ಮತ್ ಸೇಠ್ ಅಲೀಜನಾಬ ನವಾಬ ಸಾಲಾರ ಜಂಗ ಬಹದ್ದೂರರವರು ಪ್ರಜೆಗಳು ವಿದ್ಯಾವಂತರಾಗಿ ಗೌರವವನ್ನು ಪಡೆಯಲೆಂಬ ಸದುದ್ದೇಶದಿಂದ ಅನೇಕ ಸ್ಕೂಲುಗಳು ಮಿಡ್ಲ ಸ್ಕೂಲುಗಳನ್ನು ಸ್ಥಾಪಿಸಿರುವರು. ಆದಕಾರಣ ಈ ನಮ್ಮ ಪ್ರಭುಗಳನ್ನು ಎಷ್ಟು ಅಭಿನಂದಿಸಿದರೂ ತೀರದಾಗಿದೆ. ಆದರೆ ಈ ನಮ್ಮ ಪ್ರಭುಗಳ ಸದುದ್ದೇಶವು ಒಳ್ಳೇ ಊರ್ಜಿತಾವಸ್ಥೆಗೆ ಬರಬೇಕಾದರೆ ಒಳ್ಳೇ ತಳಹದಿಯಿಂದ ಈಗಿನಕ್ಕಿಂತಲೂ ಹೆಚ್ಚಿನ ತರಗತಿಯ ಶಿಕ್ಷಣಕಾರ್ಯವನ್ನು ಕೈಕೊಳ್ಳಬೇಕಾದುದು ಶಿಕ್ಷಕರ ಆದ್ಯ ಕರ್ತವ್ಯವಾಗಿರುವದು. ಶಿಕ್ಷಕರೇ, ಈಗ ದೊರೆಯುತಕ್ಕ ಪಗಾರದಿಂದ ಹೊಟ್ಟೆಬಟ್ಟೆಗಳಿಗೂ ಸಹ ಸಾಕಾಗುವದಿಲ್ಲೆಂದೂ, ಒಂದು ವೇಳೆ ಬೇನೆಬಿದ್ದರಂತೂ ಸಂಕಟದಲ್ಲಿ ಬೀಳಬೇಕಾಗುತ್ತದೆಂದೂ ಅಭಿಪ್ರಾಯಪಟ್ಟು ನೀವು ಹೆಚ್ಚಿನ ಪಗಾರವನ್ನು ಪಡೆಯಬೇಕೆಂದು ಇಚ್ಛಿಸಿ ಸಂದುಗೊಂದಿಗಳಲ್ಲಿ ಗುಣುಗುಟ್ಟುತ್ತಿರುವಿರಷ್ಟೇ? ಇಷ್ಟೇಕೆ ನಿಮಗೆ ಆಧೈರ್ಯವು? ನಮ್ಮನ್ನು ಮಕ್ಕಳಂತೆ ಜೋಪಾನಮಾಡುವ ಪ್ರಭುವು ಅಸಾಧಾರಣವಾದ ವಿದ್ಯಾರೂಪ ಮಹತ್ಕಾರ್ಯವನ್ನು ಕೈಕೊಂಡಿರುವಾಗ, ಕೀರ್ತನಕೇಸರಿ ಇತ್ಯಾದಿ ಬಿರುದಾಂಕಿತರಾದ ಜನಾಬಜಯ ರಾಮಾಚಾರ್ಯರೇ ನಾಜರ ಸಾಹೇಬರಂತಿರುವಾಗ ನೀವು ಧೈರ್ಯಬಿಡುವ ಕಾರಣವಿಲ್ಲ. ನಾವು ಹೆಚ್ಚಿನ ಪಗಾರವನ್ನು ಇತರ ಅನುಕೂಲಾದಿಗಳನ್ನೂ ಹೊಂದಬೇಕಾದರೆ ಒಂದು ಸುಲಭಮಾರ್ಗವನ್ನು ಕೈಕೊಳ್ಳಬೇಕಾಗುತ್ತದೆ. ಸಮಸ್ತ ಶಿಕ್ಷಕರೆಲ್ಲರೂ ಒಕ್ಕಟ್ಟಿಗೆ ಮಿಳಿತರಾಗಿ ಒಮ್ಮನಸ್ಸಿನಿಂದ ಶಿಕ್ಷಕರ ಹಿತದ ಸಲುವಾಗಿ ಯೋಗ್ಯ ಠರಾವುಗಳನ್ನು ಮಾಡಿ ಅವುಗಳನ್ನು ಪೂರೈಸಿಕೊಡುವ ಬಗ್ಗೆ ಪ್ರಭುಗಳ ಸನ್ನಿಧಿಯಲ್ಲಿ ಪ್ರಾರ್ಥಿಸಿಕೊಳ್ಳೋಣ! ಇದೇ ಶಿಕ್ಷಕರಿಗೆ ಸುಲಭವಾದ ಮಾರ್ಗವು; ಸರ್ವಶಿಕ್ಷಕರಲ್ಲಿ ಒಕ್ಕಟ್ಟಿಗೆ ಕೊಡುವ ಒಕ್ಕಟ್ಟಿನ ಬೀಜಾಂಕುರವು ಉದಯಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಓರ್ವ ಶಿಕ್ಷಕ.

ಹೊಸ ಯಡತೊರೆ ಟೌನಿಗೆ ದಿವಾನಸಾಹೇಬರವರ ಆಗಮನ.

ಸಾಹುಕಾರ್ ಬಿ. ಸಿದ್ಧಲಿಂಗಶೆಟ್ಟರ ನೂತನಗೃಹದಲ್ಲಿ ನಡೆದ ಆತಿಥ್ಯ.

ಈ ಮಾಹೆ 16 ನೇ ಶನಿವಾರ ಬೆಳಗ್ಗೆ 10½ ಗಂಟೆಗೆ ಯಡತೊರೆ ಹೊಸ ಟೌನಿಗೆ ನಮ್ಮ ದಿವಾನ್ ಸಾಹೇಬರವರು ಪ್ರೈವೇಟ್ ಸೆಕ್ರೆಟರಿಯವರು, ಮಿ|| ಕ್ರಂಬಿಗಲ್ ಸಾಹೇಬರವರು, ಡೆಪ್ಯುಟಿ ಕಮಿಷನರ್ ಸಾಹೇಬರವರು, ಸೊಸೈಟಿ ರಿಜಿಸ್ಟ್ರಾರವರು, ಅಸಿಸ್ಟೆಂಟ್ ರಿಜಿಸ್ಟ್ರಾರವರು, ಡಿ|| ಬೋರ್ಡು ಪ್ರೆಸಿಡೆಂಟರವರು, ಸಬ್‌ಡಿವಿಜನ್ ಸಾಹೇಬರವರು, ಇನ್ನೂ ಮೊದಲಾದ ಸರ್ಕಾರೀ ಅಧಿಕಾರಿಗಳು ಮತ್ತು ಖಾಸಗಿ ದೊಡ್ಡ ಮನುಷ್ಯರುಗಳಾದ ಮಿ|| ಮಹಮ್ಮದ್ ಸೇಟರವರು, ಮ|| ಎಂ. ವೆಂಕಟಕೃಷ್ಣಯ್ಯನವರು, ಮಿ|| ಹೆಚ್. ಸಿ. ದಾಸಪ್ಪನವರು ಇನ್ನೂ ಅನೇಕ ದೊಡ್ಡ ಮನುಷ್ಯರುಗಳೊಡನೆ ದಯಮಾಡಿಸಿದರು. ಹೊಸಟೌನನ್ನು ಪರಾಮರ್ಶಿಸಿ ರೀಡಿಂಗ್‌ರೂಂ ಪ್ರವೇಶೋತ್ಸವವನ್ನು ಜರುಗಿಸಿ ಸುಮಾರು 11 ಗಂಟೆಗೆ ಮಿ|| ಸಾಹುಕಾರ್ ಬಿ. ಸಿದ್ಧಲಿಂಗಶೆಟ್ಟರ ನೂತನ ಗೃಹದ ಬಳಿ ಹಾಕಿದ್ದ ಹಸರುವಾಣಿ ಮಂಟಪಕ್ಕೆ ದಿವಾನ್ ಸಾಹೇಬರವರೇ ಆದಿಯಾಗಿ ಸರ್ವರೂ ದಯಮಾಡಿಸಿದರು. ಅಲ್ಲಿ ಮಿ|| ಬಿ. ಸಿದ್ಧಲಿಂಗಶೆಟ್ಟರು ಹೂವಿನ ಹಾರ ತುರಾಯಿಗಳನ್ನು ಒಪ್ಪಿಸಿದ ನಂತರ ದಿವಾನರು ಗೃಹದೊಳಗೆ ಪ್ರವೇಶಿಸಿ ಎಲ್ಲಾ ಕಡೆ ಪರಾಮರ್ಶಿಸಿ ಹಸನ್ಮುಖಿಗಳಾಗಿ ಬಹಳ ಸಂತೋಷದಿಂದ ದೊಡ್ಡ ಹಾಲಿನಲ್ಲಿ ಏರ್ಪಡಿಸಿದ್ದ ಪೀಠದಲ್ಲಿ ದಿವಾನ್ ಸಾಹೇಬರವರು ಆದಿಯಾಗಿ ಸರ್ವರೂ ಮಂಡಿಸಿದರು. ಆಗ್ಗೆ ಮಿ|| ಬಿ. ಸಿದ್ಧಲಿಂಗಶೆಟ್ಟರು ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅಷ್ಟುಹೊತ್ತಿಗೆ 11½ ಗಂಟೆಯಾದ್ದರಿಂದ ಪ್ರೋಗ್ರಾಮು ಪ್ರಕಾರ ಮಿ|| ಬಿ. ಸಿದ್ಧಲಿಂಗಶೆಟ್ಟರ ಗೃಹದಲ್ಲಿ ಔತಣದ ಆತಿಥ್ಯವನ್ನು ಸ್ವೀಕರಿಸಿ ಬಹಳ ಸಂತೋಷದಿಂದ ಮೊದಲನೇ ಅಂತಸ್ತಿನ ಹಾಲಿನಲ್ಲಿ ಆಯಾಯ ಸ್ಥಳದಲ್ಲಿ ದಿವಾನ್ ಸಾಹೇಬರವರೇ ಆದಿಯಾಗಿ ಸರ್ವರೂ ಕುಳಿತುಕೊಂಡನಂತರ ಮಿ|| ಬಿಡಾರಕೃಷ್ಣಪ್ಪನವರಿಂದ ಅಮೋಘವಾದ ಸಂಗೀತವಾದ್ಯವಾಯಿತು. ಅನಂತರ ಮಿ|| ಬಿ. ಸಿದ್ಧಲಿಂಗಶೆಟ್ಟರು ದಿವಾನ್ ಸಾಹೇಬರವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಅಡ್ರೆಸ್ಸು ಈ ಕೆಳಗೆ ಕೊಡಲ್ಪಟ್ಟಿದೆ. ದಿವಾನ್ ಸಾಹೇಬರವರು ಮಿ|| ಶೆಟ್ಟರೆ! ನೀವು ಈ ನ್ಯೂ ಟೌನಿನಲ್ಲಿ ಈ ದೊಡ್ಡ ಕಟ್ಟಡವನ್ನು ಕಟ್ಟಿಸಿ ಜನಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿರುವುದಕ್ಕಾಗಿ ನಾನು ತುಂಬಾ ಸಂತೋಷಿಸುತ್ತೇನಲ್ಲದೆ ನಿಮ್ಮ ಔದಾರ್ಯವನ್ನು ನೋಡಿ ನನಗೆ ತುಂಬಾ ಹರ್ಷವುಂಟಾಗಿರುತ್ತೆಂದು ಅಪ್ಪಣೆಕೊಡಿಸಿದರು. ಆಮೇಲೆ ಸೊಸೈಟಿ ರಿಜಿಸ್ಟ್ರಾರವರಾದ ಮಿ|| ಕೆ. ಎಚ್. ರಾಮಯ್ಯನವರು ಈ ಟೌನಿನಲ್ಲಿ ಅಗ್ರಗಣ್ಯರಾದ ಮಿ|| ಬಿ. ಸಿದ್ಧಲಿಂಗಶೆಟ್ಟರೇ! ಮಿ|| ದೇವೋಜಿರಾಯರೇ! ನೀವಿಬ್ಬರೂ ಏಕೀಭವಿಸಿ ಈ ನೂತನ ಪಟ್ಟಣವನ್ನು ಅಭಿವೃದ್ಧಿಗೆ ತರಲು ಕರ್ತರಾಗಿರುತ್ತೀರಿ. ಈ ಕೀರ್ತಿಯು ನಿಮ್ಮನ್ನೇ ಸೇರಿದ್ದಾಗಿರುತ್ತೆಂದು ಸ್ವಾರಸ್ಯವಾಗಿ ಭಾಷಣಮಾಡಿದರು. ಅದನ್ನು ಮಿ|| ಮಹಮ್ಮದ್ ಸೇಟರು ಪುಷ್ಟೀಕರಿಸಿದರು. ಅನಂತರ ಗೃಹದ ಮುಂಭಾಗದ ಚಪ್ಪರದಲ್ಲಿ ಏರ್ಪಾಡು ಮಾಡಿದ್ದ ಪ್ರಕಾರ ಫೋಟೋ ತೆಗೆಯಲ್ಪಟ್ಟಿತು. ಅನಂತರ ದಿವಾನ್ ಸಾಹೇಬರು ಮೋಟಾರಿನಲ್ಲಿ ಕುಳಿತುಕೊಂಡು ಮಿ|| ಶೆಟ್ಟರೇ! ನಿಮ್ಮ ಆತಿಥ್ಯದಿಂದ ನಾನು ತುಂಬಾ ಸಂತೋಷಪಟ್ಟೆನು. ನಿಮಗೆ ಅತ್ಯಧಿಕವಾದ ಸುಖಸಂಪತ್ತುಂಟಾಗಲೆಂದು ಹಾರೈಸುತ್ತೇನೆಂದು ಹೇಳಿ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿದರು. ಅಲ್ಲಿ ಹೌಸ್ ಬಿಲ್ಡಿಂಗ್ ಸೊಸೈಟಿ ಪರವಾಗಿ ಸೆಕ್ರೆಟರಿಯವರಾದ ಮಿ|| ಬಿ. ಸಿದ್ಧಲಿಂಗಶೆಟ್ಟರು ಅಡ್ರೆಸ್ಸನ್ನು ಒಪ್ಪಿಸಿದರು. ತಾಲೂಕು ಪರವಾಗಿ ಮಿ|| ಬಿ. ಚನ್ನಪ್ಪನವರು ಅಡ್ರೆಸ್ಸು ಒಪ್ಪಿಸಿದರು. ಅಡ್ರೆಸ್ಸುಗಳಲ್ಲಿ ನಮೂದಿಸಿರುವ ಪ್ರಕಾರ ಸೊಸೈಟಿಗೆ ಫ್ರೀಯಾಗಿ ದಾಖಲಾತಿಗಳನ್ನು ನೋಡಿಕೊಡಲು ಒಬ್ಬರು ಸಬ್‌ರಿಜಿಸ್ಟ್ರಾರನ್ನೂ ಮತ್ತು ಮನೆಗಳಿಗೆ ಫ್ರೀಯಾಗಿ ಪ್ಲಾನುಮಾಡಿಕೊಡಲು ಒಬ್ಬರು ಓವರ್ಸಿಯರವರನ್ನೂ, ಹೇರಳವಾದ ಜಮೀನಿನ ಸಹಾಯವನ್ನೂ, ಎಲೆಕ್ಟ್ರಿಕ್ ದೀಪವನ್ನೂ ಸದ್ಯದಲ್ಲಿಯೇ ಕೊಡಿಸುವುದಾಗಿ ಅಪ್ಪಣೆಕೊಡಿಸಿದರು. ಅಷ್ಟುಹೊತ್ತಿಗೆ 1½ ಗಂಟೆಯಾಯಿತು. ದಿವಾನ್ ಸಾಹೇಬರವರೇ ಆದಿಯಾಗಿ ಸರ್ಕಾರೀ ಅಧಿಕಾರಿಗಳು ಮೋಟಾರಿನಲ್ಲಿ ಕುಳಿತು ಮೈಸೂರಿಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ಸಚಿವಶ್ರೇಷ್ಠರಾದ

ಸರ್ ಅಮೀರ್-ಉಲ್-ಮುಲ್ಕ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್, ಬಿ.ಎ.,

ಸಿ.ಐ.ಇ., ಓ.ಬಿ.ಇ., ಯವರ ದಿವ್ಯಸನ್ನಿಧಿಯಲ್ಲಿ

ತಮ್ಮ ಆಜ್ಞಾಧಾರಕನಾದ ಎಡತೊರೆ ಬಳೆ ಸಿದ್ಧಲಿಂಗಶೆಟ್ಟಿಯು ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನೆಂದರೆ.—

ಸ್ವಾಮಿ!

ತಾವು 1928 ನೆಯ ನವಂಬರು ತಿಂಗಳಲ್ಲಿ ಈ ಪ್ರಾಂತ್ಯಕ್ಕೆ ದಯಮಾಡಿಸಿದ ಸಮಯದಲ್ಲಿ ನಮ್ಮ ಟೌನನ್ನು ಮಾಡರ್ನ್‌ಟೌನ್ ಮಾಡಬೇಕೆಂಬುದಾಗಿಯೂ ಮತ್ತು ಅದಕ್ಕನುಸಾರವಾಗಿ ನನಗೆ ಮಾದರಿಯ ಮನೆಯನ್ನು ಕಟ್ಟಬೇಕೆಂಬುದಾಗಿಯೂ ಅಪ್ಪಣೆಯಾಗಿತ್ತು. ತಮ್ಮ ಅಮೋಘವಾದ ಆಜ್ಞೆಯನ್ನು ಶಿರಸಾವಹಿಸಿ ಈ ಮಂದಿರವನ್ನು ಸುಮಾರು ಮೂವತ್ತುಸಾವಿರ ರೂಪಾಯಿಗಳ ಖರ್ಚಿನಿಂದ ಕಟ್ಟಿಸಿರುತ್ತೇನೆ.

ಈ ಸುಸಮಯದಲ್ಲಿ ನನ್ನ ದೀರ್ಘಕಾಲದ ಒಂದು ಸ್ವವಿಷಯವನ್ನು ಅರಿಕೆಮಾಡಿಕೊಳ್ಳಲು ಅಪ್ಪಣೆ ಬೇಡುತ್ತೇನೆ. ಸ್ವಾಮಿ!

ನನ್ನ ಮಾತೃಶ್ರೀಯವರಾದ ಪುಟ್ಟತಾಯಮ್ಮನವರ ಸ್ಮರಣಾರ್ಥವಾಗಿ ಒಂದು ಹೆಂಗೆ ಆಸ್ಪತ್ರೆಯನ್ನು ನನ್ನ ಸ್ವಂತ ಖರ್ಚಿನಿಂದ ಕಟ್ಟಿಸಬೇಕೆಂದು ನನ್ನ ಅಭಿಲಾಷೆಯಿರುವುದು. ಇದಕ್ಕೆ ಖಾವಂದರವರ ಅಪ್ಪಣೆಯಾಗಬೇಕೆಂದು ಬೇಡುತ್ತೇನೆ.

ನಮ್ಮನ್ನಾಳುವ ಮಹಾಪ್ರಭುಗಳು ನಮ್ಮಿ ನವೀನ ಪಟ್ಟಣಕ್ಕೆ ದಯಮಾಡಿಸಿ ಪುರಜನರಾದ ನಮ್ಮ ರಾಜಭಕ್ತಿಪುರಸ್ಸರವಾದ ಸೇವೆಯನ್ನು ಸ್ವೀಕರಿಸುವಂತೆ ಬಿನ್ನೈಸಿಕೊಂಡು ಈ ಕಾರ್ಯವನ್ನು ಸಫಲವಾಗುವಂತೆ ಮಾಡಿಕೊಡಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ತಾವು ಸೀಮೆಗೆ ದಯಮಾಡಿಸಿ ರಾಜಕೀಯ ವಿಚಾರದಲ್ಲಿ ಕೈಕೊಂಡಿರುವ ಕಾರ್ಯವು ಸಿದ್ಧಿಸಲೆಂದು ಹಾರೈಸುತ್ತೇನೆ.

ತಮಗೂ ಮತ್ತು ತಮ್ಮ ಕುಟುಂಬಕ್ಕೂ ಭಗವಂತನು ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಹೊಸ ಎಡತೊರೆ,
ತಾ|| 16-8-1930.

ತಮ್ಮ ಆಜ್ಞಾಧಾರಕ,
ಬಿ. ಸಿದ್ಧಲಿಂಗಶೆಟ್ಟಿ,
ಸಾಹುಕಾರ್.

ಅರಮನೆ ಕೋಟೆಯೊಳಗಿರುವ ಶ್ರೀ ಪ್ರಸನ್ನ ಕೃಷ್ಣಸ್ವಾಮಿಯ ದೇವಸ್ಥಾನದಲ್ಲಿ ನಡೆದ ಕಳವು.

ಅಪರಾಧಿ—ಪೂಜಾರಿ ಎಸ್. ರಂಗಸ್ವಾಮಿಭಟ್ಟರ ಹೇಳಿಕೆ.

ಅಪರಾಧಿಯಾದ ಅರ್ಚಕ ರಂಗಸ್ವಾಮಿಭಟ್ಟರು ಸಿಟಿ ಮ್ಯಾಜಿಸ್ಟ್ರೇಟರವರನ್ನು ಕುರಿತು ಅರಿಕೆಮಾಡಿಕೊಂಡದ್ದೇನೆಂದರೆ—ನಾನು 1899 ನೇ ಇಸವಿಯಿಂದ ಶ್ರೀ ಪ್ರಸನ್ನ ಕೃಷ್ಣಸ್ವಾಮಿಯವರ ದೇವಸ್ಥಾನದಲ್ಲಿ ಅರ್ಚಕನಾಗಿದ್ದೇನೆ. ಈ ನೌಕರಿಯ ನನ್ನ ಹಕ್ಕುಬಾಧ್ಯವಾಗಿದೆ. ನಾನು ಸರ್ವಿಸ್ಸಿನಲ್ಲಿ ಟಿಸ್ಟ್ರೀಷನಾಗಿಯೂ, ಶಿಲ್ಪಿ ಕೆಲಸಗಾರನಾಗಿಯೂ ಕೆಲಸ ಮಾಡಿರುತ್ತೇನೆ. ಬೊಂಬಾಯಿ, ಹೈದರಾಬಾದು, ಶ್ರೀರಂಗ, ಕಾಂಚೀಪುರ ಮುಂತಾದ ಸ್ಥಳಗಳಲ್ಲಿ ದೇವತಾ ಕೆಲಸಗಳನ್ನು ಮಾಡಿದ್ದೇನೆ. ಆಗಮಿಕ ಶಾಸ್ತ್ರದಲ್ಲಿ ಸರ್ಕಾರದ ಪ್ರೋತ್ಸಾಹದಿಂದ ನಿತ್ಯಕ್ಕೆ ಕ ಪದ್ಧತಿಯನ್ನು ಏರ್ಪಾಡು ಮಾಡಿದ್ದೇನೆ. ಇದಕ್ಕಾಗಿ ಸರ್ಕಾರದಿಂದ ನನಗೆ 300 ರೂಪಾಯಿ ಮಂಜೂರಾಗಿದೆ. 1928 ನೇ ಇಸವಿಯಲ್ಲಿ ಬರ್ಮಾದೇಶದ ರಂಗೂನ್ ಪಟ್ಟಣದಲ್ಲಿ ರಾವ್ ಬಹದ್ದೂರ್ ರಾಜಾರಾಮನಾಥರೆಡ್ಡಿಯವರವರು ದೇವಸ್ಥಾನದ ಪ್ರತಿಷ್ಠೆ ಮಾಡುವುದಕ್ಕಾಗಿ ನನ್ನನ್ನು ಕರೆಯಿಸಿದ್ದರು. ಅಲ್ಲಿ ಅವರು ನನಗೆ 3,500 ರೂ. ಗಳಷ್ಟು ಬಹುಮಾನ ಕೊಟ್ಟದ್ದಲ್ಲದೆ ನನ್ನ ಗುಣ ಕಾರ್ಯಗಳನ್ನು ಕುರಿತು ನಮ್ಮ ಮಹಾರಾಜರವರಿಗೆ ಒಂದು ಲೇಖನವನ್ನು ಸಹ ಬರೆದಿರುತ್ತಾರೆ. ನನಗೆ ಬಹುಮಾನಗಳು ದೊರೆತಿರುವ ಪಟ್ಟಿಯನ್ನು ಸಹ ಮಹಾರಾಜರವರು ಪರಾಮರ್ಶಿಸಿರುತ್ತಾರೆ.

ಗೃಹಕೃತ್ಯದಲ್ಲಿ ಕಷ್ಟಸಂಕಟಗಳು.

ನನಗೆ ದೇವಸ್ಥಾನದಲ್ಲಿ 25 ವರುಷಗಳ ಕಾಲ ತಿಂಗಳಿಗೆ ರೂ. 15-4-0 ಸಂಬಳವಿದ್ದಿತು. ನನಗೆ 5 ಮಂದಿ ಹೆಣ್ಣುಮಕ್ಕಳು. ಇವರುಗಳಿಗೆ ಗಂಡಂದಿರನ್ನು ಒದಗಿಸುವುದು ಪ್ರಯಾಸವಾಯಿತು. ಇದರಿಂದ ನನಗಿದ್ದ ಒಂದು ಮನೆಯನ್ನು ಮಾರಿ ದರಿದ್ರನಾದೆನು. 1925 ರ ನಂತರ ಹಂಗಾಮಿಯಾಗಿ ನನ್ನ ಸಂಬಳವನ್ನು 21 ರೂಪಾಯಿಗೆ ಏರಿ ಮಾಡಿಕೊಟ್ಟರು. ನನ್ನ ಅಳಿಯಂದಿರು ತುಂಬಾ ಬಡವರಾದ್ದರಿಂದ ಅವರ ಪೋಷಣೆಯನ್ನೆಲ್ಲಾ ನಾನೇ ಮಾಡಬೇಕಾಯಿತು. ದೇವಸ್ಥಾನದ ವರಮಾನವು ಜೀವನಕ್ಕೆ ಸಾಲಲಿಲ್ಲ. ಹೆಣ್ಣುಮಕ್ಕಳಿಗೆ ಲಗ್ನ ಮಾಡಿದ್ದರಿಂದ ನನಗೆ ಸಾಲ ಹೆಚ್ಚಾಯಿತು. ಗೃಹಕೃತ್ಯವು ನಡೆಯುವುದೇ ಕಷ್ಟವಾಯಿತು. ನಾನು ರಂಗೂನ್ ಪಟ್ಟಣಕ್ಕೆ ಸಮುದ್ರದ ಮೇಲೆ ಹೋಗಿದ್ದು ಬಂದವನೆಂದು ನಮ್ಮ ಜನರು ನನ್ನನ್ನು ದೇವರ ಪ್ರತಿಷ್ಠಾ ಕಾರ್ಯಗಳಿಗೆ ಕರೆಯುವುದನ್ನು ಬಿಟ್ಟರು. ಒಂದು ದಿನ ಮನೆಯಲ್ಲಿ ಅಕ್ಕಿಯೇ ಇರಲಿಲ್ಲ. ಮನೆಯಿಂದ ಹೊರಟು ದೇವಸ್ಥಾನಕ್ಕೆ ಬಂದೆನು. ಆಗ ಗೃಹಕೃತ್ಯವನ್ನು ನಡಿಸುವುದಕ್ಕೆ ದೇವರ ಮೇಲಿದ್ದ ಆಭರಣಗಳನ್ನು ತೆಗೆದುಕೊಂಡು ಅದು ಇಡಬೇಕೆಂಬ ಕೆಟ್ಟ ಯೋಚನೆಯುಂಟಾಯಿತು. ಆದರೆ ಆ ದಿವಸ ಮನೆಯಲ್ಲಿದ್ದ ಪುರಾತನಕಾಲದ ಓಲೆಗರಿ ಪುಸ್ತಕಗಳನ್ನು ಓರಿಯಂಟಲ್ ಲೈಬ್ರೆರಿಗೆ ಬಿಕರಿ ಮಾಡಿದೆನು. ಹೀಗೆಯೇ ಮನೆಯಲ್ಲಿದ್ದ ಪದಾರ್ಥಗಳನ್ನೆಲ್ಲಾ ವಿಲೇವಾರಿಮಾಡಿಬಿಟ್ಟೆನು.

ದೇವರ ಆಭರಣಗಳ ಕಳುವು.

ಮನೆಯಲ್ಲಿ ನನ್ನ ಮಗಳ ಲಗ್ನ ಮಾಡಬೇಕಾಯಿತು. ಆಗ ದೇವಸ್ಥಾನದಲ್ಲಿ ದೇವರ ಅಷ್ಟದಳದ ಗುಂಡುಗಳ ಸರವನ್ನು ತೆಗೆದು ಮೈಸೂರು ನ್ಯಾಷನಲ್ ಬ್ಯಾಂಕಿನಲ್ಲಿ ಅಡವು ಇಟ್ಟು 120 ರೂಪಾಯಿ ಸಾಲಾ ತೆಗೆದುಕೊಂಡೆನು. ಅದರ ಜೊತೆಗೆ ಜವಳಿ ಅಂಗಡಿ ಮುಂತಾದ ಸ್ಥಳಗಳಲ್ಲಿ ಸಾಲಾ ಮಾಡಿದೆನು. ಸಾಲ ಜಾಸ್ತಿ ಆಯಿತು. ಸಾಲಗಾರರ ಕಾಟವು ಹೆಚ್ಚಿ ಸಾಲಗಾರರು ನನ್ನನ್ನು ಹಿಂಬಾಲಿಸಿ ತಿರುಗುತ್ತಿದ್ದರು. ಅವರಿಗೆ ಸಮಾಧಾನ ಹೇಳುವುದು ನನಗೆ ಸಾಧ್ಯವಿಲ್ಲದೆ ಹೋಯಿತು. ಊರಿನಲ್ಲಿರುವುದು ಕೂಡ ಅದರಿಂದ ಕಷ್ಟವಾಯಿತು. ಅದರ ದೆಸೆಯಿಂದ ನನಗೆ ಕೆಟ್ಟ ಬುದ್ಧಿ ಹುಟ್ಟಿತು. ದೇವಸ್ಥಾನದ ನಗಗಳನ್ನೆಲ್ಲಾ ಭಿಬ್ರವರಿಯಲ್ಲಿ ಒಂದೇ ಸಾರಿ ತೆಗೆದುಕೊಂಡು ಹೋಗಿ ಮನೆಯಲ್ಲಿಟ್ಟುಕೊಂಡು ಆಗಾಗ್ಗೆ ವರ್ತಕರಿಗೆ ಕೊಟ್ಟು ನನ್ನ ಸಾಲಗಳನ್ನು ತೀರಿಸಿಕೊಳ್ಳುತ್ತ ಬಂದೆನು. ಆ ಬಳಿಕ ನನ್ನ ಇನ್ನೊಬ್ಬ (4 ನೇ) ಮಗಳ ಮದುವೆಮಾಡಿದೆನು. ಹ್ಯಾಗಾದರೂ ದೇವಸ್ಥಾನದ ನಗಗಳನ್ನು ದೇವಸ್ಥಾನಕ್ಕೆ ಸೇರಿಸಬೇಕೆಂದು ಪ್ರಯತ್ನಪಟ್ಟೆನು. ಹೈದರಾಬಾದಿಗೆ ಹೋಗಿ ಹಣ ಸಂಪಾದನೆ ಮಾಡಿಕೊಂಡು ಬರೋಣವೆಂಬ ಯೋಚನೆ ಹುಟ್ಟುವಾಗ್ಗೆ ನನಗೆ ಮೂಲವ್ಯಾಧಿ ಪ್ರಾಪ್ತವಾಯಿತು. ನಾನು ಮಾಡಿರತಕ್ಕ ಅಪರಾಧವನ್ನು ಹೇಗೆ ನಿವಾರಣೆಮಾಡಿಕೊಳ್ಳಬಹುದೆಂಬ ಯೋಚನೆಯುಂಟಾಯಿತು. ಶಾಸ್ತ್ರಸಂಬಂಧವಾದ ಪುಸ್ತಕಗಳನ್ನು ಬರೆಯಲಾರಂಭಿಸಿದೆನು. ಅಷ್ಟರಲ್ಲೇ ದೇವಸ್ಥಾನದ ಪಾರುಪತ್ತೇಗಾರ್ ವೆಂಕಟನಾರಣಪ್ಪನವರು ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂದೂ, ಸುಬ್ಬಾಶಾಸ್ತ್ರಿಗಳು ಆ ಕೆಲಸಕ್ಕೆ ನೇಮಕವಾಗಿ ಬರುತ್ತಾರೆಂದೂ ಗೊತ್ತಾಯಿತು. ಇವರು ಬಂದು ಛಾರ್ಜು ಪಡೆಯುವ ಸನ್ನಿವೇಶ ಬಂದಿತು. ಬದಲಾವಣೆ ಕಾಲದಲ್ಲಿ ದೇವರ ನಗಗಳನ್ನು ಝಡ್ತಿ ಮಾಡತಕ್ಕ ಸಮಯವು ಒದಗಿತು. ಝಡ್ತಿಯಲ್ಲಿ ಆಭರಣಗಳಿಗೆ ನಾನು ಜವಾಬ್ದಾರನಾಗುತ್ತೇನೆಂಬ ಭೀತಿಯುಂಟಾಯಿತು. ಅಧೈರ್ಯವು ಅಂಕುರಿಸಿತು. ಈ ಅಪರಾಧವನ್ನು ಮುಚ್ಚತಕ್ಕ ಮಾರ್ಗವು ಮನಸ್ಸಿಗೆ ಹೊಳೆಯಿತು.

ತಪ್ಪಿಸಿಕೊಳ್ಳುವ ಉಪಾಯಗಳು.

ಏನೆಂದರೆ: ಬಾಕಿ ಇರುವ ದೇವರ ನಗಗಳನ್ನು ಉಪಾಯದಿಂದ ಕಳುವುಮಾಡಿ ಅವುಗಳನ್ನು ದೇವಸ್ಥಾನದ ಬಾವಿಯಲ್ಲಿ ಸರ್ಕಾರಕ್ಕೆ ತಿಳಿಯದಂತೆ ಹಾಕಿಬಿಡುವುದು. ಅಧೀನರಿಗೆ ಕಾಗದ ಬರೆದು ಅನಂತರ ನಗಗಳನ್ನು ಬಾವಿಯಿಂದ ಈಚೆಗೆ ತೆಗಿಸಿದ ಮೇಲೆ ಆಭರಣಗಳ ಪೈಕಿ ಗೈರ್ಹಾಜರಿ ಆಗಿದ್ದವುಗಳನ್ನು ಕಳ್ಳರು ಅಪಹರಿಸಿದರೆಂಬ ಅನುಮಾನ ಉಂಟಾಗುವಂತೆ ಮಾಡಿದರೆ ಪದ್ಧತಿ ಪ್ರಕಾರ ಗೈರ್ಹಾಜರಿ ಆಗಿರುವ ನಗಗಳ ಮೂಲ್ಯವನ್ನು ನನ್ನ ಸಂಬಳದಿಂದ ಹಿಡಿದು ನನ್ನ ಮೇಲೆ ಅಪರಾಧ ಹೊರುವುದು ತಪ್ಪುತ್ತದೆಂಬ ರೀತಿ ಯೋಚನೆಮಾಡಿದೆನು. ಒಂದು ದಿನ ದೇವಸ್ಥಾನದೊಳಗೆ ಕಿಟಕಿಯಬಳಿ ನಿಂತಿದ್ದೆನು. ಅದರ ಒಂದು ಸಲಾಕಿಯನ್ನು ಎಳೆದುನೋಡಿದೆನು. ಅದು ಸುಲಭವಾಗಿ ಬಂದುಬಿಟ್ಟಿತು. ಸಲಾಕಿಯನ್ನು ಮೇಲಕ್ಕೆ ಎಳೆದು ಕೆಳಗೆ ಜೀವು ಅನ್ನವಾಗಿ ಕೊಟ್ಟು ಬಂದೋಬಸ್ತು ಮಾಡಿದೆನು. ಇದು ಕಳ್ಳತನಕ್ಕೆ ಸುಮಾರು ಒಂದು ತಿಂಗಳ ಹಿಂದೆ. ಕಳುವಾದದ್ದಕ್ಕೆ ಒಂದು ವಾರದ ಮುಂಚೆ ಗಂಟೆ ಬಾಗಲಕೊಂಡಿ ಕಿತ್ತುಹೋಗಿದ್ದಿತು. ಇದನ್ನು ಗೊಲ್ಲ ವೆಂಕಟನರಸನಿಗೆ ತೋರಿಸಿದೆನು. ಆಗ ನಾನು ಅದನ್ನು ಸುತ್ತಿಗೆಯಿಂದ ಹೊಡೆದು ಸರಿಮಾಡಿದೆನು. ಪಾರುಪತ್ತೇಗಾರರು ಎಲ್ಲಾ ಛಾರ್ಜನ್ನೂ ತಾ|| 20-6-30 ರಲ್ಲಿ ತೆಗೆದುಕೊಳ್ಳುತ್ತಾರೆಂದು ಗೊತ್ತಾಯಿತು. ಆ ಸಮಯದಲ್ಲಿ ರಜಾ ತೆಗೆದುಕೊಂಡರೆ ಝಡ್ತಿಯು

[6 ನೇ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ

೧೯೩೦ ನೇ ಆಗಸ್ಟ್ ತಾ|| ೨೫ ನೆಯ ಸೋಮವಾರ

ವರ್ಣಾಶ್ರಮಪ್ರಕಾಶಿಕಾ.

ಲಿಂಗಧಾರಣರೂಪವಾದ ಶಿವದೀಕ್ಷೆಯಿಂದ ಸಾಮಾನ್ಯಾಕಾರಂಗಳಾದ ಪ್ರಾಕೃತ ವರ್ಣಾಶ್ರಮಧರ್ಮಗಳು ನಷ್ಟಗಳಾದರೂ ವಿಶೇಷಾಕಾರಂಗಳಾದ ಅಪ್ರಾಕೃತ ವರ್ಣಾಶ್ರಮಧರ್ಮಗಳು ಉದಯಿಸುವುದರಿಂದ ವೀರಶೈವರು ವರ್ಣಾಶ್ರಮಧರ್ಮಾವಲಂಬಿಗಳಾಗಿರುವರಲ್ಲದೆ ವರ್ಣಾಶ್ರಮಧರ್ಮಶೂನ್ಯರಲ್ಲನೆಂಬ ವಿಷಯವನ್ನು ನಮ್ಮ ಹಿಂದಣ ಸಂಚಿಕೆಗಳಲ್ಲಿ ಸಪ್ರಮಾಣವಾಗಿ ಪ್ರಕಟಿಸಿರುವೆವಷ್ಟೆ! ಈ ವಿಷಯವನು ಇನ್ನೂ ಕೆಲ ಗ್ರಂಥಪ್ರಮಾಣಗಳಿಂದ ಪ್ರತಿಪಾದಿಸುತ್ತೇವೆ.

ಕರ್ಮವಿಧ್ಯುಕ್ತ ಮುತ್ಸೃಜ್ಯ ಸ್ವಜಾತಿವಿಹಿತಂ ನರಾಃ | ಯೇರ್ಚಯಂತಿ ಶಿವಂ ತೇಷಾಂ ಪೂಜಾಂ ಗೃಹ್ಣಾತಿ ನೇಶ್ವರಃ|| ವರ್ಣಾಶ್ರಮಸದಾಚಾರಾಃ ಶಿವೇನ ಕಥಿತಾಃಪುರಾ | ನಿತಾನುಲ್ಲಂಘ್ಯ ವರ್ತಂತೇ ಶಿವಸ್ಯಾಜ್ಞಾ ವಿಲಾಪಿನಃ || ರಾಜಾಜ್ಞಾ ಭಂಗಕೃನ್ಮ್ಯಾನಾಂ ಯಥಾದಂಡೋಭವಿಷ್ಯತಿ | ಶಿವಾಜ್ಞಾ ಭಂಗಕೃನ್ಮಪ್ರಾಣಾಂದಂಡೋಹಿ ನರಕಸ್ತಥಾ ||

ಯಾರು ವರ್ಣಾಶ್ರಮಧರ್ಮಗಳನ್ನು ಮೀರಿ ದೇವದೇವನಾದ ಪರಮೇಶ್ವರನನ್ನು ಪೂಜಿಸಲುಪಕ್ರಮಿಸುವರೋ ಅಂಥವರ ಪೂಜೆಯನ್ನು ಶಿವನು ಸ್ವೀಕರಿಸುವುದಿಲ್ಲ. ವರ್ಣಾಶ್ರಮಧರ್ಮಾನುಷ್ಠಾನವು ಶಿವನಿಂದ ಆಜ್ಞಾಪಿಸಲ್ಪಟ್ಟುದುದೇ ಹೊರತು ಮಾನವರಿಂದ ಆಜ್ಞಾಪಿಸಲ್ಪಟ್ಟುದುದಲ್ಲ. ಲೋಕದಲ್ಲಿ ಪ್ರಜಾಶಾಸಕನಾದ ಮಹಾರಾಜನ ಆಜ್ಞೆಯನ್ನು ಮೀರಿದ ಪ್ರಜೆಗಳು ಹೇಗೆ ಶಿಕ್ಷಾರ್ಹರಾಗುವರೋ ಹಾಗೆ ಶಿವಾಜ್ಞೆಯನ್ನು ಮೀರುವ ನಾಸ್ತಿಕರಿಗೆ ನರಕವೆಂಬ ಶಿಕ್ಷೆಯು ತಪ್ಪದೆ ಆಗುವುದೆಂದು ಸಿದ್ಧಾಂತಗ್ರಂಥಗಳು ಸಾರುತ್ತಿರುವುವು. ಮತ್ತು "ನಚ ಲಿಂಗಧಾರಣಮಾತ್ರೇಣ ಮುಕ್ತಿಸಂಭವೇ ತದೇವಾಲಂ ಕಿಮೌಪನಿಷದ್ಭಾಷ್ಯ ವಿಚಾರಪ್ರಯಾಸೇನೇತಿ ವಾಚ್ಯಂ" ಲಿಂಗಧಾರಣಮಾತ್ರದಿಂದ ಮುಕ್ತಿಯು ಸಂಭವಿಸುವುದಾದರೆ ಬಹುಕ್ಲೇಶಕರವಾದ ವೇದಾಗಮವಿಚಾರದಿಂದ ಪ್ರಯೋಜನವೇನೆಂದ ಆಶಂಕೆಮಾಡಲಾಗದೆಂದೂ, ವರ್ಣಾಶ್ರಮಧರ್ಮಾನುಷ್ಠಾನವಿಲ್ಲದೆ ಲಿಂಗಧಾರಣಮಾತ್ರದಿಂದ ಮುಕ್ತಿಯು ಸಂಭವಿಸಲಾರದೆಂದೂ ಸೂತ್ರಭಾಷ್ಯಕಾರರಾದ ಶ್ರೀಪತಿ ಪಂಡಿತರು ತಮ್ಮ ಶ್ರೀಕರಭಾಷ್ಯದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವುದಲ್ಲದೆ, ಮಹಾರಾಜನ ಕಡೆಯವರು ತಾವು ಮಹಾರಾಜನ ಸಂಬಂಧಿಗಳೆಂದು ತೋರ್ಪಡಿಸುವುದಕ್ಕಾಗಿಯೂ ಮಹಾರಾಜನ ಆಜ್ಞೆಯನ್ನು ನೆರವೇರಿಸುವುದಕ್ಕಾಗಿ ಹೇಗೆ ಮಹಾರಾಜನ ಮುದ್ರೆಗಳನ್ನು ಧರಿಸಿರುತ್ತಾರೆಯೋ ಹಾಗೆ ಶಿವನಾಜ್ಞೆಯನ್ನು ನೆರವೇರಿಸುವುದಕ್ಕಾಗಿ ಶಿವಸಂಬಂಧವಾದ ಲಿಂಗಧಾರಣಾದಿ ಶಿವಚಿಹ್ನಗಳನ್ನು ಧರಿಸಿರಬೇಕೆಂದೂ ಹೇಳಿರುವರು. ಇದಲ್ಲದೆ "ನಿಗಮಾಗಮೋಭಯವೇದಾಂತ ಪ್ರತಿಪಾದಿತ........ಕೈವಲ್ಯಭೂತಿತ್ರಯ ಪ್ರತಿಪಾದಕ ಅಷ್ಟಾವರಣ ಪಂಚಾಚಾರಸದ್ಗುರು ಕರುಣಾಕಟಾಕ್ಷ ಲಬ್ಧ ಶಕ್ತಿಪಾತಾದ್ಯವಚ್ಛಿನ್ನ ಪರಶಿವೇಷ್ಟಲಿಂಗಧಾರಣಾತ್ಮಕ ಶೈವದೀಕ್ಷಾನಂತರ್ಯಮಿತ್ಯಥಶಬ್ದಾ ರ್ಥೋ ನಿರ್ಣೀಯತೇ ||" ಶ್ರೀ ಗುರುವಿನಿಂದ ಇಷ್ಟಲಿಂಗಧಾರಣರೂಪವಾದ ಶಿವದೀಕ್ಷೆಯನ್ನು ಪಡೆದನಂತರವೇ ಪರಶಿವಬ್ರಹ್ಮ ವಿಚಾರಾನುಷ್ಠಾನಗಳಿಗೆ ಯೋಗ್ಯನಾಗುವನೆಂದು 'ಅಥಾತೋಬ್ರಹ್ಮ ಜಿಜ್ಞಾಸಾ' ಎಂಬ ಪ್ರಥಮಸೂತ್ರದಲ್ಲಿರುವ ಅಥ ಶಬ್ದಕ್ಕೆ ಆನೇ ಶ್ರೀಪತಿಪಂಡಿತರು ಅರ್ಥಮಾಡಿರುವದನ್ನು ನೋಡಿದರೆ ಲಿಂಗಧಾರಣರೂಪವಾದ ಶಿವದೀಕ್ಷೆಯು ಪರಶಿವನ ಆರಾಧನೆಗೂ ಪರಶಿವನ ಸಾಕ್ಷಾತ್ಕಾರಸಾಧನಗಳಾದ ಅಪ್ರಾಕೃತಧರ್ಮಗಳ ಅನುಷ್ಠಾನಕ್ಕೂ ಅರ್ಹತೆಯನ್ನು ಉಂಟುಮಾಡುವುದೆಂದು ಸ್ಪಷ್ಟವಾಗುವುದು.

ಶಿವಾಗಮಗಳಲ್ಲಿ ದೀಕ್ಷೆಯು ಚಿರನಿರ್ವಾಣ ದೀಕ್ಷೆಯೆಂತಲೂ ಸದ್ಯೋನಿರ್ವಾಣ ದೀಕ್ಷೆಯೆಂತಲೂ ಎರಡುವಿಧವಾಗಿ ಹೇಳಲ್ಪಟ್ಟಿರುತ್ತದೆ. ಶ್ರೀಗುರುವಿನಿಂದ ದೀಕ್ಷಾಸಂಸ್ಕಾರಪೂರ್ವಕವಾಗಿ ಲಿಂಗಧಾರಣವನ್ನು ಹೊಂದಿ ಗುರೂಪದೇಶದಂತೆ ಭಕ್ತ್ಯಾದಿ ಅಪ್ರಾಕೃತ ವರ್ಣಾಶ್ರಮ ಕ್ರಿಯಾಚಾರಗಳನ್ನು ನಡೆಯಿಸುತ್ತ ಮೆಲ್ಲಮೆಲ್ಲನೆ ಮುಂದಣ ಮಾಹೇಶ್ವರಾದಿ ಸ್ಥಲಗಳನ್ನು ಪ್ರವೇಶಮಾಡಿ ಚಿತ್ತವು ಪರಿಪಕ್ವವಾದ ಹಾಗೆ ಸರ್ವಸಂಗಪರಿತ್ಯಾಗಮಾಡಿ ಶಿವಸಾಕ್ಷಾತ್ಕಾರವನ್ನು ಪಡೆಯುವುದೇ ಚಿರನಿರ್ವಾಣ ದೀಕ್ಷೆಯ ಫಲವಾಗಿರುವುದು. ಶ್ರೀಗುರುವಿನಿಂದ ಶೈವದೀಕ್ಷಾಪೂರ್ವಕವಾಗಿ ಲಿಂಗಧಾರಣವಾದ ಅನ್ಯವಹಿತೋತ್ತರಕ್ಷಣದಲ್ಲಿಯೇ ಮಾಂಸಪಿಂಡ ನಿವೃತ್ತಿಪೂರ್ವಕ ಮಂತ್ರಪಿಂಡತ್ವಪ್ರಾಪ್ತಿಯಾಗಿ ಜೀವಭಾವವು ಅಳಿದು ಶಿವನಿಷ್ಠ ಸರ್ವಜ್ಞತ್ವಾದಿ ಕಲ್ಯಾಣಗುಣಗಳುದಯಿಸುವುದೇ ಸದ್ಯೋನಿರ್ವಾಣದೀಕ್ಷೆಯ ಫಲವಾಗಿರುವುದು. ಈ ಎರಡು ದೀಕ್ಷೆಗಳೊಳಗೆ "ಗರ್ಭಾಷ್ಟಮೇ ಕೃತಾ ದೀಕ್ಷಾ ಮುಖ್ಯಾಸಾ ಷೋಡಶಾವಧಿ" ಎಂಬ ಪ್ರಮಾಣಾನುಸಾರವಾಗಿ ಎಂಟನೆಯ ವರ್ಷ ಮೊದಲುಮಾಡಿ ಹದಿನಾರನೆಯ ವರ್ಷದೊಳಗಾಗಿ ಮಾಡಲ್ಪಡುವ ಶಿವದೀಕ್ಷೆಯಾದರೂ ಚಿರನಿರ್ವಾಣದೀಕ್ಷಾ ಕ್ರಮವನ್ನು ವಿಧಿಸುತ್ತದಲ್ಲದೆ ಸದ್ಯೋನಿರ್ವಾಣದೀಕ್ಷಾ ಕ್ರಮವನ್ನು ವಿಧಿಸುವುದಿಲ್ಲ. ಏನೊಂದೂ ತಿಳಿಯದ ಹಸಿವು ತೃಷೆಗಳ ಬಾಧೆಯನ್ನು ಸಹಿಸದ ಬಾಲ್ಯಾವಸ್ಥೆಯಲ್ಲಿ ಆಗಬೇಕಾದ ದೀಕ್ಷೆಯು ಜೀವಭಾವವನ್ನು ನಿವೃತ್ತಿಗೊಳಿಸುವುದಿಲ್ಲ. ಬಾಲಕರಿಗೆ ಎಂಟು ವರ್ಷದಿಂದ ಹದಿನಾರುವರ್ಷಗಳ ವರೆಗೂ ಬ್ರಹ್ಮವಿದ್ಯಾಭ್ಯಾಸವನ್ನು ಮಾಡುವ ಕಾಲವಾಗಿರುತ್ತದೆ. ಇಂಥ ಬಾಲ್ಯದಲ್ಲಿ ಬ್ರಹ್ಮವಿದ್ಯಾಯೋಗ್ಯತಾಪಾದಕವಾದ ದೀಕ್ಷಾಸಂಸ್ಕಾರವಾದ ಮಾತ್ರದಿಂದ ಮಾನವನಿಷ್ಠಗಳಾದ ಜಾತಿಕುಲಾಶ್ರಮಗಳು ನಶಿಸಿ ಶಿವಸ್ವರೂಪನೇ ಆಗುವುದಾದರೆ ಶೈವದೀಕ್ಷೆಯನ್ನು ಪಡೆದ ಮೇಲೆ ಜೀವಭಾವನಿವೃತ್ತಿಯಾಗಿ ಮುಕ್ತಿಸಂಪಾದನಾರ್ಥವಾಗಿ ಅವಶ್ಯ ಅನುಷ್ಠಿಸಲ್ಪಡಬೇಕಾದ ಭಕ್ತ್ಯಾದಿ ಷಟ್‌ಸ್ಥಲಾಚರಣೆಗಳೇ ನಿಷ್ಪ್ರಯೋಜನಗಳಾಗುತ್ತವೆ. ದೀಕ್ಷಿತನಾದ ಪುರುಷನು ಕ್ರಮವಾಗಿ ಭಕ್ತಸ್ಥಲಾದ್ಯಾಚಾರಗಳನ್ನು ಅನುಷ್ಠಿಸುತ್ತ ಮುಂದುಮುಂದಕ್ಕೆ ಹೋಗಿ ಐದನೆಯ ಸ್ಥಾನವೆನಿಸಿದ ಶರಣಸ್ಥಲವನ್ನು ಹೊಂದುವನು ಅಲ್ಲಿ "ಸತೀಚಾಹಂ ಪತಿರ್ಲಿಂಗಂ ಹೃದಿಯುಕ್ತಃ ಸ್ವಯಂ ಪ್ರಭುಃ | ಪ್ರಾಪಂಚಿಕಸುಖಂ ನಾಸ್ತಿ ಶರಣಸ್ಥಲಮುತ್ತಮಂ ||" ತಾನೇ ಸತೀಸ್ವರೂಪನಾಗಿಯೂ ಲಿಂಗವೇ ಪತಿಸ್ವರೂಪವಾಗಿಯೂ ಆಗುವುದರಿಂದ ಬಾಹ್ಯಸತೀ ಸಂಗಶೂನ್ಯನಾಗುವನು. ಅಂದರೆ ಪ್ರಪಂಚಧರ್ಮಗಳೆಲ್ಲವೂ ನಷ್ಟೋನ್ಮುಖಗಳಾಗುವವೆಂದರ್ಥವು, ಇದೇ ಅರ್ಥವು ಧರ್ಮಶಿರೋಮಣ್ಯಾದಿ ಗ್ರಂಥಗಳಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿರುವುದು. ಆದುದರಿಂದ ಮಾನವನು ದೀಕ್ಷೆಯಾದಮಾತ್ರಕ್ಕೆ ಮೋಕ್ಷಾಧಿಕಾರಿಯಾದೆನೆಂದು ತಿಳಿಯದೆ ಮುಕ್ತನಾದೆನೆಂದು ತಿಳಿಯುವುದು ವ್ಯವಹಾರಕ್ಕೂ ಶಾಸ್ತ್ರಕ್ಕೂ ವಿರೋಧವಾದುದೇ ಸರಿ! ಆದುದರಿಂದ "ಯಥೈಧಾಂಸಿ ದಗ್ಧೇಷು" ಕಟ್ಟಿಗೆಗಳೆಲ್ಲವೂ ಬೆಂಕಿಯಲ್ಲಿ ಸುಟ್ಟುಬೂದಿಯಾದಂತೆ ದೀಕ್ಷೆಯಿಂದ ತನ್ನ ಪೂರ್ವಾಶ್ರಮಧರ್ಮಗಳು ನಷ್ಟವಾಗುವವು. ಮುಂತಾದ ವಾಕ್ಯಗಳು ಅಂಥ ಅಧಿಕಾರವನ್ನುಂಟುಮಾಡುವ ದೀಕ್ಷಾದಿಗಳ ಪರಮಪಾವಿತ್ರ್ಯದ್ಯೋತಕವೆಂದು ತಿಳಿಯುವುದೇ ಸಾಧುಮಾರ್ಗವಾಗಿದೆ. ಹಾಗಿಲ್ಲದಿದ್ದರೆ ಅಖಿಲಮಾನವರುದ್ಧಾರಕ್ಕಾಗಿ ಪರಮಾಪ್ತನಾದ ಪರಶಿವನಿಂದ ರಚಿತಗಳಾದ ವೇದಾಗಮಗಳಿಗೆ ತಿಲಾಂಜಲಿಯು ಕೊಡಲ್ಪಡಬೇಕಾಗುವದು. ಆದ್ದರಿಂದ ವೀರಶೈವಮತಪ್ರವಿಷ್ಟರಾದ ಸ್ತ್ರೀ ಪುರುಷಾದಿಯಾಗಿ ಎಲ್ಲರೂ, ದೀಕ್ಷಾಸಂಸ್ಕಾರದಿಂದ ಮುಕ್ತಿಸಾಧಕವಾದ ವೀರಶೈವ ಮಹಾವ್ರತವನ್ನು ನಿರ್ವಾಹಮಾಡುವ ಮೂಲಕ ಲಿಂಗಾಂಗ ಸಾಮರಸ್ಯಸಿದ್ಧಿಯನ್ನು ಸಾಧಿಸಿ ಧನ್ಯಜೀವಿಗಳಾಗಬೇಕೆಂಬುವನ್ನು ತಿಳಿದುಕೊಳ್ಳಬೇಕಲ್ಲದೆ ದೀಕ್ಷೆಗೊಂಡ ಪುರುಷರೆಲ್ಲರೂ ಅತಿವರ್ಣಾಶ್ರಮಿಗಳೆಂದು ತಿಳಿಯಬಾರದು. ಲೋಕದಲ್ಲಿ ವಿದ್ಯಾಕಾಂಕ್ಷಿಗಳಾದ ವಿದ್ಯಾರ್ಥಿಗಳು ಅವರವರ ಶಕ್ತಿಪಾತವನ್ನು ಮೀರದಂತೆ ಪಾಠಶಾಲೆಗಳಲ್ಲಿರುವ ಕ್ಲಾಸುಗಳಲ್ಲಿ ಓದಲು ಅಧಿಕಾರಿಗಳಾಗುತ್ತಾರೆ. ಕ್ಲಾಸಿಗೆ ಸೇರಿದ ಮಾತ್ರದಿಂದ ತಾವು ಆಯಾಯ ತರಗತಿಯ ಯಾವುದೊಂದೂ ಪುಸ್ತಕವನ್ನು ಓದದೆಯೂ ಶೋಧನೆಯಾಗದೆಯೂ ಡಿಗ್ರಿಯನ್ನು ಪಡೆದೆವೆಂದು ಹೇಳುತ್ತಹೋದರೆ ಅಂಥ ವಿದ್ಯಾರ್ಥಿಗಳಿಗೆ ಯಾವ ಫಲವೂ ಆಗಲಾರದಂತೆ ಲಿಂಗಾಂಗಸಾಮರಸ್ಯರೂಪವಾದ ಮೋಕ್ಷವನ್ನು ಸಾಧಿಸುವುದಕ್ಕಾಗಿ ದೀಕ್ಷಾಸಂಸ್ಕಾರವನ್ನು ಒಂದು ಪ್ರಥಮಪ್ರವೇಶ ಪರೀಕ್ಷೆಯಂತೆ ತಿಳಿದು ಪ್ರತಿಯೊಬ್ಬರೂ ಗುರುವಿನಿಂದ ದೀಕ್ಷಾಸಂಸ್ಕಾರವನ್ನು ಪಡೆದು ಲಿಂಗಾಂಗಸಾಮರಸ್ಯರೂಪವಾದ ಶಿವವಿದ್ಯೆಯನ್ನು ಸಾಧಿಸಿ ಉತ್ತರೋತ್ತರ ಕೃತಕೃತ್ಯರಾಗುವುದೇ ಚಿರನಿರ್ವಾಣದೀಕ್ಷೆಯ ಮುಖ್ಯಾರ್ಥವು. ಇನ್ನು ಸದ್ಯೋನಿರ್ವಾಣದೀಕ್ಷೆಯಾದರೂ ತೀವ್ರತರ ಶಕ್ತಿಪಾತವುಳ್ಳವರಿಗಲ್ಲದೆ ವೀರಶೈವಮತದಲ್ಲಿ ಸಂತತಿಕ್ರಮದಿಂದ ಹುಟ್ಟುಹುಟ್ಟಿದವರಿಗಲ್ಲ! ಇಂಥ ದೀಕ್ಷೆಗೆ ಚಿರನಿರ್ವಾಣ ದೀಕ್ಷೆಯಲ್ಲಿ ಹೇಳಿದ ಕಾಲನಿಯಮಗಳೊಂದೂ ಅವಶ್ಯಕವಿಲ್ಲ. ಯಾರು ದೀಕ್ಷೆಯಾಗುವುದಕ್ಕಿಂತ ಮೊದಲೇ ಯಮನಿಯಮಾಸನಾದ್ಯಷ್ಟಾಂಗಯೋಗಸಿದ್ಧಿಯುಳ್ಳವರಾಗಿ ಮಹಾತಪಸ್ವಿಗಳೆನಿಸಿಕೊಂಡಿರುತ್ತಾರೆಯೋ ಅಂಥವರಿಗೆ ಸದ್ಯೋನಿರ್ವಾಣದೀಕ್ಷೆಯಾಗಬೇಕಲ್ಲದೆ ಇತರರಿಗೆ ಅವಶ್ಯಕವಿಲ್ಲ. "ಯಥೇಂಧನೇಷು ದಗ್ಧೇಷು" ಮುಂತಾದ ಅರ್ಥವಾದಗಳು ಅಂಥ ಸದ್ಯೋನಿರ್ವಾಣದೀಕ್ಷೆಯನ್ನು ಪಡೆದವರಿಗೆ ವಿಧಿವಾದಗಳಾಗಿಯೇ ಪರಿಣಮಿಸುವವು. ಪ್ರಕೃತದಲ್ಲಿ ಇಂಥ ಸದ್ಯೋನಿರ್ವಾಣದೀಕ್ಷೆಯನ್ನು ವೀರಶೈವಮತಸ್ಥಾಪಕರಾದ ಶ್ರೀ ರೇಣುಕಾಚಾರ್ಯರಿಂದ ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಯೂ, ದಾರುಕಾಚಾರ್ಯರಿಂದ ಮಹಾತಪಸ್ವಿಯಾದ ದಧೀಚಿಮಹರ್ಷಿಯೂ, ಪಂಡಿತಾರಾಧ್ಯರಿಂದ ಸಾನಂದಮಹರ್ಷಿಯೂ, ಏಕೋರಾಮಾರಾಧ್ಯರಿಂದ ಅಷ್ಟಾದಶ ಪುರಾಣಕರ್ತನಾದ ವ್ಯಾಸಮಹರ್ಷಿಯೂ, ವಿಶ್ವಾರಾಧ್ಯರಿಂದ ಈ ಋಷಿಶ್ರೇಷ್ಠನಾದ ದೂರ್ವಾಸಮಹರ್ಷಿಯೂ ಪಡೆದು ಆಗಲೇ ಮುಕ್ತಾತ್ಮರೆನಿಸಿಕೊಂಡರು. ಇವರಂತೆ ವೀರಶೈವಮತಸ್ಥರೆಲ್ಲರೂ ಹೊಂದಲು ಶಕ್ಯವಿಲ್ಲದ ಪ್ರಯುಕ್ತ ಪ್ರತಿಯೊಬ್ಬ ವೀರಶೈವನೂ ಕಾಲನಿಯಮಗಳಿಂದ ಕೂಡಿದ ಮುಕ್ತಿಸಂಪಾದನೆಗೆ ಯೋಗ್ಯತೆಯನ್ನುಂಟುಮಾಡಿಕೊಡುವ ಚಿರನಿರ್ವಾಣದೀಕ್ಷೆಯನ್ನು ಪಡೆದು ತನ್ನ ಅಪ್ರಾಕೃತ ವರ್ಣಾಶ್ರಮಧರ್ಮಗಳನ್ನು ಬಿಡದೆ ಉತ್ತರೋತ್ತರ ಮುಕ್ತಿಸಂಪಾದನೆಯನ್ನು ಮಾಡುವುದರಲ್ಲಿ ಉದ್ಯುಕ್ತರಾಗಬೇಕಲ್ಲದೆ ದೀಕ್ಷೆಯಾದೊಡನೆ ವರ್ಣಾಶ್ರಮ ಧರ್ಮಗಳು ನೀಗಿಹೋಗುತ್ತವೆಂದು ವರ್ಣಾಶ್ರಮಗಳ ವಿಷಯದಲ್ಲಿ ಮಾತ್ರ ದ್ವೇಷಮಾಡುತ್ತ ಮಿಕ್ಕ ಪ್ರಾಪಂಚಿಕವ್ಯವಹಾರದಲ್ಲಿ ಲೋಲರಾಗಿರುವುದು ಮಾನವನಿಗೆ ವಿವೇಕವಲ್ಲವು. ಆದ್ದರಿಂದ ಇಂಥ ಪಟಾಟೋಪವನ್ನು ಬಿಟ್ಟು ಶ್ರೀಗುರುವಿನಿಂದ ದೀಕ್ಷೆಯನ್ನು ಪಡೆದು ಎಲ್ಲರೂ ಅಪ್ರಾಕೃತವರ್ಣಾಶ್ರಮ ಧರ್ಮಗಳಲ್ಲಿ ನಿಷ್ಠರಾಗಿ ಮೆಲ್ಲಮೆಲ್ಲನೆ ಭಕ್ತ್ಯಾದಿ ಷಟ್‌ಸ್ಥಲಾಚರಣೆಗಳಿಂದ ಮುಕ್ತಾತ್ಮರಾಗುವಂತೆ ವೀರಶೈವಮತಸ್ಥಾಪಕರಾದ ಶ್ರೀ ಪಂಚಾಚಾರ್ಯರು ಎಲ್ಲರನ್ನೂ ಕರುಣಿಸಲಿ.

ಭಾರತಸ್ವಾತಂತ್ರ್ಯಸಂಗ್ರಾಮ.

ಆಂಗ್ಲೇಯ ಬ್ಯಾಂಕರ್‌ರವರ ಪತ್ರ.

ಒಬ್ಬ ಆಂಗ್ಲೇಯ ಬ್ಯಾಂಕರ್‌ರವರು "ಸ್ಪೆಕ್ಟೇಟರ್" ಪತ್ರಿಕೆಯಲ್ಲಿ ಈರೀತಿಯಾಗಿ ಬರೆದಿರುತ್ತಾರೆ.

"ಸೈಮನ್ ಕಮೀಷನ ವರದಿಯು ಈ ದೇಶದಲ್ಲಿ ಎಲ್ಲರಿಂದಲೂ ಸಂಪೂರ್ಣವಾಗಿ ವಿರೋಧಿಸಲ್ಪಟ್ಟಿರುವದು. ಅದರ ವಿಷಯವಾಗಿ ಒಂದು ಒಳ್ಳೆಯ ಶಬ್ದವನ್ನೂ ಇದುವರೆಗೆ ಯಾವ ಪತ್ರಿಕೆಯಲ್ಲೂ ನಾನು ಓದಲಿಲ್ಲ. "ಟೈಂಸ್ ಆಫ್ ಇಂಡಿಯಾ" ಪತ್ರಿಕೆಯೂ ಸಹ ಅದನ್ನು ಅಲ್ಪ ಪ್ರೋತ್ಸಾಹದಿಂದ ತಿರಸ್ಕರಿಸಿರುತ್ತದೆ. ಮುಂಬಯಿಯ ಯೂರೋಪಿಯನ್ನರ ಅಭಿಪ್ರಾಯವು ಸಹ ಅದಕ್ಕೆ ಸಂಪೂರ್ಣ ವಿರೋಧವಾಗಿರುವದು. ಆದರೆ ಕಲ್ಕತ್ತೆಯ ಯೂರೋಪಿಯನ್ನರು ಮತ್ತು ಕೆಲ ಕೆಲವು ಭಾರತವಿರೋಧಿಗಳು ಮಾತ್ರ ಅದನ್ನು ಹೊಗಳಿರುವರು. ಆದರೆ ಅವರು ಇನ್ನೂ ಕಳೆದ ಶತಮಾನದ ವಾತಾವರಣದಲ್ಲಿಯೇ ಇರುವರು. ಮೆಸ್ಸರ್ಸ್ ಜಿನ್ನಾ, ಶಾಸ್ತ್ರಿ, ಠಾಕೂರದಾಸ್, ಸೆಟ್ಲೂರ್ ಮೊದಲಾದ ಪ್ರತಿಯೊಬ್ಬ ಉದಾರಪಕ್ಷದ ಮುಖಂಡರು ಅದನ್ನು ಸ್ಪಷ್ಟವಾಗಿ ಆಕ್ಷೇಪಿಸಿರುವರು. ನನ್ನ ಅಭಿಪ್ರಾಯವಾದರೂ ಅವರಂತೆಯೇ ಇರುವದು. ಅದರಿಂದ ಲೇಶದಷ್ಟು ಸುಧಾರಣೆಯಾಗುವಂತಿಲ್ಲ, ಹಾಗೂ ಭರತಖಂಡವು ಅದನ್ನೆಂದಿಗೂ ಒಪ್ಪಿಕೊಳ್ಳುವಂತಿಲ್ಲ. ಹಿಂದುಳಿದ ಅಲ್ಪಸಂಖ್ಯೆಯುಳ್ಳ ಮತದವರ ವಿಷಯದಲ್ಲಿಯೂ ಸೈನ್ಯದಮೇಲಿನ ಅಧಿಕಾರದ ವಿಷಯದಲ್ಲಿಯೂ ಅವಶ್ಯವಾದ ನಿಬಂಧನೆಗಳನ್ನು ಮಾಡಿ, ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನೇ ಕೊಡಬೇಕು. ಇದನ್ನು ಬಿಟ್ಟು ಬೇರೆ ಯಾವ ನಿರ್ಣಯವನ್ನೂ ಅವರು ಒಪ್ಪುವಂತಿಲ್ಲ. ಭಾರತೀಯರ ಸ್ವಾತಂತ್ರ್ಯಾಭಿಲಾಷೆಗೆ ಪ್ರಜೆಗಳೆಲ್ಲರ ಬೆಂಬಲವು ಇಲ್ಲವೆಂದು ಭಾವಿಸುವ ಆಂಗ್ಲೇಯರು ಕೆಲವುಕಾಲ ಗುಜರಾಥದಲ್ಲಿ ವಾಸಮಾಡಿದರೆ ಅದರ ನಿಜತತ್ತ್ವವು ತಾನಾಗಿಯೇ ತಿಳಿಯುವದು.

"ಜನಾಂಗವೆಲ್ಲವೂ ಕಾರಾಗೃಹವಾಸವನ್ನು ಅತ್ಯಂತ ಸಂತೋಷದಿಂದ ಅನುಭವಿಸಲು ಸಿದ್ಧವಾಗಿರುವ ಈ ಸಮಯದಲ್ಲಿ ಮಾತ್ರ ನಾವು ಕ್ಷಿಪ್ರದಲ್ಲಿಯೇ ಸಮಾಧಾನ ಮಾಡಲೇಬೇಕು. ಸ್ವಾತಂತ್ರ್ಯಪಕ್ಷಪಾತಿಗಳೆಂಬ ನಮ್ಮ ಲೋಕವಿಖ್ಯಾತವಾದ ಕೀರ್ತಿಯು ಸಾರ್ಥಕವಾಗಬೇಕಾದರೆ, ಭರತಖಂಡವು ಸಾಮ್ರಾಜ್ಯದಲ್ಲಿ ಉಳಿಯಬೇಕಾದರೆ, ದುಂಡುಮೇಜಿನ ಪರಿಷತ್ತಿನಲ್ಲಿ "ಸಾಮ್ರಾಜ್ಯಾಂತರ್ಗತಸ್ವರಾಜ್ಯ" ಪದ್ಧತಿಯನ್ನೇ ಚರ್ಚಿಸುವದಾಗಿ ನಾವು ಕೂಡಲೇ ಬಹಿರಂಗ ಪಡಿಸಬೇಕು.

"ಭಾರತದೇವಿಯ ಆಡಳಿತದ ಭಾರವನ್ನು ನಾವು ಭಾರತೀಯರಿಗೇ ವಹಿಸುವದಾದರೆ, ಭಾರತಿಯು ಯಾವಾಗಲೂ ನಮ್ಮ ಕನ್ಯೆಯಂತೆಯೇ ಇರುವಳು. ಭಾರತೀಯ ಮುಖಂಡರ ದೃಢನಿಶ್ಚಯವು ನನ್ನ ಮನಸ್ಸಿನಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿರುವದು. ಅವರ ದೃಢನಿಶ್ಚಯವು ಎಷ್ಟು ಅಭೇದ್ಯವಾಗಿರುವದೆಂಬುದನ್ನು ನನ್ನ (ಆಂಗ್ಲ) ದೇಶೀಯರು ಅರಿತುಕೊಳ್ಳದಿರುವದು ಅತ್ಯಂತ ಶೋಚನೀಯವಾದ ವಿಷಯವಾಗಿದೆ. ಆದರೆ ಅವರಿಗೆ ಆಂಗ್ಲೇಯರಲ್ಲಿ ಸ್ವಲ್ಪವೂ ದ್ವೇಷವಿಲ್ಲ. ಮಿ|| ಗಾಂಧಿಯವರ ಚಳವಳಿಯೆಂಬ ಭಯಂಕರ ವಾತಾವರಣದಲ್ಲಿಯೂ ಸಹ ಭರತಖಂಡದ ಎಲ್ಲಪಂಗಡದವರೂ ನಮ್ಮನ್ನು ಅತ್ಯಂತ ಗೌರವಬುದ್ಧಿಯಿಂದ ಕಾಣುವರು. ಆದರೆ ತಮ್ಮ ಆಡಳಿತವನ್ನು ತಾವೇ ನಡೆಯಿಸಿಕೊಳ್ಳುವ ಅಧಿಕಾರವನ್ನು ಮಾತ್ರ ಅವರು ಬಯಸುವರು. ಗುಜರಾಥದಲ್ಲಿ ಮಿ|| ಗಾಂಧಿಯವರು ಮೊದಲ್ಗೊಂಡು ಅತ್ಯಂತ ಕಡೆಯ ದರ್ಜೆಯ ಮನುಷ್ಯನೂ ಸಹ ಈ ವಿಷಯದಲ್ಲಿ ದೃಢನಿಶ್ಚಯವುಳ್ಳವನಾಗಿರುವನು. ಈ ಇಪ್ಪತ್ತನೆಯ ಶತಮಾನದಲ್ಲಿ ಹೀಗೆ ದೃಢನಿಶ್ಚಯವುಳ್ಳ 30 ಕೋಟಿ ಪ್ರಜೆಗಳ ಹಕ್ಕನ್ನು ನಾವೆಂದೂ ತಿರಸ್ಕರಿಸಬಾರದು.

ಲಾರ್ಡ್ ರೋಥರ್‌ಮೆಯರ್‌ರವರು "ಮೇಲ್" ಪತ್ರಿಕೆಯಲ್ಲಿ ಭಾರತೀಯರೆಲ್ಲರೂ ಗುಣರಹಿತರೆಂದೂ, ಅಯೋಗ್ಯರೆಂದೂ ಬರೆದಿರುವರು. ನನ್ನ ಭಾರತಮಿತ್ರರು ಇಂಥ ಕೆಲವು ಲೇಖಗಳನ್ನು ತಂದು ತೋರಿಸುವಾಗ ನನಗೆ ಸಹಿಸಲಾರದಷ್ಟು ನಾಚಿಕೆಯಾಗುವದು. ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಟ್ಟರೆ, ನಮ್ಮ ವ್ಯಾಪಾರವೇ ಹಾಳಾಗಿಹೋಗುವದೆಂದು ಅವರು ಬರೆದಿರುವರು. ಆದರೆ ಸ್ವರಾಜ್ಯವನ್ನು ಕೊಡದೆಹೋದರೆ ನಮ್ಮ ವ್ಯಾಪಾರವು ಹಾಳಾಗುವದೆಂದು ನಾನು ಧೈರ್ಯದಿಂದ ಹೇಳಬಲ್ಲೆನು. ಪಾರ್ಲಿಮೆಂಟಿನ ಎಂಥ ಪ್ರಬಲವಾದ ಕಾಯಿದೆಯೂ ಕೂಡ ಮತ್ತೊಂದು ದೇಶವನ್ನು ವ್ಯಾಪಾರದ ವಿಷಯದಲ್ಲಿ ನಿರ್ಬಂಧಪಡಿಸಲಾರದು. ಹಾಲೆಂಡ್ ದೇಶೀಯರು (ಡಚ್ಚರು) ಸ್ವಾತಂತ್ರ್ಯಸಂಪಾದನೆಗಾಗಿ ತಮ್ಮ ದೇಶದಲ್ಲಿ ಪ್ರಳಯವಾಗುವದನ್ನು ಲಕ್ಷಿಸದೆ ಹೋದಂತೆ, ಭಾರತೀಯರಾದರೂ ತಮ್ಮ ಸ್ವಾತಂತ್ರ್ಯಸಂಪಾದನೆಗಾಗಿ ಸರ್ವಸ್ವವನ್ನೂ ಸಂತೋಷದಿಂದ ಕಳೆದುಕೊಳ್ಳುವರೆಂದು ನಾನು ಸಾರಿಸಾರಿ ಹೇಳುವೆನು. ಭಾರತೀಯರು ಇಂಥ ಮಹತ್ಪ್ರಯತ್ನವನ್ನು ಮಾಡಬಲ್ಲರೆಂದು ನಾನೆಂದೂ ಭಾವಿಸಿರಲಿಲ್ಲ. ಆದರೆ ಈಗ ಭಾರತೀಯರು ಅತ್ಯಾನಂದದಿಂದ ಕಾರಾಗೃಹಕ್ಕೆ ತೆರಳುತ್ತಿರುವರಲ್ಲದೆ, ಕಂದಾಯ ನಿರಾಕರಣ ಚಳವಳಿಯನ್ನು ಮಾಡಿ ತಮ್ಮ ಆಸ್ತಿಯನ್ನೆಲ್ಲ ಸಂತೋಷದಿಂದ ಕಳೆದುಕೊಳ್ಳುತ್ತಿರುವರು. ದೇಶವೆಲ್ಲವೂ ಇಂಥ ದೇಶಭಕ್ತರಿಂದ ತುಂಬಿ ತುಳುಕುತ್ತಿರುವಾಗ, ನಿಜವಾದ ಯಾವ ಆಂಗ್ಲೇಯನುತಾನೇ ಸ್ವಭಾವತಃ ಶಾಂತರೂ, ಅಹಿಂಸಾತ್ಮಕರೂ ಆದ ಭಾರತೀಯರನ್ನು ಗೌರವಿಸದೆ ಇರಬಲ್ಲನು? ಈ ಸಂದರ್ಭದಲ್ಲಿ ದೇಶಭಕ್ತನೆನಿಸಿದ ಪ್ರತಿಯೊಬ್ಬ ಆಂಗ್ಲೇಯನೂ, ಒಂದುಪಕ್ಷ ನಮ್ಮ ಬ್ರಿಟಿಷ್‌ದೇಶವೇ ಹೀಗೆ ಪಾರತಂತ್ರ್ಯಬಂಧನದಲ್ಲಿ ಸಿಕ್ಕಿಬಿದ್ದು ಪರದೇಶೀಯರು ಎಷ್ಟೇ ನ್ಯಾಯದಿಂದ ರಾಜ್ಯಭಾರಮಾಡುತ್ತಿದ್ದರೂ, ನಾವೇನುಮಾಡುತ್ತಿದ್ದೆವೆಂಬುದನ್ನು ಯೋಚಿಸಬೇಕಾಗಿದೆ.

ಆಂಗ್ಲೇಯರೆನಿಸಿದ ನಾವು ಹಿಂದೆ ಅನೇಕ ಸಂದರ್ಭಗಳಲ್ಲಿ ಮಹಾಮಹಾ ಅದ್ಭುತಕಾರ್ಯಗಳನ್ನು ಮಾಡಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದಂತೆ ಈಗಲೂ ನಮ್ಮ ಸೌಜನ್ಯಭಾವವನ್ನು ಪ್ರಕಟಿಸಿ ಈ ವಿಷಮಸ್ಥಿತಿಯನ್ನು ಶಾಂತಗೊಳಿಸುವಂತಾಗಲೆಂದು ಪ್ರಾರ್ಥಿಸುತ್ತೇನೆ. 1910 ನೆಯ ವರ್ಷದಲ್ಲಿ ನಾವು ದಕ್ಷಿಣ ಆಫ್ರಿಕೆಗೆ ಸ್ವರಾಜ್ಯವನ್ನು ಕೊಟ್ಟು ಅದು ಸಾಮ್ರಾಜ್ಯದಲ್ಲಿ ಉಳಿಯುವಂತೆ ಮಾಡಿದೆವು. ಬೋಯರ್ ಯುದ್ಧವಾದ 14 ವರ್ಷಗಳನಂತರ ಘೋರ ಯುದ್ಧದಲ್ಲಿ ಆ ದೇಶವು ನಮಗೆ ಸರಿಸಮನಾದ ರೀತಿಯಲ್ಲಿ ಭಾಗವನ್ನು ವಹಿಸಿದ್ದಿತು. ಆ ಕಾರ್ಯವು ಲೋಕವಂದನೀಯವಾದ ನಮ್ಮ ರಾಜನೀತಿಜ್ಞತೆಯನ್ನು ವ್ಯಕ್ತಪಡಿಸುವದು. ಅಂಥ ರಾಜನೀತಿಜ್ಞತೆಯನ್ನು ಈಗಲೂ ನಾವು ಅನುಸರಿಸಬೇಕಾಗಿರುವದು.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಿಂದ ಸಂಸ್ಕೃತಭಾಷಾಮಯವಾದ ತ್ರೈಮಾಸಿಕಪತ್ರಿಕೆಯೊಂದು ಪ್ರಕಟಿಸಲ್ಪಡುತ್ತಿರುವುದು. ಆ ಪತ್ರಿಕೆಯಲ್ಲಿ ಪಾಲಘಾಟ ನಾರಾಯಣಶಾಸ್ತ್ರಿಗಳೆಂಬವರು ಒಂದು ಲೇಖವನ್ನು ಬರೆದು ಅದರಲ್ಲಿ ಅದ್ವೈತ ಸಿದ್ಧಾಂತವೇ ವ್ಯಾಸಸೂತ್ರ ಸಮ್ಮತವೆಂದೂ, ವೈದಿಕವೆಂದೂ ಉಳಿದ ಶೈವ, ವೈಷ್ಣವ ಸಿದ್ಧಾಂತಗಳು ವ್ಯಾಸಸೂತ್ರ ಸಮ್ಮತಗಳಲ್ಲವೆಂದೂ, ವೈದಿಕಗಳಲ್ಲವೆಂದೂ ಪ್ರತಿಪಾದಿಸಿರುವರು. ಈ ವಿಷಯವನ್ನು ಶೈವ ಹಾಗೂ ವೈಷ್ಣವಮತೀಯರು ನೋಡಿ ಸಂತಪ್ತರಾಗಿ ಮಹಾಜನಸಭೆಯೊಂದನ್ನು ಸೇರಿಸಿ ಅಸಂಬದ್ಧಾಭಿಪ್ರಾಯಗಳಿಂದೊಡಗೂಡಿದ ಸದರಿ ಲೇಖವನ್ನು ಸಭೆಯ ಮುಂದಿಡಲು, ಮತಮತಾಂತರಗಳಲ್ಲಿ ಪರಸ್ಪರ ವೈಷಮ್ಯವನ್ನುಂಟುಮಾಡತಕ್ಕ ಆ ಲೇಖನದ ವಿಷಯದಲ್ಲಿ ಸರ್ವರೂ ತಮ್ಮ ತಿರಸ್ಕಾರಭಾವವನ್ನು ತೋರಿಸಿದರೆಂದೂ, ಆಗ್ಯೆ ಲೇಖಕರಾದ ಸದರಿ ನಾರಾಯಣಶಾಸ್ತ್ರಿಗಳು ಹಾಗೂ ಪತ್ರಿಕಾ ಸಂಪಾದಕರಾದ ಎಚ್. ಯೋಗನರಸಿಂಹ, ಎಂ.ಎ., ಇವರು ಕ್ಷಮೆಯನ್ನು ಕೇಳಿಕೊಂಡರೆಂದೂ ತಿಳಿದುಬರುತ್ತದೆ. ಬ್ರಾಹ್ಮಣ ಬ್ರಾಹ್ಮಣೇತರವೆಂಬ ಭೇದದಿಂದ ಇಡೀ ಭರತಖಂಡವೇ ಅಲ್ಲೋಲಕಲ್ಲೋಲವಾಗುತ್ತಿರುವ ಈ ವಿಷಮಸಮಯದಲ್ಲಿ ಬ್ರಾಹ್ಮಣಪದವಾಚ್ಯರಾದ ಶೈವ-ವೈಷ್ಣವ-ಸ್ಮಾರ್ತರು ತಮ್ಮತಮ್ಮೊಳಗೆ ಈ ರೀತಿಯಾಗಿ ಕಲಹವನ್ನೆಬ್ಬಿಸುವದನ್ನು ನೋಡಿದರೆ ವ್ಯಸನವೆನಿಸುತ್ತದೆ. ಇನ್ನು ಮುಂದೆಯಾದರೂ ಸಂಪಾದಕರು ಈ ತರಹದ ಅಸಂಬದ್ಧ ಲೇಖಗಳಿಗೆ ಅವಕಾಶವನ್ನು ಕೊಡದೆ ಪರಸ್ಪರ ಪ್ರೇಮಭಾವವನ್ನುಂಟುಮಾಡತಕ್ಕ ಲೇಖಗಳನ್ನೇ ಪ್ರಕಟಿಸುತ್ತ ಮಹಾಜನಗಳ ಪ್ರೀತಿಗೆ ಪಾತ್ರರಾಗಬೇಕೆಂದು ಆಶಿಸುತ್ತೇವೆ.

ವಿಜಾಪುರ ಡಿಸ್ಟ್ರಿಕ್ಟಿನಲ್ಲಿ ಯಾರೋ ಒಬ್ಬರು ತಾವು ಪರ್ವತಪೀಠಾಧಿಪತಿಗಳೆಂದು ಹೇಳಿಕೊಳ್ಳುತ್ತ ಸಂಚಾರಮಾಡಹತ್ತಿದ್ದಾರೆಂದು ತಿಳಿದುಬರುತ್ತದೆ. ಅವರು ಯಾರೆಂಬುದನ್ನು ತಿಳಿದುಕೊಳ್ಳಬೇಕಾದರೆ ಗುಂತಕಲ್ಲಿನಲ್ಲಿರುವ ಮೂಲಪೀಠಾಧಿಪತಿಗಳಾದ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಸನ್ನಿಧಿಯ[illegible]ಕೆ ಮಾಡಿಕೊಂಡು ಯಥಾರ್ಥ ವಿಷಯವನ್ನು [illegible]ದುಕೊಂಡು ಅದರಂತೆ ವರ್ತಿಸಬೇಕು.

ಸ್ವಾತಂತ್ರ್ಯಸಂಗ್ರಾಮ ವಾರ್ತೆ.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಆಕ್ಟಿಂಗ್ ಪ್ರೆಸಿಡೆಂಟರಾದ ಮೌಲಾನಾ ಅಬ್ದುಲ್‌ಕಲಾಂ ಆಜದ್‌ರವರು ಇದೇ ಆಗಸ್ 21 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ದಸ್ತಗಿರಿಮಾಡಲ್ಪಟ್ಟರು. ಆಗಸ್ಟ 7 ನೆಯ ತಾರೀಖಿನ ದಿವಸ ಇವರು ಮೀರತ್ ನಗರದಲ್ಲಿ ಮಾಡಿದ್ದ ಭಾಷಣವೇ ಇವರ ದಸ್ತಗಿರಿಗೆ ಕಾರಣವೆಂದು ತಿಳಿದುಬಂದಿರುವುದು. ಮುಂಬಯಿ, ಕಲ್ಕತ್ತಾ, ಅಲಹಾಬಾದ್, ದೆಹಲಿ ಮೊದಲಾದ ಕಡೆಗಳಲ್ಲೆಲ್ಲ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಮುಂಬಯಿ ಸರಕಾರದವರು ಅಹಮದನಗರ, ಸಾತಾರಾ, ನಾಸಿಕ್, ಪೂರ್ವ ಮತ್ತು ಪಶ್ಚಿಮ ಖಾಂದೇಶಗಳಲ್ಲಿರುವ ಎಲ್ಲ ಕಾಂಗ್ರೆಸ್‌ಕಮಿಟಿಗಳೂ ಕಾಯಿದೆ ಭಂಗದ ಮಂಡಳಿಗಳೂ, ಅಸಹಕಾರ ಸಂಘವೂ ಸತ್ಯಾಗ್ರಹ ಕಮಿಟಿಗಳೂ ಮತ್ತು ಸಂಗ್ರಾಮಕೂಟಗಳು ಅಕ್ರಮಕೂಟಗಳಾಗಿರುವವೆಂದೂ, ಇದರಿಂದ ಪ್ರಜಾಸೆಮ್ಮದಿಗೆ ಭಂಗವುಂಟಾಗಿರುವದೆಂದೂ ಈ ಮೇಲ್ಕಂಡ ಕೂಟದವರು ಬೇರೆ ಹೆಸರಿನಿಂದಲೂ ಸಹ ಕಾರ್ಯಕ್ರಮಗಳನ್ನು ನಡೆಯಿಸಕೂಡದೆಂದೂ ವಿಶೇಷ ಗೆಜೆಟ್ ಒಂದನ್ನು ಹೊರಡಿಸಿರುತ್ತಾರೆ.

ಪಂಡಿತ ಮದನಮೋಹನ ಮಾಳವೀಯರವರು ಮಿ|| ವಿಠಲಭಾಯ್ ಪಾಟೀಲ್‌ರವರೊಡನೆ ಗುಜರಾಥಕ್ಕೆ ಸೇರಿದ ಕೈರಾ ಡಿಸ್ಟ್ರಿಕ್ಟಿನ ಗ್ರಾಮಾಂತರಗಳಲ್ಲಿ ರಾಷ್ಟ್ರೀಯ ಪ್ರಚಾರ ಕಾರ್ಯೋದ್ದೇಶದಿಂದ ಸಂಚಾರ ಹೊರಟಿರುವರು.

ನೈನಿ ಜೈಲಿನಲ್ಲಿರುವ ಪಂಡಿತ ಮೋತೀಲಾಲ್ ನೆಹರೂರವರ ದೇಹಸ್ಥಿತಿಯು ಅತ್ಯಂತ ಘಾಬರಿಯನ್ನುಂಟುಮಾಡುವ ಸ್ಥಿತಿಯಲ್ಲಿರುವದು. 22 ನೆಯ ಶುಕ್ರವಾರ ರಾತ್ರಿ ಡಾಕ್ಟರ್ ಅನ್ಸಾರಿಯವರು ತಮ್ಮ ದೇಹಸ್ಥಿತಿಯು ನೆಟ್ಟಗಿಲ್ಲದಿದ್ದರೂ, ಕೂಡಲೆ ಅಲಹಬಾದಿಗೆ ಹೊರಟರು. ಪಂಡಿತ ಮೋತಿಲಾಲ್‌ರವರು ಜ್ವರಪೀಡಿತರಾಗಿರುವುದಲ್ಲದೆ ರಕ್ತವನ್ನು ಕಾರುವರೆಂದೂ ತಿಳಿದುಬಂದಿದೆ.

ಪಂಡಿತ ಮೋತೀಲಾಲ್‌ರವರ ಕಾಯಿಲೆಯ ವರ್ತಮಾನವನ್ನು ಕೇಳಿದ ಕೂಡಲೇ ಕಲ್ಕತ್ತೆಯ ಡಾಕ್ಟರ್ ಬಿ. ಸಿ. ರಾಯ್ ಮತ್ತು ಸರ್ ನೀಲರತನ್ ಸರ್ಕಾರದವರು ಡೆಹರಾಡೂನ್ ಎಕ್ಸ್‌ಪ್ರೆಸ್ಸಿನಲ್ಲಿ ಅಲಹಾಬಾದಿಗೆ ಹೊರಟಿರುವರು.

ಇದೇ ಆಗಸ್ಟ 22 ನೆಯ ತಾರೀಖಿನ ಬೆಳಿಗ್ಗೆ ಅಲಹಾಬಾದಿನ "ಆನಂದಭವನ" ಮತ್ತು "ಸ್ವರಾಜ್ಯಭವನ" ಗಳನ್ನು "ಲಾ ಜರ್ನಲ್ ಪ್ರೆಸ್ಸ"ನ್ನು ಜಪ್ತು ಮಾಡಿದರು. "ಲಾ ಜರ್ನಲ್ ಪ್ರೆಸ್ಸಿ"ನಲ್ಲಿ ದೊರೆತ "ಪಟೇಲ್ ಪೇಷಾವರ್ ರಿಪೋರ್ಟಿನ" 75 ಪ್ರತಿಗಳನ್ನು ಪೋಲೀಸರು ತೆಗೆದುಕೊಂಡು ಹೋದರೆಂದು ತಿಳಿದುಬಂದಿರುವದು. ಅಲ್ಲದೆ ಮಧ್ಯಪ್ರಾಂತದ ಸರ್ಕಾರದವರು ಸದರೀ ರಿಪೋರ್ಟನ್ನು ಬಹಿಷ್ಕರಿಸಿರುವರು.

ಇದೇ ಆಗಸ್ಟ 23 ನೆಯ ತಾರೀಖಿನ ದಿವಸ ಪಾಟಿಯಾಲಾ ಮಹಾರಾಜರವರು ಲಂಡನ್ನಿನಲ್ಲಿ ನಡೆಯಲಿರುವ ದುಂಡುಮೇಜಿನ ಪರಿಷತ್ತಿಗಾಗಿ "ಮ್ಯಾಸಿಡೋನಿಯಾ" ನಾಮಕವಾದ ಮೇಲ್ ಹಡಗಿನಲ್ಲಿ ಪರಿವಾರ ಸಮೇತರಾಗಿ ಇಂಗ್ಲಂಡಿಗೆ ಹೊರಟರು. 22 ನೆಯ ತಾರೀಖಿನ ದಿವಸ ಅವರು ಮುಂಬಯಿಯ ಕಾಂಗ್ರೆಸ್ ಆಸ್ಪತ್ರೆಗೆ ಹೋಗಿದ್ದರೆಂದು ತಿಳಿದುಬಂದಿದೆ.

ಮೌಲಾನಾ ಅಬ್ದುಲ್‌ಕಲಾಂ ಆಜದ್‌ರವರನ್ನು ದಸ್ತಗಿರಿಮಾಡಿದ್ದರಿಂದ ಮುಂಬಯಿಯ 15 ಗಿರಣಿಗಳ ಸುಮಾರು 30,000 ಕೂಲಿಕಾರರು ಹರತಾಳವನ್ನಾಚರಿಸಲು ಕೆಲಸಕ್ಕೆ ಹೋಗದಿರಲು, ಸದರಿ 15 ಗಿರಣಿಗಳ ಮಾಲಕರು ಗಿರಣಿಗಳನ್ನೇ ಮುಚ್ಚಿಬಿಟ್ಟರು. ಇದುವರೆಗೆ ಒಟ್ಟು 34 ಗಿರಣಿಗಳು ನಿಂತಿರುವವು.

ವಿಜಾಪೂರ ಡಿ|| ಗುಳೇದಗುಡ್ಡದಲ್ಲಿ ತಾ|| 18-8-30 ಸೋಮವಾರ ದಿವಸ ಗಾಂಧಿಚೌಕಿನಲ್ಲಿ ವೇ|| ಪಂಚಾಕ್ಷರಶಾಸ್ತ್ರಿಗಳು ಶಿರೋಳ ಇವರು ಖಾದಿಪ್ರಚಾರ ಹಾಗೂ ಮದ್ಯಪಾನ ನಿಷೇಧದ ಬಗ್ಗೆ ಭಾಷಣಮಾಡಿದರೆಂದೂ ಆ ದಿವಸ ಸಭೆಗೆ ಹತ್ತುಸಹಸ್ರ ಜನರು ಕೂಡಿದ್ದರೆಂದೂ ತಿಳಿದುಬರುತ್ತದೆ.

[3 ನೇ ಪುಟದಿಂದ ಮುಂದುವರಿದುದು]

ವಿಳಂಬವಾಗಬಹುದೆಂದು ತಾ॥ 18 ರಲ್ಲಿ ರಜಾಕ್ಕೆ ಅರ್ಜಿಹಾಕಿದೆನು. ನನ್ನ ದುರದೃಷ್ಟಕ್ಕೆ ಸರಿಯಾಗಿ ಪಾರುಪತ್ತೇಗಾರರು ಬಂದು ಆ ಮರುದಿನ ಶ್ರೀ ಉತ್ತರಾದಿಮಠದ ಸ್ವಾಮಿಗಳವರು ಅರಮನೆಗೆ ದಯಮಾಡುತ್ತಾರೆಂದೂ, ದೇವಸ್ಥಾನದಲ್ಲಿ ಬೇಗ ಪೂಜೆ ನಡೆದು ಪ್ರಸಾದವನ್ನು ಅರಮನೆಗೆ ಕಳುಹಿಸಬೇಕೆಂದೂ ಹೇಳಿ ನನ್ನನ್ನು ನಿಲ್ಲಿಸಿಕೊಂಡರು.

ಕಳುವಿನ ರಾತ್ರಿ.

ತಾ॥ 19 ರಲ್ಲಿ ನಾನು ದೇವಸ್ಥಾನದಲ್ಲೇ ಯೋಚಿಸುತ್ತ ಅಲ್ಲಿಯೇ ಕುಳಿತಿದ್ದೆನು. ದೇವಸ್ಥಾನದ ಹಿತ್ತಾಳೆ ಬಾಗಲನ್ನು ಹಾಕಿಕೊಂಡುಹೋದರು. ನಾನು ಸಾಯಂಕಾಲವಾಗುವ ತನಕ ಒಳಗೇ ಇದ್ದೆನು. ರಾತ್ರಿಯೂ ಅಲ್ಲೇ ಇದ್ದೆನು. ರಾತ್ರಿ ದೇವರ ಪೂಜೆ ಆಗುವಾಗ ರಾಮದೇವರ ಗುಡಿಯಲ್ಲಿ ಕದದಹಿಂದೆ ಇದ್ದೆನು. ನಾನಿದ್ದುದನ್ನು ಯಾರೂ ನೋಡಲಿಲ್ಲ. ಎಲ್ಲರೂ ಬಾಗಲು ...

ಹೊರಗೆ ಹೋಗುವ ಯೋಚನೆ.

ಕಿಟಿಕಿ ಸಲಾಕಿಯನ್ನು ಎಳೆದೆನು. ಅದು ಕೈಗೆ ಬಂದುಬಿಟ್ಟಿತು. ಅದನ್ನು ಗುಡಿಯೊಳಗಿರುವ ಬಚ್ಚಲಿಗೆ ನುಗ್ಗಿಸಿ ಬಗ್ಗಿಸಿ ತಂದು ಕಿಟಿಕಿಯ ಹತ್ತಿರ ಇಟ್ಟೆನು. ಉಳಿದ ಸಾಮಾನೆಲ್ಲಾ ಅಲ್ಲೇ ಬಿಟ್ಟು ಕಟ್ಟಿದ್ದ ಗಂಟನ್ನು ಮಾತ್ರ ತೆಗೆದುಕೊಂಡು ಹೊರಗೆ ಬಂದೆನು. ಭಾವಿಯ ಹತ್ತಿರ ಇದ್ದ ಹಗ್ಗವನ್ನು ಕೊಯಿದು ದೇವಸ್ಥಾನದ ಆವರಣದ ಗೋಡೆಯ ಕಪೋತಕ್ಕೆ ಕಟ್ಟಿ ಹಗ್ಗವನ್ನು ಹೊರಕ್ಕೆ ಇಳೀ ಬಿಟ್ಟು ಅದಕ್ಕೆ 7-8 ಗಂಟು ಹಾಕಿ ಹಿಡಿದುಕೊಂಡು ಹೊರಕ್ಕೆ ಇಳಿದು ಪಾರಾದೆನು.

ಅಲ್ಲಿಂದ ಮುಂದೆ ಮಾಡಿದ ಕಾರ್ಯಗಳು.

ಪಶ್ಚಿಮದ ಕೋಟೆಬಾಗಿಲಿನಿಂದ ಹೊರಟು ದೊಡ್ಡ ಆಸ್ಪತ್ರೆಯ ತನಕ ಹೋಗುವಷ್ಟರಲ್ಲಿ ಒಂದು ಗಾಡಿಯು ಬರುತ್ತಿತ್ತು. ಅದಕ್ಕೆ ಬಾಡಿಗೆ ಗೊತ್ತುಮಾಡಿ ಹತ್ತಿಕೊಂಡು ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿಗೆ ಮೈಸೂರಿನಿಂದ ಬಂದ ಮೋಟಾರ್ ಬಸ್ಸಿಗೆ ರೂ. 2-8-0 ಛಾರ್ಜು ಕೊಟ್ಟು ಹತ್ತಿ ಕುಣಿಗಲ ಮಾರ್ಗವಾಗಿ ಬೆಂಗಳೂರಿಗೆ ...

ಜಿಗೆ ಮಾರಿದೆನು. ಈಗ ಪೋಲೀಸಿನವರ ವಶದಲ್ಲಿರುವ ಬಟ್ಟಿಹಾಗಿರುವ ಚಿನ್ನದ ಗಟ್ಟಿಯೇ ಅದು. ದೇವಸ್ಥಾನದ ಆಭರಣಗಳ ಚೂರುಗಳನ್ನು ಕರಗಿಸಿದ ಗಟ್ಟಿಯೇ ಅದು. ಅವನ್ನು ಆತ್ಮಾರಾಮನು ಕರಗಿಸಿಕೊಟ್ಟನು. ಬೆಂಗಳೂರಿನಲ್ಲಿ ಪೋಲೀಸಿನವರಿಗೆ ಪಂಚಾಯತರ ಮುಂದೆ ನಾನು ಬಚ್ಚಲ ಮನೆಯಿಂದ ತಂದಿಟ್ಟ ಚಿನ್ನದ ತುಂಡುಗಳ ಗಂಟುಗಳೇ ಕೋರ್ಟಿನಲ್ಲಿರತಕ್ಕವು. ಈ ಆಭರಣಗಳನ್ನೆಲ್ಲಾ ದೇವರಿಗೆ ವಾಪಸು ಕೊಡಬೇಕೆಂಬುವುದೇ ನನ್ನ ಉದ್ದೇಶವಾಗಿತ್ತು. ದೇವಸ್ಥಾನದ ಭಾವಿಯಲ್ಲಿ ಅವನ್ನು ಹಾಕೋಣ ಎಂದು ಯೋಚಿಸಿದ್ದೆನು. ದುರುಪಯೋಗ ಮಾಡಬೇಕೆಂಬ ಯೋಚನೆ ಇರಲಿಲ್ಲ. ಪಂಡಿತ ಶ್ರೀನಿವಾಸಯ್ಯಂಗಾರ್ರು ಕೇಳದರೆ ಕೊಡುವುದಕ್ಕೆಂದು ಚಿನ್ನದ ತುಂಡುಗಳನ್ನು ತೆಗೆದುಕೊಂಡು ಹೋದದ್ದೂ, ಅವನ್ನು ಬಚ್ಚಿಟ್ಟದ್ದೂ ಉಂಟು. ಕಳುವಾಗಿದೆ ಎಂದು ಹೇಳುವ ಆಭರಣಗಳ ಬೆಲೆ ಈಗ 9,000 ರೂ. ಆಗುವುದಿಲ್ಲ. ಅವು ನೂರಾರು ವರುಷಗಳ ಹಳೇ ನಗಗಳು. ...

ಡಾ॥ ಎ. ಜಿ. ರಾಮರವರು ಈ ರೋಗಕ್ಕಾಗಿ ನನಗೆ ಅನೇಕ ಸಾರೆ ಇಂಜಕ್ಷನ್ ಮಾಡಿದ್ದಾರೆ. ಈಗಲೂ ಜೈಲಿನಲ್ಲಿ ಡಾ॥ ಬಾಬುರಾಯರು ನನ್ನ ರೋಗವನ್ನು ತಿಳಿಸಿದ್ದಾರೆ. ಅವರಿಬ್ಬರನ್ನೂ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿದರೆ ಸಾಕಾಗಿದೆ.

ಮ್ಯಾಜಿಸ್ಟ್ರೇಟರು ಈ ಡಾಕ್ಟರುಗಳ ವಿಚಾರಣೆಗೂ, ಆರ್ಗ್ಯುಮೆಂಟಿಗೂ ಹೀರಿಂಗ್ ಇಟ್ಟಿದ್ದಾರೆ.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ರಮಿಂವಾರು ಊದುಬತ್ತಿಗಳು, ಪರಿಮಳದಶಾಂಗ ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಸ್ತಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಅರಶಿಕರ್ಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

5

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ತೇಜಿತ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿದ್ದಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[4]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ತೆರಗು ಕರೆಯುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಎನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ॥ ಮಿರಜ.

ಶ್ರೀ ರುದ್ರವಿಲಾಸ ಬುಕ್‌ಡಿಪೊ, ಗದಗ.

ಇಲ್ಲಿ ದೊರೆಯುವ

ಸಚಿತ್ರ ಶ್ರೀ ದೇವೀಪುರಾಣವು.

ಇದನ್ನು

ಶಿ. ಮೂ. ಶಿದ್ಧಲಿಂಗಾರ್ಯ ಸಾಲಿಮಠ, ರೋಣ.

ಇವರು ಚನ್ನಾಗಿ ಪರಿಶೋಧಿಸಿ ಇವರ ಪೂಜಾವಿಧಿ, ಕಠಿಣ ಶಬ್ದಗಳಿಗೆ ಅರ್ಥ, ಸಹವಾಗಿ ಬರೆದು, ಬೇರೆ ಬೇರೆ ಫುಟಗಳಿಂದ ಊ, ದಪ್ಪ ಕಾಗದಗಳಲ್ಲಿ ದೊಡ್ಡ ಅಕ್ಷರಗಳಿಂದಲೂ, ಕೆಲವು ಚಿತ್ರಗಳಿಂದಲೂ, ಅಚ್ಚುಗೊಳಿಸಿ, ಪ್ರಸಿದ್ಧಪಡಿಸಿರುವರು. ಇದು ಸರ್ವರಿಗೂ ಪಾರಾಯಣಕ್ಕೆ ಬಹು ಯೋಗ್ಯವಾಗಿರುತ್ತದೆ. ಇದರಲ್ಲಿರುವ ೫೦ ವಿಷಯಗಳನ್ನು ಕೆಳಗೆ ವಿವರಿಸಿದೆ.

೧ ಶ್ರೀ ದೇವಿಮಹಾತ್ಮೆಯ ಪೂಜಾವಿಧಾನವು. ೨ ಸ್ನಾನಮಾಡುವ ಕ್ರಮವು. ೩ ಅನುಷ್ಠಾನಕ್ಕೆ ಕೂಡ್ರುವ ದಿಕ್ಕುಗಳು. ೪ ಹಾಸುವ ಆಸನಗಳ ಭೇದವು. ೫ ಕೂಡ್ರುವ ಆಸನಕ್ರಮ. ೬ ಅನುಷ್ಠಾನ ಮಾಡುವ ಕ್ರಮವು. ೭ ವಿಭೂತಿ ಮಾಡುವ ಕ್ರಮವು. ೮ ವಿಭೂತಿ ವಿಧಾನ ಗೋಚರ ಚಕ್ರವು. ೯ ವಿಭೂತಿ ಧಾರಣ ಸ್ಥಾನಗಳು. ೧೦ ರುದ್ರಾಕ್ಷಿ ಧಾರಣ ಫಲಗಳು. ೧೧ ದೇವತಾರ್ಚನ ಭೇದವು. ೧೨ ದೇವತಾರಾಧನ ಫಲಕ್ರಮವು. ೧೩ ದೇವತಾರ್ಚನಾ ಕ್ರಮವು. ...

... ೪೩ ಮಂಗಳಾಂತಿ ಪದವು. ೪೪ ಮಂಗಲ ನೀರಾಜನವು. ೪೫ ಪುಷ್ಪಾಂಜಲಿಯು. ೪೬ ಪ್ರದಕ್ಷಿಣೆಯು. ೪೭ ನಮಸ್ಕಾರವು. ೪೮ ಪ್ರಾರ್ಥನೆಯು. ೪೯ ಅರ್ಘ್ಯಪ್ರದಾನವು. ೪೯ ವಿಸರ್ಜನ ಪೂಜೆಯು. ೫೦ ಕಠಿಣ ಶಬ್ದಗಳ ಅರ್ಥವು.

ಈ ಪ್ರಕಾರ ಯಾವತ್ತು ಮಹತ್ವದ ವಿಷಯಗಳಿಂದೊಡಗೂಡಿದ ಈ ದೇವೀಮಹಾತ್ಮೆಯ ಎರಡನೇ ಆವೃತ್ತಿಯ ಪ್ರತಿಗಳು ಖರ್ಚಾಗಿ ಇನ್ನು ಸ್ವಲ್ಪವೇ ಶಿಲ್ಕು ಉಳಿದಿರುತ್ತವೆ. ಬೇಕಾದವರು ತೀವ್ರವಾಗಿ ತರಿಸಿಕೊಳ್ಳಬೇಕು.

ಕ್ರಯ ಐದು ರೂಪಾಯಿ 5-0-0

ವಿಳಾಸ—**ಎಸ್. ಸಿ. ಸಾಲಿಮಠ ಎಂಡ ಸನ್ಸ,**
ಬುಕ್‌ಸೇಲರ್ಸ ಎಂಡ ರಬ್ಬರ ಸ್ಟ್ಯಾಂಪ ಮೇಕರ್ಸ,
ಗದಗ ಸಿಟಿ.
[4] **ಪೋಸ್ಟ ಗದಗ. ಜಿಲ್ಲಾ ಧಾರವಾಡ.**

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ... ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ... ಲಾಕೆಟ ೧ ಕ್ಕೆ ೩ ಆಣೆ. ... ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ಬಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಚಳಿಯು ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜಾಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಾಕವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[19] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕರಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಥಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪಣವ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಏಕಾಂತ, ಹಳೇ ಪರಮ, ಗರಮಿದೋಷ ಯಾವ ತರದ ರೋಗದಿಂದ ಎಷ್ಟು ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ತೇಜಿತ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿದ್ದಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರಸಿಕರು ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೪೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[2]

ಪತ್ತೆ :—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವವಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣು ಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ ? ಅದರ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿರೋಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ತಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

ಟಿಕ್ಚರು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[3] **ಮಲೇರಿಯಾನ ಕಂಪೆನಿ,** ನಂಬ್ರ 21 ತುಂಪಸಕಟ್ಟೆ, **ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ.
ಬೆಲೆ ೧ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ ೦—೦—೬

ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ ೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ಶತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,
[46] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರ್ಛೆಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಷ್ಟೋ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[7] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು:—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಸೆಪ್ಟಂಬರ್ ೧೯೩೦ [ಸಂಚಿಕೆ ೧೮.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಮೈಸೂರು ಶ್ರೀಮನ್ಮಹಾರಾಜರವರ ಕ್ಷೇತ್ರಯಾತ್ರೆ.

ಕೇದಾರನಾಥ.

ಕಳೆದ ವಾರದ ಪತ್ರಿಕೆಯಲ್ಲಿ ಪ್ರಸಿದ್ಧವಾದ ಶ್ರೀಮನ್ಮಹಾರಾಜರವರ ಯಾತ್ರಾ ವಿಷಯವನ್ನು ಸರ್ವರೂ ಓದಿ ಸಂತುಷ್ಟರಾಗಿರಬಹುದು. ಶ್ರೀಮನ್ಮಹಾರಾಜರವರು ತಾ|| 13-8-30 ನೆಯ ದಿವಸ ಶ್ರೀ ಕೇದಾರಕ್ಷೇತ್ರದಿಂದ ಹೊರಟು ಪ್ರಾತಃಕಾಲ 9 ಘಂಟೆಗೆ ಶ್ರೀ ಗೌರೀಕ್ಷೇತ್ರಕ್ಕೆ ದಯಮಾಡಿಸಿದರು. ಇಲ್ಲಿ ಸ್ನಾನ ಪೂಜಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಒಂದು ರಾತ್ರಿ ವಾಸಮಾಡಿ 14-8-30 ಕ್ಕೆ ಪುನಃ ಘಾಟಾ ಚಟ್ಟಿಗೆ ದಯಮಾಡಿಸಿದರು. ಇಲ್ಲಿಂದ 15-8-30 ಕ್ಕೆ ಗುಪ್ತಕಾಶಿಗೆ ದಯಮಾಡಿಸಿ ಅಲ್ಲಿರುವ ಗಂಗಾ, ಯಮುನಾ, ಮಣಿಕರ್ಣಿಕಾದಿ ತೀರ್ಥಗಳಲ್ಲಿ ಸ್ನಾನಾದಿ ಕ್ರಿಯೆಗಳನ್ನು ತೀರಿಸಿಕೊಂಡು ಅಲ್ಲಿಂದ ಮೂರು ಮೈಲು ದೂರದಲ್ಲಿರುವ ಶ್ರೀ ಜಗದ್ಗುರು ಏಕೋರಾಮ ಪೀಠಕ್ಕೆ ಕುಟಿಭೂರ್ತರಾಗಿ ಕೆಲವು ಸಿಬ್ಬಂದಿಯೊಡನೆ 11 ಘಂಟೆಗೆ ದಯಮಾಡಿಸಿದರು. ಉಷಾಮಠದಲ್ಲಿ ಶ್ರೀ ಜಗದ್ಗುರು ಮಹಾಸನ್ನಿಧಿಯ ಅಪ್ಪಣೆಯಮೇರೆಗೆ ಸರ್ವ ಇನಾಮುಗ್ರಾಮ ನಿವಾಸಿಗಳು, ವಿದ್ಯಾರ್ಥಿಗಳು, ಪಂಡಿತರು ವಾದ್ಯವೈಭವದೊಡನೆ ಶ್ರೀಮನ್ಮಹಾರಾಜರವರನ್ನು ಸ್ವಾಗತಮಾಡಿದರು. ಮಹಾರಾಜರವರು ಮಠದಲ್ಲಿ ಪುನಃ ಸ್ನಾನಾದಿ ನಿತ್ಯವಿಧಿಗಳನ್ನು ತೀರಿಸಿಕೊಂಡು ಶ್ರೀ ಜಗದ್ಗುರುಗಳವರ ದರ್ಶನಕ್ಕಾಗಿ ಬಹು ಮೂಲ್ಯಗಳಾದ ವಸ್ತ್ರಾಭರಣ ಕಾಣಿಕಾದಿಗಳನ್ನು ತೆಗೆದುಕೊಂಡು ಸನ್ನಿಧಿಗೆ ಸಮರ್ಪಿಸಿದರು. ಮಹಾಪ್ರಭುಗಳು ಕೆಲವು ಹೊತ್ತು ಶ್ರೀ ಜಗದ್ಗುರುಗಳ ಸಂಗಡ ಸಂಭಾಷಣವನ್ನು ಮಾಡಿ ಮಹಾಸನ್ನಿಧಿಯಿಂದ ಆಶೀರ್ವಾದವನ್ನು ಹೊಂದಿದರು. ಆ ಮೇಲೆ ಜಗದ್ಗುರುಗಳವರ ಆಗ್ರಹದ ಮೇರೆಗೆ ಮಹಾಪ್ರಭುಗಳು ಸಂಸ್ಥಾನಮಠದಲ್ಲಿಯೇ ಹಿಮಾಲಯ ಪರ್ವತಪ್ರದೇಶದ ಫಲಾದಿಗಳನ್ನು ಸೇವಿಸಿ ಪುನಃ ಜಗದ್ಗುರು ಮಹಾಸನ್ನಿಧಿಯ ಆಶೀರ್ವಾದವನ್ನು ಹೊಂದಿ ಸಂಸ್ಥಾನದ ಅಧಿಪತ್ಯಕ್ಕೊಳಪಟ್ಟಿರುವ ಗುಪ್ತಕಾಶೀಕ್ಷೇತ್ರಕ್ಕೆ ದಯಮಾಡಿಸಿದರು. ಇದೇ ದಿನ ಶ್ರೀ ಜಗದ್ಗುರು ಮಹಾಸನ್ನಿಧಿಯವರು ಗುಪ್ತಕಾಶಿಗೂ ದಯಮಾಡಿಸಿ ಶ್ರೀ ವಿಶ್ವನಾಥನ ದರ್ಶನವನ್ನು ಮಾಡಿಸಿ ಆಶೀರ್ವಾದವನ್ನು ಕೊಟ್ಟು ಪುನಃ ಉಷಾಮಠಕ್ಕೆ ದಯಮಾಡಿಸಿದರು. ಪರಮಾಸ್ತಿಕರಾದ ಈ ಮಹಾಪ್ರಭುಗಳು ಸಾಕ್ಷಾತ್ ಪರಮಾತ್ಮನ ಅಂಶೀಭೂತರೆಂದೂ ಶಕಪುರುಷರೆಂದೂ ಹೇಳುವವರಲ್ಲಿ ಏನೂ ಸಂಶಯವಿಲ್ಲ. ಏಕೆಂದರೆ, ಈ ಮಹಾರಾಜರಂತೆ ಶ್ರೀ ಕೇದಾರಕ್ಷೇತ್ರಕ್ಕೆ ಪ್ರತಿ ವರ್ಷ ಅನೇಕಜನ ಮಹಾರಾಜರೂ ಮಹಾರಾಣಿಯವರೂ ದಯಮಾಡಿಸುವ ಪದ್ಧತಿಯುಂಟು. ಆದರೆ ಅವರಿಗೆಲ್ಲ 1 ರಾತ್ರಿ ಇಲ್ಲಿ ವಾಸಮಾಡುವುದು ಬಹಳ ದುಸ್ತರವಾಗುವದು. ಮಹಾಕರ್ಮಠರೂ ದೈವಭಕ್ತರೂ ಆದ ಮೈಸೂರು ಶ್ರೀಮನ್ಮಹಾರಾಜರವರು 5 ದಿವಸಗಳವರೆಗೆ ಪದ್ಧತಿಪ್ರಕಾರ ಏಕಭುಕ್ತರಾಗಿಯೇ ನಿತ್ಯಕರ್ಮಾನುಷ್ಠಾನಗಳನ್ನು ಮಾಡುತ್ತ ಬಹು ಸಂತೋಷದಿಂದಿರುತ್ತಿದ್ದುದನ್ನು ನೋಡಿದರೆ ಹಿಂದಣ ಜನಕಾದಿ ಮಹಾರಾಜರ ಸ್ಮರಣೆಯು ಹೃದಯದಲ್ಲಿ ಉದ್ಬೋಧವಾಗುತ್ತದೆ. ಇಂಥ ಧರ್ಮನಿಷ್ಠರಾದ ಮಹಾಪ್ರಭುಗಳಿಗೆ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಾದಿ ಸಕಲ ಸಂಪತ್ತನ್ನುಂಟುಮಾಡಲೆಂದು ಅನನ್ಯಭಕ್ತಿಭಾವದಿಂದ ಪ್ರಾರ್ಥಿಸುವ,

ಅರ್ಚಕ—ಜಯಲಿಂಗ.

ಸ್ವೀಕಾರ.

ಸೊಲ್ಲಾಪುರ ವಾರದ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ರಾವುಲಡಕಿ ಬೃಹನ್ಮಠದ ಸದಾಶಿವಶರ್ಮ ಎಂಬವರು ಜಗದಾಚಾರ್ಯರ ಕೃಪಾಬಲದಿಂದ ಕಾವ್ಯಾನ್ಯಪರೀಕ್ಷೆಯಲ್ಲಿ ಪಾಸಾದ ಸಂತೋಷಕ್ಕಾಗಿ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ನೈಜಾಮ ಇಲಾಖಾ ಬರದಾಪುರಮಠದ ಪಟ್ಟಾಧ್ಯಕ್ಷಸ್ವಾಮಿಗಳವರು ಪ್ರಭಾಪೋಷಣಕ್ಕೋಸ್ಕರ 3 ರೂಪಾಯಿಗಳನ್ನು ಕಳುಹಿಸಿದ್ದಾರೆ.

ರಾಜಧಾನಿಯಲ್ಲಿರುವ ಮ|| ರಾ|| ಡಾಕ್ಟರ್ ಸಿದ್ಧಪ್ಪನವರು ತಮ್ಮ ಮನೆಯಲ್ಲಿ ಎಳೆಮಗು ಚಿ|| ಸಾಂಬಮೂರ್ತಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಕೇದಾರಸಂಸ್ಥಾನದಲ್ಲಿ ಚಡಿ ಕೆಲಸ ಮಾಡುತ್ತಿದ್ದ ಮಹಾದೇವಪ್ಪ ಚನ್ನಳ್ಳಿ ಈತನು ಶಿವಾಧೀನನಾದ ಸಮಯದಲ್ಲಿ ಪ್ರಭಾಪೋಷಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ವೇ|| ಕೊಟ್ರಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಕುಷ್ಟಿಗಿ ಯಳಿಮಲೆ ಹಿರೇಮಠದ ಸೌ|| ಸಿದ್ಧಲಿಂಗಮ್ಮನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ವೇ|| ಶಿವದೇವಶಾಸ್ತ್ರಿಗಳು ಮೃತರ ಆತ್ಮಶಾಂತ್ಯರ್ಥವಾಗಿ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಸೊರಬ ತಾ|| ಹೆಗ್ಗೋಡು ಮ|| ರಾ|| ಪುಟ್ಟಪ್ಪಗೌಡರು ತಮ್ಮ ನೂತನ ಗೃಹಪ್ರವೇಶಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ|| ಷ|| ಬ್ರ|| ಕ್ಯಾಸನೂರು ಬೃಹನ್ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಯಡತೊರೆ ತಾ|| ಬಳ್ಳೂರು ಗ್ರಾಮದ ಮ|| ರಾ|| ಬಸಪ್ಪನವರ ಕೈಲಾಸಗಣಾರಾಧನೆಯು ನೆರವೇರಿದ ಸಮಯದಲ್ಲಿ ಅವರ ಪುತ್ರರಾದ ಮ|| ರಾ|| ಮಲ್ಲಿಕಾರ್ಜುನಯ್ಯನವರು ತಮ್ಮ ಪಿತೃಗಳ ಆತ್ಮಶಾಂತ್ಯರ್ಥವಾಗಿ ಆಚಾರ್ಯರ ಹೆಸರಿನಿಂದ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ. ಸಂ.—

ಒಳದೇಶದ ವೃತ್ತಾಂತಗಳು.

ಪಂಡಿತ ಮದನಮೋಹನ ಮಾಲವಿಯ ವಿಠಲಭಾಯಿ ಪಟೇಲ ಮೊದಲಾದ ರಾಷ್ಟ್ರಮುಖಂಡರಿಗೆ ಶಿಕ್ಷೆಯಾದದ್ದಕ್ಕಾಗಿ ಕಳೆದ ತಿಂಗಳು 29 ರಲ್ಲಿ ಬೆಂಗಳೂರು ಮತ್ತು ಮೈಸೂರು ಸ್ಕೂಲು ಕಾಲೇಜಿನ ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಹೋಗದೆ ಹರತಾಳವನ್ನು ಆಚರಿಸಿದರು.

ಶ್ರೀಮದ್ಯುವರಾಜರವರು ಇದೇ ಸೆಪ್ಟಂಬರ್ 3 ಅಥವಾ 4 ನೇ ತಾರೀಖಿನ ದಿವಸ ತಮ್ಮ ಪರ್ಸನಲ್ ಅಸಿಸ್ಟೆಂಟರಾದ ಮಿ|| ಎಫ್. ಸಿ. ದೇವರಾಜೇಅರಸರವರ ಸಮೇತರಾಗಿ ಬೆಂಗಳೂರಿನಿಂದ ಬೊಂಬಾಯಿಗೆ ಚಿತ್ತೈಸಿ ಅಲ್ಲಿಂದ 6 ನೇ ತಾರೀಖು ಶನಿವಾರ ದಿವಸ ಸೀಮೆಗೆ ಪ್ರಯಾಣ ಬೆಳೆಸುವರೆಂದೂ ಜತೆಯಲ್ಲಿ ದಿವಾನರವರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ|| ಡಿ. ಮದನಗೋಪಾಲರಾಜೇಅರಸರವರೂ ಸಹ ತೆರಳುವರೆಂದೂ ತಿಳಿದುಬಂದಿದೆ.

ನಮ್ಮ ದಿವಾನರಾದ ಸರ್ ಮಿರ್ಜಾ ಮಹಮದ್ ಇಸ್ಮಾಯಿಲ್‌ರವರು ನಾಳೆ ಮಂಗಳವಾರ (2ನೇ ತಾರೀಖು) ರಾತ್ರಿ ಬೆಂಗಳೂರಿನಿಂದ ಬೊಂಬಾಯಿಗೆ ತೆರಳುವರೆಂದೂ, ಅವರ ಜೊತೆಯಲ್ಲಿ ಶ್ರೀಯುತ ಎಗ. ಎಸ್. ಸುಬ್ಬರಾಯರು ಮತ್ತು ಶ್ರೀ|| ಎಗ. ರಾಮರಾಯರೂ ಪ್ರಯಾಣಮಾಡುವರೆಂದೂ, ಸದ್ಯಃ ಹಿಮಾಲಯದ ಕೇದಾರಪೀಠವೇ ಮೊದಲಾದ ಪವಿತ್ರ ಕ್ಷೇತ್ರಗಳಲ್ಲಿ ತೀರ್ಥಯಾತ್ರೆಮಾಡುತ್ತಿರುವ ಶ್ರೀಮನ್ಮಹಾರಾಜರವರು 5 ನೇ ತಾರೀಖಿನ ದಿವಸ ಬೊಂಬಾಯಿಗೆ ದಯಮಾಡಿಸುವರೆಂದೂ, ದಿವಾನರವರು ಪ್ರಭುಗಳ ಸಂದರ್ಶನವನ್ನು ಮಾಡಿ ರಾಜಕೀಯವಿಚಾರಗಳನ್ನು ಕುರಿತು ಮಾತನಾಡಿ, 6 ನೆಯ ತಾರೀಖು ಶನಿವಾರ ದಿವಸ ಸೀಮೆಗೆ ಪ್ರಯಾಣ ಬೆಳೆಸುವರೆಂದೂ ತಿಳಿದುಬಂದಿದೆ.

ಈ ವಾರದ ಪತ್ರಿಕೆಯ ಸಂಗಡ ಮದರಾಸ್ ವಾರ್ಸ ಪುಸ್ತಕಶಾಲೆಯ "ಗೃಹಸ್ಥಾಶ್ರಮರಹಸ್ಯಗಳು" ಎಂಬ ಗ್ರಂಥದ ಜಾಹೀರಾತುಗಳನ್ನು ನಮ್ಮ ಚಂದಾದಾರರಿಗೆಲ್ಲ ಹಂಚಿರುತ್ತೇವೆ.

ಇಂಗ್ಲೆಂಡಿನಲ್ಲಿರುವ ಭಾರತ ಮಂತ್ರಿಶ್ರೇಷ್ಠರಾದ ಮಿ|| ಬೆನ್ನಿಗೂ ವೈಸರಾಯರಿಗೂ, ನೈನಿಟಾಲ್ ಕಾರಾಗೃಹದಲ್ಲಿರುವ ಪಂಡಿತ ನೆಹರೂರವರಿಗೂ ಪದೇ ಪದೇ ತಂತೀಮೂಲಕ ಚರ್ಚೆಯು ನಡೆಯುತ್ತಿರುವದೆಂದು ತಿಳಿದುಬಂದಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಸಂಚಾರ.

ಶ್ರೀ ಮಹಾಸ್ವಾಮಿಗಳವರು ಧರ್ಮಬೋಧೆಯಿಂದ ಭಕ್ತಕೋಟಿಯನ್ನುದ್ಧರಿಸಿ ಪುನೀತರನ್ನು ಮಾಡಲು ದೇಶಮಧ್ಯದಲ್ಲಿ ಸಂಚರಿಸುತ್ತ ಹುಲ್ಲೂರಿಗೆ ತಾ|| ೩೦-೭-೩೦ ರಲ್ಲಿ ಬಿಜಯಂಗೈಸಿರುವ ಸಂಗತಿಯು ಸರ್ವತ್ರವಿದಿತವಾಗಿಹುದಷ್ಟೆ! ಶ್ರೀಗಳವರು ತಾ|| ೬೦-೮-೧೯೩೦ ಬುಧವಾರ ಮಧ್ಯಾಹ್ನ ಮೂರು ಘಂಟೆಯಿಂದ ಸಕಲ ಪರಿವಾರದೊಡನೆ ಹೊಸಳ್ಳಿಗೆ ದಯಮಾಡಿಸಿದರು. ಅಲ್ಲಿಯ ಭಕ್ತರು ಗ್ರಾಮವನ್ನು ತಳಿರುತೋರಣಾದಿಗಳಿಂದಲಂಕರಿಸಿ ಇಸ್ತಕಪಾಲದೊಡನೆ ಶ್ರೀ ಮಹಾಚಾರ್ಯರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದರು. ಸಾಯಂಕಾಲ ೫ ಘಂಟೆಗೆ ಶ್ರೀ ಮಹಾಸವಾರಿಯು ದಯಮಾಡಿಸಿತು. ಕಂಬಾಗರದ ಎಸ್ಟೇಟ್ ಶಿವಾನಂದಾಶ್ರಮದ ಷ|| ಬ್ರ|| ಶ್ರೀ ಷಟ್ಸ್ಥಲ ಚನ್ನಬಸವ ಶಿವಾಚಾರ್ಯರೂ ಬಳುವ ಸೀರಲಮಠದ ಶ್ರೀ ಷಟ್ಸ್ಥಲ ವೃಷಭಲಿಂಗಶಿವಾಚಾರ್ಯರೂ ಮುಂಚಿತವಾಗಿಯೇ ದಯಮಾಡಿಸಿ ಅಲ್ಲಿಯ ಕಾರ್ಯಕ್ರಮಗಳನ್ನು ಸಜ್ಜುಗೊಳಿಸಿದ್ದರು. ಆಗ್ಯೆ ಅಲ್ಲಿಗೆ ಸೇರಿದ ಜನಸಂಖ್ಯೆಯು ಮೂರುಸಾವಿರವಾಗಬಹುದು. ಮಹಾಸವಾರಿಯು ಪಲ್ಲಕ್ಕಿಯನಾರೋಹಿಸಲು ಸರ್ವರೂ ಕರತಾಡನವನ್ನು ಮಾಡಿದರು. ಸಕಲ ವಾದ್ಯಗಳೂ ಭೋರ್ಗರೆದವು. ಪ್ರತಿ ಕ್ಷಣದಲ್ಲಿ ಆಚಾರ್ಯರ ಜಯಘೋಷವು ಮಾಡಲ್ಪಡುತ್ತಿದ್ದಿತು. ಸಕಲ ಬಿರುದಾವಳಿಗಳಿಂದ ಗ್ರಾಮದಲ್ಲಿ ಉತ್ಸವವು ಜರುಗಿ ಭಗವತ್ಪಾದರು ಅಲಂಕೃತವಾದ ಪ್ರಧಾನಮಂಟಪಕ್ಕೆ ದಯಮಾಡಿಸಿ ಸಿಂಹಾಸನವನಾರೋಹಿಸಿದ ಕೂಡಲೆ ಸರ್ವರೂ ಜಯಘೋಷಪೂರ್ವಕ ಕರತಾಡನವನ್ನು ಮಾಡಿ ಅಪ್ಪಣೆಯ ಮೇರೆಗೆ ತಮ್ಮ ತಮ್ಮ ಸ್ಥಾನಂಗಳಲ್ಲಿ ಕುಳಿತುಕೊಂಡರು. ಸಮಾಜದವರ ಪ್ರಾರ್ಥನೆಯಿಂದ ಹುಲ್ಲೂರು ಶ್ರೀಮಾನ್ ಗೊಡಚಪ್ಪ ಶೆಟ್ಟರು, ಪಟೇಲ್ ರಂಗೇಗೌಡರು, ಸಿದ್ಧಮಲ್ಲಶೆಟ್ಟರ ಗೊಡಚಪ್ಪ ಶೆಟ್ಟಿಗು, ಹುಳಿಯಾರ ಮಳ್ಳಪ್ಪನವರು ಮುಂತಾದ ಮಹಾಶಯರು ಶ್ರೀಯುತ ಭಾಣಾವರದ ಚಿಕ್ಕಣ್ಣಶೆಟ್ಟರು, ಗರುಡಂಗಿರಿ ಮಲ್ಲಪ್ಪಶೆಟ್ಟರೂ, ನಾಗಸಮುದ್ರದ ಕೊಟ್ರೂರಶೆಟ್ಟರು, ಮುಂತಾದ ಪ್ರಮುಖಮಹಾಶಯರೂ ಆಗಮಿಸಿ ಸಭೆಯನ್ನಲಂಕರಿಸಿದ್ದರು. ಬಳಿಕ ಪೌರಾಣಿಕ ಶ್ರೇಷ್ಠ ಸುಣ್ಣಕಲ್ಲು ಬಿದರೆ ಆರಾಧ್ಯಮಠದ ಬಸವಲಿಂಗಶಾಸ್ತ್ರಿಗಳು ಸ್ವಧರ್ಮಜಾಗ್ರತಿಯಿಂದ ಧನ್ಯರಾಗುವದೇ ಕರ್ತವ್ಯಕರ್ಮವೆಂದು ಧರ್ಮಪ್ರಭಾವವನ್ನು ಅಭಿವರ್ಣಿಸಿ ಪ್ರಕೃತದಲ್ಲಿ ಧರ್ಮವನಾಗಾವಲಂಬನದಿಂದ ಐಹಿಕಾಮುಷ್ಮಿಕಫಲಕ್ಕೆ ಹೇತುವಾದ ಗುರುಸೇವೆಯಿಂದ ಪುನೀತರಾದ ಭಕ್ತಮಂಡಲಿಯ ಕೃತಕೃತ್ಯತೆಯನ್ನ ಭಿವರ್ಣಿಸಿದರು. ಶ್ರೀ ಜಗದ್ಗುರುಗಳವರು ಭಕ್ತಮಂಡಲಿಯ ಮುಂಜಾಗ್ರತೆಗೆ ಆನಂದಪಟ್ಟು ವೀರಶೈವಮತದ ನಿಜತತ್ವವನ್ನ ಪ್ಪಗೆಕೊಡಿಸಿ ಇದರಂತೆ ಸದಾ ವರ್ತಿಸುತ್ತ ಉತ್ತರೋತ್ತರ ಇಹಲೋಕಸ್ಥಿತಿಯನಾದ ಸುಖಸಂಪತ್ತನ್ನು ಪಡೆಯಲೆಂದು ಆಶೀರ್ವದಿಸಿ ಪುರಾಣಶ್ರವಣ ಕಾಲವು ವಿಸ್ತರಿಸಬಾರದೆಂದು ಸಭೆಯ ವಿಸರ್ಜನಕ್ಕೆ ಅಪ್ಪಣೆಯಂ ಕೊಡಿಸಿದ ಕೂಡಲೆ ಆಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿತವಾಯಿತು. ಮರುದಿವಸ ಮಹಾಸವಾರಿಯು ನರಸೀಪುರದ ಭಕ್ತರ ಪ್ರಾರ್ಥನೆಯ ಮೇರೆಗೆ ನರಸೀಪುರಕ್ಕೆ ದಯಮಾಡಿಸಿತು. ಪದ್ಧತಿಯಂತೆ ಭಕ್ತಮಂಡಲಿಯು ಗ್ರಾಮವನ್ನಲಂಕರಿಸಿ ಇಸ್ತಕಪಾಲದಿಂದ ಶ್ರೀಗಳವರನ್ನು ಎದುರ್ಗೊಂಡು ವಾದ್ಯಂಗಳು ಮೊರೆಯುತ್ತಿರಲು ಆಂದೋಲಿಕೋತ್ಸವದೊಡನೆ ಪ್ರಧಾನಮಂಟಪಕ್ಕೆ ಬಿಜಯಮಾಡಿಸಿಕೊಂಡು ಬಂದರು. ಪೌರಾಣಿಕಶ್ರೇಷ್ಠ ಸುಣಕಲ್ಲು ಬಿದರೆ ಆರಾಧ್ಯಮಠದ ಬಸವಲಿಂಗಶಾಸ್ತ್ರಿಗಳು ಗುರುಭಕ್ತಿಪ್ರಭಾವವನ್ನು ಚನ್ನಾಗಿ ವರ್ಣಿಸಿ ಲೌಕಿಕ ಸುಖಾನುಭವಸಂಕಲ್ಪಸಿದ್ಧಿಗೆ ಪ್ರಯತ್ನಿಸಿದಂತೆ ಪಾರಲೌಕಿಕ ಸುಖಪ್ರಾಪ್ತಿಗೂ ಸಂಕಲ್ಪಿಸಿ ಉಭಯ ಲೋಕಸುಖಸಿದ್ಧಿಯನ್ನು ಪಡೆಯುವದು ಮನುಷ್ಯನ ಕರ್ತವ್ಯವಾದ್ದರಿಂದ ಈ ಮಾಗ್ಯಕ್ಕೆ ಎಲ್ಲರಗೊಂಡಿರುವದು ಜನ್ಮಾಂತರ ಸುಕೃತಪ್ರಭಾವವಿರುವದರಿಂದ ಈ ಪ್ರಸಂಗದಲ್ಲಿ ಜಗದ್ಗುರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವದು ಉತ್ತರೋತ್ತರ ಶ್ರೇಯಸ್ಸಾಧನವಾಗಿದೆಯೆಂದು ಹೇಳಿದರು. ಶ್ರೀ ಪೂಜ್ಯಪಾದರು ವೀರಶೈವ ಧರ್ಮಾಚಾರಗಳನ್ನು ಸುಲಭಶೈಲಿಯಿಂದ ಬೋಧಿಸಿ ಪಂಡಿತ ಪಾಮರರ ಚೇತಸ್ಸನ್ನು ವಿಕಾಸಗೊಳಿಸಿ ಆಶೀರ್ವದಿಸಿದರು. ಮಹಾಶಯರೇ! ಜಗದ್ಗುರು ಪಂಚಾಚಾರ್ಯ ಸೂರ್ಯಪ್ರಭೆಯು ಒತ್ತರದಿಂದ ಪಸರಿಸುತ್ತಿರಲು ಗಾಢನಿದ್ರೆಯಿಂದೆಚ್ಚತ್ತು ಸಹಜಧರ್ಮವನ್ನು ಕೈಕೊಂಡು ಧನ್ಯರಾಗುವದು ಮೊದಲನೆಯದಾಗಿದೆ. ಧರ್ಮಜಾಗ್ರತಿಯುಳ್ಳವರಿಗೆ ಧರ್ಮಸ್ಥಾಪಕ ಜಗದ್ಗುರು ಪಂಚಕವು ಉಭಯಲೋಕಸುಖಸಿದ್ಧಿಯನ್ನು ಕರುಣಿಸದೆ ಇರಲಾರದು. ಇದರಂತೆ ಶ್ರೀ ಜಗದ್ಗುರುಗಳವರು ರಾಮಪುರ ತುಂಬಾಪುರ ಮೊದಲಾದ ಗ್ರಾಮಗಳ ಭಕ್ತರ ಭಕ್ತಿಯನ್ನು ಸ್ವೀಕರಿಸುತ್ತ ಹುಲ್ಲೂರಲ್ಲಿ ಶಿವಯೋಗಾನಂದ ಕಪನ್ನಾಮ್ರಾಜ್ಯವೈಭವದಿಂದಿರುವರು. ಅಖಿಲ ಭಕ್ತಮಾಹೇಶ್ವರರು ಶ್ರೀ ಜಗದ್ಗುರುಗಳ ಸೇವೆಯಿಂದ ಕೃತಾರ್ಥತೆಯನ್ನು ಪಡೆಯಲೆಂದು ಜಗದ್ಗುರು ಪಂಚಾಚಾರ್ಯರನ್ನು ಭಜಿಸುತ್ತೇನೆ.

ಓರ್ವ ವೀರಶೈವ.

ಸ್ಥಿರಪಟ್ಟಾಧಿಕಾರ ಸಮಾರಂಭವು.

ಮ್ಯಾಗೇರಿ.

ನಿಜಾಮ ಇಲಾಖಾ ಯಲಬುರಗಿ ತಾ|| ಮ್ಯಾಗೇರಿಗ್ರಾಮದಲ್ಲಿ ಶ್ರೀಮಜ್ಜಗದ್ಗುರು ದಾರುಕಾಚಾರ್ಯ ಶಾಖೆಯ (ಸಾಲಿಮಠವೆಂಬುದು) ಸುಪ್ರಸಿದ್ಧವಾದ ಮಠವಿದೆ. ಈ ಮಠಕ್ಕೆ ನಿಜಾಮ ಪ್ರಾಂತ, ಬ್ರಿಟಿಷ್ ಪ್ರಾಂತ, ಹಾಗೂ ಇತರ ಸ್ಟೇಟುಗಳಲ್ಲಿ ಬಹುಜನ ಶಿಷ್ಯಪ್ರಶಿಷ್ಯರು ಇದ್ದು ಈಗ 20.25 ವರ್ಷಗಳಿಂದ ಅಧಿಕಾರವಿದ್ದಿಲ್ಲ. ಈಗ ಅದಕ್ಕೆ ಪರಿಶಕ್ತದಶೆಯು ಪ್ರಾಪ್ತವಾದ್ದರಿಂದ ಸದರಿ ಮಠದ ರುದ್ರಮುನಿಶಿವಾಚಾರ್ಯರಿಗೆ ಇದೇ ೧೮೫೨ ನೆಯ ಪ್ರಮೋದೂತ ಸಂ|| ಶ್ರಾವಣ ಬ|| ೫ ಗುರುವಾರದ ಶುಭಮುಹೂರ್ತದಲ್ಲಿ ಶ್ರೀ|| ಷ|| ಬ್ರ|| ಮಂಗಳೂರ ಅರಳೆಲೆ ಕಟ್ಟಿಮನಿ ಪಟ್ಟದ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಕಲ್ಲೂರು ಕೊಂಡದ ಕಟಿಮಠದ ಪಟ್ಟದಸ್ವಾಮಿಗಳವರಿಂದ ವಿಧ್ಯುಕ್ತವಾಗಿ ಅಧಿಕಾರವು ಕೊಡಲ್ಪಟ್ಟಿತು. ಈ ಮಹೋತ್ಸವಕ್ಕೆ ಹುಬ್ಬಳ್ಳಿ ಹಿರೇಮಠದ ಷ|| ಬ್ರ|| ಪಟ್ಟದಸ್ವಾಮಿಗಳವರೂ, ಸೂಡಿಗ್ರಾಮದ ಜುಗ್ತಿಮಠದ ಪಟ್ಟದಸ್ವಾಮಿಗಳವರೂ, ಬೆದವಟ್ಟಿ ಚರಮೂರ್ತಿಸ್ವಾಮಿಗಳವರೂ ಆಗಮಿಸಿದ್ದರಿಂದ ವಿಶೇಷ ಶೋಭೆಯು ಪ್ರಾಪ್ತವಾಗಿತ್ತು. ಎಡಬಲ ಗ್ರಾಮಗಳ ಭಕ್ತರೂ ಹಾಗೂ ಗದಗ, ಚವಡಿ, ಹುನಗುಂದ, ಇಳಕಲ್ಲ ಮೊದಲಾದ ಗ್ರಾಮಗಳಿಂದ ಬಂದ ಭಕ್ತರ ಯಥಾಶಕ್ತಿ ಕಾಣಿಕಾದಿಗಳನ್ನು ಸಮರ್ಪಿಸಿ ಗುರುದರ್ಶನಾಶೀರ್ವಾದಕ್ಕೆ ಪಾತ್ರರಾಗಿದ್ದರು. ಬ|| ೬ ಶುಕ್ರವಾರ ಅನ್ನಸಂತರ್ಪಣೆಯೂ ನೆರವೇರಿತು. ಬ|| ೭ ಶನಿವಾರ ಸೂರ್ಯೋದಯಾನಂತರ ವೇದಘೋಷಯುಕ್ತವಾದ ಸ್ತುತಿಗಳಿಂದಲೂ ಭಜನೆಯ ಮೇಳಗಳ ಸ್ತೋತ್ರಗಳಿಂದಲೂ ಘನತರವಾದ ಜನಸಂದಣಿಯಿಂದ ಅಡ್ಡಪಲ್ಲಕ್ಕಿ ಉತ್ಸವವು ಜರುಗಿತು; ಅಜಮಾಸ 10½ 11 ಘಂಟೆಗೆ ಉತ್ಸವವು ಮಠವನ್ನು ಸೇರಲು ಗದಗ ಅರಳೆಲೆಮಠದ ಶಿ|| ಕೋಟಿಯ್ಯನವರು, ಮಠದ ವಶಿಷ್ಯವನ್ನೂ ಸಮಾರಂಭದ ಸೊಬಗನ್ನೂ ಉತ್ಸವದಲ್ಲಿ ಕಟಿಬದ್ಧರಾಗಿ ನಿಂತ ಪಾಟೀಲ ಬಸವನಗೌಡರ ರಾ|| ಹನುಮಪ್ಪಗೌಡರ ಕಮತರ ಧೂಳಪ್ಪನವರ ರಾ|| ರಾಮಪ್ಪನವರ ಗುರಿಕಾರ ಗೌಡಪ್ಪನವರ ಸುಬೇದಾರ ವೀರಭದ್ರಪ್ಪನವರ ಅಂಗಡಿ ಮಾಳಪ್ಪ ಪತ್ತಾರ ದೇವಪ್ಪನವರ ದೇಸಾಯಿ ಕಳಕಪ್ಪ ಗುರಿಕಾರ ಗುರುಬಸಪ್ಪನವರ ಆಭಾರವನ್ನು ಮನ್ನಿಸುವದಲ್ಲದೆ ಹರಗುರು ಚರಮೂರ್ತಿಗಳ ಶಿವಾರ್ಚನೆ ಲಿಂಗಾರ್ಪಿತಕ್ಕೆ ಶುದ್ಧ ಮಡಿಯಿಂದ ಪರಿಪರಿಯ ಭಕ್ಷ್ಯಭೋಜ್ಯಾದಿಗಳನ್ನು ಸ್ವಂತ ಖರ್ಚಿನಿಂದ ಹಾಗೂ ಭಕ್ತಿವಿಶೇಷದಿಂದ ತೃಪ್ತಿಪಡಿಸಿದ ಶ್ರೀಮಂತ ಚವಡಿ ಗದಗಿನ ಸಂಗನಬಸಪ್ಪನವರ ಧರ್ಮಪತ್ನಿ ಸ್ತ್ರೀ|| ನೀಲಮ್ಮನವರ ಗುರುಭಕ್ತಿ ಪತಿಭಕ್ತಿ ಸದಾಚಾರ ಮುಂತಾದವುಗಳನ್ನು ಸರಸವಾಗಿ ಬಣ್ಣಿಸಿ ಹೇಳಿದರು. ಅನಂತರ ಮುಧೋಳದ ವೇ|| ಸಾಲೀ ವೀರಭದ್ರ ಕವಿಗಳು ಗುರುಭಕ್ತಿ ಅಷ್ಟಾವರಣಪ್ರಭಾವಂದವೇಲೆ ಯುಕ್ತಿಯುಕ್ತವಾಗಿ ಹಸ್ತಲಿಕಭಾಷಣಮಾಡಿ ಶ್ರೋತೃವೃಂದವನ್ನು ಸಂತೋಷಗೊಳಿಸಿದರು. ಮುಧೋಳದ ಶ್ರೀಮಂತ ಶಂಕರಪ್ಪ ದೇಸಾಯಿ ಇವರು ತಮ್ಮ ಪರಿವಾರ ಸಮೇತವಾಗಿ ಆಗಮಿಸಿದ್ದರಿಂದ ಸರ್ವರೂ ಅವರ ಆಯುರಾರೋಗ್ಯ ಸಂಪತ್ತಿಗೆ ಶ್ರೀ ಜಗದಾಚಾರ್ಯರು ಆಶೀರ್ವದಿಸಲೆಂದು ಕೋರಿದರು, ಸದರಿ ಪಟ್ಟದ ಸ್ವಾಮಿಗಳು ವಿದ್ಯಾಭಿಮಾನಿಗಳೂ, ಪರೋಪಕಾರನಿರತರೂ, ಲಿಂಗಪೂಜಾನಿಷ್ಠರೂ, ಭಕ್ತೋದ್ಧಾರಪ್ರಿಯರೂ ಇರೋಣದರಿಂದ ಸರ್ವರು ಸಂತೋಷಭರಿತರಾದರು. ಆ ಮೇಲೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಸಮಾರಂಭದ ಸ್ಮಾರಕಕ್ಕೋಸುಗ ಮಂಗಳೂರು ಶ್ರೀಗಳವರು ಪ್ರಭಾಪೋಷಣೆಗೆ 5 ರೂಪಾಯಿಗಳನ್ನು ತೆಗೆಯಿಸಿದರು. ಇದಕ್ಕೆಲ್ಲ ಮುಖ್ಯವಾಗಿ ಶ್ರೀಮಂತ ಚವಡಿ ಗದಗಿನ ಸಂಗನಬಸಪ್ಪನವರ, ಮಾಗೇರಿ ಪಾಟೀಲ ಬಸವನಗೌಡರ, ರಾ|| ಹಿರಿಯಪ್ಪಗೌಡರ ಗದಗ ಬಾಗೂರ ಬಸೆಟ್ಟೆಪ್ಪನವರ ಇನ್ನುಳಿದ ಸದ್ಭಕ್ತರ ಕರ್ತವ್ಯಜಾಗ್ರತೆಯೇ ಕಾರಣವಾದ್ದರಿಂದ ಜಗದ್ಗುರುಗಳು ಸರ್ವರಿಗೂ ಸರ್ವಸಂಪತ್ತನ್ನು ನಿರಂತರದಲ್ಲಿ ಒದಗಿಸಿಕೊಡಲೆಂದು ಪ್ರಾರ್ಥಿಸುವ,

ಓರ್ವ ಉತ್ಸವಭಾಗಿ.

ನೂತನ ಗೃಹಪ್ರವೇಶಮಹೋತ್ಸವವು.

ಸೊರಬದ ತಾಲೂಕು ಹೆಗ್ಗೋಡುಗ್ರಾಮದ ವೀರಶೈವಕ್ಷತ್ರಿಯವರ್ಗದ ಮ|| ರಾ|| ಪಾಟೀಲ ಪುಟ್ಟಪ್ಪಗೌಡರ ಗೃಹಪ್ರವೇಶವು ಈ ಪ್ರಮೋದೂತ ಸಂವತ್ಸರದ ಶ್ರಾವಣ ಶು|| ೭ ಶುಕ್ರವಾರ ದಿವಸ ನಡೆಯಿತು. ಈ ಕಾರ್ಯಕ್ಕೆ ಕೊಗರಸಿ ಮೊದಲಾದ ಪಟ್ಟದಸ್ವಾಮಿಗಳು, ಮಠಸ್ಥರು, ಶಾಸ್ತ್ರಿಗಳು, ಜಂಗಮವೃಂದವು, ಲಿಂಗಿಶಾಸ್ತ್ರಪರಿಷತ್ತಿನ ಮೆಂಬರುಗಳಾದ ಮ|| ರಾ|| ಹಿರೆಹಾವಲಿ ಸರಕಲ್ ಶಾನುಭೋಗ ಪಡಕ್ಷರಗೌಡರು, ಮ|| ರಾ|| ಮಾವಲೀ ಪಾ|| ಪಂಚಾಕ್ಷರಗೌಡರು, ಕೆಂದಗಸವೆ ಮ|| ರಾ|| ಮಲ್ಲಪ್ಪಗೌಡರು, ತಾವರೆಕೊಪ್ಪದ ರಾ|| ಸೋಮಪ್ಪಗೌಡರು, ರಾ|| ಕೆಲವತ್ತಿ ಕಾಡಪ್ಪಗೌಡರು, ರಾ|| ಮರೂರು ಗುರುಬಸಪ್ಪಗೌಡರು, ರಾ|| ಕುಪ್ಪೆ ಬಸಪ್ಪಗೌಡರು, ರಾ|| ಹಾಲಗಳಲೆ ಶಿವಪ್ಪಗೌಡರು, ರಾ|| ಕುಂಬತ್ತಿ ವೀರಪ್ಪಗೌಡರು, ರಾ|| ಗೇರಕೊಪ್ಪದ ವೀರಪ್ಪಗೌಡರು, ರಾ|| ಪುರದ ವೀರಪ್ಪಗೌಡರೇ ಮೊದಲಾದ ಸುಪ್ರಸಿದ್ಧ ಮನೆತನದವರು ಇತರ ಭಕ್ತಾದಿಗಳು ಸಹ (೫೦೦) ಕ್ಕೆ ಹೆಚ್ಚಾಗಿಯೇ ಸೇರಿದ್ದರು. ಆ ಸಮಯದಲ್ಲಿ ಶ್ಯಾ|| ಸಂ|| ಛೇರ್‌ಮನ್ ಪುಟ್ಟಪ್ಪಗೌಡರು ವೇ|| ಕಡೇ ನಂದಿಹಳ್ಳಿ ಮಠದ ಪಂ|| ಗುರುಮೂರ್ತಿಶಾಸ್ತ್ರಿಗಳು ಸಹ ಈ ದೇಶದಲ್ಲಿ ಜ್ಞಾನವಯೋವೃದ್ಧರಾಗಿಯೂ, ಧರ್ಮಶಾಸ್ತ್ರವನ್ನು ಕರ್ಮಕಾಂಡವನ್ನು ಅರಿತವರಾಗಿಯೂ ಇರುವ ಷ|| ಬ್ರ|| ಕ್ಯಾಸನೂರು ಸಂಸ್ಥಾನ ಮಠದ ಷಂ|| ಗುರುವೃಷಭಶಿವಾಚಾರ್ಯಸ್ವಾಮಿಗಳು ಈ ದಿವಸ ವಿಧಿಯನ್ನು ನಡಿಸಬೇಕೆಂದು ಪ್ರಾರ್ಥಿಸಲು ಶ್ರೀಗಳು ಬೆಳಗಿನ ೫ ಘಂಟೆಯಿಂದ ಮಧ್ಯಾಹ್ನ ೩ ಗಂಟೆಯವರೆವಿಗೂ ಪ್ರವೇಶಾದಿ ? ದಿಗ್ಬಲ್ಯಂತ್ಯಗಳಾದ ಕರ್ಮಗಳನ್ನು ಹೋಮಹವನಾದಿ ಸಕಲ ಕ್ರಿಯೆಗಳೊಡನೆ ಆನಂದವಾಗುವಂತೆ ಸಾಂಗವಾಗಿ ನಡೆಯಿಸಿದರು. ಅನಂತರ ರುದ್ರಾಭಿಷೇಕ ಗುರುಪೂಜೆ ಶಿವಾರ್ಚನಾದಿಗಳು ನಡೆದು ರಾತ್ರಿ ೧೨ ಘಂಟೆಯವರೆಗೆ ಅಗಣಿತ ಭಕ್ತಮಾಹೇಶ್ವರರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿದರು, ರಾತ್ರಿಯಲ್ಲಾ ಸಂಗೀತದೊಡನೆ ಗುರುದೇವತಾ ಭಜನೆಯು ನಡೆಯಿತು. ಮರುದಿವಸ ಮುಖ್ಯಸ್ಥರ ಪ್ರಾರ್ಥನೆ ಮೇರೆಗೆ ಕ್ಯಾಸನೂರ ಶ್ರೀಗಳು ಕನ್ಯಾಶುಲ್ಕ ನಿಷೇಧ, ಸಗೋತ್ರಸಂಬಂಧ ನಿಷೇಧ ಭಕ್ತವರ್ಗದಲ್ಲಿ ವಿಶೇಷವಾಗಿ ಮಲೆನಾಡಿನಲ್ಲಿರುವ ವೀರಶೈವ ಕ್ಷತ್ರಿಯವರ್ಗದಲ್ಲಿ ನೆಲೆಗೊಂಡಿರುವ ಧರ್ಮಶಾಸ್ತ್ರ ವಿರುದ್ಧಗಳಾದ ಐಕ್ಯಮತ್ಯವಿಘಾತಗಳಾದ ವಿವಾಹಾದಿ ಕಾರ್ಯಗಳಲ್ಲಿ ಪದೇ ಪದೇ ಹೆಣ್ಣುಮಕ್ಕಳ ಯಜಮಾನ್ಯದಿಂದ ಉಡಿಯಕ್ಕಿ ಮೊದಲಾದ ವ್ಯಾಜ್ಯದಿಂದ ಸಂಭವಿಸುವ ದುಷ್ಟಪದ್ಧತಿಗಳನ್ನೆಲ್ಲಾ ನಿರ್ಮೂಲಮಾಡಿ ಧರ್ಮಶಾಸ್ತ್ರದಂತೆ ನಡೆಯಬೇಕೆಂದು ಶಾಸ್ತ್ರವಚನದಿಂದಲೂ ಈಗಿನ ದೇಶೋದ್ಧಾರಕರ ಸುಧಾರಣೆಗಳಿಂದಲೂ ವಿಸ್ತಾರವಾದ ಪ್ರವಚನವನ್ನು ಮಾಡಲು ಪ್ರಮುಖರೆಲ್ಲಾ ಒಪ್ಪಿದರು. ಶ್ರೀಗಳು ಪ್ರಭೆಯ ವಿ.ಪಿ. ಯನ್ನು ವಾಪಸು ಮಾಡಿ ಕರ್ತರಿಗೆ ನಷ್ಟಪಡಿಸಿದ ಕೆಲವರ ವಿಷಯದಲ್ಲಿ ಅಸಮಾಧಾನವನ್ನು ಪ್ರದರ್ಶಿಸಲು ಸಮ್ಮುಖದಲ್ಲಿದ್ದ ಕೆಲವರು ಊರಲ್ಲಿಲ್ಲದ್ದರಿಂದ ವಾಪಸಾಗಿದೆ. ಪುನಃ ತರಿಸುವೆವೆಂದು ಒಪ್ಪಿಕೊಂಡರು. ಆ ದಿವಸ ಪುರ ಹಾಲಗಳಲೆ, ಕುಪ್ಪೆ, ಬೈರಕೊಪ್ಪ, ಚುಮನೂರು, ಕುಂಬತ್ತಿಪುರ, ಕುಳವಳ್ಳಿ, ಸಾಂತಗೇರಿ ಮುಂತಾದ ಗ್ರಾಮಗಳ ಸಕಲ ಜಾತಿಯ ಜನರು ಸಹ ಮೃಷ್ಟಾನ್ನದಿಂದ ತೃಪ್ತರಾದರು. ಆ ದಿವಸ ಒಂದು ಕಡೆ ಸರ್ವರೂ ಸಂಗೀತ ಆನಂದದಿಂದ ಕುಳಿತಿರುವ ಗುರುಕುಲದ ಮಾಹೇಶ್ವರರ ಗೋತ್ರಸೂತ್ರ ಮಠ, ಮಹಾಮಠ, ಹಕ್ಕುಬಾಬು, ಸಾಂಪ್ರದಾಯ, ಶಿಷ್ಯವರ್ಗ ವಿಶಿಷ್ಟತೆ, ಆರಾಧ್ಯ, ಧೂರಿಜಂಗಮ, ಮಠಪತಿ, ಗಣಾಚಾರಿ, ಸ್ಥಾವರ, ಗಣಕುಮಾರ, ವಿಭೂತಿ, ವಸ್ತ್ರ, ಕಾಯಕ, ಸಮ್ಮಾಳ ಮೊದಲಾದ ಪರಡಿಯ ಕೋಲಾಹಲವು ಕೇಳಬಂದಿತು. ಆಗ್ಯೆ ಶ್ರೀಗಳು ತತ್ತದಧಿಕಾರ ಪ್ರಕಾರ ವಿನಿಯೋಗಿಸಲು ಅನಂತರ ಕಾರ್ಯಕರ್ತೃಗಳಾದ ರಾ|| ಪುಟ್ಟಪ್ಪಗೌಡರು ಉಭಯ ಪತ್ನಿಯರೊಡನೆ ಸಭಾಂಗಣಕ್ಕೆ ಬಂದು ಕಾಶ್ಮೀರಶಾಲು, ಸುವರ್ಣಾಂಗುಲಿಯುತ, ಉಷ್ಣೀಷ, ಉತ್ತರೀಯ, ಅಧೋವಂಶುಕಗಳನ್ನು, ಗೋವನ್ನು, ತಾಂಮ್ರಘಟ ಮೊದಲಾದ ಪಾತ್ರೆಗಳನ್ನು ಗುರುದಕ್ಷಿಣೆ ಸಹಿತ ತಮ್ಮ ಗೋತ್ರಗುರುಗಳಾದ ಕಾಸನೂರ ಸ್ವಾಮಿಗಳವರಿಗೆ ಸಮರ್ಪಿಸಲು ಶ್ರೀಗಳು ವೇದಮಂತ್ರದೊಡನೆ ಆಶೀರ್ವದಿಸಿ ಪ್ರಭಾಪತ್ರಿಕೆಯನ್ನು ಕೇಳಲು ಸದರಿ ಗೌಡರು ೨ ರೂಪಾಯಿಗಳನ್ನು ಸ್ವಾಮಿಗಳ ಹಸ್ತದಲ್ಲಿ ಕೊಟ್ಟರು. ನಿಮಗೆ ಮುಂದೆ ಬರುವ ಪ್ರಭೆಯ ವಿ.ಪಿ. ಯನ್ನು ಸ್ವೀಕರಿಸಬೇಕೆಂದು ಅಪ್ಪಣೆ ಮಾಡಲು ಸದರಿಯವರು ಒಪ್ಪಿದರು. ಪುನಃ ಉತ್ತರಾರಾಧ್ಯ ಮಾಹೇಶ್ವರರಿಗೂ ಶಾಸ್ತ್ರಿಗಳಿಗೂ ಪಂಚಮಠದ ವೈದಿಕರಿಗೂ ಶಾಲು, ವಸ್ತ್ರ, ಮಠಕಟಗಳು ದ್ರವ್ಯರೂಪದಿಂದ ಸಲ್ಲಿಸಿದ ನಂತರ ಭೂರಿ ಜಂಗಮರಿಗೆ ದಕ್ಷಿಣೆಯು ಹಂಚಲ್ಪಟ್ಟಿತು. ಬಂದಿದ್ದ ಸರ್ವರೂ ಗೌಡರನ್ನು ಹರಸುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಮಾಸೂರು ಹಿರೇಮಠ ಚನ್ನವೀರಾರಾಧ್ಯರು.

ಬಳ್ಳಾರಿ ಜಿಲ್ಲೆಯ ವೀರಶೈವರಲ್ಲಿ ವಿಜ್ಞಾಪನೆ.

ಮಹಾಶಯರೇ, ಈ ಮೂಲಕ ತಮಗೆ ವಿಜ್ಞಾಪಿಸಿಕೊಳ್ಳುವದೇನೆಂದರೆ—ಮುಂದೆ ಬರುವ ಸೆಪ್ಟಂಬರ್ ತಿಂಗಳು 9 ನೇ ತಾ|| ಮಂಗಳವಾರದಲ್ಲಿ ಜರುಗುವ ಮದ್ರಾಸು ಶಾಸನಸಭೆಯ ಚುನಾವಣೆಗೆ ಮ|| ರಾ|| ವಿ. ಕುವಾನರೆಡ್ಡಿ, ಬಿ.ಎ., ಬಿ.ಎಲ್. ವಕೀಲ್ ಇವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಿರುತ್ತಾರೆ. ಇವರು ಅರುವರ್ಷಗಳಿಂದ ವಕೀಲ ಕೆಲಸವನ್ನು ಮಾಡುತ್ತಲಿರುವರು. ಮತ್ತು ಇವರಿಗೂ ತಾಲೂಕು ಬೋರ್ಡ್ ಜಿಲ್ಲಾ ಬೋರ್ಡ್ ಎಜುಕೇಷನಲ್ ಕೌನ್ಸಿಲ್ ಮುಂತಾದ ಸಂಸ್ಥೆಗಳ ಮೂಲಕ ಸಮಾಜಸೇವೆಯನ್ನು ಮಾಡಿರುತ್ತಾರೆ. ಈ ಜಿಲ್ಲೆಯಲ್ಲಿ ವೀರಶೈವರ ಓಟುಗಳೇ ಜಾಸ್ತಿ ಇರುತ್ತವೆ. ಪ್ರಯುಕ್ತ ಆ ದಿವಸ ನೀವು ನಿಮ್ಮ ಪ್ರಾಂತದಲ್ಲಿರುವ ಓಟರ್ರುಗಳನ್ನು ಮುತುವರ್ಜಿಯಿಂದ ಕರೆದುಕೊಂಡು ಬಂದು ಸದರಿಯವರಿಗೆ ನಿಮ್ಮ ಓಟುಗಳನ್ನು ತಪ್ಪದೆ ಕೊಟ್ಟು ಸಮಾಜದ ಗೌರವವನ್ನು ಕಾಪಾಡಬೇಕೆಂದು ಕೋರುತ್ತೇನೆ.

ವೆಡ್ಡಪ್ಪನವರ ಸಿದ್ಧಲಿಂಗಪ್ಪ,
ಹರಪನಹಳ್ಳಿ.

...ಶಕ್ಯವಳು.

9. ಒಂದೊಂದು ದೇಶದಲ್ಲಿಯೂ ಲಜ್ಜೆಯು ಹೇಗೆ ವ್ಯಾಪಿಸಿದೆ?
10. ನಾವು ಏತಕ್ಕಾಗಿ ಉಡುಪನ್ನು ಧರಿಸಬೇಕು?
11. ದಿಗಂಬರರಾಗಿರಲು ಕಾರಣವೇನು?
12. ಈಗ ಯಾವ ದೇಶದ ಜನರು ದಿಗಂಬರರಾಗಿರುವರು?
13. ಯಾವ ಯಾವ ದೇಶದಲ್ಲಿ ವಿವಾಹವು ಯಾವ ಯಾವ ರೀತಿಯಲ್ಲಿ ನಡೆಯುತ್ತಿದೆ? ನಿಜವಾದ ವಿವಾಹವು ಯಾವುದು?
14. ಪ್ರೇಮ—ಎಂದರೇನು? ಅನುರಾಗಕ್ಕೂ ಕಾಮಕ್ಕೂ ಇರುವ ಭೇದಗಳು.
15. ಶಾಂತಿಮುಹೂರ್ತದಲ್ಲಿ ಹೇಗೆ ವಿಜಯವನ್ನು ಪಡೆಯಬಲ್ಲೆವು?
16. ಪತಿಯು ಪತ್ನಿಯನ್ನು ವಶಮಾಡಿಕೊಳ್ಳುವುದು ಹೇಗೆ?
17. ಸತಿಯು ಪತಿಯನ್ನು ವಶಮಾಡಿಕೊಳ್ಳುವುದು ಹೇಗೆ?
18. ತಮಗೆ ಯೋಗ್ಯರಾದ ಪತಿಯನ್ನಾಗಲಿ, ಸತಿಯನ್ನಾಗಲಿ ನಿಶ್ಚಯಿಸುವ ಬಗೆ ಹೇಗೆ?

...ಸುವ ಔಷಧಿ.

26. ಜೀವಿತದಲ್ಲಿ ಸ್ತ್ರೀಯರು ತಿಳಿಯತಕ್ಕ ವಿಷಯಗಳು.
27. ಕೆಲವು ಸಮಯದಲ್ಲಿ ಯುವತಿಯರು ಸಂಯೋಗಕ್ಕೆ ಸಮ್ಮತಿಸದಿರಲು ಕಾರಣ ಮತ್ತು ಅದರ ನಿವೃತ್ತಿಗೆ ಉಪಾಯಗಳು.
28. ಇಷ್ಟಾನುಸಾರವಾಗಿ ಮಕ್ಕಳನ್ನು ಪಡೆಯುವುದು ಹೇಗೆ?
29. ಗರ್ಭದಲ್ಲಿರುವ ಶಿಶುವು ಗಂಡೇ ಹೆಣ್ಣೇ—ಎಂಬುವುದನ್ನು ತಿಳಿಯುವ ಬಗೆ ಹೇಗೆ?
30. ತಮ್ಮ ಇಷ್ಟಾನುಸಾರವಾಗಿಯೇ ಗಂಡು ಅಥವಾ ಹೆಣ್ಣು ಮಗುವನ್ನೇ ಪಡೆಯುವುದು ಹೇಗೆ?
31. ಗರ್ಭವನ್ನು ಧರಿಸುವುದಕ್ಕೆ ಉಪಾಯಗಳಾವುವು?
32. ಸುಖಪ್ರಸವವಾಗುವುದಕ್ಕೆ ಅನುಸರಿಸಬೇಕಾದ ಉಪಾಯಗಳು—ಹುಟ್ಟಿದ ಮಗುವನ್ನು ಬೆಳೆಸತಕ್ಕ ಕ್ರಮ.
33. ಗರ್ಭವನ್ನು ಧರಿಸಿದ ಮೊದಲು ಉಂಟಾಗುವ ಮಾರ್ಪಾಡುಗಳು.
34. ಗರ್ಭಿಣಿಯಾಗಿರುವಾಗ ಹುಟ್ಟುವ ವ್ಯಾಧಿಗಳು. ಅವುಗಳನ್ನು ನಿವಾರಿಸುವ ಉಪಾಯಗಳು.

ವಾರ ಶ್ರೀ ವಿಶ್ವನಾಥಸ್ವಾಮಿಯ ಅಭಿಷೇಕವೂ, ಧ್ವಜಾರೋಹಣವೂ, ನಾಂದೀಸಮಾರಾಧನೆ, ವಾಹನವೂ ಶುಕ್ರವಾರ ಶನಿವಾರ ವಾಹನೋತ್ಸವವೂ, ಅಷ್ಟಮಿ ರವಿವಾರ ಶ್ರೀ ಸಿದ್ಧಲಿಂಗೇಶ್ವರ ಜಯಂತಿ ದಿವಸವಿದ್ದು ಈ ದಿವಸ ಪಂಚವಣ್ಣಿಗೆ ಸಿದ್ಧಸಂಗೇಶ್ವರ ಮೂರ್ತಿಗೆ ರುದ್ರಾಭಿಷೇಕವೂ ಮತ್ತು ಶ್ರೀ ವಿಶ್ವನಾಥ, ರಾಮೇಶ್ವರ, ಅಗಸ್ತ್ಯೇಶ್ವರ, ಅಂಧಕೇಶ್ವರ, ನೀಲಕಂಠೇಶ್ವರ, ನವಲಿಂಗೇಶ್ವರ, ನಿರ್ಮಲಲಿಂಗೇಶ್ವರ, ಪಂಚಲಿಂಗೇಶ್ವರ, ಶ್ರೀ ಮಲ್ಲಿಕಾರ್ಜುನ ಅಡಿಕೇಶ್ವರ, ಶ್ರೀ ರುದ್ರಪಾದ ಶ್ರೀ ವೀರಭದ್ರೇಶ್ವರ, ಶ್ರೀ ರೇವಣಸಿದ್ಧೇಶ್ವರ, ಶ್ರೀ ಮರುಳಸಿದ್ಧೇಶ್ವರ, ಶ್ರೀ ಏಕೋರಾಮೇಶ್ವರ, ಪಂಡಿತಾರಾಧ್ಯ ಇತ್ಯಾದಿ ಶಿವಲಿಂಗಮೂರ್ತಿಗಳಿಗೆ ಅಭಿಷೇಕವು ಇಲ್ಲಿಯ ಪಂಚವಣ್ಣಿಗೆ ಬೃಹನ್ಮಠ ಧರ್ಮ ಪಾಠಶಾಲೆಯ ವಿದ್ಯಾರ್ಥಿಗಳಿಂದ ವಿಧಾನೋಕ್ತವಾಗಿ ಜರುಗಿ ಸಾಯಂಕಾಲಕ್ಕೆ ವಾಹನೋತ್ಸವವು ನೆರವೇರಿತು. ಮರುದಿವಸ ಅಂದರೆ ನವಮಿ ಸೋಮವಾರ ತಳಿರು ತೋರಣಗಳಿಂದಲಂಕರಿಸಲ್ಪಟ್ಟ ರಾಜಬೀದಿಯಲ್ಲಿ ಸಂಜೆ 4 ಘಂಟೆ ಸುಮಾರಕ್ಕೆ ಶ್ರೀ ವಿಶ್ವನಾಥಸ್ವಾಮಿಯ ರಥೋತ್ಸವವು ಪ್ರಾರಂಭವಾಗಿ 7 ಘಂಟೆಯ ಸುಮಾರಕ್ಕೆ ಅತಿ ವಿಜೃಂಭಣೆಯಿಂದ ಮರಳಿ ತನ್ನ ನಿಜಸ್ಥಾನವನ್ನು ಹೊಂದಿತು ಈ ಮಂಗಲೋತ್ಸವಕ್ಕೆ ಹೂಲಿ ಕಟ್ಟಿಮಠ ಪಂಚಾಚಾರ್ಯ ಭಜನಾಸಂಘದವರು ಸಂದಿಧ್ವಜಯುಕ್ತವಾಗಿ ಆಗಮಿಸಿದ್ದರು. ಇದಲ್ಲದೆ ಅಜೂಬಾಜೂ ಗ್ರಾಮಗಳ ಸದ್ಭಕ್ತವರ್ಯರೂ ಭಜನಾಸಂಘದವರೂ ಮುನವಳ್ಳಿಯ ಹಿಂದೂ ಮಾತೆಯ ಸೇವಾಸಂಘದವರೂ ರಾಷ್ಟ್ರಗೀತೆಯನ್ನು ಹಾಡುತ್ತಾ ಅತ್ಯಂತ ಆನಂದದಿಂದ ಉತ್ಸವಭಾಗಿಗಳಾಗಿದ್ದರು. ಈ ಸ್ವಾಮಿಯ ಕಾರ್ಯಚಾಲಕರಾದ ಶ್ರೀಯುತ ಶೆಟ್ಟೆಪ್ಪ ಮುನವಳ್ಳಿ ಇವರಿಗೂ ಮತ್ತು ಈ ಉತ್ಸವಭಾಗಿಗಳಾದ ಇನ್ನುಳಿದ ಸದ್ಭಕ್ತವರ್ಯರಿಗೂ ಶ್ರೀ ಸ್ವಾಮಿಯು ಸುಮಂಗಲವನ್ನೀಯಲೆಂದು ಅಂತ್ಯಮಂಗಲವನ್ನು ಮಾಡಿ 8 ಘಂಟೆಯ ಸುಮಾರಕ್ಕೆ ಶ್ರೀ ಸ್ವಾಮಿಯ ಆಶೀರ್ವಾದದೊಡನೆ ಯಾವತ್ತರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಓರ್ವ ಉತ್ಸವಭಾಗಿ.

ಲಿಂಗಮುದ್ರಾಸ್ಥಾಪನಮಹೋತ್ಸವ.

ದಾವಣಗೆರೆ.

ಮ|| ರಾ|| ದಾವಣಗೆರೆಯಲ್ಲಿರುವ ಮಾಗಾನಹಳ್ಳಿ ದೊಡ್ಡಪ್ಪನವರ ಚಿ|| ಗುರುಪಾದಪ್ಪ ಇವರು, ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರು ಕಳೆದ ವರುಷ ಇಲ್ಲಿಗೆ ದಯಮಾ...

...ಪಕ್ಕದಲ್ಲಿರುವ ಸುಮಾರು ಎರಡು ...ಶಾಸನ್ನಿಧಿಗೆ ಸಮರ್ಪಿಸಿದ್ದರು. ತಾ|| ...ದಿವಸ ಸಾಯಂಕಾಲ 5 ಘಂಟೆಯ ...ಭೂಮಿಗೆ ಸಾಲ್ಕು ದಿಕ್ಕುಗಳಲ್ಲಿಯೂ ...ನ್ನು ಶ್ರೀ ಹೊಳೆಹೊನ್ನೂರು ಪಟ್ಟದ ...ವಿಧ್ಯುಕ್ತವಾಗಿ ನೆರವೇರಿಸೋಣವಾ... ದಾವಣಗೆರೆ ಮಠಸ್ಥರು, ಶೆಟ್ಟರು, ...ಮೊದಲಾದ ಅನೇಕರು ಭಕ್ತ್ಯುತ್ಸಾಹ... ಸದರಿ ಕಾರ್ಯಮಹೋತ್ಸವವು ...ಜರಗಿತು. ಅನಂತರ ಇಲ್ಲಿಯ ವೇ|| ...ಚಾರ್ಯರು ಸತ್ಪಾತ್ರದಾನವನ್ನು ಕುರಿ... ಮಾಡಿದರು ಮತ್ತು ಈ ಕಾರ್ಯಕ್ಕೆ ...ಗಳನ್ನು ಇಲ್ಲಿಯ ಮ|| ರಾ|| ಸಾಹು ...ಕರಪ್ಪನವರು ಅತ್ಯಂತ ತತ್ಪರತೆಯಿಂದ ...ರ್ಯವನ್ನು ನೆರವೇರಿಸಿದ್ದುದರಿಂದ ಇವರ ...ನ್ನು ಪೂರೈಸಿದರು. ಅನಂತರ ಮಂಗ...ಳಾದಿಗಳು ವಿನಿಯೋಗಿಸಲ್ಪಟ್ಟು, ಪಂ... ಜಯಘೋಷದೊಡನೆ ಸಭೆಯು ಮು...

ಓರ್ವ ಪ್ರತ್ಯಕ್ಷದರ್ಶಿ.

...ಅನ್ನಸಂತರ್ಪಣೆಯೂ.

...ದೆಯ ಶ್ರೀ ಶಂಕರಲಿಂಗದೇವಸ್ಥಾನದಲ್ಲಿ ...ಗುರುವಾರ ದಿವಸ ಶ್ರೀಶಂಕರದೇವರ ...ಳ್ಳಿಯ ಮುಖವು ಪ್ರತಿಷ್ಠೆಗೊಳಿಸಿದ ...ಕ ಸದ್ಭಕ್ತರು ಕೂಡಿ ಶ್ರಾವಣದಲ್ಲಿ ...ರಾಣವನ್ನು ಭಕ್ತಿಪುರಸ್ಸರವಾಗಿ ಶ್ರವ...ಲ್ಲಿ ಅಂದರೆ ತಾ|| 21-8-30 ನೆಯ ...ವಿರ ಜನರಿಗೆ ಅನ್ನಸಂತರ್ಪಣೆಮಾಡಿ ...ಕಾರ ಸದ್ಭಕ್ತರು ಮೇಲಿಂದ ಮೇಲೆ ...ಸುವ ಕಾರ್ಯಗಳನ್ನು ಕೈಕೊಳ್ಳುವ ...ನ್ನು ಶ್ರೀ ಶಂಕರೇಶನು ದಯಪಾಲಿಸ...

ಓರ್ವ ಉತ್ಸವಭಾಗಿ

...ಮುಖಂಡರ ವಿಚಾರಣೆ

6 ತಿಂಗಳ ಸಾದಾ ಸಜೆ.

ದೆಹಲಿ ಆಗಸ್ಟು 28.

ನಿನ್ನೆಯದಿವಸ ದಸ್ತಗಿರಿಮಾಡಲ್ಪಟ್ಟ 9 ಜನ ಕಾಂಗ್ರೆಸ್ ಮುಖಂಡರ ಮತ್ತು ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರ ಚರಿತ್ರಾರ್ಹವಾದ ವಿಚಾರಣೆಯು ಈ ದಿವಸ 11 ಘಂಟೆಗೆ ಸೆಂಟ್ರಲ್ ಜೈಲಿನಲ್ಲಿ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮಿ|| ಎಫ್. ಬಿ. ಪೂಲ್‌ರವರ ಮುಂದೆ ಪ್ರಾರಂಭವಾಯಿತು. ಜೈಲಿನ ಸುತ್ತಲೂ ಪೋಲೀಸರು ಕಾವಲಿದ್ದು ಟಿಕೆಟ್ ಪಡೆದಿದ್ದವರನ್ನು ಮಾತ್ರ ಒಳಕ್ಕೆ ಬಿಡುತ್ತಿದ್ದರು. ಆದರೆ ವಿಚಾರಣೆಯಾಗುವಕ್ಷಣದಲ್ಲಿ ಮೌಲಾನಾ ಮುಫ್ತಿ ಕಿಫಿಯತುಲ್ಲಾ, ಮೌಲಾನ್ ಅಹಮದ್ ಸಯ್ಯದ್, ಮಿ|| ಇಸ್ಮಾಯಿಲ್ ಘಜನಾವಿ, ಶ್ರೀಮತಿ ಕಮಲಾ ಜವಾಹರಲಾಲ್ ನೆಹರು, ಬಾರ್ ಬಹದ್ದೂರ್ ಅಬ್ದುಲ್ ರಹಮಾನ್ ಅಡ್ವೋಕೇಟ್ ಮಿ|| ಅಸಫ್ ಅಲಿ ಮತ್ತು ಶ್ರೀಮತಿ ಅಸಫ್ ಅಲಿ ಮೊದಲಾದ ಅನೇಕ ಜನರು ನೆರೆದಿದ್ದರು.

ಪ್ರಥಮದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾದ ರಾವ್ ಬಹದ್ದೂರ್ ಸುರಜ್ ನಾರಾಯಣರವರು, ಪಂಡಿತ ಗೋವಿಂದ ಮಾಳವೀಯರವರು ನಿನ್ನೆಯ ದಿವಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗಿನಲ್ಲಿ ಹಾಜರಾಗಿದ್ದರೂ, ಅವರು ಅದರಲ್ಲಿ ಯಾವ ಭಾಗವನ್ನೂ ವಹಿಸದೆ ಇದ್ದುದರಿಂದ ಅವರ ಮೇಲಿನ ಮೊಕದ್ದಮೆಯನ್ನು ವಾಪಸ್ ತೆಗೆದುಕೊಂಡಿರುವದಾಗಿ ಹೇಳಿದರು. ಅನಂತರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ದೆಹಲಿ ಪ್ರಾವಿನ್ಸಿನಲ್ಲಿ ಅಕ್ರಮಕೂಟವೆಂದೂ, ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಕಾಯಿದೆಯು ದೆಹಲಿ ಪ್ರಾಂತಕ್ಕೂ ಅನ್ವಯಿಸುವದೆಂದೂ, ಇಂಡಿಯಾ ಸರಕಾರದಿಂದ ಪ್ರಸಿದ್ಧಿಪಡಿಸಲ್ಪಟ್ಟಿರುವ ಆಗಸ್ಟ್ 27 ನೆಯ ತಾರೀಖಿನ "ಗೌರ್ನಮೆಂಟ್ ಆಫ್ ಇಂಡಿಯಾ ಗೆಜೆಟ್ಟ"ನ ಪ್ರತಿಗಳನ್ನು ಹಾಜರಮಾಡಿದರು.

ಕಡೆಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ನಿನ್ನೆಯದಿವಸ ಡಾಕ್ಟರ್ ಅನ್ಸಾರಿಯವರ ಮನೆಯನ್ನು ಜಪ್ತಿಮಾಡಿದಾಗ ದೊರೆತ ಮೌಲಾನಾ ಅಬ್ದುಲ್‌ಕಲಾಂ ಆಜಾದ್‌ರವರು 27 ನೆಯ ತಾರೀಖಿನ ದಿವಸ ಡಾಕ್ಟರ್ ಎಂ. ಎ. ಅನ್ಸಾರಿಯವರನ್ನು ಕಾಂಗ್ರೆಸ್ಸಿನ ಪ್ರೆಸಿಡೆಂಟರನ್ನಾಗಿ ನೇಮಿಸಿ ಬರೆದಿದ್ದ ಕಾಗದವನ್ನೂ, ವರ್ಕಿಂಗ್‌ಕಮಿಟಿಯ ಕಾರ್ಯಕ್ರಮಗಳ ಪಟ್ಟಿಯನ್ನೂ, ಸಭೆಗೆ ಹಾಜರಾಗಿದ್ದ ಮೆಂಬರರ ಹೆಸರಿನ ಪಟ್ಟಿಯನ್ನೂ ಹಾಜರ್ಮಾಡಿದರು.

ಮಿ|| ಸೀನಿಯರ್ ಮತ್ತು ಮಿ|| ನಂದಕಿಶೋರ್ ಈ ಇಬ್ಬರು ಸಾಕ್ಷಿಗಳ ವಿಚಾರಣೆಯು ಮಾತ್ರ ನಡೆಯಿತು.

ಮೊದಲಿನಿಂದ ಕಡೆಯವರೆಗೂ ಮುಖಂಡರು ವಿಚಾರಣೆಗೆ ಗಮನವನ್ನೇ ಕೊಡದೆ, ಎಲ್ಲರೂ ಪುಸ್ತಕಗಳನ್ನು ಓದುತ್ತ ಸಂತೋಷದಿಂದ ಕುಳಿತಿದ್ದರು. 12 ಘಂಟೆಗೆ ಮ್ಯಾಜಿಸ್ಟ್ರೇಟರು ಮುಖಂಡರನ್ನು ಕುರಿತು ನೀವು "ವಿಚಾರಣೆಯಲ್ಲಿ ಭಾಗವಹಿಸುವಿರಾ?" ಎಂದು ಕೇಳಲು ಮುಖಂಡರು ನಿರಾಕರಿಸಿದರು.

ಆ ಮೇಲೆ ಮುಖಂಡರೆಲ್ಲರು ಜೈಲಿಗೆ ಸೇರಿದ ಯೂರೋಪಿಯನ್ ವಾರ್ಡಿನಲ್ಲಿ ಹಾಕಿದ್ದ ಡೇರೆಗಳಲ್ಲಿ ಊಟಮಾಡುತ್ತಿದ್ದಾಗ ಮ್ಯಾಜಿಸ್ಟ್ರೇಟರು ಪತ್ರಿಕಾಪ್ರತಿನಿಧಿಗಳ ಸಮೇತರಾಗಿ ಅಲ್ಲಿಗೆ ಪ್ರವೇಶಿಸಿ "ಮಹಾಶಯರೇ! ನಿಮ್ಮೆಲ್ಲರನ್ನು "ಎ" ತರಗತಿಯಲ್ಲಿ ಆರುತಿಂಗಳ ಸಾದಾ ಕಾರಾಗೃಹವಾಸಕ್ಕೆ ಗುರಿಪಡಿಸಲು ವ್ಯಸನಪಡುತ್ತದೆ" ಎಂದರು. ಅದಕ್ಕೆ ಮಿ|| ಪಟೇಲರು "ವಂದನೆಗಳು" ಎಂದರು.

ಮುಖಂಡರನ್ನು ಸದ್ಯ ಜೈಲ್ ಕಾಂಪೌಂಡಿನಲ್ಲಿ ಹಾಕಿರುವ ಡೇರೆಗಳಲ್ಲಿಯೇ ಇಟ್ಟಿರುವರು. ನಿನ್ನೆ ಸಾಯಂಕಾಲದ ಲಾಗಾಯಿತು ನಗರದಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಡುತ್ತಿರುವದು.

ಮಹಾತ್ಮರು ಜೈಲಿನಿಂದ ತಮ್ಮ ಆಶ್ರಮಕ್ಕೆ ಬರೆದ ಪತ್ರ.

ಆಹಾರವನ್ನು ಔಷಧದಂತೆ ತೆಗೆದುಕೊಳ್ಳುವಂತೆ ತೆಗೆದುಕೊಳ್ಳಬೇಕು. ರುಚಿಯಾಗಿದೆ ಅಥವಾ ಇಲ್ಲವೆಂದು ನೋಡಬಾರದು.

ಹೆಚ್ಚಿಗೆ ತಿನ್ನುವುದು ದ್ರೋಹ.

ನಾಲಿಗೆಯ ವಿಶಿಷ್ಟ ಹಕ್ಕನ್ನು ಮಾನವನು ಕೈಯಲ್ಲಿಟ್ಟುಕೊಂಡರೆ ಅವನು ನಿತ್ಯಬ್ರಹ್ಮಚಾರಿಯಾಗುವನು. ಬ್ರಹ್ಮಚರ್ಯಕ್ಕೂ ಜಿಹ್ವಾಬಂಧನಕ್ಕೂ ಪರಸ್ಪರ ಸಂಬಂಧವಿದೆ. ಜಿಹ್ವಾಬಂಧನವನ್ನು ಅನುಸರಿಸಿದವರಿಗೆ ಬ್ರಹ್ಮಚರ್ಯದಿಂದಿರುವುದು ಅತಿಸುಲಭ. ಋಷಿಗಳೂ ಕೂಡ ಜಿಹ್ವಾಬಂಧನವನ್ನು ಮಾಡುವುದು ಅತಿ ಪ್ರಯಾಸವೆಂದು ಹೇಳಿರುವರು. ನಮ್ಮ ದೇಹದ ಬೆಳವಣಿಗೆಗೆ ಎಷ್ಟು ಬೇಕೋ ಅಷ್ಟುಮಾತ್ರ ಆಹಾರವನ್ನು ಶರೀರಕ್ಕೆ ಹಾಕಬೇಕೇ ಹೊರತು ಹೆಚ್ಚು ಹಾಕಬಾರದು. ಔಷಧವನ್ನು ನಿಯಮದಿಂದಲೂ ಮಿತಿಯಿಂದಲೂ ತೆಗೆದುಕೊಂಡರೆ ಅದರ ಫಲವನ್ನು ನಾವು ಹೇಗೆ ಸಂಪಾದಿಸುವೆವೋ ಅದೇ ರೀತಿಯಿಂದಲೇ ಆಹಾರವನ್ನು ತೆಗೆದುಕೊಳ್ಳಬೇಕು. ಔಷಧವನ್ನು ಹೆಚ್ಚು ತೆಗೆದುಕೊಂಡರೆ ಅದರಿಂದ ಹೇಗೆ ದುಷ್ಪರಿಣಾಮವುಂಟಾಗುವುದೋ ಅದೇರೀತಿಯಲ್ಲೇ ಆಹಾರವನ್ನು ತೆಗೆದುಕೊಂಡರೆ ಅದು ಮಾನವಜನ್ಮಕ್ಕೆ ದ್ರೋಹಮಾಡಿದಂತಾಗುತ್ತದೆಂದು ನನ್ನ ಅಭಿಪ್ರಾಯ.

ಯೋಗಿ ಯಾರು?

ಪ್ರಪಂಚದಲ್ಲಿ ಸಂಪೂರ್ಣ ಆರೋಗ್ಯದಿಂದ ಇರತಕ್ಕ ಒಬ್ಬರನ್ನೂ ನಾನು ನೋಡಿಲ್ಲವೆಂದು ಒಬ್ಬ ಪ್ರಸಿದ್ಧ ಡಾಕ್ಟರರು ಹೇಳಿರುವುದು ನಿಜವೆಂದು ತೋರುವುದು. ಹೆಚ್ಚಾಗಿ ತಿನ್ನುವುದರಿಂದ ಅನೇಕ ರೋಗಗಳು ಬರುತ್ತವೆ. ಈ ರೋಗಗಳನ್ನು ಪರಿಹಾರ ಮಾಡಲು ಉಪವಾಸವೇ ಒಳ್ಳೇ ಔಷಧ. ಅದಕ್ಕೆ ನಮ್ಮ ಪೂರ್ವಜರು ಆಗಿಂದಾಗ್ಗೆ ಉಪವಾಸಗಳನ್ನು ವ್ರತರೂಪದಿಂದ ಮಾಡುತ್ತೇ ಇದ್ದರು. ನಾವುಗಳೂ ಕೂಡ ಇದನ್ನು ಅನುಸರಿಸಿ ಆರೋಗ್ಯವಂತರಾಗಿ ಬಾಳಬೇಕು. ಈ ಉತ್ತಮಧ್ಯೇಯವನ್ನು ಅನುಸರಿಸುವುದರಲ್ಲಿ ನಮ್ಮ ಪ್ರಾಣವನ್ನಾದರೂ ತ್ಯಜಿಸಬೇಕೇ ಹೊರತು ಈ ಧ್ಯೇಯವನ್ನು ಅನುಸರಿಸಲು ನಮ್ಮ ಕೈಯಿಂದ ಆಗುವುದಿಲ್ಲವೆನ್ನಬಾರದು. ಮಾತಿನಲ್ಲಿಯೂ ಕೆಲಸದಲ್ಲಿಯೂ ಆಲೋಚನೆಯಲ್ಲಿಯೂ ಸತ್ಯವಂತರಾಗಿ ಬಾಳುವುದೇ ಜೀವನದ ಧ್ಯೇಯ! ಈ ಧ್ಯೇಯವನ್ನು ಯಾರು ಅನುಸರಿಸುವರೋ ಅವರೇ ಪರಮಯೋಗಿಗಳು, ಒಂದಾನೊಂದು ಕಾಲದಲ್ಲಿ ನಮ್ಮ ಋಷಿಗಳು ಈ ಧ್ಯೇಯವನ್ನು ಅನುಸರಿಸಿ ಸೂರ್ಯನೆಂಬ ಅಗ್ನಿಯಿಂದ ಬೇಯಿಸಲ್ಪಟ್ಟ ಹಣ್ಣುಹಂಪಲು ಇತ್ಯಾದಿ ಪದಾರ್ಥಗಳನ್ನು ತಿಂದುಕೊಂಡು ಅತಿ ಪುಷ್ಟರಾಗಿಯೂ ಪ್ರಚಂಡ ಮಾನಸಿಕಶಕ್ತಿಯುಳ್ಳವರಾಗಿಯೂ ಇದ್ದು ಖ್ಯಾತಿಯನ್ನು ಪಡೆದಿರುವರು. ನಾವೆಲ್ಲರೂ ನಮ್ಮ ಕೈಲಾದಮಟ್ಟಿಗೆ ಈ ಧ್ಯೇಯವನ್ನು ನಮ್ಮ ಜೀವನದಲ್ಲಿ ಇಟ್ಟುಕೊಳ್ಳಲು ಪ್ರಯತ್ನಪಡೋಣ!

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ರಸುಂವಾರು ಊದುಬತ್ತಿಗಳು, ಪರಿಮಳದತಾಂಗ ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಗಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಾಶಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅತ್ತ ಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

6

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ ಶ್ರೀ ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ ಸಂಚಾರ.

ಶ್ರೀ ಮಹಾಸ್ವಾಮಿಗಳವರು ಧರ್ಮಬೋಧೆಯಿಂದ ಭಕ್ತಕೋಟಿಯನ್ನೆಚ್ಚರಿಸಿ ಪುನೀತರನ್ನು ಮಾಡಲು ದೇಶಮಧ್ಯದಲ್ಲಿ ಸಂಚರಿಸುತ್ತ ಹಲ್ಯಾಳಿಗೆ ತಾ|| ೩೦-೭-೩೦ ರಲ್ಲಿ ಬಿಜಯಂಗೈಸಿ [illegible]

ಭಕ್ತಮಾಹೇಶ್ವರರು ಶ್ರೀ ಜಗದ್ಗುರು[illegible] ಘಟೆಯನ್ನು ಪಡೆಯಲೆಂದು ಜಗದ್ಗು[illegible] ಭಜಿಸುತ್ತೇನೆ.

ಸ್ಥಿರಪಟ್ಟಾಧಿಕಾರ ಸ[illegible]

ಮ್ಯಾಗೇರಿ.

ನಿಜಾಮ ಇಲಾಖಾ ಯಲಬುರ[illegible] ದಲ್ಲಿ ಶ್ರೀಮಜ್ಜಗದ್ಗುರು ದಾರುಕಾ[illegible] ಮಠವೆಂಬುದು) ಸುಪ್ರಸಿದ್ಧವಾದ ಮ[illegible] ಮಹಾಪ್ರಾಂತ, ಬ್ರಿಟಿಷ್ ಪ್ರಾಂತ, ಹ[illegible] ಬಹುಜನ ಶಿಷ್ಯಪ್ರಶಿಷ್ಯರು ಇದ್ದು[illegible] ಅಧಿಕಾರವಿದ್ದಿಲ್ಲ. ಈಗ ಅದಕ್ಕೆ ಪ[illegible]

[illegible]

ಸಮಾರಂಭದ ಸ್ಮಾರಕಕ್ಕೋಸುಗ ಮಂಗಳೂರು ಶ್ರೀಗಳವರು ಪ್ರಭಾಪೋಷಣೆಗೆ 5 ರೂಪಾಯಿಗಳನ್ನು ಕೊಡುಕೆಯಿತ್ತರು. ಇದಕ್ಕೆಲ್ಲ ಮುಖ್ಯವಾಗಿ ಶ್ರೀಮಂತ ಚವಡಿ ಗದಗಿನ ಸಂಗನಬಸಪ್ಪನವರ, ಮಾಗೇರಿ ಪಾಟೀಲ ಬಸವನಗೌಡರ, ರಾ|| ಓರಿಯಪ್ಪಗೌಡರ ಗದಗ ಬಾಗೂರ ಬಕೆಟ್ಟಪ್ಪನವರ ಇನ್ನುಳಿದ ಸದ್ಭಕ್ತರ ಕರ್ತವ್ಯಜಾಗ್ರತೆಯೇ ಕಾರಣವಾದ್ದರಿಂದ ಜಗದ್ಗುರುಗಳು ಸರ್ವರಿಗೂ ಸರ್ವಸಂಪತ್ತನ್ನು ನಿರಂತರದಲ್ಲಿ ಒದಗಿಸಿಕೊಡಲೆಂದು ಪ್ರಾರ್ಥಿಸುವ,

ಓರ್ವ ಉಪವಿಭಾಗಿ.

ನೂತನ ಗೃಹಪ್ರವೇಶಮಹೋತ್ಸವವು.

ಸೊರಬದ ತಾಲೂಕು ಹೆಗ್ಗೋಡು ಗ್ರಾಮದ ವೀರಶೈವಶ್ರೇಷ್ಠರಾದ ಮ|| ರಾ|| ಪಾಟೀಲ ಪುಟ್ಟಪ್ಪಗೌಡರ ಗೃಹಪ್ರವೇಶವು ಈ ಪ್ರಮೋದೂತ ಸಂವತ್ಸರದ ಶ್ರಾವಣ ಶು|| ೭ ಶುಕ್ರವಾರ ದಿವಸ ನಡೆಯಿತು. ಈ ಕಾರ್ಯಕ್ಕೆ ತೊಗರಸಿ ಮೊದಲಾದ ಪಟ್ಟದಸ್ವಾಮಿಗಳು, ಮಠಸ್ಥರು, ಶಾಸ್ತ್ರಿಗಳು, ಜಂಗಮವೃಂದವು, ಲಿಂಗಿಶಾಸ್ತ್ರಪರಿಷತ್ತಿನ ಮೆಂಬರುಗಳಾದ ಮ|| ರಾ|| ಓರಿಹಾವಲಿ ಸರಕಲ್ ಶಾನುಭೋಗ ಪಡಕ್ತರಗೌಡರು, ಮ|| ರಾ|| ಮಾವಲೀ ಪಾ|| ಪಂಚಾಕ್ಷರಗೌಡರು, ಕೊಂಡಗಸವಿ ಮ|| ರಾ|| ಮಲ್ಲಪ್ಪಗೌಡರು, ತಾವರೆಕೊಪ್ಪದ ರಾ|| ಸೋಮಪ್ಪಗೌಡರು,

[illegible]

ಯು ಹಂಚಲ್ಪಟ್ಟಿತು. ಬಂದಿದ್ದ ಸರ್ವರೂ ಗೌಡರನ್ನು ಹರಸುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಮಾಸೂರು ಹಿರೇಮಠ ಚನ್ನವೀರಾರಾಧ್ಯರು.

ಬಳ್ಳಾರಿ ಜಿಲ್ಲೆಯ ವೀರಶೈವರಲ್ಲಿ ವಿಜ್ಞಾಪನೆ.

ಮಹಾಶಯರೇ, ಈ ಮೂಲಕ ತಮಗೆ ವಿಜ್ಞಾಪಿಸಿಕೊಳ್ಳುವದೇನಂದರೆ—ಮುಂದೆ ಬರುವ ಸೆಪ್ಟಂಬರ್ ತಿಂಗಳು 9 ನೇ ತಾ|| ಮಂಗಳವಾರದಲ್ಲಿ ಜರುಗುವ ಮದ್ರಾಸು ಶಾಸನಸಭೆಯ ಚುನಾವಣೆಗೆ ಮ|| ರಾ|| ೩ ಶಿವಪಾದಪ್ಪ, ಬಿ.ಎ. ಬಿ.ಎಲ್. ವಕೀಲ್ ಇವರನ್ನು ಅಭ್ಯರ್ಥಿಗಳನ್ನಾಗಿ ನಿಲ್ಲಿಸಿರುತ್ತಾರೆ. ಇವರು ಆರುವರ್ಷಗಳಿಂದ ವಕೀಲ ಕೆಲಸವನ್ನು ಮಾಡುತ್ತಲಿರುವರು. ಮತ್ತು ಈವರೆಗೂ ತಾಲೂಕು ಬೋರ್ಡ, ಜಿಲ್ಲಾ ಬೋರ್ಡ, ಎಜುಕೇಷನಲ್ ಕೌನ್ಸಿಲ್ ಮುಂತಾದ ಸಂಸ್ಥೆಗಳ ಮೂಲಕ ಸಮಾಜಸೇವೆಯನ್ನು ಮಾಡಿರುತ್ತಾರೆ. ಈ ಜಿಲ್ಲೆಯಲ್ಲಿ ವೀರಶೈವರ ಓಟುಗಳೇ ಜಾಸ್ತಿ ಇರುತ್ತವೆ. ಪ್ರಯುಕ್ತ ಆ ದಿವಸ ನೀವು ನಿಮ್ಮ ಪ್ರಾಂತದಲ್ಲಿರುವ ಓಟರುಗಳನ್ನು ಮುತವರ್ಜಿಯಿಂದ ಕರೆದುಕೊಂಡು ಬಂದು ಸದರಿಯವರಿಗೆ ನಿಮ್ಮ ಓಟುಗಳನ್ನು ತಪ್ಪದೆ ಕೊಟ್ಟು ಸಮಾಜದ ಗೌರವವನ್ನು ಕಾಪಾಡಬೇಕೆಂದು ಕೋರುತ್ತೇನೆ.

ಪೆದ್ದಪ್ಪನವರ ಶಿದ್ದಲಿಂಗಪ್ಪ,
ಹರಪನಹಳ್ಳಿ.

F. P. & P. House, Ltd., Triplicane, Madras.

[illegible]

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ, ಮೈಸೂರು.

ರಾಜಧಾನಿಯಲ್ಲಿರುವ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಈಗ ಹತ್ತಾರು ವರ್ಷಗಳ ಹಿಂದೆ ಇದ್ದದ್ದ[illegible]

[illegible]

ತಯಾರಾದ ಪದಾರ್ಥಗಳು ಇಂಡಿಯಾದೇಶವಲ್ಲದೆ ಇತರ ಪಾಶ್ಚಿಮಾತ್ಯದೇಶಗಳಲ್ಲಿ ತಯಾರಾದವುಗಳನ್ನೂ ಮೀರಿಸಿವೆ. ಇಲ್ಲಿ ತಯಾರಾದ ಪದಾರ್ಥಗಳು ಪರದೇಶಗಳಿಗೆ ಹೋಗುತ್ತಿರುವುದೇ ಇದಕ್ಕೆ ನಿದರ್ಶನವಾಗಿದೆ. ಮತ್ತು ಚಿತ್ರಕಲೆಯು ಇಲ್ಲಿಯವರೆಗೆ ನಾಮಮಾತ್ರಶೇಷವಾಗಿತ್ತು. ಆದರೆ ಈಗ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ರಾ|| ಶಾಮಂಜಯ್ಯವರು ಇದರ ಅಧೋಗತಿಯನ್ನು ಮಹಿಸಿಕೊಂಡಾಗಲಿಂದ ಪುನಃ ಜೀವಕಳೆಯನ್ನು ಹೊಂದುತ್ತಿರುವುದು.

ಈ ಇನ್‌ಸ್ಟಿಟ್ಯೂಟಿನ ಉನ್ನತಾವಸ್ಥೆಗೆ ಈಗ ಸೂಪರಿಂಟೆಂಡೆಂಟರಾಗಿರುವ ಮ|| ರಾ|| ಎಸ್. ರಾಮಸ್ವಾಮಯ್ಯಂಗಾರ್ಯರಿಗೆ ತಮ್ಮ ಕಾರ್ಯದಲ್ಲಿರುವ ಶ್ರದ್ಧೆಯಲ್ಲದೆ ದೇಶದ ಮೇಲಿರುವ ಅನಿರ್ವಚನೀಯವಾದ ಪ್ರೀತಿಯೂ ಕಾರಣವಾಗಿರುವುದು. ಇವರೇ ಇನ್ನೂ ಅನೇಕಕಾಲ ಇಲ್ಲೇ ಇದ್ದು ಈ ಇನ್‌ಸ್ಟಿಟ್ಯೂಟನ್ನು ಇನ್ನೂ ಉನ್ನತಪದವಿಗೆ ತರಲೆಂದು ಹಾರೈಸುತ್ತೇನೆ.

ಒಬ್ಬ ಪ್ರೇಕ್ಷಕ.

ಶ್ರೀ ದಕ್ಷಿಣ ಕಾಶೀಕ್ಷೇತ್ರ ಪೂವಲ್ಲಿ (ಹೂಲಿ) ಶ್ರೀ ವಿಶ್ವನಾಥಸ್ವಾಮಿ ರಥೋತ್ಸವವೂ ಶ್ರೀ ಸಿದ್ಧಚೈತನ್ಯಶಿವಾಚಾರ್ಯರ ಜಯಂತಿಯೂ.

ಪ್ರತಿವರುಷ ಪದ್ಧತಿಯಂತೆ ಇದೇ ಶ್ರಾವಣ ಬಹುಳ ೫ ಗುರುವಾರ ಶ್ರೀ ವಿಶ್ವನಾಥಸ್ವಾಮಿಯ ಅಭಿಷೇಕವೂ, ಧ್ವಜಾರೋಹಣವೂ, ನಾಂದೀಸಮಾರಾಧನೆ, ವಾಹನವೂ ಶುಕ್ರವಾರ ಶನಿವಾರ ವಾಹನಉತ್ಸವವೂ, ಅಷ್ಟಮಿ ರವಿವಾರ ಶ್ರೀ ಸಿದ್ಧಚೈತನ್ಯ[illegible]

[illegible]

ಯ ಕಾರ್ಯಚಾಲಕರಾದ ಶ್ರೀಯುತ ಶೆಟ್ಟೆಪ್ಪ ಮುನವಳ್ಳಿ ಇವರಿಗೂ ಮತ್ತು ಈ ಉಪವಿಭಾಗಿಗಳಾದ ಇನ್ನುಳಿದ ಸದ್ಭಕ್ತವರ್ಯರಿಗೂ ಶ್ರೀ ಸ್ವಾಮಿಯು ಸುಮಂಗಲವನ್ನೀಯಲೆಂದು ಅಂತ್ಯಮಂಗಲವನ್ನು ಮಾಡಿ 8 ಘಂಟೆಯ ಸುಮಾರಕ್ಕೆ ಶ್ರೀ ಸ್ವಾಮಿಯ ಆಶೀರ್ವಾದದೊಡನೆ ಯಾವತ್ತರೂ ತಮ್ಮ ತಮ್ಮ ಗೃಹಗಳಿಗೆ ತೆರಳಿದರು.

ಓರ್ವ ಉಪವಿಭಾಗಿ.

ಲಿಂಗಮುದ್ರಾಸ್ಥಾಪನಮಹೋತ್ಸವ.

ದಾವಣಗೆರೆ.

ಮ|| ರಾ|| ದಾವಣಗೆರೆಯಲ್ಲಿರುವ ಮಾಗಾನಹಳ್ಳಿ ದೊಡ್ಡಪ್ಪನವರ ಚ|| ಗುರುಪಾದಪ್ಪ ಇವರು, ಶ್ರೀಮಜ್ಜಗದ್ಗುರು ರಂಭಾಪುರೀ ಮಹಾಸ್ವಾಮಿಗಳವರು ಕಳೆದ ವರುಷ ಇಲ್ಲಿಗೆ ದಯಮಾ

ಓರೆಗೆ ಆನೆಕೊಂಡದ ಸಕ್ಕರೆದಲ್ಲಿರುವ ಸುಮಾರು ಎರಡು ಎಕರೆ ಭೂಮಿಯನ್ನು ಮಹಾಸನ್ನಿಧಿಗೆ ಸಮರ್ಪಿಸಿದ್ದರು. ತಾ|| 21-8-30 ನೆಯ ಗುರುವಾರ ದಿವಸ ಸಾಯಂಕಾಲ 5 ಘಂಟೆಯ ಶುಭಮುಹೂರ್ತದಲ್ಲಿ ಆ ಭೂಮಿಗೆ ನಾಲ್ಕು ದಿಕ್ಕುಗಳಲ್ಲಿಯೂ ಲಿಂಗಮುದ್ರಾಸ್ಥಾಪನೆಯನ್ನು ಶ್ರೀ ಹೊಳೆಹೊನ್ನೂರು ಪಟ್ಟದ ಶ್ರೀಗಳವರ ಅಪ್ಪಣೆಯಂತೆ ವಿಧ್ಯುಕ್ತವಾಗಿ ನೆರವೇರಿಸೋಣವಾ[illegible]

[illegible]

ಆಧಾರವನ್ನಾಸಿ ಭಾಷಣವನ್ನು ಪೂರೈಸಿದರು. ಅನಂತರ ಮಂಗಳಾರತಿಯಾಗಿ ಫಲ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಪಂಚಾಚಾರ್ಯ ಜಗದ್ಗುರುಗಳ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಪುರಾಣಶ್ರವಣವೂ ಅನ್ನಸಂತರ್ಪಣೆಯೂ.

ಗದಗ ಶಹಾಪೂರ ಪೇಟೆಯ ಶ್ರೀ ಶಂಕರಲಿಂಗದೇವಸ್ಥಾನದಲ್ಲಿ ಇದೇ ಶ್ರಾವಣ ಬ|| ೧೩ ಗುರುವಾರ ದಿವಸ ಶ್ರೀಶಂಕರದೇವರ ಎರಡುಸಾವಿರ ತೊಲಿ ಬೆಳ್ಳಿಯ ಮುಖವು ಪ್ರತಿಷ್ಠೆಗೊಳಿಸಿದ ಮೂಲಕ ಇಲ್ಲಿಯ ನಾಗರೀಕ ಸದ್ಭಕ್ತರು ಕೂಡಿ ಶ್ರಾವಣದಲ್ಲಿ ಶಂಕರದಾಸಿಮಾರ್ಯರ ಪುರಾಣವನ್ನು ಭಕ್ತಿಪುರಸ್ಸರವಾಗಿ ಶ್ರವಣಮಾಡಿ ಪುರಾಣಾಂತ್ಯದಲ್ಲಿ ಅಂದರೆ ತಾ|| 21-8-30 ನೆಯ ಗುರುವಾರ ದಿವಸ 3-4 ಸಾವಿರ ಜನರಿಗೆ ಅನ್ನಸಂತರ್ಪಣೆಮಾಡಿದರು. ಕಾರಣ ಇದೇ ಪ್ರಕಾರ ಸದ್ಭಕ್ತರು ಮೇಲಿಂದ ಮೇಲೆ ಇಂಥ ಭಕ್ತಿಯನ್ನು ಸಲಿಗೊಳಿಸುವ ಕಾರ್ಯಗಳನ್ನು ಕೈಕೊಳ್ಳುವ ಬುದ್ಧಿಯನ್ನೂ ಶಕ್ತಿಯನ್ನೂ ಶ್ರೀ ಶಂಕರೇಶನು ದಯಪಾಲಿಸಲೆಂದು ಹಾರೈಸುವ,

ಓರ್ವ ಉಪವಿಭಾಗಿ.

ಕಾಂಗ್ರೆಸ್ ಮುಖಂಡರ ವಿಚಾರಣೆ

6 ತಿಂಗಳ ಸಾದಾ ಸಜೆ.

ದೆಹಲಿ ಆಗಸ್ಟು 28.

[illegible]

ಸಿನಲ್ಲಿ ಆಕ್ರಮಕೂಟವೆಂದೂ, ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಕಾಯಿದೆಯು ದೆಹಲಿ ಪ್ರಾಂತಕ್ಕೂ ಅನ್ವಯಿಸುವದೆಂದೂ, ಇಂಡಿಯಾ ಸರಕಾರದಿಂದ ಪ್ರಸಿದ್ಧಿಪಡಿಸಲ್ಪಟ್ಟಿರುವ ಆಗಸ್ಟ 27 ನೆಯ ತಾರೀಖಿನ "ಗವರ್ನಮೆಂಟ್ ಆಫ್ ಇಂಡಿಯಾ ಗೆಜೆಟ್ಟಿ"ನ ಪ್ರತಿಗಳನ್ನು ಹಾಜರಮಾಡಿದರು.

ಕಡೆಯಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಹಿಂದಿಯದಿವಸ ಡಾಕ್ಟರ್ ಅನ್ಸಾರಿಯವರ ಮನೆಯನ್ನು ಜಪ್ತಮಾಡಿದಾಗ ದೊರೆತ ಮೌಲಾನಾ ಅಬ್ದುಲ್‌ಕಲಾಂ ಅಜದ್‌ರವರು 27 ನೆಯ ತಾರೀಖಿನ ದಿವಸ ಡಾಕ್ಟರ್ ಎಂ. ಎ. ಅನ್ಸಾರಿಯವರನ್ನು ಕಾಂಗ್ರೆಸ್ಸಿನ ಪ್ರೆಸಿಡೆಂಟರನ್ನಾಗಿ ನೇಮಿಸಿ ಬರೆದಿದ್ದ ಕಾಗದವನ್ನೂ, ವರ್ಕಿಂಗ್‌ಕಮಿಟಿಯ ಕಾರ್ಯಕ್ರಮಗಳ ಪಟ್ಟಿಯನ್ನೂ, ಸಭೆಗೆ ಹಾಜರಾಗಿದ್ದ ಮೆಂಬರರ ಹೆಸರಿನ ಪಟ್ಟಿಯನ್ನೂ ಹಾಜರ್ಮಾಡಿದರು.

ಮಿ|| ಸೀನಿಯರ್ ಮತ್ತು ಮಿ|| ನಂದಕಿಶೋರ್ ಈ ಇಬ್ಬರು ಸಾಕ್ಷಿಗಳ ವಿಚಾರಣೆಯು ಮಾತ್ರ ನಡೆಯಿತು.

ಮೊದಲಿನಿಂದ ಕಡೆಯವರೆಗೂ ಮುಖಂಡರು ವಿಚಾರಣೆಗೆ ಗಮನವನ್ನೇ ಕೊಡದೆ, ಎಲ್ಲರೂ ಪುಸ್ತಕಗಳನ್ನು ಓದುತ್ತ ಸಂತೋಷದಿಂದ ಕುಳಿತಿದ್ದರು. 12 ಘಂಟೆಗೆ ಮ್ಯಾಜಿಸ್ಟ್ರೇಟರು ಮುಖಂಡರನ್ನು ಕುರಿತು ನೀವು "ವಿಚಾರಣೆಯಲ್ಲಿ ಭಾಗವಹಿಸುವಿರಾ?" ಎಂದು ಕೇಳಲು ಮುಖಂಡರು ನಿರಾಕರಿಸಿದರು.

ಆ ಮೇಲೆ ಮುಖಂಡರೆಲ್ಲರು ಜೈಲಿಗೆ ಸೇರಿದ ಯೂರೋಪಿಯ[illegible]

ಮುಖಂಡರನ್ನು ಸದ್ಯಃ ಜೈಲ್ ಕಾಂಪೌಂಡಿನಲ್ಲಿ ಹಾಕಿರುವ ಡೇರೆಗಳಲ್ಲಿಯೇ ಇಟ್ಟಿರುವರು. ನಿನ್ನೆ ಸಾಯಂಕಾಲದ ಲಾಗಾಯತು ನಗರದಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಡುತ್ತಿರುವದು.

ಮಹಾತ್ಮರು ಜೈಲಿನಿಂದ ತಮ್ಮ ಆಶ್ರಮಕ್ಕೆ ಬರೆದ ಪತ್ರ.

ಆಹಾರವನ್ನು ಔಷಧದಂತೆ ತೆಗೆದುಕೊಳ್ಳುವಂತೆ ತೆಗೆದುಕೊಳ್ಳಬೇಕು. ರುಚಿಯಾಗಿದೆ ಅಥವಾ ಇಲ್ಲವೆಂದು ನೋಡಬಾರದು.

ಹೆಚ್ಚಿಗೆ ತಿನ್ನುವುದು ದ್ರೋಹ.

[illegible]

ಯೋಗಿ ಯಾರು?

[illegible]

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರದ ದೇವರ ಪೂಜೆಗೆ ಯೋಗ್ಯವಾದ ಗಮಂವಾರು ಊದುಬತ್ತಿಗಳು, ಹರಿಮುಳದಾಂಗ ಧೂಪದಕೊಡ, ಅಷ್ಟಗಂಧಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಾಶಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ನಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಶ್ವಸಂಜೀವಿನಿ ತೈಲ ಸಹ ತಯಾರಾಗುತ್ತದೆ. ಇಂಥ ಉಪ್ಪಲಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಅರಕೆಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

6

ಪಂಚಾಚಾರ್ಯ ಪ್ರಭಾ

೧೯೩೦ ನೇ ಸೆಪ್ಟಂಬರ್ ತಾ|| ೧ ನೆಯ ಸೋಮವಾರ

ಸ್ವಾತಂತ್ರ್ಯಸಂಗ್ರಾಮ.

ನಮ್ಮ ಭರತಖಂಡದಲ್ಲಿ ನಡೆಯುತ್ತಿರುವ ಸ್ವಾತಂತ್ರ್ಯಸಂಗ್ರಾಮವಾರ್ತೆಯನ್ನು ಪತ್ರಿಕಾಮುಖದಿಂದ ನೋಡಿ ಸಂದಿಗೊಂದಿಗಳಲ್ಲಿರುವ ಅಖಿಲಭಾರತೀಯರ ಹೃದಯದಲ್ಲಿದ್ದ ಹಳೆಯ ಚೈತನ್ಯವು ಬದಲಾವಣೆಯಾಗಿ ಒಂದು ವಿಧವಾದ ಹೊಸ ಚೈತನ್ಯವು ಅಂಕುರಿಸುತ್ತಲಿದೆ. ಎಲ್ಲಿ ನೋಡಿದರೂ ಸ್ವರಾಜ್ಯಸಾಧನಗಳಾದ ಪ್ರಯತ್ನಗಳು ಕಂಡುಬರುತ್ತಲಿವೆ. ಪಾಠಶಾಲೆಗಳಲ್ಲಿ ಓದುತ್ತಿರುವ ನವತರುಣರ ಹೃದಯವಂತೂ ಸಂಪೂರ್ಣವಾಗಿ ಸ್ವಾತಂತ್ರ್ಯಸಂಗ್ರಾಮಾಂಬುಧಿಯಲ್ಲಿ ಧುಮುಕುತ್ತಲಿರುವುದು. ದೊಡ್ಡದೊಡ್ಡ ಪಟ್ಟಣಗಳಲ್ಲಿರುವ ಅನೇಕ ಕಾಲೇಜುಗಳು ಶೂನ್ಯಾವಸ್ಥೆಯನ್ನು ಹೊಂದಿದುವು. ತಮ್ಮತಮ್ಮ ಮನೆಗಳಲ್ಲಿ ತಲೆದೂಗುತ್ತ ಕುಳಿತಿರುವ ಹಣ್ಣುಹಣ್ಣು ಮುದುಕರೂ ಸಹ ಸ್ವರಾಜ್ಯಕ್ಕಾಗಿ ಪ್ರಾಣಬಿಡುವ ಚಾಪಲ್ಯವುಳ್ಳವರಾಗಿದ್ದಾರೆ. ಅಂತಃಪುರದಲ್ಲಿದ್ದ ವೀರನಾರಿಯರು ಮುಸುಕು ತೆಗೆದುಹಾಕಿ ವೀರಪುರುಷರಂತೆ ಈ ಸಮರದಲ್ಲಿ ಭಾಗವನ್ನು ವಹಿಸಿ ಅತ್ಯುತ್ಸಾಹದಿಂದ ತವರಮನೆಗೆ ಹೋಗುವಂತೆ ಸೆರೆಮನೆಗೆ ಹೋಗಹತ್ತಿರುವರು. ಜನಗಳ ಹೃದಯದಲ್ಲಿ ಸೆರೆಮನೆಯ ಭೀತಿಯು ತಪ್ಪಿಹೋಗಿ ಸೆರೆಮನೆಯೆಂದರೆ ಇಂದ್ರಭವನವೆಂಬ ಭಾವನೆಯುತ್ಪನ್ನವಾಗಿರುವುದು. ಭಾರತೀಯರ ಹೃದಯದಲ್ಲಿ ಇಂಥ ನವಚೈತನ್ಯವು ಹಿಂದೆ ಎಂದೂ ಹುಟ್ಟಿರಲಿಲ್ಲ ಮತ್ತು ಹೀಗೆ ಹುಟ್ಟುತ್ತದೆಂದು ಯಾರೂ [illegible]ರಲಿಲ್ಲ. ಆಕಸ್ಮಿಕವಾಗಿ ಭಾರತೀಯರ ಸಂಸ್ಕಾರವು [illegible]ಗೆ ಏಕಕಾಲದಲ್ಲಿ ಬದಲಾವಣೆಯಾಗಿರುವುದನ್ನು ನೋಡಿದರೆ ಭಾರತಮಾತೆಯು ತನ್ನ ಪುತ್ರರಲ್ಲಿಟ್ಟಿದ್ದ ಪ್ರೇಮರಸದ ಆವಿರ್ಭಾವವೆಂದೇ ಹೇಳಬೇಕಾಗಿದೆ. ಬಹುಕಾಲದಿಂದ ಭಾರತೀಯರಲ್ಲಿ ಭಿನ್ನಭಿನ್ನಾಭಿಪ್ರಾಯಗಳು ನೆಲೆಗೊಂಡಿದ್ದರಿಂದ ಒಬ್ಬರು ಸ್ವರಾಜ್ಯವು ಬೇಕೆಂದರೆ ಇನ್ನೊಬ್ಬರು ಬೇಡವೆನ್ನುತ್ತಿದ್ದರು. ಈಗಣ ವಾತಾವರಣದಲ್ಲಿ ಇಂಥ ಭಿನ್ನಸಂಸ್ಕಾರವೆಲ್ಲವೂ ಹೊರಟುಹೋಗಿ ಏಕವಿಧ ಸಂಸ್ಕಾರವು ಹುಟ್ಟಿರುವುದು ಭರತಖಂಡದ ಸುದೈವವೆಂದೇ ಹೇಳಬೇಕಾಗಿದೆ. ಇದಕ್ಕೆಲ್ಲಾ ಶಾಂತಿಯೆಂಬ ಅಭೇದ್ಯವಾದ ವಜ್ರಕವಚವನ್ನೇ ತೊಟ್ಟು ಅಹಿಂಸೆಯೆಂಬ ಆಯುಧವನ್ನು ಧರಿಸಿ ಪ್ರಪಂಚದಲ್ಲಿರುವವರೆಲ್ಲರೂ ತಮ್ಮ ಮಿತ್ರರಲ್ಲದೆ ಶತ್ರುಗಳಲ್ಲವೆಂಬ ವೀರನಾದವನ್ನು ಮಾಡುತ್ತ ಸ್ವಾತಂತ್ರ್ಯಯುದ್ಧವನ್ನಾರಂಭಿಸಿ ಭಾರತಮಾತೆಯನ್ನು ಕರೆತರುವುದಕ್ಕಾಗಿ ಹೊರಟ ಮಹಾತ್ಮಗಾಂಧಿಯವರ ಸತ್ಯಸಂಕಲ್ಪವೇ ಕಾರಣವೆಂದು ಸಾರಿಸಾರಿ ಹೇಳಬಹುದು. ಪ್ರಕೃತದಲ್ಲಿ ಗಾಂಧಿಯವರ ಶರೀರವು ಪರಾಯುತ್ತವಾಗಿ ಒಂದುಕಡೆ ಕಾರಾಗೃಹದಲ್ಲಿ ಸುಮ್ಮನೆ ಕುಳಿತಿದ್ದರೂ ಅಮೂರ್ತವಾದ "ಗಾಂಧಿ" ಎಂಬ ಸೂಕ್ಷ್ಮಶಬ್ದವೇ ದೇಹರೂಪದಿಂದ ಎಲ್ಲಾಕಡೆಯಲ್ಲಿ ಸಂಚರಿಸಿ ಭಾರತೀಯರನ್ನು ಹುರಿದುಂಬಿಸಿ ಅಹಿಂಸಾಯುದ್ಧದಲ್ಲಿ ಧುಮುಕಿಸುತ್ತಿರುವುದು.

ಇಂಥ ಲೋಕವಿಲಕ್ಷಣವಾದ ಯುದ್ಧವು ಹಿಂದೆ ಯಾವ ಕಾಲದಲ್ಲೂ ನಡೆಯಲಿಲ್ಲ. ಭಾರತ ರಾಮಾಯಣ ಕಾಲಗಳಲ್ಲಿ ಧರ್ಮಯುದ್ಧಗಳು ಅನಂತವಾಗಿ ನಡೆದಿರುತ್ತವೆ. ಅವುಗಳಿಗೆ ಆಪಾತತಃ ಧರ್ಮಯುದ್ಧಗಳೆಂದು ಕರೆಯುತ್ತಿದ್ದರೂ ಅವು ಹಿಂಸಾತ್ಮಕಗಳಾಗಿದ್ದುವೇ ಹೊರತು ಅಹಿಂಸಾತ್ಮಕಗಳಾಗಿರಲಿಲ್ಲ. ವಿಷ್ಣುವಿನ ಅವತಾರವೆನಿಸಿದ ಶ್ರೀಕೃಷ್ಣನು ಸಹ ಪಾಂಡವರ ಯುದ್ಧಸಮಯದಲ್ಲಿ ಬಂಧುಗಳ ವಧೆಗೆ ಹೆದರಿ ಯುದ್ಧದಿಂದ ಹಿಂದೆಗೆದ ಮಹಾವೀರನಾದ ಅರ್ಜುನನಿಗೆ ಹಿಂಸಾಮಯಯುದ್ಧದ ರೀತಿಯನ್ನು ಬೋಧಿಸಿದನು. ಪೂರ್ವಜರು ಯುದ್ಧವೆಂಬ ಶಬ್ದಾರ್ಥವೇ ಹಿಂಸಾಮಯವಾದುದೆಂದೂ, ಹಿಂಸೆಯನ್ನು ಬಿಟ್ಟು ಯುದ್ಧವು ನಡೆಯಲಾರದೆಂದೂ, ಯುದ್ಧವಿಲ್ಲದೆ ರಾಜ್ಯಪ್ರಾಪ್ತಿಯಾಗಲಾರದೆಂದೂ ತಿಳಿದುಕೊಂಡಿದ್ದರು. ಆದುದರಿಂದಲೇ ರಾಜ್ಯಸಾಧನೆಗಾಗಿ ಹಿಂದೆ ಅನೇಕಜನ ಮಹಾವೀರರು ಯುದ್ಧಾಂಗಣದಲ್ಲಿ ತೀಕ್ಷ್ಣಶರಪಾತದಿಂದ ಮಡಿದುಹೋದರು. ಅನಂತ ವೀರಸ್ತ್ರೀಯರು ಯಾವಜ್ಜೀವವೂ ವೈಧವ್ಯದುಃಖವನ್ನನುಭವಿಸಿದರು. ಹೀಗೆ ಉಭಯಪಂಗಡಗಳಲ್ಲಿ ಅನರ್ಥವುಂಟಾಗಿ ಕೊನೆಗೆ ರಾಜ್ಯವನ್ನು ಅನುಭವಿಸುವವರು ಸಹ ಇಲ್ಲದೆ ರಾಜ್ಯಗಳು ಶ್ಮಶಾನಪ್ರಾಯಗಳಾಗಿದ್ದುವು. ಪೂರ್ವಕಾಲದ ಯುದ್ಧಗಳಲ್ಲಿ ಹಿಂಸೆಯೆಂಬ ವಿಷವು ಇದ್ದುದರಿಂದಲೇ ಇಂಥ ಕೃತಿಗಳು ನಡೆಯುತ್ತಿದ್ದುವು. ಆದರೆ ಈಗ ಮಹಾತ್ಮರಿಂದ ಪ್ರಾರಂಭವಾದ ಯುದ್ಧದ ರಚನೆಯಾದರೋ ಅಂಥದಲ್ಲ! ಯುದ್ಧದ ಆದ್ಯಂತದಲ್ಲೂ ಅಹಿಂಸಾ, ಶಾಂತಿ, ಕ್ಷಮೆ, ಭೂತದಯೆ, ದುಃಖಸಹಿಷ್ಣುತೆ ಮುಂತಾದ ಸದ್ಗುಣಗಳೇ ತುಂಬಿತುಳುಕುತ್ತಿವೆ. ಈ ಧರ್ಮಯುದ್ಧವನ್ನು ಮುದುಕರು, ಹಸುಮಕ್ಕಳು, ಸ್ತ್ರೀಯರಾದಿಯಾಗಿ ಸರ್ವರೂ ಆಚರಿಸಬಹುದಾಗಿದೆ. ಮನೆಯಲ್ಲಿ ತಮ್ಮ ದೇಶದ ಪದಾರ್ಥಗಳನ್ನು ಮಾತ್ರ ಉಪಯೋಗಿಸುವ ವ್ರತವನ್ನು ಹಿಡಿದರೆ ಆತನೇ ಈ ಯುದ್ಧದಲ್ಲಿ ಅಗ್ರೇಸರನೆಂದು ಹೇಳಿಸಿಕೊಳ್ಳುವನು. ಈ ಯುದ್ಧಕೌಶಲವನ್ನು ಹಿಂದೆ ಯಾರೂ ತಿಳಿದಿದ್ದಿಲ್ಲವು. ಆದುದರಿಂದ ಇಂಥ ಅಹಿಂಸಾಯುದ್ಧದ ದಾರಿಯನ್ನು ತೋರಿಸಿಕೊಟ್ಟ ಮಹಾತ್ಮರನ್ನು ರಾಮಕೃಷ್ಣಪಾಂಡವಾದಿಗಳಿಗಿಂತಲೂ ಹೆಚ್ಚಿನವರನ್ನಾಗಿ ಭಾವಿಸಿದರೂ ಭಾವಿಸಬಹುದು. ತಮ್ಮ ರಾಜ್ಯಸಿದ್ಧಿಗಾಗಿ ಇಂಥ ಅಹಿಂಸಾಯುದ್ಧವನ್ನು ಆಚರಿಸುವುದರಿಂದ ಪ್ರಭುತ್ವದವರಿಗಾಗಲಿ ಇನ್ನಾರಿಗಾಗಲಿ ಕೋಪತಾಪಗಳು ಹುಟ್ಟಲು ಕಾರಣವೇ ಇಲ್ಲವು. ಕ್ರೋಧಕ್ಕೆ ಹಿಂಸೆಯೇ ಮೂಲಕಾರಣವಾಗಿದೆ. ಅಂಥ ಹಿಂಸೆಯೆಂಬ ಕ್ರೂರಮೃಗವನ್ನು ದೂರದಲ್ಲಿ ಅಟ್ಟಿ ಸತ್ಯಾಗ್ರಹಸಮರಾಂಗಣದಲ್ಲಿ ಪ್ರಧಾನಪಟ್ಟವನ್ನು ವಹಿಸಿದ ಮಹಾತ್ಮ ಗಾಂಧಿಯವರನ್ನು ಹಿಂಬಾಲಿಸಿ ಭಾರತಮಾತೆಯನ್ನು ತಮ್ಮ ಮನೆಗೆ ಕರೆತರಬೇಕೆಂಬ ಕುತೂಹಲವು ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ವಾಸಿಸುತ್ತ ಬಂದಿರುವುದು. ಇಂಥ ನವಚೈತನ್ಯವೆಂಬ ಬೀಜವು ಭಾರತೀಯರ ವಿಶಾಲಹೃದಯಕ್ಷೇತ್ರದಲ್ಲಿ ತೆರವಿಲ್ಲದಂತೆ ಅಂಕುರಿಸುತ್ತ ಬಂದು ಸ್ವಲ್ಪದಿವಸಗಳಲ್ಲಿಯೇ ಘೋರಾರಣ್ಯದಂತೆ ಬೆಳೆದು ನಿಂತಿರುವುದರಿಂದ ಇದನ್ನು ನಾಶಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಮುಖಂಡರನ್ನು ಬಂಧಿಸಿದ್ದಾದರೆ ಯುದ್ಧವು ಶಾಂತವಾದೀತೆಂದು ಯೋಚಿಸಿ ಪ್ರಭುತ್ವದವರು ಯಾವತ್ತು ರಾಷ್ಟ್ರಮುಖಂಡರನ್ನು ಸೆರೆಮನೆಗೆ ಕಳುಹಿಸಿದರು. ಆದರೆ ಘೋರಾರಣ್ಯದಲ್ಲಿ ವೃಕ್ಷಗಳ ಪ್ರಧಾನಶಾಖೆಗಳನ್ನು ಕತ್ತರಿಸಿದರೆ ಆ ವೃಕ್ಷಗಳಿಗೆ ಮತ್ತಷ್ಟು ಕಸಿಮಾಡಿದಂತಾಗಿ ಆಕಾಶಚುಂಬಿಗಳಾದ ಶಾಖೋಪಶಾಖೆಗಳು ಹುಟ್ಟುವುದಕ್ಕೆ ಅವಕಾಶವನ್ನು ಕೊಟ್ಟಂತಾಗುವುದು. ಪ್ರಕೃತದಲ್ಲಿ ಸರ್ವಮುಖಂಡರೂ ಜೈಲಿನಲ್ಲಿದ್ದರೂ ಮಳೆಗಾಲದಲ್ಲಿ ಕಪ್ಪೆಗಳು ಏಳುವಂತೆ ಹಳ್ಳಿಹಳ್ಳಿಗಳಲ್ಲಿಯೂ ಸಹ ಈಗ ಮುಖಂಡರು ತಲೆದೋರಹತ್ತಿದ್ದಾರೆ. ಸರಕಾರದವರು ಇವರನ್ನೆಲ್ಲಾ ಸೆರೆಮನೆಗೆ ಕಳುಹಿಸುತ್ತೇವೆಂದರೆ ಆಕಾಶವನ್ನೇ ಹಿಡಿದುಹಾಕುತ್ತೇನೆಂದು ಅಂದುಕೊಳ್ಳುವ ಘನಪಂಡಿತನ ವಚನಕ್ಕೆ ಸಮಾನವಾಗುವುದು. ಪ್ರಭುತ್ವದವರು ಹೀಗೆ ಮಾಡುತ್ತ ಬಂದಲ್ಲಿ ಉರಿಯುವ ಅಗ್ನಿಯಲ್ಲಿ ತುಪ್ಪವನ್ನು ಚೆಲ್ಲಿದಂತಾಗಿ ಇನ್ನೂ ಹೆಚ್ಚಿನ ತೊಂದರೆಗೆ ಕಾರಣವಾಗುವುದು. ಆದುದರಿಂದ ಪ್ರಭುತ್ವದವರು ಈ ಧರ್ಮಯುದ್ಧವು ಭಗವತ್ಪ್ರೇರಿತವಾದುದೆಂದು ತಿಳಿದು ಭಾರತೀಯರನ್ನು ಹೀಗೆ ಸೆರೆಮನೆಗೆ ಕಳುಹಿಸುವ ಕೃತಿಯಿಂದ ನಿವೃತ್ತರಾಗಿ ಶಾಂತಿಸಂಧಾನವನ್ನು ನಡೆಯಿಸಿ ಭಾರತೀಯರಲ್ಲಿದ್ದ ಪ್ರೇಮವನ್ನು ವೃದ್ಧಿಗೊಳಿಸಿ ಪರಸ್ಪರ ಪ್ರೇಮಭಾವವು ಗಟ್ಟಿಗೊಳ್ಳುವಂತೆ ಮಾಡಲೆಂದು ಕೋರುತ್ತೇವೆ.

ಮಹಾತ್ಮಾ ಗಾಂಧಿ.

ಅಮೇರಿಕೆಯ ಪ್ರಸಿದ್ಧ ವೇದಾಂತ ಶಾಸ್ತ್ರಪ್ರವೀಣರಾದ ಮಿ|| ವಿಲಿಯಂ ಕರ್ಕರವರು "ಕಬ್ಬರಲ್ ವರ್ಲ್ಡ್" ಪತ್ರಿಕೆಯಲ್ಲಿ ಈರೀತಿಯಾಗಿ ಬರೆದಿರುತ್ತಾರೆ.

ಕೋಟ್ಯನುಕೋಟಿ ಜನರು ರಾಜಕೀಯ ಮತ್ತು ನೈತಿಕ ಮುಖಂಡನೆಂದು ಒಪ್ಪಿಕೊಂಡಿರುವ ಗಾಂಧಿಯು ಎಂಥ ಮನುಷ್ಯನು? ಭರತಖಂಡದಲ್ಲೆಲ್ಲಲ್ಲೂ ವಿಧವಿಧವಾದ ಜನಾಂಗದವರೂ, ವಿವಿಧಮತೀಯರೂ, ಎಲ್ಲ ಜಾತಿಯವರೂ ಮತ್ತು ಎಲ್ಲ ವಿಧಗಳಾದ ಸಂಸ್ಕೃತಿಯನ್ನು ಪಡೆದವರೂ ಸಹ ಒಬ್ಬ ದೇಶೀಯ ಪುತ್ರನಾದ ಆ ಗಾಂಧಿಯ ನಾಮವನ್ನು ಅತ್ಯಂತ ಪ್ರೀತಿಯಿಂದ ಗೌರವಿಸುವುದನ್ನೂ ಅನೇಕ ಸಂದರ್ಭಗಳಲ್ಲಿ ಪೂಜಿಸುವುದನ್ನೂ ನಾನು ನೋಡಿದೆನು.

ವಿದ್ಯಾಸಂಪನ್ನರಾದ ಭಾರತೀಯರು ಗಾಂಧಿಯವರ ಸಾಧುಸ್ವಭಾವದಿಂದಲೇ ಅವರನ್ನು ಇದುವರೆಗೆ ಯಾರನ್ನೂ ಗೌರವಿಸದಷ್ಟು ಪೂಜ್ಯಬುದ್ಧಿಯಿಂದ ಗೌರವಿಸುವರೆಂದು ಹೇಳಿರುವರು. ರವೀಂದ್ರನಾಥ ಟಾಗೂರ್‌ರವರು "ಇಡೀ ಜನಾಂಗವು ಒಂದು ಚಕಾರವನ್ನೂ ಉಚ್ಚರಿಸದೆ ಅವರನ್ನು ಹಿಂಬಾಲಿಸುವದು. ಜನಾಂಗವು ಅವರನ್ನು ಸಾಧುವೆಂದು ನಂಬಿರುವದೇ ಇದಕ್ಕೆ ಕಾರಣವಾಗಿರುವದು. ವಿಧವಿಧವಾದ ಮತತತ್ವಗಳಿಂದಲೂ, ವಿಧವಿಧಗಳಾದ ಮನೋಧರ್ಮಗಳಿಂದಲೂ ಕೂಡಿರುವ ಈ ದೇಶದ ಜನರೆಲ್ಲರೂ ಏಕವಾಕ್ಯದಿಂದ ಒಬ್ಬ ಸಾಧುವನ್ನು ಹಿಂಬಾಲಿಸುವದು, ನವಯುಗದಲ್ಲಿ ಅತ್ಯಾಶ್ಚರ್ಯಕರವಾದ ಸಂಗತಿಯೇ ಸರಿ! ಗಾಂಧಿಯವರು ಈ ಭರತಖಂಡದಲ್ಲಿ ಮಾತ್ರವೇ ಅಲ್ಲ. ಇಡೀ ಪ್ರಪಂಚದಲ್ಲಿ ಅದ್ವಿತೀಯ ಪುರುಷರಾಗಿರುವರು" ಎಂದು ಹೇಳಿರುವರು. ಅವರನ್ನು ಕ್ರೈಸ್ತ, ಬುದ್ಧ, ಸೆಂಟ್ ಫ್ರಾನ್ಸಿಸ್, ಟಾಲ್‌ಸ್ಟಾಯ್ ಮೊದಲಾದವರೊಡನೆ ಹೋಲಿಸುವದನ್ನೂ ಅವರವರ ಜೀವಮಾನ ಚರಿತ್ರೆಗಳಲ್ಲಿ ಕಂಡುಬರುವ ಪರಸ್ಪರ ಹೋಲಿಕೆಗಳನ್ನು ವರ್ಣಿಸುವದನ್ನೂ ಪದೇಪದೇ ಕೇಳುತ್ತಲೇ ಇರುವೆವು.

ನಾನು ಭರತಖಂಡಕ್ಕೆ ಬರುವಾಗ್ಗೆ ಇಂಗ್ಲೆಂಡಿನಲ್ಲಿದ್ದ ನನ್ನ ಹಿಂದೂ ಮಿತ್ರರು, ಗಾಂಧಿಯವರನ್ನು ಸೋಮವಾರ ದಿವಸ ಹೋಗಿ ನೋಡಬಾರದೆಂದೂ, ಆದಿನ ಅವರು ಸಂಪೂರ್ಣ ಮೌನವ್ರತವನ್ನಾಚರಿಸುವರೆಂದೂ ಹೇಳಿದ್ದರು. ನಾನು ಬೊಂಬಾಯಿಯನ್ನು ತಲ್ಪಿದ ಮೇಲೆ ನನ್ನ ಮಿತ್ರರ ವಾಕ್ಯಗಳನ್ನು ನೆನಪಿನಲ್ಲಿಟ್ಟುಕೊಂಡು, ನನ್ನ ಪ್ರಯಾಣವನ್ನು ತದನುಗುಣವಾಗಿ ಏರ್ಪಡಿಸಿಕೊಂಡೆನು. ಅಹಮದಾಬಾದಿನಲ್ಲಿ ಆಗ ಬಿಸಲಿನ ತಾಪವು ವಿಶೇಷವಾಗಿತ್ತು. ಅಲ್ಲಿಂದ ಆಶ್ರಮಕ್ಕೆ ಹೊರಟೆನು. ಮಹಾತ್ಮರ ಪ್ರಿಯಶಿಷ್ಯರಲ್ಲೊಬ್ಬನು ನನ್ನ ಜೊತೆಯಲ್ಲಿದ್ದನು. ಆತನು ಅತ್ಯಂತ ಪವಿತ್ರಪ್ರದೇಶಕ್ಕೆ ಹೊರಟಿದ್ದರೆ ಹೇಗೋ ಹಾಗೆ ಮಾತನಾಡುತ್ತಿದ್ದನು. ಮಹಾತ್ಮರ ಕುಟೀರಕ್ಕೆ ಹೋಗುವ ಚಿಕ್ಕದಾರಿಯನ್ನು ಪ್ರವೇಶಿಸಿದನಂತರ, ಅಲ್ಲಿಯ ವಾತಾವರಣವೆಲ್ಲವೂ ಏನೋ ಒಂದು ವಿಧವಾದ ಅದ್ಭುತಶಕ್ತಿಯಿಂದ ಕೂಡಿದ್ದಂತೆ ಭಾಸವಾಯಿತು. ಆಗ ಪ್ರಪಂಚದ ಅದ್ವಿತೀಯ ಪುರುಷಶ್ರೇಷ್ಠನನ್ನು ಕಣ್ಣಾರೆ ನೋಡುವೆನೆಂಬ ಸಂತೋಷದಿಂದ ನನ್ನ ಶರೀರಾದ್ಯಂತವೂ ಪುಳುಕಿತವಾಯಿತು. ಅವರ ಚಿಕ್ಕ ಗುಡಸಲದ ಹೊಸ್ತಲನ್ನು ದಾಟಿ ಒಳಗೆ ಹೋದೆನು. ಅಲ್ಲಿ ಭರತಖಂಡದ ಭಾಗ್ಯಸೂಚಕವೆನಿಸಿದ ಚರಕದ ಮುಂದೆ ಮಹಾತ್ಮರು ನೆಲದಮೇಲೆ ಕುಳಿತಿರುವದನ್ನು ಕಂಡು, ಅವರ ಹಸ್ತವನ್ನು ಹಿಡಿದುಕೊಂಡೆನು. ಆಗ ನನ್ನ ಮನಸ್ಸಿನಲ್ಲಿ ಉತ್ಪನ್ನವಾದಷ್ಟು ನಮ್ರಭಾವವು ಹಿಂದೆ ಎಂದೂ ಆಗಿರಲಿಲ್ಲ. ಅವರು ಸೊಂಟದ ಸುತ್ತಲೂ ಒಂದು ಖಾದಿಯ ಪಂಚೆಯನ್ನು ಸುತ್ತಿಕೊಂಡಿದ್ದರು. ಕತ್ತಿನಲ್ಲಿ ಜಪಸರವನ್ನು ಧರಿಸಿದ್ದರು. ಬಹಳವೇನು? ಸಾಧಾರಣ ಮನುಷ್ಯನೋರ್ವನು ಕೃಷಿಕಾರನ ಉಡುಪುಗಳನ್ನು ಧರಿಸಿದಂತೆ ಇದ್ದರು. ಸಂಭಾಷಣೆಯನ್ನು ಹೇಗೆ ಪ್ರಾರಂಭಿಸಬೇಕೆಂಬುದೇ ತೋರದೆ ನನ್ನ ಮನಸ್ಸಿನಲ್ಲಿ ಏನೋ ಗಡಬಿಡಿಯಾಗಿ ಕಡೆಗೆ ಪೆಚ್ಚುಪೆಚ್ಚಾಗಿ "ಮಿ|| ಗಾಂಧಿಯವರೇ! ಅಮೇರಿಕೆಯಲ್ಲಿ ನಿಮ್ಮನ್ನು ಪೂಜ್ಯಬುದ್ಧಿಯಿಂದ ಗೌರವಿಸುವ ಅನೇಕ ಮಿತ್ರರಿರುವರು" ಎಂದೆನು. ಕ್ಷಣಮಾತ್ರವಾದರೂ ಹಿಂಜರಿಯದೆ ಅವರು ನಗುತ್ತ ನನ್ನನ್ನು ನೋಡಿ "ದೂರದಿಂದ ದೃಶ್ಯವು ಮನೋಹರವಾಗುವುದು" ಎಂದರು. ಒಂದೆರಡು ಸರ್ವಸಾಮಾನ್ಯಗಳಾದ ಉದಾಹರಣೆಗಳಿಂದ ಈ ಮಹನೀಯರ ಸ್ವಭಾವವನ್ನು ಅರಿಯಬಹುದು. ಸರ್ವಸಾಮಾನ್ಯವಾದ "ಮಿಸ್ಟರ್ ಗಾಂಧಿಯವರೇ" ಎಂಬ ಶಬ್ದಗಳಿಂದ ಅವರನ್ನು ಕರೆದ ಕೂಡಲೇ ಅವರು ಮುಗುಳ್ನಗೆಯಿಂದ "ನನ್ನನ್ನು ಮಿಸ್ಟರ್ ಗಾಂಧಿಯೆಂದು ಎಂದೂ ಕರೆಯಬಾರದು. ಅದು ಬಹಳ ಅಸಂಬದ್ಧವಾಗಿಯೂ, ಸ್ವಭಾವಶೂನ್ಯವಾಗಿಯೂ ಕೇಳಿಸುವದು. ನನ್ನನ್ನು ಸುಮ್ಮನೆ ಗಾಂಧಿಯೆಂದು ಕರೆಯಿರಿ" ಎನ್ನುವರು. ಇದರಂತೆ ಅವರನ್ನು "ಮಹಾತ್ಮ" ರೆಂದು ಕರೆಯುವದು ಅವರಿಗೆ ಸಮ್ಮತಿಯಿಲ್ಲ. "ನಾನು ಮಹಾತ್ಮನಲ್ಲ, ನಾನು ಇತರ ಎಲ್ಲ ಮಾನವರಂತೆ ಅನೇಕ ಗುಣದೋಷಗಳಿಂದ ಕೂಡಿದ ಒಬ್ಬ ಸಾಮಾನ್ಯ ಮನುಷ್ಯನಾಗಿರುವೆನು" ಎಂದು ವಾದಿಸುವರು. ಅವರ ಅನುಚರರು ಅಥವಾ ಶಿಷ್ಯರು ಏನಾದರೂ ತಪ್ಪುಮಾಡಿದರೆ ಅದಕ್ಕಾಗಿ ಅವರನ್ನು ಆಕ್ಷೇಪಿಸದೆ ಆ ತಪ್ಪಿಗೆ ತಾವೇ ಕಾರಣರೆಂದು ಉಪವಾಸ ವ್ರತದಿಂದಲೂ, ಪ್ರಾರ್ಥನೆಯಿಂದಲೂ, ತಮ್ಮ ಆತ್ಮಶಕ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುವರು.

ಶಾಂತಿನಿಲಯವೆನಿಸಿದ ಈ ಆಶ್ರಮಕ್ಕೆ ಬರುವ ಅತಿಥಿಯು ಯುರೋಪ್ ಅಥವಾ ಅಮೇರಿಕೆಯಿಂದ ಬಂದಿದ್ದರೆ, ಅಂಥವರಿಗೆ ಕುಳಿತುಕೊಳ್ಳಲು ಒಂದು ಸಾಮಾನ್ಯ ತರಹದ ಮನೆಯಲ್ಲಿ ತಯಾರಿಸಲ್ಪಟ್ಟ ಖುರ್ಚಿಯು ಕೊಡಲ್ಪಡುವದು. ಇತ್ತ ಗಾಂಧಿಯವರು ಕೈಕಾಲುಗಳನ್ನು ಮಡಿಚಿಕೊಂಡು ನೆಲದ ಮೇಲೆ ಕುಳಿತು ಚರಕವನ್ನು ತಿರುಗಿಸುತ್ತಲೇ ಸಂಭಾಷಣೆ ಮಾಡುವರು. ಆಹಾ! ಅದೆಂಥ ಮನೋಹರವಾದ ದೃಶ್ಯವು! ಯಾವ ಒಬ್ಬ ವ್ಯಕ್ತಿಯನ್ನು ಕಂಡರೆ ಇಡೀ ಗ್ರೇಟ ಬ್ರಿಟನ್‌ದೇಶವೇ ಹೆದರುವದೋ, ಯಾವಾತನ ಮುಂದಾಳುತನವನ್ನು 33 ಕೋಟಿ ಪ್ರಜೆಗಳೂ ಏಕವಾಕ್ಯದಿಂದ ಒಪ್ಪಿಕೊಂಡಿರುವರೋ ಅಂಥ ಗಾಂಧಿಯವರು ಅತ್ಯಾದರದಿಂದ ಚಿಕ್ಕ ಗುಡಸಿಲಿನಲ್ಲಿ ನೆಲದ ಮೇಲೆ ಸೌಖ್ಯಸಾಧನಗಳೊಂದೂ ಇಲ್ಲದೆ ನೋಡಿದವರ ಕಣ್ಣುಗಳಿಗೆ ಪ್ರಪಂಚದಲ್ಲಿ ಯಾವವಿಧವಾದ ಚಿಂತೆಯೂ ಇಲ್ಲದಂತೆ ತೋರುತ್ತ ಕುಳಿತಿರುವರು. ಇತ್ತ ಸಮುದ್ರಗಳನ್ನು ದಾಟಿಬಂದ ಸಂತುಷ್ಟನಾದ ಅತಿಥಿಯು ಕುರ್ಚಿಯ ಮೇಲೆ ಕುಳಿತಿರುವನು. ಇದೆಂಥ ಅಪೂರ್ವ ಅನುಭವವು! ಪ್ರಪಂಚದ ಮುಖಂಡರಲ್ಲಿ ಮತ್ತು ಉಪದೇಶಕರಲ್ಲಿ ಅದ್ವಿತೀಯರೆನಿಸಿದವರು ಸಂತೋಷದಿಂದ ಕಾಲಕೆಳಗೆ ಕುಳಿತು ಮೃದುಮಧುರವಾದ ಮಾತುಗಳಿಂದ ಹೃದಯದ್ರಾವಕವಾದ ತಮ್ಮ ಅನುಭವತತ್ವಗಳನ್ನು ಹೇಳುತ್ತಿರುವರು!

ಗಾಂಧಿಯವರ ಆರ್ಥಿಕ ಮತ್ತು ರಾಜಕೀಯ ತತ್ತ್ವವು ಚರಕವನ್ನು ಅವಲಂಬಿಸಿರುವದು. ಬ್ರಿಟಿಷರ ವ್ಯಾಪಾರವನ್ನು ಕೆಡಿಸಬೇಕೆಂಬ ದುರುದ್ದೇಶದಿಂದಲ್ಲ. ಭರತಖಂಡಕ್ಕೆ ಶಾಂತಿಯೂ ಶ್ರೇಯೋಭಿವೃದ್ಧಿಯೂ ಉಂಟಾಗಲೆಂಬ ಸದುದ್ದೇಶದಿಂದ, ಭಾರತೀಯರೆಲ್ಲರೂ ಖಾದಿಯನ್ನೇ ಉಪಯೋಗಿಸಿ ಪರದೇಶೀಯ ಪದಾರ್ಥಗಳನ್ನೆಲ್ಲ ಬಹಿಷ್ಕರಿಸುವಂತೆ ಮಾಡಬೇಕೆಂದಿರುವ ಮಹಾತ್ಮರ ಅಹಿಂಸಾತ್ಮಕ ಅಸಹಕಾರ ಚಳವಳಿಯು ಚರಕದ ಸುತ್ತಲೂ ಗಿರಗಿರನೆ ತಿರುಗುತ್ತಿರುವದು. ನ್ಯಾಯಸ್ಥಾನದಲ್ಲಿ ಒಂದು ಸಾರೆ ಗಾಂಧಿಯವರು "ಒಂದುನೂರು ಐವತ್ತು ವರ್ಷಗಳ ಪೂರ್ವದಲ್ಲಿ ನಮ್ಮ ಸ್ತ್ರೀಯರು ತಮ್ಮ ಗುಡಿಸಲುಗಳಲ್ಲಿ ಸರ್ವೋತ್ತಮವಾದ ನೂಲನ್ನು ತೆಗೆದು ತಮ್ಮ ಪತಿಗಳ ಉತ್ಪನ್ನವು ಹೆಚ್ಚುವಂತೆ ಮಾಡುತ್ತಿದ್ದರು. ಗ್ರಾಮಗಳ ನೇಯಿಗೆಯವರು ಆ ನೂಲಿನಿಂದಲೇ ಬಟ್ಟೆಗಳನ್ನು ಮಾಡಿ, ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಆದರೆ ಇಂದು ನಮ್ಮ ಸ್ತ್ರೀಯರು ಆ ತಮ್ಮ ಹಸ್ತಕೌಶಲ್ಯವನ್ನು ಕಳೆದುಕೊಂಡಿರುವರು. ಇದರಿಂದ ಕೋಟ್ಯಂತರ ಜನರಿಗೆ ಸೋಮಾರಿತನವು ಪ್ರಾಪ್ತವಾಗಿ ದೇಶವನ್ನೆಲ್ಲ ಬಡತನದಲ್ಲಿ ಮುಳುಗಿಸಿಬಿಟ್ಟಿರುವದು." ಎಂದು ಹೇಳಿರುವರು.

ಗಾಂಧಿಯವರು ಚರಕವನ್ನು "ಉದ್ಯೋಗದ ಗೌರವ" ದ ಗುರುತೆಂದು ಭಾವಿಸುವರು. ಮತ್ತು ಅವರ ತತ್ತ್ವಗಳಲ್ಲಿ ನಂಬುಗೆಯಿಲ್ಲದೆ ಚರ್ಚಿಸುವವರಿಗೆ ಅವರು ಶಾಂತರೀತಿಯಿಂದ ಎಲ್ಲವನ್ನೂ ವಿವರಿಸಿ ಒಪ್ಪಿಸುವರು. ಅತ್ಯಂತ ಭರದಿಂದ ಮುಂದುವರಿಯುತ್ತಿರುವ ಯಾಂತ್ರಿಕ ಕೈಗಾರಿಕೆಯನ್ನು ತಡೆಯುವದು ಸಾಧ್ಯವೇ? ಎಂದು ಆಶ್ಚರ್ಯಪಡುವವರನ್ನು ಕುರಿತು ಗಾಂಧಿಯವರು "ಭಾರತೀಯರ ಮನೋಧರ್ಮಗಳನ್ನು ಪಾಶ್ಚಿಮಾತ್ಯರಿಗಿಂತಲೂ ಚೆನ್ನಾಗಿ ನಾನು ಬಲ್ಲೆನು. ನಮ್ಮ ಭಾರತೀಯ ಕೃಷಿಕಾರರು ಗಿರಣಿಗಳಲ್ಲಿ ಕೆಲಸ ಮಾಡುವುದಕ್ಕೂ, ಸಿದ್ಧರಾಗಿಲ್ಲ. ಮುಂಬಯಿ ಮತ್ತು ಅಹಮದಾಬಾದಿನ ಗಿರಣಿಗಳ ಕೂಲಿಕಾರರು ಸದ್ಯಃ ಗುಲಾಮರಿಗಿಂತಲೂ ಕೀಳಾಗಿರುವರು. ಹೆಚ್ಚಿನ ಗಿರಣಿಗಳು ಮತ್ತು ಹೆಚ್ಚಿನ ಯಂತ್ರಗಳಿಂದ ಈ ಅನರ್ಥಪರಂಪರೆಯನ್ನು ಮತ್ತಷ್ಟು ಹೆಚ್ಚಿಸಿದಂತಾಗುವದು. ಮಾಂಚೆಸ್ಟರ್ ಬಟ್ಟೆಯನ್ನು ಉಪಯೋಗಿಸುವದರಿಂದ ನಾವು ನಮ್ಮ ಹಣವನ್ನು ಮಾತ್ರ ಹಾಳುಮಾಡಿಕೊಳ್ಳುವೆವು. ಆದರೆ ಮ್ಯಾಂಚೆಸ್ಟರನ್ನು ಇಂಡಿಯಾದಲ್ಲಿ ನಿರ್ಮಾಣಮಾಡುವದರಿಂದ ನಾವು ನಮ್ಮ ರಕ್ತವನ್ನು ಮಾರಿ ನಮ್ಮ ಹಣವನ್ನು ಉಳಿಸಿಕೊಳ್ಳುವೆವು. ನಾಶವಾಗುವದು." ಎಂದು ಹೇಳುವರು.

ಗಾಂಧಿಯವರು ಜಯಿಸುವರೇ? ಈ ಪ್ರಶ್ನೆಗೆ ಅಮೇರಿಕೆಯವರು ಅವರ ತತ್ತ್ವಗಳೆಲ್ಲವೂ ತಪ್ಪಾಗಿರುವವೆಂದೂ, ಒಂದಲ್ಲ ಒಂದು ದಿನ ಅವರು ಪ್ರಪಂಚವನ್ನೇ ಆವರಿಸಿರುವ ಯಾಂತ್ರಿಕಶಕ್ತಿಯ ಮುಂದೆ ತಲೆಬಗ್ಗಿಸಬೇಕಾಗುವದೆಂದೂ ಹೇಳುವರು. ಚರಕಗಳಿಂದಲೂ ಕೈಮಗ್ಗಗಳಿಂದಲೂ ಕೂಡಿ ಶಾಂತವಾದ ಗಾಂಧಿಯವರ ಆಶ್ರಮದ ಸಮೀಪದಲ್ಲಿರುವ ಅಹಮದಾಬಾದಿನ ಗಿರಣಿಗಳನ್ನು ನೋಡಿದಾಗ ನಾನು ಸಹ ಅಲ್ಪವಾದ ಹಸ್ತಶಕ್ತಿಯು ಪ್ರಬಲವಾದ ಯಾಂತ್ರಿಕ ಶಕ್ತಿಯನ್ನು ಎಷ್ಟುಕಾಲ ತಡೆಯಬಲ್ಲವೆಂದು ಆಶ್ಚರ್ಯಪಟ್ಟೆನು. ಆದರೆ ಅಹಿಂಸಾತ್ಮಕ ಅಸಹಕಾರ ಚಳವಳಿಯಲ್ಲಿ ನಂಬುಗೆಯುಳ್ಳವರು ಸ್ವಲ್ಪವೂ ಆಲೋಚನಾಪರರಾಗಿಲ್ಲ. ತಮ್ಮ ತತ್ತ್ವದ ಸತ್ಯತೆಯಲ್ಲಿ ಅವರು ಸಂಪೂರ್ಣ ನಂಬಿಕೆಯನ್ನಿಟ್ಟಿರುವದಲ್ಲದೆ, ಸತ್ಯವು ಎಂಥ ಪ್ರಬಲಶಕ್ತಿಯನ್ನಾದರೂ ಜಯಿಸಬಲ್ಲದೆಂದು ದೃಢವಾಗಿ ನಂಬಿರುವರು.

ಗಾಂಧಿಯವರು ಆರ್ಥಿಕ ಮತ್ತು ನೈತಿಕ ಸುಧಾರಣೆಗಳಾದ ಹೊರತು, ರಾಜಕೀಯ ಸುಧಾರಣೆಯಾಗಲಾರದೆಂದು ಹೇಳುವರು. ಆದುದರಿಂದಲೇ ಅವರು ಚರಕವನ್ನು "ಉದ್ಯೋಗ ಗೌರವ" ದ ಹಾಗೂ ಭಾರತಸ್ವಾತಂತ್ರ್ಯದ ಗುರುತೆಂದು ಹೇಳುವರು. ಭರತಖಂಡದ ವಿವಿಧ ಮತಾನುಯಾಯಿಗಳನ್ನು ಮತ್ತು ವಿವಿಧ ಪಕ್ಷಗಳನ್ನು ಒಟ್ಟುಗೂಡಿಸಬೇಕಾದರೆ ಎಲ್ಲ ಪಂಗಡದವರಿಗೂ ಸಮಾನವಾದ ಅಭಿಮಾನವನ್ನುಂಟುಮಾಡುವ ಒಂದು ಮಾರ್ಗವು ಅತ್ಯವಶ್ಯಕವೆಂದೂ ಚರಕವೇ ಆ ಮಾರ್ಗವೆಂದೂ ಅವರು ಭಾವಿಸಿರುವರು. "ಚರಕ ಮತ್ತು ಖಾದಿಯು ಭರತಖಂಡದ ಏಕಮತ್ಯದ ಗುರುತುಗಳೆಂದು ನನಗೆ ತೋರುವದು. ಆದುದರಿಂದ ನಾನು ಅವುಗಳು ಪವಿತ್ರ ರಾಷ್ಟ್ರೀಯ ಕರ್ತವ್ಯವೆಂದು ಭಾವಿಸುವೆನು." ಈ ನಂಬುಗೆಯು ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಡಬಲ್ಲದು: ಆತ್ಮಗೌರವವನ್ನುಂಟುಮಾಡಿ ಆಹಾರದ ಅಭಾವವನ್ನು ಹೋಗಲಾಡಿಸುವದು: ಸಾಂಕ್ರಾಮಿಕ ಜಾಡ್ಯಗಳನ್ನು ತಡೆಯುವದು; ದಿನದಿನಕ್ಕೆ ಹೆಚ್ಚುತ್ತಿರುವ ಶಿಶುಜನನ ಸಂಖ್ಯೆಯನ್ನು ಕಡಿಮೆಮಾಡುವದಕ್ಕೆ ಅವಕಾಶವನ್ನು ಕಲ್ಪಿಸುವದು. ಭರತಖಂಡದ ಪ್ರಜೆಗಳೆಲ್ಲರಿಗೂ ಹೊಟ್ಟೆತುಂಬ ಆಹಾರವು ದೊರೆಯುವಂತಾಗುವವರೆಗೆ ಎಲ್ಲರೂ ಕಠಿಣ ಬ್ರಹ್ಮಚರ್ಯವ್ರತವನ್ನಾಚರಿಸಿ, ಜನನಸಂಖ್ಯೆಯನ್ನೇ ಕಡಿಮೆಮಾಡಬೇಕೆಂದು ಗಾಂಧಿಯವರು ಸಾರಿಸಾರಿ ಹೇಳುವರು.

ಗಾಂಧಿಯವರು ರಾಜಕೀಯ ಪಕ್ಷವನ್ನು ಹಿಡಿದಿರುವದು ಅವರ ಮಿತ್ರಶ್ರೇಷ್ಠರಲ್ಲಿ ಅನೇಕರಿಗೆ ಅಸಮಾಧಾನಕರವಾಗಿಯೇ ಇರುವದು. ಟಾಗೂರರವರು ಸಹ ಮಹಾತ್ಮಾಗಾಂಧಿಯವರು ತಮ್ಮ ಅಮೂಲ್ಯವಾದ ಕಾಲವನ್ನೆಲ್ಲ ಪ್ರಜೆಗಳಿಗೆ ಅತ್ಯವಶ್ಯಕವಾಗಿರುವ ನೈತಿಕ ಉನ್ನತಿಗಾಗಿ ವೆಚ್ಚಮಾಡದೆ ರಾಜಕೀಯ ಸಮರಗಳಿಗಾಗಿ ವೆಚ್ಚಮಾಡುವರಲ್ಲಾ! ಎಂದು ವ್ಯಸನಪಡುವರು. ಅನೇಕರು ಗಾಂಧಿಯವರನ್ನು ಕುರಿತು, "ಪ್ರಜೆಗಳೆಲ್ಲರೂ ನಿಮ್ಮನ್ನು ಸಾಧುವೆಂದೂ, ಪಾರಮಾರ್ಥಿಕ ಮುಖಂಡರೆಂದೂ ಭಾವಿಸುವರೇ ಹೊರ್ತು, ನಿಮ್ಮ ರಾಜಕೀಯ ಮುಂದಾಳುತನದಲ್ಲಿ ಅಷ್ಟಾಗಿ ಅವರಿಗೆ ನಂಬಿಕೆಯಿಲ್ಲವೆಂ" ದು ಒತ್ತಿ ಒತ್ತಿ ಹೇಳಿರುವರು.

ಮುಖ್ಯವಾಗಿ ಗಾಂಧಿಯವರು ತಾವಾಗಿ ರಾಜಕೀಯ ಮುಖಂಡರಾಗಿಲ್ಲ. ನಿಜವಾಗಿಯೂ ಅವರು ನೈತಿಕ ಮತ್ತು ಪಾರಮಾರ್ಥಿಕ ಮುಖಂಡರೇ ಆಗಿರುವರು. ನನ್ನೊಡನೆ ಮಾತಾಡುತ್ತಿದ್ದಾಗ ಒಮ್ಮೆ ಅವರು "ಅಮೇರಿಕೆಯು ಭಂಗಾರ ಮತ್ತು ಇತರ ಅಮೂಲ್ಯವಸ್ತುಗಳಿಂದ ತುಂಬಿರುವಂತೆ ಮಾನಸಿಕ ಮತ್ತು ಪಾರಮಾರ್ಥಿಕ ಗುಣಗಳಿಂದ ತುಂಬಿರುವದೇ?" ಎಂದು ಕೇಳಿದರು. ಅವರು ಪ್ರಾಯಶವಾಗಿ ದಿನಚರಿ ವೃತ್ತಪತ್ರಿಕೆಗಳನ್ನು ಓದುವುದೇ ಇಲ್ಲ. ಏಕೆಂದರೆ ಅವುಗಳಲ್ಲಿ ಅವರಿಗೆ ನಂಬುಗೆಯೇ ಇಲ್ಲ. ಪ್ರಪಂಚದ ಮುಖ್ಯ ಮುಖ್ಯವಾದವಿಷಯಗಳನ್ನು ಅವರು ತಮ್ಮ ಮಿತ್ರರಿಂದ ಕೇಳಿ ತಿಳಿದುಕೊಳ್ಳುವರು. ಸದ್ಯಃ ಅವರ ದೃಷ್ಟಿಯೆಲ್ಲ ಭರತಖಂಡದ ವಿದ್ಯಮಾನಗಳ ಕಡೆಗೆ ಲಕ್ಷ್ಯಕೊಡಲು ಅವಕಾಶವೇ ಇಲ್ಲ. ಈ ವಿಷಯದಲ್ಲಿ ಅವರು "ನಾನು ಯಾವಾಗಲೂ ಒಳ್ಳೆಯದನ್ನೇ ಆಶಿಸುವೆನು. ಪ್ರಪಂಚದಲ್ಲಿ ಶಾಂತಿಯು ನೆಲಸಬೇಕೆಂಬುದೇ ನನ್ನ ಆಶಯವಾಗಿರುವದು. ಆದರೆ ಪ್ರಪಂಚದ ಸ್ಥಿತಿಗತಿಗಳನ್ನೂ ಶಾಂತಿಸ್ಥಾಪನೆಗೆ ವಿರೋಧವಾಗಿ ಜರಗುತ್ತಿರುವ ಕಾರ್ಯಕ್ರಮಗಳನ್ನೂ ನೋಡಿದರೆ, ನನ್ನ ಆಶಯವು ಫಲಿಸಲಾರದೆಂದೇ ತೋರುತ್ತಿರುವದು" ಎಂದು ಹೇಳಿರುವರು.

ಗಾಂಧಿಯವರ ತತ್ತ್ವದಲ್ಲಿ ಒಂದು ಮುಖ್ಯವಾದ ಭಾಗವುಂಟು. "ಯಾವನು ನಿರ್ಮಲಹೃದಯನೂ, ಸತ್ಯಪ್ರಿಯನೂ, ಆಗಿ ಆತ್ಮನಿಗ್ರಹಮಾಡಿಲ್ಲವೋ ಮತ್ತು ಯಾವನು ಐಶ್ವರ್ಯಾಭಿಲಾಷೆಯನ್ನು ದೂರಮಾಡಿಲ್ಲವೋ, ಅಂಥವನು ನಮ್ಮ ಪವಿತ್ರಶಾಸ್ತ್ರಗಳನ್ನು ಸರಿಯಾಗಿ ಅರಿತಿಲ್ಲವೆಂದು ಸಿದ್ಧವಾಗುವದು. ಹಿಂದೂಧರ್ಮವಾದರೂ ಅದನ್ನೇ ಸಿದ್ಧಾಂತಗೊಳಿಸಿರುವದು." ಎಂದು ಹೇಳಿರುವರು. ತಮ್ಮ ಅನುಚರರೆಲ್ಲರೂ ಉತ್ತಮರೀತಿಯಲ್ಲಿ ಜೀವನ ಕ್ರಮವನ್ನು ನಡೆಯಿಸಬೇಕೆಂದು ಗಾಂಧಿಯವರು ತಮ್ಮ ಆಶ್ರಮದಲ್ಲಿ ಕೆಲವು ಕಟ್ಟಳೆಗಳನ್ನು ಮಾಡಿರುವರು. ಬೆಳಗಿನಜಾಮ 4 ಘಂಟೆಗೆ ಎದ್ದಮೇಲೆ, ಪ್ರಾರ್ಥನೆ, ಸ್ನಾನ, ಕೆಲಸ, ಊಟ, ವಿಶ್ರಾಂತಿ, ಬೇಸರಪರಿಹಾರಕಕಾರ್ಯಗಳು, ನೂಲುವದು, ಮಾತನಾಡುವದು ಹೀಗೆ ರಾತ್ರೆ 8 ಘಂಟೆಯವರೆಗೆ ಮಾಡಬೇಕಾದ ಎಲ್ಲಾ ಕಾರ್ಯಗಳಿಗೂ ಕಾಲನಿರ್ಣಯವನ್ನು ಮಾಡಿರುವರು.

ಇಡೀ ಜನಾಂಗದ ಮನಸ್ಸಿನಲ್ಲಿ ಇಂಥ ಅದ್ಭುತಪೂಜ್ಯಭಾವವು ಹುಟ್ಟಲು ಕಾರಣವಾದ ಮಹತ್ವಶಕ್ತಿಯಾದರೂ ಯಾವದು? ಅವರ ಆಕಾರವಂತೂ ವರ್ಣನೆಗೆ ಅರ್ಹವಲ್ಲದ್ದೆಂದೇ ಹೇಳಬಹುದು. ಒಬ್ಬ ಅಭಿಮಾನಿಯು ಅವರನ್ನು ಹೀಗೆ ವರ್ಣಿಸಿರುವನು. "ರಕ್ತಮಾಂಸಗಳಿಂದ ಕೂಡಿದ ಇಂಥ ಸಾಮಾನ್ಯ ಬುರುಡೆಯಲ್ಲಿ, ಇದುವರೆಗೆ ಈ ಭೂಮಿಯಲ್ಲಿ ಯಾರೂ ಕಾಣದೇ ಇದ್ದ ಒಂದು ಮಹತ್ವದ ಬೆಳಕು ಪ್ರಕಾಶಿಸುತ್ತಿರುವದು."

ಅವರ ಈ ಅದ್ಭುತಶಕ್ತಿಗೆ ಅವರ ಬುದ್ಧಿಯೇ ಕಾರಣವಲ್ಲ. ಏಕೆಂದರೆ ಭರತಖಂಡದಲ್ಲಿ ಅವರಿಗಿಂತಲೂ ಹೆಚ್ಚಿನ ಬುದ್ಧಿಶಕ್ತಿಯುಳ್ಳವರನೇಕರಿರುವರು. ನಿಜವಾಗಿ ನೋಡುವದಾದರೆ ಈಗಿನ ಕಾಲದ ವಿದ್ಯಾವಂತರಲ್ಲಿ ಕಂಡುಬರುವ ಸ್ವಾಭಾವಿಕ ಕಳೆಯೇ ಕಂಡುಬರುವುದಿಲ್ಲ. ಸೃಷ್ಟಿ ಸೌಂದರ್ಯ, ಕವಿತ್ವ, ಗಾಯನ ಮೊದಲಾದ ಕಲೆಗಳಲ್ಲಿ ಅವರಿಗೆ ವಿಶೇಷ ಅಭಿರುಚಿಯೇ ಇಲ್ಲ: ಅಥವಾ ಅವರ ಪಾದಗಳ ಕೆಳಗೆ ಅತ್ಯಂತ ಪೂಜ್ಯಭಾವದಿಂದ ಕುಳಿತುಕೊಳ್ಳುವ ಜನಸ್ತೋಮವನ್ನು ತಮ್ಮ ವಾಚಾಶಕ್ತಿಯಿಂದ ದಿಗ್ಭ್ರಮೆಗೊಳಿಸುವ ಚಾತುರ್ಯವೂ ಅವರಲ್ಲಿಲ್ಲ.

ಅವರ ಅಸಾಧಾರಣಶಕ್ತಿಗೆ ಯೇಸುಕ್ರಿಸ್ತನಂತೆ ಇತರರಿಗಾಗಿ ತಾವು ಕಷ್ಟವನ್ನು ಸಹಿಸುವ ಅಸಾಧಾರಣವಾದ ಆತ್ಮಯಜ್ಞ, ಶಕ್ತಿಯೊಂದೇ ಕಾರಣವಾಗಿರುವದು. ಟಾಗೂರರವರು ಬರೆದ ಒಂದಾನೊಂದು ಪತ್ರದಲ್ಲಿ ಗಾಂಧಿಯವರಿಗೆ ಪುಷ್ಪಗಳ ಮತ್ತು ಸೃಷ್ಟಿಯ ಸೌಂದರ್ಯವನ್ನು ನೋಡಿ ಸಂತೋಷಿಸಲು ಅವಕಾಶವೇ ಇಲ್ಲವೆಂದು ಬರೆದಿರಲು, ಗಾಂಧಿಯವರು "ಹೌದು, ಟಾಗೂರರವರು ತಮ್ಮ ಕವಿತಾಚಿತ್ತಕ್ಕನುಸಾರವಾಗಿ, ಮನೋಹರಗಳಾದ ತೋಟಗಳನ್ನು ನೋಡುವರಲ್ಲದೆ, ನಮ್ಮನ್ನು ಹಾಗೆಯೇ ಮಾಡಬೇಕೆಂದು ಅಪೇಕ್ಷಿಸುವರು. ಅವರು ಪ್ರಾತಃಕಾಲದವೇಳೆಯಲ್ಲಿ ಸುಂದರ ಪಕ್ಷಿಸಂಕುಲವು ಸ್ವರ್ಗೀಯಗಾನವನ್ನು ಮಾಡುತ್ತ

[೩ನೇ ಪುಟವನ್ನು ನೋಡಿ.]

ಬೊಂಬಾಯಿಯಲ್ಲಿ ಸೂರ್ಯ ಚಂದ್ರರ ಮೆರವಣಿಗೆ.

ಪಟೇಲರ ಪಂಚಬಾಣಗಳು.

ಮಾಲವ್ಯರ ಆಗ್ನೇಯಾಸ್ತ್ರ ಮತ್ತು ಬ್ರಹ್ಮಾಸ್ತ್ರ.

ಬೊಂಬಾಯಿ 25 ನೇ ಆಗಸ್ಟ್.

ಪಂಡಿತ ಮದನಮೋಹನ ಮಾಳವೀಯರೂ ಮತ್ತು ಶ್ರೀ ವಿಠಲಭಾಯಿ ಪಟೇಲರೂ ಗುಜರಾಥ ಪ್ರಾಂತದಲ್ಲಿ ಸಂಚಾರ ಮಾಡಿ ಸೂರತ್, ಅಹಮದಾಬಾದ್, ನವಾಸರಿ, ಆನಂದ, ಬಾರ್ಡೋಲಿ, ಜಂಬೂಸರ, ನಾಡಿಯಾದ್, ಬ್ರೋಚ್ ಇತ್ಯಾದಿ ಸ್ಥಳಗಳಲ್ಲಿ ರಾಷ್ಟ್ರೀಯ ನವಚೈತನ್ಯವನ್ನು ಉಂಟುಮಾಡಿದ್ದಕ್ಕೆ ಬೊಂಬಾಯಿಯ ಪ್ರಜೆಗಳು ಕೃತಜ್ಞತಾಪೂರ್ವಕವಾಗಿ ಈದಿನ ಪಟೇಲರ ಮತ್ತು ಮಾಳವ್ಯರ ಒಂದು ದೊಡ್ಡ ಮೆರವಣಿಗೆಯನ್ನು ನಡೆಸಿದರು. ಮೆರವಣಿಗೆಯು ಎರಡು ಮೈಲುಗಳ ಉದ್ದ ಇತ್ತು. ಒಂದು ಮೈಲು ಹೋಗಬೇಕಾದರೆ ಮೂರು ಘಂಟೆಯಾಗುತ್ತಿತ್ತು. ಪುರಜನಗಳು ಎಂದೂ ಇಲ್ಲದ ಅಭೂತಪೂರ್ವವಾದ ಉತ್ಸಾಹವನ್ನು ಇಂದು ತೋರಿಸಿದರು. ಹೂವಿನ ಕುಚ್ಚುಗಳ ಫರ್ಲಾಂಗ್ ಎತ್ತರದ ರಾಶಿಯು ಮೋಟಾರಿನಲ್ಲಿ ಬಂದು ಬಿದ್ದಿತ್ತು. ಮಣಗಟ್ಟೆ ಹೂವಿನ ಹಾರಗಳೂ ಕೈಯಿಂದ ನೂತ ದಾರದ ಹಾರಗಳೂ ಎಲ್ಲವೂ ಹತ್ತು ಹನ್ನೆರಡು ಮೋಟಾರುಗಳು ಭರ್ತಿಯಾಗಿ ಹೋಯಿತು. ಪ್ರತಿಯೊಂದು ಬೀದಿಯೂ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಮಹಾತ್ಮಾಗಾಂಧಿಯವರ ದಂಡಿ ಮೆರವಣಿಗೆಯೋ ಎನ್ನುವ ಹಾಗೆ ಕಾಣುತ್ತಿತ್ತು.

ದಾರಿಯುದ್ದಕ್ಕೂ ಭಾಷಣ.

ಮೆರವಣಿಗೆಯ ಮಧ್ಯದಲ್ಲಿ ಶ್ರೀಯುತರಾದ ವಿಠಲಭಾಯಿ ಪಟೇಲರೂ ಮತ್ತು ಪಂಡಿತ ಮಾಳವೀಯರೂ ಸೂರ್ಯಚಂದ್ರರಂತೆ ರಾರಾಜಿಸುತ್ತಿದ್ದರು. ಮುಂದುಗಡೆ ವಾಲಂಟಿಯರುಗಳ ಬ್ಯಾಂಡು, ವಾಲಗ, ಕೊಳಲು, ಅವರ ಹಿಂದೆ ಸಾವಿರಾರು ಮಹಿಳೆಯರ ಸಾಲು, ಮೆರವಣಿಗೆ ಹಿಂದುಗಡೆ ಬೊಂಬಾಯಿಯ ಲಕ್ಷಾಂತರ ಮಂದಿ ಪುರಜನರು ಪೋಲೀಸಿನವರ ಸುಳಿವೇ ಇಲ್ಲ. ಶ್ರೀ ವಿಠಲಭಾಯಿ ಪಟೇಲರೂ ಮತ್ತು ಪಂಡಿತ ಮಾಳವೀಯರೂ ದಾರಿಯುದ್ದಕ್ಕೂ ಭಾಷಣ ಮಾಡುತ್ತ ಜನಗಳನ್ನು ಸಂಬೋಧಿಸುತ್ತ ಬಂದರು.

ಬಹಿಷ್ಕಾರವೇ ಆಗ್ನೇಯಾಸ್ತ್ರ!

ಓ ಬೊಂಬಾಯಿಯ ಪ್ರಜೆಗಳೇ! ವಿದೇಶೀವಸ್ತುಗಳ ಬಹಿಷ್ಕಾರ ಜಪವನ್ನು ಮಾತ್ರ ಬಿಡಬೇಡಿರಿ ಇದೇ ಆಗ್ನೇಯಾಸ್ತ್ರ! ಈ ಅಸ್ತ್ರವು ನಮ್ಮ ಮಾತುಕೇಳದೆ ಇದ್ದವರನ್ನು ದಹಿಸಿಬಿಡುವುದು. ನಮ್ಮ ಇಷ್ಟದಂತೆ ಪ್ರತಿಯೊಂದೂ ಆಗುವುದು ಎಂಬುದಾಗಿ ಪಂಡಿತ ಮದನಮೋಹನ ಮಾಳವೀಯರು ಭಾಷಣ ಮಾಡಿದರು.

ಬ್ರಹ್ಮಾಸ್ತ್ರವಾವುದು?

ಈ ಸಾರೆ ಸರ್ಕಾರಕ್ಕೆ ಕಂದಾಯ ಕೊಡದೇ ಇರುವುದೇ ಬ್ರಹ್ಮಾಸ್ತ್ರ! ಈ ಬ್ರಹ್ಮಾಸ್ತ್ರದಿಂದ ಏನನ್ನು ಬೇಕಾದರೂ ಮಾಡಬಹುದು. ನಮ್ಮ ಇಷ್ಟದಂತೆ ಈ ಸರ್ಕಾರವನ್ನು ಬಗ್ಗಿಸುವದಕ್ಕೆ ಈ ಅಸ್ತ್ರವೊಂದು ವಿನಾ ಇನ್ನು ಯಾವುದೂ ಅಷ್ಟು ಸಾಮರ್ಥ್ಯದಿಂದ ಕೆಲಸ ಮಾಡಲಾರದು.

ಪಟೇಲರ ಪಂಚಬಾಣಗಳು.

ಶ್ರೀ ವಿಠಲಭಾಯಿ ಪಟೇಲರು ಭಾಷಣಮಾಡುತ್ತ ಹೇಳಿದ್ದೇನೆಂದರೆ—ಈಚೆಗೆ ಕೆಲವು ದಿನಗಳಲ್ಲಿ ಮಹಾಜನಗಳು ರಾಜಕೀಯ ವಿಚಾರದಲ್ಲಿ ವಿದ್ಯಾವಂತರಾಗಿರುವಷ್ಟು ಕಳೆದ 20 ವರ್ಷಗಳಿಂದಲೂ ಆಗಿರುವುದಿಲ್ಲ. ಇದೆಲ್ಲಾ ಮಹಾತ್ಮಾಗಾಂಧಿಯವರ ತಪಃಶಕ್ತಿಯಿಂದ ಆದದ್ದು. ಯುವಕರುಗಳು ಕಾಲೇಜುಗಳನ್ನು ಬಿಟ್ಟು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾತ್ರವಹಿಸಬೇಕೆಂದು ಅನೇಕಾವರ್ತಿ ಅವರಿಗೆ ಬೇಡಿಕೊಂಡಿದ್ದೇನೆ. ಅತ್ಯಾಗವೇ ಈ ಸ್ವಾತಂತ್ರ್ಯ ಸಂಗ್ರಾಮದ ಗುಂಡಿನ ಮದ್ದು. ಈ ಸಂಗ್ರಾಮದಲ್ಲಿ ನಾವು ಜಯಪ್ರದವನ್ನು ಹೊಂದಿದ್ದೇ ಆದರೆ ನಮ್ಮ ದೇಶದಲ್ಲಿ ನಾವುಗಳು ಸುಖದಿಂದ ಇರಬಹುದು ನಮ್ಮ ಯುವಕರುಗಳು ಜೀವನಕ್ಕೆ ಈಗಿನಷ್ಟು ಶ್ರಮವನ್ನು ಪಡಬೇಕಾಗುವ ಅವಶ್ಯಕತೆ ಮುಂದೆ ಇರುವುದಿಲ್ಲ. ಈಗಿನ ಯುವಕರುಗಳೇ ಮುಂದೆ ಸ್ವಾತಂತ್ರ್ಯಸುಖವನ್ನು ಅನುಭವಿಸತಕ್ಕವರು.

1. ಜೀವ ಮರಣ ಸಂಗ್ರಾಮ. 2. ಈಗ ಬಿಟ್ಟರೆ ಎಂದೂ ಇಲ್ಲ. 3. ಅಂತ್ಯದವರೆಗೂ ಯುದ್ಧಮಾಡಿರಿ. 4. ಹೆಚ್ಚು ಹೆಚ್ಚು ತ್ಯಾಗವನ್ನು ಮಾಡುತ್ತ ಬನ್ನಿರಿ. 5. ಗುಲಾಮತನದ ಬದ್ಧ ಶೃಂಖಲೆಗಳನ್ನು ಕಿತ್ತೊಗೆಯಿರಿ. ಈ ಐದು ಬಾಣಗಳನ್ನು ಹೂಡಲು ಯುವಕರುಗಳೂ ಸಿದ್ಧರಾಗಿರಿ. ಇಷ್ಟೇ ಇಂದಿನ ಯುವಕರುಗಳಿಗೆ ನಾನು ಹೇಳತಕ್ಕದ್ದು. ರಾಜಕೀಯವೆಂದರೆ ಧರ್ಮೋನ್ನತಿ ಅಥವಾ ಮತದ ಒಂದು ಭಾಗ. ದೇವರ ಧ್ಯಾನ ಮಾಡುತ್ತಾ ಬೆಳಿಗ್ಗೆ ಮತ್ತು ಸಾಯಂಕಾಲ ಎಡಬಿಡದೆ ನೂಲುವುದನ್ನು ಅಭ್ಯಾಸಮಾಡಿರಿ. ಒಂದು ಕ್ರಮವಾಗಿ ಸರ್ಕಾರದಷ್ಟೇ ಸುವ್ಯವಸ್ಥೆಯಿಂದ ಸಂಘ ಶಕ್ತಿಗಳನ್ನು ಮಾಡಿಕೊಂಡು ನಾವು ತ್ಯಾಗಮಾಡಿ ದೇಶಸೇವೆ ಮಾಡಬೇಕು. ಹೀಗಾಯಿತೆಂದರೆ ಸ್ವರಾಜ್ಯವು ನಮ್ಮ ಕೈಗೆ ಬಂದಹಾಗೆಯೇ! ಭಾರತೀಯರೆಲ್ಲರೂ ಇದಕ್ಕೆ ಸಿದ್ಧರಾಗಿರಿ!

ದೆಹಲಿಯಲ್ಲಿ ಕಾಂಗ್ರೆಸ್ ಮುಖಂಡರ ದಸ್ತಗಿರಿ.

ಸರಕಾರದ ಆಜ್ಞಾಭಂಗ.

ಮುಖಂಡರ ಮಹತ್ವದ ಸಂದೇಶ.

ಹೊಸದೆಹಲಿ ಆಗಸ್ಟ್ 27.

ಈ ದಿವಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರಾದ ಡಾಕ್ಟರ್ ಎಂ. ಎ. ಅನ್ಸಾರಿ, (ಪ್ರೆಸಿಡೆಂಟ) ಪಂಡಿತ ಮದನ ಮೋಹನ ಮಾಳವೀಯ, ಮಿ|| ವಿಠಲಭಾಯಿ ಪಟೇಲ್, ಮಿ|| ಮಥುರಾದಾಸ್ ತ್ರಿಕಂಜಿ, ಲಾಲಾ ದುನೀಚೆಂದ್ (ಅಂಬಾಲಾ), ಮಿ|| ದೀಪನಾರಾಯಣಸಿಂಗ್, ಡಾಕ್ಟರ್ ಬಿ. ಸಿ. ರಾಯ್, ಸರದಾರ್ ಮಂಗಳಸಿಂಗ್, ಅಫ್‌ಜಲ್‌ಹಕ್ ಮತ್ತು ಮಿ|| ರಾಜಾರಾವ್ (ಸೆಕ್ರೆಟರಿ). ಈ ಹತ್ತು ಜನರು ದಸ್ತಗೀಮಾಡಲ್ಪಟ್ಟು ಕಾರಾಗೃಹದಲ್ಲಿಡಲ್ಪಟ್ಟರು.

ಸರಕಾರದವರು ರಾಷ್ಟ್ರೀಯ ಸಭೆಯನ್ನು ಅಕ್ರಮಕೂಟವೆಂದು ಬಹಿಷ್ಕರಿಸಿದ್ದರೂ, ಅದಕ್ಕೆ ವಿರೋಧವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೆಂಬರರು ಸಭೆಸೇರಲೆತ್ನಿಸಿದುದೇ ಈ ದಸ್ತಗಿರಿಗೆ ಕಾರಣವಾಗಿರುವದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ತ್ರೀ ಮೆಂಬರರಾದ ಶ್ರೀಮತಿ ಕಮಲಾ [illegible]ರಲಾಲ್ ನೆಹರೂ ಮತ್ತು ಶ್ರೀಮತಿ ಹಂಸಾ ಮೆಹತಾ[illegible]ತ್ರ ದಸ್ತಗಿರಿಮಾಡಲ್ಪಡಲಿಲ್ಲ.

ಕಾಂಗ್ರೆಸ್ [illegible] ಕಮಿಟಿಯ ಮೆಂಬರರು ಮೊದಲೇ ತೀರ್ಮಾನಿಸಿಕೊ[illegible] ಈ ದಿವಸ ಮಧ್ಯಾಹ್ನ ನೂತನ ಪ್ರೆಸಿಡೆಂಟರಾದ ಡಾ[illegible]. ಎ. ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರ[illegible]ಂಗ್ ಕಮಿಟಿಯ 13 ಜನ ಮೆಂಬರರ ಪೈಕಿ 10 ಜನರು ದೆಹಲಿಗೆ ಬಂದರು. ಬೆಳಿಗ್ಗೆ ಮೆಂಬರರೆಲ್ಲರೂ ಪಂಡಿತ ಮದನಮೋಹನ ಮಾಳವೀಯರವರು ವಾಸವಾಗಿದ್ದ "ಬಿರ್ಲಾಗೃಹ" ದಲ್ಲಿ ಸಭೆ ಸೇರಿ ಕೆಲವು ತೀರ್ಮಾನಗಳನ್ನು ಮಾಡಿದರು.

ಮಧ್ಯಾಹ್ನ 3 ಘಂಟೆಗೆ ಎಲ್ಲರೂ ಕಮಿಟಿಯ ಮೀಟಿಂಗಿಗಾಗಿ ಡಾಕ್ಟರ್ ಅನ್ಸಾರಿಯವರ ಗೃಹಕ್ಕೆ ಹೊರಟರು. ಈ ದಿನ ಮುಖಂಡರನ್ನೆಲ್ಲ ದಸ್ತಗಿರಿಮಾಡಬಹುದೆಂಬ ಹಾರಿಕೆ ಸುದ್ದಿಯನ್ನು ಕೇಳಿ ಜನರು ತಂಡತಂಡವಾಗಿ ಬಂದು ನೆರೆದಿದ್ದರು. ಎಲ್ಲರಿಗಿಂತ ಮುಂಚೆ ಮಿ|| ವಿ. ಜೆ. ಪಟೇಲರವರೂ, ಅನಂತರ ಇತರ ಮೆಂಬರುಗಳೂ ಬಂದರು. ಸ್ವಲ್ಪಹೊತ್ತಿನೊಳಗಾಗಿ ಸಿ. ಐ. ಡಿ. ಸೂಪರಿಂಟೆಂಡೆಂಟರಾದ ಮಿ|| ಸೀಮಿಯರ್‌ರವರ ನಾಲ್ಕು ಮೋಟಾರ್ ಕಾರುಗಳ ಸಮೇತರಾಗಿ ಬಂದರು. ಪೋಲೀಸರು ಕ್ಷಣಮಾತ್ರದಲ್ಲಿ ಡಾಕ್ಟರ್ ಅನ್ಸಾರಿಯವರ ಗೃಹವನ್ನು ಬಳಸಿ ನಿಂತು, ಹೋಗಬರುವ ಜನರು ಮತ್ತು ಗಾಡಿಗಳನ್ನೆಲ್ಲ ತಡೆದುಬಿಟ್ಟರು. ಮಿ|| ಸೀಮಿಯರ್‌ರವರು ಶ್ರೀಮತಿ ಕಮಲಾ ಜವಾಹರಲಾಲ್ ನೆಹರೂ, ಶ್ರೀಮತಿ ಹಂಸಾ ಮೆಹತಾ, ಲಾಲಾ ದುನೀಚೆಂದ್ ಮತ್ತು ಮಿ|| ಅಫ್‌ಜಲ್‌ಹಕ್‌ರವರ ವಿನಾ ಇತರ ಎಲ್ಲ ಮೆಂಬರುಗಳ ಮೇಲೂ ವಾರಂಟುಗಳನ್ನು ಜಾರಿಮಾಡಿ, 10,000 ರೂ.ಗಳ ಜಾಮೀನ್ ಕೊಡಬೇಕೆಂದೂ, ತಪ್ಪಿದರೆ [illegible]ಕೆಗಳನ್ನು ಬರೆದುಕೊಡಬೇಕೆಂದೂ ಹೇಳಿದರು. [illegible]ದರು ಒಪ್ಪದಿರಲು, ಎಲ್ಲರೂ ದಸ್ತಗಿರಿಮಾಡಲ್ಪ[illegible] ಪೋಲೀಸರು ಡಾಕ್ಟರ್ ಅನ್ಸಾರಿಯವರ [illegible] ಅಬುಲ್‌ಕಲಾಂ ಆಜಾದ್‌ರವರ ಬಂಗಲೆಗಳ[illegible] ಇಷ್ಟರಲ್ಲಿ ಲಾಲಾ ದುನೀಚೆಂದ್ ಮತ್ತು [illegible] ರವರಿಗೆ ವಾರಂಟುಗಳು ಬಂದವು. ಪೋ[illegible] ಗಿಮಾಡಿದರು. ಅಷ್ಟುಹೊತ್ತಿಗೆ "[illegible] ರಿಂದ ಡಾಕ್ಟರ್ ಅನ್ಸಾರಿಯವರು ಮಿ[illegible] ಡೆಂಟರವರನ್ನು "ಟೀ" ತೆಗೆದುಕೊಳ್ಳುವ[illegible]. ಅವರು ನಮ್ರಪೂರ್ವಕವಾಗಿ ತಿರಸ್ಕರಿಸಿದರು.

4 ಘಂಟೆಯ ಹೊತ್ತಿಗೆ ದಸ್ತಗಿರಿಯಾದವರೆಲ್ಲರೂ ಬಲವಾದ ಪೋಲೀಸರ ಶಿಬ್ಬಂದಿಯಿಂದ ಸೆಂಟ್ರಲ್ ಜೈಲಿಗೆ ಕರೆದೊಯ್ಯಲ್ಪಟ್ಟರು. ಜೈಲಿಗೆ ಹೋಗುವದಕ್ಕೆ ಪೂರ್ವದಲ್ಲಿ ಜನರು ಮುಖಂಡರಿಗೆಲ್ಲ ಹೂವಿನಹಾರಗಳನ್ನು ಹಾಕಿ ಜಯಘೋಷಮಾಡಿ ಕಳುಹಿಸಿಕೊಟ್ಟರು.

ಮುಖಂಡರ ಕಡೆಯ ಸಂದೇಶ.

"ನನಗೆ ಅತ್ಯಂತ ಗೌರವದ ಪದವಿಯೂ, ಪೋಷಣೆಯೂ ಈಗ ದೊರೆಯಿತು."

ವಿಠಲಭಾಯಿ ಪಟೇಲ್.

"ನಮಗೆ ಎಂಥ ಕಷ್ಟಪರಂಪರೆಗಳು ಪ್ರಾಪ್ತವಾದರೂ ಯಾರೂ ಎದೆಗುಂದದೆ ಈ ಶಾಂತಿಸಮರವನ್ನು ಕೊನೆಗಾಣಿಸಬೇಕು. ಸ್ವತಂತ್ರಭಾರತದ ಪವಿತ್ರ ದೃಶ್ಯವು ಸದಾ ನಿಮ್ಮ ಕಣ್ಣುಗಳಿಗೆ ಗೋಚರಿಸುತ್ತ, ನಿಮ್ಮ ಉತ್ಸಾಹವನ್ನು ಹೆಚ್ಚಿಸುತ್ತಿರಲಿ! ದೇಶದ ಎಲ್ಲ ಕಡೆಗಳಲ್ಲೂ ವೃದ್ಧರು, ತರುಣರು, ಸ್ತ್ರೀಯರು, ಪುರುಷರು ಮತ್ತು ಮಕ್ಕಳುಗಳಲ್ಲಿ ಸಹ ಸ್ವಾತಂತ್ರ್ಯಪ್ರಿಯತೆಯೂ, ಆತ್ಮಯಜ್ಞೋತ್ಸಾಹವೂ ತಲೆದೋರುತ್ತಿರುವದನ್ನು ನೋಡಿ ನನಗೆ ಆತ್ಮಾನಂದವೆನಿಸುತ್ತಿರುವದು. ನಮ್ಮ ಗೃಹದಲ್ಲಿ ನಾವೇ ಯಜಮಾನರಾಗಿರಬೇಕು. ಅದು ನಮ್ಮ ಜನ್ಮಸಿದ್ಧವಾದ ಹಕ್ಕಾಗಿರುವದು. ಜಗದ್ರಕ್ಷಕನು ಆಗಲೇ ಪ್ರಸನ್ನನಾಗಿರುವಂತೆ ನನಗೆ ತೋರುತ್ತಿರುವದು."

ಪಂಡಿತ ಮದನಮೋಹನಮಾಳವೀಯ.

ನನ್ನ ದೇಶಬಾಂಧವರೇ ಏಳಿರಿ! ಎಚ್ಚರಿಕೆಯಾಗಿ. ರಾತ್ರಿಯು ಪೂರೈಸಿ ಆಗಲೇ ಬೆಳಕು ಹರಿಯುತ್ತಿರುವುದು. ನಿಮ್ಮ ಟೊಂಕಗಳನ್ನು ಕಟ್ಟಿ ಅಹಿಂಸಾತ್ಮಕದ ನಿಶಾನಿಯ ಕೆಳಗೆ ಕಾರ್ಯಮಾಡಿರಿ. ವಂದೇಮಾತರಂ.

—ಡಾಕ್ಟರ್ ಬಿ. ಸಿ. ರಾಯ್.

ಏಳಿರಿ! ಎಚ್ಚರಿಕೆ ಹೊಂದಿರಿ! ಇಲ್ಲವಾದರೆ ಕಾಲವು ಮೀರುವದು.

—ಲಾಲಾದುನೀಚೆಂದ.

ಕಾಂಗ್ರೆಸ್ಸಿನಲ್ಲಿ ನಾನು 14 ವರ್ಷಗಳವರೆಗೆ ಕೆಲಸಮಾಡಿದೆನು. ಆದರೆ ನನ್ನ ಜೀವಮಾನದಲ್ಲಿ ಈ ದಿನವೇ ನನಗೆ ಅತ್ಯಂತ ಸಂತೋಷವನ್ನುಂಟುಮಾಡಿರುವದು. ಏಕೆಂದರೆ ದೇಶದ ಮತ್ತು ಕಾಂಗ್ರೆಸ್ಸಿನ ಸೇವೆಮಾಡುತ್ತಿದ್ದ ನಾನು ಇಂದು ಸ್ವಾತಂತ್ರ್ಯ ಮಂದಿರಕ್ಕೆ ಯಾತ್ರಾರ್ಥಿಯಾದೆನು.

ರಾಜಾರಾವು ಸೆಕ್ರೆಟರಿ.

ನೂತನ ವರ್ಕಿಂಗ್‌ಕಮಿಟಿಯ ನಿರ್ಮಾಣ.

ದೆಹಲಿ ಆಗಸ್ಟ್ 28.

ಮೇಲ್ಕಂಡ ಮುಖಂಡರ ದಸ್ತಗಿರಿಯಾದ ಕೂಡಲೆ 6 ಜನ ಮುಹಮ್ಮದೀಯರು ಮತ್ತು 6 ಜನ ಹಿಂದೂಗಳಿಂದ ಕೂಡಿದ ನೂತನ ವರ್ಕಿಂಗ್ ಕಮಿಟಿಯು ನಿಯಾಮಕವಾಯಿತು. ಅದರಲ್ಲಿ ಲಕ್ನೋದ ಅಡ್ವೊಕೇಟರಾದ ಮಿ|| ಖಲೀಲ್-ಉಲ್-ಜಮಾನ್‌ರವರು ಆಕ್ಟಿಂಗ್ ಪ್ರೆಸಿಡೆಂಟರಾಗಿಯೂ ಮುಂಬಯಿಯ ಮಿ|| ವೇಲ್ಜಿನಪ್ಪೂರವರು ಟ್ರೆಜರರ್ರಾಗಿಯೂ, ಮಿ|| ಗೋವಿಂದ ಕಾಂತ ಮಾಳವೀಯರವರು ಸೆಕ್ರೆಟರಿಗಳಾಗಿಯೂ, ಲಕ್ನೋದ ಬ್ಯಾರಿಸ್ಟರಾದ ಮಿ|| ಹರಕರಣನಾಥ ಮಿಶ್ರ, ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ|| ಬ್ರೆಲ್ವಿಯವರು, ರಾಜಮಹೇಂದ್ರಿಯ ಮಿ|| ಕೆ. ವಿ. ಆರ್. ಸ್ವಾಮಿಯವರು, ಬಿಜಾಪುರದ ಮಿ|| ಎಸ್. ವಿ. ಕೌಜಲಗಿಯವರು, ಅಲಹಾಬಾದದ ಮಿ|| ಎ. ಎಂ. ಖಾವಜಾರವರೂ, ಅಮೃತಸರದ ಮಿ|| ಇಸ್ಮಾಯಿಲ್ ಘಜನಾಬಿಯವರೂ, ಕಲ್ಕತ್ತೆಯ ಮಿ|| ಶರತ್‌ಚಂದ್ರಬೋಸ್‌ರವರೂ, ಪಾಟ್ನಾದ ಪ್ರೊಫೆಸರ್ ಅಬ್ದುಲ್ ಬಿಯವರು, ದೆಹಲಿಯ ಮಿ|| ಆಸಾಫಲ್ಲಿಯವರೂ ಮತ್ತು ದಿನಾಜಪುರ ಬಂಗಾಳದ ಮೌಲಾನಾ ಅಬ್ದುಲ್ ಬಿಯವರು ಮೆಂಬರರಾಗಿಯೂ ನಿಯಮಿಸಲ್ಪಟ್ಟಿರುವರು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ತೇಜಿತ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[5]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

— 2 —

35. ಸ್ತ್ರೀಯರು ಬಂಜೆಯರಾಗುವುದುಂಟೇ? ಬಂಜೆತನವನ್ನು ಹೋಗಲಾಡಿಸುವ ಉಪಾಯಗಳಾವುವು?
36. ಗಂಡಸರಲ್ಲಿಯೂ ಬಂಜೆತನ ಬರುವುದುಂಟೇ? ಪುರುಷರಿಗೆ ವಂಧ್ಯತ್ವವು ಪ್ರಬಲಿಸಲು ಕಾರಣವೇನು? ಅದರ ನಿವರ್ತನೆಗೆ ಉಪಾಯವೇನು?
37. ಮಕ್ಕಳು ಲೆಕ್ಕವಿಲ್ಲದೆ ಹುಟ್ಟುವುದರಿಂದ ದೇಶಕ್ಕೆ ಉಂಟಾಗುವ ಮೇಲು ಕೀಳುಗಳಾವುವು? ಹಾಗೆ ಮಕ್ಕಳು ಹೆಚ್ಚಾಗಿ ಹುಟ್ಟದಿರುವಂತೆ ಮಾಡುವುದಕ್ಕೆ ಬೇಕಾದ ಉಪಾಯಗಳು. ಸ್ತ್ರೀಪುರುಷರು ಕಲೆತರೂ ಸಂತಾನವಾಗದಿರುವಂತೆ ಮಾಡುವುದು ಹೇಗೆ? ಅಮೆರಿಕಾ, ಫ್ರಾನ್ಸು ಮುಂತಾದ ದೇಶಗಳಲ್ಲಿಯ ಹಾಗೆ ಮಕ್ಕಳು ಹೆಚ್ಚಾಗಿ ಹುಟ್ಟದಿರುವುದಕ್ಕೆ ಮಾಡಬೇಕಾದ ಉಪಾಯಗಳು.
38, ನೂತನ ದಂಪತಿಗಳು ಸಮಾಜಕ್ಕೆ ತಕ್ಕಂತೆ ನಡೆಯುವುದು ಹೇಗೆ?
39. ಯಾವ ರೀತಿ ನಡೆಯುವುದರಿಂದ ದಂಪತಿಗಳು ಕೀರ್ತಿಭಾಜನರಾಗುವರು?
40. ತಾಯಿತಂದೆಗಳು ಮಕ್ಕಳೊಂದಿಗೆ ನಡೆಯಬೇಕಾದ ಕ್ರಮ ಯಾವುದು?

ಲಿಸಿರುವ ಸ್ವಭಾವವಿರುದ್ಧವಾಗಿ ಸುಖಪಡುವ ಕೆಟ್ಟ ಪದ್ಧತಿ.
42. ಈ ಬಗೆಯ ಕೆಟ್ಟಪದ್ಧತಿಯನ್ನು ನಿರ್ಮೂಲಗೊಳಿಸುವ ಉಪಾಯಗಳು.
43. ಈ ಹಾಳು ಅಭ್ಯಾಸದಿಂದ ಉಂಟಾಗುವ ಹಾನಿ! ಇದನ್ನು ಹೋಗಲಾಡಿಸುವುದಕ್ಕೆ ತಾಯಿತಂದೆಗಳು ಗಮನಿಸತಕ್ಕ ವಿಷಯಗಳು.
44. ವೇಶ್ಯೆಯರಿಂದ ದೇಶಕ್ಕೆ ಉಂಟಾಗುವ ಲಾಭನಷ್ಟಗಳು ಕಾಮುಕರು ಗಮನಿಸತಕ್ಕ ವಿಷಯಗಳು.
45. ಸ್ತ್ರೀರೋಗಗಳು—ಅವುಗಳಿಂದ ವಿಮುಕ್ತರಾಗುವ ವಿಧ.

ಮಿತ್ರರೇ! ಇದುವರೆಗೆ ಬರೆದ ರಹಸ್ಯಗಳೇ ಅಲ್ಲದೆ ಇನ್ನೂ ಅನೇಕ ವಿಚಿತ್ರಗಳಾದ ಮರ್ಮಗಳು ಈ ಗ್ರಂಥದಲ್ಲಿ ತುಂಬಿವೆ. ಆದಕಾರಣ ಪ್ರತಿಯೊಬ್ಬರೂ ತಪ್ಪದೆ ಈ ಗ್ರಂಥವನ್ನು ತರಿಸಿಕೊಂಡು, ಸಾರವನ್ನು ಗ್ರಹಿಸಿ, ಅದರಂತೆ ನಡೆಯುತ್ತ ಆನಂದದಲ್ಲಿ ತೇಲಾಡಿರಿ. ಪ್ರತಿಯೊಂದು ಮನೆಯಲ್ಲಿಯೂ ಈ ಗ್ರಂಥವು ಅವಶ್ಯವಾಗಿ ಇರುವುದು ಶ್ರೇಯಸ್ಕರ. ಈ ಗ್ರಂಥವನ್ನು ಮುದ್ರಿಸುವುದು ಸ್ವಲಾಭಾಪೇಕ್ಷೆಯಿಂದಲ್ಲ. ದೇಶದ ಪುರೋಭಿವೃದ್ಧಿಗಾಗಿಯೇ ಪ್ರಕಟಿತವಾಗಿದೆ.

ಒಂದೇ ಸಲ ಎರಡು ಪ್ರತಿಗಳನ್ನು ತರಿಸಿಕೊಂಡರೆ

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಪೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

[ಸಿ]ಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
[ಆಯ]ುರ್ವೇದೀಯ ಸಿದ್ಧೌಷಧಗಳು,
[ಲ]ೋಕಾಮಯಹರ ಕಸ್ತೂರಿ ಮಾತ್ರೆಗಳು.

[illegible]ಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ [illegible]ದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ [illegible]ಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿ[illegible]ಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ [illegible]ಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, [illegible]ಚಳೀಜ್ವರ, ಇನ್‌ಫ್ಲೂಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, [illegible]ವರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, [illegible]ಯ ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿ [illegible]ದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. [illegible]ದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶ [illegible]ಕೂತಿರಬೇಕಾದವರಿಗೂ, ಪೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋ[illegible] ಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದ[illegible] ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು [illegible]ವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ [illegible]ದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.
[illegible]ಯುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ [illegible]ರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

[ವೆ]ಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[ಬ್ರ]್ಯಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[೧]೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

[ಮಿರ]ಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

[ಧಾ]ತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ. [ಸ್ಪರ್ಧೆ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

[illegible]ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ [illegible]ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮ, ಗರಮಿದೋಷ ಯಾವ [illegible]ಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, [illegible]ರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, [illegible]ಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸೆಲು ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[6]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿಸನಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ಸುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಿಂತಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಗಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

ಟಿಕ್ಚ, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸಂಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[4] ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.

[5 ನೇ ಪುಟದಿಂದ ಮುಂದುವರಿದುದು.]

ಅಂತರಿಕ್ಷದಲ್ಲಿ ಬಹುದೂರ ಹಾರುವ ನೇತ್ರಾನಂದಕರಗಳಾದ ದೃಶ್ಯಗಳು, ನಮ್ಮ ಕಣ್ಣುಗಳ ಮುಂದೆ ಬಂದು ನಿಲ್ಲುವಂತೆ..........ಆದರೆ ಭಾರತಾಂಬರದ ಕೆಳಗಿರುವ ಮಾನವಪಕ್ಷಿಗೆ ತನ್ನ ಮನಸ್ಸಿಗೆ ತೃಪ್ತಿಯಾಗುವವರೆಗೆ ಹಾರಲವಕಾಶವಿಲ್ಲದೆ, ಬರಬರುತ್ತ ಶಕ್ತಿಗುಂದುವನು. ಕೋಟ್ಯವಧಿ ಜನಗಳಿಗೆ ಇದು ಕನಸಿನಲ್ಲಿಕಂಡ ಗಂಟೆನಂತೆ ಕೇವಲ ನಿರಾಶಾಜನಕವಾಗಿರುವದು. ಅತ್ಯಂತ ದುಃಖಜನಕವಾದ ಇದರ ನಿಜಸ್ಥಿತಿಯನ್ನು ಸಹ ನಾವು ಅರಿಯಲಾರದವರಾಗಿರುವೆವು. ಭಯಂಕರಯಾತನೆಗಳಿಂದ ನರಳುತ್ತಿರುವ ರೋಗಿಗಳನ್ನು ಸಂಗೀತದಿಂದ ಸಮಾಧಾನಪಡಿಸಲು ಸಾಧ್ಯವಿಲ್ಲವೆಂಬುದನ್ನು ನಾನು ಚೆನ್ನಾಗಿ ಅನುಭವ ಮಾಡಿಕೊಂಡಿರುವೆನು. ಸದ್ಯಃ ಕ್ಷುದ್ಬಾಧೆಯಿಂದ ನರಳುತ್ತಿರುವ ಕೋಟ್ಯನುಕೋಟಿ ಭಾರತೀಯರಿಗೆ ಪ್ರಾಣಾಧಾರವಾದ ಆಹಾರವೊಂದು ಮಾತ್ರ ಬೇಕಾಗಿರುವದು" ಎಂದು ಹೇಳಿರುವರು.

ಹಸಿವುತೃಷೆಗಳಿಂದ ತಪ್ಪಿಸಿಕೊಳ್ಳಲು ಪ್ರಾರಂಭಿಸಿರುವ ಈ ಭಯಂಕರ ಸಮರದಲ್ಲಿ ಸಹ ಅವರು ಹಿಂಸಾಮಯ ತತ್ತ್ವವನ್ನು ನಿಷೇಧಿಸಿ, ನಾಜರಿನ್ ಮತ್ತು ಬುದ್ಧರು ಹೇಳಿದಂತೆ—ಕೋಪವನ್ನು ಪ್ರೀತಿಯಿಂದಲೂ, ದುರಾಗ್ರಹವನ್ನು ಸತ್ಯಾಗ್ರಹದಿಂದಲೂ, ದ್ವೇಷವನ್ನು ಉದಾರಭಾವದಿಂದಲೂ, ಅನೃತವನ್ನು ಸತ್ಯದಿಂದಲೂ ಜಯಿಸಬೇಕೆಂದು ಸಾರುತ್ತಿರುವರು.

ಗಾಂಧಿಯವರಲ್ಲಿ ಒಳ್ಳೆಯ ಗುಣವು ಅಪೂರ್ವವಾಗಿ ಪ್ರಕಾಶಿಸುವದು. ಭಾರತೀಯರ ಮನೋಧರ್ಮವು ಅದನ್ನು ಅಮಾನುಷ ವ್ಯಕ್ತಿಸ್ವರೂಪವೆಂದು ನಂಬುವದು. ಎಷ್ಟೋ ಜನ ವಿಚಾರಪರರಿಂದ ಹಿಂದೂಗಳು ಗಾಂಧಿಯವರ ತತ್ತ್ವಗಳು ಹೇಗಿದ್ದರೂ ಪ್ರಾಪಂಚಿಕ ವ್ಯವಹಾರಗಳಲ್ಲಿ ಅವರಿಗೆ ಎಷ್ಟೋ ಜಯಾಪಜಯಗಳುಂಟಾದರೂ ಪೂರ್ವದೇಶೀಯರು ಮಾತ್ರ ಅವರನ್ನು ಎಂದಿಗೂ ಹೀಗೆಯೇ ಪೂಜಿಸುವರೆಂದು ಹೇಳಿರುವರು.

ಗಾಂಧಿಯವರ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ನೈತಿಕತತ್ತ್ವಗಳ ವಿಷಯದಲ್ಲಿ ಪಾಶ್ಚಿಮಾತ್ಯರು ಏನು ಹೇಳಿದರೂ, ಭಾರತಜನಾಂಗವು ಅಹಮದಾಬಾದಿನ ಈ ಶಾಂತಮೂರ್ತಿಯನ್ನು ಎಷ್ಟು ಪ್ರೀತಿಯಿಂದ ಗೌರವಿಸುವುದೆಂಬುದನ್ನು ಭರತಖಂಡದಲ್ಲಿ ಸಂಚರಿಸುವವೆಲ್ಲರೂ ಚೆನ್ನಾಗಿ ತಿಳಿಯುವರು. ಎಲ್ಲರೂ ಅವರನ್ನು ಏಕವಾಕ್ಯದಿಂದ "ಮಹಾತ್ಮ" ರೆಂದು ಕರೆಯುವರು.

ಭರತಖಂಡದ ಮುಂದಿನ ವಿದ್ಯಮಾನಗಳ ಆಕಾರಗಳನ್ನು ಕ್ರಮಪಡಿಸುತ್ತಿರುವರೋ ಎನ್ನುವಂತೆ ಸಾಬರಮತಿಯ ತೀರದ ಆಶ್ರಮದಲ್ಲಿ ನೆಲದ ಮೇಲೆ ಸದಾ ಚರಕದ ಮುಂದೆ ಕುಳಿತು ನೂಲುತ್ತಿರುವ ಈ ಮಹಾತ್ಮರೊಡನೆ ಸಂಭಾಷಣೆ ಮಾಡಿದವರೆಲ್ಲರೂ ಅವರ ಸಾಧುಸ್ವಭಾವವನ್ನು ಅಸಾಧಾರಣವಾದ ಮಾನಸಿಕ ಶಕ್ತಿಯನ್ನೂ ಅರಿಯದೆ ಇರಲಾರರು. ಅವರ ಆಶ್ರಮದಿಂದ ಹಿಂತಿರುಗಿ ಹೋಗುವಾಗ ನಾನು ಆಶ್ರಮಪ್ರಾಂತದಲ್ಲಿದ್ದ ಖಾದಿಕಾರ್ಯಾಲಯಗಳ ಮುಂದೆ ಬಂದೆನು. ಅವರ ಅನುಚರರು ಸಂತೋಷದಿಂದ ನೇಯುತ್ತ ಇರುವವನ್ನು ನೋಡಿ ರಸ್ತೆಗೆ ಬರುವ ಸಮಯದಲ್ಲಿ ನನ್ನ ಮನಸ್ಸು ತನ್ನಷ್ಟಕ್ಕೆತಾನೇ "ಮಹಾತ್ಮಾ! ನಿರಂತರ ಕಷ್ಟಗಳಿಗೆ ಗುರಿಯಾಗಿರುವ ಜನಾಂಗದ ಮುಂದಾಳುವೇ! ನಾನು ನಿನ್ನನ್ನು ವಂದಿಸುವೆನು." ಎಂದು ಹೇಳುತ್ತಿತ್ತು.

ಸ್ವಾತಂತ್ರ್ಯಸಂಗ್ರಾಮ ವಾರ್ತೆ.

"ವೈಸರಾಯರಿಂದ ಹೊರಡಿಸಲ್ಪಟ್ಟಿರುವ ನೂತನ ಕಾಯಿದೆಗಳಲ್ಲಿ ಪೋಲೀಸರು ಮತ್ತು ಸೈನಿಕರು ರಾಷ್ಟ್ರೀಯ ಸಭೆಯ ಪಕ್ಷವನ್ನು ವಹಿಸಿ ಸ್ವಾತಂತ್ರ್ಯ ಸಂಪಾದನೆಗೆ ಸಹಾಯವಾಗುವಂತೆ ಪ್ರೋತ್ಸಾಹಿಸುವದು ರಾಜದ್ರೋಹದಂತೆ ಭಾವಿಸಲ್ಪಡುವದೆಂಬುದೂ ಒಂದು ಕಾಯಿದೆಯಾಗಿದೆ. ಈ ಅಪರಾಧಕ್ಕಾಗಿ ಇದುವರೆಗೆ ಅನೇಕ ಸ್ವಯಂಸೇವಕರು ಕಾರಾಗೃಹವಾಸಿಗಳಾಗಿದ್ದಾರೆ. ಮುಂಬಯಿಯ ಶಾಖಾ ಸೆಷನ್ ಜಡ್ಜರಾದ ಶ್ರೀ|| ಬಿ. ಎಚ್. ಸಜ್ಜನರ ಮುಂದೆ ಇಂಥ ವ್ಯವಹಾರವೊಂದು ವಿಚಾರಣೆಗೆ ಬಂದಿತು. ಸೆಷನ್ ಜಡ್ಜರು ಸತ್ಯಾಗ್ರಹಿಗಳ ಮೇಲಿನ ಆಪಾದನೆಗಳನ್ನೆಲ್ಲ ಚೆನ್ನಾಗಿ ವಿಚಾರಣೆ ಮಾಡಿ "ಸ್ವಾತಂತ್ರ್ಯಸಂಪಾದನೆಯನ್ನು ಮಾಡಿರೆಂದು ಪೋಲೀಸಿನವರನ್ನೂ ಮತ್ತು ಸೈನಿಕರನ್ನೂ ಪ್ರಾರ್ಥಿಸುವದು ಅಪರಾಧವೆನಿಸುವುದಿಲ್ಲ. ಅದು ನ್ಯಾಯವಾಗಿದೆ" ಎಂದು ತೀರ್ಪು ಹೇಳಿದುದಲ್ಲದೆ, ಪೋಲೀಸರ ವರ್ತನೆಯ ವಿಷಯದಲ್ಲಿ "ಪೋಲೀಸರು ನಿಶ್ಶಸ್ತ್ರರೂ, ಅಹಿಂಸಾತ್ಮಕರೂ ಆದ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರವನ್ನು ನಡೆಯಿಸುವದು ಶುದ್ಧ ತಪ್ಪೆನಿಸುವದು. ಒಂದುವೇಳೆ ಮೇಲಿನ ಅಧಿಕಾರಿಗಳು ಹೇಳಿದರೂ ಪೋಲೀಸರು ಆರೀತಿ ವರ್ತಿಸಬಾರದು. ಹಾಗೆ ಮಾಡಿದರೆ ಅವರೇ ಶಿಕ್ಷೆಗೆ ಒಳಗಾಗುವರು" ಎಂದು ಹೇಳಿದರು.

ಗುಂಟೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಗಾಂಧೀ ಟೋಪಿಯನ್ನು ಹಾಕುವದು ರಾಜದ್ರೋಹವೆಂಬ ಆಜ್ಞೆಯನ್ನು ಮಾಡಿದ್ದಂತೆ ಮನೆಗಳಮೇಲೆ ರಾಷ್ಟ್ರೀಯ ಧ್ವಜವನ್ನು ಹಾರಿಸುವದೂ ರಾಜದ್ರೋಹವೆಂದು ಆಜ್ಞೆಮಾಡಿದರು. ಇದರಿಂದ ಆಂಧ್ರದೇಶದಲ್ಲಿ ನೂರಾರು ಜನರು ದಸ್ತಗಿರಿ ಮಾಡಲ್ಪಟ್ಟು ಕಾರಾಗೃಹವಾಸಿಗಳಾದರು. ಕಡೆಗೆ ಒಬ್ಬ ಸತ್ಯಾಗ್ರಹಿಯು ಮದರಾಸ್ ಹೈಕೋರ್ಟಿನಲ್ಲಿ ಅಪೀಲ್‌ಮಾಡಲು, ಜಸ್ಟಿಸ್ ಪಂಡಾಲೆಯವರು ವಿಚಾರಣೆಮಾಡಿ "ಗಾಂಧಿಟೋಪಿಯನ್ನು ಹಾಕುವದು ಮತ್ತು ರಾಷ್ಟ್ರೀಯ ಧ್ವಜವನ್ನು ಹಾರಿಸುವದು ರಾಜದ್ರೋಹವಲ್ಲ" ವೆಂದು ತೀರ್ಮಾನಹೇಳಿದರು.

ಸರ್ ತೇಜ್‌ಬಹದ್ದೂರ್ ಸಪ್ರೂ ಮತ್ತು ಮಿ|| ಜಯಕರ್‌ರವರು ವೈಸರಾಯರೊಡನೆ ಮಾತುಕಥೆಗಳನ್ನು ಪೂರೈಸಿ ಕಳೆದ ಆಗಸ್ಟ 29 ನೆಯ ತಾರೀಖಿನ ದಿವಸ ಅಲಹಾಬಾದಿಗೆ ಬಂದಿರುವರು. 30 ನೆಯ ತಾರೀಖಿನ ದಿವಸ ಅವರು ಪಂಡಿತ ನೆಹರುಗಳನ್ನು ನೋಡುವವರಾಗಿದ್ದರು. ಇವರು ಕೈಕೊಂಡಿರುವ ಶಾಂತಿಸಂಧಾನ ಪ್ರಯತ್ನಗಳು ಇದುವರೆಗೆ ತೃಪ್ತಿಕರವಾಗಿಯೇ ನೆರವೇರಿರುವವೆಂದೂ, ವೈಸರಾಯರವರು ತಮ್ಮ ಕೈಲಾದಮಟ್ಟಿಗೆ ಮುಖಂಡರ ಸಲಹೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟಿರುವರೆಂದೂ, ಅದರಂತೆ ಒಪ್ಪಿಕೊಂಡು ಮುಂದಿನ ಕಾರ್ಯಕ್ರಮಗಳಿಗೆ ಅವಕಾಶವನ್ನು ಕೊಟ್ಟು ಶಾಂತಿಸ್ಥಾಪನೆಮಾಡಲು ಮುಖಂಡರ ಒಪ್ಪಿಗೆಯು ಮಾತ್ರ ಅವಶ್ಯಕವಾಗಿರುವದೆಂದೂ, ಮುಖಂಡರು ವೈಸರಾಯರ ಸಲಹೆಗಳಿಗೆ ಒಪ್ಪದಿದ್ದರೆ, ಸರ್ ಸಪ್ರೂ ಮತ್ತು ಜಯಕರ್‌ರವರು ಸಿಮ್ಲಾಕ್ಕೆ ಹಿಂತಿರುಗಿ ಹೋಗದೆ, ಇದುವರೆಗೆ ನಡೆದಿರುವ ವಿದ್ಯಮಾನಗಳನ್ನೆಲ್ಲ ಕೂಡಲೇ ಬಹಿರಂಗಪಡಿಸುವರೆಂದೂ, ಹಾಗಿಲ್ಲದೆ ಮುಖಂಡರು ವೈಸರಾಯರ ಸಲಹೆಗಳಿಗೆ ಒಪ್ಪಿದರೆ, ಸರ್ ಸಪ್ರೂ ಮತ್ತು ಜಯಕರ್‌ರವರು ಹಿಂತಿರುಗಿ ಸಿಮ್ಲಾಕ್ಕೆ ಹೋಗಿ ಒಂದೆರಡುವಾರಗಳಲ್ಲೇ ಶಾಂತಿಸ್ಥಾಪನೆಯಾಗುವಂತೆ ಮಾಡುವರೆಂದೂ ತಿಳಿದು ಬಂದಿದೆ.

ಪಂಡಿತ ಮೋತೀಲಾಲ್‌ನೆಹರೂರವರ ದೇಹಸ್ಥಿತಿಯು ತಕ್ಕಮಟ್ಟಿಗೆ ಅನುಕೂಲವಾಗಿರುವದು. ಜ್ವರವೂ ರಕ್ತವನ್ನು ಕಾರುವದೂ ನಿಂತಿರುವದು. ಆದರೆ ನಿಶ್ಶಕ್ತಿಯುಮಾತ್ರ ಇನ್ನೂ ಬಹಳವಾಗಿರುವದು.

ದುಃಖವಾರ್ತೆ.

ಯಳವಾಳ (ವ) ಕುಷ್ಟಗಿ ಹಿರೇಮಠದ ವೇ|| ರಾಚಪ್ಪಯ್ಯನವರ ಸೊಸೆಯಿಂದಿರೂ, ವೇ|| ಗುರುಸಂಗಯ್ಯನವರ ಧರ್ಮಪತ್ನಿಯರೂ, ವೇ|| ಶಿವದೇವಶಾಸ್ತ್ರಿಗಳ ಪ್ರಿಯಪುತ್ರಿಯರೂ ಆದ ಸೌ|| ಸಿದ್ಧಲಿಂಗಮ್ಮನವರು ತಾ|| 9-8-30 ನೆಯ ದಿವಸ ಶಿವಾಧೀನರಾದರು. ಇವರು ವೇ|| ಪುರಗಿರಿ ಹಿರೇಮಠದ ಶಿವಸಂಗಪ್ಪಯ್ಯನವರ ಸಹೋದರಿಯರು! ಇವರ ಮನೆಯಲ್ಲಿ 20-25 ಜನರಿದ್ದಾಗ್ಯೂ, ಸರ್ವರಿಗೆ ಪ್ರಿಯರಾಗಿದ್ದರು. ಇವರಲ್ಲಿ ಅದ್ವಿತೀಯವಾದ ಶಾಂತತೆಯು ನೆಲೆಗೊಂಡಿತ್ತು. ಈ ಕಾಲದಲ್ಲಿ ಇಂತಹ ಸಾಧ್ವೀಮಣಿಯನ್ನು ಕಾಣುವುದೇ ದುರ್ಲಭವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಪುಣ್ಯಾತ್ಮಳ ಆತ್ಮಕ್ಕೆ ಶಾಂತಿಯನ್ನೀಯಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ. ಈ ಪುಣ್ಯಾತ್ಮಳು ಶಿವಾಧೀನವಾಗುವ ಸಮಯದಲ್ಲಿ ಜಗದಾಚಾರ್ಯರ ನಾಮಸ್ಮರಣಪೂರ್ವಕ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳು ಸಮರ್ಪಿಸಲ್ಪಟ್ಟವು.

ವೀರಪ್ಪನವರು, ತುರಕಾಣಿ.

ಮಾಹೇಶ್ವರದೀಕ್ಷಾವಿಧಿ.
(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅನುಕೂಲಾನ್ವವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,
ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

[47]

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ತಂತಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾನಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಬಹಳ ಪರಿಮಳವಾಗುವದು. ಇದನ್ನು ಅನೇಕ ಗೃಹಸ್ಥರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೬-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
ಪೋ. ಬಾ. ೫೧೦. ಮದರಾಸು.

[8]

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಸೆಪ್ಟಂಬರ್ ೧೯೩೦ [ಸಂಚಿಕೆ ೧೯

ವರ್ತಮಾನಸಂಗ್ರಹ.

ಬಳ್ಳಾರಿ ಡಿ|| ಹರಪನಹಳ್ಳಿಯಲ್ಲಿ ಈಚಲ ಮರಗಳನ್ನು ಕಡಿದದ್ದಕ್ಕಾಗಿ ೫ ಜನ ಸ್ವಯಂಸೇವಕರಿಗೆ ೩|| ತಿಂಗಳು, ಇಬ್ಬರಿಗೆ ೧|| ತಿಂಗಳು ಶಿಕ್ಷೆಯಾಗಿದೆ. ಇದುವರೆಗೆ 40ಜನರು ಶಿಕ್ಷೆ ಹೊಂದಿರುವರು. 12 ವರ್ಷದ ಬಾಲಕನನ್ನು ಹಿಡಿದು ಆಮೇಲೆ ಸುಮ್ಮನೆ ಬಿಟ್ಟುಕೊಟ್ಟರು.

ಬಳ್ಳಾರಿಯಲ್ಲಿ ೧೪೪ನೆಯ ಕಲಮನ್ನು ಮುರಿದದ್ದಕ್ಕಾಗಿ ೧೮೮ನೇ ಕಲಮಿನ ಪ್ರಕಾರ ಮಿ|| ಶೇಷಗಿರಿರಾವ, ಗೋಪಾಲರಾವ, ಕೊಟ್ರಪ್ಪ, ಗುರುನಾಥ ಈ ನಾಲ್ವರಿಗೂ ಒಂದೊಂದು ತಿಂಗಳ ಶಿಕ್ಷೆಯಾಯಿತು. ಇದುವರೆಗೆ ಇಲ್ಲಿ ೨೭ ಜನರಿಗೆ ಶಿಕ್ಷೆಯಾಗಿರುವುದು.

ಬೆಳಗಾಂವ ಡಿ|| ಸಂಪಗಾವದಲ್ಲಿ ಮಿ|| ಶಿವಲಿಂಗಪ್ಪ ಮಾಳಗಿ, ಶಿವಬಸಪ್ಪ ಬೆಳವಡಿ, ಬೈಲಪ್ಪ ವಕ್ಕುಂದ, ಬಾಳಪ್ಪ ಜತ್ತೆಣ್ಣನವರ, ಕಲ್ಲಪ್ಪ ಹೊಸೂರು, ರುದ್ರಪ್ಪ ಸಮರೊಳ್ಳಿ, ಬಸವಂತ ಮಲ್ಲಾರಿ. ನಾರಾಯಣ ಜೋಶಿ, ಗಂಗಪ್ಪ ಜತ್ತೆಣ್ಣನವರ, ಚನಬಸಣ್ಣ ಚೆತ್ತಿ, ಕಲ್ಲಪ್ಪ ಕಂಬಳಿ, ಸಿದ್ದಪ್ಪ ಸುನಕದ ಇವರಿಗೆ ಈಚಲ ಗಿಡಗಳನ್ನು ಕಡಿದ ಆರೋಪದ ಮೇಲೆ ಪ್ರತಿಯೊಬ್ಬರಿಗೂ ೯ ತಿಂಗಳ ಕಠಿಣ ಶಿಕ್ಷೆಯಾಯಿತು.

ಶಿರ್ಸಿ ತಾ|| ಎಕ್ಕಂಬಿಯಲ್ಲಿ ಶ್ರೀ|| ರಾಮಭಟ್ಟ ಬಿಸಿಲಕೊಪ್ಪ ಇವರನ್ನು ಅಡವಿ ಸತ್ಯಾಗ್ರಹಕ್ಕೆ ಹೊರಡುವದಕ್ಕಿಂತ ಮುಂಚೆ ಕೈಸೆರೆ ಮಾಡಿದರು. ಆಗ ಅವರ ವೀರಪುತ್ರಿಯು ಸ್ವತಃ ಹೋಗಿ ಗಿಡಗಳನ್ನು ಕಡಿದು ಬಂದು, ಅದನ್ನು ಪೋಲೀಸರಿಗೆ ತಿಳಿಸಿದಳು. ತನ್ನನ್ನು ಹಿಡಿಯಬೇಕೆಂದು ಆಹ್ವಾನ ಕೊಟ್ಟರೂ ಪೋಲೀಸರು ಹಿಡಿಯಲಿಲ್ಲ. ಮುಂದೆ ತಾನೇ ಹೆಂಗಸರನ್ನು ಕೂಡಿಕೊಂಡು ಹೋಗಿ ಕಾಯಿದೆಭಂಗ ಮಾಡುವದಾಗಿ ತಿಳಿಸಿದಳಲ್ಲದೆ ಅಲ್ಲಿದ್ದ ಅಧಿಕಾರಿಗಳಿಗೆ ಕುಂಕುಮ, ಕುಪ್ಪಸವನ್ನರ್ಪಿಸಿದಳು.

ಬಳ್ಳಾರಿ ಡಿ|| ಕೊಟ್ಟೂರಲ್ಲಿ ಈಚಲಮರಗಳನ್ನು ಕಡಿದವಕ್ಕಾಗಿ 21 ಜನರನ್ನು ಕೈಸೆರೆಮಾಡಿದ್ದರಷ್ಟೆ! ಅವರಲ್ಲಿ 3 ಜನರಿಗೆ 7 ತಿಂಗಳ ಶಿಕ್ಷೆ, 25 ರೂ. ಗಳು ದಂಡ, ದಂಡಕೊಡದಿದ್ದರೆ 3 ವಾರ ಶಿಕ್ಷೆ 8 ಜನರಿಗೆ 7 ತಿಂಗಳ ಶಿಕ್ಷೆ, 50 ರೂ. ದಂಡ, ದಂಡ ಕೊಡದಿದ್ದರೆ 2 ವಾರ ಶಿಕ್ಷೆ. 10 ಜನರಿಗೆ 3½ ತಿಂಗಳ ಶಿಕ್ಷೆ, 25 ರೂ. ದಂಡ ಕೊಡದಿದ್ದರೆ 1 ವಾರ ಶಿಕ್ಷೆ ವಿಧಿಸಲ್ಪಟ್ಟಿತು. ಎಲ್ಲರಿಗೂ ಕಠಿಣ ಶಿಕ್ಷೆಯಾಗಿದೆ.

ಬಳ್ಳಾರಿ ಟೌನಿನಲ್ಲಿರುವ ಮ|| ರಾ|| ಟಿ. ಸುಬ್ರಹ್ಮಣ್ಯಂ ಬಿ.ಎ., ಬಿ.ಎಲ್., ವಕೀಲರು ಮದರಾಸ್ ಲೆಜಿಸ್ಲೆಟಿವ್ ಕೌನ್ಸಿಲ್ ಚುನಾವಣೆಗೆ ಉಮೇದುವಾರರಾಗಿ ಯಾವ ಮೆಂಬರರಿಗೂ ಓಟುಕೊಡಕೂಡದೆಂದು ಭಾಷಣಮಾಡುತ್ತ ತಿರುಗುತ್ತಿದ್ದರೆಂಬ ಅಪಾದನೆಯ ಮೇಲೆ ಸದರಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು 124 ನೆಯ ಸೆಕ್ಷನ್ ಪ್ರಕಾರ ಅವರ ಮೇಲೆ ಛಾರ್ಜಿಟ್ಟು 1 ವರ್ಷ ಶಿಕ್ಷೆಗೆ ಗುರಿಪಡಿಸಿದರೆಂದೂ ಆ ದಿವಸ ಬಳ್ಳಾರಿಯ ಯಾವತ್ತೂ ಅಂಗಡಿಗಳು ಮುಚ್ಚಲ್ಪಟ್ಟು ಎಲ್ಲರೂ ಶಾಂತರೀತಿಯಿಂದ ಹರತಾಳವನ್ನು ಆಚರಿಸಿದರೆಂದೂ ರಾಣೀಛತ್ರದ ಮೈದಾನದಲ್ಲಿ ಕಾಂಗ್ರೆಸ್ ಬಾಲಕರು ಗಾಂಧಿಚಿತ್ರವನ್ನು ಕೈಯ್ಯಲ್ಲಿ ಹಿಡಿದುಕೊಂಡು ಭಜನೆಯನ್ನು ಮಾಡುತ್ತಾ ಉತ್ಸವವನ್ನು ಮಾಡಿದರೆಂದೂ, ಆ ಮೇಲೆ 3-4 ಸಾವಿರ ಜನರು ಸಭೆ ಸೇರಿದ ಸ್ವದೇಶ ಸ್ವಾತಂತ್ರ್ಯ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡಿದರೆಂದೂ, ಆ ಸದರಿ ಸಭೆಯಲ್ಲಿ ಮ|| ರಾ|| ಟಿ. ಸುಬ್ರಹ್ಮಣ್ಯಂರವರ ಧರ್ಮಪತ್ನಿಯು ತನ್ನ ಪತಿಯು ಹೇಳಿದ ವಿಷಯವನ್ನೇ ವೀರಾವೇಶದಿಂದ ಹೇಳಿ ತನ್ನ ವೀರಪತ್ನೀತ್ವವನ್ನು ಸಾರ್ಥಕಮಾಡಿಕೊಂಡಳೆಂದೂ ಒಬ್ಬ ಬಾತ್ಮಿದಾರರು ತಿಳುಹಿಸುತ್ತಾರೆ.

ಸ್ವೀಕಾರ.

ಕೊಪ್ಪಳ ಡಿ|| ಯಲಬುರ್ಗಿ ತಾ|| ಮ್ಯಾಗೇರಿಗ್ರಾಮದ ಬೃಹನ್ಮಠದಲ್ಲಿ ಪಟ್ಟಾಧಿಕಾರ ಮಹೋತ್ಸವವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 5 ರೂಪಾಯಿಗಳು ಶ್ರೀ|| ಷ|| ಬ್ರ|| ಮಂಗಳೂರು ಅರಳೆಲೆ ಬೃಹನ್ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ಡಿ|| ದರ್ಗನಹಳ್ಳಿಯಲ್ಲಿ ನೆರವೇರಿದ ಪುರಾಣಸಮಾಪ್ತಿದೀಕ್ಷಾದಿ ಕಾರ್ಯಗಳಲ್ಲಿ ಸಮರ್ಪಿಸಿದ 5-8-0 ರೂ. ಗಳು ಶ್ರೀ|| ಷ|| ಬ್ರ|| ಹುಟಗಿ ಬೃಹನ್ಮಠ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ತಿಪಟೂರು ನಿವಾಸಿಗಳಾದ ವೇ|| ಮುದೇನೂರು ರಾಣೆಬೆನ್ನೂರು ಮಳೆಮಠದ ಮಲ್ಲಿಕಾರ್ಜುನಯ್ಯನವರ ಧರ್ಮಪತ್ನಿಯವರು ಮಂಗಳಗೌರೀಪೂಜೆಯಲ್ಲಿ ಸಮರ್ಪಿಸಿದ 1 ರೂ. ಮ|| ರಾ|| ಬೇಗೂರು ಚಿಕ್ಕಹನ್ನಬಸವಪ್ಪನವರ ಪುತ್ರಿ ಚಿ|| ರೇವಮ್ಮನ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದದ್ದಕ್ಕಾಗಿ ಸಮರ್ಪಿಸಿದ 1 ರೂ. ಭಗವತ್ಪಾದ ಪಂಚಾಚಾರ್ಯರ ಹೆಸರಿನಿಂದ ಇಟ್ಟಿರುವ ಧರ್ಮದ ಡಬ್ಬಿಯಿಂದ 1 ರೂ. ಒಟ್ಟು 3 ರೂಪಾಯಿಗಳು ವೇ|| ಮಲ್ಲಿಕಾರ್ಜುನಯ್ಯನವರ ದ್ವಾರಾ ತಲ್ಪಿರುತ್ತವೆ.

ಆದವಾನಿ ಗ್ರಾಮನಿವಾಸಿಗಳಾದ ಮ|| ರಾ|| ರಾಜೋಳಿ ರಾಚಪ್ಪನವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಸೊರಬ ತಾ|| ಕೋಡಿಹಳ್ಳಿಗ್ರಾಮದ ಮ|| ರಾ|| ಕೆ. ಪಿ. ದೇವಪ್ಪಗೌಡರು ತಮ್ಮ ಭೂಮಿಯಲ್ಲಿ ಶ್ರೀ ರಂಭಾಪುರೀಪೀಠಾಧಿಪತಿಗಳ ಹೆಸರಿನಿಂದ ಮಾವಿನಗಿಡಗಳನ್ನು ಹಚ್ಚಿದ ಸಮಯದಲ್ಲಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬೊಂಬಾಯಿ ಪೋಲೀಸರು.

ಇಲ್ಲಿಯ ಕಾಂಗ್ರೆಸ್ ಕಮಿಟಿ ಮೀಟಿಂಗು ಈದಿನ ಆಗುತ್ತಿದ್ದಾಗ ಪೋಲೀಸು ಅಧಿಕಾರಿಗಳು ಬಂದು 144 ನೆಯ ಸೆಕ್ಷನನ್ನು ಮೀಟಿಂಗಿನ ಎಲ್ಲಾ ಮೆಂಬರುಗಳಿಗೂ ಪ್ರಯೋಗಿಸಿ ಎಸ್‌ಪ್ಲನೇಡು ಮೈದಾನದಲ್ಲಿ ಕಾಂಗ್ರೆಸ್ಸಿನವರು ಯಾರೂ ಕಸರತ್ತು ಮಾಡಕೂಡದೆಂದು ನೋಟೀಸು ಹಂಚಿಹೋದರು. ಮೀಟಿಂಗು ಅನಂತರವೂ ನಡೆಯಿತು. ಮುಖಂಡರುಗಳು ದಸ್ತಗಿರಿಗೆ ಸಿದ್ಧವಾಗಿ ಅವರ ಸ್ಥಾನಕ್ಕೆ ಹೊಸ ಮೆಂಬರುಗಳನ್ನು ಚುನಾಯಿಸಿ ಜೈಲಿಗೆ ಹೋಗಲು ಆಗಲೇ ಸಿದ್ಧವಾಗಿದ್ದಾರೆ.

[8 ನೆಯ ಪುಟದಿಂದ ಮುಂದುವರಿದುದು.]

ಹೊಟ್ಟೆಗಿಲ್ಲದೆ ಸಾಯುತ್ತಿರುವ ಬಡಜನರ ಕಷ್ಟಗಳು ಮನವರಿಕೆಯಾಗುವಂತಿಲ್ಲವೆಂಬುದು ಸ್ಪಷ್ಟವಾಗುದು.

ಹತಭಾಗ್ಯರಾದ ಭಾರತೀಯರು ಕಳೆದ 5 ತಿಂಗಳುಗಳಿಂದಲೂ ತಮ್ಮ ರಕ್ತಶೋಷಣೆಮಾಡಿ ಅನುಭವಿಸುತ್ತಿರುವ ಕಷ್ಟಗಳನ್ನು ನೋಡಿಯೂ, ಸರಕಾರದ ಅಸೀತಿಕರವಾದ ರಾಜ್ಯಾಡಳಿತದ ದೋಷಗಳು ಅಧಿಕಾರಿಗಳ ಮನಸ್ಸಿಗೆ ಗೋಚರವಾಗದಿರುವದಾದರೆ, ಪರಿಷತ್ತಿನಲ್ಲಿ ಅದನ್ನು ಅವರು ಅರಿತುಕೊಳ್ಳುವದು ನಿಜವೇ? ಉಪ್ಪಿನ ತೆರಿಗೆಯ ಆದಾಯವನ್ನು ಬೇರೆ ವಿಧದಿಂದ ಪಡೆಯುವ ಉಪಾಯವನ್ನು ತೋರಿಸಿರೆಂದು ಹೇಳುವದನ್ನು ನೋಡಿದರೆ, ಬ್ರಿಟಿಷರು ತಮ್ಮ ದುಂದುವೆಚ್ಚವನ್ನು ಬಿಡುವ ಇಷ್ಟವುಳ್ಳವರಾಗಿಲ್ಲವೆಂದು ಸ್ಪಷ್ಟವಾಗುವದು. ಈ ವಿಷಯಗಳನ್ನೆಲ್ಲಾ ಪರಿಶೀಲಿಸಿದರೆ, ರಾಷ್ಟ್ರೀಯ ಸಭೆಯು ಸರ್ಕಾರದೊಡನೆ ರಾಜಿಮಾಡಿಕೊಳ್ಳುವದು ಅಸಾಧ್ಯವೆಂದು ತೋರುವದು.

ಶಾಂತಿಸಂಧಾನವು ನಿಷ್ಫಲವಾಯಿತೆಂದು ಯಾರೂ ನಿರಾಶರಾಗಬೇಕಾಗಿಲ್ಲ. ಕಾಂಗ್ರೆಸ್ಸಿನವರು ಸ್ವಾತಂತ್ರ್ಯಕ್ಕಾಗಿ ಘೋರಸಂಗ್ರಾಮದಲ್ಲಿ ತೊಡಗಿರುವರು. ರಾಷ್ಟ್ರವು ಹಿಡಿದಿರುವ ಅಹಿಂಸಾತ್ಮಕಶಸ್ತ್ರವು ಆಳರಸರಿಗೆ ನೂತನವಾಗಿದ್ದು ಅದರ ಮಹಿಮೆಯನ್ನು ತಿಳಿಯಬೇಕಾದರೆ ಇನ್ನೂ ಬಹಳ ಕಾಲ ಬೇಕು. 5 ತಿಂಗಳ ಆತ್ಮಯಜ್ಞದಿಂದ ಅವರ ಮನಸ್ಸು ಬದಲಾಯಿಸಲಿಲ್ಲವೆಂದೂ ಯಾರೂ ಚಿಂತಿಸಬೇಕಾಗಿಲ್ಲ. ಇಂಗ್ಲೀಷರೊಡನೆ ನಮಗೆ ಯಾವ ಜಗಳವೂ ಇಲ್ಲ. ಆದರೆ ಅನರ್ಥಕರವಾದ ಅವರ ಅಧಿಕಾರದವಿಷಯದಲ್ಲಿ ಮಾತ್ರ ನಮ್ಮಲ್ಲಿರುವ ನೈತಿಕಶಕ್ತಿಯನ್ನೆಲ್ಲಾ ಉಪಯೋಗಿಸಿ ಪ್ರತಿಭಟಿಸುವೆವು. ಈ ಅಹಿಂಸಾತ್ಮಕಯುದ್ಧವನ್ನೇ ಕೊನೆಮುಟ್ಟಿಸುವದಾದರೆ ನಮ್ಮ ಅಭಿಲಾಷೆಯು ನಿಸ್ಸಂದೇಹವಾಗಿ ನೆರವೇರುವದು. ಶಾಂತಿಸಂಧಾನವನ್ನು ಮುಂದುವರಿಸುವ ಕಾಲವು ಇನ್ನೂ ಬಂದಿಲ್ಲ. ಸರಕಾರವು ತಾನಾಗಿ ಶಾಂತಿಯನ್ನು ಅಪೇಕ್ಷಿಸಿದಾಗ ಅವರು ನಿರಾತಂಕವಾಗಿ ನಮ್ಮಲ್ಲಿಗೆ ಬರಬಹುದು.

ಎಂ. ಕೆ. ಗಾಂಧಿ,
ಸರೋಜಿನಿ ನಾಯ್ಡು,
ವಲ್ಲಭಭಾಯಿ ಪಟೇಲ್,
ಜಯರಾಮದಾಸ್ ದೌಲತ್‌ರಾಂ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು. ಸಂ.—

ವಿಚಾರತರಂಗ.

ಲೇಖಕರು—ಶ್ರೀ ಶಂಭುಲಿಂಗಶಿವಾಚಾರ್ಯರು ಬೃಹನ್ಮಠ, ಬಿಜಾಪುರ.

ಈ ಲೋಕದಲ್ಲಿ ವೀರಶೈವಮತವನ್ನು ಮೊದಲು ನೆಲೆಗೊಳಿಸಿದವರು ಶ್ರೀ ರೇಣುಕನು ಮೊದಲಾಗಿ ಐವರು ಪ್ರಮಥರು. ಆದ್ದರಿಂದ ಅವರಿಗೆ ವೀರಶೈವಮತಸ್ಥಾಪನಾಚಾರ್ಯರೆಂದು ಬುನಾದಿಯಿಂದ ಹೇಳುವ ವಾಡಿಕೆಯಾಗಿದೆ. ಆ ಮಹರ್ಷಿಗಳು ಭೂಲೋಕದಲ್ಲಿ ಮೈದೋರಿದ ಕಾಲವಾವುದೆಂಬುದನ್ನು ಈಗ ಪರಿಷ್ಕಾರವಾಗಿ ಹೇಳಲು ಸಾಧ್ಯವಿಲ್ಲ. ಆದಕಾರಣ, ವೀರಶೈವಮತೀಯರಲ್ಲಿಯೇ ಅವರ ಕಾಲನಿರ್ಣಯ ವಿಷಯವಾಗಿ ಭಿನ್ನಭಿನ್ನಾಭಿಪ್ರಾಯಗಳು ತಲೆದೋರಲಾಸ್ಪದವಾಗಿರುವವು. ಈ ವಿಷಯದಲ್ಲಿ ಅವಾಂತರ ಕಾರಣಗಳನೇಕವಿರುವುವಾದರೂ ಆ ಪ್ರಾಚೀನಾಚಾರ್ಯರ ಯಥಾರ್ಥವಾದ ಚರಿತ್ರಬೋಧಕಗ್ರಂಥಗಳು ಸದ್ಯಃ ಸಾಕಷ್ಟು ಉಪಲಬ್ಧವಿಲ್ಲದಿರುವುದೂ ಒಂದು ಮುಖ್ಯಕಾರಣವೆಂದೇ ಹೇಳಬಹುದು. ಹಿಂದುಸ್ಥಾನದಲ್ಲಿ ಬೇರೆ ಬೇರೆ ಕಡೆ ಸುಪ್ರಸಿದ್ಧಗಳಾಗಿರತಕ್ಕ ಪುರಾತನಮಠಗಳಲ್ಲಿಯೂ ಶಿವಕ್ಷೇತ್ರಗಳಲ್ಲಿಯೂ ದೊರೆವ ತಾಮ್ರಶಾಸನ ಶಿಲಾಶಾಸನಗಳನ್ನೂ, ಲೌಕಿಕ ವೈದಿಕವಿಷಯ ಪ್ರತಿಪಾದಕಗಳಾದ ಪ್ರಾಚೀನಗ್ರಂಥಗಳನ್ನೂ ಪರಿಶೋಧಿಸಲು ತೊಡಗಬೇಕು. ಅವೆಲ್ಲ ಒಂದು ವೇಳೆ ಆಯಾ ಆಚಾರ್ಯರ ಆಮೂಲಾಗ್ರವಾದಿತಿಹಾಸವನ್ನು ಅರಿತುಕೊಳ್ಳಲು ಅನುಕೂಲಗಳಾಗದಿದ್ದರೂ ಅವರವರ ಆವಿರ್ಭಾವಕಾಲವನ್ನು ಕಂಡುಕೊಳ್ಳುವಷ್ಟುಮಟ್ಟಿಗಾದರೂ ಸಾಧನಗಳಾಗದಿರಲಾರವು. ಈಗ ಉಪಲಬ್ಧಗಳಾಗಿರುವ ಅಂತಹ ಸಾಧನಗಳಲ್ಲಿ ಕೆಲವಾದರೂ ಆ ಐವರು ಆಚಾರ್ಯರಲ್ಲಿ ಒಬ್ಬರು ಇದ್ದುದರ ಕಾಲವಾವುದೆಂಬುದನ್ನು ಕಂಡುಕೊಳ್ಳಲು ಅನುಕೂಲವಾದರೆ ಏನು ಹಾನಿಯೇನು? ಆದರೂ ಅಂತಹ ಕೆಲವು ಸಾಧನಕಲಾಪಗಳಿಂದೇ ಅಗಸ್ತ್ಯ ಮೊದಲಾದ ಮುನಿಗಳಿಗೆ ಶಿವಸಿದ್ಧಾಂತೋಪದೇಶಕರಾದ ಶ್ರೀ ರೇಣುಕಾದಿ ಮಹರ್ಷಿಗಳು ಭೂಲೋಕದಲ್ಲಿದ್ದುದರ ಕಾಲವು ಇದೇ ಎಂದು ನಿರ್ಧರಿಸಿ ಹೇಳಬಹುದೆಂಬ ಹವಣಿಕೆಯು ಮಾತ್ರ ಸದ್ಯಃ ಯಾರಿಗೂ ಕೈಗೂಡುವ ಹಾಗಿಲ್ಲ.

ಈಗ ಕೆಲಂಬರು ಕೆಲಕೆಲ ಕನ್ನಡಕಬ್ಬಗಳಂ ಮುಂದುವರಿಸಿ ಶ್ರೀ ರೇಣುಕಾದಿ ಮಹರ್ಷಿಗಳು ೧೨ನೆಯ ಶತಮಾನದಲ್ಲಿಯೋ ಅದರಿಂದೀಚೆಯೋ ಇದ್ದರೆನ್ನುತ್ತಿರುವುದಾದರೂ ಬಾಲಿಶಪ್ರಲಾಪವೇ ಸರಿ!

ವೇದಗಳಲ್ಲಿ ಋಚೆಗಳನ್ನು ಸಾಕ್ಷಾತ್ಕರಿಸಿಕೊಂಡ ಋಷಿಗಳ ಹೆಸರುಗಳೇ ಆ ಋಚೆಗಳ ಪ್ರಚಾರಕರಿಗಿದ್ದುದನ್ನು ಕಾಣಬಹುದು. ಋಗ್ವೇದದ ಮೊದಲನೆಯ ಮಂಡಲಪ್ರವರ್ತಕರು '**ಶತರ್ಚಿನಃ**' ಎಂಬ ಸಂಜ್ಞೆಕರಾದ ಅನೇಕ ಋಷಿಗಳಿದ್ದಾರೆ. ಈ ಮೊದಲನೆಯ ಮಂಡಲದಲ್ಲಿ ಒಂದರಿಂದ ಹತ್ತು ಸೂಕ್ತಗಳಲ್ಲಿಯ 102 ಋಚೆಗಳು **ಮಧುಚ್ಛಂದ**ನಿಂದ ಕಂಡುಕೊಳ್ಳಲ್ಪಟ್ಟವಾದುದರಿಂದ ಅವನಿಗೆ "**ಶತರ್ಚಿ**" ಎಂಬ ಸಾಮಾನ್ಯವಾದ ನಾಮವು ಪ್ರಾಪ್ತವಾಗಿದೆ. ಈ ಮೂಲಕ ಆ ಸಂಪೂರ್ಣ ಮಂಡಲ ಪ್ರವರ್ತಕರಾದ ಬೇರೆ ಬೇರೆ ಋಷಿಗಳಾದರೂ ಶತರ್ಚಿಗಳೆಂದೇ ಹೇಳಿಸಿಕೊಳ್ಳಲ್ಪಡುತ್ತಾರೆ. ಆದುಕಾರಣವೇ, ಆಶ್ವಲಾಯನ ಗೃಹ್ಯಸೂತ್ರದಲ್ಲಿ (3.4.2) ಮೊದಲನೆಯ ಮಂಡಲ ಪ್ರವರ್ತಕರಾದ ಋಷಿಗಳಿಗೆ ತರ್ಪಣವಾಡುವದಕ್ಕೋಸ್ಕರ "**ಶತರ್ಚಿನಸ್ತೃಪ್ಯಂತು**" ಎಂಬ ಉಲ್ಲೇಖವಿದೆ. ಇದೇ ಮೇರೆಗೆ ಪುರಾತನರಾದ ಶ್ರೀ ರೇಣುಕಾದಿ ಮಹರ್ಷಿಗಳ ಮುಖದಿಂದ ಉಪದಿಷ್ಟವಾದ ಶಿವಸಿದ್ಧಾಂತವನ್ನು ಅವರ ತರುವಾಯ ಜಗತ್ತಿನಲ್ಲಿ ಪ್ರಚುರಪಡಿಸಿದವರೂ, ಸ್ವತಂತ್ರವಾಗಿ ವಾಙ್ಮಯರೂಪದಿಂದ ಹಬ್ಬಿಸಿದವರೂ ಆದ ಬೇರೆ ಬೇರೆ ಕಾಲದ ಅನೇಕ ಜನ ಆಚಾರ್ಯರು ಆ ಪುರಾತನರ ಹೆಸರಿನಿಂದೇ ಪ್ರಸಿದ್ಧರಾದುದಚ್ಚರಿಯಲ್ಲ!

'**ಗೋತ್ರ**' ಎಂಬ ಶಬ್ದಕ್ಕೆ ವಂಶ, ಸಂತತಿ, ವರ್ಗವೆಂಬ ಅರ್ಥಗಳಿರುವುದರಿಂದ ಒಂದು ಗೋತ್ರ (ವರ್ಗ)ದಲ್ಲಿಯ ಬೇರೆ ಬೇರೆ ಕಾಲದ ಪುರುಷರು ಆ ಗೋತ್ರದ ಮೂಲಪುರುಷರ ಹೆಸರಿನಿಂದ ಪ್ರಸಿದ್ಧರಾಗಿರುವುದು ಕೇಳಿ ಕಂಡುದುಂಟು. ಅಥರ್ವಣ ವೇದದ ಶೌನಕೀಯ ಶಾಖೆಯಲ್ಲಿ **ಸುಕೇಶ** ಮೊದಲಾದವರ ಪ್ರಸ್ತಾಪವಿದೆ. "**ಸುಕೇಶ**" ಎಂಬುದು ಆ ವ್ಯಕ್ತಿಗೆ ಅವನ ಜನನೀಜನಕರು ಇಟ್ಟ ಹೆಸರು; ಆದರೆ ಅವನು '**ಭಾರದ್ವಾಜ**' ಎಂಬ ತನ್ನ ವಂಶೀಯ ನಾಮದಿಂದೇ ಪ್ರಸಿದ್ಧನಾದನು. ಹಾಗೇ "**ಸೌರ್ಯಾಯಣಿ**"ಯು '**ಗಾರ್ಗ್ಯ**' ಎಂಬ ವಂಶೀಯ ನಾಮದಿಂದೇ ಕರೆಯಲ್ಪಟ್ಟನು.

ಈಗಲೂ ಯಾವುದಾದರೊಂದು ಪ್ರತಿಷ್ಠಿತ ವಂಶದ ಪುರುಷನು ಅಸಾಮಾನ್ಯಗುಣಗಳಿಂದ ಪ್ರಖ್ಯಾತನಾದರೆ ಮುಂದೆ ಅವನ ಸಂತತಿಯವರಾದ ಬೇರೆ ಬೇರೆ ಕಾಲದ ಕೆಲ ಜನರು ಆ ತಮ್ಮ ಮೂಲಪುರುಷನ ಹೆಸರಿನಿಂದೇ ಪ್ರಸಿದ್ಧರಾಗುತ್ತಿರುವರಲ್ಲವೇ? ಆದರೆ ಅರ್ವಾಚೀನರಾದ ಅವರ ಹೆಸರನ್ನು ಮುಂದುವರಿಸಿ ಅವರ ಸಂತತಿಯ ಮೂಲಪುರುಷನನ್ನೇ ಮೂಲೆಗೊತ್ತಲೆಣಿಸುವಾತನ ಹವಣಿಕೆಯು, ಷಣ್ಮುಖನನ್ನು ಬಣ್ಣಿಸುವ ಹುರುಪಿನಲ್ಲಿ ಪಂಚಮುಖನ ಪ್ರಸ್ತಾಪವನ್ನೇ ಮಾಜುವಾತನ ಮಾಟದಂತಿರುವುದು.

ಹಾಗೇ ಶಿವಸಿದ್ಧಾಂತಸ್ಥಾಪಕಸಿಂಹಾಸನಾಧಿಷ್ಠಿತರಾದ ಅರ್ವಾಚೀನಕಾಲದ ರೇವಣಸಿದ್ಧ ಮೊದಲಾದ ಶಿವಾಚಾರ್ಯರ ಸಂತತಿಗೆ ಮೂಲಪುರುಷರಾದ ರೇಣುಕಾದಿ ಪುರಾತನ ಮಹರ್ಷಿಗಳ ಅಸ್ತಿತ್ವವನ್ನು ಅಡಗಿಸಲು ಹಾತೊರೆವ ಕೆಲಸವೂ ಅವಹೇಳನಾಸ್ಪದವು!

ಶ್ರೀ ರೇಣುಕಾದಿಪುರಾತನಾಚಾರ್ಯವರ್ಯರಲ್ಲಿ ನಮ್ಮ ಪ್ರಕೃತಮನೀಷೆಗೆ ರೇಣುಕಭಗವತ್ಪಾದರ ಪ್ರಾಚೀನತೆಯ ಸಿದ್ಧಿಯೇ ಪರಮಧ್ಯೇಯವಾಗಿದೆ.

ಶ್ರೀ ವೀರಸಿಂಹಾಸನ ಸ್ಥಾಪನಾಚಾರ್ಯನು ರೇವಣಸಿದ್ಧನೆಂದೂ ಅವನಿಗೆ ರೇಣುಕನೆಂಬ ಪರ್ಯಾಯನಾಮವಿದೆಯೆಂದೂ ಒಂದು ವೇಳೆ ಹೇಳುವದಾದರೆ, ಇದರಿಂದ ಆ ರೇವಣಸಿದ್ಧನು 12 ನೆಯ ಶತಮಾನದ ಸ್ವಲ್ಪ ಮುಂಚಿದ್ದವನೇ ಎನ್ನುವದಕ್ಕೆ ಅವಕಾಶವು ಸಿಕ್ಕಿತೆಂದು ತಿಳಿಯಬಾರದು.

ಸೂರ್ಯವಂಶಕ್ಕೆ ವಸಿಷ್ಠನು ಆಚಾರ್ಯನು, ಅವನೇ ಋಗ್ವೇದದ 7 ನೆಯ ಮಂಡಲಪ್ರವರ್ತಕನೆಂದೊಪ್ಪಿದರೆ, ಆ ಮಹರ್ಷಿಯ ವರ್ಗದವರಲ್ಲಿ ಅನೇಕರು ವಸಿಷ್ಠರೆಂಬ ವಂಶೀಯನಾಮದಿಂದೇ ಪ್ರಸಿದ್ಧರಾದರೆಂಬುದಕ್ಕೆ ದಾಶರಥಿಯಕಾಲದ ವಸಿಷ್ಠನೇ ಸಾಕ್ಷಿಯು.

ವೇದಾಂತಸಾರವೀರಶೈವಚಿಂತಾಮಣಿಯ ಪೂರ್ವಭಾಗದಲ್ಲಿ—

ಶಂಕರಾಚಾರ್ಯಸನ್ಯಾಸಮುಯೋಗೀನ್ದ್ರಾಯ ಮಹೋಜ್ವಲಂ। ಚನ್ದ್ರಮೌಲೀಶ್ವರಂಲಿಙ್ಗಂ ದತ್ತವಾನಿತಿ ವಿಶ್ರುತಃ॥ ಶ್ರೀರೇಣುಕ ಗಣೇಶಾಖ್ಯಂ ರೇವಣಸಿದ್ಧದೇಶಿಕಂ। ವೀರಶೈವಮತಾಚಾರ್ಯಂ ವನ್ದೇಽಹಂ ತಂ ಜಗದ್ಗುರುಂ॥

ಎಂದಿರುವ ಈ ಎರಡು ಶ್ಲೋಕಗಳಲ್ಲಿ ರೇವಣಸಿದ್ಧನು ಶಂಕರಾಚಾರ್ಯನ ಸಮಕಾಲೀನನೆಂದೂ, ರೇಣುಕಮಹರ್ಷಿಯ ವಂಶೀಯ ನಾಮದಿಂದಲೂ ಪ್ರಸಿದ್ಧನಾಗಿದ್ದನೆಂದೂ ಸೂಚಿತವಾಗಿದೆ. ಇದರಿಂದ ರೇವಣಸಿದ್ಧನ ಅಸ್ತಿತ್ವವು 12 ನೆಯ ಶತಮಾನದ ಎಡಬಲದಲ್ಲಿದೆಯೆಂಬ ಬಡಬಡಿಕೆಯು ಬುಡಮೇಲಾಗುವುದು. ಹಾಗೂ ಶಂಕರಾಚಾರ್ಯನಿಗೆ ಚಂದ್ರಮೌಲೀಶ್ವರಲಿಂಗವನ್ನೂ ರತ್ನಗರ್ಭಗಣಪತಿಯನ್ನೂ ಕರುಣಿಸಿಕೊಟ್ಟ ರೇವಣಸಿದ್ಧನು ಶೈವಕುಲಗುರುಸಾರ್ವಭೌಮನೆಂಬುದೂ ಸಿದ್ಧಿಸುವುದು. ಇನ್ನು ವೀರಶೈವಾಚಾರ್ಯರು ನಾಲ್ಕು ವರ್ಣದವರಿಗೂ ನಾಲ್ಕು ಆಶ್ರಮದವರಿಗೂ ಮಾಡುವ ದೀಕ್ಷೆಯು, ಅಂತಹ ಮುಮುಕ್ಷುಜನರ ಮಂದ ತೀವ್ರ ತೀವ್ರತರಾದಿ ಶಕ್ತಿಪಾತದ ತಾರತಮ್ಯವನ್ನನುಲಕ್ಷಿಸಿರುವುದೆಂಬುದನ್ನರಿತವರಿಗೆ ರೇವಣಸಿದ್ಧನಿಂದ ಶಂಕರಾಚಾರ್ಯನು ಪಟ್ಟಸ್ಥಲದೀಕ್ಷೆಯನ್ನೇಕೆ ಪಡೆಯಲಿಲ್ಲವೆಂಬಾಶಂಕೆಯೇ ತಲೆದೋರದು.

ರೇಣುಕಮಹರ್ಷಿಯು ಭೂಮಿಯಲ್ಲಿ ಹದಿನಾಲ್ಕು ನೂರು ವರುಷಗಳವರೆಗೆ ಬಾಳಿದನಾದ್ದರಿಂದ ಅವನೇ ರೇವಣಸಿದ್ಧನೆಂದು ಕರೆಯಲ್ಪಡುವನೆಂಬುದಾಗಿ ಹೇಳುವವರಾದರೂ, ಆ ರೇವಣಸಿದ್ಧನು ಶಂಕರಾಚಾರ್ಯನಿಗಿಂತ ಎಷ್ಟೋ ವರುಷಗಳ ಹಿಂದೆಯಾದರೂ ಇದ್ದನೆಂದೇ ಪರ್ಯಾಯದಿಂದ ಒಡಂಬಡುತ್ತಿರುವರಲ್ಲವೇ?

ಅಗಸ್ತ್ಯನಕಾಲದ ಪುರಾತನ **ರೇಣುಕಮಹರ್ಷಿ**ಯ ಪ್ರಸ್ತಾಪವು ಸದ್ಯಃ ನಮ್ಮ ಬುದ್ಧಿಗೆ ನಿಲುಕುವುದೋ ಇಲ್ಲವೋ ಅದಂತಿರಲಿ; ಆದರೆ, ಶಂಕರಾಚಾರ್ಯನ ಸಮಕಾಲೀನನೂ ಸರ್ವತ್ರ ಅವ್ಯಾಹತವಾದ ಸಂಚಾರವುಳ್ಳವನೂ ಆದ ರೇವಣಸಿದ್ಧಯೋಗಿಯ ಚರಿತ್ರೆಯನ್ನಾದರೂ ಸರಿಯಾಗಿ ಬರೆಯಲು 11 ನೆಯ ಶತಮಾನದಿಂದೀಚೆಗೆ ಬೆಳಕಿಗೆ ಬಂದ ಕನ್ನಡ ಕಬ್ಬಿಗರಲ್ಲಿ ಯಾವನೊಬ್ಬನೂ ನಂಬಿಗೆಯ ಹೊಣೆಗಾರನಾಗಲಿಲ್ಲವೆಂಬುದನ್ನು ಹೇಳದಿರಲಾರೆವು. ಕರ್ಣಾಟಕವಿಗಳೂ ಅವರಿಂದ ಬರೆಯಲ್ಪಟ್ಟ ಕರ್ಣಾಟಕ ಗ್ರಂಥಗಳೂ ಸಾಮಾನ್ಯವಾದವುಗಳೆಂದು ನಮ್ಮ ಭಾವನೆಯಲ್ಲ! ೧೬ ನೆಯ ಶತಮಾನದ ಬೊಮ್ಮರಸನ ಕನ್ನಡ ರೇವಣಸಿದ್ಧಪುರಾಣವು ಈಶಾನಶಿವಗುರುವಿನ ಸಕ್ಕದನುಡಿಯ ಚೊಕ್ಕಪಡಿನೆಳಲೆಂದೇ ತಿಳಿಯಲ್ಪಟ್ಟರೂ ಆ ಈಶಾನಶಿವಗುರುವಾಗಲಿ ವಿಕ್ರಮಶಕ ೧೧೧೬ ರಲ್ಲಿ ರಚಿತವಾದ **ರೇಣುಕವಿಜಯ**ವೆಂಬ ಸಂಸ್ಕೃತ ಪ್ರಬಂಧಕಾರನಾದ ಸಿದ್ಧನಾಥ ಗುರುವಾಗಲಿ ಪುರಾತನ ಮಹರ್ಷಿಯಾದ ಕೇವಲ ರೇಣುಕನ ಚರಿತ್ರೆಯನ್ನೇ ಬರೆದಿರುವರೆಂದು ನಿರ್ಧರಿಸಲಳವಲ್ಲ; ಏಕೆಂದರೆ: ಅವರು ಬೇರೆ ಬೇರೆ ಕಾಲದಲ್ಲಿ ರೇಣುಕನ ಅಪರಾವತಾರರೆಂದು ಪ್ರಸಿದ್ಧರಾದ ರೇವಣಸಿದ್ಧರುಗಳ ಹಾಗೂ ಅವರ ಮೂಲಪುರುಷನಾದ ರೇಣುಕಮಹರ್ಷಿಯ ಚರಿತ್ರಭಾಗಗಳ ಪಾರಸ್ಪರಿಕ ಸಂಬಂಧವನ್ನು ತಳುಕುಹಾಕಿರುವಂತೆ ತೋರಿಬರುತ್ತದೆ: ಇದಕ್ಕೆ ಪುರಾತನ ರೇಣುಕನು ಕೃತಾದಿಯುಗಗಳಲ್ಲಿ ಮೈದೋರುವನೆಂಬ ಭಾವನೆಯೇ ಕಾರಣವಾಗಿರಬಹುದು. ಅದುಕಾರಣವೇ ರೇವಣಸಿದ್ಧ ಚರಿತ್ರಕಾರರಾದ ಸಂಸ್ಕೃತ ಕವಿಗಳು ಪುರಾತನ ರೇಣುಕನ ಚರಿತ್ರೆಯ ಕೆಲವು ಅಂಶವನ್ನು ಅಲ್ಲಲ್ಲಿ ಸ್ವಲ್ಪ ಪರಿಗ್ರಹಿಸಿಯೇ ಆಯಾ ಗ್ರಂಥಗಳನ್ನು ಪೂರ್ತಿಗೊಳಿಸಿರಬಹುದೆಂದು ನಮ್ಮ ವಿಚಾರತರಂಗವು!

ಶ್ರೀ ರೇಣುಕಮಹರ್ಷಿಯು ಉಪನಿಷತ್ಪ್ರವರ್ತಕನೆಂದೂ ಈಚೆಗೆ ತಿಳಿದುಬಂದಿದೆ. ಈಗ ಉಪಲಬ್ಧವಿರುವ ರೇವಣಸಿದ್ಧನ ಚರಿತ್ರಬೋಧಕಗಳಾದ ಯಾವ ಸಂಸ್ಕೃತ ಕನ್ನಡ ಗ್ರಂಥಗಳಲ್ಲಾಗಲಿ ರೇವಣಸಿದ್ಧನ ವಿಷಯವಾಗಿ ತಮತಮಗೆ ಗೋಚರವಿದ್ದುದನ್ನಷ್ಟೇ ಆಯಾ ದೇಶದ ಬೇರೆ ಬೇರೆ ಕವಿಗಳು ಭಿನ್ನಭಿನ್ನ ಭಾಷೆಗಳಿಂದ ಪ್ರತಿಪಾದಿಸಿದ್ದಾರೆ.

ಮಹಾರಾಷ್ಟ್ರದೇಶದಲ್ಲಿ ವಿಟಾ ತಾಲ್ಲೂಕಿಗೆ ಸೇರಿದ **ರೇಣಾವಿ** ಬಳಿಯಲ್ಲಿಯ ಶ್ರೀ ರೇವಣಸಿದ್ಧೇಶ್ವರ ಕ್ಷೇತ್ರದ ಬಗ್ಗೆ ಈಗ ಉಪಲಬ್ಧವಿರುವ ರೇವಣಸಿದ್ಧನ ಚರಿತ್ರಬೋಧಕಗಳಾದ ಯಾವ ಗ್ರಂಥದಲ್ಲಿಯೂ ನಿರ್ದೇಶವಿರುವುದಿಲ್ಲ. **ಸಿದ್ಧಾಂತಸಾರ**ವೆಂಬ ಒಂದು ಗ್ರಂಥವು ಈಗ ನಮ್ಮ ದೃಷ್ಟಿಗೋಚರವಾಗಿದೆ. ಇದು ಮರಾಠೀ ಓವೀಬದ್ಧವಾಗಿರುತ್ತದೆ. ಈ ಪ್ರಾಕೃತಗ್ರಂಥಕ್ಕೆ 'ಸಿದ್ಧಾಂತಸಾರ' ಎಂಬುದಾಗಿ ಆಗಮಾರ್ಥಪ್ರತಿಪಾದಕವಾದ ಒಂದು ಸ್ವತಂತ್ರವಾದ ಸಂಸ್ಕೃತ ಗ್ರಂಥವೇನಾದರೂ ಮೂಲಭೂತವಾಗಿರಬೇಕೆಂದು ಊಹಿಸಲವಕಾಶವಿದೆ: ಆದರೂ ಈ ಮರಾಠಿಗ್ರಂಥವು ರೇಣಾವಿಯೆಂಬ ಮೇಲೆ ಕಾಣಿಸಿದ ಕ್ಷೇತ್ರದ ಸ್ಥಳಪುರಾಣವಾಗಿ ಪರಿಣಮಿಸುವ ಅವಸರದಲ್ಲಿ ಅದರೊಳಗೆ ಅನೇಕ ವಿಪರ್ಯಾಸವಾಕ್ಯಗಳು ಆಧುನಿಕರಿಂದ ಸೇರಿಸಲ್ಪಟ್ಟಿರುವುವೆಂದು ಗೊತ್ತಾಗುವುದು.

ಇನ್ನು ಕೆಲವರು ಇಂದಿಗೆ ಸುಮಾರು ೧೩೦ ವರ್ಷಗಳ ಹಿಂದೆ (ಕ್ರಿ. ಶ. ೧೮೦೦ ರಲ್ಲಿ) ಬರೆಯಲ್ಪಟ್ಟ ಕೆಳದಿ ನೃಪವಿಜಯಯದೊಳಗಣ ೧ ನೆಯ ಮತ್ತು ೧೨ ನೆಯ ಆಶ್ವಾಸಗಳಲ್ಲಿ ಹೇಳಲ್ಪಟ್ಟಿರುವ ರೇವಣಸಿದ್ಧನ ಪ್ರಸ್ತಾಪವನ್ನೇ ಮುಂದುವರಿಸಿ, ರೇವಣಸಿದ್ಧನು ವಿದ್ಯಾರಣ್ಯನ ಕಾಲದವನೆಂದೂ ಹೇಳಲು ಹಿಂಜರಿಯುವುದಿಲ್ಲ. ಆದರೆ ಕೆಳದಿನೃಪವಿಜಯ ಗ್ರಂಥದಲ್ಲಿ ವಿಜಯನಗರದ ಇತಿಹಾಸವು ಜನರ ಹೇಳಿಕೆಯ ಮೇಲೆ ಕೈಯೂರಿ ಬರೆದುದಾಗಿದೆಯಲ್ಲದೆ ಅದಕ್ಕೆ ಸಂಬಂಧಿಸಿದ ವಿಷಯವು ಯಾವದಾದರೊಂದು ಮೂಲಗ್ರಂಥವನ್ನು ಆಧಾರವಾಗಿಟ್ಟುಕೊಂಡು ಒರೆಯಲ್ಪಟ್ಟ ಬಗ್ಗೆ ಉಲ್ಲೇಖವಿಲ್ಲ. ಆದ್ದರಿಂದ ಆ ಗ್ರಂಥದಲ್ಲಿ ವಿದ್ಯಾರಣ್ಯನಿಗೆ **ಚಂದ್ರಮೌಳೀಶ್ವರ** ಲಿಂಗವು ರೇವಣಸಿದ್ಧನಿಂದೇ ಸಾಕ್ಷಾತ್ತಾಗಿ ಪ್ರಾಪ್ತವಾಗಿರುವುದೆಂದು ಹೇಳಲ್ಪಡುವುದಾದರೋ ಅದಕ್ಕಿಂತ ಮುನ್ನವೇ ರಚಿತಗಳಾದ ಅನೇಕ ಸಂಸ್ಕೃತ ಗ್ರಂಥಗಳಲ್ಲಿ ರೇವಣಸಿದ್ಧನಿಂದ ಶಂಕರಾಚಾರ್ಯನಿಗೆ ಸಾಕ್ಷಾತ್ತಾಗಿ ಪ್ರಾಪ್ತವಾದ ಚಂದ್ರಮೌಳೀಶ್ವರಲಿಂಗವನ್ನು ಆ ಶಂಕರಾಚಾರ್ಯನ ಸಂಪ್ರದಾಯಕನಾದೋರ್ವ ಯತಿಯಿಂದ ವಿದ್ಯಾರಣ್ಯನಿಗೆ ಕೊಡಲ್ಪಟ್ಟಿರುವದೆಂಬ ವಾಕ್ಯಗಳಿಗೆ ವಿರುದ್ಧವಾದುದರಿಂದ ಕೆಳದಿನೃಪವಿಜಯದಲ್ಲಿಯ ಅಸಮಂಜಸವಾದ ಆ ವಾಕ್ಯಗಳು ರೇವಣಸಿದ್ಧನು ವಿದ್ಯಾರಣ್ಯನ ಕಾಲದವನೆಂದು ಸಿದ್ಧಗೊಳಿಸಲು ಸಾಧನಗಳಾಗಲಾರವು. ಈಗಲೂ **ಶೃಂಗಗಿರಿ (ಶೃಂಗೇರಿ) ಪೀಠ**ದಲ್ಲಿ ವಿರಾಜಮಾನರಾದ ಯತಿಗಳಿಂದ ಸಮರ್ಚಿಸಲ್ಪಡುವ ಚಂದ್ರಮೌಳೀಶ್ವರಲಿಂಗವು ಆ ಪೀಠದ ಸಂಸ್ಥಾಪಕರಾದ ಆದ್ಯ ಶಂಕರಾಚಾರ್ಯರಿಗೇ ಸಾಕ್ಷಾದ್ರೇವಣಸಿದ್ಧೇಶ್ವರನಿಂದ ಪ್ರಾಪ್ತವಾಗಿರುವುದೆಂಬ ವಿಷಯದಲ್ಲಿ ವೇದಾಂತಸಾರವೀರಶೈವಚಿಂತಾಮಣಿಕಾರನ ಅಭಿಮತವನ್ನು ಈ ಮೇಲೆ ತೋರಿಸಿದ್ದೇವೆ. ಹಾಗೂ ಕ್ರಿ.ಶ. ೧೭೦೯ ರಲ್ಲಿ ಬರೆಯಲ್ಪಟ್ಟ **ಶಿವತತ್ವರತ್ನಾಕರ**ದ ೪ನೆಯ ಕಲ್ಲೋಲದ ೧೨ನೆಯ ತರಂಗದಲ್ಲಿ—

ತತಃ ಸ ರೇವಣಾಸಿದ್ಧಸಂಪ್ರದಾಯ ಪ್ರವರ್ತಿನಾಮ್। ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಮ್॥ ಸಂನ್ಯಾಸಿನಮುಪಾಶ್ರಿತ್ಯ ವಿನಯಾವನತೋಽಧಿಕಮ್॥

ಶಿವಧರ್ಮನೆಂಬ ಗೃಹಸ್ಥನು ಶ್ರೀ ರೇವಣಸಿದ್ಧನ ಸಂಪ್ರದಾಯಕನಾದ ಆದ್ಯ ಶಂಕರಾಚಾರ್ಯನ ಪರಂಪರಾಗತನಾದೋರ್ವ ಯತಿಯನ್ನಾಶ್ರಯಿಸಿದನೆಂದಿರುವ ವಾಕ್ಯದಿಂದ ಶಂಕರಾಚಾರ್ಯನು ರೇವಣಸಿದ್ಧನ ಅನುಯಾಯಿಯೆಂದು ಸಿದ್ಧವಾಗುವುದು. ಹಾಗೂ ಶೃಂಗೇರಿ ಪೀಠಾಧಿಷ್ಠಿತರಿಂದೇ ಬರೆಯಿಸಲ್ಪಟ್ಟ **ಗುರುವಂಶಕಾವ್ಯ**ದ ಮೂರನೆಯ ಸರ್ಗದಲ್ಲಿ—

ಶ್ರೀ ಚಂದ್ರಮೌಲೀಶ್ವರಲಿಂಗಮುಸ್ಮೈ
ಸದ್ರತ್ನಗರ್ಭಂಗಣನಾಯಕಂಚ।
ಸವಿಶ್ವರೂಪಾಯ ಸುಸಿದ್ಧದತ್ತಂ
ದತ್ವಾನ್ಯಗಾದೀಶ್ವರಮರ್ಚಯೇತಿ ॥೩೩॥

ಎಂದಿರುವ ಶ್ಲೋಕದಲ್ಲಿಯ '**ಸುಸಿದ್ಧದತ್ತಂ**' ಎಂಬ ಪದಕ್ಕೆ **ಸುಸಿದ್ಧೇನ ರೇವಣಾಸಿದ್ಧ ಮಹಾಯೋಗಿನಾ।** ಎಂದು ಮೂಲಕಾರನಿಂದೇ ವ್ಯಾಖ್ಯಾನವು ಬರೆಯಲ್ಪಟ್ಟಿರುವುದರಿಂದ, ಶಂಕರಾಚಾರ್ಯನಿಗೆ ಚಂದ್ರಮೌಲೀಶ್ವರಲಿಂಗವನ್ನಿತ್ತು ಅನುಗ್ರಹಿಸಿದ ರೇವಣಸಿದ್ಧೇಶ್ವರನು ಶಂಕರಾಚಾರ್ಯನಿಗಿಂತ ಮುನ್ನವೇ ಜಗತ್ತಿನಲ್ಲಿ ಸುಪ್ರಸಿದ್ಧನಾಗಿ ಶೋಭಿಸುತ್ತಿದ್ದನೆಂಬುದು ನಿರ್ವಿವಾದಸಿದ್ಧವಾಗುವುದು.

ಈ ವಿಷಯವಾಗಿ ನಾವು ಬರೆಯಬೇಕಾದುದು ಇನ್ನೂ ಹೆಚ್ಚಿನ ವಿಚಾರವನ್ನೊಳಕೊಂಡಿರುವುದಾದರೂ ಸದ್ಯಃ ನಾವಿಷ್ಟೇ ಸೂಚಿಸುತ್ತೇವೆ. ಏನಂದರೆ; ಇತಿಹಾಸ ಸಂಶೋಧಕರು ಈ ವಿಷಯ ವಿಚಾರದಲ್ಲಿ ವಿಶೇಷ ಲಕ್ಷ್ಯವನ್ನಿರಿಸಿ ಕೈಲಾದಮಟ್ಟಿಗೆ ಪರಶಿವಾಪರಾವತಾರಿಗಳ ಅಸ್ತಿತ್ವಕಾಲನಿರ್ಣಯ ಮೊದಲಾದುದನ್ನು ಸರಿಯಾಗಿ ಕಂಡುಹಿಡಿಯತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಧರ್ಮಸಭೆ.

ತಾ॥ ೩೧-೮-೩೦ ನೆಯ ರವಿವಾರ ದಿವಸ ಮುಂಜಾನೆ ೭ ಘಂಟೆಯಿಂದ ನಾಗೇಶ, ವೃಷಭಲಿಂಗ ರೂಡಗಿಯವರ ಅಧ್ಯಕ್ಷತೆಯಲ್ಲಿ ಹಿರೇಮಾಗಿಗ್ರಾಮದ ವೀರಶೈವಮಂಡಲಿಯವರು ಸಭೆ ಸೇರಿ ಶ್ರೀಮದ್ರೇಣುಕಾಚಾರ್ಯ ಮಹಾಭಗವತ್ಪಾದರು ಮಾಡಿದ ಮಹತ್ವಗಳನ್ನು ಕುರಿತು ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಪ್ರಚಾರಮಾಡಲ್ಪಟ್ಟ ರೇಣುಕವಿಜಯದ ಯಾವತ್ತು ವಿಚಾರವನ್ನು ಇಂದಿನ ಮಿಾಟಿಂಗಿನಲ್ಲಿ ಅನ್ನದಾನಯ್ಯ, ರೇವಣಸಿದ್ಧಯ್ಯ ಹೆಡ್‌ಮಾಸ್ಟರ ಚಿಕ್ಕಮಾಗಿ ಇವರು ಯಾವತ್ತೂ ಜನರಿಗೆ ತಿಳಿಸಿದ್ದರಲ್ಲಿ ಪ್ರತಿಯೊಬ್ಬರು ಭಗವತ್ಪಾದರ ಅಗಾಧವಾದ ಮಹಿಮೆಗಳನ್ನು ಕೇಳಿ ಸಂತುಷ್ಟರಾದರು. ಈ ಭಾಗದಲ್ಲಿ ಧರ್ಮಜಾಗ್ರತೆ ಇಲ್ಲದಾಗಿರುತ್ತದೆ. ಜಗದ್ಗುರು ಪೀಠಾಧಿಪತಿಗಳು ಈ ಬಗ್ಗೆ ಯೋಗ್ಯ ವ್ಯವಸ್ಥೆಯನ್ನು ಕೈಕೊಳ್ಳುವರೆಂದು ನಂಬುತ್ತೇವೆ. ತಾ॥ ೧೮-೮-೩೦ ನೇ ಸೋಮವಾರ ಪ್ರಭಾಪತ್ರಿಕೆಯಲ್ಲಿ ಶ್ರೀ ಜಗದ್ಗುರು ಉಜ್ಜಯಿನೀ ಮಹಾ ಸಂಸ್ಥಾನದಿಂದ "ಕೆಲವು ಪುಂಡ ಜನರು ಗುರುಪೀಠಗಳ ಹುಕುಂ ಇಲ್ಲದೆ ಸಂಸ್ಥಾನದ ಇಲಾಖಾದಾರರೆಂದು ಬರುತ್ತಾರೆ. ಅಂಥವರನ್ನು ನಂಬತಕ್ಕದ್ದಲ್ಲವೆಂದೂ ಅಂಥವರ ವಿಷಯದಲ್ಲಿ ದಿಗ್ಗಾವಿಗ್ರಾಮದ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷ ರುದ್ರಮುನಿದೇವರಿಗೆ ಹುಕುಂ ಬಂದೋಬಸ್ತು ಮಾಡಲಿಕ್ಕೆ ಕೊಟ್ಟಿರುತ್ತದೆ" ಎಂದೂ ಪ್ರಸಿದ್ಧವಾಗಿರುತ್ತದೆ. ಎಲ್ಲಾ ಭಾಗಗಳಲ್ಲಿ ಆಡ್ಡಾಡುವ ಪುಂಡುಗಾರರ ಹಾವಳಿಗೆ ಅವರೊಬ್ಬರಿಂದ ಆಗುವುದಿಲ್ಲೆಂದು ಕಂಡುಬರುವದರಿಂದ ಎಲ್ಲ ಭಾಗಗಳಲ್ಲಿಯ ಗುರುಸ್ಥಲದವರಿಗೆ ಪುಂಡರ ಬಂದೋಬಸ್ತಿಗಾಗಿ ಪೀಠಾಧಿಪತಿಗಳು ಯೋಗ್ಯ ಸಲಹೆ ಕೊಡುವರೆಂದು ಆಶಿಸುತ್ತೇವೆ. ಉಜ್ಜಯಿನೀ ಸಂಸ್ಥಾನದ ವತಿಯಿಂದ ಹೋದ ವರುಷ ಹಾಗೂ ಈ ವರ್ಷ ವಿಜಾಪುರ ಜಿಲ್ಲೆಯಲ್ಲಿ ಅನೇಕರು ಸಂಚಾರ ಮಾಡಿಕೊಂಡುಹೋದರು. ಮೂಲತಃ ಪೀಠಾಚಾರ್ಯರನ್ನು ನೋಡದವರು ಯಾರು ನಿಜವಾದವರೆಂದು ನಂಬಬೇಕು? ಈ ಬಗ್ಗೆ ಯೋಗ್ಯ ಏರ್ಪಾಡಾಗತಕ್ಕದ್ದಾಗಿ ಬೇಡಿಕೊಳ್ಳುತ್ತೇವೆ. ಇದೇ ಹುನಗುಂದ ತಾಲೂಕ ಪೈಕಿ ದಾಸಬಾಳಗ್ರಾಮದಲ್ಲೇ ಪೂಜಾರಿ ಮನೆತನದವರು ಗುರುಪಟ್ಟಾಧಿಕಾರ ಮಾಡಿಕೊಂಡಿರುವ ವಿಚಾರವು ಇದೇ ವಾರ ಪ್ರಭಾಪತ್ರದಲ್ಲಿ ಸಂಗನಗೌಡ, ನಾಡಗೌಡರ ಕರಡಿ ಇವರಿಂದ ಪ್ರಸಿದ್ಧವಾಗಿರುತ್ತದೆ. ಶ್ರೀ॥ ನಾಡಗೌಡರು ಇದನ್ನು ತಪಸೀಲು ತಿಳುಹಿಸದೆ ಎಂಟು ಪ್ರಶ್ನೆಗಳಲ್ಲಿ ಅವರು ಕೇಳಿರುವ ವಿಷಯಗಳು ಗುರುಸ್ಥಲದವರ ವಿರುದ್ಧ ಸದರಿ ಪಟ್ಟಾಧಿಕಾರ ನಡೆದಿರುವ ಕಾರಣ ಈ ವಿಚಾರವನ್ನು ಜಗದ್ಗುರು ಪಂಚಸಿಂಹಾಸನದವರು ಗಮನಕ್ಕೆ ತರಬೇಕೆಂದು ಬೇಡಿಕೆ ಇರುತ್ತದೆ. ಈ ಪ್ರಕಾರ ಮಿಾಟಿಂಗು ನಡೆದ ಸಮಯದಲ್ಲಿ ಮೇಲ್ಕಂಡ ವಿಚಾರಗಳು ಮತ್ತು ಅಷ್ಟಾವರಣ, ಭಕ್ತಿ, ಗುರು, ಲಿಂಗ, ಜಂಗಮತತ್ವಗಳನ್ನು ಕುರಿತು ಪ್ರವಚನಗಳು ನಡೆದು ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಹಿರೇಮಾಗಿ ವೀರಶೈವಮಂಡಲಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ವೀರಶೈವಮಹನೀಯರಲ್ಲಿ ವಿನಂತಿ.

ನನ್ನ ನೋಡುವಿಕೆಯಲ್ಲಿ ಎಷ್ಟೋ ಹಳ್ಳಿಹಳ್ಳಿಗಳಲ್ಲಿಯೂ ದೊಡ್ಡ ದೊಡ್ಡ ಗ್ರಾಮಗಳಲ್ಲಿಯೂ ವೀರಶೈವಮತದ ಉತ್ಪತ್ತಿಯು ಹ್ಯಾಗೆ ಆಯಿತು? ಯಾರಿಂದ ಆಯಿತು? ಎನ್ನುವ ವಿಷಯವೇ ಗೊತ್ತಿಲ್ಲದಾಗಿದೆ. ಇದನ್ನು ಜಗದ್ಗುರುಗಳ ಫೋಟೋಗಳ ಮೂಲಕ ತಿಳುಹಿಸಿ ಹೇಳುವುದೊಂದು ಮುಖಂಡರ ಹಾಗೂ ಗುರುಮನೆತನದವರ ಕರ್ತವ್ಯವಾಗಿದೆ. ಈ ಕೊರತೆಯನ್ನು ಹೋಗಲಾಡಿಸಲೋಸುಗ ನಮ್ಮ ಊರಲ್ಲಿರುವ ನಮ್ಮ ಗುರುಗಳಾದ ಶಿವಮೂರ್ತಿಸ್ವಾಮಿ ಗುರುವಿನಮಠ ಇವರು ಶ್ರಾವಣಮಾಸದ ಕಡೆಯ ಸೋಮವಾರದಿವಸ ತಮ್ಮ ಮಠದಲ್ಲಿ ಭಕ್ತಾದಿಗಳನ್ನೆಲ್ಲಾ ಕರೆಯಿಸಿ ನಮ್ಮ ಮತದ ಉತ್ಪತ್ತಿಯನ್ನು ತಿಳಿಸಿಹೇಳಿ ಪ್ರತಿಯೊಬ್ಬರಿಗೊಂದು ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವದ ಚಿತ್ರವನ್ನು ಕೊಟ್ಟು, ಭಕ್ತಿಪೂರ್ವಕವಾಗಿ ಪೂಜಿಸಿರೆಂದು ಹೇಳಿದರು. ಯಾವದಾದರೊಂದು ವಿಷಯವನ್ನು ತಿಳುಹಿಸಬೇಕಾದರೆ ಚಿತ್ರಗಳ ಸಮೇತವಾಗಿ ತಿಳುಹಿಸಿದರೆ ಮನಸ್ಸಿನಮೇಲೆ ಪರಿಣಾಮವಾಗುವದೆನ್ನುವದರಲ್ಲಿ ಸಂಶಯವಿಲ್ಲ. ಊರೂರಿಗೆ ಹಿರಿಯಮಠದವರೂ, ಗುರುಮನೆತನದವರೂ, ಜ್ಞಾನವಂತ ಭಕ್ತರೂ, ಇದ್ದೇ ಇರುತ್ತಾರೆ. ಅವರೆಲ್ಲರೂ ನಮ್ಮ ಗುರುಗಳಾದ ಶಿವಮೂರ್ತಿಸ್ವಾಮಿ ಗುರುವಿನಮಠ ಇವರಂತೆ ಪಂಚಾಚಾರ್ಯರ ಫೋಟೋ ಪ್ರಸಾರಮಾಡುವ ಕಾರ್ಯವನ್ನು ಕೈಕೊಂಡು ಜನರಲ್ಲಿರುವ ಅಜ್ಞಾನವನ್ನು ದೂರಮಾಡುವರೆಂದು ನಂಬಿದ್ದೇನೆ.

ಸಂಗನಗೌಡ ನಾಡಗೌಡರ, ಕರಡಿ.

ಇದೀಗ ದೇಶಸೇವೆ.

ಜಗತ್ತಿನಲ್ಲಿ ಮನುಷ್ಯನಾಗಿ ಜನ್ಮವೆತ್ತಿದ್ದಕ್ಕೆ ಹದ್ದು ನರಿಗಳಂತೆ ಜೀವಿಸಿ ಪ್ರಾಣಬಿಡುವುದರ ಬದಲು ಸ್ವಾರ್ಥತ್ಯಾಗಿಗಳಾಗಿ ದೇಶೋಪಕರವಾದ ಕಾರ್ಯಗಳಲ್ಲಿ ತೊಡಗಿ ಯಶೋವಂತರಾಗತಕ್ಕದ್ದು ಈಗಿನ ಪ್ರತಿಯೊಬ್ಬ ಭಾರತೀಯನ ಪವಿತ್ರ ಕರ್ತವ್ಯವಾಗಿದೆ. ಇದರಂತೆ ಅನೇಕ ದೇಶಾಭಿಮಾನಿಗಳನ್ನು ನಾವು ಅನಂತವಾಗಿ ಕೇಳಿರುವುದಲ್ಲದೆ, ನೋಡಿಯೂ ಇದ್ದೇವೆ. ಇವರಲ್ಲೊಬ್ಬರಾದ ಯಳಗೋಡು ಸಾಹುಕಾರ್ ದುಮ್ಮಿ ತಿಪ್ಪೇರುದ್ರಪ್ಪನವರ ಸ್ವದೇಶಾಭಿಮಾನವು ವರ್ಣನಾತೀತವಾಗಿರುತ್ತದೆ. ಮೊನ್ನೆ ಅಂದರೆ ತಾ॥ 31-8-30 ನೇ ಭಾನುವಾರ ಚಿತ್ರದುರ್ಗದ ತಾಲ್ಲೂಕು ಯಳಗೋಡುಗ್ರಾಮದಲ್ಲಿ "ಸ್ವರಾಜ್ಯಸ್ವಾತಂತ್ರ್ಯ"ದ ವಿಷಯವಾಗಿ ಸಾಹುಕಾರ್ ತಿಪ್ಪೇರುದ್ರಪ್ಪನವರ ಅಧ್ಯಕ್ಷತೆಯಲ್ಲೂ ಸಾಟಿಪೊಂಪಣ್ಣನವರ ಉಪಾಧ್ಯಕ್ಷತೆಯಲ್ಲೂ ಅನೇಕ ಪುರಪ್ರಮುಖರಿಂದಲೂ, ಪ್ರೇಕ್ಷಕರಿಂದಲೂ ಸಭೆಯು ನಡೆದು ಸ್ವದೇಶಭಕ್ತರಾದ ಕೆ. ಎಂ. ರಾಜಶೇಖರಯ್ಯನವರಿಂದ ಭಾವಗರ್ಭಿತ ಮತ್ತು ವೀರಾವೇಶಪೂರಿತವಾದ ಭಾಷಣವು ನಡೆದದ್ದಲ್ಲದೆ, ಸ್ಕೂಲ್ ಹೆಡ್ಮಾಸ್ಟರ್ ಚಂದ್ರಶೇಖರಯ್ಯನವರಿಂದಲೂ ಭಾಷಣವು ನಡೆಯಿಸಲ್ಪಟ್ಟು ಕೆಳಗೆ ಕಂಡ ನಿರ್ಣಯಗಳಾಗಿ ಭಾರತಮಾತೆಯ ಜಯಜಯಕಾರದೊಂದಿಗೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಪಾಸಾದ ನಿರ್ಣಯಗಳು.

1. ಯಳಗೋಡು ಗ್ರಾಮದಲ್ಲಿ "ತರುಣಸಂಘ" "ಖಾದೀವಸ್ತ್ರಾಲಯ" ವನ್ನು ಸ್ಥಾಪಿಸಬೇಕೆಂದೂ, ಮುಂದಿನ ಭಾನುವಾರ ಸ್ವರಾಜ್ಯಬಾವುಟವನ್ನು ಏರಿಸಬೇಕೆಂದೂ ಸರ್ವಾನುಮತದಿಂದ ನಿರ್ಣಯಿಸಲ್ಪಟ್ಟಿತು.

2. ಈ ಗ್ರಾಮದ ಆದಿಕರ್ಣಾಟಕರು, ಆದಿದ್ರಾವಿಡರು ಇನ್ನುಮುಂದೆ ಮದ್ಯಪಾನ ಮಾಡಕೂಡದೆಂದು ಅಧ್ಯಕ್ಷರಿಂದ ತಂದ ಠರಾವು ಸರ್ವಾನುಮತದಿಂದ ಪಾಸಾಗಿ ಸದರಿ ದ್ವಿವರ್ಗದವರಿಂದ ಪ್ರತಿಜ್ಞೆ ಮಾಡಲ್ಪಟ್ಟಿತು.

ಮಹಾಶಯರೇ! ಇವರಂತೆಯೇ ಎಲ್ಲಾ ಗ್ರಾಮದವರು ಸ್ವದೇಶಾಭಿಮಾನಿಗಳಾಗಿ ಯಶೋವಂತರಾಗಬೇಕೆಂದು ಬೇಡುತ್ತೇನೆ.

ಕೆ. ಎಂ. ರಾಜಶೇಖರಯ್ಯ, ಯಳಗೋಡು.

ಗರ್ಭಾಷ್ಟಮ ದೀಕ್ಷಾಸಂಸ್ಕಾರ. ಗುರುಮಹಿಮೆ.

ಧಾರವಾಡ ಜಿಲ್ಲಾ ರಾಣೀಬೆನ್ನೂರು ತಾಲೂಕು ಮುದೇನೂರು ಬೃಹನ್ಮಠಾಧ್ಯಕ್ಷ ಶ್ರೀ ಗುರುಮಾಗೀಶ್ವರ ಶಿವಾಚಾರ್ಯರ ಮಠದಲ್ಲಿ ಶ್ರಾವಣ ಶು॥ ೬ ಶುಭಮುಹೂರ್ತದಲ್ಲಿ ಬಾಣಾವರದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಪ್ರೆಸಿಡೆಂಟರಾದ ಕೊಂಚಿ ಮಠದ ವೇ॥ ಬಸವಾರಾಧ್ಯರ ಧರ್ಮಪತ್ನಿ ಹೈಮಾವತೀದೇವಿಯರ ಗರ್ಭಕ್ಕೆ ಅಷ್ಟಮಮಾಸದಲ್ಲಿ ವೇ॥ ಮುದೇನೂರು ಮಠದ ಹೊಳೆಪ್ಪಶಿಖೇಂದ್ರ ಶಾಸ್ತ್ರಿಗಳವರ ಪೌರೋಹಿತ್ಯದಿಂದ ಗರ್ಭಲಿಂಗಧಾರಣವು ವಿಧ್ಯುಕ್ತವಾಗಿ ನೆರವೇರಿತು. ಈ ಶುಭಕಾರ್ಯಕ್ಕೆ ಬಂಧುಬಾಂಧವಾದಿಗಳೂ ಸುಮಂಗಲಿಯರೂ ಸೇರಿದ್ದರು. ಸೌ॥ ದೇವಿಯವರಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪಾಬಲದಿಂದ ಗುರುಭಕ್ತಿನಿಷ್ಠನಾದ ಶಿಶುವು ಜನಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಧ್ವನಿಯೊಡನೆ ಹರಸಿ ಸಮಾಪ್ತಿಗೊಳಿಸಿದರು. ಅಲ್ಲದೆ ತಾ॥ 13-8-1930 ನೇ ದಿವಸ ಸದರಿ ವೇ॥ ಬಸವಾರಾಧ್ಯರ ಸಹೋದರ ಚನ್ನಪ್ಪಯ್ಯನವರು ಶ್ರೀ ಜಗದ್ಗುರು ಭಜನಾಸಂಘದವರನ್ನು ಬರಮಾಡಿಕೊಂಡು ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಪೂಜಿಸಿ ಅಷ್ಟೋತ್ತರ ಶತನಾಮಪಾರಾಯಣವನ್ನು ಮಾಡಲು ತಮಗೆ ಒದಗಿದ್ದ ಕಾಯಿಲೆಯು ವೈದ್ಯೋಪಚಾರವಿಲ್ಲದೆ ಶ್ರೀ ಗುರು ರೇಣುಕಾಚಾರ್ಯರ ಪ್ರಾರ್ಥನೆಯಿಂದ ಗುಣವಾಯಿತು. ಜಗದಾಚಾರ್ಯರು ಇವರಿಗೆ ಮಂಗಲವನ್ನೀಯಲೆಂದು ಹಾರೈಸುವ.

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಚೀಫ್ ಸೆಕ್ರೆಟರಿ, ವಿರೂಪಾಕ್ಷಪ್ಪ ಸಜ್ಜನಶೆಟ್ಟಿ.

ಪಂಚಾಚಾರ್ಯ ಪ್ರಭಾ

೧೯೩೦ ನೇ ಸೆಪ್ಟಂಬರ್ ತಾ|| ೮ ನೆಯ ಸೋಮವಾರ

ಶಾಂತಿಸಂಧಾನವು ಮುರಿಯಿತು.

ಪ್ರಚಂಡವಾದ ಸತ್ಯಾಗ್ರಹ ಸಮರದಿಂದ ದೇಶೀಯರಿಗೂ ಸರಕಾರದವರಿಗೂ ಘರ್ಷಣೆಯುಂಟಾಗಿ ಈಗ ಭರತಖಂಡದಲ್ಲಿ ಪ್ರಾಪ್ತವಾಗಿರುವ ದುಃಸ್ಥಿತಿಯನ್ನು ಹೇಗಾದರೂ ಹೋಗಲಾಡಿಸಬೇಕೆಂದು ಮಿತವಾದಿಪಕ್ಷದ ನಾಯಕರಾದ ಸಪ್ರೂ ಮತ್ತು ಜಯಕರರವರು ಮಾಡಿದ ಶಾಂತಿಸಂಧಾನಪ್ರಯತ್ನವು ಕೊನೆಗೆ ನಿಷ್ಫಲವಾಯಿತು. ಇದಕ್ಕೆ ಕಾರಣವನ್ನು ಹಲವರು ನಾನಾ ಬಗೆಯಾಗಿ ಊಹಿಸಬಹುದು. ಆದರೆ ಈಗ ತಾನೇ ಹೊರಪಟ್ಟಿರುವ ಶಾಂತಿಸಂಧಾನದ ವಿಷಯವಾಗಿ ನಡೆದ ವಿದ್ಯಮಾನಗಳನ್ನೂ ದೇಶನಾಯಕರಿಗೂ ಮತ್ತು ವೈಸ್ರಾಯರಿಗೂ ನಡೆದ ಪತ್ರವ್ಯವಹಾರಗಳನ್ನೂ ಈ ಕೆಳಗೆ ಸಮಗ್ರವಾಗಿ ಕೊಟ್ಟಿದ್ದೇವೆ. ಇದನ್ನು ನೋಡಿದರೆ ಸಂಧಿಪ್ರಸ್ತಾಪವು ತಟ್ಟನೆ ನಿಂತುಹೋದುದರ ನಿಜವಾದ ಕಾರಣವು ಒಡೆದುಕಾಣುವದು. ವೈಸರಾಯರು ಹೇಳಿದ್ದನ್ನೇ ಹೇಳುತ್ತ ಕಣ್ಣೊರಸುವ ಪ್ರಯತ್ನವನ್ನು ಮಾಡಿರುವರು. ಅವರ ಹೇಳಿಕೆಯಲ್ಲಿ ನೂತನವಾದ ಭರವಸೆಯೇನೂ ಇಲ್ಲ. ಅಧಿಕಾರದರ್ಪದ ವಾಣಿಯನ್ನು ಅವರು ಬಿಟ್ಟಿಲ್ಲ. ಹೀಗಿರುವಲ್ಲಿ ಸ್ವಾತಂತ್ರ್ಯಕ್ಕೋಸುಗ ತಮ್ಮ ಸರ್ವಸ್ವವನ್ನು ತ್ಯಾಗಮಾಡಿ, ಇಡೀ ದೇಶವನ್ನೇ ಎಚ್ಚರಿಸಿ ಬ್ರಿಟಿಷರನ್ನು ಬಾಯಿಬಾಯಿ ಬಿಡುವಂತೆ ಮಾಡಿರುವ ಗಾಂಧಿಯವರು ತಮ್ಮ ಮರ್ಮವನ್ನು ಜಗತ್ತಿನ ಮುಂದಿಟ್ಟಿರುವರು. ಸ್ವಾತಂತ್ರ್ಯದ ತಿರುಳನ್ನು ಇವರು ಬಯಸುತ್ತಿರುವರು. ಆದರೆ ವೈಸರಾಯರಾದರೋ, ಈಗ ಯಾವ ಭರವಸೆಯನ್ನೂ ಕೊಡಲಾಗುವದಿಲ್ಲ. [illegible] ಗೋಷ್ಠಿಗೆ ನಡೆಯಿರಿ; ಅಲ್ಲಿಯೇ ಎಲ್ಲಾ ವಿಷ[illegible]ಗಳನ್ನು ಚರ್ಚಿಸಿರಿ; ಸದ್ಯಃ ಶಾಸನಭಂಗಕಾರ್ಯವನ್ನು ನಿಲ್ಲಿಸಿರಿ; ಎಂದು ಹೇಳುತ್ತಿರುವರು. ಬ್ರಿಟಿಷರ ಭೇದತಂತ್ರವನ್ನು ಮೊದಲೇ ಅರಿತಿದ್ದ ಮಹಾತ್ಮರು ಆಳರಸರ ಶಾಂತಿಪ್ರಿಯತೆಯ ಹೂರಣವನ್ನು ಹೊರಗೆ ಹಾಕಿ, ಸೆರೆಮನೆಯಿಂದಲೇ ಸಾಂಚಜನ್ಯವನ್ನು ಊದಿಬಿಟ್ಟಿರುವರು. ತರುಣವೀರಾಗ್ರೇಸರನಾದ ಜವಾಹರಲಾಲರಾದರೋ ಸದ್ಯಃಸ್ಥಿತಿಯಲ್ಲಿ ಸತ್ಯಾಗ್ರಹಯುದ್ಧವೇ ತಮಗೆ ಪ್ರಿಯವಾದುದೆಂದು ಶಾಂತಿಸೇನಾಪತಿಗೆ ಬರೆದಿರುವರು. ಬ್ರಿಟಿಷರು ತಮ್ಮ ಪ್ರತಿಷ್ಠೆಯನ್ನೇ ದೊಡ್ಡದು ಮಾಡಿಕೊಂಡು ಶಾಂತಿಸ್ಥಾಪನೆಗಾಗಿ ಒದಗಿದ್ದ ಒಂದು ಅಪೂರ್ವ ಸಂದರ್ಭವನ್ನು ಕಳೆದುಕೊಂಡರು. ಭರತಖಂಡದಲ್ಲಿ ಶಾಂತಿಯುಂಟಾಗದಿದ್ದರೆ ಪ್ರಪಂಚದಲ್ಲಿ ಶಾಂತಿಯುಂಟಾಗಲಾರದು. ಭಾರತೀಯರ ಈ ಬಹಿಷ್ಕಾರಚಳವಳಿಯಿಂದ ಐರೋಪ್ಯರ ವ್ಯಾಪಾರವೇ ಹಾಳಾಗುತ್ತ ನಡೆದಿದೆ. ಇಂಗ್ಲೆಂಡಿನಲ್ಲಿ ನಿರುದ್ಯೋಗವು ಹೆಚ್ಚಿ ಇಂಗ್ಲಿಷ್ ಸರಕಾರವು ತತ್ತರಗೊಳ್ಳುತ್ತಿದೆ. ಈ ದ್ವಂದ್ವಯುದ್ಧದಿಂದ ಪ್ರಜೆಗಳಿಗೂ ಸರಕಾರಕ್ಕೂ ನಾನಾ ರೀತಿಯಿಂದ ಅಪಾರವಾದ ಹಾನಿಯುಂಟಾಗಹೊಡಗಿದೆ. ಈ ಕೋಲಾಹಲವನ್ನು ಶ್ರೀ ಪರಮೇಶ್ವರನೇ ಕಡಿಮೆಮಾಡಬೇಕಲ್ಲದೆ ಬೇರೊಬ್ಬರಿಂದ ಎಂದಿಗೂ ಸಾಧ್ಯವಿಲ್ಲದಾಗಿರುವದರಿಂದ ಸರ್ವರೂ ಆ ಜಗನ್ನಿಯಾಮಕನನ್ನೇ ಮರೆಹೊಗಬೇಕಾಗಿದೆ.

ಶಾಂತಿಸಂಧಾನದ ಸಮಗ್ರವೃತ್ತಾಂತ.

ಪುಣೆ ಸೆಪ್ಟಂಬರ್ 5.

ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಮಿ|| ಎಂ. ಆರ್. ಜಯಕರ್‌ರವರು ಈ ದಿನ ಮಹಾತ್ಮಾ ಗಾಂಧಿಯವರೊಡನೆ ಒಂದು ಘಂಟೆಯಕಾಲ ಚರ್ಚಿಸಿದನಂತರ, ಅಸೋಸಿಯೇಟೆಡ್ ಪ್ರೆಸ್ಸಿಗೆ ಈ ಕೆಳಗೆ ಕಂಡಂತೆ ಹೇಳಿದರು.

"ನಾವು ಕೈಕೊಂಡ ಶಾಂತಿಸಂಧಾನದ ಪ್ರಯತ್ನಗಳು ನಿಷ್ಫಲವಾದುವೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಇದುವರೆಗೆ ನಡೆದ ವಿದ್ಯಮಾನಗಳನ್ನೆಲ್ಲಾ ಈ ದಿನ ಅಥವಾ ನಾಳೆ ಬಹಿರಂಗಪಡಿಸುವೆವು.

ಸಪ್ರೂ-ಜಯಕರ್ ಹೇಳಿಕೆ.

ಕಳೆದ 2 ತಿಂಗಳುಗಳಿಂದಲೂ ನಾವು ಕೈಕೊಂಡ ಶಾಂತಿಸ್ಥಾಪನೆಗೆ ಕಾರಣಗಳು ಈ ರೀತಿಯಾಗಿರುವವು.

(1) ಜೂನ 20 ನೆಯ ತಾರೀಖಿನ ದಿವಸ ಪಂಡಿತ ಮೋತೀಲಾಲನೆಹರುರವರು ಲಂಡನ್ನಿನ "ಡೇಲಿ ಹೆರಾಲ್ಡ್" ಪತ್ರಿಕೆಯ ಸ್ಪೆಷಲ್ ಬಾತ್ಮೀದಾರರಾದ ಮಿ|| ಜಾರ್ಜ್ ಸ್ಲೋಕೊಂಬ್‌ರವರಿಗೆ ದುಂಡುಮೇಜಿನ ಪರಿಷತ್ತಿನ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದರು.

(2) ಅನಂತರ ಜೂನ 25 ನೆಯ ತಾರೀಖಿನ ದಿವಸ ಮುಂಬಯಿಯಲ್ಲಿ ಪಂಡಿತ ಮೋತೀಲಾಲ್‌ನೆಹರೂ ಮಿ|| ಜಯಕರ್ ಮತ್ತು ಮಿ|| ಸ್ಲೋಕೊಂಬ್‌ರವರು ಸಭೆ ಸೇರಿ ಈ ಕೆಳಗೆ ಕಂಡ ಷರತ್ತಿನಮೇಲೆ ಶಾಂತಿಸ್ಥಾಪನೆಯಾಗಬಹುದೆಂದು ತೀರ್ಮಾನಿಸಿದರು.

(3) ಮಿ|| ಸ್ಲೋಕೊಂಬ್‌ರವರು ಸದರೀ ತೀರ್ಮಾನದ ಪ್ರತಿಯೊಂದನ್ನು ಸರ್ ಸಪ್ರೂರವರಿಗೆ ಕಳುಹಿಸಿ, ನಾವೀರ್ವರೂ ಶಾಂತಿಸ್ಥಾಪನೆಗೆ ಮುಂದಿನ ಪ್ರಯತ್ನಗಳನ್ನು ಮಾಡಬಹುದೆಂದೂ, ಇದಕ್ಕೆ ಪಂ|| ಮೋತೀಲಾಲರು ಒಪ್ಪಿರುವರೆಂದೂ ಬರೆದರು.

ಮೇಲ್ಕಂಡ ಸಭೆಯಲ್ಲಿ ಈ ಕೆಳಗೆ ಬರೆದಂತೆ ತೀರ್ಮಾನಿಸಲ್ಪಟ್ಟಿತ್ತು. "ದುಂಡುಮೇಜಿನ ಪರಿಷತ್ತಿನಲ್ಲಿ ಭಾರತಸ್ವಾತಂತ್ರ್ಯದ ವಿಷಯವು ಯಾವುದೇ ರೀತಿಯಲ್ಲಿ ತೀರ್ಮಾನವಾದರೂ, ಸದ್ಯಃ ಬ್ರಿಟಿಷ್ ಮತ್ತು ಇಂಡಿಯಾ ಗವರ್ನಮೆಂಟಿನವರು ಸದರೀ ದುಂಡುಮೇಜಿನ ಪರಿಷತ್ತಿನಲ್ಲಿ, ಭರತಖಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನೇ ಕೊಡಬೇಕೆಂದು ಶಿಫಾರಸುಮಾಡುವದಾಗಿ ವಾಗ್ದಾನಮಾಡಿದರೆ ಪಂಡಿತ ಮೋತೀಲಾಲ್‌ರವರು ಮಿ|| ಗಾಂಧಿ ಮತ್ತು ಪಂಡಿತ ಜವಾಹರಲಾಲ್‌ರವರಿಗೆ ಚಳವಳಿಯನ್ನು ನಿಲ್ಲಿಸುವಂತೆ ಒಪ್ಪಿಸುವದಕ್ಕೆ ಹೇಳಲವಕಾಶವಾಗುವದು. ಅನಂತರ ಸರಕಾರದವರು ಸದ್ಯದ ದಬ್ಬಾಳಿಕೆಯನ್ನು ನಿಲ್ಲಿಸಿ, ಎಲ್ಲ ರಾಜಕೀಯ ಕೈದಿಗಳನ್ನೂ ಬಿಟ್ಟು ಬಿಡಬೇಕು. ಇದರಿಂದ ರಾಷ್ಟ್ರೀಯ ಸಭೆಯವರು ದುಂಡುಮೇಜಿನ ಪರಿಷತ್ತಿಗೆ ಹೋಗಲು ಅವಕಾಶವೂ ಆಗುವದು."

ಈ ತೀರ್ಮಾನದ ಆಧಾರದಮೇಲೆ ನಾವು ಜುಲೈ 13 ರಲ್ಲಿ ವೈಸರಾಯರಿಗೆ ಒಂದು ದೀರ್ಘವಾದ ಪತ್ರವನ್ನು ಬರೆದು, ಕಾರಾಗೃಹದಲ್ಲಿರುವ ಮುಖಂಡರನ್ನು ಕುರಿತು ಚರ್ಚಿಸಲು ಅವಕಾಶವನ್ನು ಕೇಳಿದೆವು. ವೈಸರಾಯರು ಜುಲೈ 23 ರಲ್ಲಿ ನಮ್ಮ ಸದುದ್ದೇಶಕ್ಕಾಗಿ ಸಂತೋಷಪಟ್ಟು, ಮುಖಂಡರನ್ನು ನೋಡಲು ತಕ್ಕ ಅವಕಾಶವನ್ನು ಕಲ್ಪಿಸಿಕೊಟ್ಟರು. ಅನಂತರ ನಾವು ಎರವಾಡಾಕ್ಕೆ ಹೋಗಿ ಜುಲೈ 23 ಮತ್ತು 24 ನೆಯ ತಾರೀಖುಗಳಲ್ಲಿ ಮಿ|| ಗಾಂಧಿಯವರೊಡನೆ ಚರ್ಚೆಮಾಡಿದೆವು. ಮಿ|| ಗಾಂಧಿಯವರು ನೈನಿಜೈಲಿನಲ್ಲಿರುವ ಪಂ|| ಮೋತೀಲಾಲ್‌ನೆಹರೂ ಮತ್ತು ಪಂ|| ಜವಾಹರಲಾಲ್‌ನೆಹರೂರವರಿಗೆ ಎರಡು ಪತ್ರಗಳನ್ನು ಬರೆದುಕೊಟ್ಟರು.

(1) ದುಂಡುಮೇಜಿನ ಪರಿಷತ್ತಿನಲ್ಲಿ ಸಂಪೂರ್ಣ ಸ್ವಾತಂತ್ರ್ಯ ಸಂಬಂಧವಾದ ವಿಷಯಗಳನ್ನು ಮಾತ್ರ ಚರ್ಚಿಸಬೇಕು. ಯಾರಾದರೂ ಇದಕ್ಕೆ ವಿರೋಧವಾಗಿ ಪ್ರಶ್ನೆಮಾಡಿದರೂ ಸ್ವಾತಂತ್ರ್ಯ ಪ್ರಶ್ನೆಯನ್ನು ಹಿಂದೆ ಹಾಕಬಾರದು. ಕಾಂಗ್ರೆಸ್‌ಪಕ್ಷವು ಪರಿಷತ್ತಿಗೆ ಹೊರಡುವದಕ್ಕೆ ಪೂರ್ವದಲ್ಲಿ ಈ ವಿಷಯವಾಗಿ ನನಗೆ ಸಂಪೂರ್ಣ ಭರವಸೆಯಾಗಬೇಕು.

(2) ಮೇಲ್ಕಂಡ ವಿಷಯದಲ್ಲಿ ನನ್ನ ಮನಸ್ಸಿಗೆ ಒಪ್ಪಿಗೆಯಾದರೆ ಅಸಹಕಾರ ಚಳವಳಿಯನ್ನು ನಿಲ್ಲಿಸುವದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಕಾಯಿದೆಭಂಗವು ಮಾತ್ರ ನಿಲ್ಲಿಸಲ್ಪಡುವದು. ಮದ್ಯಪಾನ ಮತ್ತು ಪರದೇಶೀವಸ್ತ್ರ ಬಹಿಷ್ಕಾರವು ಮಾತ್ರ ಎಂದಿನಂತೆ ನಡದೇ ನಡೆಯುವದು. ಬೇಕಿದ್ದರೆ ಸರಕಾರದವರೇ ಇದಕ್ಕೆ ತಕ್ಕ ಪ್ರತಿಬಂಧಕಮಾಡಿದರೂ ಆಗಬಹುದು. ಉಪ್ಪಿನ ತಯಾರಿಯು ಮಾತ್ರ ನಿಲ್ಲಿಸಲ್ಪಡಲಾಗದು. ಆದಕ್ಕಾಗಿ ಜನರನ್ನು ಶಿಕ್ಷೆಗೆ ಗುರಿಪಡಿಸಬಾರದು. ಉಪ್ಪಿನಕೋಠಿಗಳ ಮೇಲೆ ದಾಳಿಯಿಡುವದನ್ನು ನಿಲ್ಲಿಸುವೆವು.

(3) (a) ಸತ್ಯಾಗ್ರಹವನ್ನು ನಿಲ್ಲಿಸಿದ ಕೂಡಲೇ ಹಿಂಸಾತ್ಮಕ ಅಪರಾಧಗಳನ್ನು ಮಾಡದ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕು.

(b) ಉಪ್ಪಿನ ಕಾಯಿದೆ, ಪ್ರೆಸ್ ಕಾಯಿದೆ ಮತ್ತು ರೆವಿನ್ಯೂ ಕಾಯಿದೆಗಳ ಬಲದಿಂದ ಜಪ್ತುಮಾಡಿರುವ ಎಲ್ಲ ಆಸ್ತಿಪಾಸ್ತಿಗಳನ್ನೂ ಹಿಂದಕ್ಕೆ ಕೊಡಬೇಕು.

(c) ಸತ್ಯಾಗ್ರಹಿಗಳಿಂದಲೂ, ವರ್ತಮಾನ ಪತ್ರದವರಿಂದಲೂ ತೆಗೆದುಕೊಂಡಿರುವ ಎಲ್ಲ ದಂಡಗಳನ್ನೂ ಹಿಂದಕ್ಕೆ ಕೊಡಬೇಕು.

(d) ರಾಜೀನಾಮೆಯನ್ನು ಕೊಟ್ಟಿರುವ ಮತ್ತೂ ಚಳವಳಿಯಲ್ಲಿ ಭಾಗವಹಿಸಿದರೆಂಬ ಕಾರಣದಮೇಲೆ ಕೆಲಸವನ್ನು ಕಳೆದುಕೊಂಡಿರುವ ಎಲ್ಲ ಅಧಿಕಾರಿಗಳಿಗೂ ಪುನಃ ಕೆಲಸವನ್ನು ಕೊಡಬೇಕು.

(ಮೇಲ್ಕಂಡ ನಿಬಂಧನೆಗಳು ಹಿಂದಿನ ಅಸಹಕಾರ ಚಳವಳಿಯ ಕಾಲಕ್ಕೂ ಅನ್ವಯಿಸಲ್ಪಡಬೇಕು.)

(e) ವೈಸರಾಯರ ನೂತನ ಕಾಯಿದೆಗಳು ರದ್ದಾಗಬೇಕು.

ಮೇಲ್ಕಂಡ ಷರತ್ತುಗಳನ್ನು ನಾನು ನಿಮಿತ್ತಮಾತ್ರಕ್ಕೆ ಹೇಳಿರುವೆನು. ಏಕೆಂದರೆ; ಹೊರಗಿನ ವಿದ್ಯಮಾನಗಳನ್ನು ಸರಿಯಾಗಿ ಅರಿಯಲು ಅವಕಾಶವಿಲ್ಲದ ನನ್ನಂಥ ಕೈದಿಗೆ ರಾಜಕೀಯ ವಿದ್ಯಮಾನಗಳಲ್ಲಿ ಪ್ರವೇಶಿಸುವದು ನ್ಯಾಯವಲ್ಲವೆಂದೇ ನನಗೆ ತೋರುವದು. ಆದುದರಿಂದ ನನ್ನ ಮಾತುಗಳಿಗೆ ಸರಿಯಾದ ಬೆಲೆ ಬರುವದಿಲ್ಲವೆಂದೇ ನನಗೆ ತೋರುವುದು. ಮಿ|| ಜಯಕರ್ ಮತ್ತೂ ಡಾಕ್ಟರ್ ಸಪ್ರೂರವರು ಈ ಪತ್ರವನ್ನು ಪಂಡಿತಮೋತೀಲಾಲನೆಹರೂ, ಪಂಡಿತ ಜವಾಹರಲಾಲ್ ನೆಹರೂ, ಮಿ|| ವಲ್ಲಭಭಾಯಿ ಪಟೇಲ್ ಮತ್ತು ಚಳವಳಿಯ ಭಾರವನ್ನು ವಹಿಸಿರುವ ಇತರ ಮುಖಂಡರಿಗೂ ತೋರಿಸಬಹುದು. ಆದರೆ ಈ ವಿಷಯವನ್ನು ಪತ್ರಿಕಾಕರ್ತರಿಗೆ ತಿಳಿಸಬಾರದು. ಈ ಸಮಯದಲ್ಲಿ ಇದನ್ನು ವೈಸ್ರಾಯರಿಗೂ ತೋರಿಸಬಾರದು. ಒಂದುವೇಳೆ ಮೇಲ್ಕಂಡ ಷರತ್ತುಗಳು ಅಂಗೀಕರಿಸಲ್ಪಟ್ಟರೂ, ನನ್ನ ಮನಸ್ಸಿಗೆ ದೃಢವಾಗುವವರೆಗೆ ಹಾಗೂ ಪರಿಷತ್ತಿಗೆ ಹೊರಡುವ ಭಾರತೀಯರೆಲ್ಲರೂ ಪೂರ್ವಭಾವಿಯಾಗಿ ಕಲೆತು, ಪರಿಷತ್ತಿನಲ್ಲಿ ಚರ್ಚಿಸಬೇಕಾದ ವಿಷಯವನ್ನು ಏಕಸಮ್ಮತಿಯಿಂದ ತೀರ್ಮಾನಮಾಡಿಕೊಳ್ಳುವವರೆಗೆ ನಾನೆಂದೂ ಪರಿಷತ್ತಿಗೆ ಹೋಗಲಪೇಕ್ಷಿಸುವವನಲ್ಲ. ನಾನು ವೈಸರಾಯರಿಗೆ ಬರೆದ ಪತ್ರದಲ್ಲಿ ಕಾಣಿಸಿದ 11 ಷರತ್ತುಗಳ ಸಂಬಂಧದಲ್ಲಿ ಬರಬಹುದಾದ ಪ್ರತಿಯೊಂದು ಸಲಹೆಯನ್ನೂ, ಪ್ರಸಂಗಬಂದಂತೆ ಚೆನ್ನಾಗಿ ವಿಚಾರಮಾಡಿ ಪರೀಕ್ಷಿಸದೆ ಇರುವುದಿಲ್ಲ.

23-7-1930. ಎಂ. ಕೆ. ಗಾಂಧಿ.

ಮಿ|| ಗಾಂಧಿಯವರು ಪಂಡಿತ ಮೋತೀಲಾಲರಿಗೆ ಈ ರೀತಿ ಬರೆದಿದ್ದರು :—

"ನನ್ನ ಸ್ಥಿತಿಯು ಅತ್ಯಂತ ಇಕ್ಕಟ್ಟಿನಲ್ಲಿ ಸಿಕ್ಕಿದಂತಿರುವದು. ಕಾರಾಗೃಹದ ಒಳಗಿರುವ ನನಗೆ, ಕಾರಾಗೃಹದ ಹೊರಗಿನ ವಿದ್ಯಮಾನಗಳ ವಿಷಯದಲ್ಲಿ ಸರಿಯಾದ ಅಭಿಪ್ರಾಯವನ್ನು ಕೊಡುವದು ಅಸಾಧ್ಯವಾಗಿ ತೋರುತ್ತಿರುವದು. ಗೌರವಯುಕ್ತವಾದ ತೀರ್ಮಾನಕ್ಕೆ ಅಡ್ಡಿಮಾಡಬೇಕೆಂಬುದು ನನ್ನ ಅಭಿಪ್ರಾಯವಲ್ಲ. ಆದರೆ ಅದಕ್ಕೆ ಸಕಾಲವು ಇನ್ನೂ ಒದಗಿಲ್ಲವೆಂದೇ ನನಗೆ ತೋರುವದು. ಈ ವಿಷಯದಲ್ಲಿ ಕಡೆಯ ತೀರ್ಮಾನವನ್ನು ಪಂಡಿತ ಜವಾಹರಲಾಲರೇ ಹೇಳಬೇಕು. ನಾನು ಮತ್ತು ನೀವು ಈ ವಿಷಯದಲ್ಲಿ ತಕ್ಕ ಸಲಹೆಗಳನ್ನು ಮಾತ್ರ ಕೊಡಬಲ್ಲೆವು. ನನ್ನ ಬುದ್ಧಿಗೆ ತೋಚಿದುದೆಲ್ಲವನ್ನೂ ನಾನು ಹೇಳಿರುವೆನು. ಲಾಹೋರಿನ ತೀರ್ಮಾನಕ್ಕೆ ಅಕ್ಷರಶಃ ವ್ಯತ್ಯಾಸವಿಲ್ಲದಂತೆ ನಡೆಯಲು ನಾನು ಸಿದ್ಧನಾಗಿದ್ದೇನೆ. ಆದುದರಿಂದ ನಾನು ಬರೆದಿರುವ ವಿಷಯಗಳು ನಿಮ್ಮ ಮನಸ್ಸಿಗೆ ಒಪ್ಪದಿದ್ದರೆ ನೀವು ನಿಮ್ಮ ಸೂಕ್ತ ತೋರಿದ ರೀತಿಯಲ್ಲಿ ವರ್ತಿಸಬಹುದಾಗಿದೆ. ನಾನು ವೈಸರಾಯರಿಗೆ ಬರೆದ ಮೊದಲನೆಯ ಪತ್ರದಲ್ಲಿ ಕಾಣಿಸಿದ 11 ಷರತ್ತುಗಳ ವಿಷಯದಲ್ಲಿ ನಿಮಗಾಗಲಿ ಜವಾಹರಲಾಲರಿಗಾಗಲಿ ಅಷ್ಟಾಗಿ ಒಪ್ಪಿಗೆಯಿಲ್ಲವೆಂಬುದನ್ನು ನಾನು ಬಲ್ಲೆನು. ಆ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ಈಗ ಹೇಗಿರುವುದೋ ನಾನರಿಯೆನು. ನನಗಂತೂ, ಆ ಷರತ್ತುಗಳೇ ಸ್ವಾತಂತ್ರ್ಯದ ತಿರುಳಾಗಿರುವವು. ಆ ಷರತ್ತುಗಳನ್ನು ಕೂಡಲೇ ಜಾರಿಗೆ ತರದಿರುವ ಯಾವ ವಿಧವಾದ ಸ್ವಾತಂತ್ರ್ಯವೂ ನನಗೆ ತೃಪ್ತಿಯನ್ನುಂಟುಮಾಡಲಾರದು. ನನ್ನ ಮೇಲಿನ ಪತ್ರದಲ್ಲಿ 3 ಷರತ್ತುಗಳನ್ನು ಮಾತ್ರ ಕಾಣಿಸಿರುವೆನಾದರೂ, ಉಳಿದ 8 ಷರತ್ತುಗಳನ್ನು ನಾನು ಮರೆತಿರುವದಿಲ್ಲ. ಸದ್ಯಃ ನಮಗೆ ಲಭಿಸಿರುವ ಬಲವಾದ ಸ್ಥಾನವನ್ನು ಹೋಗಲಾಡಿಸುವ ಯಾವ ಶಾಂತಿಸಂಧಾನಕ್ಕೂ ನಾನು ಒಪ್ಪುವವನಲ್ಲ.

ಇತಿ ನಿಮ್ಮ ಪ್ರೀತಿಪಾತ್ರನಾದ,

28-8-1930. ಎಂ. ಕೆ. ಗಾಂಧಿ.

ನಾವು ನೈನಿ ಜೈಲಿಗೆ ಹೋಗಿ ಜುಲೈ 27 ಮತ್ತು 28 ರಲ್ಲಿ ಉಭಯ ಪಂಡಿತರಿಗೆ ಮೇಲ್ಕಂಡ ಪತ್ರಗಳನ್ನು ಕೊಟ್ಟು ಚರ್ಚೆಮಾಡಿದ ನಂತರ ಪಂಡಿತರು ಈ ಕೆಳಗೆ ಕಂಡ 2 ಪತ್ರಗಳನ್ನು ಬರೆದುಕೊಟ್ಟರು.

"ಸರ್ ಸಪ್ರೂ ಮತ್ತು ಜಯಕರ್‌ರೊಡನೆ ಬಹಳ ಹೊತ್ತು ಮಾತಾಡಿದೆವು. ಶಾಂತಿಸ್ಥಾಪನೆಗಾಗಿ ಅವರು ಇಷ್ಟೊಂದು ಶ್ರಮವಹಿಸುತ್ತಿರುವದನ್ನು ನೋಡಿ ನಮಗೆ ಅತ್ಯಂತ ಸಂತೋಷವಾಯಿತು. ಆದರೆ ಇದುವರೆಗೆ ದೇಶಕ್ಕಾಗಿ ತಮ್ಮ ತನುಮನಧನಗಳನ್ನೆಲ್ಲ ಅರ್ಪಿಸಿರುವ ಭಾರತೀಯರಿಗೆ ಗೌರವಯುಕ್ತವಾದ ಶಾಂತಿಯನ್ನು ಮಾತ್ರ ನಾವು ಅಪೇಕ್ಷಿಸುವೆವು. ಕಾಂಗ್ರೆಸ್ಸಿನ ಪ್ರತಿನಿಧಿಗಳಾದ ನಮಗೆ ಅದರ ತೀರ್ಮಾನವನ್ನು ಬದಲಾಯಿಸುವ ಅಧಿಕಾರವೇ ಇಲ್ಲ. ಆದರೆ ಮುಖ್ಯಾಶಯವನ್ನು ಬದಲಾಯಿಸದೆ ಒಳಗಿನ ಕಾರ್ಯಕ್ರಮಗಳಲ್ಲಿ ಕೆಲವು ಅವಶ್ಯಕವಾದ ಬದಲಾವಣೆಗಳನ್ನು ಮಾತ್ರ ಸೂಚಿಸಬಹುದು. ಸದ್ಯಃ ನಾವೀರ್ವರೂ ಕಾರಾಗೃಹದಲ್ಲಿರುವೆವು. ಹೊರಗಿನ ಪ್ರಪಂಚದ ಹಾಗೂ ಸತ್ಯಾಗ್ರಹ ಚಳವಳಿಯ ವಿದ್ಯಮಾನಗಳೇ ನಮಗೆ ತಿಳಿಯದಂತಾಗಿದೆ. ನಮ್ಮಲ್ಲಿ ಒಬ್ಬರಿಗೆ 3 ತಿಂಗಳುಗಳವರೆಗೆ ಯಾವ ವರ್ತಮಾನ ಪತ್ರವನ್ನು ಸಹ ಕೊಡುತ್ತಿರಲಿಲ್ಲ. ಗಾಂಧೀಜಿಯವರು ಸಹ ಕಾರಾಗೃಹದಲ್ಲಿರುವರು. ವರ್ಕಿಂಗ್ ಕಮಿಟಿಯ ಮುಖ್ಯಮುಖ್ಯ ಎಲ್ಲ ಮೆಂಬರರೂ ಕಾರಾಗೃಹದಲ್ಲಿರುವರು. ಅಖಿಲಭಾರತ ಕಾಂಗ್ರೆಸ್‌ಕಮಿಟಿಯ 360 ಮೆಂಬರರ ತೀರ್ಮಾನವೇ ಕಡೆಯ ತೀರ್ಮಾನವಾಗಿರುವದು. ಅದರಲ್ಲಿ ಮುಕ್ಕಾಲು ಭಾಗ ಜನರು ಕಾರಾಗೃಹವಾಸಿಗಳಾಗಿರುವರು. ಹೀಗಿರುವಲ್ಲಿ ಇತರ ಮೆಂಬರರೊಡನೆಯೂ, ಅದರಲ್ಲಿಯೂ ಗಾಂಧೀಜಿಯವರೊಡನೆಯೂ ಸಂಪೂರ್ಣವಾಗಿ ಚರ್ಚಿಸುವವರೆಗೆ ಈ ವಿಷಯದಲ್ಲಿ ನಾವು ಯಾವ ಅಭಿಪ್ರಾಯವನ್ನೂ ಕೊಡಲಾರೆವು. ಆದುದರಿಂದ ಗಾಂಧೀಜಿಯವರೊಡನೆ ಎಲ್ಲವಿದ್ಯಮಾನಗಳನ್ನೂ ಸರಿಯಾಗಿ ಚರ್ಚಿಸುವವರೆಗೆ ಸರ್ ಸಪ್ರೂ ಮತ್ತು ಮಿ|| ಜಯಕರ್‌ರೊಡನೆ ಈ ವಿಷಯವಾಗಿ ಚರ್ಚಿಸುವದಕ್ಕೆ ನಮಗಿಷ್ಟವಿಲ್ಲ. ಗಾಂಧಿಜೀಯವರ 2-3 ನೇ ಪಾಯಿಂಟ್‌ಗಳನ್ನೇನೋ ನಾವು ಒಪ್ಪಿಕೊಳ್ಳುವೆವು. ಆದರೆ ಅವರ 1 ನೆಯ ಪಾಯಿಂಟನ್ನು ಮಾತ್ರ ನಾವು ಅವರೊಡನೆಯೇ ಚರ್ಚಿಸಬೇಕಾಗಿರುವದು. ಆದುದರಿಂದ ಈ ಪತ್ರವನ್ನು ಅತ್ಯಂತ ಗೋಪ್ಯವಾಗಿ ಭಾವಿಸಿ 23-7-30 ನೇ ತಾರೀಖಿನ ಗಾಂಧಿಜಿಯವರ ಪತ್ರವನ್ನು ನೋಡುವವರಿಗೆ ಮಾತ್ರ ಇದನ್ನು ತೋರಿಸಬೇಕು."

ತಾ|| 28-7-1930.

ಪಂ|| ಜವಾಹಿರಲಾಲರು ಮಹಾತ್ಮರಿಗೆ ಬರೆದ ಪತ್ರ.

ಸೆಂಟ್ರಲ್ ಜೈಲ್ ನೈನಿ.
28-7-30.

ಪ್ರೀತಿಪಾತ್ರರಾದ ಬಾಪುರವರೇ! ಇಷ್ಟು ದೀರ್ಘಕಾಲಾನಂತರ ಒಂದು ಕಾರಾಗೃಹದಿಂದ ಮತ್ತೊಂದು ಕಾರಾಗೃಹಕ್ಕೆ ಬರೆಯಲು ನನಗೆ ಅತ್ಯಂತ ಹರ್ಷವೆನಿಸುತ್ತಿರುವದು. ಅನೇಕ ವಿಷಯಗಳನ್ನು ಬರೆಯಬೇಕೆಂಬ ಅಭಿಲಾಷೆಯಿರುವದಾದರೂ, ಅಷ್ಟಕ್ಕೆ ಅವಕಾಶವಿಲ್ಲದೆ ಸದ್ಯದ ವಿಷಯವನ್ನು ಮಾತ್ರ ಪ್ರಸ್ತಾಪಿಸುವೆನು. ಡಾಕ್ಟರ್ ಸಪ್ರೂ ಮತ್ತು ಮಿ|| ಜಯಕರ್‌ರವರು ನಿನ್ನೆ ಇಲ್ಲಿಗೆ ಬಂದು ನನ್ನೊಡನೆ ಬಹಳಹೊತ್ತು ಮಾತನಾಡಿದರು. ಈ ದಿನವೂ ಅವರು ಇಲ್ಲಿಗೆ ಬರುವರು. ಎಲ್ಲವಿಷಯಗಳನ್ನೂ ತಿಳುಹಿಸಿ, ನಿಮ್ಮ ಅಭಿಪ್ರಾಯವನ್ನು ಮತ್ತು ಪತ್ರವನ್ನು ತೋರಿಸಿದರು. ನಮ್ಮ ಅಭಿಪ್ರಾಯವನ್ನು ನಾವು ಬರೆದಿರುವ ಇನ್ನೊಂದು ಪತ್ರದಲ್ಲಿ ವಿಶದಪಡಿಸಿರುವೆವು. ಆದರಿಂದ ನಮ್ಮ ಅಭಿಪ್ರಾಯವು ನಿಮಗೆ ಚೆನ್ನಾಗಿ ವ್ಯಕ್ತವಾಗಬಹುದು. ನಿಮ್ಮ ಮೊದಲನೆಯ ಷರತ್ತಿನ ಅಭಿಪ್ರಾಯವೇ ನನಗಿನ್ನೂ ಸರಿಯಾಗಿ ಅಭಿಪ್ರಾಯವಾಗಿರುವದಿಲ್ಲ. ಆದರೆ ನೀವು ಹೇಳುವಂತೆ ಸದ್ಯಃ ನಮಗೆ ಲಭಿಸಿರುವ ಬಲವಾದ ಸ್ಥಾನವನ್ನು ನಾಶಪಡಿಸುವ ಯಾವ ಶಾಂತಿಸಂಧಾನಕ್ಕೂ ಒಪ್ಪಬಾರದೆಂಬುದೇ ನಮ್ಮ ಅಭಿಪ್ರಾಯವೂ ಆಗಿರುವದು. ಆದುದರಿಂದ ನಮ್ಮ ತೀರ್ಮಾನವನ್ನು ಹೇಳುವದಕ್ಕೆ ಮುಂಚೆ ಕೂಲಂಕಷವಾಗಿ ವಿಚಾರಮಾಡಬೇಕಾಗಿರುವದು. ಎದುರು ಪಕ್ಷದವರು ತಮ್ಮ ತತ್ತ್ವವನ್ನು ಸ್ವಲ್ಪವೂ ಬದಲಾಯಿಸಿಲ್ಲವೆಂದೇ ನನಗೆ ತೋರುವದು. ಹೀಗಿರುವಲ್ಲಿ ನಾವು ತಿಳಿಯದೆ ತಪ್ಪುಮಾರ್ಗದಲ್ಲಿ ವರ್ತಿಸುವೆವೋ ಎಂಬ ಭೀತಿಯು ತಲೆದೋರುತ್ತಿರುವದು. ನನಗಂತೂ ಈ ಸಂಗ್ರಾಮವು ಅತ್ಯಂತ ಆನಂದವನ್ನುಂಟುಮಾಡುತ್ತಿರುವದು. ಆದರಿಂದಲೇ ನಾನಿನ್ನೂ ಜೀವಿಸಿರುವೆನೆಂದು ನನಗೆ ಭಾಸವಾಗುತ್ತಿರುವದು. ಕಳೆದ ನಾಲ್ಕು ತಿಂಗಳುಗಳಿಂದ ಭರತಖಂಡದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ನನ್ನ ಮನಸ್ಸಿನಲ್ಲಿ ಆನಂದ ತರಂಗಗಳು ಉಕ್ಕುತ್ತ, ಭಾರತ ಸ್ತ್ರೀಪುರುಷರು ಮತ್ತು ಹುಡುಗರ ವಿಷಯದಲ್ಲಿ ನನ್ನ ಅಭಿಮಾನವು ವಿಶೇಷವಾಗಿ ಹೆಚ್ಚುತ್ತಿರುವದು. ನಿಮ್ಮ ಅದ್ಭುತಶಕ್ತಿಯಿಂದ ನಿರ್ಮಿತವಾಗಿರುವ ಈ ನವಭಾರತವನ್ನು ನೋಡಿ ನಿಮ್ಮನ್ನು ಎಷ್ಟು ಕೊಂಡಾಡಿದರೂ ನನಗೆ ತೃಪ್ತಿಯುಂಟಾಗದಂತಾಗಿದೆ! ಮುಂದೇನಾಗುವದೆಂಬುದನ್ನು ನಾನರಿಯೆನು. ಆದರೆ ಹಿಂದಿನ ವಿದ್ಯಮಾನಗಳು ನನ್ನ ಮನಸ್ಸಿನಲ್ಲಿ ಇನ್ನು ಬಹುಕಾಲ ಜೀವಿಸಿರಬೇಕೆಂಬ ಆಶೆಯನ್ನು ಹುಟ್ಟಿಸಿರುವವು. ಈ ನೈನಿಕಾರಾಗೃಹದಲ್ಲಿ ಕುಳಿತು ಅಹಿಂಸಾತ್ಮಕ ಶಸ್ತ್ರದ ಅದ್ಭುತಶಕ್ತಿಯನ್ನು ಯೋಚಿಸುತ್ತ ಅದರಲ್ಲಿ ಸಂಪೂರ್ಣ ಭರವಸೆಯನ್ನು ಹೊಂದಿರುವೆನು. ಅಹಿಂಸಾತ್ಮಕತತ್ತ್ವದಲ್ಲಿದ್ದ ನಿಮ್ಮ ನಂಬಿಕೆಯೂ ಕಡಿಮೆಯಾಗಿರಲಾರದೆಂದು ಭಾವಿಸುತ್ತೇನೆ. ಮಧ್ಯೆ ಮಧ್ಯೆ ಕೆಲವು ಅನಾಹುತಗಳು ಸಂಭವಿಸುತ್ತಿದ್ದರೂ, ದೇಶವು ನಾವು ಮೊದಲಿನಲ್ಲಿ ಊಹಿಸಿದ್ದಕ್ಕಿಂತಲೂ ಹೆಚ್ಚು ಉತ್ಸಾಹದಿಂದ ಅಹಿಂಸಾತ್ಮಕತತ್ತ್ವವನ್ನೇ ಅನುಸರಿಸುತ್ತಿರುವದು. ನಿಮ್ಮ ಷರತ್ತುಗಳಲ್ಲಿ ಇನ್ನೂ ನನಗೆ ಸಂಪೂರ್ಣನಂಬಿಕೆಯಿಲ್ಲ. ಅವುಗಳಿಂದ ಸಂಪೂರ್ಣಸ್ವಾತಂತ್ರ್ಯವು ಲಭಿಸುವದಿಲ್ಲವೆಂದೇ ನನಗೆ ತೋರುವದು. ಆದರೆ "ಆ ಷರತ್ತುಗಳನ್ನು ಕೂಡಲೇ ಜಾರಿಗೆ ತರುವ ಅಧಿಕಾರವು ನಮಗೆ ಪ್ರಾಪ್ತವಾಗುವ ವರೆಗೆ ನಾವು ಯಾವ ಸಂಧಾನಕ್ಕೂ ಒಪ್ಪಬಾರದೆಂದು" ನಾನು ಒಪ್ಪಿಕೊಳ್ಳುವೆನು. ತಂದೆಯವರಿಗೆ 8 ದಿವಸಗಳಿಂದಲೂ ದೇಹಸ್ಥಿತಿಯು ನೆಟ್ಟಗಿಲ್ಲ. ಅವರು ಅತ್ಯಂತ ಬಲಹೀನರಾಗಿದ್ದಾರೆ. ನಿನ್ನೆ ಸಾಯಂಕಾಲ ಚರ್ಚೆಯು ಅವರಿಗೆ ಬಹಳ ಆಯಾಸವನ್ನುಂಟುಮಾಡಿರುವದು.

ಜವಾಹರಲಾಲ್.

ದಯವಿಟ್ಟು ನನ್ನ ವಿಷಯವಾಗಿ ನೀವು ಸ್ವಲ್ಪವೂ ಚಿಂತಿಸಬೇಡಿರಿ. ಇನ್ನು ಎರಡು ಮೂರು ದಿವಸಗಳಲ್ಲಿ ಈ ಆಯಾಸವು ಪರಿಹಾರವಾಗುವದು. ಪ್ರೀತಿಪೂರ್ವಕ ವಂದನೆಗಳು.

ಮೋತೀಲಾಲ್‌ನೆಹರೂ.

ಪಿ. ಸಿ :—ಸರ್ ಸಪ್ರೂ ಮತ್ತು ಮಿ|| ಜಯಕರ್‌ರವರೊಡನೆ ಪುನಃ ಚರ್ಚಿಸಿದೆವು. ಅವರ ಅಭಿಪ್ರಾಯ ಪತ್ರದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿರುವೆವು. ಆದರಿಂದ ಹೆಚ್ಚಿನ ವ್ಯತ್ಯಾಸವೇನೂ ಆಗುವಂತಿಲ್ಲ. ನಮ್ಮ ಅಭಿಪ್ರಾಯವನ್ನು ನೀವು ಸಂಪೂರ್ಣ ಅನುಮೋದಿಸುವಿರೆಂದು ನಂಬಿರುತ್ತೇನೆ.

ಅನಂತರ ಮಿ|| ಜಯಕರ್‌ರವರೊಬ್ಬರೇ ಎರವಾಡಾಕ್ಕೆ ಹೋಗಿ ಜುಲೈ 31, ಆಗಸ್ಟ್ 1 ಮತ್ತು ಆಗಸ್ಟ್ 2 ನೆಯ ತಾರೀಖುಗಳಲ್ಲಿ ಮಿ|| ಗಾಂಧಿಯವರನ್ನು ಕಂಡು ಮಾತನಾಡಿದರು. ಮಿ|| ಗಾಂಧಿಯವರು ಕೆಳಗೆ ಕಂಡಂತೆ ಹೇಳಿ ಬರೆಯಿಸಿದರು.

1. ಭರತಖಂಡವು ತನ್ನ ಮನಸ್ಸಿಗೆ ಬೇಡವಾದಾಗ ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವನ್ನೇ ತಪ್ಪಿಸಿಕೊಳ್ಳುವ ಹಾಗೂ ಮಿ|| ಗಾಂಧಿಯವರ 11 ಷರತ್ತುಗಳನ್ನು ತೃಪ್ತಿಕರವಾದ ರೀತಿಯಲ್ಲಿ ಜಾರಿಗೆ ತರುವ ಅಧಿಕಾರವನ್ನು ಪಡೆಯದಿರುವ ಯಾವ ಆಡಳಿತಪದ್ಧತಿಯೂ ಮಿ|| ಗಾಂಧಿಯವರ ಮನಸ್ಸಿಗೆ ಒಪ್ಪಿಗೆಯಾಗುವಂತಿಲ್ಲ.

2. ದುಂಡುಮೇಜಿನ ಪರಿಷತ್ತಿನಲ್ಲಿ ಮಿ|| ಗಾಂಧಿಯವರು ಈ ವಿಷಯವನ್ನು ಪ್ರಸ್ತಾಪಿಸುವರೆಂಬುದನ್ನು ವೈಸರಾಯರಿಗೆ ಈಗಲೇ ಸ್ಪಷ್ಟವಾಗಿ ತಿಳಿಯಪಡಿಸಬೇಕು. ಏಕೆಂದರೆ ವೈಸರಾಯರು ಆ ಮೇಲೆ ಈ ವಿಷಯವು ತಮಗೆ ಮೊದಲೇ ತಿಳಿದಿರಲಿಲ್ಲವೆಂದು ಹೇಳಬಾರದು. ಹಾಗೂ ಮಿ|| ಗಾಂಧಿಯವರು ಪರಿಷತ್ತಿನಲ್ಲಿ ಬ್ರಿಟಿಷರು ಇದುವರೆಗೆ ಅನುಭವಿಸಿದ ಮತ್ತು ಸದ್ಯಃ ಅನುಭವಿಸುತ್ತಿರುವ ಅನುಕೂಲಗಳ ಮತ್ತು ಸಾಲ ಮೊದಲಾದವುಗಳ ವಿಚಾರವಾಗಿ ನಿಷ್ಪಕ್ಷಪಾತವಾದ ಒಂದು ವಿಚಾರಣಾಸಮಿತಿಯಮುಂದೆ ಚರ್ಚಿಸಬೇಕೆಂದು ಬಲಾತ್ಕರಿಸುವರೆಂಬುದನ್ನೂ ವೈಸರಾಯರಿಗೆ ಈಗಲೇ ಚೆನ್ನಾಗಿ ತಿಳುಹಿಸಬೇಕು.

ಕಾಂಗ್ರೆಸ್ ಮುಖಂಡರ ಬೇಡಿಕೆಗಳು.

ಅನಂತರ ಎರವಾಡಾ ಜೈಲಿನಲ್ಲಿ ಆಗಸ್ಟ್ 14 ಮತ್ತು 15 ನೆಯ ತಾರೀಖುಗಳಲ್ಲಿ ನಮಗೂ ಮಿ|| ಗಾಂಧಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರಿಗೂ ವಿಶೇಷ ಚರ್ಚೆಯು ನಡೆದು ಎಲ್ಲ ಮುಖಂಡರೂ ಒಟ್ಟಿಗೆ ವೈಸರಾಯರಿಗೆ ಈ ಕೆಳಗೆ ಕಂಡಂತೆ ಒಂದು ಪತ್ರವನ್ನು ಬರೆದುಕೊಟ್ಟರು.

ಎರವಾಡಾ ಸೆಂಟ್ರಲ್ ಜೈಲ್
ಆಗಸ್ಟ್ 15-1930.

ಪ್ರಿಯಮಿತ್ರರೇ !

ಶಾಂತಿಸಂಧಾನಕ್ಕಾಗಿ ನೀವು ಪ್ರಯತ್ನಿಸಿದುದನ್ನು ನೋಡಿ ನಮಗೆ ಅತ್ಯಂತ ಸಂತೋಷವೆನಿಸಿತು. ಎಲ್ಲ ವಿದ್ಯಮಾನಗಳನ್ನು ಪರಿಶೀಲಿಸಿ ನೋಡಿದರೆ ಶಾಂತಿಸ್ಥಾಪನೆಗೆ ಸರಿಯಾದ ಕಾಲವು ಇನ್ನೂ ಪ್ರಾಪ್ತವಾಗಿಲ್ಲವೆಂದೇ ನಮಗೆ ತೋರುತ್ತಿರುವುದು. ಕಳೆದ 5 ತಿಂಗಳುಗಳಲ್ಲಿ ಭಾರತಜನಾಂಗವು ಹೇಳಲಾಗದಷ್ಟು ಕಷ್ಟನಷ್ಟಗಳನ್ನು ಅನುಭವಿಸಿದ್ದರೂ ಇಚ್ಛಿತಕಾರ್ಯಸಾಧನೆಗೆ ಸಾಕಾದಷ್ಟು ಕಷ್ಟಗಳನ್ನು ಅನುಭವಿಸಿಲ್ಲವೆಂದೇ ನಮಗೆ ತೋರುವದು. ಕಾಯಿದೆ ಭಂಗದ ಚಳವಳಿಯು ದೇಶಕ್ಕೆ ಅಹಿತವನ್ನು ಮಾಡಿತೆಂಬ ವೈಸರಾಯರ ಅಭಿಪ್ರಾಯವನ್ನು ನಾವೆಂದೂ ಒಪ್ಪುವದಿಲ್ಲ. ಆಂಗ್ಲೇಯರ ಚರಿತ್ರೆಯೆಲ್ಲವೂ ಹಿಂಸಾಮಯವಾದ ದಂಗೆ ದರೋಡೆಗಳ ಕಥೆಗಳಿಂದಲೇ ತುಂಬಿದ್ದರೂ ಇಂದಿನವರೆಗೂ ಆಂಗ್ಲೇಯರು ಅವರನ್ನೇ ಹಾಡಿ ಹೊಗಳುತ್ತ ನಮಗೂ ಅದರಂತೆಯೇ ಮಾಡಿರೆಂದು ಹೇಳಿಕೊಡುತ್ತಿರುವರು. ಹೀಗಿದ್ದರೂ ಇಂಥ ವಿಷಮವಾತಾವರಣದಲ್ಲಿಯೂ ಸಹ ಅತ್ಯಂತ ಅಹಿಂಸಾತ್ಮಕವಾಗಿಯೇ ಇರುವ ಈ ಚಳವಳಿಯನ್ನು ವೈಸರಾಯರವರಾಗಲಿ ಅಥವಾ ಬೇರೆ ಯಾರಾದರೂ ಬುದ್ಧಿವಂತರೆನಿಸಿದ ಆಂಗ್ಲೇಯರಾಗಲಿ ನಿಷೇಧಿಸುವದು ತಪ್ಪೆನಿಸುವದು. ಆದರೆ ಈ ವಿಷಯವಾಗಿ ಯಾರೊಡನೆಯೂ ಚರ್ಚಿಸಲು ನಮಗೆ ಇಷ್ಟವಿಲ್ಲ. ಇಡೀ ಜನಾಂಗವು ಏಕವಾಕ್ಯದಿಂದ ಚಳವಳಿಗೆ ಸಹಾನುಭೂತಿಯನ್ನು ತೋರಿಸುತ್ತಿರುವದೇ ಅದರ ಸತ್ಯತೆಯನ್ನು ಸ್ಪಷ್ಟಪಡಿಸುವದು. ಸಾಧ್ಯವಾದರೆ ಈ ಚಳವಳಿಯನ್ನು ನಿಲ್ಲಿಸಬೇಕೆಂಬುದೇ ನಮ್ಮ ಅಭಿಲಾಷೆಯು ಆಗಿರುವದು. ನಿಷ್ಕಾರಣವಾಗಿ ನಮ್ಮ ಸ್ತ್ರೀಪುರುಷರನ್ನು ಮತ್ತು ಮಕ್ಕಳನ್ನು, ಕಾರಾಗೃಹವಾಸಕ್ಕೂ, ದೊಣ್ಣೆಯ ಪೆಟ್ಟುಗಳಿಗೂ ಮತ್ತು ಇನ್ನೂ ಹೆಚ್ಚಿನ ಶಿಕ್ಷೆಗಳಿಗೂ ಗುರಿಪಡಿಸಬೇಕೆಂದು ನಮ್ಮ ಇಷ್ಟವಲ್ಲ. ಆದರೆ ನಭೋಮಂಡಲದಲ್ಲಿ ಶಾಂತಿಸೂಚಕಚಿಹ್ನಗಳೇ ಕಾಣದಿರುವದು ಅತ್ಯಂತ ವಿಷಾದಕರವಾಗಿರುವದು. ಭರತಖಂಡದ ಆಡಳಿತವನ್ನು ಭಾರತೀಯ ಸ್ತ್ರೀಪುರುಷರೇ ವಹಿಸಬೇಕೆಂಬ ತತ್ತ್ವವೂ ಇನ್ನೂ ಯಾವ

[8 ನೇ ಪುಟವನ್ನು ನೋಡಿರಿ.]

ಮೈಸೂರು ರಾಜಧಾನಿಯ ಬಸವಜಯಂತಿ ಪ್ರಕರಣದ ತೀರ್ಪು.

ಮೈಸೂರು ಸ್ಟಾರ್‌ಪತ್ರಿಕಾಕರ್ತರೇ ಮೊದಲಾದ ಕೆಲ ಜನ ಬಣಜಿಗರಿಗೂ ಹಾಗೂ ಸಜ್ಜನರಿಗೂ ಬಸವ ಜಯಂತ್ಯುತ್ಸವದ ವಿಷಯದಲ್ಲಿ ವಾದವುತ್ಪನ್ನವಾಗಿ ಈಗ್ಯೆ 1½ ವರ್ಷಗಳ ಕೆಳಗೆ ಕೋರ್ಟಿಗೆ ಹೋಗಿದ್ದ ವಿಷಯವು ಪ್ರಭಾಪತ್ರಿಕೆಯ ವಾಚಕರೆಲ್ಲರಿಗೂ ವೇದ್ಯವಿರಬಹುದು. ಸ್ಟಾರ್‌ಪತ್ರಿಕಾಕರ್ತರೂ ಇವರ ಕಡೆಯ ಕೆಲವರೂ ಮೈಸೂರು ದೊಡ್ಡಪೇಟೆಯಲ್ಲಿರುವ ಬಸವೇಶ್ವರ ದೇವಸ್ಥಾನವು ತಮ್ಮದೊಂದು ಪ್ರಭೇದಕ್ಕೇ ಸೇರಿದುದು, ಸಜ್ಜನರು ಅಲ್ಲಿಗೆ ಬಂದು ವಿಶೇಷ ಪೂಜಾದಿಗಳನ್ನು ನಡೆಸಲು ಅವರಿಗೆ ಯಾವ ಹಕ್ಕೂ ಇಲ್ಲವೆಂದು ಹೋರಾಡಿದರು. ಸಜ್ಜನರಾದರೋ, ದೇವಸ್ಥಾನವು ರಾಜಧಾನಿಯ ಸಮಸ್ತ ವೀರಶೈವರಿಗೂ ಸೇರಿದುದು, ಎಲ್ಲಾ ಪ್ರಭೇದಗಳ ವೀರಶೈವರೂ ಬಂದು ನಿರಾತಂಕವಾಗಿ ಪೂಜಾದಿಗಳನ್ನು ಮಾಡಿ ತೀರ್ಥಪ್ರಸಾದಗಳನ್ನು ಹಂಚಲು ಅವರಿಗೆ ಹಕ್ಕಿದೆ ಎಂದು ವಾದಿಸಿದರು. ಈ ವಿವಾದವು ಕೆಲವು ದಿವಸಗಳ ವರೆಗೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯಿತು. ಕಡೆಗೆ ಮ್ಯಾಜಿಸ್ಟ್ರೇಟರು ವಾದಿಗಳಾದ ಸ್ಟಾರ್ ಪತ್ರಿಕಾಕರ್ತರ ಸಂಗಡದವರ ಅಭಿಪ್ರಾಯಕ್ಕೆ ಒಪ್ಪದೆ ಬಸವಜಯಂತಿಗಾಗಿ ಅವರು ಕೇಳಿದ ಲೈಸೆನ್ಸನ್ನು ಕೊಡದೆ ಹೋದರು. ತಾ|| 10-7-29 ರಲ್ಲಿ ನಡೆದ ಈ ತೀರ್ಮಾನದ ಮೇಲೆ ವಾದಿಗಳು ಮೈಸೂರು ಡೆಪ್ಯೂಟಿಕಮಿಷನ್ನರ ಕೋರ್ಟಿನಲ್ಲಿ ಅಪ್ಪೀಲು ಮಾಡಿದರು. ವಾದಿಗಳ ಪರವಾಗಿ ಮ|| ರಾ|| ಎಚ್. ಸಿ. ದಾಸಪ್ಪ ಬಿ.ಎ., ಎಲ್.ಎಲ್.ಬಿ., ಯವರೂ ಮತ್ತು ಮ||ರಾ|| ಎಸ್. ಕೆ. ಸುಬ್ಬರಾವ್ ಬಿ.ಎ. ಎಲ್.ಎಲ್.ಬಿ., ಯವರೂ ವಾದಿಸಿದರು. ಇದಿರುಪಕ್ಷದ ಪರವಾಗಿ ಮ|| ರಾ|| ಯಂ. ಪಿ. ಭೋಗಯ್ಯ ಬಿ.ಎ., ಬಿ.ಎಲ್., ರವರೂ ಮತ್ತು ಮ|| ರಾ|| ಎಸ್. ಸುಂದರರಾವ್ ಬಿ.ಎ., ಎಲ್.ಎಲ್.ಬಿ., ಯವರೂ ಬಹಳ ಚಾತುರ್ಯದಿಂದ ವಾದಿಸಿದರು. ಕೊನೆಗೆ ವಿವಾದವು ಡಿಸ್ಟ್ರಿಕ್ಟ್ ಕೋರ್ಟಿನಲ್ಲಿಯೂ ಬಣಜಿಗರಿಗೆ ವಿರುದ್ಧವಾಗಿಯೇ ತೀರ್ಮಾನವಾಯಿತು.

ರಾಜಧಾನಿಯ ಸಜ್ಜನ ವೀರಶೈವರು ಭಾರಿ ವ್ಯಾಪಾರಸ್ಥರೂ, ಧನಿಕರೂ ಆಗಿದ್ದು ಸದಾಚಾರಸಂಪನ್ನರಾಗಿರುವರು. ಇವರಲ್ಲನೇಕರು ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಮುಂದುವರಿಯುತ್ತಿರುವರು. ಇವರಲ್ಲಿ ಕೂಡುವಳಿ ಸೀರುಡಿಕೆ ಮೊದಲಾದ ಹೀನ ಪದ್ಧತಿಗಳ ಸುಳಿವೇ ಇಲ್ಲ. ವೀರಶೈವರ ವಿದ್ಯಾಭ್ಯಾಸಕ್ಕಾಗಿ ಈ ಸಮಾಜದವರು ನಾನಾರೀತಿಯಾಗಿ ಸರ್ವತ್ರ ಸಹಾಯ ಮಾಡಿಯೂ ಮಾಡುತ್ತಲೂ ಇರುವರು. ಈ ಸಂಗಡದ ಶ್ರೈ|| ಸೂಲಿಬೆಲೆ ಶಾಮಣ್ಣನವರು ಸುಮಾರು 60-70 ಸಾವಿರ ರೂಪಾಯಿಗಳನ್ನು ಬೆಂಗಳೂರಿನಲ್ಲಿರುವ ವೀರಶೈವ ವಿದ್ಯಾಭಿವೃದ್ಧಿನಿಧಿಗೆ ದಾನಮಾಡಿರುವರು. ಮೈಸೂರಿನ ಹೊರಗನೆಯೂ ವೀರಶೈವರ ವಿದ್ಯಾಭಿವೃದ್ಧಿಗೆ ಲಕ್ಷಾಂತರ ರೂಪಾಯಿಗಳನ್ನು ಸಹಾಯ ಮಾಡಿರುವ ಯಾದಗಿರಿ ಶ್ರೈ|| ಶಂಕರಣ್ಣನವರೇ ಮೊದಲಾದ ಸಜ್ಜನ ವೀರಶೈವ ಮಹಾಜನರಿರುತ್ತಾರೆ. ಹೀಗಿದ್ದರೂ ಮೈಸೂರಿನ ಕೆಲ ಜನ ಬಣಜಿಗರು ಸಜ್ಜನ ವೀರಶೈವರ ವಿಷಯದಲ್ಲಿ ಕೃತಜ್ಞತೆಯನ್ನು ತೋರಿಸದೆ ಅದಕ್ಕೆ ಬದಲಾಗಿ ಅಸೂಯೆಯನ್ನು ತೋರಿಸುತ್ತಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಸದರಿ ದೊಡ್ಡಪೇಟೆಯ ಬಸವೇಶ್ವರ ದೇವಸ್ಥಾನವು ಈಗ ಬಹಳ ಶೋಚನೀಯಾವಸ್ಥೆಯಲ್ಲಿದೆ. ಅಲ್ಲಿಯ ಪೂಜಾರಿಯು ಈಗ್ಗೆ ಕೆಲವು ದಿವಸಗಳ ಹಿಂದೆ ತೀರಿಹೋದುದರಿಂದ ಸದ್ಯಕ್ಕೆ ಅಲ್ಲಿಯ ಪೂಜಾದಿಗಳು ಸರಿಯಾಗಿ ನಡೆಯುತ್ತಲಿಲ್ಲ. ಇದನ್ನೆಲ್ಲಾ ಅವಲೋಕಿಸಿ ಪೇಟೆಯ ವೀರಶೈವ ಜನರು ಸದರಿ ದೇವಾಲಯದ ವಿಷಯವಾಗಿ ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ನಂಬುತ್ತೇನೆ.

ವೀರಶೈವರಲ್ಲಿ ಸಕಲ ಪ್ರಭೇದದವರೂ ಸಮಸಮಾನರೆಂದೂ, ವೀರಶೈವರಲ್ಲಿ ಭಿನ್ನಭೇದಗಳನ್ನೆಣಿಸುವುದು ಯೋಗ್ಯವಲ್ಲವೆಂದೂ ತಮ್ಮ ಪತ್ರಿಕೆಯಲ್ಲಿ ನಾನಾಮುಖವಾಗಿ ಉದ್ಘೋಷಿಸುತ್ತಿದ್ದ ಸ್ಟಾರ್ ಸಂಪಾದಕರು ಈಗ ಯಾಕೆ ಹೀಗೆ ತಮ್ಮ ಬಸವತತ್ವಕ್ಕೆ ವಿರೋಧವಾಗಿ ವರ್ತಿಸುತ್ತಿರುವರೋ ತಿಳಿಯದು. ಇದಲ್ಲದೆ ಸ್ಟಾರ್‌ಪತ್ರಿಕಾಕರ್ತರ ಮೇಲೂ ಹಾಗೂ ಈ ಸಂಗಡದ ಕೆಲ ಜನರ ಮೇಲೂ ರಾಜಧಾನಿಯ ಇಬ್ಬರು ಸದ್ಗೃಹಸ್ಥರು ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ದಾವೆಯನ್ನು ಹೂಡಿದ್ದಾರೆ. ಈ ವ್ಯಾಜ್ಯದ ಪರಿಣಾಮವು ಏನಾಗುವುದೆಂಬುದನ್ನು ಸರ್ವರೂ ಎದುರು ನೋಡುತ್ತಿದ್ದಾರೆ. ಈ ಮಾನನಷ್ಟದ ಕೇಸಿನಲ್ಲಿ ಫಿರ್ಯಾದಿಗಳ ಪರವಾಗಿ ಮ|| ರಾ|| ಜೆ. ಮಲ್ಲಾರಾಧ್ಯ ಬಿ.ಎ., ಎಲ್.ಎಲ್.ಬಿ., ಯವರೂ, ಯಂ. ಪಿ. ಭೋಗಯ್ಯ ಬಿ.ಎ., ಬಿ.ಎಲ್., ರವರೂ, ಎಸ್. ಸುಂದರರಾವ್ ಬಿ.ಎ., ಎಲ್.ಎಲ್.ಬಿ., ಯವರೂ ವಕಾಲತ್ತು ವಹಿಸಿ ಕೆಲಸ ಮಾಡುತ್ತಿರುವರು. ಮೇಲ್ಕಂಡ ವಿಷಯಗಳನ್ನು ಮೈಸೂರಿನ ಒಳಗಿನ ಮತ್ತು ಹೊರಗಿನ ಸಕಲ ವೀರಶೈವರೂ ಗಮನಿಸಿ ಇಲ್ಲಿಯ ವೀರಶೈವರಲ್ಲಿ ಛಿದ್ರಗಳುಂಟಾಗಿ ವೀರಶೈವ ಸಮಾಜದ ಏಕೀಕರಣ ಕಾರ್ಯಕ್ಕೆ ಹೇಗೆ ಭಂಗವುಂಟಾಗಿದೆಯೆಂಬ ಅಂಶವನ್ನು ಮನಸ್ಸಿಗೆ ತಂದುಕೊಳ್ಳುವರೆಂದು ನಂಬುತ್ತೇನೆ.

ಸಮಾಜಪ್ರೇಮಿ,
ಜೆ. ಸಿ. ಶಂಕರಪ್ಪ, ಬಿ.ಎ., ಸ್ಟೂಡೆಂಟ್,
ಮೈಸೂರು.

ಮಿ|| ಚರ್ಚ್‌ಹಿಲ್‌ರವರ ಆಗ್ರಹ

"ಡೇಲಿ ಹೆರಾಲ್ಡ್" ಪತ್ರಿಕೆಯ ಉತ್ತರ.

ದುರಾಗ್ರಹದಿಂದ ಶಾಂತಿಯುಂಟಾಗಲಾರದು.

ಮಿ|| ಚರ್ಚ್‌ಹಿಲ್‌ರವರು ಭಾರತಸ್ವಾತಂತ್ರ್ಯಸಂಗ್ರಾಮದ ಸಂಬಂಧವಾಗಿ ಇಂಡಿಯಾ ಸರಕಾರದ ವರ್ತನವನ್ನು ಈ ರೀತಿಯಾಗಿ ಖಂಡಿಸಿರುವರು :

"ಪೆಷಾವರ್ ಪ್ರಾಂತದಲ್ಲಿ ಅಫ್ರಿದಿ ಜನಾಂಗದವರಿಂದ ಆಗುತ್ತಿರುವ ಅನರ್ಥಪರಂಪರೆಗಳು ಭರತಖಂಡದಲ್ಲಿ ಬ್ರಿಟಿಷರ ಅಧಿಕಾರವು ಹೇಗೆ ಸತ್ವಹೀನವಾಗುತ್ತಿರುವದೆಂಬುದನ್ನು ವ್ಯಕ್ತಪಡಿಸುವವು. ಸದ್ಯಃ ಭರತಖಂಡದಲ್ಲೆಲ್ಲ ಅಶಾಂತಿಯನ್ನುಂಟುಮಾಡಿ ಸರ್ಕಾರವನ್ನು ಪ್ರತಿಭಟಿಸುತ್ತಿರುವ ವಿರೋಧಶಕ್ತಿಯೇ ಪೆಷಾವರಿನಲ್ಲಿ ಮಿಲಿಟರಿಯವರ ಶಕ್ತಿಯನ್ನು ಕುಂದಿಸುತ್ತಿರುವದು.

ದುರಾಶೆಯಿಂದ ಕೂಡಿದ ಬುದ್ಧಿ ಸ್ವಾಸ್ಥ್ಯವಿಲ್ಲದ ಮಿ|| ಗಾಂಧಿಯವರನ್ನು ಸಮಾಧಾನಪಡಿಸುವುದಕ್ಕಾಗಿ ಬ್ರಿಟಿಷ್ ಸರಕಾರದವರು ಸರ್ ಜಾರ್ಜ್ ಸ್ಕೆಮ್ಯೂರವರನ್ನು ದುಂಡುಮೇಜಿನ ಪರಿಷತ್ತಿಗೆ ಸದಸ್ಯರನ್ನಾಗಿ ತೆಗೆದುಕೊಳ್ಳದಿರುವದು ಶುದ್ಧ ಅಯೋಗ್ಯತನವೂ ಮೂರ್ಖತನವೂ ಆಗಿರುತ್ತದೆ.

ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ಯಾವ ಸೂಚನೆಯೂ, ಈಗಿನ "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಸಹ ಅಂಗೀಕರಿಸಲ್ಪಡುವಂತಿಲ್ಲ. ಈ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ವಿಷಯದಲ್ಲಿ ನಾವು ಸ್ಪಷ್ಟವಾಗಿ ಮಾತನಾಡಬೇಕಾಗಿದೆ. ರಾಜಕೀಯ ತತ್ವಜ್ಞರಾದ ಹಲಕೆಲವು ಭಾರತೀಯರ ಮನಸ್ಸಿನಲ್ಲಿ ಇಲ್ಲದ ಆಶೆಗಳನ್ನು ಹುಟ್ಟಿಸುವದು ಶುದ್ಧ ತಪ್ಪೆನಿಸುವದು. ಅಂಥವರ ಸಂಖ್ಯೆಯು ಅತ್ಯಲ್ಪವಾಗಿರುವದು. ಹೆಚ್ಚಿನ ಭಾಗದ ಭಾರತೀಯರ ರಕ್ಷಣೆಗೆ ನಾವು ಜವಾಬ್ದಾರರಾಗಿರುವದರಿಂದ ಅವರನ್ನು ನ್ಯಾಯದಿಂದಲೂ ಪ್ರೀತಿಯಿಂದಲೂ ರಕ್ಷಿಸುವದು ನಮ್ಮ ಕರ್ತವ್ಯವಾಗಿರುವದು.

ಮೇಲ್ಕಂಡ ಮಿ|| ಚರ್ಚ್‌ಹಿಲ್‌ರವರ ಆಗ್ರಹಪೂರ್ವಕವಾದ ಬರವಣಿಗೆಗೆ "ಡೇಲಿ ಹೆರಾಲ್ಡ್" ಪತ್ರಿಕೆಯು ಈ ರೀತಿಯಾಗಿ ಉತ್ತರವನ್ನು ಪ್ರಕಟಿಸಿರುವದು—

"ಮಿ|| ಚರ್ಚ್‌ಹಿಲ್‌ರವರು ವಿಚಾರಶೂನ್ಯರಾಗಿ ಬಾಯಿಗೆ ಬಂದಂತೆ ಒದರಿರುವಂತೆ ತೋರುವದು. ಅವರ ಈ ಭಾಷಣವು ಅವರ ರಾಜಕೀಯ ನೀತಿಯನ್ನು ವ್ಯಕ್ತಗೊಳಿಸುವದಾದರೆ, ಬುದ್ಧಿವಂತರು ಈಗಲೇ ಎಚ್ಚರವಾಗಬೇಕು. ಭರತಖಂಡದ ವಿಷಯದಲ್ಲಿ ಹೀಗೆ ಮಾತನಾಡುವದೇ ನಮ್ಮ ಅಪಜಯವನ್ನು ವ್ಯಕ್ತಗೊಳಿಸುವದು. ಬ್ರಿಟಿಷ್ ಮತ್ತು ಭಾರತೀಯ ಮುಖಂಡರೆಲ್ಲರ ಕಣ್ಣಮುಂದೆ ಭೀಕರರೂಪದಿಂದ ಬಂದು ನಿಂತಿರುವ ಭಾರತ ಮಹಾಸಮಸ್ಯೆಯು, ಲಾರ್ಡ್ ಅರ್ವಿನ್ ಮೊದಲಾದವರ ವರ್ತನವನ್ನು ಖಂಡಿಸುವದರಿಂದಾಗಲಿ, ಸರ್ ಜಾರ್ಜ್ ಸ್ಕೆಮ್ಯೂರನ್ನು ದುಂಡುಮೇಜಿನ ಪರಿಷತ್ತಿಗೆ ಸೇರಿಸದಿರುವದನ್ನು ಆಕ್ಷೇಪಿಸುವದರಿಂದಾಗಲಿ, ತೀರ್ಮಾನಕ್ಕೆ ಬರಲಾರದು. ಈ ವಿಷಯದಲ್ಲಿ "ಹೋಂ" ಸರಕಾರವು ಮೊದಲಿನಿಂದಲೂ ಲಾರ್ಡ್ ಅರ್ವಿನ್ನರೊಡನೆ ಕಲೆತು ಪರಸ್ಪರ ಸಮ್ಮತಿಯಿಂದಲೇ ಪ್ರತಿಯೊಂದು ಕಾರ್ಯವನ್ನೂ ನಡೆಯಿಸುತ್ತಿರುವದೆಂಬುದನ್ನೂ, ಈಗ ಅನುಸರಿಸುತ್ತಿರುವ ತತ್ವವನ್ನು ಬದಲಾಯಿಸಿ ವರ್ತಿಸುವದಾದರೆ, ಸರ್ವಸಮ್ಮತವಾದ ತೀರ್ಮಾನವು ಅಸಾಧ್ಯವಾಗಿ ಪರಿಣಮಿಸಿ ಹೆಚ್ಚಿನ ದಬ್ಬಾಳಿಕೆಗೂ, ಹೆಚ್ಚಿನ ಅನರ್ಥಗಳಿಗೂ ಕಾರಣವಾಗುವದೆಂಬುದನ್ನೂ ಮಿ|| ಚರ್ಚ್‌ಹಿಲ್‌ರವರೇ ಚೆನ್ನಾಗಿ ಅರಿತಿರುವರು."

ಮ್ಯಾಂಚೆಸ್ಟರ್ ಕಂಪೆನಿಯ ಪತ್ರ.

"ಭಾರತಸ್ವಾತಂತ್ರ್ಯ ಸಂಪಾದನೆಯ ಪ್ರಯತ್ನಗಳಿಗೆ ನಾವು ಸಂಪೂರ್ಣ ಸಹಾನುಭೂತಿಯುಳ್ಳವರಾಗಿರುತ್ತೇವೆ. ಸರಕಾರದವರು ಸಹ ಪರಿಷತ್ತಿನಲ್ಲಿ ಭರತಖಂಡದ ಅಭಿಲಾಷೆಯನ್ನು ಬಹಳ ಮಟ್ಟಿಗೆ ಪೂರೈಸಿಕೊಡುವ ಅಭಿಪ್ರಾಯವುಳ್ಳವರಾಗಿರುತ್ತಾರೆ. ಭಾರತಸ್ವಾತಂತ್ರ್ಯಸಮರವನ್ನು ದಬ್ಬಾಳಿಕೆಯಿಂದ ಅಡಗಿಸುವದು ಎಂದಿಗೂ ಸಾಧ್ಯವಿಲ್ಲ. ಹಾಗೆ ಅದನ್ನು ದಬ್ಬಾಳಿಕೆಯಿಂದ ಅಡಗಿಸಲೂ ಬಾರದು. ವಿದ್ಯಮಾನಗಳನ್ನೆಲ್ಲ ಸಂಪೂರ್ಣವಾಗಿ ಚರ್ಚೆ ಮಾಡಿದಹೊರತು ಬ್ರಿಟನ್ ದೇಶವು ಭರತಖಂಡದ ಬೇಡಿಕೆಗಳನ್ನು ಪೂರೈಸಿಕೊಡಲೊಪ್ಪುವದಿಲ್ಲ. ಆದುದರಿಂದ ಉಭಯ ಪಕ್ಷದವರೂ ತಟಸ್ಥರಾಗಿ, ಉಭಯದೇಶದ ರಾಜನೀತಿಜ್ಞರೂ ಕಲೆತು ಈ ವಿಷಯದ ತೀರ್ಮಾನವನ್ನು ಮಾಡಬೇಕು.

ಬ್ರಿಟಿಷ್ ಮಾಲುಗಳ ಬಹಿಷ್ಕಾರವು ಬ್ರಿಟಿಷ್ ಜನರ ಸಹಾನುಭೂತಿಯನ್ನು ದೂರಮಾಡಲು ಕಾರಣವಾಗಿರುವದು. ಇದರಿಂದ ಭರತಖಂಡಕ್ಕೆ ಮತ್ತಷ್ಟು ತೊಂದರೆಯೇ ಸಂಭವಿಸುವದಲ್ಲದೆ ಬೇರಿಲ್ಲ. ಮಹಾತ್ಮಾಗಾಂಧಿಯವರ ವಿಷಯದಲ್ಲಿ ನಮಗೆ ಸಂಪೂರ್ಣ ಗೌರವವುಂಟು. ಆದರೆ ಸರ್ಕಾರವನ್ನು ಪ್ರತಿಭಟಿಸುತ್ತಿರುವ ಅವರ ತತ್ವಗಳು ಮಾತ್ರ ತಪ್ಪಾಗಿರುವವು. ಅವರು ಕಾರಾಗೃಹವಾಸಿಗಳಾಗಿರುವದನ್ನು ನೋಡಿ ನಾವು ಬಹಳ ವಿಷಾದಿಸುತ್ತೇವೆ. ಮಹಾತ್ಮಾಗಾಂಧಿಯವರು ಸರ್ಕಾರವನ್ನು ಪ್ರತಿಭಟಿಸುವದರಿಂದಾಗಲೀ, ಸರ್ಕಾರದವರು ಮಹಾತ್ಮಾಗಾಂಧಿಯವರನ್ನು ಜೈಲಿನಲ್ಲಿಡುವದರಿಂದಾಗಲೀ ಏನೂ ಪ್ರಯೋಜನವಾಗುವದಿಲ್ಲ. ಭಾರತೀಯ ಮುಖಂಡರು ತಮ್ಮ ಬೇಡಿಕೆಗಳನ್ನು ಚರ್ಚೆಯಿಲ್ಲದೆ ಪೂರೈಸಿಕೊಡುವಂತೆ ಸರ್ಕಾರವನ್ನು ಬಲಾತ್ಕರಿಸಬೇಕೆಂದು ನಿರ್ಧರಿಸಿರುವರು. ಇತ್ತ ಬ್ರಿಟಿಷ್ ಸರ್ಕಾರದವರು ಭಾರತಸ್ವಾತಂತ್ರ್ಯ ಚಳವಳಿಯ ವಿಷಯದಲ್ಲಿ ನಾಕಾದಷ್ಟು ಗಮನ ಕೊಡದೆ, ಬಹು ಸಾವಕಾಶವಾಗಿ ಕೆಲಸಮಾಡುತ್ತಿರುವರು. ಪರಸ್ಪರ ವಿರೋಧಗಳಾದ ಇವರೀರ್ವರ ತತ್ವಗಳಿಂದ ಅನರ್ಥ ಪರಂಪರೆಯಲ್ಲದೆ ಮತ್ತೇನೂ ಆಗಲಾರದು. ಭರತಖಂಡವು ಬ್ರಿಟನ್ನನ್ನು ನಂಬಬೇಕು. ಬ್ರಿಟನ್ ದೇಶವು ಭರತಖಂಡವನ್ನು ನಂಬಬೇಕು. ಭರತಖಂಡವು ಸೌಖ್ಯವಾಗಿರಬೇಕೆಂಬುದೇ ನಮ್ಮ ಅಭಿಲಾಷೆಯಾಗಿರುವದು. ಪರಸ್ಪರ ಸೌಹಾರ್ದ್ರಭಾವ ಮತ್ತು ಗೌರವವು ಮಾತ್ರವೇ ಭಾರತಸಮಸ್ಯೆಯನ್ನು ಬಿಡಿಸಬಲ್ಲವು."

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.
ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗ್ಯೆರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿರ್ದಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [6]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭನಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಶುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಕಾಜಿನಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಶುದ್ಧಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭ್ಯಾತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಘನ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಷೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂಡಲೇ ಕೂಡಿರಬೇಕಾದವರಿಗೂ, ಪುರುಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಕುಮಾಕಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[21] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿದ್ದಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರಸಿಕರು ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವುದೂ ಇಲ್ಲ. ೬೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗೊತ್ತಾಗುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ನೈಜ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [7]

ಪತ್ತೆ :—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧಕೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ ? ಆದರೆ ಕಂಪೌಂಡು ಸಿರಪ್ ಕಾರ್ಡಸ್ ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, ಪಿತ್ತಶಮನ ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿರೋಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಂಚರು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ ಆರೋಗ್ಯ ಭಾಗ್ಯದ ನೀತಿಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[5] ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.

[6ನೇ ಪುಟದಿಂದ ಮುಂದುವರಿದುದು.]

ಆಂಗ್ಲೇಯ ಅಧಿಕಾರಿಯ ಮನಸ್ಸಿನಲ್ಲಿಯೂ ತಲೆದೋರಿದಂತೆ ಕಾಣಿಸುವದಿಲ್ಲ. ಅಧಿಕಾರಿಗಳ ನಯವಾದ ಮಾತುಗಳಲ್ಲಿ ನಮಗೆ ಯಾವ ನಂಬಿಕೆಯೂ ಇಲ್ಲ. ಅನೇಕ ಶತಮಾನಗಳಿಂದಲೂ ಬ್ರಿಟಿಷರ ಮನಸಿನಲ್ಲಿ ಬೇರೂರಿರುವ ವ್ಯಾಪಾರದ ತತ್ತ್ವವು ಈ ಭರತಖಂಡದಲ್ಲಿ ಆಗುತ್ತಿರುವ ನೈತಿಕ, ಆರ್ಥಿಕ ಮತ್ತು ರಾಜಕೀಯ ನಾಶಪರಂಪರೆಗಳನ್ನು ಕಣ್ಣಿಗೆ ಕಾಣದಂತೆ ಮಾಡಿರುವದು.

ಆದುದರಿಂದ ನೀವು ಸದುದ್ದೇಶದಿಂದ ಕೈಕೊಂಡಿರುವ ಈ ವಿಷಯವಾಗಿ ನಾವು ಇಷ್ಟುಮಾತ್ರ ಹೇಳಬಲ್ಲೆವು.

"ವೈಸರಾಯರು ನಿಮಗೆ ಕೊಟ್ಟಿರುವ ಉತ್ತರದಲ್ಲಿ ಅವರು ಯಾವ ವಿಷಯವನ್ನೂ ಸ್ಪಷ್ಟವಾಗಿ ಹೇಳಿರುವದಿಲ್ಲ. ಲಾಹೋರಿನಲ್ಲಿ ತೀರ್ಮಾನಿಸಲ್ಪಟ್ಟ ರಾಷ್ಟ್ರೀಯ ಬೇಡಿಕೆಗೆ ಅವರು ಯಾವ ಬೆಲೆಯನ್ನೂ ಕೊಟ್ಟಿರುವದಿಲ್ಲ. ಆದುದರಿಂದ ಈ ವಿಷಯದಲ್ಲಿ ರಾಷ್ಟ್ರೀಯ ಸಭೆಯ ವರ್ಕಿಂಗ್‌ಕಮಿಟಿಯಲ್ಲಿ ಅಥವಾ ರಾಷ್ಟ್ರೀಯ ಮಹಾ ಸಭೆಯಲ್ಲಿ ಈ ವಿಷಯವನ್ನು ಚೆನ್ನಾಗಿ ಚರ್ಚಿಸುವವರೆಗೆ ನಾವು ಯಾವ ತೀರ್ಮಾನವನ್ನೂ ಹೇಳಲಾರೆವು; ನಮ್ಮ ಅಭಿಪ್ರಾಯವು ಮಾತ್ರ ಈ ರೀತಿಯಾಗಿರುವದು.

(a) ಭರತಖಂಡಕ್ಕೆ ಬೇಕಾದ ಬ್ರಿಟಿಷ್ ಸಾಮ್ರಾಜ್ಯದಿಂದ ಬೇರೆಯಾಗುವ ಅಧಿಕಾರವನ್ನು ಕೊಡಬೇಕು. (b) ಭರತಖಂಡಕ್ಕೆ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನೂ, ರಾಜ್ಯರಕ್ಷಣೆ, ಆರ್ಥಿಕಸಂಪತ್ತಿನ ರಕ್ಷಣೆ ಹಾಗೂ ಗಾಂಧೀಜಿಯವರ ಪತ್ರದಲ್ಲಿ ಕಂಡ 11 ಷರತ್ತುಗಳ ವಿಷಯಗಳಲ್ಲಿಯೂ ಸಂಪೂರ್ಣ ಅಧಿಕಾರವನ್ನೂ ಕೊಡಬೇಕು. (c) ಇದುವರೆಗೆ ಬ್ರಿಟಿಷರು ಅನುಭವಿಸುತ್ತಿದ್ದ ಅನುಕೂಲತೆಗಳ ವಿಷಯವನ್ನೂ, ಭರತಖಂಡವು ಹೊತ್ತಿರುವ ಅಪಾರವಾದ ಸಾಲದ ವಿಚಾರವನ್ನೂ ನಿಷ್ಪಕ್ಷಪಾತವಾದ ವಿಚಾರಣಾಕರ್ತರ ಮುಂದೆ ಕೂಲಂಕಷವಾಗಿ ವಿಚಾರಣೆ ಮಾಡಿಸುವ ಅಧಿಕಾರವನ್ನು ಕೊಡಬೇಕು.

ವಿ. ಸೂ. ಅಧಿಕಾರವನ್ನು ನಮಗೆ ಒಪ್ಪಿಸಲು ಬೇಕಾದ ಅವಧಿಯಲ್ಲಿ ಭರತಖಂಡದವರು ಪಾಲಿಸಬೇಕಾದ ನಿಯಮಗಳನ್ನು ಭಾರತೀಯರ ಪ್ರತಿನಿಧಿಗಳೇ ತೀರ್ಮಾನಿಸಬೇಕು.

(2) ಮೇಲೆ ಹೇಳಿದ ಷರತ್ತುಗಳನ್ನು ಬ್ರಿಟಿಷ್ ಸರಕಾರವು ಅನುಮೋದಿಸುವದಾದರೆ, ನಾವು ಸತ್ಯಾಗ್ರಹ ಚಳವಳಿಯನ್ನು ನಿಲ್ಲಿಸುವ ವಿಷಯದಲ್ಲಿ ಅವಶ್ಯಕವಾದ ರೀತಿಯಲ್ಲಿ ಕಾಂಗ್ರೆಸ್ ವರ್ಕಿಂಗ್‌ಕಮಿಟಿಗೆ ಶಿಫಾರಸ್ ಮಾಡುವೆವು. ಅಂದರೆ ಸಾಮಾನ್ಯಗಳಾದ ಕಾಯಿದೆಭಂಗಗಳನ್ನು ಮಾತ್ರ ನಿಲ್ಲಿಸುವೆವೇ ಹೊರತು ಶಾಂತಿಮಯವಾದ ಪರದೇಶವಸ್ತ್ರ ಬಹಿಷ್ಕಾರ ಮತ್ತು ಮದ್ಯಪಾನ ನಿಷೇಧಕಾರ್ಯವನ್ನು ನಿಲ್ಲಿಸುವದಿಲ್ಲ. ಬೇಕಿದ್ದರೆ ಸರ್ಕಾರದವರೇ ಇವುಗಳಿಗೆ ತಕ್ಕ ಪ್ರತಿಬಂಧಕಗಳನ್ನು ಮಾಡಬಹುದು. ಉಪ್ಪಿನ ತಯಾರಿಯಂತೂ ನಡದೇ ನಡೆಯುವದು. ಆದಕ್ಕಾಗಿ ಉಪ್ಪಿನ ಕಾಯಿದೆಯಪ್ರಕಾರ ಯಾರನ್ನೂ ಶಿಕ್ಷಿಸಬಾರದು. ಇನ್ನು ಮುಂದೆ ಉಪ್ಪಿನ ಕೋಠಿಗಳ ಮೇಲೆ ದಾಳಿಯಿಡುವದಿಲ್ಲ.

(3) ಅಸಹಕಾರ ಚಳವಳಿಯನ್ನು ನಿಲ್ಲಿಸಿದ ಕೂಡಲೇ, (a) ವಿಚಾರಣೆಯಾಗಿರುವ ಅಥವಾ ವಿಚಾರಣೆಯಾಗದಿರುವ ಹಾಗೂ ಅಹಿಂಸಾತ್ಮಕ ಅಪರಾಧಗಳನ್ನು ಮಾಡಿದ್ದ ಎಲ್ಲ ರಾಜಕೀಯ ಕೈದಿಗಳನ್ನೂ ಕೂಡಲೇ ಬಿಡುಗಡೆಮಾಡಬೇಕು. (b) ಉಪ್ಪಿನ ಕಾಯಿದೆ,ಪ್ರೆಸ್ ಕಾಯಿದೆ ಮತ್ತು ರೆವಿನ್ಯೂಕಾಯಿದೆಗಳಿಂದ ಜಪ್ತುಮಾಡಿರುವ ಎಲ್ಲ ಆಸ್ತಿಗಳನ್ನೂ ಬಿಟ್ಟುಕೊಡಬೇಕು. (c) ಸತ್ಯಾಗ್ರಹಿಗಳಿಂದಲೂ, ಪತ್ರಿಕಾಕರ್ತರಿಂದಲೂ ವಸೂಲಾಗಿರುವ ದಂಡವನ್ನು ಹಿಂತಿರುಗಿ ಕೊಡಬೇಕು. (d) ರಾಜೀನಾಮೆ ಕೊಟ್ಟಿರುವ ಅಥವಾ ಕೆಲಸದಿಂದ ನಿವೃತ್ತರಾಗಿರುವ ಎಲ್ಲ ಅಧಿಕಾರಿಗಳನ್ನೂ ಪುನಃ ಕೆಲಸದ ಮೇಲೆ ತೆಗೆದುಕೊಳ್ಳಬೇಕು.

(ಮೇಲ್ಕಂಡ ಷರತ್ತುಗಳನ್ನು ಹಿಂದಿನ ಅಸಹಕಾರ ಚಳವಳಿಯ ಕಾಲಕ್ಕೂ ಅನ್ವಯಿಸಿಕೊಳ್ಳಬೇಕು.)

(c) ವೈಸರಾಯರ ನೂತನ ಕಾಯಿದೆಗಳೆಲ್ಲವನ್ನೂ ರದ್ದು ಪಡಿಸಬೇಕು.

(4) ಮೇಲ್ಕಂಡ ವಿಷಯಗಳೆಲ್ಲವೂ ಸಮರ್ಪಕವಾಗಿ ತೀರ್ಮಾನವಾದನಂತರ, ಕಾಂಗ್ರೆಸ್ ಪಕ್ಷದವರು ದುಂಡುಮೇಜಿನ ಪರಿಷತ್ತಿಗೆ ಹೋಗುವ ವಿಚಾರವನ್ನು ತೀರ್ಮಾನಿಸಲಾಗುವದು."

ಇತಿ ನಿಮ್ಮ ಪ್ರೀತಿಪಾತ್ರರಾದ,
ಮೋತಿಲಾಲ್‌ನೆಹರೂ,
ಎಂ. ಕೆ. ಗಾಂಧಿ,
ಸರೋಜಿನಿನಾಯಡು,
ವಲ್ಲಭಭಾಯಿ ಪಟೇಲ,
ಜಯರಾಮದಾಸ್ ದೌಲತ್‌ರಾಂ,
ಸಯದ್‌ಮಹಮುದ್,
ಜವಾಹರಲಾಲ್‌ನೆಹರೂ.

ಮೇಲ್ಕಂಡ ಪತ್ರವನ್ನು ಮಿ|| ಜಯಕರ್‌ರವರು ಆಗಸ್ಟ್ 21 ನೆಯ ತಾರೀಖಿನ ದಿವಸ ವೈಸರಾಯರಿಗೆ ಒಪ್ಪಿಸಿದರು. 25 ನೆಯ ತಾರೀಖಿನ ದಿವಸ ಸರ್ ಸಪ್ರೂರವರು ಅಲ್ಲಿಗೆ ಹೋಗಿ, ವೈಸರಾಯರು ಹಾಗೂ ಕೌನ್ಸಿಲ್ಲಿನ ಕೆಲವು ಮೆಂಬರರೊಡನೆ 25, 26, 27 ನೇ ತಾರೀಖುಗಳಲ್ಲಿ ಎಲ್ಲ ವಿಷಯಗಳನ್ನೂ ಚರ್ಚೆಮಾಡಿದರು. 27 ನೆಯ ತಾರೀಖಿನ ದಿವಸ ವೈಸರಾಯರು ಕಾಂಗ್ರೆಸ್ ಮುಖಂಡರಿಗೆ ತೋರಿಸಿರೆಂದು ಒಂದು ಪತ್ರವನ್ನು ಬರೆದುಕೊಟ್ಟರು. ಕಾಂಗ್ರೆಸ್ ಮುಖಂಡರ ಬೇಡಿಕೆಗಳ ವಿಷಯದಲ್ಲಿ ವೈಸ್‌ರಾಯರ ಅಭಿಪ್ರಾಯವು ಈ [illegible]ರುವದು."

(1) [illegible]ಮೇಜಿನ ಪರಿಷತ್ತಿನಲ್ಲಿ ಚರ್ಚಿಸಬೇಕಾದ [illegible] ಸಂಬಂಧವಾಗಿ ಪರಿಷತ್ತಿನಲ್ಲಿ ಯಾವ ನಿ[illegible]ಲ್ಲ. ಬೇಕಾದವರು ಬೇಕಾದ ವಿಷಯವನ್ನು ಚರ್ಚಿಸಬಹುದು. ಅಲ್ಲಿ ಮಾಡಲ್ಪಡುವ ತೀರ್ಮಾನದ ಆಧಾರದ ಮೇಲೆಯೇ ಪಾರ್ಲಿಮೆಂಟಿನಲ್ಲಿ ಚರ್ಚೆಯು ನಡೆಯುವದು. ಭಾರತೀಯರಿಗೆ ಸಾಧ್ಯವಾದಷ್ಟು ಹೆಚ್ಚಿನ ರಾಜಕೀಯ ಸುಧಾರಣೆಗಳನ್ನು ಕಲ್ಪಿಸಿಕೊಡಬೇಕೆಂಬುದೇ ನಮ್ಮ ಅಭಿಪ್ರಾಯವಾಗಿದೆ.

(2) ಭರತಖಂಡವು ತನಗೆ ಬೇಡವಾದಾಗ ಸಾಮ್ರಾಜ್ಯದಿಂದ ಬೇರೆಯಾಗುವ ಅಧಿಕಾರವನ್ನು ಕೊಡಬೇಕೆಂಬ ಪ್ರಶ್ನೆಯು ನ್ಯಾಯವಾದುದಲ್ಲ. ಆದರೂ ಮಿ|| ಗಾಂಧಿಯವರು ಕಾನ್ಫರೇನ್ಸಿನಲ್ಲಿ ಆ ಪ್ರಶ್ನೆಯನ್ನು ಕೇಳುವುದಾದರೆ, ವೈಸರಾಯರು ಆ ವಿಷಯವನ್ನು ಸೆಕ್ರೆಟರಿ ಆಫ್ ಸ್ಟೇಟರವರಿಗೆ ಮುಂಚಿತವಾಗಿ ತಿಳಿಸುವರು.

(3) ಸಾಲ ಮೊದಲಾದವುಗಳ ವಿಚಾರದಲ್ಲಿ, ಬೇರೆ ವಿಚಾರಣಾಕರ್ತರ ಮುಂದೆ ವಿಚಾರಮಾಡಿಸಿ, ಸಾಲಗಳನ್ನು ವಜಾಮಾಡಿಸುವ ವಿಷಯವನ್ನು ವೈಸರಾಯರು ಎಂದಿಗೂ ಒಪ್ಪುವದಿಲ್ಲ. ಆದರೆ ಸಾಲಗಳ ವಿಚಾರವನ್ನು ಪರಿಷತ್ತಿನಲ್ಲಿಯೇ ಪ್ರಸ್ತಾಪಿಸಿ ಪರೀಕ್ಷಿಸಬಹುದಾಗಿದೆ.

(4) ಉಪ್ಪಿನ ತೆರಿಗೆಯನ್ನು ರದ್ದುಮಾಡುವ ವಿಷಯದಲ್ಲಿ (a) ಸೈಮನ್‌ಸ್ಪಂಕರ ವರದಿಯಂತೆ ಒಪ್ಪಿಕೊಳ್ಳುವದಾದರೆ ಅದರಂತೆ ಸುಧಾರಿಸಲ್ಪಡುವದು. (b) ಈಗಾಗಲೇ ಸರ್ಕಾರಕ್ಕೆ ವಿಶೇಷ ನಷ್ಟ ಸಂಭವಿಸಿರುವದರಿಂದ ಈ ಆದಾಯವನ್ನು ಬಿಡುವದು ಸಾಧ್ಯವಿಲ್ಲ. ಆದರೆ ನ್ಯಾಯವಿಧಾಯಕ ಸಭೆಯವರು ಅದನ್ನು ಬಿಡಲು ಒಪ್ಪಿ, ಆ ಉತ್ಪತ್ತಿಯನ್ನು ಬೇರೆ ವಿಧದಿಂದ ಹೊಂದುವ ಮಾರ್ಗವನ್ನು ತೋರಿಸಿದರೆ, ವೈಸರಾಯರು ಅದರಂತೆ ಮಾಡುವರು. ಆದರೆ ಉಪ್ಪಿನ ಕಾಯಿದೆಯು ಜೀವಿಸುವವರೆಗೆ ಉಪ್ಪಿನಕಾಯಿದೆಭಂಗಕ್ಕಾಗಿ ಶಿಕ್ಷಿಸಲ್ಪಡಬೇಕಾಗುವದು. ಶಾಂತಿಸ್ಥಾಪನೆಯಾದನಂತರ, ಭಾರತೀಯಮುಖಂಡರು, ಬಡಜನರ ಅನುಕೂಲಕ್ಕಾಗಿ ಏನಾದರೊಂದು ಸಲಹೆಯನ್ನು ತಂದರೆ, ವೈಸರಾಯರವರು ಸಂತೋಷದಿಂದ ಮುಖಂಡರ ಒಂದು ಪರಿಷತ್ತನ್ನು ಕೂಡಿಸಿ ವಿಷಯವನ್ನು ಚರ್ಚಿಸುವರು.

(5) ಬಹಿಷ್ಕಾರ ಚಳವಳಿಯಿಂದ ಇತರ ಜನರ ಮನಸ್ಸಿನಲ್ಲಿ ದ್ವೇಷಾಸೂಯೆಗಳು ಹುಟ್ಟುವದಾಗಲೀ, ಹೊಡೆದಾಟಗಳಿಗೆ ಅವಕಾಶವಾಗುವದಾಗಲೀ ಆದರೆ, ಅಂಥ ನಡವಳಿಕೆಗಳನ್ನು ವೈಸರಾಯರು ನೂತನ ಶಾಸನಗಳಿಂದ ಅಡಗಿಸಬೇಕಾಗುವದು. ಶಾಂತಿಸ್ಥಾಪನೆಯಾದನಂತರ, ಮೇಲ್ಕಂಡ ಷರತ್ತಿಗೆಅಧೀನಪಡಿಸಿ, ಬಹಿಷ್ಕಾರಚಳವಳಿಗೆ ಸಂಬಂಧಪಟ್ಟ ಕಾಯಿದೆಯನ್ನು ರದ್ದುಪಡಿಸಲಾಗುವದು.

(6) ರಾಜೀನಾಮೆ ಕೊಟ್ಟ ಅಥವಾ ವಜಾಮಾಡಲ್ಪಟ್ಟ ಅಧಿಕಾರಿಗಳ ವಿಷಯದಲ್ಲಿ, ವೈಸರಾಯರು ಈ ವಿಷಯವನ್ನು ಸ್ಥಳೀಯ ಸರ್ಕಾರಗಳಿಗೆ ಒಪ್ಪಿಸುವರು. ಅವರಾದರೂ, ಉದಾರಬುದ್ಧಿಯಿಂದ ವಿಚಾರಮಾಡಿ ಅವಕಾಶವಿದ್ದ ಸಂದರ್ಭಗಳಲ್ಲಿ ನಿವೃತ್ತರಾದ ಅಧಿಕಾರಿಗಳನ್ನು ಪುನಃ ಕೆಲಸದಮೇಲೆ ತೆಗೆದುಕೊಳ್ಳುವರು.

(7) ಪತ್ರಿಕಾ ಕಾನೂನನ್ನು ರದ್ದುಪಡಿಸುವ ವಿಷಯದಲ್ಲಿ ಯಾವ ಅಭ್ಯಂತರವೂ ಇಲ್ಲ.

(8) ಜಪ್ತುಮಾಡಲ್ಪಟ್ಟಿರುವ ಆಸ್ತಿಗಳ ವಿಷಯವನ್ನು ಮಾತ್ರ ಸ್ವಲ್ಪ ಯೋಚಿಸಬೇಕಾಗುವದು. ಏಕೆಂದರೆ; ಹರಾಜಾಗಿರುವ ಆಸ್ತಿಗಳ ವಿಷಯದಲ್ಲಿ ಮೂರನೆಯವರ ಹಕ್ಕುಬಾಧ್ಯತೆಗಳನ್ನು ಪರಿಗಣಿಸಬೇಕಾಗಿ ಬರುವದು. ಈ ವಿಷಯವನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಿ, ಸಾಧ್ಯವಾದಷ್ಟು ಅನುಕೂಲವಾದ ಮಾರ್ಗದಲ್ಲಿ ತೀರ್ಮಾನಮಾಡಿಸಲಾಗುವದು.

(9) ರಾಜಕೀಯಕೈದಿಗಳನ್ನು ಬಿಡುಗಡೆಮಾಡುವ ವಿಚಾರವನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸಿ, ಸಾಧ್ಯವಾದಷ್ಟು ನ್ಯಾಯಸಮ್ಮತವಾದ ಮಾರ್ಗದಲ್ಲಿ ವರ್ತಿಸುವಂತೆ ಶಿಫಾರಸ್ ಮಾಡುವರು.

ಅಲ್ಲಿಂದ ಸಪ್ರೂಜಯಕರರು, ಆಗಸ್ಟ್ 28 ನೆಯ ತಾರೀಖಿನ ದಿವಸ ಹೊರಟು 30 ಮತ್ತು 31 ನೆಯ ತಾರೀಖುಗಳಲ್ಲಿ ಅಲಹಾಬಾದಿನಲ್ಲಿ ನೆಹರೂ ಮತ್ತು ಡಾ|| ಸಯದ್‌ಮಹಮುದ್‌ರವರನ್ನು ಕಂಡು, ಎಲ್ಲ ವಿಷಯಗಳನ್ನು ತಿಳಿಯಪಡಿಸಿದರು. ನೆಹರೂರವರು, ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ, ಕಡೆಯ ತೀರ್ಮಾನವನ್ನು ನೀವೇ ಹೇಳಿ ಕಳುಹಿಸಿರೆಂದು ಮಹಾತ್ಮರವರಿಗೆ ಒಂದು ಪತ್ರವನ್ನು ಬರೆದು ಕಳುಹಿಸಿದರು, ಸಪ್ರೂಜಯಕರರು ಸದರೀ ಪತ್ರ ಸಮೇತವಾಗಿ ಎರವಾಡಾಕ್ಕೆ ಸೆಪ್ಟಂಬರ್ 3, 4 ಮತ್ತು 5 ನೇ ತಾರೀಖುಗಳಲ್ಲಿ ಮಹಾತ್ಮರು ಮತ್ತು ಇತರ ಮುಖಂಡರೊಡನೆ ಚರ್ಚೆಮಾಡಿದರು. ಸದರೀ ಚರ್ಚೆಗಳು ಪೂರೈಸಿದ ನಂತರ ಮಹಾತ್ಮರು ತಮ್ಮ ಕಡೆಯ ತೀರ್ಮಾನವನ್ನು ಬರೆದುಕೊಟ್ಟಿರುವರು. ಅದರ ಸಾರಾಂಶವನ್ನು ಈ ಕೆಳಗೆ ಕೊಟ್ಟಿದೆ.

ಎರವಾಡಾ ಸೆಂಟ್ರಲ್‌ಜೈಲ್.
ತಾ|| 5-9-1930.

ಪ್ರಿಯಮಿತ್ರರೇ !

ಇದುವರೆಗೆ ನಡೆದ ಎಲ್ಲ ವಿದ್ಯಮಾನಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡುವಲ್ಲಿ ವೈಸರಾಯರು ನಮ್ಮ ಯಾವ ಷರತ್ತುಗಳಿಗೂ ಸಮಂಜಸವಾದ ಒಪ್ಪಿಗೆಯನ್ನು ಕೊಟ್ಟಿಲ್ಲವೆಂದು ಸ್ಪಷ್ಟವಾಗಿರುವದು. ವೈಸರಾಯರು ನಮ್ಮ ಪತ್ರದ ಅಭಿಪ್ರಾಯವು ವಿಚಾರಣಾಯೋಗ್ಯವಲ್ಲವೆಂದೂ ಅದರಂತೆ ವರ್ತಿಸುವದು ಅಸಾಧ್ಯವೆಂದೂ ವ್ಯಕ್ತಗೊಳಿಸಿರುವರು. ಈಗ ಭರತಖಂಡವು ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಪಡೆಯುವದಾದರೂ, ಉಭಯಪಕ್ಷದವರಿಗೂ ಯಾವದೊಂದು ನಿರ್ಬಂಧವಿಲ್ಲದಂತೆ ಬೇಕಾದಾಗ ಬೇರೆ ಬೇರೆಯಾಗಬಹುದೆಂಬ ಒಪ್ಪಿಗೆಯಿಂದಲೇ ಆಗಬೇಕಾಗಿರುವದು. ಭರತಖಂಡವು ಸಾಮ್ರಾಜ್ಯದಲ್ಲಿಯೇ ಇರಬೇಕಾದರೆ, ಆ ಸಂಬಂಧದಿಂದ ಆಗುವ ಫಲಾಫಲಗಳು ಭಾರತೀಯರ ಮನಸ್ಸಿಗೆ ಚೆನ್ನಾಗಿ ತಿಳಿಯುವಂತೆ ಮಾಡಬೇಕು. ಇಂಥ ಪರಸ್ಪರ ಸೌಹಾರ್ದಭಾವವು ಉತ್ಪನ್ನವಾದ ಹೊರತು ಭರತಖಂಡವು ಯಾವ ನಿಬಂಧನೆಗೂ ಒಪ್ಪುವಂತಿಲ್ಲ. ಆದುದರಿಂದ ಬ್ರಿಟಿಷ್ ಸರಕಾರವು ಅಂಥ ಸೌಹಾರ್ದಭಾವವು ಹುಟ್ಟಲು ಅವಕಾಶಕೊಡುವ ನಮ್ಮ ಷರತ್ತುಗಳಿಗೆ ಅವಕಾಶಕೊಡದಿರುವದಾದರೆ ನಾವು ರಾಷ್ಟ್ರೀಯ ಸಭೆಯ ಪಕ್ಷವನ್ನು ಮುಂದುವರಿಸಲೇಬೇಕು.

ಉಪ್ಪಿನ ತೆರಿಗೆಯನ್ನು ರದ್ದುಮಾಡುವ ವಿಷಯದಲ್ಲಿ ವೈಸರಾಯರ ಉತ್ತರವು ನನಗೆ ಮತ್ತಷ್ಟು ವ್ಯಸನವನ್ನುಂಟುಮಾಡುವದು. ಇದರಿಂದ ನಿಮ್ನಾದ ಉನ್ನತ ಪ್ರದೇಶದಲ್ಲಿರುವ ಭಾರತಸರಕಾರದ ಅಧಿಕಾರಿಗಳಿಗೆ

[1 ನೇ ಪುಟವನ್ನು ನೋಡಿರಿ.]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್‌ಪಾಲಿಪ್ಪುದೀಲೋಕಮಂ ||

ಸಂಪಾದಕರು—ಅಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಸೆಪ್ಟಂಬರ್ ೧೯೩೦ [ಸಂಚಿಕೆ ೨೦

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಧರ್ಮಾಧಿಕಾರಸ್ಥಾನದಿಂದ

ಕರ್ನಾಟಕ ಮಹಾರಾಷ್ಟ್ರ ತೈಲಂಗ ನಿಜಾಮ ಮೊದಲಾದ ಪ್ರದೇಶಗಳಲ್ಲಿರತಕ್ಕ ಸಮಸ್ತ ವೀರಶೈವ ಮಂಡಳಿಗೆ ಶ್ರುತಪಡಿಸುವದೇನಂದರೆ—

ವೀರಶೈವರ ದೀಕ್ಷಾ ವಿವಾಹಾದಿಕಾರ್ಯಗಳಲ್ಲಿ ಪಂಚಕಲಶಸ್ಥಾಪನೆ ಮಾಡುತ್ತಿರುವ ಶಾಸ್ತ್ರಶಿಷ್ಟಾಚಾರ ಪದ್ಧತಿಯು ಅನೂಚಾನವಾಗಿ ನಡೆದುಬಂದಿರುವಲ್ಲಿ, ಈಚೆಗೆ ಕೆಲವರು ಷಟ್ಕಲಶಗಳನ್ನು ಸ್ಥಾಪಿಸಬೇಕೆಂದು ವಿವಾದಿತರಾಗಿ ಅನೇಕ ವಿಘ್ನಗಳನ್ನುಂಟುಮಾಡುತ್ತಿರುವ ವಿಷಯವು ವಿದಿತವಾಗಿರುವದಲ್ಲದೆ, ಶ್ರೀ ಮಹಾ|| || ಸನ್ನಿಧಿಯಲ್ಲಿ ಶಾಸ್ತ್ರಾಧಾರಪೂರ್ವಕ ವಿಚಾರಣೆ ನಡೆದು ತೀರ್ಮಾನಿಸಿ ಹುಕುಂ ಜಾರಿಯಲ್ಲಿರುವಂತೆ ಸರ್ಕ್ಯೂಲರ್ ಹೊರಡಿಸಬೇಕೆಂದು ಅರ್ಜಿಗಳು ಸಹ ಬಂದಿರುವದರಿಂದ ವಿವಾದಿತರಾದ ಉಭಯಪಾರ್ಟಿಗಳಿಗೂ ವಿಚಾರಣೆ ಬಗ್ಗೆ ರಜಿಸ್ಟರ್ ನೋಟೀಸ್ ಮಾಡಲ್ಪಟ್ಟಿರುತ್ತದೆ. ಪಂಚಕಲಶವಾದಿಗಳೂ ಷಟ್ಕಲಶವಾದಿಗಳೂ ಪ್ರಮಾಣಗ್ರಂಥಗಳನ್ನು ತೆಗೆದುಕೊಂಡು ಶಾಸ್ತ್ರಾರ್ಥ ಮಾಡುವವರೊಡನೆ ತಾ|| 25-9-30 ನೆಯ ಗುರುವಾರ ದಿವಿ 12 ಘಂಟೆಗೆ ಮೈಸೂರು ಸ್ಟೇಟ ಹಾಸನ ಡಿಸ್ಟ್ರಿಕ್ಟ ಅರಶೀಕೆರೆ ತಾಲೂಕು ಹುಲ್ಯಾರು ಮುಕ್ಕಾಮಿನಲ್ಲಿ (ದಸರಾ ಮಹೋತ್ಸವ ಪೆಂಡಾಲ್) ಧಾರ್ಮಿಕ ಮಹಾಸಭಾಸ್ಥಾನಕ್ಕೆ ಹಾಜರಾಗಿ ಲಿಖಿತಮೂಲಕ ಸ್ಟೇಟಮೆಂಟ ದಾಖಲ್ಮಾಡಿಸಿ ವಿವಾದದ ಜವಾಬು ಪೂರೈಸಿಕೊಳ್ಳತಕ್ಕದ್ದು. ಮೇಲ್ಕಂಡ ವಾಯಿದೆಯಲ್ಲಿ ಸಂಗ್ರಹವಾದ ರಿಕಾರ್ಡುಗಳಮೇಲೆ ತಕ್ಕ ಫೈಸಲೋತ್ತರದ ಸರ್ಕ್ಯೂಲರನ್ನು ಜಾರಿಯಲ್ಲಿ ತರುವದಾಗುತ್ತದೆ.

ತಾ|| 13 ನೆಯ ಸೆಪ್ಟಂಬರ 1930ನೆಯ ಇಸ್ವಿ, ಮುಕ್ಕಾಂ. ಹುಲ್ಯಾರು. | ಶ್ರೀ ಜಗದ್ಗುರು ಮಹಾಸಂಸ್ಥಾನ ಧರ್ಮಾಧಿಕಾರಿ.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರಹದ ದೇವರ ಪೂಜೆಗೆ ಯೋಗ್ಯವಾದ ರಜಿಂವಾರು ಊದಬತ್ತಿಗಳು, ಪರಿಮಳದಕಾಂಗ, ಧೂಪದಕೊಡ, ಅಷ್ಟಗಂಧದಪುಡಿ, ಜವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಾಶಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಷ್ಟಸಂಜೀವಿನಿತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಅರಿಶಿನಪೂರಿವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
7 ಸುಗಂಧವ್ಯಾಪಾರಿಗಳು.
ಚಿಕ್ಕಪೇಟೆ, ಬೆಂಗಳೂರು ಸಿಟಿ.

ದುಂಡುಮೇಜಿನ ಪರಿಷತ್ತಿಗೆ ಆಹ್ವಾನಿಸಲ್ಪಟ್ಟ ಜನರು.

ವೈಸರಾಯರವರು ಈ ಕೆಳಗೆ ಕಂಡವರಿಗೆ ಭರತಖಂಡದ ಪರವಾಗಿ ದುಂಡುಮೇಜಿನ ಪರಿಷತ್ತಿಗೆ ಬರಲು ಆಮಂತ್ರಣವನ್ನು ಕಳುಹಿಸಿರುವರು. ಈ ವಿಷಯದಲ್ಲಿ ಇನ್ನೂ ಸ್ವಲ್ಪ ಚರ್ಚೆಯು ನಡೆಯುತ್ತಿರುವದರಿಂದ ಮುಂದೆ ಇನ್ನೂ ಕೆಲವರಿಗೆ ಆಮಂತ್ರಣ ಕೊಡಬಹುದೆಂದು ಊಹಿಸಲ್ಪಟ್ಟಿರುವದು.

ಸಂಸ್ಥಾನಿಕರ ಪರವಾಗಿ ಈ ಕೆಳಗೆ ಕಂಡ 16 ಜನರು ಚುನಾಯಿಸಲ್ಪಟ್ಟಿರುವರು :—

ಆಳ್ವಾರು ಮಹಾರಾಜರು, ಬರೋಡಾ ಮಹಾರಾಜರು, ಭೋಪಾಲ ನವಾಬರು, ಬಿಕಾನೇರ್ ಮಹಾರಾಜರು, ಧೋಲಪುರದ ಮಹಾರಾಜಾ ರಾಣಾರವರು, ಕಾಶ್ಮೀರದ ಮಹಾರಾಜರು, ನವಾನಗರದ ಮಹಾರಾಜರು, ಪಾಟಿಯಾಲಾ ಮಹಾರಾಜರು, ರೀವಾ ಮಹಾರಾಜರು, ಸಾಂಗಲಿ ಸಂಸ್ಥಾನಾಧಿಪತಿಗಳು, ಸರ್‌ಪ್ರಭಾಶಂಕರ ಪಟ್ಟಾಣಿಯವರು, ಸರ್ ಮಾನೂಭಾಯಿ ಮೆಹತಾರವರು, ಸರದಾರ್ ಸಾಹಿಬ್ಜಾದಾ ಸುಲ್ತಾನ್ ಅಹಮದ್ ಖಾನರವರು,ನವಾಬ ಸರ್ ಮಹಮದ್ ಅಕ್ಬರ್ ಹೈದರಿಯವರು, ಮಿರ್ಜಾ ಸರ್ ಎಂ. ಇಸ್ಮಾಯಿಲ್‌ರವರು ಮತ್ತು ಕರ್ನಲ್ ಕೆ. ಎನ್. ಹಸ್ಕರ್‌ರವರು.

ಬ್ರಿಟಿಷ್ ಇಂಡಿಯಾದಿಂದ ಈ ಕೆಳಗೆ ಕಂಡ 50 ಜನರು ಚುನಾಯಿಸಲ್ಪಟ್ಟಿರುವರು.

ಆಗಾಖಾನರವರು, ನವಾಬ ಸರ್ ಅಬ್ದುಲ್ ಖೈಯಂಖಾನ್‌ರವರು, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್, ಡಾ|| ಅಂಬೇಡಕರ್, ಮಿ|| ಚಂದ್ರಧರ ಬರೂ, ಮಿ|| ಜೆ. ಎನ್. ಬಸು, ಸರ್ ಷಹಾ ನವಾಜ್‌ಖಾನ್, ಗುಲಾಂ ಮುರ್ತಾಜಾಖಾನ್ ಭಟ್ಟೊ, ಸರ್ ಹ್ಯುಬರ್ಟ್ ಕಾರ್, ದಿವಾನ್ ಚಮನ್‌ಲಾಲ, ಮಿ|| ಸಿ. ವೈ. ಚಿಂತಾಮಣಿ, ದರ್ಭಂಗಾ ಮಹಾರಾಜಾಧಿರಾಜರು, ಮಿ| ಓ. ಡಿ. ಗ್ಲಾನ್‌ವಿಲ್, ಮಿ|| ಫಜುಲ್-ಉಲ್-ಹಕ್, ಮಿ|| ಎಂ. ಮೋಹನ್ ಘೋಷ್, ಮಿ|| ಎ. ಎಚ್. ಘಜನಾವಿ, ಲೆಫ್ಟಿನೆಂಟ್ ಕರ್ನಲ್, ಎಚ್. ಎ. ಗಿಡ್ನೆ,ಖಾನ್ ಬಹದ್ದೂರ್ ಹಫೀಜ ಹಿದಾಯತ್ ಹುಸೇನ್, ಮಿ|| ಎಂ. ಆರ್. ಜಯಕರ್, ಸರ್ ಕೊವಾಸಿ ಜಹಾಂಗೀರ್ (ಜೂನಿಯರ್), ಮಿ|| ಎಂ. ಎ. ಜಿನ್ನಾ, ಮಿ|| ಟಿ. ಎಫ್. ಗರ್ವಿನ್‌ಜೋನ್ಸ್, ರಾವ್ ಬಹದ್ದೂರ್ ಸಿದ್ದಪ್ಪ ತೋಟಪ್ಪ ಕಂಬಳಿ, ಆನರಬಲ್ ಸರ್ ಪ್ರೊವಾಸ್ ಚಂದ್ರಮಿತ್ರ, ಡಾಕ್ಟರ್ ಬಿ. ಎಸ್. ಮುಂಜೆ, ದಿವಾನ್ ಬಹದ್ದೂರ್ ಎ. ರಾಮಸ್ವಾಮಿ ಮೊದಲಿಯಾರ್, ಛತರಿ ನವಾಬರು, ಮೌಲಾನಾ ಮಹಮದ್ ಅಲಿಯವರು, ಸರ್ ಮಹಮದ್ ಷಾಫಿ, ದಿವಾನ್ ಬಹದ್ದೂರ್ ರಾಜಾ ನರೇಂದ್ರನಾಥ, ಮಿ|| ನರೇಂದ್ರನಾಥಲಾ, ರಾವ್ ಬಹದ್ದೂರ್ ಎ. ಟಿ. ಪನ್ನೀರಸೆಲ್ವಂ, ಪರ್ಲಾಕಿಮಿಡಿಯ ರಾಜಾಕೃಷ್ಣ ಚಂದ್ರರಾಜರವರು, ಸರ್ ಎ. ಪಿ. ಪಟ್ರೋ, ದಿವಾನ್ ಬಹದ್ದೂರ್ ರಾಮಚಂದ್ರರಾವ್, ಸರದಾರ್ ಸಂಪೂರ್ಣಸಿಂಗ್, ಸರ್ ತೇಜ್ ಬಹದ್ದೂರ್ ಸಪ್ರೂ, ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ಚಿಮನಲಾಲ ಸೆಟಲವಾಡ, ಸರ್ ಫಿರೋಜಸೆಠ್ನಾ, ಮಿಸಸ್. ಷಹಾನವಾಜ (ಸರ್ ಮಹಮ್ಮದ್‌ಷಾಫಿಯವರ ಮಗಳು ಮತ್ತು ಅಸೆಂಬ್ಲಿಯ ಎಕ್ಸ್‌ಮೆಂಬರರಾದ ಮಿಯಾನ್‌ಷಹಾನವಾಜರವರ ಪತ್ನಿ). ಡೊಮೀಲಿಯ ಕ್ಯಾಪ್ಟನ್ ರಾಜಾಷೇರ್ ಮಹಮದ್‌ಖಾನರವರು, ರಾವ್ ಬಹದ್ದೂರ್ ಆರ್. ಶ್ರೀನಿವಾಸನ್, ಮಿಸಸ್ ಸುಬ್ಬರಾಯನ್ (ಮದರಾಸ್ ಚೀಫ್ ಮಿನಿಸ್ಟರವರ ಪತ್ನಿಯವರು), ಸರ್ ಸಯದ್ ಸುಲ್ತಾನ್ ಅಹಮದ್‌ರವರು, ಆನರಬಲ್ ಮಿ|| ಎಸ್. ಬಿ. ಟಾಂಬೆಯವರು, ಮಿ|| ಯು. ಆಂಗ್‌ಥಿನ್, ಸರದಾರ ಸಾಹೇಬ ಸರದಾರ ಉಜ್ವಲಸಿಂಗ್, ಮಿ|| ಸಿ. ಇ. ವುಡ್ ಮತ್ತು ಮಿ|| ಜಫ್ರುಲ್ಲಾಖಾನರವರು.

ನೂತನ ಭಾಷಣ ! ನೂತನ ಭಾಷಣ !

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ
(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು **೫ ಆಣೆ**ಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ನಿವಾಸಿಗಳಾದ ಮ|| ರಾ|| ಯೂನಿಯನ್‌ಬೋರ್ಡ್ ಪ್ರೆಸಿಡೆಂಟ್ ಬಸವಲಿಂಗನಗೌಡರು ಮತ್ತು ಅವರ ತಮ್ಮಂದಿರಾದ ಸಿದ್ದನಗೌಡರು ತಮ್ಮತಮ್ಮ ಗೃಹಗಳಲ್ಲಿ ಶ್ರಾವಣಮಾಸದ ಆರಾಧನೆಯನ್ನು ಉಜ್ಜಯಿನಿ ಪೀಠಾಧೀಶ್ವರರ ಪಾದಪೂಜೆಯೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 4 ರೂ. ಗಳು ವೇ|| ಚನ್ನಬಸವಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯ ಹಳೇಅಗ್ರಹಾರ ನಿವಾಸಿಗಳಾದ ಮ|| ರಾ|| ಎಂ. ವಿ. ವೀರಪ್ಪನವರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಆಶೀರ್ವಾದ ಬಲದಿಂದ ಗುಣವಾದ ಸಂತೋಷಕ್ಕಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಮಹೋತ್ಸವ.

ರಾಮಪುರ.

ಅರಸೀಕೆರೆ ತಾಲ್ಲೋಕು ಕಣಕಟ್ಟೆ ಹೋ|| ರಾಮಪುರಗ್ರಾಮದಲ್ಲಿ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಶಿವಾನಂದ ರಾಜೇಂದ್ರ ಮಹಾಸ್ವಾಮಿಗಳವರ ಆಂದೋಲಿಕೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಗ್ರಾಮಸ್ಥರ ಪ್ರಾರ್ಥನಾಮೇರೆಗೆ ತಾ|| 24-8-30 ನೆಯ ರವಿವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಸಕಲ ಬಿರುದಾವಳಿಗಳೊಡನೆ ಮಹಾಸನ್ನಿಧಿಯು ದಯಮಾಡಿಸಿತು. ಉತ್ಸವಕ್ಕೆ ಅನೇಕಗ್ರಾಮಗಳಿಂದ ಸಾವಿರಾರು ಜನರು ನೆರೆದಿದ್ದರು. ಗ್ರಾಮವು ಹಸುರುವಾಣೆ ಚಪ್ಪರಗಳಿಂದಲೂ, ತಳಿರುತೋರಣಗಳಿಂದಲೂ ಅಲಂಕೃತವಾಗಿತ್ತು. ವಾದ್ಯವಿಶೇಷಗಳೊಡನೆ ಸಕಲರೂ ಮಹಾಸನ್ನಿಧಾನವನ್ನು ಬಿಜಯಮಾಡಿಸಿಕೊಂಡು ಬಂದು ಮೊದಲೇ ಏರ್ಪಡಿಸಿದ್ದ ದಿವ್ಯಸಿಂಹಾಸನಾರೋಹಣಂಗೈಸಿ ಜಯಜಯಕಾರಮಾಡಿದರು. ಅನಂತರ ಮಹಾಸಂಸ್ಥಾನದ ಪಂಡಿತರು ಗುರುಪ್ರಭಾವದ ಮೇಲೆ ಸ್ವಾರಸ್ಯವಾದ ಉಪನ್ಯಾಸಮಾಡಿದರು. ನೆರದಿದ್ದ ಭಕ್ತಮಂಡಲಿಯು ಕಮಲವು ರವಿಕಿರಣದಿಂದರಳುವಂತೆ ಪ್ರತ್ಯಕ್ಷಪ್ರಸನ್ನನಾಗಿರುವ ಗುರುನಾಥನನ್ನು ನೋಡಿ ಆನಂದಾಂಬುಧಿಯಲ್ಲಿ ಮುಳುಗಿ ಸರ್ವರ ಮುಖದಲ್ಲಿ ಅಸಾಧಾರಣವಾದ ಭಕ್ತಿರಸವು ಉಕ್ಕಿತು. ಮರುದಿವಸ ಸಕಲರೂ ಕಾಣಿಕೆಯನ್ನಿತ್ತು ಆಶೀರ್ವಾದ ಪಡೆದು ಧನ್ಯರಾದರು. ವೇ|| ಜಿ. ಕೆ. ಸಿದ್ಧಲಿಂಗಾರ್ಯರು, ಮ|| ರಾ|| ಲಿಂಗಣ್ಣನವರು, ಅಂ|| ಸೆಣ್ಣರಾಮೇಗೌಡರೂ, ಮರುಳಯ್ಯನವರೂ, ಪಟೇಲರು ಮೊದಲಾಗಿ ಸರ್ವರೂ ಗುರುಸೇವೆಯಲ್ಲಿ ಮಗ್ನರಾಗಿದ್ದರು.

ರೆ|| ಪ|| ರಾಮಜ್ಜೀಗೌಡ.

ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾಮಂಡಲಿ.

ಸಿದ್ದಾಪುರಂ

ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರ ಕೀರ್ತನೆ, ಸೇವಾ, ಧಾರ್ಮಿಕಸುಧಾರಣೆ ಮೊದಲಾದ ಉದ್ದೇಶಗಳಿಂದ ಭರತಖಂಡದ ನಾನಾ ಭಾಗಗಳಲ್ಲಿ ಶ್ರೀಮತ್ಪಂಚಾಚಾರ್ಯರ ಸೇವಾಮಂಡಲಿಗಳು ಸ್ಥಾಪಿತವಾಗಿರುವಂತೆ ಇಲ್ಲಿಯೂ ಮೇಲ್ಕಂಡ ಸಂಘವು ಇದೇ ಸದುದ್ದೇಶದಿಂದ ಸ್ಥಾಪಿಸಲ್ಪಟ್ಟಿದೆ. ಈ ಸಂಘವು ಈಗ್ಗೆ ಒಂದು ವರ್ಷದಿಂದ ಶ್ರೀ ಜಗದಾಚಾರ್ಯರವರ ಮತ್ತು ಸಮಾಜದ ಸೇವೆಯನ್ನು ನಾನಾವಿಧವಾಗಿ ಮಾಡುತ್ತಲಿದೆ. ಪುರಾಣಶ್ರವಣ, ಭಜನಕೀರ್ತನೆಗಳು, ನಡೆಯುತ್ತಿವೆ. ಶ್ರಾವಣಮಾಸ, ಗಜಾನನಹಬ್ಬ, ದಸರಾಹಬ್ಬ, ಕಾರ್ತಿಕಮಾಸಗಳಲ್ಲಿ ವಿಜೃಂಭಣೆಯಿಂದ ರಥೋತ್ಸವಾದಿಗಳು ನಡೆಯುತ್ತವೆ. ಪ್ರತಿ ಸೋಮವಾರ ಸಾಯಂಕಾಲ 9-30 ಘಂಟೆಯಿಂದ 8 ಘಂಟೆಯವರೆಗೆ ಭಜನೆಯು ನಡೆಯುತ್ತಲಿದೆ. ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿಗಳವರ ಭಾವಚಿತ್ರಗಳು, ಲಿಂಗೋತ್ಪತ್ತಿ ಲಾಕೆಟ್ಟುಗಳು, ಭಜನಾಪುಸ್ತಕಗಳು, ಧಾರ್ಮಿಕಗ್ರಂಥಗಳು, ಸಮಾಜಬಂಧುಗಳಲ್ಲಿ ಉಚಿತವಾಗಿ ಪ್ರಸಾರಮಾಡಲ್ಪಟ್ಟಿವೆ. ಶ್ರೀ ಜಗದಾಚಾರ್ಯರ ಜಯಂತಿಹಬ್ಬಗಳು ಅತ್ಯಂತ ಭಕ್ತಿಯಿಂದ ನಡೆಯಿಸಲ್ಪಡುತ್ತಿವೆ. ಪಂಚಾಚಾರ್ಯಪ್ರಭಾ ಪತ್ರಿಕಾಬೋಧೆಯು ನಡೆಯುತ್ತದೆ. ಈ ಭಜನಾಸಂಘಕ್ಕೆ ವೇ|| ರಾಜಕೋಟೆಪ್ಪಯ್ಯನವರು, ಮ|| ರಾ|| ವೀರಭದ್ರನಗೌಡ, ಮ|| ರಾ|| ದ್ಯಾಮಣ್ಣ, ಮ|| ರಾ|| ಮಲ್ಲಳ್ಳಿ ಬಸಪ್ಪ, ಮ|| ರಾ|| ಬಿ. ವೀರಬಸಪ್ಪ ಇವರು ಮೆಂಬರಾಗಿಯೂ ಸಿ. ಎಸ್. ಪತ್ರಪ್ಪ, ಎ. ತಿಪ್ಪೆಸ್ವಾಮಿ ಇವರು ಸೆಕ್ರೆಟರಿಗಳಾಗಿಯೂ ಇದ್ದಾರೆ. ಇವರು ಧರ್ಮಗ್ರಂಥಗಳನ್ನು ಬಲ್ಲವರಾಗಿ ತಮ್ಮ ಹಿರಿಯರಂತೆಯೇ ಸದಾಚಾರನಿಷ್ಠರಾಗಿರುವುದರಿಂದ ಇವರ ಪ್ರೋತ್ಸಾಹದಿಂದ ಈ ಮಂಡಲಿಗೆ ಸಮಾಜಸೇವೆಮಾಡಲು ವಿಶೇಷ ಅವಕಾಶವಿದೆ. ಈ ಊರಲ್ಲಿರುವ ಎ. ಸ್ಕೂಲ್ ಮಾಸ್ಟರರು ತಮ್ಮ ವಿದ್ಯಾರ್ಥಿಗಳಿಂದ ಸ್ಕೂಲಿನಲ್ಲಿ ಹಾರ್ಮೋನಿಯಂ, ತಾಳ, ಮೃದಂಗಗಳಿಂದ ಸಾಯಂಕಾಲ 8 ಘಂಟೆಯವರೆಗೆ ಭಜನೆಯನ್ನು ನಡೆಯಿಸುತ್ತಿರುವರು. ಈ ಸಂಘವು ವ್ಯಕ್ತಿಗಳಿಗೆ ಸಂಬಂಧಪಟ್ಟಿರದೆ ಶ್ರೀ ಜಗದ್ಗುರು ಮಹಾಸ್ವಾಮಿಗಳ ಸೇವೆಯನ್ನೇ ಮುಖ್ಯೋದ್ದೇಶವನ್ನಾಗಿಟ್ಟುಕೊಂಡಿರುವದರಿಂದ ಸಕಲ ಬಾಂಧವರೂ ಈ ಮಂಡಲಿಗೆ ಭೇದಭಾವಗಳಿಲ್ಲದೆ ಆಶ್ರಯದಾತರಾಗಿರಲು ಸವಿನಯಪ್ರಾರ್ಥನೆ. ಶ್ರಾವಣಮಾಸದಲ್ಲಿಯೂ ಮತ್ತು ಗಣೇಶನ ಹಬ್ಬದಲ್ಲಿಯೂ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಅಪಾರಮಹಿಮಾಪ್ರದರ್ಶಕವಾದ "ರೇಣುಕವಿಜಯ" ಮಹಾಪುರಾಣಶ್ರವಣವು ನಡೆಯಿತು. ಈ ಸೇವಾಮಂಡಲಿಯಿಂದ ಗಣೇಶೋತ್ಸವವು ಬಹು ವೈಭವದಿಂದ ನಡೆಯಿಸಲಾಯಿತು. ಈ ಸಂಘಕ್ಕೆ ಸರ್ವರೂ ಸಹಾಯಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಹಾರ್ಮೋನಿಯಂಮಾಸ್ಟರು, ಸಾ|| ದೇವಕ್ಕಿ ಗುರಣ್ಣ.
ಕಾರ್ಯದರ್ಶಿ, ಸ್ಕೂ|| ಮಾ|| ಎ. ಪಿ. ಬಸಯ್ಯ,
ಉಪದೇಶಕರು
ಪುಕ್ಕಪುಂಡಿ ವೀರಭದ್ರಪ್ಪ,
ವೀರಪ್ಪಯ್ಯನವರು, ಮರಿಯಪ್ಪ

ಈಶ್ವರಲೀಲೆಯು ಅಗಾಧವಾದುದು.

ಆಶ್ಚರ್ಯಕರವಾದ ಸಂಗತಿ.

ಧಾರವಾಡ ಡಿ|| ಹುಬ್ಬಳ್ಳಿ ತಾಲೂಕಿನಲ್ಲಿ ಮಂಟೂರು ಎಂಬ ಚಿಕ್ಕ ಗ್ರಾಮವಿರುವುದು. ಈ ಗ್ರಾಮದಲ್ಲಿ ಪರಪ್ಪ ಹೂಗಾರ ಎಂಬ ಓರ್ವ ಭಕ್ತನಿರುವನು. ಈತನಿಗೆ ಗಂಗವ್ವನೆಂಬ 5 ವರ್ಷದ ಬಾಲಿಕೆಯಿರುವಳು ಈ ಬಾಲಿಕೆಯು 5 ನೆಯ ವರ್ಷದಲ್ಲಿ ಋತುಮತಿಯಾಗಿ 6 ನೆಯ ವರ್ಷದಲ್ಲಿ ಗರ್ಭವನ್ನು ಧರಿಸಿದ್ದಾಳೆ. 5 ತಿಂಗಳು ತುಂಬಿವೆ. ಈ ವಿಷಯವು ಸತ್ಯವೋ ಅಸತ್ಯವೋ ಎನ್ನುವದನ್ನು ಪರೀಕ್ಷಿಸುವದಕ್ಕೋಸ್ಕರ 4-6 ಜನ ಡಾಕ್ಟರರು ಅಲ್ಲಿಗೆ ಹೋಗಿ ಆ ಬಾಲಿಕೆಯನ್ನು ಪರೀಕ್ಷಿಸಲು ಗರ್ಭಧಾರಣವು ನಿಶ್ಚಯವೆಂದು ಕಂಡುಬಂದಿತು. ಈ ರೀತಿಯಾಗಿ ಡಾಕ್ಟರರಿಂದ ಅಭಿಪ್ರಾಯವು ಬಂದಕೂಡಲೆ ಈ ವಿಷಯವು ಸರ್ವತ್ರ ವ್ಯಾಪಿಸಿ ಅನೇಕ ಗ್ರಾಮಗಳಿಂದ ಸಾವಿರಾರು ಜನರು ಬಂದು ಸದರಿ ಬಾಲಿಕೆಗೆ ಹಣ್ಣುಕಾಯಿಗಳನ್ನು ಶೀರೆಕುಪ್ಪಸಗಳನ್ನು ಒಪ್ಪಿಸುತ್ತಲಿದ್ದಾರೆ. ಈ ಬಾಲಿಕೆಯ ಬಲಗಾಲಿನಲ್ಲಿ ತ್ರಿಶೂಲ ಮೊದಲಾದ ರೇಖೆಗಳು ಒಡೆದು ಕಾಣುತ್ತವೆ. ಈ ಬಾಲಿಕೆಯ ಗರ್ಭದಿಂದ ಯಾವನಾದರೊಬ್ಬ ಲೋಕವಿಖ್ಯಾತ ಪುರುಷನು ಹುಟ್ಟಬಹುದೆಂದು ಜನರು ತರ್ಕಿಸುತ್ತಿರುವರು. ಸದರಿ ಬಾಲಿಕೆಯು ಪ್ರತಿ ದಿವಸ ಎರಡು ಹೊತ್ತು ಸ್ನಾನವನ್ನು ಮಾಡಿಕೊಂಡು ಅತ್ಯಂತ ಭಕ್ತಿಪುರಸ್ಸರವಾಗಿ ಶಿವಪೂಜೆಯನ್ನು ಮಾಡುತ್ತಿರುವಳು. ಈ ವಿಷಯವನ್ನು ವಿಚಾರಮಾಡಿ ನೋಡಿದರೆ ಈಶ್ವರನ ಲೀಲೆಯು ಅಗಾಧವಾದುದೆಂದು ಹೇಳಬೇಕಾಗಿದೆ. ಈ ವಿಷಯವನ್ನು ನಾನು ಪ್ರತ್ಯಕ್ಷ ಕಂಡು ಬರೆದಿದ್ದೇನೆ.

ರುದ್ರಯ್ಯಾ ರಾಚಯ್ಯಾ, ಅಣ್ಣೀಗೇರಿ,
ಮುಕ್ಕಾಂ, ಹುಬ್ಬಳ್ಳಿ.

[ಮೇಲ್ಕಂಡ ವಿಷಯವು ಎಷ್ಟರಮಟ್ಟಿಗೆ ನಿಜವಿದೆಯೋ ತಿಳಿಯದಾಗಿದೆ. ನಿಜವೇ ಆಗಿದ್ದಪಕ್ಷದಲ್ಲಿ ಈಶ್ವರಲೀಲೆಯು ಅಗಾಧವಾದದ್ದೇ ಸರಿ! ಸದರಿ ಮಂಟೂರುಗ್ರಾಮದ ಪ್ರಮುಖರು ಈ ವಿಷಯವನ್ನು ಪರ್ಯಾಲೋಚಿಸಿ ನಿಜವೃತ್ತಾಂತವನ್ನು ಪ್ರಕಟಿಸಬೇಕೆಂದು ಆಶಿಸುತ್ತೇವೆ—ಸಂ.]

ಶ್ರಾವಣ ಸಮಾರಂಭ.

ದರ್ಗನಹಳ್ಳಿ.

ಬುದ್ಧಿಯೆಂಬ ಅಮೂಲ್ಯಸಾಧನದಿಂದ ಅತ್ಯಂತ ಶ್ರೇಷ್ಠತೆಯನ್ನು ಪಡೆದ ಮನುಷ್ಯಪ್ರಾಣಿಯು ಉಳಿದ ಪ್ರಾಣಿಗಳಂತೆ ಪ್ರಪಂಚದಲ್ಲಿ ಆಸಕ್ತನಾಗದೆ ಪಾರಮಾರ್ಥಸೌಖ್ಯವನ್ನು ಪಡೆದು ಮುಕ್ತಿಯನ್ನು ಹೊಂದುವುದು ಅವನ ಅವಶ್ಯಕರ್ತವ್ಯವಾಗಿರುತ್ತದೆ. ಈ ಪಾರಮಾರ್ಥಿಕ ಸೌಖ್ಯದ ರಹಸ್ಯವನ್ನು ಭಕ್ತರ ಹೃದಯದಲ್ಲಿ ಬೀರುವದಕ್ಕೋಸ್ಕರವಾಗಿಯೇ ನಮ್ಮ ಈ ವೀರಶೈವ ಸಮಾಜದಲ್ಲಿ ಗುರುವರ್ಗದ ಮಹನೀಯರು ಇದೀಗ ಕಂಕಣಬದ್ಧರಾಗಿರುತ್ತಾರೆ. ಅಂತೆಯೇ ಈಗ ನಮ್ಮ ಸಮಾಜದಲ್ಲಿ ಅಲ್ಲಲ್ಲಿಗೆ ಪಾದಪೂಜೆ, ರುದ್ರಾಭಿಷೇಕ, ಇತ್ಯಾದಿ ಧರ್ಮಕಾರ್ಯಗಳು ಜರುಗುತ್ತಿರುತ್ತವೆ. ಅದೇ ಪ್ರಕಾರವಾಗಿ ಕಳೆದ ಶ್ರಾವಣಮಾಸದಲ್ಲಿ ಸೊಲ್ಲಾಪುರ ತಾಲೂಕ ಪೈಕಿ ದರಗನಹಳ್ಳಿ ಎಂಬ ಗ್ರಾಮದಲ್ಲಿ ಇಂಥ ಸತ್ಕಾರ್ಯಗಳು ಬಹು ಸಂಭ್ರಮದಿಂದ ನಡೆದು ಸಮಾಪ್ತಿಯಾದವೆಂದು ತಿಳುಹಿಸಲು ಅತ್ಯಂತ ಸಂತೋಷವೆನಿಸುತ್ತದೆ.

ದರಗನಹಳ್ಳಿ ಗ್ರಾಮವು ಸುಮಾರು 800 ಜನ ಸಂಖ್ಯೆಯುಳ್ಳ ಸಣ್ಣ ಹಳ್ಳಿಯು. ಇಲ್ಲಿ ಲಿಂಗಾಯತ ಜನರು ಸುಮಾರು ಅರ್ಧಕ್ಕಿಂತ ಸ್ವಲ್ಪ ಹೆಚ್ಚಿಗಿರಬಹುದು. ಆದರೂ ಆಶಿಕ್ಷಿತರೇ ವಿಶೇಷ. ವೀರಶೈವಾಚಾರ ಮಾರ್ಗವಂತೂ, ಅವರಿಗೆ ಈ ಮೊದಲು ಗೊತ್ತೇ ಇರಲಿಲ್ಲ. ಕಂಠದಲ್ಲಿ ಇಷ್ಟಲಿಂಗಧಾರಿಗಳಾದವರು ಈ ಗ್ರಾಮದಲ್ಲಿ ಈ ಮೊದಲು ದೃಷ್ಟಿಗೋಚರವಾಗುತ್ತಿರಲಿಲ್ಲ. ಇಂಥ ಪರಿಸ್ಥಿತಿಯುಳ್ಳ ಗ್ರಾಮವು, ಹುಟ್ಟಗಿ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರಸ್ವಾಮಿಗಳವರ ಶಿಷ್ಯತ್ವಕ್ಕೆ ಒಳಪಟ್ಟಿತು. ಶ್ರೀಗಳವರು ತಮ್ಮ ಸಂಚಾರಕಾಲದಲ್ಲಿ ಈ ಗ್ರಾಮದ ಹೀನಸ್ಥಿತಿಯನ್ನು ನೋಡಿ ವ್ಯಾಕುಲಮನಸ್ಕರಾಗಿ ಅಲ್ಲಿಯೇ ಕೆಲವು ದಿವಸಗಳವರೆಗೆ ನಿಂತು ಭಕ್ತಜನರಿಗೆ ವೀರಶೈವಾಚಾರಮಾರ್ಗವನ್ನು ತಿಳುಹಿಸಿ ಅದರಂತೆ ಅವರನ್ನು ಆಚರಿಸಲಿಕ್ಕೆ ಹಚ್ಚಿದರು. ತರುವಾಯ ಅಲ್ಲಿಯ ವೀರಶೈವರು ಭಕ್ತಿಪರಾಯಣರಾಗಿ ಆಚಾರದಿಂದ ವರ್ತಿಸುತ್ತಿರಲಾಗಿ ಶ್ರಾವಣಮಾಸವು ಬಂದಿತು. ಆಗ ಆ ಭಕ್ತಶ್ರೇಷ್ಠರು ಶ್ರೀ ಗುರು ಹುಟ್ಟಗಿ ಪಟ್ಟಾಧ್ಯಕ್ಷರವರ ಚರಣ ದರ್ಶನಕ್ಕೆ ಹೋಗಿ ಶ್ರಾವಣಮಾಸಕ್ಕೆ ನಮ್ಮಲ್ಲಿಗೆ ದಯಮಾಡಿಸಬೇಕೆಂದು ಪ್ರಾರ್ಥಿಸಲು ಅದರಂತೆ ಶ್ರೀಗಳವರು ದರಗನಹಳ್ಳಿಗೆ ಬಿಜಯಂಗೈಸಿದರು. ಶ್ರಾವಣಶುದ್ಧ ಪ್ರತಿಪದೆಯಿಂದ ರುದ್ರಾಭಿಷೇಕ ಪಾದಪೂಜಾದಿ ಕಾರ್ಯಗಳು ವಿಧ್ಯುಕ್ತವಾಗಿ ಪ್ರಾರಂಭವಾದವು. ಶ್ರೀಗಳು ಸಾಯಂಕಾಲ 7 ಘಂಟೆಯಿಂದ ರಾತ್ರಿ 9 ಘಂಟೆಯವರೆಗೆ "ಮಹಾದೇವಪುರಾಣ" ದಲ್ಲಿ ಆ ದಯಾನಿಧಿಯಾದ ಪರಮೇಶ್ವರನ ಅನಂತ ಲೀಲೆಗಳನ್ನು ಭಕ್ತರ ಹೃದಯದಲ್ಲಿ ಚೆನ್ನಾಗಿ ನಿಲಿಗೊಳ್ಳುವಂತೆ ಹೇಳುತ್ತಿದ್ದರು. ಈ ಮೇರೆಗೆ ಇಲ್ಲಿ ಪ್ರತಿದಿವಸ ಇಂಥ ಸತ್ಕ್ರಿಯೆಗಳು ನಡೆಯಲಾರಂಭಿಸಲು ಇಲ್ಲಿಯ ವೀರಶೈವ ಭಕ್ತರಲ್ಲಿ ಸತ್ವಗುಣವು ಹೆಚ್ಚಿತು. ಕೇವಲ ಹಾಲು ಹಣ್ಣುಗಳ ಮೇಲೆಯೇ ಜೀವನಮಾಡುತ್ತಿದ್ದ ಶ್ರೀಗಳವರು ಕೇವಲ ಪ್ರತ್ಯಕ್ಷ ಶಿವನಂತೆ ಕಂಗೊಳಿಸ ಹತ್ತಿದರು. ಅವರ ಮುಖಬಿಂಬವು ಸುಚಾಯೆಯಿಂದ ಒಪ್ಪಲಾರಂಭಿಸಿತು. ಶಿವಕಳೆಗಳು ಶೋಭಿಸಲಾರಂಭಿಸಿದವು. ಬರಬರುತ್ತ ಅದ್ಭುತಲೀಲೆಗಳಿಗೆ ಆರಂಭವಾಯಿತು.

(2) ಗೇನಪ್ಪನೆಂಬ 14-16 ವರ್ಷದ ಹುಡುಗನು 13 ಫೂಟು ಎತ್ತರದ ಮೇಲಿಂದ ಉತ್ಸವ ನೋಡುವದಕ್ಕೋಸ್ಕರವಾಗಿ ಹೆಬ್ಬಾಗಿಲಮೇಲೆ ಮಲಗಿರಲು ನಿದ್ರೆಯಿಂದ ಪರವಶನಾಗಿ ಕಲ್ಲುಹಾಸಿಗೆಗಳಿಂದ ಆಚ್ಛಾದಿತವಾದ ಆ ಸ್ಥಳದ ಕೆಳಕ್ಕೆ ಬೀಳಲು ಅವನಿಗೆ ಏನೂ ಅಪಾಯವಾಗದೆ ಮಲಗಿದವನು ಎದ್ದು ಕುಳಿತುಕೊಳ್ಳುವಂತೆ ಎದ್ದು ಕುಳಿತನು. ಈ ಮಹಿಮೆಯು ಅಗಾಧವಾದದು!

(2) ಪುರಾಣ ಸಮಾಪ್ತಿಯ ಮಹೋತ್ಸವ ಕಾಲದಲ್ಲಿ ಬಹು ಜನರು ಕೂಡಿದ್ದರು. ಸುಮಾರು 2-3 ಸಾವಿರ ಜನರಿಗೆ ಸಾಕಾಗುವಷ್ಟು ಆಹಾರದ ಸಿದ್ಧತೆಯು ಮಾಡಲ್ಪಟ್ಟಿದ್ದಿತು. ಊಟವು ನಡೆಯುತ್ತಲೇ ಇತ್ತು. ಸಂಜೆಯಾಗುತ್ತ ಬರಲು ನಾಲ್ಕು ದಿಕ್ಕುಗಳಿಂದಲೂ ಜನರು ಸಾಲುಗೊಂಡು ಬರಹತ್ತಿದರು. ಎತ್ತ ನೋಡಿದತ್ತ ಊಟಕ್ಕೆ ಕೂಡ್ರುವ ಜನರೇ ದೃಷ್ಟಿಗೆ ಬೀಳಹತ್ತಿದರು. ಇತ್ತ ಅನ್ನಸಾಮಗ್ರಿಯು ಕಡಿಮೆಯಾಗುತ್ತ ಬಂದಿತು. ಅದ್ದರಿಂದ ಓಡಾಡಿ ಕೆಲಸಮಾಡುತ್ತಿರುವ ಸದ್ಭಕ್ತ ತರುಣರು ಓಡಿಬಂದು ತಮ್ಮ ಮುಖಂಡರಿಗೆ ಹೇಳಿದರು. ಆಗ ಮುಖಂಡರು ಗಾಬರಿಯಾಗಿ ನಮ್ಮ ಮರ್ಯಾದೆಯು ಹೋಗತಕ್ಕ ಕಾಲವು ಸಮೀಪಿಸಿತೆಂದು ಖಿನ್ನಮನಸ್ಕರಾಗಿ ಶ್ರೀಗಳವರ ಚರಣಸನ್ನಿಧಿಗೆ ಬಂದು ತಮ್ಮ ಸಂಕಟವನ್ನು ಅತ್ಯಂತ ದೈನ್ಯದಿಂದ ಪ್ರಸ್ತಾಪಿಸಲು, ಶ್ರೀಗಳವರು ಅವರಿಗೆ "ನೀವು ಅಂಜಬೇಡಿರಿ. ಪರಮಾತ್ಮನು ಸಕಲರಿಗೂ ಅನ್ನವನ್ನು ಸಮೃದ್ಧಿಯಾಗುವಂತೆ ದಯಪಾಲಿಸುವನು" ಎಂದು ಹೇಳಿ ಶಿವಪಾದೋದಕವನ್ನು ಕೊಟ್ಟು ಇದನ್ನು ಅನ್ನದ ಪಾತ್ರೆಗಳಮೇಲೆ ಪ್ರೋಕ್ಷಿಸಿರೆಂದು ಅಪ್ಪಣೆಮಾಡಿದರು. ಅದೇ ಮೇರೆಗೆ ಭಕ್ತರು ವರ್ತಿಸಲು ಅನ್ನವು ಸಮೃದ್ಧಿಯಾಗುತ್ತ ನಡೆಯಿತು. ಊಟಮಾಡತಕ್ಕ ಯಾವ ಜನರೂ ಉಳಿಯಲಿಲ್ಲ. ಇದನ್ನು ನೋಡಿ ಯಾವತ್ತು ಭಕ್ತಮಹಾಶಯರಿಗಷ್ಟೇ ಅಲ್ಲ, ಪ್ರೇಕ್ಷಕ ಜನರಿಗೂ ಆಶ್ಚರ್ಯವಾಯಿತು. ಪರಮಾತ್ಮನು ಭಕ್ತವತ್ಸಲನಲ್ಲವೆ? ಇಂಥ ಅದ್ಭುತಲೀಲೆಗಳಿಂದೊಡಗೂಡಿದ ರುದ್ರಾಭಿಷೇಕ, ಪಾದಪೂಜೆ, ಮಹಾದೇವಪುರಾಣ ಇವುಗಳ ಸಮಾಪ್ತಿಕಾಲವು ಭಾದ್ರಪದ ಶುದ್ಧ ಪಂಚಮಿ ಗುರುವಾರ ದಿವಸ ಜಯಿಸಲ್ಪಟ್ಟಿತು.

ಮುಂಜಾನೆ ೬ ಘಂಟೆಯಿಂದ ಸಂಜೆಯ ೬ ಘಂಟೆಯವರೆಗೆ ಸಮಾರಾಧನೆಯು ನಡೆಯಿತು. ತರುವಾಯ ಮಹಾದೇವಪುರಾಣ, ಹಾಗೂ ಪಂಚಾಚಾರ್ಯಮಹಾನುಭಾವರ ಭಾವಪಟಗಳ ಮೆರವಣಿಗೆಯು ಶ್ರೀಗಳವರ ಅಪ್ಪಣೆಯಮೇರೆಗೆ ಗ್ರಾಮದ ಯಾವತ್ತು ಭಾಗಗಳಲ್ಲಿ ಸಂಚರಿಸಿ ಮಧ್ಯಭಾಗದಲ್ಲಿರುವ ವಿಸ್ತೀರ್ಣವಾದ ಅಂಗಣಕ್ಕೆ ಆಗಮಿಸಿತು. ಮೆರವಣಿಗೆಯ ಕಾಲದಲ್ಲಿ ನಗಾರಿ, ಕಹಳೆ, ಚೌಕತ್ತು ಮುಂತಾದ ವಾದ್ಯಗಳ ಧ್ವನಿಯು ಘೋರ್ಗರೆಯುತ್ತ ಪ್ರೇಕ್ಷಕವೃಂದವನ್ನು ಆನಂದಸಾಗರದಲ್ಲಿ ಮುಳುಗಿಸಿತು. ಜನಸಂದಣಿಯು 4-5 ಸಾವಿರದವರೆಗೆ ಕೂಡಿತ್ತು. ಈ ದರಗನಹಳ್ಳಿಯ ಸುತ್ತಲೂ ಇರುವ ಬೋರಾಮಣಿ, ಸಂಗಧರಿ, ತಾಂಡಲವಾಡಿ, ಮುಸ್ತಿ, ಕಾಟಗಾಂವ, ತರಹಟ್ಟಿ, ಕೇಸೇಗಾಂವ, ಅರಳೀದರಸರ್ಗ, ಬೋರೀಗಾಂವ, ಪಿಕಾಪುರ, ದಿಂಡೂರು, ದಂಬರ ಚವಳಿಗಿ, ವಡಗಾಂವ, ತೀರ್ಥ, ಹಾಲಳ್ಳಿ, ವಳಸಂಗ, ಚಿಂಚೋಳಿ, ಕರದಳ್ಳಿ, ಗುರದಳ್ಳಿ, ತೊಗರಳ್ಳಿ, ಸಿರವನಳ್ಳಿ, ಹಣಮಗಾಂವ, ಸಿಂಗಡಗಾಂವ, ದಿಂಡೂರು, ಧೋತ್ರಿ, ಯತ್ನಾಳ, ಹುಟ್ಟಗಿ, ಸೊಲ್ಲಾಪುರ, ಕುಂಬಾರಿ, ಹತ್ತೂರು, ಸೇಳಗಿ, ಧೈಟಾ, ದೊಡ್ಡಿಗಿ, ಕಾರೇಗಾಂವ ಇತ್ಯಾದಿ ಗ್ರಾಮಗಳ ಭಕ್ತರೆಲ್ಲರೂ ಆಗಮಿಸಿದ್ದರು.

ಊರ ಮಧ್ಯಭಾಗಕ್ಕೆ ಪಟಾಂಗಣದಲ್ಲಿ ಮೆರವಣಿಗೆಯು ಬರಲು ಅಲ್ಲಿ ಪ್ರಚಂಡವಾದ ಸಭೆಯು ಕೂಡಿತು. ಶ್ರೀಗಳವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಈ ಸಭೆಯಲ್ಲಿ ೧. ಮಲ್ಲಯ್ಯಸ್ವಾಮಿ ಪುರಾಣಿಕ ಹುಟ್ಟಗಿ, ೨. ಚನಬಸಪ್ಪ ಸಿದ್ಧರಾಮಪ್ಪ ಬಿರಾಜದಾರ ಕುಂಬಾರಿ, ೩. ಶಿವರಪ್ಪ ಮೆಹತ್ರೆ ಬೋರಾಮಣಿ, ೪. ಅಧ್ಯಕ್ಷರು ಧಾರ್ಮಿಕ ಹಾಗೂ ದರಗನಹಳ್ಳಿ ಗ್ರಾಮದ ಜನರು ಮಾಡಿದ ಆತಿಥ್ಯದಬಗ್ಗೆ ಉಪಯುಕ್ತವಾದ ಭಾಷಣವನ್ನು ಮಾಡಿದರು.

ಇಂಥ ಪವಿತ್ರಕಾರ್ಯದ ಸಮಾಪ್ತಿಯಕಾಲದಲ್ಲಿ ೧೪ ಜನ ವೀರಶೈವಭಕ್ತರು ಶ್ರೀಗಳವರಿಂದ ದೀಕ್ಷಾಸಂಸ್ಕಾರವನ್ನು ಪಡೆದರೆಂದು ತಿಳುಹಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ. ಈ ಸತ್ಕಾರ್ಯಕ್ಕೆ ಸುತ್ತುಮುತ್ತಿನ ಗ್ರಾಮಗಳ ಭಕ್ತಜನರು ತಮ್ಮ ಭಜನಾಸಂಘಗಳಿಂದ ಸಮೇತರಾಗಿ ಆಗಮಿಸಿದ್ದರಿಂದ ಈ ಮಹೋತ್ಸವಕ್ಕೆ ಮತ್ತಿಷ್ಟು ಕಳೆಯೇರಿತೆಂದು ಹೇಳಬಹುದಾಗಿದೆ. ಈ ಸತ್ಕಾರ್ಯಕ್ಕೆ ತಮ್ಮ ಗೃಹಕೃತ್ಯಗಳನ್ನು ತ್ಯಜಿಸಿ ಸರ್ವದಾ ಕಂಕಣಬದ್ಧರಾಗಿದ್ದ ಮೇಲಗಿರಿ ಅಪ್ಪಣ್ಣ ಬಿರಾಜದಾರ, ಗಣಪತಿ ಈಶ್ವರ ಬಿರಾಜದಾರ, ವಿಠೋಬರಾಮು, ರುದ್ರಪ್ಪ ಧಭಾಣೆ, ರಾಜಪ್ಪ ಸಂಗಪ್ಪ ಬಿರಾಜದಾರ, ಮಹಾದೇವಪ್ಪ ರಾಮಪ್ಪ ಹಿಂಗಮಿರೆ, ಸಿದ್ಧರಾಮು, ಭೀಮರಾವ, ಬಿರಾಜದಾರ, ರಾಮಪ್ಪ, ಭೀಮಪ್ಪ, ಮಹಾಪಟ್ಟ, ಭೀಮರಾವ, ಮಹಾಂತರಾವ, ಬಿರಾಜದಾರ, ಭವಾನೆಪ್ಪ, ಧರಮಪ್ಪ ಬಿರಾಜದಾರ, ಶಿಂದಪ್ಪ, ಅಪ್ಪಣ್ಣ ಬಿರಾಜದಾರ, ಮೊದಲಾದ ಮಹಾಶಯರಿಗೆ ಪರಮಾತ್ಮನು ಆಯುರಾರೋಗ್ಯಾದಿ ಸಕಲಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರಭಾವೃದ್ಧಿಗಾಗಿ ಕೆಳಗೆ ಬರೆದ ಮಹನೀಯರು ಹಣಸಹಾಯಮಾಡಿದ್ದಕ್ಕಾಗಿ ಅವರನ್ನು ಅನನ್ಯಭಾವನೆಯಿಂದ ಸ್ತುತಿಸುತ್ತೇವೆ.

		ರೂ. ಆ. ಪೈ.
೧. ಉತ್ಸವ ಸಮಾಪ್ತಿಯಕಾಲಕ್ಕೆ	....	೨—೦—೦
೨. ದೀಕ್ಷಾಕಾಲದಲ್ಲಿ ಸಿದ್ಧರಾಮಪ್ಪ ಬಿರಾಜದಾರ ಇವರಿಂದ	....	೧—೮—೦
೩. ದೀಕ್ಷಾಕಾಲದಲ್ಲಿ ಅಪ್ಪಣ್ಣ ಇವರಿಂದ	....	೧—೦—೦
೪. ಗಣಪತಿ, ಈಶ್ವರಪ್ಪ ಬಿರಾಜದಾರ ಇವರಿಂದ	....	೧—೮—೦
೫. ವಿಠೋಬರಾಮು ರುದ್ರಪ್ಪ ಇವರಿಂದ	....	೧—೮—೦
		೭—೮—೦

ಹ. ಬಿ. ದೇಸಾಯಿ.
ಹೆಡ್‌ಮಾಸ್ತರ ಸೆಟ್ಲಮೆಂಟಸ್ಕೂಲ್, ಹುಟ್ಟಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಧಾರ್ಮಿಕಸಭೆಯು,

ಹನುಮಸಾಗರ.

ತಾ|| 26-8-30 ನೆಯ ದಿವಸ ಮೊದಲೇ ಗೊತ್ತುಮಾಡಿದಂತೆ ಸಾಯಂಕಾಲ 6 ಘಂಟೆಗೆ ಸಭೆಗೂಡಿತು. ಸಭೆಗೆ 5-6 ನೂರು ಜನರು ನೆರೆದಿದ್ದರು. ವೇ|| ಶಿವದೇವಶಾಸ್ತ್ರಿಗಳು ಕಾವ್ಯತೀರ್ಥ ಕುಷ್ಟಗಿಯಳಮಲಿ ಹಿರೇಮಠ ಇವರು ಸರ್ವರ ಅಭಿಪ್ರಾಯದಂತೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದನಂತರ ಬಸರಕೋಡ ಕರಿವೃಷಭಶಾಸ್ತ್ರಿಗಳು ತಮ್ಮ ಕೋಮಲವಾಣಿಯಿಂದ ಪುರಾತನರ ಕೀರ್ತನೆಯನ್ನು ಮಾಡಿದರು, ಅನಂತರ ಅಧ್ಯಕ್ಷರು ವೀರಶೈವಮತದ ಪ್ರಾಚೀನತ್ವವನ್ನು ವೇದಾಗಮೋಪನಿಷತ್ಪುರಾಣೇತಿಹಾಸಗಳಿಂದ ಪ್ರತಿಪಾದಿಸಿದ್ದಲ್ಲದೆ ಪ್ರತಿಯೊಬ್ಬ ಹಿಂದುವಿಗೆ ಶಿಖೆಯು ಮುಖ್ಯಲಕ್ಷಣವಾಗಿದ್ದು ವೀರಶೈವರಂತೂ ಅವಶ್ಯವಾಗಿ ಶಿಖೆಯನ್ನು ಬಿಡಿಸಬೇಕೆಂದು ಸರ್ವರ ಮನಸ್ಸಿಗೊಪ್ಪುವಂತೆ ಹೇಳಲು ಸರ್ವರೂ ಒಪ್ಪಿಕೊಂಡರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಭಟವಾಳಯ್ಯ, ಹಿರೇಮಠ.

ಶ್ರೀ ಕಾಶೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವು.

ಕಾಶೀ ಗೌರ್ನಮೆಂಟ್ ಪರೀಕ್ಷೆ.

ವೇದಾಂತಶಾಸ್ತ್ರ ದ್ವಿತೀಯಖಂಡದಲ್ಲಿ

ಶ್ರೀ ನೀಲಕಂಠಶಾಸ್ತ್ರಿಗಳು, ಭಾವಾಪುರ,

ಪ್ರಥಮಪರೀಕ್ಷೆಯಲ್ಲಿ

ಶಿತಿಕಂಠಶಾಸ್ತ್ರಿಗಳು, ಹಂಚಿನಾಳ

ಕಾಶೀ ವಿಶ್ವವಿದ್ಯಾಲಯಪರೀಕ್ಷೆ

ಪ್ರಥಮಪರೀಕ್ಷೆಯಲ್ಲಿ

ರುದ್ರಾರಾಧ್ಯಶರ್ಮರು ಚುಂಚನಗುಡ್ಡ

ಇಂಗ್ಲೀಷು ಮೆಟ್ರಿಕ್‌ನಲ್ಲಿ

ಸೋಮಶೇಖರಶರ್ಮರು, ಹುಸ್ಕೂರು

ಕಲಕತ್ತಾ ಗೌರ್ನಮೆಂಟ್ ಪರೀಕ್ಷೆ

ವೇದತೀರ್ಥದಲ್ಲಿ

ಚಿ. ಮ|| ವೀರಭದ್ರಶರ್ಮರು, ಹೈದರಾಬಾದ್

ನ್ಯಾಯಮಧ್ಯಮದಲ್ಲಿ

ಚನ್ನಬಸಲಿಂಗ ಶಿವಾಚಾರ್ಯರು ಮೊಣಕಾಲ್ಮುರು

ಚನ್ನಬಸವ ಶಿವಾಚಾರ್ಯರು ಪುರಗಿರಿ

ಅಮರೇಶ್ವರಾಚಾರ್ಯರು ಅವರಾದಿ

ನ್ಯಾಯಾದ್ಯದಲ್ಲಿ

ವೃಷಭಲಿಂಗಶಿವಾಚಾರ್ಯರು ಗೊಬ್ಬೂರು

ಕಾವ್ಯಾದ್ಯದಲ್ಲಿ

ವಾಗೀಶಶಿವಾಚಾರ್ಯರು ಮುದೇನೂರು

(ಇವರು ಫಸ್ಟ್‌ಕ್ಲಾಸಿನಲ್ಲಿ ಉತ್ತೀರ್ಣರಾಗಿರುತ್ತಾರೆ)

ಶಿತಿಕಂಠಶಾಸ್ತ್ರಿಗಳು ಹಂಚಿನಾಳ

ಸ್ಮೃತ್ಯಾದ್ಯದಲ್ಲಿ

ವೀರಭದ್ರಶರ್ಮರು ಹೈದರಾಬಾದ್

ಏಜಂಟ್

10-8-30
ಶ್ರೀಕ್ಷೇತ್ರಕಾಶೀ

ಶ್ರೀ ಪಂಚಾಕ್ಷರ ಶಿವಾಚಾರ್ಯರು,
ಸಂಸ್ಥಾನ ಜಂಗಮವಾಡೀಮಠ.

ನೋಟೀಸು.

ಬಳ್ಳಾರಿ ಜಿಲ್ಲಾ ಹುವ್ವಿನ ಹಡಗಲಿ ತಾಲೂಕು ಹಿರೇಹಡಗಲಿ ಗ್ರಾಮದ ಮಾಸಿಹಳ್ಳಿ ಪುರವರ್ಗಮಠದ ಪಾಟೀಲು ದೊಡ್ಡವೀರನಗೌಡರ ಮಗ ಗುಡದೀರಗೌಡನು ಈ ನೋಟೀಸು ಮೂಲಕ ಸಕಲರಿಗೆ ತಿಳಿಯಪಡಿಸುವದೇನೆಂದರೆ:– ನನ್ನ ತಂಮಗಳು ಐದುಜನ ಒಡಹುಟ್ಟಿದವರು. ನಾನೂ ಸಹ ಈವರೆಗೂ ಏಕ ಕುಟುಂಬದಲ್ಲಿರಲಾಗಿ ಈ ಪೈಕಿ ಕೆಂಗೀರಪ್ಪನೆಂಬ ತಮ್ಮನು ಅವಿದ್ಯಾವಂತನಾಗಿರುವದಲ್ಲದೆ ಮೂಲವ್ಯಾಧಿ ರೋಗಗ್ರಸ್ತನಾಗಿ ಬುದ್ಧಿಸ್ವತಂತ್ರವಿಲ್ಲದೆ ತನ್ನ ಹೆಂಡತಿ ಮನೆಯವರ ಮತ್ತು ಇತರೆಯವರ ದುರ್ಬೋಧನೆಗೆ ಒಳಪಟ್ಟು ತನ್ನ ಹೆಂಡತಿ ಮತ್ತು ಮಕ್ಕಳ ಮೇಲೆ ಇಟ್ಟ ಅಜಮಾಸು ೫೦ ತೊಲೆ ಭಂಗಾರದ ಸಾಮಾನುಗಳನ್ನು ತನ್ನ ಹೆಂಡತಿ ಮನೆಯವರ ಸ್ವಾಧೀನದಲ್ಲಿಟ್ಟಿರುವ ಸಂಗತಿಯು ರಾ|| ರಾ|| ತಬ್ಬಮಣಿ ಮ|| ಮಹಾಂತಯ್ಯನವರು ಈ|| ವರಣಿ ಮ|| ಚನ್ನಬಸಯ್ಯನವರು ಹಾಕಂಡಿ ಬಸವನಗೌಡ್ರು ವಗೈರೆಯವರಿಗೆ ತಿಳಿದು ಮೇಲೆ ಕಾಣಿಸಿದ ಭಂಗಾರದ ಸೊತ್ತುಗಳನ್ನು ತೆಗೆದುಕೊಂಡು ಹೋಗಿ ಏಕಕುಟುಂಬದಲ್ಲಿರುವದು ಯುಕ್ತವೆಂದು ಬುದ್ಧಿಹೇಳಿದರೂ ಕೇಳದೆ ತನ್ನ ಇಚ್ಛಾನುಸಾರ ನಡೆಯುತ್ತ ಸಾಲಮೂಲಗಳನ್ನು ಮಾಡಿರುತ್ತಾನೆಂದು ತಿಳಿಯಬಂದಿದೆ. ಆದರೆ ಸದರಿ ಕೆಂಗೀರಪ್ಪನಿಗೂ ಉಳಿದ ತಮ್ಮಂದಿರುಗಳಿಗೂ ಮೈನರ್ ಗಂಡು ಮಕ್ಕಳು ಇರುವದರಿಂದ ಈತನು ಬುದ್ಧಿಸ್ವತಂತ್ರವಿಲ್ಲದೆ ಮೈನರ್ ಮಕ್ಕಳಿಗೆ ದ್ರೋಹಮಾಡುವದಲ್ಲದೆ ಜಾಯಿಂಟು ಕುಟುಂಬದಮೇಲೆ ಸಹ ದೇಣಿಮಾಡುತ್ತಾನೆಂದು ತೋರುತ್ತದೆ. ಪ್ರಯುಕ್ತ ಸದರಿ ಕೆಂಗೀರಪ್ಪನಿಗೆ ಯಾರಾದರೂ ಈ ಒಳಗಾಗಿ ಸಾಲ ಕೊಟ್ಟಿದ್ದರಾಗಲೀ ಮುಂದೆ ಕೊಟ್ಟರಾಗಲೀ ಮೈನರ್ ಆಸ್ತಿಗಳ ನಮ್ಮ ಅವಿಭಕ್ತಕುಟುಂಬದ ಆಸ್ತಿಗಳ ಮೇಲೆ ಯಾವ ವಿಧವಾದ ಸಂಬಂಧವಿರುವದಿಲ್ಲವೆಂದು ತಿಳಿಯತಕ್ಕದ್ದು.

ಗುಡದೀರಗೌಡ.

ಶಾಂತಿಸಂಧಾನ.

ಇಂಡಿಯಾ ಸರಕಾರದ ವರದಿ.

ಕಾಂಗ್ರೆಸ್ಸಿನ ಅಸಾಧ್ಯ ಬೇಡಿಕೆಗಳು.

ರಸ್ಲ, ಸೆಪ್ಟಂಬರ್ 9.

ಸೌಮ್ಯಪಕ್ಷದ ಮುಂದಾಳುಗಳಾದ ಸರ್ ತೇಜ್‌ಬಹದ್ದೂರ್ ಸಪ್ರೂ ಮತ್ತು ಮಿ|| ಎಂ. ಆರ್. ಜಯಕರ್‌ರವರು ಕೈಕೊಂಡಿದ್ದ ಶಾಂತಿಸಂಧಾನದ ಪ್ರಯತ್ನವು ನಿಷ್ಫಲವಾದ ವಿಷಯದಲ್ಲಿ ಇಂಡಿಯಾ ಸರಕಾರದವರು ತಮ್ಮ ವಾರದ ವರದಿಯಲ್ಲಿ ಈ ರೀತಿಯಾಗಿ ಬರೆದಿರುವರು. ಶಾಂತಿಸಂಧಾನವು ನಿಷ್ಫಲಕಾರಿಯಾದುದಕ್ಕೆ ಕಾಂಗ್ರೆಸ್ಸಿನ ಮುಖಂಡರ ಅಸಾಧ್ಯ ಬೇಡಿಕೆಗಳೇ ಕಾರಣವೆಂದು ಹೇಳಲ್ಪಟ್ಟಿರುವದು. ಅದರ ಸಾರಾಂಶವು ಈ ರೀತಿಯಾಗಿರುವದು.

"ಈ ಬೇಡಿಕೆಗಳು ಅಖಿಲ ಸೂತ್ರದ ಪ್ರಾಮುಖ್ಯತೆಯನ್ನು ಪ್ರತಿಭಟಿಸುವವು ಮಾತ್ರವಲ್ಲದೆ, ಸ್ಥಳೀಯಸರಕಾರಗಳ ಅಧಿಕಾರ ಉನ್ನತಿಗೂ ಕಂಟಕಸ್ವರೂಪಗಳಾಗಿರುವವು. ಈ ಬೇಡಿಕೆಗಳು ಇತರ ಪಂಗಡಗಳ ಅಭಿಪ್ರಾಯವನ್ನೂ, ಸದ್ಯಃ ಸ್ಥಾಪಿತವಾಗಿರುವ ಅಖಿಲ ಸೂತ್ರದ ಹಾಗೂ ಆರ್ಥಿಕ ಸಂಪತ್ತಿನ ವಿಚಾರಗಳನ್ನೂ ಸ್ವಲ್ಪವೂ ಗಮನಕ್ಕೆ ತಾರದೆ, ಕೇವಲ ತಮ್ಮ ಒಂದೇ ಒಂದು ಪಕ್ಷದ ತತ್ವವನ್ನೇ ಬಲಾತ್ಕಾರವಾಗಿ ಸ್ಥಿರಪಡಿಸಲು ಪ್ರಯತ್ನಿಸುವಂತೆ ತೋರುವವು. ಮೂರನೆಯ ಭಾಗದಲ್ಲಿ ವ್ಯಾಪಾರಕ್ಕೆ ನಿರ್ಬಂಧವನ್ನು ಕಲ್ಪಿಸಬೇಕೆಂದೂ ಕಾಯಿದೆ ಭಂಗದ ಚಳವಳಿಯ ಕೆಲವು ಮುಖ್ಯಗಳಾದ ಕಾರ್ಯಕ್ರಮಗಳಿಗೆ ಸರಗಾರವು ಅವಕಾಶವನ್ನು ಕೊಡಬೇಕೆಂದೂ ಕೇಳುವವು. ಈ ಸೂಚನೆಗಳು ಅಖಿಲ ತತ್ವಕ್ಕೆ ಸಂಪೂರ್ಣ ವಿರೋಧವಾಗಿರುವವು. ಈ ಬೇಡಿಕೆಗಳನ್ನು ಒಪ್ಪಿಕೊಂಡು ವರ್ತಿಸುವದು ಅಸಾಧ್ಯವೆಂದು ಸರಕಾರದ ತತ್ವವು ಸ್ಪಷ್ಟವಾಗಿ ತಿಳುಹಿಸಲ್ಪಟ್ಟಿರುವದು. ಕಾಯಿದೆಭಂಗದ ಚಳವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವದಾದರೆ, ಸರಕಾರವು (1) ನೂತನವಾಗಿ ಹೊರಡಿಸಿರುವ ಎಲ್ಲ ಕಾಯಿದೆಗಳನ್ನು ರದ್ದುಮಾಡುವದು. (2) ಚಳವಳಿಯ ಸಂಬಂಧದಲ್ಲಿ ಕಾರಾಗೃಹವಾಸಿಗಳಾಗಿರುವವರ ವಿಷಯವನ್ನು ಕನಿಕರದಿಂದ ಪುನರ್ವಿಮರ್ಶೆಮಾಡಬೇಕೆಂದು ಸ್ಥಳೀಯ ಸರಕಾರಗಳಿಗೆ ತಿಳುಹಿಸುವೆವು. (3) ದುಂಡುಮೇಜಿನ ಪರಿಷತ್ತಿನಲ್ಲಿ ಅವರಿಗೆ (ಕಾಂಗ್ರೆಸ್ ಪಕ್ಷದವರಿಗೆ) ಅವಶ್ಯಕವಿದ್ದಷ್ಟು ಜನರಿಗೆ ಆಮಂತ್ರಣ ಕೊಟ್ಟು, ಅಲ್ಲಿ ತಮಗೆ ಬೇಕಾದ ಅಖಿಲ ಪದ್ಧತಿಯನ್ನು ಚರ್ಚಿಸಲು ಅವಕಾಶಕೊಡುವೆವು.

ಸಂಧಾನವು ನಿಷ್ಫಲವಾದುದರಿಂದ ಶಾಂತಿಭಂಗದ ಚಳವಳಿಗೆ ಅಲ್ಪಸ್ವಲ್ಪ ತಾತ್ಕಾಲಿಕ ಬೆಂಬಲವು ದೊರೆಯಬಹುದು. ಈ ಪೂರ್ವದಲ್ಲಿ, ಶಾಂತಿಸಂಧಾನವು ಇನ್ನೂ ನಡೆಯುತ್ತಿದ್ದಾಗ, ಕೆಲವು ಬುದ್ಧಿಹೀನರು, ಸರಕಾರದವರು ಸದ್ಯಃ ಹೇಗಾದರೂ ಶಾಂತಿಸಂಧಾನವು ಫಲಕಾರಿಯಾದರೆ ಸಾಕೆಂದು ಕಾದಿರುವರೆಂದೂ, ಈಗ ಅವರು ಯಾವ ಷರತ್ತುಗಳಿಗಾದರೂ ಒಪ್ಪಿಕೊಳ್ಳುವರೆಂದೂ ಹೇಳುತ್ತ, ಸ್ವಯಂಸೇವಕರಿಗೆ ನಿರ್ಭೀತಿಯಿಂದ ಕಾಯಿದೆಭಂಗವನ್ನು ಮಾಡಿರೆಂದೂ ಅದರಿಂದ ಎಲ್ಲ ಸ್ವಯಂಸೇವಕರ ಬಿಡುಗಡೆಯಾಗುವದೆಂದೂ ಹೇಳುತ್ತಿದ್ದರು. ಸದ್ಯಃ ಈ ತಪ್ಪು ತಿಳುವಳಿಕೆಯು ಎಲ್ಲರ ಮನಸ್ಸಿನಿಂದಲೂ ದೂರವಾಗಿರುವದು. ಇದರಿಂದ ಸರಕಾರದವರು ಶಾಂತಿಸ್ಥಾಪನೆಗಾಗಿ ತಮ್ಮ ಕೈಲಾದಮಟ್ಟಿಗೂ ತಕ್ಕ ಪ್ರಯತ್ನಗಳೆಲ್ಲವನ್ನೂ ಮಾಡಿರುವರೆಂದೂ ಸಂಧಾನವು ನಿಷ್ಫಲವಾಗಿ ಪರಿಣಮಿಸಿದುದಕ್ಕೆ ಕಾಂಗ್ರೆಸ್ಸಿನ ಅಸಾಧ್ಯ ಬೇಡಿಕೆಗಳೇ ಕಾರಣವೆಂದೂ ಸೌಮ್ಯಪಕ್ಷದವರಿಗೆ ಸಂಪೂರ್ಣ ಮನವರಿಕೆಯಾಗುವದೆಂದು ಊಹಿಸಬಹುದಾಗಿದೆ.

ಸತ್ಯಾಗ್ರಹ ಚಳವಳಿಯಿಂದ ಸರಕಾರಕ್ಕಾದ ಹಾನಿ.

ಮುಂಬೈ ಸರಕಾರದವರು ಈ ವರ್ಷದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಒಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿದ್ದಾರೆ. ಅದರಿಂದ ಈ ವರ್ಷ ಒಟ್ಟಿಗೆ 125 ಲಕ್ಷ ರೂಪಾಯಿಗಳ ಹಾನಿ ತಟ್ಟಿರುವದೆಂದು ತಿಳಿಯುತ್ತದೆ. ಮದ್ಯ ಖಾತೆಯಿಂದ 60 ಲಕ್ಷ, ಅರಣ್ಯ ಕಟ್ಟಳೆಯನ್ನು ಮುರಿದು ಜನರು ಹುಲ್ಲು ಮುಂತಾದ್ದನ್ನು ಕೊಯ್ಯುತ್ತಿರುವದರಿಂದ 16 ಲಕ್ಷ, ವ್ಯಾಪಾರ ಮುಂತಾದ್ದು ಕಟ್ಟು ಆದ್ದರಿಂದ ಸ್ಟಾಂಪ ಖಾತೆಗೆ 11 ಲಕ್ಷ. ದಕ್ಷಿಣಭಾಗ ಮಧ್ಯ ಭಾಗದೊಳಗಿನ ಭೂ ಕಂದಾಯವು ವಸೂಲಾಗುತ್ತದೆ: ಆದರೂ ಗುಜರಾಥದೊಳಗೆ ಕರ ನಿರಾಕರಣೆಯು ಗದ್ದಲವು ನಡೆದಿದೆ: ಇದರಿಂದ ಬಾರ್ಡೋಲಿ, ವಾಲೋಡ, ಮಹಾಲ ಮತ್ತು ಜಂಬೂಸರ ತಾಲೂಕುಗಳಿಂದ ಬರತಕ್ಕ ಸುಮಾರು 5 ಲಕ್ಷ ರೂಪಾಯಿ ಕಂದಾಯವು ಬಂದಿಲ್ಲ; ಸರಕಾರದವರು ಈ ಕಂದಾಯವನ್ನು ತೆಗೆದುಕೊಳ್ಳುವ ಬಗ್ಗೆ ವಿಶೇಷ ಪ್ರಯತ್ನವನ್ನು ನಡೆಯಿಸುವವರಿದ್ದಾರೆ. ಮುಂಬೈ ಇಲಾಖೆಯ ಬೊಕ್ಕಸದಲ್ಲಿ ಹಿಂದಕ್ಕೆ ಇದ್ದ 82 ಲಕ್ಷ ರೂಪಾಯಿಗಳ ಶಿಲ್ಕು ಎಲ್ಲಾ ಖರ್ಚು ಆಗಿಯೂ ಇಷ್ಟು ದುಡ್ಡಿನ ಕೊರತೆ ಬೀಳುವಂತಿದೆ.

ಪಂಚಾಚಾರ್ಯ ಪ್ರಭಾ

೧೯೩೦ನೇ ಸೆಪ್ಟಂಬರ್ ತಾ|| ೧೫ನೆಯ ಸೋಮವಾರ

ಕನ್ಯಾಶುಲ್ಕವೂ ವೀರಶೈವ ಕ್ಷತ್ರಿಯರೂ.

ಭೂದಾನ ಗೋದಾನಾದಿ ಷೋಡಶಮಹಾದಾನಗಳಲ್ಲಿ ಕನ್ಯಾದಾನವೆಂಬುದೊಂದು ಮಹಾದಾನವಾಗಿ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುತ್ತದೆ. ಯಾವ ಪುರುಷನು ತನ್ನ ಪುತ್ರೀರತ್ನವನ್ನು ಪ್ರೇಮದಿಂದ ಸಲಹಿ ಋತುಮತಿಯಾಗುವ ಪೂರ್ವದಲ್ಲಿಯೇ ಯೋಗ್ಯವಾದ ವರನನ್ನು ಹುಡುಕಿ ಯಥಾಶಕ್ತಿ ಕನ್ಯೆಯನ್ನು ಅಲಂಕರಿಸಿ ವಿವಾಹಮಾಡಿಕೊಡುವನೋ ಆತನು ಪುಣ್ಯಲೋಕವನ್ನು ಹೊಂದುವನಲ್ಲದೆ ತನ್ನ ಕುಲಕೋಟಿಯನ್ನೆಲ್ಲ ಪವಿತ್ರಗೊಳಿಸುವನು. ಇತರ ದಾನಗಳು ಪುಣ್ಯದಾಯಕಗಳಾದರೂ ಅವು ಈ ಕನ್ಯಾದಾನದಿಂದಾಗುವ ಪುಣ್ಯದ ಸಹಸ್ರಾಂಶದಲ್ಲಿ ಒಂದಂಶವನ್ನೂ ಹೋಲುವುದಿಲ್ಲ. ಪಿತೃವು ವಿಧಿವತ್ತಾಗಿ ಯಾವನಿಗೆ ಕನ್ಯೆಯನ್ನು ದಾನಮಾಡುವನೋ ಆತನ ವಂಶವು ವೃದ್ಧಿಗೊಳ್ಳುವುದು. ಹೀಗಿದ್ದರೂ ಮಲವಗೌಡರೆಂಬ ಅಭಿಧಾನದಿಂದ ಶೋಭಿಸುವ ವೀರಶೈವ ಕ್ಷತ್ರಿಯರು ಇಂಥ ಮಹತ್ವದ ವಿಷಯವನ್ನು ಲಕ್ಷ್ಯಕ್ಕೆ ತಾರದೆ ದನಕರುಗಳನ್ನು ಮಾರುವಂತೆ ದ್ರವ್ಯೇಚ್ಛೆಯಿಂದ ತಮ್ಮ ಹೆಣ್ಣುಮಕ್ಕಳನ್ನು ಮಾರುವುದನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ. "ನಕನ್ಯಾಯಾಃ ಪಿತಾ ವಿದ್ವಾನ್‌ಗೃಹ್ಣೀಯಾಚ್ಛುಲ್ಕಮಣ್ವಪಿ| ಗೃಹ್ಣನ್‌ಶುಲ್ಕಂಹಿಲೋಭೇನ ಸ್ಯಾನ್ನರೋಽಪತ್ಯವಿಕ್ರಯೀ" ದ್ರವ್ಯಲೋಭದಿಂದ ವರನ ಕಡೆಯಿಂದ ಅತ್ಯಲ್ಪ ದ್ರವ್ಯವನ್ನು ಸ್ವೀಕರಿಸಿದರೂ ಸಹ ಅವನು ಪುತ್ರೀವಿಕ್ರಯ ಮಾಡಿದ ದೋಷಕ್ಕೆ ಭಾಗಿಯಾಗುತ್ತಾನೆಂದು ಬೋಧಿಸುವ ಧರ್ಮಶಾಸ್ತ್ರತತ್ವವನ್ನು ಮೀರಿ ಇಂಥ ಅಮಾರ್ಗದಲ್ಲಿ ಹೋಗುವುದು ಇವರಿಗೆ ಎಷ್ಟೂ ಭೂಷಣವಲ್ಲ. ಈ ಜನಾಂಗದಲ್ಲಿ ಕೆಲವರು ಎಲ್ಲವ್ಯಾಪಾರಕ್ಕಿಂತಲೂ ಈ ಕನ್ಯಾವಿಕ್ರಯ ವ್ಯಾಪಾರದಿಂದ ಬಹು ಬೇಗನೆ ಶ್ರೀಮಂತರಾಗುವೆವೆಂಬ ಭ್ರಾಂತಿಯಿಂದ ಯಾವಾಗಲೂ ನಮ್ಮ ಹೊಟ್ಟೆಯಲ್ಲಿ ಹೆಣ್ಣುಮಕ್ಕಳೇ ಹುಟ್ಟಲೆಂದು ದೇವರಿಗೆ ಹರಿಕೆಯನ್ನೂ ಸಹ ಕಟ್ಟುವರೆಂದು ಕೇಳುತ್ತೇವೆ. ಈ ಸಮಾಜವು ಪೂರ್ವಕಾಲದಲ್ಲಿ ರಾಜ್ಯಭಾರವನ್ನು ಮಾಡಿ ಪ್ರಜೆಗಳಲ್ಲಿ ವಿಶೇಷವಾದ ಅನುರಾಗವನ್ನು ಸಂಪಾದಿಸಿದ್ದುದಲ್ಲದೆ ತಾನು ವೀರಶೈವಮತದ ಧರ್ಮ ಕರ್ಮ ನಿಯಮಗಳನ್ನು ಸ್ವಲ್ಪವೂ ಮೀರದಂತೆ ನಡೆಯುತ್ತ ಪ್ರಜಾಶಾಸನವನ್ನು ಮಾಡುತ್ತಿದ್ದಿತು. ಈಗಲೂ ಸಹ ಈ ಜನಾಂಗದಲ್ಲಿ ಯಾವತ್ತು ಧಾರ್ಮಿಕಕ್ರಿಯೆಗಳು ಉತ್ತಮವಾಗಿರುತ್ತವೆ. ಕ್ಷೀರಸಮುದ್ರದಲ್ಲಿ ವಿಷವು ಉತ್ಪತ್ತಿಯಾದಂತೆ ಇದೊಂದು ದೋಷವು ಕೆಲಕಾಲದಿಂದ ತಲೆದೋರಿದುದರಿಂದ ಈ ಸಮಾಜದ ಸ್ವಾಭಾವಿಕವಾದ ಸೌಂದರ್ಯವೇ ಹೊರಟುಹೋಗಿದೆ. ಈ ದೋಷದಿಂದ ಈ ಸಮಾಜದಲ್ಲಿ ಅನೇಕರು ಅಗರ್ಭಶ್ರೀಮಂತರಾಗಿದ್ದರೂ ತಮ್ಮ ಗಂಡುಮಕ್ಕಳಿಗೆ ಹೆಣ್ಣುಮಕ್ಕಳನ್ನು ತರುವ ಕಷ್ಟದಲ್ಲಿ ಮನೆಮಾರುಗಳನ್ನು ಮಾರಿ ದರಿದ್ರರಾಗಿ ಹೋಗಿರುತ್ತಾರೆ. ಹೆಣ್ಣುಮಕ್ಕಳಿದ್ದ ಬಡವರು ಶ್ರೀಮಂತರಾಗಿರುತ್ತಾರೆ. ಇದರಿಂದ ಬಡವರಿಗೆ ಗಂಡುಮಕ್ಕಳಾಗುವುದೇ ಬಹು ದುಃಖಕರವಾಗಿ ಪರಿಣಮಿಸಿದೆ. ಮತ್ತು "ಯೌವನಾರಂಭ ಏವಚ ಕನ್ಯಕಾನಾಂ ಇಂಧನೀಭವಂತಿ ಪಿತರಸ್ಸಂತಾಪಾನಲಸ್ಯಹೃದಯಮಂಧಕಾರಯತಿಮೇ ದಿವಸಮಿವಪಯೋಧರೋನ್ನತಿರಸ್ಯಾಃ | ಕಟ್ಟಿಗೆಗಳು ಬೆಂಕಿಯಲ್ಲಿ ಸುಟ್ಟುಹೋಗುವಂತೆ ಮಗಳಿಗೆ ವರನು ಸಿಗಲಿಲ್ಲವೆಂಬ ಸಂತಾಪಾಗ್ನಿಯಲ್ಲಿ ಹೆಣ್ಣಿನ ತಂದೆಗಳು ಬೆಂದುಹೋಗುವರು. ಪಯೋಧರಾ (ಮೋಡವು ಮುಚ್ಚಿಕೊಂಡ ಹಾಗೆಲ್ಲಾ) ಭಿವೃದ್ಧಿಯಿಂದ ಹಗಲು ಸಹ ಕತ್ತಲೆಯಾಗುವಂತೆ ಮಗಳಪಯೋಧರಾ (ಪ್ರಾಯ) ಭಿವೃದ್ಧಿಯು ನನ್ನನ್ನು ಅಂಧನನ್ನಾಗಿ ಮಾಡಿದೆ ಎಂದು ಒಬ್ಬ ಮಹಾರಾಜನು ತನ್ನ ಹೆಣ್ಣುಮಗಳ ವಿಷಯದಲ್ಲಿ ಎಷ್ಟೋ ವ್ಯಸನಪಟ್ಟಿರುವನು.

ಹೀಗೆ ಪೂರ್ವದಿಂದಲೂ ರೂಢಮೂಲವಾಗಿ ಬಂದಿರುವ ಸ್ವಭಾವಕ್ಕೆ ವಿರುದ್ಧವಾಗಿ ಕನ್ಯಾಪಿತೃವು ಮಗಳಿಗೆ ವಯಸ್ಸಾದಹಾಗೆಲ್ಲ ದ್ರವ್ಯವು ಸಿಗುತ್ತದೆಂಬ ಆಶೆಯಿಂದ ಸಂತೋಷಗೊಂಡು ವರನಕಡೆಯವರಿಂದ ಹೇರಳ ದ್ರವ್ಯವನ್ನು ತೆಗೆದುಕೊಂಡು ಏನೊಂದೂ ತಿಳಿಯದ ಕೋಮಲ ಸ್ವಭಾವದ ಮಗಳನ್ನು ಮಾರುವದರಿಂದ ವರನ ಕಡೆಯವರು ಸಾಲಗಾರರಾಗಿ ದುಃಖಕ್ಕೀಡಾಗುವುದಲ್ಲದೆ, ಯಾವಜ್ಜೀವವೂ ಆ ಮಗಳನ್ನು ದುಃಖಕ್ಕೀಡು ಮಾಡಿದಂತಾಗುವುದು. ಕನ್ಯೆಯಾದರೂ ಸಾಲಗಾರರ ಹಿಂಸೆಯನ್ನು ಸಹಿಸದೆ ದುಃಖಪಡುತ್ತಿರುವ ಗಂಡನನ್ನು ನೋಡಿ ತಾನೂ ಬಿಸಿ ಬಿಸಿಯಾದ ಕಣ್ಣೀರನ್ನು ಸುರಿಸುತ್ತ, ತಮ್ಮ ತಂದೆತಾಯಿಗಳನ್ನು ಶಪಿಸುತ್ತಿರುವಳು. ಈ ಶಾಪಾಗ್ನಿಯು ಕನ್ಯಾಶುಲ್ಕವನ್ನು ಗ್ರಹಿಸಿದ ತಂದೆಯ ವಂಶಾರಣ್ಯವನ್ನು ಕಾಡುಗಿಚ್ಚಿನಂತೆ ಸುಡದೆ ಎಂದೂ ಬಿಡಲಾರದು. ತಂದೆತಾಯಿಗಳ ಮನೆಯ ಅಂಗಣದಲ್ಲಿ ತಾಂಡವಮಾಡುತ್ತಿರುವ ಬಾಲಲಕ್ಷ್ಮಿಯಂತಿರುವ ಕನ್ಯೆಯನ್ನು ಮಾರಿ, ಅದರಿಂದ ಸುಖಪಡುತ್ತೇನೆಂಬುವವನ ಹೀನಜನ್ಮಕ್ಕಿಂತಲೂ ಹೀನ ಜನ್ಮವು ಲೋಕದಲ್ಲಿ ಯಾವುದೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ದ್ರವ್ಯವನ್ನು ಗಳಿಸಲು ಲೋಕದಲ್ಲಿ ಅನೇಕ ಮಾರ್ಗಗಳು ದೇವರಿಂದ ಕಲ್ಪಿಸಲ್ಪಟ್ಟಿದ್ದರೂ ಅವುಗಳನ್ನೆಲ್ಲ ಬಿಟ್ಟು ದೇವರ ಆಜ್ಞೆಗೆ ವಿರುದ್ಧವಾಗಿ ಕನ್ಯೆಯನ್ನು ದಾನಮಾಡುವುದಕ್ಕೆ ಪ್ರತಿಯಾಗಿ ಕನ್ಯಾವಿಕ್ರಯವನ್ನು ಮಾಡಿ ಜೀವಿಸುವ ನೀಚವೃತ್ತಿಗೆ ಯಾವಾಗಲೂ ಧಿಕ್ಕಾರವಿರಲಿ! ಒಂದು ಕೊಪ್ಪರಿಗೆಯಷ್ಟು ಹಾಲಿನಲ್ಲಿ ಒಂದು ಹನಿಯಷ್ಟು ವಿಷ ಹಾಕಿದರೂ ಹಾಲೆಲ್ಲವೂ ವಿಷಮಯವಾಗಿ ಹೋಗುವಂತೆ ಶಾಸ್ತ್ರವಿರುದ್ಧವೂ, ಲೋಕವಿರುದ್ಧವೂ ಅತಿ ಘೋರವೂ ಆದ ಕನ್ಯಾಶುಲ್ಕವೆಂಬ ಮಹಾ ದೋಷವು ಈ ವೀರಶೈವಕ್ಷತ್ರಿಯರಲ್ಲಿ ಸ್ವಭಾವಸಿದ್ಧವಾಗಿ ಪೂರ್ವದಿಂದಲೂ ರೂಢಮೂಲವಾಗಿ ಬಂದಿರುವ ಸದ್ಗುಣಗಳನ್ನೆಲ್ಲ ಮುಚ್ಚಿ ತಾನೇ ಮುಂದುವರಿದಿದೆ. ಇದೊಂದು ದೋಷದಿಂದ ಇವರು ದೂರರಾದರೆ ಈ ಜನಾಂಗದ ಸೌಷ್ಟವವನ್ನೂ ಗಾಂಭೀರ್ಯವನ್ನೂ ಅಷ್ಟಿಷ್ಟೆಂದು ವರ್ಣಿಸಲು ಸಾಧ್ಯವಿಲ್ಲವು. ಈ ಜನಾಂಗವು "ಸ್ತ್ರೀಧನಾನಿತುಯೇಮೋಹಾದುಪಜೀವಂತಿ ಬಾಂಧವಾಃ| ನಾರೀಯಾನಾನಿವಸ್ತ್ರಂವಾ ತೇಪಾಪಾ ಯಾಂತ್ಯಧೋಗತಿಂ||" ಯಾರು ಸ್ತ್ರೀಧನದಿಂದ ಜೀವಿಸುತ್ತಾರೆಯೋ ಅಂಥ ಪಾಪಿಗಳು ಅಧೋಗತಿಯನ್ನು ಹೊಂದುವರು, ಎಂಬ ಧರ್ಮಶಾಸ್ತ್ರವನ್ನು ಇನ್ನಾದರೂ ಪರ್ಯಾಲೋಚಿಸಿ ಅತಿ ಘೋರವಾದ ಕನ್ಯಾಶುಲ್ಕವನ್ನು ಪರಿಗ್ರಹಿಸದೆ ಯಥೋಚಿತವಾಗಿ ತನ್ನ ದ್ರವ್ಯದಿಂದ ಕನ್ಯಾದಾನಮಾಡುವ ಸದ್ವೃತ್ತಿಯನ್ನು ಅಭ್ಯಾಸಮಾಡಿ ಜಗದೀಶ್ವರನ ಕೃಪೆಗೆ ಪಾತ್ರವಾಗಿ ಇಹಪರಸುಖಗಳನ್ನನುಭವಿಸಲೆಂದು ಕೋರುತ್ತೇವೆ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಕೀರ್ತನ.

೯ ವರ್ಷದ ಬಾಲಕ.

ಈಗ್ಗೆ 1-2 ತಿಂಗಳುಗಳ ಪೂರ್ವದಲ್ಲಿ ರಾಜಧಾನಿಯಲ್ಲಿ 12 ವರ್ಷದ ವೈಷ್ಣವ ಬಾಲಿಕೆಯು ಮೇಲ್ಕಂಡ ಕೀರ್ತನವನ್ನು ಮಾಡಿ ಸರ್ವಸಾಮಾಜಿಕರನ್ನು ಸಂತೋಷಪಡಿಸಿದ ಸಂಗತಿಯು ಪ್ರಭಾಪಾಠಕರಿಗೆಲ್ಲ ವೇದ್ಯವಿರಬಹುದು. ಇತ್ತೀಚೆಗೆ ರಾಜಧಾನಿ ನಿವಾಸಿಗಳಾದ ಮ|| ರಾ|| ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರ ಪ್ರೋತ್ಸಾಹದ ಮೇರೆಗೆ ಬೆಂಗಳೂರು ನಿವಾಸಿಗಳಾದ ಮ|| ರಾ|| ಎಂ. ಲಕ್ಷ್ಮೀನಾರಾಯಣ ಭಾಗವತರವರ ಪುತ್ರ ನರಸಿಂಹಮೂರ್ತಿ ಎಂಬ ಕೇವಲ 9 ವರ್ಷದ ಸ್ಮಾರ್ತಬ್ರಾಹ್ಮಣಬಾಲಕನು ಶ್ರೀ ಜಗದ್ಗುರು ರೇಣುಕಾಚಾರ್ಯರ ಕೀರ್ತನವನ್ನು ತಾ|| 11-9-30 ನೆಯ ಗುರುವಾರ ದಿವಸ ರಾ|| ಮುಜರಾಯಿ ಭಕ್ಷಿಯವರಾದ ರಾಜಕಭೂಷಣ ಎಚ್. ಲಿಂಗರಾಜ ಅರಸರವರ ಅಧ್ಯಕ್ಷತೆಯಲ್ಲಿ ಬಹು ಮನೋಹರವಾಗಿ ಮಾಡಿದನು. ಈ ಮಗುವಿನ ಮುದ್ದು ಮೊಗದಿಂದ ಪ್ರವಹಿಸುತ್ತಿರುವ ವಚನಾಮೃತಧಾರೆಯು ಸಕಲ ಶ್ರೋತೃವೃಂದದ ಕರ್ಣಕುಹರವನ್ನು ಪ್ರವೇಶಿಸಿ ಆನಂದತುಂದಿಲರನ್ನಾಗಿ ಮಾಡಿತು. ಇಂಥ ಚಿಕ್ಕವಯಸ್ಸಿನಲ್ಲಿ ಸಭಾಕಂಪನವಿಲ್ಲದೆ ಅತ್ಯಂತ ಧೈರ್ಯದಿಂದಲೂ, ಉತ್ಸಾಹದಿಂದಲೂ ಮಹಾಜನಸ್ತೋಮದಲ್ಲಿ ನಿಂತು ಕೀರ್ತನ ಮಾಡುವ ಶಕ್ತಿಯು ಈ ಬಾಲಕನಿಗೆ ಪ್ರಾಪ್ತವಾಗಿರುವದನ್ನು ನೋಡಿದರೆ ಇದು ದೈವೀಕೃಪೆಯೆಂದೇ ಹೇಳಬಹುದಾಗಿದೆ. 9 ವರ್ಷದ ಈ ಮಗುವಿನ ಕೀರ್ತನ ಶೈಲಿಯನ್ನೂ, ಮಧುರವಾಣಿಯನ್ನೂ, ಸುಶ್ರಾವ್ಯ ಸಂಗೀತವನ್ನೂ ಕೇಳಿ ಅಧ್ಯಕ್ಷಮಹನೀಯರು ಸಂತುಷ್ಟಮನಸ್ಕರಾಗಿ ಈ ಬಾಲಕನನ್ನು ವಿಶೇಷವಾಗಿ ಶ್ಲಾಘಿಸಿದರು. ಅಲ್ಲದೆ ಕೀರ್ತನ ಶ್ರೋತೃಗಳಾಗಿ ಆಗಮಿಸಿದ್ದ ಲೋಕಪ್ರಸಿದ್ಧ ಮ|| ಎಂ. ವೆಂಕಟಕೃಷ್ಣಯ್ಯನವರು ಮ|| ಡಿ. ಬಸವಯ್ಯನವರೇ ಮೊದಲಾದವರು ಈ ಬಾಲಕನ ಗುಣಗಾನವನ್ನು ಮಾಡಿದರು. ಈ ಬಾಲಕನ ಅಣ್ಣನಾದ 12 ವರ್ಷದ ಲಕ್ಷ್ಮೀಪತಿ ಎಂಬ ಬಾಲಕನು ಕೀರ್ತನದಲ್ಲಿ ಬಹು ಮನೋಹರವಾಗಿ ಕಂದಪದ್ಯಗಳನ್ನು ಅನ್ನುತ್ತಿರುವನು. ಮ|| ಎಂ. ಲಕ್ಷ್ಮೀನಾರಾಯಣಭಾಗವತರು ತಮ್ಮ ಉಭಯ ಪುತ್ರರನ್ನು ಬಹು ಕಷ್ಟಪಟ್ಟು ಇಷ್ಟುಮಟ್ಟಿಗೆ ಬುದ್ಧಿಮಂತರನ್ನಾಗಿ ಮಾಡಿರುವದನ್ನು ನೋಡಿದರೆ ಅತ್ಯಂತ ಸಂತೋಷವೆನಿಸುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯನ ಆಶೀರ್ವಾದಬಲದಿಂದ ಈ ಬಾಲಕರು ತಮ್ಮ ತಮ್ಮ ಕಲೆಯಲ್ಲಿ ದಿನೇ ದಿನೇ ವಿಶೇಷವಾದ ನೈಪುಣ್ಯವನ್ನು ಪಡೆಯುತ್ತ ದಿಗಂತವಿಶ್ರಾಂತಕೀರ್ತಿಶಾಲಿಗಳಾಗಲೆಂದು ಕೋರುತ್ತೇವೆ. ಜಗದಾಚಾರ್ಯರ ವಿಷಯದಲ್ಲಿ ಅಸಾಧಾರಣವಾದ ಭಕ್ತಿವಿಶ್ವಾಸಗಳನ್ನಿಟ್ಟು ಹಗಲಿರುಳೆನ್ನದೆ ಅವರ ಚರಿತ್ರವನ್ನು ಕಲಿತು ಆ ಗುರುಸಾರ್ವಭೌಮನ ಅತ್ಯದ್ಭುತ ಲೀಲೆಗಳನ್ನು ಕೀರ್ತನರೂಪದಿಂದ ಬೋಧಿಸಿ ಸರ್ವರನ್ನು ಸಂತೋಷಪಡಿಸಿದ ಈ ಬಾಲಕನಿಗೆ ಸರ್ವರೂ ಪ್ರೋತ್ಸಾಹವನ್ನೀಯುವದು ಅವರ ಮುಖ್ಯ ಧರ್ಮವಾಗಿದೆ. ಮುಖ್ಯವಾಗಿ ಈ ಕೀರ್ತನಕ್ಕೆ ವಿಶೇಷ ಪ್ರೋತ್ಸಾಹವನ್ನಿತ್ತು ಸಿದ್ಧಪಡಿಸಿದ ಮ|| ರಾ|| ಡಾಕ್ಟರ್ ಸಿದ್ಧಪ್ಪನವರು ಸದರಿ ಬಾಲಕನಿಗೆ ವಿಶೇಷವಾದ ಗೌರವವನ್ನು ಮಾಡುವರೆಂದು ನಂಬಿದ್ದೇವೆ. ಗುರುಭಕ್ತಿಶೂನ್ಯರೂ, ದಾಂಭಿಕರೂ, ಕೃಪಣಶಿಖಾಮಣಿಗಳೂ ಆದವರೊಡನೆ ಡಾಕ್ಟರರು ಮಿಲಿತರಾಗದೆ, ಗುರುಭಕ್ತಿಸಂಪನ್ನರೂ, ಸರಳಹೃದಯರೂ, ಉದಾರಮನಸ್ಕರೂ ಆದವರೊಡನೆ ಮಿಲಿತರಾಗಿ ಧನಸಂಚಯವನ್ನು ಮಾಡಿ ತಮ್ಮ ಗೌರವಕ್ಕೆ ತಕ್ಕಂತೆ ಸದರಿ ಬಾಲಕನಿಗೆ ಪ್ರೋತ್ಸಾಹವನ್ನಿತ್ತು, ಆತನ ಶ್ರಮವನ್ನು ಸಾರ್ಥಕಗೊಳಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಪುಣೆಯ "ಸೊಸೈಟಿ ಆಫ್ ಫ್ರೆಂಡ್ಸ್" ನ ಮೆಂಬರರಾದ ಮಿ|| ಅಲೆಕ್ಸಾಂಡರವರು ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಇರುವ ವೈಷಮ್ಯವನ್ನು ತಪ್ಪಿಸಿ ಶಾಂತಿಸ್ಥಾಪನೆಯಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಕಳೆದ ಮಂಗಳವಾರ ಮಹಾತ್ಮರೊಡನೆ ಸಂಭಾಷಣೆಯನ್ನು ನಡೆಯಿಸಿದರು. ಸಂಭಾಷಣೆಯಲ್ಲಿ ನಡೆದ ಚರ್ಚೆಗಳು ಇನ್ನೂ ಬಹಿರಂಗವಾಗಿಲ್ಲ. ಮಿ|| ಅಲೆಕ್ಸಾಂಡರವರು ಈ ವಿಷಯದಲ್ಲಿ ಸದ್ಯದಲ್ಲಿಯೇ ವೈಸರಾಯರನ್ನು ಕಂಡು ಮಾತನಾಡುವರು. ಸಪ್ರೂ ಜಯಕರರ ಸಂಧಾನವು ನಿಷ್ಫಲವಾದಂತೆ ತಮ್ಮ ಪ್ರಯತ್ನಕ್ಕೆ ಯಾವ ವಿಘ್ನವೂ ಆಗುವದಿಲ್ಲವೆಂದು ಮಿ|| ಅಲೆಕ್ಸಾಂಡರನರು ಅಭಿಪ್ರಾಯಪಟ್ಟಿರುತ್ತಾರೆ.

ಗದಗಿನಲ್ಲಿ ನಡೆದ ಕೌನ್ಸಿಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರಿಗೆ ಸಂಪೂರ್ಣ ಜಯವಾಯಿತು. ಒಬ್ಬ ಮಹಮ್ಮದೀಯನಾದರೂ ಓಟನ್ನು ಕೊಟ್ಟಿರುವುದಿಲ್ಲ.

ಯೂನಿವರ್ಸಿಟಿ ಮೆಂಬರ ಸ್ಥಾನಕ್ಕೆ 42 ಜನ ಓಟು ಕೊಡುವವರ ಪೈಕಿ ಒಬ್ಬ ಅಧಿಕಾರಿಗಳು ಮಾತ್ರ ಓಟು ಕೊಟ್ಟಿರುವರು. ಹಿಂದೂ ಪಕ್ಷದ ಮೆಂಬರರ ಸ್ಥಾನಕ್ಕೆ 3,200 ಜನ ಓಟುಕೊಡುವವರ ಪೈಕಿ 7 ಜನರು ಮಾತ್ರ ಓಟು ಕೊಟ್ಟಿರುವರು. ಇತರರು ಓಟು ಕೊಡುವ ಸ್ಥಳಕ್ಕೆ ಸಹ ಹೋಗಲಿಲ್ಲ. ಓಟುಕೊಟ್ಟ 7 ಜನರು ಸರ್ಕಾರೀ ನೌಕರರಾಗಿರುವರು.

ಸಿಂಧಾ ಪ್ರಾಂತದಲ್ಲಿ 100 ಕ್ಕೆ 5 ಜನರು ಮಾತ್ರ ಓಟು ಕೊಟ್ಟಿರುವರು. ಓಟು ಕೊಟ್ಟವರ ಪೈಕಿ 100ಕ್ಕೆ 90 ಜನರು ನಿರ್ಜೀವ ಮೆಂಬರರ ಹೆಸರಿಗೆ ಓಟು ಕೊಟ್ಟಿರುವರು. ಲಾರ್ಖಾನಾದಲ್ಲಿ 150 ಜನ ಸ್ವಯಂಸೇವಕರು ಪಿಕೆಟ್ ಮಾಡಿದುದರಿಂದ ಒಬ್ಬರೂ ಓಟು ಕೊಡಲಿಲ್ಲ.

ಇದೇ ಸೆಪ್ಟಂಬರ್ 8 ನೇ ತಾರೀಖಿನ ದಿವಸ ಇಂಡಿಯಾ ಸರ್ಕಾರದವರು ಮೋತಿಲಾಲನೆಹರೂರವರ ದೇಹಸ್ಥಿತಿಯು ನೆಟ್ಟಗಿಲ್ಲವೆಂಬಕಾರಣದ ಮೇಲೆ ಕಾರಾಗೃಹದಿಂದ ಬಿಡುಗಡೆ ಮಾಡಿದರು. ಪಂಡಿತರು ತಮ್ಮ ಆರೋಗ್ಯವನ್ನು ಕ್ರಮಪಡಿಸಿಕೊಳ್ಳಲು ಕಳೆದ 13 ನೆಯ ತಾರೀಖಿನ ದಿವಸ ತಮ್ಮ ಪತ್ನಿ ಮತ್ತು ಮೊಮ್ಮಗಳು (ಪಂಡಿತ ಜವಾಹರಲಾಲರ ಮಗಳು) ಇವರೊಡನೆ ಮಸ್ಸೂರಿಗೆ ಪ್ರಯಾಣಮಾಡಿದರು.

ಪಂಡಿತ ಮೋತಿಲಾಲ ನೆಹರೂರವರ ಅಳಿಯಂದಿರಾದ ಮಿ|| ಆರ್. ಎಸ್. ಪಂಡಿತರು ಕಳೆದ ತಿಂಗಳು ಪುರುಷೋತ್ತಮದಾಸ್ ಪಾರ್ಕಿನಲ್ಲಿ ಮಾಡಿದ ಭಾಷಣಕ್ಕಾಗಿ ಇದೇ ತಿಂಗಳು 13 ನೆಯ ತಾರೀಖಿನ ದಿವಸ ದಸ್ತಗಿರಿ ಮಾಡಲ್ಪಟ್ಟರು. ಪಂಡಿತ ಮೋತಿಲಾಲ್ ನೆಹರೂ ಮೊದಲಾದವರೆಲ್ಲರೂ ಅವರಿಗೆ ಜಯವನ್ನು ಕೋರಿ ಕಾರಾಗೃಹಕ್ಕೆ ಬೀಳ್ಕೊಟ್ಟರು. ಈ ಕಾರಣದಿಂದ ಪಂಡಿತ ಮೋತೀಲಾಲ್‌ರೊಡನೆ ಮಸ್ಸೂರಿಗೆ ಹೊರಡಬೇಕೆಂದಿದ್ದ ಶ್ರೀಮತಿ ವಿಜಯಲಕ್ಷ್ಮಿ (ಪಂಡಿತ ಮೋತೀಲಾಲರ ಮಗಳು ಇವರು ತಮ್ಮ ಪ್ರಯಾಣವನ್ನು ನಿಲ್ಲಿಸಿದರು.

ಕೌನ್ಸಿಲ್ಲಿಗೆ ಮುಂಬಯಿ ಯೂನಿವರ್ಸಿಟಿಯ ಪರವಾಗಿ ಮೆಂಬರನ್ನು ಚುನಾವಣೆ ಮಾಡುವಾಗ್ಗೆ 2724 ಜನ ಗ್ರ್ಯಾಜುಯೇಟುಗಳ ಪೈಕಿ ಸುಮಾರು 500 ಜನರು ಮಾತ್ರ ಓಟುಕೊಟ್ಟರು. ಅದರಲ್ಲಿ ಹೆಚ್ಚುಭಾಗ ಪಾರ್ಸಿಜನರಾಗಿರುವರು.

ಕೈರಾಡಿಸ್ಟ್ರಿಕ್ಟಿನ ನಡಿಯಾದದಲ್ಲಿ ಚುನಾವಣೆಯ ಕಾಲದಲ್ಲಿ ಒಂದು ವಿಚಿತ್ರ ಸಂಗತಿಯು ನಡೆಯಿತು. ಮಿಸೆಸ್ ಮತ್ತು ಮಿಸ್ ಅಬ್ಬಾಸ್ ತ್ಯಾಯಬ್ಜಿಯವರು ಬರೋಡಾದಿಂದ ಬಂದು ಬಹಿಷ್ಕಾರ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಪ್ರಾತಃಕಾಲ 9 ಘಂಟೆಯಲ್ಲಿ ಪೋಲೀಸರು ಮಿಸ್ ತ್ಯಾಯಬ್ಜಿಯವರನ್ನೂ 40 ಜನ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿ, ಉಮೇದುವಾರರು ಮಧ್ಯಸ್ಥಿಕೆ ಮಾಡಿದ ಮೇಲೆ ಎಲ್ಲರನ್ನೂ ಬಿಟ್ಟುಬಿಟ್ಟರು. ಅಲ್ಲಿ ಪುನಃ ಚಳವಳಿಗೆ ಪ್ರಾರಂಭವಾಯಿತು. ಯಾರೂ ಓಟನ್ನೇ ಕೊಡಲಿಲ್ಲ. ಮಧ್ಯಾಹ್ನ 3 ಘಂಟೆಗೆ ಪೋಲೀಸರು ಪುನಃ ದಸ್ತಗಿರಿಗೆ ಪ್ರಾರಂಭಿಸಿದರು. ಒಟ್ಟು 78 ಜನ ಗಂಡಸರನ್ನು ಮತ್ತು 5 ಜನ ಸ್ತ್ರೀಯರನ್ನು ದಸ್ತಗಿರಿ ಮಾಡಿದರು. ಇದನ್ನು ಕಂಡು ನಾಥಿಲಾಲ ವಕೀಲ ಮತ್ತು ಬಾಬಾಸಾಹೇಬ ಮೋತಿಲಾಲ ಎಂಬ ಇಬ್ಬರು ಉಮೇದುವಾರರು ತಮ್ಮ ನಾಮಿನೇಶನದ ಅರ್ಜಿಯನ್ನು ಹಿಂದಕ್ಕೆ ತೆಗೆದುಕೊಂಡು ತಾವೂ ಚಳವಳಿಯಲ್ಲಿ ಭಾಗವಹಿಸಿದರು. ಅದುವರೆಗೆ 41,000 ಜನ ಓಟರುಗಳ ಪೈಕಿ 13 ಜನರು ಮಾತ್ರ ಓಟುಕೊಟ್ಟಿದ್ದರು.

ಶಾಂತಿಸಂಧಾನ.

ಪತ್ರಿಕಾಕರ್ತರ ಅಭಿಪ್ರಾಯಗಳು.

ಶತ್ರುವಿಗೂ ಸಹ ಹೇಳದ ಷರತ್ತುಗಳು.

"ಡಾಕ್ಟರ್ ಸಪ್ರೂ ಮತ್ತು ಮಿ|| ಜಯಕರರ ಪ್ರಯತ್ನವು ವ್ಯರ್ಥವಾಯಿತು. ನಡೆದ ವಿದ್ಯಮಾನಗಳನ್ನು ನೋಡಿದರೆ ಶಾಂತಿಸಂಧಾನವು ನಿಷ್ಪ್ರಯೋಜನಕಾರಿಯಾಗುವದೆಂದು ಪ್ರಾರಂಭದಿಂದಲೇ ಕಾಣಬಂದಿತು. ಮಿ|| ಗಾಂಧಿಯವರ ಷರತ್ತುಗಳು ಸೋಲಿಸಲ್ಪಟ್ಟ ಶತ್ರುವಿಗೆ ಹೇಳುವ ಷರತ್ತುಗಳಂತಿರುವವು. ಇಂಥ ಷರತ್ತುಗಳನ್ನು ಶರಣಾಗತನಾದ ಶತ್ರುವಿಗೂ ಸಹ ಯಾರೂ ಹೇಳುವದಿಲ್ಲ. ಮಿ|| ಗಾಂಧಿಯವರು ಮೊದಲಿನಿಂದಲೂ ತಪ್ಪು ತಿಳುವಳಿಕೆಯಿಂದ ವರ್ತಿಸುತ್ತಿರುವರು. ಉಭಯ ಪಕ್ಷದವರ ಅಭಿಪ್ರಾಯಗಳಿಗೆ ಅಪಾರ್ಥಗಳನ್ನು ಕಲ್ಪಿಸುವ ಆ ಪತ್ರಗಳ ಬರವಣಿಗೆಯನ್ನು ನೋಡಿ ಭರತಖಂಡದಲ್ಲಿಯೂ ಮತ್ತು ಗ್ರೇಟಬ್ರಿಟನ್ನಿನಲ್ಲಿಯೂ ಅನೇಕರು ವಿಷಾದಿಸುವರು."

—ಸ್ಟೇಟ್ಸ್‌ಮನ್ ಕಲ್ಕತ್ತಾ.

ಕೈಹಾಕದಿದ್ದರೆ ಚೆನ್ನಾಗಿತ್ತು.

"ಡಾ|| ಸಪ್ರೂ ಮತ್ತು ಜಯಕರರು ಶಾಂತಿಸಂಧಾನವನ್ನು ಕೈಕೊಂಡ ಉದ್ದೇಶವನ್ನಾಗಲಿ ಶಾಂತಿಸ್ಥಾಪನೆಯ ವಿಷಯದಲ್ಲಿ ಅವರ ಉತ್ಕಟೇಚ್ಛೆಯನ್ನಾಗಲಿ ಯಾರೂ ಆಕ್ಷೇಪಿಸಲಾರರು. ಆದರೆ ಇವರಷ್ಟೇ ಕುಶಲಮತಿಗಳೂ, ಚತುರರೂ ಆದ ಇತರ ಎಷ್ಟೋ ಜನರು ಕೈಹಾಕಲು ಹೆದರುತ್ತಿದ್ದ ಈ ಮಹಾ ಪ್ರಯತ್ನಕ್ಕೆ ಡಾ|| ಸಪ್ರೂ ಮತ್ತು ಜಯಕರರೂ ಸಹ ಕೈಹಾಕದೇ ಇದ್ದಿದ್ದರೆ ಚೆನ್ನಾಗಿತ್ತು."

—ಅಮೃತಬಜಾರ ಪತ್ರಿಕೆ ಕಲ್ಕತ್ತಾ.

ಲಾರ್ಡ್ ಅರ್ವಿನ್ನರ ದುರದೃಷ್ಟ.

"ಶಾಂತಿಸಂಧಾನವು ನಿಷ್ಫಲವಾಗದೆ ಬೇರೆ ಮಾರ್ಗವೇ ಇರಲಿಲ್ಲ. ಲಾರ್ಡ್ ಅರ್ವಿನ್ನರು ಧೈರ್ಯದಿಂದಲೂ, ಉದಾರಬುದ್ಧಿಯಿಂದಲೂ ವರ್ತಿಸಿ, ಕೋಟ್ಯಂತರ ಜನರ ಚಿರಕೃತಜ್ಞತೆಗೆ ಪಾತ್ರರಾಗಬಹುದಾದ ಅಪೂರ್ವ ಸಂಧಿಯನ್ನು ಹೊಂದಿದ್ದರು. ಆದರೆ ಅವರ ದುರದೃಷ್ಟದಿಂದಲೋ ಏನೋ ವಿರೋಧಪಕ್ಷದವರ ಉಪದೇಶಗಳಿಗೆ ಕಿವಿಕೊಟ್ಟರು.

—ಅಡ್ವಾನ್ಸ್ ಕಲ್ಕತ್ತಾ.

ರೇಷ್ಮೆಯ ಸಂಕೋಲೆಗಳು ನಮಗೆಬೇಡ.

ಶಾಂತಿಸಂಧಾನವೆಂಬುದು ಶುದ್ಧಮೋಸವೆಂಬದಾಗಿ ಹೇಳಿದ ಮೌಲಾನಾ ಅಬ್ದುಲ್ ಕಲಾಂ ಆಜದ್‌ರವರ ವಚನಗಳನ್ನು ವೈಸರಾಯರ ಉತ್ತರವು ಸಮರ್ಥನಗೊಳಿಸುವದು. ಏಕೆಂದರೆ ಮುಖ್ಯ ಮುಖ್ಯ ವಿಷಯಗಳ ಸಂಬಂಧವಲ್ಲಿ ವೈಸರಾಯರು ಇನ್ನೂ ಅಸ್ಪಷ್ಟವಾದ ಉತ್ತರಗಳನ್ನೇ ಹೇಳುತ್ತಿರುವರು. ಅತ್ಯಂತ ಶಾಂತಿಪ್ರಿಯರಾದ ಪಂಡಿತ ಮೋತೀಲಾಲ್ ನೆಹರೂ, ಡಾ|| ಅನ್ಸಾರಿ, ಪಂ|| ಮಾಳವೀಯರೇ ಮೊದಲಾದವರನ್ನು ಸ್ವಲ್ಪವೂ ಹಿಂದುಮುಂದಾಲೋಚಿಸದೆ ಕಾರಾಗೃಹಕ್ಕೆ ಕಳುಹಿಸಿದುದೇ ಶಾಂತಿಸಂಧಾನವು ನಿಷ್ಫಲವಾಗಲು ಕಾರಣವಾಯಿತು. ಸಂಪೂರ್ಣಸ್ವಾತಂತ್ರ್ಯಸಂಪಾದನೆಗಾಗಿ ಬದ್ಧಕಂಕಣರಾಗಿರುವ ಭಾರತೀಯರು ಕಬ್ಬಿಣದ ಸಂಕೋಲೆಗಳಿಗೆ ಬದಲಾಗಿ ರೇಷ್ಮೆಯ ಸಂಕೋಲೆಗಳನ್ನು ಎಂದಿಗೂ ಅಂಗೀಕರಿಸಲಾರರು. ಕಾಂಗ್ರೆಸ್ ಮುಖಂಡರ ಬೇಡಿಕೆಗಳು ದೇಶದ ಗೌರವವನ್ನು ರಕ್ಷಿಸಲು ಅತ್ಯವಶ್ಯಕವಾದುವುಗಳಾಗಿವೆ. ಆದುದರಿಂದ ಕಾಂಗ್ರೆಸ್‌ಪಕ್ಷಕ್ಕೆ ವಿರೋಧಿಗಳಾಗಿರುವವರಾದರೂ ದುಂಡುಮೇಜಿನ ಪರಿಷತ್ತಿಗೆ ಹೋಗಬಾರದು. ಏಕೆಂದರೆ ಪರಿಷತ್ತಿನಲ್ಲಿ ಮಾತನಾಡಲು ಅವರಿಗೆ ಯಾವ ಅಧಿಕಾರವನ್ನೂ ಕೊಟ್ಟಿರುವದಿಲ್ಲ. ದೇಶವು ಕಾಂಗ್ರೆಸ್ಸಿನ ಜೊತೆಯಲ್ಲಿರುವದು."

—ಮುಂಬಯಿ ಕ್ರಾನಿಕಲ್.

ಪರಿಷತ್ತನ್ನು ನಿಲ್ಲಿಸಬೇಕಾಗಿಲ್ಲ.

"ಖೈದಿಗಳು ಹೇಳಿರುವ ಷರತ್ತುಗಳನ್ನು ಯಾವ ಆತ್ಮಾಭಿಮಾನವುಳ್ಳ ಸರಕಾರವೂ ಒಪ್ಪುವಂತಿಲ್ಲ. ರಾಷ್ಟ್ರೀಯ ಮುಖಂಡರು ಪರಿಷತ್ತಿಗೆ ಬರಬೇಕಾದುದು ಅತ್ಯವಶ್ಯಕವಾಗಿದ್ದಿತು. ಆದರೆ ಅವರು ಬರಲಿಲ್ಲವೆಂದು ಪರಿಷತ್ತನ್ನು ನಿಲ್ಲಿಸಬೇಕಾಗಿಲ್ಲ. ಸರಕಾರವೂ ಮತ್ತು ಅವರ ಸಹಾಯಕರೂ ನಿಷ್ಕಲ್ಮಷವಾದ ಮನಸ್ಸಿನಿಂದ ಪರಿಷತ್ತಿನ ಮುಂದಿನ ಕಾರ್ಯಗಳನ್ನು ಮಾಡಬಹುದು."

—ಲಂಡನ್ ಟೈಮ್ಸ್.

ಪರಸ್ಪರ ಸಹೋದರಭಾವದಿಂದ ವರ್ತಿಸಬೇಕು.

"ಸದ್ಯಃಸ್ಥಿತಿಯು ಅತ್ಯಂತ ವಿಷಮಾವಸ್ಥೆಗೆ ಬಂದಿರುವದೆಂಬುದನ್ನು ಪ್ರತಿಯೊಬ್ಬರೂ ಚೆನ್ನಾಗಿ ಅರಿತುಕೊಳ್ಳಬೇಕಾಗಿದೆ. ಆದರೆ ಚತುರತೆಯಿಂದ ಕೆಲಸ ಮಾಡುವದಾದರೆ ಈಗಲೂ ಕಾರ್ಯಸಾಧನೆ ಮಾಡಬಹುದು. ದುಂಡುಮೇಜಿನ ಪರಿಷತ್ತಿನಲ್ಲಿ ಕೇವಲ ಸೈಮನ್‌ವರದಿಯನ್ನು ಮಾತ್ರ ಚರ್ಚಿಸದೆ, ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯವನ್ನೇ ಚರ್ಚಿಸಿ ತೀರ್ಮಾನಿಸುವದಾಗಿಯೂ, ಎಲ್ಲ ರಾಜಕೀಯ ಖೈದಿಗಳನ್ನು ಬಿಡುವದಾಗಿಯೂ ಸರಕಾರದವರು ಸ್ಪಷ್ಟವಾಗಿ ಹೇಳಿಬಿಟ್ಟರೆ, ಅವರ ಕರ್ತವ್ಯವನ್ನು ಅವರು ಪೂರೈಸಿದಂತಾಗುವದು. ಈ ಭರವಸೆಯ ಮೇಲೆ ರಾಷ್ಟ್ರೀಯ ಸಭೆಯವರು ಕಾಯಿದೆಭಂಗದ ಚಳವಳಿಯನ್ನು ನಿಲ್ಲಿಸಿ, ಪರಿಷತ್ತಿಗೆ ಬಂದರೆ ಅವರ ಕರ್ತವ್ಯವನ್ನು ಅವರೂ ಪೂರೈಸಿದಂತಾಗುವದು. ಪರಸ್ಪರ ಸಹೋದರಭಾವನೆಯಿಂದ ಮೇಲ್ಕಂಡಂತೆ ವರ್ತಿಸುವದಾದರೆ ಭರತಖಂಡದಲ್ಲಿ ಶಾಂತಿಸ್ಥಾಪನೆಯಾಗುವದು.

—ಡೇಲಿಹೆರಾಲ್ಡ್.

ಕಾಂಗ್ರೆಸ್ ಮುಖಂಡರನ್ನು ಬಿಟ್ಟು ಪರಿಷತ್ತನ್ನು ನಡೆಯಿಸಬೇಕು.

"ಕಾಂಗ್ರೆಸ್ ಮುಖಂಡರು ಪರಿಷತ್ತಿಗೆ ಬರದಿದ್ದರೆ ಅವರನ್ನು ಬಿಟ್ಟೇ ಪರಿಷತ್ತನ್ನು ನಡೆಯಿಸಬೇಕು. ಮತ್ತು ಅಲ್ಲಿ ಸರ್ವಸಮ್ಮತಿಯಿಂದ ಆಗುವ ತೀರ್ಮಾನದಂತೆ ಆಡಳಿತದ ಪದ್ಧತಿಯನ್ನು ಕಾಂಗ್ರೆಸ್ಸಿನವರ ವಿರೋಧವನ್ನು ಲಕ್ಷಿಸದೆ ಸ್ಥಾಪನೆ ಮಾಡಬೇಕು. ಮುಖಂಡರು ಯಾವ ಸಲಹೆಗಳಿಗೂ ಒಪ್ಪದೆ ಮುಷ್ಕರ ಹಿಡಿದಿರುವರು. ಈ ಮುಷ್ಕರ ಸ್ವಭಾವವನ್ನು ಅವರ ಅನುಚರರು ಎಲ್ಲಿಯ ವರೆಗೆ ಸಹಿಸಿಕೊಂಡಿರುವರೆಂಬುದನ್ನು ಈಗಲೇ ಹೇಳಲಾರೆವು. ತಾತ್ಕಾಲಿಕ ಉತ್ಸಾಹದಿಂದ ಅವರು ಸ್ವಲ್ಪಕಾಲ ಹೀಗೆಯೇ ವರ್ತಿಸಬಹುದು. ಆದರೆ ಹುಚ್ಚುತನದಿಂದ ಕೂಡಿದ ಅವರ ಚಳವಳಿಯು ಬಹುಕಾಲ ನಿಲ್ಲುವದು ಅಸಂಭವವೇ ಸರಿ!"

—ಮ್ಯಾಂಚಸ್ಟರ್ ಗಾರ್ಡಿಯನ್.

ವರ್ತಮಾನಸಂಗ್ರಹ.

ಗುಜರಾಥದಲ್ಲಿಯ ಅಹಮ್ಮದಾಬಾದ ತಾಲೂಕಿನ ರೈತರು ಭೂಕಂದಾಯವನ್ನು ಕೊಡದಿದ್ದುದರಿಂದ ಅವರ ಆಸ್ತಿಗಳನ್ನು ಜಪ್ತಮಾಡುವ ಬಗ್ಗೆ ನೋಟೀಸುಗಳು ಹೊರಟಿವೆ; ಸರದಾರ ವಲ್ಲಭಭಾಯಿಯವರ ಅಪ್ಪಣೆಯಂತೆ ಎಲ್ಲರೂ ಕಂದಾಯ ಕೊಡಬಾರದೆಂದೇ ನಿಶ್ಚಯಿಸಿದ್ದಾರೆ.

ಬಳ್ಳಾರಿ ತಾಲೂಕು ಚೇಳಗುರಿಕಿಯಲ್ಲಿ ಇರುವ ಕೊಂಡೆ ವಿರಕ್ತಮಠದವರು ಶ್ರಾವಣಮಾಸದ ಗಣಾರಾಧನೆಯನ್ನು ನೆರವೇರಿಸಿದರೆಂದೂ ಸದರಿ ಗಣಾರಾಧನೆಗೆ 5-6 ಸಾವಿರ ಜನ ಮಾಹೇಶ್ವರರು ಬಂದಿದ್ದರೆಂದೂ, ನೀರಿನ ಅಭಾವದಿಂದ ಬಂದವರೆಲ್ಲ ಅತ್ಯಂತ ಆಯಾಸಪಟ್ಟು ಹೋದರೆಂದೂ, ಈ ಕಾರಣದಿಂದಲೇ ಅನೇಕ ಜನರಿಗೆ ಕಾಲರಾರೋಗವು ಪ್ರಾಪ್ತವಾಗಿ ಅದರಲ್ಲಿ ಕೆಲವರು ನೆರೆ ರೋಗಕ್ಕೆ ತುತ್ತಾದರೆಂದೂ ತಿಳಿದುಬರುತ್ತದೆ. ಮಾಹೇಶ್ವರ ವರ್ಗದವರು ಇಂಥ ಅವ್ಯವಸ್ಥಿತಸ್ಥಾನಗಳಿಗೆ ಹೋಗಿ ಈ ತರಹದ ದುರವಸ್ಥೆಯನ್ನು ಇನ್ನು ಮುಂದಾದರೂ ಹೊಂದಬಾರದೆಂದು ಒಬ್ಬ ಬಾತ್ಮೀದಾರರು ತಿಳುಹಿಸುತ್ತಾರೆ.

ಇದೇ ಸೆಪ್ಟಂಬರ್ 5 ನೇ ತಾರೀಖಿನ ಬೆಳಿಗ್ಗೆ ಅಮೇರಿಕೆಯ "ಸ್ಯಾಂಟೋ ಡೋಮಿಂಗೋ" ಪ್ರಾಂತದ ಮೂರು ಡಿಸ್ಟ್ರಿಕ್ಟುಗಳು ಸುಂಟರಗಾಳಿಯಿಂದ ಸಂಪೂರ್ಣ ನಾಶವಾಗಿರುತ್ತವೆ. ಗಾಳಿಯು ಘಂಟೆಗೆ 150 ಮೈಲುಗಳ ವೇಗದಲ್ಲಿ ನಾಲ್ಕು ಘಂಟೆಗಳವರೆಗೆ ಬಿಡದೆ ಬೀಸುತ್ತಿದ್ದು, ಕೋಟ್ಯಂತರ ರೂ.ಗಳ ನಷ್ಟವು ಸಂಭವಿಸಿರುವದು. ದೊಡ್ಡದೊಡ್ಡ ಕಟ್ಟಡಗಳೆಲ್ಲವೂ ನೆಲಕ್ಕೆ ಉರುಳಿರುವುವು. ಚಿಕ್ಕ ಚಿಕ್ಕ ಕಟ್ಟಡಗಳಂತೂ ಗಾಳಿಯಲ್ಲಿ ಹಾರಿಹೋಗಿರುವವು. ಸಾವಿರಾರು ಜನರು ಮೃತಪಟ್ಟಿರುವರು. ಸಹಾಯಸಾಧನಗಳು ಭರದಿಂದ ನಡೆಯುತ್ತಿರುವವು.

ಬಂಗಾಳದ ಸಾಂಗಾರ್ಪಂ ಡಿಸ್ಟ್ರಿಕ್ಟಿನಲ್ಲಿ ಬ್ರಹ್ಮಪುತ್ರಾನದಿಯ ಪ್ರವಾಹವು ಮಿತಿಮೀರಿ ಬಂದು ಲಕ್ಷಾಂತರ ಪ್ರಜೆಗಳು ಮನೆಮಠಗಳಿಲ್ಲದೆ ತೊಂದರೆಗೊಳಗಾಗಿರುವರು.

ಶ್ರೀ ಕೇದಾರನಾಥಕ್ಷೇತ್ರಯಾತ್ರೆಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಸದರಿ ಕ್ಷೇತ್ರಯಾತ್ರೆಯನ್ನು ವಿಧ್ಯುಕ್ತವಾಗಿ ಪೂರೈಸಿಕೊಂಡು ಈ ತಿಂಗಳು ೧೧ ನೆಯ ತಾರೀಖು ಗುರುವಾರ ದಿವಸ ರಾಜಧಾನಿಗೆ ಆಗಮಿಸಿದರು.

ಭಾರತ ಪರಿಸ್ಥಿತಿ.

ಕೂಲಿಕಾರರ ವಚನಭ್ರಷ್ಟತೆ.

(ಠಾಕೂರ್ ಆನಿಬೆಸೆಂಟರವರಿಂದ)

ಪಿಟೀಲ್ ಬಾರಿಸುವಿಕೆಯು ನಿಜವಾಗಿ ಮನೋಹರವೂ ಆನಂದದಾಯಕವೂ ಆದ ಕಲೆಯಾಗಿರುವದು. ಆದುದರಿಂದಲೇ "ನೀರೋ" ನು ಭೀಕರವೂ, ಅನೀತಿಕಾರಕವೂ ಆದ ಕ್ರೂರ ಪ್ರಾಣಿಗಳ ಕಾಳಗಗಳನ್ನು ನೋಡಲಿಚ್ಛಿಸದೆ, ಸಂಗೀತಕಲಾಭಿಮಾನಿಯಾಗಿದ್ದನು. ಹೀಗಿದ್ದು, ಅನೇಕ ಶತಮಾನಗಳು ಕಳೆದರೂ, ಇಂದಿನವರೆಗೆ ಎಲ್ಲರೂ ಅವನ ಪಿಟೀಲ್ ಬಾರಿಸುವಿಕೆಯನ್ನು, ಘೋರಪಾತಕದಂತೆ ಭಾವಿಸುವದೇತಕ್ಕೆ? "ರೋಂ ನಗರವು ಅಗ್ನಿದೇವನಿಗೆ ಆಹುತಿಯಾಗುತ್ತಿದ್ದಾಗಲೂ" ಅವನು ಪಿಟೀಲನ್ನು ಬಾರಿಸುತ್ತಿದ್ದುದೇ ಈ ಪ್ರಶ್ನೆಗೆ ಉತ್ತರವಾಗಿರುವದು. "ನೀರೋ" ನು ಚಕ್ರವರ್ತಿಯಾಗಿದ್ದನು. ರೋಂನಗರವು ಅವನ ಚಕ್ರಾಧಿಪತ್ಯದ ಮಧ್ಯದಲ್ಲಿದ್ದು ಅವನ ರಾಜಧಾನಿಯೆನಿಸಿದ್ದಿತು. ಅವನ ಚಕ್ರಾಧಿಪತ್ಯದ ರಾಜಧಾನಿಯು ಬೆಂಕಿ ಹತ್ತಿ ಉರಿಯುತ್ತಿದ್ದರೂ, ತನ್ನ ರಾಜ್ಯದ ಮತ್ತು ತನ್ನ ರಕ್ಷಣೆಗೆ ಒಳಪಟ್ಟಿದ್ದ ಪ್ರಜೆಗಳ ಭಾಗ್ಯದ ಕಡೆಗೆ ಲಕ್ಷ್ಯಕೊಡದೆ ಹೋದುದು ಅವನ ಕರ್ತವ್ಯ ದಕ್ಷತೆಯಲ್ಲಿ ದೊಡ್ಡ ಲೋಪವನ್ನು ವ್ಯಕ್ತಗೊಳಿಸುವದು. ಇದರಿಂದ ತನ್ನ ಕರ್ತವ್ಯ ಮತ್ತು ಆತ್ಮಸಂತೋಷಗಳಲ್ಲಿ ಪ್ರಾಮುಖ್ಯವಾದುದಾವುದೆಂಬುದನ್ನು ಅರಿತುಕೊಳ್ಳುವ ಶಕ್ತಿಯೇ ಅವನಲ್ಲಿರಲಿಲ್ಲವೆಂದು ವ್ಯಕ್ತವಾಗುವದು. ಈ ಕಾರಣದಿಂದ ಪಿಟೀಲು ಬಾರಿಸುವಿಕೆಯೇ ಘೋರಪಾತಕವಾಗಿ ಪರಿಣಮಿಸಿತು. ಇದರಿಂದ ಅವನು ಚಕ್ರವರ್ತಿಯೆನಿಸಲು ಅಯೋಗ್ಯನೆಂಬುದು ವ್ಯಕ್ತವಾಗಿ, ತಾನು ಶೀಘ್ರವಾಗಿ ನಾಶಹೊಂದಿದುದಲ್ಲದೆ, ಅವನ ಅನೀತಿಕಾರಕವಾದ ಸರಕಾರವು ಸಹ ಮುಕ್ತಾಯವಾಯಿತು.

ಈ ಪೂರ್ವಚರಿತ್ರೆಯನ್ನು ಮನಸಿನಲ್ಲಿಟ್ಟುಕೊಂಡು, ಸದ್ಯದ ಪರಿಸ್ಥಿತಿಯನ್ನು ಅಂದರೆ ಭರತಖಂಡದ ಭವಿಷ್ಯಚರಿತ್ರೆಯನ್ನು ಪರೀಕ್ಷಿಸೋಣ! ಚಕ್ರವರ್ತಿಯಾದ "ನೀರೋ" ವಿನ ಸ್ಥಾನಕ್ಕೆ "ಇಂಗ್ಲೆಂಡ" ನ್ನು ಸೇರಿಸಿ, "ರೋಂ" ನಗರವು ಬೆಂಕಿಯಿಂದ ಉರಿಯುತ್ತಿತ್ತೆನ್ನುವದಕ್ಕೆ ಬದಲಾಗಿ, ಈಗ ನಡೆಯುತ್ತಿರುವ ಆಟಪಾಟಗಳನ್ನು ಸೇರಿಸಿ, "ಇಂಗ್ಲೆಂಡ್ ದೇಶವು ದೂರದಲ್ಲಿರುವ ತನ್ನ ಸಾಮ್ರಾಜ್ಯಗಳು ತನ್ನ ಕೈಜಾರಿ ಹೋಗುತ್ತಿರುವದನ್ನೂ ಲಕ್ಷಿಸದೆ, ಕ್ರಿಕೆಟ ಆಡುವದರಲ್ಲಿಯೇ ಮಗ್ನವಾಗಿರುವ" ದೆಂದೂ, ಭರತಖಂಡವು ದಂಗೆಯೇಳುವ ಸ್ಥಿತಿಯಲ್ಲಿರುವದೆಂದೂ ಬರೆಯೋಣ!

ಅದರ (ಇಂಗ್ಲೆಂಡಿನ) ರಾಜಕೀಯತತ್ತ್ವಜ್ಞರು ತಮ್ಮ ತತ್ತ್ವಗಳಿಗೆ ಸಂಪೂರ್ಣ ವಿರೋಧವಾಗಿರುವ, ಪ್ರಾಚೀನಕಾಲದಿಂದ ಅಸಾಧಾರಣ ರಾಷ್ಟ್ರತತ್ತ್ವಜ್ಞರಿಂದಲೂ, ನಾನಾವಿಧಗಳಾದ ಜನಾಂಗಗಳಿಂದಲೂ ಕೂಡಿರುವ ಅಭೇದ್ಯವಾದ ಏಕಚಕ್ರಾಧಿಪತ್ಯದಂತೆ, ಜಗದೀಶ್ವರನಿಂದ ನಿರ್ಮಿಸಲ್ಪಟ್ಟ, ಸಮುದ್ರ ಮತ್ತು ...

ಭಾರತೀಯರ ಹಕ್ಕು.

ಕಬ್ಬಿಣವು ಕಾದಿದ್ದಾಗಲೇ ಹೊಡೆಯಿರಿ!

ಶ್ರೀ ವಿಠಲಭಾಯಿಯವರ ಸಂದೇಶ

ನಿಮ್ಮ ಸೇವಕ,
ವಿಠಲಭಾಯಿ ಪಟೇಲ್

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

[7]

ಸ್ತ್ರೀರೋಗ ನಿವಾರಣ ಚೂರ್ಣ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ...

ಶಿಲಾಜಿತ—...

ಕಸ್ತೂರಿ—...

ಗೃಹನಾಶೆಯು—...

ಹಿಮಾಲಯನ್ ಬಾಮ್—...

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವಿದ್ದರೂ ಜೀರ್ಣಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[22] ಬ್ರಾಂಚ್ ಅಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ವಜ್ರಾಂಗ ಸುಂದರಪಾಕ.

[8]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಮಲೇಜ್ವರಕ್ಕೆ ಮಲೇರಿಯಾನ.

[6] ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು. ದ. ಕ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ		೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ		೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ		೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ		೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ		೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ		೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ:		೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ		೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ		೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ		೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಆದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[48] ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಗೃಹಸ್ಥರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ನೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪನಿ ಲಿಮಿಟೆಡ್,

[9] ಪೋ. ಬಾ. ೫೧೦. ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಸೆಪ್ಟಂಬರ್ ೧೯೩೦ [ಸಂಚಿಕೆ ೨೧

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರಹದ ದೇವರ ಪೂಜೆಗೆ ಯೋಗ್ಯವಾದ ರಜಿಂವಾರು ಊದುಬತ್ತಿಗಳು, ಪರಿಮಳದಶಾಂಗ, ಧೂಪದಕಡ್ಡಿ, ಅಷ್ಟಗಂಧದಪುಡಿ. ಜವ್ವಾಜಿಗಂಧ, ಗಂಧದಬತ್ತಿಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅಷ್ಟಸಂಜೀವಿನಿತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬಜಾರು ಧಾರಣೆಯಿಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,

8 ಸುಗಂಧವ್ಯಾಪಾರಿಗಳು,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲದ ನಿರಾಕರಣೆಯ ಸಂಬಂಧವಾಗಿ ಸರ್ ಸಪ್ರೂರವರಿಗೆ ವೈಸರಾಯರ ಪತ್ರ.

ಸಿಮ್ಲಾ ೧೧—೯—೩೦.

ವೈಸರಾಯರು ಈ ತಿಂಗಳು ಹನ್ನೊಂದನೆಯ ತಾರೀಖಿನಲ್ಲಿ ಸರ್ ತೇಜಬಹದ್ದೂರ್ ಸಪ್ರೂರವರಿಗೂ ಮಿ|| ಎಂ. ಆರ್. ಜಯಕರರವರಿಗೂ ಬರೆದ ಪತ್ರವು ಪ್ರಕಟವಾಗಿರುವುದು. ಅದರಲ್ಲಿರುವ ಮುಖ್ಯವಾದ ಅಂಶಗಳೇನೆಂದರೆ—

ಶಾಂತಿಯನ್ನು ಸ್ಥಾಪಿಸುವ ಸಂಬಂಧವಾಗಿ ನೀವುಗಳು ಮಾಡಿದ ಧೈರ್ಯವಾದ ಪ್ರಯತ್ನಗಳಿಗಾಗಿ ನಾನು ನಿಮಗೆ ವಂದಿಸಿ ಕಳುಹಿಸಿದ ತಂತಿಯು ನಿಮಗೆ ತಲುಪಿರಬಹುದು. ನಿಮ್ಮ ಪ್ರಯತ್ನಗಳು ಸಫಲವಾಗದೆ ಹೋದರೂ ನಿಮ್ಮ ಪ್ರಯತ್ನಗಳಿಗಾಗಿ ಎಲ್ಲರೂ ನಿಮ್ಮನ್ನು ಅಭಿನಂದಿಸಬೇಕಾದುದೇ ಸರಿ!

ನಾವು ರಹಸ್ಯವಾಗಿ ಮಾತನಾಡಿದ ಒಂದು ವಿಷಯವನ್ನು ನೀವು ಹೊರಗೆಹಾಕಿದ್ದಕ್ಕಾಗಿ ನನಗೆ ಆಶ್ಚರ್ಯವುಂಟಾಯಿತು. ನಿಮಗೂ ನನಗೂ ನಡೆದ ಮಾತುಕಥೆಗಳ ಒಟ್ಟು ಸಾರಾಂಶವನ್ನು ಕಾಂಗ್ರೆಸ್ ಮುಖಂಡರುಗಳಿಗೆ ತಿಳುಹಿಸುವುದರಲ್ಲಿ ನನ್ನ ದೇನು ಅಭ್ಯಂತರವಿಲ್ಲದಿದ್ದರೂ ನಮ್ಮ ಮಾತುಕಥೆಗಳನ್ನು ನಾನು ರಹಸ್ಯವೆಂಬುದಾಗಿ ಭಾವಿಸಿದ್ದೆನು. ಕಾಂಗ್ರೆಸ್ ಮುಂಖಡರು ಆಗಸ್ಟು ೩೧ ಮತ್ತು ಸೆಪ್ಟಂಬರು ೬ ನೆಯತಾರೀಖಿನ ಪತ್ರಗಳಲ್ಲಿ ನಾವು ಮಾತನಾಡಿದ ಕೆಲವು ವಿಷಯಗಳ ಸಂಬಂಧವಾಗಿ ಅಭಿಪ್ರಾಯಗಳನ್ನು ಪ್ರದರ್ಶಿಸಿದ್ದರಿಂದ ನೀವು ಆ ವಿಷಯಗಳನ್ನು ಬಹಿರಂಗಪಡಿಸಬೇಕೆಂದು ಅಪೇಕ್ಷಿಸಿರಬಹುದು. ನಿಮ್ಮ ಉದ್ದೇಶವು ಶ್ಲಾಘ್ಯವಾದುದಾದರೂ ನೀವು ಪ್ರಕಟಿಸಿದ ಕಾಗದವನ್ನು ನನಗೆ ತೋರಿಸಿದ್ದರೆ ಚೆನ್ನಾಗಿತ್ತು. ಏಕೆಂದರೆ—ಈಗ ನೀವು ಪ್ರಕಟಿಸಿರುವುದರಲ್ಲಿ ನನ್ನ ವಿಷಯವಾಗಿಯೂ, ನನ್ನ ಸರಕಾರದ ವಿಷಯವಾಗಿಯೂ ಜನಗಳಲ್ಲಿ ತಪ್ಪು ಅಭಿಪ್ರಾಯಗಳು ಉಂಟಾಗಲು ಅವಕಾಶವಾಗಿದೆ. ಆ ತಪ್ಪುಗಳಿಂದೇನೂ ಅಷ್ಟು ಬಾಧಕವಾಗುವಹಾಗಿಲ್ಲ. ಏಕೆಂದರೆ—ಆ ಮಾತುಕಥೆಗಳಿಂದ ಪರಿಣಾಮಕಾರಿಯಾದ ಯಾವ ಪ್ರಯೋಜನವೂ ಉಂಟಾಗಿಲ್ಲ.

ಆದರೂ ಒಂದು ವಿಷಯದಲ್ಲಿ ಉಂಟಾಗಿರುವ ತಪ್ಪು ಅಭಿಪ್ರಾಯವನ್ನು ನಿವಾರಿಸ[illegible]ವುದು ಅವಶ್ಯಕವೆಂದು ಕಾಣುತ್ತದೆ. ಇಂಡಿ[illegible] ಸರ್ಕಾರದ ಸಾಲಗಳನ್ನು ಪೂರ್ತಿಯಾಗಿ ನಿರಾಕರಣೆ ಮಾಡುವುದು ಸಾಧ್ಯವಿಲ್ಲವೆಂದೂ ಆದರೆ ಇಂಡಿಯಾ ಸರಕಾರದ ಆರ್ಥಿಕ ಬಾಧ್ಯತೆಯ ವಿಷಯವಾಗಿ ಯಾರು ಬೇಕಾದರೂ ರೌಂಡ್ ಟೇಬಲ್ ಸಮ್ಮೇಳನದಲ್ಲಿ ಪ್ರಶ್ನೆಯನ್ನು ಎತ್ತಿ ಅದನ್ನು ಪರೀಕ್ಷಿಸಬಹುದೆಂದೂ ನಾನು ಹೇಳಿದ ಹಾಗೆ ಅಭಿಪ್ರಾಯ ಬರುತ್ತದೆ. ಇದರಿಂದ ಏನು ಅರ್ಥವಾಗುತ್ತದೆಯೆಂದರೆ, ನಾನೂ ನನ್ನ ಸರಕಾರವೂ ಸಾಲದ ಪೂರ್ತಿಯ ನಿರಾಕರಣೆಗೆ ಒಪ್ಪದೆ ಹೋದರೂ, ಅದರಲ್ಲಿ ಕೆಲವು ಭಾಗಕ್ಕೆ ಒಪ್ಪುತ್ತೇನೆಂಬ ಅಭಿಪ್ರಾಯವು ಬರುತ್ತದೆ. ಆದರೆ ಇದು ನಿಜವಲ್ಲ! ನಾವು ಯಾವ ಪ್ರಕಾರದಲ್ಲಿಯೂ ಎಷ್ಟು ಪ್ರಮಾಣದಲ್ಲಿಯೂ ಸಾಲದ ನಿರಾಕರಣೆಗೆ ಸಿದ್ಧರಾಗುವುದು ಸಾಧ್ಯವಿಲ್ಲ.

ನೀವು ನಿಮ್ಮ ಪ್ರಕಟಣೆಯನ್ನು ಬಹಿರಂಗಪಡಿಸಿದ ಕಾಲದಲ್ಲಿ ಈ ತಪ್ಪು ಅಭಿಪ್ರಾಯವು ಉಂಟಾಗುವುದೆಂದು ನೀವು ತಿಳಿದಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಈಗ ಆರೀತಿಯಾದ ತಪ್ಪುಭಾವನೆಗೆ ಅವಕಾಶವಿರುವುದರಿಂದ ನಾನು ನನ್ನ ಪತ್ರವನ್ನು ಪ್ರಕಟಣೆಗಾಗಿ ಪತ್ರಿಕೆಗಳಿಗೆ ಕಳುಹಿಸಿದ್ದೇನೆ.

ಪಂಡಿತ ಮಾಳವೀಯರನ್ನು ನೈನಿ ಜೈಲಿಗೆ ತಂದರು.

ಅಲಹಾಬಾದ್ ಸೆಪ್ಟಂಬರು ೧೪.

ನಿನ್ನೆಯ ದಿವಸ ಸಾಯಂಕಾಲ ಪಂಡಿತ ಮಾಳವೀಯರನ್ನು ದಿಲ್ಲಿಯಿಂದ ನೈನಿಜೈಲಿಗೆ ಸ್ಪೆಷಲ್ ರೈಲಿನಲ್ಲಿ ಕರೆದುಕೊಂಡು ಬಂದರು. ಈ ಸ್ಪೆಷಲ್ ರೈಲಿನಲ್ಲಿ ಎಂಜಿನ್ ಮತ್ತು ಒಂದು ಮೊದಲನೆಯ ತರಗತಿ ಬಂಡಿಯು ಮಾತ್ರ ಇದ್ದಿತು. ಹಿಂದಿನ ಸ್ಟೇಷನುಗಳಿಂದ ಟೆಲಿಫೋನು ಮೂಲಕ ಸಮಾಚಾರ ತಿಳಿದದ್ದರಿಂದ ನೈನಿ ಸ್ಟೇಷನಿನಲ್ಲಿ ಮಾಳವೀಯರ ದರ್ಶನಕ್ಕೋಸ್ಕರ ಜನರು ತಂಡ ತಂಡವಾಗಿ ನೆರೆದಿದ್ದರು. ಇವರುಗಳ ಜೊತೆ ಪಂಡಿತ ಮಾಳವೀಯರ ಪತ್ನಿಯವರೂ ಹಾಗೂ ಅವರ ಕುಟುಂಬದವರೆಲ್ಲರೂ ಹಾಜರಿದ್ದರು. ಮಾಳವೀಯರು ಮುಗುಳುನಗೆಯಿಂದ ಗಾಡಿಯಿಂದ ಇಳಿದ ಕೂಡಲೇ ಅಲ್ಲಿ ನೆರೆದ್ದವರೆಲ್ಲರೂ ಜಯಜಯಕಾರ ಮಾಡಿದರು. ಪೋಲೀಸು ಸೂಪರಿಂಟೆಂಡೆಂಟರಾದ ಮಿ|| ಇಕ್ರಾಮ್ ಹುಸೇನರು ನೆರೆದ್ದ ಜನರಿಗೆಲ್ಲಾ ಮಾಳವೀಯರ ದರ್ಶನವಾಗುವಂತೆ ಅವಕಾಶ ಕೊಟ್ಟರು. ಇದಾದ ತರುವಾಯ ಮೋಟಾರಿನಲ್ಲಿ ಜೈಲಿಗೆ ಕರೆದುಕೊಂಡು ಹೋದರು. ಪಂಡಿತರು ಆರೋಗ್ಯದಿಂದಿರುವರು. ಜೈಲಿನ ಕಾಯಿದೆಗಳನ್ನು ತಪ್ಪದೆ ಅನುಸರಿಸಲು ಇಚ್ಛಿಸುವರು. ಅವರು ತಮ್ಮ ಪತ್ನಿಗೂ ನೆರೆದ್ದ ಇತರ ಸ್ತ್ರೀಯರಿಗೂ ತಾವು ಜೈಲಿನಲ್ಲಿ ಸೌಖ್ಯವಾಗಿದ್ದು ಯೋಚಿಸಬೇಕಾದ ಅವಶ್ಯಕವಿಲ್ಲವೆಂದು ಹೇಳಿದರು. ಮಾಳವೀಯರಿಗೋಸ್ಕರ ನಾಲ್ಕು ರೂಮುಗಳನ್ನು ಕೊಟ್ಟಿದ್ದು ಅವರ ಸೇವೆಗೋಸ್ಕರ ಒಬ್ಬ ಪರಿಚಾರಕನನ್ನು ಕೊಟ್ಟಿರುವರು.

ಸ್ವೀಕಾರ.

ರಾಜಧಾನಿ ನಿವಾಸಿಗಳಾದ ಮ|| ರಾ|| ಬಾದಾಮಿ ಬಸೆಟ್ಟೆಪ್ಪ ಉರುಫ್ ಪುಟ್ಟಣ್ಣನವರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣೆಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಡಿತ ಜವಾಹರಲಾಲ್ ನೆಹರೂರವರನ್ನು ಈ ತಿಂಗಳು ೨೬ ಅಥವಾ ೨೭ ನೆಯ ತಾರೀಖಿನ ದಿವಸ ಜೈಲಿನಿಂದ ಬಿಡುಗಡೆ ಮಾಡುವರೆಂದೂ, ತತ್‌ಕ್ಷಣವೇ ಪುನಃ ದಸ್ತಗಿರಿ ಮಾಡುವರೆಂದೂ ಅಲಹಾಬಾದಿನ ಅಭ್ಯುದಯ ಪತ್ರಿಕೆಯು ತಿಳುಹಿಸುತ್ತದೆ.

ಮುಂಬಯಿಯ ಸಂಗ್ರಾಮಕೂಟದ ಪ್ರೆಸಿಡೆಂಟರಾದ ಶ್ರೀಮತಿ ಕಾಮದಾರ ಎಂಬ ವೀರನಾರಿಯು ಕಾಂಗ್ರೆಸ್ಸಿನ ಪ್ರಸಿದ್ಧಪತ್ರವನ್ನು ಹೊರಡಿಸಿದಳೆಂಬ ಅಪಾದನೆಯ ಮೇಲೆ ದಸ್ತಗಿರಿಮಾಡಲ್ಪಟ್ಟಳು. ಕಾಂಗ್ರೆಸ್ ಸ್ವಯಂಸೇವಕರ ಕಮ್ಯಾಂಡಿಂಗ್ ಆಫೀಸರಾದ ಸರದಾರ ಜಮೀಯತಾಸಿಂಗ್‌ರವರು ಸಹ ದಸ್ತಗಿರಿಮಾಡಲ್ಪಟ್ಟಿರುವರಲ್ಲದೆ, ಸಂಗ್ರಾಮಕೂಟದ ಇತರ ಮೆಂಬರರಿಗೂ ವಾರಂಟ್ ಕೊಡಲ್ಪಟ್ಟಿರುವದು.

ಉಪ್ಪಿನಕಾಯಿದೆಭಂಗವನ್ನು ಮಾಡಿ 1ವರ್ಷ ಕಾರಾಗೃಹವಾಸಕ್ಕೆ ಗುರಿಯಾಗಿದ್ದ ಆಂಧ್ರಪತ್ರಿಕಾ ಸಂಪಾದಕರಾದ ಶ್ರೀ|| ಕೆ. ನಾಗೇಶ್ವರರಾಯರು ಇದೇ ಸೆಪ್ಟಂಬರ್ 20ನೆಯ ತಾರೀಖಿನ ದಿವಸ ಜೈಲಿನಿಂದ ಬಿಡುಗಡೆ ಹೊಂದಿದರು. ಜೈಲಿನಲ್ಲಿ ಅತ್ಯಂತ ಸಭ್ಯರೀತಿಯಿಂದ ವರ್ತಿಸಿದುದೇ ಇವರನ್ನು ಇಷ್ಟು ಜಾಗ್ರತೆಯಾಗಿ ಬಿಡುಗಡೆಮಾಡಲು ಕಾರಣವಂತೆ!

ಅಲಹಾಬಾದ್ ತಾಲ್ಲೂಕ್ ಕಚೇರಿಯ ಮುಂದೆ ಸೀಮೆಯಿಂದೀಚಿಂಗಡಿಗಳ ಹರಾಜಿನ ಪಿಕೆಟಿಂಗ್ ನಡೆಸುತ್ತಿದ್ದ ಸ್ವಯಂಸೇವಕರಲ್ಲಿ ೨೦ ಜನರನ್ನು ದಸ್ತಗಿರಿ ಮಾಡಿದ್ದಾರೆ.

ಮುಂಬಯಿಯ ಜ್ಯೋತಿಷ್ಯ ಶಂಕರಶಾಸ್ತ್ರಿಗಳೆಂಬವರು ಇದೇ ಸೆಪ್ಟಂಬರ್ 27ನೆಯ ತಾರೀಖಿನ ದಿವಸ ಮಹಾತ್ಮಾ ಗಾಂಧಿಯವರ ಬಿಡುಗಡೆಯಾಗುವದೆಂದೂ, 30 ನೆಯ ತಾರೀಖಿನೊಳಗಾಗಿ ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯಾಗುವದೆಂದೂ 'ಮುಂಬಯಿ ಕ್ರಾನಿಕಲ್' ಪತ್ರಿಕೆಯಲ್ಲಿ ಬರೆದಿರುವರು. ಇದರಂತೆ ಇದುವರೆಗೆ 19-20 ಜನ ಜ್ಯೋತಿಷ್ಯರು ಮಹಾತ್ಮರ ಬಿಡುಗಡೆಯ ವಿಷಯದಲ್ಲಿ ಭವಿಷ್ಯವನ್ನು ಪ್ರಕಟಿಸಿದ್ದು ಅವುಗಳಲ್ಲಿ ಒಂದಾದರೂ ನಿಶ್ಚಯವಾಗಲಿಲ್ಲ. ಹೀಗೆ ನಮ್ಮ ಜ್ಯೋತಿಷ್ಯರು ಮನಸ್ಸಿಗೆ ಬಂದಂತೆ ಪ್ರಕಟಿಸಿ, ನಮ್ಮ ಪವಿತ್ರ ಜ್ಯೋತಿಷ್ಯಶಾಸ್ತ್ರಕ್ಕೇ ಅವಮಾನಮಾಡುತ್ತಿರುವದನ್ನು ನೋಡಿ ವಿಷಾದಿಸಬೇಕಾಗಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ನಿಷಯವ ನ್ನು ಸರ್ವದಾ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೋ ಪ್ರಸೀದಂತು.

ತಿರ್ಯಗಾಂದೋಲಿಕಾಮಹೋತ್ಸವ.

ಯರಿಹಂಚಿನಾಳ.

ಕೊಪ್ಪಳಜಿಲ್ಲಾ ಯಲಬುರ್ಗಿ ತಾ|| ಯರಿಹಂಚಿನಾಳ ಗ್ರಾಮ ದಲ್ಲಿ ವೀರಶೈವಸದ್ಭಕ್ತರು ಪ್ರತಿವರ್ಷ ಪಟ್ಟಶಿಕ್ಷಕಾರ ಬಿಲ್ವವನ ಗಲ್ಲಿ ಮಹಾಗಣಾರಾಧನೆಯನ್ನು ನೆರವೇರಿಸುವದ್ದರಿಂದ ಶ್ರೀ ಜಗದ್ಗುರು ಏಕೋರಾಮ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ಗುರುಪೀಠ ಪಟ್ಟಾಧ್ಯಕ್ಷ ಶ್ರೀ ಚಿದ್ರವಲಿಂಗ ರಾಜೇಂದ್ರ ಶಿವಾ ಚಾರ್ಯಮಹಾಸ್ವಾಮಿಗಳು ಭಕ್ತರ ಪ್ರಾರ್ಥನೆಯಮೇರೆಗೆ ತಾ|| 6-9-30 ನೆಯ ಶನಿವಾರ ದಿವಸ ಚತುರಂಗಬಲಸಮೇತ ಉತ್ಸವದಿ ಮುಕ್ಕಾಮಿನಿಂದ ದಯಮಾಡಿಸಿದರು. ಮಹಾಸ್ವಾಮಿಯು ಆಗ ಮನವನ್ನು ನಿರೀಕ್ಷಿಸುತ್ತಿದ್ದ ವಾಹೇಕ್ಷದವೂ ಸರ್ವಸದ್ಭಕ್ತರೂ ಮಹಾಸ್ವಾಮಿಗಳನ್ನು ಉತ್ಸವದೊಡನೆ ಪಂ|| ಅನ್ನದಾನಶಾಸ್ತ್ರಿ ಗಳು ಹುಲಿಕಂಥಿಮಠಕ್ಕೆ ಬಿಜಯಮಾಡಿಸಿದರು. ಮರುದಿವಸ ಮ ಹಾಸ್ವಾಮಿಗಳನ್ನು ಉತ್ಸವದೊಡನೆ ಬಿಲ್ವವನಕ್ಕೆ ದಯಮಾಡಿಸಿ [illegible]

[illegible]

ಪಿರಿಯಾಪಟ್ಟಣದ ಶ್ರೀ ವೈದ್ಯೇಶ್ವರಸ್ವಾಮಿ ಕೋ-ಆಪರೇಟಿವ್ ಬ್ಯಾಂಕಿನ ಹದಿನಾರನೆಯ ವಾರ್ಷಿಕೋತ್ಸವ.

ಇದೇ ಮಾಹೆ 11 ನೇ ತಾರೀಖಿನಲ್ಲಿ ಸದರಿ ಬ್ಯಾಂಕಿನ ಜನ ರಲ್ ಮೀಟಿಂಗ್ ಕೊ-ಆಪರೆಟಿವ್ ಸೊಸೈಟಿಗಳ ರಿಜಿಸ್ಟ್ರಾರಾದ ಶ್ರೀಯುತ ಕೆ. ಹೆಚ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. [illegible]

[illegible]

ಶ್ರೀ ಜಗದ್ಗುರು ಪಂಚಾಚಾರ್ಯೋ ಪ್ರಸೀದಂತು.

ಶ್ರೀ ರುದ್ರಸಮಾರಂಭವು.

ಕೊಟ್ಟೂರು.

[illegible]

ಅಣ್ಣಂದಿರಾ ಪರದೇಶಿಬಟ್ಟೆಯನ್ನು ಬಹಿಷ್ಕರಿಸಿರಿ.

[illegible]

ಕೆ. ಎ. ಶ್ರೀನಿವಾಸಶೆಟ್ಟಿ.

ಮೈಸೂರು ಸೀಮೆಯ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿಸಭೆಯ ಸದಸ್ಯ ಮಹಾಶಯರಲ್ಲಿ

ಅರಸೀಕೆರೆ ತಾಲ್ಲೋಕಿನ ಗ್ರಾಮಾಂತರ ರೈತರುಗಳು ಈ ಮೂಲಕ ಪ್ರಾರ್ಥಿಸಿಕೊಳ್ಳುವದೇನೆಂದರೆ—

ಈಗ್ಯೆ ನೂರಾರು ವರುಷಗಳಿಂದಲು ಇಲ್ಲದೆ ಇದ್ದ ಹಿಡುವಳಿ ಖರಾಬು ಜಮೀನಿಗೆ ಗುಂಟೆ 1ಕ್ಕೆ 5 ರೂಪಾಯಿಯಂತೆ ಕಿಮ್ಮತ್ತು ಕೊಡಬೇಕೆಂದು ಸರ್ಕಾರದವರು ಆರ್ಡರ್ ಮಾಡಿರುವ ವಿಚಾರ ದಲ್ಲಿ ರೈತರು ಸದರಿ ಖರಾಬು ಕಿಮ್ಮತ್ತನ್ನು ವಜಾಮಾಡಿಸಿಕೊಡ ಬೇಕೆಂದು ಧರ್ಮಸರ್ಕಾರದಲ್ಲಿ ಅರ್ಜಿಗಳ ಮೂಲಕ ವಿರ್ಧ [illegible]

[illegible]

ರೈತರು.

ಧರ್ಮಪ್ರಸಂಗ.

[illegible]

ನೀತಿಸುಧಾರಸ.

೪. ವಿವೇಕ.

[illegible]

ಜ್ಞಾನವಾಂತಿಹನರನು ಸಂತತಜಯವ ಹೊಂದಿರನು ||
ಜ್ಞಾನಹೀನನು ಸತತ ಸೌಖ್ಯವ |
ನಾಸಕಲಿಂ ಜ್ಞಾನಿಯುಹ ವಿ |
ಧಾನವನು ಯೋಚಿಸ್ಥಿರದೆಸಂತತಸೌಖ್ಯವಾಂತಿಹನು ||೧೧||

ಮುಂಬಯಿಯಲ್ಲಿ ಕೌನ್ಸಿಲ್ ಚುನಾವಣೆ.

500 ಜನ ವೀರನಾರಿಯರ ಬಹಿಷ್ಕಾರ.
406 ಜನ ಸ್ವಯಂಸೇವಕಿಯರ ದಸ್ತಗಿರಿ.

ಮುಂಬಯಿ ಸೆಪ್ಟೆಂಬರ್ 16

ಈ ದಿನ ಮುಂಬಯಿ ಟೌನ್ ಹಾಲಿನಲ್ಲಿ ಮಹಮ್ಮದೀಯೇ ತರ ಪಂಗಡದವರ ಚುನಾವಣೆಯು ಅತ್ಯಂತ ಕುತೂಹಲಯುಕ್ತ ವಾದ ವಾತಾವರಣದಲ್ಲಿ ಪ್ರಾರಂಭವಾಯಿತು. [illegible]

[illegible]

ಶಾಂತಿಸಂಭಾಷಣ.

ಪಾರ್ಲಿಮೆಂಟ್ ಮೆಂಬರರಿಗೆ ಮಹಾತ್ಮರ ಪತ್ರ.

[illegible]

ಸೂಚನೆ.

ಪ್ರತಿವರ್ಷ ಪದ್ಧತಿಯಂತೆ ನವರಾತ್ರಿಮಹೋತ್ಸವದ ನಿಮಿತ್ತವಾಗಿ ತಾ|| ೨೯-೯-೩೦ ನೆಯ ಸಂಚಿಕೆಯು ಹೊರಡುವುದಿಲ್ಲ.

—ಸಂ.

ಪಂಚಾಚಾರ್ಯ ಪ್ರಭಾ

೧೯೩೦ನೇ ಸೆಪ್ಟಂಬರ್ ತಾ|| ೨೨ನೆಯ ಸೋಮವಾರ

ದುಂಡುಮೇಜಿನ ಪರಿಷತ್ತು.

ಭರತಖಂಡದ ಸ್ಥಿತಿಗತಿಗಳು ದಿನದಿನಕ್ಕೆ ಹೆಚ್ಚು ವಿಷಮಾವಸ್ಥೆಗೆ ಬರುತ್ತಿದ್ದು ಕಡೆಗೆ ಇದರ ಪರಿಣಾಮವು ಯಾವರೀತಿಯಾಗುವದೋ ಎಂದು ಇಡೀ ಪ್ರಪಂಚವೇ ನಿರೀಕ್ಷಿಸುತ್ತಿರುವದು. ಸರಕಾರದವರು ಏರ್ಪಡಿಸಿರುವ ದುಂಡುಮೇಜಿನ ಪರಿಷತ್ತು ಸಮೀಪಿಸುತ್ತ ಬಂದಿತು. ಕಾಂಗ್ರೆಸ್ಸಿನವರನ್ನು ಪರಿಷತ್ತಿಗೆ ಬರಮಾಡಿಕೊಳ್ಳಬೇಕೆಂದು ನಡೆಯಿಸಿದ ಶಾಂತಿಸಂಧಾನವು ನಿರರ್ಥಕವಾದುದರಿಂದ ಸರಕಾರದವರು ಅವರನ್ನು ಬಿಟ್ಟು, ಪರಿಷತ್ತನ್ನು ನಡೆಯಿಸಬೇಕೆಂದು ನಿಶ್ಚಯಿಸಿ, ತಮಗೆ ಸೂಕ್ತತೋರಿದ ಇತರ ಪಕ್ಷದವರಿಗೆ ಮಾತ್ರ ಆಮಂತ್ರಣವನ್ನು ಕೊಟ್ಟಿರುವರು. ಅವರಲ್ಲಿ ಸರ್ ದಿನ್ಶಾ ಚಂದ್ ಚರ್ಮಲಾಲರವರೇ ಮೊದಲಾದ ಒಬ್ಬಿಬ್ಬರು ಆಮಂತ್ರಣವನ್ನು ತಿರಸ್ಕರಿಸಿರುವರು. ಆದರೂ, ಉಳಿದವರೆಲ್ಲ ಪರಿಷತ್ತಿಗೆ ಹೊರಡಲು ಸಿದ್ಧರಾಗಿದ್ದು ಅಕ್ಟೋಬರ್ ೪ ನೆಯ ತಾರೀಖಿನೊಳಗಾಗಿ ಹೊರಡುವರು. ಇತ್ತ ಕಾಂಗ್ರೆಸ್ಸಿನವರು ಕಾಯಿದೆಭಂಗದ ಚಳವಳಿಯನ್ನು ಮತ್ತಷ್ಟು ಉಗ್ರರೀತಿಯಿಂದ ನಡೆಯಿಸಲಾರಂಭಿಸಿ, ಇಡೀ ಭರತಖಂಡವನ್ನೇ ತಮ್ಮ ಕಡೆಗೆ ಸೆಳೆಯುತ್ತಿರುವರು. ಹೀಗಿರುವಲ್ಲಿ ಕಾಂಗ್ರೆಸ್ಸಿನವರ ಹಾಗೂ ಭರತಖಂಡದ ಹೆಚ್ಚಿನ ಪ್ರಜೆಗಳ ಅಭಿಪ್ರಾಯಕ್ಕೆ ವಿರೋಧವಾಗಿ ಪರಿಷತ್ತಿನಲ್ಲಿ ಮಾಡಬಹುದಾದ ತೀರ್ಮಾನಗಳು ಭರತಖಂಡಕ್ಕೆ ಎಂದಿಗೂ ಮಾನ್ಯಗಳಾಗಲಾರವೆಂದು ರಾಜನೀತಿವಿಶಾರದರನೇಕರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಿರುವರು.

ಭರತಖಂಡದ ಸ್ಥಿತಿಗತಿಗಳು ಇಷ್ಟೊಂದು ವಿಷಮಾವಸ್ಥೆಗೆ ಬರಲು ಸರಕಾರದವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳದಿರುವದೇ ಕಾರಣವೆಂದು ಹೇಳಬಹುದು. ಏಕೆಂದರೆ: ಕಳೆದ ನವಂಬರಿನಲ್ಲಿ ವೈಸರಾಯರು ತಮ್ಮ ಭಾಷಣದಲ್ಲಿ ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ದೊರಕುವಂತೆ ಮಾಡುವುದೇ ತಮ್ಮ ಮತ್ತು ಹೋಂ ಸರಕಾರದವರ ಮುಖ್ಯಾಶಯವಾಗಿರುವದೆಂದು ಹೇಳಿದ್ದಲ್ಲದೆ, ಮಂತ್ರಿಶ್ರೇಷ್ಠರಾದ ರಾಂಸೆ ಮ್ಯಾಕ್ಡೊನಾಲ್ಡರವರೂ ಸಹ ಭರತಖಂಡಕ್ಕೆ ಕೆಲವು ವರ್ಷಗಳಲ್ಲಿ ಅಲ್ಲ, ಕೆಲವು ತಿಂಗಳುಗಳಲ್ಲಿಯೇ ಸ್ವರಾಜ್ಯವು ದೊರಕಬೇಕೆಂಬುದು ತಮ್ಮ ಆಶಯವಾಗಿರುವದೆಂದು ಹೇಳಿರುವರು. ಈ ರೀತಿಯಾಗಿ ಮಾತನಾಡಿದ ಇವರು ಈಗ "ಸಾಮ್ರಾಜ್ಯಾಂತರ್ಗತ ಸ್ವರಾಜ್ಯ" ವೆಂಬ ಶಬ್ದವನ್ನೇ ಉಚ್ಚರಿಸದೆ, ದುಂಡುಮೇಜಿನ ಪರಿಷತ್ತಿಗೆ ಬಂದು ಅಲ್ಲಿ ಯಾವ ವಿಷಯವನ್ನಾದರೂ ಚರ್ಚಿಸಬಹುದೆಂದು ಹೇಳುತ್ತಿರುವರು. ಕಾಂಗ್ರೆಸ್ಸಿನವರು ಚಳವಳಿಯನ್ನು ಬಲಪಡಿಸಲು ಮೇಲ್ಕಂಡ ಅಸ್ಪಷ್ಟವಚನಗಳೇ ಕಾರಣಗಳಾಗಿರುವವು. ಶಾಂತಿಸಂಧಾನದ ಸಂದರ್ಭದಲ್ಲಿಯೂ ಸಹ ಮಹಾತ್ಮಾಗಾಂಧಿಯವರು ದುಂಡುಮೇಜಿನ ಪರಿಷತ್ತಿನಲ್ಲಿ ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವ ವಿಷಯವನ್ನೇ ಚರ್ಚಿಸುನೆವೆಂದೂ, ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವೆವೆಂದೂ ವೈಸರಾಯರಿಂದ ವಚನವು ದೊರೆತರೆ ಸದ್ಯಃ ಚಳವಳಿಯನ್ನು ನಿಲ್ಲಿಸಿ ಪರಿಷತ್ತಿಗೆ ಹೋಗುವದಾಗಿ ಹೇಳಿರುವರು. ಆದರೆ ಭರತಖಂಡಕ್ಕೆ ಸ್ವರಾಜ್ಯವು ದೊರೆಯುವಂತೆ ಮಾಡುವದೇ ತಮ್ಮ ಮುಖ್ಯಧ್ಯೇಯವೆಂದು ಹೇಳಿದ್ದ ವೈಸರಾಯರು ಈ ಸಂದರ್ಭದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳದಿರುವುದು ಅತ್ಯಂತ ಶೋಚನೀಯವಾದ ಸಂಗತಿಯಾಗಿರುವದು. ವೈಸರಾಯರು ಪ್ರತಿಯೊಂದು ಕಾರ್ಯವನ್ನೂ ಹೋಂ ಸರಕಾರದವರ ಅನುಮತಿಯಿಂದಲೇ ಮಾಡುತ್ತ ಬಂದಿರುವದರಿಂದ, ಇದರಿಂದ ತಮಗೆ ಯಾವ ಪ್ರಯೋಜನವೂ ಆಗುವದಿಲ್ಲವೆಂದೂ, ಭರತಖಂಡಕ್ಕೆ ಸ್ವಾತಂತ್ರ್ಯವು ಎಂದೂ ದೊರೆಯುವದಿಲ್ಲವೆಂದೂ ನಿಶ್ಚೈಸಿ ಸಹಸ್ರಾರು ಜನ ದೇಶಭಕ್ತರು ದೇಶಸ್ವಾತಂತ್ರ್ಯಕ್ಕಾಗಿ ತಮ್ಮ ತನುಮನಧನಗಳನ್ನೆಲ್ಲ ಸಮರ್ಪಿಸಿ ಸಂತೋಷದಿಂದ ಕಾರಾಗೃಹವಾಸಿಗಳಾಗಹತ್ತಿರುವರು. ಈ ವಿಷಮಸ್ಥಿತಿಯಲ್ಲಿಯೂ ಸಹ, ವೈಸರಾಯರು ಸ್ಪಷ್ಟವಾಗಿ ಮಾತನಾಡದಿರುವದನ್ನು ನೋಡಿ ಕಾಂಗ್ರೆಸ್ಸಿನವರಿಗೆ ಅನುಮಾನವುಂಟಾದುದು ಸಹಜವೆಂದೇ ಹೇಳಬಹುದು. ಇದರಿಂದ ಶಾಂತಿಸ್ಥಾಪನೆಯಾಗಿ ಕಾಂಗ್ರೆಸ್ಸಿನವರ ಸಹಾಯದಿಂದ ಸರ್ವಸಮ್ಮತವಾದ ತೀರ್ಮಾನವಾಗಲು ದೊರೆತಿದ್ದ ಅಮೂಲ್ಯವಾದ ಅವಕಾಶವನ್ನೇ ಸರಕಾರದವರು ಕಳೆದುಕೊಂಡದ್ದಾಯಿತು. ಇನ್ನು ಮುಂದೆ ಸ್ಥಿತಿಗತಿಗಳು ಮತ್ತಷ್ಟು ವಿಷಮಸ್ವರೂಪವನ್ನು ತಾಳಿ ಈ ಪರಿಷತ್ತೂ ಸಹ ಶಾಂತಿಸಂಧಾನದಂತೆ ನಿಷ್ಪ್ರಯೋಜನಕಾರಿಯಾಗಿ ಪರಿಣಮಿಸಬಹುದೆಂದು ಅನೇಕರು ತರ್ಕಿಸುತ್ತಿರುವರು. ಈ ಸಂದರ್ಭದಲ್ಲಿ ರೈಟ್ ಆನರಬಲ್ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳವರು, ಕಾಂಗ್ರೆಸ್ಸಿನವರು ಪರಿಷತ್ತಿಗೆ ಬರಲು ನಿರಾಕರಿಸಿದುದರಿಂದ ಸರ್ವಸಮ್ಮತವಾದ ತೀರ್ಮಾನವಾಗುವದು ಕಷ್ಟಸಾಧ್ಯವಾಗಿ ಪರಿಣಮಿಸಿರುವದೆಂದೂ, ಪರಿಷತ್ತಿಗೆ ಬರುವ ಪ್ರತಿನಿಧಿಗಳೆಲ್ಲರೂ ಏಕವಾಕ್ಯದಿಂದ ಸಂಪೂರ್ಣಸ್ವಾತಂತ್ರ್ಯಕ್ಕಾಗಿಯೇ ಹೋರಾಡಬೇಕೆಂದೂ ಹೇಳಿರುವರು. ಆದರೆ ಸಂಪೂರ್ಣಸ್ವಾತಂತ್ರ್ಯಸಂಪಾದನೆಗಾಗಿಯೇ ಬದ್ಧಕಂಕಣರಾಗಿ ನಿಂತಿರುವ ಕಾಂಗ್ರೆಸ್ಸಿನವರ ತತ್ತ್ವಗಳನ್ನು ಮೀರಿ ವರ್ತಿಸುತ್ತ, ಸರಕಾರದವರ ಅಸ್ಪಷ್ಟವೂ ಅನುಮಾನಾಸ್ಪದವೂ ಆದ ವಚನಗಳಲ್ಲಿಯೇ ಸಂಪೂರ್ಣ ನಂಬಿಕೆಯನ್ನಿಟ್ಟು ಹೊರಟಿರುವ, ಹಾಗೂ ಮಹಾತ್ಮಾಗಾಂಧಿ, ಪಂಡಿತ ಜವಾಹರಲಾಲನೆಹರೂ, ಪಂಡಿತ ಮದನಮೋಹನ ಮಾಳವೀಯ, ವಿ. ಜೆ. ಪಟೇಲ್, ಸರೋಜಿನಿನಾಯ್ಡು ಮೊದಲಾದ ರಾಷ್ಟ್ರೀಯ ಮುಖಂಡರನ್ನು ಪರಿಶ್ರಮವಿಲ್ಲದಿರುವ ಮೆಂಬರುಗಳಿಂದ ಈ ಮಹತ್ಕಾರ್ಯವು ಎಷ್ಟರಮಟ್ಟಿಗೆ ಸಫಲಗೊಳಿಸಲ್ಪಡುವದೆಂಬ ವಿಷಯವನ್ನು ಇಡೀ ಜಗತ್ತೇ ಕುತೂಹಲ ದೃಷ್ಟಿಯಿಂದ ಎದುರುನೋಡುತ್ತಿರುವುದು. ಈಗಲೂ ವೈಸರಾಯರು ಭಾರತೀಯರ ಅಭ್ಯುದಯದಲ್ಲಿ ದೃಷ್ಟಿಯನ್ನಿಟ್ಟು ಈ ಪರಿಷತ್ತಿನಲ್ಲಿ ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯವನ್ನೇ ಚರ್ಚಿಸುವದಾಗಿಯೂ, ಎಲ್ಲ ರಾಜಕೀಯ ಕೈದಿಗಳನ್ನೂ ಬಿಡುವದಾಗಿಯೂ ಭರವಸೆಯನ್ನಿತ್ತರೆ ಎಲ್ಲವೂ ಸುಮುಖವಾಗಿ ಕೊನೆಮುಟ್ಟುವದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳಬಹುದಾಗಿದೆ. ಈಗಿನ ವೈಸರಾಯರು ಅಸಾಧಾರಣ ಭೂತದಯೆಯುಳ್ಳವರಾಗಿದ್ದು ನಿಷ್ಕಲ್ಮಷಹೃದಯರೆಂದು ಲೋಕದಲ್ಲೆಲ್ಲಾ ಖ್ಯಾತಿಗೊಂಡಿದ್ದಾರೆ. ಇವರು ತಮ್ಮ ಅಧಿಕಾರಕಾಲದಲ್ಲಿ ಈ ಸಮಸ್ಯೆಯನ್ನು ಪೂರ್ತಿಗೊಳಿಸಿ ಭರತಖಂಡಕ್ಕೆ ಸ್ವಾತಂತ್ರ್ಯಸೌಖ್ಯವನ್ನುಂಟುಮಾಡಿ ಆಚಂದ್ರಾರ್ಕವಾಗಿ ಭರತಖಂಡದಲ್ಲಿ ತಮ್ಮ ದಿವ್ಯನಾಮವನ್ನು ಸುವರ್ಣಾಕ್ಷರಗಳಿಂದ ರಂಜಿಸುವಂತೆ ಮಾಡಿಕೊಂಡು, ಭರತಖಂಡದ ಕೃತಜ್ಞತೆಗೂ ಜಗನ್ನಿಯಾಮಕನ ಕೃಪೆಗೂ ಪಾತ್ರರಾಗಿ ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿ ಮೆರೆಯಲೆಂದು ಕೋರುತ್ತೇವೆ.

ಟರ್ಕಿದೇಶದ ಜಾರೋ ಅಘಾಯೆಂಬಾತನಿಗೆ 158 ವರ್ಷಗಳ ವಯಸ್ಸಾಗಿರುವದು. ಈತನು 12 ಜನ ಸ್ತ್ರೀಯರನ್ನು ಮದುವೆಯಾಗಿದ್ದು, 28 ಜನ ಮಕ್ಕಳು ಜನಿಸಿದ್ದರು. ಸದ್ಯಃ 64 ವಯಸ್ಸಿನ ಒಬ್ಬ ಮಗಳುಮಾತ್ರ ಇರುವಳು. ಈತನನ್ನು ಈಗ ಪ್ರದರ್ಶನಕ್ಕಾಗಿ ಅಮೇರಿಕೆಗೆ ಕರೆದುಕೊಂಡುಹೋಗಿರುತ್ತಾರೆ. ಈತನು ಹೆಚ್ಚಾಗಿ ಸೇವಿಸುವ ತರಕಾರಿ, ಹಣ್ಣುಗಳು ಮತ್ತು ಮಜ್ಜಿಗೆ ಇವುಗಳೇ ತನ್ನ ದೀರ್ಘಾಯುಸ್ಸಿಗೆ ಕಾರಣವೆಂದು ಹೇಳಿರುತ್ತಾನೆ.

ಒಳದೇಶದ ವೃತ್ತಾಂತಗಳು.

ನವರಾತ್ರಿಯ ಸರ್ವವಸ್ತುಪ್ರದರ್ಶನವು ರಾಜಧಾನಿಯಲ್ಲಿ ಈ ತಿಂಗಳು ತಾ|| 25ನೆಯ ಗುರುವಾರ ಪ್ರಾರಂಭವಾಗಿ ಅಕ್ಟೋಬರ್ ತಾ|| 9 ರ ವರೆಗೆ ನಡೆಯಿಸಲ್ಪಡುವುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ರಾಜಧಾನಿಯ ಜಗನ್ಮೋಹನ ಬಂಗಲೆಯಲ್ಲಿ ಅಕ್ಟೋಬರ್ ತಾ|| 3 ನೆಯ ಶನಿವಾರ ದಿವಸ ಪ್ರಾರಂಭವಾಗಿ ಒಂದು ವಾರದವರೆಗೆ ನಡೆಯುವುದು.

ರಾಜಧಾನಿಯಲ್ಲಿ ಈ ತಿಂಗಳು ತಾ|| 8 ರಿಂದ 14 ರ ವರೆಗೆ ಒಂದು ವಾರದಲ್ಲಿ 11 ಜನರಿಗೆ ಪ್ಲೇಗು ತಗಲಿ 11 ಮರಣಗಳಾಗಿರುವವೆಂದೂ, ಲಷ್ಕರ್, ಕೋಟೆ, ದೇವರಾಜ್, ಕೃಷ್ಣರಾಜ ಮೊಹಲ್ಲಾಗಳಲ್ಲಿ ಈ ರೋಗವಿರುವದೆಂದೂ ಹೆಲ್ತ್ ಆಫೀಸಿನ ರಿಪೋರ್ಟಿನಿಂದ ಗೊತ್ತಾಗುತ್ತದೆ.

ಕಳೆದವಾರ ರಾಜಧಾನಿಯ ಟೌನ್‌ಹಾಲಿನಲ್ಲಿ ಶ್ರೀ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಧರ್ಮಪ್ರಕಾಶ ಡಿ. ಬನುಮಯ್ಯನವರು 1000 ಗಾಂಧೀ ಟೋಪಿಗಳನ್ನು ಉಚಿತವಾಗಿ ಹಂಚಿದರು. ಆ ಸಮಯದಲ್ಲಿ ಸುಮಾರು 700 ಪರದೇಶೀ ಟೋಪಿಗಳು ಅಗ್ನಿದೇವನಿಗೆ ಸಮರ್ಪಿಸಲ್ಪಟ್ಟವು.

ಅಖಿಲಕರ್ನಾಟಕ ಸಾಹಿತ್ಯ ಪರಿಷತ್ತು ಮುಂದಿನ ಅಕ್ಟೋಬರ ೫-೬ ಮತ್ತು ೭ ನೆಯ ತಾರೀಖಿನ ದಿವಸ ರಾಜಧಾನಿಯಲ್ಲಿ ನೆರವೇರುವುದು. ಇದರ ಪ್ರಾರಂಭೋತ್ಸವವನ್ನು ಆಕ್ಟಿಂಗ್ ದಿವಾನರಾದ ಮೆ|| ಎಂ. ಎನ್. ಕೃಷ್ಣರಾಯರವರು ನೆರವೇರಿಸತಕ್ಕವರಿದ್ದಾರೆ. ಈ ಪರಿಷತ್ತು ದಸರಾಮಹೋತ್ಸವ ಸಮಯದಲ್ಲಿ ನೆರವೇರುವಂತೆ ವ್ಯವಸ್ಥೆಮಾಡಿರುವದರಿಂದ ಈ ಸಾರೆ ಈ ಪರಿಷತ್ತು ಬಹು ಜನ ಕರ್ನಾಟಕ ಸುಧಾರಕರಿಂದ ಶೋಭಿತವಾಗಿ "ನಭೂತೋನಭವಿಷ್ಯತಿ" ಎಂಬಂತೆ ನಡೆಯುವುದೆಂದು ಹೇಳಬಹುದಾಗಿದೆ.

ಹಾಸನ ಡಿ|| ಅರಸೀಕೆರೆ ತಾ|| ದಿಬ್ಬೂರು ಗ್ರಾಮನಿವಾಸಿಗಳಾದ ಸ್ಕೂಲ್‌ಮಾಸ್ಟರ್ ಮ|| ರಾ|| ಚನ್ನಪ್ಪನವರೆಂಬ ಗುರುಭಕ್ತಶಿಖಾಮಣಿಗಳು ತಮಗೆ ದೊರೆಯುವ ದಸರಾಮಹೋತ್ಸವ ರಜಾ ಸಮಯದಲ್ಲಿ ಪಂಚಾಚಾರ್ಯಪ್ರಭಾ ಪತ್ರಿಕೆಯ ಹಾಗೂ ರೇಣುಕವಿಜಯದ ಪ್ರಚಾರಕಾರ್ಯಕ್ಕಾಗಿ ಸರ್ವತ್ರ ಸಂಚರಿಸತಕ್ಕವರಾಗಿದ್ದಾರೆ. ಇವರು ಅಸದೃಶ ಗುರುಭಕ್ತಿಯುಕ್ತರಾಗಿ ನಿಸ್ವಾರ್ಥಬುದ್ಧಿಯಿಂದ ಗುರುಸೇವೆಯನ್ನೂ ತದ್ದ್ವಾರಾ ಮತಸೇವೆಯನ್ನೂ ಮಾಡುತ್ತಿರುವುದನ್ನು ಕಂಡು ಯಾರಿಗೆ ಸಂತೋಷವೆನಿಸಲಿಕ್ಕಿಲ್ಲ? ಈ ರೀತಿಯಾಗಿ ಅವಿಚ್ಛಿನ್ನಭಕ್ತಿಯಿಂದ ಮತಕಾರ್ಯಗಳನ್ನು ಮಾಡುತ್ತಿರುವ ಜನರನ್ನು ಈ ಕಾಲದಲ್ಲಿ ಕಾಣುವುದು ದುರ್ಲಭವೆಂದೇ ಹೇಳಬಹುದು. ಈ ಗುರುಭಕ್ತಾಗ್ರೇಸರರು ಕೈಕೊಂಡಿರುವ ಕಾರ್ಯಕ್ಕೆ ಸಕಲರೂ ಪ್ರೋತ್ಸಾಹವನ್ನಿತ್ತು ಅವರ ಶ್ರಮವನ್ನು ಸಾರ್ಥಕಗೊಳಿಸಬೇಕೆಂದೂ, ಗುರುಕಾರ್ಯದಲ್ಲಿ ನಿರತರಾದೀಗುರುಭಕ್ತಶ್ರೇಷ್ಠರಿಗೆ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನುಂಟುಮಾಡಲೆಂದೂ ಕೋರುತ್ತೇವೆ.

ವರ್ತಮಾನಸಂಗ್ರಹ.

ಪ್ರಪಂಚದಲ್ಲೆಲ್ಲಾ ಅತ್ಯಂತ ಸುಂದರಿಯಾರೆಂಬುದನ್ನು ಕಂಡು ಹಿಡಿಯಲು ಯೂರೋಪಿನಲ್ಲಿ ಪ್ರತಿವರ್ಷ ನಡೆಯುವ ಸಮ್ಮೇಲನದಲ್ಲಿ ಈ ವರ್ಷ ಬ್ರೆಜಿಲ್ ದೇಶದ 'ರೋಲೆಂಡ್ ಪೇಯಾರಾ' ಎಂಬ ನಾರೀಮಣಿಗೆ ಮೊಲನೆಯ ಬಹುಮಾನವು ದೊರಕಿ ಅವಳಿಗೆ "ಪ್ರಪಂಚ ಸುಂದರಿ" ಎಂಬ ಹೆಸರು ಕೊಡಲ್ಪಟ್ಟಿತು.

ಪಶ್ಚಿಮ ಇಂಡೀಸ್ ಎಂಬ ದ್ವೀಪಗಳ ಪೈಕಿ ಡೊಮಿನಿಕ, ಸ್ಯಾಂಟೊ ಡೊಮಿಂಗೋ ಎಂಬ ದ್ವೀಪಗಳೊಳಗೆ ಭಯಂಕರವಾದ ಸುಂಟರಗಾಳಿಯೆದ್ದು ಬಹು ದುಃಖಕರವಾದ ಪರಿಣಾಮವುಂಟಾಗಿದೆ. ಎರಡನೆಯ ದ್ವೀಪದಲ್ಲಿ ಒಂದು ಪಟ್ಟಣವು ಸಂಪೂರ್ಣವಾಗಿ ಹಾಳಾಯಿತು. 5,000 ಪ್ರಜೆಗಳು ಮೃತಿಹೊಂದಿದ್ದು 20,000 ಪ್ರಜೆಗಳು ಮನೆದಿಗಳನ್ನು ಕಳೆದುಕೊಂಡು ಅಲೆಯುತ್ತಿದ್ದಾರೆ.

ಅಫ್ಘಾನಿಸ್ಥಾನದ ದೊರೆಯಾದ ನಾದಿರ್ ಖಾನರು ಇದುವರೆಗೆ ತಮ್ಮ ಶತ್ರುಪಕ್ಷದವರನ್ನೆಲ್ಲಾ ನಿರ್ಮೂಲಮಾಡಿದ್ದರಿಂದ ಈಗ ಸಕಲ ಪ್ರಜೆಗಳೂ ಅವರೇ ತಮ್ಮ ದೊರೆ ಎಂದು ಅಂಗೀಕರಿಸುವಂತಾಯಿತು. ಸಂಸ್ಥಾನವು ಸರಿಯಾಗಿ ತಹಬಂದಿಗೆ ಬಂದದ್ದನ್ನು ಕಂಡು ಖಾನರು ಈಗ ಕಿರೀಟಧಾರಣೋತ್ಸವವನ್ನು ಅಕ್ಟೋಬರ್ ತಾ|| 6 ರಲ್ಲಿ ಮಾಡಿಕೊಳ್ಳುವುದಾಗಿ ಏರ್ಪಾಡು ಮಾಡುತ್ತಿದ್ದಾರೆ. ಈ ಉತ್ಸವಗಳು ಒಂದುವಾರದವರೆಗೆ ನಡೆಯುವವು. ಹಿಂದುಸ್ಥಾನದಲ್ಲಿರುವ ಅವರ ನೆಂಟರನ್ನೂ ಸ್ನೇಹಿತರನ್ನೂ ಅಫ್ಘಾನಿಸ್ಥಾನಕ್ಕೆ ಬರುವಂತೆ ಅವರಿಗೆ ಆಮಂತ್ರಣಪತ್ರಿಕೆಗಳನ್ನು ಕಳುಹಿಸಿದ್ದಾರೆ.

ತಂಜಾವೂರಿನಲ್ಲಿ ಕಳೆದವಾರ ಪ್ರಜೆಗಳು ಮದರಾಸ್ ಅಧಿಪತ್ಯದ ನ್ಯಾಯವಿಧಾಯಕಸಭೆಗೆ ಮೆಂಬರರನ್ನು ಚುನಾವಣೆ ಮಾಡಿದ ಸಂದರ್ಭದಲ್ಲಿ 30 ಓಟರುಗಳನ್ನು ಒಂದು ಮೋಟಾರ್‌ಬಸ್ಸಿನಲ್ಲಿ ಕುಳ್ಳಿರಿಸಿಕೊಂಡು ಓಟಿನ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಬಸ್ಸನ್ನು ಅದರ ಮಾಲೀಕನೇ ನಡೆಯಿಸುತ್ತಿದ್ದನು. ಅಕಸ್ಮಾತ್ತಾಗಿ ಆ ಬಸ್ಸು ಹೋಗುತ್ತಿದ್ದ ಹಾಗೇ ತಲೆಕೆಳಗಾಗಿ ಒಂದು ಚರಂಡಿಯೊಳಕ್ಕೆ ಮಗುಚಿಕೊಂಡಿತು. ಮೂವರು ತತ್‌ಕ್ಷಣವೇ ಮೃತಪಟ್ಟರು. ಉಳಿದವರಲ್ಲೂ ಅನೇಕರಿಗೆ ಗಾಯಗಳಾಗಿವೆ.

ಕಲ್ಕತ್ತೆಯ ಮುನಿಸಿಪಲ್ ಮ್ಯಾಜಿಸ್ಟ್ರೇಟರಾದ ಮಿ|| ನಾಗೇಂದ್ರನಾಥಗುಪ್ತರವರು ತಮ್ಮ ಪತ್ನಿಯಾದ ಶ್ರೀಮತಿ ರೋಮೊಲಾಗುಪ್ತಳು (ಲಾರ್ಡ್ ಸಿಂಹರ ಮಗಳು) ಮಿ|| ಟಿ. ಸಿ. ಗೋಸ್ವಾಮಿಯೆಂಬವನ ಸಂಗಮಾಡಿದ್ದಾಳೆಂದು ದಾವಾಮಾಡಿದ್ದರು. ಮಿ|| ಜಸ್ಟಿಸ್ ಪಾಂಕ್ರಿಡ್ಜರವರು ವಿಚಾರಣೆ ನಡೆಯಿಸಿ, ಮಿ|| ಗೋಸ್ವಾಮಿಯವರಿಂದ ನಾಗೇಂದ್ರನಾಥಗುಪ್ತರವರಿಗೆ 60,000 ರೂ. ಗಳ ದಂಡವನ್ನೂ ಮತ್ತು ಕೋರ್ಟುಖರ್ಚು ಬಾಬ್ತು 9,000 ರೂ. ಗಳನ್ನೂ ಸಹ ಕೊಡಿಸಿದ್ದುದೂ ಅಲ್ಲದೆ, ರೋಮೊಲಾದೇವಿಯ 11 ವರ್ಷದ ಅನಿಲಕುಮಾರನೆಂಬ ಮಗನನ್ನು ತಂದೆಯ ವಶಕ್ಕೆ ಕೊಡಿಸಿದರು.

"ಈಜಿಪ್ಟ" ಎಂಬ ಹಡಗು ಫ್ರಾನ್ಸಿನ ತೀರದಿಂದಾಚೆಗೆ ಸಾಗರದಲ್ಲಿ ಮುಳುಗಿ ಇಲ್ಲಿಗೆ ಏಳು ವರುಷಗಳಾದವು. ಆ ಸ್ಥಳದಲ್ಲಿ ಸಮುದ್ರವು 360 ಅಡಿ ಆಳವಾಗಿದೆ. ಆ ಹಡಗಿನೊಳಗೆ 20,00,000 ಪೌಂಡುಗಳ ಚಿನ್ನವನ್ನು ಭರ್ತಿಮಾಡಿ ಹಿಂದುಸ್ಥಾನಕ್ಕೆ ಕಳುಹಿಸಿದ್ದರು. ಈಚೆಗೆ ಇಟಲಿಯ ಒಂದು ಕಂಪನಿಯವರು ಆ ಹಡಗನ್ನು ಹುಡುಕಿ ಅದರೊಳಗಿರುವ ಬಂಗಾರವನ್ನು ಹೊರಕ್ಕೆ ತರಬೇಕೆಂದು ಹೊರಟಿರು. ಇವರು ಈಗ ಮುಳುಗಿರುವ ಹಡಗನ್ನು ಪತ್ತೆಮಾಡಿ ನೋಡಿದ್ದರಲ್ಲಿ ಅದು ಒಡೆದುಹೋಗಿಲ್ಲವೆಂದೂ, ಹಡಗು ಹಾಗೇ ಸರಿಯಾಗಿದೆ ಎಂದೂ ಕಂಡುಬಂದಿದೆ. ನೀರಿನ ಆಳವು ಬಹಳ ಹೆಚ್ಚಾಗಿರುವದರಿಂದ ಅವರ ಸಾಹಸವು ಬೇಗನೆ ಸಫಲವಾಗುವ ಹಾಗಿಲ್ಲ. ಕೆಲಸವೇನೋ ಉತ್ಸಾಹದಿಂದ ನಡೆಯುತ್ತಿರುವದು.

ಲಾಹೋರಿನಲ್ಲಿ ಹೊಸದೊಂದು ಕ್ರಾಂತಿಕಾರರ ಒಳಸಂಚಿನ ಗುಟ್ಟು ಬೈಲಿಗೆ ಬಿದ್ದಿದೆ. ಲಾಲಪೂರೆಂಬಲ್ಲಿದ್ದ ಕ್ರಾಂತಿಕಾರರ ಗುಪ್ತಸ್ಥಾನವನ್ನು ಪೋಲೀಸರು ಗೊತ್ತುಹಚ್ಚಿರುವರು. ಆ ಕ್ರಾಂತಿಕಾರರ ನಾಯಕನು ಓರ್ವ ಹಿಂದೂ ತರುಣನಾಗಿರುವನು. ಇವನು ರಸಾಯನ ಶಾಸ್ತ್ರದಲ್ಲಿಯೂ ವೈರ್‌ಲೆಸ್ ಟೆಲಿಗ್ರಾಫ್ ವಿದ್ಯೆಯಲ್ಲಿಯೂ ಬಹು ಪ್ರವೀಣನಿರುವನಂತೆ! ಇಡೀ ಪಂಜಾಬ್ ಪ್ರಾಂತದ ಗುಪ್ತ ಪೋಲೀಸರು ಇವನನ್ನು ಶೋಧಿಸಬೇಕೆಂದು ಎಷ್ಟೋ ಪ್ರಯತ್ನಪಟ್ಟರೂ ಈ ವರೆಗೆ ಶೋಧವಾಗಿರುವದಿಲ್ಲ. ಒಂದೆರಡುಸಾರೆ ಈ ನಾಯಕನು ಪೋಲೀಸರ ಕೈಗೆ ಸಿಕ್ಕಿದ್ದರೂ ಅತ್ಯಂತ ಜಾಣತನದಿಂದ ಜಾರಿಕೊಂಡು ಪಾರಾದನಂತೆ! ಈ ಸಂಚುಗಾರರ ಜಾಲವು ಸುತ್ತಲೂ ಪಸರಿಸಿದ್ದು ಇದರಲ್ಲಿ ಎಲ್ಲಜಾತಿಯ ತರುಣರು ಸೇರಿಕೊಂಡಿರುವರು. ಇಲ್ಲಿಯವರೆಗೆ ೪೦ ಜನರನ್ನು ಬಂಧಿಸಿದ್ದಾರೆ. ಇನ್ನೂ ಕೆಲವರನ್ನು ಹಿಡಿಯುವದರಲ್ಲಿದ್ದಾರೆ. ಒಳಸಂಚಿನ ನಾಯಕನು ಕ್ರಾಂತಿಕಾರಕರಲ್ಲಿ ಹೆಚ್ಚಿನ ಕ್ರಾಂತಿಕಾರಕನಾಗಿರುವನಂತೆ!

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಆಕ್ಟಿಂಗ್ ಸೆಕ್ರೆಟರಿಯವರು ಅಸ್ಸಾಂ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಿಗೆ ಕಳುಹಿಸಿದ್ದ 50 ರೂಪಾಯಿಗಳ ಇನ್ಷೂರ್ ಪ್ಯಾಕೆಟ್ಟನ್ನು ಪೋಸ್ಟಾಫೀಸಿನಲ್ಲಿ ಡಿಲೆವರಿ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಪೋಲೀಸರು ಅದನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಹೊರಟುಹೋದರು. ಹೆಚ್ಚಿನ ಮೊಗಲಾಯಿ!

ಇದೇ ಸೆಪ್ಟಂಬರ್ 17ನೆಯ ತಾರೀಖಿನ ದಿವಸ ದಿಲ್ಲಿಯ ಪೋಲೀಸರು ಅಲ್ಲಿಯ ಡಿಸ್ಟ್ರಿಕ್ಟ್ ಕಾಂಗ್ರೆಸ್ಸಿನ ಕಮಿಟಿ ಮತ್ತು ಸತ್ಯಾಗ್ರಹ ಕೂಟಗಳು ಅಕ್ರಮಕೂಟಗಳೆಂದು ಪ್ರಕಟಿಸಿ, ಸದರೀ ಸಂಸ್ಥೆಗಳ ಆಫೀಸುಗಳನ್ನು ಜಪ್ತುಮಾಡಿ, 116 ಜನರನ್ನು ದಸ್ತಗಿರಿ ಮಾಡಿರುವರಲ್ಲದೆ ಅಲ್ಲಿದ್ದ ಎಲ್ಲ ಕಾಗದಪತ್ರಗಳನ್ನೂ, ಹಾಗೂ ಹಣದ ಪೆಟ್ಟಿಗೆಗಳನ್ನೂ ತೆಗೆದುಕೊಂಡುಹೋದರು. ದಸ್ತಗಿರಿಯಾದವರಲ್ಲಿ ಡಾಕ್ಟರ್ ಅನ್ಸಾರಿಯವರ ಸೋದರಳಿಯಂದಿರಾದ ಮಿ|| ಫರೀದುಲ್‌ಹಕ್‌ರವರೂ ಒಬ್ಬರಾಗಿರುವರು.

ಕುರ್ಲಾ ಮ್ಯಾಜಿಸ್ಟ್ರೇಟರು ಶ್ರೀಮತಿ ಉಕ್ಕಾನಿ ಎಂಬ 65 ವರ್ಷದ ಮಹಮ್ಮದೀಯ ಸ್ತ್ರೀಯಳನ್ನು ಮದ್ಯಪಾನ ನಿಷೇಧ ಚಳವಳಿಯ ಕಾನೂನಿನ ಮೇಲೆ ೪ ತಿಂಗಳ ಕಠಿಣಸಜೆಗೆ ಗುರಿಪಡಿಸಿದರು. ಠಾಣಾ ಸೆಷನ್ ಜಡ್ಜರಾದ ಮಿ|| ಬೆಂಗಾ ಎಚ್. ಸಂಜನರವರು ಸದರೀ ವಿಚಾರಣೆಯನ್ನು ಪುನರ್ವಿಮರ್ಶೆ ಮಾಡಿ, ಪರೋಪಕಾರದೃಷ್ಟಿಯಿಂದ ಮದ್ಯಪಾನಾಸಕ್ತರಿಗೆ ಸದುಪದೇಶ ಮಾಡುವವರನ್ನು ಸಮಾಜಹಿತಚಿಂತಕರೆಂದು ಗೌರವಿಸಬೇಕೆಂದೂ, ಜನಸಾಮಾನ್ಯದ ಹಿತಕ್ಕಾಗಿ ಕೆಲಸಮಾಡುವ ಇಂಥ ಪರೋಪಕಾರಿಗಳನ್ನು ಶಿಕ್ಷಿಸಬೇಕೆಂಬುದು ಕಾಯಿದೆಯ ಉದ್ದೇಶವಲ್ಲವೆಂದೂ ಹೇಳಿ, ಶ್ರೀಮತಿ ಉಕ್ಕಾನಿಯವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವರಲ್ಲದೆ, ಈ ವಿಷಯದಲ್ಲಿ ಅಖೈರು ತೀರ್ಮಾನವನ್ನು ಮಾಡಬೇಕೆಂದು ಹೈಕೋರ್ಟ್ ಜಡ್ಜರವರನ್ನು ಕೇಳಿರುವರು. ಮ್ಯಾಜಿಸ್ಟ್ರೇಟರ ಜಡ್ಜಮೆಂಟ್ ಸ್ಥಗಿತ್ಯವಾಗಿದೆ.

ದಿವಾನ್ ಚರ್ಮನಲಾಲರವರು ದುಂಡುಮೇಜಿನ ಪರಿಷತ್ತಿಗೆ ಬರಬೇಕೆಂದು ವೈಸ್‌ರಾಯರು ಕಳುಹಿಸಿದ್ದ ಆಮಂತ್ರಣವನ್ನು ತಿರಸ್ಕರಿಸಿರುವರು. ಈ ಸಂದರ್ಭದಲ್ಲಿ ಅವರು "ಪರಿಷತ್ತಿಗೆ ಸದ್ಯಃ ಚುನಾಯಿಸಲ್ಪಟ್ಟಿರುವ ಮೆಂಬರುಗಳನ್ನು ನೋಡಿದರೆ, ನಾನು ಅಲ್ಲಿಗೆ ಹೋಗುವದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ" ವೆಂದು ಹೇಳಿರುವರು.

ಪಂಡಿತ ಮೋತೀಲಾಲ್ ನೆಹರೂರವರ ಅಳಿಯಂದಿರಾದ ಮಿ|| ಆರ್. ಎಸ್. ಪಂಡಿತರವರಿಗೆ ವಿಧಿಸಿದ್ದ 500 ರೂಪಾಯಿಗಳ ಜುಲ್ಮಾನೆಗಾಗಿ ಪೋಲೀಸರು ಅವರ ಮೋಟಾರನ್ನು ಜಪ್ತು ಮಾಡಿರುವರು.

ಇದೇ ಸೆಪ್ಟಂಬರು 12ನೆಯ ತಾರೀಖಿನ "ಟ್ರಿಬ್ಯೂನ್" ಪತ್ರಿಕೆಯು ಇದುವರೆಗೆ ಪಂಜಾಬಿನಲ್ಲಿ ಈ ಕೆಳಗೆ ಕಂಡಂತೆ 5,330 ಜನರು ದಸ್ತಗಿರಿಯಾಗಿರುವರೆಂದು ಪ್ರಕಟಿಸಿರುವದು. ಲಾಹೋರು 1,098, ಅಮೃತಸರ 692, ಗುಜರನ್‌ವಾಲಾ 454, ಶೇಖುಪುರ 338, ಲಾಯಲ್‌ಪುರ 326, ಲೂಧಿಯಾನಾ 295, ಫೆರೋಜ್‌ಪುರ 260, ಜಲಂಧರು 525, ಮಾಂಟ್ಗೋಮರಿ 171, ರೋಹಟಾಕ್ 167, ಸಿಯಾಲ್ಕೋಟ 155, ಝೇಲಂ 153, ಸಿಮ್ಲಾ 133, ಹೋಷಿಯಾರ್‌ಪೂರ್ 220, ಮುಲ್ತಾನ್ 114, ಹಿಸ್ಸಾರ್ 99, ರಾವಲ್‌ಪಿಂಡಿ 98, ಗುರುದಾಸಪುರ 95, ಸರ್ಗೋಧಾ 89, ಅಂಬಾಲಾ 88, ಝುಂಗ್ 38, ಕಂಬೇಲಪುರ 20, ಗುಜರಾತ್ 20, ಮಿಯಾನ್‌ವಾಲಿ 20, ಕಾಂಗ್ರಾ 17, ಕಾರ್ನಲ್ 15, ಮುಝಫರ್‌ಪುರ 14, ಜಿಂದ್‌ಸ್ಟೇಟ್ 14, ಡಿ-ಜಿ-ಖಾನ್ 11, ಕಪೂರ್ಥಲಾ 1.

ದಹಲಿಯಲ್ಲಿ ದಸ್ತಗಿರಿಮಾಡಲ್ಪಟ್ಟ 112 ಜನ ಸ್ವಯಂಸೇವಕರ ಪೈಕಿ 72 ಜನರು 3 ತಿಂಗಳ ಕಠಿಣಸಜೆ, 50 ರೂ. ದಂಡ, ತಪ್ಪಿದರೆ ಪುನಃ 1½ ತಿಂಗಳ ಕಠಿಣಸಜೆಗೆ ಗುರಿಪಡಿಸಲ್ಪಟ್ಟರು.

ದಿಲ್ಲಿಯಲ್ಲಿ ಇದೇ ಸೆಪ್ಟಂಬರ್ 19 ನೆಯ ತಾರೀಖಿನ ದಿವಸ 12 ಜನ ಸ್ವಯಂಸೇವಕರು "ನಾವು ಅಕ್ರಮಕೂಟದ ಮೆಂಬರರು. ಬೇಕಿದ್ದರೆ ನಮ್ಮನ್ನು ದಸ್ತಗಿರಿ ಮಾಡಬಹುದು" ಎಂದು ದೊಡ್ಡ ದೊಡ್ಡ ಅಕ್ಷರಗಳಿಂದ ಯುಕ್ತವಾದ ಬೋರ್ಡುಗಳನ್ನು ಎದೆಯಮೇಲೆ ಹಾಕಿಕೊಂಡು ಊರಲ್ಲೆಲ್ಲಾ ಸುತ್ತಿ ಕಡೆಗೆ ಪೋಲೀಸ್ ಸ್ಟೇಷನ್ನಿಗೆ ಹೋಗಲು ಪೋಲೀಸರು ಎಲ್ಲರನ್ನೂ ದಸ್ತಗಿರಿ ಮಾಡಿರುತ್ತಾರೆ.

20 ನೆಯ ತಾರೀಖಿನ ದಿವಸ ಪೋಲೀಸರು ದಿಲ್ಲಿಯ ಸತ್ಯಾಗ್ರಹಾಶ್ರಮದ ಮೇಲೆ ಎರಡನೆಯ ಸಾರೆ ದಾಳಿಯನ್ನಿಟ್ಟು 46 ಜನ ಸ್ವಯಂಸೇವಕರನ್ನು ದಸ್ತಗಿರಿ ಮಾಡಿರುತ್ತಾರೆ.

ಅಲಹಾಬಾದಿನಲ್ಲಿ ದಸ್ತಗಿರಿಯಾಗುವವರ ಸಂಖ್ಯೆಯು ಬಹಳವಾಗಿ ಹೆಚ್ಚುತ್ತಿರುವದರಿಂದ ಇನ್ನು ಮುಂದೆ ಯಾರ ದಸ್ತಗಿರಿಯಾದರೂ ನಗರದಲ್ಲಿ ಹರತಾಳವನ್ನಾಚರಿಸಬಾರದೆಂದು ನಾಗರಿಕರು ನಿರ್ಧರಿಸಿರುವರು.

ಬಂಗಾಳ ಸರಕಾರದವರು ಮಿ|| ಎಚ್. ಟಿಫ್‌ನೆಲ್ ಬ್ಯಾರೆಟ್ ಐ. ಸಿ. ಎಸ್. ಪ್ರೆಸ್ ಆಫೀಸರವರ ಸಂಪಾದಕತ್ವದಲ್ಲಿ ಒಂದು ದೈನಿಕ ಪತ್ರಿಕೆಯನ್ನು ಹೊರಡಿಸಲಾರಂಭಿಸಿರುವರು. ಅದರಲ್ಲಿ ಆ ಪ್ರಾಂತದಲ್ಲಿ ನಡೆಯುವ ಬಹಿಷ್ಕಾರ ಚಳವಳಿ ಮತ್ತು ಅದರ ಫಲಿತಾಂಶವು ಪ್ರಕಟಿಸಲ್ಪಡುತ್ತಿರುವುದು.

ಬಾಗಲಕೋಟೆಯ ಕನ್ನಡಿಗ ಪತ್ರಿಕೆಯ ಸಂಪಾದಕರಾದ ಮ|| ರಾ|| ಮಂಗಳವೇಡೆ ಶ್ರೀನಿವಾಸರಾಯರು ಈ ಮೊದಲು ಸತ್ಯಾಗ್ರಹ ಚಳವಳಿಯನ್ನು ಮಾಡಿ ಶಿಕ್ಷೆಯನ್ನನುಭವಿಸಿದ್ದರು. ಇವರು ಜೈಲಿನಿಂದ ಬಂದ ಕೂಡಲೇ ಪುನಃ ಸತ್ಯಾಗ್ರಹ ಚಳವಳಿಯ ಬಗ್ಗೆ ಅಲ್ಲಲ್ಲಿ ಭಾಷಣಗಳನ್ನು ಮಾಡಹತ್ತಿದ್ದರಿಂದ ಸರಕಾರದವರು ಪುನಃ ಇವರನ್ನು ಹಿಡಿದು 6 ತಿಂಗಳ ಶಿಕ್ಷೆಗೆ ಗುರಿಪಡಿಸಿದ್ದಾರೆ.

ಲಂಡನ್ನಿನಲ್ಲಿ ನಡೆಯುವ ದುಂಡುಮೇಜಿನ ಪರಿಷತ್ತಿಗೆ ಮಂತ್ರಿಶ್ರೇಷ್ಠರಾದ ಮಿ|| ರಾಂಸೆಮ್ಯಾಕ್ಡೊನಾಲ್ಡರವರೇ ಅಧ್ಯಕ್ಷರಾಗುವರು. ಇದರ ಪ್ರಾರಂಭೋತ್ಸವವನ್ನು ಸಾರ್ವಭೌಮರೇ ನೆರವೇರಿಸುವರೆಂದು ವದಂತಿಯಿದೆ.

ಬೈಲಹೊಂಗಲ ನಿವಾಸಿಗಳಾದ ವೇ|| ಸುಬುದ್ಧಿ ಹಿರೇಮಠ ಎಂಬವರ ಮೇಲೆ ಸತ್ಯಾಗ್ರಹ ಚಳವಳಿಯ ಬಗ್ಗೆ ಟಿಟ್ಲೆಯಾಗಿ ಸದರಿಯವರಿಗೆ 8 ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಕರಾಚಿಯಲ್ಲಿ ನಡೆದ ಚುನಾವಣೆಗೆ ಗೋವರ್‌ರೂರ ಎಂಬೊಬ್ಬ ಮುನಿಸಿಪಲ್ ಸ್ಕೂಲ್ ಜವಾನನೂ, ಮತ್ತೊಬ್ಬ ಮುನಿಸಿಪಲ್ ಕೌನ್ಸಿಲರೂ ಉಮೇದುವಾರರಾಗಿ ನಿಂತಿದ್ದರು. ಗೋವರ್ ರೂರನಿಗೆ 2,557 ಓಟುಗಳೂ, ಮುನಿಸಿಪಲ್ ಕೌನ್ಸಿಲರಿಗೆ 626 ಓಟುಗಳೂ ಬಂದು, ಗೋವರ್ ರೂರನೇ ಮೆಂಬರಾಗಿ ಚುನಾಯಿಸಲ್ಪಟ್ಟನು. ಪಶ್ಚಿಮಸಿಂಧ್‌ದೇಶದಲ್ಲಿ ಕೌನ್ಸಿಲ್ ಚುನಾವಣೆಗೆ ದಾಲು ಎಂಬೊಬ್ಬ ಚಮ್ಮಾರನೂ, ಸರಕಾರಿ ಪಬ್ಲಿಕ್ ಪ್ರಾಸಿಕ್ಯೂಟರವರಾದ ಮಿ|| ಪರಮಾನಂದ ಕೆ. ಸಿಪಾಹಿಮಲಾನಿಯವರೂ ಚುನಾವಣೆಗೆ ನಿಂತಿದ್ದರು. ದಾಲು (ಚಮ್ಮಾರ) ನಿಗೆ 3,895 ಓಟುಗಳೂ, ಪಬ್ಲಿಕ್‌ಪ್ರಾಸಿಕ್ಯೂಟರನಿಗೆ 445 ಓಟುಗಳೂ ಬಿದ್ದು ದಾಲುನೇ ಮೆಂಬರಾಗಿ ಚುನಾಯಿಸಲ್ಪಟ್ಟನು.

ಕಾಂಗ್ರೆಸ್ಸಿನ ಚಳವಳಿಯು ದೆಸೆಯಿಂದ ಬಂಗಾಲ ಸರ್ಕಾರಕ್ಕೆ ಶೇಂದೀ ಬಾಬಿನ ವರಮಾನದಲ್ಲಿ ೨೦ ಲಕ್ಷ ರೂಪಾಯಿಗಳು ಲುಕ್ಸಾನಾಗಿರುವುದಾಗಿ ತಿಳಿದುಬರುತ್ತದೆ.

ಬಳ್ಳಾರಿ ಡಿಸ್ಟ್ರಿಕ್ಟಿನಿಂದ ಮದರಾಸ್ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಚುನಾವಣೆಗೆ ನಿಂತಿದ್ದ 5 ಜನ ಮೆಂಬರರಿಗೆ ಈ ಕೆಳಗೆ ಕಂಡಂತೆ ಓಟುಗಳು ಬಂದು ಮೊದಲಿನ ಇಬ್ಬರು ಉಮೇದುವಾರರು ಚುನಾಯಿಸಲ್ಪಟ್ಟರು. ವಿ.|| ಗೋಪಾಲಸ್ವಾಮಿ ಮೊದಲಿಯಾರ್ 6,844, ಮಿ|| ರಂಗನಾಥಮು ಮೊದಲಿಯಾರ್ 3,455, ಮಿ|| ಡಿ. ಕೆ. ರೆಡ್ಡಿ, 3412, ಮಿ|| ಟಿ. ರಾಘವಾಚಾರ್ಯ 3217, ಮತ್ತು ಮಿ|| ಪಿ. ಶಿವರಾಜ್ 472.

ಭರತಖಂಡದ ಸದ್ಯದಸ್ಥಿತಿ.

ಅಮೇರಿಕೆಯ ಪತ್ರ.

(ಡಾಕ್ಟರ್ ಸುಧೀಂದ್ರಬೋಸ್‌ರವರಿಂದ)

ಅಯೋವಾ, ಆಗಸ್ಟ 9.

ದೈನಿಕಪತ್ರಿಕೆಗಳು ಭರತಖಂಡದ ವಿದ್ಯಮಾನಗಳ ವಿಷಯದಲ್ಲಿ ಅತ್ಯಲ್ಪವಾದ ವರ್ತಮಾನವನ್ನು ಪ್ರಕಟಿಸಿರುವವು. ಸಂಯುಕ್ತ ಸಂಸ್ಥಾನ ವರ್ತಮಾನ ಪತ್ರಿಕೆಗಳು ಅವರಲ್ಲಿಯೂ ನ್ಯೂಯಾರ್ಕನಗರದ ಪತ್ರಿಕೆಗಳು ಇಡೀ ಪ್ರಪಂಚದಲ್ಲಿ ಅತ್ಯುತ್ತಮವಾದವುಗಳಾಗಿರುತ್ತವೆ. ಅಮೇರಿಕೆಯವರು ಬುದ್ಧಿಶಕ್ತಿ, ಪ್ರಯತ್ನವಿಶೇಷ ಮತ್ತು ಹಣಕಾಸಿನ ವಿಚಾರಗಳಲ್ಲಿ ವಿಶೇಷ ಮುಂದುವರಿದಿರುವರಾದರೂ, ಅಮೇರಿಕೆಯ ವೃತ್ತಪತ್ರಿಕೆಗಳನ್ನು ಓದುತ್ತಾ ಹೋದರೆ ಇವರು ಮದ್ಯಪಾನ ನಿಷೇಧದ ವಿಷಯದಲ್ಲಿ ಹೇಗೆ ಪಕ್ಷಪಾತಿಗಳಾಗಿರುವರೋ ಅದರಂತೆ ಆಂಗ್ಲೇಯರ ತತ್ತ್ವಗಳ ವಿಷಯದಲ್ಲಿ ಪಕ್ಷಪಾತಿಗಳಾಗಿರುವರೆಂಬುದು ವಿಶದವಾಗುವದು. ಕೇವಲ ನಿಷ್ಪಕ್ಷಪಾತಿಗಳೆಂದು ಹೇಳಿಸಿಕೊಳ್ಳುವ ಅವರ ಈ ಪಕ್ಷಪಾತಬುದ್ಧಿಯು ಆಶ್ಚರ್ಯವನ್ನುಂಟುಮಾಡುವದು. ಹೀಗೆ ಪ್ರಜಾಭಿಪ್ರಾಯದ ಯಂತ್ರಗಳೆನಿಸಿದ ಪತ್ರಿಕಾಕರ್ತರೇ ದ್ವೇಷಾಸೂಯೆಗಳಿಂದ ಕೂಡಿದ ಪಕ್ಷಪಾತಿಗಳಾದರೆ ಜನಸಾಮಾನ್ಯಕ್ಕೆ ನಿಜವಾದ ವಿಷಯಗಳು ಹೇಗೆ ತಿಳಿಯುವವು?

ಇಂಥ ಆಂಗ್ಲಪಕ್ಷಪಾತಿಗಳಾದ ದೈನಿಕಪತ್ರಿಕೆಗಳು ಪದೇ ಪದೇ ಹಿಂದೂ ಮುಸಲ್ಮಾನರ ಕಲಹಗಳ ಕಥೆಯನ್ನು ಹಬ್ಬಿಸಿ, ಬ್ರಿಟನ್ನಿನಲ್ಲಿ ನಡೆಯುವ ಕ್ಯಾಥೋಲಿಕ್ ಪ್ರಾಟೆಸ್ಟಂಟರ ಹೊಡೆದಾಟದ ಕಥೆಗಳನ್ನು ಅಡಗಿಸುವವು. ಕಳೆದವಾರ ಅನೇಕ ಅಮೇರಿಕೆಯ ಪತ್ರಿಕೆಗಳು ಇಂಗ್ಲಂಡಿನಿಂದ ಬಂದ ಈ ಕೆಳಗೆ ಕಂಡ ವರ್ತಮಾನವನ್ನು ತಮ್ಮ ಪತ್ರಿಕೆಯ ಒಳಪುಟಗಳಲ್ಲಿ, ಕೂಡಲೇ ಕಣ್ಣಿಗೆ ಕಾಣಿಸದೆ ಇರುವ ಒಂದು ಮೂಲೆಯಲ್ಲಿ ಪ್ರಕಟಿಸಿರುವವು.

ಲಿವರ್‌ಫೂಲ್, ಜುಲೈ 28—ನೆದರ್‌ಫೀಲ್ಡ್ ರಸ್ತೆಯ ಪ್ರಾಂತದಲ್ಲಿ ನೂರಾರು ಜನ ಪೋಲೀಸರು ಸಶಸ್ತ್ರರಾಗಿ ರಾತ್ರಿಯೆಲ್ಲ [illegible] ಕಾವಲಿದ್ದರೂ, ಕ್ಯಾಥೋಲಿಕ್ ಮತ್ತು ಪ್ರಾಟೆ[illegible] ಹೊಡೆದಾಟವು ಈ ದಿನ ಪುನಃ ಪ್ರಾರಂಭವಾಯಿತು. ನೆದರ್‌ಫೀಲ್ಡ್ ರಸ್ತೆಯ ಪ್ರಾಂತದಲ್ಲಿ ಸಂಪೂರ್ಣ ಪ್ರಾಟೆಸ್ಟಂಟರೇ ಇರುವರು. ನಿನ್ನೆಯ ದಿವಸ 9ಜನರೂ, 3ಜನ ಪೋಲೀಸರೂ ಗಾಯ ಹೊಂದಿದರು. ಈ ಸಂದರ್ಭದಲ್ಲಿ ದಸ್ತಗಿರಿಮಾಡಿದ ಜನರನ್ನು ಮ್ಯಾಜಿಸ್ಟ್ರೇಟರು ಪೋಲೀಸ್ ಕೋರ್ಟಿನಲ್ಲಿ ವಿಚಾರಣೆಮಾಡುತ್ತಿದ್ದಾಗ ಈ ಮತಪಕ್ಷಪಾತಿಗಳಾದ ಜನರು ಸದರಿ ಕೋರ್ಟಿನ ಮೇಲೆಯೇ ದಾಳಿಯಿಟ್ಟು ಗಲಭೆಮಾಡಿದರು.

ಮೇಲ್ಕಂಡ ವಿದ್ಯಮಾನವು ಕ್ರಿಶ್ಚಿಯನ್ನರ ಜಗಳವಾಗಿರದೆ, ಹಿಂದೂ ಮುಸಲ್ಮಾನರ ಜಗಳವಾಗಿದ್ದರೆ ಊಹಾಶಕ್ತಿಯಿಂದ ಕೂಡಿದ ರೋಮಾಂಚವನ್ನುಂಟುಮಾಡುವ ಅನೇಕ ವಿದ್ಯಮಾನಗಳಿಂದಲೂ ದಪ್ಪದಪ್ಪ ಅಕ್ಷರಗಳಿಂದಲೂ, ಭಯೋತ್ಪಾತವನ್ನುಂಟುಮಾಡುವ ಭೀಕರವಾಕ್ಯಗಳಿಂದಲೂ ಪ್ರಥಮಪುಟದಲ್ಲಿ ನಾನಾ ವಿಧಗಳಾದ ಟೀಕೆಗಳಿಂದ ವರ್ಣಿಸಲ್ಪಡುತ್ತಲಿದ್ದಿತು. ಆದರೆ ಇಂಗ್ಲಂಡಿನಲ್ಲಿ ನಡೆದ ಮತಸಂಬಂಧವಾದ ಕ್ರಿಶ್ಚಿಯನ್ನರ ಈ ಭೀಕರ ಹೊಡೆದಾಟವು ಮೂಲೆಗೆ ಹಾಕಲ್ಪಟ್ಟಿತು. ಅದನ್ನು 10 ಜನರಲ್ಲಿ ಒಬ್ಬನು ಸಹ ಓದುವದಿಲ್ಲವೆಂದು ಧಾರಳವಾಗಿ ಹೇಳಬಹುದು.

ಅಮೇರಿಕೆಯ ಕೆಲವು ವಾರಪತ್ರಿಕೆಗಳನ್ನು ನಾನು ಬಹಳವಾಗಿ ಪ್ರೀತಿಸುವೆನು. ಇಂಥ ಕಟ್ಟುಕಥೆಗಳಿಗೆ ಅವರು ಅವಕಾಶವನ್ನೇ ಕೊಡುವವರಲ್ಲ. ಅವರಿಂದಲೇ ಅಮೇರಿಕೆಯವರು ಭರತಖಂಡದ ನಿಜವಾದ ವಿದ್ಯಮಾನಗಳನ್ನು ತಿಳಿಯುವರು. ಈ ವಾರಪತ್ರಿಕಾಕರ್ತರಾದರೂ, ಕೇವಲ ಭಾರತಪಕ್ಷಪಾತಿಗಳಾಗಿರದಿದ್ದರೂ, ಅವರು ನಿಷ್ಪಕ್ಷಪಾತಿಗಳೂ ನಿರ್ಭಯರೂ ಆಗಿರುತ್ತಾರೆ. ಎಲ್ಲ ವಿದ್ಯಮಾನಗಳನ್ನೂ ಅರಿತನಂತರ ಅಮೇರಿಕೆಯ ಉದಾರ ಪಂಗಡದವರು ಭರತಖಂಡದ ವಿಷಯದಲ್ಲಿ ತಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರಿಸುವರೆಂದು ನಾನು ನಿಸ್ಸಂಶಯವಾಗಿ ಹೇಳಬಲ್ಲೆನು. ಇವರು ಪ್ರಪಂಚದಲ್ಲೆಲ್ಲೂ ಪ್ರಜಾಪಕ್ಷದ ಪ್ರಭುತ್ವವನ್ನೇ ಸ್ಥಾಪಿಸುವದು ಅಸಾಧ್ಯವಾಗಿ ಪರಿಣಮಿಸಬಹುದಾದರೂ ತಮ್ಮ ಸರ್ವಪ್ರಯತ್ನಗಳಿಂದಲೂ ದಬ್ಬಾಳಿಕೆಯು ಮಾತ್ರ ಎಲ್ಲಿಯೂ ನಡೆಯದಂತೆ ಮಾಡುವದರಲ್ಲಿ ಯಾವ ಸಂದೇಹವೂ ಇಲ್ಲ.

ಸೈಕಿವಾಟ್ಕೆಯಲ್ಲಿರುವ ವರದಿ.

"ದಿ ವರ್ಲ್ಡ್ ಟು-ಮಾರೊ" (ನಾಳಿನ ಪ್ರಪಂಚ) ಎಂಬ ವರ್ತಮಾನಪತ್ರಕರ್ತರು ತಮ್ಮ ಅಗ್ರಲೇಖದಲ್ಲಿ ಜನಿಸುವದಕ್ಕಿಂತಲೂ ಪೂರ್ವದಲ್ಲಿ ಮರಣಹೊಂದುವದೇ ಸೈಮನ್ ವರದಿಯ ಹಣೆಯ ಬರಹವಾಗಿರುವದೆಂದು ಬರೆದಿರುವರು." ಕಮಿಷನ್ನಿನಲ್ಲಿ ಭಾರತೀಯರಲ್ಲೊಬ್ಬರನ್ನೂ ಸೇರಿಸದಿರಲು. ರಾಷ್ಟ್ರಾಭಿಮಾನಿಗಳು ಕೋಪಗೊಂಡು ಮಾಡಿದ ಬಹಿಷ್ಕಾರದಿಂದ ಸಮಿತಿಯು ಉಳಿಯುವದೇ ಕಷ್ಟವಾಗಿ ಹೋಯಿತು. ಈ ದುರದೃಷ್ಟ ಶಿಶುವು ದುರಭಿಮಾನದಿಂದಲೂ, ಜಾತ್ಯಭಿಮಾನದ ವಿಷದಿಂದಲೂ ಮೃತ್ಯುವಶವಾಯಿತು. ಇದರ ಮರಣವು ದುಃಖಕರವೂ, ಹಿತಕಾರಿಯೂ ಆಯಿತು. ವರದಿಯು ಮೃತ್ಯುವಶವಾಯಿತೆಂದು ನಾವು ಪುನಃ ಪುನಃ ಹೇಳುವೆವು. ಏಕೆಂದರೆ ಕೂಲಿಕಾರ ಸರಕಾರದವರು ವಿವೇಚನಾಶಕ್ತಿಯಲ್ಲಿಯೂ ಧೈರ್ಯದಲ್ಲಿಯೂ ಸಂಪೂರ್ಣ ಶೂನ್ಯರಾಗಿರುವರೆಂದು ನಾವೆಂದೂ ನಂಬಲಾರೆವು. ಭಾರತಸಮಸ್ಯಾಪೂರ್ತಿಯವಿಷಯದಲ್ಲಿ ಬ್ರಿಟಿಷರು ವರದಿಯ ಶಿಫಾರಸಿಗಿಂತಲೂ ಹೆಚ್ಚಾಗಿ ಏನೂ ಮಾಡಲಾರದೆ ಹೋದರೆ "ಕೈಜಾರಿದ ರಾಷ್ಟ್ರ"ಕ್ಕಾಗಿ ಒಂದು ದುಃಖಪ್ರದರ್ಶನದಿವಸವನ್ನು ಈಗಲೇ ಗೊತ್ತುಮಾಡಬೇಕಾಗುವದು. ವೈಸರಾಯರು ಮತ್ತು ಸೆಕ್ರೆಟರಿ ಆಫ್ ಸ್ಟೇಟರವರು ಭರತಖಂಡಕ್ಕೆ ಶೀಘ್ರದಲ್ಲಿಯೇ "ಡೊಮಿನಿಯನ್ ಸ್ಟೇಟಸ್" ಅಥವಾ "ಸಾಮ್ರಾಜ್ಯಾಂತರ್ಗತಸ್ವರಾಜ್ಯ"ವನ್ನು ಕೊಡುವದಾಗಿ ವಾಗ್ದಾನಮಾಡದಿದ್ದರೆ ಅಕ್ಟೋಬರಿನಲ್ಲಿ ನಡೆಯಲಿರುವ ದುಂಡುಮೇಜಿನ ಪರಿಷತ್ತು ಸಹ ವರದಿಯಂತೆ ಜನನಕ್ಕೆ ಪೂರ್ವವೇ ಮೃತ್ಯುವಶವಾಗುವದು. ಬೇರೆ ಯಾವ ಆಡಳಿತಪದ್ಧತಿಯನ್ನು ಕೊಡುವದಾದರೂ ಭರತಖಂಡವು ಸಾಮ್ರಾಜ್ಯದಿಂದ ಜಾರುವದು ಅನಿವಾರ್ಯವಾಗುವದು. ಸದ್ಯಃ ಕಾರಾಗೃಹವಾಸಿಗಳಾಗಿರುವ ಸ್ತ್ರೀ ಪುರುಷರನ್ನು ದುಂಡುಮೇಜಿನಪರಿಷತ್ತಿಗೆ ಕರೆಯದಿರುವದಾದರೆ ಅಥವಾ ಆ ಕಾರಾಗೃಹವಾಸಿಗಳು ಪರಿಷತ್ತಿಗೆ ಬರಲು ನಿರಾಕರಿಸಿದರೆ ಪರಿಷತ್ತಿಗೆ ವಿಷಾದಕರವಾದ ಅಪಜಯವುಂಟಾಗುವುದು. ಮಹಾತ್ಮಾ ಗಾಂಧಿಯವರು ಪರಿಷತ್ತಿಗೆ ಬರದೆ ಅವರ ಸಂಪೂರ್ಣಸಹಾನುಭೂತಿಯಿಲ್ಲದೆ ಯಾವ ತೀರ್ಮಾನವೂ ಆಗುವಂತಿಲ್ಲ. ಈ ರಹಸ್ಯವನ್ನು ಬ್ರಿಟಿಷ್ ಅಧಿಕಾರಿಗಳು ಅಲಕ್ಷಿಸಿರುವರೆಂಬುದು ಈಗಿನ ವಿದ್ಯಮಾನಗಳಿಂದ ಚೆನ್ನಾಗಿ ವ್ಯಕ್ತವಾಗುವದು. ಈ ವಿಷಯವಾಗಿ ಇದೇ ವರ್ಷದ ಮಾರ್ಚಿ ತಿಂಗಳಲ್ಲಿ ಪ್ರಕಟವಾದ "ಎ ಸ್ಕೆಚ್ ಆಫ್ ಇಂಡಿಯನ್ ಪಾಲಿಟಿಕ್ಸ್" ಎಂಬ ಗ್ರಂಥದಲ್ಲಿ ಭರತಖಂಡದ ಒಬ್ಬ ಲೆಫ್ಟನೆಂಟ ಗವರ್ನರವರು ಕೆಳಗೆ ಕಂಡ ಮಹತ್ವದ ವಿಷಯವನ್ನು ಬರೆದಿರುವರು. ಅದರಲ್ಲಿ ಅವರು "ಗಾಂಧಿಯವರು 1924 ರಲ್ಲಿ ಕಾರಾಗೃಹದಿಂದ ಬಿಡುಗಡೆ ಹೊಂದಿದಮೇಲೆ ಜನಸಾಮಾನ್ಯವು ಅವರಲ್ಲಿ ಇಟ್ಟಿದ್ದ ಗೌರವವು ಕಡಿಮೆಯಾಗಿದ್ದಿತು. ಈಚೆಗೆ ಅವರು ಪುನಃ ಪುನಃ ರಾಜಕೀಯ ಕಾರ್ಯಗಳನ್ನು ಕೈಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಅವರು ಮಾನವನ ಸ್ವಭಾವಕ್ಕಿಂತಲೂ ಹೆಚ್ಚಿನ ಕಾರ್ಯಸಾಧನೆಮಾಡಲು ಪ್ರಯತ್ನಿಸಿದರು. ಹಿಂದೂ ಮುಸಲ್ಮಾನರ ಐಕಮತ್ಯಕ್ಕಾಗಿ ಅವರು ಮಾಡಿದ ಪ್ರಯತ್ನಗಳು ಅಭಿಮಾನಪೂರಿತಗಳಾಗಿರಲಿಲ್ಲ. ಆದರೂ, ಅವರ ಒಂದೇ ಒಂದು ಸಂದೇಶದಿಂದ ಜನಸಾಮಾನ್ಯದಲ್ಲಿ ಉಂಟಾಗಿರುವ ಜಾಗೃತಿಯನ್ನು ನೋಡಿದರೆ ಆಶ್ಚರ್ಯವಾಗುವದು" ಎಂದು ಬರೆದಿರುವರು.

ಅಕ್ಟೋಬರಿನಲ್ಲಿ ನಡೆಯಲಿರುವ ದುಂಡುಮೇಜಿನ ಪರಿಷತ್ತಿನಿಂದ ಭರತಖಂಡಕ್ಕೆ ಯಾವ ಪ್ರಯೋಜನವೂ ಆಗುವದಿಲ್ಲ. ಬ್ರಿಟಿಷ್ ಮೆಂಬರರು ಪರಿಷತ್ತಿನಲ್ಲಿ ಸೈಮನ್ ವರದಿಯ ಶಿಫಾರಸುಗಳನ್ನು ಮಾತ್ರ ಅಂಗೀಕರಿಸುವರು. ರಾಷ್ಟ್ರೀಯ ಪಕ್ಷದವರನ್ನು ಅಲಕ್ಷಿಸಿ ಪರಿಷತ್ತಿಗೆ ಹೋಗಿರುವ ಇತರ ಭಾರತ ಪ್ರತಿನಿಧಿಗಳಿಗೆ ಸರಿಯಾಗಿ ಚರ್ಚಿಸಲು ಅರ್ಹವಾದ ಆಡಳಿತ ಸೂಚನೆಗಳೇ ಇಲ್ಲದೆ ಪೇಚಾಡಬೇಕಾಗುವದು. ಭರತಖಂಡದಿಂದ ದುಂಡುಮೇಜಿನ ಪರಿಷತ್ತಿಗೆ ಹೋಗಿರುವರೆಲ್ಲರೂ, ಬೆಕ್ಕಿನ ಕೈಗೆ ಸಿಕ್ಕಿದ ಇಲಿಯಂತೆಯೂ, ತಿರುಕರಂತೆಯೂ, ಇರುವರು. ಅಂದರೆ ಬ್ರಿಟಿಷರು ಸೈಮನ್ ವರದಿಯ ಶಿಫಾರಸುಗಳಂತೆಯೇ ಕಾರ್ಯಕ್ರಮಗಳನ್ನು ಜರುಗಿಸುವರು. ಹೀಗಾಗಿ ಭಾರತಸ್ವಾತಂತ್ರ್ಯ ಸಂಗ್ರಾಮವು ದಿನದಿನಕ್ಕೆ ಹೆಚ್ಚಿನ ವಿಸಮಸ್ಥಿತಿಗೆ ಬರುವುದು. ಆಗ ಈ ಕೆಳಗೆ ಕಂಡ ಅಂಶಗಳು ಪ್ರಪಂಚಕ್ಕೆ ಚೆನ್ನಾಗಿ ವಿದಿತವಾಗುವವು.

1\. ಗಾಂಧಿ ಕಾಂಗ್ರೆಸ್‌ಪಕ್ಷವು ಕಾರ್ಯಾರಂಭ, ಧೈರ್ಯ, ಬುದ್ಧಿಶಕ್ತಿ, ಉತ್ಸಾಹ, ಉದ್ದೇಶದ ಘನತೆ, ಅಧಿಕಾರ, ದೃಢನಿಶ್ಚಯ, ಕಾರ್ಯಕ್ರಮ ಮತ್ತು ಸಂಖ್ಯೆ ಮೊದಲಾದವುಗಳಲ್ಲಿ ಇತರ ಎಲ್ಲ ಪಂಗಡಗಳಿಗಿಂತಲೂ ಹೆಚ್ಚಿನದಾಗಿರುವದು. ವೈಸರಾಯರು ತಮ್ಮ ಭಾಷಣದಲ್ಲಿ "ಸರಕಾರವು ಇವರ ಚಳವಳಿಯನ್ನು ತನ್ನ ಸರ್ವಶಕ್ತಿಯಿಂದಲೂ ಅಡಗಿಸುವ"ದೆಂದು ಹೇಳಿರುವದೇ ಅವರ ಅದ್ಭುತಶಕ್ತಿಯನ್ನು ವ್ಯಕ್ತಗೊಳಿಸುವದು.

2\. ಕಾಂಗ್ರೆಸ್ಸಿನವರು ಸರ್ವಸಮ್ಮತವಾದ ಆಡಳಿತ ಪದ್ಧತಿಯನ್ನು ಸೂಚಿಸಲು ಅಸಮರ್ಥರಾಗಿರಬಹುದು. ನಿಜವಾದ ಸ್ವಾತಂತ್ರ್ಯವನ್ನು ಕೈವಶಮಾಡಿಕೊಳ್ಳುವ ಸಮಯದಲ್ಲಿ, ಸಂದರ್ಭಗಳಿಗನುಸಾರವಾಗಿ ಕೂಡಿಬರುವ ಸರ್ವಸಮ್ಮತವಾದ ಆಡಳಿತಪದ್ಧತಿಯನ್ನು ಎಲ್ಲರೂ ಅನುಸರಿಸಬೇಕಾಗುವದು. ಅದನ್ನು ಪೂರ್ವಭಾವಿಯಾಗಿಯೇ ಹೀಗೆಂದು ನಿಶ್ಚಯಿಸಲು ಸಾಧ್ಯವಿಲ್ಲ. ನೆಹರೂ ಪದ್ಧತಿಯು ಅನೇಕರಿಗೆ ಸಮ್ಮತವಾಗಿದ್ದಿತು. ಅದೊಂದರಿಂದಲೇ ಕಾಂಗ್ರೆಸ್‌ಪಕ್ಷದವರು ಆಡಳಿತ ಪದ್ಧತಿಗಳನ್ನು ಯೋಚಿಸಲು ಸಮರ್ಥರಾಗಿರುವರೆಂಬುದು ವ್ಯಕ್ತವಾಗುವದು.

3\. ಗಾಂಧಿ ಕಾಂಗ್ರೆಸ್ ಪಕ್ಷಕ್ಕೆ ಜಯವು ದೊರೆಯುವದಾದರೆ ಅವರು ಈಗ ಹೊಡೆದಾಡುತ್ತಿರುವ ಪರಸ್ಪರ ಎಲ್ಲ ಪಕ್ಷಗಳನ್ನೂ ತಮ್ಮ ಕಡೆಗೆ ಎಳೆದುಕೊಂಡೇ ಜಯವನ್ನು ಸಂಪಾದಿಸುವರು. ಇದರಿಂದ ಸಂಗ್ರಾಮಪೂರ್ತಿಯಾದನಂತರ ಉಳಿಯಬಹುದಾದ ಹಲಕೆಲವು ಭಿನ್ನಾಭಿಪ್ರಾಯಗಳನ್ನು ಸುಲಭವಾಗಿ ಶಮನಮಾಡಬಹುದು.

4\. ಗಾಂಧಿ ಕಾಂಗ್ರೆಸ್‌ಪಕ್ಷಕ್ಕೆ ಜಯವು ದೊರೆತರೆ ಅವರು ಅದ್ಭುತಶಕ್ತಿಯಿಂದ ಕೂಡಿ, ಭರತಖಂಡದ ಇತರ ವಿರೋಧಪಕ್ಷಗಳೆಲ್ಲವನ್ನೂ ಸುಲಭವಾಗಿ ತಮ್ಮ ವಶಪಡಿಸಿಕೊಳ್ಳುವಷ್ಟು ಸಮರ್ಥರೂ ಆಗುವರು.

ಮಹಾತ್ಮರೊಡನೆ ಮಿ|| ಅಲೆಗ್ಝಾಂಡರ ಬೆಟ್ಟಿ.

ಬೊಂಬಾಯಿ ೧೯ ನೇ ಸೆಪ್ಟೆಂಬರ್.

ಮಿ|| ಅಲೆಗ್ಝಾಂಡರವರು ಯರವಾಡಾ ಜೈಲಿನಲ್ಲಿ ಮಹಾತ್ಮಾ ಗಾಂಧಿಯವರ ಭೆಟ್ಟಿಯನ್ನು ತೆಗೆದುಕೊಂಡರು. ಇವರು ಮಹಾತ್ಮರ ಸ್ನೇಹಿತರಿದ್ದು ಇಂಗ್ಲಂಡಿನಿಂದ ಇಂಡಿಯಾಕ್ಕೆ ಜುಲೈ ಅಂತ್ಯಭಾಗದಲ್ಲಿ ಬಂದರು. ಬಂದಮೇಲೆ ಬೊಂಬಾಯಿಯಲ್ಲಿಯೂ, ಗುಜರಾಥದಲ್ಲಿಯೂ ಉಗ್ರವಾಗಿ ನಡೆಯುತ್ತಿರುವ ಚಳವಳಿಯನ್ನು ಅವಲೋಕನ ಮಾಡಿದರು. ಇವರು ಸಿಮ್ಲಾಕ್ಕೆ ಹೋಗಿ ಇಂಡಿಯಾಸರ್ಕಾರದ ಆರ್ಥಿಕ ಸಚಿವರಾದ ಸರ್ ಜಾರ್ಜ್ ಶೂಸ್ಟರ್‌ರವರೊಡನೆ ಕೆಲವು ದಿನವಿದ್ದರು. ಮಿ|| ಶೂಸ್ಟರವರೊಡನೆಯೂ ಲಾರ್ಡ್ ಅರ್ವಿನ್‌ರವರೊಡನೆಯೂ ಇಂಡಿಯಾದೇಶದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಮಾತನಾಡಿದರು. ಸಿಮ್ಲಾದಲ್ಲಿ ಹತ್ತು ದಿನಗಳಿದ್ದು ಆಮೇಲೆ ಕಾಂಗ್ರೆಸ್ಸಿನ ಆಕ್ಟಿಂಗ್ ಪ್ರೆಸಿಡೆಂಟರಾದ ಡಾ|| ಅನಸಾರಿಯವರೊಡನೆ ಮಾತುಕಥೆಗಳನ್ನಾಡಬೇಕೆಂದು ದಿಲ್ಲಿಗೆ ಬಂದರು. ಅಷ್ಟರಲ್ಲಿ ಡಾ|| ಅನಸಾರಿಯವರ ದಸ್ತಗಿರಿಯಾಗಿತ್ತು. ಮಾತನಾಡಲು ಅವಕಾಶವಾಗಲ್ಲಿ. ಅನಂತರ ಮುಂಬಯಿಗೆ ಹೋಗಿ ಸೆಪ್ಟೆಂಬರ್ ೬ ರಲ್ಲಿ ಗಾರ್ನರೊಡನೆ ಕಲೆತುಮಾತಾಡಿ ೭ ನೆಯ ತಾರೀಖಿನದಿನ ಮಹಾತ್ಮರನ್ನು ಕಂಡು ಜೈಲಿನಲ್ಲಿ ಮಾತನಾಡಿದರು. ಮಾತು ನಡೆದಾಗ ಜೈಲಿನ ಅಧಿಕಾರಿಗಳಾರೂ ಇರಲಿಲ್ಲ. ಮಾತುಗಳ ವಿವರವು ತಿಳಿದುಬಂದಿಲ್ಲ. ಮಾತುಗಳು 3 ದಿನಗಳವರೆಗೆ ನಡೆದವು. ಪಂಡಿತ ಮೋತೀಲಾಲನೆಹರೂರವರಿಗೆ ಗಾಂಧಿಯವರು ಏನಾದರೂ ಪತ್ರವನ್ನು ಕೊಟ್ಟಿರುವರೋ ತಿಳಿಯದು. ಇವರು ಪಂಡಿತ ಮೋತೀಲಾಲರವರನ್ನು ಮಸ್ಸೂರಿಯಲ್ಲಿ ಸಂದರ್ಶಿಸುವವರಾಗಿದ್ದಾರೆ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋದು. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸನ್ನದವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೩ ರೂಪಾಯಿ.

[8]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋದು ಅನಿಮಿತಮುಟ್ಟು ಬರೋದು ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋದು ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋದು ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲ[illegible] ಸಿದ್ಧ ಮೇಧಾ-ಮಹಾಮೇಧಾ-ಬುದ್ಧಿ-ಸಿದ್ಧ್ಯಾದಿ ಅ[illegible] ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾ[illegible] ಮಹೌಷಧವು ಹಿಮಾಲಯದ ಮಧು-ವಿಪಿತ್ರ[illegible] ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ [illegible]ದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ [illegible] ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತನ್ನ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಪಂಚಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟು ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕ[illegible]ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನ[illegible]ದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸ ಉಪಯೋಗಿಸುತ್ತಿದ್ದರೆ ಬಹಳ ಹೊಸ್ತು ಬಾಯಿ [illegible]ತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂದ ಜೀರ್ಣವಾದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಪುರುಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಯವರಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[23] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪತನ, ಕೈಕಾಲು ಮೂತ್ರ ಉರಿಯೋದು, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಳಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದು ಇಲ್ಲ. ೪೮ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮರ್ದ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಕೈಕಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[9]

ಪತ್ತೆ :—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವವಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ನೋವು, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಳಿಜ್ವರಕ್ಕೆ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—4—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚರು, ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[7] ಮಲೇರಿಯಾನ ಕಂಪೆನಿ, ನಂಬ್ರ 21 ಪಂಪಸಕಟ್ಟೆ, ಮಂಗಳೂರು, ದ. ಕ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ೩. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಸ್ವಪ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತವಿಮರ್ಶಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯಾವಶ್ಯಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡ್ಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅನುಕೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[49] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.



ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[10] ಪೋ. ಬಾ. ೫೧೦, ಮದರಾಸು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೩

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರಹದ ದೇವರ ಪೂಜೆಗೆ ಯೋಗ್ಯವಾದ ರಮಂವಾರು ಊದಬತ್ತಿಗಳು, ಪರಿಮಳದಕಾಂಗ, ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಜನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅತ್ತಸಂಜೀವಿನಿತೈಲ ಸಹ ತಯಾರಾಗುತ್ತದೆ, ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,

10 ಸುಗಂಧವ್ಯಾಪಾರಿಗಳು,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[12] ಪೋ. ಬಾ. ೫೧೦, ಮದರಾಸು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಮಹಾತ್ಮಾ ಗಾಂಧಿಯವರ ಪುತ್ರರಾದ ಮಿ|| ರಾಮದಾಸ ಗಾಂಧಿಯವರು ಕಳೆದ ಸೆಪ್ಟೆಂಬರ್ 20 ನೆಯ ತಾರೀಖಿನ ದಿವಸ ಸಾಬರಮತಿ ಕಾರಾಗೃಹದಿಂದ ಬಿಡುಗಡೆಮಾಡಲ್ಪಟ್ಟರು.

ದುಂಡುಮೇಜಿನ ಪರಿಷತ್ತಿಗೆ ಆಮಂತ್ರಣವನ್ನು ಸ್ವೀಕರಿಸಿರುವ ಡಾಕ್ಟರ್ ಬಿ. ಎಸ್. ಮುಂಜೆಯವರು ಈ ರೀತಿಯಾಗಿ ಹೇಳಿರುತ್ತಾರೆ. "ದುಂಡುಮೇಜಿನ ಪರಿಷತ್ತಿನಲ್ಲಿ ನಡೆಯಬಹುದಾದ ಚೇಷ್ಟೆಗಳನ್ನು ತಪ್ಪಿಸಲು ನಾನು ಆಮಂತ್ರಣವನ್ನು ಸ್ವೀಕರಿಸಿರುವೆನೇ ಹೊರತು, ಮಹಾತ್ಮಾ ಮಹತ್ಕಾರ್ಯವನ್ನು ಸಾಧಿಸುವದಕ್ಕಾಗಿಯೂ ಅಲ್ಲ. ಸರ್ ತೇಜಬಹದ್ದೂರ್ ಸಪ್ರೂ, ಮಿ|| ಎಂ. ಆರ್. ಜಯಕರ್, ಮಿ|| ಎನ್. ಸಿ. ಕೇಳ್ಕರ್ ಮತ್ತು ರಾಜಾನರೇಂದ್ರನಾಥರವರು ದುಂಡುಮೇಜಿನ ಪರಿಷತ್ತಿನ ಆಮಂತ್ರಣವನ್ನು ನೀವು ಸ್ವೀಕರಿಸದಿದ್ದರೆ ಹಿಂದೂಗಳನ್ನು ಹಾಳುಮಾಡಿದಂತಾಗುತ್ತದೆಂದು ಬಲಾತ್ಕಾರಪಡಿಸಿದ್ದುದರಿಂದ ಆಮಂತ್ರಣವನ್ನು ಸ್ವೀಕರಿಸಿದೆನು. ನನ್ನ ಮಹಮ್ಮದೀಯ ಸಹೋದರರು ಅತ್ಯಂತ ಸಂಕುಚಿತದೃಷ್ಟಿಯಿಂದಲೂ ಮತದ್ವೇಷದಿಂದಲೂ ಕೂಡಿ ರಾಷ್ಟ್ರೋದ್ಧಾರಕ್ಕೆ ವಿರೋಧವಾದ ಮಾರ್ಗದಲ್ಲಿ ವರ್ತಿಸುತ್ತಿರುವರೆಂಬ ವಿಷಯವು ಪ್ರಪಂಚಕ್ಕೆಲ್ಲ ತಿಳಿಯುವಂತೆ ಮಾಡಿದರೆ ನನ್ನ ಕರ್ತವ್ಯವನ್ನು ನಾನು ಪೂರೈಸಿದಂತಾಗುವದು."

ಬೊಂಬಾಯಿನ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಬರಡೋಲಿ ಕಂದಾಯದ ಸತ್ಯಾಗ್ರಹದ ವಿಚಾರವಾಗಿ ಈ ಕೆಳಗೆ ಕಂಡ ವಿಷಯಗಳು ಪ್ರಕಟಿಸಲ್ಪಟ್ಟಿರುವವು.

ಬರಡೋಲಿ ರೈತರು ಎಲ್ಲರೂ ಒಟ್ಟಿಗೆ ಊರು ಬಿಡಲು ಪ್ರಯತ್ನಿಸುತ್ತಿರುವರು. ಈಗಾಗಲೇ ಅನೇಕರು ತಮ್ಮ ಜಹಾಸ್ತಿಗಳನ್ನೆಲ್ಲಾ ಸಾಗಿಸಿಬಿಟ್ಟಿರುವರು. ಮಹಾತ್ಮಾ ಗಾಂಧಿಯವರೂ ಶ್ರೀ|| ಸರದಾರ್ ವಲ್ಲಭ ಭಾಯಿ ಪಟೇಲರೂ ಅಪ್ಪಣೆಮಾಡುವವರೆಗೆ ತಾವು ಕಂದಾಯವನ್ನು ಸರಕಾರಕ್ಕೆ ಕೊಡುವುದಿಲ್ಲವೆಂದು ತೀರ್ಮಾನಿಸಿದ್ದಾರೆ. ಕಂದಾಯವನ್ನು ವಸೂಲು ಮಾಡಲು ಸರಕಾರದವರು ದುಂಡಾವೃತ್ತಿ ನಡೆಯಿಸಿದರೆ ಅದನ್ನು ಎದುರಿಸಿ ಅಕ್ಕಪಕ್ಕದಲ್ಲಿರುವ ದೇಶೀಯ ಸಂಸ್ಥಾನಗಳಿಗೆ ಹೋಗುವೆವೆಂದು ನಿರ್ಧರಿಸಿರುವರು. ಸರ್ಕಾರಕ್ಕೆ ತಾವು ಸೂಚಿಸಿದಂತೆ ಬರಡೋಲಿ ತಾಲ್ಲೂಕಿನ ರೈತರೆಲ್ಲರೂ ತಮ್ಮ ತಮ್ಮ ಊರುಗಳನ್ನು ಬಿಟ್ಟು ಹೋಗಲು ಸನ್ನದ್ಧರಾಗಿರುವರೆಂದು ಸುದ್ದಿ ಬಂದಿದೆ. ಸರ್ಭಾನ್, ಕಡಾದ್, ವೆಂಕನೀರ್ ಮತ್ತು ವಾಲಲ್ ಈ ಊರುಗಳ ಜನರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ಸಾಗಿಸಿಕೊಂಡು ಇತರ ಸಂಸ್ಥಾನಗಳಿಗೆ ಹೊರಟಿರುವರೆಂದು ತಿಳಿಯಬರುತ್ತದೆ.

ಲಂಡನ್ನಿನಲ್ಲಿರುವ ಗಾಂಧೀಸಂಘದವರು ಗಾಂ[illegible]ಯವರ ಜನ್ಮದಿವಸವನ್ನು ಆಚರಿಸಿದರು. ಮಿ|| ಫ[illegible] ಬ್ರಾಕ್ವೆಂವರು ಅಧ್ಯಕ್ಷರಾಗಿದ್ದರು. ಮಿ|| ಲಾರೆನ್ಸ್ ಹೌಸ್‌ಮನ್ ಮಿ|| ರೆಜಿನಾಲ್ಡ್ ಮುಂತಾದವರು ಭಾಷಣಗಳನ್ನು ಮಾಡಿದರು. ಮಿ|| ಬನಾರ್[illegible]ಷಾರವರು ಒಂದು ಸಂದೇಶವನ್ನು ಕಳುಹಿಸಿದ್ದರು.

ಇದೇ ಅಕ್ಟೋಬರ್ 2ನೆಯ ತಾರೀಖು ವಿಜಯದಶಮಿಯ ದಿವಸ ಗದುಗಿನ ಮುನಿಸಿಪಲ್ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜಾರೋಹಣಸಮಾರಂಭವು ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ 4-5 ಸಾವಿರ ಜನರು ಕೇವಲ ಖಾದಿಯ ಉಡುಪುಗಳನ್ನೇ ಧರಿಸಿದ್ದರಂತೆ! ಕರ್ನಾಟಕದಲ್ಲಿ ನವಚೈತನ್ಯ!

ಜಂಬೂಸಾರಿನಲ್ಲಿ ಕಂದಾಯದ ಸತ್ಯಾಗ್ರಹವೂ ಸರ್ಕಾರಿ ಅಧಿಕಾರಿಗಳ ಬಹಿಷ್ಕಾರವೂ ಅತಿ ಜೋರಿನಿಂದ ನಡೆಯುತ್ತಿದೆ. ಪೋಲೀಸನೊಬ್ಬನಿಗೆ ಕ್ಷೌರವನ್ನು ಮಾಡುವುದಿಲ್ಲವೆಂದು ಹೇಳಿದ್ದಕ್ಕಾಗಿ ಒಬ್ಬ ಕ್ಷೌರಿಕನನ್ನು ದಸ್ತಗಿರಿ ಮಾಡಿರುವರು.

ವೈಸರಾಯರು ಹೊಸದಾಗಿ ಜಾರಿಗೆ ತಂದಿರುವ ಎಲ್ಲಾ ಕಾನೂನುಗಳನ್ನು ಸೂರತ್ ಜಿಲ್ಲೆಯ ಎಲ್ಲಾ ಸ್ಥಳಗಳಲ್ಲಿಯೂ ಮುರಿಯಬೇಕೆಂದು ವಾರ್‌ಕೌನ್ಸಿಲ್ಲಿನವರು ನಿಶ್ಚಯಿಸಿರುವರು.

ಸ್ವೀಕಾರ.

ಬೆಂಗಳೂರು ಹೊಸತರಗುಪೇಟೆಯಲ್ಲಿರುವ ಮ|| ರಾ|| ಮಂಡಿಮಣೇದ ಲಿಂಗಪ್ಪನವರಿಗೆ ಪ್ರಾಪ್ತವಾಗಿದ್ದ "ಹರ್ನಿಯಾ" ಎಂಬ ವಿಚಿತ್ರರೋಗವು ಶ್ರೀ ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ **5** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಸಾಂಗಲಿ ಸ್ಟೇಟ ಶಿರಹಟ್ಟಿ ತಾ|| ಮುಂಡವಾಡ ಗ್ರಾಮದ ಮ|| ರಾ|| ಪಾಟೀಲ ಹನುಮಂತಗೌಡರ ದ್ವಿತೀಯ ವಿವಾಹದ ನೂತನ ವಧೂಗೃಹಪ್ರವೇಶ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **3** ರೂ. ಗಳು ವೇ|| ಹಮ್ಮಿಗಿ ಕಣ್ವಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಸೊರಬತಾಲೂಕು ಹುರುಳಿಗ್ರಾಮದ ಪಾಲ್ದಾರ್ ಪಟೇಲ್ ವೀರಭದ್ರಪ್ಪಗೌಡರು ತಾವು ಕಟ್ಟಿಸಿದ ತಟಾಕೋತ್ಸವ ಸಮಯದಲ್ಲಿ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಪಾಲ್ದಾರ್ ಪಟೇಲ್ ನಾಗವೀರಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ನಿಜಾಮ ಇಲಾಖಾ ರಾಜೇಶ್ವರ ಗ್ರಾಮದಲ್ಲಿ ನೆರವೇರಿದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಮಹೋತ್ಸವ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ವೇ|| ಬಂಗಿ ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ವಾತ್ರೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು.

ಗೋರಕ್ಷಣಶಾಲಾಸ್ಥಾಪನ.

ಸಂಸ್ಥಾನ ಮದಿಕೆನಹಾಳ ಜಿಲ್ಲಾ ರಾಯಚೂರು.

ಗೋವು ಪರಮ ಪವಿತ್ರವೂ ಪರೋಪಕಾರಿಯೂ ಆದ ವಸ್ತುವಿರುತ್ತದೆ. ಹಿಂದೂಜನರಿಗೆ ಗೋವನ್ನು ಬಿಟ್ಟರೆ ನಡೆಯುವಂತೆ ಇಲ್ಲ. ಹಿಂದೂಧರ್ಮದ ವೈದಿಕಾಚರಣೆಗಳು ಗೋವಿನ ಪಂಚಗವ್ಯಗಳಿಂದಲೇ ನಡೆಯುವವು. ಗೋವಿನ ಹಾಲು, ಮೊಸರು, ತುಪ್ಪ, ಮೂತ್ರ, ಸಗಣಿ ಇವುಗಳಿಂದ ಅನೇಕ ರೋಗಗಳು ಸಹ ನಿವೃತ್ತಿಹೊಂದುವವು. ಇದಲ್ಲದೆ ಕೃಷಿಕಾರ್ಯವಾದರೂ ಗೋವಿನ ಸಂಹಾಯದಿಂದಲೇ ಸಾಗುವದು; ಅಂದಮೇಲೆ ಗೋವು ಲೋಕಕ್ಕೆ ಎಷ್ಟು ಪರೋಪಕಾರ ಮತ್ತು ಪೂಜ್ಯವಾದ ವಸ್ತು ಇರುತ್ತದೆಂಬುವದನ್ನು ಬಾಚಿಸಲೇ ಬಾರದು! ಆದ್ದರಿಂದ ಪ್ರತಿಯೊಬ್ಬ ಹಿಂದುವು ಗೋರಕ್ಷಣೆಯನ್ನು ಅವಶ್ಯವಾಗಿ ಮಾಡತಕ್ಕದ್ದು. ಇದರಲ್ಲಿ ವೀರಶೈವರಿಗಂತೂ ಗೋರಕ್ಷಣೆಯು ಅತ್ಯವಶ್ಯಕವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಅಷ್ಟಾವರಣಗಳಲ್ಲಿ ಒಂದಾದ ಶ್ರೀವಿಭೂತಿಯು ಕೇವಲ ಗೋಮಯದಿಂದಲೇ ಸಿದ್ಧವಾಗುತ್ತದೆಂದ ಮೇಲೆ ಅದನ್ನು ಬಿಟ್ಟರೆ ಇವರ ಧರ್ಮವೇ ನಡೆಯುವಂತಿಲ್ಲ. ಇದಲ್ಲದೆ ವೀರಶೈವರ ಪ್ರತಿಯೊಂದು ಧರ್ಮಸಂಸ್ಕಾರದ ಕಾರ್ಯಗಳಿಗೆ ಗೋವಿನ ಪಂಚಗವ್ಯವು ಬೇಕೇಬೇಕು. ಆದ್ದರಿಂದ ಗೋರಕ್ಷಣೆಯು ಧರ್ಮದ ಮುಖ್ಯಾಂಗವೆಂದು ತಿಳಿದು ನಮ್ಮ ವೇ|| ಶ್ರೀ ಗುರುಶಾಂತಾರ್ಯ ಹಿರೇಮಠ ನೀರಲಕೇರಿ ಇವರು ಮದಿಕೆನಹಾಳ ಸಂಸ್ಥಾನದ ಸೀಮೆಯಲ್ಲಿ ಮೂವತ್ತು ಎಕರೆ ಭೂಮಿಯನ್ನು ಖರೀದಿಗೆ ತೆಗೆದುಕೊಂಡು ಅಲ್ಲಿ ಒಂದು ಗೋಶಾಲೆಯನ್ನು (ಪಿಂಜರಾಪೋಳವನ್ನು) [illegible] ರಕ್ಷಣೆಯ ವ್ಯವಸ್ಥೆಯನ್ನು ಏರ್ಪಡಿಸಿರುವರು. [illegible] ದಲ್ಲಿ ಎಂಟು ಹತ್ತು ಗೋವುಗಳು ಇರುವವು. [illegible] ಗಳು ಹೆಚ್ಚಿದ ಹಾಗೆಲ್ಲ ಹೆಚ್ಚಿಗೆ ಭೂಮಿಯು ಸಂಗ್ರಹವಾಗಲು [illegible] ದುವುದು. ಆದ್ದರಿಂದ ಯಾರೇ ಆಗಲಿ ಮೇಯಿಸಲಿಕ್ಕೆ ಭಾರವಾಗಿದ್ದ ಗೋವುಗಳನ್ನು ಹಣದಾಸೆಗಾಗಿ ಕಟುಕರ ಪಾಲುಮಾಡಿ ಪಾಪಕಟ್ಟಿಕೊಳ್ಳದೆ ನಮ್ಮ ಪಿಂಜರಾಪೋಳಕ್ಕೆ ಕೊಟ್ಟು ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು ಬೇಡಿಕೊಳ್ಳುವೆವು. ಮುಂದೆ ಬೇಸಿಗೆಯ ಕಾಲದಲ್ಲಿ ಈ ಗೋಶಾಲೆಯಲ್ಲಿ ಶುದ್ಧವಾದ ಭಸ್ಮವನ್ನು ತಯಾರಿಸುವ ಕಾರಖಾನೆಯು ಏರ್ಪಡಿಸಲ್ಪಡುವದು. ಬಹು ಬೆಲೆಬಾಳುವ ಸದರಿ ಭೂಮಿಯನ್ನು ಅಲ್ಪ ಬೆಲೆಗೆ ಕೊಟ್ಟಿರುವ ನಮ್ಮ ಸಂಸ್ಥಾನದ ಶಾನಭೋಗರಾದ ರಾಘವೇಂದ್ರರಾಯರಿಗೂ ಮತ್ತು ಅದಕ್ಕೆ ಪ್ರೋತ್ಸಾಹವನ್ನುಂಟುಮಾಡಿದ ಮಾ|| ಪಾ|| ಸಂಗನಗೌಡರಿಗೂ ಜಗದೀಶ್ವರನು ಕಲ್ಯಾಣವನ್ನುಂಟುಮಾಡಲೆಂದು ಪ್ರಾರ್ಥಿಸುವೆವು. ಇದಲ್ಲದೆ ಇನ್ನು ಕೆಲವು ಜಮೀನುಗಳನ್ನು ಸದರಿ ಶಾನಭೋಗ ಪಾಟೀಲರು ಗೋರಕ್ಷಣೆಗೆ ಉಚಿತವಾಗಿ ಕೊಡುತ್ತೇವೆಂದು ವಾಗ್ದಾನಮಾಡಿರುವರು. ಧರ್ಮಾಭಿಮಾನಿಗಳು ಅವರ ಅನುಕರಣವನ್ನು ಹಿಡಿಯಬೇಕೆಂದು ಹಾರೈಸುವೆವು.

ಗೋಶಾಲಾ ವ್ಯವಸ್ಥಾಪಕ ವಿರೂಪಾಕ್ಷಪ್ಪ ಸುಂಕದ
ಮುಧಗಲ್ಲ ಮುಕ್ಕಾಂ ಮದಿಕೆನಹಾಳ.

ಬಳ್ಳಾರಿ ಜಿಲ್ಲೆಯ ವೀರಶೈವಸಮಾಜದ ದುರ್ದೈವವು.
ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.

ಸಮಾಜದ ಪ್ರಬುದ್ಧಮಾನವು ಹೆಚ್ಚಬೇಕಾದರೆ ರಾಜಕೀಯ ಸಂಸ್ಥೆಯಲ್ಲಿ ಸಮಾಜವು ಮುಂದುವರಿಯುವುದು ಪರಮಾವಶ್ಯಕವೆಂದರಿತು ಬಳ್ಳಾರಿ ಜಿಲ್ಲೆಯ ಪ್ರಮುಖರು ಏಕೀಭವಿಸಿ "ಮಹಾಜನಸಂಘ"ವೆಂಬುವ ಒಂದು ರಾಜಕೀಯ ಸಂಘವನ್ನೇರ್ಪಡಿಸಿರುವುದು ಸರ್ವ ವೀರಶೈವಸಮಾಜದವರಿಗೆ ವಿದಿತವು. ಪ್ರಾಂತಿಕಸಭೆಯೂದ ಮದ್ರಾಸು ಶಾಸನ ಕೌನ್ಸಿಲ್ ಪ್ರತಿಯೊಂದು ಸಮಾಜದ ಸಾಂಪತ್ತಿಕ, ಲೌಕಿಕ, ರಾಜಕೀಯ, ಏಳಿಗೆಯ ಪರಮಾವಧಿಯಾಗಿರುತ್ತದಷ್ಟೆ! ಅಂಥಾ ಪ್ರಾಂತಿಕಸಭೆಯ ಅಭ್ಯರ್ಥಿಯ ಚುನಾವಣೆಯು ಇದೇ ತಿಂಗಳು 9 ನೇ ತಾರೀಕಿನಲ್ಲಿದ್ದು ಅಂಥಾ ಸಭೆಗೆ ಪಾತ್ರ್ಯರಿಯುಳ್ಳ ಓರ್ವ ವೀರಶೈವ ಅಭ್ಯರ್ಥಿಯನ್ನು ನಿಲ್ಲಿಸಲು ನಮ್ಮ ಮಹಾಜನಸಂಘವು ತೀರ್ಮಾನಿಸಿ ಬಳ್ಳಾರಿಯಲ್ಲಿ ವಕೀಲರಾಗಿ, ಈ ಮುಂಚೆ ತಾಲೂಕು ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ರಾಜಕೀಯ ವಿಷಯದಲ್ಲಿ ಪೂರ್ಣ ಅನುಭವಶಾಲಿಗಳಾದ ಮಹಾರಾಜಶ್ರೀ ಡಿ. ಕೆಂಚನಗೌಡ ರೆಡ್ಡಿ, ಬಿ.ಎ., ಬಿ.ಎಲ್., ಇವರನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದು ನಮ್ಮೆಲ್ಲರಿಗೂ ತಿಳಿದ ಮಾತಾಗಿದೆ. ನಮ್ಮ ಜಿಲ್ಲೆಯ ವೀರಶೈವ ಸಮಾಜದ ದುಸ್ಥಿತಿಯ ಬಗ್ಗೆ ಮನಸ್ಸು ನೊಂದ ಸಮಾಜಾಭಿಮಾನವು ಅವರ ಹೃದಯಾಕಾಶದಲ್ಲಿ ಉದಯವಾಗಿದ್ದಲ್ಲಿ ನಮ್ಮ ಶ್ರೀಯುತ ರೆಡ್ಡಿಯವರು ಇದೇ ಜಿಲ್ಲೆಯಲ್ಲಿ ಮೊದಲನೆಯ ಅಭ್ಯರ್ಥಿಗಳಾಗಿ ಆರಿಸಿ ಬರುತ್ತಿದ್ದರೆಂದು ಘಂಟಾಘೋಷವಾಗಿ ಹೇಳಬಹುದು. ಆದರೆ ಕೆಲ ವೀರಶೈವಪ್ರಮುಖರು ತಾವು ಸದರಿ ಅಭ್ಯರ್ಥಿಗೆ ವಾಗ್ದಾನಮಾಡಿದ್ದವೆಂಬಲೂ, ರೆಡ್ಡಿಯವರನ್ನು ಅಲಕ್ಷ್ಯವಾಗಿ ನಿಲ್ಲಿಸಿದರೆಂಬಲೂ, ಹೇಳದ ಮಾತುಗಳು ನಿರಾಧಾರವಾದುವು. ಏಕೆಂದರೆ ಕೌನ್ಸಿಲು ನಿಬಂಧ ಪ್ರಕಾರ ಇಬ್ಬರು ಅಭ್ಯರ್ಥಿಗಳನ್ನು ಆರಿಸುವ ಅಧಿಕಾರವು ಮತದಾರರಿಗಿದ್ದು ಅವರು ಒಂದು ಮತವನ್ನು ನಮ್ಮ ರೆಡ್ಡಿಯವರಿಗೆ ದಯಪಾಲಿಸಿ ಅವರನ್ನು ಜಯಶೀಲರನ್ನಾಗಿ ಮಾಡಿ ಸಮಾಜದ ಕೀರ್ತಿಯಲ್ಲಿ ಭಾಗಿಗಳಾಗಬೇಕಾಗಿತ್ತು. ಆದುದರಿಂದ ವಿಜಯವನ್ನು ರೆಡ್ಡಿಯವರೇ ಸಂಪಾದಿಸುವರೆಂದು ಮುಂದಿಗೆ ತಿಳಿಸುತ್ತಿದ್ದ ಸಮಾಜವು 83 ಓಟಿನ ವ್ಯತ್ಯಾಸದಿಂದ ಅಪಜಯ ಹೊಂದಿದರೆಂದು ವ್ಯಸನದಿಂದ ಸುಮ್ಮನಾಗಿರುವುದು ಮೂರ್ಖರವು! ಸಮಾಜದ ಕಾಲವೈಪರೀತ್ಯವು!

ಸಮಾಜಬಾಂಧವರೇ! ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ರಾಜಕೀಯ ಪರಿಸ್ಥಿತಿಯಲ್ಲಿ ನಮ್ಮ ಜನಾಂಗವು ಪೂರ್ತಿ ಹಿಂದುಳಿದಿರುವುದೆಂದು ತಾವುಗಳೆಲ್ಲರೂ ನಮ್ಮ ಉದಾರಾತ್ರಯದಿಂದ ವಿದ್ಯಾ, ಧನವು ಕೂಡಿಸಿ ನಮ್ಮ ಸಮಾಜದ ಬಡಮಕ್ಕಳಿಗೆಲ್ಲಾ ರಾಜಕೀಯ ವಿದ್ಯೆಯಲ್ಲಿ ಪಾರಂಗತರನ್ನಾಗಿ ಮಾಡುತಲಿದ್ದು ಇತ್ತೀಚೆಗೆ ನಮ್ಮವರಲ್ಲಿ ಎಷ್ಟೋ ಮಂದಿ ವಿದ್ಯಾರ್ಥಿಗಳು ಬಿ.ಎ., ಬಿ.ಎ., ಬಿ.ಎಲ್., ಎಂ.ಎ., ಎಂ.ಎ., ಬಿ.ಎಲ್., ಎಂ. ಬಿ. ಬಿ. ಎಸ್. ಮೊದಲಾದ ಪದವೀಧರರಾಗಿ ಸರ್ಕಾರಿ ಉದ್ಯಮಗಳಲ್ಲಿ ಸ್ಥಾನವು ದೊರೆಯದೆ ಶಾಪಕ್ರಯದಿಂದ ತಳಮಳಗೊಳ್ಳುತ್ತಿರುವುದು ನಮ್ಮ ಸ್ಮೃತಿಪಥದಲ್ಲಿರುವುದು. ಇದಲ್ಲದೇ ಅನೇಕ ಪದವೀಧರರು ಹೆಚ್ಚಿನ ತರಗತಿಯಲ್ಲಿ ಪಾಸಾಗಿ ಸರ್ಕಾರಿ ಸಿಲೆಕ್ಷನ ಗ್ರೇಡಿನಲ್ಲಿ ಅಭ್ಯರ್ಥಿಗಳಾಗಿ ನಿಂತರೂ ಅವರ ಹೇಳಿಕೆಗಳು ಅರಣ್ಯರೋದನವಾಗಿ ಪರಿಣಮಿಸಿರುವ ವಿಷಯವು ತಮಗೆ ವಿದಿತವು. ಇಂಥಾ ವಿಷಯಗಳಲ್ಲೂ, ಮತ್ತು ಸದಿರಾ, ಆರ್ಥಿಕ, ಸಾಮಾಜಿಕ ವಿಷಯಗಳಲ್ಲಿ ಕೌನ್ಸಿಲಿನಲ್ಲಿ ಎದೆಗೊಟ್ಟು ಹೋರಾಡಿ ನಮ್ಮ ಸಮಾಜಕ್ಕೆ ಕೀರ್ತಿ ಸಂಪಾದಿಸಲೂ ಈ ರೀತಿ ಅಭ್ಯರ್ಥಿಗಳನ್ನಾರಿಸಿ ಕಳುಹಿಸುವ ಉದ್ದೇಶದಿಂದ ನಮ್ಮ ಮಹಾಜನ ಸಂಘವು ಏರ್ಪಡಾಗಿದ್ದಿತು. ಇತ್ಯಾದಿ ವಿಷಯಗಳನ್ನು ತಮ್ಮ ಧ್ಯಾನಚಿತ್ತಕ್ಕೆ ತಂದುಕೊಳ್ಳದೆ ವೀರಶೈವಪ್ರಮುಖರನೇಕರು ಮೊನ್ನಿನ ಚುನಾವಣೆಯ ವಿಷಯದಲ್ಲಿ ಔದಾಸೀನ್ಯವನ್ನು ತಾಳಿದ್ದು ಸಮಾಜದ ದುರ್ದೈವವೇ ಸರಿ. ಮಹಾಶಯರೇ ಮುಂದಾದರೂ ತಾವು ಸಮಾಜದ ಹಿತಕಾರ್ಯಗಳಲ್ಲಿ ಭಾಗಿಗಳಾಗಿ ಸಮಾಜೋದ್ಧಾರವನ್ನೇ ಹಗಲಿರುಳು ಜಪಿಸುತ್ತ ಪ್ರಸಿದ್ಧರಿಸುತ್ತ ತಮ್ಮೆಲ್ಲರಿಗೂ ಶ್ರೀ ಗುರು ಕಾರುಣ್ಯ ಪ್ರೋತ್ಸಾಹವನ್ನೀಯಲೆಂದು ನಾವು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಸಮಾಜ ಹಿತಚಿಂತಕರು.

ಹರಿಹರ ಕ್ಷೇತ್ರದಲ್ಲಿ ಪಶುಯಜ್ಞ.

ಇಂದಿಗೆ 15-20 ದಿವಸಗಳಿಗೆ ಮೇಲ್ಕಂಡ ಪಾವನಕ್ಷೇತ್ರದಲ್ಲಿ ಪಶುಯಜ್ಞವು ನಡೆಯಿಸಲ್ಪಡುವುದಾಗಿ ಕೇಳಿ ಅತ್ಯಂತ ದುಃಖಪಡಬೇಕಾಗಿದೆ. ಯುದ್ಧದಲ್ಲಿ ಸಹ ಅಹಿಂಸಾಪಾಲನೆಯನ್ನು ಮಾಡಿ ಇಡೀಜಗತ್ತಿಗೆ ಈ ಪರಮಧರ್ಮದ ಜ್ಯೋತಿಯನ್ನು ಬೆಳಗಲು ಸಹಸ್ರಾರು ಭಾರತೀಯರ ಎಂದರೆ, ಹಿಂದೂ, ಮುಸಲ್ಮಾನ, ಪಾರಸಿ, ಕ್ರೈಸ್ತ ಮುಂತಾದವರ ಬೆಂಬಲವನ್ನು ಪಡೆದ ಮಹಾತ್ಮನು ಈ ಪವಿತ್ರಭೂಮಿಯಲ್ಲಿ ಒಂದು ವಿಚಿತ್ರರಂಗವನ್ನು ಹೂಡಿರಲು ಕ್ಷೀರಸಾಗರದಲ್ಲಿ ರಕ್ತಬಿಂದುಗಳನ್ನು ಹಾಕಿದಂತೆ ಕೆಲ ಜನರು ಒಂದೆಡೆ ಪಶುಯಜ್ಞಗಳನ್ನು ಮಾಡುವುದೂ ಮತ್ತು ಕೆಲವರು ಬಾಂಬು ಗುಂಡುಗಳನ್ನು ಎಸೆದು ಅಧಿಕಾರಿಗಳನ್ನು ಕೊಲಲೆತ್ನಿಸುತ್ತಿರುವುದೂ ಇಂತಹ ಹಿಂಸಾತ್ಮಕ ಕೃತಿಗಳನ್ನು ಮಾಡಿ ಸ್ವರಾಜ್ಯ ಜಯರಥದ ಚಕ್ರಕ್ಕೆ ಅಡ್ಡಮಾಡುತ್ತಿರುವರು. ಗೋಮಾಂಸಭಕ್ಷಕರು ಸಹಾ ಮಹಾತ್ಮಾಜೀಯವರ ಅಹಿಂಸಾತ್ಮಕ ಬಿಂದುಗಳನ್ನು ಸವಿಯುತ್ತಿರಲು ಶುದ್ಧಶಾಕಾಹಾರಿಗಳಾಗಿ, ವೈದಿಕಧರ್ಮ ಪರಿಪಾಲಕರಾಗಿ, ಕೇವಲ ಆಚಾರಶೀಲರೆನಿಸಿಕೊಂಡವರು ದೇಶಕಾಲಗಳನ್ನು ಸಹ ಲಕ್ಷಿಸದೆ ಹಿಂದೆ ಅನೇಕ ಪಂಡಿತ ಪ್ರಕಾಂಡರಿಂದ ಖಂಡಿಸಲ್ಪಟ್ಟ ಅನೇಕರಿಗೆ ನೋವನ್ನುಂಟುಮಾಡುವ, ಈ ಪಶುಯಜ್ಞವನ್ನು ಹೂಡಿರುವರೆಂದರೆ ಇವರುಗಳ ಸಾಹಸಕ್ಕೇನೆನ್ನಬೇಕು? ದೇಶಕಾರ್ಯಧುರಂಧರರಾದ ಜಗನ್ನಾಥರೂ, ವೀರಮಹೇಶ್ವರರೂ, ಅಗಭೆ ಶ್ರೀಮಂತರ ಮಕ್ಕಳುಗಳೂ ಸಹ ಈಗ ಬಂಧನದಲ್ಲಿ ನರಳುತ್ತಿರಲು ಮೂಕಪ್ರಾಣಿಗಳನ್ನು ಗುದ್ದಿ ಗುದ್ದಿ ಉಸಿರೆಳೆದು ಅವುಗಳ ಮಾಂಸಖಂಡಗಳಿಂದ ಯಜ್ಞಕುಂಡಗಳನ್ನು ತುಂಬಲು ಮಹಾಪ್ರಯತ್ನಗಳು ನಡೆಯುತ್ತಿರುವವಂತೆ. ಇದಕ್ಕಾಗಿ ಸಹಸ್ರಾರು ರೂಪಾಯಿಗಳ ವೆಚ್ಚವಂತೆ. ಇದು ಉತ್ತಮವರ್ಗದವರ ಮೇಲ್ಪಂಗ್ತಿಯಂತೆ.

ಮಹಾಪುರುಷರೇ! ನೀವು ಸ್ವರ್ಗಕಾಮಿಗಳಾಗಿ ಅಲ್ಪಸುಖಕ್ಕಾಗಿ ಈ ಭಯಂಕರಕಾರ್ಯಕ್ಕೆ ಕೈಹಾಕಬೇಡಿ. ನಿಮ್ಮಂಥವರೇ ಈ ಕರ್ಮರಹಸ್ಯತೆಗಳನ್ನು ತಿಳಿಯಲೂ ಸಾಧಿಸಲೂ ದ್ಯುಕ್ತರಾದರೆ ಅವಿದ್ಯಾವಂತರಾದ ಹಳ್ಳಿಗಾಡಿನ ಜನರಿಗೆ ಅಹಿಂಸಾತತ್ವವನ್ನು ಬೋಧಿಸುವುದೆಂತು? ಪ್ರಾಣಿದಯಾ ಪ್ರಚಾರಕರು ವಿವಿಧ ಕಷ್ಟಗಳಿಗೀಡಾಗಿ ಮದ್ಯಮಾಂಸ ಭಕ್ಷಕರ ಮಧ್ಯದಲ್ಲಿ ನಿಂತು ಅಹಿಂಸಾತತ್ವವನ್ನು ಬೋಧಿಸಿ ಭಕ್ಷಕರನ್ನು ರಕ್ಷಕರನ್ನಾಗಿ ಮಾಡುತ್ತಿರಲು ರಕ್ಷಕರಾದ ನೀವು ಭಕ್ಷಕರಾಗುವುದಲ್ಲದೆ ಅಸಂಖ್ಯಾತ ಮುಗ್ಧಜನರನ್ನೇಕೆ ಕೆಡಿಸುತ್ತಲಿದ್ದೀರಿ. ನೀವು ವೇದಗಳಿಗೆ ಅವಾಚ್ಯಪ್ರಕೃತವಾದ ಅರ್ಥಗಳನ್ನೇ ಅಧಾರವಾಗಿಟ್ಟುಕೊಂಡು ಮಾಡುವ ಕಾರ್ಯದಿಂದ ಎಷ್ಟುಜನರ ಮನಸ್ಸಿಗೆ ನೋವನ್ನುಂಟುಮಾಡುತ್ತಿರುವಿರೆಂಬುದನ್ನು ಚೆನ್ನಾಗಿ ಆಲೋಚಿಸಿರಿ. ಪುರಾತನ ಕಾಲಗಳಲ್ಲಿ ಪಶುಬಲಿಯಲ್ಲದೆ ನರಬಲಿಯೂ ಕಾಣಬರುತ್ತದೆ. ಅದನ್ನೇಕೆ ಬಿಟ್ಟಿರಿ. ಸಹಗಮನವನ್ನೇಕೆ ನಿಲ್ಲಿಸಿದಿರಿ? ಸರ್ಕಾರದ ಭಯದಿಂದಲೋ? ಇಷ್ಟೆಯೋ ದೀಕ್ಷಿತರ ಧರ್ಮದೀಕ್ಷೆ? ಈಗ ಸರ್ಕಾರಕ್ಕಿಂತಲೂ ಸಮಾಜದಲ್ಲಿ ಹೆಚ್ಚು ಸಾಮರ್ಥ್ಯವಿರುವದೆಂಬುದನ್ನು ಖಂಡಿತವಾಗಿ ತಿಳಿದುಕೊಳ್ಳಿರಿ. ಈ ನಿಮ್ಮ ಕೃತಿಯನ್ನು ಸಮಾಜವು ಧಿಕ್ಕರಿಸುತ್ತದೆ. ಇದನ್ನು ನೀವು ಅರಿತಂತಿಲ್ಲ. ಇಂತಹ ಪ್ರಯತ್ನಕ್ಕೆ ಕೈಹಾಕಬೇಡಿರಿ. ಮತ್ತೊಂದು ಸಲ ನಮ್ರತೆಯಿಂದ ಬೇಡಿಕೊಳ್ಳುತ್ತೇವೆ. ಹಟಸಾಧಿಸಲು ಸಿದ್ಧರಾದರೆ ಅಹಿಂಸಾ ಸೇವಕರು ಪ್ರತಿಭಟಿಸಲು ಸಿದ್ಧರಾಗಿ ಸತ್ಯಾಗ್ರಹವನ್ನು ಹೂಡುವರು. ನಿಮ್ಮ ಕೃತಿಯನ್ನು ಅಲ್ಲಗಳೆಯುವರು. ಪ್ರಾಣಿಗಳ ಸ್ಥಾನದಲ್ಲಿ ತಮ್ಮ ಪ್ರಾಣಗಳನ್ನೇ ಕೊಡಲು ಸಿದ್ಧರಾಗುವರು. ಎಚ್ಚರಿಕೆ! ಎಚ್ಚರಿಕೆ!!

"ಪ್ರಾಣಿದಯೆ" ಚಿಕ್ಕಪೇಟೆ, ಬೆಂಗಳೂರು ಸಿಟಿ. — ಗುಂಡೂರಾವ್ ಶಾಸ್ತ್ರಿ, ಸಂಪಾದಕ.

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಭಜನಾಸಮಾರಂಭ.

ನಿಜಾಮರಾಜ್ಯ ಪಾಯಗಾ ಇಲಾಖಾ ತಾಲೂಕು ರಾಜೇಶ್ವರ ಗ್ರಾಮದಲ್ಲಿ ಪ್ರತಿವರ್ಷದಂತೆ ಈ ವರ್ಷವಾದರೂ ಹಿರಿಯ ಮಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಮಾರಂಭವು ಶ್ರಾವಣ ಮಾಸದಲ್ಲಿ ವಿಶೇಷೋತ್ಸಾಹದಿಂದ ನಡೆದು ಭಾದ್ರಪದ ಬಹುಳ ೧೧ ಗುರುವಾರ ದಿವಸ ಸತ್ಪ್ರೀತ್ಯರ್ಥವಾಗಿ ಗಣಾರಾಧನೆಯು ಮಾಡಲ್ಪಟ್ಟಿತು. ಆ ದಿವಸ ರಾತ್ರಿ ೮ ಗಂಟೆಗೆ ಆಂದೋಲಿಕೋತ್ಸವವು ನೆರವೇರಿತು. ಪಲ್ಲಕ್ಕಿಯೊಳಗೆ ಜಗದ್ಗುರು ಪಂಚಕರ ಭಾವಚಿತ್ರವು ಇಡಲ್ಪಟ್ಟು ಮಠದಿಂದ ಮೆರವಣಿಗೆಯು ಆರಂಭವಾಗಿ ನಾನಾವಿಧವಾದ ವಾದ್ಯಗಳಿಂದಲೂ ಇಲ್ಲಿಯ ಹಾಗೂ ಹುಮನಾಬಾದ ರಾಜೇಶ ಭಜನಾಮಂಡಳಿಯವರ ಭಕ್ತಿಪರ ಸ್ತೋತ್ರಗಳ ಮಂಜುಳಧ್ವನಿಯು ಮತ್ತು ಉತ್ಸವಭಾಗಿಗಳಾದ ಜನರ ಜಗದ್ಗುರು ಜಯಜಯ ಕಾರವೂ ನಭೋಮಂಡಲದಲ್ಲೆಲ್ಲ ತುಂಬಿ ಜಗದಾಚಾರ್ಯರ ವಿಷಯದಲ್ಲಿರತಕ್ಕ ಭಕ್ತ್ಯತಿಶಯವನ್ನು ವ್ಯಕ್ತಗೊಳಿಸುತ್ತಿದ್ದವು. ಉತ್ಸವವು ಗ್ರಾಮದ ಮುಖ್ಯ ಮುಖ್ಯ ಬೀದಿಗಳಲ್ಲಿ ಹೊರಟಾಗ್ಗೆ ಅಲ್ಲಲ್ಲಿ ಭಕ್ತರ ಮನೆಗಳ ಮುಂದೆ ಭಕ್ತರು ಜಗದಾಚಾರ್ಯರಿಗೆ ಭಕ್ತಿಯಿಂದ ಫಲಪುಷ್ಪಗಳನ್ನು ಸಮರ್ಪಿಸುತ್ತಿದ್ದರು. ಈ ಪ್ರಕಾರವಾಗಿ ಉತ್ಸವವು ಬಹು ವಿಜೃಂಭಣೆಯಿಂದ ಹೊರಟು ರಾತ್ರಿ ಸುಮಾರು 12 ಘಂಟೆಗೆ ತಿರುಗಿ ಮಠಕ್ಕೆ ಮುಟ್ಟಿತು. ಕೂಡಲೆ ಮಠದಲ್ಲಿ ಸಭೆಯು ಏರ್ಪಡಿಸಲ್ಪಟ್ಟಿತು. ವೇ|| ಸಿದ್ಧರಾಮಯ್ಯ ಭಂಗಿ ಹುಮನಾಬಾದ, ಶ್ರೀಯುತ ರಾಮಚಂದ್ರರಾವ ಹುಮನಾಬಾದ, ಶ್ರೀಮಂತ ಮಾರ್ತಂಡರಾವ ಕುಲಕರ್ಣಿ, ಶ್ರೀಯುತ ಮಲ್ಹಾರರಾವ ವಕೀಲ, ಶ್ರೀ ಬಸಪ್ಪ ಕರ, ಶ್ರೀಯುತ ಮಾಣಿಕರಾವ ಕುಲಕರ್ಣಿ, ಮತ್ತು ರಾಮಚಂದ್ರರಾವ ಅಡ್ಡ ಇವರು ವೀರಶೈವಧರ್ಮ, ಶಿಕ್ಷಣ ಐಕ್ಯ, ಗುರುವರ್ಗದವರ ಕರ್ತವ್ಯ ಮುಂತಾದ ವಿಷಯಗಳ ಮೇಲೆ ಸಮಯೋಚಿತವಾಗಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಮೇಲ್ಕಂಡ ಉತ್ಸವದಲ್ಲಿ ಶ್ರೀಯುತ ಮಾಣಿಕರಾವ ಕುಲಕರ್ಣಿ ಮತ್ತು ಗುರುಬಸಪ್ಪ ಮಾಲಿಗೌಡರು ಮತ್ತು ಬಾಪೂರಾವ ಪೋಲೀಸ ಪಟೇಲರು ಬಹು ಪ್ರಯಾಸವನ್ನು ವಹಿಸಿ ಏನೂ ಕೊರತೆಯಾಗದಂತೆ ಕಾಪಾಡಿಕೊಂಡಿದ್ದರು. ಶ್ರೀಮಂತ ಚನ್ನಪ್ಪನವರು ಶಾಂತಾಮುಂಗಿ ಮತ್ತು ಶೀಗಿ ನಾಗಪ್ಪನವರು ಸಮಾರಂಭವು ಯಶಸ್ವಿಯಾಗಿ ಪರಿಣಮಿಸಲಿಕ್ಕೆ ಯೋಗ್ಯ ಸಹಾಯವಮಾಡಿದರು. ಭಜನಾಸಂಘದ ವ್ಯವಸ್ಥಾಪಕರಾದ ಶ್ರೀಮಂತ ಸಂಗನಬಸಪ್ಪ ಲಕ್ಕಶೆಟ್ಟಿ ಇವರು ಉತ್ಸವವು ಸರ್ವಾಂಗಸುಂದರವಾಗಲಿಕ್ಕೆ ಸರ್ವತೋಮುಖವಾಗಿ ಪರಿಶ್ರಮವನ್ನು ವಹಿಸಿದರು. ಉತ್ಸವಭಾಗಿಗಳಾದ ಯಾವತ್ತು ಜನರಿಗೆ ಜಗದಾಚಾರ್ಯರು ಮಂಗಳವನ್ನುಂಟುಮಾಡಲೆಂದು ಹಾರೈಸುವ,

ಗೋವಿಂದರಾವ ಮೋರೀತ
ಸೆಕ್ರೆಟರಿ
ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘ,
ರಾಜೇಶ್ವರ.

ಧರ್ಮಕಾರ್ಯ.

ಶಿವಮೊಗ್ಗಾ ಡಿ|| ಸೊರಬ ತಾಲ್ಲೂಕು ಆನವಟ್ಟಿ ಹೋಬಳಿ ಹುರುಳಿಗ್ರಾಮಕ್ಕೆ ಸೇರಿದ ಸರ್ಕಾರಿಜಂಗಲಿನಲ್ಲಿ ಆನವಟ್ಟಿ ಸಂತೆಗೆ ಹೋಗುವ ದಾರಿಯಲ್ಲಿ ಹುರುಳಿಗ್ರಾಮದ ಮಾಲದಾರ್ ಪಟೇಲ್ ವೀರಭದ್ರಪ್ಪಗೌಡರು ಜನಗಳ ಉಪಯೋಗಕ್ಕಾಗಿ ನೀರನ್ನು ನಡಗಿಸುವದಕ್ಕೆ 73 ರೂಪಾಯಿಗಳನ್ನು ವ್ಯಯಮಾಡಿ ಒಂದು ಕೆರೆಯನ್ನು ಕಟ್ಟಿಸಿದ್ದಾರೆ. ಇಂಥ ಕ್ಷಾಮಕಾಲದಲ್ಲಿ ಈ ಕೆರೆಯಲ್ಲಿ ಸುಮಾರು ಹದಿನೈದು ಅಡಿ ಎತ್ತರ ಪ್ರಮಾಣ ನೀರು ನಿಂತಿರುತ್ತದೆ. ಇದಕ್ಕೆ ಹುರುಳಿ ಗ್ರಾಮಸ್ಥರು 17 ರೂ. ಗಳನ್ನು ಹಿರೇ ಚವಟಿಪಾಳಿ ವೈಶ್ಯರ ಮ|| ಕೋನಪ್ಪನವರು 4 ರೂಪಾಯಿಗಳನ್ನೂ ಧಾರವಾಡ ಜಿಲ್ಲಾ ಹಾನಗಲ್ ತಾಲ್ಲೂಕು ತಿಳವಳ್ಳಿ ವೈಶ್ಯರ ಮ|| ಯಲ್ಲಪ್ಪನವರು 5 ರೂ. ಗಳನ್ನು ಉದಾರಮನಸ್ಸಿನಿಂದ ಕೊಟ್ಟಿರುತ್ತಾರೆ. ಸದರಿ ತಿಳವಳ್ಳಿ ವೈಶ್ಯರ ಮ|| ಹೆಗ್ಗಡಿ ಕಟ್ಟಿ ಲಿಂಗಪ್ಪನವರು ಮತ್ತು ಮ|| ತಿಪ್ಪಣ್ಣನವರು ಸಹ ಸೇರಿ 10 ರೂ. ಗಳನ್ನೂ, ಮ|| ಶಿರಪತ್ರೆಪ್ಪನವರು 10 ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿರುತ್ತಾರೆ. ಸದರಿ ಹುರುಳಿ ಗ್ರಾಮದ ಶ್ರೀ|| ಹನುಮಂತದೇವರ ದೇವಸ್ಥಾನಕ್ಕೆ ಸೇರಿದ ಭಾವಿಯು ಕುಸಿದುಬಿದ್ದಿರುವ ಮೇಲ್ಭಾಗದ ಕಟ್ಟಡವನ್ನು ಚಂದಾಹಣದಿಂದ ರಿಪೇರಿಮಾಡಿರುವ ಹುರುಳಿಗ್ರಾಮಸ್ಥರಿಗೂ, ಮೇಲ್ಕಂಡ ಕೆರೆಯನ್ನು ಕಟ್ಟಿಸಿರುವ ಮಹನೀಯರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ. ಇವರು ಮಾಡಿರುವ ಸತ್ಕಾರ್ಯಸ್ಮರಣೆಯಿಂದ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿದ್ದೇನೆ.

ಹುರುಳಿ ಮಾಲದಾರ್ ಪಾಟೀಲ್
ನಾಗವೀರಪ್ಪಗೌಡರು,
ಪರಿಷ್ಕರಣಸಹಾಯಸಂಘದ ಡೆಲಿಗೇಟರ್,
ಮೊಕ್ಕಾಂ ಮೈಸೂರು.

ನೀತಿಸುಧಾರಸ.

(ವೇ|| ಆನವಟ್ಟಿ ರಾಮರಾಯ ಕವಿಯಿಂದ)

೫. ಸತ್ಯ.

ಭಾ|| ಸತತಸತ್ಯವಚನಕೆಗೆ ಮೋಹಾ |
ಸ್ಥಿತನುಮೆನಿಸುತೆ ಹೃದಯದೊಳುಸು |
ಸ್ಥಿತಿಯೊಳು ನೆಲೆಯುತವಳನಂಬುತೆ ಬಿಡದೆಪಾಲಿಸುವ ||
ಅತಿಶಯದವರ್ತನೆಯೊಳದೊರೆ |
ಹಿತದಯಶೋಕೀರ್ತಿಟದಿಂ ಭಾ |
ಸಿತನುಮೆನಿಪಾರಾಜನಂತೆಯೆ ಮನುಜ ರಾಜಿಸನು ||೧||

ಇಂತು ಸತ್ಯವಫಲವನರಿಯದ |
ರಂತರದೆ ವರ್ತಿಸುತಲಿರೆ ಧನ |
ವಂತನುಮೆನಿಸೆ ಜನದನಾಲಿಗೆಯಲ್ಲಿ ನಲಿಯುತಲಿ ||
ಚಿಂತನೆಗೆ ನಸುಚಿತ್ತವೀಯದೆ |
ಹಿಂತೆಯೋಡಿಪವೋಸಕಪಟದ |
ಹಂತಿಯದುಲೀಪನವನಾಸದವನು ಮಾನ್ಯನಲ್ತೆ ||೨||

ನುಸುಳಿಗೆತಿನಾಚಿಕೆಯ ತಾಳುವ |
ದೆಸೆಯಗಾಣದೆ ಬೆಮೆಯನಾಸುವ |
ಮಿಸುಪಸತ್ಯವಪೇಳೆಸಬುದಿಟ್ಟೆಯೊಳು ತಾನೆಸೆವ ||
ರಸೆಯೊಳಧಿಕೃತಿಗೈಯುತಿಹ ಮಾ |
ನಿಸಪಕರದಿಂ ತನ್ನ ಯೋಗ್ಯತೆ |
ಯಸಮವೆಂಬುದತೋರಿ ಮೋಸದ ಮಾರ್ಗಮೆಟ್ಟನಲ ||೩||

ತನ್ನವರ್ತನೆಯಲ್ಲಿ ಚಲಿಸದೆ |
ಬನ್ನಕೆದೆಗುಡದಂತೆ ಮನವನು |
ಸನ್ನಿಮಾರ್ಗದ ವೃತ್ತಿಯೊಳು ತಾಧೈರ್ಯವಾಗಿರುತೆ ||
ಗನ್ನಗತಕದನುಡಿಯನೇಳುವ |
ರನ್ನು ನೋಗುತೆ ಹೆದರಿಹಿಂಜರಿ |
ವನ್ನಮೇತಾಸತ್ಯದರ್ಶಕನಾಗಿ ಕಾಣಿಸನು ||೪||

ಜನಕನೀಹದೊಳೊದಿವಬುದ್ಧಿಯ |
ಧನಕೆಯಿಂ ಸ್ವಾತಂತ್ರ್ಯವಾಸುತ |
ಲನುಪಮದಕಾರ್ಯಂಗಳಲ್ಲಿ ಹಮ್ಮುವರುಹುತಲಿ ||
ಅನುವಗೈಯುವೆನೆಂದು ಭಾಷೆಯ |
ವಿನಯದಿಂ ಪೇಳ್ದುದಕೆದಂದುಗ |
ಮನಿತು ಬರಲದರಿಕ್ಕಿಸದೆ ತಾನೇರ್ಪುಗೊಳಿಸುವನು ||೫||

ಅಸಮಜನರೊಳು ಬೆರೆಯದಲೆ ತಾ |
ನೆಸೆವಕಾರ್ಯದೆ ಚಿತ್ತಕನುನಾ |
ಗಿಸುವುದಂ ಕರದಿಂದೆಗೈಯುತೆ ನುಡಿವಮಾತಿನೊಳು ||
ಎಸೆವಪಿವೇಕಜಾಗ್ರತೆಯತೋ |
ರಿಸುವ ವಾಕ್ಯಂಗಳನುಪೇಳುತೆ |
ನಗದೆ ಮೆಚ್ಚುವಕರದಿ ಚಿಚ್ಚಿಗರಿಕಾರ್ಯವೆಸಗುವನು ||೬||

ಕಪಟದಿಂದಿದಿದ್ದರ್ಪುರುಷಂ |
ಸಫಲಗೊಳಪಂತೊಡೆದನುಡಿಗಳ |
ನವಲಪಿಸುತಂ ನೈಜಮಾಗಿಹುದೆಂದು ಬಗ್ಗಿಸುತೆ ||
ವಿಫಲತೆಯನುತ್ಕದೊಳುಕಾಣಿಸಿ |
ಗುಪಿತದೊಳಗೆಲ್ಲವನು ಮರುಳಾ |
ಗಿಪಪವರ್ತನಮುದುವೆಚಿತ್ರವಿಚಿತ್ರವಾಗಿಹುದು ||೭||

ನಗುವನಳಲೊಳಗಳುವ ಸುಖದೊಳು |
ಮಿಗೆಯೊರೆವವತಿಂಗೆ ಬೆಲೆಯಂ |
ಸಿಗದಪರಿಯಾಡುತಲಿ ನೇತ್ರವಿಹೀನನಾಗಿರುವ |
ಜಗದೆಜೀವಿಪ ಪುಳುವಿನಂದದಿ |
ಸಿಗದೆತಾಮಬ್ಬಿನೊಳುರಂಧ್ರವೆ |
ನಗುವನಾಂಗಿನೊಳದ್ದುಗಪೇಳ್ವನು ಸುಖದೋಳಹೆನೆನುತ ||೮||

ಎಲ್ಲರಿಗುಕಾಣಿಸುವ ಬೆಳಗಿನೋ |
ಳಲ್ಲಿಯೇ ತಾತಪ್ಪಗೈವನು |
ಖುಲ್ಲನೆನೆಸೆಂಬ ಪೆಸರಂತಾಳಿ ಕಾಲವನು ||
ಸಲ್ಲಿಸುತ ಜೀವಿತದಕಾಲವು |
ನೆಲ್ಲವಿಸಿತುಂಸುಖವದಿಲ್ಲದೆ |
ನೊಲ್ಲಿಸುವ ನಾಲಗೆಯಮುಖ್ಯದಮುಕೆದೊರಗೈಸಿಹನು ||೯||

ಸುಗುಣದಿಂದಿದಿದರ್ಪಮನುಜನ |
ಬಗೆಯುತಾಸನುವರ್ತಿಪೆನೆನುತೆ |
ಸಗುತೆಕ್ಕೆಕೊಂಡಿರುವಕಜ್ಜಂಗಳನು ಮೋಸದಲಿ ||
ಬಗೆಯೊಳೊಗೆದಾಶುಚ್ಯಕಾರ್ಯಕೆ |
ಸಿಗುತೆಮೋಸದಬಲೆಗೆ ಬೀಳುತೆ |
ಜಗದಜನನಾಂತಿರುವಜನನೇ ಮಾನವವ್ಯಗವಲೆ ||೧೦||

ಹಂದೆಯೇ! ನಿನ್ನಂತರಂಗವ |
ಮುಂದುಬುದ್ಧಿಯೊಳಗೆಪುಗಿಸಲೀಂ |
ಸಂಪಜ್ಞನರಂದದೊಳು ಪವರ್ತಿಸಲು ಮರೆಯೆ |
ಕಂದರೆಲ್ಲರು ಮೋಸಗೈದಿಹ |
ನೆಂದು ತಿಳಿಯುತೆ ಹಾಸ್ಯದೊಳು ಬೆರ |
ಳಂದೆ ನಿನ್ನನು ತೋರಿಸುತ್ತಿರೆ ಬಾಳಫಲವೇನು ||೧೧||

ಅರಿಷಡ್ವರ್ಗ.

ಭಾಮಿನೀಷಟ್ಪದಿ.

ಚಹವುಬಂದಿತು ನಮ್ಮದೇಶಕೆ |
ಚಹವುತಂದಿತು ನಮಗೆ ರೋಗವ |
ಚಹವುಮಾಡಿತು ಕುಡುಕಜನರಿಗೆ ವೀರ್ಯನಾಶವನು ||
ಚಹವು ಹಣವನುಹಾಳುಮಾಡಿತು |
ಚಹವು ಹೊಲಮನೆಮಾರಿಸಿಟ್ಟಿತು |
ಚಹವುಕೊಟ್ಟಿತು ನಮ್ಮಕೈಯ್ಯಲಿ ಭಿಕ್ಷೆಪಾತ್ರೆಯನು ||೧||

ಕೆಟ್ಟುಹೋದರು ಜನರು ಎಲ್ಲರು |
ಕೆಟ್ಟಚಟ್ಟದ ಸೇದುಶೀಗಳೆ |
ದುಃಸ್ವಮನದಿಂ ಪಕ್ಕಸೇದ್ದರು ಮಾಧರವರಾಗಿ ||
ಕುಟ್ಟತಂಬಾಕವನು ತಿನ್ನುತ |
ಕೋಟಿಗಟ್ಟಲೆ ಇದ್ದ ಹಣವನು |
ಕೊಟ್ಟುರೋಗವ ಕೊಂಡುಕೊಳ್ಳರು ಕಾಕುಮಾನವರು ||೨||

ಓರೆತ್ರಾಪನು ತಿದ್ದಿಕೊಂಡರು |
ಹೇರ್‌ಆಯಿಲ್ಲನು ಹಚ್ಚಿಕೊಂಡರು |
ಕೇಗಿಕೇರಲಿತಿರುಗುತಿರುವರು ಭಂಡರವರಾಗಿ ||
ವೀರಪೌರುಷನಶಿಸಿ ಪೋದುದು |
ನಾರಿಯಾದರು ಗಂಡುಗಲಿಗಳು |
ದೂರನಾಡಿನ ಜನರನಾಶಿಸಿ ಕ್ರಾಪಿನಣ್ಣಗಳು ||೩||

ಕೋಟುಬೂಟಿನ ಚೆಲ್ಲದಣ್ಣರು |
ಹ್ಯಾಟುಹಾಕುತ ಮೋದದಿಂದಲಿ |
ರಾಟೆತಿರುವದೆ ಕೆಟ್ಟುಹೋದರು ಹಣವಕಳೆಯುತಲಿ ||
ರಾಶಿಗಟ್ಟಲೆ ಹಣವಕಳೆದರು |
ಊಟ ಒಪ್ಪತ್ತಿಲ್ಲದಂತಯೆ |
ಪಾಟಿದಂಡದ ಪರರ ಆಳಿಗೆ ಮೋಹಪಟ್ಟೀಗ ||೪||

ಮುದದಿ ಚಾಳೇಸ್‌ಧರಿಸಿ ಕಣ್ಣಿಗೆ |
ಪದವಹೇಳುತ ಕೇಣುತಿರುವುತ |
ಮದ್ಯದಂಗಡಿ ಮುಂದೆ ಮೆರೆವರು ಜೋಲಿಹೊಡೆಯುತಲಿ ||
ಮದದಿ ಬಯ್ಯದೆ ಬುದ್ಧಿಮಾತಿನ |
ಹದವನರಿಯುತೆ ತಿದ್ದಿಕೊಳ್ಳಿರಿ |
ಸದಿಯು ಹರಿಯುವಕೆರದಿ ಮುಟ್ಟನ ಓಘತದೆಯುತಲಿ ||೫||

ಪರಸ್ತ್ರೀಯರ ಕಂಡುಮೋಹಿಸಿ |
ಪರಮ ದುಃಹಿಮನವಾಮ ಮರೆಯುತ |
ಪರತರಿಯ ಕಷ್ಟದಲಿಬೀಳ್ವರು ನರಕಕೀಡಾಗಿ ||
ಪರರನಾರಿಯ ಭರದಿಕೆಡಿಸುತ |
ಪರಮಪಾವನ ಸತಿಯಧರ್ಮವ |
ಹರಿಮುಬಿಟ್ಟರು ಕೆಟ್ಟುಹೋದರು ಹರನೆ ಹಾ ಶಿವನೆ! ||೬||

ಹೊನ್ನುರಡಿ, ಮಲ್ಲನಗೌಡ.

ಅಮೇರಿಕೆಯಲ್ಲಿ ಗಾಂಧಿಟೋಪಿಯ ಪ್ರದರ್ಶನ

"ನ್ಯೂಯಾರ್ಕ ಟೈಂಸ್" ಪತ್ರಿಕಾಕರ್ತರ ವರ್ಣನೆ.

ಕಳೆದವಾರ "ನ್ಯೂಯಾರ್ಕ ಟೈಂಸ್" ಪತ್ರಿಕೆಯಲ್ಲಿ ಈ ಕೆಳಗೆ ಕಂಡ ವಿಷಯವು ಪ್ರಕಟಿಸಲ್ಪಟ್ಟಿರುವದು—

ಈ ದಿನ ನಮ್ಮ "ಟೈಂಸ್" ಆಫೀಸಿನ ಮುಂಭಾಗದಲ್ಲಿ ಪ್ರದರ್ಶನಕ್ಕಾಗಿ ಇಟ್ಟಿರುವ "ಗಾಂಧಿಟೋಪಿ" ಮತ್ತು "ತಕಲಿ"ಯನ್ನು ಸಾವಿರಾರು ಜನರು ಅತ್ಯಂತ ಕುತೂಹಲದಿಂದ ಬಂದು ನೋಡಿಕೊಂಡು ಹೋಗುತ್ತಿರುವರು. ಮುಂಬಯಿಯ ಮಿ|| ಎಂ. ಸಿ. ಮೋಡಿಯವರು ಸದರಿ ಟೋಪಿ ಮತ್ತು ತಕಲಿಯನ್ನು ಮಿ|| ಜಾರ್ಜ ಎಂ. ಗ್ರೇರವರಿಗೆ ಕಳುಹಿಕೊಟ್ಟಿದ್ದರು. ಮಿ|| ಗ್ರೇರವರು ಅವುಗಳನ್ನು ನಮ್ಮ "ಟೈಂಸ್" ಆಫೀಸಿಗೆ ಪ್ರದರ್ಶನಕ್ಕಾಗಿ ಕಳುಹಿಸಿರುವರು.

ಸದ್ಯ ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಮುಖ್ಯವಾಗಿ ಸೋಲಾಪುರ ಮೊದಲಾದ ನಗರಗಳಲ್ಲಿ ಸರಕಾರದವರು "ಗಾಂಧಿಟೋಪಿ"ಯನ್ನು ಸಂಪೂರ್ಣವಾಗಿ ನಿಷೇಧಿಸಿರುವರು.

"ಗಾಂಧಿಟೋಪಿ" ಯನ್ನು ಧರಿಸಿದವನು ಮಹಾತ್ಮಾ ಗಾಂಧಿಯವರ ತತ್ವಗಳನ್ನೂ, ಅವರಲ್ಲಿಯೂ ಅವರ "ಅಹಿಂಸಾತ್ಮಕ ತತ್ವ"ವನ್ನು ಅಂಗೀಕರಿಸಿರುವನೆಂಬುದನ್ನು ಸೂಚಿಸುವದು. ಇದನ್ನು ಧರಿಸಿದವನು ಸತ್ಯಸಂಧನೂ, ನಿಷ್ಕಲಂಕಭಾವದವನೂ, ತನ್ನ ಮಾತೃಭೂಮಿಯ ಸ್ವಾತಂತ್ರ್ಯ ಸಂಪಾದನೆಗಾಗಿ ತನ್ನ ಸರ್ವಸ್ವವನ್ನೂ ಸಮರ್ಪಿಸಲು ಸಿದ್ಧನಾಗಿರುವವನೂ, ದುಂದುಗಾರಿಕೆಯ ಜೀವನಕ್ರಮವನ್ನು ಬಿಟ್ಟವನೂ, ಇಡೀ ಜನಾಂಗದಲ್ಲಿ ತಾನೂ ಒಬ್ಬನಾಗಿರುವೆನೆಂಬ ಭಾವನೆಯನ್ನು ಹೊಂದಿದವನೂ ಆಗಿರುವನೆಂದು ಭಾವಿಸಲ್ಪಡುವನು.

ಇದನ್ನು ಧರಿಸಿದವನು ಸತ್ಯಾಗ್ರಹಿಯೂ, ಸತ್ಯಸಂಧನೂ, ಇತರರಿಗೆ (ಅವರು ವೈರಿಗಳಾದರೂ) ಯಾವ ಹಿಂಸೆಯನ್ನೂ ಮಾಡದೆ ಆತ್ಮಯಜ್ಞ ಮಾಡಲು ಸಿದ್ಧನಾಗಿರುವವನೂ ಆಗಿರುವನೆಂದು ಭಾವಿಸಲ್ಪಡುವನು. ಆತನು ನಿಶ್ಶಸ್ತ್ರಧಾರಿಯಾಗಿದ್ದು ತನ್ನ ದೇಹಕ್ಕೆ ಇತರರು ಕೊಡುವ ತೊಂದರೆಗಳೆಲ್ಲವನ್ನೂ ಸಂತೋಷದಿಂದ ಸ್ವೀಕರಿಸುವನು.

"ಗಾಂಧಿಟೋಪಿ" ಯನ್ನು ಧರಿಸಿದವನು, ಶಾಂತನೂ, ಪರೋಪಕಾರಿಯೂ, ಕಷ್ಟಸಹಿಷ್ಣುವೂ ಮತ್ತು ದುರ್ಮಾರ್ಗಗಳಿಗೆ ದೂರನೂ ಆದವನೆಂದು ಭಾವಿಸಲ್ಪಡುವನು. ಸರಕಾರವು ಈ "ಗಾಂಧಿಟೋಪಿ"ಗೆ ವಿರುದ್ಧವಾಗಿ ಒಂದು ದೊಡ್ಡ ಯುದ್ಧವನ್ನು ಪ್ರಾರಂಭಿಸಿ, ಅದನ್ನು ಧರಿಸಿದವರನ್ನು ಶಿಕ್ಷೆಗೆ ಗುರಿಪಡಿಸುತ್ತಿರುವದು. ಇದರ ಬೆಲೆಯು ಸುಮಾರು ಹತ್ತುಸೆಂಟು (ನಾಲ್ಕಾಣೆ) ಗಳಾಗಬಹುದು. ಇದು ಬೆಳ್ಳಗೂ ಹಗುರವಾಗಿಯೂ, ತಂಪಾಗಿಯೂ, ಮನಸ್ಸಿಗೆ ಆಹ್ಲಾದಕರವಾಗಿಯೂ ಇರುವವಲ್ಲದೆ, ಸುಲಭವಾಗಿ ಒಗೆಯಲು ಅನುಕೂಲವಾಗಿರುವವು.

ಮುಂಬಯಿಯಲ್ಲಿರುವ 6,00,000 ಗಂಡಸರಲ್ಲಿ 4,00,000 ಜನರು ಈ "ಗಾಂಧಿ ಟೋಪಿ" ಯನ್ನು ಧರಿಸುತ್ತಿರುವರು.

"ತಕಲಿ" ಯೆಂಬುದು ನೂಲನ್ನು ತೆಗೆಯುವ ಒಂದು ಸಣ್ಣ ಯಂತ್ರವಾಗಿದೆ. ಇದನ್ನು ಬಹು ಸುಲಭವಾಗಿ ಉಪಯೋಗಿಸಬಹುದು. ಭರತಖಂಡದ ಹೆಚ್ಚಿನ ಜನರು ಸದ್ಯ ನೂಲುವ ಉದ್ಯೋಗವನ್ನು ಕೈಕೊಂಡಿರುವರು.

ಭರತಖಂಡವು ಇಂಗ್ಲಿಷ್ ಬಟ್ಟೆಯನ್ನು ಸಂಪೂರ್ಣವಾಗಿ ಹೊರಡಿಸಿಬಿಡಬೇಕೆಂದು ದೃಢಸಂಕಲ್ಪ ಮಾಡಿರುವದು. ಅಖಿಲಭಾರತ ರಾಷ್ಟ್ರೀಯ ಮಹಾಸಭೆಯವರು ಪ್ರತಿಯೊಬ್ಬರೂ ಪ್ರತಿನಿತ್ಯವೂ 125 ಗಜಗಳಷ್ಟು ನೂಲನ್ನು ತೆಗೆಯಬೇಕೆಂದು ತೀರ್ಮಾನ ಮಾಡಿರುವರು. ಸದ್ಯ ಮುಂಬಯಿ ನಗರದಲ್ಲಿ 6,00,000 ಜನರು ತಕಲಿಯಿಂದ ನೂಲು ತೆಗೆಯುತ್ತಿರುವರು.

ದುಂಡುಮೇಜಿನ ಪರಿಷತ್ತು.

ಪ್ರತಿನಿಧಿಗಳ ಕರ್ತವ್ಯ.

ಮಿ|| ಸತ್ಯಮೂರ್ತಿಯವರು ಈ ರೀತಿಯಾಗಿ ಬರೆದಿರುತ್ತಾರೆ— ಅಂತೂ ದುಂಡುಮೇಜಿನ ಪರಿಷತ್ತು ನಡೆಯುವದೆಂದೇ ತೋರುವದು. ಪರಿಷತ್ತು ಏಕೆ ಕೂಡುವದೆಂದು ನನಗಿನ್ನೂ ಆಶ್ಚರ್ಯವಾಗಿರುವದು. ಪ್ರಥಮದಲ್ಲಿ ಬ್ರಿಟಿಷ್ ಸರಕಾರದವರು ಸೈಮನ್ ಕಮಿಶನ್ನನ್ನು ಬಹಿಷ್ಕರಿಸಿದ ಭಾರತೀಯರೊಡನೆ ಭರತಖಂಡದ ಮುಂದಿನ ರಾಜಕೀಯ ಸ್ಥಿತಿಗತಿಗಳನ್ನು ಚರ್ಚೆಮಾಡಿ, ಸಾಧ್ಯವಾದರೆ ಸರ್ವಸಮ್ಮತವಾದ ತೀರ್ಮಾನವನ್ನು ಮಾಡಬೇಕೆಂದು ಈ ದುಂಡುಮೇಜಿನ ಪರಿಷತ್ತನ್ನು ಏರ್ಪಡಿಸಿದರು. ಆದರೆ ಇಲ್ಲಿಯವರೆಗೆ ನಡೆದಿರುವ ವಿದ್ಯಮಾನಗಳನ್ನು ನೋಡಿದರೆ, ಪರಿಷತ್ತಿಗೆ ಆಮಂತ್ರಣ ಪಡೆದಿರುವವರಲ್ಲಿ ಉದಾರಪಕ್ಷದವರ ವಿನಹ ಇತರರೆಲ್ಲರೂ ಸೈಮನ್ ಕಮಿಷನ್ನಿಗೆ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿದವರೇ ಆಗಿರುವರು. ಅವರು ಸರಕಾರದ ತತ್ವಗಳನ್ನು ಸುಲಭವಾಗಿ ಒಪ್ಪಿಕೊಳ್ಳುವರೆಂಬುದನ್ನು ಬ್ರಿಟಿಷ್ ಸರಕಾರದವರೇ ಚೆನ್ನಾಗಿ ಅರಿತಿರುವರು. ಹೀಗಿರುವಲ್ಲಿ ಇಂಥ ಅನುಕೂಲಪರರಾದವರ ಅಭಿಪ್ರಾಯವನ್ನೇ ಮತ್ತೊಂದು ಸಾರೆ ಇಂಗ್ಲೆಂಡಿನಲ್ಲಿ

(6 ನೆಯ ಪುಟವನ್ನು ನೋಡಿ.)

ಪಂಚಾಚಾರ್ಯ ಪ್ರಭಾ

೧೯೩೦ನೇ ಅಕ್ಟೋಬರ್ ತಾ|| ೬ನೆಯ ಸೋಮವಾರ

ನವರಾತ್ರಿ ಮಹೋತ್ಸವ.

ರಾಜಧಾನಿಯಲ್ಲಿ ಪದ್ಧತಿಪ್ರಕಾರವಾಗಿ ನವರಾತ್ರಿ ಮಹೋತ್ಸವವು ಅತಿ ವಿಜೃಂಭಣೆಯಿಂದ ನೆರವೇರಿತು. ಅಶ್ವಯುಜ ಶು|| ೧ ರಿಂದ ವಿಜಯದಶಮಿಯವರೆಗೂ ಪ್ರತಿನಿತ್ಯ ಸಾಯಂಕಾಲ ಸಾಕ್ಷಾತ್ ಧರ್ಮಾವತಾರಿಗಳಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರು ದಿವ್ಯವಸ್ತ್ರಾಭರಣಗಳಿಂದ ಭೂಷಿತರಾಗಿ ಸಕಲ ರಾಜಮರ್ಯಾದೆಗಳೊಂದಿಗೆ ರತ್ನಖಚಿತವಾದ ಸಿಂಹಾಸನಾರೋಹಣವನ್ನು ಮಾಡುತ್ತಿದ್ದರು. ಪ್ರಾತಃಕಾಲ ಸಾಯಂಕಾಲಗಳಲ್ಲಿ ಅಲಂಕೃತಗಳಾದ ಪಟ್ಟದಾನೆ ಪಟ್ಟದಕುದುರೆಗಳು, ಪೂಜೆಗಾಗಿ ಸಕಲಸೈನ್ಯ ಮರ್ಯಾದೆಗಳೊಡನೆ ಕೆರೆಬಳಿಗೆಹೋಗಿ ಬರುತ್ತಿದ್ದುವು. ವಿಜಯದಶಮಿಯದಿವಸ ಮಧ್ಯಾಹ್ನ 4 ಘಂಟೆಯ ಸಮಯಕ್ಕೆ ಶ್ರೀಮನ್ಮಹಾರಾಜರವರು ಸಾಲಂಕೃತವಾದ ಭದ್ರಗಜದಮೇಲಿರುವ ಅಂಬಾರಿಯಲ್ಲಿ ಕುಳಿತುಕೊಂಡು ವಾಮಪಾರ್ಶ್ವದಲ್ಲಿ ಭಾವಿಪ್ರಭುವರ್ಯರಾದ ಶ್ರೀ ಜಯಚಾಮರಾಜೊಡೆಯರವರನ್ನೂ ಹಿಂಭಾಗದಲ್ಲಿ ಸರದಾರ್ ಶ್ರೀ ಗೋಪಾಲರಾಜ ಅರಸರವರನ್ನೂ ಕುಳ್ಳಿರಿಸಿಕೊಂಡು ವಿಜಯಯಾತ್ರೆಯನ್ನು ಬೆಳೆಯಿಸಿದರು. ಜಯಸೂಚಕಗಳಾದ 21 ಗುಂಡುಗಳು ಹಾರಿಸಲ್ಪಟ್ಟವು. ಹಸ್ತ್ಯಶ್ವರಥಪದಾತಿ ಸೈನ್ಯವು ಯಥಾಕ್ರಮವಾಗಿ ಸಾಲುಗಟ್ಟಿ ಹೋಗುತ್ತಿದ್ದಿತು. ರಾಜಕುಮಾರರು ರಾಜಬಂಧುಗಳು ರಥಾರೂಢರಾಗಿ ಮುಂದುಮುಂದು ಪ್ರಯಾಣ ಬೆಳೆಯಿಸಿದ್ದರು. ಪುರಪ್ರಮುಖರೂ ಅಧಿಕಾರಿಗಳೂ ರಾಜಭಕ್ತಿಸೂಚಕವಾದ ಮುದ್ರೆಯಿಂದೊಡಗೂಡಿ ಸಾಲುಸಾಲಾಗಿ ಹೋಗುತ್ತಿದ್ದರು. ಪ್ರೇಕ್ಷಕರಾಗಿ ಬಂದಿದ್ದ ದೇಶವಿದೇಶೀಯ ಜನಗಳು ಉತ್ಸವದ ಎಡಬಲಪಾರ್ಶ್ವಗಳಲ್ಲಿ ನಿಂತುಕೊಂಡು ಬಹು ಸಂಭ್ರಮದಿಂದ ಶ್ರೀಮನ್ಮಹಾರಾಜರವರ ದರ್ಶನವನ್ನು ಮಾಡುತ್ತ ದಾರಿಯುದ್ದಕ್ಕೂ ಜಯಜಯಕಾರವನ್ನು ಮಾಡುತ್ತಿದ್ದರು. ಉತ್ಸವಸಮಯದಲ್ಲಿ ಮೇಘರಾಜನು ದೇವೇಂದ್ರನಿಂದ ಪ್ರೇರಿತನಾಗಿ ರಾಜಧಾನಿಯ ದೊಡ್ಡಪೇಟೆಗೆ ಆಗಮಿಸಿ, ಭೂದೇವೇಂದ್ರನಾದ ಮಹಾಪ್ರಭುವಿನ ದರ್ಶನವನ್ನು ಮಾಡಿ ಸಂತೋಷಭರದಿಂದ ತಾಂಡವೋತ್ಸವನನ್ನು ಮಾಡಿದನು. ಮಹಾಪ್ರಭುಗಳು ಬನ್ನಿಯಮಂಟಪಕ್ಕೆ ದಯೆಮಾಡಿಸಿ ವಿಧ್ಯುಕ್ತವಾಗಿ ಶಮೀಪೂಜೆಯನ್ನು ನೆರವೇರಿಸಿದರು. ಅನಂತರ ಮಹೋತ್ಸವವು ಹಿಂದಿರುಗಿತು. ದೊಡ್ಡಪೇಟೆಯ ರಸ್ತೆಯುದ್ದಕ್ಕೂ ನಾಲ್ಕು ಸಾಲಾಗಿ ಕಟ್ಟಿದ್ದ ವಿದ್ಯುದ್ದೀಪಗಳ ಮಧ್ಯದಲ್ಲಿ ಬರುತ್ತಿದ್ದ ಅಂಬಾರಿಯುತ್ಸವವು ಪ್ರೇಕ್ಷಕರಿಗೆ ಮಹದಾನಂದವನ್ನುಂಟುಮಾಡುತ್ತಿದ್ದಿತು. ಉತ್ಸವದ ಉಭಯ ಪಾರ್ಶ್ವಗಳಲ್ಲಿಯೂ ಉತ್ಸವದ ಮೇಲುಭಾಗದಲ್ಲಿಯೂ ಸಾಲುಸಾಲಾಗಿ ಹೊಳೆಯುತ್ತಿರುವ ಲಕ್ಷಾವಧಿವಿದ್ಯುದ್ದೀಪಮಾಲಿಕಾ ಮಧ್ಯದಲ್ಲಿ ಶೋಭಿಸುತ್ತಿರುವ ರತ್ನಖಚಿತ ಸುವರ್ಣದಂಬಾರಿಯೊಳಗೆ ಕುಳಿತಿರುವ ಉಭಯ ರಾಜರ ಮುಖಮಂಡಲದ್ವಯವು ನಕ್ಷತ್ರಮಂಡಲ ಮಧ್ಯದಲ್ಲಿ ಆವಿರ್ಭವಿಸಿದ ಪೂರ್ಣಚಂದ್ರಮಂಡಲದ್ವಯದಂತೆ ಭಾಸವಾಗುತ್ತಿತ್ತು. ರಾತ್ರಿ ಹತ್ತು ಘಂಟೆಯ ಸಮಯಕ್ಕೆ ಉತ್ಸವವು ಅರಮನೆಯನ್ನು ತಲುಪಿತು. ಆ ಕ್ಷಣದಲ್ಲಿಯೇ ವಿಜಯಯಾತ್ರಾಸಮಾಪ್ತಿಸೂಚಕಗಳಾದ 21 ಗುಂಡುಗಳು ಹಾರಿಸಲ್ಪಟ್ಟುವು. ಆದರೆ ಈ ವರ್ಷ ರಾಜಧಾನಿಯಲ್ಲಿ ಪ್ಲೇಗುರೋಗವು ಹೆಚ್ಚಿರುವುದೆಂಬ ವಾರ್ತೆಯು ಸರ್ವತ್ರ ಹಬ್ಬಿದ್ದರಿಂದ ದೂರದೇಶದವರು ಅಷ್ಟು ವಿಶೇಷವಾಗಿ ಆಗಮಿಸಿರಲಿಲ್ಲವು. ಈ ವರ್ಷ ದಸರಾಮಹೋತ್ಸವಕ್ಕೆ ಹೈದರಾಬಾದ ನಿಜಾಮುಸಾಹೇಬರ ಇಬ್ಬರು ಮಕ್ಕಳೂ ಹೈದರಾಬಾದ ಹೈಕೋರ್ಟ್ ಜಡ್ಜರಾದ ಮಿ|| ಸೆಂಟ ಸಿಹಾಲಸಿಂಗರವರೂ ಇವರೇ ಮೊದಲಾದವರು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಆಗಮಿಸಿದ್ದರು. ಒಟ್ಟಿಗೆ ಮಹೋತ್ಸವವು ವಿಶೇಷವೈಭವದಿಂದ ನೆರವೇರಿತು. ಅಸ್ತು ! ಭಾರತಧರ್ಮಾವಲಂಬಿಗಳಾದ ಅನೇಕಜನ ಮಹಾರಾಜರು ನಮ್ಮ ಭರತಖಂಡದಲ್ಲಿ ವಾಸವಾಗಿರುವರು. ಭಾರತಧರ್ಮಗಳನ್ನೆಲ್ಲಾ ಸಂಪೂರ್ಣವಾಗಿ ಅನುಷ್ಠಿಸುವ ಮಹಾರಾಜರೆಂದರೆ ನಮ್ಮ ಶ್ರೀಮನ್ಮಹಾರಾಜರೊಬ್ಬರೇ ಎಂದು ಹೇಳಬಹುದು. ಇವರಲ್ಲಿ ವಂಶಾನುಕ್ರಮವಾಗಿ ನೆಲೆಗೊಂಡಿರುವ ದೈವಭಕ್ತಿಯೂ, ಆಸ್ತಿಕ್ಯವೂ, ರಾಜತಂತ್ರನೈಪುಣ್ಯವೂ, ಗುರುಭಕ್ತಿಯೂ, ವೇದಾಗಮ ಪ್ರಾಮಾಣ್ಯಬುದ್ಧಿಯೂ, ಪ್ರಜಾರಕ್ಷಣ ಧೌರೇಯವೂ ವರ್ಣನೀಯವಾಗಿರುವುದು. ಈಗಣ ನವವಾತಾವರಣದಲ್ಲಿ ಭರತಖಂಡ ನಿವಾಸಿಗಳಾದ ಅನೇಕ ಜನ ಮಹರಾಜರು ತಮ್ಮ ಆರ್ಯಧರ್ಮಗಳಿಗೆ ಶರಣು ಹೊಡೆದು ಪರಧರ್ಮಾವಲಂಬನೋದ್ಯುಕ್ತರಾಗುತ್ತಿರುವರು. ನಮ್ಮನ್ನಾಳುವ ಮಹಾರಾಜರವರಾದರೋ ಕ್ಷಣೇ ಕ್ಷಣೇ ಆರ್ಯಧರ್ಮವೆಂಬ ಫಲವತ್ತಾದ ಮಹಾವೃಕ್ಷವನ್ನು ಬೆಳೆಯಿಸುವುದರಲ್ಲಿಯೇ ಆಸಕ್ತರಾಗಿರುತ್ತಾರೆ. ಇಂಥ ಧರ್ಮಪ್ರಭುಗಳ ಸಾಮ್ರಾಜ್ಯಚ್ಛತ್ರಚ್ಛಾಯೆಯಲ್ಲಿ ಬೆಳೆಯುತ್ತಿರುವ ಪ್ರಜೆಗಳೇ ಧನ್ಯರೆಂದು ಹೇಳಲು ಯಾವ ಅಭ್ಯಂತರವಿಲ್ಲ. ಪ್ರತಿವರ್ಷ ಪದ್ಧತಿಯಂತೆ ಮಹಾಪ್ರಭುಗಳು ಈ ಸಾರೆ ನಡೆದ ನವರಾತ್ರಮಹೋತ್ಸವಾವಸರದಲ್ಲಿ ಧರ್ಮಕಾರ್ಯಾಸಕ್ತರೂ ಅಧಿಕಾರಿಗಳೂ ಆದ ಅನೇಕರಿಗೆ ಪ್ರಶಸ್ತಿಗಳನ್ನು ದಯಪಾಲಿಸಿದ್ದಲ್ಲದೆ ಶಾಸ್ತ್ರಕೋವಿದರಾದ ಕೆಲ ಆಸ್ಥಾನ ವಿದ್ವಾಂಸರನ್ನು ಮಹಾವಿದ್ವಾಂಸರ ತರಗತಿಗೆ ಸೇರಿಸಿದರು. ಮೂರು ನಾಲ್ಕು ಜನ ಪಂಡಿತರನ್ನು ಹೊಸದಾಗಿ ಆಸ್ಥಾನ ವಿದ್ವಾಂಸರನ್ನಾಗಿ ಮಾಡಿದರು. ಇದಲ್ಲದೆ ಸುಮಾರು 20-30 ಜನ ಆಸ್ಥಾನ ಪಂಡಿತರಿಗೆ ಎರಡೆರಡು ರೂಪಾಯಿಗಳನ್ನು ಹೆಚ್ಚಿಸಿದರು. ಈ ವರ್ಷದ ನವರಾತ್ರಿಮಹೋತ್ಸವದಲ್ಲಿ ವೈದಿಕಮಹಾಜನಗಳಿಗೆ ಇಷ್ಟು ವಿಶೇಷವಾದ ರಾಜಸನ್ಮಾನವು ನಡೆದದ್ದರಿಂದ ವೈದಿಕವರ್ಗಕ್ಕಾದ ಸಂತೋಷವನ್ನು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಸಂಪೂರ್ಣ ದೇವಾಂಶಸಂಭೂತರಾದ ನಮ್ಮ ಮಹಾಪ್ರಭುವರ್ಯರಿಗೂ ಭಾವಿಪ್ರಭುವರ್ಯರಾದ ಜಯಚಾಮರಾಜಒಡೆಯರವರಿಗೂ ಶ್ರೀ ಜಗದಾಚಾರ್ಯರು ಸಂಪೂರ್ಣಾಯುರಾರೋಗ್ಯಭಾಗ್ಯಾದಿಗಳನ್ನೀಯುವುದಲ್ಲದೆ ಲೋಕವಿಖ್ಯಾತವಾದ ಯದುವಂಶವು ಆಚಂದ್ರಾರ್ಕವಾಗಿ ಭೂಮಿಯಲ್ಲಿ ನೆಲೆಗೊಳ್ಳುವಂತೆ ಅನುಗ್ರಹಿಸಲೆಂದು ಸದಾ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಅಖಿಲ ಕರ್ಣಾಟಕ ಸಾಹಿತ್ಯ ಪರಿಷತ್ತು ಮೈಸೂರು.

ರಾಜಧಾನಿಯ ಟೌನ್‌ಹಾಲಿನಲ್ಲಿ ನಿನ್ನೆ ಭಾನುವಾರದ ದಿವಸ ಪ್ರಾತಃಕಾಲ 8½ ಘಂಟೆಗೆ ಮೇಲ್ಕಂಡ ಪರಿಷತ್ತಿನ ಪ್ರಾರಂಭಮಹೋತ್ಸವವು ಮೈಸೂರು ಸೀಮೆಯ ದಿವಾನರವರಾದ ಮೆ|| ಎಂ. ಎನ್. ಕೃಷ್ಣರಾಯರವರ ಅಧಿಪತ್ಯದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಈ ಪ್ರಾರಂಭಮಹೋತ್ಸವಕ್ಕೆ ಮೈಸೂರು ಸೀಮೆಯ ಹೈಕೋರ್ಟ್ ಜಡ್ಜರಾದ ಮೆ|| ದೊರೆಸ್ವಾಮಿ ಅಯ್ಯರವರೂ, ಲಾ ಸೆಕ್ರೆಟರಿಗಳಾದ ಮೆ|| ಪಿ. ಮಹಾದೇವಯ್ಯನವರೂ, ರಾಜಕವಿಭೂಷಣ ಎಚ್. ಲಿಂಗರಾಜ ಅರಸರವರು, ವೃದ್ಧಪಿತಾಮಹ ಮ|| ರಾ|| ಎಂ. ವೆಂಕಟಕೃಷ್ಣಯ್ಯನವರು ಇವರೇ ಮೊದಲಾದ ಸುಪ್ರಸಿದ್ಧಪುರುಷರನೇಕರು ಆಗಮಿಸಿದ್ದುದರಿಂದ ಮೇಲ್ಕಂಡ ಪರಿಷತ್ತಿಗೆ ಲೋಕವಿಲಕ್ಷಣವಾದ ತೇಜಸ್ಸು ಪ್ರಾಪ್ತವಾಗಿತ್ತು. ಆದಿಯಲ್ಲಿ ಶಿಷ್ಟಸಂಪ್ರದಾಯಾನುಸಾರವಾಗಿ ದೇವತಾಪ್ರಾರ್ಥನೆಯಾದನಂತರ ದಿವಾನ್‌ಸಾಹೇಬರವರು ಕರ್ಣಾಟಕ ಭಾಷೆಯ ಪುನರುಜ್ಜೀವನದ ವಿಷಯದಲ್ಲಿ ಅತ್ಯಮೂಲ್ಯವಾದ ಭಾಷಣವನ್ನು ಮಾಡಿದರು. (ಈ ಭಾಷಣವು ಮುಂದಿನವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಡುವುದು). ಅನಂತರ ಸ್ವಾಗತಮಂಡಲಿಯ ಅಧ್ಯಕ್ಷರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಬಹುಜನಮನೋರಂಜಕವಾದ ಸ್ವಾಗತಪರಭಾಷಣವನ್ನು ಮಾಡಿ ಸರ್ವಸಾಮಾಜಿಕರನ್ನು ಆನಂದತುಂದಿಲಹೃದಯರನ್ನಾಗಿ ಮಾಡಿದರು. ಇವರ ಭಾಷಣವು ಈ ಮುಂದೆ ಪ್ರಕಟಿಸಲ್ಪಟ್ಟಿದೆ. ಸ್ವಾಗತ ಸಂಘಾಧ್ಯಕ್ಷರ ಭಾಷಣವಾದನಂತರ ಮೈಸೂರು ಡಿಸ್ಟ್ರಿಕ್ಟಿನ ಜಡ್ಜರವರಾದ ಮ|| ರಾ|| ಶಂಕರನಾರಾಯಣರಾಯರವರು ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ಸರ್ವರೀತಿಯಿಂದಲೂ ಧಾರವಾಡನಗರನಿವಾಸಿಗಳಾದ ಮ|| ರಾ|| ಆಲೂರು ವೆಂಕಟರಾಯರು ಅರ್ಹರಿದ್ದುದರಿಂದ ಅವರೇ ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂಬ ಸೂಚನೆಯನ್ನು ತಂದರು. ಇವರೀಸೂಚನೆಗೆ ಮಂಗಳೂರು, ಕೊಡಗು, ಹೈದರಾಬಾದ, ಬಿಜಾಪೂರ ಪ್ರಾಂತಗಳ ಕರ್ಣಾಟಕಸಂಘಗಳಿಂದ ಆಗಮಿಸಿದ ಪ್ರತಿನಿಧಿಗಳು ತಮ್ಮ ತಮ್ಮ ಅನುಮೋದನವನ್ನಿತ್ತರು. ಅನಂತರ ಅಧ್ಯಕ್ಷರು ಸಮಸ್ತ ಜನರ ಆನಂದಸೂಚಕಗಳಾದ ಚಪ್ಪಾಳೆಯ ಮಧ್ಯದಲ್ಲಿ ತಮ್ಮ ಅಧ್ಯಕ್ಷಸ್ಥಾನವನ್ನಲಂಕರಿಸಿ ಕರ್ಣಾಟಕದ ಏಕೀಕರಣ, ಕರ್ಣಾಟಕಭಾಷೆಯ ಮಹತ್ವ ಮೊದಲಾದ ವಿಷಯಗಳನ್ನು ಕುರಿತು ಬಹು ಬೆಲೆಯುಳ್ಳ ಭಾಷಣವನ್ನು ಮಾಡಿ ಸರ್ವರನ್ನೂ ಸಂತೋಷಗೊಳಿಸಿದರು. ಅನಂತರ ಬೊಂಬಾಯಿ ಇಲಾಖೆಯ ಪೋಸ್ಟ್ ಮಾಸ್ಟರ್ ಜನರಲ್‌ರವರಾದ ಮಿ|| ಬೇಪೂರರವರು, ಧಾರವಾಡ ಡಿ|| ಜಡ್ಜರಾದ ಮಿ|| ಲೋಕೂರರವರು, ಹೈದರಾಬಾದ್ ಕರ್ಣಾಟಕಸಂಘದವರು ಇವರೇ ಮೊದಲಾದವರು ತಂತಿಮೂಲಕ ಈ ಪರಿಷತ್ತಿನ ವಿಷಯದಲ್ಲಿ ಕಳುಹಿಸಿದ ಶುಭಸಂದೇಶಗಳನ್ನು ಪರಿಷತ್ತಿನ ಸೆಕ್ರೆಟರಿಯವರಾದ ಮ|| ರಾ|| ಟಿ. ಎಸ್. ವೆಂಕಣ್ಣಯ್ಯನವರು ಓದಿಹೇಳಿದರು. ಅನಂತರ ಸಾಹಿತ್ಯಪರಿಷತ್ತಿನ ವಾರ್ಷಿಕವರದಿಯು ಕಾರ್ಯದರ್ಶಿಗಳಿಂದ ಓದಿಹೇಳಲ್ಪಟ್ಟಿತು. ಅಷ್ಟಕ್ಕೆ ಸಮಯವಾದ್ದರಿಂದ ಸಭಾಕಾರ್ಯವು ಸಂಕ್ಷೇಪಿಸಲ್ಪಟ್ಟು ಬಾಲಿಕೆಯರ ಮನೋಹರವಾದ ದೇವತಾಸ್ತುತಿಯೊಡನೆ ಪೂರ್ತಿಗೊಳಿಸಲ್ಪಟ್ಟಿತು.

ಅನಂತರ ಶ್ರೀಮನ್ಮಹಾರಾಜ ಕಾಲೇಜಿನಲ್ಲಿ ಮಧ್ಯಾಹ್ನ 2½ ಘಂಟೆಗೆ ವಿಷಯನಿಯಾಮಕ ಸಮಿತಿಯು ಪ್ರಾರಂಭವಾಗಿ ವಿಷಯಗಳು ಚರ್ಚಿಸಲ್ಪಟ್ಟವು. ಸಾಯಂಕಾಲ 5 ಘಂಟೆಯ ಸಮಯಕ್ಕೆ ಸದರಿ ಕಾಲೇಜಿನಲ್ಲಿಯೇ ಕುಮಾರವ್ಯಾಸ ಜಯಂತ್ಯುತ್ಸವವು ನೆರವೇರಿಸಲ್ಪಟ್ಟಿತು. ಮುಂದೆ ನಡೆಯುವ ಕಾರ್ಯಕ್ರಮಗಳ ವಿಷಯವು ಮುಂದಿನ ವಾರದ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು. ಅಸಾಧಾರಣ ಕರ್ಣಾಟಕ ಭಾಷಾಭಿಮಾನಿಗಳಾದ ಮ|| ರಾ|| ಬಿ. ಎಂ. ಶ್ರೀಕಂಠಯ್ಯನವರು, ಮ|| ರಾ|| ಟಿ. ಎಸ್. ವೆಂಕಣ್ಣಯ್ಯನವರು ಇವರೇ ಮೊದಲಾದವರು ಈ ಪರಿಷತ್ತಿನ ವಿಷಯದಲ್ಲಿ ಬಹು ಶ್ರಮವಹಿಸಿ ತಾವು ಕೈಕೊಂಡಿರುವ ಕಾರ್ಯವನ್ನು ಅತ್ಯುತ್ತಮರೀತಿಯಿಂದ ನೆರವೇರಿಸಿ ಕರ್ಣಾಟಕಮಾತೆಯ ನೈಜವಾದ ಕೃಪೆಗೂ ಪ್ರೀತಿಗೂ ಪಾತ್ರರಾದರೆಂದು ಅತ್ಯಾನಂದದಿಂದ ಉದ್ಘೋಷಿಸಬೇಕಾಗಿದೆ. ಕರ್ಣಾಟಕಮಾತೆಗೆ ಜಯವಾಗಲಿ! ಕರ್ಣಾಟಕಭಾಷೆಯ ತೇಜಸ್ಸು ದಶದಿಕ್ಕುಗಳನ್ನು ಬೆಳಗಲಿ !! ಕರ್ನಾಟಕಾಧೀಶ್ವರರ ಧರ್ಮಸಾಮ್ರಾಜ್ಯವು ಆಚಂದ್ರಾರ್ಕವಾಗಿ ಭೂಮಂಡಲದಲ್ಲಿ ರಾರಾಜಿಸಲಿ !!!

ಕರ್ಣಾಟಕ ಸಾಹಿತ್ಯ ಸಮ್ಮೇಳನ ಮೈಸೂರು

ಸ್ವಾಗತಮಂಡಲಿಯ ಅಧ್ಯಕ್ಷರ ಭಾಷಣ

(ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ)

೫-೧೦-೧೯೩೦

ಕರ್ಣಾಟಕಭಕ್ತ, ಮಹಾಶಯರೆ,

ಹದಿನಾರನೆಯ ಕರ್ಣಾಟಕ ಸಾಹಿತ್ಯಸಮ್ಮೇಳನವು ತಮ್ಮ ಆತಿಥ್ಯದಲ್ಲಿ ನಡೆಯಬೇಕೆಂದು ಆಹ್ವಾನವಿತ್ತ ಮೈಸೂರು ವಿಶ್ವವಿದ್ಯಾನಿಲಯದ ಸಲುವಾಗಿಯೂ, ಆ ವಿದ್ಯಾಪೀಠದ ಪ್ರತಿನಿಧಿಗಳೂ ರಾಜಧಾನಿಯ ಮಹಾಜನರ ಪ್ರತಿನಿಧಿಗಳೂ ವಿಶ್ವಾಸದಿಂದ ಕಲೆತು ಸಹಕರಿಸಿರುವ ಸ್ವಾಗತಮಂಡಲಿಯ ಸಲುವಾಗಿಯೂ, ಕರ್ಣಾಟಕದ ಸಮಸ್ತ ಪ್ರಾಂತಗಳಿಂದಲೂ ಈ ಮಹೋತ್ಸವಕ್ಕೆ ದಯೆಮಾಡಿಸಿರುವ ಮಹನೀಯರಾದ ತಮ್ಮೆಲ್ಲರಿಗೂ

ಸುಖಾಗಮನವನ್ನು ಬಯಸುವ ಪುಣ್ಯ ನನಗೆ ಲಭಿಸಿದ್ದಕ್ಕಾಗಿ ನಾನು ಧನ್ಯನು. ಎಷ್ಟು ಶ್ರದ್ಧೆಯಿಂದ ನಾವು ಸೇವೆಮಾಡಿದರೂ, ಅದರಲ್ಲಿ ಇರಬಹುದಾದ ನ್ಯೂನತೆಗಳನ್ನು ಉದಾರಚಿತ್ತರಾದ ತಾವು ಮನಸ್ಸಿಗೆ ತಂದುಕೊಳ್ಳದೆ, ಅಮೋಘವಾದ ತಮ್ಮ ದೇಶಭಕ್ತಿಯನ್ನೂ ಭಾಷಾಭಿಮಾನವನ್ನೂ ಮುಂದಿಟ್ಟುಕೊಂಡು ಸುಪ್ರೀತರಾಗುತ್ತೀರೆಂದು ದೃಢವಾಗಿ ನಂಬಿದ್ದೇನೆ. ತಾವು ನಮ್ಮ ಊರಿಗೆ ದಯೆಮಾಡಿಸಿರುವ ಕಾಲ ನಮ್ಮೆಲ್ಲರ ದೊಡ್ಡ ಉತ್ಸವಕಾಲ, ನಮ್ಮ ಕನ್ನಡನಾಡಿನ ಮುಖ್ಯವಾದ ಹಬ್ಬ, ನವರಾತ್ರಿ. ಸರ್ವಕಾಲದಲ್ಲಿಯೂ ಚೆಲುವೆಯಾದ ನಮ್ಮ ನಗರಲಕ್ಷ್ಮಿ ಈಗಲಂತೂ ಹಬ್ಬದ ಉಡಿಗೆ ತೊಡಿಗೆಗಳಿಂದ ಅಲಂಕೃತಳಾಗಿ, ಹಸನ್ಮುಖಿಯಾಗಿ, ಪ್ರಸನ್ನಹೃದಯಳಾಗಿ, ಉಜ್ವಲಕಾಂತಿಯಿಂದ ಬೆಳಗುತ್ತಿರುವಳು. ಯಾರ ಕೃಪಾಕಟಾಕ್ಷದಿಂದ ನಮ್ಮ ನಗರಿ ಸಾಧಾರಣ ವೈಭವದಿಂದ ಮಹದೈಶ್ವರ್ಯಕ್ಕೆ ಏರಿದಳೋ, ಯಾರ ಪೂರ್ಣಕಲಾಪ್ರತಿಭೆಯಿಂದ ಆಕೆ ಭವನಗಳ ನಗರಿ, ಉದ್ಯಾನಗಳ ನಗರಿ, ಜ್ಯೋತಿರ್ಮಯಿ, ಶಾಂತಿಯ ನೆಲೆವೀಡು ಎಂಬುದಾಗಿ ಪ್ರಖ್ಯಾತಳಾಗಿರುವಳೋ, ಆ ನಮ್ಮ ಸರ್ವ ಕರ್ಣಾಟಕಪ್ರಿಯರಾದ, ಸರ್ವ ಕರ್ಣಾಟಕ ಪೂಜ್ಯರಾದ, ದಯಾಶೀಲರು, ಆದರ್ಶರಾಜರು, ಪುರಾತನ ನೂತನ ಸಂಸ್ಕೃತಿಸಮನ್ವಯಾಚಾರ್ಯರು, ಕರ್ಮಸಂನ್ಯಾಸಿಗಳು, ರಾಜರ್ಷಿಗಳು ಎಂಬುದಾಗಿ ಸರ್ವತ್ರ ಪ್ರಶಸ್ತರಾದ ನಮ್ಮ ಶ್ರೀಮನ್ಮಹಾರಾಜರವರ ಘನಸನ್ನಿಧಾನದಲ್ಲಿ ತಾವೆಲ್ಲರೂ ಆನಂದಪೂರಿತವಾದ ಹೃದಯವುಳ್ಳವರಾಗಿದ್ದೀರೆಂದೂ, ಉದ್ದೀಪಿತವಾದ ದೇಶಭಾಷಾ ವಾತ್ಸಲ್ಯಗಳುಳ್ಳವರಾಗಿದ್ದೀರೆಂದೂ, ಭಾರತಭೂಮಿಯಲ್ಲಿ ಈಗ ಜ್ವಲಿಸುತ್ತಿರುವ ನೂತನ ಜೀವಕಳೆಯನ್ನೂ, ನೂತನ ಧ್ಯೇಯಕಾರ್ಯಶಕ್ತಿಗಳನ್ನೂ ಗಾಂಭೀರ್ಯದೊಡನೆ ಕೂಡಿದ ಒಂದು ಸಂಯಮ ಶಕ್ತಿಯೊಡನೆ ಸಂಪೂರ್ಣವಾಗಿ ಇಲ್ಲಿಯೂ ಅನುಭವಿಸಿ, ತಾವೂ ನಾವೂ ಎಲ್ಲರೂ ಒಂದೇ ಎಂಬ ಉದಾರಭಾವನೆಯಿಂದ ಕೂಡಿದವರಾಗಿರುತ್ತೀರೆಂದೂ ನಾನು ನಿಸ್ಸಂದೇಹವಾಗಿ ಹೇಳಬಲ್ಲೆನು.

ಈ ಹೊಸ ಜೀವದ ಮತ್ತು ಹೊಸ ಧ್ಯೇಯದ ಸುಪ್ರೇರಣೆ ಸಾಹಿತ್ಯದಲ್ಲಿಯೂ ತನ್ನ ಪ್ರಭಾವವನ್ನು ತೋರಿಸುವುದು ಸಹಜವೇ ಆಗಿದೆ. ಪುನರುಜ್ಜೀವನವೆಂದು ಕೆಲವರು, ಸುಧಾರಣೆ ಎಂದು ಕೆಲವರು, ವಿಪ್ಲವ ಎಂದು ಕೆಲವರು ಈ ಮಾರ್ಪಾಟನ್ನು ಕರೆಯಬಹುದು. ಹೇಗೆ ಕರೆದರೂ ಒಂದು ಜನಪದವೂ, ಒಂದು ಸಾಹಿತ್ಯವೂ ನವಯುಗಕ್ಕೆ ಪ್ರವೇಶಮಾಡುವಾಗ ಹಿಂದಿನದರಲ್ಲಿ ಜೀವದಾಯಕವಾದ ಸಾರವನ್ನು ಉಳಿಸಿಕೊಳ್ಳುವುದೂ, ಮಲಿನವಾಗಿ ಜಾಡ್ಯ ಮುಸುಕಿರುವ ಬುದ್ಧಿಯನ್ನು ತಿದ್ದಿ ಹೊಸ ಮಾರ್ಗಕ್ಕೆ ಎಳೆದುಕೊಳ್ಳುವುದೂ, ಕೊಳೆತು ಕೆಟ್ಟು ಬದುಕಾಗದ, ಕೆಲಸಕ್ಕೆ ಅಡ್ಡಿಯಾಗಿ ಬರುವ ಭಾವಗಳನ್ನು ಕೊಯ್ದು ಹಾಕಿ, ನಿರ್ಮೂಲಮಾಡಿ, ಹೊಸ ನಡತೆಗಳನ್ನು ನೆಡುವುದಕ್ಕೆ ಅವಕಾಶಮಾಡಿಕೊಳ್ಳುವುದೂ ಅವಶ್ಯಕವಾದ ಕ್ರಿಯೆಗಳಾಗಿವೆ. ಕರ್ಣಾಟಕದೇಶದಲ್ಲಿ ಈ ನವಚೈತನ್ಯ ಬೇರೂರಿ ಜಾಗ್ರತೆಯಾಗಿ ಬೆಳೆದು ಕಾರ್ಯಕ್ಷೇತ್ರದಲ್ಲಿ ವ್ಯಾಪಿಸಿಕೊಳ್ಳುತ್ತಿದೆ; ಮತ್ತು ಚರಿತ್ರೆ ಕಾರಣವಾಗಿ ಹೆಚ್ಚು ಸಂಪರ್ಕಕ್ಕೆ ಅವಕಾಶವಿಲ್ಲದಿರುವ ಕರ್ಣಾಟಕದೇಶದ ಬೇರೆ ಬೇರೆ ಪ್ರಾಂತಗಳು ಬೇರೆ ಬೇರೆ ರೀತಿಗಳಲ್ಲಿ ಬೇರೆ ಬೇರೆ ಶಕ್ತಿಗಳೊಡನೆ ಕೆಲಸಮಾಡುತ್ತಿದ್ದರೂ, ಎಲ್ಲರ ಧ್ಯೇಯವೂ, ಆಸೆಯೂ, ಗುರಿಯೂ ಒಂದೇ ಆಗಿರುತ್ತದೆ:—ಕನ್ನಡ ಸಾಹಿತ್ಯ ಶ್ರೇಷ್ಠವಾಗಬೇಕೆನ್ನುವುದು; ಕನ್ನಡಿಗರು ಗಣ್ಯತೆಯಲ್ಲಿ ಯಾರಿಗೂ ಹಿಂದಾಗಬಾರದೆನ್ನುವುದು. ಈ ನಾನಾ ಪ್ರಾಂತಗಳನ್ನೂ, ರೀತಿಗಳನ್ನೂ, ಶಕ್ತಿಗಳನ್ನೂ ಒಂದುಗೂಡಿಸಿ ಸರ್ವ ಕರ್ಣಾಟಕವೂ ಈ ಮಹತ್ಕಾರ್ಯದಲ್ಲಿ ಹೆಮ್ಮೆಯಿಂದಲೂ, ಅಕ್ಕರೆಯಿಂದಲೂ ಭಾಗಿಗಳಾಗಲು ಸಾಧ್ಯವಾದಮಟ್ಟಿಗೂ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವುದೇ ನಮ್ಮ ಸಮ್ಮೇಳನದ ಉದ್ದೇಶ. ಈ ಸಮ್ಮೇಳನವು ನಮ್ಮ ಏಕಭಾವದ ಚಿಹ್ನೆ, ಚಿನ್ನದ ಕಟ್ಟು.

ಈ ಸಮ್ಮೇಳನಗಳಿಗೆ ಮೂಲಾಧಾರವಾದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ನಿರ್ಮಾಪಕರು ಶ್ರೀಮನ್ಮಹಾರಾಜರವರ ಘನ ಸರ್ಕಾರದವರು. ಮೊದಲು, ಸಹಜವಾಗಿ, ಈ ಸಮ್ಮೇಳನವು ಮೈಸೂರು, ಬೆಂಗಳೂರು ರಾಜಧಾನಿಗಳಲ್ಲಿ ಸಭೆಮಾಡಿ, ಬಳಿಕ ತನ್ನ ಬೆಳಕನ್ನು ಕನ್ನಡನಾಡಿನಲ್ಲೆಲ್ಲಾ ಬೀರುವುದಕ್ಕೆ ಹೊರಟು, ಪ್ರಧಾನ ನಗರಗಳಾದ ಧಾರವಾಡ, ಬೆಳಗಾಂವಿ, ಬಿಜಾಪುರ, ಬಳ್ಳಾರಿ, ಕಲ್ಬುರ್ಗಿ, ಮಂಗಳೂರು ಮುಂತಾದ ಮಧ್ಯರಾಷ್ಟ್ರದ ಮತ್ತು ಗಡಿಪ್ರಾಂತಗಳ ತೇಜಸ್ಸನ್ನು ಸ್ವೀಕರಿಸಿ ಕಳೆತುಂಬುತ್ತಾ, ಮತ್ತೆ ಕರ್ಣಾಟಕ ಕೇಂದ್ರಸ್ಥಾನವಾದ ಮೈಸೂರು ನಗರಿಗೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಭಿಮಾನದಿಂದ ಈ ಸಲ ಬಂದು ಸೇರಿರುವುದು. ಈ ಹದಿನಾರು ವರ್ಷಗಳ ಸಾಧನೆಯನ್ನು ಸಂಕ್ಷೇಪವಾಗಿ ಇಲ್ಲಿ ಪ್ರಸ್ತಾಪಿಸಿದರೆ ಅಪ್ರಕೃತವಾಗಲಾರದೆಂದು ಎಣಿಸುತ್ತೇನೆ. ಇದಕ್ಕೆ ಹಿಂದಿನ ಕಾಲದ ಸಾಹಿತ್ಯದ ಚರಿತ್ರೆಯನ್ನೂ ಸ್ವಲ್ಪಮಟ್ಟಿಗೆ ಗಮನಿಸುವುದು ಅವಶ್ಯಕವಾಗಿರುವುದು.

ಸಾಹಿತ್ಯವು ರಾಜಾಶ್ರಯವನ್ನು ಪೂರ್ವದಿಂದಲೂ ಅನುಸರಿಸಿರುವುದು ಎಲ್ಲರೂ ಬಲ್ಲ ವಿಷಯ. ಎಲ್ಲಿ ಪ್ರಬಲವಾದ ರಾಜಾಸ್ಥಾನವೋ ಅಲ್ಲಿ ಪ್ರೌಢಸಾಹಿತ್ಯ. ಸಾರ್ವಭೌಮರು, ಮಹಾ ಮಂಡಲೇಶ್ವರರು, ಪ್ರಧಾನರು, ದಂಡನಾಯಕರು, ಮುಖ್ಯ ಮಠಾಧಿಪತಿಗಳು, ಯೋಗಿಗಳು ನೆಲಸಿರುವ ಸ್ಥಳಗಳಲ್ಲಿ ದೇಶದ ಹಿತಚಿಂತಕರಾದ ಪಂಡಿತರೂ, ಕವಿಗಳೂ ಬಂದು ನೆರೆಯುವರು. ಸಾಮ್ರಾಜ್ಯಲಕ್ಷ್ಮಿ ಒಂದು ಕಡೆ ಬಹುಕಾಲ ನೆಲೆಸಿರುವಳಲ್ಲವಾದುದರಿಂದ ರಾಷ್ಟ್ರಕೂಟರ ಮತ್ತು ಚಾಳುಕ್ಯರ ಆಧಿಪತ್ಯದಲ್ಲಿ ಉತ್ತರ ಕರ್ಣಾಟಕವೇ ಕನ್ನಡ ಸಾಹಿತ್ಯಕ್ಕೆ ಅಸ್ತಿಭಾರವನ್ನು ಹಾಕುವ ಪುಣ್ಯವನ್ನು ಪಡೆಯಿತು. ಗಂಗರು ಉನ್ನತಸ್ಥಿತಿಗೆ ಬಂದಮೇಲೆ ಜೈನರ ಪವಿತ್ರಕ್ಷೇತ್ರವಾದ ಶ್ರವಣಬೆಳ್ಗೊಳದ ಅಭ್ಯುದಯದ ದಿವಸಗಳಲ್ಲಿ ದಕ್ಷಿಣ ಕರ್ಣಾಟಕಕ್ಕೂ ಸಾಹಿತ್ಯಸೇವೆಯನ್ನು ಮಾಡುವ ಅದೃಷ್ಟ ಒದಗಿತು. ಕಾಲಪರಿವರ್ತನೆಯಿಂದ ಕಳಚೂರ್ಯರು ಉತ್ತರದಲ್ಲಿ, ಹೊಯ್ಸಳರು ದಕ್ಷಿಣದಲ್ಲಿ, ವಿಜಯನಗರದರಸರು ಉತ್ತರದಲ್ಲಿ, ಮೈಸೂರು ಮಹಾರಾಜರು ದಕ್ಷಿಣದಲ್ಲಿ ಪ್ರವೃದ್ಧಿಗೆ ಬಂದಬಂದಹಾಗೆಲ್ಲಾ ಒಮ್ಮೆ ಇತ್ತಕಡೆ, ಒಮ್ಮೆ ಅತ್ತಕಡೆ ಸಾಹಿತ್ಯದ ತೆಲೆತೂಗುತ್ತಿತ್ತು. ಒಟ್ಟಿನ ಮೇಲೆ ೧೦ ನೆಯ ಶತಮಾನದಿಂದ ೧೭ ನೆಯ ಶತಮಾನದವರೆಗೂ ಸಾಹಿತ್ಯಕ್ಕೆ ಹೆಚ್ಚು ಸೇವೆ ಉತ್ತರ ಕರ್ಣಾಟಕದಿಂದಲೇ ನಡೆಯಿತು; ನಾಗಚಂದ್ರ, ಲಕ್ಷ್ಮೀಶ ಮುಂತಾದ ಚರ್ಚಾಸ್ಪದರಾಗಿರುವ ಕೆಲವು ಕವಿಗಳನ್ನು ಬಿಟ್ಟರೆ, ಪಂಪ, ಪೊನ್ನ, ರನ್ನ, ಮಧುರ, ರತ್ನಾಕರ, ಹರೀಶ್ವರ, ರಾಘವಾಂಕ, ಚಾಮರಸ, ಭೀಮ, ವಿರೂಪಾಕ್ಷ, ಕುಮಾರವ್ಯಾಸ, ಕುಮಾರವಾಲ್ಮೀಕಿ, ನಿತ್ಯಾತ್ಮ ಶುಕ ಮುಂತಾದ ಉದ್ದಾಮ ಕವಿಗಳು ಉತ್ತರ ಕರ್ಣಾಟಕದವರು; ಚಾವುಂಡರಾಯ, ನಾಗವರ್ಮ, ನೇಮಿಚಂದ್ರ, ಜನ್ನ, ಮಲ್ಲಿಕಾರ್ಜುನ, ಷಡಕ್ಷರಿ, ರುದ್ರಭಟ್ಟ ಮುಂತಾದವರು ದಕ್ಷಿಣ ಕರ್ಣಾಟಕದವರು. ಸ್ಥೂಲದೃಷ್ಟಿಯಿಂದ ಮಾತ್ರ ಈ ವಿಭಾಗವನ್ನು ನಾನು ಹೇಳುತ್ತಿರುವುದು, ಕರ್ಣಾಟಕ ಭೇದದೃಷ್ಟಿಯಿಂದಲ್ಲ.

೧೭ನೆಯ ಶತಮಾನದಿಂದೀಚೆಗೆ ವಿಜಯನಗರದ ಸಿಂಹಾಸನವು ಮೈಸೂರು ಮಹಾರಾಜರುಗಳ ವಶವಾದದ್ದು ದಕ್ಷಿಣಕರ್ಣಾಟಕಕ್ಕೆ ಸಾಹಿತ್ಯ ಕೃಷಿಗೆ ಹೆಚ್ಚು ಅನುಕೂಲ್ಯ ದೊರಕಿತು. ಈ ಕಾರ್ಯಸಮಾರಂಭದಲ್ಲಿ ಮೂವರು ಪ್ರಸಿದ್ಧರಾದ ರಾಜರ ಹೆಸರನ್ನು ಹಿಡಿದು, ಮೂರು ಘಟ್ಟಗಳನ್ನು ವಿಂಗಡಿಸಬಹುದು. ಮೊದಲು, ಚಿಕ್ಕದೇವರಾಜ ಒಡೆಯರ ಕಾಲ. ಶ್ರೀರಂಗಪಟ್ಟಣದಲ್ಲಿ, ಶ್ರೀರಂಗನಾಥ ಸ್ವಾಮಿಯವರ ಸಾನ್ನಿಧ್ಯದಲ್ಲಿ ಶ್ರೀರಂಗಪಟ್ಟಣದ ಕಾವೇರಿಯ ನೀರನ್ನು ಕುಡಿದು ಬೆಳೆದವನಾದ ನಾನು ಈ ಅಂಶವನ್ನು ಸ್ವಲ್ಪ ಉತ್ಸಾಹಪೂರ್ವಕವಾಗಿ ವಿಸ್ತರಿಸಿದರೆ ತಾವು ಮನ್ನಿಸುವವರೇ ಆಗಿದ್ದೀರಿ. ಚಿಕ್ಕದೇವರಾಜರ ಪ್ರೇರಣೆಯಿಂದ ಅವರ ಅಚ್ಚುಮೆಚ್ಚಿನ ಗೆಳೆಯರಾದ ತಿರುಮಲಾರ್ಯರ ಸಹಾಯದಿಂದ, ಕನ್ನಡ ಸಾಹಿತ್ಯಕ್ಕೆ ಪ್ರಬಲವಾದ ಪ್ರೋತ್ಸಾಹ ಸಿಕ್ಕಿತು. ಹಳಗನ್ನಡಗ್ರಂಥಗಳನ್ನು ಸಂಗ್ರಹಿಸಿ ಪ್ರತಿಗಳನ್ನು ಮಾಡಿಸಿದರು; ಹಳಗನ್ನಡದಲ್ಲಿ ಕಾವ್ಯಗಳನ್ನು ಬರೆಯಿಸಿದರು, ತಾವೇ ಬರೆದರು; ಸನಾತನ ಧರ್ಮದ ತಿರುಳನ್ನೂ, ಶ್ರೀವೈಷ್ಣವಮತದ ಸಾರವನ್ನೂ, ಆಳ್ವಾರ್ ಅವರ ದಿವ್ಯಚರಿತ್ರೆಗಳನ್ನೂ ಜನರಿಗೆ ಕನ್ನಡದಲ್ಲಿ ತಿಳಿಸಿದರು. ನಾಟಕ—ಹಿಂದಿನ ಸಾಹಿತ್ಯದಲ್ಲಿ ನಮಗೆ ಇದುವರೆಗೆ ದೊರೆತಿರುವ ನಾಟಕ ತಿರುಮಲಾರ್ಯರ ತಮ್ಮ ಸಿಂಗರಾರ್ಯನ ಮಿತ್ರವಿಂದಾ ಗೋವಿಂದ ಎಂಬುದೊಂದೇ—ನಾಟಕವನ್ನು ಹೂಡಿಸಿದರು; ಚರಿತ್ರೆಯನ್ನು ಶಿಲಾಲೇಖಗಳ, ವಂಶಾವಳಿಗಳ ಆಧಾರದ ಮೇಲೆ ಕೂಡಿಸಿದರು; ಪುರಾಣೇತಿಹಾಸ ಭಗವದ್ಗೀತಾದಿಗಳನ್ನು ಕನ್ನಡಗದ್ಯದಲ್ಲಿ ಹರಡಿದರು. ಎಲ್ಲಾ ಮತದ ಕವಿಗಳಿಗೂ ಆಶ್ರಯವನ್ನಿತ್ತರು. ರಾಣಿವಾಸದ ಊಳಿಗದವಳಾದ ಸಂಚಿಯ ಹೊನ್ನಮ್ಮನಿಂದ ಹದಿಬದೆಯಧರ್ಮವೆಂಬ ಸಾಂಗತ್ಯವನ್ನು ಹಾಡಿಸಿ ಪೂರ್ವದಲ್ಲಿ ಸ್ತ್ರೀಯರೂ ಸಾಹಿತ್ಯಸಾಧಕರಾಗಿದ್ದದ್ದನ್ನು ಸ್ಥಿರೀಕರಿಸಿದರು. ಎರಡನೆಯ ಘಟ್ಟವಾಗಿ ಮುಮ್ಮಡಿ ಕೃಷ್ಣರಾಜಒಡೆಯರ ಕಾಲವನ್ನು ಹೇಳಬಹುದು. ಈ ರಾಜರ ಪ್ರೋತ್ಸಾಹದಲ್ಲಿ ಆರ್ಯರ ಅಪಾರವಾದ ಸಂಸ್ಕೃತಸಾಹಿತ್ಯ ಸಮುದ್ರದ ಶಿರೋರತ್ನಗಳಾದ ಭಾರತ, ರಾಮಾಯಣ ಪುರಾಣಕಾವ್ಯಗಳನ್ನು ಆಯ್ದು ಕನ್ನಡ ವಚನದಲ್ಲಿ ಕನ್ನಡಿಗರಿಗೆ ಹೃದ್ಗತವಾಗುವಂತೆ ಮಾಡಿದರು. ಚಾಮರಾಜ ಒಡೆಯರ ಕಾಲದಲ್ಲಿ ಈ ಸಂಸ್ಕೃತಸಾಹಿತ್ಯದ ಸಂಪಾದನೆಯ ಜೊತೆಗೆ ಮೈಸೂರಿಗೆ ಒದಗಿದ ಇಂಗ್ಲಿಷ್ ವಿದ್ಯಾಭ್ಯಾಸ ಸಾಹಿತ್ಯ ಸಂಸ್ಕೃತಿಗಳ ಪ್ರಾಬಲ್ಯದಿಂದ ಹೊಸ ಅಭಿರುಚಿಗಳೂ, ದೃಷ್ಟಿಗಳೂ ಉಂಟಾಗಿ, ಧಾರ್ಮಿಕಸಾಹಿತ್ಯದ ಪಕ್ಕದಲ್ಲಿ ಲೌಕಿಕಸಾಹಿತ್ಯವೂ ವೃದ್ಧಿಯಾಗುತ್ತ ಬಂತು. ಕಾಳಿದಾಸ ಮುಂತಾದ ಸಂಸ್ಕೃತ ಮಹಾಕವಿಗಳ ನಾಟಕಗಳೂ, ಷೇಕ್ಸ್‌ಪಿಯರ್ ಮುಂತಾದ ಇಂಗ್ಲಿಷ್ ಮಹಾಕವಿಗಳ ನಾಟಕಗಳೂ ಕನ್ನಡವಾದುವು. ಅನೇಕ ವಿದ್ವನ್ಮಣಿಗಳು ಹೊಸ ಸಾಹಿತ್ಯಸೃಷ್ಟಿಯಲ್ಲಿ ಬದ್ಧಕಂಕಣರಾದರು. ಪೂರ್ವದ ಶ್ರೇಷ್ಠಕಾವ್ಯಗಳು ಪ್ರಕಾಶಕ್ಕೆ ಬಂದುವು. ಮದರಾಸು ಬೊಂಬಾಯಿ ವಿಶ್ವವಿದ್ಯಾನಿಲಯಗಳೂ, ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘವೂ ಕನ್ನಡ ವಿದ್ಯೆಯ ಪ್ರಚಾರಣೆಯನ್ನು ಅವಕಾಶ ಸಿಕ್ಕಿದ ಹಾಗೆಲ್ಲಾ ಹುರಿಗೊಳಿಸುತ್ತ ಬಂದುವು. ಸ್ವದೇಶದವರಾದ ರಾಜರಿಲ್ಲದ ಕಡೆ ಪ್ರಜೆಗಳೇ ಹೆಚ್ಚು ಕಾರ್ಯಭಾರವನ್ನು ವಹಿಸಿದರು. ಮೈಸೂರು, ಮಂಗಳೂರು, ಧಾರವಾಡ, ಈ ಪ್ರಾಂತದ ಸಾಹಿತ್ಯ ಸೇವಕರು ಏಕೀಭವಿಸಿ ಕೆಲಸಮಾಡಲು ಆರಂಭಿಸಿದರು. ಕನ್ನಡನಾಡು ಸಂಸ್ಕೃತಿಯಲ್ಲಿ, ಸಾಹಿತ್ಯದಲ್ಲಿ ಒಂದುಗೂಡುತ್ತ ಬಂತು.

ನಮ್ಮನ್ನಾಳುವ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಮಹಾಸ್ವಾಮಿಯವರ ರಾಜ್ಯಪರಿಪಾಲನೆಯಲ್ಲಿ ಸಂಸ್ಕೃತ ಇಂಗ್ಲಿಷ್ ವಿದ್ಯೆಗಳಿಗೆ ಇರುವ ಪೋಷಣೆಯೂ ಗೌರವವೂ ಕನ್ನಡಕ್ಕೂ ಶಾಶ್ವತವಾಗಿ ಬಂದು ನೆಲಸಿದುವು. ಪೂರ್ವದ ಆರಂಭಕ್ಕೆಲ್ಲಾ ಸುವೃಷ್ಟಿಯಾಗಿ ಪೂರ್ಣಫಲವನ್ನು ಭೋಗಿಸುವ ದೆಶೆ ತಿರುಗಿತು. ಸರ್ಕಾರದವರು ಪರಿಷತ್ತನ್ನು ಏರ್ಪಡಿಸಿ ಸಾಹಿತ್ಯಕಾರ್ಯವನ್ನು ಒಂದು ನಿಬಂಧನೆಗೆ ತಂದರು. ವಿಶ್ವವಿದ್ಯಾನಿಲಯವೂ ಶಿಕ್ಷಣಶಾಖೆಯೂ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನೀಯುತ್ತಲೂ, ಹಳೆಯ ಗ್ರಂಥಗಳನ್ನೂ ಪರಿಶೋಧಿಸಿ ಮುದ್ರಣಗೊಳಿಸುತ್ತಲೂ, ನವೀನ ಕಾಲದ ನಡವಳಿಕೆಗೆ ಬೇಕಾದ ರೀತಿಯಲ್ಲಿ ಹೊಸ ಪುಸ್ತಕಗಳನ್ನು ಬರೆಯಿಸುತ್ತಲೂ ಭಾಷಾಭಿವೃದ್ಧಿಕಾರ್ಯವನ್ನು ಕೈಗೊಂಡಿರುವರು. ಹಲವರು ದೇಶಭಕ್ತರು ಕಷ್ಟನಷ್ಟಗಳನ್ನು ಲಕ್ಷ್ಯಮಾಡದೆ ಮಾಸಪತ್ರಿಕೆ ವೃತ್ತಾಂತಪತ್ರಿಕೆಗಳ ಮೂಲಕ ಕನ್ನಡದ ಶೈಲಿಯನ್ನೂ, ಭಾವಗಳನ್ನೂ, ಚೈತನ್ಯವನ್ನೂ ಹುರಿಪುಗೊಳಿಸುತ್ತಿರುವರು. ಎಲ್ಲಕ್ಕಿಂತ ಅತಿಶಯವಾಗಿ ವಿದ್ಯಾರ್ಥಿಗಳು ಕರ್ಣಾಟಕದ ಎಲ್ಲಾ ಭಾಗಗಳಲ್ಲಿಯೂ, ಕಡೆಗೆ ಹತ್ತುಜನ ಕನ್ನಡ ವಿದ್ಯಾರ್ಥಿಗಳು ಸೇರಿದ ಪರಸ್ಥಳಗಳಲ್ಲಿ ಕೂಡ ಕನ್ನಡ ಸಂಘಗಳನ್ನು ಸ್ಥಾಪಿಸಿಕೊಂಡು ಭಾಷಾಸೇವೆಗೆ ಸಿದ್ಧವಾಗುತ್ತಿದ್ದಾರೆ. ಇಂತಹ ಉತ್ಸಾಹಭರಿತರಾದ ಯುವಕ ವೀರರ ಕೈಗೆ ಹಿರಿಯರಾದ ಭಾಷಾಪ್ರೇಮಿಗಳ ಕಯ್ಯಿಂದ ಸಾಹಿತ್ಯಜ್ಯೋತಿ ಸಾಗುತ್ತಿದೆ. ಈ ಯುವಕರ ಸ್ವದೇಶಭಕ್ತಿ, ಸಾಹಸಗಳನ್ನು ನೋಡಿದ ಯಾವ ವೃದ್ಧನಿಗೆ ತಾನೇ ಹೃದಯದಲ್ಲಿ ರಕ್ತ ಮತ್ತೆ ಬಿಸಿಯಾಗಿ ಯೌವನ ಮತ್ತೊಮ್ಮೆ ಚಿಮ್ಮದೆ ಇದ್ದೀತು?

ಮಹಾಶಯರೆ, ಪೂರ್ವಕಾವ್ಯರಾಶಿ ಪ್ರಕಾಶಕ್ಕೆ ಬಂದು, ನಮ್ಮ ಹಿರಿಯರು ಕೂಡಿಸಿಟ್ಟಿದ್ದ ನಿಕ್ಷೇಪ

[8 ನೆಯ ಪುಟವನ್ನು ನೋಡಿ-]

(3 ನೆಯ ಪುಟದಿಂದ ಮುಂದುವರಿದುದು.)

ಕೇಳುವದಕ್ಕಾಗಿ ಪ್ರಜೆಗಳ ಹಣವನ್ನು ವೆಚ್ಚಮಾಡುವದನ್ನು ನೋಡಿ ನನಗೆ ಆಶ್ಚರ್ಯವಾಗಿರುವದು. ಏನಾದರೂ ಮಾಯೆಯಬಲದಿಂದಲೇ ಪರಿಷತ್ತು ಫಲಕಾರಿಯಾಗಿ ಪರಿಣಮಿಸಬೇಕಾಗಿರುವದು. ಇಲ್ಲವಾದರೆ ಅದು ಅಪಾರ ದ್ರವ್ಯವ್ಯಯದಿಂದ ಮಾಡಿದ ಹಾಸ್ಯದ ಕೂಟವೇ ಆಗಿಹೋಗುವದು.

ಕೆಲವು ಸಂದರ್ಭಗಳನ್ನು ಪರಿಶೀಲಿಸಿದರೆ ಭರತಖಂಡದ ರಾಜಕೀಯ ಸಮಸ್ಯೆಯನ್ನು ಬಿಡಿಸಲು ದುಂಡುಮೇಜಿನ ಪರಿಷತ್ತೇ ಸರ್ವೋತ್ತಮವಾದ ಉಪಾಯವೆಂದು ತೋರುವದು. ಮಹಾತ್ಮಾ ಗಾಂಧಿಯವರು ಸಹ ತಮ್ಮ ಜುಲೈ 23 ನೆಯ ತಾರೀಖಿನ ಪತ್ರದಲ್ಲಿ 'ದುಂಡುಮೇಜಿನ ಪರಿಷತ್ತಿನಲ್ಲಿ ಸಂಪೂರ್ಣ ಸ್ವರಾಜ್ಯದ ಅಧಿಕಾರವನ್ನು ವಹಿಸುವ ಪೂರ್ವದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಮಾತ್ರ ಚರ್ಚಿಸುವದಾದರೆ, ನನ್ನ ಆಕ್ಷೇಪಣೆಯೇನೂ ಇಲ್ಲ. ಆದರೆ ಸ್ವಾತಂತ್ರ್ಯದ ಪ್ರಶ್ನೆಯನ್ನು ಯಾರಾದರೂ ಪ್ರತಿಭಟಿಸಿದರೂ ಅದನ್ನು ರದ್ದುಮಾಡಕೂಡದೆಂಬುದನ್ನು ಎಲ್ಲರೂ ಚೆನ್ನಾಗಿ ಅರಿತಿರಬೇಕು.' ಎಂದು ಬರೆದಿರುವರು. ಆದರೆ ಸದ್ಯಃ ಪರಿಷತ್ತು ಕೂಡಲಿರುವ ಸ್ಥಿತಿಗತಿಗಳನ್ನು ನೋಡಿದರೆ, ಅದು ಸಂಪೂರ್ಣ ನಿಷ್ಪ್ರಯೋಜನಕಾರಿಯಾಗುವದೆಂದೇ ತೋರುವದು.

ಶಾಂತಿಸಂಧಾನವು ನಿಷ್ಪ್ರಯೋಜನವಾದ ವಿಷಯದಲ್ಲಿ ನಾನೇನೂ ಹೆಚ್ಚಾಗಿ ಹೇಳುವದಿಲ್ಲ. ಆದರೆ ಅದರಿಂದ ಹೊರಬಿದ್ದಿರುವ ಒಂದು ಮಹತ್ವದ ವಿಷಯವನ್ನು ಮಾತ್ರ ನಾವೆಂದೂ ಅಲಕ್ಷಿಸುವಂತಿಲ್ಲ. ಪಂ|| ಮೋತೀಲಾಲ ನೆಹರೂರವರು ಜೂನ್ 25ನೆಯ ತಾರೀಖಿನ ತಮ್ಮ ಮೊದಲನೆಯ ಹೇಳಿಕೆಯಲ್ಲಿಯೇ (1) ಬ್ರಿಟಿಷ್ ಮತ್ತು ಇಂಡಿಯಾ ಸರಕಾರದವರು ದುಂಡುಮೇಜಿನ ಪರಿಷತ್ತಿನಲ್ಲಿ "ಸಾಮ್ರಾಜ್ಯಾಂತರ್ಗತ ಸ್ವರಾಜ್ಯ"ವನ್ನು ಬಯಸುತ್ತಿರುವ ಭರತಖಂಡದ ಪಕ್ಷವನ್ನೇ ಹಿಡಿದು ವಾದಿಸುವದಾಗಿ ಭರವಸೆಯಿತ್ತರೆ, (2) ನಾವು ಕಾಯಿದೆಭಂಗದ ಚಳವಳಿಯನ್ನು ನಿಲ್ಲಿಸಿದ ಕೂಡಲೇ ಸರಕಾರವೂ ಸಹ ತನ್ನ ದಬ್ಬಾಳಿಕೆಯನ್ನು ನಿಲ್ಲಿಸಿ, ಎಲ್ಲ ರಾಜಕೀಯ ಬಂದಿಗಳನ್ನೂ ಬಿಡುಗಡೆಮಾಡುವದಾದರೆ, ಹಾಗೂ (3) ಕಾಂಗ್ರೆಸ್ಸಿನವರು ದುಂಡುಮೇಜಿನ ಪರಿಷತ್ತಿಗೆ ಹೋಗಲು ಅವರ ಷರತ್ತುಗಳನ್ನು [illegible] ಒಪ್ಪಿಕೊಳ್ಳುವದಾದರೆ ತಾವು ಕಾಂಗ್ರೆಸ್ [illegible] ದುಂಡುಮೇಜಿನ ಪರಿಷತ್ತಿಗೆ ಹೋಗುವಂತೆ ಒಪ್ಪಿಸುವ[illegible]ವು. ಲಾರ್ಡ್ ಅರ್ವಿನ್ನರು ಜುಲೈ 16 ನೇ ತಾರೀಖಿನಲ್ಲಿ ಎಂ|| ಜಯಕರ್‌ರವರಿಗೆ ಬರೆದ ಪತ್ರದಲ್ಲಿ ಪಂಡಿತ ಮೋತೀಲಾಲರ ಪ್ರಶ್ನೆಗಳ ಪೂರ್ವಭಾಗಕ್ಕೆ ಒಪ್ಪಿದಂತೆಯೇ ತೋರಿತು. ಏಕೆಂದರೆ ಅವರು ಅದರಲ್ಲಿ "ಭಾರತೀಯರು ರಾಜ್ಯಾಡಳಿತದಲ್ಲಿ ಸಾಧ್ಯವಾದಷ್ಟು ಹೆಚ್ಚು ಭಾರವನ್ನು ಹೊತ್ತುಕೊಳ್ಳುವಂತೆ ಮಾಡಬೇಕೆಂಬುದೇ ನನ್ನ ಮತ್ತು ಚಕ್ರವರ್ತಿ ಸಾರ್ವಭೌಮರ ಸರಕಾರದ ಅಭಿಲಾಷೆಯಾಗಿರುವದು. ಆದರೆ ಇದರ ತೀರ್ಮಾನವು ಪರಿಷತ್ತಿನಲ್ಲಿ ಆಗುವದು. ಉಭಯದೇಶೀಯರು ಪರಸ್ಪರ ನಂಬಿಕೆಯಿಂದ ವರ್ತಿಸುವದಾದರೆ ಸರ್ವಸಮ್ಮತವಾದ ತೀರ್ಮಾನವನ್ನು ಸುಲಭವಾಗಿ ಮಾಡಬಹುದು" ಎಂದು ಬರೆದಿರುವರು. ಈ ಪರಸ್ಪರ ಸೌಹಾರ್ದಭಾವವು ಭರತಖಂಡದಲ್ಲಿ ನೆಲೆಗೊಂಡಿದ್ದರೆ, ಶಾಂತಿಸಂಧಾನವು ಫಲಕಾರಿಯಾಗುತ್ತಲೇ ಇದ್ದಿತು. ಈ ವಿಷಯದಲ್ಲಿ ನಾನು ಹೆಚ್ಚಾಗಿ ಏನೂ ಹೇಳದೆ, ಮುಖಂಡರೆಲ್ಲರೂ ಒಟ್ಟಾಗಿ ಸೆಪ್ಟೆಂಬರು 5 ನೇ ತಾರೀಖಿನ ದಿವಸ ಕೊಟ್ಟ ಹೇಳಿಕೆಯಲ್ಲಿನ ಕೆಲವು ವಾಕ್ಯಗಳನ್ನು ಮಾತ್ರ ಉದಾಹರಿಸುವೆನು." ನಮ್ಮಿಬ್ಬರ ಸ್ಥಿತಿಗತಿಗಳಲ್ಲಿ ವಿಶೇಷ ಭೇದವಿರುವದು. ಪಂಡಿತ ಮೋತೀಲಾಲರು ದುಂಡುಮೇಜಿನ ಪರಿಷತ್ತಿನಲ್ಲಿ ಇತರ ಸಾಮ್ರಾಜ್ಯಗಳಂತೆ ಸಂಪೂರ್ಣ ಸ್ವಾತಂತ್ರ್ಯವನ್ನೇ ಹೊಂದಬೇಕೆಂದು ಹೇಳುತ್ತಿರುವಲ್ಲಿ, ವೈಸರಾಯರು ಈ ವಿಷಯದಲ್ಲಿ ನಮಗೆ ಸಾಧ್ಯವಾದಷ್ಟು ಅನುಕೂಲಪಡಿಸುವದಾಗಿ ಮಾತ್ರ ಹೇಳಿರುವರು."

ಇನ್ನು ನಾನು ದುಂಡುಮೇಜಿನಪರಿಷತ್ತಿಗೆ ಹೋಗುವ ಗೃಹಸ್ಥರನ್ನು ಯಾವ ಅಭಿಪ್ರಾಯದಿಂದ ಪರಿಷತ್ತಿಗೆ ಹೋಗುವಿರೆಂದು ಪ್ರಶ್ನೆ ಮಾಡುವೆನು. ದುಂಡುಮೇಜಿನ ಪರಿಷತ್ತಿನಲ್ಲಿ ಬೇಕಾದವರು ಬೇಕಾದ ಪ್ರಶ್ನೆಯನ್ನು ಮಾಡಬಹುದೆಂಬ ಮಾತು ಅಷ್ಟೇನೂ ಉಪಕಾರಿಯಾಗಿಲ್ಲ. ಏಕೆಂದರೆ ಅದರಿಂದ ನಾಗರೀಕಪ್ರಪಂಚದ ವಿನೋದಕ್ಕಾಗಿ ಇಂಗ್ಲೆಂಡಿನಲ್ಲಿ ಭಾರತರಾಜಕೀಯ ತತ್ವಪ್ರದರ್ಶನಮಾಡಿದಂತಾಗುವದಲ್ಲದೆ ಮತ್ತೇನೂ ಇಲ್ಲ. ಗೊತ್ತಾದ ರಾಜಕೀಯ ಅಭಿಪ್ರಾಯಗಳಾವುದೂ ಇಲ್ಲದೆ, ಯಾವದಾದರೊಂದು ಸಂಗಡದ ಮುಖಂಡರಂತೆ ನೋಗುತ್ತಾ ಕೆಲವು ವಿನೋದವಾಗಿ ಕಾಲಹರಣಮಾಡಿ ಬರಬೇಕೆಂದು ಹೋಗುವ ಮೆಂಬರರೊಡನೆ ನಾನು ಜಗಳಮಾಡಬಿಚ್ಛಿಸುವದಿಲ್ಲ. ಆದರೆ ಪರಿಷತ್ತಿಗೆ ಉದಾರಪಕ್ಷದ ಮುಖಂಡರೆಲ್ಲರೂ ಆಹ್ವಾನಿಸಲ್ಪಟ್ಟಿರುವರು. ಅವರೆಲ್ಲರೂ ಪರಿಷತ್ತಿಗೆ ಹೋಗುವರು. ಅವರನ್ನು ಮಾತ್ರವೇ ನಾನು ಪ್ರಶ್ನೆಮಾಡುವೆನು. ಸರ್. ತೇಜ್ ಬಹದ್ದೂರ್ ಸಪ್ರೂ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರೇ ಮೊದಲಾದವರು ಉದಾರಪಕ್ಷದ ಪರವಾಗಿ ಕಳೆದ ನವೆಂಬರಿನಲ್ಲಿ ವೈಸರಾಯರ ಪ್ರಸಿದ್ಧ ಪತ್ರಿಕೆಯ ವಿಷಯದಲ್ಲಿ "ವೈಸರಾಯರ ಹೇಳಿಕೆಯ ಮೇಲಿಂದ ದುಂಡುಮೇಜಿನ ಪರಿಷತ್ತನ್ನು ಭರತಖಂಡದಲ್ಲಿ ಸಾಮ್ರಾಜ್ಯಾಂತರ್ಗತ ಸ್ವರಾಜವನ್ನು ಕೂಡಲೇ ಸ್ಥಾಪಿಸುವದಕ್ಕಾಗಿ ಏರ್ಪಡಿಸಿರುವದೇ ಹೊರತು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಎಂದು ಸ್ಥಾಪಿಸಬೇಕೆಂಬುದನ್ನು ಚರ್ಚಿಸುವದಕ್ಕಲ್ಲವೆಂದು ನಾವು ಅರಿತಿರುವೆವು. ಈ ವಿಷಯದಲ್ಲಿ ನಾವು ವೈಸರಾಯರ ಮಹತ್ವದ ವಚನಗಳ ಅಭಿಪ್ರಾಯವನ್ನು ಸರಿಯಾಗಿ ಭಾವಿಸಿಲ್ಲವೆಂದು ನಂಬಿರುತ್ತೇವೆ." ಎಂದು ಹೇಳಿರುವರು. ಪುನಃ ಡಿಸೆಂಬರ್ 30 ನೆಯ ತಾರೀಖಿನದಿವಸ ಮದರಾಸಿನಲ್ಲಿ ನಡೆದ ನ್ಯಾಷನಲ್ ಲಿಬರಲ್ ಫೆಡರೇಷನ್ನಿನಲ್ಲಿ ಸರ್. ತೇಜಬಹದ್ದೂರ್ ಸಪ್ರೂರವರು ದುಂಡುಮೇಜಿನ ಪರಿಷತ್ತಿನ ವಿಷಯವಾಗಿ ಮಾತನಾಡುತ್ತ "ಕೂಡಲೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಸ್ಥಾಪನೆಯಾಗಬೇಕೆಂಬುದೇ ಉದಾರಪಕ್ಷದವರ ಮುಖ್ಯ ಆಶಯವಾಗಿರುವದು." ಎಂದು ಹೇಳಿರುವರು. ಅದೇ ಫೆಡರೇಷನ್ನಿನವರು ರೈಟ್ ಆನರಬಲ್ ವಿ ಎಸ್. ಶ್ರೀನಿವಾಸಶಾಸ್ತ್ರಿ ಮತ್ತು ಸರ್ ಚಿಮನಲಾಲ ಸೆಟಿಲವಾಡರವರ ಸಲಹೆಯ ಮೇಲೆ "ವೈಸರಾಯರು ವಾಗ್ದಾನಮಾಡಿರುವ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಭರತಖಂಡದಲ್ಲಿ ಜಾಗ್ರತೆಯಾಗಿ ಸ್ಥಾಪಿಸಲ್ಪಡುವಂತೆ ಭರತಖಂಡದ ಎಲ್ಲ ಪಂಗಡದವರೂ ಸಂಪೂರ್ಣಮನಸ್ಸಿನಿಂದ ಪ್ರಯತ್ನಪಡಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ" ಎಂದು ತೀರ್ಮಾನ ಮಾಡಿರುವರು. ಈ ಫೆಡರೇಷನ್ನಿನ ಪ್ರೆಸಿಡೆಂಟರಾದ ಸರ್ ಫಿರೋಜ್‌ಸೇಠ್ನಾರವರು "ನಾವು ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನೇ ಬಯಸುವೆವು. ಇಂಗ್ಲೆಂಡ್‌ದೇಶವು ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡದೆ ಇರುವಂತಿಲ್ಲ. ಕೊಡದೆ ಇರಲು ಇಚ್ಛಿಸುವುದೂ ಇಲ್ಲ" ಎಂದು ಹೇಳಿರುವರು.

ಆದರೆ ಸೆಪ್ಟೆಂಬರು 13 ನೆಯ ತಾರೀಖಿಗೆ ಆಖೈರಾದ ವಾರದ ಸ್ಥಿತಿಗತಿಗಳನ್ನು ಚರ್ಚಿಸುವಾಗ ಇಂಡಿಯಾ ಸರಕಾರದವರು "ಆಡಳಿತಪದ್ಧತಿಯ ವಿಷಯದಲ್ಲಿ ಕಾಂಗ್ರೆಸ್ಸಿನವರು ಪಾರ್ಲಿಮೆಂಟಿನ ತೀರ್ಮಾನವನ್ನು ಸಹ ಈಗಲೇ ಟೀಕೆಮಾಡುವ ಅಧಿಕಾರವನ್ನು ಅಪೇಕ್ಷಿಸುತ್ತಾರೆ." ಎಂದು ಹೇಳಿರುವರು. ಈ ಸಂದರ್ಭದಲ್ಲಿ ಸೆಪ್ಟೆಂಬರು 19 ನೆಯ ತಾರೀಖು ಶುಕ್ರವಾರದ "ಹಿಂದೂ" ಪತ್ರಿಕೆಯ ಅಗ್ರಲೇಖನದಲ್ಲಿ ಈ ರೀತಿಯಾಗಿ ಹೇಳಲ್ಪಟ್ಟಿರುವದು "ಬ್ರಿಟಿಷ್ ಸರಕಾರದವರು ಭರತಖಂಡದ ವಿಷಯದಲ್ಲಿ ತಾವು ಹೊಂದಿರುವ ಅಧಿಕಾರದ ಜವಾಬ್ದಾರಿಯನ್ನು ಬಿಟ್ಟು, ಭಾರತೀಯರ ಪ್ರತಿನಿಧಿಗಳೊಡನೆ ತಾವು ಮಾಡುವ ತೀರ್ಮಾನದ ವಿಷಯದಲ್ಲಿ ಪಾರ್ಲಿಮೆಂಟಿನವರು ತಮಗೆ ಸೂಕ್ತ ತೋರಿದಂತೆ ವರ್ತಿಸಲು ಅವಕಾಶಕೊಟ್ಟರೆ, ಬ್ರಿಟಿಷ್ ಸರಕಾರವು ತನ್ನ ವಾಗ್ದಾನವನ್ನು ಅಲಕ್ಷಿಸಿತೆಂಬುದು ಸ್ಪಷ್ಟವಾಗುವದು. ಪಾರ್ಲಿಮೆಂಟಿನವರು ಮುಂದೆ ಯಾವ ರೀತಿಯಲ್ಲಿ ವರ್ತಿಸಿದರೂ ಕೂಲಿಕಾರರು ಮತ್ತು ಇಂಡಿಯಾ ಸರಕಾರದವರು ಮಾತ್ರ ಪಾರ್ಲಿಮೆಂಟಿನಲ್ಲಿ ಭರತಖಂಡದ ಪಕ್ಷವನ್ನೇ ಹಿಡಿದು ವಾದಿಸಬೇಕೆಂದೂ, ಅದರಿಂದ ಸಂಭವಿಸಬಹುದಾದ ಕಷ್ಟಸುಖಗಳಿಗೆ ಎದೆಗೊಡಲು ಸಿದ್ಧರಾಗಿರಬೇಕೆಂದೂ, ಕಾಂಗ್ರೆಸಿನವರು ಮೊದಲಿನಿಂದಲೂ ಹೇಳುತ್ತಲೆ ಇರುವರು. ಜುಲೈ 9 ನೆಯ ತಾರೀಖಿನ ದಿವಸ ವೈಸರಾಯರು ಅಸೆಂಬ್ಲಿಯಲ್ಲಿ ಭಾಷಣಮಾಡುವಾಗ್ಗೆ ಭರತಖಂಡವು ಸದ್ಯದ ಸ್ಥಿತಿಯಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಆಡಳಿತ ಜವಾಬ್ದಾರಿಯನ್ನು ವಹಿಸುವದನ್ನು ನೋಡಬೇಕೆಂಬುದೇ ತಮ್ಮ ಮತ್ತು ತಮ್ಮ ಸರಕಾರದ ಅಭಿಲಾಷೆಯಾಗಿರುವದೆಂದೂ, ಪರಿಷತ್ತಿನಲ್ಲಿ ಮಾಡಲ್ಪಡುವ ತೀರ್ಮಾನಗಳ ಆಧಾರದಮೇಲೆ ಚಕ್ರವರ್ತಿ ಸಾರ್ವಭೌಮರ ಸರಕಾರದವರು ಪಾರ್ಲಿಮೆಂಟಿಗೆ ತಮ್ಮ ವರದಿಯನ್ನು ಒಪ್ಪಿಸುವರೆಂದೂ, ಪರಿಷತ್ತು ಕೇವಲ ಚರ್ಚೆಗಾಗಿ ಕೂಡುವ ವಿವಾದಾಂಗಣವಾಗಿರದೆ, ಉಭಯದೇಶದ ಮುಖಂಡರೂ ಕಲೆತು ಪಾರ್ಲಿಮೆಂಟಿಗೆ ಒಪ್ಪಿಸಲುಬೇಕಾದ ತೀರ್ಮಾನಗಳನ್ನು ಮಾಡುವದಕ್ಕಾಗಿ ಕೂಡುವ ಮಹಾಸಭೆಯಾಗಿರುವದೆಂದೂ, ಹೇಳಿರುವರು. ಇದರಿಂದ ಸರಕಾರವು ಪಾರ್ಲಿಮೆಂಟಿನಲ್ಲಿ ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ಭರತಖಂಡದ ಪಕ್ಷವನ್ನೇ ಹಿಡಿದು ವಾದಿಸುವದಾಗಿ ವಾಗ್ದಾನಮಾಡಿದಂತಾಯಿತು. ಪಾರ್ಲಿಮೆಂಟಿಗೂ, ಸರಕಾರಕ್ಕೂ ಇರುವ ರಾಜಕೀಯ ಸಂಬಂಧವು ಬಹು ವಿಚಿತ್ರವಾಗಿರುವದು. ಪಾರ್ಲಿಮೆಂಟಿನಲ್ಲಿ ತಮ್ಮ ಮಾತು ನಡೆದೇ ನಡೆಯುವದೆಂಬ ಭರವಸೆಯಿಲ್ಲದೆ ಅಧಿಕಾರದಲ್ಲಿರುವ ಯಾವ ಸರಕಾರವೂ ಹೀಗೆ ವಾಗ್ದಾನಮಾಡುವುದಿಲ್ಲ. ಆದುದರಿಂದ ಕೂಲಿಕಾರರ ಮತ್ತು ಭರತಖಂಡದ ಸರಕಾರದವರು ಆಡಳಿತ ಪದ್ಧತಿಯ ವಿಷಯದಲ್ಲಿ ಕಾಂಗ್ರೆಸ್ಸಿನವರು ಪಾರ್ಲಿಮೆಂಟಿನವರ ತೀರ್ಮಾನವನ್ನು ಸಹ ಈಗಲೇ ಟೀಕೆಮಾಡುವ ಅಧಿಕಾರವನ್ನು ಅಪೇಕ್ಷಿಸುತ್ತಾರೆ ಎಂದು ಆಕ್ಷೇಪಿಸುವದನ್ನು ನೋಡಿದರೆ ಸರಕಾರದವರು ಮೇಲ್ಕಂಡ ಆಕ್ಷೇಪಣೆಯ ನೆಪಮಾಡಿಕೊಂಡು ತಮ್ಮ ವಾಗ್ದಾನದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವರೆಂದು ಭಾವಿಸಬೇಕಾಗಿದೆ."

ಆದುದರಿಂದ ಇದರ ನಿಜಾಂಶವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ್ದು ಪರಿಷತ್ತಿಗೆ ಹೋಗುವ ಪ್ರತಿಯೊಬ್ಬ ಮೆಂಬರರ ಅದರಲ್ಲಿಯೂ ಉದಾರಪಕ್ಷದ ಪ್ರತಿನಿಧಿಗಳ ಪ್ರಥಮಕರ್ತವ್ಯವಾಗಿರುವದು. ಪರಿಷತ್ತಿಗೆ ಹೊರಟಿರುವ ರಾಜಕೀಯತತ್ವಜ್ಞರ ಉದ್ದೇಶಗಳನ್ನು ಚರ್ಚಿಸಲು ನನಗೆ ಇಷ್ಟವಿಲ್ಲ. ಆದರೆ ಕಾಂಗ್ರೆಸ್ಸಿನವರು ಹೋಗಲು ನಿರಾಕರಿಸಿರುವ ಪರಿಷತ್ತಿಗೆ ಹೊರಟಿರುವ ಮೆಂಬರರುಮಾತ್ರ, ತಾವು ಅಸಾಧಾರಣವಾದ ಜವಾಬ್ದಾರಿಯನ್ನು ಹೊತ್ತುಕೊಂಡಿರುವೆವೆಂಬುದನ್ನು ಮರೆಯಬಾರದೆಂದು ಹೇಳಬಿಚ್ಛಿಸುವೆನು. ಪರಿಷತ್ತಿನ ಇತರ ಕಾರ್ಯಗಳನ್ನು ಪ್ರಾರಂಭಿಸುವದಕ್ಕೆ ಪೂರ್ವದಲ್ಲಿ ಪರಿಷತ್ತಿನ ಉದ್ದೇಶವನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕಾದುದು ಪ್ರತಿಯೊಬ್ಬ ಮೆಂಬರರ ಪ್ರಥಮಕರ್ತವ್ಯವಾಗಿದೆ. ಭರತಖಂಡದಲ್ಲಿ ಅವಶ್ಯಕವಾದ ನಿಬಂಧನೆಗಳೊಡನೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಪದ್ಧತಿಯನ್ನು ಸ್ಥಾಪಿಸುವದಕ್ಕಾಗಿ ಪರಿಷತ್ತು ನಡೆಯುವದಾದರೆ, ಮೆಂಬರರು ಪರಿಷತ್ತಿನಲ್ಲಿ ಭಾಗವಹಿಸಬಹುದು. ಏಕೆಂದರೆ ಮಹಾತ್ಮಾ ಗಾಂಧಿಯವರು ಸಹ ಜುಲೈ ೨೩ ನೆಯ ತಾರೀಖಿನ ತಮ್ಮ ಪತ್ರದಲ್ಲಿ "ಗೌರವಯುಕ್ತವಾದ ತೀರ್ಮಾನಕ್ಕೆ ಸಕಾಲವು ಪ್ರಾಪ್ತವಾಗಿದ್ದರೆ ಅದಕ್ಕೆ ನಾನು ಅಡ್ಡಿಬರುವವನಲ್ಲ" ಎಂದು ಬರೆದಿರುವರು. ಹಾಗಲ್ಲದೆ ಪರಿಷತ್ತಿನಲ್ಲಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕೆ ವಿರೋಧಗಳಾದ ಪ್ರಶ್ನೆಗಳನ್ನೆತ್ತಿ, ಮತಭೇದಗಳನ್ನು ಭಯಂಕರ ರೀತಿಯಲ್ಲಿ ಹೆಚ್ಚಿಸುವದಾದರೆ, ಪರಿಷತ್ತಿಗೆ ಹೋಗುವ ಉದಾರಪಕ್ಷದ ಮತ್ತು ಇತರ ಮುಖಂಡರು, ದೇಶಕ್ಕೆ ದೊಡ್ಡ ದ್ರೋಹವನ್ನೆಸಗಿದಂತೆಯೇ ಆಗುವದು. ಸಾಮ್ರಾಜ್ಯಾಂತರ್ಗತ ಸ್ವರಾಜ್ಯಸ್ಥಾಪನೆಗಾಗಿ ಪರಿಷತ್ತನ್ನು ನಡೆಯಿಸದಿದ್ದರೆ, ಮುಖಂಡರೆಲ್ಲರೂ ಪರಿಷತ್ತಿನಿಂದ ಹಿಂತಿರುಗಬೇಕು. ಉದಾರಪಕ್ಷದ ಮತ್ತು ಇತರ ರಾಜಕೀಯಮುಖಂಡರು ಕಳೆದ ಮೂರುವರ್ಷಗಳಲ್ಲಿ ಸೈಮನ್ ಬಹಿಷ್ಕಾರ, ನೆಹರೂ ವರದಿಯ ತಯಾರಿಕೆ ಹಾಗೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಸಂಪಾದನೆ ಇವೇ ಮೊದಲಾದ ಮಹತ್ಪ್ರಯತ್ನಗಳಿಗೆ ಸಹಾಯಮಾಡಿ ಅಸಾಧಾರಣ ದೇಶಸೇವೆ ಮಾಡಿದವರೆಂಬ ಪ್ರಸಿದ್ಧಿಯನ್ನು ಹೊಂದಿರುವರು. ಇವರೆಲ್ಲರೂ ಪರಿಷತ್ತಿನಲ್ಲಿ ಸಹ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕಾಗಿಯೇ ಹೋರಾಡಬೇಕು. ಇಲ್ಲವಾದರೆ ಹೊರಕ್ಕೆ ಬಂದು ಪರಿಷತ್ತು ನಿಲ್ಲುವಂತೆ ಮಾಡಬೇಕು. ದುಂಡುಮೇಜಿನ ಪರಿಷತ್ತು ನಡೆಯಲಿ! ಅಥವಾ ನಡೆಯದಿರಲಿ! ಭರತಖಂಡವು ಸ್ವಾತಂತ್ರ್ಯವನ್ನು ಸಂಪಾದಿಸುವದರಲ್ಲಿ ಯಾವ ಅನುಮಾನವೂ ಇಲ್ಲವೇ ಇಲ್ಲ! ಏಕೆಂದರೆ, ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಇಡೀ ಭರತಖಂಡವೇ ಸಂಕಲ್ಪಮಾಡಿರುವಾಗ, ಗ್ರೇಟಬ್ರಿಟನ್ ಮಾತ್ರವೇ ಅಲ್ಲ, ಇಡೀ ಪ್ರಪಂಚದ ಯಾವ ಶಕ್ತಿಯೂ ಅದನ್ನು ತಡೆದು ನಿಲ್ಲಿಸಲಾರದು.

ನಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಿಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿದ್ದಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[10]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ಸೊಂಟದಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮಿದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಜೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಚ್ಯಕಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಜಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟು ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತೆ. ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿನತರ ಆಹಾರವನ್ನಾದರೂ ಜೀರ್ಣೋತರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಪಚನಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಹೊಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮನಾಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಯವರಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಮನ ವೈದ್ಯಶಾಲಾ, ಮೈಸೂರು.

[25] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಕರಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪೆರ್ದ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪಣ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿದ್ದಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಳಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ, ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮನಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪೌಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರುಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[11]

ಪತ್ತೆ :—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಫ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು, ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ದಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಿಂತಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಚಿಕ್ಕ ಲವಣಗಳೂ, ಹೋಮಿಯೊಪತಿ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ನ್ಯಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[9] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

[6 ನೇ ಫುಟದಿಂದ ಮುಂದುವರಿದುದು.]

ಹಸ್ತಗತವಾಗಿ, ಸರ್ವರಿಗೂ ಸಮಾನವಾದ ಸಾಹಿತ್ಯವಾಗಿ, ಜೈನಕಾವ್ಯವೇ ಆಗಲಿ, ವೀರಶೈವಕಾವ್ಯವೇ ಆಗಲಿ, ಬ್ರಾಹ್ಮಣಕಾವ್ಯವೇ ಆಗಲಿ—ಆಗಲೇ ಸಿದ್ಧವಾಗಿರುವ ಕನ್ನಡದ ಬೈಬಲ್ ಜೊತೆಗೆ ಒಂದು ಕ್ರೈಸ್ತಕಾವ್ಯಮಾಲೆಯೂ ಮತ್ತು ಮಹಮ್ಮದೀಯರ ಕಾವ್ಯಮಾಲೆಯೂ ಶೀಘ್ರದಲ್ಲಿಯೇ ನಮ್ಮ ಇತರ ಸಾಹಿತ್ಯವಾಹಿನಿಗಳೊಡನೆ ತಾವೂ ಬಂದು ಕೂಡುವುವೆಂದು ನಾನು ಹಾರೈಸುತ್ತೇನೆ—ಯಾವ ಸಾಹಿತ್ಯದ ಶಾಖೆಯೇ ಆಗಲಿ ಎಲ್ಲವೂ ನಮ್ಮ ಕನ್ನಡವೆಂದೂ, ಅದುದರಿಂದ ನಮ್ಮದೆಂದೂ ಆದರಿಸುವ ಕಾಲ ಇದು. ಎಲ್ಲಾ ಸಂಸ್ಕೃತಿಗಳಲ್ಲಿಯೂ, ಎಲ್ಲಾ ಧರ್ಮಗಳಲ್ಲಿಯೂ, ಎಲ್ಲಾ ಕವಿತಾಮಾರ್ಗಗಳಲ್ಲಿಯೂ ವಿಮರ್ಶನ ಪೂರ್ವಕವಾದ ವಿಶ್ವಾಸವಿಟ್ಟು ಎಲ್ಲಾ ಕಡೆಗಳಿಂದಲೂ ಉತ್ತಮಪಕ್ಷವನ್ನು ಸ್ವೀಕಾರಮಾಡುವ ವಿಶಾಲಹೃದಯದ ಕಾಲ ಇದು. ಸಾರ್ವಜನಿಕವಾದ ಉದ್ಯಮಗಳಿಗೂ, ಯೋಗಕ್ಷೇಮಗಳಿಗೂ ಪ್ರಾಧಾನ್ಯವನ್ನು ಕೊಟ್ಟು, "ಉದಾರಚರಿತಾನಾಂ ತು ವಸುಧೈವ ಕುಟುಂಬಕಂ" ಎಂಬ ಭಾರತೀಯರ, "ಮಾನುಷಿಕವಾದದ್ದು ಯಾವುದೂ ನನಗೆ ಹೊರಗಲ್ಲ" ಎಂಬ ಪಾಶ್ಚಾತ್ಯರ ಆರ್ಯೋಕ್ತಿಗಳ ತತ್ತ್ವವನ್ನನುಸರಿಸಿ ಜಗತ್ತಿನಲ್ಲೆಲ್ಲಾ ಮೈತ್ರಿಯೂ, ಶಾಂತಿಯೂ, ಸಮಾನ ಧರ್ಮವೂ, ಶ್ರೇಯಸ್ಸೂ ವರ್ಧಿಸಲಿ ಎಂದು ದೀಕ್ಷೆಗೊಳ್ಳುವ ಕಾಲ ಇದು. ಮಲಗಿದ್ದ ಜನರು ಎಚ್ಚತ್ತಿದ್ದಾರೆ; ಹಳೆಯ ಆತ್ಮದಿಂದ ಹೊಸ ಆತ್ಮವನ್ನು ಸೃಷ್ಟಿಮಾಡುತ್ತಿದ್ದಾರೆ; ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸ್ವಾರ್ಥತ್ಯಾಗ, ಸೇವೆ, ಇವೇ ನಮ್ಮ ಜೀವನಮಾನದ ದೀಪಿಕೆಗಳೆಂದು ಸಾರುತ್ತಿದ್ದಾರೆ. ಇಂತಹ ಸ್ವರ್ಣಯುಗದಲ್ಲಿ, ಇಂತಹ ವಿಶ್ವವ್ಯಾಪಕವಾದ ಆತ್ಮಘರ್ಷಣದಲ್ಲಿ ದಿವ್ಯಜ್ಯೋತಿಗಳು, ಮಹಾಮಹಾತ್ಮರು ಅವತರಿಸುವುದು ವಿನಾಶ್ಚರ್ಯ? ಒಬ್ಬ ಮಹಾತ್ಮನಿಂದ ಒಂದು ದೇಶವೇ ಪವಿತ್ರವಾಗಿ ಪೂಜ್ಯಸ್ಥಾನಕ್ಕೆ ಏರುವುದಿಲ್ಲವೇ? ಸಾಹಿತ್ಯ ಪ್ರೇಮಿಗಳಿಗೆ, ಸಾಹಿತ್ಯಸೇವಕರಿಗೆ, ಸಾಹಿತ್ಯಕರ್ತೃಗಳಿಗೆ ನಾನು ವಿನಯಪೂರ್ವಕವಾಗಿ ಬಿನ್ನಹಮಾಡಿಕೊಳ್ಳಬಹುದಾದರೆ, ಹೀಗೆ ಬಿನ್ನೈಸಿಕೊಳ್ಳಬಹುದಲ್ಲವೇ? ಕರ್ಣಾಟಕಮಾತೆಯ ವೀರಪುತ್ರರಿರಾ, ಪುತ್ರಿಯರಿರಾ,

ಓಂ ತತ್ಸವಿತುರ್ವರೇಣ್ಯಂ | ಭರ್ಗೋ ದೇವಸ್ಯ ಧೀಮಹಿ | ಧಿಯೋ ಯೋ ನಃ ಪ್ರಚೋದಯಾತ್ ||

ಎಂದು ಸದಾ ಪ್ರಾರ್ಥಿಸಿರಿ. ಈ ದಿವ್ಯಮಂತ್ರ ಏಕ ದೇಶಕ್ಕೆ ಮಾತ್ರ ಸೇರಿದ್ದಲ್ಲ. ಇಡಿಯ ಜಗತ್ತನ್ನೆಲ್ಲಾ ವ್ಯಾಪಿಸತಕ್ಕ ಸರ್ವ ಸಂಜೀವನ ಮಂತ್ರ. ಭಗವಾನ್ ಸೂರ್ಯದೇವನು ಎಲ್ಲಾ ಕಡೆಯಲ್ಲಿಯೂ ಬೆಳಗುವನು; ಎಲ್ಲರ ಹೃದಯದಲ್ಲಿಯೂ ಹೊಳೆಯುವನು. ಎತ್ತಕಡೆಗೂ ಕಣ್ಣುಮುಚ್ಚಬಾರದು, ಎತ್ತಕಡೆಗೂ ಹೃದಯದ ಬಾಗಿಲನ್ನು ಕಿರಿಕಿರಿದುಮಾಡುತ್ತಾ ಮುಚ್ಚಿಬಿಡಬಾರದು. ನಮ್ಮ ಚಿತ್ತಶುದ್ಧಿ, ನಮ್ಮ ಆತ್ಮವಿಶಾಲತೆ, ಪೂರ್ಣತ್ವದ ಸಾನ್ನಿಧ್ಯಕ್ಕೆ ಬಂದಹಾಗೆಲ್ಲಾ, ನಮ್ಮಿಂದ ಉತ್ತಮಸಾಹಿತ್ಯ, ಉತ್ತಮಸಾಹಿತ್ಯದಿಂದ ಉತ್ತಮಜನ್ಮ ಬೊಮ್ಮುವುದು. ಮಿಲ್ಟನ್ ಮಹಾಕವಿ ತನ್ನ ಅನುಭವದಿಂದ ಹೇಳಿದ್ದಾನೆ.—"ಉತ್ತಮಕಾವ್ಯವು ಶ್ರೇಷ್ಠವಾದ ಆತ್ಮದ ಅಮೂಲ್ಯವಾದ ಜೀವಸಾರ" ಎಂದು. ನಮ್ಮ ಹಿರಿಯರು ಹೇಳಿದ್ದಾರೆ—"ಕವಿಗಳು ಋಷಿಗಳು, ಬ್ರಹ್ಮರು" ಎಂದು. ಈ ಉತ್ತಮ ಪದವಿ ಸುಲಭವಾಗಿ ಸಿಕ್ಕಬಹುದೆ? ಆತುರಪಡಬಾರದು, ಅಹಂಕಾರಪಡಬಾರದು, ಅಸೂಯೆಪಡಬಾರದು; ಶಿಕ್ಷಣವನ್ನು ಪಡೆಯಬೇಕು, ಅಧಿಕಾರವನ್ನು ಪಡೆಯಬೇಕು, ದೈನ್ಯವನ್ನು ಪಡೆಯಬೇಕು. ಭಗವತ್ಕೃಪೆಯಿಂದ ನಮ್ಮ ಕಯ್ಯಲ್ಲಾದ ಕೈಂಕರ್ಯವನ್ನು—ನಮ್ಮ ದೇಶಕ್ಕೇ ಎಂಬ ವೀರಭಾವದಿಂದ ನಾನು ಹೇಳುವುದಿಲ್ಲ—ಸಾಧ್ಯವಾದರೆ ಜಗತ್ತಿಗೇ ಮಾಡಬೇಕು. ಅಣ್ಣತಮ್ಮಂದಿರಾಗಿ ಎಲ್ಲರೂ, ಜನಕ್ಕೆ ಸೇರಿದ ಸಾಹಿತ್ಯವನ್ನು, ಜನಕ್ಕಾಗಿ, ಜನರಿಂದ ಮಾಡಿಸಬೇಕು. ಸಮ್ಮೇಳನದ ಪ್ರತಿನಿಧಿಗಳಿರಾ, ಮಾನ್ಯಸದಸ್ಯರಿರಾ, ನನ್ನ ಈ ಭಾಷಣದಿಂದ ತಮ್ಮನ್ನು ದಣಿಸಿದೆ. ಮತ್ತೊಮ್ಮೆ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸಿ, ಸಮ್ಮೇಳನದ ಕಾರ್ಯಗಳನ್ನು ಸಾಂಗವಾಗಿ ಸುಖವಾಗಿ ನೆರವೇರುವಂತೆ ನಡಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೨ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರಮಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೪

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಹಲ್ಕೂರಲ್ಲಿ ನೆರವೇರಿದ ಶ್ರೀಮಜ್ಜಗದ್ಗುರು ರಂಭಾಪುರೀ ವೀರಸಿಂಹಾಸನಾಧೀಶ್ವರರ ದಸರಾಮಹೋತ್ಸವ.

ಅರಸೀಕೆರೆ ತಾಲೂಕು ಹಲ್ಕೂರಿಗೆ ಶ್ರೀಮಹಾ ಸವಾರಿಯು ದಯಮಾಡಿಸಿ ಶ್ರಾವಣಮಾಸದ ಆದಿಯಿಂದಲೂ ಹಲ್ಕೂರಿನ ಮತ್ತು ಅದರ ಸುತ್ತುಮುತ್ತಣ ಗ್ರಾಮಗಳ ಭಕ್ತರ ಭಕ್ತಿ ಪುರಸ್ಸರವಾದ ಸೇವಾಸತ್ಕಾರ ಕಾಣಿಕೆಗಳನ್ನು ಸ್ವೀಕರಿಸುತ್ತಿರುವ ಸಂಗತಿಯು ಸರ್ವತ್ರ ವಿದಿತವಾಗಿರುವದಷ್ಟೆ! ಈ ಮಧ್ಯೆ ಪ್ರತಿವರ್ಷವೂ ನಡೆಯುತ್ತಲಿರುವ ದಸರಾಮಹೋತ್ಸವವನ್ನು ಈ ವರ್ಷ ನಮ್ಮಲ್ಲಿಯೇ ನೆರವೇರಿಸಬೇಕೆಂದು ಮ|| ರಾ|| ಸಾಹುಕಾರ್ ಸಿದ್ಧರಾಮಶೆಟ್ಟರು ಇವರ ಚಿ|| ಗೊಡಚಪ್ಪಶೆಟ್ಟರು ಸಾಹುಕಾರ ಧರ್ಮಧುರಂಧರ ಮರುಳಾರಾಧ್ಯಪ್ಪಶೆಟ್ಟರು ಇವರ ಅಳಿಯಂದಿರಾದ ಸಾಹುಕಾರ್ ರುದ್ರಪ್ಪಶೆಟ್ಟರು ಮ|| ರಾ|| ಸಿದ್ಧಮಲ್ಲಶೆಟ್ಟರ ಗೊಡಚಪ್ಪಶೆಟ್ಟರು ಮ|| ರಾ|| ಮಾಜಿಪಟೇಲ್ ಮಲ್ಲನಗೌಡರು ಮ|| ರಾ|| ಪಟೇಲ್ ರಂಗೇಗೌಡರು ಮ|| ರಾ|| ಹುಲಿಯಾರ್ ಮರುಳಪ್ಪನವರು ಮುಂತಾದ ಪ್ರಮುಖ ಮಹಾಶಯರು ಸಂಕಲ್ಪಿಸಿ ಪ್ರಾರ್ಥಿಸಿಕೊಂಡದ್ದರಿಂದ ಆಚಾರ್ಯ ಭಗವತ್ಪಾದರವರು ಇವರ ಪ್ರಾರ್ಥನೆಯನ್ನು ಚಿತ್ತಕ್ಕೆ ತಂದು ಅಂಗೀಕರಿಸಿ ಅದಕ್ಕೆ ಅಪ್ಪಣೆಯನ್ನು ಕೊಟ್ಟರು. ಕೂಡಲೆ ಧನಸಂಗ್ರಹವೂ ಸಂಭಾರಸಿದ್ಧತೆಯೂ ಆಯಿತು. ಆಬಾಲವೃದ್ಧರಾದ ಪೌರರ ಉಲ್ಲಾಸಕ್ಕೆ ಎಣೆಯಿಲ್ಲದಾಯಿತು. ದರ್ಬಾರ ಮಂಟಪವು ನೋಡಿದವರ ಕಣ್ಣುಗಳನ್ನು ಸೆಳೆಯುವಂತೆ ಚಿತ್ರವಿಚಿತ್ರವಾಗಿ ಅಲಂಕರಿಸಲ್ಪಟ್ಟಿತ್ತು. ತಾ|| 3.9-30 ಮಂಗಳವಾರ ಪ್ರಾತಃಕಾಲದಲ್ಲಿ ಗಜಾಶ್ವಗಳಸ್ವಾನಾಲಂಕಾರಪೂಜಾಮಹೋತ್ಸವಗಳು ನೆರವೇರಿದವು. ಸಾಯಂಕಾಲದಲ್ಲಿ ಭಕ್ತರ ಪ್ರಾರ್ಥನೆಯನ್ನು ಚಿತ್ತಕ್ಕೆ ತಂದು ಪರಿವಾರದೊಡನೆ ದರ್ಬಾರ್ ಮಂಟಪಕ್ಕೆ ದಯಮಾಡಿ ಅಧಿಕಾರಿಗಳ ಹಸ್ತಾವಲಂಬನದಿಂದ ಸಿಂಹಾಸನವನ್ನಾರೋಹಿಸಿದ ಕೂಡಲೇ ಸರ್ವರೂ ಆಚಾರ್ಯರ ಜಯಘೋಷವನ್ನು ಮಾಡಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ಆರಂಭದಿಂದಲೂ ಸುತ್ತಮುತ್ತಣ ಗ್ರಾಮಗಳ ಜನಸಮುದಾಯವು ಸೇರುತ್ತಿದ್ದುದರಿಂದ ಗಲಭೆಗವಕಾಶವಿಲ್ಲದಂತೆ ಉಸ್ತುವಾರಿಗೋಸ್ಕರ ರಿಸರ್ವ್ ಪೋಲೀಸಿನವರು ಕಾನಿಸ್ಟೇಬಲ್ಲರೂ ಪುರದ ದಫೇದಾರರೂ ಮುತವರ್ಜಿಯನ್ನು ವಹಿಸಿ ಸ್ವಕಾರ್ಯದಲ್ಲಿ ತತ್ಪರರಾಗಿದ್ದರು. ನಮ್ಮ ಧರ್ಮಸರ್ಕಾರದ ಸಹಾಯವು ಸಂಪೂರ್ಣವಾಗಿದ್ದುದರಿಂದ ಸಭೆಯು ಅಭೂತಪೂರ್ವ ಶೋಭೆಯನ್ನು ಧರಿಸಿದ್ದಿತು. ತಂಗಾಗೆರದ ಶಿವಾನಂದಾಶ್ರಮದ ಶ್ರೀ ಪಟ್ಟಾಧ್ಯಕ್ಷ ಚನ್ನಬಸವಸ್ವಾಮಿಗಳೂ ಹೊನ್ನವಳ್ಳಿ ಬಳುವನೇರಲ ಆಣೂರು ಹಲ್ಕೂರು ತುಂಬಾಪುರ ಮಾದೀಹಳ್ಳಿ ಮುಂತಾದ ಗ್ರಾಮಗಳ ಮಠಾಧಿಕಾರಿಗಳಾದ ಶ್ರೀಸ್ವಾಮಿಗಳವರ ಪಟ್ಟಾಧ್ಯಕ್ಷಸ್ವಾಮಿಗಳೂ ಸಿಂಹಾಸನದ ಇಕ್ಕೆಲದಲ್ಲಿ ಮಂಡಿತವಾಗಿ ಸಭೆಗೆ ಶೋಭೆಯನ್ನುಂಟುಮಾಡಿದ್ದರು. ಮುಂಭಾಗದಲ್ಲಿ ವೈದಿಕ ಲೌಕಿಕ ವಿದ್ವನ್ಮಂಡಲಿಯು ಪ್ರಕಾಶಿಸುತ್ತಿದ್ದಿತು. ಕಾರ್ಯಾರಂಭದಲ್ಲಿ ವೈದಿಕರ ವೇದಘೋಷವೂ ಮಹಾ ಸಂಸ್ಥಾನ ವಿದ್ಯಾರ್ಥಿಗಳ ಸ್ತವನವೂ ಗಾಯಕರ ಸಂಗೀತವೂ ಜರಗಿ ಕ್ರಮದಂತೆ ಗಜಾಶ್ವಾರೋಹಿಗಳ ಮತ್ತು ಸ್ವಯಂಸೇವಕರ ಬಳಿಕ ಪೋಲೀಸಿನವರ ಅನಂತರ ಸಂಸ್ಥಾನ ಪದಾತಿಗಳ ತದುಪರಿ ಬೋಧಿಯರ ಅನಂತರ ದೀವಟಿಗೆಯವರ ವಂದನೆಗಳು ಇಂಗಿಷ್ ವಾದ್ಯಧ್ವನಿಯೊಡನೆ ನೆರವೇರಿದವು. ಅಲ್ಲಿಗೆ ಕಾರ್ಯಕ್ರಮ ವೇಳೆಯು ಪೂರೈಸಿದುದರಿಂದ ಶ್ರೀಗಳವರು ಶ್ರೀಮನ್ಮಹಾರಾಜರವರು ಸಕಲ ಭೋಗಭಾಗ್ಯಗಳಿಂದ ಚಿರಕಾಲ ರಾಜ್ಯಭಾರವಂ ಮಾಡಲೆಂದು ಹರಸಿ ಅನುಜ್ಞೆಯನ್ನು ಕೊಟ್ಟದ್ದರಿಂದ ಪ್ರತ್ಯಕ್ಷರಾವ್ಯವೆ ನಡೆದು ಸಭೆಯು ಮುಕ್ತಾಯವಾಯಿತು. ಬುಧವಾರ ಪ್ರಾತಃಕಾಲದಲ್ಲಿ ಗಜಾಶ್ವಗಳ ಮಹೋತ್ಸವವು ಜರಗಿ ಸಾಯಂಕಾಲ ದರ್ಬಾರ್ ಕಾರ್ಯವು ಪ್ರಾರಂಭವಾಯಿತು. ಶ್ರೀಗಳವರು ಸಕಾಲಕ್ಕೆ ದರ್ಬಾರ ಮಂಟಪಕ್ಕೆ ದಯಮಾಡಿಸಿ ಸಿಂಹಾಸನವನ್ನಾರೋಹಿಸಿದ ಕೂಡಲೆ ವೇದಘೋಷವೂ ಸ್ತವನವೂ ಸಂಗೀತವೂ ಆ|| ವಿ|| ಪೌರಾಣಿಕ ಬಿದರಿ ಬಸವಲಿಂಗಶಾಸ್ತ್ರಿಗಳ ಗುರುಭಕ್ತಿ ಪ್ರಭಾವ ಬೋಧಕೋಪನ್ಯಾಸವೂ ಆಗಿ ಕ್ರಮವಾಗಿ ವಾದ್ಯಸೈನ್ಯರಿಯೊಡನೆ ಸಮಸ್ತರ ವಂದನೆಗಳು ಸಮರ್ಪಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು. ಗುರುವಾರ ಪ್ರಾತಃಕಾಲ ಗಜಾಶ್ವೋತ್ಸವವೂ ಸಾಯಂಕಾಲ ಶ್ರೀಗಳವರು ಸಿಂಹಾಸನವನ್ನಾರೋಹಿಸಿದ ಕೂಡಲೇ ವೇದಘೋಷವೂ ಸ್ತವನವೂ ಸಂಗೀತವೂ ಆ|| ವಿ|| ಬಿದರಿ ಬಸವಲಿಂಗಶಾಸ್ತ್ರಿಗಳ ಧಾರ್ಮಿಕೋಪನ್ಯಾಸವೂ ಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರ ಸಮಯೋಚಿತೋಪನ್ಯಾಸವೂ ಮತ್ತು ಧಾರ್ಮಿಕ ಲೌಕಿಕ ವಿದ್ಯಾ ಶಿಕ್ಷಣಾವಶ್ಯಕತೆ ಎಂಬ ಬಗ್ಗೆ ಧರ್ಮಧುರಂಧರ ಸಾಹುಕಾರ್ ಮರುಳಸಿದ್ಧಪ್ಪಶೆಟ್ಟರ ಅಳಿಯಂದಿರಾದ ಸಾಗರದ ತಾಲೂಕ ಜೋಗಕಂತೆ ಮ|| ರಾ|| ಮಹಂತಪ್ಪಶೆಟ್ಟರು ಬಿ.ಎ. ಬಿ.ಎಲ್. ಇವರ ಮತ್ತು ಮ|| ರಾ|| ರುದ್ರಪ್ಪಶೆಟ್ಟರ ಅಳಿಯಂದಿರಾದ ಸೀಮತಿ ಕೇರಿ ಮ|| ರಾ|| ಜಯದೇವಪ್ಪನವರು ಬಿ.ಎ. ಇವರ ಉಪನ್ಯಾಸವೂ ಕೀರ್ತನಾಲಂಕಾರ ನಂಜುಂಡಾರಾಧ್ಯರ ಕೀರ್ತನವೂ ಆಗಿ ಕ್ರಮವಾಗಿ ಪರಿವಾರದ ವಂದನೆಗಳು ಸಮರ್ಪಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು. ಇದರಂತೆ ಪ್ರತಿ ದಿವಸ ಪ್ರಾತಃಕಾಲ ಸಾಯಂಕಾಲಗಳಲ್ಲಿ ಕಾರ್ಯಕ್ರಮವು ಅತ್ಯಂತ ವೈಭವದಿಂದ ವಿಜಯ ದಶಮಿಯವರೆಗೆ ನೆರವೇರಿತು. 30 ನೆಯ ತಾರೀಖಿನ ದಿವಸ ಕೊಟ್ಟೂರು ಕಂಭಾವಿ ಮಠದ ಚನ್ನಬಸವ ಗವಾಯಿಗಳ ಪಿಟೀಲು ವಾದ್ಯದೊಡನೆ ಹುಲಿಹಳ್ಳಿ ಮಠದ ಪ್ರಸಿದ್ಧ ಗವಾಯಿಗಳಾದ ಮರಿಕೊಟ್ರಯ್ಯನವರ ಗಾಯನವೂ ಚಿಕ್ಕಬಳ್ಳಾಪುರದ ಶಿವದೇವಶಾಸ್ತ್ರಿಗಳ ಕೀರ್ತನವೂ ಆಯಿತು. ಗುರುವಾರ ಪ್ರಾತಃಕಾಲ ಯಥೋಕ್ತ ಗಜಾಶ್ವಗಳ ಮಹೋತ್ಸವವು ನಡೆದು ಸಾಯಂಕಾಲ ನಾಲ್ಕು ಘಂಟೆಗೆ ಚತುರಂಗ ಬಲಸಮೇತವಾಗಿ ಸುವರ್ಣರಜತಬಿರುದಾವಳಿಗಳೊಡನೆ ನವೀನವಾದ ರಜತ ಸುವರ್ಣಾಗ್ರಕವಾದ ಪಲ್ಲಕ್ಕಿಯಲ್ಲಿ ಉತ್ಸವವು ಹೊರಡಿತು. ಪ್ರಸ್ಥಾನದಲ್ಲಿಯೂ ಜನಗಳು ತಂಡೋಪತಂಡವಾಗಿ ಬಂದು ಸೇವೆಯನ್ನು ಮಾಡಿ ದರ್ಶನಾಶೀರ್ವಾದಗಳಿಂದ ಧನ್ಯರಾಗುತ್ತಿದ್ದುದಲ್ಲದೆ ಗತಿಸಿಯ ದಿವಸ ಸ್ವದೇಶ ಪರದೇಶಗಳಿಂದ ಪ್ರಾಯಶಃ 20-25 ಸಾವಿರದವರೆಗೆ ಜನಗಳು ಆಗಮಿಸಿದ್ದರು ಬೆಂಗಳೂರು ಮುಂತಾದ ಸ್ಥಳಗಳಿಂದ ಬಂದಿದ್ದ ಪ್ರೌಢವಾದ್ಯಗಾರರ ವಾದ್ಯವಾದನವು ಶಿವಗಿಂಪಾಗಿದ್ದಿತು. ಸೀಮತಿ ಬಾಣಾವರ ದಾವಣಗೆರೆ ಭಜನಾಸಂಘದವರ ಸಂಗೀತ ಮಿಶ್ರವಾದ ಮಧುರವಾದ ಭಜನೆಯು ಸುಶ್ರಾವ್ಯವಾಗಿದ್ದಿತು. ಬೆಂಗಳೂರು ವೈದಿಕಮಂಡಲಿಯವೇದಘೋಷವು ಸರ್ವರಿಗೂ ಆನಂದವನ್ನು ಬೀರುತ್ತಿದ್ದಿತು. ಅನೇಕ ಪತಾಕೆ ಧ್ವಜಗಳೂ ಆಚಾರ್ಯ ಜಯಘೋಷವೂ ಶ್ರೋತ್ರವ್ಯಂಜನವನ್ನು ಬೆರಗುಮಾಡುತ್ತಿದ್ದಿತು. ಈ ಸಂಭ್ರಮದಿಂದ ಶ್ರೀಜಗದ್ಗುರುಗಳವರೂ ಬನ್ನೀಮಂಟಪಕ್ಕೆ ದಯಮಾಡಿ ಸರ್ವರಿಗೂ ವಿಜಯಾಭಯಾಯುರಾರೋಗ್ಯಭಾಗ್ಯಗಳುಂಟಾಗಲೆಂದು ಆಶೀರ್ವದಿಸಿ ಪೂರ್ವದಂತೆ ಮಹೋತ್ಸವದೊಡನೆ ದರ್ಬಾರ ಮಂಟಪಕ್ಕೆ ದಯಮಾಡಿ ಸಿಂಹಾಸನವನ್ನಾರೋಹಿಸಿದ ಕೂಡಲೇ ಗನ್ನುಗಳು ಹಾರಿಸಲ್ಪಟ್ಟವು. ಶ್ರೀಜಗದ್ಗುರುಗಳವರು ತಮ್ಮ ಪ್ರಸಾದವಾಣಿಯಿಂದ ಸಭೆಯವರಿಗೆ ಸದ್ಬೋಧವನ್ನು ಮಾಡಿ ಇದರಂತೆ ಮಾನಾಗಲೂ ಶ್ರೇಯಸ್ಕರ ಕಾರ್ಯದಲ್ಲಿ ತತ್ಪರರಾಗಿ ಜಯವನ್ನು ಪಡೆಯಿರೆಂದು ಆಶೀರ್ವದಿಸಿ ಸಭೆಯ ಮುಕ್ತಾಯಕ್ಕೆ ಅಪ್ಪಣೆಯನ್ನು ಕೊಟ್ಟು ಸಕಲ ಬಿರುದಾವಳಿಗಳಿಂದ ಬಿಡಾರಕ್ಕೆ ದಯಮಾಡಿಸಿದರು, ಬಂದ ಜನಗಳ ಆದರಾತಿಥ್ಯಗಳು ಸಮರ್ಪಕವಾಗಿದ್ದವು. ಪುನಃ ಶುಕ್ರವಾರ ಬೆಳಗ್ಗೆ 9 ಘಂಟೆಗೆ ಮತ್ತು ಸಾಯಂಕಾಲ 6 ಘಂಟೆಗೆ ಸಭೆ ಗೂಡಿತು ಆ ಕಾಲಕ್ಕೆ ಶಾಸ್ತ್ರಜ್ಞರೂ, ಗವಾಯಿಗಳೂ ವಾದ್ಯದವರೂ ಉಪನ್ಯಾಸಕರೂ ಕೀರ್ತನಕಾರರೂ ಭಜನಾಸಂಘದವರೂ ಕವಿಗಳೂ ಆಗಮಿಸಿ ತಮ್ಮ ವಿದ್ಯಾ ಪ್ರೌಢಿಮೆಯನ್ನು ಪ್ರದರ್ಶಿಸಿದರು. ವೇ|| ಪ|| ಕೊಂಗವಾಡ ವೀರಭದ್ರಶಾಸ್ತ್ರಿಗಳು ಉಪನ್ಯಾಸ ಮಾಡಿದರು. ವಿದ್ಯಾವಿಷಯದ ಮೇಲೆ ಜೋಗಕಂತೆ ಮ|| ರಾ|| ಮಹಂತಪ್ಪಶೆಟ್ಟರು ಬಿ.ಎ., ಎಲ್.ಎಲ್.ಬಿ., ಇವರ ಉಪನ್ಯಾಸವೂ ಬೆಂಗಳೂರು ವೈದಿಕ ಪಾಠಶಾಲೆಯ ವಿದ್ಯಾರ್ಥಿ ಚನ್ನಬಸವಾರಾಧ್ಯನ ವಿವಾಹವಿಷಯಕವಾದ ಉಪನ್ಯಾಸವೂ ಮ|| ರಾ|| ಶಿಕಾರಿಪುರದ ಪಂಡಿತಪ್ಪನವರು, ಬಿ.ಎ., ಇವರ ಉಪನ್ಯಾಸವೂ, ಮ|| ರಾ|| ತುಮಕೂರ ವಕೀಲ ಗುರುಸಂಗಾರ್ಯರು ಸಂಸ್ಥಾನ ಮತ್ತು ಸಮಾಜ ಇವುಗಳ ಕಲ್ಯಾಣವನ್ನು ಬಯಸಿ ಒಳ್ಳೇ ಆವೇಶದಿಂದ ಸಭಿಕರ ಮನಸ್ಸು ಕರಗುವಂತೆ ಮಾಡಿದ ಉಪನ್ಯಾಸವೂ ಅಲ್ಲದೆ ಗರುಡಗಿರಿ ಬಾಜೀರಾಹೇಬರು ಗುರುಭಕ್ತಿಯನ್ನೇ ಆಶ್ರಯಿಸಬೇಕೆಂದು ಕನ್ನಡ ಭಾಷೆಯಿಂದ ಅನೇಕ ಹಿಂದೀಭಾಷಾ ಪ್ರಮಾಣಗಳೊಂದಿಗೆ ಮಾಡಿದ ಉಪನ್ಯಾಸವೂ ಅವರ ಪೈಕಿಯೇ ಒಬ್ಬ ಉಪಾಧ್ಯಾಯರು ಹಿಂದೀ ಭಾಷೆಯಿಂದ ಮಾಡಿದ ಉಪನ್ಯಾಸವೂ ಆಯಿತು. ಶ್ರೀಜಗದ್ಗುರುಗಳವರು ವಿದ್ವಜ್ಜನಗಳ ಸೇವೆಗೆ ಸಂತುಷ್ಟರಾಗಿ ಪಂ|| ಕೊಂಗವಾಡ ವೀರಭದ್ರಶಾಸ್ತ್ರಿಗಳಿಗೆ ಒಂದು ಶಾಲನ್ನೂ, ಆ|| ವಿ. ಸುಣಕಲ್ಲು ಬಿದರೆ ಬಸವಲಿಂಗಶಾಸ್ತ್ರಿಗಳಿಗೆ ಬಹುಮಾನ ಪತ್ರದೊಂದಿಗೆ "ಪುರಾಣರತ್ನಂ" ಎಂಬ ಪ್ರಶಸ್ತಿಘಟಿತವಾದ ಸುವರ್ಣಪದಕ ಮತ್ತು ಶಾಲುಜೋಡಿಯನ್ನೂ, ಹುಲಿಹಳ್ಳಿ ಗವಾಯಿ ಮರಿಕೊಟ್ರಯ್ಯನವರಿಗೆ ಬಹುಮಾನಪತ್ರಿಕೆಯೊಂದಿಗೆ "ಸಂಗೀತವಿದ್ವಾನ್" ಎಂಬ ಪ್ರಶಸ್ತಿಯನ್ನೂ ಕೊಟ್ಟರು. ಗವಾಯಿ ಚನ್ನಬಸವಯ್ಯನವರಿಗೆ "ಗಾನವಾದನವಿದ್ವಾನ್" ಎಂಬ ಪ್ರಶಸ್ತಿಯನ್ನೂ, ಚಿಕ್ಕಬಳ್ಳಾಪುರದ ಶಿವದೇವಶಾಸ್ತ್ರಿಗಳಿಗೆ ಕಿಲ್ತಾನ್ನು, ಹಾವೇರಿ ಗವಾಯಿ ಜಯದೇವಯ್ಯನವರಿಗೆ "ಸಂಗೀತವಿದ್ವಾನ್" ಎಂಬ ಪ್ರಶಸ್ತಿಘಟಿತವಾದ ಸುವರ್ಣಪದಕವನ್ನೂ, ಬೀರೂರು ನಂಜುಂಡಾರಾಧ್ಯರಿಗೆ ಬಹುಮಾನಪತ್ರಿಕೆಯೊಡನೆ ಶಾಲುಜೋಡಿಯನ್ನೂ, ಬ್ಯಾಡಗಿ ಗುರುಶಾಂತಪ್ಪನೆಂಬ ಸಂಗೀತ ವಿದ್ಯಾರ್ಥಿಗೆ ಒಂದು ಶಾಲನ್ನೂ ಬೆಂಗಳೂರು ಕೊಳಲುವಾದ್ಯದ ಮುನಿಸ್ವಾಮಪ್ಪನಿಗೆ ಒಂದು ಶಾಲನ್ನೂ, ಬಳುವನೇರಲ ಪಂ|| ಪಟ್ಟಾಭಿರಾಮ ಕವಿಗಳಿಗೆ ಒಂದು ಶಾಲನ್ನೂ, ಕವಿ ಕಣಕಟ್ಟೆ ವೆಂಕಟರಾಮಯ್ಯ ಜೋಸಿ ಇವರಿಗೆ ಒಂದು ಶಾಲನ್ನೂ, ಮಾಗಡಿ ಸಂಗೀತ ಹಂಪಮ್ಮನಿಗೆ ಸಂಭಾವನೆಯನ್ನೂ, ಗರುಡಗಿರಿ ಬಾಜೀಸಾಹೇಬರಿಗೆ ಒಂದು ಶಾಲನ್ನೂ, ಮುಸಲ್ಮಾನ್ ಉಪಾಧ್ಯಾಯನಿಗೆ ಸಂಭಾವನೆಯನ್ನೂ, ಬೆಂಗಳೂರು ವೈದಿಕಮಂಡಲಿಯವರಿಗೆ ಸಂಭಾವನೆಯನ್ನೂ, ಬಾಣಾವರದ ಮತ್ತು ತುಂಬಾಪುರದ ಭಜನಾಸಂಘದವರಿಗೆ ಮೆಡಲುಗಳನ್ನೂ ದಯಪಾಲಿಸಿದರು. ಬಳಿಕ ಮಹಾಸಂಸ್ಥಾನದ ಏಜಂಟ್ ಹೆಚ್. ಎಂ. ರಾಘವಾಂಕಪ್ಪಯ್ಯನವರು ಸಂಸ್ಥಾನದ ಆದಾಯವ್ಯಯದ ವರದಿಯನ್ನು ಓದಿಹೇಳಿದರು. ಶ್ರೀಮಂತ ಬೀರೂರು ಪಟ್ರೆ ಚನ್ನವೀರಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗಿಗಾಗಿ ಮಹಾಸಂಸ್ಥಾನದ ಅಭಿವೃದ್ಧಿಗೆ ಅತ್ಯವಶ್ಯಕವಾದ ಆಲೋಚನೆಯು ನಡೆದು ಅಬಕ್ಕೊಂದು ಕಮಿಟಿಯು ಬೀರೂರಲ್ಲಿರಬೇಕೆಂದು ನಿರ್ಣಯಿಸಿದ ನಿಯಮಪತ್ರಿಕೆಯು ಬೆಂಗಳೂರು ಇನ್‌ಕಂಟ್ಯಾಕ್ಸ್ ಇನ್‌ಸ್ಪೆಕ್ಟರ್ ಜಿ. ಕೆ. ರುದ್ರಾರಾಧ್ಯರಿಂದ ಸಭಿಕರಿಗೆ ವಿವರಿಸಿ ಹೇಳಲ್ಪಟ್ಟಿತು. ಈ ಸುಸಮಯದಲ್ಲಿ ಬೆಂಗಳೂರಲ್ಲಿ ಶ್ರೀಜಗದ್ಗುರುಗಳವರು ಸ್ಥಾಪಿಸಬೇಕೆಂದಿರುವ ಸಂಸ್ಕೃತ ಕಾಲೇಜಿಗೆ

(೩ನೆಯ ಪುಟವನ್ನು ನೋಡಿ.)

ಆಕ್ರಮಕೂಟಗಳೆಂದು ಭಾವಿಸಲ್ಪಡುವ ಎಲ್ಲಸಂಸ್ಥೆಗಳ ಚರಸ್ಥಿರ ಆಸ್ತಿಗಳನ್ನು ಸರಕಾರದವರು ತಮ್ಮ ವಶಪಡಿಸಿಕೊಳ್ಳಬಹುದೆಂದು ವೈಸರಾಯರು ಒಂದು ನೂತನ ಶಾಸನವನ್ನು ಹೊರಡಿಸಿರುವರು. ಕಾಯಿದೆಭಂಗದ ಚಳವಳಿಯನ್ನು ಅಡಗಿಸುವದರ ಸಲುವಾಗಿ ವೈಸರಾಯರು ಹೊರಡಿಸಿದ ಶಾಸನಗಳಲ್ಲಿ ಇದು ಒಂಬತ್ತನೆಯದಾಗಿರುವುದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಎಡಕೊರೆ ಸ್ಯೂಟೌನಿಗೆ ಮೈಸೂರು ಹೈಕೋರ್ಟು ಚೀಫ್ ಜಡ್ಜರವರು, ಲಾ ಸೆಕ್ರೆಟರಿಯವರು ಇವರುಗಳ ಆಗಮನ.

[illegible]

ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಉಜ್ಜಯಿನೀ ಜಗದ್ಗುರುಗಳವರ ಗೃಹಾಗಮನವೂ ಕುವ್ಯಧೇಶೀ ಉಡುಪುಗಳ ದಾನವೂ, ಬಳ್ಳಾರಿ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಚರ ಪಟ್ಟಾಧ್ಯಕ್ಷ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಬಳ್ಳಾರಿ ಮುಕ್ಕಾಮಿನಲ್ಲಿರಲು ಇದೇ ಗ್ರಾಮದ ಪಟ್ಟಣಶೆಟ್ಟಿ ಮಲ್ಲಿಕಾರ್ಜುನಪ್ಪನವರು ಇದೇ ವಿಜಯದಶಮಿ ಗುರುವಾರ (2-10-30) ಜಗದ್ಗುರುಗಳವರನ್ನು ತಮ್ಮ ಗೃಹಕ್ಕೆ ಬಿಜಯಂಗೈಸಿಕೊಂಡು ಅರ್ಘ್ಯಪಾದ್ಯಾದಿಗಳಿಂದ ಮಹಾಗುರುಗಳ ಪಾದಪೂಜೆಯನ್ನೂ ಸಹಸ್ರ ಬಿಲ್ವಾರ್ಚನೆಯನ್ನೂ ಮಾಡಿ [illegible]

[illegible]

ಈ ಪ್ರಕಾರವಾದ ಶ್ರೀ ಜಗದ್ಗುರು ರೇಣುಕಗುರುವಿನ ವಾತ್ಸಲ್ಯಕ್ಕೆ ಸಾಕ್ಷಾತ್ ಪರಶಿವಾವತಾರಿಗಳಾದ ಗುರುಗಳಲ್ಲಿಯೂ, ಶಿವಯೋಗಿಗಳಲ್ಲಿಯೂ ದಾನಮಾಡಿದ ಈತನು ಧನ್ಯನಲ್ಲವೇ!

ಪ್ರತ್ಯಕ್ಷದರ್ಶಿ.

ವಿಜಯದಶಮಿ ಮಹೋತ್ಸವ.

ರಾಮಸಾಗರಂ.

ಆಶ್ವಯುಜ ಶುದ್ಧ ಪಾಡ್ಯಮಿ ಮೊದಲ್ಗೊಂಡು ವಿಜಯದಶಮಿಯವರೆಗೂ ಪ್ರತಿದಿವಸ ಸಾಯಂಕಾಲ 5½ ಘಂಟೆಗೆ ಸರಿಯಾಗಿ [illegible]

[illegible]

ಆದರೆ ಆ ದಿವಸ ಪ್ರಾತಃಕಾಲ ಪುನಃ ಮಹಾತ್ಮಾ ಗಾಂಧಿಯವರ ಮೆರವಣಿಗೆಯನ್ನು ತೆಗೆದು ಕುಡಿಯುವವರ ಮನೆಗೆ ಹೋಗಿ ಬೋಧ ಮಾಡಿದುದರಿಂದ ಕುಡಿತವು ತೀರ ಕಡಿಮೆಯಾಯಿತು.

ಆರ್. ವೀರನಗೌಡ.

ಮೇಜರ್ ಎಸ್. ಗೋಪಾಲರಾವರವರಿಗೆ ದೊರೆತ ಬಹುಮಾನಪದಕ

ಮೈಸೂರು ಶ್ರೀಮನ್ ಮಹಾರಾಜರವರ ಆನರರಿ ಎಡಿಕಾಂಗ್ ರಾದ ಮತ್ತು ಬಾಡಿಗಾರ್ಡ್ ಕಮ್ಯಾಂಡೆಂಟರಾದ ಮ|| ರಾ|| ಮೇಜರ್ ಎಸ್. ಗೋಪಾಲರಾವರವರು ಮಹಾಸ್ವಾಮಿಯವರ ಅನನ್ಯಭಕ್ತರಾಗಿದ್ದು ಅನೇಕ ವರ್ಷಗಳಿಂದ ಅವರ ಸೇವೆಯನ್ನು ಮಾಡುತ್ತಾ ಬಂದು ಮಹಾಸ್ವಾಮಿಯವರ ಅನ್ವಾದೃಶವಾದ [illegible]

[illegible] ಹೊಸಕರಹದ ಮಾದರಿ ಗ್ರಾಮವನ್ನಾಗಿ ಮಾರ್ಪಡಿಸುವಂತೆ ಈಗ್ಗೆ ಹನ್ನೆರಡು ವರ್ಷಗಳ ಹಿಂದೆ ಶ್ರೀ ಗೋಪಾಲರಾವರವರಿಗೆ ಅಪ್ಪಣೆಮಾಡಿದ್ದರು. ಅದನ್ನು ಶ್ರೀ ಗೋಪಾಲರಾವರವರು ಶಿರಸಾವಹಿಸಿ ಅಂದಿನಿಂದ ಬಹು ಶ್ರಮಪಟ್ಟು ಆ ಗ್ರಾಮವನ್ನು ಬಲು ಸೊಗಸಾಗಿ ನವೀನರೀತಿಯ ಮಾದರಿಗ್ರಾಮವನ್ನಾಗಿ ಮಾರ್ಪಡಿಸಿರುತ್ತಾರೆ. ಈಗ ಆ ಗ್ರಾಮಕ್ಕೆ ಮೊದಲಿನ ಹೆಸರು ಹೋಗಿ "ಲಲಿತಾದ್ರಿಪುರ"ವೆಂಬ ನೂತನ ನಾಮಕರಣವಾಗಿದೆ. ಈ ಗ್ರಾಮದ ಸುಂದರತೆಯನ್ನು ಒಂದು ಮಾತಿನಿಂದ ಹೇಳುವುದಾದರೆ "ಹಳ್ಳಿಗ್ರಾಮವೆಂದರೆ ಈ ಲಲಿತಾದ್ರಿಪುರದಂತಿರಬೇಕು" ಎನ್ನುವಂತಿದೆ. ಇದು ಶ್ರೀ ಗೋಪಾಲರಾವರವರ ಪ್ರಯತ್ನದ ಫಲ.

ಮೈಸೂರು ಸಂಸ್ಥಾನದಲ್ಲಿರುವ ಪ್ರತಿಯೊಂದು ಹಳ್ಳಿಯೂ ಕಾಲಕ್ರಮದಿಂದ ಈ ಮಾದರಿಯ ಗ್ರಾಮದಂತಾಗಬೇಕೆಂಬುದೇ ಮಹಾಸ್ವಾಮಿಯವರ ಘನೋದ್ದೇಶವಾಗಿರುವುದು ಮುಖ್ಯವಾಗಿ ನಮ್ಮ ಮಹಾಪ್ರಭುಗಳವರ ಪ್ರಜೆಗಳೇ ಧನ್ಯರು.

ಈ ತಿಂಗಳು ತಾ|| 4 ನೆಯ ಶನಿವಾರ ರಾತ್ರಿ ನಡೆದ ದಸರಾ ದರ್ಬಾರಿನಲ್ಲಿ ಮಹಾಸ್ವಾಮಿಯವರು ಶ್ರೀ ಗೋಪಾಲರಾವರವರಿಗೆ ಪಬ್ಲಿಕ್ ಸರ್ವೀಸಿನ ಬಹುಮಾನಪದಕವನ್ನೂ ಬಿಲ್ಲೆತ್ತನ್ನೂ ದಯಪಾಲಿಸಿ ಸನ್ಮಾನಿಸಿದರೆಂದು ತಿಳಿದು ಬಹು ಸಂತೋಷ [illegible]

[illegible] ಶ್ರೀ ಗೋಪಾಲರಾವರವರನ್ನು ನಾವು ಬಹಳವಾಗಿ ಅಭಿವಂದಿಸಿ ಅವರು ಇತೋಪ್ಯತಿಶಯವಾಗಿ ಮಾನಸನ್ಮಾನಗಳನ್ನು ಹೊಂದುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ವೇ|| ಶಿವದೇವಶಾಸ್ತ್ರಿಗಳವರ ಶ್ಲಾಘನೀಯ ಕೃತ್ಯವು.

ನಮ್ಮ ಭಾರತಭೂಮಿಯಲ್ಲಿ ಭಗವಾನ್ ರಾಮಚಂದ್ರನಿಂದ ಮೊದಲ್ಗೊಂಡು ಛತ್ರಪತಿ ಶಿವಾಜಿಯವರೆಗಿನ ಪೂರ್ವಕಾಲದ [illegible]

[illegible]

ದೇಶ ಹಿತಚಿಂತಕ ಹಂಪೀ ನಿವಾಸಿ

ತಾ|| ೧-೧೦-೧೯೩೦ ರಾ|| ರಾ|| ಶಿವಣ್ಣನವರು.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಹದಿನಾರನೆಯ ವಾರ್ಷಿಕ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವಾಗ ಮೈಸೂರು ಸಂಸ್ಥಾನದ ದಿವಾನರಾದ ರಾಜಕಾರ್ಯ ಪ್ರಸಕ್ತ ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರವರು ಮಾಡಿದ ಭಾಷಣ.

ಮಹನೀಯರೆ,

ಈ ದಿವಸ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಹದಿನಾರನೆಯ ವಾರ್ಷಿಕ ಸಮ್ಮೇಳನದ ಆರಂಭೋತ್ಸವವನ್ನು ನಡೆಯಿಸಲು ನನ್ನನ್ನು ಕರೆದುದಕ್ಕಾಗಿ ನಾನು ತಮ್ಮೆಲ್ಲರಿಗೂ ಕೃತಜ್ಞನಾಗಿದ್ದೇನೆ. [illegible]

[illegible]

[illegible]

ಈ ಮಹತ್ಕಾರ್ಯದಲ್ಲಿ ಭಾಗಿಗಳಾಗುವುದು ಕವಿತಾಸ್ಫೂರ್ತಿಯುಳ್ಳವರಿಗೆ, ಪ್ರತಿಭಾಶಾಲಿಗಳಿಗೆ, ಪ್ರಬಂಧಭಾವನಾಶೀಲರಿಗೆ ಮಾತ್ರ ಸಾಧ್ಯವೆಂದೆಣಿಸಿ ಯಾರೂ ಹಿಮ್ಮೆಟ್ಟಬಾರದು. [illegible] ಒಳಗಡೆ ತಿಳಿವೊಂದಿದ್ದರೆ ಅದನ್ನು ವ್ಯಕ್ತಪಡಿಸುವುದೇನೂ ಅಸಾಧ್ಯವಲ್ಲ.

ಕರ್ಣಾಟಕದಲ್ಲಿ ಭಾಷಾಜಾಗ್ರತಿಗಾಗಿ ಹತ್ತಾರು ವರುಷದಿಂದ ಹಗಲಿರುಳೆನ್ನದೆ ದುಡಿದಿರುವ ಶ್ರೀ ಆಲೂರು ವೆಂಕಟರಾಯರಂತಹ ವಿದ್ವಾಂಸರನ್ನು ನಾವು ಈ ಅಧಿವೇಶನದ ಅಧ್ಯಕ್ಷರನ್ನಾಗಿ ಪಡೆದುದು ಪರಿಷತ್ತಿನ ಸೌಭಾಗ್ಯವೆಂದೇ ಹೇಳಬೇಕು. ಅವರ ನೇತೃತ್ವದಲ್ಲಿ ತಮ್ಮ ಕಾರ್ಯಕ್ರಮವು ಸಾಂಗವಾಗಿ ನೆರವೇರಲೆಂದು ಹಾರೈಸುತ್ತೇನೆ.

ಈ ಉತ್ಸವದಲ್ಲಿ ಭಾಗಿಯಾಗಲು, ಮತ್ತು ಕನ್ನಡಿಗರೆಲ್ಲರಿಗೂ ಅತ್ಯಂತ ಪ್ರಿಯವಾದ ಈ ಸಮಾರಂಭದಲ್ಲಿ ನನಗಿರುವ ಆಸಕ್ತಿಯನ್ನು ವ್ಯಕ್ತಪಡಿಸಲು, ನನಗೆ ಅವಕಾಶಕೊಟ್ಟುದಕ್ಕಾಗಿ ನಾನು ತಮ್ಮೆಲ್ಲರನ್ನೂ ವಂದಿಸುತ್ತೇನೆ.

ದುಂಡುಮೇಜಿನಪರಿಷತ್ತು.

ಭಾರತ ಸಮಸ್ಯೆ.

(ಹೈದರಾಬಾದ ಚೀಫ್ ಜಸ್ಟಿಸರಾದ ಮ|| ಮಿರ್ಜಾ ಯಾರ್ಜಂಗರವರಿಂದ.)

1. ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಸ್ಥಾಪನೆಯೇ ಉತ್ತಮವಾದ ತೀರ್ಮಾನ.

[illegible]

ಸಾಮ್ರಾಜ್ಯಾಂತರ್ಗತಸ್ವರಾಜ್ಯವೆಂದರೇನು?

ಪ್ರಥಮತಃ ಭರತಖಂಡವು "ಸಾಮ್ರಾಜ್ಯಾಂತರ್ಗತಸ್ವರಾಜ್ಯ" ವೆಂಬ ಶಬ್ದಕ್ಕೆ ಏನು ಅರ್ಥಮಾಡುವದೆಂಬುದನ್ನು ಸ್ಪಷ್ಟಪಡಿಸುವೆನು. ಈ ಭಾವನೆಗಳು ಶಬ್ದಾರ್ಥಭಾವದಿಂದ ಸಂಪೂರ್ಣ ಸಮಂಜಸವಾಗಿ ತೋರದೆ ಹೋಗಬಹುದಾದರೂ, ಭರತಖಂಡವು ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಈ ಮುಂದೆ ಹೇಳುವಂತೆ ಭಾವಿಸುವುದು.

(೧) ಭರತಖಂಡದ ಅಂತರಂಗ ಆಡಳಿತ ವ್ಯವಹಾರಗಳನ್ನು [illegible]

[illegible]

ಪಂಚಾಚಾರ್ಯ ಪ್ರಭಾ

೧೯೩೦ನೇ ಅಕ್ಟೋಬರ್ ತಾ|| ೧೩ನೆಯ ಸೋಮವಾರ

श्रीमदुज्जयिनी सद्धर्मसिंहासनाधीश्वर श्री १०८ जगद्गुरु सिद्धलिङ्गशिवाचार्य महास्वामिनः

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು

ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಭೂಮಂಡಲದಲ್ಲಿ ಶಕ್ತಿವಿಶಿಷ್ಟಾದ್ವೈತಪ್ರತಿಪಾದಕವಾದ ವೀರಶೈವಸಿದ್ಧಾಂತವನ್ನು ನೆಲೆಗೊಳಿಸಿ, ಈ ಮತೀಯರ ಶಿಕ್ಷಣರಕ್ಷಣಾದಿಗಳ ಬಗ್ಗೆ ರಂಭಾಪುರಿ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ, ಕಾಶೀ ಈ ಪಂಚಪುಣ್ಯಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿರುವ ವಿಷಯವು ಶಾಸ್ತ್ರದಿಂದಲೂ ರೂಢಿಯಿಂದಲೂ ಸರ್ವತ್ರ ಪ್ರಸಿದ್ಧವಿರುವದಷ್ಟೆ! ಈ ಪಂಚಪೀಠಗಳು ಜಗದಾದಿಯಲ್ಲಿಯೇ ಸ್ಥಾಪಿಸಲ್ಪಟ್ಟಿದ್ದು ಈ ಹೊತ್ತಿನವರೆಗೆ ಅಚ್ಚಳಿಯದಂತೆ ಮೆರೆಯುತ್ತ ಬಂದಿರುವವು. ಜೈನ, ಬೌದ್ಧ, ಮುಸಲ್ಮಾನರ ಆಳ್ವಿಕೆಯಲ್ಲಿಯೂ ಸಹ ಅವರ ದಬ್ಬಾಳಿಕೆಗೆ ಒಳಗಾಗದೆ ತಮ್ಮ ಮಹಿಮಾಪ್ರಭಾವದಿಂದ ಆಯಾ ಮತೀಯ ರಾಜರಮೇಲೆ ತಮ್ಮ ಪೂಜ್ಯತೆಯನ್ನಿರಿಸಿಕೊಂಡು ಮೆರೆದವು. ಈ ವಿಷಯದಲ್ಲಿ ಶ್ರೀ ಜಗದ್ಗುರು ಕಾಶೀಪೀಠಕ್ಕೆ ಅಕಬರ್, ಬಾಬರ್, ಹುಮಾಯೂನ್, ಔರಂಗಜೇಬ್ ಮೊದಲಾದ ಮುಸಲ್ಮಾನ ಚಕ್ರವರ್ತಿಗಳು ಭಕ್ತಿಪೂರ್ವಕವಾಗಿ ಬರೆದುಕೊಟ್ಟಿರುವ ದಾನಶಾಸನಗಳೇ ಪರಮಪ್ರಮಾಣೀಭೂತಗಳಾಗಿರುತ್ತವೆ. ಈ ಗುರುಪೀಠಗಳಿಗೆ ಪೂರ್ವಕಾಲದ ಮಹಾರಾಜರು ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದುದರಿಂದ ಇವುಗಳ ವೈಭವಪ್ರಕಾಶವು ಆ ಕಾಲದಲ್ಲಿ ದಶದಿಕ್ಕುಗಳನ್ನು ವ್ಯಾಪಿಸಿದ್ದಿತು. ಕಲಿಕಾಲಪ್ರಭಾವದಿಂದ ಭರತಖಂಡದಲ್ಲಿ ಹಿಂದೂರಾಜ್ಯವೂ ಹಿಂದೂ ಧರ್ಮವೂ ನಾಶವಾಗುತ್ತ ಬಂದುದರಿಂದ ಯಾವತ್ತು ಮತಗಳ ಹಾಗೂ ಮತಾಚಾರ್ಯರ ಕಾಂತಿಯು ದಿನೇ ದಿನೇ ಕ್ಷೀಣದಶೆಯನ್ನೈದುತ್ತೈದುತ್ತ ಈಗೀಗಂತೂ ವಿಶೇಷ ಹೀನಾವಸ್ಥೆಗೆ ಪ್ರಾಪ್ತವಾಗಿದೆ. ಅಸ್ತು! ಈ ಪಂಚಪೀಠಗಳಲ್ಲಿ ಕಾಶೀ, ಕೇದಾರ ಪೀಠಗಳು ಅತ್ಯಂತ ವೈಭವದಲ್ಲಿರುವವು. ಇವುಗಳ ರಚನೆಯೂ ಕೂಡ ಬಹು ಭದ್ರವಾಗಿರುವುದು. ರಂಭಾಪುರಿ, ಉಜ್ಜಯಿನಿ. ಪರ್ವತಪೀಠಗಳ ರಚನೆಯು ಶಿಲೆಯಿಂದಾಗಿರದೆ ಕೇವಲ ಮಣ್ಣಿನಿಂದಾಗಿರೋಣದರಿಂದ ಈ ಪೀಠಗಳು ಬಹಳ ಶೈಥಿಲ್ಯವನ್ನು ಹೊಂದಿವೆ. ಅವುಗಳನ್ನು ಜೀರ್ಣೋದ್ಧಾರ ಮಾಡುವ ಭಾರವು ಆಯಾ ಪೀಠಾಧೀಶ್ವರರದಾಗಿರುತ್ತದೆ. ಸದ್ಯಃ ವೀರಶೈವಮತವನ್ನುದ್ಧರಿಸುವದಕ್ಕೋಸ್ಕರ ಅವತರಿಸಿರುವ ಪ್ರಮಥಾಧೀಶ್ವರರೂ, ಸಾಕ್ಷಾತ್ ಶ್ರೀಶಿವಾಪರಾವತಾರಿಗಳೂ, ವೈರಾಗ್ಯಚಕ್ರವರ್ತಿಗಳೂ, ಜಗದ್ಗುರು ಪದಾಂಕಿತರೂ, ದಯಾದೃಷ್ಟಿ ನಿಕ್ಷೇಪಮಾತ್ರದಿಂದ ಸಮಸ್ತಪ್ರಾಣಿಗಳನ್ನುದ್ಧರಿಸುವ ಅದ್ಭುತಶಕ್ತಿಯುಳ್ಳವರೂ, ದಯಾನಿಧಿಗಳೂ, ಗುರುಸಾರ್ವಭೌಮರೂ ಆದ ಮೇಲ್ಕಂಡ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಪೀಠದ ಶೈಥಿಲ್ಯಾವಸ್ಥೆಯನ್ನು ಕಣ್ಣಾರೆ ಕಂಡು ಸದರಿ ಪೀಠವನ್ನು ಶಿಲೆಯಿಂದ ನಿರ್ಮಿಸಿ ಆಚಂದ್ರಾರ್ಕವಾಗಿರುವಂತೆ ಮಾಡಬೇಕೆಂಬ ಸತ್ಸಂಕಲ್ಪದಿಂದ ದೇಶಮಧ್ಯದಲ್ಲಿ ಸಂಚರಿಸಹತ್ತಿದ್ದಾರೆ. ಈಗಾಗಲೇ ಎಷ್ಟೋ ಸಾಮಗ್ರಿಗಳು ಸಿದ್ಧವಾಗಿವೆ. ಸದ್ಯಃ ಜಗದ್ಗುರುಗಳವರು ಬಳ್ಳಾರಿ ಮುಕ್ಕಾಮಿನಲ್ಲಿದ್ದಾರೆ. ಬಳ್ಳಾರಿಯ ಸದ್ಭಕ್ತರು ೩-೪ ಶಿಲಾಮಂಟಪಗಳನ್ನು ಹಾಕಿಸಿಕೊಡಲಿಕ್ಕೆ ಒಪ್ಪಿದ್ದಾರೆಂಬ ವಿಷಯವನ್ನು ಬರೆಯಲಿಕ್ಕೆ ಅತ್ಯಂತ ಸಂತೋಷವೆನಿಸುತ್ತದೆ. ಈ ಸದ್ಭಕ್ತರೇ ಧನ್ಯರು! ಇವರ ಜನ್ಮವೇ ಸಾರ್ಥಕವು! ಇವರ ಪುಣ್ಯಕ್ಕೆ ಬೆಲೆಯಿಲ್ಲವೆಂದು ಹೇಳಬಹುದಾಗಿದೆ. ಇದರಂತೆ ಸರ್ವ ಪ್ರಾಂತದವರು ಅಸಾಧಾರಣವಾದ ಗುರುಭಕ್ತಿಯಿಂದೊಡಗೂಡಿ ಧರ್ಮಪೀಠದ ಜೀರ್ಣೋದ್ಧಾರ ಕಾರ್ಯದಲ್ಲಿ ಭಾಗಿಗಳಾಗಿ ಜಗದಾದಿಗುರು ಶ್ರೀ ದಾರುಕನ ಕೃಪೆಗೆ ಪಾತ್ರರಾಗಬೇಕೆಂದೂ, ಶ್ರೀ ಜಗದ್ಗುರುಗಳವರು ತಾವು ಕೈಕೊಂಡ ಕಾರ್ಯವನ್ನು "ಶುಭಸ್ಯ ಶೀಘ್ರಂ" ಎಂಬ ಆರ್ಯೋಕ್ತಿಯಂತೆ ಬೇಗನೆ ಪೂರೈಸಿ ಸಮಸ್ತ ಭಕ್ತಕೋಟಿಯ ಮನಸ್ಸಿಗೆ ಆನಂದವನ್ನುಂಟುಮಾಡಬೇಕೆಂದೂ, ಉಳಿದ ಪೀಠಾಧಿಪತಿಗಳಾದರೂ ತಮ್ಮ ತಮ್ಮ ಪೀಠಗಳ ಬಗ್ಗೆ ಈ ರೀತಿಯಾಗಿ ಜೀರ್ಣೋದ್ಧಾರಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದೂ ಪ್ರಾರ್ಥಿಸುತ್ತೇವೆ.

ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ವೇ|| ಪಂ|| ಶಂಕರಶಾಸ್ತ್ರಿಗಳವರು ಆಸ್ಥಾನವಿದ್ವಾಂಸರಾದರು.

ಈ ವರ್ಷ ಜ್ಯೇಷ್ಠಮಾಸದಲ್ಲಿ ನೆರವೇರಿದ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಉಮಚಿಗಿ ಮಳೆಮಠದ ವೇ|| ಪಂ|| ಶಂಕರಶಾಸ್ತ್ರಿಗಳವರು ಆಸ್ಥಾನವಿದ್ವತ್ ಸ್ಥಾನಕ್ಕೋಸ್ಕರ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಅರ್ಜಿಯನ್ನು ಹಾಕಿಕೊಂಡು ಅದರ ಸಂಗಡ ತಾವು ವೀರಶೈವಮತಪರವಾಗಿ ಬರೆದ ಈಶಾವಾಸ್ಯೋಪನಿಷದ್ಭಾಷ್ಯ, ಕೇನೋಪನಿಷದ್ಭಾಷ್ಯ ಸಿದ್ಧಾಂತಶಿಖೋಪನಿಷದ್ಭಾಷ್ಯ, ವೀರಶೈವಸಿದ್ಧಾಂತಸುಧಾಕರ, ಬ್ರಹ್ಮಸೂತ್ರವೃತ್ತಿ ಮೊದಲಾದ ಗ್ರಂಥಗಳನ್ನು ಕಳುಹಿಸಿದ್ದರಲ್ಲದೆ ತಮ್ಮ ಪಾಂಡಿತ್ಯದ ವಿಷಯದಲ್ಲಿ ಮಹಾಮಹೋಪಾಧ್ಯಾಯ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರೇ ಮೊದಲಾದ ಪಂಡಿತ ಪ್ರಕಾಂಡರು ಕೊಟ್ಟ ಯೋಗ್ಯತಾಪತ್ರಿಕೆಗಳನ್ನೂ ಸಹ ಕಳುಹಿಸಿದ್ದರು. ಶ್ರೀಮನ್ಮಹಾರಾಜರವರು ಇವುಗಳನ್ನೆಲ್ಲ ಪರಾಮರ್ಶಿಸಿ ಇವರಲ್ಲಿರುವ ನೈಜವಾದಪಾಂಡಿತ್ಯವನ್ನು ಕಂಡು ಸಂತುಷ್ಟಚಿತ್ತರಾಗಿ ತಮ್ಮ ಆಸ್ಥಾನಕ್ಕೆ ವಿದ್ವಾಂಸರನ್ನಾಗಿ ಸೇರಿಸಿಕೊಂಡಿರುವರು. ಇದನ್ನು ನೋಡಿ ಸಮಸ್ತ ವೀರಶೈವರು ಸಂತೋಷಪಡಬೇಕಾಗಿದೆ. ಶಾಸ್ತ್ರಿಗಳವರು ಸದ್ಗುಣಸಮುದಾಯದಿಂದಲೂ, ಗ್ರಂಥಲೇಖನಪ್ರಾಥಮ್ಯದಿಂದಲೂ, ಗುರುಸೇವೆಯಿಂದಲೂ, ಅದರಲ್ಲಿ ಶ್ರೀಮದುಜ್ಜಯಿನೀ ಪೀಠಾಧೀಶ್ವರರ ಆಶೀರ್ವಾದಪ್ರಭಾವದಿಂದಲೂ ದಿನೇ ದಿನೇ ಉನ್ನತಸ್ಥಾನವನ್ನಲಂಕರಿಸುತ್ತಿರುವುದು ಇವರ ಪುಣ್ಯವಿಶೇಷವೆಂದೇ ಹೇಳಬೇಕಾಗಿದೆ. ಶಾಸ್ತ್ರಿಗಳವರು ಇನ್ನು ಮುಂದೆಯೂ ಇದಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಗ್ರಂಥಗಳನ್ನು ಬರೆದು ಜನರ ಆದರಕ್ಕೂ ಪರಶಿವನ ಕೃಪೆಗೂ ಪಾತ್ರರಾಗಲೆಂದೂ, ಜಗದಾಚಾರ್ಯರು ಇವರಿಗೆ ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ತುಗಳನ್ನಿತ್ತು ರಕ್ಷಿಸಲೆಂದೂ ಹಾರೈಸುತ್ತೇವೆ.



श्रीमदुज्जयिनी धर्मपीठस्य महाद्वारम्

ಶ್ರೀಮದುಜ್ಜಯಿನೀ ಧರ್ಮಪೀಠದ ಮಹಾದ್ವಾರವು.

ಭಾರತಸ್ವಾತಂತ್ರ್ಯಸಂಗ್ರಾಮವಾರ್ತೆ.

ಅಖಿಲಭಾರತರಾಷ್ಟ್ರೀಯ ಮಹಾಸಭೆಯ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲ್ ನೆಹರೂರವರು ಇದೇ ತಿಂಗಳು 11ನೆಯ ತಾರೀಖಿನ ದಿವಸ ಕಾರಾಗೃಹದಿಂದ ಬಿಡುಗಡೆಹೊಂದಿದರು.

ಇದೇ ಅಕ್ಟೋಬರ್ 6 ನೆಯ ತಾ|| ಸೋಮವಾರ ಪ್ರಾತಃಕಾಲ ಮುಂಬಯಿಯ ದೇಶಸೇವಕರು, ಸ್ವಯಂಸೇವಕರು, ವಾನರಸೇನೆಯ ಮೆಂಬರರು, ಸ್ತ್ರೀಯರ ರಾಷ್ಟ್ರೀಯಸೈನ್ಯದ ಮೆಂಬರರು ಇವರೆಲ್ಲರೂ "ಸಂಗ್ರಾಮಕೂಟದ" ಮೆಂಬರರನ್ನು ಸಾಗಕಳುಹಿಸುವದಕ್ಕಾಗಿ ಕಾಂಗ್ರೆಸ್ ಗೃಹದಲ್ಲಿ ಸೇರಿದ್ದರು. ಪೋಲೀಸರು "ಸಂಗ್ರಾಮಕೂಟ"ದ ಮೆಂಬರರನ್ನು ದಸ್ತಗಿರಿ ಮಾಡುವರೆಂಬ ವರ್ತಮಾನವು ಭಾನುವಾರವೇ ಎಲ್ಲರಿಗೂ ತಿಳಿದುಬಂದಿತ್ತು. ಅದಕ್ಕಾಗಿ "ಸಂಗ್ರಾಮಕೂಟ"ದ ಮೆಂಬರರೆಲ್ಲರೂ ಸೋಮವಾರ ಪ್ರಾತಃಕಾಲ ಪೋಲೀಸರ ಆಗಮನವನ್ನು ನಿರೀಕ್ಷಿಸುತ್ತ ಕಾಂಗ್ರೆಸ್ ಗೃಹದಲ್ಲಿ ಕುಳಿತಿದ್ದರು. ಸ್ವಯಂಸೇವಕರು "ಕಾಂಗ್ರೆಸ್ ಗೃಹ"ದ ಪ್ರಥಮದ್ವಾರದಿಂದ "ಸಂಗ್ರಾಮಕೂಟ"ದ ಆಫೀಸಿನ ಬಾಗಿಲವರೆಗೆ ಸಾಲುಕಟ್ಟಿ ನಿಂತಿದ್ದರು. 9-30 ಘಂಟೆಗೆ ಸರಿಯಾಗಿ ಪೋಲೀಸ್ ಅಧಿಕಾರಿಗಳು ಅಲ್ಲಿಗೆ ಬಂದು ಸ್ವಯಂಸೇವಕರ ಮಧ್ಯದಲ್ಲಿ ಪ್ರವೇಶಮಾಡಿದರು. ದಸ್ತಗಿರಿಯ ಕಾರ್ಯಕ್ರಮಗಳು ಜರುಗಿದ ಕೂಡಲೆ "ಸಂಗ್ರಾಮಕೂಟ"ದ ಮೆಂಬರರೆಲ್ಲರೂ ಪೋಲೀಸರನ್ನು ಹಿಂಬಾಲಿಸಿದರು.

ಬಳ್ಳಾರಿಯ ಕಾರಾಗೃಹದಲ್ಲಿಡಲ್ಪಟ್ಟಿದ್ದ ಆಂಧ್ರದೇಶದ ಪ್ರಸಿದ್ಧ ರಾಜಕೀಯ ಮುಖಂಡರಾದ ವಿ|| ಸಿ. ರಾಜಗೋಪಾಲಾಚಾರಿಯವರು ಇದೇ ಅಕ್ಟೋಬರ್ 10ನೆಯ ತಾರೀಖಿನ ದಿವಸ ಬಿಡುಗಡೆಯನ್ನು ಹೊಂದಿದರು.

ದುಂಡುಮೇಜಿನ ಪರಿಷತ್ತಿನ ಸಿದ್ಧತೆಗಳು ಅತ್ಯಂತ ಭರದಿಂದ ಮಾಡಲ್ಪಡುತ್ತಿರುವುವು. ಚಕ್ರವರ್ತಿಸಾರ್ವಭೌಮರವರ ಸೆಂಟ್ ಜೇಮ್ಸ್ ಅರಮನೆಯಲ್ಲಿ ಪ್ರಸಿದ್ಧ "ಕ್ವೀನ್ ಆನಿ" ಮಹಾರಾಜ್ಞಿಯ ದಿವಾನ್‌ಖಾನೆಯಲ್ಲಿ ಪರಿಷತ್ತು ನಡೆಯುವುದು. ಮೊನ್ನೆ ಮೊನ್ನೆ ಅಮೇರಿಕಾ, ಜಪಾನ್, ಮೊದಲಾದ ಮುಖ್ಯ ಮುಖ್ಯ ರಾಜ್ಯಗಳ ಪ್ರತಿನಿಧಿಗಳೆಲ್ಲರೂ ಲಂಡನ್ನಿನಲ್ಲಿ ಸೇರಿ ನಡೆಯಿಸಿದ ನೌಕಾಪರಿಷತ್ತು ಮೇಲ್ಕಂಡ ದಿವಾನ್‌ಖಾನೆಯಲ್ಲಿಯೇ ಜರುಗಿತು. ಸದರಿ ನೌಕಾಪರಿಷತ್ತಿಗಿಂತಲೂ ದುಂಡುಮೇಜಿನ ಪರಿಷತ್ತಿಗೆ ಹೆಚ್ಚು ಸದಸ್ಯರು ಬರುವದರಿಂದ ವಿಶೇಷ ಏರ್ಪಾಟುಗಳು ನಡೆಯುತ್ತಿರುವುವು. ಪತ್ರಿಕಾಕರ್ತರಿಗೆ ಪರಿಷತ್ತು ನಡೆಯುವ ದಿವಾನ್‌ಖಾನೆಯನ್ನು ಪ್ರವೇಶಿಸಲುವಿಶೇಷ ಅವಕಾಶ ದೊರೆಯದೆ ಹೋಗುವದಾದರೂ ಪಕ್ಕದ ಕೋಣೆಯಲ್ಲಿ ಕುಳಿತು ನಡೆದುದನ್ನೆಲ್ಲ ಅರಿತುಕೊಳ್ಳಲನುಕೂಲಿಸುವಂತೆ ಶಬ್ದವನ್ನು ಹೆಚ್ಚಿಸುವ ಯಂತ್ರಗಳನ್ನು ಏರ್ಪಡಿಸಿರುವರು. 40 ಟೆಲಿಫೋನ್ ಯಂತ್ರಗಳೂ, ಅತ್ಯಂತ ವೇಗವಾಗಿ ವರ್ತಮಾನವನ್ನು ಒಯ್ಯುವ ಅನೇಕ ನೂತನ ಯಂತ್ರಸಾಧನೆಗಳೂ ಏರ್ಪಡಿಸಲ್ಪಡುವುವು. ಪ್ರತಿನಿತ್ಯವೂ ನಡೆಯುವ ವಿದ್ಯಮಾನಗಳನ್ನೆಲ್ಲ ಪ್ರತಿದಿನ ಎರಡು ಸಾರೆ ಪತ್ರಿಕಾಕರ್ತರಿಗೆ ತಿಳುಹಿಸಲನುಕೂಲಿಸುವಂತೆ ಅತ್ಯಂತ ವೇಗವಾಗಿ ಬರೆಯುವ ಅನೇಕ ಷಾರ್ಟ್‌ಹ್ಯಾಂಡ್ ಸ್ಟೆನೋಗ್ರಾಫರುಗಳ"ನ್ನೂ ಗೊತ್ತುಮಾಡುವರು. ಈ ವರ್ಷದ ಅಂತ್ಯದೊಳಗಾಗಿ ಪರಿಷತ್ತಿನ ಕಾರ್ಯಕ್ರಮಗಳು ಪೂರ್ತಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿರುವುದು.

ಇದೇ ಅಕ್ಟೋಬರ್ 7 ನೆಯ ತಾರೀಖಿನ ದಿವಸ ಲಾಹೋರಿನಲ್ಲಿ ಭಗತ್‌ಸಿಂಗ ಮೊದಲಾದವರ ಮೇಲೆ ನಡೆಯುತ್ತಿದ್ದ ರಾಜದ್ರೋಹದ ಮೊಕದ್ದಮೆಯ ತೀರ್ಮಾನವು ಹೇಳಲ್ಪಟ್ಟಿತು. ಮೊಕದ್ದಮೆಯ ತೀರ್ಮಾನವನ್ನು 8 ನೆಯ ತಾರೀಖಿನ ದಿವಸ ಹೇಳುವರೆಂದು ಜನರು ಭಾವಿಸಿದ್ದುದರಿಂದ ಜೈದಿಗಳಿದ್ದ ಜೈಲಿನ ಬಾಗಿಲಿನಲ್ಲಿ ಯಾವ ಗಲಾಟೆಯೂ ಆಗಲಿಲ್ಲ. ಮ್ಯಾಜಿಸ್ಟ್ರೇಟರು ಅಪರಾಧಿಗಳಿಗೆ ಈ ಕೆಳಗೆ ಕಂಡಂತೆ ಶಿಕ್ಷೆಯನ್ನು ವಿಧಿಸಿರುವರು

(1) ಭಗತ್‌ಸಿಂಗ್, ರಾಜಗುರು ಉರ್ಫ್ "ಎಂ. ಎಂ." ಮತ್ತು ಸುಖದೇವ ಈ ಮೂರು ಜನರಿಗೂ ಮರಣದಂಡನೆ. (2) ಕಿಶೋರಿಲಾಲ್, ಮಹಾವೀರಸಿಂಗ, ಬಿ. ಕೆ. ಸಿಂಹ, ಶಿವವರ್ಮ, ಗಯಾಪ್ರಸಾದಸಿಂಗ, ಜಯದೇವ, ಕಮಲನಾಥ ಚೌಧರಿ ಈ ಏಳುಜನರಿಗೆ ಗಡೀಪಾರು ಶಿಕ್ಷೆ. (3) ಕುಂದನಲಾಲನಿಗೆ 7 ವರ್ಷ ಕಠಿಣಸಜೆ ಮತ್ತು (4) ಪ್ರೇಮದತ್ತನಿಗೆ 5 ವರ್ಷ ಕಠಿಣಸಜೆ. ದೇಸರಾಜ, ಅಜಯಕುಮಾರಘೋಷ್ ಮತ್ತು ಸನ್ಯಾಲ ಈ ಮೂವರು ಬಿಡುಗಡೆ ಮಾಡಲ್ಪಟ್ಟರು. ಮ್ಯಾಜಿಸ್ಟ್ರೇಟರ ತೀರ್ಮಾನವು ಫುಲ್‌ಸ್ಕೇಪ್ 400 ಪುಟಗಳಲ್ಲಿ ಬರೆಯಲ್ಪಟ್ಟಿರುವದೆಂದು ತಿಳಿದುಬಂದಿದೆ. ಸರಕಾರದವರು ಅದನ್ನು ಅಚ್ಚುಹಾಕಿಸಿ ಇಷ್ಟರಲ್ಲೇ ಪ್ರಕಟಿಸಲಿರುವರು. ಇವರಿಗಾದ ಶಿಕ್ಷೆಗೋಸುಗ ಭರತಖಂಡದ ಮುಖ್ಯ ಮುಖ್ಯ ನಗರಗಳಲ್ಲೆಲ್ಲ ಹರತಾಳವು ಆಚರಿಸಲ್ಪಟ್ಟಿತು.

ಯರವಾಡಾ ಕಾರಾಗೃಹದ ಅತಿಥಿಗಳಾಗಿರುವ ಕಾಂಗ್ರೆಸ್ ಮುಖಂಡರು ಕಳೆದ ಆಗಸ್ಟ 15 ನೆಯ ತಾರೀಖಿನ ದಿವಸ ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ವಿ|| ಎಂ. ಆರ್. ಜಯಕರ್‌ರವರಿಗೆ ಬರೆದ ಪತ್ರ ಮತ್ತು ಆಗಸ್ಟ 20ನೆಯ ತಾರೀಖಿನ ದಿವಸ ಲಾರ್ಡ್ ಅರ್ವಿನ್ನರು ಸರ್ ತೇಜ್ ಬಹದ್ದೂರ್ ಸಪ್ರೂರವರಿಗೆ ಬರೆದ ಉತ್ತರ. ಈ ಎರಡು ಪತ್ರಗಳನ್ನು ಸಂಪೂರ್ಣವಾಗಿಯೂ, ಹಾಗೂ ವಿ|| ಗಾಂಧಿ ಮತ್ತು ನೆಹರೂದ್ವಯರ ಪತ್ರಗಳ ಮುಖ್ಯಸಾರಾಂಶವನ್ನೂ, ಲಂಡನ್ನಿನ "ನ್ಯೂ ಲೀಡರ್" ಪತ್ರಿಕೆಯು ಪ್ರಕಟಿಸಿರುವದು. ಇಂಗ್ಲೆಂಡಿನ ವರ್ತಮಾನಪತ್ರದಲ್ಲಿ ಮೇಲ್ಕಂಡ ಪತ್ರಗಳು ಇದೇ ಪ್ರಥಮಸಾರೆ ಪ್ರಕಟಿಸಲ್ಪಟ್ಟಿರುವುವು.

ಮಸ್ಸೂರಿಯಲ್ಲಿರುವ "ಲೀಡರ್" ಪತ್ರಿಕಾ ಪ್ರತಿನಿಧಿಗಳು ಇದೇ ತಿಂಗಳ 12 ನೆಯ ತಾರೀಖಿನ ಸುಮಾರಕ್ಕೆ ಲಾರ್ಡ್ ಅರ್ವಿನ್ನರು ಸಿಮ್ಲಾದಿಂದ ಚಕ್ರಟಾಗುಡ್ಡಗಳ ಮಾರ್ಗವಾಗಿ ಡೆಹರಾಡೂನಿಗೆ ಬರುವರೆಂದೂ, ಅದೇ ಸಮಯದಲ್ಲಿ ವೈಸರಾಯರು ಮಸ್ಸೂರಿಗೆ ಹೋಗಿ ಅಲ್ಲಿ ವಿಶ್ರಾಂತಿಯನ್ನು ಪಡೆಯುತ್ತಿರುವ ಪಂಡಿತ ಮೋತೀಲಾಲ ನೆಹರೂರವರ ದೇಹಸ್ಥಿತಿಯನ್ನು ವಿಚಾರಿಸಲಿರುವರೆಂದೂ, ಈ ಸಂದರ್ಭದಲ್ಲಿ ಅವರೀರ್ವರಿಗೂ "ದುಂಡುಮೇಜಿನ ಪರಿಷತ್ತು" ಮತ್ತು "ಶಾಂತಿಸಂಧಾನ" ಗಳ ವಿಷಯಕವಾದ ಚರ್ಚೆಯು ನಡೆಯುವ ಸಂಭವವಿರುವದೆಂದೂ ಬರೆದಿರುವರು.

ಸೂರತ್ತಿನಲ್ಲಿ ವಿ|| ಭಾಗನಲಾಲ ಮಜುಂದಾರವರ ಅಧ್ಯಕ್ಷತೆಯ ಕೆಳಗೆ ನೆರವೇರಿದ 5 ನೆಯ ಜಿಲ್ಲಾ ಕಾನ್‌ಫರೆನ್ಸಿನಲ್ಲಿ ಸೂರತ್ತಿನಲ್ಲೆಲ್ಲ ಕಂದಾಯ ನಿರಾಕರಣ ಮತ್ತು ಬಹಿಷ್ಕಾರ ಚಳವಳಿಯನ್ನು ಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು.

ಆಕಾಶವಿಮಾನದ ಅನಾಹುತ.

46 ಜನರ ಮರಣ.

ಇದೇ ಅಕ್ಟೋಬರ್ 4ನೆಯ ತಾರೀಖಿನ ದಿವಸ ರಾತ್ರಿ ಇಂಗ್ಲೆಂಡಿನ ಕಾರ್ಡಿಂಗ್‌ಟನ್ನಿನಿಂದ ಭರತಖಂಡಕ್ಕೆ ಹೊರಟ ಪ್ರಪಂಚದಲ್ಲೆಲ್ಲ ಅತ್ಯಂತ ದೊಡ್ಡದೆನಿಸಿದ R-101 ಎಂಬ ಆಕಾಶವಿಮಾನಕ್ಕೆ ಭಯಂಕರವಾದ ಅನಾಹುತವು ಸಂಭವಿಸಿತು. ಆಕಾಶವಿಮಾನವು 5ನೆಯ ತಾರೀಖಿನ ಪ್ರಾತಃಕಾಲ ಉತ್ತರಫ್ರಾನ್ಸ್‌ದೇಶದಲ್ಲಿರುವ "ಬ್ಯೂವಾಯ್" ಗ್ರಾಮದ ದಕ್ಷಿಣಪಾರ್ಶ್ವದ ಸಮೀಪದಲ್ಲಿ ಹೋಗುತ್ತಿದ್ದಾಗ ನೆಲಕ್ಕೆ ಢಿಕ್ಕಿ ಹೊಡೆದು ಬಿದ್ದು, ಕೂಡಲೆ ಹತ್ತಿಕೊಂಡು ಉರಿಯಲಾರಂಭಿಸಿತು. ರಾಯಲ್ ಏರ್‌ಷಿಪ್ ವರ್ಕ್ಸಿನ ಒಬ್ಬ ಆಫೀಸರು ಮತ್ತು 7 ಜನ ಕೆಲಸಗಾರರ ವಿನಾ ಆ ವಿಮಾನದಲ್ಲಿದ್ದ ಇತರರೆಲ್ಲರೂ ಮೃತಿಹೊಂದಿದರು. ಅವರ ಕೈಗಳಲ್ಲಿದ್ದ ಉಂಗುರ, ಗಡಿಯಾರ ಮೊದಲಾದುವುಗಳ ಸಹಾಯದಿಂದ ಲಾರ್ಡ್ ಥಾಂಸನ್ನರನ್ನೂ ಮತ್ತೆ ಕೆಲವರನ್ನೂ ಗುರ್ತಿಸಿದರು. ಲಾರ್ಡ್ ಥಾಂಸನ್ನರವರು ಕೂಲಿಕಾರ ಸರಕಾರದ "ಆಕಾಶದ ಮಂತ್ರಿ"ಗಳಾಗಿದ್ದರು. ಇವರು ಸೈನ್ಯದಲ್ಲಿ ಬ್ರಿಗೇಡಿಯರ್ ಜನರಲ್ ಸ್ಥಾನದಲ್ಲಿದ್ದು ನಿವೃತ್ತರಾಗಿದ್ದರಲ್ಲದೆ ಕಳೆದ ಘೋರ ಯುದ್ಧದ ಸಮಯದಲ್ಲಿ "ಸುಪ್ರೀಂ ವಾರ್ ಕೌನ್ಸಿಲ್ಲ"ನ ಮೆಂಬರರಾಗಿದ್ದರು. ಇವರೇ ಭರತಖಂಡದ ಮುಂದಿನ ವೈಸರಾಯರಾಗುವರಿದ್ದರು.

ಪ್ರಸಿದ್ಧ ಮೋಸಗಾರ.

ಹೈದರಾಬಾದ ಪ್ರಾಂತದಿಂದ ದಸರಾ ಮಹೋತ್ಸವಸಮಯದಲ್ಲಿ ಮೈಸೂರಿಗೆ ಒಬ್ಬ ಮೋಸಗಾರನು ಬಂದಿದ್ದನು. ಇವನು ಜಂಗಮನಿದ್ದಂತೆ ತೋರುತ್ತದೆ. ಇವನು ಕಪ್ಪುಬಣ್ಣದವನಿದ್ದು ಗಿಡ್ಡನಾಗಿದ್ದಾನೆ. ವಯಸ್ಸು 40 ರೊಳಗಿದೆ. ಇವನು ಪ್ರಭಾ ಆಫೀಸಿನಲ್ಲಿ ವಿಶೇಷವಾಗಿ ಸುಳ್ಳು ಹೇಳಿ ಕೆಲವು ಪುಸ್ತಕಗಳನ್ನು ತೆಗೆದುಕೊಂಡು ಹೋದನು. ಶ್ರೀ ನೆಲಮಂಗಲ ರಾಣಿಯವರ ಮನೆಯಲ್ಲಿ ವಾಸವಾಗಿದ್ದು ಅಲ್ಲಿಂದ ಒಂದು ಛತ್ರಿಯನ್ನು ಕದ್ದುಕೊಂಡು ಹೋಗಿದ್ದಾನೆ. ಇಲ್ಲಿಂದ ದಾವಣಗೇರಿಗೆ ಹೋಗಿ ಅಲ್ಲಿ ಬೇರೆ ರೀತಿಯಿಂದ ಮೋಸಮಾಡಲು ಪ್ರಯತ್ನಿಸಲು ಮೈಸೂರಿಂದ ಹೋಗಿದ್ದವರು ಅವನನ್ನು ಗುರ್ತಿಸಿ ಚೆನ್ನಾಗಿ ಉಗುಳಿ ಕಳುಹಿಸಿದರಂತೆ! ಈ ಮೋಸಗಾರನು ತಾನು ಹೈದರಾಬಾದ ವಕೀಲನೆಂದು ಒಮ್ಮೆ ಹೇಳುತ್ತಾನೆ. ಬಿದರಕೋಟೆ ಹಿರೇಮಠದವನೆಂದು ಒಮ್ಮೆ ಹೇಳುತ್ತಾನೆ. ಪರಳಿ ಹಿರೇಮಠದವನೆಂದು ದಾವಣಗೆರೆಯಲ್ಲಿ ಹೇಳಿದನಂತೆ! ಕೆಲವುಕಡೆಗೆ ಸಿಂಹಾಸನಗಳ ಕಾರಭಾರಿಯೆಂದು ಹೇಳುತ್ತಾನಂತೆ! ದಾವಣಗೆರೆಯಲ್ಲಿ ಇವನು ಕೊಟ್ರಪ್ಪ ಶಾಸ್ತ್ರಿಯಾಗಿದ್ದನಂತೆ! ಮೈಸೂರಲ್ಲಿ ವೀರಭದ್ರಪ್ಪನಾಗಿದ್ದನು. ಮತ್ತೊಂದುಕಡೆಗೆ ಅಮರಯ್ಯನೆಂದು ಹೇಳಿದನಂತೆ! ಗುರುವರ್ಗದವರನ್ನು ಕಂಡರೆ ಅವರಂತೆ ನಟಿಸುತ್ತಾನೆ. ವಿರಕ್ತರನ್ನು ಕಂಡರೆ ಅವರಂತೆ ನಟಿಸುತ್ತಾನೆ. ತನ್ನ ಹೆಸರನ್ನು ಕ್ಷಣಕ್ಷಣಕ್ಕೆ ಬದಲಾಯಿಸುತ್ತಾನೆ. ಈರೀತಿಯಾಗಿ ಇವನು ಸುಳ್ಳು ಹೇಳುತ್ತ ಜನರನ್ನು ನಾನಾರೀತಿಯಿಂದ ಮೋಸಗೊಳಿಸಹತ್ತಿದ್ದಾನೆ. ಆದುದರಿಂದ ಪ್ರತಿಯೊಂದು ಪ್ರಾಂತದಲ್ಲಿರತಕ್ಕ ಜನರು ಇವನ ಮೋಸಕ್ಕೆ ಒಳಪಡದೆ ಇವನು ಸಿಕ್ಕಲ್ಲಿ ಇವನನ್ನು ಪೋಲೀಸರ ಸ್ವಾಧೀನ ಮಾಡಿದರೆ ಜನರಿಗೆ ಕಲ್ಯಾಣವಾಗುವದೆಂದು ನಂಬಿದ್ದೇವೆ. ಪ್ರತಿಯೊಬ್ಬರೂ ಈ ಮೋಸಗಾರನ ವಿಷಯದಲ್ಲಿ ಪೂರ್ಣ ಜಾಗರೂಕರಾಗಿರತಕ್ಕದ್ದೆಂದು ಸೂಚಿಸುತ್ತೇವೆ.

ಸ್ವೀಕಾರ.

ಬಳ್ಳಾರಿ ಟೌನ್ ನಿವಾಸಿಗಳಾದ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಗೃಹಕ್ಕೆ ಶ್ರೀಮದುಜ್ಜಯಿನೀ ಜಗದ್ಗುರುಗಳವರನ್ನು ಬಿಜಯಂಗೈಸಿಕೊಂಡು ಬಂದು ನೆರವೇರಿಸಿದ ಪಾದಪೂಜಾಮಹೋತ್ಸವದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ಶ್ರೀ|| ಷ|| ಬ್ರ|| ಸಿದ್ಧಾಪುರ ಪಟ್ಟಾಧಿಕಾರಿಗಳಾದ ತ್ರಿಲೋಚನ ಶಿವಾಚಾರ್ಯರ ದ್ವಾರಾ ಪಲ್ಪಿರುತ್ತವೆ.

ಬಳ್ಳಾರಿ ಡಿ|| ಹಿರೇಹಾಳು ಗ್ರಾಮನಿವಾಸಿಗಳಾದ ಮ|| ರಾ|| ಶೆಟ್ಟರ ಮರುಳಪ್ಪನವರು ಪ್ರಭಾಪೋಷಣಕ್ಕೋಸ್ಕರ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಗದಗ ತಾಲೂಕು ಲಕ್ಕುಂಡಿಗ್ರಾಮದಲ್ಲಿ ನೆರವೇರಿದ ವಿಜಯದಶಮಿ ಮಹೋತ್ಸವದ ಸಮಯದಲ್ಲಿ ವೇ|| ಹಿರೇಮಠದ ವೀರಯ್ಯನವರು **1** ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವಿಷಾದವಾರ್ತೆ.

ಶ್ರೀಮದುಜ್ಜಯಿನೀ ಪೀಠಕ್ಕೆ ಚರಪಟ್ಟಾಧಿಕಾರಿಗಳಾಗಿದ್ದ ಶ್ರೀ ಮರುಳಸಿದ್ಧಸ್ವಾಮಿಗಳವರು ಈ ದಿವಸ ಬೆಳಗು ಮುಂಜಾನೆ 4½ ಘಂಟೆಗೆ ಕೊಟ್ಟೂರಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ. ಜಗದೀಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುತ್ತೇವೆ.

(ಮೂರನೆಯ ಪುಟದಿಂದ ಮುಂದುವರಿದುದು.)

(೨) ಮೂಲಸಾಮ್ರಾಜ್ಯದ ಭಾಗಗಳೆನಿಸಿದ ಇತರ ಸಾಮ್ರಾಜ್ಯಗಳೆಲ್ಲವೂ ತಮ್ಮ ತಮ್ಮ ದೇಶದ ಅಭ್ಯುದಯಕ್ಕೆ ಅವಶ್ಯಕವಾದ ರೀತಿಯಲ್ಲಿ, ಇತರ ಸಹೋದರ ಸಾಮ್ರಾಜ್ಯಗಳಿಗೆ ಕೆಡುಕಾಗದಂತೆ ತೆರಿಗೆ ಮತ್ತು ಸುಂಕದ ಪದ್ಧತಿಗಳನ್ನು ವ್ಯವಸ್ಥೆ ಮಾಡಿಕೊಂಡು, ಇಡೀ ಸಾಮ್ರಾಜ್ಯದ ಆರ್ಥಿಕ ಸಂಪದಭಿವೃದ್ಧಿಯ ವಿಷಯದಲ್ಲಿ ಐಕಮತ್ಯದಿಂದ ವರ್ತಿಸಬೇಕು.

(೩) ಪರರಾಜ್ಯದವರು ಯಾವುದಾದರೊಂದು ಸಾಮ್ರಾಜ್ಯವನ್ನು ಪ್ರತಿಭಟಿಸಿದರೆ, ಅಂದರೆ ಯುದ್ಧಕ್ಕೆ ನಿಂತರೆ, ಇತರ ಸಾಮ್ರಾಜ್ಯದವರೆಲ್ಲರೂ, ಅದಕ್ಕೆ ಸರ್ವ ವಿಧಗಳಿಂದಲೂ ಸಹಾಯಮಾಡಬೇಕು.

(೪) ಗ್ರೇಟ್‌ಬ್ರಿಟನ್ ದೇಶವು ಸಾಮ್ರಾಜ್ಯದ ಮೂಲವಾಗಿದ್ದು, ವೃಕ್ಷದ ಬುಡದಿಂದ ಹೊರಡುವ ಶಾಖೋಪಶಾಖೆಗಳಂತೆ, ಇತರ ಸಾಮ್ರಾಜ್ಯಗಳು ಅದರ ಶಾಖೆಗಳಾಗಿದ್ದು, ಸ್ವತಂತ್ರವಾಗಿರಬೇಕು, ಅಂದರೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ "ಸಾಮ್ರಾಜ್ಯಾಂತರ್ಗತಸ್ವರಾಜ್ಯ" ಪದ್ಧತಿಯನ್ನು ಸ್ಥಾಪಿಸಬೇಕು. 1926 ನೆಯ ಇಸವಿಯ ಇಂಪೀರಿಯಲ್ ಕಾನ್ಫರೆನ್ಸ್ ನಡೆದಾರಭ್ಯ, ಈ ತತ್ವದಲ್ಲಿ ಬದಲಾವಣೆಯಾಗುತ್ತಲೇ ಇರುವದು.

ಇವುಗಳು ಸಾಮ್ರಾಜ್ಯಾಂತರ್ಗತಸ್ವರಾಜ್ಯದ ಮುಖ್ಯ ವಿಷಯಗಳಾಗಿರುವವು.

ಮೇಲೆ ಹೇಳಿದ ತರಹೆಯ ಆಡಳಿತ ಸಂಬಂಧಗಳನ್ನು ಸ್ಥಾಪಿಸಿ, ಸಂಪೂರ್ಣ ಫಲ ಹೊಂದಲು ಬೇಕಾದ ಉಪಾಯಗಳನ್ನು ಚರ್ಚಿಸಿ ತೀರ್ಮಾನಿಸುವುದಕ್ಕಾಗಿಯೇ, ಲಂಡನ್ನಿನಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿಗಳೆಲ್ಲರೂ ಇಂಪೀರಿಯಲ್ ಕಾನ್ಫರೆನ್ಸಿನಲ್ಲಿ ಸೇರಿರುವರು. ಇಂಥ ಮಹತ್ವದ ಕಾನ್ಫರೆನ್ಸಿನಲ್ಲಿ, ಇತರ ಸಾಮ್ರಾಜ್ಯಗಳ ಪ್ರತಿನಿಧಿಗಳಂತೆ ಸಮಾನವಾದ ಗೌರವದಿಂದ ಭಾಗವಹಿಸುವ ಅವಕಾಶವನ್ನು ಹೊಂದಬೇಕೆಂದೇ ಭರತಖಂಡವು ಅಪೇಕ್ಷಿಸುವುದು. ಮೇಲೆ ಹೇಳಿದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಆಡಳಿತದ ಪದ್ಧತಿಯಲ್ಲಿ, ಸದ್ಯ ಜರ್ಮನಿ ಫ್ರಾನ್ಸ್ ಅಥವಾ ಅಫ್ಘಾನಿಸ್ಥಾನವು ಅನುಭವಿಸುತ್ತಿರುವಂಥ ಸ್ವಾತಂತ್ರ್ಯದ ವಿಷಯವು ಸೇರಿರುವದಿಲ್ಲ. ಮೇಲಿನಮಾದರಿ ಅರ್ಥಾನುವಾದದಿಂದ ಆಂತರಿಕ ಆಡಳಿತದ ಪದ್ಧತಿಯು [illegible], ಸಾರ್ವಭೌಮ ಸರಕಾರಕ್ಕೂ ಇತರ ಸಾಮ್ರಾಜ್ಯ[illegible]ವುಗಳೂ ಇರಬೇಕಾದ ಸಂಬಂಧಗಳ ಪ್ರಶ್ನೆಯೇ ಹೆಚ್ಚು [illegible]ವಾಗಿರುವದೆಂಬುದು ವ್ಯಕ್ತವಾಗುವುದು. ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಲ್ಲಿ ಅಂತರಿಕ ಆಡಳಿತ ವ್ಯವಹಾರದ ಪ್ರಶ್ನೆಯು, ನಮ್ಮ ಅನುಕೂಲತೆ ಮತ್ತು ಅವಶ್ಯಕತೆಗಳಿಗೆ ತಕ್ಕಂತೆ ಆಡಳಿತಪದ್ಧತಿಯನ್ನು ಕ್ರಮಪಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ಮಾತ್ರ ಬಯಸುವುದು. ಸಾಮ್ರಾಜ್ಯಾಂತರ್ಗತ ಸ್ವರಾಜ್ಯದಿಂದ ನಮ್ಮ ದೇಶದ ಆಡಳಿತ ಪದ್ಧತಿಯನ್ನು ಸ್ಥಾಪಿಸುವ ವಿಷಯದಲ್ಲಿ ನಾವು ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವೆವು. ಅದನ್ನು ಪಡೆದರೆ, ನಾವು ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಪಡೆದಂತಾಗುವುದು. ಇದರಿಂದ ನಮಗೆ ಅನುಕೂಲಿಸಿದರೂ, ಅಥವಾ ಅನುಕೂಲಿಸದಿದ್ದರೂ, ಗ್ರೇಟ್‌ಬ್ರಿಟನ್ನಿನ ಪ್ರತಿಯೊಂದು ಸಂಸ್ಥೆಯ ಆಡಳಿತಪದ್ಧತಿಯನ್ನೂ ನಾವು ಅನುಸರಿಸಲಿಚ್ಛಿಸುವೆವೆಂದು ಅಭಿಪ್ರಾಯವಲ್ಲ. ಈ ವಿಷಯವನ್ನು ಮೂರನೆಯ ಭಾಗದಲ್ಲಿ ಪುನಃ ಪ್ರಸ್ತಾಪಿಸುವೆನು.

ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕೆ ಭರತಖಂಡದ ಜನ್ಮಸಿದ್ಧವಾದ ಹಕ್ಕು.

ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಬಯಸುತ್ತಿರುವ ಭರತಖಂಡವು ತನ್ನ ಆಡಳಿತಗಳನ್ನು ನಡೆಯಿಸುವುದಕ್ಕೂ ಮತ್ತು ತನ್ನ ದೇಶವನ್ನು ರಕ್ಷಿಸಿಕೊಳ್ಳುವುದಕ್ಕೂ ಆಜನ್ಮಸಿದ್ಧವಾದ ಹಕ್ಕನ್ನು ಪಡೆದಿರುವುದು. ಭರತಖಂಡದ ಪೂರ್ವಚರಿತ್ರೆ ಮತ್ತು ನಾಗರೀಕತೆಗಳು ಇದಕ್ಕೆ ಮೂಲಾಧಾರಗಳಾಗಿರುವುವು. ಅನೇಕರು ಕೆಲವು ಮಹತ್ವದ ಸಂಗತಿಗಳನ್ನು ಎತ್ತಿ ಚರ್ಚಿಸಲು ಅಪೇಕ್ಷಿಸುವುದಿಲ್ಲ. ಆದರೆ ಅನಿವಾರ್ಯವಾಗಿ ಎತ್ತಿ ಆಡಬೇಕಾದ ಪ್ರಸಂಗಗಳೂ ಒದಗುವುವು. ಅಂಥ ಸಂಗತಿಗಳಲ್ಲಿ ಕೆಲವನ್ನು ಈ ಕೆಳಗೆ ಉದಾಹರಿಸುವೆನು:

ಭರತಖಂಡವು ಬ್ರಿಟಿಷರ ಆಡಳಿತಕ್ಕೆ ಒಳಪಡುವ ಪೂರ್ವದಲ್ಲಿ ನಮ್ಮ ಪೂರ್ವಜರು ಈ ಭೂಭಾಗದಲ್ಲಿ 5,00,000 ಗ್ರಾಮಗಳನ್ನು ಸ್ಥಾಪಿಸಿದ್ದರು. ಇಂಥ ಪ್ರತಿಯೊಂದು ಗ್ರಾಮದ ಹಳ್ಳಿಯಲ್ಲಿಯೂ ಆಡಳಿತದಸಲುವಾಗಿ ಒಂದೊಂದು ಗ್ರಾಮಸಂಸ್ಥೆಯು ಏರ್ಪಡಿಸಲ್ಪಟ್ಟು, ಈ ಎಲ್ಲ ಸಂಸ್ಥೆಗಳೂ, ಮೂಲಚಕ್ರದ ಪಕ್ಕದ ಶಾಖೆಗಳಂತಿದ್ದುವು. ಚಕ್ರಾಧಿಪತ್ಯವಾದರೂ, ಅಪೂರ್ವ ವೈಶಿಷ್ಟ್ಯದಿಂದಕೂಡಿ, ದಿನದಿನಕ್ಕೆ ಅತ್ಯಂತ ಅಭಿವೃದ್ಧಿಸ್ಥಿತಿಯನ್ನು ಪಡೆಯುತ್ತಿದ್ದ ಢಾಕಾ, ಅಯೋಧ್ಯಾ, ಬನಾರಿಸ್, ದಿಹಲಿ, ಆಗ್ರಾ ಮೊದಲಾದ ಮನೋಹರವಾದ ನಗರಗಳಂದಲೂ ಲಂಡನ್ನಿಗಿಂತಲೂ ದೊಡ್ಡದಾದ ರಾಜಧಾನಿಗಳಿಂದಲೂ, ಕೂಡಿ ಅಪೂರ್ವ ವೈಭವದಿಂದ ಮೆರೆಯುತ್ತಿದ್ದಿತು. ನಮ್ಮ ಪೂರ್ವಜರಿಂದ ಸ್ಥಾಪಿಸಲ್ಪಟ್ಟ ಮೇಲ್ಕಂಡ ಗ್ರಾಮಗಳ ಮತ್ತು ನಗರಗಳ ಆಡಳಿತಭಾರವನ್ನೇ ಸದ್ಯ ಭಾರತೀಯರು ಅಪೇಕ್ಷಿಸುತ್ತಿರುವರು. ಈಸ್ಟ್ ಇಂಡೀಸ್ ದ್ವೀಪಗಳಲ್ಲಿ ಸುಮಾರು 25 ವರ್ಷಗಳವರೆಗೆ ವಾಸಮಾಡುತ್ತಿದ್ದ ಕ್ಯಾಪ್ಟನ್ ಹ್ಯಾಮಿಲ್ಟನ್ ಎಂಬ ಆಂಗ್ಲವರ್ತಕನು 1720 ರಲ್ಲಿ ಪ್ರಕಟಿಸಿರುವ ತನ್ನ ಪ್ರಯಾಣಗಳ ಸಂಬಂಧವಾದ ಪುಸ್ತಕದಲ್ಲಿ "ಇಡೀ ಈಸ್ಟ್ ಇಂಡಿಯಾ ಕಂಪೆನಿಯು ಮಾಡುತ್ತಿದ್ದಷ್ಟು ವ್ಯಾಪಾರವನ್ನು ಸೂರತ್ತಿನ ಅಬ್ದುಲ್ ಗಫರ್ ಎಂಬ ಒಬ್ಬ ವರ್ತಕನು ಮಾಡುತ್ತಿದ್ದನು, (ವಾಲ್ಯೂಂ. 1. ಪುಟ 147). ಆತನು ಒಂದು ವರ್ಷದಲ್ಲಿ 300 ಟನ್ನಿನಿಂದ 8800 ಟನ್ನುಗಳವರೆಗೂ ತೂಕವುಳ್ಳ 20 ಹಡಗುಗಳನ್ನು ಸಿದ್ಧಗೊಳಿಸಿರುವದನ್ನು ನೋಡಿರುವೆನು, ಪ್ರತಿಯೊಂದು ಹಡಗಿನಲ್ಲಿಯೂ 1,35,000 ರೂ. ಗಳಿಗೆ ಕಡಿಮೆಯಿಲ್ಲದಷ್ಟು ಬೆಲೆಯುಳ್ಳ ಪದಾರ್ಥಗಳಿದ್ದುವು. ಕೆಲವು ಹಡಗುಗಳಲ್ಲಿ 4,00,000 ರೂ. ಗಳಷ್ಟು ಬೆಲೆಯುಳ್ಳ ಪದಾರ್ಥಗಳಿದ್ದುವು." (ಪುಟ 147, 148) ಎಂದು ಬರೆದಿರುವನು. ಆಗಿನ ಕಾಲದ ಭಾರತೀಯ ವರ್ತಕರ ಐಶ್ವರ್ಯವನ್ನೂ, ವ್ಯಾಪಾರದ ನಾವೆಗಳ ಸ್ಥಿತಿಗತಿಗಳನ್ನೂ ಆತನು ಬಹು ವಿಶದವಾಗಿ ವರ್ಣಿಸಿರುವನು. ಅದು ಔರಂಗಜೇಬನ ಕಾಲವಾಗಿದ್ದಿತು. ಆ ವರ್ತಕರ ವಂಶಜರು ತಮ್ಮ ವ್ಯಾಪಾರವನ್ನು ತಾವೇ ನಡೆಯಿಸಿಕೊಳ್ಳಬಲ್ಲರೆಂದು ಈಗಲೂ ಹೇಳುತ್ತಾರೆ. ಭರತಖಂಡದ ಅತ್ಯಂತ ಕಡೆಯ ಮೂಲೆಯಿಂದ ದೆಹಲಿಗೆ 8 ದಿವಸಗಳಲ್ಲಿ ಟಪಾಲನ್ನು ಒಯ್ಯುವ ಏರ್ಪಾಡು ಇದ್ದಿತೆಂದು ಮೇಲ್ಕಂಡ ಕ್ಯಾಪ್ಟನ್ ಹ್ಯಾಮಿಲ್ಟನ್ನನೇ ಬರೆದಿರುವನು (ವಾಲ್ಯೂಂ 1. ಪುಟ 149). ಭೂಕಂದಾಯದ ವಸೂಲಿಯ ವಿಷಯದಲ್ಲಿ ಈಗಿನ ಸರಕಾರವು ಸಹ ಅನುಸರಿಸುತ್ತಿರುವ ರಾಜ್ಯಾಡಳಿತ ಪದ್ಧತಿಯನ್ನು 300 ವರ್ಷಗಳ ಪೂರ್ವದಲ್ಲಿಯೇ ಸ್ಥಾಪಿಸಿದ ಭಾರತೀಯರು, ತಮ್ಮ ರಾಜ್ಯಾಡಳಿತವನ್ನು ನಿರ್ವಹಿಸಲಾರರೆಂದು ಯಾರು ತಾನೇ ಹೇಳಬಲ್ಲರು?

ಸದ್ಯದ ರಾಜ್ಯಾಡಳಿತದ ತೊಡಕಾದ ಯಂತ್ರವನ್ನು ನಡೆಯಿಸುವದರಲ್ಲಿ ಭಾರತೀಯರು ಬಹು ಪ್ರಾಮುಖ್ಯವಾದ ಭಾಗವನ್ನು ವಹಿಸಿರುವರು. ಸೈಮನ್ ಸಮಿತಿಯು ಸಹ ಕಳೆದ ಹತ್ತು ವರ್ಷಗಳಲ್ಲಿ ಆಡಳಿತ ಭಾರವನ್ನು ನಿರ್ವಹಿಸಿದ ಅಧಿಕಾರಗಳ ಉತ್ಸಾಹವನ್ನು ಕೊಂಡಾಡಿರುವರು. ಇಂಗ್ಲೆಂಡಿನ ಹೆಚ್ಚಿನ ಶಕ್ತಿಯನ್ನು ಒಪ್ಪಿಕೊಂಡಿರುವರು. ಆದರೆ ಭರತಖಂಡವು ರಾಜ್ಯಾಡಳಿತ ಭಾರವನ್ನು ವಹಿಸಲಾರದೆಂಬ ದುರಭಿಮಾನವನ್ನು ದೂರೀಕರಿಸಿರುವರು. ಆದುದರಿಂದ ಸಾಮ್ರಾಜ್ಯಾಂತರ್ಗತಸ್ವರಾಜ್ಯವು ಭರತಖಂಡದ ಜನ್ಮಸಿದ್ಧವಾದ ಹಕ್ಕಾಗಿರುವದು. ಆದರೆ ಒಂದುವೇಳೆ ಭಾರತೀಯರು ರಾಜ್ಯಾಡಳಿತವನ್ನು ಬ್ರಿಟಿಷರಷ್ಟು ಸಮರ್ಪಕವಾಗಿ ನಿರ್ವಹಿಸಲಾರರೆಂದು ಊಹಿಸೋಣ. ಅದರಿಂದಾಗಿ ಭರತಖಂಡದ ಹಕ್ಕುಬಾಧ್ಯತೆಯನ್ನು ನಿರಾಕರಿಸಬಹುದೇ? ಯಾವದೇ ಸಮಾಜವಾದರೂ, ಅದು ತನ್ನ ಆತ್ಮಗೌರವ, ಶಕ್ತಿ, ಸ್ವಾತಂತ್ರ್ಯ ಮತ್ತು ಜವಾಬ್ದಾರಿಯನ್ನು ಅರಿತುಕೊಳ್ಳುವವರೆಗೆ ಉನ್ನತಸ್ಥಿತಿಗೆ ಬರಲಾರದೆಂಬುದು ಅಖಿಲ ಮಾನವ ಸಮಾಜದ ಉನ್ನತಿಯ ಕಾಯಿದೆಯಾಗಿರುವದು. ಭರತಖಂಡದಲ್ಲಿ ಮಾನವ ಸಮಾಜೋನ್ನತಿಗೆ ಅವಶ್ಯಕವಾದ ಮೇಲ್ಕಂಡ ಗುಣಗಳು ನೆಲಸಬೇಕಾದರೆ, ಇಲ್ಲಿನ ವಾತಾವರಣವು ಅದಕ್ಕೆ ಅನುಕೂಲವಾಗುವಂತೆ ಮಾರ್ಪಡಬೇಕು. ಅದಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವು ಅತ್ಯವಶ್ಯಕವಾಗಿರುವದು. ಆತ್ಮಗೌರವದ ವಿಷಯದಲ್ಲಿ, ನಮ್ಮ ದೇಶಬಾಂಧವರಲ್ಲನೇಕರು, ತಮ್ಮ ಪೂರ್ವಜರು ಒಂದಾನೊಂದು ಕಾಲದಲ್ಲಿ ಅಸಾಧಾರಣವಾದ ಅಧಿಕಾರ ಬಲಗಳಿಂದ ಕೂಡಿದ್ದವರಾದರೂ, ತಾವು ಮಾತ್ರ ಆತ್ಮಗೌರವದ ಕಡೆಗೆ ಹೆಚ್ಚು ಲಕ್ಷ್ಯವಿಡದೆ, ಸ್ವಾತಂತ್ರ್ಯ ಸೌಖ್ಯಾನುಭವಿಗಳಾದ ಇತರರ ಅಪಹಾಸ್ಯಕ್ಕೆ ಗುರಿಯಾಗುತ್ತಿರುವರು. ಕಳೆದ 50 ವರ್ಷಗಳಿಂದೀಚೆಗೆ ವಿದ್ಯಾವಂತರಾದ ನಮ್ಮ ತರುಣಜನಾಂಗಕ್ಕಿಂತಲೂ, ನಮ್ಮ ವೃದ್ಧರಲ್ಲಿಯೇ ಹೆಚ್ಚು ಆತ್ಮಗೌರವವು ಉಳಿದಿರುವದನ್ನು ನಾನು ಎಷ್ಟೋ ವೇಳೆ ಕಂಡಿರುವೆನು. ಪರಾವಲಂಬನೆಯ ವಾತಾವರಣವು ಗುಲಾಮಗಿರಿಯ ಮನೋಧರ್ಮವನ್ನು ಉಂಟುಮಾಡುವದು. ಆದರೆ ಆಫ್ರಿಕಜನಾಂಗದ ತಲೆಪಟ್ಟಿಯನ್ನು ಹಚ್ಚಿಕೊಂಡು ಪ್ರಪಂಚದಲ್ಲಿ ಬಹಳಕಾಲ ತಿರುಗಲಾರದೆ ವ್ಯಥೆಪಡುತ್ತಿರುವ ಜನರನೇಕರು ನಮ್ಮಲ್ಲಿರುವರು. ಭೂಮ್ಯಾಕಾಶಸಮುದ್ರಗಳಲ್ಲಿ ನಮಗಾವ ಅಧಿಕಾರವೂ ಇಲ್ಲ. ಇನ್ನು ಸ್ವಾತಂತ್ರ್ಯ! ಅದನ್ನು ನಾವು ಹೊಂದಿಯೂ ಇರುವೆವು. ಹೊಂದದೆಯೂ ಇರುವೆವು. ಕೌನ್ಸಿಲುಗಳಲ್ಲಿ ಸೂಚನೆಗಳನ್ನು ತರುವದಕ್ಕೂ, ಟೀಕೆ ಮಾಡುವದಕ್ಕೂ ನಾವು ಸ್ವತಂತ್ರರಿರುವೆವು, ಆದರೆ ದೇಶದ ಅಭ್ಯುದಯಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳಲ್ಲಿ ಸರಕಾರದವರ ತತ್ವವನ್ನೂ, ತೀರ್ಮಾನವನ್ನೂ ಬದಲಾಯಿಸುವ ಸ್ವತಂತ್ರತೆಯು ನಮ್ಮಲ್ಲಿಲ್ಲ. ಇನ್ನು ನಮಗೆ ಎಷ್ಟರ ಮಟ್ಟಿನ ಜವಾಬ್ದಾರಿಯಿರುವದೆಂಬುದನ್ನು ಕೆಲವು ಕೌನ್ಸಿಲಿನ ತೀರ್ಮಾನಗಳಿಂದಲೇ ತಿಳಿದುಕೊಳ್ಳಬಹುದಾಗಿದೆ. ಹೀಗೆ ಜವಾಬ್ದಾರಿಯೇ ಇಲ್ಲದ ಸ್ಥಿತಿಗಳಲ್ಲಿರುವವರು ಜವಾಬ್ದಾರಿಯ ಮಹತ್ವವನ್ನು ಎಂದಿಗೂ ಅರಿತುಕೊಳ್ಳಲಾರರು. ಇಂಗ್ಲೆಂಡಿನ ಕನ್ಸರ್ವೇಟಿವ್ ಮತ್ತು ಲಿಬರಲ್ ಪಕ್ಷದವರು ಸದ್ಯದ ಕೂಲಿಕಾರರ ಸರಕಾರದ ಅನೇಕ ಆಡಳಿತ ತತ್ವಗಳನ್ನು ಒಪ್ಪದೆ ಹೋಗಬಹುದು. ಆದರೂ ಈ ಉಭಯಪಕ್ಷದವರು ಆ ಆಡಳಿತ ವಿಷಯದಲ್ಲಿ ತಮ್ಮ ತತ್ವವನ್ನು ಖಚಿತವಾಗಿ ಸ್ಥಾಪಿಸಬಲ್ಲೆವೆಂಬ ಧೈರ್ಯವು ಉಂಟಾಗುವವರೆಗೆ, ಕೂಲಿಕಾರ ಸರಕಾರದವರನ್ನು ಯಾವುದಾದರೊಂದು ವಿಷಯದಲ್ಲಿ ಪ್ರತಿಭಟಿಸಿ, ಸೋಲಿಸಿದರೆ, ಆಗ ದೇಶವು ಆ ವಿಷಯದಲ್ಲಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡುವ ಭಾರವನ್ನು ಕನ್ಸರ್ವೇಟಿವ್ ಅಥವಾ ಲಿಬರಲ್ ಪಕ್ಷದವರ ಮೇಲೆ ಹೊರಿಸುವದು. ಅದನ್ನು ನಿರ್ವಹಿಸುವದು ಇವರಿಗೂ ಹೆಚ್ಚು ಕಠಿಣವಾಗಿ ಪರಿಣಮಿಸಬಹುದು. ಆದುದರಿಂದ ಕನ್ಸರ್ವೇಟಿವ್ ಮತ್ತು ಲಿಬರಲ್ ಮುಖಂಡರು ತಮ್ಮ ಜವಾಬ್ದಾರಿಯನ್ನು ಪೂರ್ಣವಾಗಿ ಅರಿತುಕೊಳ್ಳದೆ ಕೂಲಿಕಾರ ಪಕ್ಷದವರನ್ನು ಪ್ರತಿಭಟಿಸುವದಿಲ್ಲ. ಈ ರೀತಿಯಾಗಿಯೇ ನಾವು ಸಹ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾಗಿರುವುದು. ನಮ್ಮ ಮೆಂಬರರು, ತಮ್ಮ ತೀರ್ಮಾನಗಳಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಚೆನ್ನಾಗಿ ಅರಿತಿರುವರು. ಆದುದರಿಂದಲೇ ಅವರು ಧೈರ್ಯವಾಗಿ ಬೇಕು ಬೇಕಾದಂಥ ಸೂಚನೆಗಳನ್ನು ತರುವರು. ಆದುದರಿಂದ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಪಡೆದ ಹೊರತು, ಆಡಳಿತದ ಜವಾಬ್ದಾರಿಯ ಸಂಪೂರ್ಣ ರಹಸ್ಯಗಳು ಭಾರತೀಯರಿಗೆ ತಿಳಿದುಬರುವಂತಿಲ್ಲ. ಸೈಮನ್ ಸಮಿತಿಯು ಭರತಖಂಡವನ್ನು ಕ್ರಮೇಣ ಆ ಕಡೆಗೆ ಒಯ್ಯುವೆವೆಂದು ಹೇಳಬಹುದು. ಹಾಗಾದರೆ, ಅದನ್ನಾದರೂ ಏಕೆ ಸ್ಪಷ್ಟವಾಗಿ ಹೇಳಬಾರದಾಗಿತ್ತು? ವರದಿಯಲ್ಲಿ ಈ ವಿಷಯವನ್ನು ಸ್ಪಷ್ಟವಾಗಿ ಕಾಣಿಸಿದ್ದರೆ, ಈಗ ಗುರಿಯಾಗಿರುವ ಆಕ್ಷೇಪಣೆಯಲ್ಲಿ ಅರ್ಧಕ್ಕೂ ಗುರಿಯಾಗುತ್ತಿರಲಿಲ್ಲ. "ಸ್ವಂತ ಸರಕಾರಕ್ಕೆ ಪ್ರತಿಯಾಗಿ ಉತ್ತಮ ಸರಕಾರವನ್ನು ಸ್ಥಾಪಿಸುವದೇನೂ ಒಳ್ಳೆಯ ನೀತಿಯಲ್ಲ." ಇಂಗ್ಲೆಂಡ್ ದೇಶವು ಭರತಖಂಡವನ್ನು ಚೆನ್ನಾಗಿ ಆಳುವದೆಂಬ ಕಾರಣದ ಮೇಲೆ ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಕೊಡದಿರುವದು ನ್ಯಾಯವಲ್ಲ. ಕಳೆದ ಯುದ್ಧ ಸಮಯದಲ್ಲಿ ಪ್ರಾಮುಖ್ಯವಾದ ಒಂದು ಆಂಗ್ಲ ಪತ್ರಿಕೆಯು 'ಜರ್ಮನಿಯವರು ಇಂಗ್ಲೆಂಡನ್ನು ತಮ್ಮ ಸ್ವಾಧೀನ ಪಡಿಸಿಕೊಂಡರೆ, ಅವರು ಇಗ್ಲೆಂಡ್ ದೇಶದಲ್ಲಿ ಆಂಗ್ಲೇಯರಿಗಿಂತಲೂ ಹೆಚ್ಚು ದಕ್ಷತೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ರಾಜ್ಯಭಾರ ಮಾಡುವರೆಂದು' ಬರೆದಿದ್ದರು. ಈ ಕಾರಣದ ಮೇಲೆ ಇಂಗ್ಲೆಂಡ್ ದೇಶವು ಎಂದಿಗೂ ಜರ್ಮನಿಯವರ ಆಡಳಿತಕ್ಕೆ ಒಳಪಡುವಂತಿಲ್ಲ.

(ಸಶೇಷ.)

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರಹದ ದೇವರ ಪೂಜೆಗೆ ಯೋಗ್ಯವಾದ ರಘುಂನಾಥ ಊದಬತ್ತಿಗಳು, ಪರಿಮಳದರ್ಶಾಂಗ, ಧೂಪದಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹನೀಯರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸ್ಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಆತ್ಮಸಂಜೀವಿನಿತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕವಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಅರತಿಕರ್ಪೂರವು ಬಜಾರು ಧಾರಣೆಯಂತೆ ರವಾನಿಸಲಾಗುತ್ತೆ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,

11 ಸುಗಂಧವ್ಯಾಪಾರಿಗಳು,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ಪಗ್ಗೆರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [11]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡಿಮೆಯಾಗುವ ಕಾಲಕ್ಕೆ ಕಿಬ್ಬಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕೆಸುಮುಟ್ಟು ಅಥವಾ ಬಹಳಮುಟ್ಟು ಅಥವಾ ನಿಮುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಹಿಮವತ್ಕೇದಾರದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೆ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧-ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ನಾಡಿರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿ ಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಕಾ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ನಲ್ಲಿ ಸರ್ವರೋಗೋಪಯುಕ್ತಗಳಾದ ಮಿಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಿಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮಿಶನೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮಿಶನೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಕಮಿಶನೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥ ಕಠಿಣತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮುಂದೆ ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜ್ವರ ಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ. ಜೋಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಹತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[26] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕ್ಯಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವಾಗುವ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರೀಯರೀತಿಯಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [12]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವವರಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅದುರಿನದಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಿಂತಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ —8—0.

ಟಿಪ್ಪಣಿ ಬನಾಗಳೂ, ಹೋಮಿಯೊಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವ್ಯಾಯಾಮಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[10] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು. ದ. ಕ.**

[1ನೇ ಪುಟದಿಂದ ಮುಂದುವರಿದುದು.]

ಬಾಳೆಹೊನ್ನೂರಲ್ಲಿ ಶ್ರೀಪಟ್ಟಾಭಿಷೇಕ ಸಮಯದಲ್ಲಿ ವಾಗ್ದಾನ ಮಾಡಿದ್ದಂತೆ ಮ|| ರಾ|| ರಾಂಪುರದ ಬಳ್ಳಪ್ಪನವರು ರಂಭಾಪುರೀ ಜಗದ್ಗುರುಗಳವರ ಹೆಸರಿಗೆ ರಿಜಿಸ್ಟರ್ ಮಾಡಿಸಿದ ಕಾಗದವು ಶ್ರೀಜಗದ್ಗುರು ಸನ್ನಿಧಿಗೆ ಸದರಿಯವರಿಂದ ಅರ್ಪಿಸಲ್ಪಟ್ಟಿತು. ಈ ಕಾಲೇಜಿನ ಫಂಡಿನ ವೃದ್ಧಿಗಾಗಿ ಹಲ್ಯಾಳು ಸಾಹುಕಾರ ಸಿದ್ಧರಾಮಶೆಟ್ಟರು ಇವರ ಪುತ್ರ ಗೊಡಚಪ್ಪ ಶೆಟ್ಟರು ಹತ್ತು ಸಾವಿರ ರೂಪಾಯಿಗಳನ್ನು ಕೊಡಲು ಮೇಲ್ಕಂಡ ಸಭಿಕರಿಗೆ ತಿಳುಹಿಸಿ ಶ್ರೀಮಹಾಸಂಸ್ಥಾನಕ್ಕೆ ಸಾಷ್ಟಾಂಗನಮಸ್ಕಾರವನ್ನು ಮಾಡಿದರು. ಧರ್ಮಧುರಂಧರ ಸಾಹುಕಾರ್ ಮುರುಳಸಿದ್ದಪ್ಪಶೆಟ್ಟರ ಅಳಿಯಂದಿರಾದ ಶ್ರೀಮಂತ ರುದ್ರಪ್ಪಶೆಟ್ಟರು ಒಂದು ಸಾವಿರ ರೂಪಾಯಿಗಳನ್ನು ಈ ಫಂಡಿಗಾಗಿ ಕೊಡಲು ವಾಗ್ದಾನ ಮಾಡಿದರು. ಮುಂದೆ ಇದಕ್ಕೆ ಹೆಚ್ಚಾಗಿ ಸಹಾಯ ಮಾಡಲು ಜಗದ್ಗುರುಗಳಲ್ಲಿ ಬಿನ್ನೈಸಿಕೊಂಡಿದ್ದಾರೆ. ಈ ಮಹಾಶಯರಿಗೆ ಹಾರತುರಾಗಳು ಅರ್ಪಿಸಲ್ಪಟ್ಟವು. ಈ ದಿವಸದ ಕಾರ್ಯಗಳು ಸಂಪೂರ್ಣವಾಗಿ ಶನಿವಾರಬೆಳಗ್ಗೆ ಶ್ರೀಮಹಾಸವಾರಿಯು ದರ್ಬಾರಮಂಟಪಕ್ಕೆ ದಯಮಾಡಿಸಿ ಸಿಂಹಾಸನವನ್ನಾರೋಹಿಸಿ ದೇಶದಲ್ಲಿ ಸತ್ಯರಾಜ್ಯನುಷ್ಠಾನಗಳು ನಿರ್ವಿಘ್ನವಾಗಿ ನೆರವೇರಬೇಕಾದರೆ ರಾಜಶಕ್ತಿಯು ಮೂಲಕಾರಣವಾದ್ದರಿಂದ ರಾಜರ್ಷಿಗಳೆನಿಸಿದ ದಯಾಳು ಪ್ರಭುಗಳಾದ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರು ಸಕಲ ಸಂಪತ್ತುಗಳಿಂದ ಚಿರಕಾಲ ರಾಜ್ಯಭಾರವನ್ನು ಮಾಡಲೆಂದು ನೀವುಗಳೆಲ್ಲಾ ನಮ್ಮ ಪ್ರಭುಗಳಿಗೆ ಸತ್ಪಜೆಗಳೆನಿಸಿಕೊಂಡು ಅರಮನೆ ಗುರುಮನೆಗಳಿಗೆ ವಿಧೇಯರಾಗಿ ಯಾವಾಗಲೂ ಗುರುಭಕ್ತಿತತ್ಪರತೆಯಿಂದ ಗುರುಸೇವೆಯನ್ನು ಮಾಡಿ ಸಕಲ ಮನೋರಥಗಳ ಸಿದ್ಧಿಯಿಂದ ಆನಂದಿಸಬೇಕೆಂದು ಹರಸಿದರು. ಬಳಿಕ ಧರ್ಮಧುರಂಧರ ಶ್ರೀಮಂತ ಮುರುಳಸಿದ್ದಪ್ಪಶೆಟ್ಟರು ನಮ್ಮ ಬಡಸೇವೆಯಲ್ಲಿ ಅನೇಕ ನ್ಯೂನತೆಗಳು ಬಂದಿರಬಹುದು. ಅವುಗಳನ್ನು ಚಿತ್ತಕ್ಕೆ ತರದೆ ಸೇವೆಯನ್ನು ಕೈಕೊಂಡು ಸರ್ವರೀತಿಯಿಂದಲೂ ಕೈಕೊಂಡ ಕಾರ್ಯವನ್ನು ಸಾಂಗಗೊಳಿಸಿಕೊಟ್ಟದ್ದಕ್ಕಾಗಿ ಶ್ರೀಜಗದ್ಗುರು ಸನ್ನಿಧಾನಕ್ಕೆ ಸಹಸ್ರ ಸಾಷ್ಟಾಂಗನಮಸ್ಕಾರಗಳನ್ನು ಅರ್ಪಿಸಿ ಸಭಿಕರ ಪ್ರೇಮವನ್ನು ಬಯಸಿದರು. ಅನಂತರ ಸಭಿಕರಿಗೆ ಗಂಧಪುಷ್ಪಹಾರ ತಾಂಬೂಲಗಳು ಅರ್ಪಿಸಲ್ಪಟ್ಟವು. ವಿಮುಕಾರೆ ಜಗದ್ಗುರು ಪಂಚಾಚಾರ್ಯರ ಜಯಘೋಷವಾಗಿ ಸಭೆಯು ವಿಸರ್ಜಿತವಾಯಿತು. ಸುತ್ತಮುತ್ತಣ ಗ್ರಾಮಗಳ ಭಕ್ತರ ಬಿನ್ನಹಗಳಿರುವುದರಿಂದ ಕೆಲವು ದಿವಸ ಇದೇ ಪ್ರಾಂತದಲ್ಲಿಯೇ ಸಂಚರಿಸಿ ಮಹಾಸವಾರಿಯು ಸರ್ವಭಕ್ತರ ಸೇವಾಸತ್ಕಾರ ಕಾಣಿಕೆಯನ್ನು ಸ್ವೀಕರಿಸಿ ಮುಂದಕ್ಕೆ ದಯಮಾಡಿಸುವುದು.

ಗೊಡಚಪ್ಪ ಶೆಟ್ಟಿ, ಹಲ್ಯಾಳು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೯-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೧, ಮದರಾಸು.

[13]

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೮—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೭ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮುರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ಕನ್ನಡ ಟೀಕಾ ಸಹಿತ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರಂ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧. ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲಿಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೫

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀಗುರುಭ್ಯೋನಮಃ.

ಪಲ್ಲಕ್ಕಿಉತ್ಸವ, ಲಕ್ಕುಂಡಿ.

ಧಾರವಾಡ ಜಿಲ್ಲಾ ಗದಗ ತಾಲೂಕಪೈಕಿ ಲಕ್ಕುಂಡಿ ಗ್ರಾಮದಲ್ಲಿ ಜಗದ್ಗುರು ಹಿಮವತ್ಕೇದಾರ ವಿಕೋರಾಮ ವೈರಾಗ್ಯ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಚಿನ್ಮಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಮುಕ್ಕಾಂ ಇರುವ ಸಂಗತಿ ಊರಿಗಾಗಿ ಪ್ರಸಿದ್ಧಿಸೋಣವಾಗಿದೆ. ಲಕ್ಕುಂಡಿ ಗ್ರಾಮದ ಪೋಲೀಸ ಪಾಟೀಲರಾದ ಮಲ್ಲನಗೌಡರು, ಪಾಲಪ್ಪ ಹಳ್ಳಿ, ಹೊಳಿಯಪ್ಪಗೌಡರ, ಮುಕ್ಕಪ್ಪ ಬಣವಿ ವಿರಪಣ್ಣ, ಪಂಚಾಳದವರ ಈ ಐದು ಜನ ಮಹಾಶಯರು ಜಗದ್ಗುರುಗಳವರಿಗೆ ಬಿನ್ನಹಮಾಡಿಕೊಂಡು ತಾ|| 19-9-30 ನೆಯ ಶುಕ್ರವಾರ ದಿವಸ ಪ್ರಾತಃಕಾಲ 8 ಘಂಟೆಗೆ ಸರಿಯಾಗಿ ಪಲ್ಲಕ್ಕಿಯನ್ನು ಶೃಂಗರಿಸಿ ಮೂರ್ತಮಾಡುವದಕ್ಕೆ ಪ್ರಾರ್ಥಿಸಿದರು. ಆ ಮೇರೆಗೆ ಜಗದ್ಗುರುಗಳು ಪಂಚಾಚಾರ್ಯರ ಜಯಘೋಷವು ಭೋರ್ಗರೆಯುತ್ತಿರಲು ಲಕ್ಕುಂಡಿಗ್ರಾಮಕ್ಕೆ ದಯಮಾಡಿಸಿದರು. ಜಗದ್ಗುರುಗಳು ಚತುರಂಗಬಲಸಮೇತರಾಗಿ ಪಂಚಕಲಶ ಶ್ವೇತಛತ್ರ ಮಕರ ತೋರಣ ಮೊದಲಾದ ಸಮಸ್ತ ಬಿರುದಾವಳಿಗಳಿಂದೊಡಗೂಡಿ ತಳಿರುತೋರಣ ಪತಾಕೆ ಪಟ್ಟೀರಿನಾಳಿ ಮೊದಲಾದವುಗಳಿಂದ ವಿರಾಜಮಾನವಾದ ರಾಜಬೀದಿಯಲ್ಲಿ ಅತ್ಯಂತ ವೈಭವದಿಂದ ಉತ್ಸವಗೊಂಡರು. ಮಧ್ಯಮಧ್ಯದಲ್ಲಿ ಭಕ್ತವೃಂದವು ಕಾಯಿಕರ್ಪೂರ ಮಂಗಳಾರತಿ ಪಟ್ಟೀರಿನಾಳಿ ಮೊದಲಾದವುಗಳಿಂದ ತಮ್ಮ ತಮ್ಮ ಭಕ್ತಿಯನ್ನು ವ್ಯಕ್ತಗೊಳಿಸಿ ಗುರುಮಹಾರಾಜರಿಂದ ಫಲಾಶೀರ್ವಾದವನ್ನು ಪಡೆಯುತ್ತಿದ್ದಿತು. ಉತ್ಸವವು ಸದರಿ ಗ್ರಾಮದ ಭಜನಾಸಂಘದವರ ಅಸಾಧಾರಣ ಭಕ್ತಿಪೂರ್ವಕವಾದ ಭಜನೆಯಿಂದಲೂ ಹಾಲುಮತದ ಸದ್ಭಕ್ತರ ಡೇವಮುಂಮುಖವಾದ್ಯದಿಂದಲೂ ಬಾಜಭಜಂತ್ರಿಗಳ ಸುನಾದದಿಂದಲೂ ಪರಾಕುಹೇಳುವ ಭಕ್ತರ ಜಯಘೋಷದಿಂದಲೂ ಬಹು ರಮಣೀಯವಾಗಿ ಶೋಭಿಸುತ್ತಿತ್ತು. ಈ ಉತ್ಸವದಲ್ಲಿ ಸಂಸ್ಥಾನದ ಅಮಾತ್ಯರಾದ ಮುಣ್ಣೂರ ಹಿರೇಮಠದ ರೇವಣಸಿದ್ಧ ಪಟ್ಟದಸ್ವಾಮಿಗಳು ಮತ್ತು ಮುನಿಸಿಕೊಟ್ರಾರಾಧ್ಯರು ಉತ್ಸವದ ಎಲ್ಲ ಕಾರ್ಯಕ್ರಮಗಳನ್ನೂ ಸುವ್ಯವಸ್ಥಿತವಾಗಿ ನಿರ್ವಹಿಸಿದ್ದರು. ನಾಗಾವಿ ಮೊದಲಾದ ಗ್ರಾಮದ ಭಕ್ತಮಂಡಳಿಯು ಉತ್ಸವದಲ್ಲಿ ಭಾಗವಹಿಸಿದ್ದಿತು. ಈ ಪ್ರಕಾರ ಉತ್ಸವವು ಅತ್ಯಂತ ವೈಭವದಿಂದ ಪೋ|| ಪಾ. ಮಲ್ಲನಗೌಡರ ಮನೆಗೆ ಸಲ್ಲಿತು. ಮಹಾಪ್ರಭುಗಳು ಪಂಚಾಚಾರ್ಯರ ಜಯಘೋಷವಾಗುತ್ತಿರಲು ಮೊದಲೇ ಸಿದ್ಧಗೊಳಿಸಿದ್ದ ಸಿಂಹಪೀಠದಲ್ಲಿ ಮಂಡಿಸಿದರು. ಯಾವತ್ತು ಭಕ್ತವೃಂದವು ಗುರುಮೂರ್ತಿಯನ್ನು ಭಕ್ತಿಯಿಂದ ಸಂದರ್ಶನಮಾಡಿ ಆನಂದಪಟ್ಟಿತು. ಅಷ್ಟರಲ್ಲಿ ಶಿವಪೂಜಾಸಮಯನಾಯಿತು ಅನಂತರ ಮೇಲ್ಕಂಡ ಭಕ್ತರು ತಮ್ಮ ಬಂಧುಬಾಂಧವ ಇಷ್ಟಮಿತ್ರರೊಡಗೂಡಿ ಜಗದ್ಗುರುಗಳ ಪಾದಪೂಜೆಯನ್ನು ಮಾಡಿ ಅಲ್ಲಿ ನೆರೆದಿದ್ದ 7-8 ನೂರುಜನರಿಗೆ ಮಹಾಗಣಾರಾಧನೆಯನ್ನು ನೆರವೇರಿಸಿದರು. ಮಹೋತ್ಸವದಲ್ಲಿ ಪೋ|| ಪಾ. ಮಲ್ಲನಗೌಡರ ಪುತ್ರರಾದ ಕೆ. ಬಸವನಗೌಡರು ಅತ್ಯಂತ ಉತ್ಸಾಹದಿಂದ ಕೆಲಸಮಾಡುತ್ತಿದ್ದರು. ಇವರ ಗುರುಭಕ್ತಿಧುರೀಣತೆಯು ಅತ್ಯಂತ ಸ್ತೋತ್ರಾರ್ಹವಾಗಿರುವದು. ಇಂಥ ಪುತ್ರರತ್ನವನ್ನು ಹೆತ್ತ ಮಾತಾಪಿತೃಗಳು ನಿಜವಾಗಿಯೂ ಧನ್ಯರು! ಜಗದ್ಗುರುಗಳ ಸವಾರಿಯು ಸಾಯಂಕಾಲ 7 ಘಂಟೆಗೆ ಪುನಃ ಉತ್ಸವ ಹೊರಟು 10 ಘಂಟೆಗೆ ಬಿಡಾರಕ್ಕೆ ಬಂದು ತಲ್ಪಿತು. ಆಮೇಲೆ ಮಹಾಸ್ವಾಮಿಗಳು ಸಿಂಹಪೀಠಾರೋಹಣಮಾಡಲು ಸರ್ವಭಕ್ತರು ಮಂಗಳಾರತಿಮಾಡಿ ಫಲಾಶೀರ್ವಾದಗಳನ್ನು ಪಡೆದು ತಮ್ಮ ಗೃಹಗಳಿಗೆ ತೆರಳಿದರು. ಈ ಪ್ರಕಾರ ಜಗದ್ಗುರುಗಳ ಸೇವೆಯನ್ನು ಮಾಡಿದ ಲಕ್ಕುಂಡಿಗ್ರಾಮದ ಸದ್ಭಕ್ತರೇ ಧನ್ಯರು. ಅದೇ ಸಮಯದಲ್ಲಿ ಸದರಿ ಗ್ರಾಮದ ಹಿರೇಮಠಾಧಿಕಾರಿಗಳೂ ಪೋ|| ಪಾ|| ರವರ ಮನಗುರುಗಳೂ ಆದ ವೀರಯ್ಯ ಚೆನ್ನವೀರಯ್ಯ ಇವರು ಪ್ರಭಾ ಪೋಷಣಕ್ಕಾಗಿ 1 ರೂಪಾಯಿಯನ್ನು ತೆಗೆಯಿಸಿದರು. ಇಲ್ಲಿಯ ಯಾವತ್ತು ಭಕ್ತವೃಂದಕ್ಕೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಹಾರೈಸುವ.

ಓರ್ವ ಸದ್ಭಕ್ತ.

ಸ್ವದೇಶಿ ಸಾಮಾನುಗಳನ್ನು ಉಪಯೋಗಿಸಿ.

ನಮ್ಮಲ್ಲಿ ಉತ್ತಮತರಹದ ದೇವರ ಪೂಜೆಗೆ ಯೋಗ್ಯವಾದ ರಮಣಿವಾರು ಊದುಬತ್ತಿಗಳು, ಪರಿಮಳದ್ರವ್ಯಾಂಗ, ಮೂಜಕೊಡ, ಅಷ್ಟಗಂಧದಪುಡಿ, ಜವ್ವಾಜಿಗಂಧ, ಗಂಧದಬಿಲ್ಲೆಗಳು, ಇನ್ನೂ ಅನೇಕ ತರಹದ ಊದುಬತ್ತಿಗಳು ತಯಾರಾಗುತ್ತವೆ. ಮಹಜನರು ಒಂದುಸಲ ನಮ್ಮ ಸುವಾಸನೆಯುಳ್ಳ ಪದಾರ್ಥಗಳನ್ನು ಉಪಯೋಗಿಸಿನೋಡಿದರೆ ತಮ್ಮ ಮನಸಿಗೆ ಆನಂದವುಂಟಾಗದೆ ಇರದು. ಮತ್ತು ನಮ್ಮಲ್ಲಿ ಅತ್ಯಸಂಜೀವಿನಿತೈಲ ಸಹ ತಯಾರಾಗುತ್ತದೆ. ಎಂಥ ಉಷ್ಣಕಾರಕರಿದ್ದರೂ ಸಹ ಗುಣವಾಗಿ ಮನಸ್ಸಿಗೆ ಬಹಳ ಆನಂದವನ್ನುಂಟುಮಾಡುತ್ತದೆ. ಶುದ್ಧವಾದ ಆರತಿಕರ್ಪೂರವು ಬನಾರು ಧಾರಣೆಯಂತೆ ರವಾನಿಸಲಾಗುತ್ತ.

ಕ್ಯಾಟಲಾಗು ಉಚಿತ.

ಕೆ. ಬಸಪ್ಪ ಮತ್ತು ವೈ. ಬಸಪ್ಪ,
ಸುಗಂಧವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

12

ಬಾರ್ಡೋಲಿ ತಾಲ್ಲೂಕಿನ ಪರಿಸ್ಥಿತಿ.

ಬಾರ್ಡೋಲಿಯಲ್ಲಿ ಕಂದಾಯ ಕೊಡದೆ ಇರುವ ರೈತರ ಮನೆಗಳೂ ಜಮೀನುಗಳೂ ಮನೆಯವರ ಒಡವೆವಸ್ತುಗಳೂ ಎಲ್ಲವೂ ಸರಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿರುವುವು. ರೈತರೆಲ್ಲರೂ ಹಳ್ಳಿಗಳನ್ನು ಬಿಟ್ಟು ಬೇರೆ ದೇಶೀಯ ಸಂಸ್ಥಾನಗಳಿಗೆ ಓಡಿಹೋಗುತ್ತಿರುವರು. ರಾತ್ರಿ ಹಸುರಾಗಿದ್ದ ಹೊಲಗಳು ಬೆಳಗಿನ ಹೊತ್ತಿಗೆ ಬಯಲಾಗಿ ಪರಿಣಮಿಸುತ್ತಿವೆ. ರೈತರೆಲ್ಲರೂ ಅರ್ಧರಾತ್ರಿಯಲ್ಲಿ ಬೆಳೆಗಳನ್ನು ಕುಯ್ದು ಗಾಡಿಗಳಲ್ಲಿ ಹಾಕಿಕೊಂಡು ಸುರಕ್ಷಿತಸ್ಥಾನಗಳಿಗೆ ಸಾಗಿಸುತ್ತಿರುವರು. ಬಾರ್ಡೋಲಿ ತಾಲೂಕಿನ ಅನೇಕ ಹಳ್ಳಿಗಳ ಮನೆಗಳಲ್ಲಿ ಜನಗಳಿಲ್ಲ, ಹಳ್ಳಿಗಳೆಲ್ಲಾ ಹಾಳುಸುರಿಯುತ್ತಿರುವುವು. ಅಕ್ಟೋಬರು ೧೦ ನೆಯ ತಾ|| ದಿನ ಎಲ್ಲರೂ ಬೆಳಕು ಹರಿಯುವ ಹೊತ್ತಿಗೆ ಊರುಬಿಟ್ಟು ಹೋಗಬೇಕೆಂದು ಕಾಂಗ್ರೆಸ್ ವಾಲಂಟಿಯರರು ಹುಕುಂ ಕೊಟ್ಟ ಕೂಡಲೇ ಎಲ್ಲರೂ ಗ್ರಾಮಗಳನ್ನು ಬಿಟ್ಟು ಹೊರಟುಹೋದರು. ಬಾರ್ಡೋಲಿಯೆಂದರೆ ಸಾಮಾನ್ಯವಲ್ಲ. ೨—೩ ಅಂತಸ್ತುಗಳ ದೊಡ್ಡ ಬಂಗಲೆಗಳಿರತಕ್ಕ ಸ್ಥಾನ. ಈ ತಾಲೂಕಿಗೆ ೧,೧೭,೦೦೦ ಎಕರೆ ಜಮೀನು ಸೇರಿರುವುದು. ಇದು ಒಳ್ಳೇ ಬತ್ತದ ಜಮೀನು, ಎಕರೆಗೆ ೧ ಸಾವಿರ ರೂಪಾಯಿ ಕಡ್ಡಿ ಇಲ್ಲದಂತೆ ಸಾಮಾನ್ಯ ಸ್ಥಿತಿಗಳಲ್ಲಿ ವಿಕ್ರಯವಾಗತಕ್ಕ ಜಮೀನುಗಳು. ಇವುಗಳ ಒಟ್ಟು ಬೆಲೆ ಕನಿಷ್ಠಪಕ್ಷ ಹತ್ತುಕೋಟಿ ರೂಪಾಯಿಯಾಗುವುದು. ರೈತರು ಇದೆಲ್ಲಾ ಬಿಟ್ಟು ದೇಶಕೋಸ್ಕರವಾಗಿ ಹೋಗಿ ಗುಡಿಸಲುಗಳಲ್ಲಿ ಸೇರಿಕೊಂಡಿರುವರು. ಇವರ ಸ್ವಾರ್ಥತ್ಯಾಗಕ್ಕೆ ಬೆಲೆಯೇ ?

ಸ್ವೀಕಾರ.

ಉಮಚಗಿ ಮಳೆಮಠದ ವೇ|| ಶಂಕರಶಾಸ್ತ್ರಿಗಳವರು ಜಗದಾಚಾರ್ಯರ ಆಶೀರ್ವಾದದಿಂದ ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನವಿದ್ವಾಂಸರಾಗಿ ನಿಯಮಿಸಲ್ಪಟ್ಟ ಸಂತೋಷಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಯಲಬುರ್ಗಿ ತಾ|| ಬೆದವಟ್ಟಿಯಲ್ಲಿರುವ ಮ|| ರಾ|| ಗುರುಸಂಗಪ್ಪ ತುಪ್ಪದ ಇವರ ಗುರುಗಳಾದ ವೇ|| ವೀರಪ್ಪಯ್ಯನವರು ತಮ್ಮಲ್ಲಿಗೆ ಕೊಂಡದ ಕಟ್ಟಿಮಠದ ಶ್ರೀ ಪಟ್ಟಾಧ್ಯಕ್ಷರನ್ನು ಕರೆಯಿಸಿ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಬಸೆಟ್ಟೆಪ್ಪ ಹರ್ತಿ ಇವರ ದ್ವಾರಾ ತಲ್ಪಿರುತ್ತವೆ.

ರಾಯದುರ್ಗ ತಾ|| ಕಣೇಕಲ್ಲಿನಲ್ಲಿ ನೆರವೇರಿದ ದಸರಾಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಹಿರೇಮಠದ ಚನ್ನವೀರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ.

ನವಲಗುಂದ ತಾ|| ಚಿಕ್ಕನರಗುಂದದ ಮ|| ರಾ|| ಸೆಪ್ಪಡ್ಲ ಬಸವಪ್ಪನವರು ತಮ್ಮ ಮನೆಯಲ್ಲಿ ಕೊಣ್ಣೂರು ಶ್ರೀ ಪಟ್ಟದಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ

ದಿವಾನ್ ಸಾಹೇಬರು ಅಪ್ಪಣೆಕೊಡಿಸಿದ ಭಾಷಣ.

1930 ನೆಯ ಇಸವಿ ಅಕ್ಟೋಬರ್ 3 ನೆಯ ತಾರೀಖು.

ಪ್ರಜಾಪ್ರತಿನಿಧಿ ಸಭೆಯ ಸದಸ್ಯ ಮಹಾಶಯರೇ,—ನಮ್ಮ ಸ್ವಾಮಿಗಳಾದ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಆಜ್ಞೆಯ ಪ್ರಕಾರ ಈ ವರ್ಷದ ದಸರಾ ಅಧಿವೇಶನಕ್ಕೆ ತಮ್ಮೆಲ್ಲರಿಗೂ ಆದರದಿಂದ ಸ್ವಾಗತವನ್ನು ಬಯಸಿ, ಕಳೆದ ಜೂನ್ ತಿಂಗಳಿಗೆ ಪೂರೈಸಿದ ಸಂವತ್ಸರದಲ್ಲಿ ನಮ್ಮ ಸಂಸ್ಥಾನದಲ್ಲಿ ನಡೆದ ಆಡಳಿತದ ಸಾರಾಂಶವನ್ನು ತಮಗೆ ತಿಳಿಸಪಡಿಸುವ ಗೌರವವು ನನಗೆ ಲಭಿಸಿರುತ್ತದೆ. ಭಾಷಣದ ಮೊದಲನೆಯ ಭಾಗದಲ್ಲಿ ಮುಖ್ಯಮುಖ್ಯವಾದ ಕಾರ್ಯಕಲಾಪಗಳನ್ನು ಕುರಿತು ಪ್ರಸ್ತಾಪಿಸಿ ಉಳಿದುವುಗಳನ್ನು ಎರಡನೆಯ ಭಾಗದಲ್ಲಿ ತಿಳಿಸುವೆನು.

ಮಳೆಬೆಳೆಗಳು.

ವಾಡಿಕೆಯಾಗಿ ವರುಷವರುಷವೂ ನಡೆಸಬೇಕಾದಷ್ಟು ಮಳೆಯು ಕಳೆದ ವರ್ಷದಲ್ಲಿಯೂ ಬಿದ್ದಿತು; ಅಲ್ಲದೆ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಸರಿ ಸುಮಾರು ಒಂದೇ ಸಮವಾಗಿಯೂ ಮಳೆಯಾಯಿತು. ಜನಗಳ ಆರೋಗ್ಯವೂ, ದನಕರುಗಳ ಆರೋಗ್ಯವೂ ಸಾಮಾನ್ಯವಾಗಿ ತೃಪ್ತಿಕರವಾಗಿಯೇ ಇದ್ದುವು. ಇವೆಲ್ಲದರ ಪರಿಣಾಮವಾಗಿ ಒಟ್ಟಿನಲ್ಲಿ ನಮ್ಮ ದೇಶದ ವ್ಯವಸಾಯದ ಸ್ಥಿತಿಯು ಸಮರ್ಪಕವಾಗಿದ್ದಿತೆಂದೇ ಹೇಳಬಹುದು. ಆದರೆ ಚಾಲ್ತಿ ಸಾಲಿನಲ್ಲಿ ಮಾತ್ರ, ಈಗ್ಗೆ ಸ್ವಲ್ಪಕಾಲದ ಮುಂಚಿನವರೆಗೂ ಮಳೆಯು ಸರಿಯಾಗಿ ಬೀಳದೆ ಆತಂಕವುಂಟಾಗಿದ್ದಿತು. ಆರಂಭದಲ್ಲೇನೋ ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ಸರಿಸುಮಾರು ಒಂದೇ ಸಮವಾಗಿ ಮಳೆಯಾಯಿತು. ಆದರೆ ಆ ಬಳಿಕ ಸ್ವಲ್ಪಕಾಲ ಮಳೆಯು ಬರಲಿಲ್ಲ. ಇದರಿಂದ ಉಳುಮೆಗೂ, ಬಿತ್ತನೆಗೂ, ಅವಕಾಶವಿಲ್ಲದೆ ವಿಶೇಷ ತಡವಾಯಿತು. ಕೆಲವು ತಾಲ್ಲೂಕುಗಳಲ್ಲಂತು ಕುಡಿಯುವ ನೀರಿಗೂ, ದನಕರುಗಳ ಮೇವಿಗೂ ಪ್ರಯಾಸವುಂಟಾಗಬಹುದೆಂದು ತೋರಿತು. ಅಂಥ ದುಸ್ಥಿತಿಯೊದಗಿದಲ್ಲಿ ಅದನ್ನು ನಿವಾರಣೆಮಾಡುವ ಏರ್ಪಾಡುಗಳನ್ನು ಕೂಡ ಪರ್ಯಾಲೋಚಿಸುತ್ತಿದ್ದೆವು. ಆದರೆ ಭಗವಂತನ ದಯೆಯಿಂದ ಈಗ್ಗೆ [illegible] ಹಿಂದೆ ಮಳೆಯು ಬಂದು, ಆ ವಿಧದ ಶಂಕೆಯೂ, ಆತಂಕವೂ ಪರಿಹಾರವಾದುವು. ಸಂಸ್ಥಾನದ ಅನೇಕ ಭಾಗಗಳಲ್ಲಿ ಅವಶ್ಯವಾದಷ್ಟು ಮಳೆಯಾಗಿದೆ. ಈ ವರುಷವೂ ಬಹುಶಃ ಚೆನ್ನಾಗಿ ಬೆಳೆಯಾಗಬಹುದೆಂಬುದಾಗಿ ಭರವಸೆಯುಂಟಾಗಿದೆ.

ವ್ಯಾಪಾರದ ಮುಗ್ಗಟ್ಟು.

ಈ ವರುಷ ಬೆಳೆಯೇನೋ ಬಹುಶಃ ಚೆನ್ನಾಗಿ ಆಗಬಹುದೆಂಬ ನಿರೀಕ್ಷೆಯಿದೆ. ಆದರೆ ಪ್ರಪಂಚದಲ್ಲೆಲ್ಲ ಎಲ್ಲೆಲ್ಲಿಯೂ ಎಲ್ಲ ವಸ್ತುಗಳ ಧಾರಣೆಗಳೂ ಆಕಸ್ಮಾತ್ತಾಗಿ ವಿಶೇಷವಾಗಿ ಇಳಿದುಹೋಗಿವೆ. ಇದರಿಂದ ಬಹಳ ಮುಗ್ಗಟ್ಟಾಗಿ, ವ್ಯವಸಾಯ ಕೈಗಾರಿಕೆಗಳ ವಿಚಾರದಲ್ಲಿಯೂ, ವಾಣಿಜ್ಯ ವಿಚಾರದಲ್ಲಿಯೂ ಎಲ್ಲದರಲ್ಲಿಯೂ ತೊಂದರೆಗಳುಂಟಾಗಿ ನಷ್ಟಕ್ಕೆ ಕಾರಣವಾಗಿದೆ. ಇದರ ಫಲಿತಾಂಶವಾಗಿ ಯಾವ ಕೆಲಸವಮಾಡಿದರೆ ಹೇಗೋ ಎಂಬ ಸಂಶಯವುಂಟಾಗಿ ಕಾರ್ಯಸಾಧನೆಯ ಭರವಸೆಯೇ ಕಡಿಮೆಯಾಗಿದೆ. ಸಾಲವು ಹುಟ್ಟುವುದು ಕಷ್ಟವಾಗಿದೆ. ಅಲ್ಲದೆ ಪದಾರ್ಥಗಳನ್ನು ಕೊಳ್ಳುವ ಶಕ್ತಿಯೂ ಕುಗ್ಗಿಹೋಗಿದೆ. ವ್ಯಾಪಾರವು ಬಿದ್ದುಹೋಗಿರುವುದರ ಪರಿಣಾಮವಾಗಿ ಅನೇಕ ಸರ್ಕಾರಗಳಲ್ಲಿ ಈಗಾಗಲೇ ಹುಟ್ಟುವಳಿಯು ಕಡಿಮೆಯಾಯಿತು. ನಮ್ಮ ಹುಟ್ಟುವಳಿಯಲ್ಲಿ ಅನೇಕ ಬಾಬುಗಳು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ, ವ್ಯಾಪಾರದ ಪರಿಸ್ಥಿತಿಗನುಗುಣವಾಗಿರುತ್ತವೆ. ಕೆಲವು ಬಾಬುಗಳಲ್ಲಂತು, ವಸ್ತುಗಳ ಮಾರಾಟದಿಂದಲೇ ನಮಗೆ ಹುಟ್ಟುವಳಿಯು ಬರಬೇಕು. ಹೀಗಿರುವಲ್ಲಿ, ಧಾರಣೆಗಳು ಇಳಿದುಹೋದರೆ, ಅವುಗಳಿಂದ ಬರುವ ಹುಟ್ಟುವಳಿಯೂ ಕಡಿಮೆಯಾಗುವುದು ಗೊತ್ತೇ ಇದೆ. ಗಂಧದ ಎಣ್ಣೆಯ ವ್ಯಾಪಾರವನ್ನು ಒಂದು ನಿದರ್ಶನವಾಗಿ ಇಲ್ಲಿ ಸೂಚಿಸಬಹುದಾಗಿದೆ. ಯೂರೋಪು ಅಮೆರಿಕ ಮತ್ತು ಜಪಾನ್ ಈ ಮೂರರಲ್ಲಿಯೂ ಗಂಧದ ಎಣ್ಣೆಗೆ ವಿಶೇಷ ಗಿರಾಕಿಯಿದ್ದಿತು. ಅಲ್ಲಿ ವ್ಯಾಪಾರದ ಪರಿಸ್ಥಿತಿಯು ವಿಶೇಷ ಮುಗ್ಗಟ್ಟಿಗೆ ಬಂದುದರಿಂದ, ಗಂಧದ ಎಣ್ಣೆಯ ಧಾರಣೆಯೂ ಇಳಿದುಹೋಗಿ ಅದರ ವ್ಯಾಪಾರವೂ ಕಡಿಮೆಯಾಗಿ ಹೋಗಿದೆ. ವ್ಯಾಪಾರವು ಹೀಗೆ ಎಲ್ಲಾ ದೇಶಗಳಲ್ಲಿಯೂ ಮಟ್ಟುಬಿದ್ದು ಮುಗ್ಗಟ್ಟು ಉಂಟಾಗಿರುವುದಕ್ಕೆ, ಒಟ್ಟು ಪ್ರಪಂಚಕ್ಕೇ ಅನ್ವಯಿಸುವ ಆರ್ಥಿಕ ಕಾರಣಗಳೇ ಹೊಣೆ. ಎಲ್ಲ ದೇಶಗಳಿಗೂ ಬಂದಿರುವ ಮುಗ್ಗಟ್ಟೇ ನಮ್ಮ ಇಂಡಿಯಾದೇಶಕ್ಕೂ ಬಂದಿದೆ. ಇಂಡಿಯಾದೇಶದ ಇತರ ಪ್ರಾಂತಗಳವರಂತೆಯೇ ನಮ್ಮ ಸಂಸ್ಥಾನದವರೂ ಕಷ್ಟಗಳನ್ನು ಅನುಭವಿಸಬೇಕಾಗಿದೆ. ಆದರೂ, ಇದೇ ಸ್ಥಿತಿಯು ಸ್ಥಿರವಾಗಿರುವುದಿಲ್ಲ. ವ್ಯಾಪಾರದ ಪರಿಸ್ಥಿತಿಯು ಆದಷ್ಟು ಬೇಗ ಉತ್ತಮವಾದೀತೆಂದು ನಾವು ಹಾರೈಸಬಹುದಾಗಿದೆ. ಇಷ್ಟರಮೇಲೂ ದುರದೃಷ್ಟವಶದಿಂದ ಒಂದು ವೇಳೆ ಈಗಿನ ಮುಗ್ಗಟ್ಟಿನ ಸ್ಥಿತಿಯೇ ಇನ್ನೂ ಬಹು ಕಾಲ ಇದ್ದುಬಿಡುವ ಪಕ್ಷಕ್ಕೆ, ಸಮಸ್ತರಿಗೂ ಅದರ ಬೇಗೆಯಿಂದ ಬಹಳ ತೊಂದರೆಯೂ, ಬಹಳ ಕಷ್ಟನಷ್ಟಗಳೂ ಉಂಟಾಗುತ್ತವೆ. ಅಲ್ಲದೆ, ದೇಶೋನ್ನತಿಗೆ ಸಾಧಕವಾದ ಕಾರ್ಯಕಲಾಪಗಳನ್ನು ಸರ್ಕಾರದವರು ನೆರವೇರಿಸಲು ಅವಶ್ಯಕವಾದ ಸಾಧನ ಸಂಪತ್ತುಗಳು ಕೂಡ, ಕಡಿಮೆಯಾಗಿ ಹೋಗುತ್ತವೆ.

ಕೈಮಗ್ಗಗಳನ್ನಿಟ್ಟುಕೊಂಡು ಕೆಲಸ ಮಾಡುವ ನೆಯ್ಗೆಯವರಿಗೆ ಸ್ವಲ್ಪ ಸಹಾಯವುಮಾಡಬೇಕೆಂಬ ಉದ್ದೇಶವಿರುವುದನ್ನೂ ಈ ಸಂಬಂಧದಲ್ಲಿ ಇಲ್ಲಿ ಸೂಚಿಸಬಹುದಾಗಿದೆ. ಅವರು ಬಹಳ ಬಡವರು. ಅವರು ರಚಿಸುವ ಸಾಮಾನುಗಳು ಕೂಡಲೆ ಮಾರಾಟವಾಗದೆ ನಿಂತುಹೋಗುವುದಾದರೆ ಅದನ್ನು ತಡೆದುಕೊಂಡು ಕೆಲಸವನ್ನು ನಿರ್ವಹಿಸಲು ಅವರಿಗೆ ಶಕ್ತಿಸ್ತೋಮವಿಲ್ಲ. ಅವರ ಸರಕುಗಳಿಗೆ ಹೆಚ್ಚು ಗಿರಾಕಿಯು ದೊರೆಯದೆ ತೊಂದರೆಯಾಗುವ ಸಂಭವವಿದೆ. ಈ ಕಷ್ಟದ ಸಮಯವು ಕಳೆಯುವವರೆಗೂ ಅವರಿಗೆ ಸಹಾಯಮಾಡುವುದಕ್ಕಾಗಿ ವರ್ತಕರ ಮುಖಾಂತರ ಅವರು ನೆಯ್ಯುವ ಬಟ್ಟೆಗಳನ್ನು ಕ್ರಯಕ್ಕೆ ತೆಗೆಯುವ ಏರ್ಪಾಡುಮಾಡಬೇಕೆಂಬ ಉದ್ದಿಷ್ಟವಿದೆ.

ಹೊಸ ಸಾಲಗಳು.

ನಾವು ಈಚೆಗೆ ಸರ್ಕಾರಿ ಸಾಲವನ್ನು ಏರ್ಪಡಿಸಿರುವುದು ಸರಿಯಷ್ಟೆ. ನಾವು ಕೇಳಿದ ಹಣವು ಬಹುಬೇಗ ದೊರೆಯಿತೆಂಬುದನ್ನು ತಿಳಿಸಲು ನಾನು ಹರ್ಷಿಸುವೆನು. ನಾವು ಮೂರುಕೋಟಿ ರೂಪಾಯಿಗಳ ಒಟ್ಟು ಮೊತ್ತವನ್ನು ಕೇಳಿದ್ದೆವು. ಸಾಲಕ್ಕಾಗಿ ಹಣವನ್ನು ಕೊಡಲು ಗೊತ್ತಾಗಿದ್ದ ಅವಧಿಯಲ್ಲಿ ಸುಮಾರು ಅರ್ಧಕಾಲವು ಕಳೆಯುವುದರೊಳಗಾಗಿಯೇ, ಮೂರು ಕೋಟಿ ರೂಪಾಯಿಗಳ ಮೊತ್ತವೂ ಬಂದು ಹೋಯಿತು. ಈ ಸಾಲದ ಒಟ್ಟು ಮೊತ್ತವು 4 ಕೋಟಿ ರೂಪಾಯಿಗಳಾಗುವವರೆಗೂ, ಜನಗಳು ಹಣವನ್ನು ಕಳುಹಿಸುತ್ತಿರುವುದಕ್ಕೆ ಅನುಮತಿಯನ್ನು ಕೊಡಲಾಗುವುದು. ಮೂಲಧನದ ಕಾಮಗಾರಿಗಳೂ ಸೇರಿ ಎಲ್ಲ ಅವಶ್ಯಕತೆಗಳಿಗೂ ಸರ್ಕಾರದವರು ಇನ್ನು ಕೆಲವು ವರುಷಗಳ ಕಾಲ ಯುಕ್ತ ರೀತಿಯಲ್ಲಿ ಹಣವನ್ನೊದಗಿಸಲು ಈ ಮೊತ್ತದಿಂದ ಅನುಕೂಲವಾಗುವುದು. ಇಂಡಿಯಾದೇಶದ ಎಲ್ಲ ಪ್ರಾಂತಗಳ ಜನರೂ ಈ ಸಾಲಕ್ಕೆ ಹಣವನ್ನು ಹಾಕಿದ್ದಾರೆ. ಅಲ್ಲದೆ ಹೆಚ್ಚು ನಾಯಿದೆಯ ಸಾಲಕ್ಕೇ ಬಹುವಾಗಿ ಹಣವು ಬಂದಿದೆ. ಮೈಸೂರು ಸರ್ಕಾರದವರ ಸಾಲದ ಪತ್ರಗಳಲ್ಲಿ ಜನಗಳಿಗೆ ಎಷ್ಟು ಆದರವೂ, ನಂಬಿಕೆಯೂ ಇವೆಯೆಂಬುದು ಇದರಿಂದ ವ್ಯಕ್ತವಾಗುತ್ತದೆ. ಈಗ ವಿಧಿಸಿರುವ ಷರತ್ತುಗಳ ಮತ್ತು ಬಡ್ಡಿಯ ದರಗಳ ಮೇಲೆ ಕೂಡ, ಜನಗಳಿಂದ ಈ ಮೊಬಲಗು ಬಂದಿರುವುದನ್ನು ನೋಡಿದರೆ, ಸಾಲವು ದೊರೆಯುವ ವಿಚಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಬಹಳ ಸೌಕರ್ಯವುಂಟೆಂಬುದೂ ಇದರಿಂದ ಸ್ಪಷ್ಟಪಡುತ್ತದೆ.

ಸರ್ಕಾರದ ಸಾಲಗಳ ವಿಚಾರ.

ಸರಕಾರದ ಸಾಲವನ್ನೆತ್ತುವ ವಿಚಾರದಲ್ಲಿ ನಾವು ಸಾಮಾನ್ಯವಾಗಿ ಅನುಸರಿಸುವ ಕಾರ್ಯನಿಯಮವನ್ನು ನಾನು ತಮಗೆ ಶ್ರುತಪಡಿಸಬಹುದಾಗಿದೆ. ಅಲ್ಲದೆ, ನಾವು ಮಾಡಿರತಕ್ಕ ಸಾಲದ ಸ್ವಭಾವವೇನು, ಸಂಸ್ಥಾನದ ಸಾಲದ ಒಟ್ಟು ಮೊಬಲಗೆಷ್ಟು ಎಂಬ ಸಂಗತಿಗಳನ್ನೂ ನಾನು ಇಲ್ಲಿ ಸೂಚಿಸಬಹುದಾಗಿದೆ. ವಿಶೇಷ ಉಪಯೋಗಕರವಾಗಿ ಹೆಚ್ಚು ಕಾಲ ಪ್ರಯೋಜನಗಳನ್ನುಂಟುಮಾಡತಕ್ಕ ಭಾರಿ ಭಾರಿ ಕಾಮಗಾರಿಗಳನ್ನು ಮಾಡಿಸಬೇಕಾದರೆ ಬಹಳವಾಗಿ ಹಣವು ವೆಚ್ಚವಾಗಬೇಕಾಗುತ್ತದೆ. ಇಂಥ ಕಾಮಗಾರಿಗಳಿಗಾಗಿ ಚಾಲ್ತಿ ಹುಟ್ಟುವಳಿಗಳಿಂದ ಹಣವನ್ನೊದಗಿಸುವುದು ಸಾಧ್ಯವೂ ಇಲ್ಲ. ಹಾಗೆಮಾಡುವುದು ಯುಕ್ತವೂ ಅಲ್ಲ. ಆದರೆ ಇಂಥಾ ಕಾಮಗಾರಿಗಳನ್ನು ನೆರವೇರಿಸಬೇಕಾದುದು ದೇಶೋನ್ನತಿಗೆ ತೀರ ಅವಶ್ಯಕ. ಆದಕಾರಣ, ಇವಕ್ಕೆ ಹಣವನ್ನು ಒದಗಿಸಲು ಸರ್ಕಾರಿ ಸಾಲವನ್ನು ಏರ್ಪಡಿಸುವುದೊಂದೇ ಮಾರ್ಗ. ನಮ್ಮ ದೇಶದ ಸಾಧನಸಂಪತ್ತುಗಳನ್ನು ರೂಢಿಸುವುದಕ್ಕೂ, ಪ್ರಜೆಗಳ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೂ, ಸಾಧಕವಾಗುವಂಥ ಮೂಲಧನದ ಕಾಮಗಾರಿಗಳನ್ನು ಅವಿಚ್ಛಿನ್ನವಾಗಿ ನಡೆಯಿಸುತ್ತ ಬರುವುದಕ್ಕೆ ಅವಶ್ಯಕ ಹಣವನ್ನು ಸಾಲವಾಗಿ ಪಡೆದು ಕೆಲಸ ನಡೆಯಿಸಬೇಕೆಂಬುದು ನಮ್ಮ ಉದ್ದೇಶ. ಹೀಗೆ ಸಾಲವಾಗಿ ತೆಗೆದಿರುವ ಒಟ್ಟು ಮೊಬಲಗು ಸುಮಾರು 7 ಕೋಟಿ ರೂಪಾಯಿಗಳು. ರೈಲ್ವೆಗಳು, ವಿದ್ಯುಚ್ಛಕ್ತಿಯ ಕಾಮಗಾರಿಗಳು, ನೀರಾವರಿ ಕಾಮಗಾರಿಗಳು, ಮತ್ತು ಕೈಗಾರಿಕೆಯ ಕಾರ್ಖಾನೆಗಳು ಇವುಗಳಿಗಾಗಿ ವೆಚ್ಚಮಾಡಿರುವ ಬಂಡವಾಳದ ಒಟ್ಟು ಮೊಬಲಗು ಸುಮಾರು 14 ಕೋಟಿ ರೂಪಾಯಿಗಳು. ಆದರೆ, ಅವುಗಳಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯೇ ಮುಂತಾದುವು ಕೆಲವು ನಾವು ನಿರೀಕ್ಷಿಸಿದಷ್ಟು ಪ್ರತಿಫಲವನ್ನು ಇನ್ನೂ ಕೊಡುತ್ತಿಲ್ಲವೆಂಬುದು ನಿಜ. ಕೃಷ್ಣರಾಜಸಾಗರ ಸಂಬಂಧವಾದ ನೀರಾವರಿ ಏರ್ಪಾಡು ಮುಂತಾದ ಕೆಲವು ಕಾಮಗಾರಿಗಳಿಂದ ಪೂರ್ತಿಯಾಗಿ ವರಮಾನವು ಕಾಲಕ್ರಮೇಣ ದೊರೆಯತಕ್ಕುದಾಗಿದೆ. ಆದರೆ, ನಾನು ಈಗ ಪ್ರಸ್ತಾಪಿಸುತ್ತಿರುವ ಅಂಶವು ಸಂಸ್ಥಾನದ ಸಾಲದ ಸ್ವಭಾವವು ಎಂಥದೆಂಬ ವಿಚಾರ. ನಾನು ಈಗ ತಾನೆ ತಿಳಿಸಿದಂತೆ ಸಾಲದ ಹಣವನ್ನು ನಾವು ಲಾಭದಾಯಕವಾದ ಕಾಮಗಾರಿಗಳಿಗಾಗಿ ವಿನಿಯೋಗಿಸುತ್ತಿದ್ದೇವೆ. ಅದರ ಸಹಾಯದಿಂದ ನೆರವೇರಿಸಿದ ಕಾಮಗಾರಿಗಳೂ, ಕಾರ್ಖಾನೆಗಳೂ, ಮೂಲಧನಕ್ಕೆ ತಕ್ಕಂತೆ ಪೂರ್ತಿಯಾಗಿ ಪ್ರತಿಫಲವನ್ನು ಕೊಡುತ್ತಲೂ ಇವೆ.

ಅರ್ವಿನ್ ನಾಲೆಯ ಪ್ರದೇಶದ ಅಭಿವೃದ್ಧಿ ಕಾರ್ಯಗಳು.

ಮುಂದಣ ವರುಷವು ಪ್ರಾರಂಭವಾಗುವ ವೇಳೆಗೆ ಅರ್ವಿನ್ ನಾಲೆಯ ಸಹಾಯದಿಂದ ಸುಮಾರು 15,000 ಎಕರೆಗಳು ನೀರಾವರಿ ಸಾಗುವಳಿಗೆ ಬರುವ ನಿರೀಕ್ಷೆಯಿದೆ. ಕೃಷ್ಣರಾಜಸಾಗರದ ಏರ್ಪಾಡಿನಿಂದ ಪರಮಾವಧಿ ಒಂದು ಲಕ್ಷ ಇಪ್ಪತ್ತೈದು ಸಾವಿರ ಎಕರೆಗಳಷ್ಟು ಜಮೀನು ನೀರಾವರಿ ಸಾಗುವಳಿಗೆ ಬರಲು ಅವಕಾಶವುಂಟು. ಸಾಗುವಳಿ ಜಮೀನುಗಳು ಒಟ್ಟಿನಲ್ಲಿ ಆ ವಿಸ್ತೀರ್ಣಕ್ಕೆ ಬರುವವರೆಗೂ ಇನ್ನು ಮುಂದೆ ನೀರಾವರಿಯ ವಿಸ್ತೀರ್ಣವು ಕ್ರಮಕ್ರಮವಾಗಿ ಹೆಚ್ಚುತ್ತ ಹೋಗುತ್ತದೆ. ಅರ್ವಿನ್ ನಾಲಾ ಬಯಲಿನಲ್ಲಿ ನೀರಾವರಿ ಸಾಗುವಳಿಯನ್ನು ವೃದ್ಧಿಗೊಳಿಸುವುದರಲ್ಲಿ ಅನೇಕ ವಿಚಾರಗಳಿಗೆ ಗಮನಕೊಡಬೇಕಾಗುತ್ತದೆ. ಈ ನಾಲೆಗಾಗಿ ಭಾರಿ ಬಂಡವಾಳವು ವೆಚ್ಚವಾಗಿದೆ. ಅದಕ್ಕೆ ಯುಕ್ತವಾದ ಪ್ರತಿಫಲವು ಬರುವಂತೆ ಮಾಡುವ ಎಲ್ಲ ಕಾರ್ಯಗಳನ್ನೂ ನೆರವೇರಿಸಬೇಕಾಗಿದೆ; ಅಲ್ಲದೆ, ಅವುಗಳನ್ನು ಆದಷ್ಟು ಶೀಘ್ರವಾಗಿಯೂ ನೆರವೇರಿಸಬೇಕಾಗಿದೆ. ಈ ನಾಲೆಯಿಂದ ಕಲ್ಪಿಸತಕ್ಕ ನೀರಾವರಿ ಸೌಕರ್ಯಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡು ಜಮೀನುಗಳಿಂದ ಸಮೃದ್ಧವಾಗಿ ಬೆಳೆಗಳನ್ನು ತೆಗೆಯಬೇಕಾದರೆ, ನವೀನ ವಿಧದ ವ್ಯವಸಾಯದ ಮುಟ್ಟುಗಳನ್ನು ಪ್ರಯೋಗಿಸಿ, ಈಗಿನ ಹೊಸ ರೀತಿಯಲ್ಲಿ ವ್ಯವಸಾಯವನ್ನು ನಡೆಯಿಸಬೇಕಾದುದು ಅವಶ್ಯಕ. ಈ ಉದ್ದೇಶವು ನೆರವೇರಬೇಕಾದರೆ ರೈತರಿಗೆ ನಾನಾ ವಿಚಾರಗಳಲ್ಲಿ ಸರಿಯಾದ ದಾರಿಯನ್ನೂ ತೋರಿಸಿ, ಅವರಿಗೆ ಅವಶ್ಯವಾದ ಸಹಾಯವನ್ನೂ ಮಾಡಬೇಕಾಗುತ್ತದೆ. ಈ ಮುಖ್ಯ ವಿಚಾರಗಳನ್ನೆಲ್ಲಾ ಸರ್ವತೋಮುಖವಾಗಿ ಪರಿಶೀಲಿಸಲು ಗೌರವಾನ್ವಿತರಾದ ನನ್ನ ಸಹೋದ್ಯೋಗಿಗಳು ರಾಜಮಂತ್ರಪ್ರವೀಣ ಶ್ರೀಮಾನ್ ಬಾಲಸುಂದರಂ ಅಯ್ಯರವರ ಅಧ್ಯಕ್ಷತೆಯಲ್ಲಿ "ಕೃಷ್ಣರಾಜಸಾಗರ ವರ್ಕ್ ಕಮಿಟಿ" ಎಂಬ ಸಮಿತಿಯೊಂದು ಏರ್ಪಟ್ಟಿದೆ. ಈ ಸಮಿತಿಯವರು ನಾನಾ ಅಂಶಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಪರ್ಯಾಲೋಚಿಸುತ್ತಿದ್ದಾರೆ. ಅವರು ಶೀಘ್ರದಲ್ಲೇ ತಮ್ಮ ಸಲಹೆಗಳನ್ನು ಕಳುಹಿಸಲು ಸಾಧ್ಯವಾಗಬಹುದು. ಈ ಮಧ್ಯದಲ್ಲಿ ಈಗಾಗಲೇ ಕೈಕೊಂಡಿರುವ ಒಂದೆರಡು ಕಾರ್ಯಗಳನ್ನು ನಾನು ಇಲ್ಲಿ ಸೂಚಿಸಬಹುದಾಗಿದೆ. ಈ ನಾಲಾ ಬಯಲಿನಲ್ಲಿ ಕಬ್ಬಿನ ಸಾಗುವಳಿಗೆ ಯಾವ ಜಮೀನುಗಳು ತಕ್ಕುವಾಗಿವೆ, ಇತರ ಜಮೀನುಗಳಲ್ಲೇ ಯಾವ ಯಾವ ಜಮೀನು ಯಾವ ಯಾವ ಇತರ ಬೆಳೆಗಳಿಗೆ ಅನುಕೂಲವಾಗಿದೆಯೆಂಬುದನ್ನೂ ನಿರ್ಧರಿಸುವುದಕ್ಕೋಸ್ಕರ ಭೂಗುಣವನ್ನು ಪರೀಕ್ಷಿಸುವ ಕೆಲಸವು ನಡೆಯುತ್ತಿದೆ. ಅನೇಕ ಪ್ರದೇಶಗಳಲ್ಲಿ ಭೂಗುಣದ ಪರೀಕ್ಷೆಯು ಮುಗಿದಿದೆ. ಈ ರೀತಿ ನಡೆದ ಪರೀಕ್ಷೆಯ ಫಲಿತಾಂಶಗಳು ಶೀಘ್ರದಲ್ಲೇ ಪ್ರಕಟಿಸಲ್ಪಡುವುವೆಂದು ನಿರೀಕ್ಷಿಸಲಾಗಿದೆ. ಉತ್ತಮವಾದ ಕಬ್ಬಿನ ಬೀಜದ ತುಂಡುಗಳನ್ನು ರೈತರಿಗೆ ಒದಗಿಸುವುದೊಂದು ನೂತನ ವಿಧದ ವ್ಯವಸಾಯದ ಮುಟ್ಟುಗಳನ್ನೂ, ಕೃತಕಗೊಬ್ಬರಗಳನ್ನೂ ಉಪಯೋಗಿಸಿ, ಈಗಿನ ನವೀನರೀತಿಯಲ್ಲಿ ವ್ಯವಸಾಯ ಮಾಡುವುದು ಹೆಚ್ಚು ಲಾಭದಾಯಕವೆಂಬುದನ್ನು ಜನರಿಗೆ ಕಾರ್ಯತಃ ತೋರಿಸಿಕೊಡಬೇಕೆಂಬುದೊಂದು; ಇವೆರಡು ಉದ್ದೇಶಗಳಿಂದ ಅರ್ವಿನ್ ನಾಲಾ ಬಯಲಿನಲ್ಲಿ ಮಾದರಿಯ ವ್ಯವಸಾಯ ಕ್ಷೇತ್ರವೊಂದನ್ನು ಸ್ಥಾಪಿಸಬೇಕೆಂಬ ಯೋಚನೆಯೂ ಇದೆ.

ನಾನಾ ಊರುಗಳಿಗೂ ವಿದ್ಯುಚ್ಛಕ್ತಿಯ ಸರಬರಾಯಿ.

ನಾನಾ ಊರುಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಕೆಲಸವು ಒಂದೇ ಸಮವಾಗಿ ಕ್ರಮವರಿತು ಮುಂದುವರಿಯುತ್ತದೆ. 1929-30 ನೆಯ ಸಾಲಿನಲ್ಲಿ ಕೋಲಾರ, ತುಮಕೂರು, ಮಳವಳ್ಳಿ ಈ ಮೂರು ಊರುಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸುವ ಏರ್ಪಾಡು ಆಚರಣೆಗೆ ಬಂದಿತು. ಮಂಡ್ಯಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡು ಈಚೆಗೆ ಆಚರಣೆಗೆ ಬಂದಿತು. ಕಳೆದ ತಿಂಗಳು ಅಲ್ಲಿಗೆ ಮೊಟ್ಟಮೊದಲು ವಿದ್ಯುಚ್ಛಕ್ತಿಯನ್ನು ಒದಗಿಸಿ ದೀಪೋತ್ಸವವನ್ನು ನೆರವೇರಿಸಲಾಯಿತು. ಆನೇಕಲ್ಲು, ಫ್ರೆಂಚ್‌ರಾಕ್ಸ್, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಈ ಊರುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಏರ್ಪಾಡನ್ನು ಮಂಜೂರು ಮಾಡಲಾಗಿದೆ. ಈ ಕಾಮಗಾರಿಗಳು ಶೀಘ್ರವಾಗಿ ಪ್ರಾರಂಭವಾಗುತ್ತವೆ. ಹುಣಸೂರಿಗೂ, ಯಡತೊರೆಗೂ, ವಿದ್ಯುಚ್ಛಕ್ತಿಯ ಸರಬರಾಯಿ ಮಾಡಬೇಕೆಂಬ ಏರ್ಪಾಡು ಪರ್ಯಾಲೋಚನೆಯಲ್ಲಿದೆ. ಮೈಸೂರು, ಬೆಂಗಳೂರು ನಗರಗಳಿಗೂ ಚಿನ್ನದ ಗಣಿ ಪ್ರದೇಶಕ್ಕೂ, ವಿದ್ಯುಚ್ಛಕ್ತಿಯನ್ನೊದಗಿಸುತ್ತಿರುವಂತೆಯೇ ಸಂಸ್ಥಾನದಲ್ಲಿ ಇತರ ಊರುಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಕಾರ್ಯನಿಯಮವನ್ನು ಏರ್ಪಡಿಸಿಕೊಂಡಾಗಿನಿಂದೀಚೆಗೆ, ಬೌರಿಂಗ್‌ಪೇಟೆ, ಕೋಲಾರ, ತುಮಕೂರು, ಚನ್ನಪಟ್ಟಣ, ಕೋಲಾರ್‌ಪೇಟೆ, ಮಳವಳ್ಳಿ, ಮಂಡ್ಯ, ನಂಜನಗೂಡು, ಶ್ರೀರಂಗಪಟ್ಟಣ ಮತ್ತು ಕಾನಕಾನಹಳ್ಳಿ—ಈ ಊರುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಏರ್ಪಾಡನ್ನು ಪೂರೈಸಿ, ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದೇವೆ. ಇನ್ನು ಮುಂದೆ ಕೂಡ, ಇದೇ ವಿಧದ ಕಾರ್ಯನಿಯಮವನ್ನೇ ಏಕರೀತಿಯಲ್ಲಿ ಅನುಸರಿಸುತ್ತ ಬಂದು, ಸಾಧ್ಯವಾದ ಸ್ಥಳಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬುದಾಗಿ ಉದ್ದೇಶಿಸಿದ್ದೇವೆ.

ವಿದ್ಯುಚ್ಛಕ್ತಿಯ ಸಹಾಯದಿಂದ "ಪಂಪು" ಗಳ ಮೂಲಕ ನೀರನ್ನೆತ್ತಿ ನೀರಾವರಿ ಸಾಗುವಳಿ ಮಾಡಲು ರೈತರಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಈಗ್ಗೆ ಸ್ವಲ್ಪಕಾಲ ಹಿಂದೆ ಒಂದು ಏರ್ಪಾಡನ್ನು ಮಾಡಲಾಯಿತು. ಈ ಏರ್ಪಾಡಿನಲ್ಲಿ ಜನಗಳಿಗೆ ಬಹಳ ಇಷ್ಟವುಂಟು. ಈಗಾಗಲೇ 132 ಪಂಪುಗಳು ಸ್ಥಾಪಿಸಲ್ಪಟ್ಟು ಕೆಲಸ ನಡೆಯುತ್ತಿದೆ. ಅನೇಕ ಸ್ಥಳಗಳಲ್ಲಿ ಈ ರೀತಿ ಪಂಪುಗಳಿಂದ ನೀರನ್ನೆತ್ತಿ ನೀರಾವರಿ ಸಾಗುವಳಿ ಮಾಡಲು ಅನುಕೂಲವಿದೆ. ಆದಕಾರಣ ಹೀಗೆ ನೀರಾವರಿ ಸಾಗುವಳಿಗೆ ಅವಕಾಶವನ್ನು ಕಲ್ಪಿಸಿ ಸಂಪದಭಿವೃದ್ಧಿಮಾಡುವ ಉದ್ದಿಷ್ಟದಿಂದ ಇಂಥ "ಪಂಪು" ಗಳ ಬಳಕೆಯು ಹೆಚ್ಚುವಂತೆ ಮಾಡಲು ಸಾಧ್ಯವಾದ ಪ್ರೋತ್ಸಾಹಗಳನ್ನೆಲ್ಲಾ ಕೊಡಬೇಕೆಂಬ ವಿಚಾರವು ಪರ್ಯಾಲೋಚನೆಯಲ್ಲಿದೆ. ಕೃಷ್ಣರಾಜಸಾಗರ ಅಣೆಕಟ್ಟೆಗೂ, ಹುಲಿಕೆರೆಯಲ್ಲಿರುವ ಅರ್ವಿನ್ ನಾಲಾ ಸುರಂಗ ಮಾರ್ಗಕ್ಕೂ, ಮಧ್ಯದಲ್ಲಿರುವ ಪ್ರದೇಶದಲ್ಲಿ ಇಂಥ ಪಂಪುಗಳನ್ನಿಡಿಸಿಕೊಡಬೇಕೆಂಬ ಯೋಚನೆಯಿದೆ. ಅವುಗಳಿಂದ ನೀರನ್ನೆತ್ತಿ ತೋಟಗಳನ್ನು ಏರ್ಪಡಿಸಿಕೊಂಡು ಬಾಗಾಯಿತು ಸಾಗುವಳಿ ಅವಕಾಶವನ್ನು ಕಲ್ಪಿಸಬೇಕೆಂಬುದೇ ಅದರ ಉದ್ದೇಶ. ಹೀಗೆ ಸಾಗುವಳಿ ಮಾಡುವ ವಿಧಾನವನ್ನು ಜನಗಳಿಗೆ ತೋರಿಸುವುದಕ್ಕಾಗಿ ಮಾದರಿಯಂತೆ ಒಂದು ತೋಟವನ್ನು ಏರ್ಪಡಿಸಬೇಕೆಂದು ಅಪ್ಪಣೆ ಮಾಡಲಾಗಿದೆ.

1929-30ನೆಯ ಸಾಲಿನ ಲೆಕ್ಕಗಳು.

1929-30ನೆಯ ಸಾಲಿನ ಕಚ್ಚಾ ಲೆಕ್ಕಗಳು ಈಗ ಸಿದ್ಧವಾಗಿವೆ. ಆ ಸಾಲಿನ ತಿದ್ದುಪಾಟಾದ ಅಂದಾಜಿನ ವಿಷಯವಾಗಿ ಕಳೆದ ಜೂನ್ ತಿಂಗಳಿನ ಅಧಿವೇಶನದಲ್ಲೇ ವಿವರಗಳನ್ನು ತಮ್ಮ ಅವಗಾಹನೆಗೆ ತರಲಾಗಿದ್ದಿತು. ಆ ನಿರೀಕ್ಷೆಗಳು ಎಷ್ಟರಮಟ್ಟಿಗೆ ನೆರವೇರಿರುತ್ತವೆಂಬುದನ್ನು ಸಂಕ್ಷೇಪವಾಗಿ ಈಗ ವಿವರಿಸುವೆನು.

ಈ ಅಂದಾಜಿನ ಮೇರೆಗೆ ಹುಟ್ಟುವಳಿಯೂ, ಹುಟ್ಟುವಳಿಗೆ ಖರ್ಚುಬೀಳತಕ್ಕ ವೆಚ್ಚವೂ, ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದ ದಕ್ಕಿಂತಲೂ ಸುಮಾರು 3 ಲಕ್ಷ ರೂಪಾಯಿಗಳಷ್ಟು ಹೆಚ್ಚುವುವೆಂದೂ ಒಟ್ಟಿನಲ್ಲಿ ವೆಚ್ಚವು ಕಳೆದು 30,000 ರೂಪಾಯಿಗಳ ಮಿಗುತಾಯವು ಕಂಡುಬರುವುದೆಂದೂ ಭಾವಿಸಲಾಗಿದ್ದಿತು. ಆಯವ್ಯಯಗಳು ಸಮತೂಕದಲ್ಲಿರುವಂತೆ ಮಾಡಲು ನಮಗೆ ಸಾಧ್ಯವಾಯಿತೆಂದು ತಿಳಿಸಲು ಸಂತೋಷಿಸುತ್ತೇನೆ. ಕಳೆದ ಸಾಲಿನ ಒಟ್ಟು ಹುಟ್ಟುವಳಿಯು 375.36 ಲಕ್ಷ ರೂಪಾಯಿಗಳಾಗಿದ್ದಿತು, ಎಂದರೆ ಬಡ್ಜೆಟ್ ಅಂದಾಜಿಗಿಂತಲೂ $4\frac{1}{2}$ ಲಕ್ಷ ರೂಪಾಯಿಗಳಷ್ಟು ಅಧಿಕವಾಗಿಯೂ, ತಿದ್ದುಪಾಟಾದ ಅಂದಾಜಿಗಿಂತಲೂ $1\frac{1}{2}$ ಲಕ್ಷ ರೂಪಾಯಿಗಳಷ್ಟು ಅಧಿಕವಾಗಿಯೂ, ಇದ್ದಿತು. ಈ ಅಧಿಕ್ಯಕ್ಕೆ ಎಕ್ಸೈಜು, ಬೆಂಗಳೂರು ದಂಡಿನ ಹುಟ್ಟುವಳಿ, ಬಡ್ಡಿ, ರಸ್ತೆಗಳು, ಮತ್ತು ವಿದ್ಯುಚ್ಛಕ್ತಿಯ ಕಾಮಗಾರಿಗಳು, ಈ ಬಾಬುಗಳಲ್ಲಿ ಹೆಚ್ಚು ಹುಟ್ಟುವಳಿಯು ಬಂದುದೇ ಮುಖ್ಯ ಕಾರಣವಾಗಿದೆ.

ಬಡ್ಡಿಯ ಬಾಬಿನಿಂದ 9.14 ಲಕ್ಷ ರೂಪಾಯಿಗಳು ಬರುವುವೆಂದು ಬಡ್ಜೆಟ್ ಅಂದಾಜುಗಳಲ್ಲಿಯೂ 10.14 ಲಕ್ಷ ರೂಪಾಯಿಗಳು ಬರುವುವೆಂದು ತಿದ್ದುಪಾಟಾದ ಅಂದಾಜುಗಳಲ್ಲಿಯೂ ನಿರೀಕ್ಷಿಸಲಾಗಿದ್ದಿತು. ಆದರೆ ವಾಸ್ತವಿಕ ಲೆಕ್ಕಗಳ ಮೇರೆಗೆ ಈ ಬಾಬಿನಿಂದ 16.36 ಲಕ್ಷ ರೂಪಾಯಿಗಳು ಬಂದಿವೆ. ಶೇಕಡ 7 ರಂತೆ ಬಡ್ಡಿಯುಳ್ಳ ತೀರುವೆಯ ನಿಧಿಯಿಂದ (ಸಿಂಕಿಂಗ್ ಫಂಡಿನಿಂದ) ಬಡ್ಡಿಯ ರೂಪದಲ್ಲಿ ಸುಮಾರು 6 ಲಕ್ಷ ರೂಪಾಯಿಗಳು ಬಂದುದೇ, ಈ ಅಧಿಕ್ಯಕ್ಕೆ ಮುಖ್ಯ ಕಾರಣವಾಗಿದೆ. ಈ ಸಾಲಪತ್ರಗಳು ಸ್ವಲ್ಪಮಟ್ಟಿಗೆ ಪರಿವರ್ತನೆಯಾಗಿವೆ. ಎಂದರೆ, ಈ ಸಾಲದ ಪತ್ರಗಳನ್ನು ಕೊಂಡುಕೊಂಡಿದ್ದವರಲ್ಲಿ ಕೆಲವರು ತಮ್ಮ ಪತ್ರಗಳಿಗೆ ಬದಲಾಗಿ ಹೊಸ ಸಾಲದ ಪತ್ರಗಳನ್ನು ತೆಗೆದುಕೊಂಡಿದ್ದಾರೆ. ಹೀಗೆ ಪರಿವರ್ತನವಾದ ಮೊಬಲಗನ್ನು ಬಿಟ್ಟು ಉಳಿದ ಮೊಬಲಗನ್ನು ಹೊಸ ಸಾಲಗಳಿಗೆ ಬರುವ ನಗದು ಹಣಗಳಿಂದ ತೀರಿಸಲಾಗುತ್ತದೆ. ಮುಂದೆ ಈ ಹೊಸ ಸಾಲವನ್ನು ತೀರಿಸಲು ಅನುಕೂಲವಾಗುವಂತೆ ಹೊಸ ತೀರುವೆಯ ನಿಧಿಯೊಂದನ್ನು ಏರ್ಪಡಿಸಲಾಗುವುದು. ಆದಕಾರಣ, ಹಳೆಯ ಸಾಲವನ್ನು ತೀರಿಸುವುದಕ್ಕಾಗಿ ಏರ್ಪಡಿಸಿದ್ದ ನಿಧಿಯು ಇತರ ಬಾಬುಗಳಿಗೆ ಸಿದ್ಧವಾಗಿ ಒದಗತಕ್ಕದ್ದಾಗಿದೆ. ಚಾಲ್ತಿ ದೇಣಿಗಳ ಸಲುವಾಗಿ ಯಾವಾಗ ಬೇಕಾದರೂ ನಗದಿಗೆ ಪರಿವರ್ತನಗೊಳಿಸಬಹುದಾದ ರೂಪದಲ್ಲಿ ಶೇಖರಿಸಿಟ್ಟಿರುವ ಮೊತ್ತವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಆ ನಿಧಿಯ ಸೆಕ್ಯೂರಿಟಿಗಳನ್ನು ಉಪಯೋಗಿಸಿಕೊಳ್ಳಲಾಗುವುದು.

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಕಳೆದ ಸಾಲಿನ ಆಡಳಿತದಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ನಷ್ಟವುಂಟಾಗಬಹುದೆಂದು ಕಳೆದ ಜೂನ್ ತಿಂಗಳಿನ ಅಧಿವೇಶನದಲ್ಲಿ ತಿಳಿಸಲಾಗಿದ್ದಿತು. ಮುಖ್ಯವಾಗಿ ಅಲ್ಲಿ ತಯಾರಾಗುವ ಸರಕುಗಳ ಧಾರಣೆಯು ಮತ್ತಷ್ಟು ತಗ್ಗಿದುದರಿಂದ ಆ ಸಾಲಿನ ಆಡಳಿತದಿಂದ $1\frac{1}{2}$ ಲಕ್ಷ ರೂಪಾಯಿಗಳ ನಷ್ಟವು ಬಂದಿತು. ಆ ಸಾಲಿನ ಒಟ್ಟು ಹುಟ್ಟುವಳಿಗಳಿಂದ ಈ ನಷ್ಟವನ್ನು ಭರ್ತಿಮಾಡುವುದು ಸಾಧ್ಯವಾಗದಿದ್ದಕಾರಣ, ಇದನ್ನು ಅಮಾನತ್ತು ಲೆಕ್ಕದಲ್ಲಿ ಇಟ್ಟಿದ್ದು, ಕೂಡಿದಷ್ಟು ಶೀಘ್ರವಾಗಿ ಮೊಬಲಗು ಭರ್ತಿಯಿಂದ ಸರಿಪಡಿಸಿಕೊಳ್ಳತಕ್ಕದೆಂದು ನಿರ್ಧರಿಸಲಾಗಿದೆ.

ಹುಟ್ಟುವಳಿಗೆ ಖರ್ಚುಬೀಳತಕ್ಕ ವೆಚ್ಚವು ಒಟ್ಟಿನಲ್ಲಿ 373.51 ಲಕ್ಷ ರೂಪಾಯಿಗಳಾಗುವುವೆಂದು ತಿದ್ದುಪಾಟಾದ ಅಂದಾಜುಗಳಲ್ಲಿ ನಿರೀಕ್ಷಿಸಲಾಗಿದ್ದಿತು. ಆದರೆ ವಾಸ್ತವಿಕ ಲೆಕ್ಕಗಳ ಮೇರೆಗೆ ಈ ಮೊಬಲಗು 375.14 ಲಕ್ಷ ರೂಪಾಯಿಗಳಾಯಿತು ಎಂದರೆ ಸುಮಾರು 1.63 ಲಕ್ಷ ರೂಪಾಯಿಗಳಷ್ಟು ಹೆಚ್ಚಾದಂತಾಯಿತು. ಈ ಅಧಿಕ್ಯಕ್ಕೆ, ನಾನಾ ಬಾಬುಗಳಲ್ಲಿಯೂ ವೆಚ್ಚವು ಸ್ವಲ್ಪಮಟ್ಟಿಗೆ ಹೆಚ್ಚಿದುದೇ ಕಾರಣ.

1929-30ನೆಯ ಸಾಲಿನ ಒಟ್ಟು ಮೂಲಧನದ ವೆಚ್ಚವು 91.91 ಲಕ್ಷ ರೂಪಾಯಿಗಳಾಗುವುದೆಂದು ತಿದ್ದುಪಾಟಾದ ಅಂದಾಜುಗಳಲ್ಲಿ ನಿರೀಕ್ಷಿಸಿದ್ದೆವು. ವಾಸ್ತವಿಕ ಲೆಕ್ಕಗಳ ಮೇರೆಗೆ ಈ ವೆಚ್ಚವು 78.22 ಲಕ್ಷ ರೂಪಾಯಿಗಳು ಮಾತ್ರವೇ ಆಯಿತು.

ಜಮೀನು ಕಂದಾಯ.

1929-30 ನೆಯ ಸಾಲಿನಲ್ಲಿ ಸುಮಾರು ಮುಕ್ಕಾಲು ಲಕ್ಷ ಎಕರೆಗಳಷ್ಟು ಹೊಸ ಜಮೀನು ಸಾಗುವಳಿಗೆ ಬಂದಿತು. ಗೌರಿಬಿದನೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಸ್ವಲ್ಪಕಾಲ ದನಗಳ ಮೇವು ದೊರೆಯುವುದು ಬಹು ಕಷ್ಟವಾಗಿದ್ದಿತು. ಅಲ್ಲದೆ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆಲವು ಪ್ರದೇಶಗಳಲ್ಲಿ ಕೆರೆಗಳಲ್ಲಿಯೂ ಕಾಲುವೆಗಳಲ್ಲಿಯೂ ನೀರು ಇಲ್ಲದಿದ್ದುದರಿಂದ, ಅಲ್ಲಿ ಕೆಲವು ಜಮೀನುಗಳಿಗೆ ಅರ್ಧ ಕಂದಾಯದ ಮಾಫಿಯನ್ನು ಮಂಜೂರ್ ಮಾಡಲಾಯಿತು. ಹೀಗೆ ಮಾಫಿಬಿಡಲ್ಪಟ್ಟ ಮೊಬಲಗು 30,000 ರೂಪಾಯಿಗಳು.

ಕಾಫಿ ಮತ್ತು ತೇಯಲೆಯ ಸಾಗುವಳಿಗಾಗಿ ಜಮೀನುಗಳನ್ನು ಕೊಡುವುದಕ್ಕಾಗಿ ಏರ್ಪಟ್ಟಿದ್ದ ನಿಬಂಧನೆಗಳನ್ನು ಪ್ರಸಕ್ತ ಸಾಲಿನಲ್ಲಿ ತಿದ್ದುಪಾಟುಮಾಡಿ ಜಮೀನಿನ ಬೆಲೆಯು ಎಕರೆಯೊಂದಕ್ಕೆ 40 ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದೆಂದು ವಿಧಿಸಲಾಯಿತು. ತೇಯಲೆಯನ್ನು ಬೆಳೆಯುವ ಎಲ್ಲ ಜಮೀನುಗಳಿಗೂ ಎಕರೆಗೆ ರೂ. 1-8-0 ಯಂತೆ ಕಂದಾಯವನ್ನು ಗೊತ್ತುಮಾಡಲಾಗಿದೆ.

ಜಮೀನು ಹಕ್ಕುಗಳ ದಾಖಲಾತಿಯ ಏರ್ಪಾಡನ್ನು ಜಾರಿಗೆ ತಂದ ಕಡೆಗಳಲ್ಲೆಲ್ಲಾ, ಆ ಏರ್ಪಾಡು ಜನರಂಜಕವಾಗಿ ಪರಿಣಮಿಸಿದೆ. ಈ ಏರ್ಪಾಡನ್ನು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಜಾರಿಗೆ ತರಬೇಕೆಂದು ಜನಗಳು ಏಕಪ್ರಕಾರವಾಗಿ ಕೇಳಿಕೊಳ್ಳುತ್ತಲಿದ್ದಾರೆ. ಆದಕಾರಣ, ಸುಮಾರು ಆರು ವರುಷಗಳ ಅವಧಿಯಲ್ಲಿ ಸಮಸ್ತ ತಾಲ್ಲೂಕುಗಳಲ್ಲಿಯೂ ಈ ಏರ್ಪಾಡನ್ನು ಜಾರಿಗೆ ತರುವಂತೆ ಒಂದು ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸಿ, ಅದರಂತೆ ಕೆಲಸಗಳನ್ನು ನಡೆಯಿಸಬೇಕೆಂದು ನಿರ್ಧರಿಸಲಾಗಿದೆ. ವ್ಯವಸಾಯಕ್ಕೆ ಸಹಾಯಕವಾದ ದನಕರುಗಳು, ನೇಗಿಲುಗಳು, ಬಂಡಿಗಳು ಮುಂತಾದುವುಗಳ ಪಂಚವಾರ್ಷಿಕ ಖಾನೇಷುಮಾರಿಯನ್ನು ಕಳೆದ ಜನವರಿ ತಿಂಗಳಿನಲ್ಲಿ ನಡೆಸಲಾಯಿತು. ಈ ಖಾನೇಷುಮಾರಿಯ ಮೇರೆಗೆ ಈ ವಿಷಯದಲ್ಲಿ ಸ್ಥಿತಿಗತಿಗಳು ಬಹುಮಟ್ಟಿಗೆ ಉತ್ತಮಪಟ್ಟು ದನಗಳ ಸಂಖ್ಯೆಯು ಈಚೆಗೆ ಹೆಚ್ಚಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ. ಅಲ್ಲದೆ ರೈತರ ಬಳಕೆಯಲ್ಲಿರುವ ನೇಗಿಲುಗಳ ಮತ್ತು ಗಾಡಿಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ.

ಪಬ್ಲಿಕ್‌ವರ್ಕ್ಸ್ ಇಲಾಖೆ.

ಈಗ್ಗೆ ಸುಮಾರು ನಾಲ್ಕು ವರ್ಷಗಳಿಂದಲೂ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕಾಗಿ ಪ್ರಬಲವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಹೊಸ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸಿ ನೆರವೇರಿಸುವ ಕೆಲಸವೂ, ಶಿಥಿಲವಾದ ಕೆರೆಗಳು ಮುಂತಾದುವುಗಳನ್ನು ಜೀರ್ಣೋದ್ಧಾರ ಮಾಡುವ ಕೆಲಸವೂ ಮತ್ತು ಅವಶ್ಯವಾದ ದುರಸ್ತಿ ಕಾಮಗಾರಿಗಳನ್ನು ಮಾಡಿಸುವ ಕೆಲಸವೂ ಪ್ರಸಕ್ತ ವರ್ಷದಲ್ಲಿ ತೃಪ್ತಿಕರವಾಗಿ ಸಾಗಿದುವು. ಪ್ರಸಕ್ತ ವರ್ಷದಲ್ಲಿ 357 ಮೈನರ್ ಕೆರೆಗಳ ದುರಸ್ತಿ ಮತ್ತು ಜೀರ್ಣೋದ್ಧಾರದ ಕಾಮಗಾರಿಗಳು ಹಿಡಿಯಲ್ಪಟ್ಟುವು. ಅವುಗಳಲ್ಲಿ 120 ಕೆರೆಗಳ ಕಾಮಗಾರಿಯು ಪೂರೈಸಿತು. ಪ್ರಸಕ್ತ ವರ್ಷದಲ್ಲಿ ಹಿಡಿದ ಭಾರೀ ಕಾಮಗಾರಿಗಳ ಪೈಕಿ ಮುಖ್ಯವಾದವುಗಳು ಯಾವುವೆಂದರೆ:—

(1) 43,000 ರೂಪಾಯಿಗಳ ವೆಚ್ಚದಲ್ಲಿ ಕೋಲಾರ್‌ಪೇಟೆ ತಾಲ್ಲೂಕು ಕೇತೊಪಳ್ಳಿಯಲ್ಲಿ ಒಂದು ಕೆರೆ.

(2) 1,96,000 ರೂಪಾಯಿಗಳ ವೆಚ್ಚದಲ್ಲಿ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ವೃಷಭಾವತೀ ನದಿಗೆ ಅಡ್ಡವಾಗಿ ಒಂದುಕೆರೆ.

(3) 2,04,000 ರೂಪಾಯಿಗಳ ವೆಚ್ಚದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ದಳವಾಯಿಕೆರೆ.

(4) 62,000 ರೂಪಾಯಿಗಳ ವೆಚ್ಚದಲ್ಲಿ ನಾಗಮಂಗಲ ತಾಲ್ಲೂಕಿನಲ್ಲಿ ಚಿಕ್ಕಯಗಟಿಕೆರೆ.

ಪ್ರಸಕ್ತವರ್ಷದಲ್ಲಿ ಕಾನಕಾನಹಳ್ಳಿ ತಾಲ್ಲೂಕಿನ ಮರಳವಾಡಿ ಕೆರೆಯ ಕಾಮಗಾರಿಯನ್ನು ಪುನಃ ಹಿಡಿಯಲಾಯಿತು. ಹುಣಸೂರು ತಾಲ್ಲೂಕಿನ ಹೈರಿಗೆ ಕೆರೆಯಿಂದ ಸಾಗುವಳಿಗೆ ನೀರು ಹಾಯಿಸುವುದಕ್ಕೂ ಪ್ರಾರಂಭಿಸಲಾಯಿತು.

ಶಿಕಾರಿಪುರ ತಾಲ್ಲೂಕಿನಲ್ಲಿ ಅಂಜನಾಪುರ ಜಲಾಶಯದ ಕಾಮಗಾರಿಯು ಬೇಗ ಬೇಗ ನಡೆಯುತ್ತಿದೆ. ಅಲ್ಲದೆ ಬಲದ ದಡದ ನಾಲೆಯ ಮೊದಲಣ ಐದು ಮೈಲಿಗಳ ಅಚ್ಚುಕಟ್ಟು ಸರ್ವೆ ಕೆಲಸಗಳೂ ಪೂರೈಸಿವೆ. ಪ್ರಸಕ್ತವರ್ಷದಲ್ಲಿ ಭದ್ರಾ ಅಣೆಕಟ್ಟಿನ ಮುಖ್ಯ [illegible] ಕಾಮಗಾರಿಯು ಪೂರೈಸಿತು. ಇದರ ಉದ್ದವು 40 ಮೈಲಿಗಳು. ಇದರಿಂದ ಹೊರಡುವ ಶಾಖಾನಾಲೆಗಳ ಪೈಕಿ ಒಟ್ಟು 25 ಮೈಲಿಗಳ ದೂರದಷ್ಟು ಕಾಮಗಾರಿಯೂ ಪೂರೈಸಿ ಪ್ರಸಕ್ತ ವರ್ಷದಲ್ಲಿ ಅವುಗಳಿಂದ ಸಾಗುವಳಿಗೆ ನೀರನ್ನೊದಗಿಸಲಾಯಿತು.

ಬೆಂಗಳೂರಿನಲ್ಲಿ ಸರ್ಕಾರಿ ಜೀವವಿಮೆಯ ಆಫೀಸಿನ ಕಟ್ಟಡ, ಹೆಬ್ಬಾಳದಲ್ಲಿ "ಸೀರಂ" ರಸವನ್ನು ತಯಾರಿಸುವ ಕಾರ್ಯಾಲಯಕ್ಕಾಗಿ ಒಂದು ಕಟ್ಟಡ, ವ್ಯವಸಾಯದ ಇಲಾಖೆಯ ಕಟ್ಟಡಗಳ ಬಡಾವಣೆ, ಮತ್ತು ಚಿಕ್ಕಮಗಳೂರಿನಲ್ಲಿಯೂ ಹಾಸನದಲ್ಲಿಯೂ ಹೊಸ ಜನರಲ್ ಆಸ್ಪತ್ರೆಗಳ ಕಟ್ಟಡಗಳು, ಇವು ಇಲಾಖೆಯವರು ಕೆಲಸ ನಡೆಸುತ್ತಿರುವ ಭಾರಿ ಕಟ್ಟಡಗಳ ಪೈಕಿ ಕೆಲವಾಗಿವೆ. ಪ್ರಸಕ್ತವರ್ಷದಲ್ಲಿ ಮೈಸೂರು ನಗರದ ಮೆಡಿಕಲ್ ಕಾಲೇಜಿನ ಕಟ್ಟಡವೂ, ಆಯುರ್ವೇದೀಯ ಕಾಲೇಜಿನ ಕಟ್ಟಡವೂ ಪೂರೈಸಿದುವು.

ತಿರುಮಕೂಡಲು ನರಸೀಪುರದ ಸಮೀಪದಲ್ಲಿ ಕಾವೇರೀನದಿಗೆ ಸೇತುವೆಯನ್ನು ಕಟ್ಟುವ ಕಾಮಗಾರಿಯು ತೃಪ್ತಿಕರವಾಗಿ ಮುಂದುವರಿಯಿತು.

ಸರ್ಕಾರದವರು ಬೆಂಗಳೂರಿಗೆ ನೀರು ಸರಬರಾಯಿ ಮಾಡಲು ಹೊಸ ಏರ್ಪಾಡೊಂದನ್ನು ಕಳೆದ ಮಾರ್ಚಿ ತಿಂಗಳಿನಲ್ಲಿ ಮಂಜೂರ್ ಮಾಡಿದರು. ಈ ಏರ್ಪಾಡಿಗೆ 50 ಲಕ್ಷ ರೂಪಾಯಿಗಳು ವೆಚ್ಚವಾಗುವುದಾಗಿ ಅಂದಾಜಾಗಿದೆ. ಈ ಕಾಮಗಾರಿಯನ್ನು ನಡೆಸುವುದಕ್ಕಾಗಿ ಒಬ್ಬರು ಎಗ್ಸಿಕ್ಯೂಟಿವ್ ಇಂಜನಿಯರವರ ಹತೋಟಿಯಲ್ಲಿ ಒಂದು ಸ್ಪೆಷಲ್ ಡಿವಿಜನನ್ನು ಏರ್ಪಡಿಸಲಾಯಿತು. ಕಳೆದ ಸಾಲಿನಲ್ಲಿ ಈ ಜಲಾಶಯವನ್ನು ಕಟ್ಟುವುದರ ಸಂಬಂಧದ ಕಾಮಗಾರಿಗಾಗಿ ಸುಮಾರು $7\frac{1}{2}$ ಲಕ್ಷ ರೂಪಾಯಿಗಳು ವೆಚ್ಚವಾದುವು. ಹುಣಸೂರಿಗೂ, ಕೋಲಾರಕ್ಕೂ ಕುಡಿಯುವ ನೀರನ್ನು ಸರಬರಾಯಿಮಾಡುವ ಕಾಮಗಾರಿಗಳು ನಡೆಯುತ್ತಿವೆ. ಫ್ರೆಂಚ್‌ರಾಕ್ಸ್‌ಗೂ, ಶ್ರೀರಂಗಪಟ್ಟಣಕ್ಕೂ ಕುಡಿಯುವ ನೀರನ್ನು ಸರಬರಾಯಿಮಾಡುವ ಏರ್ಪಾಡಿನ ಕಾರ್ಯಕ್ರಮದ ವಿವರಗಳೂ, ಪಟ್ಟಿಗಳೂ ತಯಾರಾಗುತ್ತಿವೆ.

ಕೃಷ್ಣರಾಜಸಾಗರದ ಕಾಮಗಾರಿಗಳು.

ನಾಲೆಗೆ ಸಂಬಂಧಪಟ್ಟ ಕಾಮಗಾರಿಗಳೂ ಕೃಷ್ಣರಾಜಸಾಗರದ ಕಟ್ಟೆಗೆ ಸಂಬಂಧಪಟ್ಟ ಕಾಮಗಾರಿಗಳೂ ಬಹಳ ಚೆನ್ನಾಗಿ ಮುಂದುವರಿದು ನಡೆದಿರುತ್ತವೆ. ಅರ್ವಿನ್ ನಾಲೆಯ ಸಂಬಂಧದಲ್ಲಿ ಅನೇಕ ಮೈಲಿಗಳವರೆಗೆ ಭೂಮಿಯನ್ನು ತೋಡುವ ಕೆಲಸವೂ, ಸರಿಯಾದ ಮಟ್ಟಕ್ಕೆ ತಂದು, ದಿಂಡುಕಟ್ಟುವ ಕೆಲಸವೂ ಸಂಪೂರ್ಣವಾಗಿ ಪೂರೈಸುತ್ತವೆ. ಮೊದಲನೆಯ ನಾಲ್ಕು ಮೈಲಿಗಳ ದೂರದವರೆಗೆ ನೀರು ಬಿಡುವುದಕ್ಕೆ ನಾಲೆಯು ಅರ್ಹವಾಗಿದೆಯೇ ಎಂಬುದನ್ನು ಅಜಮಾಯಿಷಿ ಮಾಡುತ್ತಾ ಇದೆ. ಈಗ ಸಿದ್ಧವಾಗಿರುವ ಈ ನಾಲ್ಕು ಮೈಲಿಗಳ ದೂರವನ್ನು ಬಿಟ್ಟು ಉಳಿದ ಭಾಗದ ನಾಲೆಯು ಚಾಲ್ತಿವರ್ಷದ ಅಖೈರಿನೊಳಗಾಗಿ ನೀರು ಬಿಡುವುದಕ್ಕೆ ಸಿದ್ಧವಾಗಬಹುದು. ಇದರಿಂದ ಆಗ್ಗೆ ಸುಮಾರು 15,000 ಎಕರೆಗಳಷ್ಟು ಜಮೀನಿಗೆ ನೀರು ಸರಬರಾಯಿಯಾಗಬಹುದಾಗಿದೆ.

ಬಂಡೆಗಳನ್ನೂ, ನೆಲವನ್ನೂ ಕೊರೆದು ಸುರಂಗಮಾರ್ಗದಲ್ಲಿ ನಾಲೆಯನ್ನು ತೆಗೆದುಕೊಂಡು ಹೋಗುವ ಕೆಲಸವೂ ಬಹು ತೃಪ್ತಿಕರವಾಗಿ ಮುಂದುವರಿದಿರುತ್ತದೆ. ಒಟ್ಟು 9,183 ಅಡಿಗಳಷ್ಟು ದೂರ ಸುರಂಗ ಹಾಕಿ ಕೊರೆಯಬೇಕಾಗಿದ್ದಿತು. ಇದರ ಪೈಕಿ, ಹಿಂದಿನ ವರ್ಷದ ಅಖೈರಿನಲ್ಲಿ, 450 ಅಡಿಗಳಷ್ಟು ದೂರವನ್ನು ಬಿಟ್ಟು ಉಳಿದ ಎಲ್ಲಾ ಭಾಗವನ್ನೂ ಕೊರೆದು ಪೂರೈಸಲಾಗಿದ್ದಿತು. ಅಲ್ಲಿಂದ ಈಚೆಗೆ ಈ 450 ಅಡಿಗಳ ದೂರವನ್ನೂ ಕೊರೆದು ಪೂರೈಸಲಾಯಿತು. ನಾನಾ ಕಡೆಗಳಿಂದ ಕೊರೆದು ತೋಡಿದ ನಾಲೆಯ ಭಾಗಗಳು ಒಂದಕ್ಕೊಂದಕ್ಕೆ ಕರಾರುವಾಕ್ಕಾಗಿ ಹೊಂದಿಕೊಂಡು ಸೇರಿ ಸಂಯೋಗಿಸಿರುತ್ತವೆ. ಈ ಸುರಂಗದ ನಾಲೆಗೆ ಸಂಬಂಧಪಟ್ಟ ಸಮಸ್ತ ಕಾಮಗಾರಿಯೂ ನಾಲೆಗೆ ಒಳಭಾಗದಲ್ಲಿ ಗಾರೆ ಮತ್ತು ಸಿಮೆಂಟಿನಿಂದ ಲೇಪ ಹಾಕುವ ಕಾಮಗಾರಿಯೂ ಸಹ, ಮುಂದಿನ ಏಪ್ರಿಲ್ ತಿಂಗಳ ಸುಮಾರಿನಲ್ಲಿ ಪೂರೈಸಬಹುದೆಂಬ ನಿರೀಕ್ಷೆಯಿದೆ.

ಕಟ್ಟೆಯಲ್ಲಿ ಉದ್ದಿಷ್ಟವಾದ ಮಟ್ಟಕ್ಕಿಂತ ಹೆಚ್ಚಾಗಿ ನೀರು ನಿಂತರೆ ಹೆಚ್ಚಾದ ನೀರು ಹೊರಗೆ ಹರಿದು ಹೋಗುವುದಕ್ಕಾಗಿ, ತಾವಾಗಿಯೇ ಬಾಗಿಲುಗಳು ತೆರೆದು, ಆ ಬಳಿಕ ಮತ್ತೆ ಬಾಗಿಲುಗಳು ಮುಚ್ಚಿಕೊಳ್ಳುವ ತೂಬಿನ ಯಂತ್ರಗಳನ್ನು ಕೋಡಿಯ ಕಟ್ಟೆಯ ಮೇಲೆ ಸ್ಥಾಪಿಸುವುದಕ್ಕೆ ಅವಶ್ಯವಾದ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿದೆ. ಈ ಕೆಲಸವೂ ಪೂರೈಸಿದರೆ, ಅಣೆಕಟ್ಟೆಯಲ್ಲಿ ನದಿಯ ಪಾತ್ರದ ಮಟ್ಟದಿಂದ 124 ಅಡಿಗಳ ಎತ್ತರದ ವರೆಗೆ ನೀರನ್ನು ದಾಸ್ತಾನುಮಾಡಿ ಇಡುವುದಕ್ಕೆ ಅವಶ್ಯಕವಾದ ಸಮಸ್ತ ಕಾಮಗಾರಿಯೂ ಮುಗಿದಂತಾಗುವುದು. ಈ ತೂಬಿನ ಯಂತ್ರಗಳನ್ನು ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಒದಗಿಸಿಕೊಳ್ಳುವಂತೆ ಹುಕುಂ ಮಾಡಿರುವ ಸಂಗತಿಯನ್ನೂ ಇಲ್ಲಿ ತಿಳಿಸಬಹುದಾಗಿದೆ. ಈ ವಿಧದ ತೂಬಿನ ಯಂತ್ರಗಳನ್ನು ಎರಕಹೊಯ್ದು ತಯಾರುಮಾಡಿ ಮಾದರಿಗಾಗಿ ಭದ್ರಾವತಿ ಕಾರ್ಖಾನೆಯವರು ಕಳುಹಿಸಿರುತ್ತಾರೆ. ಅವರು ಹೀಗೆ ಮಾದರಿಗಾಗಿ ಕಳುಹಿಸಿರುವ ತೂಬಿನ ಯಂತ್ರಗಳು ತೃಪ್ತಿಕರವಾಗಿವೆಯೆಂದು ಈ ವಿಚಾರಗಳಲ್ಲಿ ಸಮರ್ಥರಾದವರು ಅಭಿಪ್ರಾಯಪಟ್ಟಿದ್ದಾರೆ.

ಭದ್ರಾವತಿ ಕಬ್ಬಿಣದ ಕಾರ್ಖಾನೆ.

ಬೀಡು ಕಬ್ಬಿಣದ ಧಾರಣೆಯೂ, ಕೊಳಾಯಿಗಳ ಧಾರಣೆಯೂ, ಕಡಿಮೆಯಾಗುತ್ತಲೇ ಬಂದಿತು. ಇದ್ದಿಲಿಗಾಗಿ ಸೌದೆಯನ್ನು ಭಟ್ಟಿ ಇಳಿಸುವುದರಲ್ಲಿ ದೊರೆಯುವ ಉಪವಸ್ತುಗಳಲ್ಲಿ ಮುಖ್ಯವಾದ "ಲೈಂ ಅಸಿಟೇಟ್" ಎಂಬುದರ ಧಾರಣೆಯೂ ಇಳಿದುಹೋಯಿತು. ಈ ಎರಡು ಕಾರಣಗಳಿಗಾಗಿ ಕಾರ್ಖಾನೆಯ ಕೆಲಸದಿಂದ ಈ ವರ್ಷ ಸಮರ್ಪಕವಾದ ಫಲಿತಾಂಶವುಂಟಾಗಲಿಲ್ಲ. ಅಮೇರಿಕಾ ದೇಶದಲ್ಲಿ ಸಂಭವಿಸಿದ ಹಣ ಕಾಸಿನ ವಿಚಾರವಾದ ಮುಗ್ಗಟ್ಟಿನಿಂದ "ಲೈಂ ಅಸಿಟೇಟಿಗೆ" ಗಿರಾಕಿಯು 1929 ನೇ ನವೆಂಬರ್ ತಿಂಗಳಿನಲ್ಲಿ ಬಹಳ ಕಡಿಮೆಯಾಯಿತು. ಮರದ ಭಟ್ಟಿ ಇಲ್ಲದೆಯೇ ಇತರ ಕೃತಕವಿಧಾನಗಳಿಂದಲೇ "ಅಸಿಟಿಕ್ ಆಸಿಡ್" ಎಂಬ ದ್ರಾವಕವನ್ನು ತಯಾರಿಸುವ ವಿಧಾನವನ್ನು ಹೊರಗಿನವರು ಕಂಡುಹಿಡಿದರು. ಈ ಪೈಪೋಟಿಯ ದೆಸೆಯಿಂದ ಗಿರಾಕಿಯೂ, ಧಾರಣೆಯೂ ಈಚೆಗೆ ಇನ್ನೂ ಕಡಿಮೆಯಾಗಿ ಹೋಗಿವೆ. ಈ ಧಾರಣೆಯು ಬಿದ್ದುಹೋದುದರಿಂದ ಕಾರ್ಖಾನೆಯಲ್ಲಿ ದಾಸ್ತಾನಿರುವ ಸಮಸ್ತ ಪದಾರ್ಥಗಳ ಬೆಲೆಯನ್ನೂ ಕಡಿಮೆ ಹಾಕಬೇಕಾಯಿತು. ಸೌದೆಯ ಭಟ್ಟಿಯ "ರಿಟಾರ್ಟ್" ಗಳನ್ನು ದುರಸ್ತು ಮಾಡಬೇಕಾಗಿ ಬಂದುದರಿಂದ ಕಾರ್ಖಾನೆಯ ವೆಚ್ಚವು ಬಹಳ ಹೆಚ್ಚಿತು. ಈ ಕಾರಣಗಳ ದೆಸೆಯಿಂದ ಈ ಕಾರ್ಖಾನೆಯ ಆಡಳಿತದಲ್ಲಿ ಪ್ರಸಕ್ತ ವರ್ಷ ಒಂದೂವರೆ ಲಕ್ಷ ರೂಪಾಯಿಗಳ ನಷ್ಟವುಂಟಾಯಿತು.

[6 ನೆಯ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ

೧೯೩೦ನೇ ಅಕ್ಟೋಬರ್ ತಾ|| ೨೦ನೆಯ ಸೋಮವಾರ

ಹರಿಹರದಲ್ಲಿ ನೆರವೇರುವ ಹಿಂಸಾಯಜ್ಞ.

ಹರಿಹರಕ್ಷೇತ್ರದ ಹರಿಹರೇಶ್ವರನ ದೇವಾಲಯದಲ್ಲಿ ಕೆಲಜನ ಸ್ಮಾರ್ತರು, ಒಂದು ಯಜ್ಞವನ್ನಾರಂಭಿಸಿ ಆ ಯಜ್ಞದಲ್ಲಿ ಇಪ್ಪತ್ತೇಳು ಆಡುಗಳನ್ನು ಬಲಿಗೊಡಲು ಸಿದ್ಧರಾಗಿ ಯಜ್ಞಕ್ಕೆ ಆರಂಭಮಾಡಿರುವುದನ್ನು ನೋಡಿದರೆ ಯಾವ ಅಹಿಂಸಾವ್ರತಧಾರಿಯ ಹೃದಯವು ಕುದಿಯಲಿಕ್ಕಿಲ್ಲ? ಹಿಂಸಾಕಾರಕವಾದ ಈ ಅಜಯಜ್ಞವೆಂಬ ತಪ್ತಶಲಾಕೆಯು ಅಹಿಂಸಾದೀಕ್ಷೆಯನ್ನು ಹೊಂದಿರುವ ಪ್ರಾಣಿದಯಾಸಂಘದವರ ಕರ್ಣಕುಹರವನ್ನು ಪ್ರವೇಶಿಸಿ ಕೋಮಲವಾದ ಮನಃಪುಷ್ಪವನ್ನು ಕೊರಗಿಸಿಬಿಡುವುದರಿಂದ ಈ ಭಯಂಕರ ಹಿಂಸಾಮಯಯಜ್ಞವನ್ನು ತಪ್ಪಿಸಲು ನೂರಾರು ಜನ ಸ್ವಯಂಸೇವಕರು ಹರಿಹರಕ್ಕೆ ಹೋಗಿ ತಮ್ಮ ದೇಹತ್ಯಾಗವಾದರೂ ಚಿಂತೆಯಿಲ್ಲ, ಈ ಹಿಂಸಾಮಯ ಕಾರ್ಯವನ್ನು ನಡೆಯಗೊಡುವದಿಲ್ಲವೆಂದು ಸತ್ಯಾಗ್ರಹವನ್ನು ಹೂಡಿರುತ್ತಾರೆಂದೂ, ಹರಿಹರಕ್ಷೇತ್ರವಾಸಿಗಳಾದ ಅನೇಕ ಜನಗಳು ಸಾರ್ವಜನೀನವಾದ ಈ ಪವಿತ್ರದೇವಾಲಯದಲ್ಲಿ ಇಂಥ ಹಿಂಸಾಕಾರ್ಯವನ್ನು ಮಾಡಲಾಗದಂತೆ ನಿರೋಧಿಸಿರುತ್ತಾರೆಂದೂ ತಿಳಿದುಬರುವದಲ್ಲದೆ ಎಲ್ಲೆಲ್ಲಿಯೂ ಪ್ರಸಿದ್ಧಪತ್ರಿಕೆಗಳು ಹಂಚಲ್ಪಟ್ಟಿವೆ. ಈ ಯಜ್ಞಕಾರ್ಯಕ್ಕಾಗಿ ಅನೇಕ ಸ್ಥಲಗಳಿಂದ ಮಹಾಮಹೋಪಾಧ್ಯಾಯ ಪಂಡಿತರು ಆಗಮಿಸುವರಂತೆ! ಸದ್ಯಃ ನಮ್ಮ ಭಾರತಜನಾಂಗವೇ ಅಹಿಂಸಾಮಯ ಸತ್ಯಾಗ್ರಹವೆಂಬ ಮಹಾಯಜ್ಞವನ್ನು ಪಕ್ರಮಿಸಿರುವದಷ್ಟೆ! ಪರಮಪವಿತ್ರವೂ, ಭಗವತ್ಪ್ರೀತಿಕರವೂ ದೇಶಾಭ್ಯುದಯಕರವೂ ಆದ ಅಹಿಂಸಾಯಜ್ಞಕಾರ್ಯದಲ್ಲಿ ಭಾಗವಹಿಸುವದನ್ನು ಬಿಟ್ಟು ಲೋಕವಿರುದ್ಧವೂ, ಹಿಂಸಾಮಯವೂ, ಅಲ್ಪಫಲದಾಯಕವೂ, ಕ್ಷಣಿಕವೂ, ಕ್ಷಣಮಾತ್ರರುಚಿಕರವೂ ಆದ ಯಜ್ಞದಲ್ಲಿ ಭಾಗವಹಿಸುವುದು ಪಂಡಿತಜನಗಳಿಗೆ ಎಂದೂ ಭೂಷಣವೆನಿಸದು. ಸಮಯಾಸಮಯಗಳನ್ನರಿತು ಜಗತ್ತಿಗೆಲ್ಲಾ ಯಾವ ಕಾರ್ಯವು ಮಾನ್ಯವೆಂದು ತೋರುವುದೋ ಅಂಥ ಕಾರ್ಯವನ್ನು ಮಾಡಿ ಕೀರ್ತಿಪಡೆಯುವುದನ್ನು ಬಿಟ್ಟು ಶಾಸ್ತ್ರೀಯವಾಗಿದ್ದರೂ ಬಹುಜನಕ್ಕೆ ಸಮ್ಮತವಿಲ್ಲದ ಕಾರ್ಯವನ್ನು ಮಾಡುವುದು ನೀತಿವಿರೋಧವಾಗುತ್ತದೆ. ದೇಶೋದ್ಧಾರಕ್ಕಾಗಿ ಗಂಧದ ಕೊರಡದಂತೆ ತಮ್ಮ ದೇಹವನ್ನು ಸವೆಸುತ್ತಿರುವ ಮಹಾತ್ಮಾ ಗಾಂಧಿಯವರು ಆರಂಭಿಸಿರುವ ಅಹಿಂಸಾಮಯಯಜ್ಞದಲ್ಲಿ ಪ್ರತಿಯೊಬ್ಬರು ಭಾಗವನ್ನು ವಹಿಸಲು ತವಕಪಡುತ್ತಿರಲು, ಇದಕ್ಕೆ ವಿಪರೀತವಾಗಿ ಹಿಂಸಾಮಯ ಯಜ್ಞವನ್ನು ಆರಂಭಿಸಿರುವವರ ಬುದ್ಧಿವೈಭವವನ್ನು ಎಷ್ಟು ಕೊಂಡಾಡಿದರೂ ತೀರದಾಗಿದೆ. ಮಹಾತ್ಮರು ಅಹಿಂಸಾಮಯ ಸತ್ಯಾಗ್ರಹದಿಂದ ಭಾರತೀಯರನ್ನೆಲ್ಲಾ ಉದ್ಧರಿಸುವುದಕ್ಕಾಗಿ ಕಾರಾಗೃಹವೆಂಬ ಯೋಗಮಂಟಪದಲ್ಲಿ ತಕಲಿಯೆಂಬ ಸುದರ್ಶನವನ್ನು ತಿರುಗಿಸುತ್ತ ತದೇಕಧ್ಯಾನಾಸಕ್ತರಾಗಿ ಕುಳಿತಿರುವ ಸಮಯದಲ್ಲಿ ಸುಧಾರಿಸಿದ ಜನಾಂಗವು ಈ ರೀತಿಯಾಗಿ ಮಾಡುತ್ತಿರುವ ಹಿಂಸಾಮಯ ಯಜ್ಞಾರಂಭವನ್ನು ಕೇಳಿ ದುಃಖದಿಂದೊಡಗೂಡಿ ಎಷ್ಟು ಉಪವಾಸವ್ರತಗಳನ್ನಾಚರಿಸುವರೋ ಹೇಳತೀರದಾಗಿದೆ. "ಮಾ ಹಿಂಸ್ಯಾತ್ ಸರ್ವಾಭೂತಾನಿ" ಎಂಬ ವೇದವಾಕ್ಯವನ್ನು ಹಿಂದಕ್ಕೆ ತಳ್ಳಿ ಧಗಧಗಿಸುತ್ತಿರುವ ಅಗ್ನಿಕುಂಡದಲ್ಲಿ ಒಂದಲ್ಲ ಎರಡಲ್ಲ ಇಪ್ಪತ್ತೇಳು ಮೇಕೆಗಳನ್ನು ಬಲಾತ್ಕಾರವಾಗಿ ಗುದ್ದಿ ಗುದ್ದಿ ಕೊಂದು ಅಗ್ನಿಕುಂಡದಲ್ಲಿ ಚೆಲ್ಲಿ ಮಿಕ್ಕ ಮಾಂಸಶೇಷವನ್ನು ಸೇವಿಸಲಿಚ್ಛಿಸಿದರ ಇನ್ನು ಸ್ವಾಭಾವಿಕ ಹಿಂಸಾಕಾರಿಗಳಾದ ಜನಗಳಿಗೆ ಇದರಿಂದ ಎಷ್ಟು ಅವಕಾಶ ಕೊಟ್ಟಂತಾಗುವುದೆಂಬುದನ್ನು ಈ ಪಂಡಿತ ಪ್ರಕಾಂಡರು ಏಕೆ ಯೋಚಿಸಬಾರದು? ಭಾರತೀಯರಿಗೆ ವಿಷಮಸಮಸ್ಯೆಯುಂಟಾಗಿರುವಲ್ಲಿ ಪರಮಾಸ್ತಿಕರೆನಿಸಿಕೊಂಡ ಈ ಸ್ಮಾರ್ತರಲ್ಲಿಯ ಕೆಲ ಜನರು ಹೀಗೆ ಮಾಡುವದನ್ನು ನೋಡಿದರೆ ಯಾರಿಗೆ ತಾನೇ ಆಶ್ಚರ್ಯವಾಗಲಿಕ್ಕಿಲ್ಲ? ಇವರು ಹಿಂಸಾಮಯ ಯಜ್ಞವನ್ನು ಮಾಡುವದರಿಂದ "ವರ್ಜಯೇನ್ಮಧುಮಾಂಸಂ" ಎಂಬ ಮನುವಾಕ್ಯವನ್ನು ಮುಂದುವರಿಸಿ ಹಿಂಸಾಮಯರಾದ ಕ್ರೂರಾತ್ಮರಮೇಲೆ ಪ್ರತಿಭಟಿಸುವ ಇವರ ಅರ್ಭಟೀವೃತ್ತಿಗೆ ತಿಲಾಂಜಲಿಯನ್ನು ಕೊಟ್ಟಂತಾಯಿತು. ಇದು ತನ್ನೆಡೆಯಲ್ಲಿ ಕತ್ತೆಯು ಸತ್ತುಬಿದ್ದಿರುವಲ್ಲಿ ಇನ್ನೊಬ್ಬರೆಡೆಯಲ್ಲಿ ಬಿದ್ದಿರುವ ನೊಣವನ್ನು ಆರಿಸಲಿಕ್ಕೆ ಹೋದನೆಂಬ ಗಾಥಾವಾಕ್ಯವನ್ನನುಕರಿಸಿದಂತಾಗುವುದಿಲ್ಲವೆ? ಒಂದುಪಕ್ಷ ಪಶುವಿಶಸನ ಪೂರ್ವಕವಾದ ಯಜ್ಞಗಳು ಕೆಲ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದ್ದರೆ ಅಂಥ ವಾಕ್ಯಗಳಿಗೆ ತಮ್ಮ ವಿದ್ವದ್ಬಲದಿಂದ ಜೀವಪಶುವೆಂಬ ಅರ್ಥಕ್ಕೆ ಸಂಕೋಚಮಾಡಿ ಅಂತಶ್ಶತ್ರುವೆಂಬ ಪಶುವೆಂದು ಅರ್ಥಮಾಡಿ ಅಂಥ ಪಶುಗಳನ್ನು ನಿರ್ಭಯದಿಂದ ವಧಿಸಿ ದೇವತಾರಾಧನೆಯನ್ನು ಮಾಡುತ್ತಿದ್ದರೆ ಸರ್ವಸಾಕ್ಷಿಯಾದ ಪರಮೇಶ್ವರನು ತುಷ್ಟನಾಗಿ ಪರಮಪದವಿಯನ್ನು ಕೊಡಲು ಸಿದ್ಧನಿರುವನು. ವೈಷ್ಣವರು (ಮಾಧ್ವರು) ಅಂಥ ಪಶುವಿಶಸನ ಯಜ್ಞಪ್ರಕರಣದಲ್ಲಿ ವಿಧಿಸುವ ಪಶುವಧೆಗೆ ಪಿಷ್ಟಪಶುವಧೆಯೆಂದು ಅರ್ಥಮಾಡಿ ಅದರಂತೆ ಆಚರಿಸಿ ಲೋಕಮಾನ್ಯರಾಗಿರುವುದನ್ನು ಇವರು ಅರಿಯರೇ? ಅನೇ ವೇದಶಾಸ್ತ್ರಗಳನ್ನು ಅಂಗೀಕರಿಸುವ ವೀರಶೈವರು "ತಪಃಕರ್ಮಜಪೋಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಂ | ಅನೇನ ಪಂಚಯಜ್ಞೇನ ಯಃ ಪೂಜಯತಿ ಶಂಕರಂ" ಎಂಬ ಶಾಸ್ತ್ರೋಕ್ತಿಯಂತೆ ಪಶುಕರ್ಮಗಳನ್ನು ತ್ಯಜಿಸಿ ಪತಿಕರ್ಮಗಳನ್ನಾಚರಿಸುವುದಿಲ್ಲವೇ? ಇಂಥ ಸೌಮ್ಯಗಳಾದ ಯಜ್ಞಗಳಲ್ಲಿ ಮನಸ್ಸನ್ನಿಡದೆ ಯಾವ ವಿಧವಾದ ಅಪರಾಧವನ್ನೂ ಮಾಡದ, ವ್ಯಾಘ್ರಾದಿ ಘಾತುಕಮೃಗಗಳಂತೆ ಕ್ರೂರಸ್ವಭಾವವನ್ನು ಹೊಂದದ, ಈಶ್ವರನಿರ್ಮಿತವಾದ ಕಾಡಿನಲ್ಲಿ ಬೆಳೆದುದನ್ನು ತಿಂದು ನದಿಗಳ ನೀರನ್ನು ಕುಡಿದು ಕ್ಷೇತ್ರಾಭಿವೃದ್ಧಿಸಾಧಕವಾದ ಗೊಬ್ಬರವನ್ನೂ ಹಾಲನ್ನೂ ಕೊಡುವ ಕೋಮಲಸ್ವಭಾವದ ಆಡುಗಳನ್ನು ಬಲಾತ್ಕಾರದಿಂದ ಅಗ್ನಿಕುಂಡಕ್ಕೆ ದರದರನೆ ಎಳೆದುಕೊಂಡೊಯ್ದು ಗುದ್ದಿ ಗುದ್ದಿ ಕೊಲ್ಲುತ್ತಿರುವ ಆಡುಗಳ ದೀನಸ್ಥಿತಿಯನ್ನು ಅಹಿಂಸಾವಾದಿಗಳು ಕಣ್ಣಿನಿಂದ ನೋಡಿ ಸುಮ್ಮನಿರ್ದಾರೇ? ಆದ್ದರಿಂದ ಸ್ವಯಂಸೇವಕರು ಈ ಪಶುಯಾಗದಲ್ಲಿ ಸತ್ಯಾಗ್ರಹವನ್ನು ಹೂಡಿರುವುದು ಅತ್ಯಂತ ಯೋಗ್ಯವೆಂದು ಇಡೀ ಜಗತ್ತೇ ಕೊಂಡಾಡುತ್ತಿರುವುದು. ಹಳ್ಳಿಗಳಲ್ಲಿ ಗ್ರಾಮ್ಯಜನರು ದೇವೀಜಾತ್ರೆಯಲ್ಲಿ ಕುರಿಕೋಳಿಗಳನ್ನು ಕಡಿದು ದೇವಿಗೆ ಬಲಿಗೊಡುವರೆಂಬ ವರ್ತಮಾನವನ್ನು ಪ್ರಾಣಿದಯಾಸಂಘದವರು ಕೇಳಿ ಸಂಕಟಗೊಂಡು ಆಕ್ಷಣವೇ ಅಲ್ಲಿಗೆ ಹೋಗಿ ಹಿಂಸಕರ ಕೈಕಾಲುಗಳನ್ನಾದರೂ ಕಟ್ಟಿ, ಪಶುಬಲಿಗೆ ಬದಲು ದೇವಿಯನ್ನು ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಗೊಳಿಸುವಂತೆ ಮಾಡುವರೆಂದಮೇಲೆ ವಿದ್ಯಾಬುದ್ಧಿಗಳಲ್ಲಿ ಬಹು ಮುಂದುವರೆದಿರುವ ಈ ಜನರು ಒಮ್ಮಿಂದೊಮ್ಮಿಗೆ 27 ಪಶುಗಳನ್ನು ವಧಿಸುವ ದುಃಖವಾರ್ತೆಯನ್ನು ಕೇಳಿ ಈ ಕೃತ್ಯವನ್ನು ಸ್ವಯಂಸೇವಕರು ನಿಲ್ಲಿಸದೆ ಎಂದೂ ಬಿಡಲಾರರು. ಹಿಂಸಾಮಯವಾದ ಈ ಯಜ್ಞದ ವಿಷಯವು ಗವರ್ನಮೆಂಟಿನವರೆಗೂ ಸಹ ಹೋಗಿದೆಯೆಂದು ತಿಳಿದುಬರುತ್ತದೆ. ಸರಕಾರದವರು ಆದಷ್ಟು ಈ ವಿಷಯವನ್ನು ವಿಮರ್ಶಿಸಿ ಹಿಂಸಾಕಾರ್ಯವನ್ನು ನಿಲ್ಲಿಸಿ ಸಕಲ ದೇಶೀಯರ ಹಾಗೂ ಸಕಲ ಮತೀಯರ ಮನಸ್ಸಿಗೆ ಸಂತೋಷವನ್ನುಂಟುಮಾಡುವರೆಂದು ನಂಬಿದ್ದೇವೆ.

ಭಾರತಸ್ವಾತಂತ್ರ್ಯ ಸಂಗ್ರಾಮವಾರ್ತೆ.

ಬೊಂಬಾಯಿಯ ಸಂಗ್ರಾಮನಾಯಕರಾದ ಮಿ|| ಉಸ್ಮಾನ್ ಸೊಬಾನಿಯವರನ್ನು ಕಳೆದ 27ನೆಯ ತಾರೀಖಿನದಿವಸ ದಸ್ತಗಿರಿಮಾಡಿದರು. ಸೊಬಾನಿಯವರು ಬೊಂಬಾಯಿಯ ಜನರಿಗೆ ಕಳುಹಿಸಿದ ಸಂದೇಶದಲ್ಲಿ, "ಬಂಧುಗಳೇ! ನಮ್ಮ ದೇಶೀಯರ ಹಕ್ಕುಬಾಧ್ಯತೆಗಳ ವಿಷಯವಾಗಿ ನಮಗೂ ಆಳರಸರಿಗೂ ಪರಸ್ಪರ ಶಕ್ತಿಪ್ರದರ್ಶನವಾಗುತ್ತದೆ. ಇದರಲ್ಲಿ ನಾವು ಗೆದ್ದೇ ತೀರಬೇಕು. 'ಕಾಂಗ್ರೆಸ್ ಹೌಸ' ನ್ನು ಸರ್ಕಾರದವರು ವಶಪಡಿಸಿಕೊಂಡಮೇಲೆ ಬೊಂಬಾಯಿ ಸಿಟಿಯಲ್ಲಿರುವ ಪ್ರತಿಯೊಂದು ಮನೆಯೂ ಕಾಂಗ್ರೆಸ್ ಹೌಸಾಗಲಿ, ಪ್ರತಿಯೊಬ್ಬ ಪಟ್ಟಣಿಗನೂ ಕಾಂಗ್ರೆಸ್ ಸಭಿಕನಾಗಿರಲಿ; ಇದೇ ನನ್ನ ಪ್ರಾರ್ಥನೆಯು" ಎಂದು ಹೇಳಿರುವರು. ಇವರಿಗೆ 6 ತಿಂಗಳು ಕಠಿಣಶಿಕ್ಷೆಯು ವಿಧಿಸಲ್ಪಟ್ಟಿತು.

ಬೊಂಬಾಯಿಯ ಮ್ಯುನಿಸಿಪಲ್ ಕಾರ್ಪೋರೇಷನ್ನಿನ ಅಧ್ಯಕ್ಷರಾದ ಮಿ|| ಹುಸೇನ್‌ಭಾಯಿ ಲಾಲಜಿಯವರ ಪುತ್ರರಾದ ಮಿ|| ಅಜೀಜ್‌ಭಾಯಿ ಲಾಲಜಿಯವರನ್ನು ದಸ್ತಗಿರಿಮಾಡಿ ಅವರಿಗೆ 6 ತಿಂಗಳುಗಳ ಕಠಿನ ಸಜೆಯನ್ನೂ 300 ರೂ. ಅರ್ಥ ದಂಡವನ್ನೂ ತಪ್ಪಿದರೆ ಮತ್ತೆ 3 ತಿಂಗಳುಗಳ ಕಠಿನಸಜೆಯನ್ನೂ ವಿಧಿಸಿರುತ್ತಾರೆ. ಅಜೀಜ್‌ಭಾಯಿ ಲಾಲ್ಜಿಯವರು, "ಸ್ವಮತಬಾಂಧವರೇ! ಪೂಜ್ಯರಾದ ನಮ್ಮ 'ಜಮಾಯಿತ್ ಉಲ್ ಉಲೇಮಾ' ದ ಅಧ್ಯಕ್ಷರನ್ನೇ ಸೆರೆಗೆ ಹಾಕಿದಮೇಲೆಯೂ ನಾವು ಸುಮ್ಮನೆ ಕುಳಿತುಕೊಳ್ಳಬಹುದೇ? ಈಗಿನ ಸ್ವಾತಂತ್ರ್ಯಸಂಗ್ರಾಮಕ್ಕೆ ಸೇರುವುದು ಎಂದಿಗೂ ಇಸ್ಲಾಂ ಧರ್ಮಕ್ಕೆ ವಿರುದ್ಧವಾದುದಲ್ಲ; ಬೇಡುವುದಾಗಲಿ ಅಥವಾ ದಬ್ಬಾಳಿಕೆಯಿಂದ ತೊಂದರೆಕೊಡುವುದಾಗಲಿ ಇಸ್ಲಾಂ ಧರ್ಮಕ್ಕೆ ಸೇರಿದುದಲ್ಲ. 'ಇಸ್ಲಾಂ' ಎಂದರೆ ಶಾಂತಿ; ಆದರೆ ನೀವು ಶಾಂತಿಸ್ಥಾಪನೆಗೆ ಕೈ ಹಚ್ಚಿರುವಿರಾ? ನಿಮ್ಮ ಅಂತರಾತ್ಮನಿಗೆ ಶಾಂತಿಯಿದೆಯೇ? ನಡೆಯಿರಿ! ಕಾರ್ಯೋನ್ಮುಖರಾಗಿರಿ!" ಎಂದು ಮುಸಲ್ಮಾನರಿಗೆ ಸಂದೇಶವಿತ್ತಿರುವರು.

ಬೊಂಬಾಯಿ ವಾರ್‌ಕೌನ್ಸಿಲ್ಲಿನ ಅಧ್ಯಕ್ಷರಾದ ಮಿ|| ನಾಗಿನ್‌ದಾಸ್ ಮಾಸ್ಟರವರನ್ನೂ ಮತ್ತು ಬ್ಯಾರಿಸ್ಟರ್ ಕೆ. ಎಫ್. ನರಿಮನ್ನರನ್ನೂ ದಸ್ತಗಿರಿಮಾಡಿ, ಅವರಿಬ್ಬರಿಗೂ ಆರುತಿಂಗಳುಗಳ ಸಾದಾ ಸಜೆಯನ್ನು ವಿಧಿಸಿದ್ದಾರೆ. ಸತ್ಯಾಗ್ರಹ ಚಳವಳಿಯು ಆರಂಭವಾದಮೇಲೆ ಇದುವರೆಗೆ ನರಿಮನ್ನರು ಮೂರಾವರ್ತಿ ಶಿಕ್ಷಿಸಲ್ಪಟ್ಟಿರುವರು.

ಮಿ|| ನಾಗಿನ್‌ದಾಸ್ ಮಾಸ್ಟರವರ ಅನಂತರ ಮಿ|| ಉಸ್ಮಾನ್ ಸೊಬಾನಿಯವರು ಸಂಗ್ರಾಮಸಮಿತಿಯ ಅಧ್ಯಕ್ಷರಾದರು. ಈಗ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಸಂಗ್ರಾಮ ಸಮಿತಿಯಲ್ಲಿ ಅನೇಕರು ಸೇರಿರುವರೆಂದೂ, ಅವರಲ್ಲಿ ನೂರಾರು ಜನ ಮುಸಲ್ಮಾನರು ಇರುವರೆಂದೂ ತಿಳಿದುಬಂದಿದೆ.

ಬೊಂಬಾಯಿಯಲ್ಲಿ ಕಾಂಗ್ರೆಸ್ ಆಫೀಸುಗಳಿದ್ದ 'ಕಾಂಗ್ರೆಸ್ ಹೌಸ್' ಎಂಬ ಭವನವನ್ನು ಸರ್ಕಾರದವರು ವಶಪಡಿಸಿಕೊಂಡು ಅದರ ಮೇಲಿದ್ದ ಸ್ವರಾಜ್ಯಧ್ವಜವನ್ನು ಕಿತ್ತೊಗೆದು ಇಂಗ್ಲೀಷರ ಯೂನಿಯನ್ ಜಾಕ್ ಬಾವುಟವನ್ನು ಏರಿಸಿದಮೇಲೆ, ಬೊಂಬಾಯಿಯ ಜನರು 'ಮಂಡಿ' ಮೊಹಲ್ಲೆಯಲ್ಲಿ ಮತ್ತೊಂದು 'ಕಾಂಗ್ರೆಸ್ ಹೌಸ' ನ್ನು ತೆರೆದರು. ನೂತನ ಸಂಗ್ರಾಮನಾಯಕರಾದ ಮಿ|| ಉಸ್ಮಾನ್ ಸೊಬಾನಿಯವರು ಇದರ ಆರಂಭಮಹೋತ್ಸವವನ್ನು ನೆರವೇರಿಸಿದರು. ಈ ಆಫೀಸನ್ನೂ ಸಹ ಸರಕಾರದವರು ಮೊನ್ನೆ ದಿವಸ ವಶಪಡಿಸಿಕೊಂಡರು.

ಬೊಂಬಾಯಿಯಲ್ಲಿ ಕಳೆದ 15 ನೆಯ ತಾರೀಖಿನ ದಿವಸ 180 ಜನರನ್ನು, 16 ನೆಯ ತಾರೀಖಿನ ದಿವಸ 250 ಜನರನ್ನೂ ದಸ್ತಗಿರಿಮಾಡಿರುತ್ತಾರೆ. 'ಕಾಂಗ್ರೆಸ್ ಬುಲೆಟಿನ್‌'ಗಳನ್ನು ಹೊರಡಿಸುವವರನ್ನೂ ಹಂಚುವವರನ್ನೂ ದಸ್ತಗಿರಿಮಾಡುತ್ತಿದ್ದರೂ ಕೂಡ, ಬುಲೆಟಿನ್‌ಗಳು ಕಾಲಕ್ರಮವಾಗಿ ಹೊರಡುತ್ತಲೇ ಇವೆ.

ಸರ್ಕಾರದವರ ಕಾರ್ಯಕ್ರಮದಮೇಲೆ ತಮ್ಮ ಅಸಮಾಧಾನವನ್ನು ತೋರಿಸುವ ನಿಮಿತ್ತವಾಗಿ ಬೊಂಬಾಯಿ ಮ್ಯುನಿಸಿಪಲ್ ಕಾರ್ಪೋರೇಷನ್ನಿನವರು ಕಳೆದ 16 ನೇ ತಾರೀಖಿನ ದಿವಸ ತಮ್ಮ ಕಾರ್ಯಕಲಾಪಗಳೆಲ್ಲವನ್ನೂ ನಿಲ್ಲಿಸಿಬಿಟ್ಟರು.

ಜೈಲಿನಿಂದ ಹೊರಗೆ ಬಂದಿದ್ದ ಮಿ|| ಬಿ. ಯನ್. ಮಹೇಶರಿ ಎಂಬ ಬೊಂಬಾಯಿ ಮ್ಯುನಿಸಿಪಲ್ ಕಾರ್ಪೋರೇಷನ್ ಮೆಂಬರರನ್ನು ಪುನಃ ದಸ್ತಗಿರಿಮಾಡಿರುತ್ತಾರೆ.

ಬೊಂಬಾಯಿಯಲ್ಲಿ ಸರ್ಕಾರದವರು ಕಾಂಗ್ರೆಸ್ ಹೌಸನ್ನು ವಶಪಡಿಸಿಕೊಂಡಮೇಲೆ ಪುರಜನರು ಸಾವಿರಾರು ಮನೆಗಳ ಮುಂದೆ "ಕಾಂಗ್ರೆಸ್ ಹೌಸ್," "ಕಾಂಗ್ರೆಸ್ ಕಮಿಟಿ" ಎಂಬ ಬೋರ್ಡುಗಳನ್ನು ಹಚ್ಚಿರುವರು.

ಕೊಡಗಿನ ನಾಡೀಕೇರಿ ಎಂಬ ಹಳ್ಳಿಯಲ್ಲಿ ಶ್ರೀ ಕೊಲೇರ ಕರಿಯಪ್ಪ ಎಂಬವರ ೧೮ ವರ್ಷದ ಮಗಳು ಖದ್ದರ್ ಪ್ರಚಾರದಲ್ಲಿ ಬಹಳ ವಿಶ್ವಾಸಿಯಾಗಿದ್ದಳಂತೆ! ಕಳೆದ ತಿಂಗಳು ಹದಿನೈದನೆಯ ತಾರೀಖಿನ ದಿವಸ ಹುದಿಕೇರಿ ಎಂಬಲ್ಲಿ ಸ್ತ್ರೀ ಸತ್ಯಾಗ್ರಹಿಗಳಿಂದ ಪಿಕೆಟಿಂಗ್ ಪ್ರಾರಂಭಿಸಿದಾಗ ಈಕೆಯು ತಾನೂ ಸ್ತ್ರೀ ಸತ್ಯಾಗ್ರಹಿಗಳೊಡನೆ ಸೇರಬೇಕೆಂದು ತನ್ನ ತಂದೆತಾಯಿಗಳನ್ನು ಕೇಳಿದಳು. ಆದರೆ ಅವರು ಇದಕ್ಕೆ ಅನುಮತಿ ಕೊಡಲಿಲ್ಲ. ಹದಿನಾರನೆಯ ತಾರೀಖು ಪ್ರಾತಃಕಾಲ ಆ ಹುಡುಗಿಯು ಖದ್ದರ್ ಸೀರೆಯನ್ನು ಧರಿಸಿ ನೀರಿಗೋಸ್ಕರ ಕೆರೆಗೆ ಹೋಗಿ ತಿರುಗಿ ಬರಲೇ ಇಲ್ಲ. ತಂದೆತಾಯಿಗಳಿಗೆ ಅನುಮಾನವಾಗಿ ಅವರು ಹುದಿಕೇರಿಯ ಸತ್ಯಾಗ್ರಹಿಗಳನ್ನು ವಿಚಾರಿಸಿದರು, ಆದರೆ ಏನೂ ಪ್ರಯೋಜನವಾಗಲಿಲ್ಲ. ಹದಿನೆಂಟನೆಯ ತಾರೀಖು ಪ್ರಾತಃಕಾಲ ಕೆರೆಯ ಬಳಿ ಆ ಹುಡುಗಿಯು ಧರಿಸಿದ್ದ ಬಟ್ಟೆಗಳು ಸಿಕ್ಕವು. ಕೆರೆಯನ್ನೆಲ್ಲಾ ಹುಡುಕಲಾಗಿ ಆ ಹುಡುಗಿಯ ಹೆಣವು ದೊರೆಕಿತು. ಇವಳಲ್ಲವೇ ನಿಜವಾದ ಭಾರತ ಪುತ್ರಿಯು?

ಪಾಟ್ನಾ ಡಿಸ್ಟ್ರಿಕ್ಟಿನಲ್ಲಿ ಚೌಕಿದಾರಿ ಕಂದಾಯ ನಿರಾಕರಣ ಚಳವಳಿಯು ಹೆಚ್ಚುತ್ತಿರುವದು. ಮೋತಿಹಾರೀ ಠಾಣೆಗೆ ಸೇರಿದ ಮಧುಬಾರಿಗ್ರಾಮದಲ್ಲಿ 13-12-0 ರೂ. ಗಳ ಬಾಕಿಗಾಗಿ ಪೋಲೀಸರು ಸುಮಾರು 5000 ರೂ. ಗಳ ಬೆಲೆಬಾಳುವ ಸಾಮಾನುಗಳನ್ನು ಜಪ್ತುಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ಸದ್ಯಃ ಸಿಸ್ವಾನ ಮತ್ತು ಬಿಥಿ ಪ್ರಾಂತಕ್ಕೆ ಸೇರಿದ ಹತ್ತು ಗ್ರಾಮದವರೂ, ಹರಸಂತರಾಣೆಗೆ ಸೇರಿದ ಬರ್ಹುಯಾ, ಕೊಸೇನಮಠ, ಹರ್ಸಪೂರ ಮತ್ತು ಅಮೇರ ಗ್ರಾಮದವರೂ ಸಹ ಚೌಕಿದಾರಿ ಕಂದಾಯವನ್ನು ಕೊಡಕೂಡದೆಂದು ತೀರ್ಮಾನಮಾಡಿಕೊಂಡಿರುತ್ತಾರೆ.

ಮೋಹರಿನಲ್ಲಿ ಕಂದಾಯ ನಿರಾಕರಣ ಚಳವಳಿಯು ಆರಂಭಿಸಲ್ಪಟ್ಟಿರುವುದು. ನೋಟೀಸು ಕೊಡಲ್ಪಟ್ಟಿತು. ಹರಾಜು ಆಗುತ್ತಿರುವುದು. ರೈತರು ಎಲ್ಲಕ್ಕೂ ಸಿದ್ಧರಾಗಿರುವರು.

ಲಾಲಾ ಲಜಪತರಾಯರ ಪುತ್ರಿಯಾದ ಶ್ರೀಮತಿ ಪಾರ್ವತಿದೇವಿಯರನ್ನು ದಸ್ತಗಿರಿಮಾಡಿ ಲಾಹೋರಿನ ಹೆಂಗಸರ ಸೆರೆಮನೆಯಲ್ಲಿಟ್ಟಿದ್ದಾರೆ. ಅವರು 124-A ಸೆಕ್ಷನ್ನಿನ ಆಪಾದನೆಗೆ ಗುರಿಯಾಗಿರುವರು.

ಜಮಾಯಿತ್ ಉಲ್ ಉಲೇಮಾ ಎಂಬ ಮುಸ್ಲಿಂ ಧಾರ್ಮಿಕ ಸಂಸ್ಥೆಯ ಅಧ್ಯಕ್ಷರಾದ ಮುಫ್ತಿಕಿಫಾಯತುಲ್ಲಾರವರನ್ನು ದಿಲ್ಲಿಯಲ್ಲಿ ದಸ್ತಗಿರಿ ಮಾಡಿದುದರಿಂದ ಕಳೆದ 14 ನೆಯ ತಾರೀಖಿನ ದಿವಸ ಇಂಡಿಯಾದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಹರತಾಳವು ಆಚರಿಸಲ್ಪಟ್ಟಿತು. ಇನ್ನು ಮುಸಲ್ಮಾನರು ಚಳವಳಿಯಲ್ಲಿ ಹೆಚ್ಚು ಭಾಗ ತೆಗೆದುಕೊಳ್ಳುವ ಸಂಭವವಿದೆ.

ಅಹಮ್ಮದಾಬಾದಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಂದ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದ ರಾಣಾಪುರ ವಿಚಾರಣಾ ಸಮಿತಿಯ ಸದಸ್ಯರು ಬೊಂಬಾಯಿ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿರಲು, ಹೈಕೋರ್ಟ್ ನ್ಯಾಯಾಧಿಪತಿಗಳು ಅವರ ಶಿಕ್ಷೆಯನ್ನು ರದ್ದುಮಾಡಿರುವರು.

ಬೊಂಬಾಯಿಯ ವರ್ತಕರೆಲ್ಲರೂ ಕೂಡಿ ಇನ್ನು ಮುಂದೆ ಪರದೇಶದ ವರ್ತಕರಿಗೆ ಯಾವ ರೂಪದಲ್ಲಿಯೂ ಒಂದು ಕಾಸನ್ನೂ ಕೂಡ ನಾವು ಕೊಡಕೂಡದೆಂದೂ, ನಮಗೆ ಲುಕ್ಸಾನು ಎಷ್ಟುಬೇಕಾದರೂ ಆಗಲಿ ನಮ್ಮ ದೇಶಬಾಂಧವರ ಮೂಳೆಗಳನ್ನು ಮುರಿಯುತ್ತಿರುವಂಥವರೊಂದಿಗೆ ನಾವು ಯಾವ ವಿಧದಲ್ಲಿಯೂ ಸಹಕರಿಸಬಾರದೆಂದೂ ಪ್ರತಿಜ್ಞೆಮಾಡಿರುವರು.

ವೈಸರಾಯರು ಕಾಂಗ್ರೆಸ್ ಸಂಸ್ಥೆಗಳನ್ನು ಅಕ್ರಮ ಕೂಟಗಳೆಂದು ಸಾರಿ ಅದರಂತೆ ಕ್ರಮ ನಡೆಯಿಸಲು ಕೆಳಗಿನ ಅಧಿಕಾರಿಗಳಿಗೆ ಹುಕುಂ ಮಾಡಿರುವದಷ್ಟೆ! ಗುಜರಾಥ ಕಾಂಗ್ರೆಸ್ ಕಮಿಟಿಯವರು ಈ ಕಾಯಿದೆಯನ್ನು ವಿರೋಧಿಸಲು ಅಹಮದಾಬಾದದ ಎಲ್ಲಾ ಬೀದಿಗಳಲ್ಲೂ ಕಚೇರಿಯ ಕಾಗದಪತ್ರಗಳನ್ನು ಬಹಿರಂಗವಾಗಿ ಅಂಟಿಸಲು ಆರಂಭಿಸಿರುವರು. ಬೀದಿಗೊಂದು ಕಚೇರಿಯಾಗಿರುವುದು.

ವರ್ತಮಾನಸಂಗ್ರಹ.

೧೬ ನೆಯ ತಾರೀಖಿನ ಪ್ರಾತಃಕಾಲ ಎಂ.ಎ. ಬಿ.ಎ. ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಯನ್ನು ಕೊಡುವ ನಿಮಿತ್ತವಾಗಿ ರಾಜಧಾನಿಯಲ್ಲಿ ಪಟ್ಟಪ್ರಧಾನ ಮಹೋತ್ಸವವು ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಉತ್ತೀರ್ಣರಾದವರನೇಕರಿಗೆ ಪ್ರಶಸ್ತಿಗಳು ಕೊಡಲ್ಪಟ್ಟುವು. ಕಲ್ಕತ್ತಾ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರಕೋವಿದರಾದ ಡಾಕ್ಟರ್ ಎಸ್ ರಾಧಾಕೃಷ್ಣರವರು ವಿದ್ಯಾರ್ಥಿಗಳಿಗೆ ಕಾಲೋಚಿತವಾದ ಮಹತ್ವದ ಭಾಷಣವನ್ನು ಮಾಡಿದರು.

ಚಕ್ರಗೋಷ್ಠಿಗಾಗಿ ಲಂಡನ್ನಿಗೆ ಪ್ರಯಾಣಮಾಡಿರುವ ಮಿರ್ಜಾಮಹಮ್ಮದ್‌ಇಸ್ಮಾಯಿಲ್‌ರವರು ಫ್ರಾನ್ಸ್ ಜರ್ಮನಿ ಮುಂತಾದ ಸ್ಥಳಗಳಲ್ಲಿ ಸಂಚರಿಸಿಕೊಂಡು ಅಲ್ಲಿಂದ ಚಕ್ರಗೋಷ್ಠಿಗೆ ಹೋಗುವರೆಂದೂ ಮಿ|| ಕಂಬ್ರಿಗಲ್‌ರವರು ಸಹ ಮೈಸೂರಿಂದ ದಿವಾನ್ ಸಾಹೇಬರ ಅಪ್ಪಣೆಯಮೇರೆಗೆ ಸೀಮೆಗೆ ಪ್ರಯಾಣಮಾಡಿದರೆಂದೂ ಕೇಳುತ್ತೇವೆ.

ಪಂಡಿತ ಮೋತಿಲಾಲ ನೆಹ್ರೂರವರ ಆರೋಗ್ಯದ ವಿಷಯವಾಗಿ, ಬಾಬು ಸಭಾಷಚಂದ್ರಬೋಸರವರು ಕಲ್ಕತ್ತೆಯಿಂದ ಕಳುಹಿಸಿದ ತಂತಿಗೆ, ಪಂಡಿತ ಜವಾಹರಲಾಲ್ ನೆಹ್ರೂರವರು "ತಂದೆಯವರ ಆರೋಗ್ಯವು ತೃಪ್ತಿಕರವಾಗಿಲ್ಲ; ಅವರ ಆರೋಗ್ಯವು ನಮ್ಮೆಲ್ಲರಿಗೂ ಚಿಂತಾಜನಕವಾಗಿದೆ" ಎಂದು ಉತ್ತರ ಕೊಟ್ಟಿರುತ್ತಾರೆ.

ಲಂಡನ್ನಿನಲ್ಲಿ ಭಾರತ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ರೌಂಡ್ ಟೇಬಲ್ ಕಾನ್ಫರೆನ್ಸಿನಲ್ಲಿ ಚರ್ಚಿಸಲ್ಪಡುವ ಬಗ್ಗೆ ಭರತಖಂಡದ ಮುಂದಿನ ರಾಜ್ಯಾಂಗ ವ್ಯವಸ್ಥೆಯ ವಿಷಯವಾಗಿ ಒಂದು ಯೋಜನೆಯನ್ನು ತಯಾರಿಸಿರುವರೆಂದೂ, ಈ ಯೋಜನೆಗೆ ಸರ್ ಅಕ್‌ಬರ್ ಹೈದರಿ, ಸರ್ ಪ್ರಭಾಶಂಕರ ಪಟ್ಟಾಣಿ, ಕರ್ನಲ್ ಹಾಸ್ಕರ್, ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಇವರುಗಳ ಅನುಮೋದನೆಯು ಸಿಕ್ಕಿರುವುದೆಂದೂ, ತಾತ್ಕಾಲಿಕವಾದ ಕೆಲವು ನಿಬಂಧನೆಗಳಿಗೆ ಒಳಪಟ್ಟ ಸಾಮ್ರಾಜ್ಯಾಂತರ್ಗತಸ್ವರಾಜ್ಯವೇ ಈ ಯೋಜನೆಯ ಮುಖ್ಯಧ್ಯೇಯವಾಗಿದೆಯೆಂದೂ ಲಾಹೋರಿನ "ಸಿವಿಲ್ ಮತ್ತು ಮಿಲಿಟರಿ ಗೆಜೆಟ್" ಪತ್ರಿಕೆಗೆ ಲಂಡನ್ ಪತ್ರವ್ಯವಹಾರಕನು ತಿಳುಸಿರುತ್ತಾನೆ.

ಚಕ್ರವರ್ತಿಗಳಾಗಿದ್ದ ಅಮಾನುಲ್ಲಾರವರ ದುರವಸ್ಥೆ!

ಅಫ್ಘಾನ್ ಸಂಸ್ಥಾನಕ್ಕೆ ಮಾಜಿ ಚಕ್ರವರ್ತಿಗಳಾಗಿದ್ದ ಅಮಾನುಲ್ಲಾರವರು ಮತ್ತು ಅವರ ಧರ್ಮಪತ್ನಿ ಲೋಕಸುಂದರಿ ಸೌರಿಯಾ ರಾಣಿಯವರು ಈಗ ಇಟಲಿಯಲ್ಲಿ ಬಹು ಹೀನಸ್ಥಿತಿಯಿಂದ ಕಾಲಕ್ಷೇಪ ಮಾಡುತ್ತಿರುವರೆಂದು ತಿಳಿಯಬಂದಿದೆ. ಅಫ್ಘಾನ್ ಸಂಸ್ಥಾನದಲ್ಲಿ ಅಮಾನುಲ್ಲಾರವರ ಸ್ವಂತ ಹೆಸರಿನಲ್ಲಿದ್ದ ಆಸ್ತಿಯೆಲ್ಲವೂ ಅಲ್ಲಿಯ ಸರಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿದೆ. ತಮ್ಮ ಆಸ್ತಿಯ ನೊಬಲಗನ್ನು ತಮಗೆ ಕೊಡಬೇಕೆಂದು ಅಮಾನುಲ್ಲಾರವರು ಅಫ್ಘಾನ್ ಸರ್ಕಾರದವರನ್ನು ಕೇಳಿದ್ದಕ್ಕೆ, ಅವರು "ನೀವು ರಾಜಮನೆತನಕ್ಕೆ ಸೇರಿದ ಒಡವೆಗಳನ್ನು ವಿಶೇಷವಾಗಿ ತೆಗೆದುಕೊಂಡುಹೋಗಿರುವುದರಿಂದ ಆಗುವುದಿಲ್ಲ" ವೆಂದು ಹೇಳಿರುವರು. ೧೯೨೮ ನೆಯ ಇಸವಿಯಲ್ಲಿ ಅಮಾನುಲ್ಲಾರವರು ಯೂರೋಪ್ ದೇಶದಲ್ಲಿ ಸಂಚಾರಕ್ಕೆ ಹೊರಟಾಗ ೧೦ ಕೋಟಿ ರೂಪಾಯಿಗಳನ್ನು ವಿದೇಶೀಯ ಬ್ಯಾಂಕುಗಳಲ್ಲಿ ತಮ್ಮ ಹೆಸರಿನಲ್ಲಿ ಡಿಪಾಜಿಟ್ಟು ಮಾಡಿಟ್ಟು ಬಂದರಂತೆ! ಆ ಹಣವೇ ಅವರ ಜೀವಮಾನಕಾಲದಲ್ಲೆಲ್ಲಾ ಜೀವನಕ್ಕೆ ಸಾಕಾಗುತ್ತಿತ್ತು. ಇದನ್ನು ಅವರು ದುರ್ವ್ಯಯ ಮಾಡಿದ್ದಲ್ಲದೆ ಇದರ ಜೊತೆಗೆ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಒಡವೆಗಳನ್ನೆಲ್ಲಾ ಹೊತ್ತುಕೊಂಡುಹೋಗಿ ಅವನ್ನೂ ಸಹ ಕಳೆದರೆಂದೂ ಅದರಿಂದ ಸರ್ಕಾರದವರು ಅವರಿಗೆ ಈಗ ಏನೂ ಕೊಡಲಾಗುವುದಿಲ್ಲವೆಂದೂ, ಅವರ ಆಸ್ತಿಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳುವುದು ನ್ಯಾಯವೆಂದೂ ಅಫ್ಘಾನ್ ಮಂತ್ರಿಮಂಡಲದವರು ನಿಶ್ಚಯಿಸಿರುವರು.

ಮುಂದೆ ಒಂದು ಘೋರ ಯುದ್ಧವಾಗುವುದು.

ಈ ಕೆಳಗಿನ ವಿಷಯವನ್ನು ಇಂಗ್ಲೆಂಡಿನ ಪಾರ್ಲಿಮೆಂಟಿನ ಮೆಂಬರರಾದ ಮಿ|| ಫೇಲ್ಸ್‌ಫರ್ಡ್ ಎಂಬವರು ಬೊಂಬಾಯಿ ಕ್ರಾನಿಕಲ್‌ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವರು.

ಜರ್ಮನಿಯು ಇಂಗ್ಲೆಂಡಿಗೆ ದಂಡ ಕೊಟ್ಟು ಕೊಟ್ಟು ಬೇಸತ್ತಿರುವದರಿಂದ ಇಂಗ್ಲೆಂಡಿನ ಮೇಲೆ ಅದರ ದ್ವೇಷವು ಹೆಚ್ಚುತ್ತಿದೆ. ಪ್ರಪಂಚದಲ್ಲಿ ಸದ್ಯದಲ್ಲಿಯೇ ಒಂದು ದೊಡ್ಡ ಯುದ್ಧವಾಗುವ ಸಂಭವವಿದೆ. ಇದಕ್ಕೋಸುಗ ಪರೋಪ್ಯದೇಶಗಳೆಲ್ಲವೂ ಈಗ ಯುದ್ಧಸಾಮಗ್ರಿಗಳನ್ನು ಸಿದ್ಧಮಾಡಿಕೊಳ್ಳುತ್ತಿವೆ. ಲೀಗ್ ಆಫ್ ನೇಷನ್ಸ್ (ಪ್ರಪಂಚ ಶಾಂತಿಸ್ಥಾಪನಾಸಂಸ್ಥೆ) ಸಂಘವು ಕೇವಲ ಕಣ್ಣೊರಿಸುವ ಸಂಸ್ಥೆಯಾಗಿದೆ. ಪೋಲೆಂಡ್‌ದೇಶವು ಡಲ್ಜಾ ಪಟ್ಟಣವನ್ನು ಹಿಡಿದಾಗಲೂ ಈ ಸಂಸ್ಥೆಯು ಸುಮ್ಮನಿರುವುದು. ಮುಂದೆ ಯುದ್ಧದ ರಂಗಸ್ಥಳವು ಪೋಲೆಂಡೇ ಆಗಬಹುದು.

ಈ ಯುದ್ಧದಲ್ಲಿ ಇಟಲಿ ಜರ್ಮನಿ ಮತ್ತು 1914 ನೆಯ ಇಸವಿಯ ದೊಡ್ಡ ಯುದ್ಧದಲ್ಲಿ ಸೋತುಹೋದ ಉಳಿದ ರಾಜ್ಯಗಳು ಎಲ್ಲವೂ ಒಂದಾಗುವುವು. ಇಂಗ್ಲೆಂಡ್, ಫ್ರಾನ್ಸ್, ಪೋಲೆಂಡ್, ಅಮೆರಿಕಾ ಇವುಗಳು ಪೂರ್ವದಂತೆ ಒಂದಾಗಿ ಹಿಂದೆ ಆದ ಮಹಾಯುದ್ಧಕ್ಕಿಂತಲೂ ಜೋರಾಗಿ ಯುದ್ಧಮಾಡುವುವು. ಮಿ|| ಬ್ರಿಯಾಂಡರು ಹೇಳುವಂತೆ ಎಲ್ಲಾ ಪರೋಪ್ಯ ದೇಶಗಳನ್ನು ಒಂದುಮಾಡಿ ವಿಶ್ವಾಸದೊಂದಿಗೆ ವ್ಯಾಪಾರವನಡುವ ವಿಚಾರದ ಕಾರ್ಯವು ಸಾಧ್ಯವಾಗುವುದೇ ಇಲ್ಲ. ಯೂರೋಪ್‌ದೇಶಗಳಲ್ಲಿ ಅಂತಃಕಲಹಗಳೂ ಮನಸ್ತಾಪಗಳೂ ಒಳಗೊಳಗೇ ಹೊಗೆಯಾಡುತ್ತಿವೆ. ಅದು ಶೀಘ್ರದಲ್ಲಿಯೇ ಉರಿ ಹತ್ತಿಕೊಂಡು ಒಂದು ದೊಡ್ಡ ಯುದ್ಧದ ರೂಪದಲ್ಲಿ ಎಲ್ಲರಿಗೂ ಗೋಚರವಾಗುವುದೆಂಬುದಾಗಿ ಪರೋಪ್ಯದೇಶದಿಂದ ಸುತ್ತಿಕೊಂಡು ಬಂದ ಮಿ|| ಬ್ರೇಲ್ಸ್ ಫರ್ಡರವರು ಹೇಳುವರು.

ಕೈ|| ಎನ್. ಸುಬ್ಬಣ್ಣನವರು.

ಶ್ರೀಚಾಮುಂಡೇಶ್ವರೀ ಕರ್ನಾಟಕ ನಾಟಕಸಭಾ ಲಿಮಿಟೆಡ್ ಮೈಸೂರು, ಈ ಕಂಪನಿಯ ಸ್ಟೇಜ್ ಮ್ಯಾನೇಜರರೂ ಮತ್ತು ಉತ್ತಮಪಾತ್ರಧಾರಿಗಳೂ ಆಗಿದ್ದ ಎನ್. ಸುಬ್ಬಣ್ಣನವರು ಇದೇ ತಿಂಗಳು 9 ನೆಯ ತಾ|| ಗುರುವಾರ ದಿವಸ ವಿಧಿವಶರಾದರೆಂಬ ಸಮಾಚಾರವು ಖೇದಜನಕವಾಗಿರುವುದು. ಇವರು ಬಹುಕಾಲದಿಂದ ನಾಟ್ಯಕಲೆಯಲ್ಲಿ ನುರಿತವರಾಗಿಯೂ, ಪ್ರೇಕ್ಷಕರ ಮನೋರಂಜನವಾಗುವಂತೆ ಕಾಲೋಚಿತವಾದ ಪಾತ್ರಗಳನ್ನು ಸ್ವತಃ ವಹಿಸುವವರಾಗಿಯೂ ಇದ್ದುದಲ್ಲದೆ ಜನಾನುರಾಗಿಗಳಾಗಿದ್ದರು. ಇದಲ್ಲದೆ ಆಯಾಯ ನಾಟಕಗಳ ಸ್ವಭಾವವನ್ನು ವಿಚಾರದಂತೆ ಸೀನರಿ ಮುಂತಾದ ಪದಾರ್ಥಗಳಿಂದ ರಂಗಶಾಲೆಯನ್ನು ರಂಜಿಸುವದರಲ್ಲಿ ಬಹು ಬುದ್ಧಿಮಂತರಾಗಿದ್ದರು. ಇವರಲ್ಲಿ ಸ್ವಭಾವಸಿದ್ಧವಾಗಿ ನೆಲೆಗೊಂಡಿರುವ ನಾಟ್ಯಕಲಾಕೌಶಲ್ಯದಿಂದಲೂ, ಜನಾಕರ್ಷಣಶಕ್ತಿಯಿಂದಲೂ ಈ ಕಂಪನಿಯು ದಿನೇ ದಿನೇ ಬಾಲಚಂದ್ರನಂತೆ ಅಭಿವೃದ್ಧಿಗೊಳ್ಳುತ್ತ ಈಗಣ ನಾಟಕಕಂಪನಿಗಳಲ್ಲೆಲ್ಲಾ ಅಗ್ರಸ್ಥಾನವನ್ನು ಪಡೆದಿತ್ತು. ಹಿಂದೆ ಆಸ್ಥಾನವಿದ್ವಾನ್ ಮಿ. ರಾಚಪ್ಪನವರು ಈ ಕಂಪನಿಯಲ್ಲಿ ಸುಪ್ರಸಿದ್ಧ ಪಾತ್ರಧಾರಿಗಳಾಗಿದ್ದು ರಾಚಪ್ಪನವರು ವಿಧಿವಶರಾದಮೇಲೆ ಕಂಪನಿಯು ವೃದ್ಧಿಯಾಗುವದಿಲ್ಲವೆಂದು ವಾರ್ತೆಯು ಹಬ್ಬಿತ್ತು. ಇವರು ಈ ಅಪಯಶಸ್ಸಿಗೆ ಗುರಿಯಾಗದಂತೆ ಹಗಲಿರುಳು ತಮ್ಮ ಕೌಶಲವನ್ನು ಹೊರಹೊಮ್ಮಿಸಿ ರಾಚಪ್ಪನವರು ಇದ್ದ ಕಾಲಕ್ಕಿಂತಲೂ ಅತಿಶಯವಾಗಿ ಕಂಪನಿಯನ್ನು ಅಭಿವೃದ್ಧಿಗೆ ತಂದು ಸ್ವಸ್ಥಾನದಲ್ಲಿ ಕೀರ್ತಿಭಾಗಿಗಳಾಗಿದ್ದಲ್ಲದೆ ಬೆಂಗಳೂರು, ಮಂಗಳೂರು, ಕುಂಭಕೋಣ ಮುಂತಾದ ಪ್ರಸಿದ್ಧ ಸ್ಥಳಗಳಿಗೆ ಕಂಪನಿಯನ್ನು ತೆಗೆದುಕೊಂಡು ಹೋಗಿ ಕಂಪನಿಗೆ ಉತ್ತಮವಾದ ಕೀರ್ತಿಯನ್ನು ತಂದಿದ್ದರು. ಇಂಥ ಉತ್ತಮಪಾತ್ರವನ್ನು ಕಳೆದುಕೊಂಡದ್ದು ಕಂಪನಿಯ ದುರ್ದೈವವೆಂದೇ ಹೇಳಬೇಕಾಗಿದೆ. ಇವರ ವಿಯೋಗದಿಂದ ನಾಟಕಮಂಡಲಿಗೆ ಭಗ್ನೋತ್ಸಾಹವುಂಟಾದಾಗ್ಯೂ ಎದೆಗುಂದದೆ ತಮ್ಮ ಕರ್ತವ್ಯದಲ್ಲಿ ಅಭಿಮುಖರಾಗಿ ಕಂಪನಿಯನ್ನು ಎಂದಿನಂತೆ ಅಭಿವೃದ್ಧಿಗೆ ತರುವರೆಂದು ಕೋರುತ್ತೇವೆ. ಇವರ ವಿಯೋಗದಿಂದ ಇವರ ಕುಟುಂಬದವರಿಗೆ ಉಂಟಾದ ಮಹತ್ತರವಾದ ವ್ಯಸನವನ್ನು ಪರಿಹರಿಸುವುದಲ್ಲದೆ ಇವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ದಯಾಮಯನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

[3 ನೆಯ ಪುಟದಿಂದ ಮುಂದುವರಿದುದು.]

ಗಂಧದ ಮರದ ಸಾದೆಯ ಭಟ್ಟಿಯಿಂದ ದೊರೆಯುವ ಪದಾರ್ಥಗಳಿಗೂ, ಬೀಜು ಕಬ್ಬಿಣವೇ ಮುಂತಾದುವುಗಳಿಗೂ ಧಾರಣೆಯು ವಿಶೇಷವಾಗಿ ಇಳಿದುಹೋಗಿ ಗಿರಾಕಿಯು ದೊರೆಯುವುದು ಬಹಳ ಕಷ್ಟವಾಗಿದೆ. ಇದೇ ಪರಿಸ್ಥಿತಿಯು ಇನ್ನೂ ಎಷ್ಟು ಕಾಲ ಹೀಗೆಯೇ ಇರುವುದೆಂಬುದನ್ನು ಹೇಳಲು ಸಾಧ್ಯವಿಲ್ಲ. ಸಾಮಾನುಗಳನ್ನು ತಯಾರುಮಾಡುವುದಕ್ಕೆ ತಗಲುವ ವೆಚ್ಚವು ಅವುಗಳಿಂದ ಬರುವ ಹುಟ್ಟುವಳಿಯೂ ಒಂದಕ್ಕೊಂದಕ್ಕೆ ಸರಿಸಮವಾಗುವಂತಾದರೂ ಮಾಡುವುದಕ್ಕಾಗಿ ಪ್ರಯತ್ನಗಳನ್ನು ಮಾಡುತ್ತಾ ಇದೆ. ಕಾರ್ಖಾನೆಯ ಕಾರ್ಯವನ್ನು ನಿರ್ವಹಿಸುವುದಕ್ಕೆ ಎಷ್ಟುಮಂದಿ ಅಧಿಕಾರಿಗಳೂ, ಎಷ್ಟು ಮಂದಿ ಕೆಲಸಗಾರರೂ, ತೀರ ಅವಶ್ಯವೋ ಅಷ್ಟುಮಂದಿಯನ್ನು ಮಾತ್ರ ಇಟ್ಟುಕೊಂಡು ಉಳಿದ ಸಿಬ್ಬಂದಿಯನ್ನು ಕಡಿಮೆಮಾಡುವದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ಈ ಮೊದಲೇ ಕೈಕೊಂಡಿದೆ. ನ್ಯೂಯಾರ್ಕ್‌ಪಟ್ಟಣದ ಪೆರಿ ಮತ್ತು ಮಾರ್ಷಲ್ ಕಂಪನಿಯವರು ಈ ಕಾರ್ಖಾನೆಗೆ ಆಲೋಚನೆ ಹೇಳುವ (ಕನ್ಸಲ್ಟಿಂಗ್) ಇಂಜನಿಯರುಗಳಾಗಿರುತ್ತಾರೆ. ಈ ಕಾರ್ಖಾನೆಯ ವೆಚ್ಚವನ್ನು ಮಿತಪಡಿಸುವುದಕ್ಕೂ, ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೂ, ಇನ್ನೂ ಯಾವ ಯಾವ ಏರ್ಪಾಡುಗಳನ್ನು ಮಾಡಬೇಕಾಗಿದೆ ಎಂಬ ವಿಚಾರವನ್ನು ಅವರೊಡನೆ ಆಲೋಚಿಸಿ ಪರಿಶೋಧನೆ ಮಾಡುತ್ತಾ ಇದೆ. ಈ ಕಾರ್ಖಾನೆಯಲ್ಲಿರುವ ಯಂತ್ರಸಾಮಗ್ರಿಗಳನ್ನೂ, ಅಲ್ಲಿ ನಾನಾ ಶಾಖೆಗಳಲ್ಲಿಯೂ ನಡೆಯುವ ಕಾರ್ಯಕಲಾಪಗಳನ್ನೂ ಮಿ|| ಮಾರ್ಷಲ್‌ರವರು ಈಚೆಗೆ ಜಾಗರೂಕತೆಯಿಂದ ಪರಿಶೀಲನೆಮಾಡಿ ನೋಡಿ ಅವುಗಳೆಲ್ಲವೂ ಸಮರ್ಪಕವಾಗಿವೆಯೆಂದು ತಿಳಿಸಿದರು. ಆದರೆ, ಈ ಕಾರ್ಖಾನೆಯಲ್ಲಿ ಕೆಲಸವು ಪ್ರಾರಂಭವಾದಂದಿನಿಂದಲೂ ಇಲ್ಲಿ ತಯಾರಾಗುವ ಪದಾರ್ಥಗಳ ಧಾರಣೆಯು ಏಕಪ್ರಕಾರವಾಗಿ ಇಳಿದುಹೋಗುತ್ತಲೇ ಇದೆ. ಇದು ಕೇವಲ ಶೋಚನೀಯವಾದ ಅಂಶವಾಗಿದೆ. ಹುಟ್ಟುವಳಿಯು ಕಡಿಮೆಯಾದ ವರುಷಗಳಲ್ಲಿ ಕೈಗಾರಿಕೆಗೆ ಒದಗುವಂತೆ ಒಂದು ರಿಜರ್ವ್‌ಫಂಡನ್ನು ಏರ್ಪಡಿಸಿಕೊಳ್ಳಲು ಈ ಕಾರ್ಖಾನೆಗೆ ಏಳಿಗೆಯ ಕಾಲವು ಇದುವರೆಗೂ ದೊರಕೇ ಇಲ್ಲ.

ಇಂಡಿಯಾ ದೇಶದಲ್ಲಿ ಕಬ್ಬಿಣದ ಕೈಗಾರಿಕೆಗೆ ಬಹಳ ಕಷ್ಟದ ವೇಳೆಯು ಒದಗಿದೆ. ಈ ದೇಶದಲ್ಲಿ ಕಬ್ಬಿಣಕ್ಕೆ ಎಷ್ಟು ಗಿರಾಕಿ ಇದೆಯೋ ಅಷ್ಟಕ್ಕಿಂತಲೂ ವಿಶೇಷ ಹೆಚ್ಚಾಗಿ ಕಬ್ಬಿಣವು ತಯಾರಾಗುತ್ತಿದೆ. ಇಲ್ಲಿಗೆ ಬೇಕಾದಷ್ಟು ಕಬ್ಬಿಣವನ್ನು ಇಟ್ಟುಕೊಂಡು ಉಳಿದುದನ್ನು ಇದುವರೆಗೂ ಯಾವ ಸ್ಥಳಗಳಿಗೆ ಕಳುಹಿಸುತ್ತಿದ್ದೆವೋ ಅಲ್ಲಿ ಗಿರಾಕಿಯು ಕಡಿಮೆಯಾಗುತ್ತಿದೆ. ಆದರೂ ಜನಾಂಗದ ಏಳಿಗೆಗೆ ಈ ಕೈಗಾರಿಕೆಯು ಬಹು ಮುಖ್ಯವಾದುದೆಂಬ ಮಾತನ್ನು ಎಷ್ಟು ಹೇಳಿದರೂ ಅತಿಶಯೋಕ್ತಿಯಾಗಲಾರದು. ಆದರೆ, ನಮ್ಮ ಕಬ್ಬಿಣದ ಕಾರ್ಖಾನೆಯ ಈಗಿನ ಸ್ಥಿತಿಯು ಮಾತ್ರ ತೃಪ್ತಿಕರವಾಗಿಲ್ಲ. ಯಾವ ಯಾವ ಏರ್ಪಾಡುಗಳನ್ನು ಮಾಡಿದರೆ ಅದರ ಹುಟ್ಟುವಳಿಯು ಹೆಚ್ಚಿ ಅನುಕೂಲವಾಗಬಹುದೋ ಆ ಎಲ್ಲ ಏರ್ಪಾಡುಗಳನ್ನೂ ಕೈಕೊಳ್ಳಬೇಕೆಂಬ ವಿಚಾರವು ನಾನು ಈ ಮೊದಲೇ ಸೂಚಿಸಿದಂತೆ ಈಗ ತೀವ್ರವಾದ ಪರ್ಯಾಲೋಚನೆಯಲ್ಲಿದೆ.

ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡುವುದಕ್ಕಾಗಿ ಈಗ ನಡೆಯುತ್ತಿರುವ ಹೊಸ ಕಾಮಗಾರಿಯ ಸಂಬಂಧದಲ್ಲಿ ಅವಶ್ಯವಾಗುವ ಕೊಳಾಯಿಗಳನ್ನೂ, ಇಂಡಿಯಾ ದೇಶದ ಇತರ ಕೆಲವು ಪಟ್ಟಣಗಳಿಗೆ ಅವಶ್ಯವಾದ ಕೊಳಾಯಿಗಳನ್ನೂ ಭದ್ರಾವತಿ ಕಾರ್ಖಾನೆಯವರೇ ತಯಾರಿಸಿ ಕಳುಹಿಸುವವರಾಗಿದ್ದಾರೆ. ಆದಕಾರಣ, ಕೊಳಾಯಿಗಳಿಗೆ ಬಹು ಭಾರಿ ಪ್ರಮಾಣದಲ್ಲಿ ಗಿರಾಕಿಯು ದೊರೆತಂತಾಯಿತು.

ಫಾರೆಸ್ಟ್ ಇಲಾಖೆ.

ಪ್ರಸಕ್ತ ವರ್ಷದಲ್ಲಿ ಸುಮಾರು 800 ಎಕರೆಗಳ ಪ್ರದೇಶದಲ್ಲಿ ತೇಗದ ಮರಗಳ ಪ್ಲಾಂಟೇಷನನ್ನು ಏರ್ಪಡಿಸಲಾಯಿತು; ಅಲ್ಲದೆ 400 ಎಕರೆಗಳನ್ನು ಪಾಕಮಾಡಿ, ಅದರಲ್ಲಿ ಸಾದೆಗೆ ಉಪಯೋಗಿಸುವ ಮರಗಳ ಸಸಿಗಳನ್ನೂ, ಹೆಚ್ಚಾಗಿ ಹಣವು ಉತ್ಪತ್ತಿಯಾಗುವ ವಸ್ತುಗಳು ವಸ್ತುಗಳು ದೊರೆಯುವ ಇತರ ಸಸಿಗಳನ್ನೂ ನಾಟಲಾಯಿತು. ಈಗ್ಗೆ ಕೆಲವು ವರುಷಗಳಿಂದಲೂ ಚರ್ಮವನ್ನು ಹದಮಾಡುವುದಕ್ಕೆ ನಮ್ಮ ದೇಶದ ತಂಗಡಿ ಮತ್ತು ತಕ್ಕೆ ಚಕ್ಕೆಗೆ ಬದಲಾಗಿ ವಾಟಲ್ ಚಕ್ಕೆಯನ್ನು ಜನರು ಹೆಚ್ಚುಹೆಚ್ಚಾಗಿ ಉಪಯೋಗಿಸುವುದಕ್ಕೆ ತೊಡಗಿದ್ದಾರೆ. ಆದಕಾರಣ ಈಗ ವಿದೇಶದಲ್ಲಿ ಮಾತ್ರ ಬೆಳೆಯುತ್ತಿರುವ ಈ ಗಿಡವನ್ನು ಇಲ್ಲಿಯೂ ಬೆಳೆಸುವುದು ಯುಕ್ತವೆಂದು ಭಾವಿಸಲ್ಪಟ್ಟಿತು. ಈ ಉದ್ದೇಶದಿಂದ ಗೋಪಾಲಸ್ವಾಮಿ ಬೆಟ್ಟದಲ್ಲಿ ಸಸಿಗಳನ್ನು ಹಾಕಿಸಲಾಯಿತು. ಅಲ್ಲಿ ಈ ಸಸಿಗಳು ಚೆನ್ನಾಗಿ ವೃದ್ಧಿಗೆ ಬಂದುದರಿಂದ, ಈ ಸಸಿಯು ಬೆಳವಣಿಗೆಗೆ ಅನುಕೂಲವಾಗಿರುವ ಪ್ರದೇಶಗಳಲ್ಲಿ ಭಾರಿ ಪ್ಲಾಂಟೇಷನುಗಳನ್ನು ಏರ್ಪಡಿಸಬೇಕೆಂದು ಇದ್ದೇವೆ. ಗಂಧದ ಮರವು ವಿಶೇಷ ಲಾಭದಾಯಕವಾದುದೆಂಬುದು ಗೊತ್ತೇ ಇದೆ. ಆದಕಾರಣ, ಹೊಸದಾಗಿ ಗಂಧದ ಮರಗಳನ್ನು ಬೆಳೆಯಿಸುವುದೂ, "ಸ್ಪೈಕ್" ರೋಗದಿಂದ ನಾಶವಾದ ಗಂಧದ ಮರಗಳಿಗೆ ಬದಲಾಗಿ ಸಾಧ್ಯವಾದಷ್ಟುಗೂ ಬೇರೆ ಗಂಧದ ಸಸಿಗಳನ್ನು ನಾಟುವುದೂ ಅವಶ್ಯಕ. ಆದಕಾರಣ, ಗಂಧದ ಬೀಜಗಳನ್ನು ಬಿತ್ತುವುದಕ್ಕೂ, ಗಂಧದ ಸಸಿಗಳನ್ನು ನಾಟಿ ಬೆಳೆಸುವುದಕ್ಕೂ ವಿಶೇಷವಾಗಿ ಗಮನಕೊಡಲಾಯಿತು.

ಗಂಧದ ಮರಕ್ಕೆ ತಗಲುವ "ಸ್ಪೈಕ್" ರೋಗದ ವಿಷಯದಲ್ಲಿ ಕ್ರಮವಾದ ಪರೀಕ್ಷೆಗಳನ್ನು ನಡೆಯಿಸುವ ಕೆಲಸವು ರಸಾಯನಶಾಖೆ, ಕ್ರಿಮಿಶಾಸ್ತ್ರದ ಶಾಖೆ, ಶಿಲೀಂಧ್ರಶಾಸ್ತ್ರದ ಶಾಖೆ ಮತ್ತು ಸಸ್ಯಶಾಸ್ತ್ರದ ಶಾಖೆ ಈ ಎಲ್ಲ ಶಾಖೆಗಳಲ್ಲಿಯೂ ನಡೆಯುತ್ತಿದೆ. ಈ ಕೆಲಸದಿಂದ ಇದುವರೆಗೆ ದೊರೆತಿರುವ ಫಲಿತಾಂಶಗಳೇನೋ ಬಹು ಚೆನ್ನಾಗಿವೆ. ಆದರೂ, ಗಂಧದ ಮರಗಳಿಗೆ ಈ ರೋಗವು ಬಾರದಿರುವಂತೆ ಮಾಡುವುದಕ್ಕೆ ಅಥವಾ ಇದನ್ನು ಪರಿಹಾರ ಮಾಡುವುದಕ್ಕೆ ತಕ್ಕ ಉಪಾಯವು ಯಾವಾಗ ಕಂಡುಹಿಡಿಯಲ್ಪಡುವುದೆಂದು ಹೇಳುವುದು ಸಾಧ್ಯವಲ್ಲ. ಆದಾಗ್ಯೂ ಈ ವಿಷಯವು ಅತಿ ಪ್ರಾಮುಖ್ಯವಾದುದಾಗಿದೆ. ಏಕೆಂದರೆ, "ಸ್ಪೈಕ್" ರೋಗವು ಬಾರದಂತೆ ತಪ್ಪಿಸುವುದಾದರೆ, ಈ ರೋಗದಿಂದ ಅನೇಕ ಗಂಧದ ಮರಗಳು ನಾಶವಾಗಿ ಈಗ ನಷ್ಟವಾಗುತ್ತಿರುವ ಬಹಳ ಹಣವು ಉಳಿದು ಮಿಗುವಂತಾಗುತ್ತದೆ. ಆದಕಾರಣ, ಈ ರೋಗವನ್ನು ನಿರ್ಮೂಲ ಮಾಡಲು ಸಾಧಕವಾದ ಫಲಿತಾಂಶಗಳು ದೊರೆಯುವವರೆಗೂ ಪರೀಕ್ಷೆಗಳನ್ನು ನಡೆಸುತ್ತಲೇ ಬೇಕಾಗಿದೆ. ಬಳಿಗ, ಸರ್ವೇಮರ, ಯೂಕಲಿಪ್ಟಸ್‌ಮರ, ಅಗುರು ಮರ ಮುಂತಾದ ಮರಗಳಿಗೆ ತಗಲುವ ಬೂಜುರೋಗಗಳ ವಿಷಯವಾಗಿಯೂ, ಕೋಠಿಗಳಲ್ಲಿಯೂ ಮರಕೊಯ್ಯುವ ಕಾರ್ಖಾನೆಗಳಲ್ಲಿಯೂ ದಾಸ್ತಾನ ಮಾಡಲ್ಪಡುವ ಮರಗಳಿಗೆ ತಗಲುವ ಬೂಜುರೋಗಗಳ ವಿಷಯವಾಗಿಯೂ, ಪರೀಕ್ಷೆಗಳು ನಡೆಯುತ್ತಿವೆ. ಮರಗಳೇ ಮುಂತಾದುವುಗಳನ್ನು ಉಪಯೋಗಿಸಿ ನಡೆಯಿಸಬಹುದಾದ ಕೆಲವು ಕೈಗಾರಿಕೆಗಳನ್ನೂ ಸಹ ಪರೀಕ್ಷಿಸುತ್ತಿರಲಾಗಿದೆ.

ಮರದ ದಿಮ್ಮಿಗಳಿಗೂ, ಮರದ ಸಾಮಾನುಗಳಿಗೂ ಗೆದ್ದಲು ಹಿಡಿಯದಂತೆ ಮಾಡುವುದಕ್ಕಾಗಿ ಕ್ರಿಯೋಸೋಟ್ ತೈಲವನ್ನು ಲೇಪಿಸುವ ಯಂತ್ರೋಪಕರಣದ ಕೆಲಸವೂ ಸಹ ಪ್ರಸಕ್ತ ವರ್ಷದಲ್ಲಿ ತೃಪ್ತಿಕರವಾಗಿ ನಡೆಯಿತು. ನಮ್ಮ ಸಂಸ್ಥಾನದ ಘಟ್ಟದ ಪ್ರಾಂತದ ಜಂಗಲುಪ್ರದೇಶಗಳಲ್ಲಿ ಬೆಳೆಯತಕ್ಕ ಕೆಲವು ಜಾತಿ ಚೌಬಿನ ಮರಗಳನ್ನು ಇದುವರೆಗೂ ಯಾವುದಕ್ಕೂ ಉಪಯೋಗಿಸುತ್ತಿರಲಿಲ್ಲ. ಈ ತೈಲವನ್ನು ಲೇಪಿಸಿದಲ್ಲಿ ಅಂಥ ಮರಗಳೂ ಸಹ ಒಳ್ಳೆಯ ಉಪಯೋಗಕ್ಕೆ ಬರುವುವೆಂಬ ಅಂಶವು ಈಗ ನಿದರ್ಶನಕ್ಕೆ ಬಂದಿದೆ. ಕ್ರಿಯೋಸೋಟ್ ತೈಲವನ್ನು ಹಚ್ಚಿದ ಕಾಡುಮರದ ಸ್ಲೀಪರು ದಿಮ್ಮಿಗಳಿಗೆ ಗೆದ್ದಲು ಹಿಡಿಯುವುದಿಲ್ಲ. ಆದಕಾರಣ, ಹೊಸ ರೈಲ್ವೆ ಲೈನುಗಳನ್ನು ದುರಸ್ತಿ ಸ್ಥಿತಿಯಲ್ಲಿ ಇಟ್ಟಿರುವುದಕ್ಕೂ ತೇಗದಮರದ ದಿಮ್ಮಿಗಳಿಗೆ ಬದಲಾಗಿ ಅವುಗಳನ್ನೇ ಉಪಯೋಗಿಸಬಹುದಾಗಿದೆ. ಆದುದರಿಂದ ಹೆಚ್ಚು ವೆಚ್ಚದಲ್ಲಿ ತೇಗದ "ಸ್ಲೀಪರು" ದಿಮ್ಮಿಗಳನ್ನು ಉಪಯೋಗಿಸುವುದಕ್ಕೆ ಬದಲಾಗಿ ಕಾಡುಮರದ ಸ್ಲೀಪರುಗಳನ್ನು ಉಪಯೋಗಿಸಿ ವೆಚ್ಚವನ್ನು ವಿಶೇಷವಾಗಿ ತಗ್ಗಿಸುವ ಮತ್ತೊಂದು ಅನುಕೂಲವೂ ಸಹ ಕ್ರಿಯೋಸೋಟ್ ಯಂತ್ರೋಪಕರಣದಿಂದ ಲಭಿಸುತ್ತದೆ. ಪ್ರಸಕ್ತವರ್ಷದಲ್ಲಿ ಈ ಯಂತ್ರೋಪಕರಣದಿಂದ 3 ಲಕ್ಷ ರೂಪಾಯಿಗಳ ಬೆಲೆಬಾಳುವ ಕೆಲಸವು ನಡೆಯಿತು.

ಫಾರೆಸ್ಟ್ ಇಲಾಖೆಯವರು ಉತ್ತಮವಾದ ಹುಲ್ಲುಗಾವಲುಗಳನ್ನೇರ್ಪಡಿಸುವುದಕ್ಕೂ, ಮೇವಿನ ಸೌಕರ್ಯಗಳನ್ನು ಒದಗಿಸುವುದಕ್ಕೂ ವಿಶೇಷವಾಗಿ ಗಮನಕೊಟ್ಟರು. ಕೋಲಾರ ಡಿಸ್ಟ್ರಿಕ್ಟಿನ ಕೆಲವು ರೇಂಜುಗಳಲ್ಲಿ "ರೋಡ್ಸ್" ಜಾತಿಯ ಹುಲ್ಲನ್ನು ಅಜಮಾಯಿಷಿಗಾಗಿ ಬೆಳೆಯಿಸಿ ನೋಡಿದುದರಲ್ಲಿ ಪ್ರೋತ್ಸಾಹಕರವಾದ ಫಲಿತಾಂಶಗಳು ದೊರೆತುವು. ಕಾಡುಗಳಲ್ಲಿ ಬೆಳೆದ ಹುಲ್ಲು ಒಣಗಿ ವ್ಯರ್ಥವಾಗಿ ಹೋಗದಂತೆ, ಅದನ್ನು ಹದಮಾಡುವುದಕ್ಕಾಗಿ ಕೆಲವು "ಸೈಲೊ" ಗುಣಿಗಳನ್ನೂ ಸಹ ಏರ್ಪಡಿಸಲಾಗಿದೆ. ಆಗಾಗ್ಗೆ ಮೇವು ದೊರೆಯದೆ ಕಷ್ಟವಾಗುವ ಕಡೆಗಳಲ್ಲಿ ದನಗಳಿಗೆ ಈ ಹುಲ್ಲು ಅನುಕೂಲವಾಗಿ ಮೇವಿಗೆ ಒದಗುವುದು. ಶಿವಮೊಗ್ಗ ಡಿವಿಜನ್ನಿನ ಮತ್ತು ಭದ್ರಾವತಿ ಡಿವಿಜನ್ನಿನ ಜಂಗಲುಗಳಲ್ಲಿ ಹುಲ್ಲನ್ನು ಕೊಯ್ದು ಅದನ್ನು ಬಿಸಿಲಿನಲ್ಲಿ ಹದಕ್ಕೆ ಒಣಗಿಸಿ ಶೇಖರಿಸಿ ದಾಸ್ತಾನಾಗಿಟ್ಟುಕೊಳ್ಳಬಹುದಾಗಿದೆ. ಈ ರೀತಿ ಅದನ್ನು ದಾಸ್ತಾನಾಗಿಟ್ಟುಕೊಂಡು, ಮೈದಾನಪ್ರದೇಶಗಳಲ್ಲಿ ದನಗಳಿಗೆ ಮೇವಿಗೆ ಕಷ್ಟವಾದ ಕಾಲಗಳಲ್ಲಿ ಅದನ್ನು ಸರಬರಾಯಿಮಾಡಲು ಏರ್ಪಾಡುಗಳನ್ನು ಮಾಡುವುದು ಯುಕ್ತವೆಂದು ಭಾವಿಸಲಾಯಿತು. ಪ್ರಸಕ್ತವರ್ಷದಲ್ಲಿ ಈ ಏರ್ಪಾಡನ್ನು ಆಚರಣೆಗೆ ತರಲು ಪ್ರಾರಂಭಿಸಲಾಯಿತು.

ಬೆಂಗಳೂರು ಮತ್ತು ಮೈಸೂರು ಸಿಟಿಗಳಂಥ ದೊಡ್ಡ ಪಟ್ಟಣಗಳಲ್ಲಿ ಸೌದೆಯು ಹೆಚ್ಚುಹೆಚ್ಚಾಗಿ ಬೇಕಾಗುತ್ತಿದೆ. ಆದರೆ ಅಂಥ ಪಟ್ಟಣಗಳ ಸಮೀಪದಲ್ಲಿದ್ದ ಸೌದೆಯ ಮರಗಳೆಲ್ಲವೂ ಮುಗಿದುಹೋಗಿವೆ. ಸೌದೆಯು ಜೀವನಕ್ಕೆ ಅತ್ಯವಶ್ಯವಾಗಿ ಬೇಕೇಬೇಕು. ಆದರೆ, ಅಲ್ಲಿ ತಕ್ಕಷ್ಟು ಸೌದೆಯನ್ನು ಒದಗಿಸುವುದು ಕಷ್ಟವಾಗುತ್ತಾ ಬರುತ್ತಿದೆ. ಸುತ್ತುಮುತ್ತಲೂ ಸೌದೆಯು ಹೆಚ್ಚಾಗಿ ಬೇಕಾಗಿರುವ ಕಡೆಗಳಲ್ಲಿಯೂ ವ್ಯವಸಾಯಕ್ಕೆ ಯೋಗ್ಯವಲ್ಲದ ಅಥವಾ ವ್ಯವಸಾಯಕ್ಕೆ ಬೇಕಾಗಿಲ್ಲದ ಜಮೀನುಗಳಲ್ಲಿಯೂ ಸೌದೆಗಾಗಿ ಉಪಯೋಗವಾಗುವ ಮರಗಳ ಪ್ಲಾಂಟೇಷನುಗಳನ್ನು ಏರ್ಪಡಿಸುವ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ. ದೂರಪ್ರದೇಶಗಳಲ್ಲಿ ದೊರೆಯುವ ಸೌದೆಯಿಂದ ಇದ್ದಿಲನ್ನು ತಯಾರ್ಮಾಡಿ ಸರಬರಾಯಿಮಾಡುವುದರಿಂದಲೂ ಸಹ, ಸೌದೆಯು ಸಮರ್ಪಕವಾಗಿ ದೊರೆಯದ ಕಷ್ಟವನ್ನು ತಪ್ಪಿಸಬಹುದಾಗಿದೆ. ಆಯಾ ಸ್ಥಳದ ವಿದ್ಯಮಾನಗಳಲ್ಲಿ ಎಂಥ ಗೂಡುಗಳಲ್ಲಿ ಸೌದೆಯನ್ನು ಸುಟ್ಟರೆ ಶ್ರೇಷ್ಠವಾದ ಇದ್ದಿಲು ದೊರೆಯುವುದೆಂಬುದನ್ನು ಕಂಡುಹಿಡಿಯಲು ಅಜಮಾಯಿಷಿಗಳು ನಡೆಯುತ್ತಿವೆ.

ಅರಗನ್ನು ಮಾಡಲು ಜಾಲಾರಿ ಮರಗಳೇ ಮುಂತಾದುವನ್ನು ಬೆಳೆಯುವ ಪ್ರದೇಶವು ಕ್ರಮೇಣ ಹೆಚ್ಚುತ್ತಿದೆ. 1928-29ನೆಯ ಸಾಲಿನಲ್ಲಿ 850 ಮಣಗಳ ಅರಗು ದೊರೆತುದಕ್ಕೆ 1929-30ನೆಯ ಸಾಲಿನಲ್ಲಿ 1,025 ಮಣಗಳ ಅರಗು ದೊರೆಯಿತು. ಅರಗಿನ ಕೆಲಸಕ್ಕಾಗಿ ಏರ್ಪಟ್ಟಿರುವ ಕಾರ್ಖಾನೆಯಲ್ಲಿ ಶುದ್ಧಿಮಾಡಿದ ಅರಗು, ಬಣ್ಣದ ಮತ್ತು ಬಣ್ಣವಿಲ್ಲದ ಮೆರುಗು (ಪಾಲಿಷ್), ಮೊಹರು ಮಾಡುವ ಅರಗು, ಮತ್ತು ಗುಂಡಿಯ ಅರಗು, ಇವುಗಳು ಈಗ ತಯಾರಾಗುತ್ತಿವೆ. ಅರಗಿನ ಬಣ್ಣವನ್ನು ಹೋಗಲಾಡಿಸಿ ಸ್ವಚ್ಛವಾದ ಅರಗನ್ನು ತಯಾರಿಸುವುದು, ಮರದ ಸಾಮಾನುಗಳಿಗೆ ಪಟಿಡಿಯಲ್ಲಿ ಹಾಕುವ ಅರಗಿನ ಬಣ್ಣದ ಕಡ್ಡಿಗಳನ್ನು ತಯಾರಿಸುವುದು ಮತ್ತು ಇತರ ಸಾಮಾನುಗಳನ್ನು ತಯಾರ್ಮಾಡುವುದು, ಈ ಭಾಗದಲ್ಲಿ ಪ್ರಯೋಗಗಳನ್ನು ನಡೆಸುತ್ತಿದೆ. ಪ್ರಸಕ್ತವರ್ಷದಲ್ಲಿ ಅರಗಿಗೂ ಅರಗಿನ ಸಾಮಾನುಗಳಿಗೂ, ಬೆಲೆಯು ಬಹು ಕಡಿಮೆಯಾಗಿದ್ದುದರಿಂದ ಮಾರಾಟದಿಂದ ಹೆಚ್ಚು ಹಣವು ಬರಲಿಲ್ಲ.

ವಿದ್ಯಾಭ್ಯಾಸ.

ಪ್ರಸಕ್ತ ವರ್ಷದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ರೆಗ್ಯುಲೇಷನ್ನು ಜಾರಿಗೆ ತರಲ್ಪಟ್ಟಿತು. ಪ್ರಾಥಮಿಕ ವಿದ್ಯಾಭ್ಯಾಸದ ಆಡಳಿತವ್ಯವಸ್ಥೆಯನ್ನೂ, ಹತೋಟಿಯನ್ನೂ, ಅದಕ್ಕೆ ದ್ರವ್ಯಸಹಾಯ ಮಾಡುವ ವಿಷಯವನ್ನೂ ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟು ಬೋರ್ಡು ಮುಂತಾದ ಸ್ಥಳೀಯ ಸಂಸ್ಥೆಗಳಿಗೆ ವಹಿಸಿ ವಿದ್ಯಾಭ್ಯಾಸದ ಕಾರ್ಯಕ್ರಮದ ವಿಷಯದಲ್ಲಿಯೂ, ಆಡಳಿತದ ವಿಷಯದಲ್ಲಿಯೂ ಮೇಲ್ವಿಚಾರಣೆಯ, ಮಾರ್ಗದರ್ಶನದ, ಮತ್ತು ಅವರು ಹತೋಟಿಯ ವಿಷಯದಲ್ಲಿಯೂ ಸಮರ್ಪಕವಾದ ಅಧಿಕಾರವನ್ನು ವಿದ್ಯಾಭ್ಯಾಸದ ಇಲಾಖೆಯವರಲ್ಲಿ ಉಳಿಸಿಕೊಳ್ಳುವುದೇ, ಈ ರೆಗ್ಯುಲೇಷನಿನ ಮುಖ್ಯೋದ್ದೇಶವಾಗಿರುತ್ತದೆ. ಈ ಏರ್ಪಾಡು ವಿಶೇಷ ಫಲದಾಯಕವಾದುದಾಗಿಯೂ, ವಿಶೇಷ ಪ್ರಾಮುಖ್ಯವಾದುದಾಗಿಯೂ ಇದೆ. ಈ ಏರ್ಪಾಡನ್ನು ಆಚರಣೆಗೆ ತರುವ ವಿಚಾರವನ್ನು ಆಲೋಚಿಸಿ, ಆರಂಭದಿಂದ ಹಿಡಿದು ಅದು ಆಚರಣೆಗೆ ಬರುವವರೆಗೂ ಕ್ರಮಪಟ್ಟು ನಾನಾ ಕ್ರಮಗಳನ್ನೂ ಸಾಂಗವಾಗಿ ಜರುಗಿಸಿ ಸಫಲರೀತಿಯಲ್ಲಿ ಮುಕ್ತಾಯಗೊಳಿಸಿದ ದೊಡ್ಡ ಹೆಸರು ಗೌರವಾರ್ಹರಾದ ನನ್ನ ಸಹೋದ್ಯೋಗಿಗಳು ರಾಜಮಂತ್ರಪ್ರವೀಣ ಶ್ರೀಮಾನ್ ಕೆ. ಮಾತ್ತನ್‌ರವರಿಗೆ ಸೇರತಕ್ಕದ್ದಾಗಿದೆ. ಅವರು ವಿದ್ಯಾಭ್ಯಾಸವಿಷಯಗಳಲ್ಲಿ ತಮಗಿರುವ ವಿಶೇಷ ತಿಳುವಳಿಕೆಯನ್ನು ವಿನಿಯೋಗಿಸಿ, ಈ ಕಾರ್ಯವನ್ನು ಶ್ರೇಷ್ಠರೀತಿಯಲ್ಲಿ ನೆರವೇರಿಸಿದ್ದಾರೆ.

[ಸಶೇಷ.]

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿದುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಗೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[12]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಕೆರಗು ಕಡೆಗಾಗುವ ಕಾಲಕ್ಕೆ ಕಿಸ್ಸಟ್ಟಿಯಲ್ಲಿ, ಹೊಟ್ಟೆಯ ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಜೀಲಶಂಕರಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪ್ಲಕ್ಷಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜೆಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಮಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಪಂಚಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭಕ್ತಮಂಡಲದಲ್ಲಿ ರಹಕ್ಕೆ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ.

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥಹ ಕಠಿಣತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[27] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜೆ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧೈರ್ಯರಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವೀರ್ಯ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ರತಿಕ್ಕೊಳ್ಳಬೇಕು. ಪಥ್ಯ ಯಾವದನ್ನೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಪೂರ್ಣ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[13]

ಪತ್ತೆ :—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇವರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು— ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ ತೈಲ**ವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ನೋವಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವವು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿಖಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿ ಬಿಡ ... ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ ... ರೂಪಾಯಿ 16—8—0.

☞ ಟಿಸ್ಯು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸೇರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷೆ ಇರುವವರಿಗೆ ಧರ್ಮಾರ್ಥ.

[11] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಲ್ಪವಿದ್ದುದರಿಂದ ಅನೇಕ ಕಡೆಗೆ ಮಂತ್ರಾಕ್ಷತೆಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

[50] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವುವೆಂದರೆ:—ಪಿನಸಿ ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೪೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[14] ಪೋ. ಬಾ. ೫೧೦, ಮದರಾಸು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ರೂ. ಆ. ಪೈ. ಬೆಲೆ ೧ ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ ಕ್ಕೆ	೦—೦—೬
ಸದ್ಯಃ ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರತಕ್ಕ ಫೋಟೋ ಸೈಜು ೧೪×೧೦ ಬೆಲೆ ೧ ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಲಿಂಗಗಳನ್ನು ಪ್ರತಿಷ್ಠಿಸುವ ಫೋಟೊ ೧ ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೧ ಕ್ಕೆ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ .... ಬೆಲೆ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ ಕ್ಕೆ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೩ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು).	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ಅಕ್ಟೋಬರ್ ೧೯೩೦ [ಸಂಚಿಕೆ ೨೬

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟ್ಯಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ನಿಜವೃತ್ತಾಂತನಿದರ್ಶನ.

ಮಹಾಶಯರೇ! ಕೆಲವು ಸದ್ಭಕ್ತರು ಮತ್ತು ಸದ್ಗುರುಗಳು ಈ ಪ್ರಕಾರ ಪತ್ರಮೂಲಕ ವಿಚಾರಿಸುತ್ತಿರುವರು. ಏನೆಂದರೆ— ಬಸವಾರ್ಯಕೌಲೂರು, ಪಂ|| ಬಸವಾರ್ಯಸಾಲಿ ಮೊದಲಾದ ಹೆಸರುಗಳಿಂದ ಹಲವು ನೋಟೀಸುಗಳು ಪಸರಿಸಿರುವವು. ಅವುಗಳನ್ನು ನಿರೀಕ್ಷಿಸಿದರೆ ಆ ಬಸವಾರ್ಯರು ಶಿಷ್ಯಪ್ರಶಿಷ್ಯರುಳ್ಳ ಸಿಂಹಾಸನಾಧಿಕಾರಿಗಳಾಗಿದ್ದಾರಲ್ಲದೆ ವೈದಿಕಾದಿವಿದ್ಯೆಗಳಲ್ಲಿ ಮಹಾ ನಿಪುಣರಿರುವರೆಂದೂ ಪರಮತೇಜಸ್ವಿಗಳಾಗಿರುವರೆಂದೂ ದಿಟ್ಟಿಗೂ ಕಂಡುಬರುತ್ತದೆ. ಅವರ ನೀವು ಆ ಪ್ರಾಂತದವರಾದ್ದರಿಂದ ಅವರ ಬಗ್ಗೆ ನಮಗೆ ತಿಳುಹಿಸಬೇಕೆಂದು ನಮ್ಮ ಕಡೆಗೆ ಅನೇಕ ಪತ್ರಗಳು ಬಂದಿರುತ್ತವೆ.

ಸದ್ಗುಣಮಣಿಮಂಡಿತರೇ! ನಿಮ್ಮಗೆಲ್ಲ ಬೇರೆ ಬೇರೆ ಉತ್ತರವನ್ನು ಕೊಡುವದು ಸಾಧ್ಯವಿಲ್ಲದ್ದರಿಂದ ಪ್ರಭಾಪತ್ರಿಕೆಯಲ್ಲಿ ಅತಿ ಸಂಕ್ಷಿಪ್ತವಾಗಿ ಪ್ರಸಿದ್ಧಿಸಿರುತ್ತೇನೆ. ಕುತೂಹಲಮತಿಯಾದ ನೀವೇ ಅವರ ವಿಷಯವನ್ನರಿತುಕೊಳ್ಳತಕ್ಕದ್ದು.

ಉತ್ತರಾಭಿಲಾಷಿಗಳೇ! ಇವರ ಜನ್ಮ ಗ್ರಾಮವು ತಳಕಲ್ಲು; ಇವರಿಗೆ ಬಸವಯ್ಯ ಮಠಪತಿ ಎಂದೆನ್ನುವರು. ಇವರು ಈಗ ಇರುವಿಸಿರುವ ಕಾಲದೊಳಗಾಗಿ ಒಕ್ಕಲತನ, ವ್ಯಾಪಾರ, ಮಾಸ್ತರಿಕೆ ಇತ್ಯಾದಿ ಉದ್ಯೋಗಗಳನ್ನು ಮಾಡಿರುವದರಿಂದ ಇವರ ಧಂದೆಯು ಇಂಥದೇ ಎಂದು ಹೇಳಲಿಕ್ಕೆ ಬರುವಂತಿಲ್ಲ. ಸದ್ಯಃ ತಮ್ಮ ಊರಲ್ಲಿ (ತಳಕಲ್ಲು) ಶಾಲೆಯನ್ನು ಹಾಕಿಕೊಂಡು ಉದರಂಭರಣ ಮಾಡುತ್ತಿರುವರು. ಕೆಲವು ದಿವಸ ಕೌಲೂರು, ಹಲವು ದಿವಸ ಹಂಚಿನಾಳ ಇತ್ಯಾದಿ ಗ್ರಾಮಗಳಲ್ಲಿದ್ದರು. ಸ್ವಾರ್ಥತೆಯು ದೆಸೆಯಿಂದ ಇವರು ಚಿತ್ರವಿಚಿತ್ರವಾದ ಧಾರ್ಮಿಕ ಚಳವಳಿಗಾರರಾಗಿದ್ದಾರೆ. ಆದರೂ ಜನಗಳು ಇವರ ಮೋಹಪಾಶಕ್ಕೆ ಬೀಳದಿರುವದು ಪರಮಸಂತೋಷವು! ಇವರು ನಿಜವಾದ ಹೆಸರು ಅಡ್ಡಹೆಸರುಗಳಿಂದ ಪ್ರಕಟರಾಗದೆ ಸಾಲಿ-ಆರ್ಯ-ಪಂಡಿತ-ಕೌಲೂರು-ಹಂಚಿನಾಳ ಇವುಗಳಿಂದ ಪ್ರಕಟರಾಗುತ್ತಿದ್ದಾರೆ. ಆದರೂ ಇವರ ಕಾರ್ಯವು ಸಾಧಿಸದಾಗಿದೆ. ಇದಕ್ಕಾಗಿ ಇವರು ಬಹಳ ಚಿಂತಾಕ್ರಾಂತರಾಗಿದ್ದಾರೆಂದು ಹೇಳಬಹುದು. ಜನ್ಮಸಿದ್ಧವಾದ ಮಠಪತಿ ಎಂಬ ನಾಮವನ್ನು ನಿರ್ನಾಮ ಮಾಡಿಕೊಳ್ಳಬೇಕೆಂದು ಯತ್ನಿಸುತ್ತಿರುವದು ಇವರಿಗೆ ಭೂಷಣವಲ್ಲವೆಂದೇ ಹೇಳಬಹುದಾಗಿದೆ. ವೀರಪ್ಪನವರು ಕೆಲವು ದಿವಸ ಮಠಪತಿ ವೃತ್ತಿಯನ್ನು ಮಾಡಿ ಸೊಲಾಪುರದಲ್ಲಿದ್ದು ದಾಸೋಹಂ ಭಾವನೆಯಿಂದ ದಾಸೋಹವನ್ನು ಕೈಕೊಂಡು ಪ್ರಸಾದ ಮಹಿಮೆಯನ್ನು ಜಗತ್ತಿನಲ್ಲಿ ಪ್ರಕಾಶಪಡಿಸಿ ಶಿವಶರಣರೆಂದು ಪ್ರಸಿದ್ಧರಾಗಿ ಮೆರೆದದ್ದು ಇವರಿಗೆ ಗೊತ್ತಿಲ್ಲವೇನು? ಅವರ ಪುಣ್ಯತಿಥಿಯನ್ನು ಇವರು ಪ್ರತಿ ವರ್ಷ ತಪ್ಪದೆ ಮಾಡುತ್ತಿರುವದರಿಂದ ಗೊತ್ತಿರದೇನುಮಾಡೀತು? ಆದುದರಿಂದ ಇವರು ತಮ್ಮ ನಿಜವಾದ ಮಠಪತಿ ಎಂಬ ನಾಮದಿಂದಲೇ ಪ್ರಸಿದ್ಧರಾಗುವ ಕಾರ್ಯವನ್ನು ಕೈಕೊಳ್ಳಬೇಕೆಂದು ಆಶಿಸುತ್ತೇನೆ. ಇದಲ್ಲವೇ ನಿಜವೃತ್ತಾಂತ ನಿದರ್ಶನವು!

ಸಮಾಜಹಿತೇಚ್ಛು.

N. S. Patil.

ನೀತಿಸುಧಾರಸ.

(ಮ|| ಆನವಟ್ಟಿ ರಾಮರಾಯಕವಿ, ಮೈಸೂರು.)

೬. ತೃಪ್ತಿ.

ಧರೆಯೊಳಗೆ ಜನಿಪಂತೆ ನಿನ್ನಂ |
ವಿರಚಿಸಿಹ ದೇವನ ಮಹಿಮೆಯು |
ನೆರೆವಿಚಾರಿಸೆ ಲೋಕಕಚ್ಚರಿಯಾಗಿ ಕಾಣೆವುದು ||
ಅರಿದಿಹೆನು ನಿನ್ನಂತರಂಗದೊ |
ಳಿರುವ ಗುಣಗಳ ಸಾರವಂ ನೀ |
ಪರಿಮಿತಿಯಿಂದೆ ಯೋಚಿಸುವುದಂ ತಿಳಿವ ಶ್ರೀಧರನು ||೧||

ಕಾರಣವ ತೋರಿಸುತ ಮೋದದೆ |
ಕೋರಿದಭಿಲಾಷೆಯನು ಸಲಿಸುವ |
ಭಾರಕರ್ತನ ಸಾಹ್ಯದಿಂ ಕಾರ್ಯಗಳ ಸಾಧಿಸುತ ||
ತೋರುವಾ ಸುಖದುಃಖ ಫಲಗಳ |
ವಾರಗಳ ಯೋಚಿಪೊಡೆ ಮೋದದೆ |
ಧಾರಿಣಿಯೊಳಂ ಗೈದ ಕರ್ಮಕೆ ಫಲಗಳಾಗಿಹುವು ||೨||

ಮನದ ದುಗುಡವು ದಂದುಗವು ನಿನ |
ಗೆನಿತು ಮೇಣೆಂದಿಗವು ಸಂಧಿಪ |
ವೆನುತ ನೀ ಯೋಚಿಸದೆ ಗೈದಿಹ ಕರ್ಮಸಂಕುಲಕೆ ||
ಅನುಗುಣವಾದ ಫಲಗಳಾಗಿರ |
ಲನುದಿನಂ ತಾಳುತ್ತ ಲಿಪ್ತಗನು |
ಮೆನುತ ತೃಪ್ತತೆಯೊಂದಿ ಶಾಂತಿಯನಾಂತುದೊಳ್ಳಿತಲೆ ||೩||

ಒದೆಯುವಾಶಾಯಂತೆ ಫಲಗಳು |
ಬಿಡದೆ ತಾ ಪೊಂದಿಹವು ಮನ್ನುತ |
ಧೃಢಮನವನಾಂತವರಿಗೆ ಕೊರತೆಗಳ ತಿಮ್ಮೂಗುವಲಿ ||
ಪಡೆದ ಧನಮಧಿಕಾರ ಶಾಂತತೆ |
ಗಡಣವಿದು ಸಂಸ್ಕಾರ ಬಲದಿಂ |
ದಡರಿಹವೆನುತ ಭಾವಿಸುತ ಶಾಂತತೆಯಶಾಂತಿಹುದು ||೪||

ಧನಿಕ ಗೊಡಗದ ಕಿನಿಸು ಚಿಂತೆಗೆ |
ಳನಿತು ನಿರ್ಧನ ಪುರುಷಕಾಮೋ |
ಚನೆಗೆ ಕರದಂತವನ ದಂದುಗ ಕಳವಳಂಗಳನು ||
ಇನಿತು ಲೆಕ್ಕಿಸದೆ ತನಗಿಲ್ಲವು |
ಮೆನುವುದೊಂದನೆ ಯೋಚಿಸುತಿರುತ |
ಧನವಿಹೀನತೆ ದುಃಖವಾದದೆ ತೊಳಲಿ ಜೀವಿಪನು ||೫||

ನಾಡೆ ಪೊರಗದೆ ಕಾಣ್ಬ ಸುಖಮಂ |
ನೋಡು ತನ್ನರ ಕರುಬುತಿರೊಡೆ |
ಕೇಡಿಗನು ನೀನೆಂದು ಜನಗಳ ಪಳಿವಿಗೆಡೆಗುಡುವೆ ||
ಕಾಡುತಿಹ ಬೆಸನಗಳು ಚಿತ್ತದೆ |
ಮೂಡಿಹುದ ನೀ ಕಾಣದಾಗಿಹೆ |
ರೂಢಿಯೊಳು ಪಳಿಗೀಡೆನಿಸಿ ಬಾಳ್ವವನು ಬೋಧಿಯಿರೆ ||೬||

ತನಗೆ ದೇವಂ ಪಾಲಿಸಿಪ್ಪುದರ |
ಕನಕ ಕತಿಸಂತಸವ ನಾನುವು |
ದನುಪಮಗುಣಕೆ ಸಾಕ್ಷಿಯಾಗಿರಲಾವ ಮಾನವನು ||
ಧನವನೆನಿತುಂ ವೃದ್ಧಿಗೊಳಿಪುದ |
ಕನಿತು ದುಃಖಾಕ್ರಾಂತನಾಗುತ |
ಮನದೆ ತೃಪ್ತತೆಯಾಂತು ಜೀವಿಪವನು ಮಾನ್ಯನಲೆ ||೭||

ಎನೆವ ಸದ್ಗುಣವಾಂಪುದೆನುತಂ |
ದಸೆಯೊಳಿಮ್ಮನು ಜಗದೊಡೆಯನೇ |
ಮಿಸುಕ ಕಳುಹಿಪ್ಪನೆನೆ ಭಾವಿಸುತವನ ಪೂಜಿಸುತ ||
ಅಸಮ ..... ಪಡೆದು ಮೋಕ್ಷವ |
ನೊಸೆದು ಕುಡುವುದು ಮುಂದು ಪೇಳ್ವುದು |
ಮಿಸುವ ನಿನ್ನ ಕೃತಜ್ಞತೆಗದುವೆ ಸಾಕ್ಷಿಯಾಗಿಹುದು ||೮||

ಸ್ವೀಕಾರ.

ಗದಗ ತಾ|| ಲಿಂಗದಾಳಗ್ರಾಮದ ಮ|| ರಾ|| ನವಲಗುಂದ ಶಂಕರಪ್ಪನವರ ಪುತ್ರಿ ಚಿ|| ಸೌ|| ಪಾರ್ವತವ್ವನನ್ನು ಬೆಟಗೇರಿಯಲ್ಲಿರುವ ಮ|| ರಾ|| ಮುಳ್ಳಾಳಗುಳಪ್ಪನವರ ಪುತ್ರ ಚಿ|| ಅಡವಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವೇ|| ಹೊಸಮಠದ ಕೊಟ್ರಯ್ಯನವರ ಅಭಿಪ್ರಾಯದ ಮೇರೆಗೆ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ ೨ ರೂಪಾಯಿಗಳು ಮ|| ರಾ|| ಉಪವಾಸಿ ಗುರುಪಾದಪ್ಪನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಕಲ್ಕತ್ತಾದ ಮೆಡಿಕಲ್ ಕಾಲೇಜ್ ಹಾಸ್ಪಿಟಲಿನಲ್ಲಿ ಔಷಧ ತೆಗೆದುಕೊಳ್ಳಲು ಬರುತ್ತಿದ್ದ ಅಬಲ ಬಾಲಾದೇವಿ ಎಂಬ ಸ್ತ್ರೀಯಳಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಕದಿಯಲು ಪ್ರಯತ್ನ ಮಾಡಿದನೆಂಬ ತಪ್ಪಿಗೆ ಗುರಿಯಾದ ಸುರೇಂದ್ರನಾಥದತ್ತ ನೆಂಬವನಿಗೆ 18 ತಿಂಗಳು ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನ್‌ಸಾಹೇಬರು ಅಪ್ಪಣೆಕೊಡಿಸಿದ ಭಾಷಣ.

1930 ನೆಯ ಇಸವಿ ಅಕ್ಟೋಬರ್ 3 ನೆಯ ತಾರೀಖು.

[ಕಳೆದ ವಾರದ ಶೇಷ.]

ಗಂಧದ ಎಣ್ಣೆಯ ಕಾರ್ಖಾನೆಗಳು.

ಗಂಧದ ಎಣ್ಣೆಗೆ 1928-29 ನೆಯ ಸಾಲಿನಲ್ಲಿ ಬಂದಷ್ಟು ಗಿರಾಕಿಯು ಹಿಂದೆ ಮತ್ತಾವಾಗಲೂ ಬಂದಿರಲಿಲ್ಲ. ಆ ವರ್ಷದಲ್ಲಿ ನಡೆದ ಗಂಧದ ಎಣ್ಣೆಯ ವ್ಯಾಪಾರಕ್ಕೂ, 1929-30 ನೆಯ ಸಾಲಿನಲ್ಲಿ ನಡೆದ ವ್ಯಾಪಾರಕ್ಕೂ ಹೋಲಿಸಿ ನೋಡಿದರೆ ಪ್ರಸಕ್ತ ಸಾಲಿನಲ್ಲಿ ಬಹಳ ಕಡಿಮೆಯೆಂದು ಹೇಳಬೇಕು. ಭೋಗಪದಾರ್ಥಗಳ ಧಾರಣೆಯು ಕಡಿಮೆಯಾಗಿ ವ್ಯಾಪಾರವು ವಿಶೇಷವಾಗಿ ಬಿದ್ದುಹೋದುದೇ ಈ ರೀತಿಯಾಗಿ ಗಂಧದ ಎಣ್ಣೆಯ ವ್ಯಾಪಾರವು ಕಡಿಮೆಯಾದುದಕ್ಕೆ ಕಾರಣವಾಗಿದೆ. ನಮ್ಮ ದೇಶದ ಕಾರ್ಖಾನೆಗಳಲ್ಲಿ ಈಗ ಮೊದಲಿನಷ್ಟು ಎಣ್ಣೆಯನ್ನು ತಯಾರಿಸದಂತೆ ಅಪ್ಪಣೆಮಾಡಿದ್ದೇವೆ. ಮೈಸೂರು ಸಂಸ್ಥಾನದ ಪರವಾಗಿ "ಟ್ರೇಡ್ ಕಮಿಷನರ್" ಎಂಬ ಅಧಿಕಾರಿಗಳೊಬ್ಬರನ್ನು ಲಂಡನ್ ಪಟ್ಟಣದಲ್ಲಿ ನೇಮಕಮಾಡಿರುವುದು ಸರಿಯಷ್ಟೆ. ನಮ್ಮ ಸಂಸ್ಥಾನದ ಗಂಧದ ಎಣ್ಣೆಗೆ ಯಾವಯಾವ ದೇಶಗಳಲ್ಲಿ ಗಿರಾಕಿಗಳನ್ನು ನಾವು ಇನ್ನೂ ಒದಗಿಸಿಕೊಂಡಿಲ್ಲವೋ ಆ ದೇಶಗಳಲ್ಲಿ ಇದಕ್ಕೆ ಗಿರಾಕಿಯು ಎಷ್ಟರಮಟ್ಟಿಗೆ ಒದಗಬಹುದೆಂಬ ವಿಷಯವನ್ನು ವಿಚಾರಿಸಿ ನೋಡಿ, ತಕ್ಕ ಕ್ರಮವನ್ನು ಜರುಗಿಸುವಂತೆ ಅವರಿಗೆ ಬರೆದಿದ್ದೇವೆ. ಗಂಧದ ಎಣ್ಣೆಯ ಗಿರಾಕಿಯು ಸ್ವಲ್ಪ ಕಾಲಮಾತ್ರ ಕಡಿಮೆಯಾಗಿದ್ದು ಕ್ಷಿಪ್ರದಲ್ಲೇ ಪುನಃ ಹೆಚ್ಚುವ ಸೂಚನೆಯು ತೋರಿಬರುವುದೆಂದು ಪರೀಕ್ಷಿಸಲಾಗಿದೆ. ಕಡಿಮೆ ವೆಚ್ಚದಲ್ಲೇ ಹೆಚ್ಚು ಎಣ್ಣೆಯು ತಯಾರಾಗುವಂತೆ ಮಾಡಬೇಕೆಂಬ ಉದ್ದೇಶದಿಂದ, ಎಣ್ಣೆಯನ್ನು ಭಟ್ಟಿ ಇಳಿಸುವ ಕ್ರಮಗಳನ್ನು ಉತ್ತಮಗೊಳಿಸುವುದಕ್ಕಾಗಿ ಕೆಲವು ಪರಿಶೀಲನೆಗಳು ನಡೆಯುತ್ತಾ ಇವೆ. ಅವುಗಳಿಂದ ಇದುವರೆಗೂ ಬಂದಿರುವ ಫಲಿತಾಂಶಗಳನ್ನು ನೋಡಿದರೆ, ನಮ್ಮ ಪ್ರಯತ್ನವು ಸಫಲವಾಗಬಹುದೆಂಬ ಭರವಸೆಯು ತೋರಿಬರುತ್ತದೆ.

ರೈಲ್ವೇ ಇಲಾಖೆ.

ಶಿವಮೊಗ್ಗೆ—ಅರಸಾಳು ರೈಲ್ವೆ ಲೈನಿನಲ್ಲಿ ಶಿವಮೊಗ್ಗೆಯಿಂದ ರಾಗಿ ಹೊಸಹಳ್ಳಿಯ ವರೆಗೆ 17½ ಮೈಲಿಗಳ ದೂರಕ್ಕೆ ರೈಲು ಹಾಕಲಾಯಿತು. ಈ ರೈಲ್ವೆ ಮಾರ್ಗದಲ್ಲಿ 1930 ನೇ ಏಪ್ರಿಲ್ ತಿಂಗಳ ಲಾಗಾಯಿತು ಆಮದು ರಫ್ತು ನಡೆಯಲು ಉಪಕ್ರಮವಾದುದರಿಂದ, ಸಂಸ್ಥಾನದವರ ಆಡಳಿತದಲ್ಲಿರುವ ರೈಲ್ವೆ ಲೈನಿನ ಒಟ್ಟು ದೂರವು 443.13 ಮೈಲಿಗಳವರೆಗೆ ಹೆಚ್ಚಿತು. ಸಂಸ್ಥಾನದವರ ಆಧೀನದಲ್ಲಿರುವ ಲೈನೂ, ಮದ್ರಾಸ್ ಮತ್ತು ಸದರನ್‌ಮರಾಠಾ ರೈಲ್ವೆ ಕಂಪನಿಯವರ ಆಡಳಿತದಲ್ಲಿರುವ ಲೈನೂ ಎರಡೂ ಸೇರಿ 715 ಮೈಲಿಗಳ ವರೆಗೆ ಆಯಿತು. ಮೈಸೂರು ಸರ್ಕಾರದವರು ಕೆಲಸ ನಡೆಯಿಸುವ ಲೈನುಗಳಿಂದ ವೆಚ್ಚವು ಕಳೆದು ಉಳಿದ ನಿವ್ವಳ ವರಮಾನವು ಪ್ರಸಕ್ತ ವರ್ಷದಲ್ಲಿ 15.04 ಲಕ್ಷ ರೂಪಾಯಿಗಳು ಎಂದರೆ, ಪಸಕ್ತವರ್ಷದಲ್ಲಿ ಅದರ ಹಿಂದಿನವರ್ಷ ಬಂದುದಕ್ಕಿಂತಲೂ ಸ್ವಲ್ಪ ಹೆಚ್ಚುಲಾಭವು ಬಂದಂತಾಯಿತು. ಮದ್ರಾಸ್ ಮತ್ತು ಸದರ್ನ್‌ಮರಾಠಾ ರೈಲ್ವೆ ಕಂಪನಿಯವರು ಕೆಲಸ ನಡೆಯಿಸುವ ಲೈನುಗಳಿಂದ 20.48 ಲಕ್ಷ ರೂಪಾಯಿನ ನಿವ್ವಳ ವರಮಾನವು ಬಂದಿತು.

ಪ್ರಸಕ್ತ ವರ್ಷದಲ್ಲಿ ಈ ಇಲಾಖೆಯಲ್ಲಿ ನಡೆದ ಕಾಮಗಾರಿಗಳ ಪೈಕಿ ಬೀರೂರು—ಶಿವಮೊಗ್ಗ ಶಾಖೆಯಲ್ಲಿ ಕಂಬಿಗಳನ್ನು ಹೊಸದಾಗಿ ಹಾಕುವ ಕೆಲಸವೂ, ರಾಗಿಹೊಸಹಳ್ಳಿಯಿಂದ ಮುಂದಕ್ಕೆ ಅರಸಾಳಿನವರೆಗೆ ಲೈನನ್ನು ಹಾಕಿಸುವ ಕೆಲಸವೂ ಮುಖ್ಯವಾದುವುಗಳಾಗಿವೆ. ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಸಾಮಾನುಗಳ ಮಹಾರಗಳನ್ನೂ, ಪ್ರಯಾಣಿಕರ ಮಹಾರಗಳನ್ನೂ ಹೊಸ ಮಾದರಿಯಲ್ಲಿ ಏರ್ಪಡಿಸುವುದಕ್ಕಾಗಿ ಅಂದಾಜುಗಳನ್ನು ಮುಂಜೂರ್ಮಾಡಲಾಗಿದೆ. ಈ ಕಾಮಗಾರಿಯನ್ನು ಸದ್ಯದಲ್ಲೇ ಉಪಕ್ರಮಿಸಲಾಗುವುದು.

ವಿದ್ಯುಚ್ಛಕ್ತಿಯ ಇಲಾಖೆ.

ವಿದ್ಯುಚ್ಛಕ್ತಿಗೆ ಗಿರಾಕಿಯು ಪಕರ್ರೀತಿಯಲ್ಲಿ ಹೆಚ್ಚುತ್ತಾ ಇದೆ. ಪ್ರಸಕ್ತ ವರ್ಷದಲ್ಲಿ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡಿಸಲು 154 ಯಂತ್ರಸ್ಥಾಪನೆಗಳೂ ವಿದ್ಯುಚ್ಛಕ್ತಿಯ ದೀಪಗಳಿಗಾಗಿ 1,319 ಯಂತ್ರಸ್ಥಾಪನೆಗಳೂ ಹೊಸದಾಗಿ ಏರ್ಪಟ್ಟುವು. ಬೆಂಗಳೂರು, ಮೈಸೂರು ನಗರಗಳಲ್ಲಿಯೂ, ಕೋಲಾರದ ಚಿನ್ನದಗಣಿ ಮುಂತಾದ ಇತರ ಪ್ರದೇಶಗಳಲ್ಲಿಯೂ ಬೀದಿಗಳಲ್ಲಿ ಒಟ್ಟು 8,182 ವಿದ್ಯುಚ್ಛಕ್ತಿ ದೀಪಗಳಿದ್ದುವು. ಅಲ್ಲದೆ ವಿದ್ಯುಚ್ಛಕ್ತಿಯ ಇತರ ದೀಪಗಳಿಗಾಗಿ ಒಟ್ಟು 13,458 ಯಂತ್ರಸ್ಥಾಪನೆಗಳಿರುವಂತಾಯಿತು. ಪ್ರಸಕ್ತವರ್ಷದಲ್ಲಿ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡಿಸಲು ಏರ್ಪಟ್ಟಿದ್ದ ಒಟ್ಟು ಯಂತ್ರಸ್ಥಾಪನೆಗಳ ಸಂಖ್ಯೆಯು 881 ವಿದ್ಯುಚ್ಛಕ್ತಿಯ ಇಲಾಖೆಯಿಂದ ವೆಚ್ಚವು ಕಳೆದು ಉಳಿದ ನಿವ್ವಳ ವರಮಾನವು 31½ ಲಕ್ಷ ರೂಪಾಯಿಗಳು.

ಶಿವನಸಮುದ್ರದಲ್ಲಿ 46,000 ಅಶ್ವಶಕ್ತಿಯುಳ್ಳ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಉದ್ದೇಶದಿಂದ 7 ನೇ ಯಂತ್ರಸ್ಥಾಪನೆಯನ್ನು ಏರ್ಪಡಿಸಲಾಯಿತು. ಇಷ್ಟುಭಾರೀ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಅವಶ್ಯಕವಾದ ಎಲ್ಲ ಸಲಕರಣೆಗಳನ್ನೂ ಈಗ ಒದಗಿಸಿಕೊಳ್ಳಲಾಗಿದೆ. ಮೈಸೂರು ನಗರದಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಸ್ಟೇಷನ್ನಿನ ಕಾಮಗಾರಿಯು ಪೂರೈಸಿ, ಅದರಿಂದ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಕೆಲಸವು ಪ್ರಸಕ್ತ ವರ್ಷದಲ್ಲಿ ಉಪಕ್ರಮವಾಯಿತು. ಮೈಸೂರು ನಗರದ ವಿದ್ಯುಚ್ಛಕ್ತಿಯನ್ನು ನಾನಾ ಭಾಗಗಳಿಗೂ ಹಂಚುವ ಯಂತ್ರೋಪಕರಣಗಳನ್ನು ಹೊಸ ಮಾದರಿಯಲ್ಲಿ ಬದಲಾಯಿಸುವ ಕೆಲಸವು ನಡೆಯುತ್ತಾ ಇದೆ. ಶಿವನಸಮುದ್ರದಿಂದ ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಸಾಗಿಸುವ ಲೈನಿನಲ್ಲಿ ಬಹು ಭಾರೀ ಪ್ರಮಾಣದ ವಿದ್ಯುಚ್ಛಕ್ತಿಯು ಸಾಗಬೇಕಾಗಿದೆ. ಆದುದರಿಂದ ಅದಕ್ಕೆ ತಕ್ಕಹಾಗೆ ಈ ಲೈನನ್ನು ಹೊಸಮಾದರಿಯಲ್ಲಿ ಏರ್ಪಡಿಸುವ ಕೆಲಸವನ್ನು ಕ್ಷಿಪ್ರದಲ್ಲೇ ಕೈಕೊಳ್ಳಲಾಗುವುದು. ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡುವ ಹೊಸ ಏರ್ಪಾಡಿನ ಪೈಕಿ ವಿದ್ಯುಚ್ಛಕ್ತಿಯ ಇಲಾಖೆಗೆ ಸಂಬಂಧಪಟ್ಟ ಭಾಗದ ಕಾಮಗಾರಿಗೆ ಸುಮಾರು 7½ ಲಕ್ಷ ರೂಪಾಯಿನ ಲಾಗುವತು ತಗಲುವುದಾಗಿದೆ. ಈ ಇಲಾಖೆಯವರು ಈಗ ನಡೆಯಿಸುತ್ತಿರುವ ಕಾಮಗಾರಿಗಳ ಪೈಕಿ ಇದೊಂದು ಮುಖ್ಯವಾದ ಭಾರಿ ಕಾಮಗಾರಿಯಾಗಿದೆ.

ತಂತಿಯ ಮೂಲಕ ಮಾತನಾಡುವ ಏರ್ಪಾಡಿನಲ್ಲಿ "ಆಟೊಮ್ಯಾಟಿಕ್ ಟೆಲಿಫೋನ್" ಎಂಬ ನವೀನ ಕ್ರಮವು ಪ್ರಸಕ್ತ ವರ್ಷದಲ್ಲಿ ಪ್ರಾರಂಭವಾಯಿತು. ಈ ಕ್ರಮದ ಪ್ರಕಾರ, ಬೆಂಗಳೂರಿಗೂ ಮತ್ತು ಮೈಸೂರಿಗೂ ಒಂದು ಮುಖ್ಯ ಲೈನನ್ನು ಏರ್ಪಾಡು ಮಾಡಿದೆ. ಇದರ ಸಹಾಯದಿಂದ ಮಾತನಾಡಲಪೇಕ್ಷಿಸುವವರು ಸ್ವಲ್ಪ ಫೀಜನ್ನು ಕೊಟ್ಟರೆ ಈ ಲೈನಿನಲ್ಲಿ ಪ್ರಯೋಜನವನ್ನು ಹೊಂದಿ ಮಾತನಾಡಿಕೊಳ್ಳುವುದಕ್ಕೆ ಅವಕಾಶವು ದೊರೆಯುವುದು.

ವ್ಯವಸಾಯದ ಇಲಾಖೆ.

ಕ್ರಿಮಿಕೀಟ ವಿಷಯಕವಾದ ಶಾಸ್ತ್ರದ ಶಾಖೆಯವರು ಕಂಬಳಿಹುಳುಗಳ ಹಾವಳಿಯನ್ನು ತಪ್ಪಿಸಿ ಹತೋಟಿಗೆ ತರುವ ಕೆಲಸವನ್ನು 200 ಗ್ರಾಮಗಳಲ್ಲಿ ನಡೆಯಿಸಿದರು. ಕಬ್ಬು, ಕಾಫಿ, ಜೋಳ ಬತ್ತ ಮತ್ತು ಅವರೆ—ಈ ಬೆಳೆಗಳಿಗೆ ಬೀಳುವ ಕ್ರಿಮಿಕೀಟಗಳ ಹಾವಳಿಯನ್ನು ತಪ್ಪಿಸಿ ಹತೋಟಿಗೆ ತರುವ ಕೆಲಸಗಳೂ ಜಮೀನುಗಳಲ್ಲಿ ಭಾರಿ ಪ್ರಮಾಣದಲ್ಲಿ ನಡೆದುವು. ಪಾಪಾಸುಕಳ್ಳಿಯನ್ನು ನಿರ್ಮೂಲವಮಾಡುವ ಕೆಲಸವನ್ನು 100 ಗ್ರಾಮಗಳಲ್ಲಿ ನಡೆಯಿಸಲಾಯಿತು. ಅಲ್ಲಿ ಪಾಪಾಸುಕಳ್ಳಿಯನ್ನು ನಾಶಮಾಡಲು ಅನುಸರಿಸಿದ ವಿಧಾನವು ಬಹಳ ಫಲಕಾರಿಯಾಗಿ ಪರಿಣಮಿಸಿತು. ಕಾಡುಗಳ ಪ್ರದೇಶಗಳಲ್ಲಿಯೂ ಅಮೃತಮಹಲ್ ಕಾವಲುಗಳಲ್ಲಿಯೂ ಈ ಪಾಪಾಸುಕಳ್ಳಿಯು ತುಂಬಿಹೋಗಿರುವುದರಿಂದ, ಅಲ್ಲಿಯೂ ಇದೇ ವಿಧಾನವನ್ನೂ ಅನುಸರಿಸಿ ಪಾಪಾಸುಕಳ್ಳಿಯನ್ನು ನಿರ್ಮೂಲವಮಾಡುವ ಪ್ರಯತ್ನವು ನಡೆಯುತ್ತಾ ಇದೆ.

ಕೊಳೆರೋಗವು ಬಾರದಂತೆ ಅಡಿಕೆಯ ಮರಗಳಿಗೆ ಔಷಧವನ್ನು ಎರಚುವ ಕೆಲಸವು ಶಿಲೀಂಧ್ರಶಾಸ್ತ್ರ ಶಾಖೆಯವರ ಮೇಲ್ವಿಚಾರಣೆಯಲ್ಲಿ ಬಹುಚುರುಕಾಗಿ ನಡೆಯುತ್ತಾ ಇದೆ. ಪ್ರಸಕ್ತ ವರ್ಷದಲ್ಲಿ ಮೊದಲಿಗಿಂತಲೂ ಹೆಚ್ಚು ಸಂಖ್ಯೆಯ ತೋಟಗಳಲ್ಲಿ ಅಡಿಕೆಯ ಮರಗಳಿಗೆ ಈ ಔಷಧವನ್ನು ಎರಚಲಾಯಿತೆಂದು ವರದಿಯಾಗಿದೆ. ಕೊಳೆರೋಗ ತಗಲಿದ ಪ್ರದೇಶಗಳಲ್ಲಿ ಅಡಿಕೆಯ ತೋಟಗಳಿಗೆ ಔಷಧವನ್ನು ಕ್ರಮವಾಗಿ ಎರಚಿದುದರಿಂದ ರೋಗವು ಕಾಲವಿಹಾರಿ ಕೊನೆಕೊನೆಗೆ ಹರಿದೋರುವಂತೆ ಆಗಿದೆ. ಆದುದರಿಂದ ರೋಗನಿವಾರಣೆಗಾಗಿ ಔಷಧವನ್ನೆರಚುವ ವೆಚ್ಚವು ಕಡಿಮೆಯಾಗಿ ಪ್ರಯೋಜನವು ಮಾತ್ರ ಹೆಚ್ಚಿದುದು, ಇದರ ಫಲಿತಾಂಶವಾದಂತಾಯಿತು. ಕಾಫಿಗಿಡಕ್ಕೆ ತಗಲುವ ಕಾಡಿಗೆ ರೋಗ ಮತ್ತು ಎಲೆಯ ರೋಗಗಳು ಬಾರದಂತೆ ಕಾಫಿ ತೋಟಗಳಿಗೆ ಔಷಧವನ್ನು ಎರಚುವ ಕೆಲಸವು ಬಹಳವಾಗಿ ಹೆಚ್ಚಿರುತ್ತದೆ. ಕಾಫಿಪ್ಲಾಂಟರುಗಳೂ, ಅಡಿಕೆಯ ತೋಟಗಳ ಯಜಮಾನರೂ, ಮತ್ತು ಇತರರೂ ತಮ್ಮ ಪೈರುಗಳಿಗೆ ತಗಲುವ ರೋಗಗಳ ನಿವಾರಣಾರ್ಥವಾಗಿ, ಅತ್ಯಲ್ಪವಾದ ಹಣವನ್ನು ವೆಚ್ಚಮಾಡುವುದರಿಂದಲೇ ಅದಷ್ಟು ಹೆಚ್ಚಾಗಿ ಈ ರೋಗಗಳ ಹಾವಳಿಯನ್ನು ತಗ್ಗಿಸುವ ಪ್ರಯತ್ನವನ್ನು ಮಾಡಬೇಕಾದುದು ಆವಶ್ಯಕ. ಅವರು ಈ ರೀತಿ ಮಾಡಬೇಕಾದರೆ, ಯಾವ ಕ್ರಮವನ್ನನುಸರಿಸಬೇಕು ಮತ್ತು ಯಾವ ಔಷಧವಸ್ತುಗಳನ್ನು ಹೇಗೆ ಉಪಯೋಗಿಸಬೇಕು ಎಂಬ ವಿಷಯದಲ್ಲಿ ಅವರಿಗೆ ತಿಳುವಳಿಕೆಯುಂಟಾಗಬೇಕು. ಹಾಗೆ ಅವರಿಗೆ ತಿಳುವಳಿಕೆಯುಂಟಾಗುವಂತೆ ಇಲಾಖೆಯವರು ಅವರಿಗೆ ತಕ್ಕ ಸಲಹೆಗಳನ್ನು ಕೊಡಲು ಅನುಕೂಲಿಸಬೇಕೆಂಬ ಉದ್ದೇಶದಿಂದ, ಗಿಡಗಳಿಗೆ ಎರಚುವ ಔಷಧವಸ್ತುಗಳ ವಿಷಯದಲ್ಲಿಯೂ ಅವುಗಳನ್ನು ಎರಚುವ ಯಂತ್ರೋಪಕರಣಗಳ ವಿಷಯದಲ್ಲಿಯೂ ಮತ್ತು ಈ ಕೆಲಸಕ್ಕೆ ಬೇಕಾದ ಇತರ ಸಲಕರಣೆಗಳ ವಿಷಯದಲ್ಲಿಯೂ ಒಂದು ವಿಶೇಷ ಸ್ವಭಾವದ ಪರಿಶೋಧನೆಯನ್ನು ಕೈಕೊಳ್ಳಲಾಗಿದೆ.

ಸಸ್ಯಶಾಸ್ತ್ರ ಶಾಖೆಯವರು ಮಾಡಿದ ಕೆಲಸದ ಫಲಿತಾಂಶವಾಗಿ, ಹೆಚ್ಚು ಫಸಲನ್ನು ಕೊಡುವ ಜಾತಿಗಳ ಪೈರು ರಾಗಿ, ಕಬ್ಬು ಮತ್ತು ಹತ್ತಿ ಇವುಗಳನ್ನು ಬೆಳೆಯುವುದು ಎಲ್ಲೆಲ್ಲಿಯೂ ಪ್ರಚಾರಕ್ಕೆ ಬಂದಿತು. ದೋಷಪರೀಕ್ಷೆಯೇ ಮುಂತಾದುವುಗಳಿಂದ ಹೊಸ ಹೊಸ ಜಾತಿಯ ಪೈರುಗಳನ್ನಿಟ್ಟು ಅವುಗಳಿಂದ ಎಷ್ಟೆಷ್ಟು ಫಸಲು ದೊರೆಯುವುದೆಂಬುದನ್ನು ಅಜಮಾಯಿಷಿ ಮಾಡುತ್ತಾ ಇದೆ. ಹೆಚ್ಚು ಫಸಲನ್ನು ಕೊಡುವ ಹೊಸ ಜಾತಿಯ ನೆಲಗಡಲೆಕಾಯಿ, ಬತ್ತ, ಕಾರುರಾಗಿ, ಜೋಳ ಮತ್ತು ಅಲಸಂದೆ—ಇವುಗಳನ್ನೂ ದೋಷಪರೀಕ್ಷೆಯೇ ಮುಂತಾದುವುಗಳಿಂದ ಕಂಡು ಹಿಡಿದು ವೃದ್ಧಿಪಡಿಸುತ್ತಾ ಇದೆ.

ಪರೀಕ್ಷಾ ಕ್ಷೇತ್ರಗಳಲ್ಲಿ, ಮುಖ್ಯ ಮುಖ್ಯವಾದ ಬೆಳೆಗಳ ವಿಷಯದಲ್ಲಿ ಹೊಸ ಹೊಸ ಜಾತಿಗಳನ್ನು ಕಂಡುಹಿಡಿಯುವುದು, ಯಾವ ಫಸಲು ಯಾವ ಯಾವ ಗೊಬ್ಬರವನ್ನು ಹಾಕಿದರೆ ಎಷ್ಟೆಷ್ಟು ಹುಲುಸಾಗಿ ಬೆಳೆಯುವುದೆಂಬ ವಿಚಾರ, ಮತ್ತು ಅವುಗಳನ್ನು ಬೆಳೆಯಬೇಕಾದ ವಿಧಾನ—ಇವುಗಳ ವಿಷಯದಲ್ಲಿ ಮುಖ್ಯವಾದ ಪರಿಶೋಧನೆಗಳು ನಡೆದುವು. ಅಲ್ಲದೆ ಉತ್ತಮ ವಿಧದ ಬಿತ್ತನೆಯ ಧಾನ್ಯಗಳೇ ಮುಂತಾದುವುಗಳನ್ನೂ ಈ ಕ್ಷೇತ್ರಗಳಿಂದ ಸುತ್ತಮುತ್ತಲಿನ ಪ್ರದೇಶಗಳ ರೈತರಿಗೆ ವಿಕ್ರಯಿಸಲಾಯಿತು. ಉತ್ತಮವಾದ ಬಿತ್ತನೆಯ ಧಾನ್ಯಗಳನ್ನು ಬೆಳೆದು ಜನರಿಗೆ ವಿಕ್ರಯಿಸುವ ಕಾರ್ಯವನ್ನು ನೆರವೇರಿಸುವುದಕ್ಕೆ ಖಾಸಗಿ ಜನರಿಗೆ ಸೇರಿದ ಕ್ಷೇತ್ರಗಳಲ್ಲಿಯೂ ತಕ್ಕ ಏರ್ಪಾಡನ್ನು ಮಾಡುವುದನ್ನು ಪ್ರಸಕ್ತ ವರ್ಷದಿಂದ ಪ್ರಾರಂಭಿಸಲಾಯಿತು. ಹೈನುರಾಗಿಯನ್ನು ಬೆಳೆಯುವ ಮುಖ್ಯ ಪ್ರದೇಶಗಳಲ್ಲಿ ಇಂಥ ಹದಿನೆಂಟು ಕ್ಷೇತ್ರಗಳನ್ನೇರ್ಪಡಿಸಿ, ಬಿತ್ತನೆಗಾಗಿ ಅವುಗಳಲ್ಲಿ ಉತ್ತಮವಾದ ಹೈನುರಾಗಿಯನ್ನು ಬೆಳೆದು ಜನಗಳಿಗೆ ವಿಕ್ರಯಿಸುವಂತೆ ಗೊತ್ತುಮಾಡಲಾಯಿತು. ಈ ಕ್ಷೇತ್ರಗಳ ಮೇಲ್ವಿಚಾರಣೆಯನ್ನು ಸಸ್ಯಶಾಸ್ತ್ರ ಶಾಖೆಯ ಆಫೀಸರುಗಳ ಪೈಕಿ ಬಿತ್ತನೆ ಕಾಳನ್ನು ಹಂಚುವುದಕ್ಕಾಗಿ ನೇಮಕವಾಗಿದ್ದ ಸ್ಪೆಷಲ್ ಆಫೀಸರಿಗೆ ವಹಿಸಲಾಗಿದ್ದಿತು. ಬಿತ್ತನೆಗಾಗಿ ಉಪಯೋಗಿಸಲು ಉತ್ತಮವಾದ ಧಾನ್ಯಗಳನ್ನು ಖಾಸಗಿ ಜನಗಳೇ ಬೆಳೆದು ಇತರರಿಗೆ ವಿಕ್ರಯಿಸುವ ಈ ಬಿತ್ತನೆ ಕ್ಷೇತ್ರಗಳ ಏರ್ಪಾಡು ಹೈನುರಾಗಿಯ ವಿಷಯದಲ್ಲಿ ಫಲಕಾರಿಯಾಗುವ ಪಕ್ಷಕ್ಕೆ, ಈ ಏರ್ಪಾಡನ್ನು ಮುಂದೆ ಬತ್ತ, ಕಾರುರಾಗಿ ಮತ್ತು ನೆಲಗಡಲೆ ಮುಂತಾದ ಇತರ ಪೈರುಗಳ ವಿಷಯಕ್ಕೂ ಅನ್ವಯಿಸುವಂತೆ ಮಾಡಿ ಹೈನುರಾಗಿಯಂತೆಯೇ ಅವುಗಳ ಉತ್ತಮವಾದ ಬಿತ್ತನೆಯ ಬೀಜಗಳೂ ಸಹ ಜನಗಳಿಗೆ ದೊರೆಯುವ ವ್ಯವಸ್ಥೆಯನ್ನುಂಟುಮಾಡಬೇಕೆಂಬ ಉದ್ದೇಶವಿದೆ.

ಬಾಳೆಹೊನ್ನೂರಿನ ಕಾಫಿ ಕ್ಷೇತ್ರದಲ್ಲಿ ನಡೆಯುವ ಕಾರ್ಯಕಲಾಪಗಳು ಪೂರ್ತಿಯಾಗಿ ವೃದ್ಧಿಹೊಂದಿ ಅಲ್ಲಿ ಕೆಲಸ ನಡೆಯುತ್ತಾ ಇದೆ. ಕಾಫಿ ಪೈರಿಗೆ ಆವಶ್ಯಕವಾದ ಗೊಬ್ಬರವು ಎಂಥದಾಗಿರಬೇಕು. ಮತ್ತು ಕಾಫಿಗೆ ತಗಲುವ ರೋಗಗಳನ್ನು ತಪ್ಪಿಸಿ ಹತೋಟಿಗೆ ತರುವ ಬಗೆ ಹೇಗೆ ಎಂಬ ವಿಚಾರಗಳಲ್ಲಿ ಪರಿಶೀಲನೆಗಳು ನಡೆಯುತ್ತಾ ಇವೆ. ಏಲಕ್ಕಿಯ ಬೆಳೆಯ ವಿಚಾರವಾಗಿ ನಡೆಯಬೇಕಾದ ಪರಿಶೋಧನೆಗಳೂ ಪ್ರಾರಂಭವಾಗಿವೆ. ಮೆಣಸಿನ ಪೈರಿನ ವಿಚಾರದಲ್ಲಿ ಮತ್ತೂರು ಕ್ಷೇತ್ರದವರು ಈಗ ನಡೆಸುತ್ತಿರುವ ಪರಿಶೀಲನೆಗಳ ಜೊತೆಗೆ, ಅವರೊಡನೆ ಸ್ನಿಗ್ಧ ಸಂಬಂಧವನ್ನಿಟ್ಟುಕೊಂಡು ಬಾಳೆಹೊನ್ನೂರು ಕ್ಷೇತ್ರದಲ್ಲಿಯೂ ಪರಿಶೀಲನೆಗಳನ್ನು ನಡೆಯಿಸಿ, ಮೆಣಸನ್ನು ಬೆಳೆಯುವುದು ಸಾಧ್ಯವಿದೆಯೋ ಇಲ್ಲವೋ ಎಂಬುದೇ ಮುಂತಾದ ಅಂಶಗಳನ್ನು ಪರೀಕ್ಷಿಸಿ ನೋಡಲಾಗುವುದು.

ಪರಸ್ಪರಸಹಾಯ ಸಂಘಗಳ ಮೂಲಕವೂ ಮತ್ತು ಗ್ರಾಮ ಪಂಚಾಯಿತಿಗಳ ಮೂಲಕವೂ ಸಾರ್ವತ್ರಿಕವಾಗಿ ಎಲ್ಲಾ ಕಡೆಗಳಲ್ಲಿಯೂ ವ್ಯವಸಾಯ ವಿಚಾರದಲ್ಲಿ ಮತ್ತಷ್ಟು ಹೆಚ್ಚಾಗಿ ಸೌಕರ್ಯಗಳನ್ನುಂಟುಮಾಡಿರುವುದು ಪ್ರಸಕ್ತ ವರ್ಷದಲ್ಲಿ ನಡೆದಿರುವ ಬಹು ಮುಖ್ಯವಾದ ಅಭಿವೃದ್ಧಿಕಾರ್ಯವಾಗಿದೆ. ವ್ಯವಸಾಯದ ಮುಟ್ಟುಗಳನ್ನೂ, ಬಿತ್ತನೆಯ ಕಾಳುಗಳನ್ನೂ, ಗೊಬ್ಬರವನ್ನೂ ರೈತರಿಗೆ ಹಂಚುವ ಕೆಲಸದಲ್ಲಿ 1928-29 ನೇ ಸಾಲಿನಲ್ಲಿ 140 ಪರಸ್ಪರಸಹಾಯ ಸಂಘಗಳವರು ಉದ್ಯುಕ್ತರಾಗಿದ್ದು ಸಹಾಯ ಮಾಡಿದ್ದರು. ಆದರೆ ಪ್ರಸಕ್ತ ವರ್ಷದಲ್ಲಿ 176 ಸಂಘಗಳವರು ಈ ಕಾರ್ಯದಲ್ಲಿ ಉದ್ಯುಕ್ತರಾಗಿ ಬಹಳ ಶ್ರಮಪಟ್ಟು ಸಹಾಯ ಮಾಡಿದ್ದಾರೆ. ವ್ಯವಸಾಯ ಕಾರ್ಯಕ್ಕೆ ಆವಶ್ಯಕವಾದ ಈ ಸಾಮಗ್ರಿಗಳನ್ನು ವಿಕ್ರಯಿಸಿ ಜನರಲ್ಲಿ ಬಳಕೆಗೆ ತರುವ ಕೆಲಸವನ್ನು ಇದುವರೆಗೆ ವ್ಯವಸಾಯದ ಇಲಾಖೆಯವರು ನೆರವೇರಿಸುತ್ತಿದ್ದರು. ಈಗ ಪರಸ್ಪರಸಹಾಯ ಸಂಘಗಳವರೇ ಈ ಕೆಲಸವನ್ನು ಬಹುಮಟ್ಟಿಗೆ ವಹಿಸಿಕೊಂಡು, ತಮ್ಮ ತಮ್ಮ ತಾಲ್ಲೂಕುಗಳಲ್ಲಿ ಅದನ್ನು ವಿಚಕ್ಷಣೆಯಿಂದ ನೆರವೇರಿಸುತ್ತಿದ್ದಾರೆ. ಇದಕ್ಕೆ ನಕಾರ್ಯಗಳನ್ನು ಮಾಡುವುದಕ್ಕೋಸ್ಕರ ಮುಖ್ಯವಾಗಿ ಗ್ರಾಮಪಂಚಾಯಿತಿಗಳ ಸಹಾಯವನ್ನು ಪಡೆಯಲುದ್ದೇಶಿಸಲಾಗಿದೆ. ಗ್ರಾಮಪಂಚಾಯಿತಿಗಳವರ ವಶದಲ್ಲಿ ಕನಿಷ್ಠ ಪಕ್ಷ ಒಂದು ಉತ್ತಮವಿಧದ ನೇಗಿಲು ಮತ್ತು ಒಂದು ಕುಂಟೆಯನ್ನಾದರೂ ಇಟ್ಟು, ಅವುಗಳನ್ನು ಬಾಡಿಗೆಗೆ ಕೊಟ್ಟು ನಿದರ್ಶನಮಾಡಿ ತೋರಿಸುವಂತೆ ಮಾಡಬೇಕೆಂಬ ಉದ್ದೇಶವಿದೆ. ಸುಮಾರು 400 ಗ್ರಾಮಪಂಚಾಯಿತಿಗಳವರು ಈ ಕೆಲಸವನ್ನು ಈಗಾಗಲೇ ಕೈಕೊಂಡಿರುವಂತೆ ವರದಿಯಾಗಿದೆ. ಚಾಲ್ತಿಸಾಲಿನಲ್ಲಿ ಇನ್ನೂ 1,000 ಗ್ರಾಮಪಂಚಾಯಿತಿಗಳವರು ಈ ಕೆಲಸವನ್ನು ಪ್ರಾಯಶಃ ವಹಿಸಿಕೊಳ್ಳಬಹುದೆಂತಲೂ ವರದಿಯಾಗಿ. ಪರಸ್ಪರಸಹಾಯ ಸಂಘಗಳವರೂ, ಗ್ರಾಮಪಂಚಾಯಿತಿಗಳವರೂ ಸಹ ವ್ಯವಸಾಯ ಕಾರ್ಯವನ್ನು ಉತ್ತಮಗೊಳಿಸುವ ವಿಚಾರದಲ್ಲಿ ಈ ರೀತಿ ಹೆಚ್ಚುಹೆಚ್ಚಾಗಿ ಆಸಕ್ತಿಯನ್ನು ತೋರಿಸಿ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವುದು ದೊಡ್ಡದೊಂದು ಶುಭಸೂಚನೆಯಾಗಿದೆ. ಇದನ್ನು ನೋಡಿದರೆ, ವ್ಯವಸಾಯವನ್ನು ಬಹು ಕ್ಷಿಪ್ರದಲ್ಲೇ ವಿಶೇಷವಾಗಿ ಅಭಿವೃದ್ಧಿಗೊಳಿಸಬೇಕೆಂಬುದಾಗಿ ಜನರಲ್ಲಿ ಉತ್ಸಾಹವು ಹುಟ್ಟಿರುವ ಅಂಶವು ವ್ಯಕ್ತವಾಗುತ್ತದೆ.

ಅಜ್ಜಂಪುರದ ಹತ್ತಿರ ಪರ್ವತರಾಯನ ಕೆರೆ ಕಾವಲಿನಲ್ಲಿ ಒಂದು ಪಶುಪಾಲನೆಯ ಕ್ಷೇತ್ರವನ್ನು ಏರ್ಪಡಿಸಿರುವುದು ಸರಿಯಷ್ಟೆ. ರಾಸುಗಳ ತಳಿಯನ್ನು ಉತ್ತಮಗೊಳಿಸುವುದಕ್ಕಾಗಿ ಕೈಕೊಂಡ ಪ್ರಯತ್ನಗಳಲ್ಲಿ ಇದು ಬಹು ಮುಖ್ಯವಾದುದು. ಅಮೃತಮಹಲ್ ರಾಸುಗಳಿಂದ ಆರಿಸಿ ತಂದ 200 ರಾಸುಗಳನ್ನು ಈ ಕ್ಷೇತ್ರದಲ್ಲಿ ಈಗ ಸಾಕುತ್ತಿದ್ದಾರೆ. ಶಾಸ್ತ್ರೀಯ ವಿಧಾನದಿಂದ ಉತ್ತಮ ತಳಿಯನ್ನುಂಟುಮಾಡುವ ಕಾರ್ಯವು ಪ್ರಾರಂಭವಾಗಿದೆ. ಇನ್ನು ಮೂರು ವರ್ಷಗಳೊಳಗಾಗಿ, ಈ ಕ್ಷೇತ್ರದಲ್ಲಿ ಸಾಕಿದ ಹೋರಿಗಳು ಸಿದ್ಧವಾಗುವುವೆಂದು ಪರೀಕ್ಷಿಸಲಾಗಿದೆ. ಅದುವರೆಗೆ, ಅಮೃತಮಹಲ್ ಮಂದೆಗಳಲ್ಲಿ ದೊರೆಯುವ ರಾಸುಗಳ ಪೈಕಿ ಅತ್ಯುತ್ತಮವಾದುವುಗಳನ್ನೂ ಆರಿಸಿ, ಅವುಗಳನ್ನು ಈ ಕ್ಷೇತ್ರದಲ್ಲಿ ಪಳಗಿಸಿ, ಅವಶ್ಯಕತೆಗೆ ತಕ್ಕಹಾಗೆ ಅವುಗಳನ್ನು ಸರಬರಾಯಿ ಮಾಡಲಾಗುವುದು.

ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆ.

ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪಿನಲ್ಲಿ ಪ್ರಸಕ್ತವರ್ಷದಲ್ಲಿ ಬಾವಿ ತೋಡುವ ಬೈರಿಗೆಯ ಯಂತ್ರಗಳೂ, ಆಳವಾದ ಭಾವಿಗಳಿಂದ ನೀರನ್ನೆತ್ತುವ ಪಂಪುಗಳೂ, ಇದ್ದಿಲನ್ನು ತಯಾರಿಸುವ ಸಲಕರಣೆಗಳೂ, ಗಂಧದ ಎಣ್ಣೆಯನ್ನು ಭಟ್ಟಿ ಇಳಿಸುವುದರಲ್ಲಿ ಉಪಯೋಗಿಸುವ ಒತ್ತಡದ ಯಂತ್ರೋಪಕರಣಗಳೂ, ಮತ್ತು ನೇಗಿಲಿನ ಭಾಗಗಳೂ ತಯಾರಾದುವು. ಸಾಬೂನಿನ ಕಾರ್ಖಾನೆಗೆ ಸೇರಿದ ಪ್ರಯೋಗಾಲಯದಲ್ಲಿ, ನೂಲಿಗೂ ರೇಷ್ಮೆಗೂ ಗಟ್ಟಿ ಬಣ್ಣವು ಹತ್ತುವಂತೆ ಮಾಡುವುದಕ್ಕಾಗಿ ಉಪಯೋಗವಾದ "ಟರ್ಕಿ ರೆಡ್ ಆಯಿಲ್" ತೈಲ, ವಿಷಕ್ರಿಮಿನಾಶಕ ಸಾಬೂನು, ನ್ಯೂಮೋನಿಯಾ ಮುಂತಾದ ವ್ಯಾಧಿಗಳಲ್ಲಿ ಎದೆಗೆ ಕಟ್ಟುವ "ಆಂಟಿಫ್ಲಾಜಿಸ್ಟಿನ್" ಮುಲಾಮು ಔಷಧಿಗಳಿಗಾಗಿ ಉಪಯೋಗವಾಗುವ "ಪಿಡೋಫಾರಂ" ಧೃತಿ, ಮತ್ತು ನೀರಿಳಿದು ನೆನೆಯದಂತೆ ಮಾಡುವ ಬಟ್ಟೆಗಳು, ಇವುಗಳನ್ನು ತಯಾರಿಸುವ ಭಾಗದಲ್ಲಿ ಪ್ರಯೋಗಗಳು ನಡೆಯುತ್ತಿವೆ. ನೆಯ್ಗೆಯ ಕಾರ್ಖಾನೆಯ ಪ್ರಯೋಗಶಾಲೆಯಲ್ಲಿ ರೇಷ್ಮೆಯನ್ನು ಹುರಿಮಾಡುವುದಕ್ಕೆ ಕೈಯಿಂದಲೇ ನಡೆಸಬಹುದಾದ ಒಂದು ಯಂತ್ರವನ್ನು ನಿರ್ಮಿಸಿದ್ದಾರೆ. ಈ ಯಂತ್ರದಿಂದ ಸಮರ್ಪಕವಾಗಿ ಕೆಲಸ ನಡೆಯುವಂತೆ ಕಂಡುಬಂದಿರುವುದರಿಂದ ರೇಷ್ಮೆಯ ಗೂಡುಗಳಿಂದ ಎಳೆಯನ್ನು ತೆಗೆಯುವುದಕ್ಕಾಗಿ ಕಲ್ಪಿಸಲ್ಪಟ್ಟಿರುವ "ಡೊಮೆಸ್ಟಿಕ್ ಬೇಸಿನ್" ಸಲಕರಣೆಗಳೊಂದಿಗೆ ಇದನ್ನು ಸೇರಿಸಬೇಕೆಂದು ಉದ್ದೇಶಿಸಲಾಗಿದೆ.

ಪಿಂಗಾಣಿಯ "ಇನ್ ಸುಲೇಟರು" ಗಳನ್ನು ತಯಾರಿಸುವುದಕ್ಕಾಗಿ ಒಂದು ಏರ್ಪಾಡು ಈಗಾಗಲೇ ಮಂಜೂರಾಗಿದೆ. ಸಣ್ಣ ಸಣ್ಣ "ಎಲೆಕ್ಟ್ರಿಕ್ ಮೋಟಾರು" ಗಳನ್ನೂ "ಟ್ರಾನ್ಸ್‌ಫಾರ್ಮರು ಗಳನ್ನೂ" ತಯಾರಿಸುವುದಕ್ಕಾಗಿ ಸಲಹೆಗಳು ಬಂದಿವೆ, ಈಗ ಅವು ಸರ್ಕಾರದವರ ತೀವ್ರಾಲೋಚನೆಯಲ್ಲಿವೆ.

ಬೈರಿಗೆ ಯಂತ್ರಗಳಿಂದ ಭೂಮಿಯನ್ನು ಕೊರೆದು ಬಾವಿಗಳನ್ನು ತೋಡಿಸುವುದು ಮತ್ತೊಂದು ಮುಖ್ಯವಾದ ವಿಚಾರ. ಈ ಸಂಬಂಧದಲ್ಲಿ ಇಲಾಖೆಯವರು ವಿಶೇಷ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಬಾವಿಗಳನ್ನು ತೋಡಿಸಿಕೊಡುವ ಶಾಖೆಗೆ ಈಗ ಎಲ್ಲ ಅನುಕೂಲಗಳನ್ನು ಒದಗಿಸಲಾಗಿದೆಯೆಂದು ಹೇಳಬಹುದು. ಇವರು ತೋಡಿಸಿಕೊಟ್ಟಿರುವ ಅನೇಕ ಭಾವಿಗಳಿಂದ ನೀರು ಸರಬರಾಯಾಗುತ್ತದೆ. ಈ ವಿಧದ ಭಾವಿಗಳನ್ನು ತೋಡುವ ಯಂತ್ರಗಳನ್ನು ಕಳುಹಿಸಿಕೊಡಬೇಕೆಂದು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಮನವಿಗಳು ಬರುತ್ತಾ ಇವೆ. ಆದಕಾರಣ, ಹೆಚ್ಚಾಗಿ ಬೈರಿಗೆಯ ಯಂತ್ರಗಳನ್ನು ನಾವು ತಯಾರಿಸಿ ಇಟ್ಟುಕೊಂಡ ಹೊರತು, ಎಲ್ಲ ಕಡೆಗಳಿಗೂ ಇವುಗಳನ್ನು ಕಳುಹಿಸಿಕೊಡುವುದು ಸಾಧ್ಯವಿಲ್ಲ. ಕೆಲವು ಸ್ಥಳಗಳಲ್ಲಿ ಬಾವಿಗಳನ್ನು ಆಳವಾಗಿ ತೋಡಿದರೆ, ಸಾಕಾದಷ್ಟು ನೀರು ಒದಗುವಂತಿದ್ದರೂ, ಬೈರಿಗೆ ಯಂತ್ರಗಳ ಸಹಾಯವಿಲ್ಲದೆ ಇತರ ರೀತಿಗಳಲ್ಲಿ ಬಾವಿಗಳನ್ನು ತೋಡಿಸುವುದು ಅತಿ ಕಷ್ಟವಾಗಿರುತ್ತದೆ. ಆದಕಾರಣ ಇಂಥ ಸ್ಥಳಗಳಿಗೆ ಶುದ್ಧವಾದ ಕುಡಿಯುವ ನೀರು ಸರಬರಾಯಾಗುವಂತೆ ಮಾಡಲು ಡಿಸ್ಟ್ರಿಕ್ಟ್ ಬೋರ್ಡಿನವರು ಸ್ವಂತವಾಗಿ ಬೈರಿಗೆಯ ಯಂತ್ರಗಳನ್ನು ಇಟ್ಟುಕೊಂಡಿರುವುದು ಯುಕ್ತವಾಗಿರುತ್ತದೆ. ಹೀಗೆ ಮಾಡುವುದರಿಂದ ಆ ಯಂತ್ರಗಳ ಉಪಯೋಗವು ಜನಗಳಿಗೆ ಸುಲಭವಾಗಿ ದೊರೆಯುವಂತಾಗುವುದು.

ಕೈಯಿಂದ ನೂಲನ್ನು ತೆಗೆದು ನೇಯುವುದಕ್ಕಾಗಿ ಏರ್ಪಟ್ಟಿರುವ ಬದನವಾಳದ ಖಾದಿ ಕಾರ್ಯಾಲಯದಲ್ಲಿ ಉಪಯುಕ್ತ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ನೂಲುವವರು ಒಟ್ಟಿನಲ್ಲಿ 10,739 ರೂಪಾಯಿಗಳನ್ನೂ, ನೇಯುವವರು 5,979 ರೂಪಾಯಿಗಳನ್ನೂ ಸಂಪಾದಿಸಿದರೆಂದು ಅಂದಾಜು ಮಾಡಲ್ಪಟ್ಟಿದೆ. ಹೆಚ್ಚು ಹೆಚ್ಚು ಹಸನಾದ ಬಟ್ಟೆಯನ್ನು ತಯಾರಿಸುವುದಕ್ಕೆ ವಿಶೇಷ ಗಮನವು ಕೊಡಲ್ಪಟ್ಟಿತು. ಈ ಕಾರ್ಯಾಲಯದಲ್ಲಿ ತಯಾರಾದ ಹತ್ತಿಯನ್ನೆಕ್ಕುವ ಸಲಕರಣೆಗಳನ್ನು ಹತ್ತಿಯಿಂದ ನೂಲುವ ಖಾಸಗಿ ಜನರಿಗೆ ಬಾಡಿಗೆಗೆ ಕೊಡುತ್ತಿರಲಾಯಿತು. ಪ್ರಸಕ್ತವರ್ಷದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯಲ್ಲಿ ಹೊಸದಾಗಿ ಒಂದು ಖಾದಿಕಾರ್ಯಾಲಯವನ್ನು ಏರ್ಪಡಿಸಲಾಯಿತು.

ಜಮೀನು ಅಡಮಾನದ ಬ್ಯಾಂಕು.

ಸಹಕಾರಕ್ರಮದಲ್ಲಿ ಸ್ಥಾಪಿಸಲ್ಪಟ್ಟಿರುವ ಜಮೀನು ಅಡಮಾನದ ಬ್ಯಾಂಕಿನ ಕಾರ್ಯಕಲಾಪಗಳು ಕಳೆದ ಡಿಸೆಂಬರು ತಿಂಗಳಲ್ಲಿ ಪ್ರಾರಂಭವಾದುವು. ಸರ್ಕಾರಿ ಸಾಲಿನ ಅಖೈರಿನ ಹೊತ್ತಿಗೆ ಸುಮಾರು 700 ಮಂದಿ ಈ ಬ್ಯಾಂಕಿನ ಸದಸ್ಯರುಗಳಾಗಿ ಸೇರಿದರು. ಮತ್ತು 35,000 ರೂಪಾಯಿಗಳ ಷೇರು ಮೂಲಧನವೂ ದಾಖಲಾಯಿತು. ಸರ್ಕಾರದವರು ಈ ಬ್ಯಾಂಕಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿದ್ದಾರೆ ಎಂದರೆ, ಬ್ಯಾಂಕಿನವರು ಸಾಲದಲ್ಲಿ ಪಡೆಯಬೇಕೆಂದಿರುವ ಡಿಬೆಂಚರು ಸಾಲಗಳ ಮೂಲಧನಕ್ಕೂ, ಬಡ್ಡಿಗೂ ಅಘೋಷವಿಲ್ಲವೆಂಬುದಾಗಿ ಸರ್ಕಾರದವರು ಖಾತರಿಮಾಡಿಕೊಟ್ಟು ಹೊಣೆಯನ್ನು ವಹಿಸಿದ್ದಾರೆ. ಅಲ್ಲದೆ, ಮೊದಲಿನ ಎರಡು ವರುಷಗಳವರೆಗೆ ಬ್ಯಾಂಕಿನ ಸಿಬ್ಬಂದಿಯ ವೆಚ್ಚವನ್ನು ತಾವೇ ವಹಿಸುವುದಾಗಿಯೂ ಒಪ್ಪಿದ್ದಾರೆ. ಜಮೀನು ಅಡಮಾನದ ಬ್ಯಾಂಕಿನ

ರಿಗೂ ನನಗೂ ಬಹಳ ದಿನದಿಂದಲೂ ದ್ವೇಷವಿತ್ತೆಂದು ಹೇಳಿದರಂತೆ!

ಅಮೇರಿಕೆಯ ಹತ್ತಿರವಿರುವ ಸೌತ್ ಸಿ ಐಲೆಂಡ್ ಎಂಬ ದ್ವೀಪದಮೇಲೆ ಕಳೆದ ಅಕ್ಟೋಬರ್ 21 ನೇ ತಾರೀಖಿನ ದಿವಸ ಪೂರ್ಣ ಸೂರ್ಯಗ್ರಹಣವು ಗೋಚರವಾಯಿತು. ಈ ಪೂರ್ಣ ಸೂರ್ಯಗ್ರಹಣವನ್ನು ನೋಡಿ ಶಾಸ್ತ್ರ ಶೋಧವನ್ನು ನಡೆಯಿಸಲು ಹೋಗಿದ್ದ ವೈಜ್ಞಾನಿಕರು 41 ಗ್ರಹಣದ ಫೋಟೋಗಳನ್ನು ತೆಗೆದಿದ್ದಾರೆ. ಈ ಪೂರ್ಣ ಸೂರ್ಯಗ್ರಹಣವು 93½ ಸೆಕೆಂಡುಗಳ ಕಾಲವಿದ್ದಿತಂತೆ!

ಬರುವ ಡಿಸೆಂಬರಿನೊಳಗಾಗಿ ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳ ಸಂಖ್ಯೆ 30 ಲಕ್ಷಕ್ಕೇರುವುದಂತೆ! ಈಗಿನ ಕೂಲಿಕಾರ ಸರಕಾರದವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವೆವೆಂದು ಜನರಿಗೆ ಅಭಯವಿತ್ತಿದ್ದರು. ಆದರೆ ಅವರ ಅಭಯವಚನದಂತೆ ನಿರುದ್ಯೋಗವು ಕಡಿಮೆಯಾಗದೆ ಮತ್ತಷ್ಟು ಹೆಚ್ಚುದುದರಿಂದ ಕೆಲಸಗಾರ ಮಂತ್ರಿಮಂಡಲವು ಶೀಘ್ರದಲ್ಲಿಯೇ ಕುಸಿದುಬೀಳುವ ಹಾಗಿದೆಯೆಂದು ವರ್ತಮಾನವಿದೆ.

ಒಂದು ಮೊಕದ್ದಮೆಗೆ ಸೇರಿದ್ದ ಒಬ್ಬ ಮನುಷ್ಯನು ಕಂಬೆರಲ್ಲಿ ಕೋರ್ಟನ್ನು ಬಿಟ್ಟು ತನ್ನ ವಕೀಲನೊಡನೆ ಬರುತ್ತಿದ್ದ ಸಮಯದಲ್ಲಿ ದಾರಿಯಲ್ಲಿ ಅವಿತುಕೊಂಡಿದ್ದ ಒಬ್ಬ ಮನುಷ್ಯನು ಒಂದು ಬಾಂಬನ್ನು ಎಸೆದು ತನ್ನ ಎದುರು ಕಕ್ಷಿಗಾರನನ್ನು ಕೊಂದನು. ಆ ಮೇಲೆ, ಬಾಂಬನ್ನು ಎಸೆದವನು, ಎದುರು ಕಕ್ಷಿಗಾರನು ತನ್ನನ್ನು ಸ್ಥಳದಿಂದ ಹೊರಡಿಸಲು ಪ್ರಯತ್ನ ಪಟ್ಟದ್ದಕ್ಕಾಗಿ ಕೊಂದು ಹಾಕಿರುವೆನೆಂದು ಮ್ಯಾಜಿಸ್ಟ್ರೇಟರ ಮುಂದೆ ತಾನೇ ಹೇಳಿಕೊಂಡನಂತೆ!

ಮ್ಯೂನಿಕ್ ಪಟ್ಟಣದಲ್ಲಿ ನಾಟಕದ ಒಂದು ಹುಡುಗಿಯು ಒಂದು ಕಚೇರಿಯಲ್ಲಿ ಕೆಲಸಕ್ಕೆಂದು ಹೋದಳು. ಅವಳ ಮೇಲಿನ ಅಧಿಕಾರಿಯು ಅವಳ ಕೆಲವು ಕಾಗದಗಳನ್ನು ತೆಗೆದುಕೊಂಡು ಅವಳು ತನಗೆ ಮುದ್ದು ಕೊಟ್ಟ ಹೊರತು ವಾಪಸು ಕೊಡುವುದಿಲ್ಲವೆಂದನು. ಆಗ್ಗೆ ಅವಳು ವಿಧಿಯಿಲ್ಲದೆ ಮುದ್ದನ್ನು ಕೊಟ್ಟು ಈ ವಿಷಯವನ್ನು ಪೋಲೀಸರಿಗೆ ತಿಳುಹಿಸಿದಳು. ಇದರ ಸಲುವಾಗಿ ಅವನಿಗೆ ಕೆಲಸವು ಹೋದುದಲ್ಲದೆ 12 ತಿಂಗಳ ಕಾರಾಗೃಹ ಶಿಕ್ಷೆಯೂ ಆಯಿತು.

ಅಲಹಾಬಾದ್ ಪಟ್ಟಣದಲ್ಲಿ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ 144 ನೇ ಕಾನೂನನ್ನು ಉಲ್ಲಂಘಿಸಿ, ಪಂಡಿತ ಜವಹರಲಾಲ್ ನೆಹರುರವರು ಪುರುಷೋತ್ತಮದಾಸ ಮೈದಾನಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ರಾಜದ್ರೋಹಕರವಾದ ಭಾಷಣ ಮಾಡಿದರೆಂಬ ಆರೋಪದ ಮೇಲೆ ಪೋಲೀಸರು ಅವರನ್ನು ತಾ|| 19 ರಲ್ಲಿ ದಸ್ತಗಿರಿಮಾಡಿ ನೈನಿ ಜೈಲಿನಲ್ಲಿಟ್ಟಿರುತ್ತಾರೆ. ಸದ್ಯಃ ವಿಚಾರವು ನಡೆಯುತ್ತಲಿದೆ. ನಾಳಿನ ದಿವಸ ಜಡ್ಜ್‌ಮೆಂಟ್ ಹೇಳತಕ್ಕವರಾಗಿದ್ದಾರೆ.

ದೀಪಾವಳಿಯಹಬ್ಬವನ್ನು ಆಚರಿಸುವ ಸಲುವಾಗಿ ಎಲ್ಲಾ ಕೋಮಿನ ಸಾವಿರಾರು ಜನ ಸ್ತ್ರೀಯರು ಮೂರು ಬಣ್ಣದ ಕಾಂಗ್ರೆಸ್ ಬಾವುಟಗಳನ್ನು ಹಿಡಿದು, ಬೊಂಬಾಯಿ ಪಟ್ಟಣದ ಹಿಂದೂ ಮೊಹಲ್ಲೆಯಲ್ಲಿ, ಸುಮಾರು ಅರ್ಧ ಮೈಲು ಉದ್ದದವರೆಗೆ ಮೆರವಣಿಗೆಯನ್ನು ಹೊರಡಿಸಿದರು. ಇವರು ಬೀದಿಗಳಲ್ಲಿ ಹಾಯ್ದು ಹೋಗುವಾಗ "ಕಾಂಗ್ರೆಸ್ ಭವನವು ಚಿರಕಾಲವಿರಲಿ" "ಮಹಾತ್ಮಾ ಗಾಂಧೀಕಿ ಜಯ" ಎಂದು ಉಚ್ಚರಿಸುತ್ತಿದ್ದ ಮಹಾಧ್ವನಿಯು ಗಗನಮಂಡಲವನ್ನು ವ್ಯಾಪಿಸಿತ್ತಂತೆ!

ಬೊಂಬಾಯಿಯಲ್ಲಿ ಪ್ರತಿವರ್ಷ ಅತ್ಯಂತ ವಿಜೃಂಭಣೆಯಿಂದ ನಡೆಯಿಸಲ್ಪಡುತ್ತಿದ್ದ ದೀಪಾವಳಿ ಹಬ್ಬವು ಈ ವರುಷ ಸಾಧಾರಣವಾಗಿ ನೆರವೇರಿತು. ಈ ಸಾರೆ ಪರದೇಶದ ಮದ್ದುಬಾಣ ಪಟಾಕಿಗಳನ್ನು ಜನರು ಯಾರೂ ಕೊಳ್ಳದೆ ಹೋದುದರಿಂದ ಇವು ಅಂಗಡಿಗಳಲ್ಲಿ ರಾಶಿರಾಶಿಯಾಗಿ ಬಿದ್ದಿವೆಯಂತೆ! ಅಂಗಡಿಗಳನ್ನು ಮುಚ್ಚಿದ್ದ ವಿದೇಶೀಯ ಬಟ್ಟೆಯ ವರ್ತಕರು ದೀಪಾವಳಿಯ ಹಬ್ಬದ ದಿವಸ ವರ್ಷದ ಲೆಕ್ಕವನ್ನು ಪೂರ್ತಿ ಮಾಡಿ ಜಮಾ ಖರ್ಚನ್ನು ನೋಡಲು ಮಾತ್ರ ತಮ್ಮ ಅಂಗಡಿಗಳನ್ನು ತೆರೆದಿದ್ದರಂತೆ!

ಬೊಂಬಾಯಿಯಲ್ಲಿ ಪ್ರತಿ ವರ್ಷವೂ ದೀಪಾವಳಿಯ ಕಾಲದಲ್ಲಿ ಪರದೇಶದ ಬಟ್ಟೆಬರೆಗಳೇ ಮೊದಲಾದ ಅನೇಕ ಸಾಮಾನುಗಳು ಬಹಳವಾಗಿ ಖರ್ಚಾಗುತ್ತಿದ್ದುವು. ಈ ವರ್ಷ ಹಾಗೆ ಆಗದಂತೆ ಕಾಂಗ್ರೆಸ್ಸಿನವರು ದೀಪಾವಳಿಯ ಕಾಲದಲ್ಲಿ ಬಹಿಷ್ಕಾರದ ಚಳವಳಿಯನ್ನು ಉಗ್ರವಾಗಿ ನಡೆಸಿದುದರಿಂದ ಪರದೇಶೀ ಸರಕುಗಳ ವ್ಯಾಪಾರವನ್ನು ಮಾಡುತ್ತಿದ್ದ ವರ್ತಕರಿಗೆ ಬಹಳ ನಷ್ಟವುಂಟಾಗಿದೆ. ಕಳೆದ 6 ತಿಂಗಳುಗಳಿಂದಲೂ ಯಾವ ವ್ಯಾಪಾರವೂ ಇಲ್ಲದೆ ದೀಪಾವಳಿಯ ಸಂಭ್ರಮದಲ್ಲಾದರೂ ಅಷ್ಟಿಷ್ಟು ಲಾಭವನ್ನು ಸಂಪಾದಿಸಬೇಕೆಂದಿದ್ದ ವರ್ತಕರು ಭಗ್ನಮನೋರಥರಾದರು.

ಕಾನೂನುಭಂಗ ಮತ್ತು ಕರನಿರಾಕರಣದ ಚಳವಳಿಯ ವಿಷಯವಾಗಿ ಬರೋಡಾ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಸಹಾಯಮಾಡಲು ನಿಶ್ಚಯಿಸಿದ್ದು 9 ನೇ ಆರ್ಡಿನೆನ್ಸ್ ಪ್ರಕಾರ ಅಪರಾಧಿಗಳಾಗಿ ಬ್ರಿಟಿಷ್ ರಾಜ್ಯವನ್ನು ಬಿಟ್ಟು ತಮ್ಮ ದೇಶದಲ್ಲಿ ಸೇರಿಕೊಂಡಿರುವ ಜನರನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಡಿದುಕೊಡುವುದಾಗಿ ಬರೋಡಾ ಸರ್ಕಾರದವರು ನಿಶ್ಚಯಿಸಿರುವರೆಂದೂ, ಬ್ರಿಟಿಷ್ ಪ್ರಾಂತ್ಯದಿಂದ ಬರೋಡೆಗೆ ಹೋಗಿ ಚಳವಳಿಯನ್ನು ನಡೆಯಿಸುವವರನ್ನು ಆ ಸಂಸ್ಥಾನದಿಂದ ಗಡೀಪಾರು ಮಾಡಲು ಆಜ್ಞೆ ಹೊರಟಿರುವುದೆಂದೂ ತಿಳಿದು ಬರುತ್ತದೆ.

ಶ್ರೀ|| ವಿ. ವಿಠಲ್‌ಭಾಯಿ ಪಟೇಲರವರು ಮೂಲವ್ಯಾಧಿಯಿಂದ ನರಳುತ್ತಿರುವರು. ಅವರ ಆರೋಗ್ಯವು ಬಹಳ ಮಟ್ಟಿಗೆ ಕೆಟ್ಟುಹೋಗಿದೆ. ಅವರು ಮಹಾಜನಗಳ ಭೆಟ್ಟಿಮಾಡಬೇಕೆಂದು ಇಚ್ಛೆಪಟ್ಟರೂ ಅಧಿಕಾರಿಗಳು ಅದಕ್ಕೆ ಅವಕಾಶಕೊಡದೆ ಅವರನ್ನು ಏಕಾಂಗಿಯಾಗಿ ಒಂದು ಕೋಣೆಯಲ್ಲಿಟ್ಟಿರುವರಂತೆ! ಜೈಲಿನ ಒಬ್ಬ ಅಧಿಕಾರಿಗಳು ತಮ್ಮ ವಿಷಯದಲ್ಲಿ ಸರಿಯಾಗಿ ನಡೆಯದಿದ್ದಕ್ಕಾಗಿ ವಿ|| ಪಟೇಲರವರು ಅವರಿಗೆ ನೋಟೀಸು ಕೊಟ್ಟಿರುವರಂತೆ! ಒಂದೆರಡು ವಾರದಲ್ಲಿ ಜವಾಬು ಬರದೆಹೋದರೆ ವಿ|| ಪಟೇಲರು ಅವರ ಮೇಲೆ ಮೊಕದ್ದಮೆ ಮಾಡುವರಿದ್ದಾರೆಂದು ತಿಳಿದು ಬರುತ್ತದೆ.

ತಿನ್ನವೆಲ್ಲಿಯಲ್ಲಿ ಡಾ|| ನೋಬಲ್ಸ್ ಎಂಬವರು ಒಂದು ವಿಚಿತ್ರ ಚಿಕಿತ್ಸೆಯನ್ನು ನಡೆಯಿಸಿದರು. ಸುಮಾರು 22 ವರ್ಷದ ಒಂದು ಸುಂದರ ವ್ಯಕ್ತಿಯು ಸ್ತ್ರೀಯಳ ಉಡುಪನ್ನು ಹಾಕಿಕೊಂಡು ಚಿಕಿತ್ಸೆಗೆ ಬಂದಿತು. ಗುಹ್ಯಸ್ಥಾನದ ಪರೀಕ್ಷೆಯು ಮಾಡಲ್ಪಟ್ಟಾಗ ಗಂಡಸಿನ ಲಿಂಗದ ತರಹವೇ ಇತ್ತು. ಸ್ತ್ರೀಲಿಂಗವಿರಲಿಲ್ಲ. ಎದೆಯು ಮಾತ್ರ ಸ್ತ್ರೀಯರಂತೆ ಪ್ರಫುಲ್ಲಿತವಾಗಿರಲಿಲ್ಲ. ಡಾಕ್ಟರರು ಮೂರು ದಿವಸಗಳ ವರೆಗೆ ಪರೀಕ್ಷೆ ಮಾಡಿದರು. ವ್ಯಕ್ತಿಯು ನಿರ್ಧಾರವಾಗಿ ಗಂಡಸೋ ಹೆಂಗಸೋ ಎಂಬುದನ್ನು ಹೇಳುವದು ಅಸಾಧ್ಯವಾಯಿತು. ಡಾಕ್ಟರರು ಕಡೆಗೆ ಆ ವ್ಯಕ್ತಿಗೆ ಮದುವೆಯಾಗಬೇಡವೆಂದು ಉಪದೇಶವನ್ನು ಮಾಡಿದರಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ಐಶ್ವರ್ಯವಂತನಾದ ನ್ಯೂಯಾರ್ಕಿನ (ಅಮೇರಿಕಾದೇಶದ) ಹೆನ್ರಿಫಿಪ್ಸ್ ಎಂಬವನು 715000000 ರೂಪಾಯಿಗಳ ಆಸ್ತಿಯನ್ನು ಬಿಟ್ಟು ಸತ್ತಿರುವನು. ಆಂಡ್ರೂಕಾರ್ನೆಗಿ ಎಂಬ ಸೀಮೆಣ್ಣೆ ದೊರೆಗೆ ಒಂದಾನೊಂದು ಕಾಲದಲ್ಲಿ 1300000000 ರೂ. ಗಳ ಆಸ್ತಿಯಿದ್ದಿತು. ಆದರೆ ಇವನು ತನ್ನ ಆಸ್ತಿಯ ಬಹುಭಾಗವನ್ನು ಧರ್ಮಮಾಡಿದುದರಿಂದ ಸಾಯುವಾಗ ಇವನಲ್ಲಿ ಹೆಚ್ಚು ಹಣವಿರಲಿಲ್ಲ. ಮಿ|| ವಾಂಡರ್‌ಬಿಲ್ಟ್ ಎಂಬವನು ಸಾಯುವಾಗ 52000000 ರೂ. ಗಳ ಆಸ್ತಿಯನ್ನಿಟ್ಟಿದ್ದನು. ಹೆನ್ರಿಪ್ರೈಸ್ ಎಂಬವನು 117000000 ರೂ. ಗಳನ್ನು ವಿದ್ಯಾಭ್ಯಾಸ ಮತ್ತು ಇತರ ಧರ್ಮಕಾರ್ಯಗಳಿಗೆ ಕೊಟ್ಟುದರಿಂದ ಕೊನೆಗೆ ಅವನಿಗೆ 2600000 ರೂ. ಗಳು ಮಾತ್ರ ಉಳಿದುವು. ಇವನು ಹಿಂದೆ ಕೇವಲ ಬಡವನಾಗಿದ್ದು ವಾರಕ್ಕೆ 13 ರೂ. ಗಳ ಸಂಬಳ ತರುವ ಗುಮಾಸ್ತೆ ಕೆಲಸಕ್ಕೆ ಸೇರಿಕೊಂಡವನು. ಅಭಿವೃದ್ಧಿಗೆ ಬರುತ್ತ ಬರುತ್ತ ಕೊನೆಗೆ ಒಂದು ಮಿನಿಟ್ಟಿಗೆ 650 ರೂಪಾಯಿಗಳನ್ನು ಸಂಪಾದಿಸುವಷ್ಟು ಸಮರ್ಥನಾದನಂತೆ! ಸಂಪತ್ತಿಗೆ ಅಮೇರಿಕಾದೇಶವೇ ತವರುಮನೆಯಲ್ಲವೇ?

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನಸಾಹೇಬರು ಅಪ್ಪಣೆಕೊಡಿಸಿದ ಭಾಷಣ.

1930 ನೆಯ ಇಸವಿ ಅಕ್ಟೋಬರ್ 3 ನೆಯ ತಾರೀಖು.

[ಕಳೆದ ವಾರದ ಶೇಷ.]

ಗಂಧದ ಎಣ್ಣೆಯ ಕಾರ್ಖಾನೆಗಳು.

ಗಂಧದ ಎಣ್ಣೆಗೆ 1928 29 ನೆಯ ಸಾಲಿನಲ್ಲಿ ಬಂದಷ್ಟು ಗಿರಾಕಿಯು ಹಿಂದೆ ಮತ್ತಾವಾಗಲೂ ಬಂದಿರಲಿಲ್ಲ. ಆ ವರ್ಷದಲ್ಲಿ ನಡೆದ ಗಂಧದ ಎಣ್ಣೆಯ ವ್ಯಾಪಾರಕ್ಕೂ, 1929-30 ನೆಯ ಸಾಲಿನಲ್ಲಿ ನಡೆದ ವ್ಯಾಪಾರಕ್ಕೂ ಹೋಲಿಸಿ ನೋಡಿದರೆ ಪ್ರಸಕ್ತ ಸಾಲಿನಲ್ಲಿ ಬಹಳ ಕಡಿಮೆಯೆಂದು ಹೇಳಬೇಕು. ಭೋಗಪದಾರ್ಥಗಳ ಧಾರಣೆಯು ಕಡಿಮೆಯಾಗಿ ವ್ಯಾಪಾರವು ವಿಶೇಷವಾಗಿ ಬಿದ್ದುಹೋದುದೇ ಈ ರೀತಿಯಾಗಿ ಗಂಧದ ಎಣ್ಣೆಯ ವ್ಯಾಪಾರವು ಕಡಿಮೆಯಾದುದಕ್ಕೆ ಕಾರಣವಾಗಿದೆ. ನಮ್ಮ ದೇಶದ ಕಾರ್ಖಾನೆಗಳಲ್ಲಿ ಈಗ ಮೊದಲಿನಷ್ಟು ಎಣ್ಣೆಯನ್ನು ತಯಾರಿಸದಂತೆ ಅಪ್ಪಣೆಮಾಡಿದ್ದೇವೆ. ಮೈಸೂರು ಸಂಸ್ಥಾನದ ಪರವಾಗಿ "ಟ್ರೇಡ್ ಕಮಿಷನರ್" ಎಂಬ ಅಧಿಕಾರಿಗಳೊಬ್ಬರನ್ನು ಲಂಡನ್ ಪಟ್ಟಣದಲ್ಲಿ ನೇಮಕಮಾಡಿರುವುದು ಸರಿಯಷ್ಟೆ. ನಮ್ಮ ಸಂಸ್ಥಾನದ ಗಂಧದ ಎಣ್ಣೆಗೆ ಯಾವಯಾವ ದೇಶಗಳಲ್ಲಿ ಗಿರಾಕಿಗಳನ್ನು ನಾವು ಇನ್ನೂ ಒದಗಿಸಿಕೊಂಡಿಲ್ಲವೋ ಆ ದೇಶಗಳಲ್ಲಿ ಇದಕ್ಕೆ ಗಿರಾಕಿಯು ಎಷ್ಟರಮಟ್ಟಿಗೆ ಒದಗಬಹುದೆಂಬ ವಿಷಯವನ್ನು ವಿಚಾರಿಸಿ ನೋಡಿ, ತಕ್ಕ ಕ್ರಮವನ್ನು ಜರುಗಿಸುವಂತೆ ಅವರಿಗೆ ಬರೆದಿದ್ದೇವೆ. ಗಂಧದ ಎಣ್ಣೆಯ ಗಿರಾಕಿಯು ಸ್ವಲ್ಪ ಕಾಲಮಾತ್ರ ಕಡಿಮೆಯಾಗಿದ್ದು ಕ್ಷಿಪ್ರದಲ್ಲೇ ಪುನಃ ಹೆಚ್ಚುವ ಸೂಚನೆಯು ತೋರಿಬರುವುದೆಂದು ನಿರೀಕ್ಷಿಸಲಾಗಿದೆ. ಕಡಿಮೆ ವೆಚ್ಚದಲ್ಲೇ ಹೆಚ್ಚು ಎಣ್ಣೆಯು ತಯಾರಾಗುವಂತೆ ಮಾಡಬೇಕೆಂಬ ಉದ್ದೇಶದಿಂದ, ಎಣ್ಣೆಯನ್ನು ಭಟ್ಟಿ ಇಳಿಸುವ ಕ್ರಮಗಳನ್ನು ಉತ್ತಮಗೊಳಿಸುವುದಕ್ಕಾಗಿ ಕೆಲವು ಪರಿಶೀಲನೆಗಳು ನಡೆಯುತ್ತಾ ಇವೆ. ಅವುಗಳಿಂದ ಇದುವರೆಗೂ ಬಂದಿರುವ ಫಲಿತಾಂಶಗಳನ್ನು ನೋಡಿದರೆ, ನಮ್ಮ ಪ್ರಯತ್ನವು ಸಫಲವಾಗಬಹುದೆಂಬ ಭರವಸೆಯು ತೋರಿಬರುತ್ತದೆ.

ರೈಲ್ವೇ ಇಲಾಖೆ.

ಶಿವಮೊಗ್ಗೆ—ಅರಸಾಳು ರೈಲ್ವೆ ಲೈನಿನಲ್ಲಿ ಶಿವಮೊಗ್ಗೆಯಿಂದ ರಾಗಿ ಹೊಸಹಳ್ಳಿಯ ವರೆಗೆ 17½ ಮೈಲುಗಳ ದೂರಕ್ಕೆ ರೈಲು ಹಾಕಲಾಯಿತು. ಈ ರೈಲ್ವೆ ಮಾರ್ಗದಲ್ಲಿ 1930 ನೇ ಏಪ್ರಿಲ್ ತಿಂಗಳ ಲಾಗಾಯಿತು ಆಮದು ರಫ್ತು ನಡೆಯಲು ಉಪಕ್ರಮವಾದುದರಿಂದ, ಸಂಸ್ಥಾನದವರ ಆಡಳಿತದಲ್ಲಿರುವ ರೈಲ್ವೆ ಲೈನಿನ ಒಟ್ಟು ದೂರವು 443.13 ಮೈಲುಗಳವರೆಗೆ ಹೆಚ್ಚಿತು. ಸಂಸ್ಥಾನದವರ ಆಡಳಿತದಲ್ಲಿರುವ ಲೈನೂ, ಮದ್ರಾಸ್ ಮತ್ತು ಸದರನ್ ಮರಾಠಾ ರೈಲ್ವೆ ಕಂಪನಿಯವರ ಆಡಳಿತದಲ್ಲಿರುವ ಲೈನೂ ಎರಡೂ ಸೇರಿ 715 ಮೈಲುಗಳ ವರೆಗೆ ಆಯಿತು ಮೈಸೂರು ಸರ್ಕಾರದವರು ಕೆಲಸ ನಡೆಯಿಸುವ ಲೈನುಗಳಿಂದ ವೆಚ್ಚವು ಕಳೆದು ಉಳಿದ ನಿವ್ವಳ ವರಮಾನವು ಪ್ರಸಕ್ತ ವರ್ಷದಲ್ಲಿ 15.04 ಲಕ್ಷ ರೂಪಾಯಿಗಳು ಎಂದರೆ, ಪಸಕ್ತವರ್ಷದಲ್ಲಿ ಅದರ ಹಿಂದಿನವರ್ಷ ಬಂದುದಕ್ಕಿಂತಲೂ ಸ್ವಲ್ಪ ಹೆಚ್ಚು ಲಾಭವು ಬಂದಂತಾಯಿತು. ಮದ್ರಾಸ್ ಮತ್ತು ಸದರ್ನ್ ಮರಾಠಾ ರೈಲ್ವೆ ಕಂಪನಿಯವರು ಕೆಲಸ ನಡೆಯಿಸುವ ಲೈನುಗಳಿಂದ 20.48 ಲಕ್ಷ ರೂಪಾಯಿಯ ನಿವ್ವಳ ವರಮಾನವು ಬಂದಿತು.

ಪ್ರಸಕ್ತ ವರ್ಷದಲ್ಲಿ ಈ ಇಲಾಖೆಯಲ್ಲಿ ನಡೆದ ಕಾಮಗಾರಿಗಳ ಪೈಕಿ ಬೀರೂರು—ಶಿವಮೊಗ್ಗ ಶಾಖೆಯಲ್ಲಿ ಕಂಬಿಗಳನ್ನು ಹೊಸದಾಗಿ ಹಾಕುವ ಕೆಲಸವೂ, ರಾಗಿಹೊಸಳ್ಳಿಯಿಂದ ಮುಂದಕ್ಕೆ ಅರಸಾಳವರೆಗೆ ಲೈನನ್ನು ಹಾಕಿಸುವ ಕೆಲಸವೂ ಮುಖ್ಯವಾದುವುಗಳಾಗಿವೆ. ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಸಾಮಾನುಗಳ ವಠಾರಗಳನ್ನೂ, ಪ್ರಯಾಣಿಕರ ವಠಾರಗಳನ್ನೂ ಹೊಸ ಮಾದರಿಯಲ್ಲಿ ಏರ್ಪಡಿಸುವುದಕ್ಕಾಗಿ ಅಂದಾಜುಗಳನ್ನು ಮುಂಜೂರುಮಾಡಲಾಗಿದೆ. ಈ ಕಾಮಗಾರಿಯನ್ನು ಸದ್ಯದಲ್ಲೇ ಉಪಕ್ರಮಿಸಲಾಗುವುದು.

ವಿದ್ಯುಚ್ಛಕ್ತಿಯ ಇಲಾಖೆ.

ವಿದ್ಯುಚ್ಛಕ್ತಿಗೆ ಗಿರಾಕಿಯು ಏಕರೀತಿಯಲ್ಲಿ ಹೆಚ್ಚುತ್ತಾ ಇದೆ. ಪ್ರಸಕ್ತ ವರ್ಷದಲ್ಲಿ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡಿಸಲು 154 ಯಂತ್ರಸ್ಥಾಪನೆಗಳೂ ವಿದ್ಯುಚ್ಛಕ್ತಿಯ ದೀಪಗಳಿಗಾಗಿ 1,319 ಯಂತ್ರಸ್ಥಾಪನೆಗಳೂ ಹೊಸದಾಗಿ ಏರ್ಪಟ್ಟುವು. ಬೆಂಗಳೂರು, ಮೈಸೂರು ನಗರಗಳಲ್ಲಿಯೂ, ಕೋಲಾರದ ಚಿನ್ನದಗಣಿ ಮುಂತಾದ ಇತರ ಪ್ರದೇಶಗಳಲ್ಲಿಯೂ ಬೀದಿಗಳಲ್ಲಿ ಒಟ್ಟು 8,182 ವಿದ್ಯುಚ್ಛಕ್ತಿ ದೀಪಗಳಿದ್ದುವು. ಅಲ್ಲದೆ ವಿದ್ಯುಚ್ಛಕ್ತಿಯ ಇತರ ದೀಪಗಳಿಗಾಗಿ ಒಟ್ಟು 13,458 ಯಂತ್ರಸ್ಥಾಪನೆಗಳಿರುವಂತಾಯಿತು. ಪ್ರಸಕ್ತವರ್ಷದಲ್ಲಿ ವಿದ್ಯುಚ್ಛಕ್ತಿಯಿಂದ ಕೆಲಸ ಮಾಡಿಸಲು ಏರ್ಪಟ್ಟದ್ದ ಒಟ್ಟು ಯಂತ್ರಸ್ಥಾಪನೆಗಳ ಸಂಖ್ಯೆಯು 381 ವಿದ್ಯುಚ್ಛಕ್ತಿಯ ಇಲಾಖೆಯಿಂದ ವೆಚ್ಚವು ಕಳೆದು ಉಳಿದ ನಿವ್ವಳ ವರಮಾನವು 31½ ಲಕ್ಷ ರೂಪಾಯಿಗಳು.

ಶಿವನಸಮುದ್ರದಲ್ಲಿ 46,000 ಅಶ್ವಶಕ್ತಿಯುಳ್ಳ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವ ಉದ್ದೇಶದಿಂದ 7 ನೇ ಯಂತ್ರಸ್ಥಾಪನೆಯನ್ನು ಏರ್ಪಡಿಸಲಾಯಿತು. ಇಷ್ಟುಭಾರೀ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಅವಶ್ಯಕವಾದ ಎಲ್ಲ ಸಲಕರಣೆಗಳನ್ನೂ ಅಲ್ಲಿ ಈಗ ಒದಗಿಸಿಕೊಳ್ಳಲಾಗಿದೆ. ಮೈಸೂರು ನಗರದಲ್ಲಿ ಹೊಸ ಟ್ರಾನ್ಸ್‌ಫಾರ್ಮರ್ ಸ್ಟೇಷನ್ನಿನ ಕಾಮಗಾರಿಯು ಪೂರೈಸಿ, ಅದರಿಂದ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಕೆಲಸವು ಪ್ರಸಕ್ತ ವರ್ಷದಲ್ಲಿ ಉಪಕ್ರಮವಾಯಿತು. ಮೈಸೂರು ನಗರದ ವಿದ್ಯುಚ್ಛಕ್ತಿಯನ್ನು ನಾನಾ ಭಾಗಗಳಿಗೂ ಹಂಚುವ ಯಂತ್ರೋಪಕರಣಗಳನ್ನು ಹೊಸ ಮಾದರಿಯಲ್ಲಿ ಬದಲಾಯಿಸುವ ಕೆಲಸವು ನಡೆಯುತ್ತಾ ಇದೆ. ಶಿವನಸಮುದ್ರದಿಂದ ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಸಾಗಿಸುವ ಲೈನಿನಲ್ಲಿ ಬಹು ಭಾರೀ ಪ್ರಮಾಣದ ವಿದ್ಯುಚ್ಛಕ್ತಿಯು ಸಾಗಬೇಕಾಗಿದೆ. ಆದುದರಿಂದ ಅದಕ್ಕೆ ತಕ್ಕಹಾಗೆ ಈ ಲೈನನ್ನು ಹೊಸಮಾದರಿಯಲ್ಲಿ ಏರ್ಪಡಿಸುವ ಕೆಲಸವನ್ನು ಕ್ಷಿಪ್ರದಲ್ಲೇ ಕೈಕೊಳ್ಳಲಾಗುವುದು. ಬೆಂಗಳೂರು ನಗರಕ್ಕೆ ನೀರು ಸರಬರಾಯಿ ಮಾಡುವ ಹೊಸ ಏರ್ಪಾಡಿನ ಪೈಕಿ ವಿದ್ಯುಚ್ಛಕ್ತಿಯ ಇಲಾಖೆಗೆ ಸಂಬಂಧಪಟ್ಟ ಭಾಗದ ಕಾಮಗಾರಿಗೆ ಸುಮಾರು 7½ ಲಕ್ಷ ರೂಪಾಯಿಯ ಲಾಗುವಾತು ತಗಲುವುದಾಗಿದೆ. ಈ ಇಲಾಖೆಯವರು ಈಗ ನಡೆಯಿಸುತ್ತಿರುವ ಕಾಮಗಾರಿಗಳ ಪೈಕಿ ಇದೊಂದು ಮುಖ್ಯವಾದ ಭಾರಿ ಕಾಮಗಾರಿಯಾಗಿದೆ.

ತಂತಿಯ ಮೂಲಕ ಮಾತನಾಡುವ ಏರ್ಪಾಡಿನಲ್ಲಿ "ಆಟೋಮ್ಯಾಟಿಕ್ ಟೆಲಿಫೋನ್" ಎಂಬ ನವೀನ ಕ್ರಮವು ಪ್ರಸಕ್ತ ವರ್ಷದಲ್ಲಿ ಪ್ರಾರಂಭವಾಯಿತು. ಈ ಕ್ರಮದ ಪ್ರಕಾರ, ಬೆಂಗಳೂರಿಗೂ ಮತ್ತು ಮೈಸೂರಿಗೂ ಒಂದು ಮುಖ್ಯ ಲೈನನ್ನು ಏರ್ಪಾಡುಮಾಡಿದೆ. ಇದರ ಸಹಾಯದಿಂದ ಮಾತನಾಡಲಪೇಕ್ಷಿಸುವವರು ಸ್ವಲ್ಪ ಫೀಜನ್ನು ಕೊಟ್ಟರೆ ಈ ಲೈನಿನಲ್ಲಿ ಪ್ರಯೋಜನವನ್ನು ಹೊಂದಿ ಮಾತನಾಡಿಕೊಳ್ಳುವುದಕ್ಕೆ ಅವಕಾಶವು ದೊರೆಯುವುದು

ವ್ಯವಸಾಯದ ಇಲಾಖೆ.

ಕ್ರಿಮಿಕೀಟ ವಿಷಯಕವಾದ ಶಾಸ್ತ್ರದ ಶಾಖೆಯವರು ಕಂಬಳಿಹುಳುಗಳ ಹಾವಳಿಯನ್ನು ತಪ್ಪಿಸಿ ಹತೋಟಿಗೆ ತರುವ ಕೆಲಸವನ್ನು 200 ಗ್ರಾಮಗಳಲ್ಲಿ ನಡೆಯಿಸಿದರು. ಕಬ್ಬು, ಕಾಫಿ, ಜೋಳ ಬತ್ತ ಮತ್ತು ಅವರೆ—ಈ ಬೆಳೆಗಳಿಗೆ ಬೀಳುವ ಕ್ರಿಮಿಕೀಟಗಳ ಹಾವಳಿಯನ್ನು ತಪ್ಪಿಸಿ ಹತೋಟಿಗೆ ತರುವ ಕೆಲಸಗಳೂ ಜಮೀನುಗಳಲ್ಲಿ ಭಾರಿ ಪ್ರಮಾಣದಲ್ಲಿ ನಡೆದುವು. ಪಾಪಾಸುಕಳ್ಳಿಯನ್ನು ನಿರ್ಮೂಲವಮಾಡುವ ಕೆಲಸವನ್ನು 100 ಗ್ರಾಮಗಳಲ್ಲಿ ನಡೆಯಿಸಲಾಯಿತು. ಅಲ್ಲಿ ಪಾಪಾಸುಕಳ್ಳಿಯನ್ನು ನಾಶಮಾಡಲು ಅನುಸರಿಸಿದ ವಿಧಾನವು ಬಹಳ ಫಲಕಾರಿಯಾಗಿ ಪರಿಣಮಿಸಿತು. ಕಾಡುಗಳ ಪ್ರದೇಶಗಳಲ್ಲಿಯೂ ಅಮೃತಮಹಲ್ ಕಾವಲುಗಳಲ್ಲಿಯೂ ಈ ಪಾಪಾಸುಕಳ್ಳಿಯು ತುಂಬಿಹೋಗಿರುವುದರಿಂದ, ಅಲ್ಲಿಯೂ ಇದೇ ವಿಧಾನವನ್ನೂ ಅನುಸರಿಸಿ ಪಾಪಾಸುಕಳ್ಳಿಯನ್ನು ನಿರ್ಮೂಲವಮಾಡುವ ಪ್ರಯತ್ನವು ನಡೆಯುತ್ತಾ ಇದೆ.

ಕೊಳೆರೋಗವು ಬಾರದಂತೆ ಅಡಿಕೆಯ ಮರಗಳಿಗೆ ಔಷಧವನ್ನು ಎರಚುವ ಕೆಲಸವು ಶಿಲೀಂಧ್ರಶಾಸ್ತ್ರ ಶಾಖೆಯವರ ಮೇಲ್ವಿಚಾರಣೆಯಲ್ಲಿ ಬಹುಚುರುಕಾಗಿ ನಡೆಯುತ್ತಾ ಇದೆ. ಪ್ರಸಕ್ತ ವರ್ಷದಲ್ಲಿ ಮೊದಲಿಗಿಂತಲೂ ಹೆಚ್ಚು ಸಂಖ್ಯೆಯ ತೋಟಗಳಲ್ಲಿ ಅಡಿಕೆಯ ಮರಗಳಿಗೆ ಈ ಔಷಧವನ್ನು ಎರಚಲಾಯಿತೆಂದು ವರದಿಯಾಗಿದೆ. ಕೊಳೆರೋಗ ತಗಲಿದ ಪ್ರದೇಶಗಳಲ್ಲಿ ಅಡಿಕೆಯ ತೋಟಗಳಿಗೆ ಔಷಧವನ್ನು ಕ್ರಮವಾಗಿ ಎರಚಿದುದರಿಂದ ರೋಗವು ಕಾಲದಿಂದ ಕೊನೆಕೊನೆಗೆ ಕಡಿಮೆಯಾಗುವಂತೆ ಆಗಿದೆ. ಆದುದರಿಂದ ರೋಗನಿವಾರಣೆಗಾಗಿ ಔಷಧವನ್ನೆರಚುವ ವೆಚ್ಚವು ಕಡಿಮೆಯಾಗಿ ಪ್ರಯೋಜನವು ಮಾತ್ರ ಹೆಚ್ಚಿದುದು, ಇದರ ಫಲಿತಾಂಶವಾದಂತಾಯಿತು. ಕಾಫಿಗಿಡಕ್ಕೆ ತಗಲುವ ಕಾಡಿಗೆ ರೋಗ ಮತ್ತು ಎಲೆಯ ರೋಗಗಳು ಬಾರದಂತೆ ಕಾಫಿ ತೋಟಗಳಿಗೆ ಔಷಧವನ್ನು ಎರಚುವ ಕೆಲಸವು ಬಹಳವಾಗಿ ಹೆಚ್ಚಿರುತ್ತದೆ. ಕಾಫಿಪ್ಲಾಂಟರುಗಳೂ, ಅಡಿಕೆಯ ತೋಟಗಳ ಯಜಮಾನರೂ, ಮತ್ತು ಇತರರೂ ತಮ್ಮ ಪೈರುಗಳಿಗೆ ತಗಲುವ ರೋಗಗಳ ವಿಚಾರಣಾರ್ಥವಾಗಿ, ಅತ್ಯಲ್ಪವಾದ ವೆಚ್ಚಗಳನ್ನು ವೆಚ್ಚಮಾಡುವುದರಿಂದಲೇ ಅದಷ್ಟು ಹೆಚ್ಚಾಗಿ ಆ ರೋಗಗಳ ಹಾವಳಿಯನ್ನು ತಗ್ಗಿಸುವ ಪ್ರಯತ್ನವನ್ನು ಮಾಡಬೇಕಾದುದು ಆವಶ್ಯಕ. ಅವರು ಈ ರೀತಿ ಮಾಡಬೇಕಾದರೆ, ಯಾವ ಕ್ರಮವನ್ನನುಸರಿಸಬೇಕು ಮತ್ತು ಯಾವ ಔಷಧವಸ್ತುಗಳನ್ನು ಹೇಗೆ ಉಪಯೋಗಿಸಬೇಕು ಎಂಬ ವಿಷಯದಲ್ಲಿ ಅವರಿಗೆ ತಿಳುವಳಿಕೆಯುಂಟಾಗಬೇಕು. ಹಾಗೆ ಅವರಿಗೆ ತಿಳುವಳಿಕೆಯುಂಟಾಗುವಂತೆ ಇಲಾಖೆಯವರು ಅವರಿಗೆ ತಕ್ಕ ಸಲಹೆಗಳನ್ನು ಕೊಡಲನುಕೂಲಿಸಬೇಕೆಂಬ ಉದ್ದೇಶದಿಂದ, ಗಿಡಗಳಿಗೆ ಎರಚುವ ಔಷಧವಸ್ತುಗಳ ವಿಷಯದಲ್ಲಿಯೂ ಅವುಗಳನ್ನು ಎರಚುವ ಯಂತ್ರೋಪಕರಣಗಳ ವಿಷಯದಲ್ಲಿಯೂ ಮತ್ತು ಈ ಕೆಲಸಕ್ಕೆ ಬೇಕಾದ ಇತರ ಸಲಕರಣೆಗಳ ವಿಷಯದಲ್ಲಿಯೂ ಒಂದು ವಿಶೇಷ ಸ್ವಭಾವ ಪರಿಶೋಧನೆಯನ್ನು ಕೈಕೊಳ್ಳಲಾಗಿದೆ.

ಸಸ್ಯಶಾಸ್ತ್ರ ಶಾಖೆಯವರು ಮಾಡಿದ ಕೆಲಸದ ಫಲಿತಾಂಶವಾಗಿ ಹೆಚ್ಚು ಫಸಲನ್ನು ಕೊಡುವ ಜಾತಿಗಳ ಹೈಸು ರಾಗಿ, ಕಬ್ಬು ಮತ್ತು ಹತ್ತಿ ಇವುಗಳನ್ನು ಬೆಳೆಯುವುದು ಎಲ್ಲೆಲ್ಲಿಯೂ ಪ್ರಚಾರಕ್ಕೆ ಬಂದಿತು. ದೋಹಳಕ್ರಿಯೆಯೇ ಮುಂತಾದುವುಗಳಿಂದ ಹೊಸ ಹೊಸ ಜಾತಿಯ ಪೈರುಗಳನ್ನಿಟ್ಟು ಅವುಗಳಿಂದ ಎಷ್ಟೆಷ್ಟು ಫಸಲು ದೊರೆಯುವುದೆಂಬುದನ್ನು ಅಜಮಾಯಿಷಿ ಮಾಡುತ್ತಾ ಇದೆ. ಹೆಚ್ಚು ಫಸಲನ್ನು ಕೊಡುವ ಹೊಸ ಜಾತಿಯ ನೆಲಗಡಲೆಕಾಯಿ, ಬತ್ತ, ಕಾರುರಾಗಿ, ಜೋಳ ಮತ್ತು ಅಲುಗೆಡ್ಡೆ—ಇವುಗಳನ್ನೂ ದೋಹಳ ಕ್ರಿಯೆಯೇ ಮುಂತಾದುವುಗಳಿಂದ ಕಂಡುಹಿಡಿದು ವೃದ್ಧಿಪಡಿಸುತ್ತಾ ಇದೆ.

ಬಂಜರು ಕ್ಷೇತ್ರಗಳಲ್ಲಿ, ಮುಖ್ಯ ಮುಖ್ಯವಾದ ಬೆಳೆಗಳ ವಿಷಯದಲ್ಲಿ ಹೊಸ ಹೊಸ ಜಾತಿಗಳನ್ನು ಕಂಡುಹಿಡಿಯುವುದ

ಪಾಲರಾಯರ ಹಾಗೂ ಲಾ ಸೆಕ್ರೆಟರಿಗಳಾದ ಮೆ|| ಪಿ. ಮಹಾದೇವಯ್ಯನವರ ಮಕ್ಕಳನ್ನೂ ಸಹಪಾಠಿಗಳನ್ನಾಗಿ ನಿಯಮಿಸಿರುತ್ತಾರೆಂದು ತಿಳಿದುಬರುತ್ತದೆ.

ರಾಜಧಾನಿಯಲ್ಲಿ 40 ಲಕ್ಷ ರೂಪಾಯಿಗಳ ಮೂಲಧನದಿಂದ ಸ್ಥಾಪಿಸಲ್ಪಟ್ಟಿದ್ದ ಶ್ರೀ ಕೃಷ್ಣರಾಜೇಂದ್ರ ಮಿಲ್ಲು ಸರಿಯಾದ ವ್ಯವಸ್ಥೆಗೊಳ್ಳದೆ ನವಂಬರ ತಿಂಗಳಲ್ಲಿ ನಿಂತುಹೋಗುವ ಸಂಭವವಿದೆಯೆಂದು ತಿಳಿದುಬರುತ್ತದೆ. ಈ ಮಿಲ್ಲಿನ ಮೂಲಧನಕ್ಕೆ ನಮ್ಮ ಶ್ರೀಮನ್ಮಹಾರಾಜರವರು ಅರಮನೆಯಿಂದ 5 ಲಕ್ಷ ರೂಪಾಯಿಗಳನ್ನು ದಯೆಪಾಲಿಸಿದ್ದರು. ಇದಕ್ಕೆ ಅನೇಕ ಜನರು ಷೇರು ಹಾಕಿದ್ದರು. ಅವರೆಲ್ಲರಿಗೂ ವಿಶೇಷ ಹಾನಿಯಾಯಿತೆಂದು ಹೇಳಬಹುದಾಗಿದೆ. ಈ ಮಿಲ್ಲಿನಿಂದ ಒಂದು ಸಾವಿರ ಬಡ ಜನರು ಉಪಜೀವಿಸುತ್ತಿದ್ದರು. ಅದು ತಪ್ಪಿಹೋಗುವ ಸಂಭವವಿರುವದಕ್ಕಾಗಿ ವ್ಯಸನಪಡಬೇಕಾಗಿದೆ.

ವಾಯುಮಂಡಲದ ಮೇಲ್ಭಾಗದಲ್ಲಿ ವಾಯುವಿನ ವೇಗವನ್ನೂ, ಅದು ಬೀಸುವ ದಿಕ್ಕನ್ನೂ ಕಂಡುಹಿಡಿಯುವುದಕ್ಕಾಗಿ ಬೆಂಗಳೂರು ಅಬ್ಸರ್ವೇಟರಿಯಿಂದ ಕೆಲವು ಆಕಾಶಬುಟ್ಟಿಗಳನ್ನು (ಬೆಲೂನು) ಮೇಲಕ್ಕೆ ಕಳುಹಿಸಿದ್ದಾರೆ. ಅವುಗಳಿಂದ ಬೀಳುವ ಕಾರ್ಡನ್ನು ಯಾರು ನೋಡುತ್ತಾರೋ ಅವರು ದಯವಿಟ್ಟು ತಮ್ಮ ಹೆಸರು, ಅಡ್ರೆಸ್ಸು, ಕಾರ್ಡು ಸಿಕ್ಕಸ್ಥಳ, ತಾರೀಖು, ಇವುಗಳನ್ನು ಬೇರೆ ಕಾಗದದಲ್ಲಿ ನಮೂದಿಸಿ ಕಾರ್ಡಿನೊಡನೆ ಒಂದು ಕವರಿನಲ್ಲಿ ಹಾಕಿ ಬೆಂಗಳೂರಿನಲ್ಲಿರುವ ಮೆಟಿಯೋರೊಲಾಜಿಕಲ್ ರಿಪೋರ್ಟರಿಗೆ ಕಳುಹಿಸಿದರೆ ಅವರು ಅಂಥವರಿಗೆ ಒಂದು ರೂಪಾಯಿ ಬಹುಮಾನ ಕಳುಹಿಸುತ್ತಾರೆ. ಮೈಸೂರು ದೇಶದಲ್ಲಿ "ಮೈಸೂರು ಸರ್ಕಾರಿ" ಎಂದು ಬರೆದು ಸ್ಟಾಂಪಿಲ್ಲದೆ ಕಳುಹಿಸಬಹುದು. ವಾಚಕರು ಇದನ್ನು ಅವರ ತಾಲೂಕಿನ ಅನುಲ್ದಾರರಿಗಾಗಲಿ ಅಥವಾ ಇತರ ಸರ್ಕಾರಿ ಉದ್ಯೋಗಸ್ಥರಿಗಾಗಲಿ ತಿಳುಹಿಸಿದರೆ ಅವರು ದಯವಿಟ್ಟು ತಪಶೀಲುಗಳನ್ನು ಮೇಲ್ಕಂಡ ರಿಪೋರ್ಟರಿಗೆ ರವಾನಿಸುವರು.

ಈ ಹೊತ್ತಿನ ದಿವಸ ರಾಜಧಾನಿಯ ಲಾಯರ್ ಸಂಘದವರು ಮ|| ರಾ|| ಸಾಹುಕಾರ ಬನುಮಯ್ಯನವರ ಹೈಸ್ಕೂಲು ಕಟ್ಟಡದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರಾದ ಮೆ|| ಶಂಕರನಾರಾಯಣರಾಯರವರ ಅಧ್ಯಕ್ಷತೆಯಲ್ಲಿ 9 ವರ್ಷ ವಯಸ್ಸಿನ ಚಿ|| ನರಸಿಂಹಮೂರ್ತಿ ಎಂಬ ಬಾಲಕನಿಂದ "ಮಯೂರಧ್ವಜ" ಎಂಬ ಕೀರ್ತನವನ್ನು ಮಾಡಿಸತಕ್ಕವರಿರುವದರಿಂದ ಮಹಾಜನಗಳೆಲ್ಲರೂ ಆಗಮಿಸಬೇಕೆಂದು ಕೋರುತ್ತಾರೆ. ಸದರಿ ಬಾಲಕನು ರಾಜಧಾನಿಯಲ್ಲಿ ತನ್ನ ಕೀರ್ತನಕಲಾನೈಪುಣ್ಯದಿಂದ ಮಹಾಜನರ ವಿಶೇಷ ಪ್ರೀತಿಗೆ ಪಾತ್ರನಾಗಿದ್ದಾನೆ. ಶ್ರೀಮನ್ಮಹಾರಾಜರವರು ಈ ಬಾಲಕನ ವಿಷಯವನ್ನು ಕೇಳಿ ಸಂತುಷ್ಟಚಿತ್ತರಾಗಿ 50 ರೂಪಾಯಿಗಳನ್ನು ದಯೆಪಾಲಿಸಿದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಜಗದೀಶ್ವರನು ಸದರಿ ಬಾಲಕನಿಗೆ ಆರೋಗ್ಯಭಾಗ್ಯವನ್ನಿತ್ತು ರಕ್ಷಿಸಲೆಂದೂ, ಸದರಿ ಬಾಲಕನು ತನ್ನ ಬುದ್ಧಿವಿಶೇಷದಿಂದ ದಿನೇದಿನೇ ಅಭಿವೃದ್ಧಿಯನ್ನು ಹೊಂದುತ್ತ ದಿಗಂತವಿಶ್ರಾಂತಕೀರ್ತಿಶಾಲಿಯಾಗಲೆಂದೂ ಕೋರುತ್ತೇವೆ.

1927 ನೇ ಇಸ್ವಿಯಲ್ಲಿ ನಮ್ಮ ಘನ ಮೈಸೂರು ಸರ್ಕಾರದವರಿಂದ ಸ್ಥಾಪಿಸಲ್ಪಟ್ಟ ಬದನವಾಳದ ಖಾದೀ ಕ್ಷೇತ್ರವು ಈ 2-3 ವರ್ಷದೊಳಗಾಗಿ ಎಷ್ಟು ಅಭಿವೃದ್ಧಿಯನ್ನು ಹೊಂದಿದೆ ಎಂಬುದು ಈ ಕೆಳಗಿನ ಲೆಕ್ಕಗಳಿಂದ ಗೊತ್ತಾಗುವುದು. ಈ ಕ್ಷೇತ್ರವು ಸ್ಥಾಪಿಸಲ್ಪಟ್ಟಾಗ 100 ಜನ ನೂಲುವವರೂ, 9 ಜನ ನೆಯ್ಯುವವರೂ ಮಾತ್ರ ಇರುವಂತೆ ಏರ್ಪಾಡಾಗಿತ್ತು, ಈಗ ಅದೇ ಕ್ಷೇತ್ರದಲ್ಲೇ 1,500 ಜನ ನೂಲುವವರೂ, 100 ಜನ ನೆಯ್ಯುವ ಕುಟುಂಬಿಗಳೂ ಇರುವಂತೆ ಆಗಿದೆ. ಈ ವರ್ಷದ ಆಗಸ್ಟು ತಿಂಗಳವರೆಗೆ ಈ ಕ್ಷೇತ್ರದಿಂದ ಒಟ್ಟು 51,549 ಪೌಂಡು ದಾರವು ತಯಾರಾಗಿದೆ. ಮತ್ತು 120,224 ಗಜ ಖಾದೀ ಬಟ್ಟೆಯು ತಯಾರಾಗಿರುವುದು. 67,211 ರೂಪಾಯಿ ಖಾದಿಯು ಈಗ ಖರ್ಚಾಗಿದೆ. ಇದರಲ್ಲಿ 23,096 ರೂಪಾಯಿ ಬೆಲೆ ಬಾಳುವ ಖಾದಿಯನ್ನು ಸರ್ಕಾರದವರೇ ಕೊಂಡಿರುವರು. ಈ ಕ್ಷೇತ್ರ

...ಸ್ಥಾಪಿಸಿದ ಮೊದಲನೆಯ ಎಂಟು ತಿಂಗಳಲ್ಲಿ ...ರೂಪಾಯಿ ಬೆಲೆ ಬಾಳುವಷ್ಟು ಖಾದಿಯೂ, ...ು ಹನ್ನೆರಡು ತಿಂಗಳಲ್ಲಿ 19,440 ರೂಪಾಯಿ ...ಳುವಷ್ಟು ಖಾದಿಯೂ ಈ ಕ್ಷೇತ್ರದಿಂದ ...ಮಾಡಲ್ಪಟ್ಟಿರುವುದು. ಇದುವರೆಗೆ 6,899 ...ದಾರವು ಮಾಡಲ್ಪಟ್ಟಿರುವುದರ ಪೈಕಿ 6,736 ...ದಾರವು ನೆಯ್ಯುವುದಕ್ಕೆ ಉಪಯೋಗಿಸಲ್ಪಟ್ಟಿರುವುದು. 18,061 ಗಜ ಬಟ್ಟೆಯು 6,899 ಪೌಂಡು ದಾರದಿಂದ ತೆಗೆಯಲ್ಪಟ್ಟಿರುವುದು. ಇದರ ಬೆಲೆಯು 7569 ರೂಪಾಯಿಗಳಾಗಿರುವುದು. ಈ ಸೆಪ್ಟೆಂಬರ್ ತಿಂಗಳ ಒಂದರಲ್ಲಿಯೇ 10,000 ಗಜ ಬಟ್ಟೆಯು ತಯಾರು ಮಾಡಲ್ಪಟ್ಟಿರುವುದೆಂದು ಅಂದಾಜು ಮಾಡಲ್ಪಟ್ಟಿದೆ.

ವರ್ತಮಾನಸಂಗ್ರಹ.

ಪಂಡಿತ ಮೋತೀಲಾಲ್ ನೆಹರೂರವರು ತಮ್ಮ ಪ್ರಕೃತಿಯನ್ನು ಸುಧಾರಿಸಿಕೊಳ್ಳುವುದಕ್ಕಾಗಿ ಬೊಂಬಾಯಿ ಸಮೀಪದಲ್ಲಿರುವ ಜುಹು ಎಂಬಸ್ಥಳಕ್ಕೆ ಶೀಘ್ರದಲ್ಲಿಯೇ ಹೋಗುವವರಾಗಿದ್ದಾರೆ.

ಲಂಡನ್ನಿಗೆ ರೌಂಡ್‌ಟೇಬಲ್ ಸಮ್ಮೇಳನಕ್ಕಾಗಿ ಹೋಗಿರುವ ಭಾರತೀಯರಲ್ಲಿ ಒಂದು ತರಹದ ನೂತನ ದೇಶಾಭಿಮಾನವು ತಲೆದೋರಹತ್ತಿದೆ. ಮಿ|| ಸಪ್ರೂ ಮತ್ತು ಮಿ|| ಜಯಕರವರು ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನ ಕೊಟ್ಟ ಹೊರತು ತಾವು ಒಪ್ಪುವುದಿಲ್ಲವೆಂದು ಹೇಳುತ್ತಿರುವರಂತೆ!

ಚೈನಾದ ರಾಷ್ಟ್ರೀಯ ಪ್ರಭುತ್ವದ ಅಧ್ಯಕ್ಷರಾದ ಮಿ|| ಚಿಯಾಂಗ್‌ಕಾಯ್ ಷೇಕ್‌ರವರು ಬೌದ್ಧಮತಾವಲಂಬಿಗಳಾಗಿದ್ದು ಕ್ರೈಸ್ತಮತವನ್ನ ವಲಂಬಿಸಿದರಂತೆ! ಈ ಕಾರ್ಯವು ಬೌದ್ಧಮತೀಯರಾದ ಚೀಣರಿಗೆ ಕೋಪವನ್ನು ತಂದು ಚೈನಾದೇಶದಲ್ಲಿ ಮತ್ತೊಂದು ಕ್ರಾಂತಿಗೆ ದಾರಿ ಮಾಡಬಹುದೆಂದು ವದಂತಿಯಿದೆ.

ಲಾಹೋರ್ ಪಿತೂರಿಯ ತಪ್ಪಿಗೆ ಗುರಿಯಾಗಿ ಮರಣದಂಡನೆಗೊಳಗಾಗಿದ್ದವರು ಪ್ರೀವಿಕೌನ್ಸಿಲ್ಲಿಗೆ ಅಪ್ಪೀಲುಮಾಡಿಕೊಳ್ಳುವ ಸಂಭವವಿರುವುದರಿಂದ ಸದ್ಯಃ ಅವರನ್ನು ಗಲ್ಲಿಗೆ ಹಾಕುವುದನ್ನು ನಿಲ್ಲಿಸಿರುತ್ತಾರೆ. ಸುಖದೇವನನ್ನು ಗಲ್ಲಿನಿಂದ ತಪ್ಪಿಸಿ ಅವನಿಗೆ ಆ ಜೀವದ್ವೀಪಾಂತರವಾಸ ಶಿಕ್ಷೆಯನ್ನು ಕೊಡುವುದರಲ್ಲಿದ್ದಾರೆಂದು ತಿಳಿಯುತ್ತದೆ.

ವಾಯುವ್ಯ ಸರಹದ್ದಿನಲ್ಲಿರುವ ಪೆಷಾವರ್ ಪಟ್ಟಣದ ಹತ್ತಿರ ಈಚೆಗೆ ಗಲಾಟೆಗಳು ನಡೆದವು. ಇದರ ನಿಮಿತ್ತ ಗವರ್ನಮೆಂಟ್ ಇಂಡಿಯಾ ಸರ್ಕಾರದವರು ವಾಯುವ್ಯಸರಹದ್ದಿಗೆ ಸೇರಿದ ಭೂಮಿಯನ್ನು ಆಕ್ರಮಿಸಿಕೊಂಡು ರಸ್ತೆಗಳನ್ನು ಮಾಡಿಸಿ ಕೋಟೆಗಳನ್ನು ಕಟ್ಟಿಸಿ ಪೆಷಾವರ್ ಪಟ್ಟಣವು ಸುರಕ್ಷಿತವಾಗಿರುವಹಾಗೆ ಮಾಡುತ್ತಾರೆಂದು ತಿಳಿಯಬಂದಿದೆ.

ಸ್ಟಾಕರ್ಟ್ ಎಂಬಲ್ಲಿ ಒಬ್ಬ ಮನುಷ್ಯನು ಒಂದು ಮೋಟಾರ್ ಕಾರಿನಲ್ಲಿ ಒಬ್ಬ ಹುಡುಗಿಯನ್ನು ಚುಂಬನಮಾಡುತ್ತಿರಲು, ಕಾರು ತಲೆಕೆಳಗಾಗಿ ಬಿದ್ದು ಇನ್ನೊಬ್ಬ ಮನುಷ್ಯನಿಗೆ ಗಾಯವಾಯಿತು. ಆ ಬಗ್ಗೆ ಕೋರ್ಟಿನಲ್ಲಿ ಮೊಕದ್ದಮೆಯಾಗಿ ಚುಂಬನಸುಖವನ್ನು ಅನುಭವಿಸಿದ ಮನುಷ್ಯನು 25 ಸಾವಿರ ರೂಪಾಯಿಗಳ ದಂಡವನ್ನು ಕೊಡಬೇಕಾಯಿತಂತೆ!

ಮಹಾತ್ಮಾ ಗಾಂಧಿಯವರ ಭೆಟ್ಟಿಮಾಡಿಕೊಂಡು ಹೋದ ಮಿ|| ರೈನಾಲ್ಡ ರೈನಾಲ್ಡ್ಸ್ ಎಂಬವರು ಮತ್ತು ಪ್ರಸಿದ್ಧ ಮಿ|| ಜಾರ್ಜ ಸ್ಲೊಕೊಂಬರು ಭರತಖಂಡಕ್ಕೆ ಸ್ವರಾಜ್ಯ ಕೊಡಬೇಕೆಂದು ಪ್ರಚಾರಮಾಡುತ್ತಿದ್ದು ಇಂಗ್ಲೆಂಡ್ ಸರ್ಕಾರದವರು ಈ ರೀತಿ ಮಾಡದೆ ಹೋದರೆ ಇಂಗ್ಲೆಂಡಿನಲ್ಲಿಯೂ ಸತ್ಯಾಗ್ರಹ ಮಾಡಬೇಕಾಗುವದೆಂದು ಹೇಳುವರಂತೆ!

14 ನೆಯ ತಾರೀಖಿನ ದಿವಸ ಸಾಯಂಕಾಲ ಪೂನಾದಿಂದ ಡಾಕ್ಟರ್ ಗೋಪಾಲ ಸದಾಶಿವ ಪಾಲ್ಸೂಲೆರವರು ಬೊಂಬಾಯಿಗೆ ಬಂದಿಳಿದು ರಸ್ತೆಯಲ್ಲಿ ಹೋಗುತ್ತಿರಲು, ಇನ್ನೊಬ್ಬ ಡಾಕ್ಟರರು ಅವರನ್ನು ಕತ್ತಿಯಿಂದ ತಿವಿದು ಕೊಂದು ಹೋದರಂತೆ! ಸದರಿ ಡಾಕ್ಟರರು ಸಾಯುವಾಗ ನನ್ನನ್ನು ತಿವಿದ ಡಾಕ್ಟರರಿಗೂ ನನಗೂ ಬಹಳ ದಿನದಿಂದಲೂ ದ್ವೇಷವಿತ್ತೆಂದು ಹೇಳಿದರಂತೆ!

ಅಮೇರಿಕೆಯ ಹತ್ತಿರವಿರುವ ಸೌತ್ ಸಿ ಐಲೆಂಡ್ ಎಂಬ ದ್ವೀಪದಮೇಲೆ ಕಳೆದ ಅಕ್ಟೋಬರ್ 21 ನೇ ತಾರೀಖಿನ ದಿವಸ ಪೂರ್ಣ ಸೂರ್ಯಗ್ರಹಣವು ಗೋಚರವಾಯಿತು. ಈ ಪೂರ್ಣ ಸೂರ್ಯಗ್ರಹಣವನ್ನು ನೋಡಿ ಶಾಸ್ತ್ರ ಶೋಧವನ್ನು ನಡೆಯಿಸಲು ಹೋಗಿದ್ದ ವೈಜ್ಞಾನಿಕರು 41 ಗ್ರಹಣದ ಫೋಟೋಗಳನ್ನು ತೆಗೆದಿದ್ದಾರೆ. ಈ ಪೂರ್ಣ ಸೂರ್ಯಗ್ರಹಣವು 93½ ಸೆಕೆಂಡುಗಳ ಕಾಲವಿದ್ದಿತಂತೆ!

ಬರುವ ಡಿಸೆಂಬರಿನೊಳಗಾಗಿ ಇಂಗ್ಲೆಂಡಿನಲ್ಲಿ ನಿರುದ್ಯೋಗಿಗಳ ಸಂಖ್ಯೆ 30 ಲಕ್ಷಕ್ಕೇರುವುದಂತೆ! ಈಗಿನ ಕೂಲಿಕಾರ ಸರಕಾರದವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವೆವೆಂದು ಜನರಿಗೆ ಅಭಯವಿತ್ತಿದ್ದರು. ಆದರೆ ಅವರ ಅಭಯವಚನದಂತೆ ನಿರುದ್ಯೋಗವು ಕಡಿಮೆಯಾಗದೆ ಮತ್ತಷ್ಟು ಹೆಚ್ಚುದುದರಿಂದ ಕೆಲಸಗಾರ ಮಂತ್ರಿಮಂಡಲವು ಶೀಘ್ರದಲ್ಲಿಯೇ ಕುಸಿದುಬೀಳುವ ಹಾಗಿದೆಯೆಂದು ವರ್ತಮಾನವಿದೆ.

ಒಂದು ಮೊಕದ್ದಮೆಗೆ ಸೇರಿದ್ದ ಒಬ್ಬ ಮನುಷ್ಯನು ಕಂಜೆರದಲ್ಲಿ ಕೋರ್ಟನ್ನು ಬಿಟ್ಟು ತನ್ನ ವಕೀಲನೊಡನೆ ಬರುತ್ತಿದ್ದ ಸಮಯದಲ್ಲಿ ದಾರಿಯಲ್ಲಿ ಅವಿತುಕೊಂಡಿದ್ದ ಒಬ್ಬ ಮನುಷ್ಯನು ಒಂದು ಬಾಂಬನ್ನು ಎಸೆದು ತನ್ನ ಎದುರು ಕಕ್ಷಿಗಾರನನ್ನು ಕೊಂದನು. ಆ ಮೇಲೆ, ಬಾಂಬನ್ನು ಎಸೆದವನು, ಎದುರು ಕಕ್ಷಿಗಾರನು ತನ್ನನ್ನು ಸ್ಥಳದಿಂದ ಹೊರಡಿಸಲು ಪ್ರಯತ್ನ ಪಟ್ಟದ್ದಕ್ಕಾಗಿ ಕೊಂದು ಹಾಕಿರುವೆನೆಂದು ಮ್ಯಾಜಿಸ್ಟ್ರೇಟರ ಮುಂದೆ ತಾನೇ ಹೇಳಿಕೊಂಡನಂತೆ!

ಮ್ಯೂನಿಕ್ ಪಟ್ಟಣದಲ್ಲಿ ನಾಟಕದ ಒಂದು ಹುಡುಗಿಯು ಒಂದು ಕಚೇರಿಯಲ್ಲಿ ಕೆಲಸಕ್ಕೆಂದು ಹೋದಳು. ಅವಳ ಮೇಲಿನ ಅಧಿಕಾರಿಯು ಅವಳ ಕೆಲವು ಕಾಗದಗಳನ್ನು ತೆಗೆದುಕೊಂಡು ಅವಳು ತನಗೆ ಮುದ್ದು ಕೊಟ್ಟ ಹೊರತು ವಾಪಸು ಕೊಡುವುದಿಲ್ಲವೆಂದನು. ಆಗ್ಗೆ ಅವಳು ವಿಧಿಯಿಲ್ಲದೆ ಮುದ್ದನ್ನು ಕೊಟ್ಟು ಈ ವಿಷಯವನ್ನು ಪೋಲೀಸರಿಗೆ ತಿಳುಹಿಸಿದಳು. ಇದರ ಸಲುವಾಗಿ ಅವನಿಗೆ ಕೆಲಸವು ಹೋದುದಲ್ಲದೆ 12 ತಿಂಗಳ ಕಾರಾಗೃಹ ಶಿಕ್ಷೆಯೂ ಆಯಿತು.

ಅಲಹಾಬಾದ್ ಪಟ್ಟಣದಲ್ಲಿ ಮ್ಯಾಜಿಸ್ಟ್ರೇಟರು ಹೊರಡಿಸಿದ್ದ 144 ನೇ ಕಾನೂನನ್ನು ಉಲ್ಲಂಘಿಸಿ, ಪಂಡಿತ ಜವಹರಲಾಲ್ ನೆಹರುರವರು ಪುರುಷೋತ್ತಮದಾಸ ಮೈದಾನಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ರಾಜದ್ರೋಹಕರವಾದ ಭಾಷಣ ಮಾಡಿದರೆಂಬ ಆರೋಪದ ಮೇಲೆ ಪೋಲೀಸರು ಅವರನ್ನು ತಾ|| 19 ರಲ್ಲಿ ದಸ್ತಗಿರಿಮಾಡಿ ನೈನಿ ಜೈಲಿನಲ್ಲಿಟ್ಟಿರುತ್ತಾರೆ. ಸದ್ಯಃ ವಿಚಾರವು ನಡೆಯುತ್ತಲಿದೆ ನಾಳಿನ ದಿವಸ ಜಡ್ಜಮೆಂಟ್ ಹೇಳತಕ್ಕವರಾಗಿದ್ದಾರೆ.

ದೀಪಾವಳಿಯಹಬ್ಬವನ್ನು ಆಚರಿಸುವ ಸಲುವಾಗಿ ಎಲ್ಲಾ ಕೋಮಿನ ಸಾವಿರಾರು ಜನ ಸ್ತ್ರೀಯರು ಮೂರು ಬಣ್ಣದ ಕಾಂಗ್ರೆಸ್ ಬಾವುಟಗಳನ್ನು ಹಿಡಿದು, ಬೊಂಬಾಯಿ ಪಟ್ಟಣದ ಹಿಂದೂ ಮೊಹಲ್ಲೆಯಲ್ಲಿ, ಸುಮಾರು ಅರ್ಧ ಮೈಲು ಉದ್ದದವರೆಗೆ ಮೆರವಣಿಗೆಯನ್ನು ಹೊರಡಿಸಿದರು. ಇವರು ಬೀದಿಗಳಲ್ಲಿ ಹಾಯ್ದು ಹೋಗುವಾಗ "ಕಾಂಗ್ರೆಸ್ ಭವನವು ಚಿರಕಾಲವಿರಲಿ" "ಮಹಾತ್ಮಾ ಗಾಂಧೀಕಿ ಜಯ" ಎಂದು ಉಚ್ಚರಿಸುತ್ತಿದ್ದ ಮಹಾಧ್ವನಿಯು ಗಗನಮಂಡಲವನ್ನು ವ್ಯಾಪಿಸಿತ್ತಂತೆ!

ಬೊಂಬಾಯಿಯಲ್ಲಿ ಪ್ರತಿವರ್ಷ ಅತ್ಯಂತ ವಿಜೃಂಭಣೆಯಿಂದ ನಡೆಯಿಸಲ್ಪಡುತ್ತಿದ್ದ ದೀಪಾವಳಿ ಹಬ್ಬವು ಈ ವರುಷ ಸಾಧಾರಣವಾಗಿ ನೆರವೇರಿತು. ಈ ಸಾರೆ ಪರದೇಶದ ಮದ್ದುಬಾಣ ಪಟಾಕಿಗಳನ್ನು ಜನರು ಯಾರೂ ಕೊಳ್ಳದೆ ಹೋದುದರಿಂದ ಇವು ಅಂಗಡಿಗಳಲ್ಲಿ ರಾಶಿರಾಶಿಯಾಗಿ ಬಿದ್ದಿವೆಯಂತೆ! ಅಂಗಡಿಗಳನ್ನು ಮುಚ್ಚಿದ್ದ ವಿದೇಶೀಯ ಬಟ್ಟೆಯ ವರ್ತಕರು ದೀಪಾವಳಿಯ ಹಬ್ಬದ ದಿವಸ ವರ್ಷದ ಲೆಕ್ಕವನ್ನು ಪೂರ್ತಿ ಮಾಡಿ ಜಮಾ ಖರ್ಚನ್ನು ನೋಡಲು ಮಾತ್ರ ತಮ್ಮ ಅಂಗಡಿಗಳನ್ನು ತೆರೆದಿದ್ದರಂತೆ!

ಬೊಂಬಾಯಿಯಲ್ಲಿ ಪ್ರತಿ ವರ್ಷವೂ ದೀಪಾವಳಿಯ ಕಾಲದಲ್ಲಿ ಪರದೇಶದ ಬಟ್ಟೆಬರೆಗಳೇ ಮೊದಲಾದ ಅನೇಕ ಸಾಮಾನುಗಳು ಬಹುಳವಾಗಿ ಖರ್ಚಾಗುತ್ತಿದ್ದುವು. ಈ ವರ್ಷ ಹಾಗೆ ಆಗದಂತೆ ಕಾಂಗ್ರೆಸ್ಸಿನವರು ದೀಪಾವಳಿಯ ಕಾಲದಲ್ಲಿ ಬಹಿಷ್ಕಾರದ ಚಳವಳಿಯನ್ನು ಉಗ್ರವಾಗಿ ನಡೆಸಿದುದರಿಂದ ಪರದೇಶೀ ಸರಕುಗಳ ವ್ಯಾಪಾರವನ್ನು ಮಾಡುತ್ತಿದ್ದ ವರ್ತಕರಿಗೆ ಬಹಳ ನಷ್ಟವುಂಟಾಗಿದೆ. ಕಳೆದ 6 ತಿಂಗಳುಗಳಿಂದಲೂ ಯಾವ ವ್ಯಾಪಾರವೂ ಇಲ್ಲದೆ ದೀಪಾವಳಿಯ ಸಂಭ್ರಮದಲ್ಲಾದರೂ ಅಷ್ಟಿಷ್ಟು ಲಾಭವನ್ನು ಸಂಪಾದಿಸಬೇಕೆಂದಿದ್ದ ವರ್ತಕರು ಭಗ್ನಮನೋರಥರಾದರು.

ಕಾನೂನುಭಂಗ ಮತ್ತು ಕರನಿರಾಕರಣದ ಚಳವಳಿಯ ವಿಷಯವಾಗಿ ಬರೋಡಾ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಸಹಾಯಮಾಡಲು ನಿಷ್ಕರ್ಷಿಸಿದ್ದು 9 ನೇ ಆರ್ಡಿನೆನ್ಸ್ ಪ್ರಕಾರ ಅಪರಾಧಿಗಳಾಗಿ ಬ್ರಿಟಿಷ್ ರಾಜ್ಯವನ್ನು ಬಿಟ್ಟು ತಮ್ಮ ದೇಶದಲ್ಲಿ ಸೇರಿಕೊಂಡಿರುವ ಜನರನ್ನು ಬ್ರಿಟಿಷ್ ಸರ್ಕಾರಕ್ಕೆ ಹಿಡಿದುಕೊಡುವುದಾಗಿ ಬರೋಡಾ ಸರ್ಕಾರದವರು ನಿಶ್ಚಯಿಸಿರುವರೆಂದೂ, ಬ್ರಿಟಿಷ್ ಪ್ರಾಂತ್ಯದಿಂದ ಬರೋಡೆಗೆ ಹೋಗಿ ಚಳವಳಿಯನ್ನು ನಡೆಯಿಸುವವರನ್ನು ಆ ಸಂಸ್ಥಾನದಿಂದ ಗಡೀಪಾರು ಮಾಡಲು ಅಜ್ಞೆ ಹೊರಟಿರುವುದೆಂದೂ ತಿಳಿದು ಬರುತ್ತದೆ.

ಶ್ರೀ|| ವಿ. ವಿಠಲ್‌ಭಾಯಿ ಪಟೇಲರವರು ಮೂಲವ್ಯಾಧಿಯಿಂದ ನರಳುತ್ತಿರುವರು. ಅವರ ಆರೋಗ್ಯವು ಬಹಳ ಮಟ್ಟಿಗೆ ಕೆಟ್ಟುಹೋಗಿದೆ. ಅವರು ಮಹಾಜನಗಳ ಭೆಟ್ಟಿಮಾಡಬೇಕೆಂದು ಇಚ್ಛೆಪಟ್ಟರೂ ಅಧಿಕಾರಿಗಳು ಅದಕ್ಕೆ ಅವಕಾಶಕೊಡದೆ ಅವರನ್ನು ಏಕಾಂಗಿಯಾಗಿ ಒಂದು ಕೋಣೆಯಲ್ಲಿಟ್ಟಿರುವರಂತೆ! ಜೈಲಿನ ಒಬ್ಬ ಅಧಿಕಾರಿಗಳು ತಮ್ಮ ವಿಷಯದಲ್ಲಿ ಸರಿಯಾಗಿ ನಡೆಯದಿದ್ದಕ್ಕಾಗಿ ಮಿ|| ಪಟೇಲರವರು ಅವರಿಗೆ ನೋಟೀಸು ಕೊಟ್ಟಿರುವರಂತೆ! ಒಂದೆರಡು ವಾರದಲ್ಲಿ ಜವಾಬು ಬರದೆಹೋದರೆ ಮಿ|| ಪಟೇಲರು ಅವರ ಮೇಲೆ ಮೊಕದ್ದಮೆ ಮಾಡುವರಿದ್ದಾರೆಂದು ತಿಳಿದು ಬರುತ್ತದೆ.

ತಿನ್ನವೆಲ್ಲಿಯಲ್ಲಿ ಡಾ|| ನೋಬಲ್ಸ್ ಎಂಬವರು ಒಂದು ವಿಚಿತ್ರ ಚಿಕಿತ್ಸೆಯನ್ನು ನಡೆಯಿಸಿದರು. ಸುಮಾರು 22 ವರ್ಷದ ಒಂದು ಸುಂದರ ವ್ಯಕ್ತಿಯು ಸ್ತ್ರೀಯಳ ಉಡುಪನ್ನು ಹಾಕಿಕೊಂಡು ಚಿಕಿತ್ಸೆಗೆ ಬಂದಿತು. ಗುಹ್ಯಸ್ಥಾನದ ಪರೀಕ್ಷೆಯು ಮಾಡಲ್ಪಟ್ಟಾಗ ಗಂಡಸಿನ ಲಿಂಗದ ತರಹವೇ ಇತ್ತು. ಸ್ತ್ರೀಲಿಂಗವಿರಲಿಲ್ಲ. ಎದೆಯು ಮಾತ್ರ ಸ್ತ್ರೀಯರಂತೆ ಪ್ರಫುಲ್ಲಿತವಾಗಿರಲಿಲ್ಲ. ಡಾಕ್ಟರರು ಮೂರು ದಿವಸಗಳ ವರೆಗೆ ಪರೀಕ್ಷೆ ಮಾಡಿದರು ವ್ಯಕ್ತಿಯು ನಿರ್ಧಾರವಾಗಿ ಗಂಡಸೋ ಹೆಂಗಸೋ ಎಂಬುದನ್ನು ಹೇಳುವದು ಅಸಾಧ್ಯವಾಯಿತು. ಡಾಕ್ಟರರು ಕಡೆಗೆ ಆ ವ್ಯಕ್ತಿಗೆ ಮದುವೆಯಾಗಬೇಡವೆಂದು ಉಪದೇಶವನ್ನು ಮಾಡಿದರಂತೆ!

ಪ್ರಪಂಚದಲ್ಲೆಲ್ಲಾ ಅತ್ಯಂತ ಐಶ್ವರ್ಯವಂತನಾದ ನ್ಯೂಯಾರ್ಕಿನ (ಅಮೇರಿಕಾದೇಶದ) ಹೆನ್ರಿಫಪ್ಸ್ ಎಂಬವನು 715000000 ರೂಪಾಯಿಗಳ ಆಸ್ತಿಯನ್ನು ಬಿಟ್ಟು ಸತ್ತಿರುವನು. ಆಂಡ್ರೂಕಾರ್ನೆಗಿ ಎಂಬ ಸೀಮೆಣ್ಣೆ ದೊರೆಗೆ ಒಂದಾನೊಂದು ಕಾಲದಲ್ಲಿ 1300000000 ರೂ. ಗಳ ಆಸ್ತಿಯಿದ್ದಿತು. ಆದರೆ ಇವನು ತನ್ನ ಆಸ್ತಿಯ ಬಹುಭಾಗವನ್ನು ಧರ್ಮಮಾಡಿದುದರಿಂದ ಸಾಯುವಾಗ ಇವನಲ್ಲಿ ಹೆಚ್ಚು ಹಣವಿರಲಿಲ್ಲ. ಮಿ|| ವಾಂಡರ್‌ಬಿಲ್ಟ್ ಎಂಬವನು ಸಾಯುವಾಗ 52000000 ರೂ. ಗಳ ಆಸ್ತಿಯನ್ನಿಟ್ಟಿದ್ದನು. ಹೆನ್ರಿಸ್ಪೈಸ್ ಎಂಬವನು 117000000 ರೂ. ಗಳನ್ನು ವಿದ್ಯಾಭ್ಯಾಸ ಮತ್ತು ಇತರ ಧರ್ಮಕಾರ್ಯಗಳಿಗೆ ಕೊಟ್ಟುದರಿಂದ ಕೊನೆಗೆ ಅವನಿಗೆ 2600000 ರೂ. ಗಳು ಮಾತ್ರ ಉಳಿದುವು. ಇವನು ಹಿಂದೆ ಕೇವಲ ಬಡವನಾಗಿದ್ದು ವಾರಕ್ಕೆ 13 ರೂ. ಗಳ ಸಂಬಳ ತರುವ ಗುಮಾಸ್ತೆ ಕೆಲಸಕ್ಕೆ ಸೇರಿಕೊಂಡವನು. ಅಭಿವೃದ್ಧಿಗೆ ಬರುತ್ತ ಬರುತ್ತ ಕೊನೆಗೆ ಒಂದು ಮಿನಿಟ್ಟಿಗೆ 650 ರೂಪಾಯಿಗಳನ್ನು ಸಂಪಾದಿಸುವಷ್ಟು ಸಮರ್ಥನಾದನಂತೆ! ಸಂಪತ್ತಿಗೆ ಅಮೇರಿಕಾದೇಶವೇ ತವರುಮನೆಯಲ್ಲವೇ?

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕೀರ್ತನಪ್ರವಚನ.

ಧಾರವಾಡ ಜಿಲ್ಲಾ ಗದಗ ತಾಲೂಕ ಪೈಕಿ ನಾಗಾವಿಗೆ ಕೇದಾರಸಿಂಹಾಸನದ ಶ್ರೀ ಜಗದ್ಗುರು ಚಿನ್ಮಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ದಯಮಾಡಿಸಿದ್ದು ಒಂದು ತಿಂಗಳವರೆಗೆ ತಮ್ಮ ಅಮೃತವಾಣಿಯಿಂದ ಮತತತ್ವವನ್ನು ಬೋಧಿಸಿ ಅಲ್ಲಿಯ ಭಕ್ತಾದಿಗಳನ್ನು ಪುನೀತರನ್ನಾಗಿ ಮಾಡಿದರು. ಆಶ್ವಯುಜ ಶು|| ೧೧ ದಿವಸ ವೇ|| ಸಿದ್ಧಾಂತಿ ನಾಗಭೂಷಣಶಾಸ್ತ್ರಿಗಳು ಗದಗ ಪಾಠಶಾಲಾಧ್ಯಾಪಕ ಶಿರೋಳ, ಇವರು ಅನ್ನದಾನದಿಂದ ಉಂಟಾಗತಕ್ಕ ಮಹತ್ವವನ್ನು ಜನರ ಮೇಲೆ ಪರಿಣಾಮವಾಗುವಂತೆ ಬೋಧಿಸಿದರು. ಆಕಾಲಕ್ಕೆ ಮಹಾಸ್ವಾಮಿಗಳು ತಮ್ಮ ಅಮೃತವಾಣಿಯಿಂದ ಅಷ್ಟಾವರಣ ಪಂಚಾಚಾರ ವೀರಶೈವಸನಾತನತ್ವ ಈ ವಿಷಯಗಳ ಮೇಲೆ ಮನೋಹರವಾಗಿ ಬೋಧಿಸಿದರು. ಮಹಾಸ್ವಾಮಿಗಳವರು ಮರುದಿವಸ ಯಲಿಶಿರುಂದ ಗ್ರಾಮಕ್ಕೆ ದಯಮಾಡಿಸಿದರು.

ಪ್ರತ್ಯಕ್ಷದರ್ಶಿ.

ಪುರಾಣಶ್ರವಣವೂ ಅನ್ನಸಂತರ್ಪಣೆಯೂ.

ಬಳ್ಳಾರಿಜಿಲ್ಲಾ ರಾಯದುರ್ಗದ ತಾ|| ಕಣೇಕಲ್ಲು ಗ್ರಾಮದ ಹಿರೇಮಠದ ಎದುರಿನಲ್ಲಿರುವ ಶ್ರೀ ನಂದೀಶ್ವರ ದೇವಸ್ಥಾನದಲ್ಲಿ ಇದೇ ಆಶ್ವಯುಜ ಶು|| ೧ ರಿಂದ ಪ್ರತಿನಿತ್ಯ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಪಟವನ್ನಿಟ್ಟು (ದೇವಿಪುರಾಣವನ್ನು ಸಾಂಗವಾಗಿ ಪೂರೈಸಿ. ಇದೇ ಆಶ್ವಯುಜ ಶು|| ೧೫ ಮಂಗಳವಾರ ಉದಯ ಶ್ರೀಜಗದ್ಗುರುಗಳ ಪಟವನ್ನೂ ಶಕ್ತಿಪಟವನ್ನೂ ಉತ್ಸವದಿಂದ ಶ್ರೀ ಚಿಕ್ಕಣ್ಣವಡೆಯರ ಕೆರೆಯ ಬಳಿಗೆ ಬ್ಯಾಂಡು ವಾದ್ಯಗಳಿಂದಲೂ, ಬಿರುದಾವಳಿಗಳಿಂದಲೂ ಶ್ರೀ ಪಂಚಾಚಾರ್ಯರ ಭಜನೆಯಿಂದಲೂ, ಮೆರವಣಿಗೆಯಿಂದ ಹೋಗಿ ವಾಪಸು ಶ್ರೀ ನಂದೀಶ್ವರ ದೇವಸ್ಥಾನಕ್ಕೆ ಬಂದು ನಂದೀಶ್ವರನಿಗೆ ವಿಧ್ಯುಕ್ತಪ್ರಕಾರ ಇದೇ ಗ್ರಾಮದ ಹಿರೇಮಠಾಧ್ಯಕ್ಷರಾದ ಚನ್ನವೀರಶಾಸ್ತ್ರಿಗಳಿಂದ ಅಭಿಷೇಕಮಾಡಿಸಿ ಸಾಧಾರಣ 300-400 ಜನಕ್ಕೆ ಮೇಲ್ಪಟ್ಟು ಅನ್ನಸಂತರ್ಪಣೆ ನಡೆಯಿತು. ಪುನಃ ಸಾಯಂಕಾಲ ಸದರಿ ಶ್ರೀ ಜಗದ್ಗುರುಗಳ ಪಟವನ್ನೂ ಶಕ್ತಿಪಟವನ್ನೂ, ತೆಗೆದುಕೊಂಡು ಶ್ರೀ ಪಂಚಾಚಾರ್ಯರ ಭಜನೆಯಿಂದ ಗ್ರಾಮಾದ್ಯಂತವೂ ಉತ್ಸವ ನಡೆಸಿ ರಾತ್ರಿ 10 ಘಂಟೆಗೆ ವಾಪಸು ಬಂದು ಪುರಾಣಸಮಾಪ್ತಿಮಾಡಿ ಮಂಗಳಾರತಿಯನ್ನು ನಡೆಯಿಸಿದರು. ವೇ|| ಹೆಚ್. ಎಂ. ಚನ್ನವೀರಶಾಸ್ತ್ರಿಗಳ ದೇಳಿಕೆಯ ಮೇರೆಗೆ ಪ್ರಭಾ ಪೋಷಣಕ್ಕಾಗಿ 1 ರೂಪಾಯಿ ತೆಗೆಯಿಸಲ್ಪಟ್ಟಿತು. ಇದೇ ರೀತಿ ಪ್ರತಿಗ್ರಾಮದ ವೀರಶೈವರೂ ಶ್ರೀ ಜಗದ್ಗುರುಗಳವರ ಭಜನಾಪುರಾಣಶ್ರವಣಾದಿ ಸತ್ಕಾಲಕ್ಷೇಪವನ್ನು, ಹಬ್ಬಗಳಲ್ಲಾದರೂ ಮಾಡಿ ಶ್ರೀಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ಕೋರುವ.

ಉತ್ಸವಭಾಗಿಗಳು.

1. ಮ|| ರಾ|| ಸಾದ್ರಿ ರುದ್ರಪ್ಪನವರು.
2. ಮ|| ರಾ|| ಉಳ್ಳೇಗಡ್ಡೆ ವೀರಭದ್ರಪ್ಪನವರು.
3. ಮ|| ರಾ|| ಸೆಂಡಕಲ್ ಚನ್ನಪ್ಪನವರು.
4. ಮ|| ರಾ|| ಜಡೆ ನಾಗಪ್ಪನವರು.
5. ಮ|| ರಾ|| ಶಾಳಕೆಟ್ಟಿ ಈಶ್ವರಪ್ಪನವರು.

ಗುರುಪಾದಕಿಂಕರ
ಹೆಚ್. ಎಂ. ಚನ್ನವೀರಶಾಸ್ತ್ರೀ.
ಕಣೇಕಲ್ಲು.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಸರಸ್ವತೀ ಪ್ರಥಮಮಹೋತ್ಸವ, ಸೊಲ್ಲಾಪುರ.

ನಿತ್ಯನೈಮಿತ್ತಿಕ ಕರ್ಮಾನುಷ್ಠಾನದ ತರುವಾಯ ಶಾಸ್ತ್ರೋಕ್ತಗಳಾದ ವ್ರತಗಳನ್ನಾಚರಿಸುವದು ಸಮಸ್ತ ವೈದಿಕ ಮತೀಯರ ಮುಖ್ಯ ಕರ್ತವ್ಯವಾಗಿರುವದು. ವಿಶೇಷತಃ ವಿದ್ಯಾಧ್ಯಯನ ವ್ರತಶೀಲರಾದ ಬ್ರಹ್ಮಚಾರಿಗಳಿಗೆ ಶ್ರೀ ಸರಸ್ವತೀದೇವಿಯ ವ್ರತವು ಮುಖ್ಯಾಚರಣೀಯವಾಗಿರುವದು. ತಸ್ಮಾತ್ ಶ್ರೀಮದ್ವೀರಶೈವವಾರದ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಂದ 52 ವರ್ಷಗಳಿಂದಲೂ ಸಕ್ರಮವಾಗಿ ಶ್ರೀ ಸರಸ್ವತೀದೇವಿಯ ವ್ರತವು ಆಚರಿಸಲ್ಪಡುತ್ತ ಬಂದಿರುವದು. ಆ ಪದ್ಧತಿಯಂತೆ ಈ ವರ್ಷದಲ್ಲಿಯಾದರೂ ಆಶ್ವಯುಜ ಶು|| ಸೋಮವಾರ ಮೊದಲು, ಶು|| 10 ಗುರುವಾರದವರೆಗೂ ಶ್ರೀಮದ್ವೀರಶೈವವಾರದ ಸಂಸ್ಕೃತ ಪಾಠಶಾಲೆಯಲ್ಲಿ, ರಂಭಾಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ ಅಲಂಕೃತವಾದ ಮಂಟಪದಲ್ಲಿ ಸರಸ್ವತೀ ಮೂರ್ತಿಯನ್ನು ಸ್ಥಾಪಿಸಿ ವೇದಾಧ್ಯಯನ ಪುರಃಸರವಾಗಿ ಧ್ಯಾನಾವಾಹನಾದಿ ಷೋಡಶೋಪಚಾರ ಮಂತ್ರಗಳಿಂದಲೂ ಸಂಗೀತಭರಿತಗಳಾದ ಮಂಗಲ ಸ್ತೋತ್ರಗಳಿಂದಲೂ ಶ್ರೀ ಸರಸ್ವತೀದೇವಿಯ ಪೂಜೆಯು ಪ್ರತಿನಿತ್ಯ ಸಾಯಂ ಪ್ರಾತಃ ಕಾಲಗಳಲ್ಲಿ ವಿದ್ಯಾರ್ಥಿಗಳಿಂದ ಆಚರಿಸಲ್ಪಟ್ಟಿತು. ಶು|| 10 ಗುರುವಾರ ಸಾಯಂಕಾಲ 8 ಘಂಟೆಗೆ ಪೂಜೆಯಾದ ತರುವಾಯ ಶ್ರೀ ಸರಸ್ವತೀದೇವಿಗೆ ವಿಜಯದಶಮಿಯ ಪವಿತ್ರಪತ್ರವನ್ನು ಸಮರ್ಪಿಸಿ ಸರ್ವರನ್ನು ವಿದ್ಯಾವಂತರನ್ನಾಗಿ ಮಾಡಲೆಂದು ಶ್ರೀ ಸರಸ್ವತೀದೇವಿಯನ್ನು ಪ್ರಾರ್ಥಿಸಿ ಜಯಜಯಕಾರಗಳೊಡನೆ ಶ್ರೀ ಸರಸ್ವತೀದೇವಿಯ ಉತ್ಥಾಪನೆಯು ಮಾಡಲ್ಪಟ್ಟಿತು.

ಶ್ರೀ ಸರಸ್ವತೀಸ್ತೋತ್ರಪಂಚಕಂ.

ಸಕಲಭುವನಮಾತಾ ಬ್ರಹ್ಮದಾರಾ ಸುಪೂತಾ |
ಜಲದಿರಖಿಲಶಾಸ್ತ್ರಶ್ರೇಷ್ಠ ರತ್ನಾವಲೀನಾಮ್ ||
ನಮಿತಸುರಮುನೀಂದ್ರಾ ಕಾಮದಾ ವೇದವೇದ್ಯಾ |
ವಿತರತು ಮಮನಿತ್ಯಂ ಭಾರತೀ ಭೂರಿವಿದ್ಯಾಮ್ ||೧||

ನಿವಸತಿ ಹೃದಯಾಬ್ಜೇ ಯಾಸುಧೀ ಕಲ್ಪಜಾನಾಮ್ |
ಕರಧೃತವರವೀಣಾ ಗ್ರಂಥಮಾಲಾ ಸುಶೀಲಾ ||
ವಿಲಸತಿ ಶರದಂಭೋಜಾತವಕ್ತ್ರೇರುಕಾಂತ್ಯಾ |
ವಿತರತು ಮಮನಿತ್ಯಂ ಭಾರತೀ ಭೂರಿವಿದ್ಯಾಮ್ ||೨||

ಮಧುಕರನಿಭವೇಣೀ ರತ್ನಕಲ್ಪೋಜ್ವಲಾಂಗೀ |
ಧವಲವಸನಧಾರಿಣ್ಯಕ್ಷಯಾ ಕಂಬುಕಂಠೀ ||
ಸುರುಚಿರಶಿಖಿಯಾನಾ ಸರ್ವಲೋಕಪ್ರಚಾರಾ |
ವಿತರತು ಮಮನಿತ್ಯಂ ಭಾರತೀ ಭೂರಿವಿದ್ಯಾಮ್ ||೩||

ವಿಲಸಿತಮಣಿಹಾರಾಲಂಕೃತಾ ಗಾನಲೋಲಾ |
ಪರತರಮಹಿಮಾಢ್ಯಾನಂದಸಾಂದ್ರಸ್ವರೂಪಾ ||
ಬಹುಲಸುಗುಣಧಾತ್ರೀ ಜ್ಞಾನಸಿಕ್ತೇಪದಾತ್ರೀ |
ವಿತರತು ಮಮನಿತ್ಯಂ ಭಾರತೀ ಭೂರಿವಿದ್ಯಾಮ್ ||೪||

ನತಜನನಿಕರಾಣಾಂ ಯಾ ಕೃಪಾಸಕ್ತಚಿತ್ತಾ |
ಹರತಿ ಕಲುಷವೃಂದಂ ಮೋಹಪಾಶಂ ತಥೈವ ||
ಪಠನಕರಣ ದಕ್ಷ್ಯಂ ಶಾಸ್ತ್ರಸಂಘೈಸ್ಸುಸೇವ್ಯಾ |
ವಿತರತು ಮಮನಿತ್ಯಂ ಭಾರತೀ ಭೂರಿವಿದ್ಯಾಮ್ ||೫||

ಸದಾಶಿವಕೃತಂಪುಣ್ಯಂ | ಭಾರತೀಸ್ತೋತ್ರಪಂಚಕಂ |
ಯಃ ಪಠೇತ್ಸತತಂಭಕ್ತ್ಯಾ | ಸವಿದ್ವಾನ್ಭವತಿ ಕ್ಷಿತೌ ||೬||

ವಿದ್ಯಾರ್ಥಿ ಸದಾಶಿವಶರ್ಮಾ ರಾವಲಡಿಕಿ ಬೃಹನ್ಮಠ ವಾರದ ಸಂಸ್ಕೃತ ಪಾಠಶಾಲಾ ಸೊಲ್ಲಾಪುರ ಸಿಟಿ.

ವೀರಶೈವಸಂಘ.

ಮದ್ರಾಸು.

ಮದ್ರಾಸು ವೀರಶೈವಸಂಘದ ಕಾರ್ಯಕಾರಿಮಂಡಲದ ಸಭೆಯು ಮ|| ರಾ|| ಎಸ್. ಸಿ. ನಾಗಯ್ಯಸೆಟ್ಟಿರವರ ಅಧ್ಯಕ್ಷತೆಯಲ್ಲಿ ಪಾರ್ಕ್ ಟೌನ್ ಹನುಮಂತರಾಯನ ಬೀದಿಯಲ್ಲಿರುವ 46 ನೆಯ ನಂಬರು ಮ|| ರಾ|| ಗುರುಬಸವ ಅಂಡ್ ಕಂಪನಿಯ ಕಟ್ಟಡದಲ್ಲಿ (12-10-30)ನೆಯ ಭಾನುವಾರ ಎರಡೂವರೆ ಗಂಟೆಗೆ ಕೂಡಿತ್ತು. ಅಗ್ಗೆ ವಿದ್ಯಾರ್ಥಿಗಳು ಮತ್ತು ವೀರಶೈವಸಮಾಜದ ಕೆಲವು ಮಹನೀಯರು ಹಾಜರಿದ್ದರು.

ಸೆಕ್ರೆಟರಿಯವರಿಂದ ಹಿಂದಿನವರ್ಷದ ವಿದ್ಯಾರ್ಥಿಮಂದಿರದ ವಾರ್ಷಿಕವರದಿಯು ಓದಲ್ಪಟ್ಟಿತು. ವೀರಶೈವ ವಿದ್ಯಾರ್ಥಿಮಂದಿರದ ಪುರೋಭಿವೃದ್ಧಿ ವಿಷಯವಾಗಿ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು.

ವೀರಶೈವ ವಿದ್ಯಾರ್ಥಿಮಂದಿರವು ಸಂಘದವರಿಂದ ಸ್ಥಾಪಿಸಲ್ಪಟ್ಟು ಒಂದು ವರುಷವಾಯಿತು. ಇದರಿಂದ ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ ವೀರಶೈವಸಮಾಜದವರಿಗೆಲ್ಲ ಬಹಳ ಅನುಕೂಲವಾಗಿರುತ್ತದೆ. ಕಳೆದ ವರ್ಷ ಈ ಮಂದಿರದಲ್ಲಿ 19 ಜನ ವಿದ್ಯಾರ್ಥಿಗಳಿದ್ದರು. ಇವರಲ್ಲಿ 3 ಜನರು ಬಿ.ಎಲ್., ಪರೀಕ್ಷೆಯಲ್ಲಿಯೂ 3 ಜನರು ಎಫ್. ಎಲ್., ತರಗತಿಯಲ್ಲಿಯೂ, 7 ಜನರು ಸೀನಿಯರ್ ಇಂಟರ್‌ಮಿಡಿಯೇಟ್ ತರಗತಿಯಲ್ಲಿಯೂ, ಒಬ್ಬರು ಮೆಡಿಕಲ್ ಕಾಲೇಜಿನಲ್ಲಿಯೂ, ಒಬ್ಬರು ಜ್ಯೂನಿಯರ್ ಇಂಟರ್‌ಮೀಡಿಯೇಟ್ ತರಗತಿಯಲ್ಲಿಯೂ, ಇಬ್ಬರು ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿಯೂ ಅಭ್ಯಾಸಮಾಡುತ್ತಿದ್ದರು. ಈ ಪೈಕಿ 3 ಜನ ಎಫ್. ಎಲ್. ಪರೀಕ್ಷೆಯಲ್ಲಿಯೂ, ಒಬ್ಬರು ಬಿ.ಎ., II ನೆಯ ಭಾಗದಲ್ಲಿಯೂ, ಒಬ್ಬರು ಸೀನಿಯರ್ ಇಂಟರ್‌ಪರೀಕ್ಷೆಯಲ್ಲಿ ಸಂಪೂರ್ಣವಾಗಿಯೂ ಮತ್ತು ಇನ್ನುಳಿದವರು ಕೆಲವು ಭಾಗಗಳಲ್ಲಿಯೂ, ತೇರ್ಗಡೆಯಾಗಿರುತ್ತಾರೆ. ಬಿ.ಎಲ್., ಪರೀಕ್ಷೆಯವರು ಹೊರತು ಉಳಿದವರು ಮುಂದಿನ ತರಗತಿಗಳಿಗೆ ತೇರ್ಗಡೆಯಾಗಿರುತ್ತಾರೆ. ಈ ವರ್ಷ ಹತ್ತು ಮಂದಿ ವಿದ್ಯಾರ್ಥಿಗಳಿರುತ್ತಾರೆ. ಇವರು ಲಾ ಕಾಲೇಜು, ಪ್ರೆಸಿಡೆನ್ಸಿ ಕಾಲೇಜು, ಕ್ರಿಶ್ಚಿಯನ್ ಕಾಲೇಜು, ಮತ್ತು ಪಚ್ಚೆಯಪ್ಪ ಕಾಲೇಜುಗಳಲ್ಲಿ ಅಭ್ಯಾಸಮಾಡುತ್ತಿರುತ್ತಾರೆ.

ಈ ತರುಣರ ಸಂಘವು ಕಳೆದ ವರ್ಷ ಶ್ರೀ ಮೃತ್ಯುಂಜಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟು, ಬ್ರಹ್ಮಶ್ರೀ ಮಹದೇವಶಾಸ್ತ್ರಿಗಳವರು ಕಾರ್ಯನಿರ್ವಹಣೆಯಿಂದ ವೀರಶೈವ ಮತದ ತತ್ವದ ವಿಚಾರದಲ್ಲೂ, ಮದ್ರಾಸು ಲಾ ಕಾಲೇಜು ಪ್ರಿನ್ಸಿಪಾಲರಾಗಿದ್ದು ಈಗ ಪಬ್ಲಿಕ್ ಸರ್ವಿಸ್ ಕಮಿಷನರಾಗಿರುವ ಮ|| ರಾ|| ಎಂ. ರತ್ನಸ್ವಾಮಿಯವರು ಅಧ್ಯಕ್ಷತೆಯಲ್ಲಿ ಮ|| ರಾ|| ಸ್ವಾಮಿ ವೆಂಕಟಾಚಲಂ ಸೆಟ್ಟಿರವರು ಆಂಗ್ಲಭಾಷೆಯಲ್ಲಿ ಪ್ರಥಮ ಭಾಷಣವನ್ನು ಕ್ರಿಸ್ತಮಿಸ್ ರಜದಲ್ಲಿ ಪಟ್ಟಣಕ್ಕೆ ಆಗಮಿಸಿದ್ದ ವೀರಶೈವ ಮಹನೀಯರ ಸಮ್ಮೇಳನವು, ಮತ್ತು ಬಳ್ಳಾರಿಯಲ್ಲಿ ವಕೀಲರಾಗಿರುವ ಮ|| ರಾ|| ಸದಾಶಿವಯ್ಯ ಎಂ.ಎ., ಬಿ.ಎಲ್., ರವರಿಂದ ವೀರಶೈವ ಮತದ ತತ್ವ ವಿಚಾರವಾಗಿಯೂ ಭಾಷಣಗಳು ಮಾಡಲ್ಪಟ್ಟವು.

ದಿವಾನ್‌ಬಹದ್ದೂರು ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಸೆಟ್ಟಿರು. ಕೆ. ಟಿ. ಸಿ. ಐ. ಇವರು ವಿದ್ಯಾರ್ಥಿಮಂದಿರಕ್ಕೆ ದಯಮಾಡಿಸಿ ಇಲ್ಲಿನ ಕಾರ್ಯಗಳ ವಿಚಾರವಾಗಿ ಒಳ್ಳೆ ಅಭಿಪ್ರಾಯವನ್ನು ಬರೆದಿರುತ್ತಾರೆ. ಈ ಮೇಲ್ಕಂಡ ಕಾರ್ಯಗಳನ್ನು ಮಾಡುವುದಕ್ಕೆ ಸಂಘಸ್ಥಾಪನೆಯೆ ಕಾರಣವಾಗಿರುವುದರಿಂದ ಮದ್ರಾಸು ವೀರಶೈವಮಹನೀಯರು ತುಂಬಾ ಅಭಿನಂದಿಸಲ್ಪಡಲು ಅರ್ಹರಿರುತ್ತಾರೆ. ವರದಿಯು ಓದಲ್ಪಟ್ಟನಂತರ ವಿದ್ಯಾರ್ಥಿಮಂದಿರದ ಅಭಿವೃದ್ಧಿಯ ವಿಚಾರವಾಗಿ ಕೆಲವು ನಿರ್ಧಾರಗಳು ಮಾಡಲ್ಪಟ್ಟವು. ಅವುಗಳಲ್ಲಿ ಕೆಲವು ನಮೂದಿಸಲ್ಪಟ್ಟಿರುತ್ತವೆ.

2. ಸಂಘದ ಸೆಕ್ರೆಟರಿಯವರು 'ವೀರಶೈವ ವಿದ್ಯಾರ್ಥಿಮಂದಿರದ' ನಿಧಿಗೆ ಸಹಾಯಮಾಡಲು ವಾಗ್ದಾನಮಾಡಿರುವ ಚಂದಾಹಣವನ್ನು ವಸೂಲ್ಮಾಡುವಂತೆಯೂ ವಸೂಲುಮಾಡುವ ಮೊಬಲಗನ್ನು 'ಮದ್ರಾಸು ಇಂಡಿಯನ್ ಬ್ಯಾಂಕಿ' ನಲ್ಲಿ ಶೇಖರಿಸುವುದಕ್ಕೆ ಲೆಕ್ಕವನ್ನಿಡಬಹುದೆಂದೂ.

3. ವೀರಶೈವಸಂಘವನ್ನು 'ರಿಜಿಸ್ಟರ್' ಮಾಡಿಸಲು ಲಾಯರ ಸಲಹೆಯನ್ನು ಪಡೆಯಬೇಕೆಂದೂ,

4. ವೀರಶೈವ ವಿದ್ಯಾರ್ಥಿಮಂದಿರವನ್ನು ಶಾಶ್ವತಗೊಳಿಸಲು ಮದ್ರಾಸಾಧಿಪತ್ಯದಲ್ಲಿಯೂ ಮತ್ತು ಮೈಸೂರು ದೇಶದಲ್ಲಿಯೂ ಸಮಾಜಾಭಿವೃದ್ಧಿಪರರಾದ ಕೆಲವು ದೊಡ್ಡ ಮನುಷ್ಯರುಗಳನ್ನು 'ಮದರಾಸು ವೀರಶೈವ ಸಂಘಕ್ಕೆ' ಸದಸ್ಯರುಗಳನ್ನಾಗಿ ಸೇರಿಸಿಕೊಳ್ಳಬಹುದೆಂದೂ,

5. ಬಳ್ಳಾರಿಯಲ್ಲಿರುವ 'ವೀರಶೈವ ವಿದ್ಯಾವರ್ಧಕಫಂಡ್' ಸಂಘದವರನ್ನು ಮತ್ತು ಬೆಂಗಳೂರಲ್ಲಿರುವ 'ಮೈಸೂರು ಲಿಂಗಾಯತ ಎಜ್ಯುಕೇಷನ್ ಫಂಡ್' ಸಂಘದವರನ್ನು ಮದ್ರಾಸು ವೀರಶೈವ ವಿದ್ಯಾರ್ಥಿಮಂದಿರದ ಕೆಲವು ಉಪಯುಕ್ತ ಖರ್ಚುಗಳಿಗೆ ವರ್ಷಾಶನ ರೂಪವಾಗಿ ಸಹಾಯ ಮಾಡಲು ಪ್ರಾರ್ಥಿಸಿಕೊಳ್ಳಬೇಕೆಂದೂ, ನಿರ್ಧರಿಸಲ್ಪಟ್ಟಿತು.

ತಾ|| 15-10-30.
ವಿದ್ಯಾರ್ಥಿಮಂದಿರ,
ಮದ್ರಾಸು.

(ರುಜು.) ಎಸ್. ಸಿ. ನಾಗಯ್ಯಸೆಟ್ಟಿ,
ಅಧ್ಯಕ್ಷರು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗ್ಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ರೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[13]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಕೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ಸೊಂಟದಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಶುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಖರತೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಪಂಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂದ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಿಷ್ಠಾ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[28] **ಬ್ರಾಂಚ್ ಅಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ವದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ರೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[14]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೈಸುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಹಿಮಾಮಗೆ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ತಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಗೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[12] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಲ್ಪವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆಯದೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರ[illegible] ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇ[illegible] ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ,

[51] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—[illegible], ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೩. ವಿ. ಪಿ. ೦-೪-೦

ಡಜ಼ು ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[15] ಪೋ. ಬಾ. ೫೧೦, ಮದರಾಸು.

ಮನೋಹರವಾದ ಫೋಟೋಗಳು.

	ರೂ. ಅ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾ[illegible] ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪ[illegible] ಆವೃತ್ತಿ	೧ ಆಣೆ
ಸನ್ಯಾಸಾತ್ರಪ[illegible] ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾತ್ರಪ[illegible]ರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸುಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩ನೇ ನವಂಬರ್ ೧೯೩೦ [ಸಂಚಿಕೆ ೨೭

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ (ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ [illegible] ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ [illegible]ಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾ[illegible]ೇಭ್ಯೋನಮಃ

ಶ್ರೀ ಜಗದ್ಗುರು ಕೇದಾರ ಪೀಠಾಧೀಶ್ವರರ ಮಹೋತ್ಸವ ಲಕ್ಕುಂಡಿ.

ಧಾರವಾಡಜಿಲ್ಲಾ ಗದಗ ತಾಲೂಕು ಲಕ್ಕುಂಡಿ ಗ್ರಾಮದ ಮಾಲಿಪಾಟೀಲ ದೇವೇಂದ್ರಗೌಡರು ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯಮಹಾಸ್ವಾಮಿಗಳವರಿಗೆ ಬಿನ್ನಹಮಾಡಿಕೊಂಡು ತಾ|| ೨೦-೧೦-೩೦ ನೇ ಸೋಮವಾರ ಪ್ರಾತಃಕಾಲ ಉತ್ಸವವನ್ನು ನೆರವೇರಿಸಿದರು. ಅಲಂಕರಿಸಲ್ಪಟ್ಟ ರಾಜಬೀದಿಯಲ್ಲಿ ಉತ್ಸವವು ಮಕರತೋರಣ, ದಿವಾದೀಪ, ಶ್ವೇತಛತ್ರಾದಿ ಸಮಸ್ತ ಬಿರುದಾವಳಿಗಳೊಡನೆ ಚತುರಂಗಬಲಸಮೇತ ಬಹು ವಿಜೃಂಭಣೆಯಿಂದ ಹೊರಟಿತು. ಭಜನಾ ಸಂಘದವರ ಭಜನೆಯ ಸುಸ್ವರದಿಂದಲೂ ಶಾಲುಮತದ ಸದ್ದ[illegible]ರ ದೇವದುಂದುಭಿ ವಾದ್ಯ—ವಾದ್ಯಂಡಿಸವರ-ಸಾ[illegible] ಸುನಾದದಿಂದಲೂ ಪರಾಕು ಜಯಘೋಷದ[illegible]ಲೂ ಉತ್ಸವವು ಬಹು ಮನೋಹರವಾಗಿ[illegible] ಉತ್ಸವದಲ್ಲಿ ಮ||ರಾ|| ವಾಸುದೇವ ವೆಂಕಟೇಶ ಜೋಶಿ, ದಾಸಪ್ಪನವರು ಕುಲಕರ್ಣಿ ಇವರು ಭಾಗವಹಿಸಿದ್ದರು. ಈ ಪ್ರಕಾರ ಪರಸ್ಪರ ಮತೀಯರು ಐಕ್ಯದಿಂದ ನಡೆಯುವದನ್ನು ನೋಡಿ ಬಹಳ ಆನಂದವೆನಿಸಿತು. ಬಾಳನಗೌಡರು ಹೊಳಿಯಪ್ಪಗೌಡರು ಬೆನಹಾಳ ಇವರು ಉತ್ಸವದಲ್ಲಿ ವಿಶೇಷ ವ್ಯವಸ್ಥೆಯನ್ನು ಮಾಡಿದ್ದರು. ಸಂಸ್ಥಾನ ಅಮಾತ್ಯರಾದ ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಬೃಹನ್ಮಠಾಧ್ಯಕ್ಷ ಶ್ರೀ ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು, ಮುನಷಿ ಕೊಟ್ರಾರಾಧ್ಯರು ಉತ್ಸವ ಕಾರ್ಯವನ್ನು ನಡೆಸುತ್ತಿದ್ದರು. ಉತ್ಸವವು ದೇವೇಂದ್ರಗೌಡರ ಮನೆಗೆ ತಲ್ಪಿತು. ಜಗದ್ಗುರು ಪಂಚಾಚಾರ್ಯರ ಜಯಘೋಷವು ಧೋರ್ಗರಿಯುತ್ತಿರಲು ಶ್ರೀಗಳವರು ಸಿಂಹಪೀಠದಲ್ಲಿ ಮೂರ್ತಮಾಡಿದರು. ಈ ಗ್ರಾಮದ ವಾಸುದೇವ ವೆಂಕಟೇಶಜೋಶಿ ಇವರ ಅಧ್ಯಕ್ಷತೆಯಲ್ಲಿ ನಡೆದ ನಾಟಕ ಮಂಡಳಿಯವರು ಸುಸ್ವರದಿಂದ ಗಾನಮಾಡಿ ಶ್ರೀಗಳವರಿಗೆ ಆನಂದವನ್ನುಂಟುಮಾಡಿದರು. ಮಹಾದೇವಪ್ಪ ಆರೇರ, ಗುರಪ್ಪನಾರಾ ಎಂಬ ಇಬ್ಬರು ಬಾಲಕರು ಬಹಳ ಉತ್ತಮ ರೀತಿಯಿಂದ ಹಾಡಿ ಸರ್ವಸಾಮಾಜಿಕರನ್ನು ಸಂತೋಷಗೊಳಿಸಿದರು. ಆ ಮೇಲೆ ಮಹಾಸ್ವಾಮಿಗಳವರು ಶಿವಾರ್ಚನೆಗೆ ದಯಮಾಡಿಸಿದರು. ಪಾಟೀಲ ದೇವೇಂದ್ರಗೌಡರು ತಮ್ಮ ಬಂಧು ಬಾಂಧವರೊಡನೆ ಪಾದಪೂಜೆಯನ್ನು ಪೂರೈಸಿಕೊಂಡು ಗಣಾರಾಧನೆಯನ್ನು ನೆರವೇರಿಸಿದರು. ೬-೭ ನೂರು ಜನರಿಗೆ ಅನ್ನಸಂತರ್ಪಣೆಯಾಯಿತು. ಪಾಟೀಲರು ತಮ್ಮ ಗುರುಗಳಾದ ವೇ|| ವೀರಯ್ಯನವರು ಹಿರೇಮಠ ಲಕ್ಕುಂಡಿ ಇವರ ಕೈಯಲ್ಲಿ ಪ್ರಭಾಪೋಷಣಕ್ಕಾಗಿ ೧ ರೂಪಾಯಿಯನ್ನು ಕೊಟ್ಟರು. ಪುನಃ ಸಾಯಂಕಾಲ ೬ ಘಂಟೆಯಿಂದ ಉತ್ಸವಹೊರಟು ವೈಭವದಿಂದ ಸಂಸ್ಥಾನಕ್ಕೆ ತಲ್ಪಿತು. ಆಮೇಲೆ ಯಾವ ತ[illegible]ು ಆಶೀರ್ವಾದ ಪಡೆದುಕೊಂಡು ತಮ್ಮ ಗ[illegible] ತೆರಳಿದರು. ದೇವೇಂದ್ರಗೌಡರು ಚಿಕ್ಕವರಿದ್ದು ಈ ಸ್ಥಿತಿಯಲ್ಲಿ ಇಷ್ಟು ಗುರುಭಕ್ತಿ ಸಮಾಜಾಭಿಮಾನವೂ ಇವರಲ್ಲಿ ಪ್ರಾದುರ್ಭ[illegible]ದನ್ನು ನೋಡಿದರೆ ಆನಂದವೆನಿಸುತ್ತದೆ. ಇವರ ಮಾರ್ಗವನ್ನು ಪ್ರತಿಯೊಬ್ಬ ವೀರಶೈವನೂ ಅನುಸರಿಸತಕ್ಕದ್ದಾಗಿದೆ. ಈ ಪ್ರಕಾರ ಗುರುಭಕ್ತಿಯನ್ನು ತೋರಿಸಿದ ಸಮಸ್ತ ಸದ್ಭಕ್ತರಿಗೆ ಜಗದಾಚಾರ್ಯರು ಸರ್ವಸಂಪತ್ತನ್ನು ದಯಪಾಲಿಸಬೇಕೆಂದು ಪ್ರಾರ್ಥಿಸುವ.

ರಾಚಪ್ಪ ಅಣ್ಣಿಗೇರಿ.

ಮ|| ರಾ|| ಜಿ. ಎಚ್. ವೀರಣ್ಣನವರು ನೆರವೇರಿಸಿದ ಸಂತೋಷಕೂಟದಲ್ಲಿ ಮ|| ರಾ|| ಡಾಕ್ಟರ್ ಅಣ್ಣಾಜಪ್ಪನವರು ಮಾಡಿದ ಭಾಷಣ.

ಮ||ರಾ|| ವೀರಣ್ಣನವರೇ ಮತ್ತು ಸಭ್ಯಮಹಾಶಯರೆ,

ಈ ದಿವಸ ಮ|| ರಾ|| ವೀರಣ್ಣನವರು ನಾನು ನನ್ನ ಕರ್ತವ್ಯವೆಂದೆಣಿಸಿ ವೈದ್ಯರೂಪದಿಂದ ಮಾಡುತ್ತಿರುವ ಅಲ್ಪಸೇವೆಗಾಗಿ ನನ್ನಲ್ಲಿ ಅಧಿಕವಾದ ಪ್ರೀತಿ ವಿಶ್ವಾಸಗಳನ್ನಿಟ್ಟು ನನಗೆ ಈ ಸುಂದರವಾದ ಪೆಟ್ಟಿಗೆಯನ್ನು ಬಹುಮಾನಿಸಿದುದಕ್ಕಾಗಿ ಅವರಿಗೆ ನಾನು ತುಂಬಾ ಕೃತಜ್ಞನಾಗಿಯೂ ಋಣಿಯಾಗಿಯೂ ಇರಬೇಕಾಗಿದೆ. ಅವರು ಈ ರೀತಿ ನನಗೆ ಬಹುಮಾನ ಮಾಡುವುದು ಇದೇ ಮೊದಲನೆಯಸಲವಲ್ಲವೆಂಬುದು ತಮಗೆಲ್ಲಾ ತಿಳಿದೇ ಇದೆ. "ಅಳಿಲುಭಕ್ತಿ ಮಳಲಸೇವೆ" ಎಂಬಂತೆ ನನ್ನ ಅಲ್ಪವಾದ ಬುದ್ಧಿಯಿಂದ ಮಾಡುತ್ತಿರುವ ನನ್ನ ಅಲ್ಪಸೇವೆಗೆ ಏನೇನೂ ಬೆಲೆಯಿಲ್ಲದಿದ್ದರೂ, ಅದರಿಂದಲೇ ಸಂತುಷ್ಟರಾಗಿ, ಮ|| ರಾ|| ವೀರಣ್ಣನವರು ನನಗೆ ಪದೇ ಪದೇ ಇಷ್ಟು ಬೆಲೆಯುಳ್ಳ ಬಹುಮಾನಗಳಿಂದ ನನ್ನನ್ನು ಸತ್ಕರಿಸುತ್ತಿರುವುದನ್ನು ನೋಡಿದರೆ ಅವರು ಹುಟ್ಟುವಾಗಲೇ ಅವರ ಜೊತೆಯಲ್ಲಿಯೇ ಹುಟ್ಟಿ, ಅವರ ಜೊತೆಯಲ್ಲಿಯೇ ಬೆಳೆದು, ಅವರಲ್ಲಿಯೇ ವಾಸಮಾಡಿಕೊಂಡಿರುವ ಔದಾರ್ಯ, ಧರ್ಮಶೀಲತೆ, ದಯೆ, ಪರೋಪಕಾರ ಬುದ್ಧಿ ಮುಂತಾದ ಸದ್ಗುಣಗಳೇ ಈ ನನ್ನ ಬಹುಮಾನಕ್ಕೆ ಕಾರಣವಲ್ಲದೆ ನನ್ನ ಯೋಗ್ಯತೆಯಲ್ಲವೆಂಬುದು ಮ|| ರಾ|| ವೀರಣ್ಣನವರ ಒಡನಾಡಿಗಳಾಗಿ ಅವರ ಜೊತೆಯಲ್ಲಿಯೇ ಸರ್ವದಾ ಇರುವ ಸರ್ವರಿಗೂ ಮಂದಟ್ಟಾಗುವುದು.

ಉದಾರವಾದ ನಡತೆಯುಳ್ಳವರಿಗೆ ಪ್ರಪಂಚವೇ ಕುಟುಂಬವೆಂದು ಹಿರಿಯರು ಹೇಳಿರುವಂತೆ ಇತರರಿಂದ ಉಪಕಾರವಾಗಲಿ, ಆಗದೇ ಇರಲಿ ಎಲ್ಲರನ್ನೂ ತಮ್ಮ ಕುಟುಂಬವರ್ಗಕ್ಕೆ ಸೇರಿದ ಹಾಗೆ ಭಾವಿಸಿ, ಎಲ್ಲರಿಗೂ ಉಪಕಾರಮಾಡುವುದು ಮ|| ರಾ|| ವೀರಣ್ಣನವರಂಥ ಉದಾರಚರಿತರಿಗೆ ಸ್ವಭಾವಸಿದ್ಧ ಗುಣವಾಗಿದೆ. ಈ ವಿಧವಾದ ಸ್ವಭಾವಗುಣದಿಂದ ಅವರು ನನಗೆ ಈ ದಿನ ಮಾಡಿದಂತೆ ಬಹುಮಾನಮಾಡಿದಾಗಲೆಲ್ಲಾ ಅವರು ನನ್ನ ಮೇಲೆ ಹೆಚ್ಚು ಹೆಚ್ಚಾದ ಋಣಭಾರವನ್ನು ಹೊರಿಸುತ್ತಿದ್ದಾರೆ. ಈ ಭಾರವನ್ನು ಅವರೇ ಹಗುರ ಮಾಡಬೇಕೇ ವಿನಾ ನನ್ನ ಪ್ರಯತ್ನದಿಂದ ಆಗಲಾರದು. ಆದರೂ ಈ ದಿವಸ ಮ|| ರಾ|| ವೀರಣ್ಣನವರು ನನ್ನಲ್ಲಿ ತೋರಿಸಿರುವ ಪ್ರೀತಿ, ವಿಶ್ವಾಸ, ದಯಾಗುಣಗಳನ್ನು ಮರೆಯದೆ ಭದ್ರವಾಗಿ ಈ ಪೆಟ್ಟಿಗೆಯಲ್ಲಿಟ್ಟುಕೊಂಡಿರಬೇಕೆಂದು ಇದನ್ನು ನನಗೆ ಬಹುಮಾನಿಸಿರುತ್ತಾರೆ. ಆದರೆ ನನ್ನ ಹೃದಯವೆಂಬ ಪೆಟ್ಟಿಗೆಯಲ್ಲಿ ಅವು ಯಾವಾಗಲೂ ಸುರಕ್ಷಿತವಾಗಿ ಇರುವುವೆಂದು ನಾನು ಮ||ರಾ|| ವೀರಣ್ಣನವರಿಗೆ ಭರವಸೆಕೊಡಬಲ್ಲೆನಾದರೂ, ಮನುಷ್ಯನಿಗೆ ಲೋಕವ್ಯವಹಾರದಲ್ಲಿ ಪದೇ ಪದೇ ಅಜ್ಞಾನವು ಮುಸುಕಿ ಬರುವಕಾರಣ ಅಂಥ ಕಾಲದಲ್ಲಿ ಈ ಮನೋಹರವಾದ ಪೆಟ್ಟಿಗೆಯ ದರ್ಶನಮಾತ್ರದಿಂದಲೇ ಮ|| ರಾ|| ವೀರಣ್ಣನವರಲ್ಲಿರತಕ್ಕ ಔದಾರ್ಯವೇ ಮುಂತಾದ ಸದ್ಗುಣರಾಶಿಗಳು ನನ್ನ ನೆನಪಿಗೆ ಬಂದು, ನನ್ನ ವೈದ್ಯವೃತ್ತಿರೂಪವಾದ ಸಹೋದರ ವರ್ಗದ ಸೇವೆಯಲ್ಲಿ ನನಗೂ ಹುರುಪನ್ನುಂಟುಮಾಡುವುದಕ್ಕೆ ಈ ಪೆಟ್ಟಿಗೆಯು ಅತ್ಯುತ್ತಮವಾದ ಸಾಧನವೆಂದೆಣಿಸಿ, ಇದನ್ನು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿ, ಮ|| ರಾ|| ವೀರಣ್ಣನವರಿಗೆ ಅನೇಕ ವಂದನೆಗಳನ್ನು ಅರ್ಪಿಸುತ್ತೇನೆ.

ಪತ್ರವ್ಯವಹಾರ.

ಜಾತ್ರೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಕೇದಾರ ಪೀಠಾಧಿಪತಿಗಳ ಆಂದೋಲಿಕೋತ್ಸವ.

ನರಸಾಪುರ.

ಧಾರವಾಡಜಿಲ್ಲಾ ಗದಗ ತಾಲೂಕ ಪೈಕಿ ನರಸಾಪುರ ಗ್ರಾಮಕ್ಕೆ ಶ್ರೀ ಹಿಮವತ್ಕೇದಾರ ವೈರಾಗ್ಯ ಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಶ್ರೀ 108 ಜಗದ್ಗುರು ಚಿದ್ಘನಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಲಕ್ಕುಂಡಿಯಿಂದ ಪ್ರೋಗ್ರಾಂ ನಿಶ್ಚಯಿಸಿದ ಪ್ರಕಾರ ತಾ|| 23-10-30 ನೇ ದಿವಸ ಸಿಬ್ಬಂದಿ ಸಮೇತವಾಗಿ ಇಲ್ಲಿಗೆ ದಯಮಾಡಿಸಿದರು. ದಯಮಾಡಿಸಿದ ಕೂಡಲೆ ಪುರಪ್ರಮುಖರಾದ ವೇ|| ಅನ್ನದಾನಯ್ಯನವರು ಹಿರೇಮಠ, ಬಸವಯ್ಯನವರು ಮುಧೋಳ, ಬಸನಗೌಡರು ಪೋಲೀಸ್ ಪಾಟೀಲ, ಗುರುಪಾದಪ್ಪನವರು ಕುರ್ನಳ್ಳಿ, ಬಸಪ್ಪನವರು ಮುಳಗುಂದ, ಮರಿಗೌಡರು ಪಾಟೀಲ, ಹನುಮಂತಗೌಡರು ದೊಡ್ಡಗೌಡ್ರ ಮಲ್ಲಪ್ಪ ನೀರಲಗಿ, ಬಸಪ್ಪ ರಾಮೇನಹಳ್ಳಿ, ಇವರೇ ಮೊದಲಾದ ಪ್ರಮುಖರು ಇನ್ನುಳಿದ ಭಕ್ತ ಸ್ತ್ರೀ ಪುರುಷರು ಇಸ್ತ್ರಿಕವಾಲ ಸಹಿತವಾಗಿ ಇದಿರ್ಗೊಂಡು ಮಹಾಸ್ವಾಮಿಗಳವರ ಉತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಯಿಸಿದರು. ಈ ಗ್ರಾಮದ ಭಜನಾ ಸಂಘದವರು ಜನರ ಮನಸ್ಸಿಗೆ ಆನಂದವುಂಟಾಗುವಂತೆ ಭಜನೆಯನ್ನು ಮಾಡಿ ತಮ್ಮಲ್ಲಿರುವ ಗುರುಭಕ್ತಿಯನ್ನು ವ್ಯಕ್ತಗೊಳಿಸಿದರು. ಉತ್ಸವವು ನಿಯಮಿತಸ್ಥಳಕ್ಕೆ ಬಂದ ಕೂಡಲೆ ಸರ್ವಭಕ್ತರು ಆಚಾರ್ಯರ ಜಯಜಯಕಾರ ಮಾಡುತ್ತಿರಲು, ಜಗದ್ಗುರುಗಳು ಸಿಂಹಾಸನವನ್ನಲಂಕರಿಸಿದರು. ಆಮೇಲೆ ಸಂಸ್ಥಾನದ ಅಮಾತ್ಯರಾದ ಶ್ರೀ ಷ||ಬ್ರ|| ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಹಿರೇಮಠ ಚಿಕ್ಕಮಂಣೂರು ಇವರು ಪೀಠಾಧಿಪತಿಗಳ ಆಗಮನದಿಂದ ಭಕ್ತರಿಗೂ ಇಡೀ ಸಮಾಜಕ್ಕೂ ಆಗುವ ಲಾಭದ ಬಗ್ಗೆ ಅನೇಕ ಶಾಸ್ತ್ರೋದಾಹರಣೆಗಳನ್ನು ಕೊಟ್ಟು ಒಳ್ಳೇ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇವರ ಭಾಷಣವನ್ನು ಕೇಳಿ ಸರ್ವರೂ ಸಂತೋಷಪಟ್ಟರೆಂದು ಬರೆದರೆ ಅತಿ ಶಯೋಕ್ತಿಯೆನಿಸಲಾರದು. ಆಮೇಲೆ ಜಗದ್ಗುರುಗಳು ತಮ್ಮ ಅಮೃತವಾಣಿಯಿಂದ ಇಲ್ಲಿ ಕೂಡಿರುವ ಭಕ್ತರು ಗುರುಭಕ್ತಿಯಿಂದ ನಡೆದು ಕೃತಾರ್ಥರಾಗಬೇಕೆಂಬ ವಿಷಯದ ಮೇಲೆ ಶಾಸ್ತ್ರಪ್ರಮಾಣಗಳನ್ನು ಕೊಟ್ಟು ಸರ್ವರಿಗೆ ತಿಳಿಯುವಂತೆ ಬೋಧ ಮಾಡಿದರು. ಸಂಸ್ಥಾನ ಅಮಾತ್ಯರಾದ ಚಿಕ್ಕಮಂಣೂರು ಶ್ರೀಗಳು, ಸಂಸ್ಥಾನ ಮುನಸಿ ವೇ|| ಕೊಟ್ರಾರಾಧ್ಯರು ಹಿರೇಮಠ ನೆಲ್ಲಕುದರಿ ಇವರೀರ್ವರು ಉತ್ಸವ ಕಾರ್ಯಕ್ರಮವನ್ನು ಚನ್ನಾಗಿ ಟ್ಟಬಗ್ಗೆ ನರಸಾಪುರ ಭಕ್ತರು ಇವರ ಆ ಭಾರವನ್ನು ಮನ್ನಿಸಿದರು. ಆ ಹೊತ್ತಿಗೆ 10 ಘಂಟೆ ರಾತ್ರಿಯಾದ ಕಾರಣ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಸವನಗೌಡ ಪೋಲೀಸ್ ಪಾಟೀಲ ನರಸಾಪುರ.

ಭಜನ ಸಪ್ತಾಹ.

ಹುಟ್ಟಿಗಿ.

ಪರಮಾತ್ಮನು ಈ ಜಡಸೃಷ್ಟಿಯನ್ನು ನಿರ್ಮಿಸಿ ತಾನು ಎಲ್ಲಿಯೋ ಇದ್ದು ಸುಮ್ಮನೆ ಬಿಟ್ಟುಬಿಟ್ಟಿಲ್ಲ. ಆತನು ಅವ್ಯಕ್ತಸ್ವರೂಪನಾಗಿರ್ದು ಪ್ರತಿಕ್ಷಣದಲ್ಲಿಯೂ, ಸರ್ವಪ್ರಾಣಿಗಳ ಯೋಗಕ್ಷೇಮವನ್ನು ಚಿಂತಿಸುತ್ತಿರುವನು. ಭಕ್ತಿಯುತರಾದ ಮನುಷ್ಯರಿಗಂತೂ ಆತನು ಕಲ್ಪದ್ರುಮದಂತಿರುವನು. ಅಂತೆಯೇ ದಯಾನಿಧಿಯಾದ ಆ ಪರಮಾತ್ಮನಿಗೆ ಭಕ್ತವತ್ಸಲನೆಂಬ ಅಭಿಧಾನವುಂಟಾಗಿದೆ. ದೇವಾಧಿದೇವನಾದ ಮಹಾದೇವನಂತೂ ಕೇವಲ ಭಕ್ತಪ್ರಿಯನೇ ಆಗಿದ್ದು ಭಕ್ತರ ವಾಂಛಿತಗಳನ್ನು ತತ್‌ಕ್ಷಣದಲ್ಲಿಯೇ ಪೂರ್ತಿಗೊಳಿಸುತ್ತಾನೆಂಬ ವಿಷಯವು ಗ್ರಂಥಾಧಾರಗಳಿಂದಲೂ, ಮಹಾಮಹಿಮಾಶಾಲಿಗಳ ಅನುಭವದಿಂದಲೂ, ಸುಪ್ರಸಿದ್ಧವಾಗಿದೆ. ಆದುದರಿಂದ ಪ್ರಪಂಚಾಸಕ್ತರಾದ ನಾವುಗಳು ಐಹಿಕಸುಖಪ್ರಾಪ್ತಿಗೋಸ್ಕರವಾಗಿ ಆತನನ್ನು ಭಜನೆ, ಅರ್ಚನೆ, ಇತ್ಯಾದಿ ಸತ್ಕರ್ಮಗಳಿಂದ ಪ್ರಸನ್ನೀಕರಿಸಿಕೊಂಡು ನಮ್ಮ ಇಚ್ಛೆಗಳನ್ನು ಪೂರ್ತಿಮಾಡಿಕೊಳ್ಳುತ್ತಿರುತ್ತೇವೆ. ಅದೇ ಮೇರೆಗೆ ಈ ಗ್ರಾಮದಲ್ಲಿ ಕಳೆದ ತಿಂಗಳಲ್ಲಿ ಅಂದರೆ ಆಶ್ವಯುಜ ಕೃಷ್ಣಪಕ್ಷದ ಪ್ರತಿಪದೆಯಿಂದ ಅಷ್ಟಮಿಯವರೆಗೆ ಶ್ರೀಮಜ್ಜಗದ್ಗುರುಗಳ ಹಾಗೂ ಶ್ರೀ ಪರಶಿವನ ಸಪ್ತಾಹ ಭಜನೆಯು ಬಹು ವಿಜೃಂಭಣೆಯಿಂದ ನಡೆದು ಪೂರ್ತಿಯಾಯಿತೆಂದು ತಿಳುಹಿಸಲಿಕ್ಕೆ ತುಂಬಾ ಸಂತೋಷವೆನಿಸುತ್ತದೆ.

ಈ ಗ್ರಾಮದಲ್ಲಿ ಕಾಲರಾರೋಗವು ಈ ಮೊದಲು ೧-೨ ತಿಂಗಳುಗಳಿಂದ ಇತ್ತು. ದಿನಾಲು ೨-೩ ರಿಂದ ೫-೬ ರ ವರೆಗೆ ಕೇಸುಗಳಾಗುತ್ತಿದ್ದವು. ಒಟ್ಟು ೫೦ ಜನರು ಈ ಕಾಲರಾಬೇನೆಯಿಂದ ಮೃತಿಯನ್ನೈದಿದ್ದರು. ಈ ಅವಧಿಯಲ್ಲಿ ಇಲ್ಲಿಯ ಪಟ್ಟಾಧ್ಯಕ್ಷ ಮಹನೀಯರಾದ ಶ್ರೀಗುರು ಚನ್ನವೀರಸ್ವಾಮಿಗಳವರು ಊರಲ್ಲಿರಲಿಲ್ಲ. ಗ್ರಾಮದಲ್ಲಿ ಹೀಗೆ ಕಾಲರಾಬೇನೆಯು ಹಬ್ಬುತ್ತಿರುವ ಸಂಗತಿಯು ಶ್ರೀಗಳವರಿಗೆ ತಮ್ಮ ಸಂಚಾರ ಕಾಲದಲ್ಲಿ ತಿಳಿದುಬರಲು ಶ್ರೀಗಳು ಭಕ್ತೋದ್ಧಾರಕ್ಕಾಗಿ ತಮ್ಮ ಸಂಚಾರಕ್ರಮವನ್ನು ನಿಲ್ಲಿಸಿ ಸ್ವಗ್ರಾಮಕ್ಕೆ ದಯಮಾಡಿಸಿದರು. ಈ ಗ್ರಾಮಕಂಟಕಕ್ಕೆ ನಿವಾರಣೋಪಾಯವನ್ನು ಮಾಡಬೇಕೆಂದು ಯೋಚಿಸಿ ಸಮಸ್ತ ಭಕ್ತರಿಗೂ ತಿಳುಹಿಸಿ ಅವರಿಂದ ಸಪ್ತಾಹ ಭಜನೆಯನ್ನು ಪ್ರಾರಂಭಿಸಿದರು.

ಭಜನೆಯು ಅವ್ಯಾಹತವಾಗಿ ನಡೆಯುವದಕ್ಕೋಸ್ಕರವಾಗಿ ಶ್ರೀಗಳವರು ಪ್ರತಿ ೨ ತಾಸುಗಳಿಗೆ ೫ ಜನರಂತೆ ಭಜಕಭಕ್ತರನ್ನು ನಿಯಮಿಸಿದ್ದರು. ಮತ್ತು ಶ್ರೀಗಳೇ ಸ್ವತಃ ಭಜಕವೃಂದದ ಮಧ್ಯದಲ್ಲಿ ನಿಂತು ಭಜಕರಿಗೆ ಚಾಲನೆಕೊಡುತ್ತ ನಿಲ್ಲುತ್ತಿದ್ದರು. ವೀಣಾ, ಮೃದಂಗ, ಜಾಗಟೆ ಮೊದಲಾದ ದೇವಪ್ರಿಯ ವಾದ್ಯಗಳಿಂದ ಭಜನೆಯು ಜರಗುತ್ತಿರುವಾಗ್ಗೆ ಪ್ರೇಕ್ಷಕ ಭಕ್ತರನ್ನಾಗಲಿ, ಮತಶ್ಯಾವ ರಸಿಕ ಜನರುಗಳನ್ನಾಗಲಿ, ಪ್ರೇಮಸಾಗರದಲ್ಲಿ ಲೋಲಾಡಿಸದೆ ಬಿಡುತ್ತಿದ್ದಿಲ್ಲ. ಈಶ್ವರ ಭಜನೆಯೇ ಅಂಥ ಆನಂದದಾಯಕವಾದದ್ದು.

ಇಲ್ಲಿಯ ಹಿಂದೆ ಆಗಿಹೋದ ೮ ಮಂದಿ ಮಹಾಮಹಿಮಾಶಾಲಿಗಳಾದ ಸ್ವಾಮಿಗಳವರ ಗದ್ದುಗೆಗಳಿಗೆ ಪ್ರತಿನಿತ್ಯದಲ್ಲಿಯೂ, ಮಧ್ಯಾಹ್ನ ವಿಧ್ಯುಕ್ತರೀತಿಯಾಗಿ ರುದ್ರಾಭಿಷೇಕವು ಮಾಡಲ್ಪಡುತ್ತಿತ್ತು. ತರುವಾಯ ಗಣಾರಾಧನೆಯಾಗುತ್ತಿತ್ತು.

ಈ ಗಣಾರಾಧನೆಗೆ ನಿತ್ಯದಲ್ಲಿಯೂ ೧೦೦-೧೨೦ ಜನರು ಕೂಡುತ್ತಿದ್ದರು. ಕೆಳಗೆ ಬರೆದ ಮಹಾಶಯರು ಪ್ರತಿ ದಿನಸ ಒಬ್ಬೊಬ್ಬರಂತೆ ಗಣಾರಾಧನೆಗೂ ಹಾಗೂ ಭಜನಾಕಾರ್ಯಕ್ಕೂ ಆಗತಕ್ಕ ವ್ಯಯದ ಭಾರವನ್ನು ವಹಿಸುತ್ತಿದ್ದರೆಂಬ ಸಂಗತಿಯು ಸಂತೋಷದಾಯಕವಾಗಿದೆ.

(೧) ಮಲ್ಲಯ್ಯಸ್ವಾಮಿ ಮಠಪತಿ. (೨) ಪಾತಪ್ಪ ಕೊಠಾಣಿ. (೩) ಗುರುಸಿದ್ಧಪ್ಪ ಡೊಳ್ಳೆ. (೪) ಚನ್ನಬಸಪ್ಪ ಗಂಗಡೆ. (೫) ಶಿವಮೂರ್ತೆಪ್ಪ ಕುಂಭಾರಿ. (೬) ಭೀಮಣ್ಣ ಮಡಿವಾಳ.

ಈ ಸತ್ಕಾರ್ಯದಲ್ಲಿ (೧) ಗುರುಸಿದ್ಧಪ್ಪ ಡೊಳ್ಳೆ (೨) ಶಿವಲಿಂಗಪ್ಪ ಗಂಗಡೆ (೩) ಪಾತಪ್ಪ ಕೊಠಾಣೆ (೪) ಶಿವಪ್ಪ ಪಟ್ಟಿ ಈ ಮಹಾಶಯರು ಯಾವತ್ತು ಕಾರ್ಯವನ್ನು ಸಾಂಗಗೊಳಿಸಿದರೆಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಕಡೆಯ ದಿವಸ ಅಂದರೆ ಮಂಗಳವಾರ ಸೂರ್ಯೋದಯಕ್ಕೆ ಭಜನೆಯು ಸಮಾಪ್ತಿಯಾಯಿತು. ತರುವಾಯ ಶ್ರೀಗಳವರ ಪಾದಪೂಜೆಯು ಲಕ್ಷ ಬಿಲ್ವಪತ್ರಗಳಿಂದ ಬಹುಸಂಭ್ರಮದಿಂದ ನಡೆಯಿತು. ಆ ಕಾಲಕ್ಕೆ ಸದ್ಭಕ್ತ ಜನರ ಅಭಿಪ್ರಾಯದ ಮೇರೆಗೆ ಶ್ರೀಗಳವರ ಭಾವಪಟವು ತೆಗೆಯಲ್ಪಟ್ಟಿತು. ತರುವಾಯ ಗಣಾರಾಧನೆಯಾಗಿ ಸಂಜೆಯ ೬ ಘಂಟೆಯ ಸಮಯಕ್ಕೆ ಗ್ರಾಮದ ಯಾವತ್ತು ಭಾಗಗಳಲ್ಲಿ ಪಂಚಾಚಾರ್ಯರ ಭಾವಪಟದ ಮೆರವಣಿಗೆಯು ಬಹು ವೈಭವದಿಂದ ನಡೆಯಿತು. ಮೆರವಣಿಗೆಯು ತಿರುಗಿ ಮಠಕ್ಕೆ ಬಂದಮೇಲೆ ಸಭೆಯು ನೆರೆಯಿತು. ಶ್ರೀಗಳವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಈ ಸಭೆಯಲ್ಲಿ ಮಲ್ಲಯ್ಯಸ್ವಾಮಿಗಳು ಮಠಪತ್ತಿ ಇವರು ಸಪ್ತಾಹ ಭಜನೆಯ ಫಲವನ್ನು ವಿಶದಪಡಿಸಿದನಂತರ ಶ್ರೀಗಳವರು ಭಕ್ತಜನರಿಗೆ ಅನೇಕ ಉಪದೇಶದ ಮಾತುಗಳನ್ನೂ ಭಕ್ತಿಯ ತತ್ವಗಳನ್ನೂ ಚೆನ್ನಾಗಿ ತಿಳುಹಿಸಿಕೊಟ್ಟರು. ತರುವಾಯ ಸಭೆಯು ವಿಸರ್ಜಿಸಲ್ಪಟ್ಟಿತು.

ಈಗ ಗ್ರಾಮದಲ್ಲಿ ಕಾಲರಾ ಬೇನೆಯು ಸಂಪೂರ್ಣವಾಗಿ ನಾಶವಾಗಿದೆ. ನೋಡಿರಿ! ಈಶ್ವರನ ಭಕ್ತವತ್ಸಲತೆಯನ್ನು ?

ಎಚ್. ಬಿ. ದೇಸಾಯಿ,
ಹೆಡ್‌ಮಾಸ್ತರ, ಸೆಟ್ಲಮೆಂಟಸ್ಕೂಲ, ಹುಟ್ಟಿಗಿ.

ಸೊಸೈಟಿ ಪ್ರಾರಂಭೋತ್ಸವ.

ಮೈಸೂರಿನಲ್ಲಿ ಸ್ಥಾಪಿತವಾಗಿರುವ ಮರಾಠಾ ಕ್ಷತ್ರಿಯರ ಕೋ ಆಪರೇಟಿವ್ ಸೊಸೈಟಿಯ ಪ್ರಾರಂಭೋತ್ಸವವು 1930ನೇ ಅಕ್ಟೋಬರ್ 26ನೇ ತಾರೀಖು ಭಾನುವಾರ ಮೇಲ್ಕಂಡ ಸೊಸೈಟಿಯ ಪ್ರಾರಂಭೋತ್ಸವವು ಧರ್ಮಪ್ರಕಾಶಕ ಸಾಹುಕಾರ್ ಡಿ. ಬನುಮಯ್ಯನವರ ಹೈಸ್ಕೂಲ್ ಹಾಲಿನಲ್ಲಿ ಅತಿ ವೈಭವದಿಂದ ನೆರವೇರಿತು. ಸ್ಕೂಲ್ ಮುಂಭಾಗವು ತಳಿರುತೋರಣಗಳಿಂದಲೂ ಪತಾಕೆ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಮರಾಠಾ ಮಹಾಜನಗಳು ಮತ್ತು ಇತರ ಸಂಗಡದ ಮಹನೀಯರು ಸಭೆಗೆ ದಯಮಾಡಿಸಿದ್ದರು. ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರ್‌ರವರ ಬಾಡಿಗಾರ್ಡ್ ಕಮ್ಯಾಂಡೆಂಟ್ ಮತ್ತು ಆನರರಿ ಏಡಿಕಾಂಗ್‌ರವರಾದ ಮೇಜರ್ ಎಸ್. ಗೋಪಾಲರಾಯರವರು ಸಭಿಕರ ಪ್ರಾರ್ಥನೆಯಂತೆ ಸಭಾದಕ್ಷಸ್ಥಾನವನ್ನು ಅಲಂಕರಿಸಿದರು. ಚಿ|| ಸೀತಾಬಾಯಿ ಎಂಬ ಸಣ್ಣ ಬಾಲಕಿಯು ಸುಶ್ರಾವ್ಯವಾಗಿ ದೇವರ ಸ್ತೋತ್ರವನ್ನು ಹಾಡಿ ಸಭಿಕರ ಮನಸ್ಸನ್ನು ಆನಂದಗೊಳಿಸಿದಳು. ಕೃಷ್ಣಶಾಸ್ತ್ರಿಗಳಿಂದ ಲಕ್ಷ್ಮಿ, ಸರಸ್ವತಿ ಪೂಜೆಯು ನಡೆಯಿಸಲ್ಪಟ್ಟಿತ್ತು. ಅನಂತರ ಸಭಾಧ್ಯಕ್ಷರಿಗೆ ಮರಾಠಿ ಭಾಷೆಯಲ್ಲೂ ಕನ್ನಡದಲ್ಲೂ ಅಡ್ರೆಸ್ಸುಗಳು ಓದಿ ಒಪ್ಪಿಸಲ್ಪಟ್ಟವು. ರಿಟೈರ್ಡ್ ಫಾರೆಸ್ಟ್ ರೇಂಜರ್ ಮ|| ಚಿದಂಬರಾಯರು ವಿದ್ಯಾಭ್ಯಾಸದ ವಿಷಯದಲ್ಲಿ ಬಹು ಶ್ಲಾಘ್ಯವೂ ದೀರ್ಘವೂ ಆದ ಉಪನ್ಯಾಸವನ್ನು ಕನ್ನಡದಲ್ಲಿ ಹೇಳಿದರು. ಅನಂತರ ಸೊಸೈಟಿಯ ಅಧಿಕಾರಿಗಳ ಚುನಾವಣೆಯು ನಡೆಯಿತು. ಸಭಾದಕ್ಷರು ಮರಾಠಾ ಮಹಾಜನಗಳ ಕರ್ತವ್ಯ ಮತ್ತು ಸೊಸೈಟಿಯ ಕೆಲಸಗಳನ್ನು ನಡಿಸುವ ವಿಚಾರದಲ್ಲಿ ಬುದ್ಧಿವಾದಗಳನ್ನು ಅಪ್ಪಣೆ ಕೊಡಿಸಿದರು. ಅನಂತರ ಶ್ರೀಮನ್ಮಹಾರಾಜ ಬಹದ್ದೂರ್‌ರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಅನಂತರ ಸಭಿಕರಿಗೆ ಗಂಧಪುಷ್ಪತಾಂಬೂಲ ವಿನಿಯೋಗದಿಂದ ಸಭೆಯು ಮುಕ್ತಾಯಗೊಂಡಿತು.

ಪ್ರತ್ಯಕ್ಷದರ್ಶಿ.

ಉದ್ಯಮನಿಧಿ.

ಈಗಿನ ಔದ್ಯೋಗಿಕ ಪರಿಸ್ಥಿತಿಯು ಹೀನಾವಸ್ಥೆಯಲ್ಲಿರುವುದು ಈ ಜಗತ್ತಿನಲ್ಲಿರುವ ಎಲ್ಲಾ ಸುಧಾರಿಸಿದ ರಾಷ್ಟ್ರಗಳಿಗೂ ಸಂಪೂರ್ಣವಾಗಿ ತಿಳಿದ ಸಂಗತಿಯೇ ಆಗಿದೆ. ಕಾರಣವೇನೆಂದರೆ, ಸದ್ಯದಲ್ಲಿ ಪ್ರತಿಯೊಂದು ದೇಶದ ಕಡೆಗೆ ದೃಷ್ಟಿಯನ್ನು ಚಾಚಿ ನೋಡಿದರೂ ಬಹು ಕಠಿಣತರವಾದ ಪರಿಸ್ಥಿತಿಯು ದಿನೇ ದಿನೇ ಹೆಚ್ಚುತ್ತಲಿದೆ. ಆದರೆ ಅಂಥ ಪರಿಸ್ಥಿತಿಯನ್ನು ತಮ್ಮ ಕೈಲಾದಮಟ್ಟಿಗೂ ತಪ್ಪಿಸಬೇಕೆಂದು ಸುಧಾರಿಸಿದ ರಾಷ್ಟ್ರದವರು ತಮ್ಮ ಯೋಗ್ಯತಾನುಸಾರವಾಗಿ ಪ್ರತಿಯೊಂದು ಕಾರ್ಯವನ್ನು ಮಾಡಕೊಡಗಿದ್ದಾರೆ. ಆದರೆ ನಮ್ಮ ಹಿಂದೂಸ್ಥಾನದಲ್ಲಿರುವ ಸದ್ಯದ ಔದ್ಯೋಗಿಕ ವಿಷಯದಲ್ಲಿ ಬೇಕಾದಷ್ಟು ಪ್ರಗತಿಯನ್ನು ಮಾಡುವ ಹಾಗೆ ಇದೆ. ಈ ಉದ್ಯಮ ಪ್ರಗತಿಗೆ ಅನೇಕ ಮಾರ್ಗಗಳಿರುತ್ತವೆ. ಇಂಥ ಸಮಾಧಾನಕಾರಕ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅವುಗಳನ್ನು ಬಿಡಿಸುವುದು ಅತ್ಯಂತ ಅವಶ್ಯಕವಾದ ಸಂಗತಿಯಾಗಿದೆ. ಜಗತ್ತಿನಲ್ಲಿ ಉದ್ಯೋಗ ಪುನರ್ಘಟನೆಯ ಸುಯೋಗವು ಸದ್ಯಃ ಬಂದಿರುವುದು. ಇಂಥ ಸಮಯದಲ್ಲಿ ನಾವು ಸುಮ್ಮನೆ ಕುಳಿತುಕೊಳ್ಳದೆ ಯಾವುದಾದರೊಂದು ಸಹಕಾರತತ್ವದಿಂದ ಸೂಕ್ತ ಕಾರ್ಯವನ್ನು ಕೈಕೊಂಡು ಸಹಾಯವನ್ನು ಮಾಡುತ್ತ ಹೋದರೆ ಇಂಥ ದೊಡ್ಡ ಕಾರ್ಯಗಳು ಕೈಗೂಡುವವು. ಈ ಕಾರಣದಿಂದ ಉದ್ಯ ಪ್ರಗತಿಗೆ ನೆರವಾಗುವುದಕ್ಕೆ ರುಕ್ಕಾ ಫಂಡು ಅಥವಾ ಉದ್ಯಮನಿಧಿಯನ್ನು ಸ್ಥಾಪಿಸಿ ಇದರ ಅನುಕೂಲಕ್ಕಾಗಿ ಕೇಂದ್ರಸ್ಥಾನವಾದ ಕುರ್ಡುವಾಡಿ ಗ್ರಾಮವನ್ನು ನೇಮಿಸಿರುವೆವು.

ಉದ್ದೇಶ

ಸದರಿ ಫಂಡನ್ನು ತೆಗೆಯುವ ಉದ್ದೇಶವು ಅನೇಕ ಪ್ರಕಾರದ ಚಿಕ್ಕ ದೊಡ್ಡ ಉದ್ಯೋಗ ಶಿಕ್ಷಣಕ್ಕೆ ಅನುಕೂಲತೆಯನ್ನು ಮಾಡಿ ಅದರಲ್ಲಿ ಸ್ವತಂತ್ರ ಉದ್ಯೋಗವನ್ನು ಮಾಡುವ ತರುಣ ಜಿಜ್ಞಾಸುಗಳನ್ನು ತಯಾರುಮಾಡುವದು ಮತ್ತು ಉದ್ಯೋಗ ಪ್ರಗತಿಗೆ ಪೋಷಕವಾದಂಥ ಕಾರ್ಯವನ್ನು ಮಾಡುವುದು.

ಯೋಜನೆ.

25 ರೂಪಾಯಿ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಹಣವನ್ನು ಕೊಡುವ ಸದ್ಗೃಹಸ್ಥರನ್ನು ಸದರಿ ಸಂಸ್ಥೆ ಆಶ್ರಯದಾತೃಗಳೆಂದು ತಿಳಿಯುವುದರಲ್ಲಿ ಬರುವುದು.

11 ರೂಪಾಯಿ ಕೊಡುವ ಸದ್ಗೃಹಸ್ಥರನ್ನು ಸಂಸ್ಥೆಯ ಸಹಾಯಕರೆಂದು ತಿಳಿಯುವುದರಲ್ಲಿ ಬರುವುದು.

5 ರೂ. ಒಮ್ಮೆಲೆ ಕೊಡುವವರಿಗೆ ಸಂಸ್ಥೆಯ ಸಭಾಸದರೆಂದು ತಿಳಿಯುವುದರಲ್ಲಿ ಬರುವುದು.

1 ರೂ. ಅಥವಾ ಅದಕ್ಕಿಂತಲೂ ಹೆಚ್ಚಿಗೆ ಕೊಡುವ ಸದ್ಗೃಹಸ್ಥರನ್ನೂ ಮತ್ತು ಸಂಸ್ಥೆಯ ಕಾರ್ಯದ ಸಹಾಯದ ಸಲುವಾಗಿ ಸ್ವತಃ ಅಥವಾ ಕೂಡಿಸಿ ದ್ರವ್ಯರೂಪದಿಂದ ಸಹಾಯವನ್ನು ಮಾಡುವವರನ್ನೂ ಸ್ವಯಂಸೇವಕ ಪ್ರಚಾರಕರಾಗಿ ಈ ಕಾರ್ಯಕ್ಕೆ ಸಹಾಯ ಮಾಡುವವರನ್ನೂ ಈ ಸಂಸ್ಥೆಯ ಹಿತಚಿಂತಕರೆಂದು ತಿಳಿಯುವುದರಲ್ಲಿ ಬರುವುದು.

ಈ ಕಾರ್ಯವು ಕಾರ್ತಿಕ ಶು ||೧ ಶಕೆ ೧೮೫೨ ಬುಧವಾರ ಸುಮುಹೂರ್ತದಲ್ಲಿ ಪ್ರಾರಂಭಿಸಲ್ಪಟ್ಟಿದೆ. ಈ ದೊಡ್ಡ ಕಾರ್ಯವು ಸಮಾಜ ಬಾಂಧವರ ಸಹಾಯದಿಂದಲೇ ನೆರವೇರುವುದೆಂದು ಬಾಲಕ ಮಂಡಲಿಯವರ ಅಭಿಪ್ರಾಯವಿರುವುದು. ಆದ್ದರಿಂದ ಬಹು ಜನ ಸಮಾಜದವರು ಈ ಕಾರ್ಯಕ್ಕೆ ಸಹಾಯ ಮಾಡಬೇಕೆಂದು ಸವಿನಯವಿನಂತಿ ಇರುವುದು.

ಸದರಿ ಸಂಸ್ಥೆಯು ಪದ್ಧತಿಯಂತೆ ತೀವ್ರ ರಜಿಸ್ಟರ್ ಮಾಡುವುದರಲ್ಲಿ ಬರುವುದು.

(ವಿಶೇಷ ಸೂಚನೆ— ಎರಡು ಆಣೆಗಿಂತಲೂ ಹೆಚ್ಚಿಗೆ ಸಹಾಯ ಮಾಡುವವರಿಗೆ ಪಾವತೀ ಕೊಡುವುದರಲ್ಲಿ ಬರುವುದು.)

ಅಧ್ಯಕ್ಷರು.

ಶ್ರೀ ಗುರುಮೂರ್ತಿ ಪರಸಿದ್ಧರಾಜಯೋಗೀಂದ್ರ ಶಿವಾಚಾರ್ಯ ಚರಪಟ್ಟಾಧ್ಯಕ್ಷ ಮಠ ಸಂಸ್ಥಾನ ದಹಿವಡಿಮಠ ಬಾರ್ಸಿ.

ಉಪಾಧ್ಯಕ್ಷರು.

ಶ್ರೀ ಗುರುಮೂರ್ತಿ ರಾಚಲಿಂಗಸ್ವಾಮಿ ಗುರು ರೇವಣಸಿದ್ಧಸ್ವಾಮಿ ಪರಾಂಡಕರ್ ಮಠ ಬಾರ್ಸಿ.

ಆಡಿಟರ್.

—ಮಾಹೇಶ್ವರಮೂರ್ತಿ ಧೋಂಡೊ ಮಹಾದೇವ ಪಕಾಲೆ Rtd. S. N. ಮಾಢಾ.

ಕೋಶಾಧ್ಯಕ್ಷರು.

ಶ್ರೀಮಂತ ಬಾಬುರಾವ ಗ್ಯಾನಬಾ ಮಿಠಾರಿ ಶ್ಲಾಥ್ ಮರ್ಚಂಟ್—ಕುರ್ಡುವಾಡಿ.

ಚಿಟಣೀಸ್.

ದತ್ತಾತ್ರಯ ನೀಲಕಂಠ ಝಪಕೆ ಕುರ್ಡುವಾಡಿ.
(ಕಾರ್ಯಕಾರಿ ಮಂಡಲಿಯವರು.)

ಸದಾನಂದ ಭಗವಂತ ಕರಪೆಕೀರ್ತನಕಾರ್ ಬೋಡಬವಳೆ, ವಿಶ್ವನಾಥತುಕಾರಾಮ್ ಖಲಿಪೆ ಹೆಡ್‌ಮಾಸ್ತರ್ ಬಾರ್ಸಿ, ವಿಠೋಬಾಜಯರಾಮ ಡಿಕೋಳೆ ಕಮಿಶನ್ ಏಜಂಟ ಕುರ್ಡುವಾಡಿ, ಗಣಪತ್ ಸಬಾರಾಮ ಶೇಂಡೆ ಕಮಿಶನ್ ಏಜಂಟ್ ಕುರ್ಡುವಾಡಿ, ರಾಮಲಿಂಗಪ್ಪಾ ಅಪ್ಪಾರಾವಪತ್ರೆ ಕುರ್ಡುವಾಡಿ, ರಾಮಚಂದ್ರ ವಿಠೋಬಾಕೋಲೆ ಜನರಲ್ ಮರ್ಚಂಟ್ ಕುರ್ಡುವಾಡಿ, ಮಹಾದೇವ ಮಲ್ಲಿಕಾರ್ಜುನಶೇಟಿ, ಕೇಮ್, ಹರಿಅಣ್ಣಾರಾವ ಪಾಟಣೆ ಗಾದೆಗಾವ ತಾ|| ಪಂಢರಾಪುರ್, ಸಿದ್ರಾಮ ಧೊಂಡೋಪಕಾಲೆ, ಕುರ್ಡುವಾಡಿ, ತುಕಾರಾಮ ಬಸ್ಸನದೇವಝಾಡೆ, ಬಾರ್ಸಿ, ಮಾಹೇಶ್ವರಮೂರ್ತಿ ನಾಸಯ್ಯ ಸೋಮಯ್ಯ ಘಾಣೇಗಾವಕರ್ ಬಾರ್ಸಿ.

ಚಿಟಣೀಸ್, ರುಕ್ಕಾಫಂಡ್ ಉರುಫ್ ಉದ್ಯಮನಿಧಿ.
ಕುರ್ಡುವಾಡಿ.

ಲಾಹೋರ್ ಫಿತೂರಿಯ ಪ್ರಕರಣ.

ಲಾಹೋರ್ ಫಿತೂರಿಯ ಮೊಕದ್ದಮೆಯ ತೀರ್ಪು, ವೈಸ್‌ರಾಯರ ಅಧಿಕಾರಪ್ರಯೋಗದಿಂದ ನೇಮಿಸಲ್ಪಟ್ಟದ್ದ ವಿಶೇಷ ನ್ಯಾಯಸ್ಥಾನದಿಂದ ಕಳೆದ 7 ನೆಯ ತಾರೀಖಿನ ದಿವಸ ಕೊಡಲ್ಪಟ್ಟಿತು. ಈ ವಿಶೇಷ ನ್ಯಾಯಸ್ಥಾನವು ಜಸ್ಟಿಸ್‌ಹಿಲ್‌ಟನ್, ಸರ್ ಅಬ್ದುಲ್ ಖಾದರ್, ಮತ್ತು ಜಸ್ಟಿಸ್ ಟ್ಯಾಪ್ ಎಂಬ ಮೂವರು ನ್ಯಾಯಾಧಿಕಾರಿಗಳಿಂದ ಕೂಡಿದ್ದಿತು. ಈ ಮೂವರು ಅಧಿಕಾರಿಗಳೂ ಏಕ ಮನಸ್ಸಿನಿಂದ ತೀರ್ಮಾನವನ್ನು ಕೊಟ್ಟಿರುತ್ತಾರೆ. ಈ ತೀರ್ಮಾನದ ಮೊದಲಲ್ಲಿ ಫಿರ್ಯಾದಿಯ ಪರವಾದ ಸಾಕ್ಷ್ಯದ ಸಾಮಾನ್ಯ ಲಕ್ಷಣದ ಸಾರಾಂಶವನ್ನು ಕೊಟ್ಟಿದ್ದಾರೆ. ಅನಂತರ ಫಿರ್ಯಾದಿಯ ಪರವಾದ ಸಾಕ್ಷ್ಯದಿಂದ ಹೊರಬಿದ್ದ ಸಂಗತಿಗಳ ಕಾಲಾನುಗತ ವಿವರಣೆಯು ಬರುತ್ತದೆ. ಇವುಗಳಲ್ಲಿ ತೀರ ಹಿಂದಿನವೂ, ಅತಿ ಪ್ರಾಮುಖ್ಯವಲ್ಲದುವೂ ಆದ ಸಂಗತಿಗಳನ್ನು ಬಿಟ್ಟು ತೀರ್ಮಾನದ ಹೇಳಿಕೆಯಂತೆ, 1928 ನೇ ಸೆಪ್ಟಂಬರ್ ತಿಂಗಳಿಂದ ಆರಂಭವಾದ ದೊಡ್ಡ ಫಿತೂರಿಯ ಕಥೆಯನ್ನೂ ಅದರ ಪರಿಣಾಮವನ್ನೂ ಮಾತ್ರ ಇಲ್ಲಿ ಕೊಡುವೆವು :—

ಈ ಭಯಪ್ರವರ್ತಕರುಗಳು (ಟೆರರಿಸ್ಟ್ಸ್) ಮೊದಲೇ ಇದ್ದ ಸಣ್ಣಪುಟ್ಟ ಫಿತೂರಿಗಳನ್ನು ಒಟ್ಟುಗೂಡಿಸಿ 1928 ನೇ ಸೆಪ್ಟಂಬರಿನಿಂದ ಒಂದು ದೊಡ್ಡ ಫಿತೂರಿಗೆ ಆರಂಭಿಸಿ, ಒಂದು ಹೊಸ ಸಂಘವನ್ನು ಮಾಡಿಕೊಂಡು ಅದಕ್ಕೆ "ದಿ ಹಿಂದೂಸ್ಥಾನ್ ಸೋಶಲಿಸ್ಟ್ ರಿಪಬ್ಲಿಕ್‌ಆರ್ಮಿ" ಎಂದು ಹೆಸರಿಟ್ಟರು. ಇದೇ ತಿಂಗಳಲ್ಲಿ ದೆಹಲಿಯಲ್ಲಿ ಕೂಡಿದ್ದ ರಹಸ್ಯ ಸಭೆಯಲ್ಲಿ ಇವರು ತಮ್ಮ ಕಾರ್ಯಕ್ರಮಗಳನ್ನೂ, ಉದ್ದೇಶಗಳನ್ನೂ ನಿರ್ಧರಿಸಿದರು. ಕಾಕೋರಿ ಕೇಸಿನ ಬೈದಿಗಳಲ್ಲಿ ಕೆಲವರನ್ನು ಬಿಡುಗಡೆ ಮಾಡುವುದು, ಸೈಮನ್ ಸಮಿತಿಯನ್ನು ಶಿಕ್ಷಿಸಲು ಯತ್ನಿಸುವುದು ಮತ್ತು ಇವಕ್ಕೆ ಸಾಧಕವಾದ ಬಾಂಬುಗಳ ತಯಾರಿಯನ್ನು ಸಂಘದ ಸದಸ್ಯರು (ಮೆಂಬರು) ಗಳಿಗೆ ಹೇಳಿಕೊಡಲು ಬಂಗಾಳದಿಂದ ಬಾಂಬು ಮಾಡಬಲ್ಲವರನ್ನು ಬರಮಾಡಿಕೊಳ್ಳುವುದು ಇವೇ ಮೊದಲಾದ ನಿರ್ಧಾರಗಳು ಮೇಲ್ಕಂಡ ಸಭೆಯಲ್ಲಿ ಮಾಡಲ್ಪಟ್ಟುವು. ಕಾಕೋರಿ ಕೇಸಿನ ಅಪ್ರೂವರುಗಳನ್ನು ಕೊಲ್ಲುವುದು, ತಮ್ಮ ಕಾರ್ಯಕ್ಕೋಸುಗಬೇಕಾದ ಧನಕ್ಕಾಗಿ ಡಕಾಯಿತಿ ನಡೆಯಿಸಲು ಅನುಕೂಲವಾದ ಸ್ಥಳವನ್ನು ಆರಿಸುವುದು ಮೊದಲಾದ ವಿಷಯಗಳೂ ಚರ್ಚಿತವಾಗಿ ನಿರ್ಧರಿಸಲ್ಪಟ್ಟುವು. ಈ ಸಭೆಯು ಮುಗಿದೊಡನೆಯೆ ಭಗತ್‌ಸಿಂಗನು (ಈತನಿಗೆ ಮರಣದಂಡನೆ ವಿಧಿಸಲ್ಪಟ್ಟಿದೆ) ದೆಹಲಿಯನ್ನು ಬಿಟ್ಟು ಹೊರಟು ಹೋದನು.

1928 ನೇ ನವಂಬರ್ 17ರಲ್ಲಿ ಲಾಲಾಲಜಪತರಾಯರು ತೀರಿಹೋದರು. ಪಂಡಿತಜಿಯೂ (ಈ ಆರೋಪಿಯು ಸರ್ಕಾರದ ಕೈಗೆ ಸಿಕ್ಕದೆ ತಪ್ಪಿಸಿಕೊಂಡಿರುವನು.) ಮತ್ತು ಮಹವೀರಸಿಂಗನೂ (ಈತನಿಗೆ ಆಜೀವ ದ್ವೀಪಾಂತರ ಶಿಕ್ಷೆಯುಂಟಾಗಿದೆ.) ಫಿರೋಜಪುರದಿಂದ ಬಂದು ಜಯಗೋಪಾಲ ಲಾಹೋರ್ ಕಂಟೋನ್ಮೆಂಟಿನಲ್ಲಿ ಸೇರಿದರು. ಪಂಡಿತಜಿಯು ತಂದಿದ್ದ ಸೂಟ್‌ಕೇಸಿನಲ್ಲಿ ಒಂದು ಮೌಸರ್‌ಪಿಸ್ತೂಲೂ, ನಾಲ್ಕು ರಿವಾಲ್ವರುಗಳೂ ಇದ್ದುವು. ಅದೇ ದಿವಸವೇ ಸಂಯುಕ್ತಪ್ರಾಂತ್ಯದಿಂದ ಕುಂದನಲಾಲನೂ ಶಿವರಾಮರಾಜ ಗುರುವೂ ಬಂದು ಮೋಜಾಂಗ್ ಭವನದಲ್ಲಿ ಉಳಿದುಕೊಂಡರು. ಆ ರಾತ್ರಿ ಸುಖದೇವ (ಈತನಿಗೆ ಮರಣದಂಡನೆ ವಿಧಿಸಲ್ಪಟ್ಟಿದೆ.) ಭಗವತ್‌ಸಿಂಗ್, ಪಂಡಿತಜಿ, ಮಹಾವೀರಸಿಂಗ್, ಕುಂದನಲಾಲ್, ಶಿವರಾಮ ರಾಜಗುರು, ಕಿಶೋರಿಲಾಲ (ಈತನಿಗೂ ಆಜೀವ ದ್ವೀಪಾಂತರ ಶಿಕ್ಷೆ ವಿಧಿಸಲ್ಪಟ್ಟಿದೆ) ರೂ ಮೋಜಾಂಗ್ ಭವನದಲ್ಲಿಯೇ ವಸತಿಯನ್ನು ಮಾಡಿಕೊಂಡರು. ಕೇಂದ್ರ ಸಮಿತಿಯ ಸದಸ್ಯರಲ್ಲಿ ನಾಲ್ವರು ಮಾತ್ರ ಲಾಹೋರಿನಲ್ಲಿ ಹಾಜರಿದ್ದರು. ಉಳಿದ ಮೂವರು ಬೇರೆ ಕಡೆಗಳಲ್ಲಿದ್ದರು. ಹೀಗೆ ಲಾಹೋರಿನಲ್ಲಿ ಸಂಘದ ಸದಸ್ಯರು ಅನೇಕರು ಮುಖಂಡರೊಡನೆ ಸೇರಿದ್ದುದರ ಪ್ರಾಮುಖ್ಯತೆಯು, ಮುಂದಿನ ಡಿಸೆಂಬರ್ ತಿಂಗಳಲ್ಲಿ ಇದೇ ಲಾಹೋರಿನಲ್ಲಿ ಈ ಸಂಗಡದವರು ನಡೆಯಿಸಿದ ಕೃತ್ರಿಮಕೃತ್ಯಗಳಿಂದ ಗೊತ್ತಾಗುತ್ತದೆ.

ಇಲ್ಲಿ ಫಿತೂರಿಗಾರರು "ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ" ದಾಳಿಯಿಡಲು ಯತ್ನಿಸಿ ಹೇಗೆ ವಿಫಲರಾದರೆಂಬುದನ್ನು ನ್ಯಾಯಾಧಿಕಾರಿಗಳು ವಿವರಿಸುವರು.

ಅ|| ಸೂ|| ಸಾಂಡರ್ಸ್ನರ ಕೊಲೆ.

ಡಿಸೆಂಬರ್ 9 ಅಥವಾ 10 ರಲ್ಲಿ ಫಿತೂರಿಗಾರರು, ಲಜಪತರಾಯರಿಗೆ ಏಟುಕೊಟ್ಟು ಮರಣಕ್ಕೆ ಗುರಿಯಾಗುವಂತೆ ಮಾಡಿದವನೆಂದು ತಾವು ಭಾವಿಸಿದ್ದ, ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಸ್ಕಾಟರನ್ನು ಕೊಂದುಹಾಕುವ ವಿಷಯವನ್ನು ಚರ್ಚಿಸುವುದಕ್ಕಾಗಿ ಮೋಜಾಂಗ್ ಭವನದಲ್ಲಿ ಸೇರಿದರು. ಈ ಸಭೆಯಲ್ಲಿ ಪಂಡಿತಜಿ, ಸುಖದೇವ, ಭಗವತ್‌ಸಿಂಗ್, ಕಿಶೋರಿಲಾಲ, ಶಿವರಾಮ ರಾಜಗುರು, ಮಹಾವೀರಸಿಂಗ್, ಮತ್ತು ಜಯಗೋಪಾಲರಿದ್ದರು. ಇವರಲ್ಲಿ ಮೂವರು ಕೇಂದ್ರಸಮಿತಿಯ ಸದಸ್ಯರಿದ್ದರು. ವಿಜಯಕುಮಾರಸಿಂಹ (ಆಜೀವ ಶಿಕ್ಷೆ ವಿಧಿಸಲ್ಪಡುವನು) ಕೇಂದ್ರಸಮಿತಿಯ ಸದಸ್ಯನಾಗಿದ್ದು ಲಾಹೋರಿನಲ್ಲಿದ್ದರೂ ಈ ಸಭೆಯಲ್ಲಿ ಹಾಜರಿದ್ದಂತೆ ಕಾಣಬರುವುದಿಲ್ಲ. ಆದರೆ ಅವನು ಎರಡು ದಿವಸಗಳ ಮುಂಚಿತವಾಗಿಯೇ ಲಾಹೋರಿಗೆ ಬಂದಿದ್ದನೆಂಬ ಸಂಗತಿಯು ಮುಖ್ಯವಾದುದು. ಜಯಗೋಪಾಲನು ಸ್ಕಾಟರ ಚಲನಗಳನ್ನು ನೋಡಿಕೊಳ್ಳುವುದಕ್ಕೋಸುಗ ನೇಮಿಸಲ್ಪಟ್ಟದ್ದು ಇದಕ್ಕಾಗಿ ಡಿಸೆಂಬರ್ 11, 12, 13, 14, 15 ನೇ ತಾರೀಖುಗಳಲ್ಲಿ ಪೋಲೀಸ್ ಆಫೀಸಿನ ಆವರಣದ ಬಳಿಗೆ ಹೋಗಿದ್ದನು. ಪಂಡಿತಜಿಯಿಂದ ಡಿಸೆಂಬರ್ 17 ನೇ ತಾರೀಖು ಕೊಲೆಗಾಗಿ ಗೊತ್ತುಮಾಡಲ್ಪಟ್ಟಿತು. ಆ ದಿವಸ ಮಧ್ಯಾಹ್ನ 2 ಗಂಟೆಗೆ ಮೋಜಾಂಗ್ ಭವನದಲ್ಲಿ ಸೇರಿದ್ದ ಸಭೆಗೆ ಪಂಡಿತಜಿಯೂ, ಭಗವತ್‌ಸಿಂಗನೂ, ಸುಖದೇವನೂ, ಶಿವರಾಮರಾಜಗುರುವೂ, ಮತ್ತು ಜಯಗೋಪಾಲನೂ ಹೋಗಿದ್ದರು. ಡಿಸೆಂಬರ್ 15 ನೆಯ ದಿವಸವೇ ಭಗವತ್‌ಸಿಂಗನು, 'ಹಿಂದೂಸ್ಥಾನ್ ಸೋಶಲಿಸ್ಟ್ ರಿಪಬ್ಲಿಕ್ ಆರ್ಮಿ' 'ಸ್ಕಾಟ್ ಈಸ್ ಡೆಡ್' (ಸ್ಕಾಟನು ಸತ್ತುಹೋದ) ಎಂಬ ಶೀರ್ಷಿಕೆ (ಹೆಡ್ಡಿಂಗ್) ಗಳುಳ್ಳ ಗುಲಾಬಿ ರಂಗಿನ ಚೀಟಿಗಳನ್ನು ಜಯಗೋಪಾಲನಿಗೂ, ಹಂಸರಾಜವೋರನಿಗೂ ತೋರಿಸಿದ್ದನು. ಈ ಹೆಡ್ಡಿಂಗಿನ ಕೆಳಗೆ ಸ್ಕಾಟರನ್ನು ಕೊಲ್ಲಬೇಕಾಗಿ ಬರೆದುದಕ್ಕೆ ತಕ್ಕ ಕಾರಣವನ್ನು ತಿಳಿಸುವ ವಾಕ್ಯಗಳಿದ್ದುವು. ಡಿಸೆಂಬರ್ 17 ರಲ್ಲಿ ಭಗವತ್‌ಸಿಂಗನು ಈ ಚೀಟಿಗಳಲ್ಲಿ ಕೆಲವನ್ನು ತಾನೇ ಬರೆಯುತ್ತಿರಲು, ಹಂಸರಾಜವೋರನೂ ತಾನು ಕೆಲವು ಚೀಟಿಗಳನ್ನು ಬರೆದು ಭಗತಸಿಂಗನಿಗೆ ಸಹಾಯಮಾಡಿದನು. ಇದು ಮೋಜಾಂಗ್ ಭವನದಲ್ಲಿ ಆ ದಿವಸ ಬೆಳಗಿನ ಸುಮಾರು 11 ಗಂಟೆಗೆ ನಡೆಯಿತು. ಅದೇ ದಿವಸ ಮಧ್ಯಾಹ್ನ 12-30 ಗಂಟೆಗೆ ಹಂಸರಾಜವೋರನು ಪುನಃ ಮೋಜಾಂಗ್ ಭವನಕ್ಕೆ ಬರಲು ಪಂಡಿತಜಿಯು ಸ್ಕಾಟರನ್ನು ಕೊಲ್ಲಲು ಮಾಡಬೇಕಾದ ಒಳಸಂಚಿನ ವಿವರಗಳೆಲ್ಲವನ್ನೂ ಅವನಿಗೆ ಬೋಧಿಸಿದನು. ಮಧ್ಯಾಹ್ನ 2 ಗಂಟೆಗೆ ಸೇರಿದ್ದ ಮೀಟಿಂಗಿನಲ್ಲಿ ಕೊಲೆಯ ವಿಷಯವು ಕೊನೆಯ ತೀರ್ಮಾನಕ್ಕೆ ತರಲ್ಪಟ್ಟಿತು. ಆ ದಿವಸ ಬೆಳಗ್ಗೆ 10ಗಂಟೆಗೆ ಜಯಗೋಪಾಲನು ರೂಢಿಯಂತೆ ಪೋಲೀಸ್ ಆಫೀಸಿಗೆ ಹೋಗಿದ್ದು ಅಧಿಕಾರದ ಉಡುಪನ್ನು ಹಾಕಿಕೊಂಡು ಕೆಂಪು ಮೋಟಾರುಸೈಕಲ್ಲಿನ ಮೇಲೆ ಸವಾರಿ ಮಾಡುತ್ತಾ ಆಫೀಸಿಗೆ ಬಂದು ಒಬ್ಬ ಬ್ರಿಟಿಷ್ ಪೋಲೀಸಾಧಿಕಾರಿಯನ್ನು ನೋಡಿದ್ದನು. ಅವನು ಆ ದಿವಸ ಸ್ಕಾಟರು ಮಾಮೂಲಿನಂತೆ ಮೋಟಾರಿನಲ್ಲಿ ಬರದೆ, ಮೋಟಾರುಸೈಕಲ್ಲಿನಲ್ಲಿಯೇ ಬಂದು ಆಫೀಸಿಗೆ ಹೋದರೆಂದು ಊಹಿಸಿದನು. ಈ ವಿಷಯವು ಪಂಡಿತಜಿಗೆ ಮಧ್ಯಾಹ್ನದ ಹೊತ್ತಿಗೆ ತಿಳಿಯಿತು. ಮೀಟಿಂಗಿನಲ್ಲಿ ಮಧ್ಯಾಹ್ನದ 2 ಗಂಟೆಗೆ ಆಯುಧಗಳು ಹಂಚಲ್ಪಟ್ಟುವು. ಜಯಗೋಪಾಲನಿಗೆ ಯಾವ ಆಯುಧವೂ ಕೊಡಲ್ಪಡಲಿಲ್ಲ. ಯಾತಕ್ಕೆಂದರೆ, ಕೊಲೆಯಾಗುವಸ್ಥಳದಲ್ಲಿ ನಿಂತುಕೊಂಡು ಯಾವ ಆಫೀಸರನ್ನು ಕೊಲ್ಲಬೇಕೋ ಅವನನ್ನು ತೋರಿಸುವುದು ಮಾತ್ರ ಆತನ ಕೆಲಸವಾಗಿದ್ದಿತು. ಕೊಲೆಯಾದನಂತರ ಅವನನ್ನು ದಸ್ತಗಿರಿಮಾಡಿದರೆ, ತನ್ನ ಹತ್ತಿರ ಯಾವ ಆಯುಧವೂ ಇಲ್ಲದಿರುವುದರಿಂದ ತಾನೊಬ್ಬ ನಿರಪರಾಧಿಯಾದ ಹಾದಿಕಾರನಂತೆ ನಟಿಸುವುದು ಅವನಿಗೆ ಬಹುಸುಲಭವಾಗಿದ್ದಿತು. ಪಂಡಿತಜಿಯು ಮಾಸರ್ ಪಿಸ್ತೂಲನ್ನೂ, ಭಗತ್‌ಸಿಂಗನು ಆಟೋಮ್ಯಾಟಿಕ್ (ಅಂದರೆ ತನ್ನಷ್ಟಕ್ಕೆ ತಾನೆ ಯಂತ್ರದಂತೆ ಕೆಲಸಮಾಡುವ) ಪಿಸ್ತೂಲನ್ನೂ ತೆಗೆದುಕೊಂಡರು. ಶಿವರಾಮ್‌ರಾಜಗುರುವಿಗೆ ಒಂದು ರಿವಾಲ್ವರು ಕೊಡಲ್ಪಟ್ಟಿತು. ಈ ಮೂವರೂ ಕೊಲೆಯ ಕೆಲಸಕ್ಕಾಗಿಯೇ ನಿಯಮಿಸಲ್ಪಟ್ಟರು. ಮಹಾವೀರಸಿಂಗನು ಮೋಜಾಂಗ್ ಭವನದ

(6ನೇ ಪುಟವನ್ನು ನೋಡಿರಿ.)

ಪಂಚಾಚಾರ್ಯ ಪ್ರಭಾ

೧೯೩೦ನೇ ನವಂಬರ್ ತಾ|| ೩ನೆಯ ಸೋಮವಾರ.

ಮ|| ರಾ|| ಡಾಕ್ಟರ್ ಅಣ್ಣಾಜಪ್ಪನವರು.

ಪ್ರಪಂಚದಲ್ಲಿ ಯಾವನು ಆರೋಗ್ಯಭಾಗ್ಯವನ್ನು ಹೊಂದಿರುತ್ತಾನೆಯೋ ಅವನೇ ಮಾನವಜನ್ಮದ ಸಾಫಲ್ಯವನ್ನು ಹೊಂದುವನು. ಮಾನವನಿಗೆ ಆರೋಗ್ಯಭಾಗ್ಯವೇ ಶ್ರೇಷ್ಠವಾದ ಭಾಗ್ಯವು. ಆರೋಗ್ಯಭಾಗ್ಯವಿಲ್ಲದವನು ಎಷ್ಟು ಭಾಗ್ಯವಂತನಾದಾಗ್ಯೂ ನಿರ್ಭಾಗ್ಯನೆಂದೇ ಹೇಳಬಹುದಾಗಿದೆ. ಈ ಆರೋಗ್ಯಭಾಗ್ಯವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಪ್ರಾಪ್ತಿಗೆ ಮೂಲಭೂತವಾಗಿದೆ. ಆದುದರಿಂದಲೇ "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂದು ಧರ್ಮಶಾಸ್ತ್ರಗಳು ಉದ್ಘೋಷಿಸುತ್ತಿರುವವು. ಚತುರ್ವಿಧ ಪುರುಷಾರ್ಥಸಾಧಕವಾದ ಈ ಆರೋಗ್ಯವೆಂಬ ಮಹಾಸೂತ್ರವನ್ನು ಪರಮೇಶ್ವರನು ವೈದ್ಯರ ಹಸ್ತಕ್ಕೊಪ್ಪಿಸಿರುತ್ತಾನೆ. ಪ್ರಪಂಚಕಲ್ಯಾಣಕ್ಕಾಗಿ ಪರಮೇಶ್ವರಾನುಗ್ರಹದಿಂದ ಪಡೆದ ಆರೋಗ್ಯಸೂತ್ರವನ್ನು ನಮ್ಮ ವೈದ್ಯಪಂಡಿತರು ಬಹು ಎಚ್ಚರದಿಂದ ನೋಡಿಕೊಳ್ಳುತ್ತ, ಇವರು ಬಡವರು, ಇವರು ಶ್ರೀಮಂತರು ಎಂಬ ಭೇದಬುದ್ಧಿಯನ್ನಿಡದೆ ಸರ್ವರಲ್ಲಿ ಸಮಬುದ್ಧಿಯನ್ನಿಟ್ಟು ತನ್ನ ಕರ್ತವ್ಯವನ್ನು ಕೊನಿಗಾಣಿಸುವುದೇ ಇವರ ಆದ್ಯಕರ್ತವ್ಯವಾಗಿದೆ.

ಪ್ರಕೃತದಲ್ಲಿ ಮೈಸೂರು ರಾಜಧಾನಿಯಲ್ಲಿರುವ ನವತರುಣರಾದ ಮ|| ರಾ|| ಡಾಕ್ಟರ್ ಅಣ್ಣಾಜಪ್ಪನವರು ನಾಲ್ಕಾರು ವರ್ಷಗಳ ಹಿಂದೆ ಡಾಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೈದ್ಯವೃತ್ತಿಯನ್ನವಲಂಬಿಸಿ ನಿಃಸ್ಪೃಹತೆಯಿಂದ ಕೆಲಸಮಾಡಿ ಇಷ್ಟರೊಳಗಾಗಿ ಅನೇಕ ದೀರ್ಘರೋಗಿಗಳನ್ನು ಆರೋಗ್ಯಭಾಗ್ಯಶಾಲಿಗಳನ್ನಾಗಿ ಮಾಡಿರುತ್ತಾರೆ. ಪ್ರಾಯಶಃ ಇವರ ಚಿಕಿತ್ಸೆಗೆ ಒಳಪಟ್ಟವರೆಲ್ಲರೂ ಇವರ ಹಸ್ತಗುಣದಿಂದ ಗುಣಮುಖರಾಗುತ್ತಲೇ ಬಂದಿರುವುದರಿಂದ, ರಾಜಧಾನಿಯಲ್ಲೆಲ್ಲಾ ಇವರ ಯಶಸ್ಸು ಪಸರಿಸುತ್ತ ಬಂದಿರುವುದು. ಇವರು ರೋಗಿಗಳ ಚಿಕಿತ್ಸೆಯಲ್ಲಿ ರಾತ್ರಿ ಹಗಲೆನ್ನದೆ ಬಹು ಶ್ರದ್ಧೆಯಿಂದ ಕೆಲಸಮಾಡುತ್ತಲಿರುವದರಿಂದ ಬಹುಜನರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ಕೋಗಿಲೆಯಲ್ಲಿ ಪಂಚಮಸ್ವರವು ಸ್ವಾಭಾವಿಕವಾಗಿ ನೆಲೆಗೊಂಡಿರುವಂತೆ ಇವರಲ್ಲಿ ಸ್ವಭಾವಸಿದ್ಧವಾಗಿ ನೆಲೆಗೊಂಡಿರುವ ಪ್ರಿಯಭಾಷಣ, ಸಾಧುಸ್ವಭಾವ, ಪರೋಪಕಾರ, ದಯೆ ಮುಂತಾದ ಸದ್ಗುಣಗಳು ಎಲ್ಲರ ಮನಸ್ಸನ್ನು ಆಕರ್ಷಿಸುತ್ತಿರುವುವು. ಅಸ್ತು! ಈಗಿನ ಕಾಲದಲ್ಲಿ ನಿಜವಾದ ವೈದ್ಯಶಾಸ್ತ್ರವನ್ನು ತಿಳಿದುಕೊಂಡವರು ಅಲ್ಪಸಂಖ್ಯಾಕರಾಗಿದ್ದಾರೆ. ಆದರೆ ಉಪವನದಲ್ಲಿ ಮುಳ್ಳುಗಳು ಹೆಚ್ಚಿದಂತೆ ವೈದ್ಯಶಾಸ್ತ್ರಮರ್ಮವನ್ನು ತಿಳಿಯದಿರುವ ಮೂಢರೇ ಹೆಚ್ಚಾಗಿ ಉದರಂಭರಣಕ್ಕೋಸುಗ ಕಪಟವೈದ್ಯವೇಷವನ್ನು ಧರಿಸಿಕೊಂಡು ಮೆರೆಯುತ್ತಿರುವರು. ಇಂಥವರು "ಮಿಥ್ಯಾಪಥ್ಯೈರ್ದುಂತ ಮೃಷಾಕಷಾಯೈರಸತ್ಯಲೇಹ್ಯೈರಯಥಾರ್ಥತೈಲೈಃ | ವೈದ್ಯಾ ಇಮೇ ವಂಚಿತರುಗ್ಣವರ್ಗಾಃ ಪಿಚಂಡಭಾಂಡಂ ಪರಿಪೂರಯಂತಿ||" ಎಂಬ ಉಕ್ತಿಯಂತೆ ಸುಳ್ಳುಸುಳ್ಳಾದ ಔಷಧಿಗಳಿಂದಲೂ, ಸುಳ್ಳುಸುಳ್ಳಾದ ಕಷಾಯಗಳಿಂದಲೂ, ಅಪಾಯಕರಗಳಾದ ಅಸತ್ಯಲೇಹ್ಯಗಳಿಂದಲೂ, ಅಯಥಾರ್ಥ ತೈಲಗಳಿಂದಲೂ ರೋಗಿಗಳನ್ನು ವಂಚಿಸಿ ತಮ್ಮ ದಗ್ಧವಾದ ಕುಕ್ಷಿಭಾಂಡವನ್ನು ತುಂಬುತ್ತಿರುವರು. ಇಂಥವರ ಕುಟಿಲವಾದ ವೈದ್ಯವೃತ್ತಿಯಿಂದ ಹುಣ್ಣಿನ ಮೇಲೆ ಹುಣ್ಣು ಹುಟ್ಟಿದಂತೆ ರೋಗಿಗಳು ಮತ್ತಷ್ಟು ನರಳಬೇಕಾಗುವ ಪ್ರಸಕ್ತಿಯು ಬಂದೊದಗುವುದು. ಇಂಥ ಕುವೈದ್ಯರ ದುರ್ವೃತ್ತಿಯನ್ನು ನೋಡಿ ಒಬ್ಬ ಕವಿಯು "ವೈದ್ಯರಾಜ ನಮಸ್ತುಭ್ಯಂ ಯಮರಾಜಸಹೋದರ | ಯಮಸ್ತು ಹರತಿ ಪ್ರಾಣಾನ್ ವೈದ್ಯಃ ಪ್ರಾಣಾನ್ ಧನಾನಿಚ ||" ಎಂದು ವರ್ಣಿಸಿರುವನು. ಇಂಥ ವೈದ್ಯರ ಸಂಖ್ಯೆಯು ನಿರ್ಮೂಲವಾಗಬೇಕೆಂದು ಪರಮಾತ್ಮನನ್ನು ಪ್ರತಿಯೊಬ್ಬರೂ ಪ್ರಾರ್ಥಿಸಬೇಕಾಗಿದೆ. ಇರಲಿ; ಮ|| ಅಣ್ಣಾಜಪ್ಪನವರು ಇಪ್ಪತ್ತು ಮುವ್ವತ್ತು ವರ್ಷಗಳಿಂದ ವೈದ್ಯವೃತ್ತಿಯನ್ನವಲಂಬಿಸಿದವರಿಂದಲೂ ಹೊಂದಲ್ಪಡದ ಜನಾನುರಾಗವನ್ನೂ ಪ್ರಸಿದ್ಧಿಯನ್ನೂ ನಾಲ್ಕಾರು ವರ್ಷಗಳೊಳಗಾಗಿ ಹೊಂದಿರುವುದನ್ನು ನೋಡಿದರೆ ಇವರ ಪಟುತರವಾದ ವೈದ್ಯಕ್ರಿಯಾಶಕ್ತಿಯು ಎಲ್ಲರಿಗೂ ಸ್ಪಷ್ಟವಾಗುತ್ತದೆ. "ಗುರೋರಧೀತಾಖಿಲವೈದ್ಯವಿದ್ಯಃ ಪೀಯೂಷಪಾಣಿಃ ಕುಶಲಃ ಕ್ರಿಯಾಸು | ಗತಸ್ಪೃಹೋ ಧೈರ್ಯಧರಃ ಕೃಪಾಲುಃ ಶುದ್ಧೋಽಧಿಕಾರೀ ಭಿಷಗೀದೃಶಃ ಸ್ಯಾತ್ ||" ಕ್ರಮವಾಗಿ ಗುರುಮುಖದಿಂದ ವೈದ್ಯಶಾಸ್ತ್ರವನ್ನು ಕಲಿತವನಾಗಿಯೂ, ಹಸ್ತಸಿದ್ಧಿಯುಳ್ಳವನಾಗಿಯೂ, ರೋಗನಿದಾನವನ್ನು ತಿಳಿದ ಚಿಕಿತ್ಸಾಕುಶಲನಾಗಿಯೂ, ಆಶಾರಹಿತನಾಗಿಯೂ, ಧೈರ್ಯಶಾಲಿಯಾಗಿಯೂ, ಕರುಣಾಪೂರಿತಾಂತರಂಗನಾಗಿಯೂ, ಆತ್ಮಶುದ್ಧಿಯುಳ್ಳವನಾಗಿಯೂ ಇರುವವನೇ ವೈದ್ಯನಾಗಲರ್ಹನೆಂಬ ಆರ್ಯೋಕ್ತಿಯಂತೆ, ಮ|| ಅಣ್ಣಾಜಪ್ಪನವರಲ್ಲಿ ಈ ಗುಣಗಳೆಲ್ಲವೂ ಮೂರ್ತೀಭವಿಸಿರುತ್ತವೆಯೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ರೋಗದಿಂದ ನರಳುತ್ತಲಿದ್ದ ಅನೇಕಜನರು ಇವರ ಹಸ್ತಸಿದ್ಧಿಯಿಂದ ಆರೋಗ್ಯಭಾಗ್ಯವನ್ನು ಪಡೆದು ಸಂತುಷ್ಟಚಿತ್ತರಾಗಿ ಇವರಿಗೆ ರತ್ನಾಭರಣಗಳನ್ನೂ, ಸುವರ್ಣಮಯವಾದ ಶಿವಲಿಂಗದ ಕರಡಿಗೆಯನ್ನೂ, ಚಿತ್ರಕೆಲಸದ ಪೆಟ್ಟಿಗೆಗಳನ್ನೂ ಸಮರ್ಪಿಸಿ ತಮ್ಮ ಕೃತಜ್ಞತೆಯನ್ನು ತೋರಿಸಿಕೊಂಡಿರುತ್ತಾರೆ. ಇಂಥ ಸದ್ಗುಣಮಣಿಗಣಭೂಷಿತರಾದ ಸದರಿ ಡಾಕ್ಟರವರಿಗೆ ಕರ್ಣಾಟಕನಾಟ್ಯಕಲೆಯಲ್ಲಿ ಅಸಾಧಾರಣ ಕೀರ್ತಿವೆತ್ತಿರುವ ವಿನೋದರತ್ನಾಕರ ಪದವೀಭೂಷಿತರಾದ ಗುಬ್ಬಿ ಕಂಪನಿಯ ಪ್ರೊಪ್ರೈಟರ್ ಮ|| ರಾ|| ವೀರಣ್ಣನವರು ರೋಗಪೀಡಿತರಾಗಿದ್ದ ತಮ್ಮ ಕಂಪನಿಯ 30-40 ಜನರನ್ನು ರೋಗದಿಂದ ಗುಣಪಡಿಸಿದ ಸಂತೋಷಕ್ಕಾಗಿ ರಮಾವಿಲಾಸ ಅಗ್ರಹಾರದಲ್ಲಿರುವ ತಮ್ಮ ಬಿಡಾರದಲ್ಲಿ ತಾ|| 31-10-30 ನೆಯ ಶುಕ್ರವಾರ ದಿವಸ ಒಂದು ಸಂತೋಷಕೂಟವನ್ನೇರ್ಪಡಿಸಿ ಪ್ರಮುಖಜನರನ್ನು ಬರಮಾಡಿಕೊಂಡು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರ ಹಸ್ತದಿಂದ ಮ|| ರಾ|| ಡಾಕ್ಟರವರಿಗೆ ಒಂದು ಬೆಲೆಯುಳ್ಳ ಬೆಳ್ಳಿಯ ಸುಂದರಪೆಟ್ಟಿಗೆಯನ್ನು ಪ್ರದಾನಮಾಡಿಸಿ ತಮಗುಂಟಾದ ಸಂತೋಷಾತಿಶಯವನ್ನು ವ್ಯಕ್ತಪಡಿಸಿದರು. ವೇ|| ಶಾಸ್ತ್ರಿಗಳವರು ಸದರಿ ಡಾಕ್ಟರರ ಹಾಗೂ ಮ|| ರಾ|| ವೀರಣ್ಣನವರ ನೈಜವಾದ ಗುಣಕಥನವನ್ನು ಮಾಡಿ ಡಾಕ್ಟರರಿಗೆ ಬೆಳ್ಳಿಯ ಪೆಟ್ಟಿಗೆಯನ್ನು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಮ|| ರಾ|| ಡಾಕ್ಟರ್ ಅಣ್ಣಾಜಪ್ಪನವರು ಮಾಡಿದ ಸಂಕ್ಷೇಪ ಭಾಷಣವು ಈ ಪತ್ರಿಕೆಯ ಬೇರೊಂದು ಕಡೆಯಲ್ಲಿ ಪ್ರಸಿದ್ಧವಾಗಿದೆ; ವಾಚಕರು ಓದಿನೋಡಿಕೊಳ್ಳಬೇಕು. ಈ ಸಂತೋಷಕೂಟದಲ್ಲಿ, ವಾದನಕಲೆಯಲ್ಲಿ ಸುಪ್ರಸಿದ್ಧರಾಗಿರುವ ಮ|| ರಾ|| ಚೌಡಯ್ಯನವರ ಪಿಟೀಲುವಾದನವು ಸರ್ವಜನರನ್ನು ಸಂತೋಷಸಾಗರದಲ್ಲಿ ಮುಳುಗಿಸಿತ್ತು. ಸದಾ ಪರೋಪಕಾರನಿರತರಾದ ಮ|| ರಾ|| ವೀರಣ್ಣನವರಿಗೂ, ವೈದ್ಯವಿದ್ಯಾವಿಭೂಷಿತರಾದ ಮ|| ರಾ|| ಡಾಕ್ಟರ್ ಅಣ್ಣಾಜಪ್ಪನವರಿಗೂ ಶ್ರೀ ಜಗದಾಚಾರ್ಯರು ಆರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಕಳೆದ ತಿಂಗಳು 27ನೆಯ ತಾರೀಖಿನ ದಿನ ಚಿತ್ರದುರ್ಗದಲ್ಲಿ 5 ಇಂಚು 28 ಸೆಂಟು ಮಳೆಯಾಯಿತು. ಕಳೆದ 38 ವರ್ಷಗಳಿಂದಲೂ ಇಲ್ಲಿ ಇಂಥ ಮಳೆಯು ಆಗಿರುವುದಿಲ್ಲವೆಂದು ಪ್ರಸಿದ್ಧವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ 580 ಪ್ರೈಮರೀ ಪಾಠಶಾಲೆಗಳೂ, 26 ಮಿಡಲ್ ಸ್ಕೂಲುಗಳೂ ಇರುವವು. ಈ ಪ್ರೈಮರೀ ಶಾಲೆಗಳಲ್ಲಿ 31,545 ಬಾಲಿಕೆಯರೂ, ಬಾಲಕರ ಪ್ರೈಮರಿ ಶಾಲೆಗಳಲ್ಲಿ 7162 ಜನ ಬಾಲಿಕೆಯರೂ ಓದುತ್ತಿದ್ದಾರೆ.

ಬೆಂಗಳೂರು ತಾ|| ಕೆಂಗೇರಿ ಗ್ರಾಮನಿವಾಸಿಗಳು ಹರಿಹರಕ್ಷೇತ್ರದಲ್ಲಿ ನಡೆಯುತ್ತಿರುವ ಹಿಂಸಾಮಯ ಯಜ್ಞದ ವಿಷಯದಲ್ಲಿ ತಾ|| 29-10-30 ನೆಯ ಸಾಯಂಕಾಲ ಮ|| ರಾ|| ಕೆ. ನಾಗಣ್ಣನವರ ಧರ್ಮಾಧ್ಯಕ್ಷತ್ವದಲ್ಲಿ ಸಭೆಸೇರಿ ತಮಗುಂಟಾಗಿರುವ ಅನುತಾಪವನ್ನು ವ್ಯಕ್ತಪಡಿಸಿದರೆಂದು ತಿಳಿದುಬರುತ್ತದೆ.

ಮೈಸೂರು ವಿದ್ಯಾಖಾತೆಯ ಡೈರೆಕ್ಟರರೂ, ಮತ್ತು ಮೈಸೂರು ಮಹಾರಾಜಕಾಲೇಜ ಪ್ರಿನ್ಸಿಪಾಲರೂ ವಿದ್ಯಾರ್ಥಿಗಳು ಬ್ರಿಟಿಷ್ ಹಿಂದೂಸ್ಥಾನದ ರಾಜಕೀಯ ಚಳವಳಿಯಲ್ಲಿ ಭಾಗವಹಿಸಿ ಅನಾಗ್ಯ ಸಂಪು ಮಾಡುವದನ್ನು ಖಂಡಿಸಿ ಇನ್ನುಮುಂದೆ ಈ ರೀತಿ ಮಾಡಿದಲ್ಲಿ ಯೋಗ್ಯಶಾಸನವು ಮಾಡಲ್ಪಡುವುದೆಂದು ಅನುಜ್ಞೆಯನ್ನಿತ್ತಿರುವರು.

ಬೆಂಗಳೂರಿನ ನೇಯಕಾರರಿಂದ ತಯಾರಿಸಲ್ಪಡುವ ಕೈ ಮಗ್ಗದ ಬಟ್ಟೆಗಳನ್ನು ಕೊಂಡುಕೊಳ್ಳುವುದಕ್ಕೆ ಬೆಂಗಳೂರು ವರ್ತಕರಿಗೆ ಮೈಸೂರು ಸರ್ಕಾರದವರು ಮಂಜೂರು ಮಾಡಿದ್ದ 25,000 ರೂ. ಗಳ ಸಾಲವನ್ನು 50,000 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಈ ಹಣದ ಮೇಲೆ ಶೇಕಡಾ 4ರೂಪಾಯಿಯಂತೆ ಬಡ್ಡಿಯನ್ನು ನಿಷ್ಕರ್ಷಿಸಿದ್ದಾರೆ. ದಯಾಳುಗಳಾದ ಮೈಸೂರು ಸರ್ಕಾರದವರು ಹೀಗೆ ಕೈ ಮಗ್ಗದ ಕೆಲಸಕ್ಕೆ ಉತ್ತೇಜನ ಕೊಡುತ್ತಿರುವುದು ಸ್ತೋತ್ರಾರ್ಹವಾಗಿದೆ.

ಶ್ರೀಮನ್ಮಹಾರಾಜರವರು ಕಳೆದ ಬುಧವಾರ ದಿವಸ ಕೀರ್ತನಕಲಾಕುಶಲನಾದ ಚಿ|| ನರಸಿಂಹಮೂರ್ತಿ ಎಂಬ ೯ ವರ್ಷದ ಬಾಲಕನನ್ನು ಅರಮನೆಗೆ ಬರಮಾಡಿಕೊಂಡು "ಮಯೂರಧ್ವಜ" ಎಂಬ ಕೀರ್ತನವನ್ನು ಮಾಡಿಸಿದರೆಂದೂ, ಆ ಮಗುವಿನ ಮುದ್ದುಮೊಗದಿಂದ ಹೊರಸೂಸುತ್ತಿರುವ ಮಧುಮಧುರ ವಚನಗಳನ್ನು ಕೇಳಿ ಸಂತುಷ್ಟಚಿತ್ತರಾದರೆಂದೂ ತಿಳಿದು ಸಂತೋಷಿಸುತ್ತೇವೆ. ಈ ಬಾಲಕನಿಗೆ ಇಂತಹ ಚಿಕ್ಕ ವಯಸ್ಸಿನಲ್ಲಿ ಈ ತರಹದ ಕೀರ್ತನ ಶೈಲಿಯು ಪ್ರಾಪ್ತವಾಗಿರುವದನ್ನು ನೋಡಿದರೆ ಇದು ಪೂರ್ವಜನ್ಮ ಸಂಸ್ಕಾರ ವಿಶೇಷವೆಂದೇ ಹೇಳಬೇಕಾಗಿದೆ. ಶ್ರೀಜಗದೀಶ್ವರನ ಕೃಪಾತಿಶಯದಿಂದ ಈ ಬಾಲಕನು ಕೀರ್ತನಕಲೆಯಲ್ಲಿ ಅನನ್ಯಾದೃಶವಾದ ನೈಪುಣ್ಯವನ್ನು ಹೊಂದಲೆಂದು ಹಾರೈಸುತ್ತೇವೆ.

ಶ್ರೀಮತಿ ಆರ್. ಕಲ್ಯಾಣಮ್ಮನವರು ತಾವು ಪ್ರಕಟಿಸುವ "ಸರಸ್ವತಿ" ಎಂಬ ಮಾಸಪತ್ರಿಕೆಯ ವಿಶೇಷ ಸಂಚಿಕೆಯೊಂದನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದನ್ನು ಆದ್ಯಂತವಾಗಿ ಓದಿ ನೋಡಿದೆವು. ಸಂಗ್ರಹಿಸಿದ ವಿಷಯಗಳು ಮನೋಹರಗಳಾಗಿವೆ. ದೇಶಭಕ್ತರಾದ ಪಂಡಿತ ತಾರಾನಾಥ ಮುಂತಾದ ಪ್ರಸಿದ್ಧ ಪುರುಷರ ನೀತಿ ಬೋಧಕ ವ್ಯಾಖ್ಯಾನಗಳೂ ಎಲ್. ಗುಂಡಪ್ಪನವರು, ಶ್ರೀ|| ಕೆ. ವಿ. ಪುಟ್ಟಪ್ಪನವರು ಎಂ.ಎ., ಮೈಸೂರು ಮುಂತಾದವರು ಮಾಡಿದ ಈಗಣ ಹೊಸ ತರಹದ ಕವಿತೆಗಳೂ ಇದರಲ್ಲಿ ಸಂಗ್ರಹಿಸಲ್ಪಟ್ಟಿರುವವಲ್ಲದೆ ಅಹಿಂಸಾಮಯ ಸತ್ಯಾಗ್ರಹ ಸಮರದಲ್ಲಿ ಮಹಾಕಾರ್ಯಮತಿಯರಾದ ಶ್ರೀಮತಿ ಸರೋಜಿನೀದೇವಿ, ಶ್ರೀಮತಿ ಕಸ್ತೂರಿಬಾಯಿ ಮುಂತಾದ ಶ್ರೇಷ್ಠನಾರೀಮಣಿಗಳ ೧೫-೨೦ ಭಾವಚಿತ್ರಪಟಗಳು ಸೇರಿಸಲ್ಪಟ್ಟಿವೆ. ಒಟ್ಟಿಗೆ ಪುಸ್ತಕವು ಸರ್ವರಿಂದಲೂ ಸಂಗ್ರಾಹ್ಯವಾಗಿದೆ.

ಬೆಂಗಳೂರು ಕುನ್ನಯ್ಯಚೆಟ್ಟಿ ಎಂಬಾತನು ಚಿದಂಬರಕ್ಕೆ ಹೋಗಿ ಆರ್ಮೋಗಂ ಪಠಾಣ ಎಂಬವನಿಗೆ ಕೋಲಾರ ಬಂಗಾರದ ಗಣಿಯಲ್ಲಿ ಅಗ್ಗವಾಗಿ ಬಂಗಾರವನ್ನು ಕೊಡಿಸುತ್ತೇನೆಂದು ಅವನನ್ನು ಊರಿಗಾಕ್ಕೆ ಕರೆದುಕೊಂಡು ಬಂದನು. ಜಯವೇಲು ಮೊದಲಿಯಾರ್ ಎಂಬವನು ಕೋಲಾರದ ಬಂಗಾರ ಗಣಿಯಲ್ಲಿ ತಾನು ಮೇಸ್ತ್ರಿಯೆಂದು ಹೇಳಿದನು. ಅನಂತರ ಉಭಯರೂ ಸೇರಿ 17 ರೂಪಾಯಿಗೆ ತೊಲೆಯಂತೆ ಶುದ್ಧಬಂಗಾರವೆಂದು ಹೇಳಿ ಹೊಂಬಹಿತ್ತಾಳಿ ಗಟ್ಟಿಯನ್ನು ಕೊಟ್ಟು ಸುಮಾರು 5000 ರೂಪಾಯಿಬಾಳುವ ಬಂಗಾರದ ನಗಗಳನ್ನೂ ಸ್ವಲ್ಪ ಹಣವನ್ನೂ ಅಪಹರಿಸಿಕೊಂಡು ಹೋಗಿದ್ದಾರೆ. ಅನಂತರ ಪರೀಕ್ಷಿಸುವಲ್ಲಿ ಆ ಗಟ್ಟಿಯು ಸೀಸ ಮತ್ತು ಪಾದರಸದಿಂದ ಕೂಡಿದ್ದಿತು. ಮೋಸಗಾರನಾದ ಕುನ್ನಯ್ಯಚೆಟ್ಟಿಯು ಊರಿಗಾದಲ್ಲಿ ದಸ್ತಗಿರಿಮಾಡಲ್ಪಟ್ಟಿರುವನು.

ವರ್ತಮಾನಸಂಗ್ರಹ.

ವೈಸರಾಯರಿಂದ ಹೊರಟಿದ್ದ ವರ್ತಮಾನಪತ್ರಿಕೆಗಳ ಮೇಲಿನ ಕಠಿನ ಶಾಸನವು ಕಳೆದ ತಿಂಗಳು 27 ಕ್ಕೆ ಸಮಾಪ್ತಿಗೊಂಡಿತು.

ಕೋಲೊಂಬಾದಲ್ಲಿ ವಿಶೇಷವಾದ ಮಳೆಯಾಗಿ 2,000 ಜನಗಳಿಗೆ ಮನೆಮಠಗಳಿಲ್ಲದಂತಾಗಿದೆ. ಸರ್ಕಾರದವರು ಸಹಾಯಮಾಡುತ್ತಿರುವರು.

ಬಂಗಾಲದ ದೇಶಭಕ್ತರಾದ ಶ್ರೀಯುತ ಸೇನಗುಪ್ತರ ಪತ್ನಿಯವರು ಅಕ್ಟೋಬರ್ 30 ನೆಯ ಸಾಯಂಕಾಲ ದೆಹಲಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ಪಂಡಿತ ಗೋವಿಂದಮಾಲವೀಯರವರು ರಾಜದ್ರೋಹದ ಅಪಾದನೆಯ ಮೇಲೆ ಅಲಹಾಬಾದ್ ಡಿ|| ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಪಂಡಿತ ಮೋತೀಲಾಲ್‌ನೆಹರೂರವರ ಆರೋಗ್ಯವು ಸುಧಾರಿಸುತ್ತಲಿದ್ದಾಗ್ಯೂ ಇನ್ನೂ ಕೆಲವು ತಿಂಗಳುಗಳವರೆಗೆ ಅವರು ವಿಶ್ರಾಂತಿತೆಗೆದುಕೊಳ್ಳುವುದು ಅವಶ್ಯವೆಂದು ಅವರ ವೈದ್ಯರಾದ ಜೀವರಾಜಮೆಹತಾರವರು ತಿಳುಹಿಸುತ್ತಾರೆ.

ಪಂಡಿತ ಜವಾಹಿರಲಾಲರವರು ರಾಜದ್ರೋಹಕರವಾದ ಭಾಷಣವನ್ನು ಮಾಡಿದರೆಂಬ ಅಪಾದನೆಯ ಮೇಲೆ ಪುನಃ ದಸ್ತಗಿರಿ ಮಾಡಲ್ಪಟ್ಟು ಎರಡು ವರ್ಷ ಕಠಿಣ ಶಿಕ್ಷೆ ಮತ್ತು 600 ರೂಪಾಯಿಗಳ ಅರ್ಥ ದಂಡಕ್ಕೆ ಗುರಿಯಾಗಿರುವರು.

ಬೊಂಬಾಯಿಯಲ್ಲಿ ಪೋಲೀಸರ ದುಷ್ಟಾಳಿಕೆಯು ವಿಪರೀತವಾಗಿದ್ದು ದಸ್ತಗಿರಿಮಾಡಲ್ಪಟ್ಟ ಸ್ತ್ರೀಯರನ್ನೂ ಸಹ ನಿಕೃಷ್ಟರೀತಿಯಿಂದ ಕಂಡದ್ದರಿಂದ ಪುರಪ್ರಮುಖರು ಪ್ರಚಂಡಸಭೆಯನ್ನು ಮಾಡಿ ಪೋಲೀಸರ ವರ್ತನವನ್ನು ಖಂಡಿಸುವವರಾಗಿದ್ದಾರೆ.

ಕೊಯಮತ್ತೂರು ಜೈಲಿನಲ್ಲಿ ಅಪರಾಧಿಗಳಿಗೆ ಪ್ರತಿದಿನಸವೂ ಮಧ್ಯಾಹ್ನದಲ್ಲಿ ಕೊಡುತ್ತಿದ್ದ ಒಂದು ಘಂಟೆಯ ವಿರಾಮವನ್ನು ತಪ್ಪಿಸಿದ್ದರಿಂದ ಕಳೆದ 29ನೆಯ ತಾರೀಖಿನಿಂದ ಸುಮಾರು ಒಂದು ಸಾವಿರ ಜನ ಖೈದಿಗಳು ಉಪವಾಸವ್ರತವನ್ನು ಕೈಕೊಂಡಿದ್ದಾರೆ.

ಕಲ್ಕತ್ತೆಯಲ್ಲಿ ಸರ್ಕಾರದವರು 144 ನೇ ಸೆಕ್ಷನ್ ಜಾರಿಯಲ್ಲಿ ತಂದದ್ದರಿಂದ ಇದನ್ನು ಪ್ರತಿಭಟಿಸುವುದಕ್ಕಾಗಿ ಕಾಂಗ್ರೆಸ್ಸಿನವರು ಅಕ್ಟೋಬರ್ 30 ರಲ್ಲಿ ಪ್ರಚಂಡ ಮೆರವಣಿಗೆಯನ್ನು ಹೊರಡಿಸಿದರು. ಸರ್ಕಾರದವರು ಇವರನ್ನು ಎದುರಿಸಿ ಲಾಠೀಪ್ರಯೋಗಮಾಡಿದರು.

ತಿರುಚನಾಪಳ್ಳಿಯಿಂದ ತಂಜಾವೂರವರೆಗೆ ಮಳೆಯಿಂದ ಭಯಂಕರ ಅನಾಹುತವಾಗಿದೆ. ಅನೇಕ ಕಡೆಗಳಲ್ಲಿ ರೇಲ್ವೆ ಮಾರ್ಗಗಳೆಲ್ಲಾ ಕೆಟ್ಟುಹೋಗಿ ರೇಲ್ವೆ ಪ್ರಯಾಣವೇ ನಿಂತುಹೋಗಿದೆ. ಸಹಸ್ರಾರು ಜನಗಳು ಮನೆಮಠಗಳನ್ನು ಕಳೆದುಕೊಂಡು ಹೊಟ್ಟೆಗಿಲ್ಲದೆ ಅಲೆದಾಡುತ್ತಿರುವರು.

ಲಂಡನ್ನಿನ ದುಂಡುಮೇಜಿನ ಪರಿಷತ್ತಿಗೆ ಹೋಗಿರುವ ಭಾರತೀಯರಾಜರು ತಮ್ಮ ರಾಜ್ಯದ ಆಡಳಿತದ ವಿಷಯದಲ್ಲಿ ಭಾರತೀಯಪ್ರಮುಖರು ಕೈಹಾಕದಿದ್ದರೆ ಸಾಮ್ರಾಜ್ಯಾಂತರ್ಗತಸ್ವರಾಜ್ಯಕ್ಕೆ ತಾವು ವಿರೋಧಿಸುವುದಿಲ್ಲವೆಂದು ಹೇಳಿರುವರು. ಇದು ಭಾರತೀಯರ ಸಂಘಶಕ್ತಿಯ ಪರಿಣಾಮವಲ್ಲವೇ?

ಇಟಲಿಯಲ್ಲಿ ಭೂಕಂಪದಿಂದ ಅನೇಕರು ಮೃತಪಟ್ಟಿರುವರಲ್ಲದೆ ಬಹು ಜನರಿಗೆ ಗಾಯಗಳಾಗಿವೆ. ಅಂಕೋನ ಎಂಬ ಸುಂದರವಾದ ಪಟ್ಟಣವು ಅನಂತ ಅನರ್ಥಗಳಿಗೀಡಾಗಿದೆ. ಒಂದು ದೇವಾಲಯದ ಮೇಲ್ಛಾವಣಿಯು ಕಳಚಿಕೊಂಡು ಬಿದ್ದು ಒಬ್ಬ ಗುರುವೂ ಎಂಟು ಜನ ಶಿಷ್ಯರೂ ಮೃತಪಟ್ಟಿರುವರು.

ಪಂಡಿತ ಜವಾಹಿರಲಾಲರವರಿಗೂ ಶ್ರೀಮತಿ ಅವಂತಿಕಾಬಾಯಿಯವರಿಗೂ ಶಿಕ್ಷೆಯಾದುದಕ್ಕಾಗಿ ಬೊಂಬಾಯಿಯಲ್ಲಿ ಕಳೆದ ತಿಂಗಳು 30ನೆಯ ತಾರೀಖಿನ ದಿವಸ ಹರತಾಳವನ್ನಾಚರಿಸಿದರು. ಮ್ಯುನಸಿಪಾಲಿಟಿಯವರೂ ಸಹ ಆ ದಿವಸದ ಕಾರ್ಯಕಲಾಪಗಳನ್ನು ನಿಲ್ಲಿಸಿ ಈ ಉಭಯ ದೇಶಭಕ್ತರಲ್ಲಿ ತಮಗಿರುವ ನೈಜವಾದ ಗೌರವವನ್ನು ವ್ಯಕ್ತಪಡಿಸಿದರು.

ಬೊಂಬಾಯಿ ಸಂಗ್ರಾಮಸಮಿತಿಯ ಅಧ್ಯಕ್ಷರಾಗಿದ್ದ ಶ್ರೀಮತಿ ಅವಂತಿಕಾಬಾಯಿ ಗೋಖಲೆಯವರು ದಸ್ತಗಿರಿ ಮಾಡಲ್ಪಟ್ಟು 6 ತಿಂಗಳು ಸಾದಾ ಸಜೆ ಮತ್ತು 400 ರೂಪಾಯಿಗಳ ಅರ್ಥದಂಡಕ್ಕೆ ಗುರಿಯಾಗಿರುವರು. ತಮ್ಮ ಸ್ಥಾನಕ್ಕೆ ಶ್ರೀಮತಿ ಸರೋಜಿನಿದೇವಿಯವರ ಸಹೋದರರೂ, ಪ್ರಸಿದ್ಧ ಕವಿಗಳೂ ಆದ ಶ್ರೀಯುತ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ನಿಯಮಿಸಿರುವರು.

ಕಳೆದ ರವಿವಾರ ದಿನಸ ಬೊಂಬಾಯಿಯ ಅಜದ ಮೈದಾನದಲ್ಲಿ ಬಂಧಿಸಲ್ಪಟ್ಟಿದ್ದ ಕೆಲ ಜನ ಹೆಣ್ಣು ಮಕ್ಕಳು ನಿರಿಮನಿಯಲ್ಲಿದ್ದಾಗ ರಾತ್ರಿ ಸಮಯದಲ್ಲಿ ಮ್ಯಾಕಿಂಜಿಯೆ [illegible] ಸಾರ್ಜಂಟನು ಈ ಭಗಿನಿಯರಿದ್ದ ಸ್ಥಳಕ್ಕೆ [illegible] ಣ ಮಾಡಿದನೆಂದು ದೇಶಸೇವಿಕ [illegible] ನ ವಿರುದ್ಧವಾಗಿ ಕೋರ್ಟಿನಲ್ಲಿ ವ್ಯಾ [illegible] ರುವರು. ಅರ್ಯಮಹಿಳೆಯರ ಗೌರವಚ್ಯುತಿಗೆ ಇದೊಂದುಕಾಲ!

ಮದರಾಸಿನಲ್ಲಿ ಮಿ|| ಬಿ. ಮುನಿಸ್ವಾಮಿನಾಯುಡು ರವರು ಮುಖ್ಯ ಮಂತ್ರಿಗಳಾಗಿಯೂ, ಮಿ|| ಪಿ. ಟಿ. ರಾಜ‌ನ್, ಮತ್ತು ಎಸ್. ಕುಮಾರಸ್ವಾಮಿರಡ್ಡಿಯವರು ಉಪಮಂತ್ರಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ. ಮ|| ಬಿ. ಮುನಿಸ್ವಾಮಿರೆಡ್ಡಿಯರವರು ಮ್ಯುನಸಿಪಾಲಿಟಿಖಾತೆಗೂ, ಮ|| ಪಿ. ಟಿ. ರಾಜನ್‌ರವರು ವ್ಯವಸಾಯ ಖಾತೆಗೂ, ಮ|| ಕುಮಾರಸ್ವಾಮಿರಡ್ಡಿಯವರು ವಿದ್ಯಾಖಾತೆಗೂ ನಿಯಮಿಸಲ್ಪಟ್ಟಿರುವರು.

ವೈಸ್ರಾಯರವರು ದುಂಡುಮೇಜಿನಪರಿಷತ್ತಿಗೆ ಕೆಲವು ಸಲಹೆಗಳನ್ನು ಕಳುಹಿಸಿರುವರಂತೆ! ಇಂಡಿಯಾ ಸರ್ಕಾರದಲ್ಲಿ ದ್ವಿಮುಖಸರ್ಕಾರವೇರ್ಪಡಿಸಲ್ಪಟ್ಟು, ಆರೋಗ್ಯ, ವಿದ್ಯಾ, ಕೈಗಾರಿಗೆ ಮತ್ತು ವ್ಯಾಪಾರಖಾತೆಗಳು ಭಾರತೀಯರಿಗೆ ಕೊಡಲ್ಪಡಬೇಕೆಂತಲೂ ಹಣ, ಸೈನ್ಯ, ರಕ್ಷಣೆ ಬಾಬುಗಳು ತಮ್ಮ ಆಡಳಿತದಲ್ಲಿರಬೇಕೆಂತಲೂ ಸೂಚಿಸಿರುವರಂತೆ! ಈ ಸೂಚನೆಯಿಂದ ಮಿ|| ಸಪ್ರೂ ಹಾಗೂ ಜಯಕರರು ಅಸಮಾಧಾನಪಡುತ್ತಲಿರುವರಂತೆ!

ಬೊಂಬಾಯಿಯಲ್ಲಿ ರಾಷ್ಟ್ರೀಯ ಧ್ವಜವಂದನೆಯ ಸಂಬಂಧವಾಗಿ ನಡೆದ ಗಲಾಟೆಯಲ್ಲಿ ಪೋಲೀಸರು ಅನೇಕರ ಮೇಲೆ ಮೊಕದ್ದಮೆಗಳನ್ನು ಹಾಕಿದ್ದರು. ಅಪರಾಧಿಗಳಲ್ಲಿ ಜೋಶಿ ಎಂಬ ೧೫ ವರ್ಷದ ಬಾಲಕನಿದ್ದನು. ಮ್ಯಾಜಿಸ್ಟ್ರೇಟರು ಆ ಬಾಲಕನಿಗೆ ನೀನು ಕ್ಷಮಾಪಣೆಯನ್ನು ಬೇಡು ನಿನ್ನನ್ನು ಬಿಟ್ಟುಬಿಡುತ್ತೇನೆಂದು ಹೇಳಲು, ಅದಕ್ಕೆ ಆ ವೀರಬಾಲಕನು "ನಾನು ಮರಣಹೊಂದಿದರೂ ಸಹ ಕ್ಷಮಾಪಣೆ ಬೇಡುವುದಿಲ್ಲ" ನೆಂದು ಹೇಳಿದನಂತೆ! ನವಚೈತನ್ಯದ ಪ್ರಭಾವ!

ಬೊಂಬಾಯಿಯ ಎಸ್ಪ್ಲನಡ್ ಮೈದಾನದಲ್ಲಿ ರಾಷ್ಟ್ರಧ್ವಜಕ್ಕೆ ವಂದನೆಯನ್ನು ಮಾಡಲು ಜನಗಳು ಸೇರಕೂಡದೆಂದು ಪೋಲೀಸು ಕಮಿಷನರರು ಅಪ್ಪಣೆಮಾಡಿದ್ದಾಗ್ಯೂ, ಬೊಂಬಾಯಿ ಪಟ್ಟಣಿಗರು ಲಕ್ಷಿಸದೆ ಅಕ್ಟೋಬರ್ 26 ರ ರಲ್ಲಿ ಸಭೆ ಸೇರಿದ್ದರು. ಸವಾರರೂ ಪೋಲೀಸು ಸಾರ್ಜಂಟರೂ, ಸಿಪಾಯಿಗಳೂ ಜನಗಳ ಮೇಲೆ ಬಿದ್ದು ವಿಶೇಷವಾಗಿ ಲಾಠೀಪ್ರಯೋಗಮಾಡಿದರು. 235 ಜನರಿಗೆ ಗಾಯಗಳಾಗಿವೆ. 56 ಜನರು ದಸ್ತಗಿರಿ ಮಾಡಲ್ಪಟ್ಟರು. ಅವರ ಪೈಕಿ 26 ಜನಗಳಿಗೆ ಕಠಿಣಸಜೆ, 300 ರೂಪಾಯಿ ಜುಲ್ಮಾನೆ, ಜುಲ್ಮಾನೆ ಕೊಡದೆ ತಪ್ಪಿದಲ್ಲಿ 3 ತಿಂಗಳು ಹೆಚ್ಚಿಗೆ ಸಜೆಯು ವಿಧಿಸಲ್ಪಟ್ಟಿದೆ.

ತಮಿಳುನಾಡಿನ ಪ್ರಸಿದ್ಧ ದೇಶಭಕ್ತರಾದ ಮಿ|| ಸಿ. ರಾಜಗೋಪಾಲಾಚಾರ್ಯರು ಪರಕೀಯ ಪ್ರಭುತ್ವದ ಮೇಲೆ ದಂಗೆ ಏಳುವುದಕ್ಕೆ ಪ್ರೋತ್ಸಾಹಿಸಿದರೆಂತಲೂ, ಮತ್ತು ಈ ವರ್ಷದ ಸೆನ್ಸಸ್ಸಿನಲ್ಲಿ ಸೆನ್ಸೆಸ್ ಅಧಿಕಾರಿಗಳಿಗೆ ಉತ್ತರವನ್ನು ಕೊಡದೆ ಸೆನ್ಸಸ್ಸನ್ನು ಬಹಿಷ್ಕರಿಸಲು ಬೋಧಿಸಿದರೆಂತಲೂ, ಶಾಂತರೀತಿಯಿಂದಿರುವುದಕ್ಕೋಸ್ಕರ 500 ರೂಪಾಯಿಗಳ ಜಾಮೀನು ಬಾಂಡನ್ನು ಬರೆದು ಕೊಡಬೇಕೆಂದು ಕೊಟ್ಟ ನೋಟೀಸಿನಪ್ರಕಾರ ನಡೆಸಲಿಲ್ಲವೆಂತಲೂ ಮದ್ರಾಸ್ ಸಿಟಿ ಮ್ಯಾಜಿಸ್ಟ್ರೇಟರು ಇವರಿಗೆ ಒಂದು ವರ್ಷ ಸಾದಾ ಶಿಕ್ಷೆಯನ್ನು ವಿಧಿಸಿ "ಎ" ಕ್ಲಾಸಿನಲ್ಲಿಟ್ಟಿರುವರು. ತಮಿಳುನಾಡು ಕಾಂಗ್ರೆಸ್ಸಿಗೆ ಮಿ|| ಸತ್ಯಮೂರ್ತಿಯವರನ್ನು ಅಧ್ಯಕ್ಷರನ್ನಾಗಿ ನಿಯಮಿಸಿರುತ್ತಾರೆ. ಮಿ|| ಸಿ. ರಾಜಗೋಪಾಲಾಚಾರ್ಯರು ಜೈಲಿಗೆ ಹೋಗುವ ಪೂರ್ವದಲ್ಲಿ ಸರ್ಕಾರದವರು ನನ್ನನ್ನು ಅಪೇಕ್ಷಿಸುತ್ತಾರೆ; ನಾನು ಸಂತೋಷದಿಂದ ಹಿಂತಿರುಗಿ ಹೋಗುತ್ತೇನೆ. ಯಾವ ಗೌರವಸ್ಥ ಭಾರತೀಯನೂ ಜೈಲಿನ ಹೊರಗೆ ಸುಖವಾಗಿರಲಾರನು. ರಾಷ್ಟ್ರಯುದ್ಧವು ಜಯೋನ್ಮುಖವಾಗುತ್ತಿರುವ ಈ ಕಾಲದಲ್ಲಿ ಕಷ್ಟಗಳನ್ನು ಸುಭವಿಸಿ ಸೇವೆಯನ್ನು ಸಮರ್ಪಿಸುವುದು ಸುದೈವವೇ ಸರಿ; ಎಂದು ಹೇಳಿದರಂತೆ!

ಲಂಡನ್‌ಪಾರ್ಲಿಮೆಂಟಿನಲ್ಲಿ ಪಂಚಮ ಜಾರ್ಜ್‌ಸಾರ್ವಭೌಮರ ಭಾಷಣ.

ಅಕ್ಟೋಬರ್ 28 ರಲ್ಲಿ ಪಾರ್ಲಿಮೆಂಟಿನ ಅಧಿವೇಶನವು ಪಂಚಮ ಜಾರ್ಜ್‌ಸಾರ್ವಭೌಮರಿಂದ ಪ್ರಾರಂಭಿಸಲ್ಪಟ್ಟಿತು. ಸಾರ್ವಭೌಮರು ಅರಮನೆಯಿಂದ ಪಾರ್ಲಿಮೆಂಟಿಗೆ ವೈಭವದಿಂದ ಹೋಗುವವನ್ನು ನೋಡುವದಕ್ಕೆ ಸಹಸ್ರಾರು ಜನರು ರಸ್ತೆಯ ಉಭಯಪಾರ್ಶ್ವಗಳಲ್ಲಿಯೂ ಕಿಕ್ಕಿರಿದು ನಿಂತಿದ್ದರು. ಸಾರ್ವಭೌಮರು ಚಕ್ರವರ್ತಿನಿಯವರೊಂದಿಗೆ ಎಂಟು ದಿವ್ಯಾಶ್ವಗಳಿಂದ ಹೂಡಲ್ಪಟ್ಟ ರಥದಲ್ಲಿ ಮೂರ್ತಮಾಡಿ ಪಾರ್ಲಿಮೆಂಟಿಗೆ ದಯಮಾಡಿಸುವ ಸಮಯದಲ್ಲಿ 41 ಗುಂಡುಗಳು ಹಾರಿಸಲ್ಪಟ್ಟವು. ಚಕ್ರವರ್ತಿಗಳೂ, ಚಕ್ರವರ್ತಿನಿಯವರೂ ಉನ್ನತಾಸನದಲ್ಲಿ ಕುಳಿತುಕೊಂಡರು. ಹಿಂದೂದೇಶದರಾಜರು ಲಾರ್ಡ್ ಮನೆತನದವರ ಶ್ರೇಣಿಯಲ್ಲಿ ಕುಳಿತಿದ್ದರು. ಆಗ ಜಾರ್ಜ್ ಸಾರ್ವಭೌಮರು ಮಾಡಿದ ಭಾಷಣವು ಈ ಕೆಳಗೆ ಕೊಡಲ್ಪಟ್ಟಿದೆ.

"ಅನೇಕ ಪ್ರಾಂತ್ಯಗಳಿಂದ ಬಂದಿರುವ ನನ್ನ ಮಂತ್ರಿಗಳನ್ನೂ, ಭರತಖಂಡದ ಸದಸ್ಯರನ್ನೂ ಸ್ವಾಗತ ಮಾಡಲು ನನಗೆ ತುಂಬಾ ಸಂತೋಷವಾಗುತ್ತದೆ. ಅವರ ಉದ್ಯಮಗಳು ಫಲಕಾರಿಯಾಗುವ್ವದನ್ನು ಕೇವಲ ಅವಲಂಬಿಕೆಯಿಂದಲೂ, ನಂಬಿಗೆಯಿಂದಲೂ ನಿರೀಕ್ಷಿಸುತ್ತಲಿದ್ದೇನೆ. ಹಿಂದೂದೇಶದ ರಾಜಕೀಯ ವಿಷಯಗಳನ್ನು ನಿರ್ಣಯಿಸಲು ಪಾರ್ಲಿಮೆಂಟಿನ ಮೆಂಬರರೊಂದಿಗೆ ಸಹಕರಿಸಲು ಆಗಮಿಸಿರುವ ರಾಜರ ಪ್ರತಿನಿಧಿಗಳನ್ನೂ, ದೇಶದ ಪ್ರತಿನಿಧಿಗಳನ್ನೂ ಆನಂದದಿಂದ ಸ್ವಾಗತಿಸಲು ಆಶಿಸುತ್ತೇನೆ. ಈ ಮಹಾಸಭೆಗೆ ಶುಭವನ್ನು ಹಾರೈಸುವುದೇ ನನ್ನ ಉದ್ದೇಶ. ಈ ಸಭೆಯ ಕಾರ್ಯಕ್ರಮಗಳೂ, ಉದ್ದೇಶವೂ ನಿರಾಂತಕವಾಗಿ ಪರಿಣಮಿಸಲೆಂದು ಉತ್ಕಟೇಚ್ಛೆಯಿಂದ ಹಾರೈಸುತ್ತೇನೆ."

ಸ್ವೀಕಾರ.

ಧಾರವಾಡ ಡಿ|| ಗದಗ ತಾ|| ಹುಮ್ಮಿಗಿಗ್ರಾಮದ ವೇ|| ಓಹಿಲಿ ಗವಿಯಯ್ಯನವರು ಶಿವಾಧೀನರಾದ ಸಮಯದಲ್ಲಿ ಮಠಾಧಿಕಾರಿ ಅಭಿಪ್ರಾಯದ ಮೇರಿಗೆ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ಮ|| ರಾ|| ಬಸಪ್ಪಕಲ್ಲೂರು ಸಾ|| ಲಕ್ಷ್ಮೇಶ್ವರ ಇವರ ದ್ವಾರಾ ತಲ್ಪಿರುತ್ತದೆ.

ಕೊಪ್ಪಳ ಡಿ|| ಕಾತರಕಿ ಗ್ರಾಮದ ಸ್ಕೂಲ್‌ಮಾಸ್ತರರಾದ ವೇ|| ಬನ್ನಿಕೊಪ್ಪ ಬೃಹನ್ಮಠದ ಶಿವಯ್ಯನವರು ವಿಜಯದಶಮಿಯ ಸುಮುಹೂರ್ತದಲ್ಲಿ ಪ್ರಭಾಪೋಷಕ್ಕಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಸೊಲ್ಲಾಪುರ ಡಿ|| ಹುಟ್ಟಿಗಿ ಗ್ರಾಮನಿವಾಸಿಗಳಾದ ಮ|| ರಾ|| ಗುರುನಾಥ ಚನ್ನಬಸಪ್ಪ ಜಿವಣಶೆಟ್ಟಿ ಇವರು ಬಾವಿಯ ಶಾಂತಿಯನ್ನು ಮಾಡಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ|| ಷ|| ಬ್ರ|| ಹುಟ್ಟಿಗಿ ಬೃಹನ್ಮಠಾಧ್ಯಕ್ಷರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(3ನೇ ಪುಟದಿಂದ ಮುಂದುವರಿದುದು.)

ಲ್ಲಿದ್ದು, ವಧೆಯಾದನಂತರ ಹಂತಕರನ್ನು ಎದುರುಗೊಳ್ಳುವವನಾಗಿದ್ದನು. ವಧೆಗೋಸ್ಕರ ನಡೆದ ಆಲೋಚನಾ ಸಭೆಯಲ್ಲಿ ತಾನು ಭಾಗತೆಗೆದುಕೊಂಡಿದ್ದರೂ ಸುಖದೇವನು ವಧಾಕಾರ್ಯಕ್ಕೆ ನಿಯೋಜಿಸಲ್ಪಡಲಿಲ್ಲ. ಶಿವರಾಮರಾಜಗುರುವು ಪೋಲೀಸ್ ಆಫೀಸಿನ ಬಳಿಗೆ ಕಾಲುನಡಿಗೆಯಲ್ಲೇ ಹೋದನು. ಪಂಡಿತಜಿ, ಜಯಗೋಪಾಲ್, ಭಗತ್‌ಸಿಂಗರು ಬೈಸಿಕಲ್ಲುಗಳ ಮೇಲೆ ಹೋದರು. ಸಾಯಂಕಾಲ ನಾಲ್ಕುಗಂಟೆ ಹೊತ್ತಿಗೆ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಸಾಂಡರ್ಸ್‌ರವರು ಪೋಲೀಸ್ ಆಫೀಸಿನಿಂದ ಹೊರಕ್ಕೆ ಬಂದರು. ಇವರ ಹಿಂದೆಯೇ ಹೆಡ್ ಕಾನ್‌ಸ್ಟೇಬಲ್ಲನಾದ ಛಾನನ್‌ಸಿಂಗನೂ ಬಂದನು. ಆ ದಿವಸ ಪ್ರಾತಃಕಾಲ 10 ಗಂಟೆಗೆ ಕೆಂಪುಬಣ್ಣದ ಮೋಟಾರ್ ಸೈಕಲ್ಲಿನ ಮೇಲೆ ಆಫೀಸಿಗೆ ಹೋಗುತ್ತಿದ್ದ ಇದೇ ಸಾಂಡರ್ಸ್‌ರನ್ನೇ ಜಯಗೋಪಾಲನು ಮಿ|| ಸ್ಕಾಟರೆಂದು ಭಾವಿಸಿದ್ದನು. ಸಾಂಡರ್ಸ್‌ರು ತಮ್ಮ ಮೋಟಾರುಬೈಸಿಕಲ್ಲನ್ನು ಸ್ಟಾರ್ಟುಮಾಡಿ, ಪೋಲೀಸ್ ಆಫೀಸಿನ ಗೇಟಿನಿಂದ ಹೊರಗೆಬಂದು, ನಿಧಾನವಾಗಿ ರಸ್ತೆಯಲ್ಲಿ ಬಿಟ್ಟುಕೊಂಡು ಹೋಗತೊಡಗಿದರು. ಜಯಗೋಪಾಲನು ಸೂಚನೆಯನ್ನು ಕೊಡಲು ಶಿವರಾಜಗುರುವು ತನ್ನ ರಿವಾಲ್ವರನ್ನು ತೆಗೆದುಕೊಂಡು, ಸಾಂಡರ್ಸ್‌ರು ಬರುತ್ತಿದ್ದ ಕಡೆಗೆ ಹೋಗಿ ಅವರ ಮೋಟಾರುಬೈಸಿಕಲ್ಲು ಹತ್ತಿರಕ್ಕೆ ಬಂದೊಡನೆಯೇ, ಅವರ ಮೇಲೆ ಫೈರ್‌ಮಾಡಿದನು. ಸಾಂಡರ್ಸ್‌ರಿಗೆ ಗುಂಡಿನೇಟು ತಗಲಿ ಅವರು ತಮ್ಮ ಕೈಗಳನ್ನೆತ್ತಿ ಮೋಟಾರ್‌ಸೈಕಲ್ ಸಮೇತ ರಸ್ತೆಯಲ್ಲಿ ದಪ್ಪನೆ ಬಿದ್ದುಬಿಟ್ಟರು; ಅವರ ಒಂದುಕಾಲು ಸೈಕಲ್ಲಿನ ಅಡಿಗೆ ಸಿಕ್ಕಿಕೊಂಡಿದ್ದಿತು. ಭಗತ್‌ಸಿಂಗನು ಆಗ ಓಡಿಹೋಗಿ ಕೆಳಗೆ ಬಿದ್ದಿದ್ದ ಸಾಂಡರ್ಸ್‌ರ ಮೇಲೆ ತನ್ನ ಆಟೋಮ್ಯಾಟಿಕ್ ಪಿಸ್ತೂಲಿನಿಂದ ಅನೇಕ ಗುಂಡುಗಳನ್ನು ಹಾರಿಸಿದನು. ಹೆಡ್‌ಕಾನ್‌ಸ್ಟೇಬಲ್ ಛಾನನ್‌ಸಿಂಗನೂ, ಟ್ರಾಫಿಕ್ ಇನ್‌ಸ್ಪೆಕ್ಟರಾದ ಮಿ|| ಫರ್ನ್‌ರೂ, ಭಗತ್‌ಸಿಂಗ್, ಶಿವರಾಮರಾಜಗುರು, ಜಯಗೋಪಾಲರುಗಳನ್ನು ಕೋರ್ಟುಬೀದಿಯ ಕಡೆಗೆ ಅಟ್ಟಿಸಿಕೊಂಡು ಹೋದರು. ಗುಂಡು ಹೊಡೆಯುತ್ತಿದ್ದಾಗ ಅಬ್ದುಲ್ಲಾ ಎಂಬವನಿಂದ ನಡೆಸಲ್ಪಡುತ್ತಿದ್ದ ಒಂದು ಮೋಟಾರು ಕೋರ್ಟು ಬೀದಿಯ ಚೌಕದಲ್ಲಿ ಬಂದು ನಿಂತಿದ್ದಿತು. ಮಿ|| ಫರ್ನ್‌ರು ಭಗತ್‌ಸಿಂಗ್, ಶಿವರಾಮರಾಜಗುರುಗಳನ್ನು ಕೋರ್ಟು ಬೀದಿಯಲ್ಲಿ ಅಟ್ಟಿಸಿಕೊಂಡು ಹೋಗುತ್ತಿದ್ದಾಗ, ಅವರಿಬ್ಬರಲ್ಲಿ ಯಾರೋ (ಬಹುಶಃ ಭಗತ್‌ಸಿಂಗಿರಬಹುದು) ಮಿ|| ಫರ್ನ್‌ರನ್ನು ಗುಂಡಿನಿಂದ ಹೊಡೆಯಲು, ಅವರು [illegible] ಳ್ಳಲುಬಾಗಿ ಮಗ್ಗುರಿಸಿ ಬಿದ್ದುಬಿಟ್ಟರು. ಆಗ ಭಗ[illegible] ರಾಜಗುರುವೂ ಕೋರ್ಟು ರಸ್ತೆಯನ್ನು ಬಿಟ್ಟು [illegible] ಆಂಗ್ಲೋವರ್ನಾಕ್ಯುಲರ್ ಕಾಲೇಜಿನ ಆವರಣದೊಳಗೆ ಬಂದು ಸಣ್ಣ ಗೇಟಿನ ಮೂಲಕ ಹೊಕ್ಕು ಓಡತೊಡಗಿದರು. ಹೆಡ್‌ಕಾನ್‌ಸ್ಟೇಬಲ್ ಛಾನನ್‌ಸಿಂಗನು ಅವರಿಬ್ಬರನ್ನು ಇನ್ನೂ ಅಟ್ಟಿಕೊಂಡೇ ಬರುತ್ತಿದ್ದನು, ಶತ್ರುಗಳು ಆವರಣದೊಳಕ್ಕೆ ಹೋದುದರಿಂದ ಛಾನನ್‌ಸಿಂಗನು ತನ್ನ ಸೈಕಲನ್ನು ಬಂದೆಡೆಗೆ ತಳ್ಳಿ ಅವರನ್ನು ಬೆನ್ನಟ್ಟಿ ಹೋಗುತ್ತಿರುವಾಗ ಅವನ ಬಲದ ತೊಡೆಗೆ ಗುಂಡಿನೇಟು ಬಿತ್ತು. ಈ ಗುಂಡನ್ನು ಪಂಡಿತಜಿಯು ತನ್ನ ಮಾಸರ್‌ಪಿಸ್ತೂಲಿನಿಂದ ಹಾರಿಸಿರಬಹುದು. ಇದಾದ ಒಂದು ಗಂಟೆಯ ಮೇಲೆ ಛಾನನ್‌ಸಿಂಗನು ಮೇಯೋ ಆಸ್ಪತ್ರೆಯಲ್ಲಿ ಸತ್ತುಹೋದನು.

ಇದಾದನಂತರ ನ್ಯಾಯಾಧಿಕಾರಿಗಳು, ಕಲ್ಕತ್ತೆಯಿಂದ ಹೋಗಿ ಫಿತೂರಿಗಾರರನ್ನು ಸೇರಿಕೊಂಡಿದ್ದ ಜತೀಂದ್ರನಾಥದಾಸನು (ಈತನು ಜೈಲಿನಲ್ಲಿ ಘೋರ ಉಪವಾಸಮಾಡಿ ಸತ್ತ ವಿಷಯವು ವಾಚಕರಿಗೆ ಗೊತ್ತಿರಬಹುದು) ಫಿತೂರಿಗಾರರಿಗೆ ಬಾಂಬುಮಾಡುವುದನ್ನು ಹೇಳಿಕೊಟ್ಟ ವಿಷಯಗಳನ್ನು ನಮೂದಿಸುವರು. ಇದೇ ಭಾಗದಲ್ಲಿಯೇ ಫಿತೂರಿಗಾರರು ಕಾಕೋರೀಕೇಸಿನ ಖೈದಿಯಾದ ಜೋಗೇಶಚಂದ್ರ ಚಟರ್ಜಿಯನ್ನು ಜೈಲಿನಿಂದ ಬಿಡುಗಡೆಮಾಡಲು ಮಾಡಿದ ಹಂಚಿಕೆಯೂ ಅದು ವಿಫಲವಾದುದೂ ವರ್ಣಿಸಲ್ಪಟ್ಟಿವೆ.

ಅಸೆಂಬ್ಲಿಯಲ್ಲಿ ಬಾಂಬುಗಳು ಎಸೆಯಲ್ಪಟ್ಟುದು.

ಫೆಬ್ರವರಿ 24 ರ ಸುಮಾರಿನಲ್ಲಿ ಭಗತ್‌ಸಿಂಗನು ಲಾಹೋರಿನಿಂದ ಐದು ಬಾಂಬ್‌ಷೆಲ್ಲು (ಮದ್ದನ್ನು ತುಂಬಲು ಅನುಕೂಲವಾದ ಬಾಂಬಿನ ಬುದ್ದಿ)ಗಳನ್ನು ತಂದನು. ಈ ಷೆಲ್ಲುಗಳು ಅವನಿಗೆ ಸುಖದೇವನಿಂದ ಕೊಡಲ್ಪಟ್ಟುವು. ಪಂಡಿತಜಿಯು ಬೇಕಾದ ಹಣವನ್ನು ತೆಗೆದುಕೊಂಡು ಬಂದನು. ಶಿವವರ್ಮನೂ (ಇವನಿಗೆ ಆಜೀವದ್ವೀಪಾಂತರ ಶಿಕ್ಷೆಯುಂಟಾಗಿರುವುದು) ಎಲ್ಲಿಗೋ ಹೊರಗೆ ಗಿದ್ದು ಹಿಂದಿರುಗಿದನು. ಶಿವವರ್ಮ, ಭಗತ್‌ಸಿಂಗ್, ಪಂಡಿತಜೀ ಫಣೀಂದ್ರನಾಥಘೋಷ್ (ಮುಂದೆ ಇವನೂ ಒಬ್ಬ ಅಪ್ರೂವರಾಗಿಬಿಡುವನು) ವಿಜಯಕುಮಾರಸಿಂಹ (ಇವನಿಗೆ ಆಜೀವ ದ್ವೀಪಾಂತರ ಶಿಕ್ಷೆಯು ವಿಧಿಸಲ್ಪಡುವುದು) ಬಟುಕೇಶ್ವರದತ್ತ (ಈತನಿಗೆ ಡೆಲ್ಲೀ ಬಾಂಬ್‌ಕೇಸಿನಲ್ಲಿ ಆಜೀವ ದ್ವೀಪಾಂತರಶಿಕ್ಷೆಯಾಗಿದೆ) ಗಯಾಪ್ರಸಾದ್ (ಈತನಿಗೂ ಆಜೀವಶಿಕ್ಷೆಯಾಗಿದೆ) ಮತ್ತು ಶಿವರಾಮ ರಾಜಗುರುಗಳು ಭಗತ್‌ಸಿಂಗನು ತಂದಿದ್ದ ಬಾಂಬ್‌ಷೆಲ್ಲುಗಳಿಗೆ ಬೇಕಾದ ಮದ್ದುಗುಂಡುಗಳನ್ನು ತುಂಬಿದರು. ಇದೇ ಸಮಯದಲ್ಲಿ ಒಂದು ಕೇಂದ್ರಸಮಿತಿಯ ಸಭೆಯು ನಡೆಯಿತು. ಅಲ್ಲಿ ಸೈಮನ್‌ಸಮಿತಿಯವರಮೇಲೆ ಬಾಂಬುಗಳನ್ನು ಎಸೆಯಬೇಕೆಂದು ಮಾಡಿದ್ದ ಹಂಚಿಕೆಯು ತಳ್ಳಿಹಾಕಲ್ಪಟ್ಟಿತು. ಸೈಮನ್‌ಸಮಿತಿಯವರಮೇಲೆ ಬಾಂಬುಗಳನ್ನು ಎಸೆಯಬೇಕಾದರೆ, ಅವರು ಹೋದೆಡೆಗೆಲ್ಲಾ ಅವರನ್ನು ಅನುಸರಿಸಿಕೊಂಡುಹೋಗಿ ಸಮಯಕಾದು ಕೆಲಸಮಾಡಬೇಕಾಗುತ್ತದೆ; ಇದಕ್ಕೋಸ್ಕರ ಪ್ರಯಾಣದ ಖರ್ಚು ವಿಶೇಷವಾಗುತ್ತದೆ ಎಂಬ ಕಾರಣದಿಂದ ಫಿತೂರಿಗಾರರು ಮೇಲೆ ಹೇಳಿದ ಹಂಚಿಕೆಯನ್ನು ಬಿಟ್ಟರು. ಆದರೆ ಅದಕ್ಕೆ ಬದಲಾಗಿ ಅವರು, ಭಗತ್‌ಸಿಂಗ್ ಬಟುಕೇಶ್ವರ ದತ್ತರು ದೆಹಲಿಯ ಲೆಜಿಸ್ಲೇಟೀವ್ ಅಸೆಂಬ್ಲಿಯಲ್ಲಿ ಬಾಂಬುಗಳನ್ನು ಎಸೆಯಬೇಕೆಂದು ನಿರ್ಧರಿಸಿದರು. ಹಾಗೆ ಅಲ್ಲಿ ಬಾಂಬುಗಳನ್ನು ಎಸೆದನಂತರ ಭಗತ್‌ಸಿಂಗ್, ಬಟುಕೇಶ್ವರದತ್ತರನ್ನು ರಕ್ಷಿಸಿ ಕರೆದುಕೊಂಡುಬರುವ ಕೆಲಸವು ಪಂಡಿತಜಿ, ಜಯದೇವ, ಸದಾಶಿವರುಗಳಿಗೆ ವಹಿಸಲ್ಪಟ್ಟಿತು. ಮೇಲೆಹೇಳಿದ ನಿರ್ಧಾರದಂತೆ ಏಪ್ರೀಲ್ 8 ನೆಯ ತಾರೀಖಿನ ದಿವಸ ಭಗತ್‌ಸಿಂಗ್, ಬಟುಕೇಶ್ವರದತ್ತರು ದೆಹಲಿಯ ಅಸೆಂಬ್ಲಿ ಹಾಲಿನಲ್ಲಿ ಒಂದು ಬಾಂಬನ್ನೆಸೆದರು. ಬಾಂಬನ್ನೆಸೆದ ಮೇಲೆ ಕೆಲವು ನಿಮಿಷಗಳೊಳಗಾಗಿಯೇ ಪೋಲೀಸರು ಇವರಿಬ್ಬರನ್ನು ಅರೆಸ್ಟುಮಾಡಿದರು.

ಇದಾದಮೇಲೆ ನ್ಯಾಯಾಧಿಕಾರಿಗಳು ಪ್ರತಿಯೊಬ್ಬ ಆರೋಪಿಯಮೇಲೆ ಸಾಬೀತಾದ ತಪ್ಪುಗಳನ್ನು ಸಂಗ್ರಹವಾಗಿ ತಿಳಿಸಿರುವರು. ಅಪಾದಿತರಲ್ಲಿ ಮರಣದಂಡನೆಗೆ ಗುರಿಮಾಡಲ್ಪಟ್ಟಿರುವ ಭಗತ್‌ಸಿಂಗ್, ರಾಜಗುರು, ಸುಖದೇವರ ಕೇಸುಗಳನ್ನು ಮಾತ್ರ ಇಲ್ಲಿ ಬೇರೆಬೇರೆಯಾಗಿ ತಿಳಿಸುತ್ತೇವೆ.

ಭಗತ್‌ಸಿಂಗ್.

ಭಗತ್‌ಸಿಂಗನು, 1928 ನೇ ಸೆಪ್ಟಂಬರಿನಲ್ಲಿ ದೆಹಲಿಯಲ್ಲಿ ರೂಪಗೊಳಿಸಲ್ಪಟ್ಟ ಕ್ರಾಂತಿಕಾರಕಪಕ್ಷದ (ರೆವಲ್ಯೂಷನರಿ ಪಾರ್ಟಿ) ಒಬ್ಬ ಮುಖಂಡನು. ಈ ಪಕ್ಷವನ್ನು ನಿರ್ಮಿಸುವುದಕ್ಕಿಂತ ಮುಂಚೆಯೂ ಈತನು ಅರಾಜಕಕೃತ್ಯಗಳಲ್ಲಿ ತೊಡಗಿದ್ದನು. ಇವನು ಕ್ರಾಂತಿಕಾರಕಸಂಘದ ಪಂಜಾಬಿನ ಶಾಖೆಯಲ್ಲಿ ಮೆಂಬರಾಗಿದ್ದನು. ಈ ಪಂಜಾಬುಶಾಖೆಯಲ್ಲಿ ಸುಖದೇವನು ವ್ಯವಸ್ಥಾಕಾರ್ಯಗಳನ್ನು ನೋಡಿಕೊಳ್ಳುವ ಮೆಂಬರಾಗಿದ್ದನು. ದೆಹಲಿಯ ಮೀಟಿಂಗು ನಡೆದಮೇಲೆ, ಭಗತ್‌ಸಿಂಗನು ಎಲ್ಲಾ ಪ್ರಾಂತ್ಯದ ಮೆಂಬರುಗಳೊಡನೆ ಕಾರ್ಯಸಂಬಂಧವನ್ನು ಉಂಟುಮಾಡಲೋಸುಗ ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡುತ್ತಿದ್ದನು. ಕೇಂದ್ರಸಮಿತಿಯ ಸದಸ್ಯನಾಗಿದ್ದುದರಿಂದ ಮುಖ್ಯಮುಖ್ಯ ಕಾರ್ಯಕಲಾಪಗಳಲ್ಲಿ ಇವನೂ ಭಾಗ ತೆಗೆದುಕೊಳ್ಳುತ್ತಿದ್ದನು. ಇವನು ಸಾಮಾನ್ಯವಾಗಿ ತನ್ನ ಪಕ್ಷದವರು ಮಾಡಬೇಕೆಂದು ನಿರ್ಧರಿಸುವ ಕಾರ್ಯಗಳಿಗೆಲ್ಲಾ ಕೈಹಚ್ಚುತ್ತಲೇ ಇದ್ದನು. ಪಂಜಾಬು ನ್ಯಾಷನಲ್ ಬ್ಯಾಂಕಿಗೆ ದಾಳಿ ಇಡಬೇಕೆಂದು ಮಾಡಿದ್ದ ಹಂಚಿಕೆಯಲ್ಲಿಯೂ ಇವನು ಸೇರಿದ್ದನು. ಸಾಂಡರ್ಸ್‌ರ ಕೊಲೆಯ ಪ್ರಕರಣದಲ್ಲಿ ಇವನು ಮುಖ್ಯ ಪಾತ್ರವಹಿಸಿದ್ದನು. ತನ್ನ ಪಕ್ಷದ ಮೆಂಬರುಗಳಿಗೆ ಜತೀಂದ್ರನಾಥದಾಸನು ಬಾಂಬುಗಳ ತಯಾರಿಯನ್ನು ಹೇಳಿಕೊಡುವಂತೆ ಒಪ್ಪಂದ ಮಾಡಿಕೊಂಡವನು ಇವನೇ! ಆಗ್ರಾದಲ್ಲಿ ಬಾಂಬುಗಳನ್ನು ತಯಾರಿಸುವುದರಲ್ಲಿಯೂ, ಜೋಗೇಶಚಂದ್ರ ಚಟರ್ಜಿಯನ್ನು ಬಿಡಿಸಿಕೊಳ್ಳುವ ಪ್ರಯತ್ನದಲ್ಲಿಯೂ, ಇವನು ಭಾಗ ತೆಗೆದುಕೊಂಡಿದ್ದನು. ಕೊನೆಗೆ ಇವನು 1929 ನೇ ಏಪ್ರಿಲಿನಲ್ಲಿ ದೆಹಲಿಯ ಅಸೆಂಬ್ಲಿಹಾಲಿನಲ್ಲಿ ಬಾಂಬನ್ನು ಎಸೆಯುವ ಕಾರ್ಯಕ್ಕೆ ನೇಮಿಸಲ್ಪಟ್ಟನು.

ಚಕ್ರವರ್ತಿಯವರ ಮೇಲೆ ಯುದ್ಧಮಾಡಿದ, ಮತ್ತು ಸಾಂಡರ್ಸ್‌ರನ್ನು ಕೊಲೆಮಾಡಿದ ತಪ್ಪುಗಳಿಗೆ ಈತನು ಗುರಿಯಾಗಿರುವನೆಂದೂ, ಎಕ್ಸ್‌ಪ್ಲೋಜೀವ್‌ಸಬ್‌ಸ್ಟೆನ್ಸಸ್ ಆಕ್ಟಿನಪ್ರಕಾರ ಇವನು ತಪ್ಪಿತಸ್ಥನೆಂದೂ ಸಿದ್ಧಾಂತಮಾಡಿ ಈತನಿಗೆ ಮರಣದಂಡನೆ ವಿಧಿಸಿರುವರು.

ಶಿವರಾಮರಾಜಗುರು.

ಶಿವರಾಮರಾಜಗುರು ಉರುಫ್ "ಎಂ" ಎಂಬವನು ಪಂಜಾಬು ನ್ಯಾಷನಲ್ ಬ್ಯಾಂಕಿನ ದಾಳಿಯಲ್ಲಿ ಭಾಗ ತೆಗೆದುಕೊಳ್ಳುವ ಸಲುವಾಗಿ 1928 ನೆಯ ನವಂಬರಿನಲ್ಲಿ ಲಾಹೋರಿಗೆ ಕರೆತರಲ್ಪಟ್ಟನು. ಈ ದಾಳಿಯ ಕಾರ್ಯದಲ್ಲಿ ಇವನು ಸೇರಿಯೂ ಇದ್ದನು. ಸಾಂಡರ್ಸ್‌ರ ಮೇಲೆ ಗುಂಡು ಹಾರಿಸಿದ ಇಬ್ಬರ ಪೈಕಿ ಇವನೊಬ್ಬನು. ಕ್ರಾಂತಿಕಾರಕಪಕ್ಷದ ಮೆಂಬರುಗಳು ಝಾಂಸಿಯಲ್ಲಿ ಉಪಯೋಗಿಸುತ್ತಿದ್ದ ಮನೆಗೆ ಇವನೂ ಹೋಗುತ್ತಿದ್ದನೆಂದು ಗೊತ್ತಾಗಿದೆ. 1929 ನೇ ಫೆಬ್ರವರಿಯಲ್ಲಿ ಇವನು ಆಗ್ರಾದಲ್ಲಿಯೂ ಇದ್ದನು. ಜೋಗೇಶಚಂದ್ರ ಚಟರ್ಜಿಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದವರ ಗುಂಪಿನಲ್ಲಿಯೂ ಇವನಿದ್ದನು. ಅಸೆಂಬ್ಲಿಯಲ್ಲಿ ಬಾಂಬು ಎಸೆಯಲ್ಪಡುವುದಕ್ಕಿಂತ ಮುಂಚೆ ಇವನು ಆಗ್ರಾದಿಂದ ದೇಹಲಿಗೆ ಹೋಗಿದ್ದನು. 1928 ನೇ ಸೆಪ್ಟಂಬರಿನಲ್ಲಿ ಇವನನ್ನು ಪೂನಾದಲ್ಲಿ ಅರೆಸ್ಟುಮಾಡಿದಾಗ ಇವನ ಬಳಿ ಒಂದು ರಿವಾಲ್ವರೂ, ತೋಟಾಗಳೂ ಇದ್ದುವು.

ಸಾಂಡರ್ಸ್‌ರನ್ನು ಕೊಂದ ಮತ್ತು ಚಕ್ರವರ್ತಿಯವರ ಮೇಲೆ ಯುದ್ಧ ಮಾಡಿದ ತಪ್ಪಿತವನ್ನು ಮಾಡಿರುವನೆಂದು ಇವನಿಗೆ ಮರಣದಂಡನೆ ವಿಧಿಸಿರುವರು.

ಸುಖದೇವ.

ಸುಖದೇವನು, 1927 ಮತ್ತು 1928 ನೇ ಇಸವಿಗಳಲ್ಲಿ ಕ್ರಾಂತಿಕಾರಕ ಪಕ್ಷಕ್ಕೆ ಮೆಂಬರುಗಳನ್ನು ಸೇರಿಸುತ್ತಿದ್ದನೆಂದೂ, 1928 ನೇ ಸೆಪ್ಟಂಬರಿನ ದೆಹಲಿ ಮೀಟಿಂಗಿನಲ್ಲಿ ಹಾಜರಿದ್ದನೆಂದೂ ಆಗ ಕೇಂದ್ರ ಸಮಿತಿಗೆ ಒಬ್ಬ ಮೆಂಬರಾಗಿ ನೇಮಿಸಲ್ಪಟ್ಟನೆಂದೂ, ಪಂಜಾಬಿನ ಕ್ರಾಂತಿಕಾರಕ ಸಂಘದ ಮುಖಂಡನಾಗಿದ್ದನೆಂದೂ, ಸಾಂಡರ್ಸ್‌ರ ಕೊಲೆಯಲ್ಲಿ ಭಾಗ ತೆಗೆದುಕೊಳ್ಳದಿದ್ದರೂ ಸ್ಕಾಟರನ್ನು ಕೊಲೆಮಾಡುವ ಪ್ರಯತ್ನದ ಹಂಚಿಕೆಯಲ್ಲಿ ಸೇರಿದ್ದನೆಂದೂ ಸಿದ್ಧಾಂತವಾಗುತ್ತದೆ. ಭಗವತ್‌ಸಿಂಗನು ಅಸೆಂಬ್ಲಿಯಲ್ಲಿ ಬಾಂಬನ್ನೆಸೆಯುವುದಕ್ಕೂ, ಆಗ್ರಾದಲ್ಲಿ ಬಾಂಬುತಯಾರಿಯ ಕೆಲಸ ಕಾರ್ಯಗಳಿಗೂ ಇವನು ಸಹಾಯಕನಾಗಿದ್ದನು. ಲಾಹೋರಿನ ಕಾಶ್ಮೀರ ಭವನದಲ್ಲಿದ್ದ ಬಾಂಬು ಫ್ಯಾಕ್ಟರಿಯ ಮುಖ್ಯ ನಿರ್ಮಾಪಕನೂ ಇವನೇ! ಇದಲ್ಲದೆ ಇವನು ತನ್ನ ಸಂಘದಪರವಾಗಿ ಅಮೃತಸರ, ಫಿರೋಜಪುರ, ಮತ್ತು ಮೀಯವ್ಯ ಪ್ರಾಂತ್ಯಗಳಿಗೆ ಹೋಗಿ ಕೆಲಸ ಮಾಡುತ್ತಿದ್ದುದಾಗಿ ತಿಳಿಯಬಂದಿದೆ. ಭಗವತ್‌ಸಿಂಗನು ಫಿತೂರಿಯ ಬಲಭುಜವಾಗಿದ್ದರೆ, ಸುಖದೇವನು ಫಿತೂರಿಯ ತಲೆಯೆಂದೇ ಹೇಳಬಹುದು. ಸಂಘದ ವ್ಯವಸ್ಥೆಗಳನ್ನು ಮಾಡುವುದರಲ್ಲಿಯೂ, ಹೊಸ ಹೊಸ ಮೆಂಬರುಗಳನ್ನು ಸೇರಿಸುವುದರಲ್ಲಿಯೂ ಇವನು ಸಮರ್ಥನಾಗಿದ್ದನು; ಆದರೆ ಹಿಂಸಾಕಾರ್ಯಗಳಿಗೆ ಕೈಯಿಕ್ಕುವುದರಲ್ಲಿ ಮಾತ್ರ ಇವನು ಹಿಂದಾಗಿಯೇ ಇರುತ್ತಿದ್ದನು. ಹಾಗಿದ್ದರೂ, ಈಗ ನಡೆದಿರುವ ಅಸಂಗತ ಕಾರ್ಯಗಳ ವಿಷಯವಾಗಿ, ತನ್ನ ಬುದ್ಧಿಯನ್ನೂ, ವ್ಯವಸ್ಥಾಪಕಶಕ್ತಿಯನ್ನೂ ಉಪಯೋಗಿಸಿರುವುದರಿಂದ ಇವನ ತಪ್ಪು ಬಹುಮಟ್ಟಿಗೆ ದೊಡ್ಡದೇ!

ದೊರೆಯಮೇಲೆ ಯುದ್ಧಮಾಡಿದ, ಕೊಲೆಮಾಡಲು ದುಬೋಧಿಸಿದ ತಪ್ಪಿತಗಳಿಗೆ ಗುರಿಯಾಗಿ, ಎಕ್ಸ್‌ಪ್ಲೋಸೀವ್‌ಸಬ್‌ಸ್ಟೆಂಸಸ್ ಆಕ್ಟಿಗೆ ಬಲಿಬಿದ್ದಿರುವನೆಂದು ಹೇಳಿ ಈತನಿಗೂ ಮರಣದಂಡನೆಯನ್ನು ವಿಧಿಸಿರುವರು.

ಇತರ ಅಪಾದಿತರುಗಳ ಪೈಕಿ ಕಿಶೋರಿಲಾಲ, ಜಯದೇವ, ಶಿವವರ್ಮ, ಗಯಾಪ್ರಸಾದ, ಮಹಾವೀರಸಿಂಗ್, ವಿಜಯಕುಮಾರಸಿಂಹ ಕನ್ವಲನಾಥ ತಿವಾರಿಗಳಿಗೆ ಆಜೀವದ್ವೀಪಾಂತರಶಿಕ್ಷೆಯೂ, ಪ್ರೇಮದತ್ತನಿಗೆ 5 ವರ್ಷಗಳ ಕಠಿನ ಕಾರಾಗೃಹವಾಸವೂ, ಕುಂದನಲಾಲನಿಗೆ 7 ವರ್ಷಗಳ ಕಠಿನ ಕಾರಾಗೃಹವಾಸವೂ ವಿಧಿಸಲ್ಪಟ್ಟುವು. ಜತೀಂದ್ರನಾಥಸನ್ಯಾಲ್, ದೇಶರಾಜ್, ಮತ್ತು ಅಜಯಕುಮಾರಘೋಷರು ಬಿಡುಗಡೆಹೊಂದಿರುತ್ತಾರೆ.

ಹಂಸರಾಜವೋಹ್ರ, ಜಯಗೋಪಾಲ್, ಫಣೀಂದ್ರನಾಥಘೋಷ್, ಮನಮೋಹನಬ್ಯಾನರ್ಜಿ, ಮತ್ತು ಲಲಿತಕುಮಾರ ಮುಕರ್ಜಿ ಎಂಬವರೇ ಕೋರ್ಟಿನ ಆಜ್ಞೆಯಂತೆ ಸೆರೆಮನೆಯಿಂದ ಬಿಡುಗಡೆಹೊಂದಿದ ಅಪ್ರೂವರುಗಳು, ರಾಮಶರಣದಾಸ, ಮತ್ತು ಬ್ರಹ್ಮದತ್ತ ಎಂಬ ಇಬ್ಬರು ಅಪ್ರೂವರುಗಳು ತಾವು ಮೊದಲು ಒಪ್ಪಿಕೊಂಡಿದ್ದುದನ್ನು ಆಮೇಲೆ ಇಲ್ಲವೆಂದು ಹೇಳಿದರೆಂಬ ಅಪಾದನೆಗೆ ಗುರಿಯಾಗಿ ಸುಳ್ಳುಪ್ರಮಾಣಮಾಡಿದರೆಂಬ ತಪ್ಪಿಗೋಸ್ಕರ ಪ್ರಾಸಿಕ್ಯೂಟ್‌ಮಾಡಲ್ಪಡುವಂತೆ ನ್ಯಾಯಾಧಿಕಾರಿಗಳು ಆಜ್ಞಾಪಿಸಿದ್ದಾರೆ. ಹಾಗೆ ಇವರಮೇಲೆ ಹೊಸದಾಗಿ ವ್ಯವಹಾರ ಮಾಡಬೇಕಾದರೆ ಹೈಕೋರ್ಟಿನವರ ಅನುಮತಿಯು ದೊರೆಯಬೇಕಾಗಿದೆ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕಾಲಕ್ಕೆ ನಾಥಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[14]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಕೆರಗು ಕಡೆಗಾಗುವ ಕಾಲಕ್ಕೆ ಕಿಪ್ಪಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿಮಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೃತ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ' ೧ ಕ್ಕೆ ೩ ಆಣೆ. ೨೫ರ ಮೇಲಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೦ ರ ಮೇಲಟ್ಟು ತರಿಸಿಕೊಳ್ಳುವವರಿಗೆ ೪ಆಣಿ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸದಾಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ವಗದೆ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[29] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಭಕ್ಷಣಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಪತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಕಾಲಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಳಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದು ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮರ್ದ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [15]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೈಸುವದಾದರೆ ಕಂಪೌಂಡ್ ಸಿರಫ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ಸುಮ್ಮಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಹಿಡಾಮಣೆ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗು[illegible], ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚರು ಲವಣಗಳೂ, ಹೋಮಿಯೊಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[13] **ಮಲೇರಿಯಾನ ಕಂಪೆನಿ,** ನಂಬ್ರ 21 ಹಂಪನಕಟ್ಟೆ, **ಮಂಗಳೂರು, ದ. ಕ.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

[52] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ನೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[16] ಪೋ. ಬಾ. ೫೧೦, ಮದರಾಸು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಬಸವಧ್ವಾಂತ ದಿವಾಕರ	೮ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪಠತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. — ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ನವಂಬರ್ ೧೯೩೦ [ಸಂಚಿಕೆ ೨೮

ಚಕ್ರಗೋಷ್ಠಿಯ ಸಮಾಚಾರಗಳು.

ಇಂಗ್ಲೆಂಡಿನ ಸ್ವಾತಂತ್ರ್ಯವಾತಾವರಣವು ಭರತಖಂಡದ ಪ್ರತಿನಿಧಿಗಳಿಗೆ ಸದ್ಯಃ ಸ್ವಲ್ಪ ಹುರುಪನ್ನುಂಟುಮಾಡಿದೆ. ಈಗ ಇವರು ತಮ್ಮ ಕರ್ತವ್ಯವನ್ನರಿತು ಇಂಗ್ಲೆಂಡಿನ ಮತ್ತು ಭರತಖಂಡದ ಅವಹೇಳನಕ್ಕೆ ಗುರಿಯಾಗದಂತೆ ಕೆಲಸ ಮಾಡಲು ಜಾಗೃತರಾಗಿದ್ದಾರೆ. ಕಾಂಗ್ರೆಸ್ಸಿನವರನ್ನು ಇವರು ಉಪೇಕ್ಷಿಸಿದ್ದರೂ, ಕಾಂಗ್ರೆಸ್ಸಿನವರ ಬಲವನ್ನೂ, ಮುಂದಿನ ರಾಜ್ಯ ವ್ಯವಸ್ಥೆಯಲ್ಲಿ ಕಾಂಗ್ರೆಸ್ಸಿನವರು ಭಾಗ ತೆಗೆದುಕೊಳ್ಳದಿದ್ದರೆ ಉಂಟಾಗಬಹುದಾದ ತೊಂದರೆಯನ್ನೂ ಪ್ರತಿನಿಧಿಗಳು ಮರೆತಿಲ್ಲ. ಆದುದರಿಂದ ಇವರು ಈಗ ತಮ್ಮ ಜವಾಬ್ದಾರಿಯನ್ನು ಅರಿತು ಏಕವಾಕ್ಯತೆಯಿಂದ ಭಾರತದ ಅಭಿಪ್ರಾಯವನ್ನು ಸಭೆಯ ಮುಂದಿಡುವವರಾಗಿದ್ದಾರೆ. ಭಾರತ ಪ್ರತಿನಿಧಿಗಳಲ್ಲಿ ಈಗ ಮೂರು ಪ್ರಮುಖ ಪಕ್ಷಗಳಿವೆ. ಹಿಂದುಗಳ ಪಕ್ಷ, ಮುಸಲ್ಮಾನರ ಪಕ್ಷ, ಮತ್ತು ದೇಶೀಯ ರಾಜರ ಪಕ್ಷ. ಈ ಮೂರು ಪಕ್ಷಗಳು ತಮ್ಮ ತಮ್ಮಲ್ಲಿರುವ ವಿವಾದಗಳನ್ನು ಪರಿಹರಿಸಿಕೊಂಡ ಹೊರತು ಏಕಮತ್ಯದಿಂದ ಹೋರಾಡಲು ಆಸ್ಪದವಿಲ್ಲದಾಗಿದೆ. ಈ ವಿಷಯವು ಪ್ರತಿನಿಧಿಗಳಿಗೆ ಮನದಟ್ಟಾಗಿ ಇತ್ತೀಚೆಗೆ ಒಗ್ಗಟ್ಟಿನ ಚಿಹ್ನಗಳು ಕಾಣಬರಹತ್ತಿವೆ. ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಟ್ಟೇತೀರಬೇಕೆಂಬ ನಿರ್ಧಾರವನ್ನು ಪುಷ್ಟೀಕರಿಸಲು ಮುಸಲ್ಮಾನರು ಒಪ್ಪಿದರೆ, ಹಿಂದುಗಳು ಮುಸಲ್ಮಾನರಿಗೆ ಹಕ್ಕುಬಾಧ್ಯತೆಗಳನ್ನು ಹೆಚ್ಚಾಗಿ ಕೊಡಿಸಲು ಸಿದ್ಧರಾಗಿರುವರಂತೆ! ಇದನ್ನು ಬಹುಮಟ್ಟಿಗೆ ಮುಸಲ್ಮಾನರು ಒಪ್ಪಬಹುದು. ಆದರೆ ಅವರು ಒಂದು ಅಡ್ಡಿಯನ್ನೊಡ್ಡುತ್ತಿದ್ದಾರೆ. ಭಾರತದ ರಾಜ್ಯಘಟನೆಯಾಗುವದಕ್ಕಿಂತ ಮುಂಚೆಯೇ ಹಿಂದು ಮುಸಲ್ಮಾನರ ವಿವಾದವು ಶೀಘ್ರವಾಗಿ ಬಗೆಹರಿಯಬೇಕೆಂಬುದೇ ಕೆಲವು ಜನ ಮುಸಲ್ಮಾನ ಪ್ರತಿನಿಧಿಗಳ ಹಟ. ಹಿಂದೂ ಮುಸಲ್ಮಾನರ ಸಮಸ್ಯೆಯು ಭಾರತೀಯರಿಗೇ ಸೇರಿದ್ದು. ಇದನ್ನು ಭಾರತೀಯರೇ ತಮ್ಮ ತಮ್ಮಲ್ಲಿ ಪ್ರೇಮದಿಂದ ಬಗೆಹರಿಸಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯವೊಂದು ಪ್ರಾಪ್ತವಾದರೆ ಭಾರತೀಯರು ತಮ್ಮ ಜವಾಬ್ದಾರಿಯನ್ನು ಅರಿತು ರಾಷ್ಟ್ರದ ರಕ್ಷಣೆಯ ಸಲುವಾಗಿ ಪರಸ್ಪರ ದ್ವೇಷವನ್ನು ಬಿಟ್ಟುಬಿಡುವರು. ಆದುದರಿಂದ ಮೊದಲು ಭಾರತ ಪ್ರತಿನಿಧಿಗಳು ದೇಶದ ಸ್ವಾತಂತ್ರ್ಯದ ಸಲುವಾಗಿ ಈ ಸಮ್ಮೇಲನದಲ್ಲಿ ಒಮ್ಮತವಾಗಿ ಹೋರಾಡದಿದ್ದರೆ ನಮಗೆ ಪರಾಜಯವು ಖಂಡಿತವೆಂಬುದು ಹಿಂದೂ ಪ್ರತಿನಿಧಿಗಳ ಮತವಾಗಿದೆ. ಈ ಉಭಯ ಪಕ್ಷದವರೂ ತಮ್ಮತಮ್ಮೊಳಗೆ ತಕ್ಕ ಒಡಂಬಡಿಕೆಯನ್ನು ಮಾಡಿಕೊಳ್ಳುವವರಾಗಿದ್ದಾರೆಂದು ತಿಳಿಯುತ್ತದೆ.

ದೇಶೀಯರಾಜರ ಪ್ರತಿನಿಧಿಗಳು ಬ್ರಿಟಿಷ್ ಇಂಡಿಯಾದ ಸ್ವಾತಂತ್ರ್ಯದ ವಿಷಯದಲ್ಲಿ ತಮ್ಮ ಯಾವ ನಿಷೇಧವನ್ನೂ ಪ್ರಕಟಿಸಿಲ್ಲ. ಇವರು ತಮ್ಮ ಸಂಸ್ಥಾನಗಳ ಮೇಲೆ ತಮಗೆ ಇರುವ ಹಕ್ಕು ಮತ್ತು ತಾವು ಬ್ರಿಟಿಷರೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ಇವುಗಳಿಗೆ ಯಾವ ಬಗೆಯ ಚ್ಯುತಿಯೂ ಉಂಟಾಗದಿದ್ದರೆ ನಾವು ಭರತಖಂಡದ ಸ್ವಾತಂತ್ರ್ಯಕ್ಕೆ ಅಡ್ಡಿಬರುವುದಿಲ್ಲವೆಂದು ಹೇಳುತ್ತಿದ್ದಾರೆ.

ಬ್ರಿಟಿಷ್ ಅಧಿಕಾರಿಗಳು ಸಮ್ಮೇಲನದ ಸಿದ್ಧತೆಯನ್ನು ಬಹಳ ಆಡಂಬರದಿಂದ ನಡೆಯಿಸುತ್ತಿರುವರು. ಪ್ರತಿನಿಧಿಗಳಿಗೆ ಅಲ್ಲಲ್ಲಿ ಸ್ವಾಗತಕೂಟಗಳೇರ್ಪಡಿಸಲ್ಪಟ್ಟಿವೆ. ಪ್ರತಿನಿಧಿಗಳ ಕಣ್ಣಿಗೆ ಹಬ್ಬವನ್ನು ಮಾಡಲು ಅನೇಕ ನೋಟಗಳೂ ಅದಕ್ಕೆ ತಕ್ಕ ಸೌಕರ್ಯಗಳೂ ಏರ್ಪಡಿಸಲ್ಪಟ್ಟಿವೆ. ಕಳೆದ ನಾಲ್ಕನೆಯ ತಾರೀಖು ಭಾನುವಾರ ಚಕ್ರವರ್ತಿ ದಂಪತಿಗಳು ಭರತಖಂಡದ ರಾಜರಿಗೆ ಒಂದು ಭಾರಿ ಔತಣವನ್ನು ಮಾಡಿಸಿದರು. ಈ ಔತಣಕೂಟದಲ್ಲಿ ಭಾರತರಾಜರ ಜರತಾರಿ ನಿಲುವಂಗಿಗಳೂ, ರತ್ನಖಚಿತ ದಿವ್ಯಾಭರಣಗಳೂ ರಾರಾಜಿಸುತ್ತಿದ್ದುವಂತೆ! ಮೇರೀರಾಣಿಯವರು ಭರತಖಂಡದ ರಾಜಾಧಿರಾಜರಿಂದ ಅರ್ಪಿಸಲ್ಪಟ್ಟಿದ್ದ ರತ್ನಾಭರಣಗಳನ್ನು ಧರಿಸಿಕೊಂಡು ಬಂದು ಅತಿಥಿಗಳಿಗೆ ಸನ್ಮಾನಮಾಡಿದರೆಂದೂ, ಅವರು ಧರಿಸಿದ್ದ ರತ್ನಗಳಲ್ಲಿ ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಒಂದು ವಜ್ರವು ಇದ್ದಿತೆಂದೂ ತಿಳಿದುಬರುತ್ತದೆ. ಈ ವಜ್ರವನ್ನು ಇವರು ವಿಶೇಷ ಸಂಭ್ರಮಗಳಲ್ಲಿ ಮಾತ್ರ ಧರಿಸುವರಂತೆ! ಚಕ್ರವರ್ತಿಗಳು ಶೀಘ್ರದಲ್ಲಿಯೇ ಬ್ರಿಟಿಷ್ ಇಂಡಿಯಾದ ಪ್ರತಿನಿಧಿಗಳಿಗೂ ಒಂದು ಔತಣಕೂಟವನ್ನೇರ್ಪಡಿಸಿ ಸತ್ಕರಿಸುವವರಿದ್ದಾರೆ.

ಚಕ್ರಗೋಷ್ಠಿಯ ಆರಂಭಮಹೋತ್ಸವವನ್ನು ಹೌಸ್ ಆಫ್ ಲಾರ್ಡ್ಸ್ ಸಭೆಯ ರಾಯಲ್ ಗ್ಯಾಲರಿಯಲ್ಲಿ ಚಕ್ರವರ್ತಿಯವರೇ ನಡೆಯಿಸುವವರಾಗಿದ್ದಾರೆ. ಇತ್ತಲಾಗಿ ಚಕ್ರಗೋಷ್ಠಿಯ ವಿಷಯವಾಗಿ ಬ್ರಿಟಿಷ್ ಜನಸಾಮಾನ್ಯದ ಅಭಿಪ್ರಾಯವು ಹೇಗಿದೆ ಎಂಬುದನ್ನು ಅರಿಯಬೇಕಾಗಿದೆ. ಕನ್ಸರ್‌ವೆಟಿವ್ (ಇದ್ದುದು ಇದ್ದ ಹಾಗೆಯೇ ಇರಬೇಕೆನ್ನುವ) ಪಕ್ಷದವರು ಭರತಖಂಡದ ಬೇಡಿಕೆಗಳಿಗೆ ವಿರುದ್ಧವಾಗಿಯೇ ಇರುವರು. ಭರತಖಂಡಕ್ಕೆ ಇನ್ನೂ ಬಹಳ ವರ್ಷಗಳವರೆಗೂ ಸ್ವರಾಜ್ಯವನ್ನು ಕೊಡಕೂಡದೆಂದು ಇವರು ಚಳವಳಿಯನ್ನು ನಡೆಯಿಸುತ್ತಲೇ ಇರುವರು. ಇವರಲ್ಲಿ ಕೆಲವರು ಭಾರತೀಯ ಚಳವಳಿಗಾರರನ್ನು ಬಲಿಹಾಕಿ ದರ್ಪದಿಂದ ರಾಜ್ಯವಾಳಬೇಕೆಂದೂ, ಇದನ್ನು ತಪ್ಪಿಸಲು ಯಾರಿಗೂ ಹಕ್ಕಿಲ್ಲವೆಂದು ಅನ್ನುತ್ತಿರುವರು. ಲೇಬರ್ (ಕೂಲಿಕಾರ) ಪಕ್ಷದವರು ಸದ್ಯಃ ಅಧಿಕಾರಮಾಡುತ್ತಿರುವದರಿಂದ ಈಗ ಯಾವ ಮಾತನ್ನೂ ಆಡದೆ ಯಾವ ಪ್ರಸ್ತಾಪವನ್ನು ಮಾಡುವುದಕ್ಕೂ ಚಕ್ರಗೋಷ್ಠಿಯ ಸಮ್ಮೇಲನವೇ ಸರಿಯಾದ ಸ್ಥಾನವೆಂದು ಇವರು ಹೇಳುತ್ತಿರುವರು. ಉಳಿದವರು ಲಿಬರಲ್ (ಉದಾರ) ಪಕ್ಷದವರು. ಇವರ ಸ್ಥಾನವು ಈಗ ಬಹಳ ಮುಖ್ಯವಾದುದು. ಇವರು ಒಲಿದಕಡೆ ಜಯವಾಗುವ ಸಂಭವವಿದೆ. ಲಿಬರಲ್‌ಪಕ್ಷದವರ ಸಹಾಯವಿಲ್ಲದಿದ್ದರೆ ಲೇಬರ್ ಪಕ್ಷದವರು ಅಧಿಕಾರವನ್ನು ತಮ್ಮ ಉಳಿಸಿಕೊಳ್ಳುವ ಹಾಗಿಲ್ಲ. ಈ ಲಿಬರಲ್ ಪಕ್ಷದವರಲ್ಲಿಯೂ ಹಲವರು ಭರತಖಂಡದ ಆಕಾಂಕ್ಷೆಗಳಿಗೆ ವಿರೋಧಿಗಳಾಗಿದ್ದಾರೆ. ಈಗ ಅಧಿಕಾರಸ್ಥರಾಗಿರುವ ಲೇಬರ್ ಪಂಗಡದವರು ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಲಿಬರಲ್ ಪಂಗಡದವರನ್ನು ಒಲಿಸಿಕೊಳ್ಳಲೇಬೇಕು. ಆದರೆ ಭಾರತಕ್ಕೆ ಹಲವು ವಿಧವಾಗಿ ವಿರುದ್ಧವಾಗಿಯೇ ಲೇಬರ್ ಪಂಗಡದವರು ವರ್ತಿಸಬೇಕಾಗುವದು. ಭರತಖಂಡಕ್ಕೆ ಹಿಂದೆ ವೈಸರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರು ಲಿಬರಲ್ ಪಕ್ಷದ ಪ್ರತಿನಿಧಿಗಳಾಗಿ ಚಕ್ರಗೋಷ್ಠಿಗೆ ಬರುವವರಿದ್ದಾರೆ. ಆದುದರಿಂದ ಬ್ರಿಟಿಷ್ ಸರ್ಕಾರದ ಉದ್ದೇಶಗಳನ್ನು ನಡೆಸುವುದು ಅಥವಾ ಬಿಡುವುದು ಲಾರ್ಡ್ ರೀಡಿಂಗ್‌ರ ಕೈಯಲ್ಲಿದೆ.

ಪಾರ್ಲಿಮೆಂಟ್ ಮೆಂಬರರ ಪೈಕಿ ಭರತಖಂಡದ ವಿಷಯವಾಗಿ ನಿಜವಾದ ಅಭಿಮಾನವುಳ್ಳ ಒಂದು ಪಕ್ಷವಿದೆ. ಪಾರ್ಲಿಮೆಂಟಿನಲ್ಲಿ ಗಾಂಧೀಟೋಪಿಯನ್ನು ಧರಿಸಿ ಕುಳಿತಿದ್ದ ಮಿ|| ಫೆನ್ನರ್‌ಬ್ರಾಕ್ವೆಯವರೇ ಈ ಪಕ್ಷದ ಅಧಿನಾಯಕರು. ಆದರೆ ಈ ಪಕ್ಷವು ತೀರ ಚಿಕ್ಕದಾಗಿದೆ. ಇವರ ಹೇಳಿಕೆಗಳನ್ನು ಬ್ರಿಟಿಷ್ ಪಾರ್ಲಿಮೆಂಟು ಅಂಗೀಕರಿಸುವಂತಿಲ್ಲ.

ಬ್ರಿಟಿಷ್ ಜನಸಾಮಾನ್ಯವಾದರೋ ಭರತಖಂಡದ ಸ್ಥಿತಿಗತಿಗಳ ವಿಷಯವಾಗಿ ಸರಿಯಾದ ತಿಳಿವಳಿಕೆಯನ್ನು ಹೊಂದಿಲ್ಲ. ಇದಕ್ಕೆ ಭರತಖಂಡದಲ್ಲಿ ನಡೆಯುತ್ತಿರುವ ಚಳವಳಿಯ ನಿಜವಾದ ಸಮಾಚಾರಗಳು ಅವರಿಗೆ ತಲುಪದಿರುವುದೇ ಕಾರಣ. ಭಾರತವಿರೋಧಿಗಳ ಹೇಳಿಕೆಗಳನ್ನು ಮಾತ್ರ ಅವರು ಹೆಚ್ಚಾಗಿ ಓದುತ್ತಿರುವರು. ಮಹಾತ್ಮಾ ಗಾಂಧಿಯವರು ಕಾಯಿದೆ ಭಂಗದ ಚಳವಳಿಯನ್ನು ಹೂಡಿದ ಮೇಲೆ ಭರತಖಂಡದ ವಿಷಯವಾಗಿ ಬ್ರಿಟಿಷ್ ಜನರಿಗಿದ್ದ ಸಹಾನುಭೂತಿಯು ಈಗ ಬಹು ಕಡಿಮೆಯಾಗಿದೆಯೆಂದು ಕೆಲವರು ಲಂಡನ್ನಿನಿಂದ ಬರೆಯುತ್ತಿದ್ದಾರೆ.

ಭಾರತ ರಾಜ್ಯ ವ್ಯವಸ್ಥೆಯ ವಿಷಯವಾಗಿ ಚಕ್ರಗೋಷ್ಠಿಯಲ್ಲಿ ತಮ್ಮ ಹೇಳಿಕೆಯನ್ನು ತಿಳುಹಿಸಲು ತಕ್ಕ ಯೋಜನೆಯನ್ನು ನಡೆಯಿಸುವ ಸಲುವಾಗಿ ದೇಶೀಯ ರಾಜರು 7 ಜನ ಮಂತ್ರಿಗಳುಳ್ಳ ಒಂದು ಸಮಿತಿಯನ್ನು ಏರ್ಪಡಿಸಿರುವರು. ಈ ಸಮಿತಿಯವರು ಬ್ರಿಟಿಷ್ ಇಂಡಿಯಾ ಪ್ರತಿನಿಧಿಗಳನ್ನು ಕಂಡು ಮಾತನಾಡುವವರಿದ್ದಾರೆ. ಇಷ್ಟರಲ್ಲಿಯೇ ಇವರಿಗೂ ಬ್ರಿಟಿಷ್ ಇಂಡಿಯಾ ಪ್ರತಿನಿಧಿಗಳಿಗೂ ಒಂದು ಒಪ್ಪಂದವಾಗಬಹುದು.

ಬೊಂಬಾಯಿಯ ಗವರ್ನರವರು ರಾವ್‌ಬಹದ್ದೂರ್ ಎಸ್. ಟಿ. ಕಂಬಳಿ, ಮೌಲ್ವಿರಫಿಯುದ್ದಿನ್ ಅಹಮದ್ ಮತ್ತು ಸರ್ ರುಸ್ತುಂವಕೀಲ್ ಇವರುಗಳನ್ನು ತಮ್ಮ ಆಧಿಪತ್ಯದ ಮಂತ್ರಿಗಳನ್ನಾಗಿ ನೇಮಿಸಿರುವರು. ಹಿಂದಿನ ಮಂತ್ರಿಯಾಗಿದ್ದ ಜಾಧವರಂತೆ ರಾ|| ಬ|| ಕಂಬಳಿಯವರಿಗೂ ಎಕ್ಸೈಜ್, ವ್ಯವಸಾಯ ಇಲಾಖೆಗಳ ಅಧಿಕಾರವು ವಹಿಸಲ್ಪಟ್ಟಿದೆ. ಮುಖ್ಯ ಮಂತ್ರಿಪದವಿಯು ರಾ|| ಬ|| ಕಂಬಳಿಯವರಿಗೆ ದೊರೆಯಬಹುದೆಂದು ತೋರುತ್ತದೆ.

ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯದ ಪಂಚಮವರ್ಷಾಧಿವೇಶನ ಸಮಾರಂಭ.

ಕವಿಸಂಮೇಲನ ಹಾಗೂ ಆಯುರ್ವೇದ ಸಂಮೇಲನ.

ಶ್ರೀ ಜಗದ್ಗುರು ಕೇದಾರಸಿಂಹಾಸನ
ಉಖಾಮಠ ದರಬಾರ
ಶ್ರೀ ಜಗದ್ಗುರುಗಳ ಸನ್ನಿಧಿಯಲ್ಲಿ

ಶ್ರೀ ಕೇದಾರನಾಥ ಸನಾತನ ಧರ್ಮ ಮಹಾವಿದ್ಯಾಲಯದ ಪಂಚಮವಾರ್ಷಿಕವೇಶನವು ವಿಕ್ರಮಶಕ್ರಕಾರ ತಾ|| ೧-೭-೩೦ ನೆಯ ಶುಭದಿವಸದಲ್ಲಿ ಪಂ|| ಶ್ರೀ ಘನಶ್ಯಾಮಡಿಮರಿ ವಕೀಲಸಾಹೇಬ ಮಹೋದಯರ ಸಭಾಪತಿತ್ವದಲ್ಲಿ ಅಭೂತಪೂರ್ವವಾದ ಸಮಾರೋಹದೊಡನೆ ಸಮಾಪ್ತವಾಯಿತು. ಪ್ರತಿಷ್ಠಿತಗಣ್ಯಮಾನ್ಯಪುರುಷರು ಆಗಮನವಾಡಿದ್ದರು. ಪ್ರಾತಃಕಾಲ ಪೂಜಾಪಾಠ ಹೋಮಹವನಾದಿಗಳು ನಡೆದವು. ಮಧ್ಯಾಹ್ನದಲ್ಲಿ ಸಭಾಪತಿಗಳಿಗೆ ಅನೇಕ ವಾದ್ಯವೈಭವಪೂರ್ವಕವಾಗಿ ಸಂಸ್ಕೃತಕಾಲೇಜ ವಿದ್ಯಾರ್ಥಿಗಳೂ ಅಧ್ಯಾಪಕರೂ ಸ್ವಾಗತವಂ ಮಾಡಿದರು. ಬಳಿಕ ಸಭಾಪತಿಗಳು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ತರುವಾಯ ಸಭಾಕಾರ್ಯವು ಪ್ರಾರಂಭವಾಗಿ ಪ್ರಥಮದಲ್ಲಿ ವಿದ್ಯಾಲಯೋದ್ದೇಶವರ್ಣನವಾಗಿ ರಿಪೋರ್ಟು ಓದಲ್ಪಟ್ಟಿತು. ವಿದ್ಯಾರ್ಥಿಗಳು ಹಿಂದೀ ಹಾಗೂ ಸಂಸ್ಕೃತ ಭಾಷೆಗಳಲ್ಲಿ ವ್ಯಾಖ್ಯಾನವಮಾಡಿದರು. ಬಳಿಕ ಪಾರಿತೋಷಕ ಪ್ರದಾನ ಮಾಡಲ್ಪಟ್ಟಿತು. ಸಭಾಪತಿಗಳು ವ್ಯಾಖ್ಯಾನದಲ್ಲಿ ಉತ್ತೀರ್ಣರಾದ ೧ ರುದ್ರದತ್ತ ವಿದ್ಯಾರ್ಥಿ, ೨ ಭಾಸ್ಕರಾನಂದ ವಿದ್ಯಾರ್ಥಿ, ೩ ಶ್ಯಾಮಸುಂದರ ವಿದ್ಯಾರ್ಥಿ ಇವರಿಗೆ ಪಾರಿತೋಷಕ ಪ್ರದಾನಮಾಡಿದರು. ತದನಂತರ ಮೂರ್ತಿಪೂಜನ ವಿಷಯಕ ಹಿಂದೀಸಮಸ್ಯಾಪೂರ್ತಿಗಳು ಓದಲ್ಪಟ್ಟವು. ತರುವಾಯ ಮಹಾವಿದ್ಯಾಲಯೋತ್ತೀರ್ಣವಿದ್ಯಾರ್ಥಿಗಳಿಗೆ ಪಾರಿತೋಷಕವು ಶ್ರೀ ಜಗದ್ಗುರು ರಾವಲಸಾಹೇಬರ ಪತಿಯಿಂದ ಪ್ರದಾನಮಾಡಲ್ಪಟ್ಟಿತು. ಕಾಶೀಸ್ಥರಾಜಕೀಯ ಸಂಸ್ಕೃತ ಕಾಲೇಜ ವ್ಯಾಕರಣ ಮಧ್ಯಮತ್ತೀಯಖಂಡದಲ್ಲಿ ೧ ಭಾಸ್ಕರಾನಂದಶರ್ಮ, ದ್ವಿತೀಯಖಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು, ಮಧ್ಯ-ಖಂಡದಲ್ಲಿ ೩-ಮೂವರು ಸರ್ವಸಾಧಾರಣ ಪ್ರಥಮದಲ್ಲಿ ೪ ಜನ ವಿದ್ಯಾರ್ಥಿಗಳು ಪಾಸಾಗಿರುವರು. ಬಳಿಕ ವಿದ್ಯೋನ್ನತಿಯ ಬಗ್ಗೆ ಸಭಾಪತಿಗಳ ಭಾಷಣವಾಯಿತು. ತರುವಾಯ ಸಭಾಪತಿಗಳಿಗೆ ಧನ್ಯವಾದಾರ್ಪಣವಾಗಿ ಸಭಾಕಾರ್ಯವು ಸಮಾಪ್ತವಾಯಿತು.

ದ್ವಿತೀಯ ದಿವಸ ತಾ|| ೨-೭-೩೦.

ಪ್ರಾತಃಕಾಲ ೮ ಘಂಟೆಗೆ ಪಂ|| ಜನಾನಂದಜಿ ಆಯುರ್ವೇದ ವಿಶಾರದ ಇವರ ಅಧ್ಯಕ್ಷತೆಯಲ್ಲಿ "ಆಯುರ್ವೇದ ಸಮ್ಮೇಲನ" ಸಮಾರಂಭವು ಬಹಳ ಸಮುತ್ಸಾಹಪೂರ್ವಕ ಜರಗಿತು. ಪ್ರಥಮದಲ್ಲಿ ಅಧ್ಯಕ್ಷರನ್ನು ಸ್ವಾಗತಪದ್ಯಗಳಿಂದ ಉತ್ಸವಪೂರ್ವಕ ವಿಜಯಮಂಗ್ಯಕಿತೊಂಡು ಬಂದರು. ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದರು. ತರುವಾಯ ಆಯುರ್ವೇದ ವೈದ್ಯಗಳಾದ ಪಂಡಿತರ ಹಾಗೂ ವಿದ್ಯಾರ್ಥಿಗಳ ಸಾರವತ್ತಾದ ಭಾಷಣಗಳಾದವು. ಬಳಿಕ ಹಿಮಾಲಯ ವನಸ್ಪತಿಗಳ ಪ್ರದರ್ಶನಕಾರ್ಯವು ಬಹಳ ಚಿಕಿತ್ಸಾಪೂರ್ವಕವಾಗಿ ನಡೆಯಿತು. ಈ ಸಂದರ್ಭದಲ್ಲಿ ಪಾಶ್ಚಾತ್ಯಶಿಕ್ಷಣ ಪಂಡಿತರಾದ ಉಖಾಮಠದ ಸರ್ಜನ್ ಸಾಹೇಬರೇ ಮುಂತಾದವರು ಹಾಗೂ ವೈದ್ಯ ಪಂಡಿತರು ಬಹಳವಾಗಿ ಸಮ್ಮಿಲಿತರಾಗಿದ್ದರು. ಮೊದಲು ಹಿಮಾಲಯದಿಂದ ನೂತನವಾಗಿ ತಂದಿರುವ ಒಂದೊಂದು ಔಷಧಿಯನ್ನು ಸ್ವೀಕರಿಸಿ ಗ್ರಾಮೀಣವೈದ್ಯರು ಗ್ರಾಮೀಣನಾಮ ಹಾಗೂ ಅವುಗಳ ಗುಣಾದಿವರ್ಣನವಮಾಡಿ ವಿನಿಯೋಗವನ್ನು ಸಹ ಹೇಳಿದರು. ಬಳಿಕ ವಿಶೇಷಪಂಡಿತರು ಶಾಸ್ತ್ರೀಯ ಲಕ್ಷಣಪೂರ್ವಕ ತಮ್ಮ ಅಭಿಪ್ರಾಯವನ್ನು ತೋರಿಸಿದರು. ಅನಂತರ "ರಾಸನಾ, ಮೂಷಾಕರ್ಣೀ, ಕ್ಷೀರಕಾಕೋಲೀ, ಜೀವಕ, ಋಷಭಕ, ಮೂಸಲಿ, ನಾಗೆಯಾತೋತಾ, ಋದ್ಧಿ, ವೃದ್ಧಿ, ಶಂಖಪುಷ್ಪೀ, ವಿದಾರಾ, ಕಲಹಾರಿ, ರಜನಜೋತಿ, ವಿದಾರಿಕಂದ, ಹಾತಾಜೋಡಿ, ಮೇಧಾ, ಮಹಾಮೇಧಾ, ಪಾಷಾಣಭೇದ, ಕಾಲಪರ್ಣೀ, ಇತ್ಯಾದಿ ಅನೇಕಾನೇಕ ಜಡೀಬೂಟಿಗಳ ಪರಿಚಯ ಪ್ರದರ್ಶನವಾದ ಬಳಿಕ ಅಧ್ಯಕ್ಷರು ಭಾಷಣವನ್ನು ಮಾಡಿದರು. ಶಾಸ್ತ್ರೀಯವಾದ ಇವರ ಭಾಷಣವು ಸಭಿಕರನ್ನು ಚಕಿತಗೊಳಿಸುವದಲ್ಲದೆ ಪ್ರಾಚೀನಕಾಲದ ಚರಕಾದಿ ಮುನಿಗಳ ಸ್ಮರಣವನ್ನು ಮಾಡಿಸುತ್ತಿದ್ದಿತು. ಅಂತ್ಯದಲ್ಲಿ ಸರ್ವರ ವಿಷಯಗಳನ್ನು ಪರ್ಯಾಲೋಚಿಸಿ ಸಭಾಪತಿಗಳು ಪುನಃ ಶಾಸ್ತ್ರಸಿದ್ಧಾಂತರೀತ್ಯಾ ಪ್ರತ್ಯೇಕ ಜಡೀಬೂಟಿಗಳನ್ನು ಶಾಸ್ತ್ರೀಯ ಮತ್ತು ಗ್ರಾಮ್ಯ ಶಬ್ದಗಳಿಂದ ಹೇಳಿದರು. ಸಭಾಪತಿಭಾಷಣವು ಸಮಾಪ್ತವಾದ ಬಳಿಕ ಆಯುರ್ವೇದವಿಷಯಕ ಭಾಷಣವಮಾಡಿದ ವಿದ್ಯಾರ್ಥಿಗಳಿಗೆ ಪಾರಿತೋಷಕ ಪ್ರದಾನವಾಯಿತು. ಪಂ|| ಡಿಮರಿ ವಕೀಲ ಸಾಹೇಬರು ಡಾಕ್ಟರ್ ಸರ್ಜನ್ ಸಾಹೇಬರು ಪಾರಿತೋಷಕಪ್ರದಾನವಮಾಡಿದರು. ಈ ರೀತಿಯಾಗಿ ಈ ಸಂಮೇಲನವು ಸಾಂಗವಾಗಿ ಜರಗಿದ ಬಳಿಕ ಪ್ರಸ್ತಾವಗಳು ಪಾಸಾದವು.

ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯ.

(೧) ಈ ಸಮ್ಮೇಲನದ ನಾಮವು ಗಢವಾಲ ಆಯುರ್ವೇದಿಕ ಸಮ್ಮೇಲನ ವೆಂಬದಾಗಿಂಬೇಕು. ಪ್ರತಿ ವರ್ಷವೂ ಇದರ ಅಧಿವೇಶನವಾಗಬೇಕು.

(೨) ಈ ಸಮ್ಮೇಲನ ಕಾರ್ಯಕ್ರಮವನ್ನು ಅಖಿಲ ಭಾರತೀಯ ವೈದ್ಯಸಮ್ಮೇಲನಕ್ಕೆ ಕಳುಹಿಸತಕ್ಕದ್ದು.

(೩) ಈ ಅಧಿವೇಶನವು ಯಾವಾಗಲೂ ಶ್ರಾವಣ ಪೂರ್ಣಿಮಾನುಸರ ಆಗಬೇಕು. ಅಗ್ಗೆ ಹಿಮಾಲಯದ ದಿವ್ಯ ಜಡೀಬೂಟಿಗಳು ನೂತನವಾಗಿ ಜಯಾರಾಗುತ್ತವೆ.

(೪) ಈ ವರ್ಷ ಸಭಾಪತಿ ಪಂ|| ಜನಾನಂದ ವೈದ್ಯಮಹೋದಯರು ವಿದ್ಯಾಲಯದ ವಿದ್ಯಾರ್ಥಿಗಳೊಡನೆ ಹಿಮಾಲಯದಲ್ಲಿ ಜಡೀಬೂಟಿಗಳ ಸಲುವಾಗಿ ಹೋಗಬೇಕು.

ಸಂಸ್ಕೃತಸಾಹಿತ್ಯಸಮ್ಮೇಲ (ಕವಿಸಮ್ಮೇಲನ).

ತಾ|| ೨-೭-೩೦ ಮಧ್ಯಾಹ್ನೋತ್ತರ ೨ ಘಂಟೆಗೆ ಈ ಸಮ್ಮೇಲವು ಪ್ರಾರಂಭವಾಯಿತು. ಈ ಸಮ್ಮೇಲನಕ್ಕೆ ಪಂಡಿತ ಶ್ರೀ ಪುರಗಿರಿ ಬೃಹನ್ಮಠಾಧ್ಯಕ್ಷ ಚಿದ್ಘನಶಿವಾಚಾರ್ಯ ಮಹೋದಯರು ಶ್ರೀಕಾಶೀಸ್ಥ ಜಗದ್ಗುರು ವಿಶ್ವಾರಾಧ್ಯ ಗುರುಕುಲವಾಸಿಗಳು ಇವರು ಸಭಾಪತಿತ್ವವನ್ನು ಸ್ವೀಕರಿಸಿದರು. ಸಭೆಗೆ ಶ್ರೀಮಾನ್ ಪಂ|| ಘನಶ್ಯಾಮ ಡಿಮರಿ ಹೈಕೋರ್ಟು ವಕೀಲ, ಶ್ರೀಮಾನ್ ಪಂ|| ಅನಸೂಯಾಪ್ರಸಾದ ಹೈಕೋರ್ಟು ವಕೀಲ, ಶ್ರೀಮಾನ್ ಪಂ|| ವಂಶೀಧರಶಾಸ್ತ್ರಿಗಳು, ಶ್ರೀಮಾನ್ ಪಂ|| ನಾರಾಯಣದತ್ತಶಾಸ್ತ್ರೀಜೀ, ಕವಿರತ್ನ ಪಂ|| ಭೋಲಾದತ್ತ ಶಾಸ್ತ್ರೀಜೀ, ಪಂ|| ಗೌರೀಶಂಕರಶಾಸ್ತ್ರೀಜೀ, ಪಂ|| ಗುಣಾನಂದ ಮಠಾಧಿಪತಿ ತುಂಗನಾಥ, ಶ್ರೀಜಗದ್ಗುರು ನೀಲಕಂಠಲಿಂಗಮಿಡಲ್‌ಸ್ಕೂಲ್ ಹೆಡ್‌ಮಾಸ್ತರ್ ಡಾಕ್ಟರ್ ಸಿವಿಲಸರ್ಜನ್ ಸಾಹೇಬರು ಪೋಲೀಸ್ ಇನ್‌ಸ್ಪೆಕ್ಟರ್ ಸಾಹೇಬರು ಇನ್ನು ಮುಂತಾದ ಪ್ರಸಿದ್ಧ ಪುರುಷರು ಆಗಮನವಮಾಡಿದ್ದರು.

ಪ್ರಥಮದಲ್ಲಿ ಗತವರ್ಷ ಸಂಸ್ಕೃತ ಹಿಂದೀ ಸಮಸ್ಯಾಪೂರ್ತಿಯಲ್ಲಿ ಉತ್ತೀರ್ಣರಾದ ಪಂ|| ವಂಶೀಧರಶಾಸ್ತ್ರೀಜೀ ಪಂ|| ಸುರೇಶಾನಂದ ಹೆಡ್‌ಮಾಸ್ತರ್ ಇವರಿಗೆ (ಕ್ರಮಶಃ) "ಸಾಹಿತ್ಯಕೇಸರಿ" "ಕಲ್ಪನಾಕೋವಿದ" ಎಂಬ ಪದವೀಭೂಷಿತಸ್ವರ್ಣಪದಕಗಳು ಸಭಾಪತಿ ಶಿವಾಚಾರ್ಯರ ಹಸ್ತದಿಂದ ಪ್ರಶಂಸಾಪತ್ರಿಕಾಸಹಿತವಾಗಿ ಪ್ರದಾನವಮಾಡಲ್ಪಟ್ಟವು. ತರುವಾಯ "ಧನ್ಯಂಭಾರತಭೂತಲಂ" "ಕೇದಾರಪೀಠಂಜಯೇತ್" ಈ ಸಮಸ್ಯಾಪೂರ್ತಿಗಳನ್ನು ಅನೇಕ ಸಂಸ್ಕೃತ ವಿದ್ಯಾರ್ಥಿಗಳು ವಿದ್ವಾಂಸರು ತಮ್ಮ ತಮ್ಮ ಅಭಿಪ್ರಾಯ ಮೇರೆಗೆ ಮಾಡಿದರು. ಪಂ|| ವಂಶೀಧರಶಾಸ್ತ್ರಿಗಳು ಪಂ|| ವಾಸವಾನಂದ ಮೈಠಾಣೀ ಪಂ|| ಭಾಸ್ಕರಾನಂದ ವಿದ್ಯಾರ್ಥಿ ಪಂ|| ಮಹಿಮಾನಂದಶಾಸ್ತ್ರಿಗಳು ಪಂ|| ಭೋಲಾದತ್ತಶಾಸ್ತ್ರಿಗಳು ಪಂ|| ಗೌರೀಶಂಕರಶಾಸ್ತ್ರಿಗಳು ಪಂ|| ನಾರಾಯಣಶಾಸ್ತ್ರಿಗಳು ಇನ್ನೂ ಮುಂತಾದ ಸಮಸ್ಯಾಪೂರ್ತಿಕಾರರು ಸಂಸ್ಕೃತ ವಿದ್ವಾಂಸರು ಉಪಸ್ಥಿತರಾಗಿದ್ದಲ್ಲದೆ ಹರದ್ವಾರ, ಜಯಪುರ, ಮುಂತಾದ ಮುಖ್ಯ ಮುಖ್ಯಸ್ಥಳೀಯ ವಿದ್ವಾಂಸರು ಸಹ ಸಮಸ್ಯಾಪೂರ್ತಿಗಳನ್ನು ಟಪಾಲದ್ವಾರಾ ಕಳುಹಿಸಿದ್ದರು. ಅವುಗಳೆಲ್ಲವೂ ಓದಲ್ಪಟ್ಟವು. ತರುವಾಯ ಸಭಾಪತಿ ಪಂ|| ಶ್ರೀ ಚಿದ್ಘನ ಶಿವಾಚಾರ್ಯರು "ಮೂರ್ತಿಪೂಜನ" ಹಾಗೂ ಸಂಸ್ಕೃತಭಾಷಾ ವಿಷಯಕ ಭಾಷಣವನ್ನು ಸಂಸ್ಕೃತದಲ್ಲಿಯೇ ಅಸ್ಖಲಿತವಾಗಿ ಮೂರು ಘಂಟೆಯವರೆಗೂ ಮಾಡಿದರು. ಭಾಷಣವು ವೇದ ಆಗಮ ಪುರಾಣ ಇತಿಹಾಸಾದಿ ಪ್ರಮಾಣಗಳಿಂದೊಡಗೂಡಿದ್ದರಿಂದ ಸರ್ವರೂ ಸಂತುಷ್ಟಚಿತ್ತರಾಗಿದ್ದರು. ತರುವಾಯ ಪಂ|| ಘನಶ್ಯಾಮಡಿಮರಿ ಪ್ಲೀಡರ್ ವಕೀಲ ಸಾಹೇಬರು ಹಿಂದೀಭಾಷೆಯಲ್ಲಿ ಅಧ್ಯಕ್ಷರ ಭಾಷಣದಗೌರವವನ್ನು ವರ್ಣಿಸಿದ್ದಲ್ಲದೆ ಸಭಾಪತಿಗಳಿಗೆ ಗಢವಾಲ ಡಿಸ್ಟ್ರಿಕ್ಟ್ ಪತಿಯಿಂದ "ವ್ಯಾಖ್ಯಾನವಾಚಸ್ಪತಿ" ಎಂಬ ಪ್ರಶಸ್ತಿಯುಕೊಡಲ್ಪಟ್ಟಿದೆ ಎಂದು ಅಧ್ಯಕ್ಷರನ್ನು ಗೌರವಿಸಿದರು. ಸಭ್ಯರೆಲ್ಲರೂ ಮುಕ್ತಕಂಠದಿಂದ ಸಭಾಪತಿಗಳನ್ನು ಸ್ತುತಿಸಿದರು. ಎರಡು ವರ್ಷದಿಂದಲೂ ಗಢವಾಲ ಪ್ರದೇಶದಲ್ಲಿ ಸಂಸ್ಕೃತ ವಿದ್ಯಾಪ್ರಚಾರಕಾರ್ಯವನ್ನು ಕೈಕೊಂಡಿದ್ದುದು ಚಿದ್ಘನಶಿವಾಚಾರ್ಯರು ಸ್ವತಃ ಸಿದ್ಧ ಪಂಡಿತರಾದ್ದರಿಂದಲ್ಲವೇ ? ಎಂದು ವರ್ಣಿಸಿದರು. ಸಮಸ್ಯಾಪೂರ್ತಿಯಲ್ಲಿ ಪಂ|| ಬಾಲಕೃಷ್ಣಶಾಸ್ತ್ರಿಗಳು ಉತ್ತೀರ್ಣರಾದ್ದರಿಂದ "ಕವಿಕೋವಿದ" ಎಂಬ ಪ್ರಶಸ್ತಿಯು ಕೊಡಲ್ಪಟ್ಟಿತು. ತರುವಾಯ ಅಧ್ಯಕ್ಷರು ಉಪಸಂಹಾರ ಭಾಷಣವನ್ನು ವೃತ್ತಪಂಚಕದಿಂದಲೇ ಮಾಡಿದರು. ಬಳಿಕ ಶ್ರೀ ಕೇದಾರನಾಥಸ್ವಾಮಿಯ ಜಯಘೋಷದೊಡನೆ ಸಭಾವಿಸರ್ಜನವಾಯಿತು. ಸರ್ವರೂ ಶ್ರೀ ಕೇದಾರ ಪೀಠಾಧೀಶ್ವರ ಶ್ರೀ ೧೦೮ ಜಗದ್ಗುರು ಮಹಾಸ್ವಾಮಿಗಳ ವಿದ್ಯಾಪ್ರಚಾರಕಾರ್ಯವನ್ನು ಹೊಗಳುತ್ತ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಧ್ಯಾನಸಿಂಹಪ್ರಧಾನ ಸಭಾಪತಿ
ಶ್ರೀ ಕೇದಾರನಾಥ ಸನಾತನಧರ್ಮ ಮಹಾ ವಿದ್ಯಾಲಯ.
ತಾ|| ೮-೭-೩೦. ಉಖಾಮಠ ಡಿ|| ಗಢವಾಲ.



ಶ್ರೀ ಜಗದ್ಗುರು ಕೇದಾರಸಿಂಹಾಸನಮಠದ ಪ್ರಧಾನಕಾರ್ಯಾಲಯ (ದರ್ಬಾರ್ ಹಾಲ್)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಓಂ ನಮಃ ಶ್ರೀ ಜಗದ್ಗುರುಪಂಚಾಚಾರ್ಯೇಭ್ಯಃ.

ಶ್ರೀಗುರುಮಹತ್ವ.

ಈಶನಿರ್ಮಿತವಾದೀ ಚರಾಚರಾತ್ಮಕವಾದ ಜಗತ್ತಿನಲ್ಲಿರುವ ಪ್ರತಿಯೊಂದು ಪ್ರಾಣಿಯು ಸುಖವ (ಮುಕ್ತಿಯ) ನ್ನಪೇಕ್ಷಿಸುತ್ತದಷ್ಟೇ? ಪ್ರತಿಯೊಂದು ಚರಪ್ರಾಣಿಯೇಕೆ ? ತರು-ಗುಲ್ಮ-ಲತಾದಿಗಳಲ್ಲಿಯೂ ಸಹ ಸುಖದುಃಖಗಳ ಅನುಭವವು ಕಂಡುಬರುತ್ತದೆ. ಪೋಷಕದ್ರವ್ಯಗಳೆನಿಪ ಜಲಾದಿಗಳ ಅಭಾವವಾದ ಸಮಯಕ್ಕೆ ಗಿಡಬಳ್ಳಿಗಳು ಬಾಡಿದಂತಾಗಿ ದೀನಮುದ್ರೆಯಿಂದ ತಮಗಾದ ದುಃಖವನ್ನು ತೋರಪಡಿಸುತ್ತವೆ. ಜಲಾದಿಗಳ ಸಮೃದ್ಧಿಯಿರುವಾಗ ವ...ಸವರಿ... ಗಪ್ಪಲ್ಲಾವಸ್ಥೆಯಲ್ಲಿದ್ದು ತಮಗಾದ ಆನಂದವನ್ನು ನಡೆಯಿಸುತ್ತವೆ. ಹೀಗೆ ಗೂಢಚೈತನ್ಯವಿಶಿಷ್ಟಗ...ಯೂ ಸುಖಾಪೇಕ್ಷೆಯುಂಟೆಂದಮೇಲೆ ವ್ಯಕ್ತಚೈತನ್ಯ...ಗಳಾದಪಿಪೀಲಿಕಾದಿ ಪ್ರಾಣಿಗಳಲ್ಲಿ ಸುಖಾಪೇಕ್ಷೆಯುಂಟೆಂದು ಬೇರೆ ಬರೆಯಲು ಅವಶ್ಯಕತೆ ಉಳಿಯಲಿಲ್ಲ. ರಾಗಜ್ಞಾನಿಗಳಾದ ಪ್ರಾಣಿಗಳಲ್ಲಿರುವ ಸುಖಾಪೇಕ್ಷೆಯು ಕೇವಲ ಆಹಾರವಿಹಾರಾದಿಗಳಿಗೆ ಸಂಬಂಧಿಸಿದ್ದಲ್ಲದೆ ಪಾರಮಾರ್ಥಿಕ ಸುಖಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಏಕೆಂದರೆ, ದೇವರು ಆ ಪ್ರಾಣಿಗಳಲ್ಲಿ ತಮ್ಮ ಶರೀರಕ್ಕೆ ಮಾತ್ರ ಹಿತವಾಗಬೇಕೆಂಬ ಕೇವಲ ಸ್ವಾರ್ಥಬುದ್ಧಿಯನ್ನೇ ಇಟ್ಟಿರುವನಲ್ಲದೆ ಪವಿತ್ರವಾದ-ಧಾರ್ಮಿಕವಾದ-ಐಹಿಕಾಮುಷ್ಮಿಕ ಸುಖಪ್ರದಾಯಕವಾದ ಜ್ಞಾನವಿವೇಕವನ್ನು ಇಟ್ಟಿಲ್ಲ. ಆದ್ದರಿಂದ ಅವುಗಳಿಗೆ ಪಶುಗಳೆಂದು ವ್ಯವಹಾರ ಬಂದಿರುವುದು. ಅವುಗಳ ಜ್ಞಾನಹೀನವೃತ್ತಿಯಾದರೂ ಪಾಶವೀಯಧರ್ಮವೆನಿಸಿಕೊಳ್ಳುವದು. "ನಹಿಜ್ಞಾನೇನಸದೃಶಂ ಪವಿತ್ರಮಿಹವಿದ್ಯತೆ" ಎಂಬ ಗೀತಾವಾಕ್ಯದಂತೆ ಜ್ಞಾನಕ್ಕಿಂತಲೂ ಪವಿತ್ರವೂ ಅಧಿಕವೂ ಆದ ವಸ್ತುವು ಈ ಜಗತ್ತಿನಲ್ಲಿ ಇನ್ನೊಂದಿಲ್ಲ. ಜ್ಞಾನೋದಯವಾದನಂತರದಲ್ಲಿ ಅಜ್ಞಾನವು ತನ್ನಷ್ಟಕ್ಕೆ ತಾನೇ ನಷ್ಟವಾಗುವದು. ಸೂರ್ಯೋದಯವಾದ ಮೇಲೆ ಕತ್ತಲೆಗೆ ಸ್ಥಾನವೆಲ್ಲಿ ? ಕತ್ತಲೆಯಲ್ಲಿ ತಿರುಗುವ ಮನುಷ್ಯನು ಕಲ್ಲು-ಮುಳ್ಳುಗಳಿಗೆ ಹಾಯ್ದು ಅನೇಕ ಯಾತನೆಗಳನ್ನೈದುವಂತೆ ಅಜ್ಞಾನಿಯಾದ ಮನುಷ್ಯನು ಮಾಡಬಾರದ ಅನಂತ ದುಷ್ಕೃತ್ಯಗಳನ್ನು ಮಾಡಿ ಅಧೋಗತಿಗಿಳಿಯುವನು. ಸೂರ್ಯಪ್ರಕಾಶದಲ್ಲಿ ಸಂಚರಿಸುವವನು ಮಾತ್ರ ಪದಾರ್ಥಜಾತವನ್ನು ಯಥಾವತ್ತಾಗಿ ತಿಳಿದು ಯಾವ ದುಃಖಕ್ಕೂ ಗುರಿಯಾಗುವದಿಲ್ಲ. ಅದರಂತೆ ಮನುಷ್ಯನ ಮನಸ್ಸೆಂಬ ಆಕಾಶದಲ್ಲಿ ಜ್ಞಾನಸೂರ್ಯನು ಸಾವಿರಾರು ಕಿರಣಗಳಿಂದ ಪ್ರಕಾಶಮಯನಾಗಿ ಪ್ರಜ್ವಲಿಸುತ್ತಿರಲು ಅಜ್ಞಾನರೂಪ ಕತ್ತಲೆಯು ಉಳಿಯುವದೆಂತು? ಹೀಗಾದಮೇಲೆ ಮನುಷ್ಯನು ಹಿಂಸಾ-ಚೌರ್ಯಾದಿಹೀನವೃತ್ತಿಗಳೆಂಬ ಕಲ್ಲು ಮುಳ್ಳುಗಳನ್ನು ತುಳಿಯಲಾರನು. ಮೋಹವೆಂಬ ಗೂಬೆಯು ಒಮ್ಮೆಯಾದರೂ ಧ್ವನಿಮಾಡಲಾರದು. ಕಾಮ-ಕ್ರೋಧಾದಿಗಳೆಂಬ ಸಿಂಹಾದಿಘಾತುಕ ಪ್ರಾಣಿಗಳು ಈತನ ಗಾಳಿಗೆ ಸಹ ಹಾಯವು. ಇದೇ ಪತಿಧರ್ಮವು. ಇದರಿಂದಲೇ ಮುಕ್ತಿಯು ದೊರೆಯುವದೆಂದು ಅನೇಕ ಬುದ್ಧಿವಂತರು ಕೊಂಡಾಡಿರುವರು. ಪಾಶವೀಯಧರ್ಮಬದ್ಧಗಳಾದ ಕೀಟಪತಂಗಾದಿಗಳಲ್ಲಿ ಸುಖಾಪೇಕ್ಷೆಯು ನೆಲೆಗೊಂಡಿದೆ ಎಂದಮೇಲೆ ಕೇವಲ ಜ್ಞಾನದ ನಿಕ್ಷೇಪಸ್ಥಾನದಂತಿರುವ, ತಿಳುವಳಿಕೆಯ ತವರುಮನೆಯಂತಿರುವ, ವಿಚಾರದ ಖಣಿಯಂತಿರುವ, ಸರ್ವಪ್ರಾಣಿರಾಜನಾದ ಮನುಷ್ಯನಿಗೆ ಸುಖಾಪೇಕ್ಷೆಯುಂಟೆಂದು ಹೇಳುವದೇಕೆ ? ಹೆಳವನು ಓಡುತ್ತಾನೆಂದಮೇಲೆ ಕೈಕಾಲುಗಳಿಂದ ಪ್ರಿಥಕಾಯನಾದವನು ಓಡುವದೇನಾಶ್ಚರ್ಯ ? ಮಂಜಿನ ನೀರಿನಿಂದ ತಟಕ್ಕಿದಮನೆಯು ಮಳೆಯನೀರಿನಿಂದ ಧಾರೆಗಟ್ಟಿ ಸೋರಲಾರದೇ ? ಅಂತಹ ಅಕ್ಷಯವಾದ ಸುಖ (ಮೋಕ್ಷ) ವು ದೊರೆಯಬೇಕಾದರೆ ಪೂರ್ವಾಪರ ವಿಚಾರಪರನಾದ ಮನುಷ್ಯನಿಗಲ್ಲದೆ ದೇವತೆಗಳಿಗೂ ಸಹ ಅಸಾಧ್ಯವು. ಅಂತೇ "ದೇವತಾಮೋಕ್ಷಮಿಚ್ಛಂತಿ" ಎಂದು ಗಾದೆಯುಂಟಾಗಿರುವದು. ಇಷ್ಟೊಂದು ಮಹತ್ವವು ಮನುಷ್ಯಜನ್ಮದಲ್ಲಿರುವದು. ಮೋಕ್ಷಾಪೇಕ್ಷಿಗಳಾದ ದೇವತೆಗಳು ಮನುಷ್ಯ ಜನ್ಮವನ್ನು ತಾಳಬೇಕೆಂದು ಹವಣಿಸುತ್ತಿರುವರು. ಸ್ವರ್ಗವಾಸಿಗಳಾದವರು, ತಾವು ನರಜನ್ಮದಲ್ಲಿರುವಾಗ ಗಳಿಸಿಕೊಂಡು ಹೋದ ಸುಕೃತಸಂಭಾರವನ್ನು ಉಪಭೋಗಿಸುವಾಗ ಮಾತ್ರ ದೇವತಾನಾಮಧಾರಿಗಳಾಗಿರುವರಲ್ಲದೆ ಅಖಂಡಾನಂದ ಸುಖರೂಪಮೋಕ್ಷವನ್ನು ಪಡೆಯಲು ಅವರಿಗೆ ಅಧಿಕಾರವಿಲ್ಲದೆ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ" ಎಂಬ ವಾಕ್ಯದಂತೆ ಪುಣ್ಯಕ್ಷಯಾನಂತರದಲ್ಲಿ ಪುನಃ ಭೂಲೋಕಕ್ಕೆ ಬರುವರು. ಪಶುಗಳಿಗೆ ಕೇವಲ ಸ್ವಪ್ನಾವಸ್ಥೆ ಇರುವದು. ದೇವತೆಗಳಿಗೆ ಕೇವಲ ಜಾಗ್ರದವಸ್ಥೆ ಇರುವದು. ಮನುಷ್ಯನಿಗೆ ಮಾತ್ರ ಜಾಗ್ರತ್-ಸ್ವಪ್ನ-ಸುಷುಪ್ತಿರೂಪ ಮೂರೂ ಅವಸ್ಥೆಗಳಿರುವವು. ಅತ ಏವ ಸಾರಾಸಾರ ವಿಚಾರಪರನಾದ ಮನುಷ್ಯಜನ್ಮವು ಶ್ರೇಷ್ಠವಾದುದಲ್ಲದೆ ಮುಕ್ತಿಯಂ ಪಡೆಯಲು ದೇವರು ಅನುಗ್ರಹಿಸಿದ ಕಡೆಯ ಜನ್ಮವಾಗಿದೆ. ಜ್ಞಾನದಿಂದ ಮುಕ್ತಿಯಾಗುವದೇನೋ ಸಹಜ, ಆದರೆ ಆ ಜ್ಞಾನವು ಕರ್ಮದಿಂದುತ್ಪನ್ನವಾಗುವದು. ಕರ್ಮರಹಿತವಾದ ಜ್ಞಾನವು ಮುಕ್ತಿಯನ್ನೀಯಲು ಸಮರ್ಥವಾಗಲಾರದು. ಯದ್ಯಪಿ ಸುಖವನ್ನು ಪಡೆಯಬೇಕೆಂಬ ಸಾಮಾ

ಪಂ|| ಜವಾಹಿರಲಾಲರ ಶಿಕ್ಷೆಯಕಾಲಕ್ಕೆ ಹೃದಯದ್ರಾವಕವಾದದೃಶ್ಯ.

ಪಂಡಿತ ಜವಾಹಿರಲಾಲ ನೆಹರೂರವರ ಶಿಕ್ಷೆಯ ವಿಷಯವಾಗಿ ಅಲಹಾಬಾದಿನ ಒಂದಾನೊಂದು ಪತ್ರಿಕೆಯು ಹೀಗೆ ಬರೆಯುತ್ತಿದೆ. ನೈನಿ ಸೆಂಟ್ರಲ್ ಜೈಲಿನಲ್ಲಿ ತೀರ್ಪು ಆಯಿತು. ಪಂಡಿತ ಮೋತೀಲಾಲರು ಪೂರ್ತಿ ಜಡ್ಜಮೆಂಟನ್ನು ಓದುವದಿಲ್ಲವೇ ಎಂದು ಮ್ಯಾಜಿಸ್ಟ್ರೇಟರನ್ನು ಕೇಳಿದರು. ಪಂಡಿತ ಜವಾಹಿರಲಾಲರು ಮ್ಯಾಜಿಸ್ಟ್ರೇಟರನ್ನು ಕುರಿತು "ನಿಮಗೆ ಶ್ರಮವೇಕೆ ?" ಎಂದರು. ಆದಾಗ್ಯೂ ಮ್ಯಾಜಿಸ್ಟ್ರೇಟರು ಪಂಡಿತ ಜವಾಹಿರಲಾಲರಿಗೆ ಜಡ್ಜಮೆಂಟನ್ನು ತೋರಿಸಬೇಕೆಂದು ಶಿರಸ್ತೇದಾರರಿಗೆ ಆಜ್ಞಾಪಿಸಿ ಹೊರಟುಹೋದರು. ಕೋರ್ಟಿನಲ್ಲಿದ್ದವರೆಲ್ಲಾ "ಜಡ್ಜಮೆಂಟನ್ನು ಓದಿರಿ" ಎಂದು ಪಂಡಿತ ಜವಾಹಿರಲಾಲರನ್ನು ಕೇಳಿಕೊಂಡರು. ಅವರು ಮುಗುಳುನಗೆಯಿಂದ ಕೂಡಿ ಜಡ್ಜಮೆಂಟನ್ನು ಓದಲು ಆರಂಭಿಸಿದರು. ಅವರ ಸಂಬಂಧಿಕರೆಲ್ಲಾ ತೀರ್ಪನ್ನು ಬಹಳ ತಾಳ್ಮೆಯಿಂದ ಸ್ವೀಕರಿಸಿದರು. ಇವರ ಪತ್ನಿಯವರಾದ ಕಮಲಾ ನೆಹರೂರವರು ಉದಾಸೀನರಾಗಿದ್ದರು. ಪಂಡಿತ ಮೋತೀಲಾಲ ನೆಹರೂರವರೂ ಅವರ ಹೆಣ್ಣುಮಕ್ಕಳೂ ವಿಚಾರಗ್ರಸ್ತರಾಗಿದ್ದರು. ಪಂಡಿತ ಮೋತಿಲಾಲರವರ ಧರ್ಮಪತ್ನಿಯವರಂತೂ ದುಃಖದಿಂದ ತುಂಬಿದ್ದರು. ಪಂಡಿತ ಜವಾಹಿರಲಾಲರ ಮಗಳಾದ ಶ್ರೀಮತಿ ಇಂದುಕುಮಾರಿಯು ಯಾವ ಭಾವನೆಯನ್ನೂ ಪ್ರಕಟಿಸಲಿಲ್ಲ. ಜವಾಹಿರಲಾಲರು ದೇಶಬಾಂಧವರಿಂದ ಬೇರೆಯಾಗುವ ದೃಶ್ಯವು ಹೃದಯದ್ರಾವಕವಾಗಿತ್ತು. ಜವಾಹಿರಲಾಲರ ತಾಯಿಯು ಅಳುತ್ತಿದ್ದಳು. ಜವಾಹಿರಲಾಲರಿಗೆ ಕಣ್ಣಲ್ಲಿ ನೀರು ಬಂದಹಾಗೆ ಕಂಡಿತು. ಕೂಡಲೇ ಜವಾಹಿರಲಾಲರು ತಾಯಿಯನ್ನು ಸ್ವಲ್ಪ ಕೋಪದಿಂದ "ಏಕೆ ಅಳುತ್ತೀರಿ" ಎಂದರು. ತಂದೆಯವರಿಗೆ "ನೀವು ಪ್ರಥಮದಲ್ಲಿಯೇ ಗುಣಮುಖಹೊಂದುತ್ತೀರಿ." ಎಂದು ಹೇಳಿ ಜೈಲಿನೊಳಗೆ ವೇಗವಾದ ನಡಿಗೆಯಿಂದ ಹೊರಟು ಹೋದರು. ಅಲಹಾಬಾದಿನಲ್ಲಿ ಆ ದಿವಸ ಭಾರೀ ಸಭೆಯು ನಡೆಯಿತು. ಪಂಡಿತ ಸುಂದರಲಾಲರು ಅಧ್ಯಕ್ಷರಾಗಿದ್ದರು. ಪಂಡಿತ ಜವಾಹಿರಲಾಲರ ಶಿಕ್ಷೆಯು ನಮ್ಮ ಧೈರ್ಯವನ್ನು ಕುಂದಿಸದೆಂದೂ, ನಾವಿನ್ನೂ ಉತ್ಸಾಹದಿಂದ ಸ್ವಾತಂತ್ರ್ಯ ಚಳವಳಿಯನ್ನು ಮುಂದುವರಿಸಬೇಕೆಂದೂ ಹೇಳಿದರು. ಆ ಸಮಯದಲ್ಲಿ ಶ್ರೀಮತಿ ಉಮಾನೆಹರೂರವರು ಬಹಳ ಉಜ್ವಲವಾದ ಭಾಷಣವನ್ನು ಮಾಡಿದರು.

ಮಿ|| ಬೆಲ್ಸ್‌ಫರ್ಡರ ಅಭಿಪ್ರಾಯ.

ಇಂಗ್ಲಂಡಿನಿಂದ ಹಿಂದೂಸ್ಥಾನಕ್ಕೆ ಆಗಮಿಸಿರುವ ...ಫರ್ಡ ಎಂಬ ಪತ್ರಿಕಾ ವಿಲೇಖಕರು ಗುಜರಾತ ದೇಶದಲ್ಲಿ ಸಂಚರಿಸಿ ಅಲ್ಲಿಯ ಸ್ಥಿತಿಯನ್ನವಲೋಕಿಸಿ ಈ ಕೆಳಗೆ ಕಂಡಂತೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು. "ಹಳ್ಳಿಗಳಲ್ಲೆಲ್ಲಾ ಎಲ್ಲೋ ಕೆಲವು ಮುದಿಯರು ಹೊರತಾಗಿ ಎಲ್ಲರೂ ಗಾಂಧೀ ಟೊಪ್ಪಿಗೆಗಳನ್ನು ಧರಿಸುತ್ತಾರೆ. ಹಿಂದೂ ಜನತೆಯೇ ಕಾಂಗ್ರೆಸ್ಸಿನ ಹಿಂದೆ ಇದೆ. ಮಹಮ್ಮದೀಯ ಜನತೆಯ ಅರ್ಧಭಾಗವು ಕಾಂಗ್ರೆಸ್ಸಿಗೆ ಸೇರಿದೆ. ಭಾರತ ಜನಾಂಗಕ್ಕೆ ಲೇಬರಾ ಸರ್ಕಾರದಮೇಲೆ ಸ್ವಲ್ಪವೂ ವಿಶ್ವಾಸವಿಲ್ಲ. ಇಂಡಿಯಾದಲ್ಲಿ ಪೋಲೀಸರು ನಡೆಯಿಸುವ ಅತ್ಯಾಚಾರಗಳೆಲ್ಲಾ ಲೇಬರ್ ಸರ್ಕಾರದ ಅಪ್ಪಣೆಯಂತೆಯೇ ಎಂದು ಭಾರತೀಯರು ನಂಬಿರುವರು. ಲೇಬರು ಹಿಂದುಸ್ಥಾನವನ್ನು ಗೌರವಿಸುವುದಾದರೆ ಯಾಕೆ ಡೊಮಿನಿಯನ್ ಸ್ಟೇಟಸ್ಸನ್ನು ಕೊಡಲಿಲ್ಲ. ಐರ್ಲೆಂಡಿಗೆ ಕೊಟ್ಟಿರುವುದನ್ನು ನಾವು ಇಂಡಿಯಕ್ಕೆ ಏಕೆ ಕೊಡಬಾರದು? ಹಳ್ಳಿಗಳಲ್ಲಿ ಪೋಲೀಸರು ರೈತರನ್ನು ಬಹಳವಾಗಿ ಹಿಂಸಿಸುತ್ತಿರುವರು. "ಸ್ವರಾಜ್ಯಬೇಕೋ, ಇಗೋ ತಕ್ಕೊಳ್ಳಿರಿ" ಎಂದು ಲಾಠಿಯಿಂದ ಹೊಡೆಯುತ್ತಿರುವರು. ಹಿಂದುಸ್ಥಾನದಲ್ಲಿಂದು ೬೦ ಸಾವಿರ ಜನರು ಜೈಲಿಗೆ ಹೋಗಿರುವರು. ಜೈಲುಗಳು ತುಂಬಿರುವುವು. ಪ್ರಜಾಪಿತನ್ಯಾಸಿಯ ಭಾರತೀಯರೆಲ್ಲಾ ಸದ್ಯಃ ಜೈಲಿನಲ್ಲಿರುವರು. ಲಂಡನ್ನಿಗೆ ಹೋಗಿರುವವರಿಗೆ ಭಾರತೀಯರ ಮನ್ನಣೆಯಿಲ್ಲ. ಬ್ರಿಟಿಷ್ ಸರ್ಕಾರವು ಒಪ್ಪಂದಕ್ಕೆ ಬರಬೇಕಾದರೆ ಜೈಲಿನಲ್ಲಿರುವ ಭಾರತೀಯರೊಂದಿಗೆ ಹೊರ್ತು ಲಂಡನ್ನಿಗೆ ಹೋಗಿರುವ ಭಾರತೀಯರೊಂದಿಗೆ ಅಲ್ಲ. ಇಂದು ಗಾಂಧಿಯೇ ಹಿಂದುಸ್ಥಾನ! ಹಿಂದುಸ್ಥಾನವೇ ಗಾಂಧಿ! ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರದವರು ರಾಜಕೀಯ ಕೈದಿಗಳನ್ನೆಲ್ಲಾ ಬಿಡಬೇಕು."

ಬೊಂಬಾಯಿ ಗವರ್ನರವರ ಉತ್ತರ.

ಕಳೆದ ಅಕ್ಟೋಬರ್ 26 ನೆಯ ತಾರೀಖು ಭಾನುವಾರ ದಿವಸ ಪೋಲೀಸರು ಸತ್ಯಾಗ್ರಹಿಗಳ ಮೇಲೆ ಮಾಡಿದ ಅತ್ಯಂತಾಪಾಯಕರವಾದ ಪ್ರಹಾರಗಳ ವಿಷಯವಾಗಿಯೂ, ಸ್ತ್ರೀಯರಿಗೆ ಪೋಲೀಸರು ಅವಮಾನ ಮಾಡಿದ ವಿಷಯವಾಗಿಯೂ ಬೊಂಬಾಯಿಯ ಪುರಜನರ ಆಗ್ರಹವನ್ನೂ ಖೇದವನ್ನೂ ತಿಳುಹಿಸುವಸಲುವಾಗಿ ಬೊಂಬಾಯಿ ಕಾರ್ಪೊರೇಷನ್ ಪ್ರೆಸಿಡೆಂಟರಾದ ಮಿ|| ಹುಸೇನ್ ಭಾಯಿಲಾಲ್ಜಿಯವರು ಬೊಂಬಾಯಿಯ ಗವರ್ನರಿಗೆ ಒಂದು ಪತ್ರವನ್ನು ಬರೆದಿದ್ದರು. ಈ ಪತ್ರಕ್ಕೆ ಗವರ್ನರವರು ಈ ಕೆಳಗೆ ಬರೆದಂತೆ ಉತ್ತರವನ್ನು ಕೊಟ್ಟಿರುವರು.

"ಪ್ರಿಯ ಹುಸೇನ್ ಭಾಯಿಲಾಲ್ಜಿಯವರೇ ! ಅಕ್ಟೋಬರ್ 26 ರಲ್ಲಿ ನಡೆದ ಸಂಗತಿಗಳ ವಿಷಯವಾಗಿ ಬೊಂಬಾಯಿಯ ಜನರು ಕ್ಷುಬ್ಧರಾಗಿರುವುದನ್ನು ಕೇಳಲು ನನಗೂ ವ್ಯಸನವಾಗುತ್ತದೆ. ನಾನು ವಿಚಾರಮಾಡಿ ನೋಡುವಲ್ಲಿ ಆದಿನ ನಡೆದ ಸಂಗತಿಗಳು ಪತ್ರಿಕೆಗಳಲ್ಲಿ ಅತಿಶಯೋಕ್ತಿಯಿಂದ ಹೇಳಲ್ಪಟ್ಟಿವೆ. ಸ್ವಯಂಸೇವಿಕೆಯರನ್ನು ಪೋಲೀಸರು ಒಯ್ದು ಊರಹೊರಗೆ ನಿರ್ಜನಪ್ರದೇಶದಲ್ಲಿ ಬಿಟ್ಟರೆಂಬ ಅಪವಾದವು ಸುಳ್ಳು. ಅವರನ್ನು ಪೋಲೀಸರು ಕಾರಾಗೃಹಕ್ಕೆ ಕಳುಹಿಸಲೆಳಸದೆ ಜನಸಂಚಾರವು ಹೆಚ್ಚಾಗಿರತಕ್ಕ ಒಂದು ದೊಡ್ಡ ರಸ್ತೆಯಲ್ಲಿ ಊರಹೊರಗೆ ಬಿಟ್ಟುಬಂದರೆಂದು ನನಗೆ ಮನವರಿಕೆಯಾಗಿದೆ. ಸ್ತ್ರೀಯರಮೇಲೆ ಪೋಲೀಸರು ಸ್ವಲ್ಪಮಟ್ಟಿಗೆ ಬಲಾತ್ಕಾರ ಪ್ರಯೋಗ ಮಾಡಿರಬಹುದು. ಸ್ತ್ರೀಯರು ಧ್ವಜಗಳನ್ನು ಬಿಟ್ಟುಕೊಡದೆ ಹಠಪ್ರದರ್ಶನ ಮಾಡಿದುದರಿಂದ ಪೋಲೀಸರು ಅವರನ್ನು ಬಲಾತ್ಕರಿಸಲೇ ಬೇಕಾಯಿತು. ಸ್ತ್ರೀಯರಮೇಲೆ ಪೋಲೀಸರು ಯಾವ ಅತ್ಯಾಚಾರವನ್ನೂ ನಡೆಯಿಸಿಲ್ಲ. ಬಾವುಟಗಳನ್ನು ಪೋಲೀಸರು ಬಲಾತ್ಕಾರದಿಂದ ಕಿತ್ತುಕೊಳ್ಳುವಾಗ ಕೆಲವು ಸ್ತ್ರೀಯರನ್ನು ಅವರೇನೋ ಕಾಡಿರಬಹುದು" ಹೀಗೆ ಮಾಡಿದುದರಿಂದ ಸ್ತ್ರೀಯರಿಗೆ ಅವಮಾನವುಂಟಾಯಿತೆಂದು ನೀವು ಭಾವಿಸುವುದಾದರೆ, ಅಂತಹ ಅವಮಾನವು ಸ್ತ್ರೀಯರಿಗೆ ಉಂಟಾಗುವಂತೆ ಮಾಡಿದ ಪ್ರಸಂಗವನ್ನು ಕಲ್ಪಿಸಿದ ಜನರು ಉತ್ತರವಾದಿಗಳಾಗಿದ್ದಾರೆ. ಕಾಂಗ್ರೆಸ್ಸಿನವರು ಎಲ್ಲ ಕಾರ್ಯಗಳಿಗೂ ಸ್ತ್ರೀಯರನ್ನು ಮುಂದೆ ತಂದು ನಿಲ್ಲಿಸುತ್ತಾರೆ. ಆದುದರಿಂದ ಸ್ತ್ರೀಯರಿಗಾಗುವ ತೊಂದರೆಗಳಿಗೆಲ್ಲಾ ಅವರೇ ಕಾರಣರು. ಇತರ ದೇಶಗಳಲ್ಲಿ ಕಾಯದೆ ಭಂಗವನ್ನು ಮಾಡುವ ಸ್ತ್ರೀಯರುಗಳ ಮೇಲೆ ಉಪಯೋಗಿಸಲ್ಪಟ್ಟ ಭಯಪ್ರದರ್ಶನವನ್ನು ನಮ್ಮ ಪೋಲೀಸರು ಮಾಡಿಲ್ಲವೆಂದು ನಾನು ಹೇಳಬಲ್ಲೆ. ಸರ್ಕಾರದವರಿಗಿರುವ ಕಷ್ಟವನ್ನೂ ನೀವು ಪರಿಗಣಿಸಬೇಕಾಗಿದೆ. ಸರ್ಕಾರದವರ ಕಾಯದೆಯ ಮರ್ಯಾದೆಯನ್ನು ಹೇಗೂ ಉಳಿಸಿಕೊಳ್ಳಬೇಕಾಗಿದೆ. ಆದುದರಿಂದ ಪುರುಷರೂ ಸ್ತ್ರೀಯರೂ ಸರಿಸಮಾನರಾಗಿ ನಿಂತು ಕಾಯದೆಭಂಗಮಾಡುವ ಪಕ್ಷದಲ್ಲಿ ನಾವೂ ಸಹ ಸ್ತ್ರೀಪುರುಷ ಭೇದವನ್ನು ಮರೆತು ಕೆಲಸ ಮಾಡಬೇಕಾಗುತ್ತದೆ.

ಸ್ವೀಕಾರ.

ಬೆಂಗಳೂರು ಸಿಟಿ ನಿವಾಸಿಗಳಾದ ಮ|| ರಾ|| ತಾಳಕುಂಟೆ ಬಸವಪ್ಪನವರ ಮಕ್ಕಳು ಗವೀಶಪ್ಪನವರು ಈ ತಿಂಗಳು 3 ನೆಯ ತಾರೀಖು ಸೋಮವಾರ ದಿವಸ ವಿಶ್ವೇಶ್ವರಪುರದಲ್ಲಿರುವ ನೂತನಗೃಹದ ಪ್ರವೇಶೋತ್ಸವ ಸಮಯದಲ್ಲಿ ಪ್ರಭಾ ಪೋಷಣಾರ್ಥ್ಯೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜಿ. ಗಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಗದಗ ತಾ|| ಲಕ್ಕುಂಡಿ ಗ್ರಾಮದ ಮಾಲಿ ಪಾಟೀಲ ವೆ.|| ರಾ|| ದೇವೇಂದ್ರಗೌಡರು ನಡೆಯಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾ ಪೋಷಣಾರ್ಥ್ಯೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಟವನ್ನಿನಲ್ಲಿರುವ ಮ|| ರಾ|| ಕಲಿಗಣಿಮರಿ ಬಸವಪ್ಪನವರು ತಮ್ಮ ಮಗುವಿನ ಲಿಂಗಧಾರಣಾ ಸಮಯದಲ್ಲಿ ಪ್ರಭಾ ಪೋಷಣಾರ್ಥ್ಯೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಸಿಂಧವಾಳ ಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯದ ಪಂಚಮವರ್ಷಾಧಿವೇಶನ ಸಮಾರಂಭ.

ಕವಿಸಂಮೇಲನ ಹಾಗೂ ಆಯುರ್ವೇದ ಸಂಮೇಲನ.

ಶ್ರೀ ಜಗದ್ಗುರು ಕೇದಾರಸಂಸ್ಥಾನ
ಉಖಾಮಠ ದರವಾರ
ಶ್ರೀ ಜಗದ್ಗುರುಗಳ ಸನ್ನಿಧಿಯಲ್ಲಿ

ಶ್ರೀ ಕೇದಾರನಾಥ ಸನಾತನ ಧರ್ಮ ಮಹಾವಿದ್ಯಾಲಯದ ಪಂಚಮವಾರ್ಷಿಕವೇಶನವು ಪಕ್ಷಿಕಪ್ರಕಾರ ತಾ|| ೧-೭-೩೦ ನೆಯ ಶುಭದಿವಸದಲ್ಲಿ ಪಂ|| ಶ್ರೀ ಘನಶ್ಯಾಮಚತುರ್ವೇದಿ ವಕೀಲಸಾಹೇಬ ಮುರೋದಯರ ಸಭಾಪತಿತ್ವದಲ್ಲಿ ಅಭೂತಪೂರ್ವವಾದ ಸಮಾರೋಹದೊಡನೆ ಸಮಾಪ್ತವಾಯಿತು. ಪ್ರತಿಷ್ಠಿತಗಣ್ಯಮಾನ್ಯಪುರುಷರು

ಶ್ರೀ ಕೇದಾರನಾಥ ಸನಾತನಧರ್ಮ ಮಹಾವಿದ್ಯಾಲಯ.

ಆಗಮನವನ್ನಾಡಿದ್ದರು. ಪ್ರಾತಃಕಾಲ ಪೂಜಾಪಾಠ ಹೋಮಹವನಾದಿಗಳು ನಡೆದವು. ಮಧ್ಯಾಹ್ನದಲ್ಲಿ ಸಭಾಪತಿಗಳಿಗೆ ಅನೇಕ ವಾದ್ಯವೈಭವಪೂರ್ವಕವಾಗಿ ಸಂಸ್ಕೃತಕಾಲೇಜ ವಿದ್ಯಾರ್ಥಿಗಳೂ ಅಧ್ಯಾಪಕರೂ ಸ್ವಾಗತವಂ ಮಾಡಿದರು. ಬಳಿಕ ಸಭಾಪತಿಗಳು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ತರುವಾಯ ಸಭಾಕಾರ್ಯವು ಪ್ರಾರಂಭವಾಗಿ ಪ್ರಥಮದಲ್ಲಿ ವಿದ್ಯಾಲಯೋದ್ದೇಶವರ್ಣನವಾಗಿ ರಿಪೋರ್ಟು ಓದಲ್ಪಟ್ಟಿತು. ವಿದ್ಯಾರ್ಥಿಗಳು ಹಿಂದೀ ಹಾಗೂ ಸಂಸ್ಕೃತ ಭಾಷೆಗಳಲ್ಲಿ ವ್ಯಾಖ್ಯಾನವನ್ನಾಡಿದರು. ಬಳಿಕ ಪಾರಿತೋಷಿಕ ಪ್ರದಾನ ಮಾಡಲ್ಪಟ್ಟಿತು. ಸಭಾಪತಿಗಳು ವ್ಯಾಖ್ಯಾನದಲ್ಲಿ ಉತ್ತೀರ್ಣರಾದ ೧ ರುದ್ರದತ್ತ ವಿದ್ಯಾರ್ಥಿ, ೨ ಭಾಸ್ಕರಾನಂದ ವಿದ್ಯಾರ್ಥಿ, ೩ ಶ್ಯಾಮಸುಂದರ ವಿದ್ಯಾರ್ಥಿ ಇವರಿಗೆ ಪಾರಿತೋಷಿಕ ಪ್ರದಾನವನ್ನಾಡಿದರು. ತದನಂತರ ಮೂರ್ತಿಪೂಜನ ವಿಷಯಕ ಹಿಂದೀಸಮಸ್ಯಾಪೂರ್ತಿಗಳು ಓದಲ್ಪಟ್ಟವು. ತರುವಾಯ ಮಹಾವಿದ್ಯಾಲಯೋತ್ತೀರ್ಣವಿದ್ಯಾರ್ಥಿಗಳಿಗೆ ಪಾರಿತೋಷಿಕವು ಶ್ರೀ ಜಗದ್ಗುರು ರಾವಲಸಾಹೇಬರ ವತಿಯಿಂದ ಪ್ರದಾನಮಾಡಲ್ಪಟ್ಟಿತು. ಕಾಶೀಸ್ಥಾರಾಜಕೀಯ ಸಂಸ್ಕೃತ ಕಾಲೇಜ ವ್ಯಾಕರಣ ಮಧ್ಯಮತೃತೀಯಖಂಡದಲ್ಲಿ ೧ ಭಾಸ್ಕರಾನಂದವರ್ಮ, ದ್ವಿತೀಯಖಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು, ಮಧ್ಯಖಂಡದಲ್ಲಿ ೩-ಮೂವರು ಸರ್ವಸಾಧಾರಣ ಪ್ರಥಮದಲ್ಲಿ ೪ ಜನ ವಿದ್ಯಾರ್ಥಿಗಳು ಪಾಸಾಗಿರುವರು. ಬಳಿಕ ವಿದ್ಯೋನ್ನತಿಯ ಬಗ್ಗೆ ಸಭಾಪತಿಗಳ ಭಾಷಣವಾಯಿತು. ತರುವಾಯ ಸಭಾಪತಿಗಳಿಗೆ ಧನ್ಯವಾದಾರ್ಪಣವಾಗಿ ಸಭಾಕಾರ್ಯವು ಸಮಾಪ್ತವಾಯಿತು.

ದ್ವಿತೀಯ ದಿವಸ ತಾ|| ೨-೭-೩೦.

ಪ್ರಾತಃಕಾಲ ೮ ಘಂಟೆಗೆ ಪಂ|| ಜನಾನಂದಜಿ ಆಯುರ್ವೇದ ವಿದ್ಯಾರ್ಣ ಇವರ ಅಧ್ಯಕ್ಷತೆಯಲ್ಲಿ "ಆಯುರ್ವೇದ ಸಮ್ಮೇಲನ" ಸಮಾರಂಭವು ಬಹಳ ಸಮುತ್ಸಾಹಪೂರ್ವಕ ಜರಗಿತು. ಪ್ರಥಮದಲ್ಲಿ ಅಧ್ಯಕ್ಷರನ್ನು ಸ್ವಾಗತಪದ್ಯಗಳಿಂದ ಉತ್ಸವಪೂರ್ವಕ ವಿಜಯಂಗೈಸಿಕೊಂಡು ಬಂದರು. ಅಧ್ಯಕ್ಷರು ತಮ್ಮ ಸ್ಥಾನವನ್ನು ಸ್ವೀಕರಿಸಿದರು. ತರುವಾಯ ಆಯುರ್ವೇದ ವೇತ್ತೃಗಳಾದ ಪಂಡಿತರ ಹಾಗೂ ವಿದ್ಯಾರ್ಥಿಗಳ ಸಾರವತ್ತಾದ ಭಾಷಣಗಳಾದವು. ಬಳಿಕ ಹಿಮಾಲಯ ವನಸ್ಪತಿಗಳ ಪ್ರದರ್ಶನಕಾರ್ಯವು ಬಹಳ ಚಿಕಿತ್ಸಾಪೂರ್ವಕವಾಗಿ ನಡೆಯಿತು. ಈ ಸಂದರ್ಭದಲ್ಲಿ ಪಾಶ್ಚಾತ್ಯಶಿಕ್ಷಣ ಪಂಡಿತರಾದ ಉಖಾಮಠದ ಸರ್ಜನ್ ಸಾಹೇಬರೇ ಮುಂತಾದವರು ಹಾಗೂ ವೈದ್ಯ ಪಂಡಿತರು ಬಹಳವಾಗಿ ಸಮ್ಮಿಲಿತರಾಗಿದ್ದರು. ಮೊದಲು ಹಿಮಾಲಯದಿಂದ ನೂತನವಾಗಿ ತಂದಿರುವ ಒಂದೊಂದು ಔಷಧಿಯನ್ನು ಸ್ವೀಕರಿಸಿ ಗ್ರಾಮೀಣವೈದ್ಯರು ಗ್ರಾಮೀಣನಾಮ ಹಾಗೂ ಅವುಗಳ ಗುಣಾದಿವರ್ಣನಮಾಡಿ ವಿನಿಯೋಗವನ್ನು ಸಹ ಹೇಳಿದರು. ಬಳಿಕ ವಿಶೇಷಪಂಡಿತರು ಶಾಸ್ತ್ರೀಯಲಕ್ಷಣಪೂರ್ವಕ ತಮ್ಮ ಅಭಿಪ್ರಾಯವನ್ನು ತೋರಿಸಿದರು. ಅನಂತರ "ರಾಸನಾ, ಮೂಷಾಕರ್ಣೀ, ತ್ರಿಂಶಕಾಕೋಲೀ, ಜೀವಕ, ಋಷಭಕ, ಮೂಸಲಿ, ನಾಗಯಾತೋತಾ, ಋದ್ಧಿ, ವೃದ್ಧಿ, ಶಂಖಪುಷ್ಪೀ, ವಿದಾರಾ, ಕಲಹಾರಿ, ರತನಜೋತಿ, ವಿದಾರೀಕಂದ, ಹಾತಾಜೋಡಿ, ಮೇಧಾ, ಮಹಾಮೇಧಾ, ಪಾಷಾಣಭೇದ, ಕಾಲಪರ್ಣೀ, ಇತ್ಯಾದಿ ಅನೇಕಾನೇಕ ಜಡೀಬೂಟಿಗಳ ಪರಿಚಯ ಪ್ರದರ್ಶನವಾದ ಬಳಿಕ ಅಧ್ಯಕ್ಷರು ಭಾಷಣವನ್ನು ಮಾಡಿದರು. ಶಾಸ್ತ್ರೀಯವಾದ ಇವರ ಭಾಷಣವು ಸಭಿಕರನ್ನು ಚಕಿತಗೊಳಿಸುವದಲ್ಲದೆ ಪ್ರಾಚೀನಕಾಲದ ಚರಕಾದಿ ಮುನಿಗಳ ಸ್ಮರಣವನ್ನು ಮಾಡಿಸುತ್ತಿದ್ದಿತು. ಅಂತ್ಯದಲ್ಲಿ ಸರ್ವರ ವಿಷಯಗಳನ್ನು ಪರ



ಶ್ರೀ ಜಗದ್ಗುರು ಕೇದಾರಸಿಂಹಾಸನಮಠದ ಪ್ರಧಾನಕಾರ್ಯಾಲಯ (ದರ್ಬಾರ್ ಹಾ

ವರ್ತಮಾನಸಂಗ್ರಹ.

ಈ ವಾರದ ಪತ್ರಿಕೆಯ ಸಂಗಡ ಮದ್ರಾಸ್ ವಾಸನ್ ಬುಕ್ ಡಿಪೋದವರ ಪ್ರಸಿದ್ಧಪತ್ರಿಕೆಗಳನ್ನು ಹಂಚಿರುತ್ತೇವೆ.

ದಿಲ್ಲಿಯ ಚಾಂದನಿಚೌಕಿನಲ್ಲಿ ಒಬ್ಬ ಪೋಲೀಸನಿಗೆ ರಿವಾಲ್ವರ್ ಏಟುಬಿತ್ತು. ಅಪರಾಧಿಯನ್ನು ಹುಡುಕುತ್ತಿದ್ದಾರೆ.

ಪಂಡಿತ ಜವಾಹಿರಲಾಲರು ಕಠಿಣಶಿಕ್ಷೆಗೆ ಗುರಿಯಾದ ಮೇಲೆ ಜೈಲಿನಲ್ಲಿ ತೋಟದ ಕೆಲಸವನ್ನು ಮಾಡುತ್ತಿರುವರು.

85 ವರ್ಷದ ಮಿಸ್ ಗ್ರೇಸ್‌ರೋಲೆಂಡ್ಸ್ ಎಂಬವಳು 82 ವರ್ಷದ ಮಿ|| ಚಾರಲ್ಸ್ ಬ್ರಾಂಚ್‌ಫರ್ಡ್ ಎಂಬವನನ್ನು ಮದುವೆಯಾದಳಂತೆ! ವಧೂವರರು ಸರಿಯಾದ ವಯಸ್ಕರಾಗಿದ್ದಾರೆ. ಶ್ರೀ|| ಜನಾನಂದ ಸ್ವಾಮಿಗಳ ಸುಧಾರಣೆಯ ರೀತಿ! ...ರೀಗಳೊಡನೆ ಹಿಮಾಲಯ... ...ಗಿತು.

ಇಂಗ್ಲೆಂಡ್ ದೇಶದಲ್ಲಿ ಇರುವೆಗಳೂ ಕ್ರಿಮಿಕೀಟಾದಿಗಳೂ ಇಲ್ಲವೇ ಇಲ್ಲವೆಂದು ಸದ್ಯ ದೇಶದಲ್ಲಿ ವಾಸವಾಗಿರುವ ವಿದ್ಯಾವಾರಿಧಿ ಸಿ. ಆರ್. ಜೈನ್ ಬಾರ್ ಅಟ್. ಲಾ. ಇವರು ಪ್ರಸಿದ್ಧಪಡಿಸಿದ್ದಾರೆ. ಈಶ್ವರಲೀಲೆಯು ಅಗಾಧವಾದುದು.

ಬೊಂಬಾಯಿ ಕಾಂಗ್ರೆಸ್ ಸಂಗ್ರಾಮಸಮಿತಿಯ ನಿರ್ಧಾರದಂತೆ, ಪೋಸ್ಟಾಫೀಸುಗಳಲ್ಲಿ ಯಾವ ಹಣಕಾಸುಗಳನ್ನೂ ಇಡದೆ ಅವನ್ನು ಚಿನ್ನದ ರೂಪದಲ್ಲಿ ಇಡಬೇಕೆಂದು ಬೋಧಿಸುವ ಸಲುವಾಗಿ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದ ಇಬ್ಬರು ಸ್ವಯಂಸೇವಕರನ್ನು ದಸ್ತಗಿರಿ ಮಾಡಿರುತ್ತಾರೆ.

ನಿಜಾಮ ರಾಜ್ಯದಲ್ಲಿ ಸಾಯಗಾ ಇಲಾಖೆಯ ಸೆಶನ್ಸ್‌ಜಡ್ಜರಾದ ಮೀರ ಇಬ್ರಾಹೀಮಲ್ಲಿಯವರು ಹೈದರಾಬಾದಿನ ಮ್ಯುನಿಸಿಪಾಲಿಟಿಯ ಮೇಲೆ, ಮ್ಯುನಿಸಿಪಾಲಿಟಿಯು ದಾರಿಯನ್ನು ನೆಟ್ಟಗೆ ಇಡದಿದ್ದುದರಿಂದ ತಮ್ಮ ಮೋಟಾರಕ್ಕೆ ಕೇಡಾಯಿತೆಂದು ದಾವೆಯನ್ನು ತಂದರು. ಮುನಸಿಫರು ಅಲ್ಲಿಸಾಹೇಬರಿಗೆ ಆರು ಪೈಗಳ ನಷ್ಟ ಕೊಡಿಸಿದರು.

ಬಂಗಾಲದೇಶಕ್ಕೆ ಸೇರಿದ ಬೇಯೂರೆಂಬ ಗ್ರಾಮದಲ್ಲಿ 60 ವಯಸ್ಸಿನ ಒಬ್ಬ ವಿಧವೆಯಿದ್ದಾಳೆ. ಇವಳು 45 ವರ್ಷಗಳಿಂದ ಅನ್ನ ನೀರು ಮೊದಲಾದ ಯಾವ ಪದಾರ್ಥಗಳನ್ನೂ ಮುಟ್ಟಿಲ್ಲವಂತೆ! ಇವಳನ್ನು ಅನೇಕ ಜನ ಡಾಕ್ಟರರೂ ವೈಜ್ಞಾನಿಕರೂ ಪರೀಕ್ಷಿಸಿ ಇದು ನಿಜವೆಂದು ಒಪ್ಪಿರುವರಂತೆ! ಇವಳು ದೇವಾಂಗನೆಯೋ ಸರಿ! ಈಶ್ವರಸೃಷ್ಟಿಯು ವಿಚಿತ್ರವಾದುದು.

ಸರದಾರ್ ವಲ್ಲಭಭಾಯಿ ಪಟೇಲರವರೂ, ದೌಲತ್‌ರಾಮ್ ಮತ್ತು ಡಾ|| ಹಾರ್ಡಿಕರ್ ಇವರು ಸೆರೆಯಿಂದ ಬಿಡುಗಡೆಯಾದರು. ಸರ್ದಾರ್ ಪಟೇಲರು ಈಗ ಕಾಂಗ್ರೆಸ್ಸಿನ ಪ್ರೆಸಿಡೆಂಟರಾಗಿರುವುದರಿಂದ, ಅಲಹಾಬಾದಿಗೆ ಹೋಗಿ ಅಸ್ವಸ್ಥರಾಗಿರುವ ಪಂಡಿತ ಮೋತೀಲಾಲನೆಹರೂರವರನ್ನು ಸಂದರ್ಶಿಸಿ ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸುವರಂತೆ!

ಕಲಕತ್ತೆಯ ಒಬ್ಬಾನೊಬ್ಬ ಮುಸಲ್ಮಾನನ ಮನೆಯಲ್ಲಿ ನಾಲ್ಕು ಕಾಲುಗಳುಳ್ಳ ಹೆಣ್ಣುಕೂಸು ಜನನವಾಗಿದೆ. ಸದ್ಯಃ ಆ ಕೂಸಿಗೆ 18 ತಿಂಗಳುಗಳಾಗಿದ್ದು ಆರೋಗ್ಯದಿಂದಿರುವದು. ಈ ಕೂಸಿನಿಂದ ಟಿಕೀಟುಗಳ ದ್ವಾರಾ ಹಣವನ್ನು ಸಂಪಾದಿಸಬೇಕೆಂದಾಲೋಚಿಸಿ ಆ ಕೂಸಿನ ತಂದೆಗೆ ಹಣವನ್ನು ಕೊಟ್ಟಿದ್ದ ಗೋಕುಲಬಂಧುದೇವನೆಂಬವನು ಕಲಕತ್ತಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸದರಿ ಮುಸಲ್ಮಾನನ ಮೇಲೆ ವ್ಯವಹಾರ ಹೂಡಿದ್ದಾನೆ. ದುಡ್ಡು ತೆಗೆದುಕೊಂಡು ಕೂಸನ್ನು ಇವನ ಸ್ವಾಧೀನಕ್ಕೆ ಕೊಡದಿರುವುದೇ ಇದಕ್ಕೆ ಕಾರಣ. ಮ್ಯಾಜಿಸ್ಟ್ರೇಟರು ಸದರಿ ಕೂಸನ್ನು ಕೋರ್ಟಿಗೆ ತರಿಸಿದ್ದರಂತೆ!

ಕಳೆದ 5ನೆಯ ತಾರೀಖಿನ ದಿನ ಅಲಹಾಬಾದಿನಲ್ಲಿ ಒಂದು ಪ್ರಚಂಡವಾದ ವಿದ್ಯಾರ್ಥಿಗಳ ಮೆರವಣಿಗೆಯು ಹೊರಟಿತು. ಶ್ರೀಮತಿ ಕಮಲಾ ನೆಹರೂ (ಜವಾಹಿರಲಾಲರ ಪತ್ನಿಯವರು) ರವರು ಮೆರವಣಿಗೆಯ ನಾಯಕಿಯರಾಗಿದ್ದರು. ಪೋಲೀಸರು ಮೆರವಣಿಗೆಯನ್ನು

ತಡೆದರು. ಜನರು ಪೋಲೀಸರು ಹೇಳಿದ ಮಾತನ್ನು ಕೇಳದೆ ಹಿಂದಕ್ಕೆ ಹೆಜ್ಜೆಯಿಡುವುದಿಲ್ಲವೆಂದು ರಸ್ತೆಯಲ್ಲಿಯೇ ಕುಳಿತುಬಿಟ್ಟರು. ಪೋಲೀಸರೂ ಸಹ ರಸ್ತೆಗೆ ಅಡ್ಡವಾಗಿ ಗೋಡೆಹಾಕಿದಂತೆ ನಿಂತುಬಿಟ್ಟರು. ಸುಮಾರು 4 ಗಂಟೆಗಳ ಕಾಲ ಹೀಗೆಯೇ ಇದ್ದಿತು. ಜನರು ದೇಶಭಕ್ತಿಪರ ಗೀತೆಗಳನ್ನು ಹಾಡುತ್ತ ಕಾಲಕಳೆದರು. ಈ ವಿಷಯವಾಗಿ ವಿದ್ಯಾರ್ಥಿಗಳಿಗೆ ಶ್ರೀಮತಿ ಕಮಲಾ ನೆಹರೂರವರು ತಕ್ಕ ಸಲಹೆಗಳನ್ನು ಕೊಡುತ್ತಿದ್ದರು. ಅಲಹಾಬಾದ್ ವಿಶ್ವವಿದ್ಯಾಲಯದ ಕೆಲ ಅಧ್ಯಾಪಕರು (ಪ್ರೊಫೆಸರ್ಸ್) ಪೋಲೀಸಧಿಕಾರಿಗಳ ಜತೆಯಲ್ಲಿ ನಿಂತು ಅಕ್ರಮವಾಗದಂತೆ ನೋಡಿಕೊಳ್ಳುತ್ತಿದ್ದರು. ಕೊನೆಗೆ ಸಾಕಾಗಿ ಪೋಲೀಸರು ರಾತ್ರಿ 9½ ಗಂಟೆಗೆ ಮೆರವಣಿಗೆಯನ್ನು ಬಿಟ್ಟು ಹೊರಟುಹೋದರು. ಕೂಡಲೇ ವಿದ್ಯಾರ್ಥಿಗಳು ಜಯಘೋಷದೊಡನೆ ಮೆರವಣಿಗೆಯನ್ನು ಮುಂದುವರಿಸಿ, ಬೇಕಾದೆಡೆಯಲ್ಲಿ ಸಂಚರಿಸಿ ತಮ್ಮ ಕಾರ್ಯವನ್ನು ನಡೆಯಿಸಿಕೊಂಡು ಹೊರಟುಹೋದರು.

ಬೊಂಬಾಯಿಯ ಸಂಗ್ರಾಮಸಮಿತಿಯ 14 ನೆಯ ಅಧ್ಯಕ್ಷರಾಗಿದ್ದ ಸುಪ್ರಸಿದ್ಧ ಕವಿ ಮತ್ತು ಗಾಯಕರಾದ ಹರೀಂದ್ರನಾಥ ಚಟ್ಟೋಪಾಧ್ಯಾಯರನ್ನು ಕಳೆದ 5 ನೆಯ ತಾರೀಖಿನ ದಿವಸ ದಸ್ತಗಿರಿ ಮಾಡಿ ಅವರಿಗೆ 1 ವರ್ಷದ ಕಠಿನ ಶಿಕ್ಷೆಯನ್ನು ವಿಧಿಸಿರುವರು. 5 ನೆಯ ತಾರೀಖಿನ ದಿವಸ ಬೊಂಬಾಯಿಯ ಸಮುದ್ರತೀರದಲ್ಲಿ ಒಂದು ದೊಡ್ಡ ಸಭೆಯು ನಡೆಯುವುದರಲ್ಲಿತ್ತು. ಆ ಸಭೆಯನ್ನು ಅಕ್ರಮಕೂಟವೆಂದು ಸಾರಿ ಅದನ್ನು ತಪ್ಪಿಸಲು ಪೋಲೀಸ ಅಧಿಕಾರಿಗಳು ಆಯುಧಪಾಣಿಗಳಾಗಿ ಬಂದರು. ಜನರು ಹೆದರದೆ ಸಭೆಯನ್ನು ಸೇರಿಸಿ ಕಾರ್ಯಕ್ರಮಕ್ಕೆ ಆರಂಭಿಸಿದರು. ಅಧ್ಯಕ್ಷರಾದ ಹರೀಂದ್ರನಾಥ ಚಟ್ಟೋಪಾಧ್ಯಾಯರು ಸಭೆಯನ್ನುದ್ದೇಶಿಸಿ "ಸೋದರಸೋದರಿಯರೇ" ಎಂದು ಮಾತಾಡುವುದರೊಳಗಾಗಿಯೇ ಪೋಲೀಸರು ಅವರನ್ನು ದಸ್ತಗಿರಿ ಮಾಡಿದರು. ಸಭೆಯು ಮಾತ್ರ ಪೋಲೀಸರ ಅಪ್ಪಣೆಯಂತೆ ಚದರದಿರಲು ಲಾಠೀಪ್ರಹಾರಕ್ಕೆ ಆರಂಭವಾಯಿತು. ಸುಮಾರು 200 ಜನರಿಗೆ ಏಟುಗಳು ಬಿದ್ದು ಗಾಯಗಳಾಗಿವೆ. ಪೋಲೀಸರು ಹೋದಮೇಲೆ ಜನರು ಪುನಃ ಸಭೆಸೇರಿ ತಮ್ಮ ಕಾರ್ಯಕ್ರಮವನ್ನು ನಡೆಯಿಸಿದರು. ಡಾ|| ಬಾಪ್ಟೀಕರ್‌ರವರು ಬೊಂಬಾಯಿಯ ಸಂಗ್ರಾಮಸಮಿತಿಯ 15 ನೆಯ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

ಮುಂಬಯಿಯ ಹತ್ತರಿರುವ ಉಪನಗರಗಳ ಕಾಂಗ್ರೆಸ್ ಕಮಿಟಿಯ ಕಪ್ತಾನರಾದ ಶ್ರೀ ಸೌ|| ಸೋನವಾಲಾ ಕಮಲಾಬಾಯಿಯವರು ಪೋಲೀಸ್ ಲಾಕಪ್ಪಿನಲ್ಲಿಯ ಕಥೆಯನ್ನು ಮುಂದೆ ಕೊಟ್ಟಂತೆ ಹೇಳುತ್ತಾರೆ. ಕಳೆದ 6 ದಿವಸಗಳಿಂದ ನಾನು ಪೋಲೀಸ್ ಲಾಕಪ್ಪಿನಲ್ಲಿದ್ದೇನೆ. ನನಗೆ ಕೊಟ್ಟ ಕೋಣೆಯು ಬಹಳ ಕಿರಿದಿದೆ. ಆದರಲ್ಲಿ ಸ್ತ್ರೀಯರಿಗೆ ಮರ್ಯಾದೆ ಎನಿಸುವಂಥ ಮರೆಯ ಸ್ಥಳವೇ ಇಲ್ಲ. ಕೋಣೆಯು ದಾರಿಗೆ ಎದುರಾಗಿದ್ದು, ಬಾಗಿಲನ್ನು ಮುಚ್ಚುವಂತಿಲ್ಲ. ಪೋಲೀಸರು ಬಾಗಿಲಮುಂದೇ ಕೆಳಗೆ ಮೇಲೆ ತಿರುಗಾಡುತ್ತಾರೆ. ಸ್ನಾನಕ್ಕೆ ಅನುಕೂಲವಿಲ್ಲ. ಹೊರಗಿನವರು ನೋಡದಂತೆ ಮೈಮೇಲಿನ ಅರಿವೆ ತೆಗೆಯುವಂತಿಲ್ಲ. ಕೋಣೆಯು ದನ ಮತ್ತು ನಾಯಿಗೆ ಇರುವುದಕ್ಕೆ ಸಹ ಯೋಗ್ಯವಿಲ್ಲ. ಇಂಥ ಸ್ಥಳಗಳಲ್ಲಿ ಸ್ತ್ರೀಯರನ್ನಿಡುವದು ನನಗೆ ಅತ್ಯಂತ ನಾಚಿಕೆಯ ಮಾತು. ಕೋಣೆಯಲ್ಲಿ ದೀಪ ಸಹ ಇರುವದಿಲ್ಲ. ನಾನು ಬೇಕಾದರೆ ಆರು ವರ್ಷ ಶಿಕ್ಷೆ ಅನುಭವಿಸಲಿಕ್ಕೆ ಸಿದ್ಧಳಿದ್ದೇನೆ. ಆದರೆ ಇಂಥ ಓಕರಿಗೆ ಬರುವಂಥ ಕೋಣೆಯಲ್ಲೇಕೆ ಇಡುವಿರಿ? ಮ್ಯಾಜಿಸ್ಟ್ರೇಟರೇ! ನಿಮಗೆ ತಾಯಿ ಮತ್ತು ಅಕ್ಕ ತಂಗಿಯರು ಇಲ್ಲವೇನು? ನನ್ನಂತೆ ಅವರನ್ನು ನಡೆಯಿಸಿಕೊಂಡರೆ ನೀವು ಸಹನ ಮಾಡುವಿರಾ? ನನ್ನ ದೇಶದಲ್ಲಿ ಇಲ್ಲಿಗೆ ಮುಂದೆ ಬರುವಂಥ ನನ್ನ ಭಗಿನಿಯರ ದೆಸೆಯಿಂದ ಈ ಸಂಗತಿಯನ್ನು ನಿಮಗೆ ಹೇಳುತ್ತೇನೆ. ನಿಮಗೆ ಸ್ವತಃ ಅಲ್ಲಿಯ ಅನುಭವವನ್ನು ತಕ್ಕೊಳ್ಳಬೇಕಾದರೆ ಒಂದು ದಿವಸ ಅಲ್ಲಿದ್ದು ನೋಡಿರಿ. ಇರಲಿಕ್ಕಾಗದಿದ್ದರೆ ನೋಡಿಯಾದರೂ ಬನ್ನಿರಿ ಎಂದು ನುಡಿಯಲು ಮ್ಯಾಜಿಸ್ಟ್ರೇಟರು ಇವರಿಗೆ ಉತ್ತರವನ್ನೇ ಕೊಡಲಿಲ್ಲವಂತೆ?

ಪಂ|| ಜವಾಹಿರಲಾಲರ ಶಿಕ್ಷೆಯಕಾಲಕ್ಕೆ ಹೃದಯದ್ರಾವಕವಾದದೃಶ್ಯ.

ಪಂಡಿತ ಜವಾಹಿರಲಾಲ ನೆಹರೂರವರ ಶಿಕ್ಷೆಯ ವಿಷಯವಾಗಿ ಅಲಹಾಬಾದಿನ ಒಂದಾನೊಂದು ಪತ್ರಿಕೆಯು ಹೀಗೆ ಬರೆಯುತ್ತಿದೆ. ನೈನಿ ಸೆಂಟ್ರಲ್ ಜೈಲಿನಲ್ಲಿ ತೀರ್ಪು ಆಯಿತು. ಪಂಡಿತ ಮೋತೀಲಾಲರು ಪೂರ್ತಿ ಜಡ್ಜಮೆಂಟನ್ನು ಓದುವದಿಲ್ಲವೇ ಎಂದು ಮ್ಯಾಜಿಸ್ಟ್ರೇಟರನ್ನು ಕೇಳಿದರು. ಪಂಡಿತ ಜವಾಹಿರಲಾಲರು ಮ್ಯಾಜಿಸ್ಟ್ರೇಟರನ್ನು ಕುರಿತು "ನಿಮಗೆ ಶ್ರಮವೇಕೆ?" ಎಂದರು. ಆದಾಗ್ಯೂ ಮ್ಯಾಜಿಸ್ಟ್ರೇಟರು ಪಂಡಿತ ಜವಾಹಿರಲಾಲರಿಗೆ ಜಡ್ಜಮೆಂಟನ್ನು ತೋರಿಸಬೇಕೆಂದು ಪೇಷ್ಕಾರರಿಗೆ ಆಜ್ಞಾಪಿಸಿ ಹೊರಟುಹೋದರು. ಕೋರ್ಟಿನಲ್ಲಿದ್ದವರೆಲ್ಲಾ "ಜಡ್ಜಮೆಂಟನ್ನು ಓದಿರಿ" ಎಂದು ಪಂಡಿತ ಜವಾಹಿರಲಾಲರನ್ನು ಕೇಳಿಕೊಂಡರು. ಇವರು ಮುಗುಳುನಗೆಯಿಂದ ಕೂಡಿ ಜಡ್ಜಮೆಂಟನ್ನು ಓದಲು ಆರಂಭಿಸಿದರು. ಅವರ ಸಂಬಂಧಿಕರೆಲ್ಲಾ ತೀರ್ಪನ್ನು ಬಹಳ ತಾಳ್ಮೆಯಿಂದ ಸ್ವೀಕರಿಸಿದರು. ಇವರ ಪತ್ನಿಯವರಾದ ಕಮಲಾ ನೆಹರೂರವರು ಉದಾಸೀನದಿಂದಿದ್ದರು. ಪಂಡಿತ ಮೋತೀಲಾಲ ನೆಹರೂರವರೂ ಅವರ ಹೆಣ್ಣುಮಕ್ಕಳೂ ವಿಚಾರಗ್ರಸ್ತರಾಗಿದ್ದರು. ಪಂಡಿತ ಮೋತಿಲಾಲರವರ ಧರ್ಮಪತ್ನಿಯವರಂತೂ ದುಃಖದಿಂದ ತುಂಬಿದ್ದರು. ಪಂಡಿತ ಜವಾಹಿರಲಾಲರ ಮಗಳಾದ ಶ್ರೀಮತಿ ಇಂದುಕುಮಾರಿಯು ಯಾವ ಭಾವನೆಯನ್ನೂ ಪ್ರಕಟಿಸಲಿಲ್ಲ. ಜವಾಹಿರಲಾಲರು ತಂದೆತಾಯಿಗಳಿಂದ ಬೇರೆಯಾಗುವ ದೃಶ್ಯವು ಹೃದಯದ್ರಾವಕವಾಗಿತ್ತು. ಜವಾಹಿರಲಾಲರ ತಾಯಿಯು ಅಳುತ್ತಿದ್ದಳು. ಜವಾಹಿರಲಾಲರಿಗೆ ಕಣ್ಣಲ್ಲಿ ಸ್ವಲ್ಪ ನೀರು ಬಂದಹಾಗೆ ಕಂಡಿತು. ಕೂಡಲೇ ಜವಾಹಿರಲಾಲರು ತಾಯಿಯನ್ನು ಸ್ವಲ್ಪ ಕೋಪದಿಂದ "ಏಕೆ ಅಳುತ್ತೀರಿ" ಎಂದರು. ತಂದೆಯವರಿಗೆ "ನೀವು ಶೀಘ್ರದಲ್ಲಿಯೇ ಗುಣಮುಖಹೊಂದುತ್ತೀರಿ." ಎಂದು ಹೇಳಿ ಜೈಲಿನೊಳಗೆ ವೇಗವಾದ ನಡಿಗೆಯಿಂದ ಹೊರಟುಹೋದರು. ಅಲಹಾಬಾದಿನಲ್ಲಿ ಆ ದಿವಸ ಭಾರೀ ಸಭೆಯು ನಡೆಯಿತು. ಪಂಡಿತ ಸುಂದರಲಾಲರು ಅಧ್ಯಕ್ಷರಾಗಿದ್ದರು. ಪಂಡಿತ ಜವಾಹಿರಲಾಲರ ಶಿಕ್ಷೆಯು ನಮ್ಮ ಧೈರ್ಯವನ್ನು ಕುಂದಿಸದೆಂದೂ, ನಾವಿನ್ನೂ ಉತ್ಸಾಹದಿಂದ ಸ್ವಾತಂತ್ರ್ಯ ಚಳವಳಿಯನ್ನು ಮುಂದುವರಿಸಬೇಕೆಂದೂ ಹೇಳಿದರು. ಆ ಸಮಯದಲ್ಲಿ ಶ್ರೀಮತಿ ಉಮಾನೆಹರೂರವರು ಬಹಳ ಉಜ್ವಲವಾದ ಭಾಷಣವನ್ನು ಮಾಡಿದರು.

ಮಿ|| ಬೆಲ್ಸ್‌ಫರ್ಡರ ಅಭಿಪ್ರಾಯ.

ಇಂಗ್ಲಂಡಿನಿಂದ ಹಿಂದೂಸ್ಥಾನಕ್ಕೆ ಆಗಮಿಸಿರುವ ಬ್ರೈಲ್ಸ್‌ಫರ್ಡ್ ಎಂಬ ಪತ್ರಿಕಾ ವಿಲೇಖಕರು ಗುಜರಾಥದೇಶದಲ್ಲಿ ಸಂಚರಿಸಿ ಅಲ್ಲಿಯ ಸ್ಥಿತಿಯನ್ನವಲೋಕಿಸಿ ಈ ಕೆಳಗೆ ಕಂಡಂತೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು. "ಹಳ್ಳಿಗಳಲ್ಲೆಲ್ಲಾ ಎಲ್ಲೋ ಕೆಲವು ಮಹಮದೀಯರು ಹೊರತಾಗಿ ಎಲ್ಲರೂ ಗಾಂಧೀ ಟೊಪ್ಪಿಗೆಗಳನ್ನು ಧರಿಸುತ್ತಾರೆ. ಹಿಂದೂ ಜನತೆಯೇ ಕಾಂಗ್ರೆಸ್ಸಿನ ಹಿಂದೆ ಇದೆ. ಮಹಮ್ಮದೀಯ ಜನತೆಯಲ್ಲಿ ಅರ್ಧಭಾಗವು ಕಾಂಗ್ರೆಸ್ಸಿಗೆ ಸೇರಿದೆ. ಭಾರತೀಯ ಜನಾಂಗಕ್ಕೆ ಲೇಬರ್ ಸರ್ಕಾರದಮೇಲೆ ಸ್ವಲ್ಪವೂ ವಿಶ್ವಾಸವಿಲ್ಲ. ಇಂಡಿಯಾದಲ್ಲಿ ಪೋಲೀಸರು ನಡೆಯಿಸುವ ಅತ್ಯಾಚಾರಗಳೆಲ್ಲಾ ಲೇಬರ್ ಸರ್ಕಾರದ ಅಪ್ಪಣೆಯಂತೆಯೇ ಎಂದು ಭಾರತೀಯರು ನಂಬಿರುವರು. ಬ್ರಿಟಿಷರು ಹಿಂದುಸ್ಥಾನವನ್ನು ಗೌರವಿಸುವುದಾದರೆ ಇಂಡಿಯಾಕ್ಕೆ ಡೊಮಿನಿಯನ್ ಸ್ಟೇಟಸ್ಸನ್ನು ಕೊಡಬೇಕು. ಐರ್ಲೆಂಡಿಗೆ ಕೊಟ್ಟಿರುವುದನ್ನು ನಾವು ಇಂಡಿಯಾಕ್ಕೆ ಏಕೆ ಕೊಡಬಾರದು? ಹಳ್ಳಿಗಳಲ್ಲಿ ಪೋಲೀಸಿನವರು ರೈತರನ್ನು ಬಹಳವಾಗಿ ಹಿಂಸಿಸುತ್ತಿರುವರು. "ಸ್ವರಾಜ್ಯಬೇಕೋ, ಇಗೋ ತಕ್ಕೊಳ್ಳಿರಿ" ಎಂದು ಲಾಠಿಗಳಿಂದ ಹೊಡೆಯುತ್ತಿರುವರು. ಹಿಂದುಸ್ಥಾನದಲ್ಲಿ ಇಂದು ೬೦ ಸಾವಿರ ಜನರು ಜೈಲಿಗೆ ಹೋಗಿರುವರು. ಜೈಲುಗಳು ತುಂಬಿರುವುವು. ಪ್ರಜಾಪಿತ್ರಾಸಿಗಳಾದ ಭಾರತೀಯರೆಲ್ಲಾ ಸದ್ಯಃ ಜೈಲಿನಲ್ಲಿರುವರು. ಲಂಡನ್ನಿಗೆ ಹೋಗಿರುವವರಿಗೆ ಭಾರತೀಯರ ಮನ್ನಣೆಯಿಲ್ಲ. ಬ್ರಿಟಿಷ್ ಸರ್ಕಾರವು ಒಪ್ಪಂದಕ್ಕೆ ಬರಬೇಕಾದರೆ ಜೈಲಿನಲ್ಲಿರುವ ಭಾರತೀಯರೊಂದಿಗೆ ಹೊರ್ತು ಲಂಡನ್ನಿಗೆ ಹೋಗಿರುವ ಭಾರತೀಯರೊಂದಿಗೆ ಅಲ್ಲ. ಇಂದು ಗಾಂಧಿಯೇ ಹಿಂದುಸ್ಥಾನ! ಹಿಂದುಸ್ಥಾನವೇ ಗಾಂಧಿ! ಈ ಸಮಯದಲ್ಲಿ ಬ್ರಿಟಿಷ್ ಸರ್ಕಾರದವರು ರಾಜಕೀಯ ಕೈದಿಗಳನ್ನೆಲ್ಲಾ ಬಿಡಬೇಕು."

ಬೊಂಬಾಯಿ ಗವರ್ನರರವರ ಉತ್ತರ.

ಕಳೆದ ಅಕ್ಟೋಬರ್ 26 ನೆಯ ತಾರೀಖು ಭಾನುವಾರ ದಿವಸ ಪೋಲೀಸರು ಸತ್ಯಾಗ್ರಹಿಗಳ ಮೇಲೆ ಮಾಡಿದ ಅತ್ಯಂತಾಮಾನುಷರವಾದ ಪ್ರಹಾರಗಳ ವಿಷಯವಾಗಿಯೂ, ಸ್ತ್ರೀಯರಿಗೆ ಪೋಲೀಸರು ಅವಮಾನ ಮಾಡಿದ ವಿಷಯವಾಗಿಯೂ ಬೊಂಬಾಯಿಯ ಪುರಜನರ ಆಗ್ರಹವನ್ನೂ ಖೇದವನ್ನೂ ತಿಳುಹಿಸುವಸಲುವಾಗಿ ಬೊಂಬಾಯಿ ಕಾರ್ಪೋರೇಷನ್ ಪ್ರೆಸಿಡೆಂಟರಾದ ಮಿ|| ಹುಸೇನ್‌ಭಾಯಿಲಾಲ್ಜಿಯವರು ಬೊಂಬಾಯಿಯ ಗವರ್ನರಿಗೆ ಒಂದು ಪತ್ರವನ್ನು ಬರೆದಿದ್ದರು. ಈ ಪತ್ರಕ್ಕೆ ಗವರ್ನರವರು ಈ ಕೆಳಗೆ ಬರೆದಂತೆ ಉತ್ತರವನ್ನು ಕೊಟ್ಟಿರುವರು.

"ಪ್ರಿಯ ಹುಸೇನ್‌ಭಾಯಿಲಾಲ್ಜಿಯವರೇ! ಅಕ್ಟೋಬರ್ 26 ರಲ್ಲಿ ನಡೆದ ಸಂಗತಿಗಳ ವಿಷಯವಾಗಿ ಬೊಂಬಾಯಿಯ ಜನರು ಪ್ರಕ್ಷುಬ್ಧರಾಗಿರುವುದನ್ನು ಕೇಳಲು ನನಗೂ ವ್ಯಸನವಾಗುತ್ತದೆ. ನಾನು ವಿಚಾರಮಾಡಿ ನೋಡುವಲ್ಲಿ ಆದಿನ ನಡೆದ ಸಂಗತಿಗಳು ಪತ್ರಿಕೆಗಳಲ್ಲಿ ಅತಿಶಯೋಕ್ತಿಯಿಂದ ಹೇಳಲ್ಪಟ್ಟಿವೆ. ಸ್ವಯಂಸೇವಿಕೆಯರನ್ನು ಪೋಲೀಸರು ಒಯ್ದು ಊರಹೊರಗೆ ನಿರ್ಜನಪ್ರದೇಶದಲ್ಲಿ ಬಿಟ್ಟರೆಂಬ ಅಪವಾದವು ಸುಳ್ಳು. ಅವರನ್ನು ಪೋಲೀಸರು ಕಾರಾಗೃಹಕ್ಕೆ ಕಳುಹಿಸಲಿಕ್ಕದೆ ಜನಸಂಚಾರವು ಹೆಚ್ಚಾಗಿರತಕ್ಕ ಒಂದು ದೊಡ್ಡ ರಸ್ತೆಯಲ್ಲಿ ಊರಹೊರಗೆ ಬಿಟ್ಟುಬಂದರೆಂದು ನನಗೆ ಮನವರಿಕೆಯಾಗಿದೆ. ಸ್ತ್ರೀಯರಮೇಲೆ ಪೋಲೀಸರು ಸ್ವಲ್ಪಮಟ್ಟಿಗೆ ಬಲಾತ್ಕಾರ ಪ್ರಯೋಗ ಮಾಡಿರಬಹುದು. ಸ್ತ್ರೀಯರು ಧ್ವಜಗಳನ್ನು ಬಿಟ್ಟುಕೊಡದೆ ಹಠಪ್ರದರ್ಶನ ಮಾಡಿದುದರಿಂದ ಪೋಲೀಸರು ಅವರನ್ನು ಬಲಾತ್ಕರಿಸಲೇ ಬೇಕಾಯಿತು. ಸ್ತ್ರೀಯರಮೇಲೆ ಪೋಲೀಸರು ಯಾವ ಅತ್ಯಾಚಾರವನ್ನೂ ನಡೆಯಿಸಿಲ್ಲ. ಬಾವುಟಗಳನ್ನು ಪೋಲೀಸರು ಬಲಾತ್ಕಾರದಿಂದ ಕಿತ್ತುಕೊಳ್ಳುವಾಗ ಕೆಲವು ಸ್ತ್ರೀಯರನ್ನು ಅವರೇನೋ ಕಾಡಿರಬಹುದು" ಹೀಗೆ ಮಾಡಿದುದರಿಂದ ಸ್ತ್ರೀಯರಿಗೆ ಅವಮಾನವುಂಟಾಯಿತೆಂದು ನೀವು ಭಾವಿಸುವುದಾದರೆ, ಅಂತಹ ಅವಮಾನವು ಸ್ತ್ರೀಯರಿಗೆ ಉಂಟಾಗುವಂತೆ ಮಾಡಿದ ಪ್ರಸಂಗವನ್ನು ಕಲ್ಪಿಸಿದ ಜನರು ಉತ್ತರವಾದಿಗಳಾಗಿದ್ದಾರೆ. ಕಾಂಗ್ರೆಸ್ಸಿನವರು ಎಲ್ಲ ಕಾರ್ಯಗಳಿಗೂ ಸ್ತ್ರೀಯರನ್ನು ಮುಂದೆ ತಂದು ನಿಲ್ಲಿಸುತ್ತಾರೆ. ಆದುದರಿಂದ ಸ್ತ್ರೀಯರಿಗಾಗುವ ತೊಂದರೆಗಳಿಗೆಲ್ಲಾ ಅವರೇ ಕಾರಣರು. ಇತರ ದೇಶಗಳಲ್ಲಿ ಕಾಯಿದೆ ಭಂಗವನ್ನು ಮಾಡುವ ಸ್ತ್ರೀಯರುಗಳ ಮೇಲೆ ಉಪಯೋಗಿಸಲ್ಪಟ್ಟ ಭಯಪ್ರದರ್ಶನವನ್ನು ನಮ್ಮ ಪೋಲೀಸರು ಮಾಡಿಲ್ಲವೆಂದು ನಾನು ಹೇಳಬಲ್ಲೆ. ಸರ್ಕಾರದವರಿಗಿರುವ ಕಷ್ಟವನ್ನೂ ನೀವು ಪರಿಗಣಿಸಬೇಕಾಗಿದೆ. ಸರ್ಕಾರದವರು ಕಾಯಿದೆಯ ಮರ್ಯಾದೆಯನ್ನು ಹೇಗೂ ಉಳಿಸಿಕೊಳ್ಳಬೇಕಾಗಿದೆ. ಆದುದರಿಂದ ಪುರುಷರೂ ಸ್ತ್ರೀಯರೂ ಸರಿಸಮಾನರಾಗಿ ನಿಂತು ಕಾಯಿದೆಭಂಗಮಾಡುವ ಪಕ್ಷದಲ್ಲಿ ನಾವೂ ಸಹ ಸ್ತ್ರೀಪುರುಷ ಭೇದವನ್ನು ಮರೆತು ಕೆಲಸ ಮಾಡಬೇಕಾಗುತ್ತದೆ.

ಸ್ವೀಕಾರ.

ಬೆಂಗಳೂರು ಸಿಟಿ ನಿವಾಸಿಗಳಾದ ಮ|| ರಾ|| ತಾಳಕುಂಟೆ ಬಸವಪ್ಪನವರ ಮಕ್ಕಳು ಗವೀಕಪ್ಪನವರು ಈ ತಿಂಗಳು 3 ನೆಯ ತಾರೀಖು ಸೋಮವಾರ ದಿವಸ ವಿಶ್ವೇಶ್ವರಪುರದಲ್ಲಿರುವ ನೂತನಗೃಹದ ಪ್ರವೇಶೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜಿ. ಗಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಗದಗ ತಾ|| ಲಕ್ಕುಂಡಿ ಗ್ರಾಮದ ಮಾಲಿ ಪಾಟೀಲ ಮ|| ರಾ|| ದೇವೇಂದ್ರಗೌಡರು ನಡೆಯಿಸಿದ ಗಣಾರಾಧನೆಯ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರಿ|| ಷ|| ಬ್ರ|| ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಟವನ್ನಿನಲ್ಲಿರುವ ಮ|| ರಾ|| ಕಲಿಗಣಿಮರಿ ಬಸಪ್ಪನವರು ತಮ್ಮ ಮಗುವಿನ ಲಿಂಗಧಾರಣ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಸಿಂಧವಾಳ ಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3 ನೆಯ ಪುಟದಿಂದ ಮುಂದುವರಿದುದು]

ಬಗ್ಗೆ ಮಾಡುತ್ತಲಿರುವ ಪ್ರಯತ್ನವನ್ನು ಸಕಲ ಸಭಿಕರಿಗೂ ತಿಳುಹಿ ಶ್ರೀಗಳ ಪರಿಚಯವನ್ನು ಮಾಡಿಕೊಟ್ಟರು. ಅನಂತರ ಅಧ್ಯಕ್ಷರು ವೀರಶೈವರ ಸುಧಾರಣೆಯ ಬಗ್ಗೆ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ಆ ಮೇಲೆ ಪಾಲಕೊಪ್ಪದ ಶ್ರೀಗಳು ಕೆಲ ಹೊತ್ತು ಅದೇ ವಿಷಯದಲ್ಲಿ ಭಾಷಣಮಾಡಿದರು. ಅನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಸರ್ವರೂ ಆನಂದತುಂದಿಲಮನಸ್ಕರಾಗಿ ಪೂಜಾ ಉತ್ಸವಾದಿಗಳ ಶೋಭಾಮಹತ್ವವನ್ನು ಕೊಂಡಾಡುತ್ತ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಈ ಮಹಾಶಯರು ಸಮಾಜದೇಳಿಗೆಯ ಬಗ್ಗೆ ಅನೇಕ ಕಾರ್ಯಗಳನ್ನು ಮಾಡಿ, ಮಾಡುತ್ತಿರುವದು ಸಕಲರಿಗೂ ತಿಳಿದ ಸಂಗತಿಯೇ ಆಗಿರುವದು. "ಯೇ ಶಾಂತದಾಂತಾಃ ಶ್ರುತಿಪೂರ್ಣಕರ್ಣಾ ಜಿತೇಂದ್ರಿಯಾಃ ಸ್ತ್ರೀವಿಷಯೇ ನಿವೃತ್ತಾಃ। ಪ್ರತಿಗ್ರಹೇಸಂಕುಚಿತಾಗ್ರಹಸ್ತಾಸ್ತೇಬ್ರಾಹ್ಮಣಾಸ್ತಾರಯಿತುಂ ಸಮರ್ಥಾಃ ॥" ಯಾರು ಶಮದಮಾದಿ ಗುಣಗಳಿಂದಲಂಕರಿಸಲ್ಪಟ್ಟಿರುವರೋ, ಯಾರು ವಿದ್ಯಾವಿಶಾರದರಿರುವರೋ, ಯಾರು ಜಿತೇಂದ್ರಿಯರಾಗಿ, ಸ್ತ್ರೀಕಾಂಚನಮೋಹಾದಿ ವಿಷಯ ಜಾಲಲೋಲುಪರಾಗಿಲ್ಲವೋ, ಯಾರು ಧನಕನಕಾದಿ ವಸ್ತುಗಳಲ್ಲಿ ಕೇವಲ ನಿರಾಶಾವೃತ್ತಿಯನ್ನು ಧರಿಸಿ ವಿರಕ್ತರಿಗೆ ವಿರಕ್ತರಾಗಿ ಸಂಚರಿಸುವರೋ, ಅಂತಹ ಗುರುಗಳೇ ಸಮಾಜವನ್ನುದ್ಧರಿಸಲು ಸಮರ್ಥರಲ್ಲದೆ ಹೆಸರಿಗೆ ಕುಬೇರರಪ್ಪನಾಗಿ ಭಿಕ್ಷಾನ್ನಕ್ಕಾಗಿ ಮನೆ ಮನೆ ಅಲೆಯುತ್ತಿದ್ದರೆ ಪ್ರಯೋಜನವೇನು? ಸಮಾಜ ಬಂಧುಗಳೇ! ವೇಷಧಾರಿಗಳ ಆಡಂಬರಕ್ಕೆ ಮೋಸಹೋಗಿ ಮರುಳಾಗಬೇಡಿರಿ. ಬಂಗಾರದಂತೆ ಕಾಣಿಸಿಕೊಳ್ಳುವ ಪದಾರ್ಥಗಳೆಲ್ಲ ಪಕ್ಕಾ ಬಂಗಾರದಷ್ಟು ಬೆಲೆಗಾಣವು. ಕಾಸುಕೊಟ್ಟರೆ ಕಾಶಿಯನ್ನು ತೋರಿಸುತ್ತೇವೆಂಬ ಬುಂತಾಕಸಂತರು ಜಗತ್ತನ್ನು ವಂಚಿಸಿ ತಮ್ಮ ಗುಜರಾಣೆಯನ್ನು ಸಾಗಿಸಿಕೊಳ್ಳುವರು. ಕಾಮಧೇನುವಿನ ಆಕಾರದ ಬಂಜೆಗೋವಿಗೆ ಏನು ಹಾಕಿದರೆ ತಾನೇ ಫಲವನ್ನು ಕೊಡಬಲ್ಲದು? ಜ್ಞಾನದೃಷ್ಟಿಯಿಂದ, ಯಾವ ಗುರುಗಳು ನಮಗೆ ಮೋಕ್ಷಪ್ರದಶಿವಲಿಂಗವನ್ನಿತ್ತು ಮುಕ್ತಿಮಾರ್ಗವನ್ನು ತೋರಿಸಿದರೋ ಅಂತಹ ಭಗವತ್ಪಾದರನ್ನು ಸೇವಿಸಿ ಭವರೋಗ ಮುಕ್ತರಾಗುವ ಸುಬುದ್ಧಿಯನ್ನು ಸರ್ವರಿಗೂ ದಯಪಾಲಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಅನನ್ಯ ಭಾವದಿಂದ ಪ್ರಾರ್ಥಿಸುವ.

ಸೋಮನಾಥಶರ್ಮಾ, ಬೃಹನ್ಮಠ ಪಾಲಕೊಪ್ಪ.

ಶಿವಾಧಾರಣದ ವಿಷಯದಲ್ಲಿ ಶ್ರೀ ಜಗದ್ಗುರು ಉಜ್ಜಯಿನೀ ಪೀಠಾಧೀಶ್ವರರು ಕೊಟ್ಟ ಹುಕುಂ.

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀಮದ್ವೇದವೇದಾಂತ ಸಿದ್ಧಾಂತ ಪ್ರತಿಪಾದಿತ ವೀರಶೈವ ಮತಾ ಮತಸ್ಥಾಪನಾಚಾರ್ಯ ಶ್ರೀಮತ್ಪರಶಿವದತ್ತಿಲಿಂಗೋದ್ಭವ ಜಗದ್ಗುರು ದಾರುಕ ಶಿವಾಚಾರ್ಯ ಪರಂಪರಾಗತ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿನಾಂ,

ದೀಕ್ಷಾ ಗುರುಸ್ಥಾನದಿಂದ.

ಶ್ರೀಮದ್ವರಗುರುಚರಣಾರವಿಂದ ಮಕರಂದ ಮಧುಕರಾಯಮಾನರಾದ ಸ್ವೈಜನು ಇಲಾಖಾ ಕಲ್ಯಾಣ ಪ್ರಾಂತಕ್ಕೆ ಸೇರಿದ ಬಿದರ ಕೋಟೆ, ಮುಧೋಳ, ಹಾಲಹಳ್ಳಿ, ಬ್ಯಾಲಹಳ್ಳಿ, ದೋಣಗಾಂವ, ಈ ಮೊದಲಾದ ಗ್ರಾಮನಿವಾಸಿಗಳಾದ ಶ್ರೀಮತ್ಪಟ್ಟಚರಾಧಿಕಾರಿಗಳು ಮಠ, ಮಠಪತಿ, ದೇಸಾಯಿ, ಪಾಟೀಲ, ಶ್ಯಾನಭೋಗ ಈ ಮೊದಲಾದ ಸದ್ಭಕ್ತರು ಇವರಿಗೆ ಸಕಲ ಶಿವಸಾಮ್ರಾಜ್ಯ ಸಮೃದ್ಧಿರಸ್ತು ಇತ್ಯಾಶೀರ್ವಾದ ನಿರೂಪಮುದಾಗಿ.

ಮಹಾಗುರುಸೀಠಕ್ಕೆ ತಾವುಗಳು ಶಿವಾಧಾರಣವನ್ನು ಮಾಡಿಕೊಳ್ಳುವದಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇವೆಂದು ಬಿನ್ನೈಸಿಕೊಂಡ ಪತ್ರಿಕೆಯು ಶ್ರೀಮಠ ಯರಗೇರಿ ಕಟ್ಟಿಮನೆ ನಾವಿದ ದೇವರು ಚರಮೂರ್ತಿಗಳಾದ ಶಿವಶಂಕರದೇವರ ಮುರಿದೇವರಾದ ಸಿದ್ಧರಾಮಪ್ಪನವರಿಂದ ತಲ್ಪಿತು. ನೋಡುವಲ್ಲಿ ಸರ್ವ ವಿಷಯಗಳು ಅವಗಾಹಿಸಲ್ಪಟ್ಟವು. ಆದರೆ

ಶ್ರೀ ವೇದಾಗಮಪೀಠಸ್ಥವಸರಸಂಶ್ರಿತಪಟ್ಯಕೋಯನ್ನದಂ। ಶ್ರೀ ಜೀವೇಶ್ವರಯೋಗಪದ್ಮಕರಣಂ ಶ್ರೀಗೋಪ್ಯಚಿಂತಾಮಣಿಂ। ಶ್ರೀ ಸಿದ್ಧಾಂತಶಿಖಾಮಣಿಂಲಿಖಿತಾ ಯಸ್ತಂ ಲಿಖಿತ್ವಾ ನರಾನ್। ಶ್ರುತ್ವಾಶ್ರಾವಯಿತಾಸಯಾತಿ ವಿಮಲಾಂ ಭಕ್ತಿಂಚ ಮುಕ್ತಿಂಪರಾಂ॥

ಶ್ರೀ ಮಹಾಗುರು ಗುರುಸಾರ್ವಭೌಮನಾದ ಜಗದ್ಗುರು ಶ್ರೀ ರೇವಣಸಿದ್ಧೇಶ್ವರ ಮಹಾಸ್ವಾಮಿಯ ಉಪದೇಶಸ್ವರೂಪವಾದ ಈ ಸಿದ್ಧಾಂತ ಶಿಖಾಮಣಿ ನಾಮಕ ಗ್ರಂಥವನ್ನು ಯಾವನು ಬರೆಯುತ್ತಾನೋ, ಯಾವನು ಪ್ರವಚನಮಾಡುತ್ತಾನೋ, ಯಾವನು ಬರೆದು-ಬರೆಯಿಸಿ ಕೇಳಿ ಕೇಳಿಸುತ್ತಾನೋ ಅವನು ನಿರ್ಮಲವಾದ ಭಕ್ತಿಯನ್ನೂ, ಶ್ರೇಷ್ಠವಾದ ಮುಕ್ತಿಯನ್ನೂ ಪಡೆಯುತ್ತಾನೆಂದು ಅಭಿಯುಕ್ತೋಕ್ತಿಯಿರುವದರಿಂದ ಸಾಕ್ಷಾತ್ ಈ ಗ್ರಂಥದಲ್ಲಿ ಉಕ್ತವಾದ ಧರ್ಮಾಚರಣೆಯಲ್ಲಿ ತತ್ಪರರಾದ ಶಿವಭಕ್ತರಿಗೆ ಶ್ರೇಷ್ಠವಾದ ಭಕ್ತಿ, ನಿರ್ಮಲವಾದ ಮುಕ್ತಿ ಶೀಘ್ರದಲ್ಲಿ ದೊರೆಯದಿರಲಾರವೆಂದು ಬೇರೆ ಹೇಳಬೇಕಾಗಿಲ್ಲ.

ಆದಕಾರಣ ತಾವು ಕೇಳಿಕೊಳ್ಳುವ ಅಪ್ಪಣೆಯನ್ನೇ ಶ್ರೀಮದ್ಭಗವತ್ಪಾದ ರೇವಣಸಿದ್ಧೇಶ್ವರ ಮಹಾಸ್ವಾಮಿಯು ಅಪ್ಪಣೆ ಕೊಟ್ಟಿರುವದೇನಂದರೆ,—"|| ಶಿಖಾಯಾಮೇಕಮೇಕಾಸ್ಯಂ ರುದ್ರಾಕ್ಷಂ ಧಾರಯೇದ್ಬುಧಃ ||" ಇತಿ. ವೀರಶೈವನಾದವನು ಶಿಖಾಧಾರಣವನ್ನು ಮಾಡಿಕೊಂಡು ಅಶಿಖೆಗೆ ಒಂದು ಅಥವಾ ಏದುಮುಖಗಳುಳ್ಳ ರುದ್ರಾಕ್ಷಿಯೊಂದನ್ನು ಧರಿಸಬೇಕೆಂಬಲ್ಲಿ, ಈ ರೀತಿ ಧರಿಸಿದ ಶಿವಭಕ್ತನಿಗೆ "ತಸ್ಯ ಪಾಪಕಥಾ ನಾಸ್ತಿ ಮೂಢಸ್ಯಾಪಿ ನಸಂಶಯಃ" ಪಾಪದ ಸುದ್ದಿಯೇ ಇಲ್ಲವೆಂದು ಮಹಾಗುರುವಿನ ಅಪ್ಪಣೆಯಿರುವದರಿಂದ ವೀರಶೈವರಾದವರು ಶಿಖೆಯನ್ನು ವಿಧಿವತ್ತಾಗಿ ಬಿಟ್ಟು ಶಿಖಿಯಲ್ಲೊಂದು ರುದ್ರಾಕ್ಷಿಯನ್ನು ಧರಿಸುವದಕ್ಕೆ ಪ್ರತಿಗುರುಗಳ ಅಪ್ಪಣೆ ಇರುವದಾಗಿ ಈ ಪತ್ರಮೂಲಕ ತಮ್ಮಗಳಿಗೆ ನಿರೂಪಿಸಿದೆ.

ತಾ|| 12-7-1930. ಮುಕ್ಕಾಂ—ಅಮಲಾಪುರ ತಾ|| ಕೊಡ್ತಗಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಹೊಸಪೇಟೆಯಲ್ಲಿ ಸ್ತುತ್ಯವಾದ ಕಾರ್ಯ.

ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನು ದೇವರು ಕೊಟ್ಟಿರುವ ಬುದ್ಧಿ, ಶಕ್ತಿ, ಧನ, ಸಾಹಸಾದಿಗಳನ್ನು ಸತ್ಕಾರ್ಯದಲ್ಲಿ ಉಪಯೋಗಿಸಿದರೆ ಸತ್ಫಲಗಳನ್ನೇ ಪಡೆಯುವನು, ದುಷ್ಕಾರ್ಯದಲ್ಲಿ ವಿನಿಯೋಗಿಸಿದರೆ ದುಷ್ಫಲಗಳನ್ನೇ ಪಡೆಯುವನು. ಇದಕ್ಕೆ ಮನಸ್ಸೇ ಮುಖ್ಯಕಾರಣ ಆದ್ದರಿಂದಲೇ "ಮನಏವಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂದು ಮಹಾತ್ಮರು ಸಾರಿರುವರು. ಆದರೆ ಸಧ್ಯಃ ಇಡೀಹಿಂದೂಸ್ಥಾನದೊಳಗೆ ದುರ್ಜನ್ಯದಂತೆ ವ್ಯಾಪಕವಾಗಿರುವ ಚಹಾ, ಕಾಫಿ, ಸಿಗರೆಟ್ ಮುಂತಾದ ನಿಷೇಧ ಪದಾರ್ಥಗಳ ಸೇವನೆಯು ದಿನೇ ದಿನೇ ಪ್ರಬಲವಾಗುತ್ತಿರುವದಷ್ಟೇ! ಈ ವಸ್ತುಗಳ ಸೇವನೆಯಿಂದ ದೇಹದಲ್ಲಿ ಅಜೀರ್ಣ ಜ್ವರ, ಶ್ವಾಸಕಾಸ, ವೀರ್ಯನಾಶ, ಕ್ಷಯ, ಅಪಸ್ಮಾರಾದಿರೋಗಗಳುಂಟಾಗುವವೆಂದು ಅನೇಕ ಡಾಕ್ಟರುಗಳು ಪ್ರಸಿದ್ಧಪಡಿಸಿದ್ದಾರೆ.

ಈ ವಿಷಯವನ್ನು ತಿಳಿದು ಬಳ್ಳಾರಿ ಡಿ|| ಹೊಸಪೇಟೆ ನಿವಾಸಿಗಳಾದಂಥ ಡಿ|| ಮು|| ಕೊ|| ವಕೀಲ ಉದ್ದಾನಪ್ಪನವರು, ಬಿ.ಎ. ಬಿ.ಎಲ್. ಮತ್ತು ಡಿ|| ಮು|| ಕೊ|| ವಕೀಲ ಸಿದ್ಧಯ್ಯನವರು, ಬಿ.ಎ. ಬಿ.ಎಲ್. ಮತ್ತು ಸಿಂಟಗಲ್ಲು ಚೆನ್ನವೀರಯ್ಯನವರು, ವಸ್ತ್ರದ ಮುದ್ದಯ್ಯನವರು, ಸಾಂಬಯ್ಯನವರು, ಮ|| ರಾ|| ಜಾಲಿ ಪೊಂಪಣನವರು ಮುಂತಾದ ವೀರಶೈವ ಮಂಡಲಿಯವರು ಮತ್ತು ಇನ್ನುಳಿದ ಮತದವರು ಸಹಿತ ಸೇರಿ ಸದರಿ ನಿಷೇಧವಸ್ತುಗಳನ್ನು ಯಾರೂ ಸ್ವೀಕರಿಸಬಾರದೆಂದು ವೀರಪ್ರತಿಜ್ಞೆಯನ್ನು ಮಾಡಿ ಮೊದಲು, ಹೋಟ್ಲುಗಳಿಗೂ ಬಹಿಷ್ಕಾರ ಹಾಕಿರುವರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. (ಆದರೆ ಜಾನ್ಸನ್ ಸಕ್ಕರೆಯನ್ನು ಕೂಡ ನಿಷೇಧಿಸಿ ಬಿಡಬಹುದಾಗಿತ್ತು. ಇದನ್ನು ಪರಿಪಾಟಿಯಿಂದ ಮರೆತಿರಬಹುದು, ಇನ್ನಾದರೂ ಮುಂದೆ ಜಾನ್ಸನ್ ಸಕ್ಕರೆಯನ್ನು ಬಿಟ್ಟುಬಿಡುವರೆಂದು ಸೂಚನೆ.)

ಈ ಮಹಾಶಯರ ಮೇಲ್ಪಂಕ್ತಿಯನ್ನನುಸರಿಸಿ ಪಿಕ್ಕ ಪಟ್ಟಣವಾಸಿಗಳಾದ ವೀರಶೈವರೂ ಹಾಗು ಇನ್ನುಳಿದ ಮತದವರೂ ನಡೆಯಲು ಸಂದೇಹವಿಲ್ಲ. ಮುಖ್ಯವಾಗಿ ಪಟ್ಟಣವಾಸಿಗಳಾದ ವಿದ್ಯಾವಂತರೂ ಪ್ರಮುಖರೂ, ಪದವೀಧರರೂ, ಸುಶಿಕ್ಷಿತರೂ, ದುಶ್ಚಟಗಳನ್ನೂ ದುಷ್ಪ್ರವೃತ್ತಿಗಳನ್ನೂ ತ್ಯಾಜ್ಯಮಾಡಿ, ಸದಾಚಾರನಿಷ್ಠರಾಗಿ ವರ್ತಿಸಿದ್ದಾದರೆ ಇನ್ನುಳಿದ ಚಿಕ್ಕ ಗ್ರಾಮಾನುಗ್ರಾಮಗಳ ಅಶಿಕ್ಷಿತ ಜನರೂ, ಸಾಧಾರಣ ಜನರೂ, ಇವರ ಸದ್ವರ್ತನೆಗಳ ನೋಡಿ ಭಯದಿಂದಲೂ, ಲಜ್ಜೆಯಿಂದಲೂ, ಶಿರಬಾಗಿ ನಡೆಯಬಹುದು ಹಾಗೆ ಮಾಡದೆ ನಾವೇ ದೊಡ್ಡವರೂ ಸುಶಿಕ್ಷಿತರೂ ಎಂದು ಮನಬಂದಂತೆ ವರ್ತಿಸಿದರೆ ಕೇಳುವದೇನು? ಅಶಿಕ್ಷಿತರಾದ ಜನರುಗಳಿಗೆಲ್ಲಾ ತಿಳಿದವರೇ ದುಶ್ಚಟಗಳನ್ನೂ ದುರಾಚಾರಗಳನ್ನೂ ಕಲಿಸಿಕೊಟ್ಟಂತಾಗಿ ಇಡೀ ದೇಶವು ಮತ್ತು ಸಮಾಜಗಳು ತುಂಬಾ ಶೋಚನೀಯಸ್ಥಿತಿಗೆ ಬರಲು ಮಾರ್ಗವಾಗುವದು. ಆದುದರಿಂದ ಈಗ ವೀರಪ್ರತಿಜ್ಞೆಯನ್ನು ಕೈಕೊಂಡಿರುವ ಹೊಸಪೇಟೆಯ ಮಹಾಶಯರು ಮುಂದಾದರೂ ತಮ್ಮ ಸಂಕಲ್ಪಕ್ಕೆ ಭಂಗತಂದುಕೊಳ್ಳದೆ, ಪೂರ್ಣಗೊಳಿಸಿ, ಸಮಾಜಕ್ಕೆ ಗೌರವವೂ ಹೊಸಪೇಟೆಗೆ ಕೀರ್ತಿಯೂ ಶಾಶ್ವತವಾಗಿ ನೆಲೆಗೊಳ್ಳುವಂತೆ ವರ್ತಿಸಿ ತುಂಬಾ ಕೀರ್ತಿಭಾಜನರಾಗಬೇಕೆಂದು ಸವಿನಯವಿನಂತಿ.

ಹಿತಚಿಂತಕ.

ಚಿತ್ರದುರ್ಗದ ತಾಲ್ಲೋಕು ಕೂನಬೇವುಗ್ರಾಮ.

ಈ ಗ್ರಾಮದ ಇನ್‌ಕಂಪ್ಲೀಟ್ ಮಿಡಲ್ ಸ್ಕೂಲ್ ಹೆ. ಮಾ. ವಿರುಪಾಕ್ಷಯ್ಯನವರು ಬಂದಲಾಗಾಯ್ತು, ದಿನೇ ದಿನೇ ಅಭಿವೃದ್ಧಿಗೆ ಬರುತ್ತಿದೆ. ಈ ಗ್ರಾಮದ ಮಹನೀಯರು ಪರಸ್ಥಳದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಅನ್ನೋದಕಗಳ ಅನುಕೂಲತೆಯು ತಕ್ಕ ವಸತಿಯನ್ನೂ ಏರ್ಪಾಡು ಮಾಡಿರುವುದು ಪುಣ್ಯಪ್ರದ ಸ್ತೋತ್ರಾರ್ಹವೂ ಆಗಿದೆ. ಪ್ರತಿವರ್ಷವೂ 30 ವಿದ್ಯಾರ್ಥಿಗಳು ಕಡಿಮೆಯಿಲ್ಲದೆ ಪರಸ್ಥಳದವರು ಇರುತ್ತಾರೆ. ಈ ಗ್ರಾಮದ ಮುಖಂಡರ ಪೈಕಿ ಗೊಂಚಿಕಾರ್ ಕೊಂಚೀರುದ್ರಪ್ಪನವರು, ಗೌಡರ ದೊಡ್ಡ ಹಟ್ಟಿಪ್ಪನವರು ಮುಂತಾದ ಪ್ರಮುಖರು ಈ ಗ್ರಾಮಕ್ಕೆ ಅಕಸ್ಮಾತ್ ಆಗಮಿಸಿದ್ದ ಶಿವಕಥಾ ವಿದ್ವಾನ್ ಬಸವಲಿಂಗಶಾಸ್ತ್ರಿ ಅರಸೀಕೆರೆ ಪಾವಗಡ ತಾಲ್ಲೂಕು. ಇವರಿಂದ ಪಂಚಾಕ್ಷರೀಮಹಾವ್ರತ ಗೌರೀವ್ರತ ಈ ಎರಡು ಕೀರ್ತನಗಳನ್ನು ಮಾಡಿಸಿದರು. ಶ್ರವಣಕ್ಕಾಗಿ ಎಡಬಲ ಗ್ರಾಮಗಳ ಸಹಸ್ರಾರು ಜನರು ಭಗವತ್ಕಥಾಶ್ರವಣವನ್ನು ಮಾಡಿ ಸಂತೋಷಿಸಿದರು. ಈ ಗ್ರಾಮದ ಭಕ್ತ ಬಂಧುಗಳಿಗೆ ಪರಮಾತ್ಮನು ಶ್ರೇಯಸ್ಸನ್ನು ಕೊಡುವುದಲ್ಲದೆ ಇದೇ ರೀತಿ ದೇವತಾಕಾರ್ಯ ಮಾಡುವ ಮನಸ್ಸನ್ನು ಉಂಟುಮಾಡಲೆಂದು ಹಾರೈಸುವ.

ಓರ್ವಗ್ರಾಮವಾಸಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಆಂದೋಲಿಕೋತ್ಸವ.

ಹೊನ್ನಾಳಿ ತಾಲೋಕು ಚಿಕ್ಕಬಾಸೂರು ಗಜರಾಜಗಿರಿ ಮುಕ್ತಿವನಂದೆ ಗುರುಪಂಡಿತಾರಾಧ್ಯ ಗವಿಮಠದ ಶ್ರೀಬೆನಕಾರಾಧ್ಯ ಶಿವಯೋಗಿ ವರ್ಯರನ್ನು ತಾ|| ೧೦-೧೦-೩೦ ರಲ್ಲಿ ಶಿಕಾರಿಪುರ ತಾಲೋಕು ಶಿರಾಳಕೊಪ್ಪದ ಶೆಟ್ಟಿ ಬೋರಿಂಗ್ ಬಸವಣ್ಣೆಪ್ಪಗೌಡರು ತಾವು ವಾಸವಾಗಿರುವ ಮಾಯಿಕಟ್ಟೆಕೊಪ್ಪದಲ್ಲಿರುವ ತಮ್ಮ ಗೃಹಕ್ಕೆ ಆಂದೋಲಿಕೋತ್ಸವದೊಡನೆ ಬಿಜಮಾಡಿಸಿಕೊಂಡು ಬಂದರು. ಎಡಬಲದ ಗ್ರಾಮದ ಜನಗಳು ದರ್ಶನೋದ್ದೇಶದಿಂದ ತಮ್ಮ ತಮ್ಮ ಗ್ರಾಮದ ದೇವತಾಸಂದಿಧ್ವಜ ತೋರಣಾದಿಗಳಿಂದಲೂ ಶ್ರೀ ಜಗದಾಚಾರ್ಯರ ಭಜನಾ ಸಂಘದೊಡನೆಯೂ ಬಂದಿದ್ದರು. ಉತ್ಸವವು ಗ್ರಾಮದ ಬೀದಿಗಳಲ್ಲಿ ಹೊರಟು ಸದ್ಭಕ್ತರ ಗೃಹದಲ್ಲಿ ಅಲಂಕರಿಸಲ್ಪಟ್ಟ ಪೀಠದಲ್ಲಿ ಶಿವಯೋಗಿಗಳು ಮೂರ್ತಿಮಾಡಿ ಭಕ್ತರಿಗೆ ಸದುಪದೇಶವನ್ನು ಮಾಡಿದರು. ಅನಂತರ ಬಂದ ಪ್ರಜೆಗಳಿಗೆಲ್ಲಾ ಅನ್ನಶಾಂತಿ ನಡೆದು ಪುನಃ ಸಭೆಯು ಸೇರಿ ಭಜನಾನಂದ ಕೂಟವು ನೆರವೇರಿಸಲಟ್ಟಿತು. ಸಂಘದವರಿಗೆ ಬಂಗಾರದ ಬಳೆಗಳು ಕೊಡಲ್ಪಟ್ಟವು. ೩ ಘಂಟೆ ಸಮಯಕ್ಕೆ ಜಟ್ಟಿಗಳ ಕುಸ್ತಿಯು ನಡೆದು ಗೆದ್ದವರಿಗೆ ಬೆಳ್ಳಿಬಳೆ ಬಂಗಾರದಬಳೆ ವಸ್ತ್ರಗಳೂ ಸಹ ಹಂಚಲ್ಪಟ್ಟವು. ೬ ಘಂಟೆಗೆ ಸರ್ವ ಭಕ್ತರು ಆಶೀರ್ವಾದಗಳಂ ಪಡೆದು ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಈ ಗುರುವರ್ಗದ ಮಹೋತ್ಸವನ್ನು ನೆರವೇರಿಸಿದ ಸದ್ಭಕ್ತರುಗಳಿಗೆ ಜಗದಾಚಾರ್ಯರು ಪುತ್ರಪೌತ್ರಾಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುವ.

ಪ್ರತ್ಯಕ್ಷದರ್ಶಿ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[15]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಕೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಗುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಎನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದಿರೋಣ ಗರ್ಭಪಾತ ಲಕರ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪ್ಲಕ್ಷಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಮಕ್ಕಳು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೆ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧವಾಗಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಸಹ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕ ಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗಬೇಕೆನ್ನುವ. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಚಿವಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಹಾಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರುತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[30] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕರಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[16]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವಿರೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ ಕಂಪೌಂಡು ಸಿರಪ್ ಕಾರ್ಡಸ್ ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, ಪಿತ್ತಶಮನ ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವವು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿಖಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಸ್ಸ್ಯು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸಂಬಂಧದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ ಆರೋಗ ಭಾಗ್ಯದ ನೀತಿಸೂತ್ರ ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[14] ಮಲೇರಿಯಾನ ಕಂಪೆನಿ, ನಂಬ್ರ 21 ಸುಂಪನಕಟ್ಟೆ, ಮಂಗಳೂರು, ದ. ಕ.

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸಮುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಜರಿಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

[53] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜ಼ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[17] ಪೋ. ಬಾ. ೫೧೦, ಮದರಾಸು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೩೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಮಾಹೇಶ್ವರ ದೀಕ್ಷಾವಿಧಿ ೩ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೩ನೆಯ ಆವೃತ್ತಿ	೧ ಆಣೆ
ಬಸವಧ್ವಾಂತ ದಿವಾಕರ	೪ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧ ಆಣೆ
ಶ್ರೀ ರೇಣುಕಾಚಾರ್ಯಶತಕಂ (೩ನೆಯ ಆವೃತ್ತಿ)	೧೦ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯ ಪ್ರಭಾಕರ	೩ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೩ ಆಣೆ
ವೀರಶೈವಮತವಿಮರ್ಶಾ	೪ ಆಣೆ
ವೈದಿಕವಾಙ್ಮಯರಹಸ್ಯ	೩ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೮ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೩ ಆಣೆ ೭ ಪೈ.
ಸಚಿತ್ರ ರೇಣುಕವಿಜಯ	೧ ರೂ.
ವೀರಶೈವಸಿದ್ಧಾಂತಸುಧಾಕರ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೩ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ನವಂಬರ್ ೧೯೩೦ [ಸಂಚಿಕೆ ೩೯

ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಜಾರ್ಜ್ ಸಾರ್ವಭೌಮರು ಮಾಡಿದ ಭಾಷಣ.

ನನ್ನ ಸಾಮ್ರಾಜ್ಯದ ರಾಜಧಾನಿಗೆ ಮಹಾಮಂಡಲೇಶ್ವರರನ್ನೂ, ಮುಖ್ಯಾಧಿಪತಿಗಳನ್ನೂ, ಭಾರತೀಯ ಪ್ರಜೆಗಳನ್ನೂ ಶುಭಾಗಮನಪೂರ್ವಕ ಸ್ವಾಗತಿಸಿ ನನ್ನ ಮಂತ್ರಿಗಳ ಹಾಗೂ ಪಾರ್ಲಿಮೆಂಟಿನ ಪಕ್ಷಗಳ ಪ್ರತಿನಿಧಿಗಳೊಂದಿಗೆ ಈ ಸಭೆಯ ಸಮಾರಂಭೋತ್ಸವವನ್ನು ನೆರವೇರಿಸುವುದು ಕೇವಲ ತೃಪ್ತಿಕರವಾದಂಥವಾಗಿದೆ. ಭರತಭೂಮಿಯಲ್ಲಿ ಚರಿತ್ರಾರ್ಹವಾದ ಎಷ್ಟೋ ಸಭೆಗಳನ್ನು ಚಕ್ರವರ್ತಿಯವರು ನಡೆಯಿಸಿರುತ್ತಾರೆ. ಆದರೆ ಆಂಗ್ಲೇಯ ಮತ್ತು ಭಾರತೀಯ ರಾಜನೀತಿಜ್ಞರೂ, ಮಹಾಮಂಡಲೇಶ್ವರರೂ ಒಂದು ಸ್ಥಳದಲ್ಲಿ ಒಂದು ಮೇಜಿನ ಸುತ್ತಲೂ, ಭಾರತವರ್ಷದ ಭವಿಷ್ಯ ಪ್ರಭುತ್ವ ಸಂಸ್ಥಾಪನೆಯ ವಿಷಯವನ್ನು ಚರ್ಚಿಸಿ ಅದರ ತಳಹದಿಯನ್ನು ಹಾಕಲು ಪಾರ್ಲಿಮೆಂಟಿನವರಿಗೆ ಸೂಚಿಸುವುದಕ್ಕೋಸ್ಕರ ಒಂದು ನಿರ್ಣಯವನ್ನು ಹೊಂದಲು ಈಗ ಸೇರಿರುವ ಹಾಗೆ ಹಿಂದೆ ಎಂದೂ ಸೇರಿರಲಿಲ್ಲ.

ಸುಮಾರು ಹತ್ತು ವರ್ಷಗಳ ಕೆಳಗೆ ರಾಜಕೀಯ ಪರಿಸ್ಥಿತಿಯ ಅಭಿವೃದ್ಧಿಗೋಸ್ಕರ ವಿಶಾಲ ಕಾಯಿದೆ ಕೌನ್ಸಿಲ್‌ಗಳು ಸ್ಥಾಪಿಸಲ್ಪಟ್ಟಾಗ ಅದರ ಮಹತ್ವವನ್ನು ವಿಶದಪಡಿಸಿದ್ದೆವು. ಹತ್ತು ವರ್ಷಗಳು ರಾಷ್ಟ್ರದ ಜೀವಿತದಲ್ಲಿ ಅತ್ಯಲ್ಪ ಕಾಲವಾಗಿದೆ. ಈ ಅತ್ಯಲ್ಪಾವಧಿಯಲ್ಲಿಯೇ ಭರತಖಂಡದಲ್ಲಿಯೂ, ಸಾಮ್ರಾಜ್ಯದ ಇತರ ರಾಷ್ಟ್ರಗಳಲ್ಲಿಯೂ, ಅಪೂರ್ವ ಜಾಗೃತಿಯೂ, ಆಕಾಂಕ್ಷೆಗಳೂ ಉತ್ಪನ್ನವಾಗಿವೆ. ಈಗ ಹತ್ತು ವರ್ಷಗಳ ಕೆಳಗೆ ಪ್ರಾರಂಭಿಸಿದ್ದನ್ನು ವಿಮರ್ಶಿಸಿ ಮುಂದಿನ ವೃದ್ಧಿಗೆ ತಕ್ಕ ಸಲಕರಣೆಗಳನ್ನು ಮಾಡುವುದು ಈಗಿನ ಜನಾಂಗಕ್ಕೆ ಆಶ್ಚರ್ಯವೆನಿಸಲಾರದು. ಅಂಥ ವಿಮರ್ಶೆಯು ನಮ್ಮಿಂದ ನಿಯಮಿಸಲ್ಪಟ್ಟ ಸ್ಟ್ಯಾಚ್ಯುಯೇಟರಿ ಕಮೀಷನ್ನಿಂದ ಮಾಡಲ್ಪಟ್ಟಿದೆ. ನಿಮ್ಮ ಮುಂದಿರುವ ಬಿಕ್ಕಟ್ಟಾದ ಪ್ರಶ್ನೆಯನ್ನು ನಿರ್ವಹಿಸಲು ಕಮೀಷನ್ ಕಾರ್ಯದ ಫಲವೂ, ಇತರ ಸಲಹೆಗಳೂ ಇರುತ್ತವೆ. ನೀವು ಕೈಕೊಂಡಿರುವ ಕಾರ್ಯವು ಅತ್ಯಂತ ಮಹತ್ವವಾದುದೆಂಬುದನ್ನು ನಾವು ಸೂಚಿಸುವ ಅವಶ್ಯಕತೆ ಇರುವುದಿಲ್ಲ.

ಬ್ರಿಟಿಷ್ ಸಾಮ್ರಾಜ್ಯದ ಮುಂದಿನ ಸ್ಥಿತಿಯು ನಿಮ್ಮ ಕಾರ್ಯದ ಫಲವನ್ನವಲಂಬಿಸಿದೆ ಎಂಬಂಶವನ್ನು ನೀವೆಲ್ಲರೂ ಬಲ್ಲವರೇ ಆಗಿದ್ದೀರಿ. ನೀವೆಲ್ಲರೂ ಏಕೀಭವಿಸಿ ಕೆಲಸ ಮಾಡಲು ಪ್ರಯತ್ನಿಸಿರುವುದು ಶುಭಸೂಚನೆ ಎಂದು ಭಾವಿಸುತ್ತೇನೆ. ನಿಮ್ಮ ಕಾರ್ಯಕಲಾಪಗಳು ಜರುಗುವುದನ್ನು ಆಸಕ್ತಿಯಿಂದಲೂ, ಉತ್ಸಾಹದಿಂದಲೂ, ಭರವಸೆಯಿಂದಲೂ ನಿರೀಕ್ಷಿಸುತ್ತಿರುತ್ತೇನೆ. ಭರತಖಂಡದ ನಮ್ಮ ಪ್ರಜೆಗಳನ್ನಾವರಿಸಿಕೊಂಡಿರುವ ಪ್ರಾಪಂಚಿಕ ಸ್ಥಿತಿಗಳು ನಮ್ಮ ಚಿತ್ತದಲ್ಲಿರುತ್ತವೆ. ಭರತಖಂಡದ ಬಹುಪಕ್ಷ (Majority) ಚಿಕ್ಕಪಕ್ಷ, ಪುರುಷರು, ಸ್ತ್ರೀಯರು, ಪುರನಿವಾಸಿಗಳು, ಒಕ್ಕಲಿಗರು ಮೊದಲಾದವರ ಹಕ್ಕುಬಾಧ್ಯತೆಗಳೂ ಸಹ ನಮ್ಮ ಚಿತ್ತದಲ್ಲಿರುತ್ತವೆ. ಸ್ವಪ್ರಭುತ್ವದ ನಿಜವಾದ ತಳಹದಿಯು ಈ ನಾನಾ ವಿಧವಾದ ಹಕ್ಕುಬಾಧ್ಯತೆಗಳನ್ನು ಒಪ್ಪಿ ಅದನ್ನು ಅನುಷ್ಠಾನದಲ್ಲಿ ತರುವುದೇ ಆಗಿರುವುದು. ಈ ತಳಹದಿಯ ಮೇಲೆ ಸಂಸ್ಥಾಪನೆಮಾಡುವ ಮುಂದಿನ ಭರತಖಂಡದ ಪ್ರಭುತ್ವವು ತನ್ನ ಗೌರವಾರ್ಹವಾದ ಆ ಕಾಂಕ್ಷೆಗಳನ್ನು ನೆರವೇರಿಸುವುದೆಂದು ಆಶಿಸುತ್ತೇನೆ. ನಮ್ಮ ಪ್ರೇಮಾಸ್ಪದರಾದ ಪ್ರಜೆಗಳ ಸೌಖ್ಯವನ್ನೂ, ಅಭಿವೃದ್ಧಿಯನ್ನೂ ಉಂಟುಮಾಡಿದ ಸತ್ಪುರುಷರೆಂದೂ ನಿಮ್ಮ ಹೆಸರುಗಳು ಇತಿಹಾಸದಲ್ಲಿ ಬರೆಯಲ್ಪಡಲೆಂದೂ ಹಾರೈಸುತ್ತೇನೆ. ನಿಮಗೆ ತಾಳ್ಮೆಯನ್ನೂ, ವಿವೇಕವನ್ನೂ, ಸದ್ಬುದ್ಧಿಯನ್ನೂ ಅಧಿಕವಾಗಿ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಬ್ಯಾ. ಸೇನಗುಪ್ತರವರ ಪತ್ನಿಯವರು (ಯುರೋಪಿಯನ್ ಸ್ತ್ರೀಯಳು) ತಮ್ಮ ಇಬ್ಬರು ಮಕ್ಕಳಿಗೆ ಜೈಲಿನಿಂದ ಬರೆದ ಪತ್ರ.

ಮುದ್ದಿನ ಮಕ್ಕಳೇ! ನಿಮ್ಮ ತಾಯಿಯು ದಸ್ತಗಿರಿಯಾದಳೆಂದು ನಿಮಗೆ ತಿಳಿದಿರಬೇಕು. ರಾತ್ರಿಯಲ್ಲಿ ಈ ವರ್ತಮಾನವನ್ನು ಕೇಳಿದಾಗ ನಿಮ್ಮ ಮನಸ್ಸಿಗೆ ಗಾಬರಿಯಾಗಿರಬಹುದು. ಏಕೆಂದರೆ, ನನ್ನ ದಸ್ತಗಿರಿಯಾಗುವ ಸಂಭವವಿದೆಯೆಂದು ನಿಮಗೆ ನಾನು ಮೊದಲು ತಿಳಿಸಿರಲಿಲ್ಲ. ನನ್ನ ವಿಷಯವಾಗಿ ಮನಸ್ಸಿಗೆ ವ್ಯಸನ ಹಚ್ಚಿಕೊಳ್ಳಬೇಡಿರಿ. ನನಗೆ ಯಾವ ತೊಂದರೆಯೂ ಇಲ್ಲ. ಜೈಲಿನ ಹೊರಗಿರುವವರಿಗೆ ಜೈಲಿನ ಹೆದರಿಕೆಯೇ ಹೊರತು ಒಳಗೆ ಹೋದಮೇಲೆ ಹೆದರಿಕೆಯು ಏನೂ ಇಲ್ಲ. ನನ್ನ ಜೊತೆಯಲ್ಲಿ ಇನ್ನಿಬ್ಬರು ಸ್ತ್ರೀಯರ ದಸ್ತಗಿರಿಯಾಯಿತು. ನಾವೆಲ್ಲಾ ಒಟ್ಟು ಈಗ 20 ಜನರಿದ್ದೇವೆ. ಶ್ರೀಮತಿ ಅಸಫ್‌ಅಲಿ ಮತ್ತು ನಾನು ಇಬ್ಬರು ಹೊರತಾಗಿ ಉಳಿದ ಎಲ್ಲರೂ ಪಂಜಾಬೀಸ್ತ್ರೀಯರು. ಶ್ರೀಮತಿ ಅಸಫ್‌ಅಲೀಯವರು ಬಂಗಾಳಿಯವರು. ಅವರ ಯಜಮಾನರೂ ಜೈಲಿನಲ್ಲಿದ್ದಾರೆ. ಆಕೆಯು ಇಲ್ಲದೇಹೋಗಿದ್ದರೆ ನಿನ್ನೆ ರಾತ್ರಿ ನನಗೆ ಬಹಳ ಬೇಜಾರಾಗುತ್ತಿತ್ತು. ಏಕೆಂದರೆ, ಉಳಿದವರೆಲ್ಲಾ ಹಿಂದೀ ಮಾತನಾಡುತ್ತಾರೆ. ನನಗೆ ಅದು ಚೆನ್ನಾಗಿ ಬರುವುದಿಲ್ಲ. ಡಾ|| ರಾಯ್‌ರವರನ್ನಿಟ್ಟಿದ್ದ ಕೊಠಡಿಯಲ್ಲೇ ನಾವೆಲ್ಲಾ ಇದ್ದೇವೆ. ನಿಮ್ಮ ತಂದೆಯವರಾದ ಶ್ರೀ ಸೇನಗುಪ್ತರವರು ಬೇರೆ ಕೊಠಡಿಯಲ್ಲಿ ಒಬ್ಬರೇ ಇದ್ದಾರೆ. ನಿನ್ನೆ ರಾತ್ರಿ ಹತ್ತುಘಂಟೆಯಲ್ಲಿ ಅವರನ್ನು ನೋಡಿದೆನು. ಈಚೆಗೆ ನೋಡಲಿಲ್ಲ. ನಿಮ್ಮ ತಂದೆಗೆ ಈ ದಿನ ಜಡ್ಜ್‌ಮೆಂಟ್ ಆಗಬಹುದು. ಅವರಿಗೆ ಬಹುಶಃ ಎರಡುವರ್ಷಗಳ ಸಜೆಯನ್ನು ಕೊಡಬಹುದು. ನನಗೂ 6 ತಿಂಗಳು ಸಜೆಯನ್ನು ಕೊಡಬಹುದು. ಆದಕ್ಕೆಲ್ಲಾ ನೀವು ಹೆದರಿಕೊಳ್ಳಬೇಡಿರಿ. ನೀವಿಬ್ಬರೂ ಮತ್ತು ನಿಮ್ಮ ಅಜ್ಜಿಯೂ ಎಲ್ಲಿ ಪೇಚಾಡುತ್ತೀರೋ ಎಂಬುದೇ ನನಗೆ ಯೋಚನೆ. ನನ್ನ ವಿಷಯಕ್ಕೇನೋ ನಾನು ಸಂತೋಷವಾಗಿಯೇ ಇದ್ದೇನೆ. ಇಲ್ಲಿ ಎಷ್ಟು ಶಾಂತಿಯಿದೆ ಎಂಬುದನ್ನು ನೀವು ಊಹಿಸಲಾರಿರಿ. ಎರಡು ದಿವಸ ಮುಂಚೆಯೇ ನನ್ನ ದಸ್ತಗಿರಿಯಾಗಬಹುದೆಂದು ನನಗೆ ತಿಳಿಯಿತು. ನನಗೇನೂ ಹೆದರಿಕೆಯಾಗಲಿಲ್ಲ. ಜೈಲಿನ ಅಧಿಕಾರಿಗಳು ನನ್ನನ್ನು ಬಹಳ ಮರ್ಯಾದೆಯಿಂದ ಕಾಣುತ್ತಿದ್ದಾರೆ.

ನಿಮ್ಮ ಪ್ರೀತಿಪಾತ್ರಳಾದ ತಾಯಿ.

ಸ್ವೀಕಾರ.

ವಿಜಾಪೂರ ಡಿಸ್ಟ್ರಿಕ್ಟ ಕೆರೂರು ಇಂಗ್ಲೀಷು ಸ್ಕೂಲಿನ ಹೆಡ್ಮಾಸ್ತರಾದ ವೇ|| ಹಿರೇಮಠದ ಬಸವಲಿಂಗಯ್ಯನವರು ತಮ್ಮ ಪತ್ನಿಯವರ ಎಂಟನೆಯ ತಿಂಗಳಿನ ಗರ್ಭಲಿಂಗಧಾರಣವನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀ ಗದಿಗೆಪ್ಪನವರ ಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿಸ್ಟ್ರಿಕ್ಟ ತೀರ್ಥಹಳ್ಳಿ ತಾಲ್ಲೂಕು ಮಳಲಿಮಠದಲ್ಲಿ ನೆರವೇರಿದ ಶಿವಲಿಂಗ ಪ್ರತಿಷ್ಠಾಮಹೋತ್ಸವಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ವೇ|| ಶಿವಕಥಾಪಂಡಿತ ಜಿ. ನಂಜುಂಡಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಪೋರ್ತುಗೀಜ ಸಂಸ್ಥಾನ ವಾಸ್ಕೋಡಿಗಾಮಾ ಪಟ್ಟಣದಲ್ಲಿರುವ ಶ್ರೀಯುತ ವೀರಯ್ಯ ಕಾಗೋಟಿ ಎಂಬವರು ಪ್ರಭಾ ಪೋಷಣೆಕ್ಕೋಸ್ಕರ 1 ರೂ. ಯನ್ನು ಕಳುಹಿಸಿದ್ದಾರೆ.

ದಾವಣಗೆರೆ ಟೌನ್ ನಿವಾಸಿಗಳಾದ ಮ|| ರಾ|| ಯಜಮಾನ್ ಬೆಳ್ಳೂಡಿಗುರುಸಿದ್ಧಪ್ಪನವರ ಧರ್ಮಪತ್ನಿಯವರು ಕಾರ್ತಿಕ ಶು|| ೧೦ ದಿವಸ ಪುತ್ರರತ್ನವನ್ನು ಪಡೆದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ವೇ|| ಅವರಗೊಳ್ಳಮಠದ ಗುರುಪಾದಯ್ಯನವರ ದ್ವಾರಾ ತಲ್ಪಿರುತ್ತದೆ.

ರಾಯಚೂರುಜಿಲ್ಲಾ ಕುಷ್ಟಗಿ ಗ್ರಾಮದ ಸಿಳ್ಳಿ ಬಸೆಟ್ಟೆಪ್ಪ ಎಂಬಾತನನ್ನು ಶುದ್ಧಮಾಡಿದ ಸಂದರ್ಭದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಶ್ರೀ ಉಜ್ಜಯಿನೀ ಜಗದ್ಗುರುಗಳವರು ಮಡಕಶಿರಾ ತಾಲ್ಲೂಕು ಅಮರಾಪುರಗ್ರಾಮಕ್ಕೆ ದಯಮಾಡಿಸಿದ ಸಮಯದಲ್ಲಿ ಸದರಿ ಗ್ರಾಮದ ಭಕ್ತರು ಸಮರ್ಪಿಸಿದ 1 ರೂ. ಯು ಮ|| ರಾ|| ಸಿದ್ಧಲಿಂಗಪ್ಪ ಗೊಂಚಿಗಾರ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಮಳಲಿಮಠದಲ್ಲಿ ಶಿವಲಿಂಗಪ್ರತಿಷ್ಠೆ, ಗಣಾರಾಧನೆ ಮತ್ತು ಧಾರ್ಮಿಕಸಭೆ.

ಮೇಲ್ಕಂಡ ಶ್ರೀ ಮಳಲಿಮಠದ ಪೂಜ್ಯಪಾದರಾದ ನಾಗಾರ್ಜುನ ಶಿವಾಚಾರ್ಯರೆಂಬವರು ಪೂರ್ವದಲ್ಲಿ ಈ ಮಠಕ್ಕೆ ಅಧಿಕಾರಿಗಳಾಗಿದ್ದು, ಪೂಜಾನುಷ್ಠಾನಗಳಲ್ಲಿ ಸುಪ್ರಸಿದ್ಧರಾಗಿ ಮಹಾಮಹಿಮರೆಂದೆನಿಸಿಕೊಂಡಿದ್ದರು. ಈ ಮಹಾತ್ಮರ ವಿಚಾರದಲ್ಲಿ ಈ ಹೊತ್ತಿನವರೆಗೂ ಸರ್ವರೂ ಇವರ ಪಾದಸ್ಮರಣೆಯನ್ನು ಮಾಡುತ್ತಿರುವರು. ಈ ಗುರುವರ್ಯರು ತಮ್ಮ ಶಿವಲಿಂಗ ಪೂಜಾನಂತರ ಪ್ರಸಾದ ಸ್ವೀಕರಿಸುವ ಸಮಯದಲ್ಲಿ ಒಂದು ಸರ್ಪವು ಪ್ರಸಾದದಲ್ಲಿ ಬೀಳಲು ಅದನ್ನು ಈ ಮಹಿಮರು ಪ್ರಸಾದವೆಂದೇ ಸ್ವೀಕರಿಸಲು ಇವರ ಮಹಿಮೆಯಿಂದ ಅದು ಕರ್ಣದಲ್ಲಿ ಬಂದಿತೆಂದೂ ಹೇಳುವ ವಾಡಿಕೆಯಿರುವುದು. ಈ ಮಠದಲ್ಲಿ ಏನಾದರೂ ಆಚಾರಭ್ರಷ್ಟವಾದಲ್ಲಿ ಸರ್ಪಗಳು ಈಗಲೂ ಪ್ರತ್ಯಕ್ಷ ಕಾಣಿಸಿಕೊಳ್ಳುತ್ತಿರುವವು. ಆದ್ದರಿಂದ ಜನರು ಬಹು ಭಯಭಕ್ತಿಯಿಂದ ನಡೆದುಕೊಳ್ಳುತ್ತಿರುವರು. ಅಂದಿನಿಂದಲೂ ಈ ಪೀಠಕ್ಕೆ ಅಧಿಕಾರಿಗಳಾಗಿ ಬಂದ ಸ್ವಾಮಿಗಳವರಿಗೂ ನಾಗಾರ್ಜುನ ಸ್ವಾಮಿಗಳೆಂದೇ ಕರೆಯುತ್ತಿರುವರು. ಹಾಲಿ ಅಧಿಕಾರಿಗಳಾಗಿರುವ ಗುರುನಾಗಾರ್ಜುನ ಸ್ವಾಮಿಗಳವರು, ಯೋಗ್ಯರೂ, ವಿದ್ಯಾವಂತರೂ, ಆಚಾರಶೀಲರೂ ಆಗಿರುವರು. ಇವರಿಗಿಂತಲೂ ಹಿಂದಿನ ಮರಿನಾಗಾರ್ಜುನಸ್ವಾಮಿಗಳವರು ೨೫ ಸಾವಿರ ರೂಪಾಯಿಗಳ ವೆಚ್ಚದಿಂದ ಮಠವನ್ನು ಹೊಸದಾಗಿ ಕಟ್ಟಿಸಿರುವರು. ಈ ಮಠಕ್ಕೆ ಮೈಸೂರು ಪ್ರಾಂತದಲ್ಲಿ ಅನೇಕ ಜನ ಶಿಷ್ಯರಿರುವುದಲ್ಲದೆ ಧಾರವಾಡ ಡಿಸ್ಟ್ರಿಕ್ಟ್, ನೈಜಾಂ ಇಲಾಖೆಗಳಲ್ಲಿಯೂ ಸಹ ಶಿಷ್ಯರಿರುವರು. ಒಟ್ಟಿನಮೇಲೆ ಈ ಮಠವು ಸಂಪತ್ತಿನಿಂದಲೂ, ಪೂಜಾವೈಭವದಿಂದಲೂ, ಶಿಷ್ಯಸಮುದಾಯದಿಂದಲೂ ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಶಾಖಾಮಠವಾಗಿರುವುದರಿಂದಲೂ ಮಹತ್ವವುಳ್ಳದ್ದಾಗಿರುವುದು. ಪೂರ್ವದ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಕರ್ತೃಗದ್ದುಗೆಯು ಪ್ರತ್ಯೇಕವಾಗಿದ್ದು ಅದು ಈಚೆಗೆ ಶಿಥಿಲವಾಗಿತ್ತು. ಈ ಸಮಯದಲ್ಲಿ ಈಗಿನ ಗುರುನಾಗಾರ್ಜುನಸ್ವಾಮಿಗಳವರು ಧಾರವಾಡ ಜಿಲ್ಲಾ ಬಂಕಾಪುರಕ್ಕೆ ದಯಮಾಡಿಸಿದ ಕಾಲದಲ್ಲಿ ತಮ್ಮ ಶಿಷ್ಯರಾದ ಹಂದಿಗನೂರು ಸಂಸ್ಥಾನದ ದೇಸಾಯಿಗಳವರಲ್ಲಿ ಪ್ರಸ್ತಾಪಿಸಿದ್ದರಲ್ಲಿ, ಮ|| ರಾ|| ಶ್ರೀಮಂತ, ಕೈ|| ಬಸವಲಿಂಗಪ್ಪ ದೇಸಾಯಿರವರ ಕುಮಾರರಾದ ಶ್ರೀಮಂತ ಬಸವಂತರಾವ್, ಮಲ್ಲಿಕಾರ್ಜುನಪ್ಪ, ಮತ್ತು ಸಿದ್ಧಲಿಂಗಪ್ಪ ಉರುಫ್ ಅಪ್ಪಾಸಾಹೇಬ್ ದೇಸಾಯಿ ವ, ನಾಡುಕರ್ಣಿ ಪರಗಣೆ ವಾ ಮಲೆ ಬಂಕಾಪೂರ ಸಂಸ್ಥಾನ ಹಂದಿಗನೂರು ಮೊಕ್ಕಾಂ ಬಂಕಾಪೂರ ಇವರು ತಮ್ಮ ಮಾತಾಪಿತೃಗಳಾದ ಕೈ|| ಬಸವಲಿಂಗಪ್ಪ ದೇಸಾಯರ ಹಾಗೂ ಕೈ|| ಚನ್ನಮ್ಮ ದೇಸಾಯಿಣಿಯವರ ಸ್ಮರಣಾರ್ಥವಾಗಿ ಸಾವಿರಾರು ರೂಪಾಯಿಗಳ ವೆಚ್ಚದಿಂದ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಕರ್ತೃಗದ್ದುಗೆಯ ಮಠವನ್ನು ಜೀರ್ಣೋದ್ಧಾರಮಾಡಿಸಿದ್ದಲ್ಲದೆ ಇದೇ ಪ್ರಮೋದನಾಮಸಂವತ್ಸರದ ಕಾರ್ತಿಕ ಶುದ್ಧ ೧೩ ತಾ|| ೩೧-೧೧-೩೦ ನೆ ಸೋಮವಾರ ಸೂರ್ಯೋದಯಾದಿ ಘಟಿಕಾ ೫೯-೨೫ ಕ್ಕೆ ಸಲ್ಲುವ ತುಲಾ ಲಗ್ನದಲ್ಲಿ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಗದ್ದುಗೆಯ ಮೇಲೆ ಶಿವಲಿಂಗಪ್ರತಿಷ್ಠೆಯನ್ನು ಮಾಡಿಸಲು ಕುಟುಂಬ ಪರಿವಾರ ಸಮೇತರಾಗಿ ಮುಂಚಿತವಾಗಿಯೇ ಬಂದು ಶ್ರೀಗಳವರ ಸಮಕ್ಷಮ ತರೀಕೆರೆ ಹಿರೇಮಠದ ಕಲ್ಲಿನಾಥ ದೀಕ್ಷಿತರ ಪೌರೋಹಿತ್ಯದಿಂದ ವಿಧ್ಯುಕ್ತಪ್ರಕಾರವಾಗಿ ಶುಭಲಗ್ನದಲ್ಲಿ ಈ ಮಹತ್ಕಾರ್ಯವನ್ನು ನೆರವೇರಿಸಿ ತತ್ಸಂಬಂಧವಾದ ಶ್ರೀ ರುದ್ರಾಭಿಷೇಕ ಗುರುಪಾದಪೂಜಾಮಾಹೇಶ್ವರಾರಾಧನೆಯನ್ನು ಮಂಗಳವಾರ ನಡೆಯಿಸಿದರು. ಅದೇ ದಿವಸ ಸಾಯಂಕಾಲ ಶ್ರೀ ಗುರುನಾಗಾರ್ಜುನಸ್ವಾಮಿಗಳವರ ಆಂದೋಲಿಕೋತ್ಸವ, ಕರ್ತೃಸ್ಥಳದಲ್ಲಿ ಕೃತ್ತಿಕೋತ್ಸವ, ಅನಂತರ ಮಂಗಲಾರಾಧನಪೂರ್ವಕ ಕಾರ್ಯವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಕಾಲಕ್ಕೆ ಸರಿಯಾಗಿ ದೊಡ್ಡಗುಣಿ, ಕೌಲೇದುರ್ಗ, ದುಮ್ಮಹಳ್ಳಿ ಮುಂತಾದ ಗ್ರಾಮಗಳ ಪಟ್ಟಾಧ್ಯಕ್ಷ ಶಿವಾಚಾರ್ಯರವರು ಆಗಮಿಸಿದ್ದರಲ್ಲದೆ ಸ್ಥಲ ಪರಸ್ಥಲದಿಂದ ಸಾವಿರಾರು ಜನ ಭಕ್ತಮಾಹೇಶ್ವರರೂ ಮಹಿಳೆಯರೂ ಆಗಮಿಸಿದ್ದರು. ದೊಡ್ಡಗುಣಿ ಬೃಹನ್ಮಠದ ಶ್ರೀ ಗುರುಲಿಂಗ ಶಿವಾಚಾರ್ಯರವರ ಅಧ್ಯಕ್ಷತೆಯಲ್ಲಿ ವಿಶ್ವಪೂಧಾರ್ಮಿಕಸಭೆಯು ನಡೆಯುತ್ತಲಿದ್ದಿತು. ಸಭೆಯಲ್ಲಿ ಹುಣಿಸಿಗಟ್ಟದಮಠದ ಕೀರ್ತನಾಲಂಕಾರ ವೇ|| ಜಿ. ನಂಜುಂಡಾರಾಧ್ಯರಿಂದ ಶಿವಕೀರ್ತನೆಯೂ, ಹಾವೇರಿ ಸಂಗೀತವಿದ್ವಾನ್ ವೇ|| ಜಯದೇವಸ್ವಾಮಿ ಇವರ ಶಿಷ್ಯ ಅಂಧಕನಾದ ಗುರುಶಾಂತಮೂರ್ತಿ ಈ ಉಭಯರ ಸುಶ್ರಾವ್ಯವಾದ ಸಂಗೀತವೂ, ಪೂಜ್ಯಪಾದರ ವ್ಯಾಖ್ಯಾನವೂ ಜರಗಿದವು. ಆರಾಧ್ಯರ ಕೀರ್ತನದಿಂದ ಜನಗಳಲ್ಲಿ ನೀತಿಯೂ, ರಾಷ್ಟ್ರಭಕ್ತಿಯೂ ಉಂಟಾದುದಲ್ಲದೆ ಮಲನಾಡಿನಲ್ಲಿ ನಡೆಯುತ್ತಲಿದ್ದ ಕನ್ಯಾಶುಲ್ಕವಿಚಾರದಲ್ಲಿ ಅನೇಕ ವಿಷಯಗಳನ್ನು ಪ್ರತಿಪಾದಿಸಿದ್ದರಲ್ಲಿ ಸರ್ವರಲ್ಲಿಯೂ ಪರಿಣಾಮವಾಗಿ ಇನ್ನು ಮುಂದೆ ಹಣವು ತೆಗೆದುಕೊಳ್ಳುವುದಿಲ್ಲವೆಂದು ಒಪ್ಪಿದರು. ಹುಂಚದ ಸರಾಫ್ ಹುಚ್ಚರಾಯಪ್ಪ ದೈವಜ್ಞ ಇವರು ಶಿಲ್ಪಶಾಸ್ತ್ರೋಕ್ತಪ್ರಕಾರ ಪ್ರತಿಷ್ಠಾಗೊಳಿಸಿರುವ ಶಿವಲಿಂಗವನ್ನು ಶ್ರೀ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯ ಆಕಾರವಾಗಿ ವಿಗ್ರಹವನ್ನು ಅಂದವಾಗಿ ತಯಾರಿಸಿ ಮಸ್ತಕ ಹಿಂಭಾಗದಲ್ಲಿ ಸರ್ಪವನ್ನು ಮಾಡಿ ಪ್ರತ್ಯಕ್ಷ ನಾಗಾರ್ಜುನ ಶಿವಾಚಾರ್ಯರೋ ಎಂಬುವಂತೆ ಶಿಲೆಯಲ್ಲಿ ಬಹಳ ಮೆಹನತ್ತಿನಿಂದ ಮಾಡಿಕೊಟ್ಟಿದ್ದಕ್ಕೋಸ್ಕರ ಸದರಿಯವರಿಗೆ ಒಂದು ಸುವರ್ಣಪದಕವೂ ೫೦ ರೂಪಾಯಿಗಳೂ ಆಶೀರ್ವದಿಸಲ್ಪಟ್ಟವು. ತರೀಕೆರೆ ತಾ|| ಹಾದಿಕೆರೆಯಿಂದ ಬಂದಿದ್ದ ನಾದ್ಯದ ನಂಜಪ್ಪನಿಗೂ, ಕರಡೀಮಜಲೀಬಾರಿಸುವ ಚನ್ನಪ್ಪನಿಗೂ ಸುವರ್ಣಪದಕವು ಕೊಡಲ್ಪಟ್ಟಿತು. ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿಯವರು ತಮ್ಮ ಧರ್ಮಪತ್ನಿ ಶ್ರೀಮತಿ ರಮಾಬಾಯಿಯವರೂ ಬೆಳ್ಳಿಹಿಡಿಕೆಗಳನ್ನು ಹಾಕಿದ ಎರಡು ಬೀಸೂ ಚೌರಿಗಳನ್ನು ಮಠಕ್ಕೆ ಒಪ್ಪಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲಪೂರ್ವಕವಾಗಿ ಕಾರ್ಯವು ಸಾಂಗವಾಯಿತು. ಮೇಲ್ಕಂಡ ಮಹತ್ಕಾರ್ಯದಲ್ಲಿ ಮ|| ರಾ|| ಹೊದಲದ ಹಾಲಪ್ಪಗೌಡರು, ಕ್ಯಾರಂದೂರು ಮ|| ರಾ|| ಅಯ್ಯಪ್ಪಗೌಡರು, ಭಾಂಡ್ಯದ ಮ|| ರಾ|| ಸಾ|| ರುದ್ರಪ್ಪಗೌಡರು, ಕೊಲೂರಪ್ಪಗೌಡರು, ಕೊಟೀಗದ್ದೆ ಮ|| ರಾ|| ನಾಗಪ್ಪಗೌಡರು, ಜಳಬಯಲು ಮ|| ರಾ|| ಮಲ್ಲಪ್ಪಗೌಡರು, ಮ|| ರಾ|| ಹಲವನಹಳ್ಳಿ ಬಸವಪ್ಪಗೌಡರೇ ಮುಂತಾದ ಪ್ರಮುಖರು ಮುಂದೆ ನಿಂತು ಬಂದಜನಗಳ ಆದರಾತಿಥ್ಯಗಳನ್ನು ಮಾಡಿ ಸರ್ವರ ಸಂತೋಷಕ್ಕೆ ಪಾತ್ರರಾದರು. ಮಠದ ಶ್ರೀ ಗುರುನಾಗಾರ್ಜುನ ಶಿವಾಚಾರ್ಯರವರು ತಮ್ಮ ಕಾರಭಾರಿಗಳಾದ ವೇ|| ನಂಜುಂಡಶಾಸ್ತ್ರಿಗಳವರ ದ್ವಾರಾ ಸುತ್ಯವಾದ ಏರ್ಪಾಟು ಮಾಡಿಸಿದ್ದರು. ಈ ಶಿವಲಿಂಗ ಪ್ರತಿಷ್ಠಾಕಾರ್ಯವು ಗುರುಭಕ್ತಿ ಶಿಖಾಮಣಿಗಳಾದ ಶ್ರೀಮಂತ ದೇಸಾಯಿಯವರ ಕೋರಿಕೆಯಂತೆ ನಿರ್ವಿಘ್ನವಾಗಿ ಜರಗಿದ್ದಕ್ಕೋಸ್ಕರ ಬಂದ ಗುರುಮೂರ್ತಿಗಳೂ ಮಹಾಜನಗಳೂ ದೇಸಾಯಿಯವರಿಗೆ ಮಂಗಲವನ್ನು ಕೋರಿ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾಸ್ವಾಮಿ ಮಹಾರಾಜಕೀ ಜೈ" ಎಂಬುದಾಗಿ ಜಯಘೋಷಮಾಡಿದರು. ತರುವಾಯ ಪಂಚಾಚಾರ್ಯ ಪ್ರಭಾಪತ್ರಿಕೆಗೆ 2 ರೂಪಾಯಿಗಳನ್ನೂ, ಕಾಶೀಜಗದ್ಗುರು ವಿಶ್ವಾರಾಧ್ಯಗುರುಕುಲದಲ್ಲಿ ಅಧ್ಯಯನಮಾಡುತ್ತಲಿರುವ ಮುದೇನೂರು ಬೃಹನ್ಮಠದ ವಾಗೀಶಶಿವಾಚಾರ್ಯರವರಿಗೆ 7 ರೂಪಾಯಿಗಳನ್ನೂ ತೆಗೆದು ಕಳುಹಿಸಲಾಯಿತು. ಮಹಾಶಯರೇ! ಶ್ರೀಮಂತ ಬಸವಂತರಾವ್ ದೇಸಾಯಿಗಳವರು ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿಗಳವರು ಕುಟುಂಬಪರಿವಾರದೊಂದಿಗೆ ತಮ್ಮ ಅರಮನೆ ಪುರೋಹಿತರಾದ ವೇ|| ದೇಸಾಯಿಮಠದ ಮುರುಘಯ್ಯನವರೊಂದಿಗೂ ಬಂದು ಶ್ರೀ ಶಿವಲಿಂಗ ಪ್ರತಿಷ್ಠಾಕಾರ್ಯವನ್ನು ನೆರವೇರಿಸಿ ಗುರುಕಟಾಕ್ಷಕ್ಕೆ ಪಾತ್ರರಾಗಿ ತಮ್ಮಗಳ ಯಥಾರ್ಥ ಗುರುಭಕ್ತಿಯನ್ನು ಪ್ರದರ್ಶಿಸಿ ಉಳಿದ ಭಕ್ತಮಹಾಜನರಿಗೆ ಅನುಕರಣೀಯರಾಗಿರುವರು. ಇದಲ್ಲವೇ ನಿಜವಾದ ಗುರುಭಕ್ತಿಯು? ಈ ಮಹಾಶಯರಿಗೂ ಇವರ ಪತ್ನೀಪುತ್ರಾದಿಗಳಿಗೂ ಆಯುರಾರೋಗ್ಯ ಸತ್ಸಂತಾನಾಭಿವೃದ್ಧಿಯನ್ನು ಶ್ರೀ ಜಗದ್ಗುರು ರೇಣುಕನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಗದಿಗಯ್ಯ, ಮುಳುಕೇರಿ ಹಿರೇಮಠ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಜಗಲೂರು ಸಾಹುಕಾರ ಸಣ್ಣತಮ್ಮಣ್ಣನವರ ಧರ್ಮಸತ್ರದಲ್ಲಿ ಪ್ರಥಮ ಪ್ರವೇಶೋತ್ಸವವು.

ಈ ಜಗಲೂರು ಟೌನಿನಲ್ಲಿ ಮ|| ರಾ|| ಸಣ್ಣತಮ್ಮಣ್ಣನವರು ಧರ್ಮಾರ್ಥವಾಗಿ ಒಂದು ಸತ್ರವನ್ನು ಕಟ್ಟಿಸಬೇಕೆಂಬ ಸಂಕಲ್ಪದಿಂದ ಈಗ್ಗೆ ಕೆಲವು ದಿವಸಗಳ ಹಿಂದೆ ಪ್ರಾರಂಭಿಸಿ, ಸುಮಾರು ಮುಕ್ಕಾಲುಭಾಗ ಕಟ್ಟಡವನ್ನು ಮಾಡಿಸಿ, ಬಾವಿ ವಗೈರೆ ಕೆಲಸಗಳನ್ನು ಸಹ ಮಾಡಿಸಿದ್ದರು. ಇವರು ಕಾರಣಾಂತರದಿಂದ ಈ ಜಗಲೂರು ಟೌನಿನ ವಾಸವನ್ನು ಬಿಟ್ಟು, ಕಲ್ಲೇದೇವರಪುರಕ್ಕೆ ಹೋಗಿ ವಾಸಮಾಡಿದ್ದರಿಂದಲೋ ಗೃಹಕೃತ್ಯಗಳ ಇತರ ಅನಾನುಕೂಲಗಳಿಂದಲೋ ಈ ಕಟ್ಟಡವು ಸಂಪೂರ್ಣವಾಗದೆ ಅರ್ಧವಾಗಿಯೇ ಇತ್ತು. ಈಚೆಗೆ ಈರೀತಿ ಧರ್ಮಕ್ಕೋಸ್ಕರ ಮಾಡಿದ ಕಟ್ಟಡವು ಅರ್ಧವಾಗಿ ನಿಂತುಹೋಯಿತಲ್ಲಾ ಎಂಬ ವ್ಯಾಕುಲವು ಹುಟ್ಟಿ, ಈ ಜಗಲೂರಲ್ಲಿ ಅವರ ಮಕ್ಕಳಾದ ಜಿ. ಎಸ್. ಮಹಾಲಿಂಗಪ್ಪನವರು ಆಡಳಿತವನ್ನು ನೋಡುತ್ತ ಇದ್ದುದರಿಂದ, ತಂದೆಯವರಾದ ಶ್ರೀ|| ಸಣ್ಣತಮ್ಮಣ್ಣನವರು ಈ ಕಟ್ಟಡವನ್ನು ಶೀಘ್ರದಲ್ಲಿಯೇ ಸಂಪೂರ್ಣಗೊಳಿಸಬೇಕೆಂದು ಅಪ್ಪಣೆ ಮಾಡಿದ ಪ್ರಕಾರ ಪಿತ್ರಾಜ್ಞಾಪರಿಪಾಲಕರಾದ ಸದರಿ ಮಹಾಲಿಂಗಪ್ಪನವರು ಪುನಃ ಪ್ರಾರಂಭಿಸಿ, ಕಟ್ಟಡವನ್ನು ಪೂರ್ಣಗೊಳಿಸಿದರು. ಈ ಕಟ್ಟಡದ ಸುತ್ತಲೂ, ಆವರಣವು ಮಾಡಲ್ಪಟ್ಟಿತು. ಪರಸ್ಥಳಕರಿಗೆ ಅನುಕೂಲವಾಗುವ ಹಾಗೆ ಅನೇಕ ಮಂಟಪಗಳು ವಿರಚಿಸಲ್ಪಟ್ಟಿವೆ. ಈ ಆವರಣದ ಅಂತಃಪ್ರದೇಶದಲ್ಲಿ ರುಚಿಕರವಾದ ಶುದ್ಧಜಲದಿಂದ ಭರಿತವಾಗಿಯೂ, ಶಿಲಾಸೋಪಾನಗಳಿಂದ ರಮಣೀಯವಾಗಿಯೂ, ಸರ್ವಜನರ ಸ್ನಾನಪಾನಾದಿಗಳಿಗರ್ಹವಾಗಿಯೂ ಇರುವ ಬಾವಿಯೂ, ಶಿವಪೂಜಾರ್ಹಗಳಾದ ಬಿಲ್ವ ಪತ್ರೆ ಮೊದಲಾದ ತರುಸಸಿಗಳಿಂದೊಪ್ಪುವ ಪೂದೋಟವೂ ಕಂಗೊಳಿಸುತ್ತಿರುವವು. ಈ ಭವ್ಯತರವಾದ ಧರ್ಮಸತ್ರವು ಎರಡಂತಸ್ತುಗಳಿಂದ ಶೋಭಿಸುತ್ತಿರುವುದು. ಈ ಧರ್ಮಸತ್ರದ ಪ್ರಥಮ ಪ್ರವೇಶವನ್ನು, ಮ|| ರಾ|| ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪುಟಿ ಕಮಿಷನರರಾದ ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್ರವರ ಹಸ್ತದಿಂದ ತಾ|| 2-11-1930 ನೇ ಭಾನುವಾರ ಮಹಾಸಂಭ್ರಮದಿಂದ ನೆರವೇರಿಸಿದರು. ಆ ದಿವಸ ಸ್ಥಳದ ಮತ್ತು ಸುತ್ತಮುತ್ತಲಿನ ಅನೇಕ ಗ್ರಾಮಗಳ ಪ್ರಮುಖರೂ, ಡಿಸ್ಟ್ರಿಕ್ಟ್‌ಬೋರ್ಡ ಪ್ರಸಿಡೆಂಟರೂ, ವೈಸ್‌ಪ್ರಸಿಡೆಂಟರೂ, ಡಿಸ್ಟ್ರಿಕ್ಟ್‌ಫಾರೆಸ್ಟ್ ಆಫೀಸರರೂ, ವೆಟರ್ನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರೂ, ಇನ್ನು ಮುಂತಾದ ಮಹಾಜನರೂ ಈ ಮಹಾಕಾರ್ಯಕ್ಕೆ ಆಗಮಿಸಿದ್ದರು. ಸತ್ರದ ಮುಂಭಾಗವೂ ಸುತ್ತಲಿನ ಪ್ರದೇಶಗಳೂ, ಸುಂದರವಾದ ಹಂದರದಿಂದಲೂ, ತಳಿರು ತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಆ ದಿನ ಉದಯಕಾಲಕ್ಕೆ ಚಿತ್ರದುರ್ಗದಿಂದ ಬಂದು, ಟ್ರಾವಲರ್ಸ್ ಬಂಗಲೆಯಲ್ಲಿ ಮೊಕ್ಕಾಂಮಾಡಿದ್ದ ಡೆಪುಟಿಕಮಿಷನರ್ ಸಾಹೇಬರ ಸವಾರಿಯನ್ನು ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಬಾಜಾಭಜಂತ್ರಿಯಿಂದ ಸರ್ವರೂ ಇದಿರ್ಗೊಂಡು ಸತ್ರದಮಹಾದ್ವಾರಕ್ಕೆ ಕರೆತರಲಾಗಿ ಯಜಮಾನರಾದ ಸಣ್ಣತಮ್ಮಣ್ಣನವರೂ, ಅವರ ಜ್ಯೇಷ್ಠಪುತ್ರರಾದ ಮಹಾಲಿಂಗಪ್ಪನವರೂ ಫಲ, ಗಂಧ, ಕುಸುಮಾದಿಗಳನ್ನರ್ಪಿಸಿ ಅವರನ್ನು ಸತ್ಕಾರಪೂರ್ವಕವಾಗಿ ಅಗ್ರಾಸನೋಪವಿಷ್ಟರನ್ನಾಗಿ ಮಾಡಲು, ಸರ್ವರೂ ಜಯನಾದಗಳಂಗೈದು ಕುಳಿತುಕೊಂಡರು. ಪ್ರಥಮದಲ್ಲಿ ವೇ|| ಪೂಜಾರಹಳ್ಳಿಯ ಬೃಹನ್ಮಠಾಧ್ಯಕ್ಷರಾದ ಶಿವಪ್ರಸಾದಶಾಸ್ತ್ರಿಗಳು (ನಗುರೋರಧಿಕಂ) ಎಂಬ ಆಮ್ನಾಯೋಕ್ತಿಯನ್ನನುಸರಿಸಿ ಶ್ರೀ ಜಗದ್ಗುರುಸ್ತವನವಂಗೈದು ಅನಂತರ ವೇದಮಂತ್ರಗಳನ್ನು ಹೇಳಿದರು. ತರುವಾಯ ಸ್ಕೂಲ್‌ಮಾಸ್ತರಾದ ಸ||ಮ||ರಾ||ಜಿ. ಆರ್. ರಾಘವೇಂದ್ರರಾಯರು ತಮ್ಮ ಸ್ಕೌಟ್‌ಬಾಲಕರೊಡನೆ ಮಂಜುಳರಾಗದಿಂದ ಮಂಗಳಗೀತೆಯನ್ನು ಹಾಡಿಸಿದರು. ಅದಾದ ಮೇಲೆ ಮ|| ರಾ|| ರಿಟೈರ್ಡ್ ಸ್ಕೂಲ್ ಮಾಸ್ತರ್ ಕೆ. ಸುಬ್ಬಾಶಾಸ್ತ್ರಿಗಳು ಧರ್ಮದ ವಿಷಯದಲ್ಲಿಯೂ, ಮ|| ರಾ|| ಸಣ್ಣತಮ್ಮಣ್ಣನವರು ಉದಾರಭಾವದಿಂದ ಮಾಡಿದ ಈ ಕಾರ್ಯದ ವಿಷಯದಲ್ಲಿಯೂ ಉತ್ತಮರೀತಿಯಿಂದ ಭಾಷಣವನ್ನು ಮಾಡಿದರು. ಬಳಿಕ ಸಣ್ಣತಮ್ಮಣ್ಣನವರ ದ್ವಿತೀಯ ಪುತ್ರರಾದ ಕಲ್ಲಪ್ಪನವರು ಈ ಸತ್ರದ ಸಂಬಂಧ ರಿಪೋರ್ಟನ್ನು ಓದಿ ಹೇಳಿದರು. ತದನಂತರ ಡೆಪುಟಿಕಮಿಷನರ್ ಸಾಹೇಬರು ಸಮಯೋಚಿತವಾದ ಭಾಷಣವನ್ನು ಮಾಡಿ ಜಯಘೋಷದೊಡನೆ ಸತ್ರದ ಬೀಗವನ್ನು ತೆಗೆದು ಪ್ರಥಮ ಪ್ರವೇಶವನ್ನು ಮಾಡಿದರು. ಅನಂತರ ನೆರೆದಿದ್ದ ಸಮಸ್ತರಿಗೂ ಪನ್ನೀರು ಪರಿಮಳೋದಕಗಳನ್ನು ಸಂಪ್ರೋಕ್ಷಿಸಿ ಪುಷ್ಪಮಾಲ್ಯಾದಿಗಳಿಂದ ಸತ್ಕರಿಸಿದರು. ಪಶ್ಚಾತ್ ಮ|| ರಾ|| ಮಹಾಲಿಂಗಪ್ಪನವರು ಆನಂದಪೂರ್ಣರಾಗಿ ಸರ್ವರ ಆಭಾರ ಮನ್ನಿಸಲು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನಾ ಪೂರ್ವಕವಾಗಿ ಸಭೆಯು ವಿಸರ್ಜಿಸಲ್ಪಟ್ಟು, ಸರ್ವರೂ ಫಲಭಕ್ಷ್ಯಾದ್ಯುಪಚಾರಗಳಂ ಸ್ವೀಕರಿಸಿ ಸಂತೃಪ್ತರಾಗಿ ಸ್ವಸ್ಥಾನಗಳಿಗೆ ತೆರಳಿದರು. ಇಂಥ ಪವಿತ್ರಧರ್ಮಕಾರ್ಯನಿರತರಾದ ಮ|| ರಾ|| ಸಣ್ಣತಮ್ಮಣ್ಣನವರಿಗೆ ಪರಶಿವಮೂರ್ತಿಯು ಪುತ್ರಪೌತ್ರಾಭಿವೃದ್ಧಿಯನ್ನೂ, ಚಿರವೈಭವಾಯುರಾರೋಗ್ಯಾದಿಗಳನ್ನೂ ಉಂಟುಮಾಡಿ ಕಾಪಾಡಲೆಂದು ಕೋರುವ,

ಪ್ರತ್ಯಕ್ಷದರ್ಶಿ.

ಶ್ರೀ ರಂಭಾಪುರೀ ಜಗದ್ಗುರುಗಳ ಆಗಮನ.

ಅರಸೀಕೆರೆ.

ಮೊದಲು ಪ್ರಸಿದ್ಧಮಾಡಿದ ಪ್ರಕಾರ ತಾ|| 3-11-1930 ನೇ ಸೋಮವಾರ ಶ್ರೀಮದ್ರಂಭಾಪುರೀವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ರಜತಸುವರ್ಣನಿರ್ಮಿತವಾದ ನೂತನ ಆಂದೋಲಿಕೋತ್ಸವವು ಚತುರಂಗಬಲಸಮೇತ ಸಕಲಬಿರುದಾವಳಿಗಳೊಡನೆ ಅರಸೀಕೆರೆಯ ಟವನ್ ಬೀದಿಗಳಲ್ಲೆಲ್ಲಾ ಸಮಾಧಾನದಿಂದಲೂ, ವೈಭವದಿಂದಲೂ ಅರಸೀಕೆರೆ ವೀರಶೈವ ಮಂಡಲಿಯವರು ನೆರವೇರಿಸಿದರೆಂದು ಕೃತಜ್ಞತೆಯಿಂದ ಬಹು ಸಂತೋಷವಾಗುತ್ತದೆ. ಟವನಿನಲ್ಲಿ ಬೀದಿಗಳನ್ನು ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಅಂದವಾಗಿ ರಚಿಸಿದ ಪೆಂಡಾಲುಗಳಿಂದಲೂ, ಒಳ್ಳೇ ರಮಣೀಯವಾಗಿ ತೋರುತ್ತಿದ್ದವು. ಮೂರು ಘಂಟೆಗೆ ಸರಿಯಾಗಿ ಶ್ರೀ ಭಗವತ್ಪಾದರ ಶುಭಾಗಮನವನ್ನು ಸಾವಿರಾರು ಜನ ಶಿಷ್ಯಮಂಡಲಿಯು ಎದುರುನೋಡುತ್ತಲಿದ್ದಿತು. ಮತ್ತು ಆನಂದಭಾಷ್ಪವನ್ನು ಸ್ರವಿಸುವಂತೆ ಸೇವೆಯನ್ನು ಮಾಡಿ ಕೃತಾರ್ಥನಾಗಬೇಕೆಂಬ ಕುತೂಹಲದಿಂದ ಮೇಘರಾಜನು ಸಹ ಜಗದಾಚಾರ್ಯರ ಶುಭಾಗಮನವನ್ನು ಎದುರು ನೋಡುತ್ತ ಸಕಾಲಕ್ಕೆ ಅನುಕೂಲವಾಗಿ ಮಳೆಗರೆದು ಭೂಮಿಯನ್ನು ಪವಿತ್ರಮಾಡಿ ತನ್ನೊಳಗೆ ಗುರುಸೇವೆಯಿಂದ ಕೃತಾರ್ಥನಾದೆನೆಂಬ ಆನಂದೋದ್ಗಾರವನ್ನು ಘರ್ಜನೆಯಿಂದ ವ್ಯಕ್ತಪಡಿಸಿದನು. ಮೇಘರಾಜನು ತನ್ನ ಗುರುಭಕ್ತಿಯನ್ನು ಅಷ್ಟಕ್ಕೆ ಸಂಕುಚಿತ ಮಾಡಿದ್ದರಿಂದ ಉತ್ಸವ ಭಾಗಿಗಳಾಗಿರತಕ್ಕವರಿಗೆಲ್ಲರಿಗೂ ಮತ್ತಿಷ್ಟು ಉತ್ಸಾಹವು ಹೆಚ್ಚಿ ಆನಂದದಿಂದ ಜಗದ್ಗುರು ಸೇವೆಯಲ್ಲಿ ತೊಡಗಿದರು. ಉತ್ಸವಕ್ಕೆ ಟವನ್ನಿನ ಎಲ್ಲಾ ಮತೀಯರು ಮತ್ತು ಅಕ್ಕಪಕ್ಕದ ಗ್ರಾಮದವರು ಸಹ ಭಾಗಿಗಳಾಗಿದ್ದರು. ೮-೧೦ ಸಾವಿರದ ವರೆಗೂ ಜನರು ಸೇರಿದ್ದರು. ಉತ್ಸವವು ಮಧ್ಯಾಹ್ನ 3 ಘಂಟೆಯಿಂದ ಆರಂಭವಾಗಿ ಸಾಯಂಕಾಲ ೬ರ ವರೆಗೂ ನಡೆದು ಭಗವತ್ಪಾದರವರು ಸಿಂಹಾಸನಾರೋಹಣಮಾಡಲು ಸರ್ವರೂ ಕರತಾಡನ ಮಾಡಿದರು. ಸಂಸ್ಥಾನದ ಆ. ವಿ. ವೇ|| ಹರೀಶ್ವರ ಶಾಸ್ತ್ರಿಗಳವರು, ವೀರಶೈವ ಮತದ ಪ್ರಾಶಸ್ತ್ಯವನ್ನೂ ಮತ್ತು ಗುರುಭಕ್ತಿಯನ್ನು ಸಹ ಸರ್ವರಿಗೂ ಬೋಧಿಸಿದರು. ಅನಂತರ ಶ್ರೀ ಜಗದ್ಗುರುಗಳವರು ಮತದ ಪ್ರಾಚೀನತೆಯನ್ನೂ ಮತ್ತು ಮತದ ಅಭಿವೃದ್ಧಿಗಾಗಿ ಪೂರ್ವದಲ್ಲಿ ಅನೇಕ ಧರ್ಮಭೂಪತಿಗಳು ಉದಯಿಸಿ ಮಾಡಿದ ಮಹತ್ವ ವಿಷಯಗಳನ್ನೂ ಅಪ್ಪಣೆ ಕೊಡಿಸಿ ಆನಂದಗೊಳಿಸಿದರು. ಅಲ್ಲಿಗೆ ಪೂಜಾಸಮಯವಾಗಿದ್ದರಿಂದ ಧರ್ಮಪ್ರಭುಗಳಾದ ಶ್ರೀಮನ್ಮಹಾಪ್ರಭುವರ್ಯರ ಶ್ರೇಯೋಭಿವೃದ್ಧಿಗಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅರಸೀಕೆರೆಗೆ ಅಲ್ಲಿಯ ಪ್ರಮುಖರಾದ ಉರುವುಕೊಂಡೆ ನಾಗಪ್ಪನವರು, ಬ್ಯಾಡಗಿ ಚನವೀರಪ್ಪನವರು ಹುಂಡೇಕಾರ್ ಬಸಪ್ಪನವರು, ಕರ್ಪೂರದ ಸಿದ್ಧಪ್ಪಶೆಟ್ಟರು, ಮಾವಿನಕೆರೆ ಚನ್ನಬಸಪ್ಪಶೆಟ್ಟರು, ಶಿವಂಕರಯ್ಯನವರು, ರೊಟ್ಟಿ ಶಾಂತವೀರಪ್ಪನವರು ಮೊದಲಾದ ಎಲ್ಲಾ ವೀರಶೈವ ಮಂಡಲಿಯವರು ಗುರುಭಕ್ತಿಯಿಂದಲೂ ಒಕ್ಕಟ್ಟಿನಿಂದಲೂ ಗುರುಗಳನ್ನು ತಮ್ಮಲ್ಲಿಗೆ ಮುಕ್ಕಾಂ ಮಾಡಿಸಿ ಸೇವಾನಿರತರಾಗಿರುವದರಿಂದ ಸರ್ವರಿಗೂ ಶ್ರೀ ಭಗವತ್ಪಾದರು ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಓರ್ವ ಉತ್ಸವಭಾಗಿ.

---

೨೧ ನೆಯ ನಿಖಿಲ ಭಾರತಾಯುರ್ವೇದ ಮಹಾಸಮ್ಮೇಳನ.

ಮೈಸೂರು.

ನಿಖಿಲ ಭಾರತವೈದ್ಯ ಸಮ್ಮೇಳನವೂ, ನಿಖಿಲ ಭಾರತಾಯುರ್ವೇದ ವಸ್ತುಪ್ರದರ್ಶನವೂ ಸಹ ಬರುವ ಡಿಸೆಂಬರು ಕಡೆಯವಾರದಲ್ಲಿ ನಡೆಯತಕ್ಕದ್ದಾಗಿದೆ. ಇಂಡಿಯಾ, ಬರ್ಮಾ ಮತ್ತು ಸಿಲೋನ್ ದೇಶಗಳ ಸುಪ್ರಸಿದ್ಧ ವೈದ್ಯಪ್ರತಿನಿಧಿಗಳೆಲ್ಲರೂ ದಯಮಾಡಿಸುವವರಾಗಿದ್ದಾರೆ. ಅಧ್ಯಕ್ಷರ ಚುನಾವಣೆಯು ಇನ್ನು ಒಂದು ವಾರದೊಳಗೆ ನಡೆಯುವುದು. ಬರತಕ್ಕ ಅತಿಥಿಗಳಿಗೆ ಸ್ವಾಗತವನ್ನಿತ್ತು ಉಪಚರಿಸುವ ಭಾರವು ಇಡೀ ಕರ್ನಾಟಕದ ಮೇಲೆ, ಅದರಲ್ಲೂ ಹೆಚ್ಚಾಗಿ ಮೈಸೂರು ಸಂಸ್ಥಾನದಮೇಲೆ ಬಿದ್ದಿದೆ. ಎಲ್ಲಾ ಡಿಸ್ಟ್ರಿಕ್ಟುಬೋರ್ಡುಗಳೂ, ಅನೇಕ ವಿಲೇಜು ಪಂಚಾಯತಿ ಮೊದಲ್ಗೊಂಡು ಸಿಟಿ ಮುನಿಸಿಪಾಲಿಟಿಗಳೂ ಅವರವರ ಅನುಕೂಲವರಿತು 5 ರೂ. ನಿಂದ 300 ರೂ. ನವರಿಗೂ, ಅನೇಕ ಕೋಆಪರೇಟಿವ್ ಸೊಸೈಟಿಗಳು 5 ರೂ. ನಿಂದ 500 ರೂ. ನವರಿಗೂ ಸಹಾಯಮಾಡಿಯುತ್ತಾರೆ. ನಮ್ಮ ಘನ ಸರ್ಕಾರದವರು ಉದಾರವಾದ ಧನಸಹಾಯವನ್ನು ಮಾಡಿರುವುದಲ್ಲದೆ ಎಗ್ಸಿಬಿಷನ್ ಕಟ್ಟಡವನ್ನು ಸಹ ಸಮ್ಮೇಳನದ ಉಪಯೋಗಕ್ಕೆ ಕೊಟ್ಟಿರುತ್ತಾರೆ. ಇವುಗಳಲ್ಲದೆ ಇನ್ನೂ ಅನೇಕ ಸಂಸ್ಥೆಗಳ ತೀರ್ಮಾನಗಳು ನಮಗೆ ತಿಳಿದು ಬಂದಿತ್ತು, ಕಾಲವು ಸಮೀಪಿಸುತ್ತಾ ಬಂದಿರುವುದರಿಂದ ಸಹಾಯ ಮಾಡಲು ಇದುವರೆಗೆ ನಿರ್ಣಯಿಸಿರುವ ಸಂಸ್ಥೆಗಳು ಆದಷ್ಟು ಬೇಗ ಅವುಗಳ ಸಹಾಯ ದ್ರವ್ಯವನ್ನು ದಯಮಾಡಿ ಈ ಆಫೀಸಿಗೆ ಕಳುಹಿಸಿಕೊಡಬೇಕೆಂತಲೂ, ಇನ್ನೂ ನಿರ್ಧರ ಮಾಡಿರುವ ಸಂಸ್ಥೆಗಳು ಆದಷ್ಟು ಬೇಗ ತಮ್ಮ ಅಭಯಹಸ್ತವನ್ನು ನೀಡಿ ಕರ್ನಾಟಕಕ್ಕೆ ಕೀರ್ತಿ ಬರುವಂತೆ ಮಾಡಬೇಕೆಂಬುದಾಗಿಯೂ ಈ ಸ್ವಾಗತ ಸಮಿತಿಯು ಪ್ರಾರ್ಥಿಸುತ್ತದೆ.

ಇದುವರೆಗೆ ಅನೇಕ ಪ್ರಕಟನೆಗಳನ್ನು ಮಾಡಿಯೂ ಕರ್ನಾಟಕದ ವೈದ್ಯಮಹಾಶಯರಲ್ಲನೇಕರು ಇನ್ನೂ ತಮ್ಮ ಹೆಸರು ಮತ್ತು ವಿಳಾಸಗಳನ್ನು ಈ ಆಫೀಸಿಗೆ ಕಳುಹಿಸಿಲ್ಲ. ನಮಗೆ ಅನೇಕರು ಹೆಸರು ಗೊತ್ತಿಲ್ಲವಾದುದರಿಂದ ಅಂಥವರುಗಳಿಗೆ ಆಹ್ವಾನಗಳೂ ಪ್ರಾರ್ಥನಾಪತ್ರಗಳೂ ತಲಪದೆಯಿರಬಹುದು. ಆದರೂ ಈ ಕೂಡಲೇ ಅವರೆಲ್ಲರೂ ಪೂರ್ಣಕೃಪೆಯಿಟ್ಟು ತಮ್ಮ ವಿಳಾಸಗಳನ್ನು ತಿಳಿಸುವುದಲ್ಲದೆ ಸ್ವಾಗತಸಮಿತಿಯ ಸದಸ್ಯರಾಗಲು 5 ರೂ. ನ್ನೂ ಪೋಷಕರಾಗಲು 10 ರೂ ನ್ನೂ ಆಶ್ರಯದಾತರಾಗುವುದಾದರೆ 50 ರೂ. ನ್ನೂ ಸಹಾ ಕಳುಹಿಸಿಕೊಟ್ಟು ತಮ್ಮ ಹೆಸರುಗಳನ್ನು ದಾಖಲುಮಾಡಿಸಬೇಕಾಗಿ ಕೋರಲಾ

ಮೈಸೂರು. ಸಜ್ಜನ: ಜನರಲ್ ಸೆಕ್ರಟರಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ನೂತನ ಗೃಹಪ್ರವೇಶ ಮಹೋತ್ಸವ.

ವಿಜಾಪೂರ ಡಿ|| ಗುಳೇದಗುಡ್ಡ ಟವನ್ನಿನಲ್ಲಿರುವ ಮ|| ರಾ|| ತಿಪ್ಪಣ್ಣಪ್ಪಾ ರಾಚಪ್ಪಾ ಸಾರಂಗಿ ಇವರು ನೂತನವಾಗಿ ರಚಿಸಿದ ಗೃಹವನ್ನು ಇದೇ ಪ್ರಮೋದನಾಮ ಸಂವತ್ಸರದ ಕಾರ್ತಿಕ ಶು|| ೩ ತಾ|| ೨೪-೧೦-೧೯೩೦ ನೆಯ ಶುಕ್ರವಾರ ಪ್ರವೇಶ ಮಾಡಿದರು. ಈ ಮಹೋತ್ಸವಕ್ಕೆ ಬಹು ಕಡೆಯಿಂದ ಮಾಹೇಶ್ವರರೂ, ಬೇರೆಜನಾಂಗದವರೂ, ಬಂಧುವರ್ಗದವರೂ 300-400 ಜನಗಳವರೆಗೆ ಸೇರಿದ್ದರು. ಶ್ರೀ|| ಷ|| ಬ್ರ|| ಮಂಗಳೂರು ಅರಳೆಲೆ ಬೃಹನ್ಮಠಾಧೀಶ್ವರ ಪಟ್ಟಾಧ್ಯಕ್ಷ ಮಹಾಸ್ವಾಮಿಗಳ ಸವಾರಿಯು ದಯಮಾಡಿಸಿದ್ದಿತು. ಶ್ರೀಗಳವರ ದಿವ್ಯಸನ್ನಿಧಿಯಲ್ಲಿ ನೂತನ ಗೃಹಪ್ರವೇಶಾಂಗಭೂತವಾದ ಸಕಲ ವೈದಿಕಕ್ರಿಯೆಗಳು ವೇದೋಕ್ತವಾಗಿ ಕೆಲ್ಲಾಳ ಬೃಹನ್ಮಠದ ವೇ|| ಬಸಯ್ಯನವರು ಮತ್ತು ಜಗದ್ಗುರು ಪಂಚಾಚಾರ್ಯ ಪುರಾಣಿಕ ಸಂಘದವರು ನೆರವೇರಿಸಿದರು. ಮ|| ರಾ|| ತಿಪ್ಪಣ್ಣಪ್ಪನವರು ವಿಚಾರಶೀಲರೂ ಧಾರ್ಮಿಕಶ್ರದ್ಧೆಯುಳ್ಳವರೂ ಆದ್ದರಿಂದ ಸಮಾಜದಲ್ಲಿ ನೆಲೆಗೊಂಡ ಅನಾಚಾರ ಪದ್ಧತಿಯನ್ನು ಹೋಗಲಾಡಿಸುವದಕ್ಕೋಸ್ಕರ ಶಾಸ್ತ್ರೋಕ್ತ ಆಚರಣೆಗೂ ರೂಢಿಗೂ ಬಾಧಕಬಾರದಂತೆ ಆಚರಿಸಿ ಸರ್ವರಿಗೂ ಮೇ

ಲ್ಪನ್ನು ನೋಡಿ ಆ ಹೈಸ್ಕೂಲಿನ ಮುಂದೆ ಪಿಕೆಟಿಂಗ್ ಪ್ರಾರಂಭಿಸಿದರೆಂದೂ, ವಿದ್ಯಾರ್ಥಿಗಳು ಶಾಲೆಯ ಕಾಂಪೌಂಡಿನೊಳಗೆ ಪ್ರವೇಶಿಸದಂತೆ ಪೋಲೀಸರು ಕೆಮಾಡಿದರೆಂದೂ, ಕಾಂಪೌಂಡಿನಲ್ಲಿದ್ದ ವಿದ್ಯಾರ್ಥಿಗಳನ್ನು ಹೊರಗೆ ಹೊರಡಿಸುತ್ತಿರುವಾಗ ಪೋಲೀಸರಮೇಲೆ ಕೆಲವು ಕಲ್ಲುಗಳು ಬಿದ್ದವೆಂದೂ, ಆಗ ಪೋಲೀಸರು ಬಾಲಕರ ಮೇಲೆ ಕೈಮಾಡಿದರೆಂದೂ, ಒಬ್ಬನಿಗೆ ಪೂರಾ ಪೆಟ್ಟಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವನೆಂದೂ, ಅದೇ ದಿವಸ ಸುಬ್ಬರಾಯನ ಪಾರ್ಕಿನಲ್ಲಿ ವಿದ್ಯಾರ್ಥಿಗಳು ಸಭೆಸೇರಿಸಿ ನಿಷೇಧವನ್ನು ವ್ಯಕ್ತಪಡಿಸಿದರೆಂದೂ, ತಿಳಿದುಬರುತ್ತದೆ.

ರಾಜಧಾನಿಯಲ್ಲಿ ಸುಪ್ರಸಿದ್ಧರಾದ ಶ್ರೀಯುತ ಆರ್. ಪುಟ್ಟಣ್ಣ, ಬಿ.ಎ., ಬಿ.ಎಲ್., ರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಸೋಮವಾರ ಪರಂಧಾಮವನ್ನೈದಿದರೆಂಬ ವಿಷಯವನ್ನು ತಿಳುಹಿಸಲು ವಿಷಾದಿಸುತ್ತೇವೆ. ಇವರು ಬಹುಕಾಲದಿಂದ ಸಂಸ್ಥಾನದ ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟರಾಗಿ ಅಸಾಧಾರಣವಾದ ಅಶ್ವಶಾಸ್ತ್ರನೈಪುಣ್ಯವನ್ನು ಪಡೆದಿದ್ದರು. ಇವರಲ್ಲಿ ರಾಜಭಕ್ತಿ, ಪರೋಪಕಾರಬುದ್ಧಿ, ಜನಾನುರಾಗ, ಶಾಂತಿ ಮುಂತಾದ ಸದ್ಗುಣ

ಶ್ರೀ ಸಾರಂಗದೇವರೊಂದಿಗಿದ್ದರಿಂದ ಇವರು ಸರ್ವನ ಮೂಲಕರ್ತೃಗಳಾದ ಪಟ್ಟಾಧೀಶರ ಬಗ್ಗೆ ಅನ್ನದಾನ ಸಂತರ್ಪಣೆಯೂ ದೀಪೋತ್ಸವವೂ ನಡೆಯಲ್ಪಟ್ಟಿತು. ಈ ಮೂಲಕರ್ತೃಗಳ ಐತಿಹಾಸಿಕ ಸಂಗತಿಯು ಬಹು ಮಂದಣೀಯವಾಗಿದೆ ಈ ಮಠದ ಮೂಲಕರ್ತೃಗಳೆಂದರೆ ಶ್ರೀ ಸಾರಂಗದೇವರೆಂಬುವರು. ಇವರು ಸುಮಾರು 800-900 ವರುಷಗಳ ಹಿಂದೆ ಇದ್ದರು. ದೇಶದಲ್ಲೆಲ್ಲಾ ಸಂಚಾರಮಾಡಿ ಕುಂಭಕೋಣ, ತಂಜಾವರ, ಮಧುರೆ, ಶ್ರೀ ಕ್ಷೇತ್ರಸಂಗಮ, ಗುಳೇದಗುಡ್ಡ ಮೊದಲಾದ ಅನೇಕ ಸ್ಥಳಗಳಲ್ಲಿ ಮಠಮಾನ್ಯಗಳನ್ನು ಸಂಪಾದಿಸಿರುತ್ತಾರೆ. ಅನಾದಿಸಂಸಿದ್ಧವೂ ಪವಿತ್ರವೂ ಆದ ವೀರಶೈವ ಧರ್ಮವನ್ನು ರಾಜರಿಗೂ ಮಂಡಲಾಧೀಶರಿಗೂ ಬೋಧಿಸಿದರು. ಹಿಂದುಸ್ಥಾನದಲ್ಲಿರುವ ಯಾವತ್ತು ಸಾರಂಗಮಠಗಳೆಂಬವುಗಳು ಈ ಮಹನೀಯರಿಂದಲೇ ಸ್ಥಾಪಿಸಲ್ಪಟ್ಟಿವೆ. ಈ ಮಹಿಮರು ಕಪ್ಪಡಿ ಸಂಗಮನಾಥನಲ್ಲಿ ಐಕ್ಯರಾದರು. ಐಕ್ಯದ ಕುರುಹು ಇರುತ್ತದೆ. ಈ ಮಹನೀಯರ ಪವಾಡಗಳು ಬಹು ಮಹತ್ವವಾದವುಗಳಾಗಿವೆ. ಅಸ್ತು! ಇಲ್ಲಿಯ ಹಾಗೂ ಸಂಗಮ ವಗೈರೆ ಮಠಗಳಿಗೆ ಅಧಿಕಾರಿಗಳೋರ್ವರೆ ಇದ್ದಾರೆ. ಪ್ರತಿವರುಷದಂತೆ ಮೂಲಕರ್ತೃಗಳ ಮಹಿಮಾಸ್ಮರಣಾರ್ಥವಾಗಿಯೂ ದೈವದವರ ಪ್ರೀತ್ಯರ್ಥವಾಗಿಯೂ ಆ ದಿವಸ ಬಹಸೊಗಸಾಗಿ ಮಂಗಲಕಾರ್ಯಗಳು ಜರಗಿದವು. ಮಠಾಧೀಶರಾದ ವೇ|| ಸಣ್ಣಸಂಗಪ್ಪಯ್ಯನವರೆಂಬವರು ಶ್ರೀ ಕ್ಷೇತ್ರ ಕಪ್ಪಸಂಗಮಕ್ಷೇತ್ರದಮಠದಲ್ಲಿರುವದರಿಂದ ಅವರ ಅಳಿಯಂದಿರಾದ ವೇ|| ಶಿವಸಂಗಪ್ಪಯ್ಯನವರು ಅರಳೆಲೆ ಕಟ್ಟೆಮನೆ ಬೃಹನ್ಮಠಾಧಿಕರೆಂಬವರು ಈ ಮಹಾತ್ಮರ ಮಂಗಲೋತ್ಸವವನ್ನು ನೆರವೇರಿಸಿದರು.

ಓರ್ವವೀರಶೈವ ಸದ್ಭಕ್ತ ಗುಳೇದಗುಡ್ಡ.

ಭೂಭವಿಷ್ಯವೂ ಹೂಲಿಯ ಪಂಚಾಂಗವೂ.

"ಪ್ರತ್ಯಕ್ಷಂ ಜ್ಯೋತಿಷಂಶಾಸ್ತ್ರಂ" ಎಂಬ ಆರ್ಯರ ಉಕ್ತಿಯು ಸರಿಯಾದದ್ದೆಂದು ಅನೇಕ ಆಧಾರಗಳಿಂದಲೂ ಸದ್ಯಃ ಜರಗುತ್ತಿರುವ ಫಲಿತದಿಂದಲೂ ತಿಳಿದುಬರುತ್ತದೆ. ಅನೇಕಜನ ದೈವಜ್ಞರು ನಮ್ಮ ಹಿಂದುಸ್ಥಾನದ "ಸದ್ಯಸ್ಥಿತಿಯಮೇಲೆ ತಮ್ಮ ತಮ್ಮ ಮತವನ್ನು ಆಗಾಗ್ಗೆ ತಿಳುಹಿಸುತ್ತಿರುವರು. ಅದರಂತೆ ಹೂಲಿ ಪಂಚಾಂಗಕರ್ತರು ತಮ್ಮ ಪಂಚಾಂಗದಲ್ಲಿ ಈ ವರುಷದ ಭೂಭವಿಷ್ಯದ ಫಲವನ್ನು ಪ್ರಸಿದ್ಧಗೊಳಿಸಿದಂತೆ ಇಲ್ಲಿಯವರೆಗೆ ಫಲಿತವನ್ನು ಸ್ವಲ್ಪ ಹೇಳುವೆನು.

ಮಳೆಯ ವಿಷಯ.

ಈ ಹೂಲಿ ಪಂಚಾಂಗದಲ್ಲಿ ಪ್ರಸಿದ್ಧಪಡಿಸಿದಂತೆ ಮುಂಗಾರು ಮಳೆ ಖಂಡಮಂಡಲವಾಗಿ, ಪೂರ್ವಾ ಹಸ್ತಾ ಈ ಮಳೆಗಳು ಎಲ್ಲ ಸರಿಯಾಗಿ ಆದರೂ ನಮ್ಮ ಬೈಲುದೇಶಕ್ಕೆ ಅಷ್ಟರಿಂದ ಅನುಕೂಲವಾಗದೆ ಜನರು ಚಿಂತಾಕ್ರಾಂತರಾಗಿರಲು ಸ್ವಾತಿಮಳೆಯು ಅತ್ಯಂತ ಅನುಕೂಲವನ್ನುಂಟುಮಾಡಿತಲ್ಲದೆ ಈ ಪಂಚಾಂಗದ ಪ್ರಸಿದ್ಧಪಡಿಸಿದಂತೆ ಈ ಕಾರ್ತಿಕಮಾಸದಲ್ಲಿ ದಕ್ಷಿಣದೇಶದ ಅತಿವೃಷ್ಟಿಯಾದ ವಾರ್ತೆಯು ವರ್ತಮಾನ ಪತ್ರಿಕೆಗಳಿಂದ ತಿಳಿದು ಬರುತ್ತದೆ.

ಗ್ರಹಣದ ವಿಷಯ.

ಇದೇ ವರುಷದ ಹಿಂದಿನ ಅಶ್ವಯುಜ ಶುದ್ಧ ಪೂರ್ಣಿಮೆ ದಿವಸ ಪ್ರವೇಶವಾದ ಚಂದ್ರಗ್ರಹಣದ ವಿಷಯದಲ್ಲಿ ಅನೇಕ ಪಂಚಾಂಗ ಕರ್ತರು ಆ ದಿವಸ ಗ್ರಹಣವೇ ಪ್ರವೇಶವಾಗುವದಿಲ್ಲೆಂದೂ ಆ ದಿವಸ ಗ್ರಹಣದ ನೈಮಿತ್ತಿಕಕರ್ಮಾದಿಗಳನ್ನು ಆಚರಿಸ್ಬಾರದೆಂದೂ ಪ್ರಸಿದ್ಧಪಡಿಸಿದ್ದರು. ಆದರೆ ಹೂಲಿ ಪಂಚಾಂಗಕರ್ತರು ಮಾತ್ರ ಆದಿವಸ ರಾತ್ರಿ ಹನ್ನೆರಡು ಘಂಟೆಮಾರಿ ಈಶಾನ್ಯ ದಿಕ್ಕಿನಿಂದ ಗ್ರಹಣವು ಪ್ರವೇಶವಾಗಿ ವಾಯುವ್ಯ ದಿಕ್ಕಿಗೆ ಮೋ

ಮಹಾತ್ಮಾ ಗಾಂಧಿಯವರು ದಸ್ತಗಿರಿ ಯಾದಮೇಲೆ ಉಪ್ಪಿನ ಸತ್ಯಾಗ್ರಹವನ್ನು ಕೈಕೊಂಡು, ಜೈಲಿಗೆ ಹೋಗಿದ್ದ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಮಿ|| ಅಬ್ಬಾಸ್‌ತಯಾಬ್ಜಿಯವರು ಬಿಡುಗಡೆ ಮಾಡಲ್ಪಟ್ಟಿರುವರು. ಇವರು ಇನ್ನು ಮೂರು ವಾರಗಳಲ್ಲಿಯೇ ಪುನಃ ಜೈಲಿನ ಸುಖವನ್ನನುಭವಿಸುವ ಸುಯೋಗವು ತಮಗೆ ಒದಗುವುದೆಂದು ಹೇಳಿರುವರು.

ಹರಪನಹಳ್ಳಿಯಲ್ಲಿ ದಸ್ತಗಿರಿಮಾಡಲ್ಪಟ್ಟ ಮ|| ರಾ|| ಕೊಟ್ರಪ್ಪ ಮತ್ತು ಮ|| ರಾ|| ನರಸಿಂಹಮೂರ್ತಿ ಎಂಬೀರ್ವರಿಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಂದು ವರ್ಷದ ಸಾದಾ ಸಜೆಯನ್ನು ವಿಧಿಸಿರುವರು ಹಾಗೂ ನವಂಬರ್ 9 ನೆಯ ತಾರೀಖಿನ ದಿವಸದಿಂದ ಎರಡುತಿಂಗಳುಗಳವರೆಗೆ ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಅಪ್ಪಣೆಯನ್ನನುಸರಿಸಿ ಮೆರವಣಿಗೆಗಳೂ, ಕೂಟಗಳೂ, ಪ್ರದರ್ಶನಗಳೂ ನಡೆಯಿಸಲ್ಪಡತಕೂಡದೆಂದು ಹೊಸಪೇಟೆಯ ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿದ್ದಾರೆ.

ಪಂಡಿತ ಮೋತಿಲಾಲನೆಹರೂರವರ ಪುತ್ರಿ ಶ್ರೀಮತಿ ಕೃಷ್ಣಕುಮಾರಿಯವರೂ, ಶ್ರೀಮತಿ ಶಾಮಕುಮಾರಿಯವರೂ, ಅಕ್ರಮಕೂಟದ ಮೆಂಬರರೆಂದು ದಸ್ತಗಿರಿಮಾಡಲ್ಪಟ್ಟು 50 ರೂಪಾಯಿಗಳ ಅರ್ಥದಂಡ ಅಥವಾ ಒಂದು ತಿಂಗಳು ಸಾದಾಸಜೆಗೆ ಗುರಿಯಾಗಿದ್ದು ಉಭಯರೂ ಜೈಲಿನಲ್ಲಿದ್ದರು. ಯಾರೋ ಒಬ್ಬರು ಇವರ ಸಂಬಂಧವಾದ 50 ರೂ. ಅರ್ಥದಂಡವನ್ನು ಕೊಟ್ಟಿದ್ದರಿಂದ ಬಿಡುಗಡೆ ಮಾಡಲ್ಪಟ್ಟರು. ದಂಡವನ್ನು ಕೊಟ್ಟಿರುವ ಗುಪ್ತ ಮನುಷ್ಯನು ನನಗೂ, ನನ್ನ ಮಗಳಿಗೂ ಹಾಗೂ ನನ್ನ ದೇಶಕ್ಕೂ ದ್ರೋಹಿ ಎಂದೆನಿಸುತ್ತೇನೆಂದು ಪಂಡಿತ ಮೋತಿಲಾಲನೆಹರೂರವರು ಅಭಿಪ್ರಾಯಪಟ್ಟಿರುವರು.

ಡಾ|| ಕೊಕಟನೂರ್ ಎಂಬೊಬ್ಬ ನಮ್ಮ ಕರ್ನಾಟಕದೇಶೀಯರು 1912 ರಲ್ಲಿ ಅಮೇರಿಕಾಖಂಡಕ್ಕೆ ಹೋಗಿ ಪ್ರಾರಂಭದಲ್ಲಿ ಒಂದು ಕಾರ್ಖಾನೆಯಲ್ಲಿ ಕೂಲಿಮಾಡಿ ಜೀವಿಸುತ್ತಿದ್ದು, ಈಗ ಜಗತ್ತಿನಲ್ಲಿರುವ ಪ್ರಸಿದ್ಧ ವಿಜ್ಞಾನಶಾಸ್ತ್ರಜ್ಞರಲ್ಲಿ ಒಬ್ಬರೆಂದು ಗಣಿಸಲ್ಪಟ್ಟಿರುವರು. ಇವರು ಪ್ರಪಂಚದಲ್ಲಿ ಯಾರೂ ಮಾಡದಿರುವ ಅನೇಕ ಹೊಸ ಹೊಸ ಶೋಧನೆಗಳನ್ನು ಮಾಡಿರುವರು. ಆಕಾಶವಿಮಾನದ ರೆಕ್ಕೆಗಳಿಗೆ ಸವರುವ ಒಂದು ವಿಧವಾದ ರಸಾಯನವನ್ನು ಕಂಡುಹಿಡಿದಿರುವರು. ಇದನ್ನು ಸವರುವುದರಿಂದ ರೆಕ್ಕೆಗಳ ಮೂಲಕ ಗಾಳಿಯು ಒಳಗೆ ಪ್ರವೇಶಿಸಲು ಅವಕಾಶವಾಗುವುದಿಲ್ಲವಂತೆ! ಹಿಂದೂದೇಶದಲ್ಲಿ ತಯಾರಾಗುವ ಉಣ್ಣೆ ಮತ್ತು ನೂಲಿನ ಬಟ್ಟೆಗಳಿಗೆ ಹಾಕುವ ಬಣ್ಣವನ್ನು ನಮ್ಮವರು ಕೋಟ್ಯಂತರ ರೂಪಾಯಿಗಳನ್ನು ಕೊಟ್ಟು ಜರ್ಮನಿಯಿಂದ ತರಿಸುತ್ತಿರುವರು. ಡಾ|| ಕೊಕಟನೂರರವರು ಜರ್ಮನಿಯಿಂದ ತರಿಸುವ ಬಣ್ಣಕ್ಕಿಂತಲೂ ಶ್ರೇಷ್ಠವಾದ ಬಣ್ಣವನ್ನು ಸುಲಭ ಖರೀದಿಯಲ್ಲಿ ತಯಾರಿಸುವ ಉಪಾಯವನ್ನು ಕಂಡುಹಿಡಿದಿರುವರಂತೆ! ಈ ಕರ್ನಾಟಕ ಪುತ್ರನಿಂದ ಹಿಂದೂದೇಶದ ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದಿ ಮೆರೆಯಲೆಂದು ಆಶಿಸುತ್ತೇವೆ.

ಆರಾಧ್ಯ ಮೋಟಾರ್ ಸರ್ವಿಸ್, ಶಿವಮೊಗ್ಗ

ಮಹನೀಯರೆ,

ಈ ಸರ್ವಿಸ್ಸಿನ ಬಸ್ಸುಗಳು ದಿವಸಕ್ಕೆ ಎರಡಾವರ್ತಿ ಅಂದರೆ ಬೆಳಿಗ್ಗೆ 7-45 ಕ್ಕೆ ಮತ್ತು ಮಧ್ಯಾಹ್ನ 4 ಘಂಟೆಗೆ ಶಿವಮೊಗ್ಗಾದಿಂದ ಕಡೂರಿಗೆ ಹೋಗುತ್ತಿದ್ದುದು ತಮಗೆಲ್ಲರಿಗೂ ತಿಳಿದೇ ಇರುತ್ತದೆ. ಪ್ರಯಾಣಿಕರ ಸೌಕರ್ಯಕ್ಕಾಗಿ ಮಧ್ಯಾಹ್ನ ಹೊರಡುವ ಸರ್ವಿಸ್ಸು ಈ ಲಗಾಯಿತು 3 ಘಂಟೆಗೆ ಹೊರಟು ತರೀಕೆರೆ ಲಿಂಗದಹಳ್ಳಿ ಮಾರ್ಗವಾಗಿ 6½ ಘಂಟೆಗೆ ಕಡೂರಿಗೆ ಸೇರುವ ಏರ್ಪಾಟು ಮಾಡಿರುತ್ತೆ. ಬೆಳಿಗ್ಗೆ ಶಿವಮೊಗ್ಗದಿಂದ 7-45 ಕ್ಕೆ ಹೊರಡುವ ಸರ್ವಿಸ್ಸು ಮಾಮೂಲಿನಂತೆ ತರೀಕೆರೆ ಶಿವಪುರ ಮಾರ್ಗವಾಗಿ ಕಡೂರಿಗೆ 10-45 ಕ್ಕೆ ಸೇರುವುದು. ಎಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶಿವಮೊಗ್ಗ, 7-11-1930. ಎಂ. ವಿ. ಮರುಳಸಿದ್ದಯ್ಯ, ಪ್ರೊಪ್ರೈಟರ್.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಮಳಲಿಮಠದಲ್ಲಿ ಶಿವಲಿಂಗಪ್ರತಿಷ್ಠೆ, ಗಣಾರಾಧನೆ ಮತ್ತು ಧಾರ್ಮಿಕಸಭೆ.

ಮೇಲ್ಕಂಡ ಶ್ರೀ ಮಳಲಿಮಠದ ಪೂಜ್ಯಪಾದರಾದ ನಾಗಾರ್ಜುನ ಶಿವಾಚಾರ್ಯರೆಂಬವರು ಪೂರ್ವದಲ್ಲಿ ಈ ಮಠಕ್ಕೆ ಅಧಿಕಾರಿಗಳಾಗಿದ್ದು, ಪೂಜಾನುಷ್ಠಾನಗಳಲ್ಲಿ ಸುಪ್ರಸಿದ್ಧರಾಗಿ ಮಹಾಮಹಿಮರೆಂದೆನಿಸಿಕೊಂಡಿದ್ದರು. ಈ ಮಹಾತ್ಮರ ವಿಚಾರದಲ್ಲಿ ಈ ಹೊತ್ತಿನವರೆಗೂ ಸರ್ವರೂ ಇವರ ಪಾದಸ್ಮರಣೆಯನ್ನು ಮಾಡುತ್ತಿರುವರು. ಈ ಗುರುವರ್ಯರು ತಮ್ಮ ಶಿವಲಿಂಗ ಪೂಜಾನಂತರ ಪ್ರಸಾದ ಸ್ವೀಕರಿಸುವ ಸಮಯದಲ್ಲಿ ಒಂದು ಸರ್ಪವು ಪ್ರಸಾದದಲ್ಲಿ ಬೀಳಲು ಅದನ್ನು ಈ ಮಹಿಮರು ಪ್ರಸಾದವೆಂದೇ ಸ್ವೀಕರಿಸಲು ಇವರ ಮಹಿಮೆಯಿಂದ ಅದು ಕರ್ಣದಲ್ಲಿ ಬಂದಿತೆಂದೂ ಹೇಳುವ ವಾಡಿಕೆಯಿರುವುದು. ಈ ಮಠದಲ್ಲಿ ಏನಾದರೂ ಅಚಾತುರ್ಯವಾದಲ್ಲಿ ಸರ್ಪಗಳು ಈಗಲೂ ಪ್ರತ್ಯಕ್ಷ ಕಾಣಿಸಿಕೊಳ್ಳುತ್ತಿರುವವು. ಆದ್ದರಿಂದ ಜನರು ಬಹು ಭಯಭಕ್ತಿಯಿಂದ ನಡೆದುಕೊಳ್ಳುತ್ತಿರುವರು. ಅಂದಿನಿಂದಲೂ ಈ ಪೀಠಕ್ಕೆ ಅಧಿಕಾರಿಗಳಾಗಿ ಬಂದ ಸ್ವಾಮಿಗಳವರಿಗೂ ನಾಗಾರ್ಜುನ ಸ್ವಾಮಿಗಳೆಂದೇ ಕರೆಯುತ್ತಿರುವರು. ಹಾಲಿ ಅಧಿಕಾರಿಗಳಾಗಿರುವ ಗುರುನಾಗಾರ್ಜುನ ಸ್ವಾಮಿಗಳವರು, ಯೋಗ್ಯರೂ, ವಿದ್ಯಾವಂತರೂ, ಆಚಾರಶೀಲರೂ ಆಗಿರುವರು. ಇವರಿಗಿಂತಲೂ ಹಿಂದಿನ ಮರಿನಾಗಾರ್ಜುನಸ್ವಾಮಿಗಳವರು ೩೫ ಸಾವಿರ ರೂಪಾಯಿಗಳ ವೆಚ್ಚದಿಂದ ಮಠವನ್ನು ಹೊಸದಾಗಿ ಕಟ್ಟಿಸಿರುವರು. ಈ ಮಠಕ್ಕೆ ಮೈಸೂರು ಪ್ರಾಂತದಲ್ಲಿ ಅನೇಕ ಜನ ಶಿಷ್ಯರಿರುವುದಲ್ಲದೆ ಧಾರವಾಡ ಡಿಸ್ಟ್ರಿಕ್ಟ್ ನೈಜಾಂ ಇಲಾಖೆಗಳಲ್ಲಿಯೂ ಸಹ ಶಿಷ್ಯರಿರುವರು. ಒಟ್ಟಿನಮೇಲೆ ಈ ಮಠವು ಸಂಪತ್ತಿನಿಂದಲೂ, ಪೂಜಾವೈಭವದಿಂದಲೂ, ಶಿಷ್ಯಸಮುದಾಯದಿಂದಲೂ ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಶಾಖಾಮಠವಾಗಿರುವುದರಿಂದಲೂ ಮಹತ್ವವುಳ್ಳದ್ದಾಗಿರುವುದು. ಪೂರ್ವದ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಕರ್ತೃಗದ್ದುಗೆಯು ಪ್ರತ್ಯೇಕವಾಗಿದ್ದು ಅದು ಈಚೆಗೆ ಶಿಥಿಲವಾಗಿತ್ತು. ಈ ಸಮಯದಲ್ಲಿ ಈಗಿನ ಗುರುನಾಗಾರ್ಜುನಸ್ವಾಮಿಗಳವರು ಧಾರವಾಡ ಜಿಲ್ಲಾ ಬಂಕಾಪುರಕ್ಕೆ ದಯಮಾಡಿಸಿದ ಕಾಲದಲ್ಲಿ ತಮ್ಮ ಶಿಷ್ಯರಾದ ಹಂದಿಗನೂರು ಸಂಸ್ಥಾನದ ದೇಸಾಯಿಗಳವರಲ್ಲಿ ಪ್ರಸ್ತಾಪಿಸಿ ಅಪ್ಪಣೆಕೊಡಿಸಿದ್ದರಲ್ಲಿ, ಮ|| ರಾ|| ಶ್ರೀಮಂತ, ಕೈ|| ಬಸವಲಿಂಗಪ್ಪ ದೇಸಾಯಿರವರ ಕುಮಾರರಾದ ಶ್ರೀಮಂತ ಬಸವಂತರಾವ್, ಮಲ್ಲಿಕಾರ್ಜುನಪ್ಪ, ಮತ್ತು ಸಿದ್ಧಲಿಂಗಪ್ಪ ಉರುಫ್ ಅಪ್ಪಾಸಾಹೇಬ್ ದೇಸಾಯಿ ವ. ಸಾ. ದುಕರ್ಗೆ ಪರಗಣೆ ಮಾಮಲೆ ಬಂಕಾಪೂರ ಸಂಸ್ಥಾನ ಹಂದಿಗನೂರು ಮೊಕ್ಕಾಂ ಬಂಕಾಪೂರ ಇವರು ತಮ್ಮ ಮಾತಾಪಿತೃಗಳಾದ ಕೈ|| ಬಸವಲಿಂಗಪ್ಪ ದೇಸಾಯರ ಹಾಗೂ ಕೈ|| ಚನ್ನಮ್ಮ ದೇಸಾಯಿಣಿಯವರ ಸ್ಮರಣಾರ್ಥವಾಗಿ ಸಾವಿರಾರು ರೂಪಾಯಿಗಳ ವೆಚ್ಚದಿಂದ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಕರ್ತೃಗದ್ದುಗೆಯು ಮಠವನ್ನು ಜೀರ್ಣೋದ್ಧಾರಮಾಡಿಸಿದ್ದಲ್ಲದೆ ಇದೇ ಪ್ರಮೋದನಾಮಸಂವತ್ಸರದ ಕಾರ್ತಿಕ ಶುದ್ಧ ೧೩ ತಾ|| ೩೧-೧೧-೩೦ ನೆ ಸೋಮವಾರ ಸೂರ್ಯೋದಯಾದಿ ಘಟಿಕಾ ೫೯-೩೫ ಕ್ಕೆ ಸಲ್ಲುವ ತುಲಾಲಗ್ನದಲ್ಲಿ ಶ್ರೀ ನಾಗಾರ್ಜುನ ಶಿವಾಚಾರ್ಯರವರ ಗದ್ದುಗೆಯ ಮೇಲೆ ಶಿವಲಿಂಗಪ್ರತಿಷ್ಠೆಯನ್ನು ಮಾಡಿಸಲು ಕುಟುಂಬ ಪರಿವಾರ ಸಮೇತರಾಗಿ ಮುಂಚಿತವಾಗಿಯೇ ಬಂದು ಶ್ರೀಗಳವರ ಸಮಕ್ಷಮ ತರೀಕೆರೆ ಹಿರೇಮಠದ ಚಲ್ಲಿನಾಥ ದೀಕ್ಷಿತರ ಪ್ರೋಹಿತ್ಯದಿಂದ ವಿಧ್ಯುಕ್ತಪ್ರಕಾರವಾಗಿ ಶುಭಲಗ್ನದಲ್ಲಿ ಈ ಮಹತ್ಕಾರ್ಯವನ್ನು ನೆರವೇರಿಸಿ ತತ್ಸಂಬಂಧವಾದ ಶ್ರೀ ರುದ್ರಾಭಿಷೇಕ ಗುರುಪಾದಪೂಜಾಮಾಹೇಶ್ವರಾರಾಧನೆಯನ್ನು ಮಂಗಳವಾರ ನಡೆಯಿಸಿದರು. ಅದೇ ದಿವಸ ಸಾಯಂಕಾಲ ಶ್ರೀ ಗುರುನಾಗಾರ್ಜುನಸ್ವಾಮಿಗಳವರ ಆಂದೋಳಿಕೋತ್ಸವ, ಕರ್ತೃಸ್ಥಳದಲ್ಲಿ ಛತ್ತೀಕೋತ್ಸವ, ಅನಂತರ ಮಂಗಲಾರಾಧನಪೂರ್ವಕ ಕಾರ್ಯವು ಅತ್ಯಂತ ವಿಜೃಂಭಣೆಯಿಂದ ಜರಗಿತು. ಈ ಕಾಲಕ್ಕೆ ಸರಿಯಾಗಿ ದೊಡ್ಡಗುಣಿ, ಕೌಲೇದುರ್ಗ, ದುಮ್ಮಹಳ್ಳಿ ಮುಂತಾದ ಗ್ರಾಮಗಳ ಪಟ್ಟಾಧ್ಯಕ್ಷ ಶಿವಾಚಾರ್ಯರವರು ಆಗಮಿಸಿದ್ದಲ್ಲದೆ ಸ್ಥಳ ಪರಸ್ಥಳದಿಂದ ಸಾವಿರಾರು ಜನ ಭಕ್ತಮಾಹೇಶ್ವರರೂ ಮಹಿಳೆಯರೂ ಆಗಮಿಸಿದ್ದರು. ದೊಡ್ಡಗುಣಿ ಬೃಹನ್ಮಠದ ಶ್ರೀ ಗುರುಲಿಂಗ ಶಿವಾಚಾರ್ಯರವರ ಅಧ್ಯಕ್ಷತೆಯಲ್ಲಿ ಪಿತೃಪೂ ಧಾರ್ಮಿಕಸಭೆಯು ನಡೆಯುತ್ತಲಿದ್ದಿತು. ಸಭೆಯಲ್ಲಿ ಹುಣಸಿಗಟ್ಟದಮಠದ ಕೀರ್ತನಾಲಂಕಾರ ವೇ|| ಜಿ. ನಂಜುಂಡಾರಾಧ್ಯರಿಂದ ಶಿವಕೀರ್ತನೆಯೂ, ಹಾವೇರಿ ಸಂಗೀತವಿದ್ವಾನ್ ವೇ|| ಜಯದೇವಸ್ವಾಮಿ ಇವರ ಶಿಷ್ಯ ಅಂಧಕನಾದ ಗುರುಶಾಂತಮೂರ್ತಿ ಈ ಉಭಯರ ಸುಶ್ರಾವ್ಯವಾದ ಸಂಗೀತವೂ, ಪೂಜ್ಯಪಾದರ ವ್ಯಾಖ್ಯಾನವೂ ಜರಗಿದವು. ಆರಾಧ್ಯರ ಕೀರ್ತನದಿಂದ ಜನಗಳಲ್ಲಿ ನೀತಿಯೂ, ರಾಷ್ಟ್ರಭಕ್ತಿಯೂ ಉಂಟಾದುದಲ್ಲದೆ ಮಲನಾಡಿನಲ್ಲಿ ನಡೆಯುತ್ತಲಿದ್ದ ಕನ್ಯಾಶುಲ್ಕವಿಚಾರದಲ್ಲಿ ಅನೇಕ ವಿಷಯಗಳನ್ನು ಪ್ರತಿಪಾದಿಸಿದ್ದರಲ್ಲಿ ಸರ್ವರಲ್ಲಿಯೂ ಪರಿಣಾಮವಾಗಿ ಇನ್ನು ಮುಂದೆ ಕರವು ತೆಗೆದುಕೊಳ್ಳುವುದಿಲ್ಲವೆಂದು ಒಪ್ಪಿದರು. ಹುಂಚದ ಸರಾಫ್ ಹುಚ್ಚರಾಯಪ್ಪ ದೈವಜ್ಞ ಇವರು ಶಿಲ್ಪಶಾಸ್ತ್ರೋಕ್ತಪ್ರಕಾರ ಪ್ರತಿಷ್ಠಾಗೋಸಿರುವ ಶಿವಲಿಂಗವನ್ನು ಶ್ರೀ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯ ಆಕಾರವಾಗಿ ವಿಗ್ರಹವನ್ನು ಅಂದವಾಗಿ ತಯಾರಿಸಿ ಮಸ್ತಕ ಹಿಂಭಾಗದಲ್ಲಿ ಸರ್ಪವನ್ನು ಮಾಡಿ ಪ್ರತ್ಯಕ್ಷ ನಾಗಾರ್ಜುನ ಶಿವಾಚಾರ್ಯರೋ ಎಂಬುವಂತೆ ಶಿಲೆಯಲ್ಲಿ ಬಹಳ ಮೆಹನತ್ತಿನಿಂದ ಮಾಡಿಕೊಟ್ಟದ್ದಕ್ಕೋಸ್ಕರ ಸದರಿಯವರಿಗೆ ಒಂದು ಸುವರ್ಣಪದಕವೂ ೫೦ ರೂಪಾಯಿಗಳೂ ಆಶೀರ್ವದಿಸಲ್ಪಟ್ಟವು. ತರೀಕೆರೆ ತಾ|| ಹಾದಿಕೆರೆಯಿಂದ ಬಂದಿದ್ದ ವಾದ್ಯದ ನಂಜಪ್ಪನಿಗೂ, ಕರಡೇಮಜಲೀಬಾರಿಸುವ ಚೆನ್ನಪ್ಪನಿಗೂ ಸುವರ್ಣಪದಕವು ಕೊಡಲ್ಪಟ್ಟಿತು. ಶ್ರೀಮಂತ ಮಲ್ಲಿಕಾರ್ಜುನಪ್ಪ ದೇಸಾಯಿಯವರು ತಮ್ಮ ಧರ್ಮಪತ್ನಿ ಶ್ರೀಮತಿ ರಮಾಬಾಯಿಯವರೂ ಬೆಳ್ಳಿಹಿಡಕೆಗಳನ್ನು ಹಾಕಿದ ಎರಡು ಬೀಳೇ ಚೌರಿಗಳನ್ನು ಮಠಕ್ಕೆ ಒಪ್ಪಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಲಪೂರ್ವಕವಾಗಿ ಕಾರ್ಯವು ಸಾಂಗವಾಯಿತು. ಮೇಲ್ಕಂಡ ಮಹತ್ಕಾರ್ಯದಲ್ಲಿ ಮ|| ರಾ|| ಹೊದಲದ ಹಾಲಪ್ಪಗೌಡರು, ಹ್ಯಾರಂದೂರು ಮ|| ರಾ|| ಅಯಪ್ಪಗೌಡರು, ಭಾಂಡ್ಯದ ಮ|| ರಾ|| ಸಾ|| ರುದ್ರಪ್ಪಗೌಡರು, ಕೊಲ್ಲೂರಪ್ಪಗೌಡರು, ಕೊಟೀಗದ್ದೆ ಮ|| ರಾ|| ನಾಗಪ್ಪಗೌಡರು, ಜಳಬಯಲು ಮ|| ರಾ|| ಮಲ್ಲಪ್ಪಗೌಡರು, ಮ|| ರಾ|| ಹಲವನಹಳ್ಳಿ ಬಸವಪ್ಪಗೌಡರೇ ಮುಂತಾದ ಪ್ರಮುಖರು ಮುಂದೆ ನಿಂತು ಬಂದಜನರಿಗೆ ಆದರಾತಿಥ್ಯಗಳನ್ನು ಮಾಡಿ ಸರ್ವರ ಸಂತೋಷಕ್ಕೆ ಪಾತ್ರರಾದರು. ಮಠದ ಶ್ರೀ ಗುರುನಾಗಾರ್ಜುನ ಶಿವಾಚಾರ್ಯರವರು ತಮ್ಮ ಕಾರಭಾರಿಗಳಾದ ವೇ|| ನಂಜುಂಡಶಾಸ್ತ್ರಿಗಳವರ ದ್ವಾ. ಗಾ. ...

ಚಕ್ರಗೋಷ್ಠಿಯ ಸಮಾಚಾರವು.

ಇದೇ ತಿಂಗಳು ತಾ|| 12 ನೆಯ ದಿನದ ದುಂಡುಮೇಜಿನ ಅಧಿವೇಶನವು ಬಹುವೈಭವದಿಂದ ಪ್ರಾರಂಭಿಸಲ್ಪಟ್ಟಿತು. ಪಂಚಮ ಜಾರ್ಜಸಾರ್ವಭೌಮರು ಈ ಪರಿಷತ್ತಿಗೆ ಆಗಮಿಸಿ ಈ ಸಭೆಯ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನಡೆಯಲೆಂದು ಶುಭಶಂಸನವನ್ನು ಕೋರಿ 8 ನಿಮಿಷಗಳವರೆಗೂ ಭಾಷಣವನ್ನು ಮಾಡಿ ಸಭಿಕರಿಗೆ ವಂದನೆಗಳನ್ನರ್ಪಿಸಿ ಸ್ವಸ್ಥಾನಕ್ಕೆ ತೆರಳಿದರು. ಅವರ ಭಾಷಣವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಕೊಡಲ್ಪಟ್ಟಿದೆ. ಬಳಿಕ ಮಿ|| ರಾಮುಸೇಮ್ಯಾಕ್ಡೊನಾಲ್ಡರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿ ಸಾರ್ವಭೌಮರವರು ಈ ಮಹಾ ಸಭೆಗೆ ಶುಭಾಶೀರ್ವಾದವನ್ನು ದಯಪಾಲಿಸಿರುವುದರಿಂದ ಈ ಸಭೆಯ ಕಾರ್ಯಕಲಾಪಗಳು ನಿರ್ವಿಘ್ನವಾಗಿ ನಡೆದು ಉಭಯ ರಾಷ್ಟ್ರಗಳಿಗೆ ಸೌಹಾರ್ದವು ಬೆಳೆಯುವದೆಂದು ಹೇಳಲು ಸಂಶಯವಿಲ್ಲ. ಆದರೂ ನಮ್ಮ ಮುಂದಿನ ಕಾರ್ಯವು ಅನೇಕ ವಿಘ್ನಗಳಿಂದ ಕೂಡಿದೆ. ಈ ಮಹತ್ಕಾರ್ಯವನ್ನು ನಮ್ಮಗಳೆಲ್ಲರ ಬುದ್ಧಿ ಸಾಹಸಾದಿಗಳಿಂದ ನಿರ್ವಹಿಸಬೇಕು. ಭರತಖಂಡದ ಹಿತಚಿಂತಕರಾಗಿ ನಾವು ಈ ದುಂಡುಮೇಜಿನ ಮುಂದೆ ಕುಳಿತುಕೊಂಡಿರುವುದರಿಂದ ಪೂರ್ವದ ವೈಷಮ್ಯಗಳನ್ನೂ, ರೋಷದ ಭರದಿಂದಾಡಿರುವ ಕಠಿಣ ಭಾಷಣಗಳನ್ನೂ ಮರೆತು ಸರ್ವರೂ ಏಕೀಭವಿಸಿ ಕೆಲಸ ಮಾಡೋಣ! ಎಂದು ಹತ್ತು ನಿಮಿಷಗಳವರೆಗೂ ಮಾತನಾಡಿದರು. ಅನಂತರ ಬರೋಡಾ ಮಹಾರಾಜರೂ, ಕಾಶ್ಮೀರ ಮಹಾರಾಜರೂ, ಸರ್ ಅಕ್ಬರ್ ಹೈದರಿಯವರೂ, ಶ್ರೀಯುತ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳೂ, ಮಿ|| ಎಂ. ಜಿ. ಜಿನ್ನಾರವರೂ, ಮಿ|| ಯು. ಬಿ. ಪೇರವರೂ ಭಾಷಣಗಳನ್ನು ಮಾಡಿದರು.

ಕಾಶ್ಮೀರ ಮಹಾರಾಜರವರ ಭಾಷಣದ ಸಾರಾಂಶ.

ಇಂಗ್ಲೆಂಡಿನ ಮಿತ್ರರಾಗಿ ಭರತಖಂಡಕ್ಕೆ ಇಂಗ್ಲೆಂಡಿನ ಸಂಬಂಧವಿರಬೇಕೆಂಬಂಶವನ್ನು ಸ್ಥೈರ್ಯದಿಂದಲೂ, ಧೈರ್ಯದಿಂದಲೂ ಸಮರ್ಥನಮಾಡುತ್ತೇನೆ. ಆದರೂ ಸ್ವದೇಶವಾತ್ಸಲ್ಯಪೂರಿತರಾಗಿ ನಮ್ಮ ಭರತಖಂಡದ ದೇಶಾಭಿಮಾನಿಗಳೊಡನೆ ನಮ್ಮ ರಾಜ್ಯಗಳ ಹಾಗೂ ಭರತಖಂಡದ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸುವುದಕ್ಕೂ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತೀಯರಿಗೆ ಗೌರವಾರ್ಹವೂ, ಸರಿಸಮಾನವೂ ಆದ ಸ್ಥಾನವನ್ನು ದೊರಕಿಸಲು ಹೋರಾಡುವುದರಲ್ಲಿ ಎಳ್ಳಷ್ಟೂ ಹಿಂದುಳಿಯಲಾರೆವು. ನಮ್ಮ ಕಾರ್ಯವು ಮಹತ್ವವಾಗಿದುದ್ದು, ಅನೇಕ ತೊಡಕುಗಳುಳ್ಳದ್ದೂ ಆಗಿದೆ. ನಾವು ಸತಾಳ್ಮೆಯಿಂದಲೂ, ನಿಃಸ್ವಾರ್ಥತೆಯಿಂದಲೂ ಸೌಹಾರ್ದಭಾವದಿಂದಲೂ, ಏಕೀಭವಿಸಿ ಈ ಸಭೆಯ ಕಾರ್ಯಕಲಾಪಗಳಿಗೆ ವಿಜಯಲಕ್ಷ್ಮಿಯು ಪ್ರಸನ್ನಳಾಗುವಂತೆ ವರ್ತಿಸಿ ಎಲ್ಲರೂ ಕೀರ್ತಿಭಾಜನರಾಗುವುದು ಅತ್ಯವಶ್ಯಕವಾದುದಾಗಿದೆ. ಎಂದು ಹೇಳಿದರು. ಇವರ ಅಭಿಪ್ರಾಯಕ್ಕೆ ಅಲ್ಲಿ ನೆರೆದಿರುವ ಎಲ್ಲಾ ಮಂಡಲೇಶ್ವರರೂ, ರಾಜಪ್ರತಿನಿಧಿಗಳೂ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದರು. ಭಾರತೀಯ ರಾಜರುಗಳಿಗೂ, ಭಾರತೀಯ ಮುಖಂಡರುಗಳಿಗೂ ಭಿನ್ನಾಭಿಪ್ರಾಯವುಂಟಾಗಿ ತಮ್ಮ ಕಾರ್ಯವು ಸುಗಮವಾಗಬಹುದೆಂದು ನಿರೀಕ್ಷಿಸುತ್ತಿದ್ದ ಕನ್ಸರ್ವೇಟಿವ್ ಪಾರ್ಟಿ ಮೆಂಬರರ ಮುಖಗಳಲ್ಲಿ ಈ ಏಕಾಭಿಪ್ರಾಯವು ಸಂಕೋಚಭಾವವನ್ನು ಸೂಚಿಸುತ್ತಲಿತ್ತು.

ಮಿ|| ಎಂ. ಎ. ಜಿನ್ನಾರವರ ಶ್ಲಾಘನೀಯವಾದ ಭಾಷಣದ ಸಾರಾಂಶ.

ಭಾರತೀಯರಿಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಲಭಿಸುವುದೇ ಬ್ರಿಟಿಷ್ ಸರ್ಕಾರದ ಅಭಿಮತವಾಗಿದೆ ಎಂದು ವೈಸರಾಯರು ಇತ್ತೀಚೆಗೆ ಪ್ರಸಿದ್ಧಪಡಿಸಿರುವ ವಿಷಯವು ಅನುಷ್ಠಾನದಲ್ಲಿ ಬರಬೇಕು. ಈ ಉಭಯ ರಾಷ್ಟ್ರಗಳ ಚರಿತ್ರೆಯಲ್ಲಿ ಇಂಥ ಮಹತ್ವವೂ, ಗಂಭೀರವೂ ಆದ ಸಂಘಟನೆಯು ಎಂದೂ ಒದಗಿರಲಿಲ್ಲ. ಪ್ರಪಂಚದ ಐದನೆಯ ಒಂದು ಭಾಗವನ್ನೊಳಗೊಂಡಿರುವ ಭಾರತೀಯರ ಮುಂದಿನ ಅಭಿವೃದ್ಧಿಯು ಈ ಕೂಟದ ಜಯಾಪಜಯವನ್ನವಲಂಬಿಸಿದೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಇನ್ನೊಂದು ಸ್ವತಂತ್ರರಾಷ್ಟ್ರವು ಉತ್ಪನ್ನವಾಗುವುದನ್ನು ನೋಡಲು ಕೆನಡಾ ಮೊದಲಾದ ರಾಜ್ಯಗಳಿಂದ ಪ್ರತಿನಿಧಿಗಳು ಬಂದಿರುವುದೊಂದು ಪರಮಸಂತೋಷದಾಯಕವಾದ ಸಂಗತಿಯಾಗಿದೆ ಎಂದು ಮಿ|| ಜಿನ್ನಾರವರು ಅನುಪಮವಾಗ್ಝರಿಯಿಂದಲೂ ಧೈರ್ಯದಿಂದಲೂ, ಭರತಖಂಡದ ಸ್ವಾತಂತ್ರ್ಯವನ್ನು ಸಮರ್ಥಿಸಿದರು.

ರೈ. ಆ. ವಿ. ಎಸ್. ಶ್ರೀನಿವಾಸಶಾಸ್ತ್ರಿಗಳ ಭಾಷಣದ ಸಾರಾಂಶ.

ಸಾರ್ವಭೌಮರವರ ಮುಖಪದ್ಮದಿಂದ ದಯಾನ್ವಿತವೂ, ಸ್ಫೂರ್ತಿದಾಯಕವೂ, ಆದ ವಚನಗಳು ಹೊರಬಿದ್ದಿರುತ್ತವೆ. ನಮ್ಮ ಮುಂದಿನ ಮಹತ್ಕಾರ್ಯವು ನಿರ್ವಿಘ್ನವಾಗಿಯೂ, ಜಯಪ್ರದವಾಗಿಯೂ, ಕೊನೆಗಾಣಬೇಕಾದರೆ ಅವರ ಉಪದೇಶವನ್ನು ನಾವು ಲಕ್ಷ್ಯದಲ್ಲಿಟ್ಟು ಅದರಂತೆ ವರ್ತಿಸಬೇಕು. ಸಾರ್ವಭೌಮರು ನ್ಯಾಯ, ಸ್ವಾತಂತ್ರ್ಯ, ಸ್ವಸಾಮ್ರಾಜ್ಯರಾಷ್ಟ್ರಗಳಲ್ಲಿ ಪರಸ್ಪರ ಸಮಾನತೆ ಇವುಗಳಿಗೆ ಮಾತೃಸ್ಥಾನವಾಗಿದ್ದಾರೆ. ಮಹಾಪ್ರಭುಗಳ ಸಾಮ್ರಾಜ್ಯದ ಯಾವ ಭಾಗದಲ್ಲಿಯಾದರೂ, ಅನ್ಯಾಯ, ಅಸ್ವಾತಂತ್ರ್ಯಾದಿ ಅಸಹ್ಯಕರವಾದ ಕಟ್ಟುಗಳಿರುವುದನ್ನು ಕಂಡೂ ಕಂಡು ಸಹಿಸಮಾಡಿದರೆ ನಾವು ನಮ್ಮ ಕರ್ತವ್ಯಪರಾಙ್ಮುಖರಾದಂತಾಗುವುದು. ಈ ಸಭೆಯ ಮುಂದಿರುವ ಮುಖ್ಯಾಂಶಗಳು ಎರಡು. ಮೊದಲನೆಯದು ವೈಸರಾಯರವರು ಕಳೆದವರ್ಷ ಹೇಳಿರುವಂತೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವೇ ಭಾರತವರ್ಷದ ಭಾವೀಸನುಸ್ಥಿಯು. ಎರಡನೆಯದು ಇದೇ ವರ್ಷದ ಜುಲೈ ತಿಂಗಳಲ್ಲಿ ವೈಸ್ರಾಯರವರು ಹೇಳಿದಂತೆ ಅದನ್ನು ಮಟ್ಟಿಗೆ ತಮ್ಮ ಆಡಳಿತವನ್ನು ತಾವೇ ನಡೆಯಿಸಲು ಅನುಕೂಲ್ಯಗಳನ್ನು ಕಲ್ಪಿಸಿ ಕೊಡುವುದು. ಈ ಎರಡು ಅಭಯವಚನಗಳನ್ನು ಔದಾರ್ಯದಿಂದಲೂ, ಧೈರ್ಯದಿಂದಲೂ, ಭಾರತೀಯರಿಗೆ ಕ್ಷೇಮವಾಗುವ ಹಾಗೂ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಕೀರ್ತಿಲಭಿಸುವ ಹಾಗೂ, ಅನುಷ್ಠಾನದಲ್ಲಿ ತರುವುದು ಎಲ್ಲರ ಅವಶ್ಯಕವಾದ ಕರ್ತವ್ಯವಾಗಿದೆ."

ಮಿ|| ಜಿನ್ನಾ ಮತ್ತು ಶ್ರೀಯುತ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಇವರೀರ್ವರ ಭಾಷಣಗಳು ಮಾತ್ರ ಬಹುಧೈರ್ಯಯುಕ್ತವಾಗಿಯೂ ಅಸಮಾನ ವಾಗ್ಝರಿಯಿಂದ ಕೂಡಿಯೂ ಇರುವವಲ್ಲದೆ ಭಾರತವರ್ಷದ ಸ್ವಾತಂತ್ರ್ಯವನ್ನು ಸಮರ್ಥಿಸಲು ಅರ್ಹಗಳಾಗಿರುವವು. ಸಮಸ್ತ ಭಾರತೀಯರಿಗೆ ಸುಖಶಾಂತಿಗಳೂ ಬ್ರಿಟಿಷ್‌ಸಾಮ್ರಾಜ್ಯಕ್ಕೆ ಗೌರವಪ್ರತಿಷ್ಠೆಗಳೂ ಲಭಿಸಬೇಕಾದರೆ ಭಾರತೀಯ ಪ್ರಜೆಗಳ ಮತ್ತು ಮಹಾರಾಜರುಗಳ ಆಕಾಂಕ್ಷೆಗಳ ವಿಷಯದಲ್ಲಿ ಔದಾರ್ಯವನ್ನು ತೋರಿಸಿ 1857 ರಲ್ಲಿ ವಿಕ್ಟೋರಿಯಾಚಕ್ರವರ್ತಿನಿಯವರು ಅಪ್ಪಣೆಕೊಡಿಸಿರುವ ಪ್ರಸಿದ್ಧಪತ್ರಿಕೆಯನ್ನು ಸಾಧಿಸುವುದೇ ಈ ಸಭೆಯ ಮುಖ್ಯ ಧ್ಯೇಯವಾಗಿರಬೇಕೆಂದು ಬರೋಡಾ-ಮಹಾರಾಜರವರು ಸೂಚಿಸಿದರು. ಕಾರ್ಯಕ್ರಮವನ್ನು ನಿರ್ವಹಿಸಲು ಆಲೋಚನಾಸಮಿತಿಯೊಂದನ್ನು ನಿರ್ಮಿಸಬೇಕೆಂದು ಮಿ|| ರಾಮುಸೇಮ್ಯಾಕ್ಡೊನಾಲ್ಡರವರು ತಂದ ಸೂಚನೆಯನ್ನು ಸಭಿಕರು ಅನುಮೋದಿಸಿದ್ದರಿಂದ ಆಲೋಚನಾಸಮಿತಿಯೊಂದು ನಿರ್ಮಾಣಮಾಡಲ್ಪಟ್ಟಿತು. ಅಲವಾರ್‌ಮಹಾರಾಜರವರು ಇಂಡಿಯಾ ಸೆಕ್ರಿಟರಿ ಆಫ್ ಸ್ಟೇಟ್ ಬೆನ್‌ರವರು, ಸರ್ ಹ್ಯುಬರ್ಟ್‌ಕಾರ್, ಕೆ. ಹಕ್ಸರ್, ಸರ್. ಎಸ್. ಸೋರ್, ಸರ್ ಅಕಬರ್ ಹೈದರಿ, ಸರ್ ಎಂ. ಮಿರ್ಜಾ ಇಸ್ಮಾಯಿಲ್, ಮಿ|| ಜಿನ್ನಾ, ಮಿ|| ಜಯಕರ್, ಸರ್ ಬಿ. ಎನ್. ಮಿತ್ರ, ಮಿ|| ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್. ಎಂ. ಷಫಿ ಮತ್ತು ಸರ್ದಾರ ಉಜ್ಜಲಸಿಂಗರವರು ಈ ಸಭೆಯ ಸದಸ್ಯರುಗಳಾಗಿರುವರು. ಚಕ್ರಗೋಷ್ಠಿಯ ಪರಿಷತ್ತು ಈ ದಿನ ಪುನಃ ಪ್ರಾರಂಭವಾಗುವದು.

ಸಾರ್ವಭೌಮರ ಮತ್ತು ಮುಖ್ಯ ಮಂತ್ರಿಗಳಾದ ರಾಮುಸೇಮ್ಯಾಕ್ಡೊನಾಲ್ಡರವರ ಭಾಷಣಗಳಲ್ಲಿ ಸಾಮ್ರಾಜ್ಯಾಂತರ್ಗತಸ್ವರಾಜ್ಯವು ಪ್ರತಿಪಾದಿಸಲ್ಪಟ್ಟಿಲ್ಲವಾದುದರಿಂದ ಸರ್ ಫಿರೋಜಷಹ ಸೆತ್ನಾರವರು ಒಬ್ಬ ಪತ್ರಿಕಾಪ್ರತಿನಿಧಿಯ ಸಂಗಡ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರಂತೆ.

ಹಿಂದೂಮಹಮ್ಮದೀಯ ಪ್ರತಿನಿಧಿಗಳಲ್ಲಿ ಇನ್ನೂ ಸಂಪೂರ್ಣ ಏಕಮತ್ಯವು ನೆಲೆಗೊಂಡಿರುವುದಿಲ್ಲವೆಂದೂ ಪ್ರತ್ಯೇಕಪ್ರಾತಿನಿಧ್ಯ, ಸಿಂಧೂದೇಶವನ್ನು ಪ್ರತ್ಯೇಕಿಸುವಿಕೆ ಮೊದಲಾದ ಹದಿನಾಲ್ಕು ಅಂಶಗಳನ್ನು ಮಹಮ್ಮದೀಯರು ಮುಂದೊಡ್ಡುತ್ತಿರುವರೆಂದೂ ತಿಳಿದುಬರುತ್ತದೆ.

ಒಳದೇಶದ ವೃತ್ತಾಂತಗಳು.

ನಮ್ಮ ಶ್ರೀಮನ್ಮಹಾರಾಜರವರು ಚಿ|| ನರಸಿಂಹಮೂರ್ತಿ ಎಂಬ ೯ ವರ್ಷ ವಯಸ್ಸಿನ ಬಾಲಕನನ್ನು ಅರಮನೆಗೆ ಬರಮಾಡಿಕೊಂಡು "ಮಯೂರಧ್ವಜ" ಎಂಬ ಕೀರ್ತನವನ್ನು ಕೇಳಿ ಸಂತುಷ್ಟರಾದರೆಂಬ ವಿಷಯವನ್ನು ಈ ಮೊದಲೇ ಪ್ರಸಿದ್ಧಿಸಿದ್ದೇವಷ್ಟೆ! ಆ ಸಂತೋಷಕ್ಕಾಗಿ ಮಹಾಪ್ರಭುಗಳವರು ಸದರಿ ಬಾಲಕನಿಗೂ, ಈ ಬಾಲಕನ ಅಣ್ಣನಾದ ಚಿ|| ಲಕ್ಷ್ಮೀಪತಿಗೂ ತಾ|| ೩-೧೧-೩೦ ನೆಯ ತಾರೀಖಿನ ದಿವಸ ೧೫೦ ರೂಪಾಯಿಗಳನ್ನು ಬಹುಮಾನರೂಪವಾಗಿ ದಯಪಾಲಿಸಿದರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಇದಲ್ಲದೆ ಸದರಿ ಬಾಲಕರಿಗೆ ಮಹಾಪ್ರಭುಗಳವರು ಇದಕ್ಕಿಂತಲೂ ಮೊದಲು ೫೦ ರೂಪಾಯಿಗಳನ್ನು ದಯಪಾಲಿಸಿದ್ದರು. ಗಾನ ಮತ್ತು ಕೀರ್ತನ ಕಲಾಕುಶಲರಾದ ಈ ಉಭಯಬಾಲಕರಿಗೆ ಜಗದೀಶ್ವರನು ಕಲ್ಯಾಣವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಮೈಸೂರು ಅರಮನೆಯ ಮುಂಭಾಗದ ದರ್ಬಾರ ಹಾಲನ್ನು ಕಿತ್ತು, ಹೊಸದಾಗಿ ಕಟ್ಟಲು ಪ್ರಾರಂಭಿಸಿದ್ದಾರೆ. ಈಗಿರುವ ದರ್ಬಾರ್‌ಹಾಲಿನಲ್ಲಿ ಶ್ರೀಮನ್ಮಹಾರಾಜರವರು ಸಿಂಹಾಸನಾರೂಢರಾಗಿ ಕುಳಿತರೆ ಮಹಾರಾಜರವರ ದರ್ಶನವು ಜನರಿಗೆ ಸರಿಯಾಗಿ ಆಗುವುದಿಲ್ಲವೆಂದೂ, ದರ್ಬಾರಿಜನರಿಗೆ ಕುಳಿತುಕೊಳ್ಳಲು ಸ್ಥಳವು ಸಾಲುವದಿಲ್ಲವೆಂದೂ ಇವೇ ಮೊದಲಾದ ಕಾರಣಗಳಿಂದ ಹೊಸದಾಗಿ ಕಟ್ಟಿಸುವ ಏರ್ಪಾಟು ನಡೆದಿದೆ. ಈ ಭವ್ಯಕಟ್ಟಡವು ಕೇವಲ ಕಬ್ಬಿಣದ ಎರಕದ ಸಾಮಾನುಗಳಿಂದಲೇ ನಿರ್ಮಿಸಲ್ಪಡುವುದು. ಎರಕದ ಯಾವತ್ತು ಸಾಮಗ್ರಿಗಳು ಸೀಮೆಯಲ್ಲಿ ತಯಾರಾಗಿದ್ದು ಅಲ್ಲಿಂದ ರಾಜಧಾನಿಗೆ ಬರಹತ್ತಿವೆ. ಈ ಕೆಲಸವನ್ನು ನಿರ್ವಹಿಸಲು ಮದ್ರಾಸಿನಲ್ಲಿರುವ ರಿಚರ್ಡ್ ಸನ್‌ಕ್ರೂಡಾಸ್ ಕಂಪನಿಯವರು ಒಪ್ಪಿಕೊಂಡಿರುವರು. ಈ ಕಟ್ಟಡಕ್ಕೋಸ್ಕರ ೧೫ ಲಕ್ಷ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜು ಮಾಡಲ್ಪಟ್ಟಿದೆ. ಬರುವ ದಸರಾಮಹೋತ್ಸವದೊಳಗಾಗಿ ಈ ಭವ್ಯಮಂದಿರವು ಸಿದ್ಧವಾಗುವುದೆಂದು ತಿಳಿದುಬರುತ್ತದೆ.

ಇದೇ ತಿಂಗಳು 12 ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ಪ್ರಾರಂಭಿಸಲ್ಪಟ್ಟ ಚಕ್ರಗೋಷ್ಠಿಯನ್ನು ನಿಷೇಧಿಸಲು ರಾಜಧಾನಿಯ ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿಗಳೂ ಮತ್ತು ವಿದ್ಯಾರ್ಥಿನಿಯರೂ ಶಾಲೆ ಮತ್ತು ಕಾಲೇಜುಗಳಿಗೆ ಹೋಗದೆ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಮಾತ್ರ ಕೆಲಸ ನಡೆಯುತ್ತಿದ್ದನ್ನು ನೋಡಿ ಆ ಹೈಸ್ಕೂಲಿನ ಮುಂದೆ ಪಿಕೆಟಿಂಗ್ ಪ್ರಾರಂಭಿಸಿದರೆಂದೂ, ವಿದ್ಯಾರ್ಥಿಗಳು ಶಾಲೆಯ ಕಾಂಪೌಂಡಿನೊಳಗೆ ಪ್ರವೇಶಿಸದಂತೆ ಪೋಲೀಸರು ತಡೆಮಾಡಿದರೆಂದೂ, ಕಾಂಪೌಂಡಿನಲ್ಲಿದ್ದ ವಿದ್ಯಾರ್ಥಿಗಳ ಗುಂಪನ್ನು ಹೊರಗೆ ಹೊರಡಿಸುತ್ತಿರುವಾಗ ಪೋಲೀಸರಮೇಲೆ ಕೆಲವು ಕಲ್ಲುಗಳು ಬಿದ್ದವೆಂದೂ, ಆಗ ಪೋಲೀಸರು ಬಾಲಕರ ಮೇಲೆ ಕೈಮಾಡಿದರೆಂದೂ, ಒಬ್ಬನಿಗೆ ಪೂರಾ ಪೆಟ್ಟಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವನೆಂದೂ, ಅದೇ ದಿವಸ ಸುಬ್ಬರಾಯನ ಪಾರ್ಕಿನಲ್ಲಿ ವಿದ್ಯಾರ್ಥಿಗಳು ಸಭೆಸೇರಿಸಿ ನಿಷೇಧವನ್ನು ವ್ಯಕ್ತಪಡಿಸಿದರೆಂದೂ, ತಿಳಿದುಬರುತ್ತದೆ.

ರಾಜಧಾನಿಯಲ್ಲಿ ಸುಪ್ರಸಿದ್ಧರಾದ ಶ್ರೀಯುತ ಆರ್. ಪುಟ್ಟಣ್ಣ, ಬಿ.ಎ., ಬಿ.ಎಲ್., ರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಸೋಮವಾರ ಪರಂಧಾಮವನ್ನೈದಿದರೆಂಬ ವಿಷಯವನ್ನು ತಿಳುಹಿಸಲು ವಿಷಾದಿಸುತ್ತೇವೆ. ಇವರು ಬಹುಕಾಲದಿಂದ ಸಂಸ್ಥಾನದ ಮಿಲಟರಿ ಸೆಕ್ರೆಟರಿಯವರ ಅಸಿಸ್ಟೆಂಟರಾಗಿ ಅಸಾಧಾರಣವಾದ ಅಶ್ವಶಾಸ್ತ್ರನೈಪುಣ್ಯವನ್ನು ಪಡೆದಿದ್ದರು. ಇವರಲ್ಲಿ ರಾಜಭಕ್ತಿ, ಪರೋಪಕಾರ ಬುದ್ಧಿ, ಜನಾನುರಾಗ, ಶಾಂತಿ ಮುಂತಾದ ಸದ್ಗುಣಗಳು ಮನೆಮಾಡಿಕೊಂಡಿದ್ದರಿಂದ ಇವರು ಸರ್ವರ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಈ ಮಹೋದಯರಲ್ಲಿದ್ದ ಸದ್ಗುಣಗಳೆಲ್ಲವೂ ಇವರ ಪುತ್ರರಾದ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿರುವ ಶ್ರೀಯುತ ಆರ್. ಪಿ. ಮಲ್ಲಪ್ಪನವರಲ್ಲಿ ಮೂರ್ತೀಭವಿಸಿರುತ್ತವೆ. ಇವರಲ್ಲಿರುವ ಪಿತೃಭಕ್ತಿಯೆಂಬುವುದು ನಿರುಪಮಾನವಾದುದರಿಂದ ಪಿತೃಗಳ ಉತ್ತರಕ್ರಿಯೆಗಳನ್ನೆಲ್ಲಾ ಸಾಂಗವಾಗಿ ನೆರವೇರಿಸಿದರು. ಜಗದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ಮಿಸೆಸ್ ಹೈಸೀ ಎಂಬ ಇಂಗ್ಲೆಂಡಿನ ಹೆಂಗಸು ತನ್ನ ಗಂಡನು ತನ್ನನ್ನು ಬಾರಿಬಾರಿಗೂ ಚುಂಬನ ಮಾಡಿದನೆಂದು ಮೊಕದ್ದಮೆಯನ್ನು ಹಾಕಿರುವಳು.

ಪಂಡಿತ ಮೋತೀಲಾಲನೆಹರೂರವರ ಆರೋಗ್ಯವು ಇನ್ನೂ ಸಂಪೂರ್ಣವಾಗಿ ಸುಧಾರಿಸಿಲ್ಲವೆಂದೂ, ಅವರು ಚಿಕಿತ್ಸೆಗಾಗಿ ಈ ದಿನ ಕಲ್ಕತ್ತೆಗೆ ದಯಮಾಡಿಸಿದರೆಂದೂ ವರ್ತಮಾನವಿದೆ.

ಲಾಹೋರಿನ ಹೊಸಪಿತೂರಿ ಮೊಕದ್ದಮೆಯಲ್ಲಿ ಗುಪ್ತಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ಅಬ್ದುಲ್‌ಹಕ್ ಎಂಬವನು ಮೋಟಾರಿಗೆ ಸಿಕ್ಕಿ ಪ್ರಾಣಾಪಾಯಸ್ಥಿತಿಯಲ್ಲಿರುವನಂತೆ!

ಬಿಹಾರ್ ಪ್ರಾಂತದಲ್ಲೊಂದರಲ್ಲಿಯೇ ಶಾಸನೋಲ್ಲಂಘನ ಚಳವಳಿಯು ಪ್ರಾರಂಭವಾದಂದಿನಿಂದ ಹತ್ತು ಸಾವಿರ ಜನರು ದಸ್ತಗಿರಿ ಮಾಡಲ್ಪಟ್ಟು ಜೈಲಿಗೆ ಸಾಗಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

"ಬಾಂಬೆ ಕಾಂಗ್ರೆಸ್ ಬುಲೆಟಿನ್" ಪತ್ರಿಕೆಯ ಸಂಪಾದಿಕೆಯಾದ ಶ್ರೀಮತಿ ತ್ರಿಕೂಲದಾರೂ ಎಂಬ ಯುವತಿಯು ನಾಲ್ಕು ತಿಂಗಳುಗಳ ಸಾದಾಸಜೆಗೂ 50 ರೂಪಾಯಿಗಳ ಅರ್ಥದಂಡಕ್ಕೂ ಗುರಿಯಾಗಿರುವಳು.

ಬಳ್ಳಾರಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಗಳಾದ ಶ್ರೀಯುತ ಎಂ. ರಾಘವೇಂದ್ರರಾಯರು ಹಿರೇಹಡಗಲಿಯಲ್ಲಿ ಖಾದಿಪ್ರಸಾರ ಮತ್ತು ಮದ್ಯಪಾನ ನಿರೋಧದ ಮೇಲೆ ಉಜ್ವಲವಾದ ಭಾಷಣ ಮಾಡಿದರು.

ಅಮೇರಿಕಾಖಂಡದಲ್ಲಿ ಸ್ತ್ರೀಯರು ವಿನೋದಕೂಟಗಳನ್ನು ಸೇರಿಸುವ ಕಟ್ಟಡಗಳ ನಿರ್ಮಾಣಕ್ಕೂ, ತಮ್ಮ ಸೌಂದರ್ಯವನ್ನು ವೃದ್ಧಿಪಡಿಸುವ ಉಪಕರಣಗಳಿಗೂ ಈ ವರ್ಷ ಸುಮಾರು 195 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿರುವರಂತೆ! ಸ್ತ್ರೀಸ್ವಾತಂತ್ರ್ಯದ ಮಹಿಮೆಯು!

ಮಹಾತ್ಮಾ ಗಾಂಧಿಯವರು ದಸ್ತಗಿರಿಯಾದಮೇಲೆ ಉಪ್ಪಿನ ಸತ್ಯಾಗ್ರಹವನ್ನು ಕೈಕೊಂಡು, ಜೈಲಿಗೆ ಹೋಗಿದ್ದ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಮಿ|| ಅಬ್ಬಾಸ್‌ತಯಾಬ್ಜಿಯವರು ಬಿಡುಗಡೆ ಮಾಡಲ್ಪಟ್ಟಿರುವರು. ಇವರು ಇನ್ನು ಮೂರು ವಾರಗಳಲ್ಲಿಯೇ ಪುನಃ ಜೈಲಿನ ಸುಖವನ್ನನುಭವಿಸುವ ಸುಯೋಗವು ತಮಗೆ ಒದಗುವುದೆಂದು ಹೇಳಿರುವರು.

ಹರಪನಹಳ್ಳಿಯಲ್ಲಿ ದಸ್ತಗಿರಿಮಾಡಲ್ಪಟ್ಟ ಮ|| ರಾ|| ಕೊಟ್ರಪ್ಪ ಮತ್ತು ಮ|| ರಾ|| ನರಸಿಂಹಮೂರ್ತಿ ಎಂಬೀರ್ವರಿಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಂದು ವರ್ಷದ ಸಾದಾ ಸಜೆಯನ್ನು ವಿಧಿಸಿರುವರು ಹಾಗೂ ನವಂಬರ್ 9 ನೆಯ ತಾರೀಖಿನ ದಿವಸದಿಂದ ಎರಡುತಿಂಗಳುಗಳವರೆಗೆ ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಅಪ್ಪಣೆಯನ್ನನುಸರಿಸಿ ಮೆರವಣಿಗೆಗಳೂ, ಕೂಟಗಳೂ, ಪ್ರದರ್ಶನಗಳೂ ನಡೆಯಿಸಲ್ಪಡಕೂಡದೆಂದು ಹೊಸಪೇಟೆಯ ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿದ್ದಾರೆ.

ಪಂಡಿತ ಮೋತೀಲಾಲನೆಹರೂರವರ ಪುತ್ರಿ ಶ್ರೀಮತಿ ಕೃಷ್ಣಕುಮಾರಿಯವರೂ, ಶ್ರೀಮತಿ ರಾಮಕುಮಾರಿಯವರೂ, ಅಕ್ರಮಕೂಟದ ಮೆಂಬರರೆಂದು ದಸ್ತಗಿರಿಮಾಡಲ್ಪಟ್ಟು 50 ರೂಪಾಯಿಗಳ ಅರ್ಥದಂಡ ಅಥವಾ ಒಂದು ತಿಂಗಳು ಸಾದಾಸಜೆಗೆ ಗುರಿಯಾಗಿದ್ದು ಉಭಯರೂ ಜೈಲಿನಲ್ಲಿದ್ದರು. ಯಾರೋ ಒಬ್ಬರು ಇವರ ಸಂಬಂಧವಾದ 50 ರೂ. ಅರ್ಥದಂಡವನ್ನು ಕೊಟ್ಟದ್ದರಿಂದ ಬಿಡುಗಡೆ ಮಾಡಲ್ಪಟ್ಟರು. ದಂಡವನ್ನು ಕೊಟ್ಟಿರುವ ಗುಪ್ತ ಮನುಷ್ಯನು ನನಗೂ, ನನ್ನ ಮಗಳಿಗೂ ಹಾಗೂ ನನ್ನ ದೇಶಕ್ಕೂ ದ್ರೋಹಿ ಎಂದೆಣಿಸುತ್ತೇನೆಂದು ಪಂಡಿತ ಮೋತೀಲಾಲನೆಹರೂರವರು ಅಭಿಪ್ರಾಯಪಟ್ಟಿರುವರು.

ಡಾ|| ಕೊಕಟನೂರ್ ಎಂಬೊಬ್ಬ ನಮ್ಮ ಕರ್ನಾಟಕದೇಶೀಯರು 1912 ರಲ್ಲಿ ಅಮೇರಿಕಾಖಂಡಕ್ಕೆ ಹೋಗಿ ಪ್ರಾರಂಭದಲ್ಲಿ ಒಂದು ಕಾರ್ಖಾನೆಯಲ್ಲಿ ಕೂಲಿಮಾಡಿ ಜೀವಿಸುತ್ತಿದ್ದು, ಈಗ ಜಗತ್ತಿನಲ್ಲಿರುವ ಪ್ರಸಿದ್ಧ ವಿಜ್ಞಾನಶಾಸ್ತ್ರಜ್ಞರಲ್ಲಿ ಒಬ್ಬರೆಂದು ಗಣಿಸಲ್ಪಟ್ಟಿರುವರು. ಇವರು ಪ್ರಪಂಚದಲ್ಲಿ ಯಾರೂ ಮಾಡದಿರುವ ಅನೇಕ ಹೊಸಹೊಸ ಶೋಧನೆಗಳನ್ನು ಮಾಡಿರುವರು. ಆಕಾಶವಿಮಾನದ ರೆಕ್ಕೆಗಳಿಗೆ ಸವರುವ ಒಂದು ವಿಧವಾದ ರಸಾಯನವನ್ನು ಕಂಡುಹಿಡಿದಿರುವರು. ಇದನ್ನು ಸವರುವುದರಿಂದ ರೆಕ್ಕೆಗಳ ಮೂಲಕ ಗಾಳಿಯು ಒಳಗೆ ಪ್ರವೇಶಿಸಲು ಅವಕಾಶವಾಗುವುದಿಲ್ಲವಂತೆ! ಹಿಂದೂದೇಶದಲ್ಲಿ ತಯಾರಾಗುವ ಉಣ್ಣೆ ಮತ್ತು ನೂಲಿನ ಬಟ್ಟೆಗಳಿಗೆ ಹಾಕುವ ಬಣ್ಣವನ್ನು ನಮ್ಮವರು ಕೋಟ್ಯಂತರ ರೂಪಾಯಿಗಳನ್ನು ಕೊಟ್ಟು ಜರ್ಮನಿಯಿಂದ ತರಿಸುತ್ತಿರುವರು. ಡಾ|| ಕೊಕಟನೂರರವರು ಜರ್ಮನಿಯಿಂದ ತರಿಸುವ ಬಣ್ಣಕ್ಕಿಂತಲೂ ಶ್ರೇಷ್ಠವಾದ ಬಣ್ಣವನ್ನು ಸುಲಭ ಬೆಲೆಯಲ್ಲಿ ತಯಾರಿಸುವ ಉಪಾಯವನ್ನು ಕಂಡುಹಿಡಿದಿರುವರಂತೆ! ಈ ಕರ್ನಾಟಕ ಪುತ್ರನಿಂದ ಹಿಂದೂದೇಶದ ಕೈಗಾರಿಕೆಗಳು ಅಭಿವೃದ್ಧಿಯನ್ನು ಹೊಂದಿ ಮೆರೆಯಲೆಂದು ಆಶಿಸುತ್ತೇವೆ.

ಆರಾಧ್ಯ ಮೋಟಾರ್ ಸರ್ವಿಸ್, ಶಿವಮೊಗ್ಗ

ಮಹನೀಯರೆ,

ಈ ಸರ್ವಿಸ್ಸಿನ ಬಸ್ಸುಗಳು ದಿವಸಕ್ಕೆ ಎರಡಾವರ್ತಿ ಅಂದರೆ ಬೆಳಿಗ್ಗೆ 7-45 ಕ್ಕೆ ಮತ್ತು ಮಧ್ಯಾಹ್ನ 4 ಘಂಟೆಗೆ ಶಿವಮೊಗ್ಗಾದಿಂದ ಕಡೂರಿಗೆ ಹೋಗುತ್ತಿದ್ದುದು ತಮಗೆಲ್ಲರಿಗೂ ತಿಳಿದೇ ಇರುತ್ತದೆ. ಪ್ರಯಾಣಿಕರ ಸೌಕರ್ಯಕ್ಕಾಗಿ ಮಧ್ಯಾಹ್ನ ಹೊರಡುವ ಸರ್ವಿಸ್ಸು ಈ ಆಗಾಯಿತು 3 ಘಂಟೆಗೆ ಹೊರಟು ತರೀಕೆರೆ ಲಿಂಗದಹಳ್ಳಿ ಮಾರ್ಗವಾಗಿ 6½ ಘಂಟೆಗೆ ಕಡೂರಿಗೆ ಸೇರುವ ಏರ್ಪಾಟು ಮಾಡಿರುತ್ತೆ. ಬೆಳಿಗ್ಗೆ ಶಿವಮೊಗ್ಗದಿಂದ 7-45 ಕ್ಕೆ ಹೊರಡುವ ಸರ್ವಿಸ್ಸು ಮಾಮೂಲಿನಂತೆ ತರೀಕೆರೆ ಶಿವಪುರ ಮಾರ್ಗವಾಗಿ ಕಡೂರಿಗೆ 10-45 ಕ್ಕೆ ಸೇರುವುದು. ಎಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶಿವಮೊಗ್ಗ, 7-11-1930.

ಎಂ. ವಿ. ಮರುಳಸಿದ್ದಯ್ಯ, ಪ್ರೊಪ್ರೈಟರ್.

ಶ್ರೀಮದುಜ್ಜಯಿನೀ ಜಗದ್ಗುರುಗಳ ಆಗಮನ.

ಅಮರಾಪುರ.

ಅನಂತಪುರಜಿಲ್ಲಾ ಮಡಕಶಿರಾ ತಾಲ್ಲೂಕು ಅಮರಾಪುರ ಗ್ರಾಮಕ್ಕೆ ತಾರೀಖು 31-10-1930 ನೇ ಶುಕ್ರವಾರ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಮಧ್ಯಾಹ್ನ 11 ಘಂಟೆಗೆ ದಯಮಾಡಿಸಿದರು. ಪುರಪ್ರಮುಖರಾದ ವೇ|| ಮಠದ ಸಣ್ಣಪ್ಪಯ್ಯನವರು, ಕರಿಬಸವಸ್ವಾಮಿಗಳವರು, ಪಾಟೀಲ್ ಲಿಂಗನಗೌಡರು, ಸಿದ್ಧರಾಮಣ್ಣನವರ ಶಿವಣ್ಣನವರು, ಎಲೆ ಸಣ್ಣಪ್ಪನವರು ಇನ್ನೂ ಮುಂತಾದ ವೀರಶೈವ ಜನಾಂಗದವರೂ ...

ಜಗಲೂರು ತಾಲೂಕ್ ವಿಚಾರ.

ಅಲ್ಯೂಮಿನಂ ಪಾತ್ರೆಗಳಲ್ಲಿ ಅಡಿಗೆಮಾಡುವುದರಿಂದಾಗುವ ವಿಷದೋಷಗಳು.

ವಿಷಗುಣವುಳ್ಳದ್ದೆಂದೂ, ಅದರಲ್ಲಿ ಅಡಿಗೆಮಾಡುವುದು ತಪ್ಪೆಂದೂ ವ್ಯಕ್ತವಾಗುವುದು. ಅವರು ಮಾಡಿದ ಪರೀಕ್ಷೆಗಳಿಂದ ಕೆಳಗೆ ಕಾಣಿಸಿದ ಸಂಗತಿಗಳು ಕಂಡುಬಂದಿವೆ.

1. ಸಿಪ್ಪೆ ತೆಗೆದ ಉರುಳುಗೆಡ್ಡೆಯನ್ನು ಒಂದು ಅಲ್ಯೂಮಿನಂ ಪಾತ್ರೆಯಲ್ಲಿ ಒಂದು ರಾತ್ರಿ ಇಟ್ಟಿದ್ದರೆ, ಅದು ಹಳದಿ ಬಣ್ಣಕ್ಕೆ ತಿರುಗುವುದು. ಅಲ್ಲದೆ ಅದನ್ನು ಬೇಯಿಸುವಾಗ, ಬಹಳವಾಗಿ ಸುರುಗಿಕೊಳ್ಳುವುದು, ಮತ್ತು ಒಡೆದು ನೋಡಿದರೆ ಒಳಗೆ ಕರೀ ಗೆರೆಗಳು ಕಾಣಿಸಿಕೊಳ್ಳುವುವು.

2. ರೊಟ್ಟಿಗಾಗಿ ಮಾಡಿದ ಹಿಟ್ಟನ್ನು ಅಲ್ಯೂಮಿನಂ ತಟ್ಟೆಯಲ್ಲಿ ಕಲೆಸಿದರೆ, ಅದು ಬೂದಿಯ ಬಣ್ಣಕ್ಕೆ ಬರುವುದು. ಕೋಸುಗೆಡ್ಡೆಯನ್ನು ಅಲ್ಯೂಮಿನಂ ಪಾತ್ರೆಯಲ್ಲಿ ಹಾಕಿ ಬೇಯಿಸಿದರೆ, ಅದು ಕಪ್ಪಾಗಿ ಮಾರ್ಪಡುವುದು. ಚಪ್ಪರಬದನೆ, (ಟೊಮಟೋ) ಸೇಬು, ರುಬಾರ್ಬ್, ದ್ರಾಕ್ಷಿಹಣ್ಣು ಮುಂತಾದುವನ್ನು ಅಲ್ಯೂಮಿನಂ ಪಾತ್ರೆಯಲ್ಲಿ ಹಾಕಿ ಕುದಿಸಿದರೆ, ಐದು ನಿಮಿಷಗಳೊಳಗಾಗಿ, ಆ ಪಾತ್ರೆಯಲ್ಲಿರುವ ಕಲ್ಮಷಗಳೆಲ್ಲ ಎಳೆದುಕೊಂಡು ಪಾತ್ರೆಯನ್ನು ಶುದ್ಧಿಮಾಡುವುದು.

3. ಸಾಧಾರಣವಾದ ಬಾವಿಯ ನೀರನ್ನು ಅಲ್ಯೂಮಿನಂ ಪಾತ್ರೆಯಲ್ಲಿ ಎರಡು ಘಂಟೆಗಳ ಕಾಲದವರೆಗೆ ಇಟ್ಟಿದ್ದರೆ, ಆ ನೀರು ಹಾಲಿನಂತಾಗಿ ಬಿಡುವುದಲ್ಲದೆ, ಆ ಪಾತ್ರೆಯ ತಳದಲ್ಲಿ ಕರೀ ಚುಕ್ಕಿಗಳು ಕಾಣಿಸುವುವು.

11. ಸಮುದ್ರದ ಮೀನು ಮುಂತಾದ ಆಹಾರಗಳನ್ನು ಹಾಲಿನ ಸಂಗಡ ಅಲ್ಯೂಮಿನಂ ಪಾತ್ರೆಯಲ್ಲಿ ಬೇಯಿಸಿ ತಿಂದರೆ, ಅದರಿಂದ ವಮನವುಂಟಾಗುವುದು.

12. ಅದರಂತೆಯೇ ಸಲ್ವಾರ್‌ಗಳನ್ನು ಎರಡು ಘಂಟೆಗಳ ಕಾಲ ಇಟ್ಟಿದ್ದರೂ ಅದನ್ನು ತಿಂದವರಿಗೆ ಒಡನೆ ವಾಂತಿಬರುವುದು.

1920 ನೇ ಇಸವಿಯಿಂದ 1925 ರ ವರೆಗೂ ಗವರ್ನಮೆಂಟಿನವರು ಇದೇ ವಿಷಯವಾಗಿ ದೀರ್ಘ ವಿಚಾರಣೆಗಳನ್ನು ನಡೆಸಿದರು. ಆಗ "ಫೆಡರಲ್ ಟ್ರೇಡ್ ಕಮಿಷನ್ ಬೋರ್ಡ್" 540 ರಷ್ಟು ಸಾಕ್ಷಿಗಳನ್ನು ವಿಚಾರಿಸಿ, 4,000 ಪುಟಗಳಷ್ಟು ವಾಙ್ಮೂಲವು ಟೈಪು ಮಾಡಲ್ಪಟ್ಟಿದೆ. 5 ವರ್ಷ ಕಾಲದಲ್ಲಿ 150 ಸಾಕ್ಷಿಗಳು ವಿಚಾರಿಸಲ್ಪಟ್ಟರು. ಆದರ ಮೇಲೆ ಎಡ್ವರ್ಡ್, ಎಮ್. ಅವರಿಲ್ ಎಂಬವರು ಸರಕಾರಕ್ಕೆ ರಿಪೋರ್ಟು ಕಳುಹಿಸಿದರು. ಆ ಸಾಕ್ಷಿಗಳು ಎಲ್ಲಾ ಕಾಲೇಜು ಪ್ರೊಫೆಸರುಗಳೂ, ಡೀನ್‌ಗಳೂ, ಬಯೋಲಜಿ ಟಾಕ್ಸಿಯಾಲಜಿ ಮುಂತಾದ ಶಾಸ್ತ್ರಗಳಲ್ಲಿ ಪಾರಂಗತರೂ ಆಗಿದ್ದರು. ಇವರೆಲ್ಲರೂ ಅಮೇರಿಕದ ಪ್ರಖ್ಯಾತ ಕಲಾಶಾಲೆಗಳ ಉದ್ಯೋಗಸ್ಥರು. ಈ ಸಾಕ್ಷಿಗಳ ಮೂಲಕ ಬಂದ ವಾಙ್ಮೂಲಗಳನ್ನು ಕ್ರೋಡೀಕರಿಸಿ, ಅವರಿಲ್ ಎಂಬವರು ಕೆಳಗೆ ಕಂಡಂತೆ ರಿಪೋರ್ಟು ಮಾಡಿರುವರು.

"ಇದುವರೆಗೆ ವಿಚಾರಿಸಿದ ಸಾಕ್ಷಿಗಳ ವಾಙ್ಮೂಲದಿಂದ ಅಲ್ಯೂಮಿನಂ ಪಾತ್ರೆಯು ನಿರಪಾಯವಾದುದೆಂಬುದಕ್ಕೆ ಏನೂ ಆಧಾರವು ದೊರೆಯಲಿಲ್ಲ."

[ಅ. ಚಂ.]

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶೀ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

[16]

ಸ್ತ್ರೀರೋಗ ನಿವಾರಣೆ ಚೂರ್ಣ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮೀರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ...

ಶಿಲಾಜಿತ—

ಕಸ್ತೂರಿ—

ಗೃಹಮಾತೆಯು—

ಹಿಮಾಲಯನ್ ಬಾಮ್—

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನವಾದ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ... 350 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[31]

ಸತ್ವದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

[17]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಕಂಪೌಂಡ್ ಸಿರಪ್ ಕಾರ್ಡಸ್ ...

ಮಲೆಜ್ವರಕ್ಕೆ ಮಲೇರಿಯಾನ.

[15] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮಂತ್ರಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೩ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇನೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ,

[54] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಬೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿತಲೆನೋವು,

ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[18] ಪೋ. ಬಾ. ೫೧೧. ಮದರಾಸು.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗೆ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸರ್ವೋತ್ತಮವಾದ ಗ್ರಂಥಗಳು.

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧
ಮರುಳಸಿದ್ಧೇಶ್ವರಸ್ತೋತ್ರ	೧
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೩
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ	೪
ಬಸವಧ್ವಾಂತ ದಿವಾಕರ	೮
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೩
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦
ಶ್ರೀ ರೇಣುಕಾಚಾರ್ಯಶತಕಂ (೨ನೆಯ ಆವೃತ್ತಿ)	೨
ವಿವಾಹವಿಧಿ (೨ನೆಯ ಆವೃತ್ತಿ)	೩
ಪಂಚಾಚಾರ್ಯ ಪ್ರಭಾಕರ	೨
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪
ವೀರಶೈವಮತಮೀಮಾಂಸಾ	೨
ವೈದಿಕವಾಙ್ಮಯರಹಸ್ಯ	೪
ಶಿವಾಧಿಕ್ಯರತ್ನಾವಳೀ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧
ಸಚಿತ್ರ ರೇಣುಕವಿಜಯ	೧
ವೀರಶೈವಸಿದ್ಧಾಂತಸುಧಾಕರ	೨
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುವುದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ | ಪಂಚಕ್ಲೇಶವಿನಾಶಕಾಃ ಪರತರಶ್ರೀಪಂಚಲಿಂಗೋದ್ಭವಾಃ ||
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ | ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿತ್ವದೀರೋಕಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ನವಂಬರ್ ೧೯೩೦ [ಸಂಚಿಕೆ ೩೦

ಶ್ರೀ ಜಗದ್ಗುರುಭ್ಯೋನಮಃ

ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಹೋಟಗಿ. ಇವರ ಸಂಚಾರ.

ಚರಾಚರಾತ್ಮಕವಾದೀ ಜಗತ್ತನ್ನು ಪರಶಿವನು ನಿರ್ಮಿಸಿ ತದ್ರಕ್ಷಣೆಯನ್ನು ಮಾಡುವದರಲ್ಲಿ ಅಹರ್ನಿಶಿಯೂ ತತ್ಪರನಾಗಿರುವನಲ್ಲದೆ ಅನೇಕ ಧರ್ಮಪಂಗಡಗಳನ್ನು ನಿರ್ಮಿಸಿ ಆಯಾ ಧರ್ಮರಕ್ಷಣೆಗಾಗಿ ಅನೇಕ ಧರ್ಮಗುರುಗಳನ್ನು ನಿಯಮಿಸಿದ್ದಾನೆ. ವೀರಶೈವಮತಕ್ಕೆ ಆ ಪರಶಿವನ ಪಂಚಮುಖೋದ್ಭೂತರಾದ ಪಂಚಾಚಾರ್ಯರೇ ಜಗದ್ಗುರುಗಳಲ್ಲದೆ ಇತರರಲ್ಲವು. ಆ ಪಂಚಾಚಾರ್ಯ ಸೂತ್ರಾನುವರ್ತಿಗಳಾದ ಪಟ್ಟಚರಾಧ್ಯಕ್ಷರೇ ಧರ್ಮಗುರುಗಳಲ್ಲದೆ ಬೇರೊಬ್ಬರಲ್ಲವು. ಹೀಗಿದ್ದರೂ ಅನೇಕರು ತಮ್ಮ ಧರ್ಮಗುರುಗಳನ್ನು ಬಿಟ್ಟು ಕಂಡಕಂಡವರಿಗೆಲ್ಲ ಗುರುಗಳೆನ್ನುತ್ತ ಧರ್ಮಲಂಡರಾಗಿ ವರ್ತಿಸುವವರಿಗೆ ದಂಡಧರ (ಯಮ) ನ ಕುಂಡವೇಗತಿಯಲ್ಲದೆ ಬೇರೊಂದಿಲ್ಲವು. ಹೀಗಾಗಲು ನಮ್ಮ ಸ್ವಾಮಿಗಳಲ್ಲಿರುವ ಅಕಾಪಾಪಟೆಯೂ, ಆಲಸ್ಯವೂ, ಕಾರಣಗಳಾಗಿವೆ. ನಮ್ಮ ಸುದೈವದಿಂದ ಈಗೀಗ ಅಲ್ಲಲ್ಲಿ ಧರ್ಮೋಪದೇಶಕರು ಕಂಗೊಳಿಸಹತ್ತಿದ್ದಾರೆ. ಇದಕ್ಕೆಲ್ಲಾ ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳೇ ಮೂಲಕಾರಣೀಭೂತರಾಗಿದ್ದಾರೆ. ಸದರಿ ಶಾಸ್ತ್ರಿಗಳವರಿಗೆ ಎಷ್ಟು ಧನ್ಯವಾದಗಳನ್ನಿತ್ತರೂ ಅಲ್ಪವೇ ಎಂಬುದು ಸರ್ವ ಜಗತ್ತಿಗೇನೇ ತಿಳಿದ ಸಂಗತಿಯಾಗಿದೆ. ಕರ್ನಾಟಕ ಪ್ರಾಂತವು ಮೊದಲಿನಿಂದಲೂ ಸುಧಾರಕ ಪ್ರಾಂತವಾಗಿದ್ದು ಅಲ್ಲಿ ಈಗೀಗಂತೂ ಸುವರ್ಣಕ್ಕೆ ಸುಗಂಧಪ್ರಾಪ್ತವಾದಂತಾಗಿರುತ್ತದೆ. ನಮ್ಮ ಮಹಾರಾಷ್ಟ್ರ ಪ್ರಾಂತವು ಅತ್ಯಂತ ಹಿಂದುಳಿದ ಪ್ರಾಂತವಾದೆ. ಅದರೊಳಗಂತೂ ಸೋಲಾಪುರ ತಾಲೂಕ ಪ್ರಾಂತವಂತೂ ಅತ್ಯಂತವಾಗಿ ಹಿಂದುಳಿದಿದೆ. ಈ ದೇಶೀಯರಿಗೆ ಲಿಂಗವನ್ನು ಧರಿಸಿರಿ. ಲಿಂಗವಿಲ್ಲದೆ ಭವಿಗಳಂತೆ ಚರಿಸಬೇಡಿರೆಂದು ಹೇಳಿದರೆ ಕಂಠದಲ್ಲಿ ಲಿಂಗವನ್ನು ಧರಿಸುವದರಿಂದ ಆ ಲಿಂಗವು ಅಲ್ಲಿ ಏನುತಿನ್ನುವದು? ಎಂದು ನಾಸ್ತಿಕರಂತೆ ನುಡಿಯುತ್ತಿದ್ದರು. ನೋಡಿದಿರಾ! ಈ ದೇಶ ಸುಧಾರಣೆಯನ್ನು! ಈಗ ನೂರು ವರ್ಷಗಳಿಂದ ಹೋಟಗಿ ಬೃಹನ್ಮಠಾಧ್ಯಕ್ಷ ಮಹಾಸ್ವಾಮಿಗಳವರು ಅಹರ್ನಿಶಿ ಶ್ರಮವಹಿಸಿ ಅತ್ಯಂತ ಸುಧಾರಣೆ ಮಾಡುತ್ತಿದ್ದಾರೆಂಬುದು ಸರ್ವರಿಗೂ ತಿಳಿದ ಸಂಗತಿಯೇ ಆಗಿದೆ. ಲಿಂಗವಿಲ್ಲದೆ ತಿರುಗುವವರೇ ಈಗ ಅಷ್ಟಾವರಣನಿರತರಾಗಿ, ಲಿಂಗವಿಲ್ಲದವರಿಗೆ ಪುನಃ ತಾವೇ ಉಪದೇಶಮಾಡುವದನ್ನು ಕಂಡು ಕೇಳಿ ಸದರಿ ಸ್ವಾಮಿಗಳವರ ಪರಿಶ್ರಮದ ಬಗ್ಗೆ ಅತ್ಯಾಶ್ಚರ್ಯವೂ, ರೋಮಾಂಚವೂ ಉತ್ಪನ್ನವಾಗದೆ ಇರಲಾರದು. ಸ್ವಾಮಿಗಳವರು ಹೋಟಗಿ, ಯತ್ನಾಳ, ಕುಂಭಾರಿ, ದರ್ಗನಹಳ್ಳಿ, ಬೋರಾಮಣಿ, ಸಂಗದರಿ, ದೊಂಬರಜವಳಿ, ಫೋತ್ರಿ, ವಡಗಾಂವ, ಡಿಂಡೂರ, ಟಾಕಳಿ ಇಂತಿಷ್ಟು ಗ್ರಾಮಗಳನ್ನು ಸುಧಾರಿಸಿದ್ದಲ್ಲದೆ ತಾ|| ೧೦-೧೧-೩೦ ಕ್ಕೆ ಭಂಕಲಗಿಯ ಭಕ್ತರ ವಿಜ್ಞಾಪನೆಯ ಮೇರೆಗೆ ಸದರಿ ಗ್ರಾಮಕ್ಕೆ ದಯಮಾಡಿ ಅಲ್ಲಿ ಎರಡು ದಿವಸ ಸಭೆಮಾಡಿ ವ್ಯಾಖ್ಯಾನವನ್ನಿತ್ತರು. ಅಹಿರವಾಡಿ ಭುರಾಣೆಕ ವೀರಯ್ಯನವರು ಸ್ವಾಮಿಗಳವರನ್ನು ಅತ್ಯಂತ ಹೊಗಳಿದರು. ಅಲ್ಲಿಂದ ತಾ|| ೧೩ಕ್ಕೆ ಹಿಂದವೀಡ ಭಕ್ತರ ವಿಜ್ಞಾಪನೆ ಮೇರೆಗೆ ಅಲ್ಲಿಗೆ ದಯಮಾಡಿಸಿ ಅಲ್ಲಿ ಭಸಭೆಗೂಡಿಸಿ ದಿಯಲ್ಲಿ ಕಾಮನಾಶ ಎಂಬುವ ೧೩ ವರ್ಷದ ಹುಡುಗನಿಂದ ಆಚಾರ್ಯಸ್ತುತಿಯೊದವಮೇಲೆ ಮಹಾಸ್ವಾಮಿಗಳವರ ವ್ಯಾಖ್ಯಾನ ನಡೆಯಿತು. ಹೀಗೆ ೪ ದಿವಸಗಳ ಪರ್ಯಂತ ಉಪದೇಶವು ಜರಗಿತು. ಸದರಿ ಸ್ವಾಮಿಗಳವರಿಗೆ ಹೋಟಗಿ, ಕುಂಭಾರಿ, ಬೋರಾಮಣಿ, ಫೋತ್ರಿ, ದರ್ಗನಾಳ, ಮುಸ್ತಿ, ಶಿರೋಳ, ಸಿಂಗಡಗಾಂವ, ಸೋಲಾಪುರ ಇಲ್ಲಿ ಮಠಗಳೂ ಆಯಾ ಮಠಗಳಿಗೆ ಉತ್ಪನ್ನವೂ, ಕ್ಷಿಕಾವಿದ ಶಿಷ್ಯರ ಮನೆಗಳೂ ಇರುತ್ತವೆ. ಸ್ವಾಮಿಗಳು ಕೇವಲ ಧರ್ಮಸುಧಾರಣೆಯ ಬಗ್ಗೆ ಕಂಕಣಬದ್ಧರಾದದ್ದು ಅತ್ಯಂತ ಸುತ್ಯವಾದ ಸಂಗತಿಯಾಗಿದೆ. ಸದರಿ ಸ್ವಾಮಿಗಳವರ ಅಪ್ಪಣೆಯ ಮೇರೆಗೆ "ಪಂಚಾಚಾರ್ಯಪ್ರಭಾ ವೀರಪ್ರಭಾ, ವೀರಶೈವಕೇಸರೀ, ಪತ್ರಿಕೆಗಳನ್ನು ತರಿಸಲು ಒಪ್ಪಿದ್ದೇವೆ. ಪಂಚಾಚಾರ್ಯಪ್ರಭೆಗೆ ವರ್ಗಣಿಯನ್ನು ಸದರಿ ಸ್ವಾಮಿಗಳವರ ವಶಕ್ಕೆ ಅರ್ಪಿಸಿರುತ್ತೇವೆ. ಇತರ ಪಟ್ಟಚರಾಧ್ಯಕ್ಷರು ಹೀಗೆ ಕಾರ್ಯಾಸಕ್ತರಾದರೆ ಸಮಾಜವು ಬೇಗನೆ ಸುಧಾರಣೆಯನ್ನು ಹೊಂದುವುದರಲ್ಲಿ ಸಂಶಯವೇನು?

ಸ್ವಾಮಿಗಳ ಸೇವಕ.

ನೀಲಕಂಠಪ್ಪ, ಲಿಂಗಪ್ಪ ಮುಕಾಶಿ ಸಿಂದಖೇಡ.

ಸರ್ ಸಿ. ವಿ. ರಾಮನ್ನರವರು.

ಸರ್ ಸಿ. ವಿ. ರಾಮನ್ನರವರಿಗೆ ಪ್ರಪಂಚದಲ್ಲೆಲ್ಲಾ ಅತ್ಯಂತ ಖ್ಯಾತಿಗೊಂಡಿರುವ "ನೋಬೆಲ್‌ಪ್ರೈಜ್" ಎಂಬ ಬಹುಮಾನವು ಕೊಡಲ್ಪಡುವುದಷ್ಟೆ! ಈ ಬಹುಮಾನವು ಪ್ರಪಂಚದ ಅತ್ಯಂತ ಮೇಧಾವಿಗಳಿಗೆ ಮಾತ್ರ ದೊರೆಯುವುದು. ನಮ್ಮ ಇಂಡಿಯಾದಲ್ಲಿ ಇಂತಹ ಬಹುಮಾನವು 1914 ರಲ್ಲಿ ಡಾ|| ರವೀಂದ್ರನಾಥ ಟಾಗೋರ್‌ರವರಿಗೆ ಸಾಹಿತ್ಯಕ್ಕೋಸ್ಕರವಾಗಿ ದೊರೆಯಿತು. ಸದ್ಯಃ ಸರ್ ಸಿ. ವಿ. ರಾಮನ್ನರವರಿಗೆ ಭೌತಿಕ ಶಾಸ್ತ್ರಕ್ಕೋಸ್ಕರವಾಗಿ ದೊರೆತಿದೆ. ಮಿಕ್ಕವರು ಈ ಬಹುಮಾನವನ್ನು ಯಾರೂ ಪಡೆದಿಲ್ಲ. ಇವರು ಮದ್ರಾಸ್ ಇಲಾಖಾ ತಂಜಾವೂರ್ ಜಿಲ್ಲೆಗೆ ಸೇರಿದವರಿದ್ದು ಜಾತಿಯಲ್ಲಿ ಬ್ರಾಹ್ಮಣರಿರುವರ ಚಿಕ್ಕಂದಿನಿಂದಲೂ ತಮ್ಮ ಕುಶಾಗ್ರ ಬುದ್ಧಿಯನ್ನು ತೋರಿಸುತ್ತ, 18 ನೆಯ ವಯಸ್ಸಿನಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಎಂ.ಎ., ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸಿನಲ್ಲಿ ಪಾಸಾದರು. ಅನಂತರ ಫೈನಾನ್ಶಿಯಲ್ ಸರ್ವಿಸ್ ಪರೀಕ್ಷೆಗೆ ಕುಳಿತು ಅದರಲ್ಲಿ ಪ್ರಥಮ ಸ್ಥಾನವನ್ನು ಸಂಪಾದಿಸಿದರು. ಇಂಡಿಯಾ ಸರ್ಕಾರದ ಫೈನಾನ್ಶಿಯಲ್ ಇಲಾಖೆಯಲ್ಲಿ ಇವರಿಗೆ ದೊಡ್ಡ ಅಧಿಕಾರವು ದೊರೆಯಿತು. 4-5 ವರ್ಷಗಳು ಆ ನೌಕರಿಯಲ್ಲೇ ಇದ್ದರು. ಆಗಲೂ ಮನೆಯಲ್ಲಿಯೇ ಶಾಸ್ತ್ರಪ್ರಯೋಗವನ್ನು ನಡಯಿಸುತ್ತಿದ್ದರು. ಭೌತಿಕ ಶಾಸ್ತ್ರದ 'ಸೌಂಡ್' ಅಥವಾ ಧ್ವನಿ ಎಂಬ ವಿಷಯವಾಗಿ ನಮ್ಮ ಹಿಂದೂ ಸಂಗೀತದ ವೀಣೆ, ತಂಬೂರಿ ಇವೇ ಮೊದಲಾದವುಗಳ ಶೋಧನೆಯನ್ನು ಮಾಡಿ ಕೆಲವು ಹೊಸ ತತ್ವಗಳನ್ನು ಕಂಡು ಹಿಡಿದು ಅವುಗಳನ್ನೆಲ್ಲಾ ಪ್ರಖ್ಯಾತವಾದ ಪಾಶ್ಚಿಮಾತ್ಯ ದೇಶಗಳ ಶಾಸ್ತ್ರೀಯ ಮಾಸಪತ್ರಿಕೆಗಳಲ್ಲಿ ಪ್ರಕಟಿಸಿದರು. ಇವರ ಲೇಖನಗಳಿಗೆ ಪಾಶ್ಚಿಮಾತ್ಯ ಶಾಸ್ತ್ರೀಯ ಮಾಸಪತ್ರಿಕೆಗಳಲ್ಲಿ ಅಗ್ರಸ್ಥಾನವು ಕೊಡಲ್ಪಡುತ್ತಿತ್ತು. 1914 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಡಾ|| ರಾಷ್‌ಬಿಹಾರಿ ಘೋಷ್‌ರವರು 10 ಲಕ್ಷ ರೂ. ಗಳ ದಾನಮಾಡಿದರು. ಕಲ್ಕತ್ತಾ ವಿಶ್ವವಿದ್ಯಾಲಯದ ವೈಸ್‌ಛಾನ್ಸಲರ್ ಆದ ಸರ್. ಅಶುತೋಷ್‌ಮುಕರ್ಜಿಯವರು ಒಂದು ಸೈನ್ಸ್ ಕಾಲೇಜನ್ನು ಕಟ್ಟಿಸಿದರು. ಅದರಲ್ಲಿ ಪ್ರಖ್ಯಾತರಾದ ಭಾರತೀಯರನ್ನೇ ನೇಮಿಸಬೇಕೆಂಬ ನಿಬಂಧನೆಯನ್ನು ಮಾಡಿದರು. ಭಾರತೀಯರ ಬುದ್ಧಿ ಪ್ರಕರ್ಷಕ್ಕೆ ಇಲ್ಲಿ ಅವಕಾಶವು ದೊರೆಯಿತು. ಮುಕರ್ಜಿಯವರು ಸರ್ ಸಿ. ವಿ. ರಾಮನ್‌ರವರನ್ನು ಈ ಕಾಲೇಜಿಗೆ ಬರಬೇಕೆಂದು ಕೇಳಿಕೊಂಡದ್ದರಿಂದ ಇವರು ಅಲ್ಲಿಗೆ ಬಂದರು. 1914 ರಿಂದ ಒಂದೇ ಸಮನಾಗಿ ಆ ಕಾಲೇಜಿನಲ್ಲಿ ಇವರು ಹೊಸ ಹೊಸ ಶೋಧನೆಗಳನ್ನು ನಡೆಯಿಸುತ್ತ ಬಂದರು. ಕ್ರಮಕ್ರಮವಾಗಿ ಇವರಿಗೆ ಮರ್ಯಾದೆಯು ದೊರೆಯಲಾರಂಭಿಸಿತು. ಕಲ್ಕತ್ತಾ ವಿಶ್ವವಿದ್ಯಾಲಯವು ಇವರಿಗೆ ಡಿ. ಎಸ್. ಸಿ. ಪದವಿಯನ್ನು ಕೊಟ್ಟಿತು. 1926-27 ರಲ್ಲಿ ಇವರು ಯೂರೋಪನ್ನೆಲ್ಲಾ ಪ್ರಯಾಣ ಮಾಡಿಕೊಂಡು ಬಂದರು. ಆಗ ಇವರ ಕೀರ್ತಿಯು ಯೂರೋಪಿನಲ್ಲೆಲ್ಲಾ ಬೆಳೆಯಿತು. ಇಂಗ್ಲೆಂಡಿನವರು ಇವರಿಗೆ ಎಫ್.ಆರ್.ಎಸ್. ಎಂಬ ಅತ್ಯಂತೋನ್ನತವಾದ ಪದವಿಯನ್ನು ದಯಪಾಲಿಸಿದರು. ಕ್ರಮೇಣ 'ಸರ್' ಪದವಿಯೂ ಬಂದಿತು. ಈಗ ನೋಬೆಲ್‌ಪ್ರೈಜ್ ಬಹುಮಾನವು ದೊರೆತಿರುವುದು. ಇವರು ಮಾಡಿರತಕ್ಕಂಥ ಶೋಧೆಗಳ ಮಹತ್ವವು ಆಯಾಯ ಶಾಸ್ತ್ರವೇತ್ತರಿಗೆ ಗೊತ್ತೇ ಹೊರತು ಸಾಮಾನ್ಯ ಜನರಿಗೆ ತಿಳಿಯುವುದು ಕಷ್ಟ! ರಾಮನ್ಸ ಎಫೆಕ್ಟ್ ಅಥವಾ ರಾಮನ್ನ ಪರಿಣಾಮ ಎಂಬ ಒಂದು ಹೆಸರೇ ಈಗ ಭೌತಿಕಶಾಸ್ತ್ರದಲ್ಲಿ ಪ್ರಖ್ಯಾತವಾಗಿದೆ. ಇವರಿಗೆ 42-43 ವರ್ಷವಿರಬಹುದು. ಇವರ ಶಾಸ್ತ್ರಶೋಧನಾ ಶಕ್ತಿಯು ಎಷ್ಟು ಅದ್ಭುತವಾಗಿದೆಯೋ ಇವರ ವಾಕ್ಪ್ರತಿಭೆಯೂ ಸಹ ಅಷ್ಟೇ ಅದ್ಭುತವಾಗಿದೆ. ಇವರಿಗೆ ತಮ್ಮ ವಿದ್ಯಾರ್ಥಿಗಳಲ್ಲಿ ಅತ್ಯಂತ ಪ್ರೇಮವಿದೆ. ತಮ್ಮ ದೇಶವೆಂದರೆ ಪ್ರಾಣ! ತಮಗೆ ಬಂದಿರುವ ಪದವಿಗಳೆಲ್ಲಾ ಭಾರತಮಾತೆಗೆ ಸೇರಿದವೆಂದು ಇವರು ತಿಳಿದಿರುತ್ತಾರೆ. ಭಾರತಮಾತೆಯ ಉದರದಲ್ಲಿ ಹಿಂದೆ ಜನಿಸಿದ ಮತ್ತು ಮುಂದೆ ಜನಿಸಬಹುದಾದ ಮಹಾ ಮಹಾ ಮೇಧಾವಿಗಳನ್ನು ಹೋಲಿಸಿದರೆ ತಾವು ಅಲ್ಪರೆಂಬ ಭಾವನೆಯು ಇವರಲ್ಲಿದೆ. ಭಾರತಮಾತೆಯು ಇಷ್ಟು ರಾಜಕೀಯ ಪರಾಧೀನತೆಯಲ್ಲಿದ್ದರೂ ತನ್ನ ಪ್ರತಿಭೆಯನ್ನು ಕಳೆದುಕೊಂಡಿಲ್ಲವೆಂಬುದೇ ಸರ್ ಸಿ. ವಿ. ರಾಮನ್ನರವರಿಗೆ ಸಮಾಧಾನ. ಒಬ್ಬ ಪತ್ರಿಕಾ ಪ್ರತಿನಿಧಿಯು ಈ ನೋಬೆಲ್ ಬಹುಮಾನ ಬಂದ ಸಂದರ್ಭದಲ್ಲಿ ಅವರನ್ನು ಸಂದರ್ಶಿಸಿದನು. ಅವರಿಗೆ ಅಭಿನಂದನವನ್ನು ಮಾಡಿದನು. ಆಗ ಸಿ. ವಿ. ರಾಮನ್ನರವರು ಹೇಳಿದ್ದೇನೆಂದರೆ:— "ಅಯ್ಯಾ ಸಹೋದರನೇ! ನನಗೆ ಅಭಿನಂದನ ಮಾಡುವ ವಿಷಯವು ಹಾಗಿರಲಿ. ಭಾರತಮಾತೆಗೆ ಈಗ ಒದಗಿರತಕ್ಕಂಥ ಮಹಾ ಸಂಕಟವು ಶೀಘ್ರದಲ್ಲಿಯೇ ಪರಿಹಾರವಾಗಲೆಂದು ಎಲ್ಲರೂ ನಾನೂ ಒಟ್ಟಿಗೆ ಪ್ರಾರ್ಥಿಸೋಣ! ಈ ಡಿಗ್ರಿಗಳನ್ನು ನಾನು ಪೋಸ್ಟೇಜು ಸ್ಟಾಂಪುಗಳಂತೆ ಶೇಖರಿಸುತ್ತೇನೆ. ಆದರೆ ನಾನು ಮಾತ್ರ ಸರಳನಾದ ಸಿ. ವಿ. ರಾಮನ್ ಆಗಿಯೇ ಇರುತ್ತೇನೆ."

ಇದರಿಂದಲೇ ಇವರ ಸರಳಭಾವವೂ ಉದಾರಹೃದಯವೂ ದೇಶಾಭಿಮಾನವೂ ವ್ಯಕ್ತವಾಗುವುದು. ಜಗದೀಶ್ವರನು ಇವರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ಅವರಿಂದ ಭಾರತಮಾತೆಯ ಕೀರ್ತಿಯು ಇನ್ನೂ ಹೆಚ್ಚುವಂತೆ ಅನುಗ್ರಹಿಸಲಿ. (ತಾ. ನಾ.)

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಆಗಮನ.

ಇಲ್ಲಿಯ ದೈವದವರ ಪ್ರಾರ್ಥನಾನುಸಾರವಾಗಿ ಜಗದ್ಗುರುಗಳವರು ತಾ|| 31-10-30ನೆಯ ಶುಕ್ರವಾರ ಬೆಳಗಿನ 10 ಘಂಟೆಗೆ ದೈವದವರ ಧರ್ಮಛತ್ರಕ್ಕೆ ದಯಮಾಡಿಸಿ ಸ್ವಾಗತಮಂಡಳಿಯವರ ಸುಸ್ವಾಗತವನ್ನು ಕೈಕೊಂಡರು. ದೈವದವರ ಹಾಗೂ ಪಂಚಾಚಾರ್ಯಭಜನಾಸಂಘದವರ ಸ್ತುತಿ ನಜರ್ ಮುಜರೆಗಳು ಆದನಂತರ ಸಂಸ್ಥಾನದ ಕಾರ್ಯಕ್ರಮಗಳನ್ನು ಕುರಿತು ಸುಬೇದಾರ್ ವಿ. ಎಂ. ಚಂದ್ರಶೇಖರಯ್ಯನವರು ಭಾಷಣಮಾಡಿದರು. ಶ್ರೀ ಮಹಾಸ್ವಾಮಿಗಳವರು ಶಿಷ್ಯಕೋಟಿಯ ಕುಶಲಪ್ರಶ್ನಾನಂತರ ಕಾಲಾನುಗುಣ್ಯವಾದ ಸದ್ಬೋಧೆಯನ್ನು ನಿರೂಪಿಸಿ ಜಯಘೋಷದೊಡನೆ ಶೃಂಗಾರಗೊಂಡ ಆಂದೋಳಿಕೆಯಲ್ಲಿ ಮೂರ್ತಗೊಳ್ಳಲು ಉತ್ಸವವು ಸಕಲ ಬಿರುದಾವಳಿಗಳೊಡನೆ ಅತ್ಯಂತವೈಭವದಿಂದ ಕದಳಿತೋರಣರಂಭಾಸ್ತಂಭಾದಿಗಳಿಂದಲಂಕೃತವಾದ ರಾಜಬೀದಿಯಲ್ಲಿ ಹೊರಟಿತು. ಶ್ರೀಗಳವರು ಸರ್ವರಿಗೂ ಆಶೀರ್ವಾದವಮಾಡುತ್ತ ಗ್ರಾಮದ ಶೆಟ್ಟರೂ ಮತ್ತು ಪಾಟೀಲರೂ ಆದ ಮ|| ರಾ|| ಲಿಂಗನಗೌಡರ ಮನೆಗೆ ದಯಮಾಡಿಸಿ ಅವರಿಂದರ್ಪಿಸಲ್ಪಟ್ಟ ಫಲಪುಷ್ಪಗಳನ್ನು ಪರಿಗ್ರಹಿಸಿ ಮಧ್ಯಾಹ್ನ 1 ಘಂಟೆಗೆ ಪೇಟೆಯ ಶ್ರೀ ನಂದೀಶ್ವರಾಲಯಕ್ಕೆ ದಯಮಾಡಿಸಿ ಧರ್ಮಪೀಠಾರೋಹಣಂಗೈದನಂತರ ಸಂಸ್ಥಾನದ ಸುಬೇದಾರರವರ ಸಮಯೋಚಿತವಾದ ಭಾಷಣವಾಯಿತು. ಅನಂತರ ಶ್ರೀ ಮಹಾಸನ್ನಿಧಾನದವರು ಭಕ್ತಿಜ್ಞಾನವೈರಾಗ್ಯಗಳ ವಿಚಾರವನ್ನು ಸಶಾಸ್ತ್ರವಾಗಿ ಅನೇಕೋದಾಹರಣೆಗಳೊಂದಿಗೆ ನಿರೂಪಿಸಿದರು. ತಾ|| 3-11-30ರವರೆಗೆ ಮ||ರಾ|| ಗೌ|| ಸಿದ್ಧಲಿಂಗಪ್ಪನವರು ಪಾ|| ಲಿಂಗನಗೌಡರು, ಇಕ್ಕಬುದ್ಧಿ ನಾಗಪ್ಪನವರು ಕ್ರಮವಾಗಿ ಶ್ರೀಗಳ ಪಾದಪೂಜೆಯನ್ನು ಮಾಡಿ ಅನೇಕ ಭಕ್ತಮಾಹೇಶ್ವರರನ್ನು ಸಂತರ್ಪಣಾದಿಗಳಿಂದ ತೃಪ್ತಿಪಡಿಸಿ ತಮ್ಮ ಜನ್ಮ ಸಾರ್ಥಕ್ಯಪಡಿಸಿಕೊಂಡಿದ್ದಲ್ಲದೆ ಸರ್ವರನ್ನು ಪುನೀತರನ್ನಾಗಿ ಮಾಡಿದರು. ಮಹಾಶಯರೇ! ಇದಲ್ಲವೇ ಗುರುಶಿಷ್ಯಸಂಬಂಧವು? ಭಕ್ತಾಧೀನನಾದ ಪರಮಾತ್ಮನು ಭಕ್ತೋದ್ಧಾರಕ್ಕಾಗಿ ಕೈಲಾಸದಿಂದ ದಯಮಾಡಿಸಿದಂತೆ ಭಗವತ್ಪಾದರು ದಯಮಾಡಿಸಿ ಸರ್ವರನ್ನು ಪುನೀತರನ್ನಾಗಿ ಮಾಡಿದರು. ಈ ನಾಡಿನ ಭಕ್ತಮಂಡಳಿಯವರೇ ಧನ್ಯರು! ಧನ್ಯರು!!

ಮೇಲ್ಕಂಡ ಮಹತ್ಕಾರ್ಯವನ್ನು ನೆರವೇರಿಸಿದ ದೈವದವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸಕಲ ಸನ್ಮಂಗಲಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ಗೌಡ ಶಿವಪ್ಪಯ್ಯ, ಪರಶುರಾಂಪುರ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನ.

ಮಡಕಶಿರಾತಾಲೂಕಿಗೆ ಸೇರಿದ ಅರಸಿಕೆರೆಗೆ ಜಗದ್ಗುರುಗಳವರು ತಾ|| 30-10-30 ರಲ್ಲಿ ಪನ್ನಿಲ್ಲರ ಸುದೈವದಿಂದ ಬಹುಕಾಲಕ್ಕೆ ಕೃಪೆಮಾಡಿ ಸಕಲ ಪರಿವಾರಸಮೇತರಾಗಿ ಆಗಮಿಸಿ ಸಕಲ ಭಕ್ತರಿಗೂ ದರ್ಶನಾಶೀರ್ವಾದಗಳನ್ನು ದಯಪಾಲಿಸಿದರು. ಸಂದರ್ಶನಾರ್ಥವಾಗಿ ಆಗಮಿಸಿದ್ದ ಪಾವಗಡ ತಾಲ್ಲೂಕು ಅರಸೀಕೆರೆ ಗ|| ಪ್ರೈಮರಿ ಸ್ಕೂಲ್ ಹೆಡ್ಮಾಸ್ಟರರೂ, ಕೀರ್ತನಕಾರರೂ ಆದ ವಿ|| ಮಾಧ್ವ ಭೀಮರಾವ್, ವಿ|| ಶ್ಯಾನಭೋಗ್ ಶಂಕರಪ್ಪನವರು, ಮ|| ರಾ|| ಪೋಲೀಸ್ ದಫೇದಾರ್ ಭೀಮಯ್ಯನವರು ಫಲಸಮರ್ಪಣೆಮಾಡಿದರು. ಆಗ್ಯೆ ಶ್ರೀಗಳವರು ನೆರೆದಿದ್ದ ಸದ್ಭಕ್ತರಿಗೆಲ್ಲಾ ದೈವಭಕ್ತಿ ಗುರುಭಕ್ತಿವಿಚಾರದಲ್ಲಿ ಪ್ರತಿಯೊಬ್ಬ ಮಾನವನೂ ಅನುಸರಿಸಬೇಕಾದ ಸುಬೋಧೋಪಾಯಗಳನ್ನು ವಿಮರ್ಶಿಸಿ ಭಾಷಣಮಾಡಿ ಪ್ರತಿಯೊಂದು ಮತದ ಸ್ವರೂಪವನ್ನು ತಿಳುಹಿಸಿದರು. ನೋಡಿರಿ? ಸುಜ್ಞಾನ, ದೈವಭಕ್ತಿ, ಗುರುದರ್ಶನ ಲಾಭಾದಿಗಳನ್ನು ಬಲ್ಲವರೇ ಬಲ್ಲರು ಎಂದು ಮಾಧ್ವ ಭೀಮರಾವ್ ಕೀರ್ತನಕಾರ್, ಶ್ಯಾ|| ಶಂಕರಪ್ಪನವರು ಎಷ್ಟು ಭಕ್ತಿಶ್ರದ್ಧೆಗಳಿಂದ ಬಂದಿದ್ದಾರೆಂಬುದನ್ನು ಅತ್ಯಾನಂದದಿಂದ ಉದಾಹರಿಸಿದರು. ಶ್ರೀ ಗುರುಗಳವರ ದರ್ಶನ ಸೇವಾಸತ್ಕಾರಗಳಿಗಾಗಿ ಬಹಳ ದೂರ ಪ್ರದೇಶಗಳಿಂದ ಸನ್ನಿಧಿಯಲ್ಲಿ ಹಾಜರಿದ್ದ ಸಾವಿರಾರು ಪ್ರಜೆಗಳ ಸಭೆಯಲ್ಲಿ ಶ್ರೀ ಪರಮೇಶ್ವರಾನುಗ್ರಹವುಂಟಾಗಲು ಭಕ್ತಿಯೇ ಮುಖ್ಯವೆಂಬುದನ್ನು ನಿದರ್ಶನರೂಪವಾಗಿ ಶಿವಕೀರ್ತನದಲ್ಲಿ ಪ್ರವೀಣರಾಗಿರುವ ಮ|| ರಾ|| ಶ್ರೀ ಮಾಧ್ವ ಭೀಮರಾಯರು ಮಾರ್ಕಂಡೇಯವಿಜಯ, ಸಿರಿಯಾಳಸೆಟ್ಟಿಕಥೆ ಇವುಗಳನ್ನು ತಮ್ಮ ಸುಶ್ರಾವ್ಯಸಂಗೀತಭಕ್ತಿರಸದಿಂದ ಕೀರ್ತನೆಗಳನ್ನು ಮಾಡಿದರು. ಶ್ರೀಗಳವರು ಕೀರ್ತನಾನಂತರ ದಾಸರ ಬೋಧಪ್ರದ ಸುಶ್ರಾವ್ಯಸಂಗೀತಾದಿಗಳಿಗೆ ಸಂತೋಷಪಟ್ಟು ಕೀರ್ತನಕಾರರಿಗೂ ಸಭಿಕರಿಗೂ ಶ್ರೇಯಸ್ಸನ್ನು ಬಯಸಿದರು. ಶ್ರೀಗಳವರು ಇಲ್ಲಿಂದ ಪ್ರಯಾಣಬೆಳೆಯಿಸುವಾಗ ವೇ|| ಮಠದ ಚಿಕ್ಕಪ್ಪಯ್ಯಶಾಸ್ತ್ರಿಗಳು ಜಗದ್ಗುರು ಪ್ರಾರ್ಥನೆಯನ್ನು ಶ್ಲೋಕಗಳಿಂದ ಹೇಳಿದ್ದನ್ನು ಕೇಳಿ ಸಂತೋಷದಿಂದ ಆಶೀರ್ವದಿಸಿ ಸುಪ್ರಯಾಣ ಬೆಳೆಸಿದರು.

ಅರಸೀಕೆರೆ
15-11-1930.

S. Rudrappa Sastri,
ಶ್ರೀ ಜಗದ್ಗುರು ಪಾದಸೇವಕ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಅಡ್ಡಪಲ್ಲಕ್ಕಿಮಹೋತ್ಸವ, ಹುಮನಾಬಾದ್.

ಪ್ರತಿ ವರ್ಷ ಪದ್ಧತಿಪ್ರಕಾರ ಶ್ರೀಜಗದ್ಗುರು ಪಂಚಾಚಾರ್ಯ ಭಜನಾ ಸಂಘದವರು ಶ್ರಾವಣಮಾಸದಿಂದ ಕಾರ್ತಿಕ ಶು|| ೮ ವರೆಗೆ ಭಜನೆಯನ್ನು ನಡೆಯಿಸಿ ಆ ದಿವಸ ಮಹಾಗಣಾರಾಧನೆಯನ್ನು ಮಾಡಿದರು. ಶು|| ೯ ಬುಧವಾರ ಪಲ್ಲಕ್ಕಿಮಹೋತ್ಸವವು ಅತಿ ವೈಭವದಿಂದ ಸಾಯಂಕಾಲ ೬ಕ್ಕೆ ಹೊರಟು ರಾತ್ರಿ ೧೨ ಘಂಟೆಗೆ ಸ್ವಸ್ಥಲಕ್ಕೆ ಬಂದು ತಲ್ಪಿತು. ಈ ಮಹೋತ್ಸವವನ್ನು ನೋಡಿ ಸಮಸ್ತ ಮತೀಯರೂ ಅತ್ಯಂತ ಸಂತೋಷಪಟ್ಟರು. ಈ ಮಹೋತ್ಸವಕ್ಕೆ ರಾಜೆಸೂರ ಪಂಚಾಚಾರ್ಯ ಭಜನಾಸಂಘದವರೂ ಹಾಗೂ ಪ್ರಮುಖರೂ ಬಂದಿದ್ದರು. ಎಲ್ಲಾ ವ್ಯವಸ್ಥೆಯು ಬಹು ತೃಪ್ತಿಕರವಾಗಿ ನೆರವೇರಿತು. ಸಕಲ ಸದ್ಭಕ್ತರಿಗೂ ಜಗದಾಚಾರ್ಯರು ಕಲ್ಯಾಣವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಪಂಚಾಚಾರ್ಯ ಭಜನಾಸಂಘದ
ಮ್ಯಾನೇಜರ್.

ರೌಂಡಟೇಬಲ್ ಕಾನ್ಫರೆನ್ಸಿನ ಸಮಾಚಾರ.

ಚಕ್ರಗೋಷ್ಠಿಯ ದ್ವಿತೀಯ ಅಧಿವೇಶನವು ಇದೇ ಮಾಹೆ 17 ನೆಯ ತಾರೀಖಿನ ದಿವಸ ಸೆಂಟ್‌ಜೇಮ್ಸ್ ಅರಮನೆಯಲ್ಲಿ ಆರಂಭವಾಯಿತು. ಬ್ರಿಟಿಷ್ ಇಂಡಿಯಾದಿಂದ 57, ಆಶ್ರಿತರಾಜ್ಯಗಳಿಂದ 17, ಪಾರ್ಲಿಮೆಂಟಿನಿಂದ 15 ಒಟ್ಟು 89 ಪ್ರತಿನಿಧಿಗಳು ಸೇರಿದ್ದರು.

ಮುಖ್ಯಮಂತ್ರಿಗಳಾದ ರಾಮ್ಸೆಮ್ಯಾಕ್ಡೋನಾಲ್ಡರವರು ಅಧ್ಯಕ್ಷಸ್ಥಾನವನ್ನು ವಹಿಸಿ ಸಮಸ್ತ ಪ್ರತಿನಿಧಿಗಳೂ ಒಮ್ಮನಸ್ಸಿನಿಂದ ಕಾರ್ಯಮಾಡಿ ಜಯಶೀಲರಾಗಬೇಕೆಂಬಂಶವನ್ನು ಒತ್ತಿ ಹೇಳಿದರು. ಲಾರ್ಡ್ ಸ್ಯಾಂಕಿ ಎಂಬವರು ಉಪಾಧ್ಯಕ್ಷರಾಗಿದ್ದರು. ಪತ್ರಿಕಾಪ್ರತಿನಿಧಿಗಳು ಪರಿಷತ್ತಿಗೆ ಬರಲು ಅವಕಾಶಕೊಡಕೂಡದೆಂದು ಅಧ್ಯಕ್ಷರು ಮಿ|| ಮೆ. ಜೇ, ಮಿ|| ರಷಬ್ರೂಕ್‌ವಿಲಿಯಂಸ್, ಶ್ರೀಯುತ ಸಿ. ವೈ. ಚಿಂತಾಮಣಿ ಈ ಮೂವರನ್ನೊಳಕೊಂಡ ಒಂದು ಪ್ರಚಾರಕ ಸಮಿತಿಯನ್ನು ನಿರ್ಮಿಸಿದರು. ಸಿ. ವೈ. ಚಿಂತಾಮಣಿಯವರು ಇದು ನ್ಯಾಯವಿರೋಧವಾದುದೆಂದು ಆಕ್ಷೇಪಿಸಿದರು. ಆದರೂ ಅಧ್ಯಕ್ಷರು ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಸಭೆಯಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ಅವಕಾಶ ಕೊಡುವ ಸಂಪ್ರದಾಯವು ಮೊದಲಿನಿಂದಲೂ ನಡೆದು ಬಂದಿಲ್ಲವಾದುದರಿಂದ ಈ ಅಭಿಪ್ರಾಯವನ್ನು ಅಂಗೀಕರಿಸಲಾಗುವುದಿಲ್ಲವೆಂದು ಹೇಳಿದರು. ಆದರೂ ಶ್ರೀಯುತ ಸೆತಲ್ವಾಡ್ ಮತ್ತು ಸೀಲ್ ಎಂಬ ಇಬ್ಬರು ಪತ್ರಿಕಾಪ್ರತಿನಿಧಿಗಳಾಗಿ ಸಭೆಗೆ ಹಾಜರಾಗಿದ್ದರು. ಅಧ್ಯಕ್ಷರ ಠರಾವನ್ನು, ಸರ್. ತೇಜಬಹದ್ದೂರ್ ಸಪ್ರೂ[illegible]ರು. ಸ್ಫೂರ್ತಿದಾಯಕವೂ, ದೇಶವಾತ್ಸಲ್ಯಪೂ[illegible] ಶ್ಲಾಘನೀಯವೂ ಆದ ಭಾಷಣವನ್ನು ಮಾ[illegible]

ಶ್ರೀಯುತ ಸಪ್ರೂರವರ ಭಾಷಣದ ಸಾರಾಂಶವು.

ಅಸಮಾಧಾನದಿಂದ ತಪ್ತವಾಗಿರುವ ಭರತಖಂಡವೂ ಮತ್ತು ಇಡೀ ಪ್ರಪಂಚವೂ ಈ ಕೂಟದ ಪ್ರತಿಫಲವನ್ನು ಆತುರದಿಂದ ನಿರೀಕ್ಷಿಸುತ್ತಲಿದೆ.

ಬ್ರಿಟಿಷ್‌ರ ಪ್ರೌಢರಾಜನೀತಿಯು ಇನ್ನಿ ನೆರೆದಿರುವ ಭಾರತೀಯರ ದೇಶವಾತ್ಸಲ್ಯದ ಪರೀಕ್ಷಾಕಾಲವಾಗಿದೆ. ಭರತಖಂಡದ ವೈಸರಾಯರವರ ವಿಷಯದಲ್ಲಿ ನನ್ನ ದೇಶದಲ್ಲಿಯೂ, ಇಂಗ್ಲೆಂಡಿನಲ್ಲಿಯೂ, ಭಿನ್ನಮತಗಳಿದ್ದಾಗ್ಯೂ ಅವರ ಹೃದಯವು ಭಾರತೀಯರೊಂದಿಗೆ ಇರುತ್ತದೆ. ನನ್ನ ದೇಶೀಯರು ನಮ್ಮನ್ನು ದೇಶದ್ರೋಹಿಗಳೆಂದು ಅವಹೇಳನಕ್ಕೀಡುಮಾಡಿದರೂ, ಈ ಸಭೆಯಲ್ಲಿ ಅಕುಟಿಲವೂ ನಿರಾತಂಕವೂ ಆದ ಚರ್ಚೆಯನ್ನು ನಡೆಯಿಸಿ ನಮ್ಮ ಮೇಲೆ ಹೊರಿಸಿದ ಆಕ್ಷೇಪಣೆಯು ಅಸತ್ಯವಾದುದೆಂದು ನಿರ್ಧರಿಸಲು ದೃಢಸಂಕಲ್ಪಮಾಡಿ ಇಲ್ಲಿ ನೆರೆದಿರುವೆವು. ಈಗ ಹತ್ತು ವರ್ಷಗಳಿಂದ ಭರತವರ್ಷದಲ್ಲಿ ಅದ್ಭುತ ಜಾಗೃತಿಯುಂಟಾಗಿರುವುದು. ಶಾಸನೋಲ್ಲಂಘನೆಯ ಚಳವಳಿಯು ಬಹು ಭೀಷಣವಾಗಿದೆ. ಡೊಮಿನಿಯನ್ ಸ್ಟೇಟಸ್ ಶಬ್ದವನ್ನೆತ್ತಿದಕೂಡಲೇ ಸಾಮಾನ್ಯ ಆಂಗ್ಲೇಯನೂ ಸಹ ಚಕಿತನಾಗುವನು. 1865 ನೆಯ ಇಸವಿಯಲ್ಲಿ ಕೆನಡಾಕ್ಕೂ, 1900 ನೆಯ ಇಸವಿಯಲ್ಲಿ ಆಸ್ಟ್ರೇಲಿಯಕ್ಕೂ, 1909 ರಲ್ಲಿ ದಕ್ಷಿಣ ಆಫ್ರಿಕಾಕ್ಕೂ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಕೊಡಲ್ಪಟ್ಟಾಗ ಆಂಗ್ಲೇಯರು ಚಕಾರಶಬ್ದವನ್ನಾದರೂ ಎತ್ತದೇ ಇದ್ದುದಕ್ಕೆ ಕಾರಣವೇನು? ಭರತಖಂಡವು ಮೇಲ್ಕಂಡ ಮೂರು ರಾಷ್ಟ್ರಗಳ ಜೊತೆಗೆ ಸಮಾನತೆಯನ್ನು ಸಂಪಾದಿಸಬೇಕೆಂದು ದೃಢನಿಶ್ಚಯಮಾಡಿರುತ್ತದೆ ಮೊಗಲ್ ಚಕ್ರವರ್ತಿಗಳಕಾಲದಲ್ಲಿಯೂ ಸಹ ಭರತಖಂಡವು ಈಗಿನಂತೆ ಪ್ರತಿನಿಧಿಗಳಿಂದ ಆಳಲ್ಪಡುತ್ತಿದ್ದಿಲ್ಲವು. ಮೊಗಲರಾಯರು ನಮ್ಮ ದೇಶದಲ್ಲಿ ನೆಲಸಿ ಭಾರತೀಯರಾಗಿ ಹೋಗಿದ್ದರು.

ಪ್ರಾಂತಗಳಿಗೆ ಪ್ರಭುತ್ವಮಾಡುವ ಹಕ್ಕನ್ನು ಕೊಡುವುದು ಮಾತ್ರವೇ ಸಾಲದು. ಕೇಂದ್ರಪ್ರಭುತ್ವವೂ ಸಹ ಮಂತ್ರಾಲೋಚನಾಸಭೆಗೆ ಉತ್ತರವಾದಿಯಾಗಿರಬೇಕು. ದೇಶಾಭಿಮಾನಿಗಳಾದ ಸಾಮಂತರಾಜರೂ ಸಹ ವಿಶಾಲದೃಷ್ಟಿಯನ್ನಿಟ್ಟು ಭರತಖಂಡದ ಏಳಿಗೆಗೆ ನೆರವಾಗುವರೆಂದು ಆಶಿಸುತ್ತೇನೆ. ಭರತಖಂಡದ ಪ್ರಭುತ್ವವು ಏಕಮುಖವಾಗಿರಬೇಕೋ ಸಂಯುಕ್ತವಾಗಿರಬೇಕೋ ಎಂಬ ಚರ್ಚೆಯಲ್ಲಿ ಸಂಯುಕ್ತವಾಗಿರಬೇಕೆಂಬುದೇ ನನ್ನ ಅಭಿಪ್ರಾಯವು. ಸಂಯುಕ್ತವಾಗಿರುವುದರಿಂದ ಮೂರು ವಿಧವಾದ ಪ್ರಯೋಜನಗಳಿವೆ. ಒಂದನೆಯದು ರಾಜ್ಯಾಂಗವ್ಯವಸ್ಥೆಯನ್ನು ದೃಢಪಡಿಸುವುದು. ಎರಡನೆಯದು ಏಕಮತ್ಯಪ್ರಗತಿಯು ಶೀಘ್ರವಾಗಿ ಪ್ರಾರಂಭವಾಗುವುದು. ಮೂರನೆಯದು ಬ್ರಿಟಿಷ್ ಇಂಡಿಯಾದವರಿಗೆ ಅನುಭವವಿಲ್ಲದಿರುವ ರಕ್ಷಣಾಕಾರ್ಯವು ಅನುಭವಕ್ಕೆ ಬರುವುದು. ಶಾಸನ, ಸಂರಕ್ಷಣ, ವ್ಯಾಪಾರ, ಹಣಕಾಸಿನ ವಿಚಾರ ಮತ್ತು ಐರೋಪ್ಯರ ಹಿತಾಹಿತಗಳು ಎಂಬೀ ಅಂಶಗಳು ತೊಡಕುಗಳಿಂದ ಕೂಡಿದಾಗ್ಯೂ ಅಸಾಧ್ಯವಾದವುಗಳೆಂದು ಹೇಳಲಾಗುವುದಿಲ್ಲ. ಭಾರತೀಯರು ಐರೋಪ್ಯರ ನಿಧಿಯನ್ನು ಅಪಹರಿಸಬೇಕೆಂಬ ಇರಾದೆಯುಳ್ಳವರಾಗಿಲ್ಲ. ತಮ್ಮ ಹಿತಚಿಂತನೆಗಾಗಿ ಐರೋಪ್ಯರು ಏನು ಸೂಚಿಸಿದರೂ ಭಾರತೀಯರು ಅಂಗೀಕರಿಸಲು ಸಿದ್ಧರಿದ್ದಾರೆ. ಸೈನ್ಯವು ವೈಸರಾಯರ ಆಡಳಿತದಲ್ಲಿರಬಹುದು. ಆದರೆ ಸೈನ್ಯದಲ್ಲಿ ಭಾರತೀಯರನ್ನು ತರಬೇತುಮಾಡುವುದು ಅವಶ್ಯಕವಾದಂಶವಾಗಿದೆ. ನಾವೆಲ್ಲರೂ ಸಾರ್ವಭೌಮರ ಪ್ರಜೆಗಳು. ಒಂದೇ ಸಾಮ್ರಾಜ್ಯದಲ್ಲಿರತಕ್ಕವರು. ಉಚ್ಚನೀಚಭಾವನೆಗಳಿಗೆ ಅವಕಾಶವಿರಕೂಡದು. ಅಂಥ ಭಾವನೆಗಳಿಗೆ ಅವಕಾಶ ಕೊಟ್ಟರೆ ಭರತವರ್ಷದಲ್ಲಿ ಸಮಾಧಾನವು ನೆಲೆಗೊಳ್ಳಲಾರದು.

ಬಿಕಾನೇರ್ ಮಹಾರಾಜರವರು ಮಾಡಿದ ಭಾಷಣದ ಸಾರಾಂಶ.

ಭರತಖಂಡವು ಡೊಮಿನಿಯನ್ ಸ್ಟೇಟಸ್ಸನ್ನು ಹೊಂದಬೇಕೆಂಬ ಅಭಿಪ್ರಾಯವು ಬ್ರಿಟಿಷ್ ಸರ್ಕಾರದವರು 1917 ನೆಯ ಇಸವಿಯಲ್ಲಿ ಪ್ರಸಿದ್ಧಪಡಿಸಿರುವ ಪ್ರಕಟನೆಯಲ್ಲಿ ಸ್ಪಷ್ಟಪಡುತ್ತದೆ. ಮತ್ತು ಈ ಅಭಯವು ಇತ್ತೀಚೆಗೆ ಅಧಿಕಾರಿಗಳಿಂದ ಪುಷ್ಟೀಕರಿಸಲ್ಪಟ್ಟಿದೆ. ಬ್ರಿಟಿಷ್ ಇಂಡಿಯಾದೇಶವೂ ಆಶ್ರಿತರಾಜ್ಯಗಳೂ ಒಂದಕ್ಕೊಂದು ಸಂಬಂಧವಾಗಿದ್ದು ಸಂಯುಕ್ತಪ್ರಭುತ್ವವು ನೆಲೆಗೊಂಡರೆ ಭರತಖಂಡದ ಮುಂದಿನ ಅಭಿವೃದ್ಧಿಗೆ ಬಹುನಟ್ಟಿಗೆ ಅನುಕೂಲವಾಗುವುದು. ತಮ್ಮ ಒಳ ಆಡಳಿತದ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದವರು ಕೈಹಾಕದಿದ್ದರೆ ತಾವು ಅನಾವಶ್ಯಕವಾಗಿ ಅವರ ಕಾರ್ಯಗಳಲ್ಲಿ ಪ್ರವೇಶಮಾಡುವುದಿಲ್ಲವೆಂದೂ, ಒಪ್ಪಂದದ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕೆ ಒಂದು ಸುಪ್ರೀಂ ಕೋರ್ಟು ಏರ್ಪಡಿಸಲ್ಪಡಬೇಕೆಂದೂ, ಪ್ರಭುತ್ವಕ್ಕೆ ಸಂಬಂಧಪಡುವ ಪ್ರಶ್ನೆಗಳನ್ನು ಆಲೋಚಿಸುವುದಕ್ಕೆ ವೈಸರಾಯರವರಿಗೆ ಸಲಹೆಕೊಡುವ ಒಬ್ಬ ಪ್ರೈ

ವೇಟ್ ಸೆಕ್ರೆಟರಿಯು ಇರಬೇಕೆಂದೂ, ಆಶ್ರಿತರಾಜ್ಯಗಳ ಸಮಿತಿ (Indian States Council) ಎಂಬುದೊಂದು ಸಭೆಯು ನಿಯಮಿಸಲ್ಪಡಬೇಕೆಂದೂ ಭಾಷಣಮಾಡಿದರು.

ಮಿ|| ಎಂ. ಆರ್. ಜಯಕರ್‌ರವರ ಭಾಷಣದ ಸಾರಾಂಶ

ನನಗೆ ಬೆದರಿಕೆತೋರಿಸಬೇಕೆಂಬ ಅಭಿಪ್ರಾಯವಿಲ್ಲ. ಆದರೂ ಇಷ್ಟುಮಾತ್ರ ಹೇಳದಿರಲಾರೆನು. ಈಗ ಭರತಖಂಡವನ್ನು ಸಮಾಧಾನಮಾಡದಿದ್ದರೆ ಇನ್ನು ಆರು ತಿಂಗಳುಗಳಮೇಲೆ ಕೈಮಿಂಚಿಹೋಗುವುದು. ಆಗ ಹಿಂದುಸ್ಥಾನವು ಯಾವ ಒಡಂಬಡಿಕೆಗೂ ಬರಲಾರದು. ರಾಜಶಾಸನಾನುಸಾರವಾದ ಸರ್ಕಾರವು ನೆಲೆಗೊಳ್ಳುವುದೋ ಅಥವಾ ಅನಾಯಕತ್ವವುಂಟಾಗುವುದೋ ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗಿದೆ. ಈಗ ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಕೊಡುವುದಾದರೆ ಹಿಂದೂದೇಶದ ವಾತಾವರಣದಲ್ಲಿ ತುಂಬಿರುವ ಸಂಪೂರ್ಣ ಸ್ವರಾಜ್ಯದ ಧ್ವನಿಯು ಅಡಗಿಹೋಗುವುದು. ಇಲ್ಲವಾದರೆ ಆ ಧ್ವನಿಯು ಸರ್ವತ್ರ ಅತ್ಯಧಿಕವಾಗಿ ವ್ಯಾಪಿಸುವುದು. ಆಶ್ರಿತರಾಜ್ಯಗಳ ವಿಷಯದಲ್ಲಿ ಕೈಹಾಕುವುದು ನನಗೆ ಆಗತ್ಯವಿಲ್ಲ. ಬ್ರಿಟಿಷ್ ಇಂಡಿಯಾ ಮತ್ತು ಆಶ್ರಿತರಾಜ್ಯಗಳಿಗುಂಟಾಗುವ ವಿವಾದವನ್ನು ನಿರ್ಣಯಿಸುವುದಕ್ಕೆ ಸುಪ್ರೀಂ ಕೋರ್ಟುಸ್ಥಾಪನೆಗೆ ಸಾಮಂತಸಂಸ್ಥಾನಗಳು ಒಪ್ಪುವುದಾದರೆ ನಾವೂ ಸಹ ಯಾವ ಅಭ್ಯಂತರವೂ ಇಲ್ಲದೆ ಒಡಂಬಡುತ್ತೇವೆ. ಅಲ್ಪಸಂಖ್ಯೆಗಳುಳ್ಳ ಸಮಾಜಗಳ ಬಿಕ್ಕಟ್ಟಾದ ಪ್ರಶ್ನೆಯನ್ನು ಅವುಗಳಿಗೆ ತಕ್ಕ ಅನುಕೂಲ್ಯಗಳನ್ನು ಕಲ್ಪಿಸಿಕೊಡುವುದರಿಂದ ಸುಲಭವಾಗಿ ಬಿಡಿಸಬಹುದು. ಐರೋಪ್ಯರ ಹಿತಚಿಂತನೆಗೆ ಬೇಕಾದ ಸಾಧನೆಗಳನ್ನು ನಾವು ವಿರೋಧಿಸುವುದಿಲ್ಲ. ಇಂಡಿಯಾದಲ್ಲಿ ಇಂಗ್ಲೆಂಡಿನ ಪ್ರಯೋಜನವೆಂದರೆ ವ್ಯಾಪಾರ. ಈ ವ್ಯಾಪಾರವು ಭಾರತೀಯರು ಶಾಂತರಾಗಿಯೂ ತೃಪ್ತರಾಗಿಯೂ ಇದ್ದರೆ ಅವ್ಯಾಹತವಾಗಿ ನಡೆಯುವುದು. ಈ ಸ್ವಾರ್ಥದೃಷ್ಟಿಯಿಂದಾದರೂ ಸಂಪೂರ್ಣ ಡೊಮಿಯನ್ ಸ್ಟೇಟ್ಸ್ (ಸಾಮ್ರಾಜ್ಯಾಂತರ್ಗತ ಸ್ವರಾಜ್ಯ) ವನ್ನು ಕೊಡುವುದು ಅವಶ್ಯಕವಾಗಿದೆ.

ಮಹಮ್ಮದ್ ಷಫಿಯವರು ಮಾಡಿದ ಭಾಷಣದ ಸಾರಾಂಶ.

1833 ನೆಯ ಇಸವಿಯಲ್ಲಿ ಲಾರ್ಡ್ ಮೆಕಾಲೆಯವರು ಆಂಗ್ಲೇಯರ ರಾಜ್ಯಪದ್ಧತಿಯಂತೆ ರಾಜ್ಯಾಂಗ ವ್ಯವಸ್ಥೆಯಾಗಬೇಕೆಂದು ಭಾರತೀಯರು ಕೇಳುವ ಕಾಲವು ಒದಗುವುದೆಂದು ಹೇಳಿದ ಭವಿಷ್ಯವಾಣಿಯು ಈಗ ಅಕ್ಷರಶಃ ನಿಜವಾಗಿದೆ. ಆದರೆ ಪಾರ್ಲಿಮೆಂಟಿನವರು ದೀರ್ಘಸೂತ್ರಿ ಎಂಬ ಜಾಡ್ಯದಿಂದ ಪೀಡಿತರಾಗಿದ್ದಾರೆ. ಪಾರ್ಲಿಮೆಂಟಿನವರು ಎಚ್ಚೆತ್ತು ಕಾಲಕಾಲಕ್ಕೆ ತಕ್ಕ ರಾಜಕೀಯ ಸುಧಾರಣೆಗಳನ್ನು ಮಾಡಿದ್ದರೆ ಭರತಖಂಡದಲ್ಲಿ ಈಗ ಪ್ರಚಲಿತವಾಗಿರುವಂಥ ಭಯಂಕರ ಪರಿಸ್ಥಿತಿಯು ಎಂದೂ ಒದಗುತ್ತಿರಲಿಲ್ಲ. ಭರತಖಂಡದಲ್ಲಿ ವಿದ್ಯಾವಂತರು ಮಾತ್ರನೇ ಅಸಮಾಧಾನಗೊಂಡಿರುವರೆಂಬ ಲೇಖನಗಳನ್ನೋದುವುದು ವ್ಯಸನವೆನಿಸುತ್ತದೆ. ಈಗಿನ ಶಾಸನೋಲ್ಲಂಘನ ಚಳವಳಿಯಲ್ಲಿ ಮುಖ್ಯಪಾತ್ರವನ್ನು ವಹಿಸಿ ಕಷ್ಟಪರಂಪರೆಗಳಿಗೀಡಾಗಿರುವವರಲ್ಲಿ ಬಹುಮಂದಿ ಅವಿದ್ಯಾವಂತರೇ ಇದ್ದಾರೆ. ಹಿಂದುಸ್ಥಾನದ ಆಶಯಗಳನ್ನು ತೃಪ್ತಿಕರವಾಗಿ ತೀರ್ಮಾನಿಸದಿದ್ದರೆ ಯಾವ ಪರಿಣಾಮವಾಗುವುದೆಂಬುದನ್ನು ಹೇಳುವುದಕ್ಕೆ ಕಂಪನವಾಗುತ್ತದೆ. ಮಹಮ್ಮದೀಯರೂ ಸಹ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭರತಖಂಡವು ಸ್ವತಂತ್ರವಾಗಿರುವುದನ್ನೇ ಆಶಿಸುತ್ತಾರೆ. ಪ್ರಾಂತಗಳಲ್ಲಿ ನೆಲೆಗೊಳ್ಳಬೇಕಾದ ನಿರಾತಂಕವಾದ ಪ್ರಭುತ್ವದ ಜೊತೆಯಲ್ಲಿ ಕೇಂದ್ರಪ್ರಭುತ್ವವು ಮಂತ್ರಾಲೋಚನಾಸಭೆಗೆ ಉತ್ತರವಾದಿಯಾಗಿರಬೇಕೆಂಬುದನ್ನು ಅಪೇಕ್ಷಿಸುತ್ತೇನೆ.

ಕನ್ಸರ್ವೇಟಿವ್ ಪಕ್ಷದ ಪ್ರತಿನಿಧಿಗಳಾದ ಲಾರ್ಡ ಪೀಲ್‌ರವರು ಮಾಡಿದ ಭಾಷಣದ ಸಾರಾಂಶ.

ಕಳೆದ ಮಹಾಯುದ್ಧದಲ್ಲಿ ಭಾರತೀಯರೂ ಸಾಮಂತರಾಜರೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾಡಿದ ಮಹೋಪಕಾರಗಳಿಗೆ ಆಂಗ್ಲೇಯರು ತುಂಬಾ ಋಣಿಗಳಾಗಿದ್ದಾರೆ. ವೈಸ್ರಾಯರವರು ತಮ್ಮ ಜನವರಿ 15 ನೆಯ ತಾರೀಖಿನ ಪ್ರಕಟನೆಯಲ್ಲಿ ಭರತಖಂಡದ ನಿರ್ದೇಶವಾದ ಗುರಿಯನ್ನು ತೋರಿಸಿರುವರು. ಅಷ್ಟು ಮಾತ್ರದಿಂದಲೇ ಆ ಗುರಿಯನ್ನು ಸಾಧಿಸಿದಂತಾಗಲಿಲ್ಲ. ವೈಸರಾಯರ ವಚನಗಳಿಗೆ ಹಿಂದೂದೇಶದ ಕೆಲವು ರಾಜಕೀಯ ಪಕ್ಷದವರು ಅಪಾರ್ಥಗಳನ್ನು ಮಾಡಿರುವರು. ತತ್‌ಕ್ಷಣವೇ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವು ಕೊಡಲ್ಪಡುವುದೆಂದು ಅವರ ಹೇಳಿಕೆಯಲ್ಲಿ ಕಂಡುಬರುವುದಿಲ್ಲ. ಸಹಕಾರನಿರಾಕರಣ ಚಳವಳಿಯಿಂದ ಅನೇಕ ವಿಘಾತಗಳಾಗಿವೆ. ಕಾಂಗ್ರೆಸ್ಸಿನವರು ಸಂಪೂರ್ಣ ಸ್ವಾತಂತ್ರ್ಯವನ್ನು ಪ್ರಸಿದ್ಧಪಡಿಸಿರುವುದೂ, ಸರ್ಕಾರದ ಸಾಲಗಳನ್ನು ನಿರಾಕರಿಸಿರುವುದೂ ಬ್ರಿಟನ್ನಿನ ವರ್ತಕರ ಮತ್ತು ಬ್ಯಾಂಕುಗಳ ನಂಬಿಕೆಯನ್ನು ಸಡಿಲಿಸಿದೆ. ಆಂಗ್ಲೇಯರನ್ನು ಪರಕೀಯರೆಂದು ಭಾವಿಸಲಾಗದು. ಇವರು ಬಹುಕಾಲದಿಂದ ಭಾರತೀಯರ ಹಿತಕ್ಕೋಸ್ಕರ ಕೆಲಸಮಾಡಿರುವುದರಿಂದ ಇವರಿಗೆ ಹಿಂದುಸ್ಥಾನದ ಕಾರ್ಯಗಳಲ್ಲಿ ಭಾಗಿಗಳಾಗಲು ನೈತಿಕವಾದ ಹಕ್ಕುಂಟು. ಜವಾಬ್ದಾರಿ ಸರ್ಕಾರವನ್ನು ನಡೆಯಿಸುವುದು ಬಹು ಕಠಿಣವಾದ ಕೆಲಸವಾಗಿದೆ. ಎಷ್ಟೋ ರಾಷ್ಟ್ರಗಳು ಪಾರ್ಲಿಮೆಂಟಿನ ಪದ್ಧತಿಯನ್ನನುಸರಿಸಲು ಪ್ರಯತ್ನಿಸಿ ಮೊಗಚಿಬಿದ್ದಿವೆ. ಭರತಖಂಡಕ್ಕೆ ಇಂಥ ಸ್ಥಿತಿಯು ಒದಗಬಾರದೆಂಬುದೇ ನಮ್ಮ ಪಾರ್ಲಿಮೆಂಟಿನ ಉತ್ಕಟೇಚ್ಛೆಯಾಗಿದೆ. ಆದರೂ ಎಲ್ಲರೂ ಸೇರಿ ಭರತಖಂಡಕ್ಕೆ ಹಿತವಾವುದೆಂಬುದನ್ನು ನಿರ್ಣಯಿಸೋಣ!

19 ನೆಯ ತಾರೀಖಿನ ದಿವಸ ಡಾ|| ಬಿ. ಎಸ್. ಮುಂಜೆಯವರು ಮಾಡಿದ ಸರ್ವೋತ್ಕೃಷ್ಟವಾದ ಭಾಷಣದ ಸಾರಾಂಶ.

ಲಾರ್ಡ್ ಪೀಲ್‌ರವರು ಸ್ವಲ್ಪವೂ ಕಪಟವಿಲ್ಲದೆ ತಮ್ಮ ಹೃದಯವನ್ನು ಬಿಚ್ಚಿ ಹೇಳಿದ್ದಕ್ಕೆ ತುಂಬಾ ಕೃತಜ್ಞನಾಗಿದ್ದೇನೆ. ಬ್ರಿಟಿಷರು ಭಾರತೀಯರ ಸೇವೆಯನ್ನು ಮಾಡಿರುವುದು ನಿಜ. ಅದು ಹೇಗೆಂದರೆ— ಒಕ್ಕಲಿಗನು ಹಾಲುಕೊಡುವ ಹಸುವನ್ನು ಪ್ರೀತಿಸುವಂತೆ! ಲಾರ್ಡಪೀಲ್‌ರವರು ಹೇಳುವ ಮಾತು ಚರಿತ್ರೆಯಿಂದಲೇ ಸುಳ್ಳಾಗುತ್ತದೆ. ಭಾರತೀಯರ ಹಡಗದ ಕೈಗಾರಿಕೆಯು ಆಂಗ್ಲೇಯರಿಂದ ನಾಶವಾಯಿತೆಂದೂ, ಭಾರತೀಯರ ಬಟ್ಟೆಯ ಕೈಗಾರಿಕೆಯನ್ನು ಪೇಸ್ಲಿ ಮತ್ತು ಮ್ಯಾಂಚೆಸ್ಟರ್ ಇವುಗಳ ಹಿತದೃಷ್ಟಿಯಿಂದ ಬಗ್ಗುಬಡಿದರೆಂದೂ ಪ್ರಸಿದ್ಧ ಐತಿಹಾಸಿಕರಾದ ವಿಲ್ಸನ್‌ರವರೇ ವ್ಯಕ್ತಪಡಿಸಿದ್ದಾರೆ.

ವೈಸರಾಯರು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಡುವುದಾಗಿ ಭಾಷೆಕೊಟ್ಟಿಲ್ಲವೆಂದೂ, ನಿಮ್ಮ ಯೋಗ್ಯತೆಯನ್ನು ಸ್ಥಿರೀಕರಿಸಿದರೆ ನಿಮಗೆ ದೊರೆಯುವುದೆಂದು ಆಂಗ್ಲೇಯರು ಹೇಳುವುದು ಸಿದ್ಧವಾದ ಮಾತೆಂದೂ ನಾನು ಮೊದಲೇ ನಿರೀಕ್ಷಿಸಿದ್ದೆನು.

ಭಾರತೀಯರು ಸ್ವರಾಜ್ಯಕ್ಕೆ ಅರ್ಹರೂ ಸಮರ್ಥರೂ ಆಗಿದ್ದಾರೆಂದು ಘಂಟಾಘೋಷವಾಗಿ ಹೇಳಬಲ್ಲೆನು. ರಾಷ್ಟ್ರೀಯ ಚಳವಳಿಯು ವಿಶ್ವವ್ಯಾಪಕವಾಗಿದೆ. ಸಾವಿರಾರು ಜನರು ಸಂತೋಷದಿಂದ ಕಷ್ಟಪರಂಪರೆಗಳನ್ನನುಭವಿಸುತ್ತಿರುವರು. ನಾನೇ ಈಗ 2 ಸಾರಿ ಜೈಲಿಗೆ ಹೋಗಿ ಬಂದಿದ್ದೇನೆ. ಪಶುಬಲದಿಂದ ಭಾರತೀಯರನ್ನು ಹೆದರಿಸುವ ಕಾಲವು ಬಹು ದೂರ ಹೋಯಿತು. ನಮ್ಮ ದೇಶೀಯರು ನನ್ನನ್ನು ದೇಶದ್ರೋಹಿ ಎಂದು ಅವಮಾನಪಡಿಸಿದರೂ 175 ವರ್ಷಗಳಿಂದ ನಮಗೂ ಆಂಗ್ಲೇಯರಿಗೂ ಇರುವ ಸಹವಾಸದ ಪ್ರೇಮಬಲದಿಂದ ಕೊನೆಯ ಪ್ರಯತ್ನವನ್ನು ನೋಡೋಣವೆಂದು ಇಲ್ಲಿಗೆ ಬಂದಿದ್ದೇನಲ್ಲದೆ ನಾನು ಭಿಕ್ಷುಕನಾಗಿ ಬಂದಿರುವುದಿಲ್ಲ. ಭಯವೂ ಅನುಮಾನವೂ ಆಂಗ್ಲೇಯರನ್ನು ಡೊಮಿಯನ್ ಸ್ಟೇಟಸ್ಸನ್ನು ಕೊಡದಂತೆ ತಡೆಮಾಡಿದರೆ ಜವಾಬ್ದಾರಿಸರ್ಕಾರಕ್ಕಿಂತ ಕಡಿಮೆಯಾದುದು ಯಾವುದೂ ನಮಗೆ ತೃಪ್ತಿಕರವಾಗುವುದಿಲ್ಲ.

ಮೌಲಾನಾಮಹಮ್ಮದಾಲಿಯವರ ಶ್ಲಾಘನೀಯವಾದ ಭಾಷಣದ ಸಾರಾಂಶ.

ಡಾ|| ಮುಂಜೆಯವರಂತೆಯೇ ನಾನಾದರೂ ದೇಶದ್ರೋಹಿಯೆಂದು ಕರೆಯಲ್ಪಟ್ಟು ಈ ಸಭೆಗೆ ಬಂದಿದ್ದೇನೆ. ಲಾರ್ಡ್ ಪೀಲ್‌ರವರ ಅಭಿಪ್ರಾಯಗಳು ಗಣನೆಗೆ ತರಲು ಅರ್ಹಗಳಾಗಿಲ್ಲವು. ಆದರೆ ನನ್ನ ಸ್ನೇಹಿತರಾದ ರಾಮ್ಸೇಮ್ಯಾಕ್ಡೋನಾಲ್ಡರವರು ನವೀನ ಇತಿಹಾಸವನ್ನು ಕಲ್ಪಿಸುವರೆಂದು ನಿರೀಕ್ಷಿಸುತ್ತೇನೆ. ನಾನು ಪ್ರಜಾಧಿಪತ್ಯದ ಪಕ್ಷದವನಾದರೂ ಈ ಪರಿಷತ್ತಿನ ಪ್ರಾರಂಭೋತ್ಸವವನ್ನು ಮಾಡಿದ ಜಾರ್ಜ್ ಸಾರ್ವಭೌಮರವರಲ್ಲಿ ನನಗೆ ತುಂಬಾ ನಂಬಿಕೆಯಿದೆ. ಜಗತ್ತಿನಲ್ಲಿ ಐದನೇ ಒಂದು ಭಾಗವಾದ 33 ಕೋಟಿ ಪ್ರಜೆಗಳುಳ್ಳ ಹಿಂದೂಸ್ಥಾನಕ್ಕೆ ಕ್ಷೇಮಕರವೂ ನ್ಯಾಯವೂ ಆದುದನ್ನು ನಿಸ್ಸಂಶಯವಾಗಿ ಮಾಡುವರೆಂದು ನಂಬಿದ್ದೇನೆ. ವೈಸರಾಯರಲ್ಲಿ ನನಗೆ ಪೂರ್ಣ ವಿಶ್ವಾಸವಿರುವುದರಿಂದ ನಾನು ಈ ಸಭೆಗೆ ಬಂದಿದ್ದೇನೆ. ಆದರೂ ಅವರ ಪ್ರಭುತ್ವಕ್ಕೂ ನನಗೂ ಏನೂ ಸಂಬಂಧವಿರುವುದಿಲ್ಲ. ಅವರು ಕಾನ್ಫರೆನ್ಸಿಗೆ ಕಳುಹಿಸಿರುವ ಸಲಹೆಗಳು ನಿರಾಶಾಜನಕಗಳಾಗಿವೆ. ಈ ಸಭೆಗೆ ಬರಲು ಅರ್ಹರಾದ ಎಷ್ಟೋ ಜನ ಸಮರ್ಥರು ಜೈಲಿನಲ್ಲಿದ್ದಾರೆ. ಮಿ|| ಗಾಂಧಿಯವರಿಗೂ ಮತ್ತು ಸರ್ಕಾರಕ್ಕೂ ಒಡಂಬಡಿಕೆಯನ್ನು ಮಾಡಬೇಕೆಂದು ನಾನೂ ಸಹ ಶ್ರೀಯುತ ಸಪ್ರೂ, ಜಯಕರರೊಂದಿಗೆ ಪ್ರಯತ್ನಪಟ್ಟು ವಿಫಲನಾದೆನು. ನಾವು ಸ್ವಾತಂತ್ರ್ಯದ ತಿರುಳಿಲ್ಲದೆ ಹಿಂದಿರುಗುವುದಿಲ್ಲವೆಂದು ತುಂಬಾ ನಂಬಿಕೆಯುಳ್ಳವನಾಗಿದ್ದೇನೆ. ನಾನು ಹಳೇಸಹಕಾರನಿರಾಕರಣವಾದಿಯಾಗಿದ್ದೇನೆ. ಲಾರ್ಡ್ ರೀಡಿಂಗ್ ಪ್ರಭುಗಳ ಸರ್ಕಾರದಿಂದ ಮೊಟ್ಟಮೊದಲು ಜೈಲಿಗೆ ಹೋದವರೆಂದರೆ ನಾನೂ ಮತ್ತು ನನ್ನ ಸಹೋದರನು. ನಾವು ಡೊಮಿನಿಯನ್ ಸ್ಟೇಟಸ್ (ಸಾಮ್ರಾಜ್ಯಾಂತರ್ಗತಸ್ವರಾಜ್ಯ) ವನ್ನು ಸಂಪಾದಿಸದೆ ಹಿಂದಿರುಗಿದರೆ ಬ್ರಿಟಿಷ್ ಸಾಮ್ರಾಜ್ಯದ ಹೊರಗೆ ಭರತಖಂಡವು ಸ್ವಾತಂತ್ರ್ಯದಿಂದಿರುವುದನ್ನು ನೋಡುವ ಕಾಲವು ಒದಗುವುದು. ವಿಕ್ಟೋರಿಯಾ ಮಹಾರಾಣಿಯವರ ಮೊಮ್ಮಕ್ಕಳಾದ ಜಾರ್ಜ್‌ಸಾರ್ವಭೌಮರವರಲ್ಲಿ ನನಗೆ ನಂಬಿಕೆಯಿದೆ. ಮೂರನೆಯ ಜಾರ್ಜ್‌ರವರ ಪ್ರಭುತ್ವದಲ್ಲಿ ಅಮೇರಿಕೆಯು ಕೈಬಿಟ್ಟುಹೋಯಿತು. ಐದನೆಯ ಜಾರ್ಜ್‌ರವರ ಪ್ರಭುತ್ವದಲ್ಲಿ ಭರತಖಂಡವು ಸ್ವಾತಂತ್ರ್ಯವನ್ನು ಸಂಪಾದಿಸಿತೆಂದು ಚರಿತ್ರೆಯಲ್ಲಿ ಬರೆಯಲ್ಪಡಲಿ. ಹಿಂದೂಮಹಮ್ಮದೀಯರ ಅನೈಕಮತ್ಯಕ್ಕೆ ಆಂಗ್ಲೇಯರಿಂದ ಬರೆಯಲ್ಪಟ್ಟ ಚರಿತ್ರೆಗಳೇ ಕಾರಣಗಳಾಗಿವೆ. ಹಿಂದೂಮಹಮ್ಮದೀಯರು ಒಮ್ಮನಸ್ಸು ಮಾಡಿದರೆ ಅದು ಕಠಿಣಪ್ರಶ್ನೆಯಾಗುವದು. ನಾನು ಅಲ್ಪ ಸಂಖ್ಯೆಯ ಸಮಾಜಕ್ಕೆ ಸೇರಿದಾಗ್ಯೂ ಬಹು ಸಂಖ್ಯೆಯ ಪ್ರಭುತ್ವದೊಳಗಿರಲು ನನಗೆ ಸಮಾಧಾನವಿದೆ. ನನಗೆ ಇಲ್ಲಿ ಸಮಾಧಿಯನ್ನು ಮಾಡಿದರೂ ಅಡ್ಡಿಯಿಲ್ಲ. ಸ್ವಾತಂತ್ರ್ಯದ ತಿರುಳಿಲ್ಲದೆ ಹಿಂದಿರುಗಲಾರೆನು. ಇಂಗ್ಲೆಂಡಿನಂತೆ ಹಿಂದೂದೇಶವು ಸ್ವಾತಂತ್ರ್ಯದಿಂದಿರುವುದೆಂದು ಅಧ್ಯಕ್ಷರು ಹೇಳುವವರೆಗೂ [illegible] ಮಾತನಾಡಲಾರೆನು.

ಇಷ್ಟಾದಮೇಲೆ ಪಾಟಿಯಾಲಾ ಮಹಾರಾಜರೂ, ರೀವಾ ಮಹಾರಾಜರೂ, ಸಾಂಗ್ಲಿ ಅಧಿಪತಿಗಳೂ, ಸಿಕ್ಕರ ಪ್ರತಿನಿಧಿಗಳಾದ ಉಜ್ವಲಸಿಂಗರವರೂ, ಪರಶುರಾಮಸಕ್ಸೋರವರೂ ಯುಕ್ತಿಯುಕ್ತಗಳಾದ ಭಾಷಣಗಳನ್ನು ಮಾಡಿದರು. ಮಿ|| ಎಂ. ಆರ್. ಜಯಕರ್‌ರವರು ಡೊಮಿನಿಯನ್ ಸ್ಟೇಟಸ್ ಕೊಡುವುದರಿಂದ ಸಂಪೂರ್ಣ ಸ್ವರಾಜ್ಯಧ್ವನಿಯು ಅಡಗುವುದೆಂದು ಹೇಳಿದ್ದಕ್ಕೆ ಲಂಡನ್ನಿನ ಕಾಂಗ್ರೆಸ್ ಸಂಘದವರು ಇದನ್ನು ಮಾತನಾಡಲಿಕ್ಕೆ ನಿಮಗೆ ಯಾವ ಹಕ್ಕಿದೆಯೆಂದು ಪ್ರತಿಭಟಿಸಿ ನಿಷೇಧಿಸಿದರೆಂದು ತಿಳಿದುಬರುತ್ತದೆ.

ಬೊಂಬಾಯಿಯ ಪೋಲೀಸರು ಸ್ತ್ರೀಯರನ್ನು ಕುರಿತು ಅಸಭ್ಯ ಭಾಷಣಮಾಡಿ ಭಾರತೀಯಮಹಿಳೆಯರ ಗೌರವಕ್ಕೆ ಚ್ಯುತಿಬರುವಂಥ ಕೃತ್ಯಮಾಡಿದ್ದನ್ನು ಖಂಡಿಸಲು ದೊಡ್ಡ ಸಭೆಯನ್ನು ಸೇರಿಸಬೇಕೆಂದು ಸುಮಾರು 300000 ಜನ ಬೊಂಬಾಯಿ ನಗರ ನಿವಾಸಿಗಳು ಪೊಲೀಸ್‌ರವರಿಗೆ ವಿಜ್ಞಾಪನೆಮಾಡಿಕೊಂಡಾಗ್ಯೂ [illegible] ಅವರ ಪ್ರಾರ್ಥನೆಯನ್ನು ಅಂಗೀಕರಿ[illegible]ರೀಫ್ ಪದವಿಯು ಬಹುನಾಮಾರ್ಥಕ[illegible], ಸರ್ಕಾರಕ್ಕೆ ಅಧೀನವಾಗಿರುವುದರಿಂದ ತಾವು ಈ ಕಾರ್ಯದಲ್ಲಿ ಕೈಹಾಕಲು ಸಾಧ್ಯವಿಲ್ಲವೆಂದು ಹೇಳಿರುವರಂತೆ!

ಪಂಚಾಚಾರ್ಯ ಪ್ರಭಾ.

೧೯೩೦ನೇ ನವಂಬರ್ ತಾ|| ೨೪ನೆಯ ಸೋಮವಾರ.

ರೌಂಡ್‌ಟೇಬಲ್ ಕಾನ್ಫರೆನ್ಸ್.

ಭರತಖಂಡದ ಮುಂದಿನ ರಾಜ್ಯಾಂಗರಚನೆಗೋಸುಗ ಸಾರ್ವಭೌಮ ಸರ್ಕಾರದವರಿಂದ ನಿಯಮಿತವಾಗಿರುವ ಚಕ್ರಗೋಷ್ಠಿಯು ಕಳೆದ 12 ನೆಯ ತಾರೀಖಿನ ದಿವಸ ಲಂಡನ್ ಪಟ್ಟಣದಲ್ಲಿ ವಿಖ್ಯಾತನಾಮವಾದ "ಸೇಂಟ್ ಜೇಮ್ಸ್" ಎಂಬ ಅರಮನೆಯಲ್ಲಿ ಪ್ರಾರಂಭವಾಗಿ 17 ನೆಯ ತಾರೀಖಿನಿಂದ ಕಾರ್ಯಕಲಾಪಗಳನ್ನಾರಂಭಿಸಿರುವುದು ಸರಿಯಷ್ಟೆ! ಅಭೂತಪೂರ್ವವೂ ಇತಿಹಾಸಪ್ರಸಿದ್ಧವೂ ಆದ ಈ ಕೂಟವೆಂಬ ಕಲ್ಪವೃಕ್ಷದಿಂದ ಯಾವ ರೂಪವಾದ ಫಲವು ಹೊಂದಬೇಕಾಗುವುದೋ ಎಂದು ಸಮಸ್ತ ಪ್ರಪಂಚವೂ ಆತುರದಿಂದ ನಿರೀಕ್ಷಿಸಿಕೊಂಡಿರುವುದು. ಕಳೆದ ಒಂದುವರೆ ಶತಮಾನದಿಂದಲೂ ನಂದನವನದಂತಿರುವ ಭರತಖಂಡದಲ್ಲಿ ವಾಸವಾಗಿರುವ ಆಂಗ್ಲೇಯರು, ಭಾರತರಾಜ್ಯಭಾರಸೂತ್ರವನ್ನು ಈ ದೇಶೀಯರಿಗೊಪ್ಪಿಸುವ ವಿಷಯವಾಗಿ ಕೀರ್ತಿಶೇಷರಾದ ವಿಕ್ಟೋರಿಯಾ ಮಹಾರಾಣಿಯವರ ಕಾಲದಿಂದಲೂ ಕೇವಲ ಬಾಯಿಯಲ್ಲಿ ಮಾತ್ರ ಅಭಯವನ್ನು ಕೊಡುತ್ತಿದ್ದರಲ್ಲದೆ ಕೃತಿಯಲ್ಲಿ ತೋರಿಸುತ್ತಿದ್ದಿಲ್ಲ. ಆದುದರಿಂದ ಮಹಾತ್ಮಾ ಗಾಂಧಿಯವರೇ ಮೊದಲಾದ ಭಾರತೀಯ ಪ್ರಮುಖರು ಈ ಚಕ್ರಗೋಷ್ಠಿಯಿಂದಲೂ ಸಹ ಭರತಖಂಡಕ್ಕೆ ಯಾವ ವಿಧವಾದ ಪ್ರಯೋಜನವೂ ಉಂಟಾಗಲಾರದೆಂದು ನಿರ್ಧರಿಸಿದ್ದರು. ಈ ಗೋಷ್ಠಿಗೆ ಆಮಂತ್ರಿತರಾಗಿರುವ ಹಿಂದೂ, ಮುಸಲ್ಮಾನ, ಪಾರ್ಸಿ, ಕ್ರೈಸ್ತ, ಶೀಖ ಮೊದಲಾದ ಭಿನ್ನಭಿನ್ನ ಮತಗಳ ಪ್ರತಿನಿಧಿಗಳೂ, ರಾಜರುಗಳೂ ತಮ್ಮತಮ್ಮ ಒಳಜಗಳಗಳನ್ನೆಲ್ಲಾ ಬಿಟ್ಟು ಏಕಮತ್ಯದಿಂದ ಆಂಗ್ಲಪ್ರಭುತ್ವದವರೊಡನೆ ಹೋರಾಡಿ ಭರತಖಂಡಕ್ಕೆ ಸ್ವರಾಜ್ಯವನ್ನು ದೊರಕಿಸಿಕೊಡುವುದು ಕೇವಲ ದುಸ್ಸಾಧ್ಯವಾದ ಕಾರ್ಯವೆಂದು ಅನೇಕರು ಭಾವಿಸಿಕೊಂಡಿದ್ದರು. ಈ ಸಭೆಯ ಪ್ರಾರಂಭದಲ್ಲಿ ಸಾರ್ವಭೌಮರೂ, ಮುಖ್ಯ ಮಂತ್ರಿಗಳೂ ಮಾಡಿದ ಭಾಷಣಗಳು ಭರತಖಂಡದ ರಾಜಕೀಯ ಸುಧಾರಣಾವಿಷಯವಾಗಿ ಒಂದಂಶವನ್ನೂ ಸೂಚಿಸದೆ ಕೇವಲ ಔಪಚಾರಿಕವಾಕ್ಯಗಳನ್ನೇ ಒಳಗೊಂಡಿದ್ದುದರಿಂದ ಆಂಗ್ಲಪ್ರಭುತ್ವದವರಲ್ಲಿ ಅಲ್ಪಸ್ವಲ್ಪ ನಂಬಿಕೆಯನ್ನಿಟ್ಟುಕೊಂಡಿದ್ದ ಮವಾಳರೂ ಕೂಡ ಇವರಿಂದ ಭರತಖಂಡಕ್ಕೆ ಯಾವ ಪ್ರಯೋಜನವೂ ಉಂಟಾಗಲಾರದೆಂಬ ನಿರಾಶೆಯಿಂದ ತಮ್ಮ ಪ್ರತಿನಿಧಿಗಳನ್ನು ಭರತಖಂಡಕ್ಕೆ ಕೂಡಲೆ ಹಿಂದಿರುಗಿ ಬರಬೇಕೆಂದು ಕೇಳಿಕೊಂಡಿದ್ದರು. ಆದರೆ ಈಚೆಗೆ ಈ ಸಭೆಯಲ್ಲಿ ನಡೆದ ವಿದ್ಯಮಾನಗಳನ್ನು ಪರಿಶೀಲಿಸಿದರೆ ಈ ಮಹಾ ಸಮಸ್ಯೆಯು ಉಭಯ ದೇಶಗಳಿಗೂ ಅನುಕೂಲವಾಗುವರೀತಿಯಲ್ಲಿ ತೀರ್ಮಾನವಾಗುವ ಶುಭಚಿಹ್ನಗಳು ಕಂಡುಬರುತ್ತವೆ. ಈ ಸಮ್ಮೇಳನದ ಕಾರ್ಯಕಲಾಪಗಳಿಗೆ ವಿಘ್ನರೂಪವಾಗಿದ್ದ ಹಿಂದೂ ಮಹಮ್ಮದೀಯರ ವಿವಾದವು ದೇಶಭಕ್ತಧುರೀಣರಾದ ಸರ್ ಸಪ್ರೂ, ಮಿ|| ಜಯಕರ್, ರೈ. ಆ. ಶ್ರೀನಿವಾಸಶಾಸ್ತ್ರಿ, ಡಾ|| ಮುಂಜೆ, ಮಿ|| ಜಿನ್ನಾ, ಮೌ|| ಮಹಮ್ಮದಾಲಿ ಮೊದಲಾದ ಮುಖಂಡರ ಸಾಹಸದಿಂದ ಉಭಯಪಕ್ಷಗಳಿಗೂ ಅನುಕೂಲವಾದ ರೀತಿಯಲ್ಲಿ ತೀರ್ಮಾನವಾಗಿ ಪ್ರಬಲವಾದ ಈ ಎರಡು ಪಂಗಡಗಳು ಒಂದಾದುದು ಅತ್ಯಂತ ಸಂತೋಷಕರವಾದ ಸಂಗತಿಯಾಗಿದೆ. ಈ ಸಮ್ಮೇಳನದ ಪ್ರಾಸ್ತಾವಿಕಾಧಿವೇಶನದಲ್ಲಿ ರಾಜರೂ, ಪ್ರತಿನಿಧಿಗಳೂ ಮಾಡಿದ ದೇಶಾಭಿಮಾನಪೂರಿತಗಳಾದ ಧೀರೋದಾತ್ತಭಾಷಣಗಳು ಭರತಖಂಡವು ಸ್ವರಾಜ್ಯಸಂಪಾದನೆಗೋಸ್ಕರ ಎಂತಹ ಉಗ್ರತರವಾದ ಅಸಹಕಾರವನ್ನು ಕೈಗೊಂಡಿರುವದೆಂಬಂಶವನ್ನು ಆಂಗ್ಲೇಯರಿಗೆ ಚೆನ್ನಾಗಿ ಮಂಡಟ್ಟುಮಾಡಿಕೊಟ್ಟಿರುವುವು. ಮುಖ್ಯಮಂತ್ರಿಗಳಾದ ಮಿ|| ಮ್ಯಾಕ್ಡೊನಾಲ್ಡರವರು ೨೧ ನೆಯ ತಾರೀಖಿನದಿವಸ ಮಾಡಿರುವ ಭಾಷಣವನ್ನು ಪರಿಶೀಲಿಸಿದರೆ ನಿರಾಶರಾಗಿದ್ದವರ ಮನಸ್ಸಿನಲ್ಲಿ ಪುನಃ ಆಶಾಂಕುರವು ಮೂಡುತ್ತಿರುವುದು. ಭಾರತೀಯರು ಸ್ವಾತಂತ್ರ್ಯಕ್ಕೆ ಸ್ವಲ್ಪವೂ ಅರ್ಹರಲ್ಲವೆಂದು ಕೇವಲ ಉದಾಸೀನಭಾವದಿಂದ ಭರತಖಂಡದ ಬೇಡಿಕೆಗಳನ್ನು ಅಲ್ಲಗಳೆಯುತ್ತಿದ್ದ ಮಿ|| ಮ್ಯಾಕ್ಡೊನಾಲ್ಡರವರ ಮತ್ತು ಇವರ ಅನುಯಾಯಿಗಳ ಮನಸ್ಸು ಈಗ ಈರೀತಿಯಾದ ಬದಲಾವಣೆಯನ್ನು ಹೊಂದಿರುವುದಕ್ಕೆ ಪ್ರತಿನಿಧಿಗಳೆಲ್ಲರೂ ತಮ್ಮ ತಮ್ಮ ಕೋಮುವಾರು ಬಡೆದಾಟಗಳನ್ನೆಲ್ಲಾ ಮೂಲೆಗೊತ್ತಿ, ಏಕವಾಕ್ಯದಿಂದ ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡಬೇಕೆಂದು ವಾದಿಸಿದುದೂ, ಸಂಸ್ಥಾನಾಧಿಪತಿಗಳೂಕೂಡ ಭಾರತೀಯಪ್ರತಿನಿಧಿಗಳೊಡನೆ ಸಹಕರಿಸಿ ಭರತಖಂಡವು ಸರ್ವರೀತಿಯಿಂದಲೂ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಹೊಂದಲು ಅರ್ಹವಾಗಿದೆಯೆಂಬಂಶವನ್ನು ವ್ಯಕ್ತಪಡಿಸಿದುದೂ ಮುಖ್ಯಕಾರಣವಾಗಿದೆ.

ಸರ್ ಸಪ್ರೂ ಮತ್ತು ಮಿ|| ಜಿನ್ನಾರವರ ಧೀರೋದಾತ್ತಭಾಷಣಗಳು ಆಂಗ್ಲೇಯರನ್ನು ಆಶ್ಚರ್ಯಾನ್ವಿತರನ್ನಾಗಿ ಮಾಡಿಬಿಟ್ಟಿರುವುವು. ಮಹಮ್ಮದೀಯರ ಮುಖಂಡರಾದ ಮೌ|| ಮಹಮ್ಮದಾಲಿಯವರು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಸಂಪಾದಿಸದೆ ಭರತಖಂಡಕ್ಕೆ ತಾವು ಹಿಂದಿರುಗುವುದಿಲ್ಲವೆಂದು ವೀರಪ್ರತಿಜ್ಞೆಯನ್ನು ಮಾಡಿ ಭಾಷಣಮಾಡಿರುವರು. ನಿಮ್ನಪಂಗಡದ ಪ್ರತಿನಿಧಿಗಳಾದ ಡಾ|| ಅಂಬೇಡಕರ್‌ರವರೂ, ಸ್ತ್ರೀ ಪ್ರತಿನಿಧಿಗಳಾದ ಬೇಗಮ್‌ಷಾನವಾಜ್‌ರವರೂ ಅಂತರ್ಗತಸ್ವರಾಜ್ಯವೇ ತಮ್ಮ ಧ್ಯೇಯವೆಂದು ಸಾರಿರುವರು. ಯಾವತ್ತು ಪ್ರತಿನಿಧಿಗಳ ಭಾಷಣಗಳ ಸಾರಾಂಶವು ನಮ್ಮಾ ಪತ್ರಿಕೆಯಲ್ಲಿ ಕೊಡಲ್ಪಟ್ಟಿದೆ. ಇದನ್ನು ವಾಚಕರು ಓದಿನೋಡಿಕೊಳ್ಳಬೇಕು. ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಭಾರತೀಯರ ಬೇಡಿಕೆಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚಿಸಿ ಉಭಯರಾಜ್ಯಗಳಿಗೂ ಕೀರ್ತಿಬರುವಂತೆ ತೀರ್ಮಾನಮಾಡಲು ತಮ್ಮ ಕೈಲಾದ ಸಾಹಸವನ್ನೆಲ್ಲಾ ಉಪಯೋಗಿಸುವುದಾಗಿಯೂ, ಈ ಉದ್ದೇಶವನ್ನು ಈಡೇರಿಸುವುದಕ್ಕೋಸ್ಕರ ಭಾರತಪ್ರತಿನಿಧಿಗಳೆಲ್ಲರೂ ತಮಗೆ ಸಹಾಯಮಾಡಬೇಕೆಂದೂ ಕೇಳಿಕೊಂಡಿರುವರು. ಇದನ್ನೆಲ್ಲಾ ಪರಿಶೀಲಿಸಿದರೆ ಭರತಖಂಡಕ್ಕೆ ಒಂದುವಿಧವಾದ ಅಂತರ್ಗತಸ್ವರಾಜ್ಯವು ಲಭಿಸುವುದರಲ್ಲಿ ಸಂದೇಹವಿಲ್ಲವೆಂದು ತೋರಿಬರುತ್ತದೆ. ಇದಕ್ಕೆಲ್ಲ ಪ್ರತಿನಿಧಿಗಳ ಮತ್ತು ಸಂಸ್ಥಾನಾಧಿಪತಿಗಳ ಸೌಹಾರ್ದಭಾವವೇ ಮುಖ್ಯಕಾರಣವೆಂದು ವ್ಯಕ್ತವಾಗುತ್ತದೆ. ಪ್ರತಿನಿಧಿಗಳು ಮುಂದಕ್ಕೂ ಇದೇ ರೀತಿಯಾಗಿ ಏಕಮತ್ಯದಿಂದ ವರ್ತಿಸಿ ಭರತಖಂಡದ ಸ್ವಾತಂತ್ರ್ಯವನ್ನು ಸಂಪಾದಿಸಿದ ಕೀರ್ತಿಗೆ ಪಾತ್ರರಾಗಲೆಂದೂ, ಬ್ರಿಟಿಷ್ ಪ್ರಭುತ್ವದವರು ಭಾರತೀಯರ ಹಕ್ಕುಬಾಧ್ಯತೆಗಳನ್ನು ಮನ್ನಿಸಿ ಭರತಖಂಡಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನಿತ್ತು ಕೀರ್ತಿಶೇಷರಾದ ವಿಕ್ಟೋರಿಯಾ ಮಹಾರಾಣಿಯವರ ಅನುಜ್ಞೆಯನ್ನು ಸಾರ್ಥಕಗೊಳಿಸಿ ಭಾರತೀಯರ ಚಿರಕೃತಜ್ಞತೆಗೆ ಪಾತ್ರರಾಗಲೆಂದೂ, ಈ ಕಾರ್ಯಗಳೆಲ್ಲವೂ ಸಾಂಗವಾಗಿ ನೆರವೇರಿ ಚಕ್ರಗೋಷ್ಠಿಯ ತೀರ್ಮಾನಗಳು ಭಾರತೀಯೇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡುವಂತೆ ಪರಮಾತ್ಮನು ಅನುಗ್ರಹಿಸಲೆಂದೂ ದಯಾನಿಧಿಯಾದ ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ಹೊಸಪೇಟೆಯಲ್ಲಿ 1931 ನೆಯ ಫೆಬ್ರವರಿ 6, 7, 9 ಮತ್ತು 11 ರಲ್ಲಿ ನರೇಂದ್ರಮಂಡಲದ ವಾರ್ಷಿಕಾಧಿವೇಶನವು ಸೇರಿಸಲ್ಪಡಬೇಕೆಂದು ಗೊತ್ತಾಗಿದೆ.

ಶ್ರೀ ಜಗದ್ಗುರು ಕಾಶೀ ಸಿಂಹಾಸನಾಧೀಶ್ವರರ ಸರ್ಕೀಟು ನೈಜಾಮರಾಜ್ಯಕ್ಕೆ ಸೇರಿದ ಬಿದರ ಜಿಲ್ಲಾ ಅಹಮ್ಮದಪುರದಲ್ಲಿ ರುವದಾಗಿ ತಿಳಿದುಬರುತ್ತದೆ.

ಶ್ರೀ ಜಗದ್ಗುರು ಕೇದಾರ ಸಂಸ್ಥಾನದ ಸರ್ವಾಧಿಕಾರಿಗಳವರ ಸರ್ಕೀಟು ರಾಯದುರ್ಗ ಡಿ|| ದೇವದುರ್ಗದಲ್ಲಿದೆ. ದೊಡ್ಡ ಶ್ರೀಗಳವರು ಹಿಮಾಲಯದಿಂದ ಇಷ್ಟರಲ್ಲಿಯೇ ಸರ್ಕೀಟಿಗೆ ದಯಮಾಡಿಸುತ್ತಾರೆಂದು ತಿಳಿದುಬರುತ್ತದೆ.

ಪ್ಯಾರಿಸ್‌ನಲ್ಲಿ ಒಬ್ಬ ಹೆಂಗಸು ಏಳು ಅಡಿ ಒಂದು ಅಂಗುಲ ಎತ್ತರವಿರುವಳು. ಅವಳ ಹೆಸರು ಮ್ಯಾಡೆಮಾಯ್ಸೆಲ್ ಆಸ್ಟ್ರೋವಾಕ್ಸೀ. ಆಕೆಯು ಒಬ್ಬ ದರ್ಜಿಯ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಳೆ.

ಲಾಹೋರಿನಲ್ಲಿ ಕೆಲವು ತರುಣರನ್ನು ಹಿಂಬಾಲಿಸುತ್ತಿದ್ದ ಒಬ್ಬ ಗುಪ್ತ ಪೋಲೀಸಧಿಕಾರಿಯನ್ನು ಆ ತರುಣರು ಒಂದು ಮರಕ್ಕೆ ಕಟ್ಟಿ ಚೆನ್ನಾಗಿ ಹೊಡೆದು ಅದೃಶ್ಯರಾದರೆಂದು ಲಾಹೋರಿನ ಕೆಲವು ಪತ್ರಿಕೆಗಳು ತಿಳುಹಿಸುತ್ತವೆ.

ಲಾಹೋರಿನಲ್ಲಿ ಕಾಶೀರಾಮ ಎಂಬ ಹನ್ನೆರಡು ವರ್ಷದ ಬಾಲಕನು ಪಿಕೆಟಿಂಗ್ ಮಾಡಿದನೆಂಬ ಅಪರಾಧದ ಮೇಲೆ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟು ನಾಲ್ಕು ವರ್ಷಗಳವರೆಗೆ ಜೈಲಿನಲ್ಲಿ ಇರಿಸಲ್ಪಟ್ಟಿರುವನು.

ಇದೇ ತಿಂಗಳು 10 ನೆಯ ತಾರೀಖಿನ ದಿವಸ ಬರ್ಮಾದೇಶಕ್ಕೆ ಸೇರಿದ ಕೌಕಪ್ಯು ಎಂಬ ಪಟ್ಟಣವು ಚಕ್ರವಾತದಿಂದ ಸಂಪೂರ್ಣ ನಾಶವಾಗಿದೆ. ಆ ಪಟ್ಟಣದ ಎಲ್ಲಾ ಗೃಹಗಳೂ, ಸರ್ಕಾರಿ ಕಟ್ಟಡಗಳೂ ಪೂರ್ಣನಾಶವಾಗಿವೆಯಂತೆ!

ಮಾಜಿ ಇಂದೂರು ಮಹಾರಾಜರು ಒಬ್ಬ ಅಮೇರಿಕಾದೇಶದ ಯುವತಿಯನ್ನು ವಿವಾಹವಾಗಿದ್ದರಷ್ಟೆ! ಆಕೆಯಿಂದ ಪ್ಯಾರಿಸ್ಸಿನಲ್ಲಿ ಒಂದು ಹೆಣ್ಣು ಶಿಶುವು ಜನಿಸಿರುವುದೆಂದೂ, ಆ ಕೂಸಿಗೆ ಸೀತಾರಾಜೆ ಹೋಳ್ಕರ್ ಎಂಬ ನಾಮಕರಣಮಾಡಿರುವರೆಂದೂ ತಿಳಿದುಬರುತ್ತದೆ.

ಪಂಡಿತ ಮದನಮೋಹನಮಾಲವೀಯವರಿಗೆ ನಾಲ್ಕೈದು ದಿವಸಗಳಿಂದ 104 ಡಿಗ್ರಿಗಳವರೆಗೆ ಜ್ವರವು ಬರುತ್ತಲಿದೆಯೆಂದೂ, ಅದೇ ಜೈಲಿನಲ್ಲಿರುವ ಅವರ ಅಳಿಯಂದಿರಾದ ಪಂಡಿತ ಗೋವಿಂದಮಾಲವೀಯವರು ಅವರ ಜೊತೆಯಲ್ಲಿಯೇ ಇರುವರೆಂದೂ ತಿಳಿದುಬರುತ್ತದೆ.

ಕಲ್ಕತ್ತೆಯಲ್ಲಿ 19 ನೆಯ ತಾರೀಖಿನ ದಿವಸ ರಾತ್ರಿ ಅದ್ಭುತ ಮಳೆಯಾಗಿದೆ. ಇಂಥ ಮಳೆಯು ಕಲ್ಕತ್ತೆಯಲ್ಲಿ 1901 ಮತ್ತು 1912 ಇಸ್ವಿಗಳಲ್ಲಿ ಮಾತ್ರ ಬಿದ್ದಿತ್ತೆಂದು ಕೇಳುತ್ತೇವೆ. ಮೈಮನಸಿಂಗದಿಂದ ಮುರ್ಷಿದಾಬಾದ್‌ವರೆಗೂ ವಿಶೇಷ ಮಳೆಯಿಂದ ಬೆಳೆಗಳು ನಾಶವಾಗಿ ಬಹಳ ತೊಂದರೆಯುಂಟಾಗಿದೆ.

ಲಾಹೋರಿನಲ್ಲಿ ಹರಿದತ್ತನೆಂಬ ಹದಿನೆಂಟುವರ್ಷ ವಯಸ್ಸಿನ ವಿದ್ಯಾರ್ಥಿಯೊಬ್ಬನು ವಿಷಪಾನಮಾಡಿ ಆತ್ಮಹತ್ಯೆ ಮಾಡಿಕೊಂಡನಂತೆ! ಅಭ್ಯಾಸದಲ್ಲಿ ಸಹಪಾಠಿಗಳಿಗಿಂತಲೂ ತಾನು ಬಹಳ ಹಿಂದುಳಿದಿದ್ದುದೇ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವೆಂದು ಪ್ರಾಣಬಿಡುವುದಕ್ಕೆ ಪೂರ್ವದಲ್ಲಿ ವೈದ್ಯರ ಮುಂದೆ ಹೇಳಿದ್ದನಂತೆ!

ಮಿ|| ಫ್ರೀಮನ್‌ರವರು ದುಂಡುಮೇಜಿನ ಪರಿಷತ್ತು ಸೇರಿರುವುದಕ್ಕೋಸ್ಕರ ಭರತಖಂಡದ ಶಾಂತಿಮಯ ಕೈದಿಗಳನ್ನು ಬಿಡುಗಡೆ ಮಾಡಲಾಗುವುದೇ? ಎಂದು ಪಾರ್ಲಿಮೆಂಟಿನಲ್ಲಿ ಇಂಡಿಯಾ ಸೆಕ್ರೆಟರಿಗಳಾದ ಮಿ|| ಬೆನ್‌ರವರನ್ನು ಪ್ರಶ್ನೆ ಮಾಡಿದ್ದಕ್ಕೆ ಅವರು ಸದ್ಯಃ ಯಾವುದೂ ಸಾಧ್ಯವಿಲ್ಲವೆಂದು ಉತ್ತರ ಹೇಳಿದರಂತೆ!

ಕರ್ನಾಟಕದ ಪ್ರಥಮ ಸರ್ವಾಧಿಕಾರಿಗಳಾದ ಮಿ|| ಹನುಮಂತರಾವ್ ಕೌಜಲಗಿಯವರೂ, ಬೆಳಗಾಂವ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾದ ಮಿ|| ನಾರಾಯಣರಾವ್ ಜೋಶಿಯವರೂ ಇದೇ ತಿಂಗಳು 17 ನೆಯ ತಾರೀಖಿನ ದಿವಸ ಬೆಳಗಾಂವ ಸಿಟಿ ಮ್ಯಾಜಿಸ್ಟ್ರೇಟರಿಂದ ಆರು ತಿಂಗಳುಗಳ ಕಠಿಣ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು.

ಬೊಂಬಾಯಿಯ ಸಂಗ್ರಾಮ ಸಮಿತಿಯ ಉಪಾಧ್ಯಕ್ಷರಾದ ಮಿ|| ಅಬ್ದುಲ್‌ರಹಿಮಾನ್‌ರವರೂ, ಸೆಕ್ರೆಟರಿಗಳಾದ ಮಿ|| ವಿ. ಪಿ. ನಿಗಮ್‌ರವರೂ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಪೋಸ್ಟಾಫೀಸಿನಲ್ಲಿಟ್ಟಿರುವ ಹಣವನ್ನು ವಾಪಸು ತೆಗೆದುಕೊಳ್ಳಬೇಕೆಂದು ಬರೆಯಲ್ಪಟ್ಟಿದ್ದ ಕಾಗದಗಳನ್ನು ಹಂಚಿದ ಅಪರಾಧಕ್ಕಾಗಿ ಇವರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಬೊಂಬಾಯಿ ಸರಕಾರದವರು ಚೌಪಾಟಿಯಲ್ಲಿ ದಿವಂಗತ ಲೋಕಮಾನ್ಯ ಬಾಲಗಂಗಾಧರತಿಲಕರವರ

ಪ್ರತಿಮೆಯನ್ನು ಸ್ಥಾಪಿಸಿ ಅದರಡಿಯಲ್ಲಿ ಅವರ ಮುಖ್ಯತತ್ವವಾದ "ಸ್ವರಾಜ್ಯವು ನನ್ನ ಜನ್ಮಸಿದ್ಧವಾದ ಹಕ್ಕು. ನಾನು ಅದನ್ನು ಅವಶ್ಯಕವಾಗಿ ಹೊಂದಲೇಬೇಕು." ಎಂಬ ಅವರ ವಾಕ್ಯವನ್ನು ಕೆತ್ತಿಸಲು ಅನುಮತಿಯನ್ನಿತ್ತಿರುವರೆಂದು ತಿಳಿದುಬರುತ್ತದೆ.

ಶ್ರೀಯುತ ಪಂಡಿತ ಮೋತೀಲಾಲ ನೆಹರೂರವರು ತಮ್ಮ ಚಿಕ್ಕ ಮಗಳಾದ ಶ್ರೀಮತಿ ಕೃಷ್ಣಾಕುಮಾರಿಯವರೊಂದಿಗೆ 18ನೆಯ ತಾರೀಖು ಪ್ರಾತಃಕಾಲ ಕಲ್ಕತ್ತೆಗೆ ಬಂದಿಳಿದರು. ಕಲ್ಕತ್ತೆಯ ಮೇಯರ್ ಸುಭಾಷ್ ಚಂದ್ರಬೋಸ್ ಮೊದಲಾದ ಅನೇಕ ದೇಶಭಕ್ತರು ಸ್ಟೇಷನ್ನಿಗೆ ಬಂದು ಇವರನ್ನು ಸ್ವಾಗತಿಸಿ "ಸಮಾಜಾಯಮ್ಯಾನ್ಷನ್" ಎಂಬ ವಿಶಾಲವೂ ಮನೋಹರವೂ ಆದ ಭವನದಲ್ಲಿ ಇರಿಸಿ ಯೋಗ್ಯ ಸತ್ಕಾರಗಳನ್ನು ಮಾಡುತ್ತಿರುವರು.

ಕಸೂರ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಮ|| ತೇಜಸಿಂಗರನ್ನು ಅಲ್ಲಿಯ ಮ್ಯಾಜಿಸ್ಟ್ರೇಟರು ಪೋಲೀಸರ ಸಾಕ್ಷಿಯ ಮೇಲೆ ನಾಲ್ಕು ವರ್ಷಗಳ ಕಠಿಣಶಿಕ್ಷೆಗೆ ಗುರಿಮಾಡಿದ್ದರು. ಆದರೆ ಅಡಿಷನಲ್ ಸೆಷನ್‌ಜಡ್ಜರು ಪೋಲೀಸರು ಅವರ ಮೇಲೆ ಮಾಡಿದ ಮೊಕದ್ದಮೆಯು ಶುದ್ಧ ಅನ್ಯಾಯವೆಂದೂ ಅವರು ಕಾಂಗ್ರೆಸ್‌ಕಾರ್ಯದಲ್ಲಿ ಮುಖ್ಯಭಾಗವನ್ನು ವಹಿಸುತ್ತಿದ್ದುದರಿಂದ ಇಂಥ ಮೊಕದ್ದಮೆಯನ್ನು ಕಲ್ಪನೆ ಮಾಡಿದ್ದಾರೆಂದೂ ಕೆಳಕೋರ್ಟಿನ ತೀರ್ಮಾನವನ್ನು ರದ್ದುಮಾಡಿದರು.

ನಾಗಪುರದ ದಿವಂಗತ ರಾವ್‌ಬಹದ್ದೂರ್ ಡಿ. ಲಕ್ಷ್ಮೀನಾರಾಯಣನ್‌ರವರು ಒಂದು ಲಕ್ಷ ರೂಪಾಯಿಗಳನ್ನು ಭರತಖಂಡದ ಸೇವಾಸಂಘ (Servants of India Society) ಕ್ಕೂ 114000 ರೂಪಾಯಿಗಳನ್ನು ತಮ್ಮ ಬಂಧುಗಳಿಗೂ, 33 ಲಕ್ಷ ರೂಪಾಯಿಗಳನ್ನು ನಾಗಪುರದ ವಿಶ್ವವಿದ್ಯಾನಿಲಯದಲ್ಲಿ ರಸಾಯನಶಾಸ್ತ್ರ ಮತ್ತು ಔದ್ಯೋಗಿಕ ಸಂಬಂಧವಾದ ವಿದ್ಯೆಯನ್ನು ಮಧ್ಯಪ್ರಾಂತ್ಯದ ಮತ್ತು ಬಿರಾರಿನ ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೂ ಉಪಯೋಗಿಸಬೇಕೆಂದು ಮರಣಶಾಸನವನ್ನು ಬರೆದಿಟ್ಟಿರುವರು. ಸ್ತುತ್ಯ!

ಲಾಹೋರಿನಲ್ಲಿ ಕೆಲವು ಜನರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟನ್ನು ಸುಡಲು ಪ್ರಯತ್ನಿಸಿದರೆಂದೂ, ಇದೇ ತಿಂಗಳು 16 ನೆಯ ತಾರೀಖಿನ ದಿವಸ ರಾತ್ರಿ ಸುಮಾರು ಹತ್ತು ಘಂಟೆಯ ಸಮಯದಲ್ಲಿ ಕೋರ್ಟಿನ ಕಾವಲುಗಾರನು ರಿಕಾರ್ಡುರೂಮಿನ ಹಿಂಭಾಗದ ಬಾಗಿಲು ಹೊಗೆಹಾಯುತ್ತಿದ್ದುದನ್ನು ಕಂಡು ಮುಖ್ಯಶಿಪಾಯಿಯನ್ನು ಕರೆತಂದು ಅವನ ಸಹಾಯದಿಂದ ಬೆಂಕಿಯನ್ನು ಆರಿಸಿದನೆಂದೂ, ಹಿಂಬಾಗಿಲ ಹತ್ತಿರ ಒಂದು ಪೆಟ್ರೋಲ್ ಡಬ್ಬಿ ಇತ್ತೆಂದೂ, ಒಂದು ಬಾಗಿಲು ಮಾತ್ರವೇ ಸ್ವಲ್ಪಮಟ್ಟಿಗೆ ಸುಟ್ಟಿದೆ ಎಂದೂ ತಿಳಿದುಬರುತ್ತದೆ.

ಬಂತಾಸಿಂಗ್ ಎಂಬೊಬ್ಬ ಫೈಲ್ವಾನನು ಪಂಜಾಬದೇಶದಿಂದ ಕಲ್ಕತ್ತೆಗೆ ಬಂದಿರುವನು. ಇವನು 6 ಅಡಿ 8 ಅಂಗುಲ ಎತ್ತರವಿರುವನಂತೆ! ಇವನಿಗೆ ಪ್ರತಿದಿವಸವೂ ಆಹಾರಕ್ಕಾಗಿ ಹತ್ತು ರೂಪಾಯಿಗಳು ಅವಶ್ಯಕವಾಗಿ ಬೇಕಿದ್ದು, ಅಷ್ಟು ಹಣವನ್ನು ಸಂಪಾದಿಸಲು ಇವನಿಗೆ ಅಸಾಧ್ಯವಾಗಿರುವುದರಿಂದ ದಿನೇ ದಿನೇ ಬಲಹೀನನಾಗುತ್ತಿರುವನಂತೆ! ಇವನಿಗೆ ದಿವಸ ಒಂದಕ್ಕೆ 5 ಸೇರು ಹಾಲು, 1 ಸೇರು ತುಪ್ಪ, 1½ ಸೇರು ಮಾಂಸ 1 ಸೇರು ಹಿಟ್ಟು, ½ ಸೇರು ಬಾದಾಮಿ, ½ ಸೇರು ಅಕ್ರೋಡ ಬೇಕಂತೆ! ಇವನನ್ನು ಇಪ್ಪತ್ತನೆಯ ಶತಮಾನದ ಬಕಾಸುರನೆಂದು ಕರೆಯಬಹುದಲ್ಲವೆ?

ಶ್ರೀಯುತ ವಲ್ಲಭಭಾಯಿ ಪಟೇಲರವರೂ, ಶ್ರೀಯುತ ಮಹಾದೇವದೇಸಾಯಿಯವರೂ ಇದೇ ತಿಂಗಳು 18 ನೇ ತಾರೀಖಿನ ದಿವಸ ಪ್ರಾತಃಕಾಲ ಅಹಮ್ಮದಾಬಾದಿಗೆ ಬಂದಿಳಿದರು. ಈ ಉಭಯರನ್ನು ಸುಖಾಗಮನಪೂರ್ವಕ ಸ್ವಾಗತಿಸುವುದಕ್ಕೋಸ್ಕರ ಅಸಂಖ್ಯ ಜನರು ಸ್ಟೇಷನ್ನಿನ ಬಳಿ ನೆರೆದಿದ್ದರು. ಉತ್ಸವಪೂರ್ವಕವಾಗಿ ಪುರಪ್ರವೇಶಮಾಡಿಸುವುದು ತಮಗಿಷ್ಟವಿಲ್ಲವೆಂದು ಶ್ರೀಯುತ ವಲ್ಲಭಭಾಯಿ ಪಟೇಲರು ಹೇಳಿದ್ದರಿಂದ ಪುರಜನರು ಆ ಪ್ರಯತ್ನವನ್ನು ಬಿಟ್ಟುಬಿಟ್ಟರು. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ಉಭಯರೂ ಅಹಮ್ಮದಾಬಾದ್ ಜಿಲ್ಲೆಯಲ್ಲಿ ಇನ್ನು ಎರಡು ತಿಂಗಳುಗಳವರೆಗೆ ಭಾಷಣಮಾಡಕೂಡದೆಂದು ನೋಟೀಸು ಜಾರಿ ಮಾಡಿರುವರು.

ಲಾರ್ಡ್‌ಪೀಲ್‌ರವರ ಭಾಷಣವು ಭಾರತೀಯಮೆಂಬರರನ್ನು ಬಹು ಕ್ರೋಧಾನ್ವಿತರಾಗುವಂತೆ ಮಾಡಿದೆಯೆಂದೂ, ಭರತಖಂಡದ ಮುಂದಿನ ಸರ್ಕಾರದ ಸ್ಥಿತಿಯನ್ನು ರಚನೆಮಾಡಲು ನಿಯಮಿಸಲ್ಪಟ್ಟಿರುವ ಫೆಡರಲ್ ಕಮಿಟಿಯು ಮುಂದಿಡುವ ಪಂಕ್ತಿಗಳು ಇನ್ನೂ ಆಲೋಚನೆಯಲ್ಲಿವೆಯೆಂದೂ, ಭಾರತೀಯಮೆಂಬರರು ಡೊಮಿನಿಯನ್‌ಸ್ಟೇಟಸ್ ಮತ್ತು ಕೇಂದ್ರದಲ್ಲಿ ಉತ್ತರವಾದಿತ್ವ ಪ್ರಶ್ನೆಗಳ ಕಮಿಟಿಯು ಮುಂದಿಡಲ್ಪಡಬೇಕೆಂದು ತರ್ಕಿಸುವರೆಂದೂ, ಈ ಪ್ರಯತ್ನವು ಸಾಗದಿದ್ದರೆ ಮಿ|| ಜಯಕರ್, ಮಿ|| ಜಿನ್ನಾ, ಮಿ|| ಜಾಧವ, ಮಿ|| ಎಂ. ಪಿ. ಸಪ್ರೋ ಮೊದಲಾದ ಮೆಂಬರರು ಸಭೆಯಿಂದ ಹೊರಗೆ ಬರುವ ಉದ್ದೇಶವುಳ್ಳವರಾಗಿದ್ದಾರೆಂದೂ ಕ್ರಾನಿಕಲ್ ಪತ್ರಿಕೆಗೆ 19ನೆಯ ತಾರೀಖಿನದಿವಸ ತಂತಿಯು ಬಂದಿದೆಯಂತೆ!

21 ನೆಯ ತಾರೀಖಿನ ದಿವಸ ನಡೆದ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಮಿ|| ಮಹಮದ್‌ಖಾನರವರು ಪರರಾಷ್ಟ್ರಗಳ ಮಹತ್ವಾಕಾಂಕ್ಷೆಯಿಂದ ದೇಶವನ್ನು ಕಾಪಾಡುವುದು ಅತ್ಯವಶ್ಯವಾದುದೆಂದೂ, ಆಂಗ್ಲೇಯ ಹಡಗಗಳನ್ನು ಒಂದು ದಿವಸ ತೆಗೆದುಹಾಕಿದರೆ ಜನಭರಿತವಾದ ಬೊಂಬಾಯಿ, ಮದರಾಸು ಪಟ್ಟಣಗಳಿಗೆ ಪರರಾಷ್ಟ್ರಗಳಿಂದ ತೊಂದರೆಯಾಗಬಹುದೆಂದೂ, ದೇಶವು ಸ್ವಾತಂತ್ರ್ಯದಿಂದಿರುವುದಾದರೆ ಸೈನ್ಯದ ಸಮಸ್ಯೆಯನ್ನು ನಿಸ್ಪೃಹತೆಯಿಂದಲೂ, ಧೈರ್ಯದಿಂದಲೂ ನಿರ್ವಹಿಸಬೇಕೆಂದೂ, ಹಿಂದೂರಾಷ್ಟ್ರ ಸೈನ್ಯವು ವೈಸರಾಯ್, ಕಮ್ಯಾಂಡರ್ ಇನ್ ಚೀಫ್ ಮುಂತಾದ ಸೈನ್ಯಕಲೆಯನ್ನು ಬಲ್ಲ ಬುದ್ಧಿವಂತರನ್ನೊಳಕೊಂಡ ಒಂದು ಕಮಿಟಿಯ ಅಧಿಪತ್ಯಕ್ಕೆ ಒಳಪಟ್ಟಿರಬೇಕೆಂದೂ, ಸೈನ್ಯಕ್ಕೆ ಯುದ್ಧವೇ ವೃತ್ತಿಯಾಗುಳ್ಳ ಅನೇಕ ಶೂರ ಸೈನಿಕರನ್ನು ಸೇರಿಸಬೇಕೆಂದೂ ಹೇಳಿದರು.

ಭರತಖಂಡದ ಪ್ರಸಿದ್ಧ ವಿಜ್ಞಾನಶಾಸ್ತ್ರ ಪಾರಂಗತರಾದ ಪ್ರೊಫೆಸರ್ ಸಿ. ವಿ. ರಾಮನ್‌ರವರಿಗೆ "ನೋಬೆಲ್ ಪ್ರೈಜ್" ಎಂಬ ಸರ್ವೋತ್ಕೃಷ್ಟವಾದ ಬಹುಮಾನವು ದೊರೆತಿರುವುದಕ್ಕಾಗಿ ಬೆಂಗಳೂರು ಸೆಂಟ್ರಲ್‌ಕಾಲೇಜು ಪ್ರಿನ್ಸಿಪಾಲರಾದ ಮಿ|| ಸಿ. ವೆಂಕಟೇಶಾಚಾರ್ಯರವರು ಇಂಟರ್‌ಮಿಡಿಯಟ್ ಕಾಲೇಜಿನಲ್ಲಿ ಸಭೆಸೇರಿಸಿ ಅವರಿಗೆ ಬಹುಮಾನಪತ್ರವನ್ನೊಪ್ಪಿಸಿದರು. ಈ ಸಭೆಗೆ ಆಕ್ಟಿಂಗ್ ದಿವಾನ್ ಸಾಹೇಬರವರೂ, ಕೌನ್ಸಿಲ್‌ಮೆಂಬರರೂ, ಇನ್ನೂ ಅನೇಕ ಪ್ರಸಿದ್ಧ ವಿಜ್ಞಾನಶಾಸ್ತ್ರಜ್ಞರೂ, ಆಗಮಿಸಿದ್ದರು. ಪ್ರೊ|| ಸಿ. ವಿ. ರಾಮನ್‌ರವರು ತಮಗೆ ಲಭ್ಯವಾಗಿರುವ ಬಹುಮಾನವನ್ನು ಪಡೆಯಲು ಸ್ಟಾಕ್‌ಹೋಂಗೆ ತೆರಳುವವರಾಗಿದ್ದಾರೆ. ಈ ಮಹೋದಯರ ಜಲಪ್ರಯಾಣವು ಸುಖಕರವಾಗಲೆಂದೂ, ಇವರ ಮಹತ್ಕಾರ್ಯಗಳಿಗೆ ವಿಜಯವಾಗಲೆಂದೂ, ಇವರಿಂದ ಭರತಮಾತೆಯ ಗೌರವವು ಇನ್ನೂ ಹೆಚ್ಚಲೆಂದೂ ಹಾರೈಸುತ್ತೇವೆ.

ಇಂಡಿಯಾದ ಮುಂದಿನ ರಾಜಕೀಯ ರಚನೆಯ ವಿಷಯವನ್ನು ಸಮಗ್ರವಾಗಿ ಸೂಚಿಸುವುದಕ್ಕಾಗಿ ಫೆಡರಲ್ ಕಮಿಟಿಯೆಂಬ ಒಂದು ಕಮಿಟಿಯು ನಿರ್ಮಿತವಾಗಿದೆ. ಅದರಲ್ಲಿ ಸಪ್ರೂ, ಸರ್‌ಸೆಟಲ್‌ವಾಡ್, ಸರ್ ರಾಮಸ್ವಾಮಿಅಯ್ಯರ್, ಮ|| ರಾಮಚಂದ್ರರಾವ್, ಮಿ|| ಮಹಮ್ಮದಾಲಿ, ಮಿ|| ಜಿನ್ನಾ, ಮಿ|| ಷಹದ್ ಅಹ್ಮದ್‌ಖಾನ್, ಸರ್‌ಷಫೀ, ಮಿ|| ಫಜಲ್‌ಹಕ್, ಶ್ರೀ ಜಯಕರ್, ಡಾ|| ಮುಂಜೇ, ಸರ್ದಾರ್ ಉಜ್ವಲ್‌ಸಿಂಗ್, ಮಿ|| ಗಾರೀಜೋನ್ಸ್, ಸರ್ ಪಿರೋಜ್ ಡಾ|| ಅಂಬೇಡಕರ್ ಮತ್ತು ಸರ್ ಭೂಪೇಂದ್ರನಾಥಮಿತ್ರ ಇವರುಗಳು ಇರುವರು. ಇವರೆಲ್ಲರೂ ಇಂಡಿಯಾದ ಮಧ್ಯ ಸರ್ಕಾರವು ಪ್ರಜೆಗಳಿಗೆ ಉತ್ತರವಾದಿಯಾಗಿರಬೇಕೆಂದು ಕೋರುವರು. ಬ್ರಿಟಿಷ್ ಪ್ರತಿನಿಧಿಗಳ ಪೈಕಿ ಮಿ|| ಬೆನ್, ಲಾರ್ಡ್ ಸ್ಯಾಂಕೀ, ಲಾರ್ಡ್ ಪೀಲ್, ಲಾರ್ಡ್ ಚೆಟ್ಲಿಂಗ್, ಲಾರ್ಡ್ ರೀಡಿಂಗ್, ಮಾರ್ಕ್ವೆಸ್ ಆಫ್ ಲೋಥಿಯನ್‌ರವರೂ ಇರುವರು. ಮುಖ್ಯಮಂತ್ರಿಗಳಾದ ಮಿ|| ಮ್ಯಾಕ್ಡೊನಾಲ್ಡರವರೇ ಈ ಕಮಿಟಿಗೆ ಅಧ್ಯಕ್ಷರಾಗುವರು. ಈ ಕಮಿಟಿಯ ತೀರ್ಮಾನವು ಬಹಳಮಟ್ಟಿಗೆ ಇಂಡಿಯಾದ ರಾಷ್ಟ್ರೀಯ ಭಾವನೆಗೆ ಅನುಗುಣವಾಗುವುದೆಂದು ಬಹುಜನರು ನಿರೀಕ್ಷಿಸುತ್ತಾರೆ.

ದುಂಡುಮೇಜಿನ ಪರಿಷತ್ತಿಗೆ ಹೋಗಿರುವ ಮಿ|| ಶ್ರೀನಿವಾಸಶಾಸ್ತ್ರಿ, ಮಿ|| ಸಪ್ರು, ಮಿ|| ಜಯಕರ್, ಮಿ|| ಮುಂಜೆ ಇವರಿಗೆ ಮಿ|| ಎನ್. ಸಿ. ಕೇಳಕರ್, ಮಿ|| ಲಾಲಜಿನಾರಾಯಣಜಿಯವರು ಕಳುಹಿಸಿರುವ ತಂತಿ ವರ್ತಮಾನ.—

ಚಕ್ರಗೋಷ್ಠಿಯ ಮುಂದೆ ಭರತಖಂಡದ ಮುಂದಿನ ಪ್ರಭುತ್ವವು ಸಾಮ್ರಾಜ್ಯಾಂತರ್ಗತಸ್ವರಾಜ್ಯವಾಗಿರಬೇಕೆಂಬಂಶವನ್ನು ಬ್ರಿಟಿಷ್ ಮಂತ್ರಿಗಳೂ, ರಾಜನೀತಿಕೋವಿದರೂ ಸ್ವಲ್ಪವೂ ಸ್ಪಷ್ಟಪಡಿಸದಿರುವುದು ವ್ಯಕ್ತವಾಗುತ್ತದೆ. ಚಕ್ರವರ್ತಿಗಳ ಭಾಷಣವು ನಿರಾಶಾಜನಕವಾಗಿರುವುದನ್ನು ಕೇಳಿ ವಿಸ್ಮಯಪಡಬೇಕಾಗಿದೆ. ಇಂಡಿಯಾ ಸರ್ಕಾರದವರು ರವಾನಿಸಿರುವ ಸಲಹೆಗಳು ಇಂಗ್ಲೆಂಡಿನಲ್ಲಿ ಕ್ರೇಷ ಮೇಧಾವಿಗಳೆಂಬುವವರ ಮನೋವೃತ್ತಿಯು ಎಷ್ಟರಮಟ್ಟಿಗೆ ವಕ್ರವಾಗಿದೆ ಎಂಬುದನ್ನು ಪ್ರಕಟಪಡಿಸುತ್ತವೆ. ಚಕ್ರಗೋಷ್ಠಿಯಲ್ಲಿ ನಡೆಯುವ ಚರ್ಚೆಗೆ ಇದೇ ಅಸ್ತಿಭಾರವಾಗುವುದಾದರೆ ಮುಂದಿನ ಕಾರ್ಯಕ್ರಮಗಳು ನಿಷ್ಪ್ರಯೋಜನವಾದುವುಗಳೆಂಬುದು ದೃಢಪಡುತ್ತದೆ. ಆ ಪರಿಷತ್ತಿನಲ್ಲಿ ಯಾರು ಬೇಕಾದರೂ ತಮಗಿಷ್ಟವಾದ ಸೂಚನೆಗಳನ್ನು ತರುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿದೆ ಎಂದು ಬ್ರಿಟಿಷ್ ಸರ್ಕಾರದವರು ಭರವಸೆಕೊಟ್ಟದ್ದರಿಂದ ನೀವು ನಿಮ್ಮ [illegible]ಗಳನ್ನು ನಮ್ಮ ಸಂಗಡ ಹೇಳಿ ಸಭೆಗೆ ಹೋದಿರಿ. ಸಾ[illegible]ಂತರ್ಗತ ಸ್ವರಾಜ್ಯದ ಠರಾವನ್ನು ತಂದು ಧೈರ್ಯದಿಂದ ಸಮರ್ಥನಮಾಡಿರಿ. ಇದು ಸಾಧ್ಯವಾಗದ ಪಕ್ಷದಲ್ಲಿ ಆಂಗ್ಲೇಯರು ಹಿಂದೂದೇಶದಲ್ಲಿರುವ ಅನೈಕಮತ್ಯ ಮುಂತಾದ ಅನಾವಶ್ಯಕವಾದ ಪ್ರಶ್ನೆಗಳನ್ನು ತಂದೊಡ್ಡುವ ಸಭೆಯಲ್ಲಿ ಭಾಗಿಗಳಾಗುವುದಕ್ಕಿಂತಲೂ ಆ ಸಭೆಗೆ ತಿಲಾಂಜಲಿಯನ್ನು ಬಿಟ್ಟು ಹಿಂದಿರುಗುವುದು ಶ್ರೇಯಸ್ಕರವೂ ಗೌರವವೂ ಆಗಿದೆ. ದಿನೇ ದಿನೇ ಹೆಚ್ಚುತ್ತಿರುವ ದಬ್ಬಾಳಿಕೆಯಿಂದ ಪರಿತಾಪಪಡುತ್ತಿರುವ ದೇಶವು, ನೀವು ಜಾಗ್ರತೆ ಪಡಗನ್ನು ಹತ್ತಿ ಹಿಂದಿರುಗಿದರೆ ನಿಮ್ಮನ್ನು ಮಮತೆಯಿಂದ ಸ್ವಾಗತಿಸುವುದು.

ಮಿ|| ಜಯಕರರವರ ಉತ್ತರ.

ನಿಮ್ಮ ಭಯವು ಅಕಾಲಿಕವಾದುದಾಗಿದೆ. ಭರತಖಂಡದ ಮುಂದಿನ ರಾಜ್ಯಾಂಗ ವ್ಯವಸ್ಥೆಯನ್ನು ಮಾಡುವ ಒಂದು ಕಮಿಟಿಯು ನಿರ್ಮಾಣವಾಗಿದೆ. ಆ ಕಾಲದಲ್ಲಿ ನಮ್ಮ ಆಕಾಂಕ್ಷೆಗಳನ್ನು ಮುಂದಿಟ್ಟು ಸಮರ್ಥನ ಮಾಡುತ್ತೇವೆ. ಆಂಗ್ಲೇಯರು ವಿರೋಧಿಸುವುದು ಸ್ಪಷ್ಟವಾಗಿ ಕಂಡುಬಂದರೆ ನಾವು ಹಿಂದಿರುಗುವುದು ನಿಜವೆಂದು ನೀವು ನಂಬಬಹುದು.

ಸ್ವೀಕಾರ.

ಧಾರವಾಡ ಡಿ|| ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಮೈಲಾರಪ್ಪ ಚಿಕ್ಕಣ್ಣನವರ ಇವರ ಪುತ್ರಿ ಚಿ|| ಸೌ|| ಶಿವವ್ವನನ್ನು ಮುಂಡರಗಿ ಗ್ರಾಮನಿವಾಸಿಗಳಾದ ಮ|| ರಾ|| ಇಟಗಿ ಶಿವಪ್ಪನವರ ಪುತ್ರ, ಚಿ|| ಬಸಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವರನಕಡೆಯಿಂದ ಸಮರ್ಪಿಸಿದ 2 ರೂ. ಕನ್ಯೆಯ ಕಡೆಯಿಂದ ಸಮರ್ಪಿಸಿದ 1 ರೂ. ಒಟ್ಟು 3 ರೂಪಾಯಿಗಳು ಮ|| ರಾ|| ಬೆಟಗೇರಿ ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ವಿಜಾಪೂರ ಡಿ|| ಗುಳೇದಗುಡ್ಡ ಗ್ರಾಮನಿವಾಸಿಗಳಾದ ಮ|| ರಾ|| ತಿಪ್ಪಣ್ಣಪ್ಪ ಸಾರಂಗಿ ಇವರು ತಮ್ಮ ನೂತನ ಗೃಹದ ಪ್ರವೇಶೋತ್ಸವಸಮಯದಲ್ಲಿ ಶ್ರೀ|| ಷ|| ಬ್ರ|| ಮುಗಳೂರು ಅರಳೆಲೆ ಕಟ್ಟಿಮನೆ ಬೃಹನ್ಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ.ಗಳು ವೇ|| ಶಿವಸಂಗಪ್ಪಯ್ಯನವರು ಅರಳೆಲೆ ಬೃಹನ್ಮಠ ಇವರ ದ್ವಾರಾ ತಲ್ಪಿರುತ್ತವೆ.

ಲಕ್ಷ್ಮೇಶ್ವರ ತಾಲೂಕು ರಾಮಗೇರಿಯಲ್ಲಿರುವ ಮ|| ರಾ|| ಕುಮಸಿ ರಾಚಪ್ಪನವರ ಮಾತೃ ಶ್ರೀಮತಿ ನೀಲವ್ವನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಲಕ್ಷ್ಮೇಶ್ವರ ಹಿರಿಯಮಠದ ಕಾಶಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

20ನೆಯ ತಾರೀಖಿನ ದಿವಸ ನಡೆದ ಸಭೆಯಲ್ಲಿ ಈ ಕೆಳಗೆ ಕಾಣಿಸಿದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ—

ಭೋಪಾಲ್ ನವಾಬರು.

ಮುಂದಿನ ಫೆಡರಲ್ ರಚನೆಯಲ್ಲಿ ದೇಶೀಯ ಸಂಸ್ಥಾನಗಳಿಗೆ ಸಂಸಮಾನವಾದ ಸ್ಥಾನವು ದೊರೆಯಬೇಕು. ಹಿಂದೂಮುಹಮ್ಮದೀಯ ವ್ಯತ್ಯಾಸವು ರಾಜಕೀಯವಾದುದೇ ಹೊರತು ಬೇರೆಯಲ್ಲ. ನಿಜವಾದ ಅಧಿಕಾರವು ಇಂಡಿಯಾದೇಶಕ್ಕೆ ದೊರೆತರೆ ಈ ವ್ಯತ್ಯಾಸಗಳು ತಾವೇ ಮಾಯವಾಗುವವು.

ಎನ್. ಎಂ. ಜೋಷಿ.

ಮುಂದಿನ ರಾಜ್ಯರಚನೆಯಲ್ಲಿ ಎಲ್ಲರಿಗೂ ಓಟಿನ ಅಧಿಕಾರವಿರಬೇಕು. ಕೆಲಸಗಾರರಿಗೆ ಸಂಬಂಧಪಟ್ಟ ಕಾನೂನು ಮಧ್ಯವರ್ತಿಸರಕಾರದಿಂದ ಆಗಬೇಕು.

ಬೇಗಮ್ ಷಹಾನವಾಬ್.

ಭಾರತೀಯ ಸ್ತ್ರೀಯರಿಗೆ ಸರಿಯಾದ ಸ್ಥಾನವು ದೊರೆಯಬೇಕು.

ಸರ್ ಮಿರ್ಜಾ ಎಂ. ಇಸ್ಮಾಯಿಲ್.

ಸಂಪೂರ್ಣ ಸ್ವಾತಂತ್ರ್ಯದ ಕೂಗನ್ನು ನಾನು ಗಣಿಸುವುದಿಲ್ಲ. ಇಂಡಿಯಾದ ಭೇದಗಳೇ ಐಕ್ಯಕ್ಕೆ ಸಾಧಕವಾದವುಗಳು. ಪ್ರಾಂತ್ಯಗಳಿಗೆ ಪೂರ್ಣಸ್ವಾತಂತ್ರ್ಯವು ಮಧ್ಯ ಸರಕಾರವು ಪ್ರಜೆಗಳಿಗೆ ಜವಾಬ್ದಾರಿಯಾಗಿರುವುದು, ಇಬ್ಬರಿಗೂ ಸಮಾನವಾದ ವಿಷಯಗಳನ್ನು ದೇಶೀಯ ಸಂಸ್ಥಾನಗಳೂ, ಬ್ರಿಟಿಷ್ ಇಂಡಿಯಾದೇಶವೂ ಕಲೆತು ಸಮಾಲೋಚಿಸಬೇಕು.

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್.

ಇಂಡಿಯಾದ ಸುಂಕದ ಅಧಿಕಾರವು ಇಂಡಿಯಾಕ್ಕೆ ಇರಬೇಕು.

ಲಾರ್ಡ್ ರೀಡಿಂಗ್.

ಇತರ ಡೋಮಿನಿಯನ್ನುಗಳಿಗಿರುವ ಸ್ವಾತಂತ್ರ್ಯದ ಅಧಿಕಾರವೇ ಇಂಡಿಯಾಕ್ಕೂ ಈಗಲೇ ಕೊಡಬೇಕೆಂದು ಕೇಳುವುದು ಕೆಲಸವಿಲ್ಲದಮಾತು. ಸೈನ್ಯ, ಪರದೇಶಗಳೊಡನೆ ನಡೆಯಿಸುವ ಕಾರಭಾರಗಳೇ ಮೊದಲಾದ ವಿಷಯಗಳನ್ನು ಆಲೋಚಿಸಬೇಕು. ಇಂಡಿಯಾದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಒಗ್ಗಟ್ಟಿರಬೇಕು.

ನವಾನಗರ ಮಹಾರಾಜರು.

ದೇಶೀಯ ಸಂಸ್ಥಾನಗಳಿಗೆ, ಒಳ ಆಡಳಿತ ಸ್ವಾತಂತ್ರ್ಯವು ಬೇಕು.

ಸರ್ ಪಿ. ಸಿ. ಮಿತ್ರ.

ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಪದ್ಧತಿಯನ್ನು ಏರ್ಪಡಿಸಬೇಕು.

ಡಾ|| ಅಂಬೇಡಕರ್.

ನಿಮ್ನ ವರ್ಗದವರಿಗೂ ಸ್ವರಾಜ್ಯವು ಬೇಕು.

ಕೆ. ಟಿ. ಪಾಲ್.

ಮಧ್ಯ ಸರ್ಕಾರವು ಬಲವಾಗಿರಬೇಕು.

ಎಂ. ಎ. ಜಿನ್ನಾ

ದೇಶೀಯರಾಜರು ನಮ್ಮ ಧನ್ಯವಾದಕ್ಕೆ ಅರ್ಹರು. ಅವರೂ ಸಹ ನಮ್ಮ ಬೇಡಿಕೆಯನ್ನು ಸಮರ್ಥಿಸಿದ್ದಾರೆ. ಮಧ್ಯ ಸರ್ಕಾರವು ಪ್ರಜೆಗಳಿಗೆ ಜವಾಬ್ದಾರಿಯಾಗಿರಬೇಕು.

ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ.

ಕಾಂಗ್ರೆಸ್ಸಿನವರು ದೇಶಭಕ್ತರು. ಅವರೇನೂ ಕೇಡಿಗಳಲ್ಲ; ಬ್ರಿಟಿಷರ ಶತ್ರುಗಳಲ್ಲ. ಅವರೆಲ್ಲಾ ಮೇಧಾವಿಗಳೂ ಸುಸಂಸ್ಕೃತರೂ ಆಗಿದ್ದಾರೆ. ಇಂಡಿಯಾದೇಶದಲ್ಲಿ ರಾಜಕೀಯ ಸ್ವಾತಂತ್ರ್ಯವು ಬಂದರೆ ಅವರೆಲ್ಲಾ ಮಿತ್ರರಾಗುವರು. ನಾನು ಕಾನೂನನ್ನು ಮುರಿಯುವವನಲ್ಲ! ಆದರೂ ಅನೇಕಾವರ್ತಿ ಸರಕಾರದವರು ನನ್ನನ್ನು ಅಪನಂಬಿಕೆಯಿಂದ ಕಂಡಿದ್ದಾರೆ. "ನಮ್ಮ ದೇಶರು! ಕಾಂಗ್ರೆಸ್ಸಿನವರದು ತಪ್ಪು" ಎಂದು ಹೇಳುವುದು ಸರಿಯಲ್ಲ! ಶಾಂತಿಮಾರ್ಗವನ್ನು ಅನುಸರಿಸಿದರೆ ಶತ್ರುಗಳೂ ಸಹ ಮಿತ್ರರಾಗುವರು.

ಸರ್ದಾರ್ ಷಹಿಬ್ಜಾದಾ ಅಹಮದ್.

ಕ್ರಮವಾಗಿ ಇಂಡಿಯಾಕ್ಕೆ ಡೊಮಿನಿಯನ್ ಸ್ಟೇಟಸ್ಸನ್ನು ಕೊಡಬೇಕು.

ಎಚ್. ಪಿ. ಮೋದಿ.

ಇಂಡಿಯಾಕ್ಕೆ ಆರ್ಥಿಕ ಸ್ವಾತಂತ್ರ್ಯವೂ ಬೇಕು.

ಫಜುಲ್ ಹಕ್.

ಮಹಮದೀಯರ ಹಕ್ಕು ಬಾಧ್ಯತೆಗಳನ್ನು ದುರ್ಲಕ್ಷ್ಯ ಸಕೂಡದು.

ಸರ್ ಫೆರೋಜ್ ಸೆತ್ನಾ.

ಡೋಮಿನಿಯನ್ ಸ್ಟೇಟಸ್ಸಿಗಿಂತ ಸ್ವಲ್ಪವೂ ಕಡಿಮೆಯಾಗಕೂಡದು.

ಸರ್ ಎ. ಹೈದರಿ.

ಶಾಶ್ವತವಾದ ರಾಜ್ಯಪದ್ಧತಿಯು ಏರ್ಪಡಿಸಲ್ಪಡಬೇಕು.

ಜಿಹ್ನಾರವರ ೧೪ ಷರತ್ತುಗಳು.

೧. ಮುಂದಿನ ಸರ್ಕಾರವು ಫೆಡರಲ್ ರಚನೆಯಿಂದ ಕೂಡಿರಬೇಕು. ಪ್ರಾಂತ್ಯಗಳಲ್ಲಿ ರೆಸಿಡ್ಯೂಯರಿ ಅಧಿಕಾರವಿರಬೇಕು. ೨. ಎಲ್ಲಾ ಪ್ರಾಂತ್ಯಗಳಲ್ಲಿಯೂ ಒಂದೇ ಸಮನಾದ ಅಧಿಕಾರವಿರಬೇಕು. ೩. ಪ್ರತಿಯೊಂದು ಸಣ್ಣ ಪಂಗಡದವರ ಪ್ರಾತಿನಿಧ್ಯವೂ ಬಂದೇ ಒರುವಂತೆ ನ್ಯಾಯವಿಧಾಯಕ ಸಭೆಗಳಿಗೆ ಮೆಂಬರುಗಳ ಚುನಾವಣೆ ಇರಬೇಕು. ೪. ಮಧ್ಯ ನ್ಯಾಯವಿಧಾಯಕ ಸಭೆಯಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಸ್ಥಾನಗಳಿರಕೂಡದು. ೫. ಈಗಿರುವಂತೆ ಕೋಮುವಾರು ಪ್ರಾತಿನಿಧ್ಯಗಳೇ ಮುಂದೂ ಇರಬೇಕು. ಆದರೆ ಯಾವ ಪಂಗಡಕ್ಕೆ ಕೋಮುವಾರು ಪ್ರಾತಿನಿಧ್ಯ ಬೇಜಾರಾದಾಗ ಅದನ್ನು ಬಿಟ್ಟುಬಿಡುವಂತೆ ಅನುಕೂಲವು ಕಲ್ಪಿಸಲ್ಪಡಬೇಕು. ೬. ಪ್ರಾಂತಿಕ ವಿಭಜನೆಯನ್ನು ಏನಾದರೂ ಮಾಡಲು ಅವಶ್ಯಕವಾದರೆ, ಪಂಜಾಬು ಈಶಾನ್ಯ ಪ್ರಾಂತ್ಯಗಳು ಬಂಗಾಳಾ ಈ ಪ್ರಾಂತ್ಯಗಳಲ್ಲಿರುವ ಬಹು ಸಂಖ್ಯಾಕ ಮಹಮ್ಮದೀಯರ ಹಿತಕ್ಕೆ ಕುಂದುಬರದಂತೆ ಮಾಡಬೇಕು. ೭. ಮತಸಂಬಂಧದ ವಿಷಯದಲ್ಲಿ ಅಂದರೆ ನಂಬಿಕೆಯಲ್ಲಿ ಪೂಜೆಯಲ್ಲಿ ಪ್ರಚಾರದಲ್ಲಿ ಸಂಘ ವಿದ್ಯಾಭ್ಯಾಸ ಇವುಗಳ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು. ೮. ಯಾವ ಪಂಗಡದ ಮುಕ್ಕಾಲುಭಾಗ ಮೆಂಬರುಗಳು ತಮ್ಮ ಪಂಗಡಕ್ಕೆ ಸಂಬಂಧ ಪಡುವ ಒಂದು ಠರಾವನ್ನು ಅಥವಾ ಒಂದು ಮಸೂದೆಯನ್ನು ವಿರೋಧಿಸಿದರೆ ಆ ಠರಾವು ಜಾರಿಗೆ ತರಲ್ಪಡದಂತೆ ಮಾಡಬೇಕು. ೯. ಸಿಂಧ್ ಪ್ರಾಂತ್ಯದಿಂದ ಬೇರೆ ಮಾಡಬೇಕು. ೧೦. ಈಶಾನ್ಯ ಪ್ರಾಂತ್ಯಗಳಲ್ಲೂ ಬೇಲೂಚಿಸ್ಥಾನ ಪ್ರಾಂತ್ಯಗಳಲ್ಲೂ ಇತರ ಪ್ರಾಂತ್ಯಗಳಂತೆ ಸುಧಾರಣೆ ಮಾಡಬೇಕು. ೧೧. ಮಹಮ್ಮದೀಯರಿಗೂ ಮತ್ತು ಇತರಹಿಂದುಳಿದ ಪಂಗಡದವರಿಗೂ ಸರ್ಕಾರೀ ಕೆಲಸಗಳಲ್ಲಿ ಸ್ಥಾನವಿರಬೇಕು. ೧೨. ಮಹಮ್ಮದೀಯರ ಮತಸಂಬಂಧವಾದ ಯಾವ ವಿಷಯಗಳಿಗೂ ಸರ್ಕಾರವು ಅಡ್ಡಿ ಬರಬಾರದು. ೧೩. ಪ್ರತಿಯೊಂದು ನ್ಯಾಯವಿಧಾಯಕ ಸಭೆಯಲ್ಲಿ ಮಹಮ್ಮದೀಯ ಮಂತ್ರಿಗಳ ಸಂಖ್ಯೆಯು ಮೂರನೇ ಒಂದು ಭಾಗದಷ್ಟಿರಬೇಕು. ೧೪. ದೇಶೀಯ ಸಂಸ್ಥಾನಗಳು ಬ್ರಿಟಿಷ್ ಇಂಡಿಯಾದೊಂದಿಗೆ ಮುಂದಿನ ರಾಜಕೀಯ ರಚನೆಯಲ್ಲಿ ಸೇರಿರಬೇಕು.

ದುಂಡುಮೇಜಿನಪರಿಷತ್ತಿಗೆ ಹೋಗಿರುವ ಹಿಂದೂಮಹಮ್ಮದೀಯರ ಒಪ್ಪಂದ.

ಇದೇ ತಿಂಗಳು 17 ನೆಯ ತಾರೀಖಿನ ದಿವಸ ಅಲ್ಪಸಂಖ್ಯಾತರ ಒಪ್ಪಂದ ರಚನಾಸಮಿತಿ (Minority regotiations Committee) ಯು ಭೋಪಾಲ್ ನವಾಬರವರು ವಾಸಿಸುವ ಮನೆಯಲ್ಲಿ ಸೇರಿತು. ಎಲ್ಲಾ ಮೆಂಬರರೂ ಹಾಜರಿದ್ದರು. ಯಾವ ಒಪ್ಪಂದವೂ ಆಗದೆ ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾಗುವುದೆಂದು ನಿರೀಕ್ಷಣೆಯಿತ್ತು. ಯಾವುದಾದರೂ ಒಂದು ಒಪ್ಪಂದವಾದ ವಿನಾ ತಾವು ಆ ದಿವಸದ ಪರಿಷತ್ತಿಗೆ ಹೋಗುವುದಿಲ್ಲವೆಂದು ರಾಜತಂತ್ರವಿಶಾರದರಾದ ಮಿ|| ಸಪ್ರು, ಮಿ|| ಜಿನ್ನಾ, ಮಿ|| ಷಫಿಯವರು ಮುಖ್ಯತಃಹಿಡಿದದ್ದರಿಂದ ಕೆಳಗಿನಂತೆ ಒಡಂಬಡಿಕೆಯಾಯಿತು. ಮಿ|| ಜಯಕರ್, ಡಾ|| ಮುಂಜೆ, ರಾಜಾನರೇಂದ್ರನಾಥರವರು ಹಿಂದೂ ಪ್ರತಿನಿಧಿಗಳಾಗಿ ತಮ್ಮ ಸಹೋದ್ಯೋಗಿಗಳ ಬಲಾತ್ಕಾರಕ್ಕೆ ಒಪ್ಪಬೇಕಾಯಿತೆಂದು ಆ ಮಾಧಾನಪಟ್ಟರೂ ತಾವು ಬಂದೂಕನ್ನು ನಿಮ್ಮ ತಲೆಗಳಿಗೆ ಗುರಿಯಿಟ್ಟು ಬೆದರಿಸಿ ಒಪ್ಪಂದಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುವದಿಲ್ಲವೆಂದೂ ತಮ್ಮ ಹಕ್ಕುಗಳು ನಿರ್ಣಯವಾದ ಹೊರತು ಯಾವ ರಾಜ್ಯಾಂಗವವಸ್ಥೆಯಾದರೂ ಕೆಲಸಮಾಡಲು ಸಾಧ್ಯವಾಗುವದಿಲ್ಲವೆಂದೂ ಮಹಮ್ಮದೀಯರು ಸ್ಪಷ್ಟವಾಗಿ ಹೇಳಿಬಿಟ್ಟರು.

(1) ಬೊಂಬಾಯಿ ಅಧಿಪತ್ಯದಿಂದ ಸಿಂಧುದೇಶವನ್ನು ಪ್ರತ್ಯೇಕಿಸುವಿಕೆ. ಸಿಂಧುದೇಶವನ್ನು ಪ್ರತ್ಯೇಕಪ್ರಾಂತವಾಗಿ ಮಾರ್ಪಡಿ ಹೊಸರಾಜ್ಯನಿಯಮವನ್ನು ಸ್ಥಾಪಿಸುವುದಕ್ಕೆ ಒಂದು ಕಮಿಟಿಯು ಏರ್ಪಡಿಸಲ್ಪಡಬೇಕು. ಸಿಂಧುದೇಶವು ಪ್ರತ್ಯೇಕವಾದನಂತರ ಅದರ ಆಯವ್ಯಯವನ್ನು ಅದೇ ವಹಿಸಬೇಕು. ಕಮಿಟಿಯವರು ಹಣಕಾಸಿನ ವಿಚಾರದಲ್ಲಿಯೂ, ಆಡಳಿತದ ವಿಷಯದಲ್ಲಿಯೂ ಅವಶ್ಯಕಬದಲಾವಣೆಗಳನ್ನು ಮಾಡಬಹುದು.

(2) ವಾಯವ್ಯಪ್ರಾಂತದ ಗಡಿನಾಡುದೇಶದ ಸರ್ಕಾರದ ಹೊಸರಾಜ್ಯಾಂಗ ವ್ಯವಸ್ಥೆಯು ಮಿಕ್ಕ ಪ್ರಾಂತಗಳಂತೆಯೇ ಇರತಕ್ಕದ್ದು.

ಸರ್ವಿಸಸ್ ಎಂಬ ಶಿರೋನಾಮೆಯಲ್ಲಿ—

(3) (1) ಯಾವ ಪಬ್ಲಿಕ್ ಸರ್ವಿಸ್ಸಿಗೆ ಸೇರುವುದಕ್ಕೂ ತನ್ನ ಮತ ಮತ್ತು ಜಾತಿಯಿಂದ ಯಾರಿಗೂ ಅನರ್ಹತೆಯುಂಟಾಗಬಾರದು.

(2) ಪ್ರತಿಯೊಂದುಪ್ರಾಂತದಲ್ಲಿಯೂ, ಕೇಂದ್ರಸರ್ಕಾರದಲ್ಲಿಯೂ ಪಬ್ಲಿಕ್‌ಸರ್ವಿಸ್ ಕಮಿಷನ್ ಎಂಬ ಸಂಸ್ಥೆಯು ಏರ್ಪಡಿಸಲ್ಪಟ್ಟು ಆ ಸಂಸ್ಥೆಯವರು ಸಾರ್ವಜನಿಕ ಕೆಲಸಗಳಿಗೆ ದಕ್ಷರಾದವರು ಪ್ರತಿಯೊಂದು ಸಮಾಜದಿಂದ ಆರಿಸಲ್ಪಟ್ಟು ಯೋಗ್ಯಪ್ರಾತಿನಿಧ್ಯವು ದೊರೆಯುವಂತಾಗಬೇಕು.

(3) ಸಮಾಜ, ಜಾತಿ, ಮತ ಮತ್ತು ವಂಶ ಇವುಗಳು ಸರ್ವಿಸ್ಸಿನಲ್ಲಿ ಬಡ್ತಿಯಾಗುವುದಕ್ಕಾಗಲಿ, ಹೆಚ್ಚಿನ ಕೆಲಸಕ್ಕೆ ಹೋಗುವುದಕ್ಕಾಗಲಿ ಕಾರಣೀಭೂತಗಳಾಗಬಾರದು.

ಮಂತ್ರಿಗಳಸಭೆಯು (ಡಾ|| ಸಪ್ರುರವರ ಆಲೋಚನೆಗೆ ಒಳಪಡತಕ್ಕದ್ದು.)

(1) ಕೇಂದ್ರ ಸರ್ಕಾರದಲ್ಲಿಯೂ, ಪ್ರಾಂತಿಕಸರ್ಕಾರದಲ್ಲಿಯೂ ನಿರ್ಮಿಸಲ್ಪಡುವ ಮಂತ್ರಿಮಂಡಲದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಮಹಮ್ಮದೀಯ ಹಾಗೂ ಚಿಕ್ಕಸಮಾಜಗಳ ಮೆಂಬರರು ಹೆಚ್ಚಾಗಿ ಸೇರಲು ಅವಕಾಶವಿರಬೇಕು.

(2) ಪಂಜಾಬಿನ ಮಂತ್ರಿಮಂಡಲದಲ್ಲಿ ಕನಿಷ್ಠಪಕ್ಷ ಒಬ್ಬ ಹಿಂದೂ ಮೆಂಬರಿಗಾದರೂ ಅವಕಾಶದೊರೆಯಬೇಕು.

(4) ಮಂತ್ರಾಲೋಚನಾಸಭೆಯಲ್ಲಿ ಯಾವುದಾದರೂ ಒಂದು ಬಿಲ್ ಪಾಸಾದರೆ ಅದರಿಂದ ಆ ಸಭೆಯಲ್ಲಿರುವ ಒಂದು ಮತದ ⅔ ಭಾಗದ ಮೆಂಬರರಿಗೆ ಧಾರ್ಮಿಕ ಅಥವಾ ಸಾಮಾಜಿಕವಿಷಯಕ್ಕೆ ಬಾಧೆ ಬರುವುದೆಂದು ಕಂಡುಬಂದರೆ ಆ ಮೆಂಬರರು ಬಿಲ್ ಪಾಸಾದ ಒಂದು ತಿಂಗಳೊಳಗೆ ಪ್ರೆಸಿಡೆಂಟರಮೂಲಕ ಗೌರ್ನರ ಅಥವಾ ಗೌರ್ನರ್ ಜನರಲ್‌ರವರಿಗೆ ಅಂಕಿವಮಾಡಿಕೊಂಡು ಆ ಬಿಲ್ಲಿನ ಪರಿಣಾಮವು ಒಂದು ವರ್ಷದವರೆಗೂ ಜಾರಿಯಲ್ಲಿ ಬರದಂತೆ ತಟಸ್ಥಮಾಡಬಹುದು. ಒಂದು ವರ್ಷದ ತರುವಾಯ ಆ ಬಿಲ್ಲನ್ನು ಪುನರ್ವಿಮರ್ಶೆಗೆ ಮಂತ್ರಾಲೋಚನಾಸಭೆಗೆ ಕಳುಹಿಸತಕ್ಕದ್ದು. ಆ ಸಭೆಯವರು ಆಯಾಜಾತಿಯವರ ಆಕ್ಷೇಪಣೆಗಳನ್ನು ಸರಿಪಡಿಸಿ ಬಿಲ್ಲನ್ನು ಬದಲಾಯಿಸದಿದ್ದರೆ ಆ ಜಾತಿಯ ಇಬ್ಬರು ಮೆಂಬರರಿಂದ ಸದರಿ ಬಿಲ್ ಸುಪ್ರೀಂಕೋರ್ಟಿನಲ್ಲಿ ವಿವಾದಹೂಡಲಿಕ್ಕೆ ಅವಕಾಶವುಳ್ಳದಾಗಿದ್ದರೆ ಗೌರ್ನರ್ ಅಥವಾ ಗೌರ್ನರ್‌ಜನರಲ್ಲರು ಅದನ್ನು ರದ್ದುಪಡಿಸಬಹುದು. ಅಥವಾ ಅನುಮತಿ ಕೊಡಬಹುದು.

ಕೇಂದ್ರಸರ್ಕಾರದಲ್ಲಿ ಶೇಕಡಾ 33ರಂತೆ ಸ್ಥಾನಗಳು ಕಾದಿಲ್ಪಡಬೇಕೆಂದು ಮಹಮ್ಮದೀಯರು ವಾದಿಸುವರು. ಮಿ|| ಜಯಕರ್ ಮೊದಲಾದ ಹಿಂದುಗಳು ಶೇಕಡಾ 30 ಕ್ಕಿಂತ ಹೆಚ್ಚಿಗೆ ಸ್ಥಾನಗಳನ್ನು ಮೀಸಲಾಗಿಡಲು ಸಾಧ್ಯವಿಲ್ಲವೆಂದು ಹೇಳುವರು. ಮಹಮ್ಮದೀಯರು ಅಲ್ಪಸಂಖ್ಯಾತರಾಗಿರುವ ಪ್ರಾಂತಗಳಲ್ಲಿ ಅವರಿಗೆ ಹಕ್ಕುಬಾಧ್ಯತೆಗಳು ಕಾದಿಡಲ್ಪಡುವಂತೆ, ಹಿಂದುಗಳು ಅಲ್ಪಸಂಖ್ಯಾತರಾಗಿರುವ ಪಂಜಾಬ್ ಮತ್ತು ಬಂಗಾಲ ಪ್ರಾಂತಗಳಲ್ಲಿ ಅವರಿಗೆ ಯೋಗ್ಯಪ್ರಾತಿನಿಧ್ಯವು ಕೊಡಲ್ಪಡಬೇಕು. ಈ ವಿಷಯವು ಎಚ್. ಎಚ್. ಆಗಾಖಾನ್‌ರವರ ಅಧ್ಯಕ್ಷತೆಯ ಕೆಳಗೆ ನಡೆಯುವ ಸಭೆಯಲ್ಲಿ ಇತ್ಯರ್ಥವಾಗುವುದು. ಪಂಜಾಬಿನ ಪ್ರಭುತ್ವದಲ್ಲಿ ಹಿಂದುಗಳು ಸಿಕ್ಕರಿಗೆ ಎರಡು ಜಾಗಾಗಳನ್ನು ಬಿಟ್ಟು ಕೊಡುವುದಾದರೆ ತಾವೂ ಎರಡು ಜಾಗಾಗಳನ್ನು ಬಿಟ್ಟು ಕೊಡುವುದಾಗಿ ಮಹಮ್ಮದೀಯರು ಅಭಿಪ್ರಾಯಪಡುವರಂತೆ!

ಧಾರವಾಡ, ಕಾರವಾರ, ಬಿಜಾಪೂರ ಡಿಸ್ಟ್ರಿಕ್ಟುಗಳಲ್ಲಿರುವ ಎಲ್ಲಾ ಕಾಂಗ್ರೆಸ್ ಸಮಿತಿಗಳೂ ಅಕ್ರಮಕೂಟಗಳೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಕರ್ನಾಟಕದ ಸರ್ವಾಧಿಕಾರಿಗಳಾದ ಶ್ರೀಯುತ ಹನುಮಂತರಾವ್ ಕೌಜಲಿಗಿಯವರು ಇ. ಪೀ. ಕೋಡು 117 ನೇ ಸೆಕ್ಷನ್ ಪ್ರಕಾರ ದಸ್ತಗಿರಿಮಾಡಲ್ಪಟ್ಟು ಬೆಳಗಾವಿಗೆ ಸಾಗಿಸಲ್ಪಟ್ಟಿದ್ದಾರೆ. ಕಿತ್ತೂರಿನ 21 ಜನ ಸತ್ಯಾಗ್ರಹಿಗಳು ದಸ್ತಗಿರಿಮಾಡಲ್ಪಟ್ಟಿದ್ದಾರೆ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ— ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯ ವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಧಿ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೨ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ... ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ...ನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ...ಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ...ಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ...ಲ್ಲಿ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ...ಕಾರದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ...ರಿಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ...ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತ...ದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ...ದು ಧನ್ಯರಾಗತಕ್ಕದ್ದು. ಲಾಕೆಟು ೧ ಕ್ಕೆ ೩ ಆಣೆ. ೨೫ರ ...ಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ...ಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ...ಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ...ಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ... ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಶರೀರಕ್ಕೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜ್ವರ ಸಣ್ಣ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ... ಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಿಗೂ ವಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಶೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[32] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ

ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೋತ್ಪತ್ತಿ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವದರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ ...ಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗೊತ್ತಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರುಮಾಡಿ ಕಳುಹಿಸುತ್ತೇವೆ. ೧ ಬಿಬ್ಬಿಗೆ ಕಡಿಮೆ ಕಳುಹಿಸಲಾಗುದು.

[18]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕೆಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿಯುವುದು ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ತಳದ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ಸುಮ್ಮನೆ ಬಳಲಿಕೆಗೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕೆಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕೆಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಿಂತಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

ಕ್ವಿನೈನ್ ಟಿಕ್ಕು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ವ್ಯಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[16] **ಮಲೇರಿಯಾನ ಕಂಪೆನಿ, ನಂಬ್ರ 21 ಮುಪಸಕಟ್ಟೆ, ಮಂಗಳೂರು, ದ. ಕ.**

ಮಾಹೇಶ್ವರದೀಕ್ಷಾವಿಧಿ.

(ಮನೋಹರವಾದ ಮುದ್ರಣ)

ಗುರುವರ್ಗದ ಮಠಾಧಿಕಾರಿಗಳು ದೀಕ್ಷಾ ವಿಷಯವನ್ನು ಅನುಕೂಲಾಗ್ರವಾಗಿ ತಿಳಿದುಕೊಳ್ಳಲೆಂಬ ಸದುದ್ದೇಶದಿಂದ ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂಡಿತ ಕಾಶೀನಾಥಶಾಸ್ತ್ರಿಗಳವರು ಕನ್ನಡಭಾಷೆಯಿಂದ ಮೇಲ್ಕಂಡ ಗ್ರಂಥವನ್ನು ರಚಿಸಿ ಈ ಮೊದಲು ಮುದ್ರಿಸಿ ಪ್ರಸಿದ್ಧಪಡಿಸಿದ್ದರಷ್ಟೆ! ಮೊದಲನೆಯ ಮುದ್ರಣವು ಸ್ವಚ್ಛವಿಲ್ಲದೆ ಅನೇಕ ಕಡೆಗೆ ಮುಂತಾಕ್ಷರಗಳೇ ಲೋಪವಾಗಿ ಹೋಗಿರುವದರಿಂದ, ಪುನಃ ಶುದ್ಧವಾಗಿಯೂ ಸುಂದರವಾಗಿಯೂ ಮುದ್ರಿಸಬೇಕೆಂದು ಅನೇಕ ಜನ ಗುರುವರ್ಗ ಮಠಾಧಿಕಾರಿಗಳು ಸೂಚಿಸಿದ ಕಾರಣ ಅವರ ಅಭಿಪ್ರಾಯದ ಮೇರೆಗೆ ಮೇಲ್ಕಂಡ ದೀಕ್ಷಾವಿಧಿಯು ಈಗ ಹೊಸದಾಗಿ ಉತ್ತಮವಾದ ಕಾಗದದಲ್ಲಿ ಬಹು ಸುಂದರವಾಗಿಯೂ ಶುದ್ಧವಾಗಿಯೂ ಮುದ್ರಿಸಲ್ಪಟ್ಟಿದೆ. ಆದುದರಿಂದ ಈ ಗ್ರಂಥವನ್ನು ಮೊದಲು ತೆಗೆದುಕೊಂಡವರೂ ಹಾಗೂ ತೆಗೆದುಕೊಳ್ಳದೆ ಇದ್ದವರೂ ತರಿಸಿಕೊಂಡು ಅದರಂತೆ ದೀಕ್ಷಾಕರ್ಮವನ್ನು ನೆರವೇರಿಸಬೇಕೆಂದು ಆಶಿಸುತ್ತೇವೆ. ಬೆಲೆ ೧೨ ಆಣೆ.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ,

[55] **ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಬಾಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೩ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮಾರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾಗದು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.—ವಿಳಾಸ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[19] ಪೋ. ಬಾ. ೫೧೦, ಮದರಾಸು.

ಶ್ರೀ ಕರ್ನಾಟಕ ಸ್ಕಾಂದ ಮಹಾಪುರಾಣ.

ಮಾಹೇಶ್ವರಖಂಡದ ವಚನ ೨ನೇ ಕೌಮಾರಿಕಾ ಖಂಡವು

ಧರ್ಮಸೂಕ್ಷ್ಮಗಳ ಭಾಂಡಾಗಾರವಾಗಿಯೂ, ವೇದಾಂತರಹಸ್ಯ ತತ್ವಗಳ ತೌರುಮನೆಯಾಗಿಯೂ, ಸುಂದರವಾದ ಚಿತ್ರಗಳನ್ನೊಳಗೊಂಡು ಪ್ರಕಾಶಿಸುತ್ತಿರುವ ಈ ಗ್ರಂಥವು ಬಿಕರಿಗೆ ಸಿದ್ಧವಾಗಿರುತ್ತೆ.

ಈ ಗ್ರಂಥದಲ್ಲಿನ ಸಂಕ್ಷಿಪ್ತ ವಿಷಯಗಳು:—

ಅರ್ಜುನನು ಋಷಿಗಳಾಜ್ಞಾಪ್ರಕಾರ ಮಹೀಸಾಗರ ಕ್ಷೇತ್ರತೀರ್ಥಗಳಲ್ಲಿ ಮಿಂದು ಅಪ್ಸರೆಯರನ್ನು ಉದ್ಧರಿಸುವುದು, ನಾರದಾರ್ಜುನರ ಸಂವಾದ, ಶೈವಕ್ಷೇತ್ರಗಳ ಮಹಾತ್ಮೆ, ಮಹಾಶಿವಭಕ್ತನಾದ ಭೃಗುಋಷಿಯೊಂದಿಗೆ ನಾರದನ ಸಮಾಗಮ, ಭೃಗುಋಷಿಯು ಶಿವತೀರ್ಥಗಳನ್ನು ಬಿತ್ತರಿಸುವುದು, ನಾರದನು ಶಿವಪ್ರೀತ್ಯರ್ಥವಾಗಿ ದಾನಮಾಡುವುದಕ್ಕಾಗಿ ಧರ್ಮವರ್ಮ ರಾಜನಿಂದ ಭೂಮಿ ಮತ್ತು ಧನಗಳನ್ನು ಪಡೆಯುವುದು, ದಾನಪ್ರಶಂಸೆಯು, ದಾನಾರ್ಹರ ಲಕ್ಷಣ ನಾರದನು ಮಾಡಿದ ದಾನ, ದಾನವೈಲಕ್ಷಣ್ಯದಿಂದ ನಾರದನಿಗೆ ಬಂದ ಶಾಪ, ನಾರದನು ಬ್ರಾಹ್ಮಣರನ್ನು ಶಪಿಸುವಿಕೆ, ಮಹೀನದಿಯು ಹೇಗೆ ಆವಿರ್ಭವಿಸಿತೆಂಬ ವಿಷಯ, ಅರ್ಜುನನು ಈ ಮಹೀಸಾಗರ ಸಂಗಮದಲ್ಲಿರುವ ಶಿವತೀರ್ಥಗಳ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಯಲು ನಾರದನನ್ನು ಕೇಳುವಿಕೆ, ಅದನ್ನು ನಾರದನು ಹೇಳುವುದು, ಭಕ್ತಾಗ್ರೇಸರನಾದ ಇಂದ್ರದ್ಯುಮ್ನ ಮತ್ತು ನಾಡೀಜಂಘರ ಆಖ್ಯಾನ ವರ್ಣನವು, ಮಹಾ ಶಿವಭಕ್ತ ಶಿರೋಮಣಿಯಾದ ಲೋಮಶ ಮಹರ್ಷಿಯು ತನ್ನ ದೀರ್ಘಾಯುಷ್ಯಕ್ಕೆ ಕಾರಣವನ್ನು ಹೇಳುವಿಕೆ, ಶಿವಲಿಂಗ ಪೂಜನ ಮಹಾತ್ಮೆ ಕಥನವು, ಇಂತು ಲೋಮಶರು ಶಿವಲಿಂಗ ಪೂಜನ ಮಹಾತ್ಮೆಯನ್ನು ಹೇಳಿ, ಇಂದ್ರದ್ಯುಮ್ನ ನಾರದಾದಿಗಳನ್ನು ಶಿವದೀಕ್ಷೆಗಾಗಿ ಅಜ್ಞಾಪಿಸುವುದು, ಶಿವದೀಕ್ಷೆಗೊಪ್ಪಿಕೊಂಡ ಇಂದ್ರದ್ಯುಮ್ನಾದಿಗಳಿಗೆ ದೀಕ್ಷೆಕೊಟ್ಟು ಶಿವಪೂಜಾ ವಿಧಾನವನ್ನು ಬಿತ್ತರಿಸುವಿಕೆ, ಬಳಿಕ ಮಾರ್ಕಂಡೇಯ ಇಂದ್ರದ್ಯುಮ್ನ ನಾರದಾದಿಗಳು ಕ್ರಿಯಾಯೋಗಾರಂಭಪೂರ್ವಕ ಶಿವನನ್ನು ಕುರಿತು ತಪಗೆಯ್ಯುವಿಕೆ, ಷಣ್ಮುಖಸ್ವಾಮಿಯ ಮಹಾತ್ಮೆ ಕಥನವು, ತಾರಕಾಸುರ ಷಣ್ಮುಖರ ಘೋರ ಯುದ್ಧ, ಷಣ್ಮುಖನು ಕುಮಾರೇಶ್ವರ ಲಿಂಗವನ್ನು ಸ್ಥಾಪಿಸಿ ತಂದೆಯಾದ ಪರಶಿವನಿಂದ ಲಿಂಗಪೂಜಾ ವಿಧಾನವನ್ನು ತಿಳಿಯುವುದು, ಕುಮಾರೇಶ್ವರ ಸ್ತುತಿ, ಶಿವನು ಷಣ್ಮುಖನಿಗೆ ವರವನ್ನೀಯುವಿಕೆ, ಮಹೀಸಾಗರ ಕುಮಾರೇಶ್ವರನಾಮಕ ಶಿವಲಿಂಗದ ಸೇವೆಯ ಮಹಿಮಾನು ವರ್ಣನವು, ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಕುಮಾರೇಶ್ವರಲಿಂಗವನ್ನು ಮಹೀಸಾಗರ ಸಂಗಮದಲ್ಲಿ ಧ್ವಜಸ್ತಂಭದ ಮೇಲೆ ಪ್ರತಿಷ್ಠಿಸುವುದು, ವೇದಾಂತ ರಹಸ್ಯಗಳು, ಪಿಂಡೋತ್ಪತ್ತಿ, ಶಿವಕಾರುಣ್ಯ ಸಂಪಾದನಾಸ್ಥಳ, ಅನೇಕ ಉಪಬೃಂಹಣವಾಕ್ಯಗಳು, ಗುಪ್ತಕ್ಷೇತ್ರ ಮಹಾತ್ಮೆ, ಯೋಗಲಕ್ಷಣ ವಿವರಣ, ಸಮಾಧಿಯ ತತ್ವ, ಶಿವಸಾನ್ನಿಧ್ಯವನ್ನು ಜೀವನು ಪಡೆಯುವ ರೀತಿ, ಶಿವತತ್ವಸಾರ, ಗುಪ್ತಕ್ಷೇತ್ರದ ಕೋಟಿಲಿಂಗ ಮಹಿಮೆ, ಸೋಮನಾಥೇಶ್ವರಲಿಂಗ ಮಹಿಮೆ, ಧರ್ಮಸೂಕ್ಷ್ಮಗಳ ವಿವರಣೆ, ಪಾಪಪುಣ್ಯಗಳ ವಿವರಣೆ, ತತ್ವವೆಂದರೇನು, ಶಿವಾಧಿಕ್ಯವು ಹೇಗೆ ಸಿದ್ಧಿಸುವುದು, ಶಿವನಾರು, ಪರಶಿವನಾರು, ಶಿವ, ದೇವಿ, ಗಣಪತಿ, ವಿಷ್ಣು, ಬ್ರಹ್ಮ, ಸೂರ್ಯ ಇವರುಗಳ ಮಹಿಮೆ, ಪರಮೇಶ್ವರ ಮಹಿಮಾನು ವರ್ಣನವು, ಶಿವಕ್ಷೇತ್ರಗಳ ಪ್ರಾಶಸ್ತ್ಯ, ಈ ಮಹೀಸಾಗರ ಸಂಗಮಕ್ಕೆ ಗುಪ್ತಕ್ಷೇತ್ರವೆಂಬ ಹೆಸರು ಬಂದುದು ಹೇಗೆಂಬುದು, ಅರ್ಜುನನು ತೀರ್ಥಯಾತ್ರಾ, ನಾರದ ಶಾಪ ಸಂವಿಧಾನ ಇತ್ಯಾದಿ ವಿಷಯಗಳನ್ನೊಳಗೊಂಡಿರುವ ಗ್ರಂಥ.

ಫುಲ್ ಕ್ಯಾಲಿಕೋ ಗ್ಲೇಜ್ ಕಾಗದ ಶುದ್ಧ ಪ್ರತಿ. ಪುಸ್ತಕ ೧ಕ್ಕೆ ರೂ. ೨—೮—೦.

(ಟಪಾಲ್ ಹಾಸಲು ಪ್ರತ್ಯೇಕ.)

ಇತರೇ ಪುಸ್ತಕಗಳು.	ಗ್ಲೇಜ್	ರಫ್
ರಾಜಶೇಖರ ವಿಳಾಸ ೧೪ ಆಶ್ವಾಸದ ವಚನಕಾವ್ಯ ಪ್ರತಿ ೧ಕ್ಕೆ	ರೂ. ೨—೦—೦	೧—೮—೦
ಇಂಡಿಯನ್ ಸಿವಿಲ್ ಪ್ರೊಸೀಜರ್ ಕೋಡು ,,	ರೂ. ೩—೮—೦	೨—೮—೦
(ಹೊಸ ರೂಲ್ಸುಗಳನ್ನೆಲ್ಲಾ ಸೇರಿಸಿ ಪ್ರಿಂಟ್ ಮಾಡಿರುವುದು.)		
ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ೩ ಭಾಗ ಸೇರಿದ್ದು ಪ್ರತಿ ೧ಕ್ಕೆ	ರೂ. ೨—೧೨—೦	
ಸ್ಕಾಂದಪುರಾಣ (ಮಾಹೇಶ್ವರ ಖಂಡದ) ೧ನೇ ಕೇದಾರ ಖಂಡ ಪ್ರತಿ ೧ಕ್ಕೆ	ರೂ. ೧—೮—೦	

(ಟಪಾಲ್ ಹಾಸಲು ಬೇರೆ.)

ವಿಳಾಸ—

ಯೂನಿವರ್ಸಲ್ ಪವರ್ ಪ್ರೆಸ್, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪುಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ಶಿಳುವಾಗುವದು, ಸ್ತ್ರೀಸ್ಪರ್ಶಮಾದಕೂಡಲೆ ವೀರ್ಯಸ್ಖಲನ ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ರೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದವನ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [17]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಟಿಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿಸುಚಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುವಾಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೨ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಡಿಶಂಬರ್ ೧೯೩೦ [ಸಂಚಿಕೆ ೩೧

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರುಕೂಡ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತರಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟ್ಯಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಹೊಳಲ್ಕೆರೆ ತಾ|| ಚಿಕ್ಕಜಾಜೂರು ಗ್ರಾಮದ ವಿಚಾರ.

ಈ ಗ್ರಾಮದಲ್ಲಿ ಈಗ ಕೆಲವು ದಿವಸಗಳಿಂದಲೂ ಪಾರ್ಟಿ ಹುಟ್ಟಿ ಗ್ರಾಮದ ದೇವರ ಕೆಲಸಗಳೇ ಆಗಲಿ ಗ್ರಾಮದ ಪಂಚಾಯತಿ ಕೆಲಸಗಳೇ ಆಗಲಿ ಸಮರ್ಪಕವಾಗಿ ನಡೆಯದೆ ನಿಂತುಹೋಗಿದ್ದವು. ಇದನ್ನು ತಾಲೋಕು ಮೆಂಬರುಗಳು ಬಹಳ ಕಷ್ಟಪಟ್ಟು ಈ ಗ್ರಾಮದ ಮೇಲೆ ಪೂರಾ ನಿಗಾಕೊಟ್ಟು ಮೊದಲಿದ್ದ ಛೇರ್ಮನ್ ಮತ್ತು ಪಾಟೀಲರ ಬದಲಾವಣೆಗಳನ್ನು ಮಾಡಿದ್ದರಿಂದ ಈಗ ಹಾಲಿ ಛೇರ್ಮನ್ ಕೆಲಸ ನೋಡುತ್ತಿರುವ ಮ|| ರಾ|| ಸಿದ್ರಾಮಪ್ಪನವರು, ಹಾಲಿ ಪಟೇಲಿ ಕೆಲಸ ನೋಡುತ್ತಿರುವ ಮ|| ರಾ|| ಮುನಿಯಪ್ಪನವರೂ ಸಹ ಗ್ರಾಮಪಂಚಾಯತಿ ಕೆಲಸಗಳನ್ನೂ ಮತ್ತು ಗ್ರಾಮದಲ್ಲಿರುವ ದೇವರ ಕೆಲಸಗಳನ್ನೂ ಬಹಳ ಮುತುವರ್ಜಿಯಿಂದ ನಡೆಸುತ್ತ ಇರುವುದು ಬಹಳ ಶ್ಲಾಘನೀಯವಾಗಿರುತ್ತದೆ. ಬಹಳ ದಿವಸಗಳಿಂದಲೂ ಈ ಗ್ರಾಮದಲ್ಲಿ ಪಾರ್ಟಿಯಿಂದ ಮೂಲೆಯಲ್ಲಿ ಬಿಟ್ಟಿದ್ದ ಶ್ರೀ ಸಿದ್ಧರಾಮೇಶ್ವರ ದೇವರು ಮತ್ತು ಶ್ರೀ ಆಂಜನೇಯಸ್ವಾಮಿ, ಶ್ರೀ ರಾಮಕೃಷ್ಣ ದೇವರು, ಶ್ರೀ ರೇಣುಕರು ಇವುಗಳ ಕಾರ್ತಿಕಮಹೋತ್ಸವವನ್ನು ತಾ|| 21-11-30 ನೇ ಶುಕ್ರವಾರದ ದಿವಸ ಈ ಗ್ರಾಮದಲ್ಲಿರುವ ವೇ|| ಮೂ|| ಗಾರೆಪಟ್ಟಿ ಮಠದ ಚನ್ನಪ್ಪಯ್ಯನವರ ಮಕ್ಕಳು ವೇ|| ಮೂ|| ಸದಾಶಿವಯ್ಯನವರು, ಬುಕ್ಕಾಂಬುಧಿ ವೇ|| ಮೂ|| ಮರುಳಸಿದ್ಧಯ್ಯನವರು, ಮ|| ರಾ|| ದಾವಣಗೆರೆ ಶೆಟ್ರು ಅಡವಪ್ಪನವರು ಸಹ ಸೇರಿ ಬಹುವಿಜೃಂಭಣೆಯಿಂದ ಪಂಚಾಚಾರ್ಯ ಭಜನಾ ಸಂಘದವರ ಮತ್ತು ಶ್ರೀ ರಾಮಭಜನಾ ಸಂಘದವರ ಸಮೇತ ರಾತ್ರಿ 8 ಘಂಟೆಯಿಂದ 1 ಘಂಟೆವರೆಗೆ ನಡೆಯಿಸಿದ್ದರಿಂದ ಈ ಗ್ರಾಮದ ಜನಗಳು ಬಹಳ ಸಂತೋಷಪಟ್ಟರು. ಮ|| ರಾ|| ಶ್ಯಾ|| ಹನುಮಂತಪ್ಪನವರು, ಮ|| ರಾ|| ಕಂಟ್ರಾಕ್ಟರ್ ಮರುಳಸಿದ್ಧಯ್ಯನವರು, ವೇ|| ಮೂ|| ರುದ್ರಯ್ಯನವರು, ಮ|| ರಾ|| ದಾವಣಗೆರೆ ಶೆಟ್ರು ಅಡವಪ್ಪನವರು, ಮ|| ರಾ|| ಬಡಗಿಬಾಗಿಲು ಹನುಮಂತಪ್ಪನವರು ಮೇಲ್ಕಂಡ ಈ ಉತ್ಸವಕ್ಕೆ ಇದೇ ಗ್ರಾಮದಲ್ಲಿರುವ ಮುಖ್ಯಸ್ಥರು ಬಹಳ ಮುತುವರ್ಜಿಯಿಂದ ನಿಂತುಕೊಂಡು ಉತ್ಸವವನ್ನು ನಡೆಯಿಸಿದರು.

ಪ್ರತ್ಯಕ್ಷದರ್ಶಿ.

ಚಿಕ್ಕಜಾಜೂರು.

ಸ್ವೀಕಾರ.

ಚನ್ನರಾಯಪಟ್ಟಣ ತಾ|| ಹಿರೇಸಾವೆ ಗ್ರಾಮ ನಿವಾಸಿಗಳಾದ ಬಾಳೇಹೊನ್ನೂರು ಸಂಸ್ಥಾನದ ಇನಾಮ್ದಾರ ಮೆಂಬರ್ ಮ|| ರಾ|| ಸಿದ್ಧಲಿಂಗಪ್ಪನವರು ತಮಗೆ ಪ್ರಾಪ್ತವಾದ ಕಾಯಿಲೆಯು ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ನಡೆಯಿಸಿದ ಆರಾಧನೆ ಹಾಗೂ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯ ಉತ್ಸವಸಮಯದಲ್ಲಿ ಪ್ರಭಾಪೋಷಣೆಗೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮ|| ರಾ|| ಮಾದೇನಹಳ್ಳಿ ಕುಂಬಾರ ಶಿವಪ್ಪನು ಸ್ವಾಮಿತಿ ಕುಂಬಾರ ಬಸವಲಿಂಗಪ್ಪನಿಗೆ ವಿಲ್ಲು ಬರೆದುಕೊಟ್ಟಕಾಲದಲ್ಲಿ ಪ್ರಭಾಪೋಷಣೆಗೋಸ್ಕರ ಸಮರ್ಪಿಸಿದ 2 ರೂ. ಗಳು ಸ್ವಾಮಿತಿ ಗ್ರಾಮನಿವಾಸಿಗಳಾದ ಮ|| ರಾ|| ಕೇಣಿ ಹಾಲಪ್ಪನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸೋಲಾಪುರದ ಮಿ|| ಮಲ್ಲಪ್ಪನವರು ಧನಸೆಟ್ಟಿ, ಮಿ|| ರಾರ್ಡೆ, ಮಿ|| ಸಿಂಧೆ, ಮಿ|| ಭೋರೆ ಇವರು ಕಳೆದ ಮೇ ತಿಂಗಳಲ್ಲಿ ಸೋಲಾಪುರದಲ್ಲಿ ನಡೆದ ಗಲಾಟೆಯ ಸಂಬಂಧವಾಗಿ ಬೊಂಬಾಯಿ ಹೈಕೋರ್ಟಿನಿಂದ ಮರಣ ಶಾಸನಕ್ಕೆ ಗುರಿಮಾಡಲ್ಪಟ್ಟುದು ಸರಿಯಷ್ಟೆ! ಇವರು ಲಂಡನ್ನಿನ ಪ್ರಿವಿಕೌನ್ಸಿಲ್ಲಿಗೆ ಅಪೀಲ್ ಮಾಡುವದಕ್ಕೋಸ್ಕರ ಅರ್ಜಿಯನ್ನು ಹಾಜರ್ ಮಾಡಿದ್ದರು. ಪ್ರಿವಿಕೌನ್ಸಿಲ್ಲಿನ ಲಾರ್ಡ್ ಥ್ಯಾಂಕರ್ಟನ್‌ರವರು ಕೆಳಕೋರ್ಟಿನ ತೀರ್ಮಾನದಲ್ಲಿ ಕೈಹಾಕಲು ಯಾವ ಕಾರಣವೂ ಇಲ್ಲವಾದ್ದರಿಂದ ಅಪೀಲ್ ಹಿಡಿಯಲಾಗುವುದಿಲ್ಲವೆಂದು ಹೇಳಿದರೆಂಬುದನ್ನು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಬೊಂಬಾಯಿ ಗವರ್ನರ್ ಸಾಹೇಬರವರಾದರೂ ಇವರುಗಳ ಮೇಲೆ ಕೃಪೆಮಾಡಿ ಭಯಂಕರವಾದೀಮರಣಶಾಸನವನ್ನು ತಪ್ಪಿಸಬೇಕೆಂದು ಅನೇಕರು ಕೋರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಬೆಂಗಳೂರಿಂದ ನಿನ್ನೆ ದಿವಸ ರಾಜಧಾನಿಗೆ ಚಿತ್ತೈಸಿದರೆಂದು ತಿಳಿದುಬರುತ್ತದೆ.

ಈ ಮೊದಲು ವೈಸ್‌ರಾಯರಾಗಿದ್ದ ಮೆ|| ಲಾರ್ಡ್ ಹಾರ್ಡಿಂಜ್‌ರವರು ಈ ತಿಂಗಳು 7 ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸತಕ್ಕವರಿದ್ದು, ಇವರ ಸ್ವಾಗತಕ್ಕೋಸ್ಕರ ರೈಲ್ವೆ ನಿಲ್ದಾಣದಲ್ಲಿ ಮಂಟಪಾದಿಗಳ ರಚನಾಕಾರ್ಯವು ಪ್ರಾರಂಭವಾಗಿದೆ.

ಶ್ರೀಮನ್ಮಹಾರಾಜರವರು ಕಳೆದ ಸೋಮವಾರ ಸಾಯಂಕಾಲ ಬೆಂಗಳೂರು ದಂಡಿನಲ್ಲಿರುವ ಇಂಪೀರಿಯಲ್ ಸಿನೆಮಾ ನಾಟಕಕ್ಕೆ ಚಿತ್ತೈಸಿ ಮಾತನಾಡುವ ಚಿತ್ರಗಳ ಸಹಿತವಾದ ನೋಟವನ್ನು ಪರಾಮರ್ಶಿಸಿ ಸಂತೋಷಪಟ್ಟರೆಂದು ತಿಳಿದುಬರುತ್ತದೆ.

ಮಹಾರಾಣೀ ಕಾಲೇಜಿನಲ್ಲಿ ಉಪಾಧ್ಯಾಯಿನಿಯಾಗಿರುವ ಶ್ರೀಮತಿ ಕನಕಲಕ್ಷ್ಮಮ್ಮನವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿ ಕಳೆದ ತಾ|| 12ರಲ್ಲಿ ಅವರು ಹರತಾಳದ ಮೆರವಣಿಗೆಯಲ್ಲಿದ್ದರೆಂಬ ಸಂಗತಿಯನ್ನು ಕುರಿತು ವಿಚಾರಣೆ ಮಾಡುತ್ತಿದ್ದಾರೆಂದು ಕೇಳುತ್ತೇವೆ.

ಮೈಸೂರು ಗವರ್ನಮೆಂಟಿನವರು ಸಂಸ್ಥಾನದ ಸಂಪದಭ್ಯುದಯದ ದೊಡ್ಡ ದೊಡ್ಡ ಕಾಮಗಾರಿಗಳನ್ನು ನಡೆಯಿಸುವುದಕ್ಕೆ ಮಹಾಜನಗಳಲ್ಲಿ ಶೇ|| 5, ಶೇ|| 5½ ಬಡ್ಡಿಯುಳ್ಳ ಸಾಲ ಮಾಡುವಂತೆ ಪ್ರಕಟಿಸಿದ್ದರಷ್ಟೆ! ಈ ಸಾಲಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದು ಅಕ್ಟೋಬರ್ ತಾ|| 31ಕ್ಕೆ ಮುಗಿಯಿತು. ಆ ತಾರೀಖಿನವರೆಗೆ ಶೇ|| 5 ರ ಸಾಲಕ್ಕೆ 1,61,05,000 ರೂಪಾಯಿಗಳು ಶೇ|| 5½ ಯ ಸಾಲಕ್ಕೆ 2,54,80,000 ರೂಪಾಯಿಗಳೂ ಖಜಾನೆಗೆ ಬರುವುದಾಗಿ ಪ್ರಕಟನೆಮಾಡಿದ್ದಾರೆ. ಆದರೆ ಒಟ್ಟು 4,15,85,000 ರೂಪಾಯಿಗಳು ಬಂದಂತಾಯಿತು.

ಬೆಂಗಳೂರು ಡಿ|| ಬಿಡದಿ ಗ್ರಾಮದ ಕನ್ನಡ ಪ್ರೈಮರಿಸ್ಕೂಲಿನ ಉಪಾಧ್ಯಾಯರಾದ ಮ|| ರಾ|| ಶ್ರೀ ಜಿ. ಹೊನ್ನಗಂಗಪ್ಪನವರು "ಸಚಿತ್ರ ಕನ್ನಡ ಮಕ್ಕಳಗಣಿತ" ಎಂಬ ಪುಸ್ತಕವನ್ನು ರಚಿಸಿ ಪ್ರಸಿದ್ಧಪಡಿಸಿದ್ದಾರೆ. ಇದರಲ್ಲಿ ಮಕ್ಕಳು ಸುಲಭರೀತಿಯಾಗಿ ಲೆಕ್ಕವನ್ನು ತಿಳಿದುಕೊಳ್ಳುವ ವಿಷಯವು ಪ್ರತಿಪಾದಿಸಲ್ಪಟ್ಟಿರುವುದಲ್ಲದೆ ಮಕ್ಕಳ ಸೌಕರ್ಯಕ್ಕೋಸ್ಕರ ಗಣಿತಕ್ಕೆ ಸಂಬಂಧಪಟ್ಟ ಅನೇಕ ಚಿತ್ರಗಳು ಸೇರಿಸಲ್ಪಟ್ಟಿರುತ್ತವೆ. ಈ ಪುಸ್ತಕವು ಗಣಿತಾಭ್ಯಾಸಕ್ಕೋಸ್ಕರ ಶ್ರೇಷ್ಠವಾದ ಸಾಧನವಾಗಿದೆ ಎಂದು ಅತ್ಯಂತಸಂತೋಷದಿಂದ ಹೇಳಬೇಕಾಗಿದೆ. ಪ್ರತಿಯೊಂದು ಸ್ಕೂಲಿನ ಬಾಲಕರು ಈ ಪುಸ್ತಕವನ್ನು ತೆಗೆದುಕೊಂಡು ಅದರಲ್ಲಿಯ ವಿಷಯವನ್ನು ಗ್ರಹಿಸಿಕೊಳ್ಳುವರೆಂದು ನಂಬಿದ್ದೇವೆ. ಬೆಲೆ 0-4-0

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಹಂಪಾಪುರದಲ್ಲಿ ಸಂತೆಯ ಏರ್ಪಾಡು.

ಹೆಗ್ಗಡದೇವನಕೋಟೆ ತಾ|| ಹಂಪಾಪುರದಲ್ಲಿ ಪ್ರೋಗ್ರಾಂ ಮೇರೆ ತಾರೀಖು 16-11-30 ನೇ ಭಾನುವಾರ ದಿವಸ 8 ಘಂಟೆಗೆ ಹ|| ಡೆ|| ಕ|| ಸಾ|| ಕೆ. ವಿ. ಅನಂತರಾಮ್ ಬಿ.ಎ., ಎಲ್ ಎಲ್. ಬಿ. ಸಾಹೇಬರವರು, ಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟ್ ಸಾಹೇಬರವರು, ಮೈಸೂರು ಅ|| ಕ|| ಮ|| ಮುಹಮ್ಮದ್‌ಇಸ್ಮಾಯಿಲ್ ಷರೀಫ್ ಬಿ.ಎ., ಸಾಹೇಬರವರು ಸಹ ದಯಮಾಡಿಸಿದ ಕೂಡಲೆ ಹಾಜರಿದ್ದ ಅಮಲ್ದಾರ್, ಮ|| ರಾ|| ಎಫ್. ಎಂ. ಅಬ್ದುಲ್‌ರಹೀಂಸಾಹೇಬರು, ಮ|| ರಾ|| ಸಿ. ನರಸಿಂಹಯ್ಯನವರು, ರೆ|| ಇ. ಸೈದ್‌ಅಬ್ದುಲ್‌ಕರೀಂಸಾಹೇಬರವರು ಇತರ ಆಫೀಸರುಗಳು, ಛೇರ್ಮನ್ ಆರ್. ಕುಮಾರಾರಾಧ್ಯರು ಫೀ. ಅಬ್ದುಲ್‌ಲತೀಫ್‌ಸಾಹೇಬರು, ಫೀ. ರಾಮಣ್ಣನವರು, ಶ್ಯಾ|| ಶ್ಯಾಮರಾಯರು, ಕೆ. ನಂಜುಂಡಸ್ವಾಮಿಯವರು, ಸೈದ್‌ಅಬ್ದುಲ್‌ಕರೀಂಸಾಹೇಬರು, ಮದೀನ್ ಸಾಹೇಬರು, ಹಸನ್ ಫೀರ್‌ಬೇಗ್‌ಸಾಹೇಬರು ವಗೈರೆ ಜನರು ಮರ್ಯಾದೆಯಿಂದ ಬಂಗ್ಲಾದಲ್ಲಿಳಿಸಿ ತಮ್ಮಗಳ ಸಂತೋಷವನ್ನು ತೋರ್ಪಡಿಸಿದ ಮೇಲೆ ಆರ್. ಕುಮಾರಾರಾಧ್ಯರು ಭಾಷಣಮಾಡಿ ತಮ್ಮ ವಿಜ್ಞಾಪನಾಪತ್ರಿಕೆಯನ್ನು ಒಪ್ಪಿಸಿದರು. ಮೆ|| ಡೆ|| ಕ|| ಸಾಹೇಬರವರು ತಮ್ಮ ಗಂಭೀರವಾದ ಭಾಷಣಮಾಡಿದಬಳಿಕ ಶ್ರೀಮನ್ ಮಹಾರಾಜರವರ ಜಯಘೋಷದಿಂದ ಹಾರ ತುರಾಯಿ ಒಪ್ಪಿಸಲ್ಪಟ್ಟಿತು. ಅನಂತರ ಹ|| ಡೆ|| ಕ|| ಸಾ|| ರವರು ಶ್ರೀ ದೇವರ ಮಂಗಳಾರತಿಯನ್ನು ಮಾಡಿಸಿ ತಮ್ಮ ದಿವ್ಯಹಸ್ತಗಳಿಂದ ಸಂತೆ ಓಪನ್ ಮಾಡಿ ಫಲಹಾರಂಗಳನ್ನು ಸ್ವೀಕರಿಸಿ ಒಳ್ಳೇ ರಾಸುಗಳ ಮಾಲೀಕರುಗಳಿಗೆ ಬಹುಮಾನವನ್ನು ದಯಪಾಲಿಸಿ ಪ್ರಯಾಣಮಾಡಿದರು. ಈ ಹಂಪಾಪುರದಲ್ಲಿ ಪ್ರತಿಭಾನುವಾರವು ಸಂತೆ ನಡೆಯುವುದಕ್ಕೂ ಒಳ್ಳೆ ದನಗಳು ಮಾರಾಟಕ್ಕೆ ಬರುವದಕ್ಕೂ ಎಲ್ಲಾ ಪ್ರಾಂತ್ಯದ ಜನಗಳು ಪ್ರೋತ್ಸಾಹಕೊಟ್ಟು ಅಭಿವೃದ್ಧಿಸ್ಥಿತಿಗೆ ತರುತ್ತಾರೆಂದು ಕೋರುತ್ತೇನೆ.

ಪ|| ಬಸಪ್ಪ.

ನ್ಯೂ ಯಡತೊರೆ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿಯ ವಾರ್ಷಿಕ ಮೀಟಿಂಗ್ ಸಮಾರಂಭ.

ಕಳೆದ ತಿಂಗಳು 22 ನೆಯ ಶನಿವಾರ ದಿವಸ ಮಧ್ಯಾಹ್ನ ಮೂರು ಗಂಟೆಗೆ ಮ|| ರಾ|| ಬಳೆ ಸಿದ್ಧಲಿಂಗಶೆಟ್ಟರವರ ಹೊಸ ಬಂಗಲೆಯಲ್ಲಿ ಮೇಲ್ಕಂಡ ಸೊಸೈಟಿಯ ಜನರಲ್ ಮೀಟಿಂಗ್ ಕೂಡಿತು. ಅಧ್ಯಕ್ಷಸ್ಥಾನವನ್ನು ಮೈಸೂರು ಡಿ|| ಡೆಪ್ಯುಟಿ ಕಮಿಷನರ್ ಸಾಹೇಬರವರಾದ ಮೆ|| ಕೆ. ವಿ. ಅನಂತರಾಮ್ ಬಿ. ಎ. ಯವರು ವಹಿಸಿದರು. ಸದರಿ ಮೀಟಿಂಗಿಗೆ ಎಲೆಕ್ಟ್ರಿಕ್ ಇಂಜನೀಯರ್‌ರವರು, ಅಸಿಸ್ಟೆಂಟ್ ಇಂಜನೀಯರ್‌ರವರು, ಎಗ್ಸಿಕ್ಯೂಟೀವ್ ಇಂಜನೀಯರ್‌ರವರು, ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು, ಲ್ಯಾಂಡ್ ಅಕ್ವಿಜೇಷನ್ ಆಫೀಸರವರು, ಸೊಸೈಟಿ ಇನ್ಸ್‌ಪೆಕ್ಟರವರು, ಮತ್ತು ಖಾಸಗಿ ದೊಡ್ಡಮನುಷ್ಯರುಗಳೇ ಆದಿಯಾಗಿ ಸುಮಾರು ಎರಡುನೂರು ಜನಗಳು ಆಗಮಿಸಿದ್ದರು. ಪ್ರಾರಂಭದಲ್ಲಿ ಅಧ್ಯಕ್ಷರಿಗೂ ಸಂಘಕ್ಕೂ ಶ್ರೇಯಃಪ್ರಾರ್ಥನೆಯು ಮಾಡಲಾಯಿತು. ಸದರಿ ಸಂಘದ ಆನರರಿ ಸೆಕ್ರೆಟರಿಯವರಾದ ಮ|| ಬಳೆ ಸಿದ್ಧಲಿಂಗಶೆಟ್ಟರವರು ಸಂಘದ ಪರವಾಗಿ ಮೆ|| ಕೆ. ವಿ. ಅನಂತರಾಮ್ ಬಿ. ಎ. ಯವರಿಗೆ ಒಂದು ಬಿನ್ನವತ್ತಳೆಯನ್ನು ಒಪ್ಪಿಸಿದರು. ಅಧ್ಯಕ್ಷರು ಪ್ರತ್ಯುತ್ತರವಾಗಿ ಸಂಘಕ್ಕೆ ಅತ್ಯುನ್ನತವಾದ ತಿಳುವಳಿಕೆಯನ್ನೂ ಮತ್ತು ಮ|| ಬಳೆ ಸಿದ್ಧಲಿಂಗಶೆಟ್ಟರಿಗೂ ಸಂಘಕ್ಕೂ ಸಹ ವಂದನೆಯನ್ನೂ ಸೂಚಿಸಿದರು. ಸಂಘದ ಆನರರಿ ಸೆಕ್ರೆಟರಿಯವರು ವಾರ್ಷಿಕ ರಿಪೋರ್ಟನ್ನು ಓದಿದರು. ಅನಂತರ ಡೈರೆಕ್ಟರುಗಳ ಚುನಾವಣೆ ನಡೆಯಿತು. ಡೈರೆಕ್ಟರುಗಳ ಪೈಕಿ ಮೆ|| ಬಳೆ ಸಿದ್ಧಲಿಂಗಶೆಟ್ಟರೇ ಸೆಕ್ರೆಟರಿಯವರಾಗಬೇಕೆಂದು ಸೊಸೈಟಿ ಪ್ರೆಸಿಡೆಂಟರು ಸೂಚಿಸಿದರು. ಇದಕ್ಕೆ ಸರ್ವರೂ ಅನುಮೋದಿಸಿದರು. ಆ ಮೇಲೆ ಸಂಘದ ಮೆಂಬರುಗಳು ತಮಗೆ ಆಗಬೇಕಾದ ಸೌಲಭ್ಯಗಳನ್ನು ಕೇಳಿಕೊಂಡರು. ಅಧ್ಯಕ್ಷರು ಸಮಯೋಚಿತವಾದ ಸದುತ್ತರವನ್ನು ಕೊಟ್ಟರು. ಅನಂತರ ಸರ್ವರಿಗೂ ಫಲಾಹಾರವು ಜರುಗಿ ಪುನಃ ಮೀಟಿಂಗಿಗೆ ಪ್ರಾರಂಭಗಾಯಿತು. ಆಗ್ಗೆ ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಅಮೋಘವಾದ ಭಾಷಣವನ್ನು ಮಾಡಿದರು. ಬಳಿಕ ಮ|| ಟಿ. ಎಸ್. ಸುಬ್ಬರಾಯರು ಅಧ್ಯಕ್ಷರಿಗೂ, ಸಭಿಕರಿಗೂ ವಂದನೆಯನ್ನು ಸೂಚಿಸಿದರು. ಶ್ರೀಮನ್ ಮಹಾರಾಜರವರ ಹಾಗೂ ಶ್ರೀಮದ್ಯುವರಾಜರವರ ಜಯಘೋಷದೊಡನೆ ಸಭೆಯು ಸಾಯಂಕಾಲ ೬. ಗಂಟೆಗೆ ಸಮಾಪ್ತಿಗೊಂಡಿತು.

Bale Nanjundasetty, Yedatore.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಕೃತ್ತಿಕಾಮಹೋತ್ಸವಸಮಾಪ್ತಿ.

ಬಾಣಾವರ.

ಪ್ರತಿವರ್ಷ ಪದ್ಧತಿಮೇರೆ ಇದೇ ಪ್ರಮೋದೂತನಾಮಸಂವತ್ಸರದ ಕಾರ್ತಿಕ ಶುದ್ಧ ೧ ರಿಂದ ಕಾರ್ತಿಕ ಬಹುಳ 30 ನೇ ಗುರುವಾರದವರೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ರಜತವಿಗ್ರಹವನ್ನು ಬಾಣಾವರ ಹಿರೇಮಠದಲ್ಲಿ ಮಂದಾಸನಗೊಳಿಸಿ ಕೃತ್ತಿಕಾಮಹೋತ್ಸವವನ್ನು ನಡೆಯಿಸಿ ತಾರೀಖು 19-11-30 ನೆಯ ಬುಧವಾರ ಗಣಸಂತರ್ಪಣೆಯು ನಡೆದು ತಾರೀಖು 20-11-30 ನೆಯ ಗುರುವಾರ ಶ್ರೀ ರಂಭಾಪುರೀ ವೀರಸಿಂಹಾಸನಾಧೀಶ್ವರರ ಆಗಮನಕ್ಕಾಗಿ ಹಿರೇಮಠದ ಮುಂಭಾಗದಲ್ಲಿ ಹಾಕಿರುವ ಪೆಂಡಾಲಿನಲ್ಲಿ ಶೃಂಗರಿಸಲ್ಪಟ್ಟ ಮಹಾಸ್ವಾಮಿಗಳ ಸಿಂಹಾಸನ ಮಂಟಪದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ರಜತವಿಗ್ರಹವನ್ನು ಮೂರ್ತಗೊಳಿಸಿ ವಿಧಿವತ್ತಾಗಿ ಮಧ್ಯಾಹ್ನ ಪೂಜಾಸಮಾರಂಭವು ನಡೆದು ರಾತ್ರಿ 9 ಘಂಟೆಗೆ ಭಜನಾಸಂಘದ ಕೇವಲ 6-8 ವರ್ಷಗಳ ಚಿಕ್ಕ ಚಿಕ್ಕ ಬಾಲಕರಿಂದ ಸದರಿ ಪೆಂಡಾಲಿನಲ್ಲಿ ಶ್ರೀ ಜಗದ್ಗುರು ರಂಭಾಪುರೀ ಪೀಠಸ್ಥಾಪಕರಾದ ರೇಣುಕಶಿವಾಚಾರ್ಯರ ರೇಣುಕವಿಜಯವೆಂಬ ನಾಟಕದ ಪ್ರಥಮಾಂಕವು ಅಭಿನಯಿಸಲ್ಪಟ್ಟು ಅನಂತರ ಮಹಾಮಂಗಳಾರತಿಯು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದವರ ಪಂಚಾಚಾರ್ಯರ ಮಂಗಲಸ್ತೋತ್ರಾವಳಿಯಿಂದ ಕಾರ್ಯಭಾಗವು ಪೂರ್ಣಗೊಳಿಸಲ್ಪಟ್ಟಿತು. ಇದರಂತೆ ಪ್ರತಿಯೊಬ್ಬ ವೀರಶೈವಲಿಂಗಾಂಗಿಯು ಗುರುಭಕ್ತಿಯುಕ್ತನಾಗಿ ಗುರುಸೇವಾಭಾಗಿಯಾಗಿ ತನ್ನ ಚಿರಾಯುರಾರೋಗ್ಯಭಾಗ್ಯಾದಿಗಳನ್ನು ಜಗದಾಚಾರ್ಯರಲ್ಲಿ ಬೇಡಿಕೊಳ್ಳಲೆಂದೂ, ಪ್ರತಿಯೊಬ್ಬ ಗುರುಭಕ್ತಿನಿಷ್ಠರಿಗೆ ಶ್ರೀ ಜಗದ್ಗುರುಗಳು ಅವರವರ ಮನೋಭೀಷ್ಟಗಳನ್ನು ಪೂರ್ತಿಗೊಳಿಸಲೆಂದೂ ಹಾರೈಸುವ,

ಬಾಣಾವರ ಪಂಚಾಚಾರ್ಯರ ಭಜನಾಸಂಘದ
ಚೀಫ್ ಸೆಕ್ರೆಟರಿ.
Sajjan Shetty.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮಹಾಗಣಾರಾಧನೆ.

ತಾರೀಖು ೧೭-೧೧-೧೯೩೦ ನೇ ಸೋಮವಾರದ ದಿವಸ ಶ್ರೀ ಎತ್ತಗದ ಗುರುಮಠಾಧಿಕಾರಸ್ಥಾನದಲ್ಲಿ ಮಾಮೂಲ್ ಪದ್ಧತಿಯ ಪ್ರಕಾರ ಶ್ರೀ ಜಗದ್ಗುರು ಪಂಚಾಚಾರ್ಯರ ಹೆಸರಿನ ಗಣಾರಾಧನೆಯು ಮಹಾವೈಭವದಿಂದ ನೆರವೇರಿತು. ಈ ಮಹಾಕಾರ್ಯಾರ್ಥವಾಗಿ ಶ್ರೀ ಮಠಕ್ಕೆ ಸ್ಥಳಪರಸ್ಥಳಗಳಿಂದ ಅನೇಕ ಭಕ್ತಮಹೇಶ್ವರರು ಆಗಮಿಸಿದ್ದರು. ಯಥಾವಿಧಿಯಾಗಿ ಸಂತರ್ಪಣೆಯು ನಡೆದ ಮೇಲೆ ಸಭೆ ಸೇರಿತು. ಅಲ್ಲಿ ಧರ್ಮ ಸಂಬಂಧವಾದ ಅನೇಕ ಉಜ್ವಲವ್ಯಾಖ್ಯಾನಗಳು ನಡೆದವು. ಅನಂತರ ಭಕ್ತರು ಗುರುಕಾಣಿಕೆಯನ್ನರ್ಪಿಸಿ ಆಶೀರ್ವಾದವನ್ನು ಪಡೆದುಕೊಂಡರು. ಪುನಃ ಸಾಯಂಕಾಲ ೫ ಘಂಟೆಗೆ ಸಭೆಸೇರಿತು. ಧರ್ಮ ಕಟ್ಟಳೆಯ ಮೇಲೆ ವೇ|| ಪುರದ ಮಠದ ಲಿಂಗಣಾರಾಧ್ಯರು, ಲಿಂಗಧಾರಣೆಯ ಮೇಲೆ ವೇ|| ಮಲೆಯೂರು ಮಠದ ಪುಟ್ಟಸೋಮಾರಾಧ್ಯರು, ರಾಜಕೀಯ ವಿಚಾರದ ಮೇಲೆ ವೇ|| ಜಿನ್ನಹಳ್ಳಿ ಮಠದ ರೇವಣಾರಾಧ್ಯರು, ಗುರುಭಕ್ತಿಯ ಮೇಲೆ ಮ|| ರಾ|| ಪುಟ್ಟಣ್ಣನವರು, ಆಚಾರದ ಮೇಲೆ ಮ|| ರಾ|| ಪಟೇಲ್ ಸೋಮಣ್ಣನವರು ಮುಂತಾದವರ ಪ್ರಸಿದ್ಧ ಭಾಷಣಗಳಾದವು. ಈ ಮೇಲ್ಕಂಡ ಸಭಾಕಾರ್ಯಕ್ರಮಗಳನ್ನು ವೇ|| ಬೀಚನಹಳ್ಳಿ ಮಠದ ನಾಗಭೂಷಣಾರಾಧ್ಯರು, ವೇ|| ಕೊಂಡವಾಡಿ ತೊಟ್ಟಿಮನೆಯ ನಂಜುಂಡಾರಾಧ್ಯಶಾಸ್ತ್ರಿಗಳವರು ವಹಿಸಿದ್ದ ಕ್ರಮವು ಅಭೂತಪೂರ್ವವಾಗಿತ್ತು. ಅನಂತರ ಸರ್ವರಿಗೂ ಸಮ್ಮೋದಿಯಾಗುವಂತೆ ಶ್ರೀ|| ವೇ|| ದೊಡ್ಡರಾಮಾರಾಧ್ಯಮಹಾಸ್ವಾಮಿಗಳವರು ಉಪಸಂಹಾರ ಭಾಷಣಮಾಡಿದರು. ಆ ಮೇಲೆ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಮಹಾಕಾರ್ಯಕ್ಕೆ ಶ್ರೀ ಮಠದಲ್ಲಿ ಮಾಡಿದ್ದ ಅಲಂಕಾರ ವಿಶೇಷಗಳು ವರ್ಣನಾತೀತವಾಗಿದ್ದವು.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಕೋರ್ಟಿನಲ್ಲಿ ಪ್ರಮಾಣ.

ಶ್ರೀಹಿಮವತ್ಕೇದಾರ್ಯೈಕೋರಾಮ ವೈರಾಗ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಸಂಸ್ಥಾನದಲ್ಲಿ ಬಳ್ಳಾರಿಶೆಟ್ಟರ ಅಳಿಯನಾದ ಮರಿಬಸಪ್ಪನು ಮಾನವವರೊಡನೆ ಗೃಹಕೃತ್ಯದ ಮೂಲಕ ವ್ಯಾಜ್ಯವಾಡಿ ವ್ಯಸನಾಕ್ರಾಂತನಾಗಿ ಕೆಲವು ದಿವಸವಿದ್ದು ಸ್ವಂತ ಖರ್ಚಿಗಾಗಿ ಸಂಸ್ಥಾನದಲ್ಲಿ ಸಹಸ್ರಾರು ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡನು. ಪರಂತು ಸಂಸ್ಥಾನದವರು ಹಣದ ವಿಷಯವಾಗಿ ಎಷ್ಟೋ ಸಲ ವಿಚಾರ ಮಾಡಿದರೂ ಕಾಲವನ್ನು ಕಳೆಯುತ್ತಿದ್ದನು. ಆಮೇಲೆ ಸದರಿ ಮರಿಬಸಪ್ಪನ ಮೇಲೆ ಸಂಸ್ಥಾನ ಪತಿಯಿಂದ ಕೋರ್ಟಿನಲ್ಲಿ ದಾವಾ ದಾಖಲ್ ಮಾಡಲ್ಪಟ್ಟಿತು. ಇದರ ವಿಚಾರಣೆಯು ಪ್ರಾರಂಭವಾದ ಕೂಡಲೆ ಅಧಿಕಾರಿಗಳು ನೀನು ಕೇದಾರ ಸಂಸ್ಥಾನದಲ್ಲಿ ಹಣವನ್ನು ತೆಗೆದುಕೊಂಡಿಲ್ಲವೆಂದು ಪ್ರಮಾಣ ಮಾಡಬಲ್ಲೆಯಾ? ಎಂದು ಕೇಳಿದ ಕೂಡಲೆ ಸದರಿ ಮರಿಬಸಪ್ಪನು ಪ್ರಮಾಣವನ್ನು ಮಾಡಲು ಸಿದ್ಧನಾಗಿ ಶ್ರೀ ಮರಿಸ್ವಾಮಿಗಳ ಮಠದಲ್ಲಿ ಕೋರ್ಟಿನ ಅಧಿಕಾರಿಗಳ ಪ್ರತ್ಯಕ್ಷ ಗುರುಸಾಕ್ಷಿಯಾಗಿ ಜಗದ್ಗುರು ಸ್ಥಾನದ ದ್ರವ್ಯವನ್ನು ತೆಗೆದುಕೊಂಡಿಲ್ಲವೆಂದು ಪ್ರಮಾಣ ಮಾಡಿದನಂತೆ! ಇದು ಹೇಗಾದರೂ ಇರಲಿ;

ಗುರುದ್ರವ್ಯಹರಣದ ವಿಷಯವನ್ನು ಎಲ್ಲರೂ ತಿಳಿದುಕೊಂಡು ಗುರುಗಳಲ್ಲಿ ಭಕ್ತಿಯಿಂದ ವರ್ತಿಸಬೇಕಾಗಿರುವುದರಿಂದ ಅದರ ಸ್ವರೂಪವನ್ನು ಎಲ್ಲರಿಗೂ ತಿಳಿಯಪಡಿಸುವುದಕ್ಕಾಗಿ ಸ್ವಲ್ಪಮಟ್ಟಿಗೆ ಬರೆಯುತ್ತೇನೆ.

ನವಿಷಂ ವಿಷಮಿತ್ಯಾಹುರ್ಗುರುಸ್ವಂ ವಿಷಮುಚ್ಯತೇ |
ವಿಷಮೇಕಾಕಿನಂ ಹಂತಿ ಗುರುಸ್ವಂ ಕುಲನಾಶನಂ ||

ವಿಷಕ್ಕೆ ವಿಷವೆಂದು ಹೇಳಬಾರದು. ಗುರುದ್ರವ್ಯವೇ ಮಹಾವಿಷವೆಂದು ತಿಳಿಯಬೇಕು. ವಿಷವು ತನ್ನನ್ನು ಸ್ವೀಕರಿಸುವವನನ್ನು ಮಾತ್ರ ಕೊಂದುಬಿಡುವದು. ಗುರುದ್ರವ್ಯವು ಅಪಹರಿಸಿದವನ ಕುಲವನ್ನೇ ನಾಶಮಾಡುವದು. ಎಂದು ಆರ್ಯರು ಹೇಳಿರುವುದರಿಂದ ಪ್ರತಿಯೊಬ್ಬರೂ ಗುರುದ್ರವ್ಯದ ವಿಷಯದಲ್ಲಿ ಜಾಗರೂಕರಾಗಿದ್ದು ಗುರುಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದು ಕೋರುತ್ತೇನೆ. ಓರ್ವ ಗುರುಭಕ್ತ.

ನೀತಿಸುಧಾರಸ.

ಮ|| ಆನವಟ್ಟಿ ರಾಮರಾಯ ಕವಿ, ಮೈಸೂರು.

೭. ಪಂಚೇಂದ್ರಿಯಗಳು.

ಭಾ|| ಮೊದಲೆ ರಚಿಸಿರ್ದಂಗಕತಿನೀ |
ಪದೆದು ಹೆಚ್ಚಳಪಡುವುದೋಕೆಂ |
ಪುದಿದಬುದ್ಧಿಗೆ ಭಾವುಭಾವಂ ದೊರೆವುದನುಚಿತವು ||
ಹೃದಯದೊಳಗಾತ್ಮನೆ ಲಸಿಪನಂ |
ಬುದನರಿದು ತನುವಿಗೆರೆಯನು ತಾ |
ನಧಿಕನದ್ಗುಣದಿಂದ ಮೆನ್ನುತೆ ತಿಳಿವುದುಚಿತವಲೆ ||೧||
ಸಲೆಸುಧಾನ್ನವ ಸಡುವಕಾರ್ಯಕೆ |
ನೆಲವದೊದಲುಂ ಹಸನಗೈದೊಡೆ |
ಫಲವಕಾಣತಿಯಾಗಿ ಮಾನವನೊಂದುವನುಮೇಣು ||
ನೆಲದೆ ಕುಂಬರನಗ್ಗಿ ಕುಂಡವ |
ನಲಸದಡೆ ತಾಜವದೆಸಿದ್ಧವ |
ಗೊಳಿಸಿಕೊಳ್ವುದು ರಚಿತ ಸುವರ್ಣಪಾತ್ರೆಗೆಮುನ್ನ ಮೆ ||೨||
ಪವನಪುರುಷನ ಗತಿಯಸರದಿಂ |
ಜವದೆ ಜಲಧಿಯ ವೀಚಿಗಳುತಾ |
ವವನಿಯೊಳು ಮೇರೆಗಳಮೀರದೆ ಪತ್ತಿಪಂಪುದೆನೆ ||
ಸವನಿಪಂತೆಯೆ ಕೇಳಿಲೊಪುಮಾ |
ನವನೆ! ತಾಪ್ರೇರಿಸುವ ನಡಿಸುವ |
ಪವಣವರಿಯುತೆ ದೇಹಯಂತ್ರವನಾತ್ಮ ಸೊಲವಿನಲಿ ||೩||
ನೀರಮೇಲಣಗುಳ್ಳೆಯಂದದಿ |
ತೋರುವೀತನುವಿಗೊಡೆಯನಾತ್ಮನು |
ಗಾರುಗೊಳಿಸುವ ವಿಧದಿ ತನುವಿನಮೇಲೆ ಕರಣಗಳ ||
ವಾರಗಳನಿಬ್ಬಿಸದೆಲಾಪುತ |
ಸಾರಮಹ ತನುವೆನಿಪಭುವನಾ |
ಧಾರವೆಲುಬಂಗಳಾಗಿಹುದೆನುತಲರಿಯೊಮಾನವನೆ ||೪||
ಜಲಧಿತಾಟಗಿಂಗೆ ಮೂಲ |
ಸ್ಥಲಮದಾಗುತಲದುವೆನದಿಯಂ |
ತಲಪದೆಪರಿದು ಪಿಂದಿರುಂಗುತುದಧಿಯನೇಳ್ವಂತೆ ||
ನೆಲದೆಮನುಜನ ಜೀವಮಾನವು |
ನಿಲದೆ ಹೃದಯದೆ ಪೊರಟು ಜವದಿಂ |
ತಳುವಗೊಳ್ಳದೆ ಪೊರಟತಾನಕೆ ತಾ ನೈದುವುದು ||೫||
ಮೇಲಿಯೊರೆದಿಹ ಪೊನಲದೆಲಿತುಂ |
ಜಾಲಮಾನುಗಳ. ನೋಡೆ ದ |
ಯಾಲವಾಲನ ನೀಮವೆಂದರಿದು ಯೋಚಿಸದೆ ||
ಸೀಲಮೇಗ್ರಕ್ಯಾಮನಂಘ್ರಿಯು |
ಕಾಲನೇಮದಿಪಿಡಿದು ಸದ್ಗುಣ |
ಶೀಲನಾಗುತ ಜೀವಿಸಿರ್ಪದೆ ಜನ್ಮ ಸಾರ್ಥಕವು ||೬||
ಪರಿಮಳದ ವಾಸನೆಯನರಿವುದು |
ಮೆರೆವನಾಶಿಕಮಲ್ಲವೆ ? ರಸಗಳ |
ಪರಿಯನರಿವುದು ರಸನೆಯಲ್ಲವೆ ? ಮಿಸೆಯಮೀರ್ದಪರಿ ||
ತರತರದೆ ನೀವಿಸಿರಲುವುಗಳ |
ನಿಮಿಗೈತರದೆಬಿಹುದುಸ್ತಹ |
ವಿರುವಕತದಿಂ ಪರಿಣಮಿಸಿ ಕೇಡಿಗೆಡೆಯಾಗಿರುವ ||೭||

ತನಗೆ ಕೇಡುಗಳೆಂದು ಬಿಡದರೆ |
ತನನಕೆಡೆಯಾಗಿಸದೆಕಾವುದು |
ಮಿನುಗುವಾನಾಮುನೀಂದ್ರಿಯಲ್ಲವೆ ಪೇಳೊಮಾನವನೆ ||
ಮನಕೆ ಗೋಚರವಾಗಲದುವೇ |
ಘನತೆಯೊಂದಿಪ ನಿಜಮದಲ್ಲವು |
ದೆಸುಕಟಿದುಗೆಡಿಗೈಸಿನಾಶಕೆ ಹೇತುವಾಗಿಪುವು ||೮||
ಅವಿನಿಂಪಿನ್ಯಾತ್ಮನಂ ನಂ |
ಮುದದೆ ಮಿತದಿಂದಿತುತೆ ಬೋಧಿಸೆ |
ಯದಕೆ ಸನ್ಮಾರ್ಗವಲಂಬನೆಯನ್ನು ಸಂತತವು ||
ವಿದಿತಮಾದಾ ಸತ್ಯಮಾರ್ಗದೊ |
ಳಮುವೆಚರಿಸಲು ಹದವನಾನುತೆ |
ಮದವವರ್ಜಿತನಾಗಿ ಶಾಂತಿಯನಾಂತು ಬಾಳುವೆಯೊಂ ||೯||
ಕರವುವಿರಚಿಪ ಕಾರ್ಯಮಾರಯೆ |
ಧರೆಯೊಳಚ್ಚರಿಯಾಗಿ ತೋರುತ |
ಲಿರಲು ದೇವನಿನಗದನೀಡಿಹನೆಂದು ಭಾವಿಸುತ ||
ಪರಿಪರಿಯೊಳಳಲಿಂದೆ ನೊಂದುತೆ |
ಕರಕರೆಯ ಬಡುತಿಪ್ಪರ್ಜೀವಿಯ |
ಮೆರೆಯುದರೆ ಪಾಲಿಪುದು ಸಂತತಹಸ್ತಭೂಷಣವು ||೧೦||
ಜಗದ ಜೀವಿಗಳೊಳಗೆ ನೀನೆಯೆ |
ಬಗೆಬಗೆಯವಾಣಿಂದಿರಲು ಗೈದಿಹ |
ಬಗೆಯದೇಂ ಯೋಚಿಸಲು ಸಂತತ ಬಗೆಗೆಬಾರದಿದೆ ||
ಮುಗುದಮಾನವ! ನಿನ್ನೊಳಿಹುದದು |
ಮೊಗದೆಕಾಣ್ಬುದಕೆತದೊಳಮಾ |
ನಗಳನಾನುವಕಾರ್ಯ ಮೆಂದಿಗುರಚಿಸಬಾರದರೆ ||೧೧||
ವದನದೊಳತದರ್ಕೆಂಪನೀಕ್ಷಿಸ |
ಲೊದಗಿಹಾಭಾಯದಿಂ ವಿಕಾರವ |
ನ್ಯೆದುವೆಗೈದಿರೆ ವರ್ಜಿಸುತ ಕೆಲ ಪದಕಾರ್ಯಗಳ ||
ಅದರಿಂ ತಮಪ್ಪದಯ ಗರ್ಭದೊ |
ಳಮಬುತದ ಬಯವಿರ್ಪಕತದಿಂ |
ಬುಧರಮತದಿಂದದನು ವರ್ಜಿಸೆ ಲೋಕಸಮ್ಮತವು ||೧೨||
ಮೆರೆವ ಶಯ್ಯಾಸನದೆ ನಿದ್ರಿಸು |
ತಿರಲು ಸುಖದುಃಖಗಳಭಾವವು |
ಧರದೊಳಾತ್ಮಗೆ ಸೂಚಿಸುವುದದು ಪೂರ್ವಭಾವಿಯೊಳು ||
ಅರಿಮೆಯಿಂ ಯೋಚಿಸುತಲವುಗಳ |
ಗಿರದೆ ಮನ್ನಣೆಯೀವುದೊಳ್ಳಿತು |
ಗಿರಿಧರನಮತದಂತೆ ಯಾದುದೆನುತ ಭಾವಿಪುದು ||೧೩||
ಮುಂದಣದ ಫಲವರಿಯಲಾರೆಯೊ |
ಪಿಂದೆಗೈದಾವಿವಿಧ ಸುಕೃತಗ |
ಳಿಂದೆ ಮಾನವಜನ್ಮಕೈದಿಹೆ ವೃದ್ಧಿಗೈತರುವ ||
ಕಂದರಿಗೆ ಸುಜ್ಞಾನಬೋಧೆಗ |
ಳಂದದಿಂ ಬೋಧಿಸುತ ಭಕ್ತರ |
ಬೃಂದವನು ಸೇವಿಸುತಕಾರ್ಯದೆ ಸಿದ್ಧನಾಗೆಲವೊ !

ಇಂಗ್ಲೆಂಡಿನ ಮುಖ್ಯಮಂತ್ರಿಗಳಾದ ರಾಂಸೇ ಮ್ಯಾಕ್ಡೋನಾಲ್ಡರವರು ರೌಂಡ್ ಟೇಬಲ್ ಕಾನ್ಫರನ್ಸಿನಲ್ಲಿ ಮಾಡಿದ ಭಾಷಣದ ಸಾರಾಂಶ.

ಇಂಗ್ಲೆಂಡಿನ ಪಾರ್ಲಿಮೆಂಟಿನ ಮೆಂಬರುಗಳೂ, ಬ್ರಿಟಿಷ್ ಪ್ರಭುತ್ವದ ಮುಖ್ಯಾಧಿಕಾರಿಗಳೂ, ಭಾರತೀಯ ಮೆಂಬರರೂ ಒಟ್ಟು ಸೇರಿ ಈ ದುಂಡುಮೇಜಿನ ಸುತ್ತಲೂ ಕುಳಿತು ರಾಜಕೀಯತತ್ವಗಳನ್ನು ಆಲೋಚಿಸುವುದೊಂದು ಅಭೂತಪೂರ್ವವಾದ ಸಂಗತಿಯಾಗಿದೆ. ಹಿಂದಿನ ಮತ್ತು ಈಗಿನ ಪರಿಸ್ಥಿತಿಯನ್ನು ಪರಿಭಾವಿಸಿದರೆ ಹಳೆಯ ಹಿಂದುಸ್ಥಾನವು ಬದಲಾವಣೆಯಾಗಿ ಅಲ್ಲಿ ಹೊಸ ಮಾದರಿಯು ಏರ್ಪಾಡಾಗುವುದೆಂದು ಈ ಸಭೆಯ ಪರಿಣಾಮದಿಂದ ನೀವು ನಂಬಬಹುದಾಗಿದೆ. ತಾವು ನನ್ನನ್ನು ಈ ಸಭೆಗೆ ಅಧ್ಯಕ್ಷನನ್ನಾಗಿ ಆರಿಸಿ ನನಗೆ ಅಧಿಕವಾದ ಗೌರವವನ್ನುಂಟುಮಾಡಿರುತ್ತೀರಿ. ಈ ಗೌರವವು ಪ್ರತಿಕ್ಷಣಕ್ಕೂ ಹೆಚ್ಚುತ್ತಲಿದೆ. ಈ ಸಮಾವೇಶವು ಮುಂದಣ ಚರಿತ್ರಾರ್ಹವಾದ ವಿಷಯವಾಗಿದೆ. ಇದುವರೆಗೂ ನೀವೆಲ್ಲರೂ ಆಶಾಜನಕವೂ, ಶ್ಲಾಘನೀಯವೂ ಆಗಿರುವ ಸಾಮಂತಭೂಪಾಲರ ಭಾಷಣಗಳನ್ನೂ, ಹಿಂದೂಸ್ಥಾನದ ಸಮಸ್ತ ಪ್ರತಿನಿಧಿಗಳ ಭಾಷಣಗಳನ್ನೂ, ಹಿಂದೂದೇಶದ ಸ್ತ್ರೀಸ್ವಾತಂತ್ರ್ಯ ವಿಕಸನಕಾರಿಯಾದ ಭಾರತೀಯ ಮಹಿಳೆಯರ ಹೋರಾಟವನ್ನೂ ಸಹ ಕೇಳಿರುತ್ತೀರಿ. ಮಹಿಳೆಯರು ಈ ಮಹಾಕಾರ್ಯದಲ್ಲಿ ಭಾಗಿಗಳಾಗಿರುವುದನ್ನು ನೋಡಿದರೆ ಹಿಂದೂದೇಶವು ಯೋಗ್ಯಸ್ಥಾನಕ್ಕೆ ಅರ್ಹವಾಗಿದೆ ಎಂಬುದನ್ನು ಒಪ್ಪಲೇಬೇಕಾಗುವುದು. ಆ ಸ್ಥಾನವನ್ನು ಒಪ್ಪಿದಮೇಲೆ ದುರಭಿಮಾನದಿಂದ ಅಂಥ ಯೋಗ್ಯತೆ ಇಲ್ಲವೆಂದು ಹೇಳಿ ಹಿಂಜರಿಯುವುದು ಅಸಾಧ್ಯವು. ಇದೆಲ್ಲವೂ ಹಿಂದೂದೇಶದಲ್ಲಿ ಜಾಗೃತಿಯು ವೃದ್ಧಿಯಾಗುವುದಕ್ಕೋಸ್ಕರವೇ ಹುಟ್ಟಿದೆ. ಭರತಖಂಡದ ಮನೋಭಾವವನ್ನು ವಿವರಿಸುವ ಮನೋಹರಗಳಾದ ಭಾಷಣಗಳನ್ನು ಕೇಳಿದ್ದೀವೆ. ಭಿನ್ನಾಭಿಪ್ರಾಯಗಳು ಬಂದೊಡನೆಯೇ ನೀವು ಹಿಂದೂದೇಶಕ್ಕೂ, ನಾವು ಪಾರ್ಲಿಮೆಂಟಿಗೂ ಹಿಂದಿರುಗುವಂತೆ ನಿರಾಶಾಜನಕವಾದುವುಗಳಲ್ಲ. ಆದರೆ ಉಭಯರೂ ಏಕೀಭವಿಸಿ ಕ್ಲಿಷ್ಟ ಸಮಸ್ಯೆಯನ್ನು ಸುಗಮವಾಗಿ ಮಾಡಿ ಒಂದು ರೀತಿಯಿಂದ ಒಪ್ಪಂದಕ್ಕೆ ತರಬೇಕಾಗಿದೆ. ನೀವು ಈ ಸಭೆಯಲ್ಲಿ ಮಾತ್ರವೇ ಭಾಷಣಮಾಡದೆ ಲಂಡನ್ನಿನ ಇತರ ದೊಡ್ಡಸಭೆಗಳಲ್ಲಿ ಭಾಷಣಮಾಡಿದ್ದೀರಿ. ಮಿ|| ವಿ. ಎಸ್. ಶಾಸ್ತ್ರಿಗಳವರು ಅಮೋಘವಾದ ವಾಗ್ಸರಿಯಿಂದ ತಮ್ಮ ಅಭಿಪ್ರಾಯವನ್ನು ಬದಲಾಯಿಸಿದ್ದೇವೆಂದು ಮುಕ್ತಕಂಠದಿಂದ ಹೇಳಿದ್ದಾರೆ. ಕಳೆದ ಕೆಲವು ದಿವಸಗಳಿಂದ ಅಭಿಪ್ರಾಯವನ್ನು ಬದಲಾಯಿಸಿರುವವರಲ್ಲಿ ಮಿ|| ಶಾಸ್ತ್ರಿಗಳೊಬ್ಬರೇ ಅಲ್ಲ. ಮಹತ್ವಾಕಾಂಕ್ಷೆಗಳಿಂದಲೂ ಉದಾತ್ತವಿಚಾರಗಳಿಂದಲೂ, ಉಚ್ಚಧ್ಯೇಯಗಳಿಂದಲೂ ಕೂಡಿರುವ ಅಭಿಪ್ರಾಯವು ಬದಲಾಯಿಸಲ್ಪಡುವುದು ನಮಗೆ ಸಮ್ಮತವಲ್ಲವು. ಆದರೆ ನಾವು ಈ ಪರಿಷತ್ತನ್ನು ಪರಿಸಮಾಪ್ತಿಗೊಳಿಸುವುದಕ್ಕೆ ಪೂರ್ವದಲ್ಲಿ ಹೊಸದಾಗಿ ಬರತಕ್ಕ ಸಮಸ್ಯೆಯನ್ನು ಕಾರ್ಯತಃ ಅನುಷ್ಠಾನಕ್ಕೆ ತರಲು ಯೋಗ್ಯವಾಗುವಂತೆ ಅಭಿಪ್ರಾಯವನ್ನು ಬದಲಾಯಿಸುವುದು ಅವಶ್ಯವಾಗಿದೆ. ನಿಮ್ಮ ಭಾಷಣಗಳು ಈ ಪಟ್ಟಣದ ಜನಸಾಮಾನ್ಯದ ಅಭಿಪ್ರಾಯದಮೇಲೆ ಪ್ರಬಲವಾದ ಪರಿಣಾಮವನ್ನುಂಟುಮಾಡಿವೆ. ನಮ್ಮ ಮುಂಭಾಗದಲ್ಲಿ ಕುಳಿತಿರುವ ಚಿಕ್ಕ ಸಮಾಜದವರಿಗೆ ಅವರ ಪ್ರಯತ್ನವು ವಿಫಲವಾಗುವುದಿಲ್ಲವೆಂದು ಸಮಾಧಾನಕರವಾದ ಭರವಸೆಯನ್ನು ಕೊಡುತ್ತೇನೆ. ಈ ಭಾಷಣಗಳು ಪ್ರಶ್ನೆಗಳನ್ನು ಚರ್ಚಿಸಬೇಕೆಂಬ ಉದ್ದೇಶದಿಂದ ಹೇಳಿದುವುಗಳಲ್ಲ. ನಾವು ಚರ್ಚಿಸುವುದಕ್ಕೆ ಕುಳಿತಿರುವುದಿಲ್ಲ. ಒಂದು ಶ್ರೇಷ್ಠಕೃತ್ಯವನ್ನು ಮಾಡಲು ಸೇರಿರುತ್ತೇವೆ. ನೀವೆಲ್ಲರೂ ರಾಜಕೀಯ ಕಾರ್ಯದಲ್ಲಿ ಅನುಭವಿಗಳಿರುತ್ತೀರಿ. ಈ ಕಾರ್ಯವು ಪೂರೈಸಿದ ಮೇಲೆ ನೀವೆಲ್ಲರೂ ದೊಡ್ಡ ಜವಾಬ್ದಾರಿಯನ್ನು ವಹಿಸಬೇಕಾಗುವುದು. ನನ್ನ ಸ್ನೇಹಿತರೂ ಮತ್ತು ನಾನೂ ರಾಜಕೀಯ ಜವಾಬ್ದಾರಿಯನ್ನು ವಹಿಸಿದಂತೆ ನೀವೂ ಜವಾಬ್ದಾರಿಯನ್ನು ವಹಿಸಿದ್ದಾದರೆ ಸ್ವಭಾವಸಿದ್ಧವಾದ ನಿಯಮಗಳಿಂದ ರಾಜಕೀಯ ತತ್ವವು ವಿಕಾಸವನ್ನು ಹೊಂದಿ ಕಾರ್ಯರೂಪದಲ್ಲಿ ಪರಿಣಮಿಸುವುದು.

1800 ನೆಯ ವರ್ಷದಲ್ಲಿ ಏನಾಯಿತೆಂಬುದನ್ನು ದಫ್ತರ್ ಬರೆಯುವುದಕ್ಕೆ ನಾವು ಇಲ್ಲಿ ನೆರೆದಿರುವುದಿಲ್ಲ. ನಾವು ಭೂತಕಾಲದ ದಫ್ತರ್ ಬರೆಯುವವರಲ್ಲ. ಭವಿಷ್ಯದ ಮೇಲ್ವಿಚಾರಕರು. 1930ನೆಯ ವರ್ಷದಲ್ಲಿ ಯಾವ ಪರಿಸ್ಥಿತಿಯುಂಟಾಗಿದೆ. ಅದನ್ನು ಯಾವ ರೀತಿಯಿಂದ ನಿರ್ವಹಿಸಬೇಕೆಂಬುದೇ ನಮ್ಮ ಮುಂದಿನ ಪ್ರಬಲವಾದ ಸಮಸ್ಯೆಯಾಗಿದೆ. ನೀವು ಪ್ರಭುತ್ವದವರ ಯಾವ ಪ್ರಕಟನೆಗಳನ್ನು ಅಭಯವಚನಗಳೆಂದು ನಂಬಿ ಅಂಗೀಕರಿಸಿದ್ದೀರೋ ಅವುಗಳನ್ನು ಅತಿಕ್ರಮಿಸಬೇಕೆಂದು ನಮ್ಮಲ್ಲಿ ಕೆಲವರು ಅಭಿಪ್ರಾಯಪಡುತ್ತಾರೆಂದು ಅನೇಕರು ಹೇಳುವುದುಂಟು. ಪ್ರಾಯಶಃ 1917 ರಿಂದ ಇಲ್ಲಿಯವರೆಗೆ ಹೇಳಿರುವ ವಚನಗಳನ್ನೆಲ್ಲಾ ತಿರಸ್ಕರಿಸಬೇಕೆಂದು ನಾವು ಹೇಳುವುದಿಲ್ಲ. ಬ್ರಿಟಿಷ್ ಸರ್ಕಾರದವರು ಅಧಿಕಾರವಾಣಿಯಿಂದ ಹೊರಬಿದ್ದಿರುವ ಪ್ರತಿಯೊಂದು ವಚನವನ್ನೂ ಅಂಗೀಕರಿಸುತ್ತಾರೆ. ಅಧಿಕಾರಿಗಳ ವಚನವನ್ನು ಒಪ್ಪುವುದರಿಂದಲೇ ಈ ಸಮ್ಮೇಳನವು ಇಲ್ಲಿ ನೆರೆದಿದೆ. ನಾವು ಸರ್ಕಾರದ ಅಭಯವಚನವನ್ನು ನಡೆಯಿಸಲು ಸಿದ್ಧರಾಗಿದ್ದೇವೆಂಬುದನ್ನು ತೋರಿಸಲು ಬೇಕಾದಷ್ಟು ಆಧಾರಗಳಾಗಿವೆ. ಉಭಯುಕ್ತ ವಿಷಯಗಳನ್ನು ನಾವು ಧೈರ್ಯದಿಂದ ವಿಮರ್ಶಿಸಬೇಕಾಗಿದೆ. ನನಗೆ "ಕಠಿಣ" ಎಂಬ ಶಬ್ದವೇ ಸೇರುವುದಿಲ್ಲ. ಮನುಷ್ಯನು ಕಾರ್ಯವು ಕಠಿಣವಾದುದೆಂದು ಗೊಣಗುಟ್ಟಿದರೆ ಅವನ ದೌರ್ಬಲ್ಯವೂ, ಅವನನ್ನು ಅಪಜಯಲಕ್ಷ್ಮಿಯು ಆಲಂಗಿಸಿರುವಳೆಂಬುದೂ ಸ್ಪಷ್ಟವಾಗುತ್ತದೆ. ಜಗತ್ತಿನಲ್ಲಿ ಎರಡು ತರಹದ ಜನಗಳಿದ್ದಾರೆ. ಮೊದಲನೆಯ ವರ್ಗದ ಮನುಷ್ಯನು ಒಂದು ಕಾರ್ಯವು ಕ್ಲಿಷ್ಟವಾಗಿದ್ದರೂ ಅದನ್ನು ಪೂರ್ವಾಪರ ವಿಮರ್ಶೆ ಮಾಡದೆ ಕೊಂದರೆಯಿಲ್ಲದೆ ಅದನ್ನು ನಿರ್ವಹಿಸಬಲ್ಲೆನೆಂದು ಊಹಿಸಿ ದಿಟ್ಟತನದಿಂದಿರುವನು. ಇನ್ನೊಂದು ವರ್ಗದ ಮನುಷ್ಯನು ತಾನು ಕೈಕೊಂಡ ಕಾರ್ಯದಲ್ಲಿ ಸ್ವಲ್ಪ ವಿಘ್ನವು ಬಂದೊಡನೆಯೇ ಅದನ್ನು ಇಲ್ಲಿಗೆ ನಿಲ್ಲಿಸಿಬಿಡೋಣವೆಂದು ಯೋಚಿಸುತ್ತಾನೆ. ಅವನಿಗೆ ಮುಂದಿನ ದಾರಿಯೂ ಸಹ ತೋಚದೆ ಹಿಂದಕ್ಕೆ ಹೋಗುವ ಉಪಾಯವನ್ನೂ ಸಹ ಕಾಣದೆ ಅವನು ಅಲ್ಲಿಯೇ ನಿಂತುಬಿಡುವನು. ಇಂಥ ಮನುಷ್ಯನಿಂತೂ ಕೇವಲ ನಿಷ್ಪ್ರಯೋಜಕನು! ಮೇಲ್ಕಂಡ ಉಭಯ ವರ್ಗಗಳ ಮನುಷ್ಯರಿಂದಲೂ ಏನೂ ಪ್ರಯೋಜನವಾಗುವುದಿಲ್ಲ. ಆದರೆ ವಿಘ್ನಗಳು ಬಂದೊದಗಿದರೂ ಅವುಗಳನ್ನು ಧೈರ್ಯದಿಂದ ಎದುರಿಸಿ ತನ್ನ ಕಾರ್ಯನಿರ್ವಾಹಶಕ್ತಿಯನ್ನೂ ಚತುರತೆಯನ್ನೂ ಉಪಯೋಗಿಸಿ ಎಂಥ ಅಸಾಧ್ಯಕಾರ್ಯವನ್ನಾದರೂ ಸುಸಾಧ್ಯವನ್ನಾಗಿ ಮಾಡುವವನೇ ನಿಜವಾದ ಮನುಷ್ಯನು, ಚತುರನೂ, ದಕ್ಷನೂ, ಕಾರ್ಯನಿರ್ವಾಹಕನೂ. ಉದಾರಹೃದಯನೂ ಆದ ಮನುಷ್ಯನೇ ಹಿಂದೂದೇಶಕ್ಕೂ ಮತ್ತು ಈ ದೇಶಕ್ಕೂ ಜಯವೂ ಗೌರವಪ್ರತಿಷ್ಠೆಗಳೂ ಲಭಿಸುವಂತೆ ಮಾಡುವನು. ಈ ಉದಾತ್ತಧ್ಯೇಯವನ್ನು ಮುಂದಿಟ್ಟುಕೊಂಡೇ ಕಠಿಣ ಪ್ರಶ್ನೆಗಳನ್ನು ಬಿಡಿಸಲು ನಾವು ಯತ್ನಿಸಬೇಕು. ಇತ್ತೀಚೆಗೆ ನಡೆದ ಸಾಮ್ರಾಜ್ಯಸಭೆಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಇಂಥ ಬಿಕ್ಕಟ್ಟಾದ ಪ್ರಶ್ನೆಗಳನ್ನೇ ವಿಮರ್ಶಿಸಬೇಕಾಯಿತು. 1926ನೆಯ ವರ್ಷದ ಸಾಮ್ರಾಜ್ಯಸಭೆಯಲ್ಲಿ ಒಂದು ಪ್ರಕಟಣೆಯು ಮಾಡಲ್ಪಟ್ಟಿತು. 1930ನೆಯ ಸಭೆಯಲ್ಲಿ ಆ ಪ್ರಕಟನೆಗೆ ಅನುಕ್ರಮಣಿಕೆಯನ್ನು ಹಾಕಬೇಕಾಯಿತು. ಇಲ್ಲಿರುವ ನಮ್ಮೆಲ್ಲರ ಸ್ಥಿತಿಯೂ ಸಹ ಹಾಗೆಯೇ ಇದೆ.

ಈ ದಿವಸ ಪ್ರಾತಃಕಾಲ ಉಪನ್ಯಾಸಮಾಡಿದವರಲ್ಲಿ ಒಬ್ಬರು ಸರ್ಕಾರವು ಜನಗಳ ಸರ್ಕಾರ; ಜನರಿಂದ ರಚಿಸಲ್ಪಟ್ಟದ್ದು; ರಾಜ್ಯಾಂಗರಚನೆಯನ್ನು ಇನ್ನೊಬ್ಬರಿಗೆ ಹೇಳಿ ಮಾಡಿಸಲಾಗುವುದಿಲ್ಲವೆಂದು ಹೇಳಿದರು. ರಾಜ್ಯಾಂಗರಚನೆಯನ್ನು ಬೆಟ್ಟಗೆ ಕುಳಿತುಕೊಂಡು ಮಾಡುವುದು ಸಾಧ್ಯವಿಲ್ಲ. ನಾನು ನಿಮ್ಮ ಸಹೋದರನಾಗಿದ್ದು ಅದರ ಕುಂದುಕೊರತೆಗಳನ್ನು ಸಾಧ್ಯವಾದಮಟ್ಟಿಗೆ ಬಲ್ಲವನಾದ್ದರಿಂದ ರಾಜ್ಯಾಂಗರಚನೆಯು ಕೇವಲ ಒಬ್ಬರಿಂದಲೇ ಆಗುವುದು ಅಸಾಧ್ಯವೆಂದು ಸ್ಪಷ್ಟವಾಗಿ ಹೇಳಬಲ್ಲೆನು. ವಿದ್ಯಾವಂತರೂ ಅನುಭವಿಗಳೂ, ಇಂಥ ಸಮಸ್ಯೆಗಳನ್ನು ವಿಮರ್ಶಿಸಿದವರೂ ಆದ ನಾವು ಉಭಯರೂ ಏಕೀಭವಿಸಿ ಪರಸ್ಪರ ವಿಶ್ವಾಸಗಳಿಂದ ಒಂದು ಸ್ಥಳದಲ್ಲಿ ಕಲೆತು ಕ್ಲಿಷ್ಟವಾದ ಪ್ರಶ್ನೆಯನ್ನು ಸುಲಭವಾಗಿ ಬಿಡಿಸುವ ಉಪಾಯವನ್ನು ಕಂಡುಹಿಡಿಯಬೇಕು. ಅನಂತರ ನಮ್ಮ ಉಪಾಯವು ಫಲಕಾರಿಯಾಗಿ ನಮ್ಮ ಜನಗಳಿಗೆ ಸೌಖ್ಯವೂ ಶಾಂತಿಯೂ ಪ್ರಾಪ್ತಿಯಾದಾಗ ನಾವು ಮಾಡಿದ ಕಾರ್ಯಕ್ಕಾಗಿ ಅಭಿಮಾನಪಡಬೇಕು. ಇಲ್ಲಿ ಸಾಮಂತರಾಜರೂ, ಹಿಂದುಗಳೂ, ಮಹಮ್ಮದೀಯರೂ, ಚಿಕ್ಕ ಸಮಾಜದವರೂ, ಬರ್ಮಾದೇಶದವರೂ ತಮ್ಮ ತಮ್ಮ ಕಷ್ಟಗಳು ನಿವಾರಣೆಯಾಗಲೆಂದು ಇಲ್ಲಿ ನೆರೆದಿದ್ದಾರೆ. ಈ ಸಭೆಯಲ್ಲಿ ನಿರ್ದಾಕ್ಷಿಣ್ಯವಾಗಿ ಮಾತನಾಡುವುದಕ್ಕೂ, ಆಕ್ಷೇಪಿಸುವುದಕ್ಕೂ, ಸಲಹೆಗಳನ್ನು ತಿರಸ್ಕರಿಸುವುದಕ್ಕೂ ಪೂರ್ಣ ಸ್ವಾತಂತ್ರ್ಯವಿದೆ. ಇದೊಂದು ದೊಡ್ಡ ಲಾಭವೆಂದು ಹೇಳದಿರಲಾರೆನು. ಉಭಯರಿಗೂ ಪರಸ್ಪರ ಸಹಾನುಭೂತಿಯು ಉತ್ಪನ್ನವಾಗಿದೆ.

ಈ ವಿಷಯವು ಉಳಿದಿದೆ, ಆ ವಿಷಯವು ಉಳಿದಿದೆ ಎಂಬ ಶಬ್ದವು ನನ್ನ ಮನಸ್ಸಿಗೆ ಬರುವುದಿಲ್ಲ. ನಾವು ಹಾಗೆ ಹೇಳಿದ್ದಾದರೆ ಕಾಸಿಕಾಸಿಗೆ ಬಡ್ಡಿ ಹಾಕುವ ಕೋಮಟಿಗರಾಗುವೆವು. ಎಲ್ಲಾ ವಿಷಯಗಳನ್ನೂ ಈಗಿನ ಸ್ಥಿತಿಗಳಿಗನುಸರಿಸಿ ಹೇಗೆ ಯೋಜನೆಮಾಡಬೇಕೆಂಬುದನ್ನು ವಿಮರ್ಶಿಸಬೇಕು. ಒಪ್ಪಂದವಾದ ಆರು ವಾರಗಳಲ್ಲಿಯೇ ನೀವೂ ನಾವೂ ಜವಾಬ್ದಾರಿಯನ್ನು ವಹಿಸಬೇಕಾಗುವುದೆಂಬುದನ್ನು ಬಲ್ಲವರೇ ಇದ್ದೀರಿ.

ನೀವು ಹಿಂದೂಸ್ಥಾನದಲ್ಲಿ ಜನಾಭಿಪ್ರಾಯವನ್ನೂ ಚಳವಳಿಯನ್ನೂ ಪ್ರತಿಬಂಧಮಾಡಲು ಸಿದ್ಧರಾಗಿರಬೇಕು. ಪ್ರಾಯಶಃ ನೀವು ಹಿಂದಿರುಗಿದಾಗ ನಿಮಗೆ ಸುಖಾಗಮನವನ್ನು ಬಯಸುವುದಕ್ಕಾಗಿ ಹಿಡಿಯಲ್ಪಡುವ ಕರಿಯ ನಿಶಾನೆಗಳಿಗೂ ಸಹ ಹಿಂಜರಿಯಬಾರದು. ಅದರಂತೆ ನಮಗೂ ಸಹ ಈ ದೇಶದಲ್ಲಿ ಜನಾಭಿಪ್ರಾಯವನ್ನು ಎದುರಿಸುವ ಪ್ರಸಂಗವು ಪ್ರಾಪ್ತವಾಗುವುದು. ಸಾಮಂತರಾಜರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಿರುವುದು ನಮಗೆ ಬಹು ಆನಂದವನ್ನುಂಟುಮಾಡಿದೆ. ಇದು ನಮ್ಮ ಮುಂದಿನ ಕರ್ತವ್ಯವನ್ನು ಬಹು ಸುಲಭಮಾಡಿತು. ಸಾಮಂತರಾಜರು ಹಿಂದೂದೇಶದ ಸಂಯುಕ್ತಸಂಸ್ಥಾನದ ರಚನೆಗೆ ಪ್ರಬಲವಾದ ಸಹಾಯಮಾಡಿದರು.

ನಾನು ಈ ಮೊದಲು ಹಿಂದೂದೇಶದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ ನಿಮ್ಮ ಸುಂದರವಾದ ಪ್ರಾಚೀನ ಶಿಲ್ಪಶಾಸ್ತ್ರವನ್ನು ಬಲ್ಲವನಾಗಿದ್ದೇನೆ.

ಭಾರತೀಯರ ಮನಸ್ಸು ಅತ್ಯಂತ ಸುಂದರಗಳಾದ ಕಟ್ಟಡಗಳನ್ನು ರಚಿಸುವ ಶಿಲ್ಪಕಲೆಯಲ್ಲಿ ವಿಕಾಸವಾಗುವುದನ್ನು ಅತ್ಯಾನಂದದಿಂದ ಕೊಂಡಾಡುತ್ತೇನೆ. ನಿಮ್ಮ ಸ್ವಭಾವಸಿದ್ಧಗಳಾದ ಆಧ್ಯಾತ್ಮಿಕವಾದ ವಿಚಾರಗಳಿಗೆ ಅನುಗುಣವಾದ "ರಾಜ್ಯಾಂಗ ರಚನೆ" ಎಂಬ ಸುಂದರವಾದ ಕಟ್ಟಡವನ್ನು ನಾವು ಸದ್ಯಃ ನಿರ್ಮಿಸಬೇಕಾಗಿದೆ. ನಿಮಗೆ ಅನನುಗುಣವಲ್ಲದ ರಾಜ್ಯಾಂಗರಚನೆಯನ್ನು ಮಾಡುವುದಾದರೆ ನಿಮಗೆ ಸಹಕಾರಿಯಾಗಲಾರದು. ಉಭಯರ ಆರ್ಯಸಂಸ್ಕೃತಿಯು ಕಳಹದಿಯ ಕುಟುಂಬವಾಗಿದೆ. ಬೇಗಂಪಹಲವಾಜರವರು ನೆನ್ನೆ ಹೇಳಿದಂತೆ ವಾತ್ಸಲ್ಯವು ಒಂದು ಕುಟುಂಬದಿಂದ ಒಂದು ಹಳ್ಳಿಗೂ ಅನಂತರ ಜಿಲ್ಲೆಗೂ ವಿಸ್ತಾರವಾಗುತ್ತಾ ಹೋಗುವಹಾಗೆ ನಾವು ಸ್ಥಾಪಿಸುವ ಸಂಯುಕ್ತ ಪ್ರಭುತ್ವವು ವೃದ್ಧಿಯಾಗುವುದಾಗಿರಬೇಕು. ಸಂಯುಕ್ತ ಪ್ರಭುತ್ವವೇ ಉಭಯರಾಷ್ಟ್ರಗಳಿಗೂ ತೃಪ್ತಿಕರವಾದುದಾಗಿದೆ. ಈ ವಿಷಯದಲ್ಲಿ ಉಪಯುಕ್ತಗಳಾದ ಐದು ಅಂಶಗಳಿವೆ. ಫೆಡರೇಷನ್ ರಚನೆಯಲ್ಲಿ ರಬೇಕಾದ ಭಾಗಗಳ ರೀತಿಯು ಹೇಗಿರಬೇಕು? (2) ಏಕೀಕರಣಮಾಡುವ ಕೇಂದ್ರಸರಕಾರದ ರೀತಿಯು ಹೇಗಿರಬೇಕು? (3) ಅತ್ರಿತರಾಷ್ಟ್ರಗಳಿಗೂ ಕೇಂದ್ರ ಪ್ರಭುತ್ವಕ್ಕೂ ಇರತಕ್ಕ ಸಂಬಂಧಗಳಾವುವು? (4) ಚಿಕ್ಕ ಸಮಾಜದವರು ಸಂತೋಷದಿಂದ ಸಹಾಯ್ಯಾಕರಿಸಬೇಕಾದರೆ ಯಾವ ಜೋಡಣೆಗಳನ್ನು ಮಾಡಬೇಕು. (5) ಅದರ ಅಧಿಕಾರವೂ, ಕಾರ್ಯವೂ, ಜವಾಬ್ದಾರಿಯು ಏನು? ನಾವೆಲ್ಲರೂ ಸೇರಿ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕಂಡುಹಿಡಿದು ಅದನ್ನು ಒಂದು ಕಾಯಿದೆಯಾಗಿ ಮಾಡುವುದಕ್ಕೆ ಪಾರ್ಲಿಮೆಂಟಿನ ಮುಂದಿಡಬೇಕು. ನಾವು ನಿರ್ಮಿಸುವ ರಾಜ್ಯಾಂಗವ್ಯವಸ್ಥೆಯು ಅನುಷ್ಠಾನಕ್ಕೆ ತರಲು ಯೋಗ್ಯವಾಗಿರಬೇಕು. ನಮ್ಮ ಹಿರಿಯರು ಸಂಪಾದಿಸಿದ ಪಿತ್ರಾರ್ಜಿತ ಆಸ್ತಿ ಎಂದು ಅನುಷ್ಠಾನಕ್ಕೆ ತರಲು ಸಾಧ್ಯವಿಲ್ಲದೆ ನಿಮ್ಮ ಮೊಮ್ಮಕ್ಕಳೂ, ಮರಿಮಕ್ಕಳೂ ಗಿಂಮಕ್ಕಳೂ ಪೂಜಿಸುವಹಾಗಿರಬಾರದು. ನಮ್ಮ ಡೊಮಿನಿಯನ್‌ಗಳ ರಾಜ್ಯಾಂಗ ರಚನೆಯೂ ಹಾಗೆಯೇ ಇದೆ. ಕೆನಡಾ, ಆಸ್ಟ್ರೇಲಿಯಾ ಮೊದಲಾದ ಡೊಮಿನಿಯನ್‌ಗಳಲ್ಲಿಯೂ, ಜೈಲಿಗೆ ಹೋದವರೂ, ಭಯಂಕರ ಚಳವಳಿಗಳನ್ನೆಬ್ಬಿಸಿದವರೂ ಅನೇಕರಾಗಿ ಹೋಗಿರುವರು. ಒಂದು ಉಚ್ಚ ತತ್ವವು ವಿಕಾಸವಾಗಿ ವೃದ್ಧಿಯಾಗಬೇಕಾದರೆ ಅವೆಲ್ಲವೂ ಅವಶ್ಯಕವಾದಂಶಗಳಾಗಿವೆ. ಸ್ವಭಾವಸಿದ್ಧಗಳಾದ ನಿಯಮಗಳಿಂದ ಒಂದು ತತ್ವವು ಹೇಗೆ ವಿಕಾಸವಾಗುವುದೆಂಬುದನ್ನು ಹಿಂದೂ ಮತ್ತು ಮಹಮ್ಮದೀಯ ತತ್ವಜ್ಞಾನ ವಿಶಾರದರಿಗಿಂತ ಚೆನ್ನಾಗಿ ಬಲ್ಲವರು. ನಿಮ್ಮ ಕಾರ್ಯಗಳಿಗೆ ಬ್ರಿಟಿಷ್ ಸರ್ಕಾರದ ಸಹಾನುಭೂತಿಯಿದೆ. ಸಮಿತಿಯ ಪರಿಣಾಮವು ಉಭಯರಾಷ್ಟ್ರಗಳಿಗೂ ಮೈತ್ರಿಯು ವೃದ್ಧಿಯಾಗುವುದಕ್ಕೆ ಸಹಕಾರಿಯಾಗುವುದೆಂದು ನಿರೀಕ್ಷಿಸುತ್ತೇನೆ. ಮುಂದಿನ ಕಾರ್ಯಕಲಾಪಗಳಲ್ಲಿ ನನ್ನ ಸಹಾಯವನ್ನು ಅಪೇಕ್ಷಿಸಿದರೆ ನಾನು ಯಾವಾಗಲೂ ನಿಮಗೆ ನೆರವಾಗಲು ಸಿದ್ಧನಿರುತ್ತೇನೆಂದು ನೀವು ನಂಬಬಹುದು.

ಪಂಚಾಚಾರ್ಯ ಪ್ರಭಾ.

೧೯೩೦ನೇ ಡಿಸಂಬರ್ ತಾ|| ೧ನೆಯ ಸೋಮವಾರ.

ಇಂಗ್ಲೀಷ್ ಭಾಷೆಯ ಪ್ರಭಾವವೂ ಗುರುಭಕ್ತಿಯಲಕ್ಷಣವೂ.

ಶ್ರೀ ಪರಮೇಶ್ವರನು ಮಾನವಪ್ರಾಣಿಯ ಉದ್ಧಾರಕ್ಕೋಸ್ಕರ ತಾನೇ ಗುರುರೂಪವನ್ನು ಧರಿಸಿ ಭೂಲೋಕದಲ್ಲಿ ಸಂಚರಿಸುತ್ತಾನೆಂದು ಘಂಟಾಘೋಷವಾಗಿ ಪ್ರತಿಪಾದಿಸುವ ಶಿವಾಗಮಗಳ ಸಿದ್ಧಾಂತವು ಪ್ರತಿಯೊಬ್ಬ ಆಸ್ತಿಕರಿಗೂ ತಿಳಿದಂತವಾಗಿದೆ. ಆದುದರಿಂದಲೇ ಲೋಕದಲ್ಲಿ "ಗುರು" ಎಂಬ ವಸ್ತುವು ಅಸಾಧಾರಣವಾದ ಪೂಜ್ಯಸ್ಥಾನವನ್ನು ಹೊಂದಿ ಮೆರೆಯುತ್ತಿರುವುದು. ಸನಾತನಧರ್ಮವನ್ನವಲಂಬಿಸಿರುವ ಭಾರತೀಯರು ದೇವರಿಗಿಂತಲೂ ಗುರುಗಳಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ನಡೆದುಕೊಳ್ಳುವ ವಿಷಯವು ಚಿಕ್ಕ ಬಾಲಕರಿಗೂ ಸಹ ವೇದ್ಯವಿದೆ. ಇವರು ತಮ್ಮ ತಮ್ಮ ಗುರುಗಳ ವಿಷಯದಲ್ಲಿ ಪ್ರಾಣವನ್ನು ಸಹ ಒಪ್ಪಿಸುತ್ತಲಿರುವರು. ಎಷ್ಟೋ ಪ್ರಾಂತಗಳಲ್ಲಿಯ ಜನರು ತಮ್ಮ ತಮ್ಮ ಗುರುಗಳ ಉತ್ಸವಾದಿಗಳ ಬಗ್ಗೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿಕೊಂಡಿರುವರಲ್ಲದೆ, ಒಂದೊಂದು ಸಮಯದಲ್ಲಿ ಪ್ರಾಣವನ್ನು ಸಹ ಅರ್ಪಿಸಿರುವರು. ಇವರೇ ನಿಜವಾದ ಗುರುಭಕ್ತರೆಂದು ಕೈಯೆತ್ತಿ ಸಾರಬಹುದಾಗಿದೆ. ಪೂರ್ವಕಾಲದಲ್ಲಿದ್ದ ಇಂತಹ ಗುರುಭಕ್ತಿಯು ಸದ್ಯಃ ಕಲಿಮಹಿಮೆಯಿಂದ ದಿನೇ ದಿನೇ ಕ್ಷೀಣದಶೆಯನ್ನು ಹೊಂದುತ್ತ ನಡೆದಿರುವದನ್ನು ನೋಡಿ ಆಸ್ತಿಕಮಹಾಜನಗಳು ಕೊರಗಹತ್ತಿರುವರು. ಆದರೆ ಈ ತರಹದಕಾಲವು ಬಹುದಿವಸಗಳವರೆಗೆ ನಿಲ್ಲಲಾರದೆಂದು ನಿಃಸಂಶಯವಾಗಿ ಹೇಳಬಹುದಾಗಿದೆ. ಈಗ್ಗೆ ೨೫೦೦ ವರ್ಷಗಳ ಪೂರ್ವದಲ್ಲಿದ್ದ ಅಶೋಕಚಕ್ರವರ್ತಿಯ ಕಾಲದಲ್ಲಿ ಇಡೀ ಭರತಖಂಡವು ನಾಸ್ತಿಕಮಯವಾಗಿ ಹೋಗಿದ್ದಿತು. ಎಲ್ಲಿ ನೋಡಿದರೂ "ದೇವರಿಲ್ಲ; ದೇವರಿಲ್ಲ; ಸುಖವೇ ಸ್ವರ್ಗ; ದುಃಖವೇ ನರಕ." ಎಂಬ ನಾಸ್ತಿಕವಾದವೇ ತಲೆದೋರಿಹೋಗಿದ್ದಿತು. ಆಗ್ಗೆ ಕೆಲಜನ ಮಹಾತ್ಮರು ಉದಯಿಸಿ ನೂರಾರು ವರ್ಷಗಳಲ್ಲಿ ಆ ನಾಸ್ತಿಕವಾದವನ್ನೆಲ್ಲಾ ನಾಶಮಾಡಿ, ಭರತಖಂಡದಲ್ಲಿ ಬೌದ್ಧಮತದ ಬೇರನ್ನೇ ಕಿತ್ತೊಗೆದು ಈ ಖಂಡವನ್ನು ಮೊದಲಿನಂತೆ ಆಸ್ತಿಕಮಯವನ್ನಾಗಿ ಮಾಡಿ ಸನಾತನಧರ್ಮವನ್ನುದ್ಧರಿಸಿದರು. ಅದರಂತೆ ಈಗಿದ್ದ ಗುರುಭಕ್ತಿಹೀನದಶೆಯೂ ಸಹ ಒಂದಾನೊಂದು ಕಾಲದಲ್ಲಿ ಮಹಾತ್ಮರ ಆವಿರ್ಭಾವದಿಂದ ನಾಶವಾಗಿ ಮೊದಲಿನಂತೆ ಸರ್ವತೋಮುಖವಾಗಿ ದೇದೀಪ್ಯಮಾನವಾಗಿ ಮೆರೆಯುವದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕಾಲದಲ್ಲಿ ಗುರುಭಕ್ತಿಯು ನಾಶವಾಗಲಿಕ್ಕೆ ಇಂಗ್ಲೀಷಶಿಕ್ಷಣವೇ ಮೂಲಕಾರಣವೆಂದು ಹೇಳಬಹುದಾಗಿದೆ. ಈ ಶಿಕ್ಷಣದಿಂದ ಗುರುಭಕ್ತಿಯೊಂದೇ ಅಲ್ಲ; ಮಾತೃಭಕ್ತಿಯೂ, ಪಿತೃಭಕ್ತಿಯೂ, ದೈವಭಕ್ತಿಯೂ ನಾಶವಾಗಿ ಹೋಗಿವೆ. ಎದೆಯಲ್ಲಿ ನಾಲ್ಕು ಇಂಗ್ಲೀಷ ಅಕ್ಷರಗಳು ಮೂಡಿದರೆ ಸಾಕು; ಕೂಡಲೆ ಅವನಲ್ಲಿ ನಾಸ್ತಿಕವಾದವು ತಲೆಯೆತ್ತಲು ಪ್ರಾರಂಭಮಾಡುತ್ತದೆ. ಅದರಲ್ಲೇನಿದೆ? ಇದರಲ್ಲೇನಿದೆ? ಎಲ್ಲವೂ ಒಂದೇ! ಗುರುವೆಲ್ಲಿ? ಶಿಷ್ಯನೆಲ್ಲಿ? ದೇವರೆಲ್ಲಿ? ಎಂದು ಮದ್ಯಕುಡಿದ ಮಂಗನಂತೆ ಮಾತನಾಡಹತ್ತುತ್ತಾರೆ. ಇಂಥ ಆರ್ಯಧರ್ಮದ್ರೋಹಿಗಳಿಗೆ ಭಯಂಕರವಾದ ನರಕಯಾತನೆಯಲ್ಲದೆ ಬೇರೊಂದಿಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ತಾಯಿತಂದೆಗಳು ಕುರೂಪಿಗಳಿದ್ದರಂತೂ ಇವರು ನಮ್ಮ ತಾಯಿತಂದೆಗಳೇ ಅಲ್ಲವೆಂದೂ, ನಮ್ಮ ಮನೆಯ ನೌಕರರೆಂದೂ ಹೇಳಲು ಹಿಂಜರಿಯುವದಿಲ್ಲ. ಈ ರೀತಿಯಾಗಿ ನುಡಿವ ಪಾಪಾತ್ಮರು ಅಲ್ಲಲ್ಲಿ ಗೋಚರಿಸುತ್ತಿರುವರು. ಇಂಥ ನೀಚರಿಗೆ ಬಹುಬೀಜಸಂಬಂಧಿಗಳೆಂದು ಹೇಳಿದರೆ ಅವ ದೋಷವೂ ಬರಲಾರದು. ತಮ್ಮನ್ನು ಹಡೆದು ಎಣ್ಣೆಬೆಣ್ಣೆಗಳಿಂದ ರಕ್ಷಿಸಿದ ತಾಯಿತಂದೆಗಳನ್ನೇ ಈ ರೀತಿಯಾಗಿ ತಿರಸ್ಕಾರಭಾವದಿಂದ ಕಾಣುತ್ತಿರುವ ದುರುಳರು ಗುರುಗಳನ್ನು ಭಕ್ತಿಯಿಂದ ಕಾಣುವದಂತೂ ದೂರೇ ಉಳಿಯಿತು. ಕೆಲಜನ ಧೂರ್ತಶಿಷ್ಯರು ಹೀಗಿರುತ್ತಾರಲ್ಲಾ! ತಮ್ಮ ಮನೆಯ ಗುರುಗಳು ಬಂದರೆ ಅವರನ್ನೇ ದುಡಿಯಲಿಕ್ಕೆ ಹಚ್ಚುತ್ತಾರೆ. ಅವರೊಡನೆ ಪೂಜ್ಯಭಾವದಿಂದ ವರ್ತಿಸದೆ ದುರಹಂಕಾರಭಾವದಿಂದ ವರ್ತಿಸುತ್ತಾರೆ. ಈ ರೀತಿಯಾಗಿ ಆಚರಿಸುವವರಲ್ಲಿ ಇಂಗ್ಲೀಷನ್ನು ಕಲಿತ (ಎಲ್ಲರೂ ಅಲ್ಲ!) ಕೆಲ ನಾಸ್ತಿಕರೂ, ಕೆಲಜನ ಶ್ರೀಮಂತರೂ ಹೆಚ್ಚಾಗಿದ್ದಾರೆ. ಈ ಪಾಪಿಗಳಿಗೆ ಪರಮೇಶ್ವರನು ಇವರ ಜೀವಿತಕಾಲದಲ್ಲಿಯೇ ಘೋರವಾದ ಶಿಕ್ಷೆಯನ್ನು ಒಂದಿಲ್ಲ ಒಂದು ವಿಧದಿಂದಾದರೂ ಕೊಡುತ್ತಾನೆ. ಈ ವಿಷಯದಲ್ಲಿ ಅನೇಕ ದೃಷ್ಟಾಂತಗಳಿವೆ. ಒಟ್ಟಿಗೆ ಹೇಳುವದೇನಂದರೆ, ಶಿಷ್ಯರು ಗುರುಗಳ ವಿಷಯದಲ್ಲಿ ಅಸಾಧಾರಣವಾದ ಪೂಜ್ಯಭಾವವನ್ನಿಟ್ಟಿರಬೇಕು.

ಗುರುಃಶಿವೋ ಗುರುರ್ದೇವೋ ಗುರುರ್ಮಾತಾ ಗುರುಃಪಿತಾ |

ಎಂಬ ಧರ್ಮಶಾಸ್ತ್ರೋಕ್ತಿಯಂತೆ ಗುರುವೇ ಸಾಕ್ಷಾತ್ ಶಿವನೆಂದೂ, ಮಂತ್ರವೆಂದೂ, ತಾಯಿಯೆಂದೂ, ತಂದೆಯೆಂದೂ ಭಾವಿಸಿ ಅದರಂತೆ ನಡೆಯಬೇಕು.

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ ಪದಂ | ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃಕೃಪಾ ||

ಎಂದು ಗುರುವಿನ ಆಧಿಕ್ಯವನ್ನು ಸಾರುವ ಗುರುಗೀತೆಯ ಬೋಧೆಯನ್ನು ಪ್ರತಿಯೊಬ್ಬರೂ ಲಕ್ಷ್ಯದಲ್ಲಿಟ್ಟು ವರ್ತಿಸಬೇಕು.

ಯಃ ಪಶ್ಯತಿ ಗುರುಂ ಶಿಷ್ಯ ಉದಾಸೀನಮನೀಷಯಾ |
ಸಪಾಪಾತ್ಮಾ ಮಹಾಘೋರೇ ನರಕೇ ಪರಿವರ್ತತೇ ||

ಯಾವ ಶಿಷ್ಯನು ಗುರುವನ್ನು ಉದಾಸೀನಬುದ್ಧಿಯಿಂದ ಕಾಣುವನೋ, ಅವನು ಮಹಾ ಪಾಪಿಯೆಂತಲೂ, ಘೋರವಾದ ನರಕವನ್ನನುಭವಿಸುವನೆಂತಲೂ ಧರ್ಮಶಾಸ್ತ್ರವು ಸಿಂಹನಾದವನ್ನು ಮಾಡುತ್ತಿರುವುದು. ಈ ಪವಿತ್ರವಿಷಯವನ್ನು ಪ್ರತಿಯೊಬ್ಬರು ತಿಳಿದುಕೊಂಡು ಗುರುಗಳ ವಿಷಯದಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಬೇಕು. ಈ ಕಾಲದಲ್ಲಿ ಲಿಂಗಧಾರಿಗಳಾದ ಕೆಲಜನ ಕನ್ವರ್ಟ (ಮಿಶ್ರ)ರೂ, ಕಡಿಮೆಕುಲದವರೂ, ದುರ್ಬೀಜಜಾತರೂ, ಅನಾದಿಸಂಸಿದ್ಧ ಸಂಪ್ರದಾಯಶುದ್ಧರಾದ ವಂಶೀಯಗುರುಗಳನ್ನು ಬಿಟ್ಟು ಒಕ್ಕಲಿಗನೇ ಇರಲಿ, ಜಾಡನೇ ಇರಲಿ, ಬಣಜಿಗನೇ ಇರಲಿ, ಅನ್ಯರೇತೋಜಾತನೇ ಇರಲಿ, ದುರಭಿಮಾನಪೂರಿತರಾಗಿ ತಮ್ಮ ತಮ್ಮ ಪಂಗಡಗಳಲ್ಲಿ ಗುರುಗಳನ್ನು ಮಾಡಿಕೊಳ್ಳಹತ್ತಿದ್ದಾರೆ. ಈ ನವೀನನಾಸ್ತಿಕರಿಗೆ ಯಾವ ಬೋಧೆಯನ್ನು ಮಾಡಿದರೂ ಪ್ರಯೋಜನವಾಗುವಂತಿಲ್ಲ. ಜಂಗಮರಿಗೂ ನಮಗೂ ಏನು ವ್ಯತ್ಯಾಸವಿದೆ? ಅವರಲ್ಲಿದ್ದ ಅವಯವಗಳು ನಮ್ಮಲ್ಲಿಯೂ, ನಮ್ಮಲ್ಲಿದ್ದ ಅವಯವಗಳು ಅವರಲ್ಲಿಯೂ ಇವೆ. ಹೀಗಿದ್ದ ಮೇಲೆ ಪರಸ್ಪರ ವ್ಯತ್ಯಾಸವೇನು? ಎಂದು ಪಾಖಂಡಿಗಳಿಗಿಂತಲೂ ಹೆಚ್ಚಾಗಿ ಬೊಗಳುತ್ತಿರುವರು. ಜ್ಞಾನಶೂನ್ಯರಾದ ಈ ಪಾಪಾತ್ಮರಿಗೆ ಯಾವತ್ತು ಅವಯವಗಳಿಂದ ಸಮಾನರಾಗಿದ್ದ ತಾಯಿಯೂ, ಹೆಂಡತಿಯೂ ಒಂದೇ ಸರಿ! ಈ ವಿಷಯವನ್ನಾದರೂ ಈ ನವೀನ ನಾಸ್ತಿಕರು ತಿಳಿದುಕೊಂಡು ಅಡ್ಡಮಾರ್ಗಕ್ಕೆ ಬೀಳದೆ ಅನಾದಿಸಂಸಿದ್ಧವಾಗಿ ನಡೆದು ಬಂದ ವಂಶೀಯಗುರುಗಳಲ್ಲಿ ನೈಜವಾದ ಭಕ್ತಿಯನ್ನಿಟ್ಟು ಪರಶಿವನ ಕೃಪೆಗೆ ಪಾತ್ರರಾಗಿ ಇಹಪರಸುಖಗಳನ್ನು ಹೊಂದಿ ಧನ್ಯರಾಗಲೆಂದು ಕೋರುತ್ತೇವೆ.

ರೌಂಡಟೇಬಲ್ ಕಾನ್ಫರೆನ್ಸಿನ ಸಮಾಚಾರ.

ಕಳೆದ ತಿಂಗಳು 21 ನೆಯ ತಾರೀಖಿನ ದಿವಸ ದುಂಡುಮೇಜಿನ ಪರಿಷತ್ತಿನಲ್ಲಿ ಎಚ್. ಎಚ್. ಆಗಾಖಾನ, ಮಿ|| ಜಾಧವ, ಕರ್ನಲ್ ಹಕ್ಸರ್, ಮಿ|| ಚಿಂತಾಮಣಿ ಇವರುಗಳು ಭಾಷಣಗಳನ್ನು ಮಾಡಿದ ಬಳಿಕ ಮುಖ್ಯಮಂತ್ರಿಗಳಾದ ರಾಂಸೇಮೆಕ್ಡೊನಾಲ್ಡರವರು ಉಪಸಂಹಾರಭಾಷಣವನ್ನು ಮಾಡಿ ಆ ದಿನಸದ ಅಧಿವೇಶನವನ್ನು ಪರಿಸಮಾಪ್ತಿಗೊಳಿಸಿದರು.

ಎಚ್. ಎಚ್. ಆಗಾಖಾನರವರು ಸ್ವರಾಜ್ಯಸಂಪಾದನೆಯ ವಿಷಯದಲ್ಲಿ ಎಲ್ಲಾ ಭಾರತೀಯಮೆಂಬರರೂ ಏಕಾಭಿಪ್ರಾಯವುಳ್ಳವರಾಗಿರುವರೆಂಬಂಶವನ್ನು ಆ ಸಭೆಯವರ ಚಿತ್ತಕ್ಕೆ ತಂದರು. ಮುಂದಿನ ಸರ್ಕಾರವು ಭಾರತೀಯ ಅಲ್ಪಸಂಖ್ಯೆಯ ಸಮಾಜಗಳಿಗೂ ಆಂಗ್ಲೀಯ ವರ್ತಕರಿಗೂ ತೃಪ್ತಿಕರವಾಗಿರಬೇಕು. ಸಾಮಂತರಾಜರಿಗೂ, ಹಿಂದುಗಳಿಗೂ, ಮಹಮ್ಮದೀಯರಿಗೂ, ಇತರ ಚಿಕ್ಕ ಸಮಾಜದವರಿಗೂ, ಯೋಗ್ಯವ್ಯಾಪಾರಸ್ಥರಿಗೂ ಅನುಕೂಲವಾಗುವಹಾಗೆ ಫೆಡರಲ್ (ಸಂಯುಕ್ತಪ್ರಭುತ್ವವನ್ನು) ರಚನೆಮಾಡುವುದಾದರೆ ಸ್ವರಾಜ್ಯ ಮತ್ತು ಉತ್ತರವಾದಿತ್ವ ಇವುಗಳ ತಳಹದಿಯ ಮೇಲೆ ಏಕೆ ಮಾಡಬಾರದು?" ಎಂದು ಭಾಷಣಮಾಡಿದರು.

ಕರ್ನಲ್ ಹಕ್ಸರ್‌ರವರು ಸಾಮಂತರಾಜರು ಫೆಡರೇಷನ್ನಿಗೆ ಒಪ್ಪುವುದಕ್ಕೂ ಸದ್ಯಃ ಹಿಂದುಸ್ಥಾನದ ದುಃಖಕರವಾದ ಪರಿಸ್ಥಿತಿಗೂ 1919 ನೆಯ ಇಸವಿಯ ಬದಲಾವಣೆಗಳೇ ಕಾರಣಗಳೆಂದೂ, ಅವರು ಫೆಡರೇಷನ್ನಿಗೆ ಒಪ್ಪುವುದರಲ್ಲಿ ಸ್ವಾರ್ಥೋದ್ದೇಶವಿಲ್ಲದೆ ಸಾಮ್ರಾಜ್ಯವು ಏಕಮತ್ಯವಾಗಿರಬೇಕೆಂಬ ಉಚ್ಚಧ್ಯೇಯವಿದೆ ಎಂದೂ ಹೇಳಿದರು.

ಮಿ|| ಚಿಂತಾಮಣಿಯವರು ಆಂಗ್ಲೀಯ ಮೆಂಬರರು. ತಮಗೆ ರುಚಿಸದಿದ್ದರೂ ಸತ್ಯಾಂಶಗಳನ್ನೊಳಗೊಂಡಿರುವ ಭಾರತೀಯರ ಭಾಷಣಗಳನ್ನು ಶಾಂತಿಯಿಂದ ಕೇಳಿದ್ದಕ್ಕೆ ಅವರನ್ನು ವಂದಿಸಿ ಲಾರ್ಡ್ ಪೀಲ್‌ರವರ ಭಾಷಣದಿಂದ ಏನೂ ಮನೋವಿಕಾರವಾಗಿಲ್ಲವೆಂದೂ, ಲಾರ್ಡ್ ರೀಡಿಂಗ್‌ರವರು ಸೈರ್ಯರಂಥ ಲಿಬರಲ್ (ಉದಾರ) ಪಕ್ಷದವರಾಗದೆ ಗ್ಲಾಡಸ್ಟನ್‌ರಂಥ ಲಿಬರಲ್ ಪಕ್ಷದವರಾಗಬೇಕೆಂದೂ, ಲೇಬರ್ ಪ್ರಭುತ್ವವು ಭರತಖಂಡವನ್ನು ಸಾಮ್ರಾಜ್ಯದಲ್ಲಿ ಸಮಾನಸ್ಥಾನದಲ್ಲಿರಿಸಲು ಅಪೇಕ್ಷಿಸುವುದೆಂದೂ, ಭರತಖಂಡವು ಲೌಕಿಕ ಮತ್ತು ನೈತಿಕೋನ್ನತಿಯನ್ನು ಹೊಂದುವುದಕ್ಕೂ ಇದರಿಂದ ಜಗತ್ತಿಗೆ ಕಲ್ಯಾಣವಾಗುವುದಕ್ಕೂ ಇಂಡಿಯಾ ಮತ್ತು ಇಂಗ್ಲೆಂಡು ಏಕೀಭವಿಸಿ ಕೆಲಸಮಾಡಬೇಕೆಂದೂ ಹೇಳಿದರು.

ಮಿ|| ಜಾಧವರವರು ಸದ್ಯದಲ್ಲಿರುವ ದ್ವಿಮುಖ ಸರ್ಕಾರವು ಕೊನೆಗಾಣಬೇಕೆಂದೂ, ಪ್ರಾಂತಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ (Complete Autonomy) ವಿರಬೇಕೆಂದೂ, ಹಿಂದೂಮಹಮ್ಮದೀಯರ ಏಕಮತ್ಯದ ವಿಷಯವು ಕಠಿಣವಾದುದಲ್ಲವೆಂದೂ, ಸಾಮಂತರಾಜರು ಸಂಯುಕ್ತಪ್ರಭುತ್ವ (Federation) ದೊಳಗಿರಬೇಕೆಂಬ ಆಶೆಗೆ ಭಂಗತರಬೇಕೆಂದು ಆಶಿಸದಿದ್ದರೂ ಅವರು ತಮ್ಮ ಸ್ವಂತ ಫೆಡರೇಷನ್ ಮಾಡಿಕೊಂಡು ಅನಂತರ ಬ್ರಿಟಿಷ್ ಇಂಡಿಯಾದೊಡನೆ ಒಂದುಗೂಡುವುದು ಒಳ್ಳೆಯದೆಂದೂ ಹೇಳಿದರು.

ಬಾಯಾರಿಕೆಯಾದಾಗ ಬಾವಿತೋಡಿದ ಹಾಗೆಯೇ ಸರಿ.

"ಮೈಸೂರು ಸಂಸ್ಥಾನದ ದಿವಾನರಾಗಿದ್ದ ಎ. ಆರ್. ಬಾನರ್ಜಿಯವರು ಲಂಡನ್ನಿನಲ್ಲಿ ಭಾಷಣ ಮಾಡುವಾಗ ಹೇಳಿದ್ದೇನೆಂದರೆ:—ಈಗ ನಾಲ್ಕು ವರ್ಷಗಳ ಹಿಂದೆ ಭಾರತೀಯ ಕಾಂಗ್ರೆಸ್ಸಿನವರು ದುಂಡುಮೇಜಿನ ಪರಿಷತ್ತನ್ನು ನಡೆಯಿಸಬೇಕೆಂದು ಕೇಳಿದ್ದು ಅರಣ್ಯರೋದನವಾಗಿ ಪರಿಣಮಿಸಿತು. ನೋದವರ್ಷ ಡೊಮೀನಿಯನ್ ಸ್ಟೇಟಸ್ಸನ್ನು ಕೇಳಿದರು. ಬ್ರಿಟಿಷ್ ಸರ್ಕಾರವು ಆಗಲೂ ಸಹ ಮೌನವ್ರತವನ್ನು ಧರಿಸಿತು. ಭಯಂಕರ ಪರಿಸ್ಥಿತಿಯು ಒದಗಿರುವಾಗ ದುಂಡುಮೇಜಿನ ಪರಿಷತ್ತನ್ನು ನಡೆಯಿಸಿ ಭಾರತೀಯರಿಗೆ ತೃಪ್ತಿಕರವಾಗದ ಸಂಯುಕ್ತಸಂಸ್ಥಾನ ರಚನೆಯನ್ನು ಮಾಡುವುದರಲ್ಲಿ ತೊಡಗಿದ್ದಾರೆ. ಇಗು ಬಾಯಾರಿಕೆಯಾದಾಗ ಬಾವಿತೋಡಿದಹಾಗೆಯೇ ಸರಿ! ಬ್ರಿಟಿಷರ ಸಂಬಂಧವನ್ನು ಇಟ್ಟುಕೊಳ್ಳಬೇಕೇ ಬೇಡವೇ ಎಂಬ ಪ್ರಶ್ನೆಯು ಕಾಂಗ್ರೆಸ್ಸಿನವರನ್ನು ಅವಲಂಬಿಸಿದ್ದರೂ, ಸದ್ಯಃಸ್ಥಿತಿಯು ಸಮಾಧಾನಕರವಾಗಬೇಕಾದರೆ ತತ್‌ಕ್ಷಣದಲ್ಲಿಯೇ ಡೊಮೀನಿಯನ್ ಸ್ಟೇಟಸ್ಸನ್ನು ಕೊಡುವುದು ಅಗತ್ಯವು."

ಫೆಡರಲ್ ರಿಲೇಷನ್ಸ್ ಕಮಿಟಿಯು ಕಳೆದ ತಿಂಗಳು 24 ನೆಯ ತಾರೀಖಿನ ದಿವಸ ಸೇರಿ ನವಾನಗರದ ಮಹಾರಾಜರು, ರೀವಾಮಹಾರಾಜರು, ಸಾಂಗ್ಲಿ ಅಧಿಪತಿಗಳು, ಮಿ|| ಸುಲ್ತಾನ್ ಅಹಮ್ಮದ್ ಖಾನ್, ಶ್ರೀಯುತ ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಮತ್ತು ಇವರುಗಳಲ್ಲದೆ ಬ್ರಿಟಿಷ್ ಹಿಂದೂಸ್ಥಾನದ ಮೆಂಬರುಗಳ ಪೈಕಿ ಇನ್ನು ಆರು ಜನರನ್ನು ಫೆಡರಲ್ ಕಮಿಟಿಗೆ ಸೇರಿಸಬೇಕೆಂದು ನಿರ್ಧರಿಸಿದರು. ಲಾರ್ಡ್ ಸ್ಯಾಂಕಿಯವರು ಸಾಮ್ರಾಜ್ಯದಲ್ಲಿರುವ ಅನೇಕ ರಾಷ್ಟ್ರಗಳ ಫೆಡರಲ್ ರೀತಿಗಳನ್ನು ಚನ್ನಾಗಿ ಅರಿತವರೂ, ಅನುಭವಿಗಳೂ, ವಿದ್ಯಾವಂತರೂ ಆದ್ದರಿಂದ ಆಲೋಚಿಸಬೇಕಾದ ಮುಖ್ಯ ವಿಷಯಗಳ ತಪಸೀಲನ್ನು ತಯಾರಿಸಬೇಕೆಂದು ಎಲ್ಲಾ ಮೆಂಬರರೂ ಅಭಿಪ್ರಾಯಪಟ್ಟ ಪ್ರಕಾರ ಈ ಕೆಳಗೆ ಕಂಡ ಹನ್ನೆರಡು ವಿಷಯಗಳನ್ನು ಕಮಿಟಿಯ ಮುಂದಿಡಲು ತಯಾರಿಸಿದ್ದಾರೆ.

(1) ಫೆಡರಲ್ ಸರ್ಕಾರಕ್ಕೆ ಒಳಪಡುವ ಪ್ರಾಂತಗಳಾವುವು. (2) ಫೆಡರಲ್ ಸರ್ಕಾರದಲ್ಲಿ ಮಂತ್ರಾಲೋಚನಾಸಭೆಗೆ ಮೆಂಬರುಗಳನ್ನು ಆರಿಸುವ ವಿಧಾನ ಹಾಗೂ ಎಷ್ಟು ಮಂತ್ರಾಲೋಚನಾಸಭೆಗಳಿರಬೇಕು? (3) ಫೆಡರಲ್ ಸರ್ಕಾರದ ಮಂತ್ರಾಲೋಚನಾಸಭೆಯ ಅಧಿಕಾರಗಳೇನು? (4) ಫೆಡರಲ್ ಸರ್ಕಾರದಲ್ಲಿ ಮಂತ್ರಿಗಳ ಸಂಖ್ಯೆ ಎಷ್ಟು? ಮತ್ತು ಅವರ ಕರ್ತವ್ಯಗಳೇನು? (5) ಬ್ರಿಟಿಷ್‌ಇಂಡಿಯಾದಿಂದಲೂ ಆಶ್ರಿತಸಂಸ್ಥಾನಗಳಿಂದಲೂ ಪ್ರತಿನಿಧಿಗಳನ್ನು ಆರಿಸುವ ವಿಧಾನಗಳು. (6) ಫೆಡರಲ್ ಸರ್ಕಾರದ ಎಗ್ಜಿಕ್ಯೂಟಿವ್ ಕೌನ್ಸಿಲ್ಲಿನ ರಚನಾ, ರೀತಿ, ಅಧಿಕಾರಗಳು, ಜವಾಬ್ದಾರಿಗಳೇನು? (6) ಪ್ರಾಂತಿಕಮಂತ್ರಾಲೋಚನಾಸಭೆಯ ಅಧಿಕಾರಗಳೇನು? (8) ಪ್ರಾಂತಿಕಸರ್ಕಾರದ ಎಗ್ಜಿಕ್ಯೂಟಿವ್ ಕೌನ್ಸಿಲಿನಲ್ಲಿ ರಚನಾ, ರೀತಿ, ಅಧಿಕಾರಗಳು, ಜವಾಬ್ದಾರಿಗಳೇನು? (9) ಚಿಕ್ಕಸಮಾಜಗಳ ಸಹಾನುಭೂತಿಯನ್ನು ಪಡೆಯಲು ಯಾವ ಜೋಡಣೆಯನ್ನು ಮಾಡಬೇಕು? (10) ಸುಪ್ರೀಂಕೋರ್ಟನ್ನು ಸ್ಥಾಪಿಸುವುದು ಮತ್ತು ಅದರ ನ್ಯಾಯಾಧಿಕಾರವೆಷ್ಟು? (11) ಸಂರಕ್ಷಣಸೈನ್ಯದ ವಿಚಾರ. (12) ಸಾಮ್ರಾಜ್ಯಸರಕಾರಕ್ಕೂ ಫೆಡರಲ್ ಸರ್ಕಾರಕ್ಕೂ ಪ್ರಾಂತಿಕ ಸರ್ಕಾರಕ್ಕೂ ಯಾವ ಸಂಬಂಧವಿರಬೇಕು.

ಈ ಹನ್ನೆರಡು ವಿಷಯಗಳನ್ನು ಫೆಡರಲ್‌ಕಮಿಟಿಯವರು ವಿಮರ್ಶೆಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಫೆಡರೇಷನ್ ಸರ್ಕಾರವು ಇತ್ಯರ್ಥವಾಗಿ ನೆಲೆಗೊಂಡಾಗ ಹಿಂದೂಸ್ಥಾನದಲ್ಲಿ 25 ವರ್ಷಗಳೊಳಗೆ ಬ್ರಿಟಿಷ್ ಸೈನ್ಯವನ್ನು 20,000 ಕ್ಕೆ ಇಳಿಸುವುದಕ್ಕೆ ಏರ್ಪಾಡುಮಾಡುವಂತೆ ಬ್ರಿಟಿಷ್ ಸರ್ಕಾರದವರ ವಾರ್ ಆಫೀಸಿಗೂ, ಇಂಡಿಯಾ ಆಫೀಸಿಗೂ, ಇಂಡಿಯಾ ಸರ್ಕಾರದ ಸೈನ್ಯದ ಖಾತೆಗೂ ಸೂಚಿಸುವುದಾಗಿ ತಿಳಿದುಬರುತ್ತದೆ.

ಡಾ|| ಬಿ. ಎಸ್. ಮುಂಜೆ ಮತ್ತು ಮಿ|| ಶಿವರಾವ್‌ರವರು ಎಲ್ಲಾ ರಾಜಕೀಯಖೈದಿಗಳನ್ನು ಬಿಡುವುದೂ, ಸದ್ಯಃ ದಬ್ಬಾಳಿಕೆಗೆ ಅವಕಾಶವಾಗಿರುವ ಕಾಯಿದೆಗಳನ್ನು ತೆಗೆದುಹಾಕುವುದೂ ಭಾರತೀಯರ ಮನಃಕಲ್ಮಷವನ್ನು ತೊಳೆಯುವುದಕ್ಕೆ ಅನುಕೂಲವಾಗಿ ಸುಹೃದ್ಭಾವದಿಂದ ಮುಂದಿನ ಕಾರ್ಯಕಲಾಪಗಳನ್ನು ಸಾಂಗವಾಗಿ ನಡೆಯಿಸುವುದಕ್ಕೆ ಸಹಾಯಕಾರಿಯಾಗುವುದೆಂದು ಅಭಿಪ್ರಾಯಪಡುವರು.

ಲಾರ್ಡ್ ಸ್ಯಾಂಕಿಯವರ ಹನ್ನೆರಡು ಅಂಶಗಳಲ್ಲಿ ಅನೇಕ ನ್ಯೂನತೆಗಳಿವೆ ಎಂದು, ಅನೇಕ ಪ್ರಸಿದ್ಧ ವರ್ತಮಾನಪತ್ರಿಕಾ ಸಂಪಾದಕರು ಸಾರುತ್ತಿರುವರು. ಆದರೆ ಡಾ|| ಟಿ. ಬಿ. ಸಪ್ರೂರವರು ಲಾರ್ಡ್ ಸ್ಯಾಂಕಿಯವರು ತಯಾರಿಸಿರುವ ಅಂಶಗಳಮೇಲೆ ಫೆಡರೇಷನ್ ಸರ್ಕಾರವನ್ನು ರಚಿಸುವುದಾದರೆ ಡೊಮಿನಿಯನ್ ಸ್ಟೇಟಸ್ಸಿನ ವಿಚಾರವು ಹಿಂದೆ ಉಳಿಯುವುದೆಂಬ ಭಯವು ನಿರಾಧಾರವಾದುದೆಂದು ಹೇಳುವರು.

ಲಂಡನ್ನಿನ ವೆಸ್ಟ್‌ಮಿನಿಸ್ಟರ್ ಸೆಂಟ್ರಲ್ ಹಾಲಿನಲ್ಲಿ ಸೇರಿದ ಒಂದು ದೊಡ್ಡ ಸಾರ್ವಜನಿಕಸಭೆಯಲ್ಲಿ ಮಿ|| ಬ್ರೈಲ್ಸ್‌ಫರ್ಡ್ ಎಂಬೊಬ್ಬರು ಮಹಾತ್ಮಾಗಾಂಧಿಯವರು ಭರತಖಂಡದ ಹಿತೈಷಿಗಳುಮಾತ್ರವೇ ಅಲ್ಲದೆ, ಇಂಗ್ಲೆಂಡಿಗೂ ಸಹ ಮಹದುಪಕಾರ ಮಾಡಿರುವರೆಂದೂ, ಮಹಾತ್ಮಾಗಾಂಧಿಯವರು ಇಲ್ಲದೆ ಇದ್ದರೆ ಹಿಂದೂದೇಶದಲ್ಲಿ ರಕ್ತಪ್ರವಾಹವು ಹರಿಯುತ್ತಿತ್ತೆಂದೂ ಹೇಳಿದರು.

ಸಿಂಥಿಯಾಮೋಸ್ಲೆ ಎಂಬ ನಾರೀಮಣಿಯು ಭಾರತೀಯರಿಗೆ ಪೂರ್ಣಸ್ವಾತಂತ್ರ್ಯವು ಕೊಡಲ್ಪಡಬೇಕೆಂದೂ, ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಟ್ಟು ಲೇಬರ್ ಪಾರ್ಟಿಯವರು ತಮ್ಮ ಎಲೆಕ್ಷನ್ ಪ್ರೋಗ್ರಾಮಿನಂತೆ ನಡೆಯಬೇಕೆಂದೂ ಹೇಳಿದರು. ಆ ಸಭೆಗೆ ಲಂಡನ್ನಿನ ಕಾಂಗ್ರೆಸ್ ಶಾಖೆಯ ಮೆಂಬರುಗಳೂ ಹೋಗಿ ಉಪನ್ಯಾಸಕರು ಡೊಮಿನಿಯನ್ ಸ್ಟೇಟಸ್ ಎಂದೊಡನೆಯೇ ಅವರಿಗೆ ಪ್ರಶ್ನೆಗಳನ್ನು ಹಾಕಲು ಉಪಕ್ರಮಿಸುತ್ತಿದ್ದರು.

ವರ್ತಮಾನಸಂಗ್ರಹ.

ನಾಗಪುರದ ದಿವಾನ್ ಕೌನ್ಸಿಲ್ ಪ್ರೆಸಿಡೆಂಟರು ದಸ್ತಗಿರಿಮಾಡಲ್ಪಟ್ಟಿರುವರು. ಇವರು ವಿಶೇಷ ಶ್ರೀಮಂತರಾಗಿರುವರು.

ಪಾಟ್ನಾದಲ್ಲಿ ಜವಾಹಿರಲಾಲ್ ದಿನದ ಆಚರಣೆಯಲ್ಲಿ ಭಾಗಿಯಾಗಿದ್ದ ಶ್ರೀಮತಿ ವಿಂಧ್ಯವಾಸಿನೀದೇವಿಯು 4 ತಿಂಗಳು ಸಾದಾಶಿಕ್ಷೆಗೆ ಗುರಿಯಾದಳು.

ಧಾರ್ವಾಡಜಿಲ್ಲೆಗೆ ಸೇರಿದ ಸಿಗ್ಗಾವಿಯಲ್ಲಿ ಅರಣ್ಯಶಾಸನವನ್ನು ಉಲ್ಲಂಘಿಸಿದರೆಂದು ಕದ 24 ನೆಯ ತಾರೀಖಿನ ದಿವಸ 8 ಜನ ಸ್ವಯಂಸೇವಕರು ದಸ್ತಗಿರಿ ಮಾಡಲ್ಪಟ್ಟರು.

ಜಪಾನಿನಲ್ಲಿ ಭೂಕಂಪವು ಅರ್ಧಗಂಟೆಯವರೆಗೂ ಇದ್ದು 223 ಜನರು ಮೃತಪಟ್ಟಿರುವರು. ಭೂಗರ್ಭದಿಂದ ಕುದಿಯುವ ನೀರು ಮೇಲಕ್ಕೆ ನೆಗೆಯಲ್ಪಟ್ಟು ಅನೇಕ ಜಿಲ್ಲೆಗಳಲ್ಲಿ ಬಹುಜನರಿಗೆ ತೊಂದರೆಯುಂಟಾಗಿದೆ.

ನಬರ್ಮತಿ ಸೆಂಟ್ರಲ್ ಜೈಲಿನಲ್ಲಿದ್ದ ಶ್ರೀಯುತ ಮಣಿಲಾಲ್‌ಕೊಠಾರಿಯವರು ಬ್ರಿಟಿಷ್ ಇಂಡಿಯಾ ದೇಶವನ್ನು ಬಿಟ್ಟು ವಧ್ವಾನಿಗೆ ಹೋಗಬೇಕೆಂದು ಬೊಂಬಾಯಿಯ ಗೌರ್ನರ್‌ರವರು ಅಪ್ಪಣೆಮಾಡಿರುವರು.

ಬ್ರೆಜಿಲ್ಲಿನಲ್ಲಿ ರೋಜಾಡಾ ಕಾಸ್ಟಾ ಎಂಬ 150 ವರ್ಷ ವಯಸ್ಸಿನ ವೃದ್ಧಸ್ತ್ರೀಯೊಳು ಸ್ವರ್ಗಸ್ಥಳಾದಳು. ಈಕೆಗೆ 14 ಜನ ಗಂಡುಮಕ್ಕಳೂ, 4 ಜನ ಹೆಣ್ಣು ಮಕ್ಕಳೂ 124 ಮೊಮ್ಮಕ್ಕಳೂ, 230 ಮರಿಮಕ್ಕಳೂ, 214 ಮರಿಮೊಮ್ಮಕ್ಕಳೂ ಇದ್ದಾರಂತೆ!

ಅಹಮ್ಮದಾಬಾದಿನ ಮ್ಯುನಿಸಿಪಲ್ ಗಾಂಧಿಹಾಲಿನಲ್ಲಿ ಸರ್ದಾರವಲ್ಲಭಭಾಯಿ ಪಟೇಲರವರ ಛಾಯಾಚಿತ್ರಪಟವನ್ನು ಇರಿಸಬೇಕೆಂದು ಕಳೆದ ತಿಂಗಳು 25 ನೆಯ ತಾರೀಖಿನ ದಿವಸ ನಡೆದ ಮ್ಯುನಿಸಿಪಲ್ ಮೀಟಿಂಗಿನಲ್ಲಿ ತೀರ್ಮಾನಿಸಿ ಇದಕ್ಕೋಸ್ಕರ 1000 ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ.

ಹರಿಹರ ಸಬ್ ತಾಲೂಕಿಗೆ ಸೇರಿದ ದಿಟೂರು ಎಂಬ ಗ್ರಾಮದಲ್ಲಿ ಒಂದು ಕುರಿಯಿಂದ ಆರು ಕಾಲುಗಳುಳ್ಳ ಒಂದು ಹೆಣ್ಣುಮರಿಯು ಉತ್ಪನ್ನವಾಗಿರುವುದೆಂದೂ, ಸದ್ಯಃ ಆ ಮರಿಗೆ ಒಂದು ತಿಂಗಳವಾಗಿದ್ದು ಸುಖವಾಗಿರುವುದೆಂದೂ ಸಾರಥಿಸ್ಕೂಲ್ ಮಾಸ್ಟರ್ ಕೆ. ಕೊಟ್ರಪ್ಪನವರು ತಿಳಿಸುತ್ತಾರೆ.

ಧಾರ್ವಾಡ ಡಿಸ್ಟ್ರಿಕ್ಟಿಗೆ ಸೇರಿದ ಹಾನಗಲ್ಲಿನಲ್ಲಿ 18 ವರ್ಷಗಳಿಂದಲೂ ವಾಸವಾಗಿದ್ದ ಮಿ|| ಅನಂತ ಭಟ್ಟ ಕುಂದಾಪುರ ಎಂಬವರು ಡಿಸ್ಟ್ರಿಕ್ಟ್ ಪೋಲೀಸ್ ಆಕ್ಟ್ 46 ನೆಯ ಸೆಕ್ಷನ್ ಪ್ರಕಾರ 48 ಘಂಟೆಗಳೊಳಗಾಗಿ ಹಾನಗಲ್ ಮತ್ತು ಸುತ್ತುಮುತ್ತಲಿನ ತಾಲೂಕುಗಳನ್ನು ಬಿಟ್ಟುಹೋಗಬೇಕೆಂದು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರವರು ಅಪ್ಪಣೆಮಾಡಿದ್ದಾರೆ.

ಶಿರೋಳ ಬೃಹನ್ಮಠದ ವೇ|| ಪಂಚಾಕ್ಷರಶಾಸ್ತ್ರಿಗಳು ವಿಜಾಪುರದ ಪಟ್ಟಣದಲ್ಲಿ ಕಳೆದ ತಿಂಗಳು 20-21 ನೆಯ ತಾರೀಖಿನ ದಿವಸ ಅಹಿಂಸಾತತ್ವದ ಮೇಲೆ ಬಹು ಮನೋಹರವಾದ ಭಾಷಣವನ್ನು ಮಾಡಿದರೆಂದೂ, 24 ನೆಯ ತಾರೀಖಿನ ದಿವಸ ಬಾಗಲಕೋಟೆಯಲ್ಲಿ ಭಾಷಣ ಮಾಡಿದರೆಂದೂ ಇವರ ಭಾಷಣವನ್ನು ಕೇಳುವದಕ್ಕಾಗಿ ಅನೇಕ ಜನರು ನೆರೆದಿದ್ದರೆಂದೂ ತಿಳಿದುಬರುತ್ತದೆ.

ಮದರಾಸಿನಲ್ಲಿ ನವಂಬರ್ 28 ನೆಯ ತಾರೀಖಿನ ದಿವಸ ಭಯಂಕರ ಬಿರುಗಾಳಿ ಮತ್ತು ಮಳೆ ಇವುಗಳ ಹೊಡತದಿಂದ ಟೆಲಿಫೋನ್ ತಂತಿಗಳಿಗೂ, ಟ್ರಾಮ್‌ವೇ ಬಂಡಿಗಳಿಗೂ ಮತ್ತು ಬೀದಿಯ ದೀಪಗಳಿಗೂ ವಿಶೇಷವಾದ ಅನಾಹುತವಾಗಿದೆ. ಪಟ್ಟಣದ ಅನೇಕ ಭಾಗವು ಜಲಮಯವಾಗಿ ಹೋಗಿದೆ. ಅನೇಕ ರಸ್ತೆಗಳಲ್ಲಿ ಮೂಲೋತ್ಪಾಟನವಾಗಿ ಬಿದ್ದಿರುವ ಮರಗಳಿಂದ ಜನಸಂಚಾರವೇ ನಿಂತುಹೋಗಿದೆ. ಅನೇಕ ಗುಡಿಸಲುಗಳೂ, ಚಿಕ್ಕ ಚಿಕ್ಕ ಮನೆಗಳೂ ನಾಶವಾಗಿವೆ.

ವಿಜಾಪುರಜಿಲ್ಲೆಗೆ ಸೇರಿದ ಹುನಗುಂದದಲ್ಲಿ 68 ವರ್ಷಗಳ ವಯಸ್ಸಿನ ಎಂ. ರಾಘವೇಂದ್ರರಾವ್ ದೇಸಾಯಿ ಎಂಬ ವಕೀಲರೂ, ಐದು ಜನ ಮುಖಂಡರೂ ಕ್ರಿಮಿನಲ್ ಲಾ ಅಮೆಂಡ್‌ಮೆಂಟ್ ಆಕ್ಟ್ ಪ್ರಕಾರ 6 ತಿಂಗಳುಗಳ ಕಠಿಣಶಿಕ್ಷೆ ಮತ್ತು 200 ರೂ. ಜುಲ್ಮಾನೆ ಅಥವಾ 1½ ತಿಂಗಳು ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು. ಇವರಲ್ಲದೆ ಇನ್ನೂ 13 ಜನರು 3 ತಿಂಗಳುಗಳ ಕಠಿಣಶಿಕ್ಷೆ ಮತ್ತು 50 ರೂ. ಜುಲ್ಮಾನೆ ಅಥವಾ ಒಂದು ತಿಂಗಳು ಶಿಕ್ಷೆಗೆ ಗುರಿಯಾಗಿರುವರು.

ಅಹಮ್ಮದಾಬಾದಿನಲ್ಲಿ 50 ಜನ ಗಂಡಸರೂ, 20 ಜನ ಸ್ತ್ರೀಯರೂ ವಿದೇಶಿವಸ್ತ್ರಗಳನ್ನು ಮಾರುತ್ತಿದ್ದ 60 ಅಂಗಡಿಗಳ ಮುಂದೆ ಕಳೆದ ತಿಂಗಳು 27 ನೆಯ ತಾರೀಖಿನ ಪ್ರಾತಃಕಾಲದಿಂದ ಉಪವಾಸವ್ರತವನ್ನು ಕೈಕೊಂಡು ಸತ್ಯಾಗ್ರಹವನ್ನಾಚರಿಸಿದರು. ಮುಂದಿನ ಮೇ 5ನೆಯ ತಾ|| ನವರೆಗೂ ವಿದೇಶೀಯ ವಸ್ತ್ರಗಳನ್ನು ಮಾರುವುದಿಲ್ಲವೆಂದು ವರ್ತಕರು ಮುಚ್ಚಳಿಕೆಯನ್ನು ಬರೆದುಕೊಟ್ಟರೆ ಉಪವಾಸವ್ರತವನ್ನು ಬಿಟ್ಟುಬಿಡುವುದಾಗಿ ಹೇಳಿದರು. ಆ ದಿವಸ ರಾತ್ರಿ 10 ಘಂಟೆಗೆ ವರ್ತಕರೆಲ್ಲರೂ ಸೇರಿ ವಿದೇಶೀಯ ವಸ್ತ್ರಗಳನ್ನು ಮಾರುವುದಿಲ್ಲವೆಂದು ಮುಚ್ಚಳಿಕೆಯನ್ನು ಬರೆದುಕೊಟ್ಟನಂತರ ಸ್ವಯಂಸೇವಕರು ಕೃತಾರ್ಥರಾಗಿ ನಿರಶನವ್ರತವನ್ನು ಬಿಟ್ಟು ಹಸನ್ಮುಖಿಗಳಾಗಿ ತಮ್ಮ ಮನೆಗಳಿಗೆ ತೆರಳಿದರಂತೆ!

ಲಾಹೋರಿನ ದಯಾನಂದ ಆಂಗ್ಲೋವೇದಿಕ್ ಕಾಲೇಜಿನ ಮ್ಯಾನೇಜಿಂಗ್ ಕಮಿಟಿಯವರೂ ಪ್ರೊ|| ಸಂತಾರಾಮರವರೂ ಅಕ್ಟೋಬರ್ 8 ನೆಯ ತಾರೀಖಿನ ದಿವಸ ಪೋಲೀಸು ಅಧಿಕಾರಿಗಳು ಕಾಲೇಜನ್ನು ನಿಷ್ಕಾರಣವಾಗಿ ಮುತ್ತಿದ್ದಕ್ಕೂ ಮತ್ತು ಪ್ರೊ|| ಸಂತಾರಾಮರವರ ಮೇಲೆ ಬಿದ್ದು ಅಪಮಾನಪಡಿಸಿದ್ದಕ್ಕೂ ಒಂದು ತಿಂಗಳೊಳಗಾಗಿ 10,00 ರೂ. ಗಳು ಪರಿಹಾರದ್ರವ್ಯವನ್ನು ಕೊಡಬೇಕೆಂದು ಪೋಲೀಸು ಅಧಿಕಾರಿಗಳಿಗೆ ನೋಟೀಸು ಕೊಟ್ಟಿರುವರು. ಕ್ರಿಮಿನಲ್ ಪ್ರೋಸಿಜರ್ ಕೋಡು 197 ನೆಯ ಸೆಕ್ಷನ್ ಪ್ರಕಾರ ಪೋಲೀಸು ಅಧಿಕಾರಿಗಳ ಮೇಲೆ ಫಿರ್ಯಾದು ನಡೆಯಿಸಲು ಅನುಮತಿಯನ್ನು ಕೊಡಬೇಕೆಂದು ಪಂಜಾಬ್ ಗೌರ್ನರವರಿಗೆ ಅರ್ಜಿಮಾಡಿದ್ದಾರೆ.

ಹಿಂದೂದೇಶದಲ್ಲಿ ಮೊದಲು ವೈಸರಾಯರಾಗಿದ್ದ ಲಾರ್ಡ್ ಹಾರ್ಡಿಂಜರವರು ಕಳೆದ ತಿಂಗಳು 28ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದಿಳಿದರು. ಅವರು ತಮ್ಮ ಸ್ನೇಹಿತರನ್ನೂ ಹೊಸದಿಲ್ಲಿಯನ್ನೂ ನೋಡುವುದಕ್ಕಾಗಿ ಬಂದಿರುವುದಾಗಿ ಹೇಳಿದರಂತೆ! ದುಂಡುಮೇಜಿನಪರಿಷತ್ತಿಗೆ ತಾವು ಒಂದು ದಿವಸ ಮಾತ್ರ ಹೋಗಿದ್ದರಂತೆ! ಆ ಪರಿಷತ್ತಿನ ಫಲಿತಾಂಶವು ಏನಾಗುವುದೆಂಬುದನ್ನು ಆಲೋಚಿಸಲು ಸಾಧ್ಯವಿಲ್ಲವೆಂದೂ, ಕನ್ಸರ್ವೇಟಿವ್ ಪಾರ್ಟಿಯಲ್ಲಿ ಬಹು ಅನೈಕಮತ್ಯವಿದೆಯೆಂದೂ, ಹೇಳಿದರಂತೆ! ಇವರು 3 ತಿಂಗಳ ವರೆಗೂ ಹಿಂದೂಸ್ಥಾನದಲ್ಲಿದ್ದು, ಹೈದರಾಬಾದ್, ಮೈಸೂರು, ಮದರಾಸು, ಕಲ್ಕತ್ತಾ, ನ್ಯೂಡೆಲ್ಲಿ ಈ ಸ್ಥಳಗಳಲ್ಲೆಲ್ಲಾ ಸಂಚರಿಸುವವರಾಗಿದ್ದಾರೆ.

ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ|| ಸಯ್ಯದ್ ಅಬ್ದುಲ್ ಬ್ರೆಲ್ವಿಯವರೂ, ಪ್ರಿಂಟರ್ ಮತ್ತು ಪಬ್ಲಿಷರ್ ಮಿ|| ಕಪಾಡಿಯಾರವರೂ ಕ್ರಿಮಿನಲ್ ಲಾ ಅಮೆಂಡಮೆಂಟ್ ಆಕ್ಟ್ ಪ್ರಕಾರ ದಸ್ತಗಿರಿಮಾಡಲ್ಪಟ್ಟು ಪ್ರೆಸಿಡೆನ್ಸಿ III ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು. ಮಿ|| ಬ್ರೆಲ್ವಿಯವರು ಜಾಮೀನು ಕೊಡಲಿಲ್ಲ. ಮಿ|| ಕಪಾಡಿಯಾರವರು 500ರೂ. ಜಾಮೀನು ಕೊಟ್ಟಮೇಲೆ ಬಿಡುಗಡೆಮಾಡಲ್ಪಟ್ಟರು. ಮಿ|| ಬ್ರೆಲ್ವಿಯವರು ಕೋರ್ಟಿನ ಕಾರ್ಯದಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ಮಿ|| ಕಪಾಡಿಯಾರವರ ಪರವಾಗಿ ಮಿ|| ಕಸುಗ ಎಂಬ ವಕೀಲರು ವಾದಿಸುತ್ತಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯರ್ಃ ಪ್ರಸೀದಂತು.

ಕೊಟ್ಟೂರೇಶನ ಮಹಿಮೆ.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾ|| ಕೊಟ್ಟೂರು ಗ್ರಾಮದ ಶ್ರೀ ಕೊಟ್ಟೂರೇಶ್ವರನ ಕಾರ್ತೀಕೋತ್ಸವವು ಇದೇ ವರ್ತಮಾನ ಬ|| 3 ತಾ. 8-12-30 ನೆಯ ಸೋಮವಾರ ದಿವಸ ನಡೆಯುತ್ತದೆ. ಈತನ ಮಹಿಮೆಯು ಎಲ್ಲರಿಗೂ ಪ್ರತ್ಯಕ್ಷ ನಿದರ್ಶನವಾಗಿರುತ್ತದೆ. ಏನಂದರೆ ಮುಕ್ತುವರದಹಳ್ಳಿಯವನೊಬ್ಬನು ಕಾಯಿ ಕರ್ಪೂರವನ್ನು ತಂದು ಸ್ವಾಮಿಗೆ ಅರ್ಪಿಸದೆ ಹಾಗೆ ಹೋಗಿ ಮನೆಯಲ್ಲಿ ಊಟ ಮಾಡುತ್ತಿರುವಾಗ ಆಹಾರವು ವಿಷವಾಗಿ ಪ್ರಜ್ಞೆ ತಪ್ಪಿ ಸ್ಮೃತಿಯಿಂದ ಸಂಚಾರವಿಸುತ್ತಿದ್ದನು. ಅವನ ಸ್ನೇಹಿತರು ಕಂಡು ವಿಚಾರಿಸಲಾಗಿ ಇದು ಸ್ವಾಮಿಯ ಮಹಿಮೆಯೆಂದು ತಿಳಿದು ಪುನಃ ಆತನನ್ನು ಸ್ವಾಮಿಯ ದರ್ಶನಕ್ಕೆ ಕರತಂದದ್ದರಿಂದ ರೋಗ ಬಿಟ್ಟನಂತರ ಸುಖವಾಗಿ ಇದ್ದಾನೆ.

ಓರ್ವ ಪ್ರತ್ಯಕ್ಷದರ್ಶಿ.

ಮುಂಬಯಿ ಇಲಾಖೆಯ ವ್ಯವಸಾಯ, ಅರವಿ,
ಸಹಕಾರ ಇತ್ಯಾದಿ ಖಾತೆಗಳ
ಮಂತ್ರಿಗಳಾದ ರಾವಬಹಾದ್ದೂರ ಪ್ರಶಸ್ತಿಯನ್ನು ಪಡೆದಿರುವ

ಶ್ರೀಮಾನ್ ಸಿದ್ದಪ್ಪನವರು ತೋಟಪ್ಪನವರು

ಕಂಬಳಿ ಬಿ.ಎ., ಎಲ್‌ಎಲ್. ಬಿ. ಮಹಾಶಯರಿಗೆ

ಹುಬ್ಬಳ್ಳಿಯ ಹತ್ತಿ ಅರಳಿ ದಲಾಲರು ಹಾಗೂ ಖರೀದಿದಾರರು ತಮಗೆ ಸ್ವಾಗತವನ್ನೀಯಲು ಸಂತೋಷವಾಗುತ್ತದೆ. ಕೆಲವು ವರ್ಗಗಳ ನೆರವೇ ತಮಗೆ ದೊರೆಯಬೇಕಾದ ಮಂತ್ರಿಪದವು ಈಗಾಗ ಪ್ರಾಪ್ತವಾದುದು ನಮ್ಮೆಲ್ಲರಿಗೂ ಆನಂದದ ಸಂಗತಿಯು.

[illegible]

ಹುಬ್ಬಳ್ಳಿ ಕಾಟನ್ ಮಾರ್ಕೇಟ್ ತಾ. ೨೯-೧೧-೩೦

॥ ಶ್ರೀ ಕೇದಾರನಾಥಃ ಪ್ರಸೀದತು ॥

ಹಿಮವತ್ಪರ್ವತದ ಮಧ್ಯದಲ್ಲಿ ರಾರಾಜಿಸುತ್ತಿರುವ
ಶ್ರೀ ಕೇದಾರನಾಥಸ್ವಾಮಿಯ ಮಂದಿರ.

ಭರತಖಂಡದಲ್ಲಿ ಪರಿಶೋಭಿಸುತ್ತಿರುವ ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದಾದ ಶ್ರೀ ಕೇದಾರನಾಥ ಜ್ಯೋತಿರ್ಲಿಂಗಮೂರ್ತಿಯ ಪೂಜೆಯು ಪ್ರತಿವರ್ಷದಂತೆ ತಾ|| ೨೩-೧೦-೩೦ ನೆಯ ಕಾರ್ತಿಕ ಶುಕ್ಲ ದ್ವಿತೀಯಾ ಗುರುವಾರ ದಿವಸ ವೇದೋಕ್ತವಾಗಿ ನೆರವೇರಿ ಆ ದಿವಸ ಶುಭಮುಹೂರ್ತದಲ್ಲಿ ಕಪಾಟ (ದ್ವಾರ) ಬಂಧನವು ಮಾಡಲ್ಪಟ್ಟಿತು. ಇನ್ನು ಪುನಃ ವೈಶಾಖ ಮಾಸದಲ್ಲಿ ದ್ವಾರವು ತೆರೆಯಲ್ಪಡುವದು. ಈ ವರ್ಷ ಚಳಿಯು ಅತ್ಯಧಿಕವಾಗಿರುವುದು. ಬಾಗಿಲನ್ನು ಮುಚ್ಚುವಕಾಲಕ್ಕೆ ಕುತ್ತಿಗೆಯವರೆಗೂ ಬರ್ಫವು ಬಿದ್ದಿತ್ತು. ಮನೆಗಳೆಲ್ಲಾ ಮುಳುಗಲಾರಂಭಿಸಿದುವು. ಮುಂದಿನ ವರ್ಷ ವೈಶಾಖಮಾಸದಲ್ಲಿ ಭಗವಂತನ ಬಾಗಿಲವನ್ನು ತೆಗೆದು ಒಳಗೆ ಪ್ರವೇಶವಾಡಿ ನೋಡಿದರೆ ಕೇದಾರೇಶ್ವರನಿಗೆ ಹಿಂದೆ ಸಮರ್ಪಿಸಿದ್ದ ಫಲಪುಷ್ಪಾದಿಗಳು ಈಗ ಪೂಜೆಯು ಮಾಡಲ್ಪಟ್ಟಿರುವುದೋ ಏನೋ ಎಂಬುವಂತೆ ಕಾಣಬರುವವು. ಇದು ಆಶ್ಚರ್ಯಕರವಾದ ಸಂಗತಿಯಾಗಿದೆ. ಮೈಸೂರು ಶ್ರೀಮನ್ಮಹಾರಾಜರವರು ಈ ವರ್ಷ ಇಲ್ಲಿಗೆ ದಯಮಾಡಿಸಿದ್ದು ಸ್ವಾಮಿಯ ದರ್ಶನವಾಡಿಕೊಂಡು ಸಂತುಷ್ಟರಾದರು. ಸ್ವರಾಜ್ಯಚಳವಳಿಯಿಂದ ಪ್ರತಿವರ್ಷದಂತೆ ಈ ವರ್ಷ ಯಾತ್ರೆಜನರು ವಿಶೇಷವಾಗಿ ಬಾರದಿದ್ದುದರಿಂದ ಕೇದಾರಸಂಸ್ಥಾನಕ್ಕೂ ಹಾಗೂ ಆ ಸಂಸ್ಥಾನಕ್ಕೊಳಪಟ್ಟ ೨೨ ಕ್ಷೇತ್ರಗಳಿಗೂ ಕೂಡಿ ಒಟ್ಟು ೪೦ ಸಾವಿರದ ವರೆಗೆ ಹಾನಿಯಾಗಿರುವುದು. ಸದ್ಯಃ ಚಳಿಯು ಇನ್ನೂ ಹೆಚ್ಚುತ್ತಿರುವುದು. ಬೆಳೆಗಳು ಸಾಧಾರಣವಾಗಿರುವವು.

ಸಿದ್ಧಲಿಂಗಶರ್ಮಾ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು
ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

[illegible]

[18]

ಸ್ತ್ರೀರೋಗ ನಿವಾರಣ ಚೂರ್ಣ.

[illegible]

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ
ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಪಂಚಾಕ್ಷರಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜು) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಗೃಹಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ-ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು.

[illegible]

ಶಿಲಾಜಿತ—[illegible]

ಕಸ್ತೂರಿ—[illegible]

ಗೃಹಮಾತೆಯು—[illegible]

ಹಿಮಾಲಯನ್ ಬಾಮ್—[illegible]

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

[illegible]

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಉಂಟುಮಾಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲೂಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. [illegible] ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[33] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾದ ಜನರಿಗೆ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ

ಧಿಕ್ಕರಿಸದೆ ಶ್ರೀಮಂತರು ಕಾಯ್ದು ಕೊಳ್ಳುವರು.

[illegible]

[19]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

[illegible] ಕೆಂಪೌಂಡ್ ಸಿರಪ್ ಕಾರ್ಡಸ್ [illegible] ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕೆಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

[illegible] ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

[illegible] ಆರೋಗ್ಯ ಭಾಗ್ಯದ ನೀತಿಸೂತ್ರ [illegible]

[17] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾ[illegible] ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ ಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[20] ಪೋ. ಬಾ. ೫೧೧. ಮದರಾಸು.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೪ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಪಮಾಪನಂ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ಸ್ಪಷ್ಟೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಸಟೀಕ ರಚಿತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪು[illegible]ಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯನಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! **ಸಾಲವು ದೊರಕುವುದು !!** **ಅಪೂರ್ವಲಾಭ !!!**

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—ದೇಹಲಿ.

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್.

113, ಕೃಷ್ಣರಾಜಮೊಹಲ್ಲಾ, ಮೈಸೂರು.

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರಿವಿಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲೂಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು.

ಮೆ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ನೇ ಡಿಸೆಂಬರ್ ೧೯೩೦ [ಸಂಚಿಕೆ ೩೨

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾ

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಹೊಳಲಿಂಗೇಶ್ವರ ಪ್ರಸೀದ.

ಶ್ರೀ ಹೊಳೆಲಿಂಗೇಶ್ವರಸ್ವಾಮಿಯ ರಥೋತ್ಸವ ವ್ಯಾಹ್ವಾನಪತ್ರಿಕೆ.

ನಮ್ಮ ಗ್ರಾಮದ ಸಮೀಪದಲ್ಲಿ ವರದಾ ಮತ್ತು ದಂಡಕನದಿಗಳ ಸಂಗಮವಾಗಿ ಹೊಳೆಯಲ್ಲಿ ಲಿಂಗವು ಉದ್ಭವಿಸಿ ಅತ್ಯಂತ ಪುಣ್ಯಸ್ಥಳವೆನಿಸಿಕೊಂಡಿದ್ದು, ಈಗ ಅನೇಕ ವರ್ಷಗಳಿಂದ ಮಕರಸಂಕ್ರಮಣದಲ್ಲಿ ನಡೆಯುವ ರಥೋತ್ಸವವನ್ನು ಅಜೂಬಾಜೂ ಗ್ರಾಮಗಳ ಪ್ರಮುಖರು ಅತ್ಯಂತ ಪ್ರೋತ್ಸಾಹದಿಂದ ನಡೆಯಿಸುತ್ತಾ ಇದ್ದಾರೆ. ಪದ್ಧತಿಪ್ರಕಾರ ಶಕೆ ೧೮೫೨ ನಯ ಪ್ರಮೋದೂತನಾಮಸಂವತ್ಸರದ ಪುಷ್ಯ ಬ|| ೧೧ ಬುಧವಾರ (ತಾ|| ೧೪-೧-೧೯೩೧) ಬೆಳಗಿನಿಂದ ಸಾಯಂಕಾಲದವರೆಗೆ ಲಿಂಗಪೂಜಾ, ರಾತ್ರಿ ೭ ಘಂಟೆಯಿಂದ ದೇವರ ಅಲಂಕಾರ, ದೀಪಾರಾಧನೆ, ಮತಸಂಬಂಧ ಆಚರಣೆ, ಸಭೆ, ಕೀರ್ತನ, ಭಜನೆ, ಇವುಗಳು ನಡೆದ ತರುವಾಯ ಬೆಳಗಿನ ೫ ಘಂಟೆಗೆ ಶ್ರೀ ಹೊಳೆಲಿಂಗೇಶ್ವರನ ರಥಾರೋಹಣಮಹೋತ್ಸವವು ನಡೆಯುತ್ತದೆ. ಮತ್ತು ತಾ|| ೧೬ ರಿಂದ ತಾ|| ೨೪-೧-೩೧ ರ ವರೆಗೆ ಕುಸ್ತಿನಡೆಯಿಸಿ ಬಹುಮಾನವು ಕೊಡಲ್ಪಡುತ್ತದೆ. ಪ್ರತಿ ವರ್ಷವೂ ದನಕರುಗಳ ವ್ಯಾಪಾರವು ಹೆಚ್ಚಾಗಿ ನಡೆಯುತ್ತಾ ಇದೆ. ಹೊಸದಾಗಿ ಬರತಕ್ಕ ನಾಟಕದವರೂ, ಅಂಗಡಿಕಾರರೂ, ತಮ್ಮ ಅನುಕೂಲತೆಯ ಬಗ್ಗೆ ಮ|| ರಾ|| ಶ್ರೀ ಬಣೇಹೊಳಲಿ ಶ್ಯಾನವಳ್ಳಿ ನಾಳಗಿ ದೊಡ್ಡವೀರಪ್ಪಗೌಡರಿಗೂ ಮ|| ರಾ|| ಶ್ರೀ ಬಂಕಾಪ್ಪನಾದ ಪಟೇಲ ಪುಟ್ಟಪ್ಪಗೌಡರಿಗೂ ಮೊದಲೇ ತಿಳಿಸಬೇಕಾದ್ದು.

ಈ ಸಂಗಮಪ್ರದೇಶವು ಆನವಟ್ಟಿಗೆ ೫ ಮೈಲು, ಶಿಕಾರಿಪುರಕ್ಕೆ ೧೦ ಮೈಲು, ಬನವಾಸಿಗೆ ೯ ಮೈಲು ದೂರದಲ್ಲಿದೆ.

ಸದ್ಭಕ್ತರು ಎಂದಿನಂತೆ ಬಂದು ಮಕರಸಂಕ್ರಮಣಸ್ನಾನಮಾಡಿ ಪುಣ್ಯಭಾಗಿಗಳಾಗಬೇಕಾಗಿ ಕೋರುತ್ತೇವೆ.

ತಾ|| 15-12-1930 ಬಂಕಾನಾಗ್ರಾಮ. } ಬ|| ಗೌ|| ಚನ್ನವೀರಯ್ಯನವರು, ಸೇ|| ಮ|| ಬಸವಣ್ಣಪ್ಪನವರು.

ಅಪಾಯಸಂಭವನಗಳಲ್ಲಿ ಮಾಡಬೇಕಾದ ಪ್ರಥಮಚಿಕಿತ್ಸೆಗಳು.

ಕಣ್ಣಿನೊಳಗೆ ಮಳಲು ಮುಂತಾದ [illegible]ಗಳು ಸೇರುವುದು.

ಈ ಸ್ಥಿತಿಯಲ್ಲಿ ಕಣ್ಣನ್ನು ಉಜ್ಜಬಾರದು. ಕೆಳರೆಪ್ಪೆಯೊಳಗೆ ನೋಡಿ, ಕರ್ಚೀಫಿನ ರವೆ ಮುಂತಾದುವೇನಾದರೂ ಕಂಡರೆ, ಮೆಲ್ಲನೆ ರೆಪ್ಪೆಯನ್ನು ಕೆಳಕ್ಕೆ ಮಡಿಸಿ, ಕೈಬಟ್ಟೆಯಿಂದಾಗಲಿ, ಒಂದು ಗರಿಯಿಂದಾಗಲಿ, ಅದನ್ನು ಹೊರಗಡೆಗೆ ತಳ್ಳಬಹುದು. ಮೇಲಿನ ರೆಪ್ಪೆ ಎಳಗಿದ್ದಾಗ, ಅದನ್ನು ಮೇಲುಗಡೆಗೆ ಮಡಿಸಿ, ಕೆಳರೆಪ್ಪೆಯನ್ನು ಮೇಲಕ್ಕೆ ಎಳೆಯುವುದರಿಂದ ಆ ರೆಪ್ಪೆಯು ಕೂಡಲೇ ಬ್ರಷ್ಷಿನಂತಾಗಿ, ಆ ಕಣ್ಣವನ್ನು ಹೊರಕ್ಕೆ ತಳ್ಳುವುದು. ಕಣ್ಣಿನೊಳಗೆ ಬಿದ್ದ ಪದಾರ್ಥವು ಕೈವಸ್ತ್ರದಿಂದಾಗಲಿ, ಗರಿಯಿಂದಾಗಲಿ ಹೊರಕ್ಕೆ ಬಾರದಿದ್ದರೆ ಕಣ್ಣಿಗೆ ಒಂದು ತೊಟ್ಟು ಎಣ್ಣೆಯನ್ನು ಬಿಟ್ಟು, ಮೇಲೆ ಬಟ್ಟೆಯನ್ನು ಹೊದಿಸಿ ಕಟ್ಟುಕಟ್ಟಿ, ಡಾಕ್ಟರನ್ನು ಕರೆಸಿ ತೋರಿಸಬೇಕು.

ಮೈಯಲ್ಲಿ ಸಿಬರು ನಾಟಿಕೊಂಡರೆ.

ಚಿಮುಟದಿಂದ ಹಿಡಿದು ಅದನ್ನು ತೆಗೆಯಬಹುದು. ಅದರಿಂದ ಸಾಧ್ಯವಿಲ್ಲದಿದ್ದರೆ, ಬಟ್ಟಿಯಿಂದ ಪೋಲ್ಟೀಸುಮಾಡಿ ಕಟ್ಟಬೇಕು. ಇದರಿಂದ ಆ ಸ್ಥಳಕ್ಕೆ ಮೃದುತ್ವವು ಬಂದು, ಸಿಬರು ತಾನಾಗಿ ಸಡಿಲ ಆಗುವಂತಾಗುವುದು. ಒಂದು ಸಣ್ಣ ಗಾಯವಾಗಿದ್ದರೂ, ಕೊಳೆಸೇರುವುದರಿಂದ ಅದು ಪ್ರಬಲವಾಗಿ, ಉರಿ, ಮತ್ತು ಬೇನೆಗಳು ಕಾಣಿಸುವುವು. ಅದಕ್ಕೆ ಮಾರಿಸಿ ವಾಶಿ, ತಣ್ಣೀರಿನ ಮತ್ತು ಬಿಸಿನೀರಿನ ಒತ್ತಿಸೆಗಳನ್ನು ಕೊಡುತ್ತಿರಬೇಕು.

(ಕಾಲಿಕ್) ಹೊಟ್ಟೆನೋವು.

ಇದು ದೊಡ್ಡ ಕರುಳಿಗೆ ಸಂಬಂಧಪಟ್ಟ ಬಾಧೆ. ಬಿಸಿನೀರಿನಲ್ಲಿ ಅದ್ದಿದ ಗುಡಟಿದಿಂದ, ಹೊಟ್ಟೆಗೆ ಒತ್ತನೆ ಕೊಟ್ಟರೆ ಬಾಧೆಯು ತಗ್ಗಬಹುದು. ಮಲವು ಕಟ್ಟುವುದರಿಂದ ಹೀಗಾಗಿದ್ದ ಸಂದರ್ಭದಲ್ಲಿ, ಭೇದಿಯ ಔಷಧಿಯನ್ನು ಕುಡಿಸಬೇಕು.

ವಿಷಕ್ರಿಮಿಗಳ ಕಡಿತ.

ಕ್ರಿಮಿಗಳು ಕಚ್ಚಿದಾಗ ಅವರ ಮುಳ್ಳು ಚರ್ಮದಲ್ಲಿ ನಾಟಿಕೊಂಡಿದ್ದರೆ, ಅದನ್ನು ಒಡನೆಯೇ ತೀಳಸಬೇಕು. ಕಣಜದ ಕಡಿತಕ್ಕೆ ವಿನೀಗರ್, ಅಥವಾ ಈರುಳ್ಳಿಯ ರಸವನ್ನು ಹಚ್ಚಬೇಕು. ದುಂಬಿಗಳ ಕಡಿತಕ್ಕೆ ಅಮೋನಿಯಾ ಅಥವಾ ಸೋಡಾವನ್ನು ಹಾಕಬೇಕು. ಚೇಳ್ಕೆ ಗಳದ್ದರೆ ಶುದ್ಧವಾದ ಸೂಜಿಯಿಂದ ಆ ಗುಳ್ಳೆಯ ಒಂದು ಪಾತ್ರ್ಯವಾಗಿ ಚರ್ಮವನ್ನು ಚುಚ್ಚಿ, ನೀರು ಹೊರಗೆ ಬರುವಂತೆ ಮಾಡಬೇಕು. ಕಣ್ಣುಕುಟಿಕೆಗಳದ್ದರೆ ಬಿಸಿಯಾದ ಬೋರಾಸಿಕ್ ದ್ರಾವಕದಿಂದ ಅದನ್ನು ತೊಳೆಯುತ್ತಿರಬೇಕು.

ಉಗುರುಸುತ್ತು.

[illegible]ರುಸುತ್ತಾಗಿದ್ದಾಗ, ಯಾವಾಗಲೂ ಪೋಲ್ಟೀಸನ್ನು ಕಟ್ಟಿದ್ದು, ತೋಳಿಗೆ ಪೂರ್ಣವಿಶ್ರಾಂತಿ ಯಿರುವಂತೆ ಕೈತೂಗನ್ನು ಕಟ್ಟಿಕೊಂಡಿರಬೇಕು. ಉಗುರುಸುತ್ತು ಇನ್ನೂ ಒಳಕ್ಕೆ ವ್ಯಾಪಿಸದೆ ಹಾಗೆ, ಅದಕ್ಕೆ ಮೊದಲೇ ಶಸ್ತ್ರಚಿಕಿತ್ಸೆ ಮಾಡಿಸಿ, ಆಮೇಲೆ ಗಾಯಕ್ಕೆ ಶಾಖವನ್ನು ಕೊಟ್ಟು, ಬೋರಾಸಿಕ್ ಮುಲಾಮನ್ನು ಸವರುವುದೊಳ್ಳೆಯದು. ತುರಿಸುವಾಗ ಕಟ್ಟು ಕೊಳೆಯಾಗಲಿ. ಸಿವುರಾಗಲಿ ಉಗುರು ಸಂದುಗಳಲ್ಲಿ ಸೇರುವುದೇ ಈ ವ್ಯಾಧಿಗೆ ಕಾರಣವು. ಡಾಕ್ಟರಿಂದ ಇದಕ್ಕೆ ಚಿಕಿತ್ಸೆ ಮಾಡಿಸದಿದ್ದರೆ, ಬೇರೆ ಬೆರಳುಗಳಿಗೂ ಇದರ ಸೋಂಕು ವ್ಯಾಪಿಸಿ ಹುಣ್ಣಾಗುವ ಸಂಭವವುಂಟು.

ಕಿವಿಬೇನೆ.

ಇದು ಶೀತದಿಂದಲೂ, ಬೇರೆ ಕೆಲವು ಕಾರಣದಿಂದಲೂ ಬರುವುದು. ಕಿವಿಯ ಹಿಂದೆ ಬಿಸಿಯಾದ ಶಾಖವನ್ನು ಕೊಡಬೇಕು. ಅಥವಾ ಬಹಳ ಬಿಸಿನೀರಿನಲ್ಲಿ ಅದ್ದಿದ ಹತ್ತಿಯನ್ನು ಕಿವಿಯ ರಂಧ್ರಕ್ಕೆ ಇಡಬೇಕು. ಆಲಿವ್ ಎಣ್ಣೆ ಮತ್ತು ಲಾಡನಮ್ ಇವೆರಡನ್ನೂ ಸಮಭಾಗವಾಗಿ ಸೇರಿಸಿ, ಟೀಸ್ಪೂನಿನಲ್ಲಿ ಕಾಯಿಸಿ ಕಿವಿಯೊಳಕ್ಕೆ ಬಿಟ್ಟು, ಬಾಯಿಗೆ ಹತ್ತಿಯನ್ನು ಮುಚ್ಚಿಟ್ಟರೂ ನೋವು ಗುಣವಾಗುವುದು.

ಕಿವಿಯಲ್ಲಿ ಕೀವು ಸುರಿಯುತ್ತಿದ್ದಾಗ, ಕಿವಿಯ ಬಾಯಿಗೆ ಹತ್ತಿಯನ್ನಿಟ್ಟು ಮುಚ್ಚುವುದು ಅಪಾಯಕಾರಿಯು. ಇದಕ್ಕೆ ಗೃಹವೈದ್ಯದಿಂದ ಪ್ರಯೋಜನವು ಕಡಿಮೆ. ಡಾಕ್ಟರಿಗೇ ತೋರಿಸಬೇಕು. ಕಿವಿಯ ಕಶ್ಮಲವನ್ನು ತೆಗೆಯುವುದಕ್ಕಾಗಿ ಕಿವಿಯೊಳಕ್ಕೆ ಸುಖೋಷ್ಣವಾದ ನೀರನ್ನು ಸಿರೆಂಜ್ ಮಾಡಬಹುದು. ಈ ಕಾರ್ಯವನ್ನು ಡಾಕ್ಟರ್ ಮೂಲಕವಾಗಿಯೇ ನಡೆಸಬೇಕೇ ಹೊರತು, ಅವರವರ ಮನೆಯಲ್ಲಿ ತಮಗೆ ತೋರಿದಂತೆ ಮಾಡಿದರೆ, ಅದರಿಂದ ಕಿವಿಯ ಪರೆಗೆ ಏನಾದರೂ ಘಾತವುಂಟಾಗಿ, ಜೀವಾವಧಿ ಕಿವುಡಾಗಿರಬೇಕಾದ ಸಂಭವವುಂಟು.

ಗಂಟಲು ಬೇನೆ.

ಇದು ಸಾಧಾರಣ ಸ್ಥಿತಿಯಲ್ಲಿದ್ದಾಗ, ಕುಪಟದ ಬಟ್ಟೆಯಿಂದ ಬಿಸಿಬಿಸಿಯಾಗಿ ಶಾಖವನ್ನು ಕೊಟ್ಟರೆ ಬಹಳ ಮಟ್ಟಿಗೆ ಗುಣವನ್ನು ಕಾಣಬಹುದು. ಆದರೆ ಈ ಗಂಟಲು ಬೇನೆಯೆಂಬುದು ಹಲವು ಬಗೆಯ ಕಠಿಣ ವ್ಯಾಧಿಗಳಿಗೆ ಆರಂಭಚಿಹ್ನವಾಗಿ ಕಾಣಿಸುವುದೂ ಉಂಟು. ಆದುದರಿಂದ ಇದಕ್ಕೆ ಮಾಡುವ ಮೇಲ್ಕಂಡ ಚಿಕಿತ್ಸೆಯನ್ನಾದರೂ ತಾತ್ಕಾಲಿಕವಾದ ಉಪಶಮನಕ್ಕಾಗಿ ಪ್ರಥಮಸಹಾಯವಾಗಿ ಮಾಡಬೇಕೇ ಹೊರತು, ಡಾಕ್ಟರಿಗೆ ತಿಳಿಸಿಯೇ ಸರಿಯಾದ ಚಿಕಿತ್ಸೆ ಮಾಡಿಸಬೇಕು. (ಆ. ಚಂ.)

ಸ್ವೀಕಾರ.

ಬಳ್ಳಾರಿ ಡಿ|| ಹೊಸಪೇಟೆ ತಾ|| ಕೂಂಡಿನಾಯಕನಹಳ್ಳಿಯಲ್ಲಿ ನೆರನೇರಿದ ಕಾರ್ತಿಕ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ವೆ|| ಸಿದ್ಧಾರಾಧ್ಯರವರ ದ್ವಾರಾ ತಲ್ಪಿರುತ್ತದೆ.

ಧಾರವಾಡ ಡಿ|| ಶಿಗ್ಗಾಂವಿ ತಾ|| ಹೊಸಕಟ್ಟಿಯಲ್ಲಿ ಸದಾಚಾರಸುಧಾರಕಸಂಘವು ಸ್ಥಾಪಿಸಲ್ಪಟ್ಟ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿದ 1 ರೂಪಾಯಿಯು ಶ್ರೀ|| ಷ|| ಬ್ರ|| ಪಾಲಿಕೆಸಪ್ಪ ಬ್ಯಹನ್ಮಠದ ಪಟ್ಟಾಧ್ಯಕ್ಷರವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸದಾಚಾರಸುಧಾರಕಸಂಘ.

ಹೊಸಕಟ್ಟಿ.

ಈ ಸಮಯದಲ್ಲಿ ಮಾನವಪ್ರಾಣಿಯು ತನ್ನ ಜೀವನಕಲಹದ ಸಮಸ್ಯೆಯನ್ನು ಪೂರ್ತಿಮಾಡಿಕೊಂಡು ಸುಖಿಯಾಗಿರುವದರ ಆವಶ್ಯಕತೆಯು ಬಹುಮಟ್ಟಿಗೆ ಬೇಕಾಗಿರುವದು. ಏಕೆಂದರೆ ಮನುಷ್ಯನ ಜೀವನಾಧಾರಗಳಾದ ಸದಾಚಾರಗಳು ಕಲಿರಾಜನ ಕರಾಳಶಾಸನಕ್ಕೆ ಒಳಗಾಗಿ ಕಾಡುಗಿಚ್ಚಿಗೆ ಸಿಕ್ಕಿದ ವನಲತೆಯಂತೆ ಪ್ರತಿನಿಮಿಷದಲ್ಲಿಯೂ ಕ್ಷೀಣಿಸುತ್ತ ಅನೇಕ ದುರಾಚಾರಗಳು ಹುಟ್ಟಿ ಜನತೆಯು ಪಾಪಸಮುದ್ರದಲ್ಲಿ ತೇಲುಮುಳುಗುತ್ತಿರುವದು. ದುರಾಚಾರಗಳು ಹೆಚ್ಚಿದಹಾಗೆಲ್ಲ ವಿಧಿವಾಕ್ಯಗಳ ಗೌರವವು ಕಡಿಮೆಯಾಗಹತ್ತಿತು. ರಾತ್ರಿಯು ಬಲಿತಹಾಗೆಲ್ಲ ಸೂರ್ಯಪ್ರಕಾಶವು ಇಲ್ಲದಂತಾಗುವದೆಂಬ ವಿಷಯವು ಯಾರಿಗೆ ತಾನೇ ತಿಳಿಯದು? ಶರೀರತ್ಯಾಗಾನಂತರದಲ್ಲಿ ಅನುಭವಿಸಬೇಕಾದ ಪಾಪಪುಣ್ಯಗಳ ವಿಚಾರವನ್ನು ಮಾಡುವದು ನಮಗೇನೂ ಬೇಕಾಗಿಲ್ಲ. ಬೇರು ಆರೋಗ್ಯದಿಂದಿದ್ದರೆ ಟಾಳೆಗಳಲ್ಲಿ ಹಣ್ಣುಗಳಾಗುವವೆಂದು ಊಹಿಸಬಹುದು. ಬೇರನ್ನೇ ಕತ್ತರಿಸಿದರೆ ಎಲ್ಲಿಯ ಹಣ್ಣುಗಳು? ಕಣ್ಣಿದುರಿಗೆ ಕಾಣುವದನ್ನು ನೋಡಲಸಮರ್ಥರಾದವರು (ಜ್ಞಾನಾಂಧರು) ಕಾಣದ್ದನ್ನು ತಿಳಿಯುವದೆಂತು? ಆಕಾರಣ ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಕಾವ್ಯಾದಿಗಳಲ್ಲಿ ವರ್ಣಿಸುವ ಪಾಪಪುಣ್ಯಗಳನ್ನು ಮನೋಹರವಾಗಿ ವರ್ಣಿಸುವದಕ್ಕಿಂತಲೂ ನಮ್ಮದುರಿಗೆ ಗುದ್ದಿದಂತೆ ಗೋಚರಿಸುವ ಜೀವನೋಪಾಯದ ವಿಷಮಾವಸ್ಥೆಯನ್ನು ಸರಿಪಡಿಸಿಕೊಳ್ಳುವದು ವಿಹಿತವು. ನಾವು ಮಾಡಿದ ಪ್ರತಿಯೊಂದು ಕರ್ಮದ ಫಲವು ನಮಗೆ ಕಂಡೇ ಕಾಣಿಸುವದು. ಆದರೆ ಕಳ್ಳರು ಮನೆಯನ್ನು ಹೊಕ್ಕು ಮಲಗಿದವನಿಗೆ ಮಂಕುಬೂದಿಯನ್ನು ಉಗ್ಗಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿರುವಾಗ ಮಲಗಿದವನು ಮಿಟಿಮಿಟಿ ಕಣ್ಣು ಬಿಡುತ್ತಿದ್ದರೂ, ಆ ಕಳ್ಳರ ಕೃತಿಯನ್ನು ತುಂಬಾ ನಿರೀಕ್ಷಿಸುತ್ತಿದ್ದರೂ, ಹಾಸಿಗೆಯನ್ನು ಬಿಟ್ಟು ಮೇಲಕ್ಕೆದ್ದು ಅವರಿಗೆ ತಕ್ಕ ಪ್ರತಿಕ್ರಿಯೆಯನ್ನು ಮಾಡುವದು ತಿಳಿಯದಂತೆ ನಮ್ಮಿಂದಾದ ಕರ್ಮಫಲವು ನಮ್ಮನ್ನು ಅನೇಕ ರೀತಿಯಿಂದ ಪೀಡಿಸುತ್ತಿದ್ದರೂ ಗೊತ್ತಾಗುವದಿಲ್ಲ. ಲಕ್ಷಾಂತರ ಆಕಳುಗಳ ಹಿಂದಿನಲ್ಲಿ ಕರುವು ತನ್ನ ತಾಯಿಯನ್ನೇ ಹುಡುಕಿಕೊಳ್ಳುವಂತೆ ಕರ್ಮಫಲವು ಕರ್ತೃವನ್ನೇ ಅರಸಿಕೊಳ್ಳುವದು. ರೋಗ, ಶೋಕ, ತಾಪ, ಬಂಧನ, ವ್ಯಸನ ಮೊದಲಾದವುಗಳು ನಾವು ಮಾಡಿದ ಅಂದರೆ ಹೃದಯಕ್ಷೇತ್ರದಲ್ಲಿ ಪ್ರೇಮಾತಿಶಯದಿಂದ ಬೆಳೆಯಿಸಿದ ಅಪರಾಧಗಳೆಂಬ ವೃಕ್ಷಗಳ ಹಣ್ಣುಕಾಯಿಗಳಾಗಿರುವವು. ಪ್ರಕಾಶದ ಅಭಾವವೇ ಕತ್ತಲೆಯಾಗಿ ಪರಿಣಮಿಸುವಂತೆ ಹೀನಮಾನವರ ಗತಿಯಾಗಿರುವದು. ಹಾಲುಕುಡಿಯುವದರಲ್ಲಿ ಲೋಲುಪ್ತವಾದ ಬೆಕ್ಕು ಬೆನ್ನ ಮೇಲೆ ಬೀಳುವ ಕೋಲನ್ನು ಕಾಣದಂತೆ ಅಕೃತ್ಯಗಳಲ್ಲಿ ಆಸಕ್ತರಾದವರು ಮುಂದೆ ತಮಗೊದಗುವ ದುಷ್ಪರಿಣಾಮದಕಡೆಗೆ ಮನಗೊಡುವದಿಲ್ಲ. ಸರ್ವರಲ್ಲಿ ಜ್ಞಾನವಿದ್ದರೂ ಕಪ್ಪುಗಾಜಿನಲ್ಲಿಯ ದೀಪದಂತೆಯೂ, ಮುಚ್ಚುಮಡಿಕೆಯಲ್ಲಿಯ ಗಂಗೋದಕದಂತೆಯೂ ಕೆಲಸಕ್ಕೆ ಬಾರದ್ದಾಗಿರುವದು. ಎಲ್ಲರ ಗತಿಯೂ ಹೀಗೆಯೇ ಇರುವದಿಲ್ಲ! ಪರಂತೂ ವಿವೇಕದೃಷ್ಟಿಯಿಂದ ಸಮತೆಯಿಂದ ನಡೆಯುವ ಪಕ್ವಹೃದಯರಾದ ಪಂಡಿತ ಪ್ರಕಾಂಡರ ಪರಿಗಣನೆಯು ಮಾತ್ರ ಪ್ರಪಂಚದಲ್ಲಿ ಬಹುಮಟ್ಟಿಗೆ ಕಡಿಮೆಯಾಗಿರುವದು. ಕೇವಲ ವಿವೇಕಶಾಲಿಗಳಾದವರು ಅಕೃತ್ಯವನ್ನು ಮಾಡುವದಿಲ್ಲ. ವನದಲ್ಲಿ ಸಂಚರಿಸುವ ಶಕ್ತಿಯು ಪರಾಕ್ರಮ ವಿಶೇಷದಿಂದ ಬೇಟೆಯನ್ನಾಡಿ ಮೃಗಮಾಂಸವನ್ನು ಸಂಪಾದಿಸಿ ಜೀವನಯಾತ್ರೆಯನ್ನು ಸಾಗಿಸುತ್ತಲಿರುವ ಸಿಂಹಾದಿ ಶೂರಪ್ರಾಣಿಗಳು ಒಂದಾನೊಂದು ಸಮಯದಲ್ಲಿ ಮಾಂಸವು ಸಿಗದಿದ್ದರೆ ಸಾಧಾರಣಮೃಗಪಶುಗಳಂತೆ ಹುಲ್ಲು, ಗಿಡದೆಲೆಗಳನ್ನೇನಾದರೂ ತಿನ್ನುವವೇನು? ಛೇ! ಛೇ! ತಿನ್ನುವದಿಲ್ಲ. ಮನಸ್ಸಿನಲ್ಲಿ ಸಹ ಇಂಥಾ ಹೇಡಿ ಹಂಬಲವನ್ನು ಮಾಡಲಾರವು. ಅಂಥಾ ವಿವೇಕವು, ಸತೇಜಪರಾಕ್ರಮವು, ಸಜ್ಞಾನ ಚಪಲತೆಯು ಜನತೆಗೆ ದೊರೆಯಬೇಕಾದರೆ ಶಿಕ್ಷಣಬಲವು ಬಹುಮಟ್ಟಿಗೆ ಬೇಕಾಗುವದು. ಮಂಥನವಿಶೇಷದಿಂದ ಬೆಣ್ಣೆಯು ಬರುವಂತೆ ಶಿಕ್ಷಣವಿಶೇಷದಿಂದ ವಿವೇಕೋದಯವಾಗುವದು. ಈಗಿನ ನವನಾಗರಿಕತೆಯು ಸುಧಾರಿಸಿದ ಸಮಯದಲ್ಲಿಯು ಶಿಕ್ಷಣವು ಬಹು ಸೊಗಸಾಗಿ ಶಾಖೋಪಶಾಖೆಗಳಿಂದ ವ್ಯಾಪಿಸಿದ್ದರೂ ಮುಂದೆ ಮುಂದೆ ಕುಡಿವರಿಯುತ್ತಲೇ ಇರುವದು. ಇದು ಯಾರಿಗೆ ತಾನೇ ಪರಿತೋಷವನ್ನೀಯದ ಸಂಗತಿಯು? ಯಾವ ಶಿಕ್ಷಣವು ಪುರಾತನಸಮಯದಲ್ಲಿ ಅಡವಿಗಳಲ್ಲಿದ್ದು, ಕಂದಮೂಲಾದಿಗಳಿಂದ ಜೀವನವೃತ್ತಿಯನ್ನು ಸಾಗಿಸುತಿದ್ದ, ವನಮೃಗಗಳ ಸಹವಾಸದಲ್ಲಿದ್ದ [illegible]

[illegible] ಸ್ನೋದಿ ಮಹಾಜ್ಞಾನಿಗಳಾಗುತ್ತಿದ್ದರೋ ಅಂಥಹ ಶಿಕ್ಷಣಪ್ರಕಾರದ ಮಹಿಮೆಯು ಈಗಿನ ಸಮಯದಲ್ಲಿ ಎಲ್ಲಿಯವರೆಗೆ ಏರಿರುವದೆಂಬ ಅಂಕವು ಕಂಬಿಲ್ಲದಂತೆ ಸಹಸ್ರಾವಧಿಯೇನವಾಗಿ ದೃಗ್ಗೋಚರವಾಗದಿರಲಾರದು. ಅಂತಹ ಕಷ್ಟತರಸಮಯದಲ್ಲಿ ದೊರೆಯುವ ಶಿಕ್ಷಣದಿಂದಲೇ ಮಹಾಜ್ಞಾನಿಗಳ ಸಂಖ್ಯೆಯು ಬೆಳೆದು ಆ ಮಹನೀಯರು ಭಾವೀಸಂತತಿಯ ಉನ್ನತಿಗಾಗಿ, ಧರ್ಮಪರಾಯಣತೆಗಾಗಿ, ಸುಖಪ್ರಾಪ್ತಿಗಾಗಿ, ಶಾಂತಿಸಂಪಾದನೆಗಾಗಿ ಕಿಂಬಹುನಾ ಇಹಾಮುತ್ರಲೌಖ್ಯಲಾಭಕ್ಕಾಗಿ ದಯಾರ್ದ್ರ ನಿರ್ಮಲಾಂತಃಕರಣದಿಂದ, ಪರೋಪಕಾರಬುದ್ಧಿಯಿಂದ, ಜನತೆಯು ದುರ್ಮಾರ್ಗಕ್ಕೆ ಹೋಗಬಾರದೆಂಬ ಕರುಣೆಯ ಕಳಕಳಿಯಿಂದ ತಮ್ಮ ಹೃದಯಕ್ಷೇತ್ರದಲ್ಲಿ ಬೆಳೆದ ಧಾರ್ಮಿಕ, ನೈತಿಕ, ಔದ್ಯೋಗಿಕಾದಿ ವಿದ್ಯೆಯ ಉದಾತ್ತತತ್ವರೂಪಫಲಗಳನ್ನು ಎಷ್ಟೋ ಗ್ರಂಥಗಳಲ್ಲಿ ತುಂಬಿ ಹೊರಸೂಸುವಂತೆ ಬರೆದಿಟ್ಟು ನಮ್ಮ ಮೇಲೆ ಮಹೋಪಕಾರವನ್ನು ಮಾಡಿರುವರು. ಆ ತತ್ವಾಮೃತವನ್ನು ಈಗಿನವರು ಪಾನಮಾಡಿದರೆ ಅಜರಾಮರರಾಗುವದರಲ್ಲಿ ಸಂದೇಹವೇನು? ಪರಂತು ಬುದ್ಧಿರಸನೆಯು ವ್ಯಸನಜ್ವರಗ್ರಸ್ತವಾಗಿರುವದರಿಂದ ಆ ತತ್ವಾಮೃತವು ವಿಷಮಯವಾಗಿ ಪರಿಣಮಿಸಹತ್ತಿದೆ. ಸರ್ವತ್ರ ಹೀಗೇನೂ ಇಲ್ಲ; ಆದರೆ ಇದೇ ವಿಶೇಷ. ವಿದ್ಯಾಪ್ರಚಾರದ ಕಾರ್ಯವು ಭರದಿಂದ ನಡೆದಿದ್ದರೂ ಅದನ್ನು ಸನ್ಮಾರ್ಗಕ್ಕೆ ಹಚ್ಚುವ ಮಹನೀಯರು ಮಾತ್ರ ಕಡಿಮೆಯೆಂದರೆ ನಡೆಯಬಹುದು. ಕೇವಲ ಅಕ್ಷರಾಭ್ಯಾಸದಿಂದಲೇ ಮನುಷ್ಯನ ಗತಿಯು ಸುಧಾರಿಸುವದಿಲ್ಲ. ಅಕ್ಷರವಿನ್ಯಸ್ತಗಳಾದ ವಿಷಯಗಳಂತೆ ವರ್ತನವಿದ್ದರೆ ಅದು ಸಫಲವಾಗುವದು. "ಯಃ ಕ್ರಿಯಾವಾನ್ ಸಪಂಡಿತಃ" ಎಂಬ ಗೀರ್ವಾಣಗೀತೆಯಂತೆ ಓದುವದೂ, ಓದಿಸುವದೂ, ಅನೇಕ ಶಾಸ್ತ್ರಗಳನ್ನು ಅವಲೋಕಿಸುವದೂ, ಬುದ್ಧಿಭಾಂಡಾರದಲ್ಲಿ ತುಂಬುವದೂ, ವಾದವಿವಾದಗಳಂ ಮಾಡುವದೂ ಇವೇ ಮೊದಲಾದವುಗಳಿಂದ ಪಾಂಡಿತ್ಯವು ದೊರೆಯದೆ ಕ್ರಿಯಾಪ್ರವೃತ್ತಿಯಿಂದ ದೊರೆಯುವದು. ಕೆಲವು ಕ್ರಿಯಾರಹಿತವಾಗ್ಮಿಗಳಾದ ಪಂಡಿತರ ದುರ್ಮಾರ್ಗವನ್ನು ಸರಳಹೃದಯದವರು ನೋಡಿ "ಶ್ಯಾಣ್ಯಾತನಾ ಕಲ್ತವರು ಏನಧರ್ಮದಿಂದ ನಡಿತಾರೆ. ಇದೆ ಕಲ್ತವರ್ಗೆ ಕೆಟ್ಟಗುಣಾಸೇರ್ತಾವೆ ನಮಗೇನು ಸಾಲಿಬ್ಯಾಡಾ ಗೀಲಿಬ್ಯಾಡಾ" ಎಂದು ಹಿಂಜರಿಯುವಷ್ಟು ಪರಿಣಾಮವಾಗುವದು. ಹೆಚ್ಚಾಗಿ ಮಾಲನ್ನು ಕೊಡಿಹಾಕಿ ಸರಿಯಾಗಿ ವ್ಯಾಪಾರಮಾಡದಿದ್ದರೆ ಹಾನಿಯಲ್ಲದೆ ಮತ್ತೇನು? ಸ್ವಲ್ಪ ಮಾಲಿನಿಂದಾದರೂ ಸರಿಯಾಗಿ ವ್ಯಾಪಾರ ಸಾಗಿಸಿದರೆ ಲಾಭವೇ ದೊರೆಯುವದು. ಮನಸ್ಸಿಲ್ಲದೆ ಕಬ್ಬನ್ನು ತಿಂದರೆ ಸಿಪ್ಪೆಯನ್ನು ತಿಂದಂತಾಗುವದು. ಮನಃಪೂರ್ವಕ ಸಿಪ್ಪೆಯನ್ನು ತಿಂದರೂ ಕಬ್ಬು ಸವಿದಷ್ಟು ಸಂತೋಷವಾಗುವದು. ಹಿಂದೆ ಪರ್ಣಶಾಲೆಗಳಲ್ಲಿ ಬಹು ಕಷ್ಟಕರವಾಗಿ ದೊರೆಯುತ್ತಿದ್ದ ಶಿಕ್ಷಣವು ಆಧುನಿಕಸಮಯದಲ್ಲಿ ಇಂದ್ರಭವನಗಳಂತೊಪ್ಪುವ ದಿವ್ಯಮಂದಿರಗಳಲ್ಲಿ ಬಹುಸುವ್ಯವಸ್ಥೆಯಿಂದ ಅನಾಯಾಸವಾಗಿ ದೊರೆಯುವದು ವಿದ್ಯಾರ್ಥಿಗಳ ಸೌಕರ್ಯಕ್ಕೆ ಎಣೆಯೆ? ಇಷ್ಟಾದರೂ ದೇಶವು ದಾರಿದ್ರ್ಯ ದುರವಸ್ಥೆಗಳಿಂದ ಬಳಲಲು ಕಾರಣವೇನು? ಅದೇಕೆ ಮುಂಗೈಬಳೆಯಂತೆ ಮುಂದೇ ಕಾಣುವದು ವಿದ್ಯೆಯ ದುರುಪಯೋಗವಲ್ಲದೆ ಮತ್ತೇನು? ವಿದ್ಯೆಯು ದುರುಪಯೋಗವಾಗಿ ಅನೀತಿ ನಾಸ್ತಿಕತ್ವಗಳು ಬೆಳೆದು ಎಲ್ಲಿ ನೋಡಿದರೂ ದುರಾಚಾರಗಳ ಪುರಸ್ಕಾರವೇ ವಿಶೇಷ. ಒಂದುಕಡೆಯಿಂದ ಸೂರ್ಯೋದಯವಾಗಿ ಪ್ರಕಾಶವು ಪಸರಿಸಿ ಜನರನ್ನು ಕಾರ್ಯಕುಶಲರನ್ನಾಗಿ ಮಾಡಿದರೆ ಮತ್ತೊಂದುಕಡೆಯಿಂದ ಹದ್ದಿರೋಧಿಯಾದ ಗಾಢಾಂಧಕಾರವು ವ್ಯಾಪಿಸಿ ಜನದೃಷ್ಟಿಗೆ ತಡೆಹಾಕಿ ಹೆಜ್ಜೆಹೆಜ್ಜೆಗೆ ಬಿಗಿದು ಮೂಲೆಗೊತ್ತುವಂತೆ ಎಷ್ಟು ಒತ್ತರದಿಂದ ಶಿಕ್ಷಣಪ್ರಸಾರವಾಗುವದೋ ಅದರ ಹತ್ತುಪಟ್ಟು ವೇಗದಿಂದ ವ್ಯಸನಗಳು ಹಬ್ಬುವವು. ಶಿಕ್ಷಣವು ವಾಯುಗತಿಯಿಂದ ಓಡಿದರೆ ವ್ಯಸನಗಳು ಮನೋವೇಗದಿಂದ ಓಡುತ್ತಿರುವವು. ಗಿಡದ ಬೇರಿಗೆ ಬೆಂಕಿಯ ಗೊಬ್ಬರವನ್ನಿಟ್ಟಂತೆ ಶಿಕ್ಷಣಕ್ಕೆ ವ್ಯಸನಗಳ ಪ್ರೋತ್ಸಾಹವಿರುವದು. ಈ ವ್ಯಸನಗಳು ಅನೇಕಗಳಾಗಿರುವವು. ಮಾಯಾವಿಯಾದ ರಕ್ತಬೀಜನ ಕುಲದವು. ವ್ಯಸನಗ್ರಸ್ತವಾದ ಜಗತ್ತಿಗೆ ನೀತಿಸದಾಚಾರಗಳ ಗಂಧವು ಹೇಗೆ ಬಡೆದೀತು? ವನಗಜದ ಕೊಗಾಟೆಯು ತನ್ನ ಮರಣಕ್ಕೆ ಹೇತುವಾದ ಕೂರಹಿಂಸಕ ಸಿಂಹದ ಎಚ್ಚರಿಕೆಗೆ ಕಾರಣವಾಗುವಂತೆ ಮೇಲೆ ಕಾಣಿಸುವ ಧರ್ಮನೀತಿಸದಾಚಾರರಹಿತವಾದ ಈಗಿನ ಸುಧಾರಣೆಯ ಟಾಪುಟೀಪು ನಮ್ಮ ಅವನತಿಯನ್ನೇ ಬೆಳೆಯಿಸುವದು. ಎಲ್ಲಾ ವಿಷಯಗಳ ಪರಿಣಾಮವು ಹೀಗೆಯೇ ಅಲ್ಲ. ಆದರೆ ಅವನತಿಯಭಾಗವು ಹೆಚ್ಚಾಗಿರುವದು. ಈ ಕಾರಣದಿಂದಲೇ ನಮ್ಮ ಸ್ಥಿತಿ ಸರ್ವಸ್ವವು ಛಿನ್ನವಿಚ್ಛಿನ್ನವಾಗಿರುವದು. ದೇಶದೇಶ ಸಮಾಜಸಮಾಜಗಳಲ್ಲಿ ನೀತಿಯು ಬೆಳೆದು ಒಮ್ಮನಸ್ಸುಂಟಾಗುವದೊತ್ತಟ್ಟಿಗಿರಲಿ ಈ ವ್ಯಸನಗಳು ತಮ್ಮನ್ನೇ ತಾವು ತಿಳಿಯದಂತೆ ಮರುಳುಗೊಳಿಸಿಬಿಟ್ಟಿರುವವು. ಈ ದುರಾಚಾರಗಳಿಂದ ಹರಿಕಾಯ್ದು ಜನತೆಯುಮನಸ್ಸು ಕರಗಿ ನೀರಾಗಿ ಯಾವ ಕಾರ್ಯವನ್ನೆಸಗಲಿಕ್ಕೂ ಸಮರ್ಥವಾಗದಂತಾಗಿದೆ. ಒಂದು ಕುಟುಂಬದಲ್ಲಿ ಒಟ್ಟಿಗೆ ನಡೆಯಬೇಕಾದ ಬಂಧುಬಾಂಧವರ ಮನಸ್ಥಿತಿಯು ಹಾಳಾಗಿ ಒಬ್ಬರಮೇಲೊಬ್ಬರು ರೇಗಿ ಬಿಕ್ಕೀ ಬೇಡಲುಸಹ ನಾಚುವದಿಲ್ಲ. ಇನ್ನು ನಮ್ಮ ಹೀನಾವಸ್ಥೆಯು ಎಂದು ಬಯಲಾಗುವದೋ ದೇವರೇಬಲ್ಲ. ಜನರನ್ನು ದುರಾಚಾರಕ್ಕೆ ಎಳೆದೊಯ್ಯುವ ತೋಹಕ ಮಂದಿರಗಳು ಎಲ್ಲೆಲ್ಲಿಯೂ ಕಂಗೊಳಿಸುವವು. ಅಡವಿಯಲ್ಲಿಯೂ ಗುಪ್ತಗಳಲ್ಲಿಯೂ [illegible]

ಪುಣ್ಯಾತ್ಮರು ತಮ್ಮ ಜೀವಿತವನ್ನೇ ದಾನಮಾಡಿದ ಉದಾಹರಣೆಗಳು ಈಗಲೂ ಸುವರ್ಣಾಕ್ಷರಗಳಲ್ಲಿ ರಾರಾಜಿಸುತಲಿರುವವು. ಅವುಗಳಿಗೆ ಬದಲಾಗಿ ಈಗಿನ ದುರವಸ್ಥೆಯನ್ನು ವರ್ಣಿಸಲಶಕ್ಯವಾದ ವ್ಯಸನವಿಶೇಷದಿಂದಲೇ ಅನೈಕ್ಯ, ಅನೀತಿ, ಅನಾಚಾರಗಳು ಹೆಚ್ಚಿ ನಮ್ಮ ಅನ್ನವು ನಮಗಿಲ್ಲದಂತಾಗುವ ವಿಷಮಸ್ಥಿತಿಯು ಪ್ರಾಪ್ತವಾಗಿರುವದು. ಬಲಿಷ್ಠನಿಗೆ ಬಲಿಷ್ಠನು ಕೂಡಿದರೆ ಬಗ್ಗುವಂತೆ ಅವುಗಳಿಗೆ ಪ್ರತಿಯಾಗಿ ಕೆಲವುಸಂಘಗಳು ಸ್ಥಾಪಿಸಲ್ಪಡಬೇಕಾಗಿರುವದು. "ಸಂಘೇ ಶಕ್ತಿಃ ಕಲೌಯುಗೇ" ಎಂಬಂತೆ ಸಂಘಗಳಿಂದಲೇ ಜನಸುಧಾರಣೆಯಾಗುವದೆಂಬ ವಿಷಯವು ಎಲ್ಲರಿಗೂ ತಿಳಿದಿದೆ. ದುರಾಚಾರಪ್ರಚಾರಕ ಸಂಘಗಳು ಬೆಳೆದು ಜನತೆಯು ನಿರ್ಜೀವವಾಗುವಂತೆ ಸದಾಚಾರಸುಧಾರಕಸಂಘಗಳ ಏರ್ಪಡಿಸುವಿಕೆಯು ಬಗೆಬಗೆಯಾಗಿ ಜನರಲ್ಲಿ ಸವಚೈತನ್ಯವುಂಟಾಗಬೇಕಾಗಿರುವದು. ಧರ್ಮವು ಸಕಲ ಮಾನವರ ಜೀವಾಳವಾಗಿರುವದು. ಸಾಮಾನ್ಯ ವಿಶೇಷ ಧರ್ಮಗಳು ಸದಾಚಾರಗಳ ಹೆಸರಿನಿಂದ ಪ್ರಚಾರದಲ್ಲಿ ಬಂದಿರುವವು. ಧರ್ಮವು ಸದಾಚಾರಗಳ ಬೇರಿನಂತಿರುವದು. ಬೇರುಗಳು ಘಟ್ಟಿಯಾಗಿದ್ದರೆ ಗಿಡವು ನಿಲ್ಲುವಂತೆ ಧರ್ಮವು ಸರ್ವತ್ರ ನೆಲೆಗೊಂಡರೆ ಸದಾಚಾರಗಳು ತಾವೇ ಕಂಗೊಳಿಸುವವು. ಸಧಾಚಾರಗಳು ಅನುಷ್ಠಾನದಲ್ಲಿ ಬಂದರೆ ಜನರು ಸನ್ಮಾರ್ಗದಲ್ಲಿ ನಡೆಯುವರೆಂದು ಬೇರೆ ಬರೆಯುವ ಕಾರಣವಿಲ್ಲ. ಸನ್ಮಾರ್ಗದಲ್ಲಿ ನಡೆದರೆ ಇಹಪರಗಳಲ್ಲಿ ನಡೆಯಬೇಕಾದ ಸುಖವು ಬೇಡವೆಂದರೂ ತಾನೇ ದೊರೆಯುವದು. ಇನ್ನೊಂದು ಮಾನವೀಯಧರ್ಮದ ಹ್ರಾಸವಾಗಿ ಕೇವಲ ತಾಮಸವೃತ್ತಿಯು ವ್ಯಾಪಿಸಿ, ಬುದ್ಧಿಶಕ್ತಿಯು ಕುಂಠಿತವಾಗಿ, ಶರೀರಸಾಮರ್ಥ್ಯವು ಸಂಡಿಸಿ, ಪರಾಧೀನರಾಗಿ ನಮ್ಮ ಎಡೆಯಲ್ಲಿಯ ಅನ್ನವನ್ನು ನಮ್ಮ ಕೈಯಿಂದ ನಮ್ಮ ಬಾಯಲ್ಲಿ ಇಟ್ಟುಕೊಳ್ಳಬೇಕಾದರೆ ಪರರ ಸಹಾಯವನ್ನು ಬೇಡುವಂಥ ಶೂರಕನವು ನಮ್ಮಲ್ಲಿ ಮನೆ ಮಾಡಿಕೊಂಡಿರುವದು. ರೋಗಿಗೆ ಔಷಧೋಪಚಾರಗಳು ಅವಶ್ಯಕವಾಗಿ ಬೇಕಾಗಿರುವಂತೆ ಸದಾಚಾರಸುಧಾರಕಸಂಘಗಳು ಬೇಕೇಬೇಕು. ಸದಾಚಾರಗಳು ಹೆಚ್ಚಿ ಸಕಲ ಸಮಾಜಗಳು ಸುಖದಿಂದ, ಸಹಾನುಭೂತಿಯಿಂದ, ಒಮ್ಮನಸ್ಸಿನಿಂದ ನಡೆಯುವವು. ಇಲ್ಲವಾದರೆ ಈಗಿನ ವಿಷಮದುರ್ದಶೆಯೇ ಘಟ್ಟಿಯಾದರೆ ಮುಂದಾಗುವ ದುಷ್ಪರಿಣಾಮವನ್ನು ಸ್ಮರಿಸಿದರೂ ಮನಸ್ಸು ತಲ್ಲಣಿಸದಿರಲಾರದು. ಪ್ರತ್ಯಕ್ಷ ಪ್ರಾಣಾಪಹಾರಕ ವಿಷ ಕುಡಿಯುವವನನ್ನು ನೋಡಿದ ಮೇಲೆ ಆ ವಿಷವೇಗವನ್ನು ತಡೆಯದೆಬಿಟ್ಟರೆ ಮುಂದೆ ಅವನ ಗತಿಯು ವಿನಾಶವಾಗುವದೆಂಬದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಆದ್ದರಿಂದಲೇ ಈ ಹೊಸ ಸುಧಾರಣೆಯ ಶೀತವಾತಾವರಣಕ್ಕೆ ಸಿಕ್ಕಿದ ಪ್ರತ್ಯೇಕ ವ್ಯಕ್ತಿಯು ಅಧರ್ಮಮೂಲಗಳಾದ ದುರಾಚಾರಗಳನ್ನು ಧ್ವಂಸಮಾಡಿ ಧರ್ಮವೇ ತಳಹದಿಯಾದ ಸದಾಚಾರಗಳನ್ನು ಸುಧಾರಿಸಲಿಕ್ಕೆ ಅವಶ್ಯಕವಾಗಿ ಬೇಕಾದ "ಸದಾಚಾರಸುಧಾರಕ ಸಂಘ"ಗಳನ್ನು ಅಲ್ಲಲ್ಲಿಗೆ ಬಿತ್ತಲಿಕ್ಕೆ ಜೀವಬಲಸಹಿತ ಪ್ರಯತ್ನಮಾಡುವದು ಶ್ರಿವಾರ್ಯೋಗ್ಯವಾಗಿರುವದು. ನಮ್ಮ ಊರಲ್ಲಿ ವೀರಶೈವರ ವಸತಿಯು ವಿಶೇಷವಾಗಿದ್ದು ಈಶ್ವರ ದೇವಾಲಯವೊಂದಿರುವದು. ಸದರೀ ಗುಡಿಯ ವ್ಯವಸ್ಥೆಯು ಪಾಲಕರಿಂದ ಚೆನ್ನಾಗಿ ಸಾಗಿಸಲ್ಪಡುತ್ತಲಿದೆ. ಈ ವರ್ಷ ಮಾತ್ರ ಈಶ್ವರಪ್ರೇರಣೆಯ ಮೇರೆಗೆ ಕಾರ್ತಿಕ ಮಾಸವು ಪ್ರಾರಂಭವಾಗಿ ಮುಗಿಯುವ ಪರ್ಯಂತರ ಪುರಪ್ರಮುಖರಿಂದ ದೇವರಿಗೆ ದೀಪಾವಳಿ ಮಹೋತ್ಸವವು ಪ್ರತಿನಿತ್ಯದಲ್ಲಿಯೂ ವಾದ್ಯವೈಭವ, ಭಜನಾಸಂಘ ಮೊದಲಾದವುಗಳಿಂದ ಬಹು ಸಡಗರದೊಂದಿಗೆ ನಡೆಸಲ್ಪಡುತ್ತಿತ್ತು. ಈ ಕಾರ್ಯಕ್ಕಾಗಿ ಧಾರವಾಡಜಿಲ್ಲಾ ಹುಬ್ಬಳ್ಳಿ ತಾಲೂಕು ಪ್ರೈಶಾಲೀಕೊಪ್ಪದ "ಪುಣ್ಯಾಶ್ರಮ ಶ್ರೀ ರೇಣುಕಭಾಗ" ನಿವಾಸಿಗಳಾದ ಶ್ರೀ||ಷ||ಬ್ರ|| ಷಟ್‌ಸ್ಥಲ ಬೃಹನ್ಮಠ ಇವರನ್ನು ಬರಮಾಡಿಕೊಂಡಿದ್ದರು. ಸಾಯಂಕಾಲದ ೭ ರಿಂದ ೯ರ ವರೆಗೆ ದೇವರಿಗೆ ದೀಪಾವಳಿ ಮಹೋತ್ಸವವಾದ ನಂತರ ೧೧ ಘಂಟೆಯವರೆಗೆ ಧರ್ಮಬೋಧವು ಸಾಗುತ್ತಿತ್ತು. ಸರ್ವಮತೀಯರೂ ಸಭೆಗೆ ಬರುತ್ತಿದ್ದರು. ಸಭಾಂಗಣದಲ್ಲಿ ಇಲ್ಲಿಯ ಪೆನ್‌ಶನ್‌ದಾರ ಮುದಿಗೌಡ ಮಾಸ್ತರರು ಬಹು ರಮ್ಯವಾಗಿ ಭಾಷಣಮಾಡಿ ಜನರನ್ನು ಭಕ್ತಿರಸದಲ್ಲಿ ಮುಳುಗಿಸಿಬಿಡುತ್ತಿದ್ದರು. ಅನಂತರ ಶ್ರೀ ಸ್ವಾಮಿಗಳವರಿಂದ ಧರ್ಮಬೋಧ ಸಾಗುತ್ತಿತ್ತು. ಸುತ್ತುಮುತ್ತಲಿನ ಹಳ್ಳಿಯಜನರು ನೆರೆಯುತ್ತಿದ್ದರು. ಜನರಲ್ಲಿರುವ ದುರಾಚಾರಗಳು ದೂರಾಗಿ ಸದಾಚಾರಗಳು ನೆಲೆಗೊಳ್ಳಬೇಕೆಂಬ ಅಭಿಪ್ರಾಯದಿಂದ ಕಾ||ಶು|| ೧೫|| ಶೇ|| ತಾ. ೧೦-೧೧-೩೦ ನೇ ಸೋಮವಾರದ ದಿವಸದಲ್ಲಿ ಸದರೀ ಶ್ರೀಗಳಿಂದ "ಸದಾಚಾರಸುಧಾರಕ ಸಂಘ" ವೆಂಬದೊಂದುಸಂಸ್ಥೆಯು ಸರ್ವಾನುಮತದಿಂದ ಸ್ಥಾಪಿಸಲ್ಪಟ್ಟಿತು. ಈ ಸಂಘವು ಒಂದೇ ಮತದವರಿಗಾಗಿರದೆ ಸರ್ವರಿಗೂ ಚಕುಸ್ಥದೀಪದಂತಿರುವದು. ವ್ಯಸನವಿನಾಶ, ಹಿಂಸಾನಿರೋಧ, ವಿದ್ಯಾಪ್ರಸಾರ, ಧಾರ್ಮಿಕೋನ್ನತಿ, ಪರಧರ್ಮಸಹಿಷ್ಣುತೆ ಇವೇ ಮೊದಲಾದ ಅನೇಕ ನೇಮಗಳು ಈ ಸಂಘಕ್ಕೆ ಸಂಬಂಧಿಸಲ್ಪಟ್ಟಿವೆ. ಈ ಸಂಘಕ್ಕೆ ಇಲ್ಲಿಯ ಸಾಹುಕಾರ ಮ|| ರಾ|| ಮಹಾಂತಪ್ಪನವರು, ಮಲ್ಲಿಗವಾಡ ಈ ಮಹಾಶಯರು ಬಹು ಮತದಿಂದ ಅಧ್ಯಕ್ಷರಾಗಿ ನಿಯುಕ್ತರಾಗಿರುವರು. ಇನ್ನು ಬೇಕಾದ ಕೆಲಸಗಾರರು ಮುಂದೆಮುಂದೆ ನಿಯಮಿಸಲ್ಪಡುವರು. ಈ ಊರಿನಲ್ಲಿ ೩ ಭಜನಾಸಂಘಗಳಿರುವವು. ಭಜನಾಸಂಘದವರು ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಜನ ಸುಧಾರಣೆಯ ಬಗ್ಗೆ ಬಹುಮಟ್ಟಿಗೆ ಹೆ[illegible]

ಅಂಗಗಳಾಗಿರುವವು. ಕಾರ್ತಿಕ ಮಹೋತ್ಸವದ ಶಾಂತಿಗಾಗಿ ಮಾರ್ಗ|| ಶು|| ೪|| ಸೋಮವಾರ ದಿವಸ ದೊಡ್ಡಗಣಾರಾಧನೆಯು ನೆರವೇರಿಸಲ್ಪಟ್ಟಿತು. ಶಿವಲಿಂಗಕ್ಕೆ ರುದ್ರಾಭಿಷೇಕವಾಗಿ ಮಾಹೇಶ್ವರರಿಗೆ ಅನ್ನಸಂತರ್ಪಣೆಯು ನಡೆದ ಬಳಿಕ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಧರ್ಮಬೋಧವಾಯಿತು. ಅನಂತರ ಶ್ರೀಗಳವರ ಪಲ್ಲಕ್ಕಿಮೆರವಣಿಗೆಯು ನಡೆಯಿತು. ಸ್ವಾಮಿಗಳು ಚರ್ತುರ್ಮಾಸವನ್ನು ಲೆಕ್ಕಿಸದೆ ಪಾದಚಾರಿಗಳಾಗಿ ಗ್ರಾಮಾನುಗ್ರಾಮಗಳನ್ನು ಸಂಚರಿಸಿ ಜನರಿಗೆ ಸದ್ಬೋಧವನ್ನಿತ್ತು ಎಚ್ಚರಿಸುತ್ತಲಿರುವರು. ನಿರ್ಜನವನದಲ್ಲಿ ಸಿಂಹ, ಹುಲಿ, ಕರಡಿ ಮೊದಲಾದ ಹಿಂಸಾಪಶುಗಳು ವ್ಯಾಪಿಸಿದಂತೆ ಬೋಧಕರಿಲ್ಲದ ಹಳ್ಳಿಗಳಲ್ಲಿ ಕೆಲವು ಗಾಂಜಬುಕ್ಕರು ವಾಸವಾಗಿ ಅನಾಚಾರಗಳು ನೆರೆಗೊಳಿಸಿರುವವು. ಈ ಅನಾಚಾರಗಳು ಹರಿದುಹೋಗಬೇಕಾದರೆ ಸಮಾಜಪುರುಷನಿಗೆ ಸುಖಶಾಂತಿಗಳು ದೊರೆಯಬೇಕಾದರೆ "ಸದಾಚಾರಸುಧಾರಕ ಸಂಘ" ಗಳನ್ನು ನೆಲೆಗೊಳಿಸಿರಿ? ಅದರ ಕಟ್ಟುಗಳನ್ನು ಜನತೆಗೆ ಬೇರೆ ಮೆಂಬರರನ್ನಾಗಿ ಮಾಡಿರಿ? ಓ ನನ್ನ ಸರ್ವಸಮಾಜ ಬಂಧುಗಳೇ? ಮರೆಯಬೇಡಿರಿ! ಅಧರ್ಮವನ್ನು ಮೂಲೆಗೊತ್ತಿರಿ! ಧರ್ಮವನ್ನು ಮೇಲಕ್ಕೆತ್ತಿರಿ! ಭಾರತಮಾತೆಯನ್ನು ನಿಮ್ಮ ಸದಾಚಾರಸುಧಾಪ್ರವಾಹದಿಂದ ಸಂತೈಸಿರಿ! ಏಳಿರಿ! ಏಳಿರಿ!! ಏಳಿರಿ!!! ಸತ್ಯಶಾಸ್ತ್ರವನ್ನು ಹಿಡಿಯಿರಿ!

ಶ್ರೀ ಶಿವಭಕ್ತಿಯ ಪ್ರಚಾರಕ್ಕಾಗಿ ಉದಾರಹೃದಯದಿಂದ ಸಹಾಯಮಾಡಿದ ಮಹೋದಯರ ಹೆಸರುಗಳು.

೧ ಶ್ರೀಯುತ ಮಹಾಂತಪ್ಪನವರು, ಮಲ್ಲಿಗವಾಡ ರುಪಾ ೬, ೧೦೦ ರೂಪಾಯಿ, ೨ ಮ||ರಾ||ರಾ|| ಚನ್ನಪ್ಪ ಕುರುಬರ ಸಾಣೇಕಲ್ಲು, ೫೦ ರೂಪಾಯಿ.

ವೀರಶೈವಸಮಾಜ ಹಿತೈಷಿ, ಬಸವಪ್ಪ ಮಲ್ಲಿಗವಾಡ,
ಹೊಸಕಟ್ಟಿ ತಾ|| ಸಿಗ್ಗಾವಿ, ಜಿ|| ಧಾರವಾಡ.

ವೀರಶೈವಸಮಾಜಬಾಂಧವರಲ್ಲಿ ಸವಿನಯವಿನಂತಿ.

ಹಿಮಾಲಯಪ್ರದೇಶದಲ್ಲಿ ವೀರಶೈವಜನಾಂಗವೇ ಇಲ್ಲ; ಮುಖ್ಯವಾಗಿ ಶ್ರೀ ಕೇದಾರಸಂಸ್ಥಾನ ಮಠ ಮತ್ತು ಗೋಪೇಶ್ವರ ಮಠ ಈ ಎರಡು ಮಾತ್ರ ಇರುವವು. ಈ ಸ್ಥಳಗಳು ಬಹು ಪುರಾತನವಾದವುಗಳಾಗಿವೆ. ಈ ಮಠಗಳಿಗೆ ಆಗಾಗ್ಗೆ ಅಧಿಕಾರಿಗಳಿಗೆ ನಾವು ಕೇವಲ ಕೇದಾರನಾಥನೆಂದು ಇದುವರೆಗೂ ಭಾವಿಸುತ್ತ ಬಂದಿರುವೆವು. ಶ್ರೀ ರುದ್ರನಾಥ ಗೋಪೇಶ್ವರ ಈ ಕ್ಷೇತ್ರಗಳು ಮೊದಲಿನಿಂದ ಶ್ರೀ ಕೇದಾರಸಂಸ್ಥಾನದ ಅಧೀನದಲ್ಲಿದ್ದವು. ಕೆಲವು ಕಾರಣಗಳಿಂದ ಸುಮಾರು 45 ಅಥವಾ 50 ವರ್ಷಗಳಿಂದ ಬೇರೆಮಾಡಲ್ಪಟ್ಟಿವೆ. ಈ ಸಿವಿಲ್‌ವ್ಯಾಜ್ಯದ ವಿಷಯದಲ್ಲಿ 600 ರೂಪಾಯಿ ಕೇದಾರಸಂಸ್ಥಾನದಿಂದ ಆಶೀರ್ವಾದವಾಗಿದೆ. ಆದರೆ ಗೋಪೇಶ್ವರ ಮಠಕ್ಕೆ 1926 ರಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿದ್ದವು. ಅವರು ಕಪಟಧಾರಿಗಳೆಂಬುವದು ನಮಗೆ ತಿಳಿಯಲಿಲ್ಲ. ಈತನು 3 ವರ್ಷ ಆಹಾರಾದಿಗಳನ್ನು ಬಿಟ್ಟು ಭಯಂಕರ ಅರಣ್ಯದಲ್ಲಿ ತಪಸ್ಸುಮಾಡುತ್ತಿದ್ದನು. ಆದರೆ ಈ ವರ್ಷ ಗೋಪೇಶ್ವರ, ರುದ್ರನಾಥ ಈ ಎರಡು ಕ್ಷೇತ್ರಗಳು ಮತ್ತು ಇವುಗಳಿಗೆ ಒಳಪಟ್ಟ 3 ಜಹಗೀರ ಗ್ರಾಮಗಳನ್ನು ಪರಮತದವರ ಸ್ವಾಧೀನಮಾಡಿ ಎತ್ತಕಡೆಯೋ ಹೊರಟುಹೋಗಿರುವನು. ಈ ಸಮಯದಲ್ಲಿ ಸುಮ್ಮನೆ ಕುಳಿತರೆ ಈ ಪವಿತ್ರಸ್ಥಳಗಳು ವೀರಶೈವ ಜನಾಂಗದ ಕೈತಪ್ಪಿದವೆಂದು ತಿಳಿಯಬೇಕು. ಅಯ್ಯಾ ಸಮಾಜಬಾಂಧವರುಗಳಿರಾ! **महाजनो येनगतः सपन्थाः** ಎನ್ನುವಂತೆ ನಿಮ್ಮ ಪ್ರಾಚೀನರ ಮರ್ಯಾದೆಯನ್ನು ಬಿಡಬೇಡಿರಿ. ಮತ್ತು **धर्मेण हीनाः पशुभिः समानाः** ಎಂಬ ಗಾದಿಯಂತೆ 3 ವರ್ಷ ತಪಸ್ಸುಮಾಡಿ ಸ್ವಧರ್ಮದವರ ಪವಿತ್ರಸ್ಥಳವನ್ನು ಪರಧರ್ಮದವರ ವಶಕ್ಕೆ ಕೊಟ್ಟುಹೋದವನು ಪಶುವೇ ಸರಿ! ಆದರೆ ಈಗ ಸಿವಿಲ್‌ಕೋರ್ಟಿಗೆ ಹೋಗುವ ಪ್ರಸಂಗಬರುವದು. ಇದಕ್ಕೆ ದ್ರವ್ಯದ ಖರ್ಚು ಇರುವದು. ನಾನು ಬಡವನು; ನಿಮ್ಮ ಸಮಾಜಪತಿಯಿಂದ ಯಾರನ್ನಾದರೂ ಕಳುಹಿಸಿದರೆ ನಾನು ಉಚಿತವಾಗಿ ಸರ್ವ ವಿಷಯದಲ್ಲಿಯೂ ಸಹಾಯಮಾಡುತೇನೆ. ನನ್ನೊಡನೆ ಪತ್ರವ್ಯವಹಾರ ಮಾಡುವುದರಿಂದ ಸರ್ವ ವಿಷಯಗಳು ತಿಳಿಯುವವು.

ಸಮಾಜದ ಶುಭಹಿತಚಿಂತಕ,
ಪರಮಸಿಂಗ.

ನನ್ನ ವಿಳಾಸ:—

ಮುನಷಿ ಪರಮಸಿಂಗ ಠಾಕೂರ,
ಮುಕ್ಕಾಮು—ಗೋಪೇಶ್ವರ,
ಪೋಸ್ಟ—ಚಮೋಲಿ,
ಜಿಲ್ಲಾ—ಗಢವಾಲ.

ಶ್ರೀಗುರು ಪಂಚಾಚಾರ್ಯೇಭ್ಯೋನಮಃ

ಪಂಚಾಚಾರ್ಯ ಭಜನಾಸಂಘ

ಕಾರ್ತಿಕ ಸಮಾರಂಭ

ಕೊಂಡಿನಾಯಕನಹಳ್ಳಿ.

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೋಕು ಪೈಕಿ ಕೊಂಡಿನಾಯಕನಹಳ್ಳಿಯಲ್ಲಿ ಶ್ರೀಪ್ರಮೋದೂತ ಸಂವತ್ಸರದ ಕಾರ್ತಿಕ ಶು|| ೧ ಯಿಂದ ಮಾರ್ಗಶಿರ ಶು|| ೧೧ ರ ವರಿವಿಗೂ ಸ್ಕೂಲ್ ಮಾಸ್ಟರ್ ಯೋಳಬೆಂಚಿ ಹಿರೇಮಠದ ವೇ|| ಶಿವಬಸವಯ್ಯನವರಿಂದಲೂ, ಇವರ ತಮ್ಮನವರಾದ ಸಿದ್ಧಾಂತಿ ಶಿದ್ಧಾರಾಧ್ಯರವರಿಂದಲೂ, ಇವರ ವಿದ್ಯಾರ್ಥಿಗಳವರಿಂದಲೂ, ಶ್ರೀಮತ್ತಾಳಿಕಾಪ್ಪನವರಾದ ಅಕ್ಕಸಾಲೆ ವೀರಪ್ಪನವರಿಂದಲೂ, ಹಾಲುಮಂತ ಕರೇಸೋಮಪ್ಪನವರಿಂದಲೂ, ಚಿಂಚಿಗಿ ಮಲ್ಲೇಶ್ವರಪ್ಪನವರಿಂದಲೂ ದಿನಂಪ್ರತಿ ಸಾಯಂಕಾಲ ೬ ಘಂಟೆಯಿಂದ ೯ ಘಂಟೆಯುವರಿವಿಗೂ ಶ್ರೀಜಗದ್ಗುರುಗಳಾದ ಪಂಚಪೀಠಾಧಿಪತಿಗಳ ಭಾವಪಟವನ್ನು ಉತ್ಸವದಿಂದ ತೆಗೆದುಕೊಂಡು ಪ್ರತಿಯೊಂದು ಬೀದಿಯಲ್ಲಿ ಪಂಚಾಚಾರ್ಯರ ಭಜನೆಯೊಡನೆ ಮೆರೆಯಿಸಿ ನಂದೀಶ್ವರ ದೇವಾಲಯಕ್ಕೆ ಬಂದು ಕಾರ್ತಿಕವನ್ನು ಹಚ್ಚಿ ಪಂಚಾಚಾರ್ಯರ ಮಂಗಲವನ್ನು ಮಾಡುತ್ತ ಮಾರ್ಗಶಿರ ಶು|| ೧೧ ಸೋಮವಾರ ಶ್ರೀ ನಂದೀಶ್ವರನಿಗೆ ವೇ|| ಸಿದ್ಧಾಂತಿಗಳಿಂದ ೪ ಘಂಟೆಯಿಂದ ೧೨ ಘಂಟೆಯವರಿವಿಗೂ ವೇದೋಕ್ತ ಶ್ರೀರುದ್ರಾಭಿಷೇಕವನ್ನು ಸಹಸ್ರ ಬಿಲ್ವಾರ್ಚನೆಯನ್ನೂ ಮಾಡಿ ತದನಂತರ ೭ ಘಂಟೆಯಿಂದ ೯ ಘಂಟೆಯುವರಿವಿಗೂ ಶ್ರೀಜಗದ್ಗುರುಗಳ ಭಾವಪಟವನ್ನು ಮೆರೆಯಿಸಿದರು. ಅನ್ನಸಂತರ್ಪಣೆಯು ನಡಿಯಿಸಲ್ಪಟ್ಟಿತು. ಸದರಿ ಮಹೋತ್ಸವಕ್ಕೆ ಹೊಸಪೇಟೆ ಪಾಠಶಾಲಾ ವಿದ್ಯಾರ್ಥಿಗಳು ಇನ್ನು ಅನೇಕರು ಆಗಮಿಸಿದ್ದರು. ನಮ್ಮ ಗ್ರಾಮಕ್ಕೆ ಸ್ಕೂಲ್ ಮಾಸ್ಟರ್ ಯಂ. ಶಿವಬಸವಯ್ಯನವರು ಬಂದಂದಿನಿಂದಲೂ ಗ್ರಾಮದಲ್ಲಿ ಮಂಗಲಕಾರ್ಯಗಳು ಜರುಗುತ್ತಲಿರುವುದನ್ನು ನೋಡಿದರೆ ನಮ್ಮ ಗ್ರಾಮದ ಸುಕೃತವೆಂದೇ ಹೇಳಬೇಕು. ಈ ಸಮಯದಲ್ಲಿ ಪ್ರಭಾಪೋಷಣಕ್ಕೆ ೧ ರೂಪಾಯಿ ಕಳುಹಿಸಿಕೊಟ್ಟಿರುತ್ತಾರೆ.

ಪ್ರತ್ಯಕ್ಷದರ್ಶಿ,
ರೆಡ್ಡಿ ತಿಪ್ಪನಗೌಡರು, ಕೊಂಡಿನಾಯಕನಹಳ್ಳಿ.

ಅಫಗಾಣಿಸ್ಥಾನದಲ್ಲಿ ಪುನಃ ಗೊಂದಲ.

ಅಫಗಾಣಿಸ್ಥಾನದ ದೈವದಲ್ಲಿ ಏನು ಬರೆದಿರುವದೋ ಯಾರಿಗೆ ಗೊತ್ತು! ಎಲ್ಲಕ್ಕೂ ಮೊದಲು ಅಮಾನುಲ್ಲಾಖಾನರ ಬಗ್ಗೆ ಗದ್ದಲವೆದ್ದು ಅವರ ಸ್ಥಿತಿಯು ಹೇಗಾಯಿತೆಂಬುದನ್ನು ಹೇಳಲಿಕ್ಕೆ ಬೇಡ; ಈಗಂತೂ ಅವರು ತಮ್ಮ ರಾಜ್ಯದ ಚಿಂತೆಯನ್ನು ಬಿಟ್ಟು ರೋಮದೊಳಗೆ ಕಾಲ ಕಳೆಯುತ್ತಿರುವರು; ಇತ್ತ ನಾದೀರಖಾನರೂ ತಾವು ಗೆದ್ದ ರಾಜ್ಯವನ್ನು ವ್ಯವಸ್ಥೆ ಪಡಿಸಿ, ಅದಕ್ಕೆ ತಾವು ರಾಜರೆಂದು ಸಾರಿ ಆಳುತ್ತಿರುವರು; ಅಲ್ಲದೆ ಕಳೆದ ತಿಂಗಳಲ್ಲಿಯೇ ಅವರು ಪಟ್ಟಕ್ಕೆ ಕುಳಿತ ಸಮಾರಂಭವೂ ಆಯಿತು. ಇಷ್ಟರಲ್ಲಿ ಮತ್ತೆ ಗಿಲಝಾಯಿ ಜನರು ಪುನಃ ದಂಗೆಯನ್ನೆಬ್ಬಿಸಿರುವರೆಂದು ತಿಳಿಯುತ್ತದೆ. ಗಿಲಝಾಯಿ ಜನರು ಅಮಾನುಲ್ಲಾ ಸಾಹೇಬರ ಪಕ್ಷದವರಿದ್ದು ಅವರಿಗೆ ನಾದೀರಖಾನರ ಆಳ್ವಿಕೆಯು ಸಮ್ಮತವಿಲ್ಲ. ಮುಕರ ಹಾಗೂ ಕಲಾತ ಪ್ರಾಂತದಲ್ಲಿ ಸುಲೇಮಾನ ಖೇಲರು ಇರುವರು. ಗಝ್ನಿ ಪ್ರಾಂತದಲ್ಲಿ ಸುಲೇಮಾನ ಖಾನರು ಇರುವರು. ಇವರೆಲ್ಲರೂ ಒಂದಾಗಿ ಈಗ ಗಲಭೆಯನ್ನೆಬ್ಬಿಸಿದ್ದಾರೆ. ಈಗೇನೋ ಅವಿಚಾರ ಅಮಾನುಲ್ಲಾಖಾನರನ್ನು ನಾವೇಕೆ ರಾಜ್ಯಬಿಟ್ಟು ಓಡಿಸಿದೆವೋ ಎಂದು ಅವರಿಗೆ ಪಶ್ಚಾತ್ತಾಪವಾಗುತ್ತಿದೆಂದು ಪ್ರಸಿದ್ಧವಾಗಿದೆ. ಈ ಕಾಡಜನರನ್ನು ಚೆನ್ನಾಗಿ ಹದ್ದಿಗೆ ತರಬೇಕೆಂದು ನಾದೀರಶಹರು ವೆ. ಅಲ್ಲಾನವಾಜ ಸೇನಾಪತಿಗಳನ್ನು ಅಲ್ಲಿಗೆ ಕಳುಹಿಸಿದ್ದರೂ ಇಂಥ ಜನರನ್ನು ಹೆಚ್ಚು ಕೆರಳಿ ಗದ್ದಲವೆಬ್ಬಿಸುವದರಲ್ಲೇನೂ ಅರ್ಥವಿಲ್ಲೆಂದು ಅವರು ನಾದೀರಶಹರಿಗೆ ತಿಳಿಸಿದ್ದರಿಂದ ಅಂತೂ ಇಂತೂ ಈ ಕಾಡು ಜನರ ಗೊಡವೆಗೆ ಹೋಗುವದೇ ಬೇಡವೆಂದು ಗೊತ್ತಾಯಿತು; ಆದರೂ ಸುಮ್ಮನಿದ್ದಂತಿಲ್ಲ ಈ ದಂಗೆಯ ಬಿರುಗಾಳಿಯು ಕಂದಹಾರ ಭಾಗದಲ್ಲಿಯೂ ಬೀಸುತ್ತಿರುವದಾಗಿ ತಿಳಿಯುತ್ತದೆ. ಅಬ್ದುಲ್ ರಹಿಮಾನ ಖಾನರನ್ನು ತಮ್ಮ ಮುಖಂಡರನ್ನಾಗಿ ಮಾಡಿಕೊಂಡು ಗಿಲಝಾಯಿ ಜನರು ಈಗ ಅಫಗಾಣ ಸರಕಾರ ವಿರುದ್ಧವಾಗಿಯೇ ಬಂಡಾಯ ನಡಿಸಿರುವರು. ಇದೆಲ್ಲವೂ ಕೆಲವು ಗಿಲಝಾ ಜನರ ಪ್ರಯತ್ನವಿದ್ದು ಅವರು ದೇಶತ್ಯಾಗ ಮಾಡಿ ಹೋದ ಅಮಾನುಲ್ಲಾಖಾನರನ್ನು ತಿರುಗಿ ತಮ್ಮ ಪಟ್ಟಕ್ಕೆ ತರಬೇಕೆಂದು ಹವಣಿಸುತ್ತಿದ್ದು ಅವರನ್ನು ಕರೆಕಳಿಸಬೇಕೆಂದೂ ಹವಣಿಸುತ್ತಿರುವರಂತೆ? ನಾದೀರಶಹರ ಕಾಲಕ್ಕೆ ಅಮಾನುಲ್ಲಾ ಸಾಹೇಬರ ಪಕ್ಷಪಾತಿಗಳೂ ಕೆಲವರಿದ್ದರು. ಅವರನ್ನು ನಾದೀರಸಾಹೇಬರು ಕೋಟೆಯಲ್ಲಿ ಸೆರೆ ಹಾಕಿದ್ದರಿಂದ ಅವರೆಲ್ಲರ ಬಗ್ಗೆಯೂ ಜನರಿಗೆ ಚಿಂತೆಯೆನಿಸಿ ಅವರೀಗ ನಾದೀರಸಾಹೇಬರ ಬಂಡಾಯ ಹೂಡಿರುವವರಲ್ಲೇನೂ ಸಂದೇಹವಿಲ್ಲ. ಒಮ್ಮೆ ಶಾಂತವಾಗಿದ್ದ ಅಫಗಾಣಿಸ್ಥಾನದ ಬಂಡಾಯದ ಬಿರುಗಾಳಿಯು ಯಾವ್ಯಾವ ಸ್ಥಿತ್ಯಂತರಗಳನ್ನು ತರುವದೋ ತಿಳಿಯದವಾಗಿದೆ!

ಸಂ. ಕ.

ರೌಂಡ್‌ಟೇಬಲ್ ಕಾನ್ಫರೆನ್ಸಿನ ಸಮಾಚಾರ.

ಲಾರ್ಡ್ ಸ್ಯಾಂಕಿಯವರು ತೆಗೆದಿರುವ ಹನ್ನೆರಡು ವಿಷಯಗಳ ಚರ್ಚೆಯು ಉಪಕ್ರಮವಾಗಿದೆ. ಈ ವಿಷಯಗಳು ಉಕ್ಕಿನ ಕಡಲೆಗಳಂತೆ ಬಹು ಕಠಿಣಗಳಾಗಿವೆ. ಇವುಗಳನ್ನು ವಿಮರ್ಶನಮಾಡಲು ಸಬ್‌ಕಮಿಟಿಗಳನ್ನು ಏರ್ಪಡಿಸಿರುತ್ತಾರೆ. ಬರ್ಮಾದೇಶದ ಯು. ಚೆ. ಪೇರವರು ತಮ್ಮ ದೇಶವನ್ನು ಹಿಂದೂದೇಶದಿಂದ ಪ್ರತ್ಯೇಕಪಡಿಸಬೇಕೆಂದೂ, ಬರ್ಮಾದೇಶೀಯರಿಗಿರುವಂತೆ ಬರ್ಮಾದೇಶದಲ್ಲಿರುವ ಭಾರತೀಯರಿಗೂ ಸೌಕರ್ಯಗಳನ್ನೇರ್ಪಡಿಸಲಾಗುವದೆಂದೂ ಹೇಳಿದರು. ಬರ್ಮಾದೇಶವನ್ನು ಹಿಂದೂದೇಶದಿಂದ ಪ್ರತ್ಯೇಕಿಸುವ ವಿಷಯವು ಬಹುಮತದಿಂದ ಅಂಗೀಕರಿಸಲ್ಪಟ್ಟದ್ದರಿಂದ ಇದಕ್ಕಾಗಿ ಒಂದು ಕಮಿಟಿಯು ಸಹ ಏರ್ಪಾಟಾಗಿರುತ್ತದೆ.

ಒಂಬತ್ತನೆಯದಾದ ಚಿಕ್ಕಸಮಾಜಗಳ ವಿಷಯವನ್ನು ಚರ್ಚಿಸಿದಾಗ ಮಹಿಳಾಪ್ರತಿನಿಧಿಯಾದ ಮಿಸೆಸ್ ಸುಬ್ಬರಾಯ್ಣರವರು ಭಾರತೀಯ ಮಹಿಳೆಯರೂ ಸಹ ಆ ವಿಷಯದಲ್ಲಿ ಸೇರಿಸಲ್ಪಡುವರೇ? ಎಂದು ಪ್ರಶ್ನೆಮಾಡಿದರು. ಮುಖ್ಯಮಂತ್ರಿಗಳಾದ ರಾಂಸೇಮ್ಯಾಕೊನಾಲ್ಡರವರು ಈ ಸಭೆಯಲ್ಲಿ ಪುರುಷರೇ ವಿಶೇಷವಾಗಿರುವದರಿಂದ ಭಾರತೀಯಮಹಿಳೆಯರು ಚಿಕ್ಕಸಮಾಜದವರೆಂದು ತೀರ್ಮಾನಿಸಲ್ಪಟ್ಟರೆ ಮಹಿಳೆಯರು ಸಂತೋಷಪಡಲಾರರು. ಮತ್ತು ಮೆಂಬರರನ್ನು ಆರಿಸುವ ಪ್ರಶ್ನೆಯು ಬಂದಾಗ ಭಾರತೀಯ ಮಹಿಳೆಯರ ವಿಷಯವನ್ನು ಚರ್ಚಿಸಲಾಗುವದು ಎಂದು ಹಸನ್ಮುಖಿಗಳಾಗಿ ಹೇಳಿದರು.

ಮಹಮ್ಮದೀಯರು ಜಿನ್ನಾರವರ ಹದಿನಾಲ್ಕು ಅಂಶಗಳೂ ತಮಗೆ ಸಂಪೂರ್ಣ ಅನುಕೂಲವಾಗಬೇಕೆಂದು ಹಟಹಿಡಿದಿರುವರು. ಇದಕ್ಕೆ ಮಿ|| ಟಿ. ಬಿ. ಸಪ್ರು ಮತ್ತು ಎಚ್. ಎಚ್. ಆಗಾಖಾನ ಮುಂತಾದ ಅತಿರಥ ಮಹಾರಥರು ಇದು ಕ್ಲಿಷ್ಟತರವಾದ ಸಮಸ್ಯೆಯು, ಲಾರ್ಡ್ ಸ್ಯಾಂಕಿಯವರ ಒಂಬತ್ತನೆಯ ವಿಷಯವನ್ನು ಚರ್ಚಿಸುವಾಗ ಇದನ್ನು ಚರ್ಚಿಸಿ ನಿರ್ಣಯಕ್ಕೆ ತರಬಹುದಾಗಿದೆ ಎಂದು ಹೇಳಿ ಆ ವಿಷಯವನ್ನು ಕೈಬಿಟ್ಟರು.

ಅಶ್ರಿತಸಂಸ್ಥಾನಗಳು ಫೆಡರೇಶನ (ಸಂಯುಕ್ತಸಂಸ್ಥಾನ) ದೊಂದಿಗೆ ಸೇರುವ ಬಗೆ ಹೇಗೆ ಎಂಬುದೊಂದು ಕಠಿಣಪ್ರಶ್ನೆಯಾಗಿತ್ತಂತೆ! ಬಿಕಾನೇರ್ ಮಹಾರಾಜರು ಇತರ ಪ್ರಾಂತಗಳೊಂದಿಗೆ ಸರಿಸಮಾನಸ್ಥಾನವು ಒಪ್ಪಲ್ಪಡಬೇಕೆಂದೂ, ತಮ್ಮ ಪೈಕಿನ ಹಕ್ಕುಗಳಲ್ಲಿ ಯಾರೂ ಕೈಹಾಕಕೂಡದೆಂದೂ, ತಮ್ಮ ಸಂಸ್ಥಾನಗಳಿಗೆ ಬಾಧಕಗಳಾದ ವಿಷಯಗಳು ಉತ್ಪನ್ನವಾದರೆ ಅವುಗಳ ಬಗ್ಗೆ ಚಕ್ರವರ್ತಿಯವರ ಪ್ರತಿನಿಧಿಯಾದ ವೈಸ್ರಾಯರ ಮೂಲಕ [illegible]

ಪಂಚಾಚಾರ್ಯ ಪ್ರಭಾ.

೧೯೩೦ನೇ ಡಿಸೆಂಬರ್ ತಾ|| ೮ನೆಯ ಸೋಮವಾರ.

ಗೃಹಸ್ಥಾಶ್ರಮ.

ಭಾರತೀಯರಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂದು ನಾಲ್ಕು ಆಶ್ರಮಗಳುಂಟು. ಈ ನಾಲ್ಕಾಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಮಿಕ್ಕ ಆಶ್ರಮಗಳಿಗೆ ಆಧಾರವಾಗಿರುತ್ತದೆ. ಈ ಗೃಹಸ್ಥಾಶ್ರಮಿಗಳ ಸಹಾಯವಿಲ್ಲದಿದ್ದರೆ ಬ್ರಹ್ಮಚಾರಿಗಳಾಗಲಿ, ವಾನಪ್ರಸ್ಥರಾಗಲಿ, ಸನ್ಯಾಸಿಗಳಾಗಲಿ ಯಾರೂ ಜೀವಿಸಲು ಸಾಧ್ಯವಿಲ್ಲ. "ಯಥಾನದೀನದಾಸ್ಸರ್ವೇ ಸಾಗರೇಯಾಂತಿ ಸಂಸ್ಥಿತಿಂ| ತಥೈವಾಶ್ರಮಿಣಸ್ಸರ್ವೇ ಗೃಹಸ್ಥೇ ಯಾಂತಿ ಸಂಸ್ಥಿತಿಂ || ಗಂಗಾದಿ ನದಿಗಳು ವಕ್ರವಕ್ರಗಳಾಗಿ ಹರಿದುಹೋಗಿ ಕೊನೆಯಲ್ಲಿ ಸಮುದ್ರವನ್ನು ಹೇಗೆ ಆಶ್ರಯಿಸುತ್ತವೆಯೋ, ಹಾಗೆ ಬ್ರಹ್ಮಚಾರಿ, ವಾನಪ್ರಸ್ಥ, ಸನ್ಯಾಸಿಗಳೆಲ್ಲರೂ ಗೃಹಸ್ಥಾಶ್ರಮಿಗಳಿಂದಲೇ ತಮ್ಮ ಜೀವಿಕೆಯನ್ನು ನಡೆಯಿಸಬೇಕಾಗಿರುತ್ತದೆಂದು ಮನುಧರ್ಮಶಾಸ್ತ್ರವು ಗೃಹಸ್ಥಾಶ್ರಮವನ್ನು ವಿಶೇಷವಾಗಿ ಕೊಂಡಾಡಿರುವುದು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು ಗೃಹಸ್ಥಾಶ್ರಮಿಗಳಿಗೆ ಸುಲಭವಾಗಿ ದೊರೆಯುವುವು. ಬ್ರಹ್ಮಚರ್ಯಾದ್ಯಾಶ್ರಮಿಗಳು ಶಾಸ್ತ್ರಮಾರ್ಗವನ್ನು ಅತಿಕ್ರಮಿಸದೆ ತಮ್ಮ ತಮ್ಮ ಉಪಾಸನಾಸಾಮರ್ಥ್ಯದಿಂದಲೇ ಮೋಕ್ಷರೂಪಮಹಾಪುರುಷಾರ್ಥವನ್ನು ಪಡೆಯಬಹುದಾಗಿದೆ. ಗೃಹಸ್ಥಾಶ್ರಮಿಗಳಾದರೋ ತಾವು ತಮ್ಮ ಉಪಾಸನಾಮಾರ್ಗವನ್ನು ಸಾಮರ್ಥ್ಯವಿಲ್ಲದೆ ಅಲ್ಪಸ್ವಲ್ಪ ಬಿಟ್ಟರೂ ಉಳಿದ ಮೂರು ಆಶ್ರಮಿಗಳನ್ನು ಕಾಪಾಡುವುದರಿಂದಲೂ, ಅವರ ಸೇವೆಯನ್ನು ಮಾಡುವುದರಿಂದಲೂ, ತಾವು ಕಷ್ಟಾರ್ಜನೆಮಾಡಿ ಆ ಮೂರು ಆಶ್ರಮಧಾರಿಗಳಿಗೆ ಅನ್ನೋದಕಗಳನ್ನೂ ಬಟ್ಟೆಬರೆಗಳನ್ನೂ ಕೊಟ್ಟು ಕಾಪಾಡುವುದರಿಂದಲೂ, ಮನೆಗೆ ಅತಿಥಿಗಳಾಗಿ ಆಗಮಿಸಿದ ಶ್ರೀ ಗುರುಜಂಗಮರನ್ನು ಪೂಜಿಸಿ ತೃಪ್ತಿಗೊಳಿಸುವುದರಿಂದಲೂ, ದೇವಸ್ಥಾನ ಮಠಾದಿಗಳನ್ನು ರಚಿಸಿ ಪುಣ್ಯಕರ್ಮಗಳನ್ನು ಮಾಡುವುದರಿಂದಲೂ, ಅನಾಥರಿಗೆ ವಿದ್ಯಾಸಹಾಯ ಮಾಡುವುದರಿಂದಲೂ ಈಶ್ವರನು ಅಂಥ ಗೃಹಸ್ಥರಿಗೆ ಭೋಗಮೋಕ್ಷಗಳನ್ನು ಕೊಡುತ್ತಾನೆ. ಪ್ರಪಂಚದಲ್ಲಿ ಗೃಹಸ್ಥಾಶ್ರಮಿಗಳು ಈಶ್ವರನಿಂದ ನಿರ್ಮಿಸಲ್ಪಡದಿದ್ದರೆ ಮಿಕ್ಕಾಶ್ರಮ ಧರ್ಮಗಳು ಇಷ್ಟರೊಳಗಾಗಿ ನಾಮಾವಶೇಷಗಳಾಗುತ್ತಿದ್ದುವಲ್ಲದೆ, ಪಶುಪಕ್ಷಿ ಮೊದಲಾದ ಇತರ ಪ್ರಾಣಿಗಳೂ ಸಹ ಉಳಿಯುತ್ತಿದ್ದಿಲ್ಲ. ಬ್ರಹ್ಮಚಾರಿ, ವಾನಪ್ರಸ್ಥ, ಸನ್ಯಾಸಿ ಮೊದಲಾದವರೆಲ್ಲರೂ ಗೃಹಸ್ಥಾಶ್ರಮಿಗಳಿಂದಲೇ ಜನಿಸಿದ್ದಾರೆ. ಅವರುಗಳಿಂದಲೇ ಜೀವಿಸುತ್ತಿದ್ದಾರೆ. ಗೃಹಸ್ಥಾಶ್ರಮಿಗಳು ಮನೆ ಮಠಗಳನ್ನು ಕಟ್ಟಿಕೊಂಡು ಧನಾರ್ಜನೆಯಲ್ಲಿ ಆಸಕ್ತರಾಗಿರುತ್ತಾರೆ. ಅದರಂತೆ ಉಳಿದ ಮೂರು ಆಶ್ರಮದವರು ಹೊಲಮನೆಗಳಿಂದಾಗಲಿ ಅಥವಾ ಇನ್ನಾವರೀತಿಯಿಂದಾಗಲಿ ದ್ರವ್ಯಾರ್ಜನೆ ಮಾಡುವವರಲ್ಲ! ಬ್ರಹ್ಮಚಾರಿಯು ಗುರುಕುಲವಾಸವನ್ನು ಮಾಡಿ ವಿದ್ಯಾಭ್ಯಾಸದಲ್ಲಿ ಆಸಕ್ತನಾಗಿರುತ್ತಾನೆ. ವಾನಪ್ರಸ್ಥನು ಕಾಡಿನಲ್ಲಿ ವಾಸಮಾಡಿರುತ್ತಾನೆ. ಸನ್ಯಾಸಿಯು ವೈರಾಗ್ಯವನ್ನವಲಂಬಿಸಿರುತ್ತಾನೆ. ಇವರುಗಳಿಗೆ ಯಾವ ವೃತ್ತಿಗಳೂ ಇಲ್ಲದಿರುವುದರಿಂದ ತಮ್ಮ ಜೀವಿಕೆಯನ್ನು ತಾವು ನಡೆಯಿಸಿಕೊಳ್ಳುವುದಾಗದೆ ಇವರೆಲ್ಲರೂ ಗೃಹಸ್ಥನು ಕೊಟ್ಟ ಅನ್ನೋದಕಗಳಿಂದಲೇ ಜೀವಿಸಬೇಕಾಗಿರುತ್ತದೆ. ದಾನಧರ್ಮ ಪರೋಪಕಾರ ಮುಂತಾದ ಪರಲೋಕಸಾಧನಗಳಾದ ಪುಣ್ಯಕರ್ಮಗಳೆಲ್ಲವನ್ನೂ ಈ ಗೃಹಸ್ಥಾಶ್ರಮಿಯೇ ನಡೆಯಿಸಬೇಕಲ್ಲದೆ ಮಿಕ್ಕ ಆಶ್ರಮದವರಿಂದೂ ನಡೆಯಿಸಲಾರರು. ಇವರು ಗೃಹಸ್ಥಾಶ್ರಮದವರಂತೆ ಸತಿಸುತಾದಿಗಳನ್ನು ಕಟ್ಟಿಕೊಂಡು ದ್ರವ್ಯಾರ್ಜನಾಸಕ್ತರಾಗಿಲ್ಲವು. ಪ್ರಾಪಂಚಿಕವ್ಯವಹಾರದಿಂದ ಹಿಂದಿರುಗಿ ವಿದ್ಯಾತಪೋನುಷ್ಠಾನಗಳೊಂದೇ ತಮ್ಮ ವಿಧಿಯನ್ನಾಗಿ ಮಾಡಿಕೊಂಡಿರುವ ಈ ಮೂರು ಆಶ್ರಮಿಗಳೂ ಈ ಪವಿತ್ರಗೃಹಸ್ಥಾಶ್ರಮಿಗಳಿಂದಲೇ ಜೀವಿಸಿಕೊಂಡಿರುವುದರಿಂದ, ಇವರು ಆ ಗೃಹಸ್ಥರಿಗೆ ತಾವು ಆರ್ಜಿಸಿದ ತಪೋಭಾಗವನ್ನು ಕೊಟ್ಟು ಕರುಣಿಸಿಯೇ ಕರುಣಿಸುತ್ತಾರೆ. ಹೀಗೆ ಅನ್ನೋದಕಗಳನ್ನು ಕೊಟ್ಟು ಕಾಪಾಡುವುದರಿಂದ ಈ ಮೂರು ಆಶ್ರಮದವರೂ ಗೃಹಸ್ಥರಿಗೆ ಸದಾ ಋಣಿಗಳೇ ಆಗಿದ್ದಾರೆಂದು ಹೇಳಬಹುದಾಗಿದೆ. ಇಂಥ ಮೂರು ಆಶ್ರಮಗಳನ್ನು ಬದುಕಿಸಬೇಕಾದರೆ ಗೃಹಸ್ಥನು ಧರ್ಮಮಾರ್ಗವನ್ನು ಬಿಡದೆ ನಾನಾ ವೃತ್ತಿಗಳನ್ನು ಅವಲಂಬಿಸಿ ಪುಷ್ಟನಾಗಿರಲೇ ಬೇಕಾಗುವುದು. ಈ ಮೂರು ಆಶ್ರಮದವರಲ್ಲಿ ಯಾವುದೊಂದೂ ದವಸಧಾನ್ಯಗಳಿಲ್ಲದ್ದರಿಂದ ಪಶುಪಕ್ಷ್ಯಾದಿಪ್ರಾಣಿಗಳೂ ಸಹ ಇವರನ್ನು ಆಶ್ರಯಮಾಡದೆ ಗೃಹಸ್ಥನಿದ್ದೆಡೆಗೆ ಬಂದು ಜೀವಿಸಬೇಕಾಗುತ್ತವೆ. ಆಹಾರ ನಿದ್ರಾದಿಗಳಲ್ಲಿ ಮಾತ್ರ ಲೋಲಗಳಾದ ಈ ಮೂಕಪ್ರಾಣಿಗಳು ದವಸಧಾನ್ಯಗಳಿದ್ದಲ್ಲಿ ಹೋಗಿ ಹೊಟ್ಟೆ ತುಂಬಿಸಿಕೊಳ್ಳಬೇಕೆಂಬ ಇಚ್ಛೆಯು ಮಾತ್ರ ಇದೆಯೇ ಹೊರತು, ತಾವು ದುಡಿದು ಪುಣ್ಯಕರ್ಮಗಳನ್ನಾಚರಿಸಬೇಕೆಂಬ ಇಚ್ಛೆಯುಳ್ಳವುಗಳಾಗಿರುವುದಿಲ್ಲ. ಇಂಥ ಇಚ್ಛೆಯು ಇವುಗಳಿಗೆ ಎಂದೂ ಹುಟ್ಟುವ ಸಂಭವವಿಲ್ಲ. ಇಂಥ ಮೂಕಪ್ರಾಣಿಗಳೂ ಸಹ ಆ ಗೃಹಸ್ಥನ ಆಶ್ರಯದಿಂದಲೇ ಜೀವಿಸಬೇಕಾಗಿವೆ. ಲೋಕಪಾಲಕನಾದ ಮಹಾರಾಜನು ಸಹ ಗೃಹಸ್ಥರಾದ ಪ್ರಜೆಗಳ ಕಂದಾಯದಿಂದಲೇ ಜಗತ್ತನ್ನು ಪಾಲಿಸಬೇಕಾಗಿದೆ. ಹೊಲಮನೆಗಳೊಂದೂ ಇಲ್ಲದ ಬ್ರಹ್ಮಚಾರಿಗಳಿಂದಾಗಲಿ, ವಾನಪ್ರಸ್ಥರಿಂದಾಗಲಿ, ಸನ್ಯಾಸಿಗಳಿಂದಾಗಲಿ ಮಹಾರಾಜನು ಕಂದಾಯ ಮೊದಲಾದವುಗಳನ್ನೇ ತೆಗೆದುಕೊಳ್ಳುವಂತಿಲ್ಲ. ತಾವೇ ಗೃಹಸ್ಥಾಶ್ರಮಿಗಳ ಮನೆಗೆ ಹೋಗಿ ಭಿಕ್ಷೆಯಿಂದ ಜೀವಿಸುವಲ್ಲಿ ಇನ್ನೊಬ್ಬರಿಗೆ ಕರವನ್ನು ಕೊಡುವದೆಂತು? ಇದರಿಂದ ರಾಜ್ಯಭಾರದ ವ್ಯವಸ್ಥೆಯು ಸಹ ಗೃಹಸ್ಥಾಶ್ರಮಿಗಳ ಮೇಲೆಯೇ ಬಿದ್ದಂತಾಯಿತು. ಚರಾಚರಾತ್ಮಕವಾದೀ ಜಗತ್ತು ಗೃಹಸ್ಥಾಶ್ರಮದ ಸಹಾಯವೆಂಬ ಒಂದು ಕಂಬದ ಆಧಾರದಲ್ಲಿ ನಿಂತಿರುತ್ತದೆ. ಆದುದರಿಂದ ಮಹಾಭಾರತಕಾರರು ಸಹ ಇದರ ರಹಸ್ಯವನ್ನೆಲ್ಲ ಯೋಚಿಸಿ "ಯಥಾ ಮಾತರಮಾಶ್ರಿತ್ಯ ಸರ್ವೇ ಜೀವಂತಿ ಜಂತವಃ | ಏವಂಗಾರ್ಹಸ್ಥ್ಯಮಾಶ್ರಿತ್ಯ ವರ್ತಂತೇ ಇತರಾಶ್ರಮಾಃ || ಪ್ರಪಂಚದ ಸಮಸ್ತಪ್ರಾಣಿವರ್ಗವೂ ತಮ್ಮ ತಮ್ಮ ತಾಯಿಯ ಆಶ್ರಯದಲ್ಲಿ ಹೇಗೆ ಜೀವಿಸುತ್ತದೆಯೋ ಹಾಗೆ ಬ್ರಹ್ಮಚಾರಿಗಳೂ, ವಾನಪ್ರಸ್ಥರೂ, ಸನ್ಯಾಸಿಗಳೂ, ಗೋವುಗಳೂ, ಇತರ ಪ್ರಾಣಿಗಳೂ ಈ ಗೃಹಸ್ಥಾಶ್ರಮದವರನ್ನಾಶ್ರಯಿಸಿಯೇ ಜೀವಿಸುತ್ತವೆ ಎಂದು ಗೃಹಸ್ಥಾಶ್ರಮಿಗಳನ್ನು ತಾಯಿಗೆ ಹೋಲಿಸಿರುತ್ತಾರೆ. ಗೃಹಸ್ಥಾಶ್ರಮಿಯು ಯೋಗವಿದ್ಯೆಯಿಲ್ಲದೆ, ಆತ್ಮವಿಚಾರವಿಲ್ಲದೆ ಪ್ರಾಣಿರಕ್ಷಣೆಯೊಂದರಿಂದಲೂ, ಇತರಾಶ್ರಮಿಗಳ ಪೋಷಣೆಯಿಂದಲೂ ಧನ್ಯಜೀವಿಯಾಗಿ ಪರಮಾತ್ಮನ ಸಂಪೂರ್ಣಾನುಗ್ರಹಕ್ಕೆ ಪಾತ್ರನಾಗುವನು. ಆದುದರಿಂದ ಪೂಜ್ಯಳಾದ ತಾಯಿಯಂತೆ ಗೃಹಸ್ಥಾಶ್ರಮವನ್ನು ಹೊಂದಿದ ಮಾನವನು ಏಕಪತ್ನೀವ್ರತನಾಗಿಯೂ, ಜಿತೇಂದ್ರಿಯನಾಗಿಯೂ, ಪಾಪಭೀರುವಾಗಿಯೂ, ಗುರುಹಿರಿಯರಲ್ಲಿ ಭಕ್ತಿಯುಳ್ಳವನಾಗಿಯೂ ಧರ್ಮಪೂರ್ವಕದ್ರವ್ಯಾರ್ಜನೆಯುಳ್ಳವನಾಗಿಯೂ, ಸದಾಚಾರಸಂಪನ್ನನಾಗಿಯೂ ಇರಬೇಕು. ಸಕಲಾಶ್ರಮದವರನ್ನು ಪೋಷಿಸುವ ಮಹಾಭಾರವು ಈ ಗೃಹಸ್ಥನಮೇಲೆ ಬಿದ್ದಿರುವುದರಿಂದ ಈ ಗೃಹಸ್ಥನು ಧರ್ಮಮಾರ್ಗದಿಂದ ಚ್ಯುತನಾಗಿ ಅಧರ್ಮಮಾರ್ಗದಲ್ಲಿ ಎಂದು ಕಾಲಿಡುವನೋ ಅಂದೇ ಇವನ ಅನ್ನೋದಕಪ್ರಭಾವದಿಂದ "ಯಜಮಾನಕೃತಂ ಪಾಪಂ ಅನ್ನಮಾಶ್ರಿತ್ಯ ತಿಷ್ಠತಿ" ಎಂಬಂತೆ ಉಳಿದ ಬ್ರಹ್ಮಚರ್ಯಾದ್ಯಾಶ್ರಮಿಗಳ ಆತ್ಮವು ಸಹ ಕಲುಷಿತವಾಗಿ ಹೋಗುವುದು. ಗೃಹಸ್ಥರು ಮಾಡಿದ ಅಧರ್ಮದ ಫಲವು ಉಳಿದ ಆಶ್ರಮಿಗಳ ಹೃದಯದಲ್ಲೂ ಪರಿಣಾಮವಾಗುವುದೆಂಬುದೇ ಶಾಸ್ತ್ರರಹಸ್ಯವು. ಇಂಥ ಗೃಹಸ್ಥಾಶ್ರಮದಲ್ಲಿರುವ ಸ್ತ್ರೀಪುರುಷರ ಪವಿತ್ರಹೃದಯದಲ್ಲಿ ಪರಮೇಶ್ವರನು ಸದಾ ಸನ್ನಿಹಿತನಾಗಿ ಯೋಗಕ್ಷೇಮಗಳ ಭಾರವನ್ನು ವಹಿಸಿರುತ್ತಾನೆ. ಈಗಣ ವಾತಾವರಣದಲ್ಲಿ ಸರ್ವಾಶ್ರಮಗಳಿಗೂ ಮೂಲಸ್ತಂಭರೂಪವಾದ ಗೃಹಸ್ಥಾಶ್ರಮಧರ್ಮವು ಶೈಥಿಲ್ಯವನ್ನೇ ಹೊಂದುತ್ತಲಿರುವುದು ಶೋಚನೀಯವಾಗಿದೆ. ಪರಮೇಶ್ವರನು ಈ ಧರ್ಮಕ್ಕೆ ಜಯವನ್ನೀಯಲಿ.

ಒಳದೇಶದ ವೃತ್ತಾಂತಗಳು.

ತಿರುವಾಂಕೂರು ಶ್ರೀಮನ್ಮಹಾರಾಜರವರು ಚಿಕ್ಕಮಗಳೂರಿಗೂ ಅಲ್ಲಿಂದ ಜೋಗಾಫಾಲ್ಸಿಗೂ ದಯಮಾಡಿಸಿರುವರೆಂದೂ, ನಮ್ಮ ಸರ್ಕಾರದವರು ಅವರ ಆದರಾತಿಥ್ಯಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡಿರುವರೆಂದೂ ಕೇಳುತ್ತೇವೆ.

ನೆನ್ನೆಯದಿವಸ ಪ್ರಾತಃಕಾಲ ಸುಮಾರು 8½ಘಂಟೆಯ ಸಮಯದಲ್ಲಿ ಈ ಮೊದಲು ವೈಸರಾಯರಾಗಿದ್ದ ಲಾರ್ಡ್ ಹಾರ್ಡಿಂಜ್‌ರವರು ಸ್ಪೆಷಲ್ ಗಾಡಿಯಲ್ಲಿ ಮೈಸೂರಿಗೆ ಬಂದಿಳಿದರು. ಶ್ರೀಮನ್ಮಹಾರಾಜರವರು ಅವರಿಗೆ ಸ್ವಾಗತವನ್ನಿತ್ತು ತಮ್ಮ ಕಾರಿನಲ್ಲಿ ಕುಳ್ಳಿರಿಸಿಕೊಂಡು ಗೌರವದಿಂದ ಕರೆತಂದರು. ಈ ನೋಟವನ್ನು ನೋಡುವುದಕ್ಕೆ ಅನೇಕ ಜನರು ನೆರೆದಿದ್ದರು. ಲಾರ್ಡ್ ಹಾರ್ಡಿಂಜ್‌ರವರು ಇಲ್ಲಿಂದ ಕಾರಾಪುರದ ಕಡೆಗೆ ದಯಮಾಡಿಸುವವರಾಗಿದ್ದಾರೆಂದು ತಿಳಿದುಬರುತ್ತದೆ.

ತುಮಕೂರು ಡಿಸ್ಟ್ರಿಕ್ಟ್ ಉಪಾಧ್ಯಾಯರ ಸಮ್ಮೇಳನದವರು ಮುಂದಿನವರ್ಷ ಜನವರಿ 3 ಮತ್ತು 4 ನೆಯ ತಾರೀಖಿನದಿವಸ ತುಮಕೂರಿನಲ್ಲಿ ಪ್ರಾಂತಿಕ ಉಪಾಧ್ಯಾಯರ ಸಭೆಯನ್ನು ನಡೆಯಿಸುವರೆಂದೂ, ದ್ವಿತೀಯ ಸಚಿವರಾದ ರಾಜಮಂತ್ರಪ್ರವೀಣ ಮೆ|| ಕೆ. ಮ್ಯಾಥ್ಯು ಸಾಹೇಬರವರು ಈ ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದೂ, ಮೈಸೂರು ವಿದ್ಯಾಶಾಖೆಯ ಮುಖ್ಯಾಧಿಕಾರಿಗಳಾದ ಮೆ|| ಎ. ಆರ್. ವಾಡಿಯಾವರು ಅಧ್ಯಕ್ಷರಾಗಿ ಕಾರ್ಯಗಳನ್ನು ನಡೆಯಿಸುವರೆಂದೂ ತಿಳಿದುಬರುತ್ತದೆ.

ಶ್ರೀಕೃಷ್ಣರಾಜೇಂದ್ರ ಮಿಲ್ಲನ್ನು ಮುಚ್ಚುವ ಸಂಭವವುಂಟಾಗಿದ್ದ ವಿಷಯವನ್ನು ಈ ಮೊದಲೇ ಪ್ರಸಿದ್ಧಪಡಿಸಿದ್ದೆವಷ್ಟೆ! ಆದರೆ ಆ ಕಂಪನಿಯ ಛೇರ್‌ಮನ್ನರಾದ ಮ|| ಸಿ. ಶ್ರೀಕಂಠೇಶ್ವರ ಅಯ್ಯರ್‌ರವರು ಬಹು ಪ್ರಯತ್ನಮಾಡಿದ್ದರಿಂದ ಮೈಸೂರು ಬ್ಯಾಂಕಿನವರು ಎಂದಿನಂತೆ ಹಣವನ್ನು ಒದಗಿಸುವುದಾಗಿ ಒಪ್ಪಿಕೊಂಡರೆಂದೂ, ಆದುದರಿಂದ ಮಿಲ್ಲಿನ ಕೆಲಸಗಳು ಎಂದಿನಂತೆ ನಡೆಯಲು ಪ್ರಾರಂಭವಾಗಿವೆ ಎಂದೂ, ಹೆಚ್ಚಿನ ಸಂಬಳಗಳ ಕೆಲವು ನೌಕರಿಗಳನ್ನು ವಜಾಮಾಡಿದ್ದಾರೆಂದೂ, ಮ್ಯಾನೇಜಿಂಗ್ ಡೈರಕ್ಟರರು ಕಡಿಮೆ ಪ್ರತಿಫಲವನ್ನು ತೆಗೆದುಕೊಂಡು ಕೆಲಸ ಮಾಡಲೊಪ್ಪಿರುವರೆಂದೂ ತಿಳಿದುಬರುತ್ತದೆ.

ಮೈಸೂರು ಮಂಡಿ ಪುಟ್ಟಮ್ಮ, ಪಗಡೂರು ಮಲ್ಲಮ್ಮ, ಪಗಡೂರು ಮಹಾದೇವಮ್ಮ, ಲಕ್ಷ್ಮಿ, ಅರಸಿ, ಸಿಂಗಿ, ಇವರುಗಳು ಕೃಷ್ಣರಾಜೇಂದ್ರ ಮಿಲ್ಲಿನಲ್ಲಿ ಕೂಲಿ ಮಾಡುತ್ತಿದ್ದ ದಾಸಪ್ಪನೆಂಬಾತನ ಕುಮಾರಿ ತಿರುಲಮ್ಮ ಎಂಬ ಹುಡುಗಿಗೆ ದುರುಪದೇಶವನ್ನು ಮಾಡಿ ನಿನ್ನನ್ನು ಶ್ರೀಮಂತನಾದ ಗಂಡನಿಗೆ ಮದುವೆಮಾಡಿಸುತ್ತೇವೆಂದು ಹೇಳಿ ಯಡತೊರೆಗೆ ಕರೆದುಕೊಂಡು ಹೋದರು. ದೈವವಶಾತ್ ಯಡತೊರೆಯಲ್ಲಿ ಆ ಹುಡುಗಿಯ ಸೋದರಮಾವನು ಇವರ ದುರ್ಮಸಲತ್ತನ್ನು ತಿಳಿದುಕೊಂಡು ಮೇಲ್ಕಂಡ ಆರು ಜನರನ್ನು ಪೋಲೀಸರ ಛಾರ್ಜಿಗೆ ಕೊಟ್ಟು ಮೊಕದ್ದಮೆ ಹೂಡಿದ್ದನು. ಸಿಟಿ ಮ್ಯಾಜಿಸ್ಟ್ರೇಟರು ಇದೇ ತಿಂಗಳು 1 ನೆಯ ತಾರೀಖಿನ ದಿವಸ 2 ಮತ್ತು 3 ನೆಯ ಅಪರಾಧಿಗಳನ್ನು ಬಿಟ್ಟು ಮಿಕ್ಕವರಿಗೆ ಪ್ರತಿಯೊಬ್ಬರಿಗೂ 18 ತಿಂಗಳುಗಳ ಕಠಿಣ ಸಜೆಯನ್ನು ವಿಧಿಸಿದರು.

ವರ್ತಮಾನಸಂಗ್ರಹ.

ಪೆಷಾವರಿನಲ್ಲಿ ಒಬ್ಬ ಬ್ರಿಟಿಷ್ ಸೈನ್ಯಾಧಿಕಾರಿಯು ಕೊಲ್ಲಲ್ಪಟ್ಟಿರುವನೆಂದು ತಿಳಿದುಬರುತ್ತದೆ.

ಪಂಡಿತ ಮದನಮೋಹನಮಾಲವೀಯರ ಆರೋಗ್ಯವು ಸುಧಾರಿಸುತ್ತಲಿದ್ದರೂ ಇನ್ನೂ ಬಹಳ ಅಶಕ್ತಿಯಿದೆ ಎಂದು ತಿಳಿದುಬರುತ್ತದೆ.

ಮಿ|| ಎಸ್. ಎ. ಬ್ರೇಲ್ವಿಯವರಿಗೆ ಶಿಕ್ಷೆಯಾದನಂತರ ಮಿ|| ಎಲ್. ಜಿ. ಖಾರೆಯವರು ಬೊಂಬಾಯಿಯ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾಗಿರುವರು.

ಡಿಲ್ಲಿ ಸಂಗ್ರಾಮಸಮಿತಿಯ ಸರ್ವಾಧಿಕಾರಿಗಳಾಗಿದ್ದ ಸೇಟ್ ಕೇದಾರನಾಥರವರು ದಸ್ತಗಿರಿಮಾಡಲ್ಪಟ್ಟ ಮೇಲೆ ಪಂಡಿತ ಜವಾಹರಲಾಲರವರ ಅತ್ತೆಯವರು ಸರ್ವಾಧಿಕಾರಿಗಳಾಗಿರುವರು.

ರೌಂಡುಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ರೇವಾ ಮಹಾರಾಜರವರ ಆರು ವರ್ಷಗಳ ವಯಸ್ಸಿನ ಮಗನು ಮೋಟಾರ್ ಸೈಕಲ್ಲಿಗೆ ಸಿಕ್ಕಿ ಗಾಯಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವನಂತೆ!

ತಿರುವಾಂಕೂರು ಸಂಸ್ಥಾನದ ತಂಪನೂರನೆಂಬ ಗ್ರಾಮದಲ್ಲಿ ಒಂದು ಮನೆಯ ನೆಲದ ಕೆಳಗೆ ಸೀಮೆಎಣ್ಣೆಯ ಬಾವಿಯು ಸಿಕ್ಕಿರುವುದಾಗಿ ವರ್ತಮಾನವಿದೆ. ಇದು ಮೇಲ್ಕಂಡ ಸಂಸ್ಥಾನದ ಪುಣ್ಯೋದಯವೆಂದೇ ಹೇಳಬಹುದಾಗಿದೆ.

ಕೇರಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಶ್ರೀಯುತ ವಲ್ಲಭಭಾಯಿ ಪಟೇಲ್‌ರವರು ಕೇರಾಜಿಲ್ಲೆಯಲ್ಲಿ ಎರಡುತಿಂಗಳುಗಳವರೆಗೂ ಕಾಲಿಡಕೂಡದೆಂದು ಕ್ರಿ. ಪ್ರೊ. ಕೋ. 144 ನೆಯ ಸೆಕ್ಷನ್ ಪ್ರಕಾರ ಆರ್ಡರ್ ಜಾರಿಮಾಡಿರುವರು.

ಪಂಡಿತ ಮೋತಿಲಾಲ್ ನೆಹರೂರವರ ಆರೋಗ್ಯವು ಇನ್ನೂ ಸುಧಾರಿಸಿಲ್ಲವೆಂದೂ 100 ಡಿಗ್ರಿಗಳ ಜ್ವರವು ಬರುತ್ತಿರುವುದೆಂದೂ ಇವರ ಮತ್ತು ಜವಾಹರಲಾಲರ ಪತ್ನಿಯರು ಇವರನ್ನು ಉಪಚರಿಸಲು ಕಲ್ಕತ್ತೆಗೆ ಹೋಗುವರೆಂದೂ ತಿಳಿದುಬರುತ್ತದೆ.

ಜಪಾನ್‌ದೇಶದಲ್ಲಿ ಭೂಕಂಪದಿಂದ ಬಹುಅನಾಹುತವಾಗಿದೆ. ರೈಲುಕಂಬಗಳೂ, ತಂತಿಗಳೂ ಕೆಟ್ಟುಹೋಗಿವೆ. ಪ್ಯೂ ಎಂಬ ಪಟ್ಟಣದಲ್ಲಿ 36 ಜನರು ಮೃತಪಟ್ಟಿರುವರೆಂದೂ, ಅನೇಕರಿಗೆ ಗಾಯಗಳಾಗಿವೆಯೆಂದೂ, ಕೆಲವುಪಟ್ಟಣಗಳು ಕುಸಿದುಬಿದ್ದಿವೆಯೆಂದೂ ಕೇಳುತ್ತೇವೆ.

ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಮಿ|| ವೆಡ್ಜವುಡ್ ಬೆನ್‌ರವರು ಇಂಡಿಯಾ ದೇಶದವರ ಬಹಿಷ್ಕಾರ ಚಳವಳಿಯಿಂದ 1930 ನೆಯ ಸೆಪ್ಟಂಬರ್ ತಿಂಗಳಿನಲ್ಲಿ 1929ನೆಯ ಸೆಪ್ಟಂಬರ್‌ಗಿಂತ ಇಂಗ್ಲೆಂಡಿನ ಮಾಲು ಶೇಕಡಾ 43.6 ರಷ್ಟು ಕಡಿಮೆಯಾಗಿ ಹಿಂದೂದೇಶಕ್ಕೆ ಸಾಗಿದೆ ಎಂದು ಹೇಳಿದರು.

ಏಪ್ರಿಲ್ 9 ನೆಯ ತಾರೀಖಿನ ದಿವಸ ಟಪಾಲು ತೆಗೆದುಕೊಂಡು ಹೋಗುವ ಜವಾನನನ್ನು ಬೆನ್ನಟ್ಟಿ 9 ಚೀಲಗಳನ್ನು ಕಿತ್ತುಕೊಂಡರೆಂಬ ಅಪರಾಧದಮೇಲೆ ಪೌನಾ ಸೆಷನ್ಸ್ ಜಡ್ಜರವರು ಒಬ್ಬ ಹಿಂದುವಿಗೆ 9 ವರ್ಷಗಳ ಕಠಿಣಶಿಕ್ಷೆಯನ್ನೂ, ಒಬ್ಬ ಮಹಮ್ಮದೀಯನಿಗೆ 7 ವರ್ಷಗಳ ಕಠಿಣಶಿಕ್ಷೆಯನ್ನೂ ವಿಧಿಸಿರುವರು.

ಬೊಂಬಾಯಿಯ ಸ್ಮಾಲ್‌ಕಾಜಸ್‌ಕೋರ್ಟ್‌ಚೀಫ್ ಜಡ್ಜರಾದ ಮಿ|| ಚಿತ್ರೆಯವರು ಶಾಸನೋಲ್ಲಂಘನಕ್ಕಾಗಿ ಶಿಕ್ಷಿಸಲ್ಪಟ್ಟ ಮುನಸಿಪಾಲಿಟಿಯ ಮೆಂಬರರು ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುವರೆಂದೂ, ಪುನಃ ಎಲೆಕ್ಷನ್ ಆದಾಗ ಅಭ್ಯರ್ಥಿಗಳಾಗನಿಂತು ಆರಿಸಲ್ಪಡಬಹುದೆಂದೂ ತೀರ್ಪುಕೊಟ್ಟಿರುವರು.

ಅಮೇರಿಕಾಖಂಡದ ವ್ಯಾಪಾರವು ಪ್ರತಿವರ್ಷವೂ ಹೆಚ್ಚುತ್ತಲೇ ಇತ್ತು. ಆದರೆ ಈ ವರ್ಷಮಾತ್ರ ವ್ಯಾಪಾರವು ಬಹಳ ಕಡಿಮೆಯಾಗಿದೆ. ವಾರ್ಷಿಕ ಜಮಾಖರ್ಚಿನ ಪಟ್ಟಿಯಲ್ಲಿ 1800 ಲಕ್ಷ ಡಾಲರ್‌ಗಳ ಲುಕ್ಸಾನು ಕಂಡುಬರುವುದೆಂದೂ, ಈ ಸ್ಥಿತಿಯನ್ನು ಸರ್ಕಾರದವರು ಇನ್ನು ಆರುತಿಂಗಳೊಳಗಾಗಿಯೇ ಸುಧಾರಿಸುತ್ತೇವೆಂದೂ ಹೇಳಿರುವರು.

ಬೊಂಬಾಯಿಯ ಕ್ರಾನಿಕಲ್ ಪತ್ರಿಕೆಯ ಸಂಪಾದಕರಾದ ಮಿ|| ಎಸ್. ಎ. ಬ್ರೇಲ್ವಿಯವರು 5 ತಿಂಗಳು ಸಾದಾ ಶಿಕ್ಷೆ ಮತ್ತು 250 ರೂ. ಗಳ ಜುಲ್ಮಾನೆ ಅಥವಾ 6 ವಾರಗಳ ಶಿಕ್ಷೆಗೂ, ಪ್ರಿಂಟರ್ ಮತ್ತು ಪಬ್ಲಿಷರ್ ಮಿ|| ಕಪಾಡಿಯಾರವರು 5 ತಿಂಗಳು ಸಾದಾ ಶಿಕ್ಷೆ ಮತ್ತು 150 ರೂ. ಗಳ ಜುಲ್ಮಾನೆ ಅಥವಾ 6 ವಾರಗಳ ಶಿಕ್ಷೆಗೂ, ಗುರಿಮಾಡಲ್ಪಟ್ಟಿರುವರು.

ಬಂಜೀರ ಸಂಸ್ಥಾನದ ದಿವಾನರು ತಮ್ಮ ಸಂಸ್ಥಾನದಲ್ಲಿ ವಿದ್ಯಾರ್ಥಿಗಳಾಗಲಿ, ಸರ್ಕಾರಿ ನೌಕರರಾಗಲಿ, ಲೋಕಲ್ ಬೋರ್ಡ್ ಮತ್ತು ಮ್ಯುನಿಸಿಪಾಲಿಟಿಗಳ ಮೆಂಬರರಾಗಲಿ ಗಾಂಧಿ ಟೋಪಿಯನ್ನು ಧರಿಸಬಾರದೆಂದು ಹುಕುಂ ಹೊರಡಿಸಿರುವರಂತೆ! ಗಾಂಧಿ ಟೋಪಿಗಳನ್ನು ಹಾಕಿದವರಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನೂ ಕೂಡ ಮಾಡಬಾರದಂತೆ! ಸರಿಯಾದ ದಿವಾನರು.

ಇಂಡಿಯಾದೇಶದ ಗೌರ್ನರ್‌ಜನರಲ್‌ರವರು ಇಂಡಿಯಾ ಸೆಕ್ರೆಟರಿಗಳ ಅನುಮತಿಯನ್ನು ತೆಗೆದುಕೊಂಡು ಸರ್ ಅತುಲಚಂದ್ರಚಟ್ಟರ್ಜಿಯವರ ಸ್ಥಾನದಲ್ಲಿ ಸರ್ ಭೂಪೇಂದ್ರನಾಥಮಿತ್ರರನ್ನು ಹೈಕಮಿಷನರನ್ನಾಗಿ ನಿಯಮಿಸಿದ್ದಾರೆ. ಆ ಸ್ಥಾನವು 1931 ನೆಯ ಜುಲೈ 1 ನೆಯ ತಾರೀಖಿಗೆ ಖಾಲಿಬೀಳುವುದು. ಅನಂತರ ಭೂಪೇಂದ್ರನಾಥಮಿತ್ರರವರು ಆ ಸ್ಥಾನವನ್ನು ಅಲಂಕರಿಸುವವರಾಗಿದ್ದಾರೆ.

ಮಹಾತ್ಮಾಗಾಂಧಿಯವರ ಪ್ರೈವೇಟ್‌ಸೆಕ್ರೆಟರಿಗಳಾದ ಶ್ರೀಯುತ ಮಹಾದೇವದೇಸಾಯಿಯವರು ಕ್ರಿ. ಪ್ರೊ. ಕೋ 144 ನೆಯ ಸೆಕ್ಷನ್ ಪ್ರಕಾರ ಜಾರಿಮಾಡಿದ ಹುಕುಮಿಗೆ ವಿರೋಧವಾಗಿ ಹಳ್ಳಿಯ ಅಧಿಕಾರಿಗಳೊಡನೆ ಅಂತರಂಗವಾಗಿ ಸಭೆಸೇರಿಸುತ್ತಿದ್ದರೆಂಬ ಅಪರಾಧದ ಮೇಲೆ ದಸ್ತಗಿರಿಮಾಡಲ್ಪಟ್ಟು ಅಹಮ್ಮದಾಬಾದ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಮಿ|| ವಿಠ್ಠಲಭಾಯಿ ಪಟೇಲರವರು ಅಂಬಾಲಾ ಜೈಲಿನಿಂದ ಮದರಾಸಿಗೆ ಇದೇ ತಿಂಗಳು 4 ನೆಯ ತಾರೀಖಿನ ದಿವಸ ಕರೆತರಲ್ಪಟ್ಟರು. ಇವರನ್ನು ಮೋಟಾರಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಜನರು ಇವರ ದರ್ಶನಮಾಡಿಕೊಂಡು "ಮಹಾತ್ಮಾ ಗಾಂಧಿಕಿಜೈ" ಎಂದು ಜಯಘೋಷಮಾಡಿದರು. ಸರ್ಕಾರದವರು ಇವರನ್ನು ಅದೇ ದಿವಸ ರಾತ್ರಿ ಕೊಯಮುತ್ತೂರಿಗೆ ಕರೆದುಕೊಂಡು ಹೋದರೆಂಬ ವರ್ತಮಾನವಿದೆ.

ಇಟಲಿ ಮತ್ತು ಜಪಾನ್ ದ್ವೀಪಗಳಲ್ಲಿ ಭೂಕಂಪದಿಂದ ಕಾಲಾಧೀನವಾಗುವ ಜನಗಳ ಸಂಖ್ಯೆಗಿಂತಲೂ ದೊಡ್ಡಪಟ್ಟಣಗಳಲ್ಲಿ ಮೋಟಾರು ಗಾಡಿಗಳಿಗೆ ಸಿಕ್ಕಿ ಮೃತಪಡುವ ಜನಗಳ ಸಂಖ್ಯೆಯೇ ಹೆಚ್ಚಾಗಿರುವುದೆಂದೂ, ಪ್ರತಿವರ್ಷವೂ ಜಗತ್ತಿನಲ್ಲಿ ಸುಮಾರು 15000 ಜನರು ಭೂಕಂಪದಿಂದಲೂ, ಲಕ್ಷಾಂತರ ಜನರು ಮೋಟಾರುಗಾಡಿಗಳ ಅಪಾಯದಿಂದಲೂ ಮೃತಪಡುವರೆಂದೂ ಇಂಗ್ಲೆಂಡಿನ ಒಬ್ಬ ಶಾಸ್ತ್ರಜ್ಞರು ತಿಳುಹಿಸಿರುತ್ತಾರೆ.

ಇದೇ ತಿಂಗಳು 5ನೆಯ ತಾರೀಖಿನ ದಿವಸ ಬೊಂಬಾಯಿಯ ಸಂಗ್ರಾಮಸಮಿತಿಯವರು ಎಸ್ಪ್ಲನೇಡ್ ಮೈದಾನದಲ್ಲಿ ಒಂದು ಸಭೆಯನ್ನು ನಡೆಯಿಸಬೇಕೆಂದು ಪ್ರಯತ್ನಪಟ್ಟರು. ಸಾವಿರಾರುಜನರು ಸೇರಿದ್ದರು. ಆಗ ಪೋಲೀಸ್ ಕಮಿಷನರ್‌ರವರು 400 ಜನ ಸಿಪಾಯಿಗಳೊಂದಿಗೆ ಆ ಸ್ಥಳಕ್ಕೆ ಬಂದು ಸಭೆಯನ್ನು ಚದುರಿಸಿ ಲಾಠೀಪ್ರಯೋಗ ಮಾಡಿಸಿದರೆಂದೂ, 229 ಜನರು ಗಾಯಪಟ್ಟು ಕಾಂಗ್ರೆಸ್ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರೆಂದೂ ತಿಳಿದುಬರುತ್ತದೆ.

ಮಲಯಾದ ರಬ್ಬರ್ ತೋಟಗಳಲ್ಲಿ ಕೆಲಸಮಾಡುತ್ತಿದ್ದ ಇಂಡಿಯಾದೇಶದ ಕೂಲಿಜನರ ಪೈಕಿ ಸುಮಾರು 25000 ಜನರು ಕೂಲಿಯು ಕಡಿಮೆಯಾದುದರಿಂದಲೂ, ಕೆಲಸಮಾಡುವ ಘಂಟೆಗಳ ಸಂಖ್ಯೆಯನ್ನು ಹೆಚ್ಚಿಸಿದುದರಿಂದಲೂ ಹಿಂದೂದೇಶಕ್ಕೆ ಹೊರಟಿರುವರು. ಮಾರಿಸ್‌ನಾಥ್ ಎಂಬವರು ರಬ್ಬರ್‌ಧಾರಣೆಯು ಹೆಚ್ಚಿದಾಗ ಕೂಲಿಗಳಿಲ್ಲದೆ ತೊಂದರೆಯಾಗಬಹುದಾದ್ದರಿಂದ ಕೂಲಿಯನ್ನು ಹೆಚ್ಚಿಸುವುದು ಅವಶ್ಯಕವೆಂದೂ, ಕೆಲಸ ಮಾಡುವ ಕಾಲವನ್ನು ಕಡಿಮೆಮಾಡಬೇಕೆಂದೂ ಸೂಚಿಸಿರುವರು.

ಕಾಶೀ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದುಂಡು ಮೇಜು ಪರಿಷತ್ತಿನ ನಾಟಕವನ್ನಾಡಿದರು. ಚಕ್ರವರ್ತಿಗಳೂ, ಮುಖ್ಯಮಂತ್ರಿಗಳೂ, ಮಹಾರಾಜರುಗಳೂ, ಪ್ರತಿನಿಧಿಗಳೂ, ಸ್ತ್ರೀಪ್ರತಿನಿಧಿಗಳೂ ಇವರುಗಳ ಪಾತ್ರಗಳೆಲ್ಲಾ ಅಭಿನಯಿಸಲ್ಪಟ್ಟವು. ಪ್ರೊಫೆಸರ್ ಥಾರ್ ಎಂಬವರು ಚಕ್ರವರ್ತಿಗಳ ಪಾರ್ಟನ್ನೂ, ಸಿಂಹ ಎಂಬವರು ಮ್ಯಾಕ್‌ಡೊನಾಲ್ಡರ ಪಾತ್ರವನ್ನೂ, ಮಿಸ್ ಮನೋರಮಾಸೇಟ್ ಎಂಬಾಕೆಯು ಮಿಸೆಸ್ ಷಹಾನವಾಜರ ಪಾತ್ರವನ್ನೂ ಅಭಿನಯಿಸಿದರಂತೆ! ಇದನ್ನು ನೋಡುವುದಕ್ಕಾಗಿ ಬಹು ಜನರು ಸೇರಿದ್ದರಂತೆ!

ಎರವಾಡಾ ಜೈಲಿನಲ್ಲಿ ಮಹಾತ್ಮಾಗಾಂಧಿಯವರ ಸನ್ನಿಧಿಯಲ್ಲಿದ್ದ ಕಾಕಾ ಕಲೇಲ್ಕರ್‌ರವರು ಸಬರ್ಮತಿ ಆಶ್ರಮದಲ್ಲಿ ಮಹಾತ್ಮರ ವಿಷಯದಲ್ಲಿ ಹೇಳಿರುವುದೇನೆಂದರೆ:—"ಮಹಾತ್ಮಾ ಗಾಂಧಿಯವರ ಆರೋಗ್ಯವು ಚನ್ನಾಗಿದೆ. ಆದರೆ ಅವರ ತೂಕವು 104 ಪೌಂಡಿನಿಂದ 101 ಪೌಂಡಿಗೆ ಇಳಿದಿದೆ. ಎರವಾಡಾ ಜೈಲಿನ ನೀರು ಅವರಿಗೆ ಹಿತಾವಹವಾಗಿಲ್ಲ ಮತ್ತು ಅವರು ಮಲಬದ್ಧದಿಂದ ನರಳುತ್ತಿದ್ದರು. ಇತ್ತೀಚೆಗೆ ಹಾಲು ಮತ್ತು ಮೊಸರನ್ನು ತೆಗೆದುಕೊಳ್ಳುವುದನ್ನು ಸಹ ಬಿಟ್ಟುಬಿಟ್ಟಿರುವರು. ತಮ್ಮ ವೇಳೆಯನ್ನು ಗೀತೆಯನ್ನು ಓದುವುದರಲ್ಲಿಯೂ, ರಾಟೆಯನ್ನು ನಡೆಯಿಸುವುದರಲ್ಲಿಯೂ ಕಳೆಯುವರು. ಅವರಿಗೆ ಆಶ್ರಮದ ಎಲ್ಲಾ ಜನರಿಗೂ ಅದರಲ್ಲಿಯೂ ಚಿಕ್ಕಮಕ್ಕಳಿಗೂ ಪತ್ರಗಳನ್ನು ಬರೆಯಬೇಕೆಂಬುದು ಬಹು ಆಶೆ. ಅವರು ಯಾವಾಗಲೂ ಅವರ ವಿಷಯವಾಗಿ ಚಿಂತಿಸುತ್ತಿರುವರು. ಭರತಖಂಡವು ದುಃಖಾವಳಿಯಲ್ಲಿಯೂ ಸಹ ಶಾಂತಸ್ವಭಾವವನ್ನು ತಾಳಿರುವುದು ಅವರಿಗೆ ಕೇವಲ ತೃಪ್ತಿಕರವಾಗಿದೆ. ಶ್ರೀಯುತ ಪ್ಯಾರಿಲಾಲ್‌ರವರು ಈಗ ಅವರ ಸಂಗಡಿಗರಾಗಿದ್ದಾರೆ.

ಬೊಂಬಾಯಿಯ ಕ್ರಾನಿಕಲ್ ಪತ್ರಿಕಾ ಸಂಪಾದಕರಾದ ಮಿ|| ಎಸ್. ಎ. ಬ್ರೇಲ್ವಿಯವರ ದಸ್ತಗಿರಿಯು ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಅವಕಾಶವಾಗಿದೆ. ಮಿ|| ಫ್ರೀಮನ್ ಮತ್ತು ಮಿ|| ಫೆನ್ನರ್‌ಬ್ರಾಕ್ವೇರವರು ಇಂಡಿಯಾ ಸೆಕ್ರೆಟರಿ ಮಿ|| ಬೆನ್‌ರವರನ್ನು ಮಿ|| ಸೆಯ್ಯದ್‌ಬ್ರೇಲ್ವಿಯವರ ದಸ್ತಗಿರಿ ವಿಷಯವಾಗಿ ಪ್ರಶ್ನೆಮಾಡಿದ್ದಕ್ಕೆ ಮಿ|| ವೆ. ಬೆನ್‌ರವರು, ವೈಸರಾಯರವರ ಆರ್ಡಿನೆನ್ಸ್ ಪ್ರಕಾರ ಸದರಿ ಸಂಪಾದಕರು ದಸ್ತಗಿರಿ ಮಾಡಲ್ಪಟ್ಟಿಲ್ಲವೆಂದೂ, 1908 ನೆಯ ಆಕ್ಟ್ ಪ್ರಕಾರ ಅಕ್ರಮಕೂಟವಾದ ಬೊಂಬಾಯಿಯ ಸಂಗ್ರಾಮಸಮಿತಿಗೆ ಸಹಾಯಮಾಡಿದ್ದಕ್ಕೆ ಕೈಸೆರೆಮಾಡಲ್ಪಟ್ಟಿರುವರೆಂದೂ, ವೈಸರಾಯರವರ ಆರ್ಡಿನೆನ್ಸ್ ಪರಿಸಮಾಪ್ತಿಯಾದರೂ ಸಾಮಾನ್ಯವಾಗಿ ಜಾರಿಯಲ್ಲಿರುವ ಕಾಯಿದೆಯನ್ನು ಚಲಾಯಿಸಲಾಗುವುದೆಂದೂ ಉತ್ತರವನ್ನಿತ್ತರು. ಆದಕ್ಕೆ ಪ್ರಾಶ್ನಿಕರು ಇಂಡಿಯಾ ಸೆಕ್ರೆಟರಿಗಳ ಹೇಳಿಕೆಯು ತೃಪ್ತಿಕರವಾಗಿಲ್ಲವೆಂದೂ, ಉಭಯರಾಷ್ಟ್ರಗಳಿಗೆ ಸಮಾಧಾನಕರವಾಗುವ ಸಂಧಾನವು ನಡೆಯುತ್ತಿರುವಾಗ ವರ್ತಮಾನ ಪತ್ರಿಕೆಗಳ ಸ್ವಾತಂತ್ರ್ಯವನ್ನು ಹರಣಮಾಡುವುದು ಅನುಚಿತವಾದುದೆಂದೂ, ಆ ಸಂಪಾದಕರು ವರ್ತಮಾನವನ್ನು ಮಾತ್ರವೇ ಪ್ರಕಟಿಸಿದರೆಂದೂ ಅಭಿಪ್ರಾಯಪಡುವರು.

ಸೂಚನೆ.

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಪ್ರಸಿದ್ಧವಾದ "ಇಂಗ್ಲಿಷ್ ವಿದ್ಯಾಪ್ರಭಾವವೂ, ಗುರುಭಕ್ತಿಯ ಲಕ್ಷಣವೂ" ಎಂಬ ಲೇಖನವನ್ನು ನೋಡಿ ಕೆಲವರು ಸಂಕುಚಿತಮನಸ್ಕರಾಗಿದ್ದಾರೆಂದು ತಿಳಿದುಬರುತ್ತದೆ. ಈಗಿನ ಕಾಲದಲ್ಲಿ ಇಂಗ್ಲೀಷುಭಾಷೆಯನ್ನು ಕಲಿತ ಕೆಲ ಜನ ಕನ್ನಟರು ಪ್ರಾಚೀನಧರ್ಮಕರ್ಮಗಳಿಗೆಲ್ಲಾ ತಿಲಾಂಜಲಿಯನ್ನು ಕೊಡುತ್ತ ಗುರುಭಕ್ತಿಶೂನ್ಯರಾಗಿ ಗುರುವರ್ಗದ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಅಶ್ಲೀಲಬರವಣಿಗೆಗಳನ್ನು ಬರೆಯುತ್ತಿದ್ದಾರೆ. ಇತ್ತೀಚೆಗೆ ಹೊರಟ ಈ ತಂಡದ ಕೆಲಜನ ನಾಸ್ತಿಕರ ಲೇಖನಗಳನ್ನು ನೋಡಿ ಅನೇಕ ಜನ ಗುರುಭಕ್ತರು ಈ ಜನರಿಗೆ ಬುದ್ಧಿಯುತ್ಪನ್ನವಾಗುವ ಹಾಗೆ ಯಾವಾಗಲೂ ಪತ್ರಿಕೆಯಲ್ಲಿ ಲೇಖನಗಳು ಬರುತ್ತಿರಬೇಕೆಂದು ಪ್ರಾರ್ಥಿಸಿಕೊಂಡಿದುದರಿಂದ ಯಥಾರ್ಥಶಾಸ್ತ್ರೀಯಲೇಖನಗಳನ್ನು ಪ್ರಕಟಿಸಬೇಕೆಂದಿದ್ದೇವೆ. ಈ ಲೇಖನಗಳು ಕೇವಲ ಗುರುದ್ರೋಹಿಗಳನ್ನು ಕುರಿತು ಬರೆದವುಗಳಿರುತ್ತವಲ್ಲದೆ ಗುರುಭಕ್ತರನ್ನು ಕುರಿತು ಬರೆಯಲ್ಪಟ್ಟವುಗಳಲ್ಲವೆಂಬ ವಿಷಯವನ್ನು ಸರ್ವರೂ ತಿಳಿಯತಕ್ಕದ್ದು. ಧರ್ಮಭ್ರಷ್ಟರಾಗಿ ಮತಾಚಾರ್ಯರನ್ನು ದೂಷಿಸುತ್ತಿದ್ದ ಗುರುದ್ರೋಹಿಗಳ ವಿಷಯವನ್ನು ಖಂಡಿಸುವದರಲ್ಲಿ ಪ್ರತಿಯೊಬ್ಬರೂ ಕಟಿಬದ್ಧರಾಗಿರಬೇಕೆಂಬುದೇ ನಮ್ಮ ಮುಖ್ಯಾಶಯವಾಗಿದೆ.

ಇಂಗ್ಲೆಂಡಿನ ಸುಪ್ರಸಿದ್ಧ ಲೇಖಕರಾದ ಬ್ರೇಲ್ಸ್ ಫೋರ್ಡ್‌ರವರು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದ ಲೇಖನದ ಸಾರಾಂಶ.

ಭಾರತೀಯರಲ್ಲಿ ಮಹಾತ್ಮಾ ಗಾಂಧಿಯವರ ತರುವಾಯ ಸರ್ವೋತ್ಕೃಷ್ಟವ್ಯಕ್ತಿಯೆನಿಸಿರುವ ಜವಾಹರಲಾಲ್‌ರವರನ್ನು ನಾನು ಕಳೆದವಾರ ಅಲಹಾಬಾದಿನ ಜೈಲಿನಲ್ಲಿ ಸಂದರ್ಶಿಸಿದೆನು. ಈ ರಾಷ್ಟ್ರೀಯ ಕ್ಷೋಭೆಯು ಪ್ರಾರಂಭವಾದಂದಿನಿಂದ ಜವಾಹರಲಾಲರವರು ಎಂಟು ದಿವಸಗಳು ಮಾತ್ರ ಸ್ವಾತಂತ್ರ್ಯಸುಖವನ್ನನುಭವಿಸಿದವರಾಗಿದ್ದಾರೆ. "ಎ" ವರ್ಗದ ಖೈದಿಗಳಿಗೆ ಬಂಧನದಲ್ಲಿರುವುದೊಂದೇ ಶಿಕ್ಷೆಯಲ್ಲದೆ ಮತ್ತಾವ ತೊಂದರೆಯೂ ಇರುವುದಿಲ್ಲ. ಚಳವಳಿಯ ಚಿಹ್ನೆಯನ್ನು ಆ ಚಳವಳಿಯ ಮುಖ್ಯ ಮನುಷ್ಯನಿಂದ ತಿಳಿದುಕೊಳ್ಳಬಹುದು. ಕೆಲವು ವರ್ಷಗಳ ಹಿಂದೆ ನಾನು ಅವರನ್ನು ಸಂದರ್ಶಿಸಿದ್ದರೆ ಇಂಗ್ಲೆಂಡಿನ ವಿಶ್ವವಿದ್ಯಾನಿಲಯದಿಂದ ಹೊರಬಿದ್ದ ವ್ಯಕ್ತಿಯಂತೆ ಪ್ರಾಯಶಃ ಪರದೇಶೀಯರ ವೇಷದಲ್ಲಿ ಅವರನ್ನು ಕಾಣಬಹುದಾಗಿತ್ತು. ಈಗ ಇವರು ಕಾಂಗ್ರೆಸ್ಸಿನ ಸ್ವಯಂಸೇವಕರು ಧರಿಸುವ ಕೈಮಗ್ಗದ ವಸ್ತ್ರಗಳನ್ನು ಧರಿಸುವರು. ಕಪಿಗಳಂತೆ ಪಾಶ್ಚಿಮಾತ್ಯರ ಅನುಕರಣಮಾಡುವುದು ಇವರಿಗೆ ವಾಕರಿಕೆ ಬರುತ್ತದೆ. ಕೊರಗೆ ಸ್ವಾಭಾವಿಕವಾಗಿರುವ ವಿನಯವೂ, ಸಭ್ಯವರ್ತನವೂ ಇವರನ್ನು ನೋಡಿದ ಕೂಡಲೇ ಮನವರಿಕೆಯಾಗುವವು. ಗಂಭೀರವೂ, ಶಾಂತವೂ, ವಿಶಾಲವೂ ಆದ ಸಾಗರಮಧ್ಯದಲ್ಲಿ ಬಡಬಾಗ್ನಿಯು ಅಡಕವಾಗಿರುವಂತೆ ಜವಾಹರಲಾಲರವರ ಹೃದಯದಲ್ಲಿ ಸ್ವದೇಶಾಭಿಮಾನವೆಂಬ ಅಗ್ನಿಯು ಪ್ರಜ್ವಲಿಸಿರುವುದೆಂದು ಅವರನ್ನು ನೋಡಿದವರಿಗೆ ಸ್ಪಷ್ಟವಾಗುವದು. ಅವರು ಅಪ್ರತಿಹತ ಧೈರ್ಯದಿಂದ ತಮ್ಮ ಮುಂದಿನ ಕಾರ್ಯವನ್ನು ಯೋಚಿಸತಕ್ಕವರಲ್ಲದೆ ಯುಕ್ತಿ ಸಮ್ಮತವಾಗಿ ದೃಢಸಂಕಲ್ಪದಿಂದ ಕಾರ್ಯಕ್ರಮವನ್ನಾರಂಭಿಸತಕ್ಕವರಾಗಿದ್ದಾರೆ. [illegible]

[illegible]

ಸಾರ್ವಜನಿಕ ಖಾತೆ (Public dept) [illegible]

[illegible]

ಇದರಿಂದ ಸರಕಾರದವರ ಮುಖ್ಯ ಉತ್ಪನ್ನಕ್ಕೆ ಬಾಧೆ ಬರುತ್ತದೆ. ಒಂದು ವಿಷಯದಲ್ಲಿ ಮಾತ್ರ ನಾನು ಧೈರ್ಯದಿಂದ ಭವಿಷ್ಯವನ್ನು ಹೇಳಬಲ್ಲೆನು. ಅದೇನೆಂದರೆ ಈ ಸಂಗ್ರಾಮದಿಂದ ಪ್ರಾದುರ್ಭವಿಸುವ ಭರತವರ್ಷವು ಅಸಂಖ್ಯ ಕಡವಾನಗಳ ಜಡತ್ವವನ್ನು ತಳ್ಳಿ ವಿಕಾಸವಾಗುವುದೆಂದೇ ನನ್ನ ಭವಿಷ್ಯ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೇ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ತೇಜಿತ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಗೆ ಸಾಫಾಗಿ ಹಸಿವು, ಶಕ್ತಿ ತನ್ನ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[19]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಗ್ಗದ ಕೆರಗು ಅಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತ ಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ಪಾಮಿರಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ
ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿ [illegible]

[illegible]

ಶಿಲಾಜಿತ—[illegible]

ಕಸ್ತೂರಿ—[illegible]

ಗೃಹಮಾತೆಯು—[illegible]

ಹಿಮಾಲಯನ್ ಬಾಮ್—[illegible]

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

[illegible]

ವ್ಯವಸ್ಥಾಪಕರು,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿಣತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಬಂಧ [illegible]

[illegible] 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲಿ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[34] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ವದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸಿದರೆ, ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತನ್ನ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, [illegible]

[illegible]

ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸಕಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[20]

ಪತ್ತೆ :—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೈಪಡುವವರಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅದುರಿಸವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿರಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚರು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[18] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಷಟ್ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ ಒಳಗಿನ ರೋಗಗಳು,

ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[21] ಪೋ. ಬಾ. ೫೧೦. ಮದರಾಸು.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀಸ್ರೀರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ವೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಸಿದ್ಧಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಚ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! ಸಾಲವು ದೊರಕುವುದು !! ಅಪೂರ್ವಲಾಭ !!!

ದಿ ಪಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—ದೇಹಲಿ.

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, ಮೈಸೂರು.

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅನುಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರಿಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (2)

ಮೆ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ :: ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೫ನೇ ಡಿಶಂಬರ್ ೧೯೩೦ [ಸಂಚಿಕೆ ೩೩

ಕಲ್ಕತ್ತಾದಲ್ಲಿ ಬೆಂಗಾಲದ ಕಾರಾಗೃಹಗಳ ಇನ್‌ಸ್ಪೆಕ್ಟರ್ ಜನರಲ್‌ರವರು ಗುಂಡಿ ನೇಟಿನಿಂದ ಮಡಿದರು.

ಇದೇ ತಿಂಗಳು 8ನೆಯ ತಾರೀಖಿನ ದಿವಸ ಮೂವರು ಬೆಂಗಾಲಿ ಯುವಕರು ಬೆಂಗಾಲದ ಕಾರಾಗೃಹಗಳ ಇನ್‌ಸ್ಪೆಕ್ಟರ್ ಜನರಲ್ ಮಿ|| ಸಿಂಪ್ಸನ್‌ರವರ ಆಫೀಸಿನೊಳಗೆ ಬಲಾತ್ಕಾರವಾಗಿ ನುಗ್ಗಿ ಅವರನ್ನು ಗುಂಡಿನಿಂದ ಹೊಡೆಯಲು ಕೂಡಲೇ ಅವರು ಮೃತಪಟ್ಟರು. ಅನಂತರ ಫೈನಾನ್ಸ್ ಮೆಂಬರ್ ಆ|| ಮಿ|| ಎ. ಮಾರ್ ಎಂಬವರನ್ನು ಹೊಡೆಯಲು ಪ್ರಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಇದಾದಮೇಲೆ ಒಬ್ಬ ಅಮೇರಿಕಾದೇಶದ ಪಾದ್ರಿಗಳಾದ ಮಿ|| ಇ. ಎಸ್. ಜಾನ್ಸನ್‌ರವರ ಮೇಲೆ ಗುಂಡುಹಾರಿಸಿದರು. ಆದರೆ ಅದು ದೈವವಶಾತ್ ತಪ್ಪಿಹೋಯಿತು. ಅನಂತರ ಜ್ಯುಡಿಷಿಯಲ್ ಸೆಕ್ರೆಟರಿ ಮಿ|| ನೆಲ್ಸನ್‌ರವರ ಆಫೀಸಿಗೆ ನುಗ್ಗಿ ಅವರ ತೊಡೆಗೆ ಗುಂಡಿನಿಂದ ಹೊಡೆದರು. ಆ ಯುವಕರಲ್ಲಿ ಒಬ್ಬನಾದ ಮಿ|| ಬಿ. ಎನ್. ಡಿ. ಎಂಬವನು ವಿಷಪಾನಮಾಡಿ ಆತ್ಮಹತ್ಯೆಮಾಡಿಕೊಂಡನು. ಇವನು ಢಾಕಾಜಿಲ್ಲೆಗೆ ಸೇರಿದವನೆಂದೂ ಎಂ. ಎಸ್. ಸಿ. ಪರೀಕ್ಷೆ ಪ್ಯಾಸ್ ಮಾಡಿದವನೆಂದೂ ತಿಳಿದುಬರುತ್ತದೆ. ಇನ್ನಿಬ್ಬರು ತಾವೇ ಗುಂಡಿನಿಂದ ಹೊಡೆದುಕೊಂಡದ್ದರಿಂದ ಅಪಾಯಸ್ಥಿತಿಯಲ್ಲಿದ್ದು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿರುವರು. ಈ ಪೈಕಿ ಇನ್ನೊಬ್ಬನ ಹೆಸರು ಬಿನಾಯಕಕೃಷ್ಣಬೋಸ್ ಎಂದಿರುತ್ತದೆ. ಇವನು ಬೆಂಗಾಲದ ಪೋಲೀಸ್ ಇನ್‌ಸ್ಪೆಕ್ಟರ್‌ಜನರಲ್ ಮಿ|| ಲೋಮನ್‌ರವರನ್ನು ಕೊಂದವನೂ ಸಹ ತಾನೇ ಎಂದು ತನ್ನ ಮರಣಶಾಸನದಲ್ಲಿ ಹೇಳಿರುವನು. ಮತ್ತೊಬ್ಬನು ದಿನೇಶಗುಪ್ತ. ಇವನು ಢಾಕಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಂತೆ! ಇವರು ಗುಂಡುಹಾರಿಸುವಾಗ "ವಂದೇಮಾತರಂ" ಎಂದು ಕೂಗುತ್ತಿದ್ದರಂತೆ! ಮಿ|| ಸಿಂಪ್ಸನ್‌ರವರಿಗೆ ಒಬ್ಬನೇ ಒಬ್ಬ ಮಗನೂ ಹೆಂಡತಿಯೂ ಇದ್ದು ಅವರು ಇಂಗ್ಲೆಂಡಿನಲ್ಲಿರುವರು. 9 ನೆಯ ತಾರೀಖಿನ ದಿವಸ ಮಿ|| ಸಿಂಪ್ಸನ್‌ರವರಿಗೆ ಭವಾನಿಪುರದ ಐರೋಪ್ಯರ ಸ್ಮಶಾನದಲ್ಲಿ ಸೈನಿಕರಿಗೆ ಮಾಡಲ್ಪಡುವ ಉತ್ತರಕ್ರಿಯೆಗಳನ್ನು ಮಾಡಿದರು. ಆಗ ವೈಸರಾಯರ ಮತ್ತು ಗೌರ್ನರವರ ಪ್ರತಿನಿಧಿಗಳೂ, ಎಲ್ಲಾ ದೊಡ್ಡ ಸರ್ಕಾರಿ ಅಧಿಕಾರಿಗಳೂ ಕೆಲವು ಹೈಕೋರ್ಟು ಜಡ್ಜಿಗಳೂ ಹಾಜರಿದ್ದರು.

ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಕ್ಕೆ ಸರ್ಕಾರದವರು ಕೊಡುತ್ತಿದ್ದ ಮೂರುಲಕ್ಷ ರೂಪಾಯಿಗಳ ಗ್ರ್ಯಾಂಟನ್ನು ನಿಲ್ಲಿಸಿದರು.

ಲಿಬರ್ಟಿ ಪತ್ರಿಕೆಯು ಇದೇ ತಿಂಗಳು 4 ನೆಯ ತಾರೀಖಿನ ದಿವಸ ಈ ಕೆಳಗೆ ವಿವರಿಸಿರುವ ವಿಷಯವನ್ನು ಪ್ರಸಿದ್ಧಪಡಿಸಿರುತ್ತದೆ.

ಇಂಡಿಯಾ ಸರ್ಕಾರದವರು ವಿಶ್ವವಿದ್ಯಾನಿಲಯಕ್ಕೆ ಕೊಡುತ್ತಿದ್ದ ಗ್ರ್ಯಾಂಟನ್ನು ನಿಲ್ಲಿಸಿಬಿಟ್ಟರು. ಇದು ಅನಿರೀಕ್ಷಿತವಾದುದಲ್ಲ. ಕೆಲವು ವಾರಗಳ ಕೆಳಗೆ ಇಂಡಿಯಾ ಸರ್ಕಾರದವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಕೆಳಗೆ ಕಂಡುಬರುವ ಷರತ್ತುಗಳನ್ನೊಳಗೊಂಡ ಕೊನೆಯ ನಿರೂಪವನ್ನು ಕಳುಹಿಸಿದರು.

1. ಸದ್ಯಃ ಪ್ರಚಲಿತವಾಗಿರುವ ರಾಷ್ಟ್ರೀಯಚಳವಳಿಯಲ್ಲಿ ಭಾಗಿಗಳಾಗಿರುವ ಮತ್ತು ಭಾಗಿಗಳಾಗುವ ಪ್ರೊಫೇಸರ್ ಮೊದಲಾದವನ್ನು ವಿಶ್ವವಿದ್ಯಾನಿಲಯದ ಲಿಸ್ಟಿನಿಂದ ತೆಗೆದುಹಾಕಬೇಕು.

2. ರಾಷ್ಟ್ರೀಯ ಮನೋವೃತ್ತಿಯುಳ್ಳ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸೇರಿಸಬಾರದು.

3. ಚಳವಳಿಯದೆಸೆಯಿಂದ ಶಿಕ್ಷಿಸಲ್ಪಟ್ಟಿರುವ ವಿದ್ಯಾರ್ಥಿಗಳನ್ನು ವಜಾಮಾಡಬೇಕು.

ಇಂಡಿಯಾ ಸರ್ಕಾರದವರು ಗ್ರ್ಯಾಂಟನ್ನು ಕೊಡುವುದೂ, ಬಿಡುವುದೂ ಮೇಲ್ಕಂಡ ಷರತ್ತುಗಳ ಪಾಲಿಸಿಯನ್ನವಲಂಬಿಸಿದೆ ಎಂಬ ಅರ್ಥವನ್ನು ಸೂಚಿಸುವ ಪತ್ರವನ್ನು ಬರೆದರು. ಈ ಪತ್ರವು ತಲುಪಿದೊಡನೆಯೇ ಪ್ರಿನ್ಸಿಪಲ್ ಮಿ|| ಧ್ರುವರವರು, ಪ್ರೊ|| ಎಸ್. ಸಿ. ಡಿ. ಯವರೊಂದಿಗೆ ವೈಸ್‌ಛಾನ್ಸಲರಾದ ಪಂಡಿತ ಮದನಮೋಹನಮಾಲವೀಯರ ಸಂಗಡ ಆಲೋಚಿಸುವುದಕ್ಕೋಸ್ಕರ ನೈನಿಜೈಲಿಗೆ ಹೋದರು. ಪಂಡಿತ ಮಹೋದಯರು ಸರ್ಕಾರದವರಿಗೆ ಈ ವಿಷಯದಲ್ಲಿ ಮುಚ್ಚಳಿಕೆಯನ್ನು ಬರೆದುಕೊಡಲು ಇಷ್ಟಪಟ್ಟ ಹಾಗೆ ತೋರುವುದಿಲ್ಲ. ಅದುದರಿಂದ ಸದರಿ ಮೆಂಬರರು ರಜಾದಲ್ಲಿರುವಾಗ ಚಳವಳಿಯಲ್ಲಿ ಭಾಗಿಗಳಾಗಿರುವುದರಿಂದ ಏನೂ ಮಾಡಲು ಸಾಧ್ಯವಿಲ್ಲವೆಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಸರ್ಕಾರದವರಿಗೆ ಉತ್ತರವನ್ನಿತ್ತರು. ವಿಶ್ವವಿದ್ಯಾನಿಲಯದ ಮೆಂಬರರೂ, ಉಪಾಧ್ಯಾಯರೂ, ಪ್ರೊಫೇಸರರೂ ಸಭೆ ಸೇರಿ ವಿಶ್ವವಿದ್ಯಾನಿಲಯದ ಆರ್ಥಿಕಸ್ಥಿತಿಯು ಸುಧಾರಿಸುವವರೆಗೂ ತಾವು ಕಡಿಮೆ ಪ್ರತಿಫಲವನ್ನು ತೆಗೆದುಕೊಂಡು ಕೆಲಸಮಾಡಲು ಒಪ್ಪಿರುವರೆಂದೂ, ಕೆಲವರು ಅರ್ಧ ಸಂಬಳಗಳ ಮೇಲೂ ಸಹ ಕೆಲಸಮಾಡಲೊಪ್ಪಿರುವರೆಂದೂ ತಿಳಿದುಬರುತ್ತದೆ.

ಸಸೂನ್ ಗಿರಣಿಗಳ ಒಡಂಬಡಿಕೆ.

ಪರದೇಶೀಯ ವಸ್ತ್ರಗಳ ಬಹಿಷ್ಕಾರ

ಬೊಂಬಾಯಿಯ ಸಸೂನ್ ಗಿರಣಿಗಳಿಗೂ ಕಾಂಗ್ರೆಸ್ಸಿನವರಿಗೂ ಈ ಕೆಳಗೆ ಕಾಣಿಸಿರುವಂತೆ [illegible]ಡಿಕೆಗಳಾದವು.

೧. ಹಿಂದೂಸ್ಥಾನದ ಜನರು ರಾಷ್ಟ್ರೀಯ ಬೇಡಿಕೆಗಳ ಬಗ್ಗೆ ನಮಗೆ ಸಂಪೂರ್ಣಸಹಾನುಭೂತಿಯುಂಟು. ಸಾಧ್ಯವಾದಷ್ಟು ಮಟ್ಟಿಗೆ ಪರದೇಶದ ಸಾಮಾನುಗಳನ್ನು ಬಿಡು ಸ್ವತಂತ್ರವಾಗಿ ಕೈಗಾರಿಕೆಗಳನ್ನು ಹೆಚ್ಚಿಸುವ ವಿಷಯವಾಗಿ ನಮ್ಮ ಸಹಾನುಭೂತಿಯು ರುವುದು. ಎಲ್ಲಾ ವಿಷಯಗಳಲ್ಲಿಯೂ ಹಿಂದೂಸ್ಥಾನದ ಹಿತವನ್ನೇ ನಮ್ಮ ಗುರಿಯಾಗಿಟ್ಟುಕೊಂಡು ಅದರಂತೆ ನಡೆಯುವೆವು.

೨. ನಮ್ಮ ಗಿರಣಿಗಳಲ್ಲಿ ತಯಾರಾದ ಬಟ್ಟೆಗಳನ್ನು ಖಾದಿ ಎಂದೂ ಮಾರುವುದಿಲ್ಲ. ಈಗಾಗಲೇ ಕಂಟ್ರಾಕ್ಟು ಮಾಡಿಕೊಂಡಿರುವ ಪ್ರಕಾರ ಕೆಲವು ಬಟ್ಟೆಗಳು ಮಾತ್ರ ಮಾರಲ್ಪಡುವವು.

೩. ಈಗ ನಮ್ಮ ಹಾಕಿರುವ ಏಳು ಗಿರಣಿಗಳಲ್ಲಿ ಯಾವುದರಲ್ಲಿಯೂ ಶೇಕಡಾ ೭೫ ರಷ್ಟು ಬಂಡವಾಳದ ಹಣವು ಹಿಂದೀಯರದಲ್ಲ. ಆದರೆ ನೂರಕ್ಕೆ ನೂರರಷ್ಟು ಹಿಂದೀಯರೇ ಷೇರುಗಳನ್ನು ತೆಗೆದುಕೊಳ್ಳುವುದರಲ್ಲಿ ಯಾವ ಅಡಚಣೆಯೂ ಇರುವುದಿಲ್ಲ.

೪. ಡೈರೆಕ್ಟರ್ ಸಂಖೆಯಲ್ಲಿ ಮೂರನೆಯ ಎರಡು ಭಾಗವು ಹಿಂದೀಯರಾಗಿರಬೇಕೆಂಬ ಅಂಶವನ್ನು ನಾವು ಒಪ್ಪಿಕೊಳ್ಳುವೆವು.

೫. ಗಿರಣಿಗಳಲ್ಲಿ ಉದ್ಯೋಗಗಳು ಹಿಂದೀಯರಿಗೆ ಮಾತ್ರ ಕೊಡಲ್ಪಡುವುವು.

೬. ಸಾಧ್ಯವಾದಷ್ಟು ಮಟ್ಟಿಗೆ ಗಿರಣಿಗಳು ಹಿಂದುಸ್ಥಾನದಲ್ಲೇ ಆದ ಪದಾರ್ಥಗಳನ್ನು ಕೊಳ್ಳುವವು. ಮತ್ತು ನಮ್ಮ ವ್ಯವಹಾರಗಳನ್ನು ಹಿಂದೀ ಬ್ಯಾಂಕುಗಳಲ್ಲಿಯೂ, ಹಿಂದೀ ಜೀವವಿಮೆಸಂಘಗಳಲ್ಲಿಯೂ ಮತ್ತು ಹಿಂದೀ ಹಡಗುಗಳ ಕಂಪನಿಗಳಲ್ಲಿಯೂ ನಡೆಯಿಸುವೆವು.

೭. ಗಿರಣಿಗಳು ಪರದೇಶದ ದಾರಗಳಿಗೆ ಬಣ್ಣ ಹಾಕುವುದು ಅಥವಾ ಚಲುವೆ ಮಾಡುವುದು ಪರದೇಶೀ ದಾರಗಳಿಂದ ತಯಾರಾದ ಬಟ್ಟೆಗಳನ್ನು ಚಲುವೆಮಾಡುವುದು ಮತ್ತು ಬಣ್ಣಹಾಕುವುದು ಈ ಮೇಲ್ಕಂಡ ಕಾರ್ಯಗಳಿಗೆ ಕೈಹಾಕುವುದಿಲ್ಲ.

೮. ಗಿರಣಿಗಳು ಪರದೇಶದ ರೇಷ್ಮೆಯನ್ನೂ ಮತ್ತು ಪರದೇಶದ ಮರ್ಸ್ರೈಸ್ ದಾರವನ್ನೂ ಉಪಯೋಗಿಸುವುದಿಲ್ಲ.

೯. ಈ ಗಿರಣಿಗಳಲ್ಲಿ ತಯಾರಾದ ಬಟ್ಟೆಗಳ ಥಾನುಗಳ ಮೇಲೆ ಗಿರಣಿ ಮಾಲಿಕರ ಸಂಘದ ಗುರುತು ಹಾಕಲ್ಪಡುವುದು.

೧೦. ಪರದೇಶೀ ವಸ್ತ್ರಗಳನ್ನು ತರಿಸುವುದಿಲ್ಲ. ಪರದೇಶೀ ದಾರದ ವ್ಯಾಪಾರಮಾಡುವುದಿಲ್ಲ. ಒಂದು ವೇಳೆ ನಮ್ಮ ರೀತಿನೀತಿಗಳಲ್ಲಿ ಬದಲಾವಣೆಗಳನ್ನುಂಟುಮಾಡಬೇಕಾದರೆ ೬ ತಿಂಗಳ ಪೂರ್ವಭಾವಿಯಾಗಿಯೇ ಗಿರಣಿಮಾಲಿಕರ ಸಂಘಕ್ಕೆ ತಿಳಿಸುತ್ತೇವೆ.

೧೧. ರಾಷ್ಟ್ರೀಯ ಚಳುವಳಿಯ ದೆಸೆಯಿಂದ ಜನರಲ್ಲಿ ಉಂಟಾಗಿರುವ ಸ್ವದೇಶೀ ಭಾವನೆಯನ್ನು ನಾವು ದುರುಪಯೋಗಪಡಿಸಿಕೊಳ್ಳುವುದಿಲ್ಲ. ನಮ್ಮ ಗಿರಣಿಗಳಲ್ಲಿ ತಯಾರಾದ ಬಟ್ಟೆಗಳನ್ನು ನ್ಯಾಯವಾದ ಬೆಲೆಗೆ ಮಾರುತ್ತೇವೆ. ಮತ್ತು ಈಗಿರುವ ಬೆಲೆಗಿಂತ ಅಧಿಕವಾಗಿ ಮಾರುವುದಿಲ್ಲ.

ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಅಧಿಕಾರಸ್ಥಾನದಿಂದ

ಸಮಸ್ತ ವೀರಶೈವಮಂಡಳಿಗೆ ಪ್ರಕಟಪಡಿಸುವದೇನೆಂದರೆ—ಶ್ರೀ ಜಗದ್ಗುರುಗಳವರ ಸವಾರಿಯು ತಾರೀಖು 15—12—30 ಕ್ಕೆ ಬಾಣಾವರಕ್ಕೆ ಮುಕ್ಕಾಂ ಮಾಡುವುದರಿಂದ ದರ್ಶನಾಪೇಕ್ಷಿಗಳು ಬಾಣಾವರ ಮುಕ್ಕಾಮಿಗೆ ಬರತಕ್ಕದ್ದು. ಪತ್ರವ್ಯವಹಾರಗಳನ್ನು ಬಾಣಾವರಕ್ಕೆ ಮಾಡತಕ್ಕದ್ದು.

ಮುಕ್ಕಾಂ ಅರಸೀಕೆರೆ.

ದಕ್ಷಿಣಾಫ್ರಿಕೆಯ ಸರ್ ಅಬೋಬೇಟ್ ಎಂಬ ವಜ್ರಗಳ ವ್ಯಾಪಾರಿಯು ಲಂಡನ್ನಿನಲ್ಲಿ ಇದೇ ತಿಂಗಳು 8 ನೆಯ ತಾರೀಖಿನ ದಿವಸ ಮೃತಪಟ್ಟನು. ಇವನು ಲಂಡನ್ನಿನ ಎಡ್ವರ್ಡ್ ಆಸ್ಪತ್ರೆಗೆ ಸುಮಾರು ಏಳು ಲಕ್ಷ ರೂಪಾಯಿಗಳನ್ನೂ, ವೈದ್ಯಶೋಧಕ ಸಂಸ್ಥೆಗೆ 22 ಲಕ್ಷ ರೂ. ಗಳನ್ನೂ ದಾನಮಾಡಿರುವನಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದ ಭಾಷಣದ ಸಾರಾಂಶ.

ಟೆಹರಿ ಮಹಾರಾಜರವರ ಅಸಿಸ್ಟೆಂಟ್ ದಿವಾನರಾದ ಪಂ|| ವಿ. ಪಿ. ಗೈರೋಲಾಸಾಹೇಬರು ಉಖಾಮಠಕ್ಕೆ ಲೆಕ್ಕಪತ್ರಗಳ ಪರೀಕ್ಷೆಗಾಗಿ ಬಂದ ಸಮಯದಲ್ಲಿ ಶ್ರೀ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಆ ಕಾಲದಲ್ಲಿ ಸನ್ನಿಧಿಯವರು ಈ ಕೆಳಗೆ ಕಂಡಂತೆ ಭಾಷಣಮಾಡಿದರು.

ಅಯ್ಯಾ ಸಭಿಕರೇ! ಈ ದಿನಸ ಈ ಸಂಸ್ಥಾನದ ಲೆಕ್ಕಪತ್ರಗಳನ್ನು ತನಿಖೆಮಾಡುವದಕ್ಕಾಗಿ ದಿವಾನರು ಆಗಮಿಸಿರುವುದು ಈ ಪ್ರಾಂತದ ಭಕ್ತಾದಿಗಳಿಗೆಲ್ಲಾ ಆನಂದವನ್ನುಂಟುಮಾಡಿದೆ. "ಯಥಾರಾಜಾ ತಥಾಪ್ರಜಾಃ" ಎಂಬ ನ್ಯಾಯದಂತೆ ರಾಜರಂತೆ ಪ್ರಜೆಗಳು ವರ್ತಿಸುವುದು ಧರ್ಮವೆಂದು ಹೇಳುವ ಮಾತು ಸುಳ್ಳಲ್ಲ! ಈ ಕೇದಾರಕ್ಷೇತ್ರವು ಮತ್ತು ಜಗದ್ಗುರು ಪೀಠವು ಸನಾತನಕಾಲದಿಂದ ಈ ಪ್ರದೇಶದಲ್ಲಿ ಕಂಗೊಳಿಸುತ್ತಿರುವದು. ಇದು ಹಿಂದೂ ಮಹಾರಾಜರ ವ್ಯವಸ್ಥೆಯಲ್ಲಿರುವದರಿಂದ ಇದರ ಗೌರವವು ದಿನೇದಿನೇ ಹೆಚ್ಚುತ್ತಿರುವುದು. ಇದರಂತೆ ಪ್ರತಿಯೊಬ್ಬ ರಾಜರೂ ತಮ್ಮ ತಮ್ಮ ರಾಜ್ಯದಲ್ಲಿರತಕ್ಕ ಮಠಮಂದಿರಾದಿಗಳ ರಕ್ಷಣೆಗಾಗಿ ವ್ಯವಸ್ಥೆಯನ್ನಿಟ್ಟರೆ ಪವಿತ್ರ ಸನಾತನ ಧರ್ಮಗಳು ಸುರಕ್ಷಿತವಾಗಿರುವವು. ಆದರೆ ಹಿಂದೂದೇಶದ ದುರ್ದೈವದಿಂದ ಸದ್ಯಃ ವಿಪರೀತಕಾಲಗಳು ಕಂಡು ಬರಹತ್ತಿರುವವು. ಹಿಂದು ... ಅನೇಕ ಜನ ರಾಜರು ತಮ್ಮ ಪವಿತ್ರಧರ್ಮವನ್ನು [illegible]

ವರ್ತಮಾನಸಂಗ್ರಹ.

ಸರ್ದಾರ ವಲ್ಲಭಭಾಯಿ ಪಟೇಲರವರು ಶಿಕ್ಷಿಸಲ್ಪಟ್ಟರೆ ಮಿ|| ಕೆ. ಎಂ. ಮುನ್ಷಿಯವರು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ವಹಿಸುವವರಾಗಿದ್ದಾರೆ.

ಅಮೃತಸರದಲ್ಲಿ ವಿದೇಶೀ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ್ದಕ್ಕೋಸ್ಕರ 30 ಜನ [illegible]

ಬೊಂಬಾಯಿಯ ಕ್ರೈಸ್ತರಾಷ್ಟ್ರೀಯ ಸಂಘದ ... [illegible]

ನಾರ್ಲಿಮೆಂಟಿನ ಮೆಂಬರರಲ್ಲಿ ವಿಶೇಷ ಜನರು ಭಾರತೀಯರಿಗೆ ಡೊಮಿನಿಯನ್ ಸ್ಟೇಟಸ್ ಕೊಡುವುದನ್ನು ವಿರೋಧಿಸುವವರಿದ್ದಾರೆ. ಇಂಗ್ಲೀಷರು ಹಿಂದೂದೇಶದಲ್ಲಿ ತಮಗಿರುವ ಮುಖ್ಯವಾದ ಅಧಿಕಾರಗಳನ್ನು ಎಂದಿಗೂ ಬಿಟ್ಟುಕೊಡಲಾರರು. ಹಾಗೆ ಬಿಟ್ಟುಕೊಟ್ಟರೆ ಬ್ರಿಟಿಷ್ ಸಾಮ್ರಾಜ್ಯದ ಅವನತಿಯ ಕಾಲವು ಸಮೀಪಿಸಿತೆಂದು ಭಾವಿಸಬೇಕಾಗದೆ. ಭಾರತೀಯರಿಗೆ ಇನ್ನು ಮುಂದೆ ಹಕ್ಕುಬಾಧ್ಯತೆಗಳನ್ನು ಕೊಡುವುದಕ್ಕೂ, ಕೊಟ್ಟಿರುವ ಹಕ್ಕುಗಳನ್ನು ಕಿತ್ತುಕೊಳ್ಳುವುದಕ್ಕೂ ಪಾರ್ಲಿಮೆಂಟಿಗೆ ಪೂರ್ಣಸ್ವಾತಂತ್ರ್ಯವಿದೆ. ಈಗಿನ ಸಂಸ್ಥಾನವು ಯೂನಿಯನ್ ಜಾಕ್ (ಬ್ರಿಟಿಷರ ಧ್ವಜ)ವನ್ನು ಸುಟ್ಟ ಲಾಹೋರಿನ ಕಾಂಗ್ರೆಸ್ಸನ್ನು ಜರುಗಿಸಿದ ಮುಖಂಡರನ್ನು ಗಡೀಪಾರುಮಾಡಬೇಕಾಗಿತ್ತು. ಮಿ|| ಗಾಂಧಿಯನ್ನು ಕಾಯಿದೆ ಭಂಗಮಾಡಿದಕೂಡಲೇ ದಸ್ತಗಿರಿ ಮಾಡಿ ವಿಚಾರಣೆ ನಡೆಯಿಸಿ ಶಿಕ್ಷಿಸಬೇಕಾಗಿತ್ತು. ಗಾಂಧಿಯ ತತ್ವವನ್ನು ಜೋರಿನಿಂದ ಬಗ್ಗು ಬಡಿಯಬೇಕು. ಹುಲಿಯನ್ನು ಬೆಕ್ಕಿನ ಮಾಂಸದಿಂದ ಪ್ರೀತಿಸಲು ಪ್ರಯತ್ನಿಸುವುದು ನಿಷ್ಪ್ರಯೋಜನವು" ಎಂದು ಭಾಷಣಮಾಡಿದರು. ಅವಿಚಾರಪೂರಿತವಾದ ಇವರೀ ತರಹದ ಭಾಷಣವನ್ನು ಕೇಳಿ ಮುಖ್ಯಮಂತ್ರಿಗಳಾದ ಮಿ|| ಮ್ಯಾಕ್ಡೋನಾಲ್ಡರವರು ಸಿಟ್ಟಿಗೆದ್ದು ಇನ್ನು ಮುಂದೆ ಈ ತರಹದ ಭಾಷಣಗಳನ್ನು ಮಾಡಿದರೆ ತಕ್ಕ ಬಂದೋಬಸ್ತು ಮಾಡಲಾದೀತೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಸರಿಯಾದ ಎಚ್ಚರಿಕೆ!

ತೀರ್ಥಹಳ್ಳಿ ತಾಲ್ಲೋಕು ಭಾಂಡ್ಯ.

ಶ್ರೀಮಂತ ರುದ್ರಪ್ಪಗೌಡರವರು ತಮ್ಮ ಜಾತಕರೀತ್ಯಾ ಬುಧದೆಸೆಯ ಅಂತ್ಯಕಾಲದಲ್ಲೊದಗಿದ ಕಷ್ಟನಿವಾರಣೆಗಾಗಿ ಇದೇ ಪ್ರಮೋದೂತನಾಮಸಂವತ್ಸರದ ಕಾರ್ತಿಕ ಬ|| ೧೦ ದಿವಸ ಶ್ರೀಮನ್ಮಹಾಮಳಲಿಮಠದ ಸ್ಥಿರಪಟ್ಟಾಧ್ಯಕ್ಷ ಶ್ರೀ ಗುರು ನಾಗಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ತಮ್ಮ ಗೃಹಕ್ಕೆ ದಯಮಾಡಿಸಿಕೊಂಡು ಬಂದು ಇದೇ ಕಾರ್ತಿಕ ಬ|| ೧೧ ಮಿತಿಯಿಂದ ಬಹುಳ ೩೦ ಮಿತಿ ವರೆಗೆ ಮೃತ್ಯುಂಜಯ ಪಾರಾಯಣವು ಜಪವು ನವಗ್ರಹಪೂಜಾ ಜಪವೂ ವಿಧ್ಯುಕ್ತಪ್ರಕಾರ ಶ್ರೀಗಳವರ ಪಾದಪೂಜೆಯು ನಡೆಯಿಸಲ್ಪಟ್ಟು 30 ನೆಯ ಗುರುವಾರ ನವಗ್ರಹದಾನವು ಕೊಡಲ್ಪಟ್ಟಿತು. ಇದೇ ಪ್ರಮೋದೂತ ಸಂವತ್ಸರದ ಮಾರ್ಗಶಿರ ಶು|| ೧ ಮಿತಿ ಶುಕ್ರವಾರ ರುದ್ರಾಭಿಷೇಕವೂ, ಶ್ರೀಗಳ ಪಾದಪೂಜೆಯೂ ವಿಧ್ಯುಕ್ತಪ್ರಕಾರ ವೇ|| ನಂಜುಂಡಶಾಸ್ತ್ರಿಗಳವರಿಂದಲೂ ಕಾನುಗೋಡುಮಠದ [illegible]

ನಾಗಪ್ಪಗೌಡ, ಜಳಪ್ಪಿಲು.

ದುಃಖವಾರ್ತೆ.

[illegible]

ಮುಲ್ಲಯ್ಯ ಬ್ರಹ್ಮಪ್ಪ ಕಿಂಕರ ಹೋಟಿಗಿ.

B. Laxminaranappa,
D. B. Member, Mysore.

ನಮಃ ಪಂಚಜಗದ್ಗುರುಭ್ಯಃ.

ಕಾರ್ತಿಕಮಹೋತ್ಸವ.

ಹೋಟಗಿ.

[illegible]

ಅರಕಲಗೂಡು ತಾಲ್ಲೂಕು ರಾಮನಾಥಪುರದ ಸುಬ್ರಹ್ಮಣ್ಯೇಶ್ವರಸ್ವಾಮಿಯ ರಥೋತ್ಸವದ ವಿಚಾರ.

[illegible]

ಸಮಾಜ ಹಿತಚಿಂತಕ

ಗುರುಭಕ್ತಶಿಖಾಮಣಿಗಳ ಸಂಚಾರ.

ಅರಸೀಕೆರೆ ತಾ|| ದಿಬ್ಬೂರು ಗ್ರಾಮದ ಸ್ಕೂಲ್ ಮಾಸ್ತರವರಾದ ಮ|| ರಾ|| ಎ. ಚನ್ನಪ್ಪನವರು ಕ್ರಿಸ್‌ಮಸ್ ರಜಾಕಾಲದಲ್ಲಿ ಪಂಚಾಚಾರ್ಯಪ್ರಭಾ ಪತ್ರಿಕೆಯ ಹಾಗೂ ಉದಾತ್ತ ಮತ [illegible] ...ಗಾಗಿ ಧರ್ಮಗ್ರಂಥಗಳನ್ನು ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಸದಾ ಗುರುಸೇವೆಯಲ್ಲಿಯೇ ಲೋಲುಪರಾಗಿರುವ ಈ ಗುರುಭಕ್ತಶಿಖಾಮಣಿಗಳಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಸ್ವೀಕಾರ.

ಬೆಳಗಾಂವ ಡಿಸ್ಟ್ರಿಕ್ಟ್ ಘೋಡಗೇರಿಗ್ರಾಮದಲ್ಲಿ ಎರಡು ಪ್ರಾಚೀನ ಶಿವಾಲಯಗಳನ್ನು ಜೀರ್ಣೋದ್ಧಾರಮಾಡಿದ ಸಮಯದಲ್ಲಿಯೂ ಹಾಗೂ ಘೋಡಗೇರಿಯಿಂದ ಅರ್ಧಮೈಲುದೂರದಲ್ಲಿರುವ ನಿರ್ವಾಣಪ್ಪನ ಗುಡ್ಡದಲ್ಲಿ ರಾರಾಜಿಸುತ್ತಿದ್ದ ಗಂಗಸಿದ್ಧೇಶ್ವರನಿಗೆ ನೂತನವಾದ ಆಲಯವನ್ನು ಕಟ್ಟಿಸಿ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿಯೂ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 11 ರೂಪಾಯಿಗಳು ಮ|| ರಾ|| ಮಲ್ಲಪ್ಪ ಬಾಳಪ್ಪ ಗುಡಶೇಠ್ರಿ ಇವರ ದ್ವಾರಾ ತಲ್ಪಿರುತ್ತವೆ.

ತೀರ್ಥಹಳ್ಳಿ ತಾಲ್ಲೂಕು ಭಾಂಡ್ಯ ಗ್ರಾಮದ ಮ|| ರಾ|| ರುದ್ರಪ್ಪಗೌಡರವರು ತಮ್ಮ ಜಾತಕರೀತಿಯಂತೆ ಗ್ರಹಶಾಂತಿಯನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜಳಪ್ಪಿಲು ನಾಗಪ್ಪಗೌಡರವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಡಿ|| ಮಟಗಿಗ್ರಾಮದಲ್ಲಿ ನೆರವೇರಿದ ಕಾರ್ತಿಕಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಷ|| ಬ್ರ|| ಶ್ರೀ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅಪ್ಪಣೆ ಕೊಡಿಸಿದ ಭಾಷಣದ ಸಾರಾಂಶ.

ಟಿಹರಿ ಮಹಾರಾಜರವರ ಅಸಿಸ್ಟೆಂಟ್ ದಿವಾನರಾದ ಪಂ|| ವಿ. ಪಿ. ಗೈರೋಲಾಸಾಹೇಬರು ಉಖಾಮಠಕ್ಕೆ ಲೆಕ್ಕಪತ್ರಗಳ ಪರೀಕ್ಷೆಗಾಗಿ ಬಂದ ಸಮಯದಲ್ಲಿ ಶ್ರೀ ಸನ್ನಿಧಿಯ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಆ ಕಾಲದಲ್ಲಿ ಸನ್ನಿಧಿಯವರು ಈ ಕೆಳಗೆ ಕಂಡಂತೆ ಭಾಷಣಮಾಡಿದರು.

ಅಯ್ಯಾ ಸಭಿಕರೇ! ಈ ದಿವಸ ಈ ಸಂಸ್ಥಾನದ ಲೆಕ್ಕಪತ್ರಗಳನ್ನು ತನಿಖೆಮಾಡುವದಕ್ಕಾಗಿ ದಿವಾನರು ಆಗಮಿಸಿರುವುದು ಈ ಪ್ರಾಂತದ ಭಕ್ತಾದಿಗಳಿಗೆಲ್ಲಾ ಅತ್ಯಾನಂದವನ್ನುಂಟುಮಾಡಿದೆ. "ಯಥಾರಾಜಾ ತಥಾಪ್ರಜಾಃ" ಎಂಬ ನ್ಯಾಯದಂತೆ ರಾಜರಂತೆ ಪ್ರಜೆಗಳು ವರ್ತಿಸುವುದು ಧರ್ಮವೆಂದು ಹೇಳುವ ಮಾತು ಸುಳ್ಳಲ್ಲ! ಈ ಕೇದಾರಕ್ಷೇತ್ರವು ಮತ್ತು ಜಗದ್ಗುರು ಪೀಠವು ಸನಾತನಕಾಲದಿಂದ ಈ ಪ್ರದೇಶದಲ್ಲಿ ಕಂಗೊಳಿಸುತ್ತಿರುವದು. ಇದು ಹಿಂದೂ ಮಹಾರಾಜರ ವ್ಯವಸ್ಥೆಯಲ್ಲಿರುವದರಿಂದ ಇದರ ಗೌರವವು ದಿನೇದಿನೇ ಹೆಚ್ಚುತ್ತಿರುವುದು. ಇದರಂತೆ ಪ್ರತಿಯೊಬ್ಬ ರಾಜರೂ ತಮ್ಮ ತಮ್ಮ ರಾಜ್ಯದಲ್ಲಿರತಕ್ಕ ಮಠಮಂದಿರಾದಿಗಳ ರಕ್ಷಣೆಗಾಗಿ ವ್ಯವಸ್ಥೆಯನ್ನಿಟ್ಟರೆ ಪವಿತ್ರ ಸನಾತನ ಧರ್ಮಗಳು ಸುರಕ್ಷಿತವಾಗಿರುವವು. ಆದರೆ ಹಿಂದೂದೇಶದ ದುರ್ದೈವದಿಂದ ಸದ್ಯಃ ವಿಪರೀತಕಾಲಗಳು ಕಂಡು ಬರಹತ್ತಿರುವವು. ಹಿಂದುಸ್ಥಾನದಲ್ಲಿ ಅನೇಕ ಜನ ರಾಜರು ತಮ್ಮ ಪವಿತ್ರಧರ್ಮವನ್ನು ತ್ಯಜಿಸಿ ಫ್ರಾನ್ಸ್, ಅಮೇರಿಕಾ, ಜರ್ಮನಿ ಮೊದಲಾದ ದೇಶಗಳ ಯಾತ್ರೆಯನ್ನು ಮಾಡುತ್ತಿರುವರು. ಅತ್ಯಂತ ವಿಸ್ತಾರವಾದ ಈ ಭರತಭೂಮಿಯಲ್ಲಿ ಅನೇಕ ರಾಜಾಧಿರಾಜರಿದ್ದು ಅವರಲ್ಲಿ ಸದ್ಯಃ ಧರ್ಮಮೂಲಸ್ತಂಭಾಯಮಾನರಾದ ಮಹಾರಾಜಾಧಿರಾಜ ಮೈಸೂರು ಪ್ರಭುಗಳು ತಮ್ಮ ಪವಿತ್ರಸನಾತನಧರ್ಮದ ಮರ್ಯಾದೆಯನ್ನು ಕಾಪಾಡುವದು ಸರ್ವರ ದೃಷ್ಟಿಯಲ್ಲಿರುವುದು. ಈಗ್ಗೆ ಸ್ವಲ್ಪ ಕಾಲದ ಹಿಂದೆ ಧರ್ಮಮರ್ಯಾದೆಯನ್ನು ಕಾಪಾಡತಕ್ಕ ಕಾಶ್ಮೀರ ಮಹಾರಾಜರು, ದರಭಂಗಾ ಮಹಾರಾಜರು, ಉದಯಪುರ ಮಹಾರಾಜರು, ಶಿವೈಕ್ಯರಾದರು. ಇದು ಸನಾತನ ಧರ್ಮದ ದುರ್ಭಾಗ್ಯವೇ ಸರಿ! ಈಗ ಸಭಿಕರಿದುರಿಗೆ ನಾವು ಈ ಪೀಠಕ್ಕೆ ಅಧಿಕಾರಿಗಳಾಗಿ ಬಂದಂದಿನಿಂದ ಇಂದಿನವರೆಗೂ ನಡೆಯಿಸಿದ ಕಾರ್ಯಕ್ರಮಗಳನ್ನು ಸೂಚಿಸುವದು ಉಚಿತವೆಂದು ಕಂಡುಬರುವದರಿಂದ ಅದನ್ನು ಸಂಕ್ಷಿಪ್ತವಾಗಿ ಸೂಚಿಸುವೆವು.

ಸದ್ಯಃ ಪ್ರತಿಯೊಂದು ದೇಶದಲ್ಲಿಯ ಪ್ರತಿಯೊಂದು ಧರ್ಮದ ಜನರು ದೇಶೋನ್ನತಿಯನ್ನು ಇಚ್ಛಿಸುತ್ತಿರುವರು. ಅದರಂತೆ ನೀವಾದರೂ ಈ ಸಂಸ್ಥಾನದ ಉನ್ನತಿಯನ್ನು ಇಚ್ಛಿಸುತ್ತಿರುವಿರಿ. ಈ ಸಂಸ್ಥಾನದಿಂದ ದೂರ[...]ಲ್ಪಟ್ಟ ಕೆಲವು ದೈವದ್ರೋಹಿಗಳೂ ಗುರುದ್ರೋಹಿಗಳೂ ಸಂಸ್ಥಾನಕ್ಕೆ ವಿರೋಧವಾಗಿ ಸ್ಥಳ ಪರಸ್ಥಳಗಳಲ್ಲಿ ಚಿಕ್ಕ ದೊಡ್ಡ ರಾಜಕರ್ಮಚಾರಿಗಳಲ್ಲಿ ಸಂಸ್ಥಾನದ ದೂಷಣೆಯನ್ನು ಮಾಡುತ್ತ ತಿರಗುತ್ತಿರುವರು. ತಮ್ಮ ನೀಚಕೃತ್ಯಗಳ ಫಲವೇ ಅವರನ್ನು ಸಂಸ್ಥಾನದಿಂದ ದೂರಮಾಡಿರುವುದು. ಈ ಸ್ವಾರ್ಥಿಗಳ ಮೇಲೆ ವಿಶ್ವಾಸವಿಟ್ಟದ್ದರಿಂದ ಸಂಸ್ಥಾನಕ್ಕೆ ಬಗೆಬಗೆಯಿಂದ ಆರ್ಥಿಕ ನಷ್ಟವುಂಟಾಯಿತು.

ನಾವು ೧೯೨೧ ರಲ್ಲಿ ಈ ಸಂಸ್ಥಾನಕ್ಕೆ ಅಧಿಕಾರಿಗಳಾಗಿ ನಿಯಮಿಸಲ್ಪಟ್ಟೆವು. ಆ ಸಮಯದಲ್ಲಿ ಸಂಸ್ಥಾನದಲ್ಲಿ ಗವರ್ನಮೆಂಟಿನಿಂದ ನೇಮಿಸಲ್ಪಟ್ಟ ಒಬ್ಬ ಮ್ಯಾನೇಜರನು ಸರ್ವಕಾರ್ಯಗಳನ್ನು ನೋಡುತ್ತಿದ್ದನು. ಆಗ್ಗೆ ಸಂಸ್ಥಾನಕ್ಕೆ ೮೫೦೦೦ ರೂಪಾಯಿಗಳ ಸಾಲವಿದ್ದು ಸಂಸ್ಥಾನವು ಅತಿ ಚಿಂತಾಜನಕಸ್ಥಿತಿಯಲ್ಲಿತ್ತು. ಇದಲ್ಲದೆ ಯಾವ ಪ್ರಕಾರದ ವಿದ್ಯಾಪ್ರಚಾರ, ಅತಿಥಿ ಸತ್ಕಾರಾದಿಗಳೂ ಇದ್ದಿಲ್ಲ. ಇವೆಲ್ಲಾ ವಿಷಯಗಳು ಸಭಿಕರಿಗೆ ಗೊತ್ತೇ ಅವೆ. ೧೯೨೧ ರಲ್ಲಿ ಮ್ಯಾನೇಜರನು ಸಂಸ್ಥಾನದ ಖಜಾನೆಯಿಂದ ೪೭೦೦೦ ರೂಪಾಯಿಗಳನ್ನು ಅಪಹರಿಸಿ ಖಜಾನೆಯಲ್ಲಿ ಒಂದು ಕಾಸು ಸಹ ಉಳಿಸದೆ ವಿಷವನ್ನು ಕುಡಿದು ಸತ್ತುಹೋದನು. ಅವನು ಸಾಯುವವರೆಗೂ ಸಂಸ್ಥಾನದ ಸರ್ವಾಧಿಕಾರವು ಅವನ ಸ್ವತಂತ್ರತೆಯಲ್ಲಿಯೇ ಇತ್ತು. ಅವನ ವಿಷಯಗಲ್ಲಿ ಕಮಿಷನರ್ ಸಾಹೇಬರಿಗೆ ಅನೇಕ ಸಾರೆ ಬರೆದದ್ದಾಯಿತು. ಅದಕ್ಕೆ ಕಮಿಷನರ್ ಸಾಹೇಬರು ಆತನು ಸತ್ತುಹೋದುದರಿಂದ ಆತನ ಮೇಲೆ ಯಾವತರದ ಕೇಸನ್ನು ನಡೆಯಿಸುವುದಕ್ಕಾಗುವ[...]ದಿಲ್ಲವೆಂದು ಉತ್ತರಕೊಟ್ಟರು. ೧೯೨೧ ರಿಂದ ಸಂಸ್ಥಾನದ [...] ಅಧಿಕಾರವು ನಮ್ಮ ಕೈಯಲ್ಲಿ ಬಂದಿತು. ಅಂದಿನಿಂ[...]ಗೆ ನಡೆದ ಕಾರ್ಯಕ್ರಮವು ಹೀಗಿರುವುದು. ಮೊದಲು [...]ಕಿನ ಸಾಲರೂಪವಾಗಿದ್ದ ೮೫೦೦೦ ರೂಪಾಯಿಗಳಿಗೆ ೪೮೦೦೦ ರೂಪಾಯಿಗಳನ್ನು ಕಟ್ಟಿದೆ. ೧೯೨೪ ರಲ್ಲಿ ಯಾತ್ರಿಕರ ಮತ್ತು ಈ ದೇಶದ ರೋಗಿಗಳ ಸುಖಕ್ಕಾಗಿ ಗೌರೀಕ್ಷೇತ್ರ, ಗುಪ್ತಕಾಶಿ, ಉಖಾಕ್ಷೇತ್ರಗಳಲ್ಲಿ ಧರ್ಮಾರ್ಥ ಔಷಧಾಲಯಗಳು ಸ್ಥಾಪಿಸಲ್ಪಟ್ಟಿವೆ. ೧೯೨೫ ರಲ್ಲಿ ವ್ಯಾಕರಣ, ಜ್ಯೋತಿಷ, ವೈದಿಕ, ಶಾಸ್ತ್ರಗಳ ಅಧ್ಯಯನಕ್ಕಾಗಿ ಸಂಸ್ಕೃತ ಮಹಾವಿದ್ಯಾಲಯಗಳು, ಉಖಾಮಠ ಮತ್ತು ಟಿಹರಿರಾಜ್ಯದಲ್ಲಿರುವ ಸಂಸ್ಥಾನ ಜಹಗೀರ ಗ್ರಾಮಗಳಲ್ಲಿ ಸ್ಥಾಪಿಸಲ್ಪಟ್ಟವು. ೧೯೨೬ ರಲ್ಲಿ ಸಾಧು, ಬ್ರಾಹ್ಮಣ, ಬಡಜನರ ಸಲುವಾಗಿ ಅನ್ನೋದಕದ ದೃಷ್ಟಿಯಿಂದ ಸದಾವರ್ತಗಳು ಸ್ಥಾಪಿಸಲ್ಪಟ್ಟವು. ರುದ್ರಪ್ರಯಾಗದಿಂದ ಕೇದಾರನಾಥ ತುಂಗನಾಥದ ವರೆಗೆ ೮೦ ಮೈಲು ವಿಸ್ತಾರವಾದ ಪ್ರದೇಶದಲ್ಲಿ ತಿರುಗಾಡಿ ರೋಗಿಗಳಿಗೆ ಔಷಧ ಹಂಚುವದಕ್ಕಾಗಿ ಕಾಂಪೌಂಡರುಗಳು ನಿಯಮಿಸಲ್ಪಟ್ಟರು. ೧೯೨೮ ರಲ್ಲಿ ಮನುಷ್ಯರನ್ನು ತಿನ್ನುವ ಹುಲಿಯು ಮಾರ್ಗದಲ್ಲಿ ತಿರುಗುತ್ತ ಯಾತ್ರಿಕರಿಗೆ ಹಿಂಸೆಮಾಡುತ್ತಿರುವುದನ್ನು ಕಂಡು ಯಾತ್ರಿಕರ ರಕ್ಷಣೆಗಾಗಿ ಯೋಗ್ಯವ್ಯವಸ್ಥೆಯು ಮಾಡಲ್ಪಟ್ಟಿತು. ಮತ್ತು ಬಾಲಕರ ಹಿತಕ್ಕಾಗಿ ೧೯೨೬ ರಲ್ಲಿ ಆಂಗ್ಲೋ ಹಿಂದಿ ಮಿಡಲ್‌ಸ್ಕೂಲ್ ಸ್ಥಾಪಿಸಲ್ಪಟ್ಟಿತು. ಕೇದಾರಕ್ಷೇತ್ರದಲ್ಲಿಯೂ, ಮಧ್ಯಮೇಶ್ವರಕ್ಷೇತ್ರದಲ್ಲಿಯೂ ಯಾತ್ರಿಕರ ಸೌಕರ್ಯಕ್ಕಾಗಿ ಧರ್ಮಶಾಲೆಗಳು ಕಟ್ಟಿಸಲ್ಪಟ್ಟವು. 1929 ರಲ್ಲಿ ಸಂಸ್ಕೃತ ಸಾಹಿತ್ಯಪ್ರಚಾರಕ್ಕಾಗಿ ಸಾಹಿತ್ಯಸಮ್ಮೇಲನವು ಪ್ರತಿವರ್ಷವೂ ಜರಗುವಂತೆ ವ್ಯವಸ್ಥೆ ಮಾಡಲ್ಪಟ್ಟಿತು. ಮತ್ತು ಆಯುರ್ವೇದದ ಪ್ರಚಾರಕ್ಕಾಗಿ ಆಯುರ್ವೇದ ಮಹಾವಿದ್ಯಾಲಯವು ಸ್ಥಾಪಿಸಲ್ಪಟ್ಟಿತು. 1930 ರಲ್ಲಿ ಆಯುರ್ವೇದಪ್ರಚಾರಕ್ಕಾಗಿ ಪ್ರತಿವರ್ಷವೂ ಜರಗುವ ಸಾಹಿತ್ಯಸಮ್ಮೇಲನದೊಡನೆ ಆಯುರ್ವೇದ ಸಮ್ಮೇಲನವನ್ನು ನಡೆಯಿಸಬೇಕೆಂದು ನಿಶ್ಚಯಿಸಿ ಆಯುರ್ವೇದ ಸಮ್ಮೇಲನವು ಸ್ಥಾಪಿಸಲ್ಪಟ್ಟಿತು. ಇದಲ್ಲದೆ ದಕ್ಷಿಣದೇಶದಲ್ಲಿ ಧರ್ಮಪ್ರಚಾರಕ್ಕಾಗಿ ಪ್ರಾದುರ್ಭವಿಸಿದ "ಪಂಚಾಚಾರ್ಯಪ್ರಭಾ" ಪ್ರೆಸ್ಸಿಗೂ ಮತ್ತು ಯಾದಗಿರಿಯಲ್ಲಿ ಶಂಕರವಿಲಾಸ ಪ್ರೆಸ್ಸಿಗೂ ಯಥಾಶಕ್ತಿ ಸಹಾಯಮಾಡಲಾಗಿದೆ. ಇದಲ್ಲದೆ ಪರಮತೀಯರ ಧರ್ಮರಕ್ಷಣೆಗಾಗಿಯೂ, ಧರ್ಮಪ್ರಚಾರಕ್ಕಾಗಿಯೂ, ಸಂಸ್ಥಾನದ ಮರ್ಯಾದೆಯನ್ನು ರಕ್ಷಿಸುವದಕ್ಕಾಗಿಯೂ ಬಹುಸಂಖ್ಯಾಕ ದ್ರವ್ಯವನ್ನು ಖರ್ಚುಮಾಡಬೇಕಾಯಿತು. ಮತ್ತು ಅನೇಕ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಸಾವಿರಾರು ರೂಪಾಯಿ ಸ್ಕಾಲರಶಿಪ್ ಕೊಡಲಾಗುವದು. ಆದರೆ ಈ ವರ್ಷ ಮಹಾ ಸತ್ಯಾಗ್ರಹ ಚಳವಳಿಯ ಮೂಲಕ ಯಾತ್ರಿಕರು ಬರದೆ ಇದ್ದ[...]ಕ್ಕಾಗಿ ಆರ್ಥಿಕಹಾನಿಯು ಅಧಿಕವಾದ್ದರಿಂದ ಸ್ಕಾಲರ್‌ಶಿಪ್ ನಿಲ್ಲಿಸಿರುವೆವು. ಇದಲ್ಲದೆ ಇನ್ನೂ ಅನೇಕ ಚಿಕ್ಕಚಿಕ್ಕ ಧರ್ಮಕಾರ್ಯಗಳು ಜರಗಿರುವವು. ಮುಖ್ಯವಾಗಿ ಎಲ್ಲರೂ ಲಕ್ಷ್ಯದಲ್ಲಿಡತಕ್ಕ ವಿಷಯವೇನೆಂದರೆ, ಯಾವ ಮನುಷ್ಯನು ದುರಾಶೆಯಿಂದ ಗುರುದ್ರವ್ಯವನ್ನೂ ದೇವರ ದ್ರವ್ಯವನ್ನೂ ಅಪಹಾರ ಮಾಡುವನೋ, ಅವನು ಅಂತ್ಯದಲ್ಲಿ ನಾನಾತರದ ಕಷ್ಟಕ್ಕೆ ಪಾತ್ರನಾಗುವನು. ಇದು ತಮ್ಮೆಲ್ಲರೆದುರಿಗೆ ಕನ್ನಡಿಯಂತೆ ಹೊಳೆಯುವ ಮಾತಿರುವದು. ಅದೇನೆಂದರೆ ಸಂಸ್ಥಾನಕ್ಕೆ ಮ್ಯಾನೇಜರನಾದ ನಾರಾಯಣದತ್ತನು ಸಂಸ್ಥಾನದ ದ್ರವ್ಯವನ್ನು ಅಪಹಾರಮಾಡಿದ್ದರಿಂದ ಆತ್ಮಹತ್ಯ ಮಾಡಿಕೊಂಡನು. ಮಗನು ಹುಚ್ಚನಾಗಿ ತಿರುಗುತ್ತಿರುವನು. ಮಗನ ಹೆಂಡತಿಯು ಎಲ್ಲಿಯೋ ಹೋದಳು. ಇದಲ್ಲದೆ ಸಂಸ್ಥಾನಕ್ಕೆ ದಿವಾನನಾದ ಜ್ವಾಲಾರಾಮನು ಹುಚ್ಚುಹಿಡಿದು ಸತ್ತನು. ಬಾಲಕ ರಾಮನು ಮನೆಯಮೇಲಿಂದ ಹಾರಿ ಪ್ರಾಣಬಿಟ್ಟನು. ಕಾಶೀರಾಮ, ತುಕಾರಾಮ, ಗಂಗಾರಾಮ ಇವರು ನಿರ್ವಂಶರಾಗಿ "ಪಾಪಿದ್ರವ್ಯ ಪರರಪಾಲು" ಎಂಬುವಂತೆ ಕಂಡ ಕಂಡವರೆಲ್ಲಾ ಎತ್ತಿ ಹಾಕಿದ್ದು ಮತ್ತು ಅಂತ್ಯಕ್ಕೆ ಅನ್ನ ನೀರಿನಿಂದ ವಂಚಿತರಾಗಿ ಪರಜನರ ಬಾಗಿಲಲ್ಲಿ ಅನ್ನಕ್ಕಾಗಿ ಕಾದುಬಿದ್ದದ್ದು ಸುಳ್ಳಾದ ಸಂಗತಿಯಲ್ಲ! ಅದ್ದರಿಂದ ಸರ್ವರೂ ಎಚ್ಚತ್ತು ನಡೆಯುವದು ಉತ್ತಮವಾಗಿದೆ. ನಾವು ವೇದಾಗಮಾದಿ ಧರ್ಮಶಾಸ್ತ್ರಗಳನ್ನು ಮನ್ನಿಸತಕ್ಕ ಆರ್ಯಧರ್ಮದವರಾಗಿದ್ದೇವೆ. ಗುರು, ದೇವತೆಗಳ ಸ್ವತ್ತಿಗೆ ಆಶೆಮಾಡಿ ಕೆಡಬಾರದು. ಇದರಿಂದ ಇಹಪರಗಳೆರಡೂ ಕೆಡುವವು. ಈ ವಿಷಯದಲ್ಲಿ ಎಷ್ಟು ಹೇಳಿದರೂ ತೀರದು. ಶ್ರೀ ಜಗದಾಚಾರ್ಯರು ಸರ್ವರಿಗೂ ಸುಬುದ್ಧಿಯನ್ನು ಕೊಟ್ಟು ಆಯುರಾರೋಗ್ಯವನ್ನುಂಟುಮಾಡಲೆಂದು ಆಶೀರ್ವದಿಸಿ ಭಾಷಣವನ್ನು ಸಮಾಪ್ತಿಗೊಳಿಸುತ್ತೇವೆ.

ಸಮಾಜ ಹಿತಚಿಂತಕ
ಎಸ್. ಎಮ್. ಶರ್ಮಾ, ಓಖಿಮಠ.

ಅರಕಲಗೂಡು ತಾಲ್ಲೂಕು ರಾಮನಾಥಪುರದ ಸುಬ್ರಹ್ಮಣ್ಯೇಶ್ವರಸ್ವಾಮಿಯ ರಥೋತ್ಸವದ ವಿಚಾರ.

ಈ ಮಹೋತ್ಸವವನ್ನು ಹಾಸನ ಡಿಸ್ಟ್ರಿಕ್ಟ್ ಡೆಪ್ಯು[...]ನರ್ ಸಾಹೇಬರವರು 26-11-30 ರಲ್ಲು ಹುದ್ದು ದಯಮಾಡಿ[...]ಲಕ್ಕೆ ಸರಿಯಾಗಿ ರಥಾರೋಹಣಮಾಡಿಸಿದ್ದಕ್ಕಾಗಿ ಬಹು ಜನರು ಸಂತೋಷಪಟ್ಟರು. ಇವರು ಮುಸಲ್ಮಾನ ಜಾತಿಯವರಾಗಿದ್ದಾಗ್ಯೂ ಹಿಂದೂ ಜನಗಳ ವಿಚಾರದಲ್ಲಿ ಇಟ್ಟಿರುವ ಪ್ರೇಮವು ಸ್ತೋತ್ರಾರ್ಹವಾಗಿರುತ್ತದೆ. ಹಾಸನ ಡಿಸ್ಟ್ರಿಕ್ಟಿಗೆಲ್ಲಾ ಇದೇ ಭಾರಿಜಾತ್ರೆ. ಜನಗಳು ಸೇರತಕ್ಕ ಸ್ಥಳ. 10 ಲಕ್ಷ ರೂಪಾಯಿ ವ್ಯಾಪಾರ ನಡೆಯುತ್ತದೆ. ಈ ಜಾತ್ರೆಗೆ ಬ್ರಾಹ್ಮಣರು ಅನೇಕರಾಗಿ ಸೇರುತ್ತಾರೆ. ಇಂದೂರು ಲೇಟ್ ದಿವಾನ್ ಮಿ|| ಗೋವಿಂದರಾಯರು 1000 ರೂಪಾಯಿ ಖರ್ಚಿನಿಂದ ಪಂಚಮಿ ಷಷ್ಟಿ ಎರಡು ದಿವಸವೂ ಸಮಾರಾಧನೆ ಮಾಡಿಸುತ್ತಾರೆ. ಈ ವರ್ಷ ರಥಾರೋಹಣಕ್ಕೆ ದೇವರು ಬಿಜಮಾಡಿಸುವ ಮಂಟಪದ ಕಾವುಗಾರಿಮಾಡಿಸುತ್ತಾ ಇದ್ದಾರೆ. ಆದರೆ ಇವರಿಗೆ ಗಂಡುಮಕ್ಕಳಿಲ್ಲ. ನಂಜನಗೂಡಿನಲ್ಲಿರುವ ಮ|| ರಾ|| ಕಾವೇರಿ ರೈಸ್‌ಮಿಲ್ ಪ್ರೊಪ್ರೈಟರ್ ಲೇಟ್ ಅ|| ಕಮಿಷನರ್ ಶ್ರೀಕಂಠಯ್ಯನವರ ಮಕ್ಕಳು ಶಿವರಾಮಯ್ಯನವರು ಚಿಕ್ಕಜಾತ್ರೆ ದಿವಸ ಭಾರೀ ಸಂತರ್ಪಣೆ ಮಾಡಿಸುತ್ತಾರೆ. ಇದು ಸ್ತೋತ್ರಾರ್ಹವಾದುದಾಗಿದೆ. ಮಿ|| ಗೋವಿಂದರಾಯರವರಂತೂ ಇದೇ ಮನಸ್ಸುಕೊಟ್ಟು ಮುಂದಿನ ವರ್ಷದಿಂದ ನಂಜನಗೂಡಿನಲ್ಲಿ ನಡೆಯುವ ರೀತಿ ಮಾಡಿಸಲು ಸುಬ್ರಹ್ಮಣ್ಯೇಶ್ವರಸ್ವಾಮಿಯು ಪ್ರೇರೇಪಣೆಮಾಡುತ್ತಾರೆಂದು ನಂಬಿದೆ.

ಒಳದೇಶದ ವೃತ್ತಾಂತಗಳು.

ಲಾರ್ಡ್ ಹಾರ್ಡಿಂಜ್‌ರವರು ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮೊದಲಾದ ಸ್ಥಳಗಳಿಗೆ ಹೋಗಿ ಪ್ರಸಿದ್ಧಗಳಾದ ದೇವಸ್ಥಾನಗಳನ್ನು ನೋಡಿ ಅನಂತರ ಕಾರಾಪುರಕ್ಕೆ ದಯಮಾಡಿಸುವರೆಂದು ಕೇಳುತ್ತೇವೆ.

1929 ನೆಯ ಜುಲೈ ತಿಂಗಳಿನಲ್ಲಿ ನಡೆದ ಬೆಂಗಳೂರು ಎರಡನೆಯ ಗಲಭೆಯಲ್ಲಿ ಪೋಲೀಸರು 97 ಜನರನ್ನು ಅಪಾದಿತರನ್ನಾಗಿ ಮಾಡಿದ್ದರು. ಇದೇ ತಿಂಗಳು 8ನೆಯ ತಾರೀಖಿನ ದಿವಸ ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟರು ಈ ಮೊಕದ್ದಮೆಯ ತೀರ್ಪನ್ನು ಹೇಳಿದರು. 13 ಜನರು ಆಕ್ರಮಕೂಟದಲ್ಲಿ ಸೇರಿ ದೊಂಬಿಯನ್ನು ನಡೆಯಿಸಿದರೆಂದು 147 ಸೆಕ್ಷನ್ ಪ್ರಕಾರ ಅವರು 6 ತಿಂಗಳುಗಳ ಕಠಿಣಶಿಕ್ಷೆಗೆ ಗುರಿಮಾಡಲ್ಪಟ್ಟಿರುವರೆಂದು ಕೇಳುತ್ತೇವೆ.

ಬೆಂಗಳೂರಿನ ಮಿ|| ಭಾಷ್ಯಂರವರು ಕಾಯಿದೆ ಭಂಗದ ಚಳವಳಿಯನ್ನು ಕುರಿತು ಅನೇಕ ಭಾಷಣಗಳನ್ನು ಮಾಡಿದರೆಂದೂ, ಆ ಪ್ರಯುಕ್ತ ಅವರ ಸನದನ್ನು ಏಕೆ ವಜಾಮಾಡಬಾರದೆಂದೂ ಹೈಕೋರ್ಟಿನಲ್ಲಿ ವಿಚಾರಣೆ ನಡೆಯಿತಷ್ಟೆ! ಮಿ|| ಭಾಷ್ಯಂರವರು ತಮ್ಮ ಮೇಲೆ ತಂದಿರುವ ಅಪಾದನೆಗಳೆಲ್ಲವೂ ಸರಿಯಲ್ಲವೆಂದೂ, ತಮ್ಮ ಭಾಷಣವನ್ನು ತಪ್ಪು ತಿಳಿದುಕೊಂಡಿರುವರೆಂದೂ, ಅದಕ್ಕೋಸ್ಕರ ತಾವು ವಿಷಾದಿಸುವೆನೆಂದೂ ಹೇಳಿದ್ದರ ಮೇಲೆ ಹೆಚ್ಚು ಕ್ರಮ ಜರುಗಿಸುವ ಆವಶ್ಯಕವಿಲ್ಲವೆಂದು ಮುಖ್ಯ ಜಡ್ಜಿಯವರು 20 ನೆಯ ತಾರೀಖಿನ ದಿವಸ ಆರ್ಡರ್ ಮಾಡಿದರು.

ಇದೇ ತಿಂಗಳು 8 ನೆಯ ತಾರೀಖಿನ ದಿವಸ ಮೈಸೂರು ಚಾಮುಂಡಿಎಕ್ಸ್ಟೆನ್ಷನ್ನಲ್ಲಿ ಶ್ರೀಮನ್ಮಹಾರಾಜರವರ ಸಹೋದರಿಯವರಾದ ಶ್ರೀ ಮಹಾರಾಜಕುಮಾರಿ ಚೆಲುವಾಜಮ್ಮಣ್ಣಿಯವರು ಮಹಿಳಾಸಮಾಜದ ಕಟ್ಟಡದ ತಳಹದಿಯ (Foundation stone) ಕಲ್ಲನ್ನು ಹಾಕಿದರೆಂದೂ, ಆ ಸಮಾರಂಭದಲ್ಲಿ ಅನೇಕಜನ ಮಹಿಳೆಯರು ಭಾಗಿಗಳಾಗಿದ್ದರೆಂದೂ, ಮಹಾರಾಣಿಕಾಲೇಜಿನ ಸೂಪರಿಂಟೆಂಡೆಂಟ್ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮನವರು ಶ್ರೀ ಮಹಾರಾಜಕುಮಾರಿಯವರಿಗೆ ಅಡ್ರೆಸ್ಸನ್ನೊಪ್ಪಿಸಿದರೆಂದೂ, ಆಗ್ಗೆ ಶ್ರೀ ಮಹಾರಾಜಕುಮಾರಿಯವರು ಯುಕ್ತಿಯುಕ್ತವಾದ ಭಾಷಣವನ್ನು ಮಾಡಿದರೆಂದೂ ಕೇಳುತ್ತೇವೆ.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕಸಭೆಯು ಇದೇ ತಿಂಗಳು 15 ನೆಯ ತಾರೀಖಿನ ದಿವಸ ಪ್ರಾರಂಭವಾಗಿ ನಾಲ್ಕುದಿವಸಗಳವರೆಗೆ ನಡೆಯುವುದೆಂದು ತಿಳಿದುಬರುತ್ತದೆ. ಕಳೆದ ಜುಲೈ ತಿಂಗಳಿನಲ್ಲಿ ವರ್ತಮಾನ ಪತ್ರಿಕೆಗಳಿಗೆ ಯಾವಕಾರಣಗಳ ಮೇಲೆ ಸರ್ಕಾರದವರು ಎಚ್ಚರಿಕೆಕೊಟ್ಟಿರುವರೆಂದು ಮಿ|| ಬೇಲೂರು ಶ್ರೀನಿವಾಸಯ್ಯಂಗಾರ್‌ರವರು ಕೇಳಿರುವರಂತೆ! ಶ್ರೀಮನ್ಮಹಾರಾಜರವರಸರ್ಕಾರದವರು ವರ್ತಮಾನ ಪತ್ರಿಕೆಗಳ ಮೇಲಿನ ಶಾಸನವನ್ನು ಕೂಡಲೆ ತೆಗೆದುಹಾಕಬೇಕೆಂದು ಶ್ರೀಯುತ ಡಿ. ಎಸ್. ಮಲ್ಲಪ್ಪನವರು ಒಂದು ಠರಾವನ್ನು ಕಳುಹಿಸಿರುವರು. ಮಿ|| ತಂಗಲರಾಯರೆಡ್ಡಿಯವರು ಗೆಜೆಟೆಡ್ ಅಧಿಕಾರಿಗಳ ಸಂಬಳವನ್ನು ಅದಷ್ಟುಮಟ್ಟಿಗೆ ಕಡಿಮೆಮಾಡುವ ಅವಶ್ಯಕತೆಯನ್ನು ಪರ್ಯಾಲೋಚಿಸಲು ಒಂದು ಕಮಿಟಿಯು ನಿರ್ಮಿಸಲ್ಪಡಬೇಕೆಂದು ಒಂದು ಠರಾವನ್ನು ಕಳುಹಿಸಿರುವರು. ಮಿಲ್ಲರ್‌ಕಮಿಟಿ ರಿಪೋರ್ಟು, ಮೈಸೂರುಸರ್ಕಾರದ ಸಾಲ, ಬೆಂಗಳೂರು ಗಲಭೆಗಳು, ಸಮ್ಮಸಮಾಜಗಳ ಪ್ರಾತಿನಿಧ್ಯ ಇವುಗಳ ಮೇಲೆ ಅನೇಕ ಪ್ರಶ್ನೆಗಳು ಚರ್ಚಿಸಲ್ಪಡುವವೆಂದು ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಸರ್ದಾರ ವಲ್ಲಭಭಾಯಿ ಪಟೇಲರವರು ಶಿಕ್ಷಿಸಲ್ಪಟ್ಟರೆ ಮಿ|| ಕೆ. ಎಂ. ಮುನ್ಷಿಯವರು ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ವಹಿಸುವವರಾಗಿದ್ದಾರೆ.

ಅಮೃತಸರದಲ್ಲಿ ವಿದೇಶೀ ವಸ್ತ್ರಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದ್ದಕ್ಕೋಸ್ಕರ 30 ಜನ ಸ್ವಯಂಸೇವಕರು ಕೈಸೆರೆಮಾಡಲ್ಪಟ್ಟಿರುವರು.

ಪಂಡಿತ ಮೋತಿಲಾಲನೆಹರೂರವರ ಆರೋಗ್ಯವು ಸುಧಾರಿಸುತ್ತಲಿದೆ ಎಂದೂ, ಈಗ 3-4 ದಿವಸಗಳಿಂದ ರಕ್ತವು ಬೀಳುವುದಿಲ್ಲವೆಂದೂ ಪ್ರಸಿದ್ಧವಾಗಿದೆ.

ಹೊಸದಿಲ್ಲಿಯಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯ ಅಧಿವೇಶನವು ಮುಂದಿನ ತಿಂಗಳು 14 ನೆಯ ತಾರೀಖಿನ ದಿವಸ ಪ್ರಾರಂಭವಾಗುವುದೆಂದು ಪ್ರಕಟವಾಗಿದೆ.

ಮಿ|| ವಿ. ಜೆ. ಪಟೇಲರವರು ಅಂಬಾಲಾದಿಂದ ಕೊಯಮುತ್ತೂರಿಗೆ ಪ್ರಯಾಣಮಾಡುವುದರೊಳಗಾಗಿ ಅವರ ಶರೀರದಲ್ಲಿ ಒಂದು ಪೌಂಡು ತೂಕವು ಕಡಿಮೆಯಾಗಿದೆ ಎಂದು ವರ್ತಮಾನವಿದೆ.

"ಸಿ" ಕ್ಲಾಸ್ ಖೈದಿಗಳಿಗಾಗಿ ಲಕ್ನೋದಲ್ಲಿ ಹೊಸ ಜೈಲನ್ನು ಕಟ್ಟಿಸಿರುವರು. ಆಗ್ರಾ, ಅಲಹಾಬಾದ್ ಮೊದಲಾದ ವಾಯವ್ಯಪ್ರಾಂತದ ಮುಖ್ಯ ಪಟ್ಟಣಗಳಲ್ಲಿರುವ ಖೈದಿಗಳೆಲ್ಲರೂ ಮುಂದಿನ ವರ್ಷದ ಆದಿಯಿಂದ ಅಲ್ಲಿಗೆ ಸಾಗಿಸಲ್ಪಡುವರು.

ಬೊಂಬಾಯಿಯ ಸಂಗ್ರಾಮಸಮಿತಿಯ ಅಧ್ಯಕ್ಷರಾಗಿದ್ದ ಮಿ|| ನಗಿಂದಾಸ್ ಟಿ. ಮಾಸ್ಟರವರನ್ನು IV ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಆರು ತಿಂಗಳುಗಳ ಸಾದಾಶಿಕ್ಷೆಗೆ ಗುರಿಪಡಿಸಿದುದು ಸರಿಯಷ್ಟೆ! ಬೊಂಬಾಯಿಯ ಹೈಕೋರ್ಟು ಜಡ್ಜರು ಕೆಳಕೋರ್ಟಿನ ತೀರ್ಪನ್ನು ರದ್ದುಪಡಿಸಿದ್ದರ ಮೇಲೆ ಅವರು ಕಾರಾಗೃಹದಿಂದ ಬಿಡುಗಡೆಮಾಡಲ್ಪಟ್ಟಿರುವರು.

ಲಾಹೋರಿನ ಫೋರ್ಮನ್ ಕ್ರಿಶ್ಚಿಯನ್ ಕಾಲೇಜಿನ ಬಿ. ಎ. ವಿದ್ಯಾರ್ಥಿನಿಯಾದ ಮಿಸ್ ಜೆಟ್ಲಿ ಎಂಬವರು ಪಿಕೆಟ್‌ಮಾಡುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಡಬೇಕೆಂಬ ಕಾಲೇಜಿನ ಅಧಿಕಾರಿಗಳ ಅನುಜ್ಞೆಯನ್ನು ಉಲ್ಲಂಘಿಸಿದಕಾರಣ ವಜಾಮಾಡಲ್ಪಟ್ಟಿರುವರು. ಇವರ ಸಹೋದರಿಯರೂ ಸಹ ಕಾಲೇಜಿನಲ್ಲಿ ಪಿಕೆಟಿಂಗ್ ಮಾಡಿದ್ದಕ್ಕೋಸ್ಕರ ಶಿಕ್ಷಿಸಲ್ಪಟ್ಟು ಕಾರಾಗೃಹದಲ್ಲಿರುವರು.

ಇರೋಡೆಯ ಲಾರ್ಡ್ ಮಿಷನ್ ಸ್ಕೂಲ್ ಬೋರ್ಡಿಂಗಿನಲ್ಲಿ ಇದೇ ತಿಂಗಳು 8 ನೆಯ ತಾರೀಖಿನ ದಿವಸ ರಾತ್ರಿಯ ಊಟವಾದಮೇಲೆ 30 ಜನ ವಿದ್ಯಾರ್ಥಿಗಳು ಅಕಸ್ಮಾತ್ತಾಗಿ ವಾಂತಿಮಾಡುತ್ತ ಮೃತಪಟ್ಟರು. ಆಹಾರದಲ್ಲಿ ಯಾವುದೋ ವಿಷಪ್ರಾಣಿಯು ಬಿದ್ದಿರಬೇಕೆಂದು ಕೆಲವರು ಊಹಿಸುವರು. ವಾಂತಿಭೇದಿರೋಗದಿಂದ ಮೃತಪಟ್ಟಿರಬೇಕೆಂದು ಕೆಲವರು ಅಭಿಪ್ರಾಯಪಡುವರು. ಶೋಚನೀಯವಿಷಯ!

ಕಲ್ಕತ್ತೆಯಲ್ಲಿ ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲ್ ಸಿಂಪ್ಸನ್‌ರವರ ಕೊಲೆಯಾದುದಕ್ಕೆ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ಮಿ|| ಕೆ. ಟಿ. ಪಾಲ್‌ರವರೂ, ಮಿ|| ಫಜಲ್‌ಹಕ್ಕರವರೂ ತಮ್ಮ ಅನುತಾಪವನ್ನು ವ್ಯಕ್ತಪಡಿಸಿ ಇಂಥ ಅಕೃತ್ಯಗಳನ್ನು ಬೇಜವಾಬ್ದಾರಿಯ ಕೆಲವು ತರುಣರು ನಡೆಯಿಸಿರಬಹುದೆಂದೂ, ಭರತವರ್ಷವು ಇಂಥ ಕಾರ್ಯಗಳಿಗೆ ಎಂದಿಗೂ ಉತ್ತೇಜನಕೊಡುವುದಿಲ್ಲವೆಂದೂ ಭಾಷಣಮಾಡಿದರು.

ಕಾಯಿದೆಭಂಗಮಾಡಿದ್ದಕ್ಕಾಗಿ ಶಿಕ್ಷಿಸಲ್ಪಟ್ಟು ಮುಹಿದಾಬಾದ್ ಜೈಲಿನಲ್ಲಿದ್ದ ಹದಿನೇಳು ವರ್ಷ ವಯಸ್ಸಿನ ಮಣಿಕ್‌ಲಾಲ್‌ಸೇಠ್ ಎಂಬ ತರುಣನು ರಾಜಕೀಯ ಖೈದಿಗಳಿಗೆ [illegible]ವಾದ ಆಹಾರವು ಕೊಡಲ್ಪಡುವುದೆಂಬುದನ್ನು ನಿಷೇಧಿಸಿ 60 ದಿವಸಗಳ ವರೆಗೂ ಉಪವಾಸಮಾಡಿ ಮೃತಪಟ್ಟನು. ಅವನ ತಾಯಿಯು ಕಾಶಿಯಲ್ಲಿರುವಳು. ಅವನ ದೇಹವು ದಹನವಾದಮೇಲೆ ಆ ಬೂದಿಯನ್ನು ಕಾಶಿಯಲ್ಲಿ ಮೆರವಣಿಗೆ ಮಾಡಿ ಗಂಗಾನದಿಯಲ್ಲಿ ಬಿಟ್ಟರು.

ಬೊಂಬಾಯಿಯ ಕ್ರೈಸ್ತರಾಷ್ಟ್ರೀಯ ಸಂಘದವರೂ, ಯೆಹೂದಿಸಂಘದವರೂ, ಪಾರ್ಸಿರಾಜಕೀಯ ಸಭೆಯವರೂ ಮಿ|| ಬಿ. ಜೆ. ಹಾರ್ನಿಮನ್‌ರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು 9 ನೆಯ ತಾರೀಖಿನ ದಿವಸ ಒಂದು ಪ್ರಚಂಡಸಭೆಯನ್ನು ಸೇರಿಸಿ ಭಾರತೀಯರಿಗೆ ಸಂಪೂರ್ಣ ಸ್ವರಾಜ್ಯವು ದೊರೆಯಬೇಕೆಂದೂ, ಶ್ರೀಯುತ ವಿ. ಜೆ. ಪಟೇಲರವರ ಪ್ರಕೃತಿಯು ಶೋಚನೀಯವಾಗಿರುವುದರಿಂದ ಅವರನ್ನು ಕೂಡಲೇ ಬಂಧನದಿಂದ ವಿಮೋಚನೆ ಮಾಡಬೇಕೆಂದೂ ತೀರ್ಮಾನಿಸಿರುವರು.

ಢಾಕಾದಲ್ಲಿ ಹಿಂದೂ ಮುಹಮ್ಮದೀಯರ ಗಲಾಟೆಯಲ್ಲಿ ಅನೇಕರನ್ನು ಖೂನಮಾಡಿದ್ದ ಮಹಿಯುದ್ದೀನ್ ಎಂಬವನು ಢಾಕಾಕೋರ್ಟಿನ ಲಾಕಪ್ಪಿನಲ್ಲಿದ್ದನು. ಇವನು ಇದೇ ತಿಂಗಳು 11 ನೆಯ ತಾರೀಖಿನ ದಿವಸ ಮಧ್ಯಾಹ್ನದಲ್ಲಿ ಮಲವಿಸರ್ಜನೆ ಮಾಡುವುದಕ್ಕೆ ಬಿಡಬೇಕೆಂದು ಹತ್ತಿರವಿದ್ದ ಪೋಲೀಸರನ್ನು ಕೇಳಿಕೊಳ್ಳಲು ಅವರು ಸೊಂಟಕ್ಕೆ ಹಗ್ಗ ಬಿಗಿದು ಕಳುಹಿಸಿದರು. ಆಗ ಅವನು ತನ್ನಲ್ಲಿದ್ದ ಚೂರಿಯಿಂದ ಹಗ್ಗವನ್ನು ಕೊಯಿದು ಗೋಡೆಯನ್ನು ಹಾರಿ ಓಡಿಹೋಗಲು ಪೋಲೀಸರು ಅವನನ್ನು ಹಿಡಿದು ಢಾಕಾದ ಸಬ್‌ಡಿವಿಜನಲ್ ಆಫೀಸರವರ ಮುಂದೆ ವಿಚಾರಣೆಗೆ ಗುರಿಪಡಿಸಿರುವರು.

ಸೋಲಾಪುರದ ಮ|| ಧನಸೆಟ್ಟಿ ಮಲ್ಲಪ್ಪನವರೇ ಮೊದಲಾದ ನಾಲ್ವರ ವಿಷಯದಲ್ಲಿ ದಯೆಯನ್ನು ತೋರಿಸಿ ಮರಣಶಾಸನವನ್ನು ತಪ್ಪಿಸಬೇಕೆಂದು ಬೊಂಬಾಯಿ ಗೌರ್ನರವರನ್ನು ಪ್ರಾರ್ಥಿಸಲು ಭಾರತೀಯ ವರ್ತಕಸಂಘದ ಪ್ರೆಸಿಡೆಂಟ್ ಮಿ|| ಹುಸೇನ್‌ಭಾಯಿ ಲಾಲ್ಜಿಯವರೂ, ಸರ್ ಪುರುಷೋತ್ತಮದಾಸ್ ಠಾಕೂರದಾಸರವರೂ, ಸರ್ ಇಬ್ರಾಹಿಂರಹಿಮತುಲ್ಲಾರವರೂ ಅವರನ್ನು ಕಾಣುವರೆಂದೂ, ಕೌನ್ಸಿಲ್ ಆಫ್ ಸ್ಟೇಟ್ ಮೆಂಬರರಾದ ರಾಜಾಲಕ್ಷ್ಮಣರಾವ್‌ಭಾನ್ಸಲೇರವರು ವೈಸರಾಯರಿಗೂ, ಗೌರ್ನರವರಿಗೂ ಸಹ ಈ ವಿಷಯದಲ್ಲಿ ತಂತಿಕಳುಹಿಸಿರುವರೆಂದೂ ತಿಳಿದುಬಂದಿದೆ.

ದಿಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯ ಪ್ರೆಸಿಡೆಂಟರಾಗಿದ್ದ ಶ್ರೀಯುತ ವಿಠ್ಠಲಭಾಯಿಪಟೇಲ್‌ರವರು ಜೈಲಿನಲ್ಲಿ ಅಸ್ವಸ್ಥರಾಗಿ ನರಳುತ್ತಿರುವುದು ಕೇವಲ ದುಃಖಕರವಾದ ಸಂಗತಿಯಾಗಿದೆ ಎಂದೂ, ಇಡೀ ಭರತಖಂಡವೇ ಶ್ರೀಯುತ ಪಟೇಲರವರ ದೇಹಸ್ಥಿತಿಯನ್ನು ಆತುರದಿಂದ ನಿರೀಕ್ಷಿಸುತ್ತಿರುವುದೆಂದೂ, ಇವರನ್ನು ಕೂಡಲೇ ಸರ್ಕಾರದವರು ಜೈಲಿನಿಂದ ಬಿಡುಗಡೆಮಾಡಿ ಜನಗಳ ಮನಸ್ಸಂತೋಷಪಡಿಸಬೇಕೆಂದೂ, ಈ ವಿಷಯದಲ್ಲಿ ಇಂಡಿಯಾಸರ್ಕಾರದ ದೊಡ್ಡ ಜವಾಬ್ದಾರಿಯಿದೆ ಎಂದೂ, ಮದರಾಸಿನ ಮಂತ್ರಾಲೋಚನಾ ಸಭೆಯ ಡೆ|| ಪ್ರೆಸಿಡೆಂಟ್ ಶ್ರೀಮತಿ ಮುತ್ತುಲಕ್ಷ್ಮಿರೆಡ್ಡಿಯವರು ಹೇಳಿರುವರು.

ಲಂಡನ್ನಿನಲ್ಲಿ ನೆರೆದಿರುವ ದುಂಡುಮೇಜಿನ ಪರಿಷತ್ತಿನ ಸಮಿತಿಯಿಂದ ನಿಯಮಿಸಲ್ಪಟ್ಟಿರುವ ಫೆಡರಲ್‌ಕಮಿಟಿಯು ಹಿಂದೂದೇಶದ ಫೆಡರೇಷನ್ ರಚನೆಯ ಕಾರ್ಯಕ್ರಮವನ್ನು ಈ ದಿವಸ ಪೂರೈಸುವುದಂತೆ! ಹಿಂದೂಮುಹಮ್ಮದೀಯರ ಪ್ರಶ್ನೆಯು ಇನ್ನೂ ಯಾವ ನಿರ್ಣಯಕ್ಕೆ ಬಂದಿರುವುದಿಲ್ಲವೆಂದೂ, ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾದ ರಾಂಸೇಮ್ಯಾಕ್ಡೋನಾಲ್ಡರವರೇ ಈ ವಿಷಯದಲ್ಲಿ ಮಧ್ಯವರ್ತಿಗಳಾಗಿ ಸಹಾಯಮಾಡಲು ಒಪ್ಪಿರುವರೆಂದೂ, ಹಿಂದುಗಳಲ್ಲಿ ನಾಲ್ವರು, ಮಹಮ್ಮದೀಯರಲ್ಲಿ ನಾಲ್ವರು ಮುಖಂಡರು ಮುಖ್ಯ ಮಂತ್ರಿಗಳನ್ನು ಸಂದರ್ಶಿಸಿ ಚರ್ಚೆಗಳನ್ನು ನಡೆಯಿಸುತ್ತಿರುವರೆಂದೂ ತಿಳಿದುಬರುತ್ತದೆ.

ಲಂಡನ್ನಿನ ಭಾರತೀಯ ಸಾಮ್ರಾಜ್ಯಸಂಘದವರು ಇದೇತಿಂಗಳು 11 ನೆಯ ತಾರೀಖಿನ ದಿವಸ ಒಂದು ಸಭೆಯನ್ನು ಸೇರಿಸಿ ಕೆಲವು ವಿಷಯಗಳನ್ನು ತೀರ್ಮಾನಿಸಿದರು. ಆ ಸಭೆಯಲ್ಲಿ ಚರ್ಚಿಲ್‌ರವರು "ಲೇಬರ್ ಸರ್ಕಾರವೇ ಈಗಿನ ಭರತಖಂಡದ ಪರಿಸ್ಥಿತಿಗೆ ಉತ್ತರವಾದಿಯಾಗಿದೆ. ಮುಂದಿನ ಭಾರತೀಯರ ರಾಜ್ಯಾಂಗರಚನೆಯನ್ನು ಮಾಡುವ ಹಕ್ಕು ಇಂಗ್ಲೆಂಡಿನ ಪಾರ್ಲಿಮೆಂಟಿಗಿರುವುದೇ ವಿನಾ ರೌಂಡ್ ಟೇಬಲ್ ಕಾನ್ಫರೆನ್ಸಿಗಿರುವುದಿಲ್ಲ. ರೌಂಡ್‌ಟೇಬಲ್ ಕಾನ್ಫರೆನ್ಸಿನ ಸಲಹೆಗಳನ್ನು ಒಪ್ಪುವುದೂ ತಿರಸ್ಕರಿಸುವುದೂ ಪಾರ್ಲಿಮೆಂಟನ್ನು ಅವಲಂಬಿಸಿದೆ. ಈಗಿರುವ ಪಾರ್ಲಿಮೆಂಟಿನ ಮೆಂಬರರಲ್ಲಿ ವಿಶೇಷ ಜನರು ಭಾರತೀಯರಿಗೆ ಡೊಮಿನಿಯನ್ ಸ್ಟೇಟಸ್ ಕೊಡುವುದನ್ನು ವಿರೋಧಿಸುವವರಿದ್ದಾರೆ. ಇಂಗ್ಲೀಷರು ಹಿಂದೂದೇಶದಲ್ಲಿ ತಮಗಿರುವ ಮುಖ್ಯವಾದ ಅಧಿಕಾರಗಳನ್ನು ಎಂದಿಗೂ ಬಿಟ್ಟುಕೊಡಲಾರರು. ಹಾಗೆ ಬಿಟ್ಟುಕೊಟ್ಟರೆ ಬ್ರಿಟಿಷ್‌ಸಾಮ್ರಾಜ್ಯದ ಅವನತಿಯ ಕಾಲವು ಸಮೀಪಿಸಿತೆಂದು ಭಾವಿಸಬೇಕಾಗಿದೆ. ಭಾರತೀಯರಿಗೆ ಇನ್ನು ಮುಂದೆ ಹಕ್ಕುಬಾಧ್ಯತೆಗಳನ್ನು ಕೊಡುವುದಕ್ಕೂ, ಕೊಟ್ಟಿರುವ ಹಕ್ಕುಗಳನ್ನು ಕಿತ್ತುಕೊಳ್ಳುವುದಕ್ಕೂ ಪಾರ್ಲಿಮೆಂಟಿಗೆ ಪೂರ್ಣಸ್ವಾತಂತ್ರ್ಯವಿದೆ. ಈಗಿನ ಸರ್ಕಾರವು ಯೂನಿಯನ್‌ಜಾಕ್ (ಬ್ರಿಟಿಷರ ಧ್ವಜ)ವನ್ನು ಸುಟ್ಟ ಲಾಹೋರಿನ ಕಾಂಗ್ರೆಸ್ಸನ್ನು ಜರುಗಿಸಿದ ಮುಖಂಡರನ್ನು ಗಡೀಪಾರುಮಾಡಬೇಕಾಗಿತ್ತು. ಮಿ|| ಗಾಂಧಿಯನ್ನು ಕಾಯಿದೆ ಭಂಗಮಾಡಿದಕೂಡಲೇ ದಸ್ತಗಿರಿ ಮಾಡಿ ವಿಚಾರಣೆ ನಡೆಯಿಸಿ ಶಿಕ್ಷಿಸಬೇಕಾಗಿತ್ತು. ಗಾಂಧಿಯ ತತ್ವವನ್ನು ಜೋರಿನಿಂದ ಬಗ್ಗು ಬಡಿಯಬೇಕು. ಹುಲಿಯನ್ನು ಬೆಕ್ಕಿನ ಮಾಂಸದಿಂದ ಪ್ರೀತಿಸಲು ಪ್ರಯತ್ನಿಸುವುದು ನಿಷ್ಪ್ರಯೋಜನವು" ಎಂದು ಭಾಷಣಮಾಡಿದರು. ಅವಿಚಾರಪೂರಿತವಾದ ಇವರೀತರಹದ ಭಾಷಣವನ್ನು ಕೇಳಿ ಮುಖ್ಯಮಂತ್ರಿಗಳಾದ ಮಿ|| ಮ್ಯಾಕ್ಡೋನಾಲ್ಡರವರು ಸಿಟ್ಟಿಗೆದ್ದು ಇನ್ನು ಮುಂದೆ ಈ ತರಹದ ಭಾಷಣಗಳನ್ನು ಮಾಡಿದರೆ ತಕ್ಕ ಬಂದೋಬಸ್ತು ಮಾಡಲಾದೀತೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಸರಿಯಾದ ಎಚ್ಚರಿಕೆ!

ಗುರುಭಕ್ತಶಿಖಾಮಣಿಗಳ ಸಂಚಾರ.

ಅರಸೀಕೆರೆ ತಾ|| ದಿಬ್ಬೂರು ಗ್ರಾಮದ ಸ್ಕೂಲ್‌ಮಾಸ್ತರರಾದ ಮ|| ರಾ|| ಎ. ಚನ್ನಪ್ಪನವರು ಕ್ರಿಸ್‌ಮಸ್ ರಜಾಕಾಲದಲ್ಲಿ ಪಂಚಾಚಾರ್ಯಪ್ರಭಾ ಪತ್ರಿಕೆಯ ಹಾಗೂ ಉದಾತ್ತ ಮತಗ್ರಂಥಗಳ ಪ್ರಸಾರಕಾರ್ಯಕ್ಕಾಗಿ ಸಂಚರಿಸುವವರಾಗಿದ್ದಾರೆ. ಸದರಿ ಚನ್ನಪ್ಪನವರು ಗುರುಸೇವೆಯೇ ಸರ್ವಕ್ಕೂ ಮೂಲಸಾಧನೀಭೂತವಾದುದೆಂಬ ನಿಜತತ್ವವನ್ನು ತಿಳಿದುಕೊಂಡು ಅಪ್ರಾಕೃತವಾದ ಗುರುಭಕ್ತಿಯಿಂದ ಕೂಡಿದವರಾಗಿ ಗುರುಕಾರ್ಯವನ್ನು ಮಾಡುತ್ತಿರುವುದನ್ನು ಕಂಡು ಯಾರ ಮನಸ್ಸು ಸಂತೋಷಸಾಗರದಲ್ಲಿ ಲೋಲಾಡಲಿಕ್ಕಿಲ್ಲ? ಇವರು ತಮ್ಮ ಆಯುಸ್ಸನ್ನು ಗುರುಸೇವೆಯಲ್ಲಿಯೇ ಸವೆಸಹತ್ತಿರುವರು. ಇಂಥ ಗುರುಭಕ್ತರತ್ನಗಳು ಇನ್ನೂ ಹೆಚ್ಚಾಗಿ ವೀರಶೈವಮತದ ಕಂಠಾಭರಣಗಳಾಗಿ ಪ್ರಜ್ವಲಿಸಲೆಂದು ಕೋರುತ್ತೇವೆ. ಸರ್ವರೂ ಇವರ ಪ್ರೋತ್ಸಾಹಕ್ಕೊಳಗಾಗಿ ಧರ್ಮಗ್ರಂಥಗಳನ್ನು ತರಿಸಿಕೊಂಡು ಓದಿ ಧನ್ಯರಾಗಬೇಕೆಂದು ಆಶಿಸುತ್ತೇವೆ. ಸದಾ ಗುರುಸೇವೆಯಲ್ಲಿಯೇ ಲೋಲುಪರಾಗಿರುವ ಈ ಗುರುಭಕ್ತಶಿಖಾಮಣಿಗಳಿಗೆ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನಿತ್ತು ರಕ್ಷಿಸಲೆಂದು ಹಾರೈಸುತ್ತೇವೆ.

ಸ್ವೀಕಾರ.

ಬೆಳಗಾಂವ ಡಿಸ್ಟ್ರಿಕ್ಟ್ ಘೋಡಗೇರಿಗ್ರಾಮದಲ್ಲಿ ಎರಡು ಪ್ರಾಚೀನ ಶಿವಾಲಯಗಳನ್ನು ಜೀರ್ಣೋದ್ಧಾರಮಾಡಿದ ಸಮಯದಲ್ಲಿಯೂ ಹಾಗೂ ಘೋಡಗೇರಿಯಿಂದ ಅರ್ಧಮೈಲುದೂರದಲ್ಲಿರುವ ನಿರ್ವಾಣಪ್ಪನ ಗುಡ್ಡದಲ್ಲಿ ರಾರಾಜಿಸುತ್ತಿದ್ದ ಗಂಗಸಿದ್ಧೇಶ್ವರನಿಗೆ ನೂತನವಾದ ಆಲಯವನ್ನು ಕಟ್ಟಿಸಿ ಗಣಾರಾಧನೆಯನ್ನು ನೆರವೇರಿಸಿದ ಸಮಯದಲ್ಲಿಯೂ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 11 ರೂಪಾಯಿಗಳು ಮ|| ರಾ|| ಮಲ್ಲಪ್ಪ ಬಾಳಪ್ಪ ಗುಡಕೇತ್ರಿ ಇವರ ದ್ವಾರಾ ತಲ್ಪಿರುತ್ತವೆ.

ತೀರ್ಥಹಳ್ಳಿ ತಾಲ್ಲೂಕು ಭಾಂಡ್ಯ ಗ್ರಾಮದ ಮ|| ರಾ|| ರುದ್ರಪ್ಪಗೌಡರವರು ತಮ್ಮ ಜಾತಕರೀತಿಯಂತೆ ಗ್ರಹಶಾಂತಿಯನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಜಳಬೈಲು ನಾಗಪ್ಪಗೌಡರವರ ದ್ವಾರಾ ತಲ್ಪಿರುತ್ತವೆ.

ಸೋಲಾಪುರ ಡಿ|| ಹುಟಗಿಗ್ರಾಮದಲ್ಲಿ ನೆರವೇರಿದ ಕಾರ್ತಿಕಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಷ|| ಬ್ರ|| ಶ್ರೀ ಪಟ್ಟದಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಸಹಾಯಕರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ನನ್ನ ಯುರೋಪದ ಪ್ರವಾಸ.

(ಮ|| ರಾ|| ಎಂ. ಬಿ. ಮಿಣಜಗಿ ಎ. ಎಂ. ಲಂಡನ್)

ನಾನು ಲಂಡನ್ನಿನಲ್ಲಿದ್ದಾಗ ಕಾಲೇಜದ ಪ್ರಿನ್ಸಿಪಾಲರು "ಟುವಾರ ಗ್ಯಾಲರಿ" ಯ ಸೌಂದರ್ಯದ ವಿಷಯಕ್ಕೆ ಮೇಲಿಂದಮೇಲೆ ಹೇಳುತ್ತಿದ್ದರು. ಇದು ಜಗತ್ಪ್ರಸಿದ್ಧ ಶಿಲ್ಪಿಗಳು ಕೆತ್ತಿದ ಅಸಂಖ್ಯ ಶಿಲ್ಪಕಲೆಗಳ ಬೀಡಾಗಿರುವದರಿಂದ ಬೇಸಿಗೆಯ ಸೂಟಿಯಲ್ಲಿ ನೋಡಲಿಕ್ಕೆ ಹೋಗಬೇಕೆಂದು ಯೋಚಿಸಿದೆನು. ಸೂಟಿಗೆ ಹೊರಡುವಷ್ಟರಲ್ಲಿ ನನ್ನ ಅನುಭವಿಕ ಮಿತ್ರರೊಬ್ಬರು ಯುರೋಪದಲ್ಲಿಯ ಪ್ರವಾಸವು ಲಂಡನ ಪಟ್ಟಣದಲ್ಲಿರುವದರ ಕೈಂತ ಹೆಚ್ಚಿಗೆ ಬರುವದಿಲ್ಲೆಂದು ಹೇಳಿದ್ದರಿಂದ, "ಟುವಾರ ಗ್ಯಾಲರಿ" ನೋಡಬೇಕೆಂದು ಮತ್ತು ಸ್ವಿಟ್ಜರ್ಲಂಡದಲ್ಲಿರುವ ಬೇರೆ ಬೇರೆ ಸೃಷ್ಟಿ ಸೌಂದರ್ಯಗಳನ್ನು ಚಿತ್ರಿಸಬೇಕೆಂದು ನಿರ್ಧರಿಸಿದೆನು. ನಾನು ಇಂಗ್ಲೀಷ ಶಾಲೆಯ ಇಯತ್ತೆಯಲ್ಲಿದ್ದಾಗ ಓದುತ್ತಿದ್ದ ಲಸೆರ್ನ ಮತ್ತು ಲೇಮನ್ನ ಸರೋವರಗಳನ್ನೂ ಸ್ವಿಟ್ಜರ್ಲಂಡದ ಸೃಷ್ಟಿ ಸೌಂದರ್ಯವನ್ನೂ ಪ್ರತ್ಯಕ್ಷ ನೋಡುವ ಸಂಯೋಗವು ಒದಗಿದ್ದಕ್ಕಾಗಿ ನಾನು ದೇವರನ್ನು ಪ್ರಾರ್ಥಿಸಿದೆನು.

ನಮ್ಮ ಕಾಲೇಜವು ಜುಲೈ ತಾ|| ೧೮ನೆಯು ತಾರೀಖಿನ ದಿವಸ ಸೂಟಿಬಿಟ್ಟಿತು. ತಾ|| ೧೯ನೆಯು ದಿವಸ ಮುಂಜಾನೆ ಪ್ಯಾರಿಸ ...

... ನನ್ನ ವಸತಿಯ ಸ್ಥಳಕ್ಕೆ ಹೋದ ಬಳಿಕ ಆಗಸ್ಟ ೯ ನೇ ತಾರೀಖಿನ ದಿವಸ ತಿರುಗಾಡಲಿಕ್ಕೆ ಹೊರಟೆನು. ಸಾಯಂಕಾಲದ ಸಮಯವಾದುದರಿಂದ ಸುವರ್ಣವರ್ಣದ ಕಿರಣಗಳು ಹಿಮಾಚ್ಛಾ...

... ಅನಂದವಾಗುತ್ತವೆ. ಈ ದೇಶದ ಜನರು ಅತಿಥಿಸತ್ಕಾರದಲ್ಲಿ ಬಹು ಮುಂದೊರೆದವರೆಂಬುದನ್ನು ನಾನು ಈ ವೊದಲಿಗೆ ಉಲ್ಲೇಖಿಸಿದ್ದೇನೆ.

(ಸ. ಕ.)

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲನೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತಿಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[20]

ಸ್ತ್ರೀರೋಗ ನಿವಾರಣೆ ಚೂರ್ಣ.

...

ಪತ್ತೆ :—ವೈದ್ಯ ಪಾ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜಿ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಶುದ್ಧ ಸಿದ್ಧ ವೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪುಷ್ಕರೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ...

...

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳಿಂ. ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ...

...

ವ್ಯವಸ್ಥಾಪಕರು,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ, ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ...

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[35] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುಪತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಕೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ...

... ತಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರುಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[21]

ಪತ್ತೆ :—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛಿಸತಕ್ಕವರಾದರೆ ಕಂಪೌಂಡ್ ಸಿರಫ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ...

ಮಲೇಜ್ವರಕ್ಕೆ ಮಲೇರಿಯಾನ.

...

[19] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾಪಟಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[22] ಪೋ. ಬಾ. ೫೧೦. ಮದರಾಸು.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಜಯಮಂಗಲ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವತತ್ವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಪದಚ್ಛೇದಪರಿಷ್ಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ! ಸಾಲವು ದೊರಕುವುದು!! ಅಪೂರ್ವಲಾಭ!!!

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್:—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ಹಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರಿವಿಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (3)

ನೆ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಡಿಶಂಬರ್ ೧೯೩೦ [ಸಂಚಿಕೆ ೩೪

ನೂತನ ಭಾಷಣ! ನೂತನ ಭಾಷಣ!!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾ ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಳದೇಶದ ವೃತ್ತಾಂತಗಳು.

ಮೈಸೂರು ಟ್ರೇನಿಂಗ್ ಕಾಲೇಜ್ ಪ್ರಿನ್ಸಿಪಾಲರಾದ ಡಾ|| ಕೆ. ಸಿದ್ದಲಿಂಗಯ್ಯ, ಎಂ.ಎ., ಪಿ.ಎಚ್.ಡಿ. ಯವರು ಮಿ|| ಕೆ. ಎಸ್. ಕಿನಿಯವರ ಸ್ಥಾನದಲ್ಲಿ ಮೈಸೂರು ದೇಶೀಯಪರೀಕ್ಷಾ ಸಂಘದ ಮೆಂಬರರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳುತ್ತೇವೆ.

ಗೊಲ್ಲರೆಂಬ ಸಮಾಜದವರು ಇತಃಪರ ಯಾದವರೆಂದು ಕರೆದುಕೊಳ್ಳಬಹುದೆಂದೂ, ಎಲ್ಲಾ ಸರ್ಕಾರಿ ಕಾಗದಪತ್ರಗಳಲ್ಲಿಯೂ, ಮುಂದಿನ ವರ್ಷಪ್ರಾರಂಭವಾಗುವ ಸೆನ್ಸಸ್ಸಿನಲ್ಲಿಯೂ ಆ ಹೆಸರಿನಿಂದ ಬರೆಯಬಹುದೆಂದೂ ಮೈಸೂರು ಸರ್ಕಾರದವರ ಅಪ್ಪಣೆಯಾಗಿದೆ.

ಲಾರ್ಡ್‌ಹಾರ್ಡಿಂಜರವರು ಒಂದು ವಾರದವರೆಗೂ ಮೈಸೂರು ಸಂಸ್ಥಾನದಲ್ಲಿದ್ದು ಅಪೂರ್ವವಾದ ದೃಶ್ಯಗಳನ್ನು ನೋಡಿ ಸಂತುಷ್ಟಚಿತ್ತರಾಗಿ ಮದರಾಸಿಗೆ ಹೋದರೆಂದೂ, ಅವರು ಹೊರಡುವಾಗ ಕೈಲೈಸ್ನೇಹಪೂರ್ವಕವಾಗಿ ಶ್ರೀಮನ್ಮಹಾರಾಜರು ದಯಮಾಡಿಸಿದ್ದರೆಂದೂ ಕೇಳುತ್ತೇವೆ.

ರಾಜಧಾನಿಯಲ್ಲಿ ಇದೇ ತಿಂಗಳು 27, 28 ಮತ್ತು ೨೯ನೆಯ ತಾರೀಖಿನ ದಿವಸಗಳಲ್ಲಿ 21ನೆಯ ಸಿವಿಲ ಭಾರತಾಯುರ್ವೇದ ಮಹಾಸಮ್ಮೇಳನದ ಅಧಿವೇಶನವು ಜಗತ್ಪ್ರಸಿದ್ಧರಾದ ಕಲ್ಕತ್ತೆಯ ಮಹಾಮಹೋಪಾಧ್ಯಾಯ ಕವಿರಾಜಗಣನಾಥ ಸೇನರವರ ಅಧ್ಯಕ್ಷತೆಯಲ್ಲಿ ಜರುಗುವುದು. ಅದರ ಕಾರ್ಯಕ್ರಮವನ್ನು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಪ್ರಕಟಿಸಿರುತ್ತೇವೆ. ವಾಚಕರು ಓದಿಕೊಳ್ಳಬೇಕು.

ಮಿ|| ಕೆ. ಚಂಗಲರಾಯರೆಡ್ಡಿಯವರು ದವಸಧಾನ್ಯಗಳ ಬೆಲೆಯು ಕೇವಲ ಕಡಿಮೆಯಾಗಿ ರೈತರಿಗೆ ವಿಶೇಷ ತೊಂದರೆಯಾಗಿರುವುದರಿಂದ, ಅವರಿಗೆ ಪ್ರತ್ಯತೋಚಿತ ಸಹಾಯಮಾಡಲು ತಕ್ಕ ಏರ್ಪಾಟುಗಳನ್ನು ಮಾಡುವುದು ಅವಶ್ಯಕವೆಂಬ ಠರಾವನ್ನು ತಂದರು. ಮಿ|| ಜಿ. ಚನ್ನಪ್ಪ, ಮಿ|| ಬೇಲೂರು ಶ್ರೀನಿವಾಸಯ್ಯಂಗಾರ್ ಮೊದಲಾದ ಮೆಂಬರರು ಆ ಠರಾವನ್ನು ಸಮರ್ಥಿಸಿ ಮಾತನಾಡಿದರು. ಸರ್ಕಾರದವರು ಆ ಠರಾವನ್ನು ಸ್ವಲ್ಪ ಬದಲಾಯಿಸಿ ಅಂಗೀಕರಿಸಿದರು.

ಇದೇ ತಿಂಗಳು 14 ನೆಯ ತಾರೀಖಿನ ದಿವಸ ಬೆಂಗಳೂರು ಪಟ್ಟಣದ ಕೋ-ಆಪರೇಟಿವ್ ಸೊಸೈಟಿಯ ಸಿಲ್ವರ್‌ಜ್ಯೂಬಿಲಿಯ ಮಹೋತ್ಸವವು ರಾಜಕಾರ್ಯಪ್ರಸಕ್ತ ದಿವಾನ್‌ಬಹದ್ದೂರ್ ಎಂ. ಎನ್. ಕೃಷ್ಣರಾಯರವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರಿತು. ಆ ಕಾಲದಲ್ಲಿ ರಾಜಸಭಾಭೂಷಣ ಮ|| ರಾ|| ಕೆ. ಆರ್. ಶ್ರೀನಿವಾಸಯ್ಯಂಗಾರ್, ರಾಜಕಾರ್ಯಪ್ರಸಕ್ತ ಮಿ|| ಎಂ. ಶಾಮರಾವ್, ರಾಜಕಾರ್ಯಪ್ರವೀಣ ಮಿ|| ಕೆ. ಎಸ್. ಚಂದ್ರಶೇಖರ ಐಯ್ಯರ್, ಮಿ|| ಸಿ. ಎಸ್. ದೊರೆಸ್ವಾಮಿ ಐಯ್ಯರ್, ಮಿ|| ಕೆ. ರಾಮಯ್ಯ ಮೊದಲಾದ ದೊಡ್ಡ ಮನುಷ್ಯರು ಹಾಜರಿದ್ದ ದಿವಾನ್‌ಸಾಹೇಬರವರು ಸಯುಕ್ತಿಕವೂ, ಸ್ವಾರಸ್ಯವೂ ಆದ ಭಾಷಣವನ್ನು ಮಾಡಿದರು.

ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಇದೇ ತಿಂಗಳು 17 ನೆಯ ತಾರೀಖಿನ ದಿವಸ ಮ|| ರಾ|| ಡಿ. ಎಸ್. ಮಲ್ಲಪ್ಪನವರು ವರ್ತಕರಿಗೂ ರೈತರಿಗೂ ಸರ್ಕಾರದವರು ಕಡಿಮೆ ದರದ ಬಡ್ಡಿಯ ಮೇಲೆ ಸಾಲವನ್ನು ಕೊಟ್ಟು ಈಗಿನ ಕಷ್ಟಕಾಲದಲ್ಲಿ ಸಹಾಯಮಾಡಬೇಕೆಂದು ಠರಾವನ್ನು ತಂದರು. ಮಿ|| ಡಿ. ಎಚ್. ಚಂದ್ರಶೇಖರಯ್ಯನವರೂ, ಮಿ|| ಚಂಗಲರಾಯರೆಡ್ಡಿಯವರೂ, ಮಿ|| ಎಚ್. ಸಿದ್ದಯ್ಯನವರೂ, ಮಿ|| ಪಿ. ಸುಬ್ಬರಾಮಶೆಟ್ಟರೂ, ಮಿ|| ಎಚ್. ಸಿ. ದಾಸಪ್ಪನವರೂ, ಡಾ|| ಡಿ. ಎಸ್. ರಾಮಚಂದ್ರರಾಯರೂ ಈ ಠರಾವನ್ನು ಸಮರ್ಥಿಸಿದರು. ಅಧಿಕಾರಿಗಳು ವರ್ತಕರ ಮತ್ತು ರೈತರ ಕಷ್ಟಗಳು ತಮಗೆ ಮನವರಿಕೆಯಾಗಿ ಅವರ ವಿಷಯದಲ್ಲಿ ತುಂಬಾ ಸಹಾನುಭೂತಿಯಿದ್ದರೂ ಸದ್ಯದಲ್ಲಿ ಸಹಾಯ ಮಾಡಲು ಸಾಧ್ಯವಿಲ್ಲವೆಂದು ಹೇಳಿದರು. ಆಗ ಓಟುಗಳನ್ನು ತೆಗೆಯಲು 19 ಓಟುಗಳು ಠರಾವಿನ ಪರವಾಗಿಯೂ, 22 ಓಟುಗಳು ವಿರೋಧವಾಗಿಯೂ ಬಿದ್ದುದರಿಂದ ಠರಾವು ಉತ್ತೀರ್ಣವಾಗಲಿಲ್ಲ.

ಸತ್ಯಾಗ್ರಹಸಮರದಲ್ಲಿ ಸೇರಿ 6 ತಿಂಗಳುಗಳ ಕಠಿಣ ಶಿಕ್ಷೆಗೆ ಗುರಿಯಾಗಿರುವ ವೇ|| ರಾಮದುರ್ಗಮಠದ ಮರುಳಾರಾಧ್ಯಶಾಸ್ತ್ರಿಗಳನ್ನು "ಬ" ವರ್ಗದಿಂದ "ಕ" ವರ್ಗಕ್ಕೆ ಸೇರಿಸಿದ್ದಾರೆಂದು ತಿಳಿದುಬರುತ್ತದೆ.

ಸ್ವೀಕಾರ.

ಹಾಸನ ಡಿ|| ಬೇಲೂರು ಟೌನ್ ನಿವಾಸಿಗಳಾದ ಮ|| ರಾ|| ಎಂ. ಆರ್. ಸಿದ್ಧರಾಮಪ್ಪಶೆಟ್ಟರು ತಮ್ಮ ಜಾತಕರೀತಿಯಂತೆ ರುದ್ರಾಧ್ಯಾಯಜಪಪೂರ್ವಕ ಶಾಂತಿಕರ್ಮವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಚಿತ್ರದುರ್ಗ ತಾ|| ಎಳಗೋಡುಗ್ರಾಮದ ಸಾಹುಕಾರ್ ಮ|| ರಾ|| ದುಮ್ಮಿ ಗುರುಸಿದ್ಧಪ್ಪನವರ ತೃತೀಯಪುತ್ರ ಚಿ|| ಸ|| ಮುರಿಗಪ್ಪನಿಗೆ ರಾಣೇಬೆನ್ನೂರು ತಾ|| ಹಲಗೇರಿ ಗ್ರಾಮದ ಮ|| ರಾ|| ಗಟ್ಟಿನಮನೆ ಜಂಬಣ್ಣನವರ ಪುತ್ರಿ ಚಿ|| ಸೌ|| ಭಾಗ್ಯಮ್ಮನೆಂಬ ಕನ್ಯೆಯನ್ನೂ, ದಾವಣಗೆರೆ ಸೋಮಾಪುರ ಮ|| ರಾ|| ಚನ್ನಬಸಪ್ಪನವರ ಪುತ್ರ ಚಿ|| ಸ|| ಚನ್ನಪ್ಪನಿಗೆ ಅಣಜಿ ಗ್ರಾಮದ ಮ|| ರಾ|| ಶೆಟ್ಟಿಕೊಟ್ರಪ್ಪನವರ ಪುತ್ರಿ ಚಿ|| ಸೌ|| ದೇವೀರಮ್ಮನೆಂಬ ಕನ್ಯೆಯನ್ನೂ ನಿಶ್ಚಯಿಸಿ ಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ|| ಕೆ. ಎಂ. ರಾಜಶೇಖರಯ್ಯನವರ ದ್ವಾರಾ ತಲ್ಪಿರುತ್ತವೆ.

ಗುಲ್ಬರ್ಗಾ ಡಿ|| ದಿಗ್ಗಾವಿ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಪಟ್ಟದ ರುದ್ರಮುನಿಶಿವಾಚಾರ್ಯರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ 1 ರೂ. ಯನ್ನು ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಬೊಂಬಾಯಿಯ ಭಾರತೀಯ ವರ್ತಕಸಂಘದ ಪ್ರೆಸಿಡೆಂಟ್ ಮೊದಲಾದ ಸದ್ಗೃಹಸ್ಥರು ಮರಣ ಶಾಸನಕ್ಕೆ ಗುರಿಯಾಗಿರುವ ಸೋಲಾಪುರದ ಮ|| ರಾ|| ಧನಸೆಟ್ಟಿ ಮಲ್ಲಪ್ಪನವರೇ ಮೊದಲಾದವರ ವಿಷಯದಲ್ಲಿ ಗೌರ್ನರವರನ್ನು ಕಾಣಲು ಅನುಮತಿಯನ್ನು ಕೇಳಿದ್ದಿದು ಸರಿಯಷ್ಟೆ! ಗೌರ್ನರರು ತಮ್ಮನ್ನು ಕಾಣುವುದರಿಂದ ಏನೂ ಪ್ರಯೋಜನವಿಲ್ಲವೆಂದು ಉತ್ತರವನ್ನಿತ್ತರು. ಅನಂತರ ಸದರಿ ಸಂಘದ ಪ್ರೆಸಿಡೆಂಟರು ವೈಸರಾಯರವರಲ್ಲಿ ಈ ವಿಷಯವನ್ನು ಅರಿಕೆಮಾಡಿಕೊಳ್ಳಲು ಅವಕಾಶಕೊಡಬೇಕೆಂದು ತಂತಿಯನ್ನು ಕಳುಹಿಸಿರುವರು. ಹದಿನಾಲ್ಕು ಸ್ತ್ರೀಸಂಘಗಳ ಪರಿಯಿಂದ ಬೊಂಬಾಯಿಯ ನಿವಾಸಿಗಳಾದ ಶ್ರೀಮತಿ ಲಕ್ಷ್ಮೀಬಾಯಿಯವರು ಸೋಲಾಪುರದ ಆ ನಾಲ್ವರು ದುರ್ದೈವಿಗಳ ವಿಷಯದಲ್ಲಿ ದಯೆಯನ್ನು ತೋರಿಸಿ ಭೀಕರವಾದ ಮರಣದಂಡನೆಯನ್ನು ತಪ್ಪಿಸಬೇಕೆಂದು ವೈಸರಾಯರವರಿಗೂ ಮತ್ತು ವೈಸರಾಯರವರ ಮನಸ್ಸಿನ ಮೇಲೆ ಪರಿಣಾಮವಾಗುವಹಾಗೆ ಪ್ರೋತ್ಸಾಹಿಸಬೇಕೆಂದು ಅವರ ಪತ್ನಿಯವರಿಗೂ ತಂತಿಯನ್ನು ಕಳುಹಿಸಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಔದಾರ್ಯ.

ಬೆಂಗಳೂರು ಡಿಸ್ಟ್ರಿಕ್ಟ್ ಹೊಸ್‌ಕೋಟೆ ತಾಲೂಕು ಕಾಕ್ ಕಾಕ್ ಹಳ್ಳಿ ರಸ್ತೆಯಲ್ಲಿರುವ ಅನ್ನೇರಹಳ್ಳಿಯ ಸಮೀಪದ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಶ್ರೀ ಮುದ್ದುಬಸವಲಿಂಗಸ್ವಾಮಿಗಳ ಪಟ್ಟಾಧ್ಯಕ್ಷತೆಯಲ್ಲಿಯೂ ಶ್ರೀ ಚನ್ನವೀರದೇವರ ಕಾರಭಾರದಲ್ಲಿಯೂ ಇರುವ ಬಾಳೆಹೊನ್ನೂರು ಪೀಠಕ್ಕೆ ಸೇರಿದ ರಾಜಾಪುರದ ಮಠದಲ್ಲಿ ಜಾತ್ರೆಕಾಲದಲ್ಲಿಯೂ ಮತ್ತು ಇತರ ದಿವಸಗಳಲ್ಲಿಯೂ ಪ್ರತಿದಿವಸವೂ ತಪ್ಪದೆ ಯಾತ್ರಾರ್ಥಿಗಳಾಗಿ ಬರುವ ಸಾವಿರಾರು ಜನರಿಗೆ ಸದಾ ದಾಸೋಹವನ್ನು ನಡೆಯಿಸಲು ಸಹಾಯಮಾಡುವುದಕ್ಕಾಗಿ ಹೊಸ್‌ಕೋಟೆ ತಾಲೂಕು ಬಿದರಿಯಲ್ಲಿ ಪ್ರತಿವರ್ಷವೂ ತಪ್ಪದೆ ಸಹಾಯ ಮಾಡುವವರಾಗಿ ವಾಗ್ದಾನಮಾಡಿರುವ ಧಾರ್ಮಿಕರ ಲಿಸ್ಟ್.

ಚನ್ನಶೆಟ್ಟರು 2 ರೂ. ಮರಿದೇವರು 1 ರೂ. ಬಿ. ಸಿ. ರೇವಣಶಾಸ್ತ್ರಿಗಳು 12½ ಸೇರು ಅಕ್ಕಿ. ಸಿ. ಗು. ಚನ್ನಪ್ಪನವರು 12½ ಸೇರು ಅಕ್ಕಿ. ಬಿ. ಆರ್. ಶಿವರುದ್ರಯ್ಯನವರು 1 ರೂ. ಚ. ವೀರಭದ್ರಪ್ಪನವರು ½ ಮ. ಎಣ್ಣೆ. ಆರ್. ವೆಂಕಟಾಚಲಯ್ಯಂಗಾರ್‌ರವರು 2 ರೂ. ಜ್ಯೋ. ದಾಸಪ್ಪನವರು 1 ಪಂ. ಎಣ್ಣೆ. ಜ್ಯೋ. ಬಾಲಯ್ಯನವರು 1 ಗಂ. ಎಣ್ಣೆ. ಜ್ಯೋ. ತಿಮ್ಮಪ್ಪನವರು 1 ಪಂ. ಎಣ್ಣೆ. ಬಿ. ಯಂ. ವೀರರಾಜೇ ಅರಸ್‌ರವರು 1 ರೂ. ಬೇಳೆ. ಯಂ. ಮಲ್ಲಪ್ಪನವರು ½ ಮ. ಎಣ್ಣೆ. ಬಿ. ಸಿ. ರೇವಣ್ಣನವರು 75 ಸೇ. ಅಕ್ಕಿ. ಜ್ಯೋ. ರಾಮಸ್ವಾಮಪ್ಪನವರು 1 ಪಂ. ಎಣ್ಣೆ. ದೊ. ಚನ್ನಪ್ಪನವರು 1 ಧ. ಎಣ್ಣೆ. ಜ. ರೇವಣ್ಣನವರು 6¼ ಸೇ. ಅಕ್ಕಿ. ವರ್ದೀರ್ ಪುಟ್ಟಯ್ಯನವರು 1 ರೂ. ಅಕ್ಕಿ. ಬಿ. ಸಿ. [illegible] ಅರಸ್‌ರವರು 6¼ ಸೇರು ಅಕ್ಕಿ. ಚಿಕ್ಕವೆಂಕಟಪ್ಪನ[illegible] ಎಣ್ಣೆ. ಜ್ಯೋ. ಮಾರಕೆಟ್ಟಪ್ಪನವರು 1 ಧ. ಎಣ್ಣೆ. [illegible] ಪ್ಪನವರು 6¼ ಸೇ. ಅಕ್ಕಿ. ಸಿದ್ಧಲಿಂಗಪ್ಪನವರು 5 ರೂ. ಬೇಳೆ. ಬಸಮ್ಮನವರು 6¼ ಸೇ. ಅಕ್ಕಿ. ಮುನಿಸೋಜಿರಾಯರು 8 ಆಣೆ. ದೊ. ಅ. ಮರಿಯಪ್ಪನವರು 18¾ ಸೇ. ಅಕ್ಕಿ.

ಬಿದರಿ. ತಾ|| 19-12-30 B. C. Mallappa.

ಪ್ರೈಮರಿಸ್ಕೂಲ್ ಪ್ರವೇಶೋತ್ಸವ, ಶೀಳನೆರೆ.

30-11-1930ನೇ ಭಾನುವಾರ ಸ್ಕೂಲಿನ ಓಪನಿಂಗ್ ಉತ್ಸವಕ್ಕೆ ಮೈಸೂರು ಡಿ|| ಡೆಪ್ಯುಟಿಕಮಿಷನರ್ ಮಿ|| ಅನಂತರಾಮಯ್ಯ ಸಾಹೇಬರನ್ನೂ, ಡಿ|| ಬೋರ್ಡ್ ಪ್ರೆಸಿಡೆಂಟ್ ಮಿ|| ಪುಟ್ಟಸ್ವಾಮಿ, ಬಿ.ಎ.,ಬಿ.ಎಲ್. ರವರನ್ನೂ, ಕೆಲವು ಜನ ಡಿ|| ಬೋರ್ಡ್ ಮೆಂಬರುಗಳನ್ನೂ, ಇತರರನ್ನೂ, ಹುದ್ದೆದಾರ್, ಡಿ|| ಎಜ್ಯುಕೇಟ್ ಆಫೀಸರುಗಳನ್ನೂ ಮ|| ಶೀಳನೆರೆ ಡಿ|| ಬೋರ್ಡ್ ಮೆಂಬರು ತಿಮ್ಮೇಗೌಡರು ಬರಮಾಡಿಕೊಂಡು ಬಹಳ ವಿಜೃಂಭಣೆಯಿಂದ ಎಲ್ಲಾ ಕಾರ್ಯಕಲಾಪಗಳನ್ನೂ ಊಟ ವಗೈರೆ ಆತಿಥ್ಯವನ್ನೂ ಚೆನ್ನಾಗಿ ನಡೆಯಿಸಿದರು. ನಮ್ಮ ಡೆ|| ಕಮಿಷನರ್ ಸಾಹೇಬರು ಶರೀರದಲ್ಲಿ ಅಸ್ವಸ್ಥರಾಗಿದ್ದಾಗ್ಯೂ, ಮತ್ತು ಇತರ ಸರಕಾರಿ ಕೆಲಸದಗಲಾಟೆ ಇದ್ದಾಗ್ಯೂ ವ್ಯವಧಾನಮಾಡಿಕೊಂಡು ದಯಮಾಡಿಸಿದ್ದು ಅಲ್ಲಿ ಸೇರಿದ್ದ ಪ್ರಜೆಗಳಿಗೆಲ್ಲಾ ಬಹಳ ಸಂತೋಷವನ್ನುಂಟುಮಾಡಿತು. ಡೆ|| ಕಮಿಷನರ್ ಸಾಹೇಬರು ದಯಮಾಡಿಸುವದರಿಂದ ಅನೇಕ ಹಳ್ಳಿಗರಿಗೆ ಮನಸ್ಸಂತೋಷವುಂಟುಮಾಡಿ ಮುಂದೆ ಅನೇಕ ಧರ್ಮ ಕೆಲಸ ಮಾಡಲು ಆಸಕ್ತಿ ಹುಟ್ಟಲು ಮುಖ್ಯ ಕಾರಣವಾಯಿತು. ಆದರೆ ಆ ದಿವಸ 5 ಗಂಟೆಯಲ್ಲಿ ಮರ್ಯಾದೆ ನಡೆದಾಗ ನಮ್ಮ ಡಿ|| ಡೆಪ್ಯುಟಿಕಮಿಷನರ್ ಸಾಹೇಬರಿಗೆ ಹಾರ ಹಾಕಿದನಂತರ ಅವರ ಬಲಪಕ್ಕದಲ್ಲೇ ಕುಳಿತಿದ್ದ ಡಿ|| ಬೋರ್ಡ್ ಪ್ರೆಸಿಡೆಂಟರಿಗೆ ಹಾಕದೆ ಇತರರಿಗೆ ಹಾರವನ್ನು ಹಾಕಿದರು. ಇದಕ್ಕಾಗಿ ಅಲ್ಲಿ ಬಂದಿದ್ದವರ ಪೈಕಿ ಡಿ|| ಬೋರ್ಡ್ ಮೆಂಬರು ಕೆಲವರು ಹಾರ ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ಮಾತ್ರ ಕೆಲವರಿಗೆ ವಿಷಾದವನ್ನುಂಟುಮಾಡಿರುತ್ತದೆ.

B. Laxminaranappa,
D. B. Member.

ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು.

ದುಃಖವಾರ್ತೆ.

ನಿಜಾಂ ಸ್ಟೇಟ್ ಷಡಗಿರಿ ತಾಲೂಕು ಪೈಕಿ ಮುಧೋಳ ಗ್ರಾಮದಲ್ಲಿಯ ಶುದ್ಧವೀರಶೈವ ವಂಶೋದ್ಭವರೂ, ಲಿಂಗನಿಷ್ಠಾಗರಿಷ್ಠರೂ, ಆಗರ್ಭಶ್ರೀಮಂತರೂ ಆದ ಮ|| ರಾ|| ರಾ|| ಗುರುಬಸವಪ್ಪ ಬಸನಾಳೆ, ಇವರ ಪ್ರೀಮಜನನಿಯಾದ ಶ್ರೀಮತಿ ಸಿಂಬಮ್ಮನವರು ಇದೇ ಮಾರ್ಗಶೀರ್ಷ ಶು|| ೬ ಗುರುವಾರ ದಿವಸ ತಮ್ಮ ಪಾಂಚಭೌತಿಕಶರೀರವನ್ನು ಬಿಟ್ಟು ಲಿಂಗೈಕ್ಯರಾದರು. ಜಗತ್ತಿನಲ್ಲಿರುವ ಪ್ರತಿಯೊಬ್ಬರು ಯಾವುದಾದರೊಂದು ರೋಗದಿಂದ ಮರಣೋನ್ಮುಖರಾಗುತ್ತಾರೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಆದರೆ ಈ ಮಾತೆಯವರು ದೇಹಪತನಕ್ಕಿಂತ ಸಾರಮಾಗಿ ಮಂಗಳವಾರ ದಿವಸ ಚಟ್ಟಿಯ ಹಬ್ಬದ ಕಾರ್ಯವನ್ನು ಸ್ವತಃ ಮಾಡಿದರು. ಮಧ್ಯಾಹ್ನದಿಂದ ಸಾಯಂಕಾಲದವರೆಗೆ ತಮ್ಮ ಬಂಧುಬಾಂಧವರಲ್ಲದೆ ಇತರರಿಗೂ ತೃಪ್ತಿಯನ್ನು ಸ್ವತಃ ಮಾಡಿಸಿ, ತಮ್ಮ ಖಾಸ ಅಕ್ಕಂದಿರಾದ ಶ್ರೀಮತಿ ವೀರಸಂಗಮ್ಮನವರು ಮತ್ತು ಸೋದರಿಯರು, ಪುತ್ರಪೌತ್ರರು ರಾತ್ರಿ 10 ಘಂಟೆಯ ಸಮಯಕ್ಕೆ ನಿತ್ಯದಂತೆ ಭೋಜನಮಾಡಿ ಮಲಗಿದರು. ಈ ಅಕ್ಕತಂಗಿಯರು ಒಂದೇ ಹಾಸಿಗೆಯಲ್ಲಿ ಮಲಗಿದರು. 2 ನೆಯ ಪ್ರಹರದ ಸಮಯದಲ್ಲಿ ಶ್ರೀಮತಿ ಸಿಂಬಮ್ಮನವರು ದೀರ್ಘನಿದ್ರೆಯನ್ನು ಹೊಂದಿದ್ದರು. ಅದನ್ನು ತಿಳಿಯದೆ ವೀರಸಂಗಮ್ಮನವರು ತಂಗಿ, ತಂಗಿ, ಎಂಬ ಹಾಹಾಕಾರ ಧ್ವನಿಯನ್ನು ತೆಗೆದಕೂಡಲೇ ಸರ್ವಪುತ್ರಪೌತ್ರರು ಬಂದುನೋಡುವದರೊಳಗಾಗಿ ಆಶ್ಚರ್ಯವೆನಿಸಿತು. ಏನಿದು ಗುರುವಿನಮಹಿಮೆಯು? ಇಂಥ ಮರಣವು ಪುಣ್ಯಾತ್ಮರಿಗಲ್ಲದೆ ಬೇರೆಯವರಿಗೆ ಸಾಧ್ಯವಿಲ್ಲವೆಂದು ಜನರು ನುಡಿಯುತ್ತಿದ್ದರು. ಈ ಮಾತೆಯಲ್ಲಿ ಗುರುದೈವಭಕ್ತಿ ಮೊದಲಾದ ಅಮೂಲ್ಯಗುಣಗಳು ವಾಸಮಾಡಿಕೊಂಡಿದ್ದುದರಿಂದ ಮಹಿಮಾಶಾಲಿಯಾದ ಗುರುವು ತನ್ನ ಅಂತರಂಗವೆಂಬ ಗುಹೆಯಲ್ಲಿ ಲೀನಮಾಡಿಕೊಂಡನೋ ಏನೋ ಎನ್ನುವ ಹಾಗೆ ಪರಿಣಮಿಸಿತು. ಇವರ ಪುತ್ರರು ಜನನಿಯ ಆತ್ಮಶಾಂತಿಗಾಗಿ ಅನೇಕ ದಾನಧರ್ಮಕಾರ್ಯಗಳನ್ನು ಮನಃಪೂರ್ವ ಮಾಡಿದರು. ಆ ಸಮಯದಲ್ಲಿ ಶ್ರೀ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ 2 ರೂ.ಗಳನ್ನು ಸಮರ್ಪಿಸಿದರು. ಶ್ರೀ ಶಿವಲಿಂಗಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳ ಅಭ್ಯಂಗಸ್ನಾನಕ್ಕೆ ಸ್ವಲ್ಪ ಆಹಾರಂ ಧನಿಯಾರವನ್ನು ಸಮರ್ಪಿಸಿದರು. ಅನೇಕ ಬಡಜನರಿಗೆ ಬಟ್ಟೆ ಕುಪ್ಪಸಗಳನ್ನು ಕೊಟ್ಟರು. ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಕೋರುವ,

ಗುಂಡಪ್ಪ ಬಿದಗುಂಡಿ, ಮುಧೋಳ.

ಜಯ ರೇಣುಕ.

ರಾಟೆಯ ಮಹತ್ವ.

ಜನರೆ ಜಾಗ್ರತರಾಗಿ ಜಗದಲಿ |
ಧನವ ಗಳಿಸುತ ಸ್ವಾತ್ರ ಚಂದದಿ |
ಮನಸಿನಿಂದಲಿ ತೀವ್ರತರದಿ ರಾಟೆಯನು ಮುದದಿ ||
ಹೀನದಶೆಯೊಳು ನೀವು ಸಿಲುಕದೆ |
ಜನಿಸಿದೇಹವ ವ್ಯರ್ಥಮಾಡದೆ |
ಮನಸಿನಿಂದಲಿ ಪೂರ್ತಿಗೊಳಿಸಿರಿ ಗಾಂಧಿತತ್ವವನು ||೧||

ಪರರ ಬುದ್ಧಿಗೆ ಮರುಳರಾಗದೆ |
ಧರದಿ ಬಾಳಲು ರಾಟೆತಿರುವಿರಿ |
ಪರಮಗುರುವಿನ ದಯದಿ ಎಮ್ಮಗೆ ರಾಜ್ಯಸಿಗಲೆಂದು ||
ಇರದೆಸುಮ್ಮನೆ ಕಾಲಕಳೆಯದೆ |
ಕರದಿ ಪ್ರೇಮದಿ ನೂಲುತೆಗೆಯುತ |
ಪರಮಪಾವನರಾಟೆಯಿಂದಲಿ ರಾಜ್ಯಸಿಗಲೆಂದು ||೨||

ಶ್ರೀ ಪಟ್ಟಾಧ್ಯಕ್ಷ, ಬೃಹನ್ಮಠ ದಿಗ್ಗಾವಿ.

ಬೆಟ್ಟದಪುರದ ಶ್ರೀ ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳವರ ವಿದ್ಯಾರ್ಥಿನಿಲಯ, ಮೈಸೂರು.

ಈ ವಿದ್ಯಾರ್ಥಿನಿಲಯದ 6 ನೆಯ ವಾರ್ಷಿಕೋತ್ಸವವು ಡಿಸಂಬರ್ 6 ನೆಯ ತಾರೀಖು ಶನಿವಾರದ ದಿವಸ ಮಹಾರಾಜರವರ ಕಾಲೇಜಿನ ಮಹೋಪಾಧ್ಯಾಯರಾದ ಡಾಕ್ಟರ್ ಜಗದೀಶನ್, ಎಂ. ಕೃಷ್ಣರಾಧ್ಯ, ಎಂ.ಎ., ಪಿ ಎಚ್. ಡಿ. ಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬಾಲಕವಿ ಶ್ರೀಮಾನ್ ಕೆ. ವಿ. ಪುಟ್ಟಪ್ಪ ಎಂ.ಎ. ಇವರಿಂದ ವಿರಚಿತವಾದ "ಜಲಗಾರ" ಎಂಬ ನಾಟಕವನ್ನು ಅಭಿನಯಿಸಿ ಪ್ರೇಕ್ಷಕರನ್ನು ಆನಂದಗೊಳಿಸಿದರು. ಬೆಟ್ಟದಪುರದ ಈಗಿನ ಶ್ರೀ ಚನ್ನವೀರದೇಶಿಕೇಂದ್ರಸ್ವಾಮಿಗಳವರು ಈ ಸಂತೋಷಕೂಟದಲ್ಲಿ ಭಾಗಿಗಳಾಗಿದ್ದು ವಿದ್ಯಾರ್ಥಿಗಳ ಮನಸ್ಸನ್ನು ಸಂತೋಷಪಡಿಸಿದರು. ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರಿದ ಬಳಿಕ ಅಧ್ಯಕ್ಷರು ಮೃದುಮಧುರರಸಭರಿತ ವಾಗ್ಝರಿಯಿಂದ ಪ್ರಕೃತಸ್ಥಿತಿಯಲ್ಲಿ ಆಬಾಲವೃದ್ಧರ ಮುಖ್ಯಧ್ಯೇಯವೇನಿರಬೇಕೆಂಬುದನ್ನು ಉದ್ದೇಶಿಸಿ ಸ್ವಾರಸ್ಯವಾಗಿ ಭಾಷಣಮಾಡಿದರು.

ಓರ್ವ ಪ್ರೇಕ್ಷಕ.

ಆಹ್ವಾನಪತ್ರಿಕಾ.

21 ನೆಯ ನಿಖಿಲಭಾರತಾಯುರ್ವೇದಸಮ್ಮೇಳನವು ಮತ್ತು ಆಯುರ್ವೇದೀಯ ವಸ್ತುಪ್ರದರ್ಶನವು ಇದೇ 1930 ನೆಯ ಡಿಸೆಂಬರ್ ತಾರೀಖು 27, 28 ಮತ್ತು 29 ರಲ್ಲಿ ಮೈಸೂರು ರಾಜಧಾನಿಯಲ್ಲಿ ನೆರವೇರುವುದು.

ಮಹಾಮಹೋಪಾಧ್ಯಾಯ ಕವಿರಾಜ ಗಣನಾಥ ಸೇನ್, ಸರಸ್ವತಿ, M.A., L.M. & S., Etc. ಇವರು ಅಧ್ಯಕ್ಷತೆಯನ್ನು ವಹಿಸುವರು.

ಮೈಸೂರು ಸರ್ಕಾರದ ಉಪಸಚಿವರಾದ ರಾಜಕಾರ್ಯಪ್ರವೀಣ ಶ್ರೀಯುತ ಪಿ. ಜಿ. ಡಿಸೌಜಾ, ಬಿ.ಎ., ಬಿ.ಎಲ್. ರವರು ಸಮ್ಮೇಳನದ ಪ್ರಾರಂಭೋತ್ಸವವನ್ನು ಜರುಗಿಸಲು ದಯೆಯಿಟ್ಟು ಅಂಗೀಕರಿಸಿರುತ್ತಾರೆ. ತಾವು ಪೂರ್ಣಾಭಿಮಾನವಿಟ್ಟು ಈ ಸಭೆಗೆ ದಯಮಾಡಿಸಿ ಇಲ್ಲಿಯ ಕಾರ್ಯನಿರ್ವಹಣದಲ್ಲಿ ಭಾಗಿಗಳಾಗುವುದರ ಮೂಲಕ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿ ಸ್ವಾಗತಸಮಿತಿಯವರು ಆದರದಿಂದ ಪ್ರಾರ್ಥಿಸುತ್ತಾರೆ.

ಮೈಸೂರು, 10-12-1930. ಎಚ್. ಸಂಜುಂಡರಾಜೇ ಅರಸ್, ಸ್ವಾಗತಾಧ್ಯಕ್ಷ.

ಕಾರ್ಯಕ್ರಮ.

27-12-30 ಬೆಳಗ್ಗೆ 8-30 11-30 (ಟೌನ್‌ಹಾಲ್)—ಸಮ್ಮೇಳನ ಪ್ರಾರಂಭೋತ್ಸವ—ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾರವರಿಂದ. ಸ್ವಾಗತಾಧ್ಯಕ್ಷರ ಸ್ವಾಗತನಿವೇದನ. ಅಧ್ಯಕ್ಷರ ಭಾಷಣ. ವಿಷಯನಿರ್ಧಾರಣಸಮಿತಿಯ ಮೆಂಬರುಗಳ ಚುನಾವಣೆ.

ಮಧ್ಯಾಹ್ನ 3—3-30 (ಎಗ್ಜಿಬಿಷನ್ ಬಿಲ್ಡಿಂಗ್) ಪ್ರದರ್ಶನದ ಪ್ರಾರಂಭೋತ್ಸವ—ಡಾ|| ಪಿ. ಸುಬ್ಬರಾಯರು. Bsc. Etc. (ಪ್ರೆಸಿಡೆಂಟ್, ಆಯುರ್ವೇದ ವಿಶ್ವವಿದ್ಯಾಲಯ ಕಾಶನಾಡ) ಇವರಿಂದ. 3-30—6 ರಸಾಯನಸಂಭಾಷಾಪರಿಷತ್ತು—ಶ್ರೀ|| ನಾರಾಯಣ ಶಂಕರ ದೇವಶಂಕರ ಪ್ರಾಣಾಚಾರ್ಯ, ಅಹಮದಾಬಾದ್ ಇವರ ಅಧ್ಯಕ್ಷತೆಯಲ್ಲಿ.

ರಾತ್ರಿ 8-30—11 ವಿಷಯವಿವೇಚನಸಮಿತಿ.

28-12-30 ಬೆಳಗ್ಗೆ—ದ್ರವ್ಯಸಂಭಾಷಾಪರಿಷತ್ತು. ವೈದ್ಯ ಡಾ|| ಮಸ್ಕರ್, M.A.M.D. ಬೊಂಬಾಯಿನ ಹಾಫ್‌ಕಿನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ರವರ ಅಧ್ಯಕ್ಷತೆಯಲ್ಲಿ.

ಮಧ್ಯಾಹ್ನ 2-30—5-30 ಚಿಕಿತ್ಸಾಸಂಭಾಷಾಪರಿಷತ್ತು—ಆಯುರ್ವೇದಭೂಷಣ ಕ್ಯಾಪ್ಟನ್ ಪನಿಕರ್, L.R.C.P. M.R.C.S., ಕೊಲಂಬೊ ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರು. 6-7 ಆರೋಗ್ಯಶಾಸ್ತ್ರದಮೇಲಿನ ಚಲನಚಿತ್ರದ ಉಪನ್ಯಾಸ—ಮದ್ರಾಸಿನ ಭಿಷಗ್ರತ್ನ ಡಾ|| ಎ. ಲಕ್ಷ್ಮೀಪತಿ, B.A.M.B. C.M. ಇವರಿಂದ. 8—11-30 (ಟೌನ್‌ಹಾಲ್)—ವಿಷಯವಿವೇಚನ.

29-12-30 ಬೆಳಗ್ಗೆ 8-30—11 (a) ಮಹಾಸಭೆ (b) ನಿರ್ಣಯಗಳು. (c) ಸಮ್ಮೇಳ ಸಮಾಪ್ತಿ.

ಸಾಯಂಕಾಲ 4-7—ಕರ್ಣಾಟಕಪ್ರಾಂತಿಕ ಆಯುರ್ವೇದಸಮ್ಮೇಳನ—1. ಅಧ್ಯಕ್ಷರು—ಶ್ರೀಯುತ ಡಾ|| ಎಸ್. ವೆಂಕೋಬರಾವ್, ಬಿ.ಎ., ಅನಾಥಿಕರ, ಆಯುರ್ವೇದವೈದ್ಯರು, ಬೆಂಗಳೂರು. 2. ನಿರ್ಣಯಗಳು. 3. ಸಮಾಪ್ತಿ.

ಮೈಸೂರು, ತಾ|| 10-12-30. ವೈ. ಲಕ್ಷ್ಮೀನರಸಿಂಹಶಾಸ್ತ್ರೀ, ಅ|| ಜನರಲ್ ಸೆಕ್ರೆಟರಿ.

ರೌಂಡ್‌ಟೇಬಲ್ ಕಾನ್ಫರೆನ್ಸ್ ಸಮಾಚಾರವು ಪ್ರಾಂತಗಳ ಭವಿಷ್ಯ.

ಪ್ರಾಂತಗಳ ಭವಿಷ್ಯವನ್ನು ವಿಮರ್ಶಿಸಲು ನಿಯಮಿಸಲ್ಪಟ್ಟಿದ್ದ ಕಮಿಟಿಯು ವರದಿಯನ್ನು ತಯಾರಿಸಿರುತ್ತದೆ. ಅದರ ಮುಖ್ಯ ಸಾರಾಂಶವೇನೆಂದರೆ:—ಪ್ರಾಂತಗಳಲ್ಲಿ ಸದ್ಯಃ ಜಾರಿಯಲ್ಲಿರುವ ದ್ವಿಮುಖಸರ್ಕಾರವು ಕೊನೆಗಾಣಬೇಕು. ಪ್ರಾಂತಕ್ಕೆ ಸಂಬಂಧಪಡುವ ಎಲ್ಲಾ ವಿಷಯಗಳೂ (ಕಾಯಿದೆ ಮತ್ತು ಸಂರಕ್ಷಣವಿಷಯ

ವೂ ಸೇರಿ) ನ್ಯಾಯವಿಧಾಯಕಸಭೆಗೆ ಜವಾಬ್ದಾರಿಯಾಗಿರಬೇಕು. ಮಂತ್ರಿಗಳನ್ನು ಆರಿಸುವ ಕೆಲಸವು ಗೌರ್ನರವರದಿರುತ್ತದೆ. ಸಾಮಾನ್ಯವಾಗಿ ಗೌರ್ನರವರು ನ್ಯಾಯವಿಧಾಯಕಸಭೆಯಲ್ಲಿ ಹೆಚ್ಚು ಸಂಖ್ಯೆ ಅನುಯಾಯಿಗಳುಳ್ಳ ಮುಖಂಡನನ್ನು ಕರೆದು ಅವನ ಮೂಲಕ ಮಂತ್ರಿಗಳಾಗಲು ಅರ್ಹರಾದವರನ್ನು ಚುನಾಯಿಸಿ ಮಂತ್ರಿಮಂಡಲವನ್ನು ರಚಿಸತಕ್ಕದ್ದು. ನ್ಯಾಯವಿಧಾಯಕಸಭೆಯಲ್ಲಿ ಜನರಿಂದ ಆರಿಸಲ್ಪಟ್ಟಿರುವ ಮೆಂಬರುಗಳನ್ನೇ ಸಾಮಾನ್ಯವಾಗಿ ಮಂತ್ರಿಮಂಡಲದಲ್ಲಿ ಸೇರಿಸತಕ್ಕದ್ದು. ಜನಗಳಿಂದ ಆರಿಸಲ್ಪಡದೇ ಅನಧಿಕಾರಿಯಾದ ಮನುಷ್ಯನು ಮಂತ್ರಿಯಾಗಬೇಕಾದ ಸಂದರ್ಭದಲ್ಲಿ ಆರು ತಿಂಗಳೊಳಗೆ ಜನರಿಂದ ಆರಿಸಲ್ಪಟ್ಟು ಮೆಂಬರನಾಗಬೇಕು. ಅಥವಾ ಗೌರ್ನರವರು ಅವನನ್ನು ನ್ಯಾಯವಿಧಾಯಕಸಭೆಗೆ ಮೆಂಬರನನ್ನಾಗಿ ನೇಮಿಸಬಹುದು. ಹೊಸ ರಾಜ್ಯಾಂಗರಚನೆಯು ಜಯಪ್ರದವಾಗಬೇಕಾದರೆ ಮುಖ್ಯವಾದ ಚಿಕ್ಕ ಸಮಾಜಗಳ ಹಿತವನ್ನು ಪ್ರಾಂತದ ಸರ್ಕಾರದಲ್ಲಿ ಒಪ್ಪಬೇಕು. ಗೌರ್ನರವರು ನ್ಯಾಯವಿಧಾಯಕಸಭೆಯನ್ನು ವಜಾ ಮಾಡಬಹುದು. ಅವರು ಯಾವುದಾದರೂ ಕಾಯಿದೆಗೆ ತಮ್ಮ ಅನುಮತಿಯನ್ನು ಕೊಡಬಹುದು. ಅಥವಾ ಕೊಡದೇ ಇರಬಹುದು. ಮತ್ತು ಪಾಸಾಗಿ ಬಂದಂಥ ಬಿಲ್ಲನ್ನು ಪುನಃ ಆಲೋಚಿಸಲು ನ್ಯಾಯವಿಧಾಯಕಸಭೆಗೆ ವಾಪಸು ಕಳುಹಿಸಬಹುದು. ಅಥವಾ ಗೌರ್ನರ್ ಜನರಲ್‌ರವರ ಅವಗಾಹನೆಗಾಗಿ ಅನಾಮತ್ತಿನಲ್ಲಿಡಬಹುದು. ಒಂದು ಸಮಾಜದ ಅಥವಾ ಒಂದು ವರ್ಗದ ಧರ್ಮದ ಕ್ರಿಯೆಗಳಿಗೆ ಬಾಧಕಬರಬಹುದಾದ ಕಾಯಿದೆಯನ್ನು ಮಾಡುವುದಕ್ಕಾಗಲೀ, ಫೆಡರಲ್ ಸಬ್ಜೆಕ್ಟನ್ನು ಕ್ರಮಕ್ಕೆ ತರುವುದಕ್ಕಾಗಲೀ, ಕೇಂದ್ರನ್ಯಾಯವಿಧಾಯಕಸಭೆಯಲ್ಲಿ ಪಾಸಾಗಿರುವ ಕಾಯಿದೆಯನ್ನು ತೆಗೆದುಹಾಕುವುದಕ್ಕಾಗಲೀ ಗೌರ್ನರವರ ಅನುಮತಿಯಿಲ್ಲದೆ ಠರಾವನ್ನು ತರುವುದು ನ್ಯಾಯಸಮ್ಮತವಾದುದಲ್ಲ. ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಯೇ ಸಾಮಾನ್ಯವಾಗಿ ಅಧ್ಯಕ್ಷನಾಗಿರತಕ್ಕದ್ದು. ಕೆಲವು ಸಂದರ್ಭಗಳಲ್ಲಿ ಗೌರ್ನರವರು ಅಧ್ಯಕ್ಷರಾಗಬಹುದು. ಗೌರ್ನರವರಿಗೆ ಇಷ್ಟವಿರುವವರೆಗೂ ಮಂತ್ರಿಗಳಾಗಿರಬಹುದು. ಚಿಕ್ಕಸಮಾಜಗಳ ರಕ್ಷಣಾಕಾರ್ಯದಲ್ಲಿಯೂ, ಪ್ರಾಂತವನ್ನು ಶಾಂತವಾಗಿಯೂ ಸುರಕ್ಷಿತವಾಗಿಯೂ ಇಡುವುದರಲ್ಲಿಯೂ ಮಂತ್ರಿಗಳ ಅನುಮತಿಯನ್ನು ತಿರಸ್ಕರಿಸಬಹುದು. ರಾಜ್ಯಾಂಗಸಂಸ್ಕರಣವು ಅಥವಾ ಸರ್ಕಾರವು ಕಳಚಿಬಿದ್ದಾಗ ಪ್ರಭುತ್ವವನ್ನು ನಡೆಯಿಸಲು ಗೌರ್ನರವರಿಗೆ ಅಸಾಧಾರಣಗಳಾದ ಅಧಿಕಾರಗಳಿರಬೇಕು. ಈ ಅಧಿಕಾರಗಳು ಪಾರ್ಲಿಮೆಂಟಿನ ಅನುಮತಿಯಿಲ್ಲದೆ ಆರುತಿಂಗಳುಗಳ ಅವಧಿಯಮೇಲೆ ಇರಬಾರದು. ನ್ಯಾಯವಿಧಾಯಕಸಭೆಯು 5 ವರ್ಷಗಳ ಮೇಲ್ಪಟ್ಟಿರಲು ಅಧಿಕಾರವಿಲ್ಲ. ಎಲೆಕ್ಷನ್‌ಮೂಲಕ ಮೆಂಬರರನ್ನು ಕಳುಹಿಸಲು ಸಾಧ್ಯವಿಲ್ಲದಿರುವ ಚಿಕ್ಕಸಮಾಜಗಳಿಂದ ಗೌರ್ನರವರು ನೇಮಿಸಬಹುದಾದ ಮೆಂಬರರು ವಿನಾ ಉಳಿದ ಎಲ್ಲಾ ಮೆಂಬರರು ಪ್ರಜೆಗಳಿಂದ ಆರಿಸಲ್ಪಟ್ಟಿರಬೇಕು. ಪೋಲೀಸಿನ ಆಡಳಿತದ ಪ್ರಶ್ನೆಯನ್ನು ಸರ್ವಿಸೆಸ್ ಸಬ್ ಕಮಿಟಿಯಲ್ಲಿ ತೀರ್ಮಾನಿಸಬೇಕೆಂದು ನಿಷ್ಕರ್ಷಿಸಲಾಗಿದೆ.

ಇದೇ ತಿಂಗಳು 16ನೆಯ ತಾರೀಖಿನ ದಿವಸ ಮಿ|| ಎಫ್. ಡಬ್ಲ್ಯು. ವಿಲ್ಸನ್‌ಎಂಬವರು ಹಿಂದೂಪತ್ರಿಕೆಗೆ ಕಳುಹಿಸಿರುವ ತಂತಿಯಲ್ಲಿ ತಿಳುಹಿಸಿರುವುದೇನೆಂದರೆ:— ಯಾವುದಾದರೂ ಸುವಾರ್ತೆಯನ್ನು ಹಿಂದೂದೇಶಕ್ಕೆ ಕಳುಹಿಸೋಣವೆಂದು ಈಗ ಕೆಲವು ದಿವಸಗಳಿಂದ ವರ್ತಮಾನಗಳನ್ನು ಕಳುಹಿಸುವುದನ್ನು ಉದ್ದೇಶಪೂರ್ವಕವಾಗಿ ನಿಲ್ಲಿಸಿದ್ದೆನು. ಆದರೆ ನನ್ನ ಆಶೆಯು ನಿರರ್ಥಕವಾಯಿತು. ಹಿಂದೂ ಮುಸಲ್ಮಾನರ ಪ್ರಶ್ನೆಯು ಅನೇಕ ತೊಡಕುಗಳಿಂದ ಕೂಡಿ ರೌಂಡ್‌ಟೇಬಲ್‌ಕಾನ್ಫರೆನ್ಸಿನ ಕಾರ್ಯಕಲಾಪಗಳು ಜಯಪ್ರದವಾಗುವುದಕ್ಕೆ ವಿಘ್ನಕಾರಿಯಾಗಿದೆ. ಈಗ ಒಂದು ವಾರದ ಕೆಳಗೆ ಸಂಪೂರ್ಣಸ್ವರಾಜ್ಯವೇ ಭಾರತೀಯರ ಹಸ್ತಗತವಾಯಿತೆಂದು ಆತುರದಿಂದ ನಿರೀಕ್ಷಿಸುತ್ತಿದ್ದೆನು. ಆದರೆ ಈಗ ಅದೆಲ್ಲವೂ ಮಾಯವಾಯಿತು. ಈ ಪರಿಸ್ಥಿತಿಯನ್ನು ನೋಡಿದರೆ ಯಾರಿಗೆತಾನೇ ವ್ಯಸನವಾಗಲಿಕ್ಕಿಲ್ಲ? ಇಂಗ್ಲೆಂಡಿನ ಮುಖ್ಯಮಂತ್ರಿಗಳೂ ಸಹ ನಿಮ್ಮ ಪರಸ್ಪರ ಜಗಳಗಳಿಂದ ನಿಮ್ಮ ಹಿತವನ್ನೇ ಕೆಡಿಸಿಕೊಳ್ಳುವಿರಿ. ನೀವು ಏಕಮತ್ಯದಿಂದ ಬಂದಿದ್ದರೆ ನೀವು ಇಷ್ಟಪಟ್ಟಂತೆ ನಡೆಯುತ್ತಿದ್ದೆನು. ಹಾಗಿಲ್ಲದಿರುವುದರಿಂದ ಇಂಡಿಯಾ ಸರ್ಕಾರದವರ ಸಲಹೆಗಳಿಗಿಂತ ಮುಂದೆ ಹೋಗಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿಬಿಟ್ಟರು. ಜಾತಿವಾತ್ಸಲ್ಯವೆಂಬ ಪಿಶಾಚಗ್ರಸ್ತರು ಆಗಾಗ್ಗೆ ಜನಾಂಗ ಮತ್ತು ಪ್ರಜಾಪ್ರಭುತ್ವದ ಮೇಲೆ ಮಾತನಾಡುತ್ತಿರುವುದು ವ್ಯರ್ಥವೂ ಅವಹೇಳನಕರವೂ ಆದುದೇ ಸರಿ! ಕನ್ಸರ್ವೇಟಿವ್‌ಪಾರ್ಟಿಯವರು ಇವರು ಸ್ವರಾಜ್ಯಕ್ಕೆ ಅರ್ಹರಲ್ಲನೆಂದು ನಾವು ಮೊದಲೇ ಹೇಳಲಿಲ್ಲವೇ? ಎಂದು ಅತ್ಯಾನಂದದಿಂದ ನುಡಿಯುತ್ತ ನಗುತ್ತಿರುವರು. ಫೆಡರೇಷನ್ ಕಟ್ಟಡದ ರಚನೆಯು ದಿನೇ ದಿನೇ ಕ್ಲಿಷ್ಟವಾಗುತ್ತ ಇದೆ. ಲಾರ್ಡ್ ಪೀಲ್ ಮತ್ತು ವಿನ್ಸ್ಟನ್ ಚರ್ಚಿಲ್ ಮೊದಲಾದವರೂ ಭಾರತೀಯರ ಆಕಾಂಕ್ಷೆಗಳನ್ನು ನಿರೋಧಿಸಲು ಬಹು ಸಹಾಯಕಾರಿಯಾಯಿತು. ರೌಂಡ್‌ಟೇಬಲ್‌ಕಾನ್ಫರೆನ್ಸಿನ ಅಧಿವೇಶನವು 23 ನೆಯ ತಾರೀಖಿನ ದಿವಸ ಪುನಃ ಸೇರಿ ಕ್ರಿಸ್‌ಮಿಸ್ ಸಲುವಾಗಿ 29 ನೆಯ ತಾರೀಖಿನ ದಿವಸಕ್ಕೆ ಅಡ್ಜರ್ನ್ ಮಾಡಲ್ಪಡುವುದು. ಈ ಕಾನ್ಫರೆನ್ಸಿನ ಕಾರ್ಯಗಳು ಮುಂದಿನ ತಿಂಗಳು 15 ನೆಯ ತಾರೀಖಿನ ದಿವಸದೊಳಗೆ ಪೂರೈಸಬಹುದೆಂದು ನಿರೀಕ್ಷಿಸುತ್ತಾರೆ. ಕೆಲವು ಮೆಂಬರರು ಜನವರಿ 16 ಮತ್ತು 23 ನೆಯ ತಾರೀಖುಗಳೊಳಗೆ ಮಾರ್ಸೇಲ್ಸ್‌ಮಾರ್ಗವಾಗಿ ಹಿಂದೂಸ್ಥಾನಕ್ಕೆ ಹೊರಡಲು ಟಿಕೆಟ್‌ಗಳನ್ನು ತೆಗೆಯಿಸಿರುವುದಾಗಿಯೂ ಸಹ ಕೇಳುತ್ತೇವೆ.

ಬ್ಯಾರಿಸ್ಟರ ಜಯಕರರು ರೌಂಡುಟೇಬಲ್ ಬಿಟ್ಟು ಎದ್ದು ಹೋಗುವರು.

ಅವರು ಅಂದದ್ದೇನೆಂದರೆ—

ರೌಂಡುಟೇಬಲಿನ ಕೆಲಸವು ಅತ್ಯಂತವಾದ ಅಸಮಾಧಾನದಿಂದ ನಡೆದಿದೆ. ಪರಿಷತ್ತಿನಲ್ಲಿ ಕೆಲ ನಾಮಾಂಕಿತ ಬ್ರಿಟಿಷ ಮುತ್ಸದ್ದಿಗಳಿರುವದು ನಿಜ. ಆದರೆ ನಮ್ಮ ಪರಿಸ್ಥಿತಿಯು ಅವರ ಲಕ್ಷ್ಯದಲ್ಲಿ ಚೆನ್ನಾಗಿ ಬರುವದಿಲ್ಲ. ಇಲ್ಲಿಂದ ಆರುಸಾವಿರ ಮೈಲುಗಳ ಮೇಲಿರುವ ನಮ್ಮ ತಾಯಿನಾಡಿನಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವಂಥ ನಮ್ಮ ಅನೇಕ ದೇಶಬಾಂಧವರನ್ನು ಎಳೆದೆಳೆದು ತುರಂಗದಲ್ಲಿ ಹಾಕುತ್ತಿದ್ದಾರೆ. ಈ ಮೂಲಕ ಸದ್ಯಃ ವಿಲಾಯತಿಯಲ್ಲಿರುವ ಹಿಂದೀಪ್ರತಿನಿಧಿಗಳ ಸ್ಥಿತಿಯು ಅತ್ಯಂತವಾಗಿ ಬಿಕ್ಕಟ್ಟಿನದಾಗಿರುತ್ತದೆ. ಮಹಾತ್ಮರು ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ವಿಭೂತಿಯಾಗಿದ್ದು, ಇವರು ರಾಜಕಾರಣದಲ್ಲಿ ಧರ್ಮ ಮತ್ತು ತತ್ವಜ್ಞಾನವನ್ನು ಮನೋಹರವಾಗಿ ಕೂಡಿಸಿದ್ದಾರೆ. ರೌಂಡ್‌ಟೇಬಲ್ಲಿನಲ್ಲಿ ನಡೆಯುವ ಕೆಲಸದ ಕಡೆಗೆ ಅವರಷ್ಟು ಲಕ್ಷ್ಯವು ಇನ್ನಾರದೂ ಇರಲಿಕ್ಕಿಲ್ಲ. ಸದ್ಯಃ ರೌಂಡುಟೇಬಲ್ ಎಂದರೆ-ಹಿಂದೀ ರಾಷ್ಟ್ರಕ್ಕೆ ಮೃಗಜಲ ತೋರಿಸುವಂಥ ಒಂದು ದೃಶ್ಯವಾಗಿರುತ್ತದೆ. ರೌಂಡುಟೇಬಲ್ಲಿನಲ್ಲಿ ಬರೇ ಶಬ್ದಗಳ ತಿಕ್ಕಾಟ ಮತ್ತು ಆಡಂಬರದ ಹೊರ್ತು ಮತ್ತೇನೂ ಆಗಲಾರದೆಂದು ಪಂಡಿತ ಮೋತೀಲಾಲರೂ ಮಹಾತ್ಮರೂ ಈ ಮುಂದಾಗಿಯೇ ನನಗೆ ಹೇಳಿದ್ದಾರೆ. ಮಹಾತ್ಮರು ನನಗೆ ನಿರೂಪಕೊಡುವಾಗ ಉಚ್ಚರಿಸಿದ ಕೊನೆಯ ಶಬ್ದಗಳು ನನ್ನ ನೆನಪಿನಲ್ಲಿ ಸ್ಥಿರವಾಗಿರುವವು. ಇಂಗ್ಲೆಂಡಿನಿಂದ ತಿರುಗಿ ಬಂದ ಬಳಿಕ ನನಗೆ ಭೆಟ್ಟಿಯಾಗಿರಿ. ಅಲ್ಲಿಂದ ನೀವು ನನಗೆ ಬೇಕಾದಂಥ ಸ್ವಾತಂತ್ರ್ಯದ ತಿರುಳನ್ನು ತಂದಿರುತ್ತೀರೆಂದು ನನಗೆ ಕಂಡುಬಂದರೆ, ನಾನು ನನ್ನ ಧೋರಣದಲ್ಲಿ ಯೋಗ್ಯವಾದ ಬದಲು ಮಾಡುವೆನು ಎಂದು ನನ್ನ ಮುಂದೆ ಅಂದಿದ್ದಾರೆ. ಅವರ ಧೈರ್ಯದಿಂದಲೇ ನಾನು ಇಲ್ಲಿಗೆ ಬಂದಿದ್ದೇನೆ. ಹಿಂದೂಸ್ಥಾನ ಸರಕಾರದ ಆಡಳಿತದಲ್ಲಿ ಹಿಂದೀ ಜನರಿಗೆ ಕೊಡಬೇಕಾದ ಪೂರ್ಣ ಜವಾಬದಾರಿಯ ಹಕ್ಕನ್ನು ತಪ್ಪಿಸಬೇಕೆಂದು ಪ್ರಯತ್ನ ನಡೆದಿದೆ. ಒಂದೆರಡು ವಾರಗಳಲ್ಲಿ ಅದರ ಇತ್ಯರ್ಥವಾಗುವುದು. ಹೀಗಾಗದ ಪಕ್ಷದಲ್ಲಿ ಕೆಲ ಪ್ರತಿನಿಧಿಗಳಾದರೂ ಪರಿಷತ್ತಿನ ಪರಿವೆ ಮಾಡದೆ, ಆಗ ಹೊರಡಬೇಕಾಗಿರುವ ಮೊದಲನೆಯ ಹಡಗಿನಿಂದಲೇ ಹಿಂದುಸ್ಥಾನದ ಹಾದೀ ಹಿಡಿಯುವರು.

ಬಿ. ಎ., ಎಂ. ಎ., ಮೊದಲಾದ ಪದವೀಧರರಿಗೆ ಮುಕ್ತಿನಂಥ ಮಾತುಗಳು.

ಆಂಧ್ರವಿಶ್ವವಿದ್ಯಾನಿಲಯದ ಪಟ್ಟಪ್ರದಾನೋತ್ಸವ ಸಮಯದಲ್ಲಿ ಮದರಾಸ್ ಅಡ್ವೊಕೇಟ್ ಜನರಲ್ ಶ್ರೀಯುತ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಬಿ.ಎ., ಬಿ.ಎಲ್., ರವರು ಪದವೀಧರರಿಗೆ ಉಪದೇಶಮಾಡಿದ್ದೇನೆಂದರೆ :—"ವಿಶ್ವವಿದ್ಯಾನಿಲಯದ ಗ್ರಾಜ್ಯುಯೇಟರು ಮೂರು ವಿಧವಾದ ಕರ್ತವ್ಯವನ್ನು ಮಾಡುವುದು ಅವಶ್ಯಕವೆಂಬುದನ್ನು ತಿಳಿದುಕೊಳ್ಳಬೇಕು. 1. ಸ್ವಕೀಯವಾದ ಕರ್ತವ್ಯ, 2. ತಮಗಿಂತಲೂ ಕಡಿಮೆಸ್ಥಿತಿಯಲ್ಲಿರುವವರಿಗೆ ಮಾಡಬೇಕಾದ ಕರ್ತವ್ಯ 3. ತಮ್ಮ ಸ್ವಂತ ಸಮಾಜಕ್ಕೂ ಹಾಗೂ ದೇಶಕ್ಕೂ ಮಾಡಬೇಕಾದ ಕರ್ತವ್ಯ.

1. ಅವರ ಸ್ವಕೀಯವಾದ ಕರ್ತವ್ಯ.

ತಾವು ಪದವಿಯನ್ನು ತೆಗೆದುಕೊಂಡಮೇಲೆ ವಿದ್ಯಾಭ್ಯಾಸವು ಪ್ರಾರಂಭವಾಯಿತೆಂದು ತಿಳಿದು ತಮ್ಮ ಮುಂದಿನ ಜೀವನವನ್ನು ಪ್ರಾರಂಭಿಸಬೇಕು.

ವಿದ್ಯಾಭ್ಯಾಸವು ದಿನೇ ದಿನೇ ವೃದ್ಧಿಯಾಗುವಂತಹದು; ವಿದ್ಯೆಯು ಪ್ರತಿಕ್ಷಣದಲ್ಲಿಯೂ ವಿಕಾಸವಾಗುತ್ತಿರುವುದು. ಸತ್ಯಾಂಶವನ್ನು ಶೋಧಿಸುವುದು ಪೂರೈಸಿತೆಂದು ಯಾವ ಕಾಲದಲ್ಲಿಯೂ ಹೇಳಲಾಗುವುದಿಲ್ಲ. ತನಗಿಂತಲೂ ಕೆಳಗಿನ ಅಂತಸ್ತಿನಲ್ಲಿರುವವರಿಗೆ ತನಗೆ ಲಭ್ಯವಾಗಿರುವ ವಿದ್ಯೆಯ ಬೆಳಕನ್ನು ಕೊಡುವುದು ಎರಡನೆಯ ಕರ್ತವ್ಯವಾಗಿದೆ. ನಿಮ್ಮ ಪೈಕಿ ವಿಶೇಷ ಜನರ ವಿದ್ಯಾಭ್ಯಾಸವು ಮನುಷ್ಯಪ್ರಾಣಿಗೆ ಅತ್ಯಾವಶ್ಯಕಗಳಾಗಿರುವ ಅನ್ನವಸ್ತ್ರಗಳನ್ನೂ ಸಹ ಮಿತಿಯಲ್ಲಿಟ್ಟು ಅನೇಕ ಕಷ್ಟಗಳನ್ನು ಸಹಿಸಿರುವ ನಿಮ್ಮ ತಂದೆತಾಯಿಗಳ ಅಮೋಘವಾದ ಸ್ವಾರ್ಥತ್ಯಾಗದ, ನಿಮ್ಮ ಸ್ನೇಹಿತರ ಮತ್ತು ಸರ್ಕಾರದ ಸಹಾಯದ ಪ್ರತಿಫಲವಾಗಿದೆ ಎಂದು ಧಾರಾಳವಾಗಿ ಹೇಳಬಹುದಾಗಿದೆ. ನಿಮ್ಮಂತೆಯೇ ಇರುವ ಇತರರಿಗೆ ಲಭ್ಯವಾಗದೇ ಇರುವ ವಸ್ತುವು ನಿಮಗೆ ದೊರೆತಿರುವುದು ನಿಮ್ಮ ಸುದೈವವೆಂಬುದನ್ನು ಲಕ್ಷ್ಯದಲ್ಲಿಡಬೇಕು. ನಿಮ್ಮ ದೇಶದ ಸೇವೆಗೋಸ್ಕರ ಸರ್ವೋತ್ಕೃಷ್ಟವಾದ ನಿಮ್ಮ ಶಕ್ತಿಯನ್ನು ವಿನಿಯೋಗಿಸಿ ನಿಮ್ಮ ಸಮಾಜವು ಅಭಿವೃದ್ಧಿಯನ್ನು ಹೊಂದುವುದಕ್ಕೆ ಸಹಾಯಮಾಡಬೇಕು. ನೀವು ಜನ್ಮವೆತ್ತಿದಾಗ ಇದ್ದುದಕ್ಕಿಂತಲೂ ನಿಮ್ಮ ಜೀವಿತಕಾಲವು ಪೂರೈಸುವಾಗ ಜಗತ್ತು ಸರ್ವತೋಮುಖವಾದ ಅಭಿವೃದ್ಧಿಯನ್ನೂ ಸಂಪತ್ತಿಯನ್ನೂ ಹೊಂದುವಹಾಗೆ ಸಹಾಯಮಾಡಬೇಕೆಂಬ ಮಹತ್ವಾಕಾಂಕ್ಷೆಯು ನಿಮ್ಮಲ್ಲಿ ಉದಯವಾಗಬೇಕು.

ಅಮೋಘವಾದ ಸ್ವದೇಶಾಭಿಮಾನವೆಂಬ ಸದ್ಗುಣವನ್ನು ಬೆಳೆಯಿಸುವುದು, ಆತ್ಮಗೌರವದ ವಿಷಯದಲ್ಲಿ ಆತುರಪಡುವುದು, ಮತ್ತು ಇತರರ ಸಂಗಡ ವ್ಯವಹರಿಸುವಾಗ ಧೈರ್ಯವನ್ನು ಪ್ರಕಟಿಸುವುದು ನಿಮ್ಮ ಕರ್ತವ್ಯವಾದರೂ, ಜಾತಿಮಾತ್ಸರ್ಯಕ್ಕೂ ಪಂಗಡಗಳ ಕಲಹಕ್ಕೂ ಬಲಿಬೀಳಬಾರದೆಂದು ಆದರದಿಂದ ಹೇಳುತ್ತೇನೆ. ತಾರುಣ್ಯದಲ್ಲಿರುವ ಉದಾತ್ತವಾದ ಮನೋಭಾವನೆಗಳನ್ನು ವಿಶ್ವವಿದ್ಯಾನಿಲಯದ ಕಟ್ಟಡದೊಳಗೇನೇ ಬಿಟ್ಟುಹೋಗಬಾರದು. ಸದ್ಗುಣಕ್ಕಿಂತಲೂ ಮನುಷ್ಯನಿಗೆ ಹೆಚ್ಚಿನ ಆಸ್ತಿಯು ಯಾವುದೂ ಇಲ್ಲವೆಂಬುದನ್ನು ಪೂರ್ಣ ಲಕ್ಷ್ಯದಲ್ಲಿಡಬೇಕು.

ಅಬರ್ಡೀನ್ ಯೂನಿವರ್ಸಿಟಿಯ ವಿದ್ಯಾರ್ಥಿಗಳಿಗೆ ಲಾರ್ಡ್ ಆಕ್ಸ್‌ಫರ್ಡ್‌ರವರು ಬೋಧಿಸಿದ ಉಪದೇಶ ಮಾತುಗಳನ್ನು ಹೇಳಿ ಆ ವಿಷಯವನ್ನು ಸಮಾಪ್ತಿಗೊಳಿಸಿದರು.

ಅದೇನೆಂದರೆ—"ನೀವು ಯಾವ ಮಾರ್ಗವನ್ನವಲಂಬಿಸಿದರೂ ಮಹತ್ವವಿಚಾರಗಳ ಸಹವಾಸವನ್ನೂ, ಸ್ಫೂರ್ತಿಯ ಉದಾತ್ತಧ್ಯೇಯಗಳನ್ನೂ, ಮಹತ್ಕಾರ್ಯಸಿದ್ಧಿಯ ಉದಾಹರಣೆಯನ್ನೂ, ಎಂಥ ಅಪಜಯಗಳುಂಟಾದರೂ ಸಮಾಧಾನವನ್ನು ಹೊಂದುವ ಮನೋವೃತ್ತಿಯನ್ನೂ ಯಾವಾಗಲೂ ಜ್ಞಾಪಕದಲ್ಲಿಡಬೇಕು. ಹಾಗಾದರೆ ನಿಮ್ಮ ಮುಂದಿನ ಜೀವಿತದಲ್ಲಿ ಬರುವ ಸುಖದುಃಖಗಳು ನಿಮ್ಮ ಮನಶ್ಶಾಂತಿಯನ್ನು ಭಂಗಪಡಿಸಲಾರವು."

ಪಂಚಾಚಾರ್ಯ ಪ್ರಭಾ.

೧೯೩೦ನೇ ಡಿಸೆಂಬರ್ ತಾ|| ೨೨ನೇಯ ಸೋಮವಾರ.

ತ್ರಿವಿಧ ವೀರಶೈವಸ್ವರೂಪ.

"ತ್ರಿವಿಧಂ ವೀರಶೈವಾಖ್ಯಂ ಅಧಿಕಾರಿವಿಭೇದತಃ" ಎಂಬ ಪಾರಮೇಶ್ವರಾಗಮೋಕ್ತ್ಯನುಸಾರವಾಗಿ ವೀರಶೈವಮತದಲ್ಲಿ ಸಾಮಾನ್ಯವೀರಶೈವ, ವಿಶೇಷವೀರಶೈವ, ನಿರಾಭಾರಿವೀರಶೈವ ಎಂದು ಮೂರು ತರಗತಿಗಳುಂಟು. ಇವುಗಳನ್ನು ಅನೇಕರು ಅನೇಕ ವಿಧವಾಗಿ ತಿಳಿದುಕೊಂಡು, ಇತ್ತೀಚೆಗೆ ಲಿಂಗಧರಿಸಿಕೊಂಡ ಆಗಂತುಕರನ್ನು ಸಾಮಾನ್ಯರನ್ನಾಗಿಯೂ, ಅನಾದಿಕಾಲದಿಂದ ಲಿಂಗಧಾರಿಗಳಾಗಿ ಬಂದವರನ್ನು ವಿಶೇಷರನ್ನಾಗಿಯೂ, ಸನ್ಯಾಸಿಗಳನ್ನು ನಿರಾಭಾರಿಗಳನ್ನಾಗಿಯೂ ಕರೆಯುವ ರೂಢಿಯನ್ನು ಕೆಲವೆಡೆಯಲ್ಲಿಟ್ಟುಕೊಂಡಿರುತ್ತಾರೆ. ಇದು ಸಿದ್ಧಾಂತಕ್ಕೆ ವಿರೋಧವಾಗುತ್ತದೆ. ಅವರವರು ಆಚರಿಸುವ ಕ್ರಿಯಾಜ್ಞಾನಾಚಾರಗಳಿಂದ ಒಬ್ಬನೇ ಒಂದು ಕಾಲದಲ್ಲಿ ಸಾಮಾನ್ಯ ವೀರಶೈವನೆಂತಲೂ, ಮತ್ತೊಂದು ಕಾಲದಲ್ಲಿ ವಿಶೇಷವೀರಶೈವನೆಂತಲೂ, ಬೇರೊಂದು ಕಾಲದಲ್ಲಿ ನಿರಾಭಾರಿ ವೀರಶೈವನೆಂತಲೂ ಹೇಳಿಸಿಕೊಳ್ಳುವನು. ಪಾಠಶಾಲೆಯಲ್ಲಿ ಓದುವ ಒಬ್ಬ ವಿದ್ಯಾರ್ಥಿಯೇ ಜ್ಞಾನಾಧಿಕ್ಯದಿಂದ ಆಯಾಯ ತರಗತಿಯವನೆಂದು ಹೇಳಿಸಿಕೊಳ್ಳುವಂತೆ, ಒಬ್ಬ ಸಾಧಕನಾದ ವೀರಶೈವನೇ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ನಾಮಗಳನ್ನು ಪಡೆಯುತ್ತಾನೆ. ಇದರಿಂದ ಸಾಮಾನ್ಯನೇ ವಿಶೇಷನಾಗಬಹುದು; ವಿಶೇಷನೇ ನಿರಾಭಾರಿಯಾಗಬಹುದು. ಕ್ರಿಯಾಜ್ಞಾನಗಳಿಂದ ಭ್ರಷ್ಟನಾದರೆ ಮೇಲಕ್ಕೇರಿದ ನಿರಾಭಾರಿಯೂ ಸಹ ಅಧೋಗತಿಯನ್ನು ಹೊಂದಬಹುದು. ಈ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಶಬ್ದಗಳು ಪ್ರತಿಯೊಬ್ಬ ಲಿಂಗಾಂಗಿಗೂ ಅವನವನ ಆತ್ಮಶಕ್ತಿಯನ್ನನುಸರಿಸಿ ಬರತಕ್ಕವುಗಳಾಗಿವೆಯಲ್ಲದೆ ಜನ್ಮತಃ ಬರತಕ್ಕವುಗಳಾಗಿಲ್ಲ. ಗುರುವಿನಿಂದ ಶಿವಲಿಂಗವನ್ನು ಪಡೆದು ಕ್ರಿಯಾಚಾರಗಳನ್ನು ತಪ್ಪದೆ ನಡೆಯಿಸುತ್ತ ಗುರುಲಿಂಗಜಂಗಮಪ್ರೇಮಿಯಾಗಿರುತ್ತ, ದೈವದೋಷದಿಂದಾಗಲಿ ಬುದ್ಧಿದೋಷದಿಂದಾಗಲಿ ಗುರುವಿನಿಂದನುಗ್ರಹೀತವಾದ ಇಷ್ಟಲಿಂಗವು ನಷ್ಟವಾದರೆ, ಮರಳಿ ಗುರುವಿನ ಆಜ್ಞೆಯಂತೆ ಪ್ರಾಯಶ್ಚಿತ್ತದಿಂದ ಪರಿಶುದ್ಧನಾಗಿ ಎಂದಿನಂತೆ ಕ್ರಿಯಾಚಾರಗಳನ್ನನುಷ್ಠಿಸುತ್ತಿರುವವನೇ ಸಾಮಾನ್ಯ ವೀರಶೈವನೆನಿಸಿಕೊಳ್ಳುವನು. ಶಿವದೀಕ್ಷಾಕಾಲದಲ್ಲಿ ಗುರುವಿನಿಂದ ಉಪದೇಶಿಸಲ್ಪಟ್ಟ ಅಷ್ಟಾವರಣ ಷಟ್‌ಸ್ಥಲಾಚರಣೆಗಳನ್ನು ನಡೆಯಿಸುತ್ತ ಲಿಂಗಲೋಪವ್ರತಲೋಪಾದಿಗಳಿಗೆ ಅವಕಾಶವನ್ನು ಕೊಡದೆ ಆತ್ಮಾನಾತ್ಮವಿಚಾರಿಯಾಗಿರುವವನೇ ವಿಶೇಷ ವೀರಶೈವನೆನಿಸುವನು. ಕ್ರಿಯಾಸಿದ್ಧಿಯನ್ನೂ, ಜ್ಞಾನಸಿದ್ಧಿಯನ್ನೂ ಪಡೆದು ಸ್ವಚ್ಛಂದನಾದಿಗಳಲ್ಲಿ ಮಹಾವೈರಾಗ್ಯವನ್ನವಲಂಬಿಸಿ ಬಹಿರಷ್ಟಾವರಣಾಂತರಷ್ಟಾವರಣಗಳಿಂದ ಕೂಡಿ ಭಕ್ತಾದ್ಯೈಕ್ಯಾಂತಸ್ಥಳಗಳ ಸಿದ್ಧಿಯನ್ನು ಪಡೆದು ಪ್ರಾಪಂಚಿಕಾಭಿಮಾನವನ್ನು ತೊರೆದು ಮನೆಮಠಗಳನ್ನು ಬಿಟ್ಟು ಗಿರಿಗುಹೆಗಳಲ್ಲಿ ವಾಸಮಾಡುತ್ತ, ಕರತಲದಲ್ಲಿ ಭಿಕ್ಷೆಯನ್ನೆತ್ತುತ್ತ ಸರ್ವಸಂಗಪರಿತ್ಯಾಗಮಾಡಿದವನೇ ನಿರಾಭಾರಿಯೆನಿಸುವನು. ಈತನೇ ಜೀವನ್ಮುಕ್ತನೆಂದೂ ಶಿವಯೋಗಿಯೆಂದೂ ಹೇಳಿಸಿಕೊಳ್ಳಲ್ಪಡುವನು. ಇಂಥ ಸಿದ್ಧಪುರುಷನನ್ನು ಸಿದ್ಧಾಂತಗ್ರಂಥಗಳು ವಿಶೇಷವಾಗಿ ಪ್ರಶಂಸೆಮಾಡಿರುತ್ತವೆ. ಈತನೇ ಶ್ರೀ ಜಗದ್ಗುರು ರೇಣುಕಾದಿಪಂಚಾಚಾರ್ಯರು ಸ್ಥಾಪಿಸಿದ ವೀರಶೈವಧರ್ಮರಹಸ್ಯವನ್ನರಿತು ಅವಿರಳಶಿವಾನಂದವನ್ನನುಭವಿಸುವವನಾದುದರಿಂದ ಶ್ರೀ ಜಗದಾಚಾರ್ಯರ ಪೂರ್ಣಾನುಗ್ರಹಕ್ಕೆ ಪಾತ್ರನಾಗುತ್ತಾನೆ.

ದಂಡಕೌಪೀನಕಾಷಾಯಜಟಾಭಸ್ಮಕಮಂಡಲೂನ್ |
ಧೃತ್ವಾ ಧವಾ ಶಿರೋಮುಂಡೀ ಭೂತ್ವಾ ವಸನವರ್ಜಿತಃ |
ಅಜಿನಾಸನಯುಕ್ತಸ್ಸನ್ ಕಾಷಾಯಂ ವಾ ದಕಪ್ಲರೇತ್ ||
ಕಷಾಯಂ ವಪುರ್ವಾರಂ ಧೃತ್ವಾ ಭವೇಚ್ಛ್ರೈವದಿಗಂಬರಃ |
ಯದ್ವಲ್ಕ್ಯಮಾಲ್ಯಶ್ಶೈವಪ್ರಸಾದಾಪ್ತಾದನೇರತಃ |
ಕಾಯೇ ನಮನನಾವಾಚಾ ತ್ಯಕ್ತಭೂವಿತ್ತಕನ್ಯಕಃ |
ತ್ಯಕ್ತ್ವಾ ಗೃಹಮಠಾದೀನಿ ಮನುಷ್ಯಾದಿಸ್ಥಲಾನಿಚ |
ನಿವಾಸಸ್ತೇನ ಕರ್ತವ್ಯೋ ವನೇ ಗಿರಿಗುಹಾದಿಷು |
ನಾಂದೋಳಿಕಾಂ ಸಮಾರೋಹೇದಶ್ವಾರೋಹಣವರ್ಜಿತಃ |
ಪಾದಚಾರೀಚ ಸಂಭೂಯ ಚರೇದ್ಭೂವಲಯೇ ಸದಾ ||

ಎಂದು ನಿರಾಭಾರಿಯ ಲಕ್ಷಣಗಳು ಅನೇಕವಾಗಿ ಸಿದ್ಧಾಂತಗ್ರಂಥಗಳಲ್ಲಿ ಹೇಳಲ್ಪಟ್ಟಿರುತ್ತವೆ. ಮೋಕ್ಷಾಪೇಕ್ಷಿಯಾದ ಮಾನವನು ಇಂಥ ನಿರಾಭಾರಿಯ ಸ್ಥಿತಿಯನ್ನು ಹೊಂದಲೇಬೇಕೆಂದು ಮತಸ್ಥಾಪಕರ ಉದ್ದೇಶವಾಗಿರುವುದರಿಂದ, ಉಚ್ಚಶಿಕ್ಷಣವನ್ನನುಗ್ರಹಿಸಿದ ಉಪಾಧ್ಯಾಯನಲ್ಲಿ ವಿದ್ಯಾರ್ಥಿಯು ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಆ ಋಣಭಾರವನ್ನು ತೀರಿಸಲು ಆಗದಂತೆ, ಈ ಸಿದ್ಧಪುರುಷನಾದ ನಿರಾಭಾರಿಯಾದರೂ ಈ ಮೂಲಾಚಾರ್ಯರಲ್ಲಿ ಚಿರಋಣಿಯಾಗಿರಲೇಬೇಕು. ಲೋಕದಲ್ಲಿ ದ್ವೈತಾದ್ವೈತ ಮತಾವಲಂಬಿಗಳಾದ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಿ, ಆರೂಢ ಈ ಪದವಿಯನ್ನು ಹೊಂದಿದವರೆಲ್ಲರೂ ತಮ್ಮ ತಮ್ಮ ಮತಾಚಾರ್ಯರಲ್ಲಿ ಎಷ್ಟರಮಟ್ಟಿಗೆ ಅಸಾಧಾರಣ ಭಕ್ತಿಯನ್ನಿಟ್ಟು ಕೃತಕೃತ್ಯರಾಗುತ್ತಿರುವರೋ ಅದರಂತೆ ವೀರಶೈವಮತಾವಲಂಬಿಗಳಾದ ಬ್ರಹ್ಮಚರ್ಯಾದ್ಯಾಶ್ರಮಿಗಳು ತಮ್ಮನ್ನುದ್ಧರಿಸಿದ ಮತಸ್ಥಾಪಕರಾದ ಮೂಲಗುರುಗಳಲ್ಲಿ ಅನಿತರ ಸಾಧಾರಣ ಭಕ್ತಿಯನ್ನಿಟ್ಟು ಕೃತಕೃತ್ಯರಾಗಬೇಕು. ಲಿಂಗಾಂಗಸಾಮರಸ್ಯರೂಪವಾದ ಮುಕ್ತಿಯನ್ನು ಪಡೆಯಲು ಈ ಮೂರು ತರಗತಿಗಳು ಮಹಡಿಯನ್ನು ಹತ್ತುವುದಕ್ಕೆ ಹಾಕಿದ ಏಣಿಯೊಳಗಣ ಮೂರು ಕಾಲುಗಳಂತಿರುತ್ತವೆ. ಆರೋಹಕನು ಕ್ರಮದಿಂದ ಒಂದೊಂದು ಕಾಲಿನಮೇಲೆ ಹತ್ತುತ್ತ ಹೋಗುವಂತೆ ಸಾಧಕನು ಮೆಲ್ಲಮೆಲ್ಲನೆ ಸಾಮಾನ್ಯವೀರಶೈವ ಲಕ್ಷಣಗಳನ್ನೆಲ್ಲಾ ಅನುಭವಕ್ಕೆ ತಂದುಕೊಂಡು, ಮುಂದಣ ವಿಶೇಷ ವೀರಶೈವಲಕ್ಷಣಗಳನ್ನು ಅನುಷ್ಠಿಸಿ, ಕೊನೆಯದಾದ ನಿರಾಭಾರಿ ವೀರಶೈವನ ಭೂಮಿಕೆಯನ್ನು ಪ್ರವೇಶಿಸಿ, "ಏಕೇನ ಜನ್ಮನಾ ಮುಕ್ತಿಃ" ಎಂಬ ಶಿವೋಕ್ತಿಯನ್ನು ಅನ್ವರ್ಥಕಗೊಳಿಸಬೇಕು. ಇವನೇ ನಿಜವಾದವೀರಶೈವನೆಂದು ಹೇಳಿಸಿಕೊಳ್ಳುತ್ತಾನೆ. ಮಾಂಸಪಿಂಡನಿವೃತ್ತಿಪೂರ್ವಕ ಮಂತ್ರಪಿಂಡತ್ವಾಪಾದಕವಾದ ಶಿವದೀಕ್ಷಾವಸರದಲ್ಲಿ ಆಚಾರ್ಯರು ಉಪದೇಶಿಸಿದ ಈ ಮೂರು ತರಗತಿಗಳನ್ನು ಕ್ರಮದಿಂದ ಅನುಷ್ಠಿಸುತ್ತ ಪರಿಪಕ್ವಚಿತ್ತನಾಗಿ ಲೌಕಿಕಾಭಿಮಾನವನ್ನು ತ್ಯಜಿಸಿ ದಗ್ಧಪಟದಂತೆ ಆಪಾತತಃ ದೇಹಧಾರಿಯಾಗಿರುವವನೇ ನಿರಾಭಾರಿಯೆನಿಸುತ್ತಾನೆ. ಇವನನ್ನು ಶಿವಯೋಗಿಯೆಂದೂ ಲಿಂಗಾರೂಢನೆಂದೂ ಕರೆಯುತ್ತಾರೆ. ಸಾಮಾನ್ಯವೀರಶೈವನಿಗಿರುವ ಗುರುಭಕ್ತಿಗಿಂತಲೂ ವಿಶೇಷವೀರಶೈವನಿಗಿರುವ ಗುರುಭಕ್ತಿಯು ಹೆಚ್ಚಾಗಿರುತ್ತದೆ. ಇವರೀರ್ವರಲ್ಲಿರುವ ಗುರುಭಕ್ತಿಗಿಂತಲೂ ನಿರಾಭಾರಿಗಳಿಗಿರುವ ಗುರುಭಕ್ತಿಯು ಹೆಚ್ಚಿನದಾಗಿರುತ್ತದೆ. ಪಂಚಕಲಶಸ್ಥಾಪನದ್ವಾರಾ ಶ್ರೀ ಪಂಚಾಚಾರ್ಯರ ಸಾಕ್ಷಿಯಾಗಿ ಗುರೂಪದೇಶವೆಂಬ ಸೂಕ್ಷ್ಮಬೀಜವು ಶಿಷ್ಯನ ಹೃದಯಭೂಮಿಯಲ್ಲಿ ಬಿದ್ದಮೇಲೆ, ಆ ಉಪದೇಶಬೀಜವೇ ಈ ಮೂರು ತರಗತಿಗಳಲ್ಲಿ ಕ್ರಮವಾಗಿ ಅಂಕುರಿಸಿ, ಪಲ್ಲವಿಸಿ ಫಲಿತವಾಗುತ್ತದೆ. ಈ ಮೂರು ತರಗತಿಗಳೊಳಗೆ ಯಾವ ತರಗತಿಯಲ್ಲೂ ಆ ಹಿಂದಣ ಶಿವಲಿಂಗಧಾರಣಪೂರ್ವಕ ಬಿತ್ತಿದ ಉಪದೇಶಬೀಜವು ಬದಲಾವಣೆಯಾಗುವುದಿಲ್ಲ. ಆ ಬೀಜವನ್ನು ತೆಗೆದುಹಾಕಿ ಮತ್ತೊಬ್ಬ ಗುರುವಿನಿಂದ ಬೇರೊಂದು ಉಪದೇಶಬೀಜವನ್ನು ಪಡೆಯುವುದಾದರೆ ಆತನು ನಿಂದಿತನಾಗಿ ಗುರುದ್ರೋಹಿಯಾಗುತ್ತಾನೆ. ಹಾಗೆ ಯಾವ ಸಿದ್ಧಾಂತದಲ್ಲೂ ಸಾಮಾನ್ಯನಿಗೊಂದು ಉಪದೇಶವು, ವಿಶೇಷನಿಗೊಂದು ಉಪದೇಶವು, ನಿರಾಭಾರಿಗೊಂದು ಉಪದೇಶವು ಎಂದು ಹೇಳಲ್ಪಟ್ಟಿಲ್ಲ. ನಿರಾಭಾರಿಯಾದವನು ದೀಕ್ಷಾವಸರದಲ್ಲಿ ಅನುಗ್ರಹಿಸಿದ ಶಿವಲಿಂಗವನ್ನಾಗಲಿ, ಮಹಾಮಂತ್ರವನ್ನಾಗಲಿ, ಅಷ್ಟಾವರಣ ಷಟ್‌ಸ್ಥಲಗಳನ್ನಾಗಲಿ ಬಿಟ್ಟಿಲ್ಲ. ಹೀಗಿದ್ದರೂ ಕೆಲ ನೆಡೆಯಲ್ಲಿ ನಿರಾಭಾರಿಗಳಿಗೊಬ್ಬ ಗುರುಗಳೆಂತಲೂ, ವಿಶೇಷರಿಗೊಬ್ಬ ಗುರುಗಳೆಂತಲೂ, ಸಾಮಾನ್ಯರಿಗೊಬ್ಬ ಗುರುಗಳೆಂತಲೂ ವಾದಿಸಹತ್ತಿದ್ದಾರೆ. ಇದು ವೀರಶೈವಮತಸ್ಥಾಪಕರಾದ ಪಂಚಾಚಾರ್ಯರ ಸಿದ್ಧಾಂತಕ್ಕೆ ಅತಿವಿರೋಧವಾದುದು. ಜ್ಞಾನಾಧಿಕ್ಯದಿಂದಾಗುವ ಇಂಥ ನಿರಾಭಾರಿಯ ಅಧಿಕಾರವು ಕಲಿಕಾಲಮಹಿಮೆಯಿಂದ ಅಪ್ಪನ ಸ್ಥಾನವನ್ನು ಮಗನು ಪಡೆಯುವಂತೆ, ಮನೆಮಠಗಳನ್ನು ಕಟ್ಟಿಕೊಂಡು ಬೇಕಾದಷ್ಟು ಆಸ್ತಿಪಾಸ್ತಿಗಳನ್ನು ಗಳಿಸಿಕೊಂಡ ಅಭಿಮಾನದಿಂದ ನಿರಾಭಾರಿಯೆಂಬ ಅಂಕಿತನಾಮವನ್ನು ಧರಿಸಿ ತಾನು ಪ್ರಾಣಬಿಡುವಕಾಲಕ್ಕೆ ತನ್ನ ಸ್ಥಾನಕ್ಕೆ ಮತ್ತೊಬ್ಬನನ್ನು ಕುಳ್ಳಿರಿಸುತ್ತಾನೆ. ಅವನ ಅವಸಾನದಲ್ಲಿ ಮತ್ತೊಬ್ಬನು ಬರುತ್ತಾನೆ. ಹೀಗೆ ನಿರಾಭಾರಿಗಳು ತಮ್ಮ ಮಠಗಳ ವಿಷಯದಲ್ಲಿ ಗೃಹಸ್ಥರಿಗಿಂತಲೂ ಕಡೆಯಾಗಿ ವರ್ತಿಸಹತ್ತಿದ್ದಾರೆ. ಆತ್ಮಶಕ್ತಿಯನ್ನು ಮೇಲುಮಾಡಿ ದೇಹಶಕ್ತಿಯನ್ನು ಕೀಳುಮಾಡಿ ಕೇವಲ ಲಿಂಗವಿಹಾರಿಯಾದವನೇ ನಿಜವಾದ ನಿರಾಭಾರಿಯೆನಿಸುತ್ತಾನೆ. ಇದು ವೈರಾಗ್ಯಬಲದಿಂದ ಬರತಕ್ಕದಲ್ಲದೆ ದೊಡ್ಡದೊಡ್ಡ ಮಠಗಳನ್ನು ಕಟ್ಟಿಸಿಕೊಳ್ಳುವುದರಿಂದ ಬರತಕ್ಕುದಲ್ಲ. ಇಂಥ ವಾಸ್ತವವಾದ ನಿರಾಭಾರಿಗೆ ವಾಹನಾದಿಗಳ ಅಪೇಕ್ಷೆಯಾಗಲಿ, ದ್ರವ್ಯಸಂಗ್ರಹೇಚ್ಛೆಯಾಗಲಿ, ಸ್ವಾಭಿಮಾನವಾಗಲಿ ಒಂದೂ ಇರುವುದಿಲ್ಲ. ಈಗ ಬಲಾತ್ಕಾರದಿಂದ ನಿರಾಭಾರಿಗಳೆಂದು ಹೆಸರನ್ನಿಟ್ಟುಕೊಂಡಿರುವ ಧರ್ಮಶಾಸ್ತ್ರಜ್ಞಾನಶೂನ್ಯರಾದ ಕೆಲ ದಾಂಭಿಕ ವಿರಕ್ತರು ಮತಸ್ಥಾಪಕರಿಗಿಂತಲೂ, ಒಂದು ಪಕ್ಷ ಶಿವನಿಗಿಂತಲೂ ನಾವೇ ದೊಡ್ಡವರೆಂದು ಪ್ರಲಪಿಸುತ್ತ ನವೀನನಾಸ್ತಿಕರಾಗಿ ಮೆರೆಯಹತ್ತಿದ್ದಾರೆ. ಅಸ್ತು! ಸಾಮಾನ್ಯರಾಗಲಿ, ವಿಶೇಷರಾಗಲಿ, ನಿರಾಭಾರಿಗಳಾಗಲಿ ಎಲ್ಲರೂ ತಮ್ಮ ಮತದ ಮೂಲಗುರುಗಳಲ್ಲಿ ಅಸಾಧಾರಣಭಕ್ತಿಯನ್ನಿಟ್ಟು ವರ್ತಿಸಿ ಶ್ರೀ ಜಗದೀಶ್ವರನ ಅನುಗ್ರಹಕ್ಕೆ ಪಾತ್ರರಾಗಲೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ಕಳೆದ ಸೋಮವಾರ ಚಕ್ರವರ್ತಿನಿಯವರು ರೌಂಡು ಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ಮಹಿಳೆಯರಿಗೆ ಔತಣವನ್ನು ಮಾಡಿಸಿದರು.

ಲಂಡನ್ನಿನ ಒಬ್ಬ ಶಾಸ್ತ್ರಜ್ಞರು ಕತ್ತಲಕೋಣೆಯಲ್ಲಿ ಮಲಗಿದರೂ ಚನ್ನಾಗಿ ಓದಲು ಅನುಕೂಲಿಸುವಂಥ ಸುಲೋಚನವನ್ನು ಕಂಡುಹಿಡಿದಿರುವರಂತೆ!

ಕಾಯಿದೆಭಂಗದಲ್ಲಿ ಭಾಗಿಗಳಾಗಿದ್ದ ಹಾವೇರಿಯ ಮ|| ರಾ|| ವಿರೂಪಾಕ್ಷಪ್ಪ ಸಿರ್ಸಿ ಮೊದಲಾದ 5 ಜನ ಸ್ವಯಂಸೇವಕರಿಗೆ 2½ ತಿಂಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತೆಂದು ತಿಳಿದುಬರುತ್ತದೆ.

ಲಾರ್ಡ್ ಇರ್ವಿನ್‌ರವರ ತರುವಾಯ ಈ ಮೊದಲು ಬೊಂಬಾಯಿ ಇಲಾಖೆಯ ಗೌರ್ನರಾಗಿದ್ದ ಲಾರ್ಡ್ ವಿಲಿಂಗ್ಡನ್‌ರವರು ಇಂಡಿಯಾದೇಶದ ವೈಸರಾಯಿ ಪದವಿಯನ್ನು ಅಲಂಕರಿಸುವವರಾಗಿದ್ದಾರೆ.

ಪಂಡಿತ ಜವಾಹರಲಾಲರವರ ಪತ್ನಿಯರಾದ ಶ್ರೀಮತಿ ಕಮಲಾನೆಹರೂರವರು ಹೊಸದಿಲ್ಲಿಯಲ್ಲಿ ಜೈಲಿನಲ್ಲಿರುವ ತಮ್ಮ ತಾಯಿಯವರನ್ನು ಇದೇ ತಿಂಗಳು 15 ನೆಯ ತಾರೀಖಿನ ದಿವಸ ಸಂದರ್ಶಿಸಿದರು.

ಮುರ್ಷಿದಾಬಾದ್ ಮತ್ತು ಸೆತಹತ ಎಂಬ ಸ್ಥಳಗಳಲ್ಲಿ ಜನರು ಕಾಯಿದೆವಿರುದ್ಧವಾಗಿ ಉಪ್ಪನ್ನು ತಯಾರಿಸಲು ಪ್ರಾರಂಭಿಸಿರುವರೆಂದೂ, ಜಿಲ್ಲಾಧಿಕಾರಿಗಳು ಶಸ್ತ್ರ ಶಿಪಾಯಿಗಳೊಡನೆ ಆ ಸ್ಥಳಗಳಿಗೆ ಹೊರಟಿರುವರೆಂದೂ ಪ್ರಕಟಿಸಲ್ಪಟ್ಟಿದೆ.

ನ್ಯೂಡಿಲ್ಲಿಯಲ್ಲಿ ಸ್ವಾಮಿ ಶ್ರದ್ಧಾನಂದರವರ ಮೊಮ್ಮಗಳಾದ ಹದಿನಾರು ವರ್ಷ ವಯಸ್ಸಿನ ಕುಮಾರಿ ಕೌಸಲ್ಯಾದೇವಿ... ಶ್ರೀಯುತ ವಲ್ಲಭಭಾಯಿ ಪಟೇಲರವರ ದಸ್ತಗಿರಿಯನ್ನು ಕುರಿತು ಭಾಷಣಮಾಡಿದ್ದಕ್ಕೋಸ್ಕರ ಕೈಸೆರೆಮಾಡಲ್ಪಟ್ಟಿರುವರು.

ಅಮೇರಿಕೆಯ ಪ್ರಸಿದ್ಧ ಡಾಕ್ಟರರಾದ ಎಲ್. ಬಿ. ಮಾರ್ಗರೆಂಬುವರು ಮತ್ತು ಅವರ ಪತ್ನಿಯವರು ರಾತ್ರಿಯಲ್ಲಿ ಒಬ್ಬರಿಗೊಬ್ಬರು ಅಪಾಯಕರಗಳಾದ ಯಂತ್ರಗಳಿಂದ ಹೊಡೆದಾಡಿ ಉಭಯರೂ ಹಾಸಿಗೆಯಲ್ಲಿ ಪ್ರಾಣಗಳನ್ನು ಬಿಟ್ಟಿರುವರಂತೆ! ಸರಿಯಾದ ದಾಂಪತ್ಯ!

ಬೊಂಬಾಯಿಯ ಕ್ರಾನಿಕಲ್ ಪತ್ರಿಕೆಯ ಪ್ರಿಂಟರ್ ಮತ್ತು ಪ್ರಕಾಶಕರಾದ ಮಿ|| ಕಪಾಡಿಯರವರು ಕೆಳಕೋರ್ಟಿನ ತೀರ್ಪಿನಮೇಲೆ ಹೈಕೋರ್ಟಿಗೆ ಅಪೀಲ್ ಮಾಡಿದ್ದುದು ಸರಿಯಷ್ಟೆ! ಹೈಕೋರ್ಟಿನ ನ್ಯಾಯಾಧೀಶರು ಕೆಳಕೋರ್ಟಿನ ತೀರ್ಪನ್ನೇ ಸ್ಥಿರಪಡಿಸಿದರು.

ಆಫ್ರಿಕಾಖಂಡದಲ್ಲಿ ಪ್ರಸಿದ್ಧಮುಖಂಡರಾದ ಡಾ|| ಹೆರಾಲ್ಡ್‌ಮೋಡಿ ಎಂಬವರು ಮಹಾತ್ಮಗಾಂಧಿಯವರನ್ನೂ, ಅವರ ಅಹಿಂಸಾಮಯಚಳವಳಿಯನ್ನೂ ಬಹು ಪ್ರಶಂಸಿಸಿ, ಆಫ್ರಿಕಾಖಂಡದ ಕರಿಯ ಜನರು ಅವರ ತತ್ವವನ್ನು ಅನುಸರಿಸಿದರೆ ಕ್ಷೇಮಕರವಾಗುವುದೆಂದು ಭಾಷಣಮಾಡಿದರು.

ಬೆಳಗಾಂವ ಪಟ್ಟಣದಲ್ಲಿ ಕ್ರಿ. ಪ್ರೊ. ಕೋ 144 ನೆಯ ಸೆಕ್ಷನ್ನು ಪೋಲೀಸಿನವರು ಜಾರಿಯಲ್ಲಿ ತಂದು ಇದೇ ತಿಂಗಳು 15 ಮತ್ತು 16 ನೆಯ ತಾರೀಖಿನ ದಿವಸ ಪ್ರಭಾತಪೇರಿಗಳನ್ನು ಬಲಾತ್ಕಾರವಾಗಿ ಅಡ್ಡಪಡಿಸಿದರೆಂದೂ, ಸುಮಾರು ನೂರಾರುಜನರು ದಸ್ತಗಿರಿ ಮಾಡಲ್ಪಟ್ಟಿರುವರೆಂದೂ ತಿಳಿದುಬರುತ್ತದೆ.

ಈ ತಿಂಗಳು 16 ನೆಯ ತಾರೀಖಿನ ದಿವಸ ಗುಳೇದಗುಡ್ಡದ ಶ್ರೀಮತಿ ಫಕೀರವ್ವನು, ಇಸ್ಮಾಯಿಲ್ ಮತ್ತು ನರಸಿಂಹ ಎಂಬ ಇಬ್ಬರು ಸ್ವಯಂಸೇವಕರು ವಿಜಾಪುರದ ಸೆರೆಮನೆಯಿಂದ ಬಿಡುಗಡೆಮಾಡಲ್ಪಟ್ಟರು. ಆ ದಿವಸ ವಿಜಾಪುರದ ನಾಗರಿಕರು ಅವರ ಮೆರವಣಿಗೆಯನ್ನು ಮಾಡಿದರೆಂದು ತಿಳಿದುಬರುತ್ತದೆ.

ಲಾಹೋರಿನ ಹಿಂದೂಸ್ಥಾನ ಟೈಮ್ಸು ಪತ್ರಿಕೆಯು ಡಿಪಾಜಿಟ್ಟು ಹಣವನ್ನು ಸರ್ಕಾರದವರು ಮುಟ್ಟುಗೋಲು ಹಾಕಿಕೊಂಡ ವಿಷಯವು ಅಲ್ಲಿಯ ಹೈಕೋರ್ಟಿನಲ್ಲಿ ವಿಮರ್ಶೆಗೆ ಬಂದು, ವಾದದ ಮಧ್ಯದಲ್ಲಿ ಜಡ್ಜರವರು "ಇತರ ಪತ್ರಿಕೆಗಳು ಪ್ರಕಟಿಸುವಂತೆಯೇ, ಕಾನೂನು ಭಂಗದ ಸುದ್ದಿಯನ್ನು ಈ ಪತ್ರಿಕೆಯೂ ಪ್ರಕಟಿಸಿದರೆ ಅದರಲ್ಲಿ ತಪ್ಪೇನು?" ಎಂದು ಪ್ರಶ್ನಿಸಿದರಂತೆ!

ಇಂಗ್ಲೆಂಡಿನಲ್ಲಿ ಮರಣಶಿಕ್ಷೆಯನ್ನು ತಪ್ಪಿಸಬೇಕೆಂಬ ಪ್ರಯತ್ನವು ಬಹುದಿನಗಳಿಂದಲೂ ನಡೆಯುತ್ತಿದ್ದು ಇದಕ್ಕಾಗಿ ಒಂದು ಸ್ಪೆಷಲ್ ಕಮಿಟಿಯು ಏರ್ಪಾಡಾಗಿತ್ತು. ಕಮಿಟಿಯವರು ಇನ್ನು ಐದುವರ್ಷಗಳವರೆಗೆ ಮರಣಶಿಕ್ಷೆಯನ್ನು ವಜಾಮಾಡಿರಬಹುದೆಂದೂ, ಅನಂತರ ಅಪರಾಧಿಗಳ ಮೇಲಿನ ಪರಿಣಾಮವನ್ನು ನೋಡಿಕೊಂಡು ಈ ಕಾನೂನನ್ನು ಇನ್ನೂ ಕೆಲವುಕಾಲ ಹೆಚ್ಚಿಸಬಹುದೆಂದೂ ಅಭಿಪ್ರಾಯಪಟ್ಟಿರುವದರಿಂದ ಕೂಡಲೇ ಇದು ಕಾನೂನಾಗಿ ಮಾಡಲ್ಪಡುವುದು.

ಕೊಯಮತ್ತೂರು ಜೈಲಿನಲ್ಲಿರುವ ಶ್ರೀಯುತ ವಿಠ್ಠಲಭಾಯಿ ಪಟೇಲರವರ ಪ್ರಕೃತಿಯು ಇನ್ನೂ ಎಷ್ಟು ಸುಧಾರಿಸಿಲ್ಲ. ಅವರಿಗೆ ಮೂಲವ್ಯಾಧಿಯು ಬೇನೆಯಿದ್ದು, ಹೃದಯದ ಮೇಲೆ ಒಂದು ಹುಣ್ಣಾಗಿದೆಯಂತೆ! ಇದೇ ತಿಂಗಳು 18 ನೆಯ ತಾರೀಖಿನ ದಿವಸ ಅವರು ಸೆಂಟ್ರಲ್ ಜೈಲ್ ಆಸ್ಪತ್ರೆಗೆ ಸಾಗಿಸಲ್ಪಟ್ಟು ಆಪರೇಷನ್ನಿಗಾಗಿ ಒಂದು ಮೇಜಿನ ಮೇಲೆ ಮಲಗಿಸಲ್ಪಡಲು ಆಗ ಆಕಸ್ಮಾತ್ತಾಗಿ ಮೇಜಿನ ಕಾಲಿನ ಕೀಲುತಪ್ಪಿ ಮೇಜಿನಿಂದ ಕೆಳಗಿಬಿದ್ದರು. ಆದರೂ ದೇವರಕೃಪೆಯಿಂದ ಯಾವ ಅಪಾಯವೂ ಸಂಭವಿಸಲಿಲ್ಲವೆಂದು ತಿಳಿದುಬರುತ್ತದೆ.

ಇದೇ ತಿಂಗಳು 17ನೆಯ ತಾ|| ನ ದಿವಸ ಅಳ್ವಾರ್ ಮಹಾರಾಜರವರು ಲಂಡನ್ನಿನಲ್ಲಿ ಇಂಗ್ಲೆಂಡಿನ ಮುಖ್ಯ ಮಂತ್ರಿಗಳೇ ಮೊದಲಾದ ಐರೋಪ್ಯ ದೊಡ್ಡಮನುಷ್ಯರಿಗೂ ಸಂಸ್ಥಾನಾಂತರರಾಜರುಗಳಿಗೂ, ಇತರ ದೊಡ್ಡಮನುಷ್ಯರಿಗೂ ಒಂದು ಔತಣವನ್ನು ಮಾಡಿಸಿದರು. ಆಗ ಅವರು ಮಂತ್ರಿಗಳಾದ ರಾಂಸೇ ಮ್ಯಾಕ್ಡೊನಾಲ್ಡರವರು ಹಿಂದೂಸ್ಥಾನಕ್ಕೆ ಬೇಕಾಗಿರುವ ಅಂಶಗಳೆಲ್ಲಾ ತಮಗೆ ಚನ್ನಾಗಿ ಗೊತ್ತಿದೆ ಎಂದೂ, ಸಾಧ್ಯವಾದಷ್ಟುಗೂ ಸಹಾಯಮಾಡಲು ದೃಢಸಂಕಲ್ಪಮಾಡಿರುವದಾಗಿ ಭಾಷಣಮಾಡಿದರೆಂದೂ ಪ್ರಸಿದ್ಧವಾಗಿದೆ.

ಮುಂದಿನ ತಿಂಗಳು 14 ನೆಯ ತಾರೀಖಿನ ದಿವಸ ಪ್ರಾರಂಭವಾಗುವ ಲೆಜಿಸ್ಲೇಟಿವ್ ಅಸೆಂಬ್ಲಿಯ ಅಧಿವೇಶನದಲ್ಲಿ ಮಿ|| ಬಿ. ದಾಸ್ ಎಂಬವರು ಇಂಡಿಯಾಗೌರ್ನಮೆಂಟಿನವರು ಹಿಂದೂಸ್ಥಾನದ ರಾಜಕೀಯ ಸುಧಾರಣೆಗಾಗಿ ಕಳುಹಿಸಿರುವ ಸಲಹೆಗಳು ಭಾರತೀಯರ ಮನೋಭಿಷ್ಟಗಳನ್ನು ವ್ಯಕ್ತಪಡಿಸುವುದಿಲ್ಲವೆಂದೂ, ಅವು ಈಗಿನ ಕಾಲಕ್ಕೆ ಅನ್ವಯಿಸತಕ್ಕವುಗಳಲ್ಲವೆಂದೂ ಬ್ರಿಟಿಷ್ ಸರ್ಕಾರಕ್ಕೂ, ಇಂಡಿಯಾಸೆಕ್ರೆಟರಿಗಳಿಗೂ ತಿಳುಹಿಸುವುದಕ್ಕೋಸ್ಕರ ಒಂದು ಠರಾವನ್ನು ಕಳುಹಿಸಿದ್ದಾರೆ. ಮತ್ತು ಭೂಪತಸಿಂಗ್ ಎಂಬ ಬಿಹಾರಿನ ಮೆಂಬರರು ಶಾರದಾಆಕ್ಟನ್ನು ಸ್ವಲ್ಪಮಟ್ಟಿಗೆ ಬದಲಾಯಿಸಬೇಕೆಂದು ಸೂಚನೆಯನ್ನು ಕಳುಹಿಸಿರುವರು.

ಪಂಡಿತ ಮದನಮೋಹನ ಮಾಲವೀಯರವರು ಇದೇ ತಿಂಗಳು 17 ನೆಯ ತಾರೀಖಿನ ದಿವಸದಿಂದ ಮೂತ್ರಜನಕಾಂಗದಲ್ಲಿ ಒಂದು ವಿಧವಾದ ಬಾಧೆಯಿಂದ ನರುಳುತ್ತಿರುವರೆಂದೂ, ನೈನಿಜೈಲಿನಿಂದ ಅಲಹಾಬಾದಿನ ಯೂರೋಪಿಯನ್ ಸಿವಿಲ್ ಆಸ್ಪತ್ರೆಗೆ 18 ನೆಯ ತಾರೀಖಿನ ದಿವಸ ಮಧ್ಯಾಹ್ನ ಕರೆತರಲ್ಪಟ್ಟರೆಂದೂ, ನೈನಿಜೈಲಿನಿಂದ ಸಿವಿಲ್ ಆಸ್ಪತ್ರೆಗೆ ಬರುವುದಕ್ಕೆ ಮುಂಚೆ ಆಸ್ಪತ್ರೆಯ ಮುಂಭಾಗದಲ್ಲಿ ಸರ್ಕಾರದವರು ಬಲವಾದ ಪೋಲೀಸು ಕಾವಲಿಟ್ಟಿದ್ದರೆಂದೂ, ಪಂ|| ಮದನಮೋಹನಮಾಲವೀಯರಿರುವ ವಾರ್ಡಿನ ಪಕ್ಕದ ರೂಮಿನಲ್ಲಿಯೇ ಅವರ ಪತ್ನಿಯರೂ ಮತ್ತು ಮಗನೂ ಇರಲು ಸರ್ಕಾರದವರು ಅನುಮತಿಯನ್ನು ಕೊಟ್ಟಿರುವರೆಂದೂ ಪ್ರಕಟಿಸಲ್ಪಟ್ಟಿದೆ.

ಮುಂಬಯಿಪಟ್ಟಣದಲ್ಲಿ ಮ|| ರಾ|| ಗೋವರ್ಧನದಾಸನೆಂಬ ಸತ್ಯಾಗ್ರಹಿಯ ವಿವಾಹವು ನೆರವೇರಿತು. ವಧೂವರರಿಬ್ಬರೂ ಕೇವಲ ಖಾದಿಯಬಟ್ಟೆಗಳನ್ನೇ ಧರಿಸಿದ್ದರು. ಇವರ ಮೆರವಣಿಗೆಯು ವಾಹನವಿಲ್ಲದೆ ಕೇವಲ ನಡಿಗೆಯಿಂದಲೇ ಸಾಗಿತು. ದಾರಿಯುದ್ದಕ್ಕೂ ರಾಷ್ಟ್ರಸೇವಕರು ಜಯಜಯಕಾರವನ್ನು ಮಾಡುತ್ತಿದ್ದರು. ವಧುವಿನ ಕಡೆಯವರು ವರನಿಗೆ ಒಂದು ಗಾಂಧಿಟೊಪ್ಪಿಗೆಯನ್ನೂ, ಒಂದು ತಕಲಿ (ಸಿರಕಿ) ಯನ್ನೂ ವರದಕ್ಷಿಣೆಯ ರೂಪದಿಂದ ಸಮರ್ಪಿಸಿದರಂತೆ! ಇದಲ್ಲವೇ ರಾಷ್ಟ್ರಚೈತನ್ಯದ ನವೀನ ವಿವಾಹಪದ್ಧತಿಯು? ಈ ರೀತಿಯಾಗಿ ಮಿತವ್ಯಯದಿಂದ ವಿವಾಹಕಾರ್ಯವನ್ನು ಸಮಾಪ್ತಿಗೊಳಿಸಿ ತಾವು ಮೊದಲು ಅಂದಾಜು ಮಾಡಿಕೊಂಡಿದ್ದ ಹಣದಲ್ಲಿ ಉಳಿದುದನ್ನು ಸ್ವದೇಶಿಪ್ರಚಾರಕ ಸಂಘಕ್ಕೆ ಸಮರ್ಪಿಸಿದರೆಂದು ತಿಳಿದುಬರುತ್ತದೆ.

ಈಜಿಪ್ಟ್‌ದೇಶದ "ಅಲ್‌ಜಲಾದ್" ಪತ್ರಿಕೆಯ ಸಂಪಾದಕರು ಮಹಾತ್ಮರನ್ನು ಈರೀತಿ ಪ್ರಶಂಸಿಸಿರುವರು.

ಗಾಂಧೀ ಎಂದರೆ ಯಾರು? ಕೇವಲ ಅಸ್ಥಿಪಂಜರವನ್ನು ಹೊಂದಿರುವ ಮಹಾತ್ಮನಲ್ಲವೇ! ಆ ಅಸ್ಥಿಪಂಜರದಲ್ಲಿ ಆತ್ಮವು ಪ್ರಕಾಶಿಸುವುದಿಲ್ಲವೆ? ಆ ಮಹಾಪುರುಷನು ತನ್ನ ದೇಶದಲ್ಲಿರುವ ಲಕ್ಷಾಂತರ ಬಡಜನರ ಸಹಾನುಭೂತಿಗಾಗಿ ತಾನೇ ನೂತು ತಾನೇ ನೇಯ್ದ ಒಂದು ಲಂಗೋಟಿಯನ್ನು ಮಾತ್ರ ಧರಿಸುವನಲ್ಲವೇ? ಮಹಾತ್ಮನೇ! ನೀನು ಇಂಡಿಯಾದೇಶಕ್ಕೆ ಮಾತ್ರವೇ ಮಾರ್ಗದರ್ಶಕನಲ್ಲ. ಈಜಿಪ್ಟಿಗೂ ಮಾರ್ಗದರ್ಶಕನಾಗಿರುವೆ. ಭಾರತಮಾತೆಯೇ! ನೀನು ಎಂತಹ ಪುಣ್ಯಾತ್ಮಳು? ನೀನು ಎಷ್ಟು ಕಷ್ಟದಲ್ಲಿ ಸಿಲುಕಿಕೊಂಡಿದ್ದರೂ ಗಾಂಧಿಯಂತಹ ಧರ್ಮಾತ್ಮನನ್ನು ಪಡೆಯುವ ಭಾಗ್ಯವು ನಿನಗೊದಗಿದೆಯಲ್ಲ! ನೀನೇ ಧನ್ಯಳು! ಧನ್ಯಳು!!

ಅಹಮ್ಮದಾಬಾದ್ ಗಿರಣಿಕಾಮದಾರರ ಸಂಘಗಳ ಪತಿಯಿಂದಲೂ, ವರ್ತಕಸಂಘಗಳ ಪತಿಯಿಂದಲೂ ಮರಣಶಾಸನಕ್ಕೆ ಗುರಿಯಾಗಿರುವ ಸೋಲಾಪುರದ ಕೈದಿಗಳ ವಿಷಯದಲ್ಲಿ ದಯೆಯನ್ನು ತೋರಿಸಬೇಕೆಂದು ಚಾರ್ಜ್ ಸಾರ್ವಭೌಮರವರಿಗೂ, ಮುಖ್ಯಮಂತ್ರಿಗಳಿಗೂ, ಪಾರ್ಲಿಮೆಂಟ್ ಸಭೆಯ ಅಧ್ಯಕ್ಷರಿಗೂ, ಇಂಡಿಯಾ ಸೆಕ್ರೆಟರಿ ಮಿ|| ಬೆನ್‌ರವರಿಗೂ, ಮಿ|| ಫೆನ್ನರ್ ಬ್ರಾಕ್ವೇರವರಿಗೂ, ವೈಸರಾಯರವರಿಗೂ, ಬೊಂಬಾಯಿ ಗೌರ್ನರವರಿಗೂ ತಂತಿಯನ್ನು ಕಳುಹಿಸಿರುವರು. ಮತ್ತು ಪೂನಾ ಕ್ರೈಸ್ತ ಸೇವಾಸಂಘದ ಪ್ರೆಸಿಡೆಂಟ್ ರೆ|| ವಿನ್ಸ್ಲೋರವರು ಲಂಡನ್ನಿನ ಪಾರ್ಲಿಮೆಂಟಿನಿಂದ ನೇಮಕವಾಗಿರುವ ಮರಣಶಾಸನ ಸಮಿತಿಯ ಛೇರಮನ್ ರೆ|| ಜೇಮ್ಸ್‌ಬಾರ್‌ರವರಿಗೆ ಈ ವಿಷಯದಲ್ಲಿ ಇಂಡಿಯಾ ಸೆಕ್ರೆಟರಿ ಮಿ|| ಬೆನ್‌ರವರು ಕೈ ಹಾಕಿ ದಯೆಯನ್ನು ತೋರಿಸುವಂತೆ ಪ್ರೋತ್ಸಾಹಿಸಬೇಕಾಗಿ ತಂತಿಯನ್ನು ಕಳುಹಿಸಿರುವರು.

ಅಲಹಾಬಾದಿನ ನೈನಿಜೈಲಿನಲ್ಲಿ ಪಂಡಿತ ಜವಾಹರಲಾಲ್‌ನೆಹರು, ಡಾಕ್ಟರ್ ಸೈಯ್ಯದ್‌ಮಹಮ್ಮದ್, ಸರ್ದಾರ್ ಸರ್ಮದಾಸ್ರಸಾದಸಿಂಗ್, ಮಿ|| ಆರ್. ಎಸ್. ಪಂಡಿತ ಗೋವಿಂದಮಾಲವೀಯ ಇವರು ವಾಯುವ್ಯ ಸಂಯುಕ್ತ ಸಂಸ್ಥಾನದ ಕೆಲವು ಜೈಲುಗಳಲ್ಲಿ ರಾಜಕೀಯ ಖೈದಿಗಳನ್ನು ಪೋಲೀಸರು ಹೊಡೆದರೆಂದು ಕೇಳಿ, ಇದೇ ತಿಂಗಳು 18 ನೆಯ ತಾರೀಖಿನ ದಿವಸದ ಪ್ರಾತಃಕಾಲದಿಂದ ಮೂರು ದಿವಸಗಳವರೆಗೆ ಉಪವಾಸವ್ರತವನ್ನು ಕೈಕೊಂಡಿರುವರೆಂದೂ, ಸರ್ಕಾರದವರು ಇನ್ನು ಮೇಲೆ ಹೀಗೆ ಮಾಡಲು ಅವಕಾಶಕೊಡುವುದಿಲ್ಲವೆಂದು ಭರವಸೆಯನ್ನು ಕೊಡದಿದ್ದರೆ ಜೈಲಿನಲ್ಲಿಯೇ ಸಹಾಯ ನಿರಾಕರಣ ಚಳವಳಿಯನ್ನು ಹೂಡತಕ್ಕವರಾಗುವರೆಂದು ಪಂಡಿತ ಜವಾಹರಲಾಲ್ ನೆಹರೂರವರು ಜೈಲು ಸೂಪರಿಂಟೆಂಡೆಂಟರವರ ಮೂಲಕ ಸರ್ಕಾರದವರಿಗೆ ಪತ್ರವನ್ನು ಬರೆದಿರುವರೆಂದೂ, ಆ ಪತ್ರದ ಕಾಪಿಯೊಂದನ್ನು ವೈಸ್‌ರಾಯರವರಿಗೆ ಕಳುಹಿಸುವರೆಂದೂ ತಿಳಿದುಬರುತ್ತದೆ.

ಇದೇ ತಿಂಗಳು 15 ನೆಯ ತಾರೀಖಿನ ದಿವಸ ಬೊಂಬಾಯಿಯ ಕಾಲಬಾದೇವಿರಸ್ತೆಯಲ್ಲಿ ಬಾಬುಗೇನು ಎಂಬ ಕಾಂಗ್ರೆಸ್ಸಿನ ಸ್ವಯಂ ಸೇವಕನು ವಿದೇಶೀಯ ವಸ್ತ್ರಗಳನ್ನು ಸಾಗಿಸುತ್ತಿದ್ದ ಮೋಟಾರ್ ಲಾರಿಯನ್ನು ಅಡ್ಡಪಡಿಸಲು ಹೋಗಿ ಮೋಟಾರಿಗೆ ಸಿಕ್ಕಿ ಮೃತಪಟ್ಟನು. ಬೊಂಬಾಯಿಯ ಸಮಸ್ತ ಪಂಗಡದ ಪುರುಷರೂ, ಸ್ತ್ರೀಯರೂ, ಸಹಸ್ರಾರು ಜನರು ಈತನ ಕಳೇಬರವನ್ನು ಮೆರವಣಿಗೆಮಾಡಿ ಲೋಕಮಾನ್ಯ ಬಾಲಗಂಗಾಧರ ತಿಲಕರವರ ದೇಹವನ್ನು ದಹನಮಾಡಿದ ಸ್ಥಳದಲ್ಲಿಯೇ ದಹನಮಾಡಿದರು. ಬೊಂಬಾಯಿಯ ಮ್ಯುನಿಸಿಪಾಲಿಟಿಯವರು ದೇಶಕಾರ್ಯದ ಅವಸಾನಪನ್ನೈದಿದ ಬಾಬುಗೇನುವಿನ ಗೌರವಾರ್ಥವಾಗಿ ತಮ್ಮ ಕಾರ್ಯಕಲಾಪಗಳನ್ನು ನಿಲ್ಲಿಸಿದರು. ಆ ಬಾಬೂಗೇನೂನ ಸ್ಮರಣಾರ್ಥವಾಗಿ ಆ ಬೀದಿಯನ್ನು ಬಾಬೂರಾವ್ ರೋಡ್ ಎಂಬುದಾಗಿ ಕರೆಯಬೇಕೆಂದೂ, ಆತನು ಮೃತಿಹೊಂದಿದ ಸ್ಥಳದಲ್ಲಿ ಒಂದು ಸಮಾಧಿಯನ್ನು ಕಟ್ಟಬೇಕೆಂದೂ ಮುಂಬೈನಿವಾಸಿಗಳು ನಿಶ್ಚಯಿಸಿರುವರು. ಈಗಾಗಲೇ ಸಾವಿರಾರು ಜನರು ಆ ಸ್ಥಳಕ್ಕೆ ಭಕ್ತಿಯಿಂದ ಹೋಗುತ್ತಿರುವರು. ಅಲ್ಲಿ ಮೃತನ ಭಾವಚಿತ್ರವು ಇಡಲ್ಪಟ್ಟಿರುವುದು. ಹೂವಿನ ರಾಶಿಯಂತೂ ಲೆಖ್ಖವಿಲ್ಲದೆ ಬೀಳುತ್ತಿರುವುದು.

ಇದೇ ತಿಂಗಳು 18 ನೆಯ ತಾರೀಖಿನ ದಿವಸ ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಶ್ರೀಯುತ ಜಯಕರ್‌ರವರು ಭಾಷಣಮಾಡಿದ್ದೇನೆಂದರೆ:—ಭಾರತೀಯರು ಯಾವ ವಿಷಯಗಳನ್ನು ಕೇಳಿದಾಗ್ಯೂ ಅವುಗಳನ್ನು ಇಂಗ್ಲಿಷರು ಸಕಾಲದಲ್ಲಿ ಕೊಡುವುದಿಲ್ಲ. ಆದುದರಿಂದಲೇ ಇಂಡಿಯಾ ಕಾಂಗ್ರೆಸ್‌ನವರು 1924 ಮತ್ತು 1925 ನೆಯ ವರ್ಷದಲ್ಲಿ ರೌಂಡ್‌ಟೇಬಲ್ ಕಾನ್ಫರೆನ್ಸ್ ನಡೆಯಿಸಬೇಕೆಂದು ಕೇಳಿದಾಗ್ಯೂ ಸಕಾಲದಲ್ಲಿ ಅವರ ಆಶಯವನ್ನು ಆಂಗ್ಲೇಯರು ಪೂರ್ತಿಮಾಡದೆ ಹೋದುದರಿಂದ ಈಗ ಅದನ್ನು ತಿರಸ್ಕರಿಸುತ್ತಿರುವರು. ಆದಸ್ರಯುಕ್ತ ಆಂಗ್ಲೇಯರು ಶೀಘ್ರದಲ್ಲಿಯೇ ಭರತಖಂಡಕ್ಕೆ ಜವಾಬ್ದಾರಿ ಸರ್ಕಾರವನ್ನು ಕೊಡತಕ್ಕದೆಂದು ರೌಂಡ್‌ಟೇಬಲ್ ಕಾನ್ಫರೆನ್ಸ್‌ನಲ್ಲಿ ಠರಾವು ಪಾಸುಮಾಡಿ ಭಾರತೀಯರ ವಿಶ್ವಾಸಕ್ಕೆ ಪಾತ್ರರಾಗಬೇಕು. ಸಣ್ಣಪುಟ್ಟ ಎಲ್ಲಾ ವಿಷಯಗಳೂ ತೀರ್ಮಾನಕ್ಕೆ ಬರುವವರೆಗೂ ನಾವು ಕಾಯುತ್ತಿರಬೇಕೆಂದು ನಿರೀಕ್ಷಿಸುವುದು ಪ್ರಯೋಜನವಿಲ್ಲ. ಭಾರತೀಯರಿಗೆ ಅವಶ್ಯಕವಾದ ಪ್ರಥುಕ್ತವು ಕೊಡುವುದೆಂಬ ಭರವಸೆಯನ್ನು ಮೊದಲು ಕೊಡಬೇಕು. ಅನಂತರ ಅದರಲ್ಲಿ ಬರುವ ಚೊಂಕುಗಳನ್ನು ತಿದ್ದಲು ನಾವು ಸಮರ್ಥರಿದ್ದೇವೆ. ಭಾರತೀಯರಿಗೆ ಡೊಮಿನಿಯನ್ ಸ್ಟೇಟಸ್ ಕೊಡುವೆವೆಂಬ ಭರವಸೆಯನ್ನು ಕೊಟ್ಟರೆ ಚಿಕ್ಕಸಮಾಜಗಳ ಪ್ರಶ್ನೆಯನ್ನು ನಾವು ತೃಪ್ತಿಕರವಾಗಿ ತೀರ್ಮಾನಿಸುವೆವೆಂದು ಹಿಂದೂ ಮುಖಂಡರು ಎಷ್ಟೋ ಸಲ ಹೇಳಿದ್ದಾರೆ. ಜಾತಿಯ ಪ್ರಶ್ನೆಯನ್ನು ಮುಂದುಮಾಡಿ ಒಂದು ದೇಶದ ರಾಜಕೀಯ ಅಭಿವೃದ್ಧಿಯನ್ನು ತಡೆಯುವುದು ಜಾಣತನವಲ್ಲ.

ಸೆರೆಮನೆಯಲ್ಲಿ ಮಹಾತ್ಮರ ಕಾರ್ಯಕ್ರಮ.

ಗುಜರಾಥ ವಿದ್ಯಾಪೀಠದ ಮುಖ್ಯಾಧಿಕಾರಿಗಳಾದ ಶ್ರೀ ಕಾಕಾ ಕಾಳೇಲ್‌ಕರ್‌ರವರು ಮಹಾತ್ಮರ ಜೊತೆಯಲ್ಲಿ ಕೆಲವುದಿವಸವಿದ್ದರು. ಅವರು ಮಹಾತ್ಮರ ಕಾರ್ಯಕ್ರಮವನ್ನು ಈ ಕೆಳಗೆ ಕಂಡಂತೆ ಪ್ರಸಿದ್ಧಮಾಡಿದ್ದಾರೆ.

ನಾವು ಮುಂಜಾನೆ 4 ಗಂಟೆಗೆ ಇನ್ನೂ ನಕ್ಷತ್ರಗಳು ತಮ್ಮ ಪ್ರಕಾಶವನ್ನು ಬೀರುತ್ತಿರುವಾಗಲೇ ಹಾಸಿಗೆಯಿಂದ ಮೇಲಕ್ಕೇಳುವೆವು. 4-20 ರೊಳಗಾಗಿ ನಮ್ಮ ಪ್ರಾತಃಕಾಲದ ದೇವತಾಪ್ರಾರ್ಥನೆಯು ಪ್ರಾರಂಭವಾಗುವುದು. ಪ್ರಾರ್ಥನೆಯನಂತರ ಭಗವದ್ಗೀತೆಯ ಪಠನವಾಗುವುದು. ಆ ಮೇಲೆ ಅರ್ಧ ಗಂಟೆ ಹೊತ್ತು ನಾನು ಗಾಳಿಸಂಚಾರಕ್ಕೆ ಹೋಗುವೆನು. ಮಹಾತ್ಮರು ಓದುವುದರಲ್ಲಿಯೋ ಬರೆಯುವುದರಲ್ಲಿಯೋ ತೊಡಗಿದ್ದು ನಾನು ಹಿಂದಿರುಗಿದ ಕೂಡಲೆ ನನ್ನೊಂದಿಗೆ ಕಲೆಯುವರು. ಸ್ವಲ್ಪ ತಿರುಗಾಡುತ್ತಾ, ಗೀತೆ, ಆಶ್ರಮದ ಉತ್ತಮ ಆಹಾರ, ಚರಕ ಈ ವಿಷಯಗಳನ್ನು ಚರ್ಚಿಸುತ್ತೇವೆ. 6 ಗಂಟೆಗೆ ಸರಿಯಾಗಿ ಪ್ರಾತಃಕಾಲದ ಭೋಜನಕ್ಕೆ ಕುಳಿತುಕೊಳ್ಳುವೆವು. ಮಹಾತ್ಮರು ಮೊಸರನ್ನು (ಇಷ್ಟವಾದರೆ) ನೀರಿನಲ್ಲಿ ನೆನೆಯಿಸಿದ ಖರ್ಜೂರವನ್ನೂ ತೆಗೆದುಕೊಳ್ಳುವರು. ಈ ಭೋಜನವನ್ನು ಮುಗಿಸುವ ಹೊತ್ತಿಗೆ ಹಾಲು ಕರೆಯುವ ಆಡುಗಳು ಬರುವುವು. ತಾಯಿಯನ್ನು ಕಂಡು ಆಡಿನ ಮರಿಗಳು ಓಡಿಹೋಗಿ ಹಾಲು ಕುಡಿಯುವುದನ್ನೂ ತಮ್ಮ ತಮ್ಮ ತಾಯಂದಿರನ್ನು ಕೂಗುವುದನ್ನೂ ನೋಡಿದರೆ ಮಹಾತ್ಮರಿಗೆ ಬಹಳ ಆನಂದವಾಗುವುದು. ಅನಂತರ ಒಂದು ನಿಮಿಷವನ್ನೂ ವ್ಯರ್ಥವಾಗಿ ಕಳೆಯದೆ, ಮಹಾತ್ಮರು ಭಾರತದ ಕಷ್ಟಪರಂಪರೆಗಳನ್ನು ಸ್ಮರಣೆಗೆ ತರುವ ಮತ್ತು ಭಾರತವನ್ನು ದುರ್ದಶೆಯಿಂದ ಮೇಲಕ್ಕೆತ್ತುವ ಭಾರತದ ಭಾಗ್ಯವನ್ನು ತನ್ನಲ್ಲಡಕಮಾಡಿಕೊಂಡಿರುವ ರಾಟೆಯನ್ನು ತಿರುಗಿಸಲು ಪ್ರಾರಂಭಿಸುವರು. ಆ ರಾಟೆಯ ಧ್ವನಿಯು ಇಂಪಾಗಿ ಕಿವಿಗೆ ಕೇಳಿಸುತ್ತ, ಭಾರತದ ಪುರಾತನ ಇತಿಹಾಸವನ್ನು ಪದ್ಯಗಳಲ್ಲಿ ಹಾಡಿದಂತಾಗುವುದು.

ರಾಟೆಯು ನಮ್ಮ ಹತ್ತಿರ ಧ್ವನಿಮಾಡುತ್ತಿದ್ದರೆ ನಾವು ಒಬ್ಬಂಟಿಗರೆಂಬ ಭಾವನೆಯು ನಮಗುಂಟಾಗುವುದಿಲ್ಲ. ಹೀಗೆ ರಾಟೆಯ ಕೆಲಸವು ಅವಿಚ್ಛಿನ್ನವಾಗಿ 10-30 ರ ವರೆಗೆ ಸಾಗುವುದು. ಸುಮಾರು 7 ಗಂಟೆಯ ಹೊತ್ತಿಗೆ ಮಹಾತ್ಮರು ನಿಂಬೆಹಣ್ಣಿನ ರಸ ಮತ್ತು ಉಪ್ಪಿನೊಡನೆ ಬೆರತ ಬಿಸಿನೀರನ್ನು ತೆಗೆದುಕೊಳ್ಳುವರು. ಹತ್ತೂವರೆ ಗಂಟೆಗೆ ಸರಿಯಾಗಿ ಅವರು ಸ್ನಾನಕ್ಕೆ ಹೋಗುವರು. ಪ್ರಾತಃಕಾಲದಲ್ಲಿ ಅವರು ಹತ್ತಿಯನ್ನು ಹಿಂಜುವ ಕೆಲಸದಲ್ಲಿ ಸ್ವಲ್ಪಹೊತ್ತನ್ನು ಕಳೆಯುವರು. ಅವರು ಅರ್ಧ ಗಂಟೆ ಹಿಂಜಿದ ಹತ್ತಿಯು ಅವರಿಗೆ ಸಾಯಂಕಾಲದವರೆಗೂ ಸಾಕಾಗುತ್ತದೆ. ಆದರೆ ನನಗೂ ಮತ್ತು ಕೆಲವುಸಾರಿ ಸರದಾರ್ ವಲ್ಲಭಭಾಯಿಯವರಿಗೂ ಈ ಹತ್ತಿಯು ಸಾಲುತ್ತಿರಲಿಲ್ಲ. ವಲ್ಲಭಭಾಯಿಯವರು ಜೈಲುಸೂಪರಿಂಟೆಂಡೆಂಟರ ಮೂಲಕ ಹೇಳಿಕಳುಹಿಸಿ ಹತ್ತಿಯನ್ನು ಮಹಾತ್ಮರಿಂದ ತರಿಸಿಕೊಳ್ಳುತ್ತಿದ್ದರು. ನನಗೂ ಸರದಾರರಿಗೂ ಈ ಹತ್ತಿಯನ್ನೊದಗಿಸುವ ಕೆಲಸವು ಮಹಾತ್ಮರಿಗೆ ಬಹಳ ಸಂತೋಷದಾಯಕವಾಗಿದ್ದಿತು. ತಾಯಿಯು ತನ್ನ ಪ್ರಿಯ ಮಕ್ಕಳಿಗೆ ಊಟಕ್ಕೆ ಮಾಡಿಡಲು ಉತ್ಸಾಹಪಡುವಂತೆ ಮಹಾತ್ಮರು ನಮಗೆ ಹತ್ತಿಯ ಸರಬರಾಯನ್ನು ಸಡಗರದಿಂದ ಮಾಡುತ್ತಿದ್ದರು.

ಹನ್ನೊಂದು ಗಂಟೆಗೆ ನಮ್ಮ ಮಧ್ಯಾಹ್ನದ ಭೋಜನ ಮಾಡುತ್ತಿದ್ದೆವು. ಆಗಲೂ ಮೊಸರು, ಖರ್ಜೂರ, ಬೇಯಿಸಿದ ತರಕಾರಿ ಇವೇ ಭೋಜನದ ಪದಾರ್ಥಗಳಾಗಿದ್ದುವು. ಇದೇ ಸಮಯದಲ್ಲಿ ವೃತ್ತಪತ್ರಿಕೆಗಳು ಬರುತ್ತಿದ್ದುವು. ನಾನು ಲಾಹೋರ್ ಪ್ರಕಾರದ ಪ್ರಸಂಗಗಳನ್ನೂ ಬೊಂಬಾಯಿ ನಗರದ ಮಹಿಳೆಯರು ರಾಷ್ಟ್ರಧ್ವಜಗಳನ್ನೇರಿಸಿದುದರ ಸಾಹಸವನ್ನೂ ಓದುತ್ತಿದ್ದೆನು. ನಾವು ಆಗ ಈ ವೃತ್ತಾಂತಗಳ ವಿಷಯದಲ್ಲಿ ವಿಮರ್ಶೆ ಮಾಡುತ್ತಿರಲಿಲ್ಲ. ಸಾಯಂಕಾಲದ ಗಾಳಿಸಂಚಾರದ ಸಮಯಕ್ಕೆ ಈ ಚರ್ಚೆಯನ್ನು ಮುಂದುವರಿಸುತ್ತಿದ್ದೆವು. ಊಟದ ಸಮಯದಲ್ಲಿ ಶುದ್ಧವಾದ ಮಿತಾಹಾರವೂ, ಗಾಳಿ, ಬೆಳಕು, ವ್ಯಾಯಾಮ ಮೊದಲಾದ ಸ್ವಾಭಾವಿಕ ಪದಾರ್ಥಗಳೂ ಆರೋಗ್ಯಕ್ಕೆ ಮುಖ್ಯಕಾರಣಗಳೆಂಬ ವಿಷಯಗಳು ಭೋಜನದ ಸಮಯದಲ್ಲಿ ಪ್ರಸ್ತಾಪಿಸಲ್ಪಡುತ್ತಿದ್ದುವು. ಭೋಜನವಾದಕೂಡಲೆ ರಾಟೆಯ ಚಕ್ರವು ತಿರುಗುವುದಕ್ಕೆ ಪ್ರಾರಂಭವಾಗುತ್ತಿದ್ದಿತು. ಅದಾದ ಕೂಡಲೆ ವೃತ್ತಪತ್ರಿಕೆಗಳು. ಅನಂತರ ವಿಶ್ರಾಂತಿ. ಒಂದೂವರೆ ಗಂಟೆಗೆ ಸರಿಯಾಗಿ ಹುಳಿಯ ನಿಂಬೆಹಣ್ಣಿನ ರಸದಿಂದ ಕೂಡಿದ ಒಂದು ಬಟ್ಟಲು ನೀರನ್ನು ಮಹಾತ್ಮರು ತೆಗೆದುಕೊಳ್ಳುತ್ತಿದ್ದರು. ಆ ಮೇಲೆ ಕಾಗದಗಳನ್ನೋದುವ ಮತ್ತು ಪತ್ರಗಳನ್ನು ಬರೆಯುವ ಕಾರ್ಯವು ಪ್ರಾರಂಭವಾಗುತ್ತಿದ್ದಿತು. ಅನಂತರ ಮೀರಾಬೇನಳ ಉಪಯೋಗಕ್ಕಾಗಿ ಆಶ್ರಮದ ಪ್ರಾರ್ಥನಾ ಪುಸ್ತಕದ ಭಾಷಾಂತರವಾಗುತ್ತಿದ್ದಿತು. ನಾಲ್ಕು ಗಂಟೆಗೆ ಸರಿಯಾಗಿ ಮಹಾತ್ಮರು ತಕಲಿಯನ್ನು ತೆಗೆದುಕೊಳ್ಳುತ್ತಿದ್ದರು. ಆ ತಕಲಿಯನ್ನು ಅವರೇ ತಯಾರಿಸಿದ್ದಾರೆ. ಒಂದು ಒಡಕು ಬೋಕಿಯೂ ಒಂದು ಬಿದರು ಕಡ್ಡಿಯೂ ಆ ತಕಲಿಯ ಸಾಮಾನುಗಳು. ಮಹಾತ್ಮರು ಬಿಸಿಲಲ್ಲಿ ತಿರುಗಾಡುತ್ತ ಹಾಲಿನಂತೆ ಶುಭ್ರವಾದ ದಾರವನ್ನು ತಯಾರುಮಾಡುತ್ತ ನಗುಮುಖದಿಂದಿರುವರು. ಸ್ವಲ್ಪ ಬೂದಿಯನ್ನು ತಕಲಿಗೂ, ಬೆರಳುಗಳಿಗೂ ಸವರಿದರೆ ತಕಲಿಯ ವೇಗವು ಹೆಚ್ಚಾಗುವುದೆಂದು ಅವರ ಅಭಿಮತ.

ಪ್ರಾರ್ಥನೆಗಳು.

ಐದು ಗಂಟೆಯಾದೊಡನೆ ನಮ್ಮ ಸಾಯಂಕಾಲದ ಊಟವು ಪ್ರಾರಂಭವಾಗುತ್ತಿದ್ದಿತು. ಮೊಸರು, ಖರ್ಜೂರ ಮತ್ತು ತರಕಾರಿ ಆ ಸಮಯಕ್ಕೆ ಸರಿಯಾಗಿ ಆಡುಗಳು ತಮ್ಮ ಪುಟ್ಟಮರಿಗಳೊಡನೆ ಬರುತ್ತಿದ್ದುವು. ಊಟವಾದ ಕೂಡಲೇ ನಾನು ಪಾತ್ರೆಗಳನ್ನು ಬೆಳಗುತ್ತಿದ್ದೆನು. ಮಹಾತ್ಮರು ಮರುದಿವಸದ ಉಪಯೋಗಕ್ಕೋಸ್ಕರ ಖರ್ಜೂರಗಳನ್ನು ಶುದ್ಧಮಾಡಿ ನೀರಿನಲ್ಲಿ ನೆನೆಹಾಕುತ್ತಿದ್ದರು. ಅನಂತರ ನಮ್ಮ ಸಾಯಂಕಾಲದ ಸಂಚಾರ. ಸಂಧ್ಯಾಕಾಲದ ಆಕಾಶದ ಬಣ್ಣಗಳು, ಮುಳುಗುತ್ತಿರುವ ಸೂರ್ಯನ ಸೊಬಗು, ವಿಚಿತ್ರಾಕಾರವುಳ್ಳ ಮೋಡಗಳ ಬೆಡಗು ಇವುಗಳು ಮಹಾತ್ಮರ ಮನಸ್ಸನ್ನು ಸೆಳೆಯುತ್ತಿದ್ದುವು. ಒಂದೊಂದು ಸಾರೆ ನಾನು ನಲ್ಲಿಯ ಹತ್ತಿರವಿನ್ನೂ ಕೆಲಸದಲ್ಲಿರುವಾಗಲೇ ಆತುರದಿಂದ ಮಹಾತ್ಮರು ನನ್ನನ್ನು ಕರೆದು ಮೋಡಗಳ ಮೋಡಿಯನ್ನು ತೋರಿಸುತ್ತಿದ್ದರು. ನಿಯಮಿತಕಾರ್ಯಗಳಲ್ಲಿ ತೊಡಗಿರುವವರನ್ನು ಅವರು ಕರೆಯುತ್ತಿದ್ದುದೇ ಅಪೂರ್ವ. ಏಳುಗಂಟೆಗೆ ಸರಿಯಾಗಿ ನಮ್ಮ ಸಾಯಂಕಾಲದ ಪ್ರಾರ್ಥನೆಗಳನ್ನು ಪ್ರಾರಂಭಮಾಡುತ್ತಿದ್ದೆವು. ಮಳೆಗಾಲದಲ್ಲಿ ಮಾತ್ರ ಪ್ರಾರ್ಥನೆಯ ಕಾಲವು 7-30 ಕ್ಕೆ ಆಗಿದ್ದಿತು. ಹೇಮಂತಋತುವು ಬಂದಕೂಡಲೆ ಪ್ರಾರ್ಥನಾಸಮಯವು ಆಶ್ರಮದಲ್ಲಿ 7ಕ್ಕೆ ಬದಲಾಯಿಸಲ್ಪಡುತ್ತಿದ್ದಿತು. ಆಶ್ರಮದ ನಿಯಮಗಳಿಗನುಸಾರವಾಗಿ ನಾವು ಕಾಲವನ್ನು ಬದಲಾಯಿಸುತ್ತಿದ್ದೆವು. ನೂರಾರು ಮೈಲುಗಳ ದೂರದಲ್ಲಿದ್ದರೂ ಆಶ್ರಮವಾಸಿಗಳ ಜೊತೆಯಲ್ಲಿಯೇ ಪ್ರಾರ್ಥನೆಯನ್ನು ಮಾಡುತ್ತಿರುವೆವೆಂಬ ಭಾವನೆಯನ್ನು ಹೊಂದುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೆವು.

ಸಬರಮತಿಯ ಪುಟ್ಟಹಕ್ಕಿಗಳಿಂದ ಬರುತ್ತಿದ್ದ ಸಣ್ಣಕತೆಗಳು.

ಪ್ರಾರ್ಥನೆಯಾದನಂತರ ಮಹಾತ್ಮರು ಕಾಗದಗಳನ್ನು ಬರೆಯುವುದಕ್ಕೆ ತೊಡಗುತ್ತಿದ್ದರು. ಆಶ್ರಮನಿವಾಸಿಗಳೆಲ್ಲರೂ ಒಂದು ಕುಟುಂಬವರ್ಗಕ್ಕೆ ಸೇರಿದವರೆಂಬ ಭಾವನೆಯಿದ್ದಿತು. ಆದುದರಿಂದ ಆಶ್ರಮದ ಪುಟ್ಟಹಕ್ಕಿಯೂ ಬಾಪುವಿನಿಂದ ಒಂದು ಚೀಟಿಯನ್ನಾದರೂ ನಿರೀಕ್ಷಿಸುತ್ತಲೇ ಇದ್ದಿತು. ಕೆಲವು ಹೆಣ್ಣುಮಕ್ಕಳು "ಬಾಪುವಿನ ಸಂಚಾರದ ಚಿತ್ರಗಳು" ಎಂದು ಬರೆಯುತ್ತಿದ್ದುವು. ಯಾತಕ್ಕೆಂದರೆ ಮಹಾತ್ಮರ ಸಾಯಂಕಾಲದ ಸಂಚಾರಸಮಯದಲ್ಲಿ ಆ ಮಕ್ಕಳ ಮೇಲೆ ತಮ್ಮ ಕೈಯನ್ನಿಟ್ಟುಕೊಂಡು ನಡೆಯುವ ಪದ್ಧತಿಯಿದ್ದಿತು. ಆ ಚಿಕ್ಕಮಕ್ಕಳ ಕಾಗದಗಳಲ್ಲಿ ತಾವು ಮಾಡಿದ ತಪ್ಪುಗಳ ಒಪ್ಪಿಗೆಯೂ ಇರುತ್ತಿದ್ದಿತು. ಒಬ್ಬ ಹುಡುಗನು ತನ್ನ ಸಹೋದರಿ ನಿವಾಸಿಗೇನಾದರೂ ಅಪರಾಧ ಮಾಡಿದರೆ ಅದನ್ನು ಬಾಪುವಿಗೆ ಬರೆಯುವವರೆಗೂ ಅವನಿಗೆ ಸಮಾಧಾನವಾಗುವುದಿಲ್ಲ. ಹೊಸದಾಗಿ ಆಶ್ರಮಕ್ಕೆ ಸೇರಿದ ಬಾಲಕನು ಮಹಾತ್ಮರನ್ನು ಕುರಿತು "ನನಗೆ ಪ್ರಾರ್ಥನಾಕಾಲದಲ್ಲಿ ಪಾಲುಮಾರಿಕೆಯಾಗುವುದಕ್ಕೂ, ರಾಟೆಯನ್ನು ತಿರುಗಿಸುವುದಕ್ಕೆ ಅಷ್ಟು ಇಷ್ಟವಿಲ್ಲದಿರುವುದಕ್ಕೂ ಕಾರಣವೇನು?" ಎಂದು ಪ್ರಶ್ನೆ ಮಾಡಿದರೆ, "ಮಗುವೆ! ನಿನಗಿನ್ನೂ ಬಡವರ ಕಷ್ಟವು ಗೊತ್ತಿಲ್ಲ. ಪ್ರಾರ್ಥನೆಯು ಆಹಾರ ನಿದ್ರೆಗಳಂತೆಯೇ ಅತ್ಯಾವಶ್ಯಕವಾದುದೆಂಬ ವಿಷಯವು ತಿಳಿಯದು. ಈ ರೀತಿ ಮಹಾತ್ಮರು ಉತ್ತರವನ್ನೀಯುತ್ತಿದ್ದರು. ಅಪರಾಧಿಯು ತನ್ನ ತಪ್ಪುಗಳನ್ನೆಲ್ಲಾ ಒಪ್ಪಿಕೊಳ್ಳುವನು. ಇನ್ನು ಮೇಲೆ ಅಂತಹ ತಪ್ಪುಗಳನ್ನು ಖಂಡಿತವಾಗಿಯೂ ಮಾಡುವುದಿಲ್ಲವೆಂದು ವಾಗ್ದಾನ ಮಾಡುವನು. ಇವನು ಬರೆದ ಕಾಗದಗಳನ್ನು ಯಾರು ಓದಿದರೂ ಈತನಿಗೆ ಕೋಪ ಬರುತ್ತಿರಲಿಲ್ಲ. ತನ್ನ ಅಪರಾಧಗಳನ್ನು ಇತರರು ಕಂಡರೂ ಅಸಮಾಧಾನವಿಲ್ಲ. ತನ್ನ ಏಕಮಾತ್ರನಾದ ಪ್ರಿಯಪುತ್ರನನ್ನು ಕಳೆದುಕೊಂಡ ತಂದೆಯು ತನ್ನ ಶೋಕವನ್ನು ಮಹಾತ್ಮರಿಗೆ ತಿಳಿಸುವನು. ಮಹಾತ್ಮರು ಬರೆಯುವ ಪತ್ರವು ಅವನಿಗೆ ಸಮಾಧಾನವನ್ನೀಯುವುದಲ್ಲದೆ ಅವರ ಸಂದೇಶವು ಆತನಿಗೆ ಆಶೆ, ನಂಬಿಕೆ, ಸಂತೋಷ ಮೊದಲಾದವುಗಳನ್ನುಂಟುಮಾಡುವುದು.

ಬಯಲಲ್ಲಿ ಮಲಗುವುದು.

9 ಗಂಟೆಯು ಹೊಡೆಯಿತೆಂದರೆ ಮಹಾತ್ಮರು ತಮ್ಮ ಲೇಖಣಿಯನ್ನಿರಿಸಿ ಮಲಗುವರು. ಅವರಿಗೆ ಬಹಳ ದಿವಸಗಳಿಂದಲೂ ನಕ್ಷತ್ರಗಳ ಕೆಳಗೆ ಬಯಲಲ್ಲಿ ಮಲಗುವ ರೂಢಿಯೇ ಹೆಚ್ಚು. ನಕ್ಷತ್ರಗಳ ಕಾಂತಿಯು ಆರೋಗ್ಯವರ್ಧನಿಯೆಂದು ಅವರ ನಂಬಿಕೆಯಿದೆ. ಚಳಿಯ ಹೊಡೆತವೂ ಹಿಮದ ಬಡಿತವೂ ಅವರನ್ನು ಮೇಲ್ಛಾವಣಿಯಿಂದ ಕೆಳಕ್ಕೋಡಿಸಲಾರದು. ಅನೇಕ ಸಾರೆ ಮಧ್ಯರಾತ್ರಿಯಲ್ಲಿ ನಾನೆದ್ದು ನೋಡಿದಾಗ ಮಹಾತ್ಮರು ಕೃತ್ರಿಮವನ್ನರಿಯದ ಮುದ್ದುಮಕ್ಕಳಂತೆ ಗಂಭೀರ ನಿದ್ರಾಮುದ್ರಿತರಾಗಿರುವರು."

ವಿ. ಬ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುದೋಷ ಗೋಗ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಟಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[21]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಕೆರಗು ಕಡೆಗಾಗುವ ಕಾಲಕ್ಕೆ ಕಿಬ್ಬಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮಿದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಪಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ಪಾಮಿರಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೈಷಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿವಿಧ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಶುಕ್ರದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಸಮಷ್ಟಿ ಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಭಕ್ತರೂ ಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾಕಾರದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಸುಂದರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭಕ್ತರೆಲ್ಲರೂ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮಿಶನ. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮಿಶನ. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಪರ್ಣನದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಹೊಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[36] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ## ವಜ್ರಾಂಗ ಸುಂದರಪಾಕ. [ಸ್ಪರ್ಧ

ಧಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುವುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಕೌಟಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವ ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮರ್ದ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಥಿಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[22]

ಪತ್ತೆ:—**ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವವರಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಬಿಲ್ಲಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಬಿಲ್ಲಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿರೋಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಬಿಲ್ಲಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಬಿಸ್ಕು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[20] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ.	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೀ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[23] ಪೋ. ಬಾ. ೫೧೦. ಮದರಾಸು.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಚಾರಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕನಾಮ್ನ ಯುವಕಸ.	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಸಡಿಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಮ್ಮಿ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲ್ಪಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನಿ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! **ಸಾಲವು ದೊರಕುವುದು !!** **ಅಪೂರ್ವಲಾಭ !!!**

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್.

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ. ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರಿವಿಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಮ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹುಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (4)

ಮೆ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ಡಿಶಂಬರ್ ೧೯೩೦ [ಸಂಚಿಕೆ ೩೩

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೧ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಅಗಸ್ತ್ಯಕೃತ ಶ್ರೀ ರೇಣುಕೇಂದ್ರಾಷ್ಟಕಂ.

(ಮಲ್ಲಿಕಾಮಾಲಾವೃತ್ತಂ.)

ಶ್ರೀಕರೋತ್ತಮಕೊಲ್ಲಿಪಾಕಿಸುಸೋಮನಾಥಸಮುದ್ಭವ |
ಲೋಕಸಂಭಯಬಾಲಸೈಕವಿಸಿದ್ರಮಾನಸಮಂಡಿತ ||
ನಾಕಿವೃಂದಸಮರ್ಚಿತಾಮಲಚಾರುಪಾದಸರೋರುಹಾ |
ಸ್ತೋಕಭಕ್ತಿಸಮಗ್ರವಿಗ್ರಹ ರೇಣುಕೇಂದ್ರನಮೋಽಸ್ತು ತೇ ||೧||

ಕಾಂಚನೋಜ್ವಲಕಾಂತಿಸಂಚಯಕಂಚದಂಗವಿಭಾಸುರ |
ಪ್ರಾಂಚದೀಪ್ತಿವಿಚಂಚುಪಂಚಸುವರ್ಣಮದ್ರಸನಾಂಚಲ ||
ಪಂಚಬಾಣಮದೇಭಪಂಚಮುಖಪ್ರಭಾವಸಮಂಚಿತ |
ಪಾಂಚಜನ್ಯಧರಾದಿವಂದಿತ ರೇಣುಕೇಂದ್ರನಮೋಽಸ್ತು ತೇ ||೨||

ಮಂಗಲಾಕರ ಲಿಂಗಸಂಗತ ಮಂಜುಲಾಂಗ ಮನೋಹರ |
ತುಂಗದೇವತರಂಗಿಣೀಧ್ರುವರಂಗದುತ್ತಿಮುಖಾಂಬುಜ ||
ಜಂಗಲಿಂಗಸಮರ್ಚನೋದ್ಯದಭಂಗಸದ್ಗುಣಸಂಗತ |
ಜಂಗಮಾಳಿಮನೋಜ್ಞ ಬಾಲಪತಂಗ ರೇಣುಕತೇ ನಮೋ ||೩||

ಸಿದ್ಧವೃಂದವರಾಘ್ಯಗಬೋಧಸದಧ್ಯಸಿದ್ಧಿವಿಚಾರಜಾ |
ಸಿದ್ಧವೇದವಚಃಸಮೃದ್ಧಿ ವಿಬುದ್ಧಭಾವಸ ನೋಕ್ಷದ ||
ಕ್ಷುದ್ರದೋಷಹವಿಸದ್ಧಬುದ್ಧಮತೋದ್ಧತಸ್ಥಯಸಂಹರ |
ಶುದ್ಧಭಕ್ತಮನೋನಿಕೇತನ ರೇಣುಕೇಂದ್ರನಮೋಽಸ್ತು ತೇ ||೪||

ಶಾಂತಭೂತಲಶಾಂತಬಾಣನಿಶಾಂತ ಶಾಂತರಯೋಗಜಾ |
ಸ್ವಾಂತಸಂಸ್ಥಿತಮೀಶ ಸನ್ನಿಗಮಾಂತವಾಕ್ಯವಿಚಾರದ ||
ಭ್ರಾಂತಸಂಸೃತಿತಾಂತರಕ್ತಧ್ವಗಂತರಾತ್ಮ ವಿಚಾರಜಾ |
ಕಾಂತಚೂತಸಮರ್ಚನೋತ್ಸುಕ ರೇಣುಕೇಂದ್ರನಮೋಽಸ್ತು ತೇ ||೫||

ಗಾಢಭಕ್ತಿನಿರೂಢಚಿತ್ತ ಸಮೂಢಸನ್ನಹಿಮಾವಲೀ |
ಗೂಢಗಾತ್ರ ನಿಗೂಢತತ್ವ ಸಗಾಢಸನ್ನತಿಸಂಯುತ ||
ರೂಢಮಾರ್ಗನಿಕೃತಾಂತಗಾಢಸದೂಢಶಂಕರಭಾವನ |
ಪ್ರೌಢವರ್ಗನಿಷೇವಿತ ರೇಣುಕೇಂದ್ರನಮೋಽಸ್ತು ತೇ ||೬||

ಶಂಕರೈಕಶರಣ್ಯಸಂಕರಪಂಕಜೋತ್ಕರಭಾಸ್ಕರ |
ಪಂಕಸಂಕಲಿತಾಘದೂರ ಮೃಗಾಂಕಶೇಖರಸನ್ನತಾ ||
ಸಂಕರಾಧರರಂಕರಕ್ಷ ಶಿವಂಕರಾಂಘ್ರಿಕರಾಬ್ಜಕ |
ಕಂಕಶೀಲನಿರಂಕುಶೋದ್ಯಮ ರೇಣುಕೇಂದ್ರನಮೋಽಸ್ತು ತೇ ||೭||

ಹಾರಹೀರಸಟೀರಕಾರದಕಾರಶೇಶ್ವರಹಾರಮಂ |
ದಾರಚಾರುತುಷಾರಭೂಧರನಾರದಾಮರವಾರಣ ||
ಕ್ಷೀರವಾರಧಿಸಾರಸಾರಸತಾರದಾರಧಮರಾಳಸು |
ಕ್ಷೀರಗೌರಯಶೋವಿಭಾಸುರ ರೇಣುಕೇಂದ್ರನಮೋಽಸ್ತು ತೇ ||೮||

ಧಾರವಾಡ ಡಿ|| ರೋಣ ತಾ|| ಹಾಳಕೇರಿ ಸಂಸ್ಕೃತಪಾಠಶಾಲಾಧ್ಯಾಪಕರಾದ ವೇ|| ಪಂಡಿತ ಗೌರೀನಾಥಶಾಸ್ತ್ರಿಗಳು ಪ್ರಾಚೀನ ತಾಳವಾಲೆಯ ಪುಸ್ತಕದಲ್ಲಿದ್ದ ಗುರುಸಾರ್ವಭೌಮನ ಈ ಸ್ತೋತ್ರಾಷ್ಟಕವನ್ನು ಇದ್ದಕ್ಕಿದ್ದಹಾಗೆ ಬರೆದು ಕಳುಹಿಸಿದ್ದಾರೆ. ಅದರಂತೆಯೇ ನಾವಾದರೂ ಪ್ರಸಿದ್ಧಿಸಿದ್ದೇವೆ. ಪ್ರತಿಯೊಬ್ಬರೂ ಈ ಅಷ್ಟಕವನ್ನು ಪ್ರತಿದಿವಸ ಪಠಿಸುತ್ತ ಗುರುಚಕ್ರವರ್ತಿಯ ಕೃಪೆಗೆ ಪಾತ್ರರಾಗಬೇಕೆಂದೂ, ಇದನ್ನು ಶೋಧಿಸಿ ಬರೆದು ಕಳುಹಿಸಿದ ಶಾಸ್ತ್ರಿಗಳಿಗೆ ಜಗದಾಚಾರ್ಯರು ಸಕಲಸನ್ಮಂಗಲಗಳನ್ನೀಯಲೆಂದೂ ಕೋರುತ್ತೇವೆ.

ಪಂಜಾಬಿನ ಗೌರ್ನರರವರು ಗುಂಡಿನೇಟಿನಿಂದ ಗಾಯಪಟ್ಟರು.

ಲಾಹೋರಿನ ಪಂಜಾಬು ವಿಶ್ವವಿದ್ಯಾನಿಲಯದ ಪಟ್ಟಪ್ರದಾನೋತ್ಸವ ಸಮಯದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ ಪಂಜಾಬಿನ ಗೌರ್ನರ್ ಸಾಹೇಬರಿಗೆ ಯಾರೋ ಗುಂಡುಹಾಕಿದರು. ಈ ತಿಂಗಳು 22 ನೆಯ ತಾರೀಖಿನ ದಿವಸ ಮಧ್ಯಾಹ್ನ 12 ಘಂಟೆಯ ಸಮಯದಲ್ಲಿ ವಿದ್ಯಾರ್ಥಿಗಳೂ, ಇತರ ದೊಡ್ಡ ಮನುಷ್ಯರೂ ವಿಶ್ವವಿದ್ಯಾನಿಲಯದ ಕಟ್ಟಡದಲ್ಲಿ ಬಂದು ಕುಳಿತಿದ್ದರು. ಗೌರ್ನರರವರು 12 ಘಂಟೆಗೆ ಸರಿಯಾಗಿ ಆ ಕಟ್ಟಡಕ್ಕೆ ಬಂದಿಳಿದರು. ಪರವಾನಿಗಿಯಿಲ್ಲದೆ ಮೊದಲು ಆ ಸಭಾಂಗಣಕ್ಕೆ ಯಾರನ್ನೂ ಬಿಟ್ಟಿರಲಿಲ್ಲ. ಇದಕ್ಕಾಗಿ ಸರಿಯಾದ ಪೋಲೀಸು ಬುಸ್ತುವಾರಿಯನ್ನು ಇಟ್ಟಿದ್ದರು. ಪಟ್ಟಪ್ರದಾನೋತ್ಸವವು ಶಾಂತರೀತಿಯಿಂದ ಸಮಾಪ್ತಿಯಾಯಿತು. ಗೌರ್ನರರು ಹೊರಗೆ ಬರುವಾಗ ಅವರ ಕಡೆಗೆ ಆರು ಗುಂಡುಗಳು ಹಾರಿದುವು. ವಿದ್ಯಾರ್ಥಿಗಳೂ ಇತರ ದೊಡ್ಡಮನುಷ್ಯರೂ ಗೌರ್ನರರವರ ಗೌರವಾರ್ಥವಾಗಿ ತೋಪುಗಳನ್ನು ಹಾರಿಸಿದರೆಂದು ಭಾವಿಸಿದರು. ಅನಂತರ ಒಬ್ಬ ಯುವಕನು ಗೌರ್ನರರವರನ್ನು ಗುಂಡಿನಿಂದ ಹೊಡೆದನೆಂದು ತಿಳಿದು ಎಲ್ಲರೂ ಚಕಿತರಾಗಿ ಖಿನ್ನವದನರಾದರು. ಆಗ ಆ ಕಟ್ಟಡದಲ್ಲಿರುವವರು ಆ ಕೂಡಲೇ ಹೊರಗೆ ಹೋಗದಹಾಗೆ ಪ್ರತಿಬಂಧಮಾಡಲ್ಪಟ್ಟರು. ವಿದ್ಯಾರ್ಥಿಗಳು ಕುಳಿತಿದ್ದ ಸ್ಥಳದಿಂದಲೇ ಗುಂಡುಹಾರಿಸಲ್ಪಟ್ಟಿತೆಂದು ನಿಶ್ಚಯಿಸಿದರು. ಆಗ ಪೋಲೀಸರು ಗುಂಡುಹಾಕಿದನೆಂದು ಒಬ್ಬ ವಿದ್ಯಾರ್ಥಿಯನ್ನೂ ಅವನಿಗೆ ಸಹಾಯಮಾಡಿದನೆಂದು ಇನ್ನೊಬ್ಬ ವಿದ್ಯಾರ್ಥಿಯನ್ನೂ ಆ ಕೂಡಲೇ ದಸ್ತಗಿರಿ ಮಾಡಿದರು. ಮೊದಲು ದಸ್ತಗಿರಿಮಾಡಲ್ಪಟ್ಟ ಹುಡುಗನ ಹತ್ತಿರ ಒಂದು ರಿವಾಲ್ವರ್, ತೋಟಾಗಳೂ, ಒಂದು ಚೂರಿಯೂ ಇದ್ದುವಂತೆ! ಗೌರ್ನರರವರಿಗೆ ಎಡಭಾಗದ ಪೃಷ್ಠದ ಮೇಲ್ಭಾಗದಲ್ಲಿಯೂ, ಎಡಗಡೆ ಭುಜದಮೇಲೂ, ಗಾಯಗಳಾಗಿವೆಯಂತೆ! ಗೌರ್ನರರವರ ಸ್ಥಿತಿಯು ಸುಧಾರಿಸುತ್ತಲಿದೆ ಎಂದು ತಿಳಿದುಬರುತ್ತದೆ. ಆ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್ ಚನನ್ ಸಿಂಗ್ ಎಂಬವರಿಗೆ ಬಹು ಪೆಟ್ಟಾದ್ದರಿಂದ ಅವರು ಸಾಯಂಕಾಲ 6-15 ಘಂಟೆಗೆ ಮೃತಪಟ್ಟರು. ವೈಸರಾಯರವರು ಗೌರ್ನರರವರಿಗೆ ಉಂಟಾದ ವಿಪತ್ತಿಗೋಸ್ಕರ ತಮ್ಮ ಅನುತಾಪವನ್ನು ತಂತಿಯಮೂಲಕ ಕಳುಹಿಸಿರುವರು. ರೌಂಡುಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ಸರ್ದಾರ ಉಜ್ವಲಸಿಂಗ್ ಮೊದಲಾದ ಮೆಂಬರರು ತಮ್ಮ ಅನುತಾಪವನ್ನು ವ್ಯಕ್ತಪಡಿಸಿ ಗೌರ್ನರರಿಗೆ ತಂತಿಯನ್ನು ಕಳುಹಿಸಿರುವರು.

ಸ್ವೀಕಾರ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮನಿವಾಸಿಗಳಾದ ಮ|| ರಾ|| ತರ್ಲಿ ಲಿಂಗಪ್ಪನವರ ಪುತ್ರಿ ಚಿ|| ಕುಂ|| ಸೌ|| ರುದ್ರಮ್ಮನನ್ನು ಮ|| ರಾ|| ಬಂತಕಲ್ ಮಹಾದೇವಪ್ಪನಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 3 ರೂ. ಗಳು ವೇ|| ಮಿ|| ಮ|| ಜಾಗಟಗೇರಿ ಚನ್ನಬಸವಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಶಹರ ನಿವಾಸಿಗಳಾದ ಹೊನ್ನಾಪುರ ವಕೀಲ್ ಶ್ರೀಯುತ ಗದಿಗೆಪ್ಪನವರು ಮಿಶ್ರೀಕೋಟಿ ನಿವಾಸಿಗಳಾದ ಚಿ|| ಚಂದ್ರಶೇಖರಯ್ಯ ಎಂಬಾತನನ್ನು ದತ್ತಕಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಅನೇಕಲ್ ಟವನ್ನಿನಲ್ಲಿರುವ ವೀರಶೈವರು ತಮ್ಮಲ್ಲುಂಟಾದ ಕಾಲರಾ ಉಪದ್ರವವು ಜಗದಾಚಾರ್ಯರ ಆಶೀರ್ವಾದಬಲದಿಂದ ಶಾಂತವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಮ|| ರಾ|| ಹೆಬ್ಬೂರು ಹುಚ್ಚವೀರಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸೋಲಾಪುರದ ಧನಶೆಟ್ಟಿಮಲ್ಲಪ್ಪನವರು ಮೊದಲಾದ ನಾಲ್ವರು ಕೈದಿಗಳ ವಿಷಯದಲ್ಲಿ ದಯೆಯನ್ನು ತೋರಿಸಿ ಮರಣ ಶಾಸನವನ್ನು ತಪ್ಪಿಸಬೇಕೆಂದು ಪೂನಾ, ಕಲ್ಕತ್ತಾ, ಕೊಯಮುತ್ತೂರು, ಮೈಸೂರು ಮೊದಲಾದ ಹಿಂದೂದೇಶದ ಅನೇಕ ಭಾಗಗಳಿಂದ ವೈಸರಾಯರವರಿಗೆ ತಂತಿಗಳು ಹೋಗಿವೆ. ಬೊಂಬಾಯಿಯ ಕಪ್ಪಣದ ವರ್ತಕರ ತಂತಿಗೆ ವೈಸರಾಯರವರು ಈ ವಿಷಯದಲ್ಲಿ ಪರ್ಯಾಲೋಚಿಸುವುದಾಗಿ ಉತ್ತರವನ್ನಿತ್ತಿರುವರೆಂದು ಕೇಳುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಅಯೋಧ್ಯಾ ಹಾಲುಗಂಗಾಧರಸ್ವಾಮಿಗಳು.

(ಲೇಖಕರು—ಶಿವಮೂರ್ತಿಸ್ವಾಮಿ ಗುರುವಿನಮಠ ಕರಡಿ ತಾ|| ಹುನಗುಂದ, ಜಿಲ್ಲಾ ವಿಜಾಪೂರ.)

ಯಾವ ಮಹನೀಯರು ಪಂಚಲಿಂಗಗಳಿಂಮುದ್ಭವಿಸಿ ತಮ್ಮ ಅಸಮಾನ ಮಹಿಮೆಗಳಿಂದ ಭಾರತವರ್ಷದಲ್ಲಿ ವೀರಶೈವ ಧರ್ಮಸಾಮ್ರಾಜ್ಯವನ್ನು ಸ್ಥಾಪಿಸಿದರೋ, ಯಾವ ಗುರುಪುಂಗವರು ತಮ್ಮ ದಿವ್ಯ ತಪಃಪ್ರಭಾವದಿಂದ ದೊಡ್ಡ ದೊಡ್ಡ ರಾಜರನ್ನು ದಂಗುಬಡಿಸಿದರೋ, ಅಂಥ ಮಹಾತ್ಮರಾದ ಪಂಚಾಚಾರ್ಯವರೇಣ್ಯರ ಧರ್ಮದಾತಳಕಿಯಲ್ಲಿ ಅನೇಕ ಮಹಿಮಶಾಲಿಗಳಾದ ಸ್ಥಿರಚರ ಪಟ್ಟಾಧಿಕಾರಿಗಳು ಆಗಿ ಹೋಗಿದ್ದಾರೆ. ಅಂಥ ಮಹಿಮರ ಚರಿತ್ರಗಳನ್ನು ಪ್ರಸಿದ್ಧಪಡಿಸುವದು ಪ್ರತಿಯೊಬ್ಬ ಗುರುಭಕ್ತನ ಕರ್ತವ್ಯವಾಗಿರುತ್ತದೆ. ಇರಲಿ; ಹೀಗೆ ಪುರಾತನ ಕಾಲದಲ್ಲಿ ಪ್ರಸಿದ್ಧರಾಗಿಹೋದ ಮಹಾನುಭಾವರಲ್ಲಿ ಅಯೋಧ್ಯಾ ಹಾಲುಮಠದ ಹಾಲುಗಂಗಾಧರ ಶಿವಾಚಾರ್ಯರೊಬ್ಬರಾಗಿದ್ದಾರೆ. ಇವರ ಸಚ್ಚರಿತ್ರವನ್ನು ಶೋಧನಾದದ್ದರಮಟ್ಟಿಗೆ ಪ್ರಭಾವಾಚಕರಿಗೆ ಮಾಡಿಕೊಡುವದೇ ಈ ಲೇಖಕನ ಉದ್ದೇಶ.

ಅಯೋಧ್ಯಾ ಎಂಬ ಗ್ರಾಮವು ನಿಜಾಮ ಇಲಾಖಾ ರಾಯಚೂರು ಜಿಲ್ಲಾ ಗಂಗಾವತಿ ತಾಲೂಕಿಗೆ ಸೇರಿದ್ದು ತುಂಗಾಭದ್ರಾ ನದೀ ತೀರದಲ್ಲಿದೆ. ಇದು ಈಗ ೬೦೦-೭೦೦ ಜನರುಳ್ಳ ಚಿಕ್ಕ ಗ್ರಾಮವಾಗಿದ್ದು, ಪ್ರಾಚೀನ ಗುರುತುಗಳನ್ನು ನೋಡಲಾಗಿ ಇದು ಹಿಂದಕ್ಕೆ ಒಂದು ದೊಡ್ಡ ಪಟ್ಟಣವಾಗಿದ್ದಂತೆ ಭಾಸವಾಗುತ್ತದೆ. ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಇಲ್ಲಿ ಲಕ್ಷೋಪಲಕ್ಷ ಜನರಿದ್ದಂತೆ ಕಾಣಿಸುತ್ತದೆ. ಅದರ ಕುರುಹುಗಳು ಈಗ್ಯೂ ಉಂಟು. ಕಾಲಾನುರೋಧದಿಂದ ಇಂಥ ಐತಿಹಾಸಿಕಸ್ಥಳಕ್ಕೆ ಈಗ ಹಳ್ಳಿಯ ಸ್ವರೂಪವು ಪ್ರಾಪ್ತವಾಗಿದೆ. ಇದೇ ಅಯೋಧ್ಯಾ ಗ್ರಾಮದಲ್ಲಿಯೇ ಹಾಲಮಠವೆಂಬದೊಂದು ಹಿರಿಯ ಮಠವಿದ್ದು ಅದು ಈಗ ಬಿದ್ದುಹೋಗಿದೆ. ಹಾಳಾಗಿರುವ ಈ ಮಠದಲ್ಲಿಯ ಶಿಲಾಲೇಖಗಳನ್ನು ನೋಡಿದರೆ ಈ ಮಠವು ಜಗದ್ಗುರು ದಾರುಕಾಚಾರ್ಯರ ಪೀಠಕ್ಕೆ ಸಂಬಂಧಿಸಿದ್ದು ಅಯೋಧ್ಯಾ, ಡಾಣಾಪೂರ, ಬೆಳಗೋಡ ಈ ಮೂರು ಗ್ರಾಮಗಳಿಗೆ ಹಿರಿಯಮಠವಾಗಿದ್ದಂತೆ ತಿಳಿದುಬರುತ್ತದೆ. ಇದೇ ಮಠದ ಅಧ್ಯಕ್ಷರೇ ನಮ್ಮ ಚರಿತ್ರನಾಯಕರಾದ ಹಾಲುಗಂಗಾಧರ ಶಿವಾಚಾರ್ಯರು. ಇವರು ನಂದಿಗೋತ್ರ ವೃಷ್ಟಿಸೂತ್ರಾನುಯಾಯಿಗಳು. ಮೇಲ್ಕಂಡ ಸ್ವಾಮಿಗಳ ಕಾಲನಿರ್ಣಯವನ್ನು ಇಂಥದೇ ಎಂದು ಮಾಡಲಿಕ್ಕೆ ಬರುವಂತಿಲ್ಲ. ಆದರೆ ಸ್ವಾಮಿಗಳ ವಂಶಸ್ಥರಲ್ಲಿರುವ ರಿಕಾರ್ಡುಗಳನ್ನು ನೋಡಿದರೆ ಇವರು ಸುಮಾರು ೬೫೦ ವರ್ಷಗಳ ಪೂರ್ವದಲ್ಲಿದ್ದರೆಂದು ಕಂಡುಬರುತ್ತದೆ. ಇವರ ಪೂರ್ವಜರ ಮೂಲಸ್ಥಾನವು ನಿಜಾಂ ಇಲಾಖಾ ಬಿದುರುಕೋಟೆಯೆಂದೂ, ಅಲ್ಲಿ ಇವರು ಹಿರಿಯಮಠದವರೆಂದೂ ಹಾಗೂ ಆಲೂರ ದೇಶಮುಖರ ಗುರುಗಳೆಂದೂ, ಅಲ್ಲಿಂದ ಇವರು ಶಿಷ್ಯಮಂಡಳಿಯ ಉದ್ಧಾರಕ್ಕಾಗಿ ಸಂಚರಿಸುತ್ತ, ಅನೇಕ ಮಹಿಮೆಗಳನ್ನು ತೋರಿಸಿ ಕಲ್ಯಾಣ, ಕಲಬುರ್ಗಿ, ಸರವಗೆ, ವಜ್ರಗೋನಾಳ, ಅಯೋಧ್ಯಾ ಮುಂತಾದ ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂದೂ ಶಿಲಾಲೇಖದಲ್ಲಿ ಬರೆದಿದೆ. ಪರಮ ತಪಸ್ವಿಗಳಾದ ಈ ಸ್ವಾಮಿಗಳು ತೋರಿಸಿದ ಅಸಂಖ್ಯ ಪವಾಡಗಳಲ್ಲಿ ವಿಜಾಪೂರ ಜಿಲ್ಲಾ ಹುನಗುಂದ ತಾಲೂಕ ಗೋನಾಳದಲ್ಲಿ ತೋರಿಸಿದ ಪವಾಡವು ಅತ್ಯಂತ ಮಹತ್ವದ್ದಾಗಿರುತ್ತದೆ. ಅದನ್ನು ವಾಚಕರಿಗಾಗಿ ಇಲ್ಲಿ ಕೊಟ್ಟಿದೆ. ಈ ಪವಾಡವನ್ನು ಗೋನಾಳ ಶಿಲಾಲೇಖವು ಕೆಳಗೆ ಬರೆದಂತೆ ವರ್ಣಿಸಿರುತ್ತದೆ.

ಎರಡುನೂರ ಐವತ್ತು ವರ್ಷಗಳ ಹಿಂದೆ ಅಂದರೆ ವಿಜಾಪೂರದ ಕಡೆಯ ಬಾದಶಹಾನ ಸಿಕಂದರನು ಈ ಪ್ರಾಂತವನ್ನು ಆಳುತ್ತಿರುವಾಗ್ಯೆ, ಈಗ ವಜ್ರಗೋನಾಳವೆಂದು ಹೆಸರುಗೊಂಡಿರುವ ಗ್ರಾಮದ ಸುತ್ತಮುತ್ತಲಿನ ನಾಡನ್ನು ಕೆಲೂರು ರಾಮರೆಡ್ಡಿ ಎಂಬ ದೇಶಾಯಿಯು ಆಳುತ್ತಿದ್ದನು. ಗೋನಾಳಗ್ರಾಮವಿರುವ ಸ್ಥಳವು ಆಗ್ಯೆ ಒಂದು ಅರಣ್ಯವಾಗಿತ್ತು. ಅಲ್ಲಿ ಗೊಲ್ಲರ ತಿಮ್ಮನೆಂಬುವನು ೫-೬ ಸಾವಿರ ಗೋವುಗಳಿಗೆ ಒಡೆಯನಾಗಿ, ಅದೇ ಅರಣ್ಯದಲ್ಲಿ ಗೋವಿನ ಹಟ್ಟಿಯನ್ನು ಮಾಡಿದ್ದನು. ಈ ಗೋಪಾಲಕನು ಮಹಾಭಾಗವತ್ಭಕ್ತನಾಗಿಯೂ, ಯೋಗಿಗಳ ಸೇವೆಯಲ್ಲಿ ನಿರತನಾಗಿಯೂ, ಸಜ್ಜನನಾಗಿಯೂ, ಪರೋಪಕಾರಿಯೂ ಗಿಯೂ ಇದ್ದನು. ಅರಣ್ಯವಾಸಿಗಳಿಗೆ ಬೇಕಾದ ಎಲ್ಲ ಸುಖಗಳು ಇವನಿಗಿದ್ದರೂ ಸಂತಾನಸುಖವೊಂದು ಮಾತ್ರವಿರಲಿಲ್ಲ. ಆಗ ಈ ಗೋಪಾಲಕನು ಬಹು ಚಿಂತಾಕ್ರಾಂತನಾಗಿ ಗೋವುಗಳನ್ನು ಕಾಯುತ್ತಿರಲು, ಅರಣ್ಯದಲ್ಲಿ ಒಂದು ವಿಶಾಲವಾದ ವೃಕ್ಷದಡಿಯಲ್ಲಿ ಕಾವಿಯಲಾಂಛನದಿಂದ ಸುಶೋಭಿತನೂ, ಜಟಾಮುಕುಟಧಾರಿಯೂ ಆಗಿರುವ ಒಬ್ಬ ಯತೀಶ್ವರನು ಕಣ್ಣಿಗೆ ಬಿದ್ದನು. ಗೋಪಾಲಕನು ಇದು ಶುಭಚಿಹ್ನವೆಂದು ಭಾವಿಸಿ, ಆ ಯತೀಶ್ವರನಲ್ಲಿ ಹೋಗಿ ದೀರ್ಘದಂಡಪ್ರಣಾಮಂಗೈದು ಎದ್ದುನಿಂತನು. ಯೋಗಾಸಕ್ತನಾಗಿದ್ದ ಆ ತಪೋಮೂರ್ತಿಯು ಕಣ್ತೆರೆದು ತನ್ನ ದಿವ್ಯದೃಷ್ಟಿಯಿಂದ ಗೋಪಾಲಕನನ್ನು ನೋಡಿ "ಮಗೂ, ನಿನ್ನ ಮನಸ್ಸಿನ ಬಯಕೆಯು ಈಡೇರುವದು, ಚಿಂತೆಮಾಡಬೇಡ ನಡೆ" ಎಂದು ಆಶೀರ್ವದಿಸಿ ಪುನಃ ಧ್ಯಾನಾಸಕ್ತನಾದನು. ಯತಿಪುಂಗವನ ಆಶೀರ್ವಾದ ವಚನವನ್ನು ಕೇಳಿ ಗೋಪಾಲಕನು ಪರಮಹರ್ಷಿತನಾಗಿ ತನ್ನ ಮನೆಗೆ ಬಂದು, ಭಾರ್ಯೆಗೆ ಎಲ್ಲವನ್ನು ತಿಳಿಸಿದನು. ಆಮೇಲೆ ನವಮಾಸ ಪೂರ್ಣವಾಗುವದರಲ್ಲಿ ಯತೀಶ್ವರನ ಪ್ರಸಾದಮಹಿಮೆಯಿಂದ ಒಂದು ಗಂಡುಕೂಸು ಜನಿಸಿತು. ಆ ಕೂಸಿಗೆ ಹನುಮನೆಂಬ ನಾಮಕರಣಮಾಡಿ ಆ ಯತೀಶ್ವರನ ಹೆಸರಿನಿಂದ ಒಂದುಸಾವಿರ ಆಕಳುಗಳಿಗೆ ಲಿಂಗಮುದ್ರೆಯನ್ನು ಆ ಗೊಲ್ಲನು ಹಾಕಿಸಿದನು. ಹೀಗಿರುತ್ತಿರಲು ಆ ಯತೀಶ್ವರನ ಸುದ್ದಿಯು ಕರ್ಣೋಪಕರ್ಣವಾಗಿ ಹಬ್ಬಲು, ಆ ನಾಡಿನೊಡೆಯನಾದ ರಾಮರೆಡ್ಡಿ ದೇಶಾಯಿಯು ಸ್ವತಃ ಬಂದು ಯೋಗಿಗಳ ಪಾದದರ್ಶನವಮಾಡಿಕೊಂಡು, ಅವರ ದಿವ್ಯ ತಪಃಪ್ರಭಾವವನ್ನು ನೋಡಿ ಪರಮಾಶ್ಚರ್ಯಪಟ್ಟನು. ಅಷ್ಟರಲ್ಲಿ ಕಲ್ಯಾಣ ಕಡೆಯ ಭಕ್ತರು ನಮ್ಮ ಗುರುವರ್ಯನು ಎತ್ತಹೋದನೋ ಎನ್ನುತ್ತ ಅದೇ ಅರಣ್ಯಮಾರ್ಗವಾಗಿ ಬರಲು ಅಲ್ಲಿ ಯೋಗಾಸಕ್ತನಾಗಿರುವ ತಮ್ಮ ಗುರುಪುಂಗವನನ್ನು ನೋಡಿ, ಅವರು ರಾಮರೆಡ್ಡಿ ದೇಶಾಯಿಗೆ ಸ್ವಾಮಿಗಳ ಸಾದ್ಯಂತ ಸಂಗತಿಯನ್ನು ತಿಳಿಸಿದರು. ದೇಶಾಯಿಯು ತಪಸ್ವಿಮೂರ್ತಿಯು ಹಾಲುಗಂಗಾಧರ ಯತೀಶ್ವರರೆಂಬುದನ್ನು ಕೇಳಿ, ಪರಮಾನಂದಕಂದಿಲನಾಗಿ ಅವರ ವೈರಾಗ್ಯಶೀಲತೆಗೂ, ಯೋಗಸಾಮರ್ಥ್ಯಕ್ಕೂ ಮೆಚ್ಚಿ ಅಲ್ಲಿಯೇ ಬಂದು ಭವ್ಯವಾದ ಮಠವನ್ನು ಕಟ್ಟಿಸಿ ಅದರ ಸುತ್ತುಮುತ್ತಲಿನ ಅರಣ್ಯವನ್ನು ಕಡಿಸಿ, ಈಗಿನ ಸುಮಾರು ೪೦೦ ಎಕರೆಗಳಷ್ಟು ಭೂಮಿಯನ್ನು ಲಿಂಗಮುದ್ರಾಸ್ಥಾಪನೆಮಾಡಿ ಉಂಬಳಿ ಹಾಕಿಕೊಟ್ಟನು. ಅಲ್ಲಿ ಗೋವುಗಳು ವಿಶೇಷವಾಗಿದ್ದುದರಿಂದ ಆ ಸ್ವಾಮಿಗಳ ಮಠವಿರುವ ಗ್ರಾಮಕ್ಕೆ ಹಾಲುಗಂಗಾಧರ ವಡೆಯರ ಗೋವಿನ ಹಾಲುಗ್ರಾಮವೆಂದು ಹೆಸರುಬಂದಿತು. ಈಗ್ಯೂ ಆ ಗ್ರಾಮಕ್ಕೆ ಒಜ್ರ ಗೋನಾಳ ಎಂದು ಕರೆಯುತ್ತಾರೆ. ಸ್ವಾಮಿಗಳು ತಮ್ಮ ಮಠದಲ್ಲಿ ತಪೋವೈಭವದಿಂದ ಮೆರೆಯುತ್ತಿರಲು, ಒಮ್ಮೆ ಆ ಭಾಗದ ಮುಸಲ್ಮಾನ ಸುಬೇದಾರನು ಅಲ್ಲಿಗೆ ಬಂದಿದ್ದನು. ಅವನು ಸ್ವಾಮಿಗಳ ಯೋಗ್ಯತೆಯನ್ನು ಪರೀಕ್ಷಿಸಲು ಒಂದು ತಬಕದಲ್ಲಿ ಮೇಕೆಯ ಮಾಂಸವನ್ನು ಹಾಕಿ ಮೇಲೆ ರೇಶಿಮೆಯ ಕರವಸ್ತ್ರವನ್ನು ಹೊದಿಸಿ ಸ್ವಾಮಿಗಳ ದರ್ಶನಕ್ಕೆ ತೆಗೆದುಕೊಂಡುಹೋದನು. ಅದನ್ನು ಹಸ್ತದಿಂದ ಸ್ಪರ್ಶಮಾಡಲು ಮಾಂಸದ ಬದಲು ಕೆಂಪುದಾಸಾಳದ ಹೂಗಳೇ ಕಂಡುಬಂದವು. ಸ್ವಾಮಿಗಳ ಪ್ರಭಾವವನ್ನು ನೋಡಿ ಸುಬೇದಾರನು ಇಂಗಳಾಪುರ [illegible] ಎಂಬೆರಡು ಗ್ರಾಮಗಳನ್ನು ಸ್ವಾಮಿಗಳಿಗೆ ಜಹಾಗೀರು [illegible] ಕೊಟ್ಟನು. ಇದು ಶಾಲಿವಾಹನ ಶಕೆ ೧೬೩೦ರಲ್ಲಿ ಜರುಗಿತು. ಇವರ ಸಂದರ್ಭವೇ ಹಳಗನ್ನಡದಲ್ಲಿ ಬರೆದದೆ. ಹೀಗೆ ಸ್ವಾಮಿಗಳು ಅನೇಕ ಮಹಿಮೆಗಳನ್ನು ತೋರಿಸಿ, ಇದೇ ವಜ್ರ ಗೋನಾಳಮಠದಲ್ಲಿಯೇ ಲಿಂಗೈಕ್ಯನಾದರು. ಇವರ ಗದ್ದುಗೆಯು (ಸಮಾಧಿಯು) ಇಲ್ಲಿಯೇ ಇದ್ದು, ಅದರ ಮೇಲೆ ಭಕ್ತರು ಸಾಧಾರಣತರದ ಒಂದು ಗುಡಿಯನ್ನು ಕಟ್ಟಿಸಿದ್ದಾರೆ. ಈ ಸ್ವಾಮಿಗಳ ತರುವಾಯ ಇವರ ವಂಶಪರಂಪರೆಯಲ್ಲಿಯ ಗುರುಶಾಂತಲಿಂಗ ಶಿವಾಚಾರ್ಯರೆಂಬುವರ ಸಮಾಧಿಯೂ ಇದೇ ಗ್ರಾಮದಲ್ಲಿಯೇ ಇದೆ. ಈ ಸ್ಥಾನವು ಪುಣ್ಯಭೂಮಿಯಾಗಿದ್ದು, ಬಹು ಜಾಗ್ರತಸ್ಥಾನವಾಗಿರುತ್ತದೆ. ಸ್ವಾಮಿಗಳ ಪ್ರಭಾವದಿಂದ ಈ ಗ್ರಾಮದ ಸೀಮೆಯೊಳಗೆ ಎಲ್ಲಿಯೂ ಪ್ರಾಣಿವಧೆಯಾಗುವದಿಲ್ಲ. ಹಾಗೆ ಅಕಸ್ಮಾತ್ ಯಾರಾದರೂ ಹಿಂಸೆಮಾಡಿದರೆ ಅವರಿಗೆ ಆಗಿಬರುವದಿಲ್ಲ. ಗುರುಶಾಂತಲಿಂಗ ಶಿವಾಚಾರ್ಯರ ಅನಂತರ ಅವರ ವಂಶದವರು ಯಾರೂ ಇಲ್ಲಿ ವಾಸಮಾಡದಿದ್ದುದರಿಂದ ಪೇಶ್ವೆಯವರ ಅಮಲು ಹೋಗಿ ಕಂಪನಿಯವರ ಅಮಲುಬರುವ ಕಾಲಕ್ಕೆ ಸ್ವಾಮಿಗಳ ಜಹಗೀರು ಖಾಲಸಾ ಆಗಿ ಹೋಯಿತು. ಈಗ ಸದರೀ ಸ್ವಾಮಿಗಳ ವಂಶದವರಲ್ಲಿ ಬಸವಲಿಂಗಾರ್ಯ ಹಾಗೂ ಅಡಿವಯ್ಯ ಎಂಬಿಬ್ಬರಿದ್ದು, ಇವರು ಆಚಾರಶೀಲರೂ, ಸಾಧುಸ್ವಭಾವದವರೂ ಇದ್ದಾರೆ. ಇವರು ಈಗ ಅಯೋಧ್ಯಾಗ್ರಾಮದಲ್ಲಿರುತ್ತಾರೆ. ಕಲ್ಯಾಣ, ಸರವಗೆ, ಅಯೋಧ್ಯಾ ಮಠಗಳು ಈ ಉಭಯರ ವಶದಲ್ಲಿದ್ದು ಇದುವರೆಗೆ ಸಂತಾನಾಭಿವೃದ್ಧಿ ಇಲ್ಲದಿರುವದರಿಂದ ಇನ್ನೂ ಪಟ್ಟಾಧಿಕಾರವನ್ನು ಮಾಡಿರುವದಿಲ್ಲ. ಇವರ ಶಿಷ್ಯರ ಮನೆಗಳ ಸಂಖ್ಯೆಯು ಆರುಸಾವಿರಕ್ಕೆ ಏರಿರಬಹುದು. ಆದರೆ ಮೇಲಿನ ಉಭಯರು ಚಿಕ್ಕವರಿದ್ದಾಗ್ಯೆ ಇವರ ಶಿಷ್ಯರೊಳಗಿನ ಕೆಲವು ಜಂಗಮರು ತಾವೇ ಹಾಲುಗಂಗಾಧರಸ್ವಾಮಿಗಳ ವಂಶದವರೆಂದು ಹೇಳಿಕೊಳ್ಳುತ್ತಾ ಶಿಷ್ಯರ ಮನೆಗಳ ಮೇಲೆ ಕಾಣಿಕೆಯಾದಿಗಳನ್ನು ವಸೂಲು ಮಾಡುತ್ತಾರೆಂದು ಕೇಳುತ್ತೇನೆ. ನಿಜವಾದ ಗುರುಭಕ್ತರು ಇಂಥವಕ್ಕೆ ಮೋಸಹೋಗಬಾರದು. ಈ ಸ್ವಾಮಿಗಳ ಮಠದ ಯೋಗ್ಯತೆಯನ್ನು ನೋಡಿ ಉಜ್ಜಯಿನೀ ಸದ್ಧರ್ಮಪೀಠದ ಚರಪಟ್ಟಾಧ್ಯಕ್ಷರಾದ ಗುರುಸಿದ್ಧರಾಜದೇಶಿಕೇಂದ್ರ ಮಹಾಸ್ವಾಮಿಗಳೆಂಬವರು ಇಬ್ಬರು ಬಿಲ್ಲೇಜವಾನರ ಹುಕುಮನ್ನು ಈ ಮಠದವರಿಗೆ ದಯಪಾಲಿಸಿದ್ದಾರೆ. ಇದು ಈ ಮನೆತನದ ಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ಹಾಲುಗಂಗಾಧರಸ್ವಾಮಿಗಳ ಸರ್ವಶಿಷ್ಯರು ಅಯೋಧ್ಯಾ ಹಾಲುಮಠದ ಬಸವಲಿಂಗಾರ್ಯ ಹಾಗೂ ಅವರ ತಮ್ಮಂದಿರಾದ ಅಡಿವಯ್ಯನವರಿಗೇನೆ ಕಾಣಿಕಾದಿ ಗುರುಮರ್ಯಾದೆಗಳನ್ನು ಮಾಡಬೇಕಲ್ಲದೆ, ಉಳಿದ ನಾಮಧಾರಿಗಳಿಗೆ ಮಾಡಬಾರದು. ಹೀಗೆ ಗದಾಚಿತ್ ಯಾರಾದರೂ ಮಾಡಿದರೆ ಅವರು ಗುರುದ್ರೋಹಕ್ಕೆ ಪಾತ್ರರಾಗುವರು. ಯಾರಿಗಾದರೂ ಹಾಲುಗಂಗಾಧರಸ್ವಾಮಿಗಳ ಸಂಬಂಧ ಹಾಗೂ ಅವರ ವಂಶಿಕರ ಸಂಬಂಧ ಮಾಹಿತಿಯು ಬೇಕಾಗಿದ್ದರೆ ಈ ಲೇಖಕನನ್ನು ಪತ್ರದ್ವಾರದಿಂದ ಇಲ್ಲವೇ ಸಮಕ್ಷಮ ಕೇಳಿಕೊಳ್ಳಬಹುದು.

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ಪಂಚಾಚಾರ್ಯ ಭಜನಾಸಂಘ ಆನೆಕಲ್‌ಟವ್ರ್ನ.

ಈ ಪುರನಿವಾಸಿಗಳಾದ ಶ್ರೀಮದ್ವೀರಶೈವ ಮಹಾಜನರು ಇಲ್ಲಿ ಕಾಲರಾಗಲಾಟೆ ಪ್ರಾಪ್ತವಾದಂದಿನಿಂದ ಶ್ರೀ ಜಗದ್ಗುರು ಪಂಚಾಚಾರ್ಯರವರ ಲಿಂಗೋದ್ಭವ ಪಟವನ್ನು ಭಕ್ತಿಪೂರ್ವಕವಾಗಿ ಬೆಳಗಿನ 5 ಘಂಟೆವರೆಗೂ ದಿನಂಪ್ರತಿ ಭಜನೆಯೊಡನೆ ಪೇಟೆಯ ಬೀದಿಗಳಲ್ಲಿ ಮೆರಯಿಸಿ ಶ್ರೀ ನಂದೀಶ್ವರ ದೇವಾಲಯಕ್ಕೆ ಬಂದು ಮಂಗಳವನ್ನು ಹಾಡಿ ಮುಕ್ತಾಯಮಾಡುತ್ತಿದ್ದರು. ಇಡೆಗೆ ಅನೇಕ ಭಕ್ತಾದಿಗಳಿಂದ ಬಂದ ದವಸವನ್ನು ಶೇಖರಿಸಿ, ಇದೇ ಪ್ರಮೋದದೂತನಾಮ ಸಂ|| ಪುಷ್ಯಶುದ್ಧ 2 ಭಾನುವಾರ ರಾತ್ರಿ 10 ಘಂಟೆಯಿಂದ ಬೆಳಗಿನ 5 ಘಂಟೆಯವರೆಗೂ ಮೇಲ್ಕಂಡ ದೇವಾಲಯದಲ್ಲಿ ಶ್ರೀ ವಿಶ್ವೇಶ್ವರಸ್ವಾಮಿಯವರಿಗೂ, ಶ್ರೀ ವೀರಭದ್ರಸ್ವಾಮಿಯವರಿಗೂ, ಶ್ರೀ ನಂದೀಶ್ವರಸ್ವಾಮಿಯವರಿಗೂ ಸಹ ಪುರೋಹಿತರಾದ ವೇ|| ರುದ್ರಯ್ಯನವರಿಂದ ವೇದೋಕ್ತ ರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ ಸಹ ನೆರವೇರಿತು. ಸೋಮವಾರ ಬೆಳಗಿನ 7 ಘಂಟೆಯಿಂದ ಮಧ್ಯಾಹ್ನ 10 ಘಂಟೆಯವರೆಗೂ ತ್ರಿಮಠಸ್ಥ ಭಜನಾಸಂಘದವರೊಡನೆ ನಂದಿಧ್ವಜ ಸಮೇತ ಶ್ರೀ ವೀರಭದ್ರಸ್ವಾಮಿಯವರ ಮಹೋತ್ಸವವು ಅತಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಸ್ವಾಮಿಯವರ ಉತ್ಸವವು ದೇವಸ್ಥಾನಕ್ಕೆ ತಲುಪಿದಕೂಡಲೆ ಮಹಾ ಮಂಗಳಾರತಿಯಾಗಿ ಅನಂತರ ಭಕ್ತಾದಿಗಳಿಂದ ಶೇಖರಿಸಿದ್ದ ದವಸದಲ್ಲಿ ಶ್ರೀ ವೀರಶೈವಮಂಡಲಿಯವರಾದಿಯಾಗಿ ಸಾವಿರಾರು ಜನಗಳವರೆಗೂ ಅನ್ನಸಂತರ್ಪಣೆಯು ನಡೆಯಿಸಲ್ಪಟ್ಟಿತು. ಮೇಲ್ಕಂಡ ಸ್ವಾಮಿಯವರ ಸೇವೆಯಲ್ಲಿ ಭಾಗಿಗಳಾಗಿ ನಿಂತಿದ್ದ ಶ್ರೀಮದ್ವೀರಶೈವಮಹಾಮಂಡಲಿಯವರು ಆನೆಕಲ್ ಟವ್ರ್ನನಲ್ಲಿ ಪ್ರಾಪ್ತವಾಗಿದ್ದ ಕಾಲರಾಗಲಾಟೆಯು ಸಂಪೂರ್ಣವಾಗಿ ನಿಂತುಹೋದ ಸಂತೋಷದಿಂದಲೂ, ಅನ್ನಸಂತರ್ಪಣೆಯಲ್ಲಿ ಯಾವದೊಂದು ವಿಘ್ನಗಳು ಬಾರದೆ ಬಡವರಾದಿಯಾಗಿ ಸಾವಿರಾರು ಜನಗಳು ತೃಪ್ತಿಪಟ್ಟುಕೊಂಡುಹೋದ ಸಂತೋಷದಿಂದಲೂ ಶ್ರೀ ಪಂಚಾಚಾರ್ಯ ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಸಮರ್ಪಿಸಿ ಶ್ರೀ ಭಗವತ್ಪಾದರವರ ಕೃಪಾಕಟಾಕ್ಷವನ್ನು ಹೊಂದಿ ಶ್ರೀಗಳವರ ಜಯಧ್ವನಿಗಳೊಡನೆ ಸರ್ವರೂ ಆನಂದಭರಿತರಾಗಿ ತೆರಳಿದರು.

ಓರ್ವ ಗುರುಭಕ್ತ.

ನವೀನ ನಾಟಕಾಭಿನಯ.

ದಿದ್ದಿಗಿ.

ಶ್ರೀಮದಸುಗೋಡು ಪಟ್ಟಾಧ್ಯಕ್ಷರೂ ಮತ್ತು ಶ್ರೀರಾಮಘಟ್ಟದ ಪಟ್ಟಾಧ್ಯಕ್ಷರೂ ಈ ಉಭಯ ಪೂಜ್ಯಪಾದರ ಮೇಳನದೊಡನೆ ಜಗಲೂರು ತಾಲೂಕು ದಿದ್ದಿಗಿ ಗ್ರಾಮದಲ್ಲಿ ಇದೇ ತಾ|| 16 ಮತ್ತು 17 ರಲ್ಲಿ ಶ್ರೀ ಮಹೇಶ್ವರ ಜಾತ್ರೆಯು ಅತ್ಯಂತ ವಿಜೃಂಭಣೆಯಿಂದ ನಡೆದದ್ದು ಸರ್ವವಿದಿತವಾದದ್ದೇ ಇರುತ್ತದೆ. ತಾ|| 18-12-30 ನೆಯ ದಿನ ರಾತ್ರಿ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಉಜ್ಜಯಿನೀಮಠದ ಬಿ. ಎಂ. ಗುರುಸಿದ್ಧಶಾಸ್ತ್ರಿಗಳ ಪುತ್ರರಾದ ಗುರುಸ್ವಾಮಯ್ಯನವರಿಂದ ನವೀನವಾಗಿಯೂ ಕಲ್ಪಿತವಾಗಿಯೂ ರಚಿಸಿರುವ "ಭಕ್ತಪ್ರತಾಪ" ವೆಂಬ ನವೀನ ಧ್ವಪೋನಾಟ್ಯಾನವು ಸದರಿ ಗ್ರಾಮದ ಬಾಲಕರಿಂದ ಅಭಿನಯಿಸಲ್ಪಟ್ಟಿತು. ಸುಮಾರು ಎರಡೂವರೆ ಸಾವಿರಕ್ಕಿಂತ ಹೆಚ್ಚು ಪ್ರೇಕ್ಷಕರು ನೆರದಿದ್ದರು. ಶ್ರೀಮದಸುಗೋಡು ಪಟ್ಟಾಧ್ಯಕ್ಷರೂ, ಜಗಳೂರು ಸಾಹುಕಾರ್ ಮಲ್ಲಪ್ಪನವರೂ, ಬಸವನಕೋಟೆ ಸಾಹುಕಾರ್ ಕೊಟ್ರಬಸಪ್ಪನವರೂ ಅನೇಕ ಸುತ್ತುಮುತ್ತಲಿನ ಗ್ರಾಮದ ಉಪಾಧ್ಯಾಯರೂ, ವಿದ್ವಾಂಸರೂ ಸಹ ನೆರೆದಿದ್ದರು. ಸದರಿ ಆಖ್ಯಾನವು ನೀತಿ, ಹಾಸ್ಯ, ಶೃಂಗಾರ ಮುಂತಾದ ವಿಷಯಗಳಿಂದ ಕೂಡಿ ಪಂಡಿತಪಾಮರರ ಮನಸ್ಸನ್ನೆಲ್ಲಾ ಆಕರ್ಷಿಸಿತು. ಮೇಲ್ಕಂಡ ಉಭಯ ಶ್ರೀಗ

ಳವರೂ ಮತ್ತು ಉಳಿದ ಸಕಲ ಬುದ್ಧಿವಂತರೂ ಸಹ ಇವರ ಕವಿತಾಸಾಮರ್ಥ್ಯಕ್ಕೆ ಒಪ್ಪಿಕೊಂಡು ಆನಂದಿತರಾದರು. ವೇ|| ಗುರುಸ್ವಾಮಯ್ಯನವರು ಕೇವಲ ಬಾಲ್ಯದಲ್ಲಿಯೇ ನಾನಾವಿಧವಾದ ಪದಪದ್ಯಗಳನ್ನು ಮಾಡುತ್ತ 1927ನೆಯ ಇಸವಿಯಲ್ಲಿ ದಾವಣಗೆರೆಯಲ್ಲಿ ನಡೆದ ಉಪಾಧ್ಯಾಯರ ಪರಿಷತ್ತಿನಲ್ಲಿ ತಮ್ಮ ಕವಿತಾಸಾಮರ್ಥ್ಯವನ್ನು ಪ್ರದರ್ಶಿಸಿ ಯೋಗ್ಯತಾಪತ್ರಿಕೆಯನ್ನು ಪಡೆದಿರುವರು. ಇವರು ಈ ಹಿಂದೆ ಅನೇಕ ನಾಟಕಗಳನ್ನು ರಚಿಸಿರುವರು. ಇವರು ಕಲ್ಪಿತಗಳಾದ ಆಖ್ಯಾನಗಳನ್ನು ರಚಿಸಿರುವುದೇ ಹೆಚ್ಚು. ತಾನಾಗಿಯೇ ಒಲಿದಿರುವ ಕವಿತಾನುರಾತೆಯ ಪ್ರಭಾವದಿಂದ ಇವರು 1 ಘಂಟೆಗೆ 10-12 ಪದಪದ್ಯಗಳನ್ನು ನಿರಾಯಾಸವಾಗಿ ರಚಿಸುವರು. ರಸಭರಿತವಾದ ಇವರ ಕೃತಿಗಳು ಅಕ್ಷರಶಃ ಮನವನ್ನು ಸೆಳೆಯುವಂತಿವೆ. ಇವರು ತಾವು ರಚಿಸುವ ಕೃತಿಗಳನ್ನು ಪ್ರಿಂಟುಮಾಡಿಸಿ ಜಗತ್ಸಂತೋಷಗೊಳಿಸಬೇಕೆಂದು ಸಕಲರಿಗೂ ತುಂಬಾ ಆಶೆಯಿದೆ. ಈ ಅಪೇಕ್ಷೆಯನ್ನು ನೆರವೇರಿಸಬೇಕೆಂದು ಹಾರೈಸುತ್ತೇನೆ. ದೇಶಮಧ್ಯದ ಜನಗಳೂ ಸಹ ಸದರಿಯವರಿಂದ ಇಂಥ ನೀತಿಬೋಧಕಗಳಾದ ಕೃತಿಗಳನ್ನು ಮಾಡಿಸಿ ತಮ್ಮ ತಮ್ಮ ಗ್ರಾಮಗಳಲ್ಲಿ ಅಭಿನಯಿಸಿ ದೇಶೋದ್ಧಾರಮಾಡಬೇಕೆಂದು ನಮ್ಮ ಇಷ್ಟವಿದೆ. ಈ ಕವಿಗೆ ದೇವರು ಆಯುರಾರೋಗ್ಯೈಶ್ವರ್ಯಾದಿಗಳನ್ನು ಕರುಣಿಸುವುದಲ್ಲದೆ ಪದೇ ಪದೇ ಇಂಥ ಕೃತಿಗಳನ್ನು ರಚಿಸಿ ಅವುಗಳನ್ನು ಪ್ರಕಾಶಗೊಳಿಸುವ ಬುದ್ಧಿಯನ್ನೂ ಕರುಣಿಸಲೆಂದು ಹಾರೈಸುತ್ತೇನೆ.

ಚನ್ನಪ್ಪಯ್ಯನವರ ಮಕ್ಕಳು
ಎಂ. ಷಡಕ್ಷರಯ್ಯ.

ಶ್ರೀ ಗುರುಭ್ಯೋನಮಃ.

ಜಾಹೀರ್ ವಿನಂತಿ.

ಮದ್ರಾಸ್ ಇಲಾಖಾ ಕುಂಭಕೋಣದಲ್ಲಿರುವ ಶ್ರೀ ಸಾರಂಗದೇವರ ಮಠವು ಗುರುಸ್ಥಲದ್ದಾಗಿರುತ್ತದೆ. ಆ ಮಠದ ಸಂಸ್ಥಾಪಕರು ವಿಜಾಪೂರ ಡಿ|| ಸಂಗನ ಕ್ಷೇತ್ರದಲ್ಲಿ ಲಿಂಗೈಕ್ಯರಾಗಿದ್ದಾರೆ. ಆ ಮಠದ ವಂಶಜರು ಈಗಲೂ ಸುಸ್ಥಿತಿಯಲ್ಲಿದ್ದಂತೆ ತಿಳಿಯಬರುತ್ತದೆ. ಕುಂಭಕೋಣ ಮಠಕ್ಕೆ ಈಗ ಅಧಿಕಾರಿಗಳಿಲ್ಲ. ಕೆಲವು ದಿನಸಗಳ ಕೆಳಗೆ ಲಿಂಗೈಕ್ಯರಾದ ಆ ಮಠದ ಶ್ರೀಗಳು ಸಂಸ್ಥಾನಮಠದ ಉತ್ತರಾಧಿಕಾರಕ್ಕೆ ಅನಂತಜರನ್ನು ನೇಮಿಸಬೇಕೆಂದು ಬಸವಣ್ಣಶೆಟ್ಟರು ತ್ರಿಚನಾಪಲ್ಲಿ ಇವರಿಗೆ ಅಧಿಕಾರ ಕೊಟ್ಟಿರುವುದಾಗಿ ತಿಳಿಯುತ್ತದೆ. ಈಗ ಸದರಿ ಶೆಟ್ಟರು ಯಾವಕಾರಣದಿಂದಲೋ ಸದರಿ ಮಠದ ಆಸ್ತಿ ಮೊದಲಾದವುಗಳನ್ನು ವಿರಕ್ತಮಠಕ್ಕೆ ಸೇರಿಸಲಿಕ್ಕೆ ಪ್ರಯತ್ನಿಸುತ್ತಿರುವದಾಗಿ ತಿಳಿದುಬರುತ್ತದೆ. ಇದು ನಿಜವಿದ್ದಪಕ್ಷದಲ್ಲಿ ಇದು ಕೇವಲ ಅನ್ಯಾಯವಾದುದೆಂದು ಹೇಳಬಹುದಾಗಿದೆ. ಈ ಬಗ್ಗೆ ನೋಟೀಸನ್ನು ಸಂಗಮಕ್ಷೇತ್ರದ ವಂಶಜರು ಪ್ರಸಿದ್ಧಮಾಡಿದ್ದಾರೆ. ಬಸವಣ್ಣಶೆಟ್ಟರೇ ಆಗಲಿ, ಉಳಿದ ಅಭಿಮಾನಿಗಳೇ ಆಗಲಿ ಈ ಕೆಲಸವನ್ನು ಮುಚ್ಚುಮರೆಯಿಂದ ಮಾಡತಕ್ಕದ್ದಲ್ಲ. ಪ್ರಸಿದ್ಧರೀತಿಯಿಂದ ಎಲ್ಲರಿಗೂ ಒಪ್ಪುವಂತೆ ಮಾಡತಕ್ಕದ್ದಾಗಿದೆ. ಆದಕಾರಣ ಸದರಿ ಬಸವಣ್ಣಶೆಟ್ಟರು ಕುಂಭಕೋಣಮಠದ ವಿಷಯವಾಗಿ ಸದ್ಯಃ ಯಾವ ಯಾವ ಕೆಲಸಗಳನ್ನು ಮಾಡಿರುತ್ತಾರೆ. ಆ ಮಠದ ಶ್ರೀಗಳ ನಿಜವಾದ ಅಪೇಕ್ಷೆ ಏನಿತ್ತು? ತಮ್ಮಲ್ಲಿರುವ ಕಾಗದಪತ್ರಗಳಿಂದ ಆ ಮಠದ ನಿಜವಾದ ಇತಿಹಾಸವೇನಿರುವದು? ಆ ಮಠದ ಕೆಳಗೆ ಬೇರೆ ಮಠಗಳು ಎಲ್ಲೆಲ್ಲಿರುತ್ತವೆ? ಅವುಗಳ ಆಸ್ತಿಗಳು ಯಾರ ಯಾರ ವಶದಲ್ಲಿರುತ್ತವೆ? ಎಲ್ಲಾ ಮಠಗಳ ವ್ಯವಸ್ಥೆಯು ಈಗ ಯಾವರೀತಿ ನಡೆದಿರುತ್ತದೆ? ಆದಾಯವ್ಯಯಗಳ ಲೆಖ್ಖಪತ್ರಗಳೇನು? ಇವೆಲ್ಲಾ ಸಂಗತಿಗಳನ್ನು ಜಾಹೀರರೀತಿಯಿಂದ ಪ್ರಸಿದ್ಧಮಾಡಬೇಕೆಂದು ವಿನಂತಿ ಇದೆ.

ತಾ|| ೨೦-೧೨-೩೦. ಓರ್ವ ಮಠಾಭಿಮಾನಿ.

ಬಾಬುಗಣುವಿನ ಅಪೂರ್ವದೇಹತ್ಯಾಗ.

ಬೊಂಬಾಯಿಯಲ್ಲಿ "ಬಾಬು ಗಣು" ಎಂಬ ಸ್ವಯಂಸೇವಕನ ಮೇಲೆ ಮೋಟಾರು ಹಾಯ್ದು ಸದರಿ ಸ್ವಯಂಸೇವಕನು ಆ ದಿವಸವೇ ಮೃತಿಹೊಂದಿದನಷ್ಟೆ! ಅಂದು ಶುಕ್ರವಾರ. ಮರುದಿನ ಬೆಳಗ್ಗೆ ಅಂದರೆ ಶನಿವಾರ ದಿವಸ ಬೆಳಗ್ಗೆ ಈ ಸಮಾಚಾರವು ಇಡೀ ಬೊಂಬಾಯಿ ಪಟ್ಟಣದಲ್ಲೆಲ್ಲಾ ಹರಡಿ ಜನರಲ್ಲಿ ಕಳವಳವನ್ನುಂಟುಮಾಡಿತು. ಪುರನಿವಾಸಿಗಳು ತಮ್ಮ ತಮ್ಮ ಉದ್ಯೋಗಗಳನ್ನು ನಿಲ್ಲಿಸಿ ಸ್ವಯಂಸೇವಕನ ಕಳೇಬರವನ್ನು ದಹನ ಮಾಡುವುದಕ್ಕೋಸ್ಕರ ತಂಡತಂಡವಾಗಿ ಹೋಗಲಾರಂಭಿಸಿದರು. ಬಾಬುಗಣುವಿನ ಮೆರವಣಿಗೆಯು ಹೊರಟಿತು. ಸಾವಿರಾರು ಜನರು ಜಾತಿ, ಮತ, ಕೋಮುಗಳ ಭೇದಭಾವವಿಲ್ಲದೆ ಮೆರವಣಿಗೆಯಲ್ಲಿ ಬೆರತು ದೇಹತ್ಯಾಗ ಮಾಡಿದ ಸ್ವಯಂಸೇವಕನಿಗೆ ಮರ್ಯಾದೆ ಮಾಡುತ್ತಿದ್ದರು. ಲೋಕಮಾನ್ಯ ಬಾಲಗಂಗಾಧರತಿಲಕರ ಶವಸಂಸ್ಕಾರ ಸಮಯದಲ್ಲಿ ಬೊಂಬಾಯಿ ಪುರನಿವಾಸಿಗಳು ಎಷ್ಟು ಅಭೂತಪೂರ್ವವಾದ ಉತ್ಸಾಹವನ್ನು ತೋರ್ಪಡಿಸಿದರೋ ಅಷ್ಟೇ ಉತ್ಸಾಹವನ್ನು ಇಂದು ಬಾಬುಗಣುವಿಗೆ ತೋರ್ಪಡಿಸುತ್ತಿದ್ದರು. ಈ ಮೆರವಣಿಗೆಯು ಬೊಂಬಾಯಿ ವಾರ್‌ಕೌನ್ಸಿಲ್ಲಿನವರಿಂದ ಏರ್ಪಡಿಸಲ್ಪಟ್ಟಿತ್ತು. ಅಧ್ಯಕ್ಷರಾದ ಶ್ರೀಮತಿ ಸ್ನೇಹಲತಾದೇವಿಯವರೂ, ಇತರ ಸದಸ್ಯರೂ ಮೆರವಣಿಗೆಯ ಮುಂಭಾಗದಲ್ಲಿದ್ದು ಉತ್ಸವವನ್ನು ಬಹು ವೈಭವದಿಂದ ಸಾಗಿಸುತ್ತಿದ್ದರು.

ಬಾಬುಗಣುವಿನ ದೇಹವನ್ನು ತೊಳೆದು ಶುಭ್ರವಸ್ತ್ರದೊಡನೆ ಶೃಂಗರಿಸಿ, ಮನೋಹರಗಳಾದ ಕುಸುಮಗಳಿಂದ ದೇಹವನ್ನೆಲ್ಲಾ ಮುಚ್ಚಿದ್ದರು. ಶನಿವಾರ ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಮೆರವಣಿಗೆಯು ಹೊರಟಿತು. ಮೆರವಣಿಗೆಯು ೩ ಮೈಲುಗಳವರೆಗಿತ್ತು. ಮುದುಕರೂ, ತರುಣರೂ, ಹಿಂದುಗಳೂ, ಪಾರ್ಶಿಗಳೂ ಮತ್ತು ಜ್ಯೂಗಳೂ ನಾಮುಂದು ತಾಮುಂದು ಎಂದು ಮೆರವಣಿಗೆಯಲ್ಲಿ ಉತ್ಸಾಹದಿಂದಲೂ ಭಕ್ತಿಗೌರವದಿಂದಲೂ ಸೇರಿದ್ದರು. ಮೆರವಣಿಗೆಯಲ್ಲಿ ಲಕ್ಷಾಂತರ ಜನರಿದ್ದರೂ ಎಲ್ಲರೂ ನಿಶ್ಶಬ್ದವಾಗಿ ಬಲು ಸಿಸ್ತಿನಿಂದ ಸೈನಿಕರೋಪಾದಿಯಲ್ಲಿ ನಡೆಯುತ್ತಿದ್ದರು. ರಸ್ತೆಯಲ್ಲಿ ಸಿಸ್ತನ್ನು ಕಾಪಾಡಲು ಸ್ವಯಂಸೇವಕರ ಅಥವಾ ಪೋಲೀಸರ ಸಹಾಯದ ಅವಶ್ಯಕತೆಯಿರಲಿಲ್ಲ. ಕಳೇಬರದ ಮುಂದೆ ಕಾಂಗ್ರೆಸ್ ಮುಖಂಡರೂ, ಅವರ ತರುವಾರ ಹಿಂದೂಗಳೂ, ಪಾರ್ಶಿಗಳೂ, ಮುಸಲ್ಮಾನರೂ, ಜ್ಯೂಗಳೂ ಬಾಬುವಿನ ಅಪ್ರತಿಮದೇಶಭಕ್ತಿಯನ್ನು ಕೊಂಡಾಡುತ್ತ, ಅವನ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತ ಮುಂದುವರಿಯುತ್ತಿದ್ದರು. ವಾರ್‌ಕೌನ್ಸಿಲ್ಲಿನವರು, ಬೊಂಬಾಯಿ ಪುರನಿವಾಸಿಗಳು ಬರೀ ತಲೆಯಲ್ಲಿ ಮೆರವಣಿಗೆಯನ್ನು ಹೊರಡಿಸಬೇಕೆಂದೂ, ನಾಲ್ಕು ನಾಲ್ಕು ಜನರಂತೆ ಒಂದು ವ್ಯೂಹವನ್ನು ಕಲ್ಪಿಸಿಕೊಂಡು ನಡೆಯಬೇಕೆಂದೂ, ತಲೆಯ ಮೇಲೆ ವಸ್ತ್ರಗಳನ್ನು ಧರಿಸಿದವರನ್ನು ಹಿಂಸಿಸಕೂಡದೆಂದೂ, "ಬಾಬೂಗಣುಜಿಂದಾಬಾದ್ ಇಂಕ್ವಿಲಾಬ್, ಜಿಂದಾಬಾದ್" ಎಂದು ಜಯಘೋಷಗಳನ್ನು ಮಾತ್ರ ಮಾಡಬೇಕೆಂದೂ ಪ್ರಾರ್ಥಿಸಿ ಹಸ್ತಪತ್ರಿಕೆಗಳನ್ನು ಹಂಚಿದ್ದರು. ಇದಕ್ಕನುಸಾರವಾಗಿ ಪುರನಿವಾಸಿಗಳು ನಡೆದು ಕಾಂಗ್ರೆಸ್ಸಿನವರ ಕೋರಿಕೆಗೆ ಮನ್ನಣೆಯನ್ನಿತ್ತರು. ಮೇಲ್ಕಂಡ ಜಯಘೋಷಗಳ ಜೊತೆಯಲ್ಲಿ ಹಿಂದೂ, ಜೋರೇ ರಾಷ್ಟ್ರೀಯಗಾ (ಪಾರ್ಶಿ) ಮತ್ತು ಕ್ರೈಸ್ತ ಮೊದಲಾದವರು ತಮ್ಮ ತಮ್ಮ ಮತದ ಮಂತ್ರಗಳನ್ನು ಹೇಳುತ್ತಿದ್ದರು. ಮತ್ತೊಂದು ವಿಶೇಷ ಸಂಗತಿಯೇನೆಂದರೆ: ಸ್ತ್ರೀಯರೂ ಸಹ ತಾವು ಕಳೇಬರವನ್ನು ಹೊರಬೇಕೆಂದು ಹಾತೊರೆಯುತ್ತಿದ್ದರು. ಮೆರವಣಿಗೆಯು ಮೊದಲಿನಿಂದ ಕೊನೆಯವರೆಗೂ ಶಾಂತರೀತಿಯಿಂದಲೂ ಸುವ್ಯವಸ್ಥೆಯಿಂದಲೂ ನಡೆಯಿತು. ಕೊನೆಯಲ್ಲಿ ಮಾತ್ರ ಪೋಲೀಸರಿಗೂ ಜನರಿಗೂ ಸ್ವಲ್ಪ ತಿಕ್ಕಾಟವಾಯಿತು. ಮೆರವಣಿಗೆಯು ಧಾಬಜಾರದಿಂದ ಹೊರಟು ಮಾಂಡವಿ, ಕಾಲ್ಬಾದೇವೀ ರಸ್ತೆ, ಮಾಲ್ಬಜೆ ಮಾರ್ಕೆಟ್ ಮೊದಲಾದ ರಸ್ತೆಗಳ ಮೇಲಿಂದ ಹಾಯ್ದು ಗಿರಗಾವಿಗೆ ಹೋಯಿತು. ಈ ರಸ್ತೆಗಳಲ್ಲೆಲ್ಲಾ ವಾಹನ ಮುಂತಾದವುಗಳನ್ನು ಕೆಲ ಘಂಟೆಗಳ ಕಾಲದ ವರೆಗೆ ನಿಲ್ಲಿಸಬೇಕಾಗಿ ಬಂದಿತು. ಅಕ್ಕಪಕ್ಕದ ಮಹಡಿಯ ಮೇಲೆ ಜನರು ತಂಡತಂಡವಾಗಿ ಸೇರಿ ಕಳೇಬರದ ದರ್ಶನವನ್ನು ಮಾಡುತ್ತ ಪುಷ್ಪವೃಷ್ಟಿಯನ್ನು ಕರೆಯುತ್ತಿದ್ದರು. ದಾರಿಯುದ್ದಕ್ಕೂ ರಾಷ್ಟ್ರೀಯ ಧ್ವಜಗಳು ಹಾರಾಡುತ್ತಿದ್ದವು.

ಗಿರಗಾವಿನ ವರೆಗೂ ಪೋಲೀಸರ ಸುಳಿವೇ ಇರಲಿಲ್ಲ. ಠಾಕುರ್ ದ್ವಾರ್ ಎಂಬಲ್ಲಿಗೆ ಮೆರವಣಿಗೆಯು ಬರುವುದಕ್ಕೆ ಮೂರು ಘಂಟೆಗಳ ಕಾಲವಾಯಿತು. ಗಿರಗಾವಿನ ನಿವಾಸಿಗಳು ಮೆರವಣಿಗೆಯು ಅಲ್ಲಿ ಹಾದು ಹೋಗಬೇಕೆಂದು ಅಪೇಕ್ಷಿಸಿದ ಕಾರಣ ಮೆರವಣಿಗೆಯು ಅಲ್ಲಿ ಚಲಿಸಿತು. ಆದರೆ ಇದು ಮೊದಲು ಪ್ರಕಟವಾದ ಕಾರ್ಯಕ್ರಮಕ್ಕೆ ವಿರುದ್ಧವಾಗಿದ್ದಿತು. ಮೆರವಣಿಗೆಯು ಮುಂದೆ ಹೋಗಕೂಡದೆಂಬ ಆಜ್ಞೆಯು ಪೋಲೀಸು ಕಮಿಷನರಿಂದ ಬಂದಿತು. ಮೆರವಣಿಗೆಯಲ್ಲಿದ್ದ ಜನರು ಆ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಹಿಂದಿದ್ದ ಜನರು ಸಮೀಪಿಸುತ್ತಲೇ ಸ್ವಲ್ಪ ನೂಕು ನುಗ್ಗಾಯಿತು. ಕೂಡಲೇ ಪೋಲೀಸರು ಲಾಠೀಪ್ರಹಾರವನ್ನಾರಂಭಿಸಿದರು. ಈ ಮಧ್ಯೆ ವಾರ್‌ಕೌನ್ಸಿಲ್ಲಿನ ಸದಸ್ಯರುಗಳು ಯೋಚಿಸಿ ಕಳೇಬರವನ್ನು ಚೌಪಾತಿಯಲ್ಲಿ ದಹನಮಾಡಬೇಕು. ಅದಕ್ಕೋಸ್ಕರ ಮುನ್ಸಿಪಲ್ ಕಮಿಷನರ ಅನುಮತಿಯನ್ನು ಪಡೆಯಬೇಕು ಎಂದು ಕೆಲವರು ತಿಳಿಸಿದರು. ಆದರೆ ವಾರ್‌ಕೌನ್ಸಿಲಿನವರು ತಾವು ಮೊದಲೇ ನಿಷ್ಕರ್ಷಿಸಿದ್ದಂತೆ ಹಿಂದೂ ಸ್ಮಶಾನದಲ್ಲೇ ದಹನಮಾಡಬೇಕೆಂದು ನಿಶ್ಚಯಿಸಿ ಕ್ವೀನ್ಸ್ ರೋಡಿನ ಮುಖಾಂತರ ಮೆರವಣಿಗೆಯು ಹೋಗಲು ಅವಕಾಶವನ್ನು ಕೊಡಬೇಕೆಂದು ಪೋಲೀಸ್ ಕಮಿಷನರನ್ನು ಪ್ರಾರ್ಥಿಸಿದರು. ಪೋಲೀಸು ಕಮಿಷನರು ಇದಕ್ಕೆ ಒಪ್ಪದೆ ಬೇರೆ ಮಾರ್ಗವಾಗಿ ಹೋಗಬೇಕೆಂದರು. ಈ ಮಾತುಕಥೆಗಳು ನಡೆಯುತ್ತಿದ್ದಾಗ ಒಂದು ಘಂಟೆಯು ಕಾಲ ಕಳೆಯಿತು. ಅದುವರೆಗೂ ಮೆರವಣಿಗೆಯು ಚಲಸ್ಥವಾಗಿದ್ದಿತು. ಈ ಮಧ್ಯೆ ಪೋಲೀಸಿನವರ ಅನೇಕ ಪಡೆಗಳೂ, ಬ್ರಿಟಿಷ್ ಸೈನ್ಯವೂ ಬಂದಿತು. ಜನಗಳನ್ನು ಚದುರಿಸುವುದಕ್ಕೆ ಪೋಲೀಸಿನವರು ಲಾಠಿಗಳನ್ನು ಉಪಯೋಗಿಸುತ್ತಿದ್ದರು. ಅನೇಕರಿಗೆ ಗಾಯಗಳಾದವು. ಅಂತು ಮಧ್ಯಾಹ್ನ ಸುಮಾರು ೨-೩೦ ಘಂಟೆಗೆ ಮೆರವಣಿಗೆಯು ಹಿಂದೂ ಸ್ಮಶಾನವನ್ನು ಸೇರಿತು. ಇಲ್ಲಿಯೂ ಸಹ ಆಗಲೇ ಸಾವಿರಾರು ಜನ ಸೇರಿದ್ದರು. ಜಾತಿ ಮತ ಕೋಮುಗಳ ಭೇದವು ಸಂಪೂರ್ಣವಾಗಿ ಇಲ್ಲಿ ಅಳಿಸಿ ಹೋಗಿತ್ತು. ತಾವು ಮೊದಲು ಹಿಂದೀಯರು ಎಂಬ ಭಾವನೆಯು ಸರ್ವರಲ್ಲಿಯೂ ನಲಿದಾಡುತ್ತಿತ್ತು. ಬಾಬುವಿನ ಕಳೇಬರವನ್ನು ಶ್ರೀಗಂಧದ ಚಿತೆಯ ಮೇಲೆ ಇಟ್ಟರು. ಪ್ರಮುಖ ಕಾಂಗ್ರೆಸ್ ಮುಖಂಡರು ಒಬ್ಬೊಬ್ಬರಾಗಿ ಹೂಮಾಲೆಗಳನ್ನು ಹಾಕಿದರು. ಮಿ|| ಹಾರ್ನಿಮನ್‌ರವರೂ ಮಿ|| ಮೆಹರಾಲಿಯವರೂ ಹೂಗಳನ್ನು ಎರಚಿದರು. ಹಿಂದೂ ಸ್ಮಶಾನದಲ್ಲಿ ಎಲ್ಲಾ ಮತಸ್ಥರೂ ಸೇರಿದ್ದರು. ಇದೇ ಮೊದಲು. ಶ್ರೀ|| ಜಮುನಾದಾಸ್ ದ್ವಾರಕಾದಾಸ್‌ರವರು ಬಾಬುವಿನ ಗುಣಕಥನವನ್ನು ಮಾಡಿದರು. ವಾರ್‌ಕೌನ್ಸಿಲ್ಲಿನ ಅಧ್ಯಕ್ಷರಾದ ಶ್ರೀಮತಿ ಸ್ನೇಹಲತಾದೇವಿಯವರು ಚಿತೆಗೆ ಮಂತ್ರಪೂರ್ವಕವಾಗಿ ಅಗ್ನಿಸಂಸ್ಕಾರ ಮಾಡಿದರು. ಸ್ವಲ್ಪ ಹೊತ್ತಿನಲ್ಲಿಯೇ ಬಾಬುವಿನ ಕಳೇಬರವೆಲ್ಲವೂ ಭಸ್ಮವಾಯಿತು. ಅದೇ ದಿವಸ ಸಾಯಂಕಾಲ ಚೌಪಾತಿಯಿಂದ ಶಾಂತರೀತಿಯಿಂದ ಮತ್ತೊಂದು ಮೆರವಣಿಗೆಯು ಹೊರಟು ಆಜಾದ ಮೈದಾನವನ್ನು ಮುಟ್ಟಿತು. ಅಲ್ಲಿ ಒಂದು ಬಹಿರಂಗ ಸಭೆಯು ಸೇರಿತ್ತು. ಶ್ರೀಮತಿ ಲೀಲಾವತಿ ಮುನ್ಷಿಯವರು ಅಧ್ಯಕ್ಷರಾಗಿ ಬಾಬುವಿನ ಗುಣಕಥನ ಮಾಡಿದರು. ಬೊಂಬಾಯಿಯಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು. ಶಾಲೆಗಳೆಲ್ಲಾ ಮುಚ್ಚಲ್ಪಟ್ಟಿದ್ದವು.

ತಾ. ನಾ.

ಅಹಮ್ಮದಾಬಾದಿನ ಮುನಸಿಪಾಲಿಟಿ ಶಾಲೆಗಳು ರಾಜಕೀಯಮುಖಂಡರಿಗೆ ಶಿಕ್ಷೆಯಾದ ಸಮಯದಲ್ಲಿ ಮುಚ್ಚಲ್ಪಟ್ಟಿದ್ದುವೆಂದು ಸರ್ಕಾರದವರು ತಾವು ಕೊಡುತ್ತಿದ್ದ ಗ್ರಾಂಟನ್ನು ನಿಲ್ಲಿಸಿದರು.

ಪಂಚಾಚಾರ್ಯ ಪ್ರಭಾ.

೧೯೩೦ನೇ ಡಿಸಂಬರ್ ತಾ|| ೨೯ನೇಯ ಸೋಮವಾರ.

ಸೆನ್ಸಸ್ಸೂ ವೀರಶೈವರೂ.

(ಜನಪರಿಗಣನೆ.)

ಭರತಖಂಡ ಮೊದಲಾದ ಯಾವತ್ತು ದೇಶಗಳಲ್ಲಿ ಹತ್ತುವರ್ಷಗಳಿಗೊಮ್ಮೆ ಸರಕಾರದವರು ಜನಪರಿಗಣನೆಯನ್ನು ಮಾಡುವುದು ಸರಿಯಷ್ಟೆ! ಜನಪರಿಗಣನೆಯ ಈ ಕೆಲಸವು ಮುಂದಿನ ಫೆಬ್ರವರಿ ತಿಂಗಳಲ್ಲಿ ನೆರವೇರುವುದು. ಆದಾಗ್ಯೂ ಸರಕಾರದವರು ಈಗಿನಿಂದಲೇ ಪ್ರತಿಯೊಂದು ಗ್ರಾಮದಲ್ಲಿ ಪ್ರತಿಯೊಂದು ಮನೆಯವರನ್ನು ವಿಚಾರಿಸಿ ಅವರವರ ಮತ, ಜಾತಿ, ವೃತ್ತಿ ಮೊದಲಾದವುಗಳನ್ನು ಬರೆದುಕೊಳ್ಳುವ ವ್ಯವಸ್ಥೆಯನ್ನು ಮಾಡುತ್ತಿರುವ ಸಂಗತಿಯು ಪ್ರತಿಯೊಬ್ಬರಿಗೂ ತಿಳಿದದ್ದೇ ಆಗಿದೆ. ಆದರೆ ಸೆನ್ಸಸ್ಸಿನಲ್ಲಿ ಲಿಂಗಧಾರಿಗಳು ಮತ, ಜಾತಿ, ವೃತ್ತಿ ಮೊದಲಾದವುಗಳನ್ನು ಯಾವ ರೀತಿಯಿಂದ ಬರೆಯಿಸಬೇಕೆಂದು ಅನೇಕಾನೇಕಜನರು ನಮ್ಮನ್ನು ಪತ್ರದ್ವಾರಾ ವಿಚಾರಿಸುತ್ತಿರುವರು. ಆದುದರಿಂದ ಈ ವಿಷಯವನ್ನು ಸರ್ವರೂ ತಿಳಿದು ಅದರಂತೆ ವರ್ತಿಸಲೆಂದು ಈ ಲೇಖವನ್ನು ಬರೆಯಬೇಕಾಗಬಂದಿದೆ. ಈ ಸೆನ್ಸಸ್ಸಿನ ಬಗ್ಗೆ ಅಲ್ಲಲ್ಲಿ ಕೆಲಜನ ಬಸವಪಂಥಿಗಳು, ಲಿಂಗಧಾರಿಗಳು ತಮ್ಮ ತಮ್ಮ ಒಳಪಂಗಡ (ಜಾತಿ) ಗಳ ಹೆಸರುಗಳನ್ನು ಹೇಳದೆ ಕೇವಲ "ಲಿಂಗಾಯತ" ಎಂಬ ಮತದ ಹೆಸರನ್ನೇಮಾತ್ರ ಹೇಳಬೇಕೆಂದು ಉಪದೇಶಿಸುತ್ತಿರುವರೆಂದು ತಿಳಿದುಬಂದಿದೆ. ಆದರೆ ಲಿಂಗಾಯತರು (ಬಸವಪಂಥಿಗ[illegible]ಹಾಗೆ ಹೇಳಿದರೂ ಹೇಳಬಹುದು. ಯಾಕಂದರೆ ಆ[illegible]ತ್ವವು ಜಾತಿ ಕುಲಗಳನ್ನು ಸಮೂಲವಾಗಿ ನಾಶಮಾಡುವಂಥದಾಗಿರುತ್ತದೆ. ಆದುದರಿಂದ ಹಾಗೆ ಹೇಳುವುದು ಅವರಿಗೆ ಶೋಭಿಸುತ್ತಿರಬಹುದು. ಅಸ್ತು! ಮತಸ್ಥಾಪನಾಚಾರ್ಯರ ಸಿದ್ಧಾಂತವನ್ನು ಮನ್ನಿಸುತ್ತಿರುವ ವೀರಶೈವರು ಮಾತ್ರ ಆ ಕುಲಘಾತಕಮಾರ್ಗಕ್ಕೆ ಎಂದೂ ಹೋಗಬಾರದು. ಪ್ರತಿಯೊಬ್ಬರೂ ಅನಾದಿಕಾಲದಿಂದ ಈ ಹೊತ್ತಿನವರೆಗೆ ನಡೆದುಬಂದ ತಮ್ಮ ತಮ್ಮ ಜಾತಿಗಳ ಹೆಸರುಗಳನ್ನು ಅತ್ಯಾನಂದದಿಂದ ಹೇಳಿ ಜಾತಿಧರ್ಮಪಾಲಕರೆಂಬ ಬಿರುದನ್ನು ಪಡೆದುಕೊಳ್ಳಬೇಕು. ಜಾತಿಮರ್ಯಾದೆಯು ಸಾಕ್ಷಾತ್ ಶಿವನಿಂದುಕ್ತವಾಗಿದೆ. ಇದೇ ವಿಷಯವನ್ನು ವೀರಶೈವಧರ್ಮಶಿರೋಮಣಿ ಗ್ರಂಥಕಾರರಾದ ಕೆಳದಿರಾಜ್ಯದ ಷಡಕ್ಷರಮಂತ್ರಿಗಳು ತಮ್ಮ ಗ್ರಂಥದಲ್ಲಿ—

ಶಿವೋಕ್ತಾಂ ಜಾತಿಮರ್ಯಾದಾಂ ಯೋಽತಿಕ್ರಮ್ಯ ವಿವರ್ತತೇ |
ಸ ಚಂಡಾಲ ಇತಿಜ್ಞೇಯಃ ಸರ್ವಕರ್ಮಬಹಿಷ್ಕೃತಃ ||

ಎಂಬ ಶಿವಾಗಮಪ್ರಮಾಣವನ್ನುದಾಹರಿಸಿ, ಯಾವ ವೀರಶೈವನು ಶಿವನಿಂದ ಹೇಳಲ್ಪಟ್ಟ ಜಾತಿಮರ್ಯಾದೆಯನ್ನು ಮೀರುವನೋ ಅವನು ಚಂಡಾಲನೆಂದೂ, ಸರ್ವಕರ್ಮಬಹಿಷ್ಕೃತನೆಂದೂ ಘಂಟಾಘೋಷವಾಗಿ ಸಾರಿರುವರು. ಆದುದರಿಂದ ಪ್ರತಿಯೊಬ್ಬರೂ ಈ ಶಿವಾಗಮವಾಕ್ಯವನ್ನನುಸರಿಸಿ ಅದರಂತೆ ವರ್ತಿಸಬೇಕು. ಲಿಂಗಧಾರಿಗಳಲ್ಲಿ ಪಂಚಮಸಾಲಿಯವರು, ಬಣಜಿಗರು, ಒಕ್ಕಲಿಗರು, ಕುಡಿಒಕ್ಕಲಿಗರು, ಸಜ್ಜನರು, ಗೌಡರು, ಮಲವಗೌಡರು, ಆದಿಬಣಜಿಗರು, ಜೈನಬಣಜಿಗರು, ಶಿವಶಿಂಪಿಗರು, ಜಾಡರು, ಸಾದರು, ನೊಣಬರು, ಗವಳಿಗರು (ಕವಾಡಿಗರು), ಹಟಗಾರರು, ದೇವಾಂಗದವರು, ರಡ್ಡಿಯರು, ತುರುಕಾಣ್ಯದವರು, ಚಂದ್ರಗುಂಡರು, ಲಾಳಗುಂಡರು, ನಗರ್ತರು, ನೇಕಾರರು, ಪದ್ಮಸಾಲಿಯವರು, ಹೂಗಾರರು, ಅರ್ಚಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕುರುಬರು, ಉಪ್ಪಾರರು, ಪಾತರದವರು, ಅಗಸರು, ಕ್ಷೌರಿಕರು, ಚಲವಾದಿಗಳು ಇವರೇ ಮೊದಲಾದ ಅನೇಕ ಪಂಗಡದವರಿದ್ದಾರೆ. ಈ ಜಾತಿಗಳಲ್ಲಿ ಧರ್ಮಶಾಸ್ತ್ರಾನುಸಾರವಾಗಿ ನ್ಯೂನಾಧಿಕಭಾವವಿರುತ್ತದೆ. ಬಸವಪಂಥಿಗಳ ಉಪದೇಶದಂತೆ ಜನರು ತಮ್ಮ ತಮ್ಮ ಜಾತಿಗಳನ್ನು ಬರೆಯಿಸದೆ ಕೇವಲ ಮತದ ಹೆಸರನ್ನೇ ಬರೆಯಿಸಿದರೆ ಉತ್ತಮಜಾತಿಯವರಾರೋ ಕನಿಷ್ಠಜಾತಿಯವರಾರೋ ಎನ್ನುವುದು ತಿಳಿಯದಂತಾಗಿ ಅಗಸರು, ಕ್ಷೌರಿಕರು ಮೊದಲಾದವರು ಹೋಗಿ ಬಣಜಿಗರೇ ಮೊದಲಾದವರಾಗಬಹುದು. ಬಣಜಿಗರೇ ಮೊದಲಾದವರು ಹೋಗಿ ಅಗಸ ಕ್ಷೌರಿಕರಾಗಬಹುದು. ಈ ಧರ್ಮಸೂಕ್ಷ್ಮವಿಷಯವನ್ನು ತಿಳಿಯದೆ ಯಾವುದೋ ಒಂದು ದುರಭಿಮಾನದಿಂದ ಕಡಿಮೆ ತರಗತಿಯ ಜನರು ತಾವೂ ಸಹ ಮೇಲಿನ ಪಂಗಡದವರೊಡನೆ ಕೂಡಿ ಎಲ್ಲರೂ ಸಮಾನರಾಗಬೇಕೆಂಬ ದುರಾಶೆಯಿಂದ ಮನಬಲ್ಲಂತೆ ಹೇಳಹತ್ತಿರುತ್ತಾರೆ. ಅಂಥವರ ಮಾತಿಗೆ ಯಾರೂ ಕಿವಿಗೊಡಬಾರದು. ತಂದೆಯು ಎಂಥ ಕುರೂಪಿಯಾಗಿದ್ದರೂ, ಅಂಗಹೀನನಾಗಿದ್ದರೂ, ದುರ್ವೃತ್ತಿಯುಳ್ಳವನಾಗಿದ್ದರೂ ಮಗನು ತನ್ನ ತಂದೆಯ ಹೆಸರನ್ನು ಎಷ್ಟು ವಿಶ್ವಾಸದಿಂದ ಹೇಳುತ್ತಿರುವನೋ, ಅದರಂತೆ ಒಂದೊಂದು ಜಾತಿಯವರು ತಾವು ಕಡಿಮೆ ತರಗತಿಯವರಾದಾಗ್ಯೂ ಅದನ್ನು ಲಕ್ಷ್ಯಕ್ಕೆ ತರದೆ ಹುಟ್ಟಿಸಿದ ತಂದೆಗಿಂತಲೂ ಕೋಟಿಪಾಲು ಹೆಚ್ಚಾಗಿರುವ ತಾವು ಹುಟ್ಟಿದ ಜಾತಿಯ ಹೆಸರನ್ನು ಅತ್ಯಂತ ವಿಶ್ವಾಸದಿಂದ ಹೇಳಬೇಕು. ಹೀಗೆ ಹೇಳುವುದೇ ನಿಜವಾದ ಜಾತಿಯ ಪುರುಷನ ಲಕ್ಷಣ! ಆದುದರಿಂದ ಪ್ರತಿಯೊಬ್ಬರೂ ಸೆನ್ಸಸ್ಸಿನ ಸಮಯದಲ್ಲಿ ಮೊದಲು ಮತದ ಹೆಸರನ್ನು ಬರೆಯಿಸಿ ಆ ಮೇಲೆ ತಮ್ಮ ಜಾತಿಯ ಹೆಸರನ್ನು ಬರೆಯಿಸಬೇಕು. ಬಸವಪಂಥಿಗಳು ತಮ್ಮ ಮತದ ಹೆಸರನ್ನು "ಲಿಂಗಾಯತ" ಎಂದು ಬರೆಯಿಸಬಹುದು. ಆದರೆ ಆಚಾರ್ಯಪಂಥದವರುಮಾತ್ರ ತಮ್ಮ ಮತದ ಹೆಸರನ್ನು "ವೀರಶೈವ" ಎಂದು ಬರೆಯಿಸಬೇಕು. ಈ ರೀತಿಯಾಗಿ ಬರೆಯಿಸುವುದೇ ವೇದಮಾರ್ಗಾವಲಂಬಿಗಳ ಧರ್ಮವಾಗಿರುತ್ತದೆ. ಆದುದರಿಂದ ವೀರಶೈವಮತಾನುಯಾಯಿಗಳು ಈ ಧರ್ಮಸೂಕ್ಷ್ಮವನ್ನು ತಿಳಿದುಕೊಂಡು ಬಸವಪಂಥಿಗಳ ಬಲೆಯೊಳಗೆ ಬೀಳದೆ, ತಮ್ಮ ತಮ್ಮ ಜಾತಿಯ ಹೆಸರನ್ನು ಬರೆಯಿಸಿ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ಈ ವಾರದ ಸವಿಸ್ತಾ ಪತ್ರಿಕೆಯಲ್ಲಿ ಪದ್ಧತಿಯ ಪ್ರಕಾರ 1931 ನೆಯ ವರ್ಷದ ಕ್ಯಾಲೆಂಡರನ್ನು ನಮ್ಮ ವಾಚಕರಿಗೆ ಹಂಚಿರುತ್ತೇವೆ.

ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಮುಂದಿನ ತಿಂಗಳು 16 ನೆಯ ತಾರೀಖಿನ ದಿವಸ ಲಂಡನ್ನಿನಿಂದ ಹೊರಟು 29 ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದಿಳಿಯುವರೆಂದು ತಿಳಿದುಬರುತ್ತದೆ.

ರಾಜಧಾನಿಯಲ್ಲಿರುವ ಶ್ರೀ ಸತ್ಯನಾರಾಯಣ ಪರಿಮಳಫ್ಯಾಕ್ಟರಿಯ ಪ್ರೊಪ್ರೈಟರಾದ ಮ|| ರಾ|| ಎಂ. ವಿ. ನಾರಾಯಣರಾಯರವರು ಕಳುಹಿಸಿರುವ ಅನೇಕ ದೇಶಭಕ್ತರ ಚಿತ್ರಗಳಿಂದೊಡಗೂಡಿದ 1931 ನೆಯ ಇಸವಿಯ ಮನೋಹರವಾದ ಕ್ಯಾಲೆಂಡರನ್ನು ಅತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಮೈಸೂರು ಹೈಕೋರ್ಟ್ ಚೀಫ್‌ಜಸ್ಟಿಸ್ ರಾಜಧರ್ಮಪ್ರವೀಣ ಮಿ|| ಸಿ. ಎಸ್. ದೊರೆಸ್ವಾಮಯ್ಯರವರು ಜನವರಿ 2 ನೆಯ ತಾರೀಖಿನಿಂದ 15 ದಿವಸಗಳವರೆಗೆ ಪ್ರಿವಿಲೇಜ್‌ರಜಾ ಪಡೆದಿರುವುದರಿಂದ ಶ್ರೀಮನ್ಮಹಾರಾಜರವರು ಇವರ ಸ್ಥಾನದಲ್ಲಿ ಮಿ|| ಜಸ್ಟಿಸ್ ವಿ. ಜಿ. ರಾಮರಾವ್ ಇವರನ್ನು ನಿಯಮಿಸಿರುವರೆಂದು ತಿಳಿದುಬರುತ್ತದೆ.

ಬೆಂಗಳೂರು ದಂಡಿನಲ್ಲಿ ರಾಮುಡು, ಕರೀಂ, ಮುನಿಸ್ವಾಮಿ ಎಂಬೀ ಮೂವರು ಕಿಟಕಿಯ ಮೂಲಕ ಮೊರಾರ್ಜಿಯವರ ನಗಗಳ ಅಂಗಡಿಯೊಳಗೆ ಇಳಿದು ಸುಮಾರು 7,000 ರೂಪಾಯಿಗಳ ಆಭರಣಾದಿಗಳನ್ನು ಕಳುವುಮಾಡಿದರೆಂದು ಅಲ್ಲಿಯ ಮುಫಸಿಫ್ ಮ್ಯಾಜಿಸ್ಟ್ರೇಟರು ಆ ಮೂವರು ಜನರಿಗೂ ಎರಡೆರಡು ವರುಷಗಳ ಶಿಕ್ಷೆಯನ್ನು ವಿಧಿಸಿದರು.

ಮರಣಕ್ಕೊಳಗಾಗಿರುವ ಸೊಲ್ಲಾಪುರದ ನಾಲ್ವರ ವಿಷಯದಲ್ಲಿ ಮೈಸೂರು ಸಂಸ್ಥಾನದ ವ್ಯಾಪಾರಿಮಂಡಲಿಯ ಸೆಕ್ರೆಟರಿಗಳಾದ ಮ|| ರಾ|| ಕೆ. ಶ್ಯಾಮಯ್ಯರ್‌ರವರು ಸಭೆಯ ಪರವಾಗಿ ಘನಹೊಂದಿದ ವೈಸ್‌ರಾಯರಿಗೆ ತಮಗಿರುವ ಉಚ್ಚಾಧಿಕಾರದಿಂದ ಈ ಶಿಕ್ಷೆಯನ್ನು ತಪ್ಪಿಸಬೇಕೆಂದು ತಂತಿಯನ್ನು ಕಳುಹಿಸಿದ್ದಾರೆಂದು ತಿಳಿದುಬರುತ್ತದೆ.

ಹಿಂದೂಸ್ಥಾನದ ಮುಖ್ಯಸೇನಾಪತಿಗಳಾದ ಸರ್ ಫಿಲಿಪ್‌ಚಟ್‌ವುಡ್‌ರವರು ಇದೇ ತಿಂಗಳು 21ನೆಯ ತಾ|| ದಿವಸ ಪತ್ನೀ ಸಮೇತರಾಗಿ ಮೈಸೂರಿಗೆ ಬಂದಿಳಿದರು. ಅವರ ಗೌರವಾರ್ಥವಾಗಿ 17 ತೋಪುಗಳು ಹಾರಿಸಲ್ಪಟ್ಟವು. ಕನ್ನಂಬಾಡಿಕಟ್ಟೆ, ಶ್ರೀರಂಗಪಟ್ಟಣಗಳನ್ನು ನೋಡಿ 23 ನೆಯ ತಾರೀಖಿನ ದಿವಸ ಕಾರಾಪುರಕ್ಕೆ ಪ್ರಯಾಣಮಾಡಿದರು.

ಅಮೇರಿಕಾ ಖಂಡದಲ್ಲಿ ಪ್ರೆಸಿಡೆಂಟರಾಗಿದ್ದ ವಿಲ್ಸನ್‌ರವರ ಅಳಿಯಂದಿರೂ, ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪ್ರೊಫೇಸರರೂ ಆದ ಮಿ|| ಸೇಯರ್‌ರವರು ಈ ತಿಂಗಳು 19 ನೆಯ ತಾರೀಖಿನ ದಿವಸ ಮಹಾರಾಜಕಾಲೇಜಿನಲ್ಲಿ ಡಾ|| ಜೆ. ರಾಬಿನ್ಸನ್‌ರವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದಾಗ ಅಮೇರಿಕಾಖಂಡವು ಭಾರತೀಯರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪೂರ್ಣ ಸಹಾನುಭೂತಿಯನ್ನು ತೋರಿಸುವುದೆಂದು ಹೇಳಿದರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಬೆಂಗಳೂರು ಆನರರಿ ಮ್ಯಾಜಿಸ್ಟ್ರೇಟರೂ ಆದ ಮ|| ರಾ|| ನೀಲಗಿರಿ ಜಿ. ಸಂಜೀವಯ್ಯನವರು ಕಂಟೋನ್ಮೆಂಟಿನ ಮೆ|| ಪೀಟರ್ಸ್ ಅಂಡ್ ಕಂಪನಿಯವರಿಗೆ 1929 ನೆಯ ಜನವರಿಯಲ್ಲಿ 4907 ರೂಪಾಯಿಗಳಿಗೆ ಬ್ಯಾಂಕಿನಲ್ಲಿ ಹಣವಿಲ್ಲದೆ ಸುಮ್ಮ ಸುಮ್ಮನೆ ಚೆಕ್ಕು ಬರೆದು ಕೊಟ್ಟ ಮೋಸಮಾಡಿದರೆಂಬ ಅಪರಾಧದ ಮೇಲೆ ಕಂಟೋನ್ಮೆಂಟ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಇವರನ್ನು 3 ತಿಂಗಳ ಕಠಿಣಶಿಕ್ಷೆಗೆ ಗುರಿಮಾಡಿದರು. ಮೇಲಿನ ಕೋರ್ಟಿಗೆ ಅಪೀಲಾಗಿದೆ.

ವರ್ತಮಾನಸಂಗ್ರಹ.

ಮಹಾತ್ಮಾ ಗಾಂಧಿಯವರ ಪುತ್ರರಾದ ಮ|| ರಾ|| ರಾಮದಾಸಗಾಂಧಿಯವರು ರಾಜದ್ರೋಹಕರವಾದ ಭಾಷಣ ಮಾಡಿದರೆಂದು ಪುನಃ ದಸ್ತಗಿರಿಮಾಡಲ್ಪಟ್ಟಿರುವರು.

ಈ ತಿಂಗಳು 25 ನೆಯ ತಾರೀಖಿನದಿವಸ ಸಿರಸಿ ಪಟ್ಟಣದಲ್ಲಿ ಪೋಲೀಸರು ಪ್ರಭಾತಫೇರಿಯವರ ಮೇಲೆ ಲಾಠೀಪ್ರಯೋಗಮಾಡಲು ಹನ್ನೆರಡುಜನರಿಗೆ ಗಾಯಗಳಾಗಿವೆಯಂತೆ!

ಜರ್ಮನಿಯಲ್ಲಿ ಒಬ್ಬ ಮನುಷ್ಯನು ಶೀಶೆಯೊಳಗೆ ಮಳಲು ಮತ್ತು ನೀರನ್ನು ತುಂಬಿ ವಿದ್ಯುಚ್ಛಕ್ತಿಯ ಪ್ರಯೋಗದಿಂದ ಬಂಗಾರವನ್ನು ಮಾಡಿ ಮಾರಿದನೆಂದು 18 ತಿಂಗಳುಗಳ ಕಠಿಣಶಿಕ್ಷೆಗೆ ಗುರಿಯಾದನು.

ಈ ತಿಂಗಳು 23 ನೆಯ ತಾರೀಖಿನ ದಿವಸ ಪಂಡಿತ ಮದನಮೋಹನಮಾಲವೀಯರವರು ಯಾವ ಕರಾರುಗಳೂ ಇಲ್ಲದೆ ಬಂಧವಿಮೋಚನೆ ಮಾಡಲ್ಪಟ್ಟಿರುವರೆಂದೂ, ಅವರ ದೇಹಸ್ಥಿತಿಯು ಇನ್ನೂ ಸುಧಾರಿಸಿಲ್ಲವೆಂದೂ ತಿಳಿದುಬರುತ್ತದೆ.

ಹೊಸ ದಿಲ್ಲಿಯಲ್ಲಿ 24 ಜನ ರಾಜಕೀಯ ಸ್ತ್ರೀ ಖೈದಿಗಳನ್ನು "ಸಿ" ಕ್ಲಾಸಿಗೆ ಸೇರಿಸಿದುದರಿಂದ ಆ ಜೈಲಿನಲ್ಲಿರುವ ರಾಜಕೀಯ ಖೈದಿಗಳು ಉಪವಾಸವ್ರತವನ್ನು ಮಾಡಲು ಪ್ರಾರಂಭಿಸಿರುವರು. ಮಿ|| ಸೇನಗುಪ್ತರು ಮತ್ತು ಇವರ ಪತ್ನಿಯವರು ಸಹ ಉಪವಾಸವ್ರತವನ್ನು ಕೈಕೊಂಡಿರುವರಂತೆ!

ಈ ತಿಂಗಳು 23 ನೆಯ ತಾರೀಖಿನ ದಿವಸ ವೈಸರಾಯರವರು ಹೊಸದಾಗಿ ಎರಡು ಆರ್ಡಿನೆನ್ಸ್‌ಗಳನ್ನು ಹೊರಡಿಸಿರುವರು. ಒಂದನೆಯದು ಅಪ್ಪಣೆಯಿಲ್ಲದೆ ಹೊರಡುವ ಕೆಲವು ವರ್ತಮಾನ ಪತ್ರಿಕೆಗಳನ್ನೂ, ಪ್ರೆಸ್ಸನ್ನೂ ಪ್ರತಿಬಂಧಮಾಡುವುದಕ್ಕೂ, ಎರಡನೆಯದು ಕರನಿರಾಕರಣೆಯನ್ನು ನಿಲ್ಲಿಸುವುದಕ್ಕೂ ಹೊರಡಿಸಲ್ಪಟ್ಟಿವೆ.

ಬೊಂಬಾಯಿಯ ಹೈಕೋರ್ಟ್ ನ್ಯಾಯಾಧೀಶರು ಕ್ರಿ. ಲಾ. ಅ. ಆಕ್ಟ್ 17 ನೆಯ ಸೆಕ್ಷನ್ ಪ್ರಕಾರ ಮಾಡಿರುವ ತೀರ್ಪುಗಳನ್ನು ಪುನರ್ವಿಮರ್ಶೆಮಾಡಬೇಕೆಂದು ಎಲ್ಲಾ ಸೆಷನ್ಸ್‌ಜಡ್ಜರಿಗೂ ಕಳುಹಿಸಿರುವ ಸರ್ಕ್ಯುಲರ್ ಪ್ರಕಾರ ಬೊಂಬಾಯಿಯ ಸುಪ್ರಸಿದ್ಧ ದೇಶಭಕ್ತ ಕೆ. ಎಫ್. ನರಿಮನ್‌ರವರ ಶಿಕ್ಷೆಯ ಪುನರ್ವಿಮರ್ಶೆಯು ಮುಂದಿನ ತಿಂಗಳಲ್ಲಿ ನಡೆಯುವುದಾಗಿದೆ.

ನೈನಿಜೈಲಿನಲ್ಲಿ ಪಂಡಿತ ಜವಾಹರಲಾಲ್ ಮೊದಲಾದ ಮುಖಂಡರು ಕೈಕೊಂಡಿದ್ದ ಮೂರು ದಿವಸದ ಉಪವಾಸವ್ರತವು ಪೂರೈಸಿದ ದಿವಸ ಅಲಹಾಬಾದಿನ ಸಹಸ್ರಾರು ಜನರು ಪಟ್ಟಣದಲ್ಲಿ ಮೆರವಣಿಗೆ ಹೊರಟು ಜೈಲಿನ ಮುಂದೆ ಬಂದು ಜಯಘೋಷಮಾಡಿದರು. ಪಂಡಿತ ಜವಾಹರಲಾಲ್ ಮೊದಲಾದವರು ಉಪವಾಸವ್ರತವನ್ನು ಮಾಡಿದರೂ ವಿನೋದದಿಂದಿರುವರಂತೆ!

ಈ ತಿಂಗಳು 20 ನೆಯ ತಾರೀಖಿನ ದಿವಸ ಬೆಂಗಾಲ್ ನಾರೀ ಸತ್ಯಾಗ್ರಹಸಮಿತಿಯವರು ಮಿಸೆಸ್ ಮೋತೀಲಾಲ್‌ನೆಹರೂರವರಿಗೆ ಕಲ್ಕತ್ತಾ ಆಲ್ಬರ್ಟ್‌ಹಾಲಿನಲ್ಲಿ ಒಂದು ಮಾನಪತ್ರವನ್ನರ್ಪಿಸಿದರು. ಆಗ ಮಿಸೆಸ್ ನೆಹರೂರವರು ಹೇಳಿದುದೇನೆಂದರೆ:—"ಭರತಖಂಡದ ತರುಣರೂ ಮತ್ತು ವೀರಪುರುಷರೂ ಜೈಲಿನಲ್ಲಿ ನರಳುತ್ತಿರುವಾಗ ಸಿನೆಮಾ ಮತ್ತು ನಾಟಕಮಂದಿರಗಳಿಗೆ ಹೋಗಿ ವಿನೋದಪಡುವುದೂ, ಸೋಮಾರಿಗಳಾಗಿ ಮನೆಯಲ್ಲಿ ಕುಳಿತುಕೊಳ್ಳುವುದೂ ಭಾರತೀಯ ಮಹಿಳೆಯರಿಗೆ ವಿಹಿತವಾದುದಲ್ಲ. ದೇಶಭಕ್ತರಲ್ಲಿ ಅಗ್ರೇಸರರೆಂದು ಜಗದ್ವಿಖ್ಯಾತರಾದ ದಿವಂಗತ ದೇಶಬಂಧುದಾಸರವರ ಈ ಮುಖ್ಯಪಟ್ಟಣದಲ್ಲಿ ಖಾದಿಯ ಪ್ರಚಾರವು ಸಮರ್ಪಕವಾಗಿಲ್ಲದಿರುವುದು ತುಂಬಾ ಅವಮಾನಕರವಾದುದೇ ಸರಿ! ಮಹಿಳೆಯರ ಸಹಾಯವಿಲ್ಲದೆ ಭರತಖಂಡವು ಸ್ವರಾಜ್ಯವನ್ನು ಸಂಪಾದಿಸುವುದು ಶಕ್ಯವಲ್ಲ. ಅಸಾಧಾರಣವಾದ ಧೈರ್ಯವನ್ನೂ, ಸ್ಥೈರ್ಯವನ್ನೂ ವೃದ್ಧಿಪಡಿಸಬೇಕು. ಜಾಗ್ರತ್ಸ್ವಪ್ನಗಳಲ್ಲಿಯೂ ಸ್ವರಾಜ್ಯದ ವಿಚಾರವೇ ನೆಲೆಗೊಂಡಿರಬೇಕು. ಪಂ|| ಜವಾಹರಲಾಲ್‌ರವರು ಉಪವಾಸವ್ರತವನ್ನು ಕೈಕೊಂಡರೆಂಬುದನ್ನು ಕೇಳಿ ಜನನಿಯಾದ ನನ್ನ ಹೊಟ್ಟೆಯುರಿದರೂ ವ್ಯಸನವೆನಿಸಲಿಲ್ಲ. ಜವಾಹರಲಾಲನಂಥ ಮಗನನ್ನು ಹೆತ್ತಿರುವುದಕ್ಕೆ ತುಂಬಾ ಅಭಿಮಾನಪಡುತ್ತೇನೆ. ಕೇವಲ ಜನರೂ ಸಹ ಖಾದಿಯ ಬಟ್ಟೆಯನ್ನೇ ಧರಿಸಬೇಕೆಂದು ಪ್ರತಿಜ್ಞೆಮಾಡಬೇಕು."

ಇಂಡಿಯಾ ಸರ್ಕಾರದವರು ಶ್ರೀಯುತ ವಿಠ್ಠಲಭಾಯಿ ಪಟೇಲರವರ ಪ್ರಕೃತಿಯ ವಿಷಯವಾಗಿ ಒಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿರುವರು. ಅದು ವಿವರಿಸುವುದೇನೆಂದರೆ:—

ಮಿ|| ವಿಠ್ಠಲಭಾಯಿಪಟೇಲರವರು ಕಳೆದ ಆಗಸ್ಟ್ ತಿಂಗಳಲ್ಲಿ ಕ್ರಿ. ಲಾ. ಅ. ಆಕ್ಟ್‌ಪ್ರಕಾರ ಆರುತಿಂಗಳುಗಳ ಸಾದಾ ಸಜೆಗೆ ಗುರಿಮಾಡಲ್ಪಟ್ಟು ಅಂಬಾಲಾ ಡಿಸ್ಟ್ರಿಕ್ಟ್ ಜೈಲಿನಲ್ಲಿಡಲ್ಪಟ್ಟರು. ಅಲ್ಲಿ ಅವರಿಗೆ ಬೇಕಾದ ಅನುಕೂಲ್ಯಗಳೆಲ್ಲಾ ಕಲ್ಪಿಸಲ್ಪಟ್ಟಿದ್ದುವು. ಅವರು ಜೈಲಿಗೆ ಬಂದಮೇಲೆ ಅವರ ಪ್ರಕೃತಿಯು ಸ್ವಲ್ಪ ವ್ಯತ್ಯಾಸವನ್ನು ಹೊಂದಿ ಅವರ ಭಾರವು ಕಡಿಮೆಯಾಯಿತು. ಪಂಜಾಬಿನ ಗಾಳಿಯು ಅವರಿಗೆ ಸೇರದ್ದರಿಂದ ನವಂಬರ್ 22 ನೆಯ ತಾರೀಖಿನ ದಿವಸ ಲಾಹೋರಿನ ಮುಖ್ಯ ಡಾಕ್ಟರುಗಳಿಂದ ಪರೀಕ್ಷಿಸಲ್ಪಟ್ಟರು. ಆ ಡಾಕ್ಟರರು ಅವರಿಗೆ ಪ್ರಾಣಾಪಾಯವೇನೂ ಇಲ್ಲವೆಂದೂ, ಅವರು ಶಿಕ್ಷಿಸಲ್ಪಟ್ಟಿರುವುದರಿಂದ ಆರೋಗ್ಯವು ಕೆಟ್ಟಿಲ್ಲವೆಂದೂ, ಅವರು ಪ್ರಯಾಣಮಾಡುವುದರಿಂದ ಏನೂ ಅಪಾಯವಿಲ್ಲವೆಂದು ಡಾಕ್ಟರರು ಭರವಸೆಕೊಟ್ಟದ್ದರಿಂದ ಅವರನ್ನು ಅಂಬಾಲಾಜೈಲಿನಿಂದ ಕೊಯಮುತ್ತೂರು ಜೈಲಿಗೆ ತಂದಿರುವರೆಂದೂ, ಪಂಜಾಬಿನ ಡಾಕ್ಟರರ ಸಲಹೆಗಳನ್ನು ಮದರಾಸ್ ಸರ್ಕಾರದವರು ಆಚರಣೆಗೆ ತಂದು ಅವರ ಆರೋಗ್ಯಸ್ಥಿತಿಯನ್ನು ತಮ್ಮ ಸರ್ಕಾರಕ್ಕೆ ತಿಳಿಸುತ್ತಿರಲು ಮದರಾಸ್ ಸರ್ಕಾರದವರಿಗೆ ಸೂಚಿಸಿರುವದಾಗಿಯೆಂದೂ ಪ್ರಕಟಿಸಿದ್ದಾರೆ. ಮತ್ತು ಕೊಯಮುತ್ತೂರು ಡಾಕ್ಟರರು ಅವರನ್ನು ಪರೀಕ್ಷಿಸಿ ಪ್ರಾಣಾಪಾಯವೇನೂ ಇಲ್ಲವೆಂದು ತಿಳುಹಿಸಿರುವುದಾಗಿಯೂ, ಅವರಿಗೆ "ಎ" ಕ್ಲಾಸ್ ಖೈದಿಗಳಿಗೆ ಕಲ್ಪಿಸಿರುವ ಎಲ್ಲಾ ಅನುಕೂಲ್ಯಗಳನ್ನೂ ಒದಗಿಸಿರುವುದಲ್ಲದೆ ಒಬ್ಬ ಗುಜರಾಥಿ ಅಡಿಗೆಯವನನ್ನೂ, ಇನ್ನೊಬ್ಬ ಸೇವಕನನ್ನು ನೇಮಿಸಿರುವುದಾಗಿಯೂ ತಿಳುಹಿಸುತ್ತಾರೆ. ಈ ತಿಂಗಳು 25 ನೆಯ ತಾರೀಖಿನದಿವಸ ಮಿ|| ವಿಠ್ಠಲಭಾಯಿಪಟೇಲರವರ ಖಾಸಗಿ ಡಾಕ್ಟರರಾದ ಮಿ|| ಪುರುಷೋತ್ತಮದಾಸ್ ಪಟೇಲರವರೂ, ಡಾ|| ರಾಜಬಳ್ಳಿ, ವಿ. ಪಟೇಲರವರೂ, ಮಿ|| ಸಿ. ವಿ. ವೆಂಕಟರಮಣ ಅಯ್ಯಂಗಾರ್ರವರ ಜೊತೆಯಲ್ಲಿ ಜೈಲಿಗೆ ಹೋಗಿ ಶ್ರೀಯುತ ವಿ. ಜೆ. ಪಟೇಲರವರನ್ನು ಸಂದರ್ಶಿಸಿ ಆ ದಿವಸ ಸಾಯಂಕಾಲವೇ ಅವರನ್ನು ಪರೀಕ್ಷಿಸಿದರೆಂದು ಪ್ರಸಿದ್ಧವಾಗಿದೆ.

ಎಮ್ಮೆಯ ಹೊಟ್ಟೆಯಿಂದ ಆನೆಯ ಮರಿ.

ಶಿವಮೊಗ್ಗ ಡಿ|| ಹೊನ್ನಾಳಿ ತಾ|| ಸೊಳಲಂಕೆಹಳ್ಳಿ ಗ್ರಾಮದ ಪಟೇಲ್ ಮ|| ರಾ|| ಹನುಮಂತಪ್ಪನವರ ಮನೆಯಲ್ಲಿ ಎಮ್ಮೆಯ ಹೊಟ್ಟೆಯಿಂದ ತಾ|| 21-10-30 ನೆಯ ಮಂಗಳವಾರ ರಾತ್ರಿ 9 ಗಂಟೆಯ ಸಮಯದಲ್ಲಿ ಒಂದು ಆನೆಯ ಮರಿಯು ಹುಟ್ಟಿತು. ಆ ಮರಿಗೆ ಸೊಂಡಿಲು, ಕಿವಿಗಳು, ಕುಂಭಸ್ಥಳ, ಬಾಲ ಇವುಗಳು ಆನೆಯಂತೆಯೇ ಇದ್ದುವು. ಕಾಲುಗಳಲ್ಲಿ ಮಾತ್ರ ಎಮ್ಮೆಯಂತೆ ಗೊರಸುಗಳಿದ್ದುವು. ಈ ವಿಚಿತ್ರಸೃಷ್ಟಿಯನ್ನು ಈ ಗ್ರಾಮದವರೂ ಹಾಗೂ ಇತರ ಗ್ರಾಮದವರೂ ನೋಡಿ ಆಶ್ಚರ್ಯಪಟ್ಟರು. ಕರುವು ಒಂದು ದಿನಮಾತ್ರ ಇದ್ದು ಸತ್ತುಹೋಯಿತು. ಭಗವತ್ಸೃಷ್ಟಿಯು ವಿಚಿತ್ರವಾದುದು!

H. Channabasaiah.

ರೌಂಡ್‌ಟೇಬಲ್ ಕಾನ್ಫರೆನ್ಸಿನ ಸಮಾಚಾರ.

ಹಿಂದೂ ಮಹಮ್ಮದೀಯರ ಸಮಸ್ಯೆಯು. ಸ್ತ್ರೀಯರ ಪ್ರಶಂಸನೀಯಭಾಷಣ.

ಚಿಕ್ಕಸಮಾಜಗಳ ವಿಷಯವನ್ನು ವಿಮರ್ಶಿಸಲು ನೇಮಕವಾಗಿರುವ ಸಮಿತಿಯು ಇದೇ ತಿಂಗಳು 23 ನೆಯ ತಾರೀಖಿನ ದಿವಸ ಕೂಡಿತು. ಸಾಮಾನ್ಯ ವಿಷಯಗಳು ಚರ್ಚಿಸಲ್ಪಟ್ಟರೂ ಆ ದಿವಸ ಯಾವ ನಿರ್ಣಯವೂ ಆಗಲಿಲ್ಲ. ಈ ಕಮಿಟಿಯು ಕ್ರಿಸ್‌ಮಸ್ ಸಲುವಾಗಿ ಈ ತಿಂಗಳು 31 ನೆಯ ತಾರೀಖಿಗೆ ಇಡಲ್ಪಟ್ಟಿದೆ.

23 ನೆಯ ತಾರೀಖಿನ ದಿವಸ ನೆರೆದ ಸಭೆಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿ ಭಾಷಣಮಾಡಿದರು. ಅದರ ಸಾರಾಂಶವೇನೆಂದರೆ:—"ಈ ಕಮಿಟಿಯ ಕಾರ್ಯವು ಎಷ್ಟು ಮಹತ್ವದ್ದೆಂಬುದನ್ನು ನಾನು ಹೇಳುವ ಆವಶ್ಯಕತೆ ಇಲ್ಲ. ಚಿಕ್ಕಸಮಾಜಗಳ ಪ್ರಶ್ನೆಯನ್ನು ವಿಮರ್ಶೆಮಾಡಿ ನಿರ್ಣಯಕ್ಕೆ ಬರುವುದು ಭಾರತೀಯರ ರಾಜಕೀಯ ಅಭಿವೃದ್ಧಿಗೆ ಅತ್ಯಾವಶ್ಯಕವೆಂಬುದು ಆಂಗ್ಲೇಯರ ಅಭಿಪ್ರಾಯವು ಮಾತ್ರವೇ ಅಲ್ಲದೆ, ಪ್ರತಿಯೊಬ್ಬ ಸುಧಾರಿಸಿದ ಭಾರತೀಯನ ಅಭಿಪ್ರಾಯವೂ ಆಗಿದೆ. ಭಾರತೀಯರ ರಾಜ್ಯಾಂಗರಚನೆಗೆ ಅತ್ಯವಶ್ಯಕವಾಗಿರುವ ಈ ವಿಷಯವನ್ನು ನೀವು ನಿಮ್ಮೊಳಗೇನೆ ನಿರ್ಣಯಿಸಿಕೊಳ್ಳಬೇಕಲ್ಲದೆ ಇತರ ಅಧಿಕಾರಿಗಳು ನಿರ್ಣಯಿಸಬೇಕೆಂದು ನಿರೀಕ್ಷಿಸುವುದು ಪ್ರಯೋಜನವಿಲ್ಲ. ನಿಮ್ಮ ಬುದ್ಧಿಸಾಹಸಗಳನ್ನೆಲ್ಲಾ ಖರ್ಚುಮಾಡಿ ಪರಸ್ಪರ ಸೌಹಾರ್ದವುಂಟಾಗುವ ಹಾಗೆ ನಿರ್ಣಯಿಸುವಿರೆಂದು ನಾನು ಒತ್ತಿಹೇಳಬೇಕಾದುದಿಲ್ಲ. ಅನೈಕಮತ್ಯವು ಕೊನೆಗಂಡು ಏಕಮತ್ಯವೂ ಮತ್ತು ಶಾಂತಿಯೂ ಆಗುವ ಹಾಗೆ ನಿರ್ಣಯಿಸಿ ನಿಮ್ಮ ವಾಚ್ಯಾಲಗಳನ್ನು ಹೇಳಬೇಕಾಗಿ ಬೇಡುತ್ತೇನೆ."

ಅನಂತರ ಶ್ರೀಮತಿ ಬೇಗಂಷಹನವಾ[illegible] ಭಾಷಣಮಾಡಿದ್ದೇನೆಂದರೆ:—

"ಬಂಧುಗಳೇ! ಹೃದಯದ್ರಾವಕಗಳಾದ [illegible]ಗಳನ್ನು ಮಾಡುವ ಮತ್ತು ಏಕ್ಯರಾಗಬೇಕೆಂದು ಮೊರೆಯಿಡುವ ಕಾಲವು ಪೂರೈಸಿದೆ. ಕಾರ್ಯಕ್ಷೇತ್ರದಲ್ಲಿ ಮಹತ್ವದ ಸೂಚನೆಗಳನ್ನು ಕೊಡುವುದರ ಮೂಲಕ ಒಂದು ಮಹಾಕಾರ್ಯವನ್ನು ಮಾಡುವ ಕಾಲವು ಒದಗಿದೆ. ಈಗ ನಿಮ್ಮ ನಿಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಒಂದು ನಿರ್ಣಯಕ್ಕೆ ಬಾರದಿದ್ದರೆ ನೀವು ಏಕ್ಯರಾಗುವ ಸುಸಮಯವು ಎಂದು ಒದಗುವುದು? ನಿಮ್ಮ ದೇಶದ ಸಲುವಾಗಿ ಅಪರಿಮಿತವಾದ ಸ್ವಾರ್ಥತ್ಯಾಗವನ್ನು ಮಾಡಿ ನಿಮ್ಮ ದೇಶದಲ್ಲಿ ನೀವು ಸ್ವಾತಂತ್ರ್ಯದಿಂದಿರುವ ಒಂದು ಭವಿಷ್ಯವನ್ನು ನಿರ್ಣಯಿಸಲು 7000 ಮೈಲುಗಳ ದೂರದಿಂದ ಬಂದಿರುವಿರಿ. ಅಂಥ ಮಹತ್ವಾಕಾಂಕ್ಷೆಯನ್ನು ಈಡೇರಿಸುವ ಸುಸಮಯವು ಈಗ ಒದಗಿದೆ. ಇಂಥ ಕಾಲದಲ್ಲಿ ನೀವು ಅನೈಕಮತ್ಯದಿಂದಿರುವುದು ಯೋಗ್ಯವಾದುದೇ? ಎಂಬ ಪ್ರಶ್ನೆಯನ್ನು ನೀವೇ ಕೇಳಿಕೊಳ್ಳಿರಿ. ನೀವು ಯಾವ ಮಹತ್ವದ ಉದ್ದೇಶದಿಂದ ಇಲ್ಲಿಗೆ ಆಗಮಿಸಿದರೋ ಅದರ ಜಯಾಪಜಯಗಳು ಹಿಂದೂಮಹಮ್ಮದೀಯರ ಏಕಮತ್ಯವನ್ನವಲಂಬಿಸಿವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕೆಂದು ಬೇಡುತ್ತೇನೆ. ಏಕಮತ್ಯದಿಂದ ಜಯವೂ ಅನೈಕಮತ್ಯದಿಂದ ವಿನಾಶವೂ ಆಗುವುದೆಂಬುದನ್ನು ಜ್ಞಾಪಕದಲ್ಲಿಡಬೇಕು. ನೀವೆಲ್ಲರೂ ಹಿಂದೂ ಮಾತೆಯ ಗರ್ಭದಿಂದ ಉದ್ಭವಿಸಿ ಒಂದೇ ಸ್ಥಳದಲ್ಲಿದ್ದು ಒಂದೇ ಜೀವನಮಾನವನ್ನು ನಡೆಯಿಸುವ ಸಹೋದರರು.

ನನ್ನ ಹಿಂದೂ ಸಹೋದರರಿಗೆ ಒಂದು ಮಾತು ಹೇಳುವುದೇನೆಂದರೆ:—ನಿಮ್ಮ ಮಹಮ್ಮದೀಯ ಸಹೋದರರ ವಿಷಯದಲ್ಲಿ ಔದಾರ್ಯವನ್ನು ತೋರಿಸಿರಿ. ಯಾವುದಾದರೂ ಒಂದು ಪಂಗಡಕ್ಕೆ ಅನುಕೂಲವಾದರೆ ಅದನ್ನು ಅನುಭವಿಸುವವರು ಭಾರತೀಯರೆಂಬುದನ್ನು ವಿವೇಚಿಸಿರಿ. ಔದಾರ್ಯವೆಂದರೆ ಕೃತಜ್ಞತೆ. ವಿಶ್ವಾಸದಿಂದ ವಿಶ್ವಾಸವು ಹುಟ್ಟುವುದು. ನೀವು ವಿಶ್ವಾಸದಿಂದ ಅವರಿಗೆ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟರೆ ಅವರು ಪ್ರತಿಯಾಗಿ ನಿಮ್ಮಲ್ಲಿ ವಿಶ್ವಾಸವನ್ನೂ ಕೃತಜ್ಞತೆಯನ್ನೂ ವ್ಯಕ್ತಪಡಿಸದಿರರು. ಮಹಮ್ಮದೀಯರನ್ನು ನಿಮ್ಮ ಸಹೋದರರೆಂದು ನಂಬಿದರೆ ಪರಸ್ಪರ ಸೌಹಾರ್ದವೂ ವಿಶ್ವಾಸವೂ ನೆಲೆಗೊಳ್ಳುವುದರಲ್ಲಿ ಸಂಶಯವಿಲ್ಲ. ನಿಮ್ಮಲ್ಲಿ ವಿಶೇಷ ಜನರು ಉದಾರಿಗಳಾಗಿರುವಿರಿ. ನನ್ನ ಮಹಮ್ಮದೀಯ ಸಹೋದರರಿಗೆ ಅತ್ಯಂತ ದೈನ್ಯದಿಂದ ಮೊರೆಯಿಡುವುದೇನೆಂದರೆ:—ಬಲುಮೆಯಿಂದ ತೆಗೆದುಕೊಳ್ಳಲೇಬೇಕೆಂದು ನೀವು ಹಟಹಿಡಿಯಕೂಡದು. ನಿಮ್ಮ ಮಾತೃಭೂಮಿಯ ಸ್ವಾತಂತ್ರ್ಯದ ಪ್ರಶ್ನೆಯು ಮುಖ್ಯಧ್ಯೇಯವಾಗಿರುವಾಗ ಸ್ವಲ್ಪಹೆಚ್ಚುಕಡಿಮೆ ಸುಧಾರಿಸಿಕೊಳ್ಳಬೇಕು. ಹಿಂದೂ ಸಹೋದರರು ಔದಾರ್ಯವನ್ನು ತೋರಿಸದಿದ್ದರೆ, ಆ ಸದ್ಗುಣವು ಮಹಮ್ಮದೀಯರ ಸ್ವಭಾವವಾಗಿದೆ ಎಂಬುದನ್ನು ಪ್ರಕಟಿಸಬೇಕು. ನಿಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲಾ ಬದಿಗೊತ್ತಬೇಕೆಂದು ಭಾರತೀಯ ಮಹಿಳೆಯರ ಪರವಾಗಿ ಪ್ರಾರ್ಥಿಸುತ್ತೇನೆ. ನಿಮ್ಮ [illegible]ದಲ್ಲಿ ಪೂರ್ಣಸಹಾನುಭೂತಿಯುಳ್ಳವರೂ, ಮತ್ತು ನಿಮ್ಮ ತೊಡಕುಗಳನ್ನು ಪರಿಹರಿಸಲು ನೆರವಾಗುವ ಅಪೇಕ್ಷೆಯುಳ್ಳವರೂ ಆದ ಮುಖ್ಯಮಂತ್ರಿಗಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿರುವರು. ಇಂಥ ಸುಸಂಧಿಯು ಎಂದೂ ಒದಗಲಾರದು. ಆದಪ್ರಯುಕ್ತ ಹಿಂದೂಸ್ಥಾನದ ಮಿತ್ರರಿಗೂ, ಮುಖ್ಯಮಂತ್ರಿಗಳಿಗೂ, ಭಾರತೀಯ ಮಹಿಳೆಯರಿಗೂ ನಿರಾಶೆಯನ್ನುಂಟುಮಾಡಬೇಡಿರೆಂಬುದೇ ನನ್ನ ಪ್ರಾರ್ಥನೆ."

ಅಡ್ಡಪಲ್ಲಕ್ಕಿಮಹೋತ್ಸವ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಮಹೋತ್ಸವವು ಈ ಮೊದಲು ಪ್ರಸಿದ್ಧವಾದಂತೆ ಈ ತಿಂಗಳು ೨೨ ನೆಯ ತಾರೀಖಿನ ದಿವಸ ಬಳ್ಳಾರಿ ಪಟ್ಟಣದಲ್ಲಿ ಅಡ್ಡಪಲ್ಲಕ್ಕಿ ಮೊದಲಾದ ೨೨ ಬಿರುದಾವಳಿಗಳೊಡನೆ ಅತ್ಯಂತ ವೈಭವದಿಂದ ನೆರವೇರಿತೆಂದೂ, ಈ ಮಹೋತ್ಸವಕ್ಕೆ ೩೦-೪೦ ಸಾವಿರದ ವರೆಗೆ ಜನರು ಸಮ್ಮಿಲಿತರಾಗಿದ್ದರೆಂದೂ, ಬಳ್ಳಾರಿ ಟವನ್ನಿನ ವೀರಶೈವರು ಯಾವತ್ತು ವ್ಯವಸ್ಥೆಯನ್ನು ಸರಿಯಾಗಿ ಮಾಡಿದ್ದರೆಂದೂ ತಿಳಿದುಬರುತ್ತದೆ. ಯತಿಕುಲಚಕ್ರವರ್ತಿಗಳೆಂದು ಲೋಕದಲ್ಲೆಲ್ಲಾ ವಿಖ್ಯಾತಿಗೊಂಡು ಮೆರೆಯುತ್ತಿರುವ ಶ್ರೀ ಸಿದ್ಧಲಿಂಗಶಿವಾಚಾರ್ಯ ಗುರುಸಾರ್ವಭೌಮರ ಮಹೋತ್ಸವವನ್ನು ತ್ರಿಕರಣಪೂರ್ವಕವಾದ ಭಕ್ತಿಯಿಂದ ನೆರವೇರಿಸಿದ ಬಳ್ಳಾರಿಯ ಭಕ್ತರೇ ಧನ್ಯರು! ಇವರ ಜನ್ಮವೇ ಸಾರ್ಥಕವು!! ಜಗದಾಚಾರ್ಯರು ಈ ಸದ್ಭಕ್ತಶಿಖಾಮಣಿಗಳಿಗೆ ಆಯುರಾರೋಗ್ಯಭಾಗ್ಯಾದಿಸಕಲಸಂಪತ್ತುಗಳನ್ನೀಯಲೆಂದು ಹಾರೈಸುತ್ತೇವೆ.

ಮೈಸೂರು ವಿದ್ಯಾಖಾತೆಯ ಆಕ್ಟಿಂಗ್ ಡೈರೆಕ್ಟರ್ ಪ್ರೊ|| ವಾಡಿಯಾರವರು ಢಾಕಾದಲ್ಲಿ ನೆರವೇರಿದ ತತ್ವಸಭೆಯ ಅಧ್ಯಕ್ಷರಾಗಿ ಮಾಡಿದ ಭಾಷಣದ ಒಂದು ಭಾಗ.

ಮಹಾತ್ಮಾ ಗಾಂಧಿಯವರ ತತ್ವಶಾಸ್ತ್ರ

ಭೂಮಂಡಲದಲ್ಲಿ ತತ್ವಶಾಸ್ತ್ರದ ಅಭ್ಯಾಸಕ್ಕೆ ಭರತಖಂಡದಲ್ಲಿರುವಷ್ಟು ಅನುಕೂಲ್ಯಗಳು ಮತ್ತಾವ ದೇಶದಲ್ಲಿಯೂ ಇಲ್ಲ. ಏಕೆಂದರೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಶಾಸ್ತ್ರವು ಜೊತೆಯಾಗಿ ಅಭ್ಯಸಿಸಲ್ಪಡುತ್ತದೆ. ಈ ಉಭಯ ತತ್ವಶಾಸ್ತ್ರಗಳ ಸಮನ್ವಯವು ಭಾರತೀಯರಲ್ಲಿ ಸುಪ್ರಸಿದ್ಧರೆನಿಸಿರುವ ಮಹಾತ್ಮಾ ಗಾಂಧಿಯವರಲ್ಲಿ ಕಂಡುಬರುವುದು. ಮಹಾತ್ಮಾ ಗಾಂಧಿಯವರು ತತ್ವಶಾಸ್ತ್ರಜ್ಞರ ವರ್ಗಕ್ಕೆ ಸೇರದೇ ಇರಬಹುದು. ಆದರೆ ವಿಚಾರಶಕ್ತಿಯೂ ಸತ್ಯಸಂಶೋಧನೆಯೂ ಯಾವ ವ್ಯಕ್ತಿಯ ಗುತ್ತಿಗೆಯೂ ಅಲ್ಲ. ಸಾವಿರಾರು ವರ್ಷಗಳ ತರುವಾಯ ಕೇವಲ ಧರ್ಮಶಾಸ್ತ್ರಗಳ ಮಾತನ್ನು ಹೇಳದೆ ತನ್ನ ಸ್ವಾನುಭವದಿಂದ ತತ್ವಶಾಸ್ತ್ರವನ್ನು ಬೋಧಿಸುವ ಮಹಾನುಭಾವನು ಸದ್ಯಃ ಹಿಂದೂಸ್ಥಾನದಲ್ಲಿ ಅವತರಿಸಿರುವನು. ಮಹಾತ್ಮಾ ಗಾಂಧಿಯವರ ತತ್ವಶಾಸ್ತ್ರವನ್ನು ವಿವರಿಸುವುದು ಸುಲಭವಾದ ಕೆಲಸವಲ್ಲ.

ಏಕೆಂದರೆ ಅವನು ರಾಜನೀತಿಜ್ಞನಾಗಿರುವನಲ್ಲದೆ ಜಗತ್ತಿಗೆ ಒಬ್ಬ ದೊಡ್ಡ ಬೋಧಕನಾಗಿರುವನು. ಜಗತ್ತಿನ ಇತಿಹಾಸದಲ್ಲಿ ಮಹಾತ್ಮಾ ಗಾಂಧಿಯವರಂಥ ಜ್ಞಾನಿಗಳು ತಮ್ಮ ಜನಾಂಗದ ಲೌಕಿಕಕಾರ್ಯಗಳಲ್ಲಿ ತೊಡಗಿದವರು ಯಾರೂ ಇಲ್ಲ. ಜಗತ್ತಿನಲ್ಲಿ ರಾಜಕೀಯ ವಿಷಯವು ಬಹು ಪ್ರಾಮುಖ್ಯವಾಗಿರುವುದರಿಂದ ಮಹಾತ್ಮಾ ಗಾಂಧಿಯಂಥ ಜ್ಞಾನಿಗಳು ಪ್ರವೇಶಿಸುವುದು ಅತ್ಯವಶ್ಯಕವಾಗಿದೆ. ರಾಜನೀತಿಯು ನೀತಿಮಾರ್ಗವನ್ನವಲಂಬಿಸುವಹಾಗೆ ಮಾಡಬೇಕೆಂದು ಅನೇಕ ರಾಜತಂತ್ರವಿಶಾರದರು ಪ್ರಯತ್ನಪಟ್ಟರು. ಆದರೆ ರಾಜಕೀಯ ವಿಷಯವು ನೀತಿಯುಕ್ತವಾಗಿರುವುದು ಅಕ್ಷರಶಃ ನಿಜವಾಗಿಬೇಕೆಂಬುದು ಮಹಾತ್ಮರಧ್ಯೇಯವಾಗಿದೆ. ಮಹಾತ್ಮಾ ಗಾಂಧಿಯವರ ಜೀವನಸಾರವೆಲ್ಲಾ ವಿಶಾಲದೃಷ್ಟಿಯು ಸ್ವಾಭಾವಿಕವಾದ ಗುಣವಾಗಿದೆ. ಹಿಂದೆ ಒಂದುಸಾರೆ ಮಹಾತ್ಮಾ ಗಾಂಧಿಯವರು ತಾವು ಕ್ರೈಸ್ತಧರ್ಮವನ್ನವಲಂಬಿಸಬೇಕೇ? ಅಥವಾ ಹಿಂದೂಧರ್ಮದಲ್ಲಿಯೇ ಇರಬೇಕೇ? ಎಂದು ಸಂಶಯಾವಿಷ್ಟರಾಗಿದ್ದರು. ಕಡೆಗೆ ಹಿಂದೂಧರ್ಮದಲ್ಲಿಯೇ ಇರಬೇಕೆಂದು ನಿರ್ಣಯಿಸಿದರು. ಆದರೆ ಅವರು ಅನುಸರಿಸಿದ ಹಿಂದೂಧರ್ಮವು ತಮ್ಮ ಸ್ವಂತ ವಿಚಾರವೆಂಬ ಮೂಸಿಯಲ್ಲಿ ಕುದಿದು ಪರಿಶುದ್ಧವಾದುದು. ಭಗವದ್ಗೀತೆಯು ಯಾವಾಗಲೂ ಅವರನ್ನಗಲುವದಿಲ್ಲ. ಬೈಬಲ್ಲಿನ ಸಿದ್ಧಾಂತವಂತೂ ಅವರ ಹೃದಯದಲ್ಲಿ ಸಮಾವೇಶವಾಗಿದೆ. ಆದುದರಿಂದಲೇ ಮಹಾತ್ಮಾ ಗಾಂಧಿಯವರು ತನ್ನ ಧರ್ಮವು ದೇಶಕೋಶಗಳಪರಿಮಿತಿಯನ್ನು ಮೀರಿದುದು ಎಂದು ಹೇಳಿದರು.

ಹಿಂದೂಧರ್ಮದ ಅರ್ಥವನ್ನು ವಿವರಿಸುವುದು ಬಹು ಕ್ಲಿಷ್ಟವಾದ ಕೆಲಸವಾಗಿದೆ. ಸೌಜನ್ಯಮಾರ್ಗದಿಂದ ಸತ್ಯವನ್ನು ಸಂಶೋಧಿಸುವುದೇ ಹಿಂದೂಧರ್ಮವೆಂದು ಮಹಾತ್ಮಾ ಗಾಂಧಿಯವರ ಮತವು. ಜಗತ್ತಿನ ಯಾವ ಭಾಗದಿಂದ ಸತ್ಯಪ್ರವಾಹವು ಬಂದರೂ ಅದನ್ನಂಗೀಕರಿಸುವ ಮನೋವೃತ್ತಿಯುಳ್ಳ ಮನುಷ್ಯನು ತನ್ನ ವಿಚಾರಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸುವನೆಂಬುದು ಸ್ವತಃ ಸಿದ್ಧವಾಗುವುದು. "ಅತ್ಯಂತ ಪವಿತ್ರವಾದ ಧರ್ಮದ ಹೆಸರಿನಿಂದ ಅದರಲ್ಲಿ ಸಮಾವೇಶವಾಗಿದ್ದರೂ ಅದನ್ನು ನಿರ್ದೋಷವೆಂದು ಹೇಳಲಾರೆನು. ನನ್ನ ವಿಚಾರಶಕ್ತಿಗೆ ಅನ್ಯಾಯವೆನಿಸಿದ್ದರೆ ಪುರಾತನಗಳಾದ ಧರ್ಮಶಾಸ್ತ್ರಗಳನ್ನು ಸಹ ನಾನು ಒಪ್ಪಲಾರೆನು." ಎಂದು ಮಹಾತ್ಮಾ ಗಾಂಧಿಯವರು ಹೇಳಿರುವರು. ಹೀಗೆ ಅಭಿಪ್ರಾಯಪಡುವುದು ಭರತಖಂಡದ ಇತಿಹಾಸದಲ್ಲಿ ಹೊಸದು. ಅವರು ದುರಭಿಮಾನದಿಂದ ಹೀಗೆ ಹೇಳದೆ ಕೇವಲ ಸತ್ಯಸಂಶೋಧನೆಯ ಭಕ್ತರಾಗಿ ನಮ್ರತೆಯಿಂದ ತಮ್ಮ ಹೃದಯವನ್ನು ಬಿಚ್ಚಿಡುವರು. ವೇದಗಳಂತೆಯೇ ಬೈಬಲ್ಲನ್ನೂ ಖುರಾನನ್ನೂ, ಒಂದೇ ದೃಷ್ಟಿಯಿಂದ ನೋಡುವ ವಿಶಾಲಹೃದಯರು. ಒಂದು ಧರ್ಮವನ್ನನುಸರಿಸುವುದರಿಂದ ಶ್ರೇಷ್ಠಕಾರ್ಯವು ಪ್ರತಿಫಲಿಸಲು ಅವಕಾಶವಿಲ್ಲದೆ ಇದ್ದರೆ ಅದು ಕೇವಲ ನಿಷ್ಪ್ರಯೋಜನವು. ಯಾವಕಾರ್ಯವನ್ನಾದರೂ ಧೈರ್ಯದಿಂದ ನಿರ್ವಹಿಸುವ ಶಕ್ತಿಯು ಇರುವುದರಿಂದಲೇ ಮಹಾತ್ಮಾ ಗಾಂಧಿಯವರು ಜಗತ್ತಿನ ಇತಿಹಾಸದಲ್ಲಿ ಶ್ರೇಷ್ಠರಾದ ಕರ್ಮಯೋಗಿಗಳಾಗಿದ್ದಾರೆ.

ಭಯವನ್ನು ತಾವು ಸ್ವತಃ ಜಯಿಸಿ ಇತರರೂ ಅದನ್ನು ಜಯಿಸುವಹಾಗೆ ಕಲಿಸಿರುವುದೇ ಮಹಾತ್ಮಾ ಗಾಂಧಿಯವರು ಭರತಖಂಡಕ್ಕೆ ಮಾಡಿರುವ ಮಹೋಪಕಾರವೆಂದು ಹೇಳಬಹುದಾಗಿದೆ. ಪೋಲೀಸರ ಭಯ, ಸೈನಿಕರ ಭಯ, ಲೋಕಾಪವಾದದ ಭಯ, ಜಾತಿಕಟ್ಟಳೆಗಳ ಭಯ, ಭೂತಗಳ ಭಯ ಹೀಗೆ ಸರ್ವವಿಧದಿಂದಲೂ ನಿಶ್ಶಕ್ತರಾದ ಭಾರತೀಯರಲ್ಲಿ ಈ ಭಯವನ್ನು ಮೂಲೋತ್ಪಾಟನ ಮಾಡಿರುವುದು ಸಾಮಾನ್ಯವಾದ ಕೆಲಸವಲ್ಲ. ನಮ್ಮ ರಾಜಕೀಯಕಾರ್ಯವೂ, ಸಮಾಜ ಸುಧಾರಣೆಯೂ ಭಯದಿಂದ ಸತ್ವಶೂನ್ಯವಾಗಿವೆ. ಇಲ್ಲಿಯವರೆಗೂ ನಮ್ಮ ಸುಧಾರಣೆಗಳೆಲ್ಲಾ ಕೇವಲ ನುಡಿಯಲ್ಲೇ ಇದ್ದುವು. ವೇದಾಂತಿಗಳು ಹಿಂದೂಧರ್ಮವು ಬಹು ವಿಶಾಲವಾದುದೆಂದು ಭಾಷಣ ಮಾಡಬಲ್ಲರೇ ಹೊರತು ಅದನ್ನು ಅನುಷ್ಠಾನದಲ್ಲಿ ತರಲರಿಯರು. ಇವಕ್ಕೆಲ್ಲಾ ಭಯವೇ ಮೂಲಕಾರಣವಾಗಿದೆ. ಭಯವನ್ನು ಜಯಿಸಿದಹೊರತು ಯಾವ ಮನುಷ್ಯನೂ ಅಭಿವೃದ್ಧಿಯನ್ನು ಹೊಂದಲಾರನು. ದರೋಡೆಗಾರರೂ, ಕಳ್ಳರೂ ಮೊದಲಾದ ಅಪರಾಧಿಗಳು [illegible] ದ್ದು ಕೇವಲ ಧೈರ್ಯಶಾಲಿಗಳೆನಿಸಿರುವರು. ಆದರೆ ಅದು ನಿರ್ಭಯವಲ್ಲ. ಅರಿಷಡ್ವರ್ಗಗಳನ್ನು ಜಯಿಸಿ ಆತ್ಮವನ್ನು ಸನ್ಮಾರ್ಗದಲ್ಲಿ ತಿದ್ದಿ ಅದನ್ನು ಪ್ರಕಾಶಪಡಿಸುವುದು ಧೈರ್ಯದ ಲಕ್ಷಣ. ಮಹಾತ್ಮಾ ಗಾಂಧಿಯವರು ಸ್ವತಃ ಹೇಳುವುದೇನೆಂದರೆ:—ಸತ್ಯವನ್ನು ಸ್ಥಿರಪಡಿಸುವುದಕ್ಕೋಸ್ಕರ ಇತರರನ್ನು ಕೊಲ್ಲದೆ ಆತ್ಮಯಜ್ಞವನ್ನು ಮಾಡುವುದು ಸೌಜನ್ಯದ ಲಕ್ಷಣವಾಗಿದೆ. ಈ ನೀತಿಯನ್ನು ಅಕ್ಷರಶಃ ಅನುಷ್ಠಾನದಲ್ಲಿ ತಂದಿರುವರು. ಅಪರಿಮಿತ ಪ್ರೇಮಪೂರಿತವಾದ ಅದರ ಹೃದಯವೂ, ಸಂತೋಷದಾಯಕವಾದ ಅವರ ಮಂದಸ್ಮಿತವೂ ಕೋಟ್ಯಂತರಜನರ ಮನಸ್ಸನ್ನು ಆಕರ್ಷಿಸುವುದರಿಂದ ಅವರನ್ನು ಸಜೀವ ಸೂಜಿಗಲ್ಲೆಂದು ಹೇಳಬಹುದಾಗಿದೆ. ನಿರ್ದುಷ್ಟವಾದ ಸರಳತ್ವವು ಅವರ ಸ್ವಭಾವವಾಗಿರುವುದರಿಂದ ಅವರ ವಿಷಯದಲ್ಲಿ ಯಾರೂ ಸಂಶಯ ಪಡುವಹಾಗಿಲ್ಲ. ಅವರ ಸಾನ್ನಿಧ್ಯದಲ್ಲಿ ಧರ್ಮವೂ, ಭಗವದ್ಭಕ್ತಿಯೂ ಘಮಘಮಿಸುತ್ತಿರುವುವು. ಪರಮಾತ್ಮನ ಕಾಂತಿಯು ಅವರ ಮುಖದಲ್ಲಿ ಹೊಳೆಯುವುದು ಮತ್ತು ಹೃದಯದಲ್ಲಿ ವಾಸವಾಗಿರುವುದು. ಸನಾತನಹಿಂದೂವೆಂಬುದಾಗಿ ಹೇಳಿಸಿಕೊಳ್ಳಲು ಅವರಿಗೆ ಬಹು ಆಶೆ. ಹಿಂದೂಧರ್ಮಶಾಸ್ತ್ರಗಳನ್ನು ಒಪ್ಪುವುದು, ವೇದದಲ್ಲಿ ಹೇಳಿರುವಂತೆ ವರ್ಣಾಶ್ರಮಗಳನ್ನು ನಂಬುವುದು, ಗೋರಕ್ಷಣ ಮಾಡುವುದು ಇವುಗಳು ಮಹಾತ್ಮರು ನಂಬಿರುವ ಹಿಂದೂಧರ್ಮದ ತಿರುಳಾಗಿವೆ. ಗೋವನ್ನು ಗೌರವಿಸುವುದು ಅವರ ಜಗತ್ತಿನ ಪ್ರಾಣಿಗಳನ್ನು ಗೌರವಿಸುವ ಚಿಹ್ನವಾಗಿದೆ. ಹಸುವಿನ ಮೂಲಕ ಉಪನಿಷತ್ತುಗಳಲ್ಲಿ ಹೇಳಿರುವ ಜೀವಿಗಳ ಏಕತ್ವವನ್ನು ತಿಳಿದುಕೊಂಡಿರುವರು. ಮನುಷ್ಯನು ಹಸುವಿನ ಮೂಲಕ ಸರ್ವಪ್ರಾಣಿಗಳಲ್ಲಿಯೂ ಒಂದೇ ಆತ್ಮವು ಪ್ರಜ್ವಲಿಸುವುದೆಂಬುದನ್ನು ತಿಳಿದುಕೊಳ್ಳಬೇಕೆನ್ನುವುದೇ ಮಹಾತ್ಮರ ಅಭಿಪ್ರಾಯ.

ಅವರ ನೀತಿ ಸಂಸ್ಥಾಪನೆಯು, ಸತ್ಯ ಮತ್ತು ಪ್ರಾಣಿದಯೆ ಇವುಗಳ ಮೇಲೆ ನಿಂತಿದೆ ಪ್ರಾಣಿಗಳನ್ನು ಪ್ರೀತಿಸುವುದು ಅವರ ಹುಟ್ಟುಗುಣವಾಗಿದೆ ಬಂಧುಗಳಿಗೂ, ಪರಕೀಯರಿಗೂ, ನಮ್ಮ ದೇಶದವರಿಗೂ, ಪರದೇಶೀಯರಿಗೂ, ಬಿಳಿಯ ಜನರಿಗೂ, ಕಪ್ಪು ಜನರಿಗೂ, ಹಿಂದೂ, ಮಹಮ್ಮದೀಯ, ಕ್ರೈಸ್ತ, ಪಾರ್ಶಿ, ಎಹೂದಿ ಇವರಲ್ಲಿ ಯಾವ ಭೇದವೂ ತೋರುವುದಿಲ್ಲ. ನನ್ನ ಹೃದಯವು ಅಂಥ ವ್ಯತ್ಯಾಸವನ್ನು ಎಂದೂ ಒಪ್ಪುವುದಿಲ್ಲವೆಂದು ಧೈರ್ಯವಾಗಿ ಹೇಳಬಲ್ಲೆನು. ಅಹಿಂಸಾ ಮತ್ತು ಬ್ರಹ್ಮಚರ್ಯೆಯನ್ನು ವೃದ್ಧಿಪಡಿಸಲು ಈಗಲೂ ನಿತ್ಯ ಪ್ರಯತ್ನಿಸುತ್ತಿರುವೆನೆಂದು ಮಹಾತ್ಮರು ಹೇಳಿರುವರು. ಪ್ರತಿಮನುಷ್ಯನಲ್ಲಿಯೂ ದೈವತ್ವವನ್ನು ಕಾಣುವವರಾಗಿದ್ದಾರೆ. ಆದುದರಿಂದಲೇ ಮಹಾತ್ಮರು ಕೆಡುಕಿಗೂ ಮತ್ತು ಕೆಡುಕುಮಾಡುವ ಮನುಷ್ಯನಿಗೂ ವ್ಯತ್ಯಾಸಮಾಡುವ ನೂತನತತ್ವವನ್ನು ಕಂಡುಹಿಡಿದಿರುವರು. ಜಲಿಯನ್‌ವಾಲಾಬಾಗಿನಲ್ಲಿ ಕೊಲೆಯನ್ನು ಮಾಡಿದ ಜನರಲ್‌ಡೈಯರನನ್ನು ಕುರಿತು ಅವನು ಮಾಡಿದ ನೀಚಕೆಲಸವನ್ನು ದ್ವೇಷಿಸುವೆನು. ಆದರೆ ಅವನು ಕಾಯಿಲೆ ಬಿದ್ದರೆ ಅವನ ಪೋಷಣೆಯನ್ನು ಮಾಡುತ್ತೇನೆಂದು ಹೇಳಿರುವರು. ಕೆಟ್ಟಕಾರ್ಯವು ಎಲ್ಲಿ ಕಂಡುಬಂದರೂ ಅದನ್ನು ದ್ವೇಷಿಸಬೇಕೇ ಹೊರತು ಆ ಕೆಟ್ಟಕಾರ್ಯವನ್ನಾಚರಿಸಿದ ವ್ಯಕ್ತಿಯನ್ನು ದ್ವೇಷಿಸಬಾರದು. ಏಕೆಂದರೆ ಪರಮಾತ್ಮನು ಸರ್ವವ್ಯಾಪಿಯಾಗಿದ್ದಾನೆ; ಆ ನೀಚಕೃತಿಯನ್ನು ಮಾಡಿದ ಮನುಷ್ಯನಲ್ಲಿಯೂ ಅವನ ಬೆಳಗು ಹೊಳೆಯುತ್ತಿರುವುದು. ಅಹಿಂಸಾ ತತ್ವವು ಬೌದ್ಧ ಮತ್ತು ಜೈನಧರ್ಮಗಳು ಹುಟ್ಟಿದಂದಿನಿಂದಲೂ ಇದ್ದುದಾದರೂ ಆ ತತ್ವವನ್ನು ಜಗತ್ತಿನಲ್ಲಿ ಮಹಾತ್ಮರಂತೆ ಮತ್ತಾರೂ ಆಚರಣೆಗೆ ತಂದಿರುವುದಿಲ್ಲವೆಂದು ಹೇಳಬಹುದು. ಪ್ರಬಲ ಯುದ್ಧಗಳಿಂದ ಹಣ್ಣಾಗಿರುವ ಪ್ರಪಂಚಕ್ಕೆ ಮಹಾತ್ಮ ಗಾಂಧಿಯವರ ಈ ನೂತನಾಯುಧವು ನವಚೈತನ್ಯವನ್ನುಂಟುಮಾಡುವಹಾಗಿದೆ. ಜಗತ್ತಿನಲ್ಲಿರುವ ಯಾವತ್ತು ರಾಷ್ಟ್ರಗಳು ಸತ್ಯಾಗ್ರಹ ತತ್ವವನ್ನವಲಂಬಿಸಿದರೆ ಯಾವ ಯುದ್ಧಕ್ಕೂ ಅವಕಾಶವೇ ಇರುವುದಿಲ್ಲ. ಮಹಾತ್ಮಾ ಗಾಂಧಿಯವರ ಸತ್ಯಾಗ್ರಹವು ರಾಷ್ಟ್ರಗಳ ಸಂಸ್ಥೆ (League of Nations) ಗೆ ತುಂಬಾ ಸಹಕಾರಿಯಾಗುವುದು.

(ಸಶೇಷ.)

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಾದರೂ ಕಾಮೋತ್ಪತ್ತಿ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[22]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಗ್ಗೆದ ಬೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಮಿತಮುಟ್ಟು ಜರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ಪಾಮಿರಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಅನೇಕ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗ್ರಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಬೇಕೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಜೊಸ್ಸು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥ ಕಠಿನವಾದ ಆಹಾರವನ್ನಾದರೂ ಜೀರ್ಣೋಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರದೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂಧುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಹೊಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಜಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಡಾಕ್ಟರಿಗೂ ವೈದ್ಯರುಗಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[37] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸದೆ, ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ರಜಿ] **ವಜ್ರಾಂಗ ಸುಂದರಪಾಕ.** [ಸ್ಪರ್ಧೆ

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ, ತಿಳುಪುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಾದರೂ ತರುಣರಂತೆ ಕಾಮೋತ್ಪತ್ತಿ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೪೮ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[23]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ನೋವು, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಿಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕಾಣಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿವಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೆ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[21] **ಮಲೇರಿಯಾನ ಕಂಪೆನಿ,** ನಂಬ್ರ 21 ಪಂಪನಕಟ್ಟೆ, **ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಾಕೃತ ಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸಧ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಸುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿ[illegible] ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜ್ಜ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

(Registered Trade Mark)

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[24] ಪೋ. ಬಾ. ೫೧೦. ಮದರಾಸು.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	....	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	....	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	....	....	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	....	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	....	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	....	....	೧ ಆಣೆ
ಬಸವಾದಿ ಪ್ರಮಥಸ್ವರ್ದರ್ಶನ ೩ನೆಯ ಆವೃತ್ತಿ	....	....	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	....	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	....	೨ ಆಣೆ
ವೀರಶೈವಮತಮೀಮಾಂಸಾ	....	....	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	....	....	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	....	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ಸಷ್ಟೀಕರಣ ೨ನೆಯ ಆವೃತ್ತಿ	....	....	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	....	....	೪ ಆಣೆ
ವೈದಿಕವಾಙ್ಮಯರಹಸ್ಯ	....	....	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	....	....	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಸದಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	....	....	೮ ಆಣೆ
ಬಸವಪ್ರಾಂತ ದಿವಾಕರ ೨ನೆಯ ಆವೃತ್ತಿ	....	....	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	....	....	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ ([illegible]ರವಾದ ಮುದ್ರಣ)	....	....	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವ[illegible] ಸಂಸ್ಕೃತ	....	....	೧ ರೂ.
ಸಚಿತ್ರ ರೇಣುಕವಿಜಯ	....	....	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	....	....	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	....	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ಕಳೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ತವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! ಸಾಲವು ದೊರಕುವುದು !! ಅಪೂರ್ವಲಾಭ !!!

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಏಜೆನ್ಸೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರೆಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮೀಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (5)

ನೊ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ಜನವರಿ ೧೯೩೧ [ಸಂಚಿಕೆ ೩೬

ಸಿದ್ಧಾಂತಸಾರಾವಳಿ.

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಅದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ.

ಆಗಮಪರಿಜ್ಞಾನ.

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೧ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೂರು ಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಬೊಂಬಾಯಿಯಲ್ಲಿ ಪೋಲೀಸರ ಲಾಠೀಪ್ರಯೋಗ.

ಬೊಂಬಾಯಿಯಲ್ಲಿ ಈ ತಿಂಗಳು 1 ನೆಯ ತಾರೀಖಿನ ದಿವಸ ಸಂಗ್ರಾಮಸಮಿತಿಯವರು ಭರತಖಂಡದ ಸ್ವಾತಂತ್ರ್ಯ ದಿವಸದ ಮಹೋತ್ಸವವನ್ನು ಆಚರಿಸಿದರು. ಆ ಪಟ್ಟಣದ ಬೇರೆ ಬೇರೆ 30 ಸ್ಥಳಗಳಲ್ಲಿ ಈ ಮಹೋತ್ಸವವು ಆಚರಿಸಲ್ಪಟ್ಟಿರುಹುದು. ಲಕ್ಷೋಪಲಕ್ಷ ಜನರು ಈ ಕಾರ್ಯದಲ್ಲಿ ಭಾಗಿಗಳಾಗಿದ್ದರು. ಕಾಲಬಾದೇವಿರೋಡಿನಲ್ಲಿ ವಿದೇಶೀವಸ್ತ್ರ ಬಹಿಷ್ಕಾರಕ್ಕಾಗಿ ಬಾಬುಗಣುವು ಆತ್ಮವನ್ನು ಸಮರ್ಪಿಸಿದ ಸ್ಥಳದಲ್ಲಿ ಧ್ವಜಾರೋಹಣಮಾಡುತ್ತಿದ್ದ ಗುಂಪನ್ನು ಚದುರಿಸಬೇಕೆಂದು ಪೋಲೀಸರು ಗುಂಡುಹಾರಿಸಿದರು. ಏಳು ಜನರಿಗೆ ಗಾಯಗಳಾಗಿ ಫ್ರೀಅಂಬುಲೆನ್ಸಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಆ ಪೈಕಿ ಮಿ|| ಲಕ್ಷ್ಮಣದಾಸ್ ಈಶ್ವರದಾಸ್ ಎಂಬ ಸಿಕ್ ಸ್ವಯಂಸೇವಕನು ಹೊಟ್ಟೆಯೊಳಗೆ ಗುಂಡುಹೋಗಿದ್ದುದರಿಂದ ಅವಸಾನವನ್ನೈದಿದನು. ಲಾಠೀಪ್ರಯೋಗದಿಂದುಂಟಾದ ಗಾಯಗಳಿಂದ ಮಿ|| ಗೋವರ್ಧನದಾಸ್ ಗೋವಿಂದಜೀ ವೇಧಾ ಎಂಬ ಸ್ವಯಂಸೇವಕನು ಮೃತಪಟ್ಟನು. ಚೌಪಾತಿಯ ಹತ್ತಿರ ಒಂದು ತಾರುಕಂಬದಮೇಲೆ ಧ್ವಜಾರೋಹಣ ಮಾಡಿದರು. 500 ಜನ ಪೋಲೀಸರು ಲಾಠಿಗಳನ್ನು ಹಿಡಿದುಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ನಿಂತಿದ್ದರು. ಸೈನ್ಯದ ಪಡೆಯೊಂದು ಅಲ್ಲಿಗೆ ಬಂದಿತು. ಪೋಲೀಸು ಸೂಪರಿಂಟೆಂಡೆಂಟ್ ಮಿ|| ಗೈಡರವರು ಪೋಲೀಸರ ಸಹಾಯದಿಂದ ಜನರಗುಂಪಿನಮೇಲೆ ಲಾಠೀಪ್ರಯೋಗ ಮಾಡಿಸಿ ಚದುರಿಸಿದರು. ಆಗ 25 ಜನರಿಗೆ ಪೆಟ್ಟಾಯಿತು. ಸ್ಯಾಂಡಸ್ಟ್ ಬ್ರಿಡ್ಜಿನಹತ್ತರ ಸಾಗುತ್ತಿದ್ದ ಕಾಂಗ್ರೆಸ್ ಸ್ವಯಂಸೇವಕರ ಉತ್ಸವವನ್ನೂ ಚದುರಿಸಿದರು.

ಬೊಂಬಾಯಿಯ ಭೂಲೇಶ್ವರದ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಮಿ|| ಶಿವಲಾಲ್‌ಪಾಟ್ವಾರಿಯವರು "ವಂದೇಮಾತರಂ" ಎಂಬ ಜಯಘೋಷ ಮಾಡುತ್ತ ರಾಷ್ಟ್ರಧ್ವಜಾರೋಹಣ ಮಾಡಿದರು. ಪೋಲೀಸರು ಜನರನ್ನು ಚದುರಿಸಲು ಪ್ರಯತ್ನಿಸಿದಾಗ ಜನರು ಪೋಲೀಸರಮೇಲೆ ಕಲ್ಲುಗಳನ್ನೆಸೆದುದರಿಂದ ಪೋಲೀಸರು ಗುಂಡುಹಾರಿಸಿದರೆಂದು ವರ್ತ[illegible]ದೆ. ಕಲ್ಲಿನಿಂದ ಹೊಡೆದುದರಿಂದ 4 ಜನ ಸಾರ್ಜೆಂ[illegible] 20 ಜನ ಕಾನ್ಸ್ಟೇಬಲರಿಗೂ ಗಾಯಗಳಾಗಿವೆಯಂತೆ!

ಕ್ಲೇರ್‌ರೋಡಿನಲ್ಲಿ ಜಮಾಯತ್ ಉಲ್‌ಉಲೆಮದ 50ಜನ ಸ್ವಯಂಸೇವಕರು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ನಾಗಪಾಡದಲ್ಲಿ ಸಭೆಸೇರಿಸಲು ಉತ್ಸವಪೂರ್ವಕ ಹೊರಟರು. ಆದರೆ ಪೋಲೀಸರು ಲಾಠೀಪ್ರಯೋಗಮಾಡಿ ಅವರನ್ನು ಚದುರಿಸಿದರು. ಆಗ ನಾಲ್ವರಿಗೆ ಗಾಯಗಳಾದುವು. ಪರೇಲ್, ದಾದರ್, ಬಾಯಕಳ್ ಮೊದಲಾದ ಸ್ಥಳಗಳಲ್ಲಿ ಸೇರಿದ ಸಭೆಗಳು ನಿರಾತಂಕವಾಗಿ ಜರುಗಿದುವು. ಪೋಲೀಸರು ಮಾಂಡವಿಯಲ್ಲಿ ಕಾಂಗ್ರೆಸ್ಸಿನ ಸರ್ವಾಧಿಕಾರಿಯನ್ನು ದಸ್ತಗಿರಿಮಾಡಿ ಜನರಮೇಲೆ ಲಾಠೀಪ್ರಯೋಗಮಾಡಿದರು. 2800 ಜನ ಪೋಲೀಸರೂ, 150 ಜನ ಮಿಲಿಟರಿಯವರೂ, 100 ಜನ ತುಪಾಕೀ ಪೋಲೀಸರೂ ಡ್ಯೂಟಿಯ ಮೇಲಿದ್ದರು. ಆದಿವಸ 175 ಜನರಿಗೆ ಗಾಯಗಳಾದುವೆ[illegible] ಬರುತ್ತದೆ.

ಮಾರನೆಯ ದಿವಸ ಆ[illegible]ಳು ಹರತಾಳವನ್ನಾಚರಿಸಿದರು. ಎಲ್ಲಾ[illegible], ಅರಳೆ ಮಾರ್ಕೆಟ್‌ಗಳೂ, ಇತರ ವರ್ತಕಸಂಘಗಳೂ ಮುಚ್ಚಲ್ಪಟ್ಟಿದ್ದುವು. ಆ ದಿವಸ ಗಿರಗಾಂವ ಸ್ವಾತಂತ್ರ್ಯಸಭೆಯ ಪತಿಯಿಂದ ದಾದಾಭಾಯಿ ನೌರೋಜಿಯವರ ಮೊಮ್ಮಗಳಾದ ಶ್ರೀಮತಿ ಪೆರಿನ್ ಕ್ಯಾಪ್ಟನರವರ ಅಧ್ಯಕ್ಷತೆಯಲ್ಲಿ ಅಜಾದ್ ಮೈದಾನದಲ್ಲಿ ಪ್ರಚಂಡ ಸಭೆ ಸೇರಿತು. ಸ್ವರಾಜ್ಯಸಂಗ್ರಾಮದಲ್ಲಿ ಕೊನೆಯವರೆಗೂ ಶಾಂತರೀತಿಯಿಂದ ವರ್ತಿಸಬೇಕೆಂದು ಶ್ರೀಮತಿ ಪೆರಿನ್ ಕ್ಯಾಪ್ಟನರವರು ಭಾಷಣಮಾಡಿದರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರು ಕರನಿರಾಕರಣಚಳವಳಿಯನ್ನು ಕೈಕೊಂಡಿರುವ ಬರ್ಸಾದ್ ತಾಲ್ಲೂಕಿನಲ್ಲಿ ಸಂಚರಿಸಿ, ಅವರ ಸ್ವಾರ್ಥತ್ಯಾಗದಿಂದ ಸ್ವರಾಜ್ಯವು ಸಮೀಪಿಸುತ್ತಲಿದೆ ಎಂದು ಜನರಿಗೆ ಧೈರ್ಯವನ್ನು ಹೇಳುತ್ತ ಸಂಚರಿಸುತ್ತಲಿರುವರು. ಜನರು ತಂಡೋಪತಂಡವಾಗಿ ಬಂದು ಮಹಾತ್ಮಾ ಗಾಂಧಿಯವರ ಪ್ರತಿನಿಧಿಗಳೆಂದು ಇವರನ್ನು ಅತ್ಯಂತ ಗೌರವದಿಂದ ಆದರಿಸುತ್ತಿರುವರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ್ಕ್ಕೆ ಪ್ರಸೀದಂತು.

ಸಮಾಜಸುಧಾರಣೆ.

ಸಮಾಜಬಾಂಧವರೇ! ಪ್ರತಿಯೊಂದು ವಸ್ತುವು ಜಗತ್ತಿನಲ್ಲಿ ಮೇಲ್ಮೆಯನ್ನು ಪಡೆಯಬೇಕಾದರೂ, ಲೋಕದಲ್ಲಿ ಸರ್ವರಿಂದಲೂ ಹೊಗಳಿಸಿಕೊಳ್ಳಬೇಕಾದರೂ ಅದರಲ್ಲಿ ಅಂತಹ ವಿಶೇಷಗುಣಗಳು ಇರಬೇಕಾಗುತ್ತದೆ. ಅವು ಕೇವಲ ನಿರ್ಮಲವಾಗಿರಬೇಕಾಗಿರುತ್ತದಲ್ಲದೆ, ಆ ವಸ್ತುವಿನಲ್ಲಿ ಆ ಪ್ರಕಾರದ ಪ್ರಕಾಶವಿಶೇಷವು ಮನೆಮಾಡಿಕೊಂಡಿರಬೇಕಾಗುತ್ತದೆ. ಯಾವದೊಂದು ವಿಶೇಷವಿಲ್ಲದ ನಿರುಪಯೋಗಿಯಾದ ವಸ್ತುವು ಬಂಜೆಯೋಗಿಯಾದ ಗೋವಿನಂತೆ ಯಾವದಕ್ಕೂ ಬರುವದಿಲ್ಲವಲ್ಲದೆ ಅದಕ್ಕೆ ಯಾವಗೌರವವೂ ದೊರೆಯುವದಿಲ್ಲ. ಆದ್ದರಿಂದ ಮುಂದಾಗ ಬೇಕು, ವರಿಷ್ಠನಾಗಬೇಕು, ಮರ್ಯಾದೆಯನ್ನು ಪಡೆಯಬೇಕೆಂದು ಹವಣಿಸುವ ಪ್ರತಿಯೊಬ್ಬನು ತನ್ನ ಸುತ್ತು ಮುತ್ತು ಬಹುಜಾಗರೂಕತೆಯಿಂದ ನೋಡಿ ದೋಷಾಸ್ಪದಸ್ಥಾನಗಳನ್ನು ಬಿಟ್ಟು ಪವಿತ್ರವಿಷಯಗಳಲ್ಲಿಯೇ ಹೆಜ್ಜೆಯನ್ನಿಡುತ್ತ ನಡೆಯಬೇಕಾಗಿರುತ್ತದೆ. ಅಂದರೆ ಭೂಮಿಯ ಮೇಲೆ ನಡೆಯುವ ಸಮಯದಲ್ಲಿಯೇ ಸುತ್ತು ಮುತ್ತು ನೋಡಿ ನಡೆಯಬೇಕೆಂದರ್ಥವಲ್ಲ. ಮನುಷ್ಯನ ದೃಷ್ಟಿಯು ತನ್ನಲ್ಲಿಯ ಗುಣಗಳ ಕಡೆಗೆ ವಿಶೇಷವಾಗಿರಬೇಕೆಂದಭಿಪ್ರಾಯವು. ನನ್ನ ಗೆಳೆಯರೇ! ಈಗಿನ ಸಮಯವಾದರೂ ಈಗಿನ ಸುಗ್ಗಿಯಾದರೂ ಅಧುನಿಕ ವಾತಾವರಣವಾದರೂ ಈ ಬಗೆಯದೇ ಆಗಿರುವದು. ಮಲಯಮಾರುತನು ಬೀಸುವಾಗ ಗಂಧವಿಶೇಷಸಂಸರ್ಗದಿಂದ ಕೆಲವು ಗಿಡಬಳ್ಳಿಗಳು ತಮ್ಮ ಬದಲಾವಣೆಯನ್ನು ಮಾಡಿಕೊಂಡು ಪವಿತ್ರಗಳಾಗುವಂತೆ ಸಾಮಾಜಿಕ ಸುಧಾರಣಾವಾತಾವರಣದಲ್ಲಿಯಾದರೂ ಪ್ರತಿಯೊಂದು ಮತೀಯರೂ ಪ್ರತಿಯೊಬ್ಬ ವ್ಯಕ್ತಿಯೂ ತ... ಹಿಂದಿನ ಹೀನಾವಸ್ಥೆಯನ್ನು ನೀಗಿ ನಿರ್ಮಲರಾಗುವದು ... ಅವಶ್ಯಕವು. ಪ್ರತಿಯೊಂದು ವಸಂತಋತುಗಳಿಗೆ ಆಯಾಯ ಋತು ... ಪರಿಣಾಮವು ... ತೀರುತ್ತದೆ. ಮತ್ತು ಆ ಗಿಡಬಳ್ಳಿಗಳಾದರೂ ತಮ್ಮ ... ಸಮಯವು ಬಂದ ಮೇಲೆ ಅವಕ್ಕೆ ಮೈಯೊಡ್ಡಿ ತಮ್ಮ ಸೊಬಗನ್ನು ಮುಂಬರಿಸಲೇ ಬೇಕಾಗುತ್ತದೆ. ಅಂದ ಮೇಲೆ ಸುಧಾರಣೆಯ ಶಿಖರವನ್ನೇರಿ ಸರ್ವರೀತ್ಯಾ ಸುಖಶಾಂತಿಗಳನ್ನು ಪಡೆಯಬೇಕೆಂಬ ಮನುಷ್ಯನು ಈಗಿನ ಸಮಯದಲ್ಲಿ ತನಗೆ ಪ್ರಾಪ್ತಿಯಾಗಿರುವ ಸರ್ವಾಂಗಶೋಭೆಯಿಂದ ಮಂಗಲದರ್ಶನವನ್ನಿತ್ತು ಕಾಪಾಡಲು ಸನ್ನದ್ಧಳಾಗಿ ಪಾವನವಾದ ಅಭಯ ವರದ ಹಸ್ತವನ್ನು ಮೇಲಕ್ಕೆತ್ತಿ "ಏನು ಬೇಡುತ್ತೀ! ಬೇಡು" ಎಂದು ಕಂಠಭಂಗವಾಗುವ ಹವಣೆ ಇಲ್ಲದೆ ಕೂಗಿಕೊಳ್ಳಲು ಸುಧಾರಣಾದೇವತೆಯು ಮುಂದೆ ಸಂಚರಿಸುತ್ತಿರಲು ಅದರ ಉಪಯೋಗವನ್ನು ಮಾಡಿಕೊಳ್ಳಬಾರದೆಂದರೆ ಇದೆಂತಹ ಮಾನವೀಯಧರ್ಮ? ಇದೆಂತಹ ಜ್ಞಾನ? ಇದೆಂತಹ ಪರಿಷತ್? ಎಲ್ಲರೂ ಅಂದರೆ ಸರ್ವಮತೀಯರೂ ತಮ್ಮಲ್ಲಿಯ ಕುಂದು ಕೊರತೆಗಳನ್ನು ವಿಚಾರಿಸಿ ತಮ್ಮ ಮತವನ್ನು ಮೇಲಕ್ಕೇರಿಸಿ ತಾವಾದರೂ ಮಾನವಮಂಟಪದಲ್ಲಿ ತೂಗಾಡುವ ವರಿಷ್ಠತೆಯ ತೊಟ್ಟಿಲಲ್ಲಿ ಸುಖವಾಗಿ ನಿದ್ರಿಸಬೇಕಾಗಿರುವದು ಇರಲಿ. ಇನ್ನು ಸ್ವಲ್ಪ ದಿವಸಗಳಲ್ಲಿ ಅಂದರೆ ಎರಡೇ ತಿಂಗಳಲ್ಲಿ ಕಾಮದಹನದ ಹಬ್ಬವು (ಹೋಳೀಹುಣ್ಣಿಮೆಯು) ತನ್ನ ಸೊಬಗಿನ ಉಜ್ವಲವಾದ ವೇಷವನ್ನು ಧರಿಸಿ ಭಾರತಭೂರಂಗದಲ್ಲಿ ನರ್ತನ ಮಾಡಲಿಕ್ಕೆ ಬರುವದು ಸರ್ವರಿಗೂ ತಿಳಿದಂತವೇ ಆಗಿರುವದು. ಸದರೀ ಹಬ್ಬವು ಪೂರ್ವದಲ್ಲಿ ಮೂಲತಃ ಪವಿತ್ರವಾಗಿದ್ದರೂ ಕೆಲ ಕಾಲದಿಂದೀಚೆಗೆ ಬಹು ಹೀನಾವಸ್ಥೆಯನ್ನೈದಿ ತಿಪ್ಪೆಯಲ್ಲಿಯ ರತ್ನದಂತೆ ತೇಜೋಹೀನವಾಗಿ ಪಾದಾಕ್ರಾಂತವಾಗಿ ಅತ್ತದ ಕಾಮದಹನದ ಮಹತ್ತವೇ ಮುಚ್ಚಿಹೋಗಿರುವುದು. ಸದರಿ ಹಬ್ಬವು ಈಗಿನ ಸಮಯದಲ್ಲಿ ರಾಷ್ಟ್ರದ ಉನ್ನತಿಗೆ ಅನುಕೂಲವಾಗಿರದೆ ರಾಷ್ಟ್ರವಿಘಾತಕವಾಗಿರುವುದು. ಭಾವೀರಾಷ್ಟ್ರತಳಹದಿಯಂತಿರುವ ಚಿಕ್ಕ ಚಿಕ್ಕ ಬಾಲಕರನ್ನು ಹಾಳುಮಾಡಿ ಬಿಡುವದಲ್ಲದೆ ಮತಾಚಾರವಿಷಾಂಗಗಳನ್ನು ಮೂಲೆಗೊತ್ತುವ ಅಂಕುಶವಾಗಿರುವದು. ಆ ಸಮಯದಲ್ಲಿಯ ಅನೇಕ ಶೃಂಗಾರಾದ್ಯಶ್ಲೀಲ ಪದಗಳಲ್ಲಿಯ ವಿಷಪ್ರಾಯ ವಿಷಯಗಳು ಕುಡಿಮೀಸೆಯ ಮಿಂಚುಮುಖಿಗಿನ ರುವಣಾಲಪ್ಪಗಳ ... ತರುಣರನ್ನು ಒಣ ಕಟ್ಟಿಗೆಗಳನ್ನು ಅಗ್ನಿನಾರಾಯಣನು ತೀವ್ರದಲ್ಲಿಯೇ ತಿಂದುಗುಳುವಂತೆ ಬಹುಜಾಗ್ರತೆಯಾಗಿ ಮುಂದು ತನ್ನ ದುರಾಚಾರಸಾಮ್ರಾಜ್ಯದ ಬಾವುಟವನ್ನು ತರುಣ ಜನತೆಯಲ್ಲಿ ದೃಢವಾಗಿ ನಿಲ್ಲಿಸಿದರೂ ಬಾಲಕರ ಮನಸ್ಸಿನಲ್ಲಿ ತೀವ್ರವಾಗಿ ಅದರ ಪರಿಣಾಮವಾಗದಿದ್ದಗೂ ಹಸಿಕಟ್ಟಿಗೆಯು ಕಾಲಾತಿಕ್ರಮದಿಂದ ಭಸ್ಮಸಾತ್ ಆನುವಂತೆ ಬಿತ್ತಿದ ಬೀಜವು ತತ್ಕಾಲಕ್ಕೆ ಫಲವನ್ನೀಯದೆ ಕೆಲಕಾಲವು ಹೋದಮೇಲೆ ಫಲಿಸುವಂತೆ ಮುಂದೆ ಮುಂದೆ ಮಹತ್ತರ ಹೊಲಸದಗಳ ದುಷ್ಪರಿಣಾಮವು ಮೇಣಿದವಮನದ ಎಳೆಬಾಲಕರ ಮೇಲಾಗದಿರದು. ಅವರ ಸ್ಥಿತಿಸರ್ವಸ್ವಕ್ಕೆ ಬೆಂಕಿಯಿಟ್ಟದೇ ಬಿಡದು. ಆದ್ದರಿಂದ ಅಂತಹ ದುರಾಚಾರ ಪ್ರಬೋಧಕವಿಷಯಗಳನ್ನು ಬಿಟ್ಟು ರಾಷ್ಟ್ರಜೀವನಗಳಾದವುಗಳನ್ನೇ ಜನತಾ ಮನೋಭೂಮಿಯಲ್ಲಿ ಬಿತ್ತುವದು ಸರ್ವರ ಅವಶ್ಯಕರ್ತವ್ಯವಾಗಿರುವದು. ಈ ಹೋಳೀಹುಣ್ಣಿಮೆಯಲ್ಲಿಯ (ಕಾಮದಹನದ ಹಬ್ಬದಲ್ಲಿಯ) ನಿಷಿದ್ಧಕೃತಿಗಳನ್ನು ಸಮೂಲವಾಗಿ ನಾಶಮಾಡಲು ಧಾರವಾಡ ಜಿಲ್ಲಾ ಹು|| ತಾಲೂಕು ನೈಕಿ ಪಾಲೀಕೊಪ್ಪದ "ಪುಣ್ಯಾಶ್ರಮ ಶ್ರೀ ರೇಣುಕಬಾಗ" ಎಂಬಲ್ಲಿ ಸದರಿ ಪಾಲೀಕೊಪ್ಪದ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ "ಭಾರತೀಯ ಶಾಸನ" ಎಂಬ ಬಿಲ್ಲು ಬಹುಮತದಿಂದ ಪಾಸಾಗಿ ಮರೆಯಲ್ಲಿರದೆ ಹೊರಬಿದ್ದು ಆಗಲೇ ಕ್ರಮವಹಿಸಿ ಸದರಿ ಹಬ್ಬದಲ್ಲಿಯ ಅನೇಕ ಗ್ರಾಮಗಳಲ್ಲಿಯ ದುರಾಚಾರಗಳನ್ನು ಕಡಿದದ್ದು ಎಲ್ಲರ ಮನಸ್ಸಿನಲ್ಲಿಯೂ ಇನ್ನೂ ವರೆಗೆ ಇರಬಹುದು. ಸದರೀ ಪಾಲೀಕೊಪ್ಪದ ಶ್ರೀಗಳು ಈಗಂತೂ ಅದರ ಪ್ರಚಾರಕ್ಕಾಗಿ ಅನಾಚಾರಗಳನ್ನು ಹುರಿಯುವದಕ್ಕಾಗಿ ವಿಶೇಷತಃ ವೀರಶೈವರನ್ನು ಸದಾಚಾರಪೂರ್ಣರನ್ನಾಗಿ ಮಾಡಲು ಮುಲಗಿಸುವದಕ್ಕೋಸ್ಕರ ದಿವಾರಾತ್ರಿಗಳನ್ನೆಣಿಸದೆ ಚಳಿಮಳೆಗಳನ್ನು ಲೆಕ್ಕಿಸದೆ ಹಳ್ಳಿಹಳ್ಳಿಗಳಲ್ಲಿ ಬೇಸರಿಲ್ಲದೆ ಸಂಚರಿಸಿ ಜನರನ್ನು ಎಚ್ಚರಿಸಿ ಸದಾಚಾರಕ್ಕೆ ಹಚ್ಚುತ್ತಿರುವರು. ಆದ್ದರಿಂದ ಎಲ್ಲಿ ಹೋಳೀಹುಣ್ಣಿಮೆಯ ದುರಾಚಾರಗಳಲ್ಲಿ ಭಾಗವಹಿಸುವ ಸರ್ವಸಮಾಜಬಂಧುಗಳೇ? ವಿಶೇಷತಃ ವೀರಶೈವರೇ? ದುಷ್ಟಪದಗಳನ್ನು ನೀವು ಕಲಿಯಬೇಡಿರಿ. ನಿಮ್ಮ ಚಿಕ್ಕಮಕ್ಕಳಿಗೆ ಅವುಗಳನ್ನು ಮಹಾಮಂತ್ರಗಳಂತೆ ಕಲಿಸಬೇಡಿರಿ. ಶಾಸ್ತ್ರೀಯವಾಕ್ಯಗಳಂತೆ ದೊಡ್ಡ ದೊಡ್ಡ ಹೊತ್ತಿಗೆಗಳಲ್ಲಿ ಬರೆದುಕೊಳ್ಳಬೇಡಿರಿ. ನಿಮ್ಮಲ್ಲಿ ಅಂತಹ ಹೊಲಸುಪದಗಳಿದ್ದರೆ ಸುಟ್ಟುಬಿಡಿರಿ. ಈಗಾಗಲೇ ಜಗ್ಗುವ ಹಳೇಹಲಿಗೆಗಳನ್ನು ಬಗಿಸಲು ಮುದಿ ಎತ್ತು ಎಮ್ಮೆಗಳನ್ನು ಕೊಳ್ಳುವ ಪಾಪದ ವಿಚಾರವನ್ನು ಮಾಡಬೇಡಿರಿ. ಎಂಥೂ ಮಾಡಬೇಡಿರಿ. ಯಾರಾದರೂ ಮಾಡುತ್ತಿದ್ದರೆ ಬಿಡಿಸಿರಿ. ಕಂತದ್ದನ್ನು ತಿನ್ನಲು ಹವಣಿಸಿದರೆ ಅದು ಪಶುವೃತ್ತಿ ಎನಿಸುವುದು. ನೀವು ನಿಮ್ಮ ನಿಜಸ್ಥಿತಿಯನ್ನು ತಿಳಿದುಕೊಳ್ಳಿರಿ. ಪವಿತ್ರವಾದ ಕಾಮದಹನದ ಮಹೋತ್ಸವವನ್ನು ಕಳೆದುಕೊಂಡು ತಿರುಗಬೇಡಿರಿ. ಮರುಗಬೇಡಿರಿ. ಪಾಪಿಗಳಾಗಬೇಡಿರಿ. ದೇವರ ಅನುಗ್ರಹಕ್ಕೆ ದೂರಾಗಬೇಡಿರಿ. ಈ ವಿಷಯದಲ್ಲಿ ಪ್ರಮುಖ ಮುಂದಾಳುಗಳಿಗೆ ಅಗ್ರಹಪೂರ್ವಕ ತಿಳಿಸುವದೇನಂದರೆ, ಸಮಾಜಸುಧಾರಕರಿಗೆ ಬೇಡಿಕೊಳ್ಳುವದೇನಂದರೆ, ಜೀವದಯಾಸಂಘದವರಿಗೂ ದೇಶಸೇವೆಗಾಗಿ ಟೊಂಕಕಟ್ಟಿದವರಿಗೂ ಸೂಚಿಸುವದೇನಂದರೆ, ಶ್ರೀ|| ಷ|| ಬ್ರ|| ಚರಪಟ್ಟಾಧೀಶರಿಗೆ ಶಿರಸಾಷ್ಟಾಂಗನಮಸ್ಕಾರ ಪೂರ್ವಕವಾಗಿ ಸವಿನಯವಾಗಿ ಕರಗೊಡ್ಡಿ ವಿಜ್ಞಾಪಿಸಿಕೊಳ್ಳುವದೇನಂದರೆ, ಪ್ರತ್ಯೇಕ ಗ್ರಾಮಗಳಲ್ಲಿ ನೀವು ಸಭೆ ಸೇರಿಸಿ ಈ ಹೋಳೀಹುಣ್ಣಿಮೆಯಲ್ಲಿಯ ನಿಷಿದ್ಧಕೃತಿಗಳನ್ನು ನಿಷೇಧಿಸಿ ಆ ನಿಷೇಧಸಭೆಯ ವಿಷಯವನ್ನು ಎಲ್ಲ ವರ್ತಮಾನಪತ್ರಿಕೆಗಳಲ್ಲಿಯೂ ಬಹು ತೀವ್ರದಲ್ಲಿಯೇ ಪ್ರಕಟಿಸಿ ಮುಂದಿನವರಿಗೆ ಪ್ರೋತ್ಸಾಹವನ್ನೀಯಬೇಕು. ಮತ್ತು ಅಯ್ಯೋ! ನನ್ನ ವೀರಶೈವಸಮಾಜವೇ! ಇನ್ನೂ ಎಲ್ಲಿಯವರೆಗೆ ಹೀಗೆಯೇ ಹಾಸಿಗೆಯಲ್ಲಿ ನರಳುವೆ? ಇನ್ನಾದರೂ ಮೇಲಕ್ಕೇಳಬಾರದೇ?" ಎಂದು ಬಡಬಡಿಸುತ್ತ ಸಂಚರಿಸುವ ಪಾಲೀಕೊಪ್ಪದ ಶ್ರೀಗಳ ಪ್ರಯತ್ನಕ್ಕೆ ಫಲವು ದೊರೆಯುವದೆಂದರೆ ಎಲ್ಲರೂ ಈ ಭಾರತೀಯ ಶಾಸನವನ್ನು ಅನುಸರಿಸಿ ಪವಿತ್ರರಾದರಲ್ಲವೇ? ಮುಂದೆ ಇನ್ನೂ ಕೆಲವು ವಿಷಯಗಳನ್ನು ಹಸ್ತಪತ್ರಿಕೆಗಳಿಂದಲೂ ವರ್ತಮಾನಪತ್ರಗಳ ಮುಖದಿಂದಲೂ ಶ್ರೀಗಳು ಬೀರತಕ್ಕವರಿರುವರು. ಅವುಗಳ ಕಡೆಗೆ ವಾಚಕ ಮಹಾಶಯರು ಸಂಪೂರ್ಣಲಕ್ಷವನ್ನೀಯಬೇಕೆಂದು ಕೋರಿಕೆ.

ಚೆನ್ನಬಸವಾರ್ಯ, ಗಂಜೀಗಟ್ಟಿ ಹಿರೇಮಠ, ಹುಬ್ಬಳ್ಳಿ.

ಶ್ರೀ ಜಗದ್ಗುರು ಪಂಚಾಚಾರ್ಯರ್ಕ್ಕೆ ಪ್ರಸೀದಂತು.

ಜಗದಾಚಾರ್ಯರ ಅದ್ಭುತಮಹಿಮೆ.

ಧಾರವಾಡ ಜಿ|| ಹುಲಗೂರು ಗ್ರಾಮದಲ್ಲಿ ಅತ್ತೀಗೇರಿ ಸಂಗಪ್ಪನವರೆಂಬ ಸದ್ಭಕ್ತರುಂಟು. ಜಗದಾಚಾರ್ಯರ ವಿಷಯದಲ್ಲಂತೂ ಇವರ ಭಕ್ತಿಯು ಅನಾದೃಶವಾದುದು. ಇವರ ಭಕ್ತಿಯನ್ನು ಪರೀಕ್ಷಿಸುವದಕ್ಕೋ ಏನೋ ಎನ್ನುವಂತೆ ಇವರ ಪತ್ನಿಯವರಿಗೆ ಶ್ರೀ ಪರಮೇಶ್ವರನು ಪ್ಲೇಗುರೋಗವನ್ನುಂಟುಮಾಡಿದನು. ರೋಗವು ಅತ್ಯಂತ ವಿಕೋಪಕ್ಕೆ ಬಂದಿತು. ಆಗ ಕುಲಗುರುಗಳಾದ ಹಿರೇಬೆಂಡಿಗೇರಿ ಕಂಬಾಳಿಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳು ಇಲ್ಲಿಗೆ ದಯಮಾಡಿಸಿದರು. ಯಾವ ಔಷಧದಿಂದ ಏನೂ ಪ್ರಯೋಜನವಾಗಲಿಲ್ಲವೆಂಬ ವಿಷಯವನ್ನು ಗುರುಗಳು ತಿಳಿದು ಈ ಮಹಾರೋಗವು ಭವರೋಗವೈದ್ಯನಾದ ಜಗದ್ಗುರುವಿನ ಆಶೀರ್ವಾದ ಬಲದಿಂದ ಶಮನವಾಗಬೇಕಲ್ಲದೆ ಮತ್ತಾವ ಮಾರ್ಗವೂ ಇಲ್ಲವೆಂದು ಹೇಳಿ ತಮ್ಮ ಶಿಷ್ಯನಿಗೆ ಜಗದಾಚಾರ್ಯರ ಪೂಜಾಧ್ಯಾನಾದಿಗಳನ್ನು ಅಸಾಧಾರಣವಾದ ಭಕ್ತಿಯಿಂದ ಮಾಡಬೇಕೆಂದು ಅಪ್ಪಣೆಯನ್ನು ಮಾಡಿದರು. ಅದರಂತೆಯೇ ಮ|| ರಾ|| ಸಂಗಪ್ಪನವರು ಜಗದಾಚಾರ್ಯರನ್ನು ಮರೆಹೊಗಲು ಈ ಮಹಾರೋಗವು ದಿನೇ ದಿನೇ ಕಡಿಮೆಯಾಗುತ್ತ ಬಂದು ಈಗ ಪೂರ್ತಿಯಾಗಿ ಗುಣವಾಗಿದೆ. ಇದಲ್ಲವೇ ಜಗದಾಚಾರ್ಯರ ಅದ್ಭುತಮಹಿಮೆಯು? ಈ ಸಂತೋಷಕ್ಕೋಸ್ಕರ ಸದರಿ ಸಂಗಪ್ಪನವರು ತಮ್ಮ ಗುರುಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕಾಗಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದರು. ಜಗದಾಚಾರ್ಯರು ತಮ್ಮ ನಿಜಭಕ್ತರನ್ನು ಸದಾ ರಕ್ಷಿಸಲೆಂದು ಪ್ರಾರ್ಥಿಸುವ.

ಓರ್ವ ಪ್ರತ್ಯಕ್ಷದರ್ಶಿ.

ವೀರಶೈವಶಾಲೆ, ಬಳ್ಳಾರಿ.

ಮಹಾಶಯರೇ!

ಶ್ರೀ ಕೇದಾರನಾಥ ಸ್ಮಾರಕದ ತೃತೀಯ ವರ್ಷದ ವಿನೋದದಾಟಗಳು ಈ ಜನವರಿ 10 ನೆಯ ತೇದಿ ಶನಿವಾರ ಪ್ರಾತಃಕಾಲ $7\frac{1}{2}$ ಘಂಟೆಯಿಂದ $10\frac{1}{2}$ ವರೆಗೂ, ಸಾಯಂಕಾಲ 3 ಘಂಟೆಯಿಂದ 6 ವರೆಗೂ ಗಾಂಧಿನಗರದಲ್ಲಿಯ ವೀರಶೈವ ವಿದ್ಯಾರ್ಥಿನಿಲಯದಾವರಣದಲ್ಲಿ ನಡೆಯುತ್ತವೆ.

ಹಾಗೂ, ಶಾಲೆಯ ತೃತೀಯ ವಾರ್ಷಿಕವರ್ಧಂತಿಯೂ ಈ ತಿಂಗಳು 11ನೆಯ ತೇದಿ ಭಾನುವಾರ ಸಾಯಂಕಾಲ 5 ಘಂಟೆಯಲ್ಲಿ ಶ್ರೀ ಗಣೇಶನಗುಡಿಯ ಬೀದಿಯಲ್ಲಿರುವ ಸೊಗಮ್ಮನವರ ಚಾಕಿಯಲ್ಲಿ ನಡೆಯುತ್ತದೆ.

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶ್ರೀ ೧೦೮ ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಬಹುಮಾನಗಳನ್ನು ಹಂಚಲು ಆದರಪೂರ್ವಕವಾಗಿ ಒಪ್ಪಿರುತ್ತಾರೆ.

ಬಳ್ಳಾರಿ ರೇಂಜಿನ ವಿದ್ಯಾಧಿಕಾರಿಗಳಾದ ಮ|| ರಾ|| ಶ್ರೀ ಎ. ಕೆ. ಬಾಲಸುಂದರಂ, ಬಿ.ಎ., ಎಲ್.ಟಿ., ಇವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿರುತ್ತಾರೆ.

ಆದುದರಿಂದ ತಾವು ಈ ಸಮಾರಂಭಕ್ಕೆ ಆಗಮಿಸಬೇಕಾಗಿ ಪ್ರಾರ್ಥನೆ.

ತಮ್ಮ ಶ್ರೇಯೋಭಿಲಾಷಿ,
ಎಂ. ರಾಜಯ್ಯ,
ಮುಖ್ಯೋಪಾಧ್ಯಾಯ.

ಬಳ್ಳಾರಿ,
30-12-30.

ನೀತಿಸುಧಾಸಾರ.

[ಮ|| ರಾ|| ಅನವಟ್ಟಿ ರಾಮರಾಯರಿಂದ]

ಮಾನವನ ಜೀವಿತಕಾಲದ ಏಳು ಅಂಕಗಳು.

ಧರೆಯುರಂಗಸ್ಥಳಮದಾಗಿದೆ |
ಪುರುಷ ವನಿತೆಯರೆಲ್ಲ ರಭಿನಯ |
ತಿರುವ ಸುವೇಷಧಾರಿಗಳೆನಿಸಿ ಜನನಮರಣಗಳು ||
ಬರದೆರಂಗಕೆ ಸಾರಿಪೋಗುವ |
ತೆರದೆಕಾಣ್ಬುದಬಗೆಯೆ ಮನುಜನ |
ಮೆರೆವ ಜೀವಿತಕಾಲವೇಳಂಕಮನೆ ತೋರುವುದು ||೧||

* * *

ಮೊದಲೆನಿಪಶೈಶವದೆಂಬಂ |
ಕದೊಳು ಮಾತೆಯತೊಡೆಯನೇರುತೆ |
ವಿಧವಿಧದಸರಗೆಳಸೆಚೀರುತೆ ಆರುತಿರುತಿಹನು ||
ಮುದದೊಳೆರಡನೆಯಂಕ ಬಾಲ್ಯದೆ |
ಹೃದಯಕಾನಂದವನು ಬೀರುವ |
ವದನದಿಂರಾಜಿಸುವಕಾಂತಿಯನಾಂತು ಮೆರೆಯುವನು ||೨||

* * *

ಬಿಡದೆಹೊತ್ತಿಗೆಯನ್ನು ಹಸ್ತದೆ |
ಪಿಡಿದು ಬಿಕ್ಕುತಳುತುದಯದೊಳು |
ನಡೆದು ಬಸವನಪುಳದೆತೆರದಿಂ ಮರಳೆ ಸಾಲ್ವಲೆ ||
ನಡೆವ ಮೂರನೆಯಂಕದೊಳು ತನ |
ಗೆಡಸಿದಾಜ್ಞಾವ್ಯನದೆ ಮುದದಿಂ |
ದಿಡಿದು ಜವದಿಂ ಮತ್ತ ನಾಗುತೆ ವಿರಹತಾಪದೊಳು ||೩||

* * *

ತರಹರಿಸಿ ನಿಟ್ಟುಸಿರಬಿಡುತಂ |
ಸಿರುತ ತನ್ನಿನಿಯಳನೆ ಬಣ್ಣಿಸಿ |
ಬರೆದಪದ್ಯಂಗಳನು ಪಾಡುತೆ ನೋಹವತಪಹನು ||
ಕರೆವ ನಾಲ್ಕನೆಯಂಕದೊಳುತಾ
ಮೆರೆವ ಕೌಮಾರದೊಳಧಿಕಮಾ |
ಗಿರುವ ಪದವಿದ್ರವ್ಯಕಗಳ ಬಿಡದೆಕಾಗಿಸೆ ||೪||

* * *

ಬಿಡದಿಂದಾಣೆಗಳ ತಸ್ಕತೆ |
ಜನಕೆತನ್ನವನೊರೆದೆ ನೆನ್ನುತೆ |
ಭವನರದ ಭಾಷೆಗಳಕುಡುತಲಿ ದುಡುಕಿಕಲಹವನು ||
ಮುಂದುಗೆಯ್ಯುತೆ ವಿವಿಕಕೀರ್ತಿಯು |
ಮನುವಿನಿಂತಾ ಪಡೆವೆನೆನ್ನುತೆ |
ಭುವನಗೋಸುಗ ಗುಂಡಿನಿದಿರೊಳು ನಿಲಲು ಹೆದರನು! ||೫||

* * *

ಒಲಿಯಮೈದನೆಯಂಕದೊಳು ತನು |
ಪರಿಕಳೋಕವನಾಂತು ಜನರೊಳು |
ಮೆರೆವ ಗೌರವದಿಂದೆರಾಣೆಗಿಕೊಳುತೆ ಜನಗಳನು ||
ತಂತರದನುಡಿಗಳಗೆ ದಂಡಿಸು |
ತಂಮೆಯುಂ ಲೋಕಾನುಭವವಂ |
ಧರೆಗೆ ಸಾರ್ಚುತಲೋಕಮನ್ನಣೆಯಾಂತು ಜೀವಿಸುತೆ ||೬||

* * *

ಮುದದೆ ಲೋಕಕೆ ನೀತಿಯೊರೆಯುತ |
ಹದನದಿಂದಲಿ ಹಾಸ್ಯಗಾದೆಗ |
ಳಮುಖತಮಾಗಿಪೇಳುತೆ ಮಿತಿಯಮೀರಿಭುಂಜಿಸುತೆ ||
ಒದಗಿದಾಸಕ್ಕೂಲವಥವಾಂತೀ |
ವಿಧದೆ ತಾಪಂಚಾಯತಿಯಗೈ |
ವುದರೊಳಾಸಕ್ತಿಯ ನಾನುತೆ ಕಾಲಕಳೆಯುವನು ||೭||

* * *

ಅರನೆಯಂಕದೆನಿಪ ಜರೆಯೊಳು |
ಭೂರಿಸುಖವಿಲ್ಲದೆ ಗೆಳತಕ |
ರ್ದರಕತಿಗಡಿಗುಡಿಗೆ ಕೊಡಿಗೆಗಳಂಬೆಸಿಂಗರಿಸಿ ||
ದೂರನೋಡೆ ಸುಲೋಚನಕಂಟ |
ಕಾಗೆಗಳನ್ನು ತಾಳಿಮೆಟ್ಟುತೆ |
ಊರಗೋಲನು ಪಿಡಿದುತಪ್ಪೆಜ್ಜೆಗಳಹಾಕುವನು ||೮||

* * *

ನಂಬಿಕೆಯನಿಡದಂತೆ ಯಾರೊಳು |
ಹಂಬಲಿಸಿ ಯಾಡಿದುದನಾಡುತೆ |
ತುಂಬಿದಾಕಲಿಗೆದೆಯಾಗುತೆ ಮೊದಲಸರಮುಳಿದು ||
ಕುಂಭಿನಿಯ ಹಾಸ್ಯಕೆಡೆಯಾಗುತ |
ಲಿಂಬುಳಿಯುತಂ ಕೀರಸರಂಗ |
ಕಂಬಿಬಿಡಿಯನುಡಿಯನುಡಿಯುತೆ ಹಾಸ್ಯಕೆಡೆಯಹನು ||೯||

* * *

ವಾಸನಾಟಕ ಕೊನೆಯದಂಕದೊ |
ಳರುಹ ಲಂಬ್ಯಾವಸ್ಥೆಗೆಬಿಡದೆ |
ಗುರಿಯದಾಗುತೆ ತಿರುಗಿಬಾಲ್ಯಾವಸ್ಥೆಯತೋರಿಸಿ ||
ಅರಿವುಹೀನತೆಯಾಂತ ದಂತಗ |
ಳರದೆ ರುಚಿದಪ್ಪಿ ಕರಣಮುಡುಗಿ |
ಮರಣ ಪದಮಂ ಪಡೆಯಲಂತ್ಯದೆ ಲಯವನೊಂದುವನು ||೧೦||

* * *

ಇಂತಿರುವ ನರಜನ್ಮವೆಬಿಡದೆ |
ಸಂತತಂ ಸಂತರನುಸೇವಿಸಿ |
ಸಂತಸದ್ಗುಣಭರಿತನಾಗುತ ಲೋಕಸೇವೆಯೊಳು ||
ಸಂತಸದೆ ತಾನಿರತನಾಗುತೆ |
ಚಿಂತಿತಾರ್ಥಪ್ರದನ ಸೇವಿಸು |
ತಿಂತು ಮಾನವಜನ್ಮ ತತ್ವ ನಂಪೊ ಮಾನವನೆ ||೧೧||

ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ಕಾಶೀಕ್ಷೇತ್ರದಲ್ಲಿ ನೆರವೇರಿದ ಅಖಿಲ ಏಷಿಯಾಖಂಡದ ವಿದ್ಯಾಭ್ಯಾಸಮಹಾಸಭಾ.

ಅಖಿಲ ಏಷಿಯಾಖಂಡದ ಪ್ರಥಮ ವಿದ್ಯಾಭ್ಯಾಸ ಮಹಾಸಭೆಯು ಬೆನಾರಸ್ ಸೆಂಟ್ರಲ್ ಹಿಂದೂ ಹೈಸ್ಕೂಲಿನಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರೋ|| ಎಸ್. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಬನಾರಸ್ ಮಹಾರಾಜರವರು ಆ ಸಭೆಯ ಪ್ರಾರಂಭೋತ್ಸವವನ್ನು ಮಾಡಿದರು. ಹಿಂದೂಸ್ಥಾನದ ಅನೇಕ ಪ್ರಾಂತಗಳಿಂದಲೂ ಏಷಿಯಾಖಂಡದ ಇತರದೇಶಗಳಿಂದಲೂ ಬಂದ ಸದಸ್ಯರುಗಳಿಂದ ಸಭೆಯು ತುಂಬಿ ಬಹು ಶೋಭಾಯಮಾನವಾಗಿತ್ತು. ಸಭಾಪ್ರಾರಂಭದಲ್ಲಿಯೇ ಕಾಂಗ್ರೆಸ್ ಸ್ವಯಂಸೇವಕರು ಆಗಮಿಸಿ ಮೂರು ಬಣ್ಣಗಳಿಂದ ಕೂಡಿರುವ ರಾಷ್ಟ್ರಧ್ವಜಗಳನ್ನು ಮೇಲಕ್ಕೇರಿಸಿ ರಾಷ್ಟ್ರಗೀತೆಗಳನ್ನು ಹಾಡಿದರು. ಅಖಿಲಭಾರತೋಪಾಧ್ಯಾಯರ ಸಂಘದ ಅಧ್ಯಕ್ಷರಾದ ಮಿ|| ಪಿ. ಶೇಷಾದ್ರಿ, ಎಂ.ಎ., ರವರು ಮಾಡಿದ ಭಾಷಣದ ಸಾರಾಂಶವೇನೆಂದರೆ— ಈ ಮಹಾಸಭೆಯು ಇಲ್ಲಿ ನೆರೆಯುವುದಕ್ಕೆ ಅಖಿಲಭಾರತ ಉಪಾಧ್ಯಾಯರ ಸಮ್ಮೇಳನವೇ ಮೂಲಕಾರಣವಾಗಿದೆ. ಆ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ನಮ್ಮ ಉದ್ದೇಶಗಳೇನೆಂದರೆ—(1) ಹಿಂದೂಸ್ಥಾನದ ಸ್ಥಿತಿಗತಿಗಳಿಗನುಸಾರವಾಗಿ ವಿದ್ಯಾಭ್ಯಾಸದ ಸಮಸ್ಯೆಯನ್ನು ಕೂಲಂಕಷವಾಗಿ ವಿಚಾರಮಾಡುವುದು. (2) ಹಿಂದೂಸ್ಥಾನದ ವಿದ್ಯಾಭ್ಯಾಸಕ್ಕೆ ಅವಶ್ಯಕಗಳಾಗಿರುವ ಅಂಶಗಳನ್ನು ಯೋಗ್ಯರೀತಿಯಿಂದ ಆಚರಣೆಯಲ್ಲಿ ತರುವುದು. (3) ದೇಶದಲ್ಲಿರುವ ಅನೇಕ ಉಪಾಧ್ಯಾಯರ ಸಂಸ್ಥೆಗಳ ಕಾರ್ಯಗಳನ್ನು ಸಮಾವೇಶ ಮಾಡುವುದು. (4) ಉಪಾಧ್ಯಾಯ ವೃತ್ತಿಯ ಹಿತಗಳನ್ನು ಕಾಪಾಡಿ ಅವುಗಳನ್ನು ಅಭಿವೃದ್ಧಿಗೆ ತಂದು ಜನಾಂಗದಲ್ಲಿ ಅದಕ್ಕೆ ಯೋಗ್ಯಸ್ಥಾನವು ದೊರೆಯುವಂತೆ ಮಾಡುವುದು. (5) ಜಗತ್ತಿನಲ್ಲಿ ನಡೆಯುವ ಉಪಾಧ್ಯಾಯರ ಸಂಘಗಳಿಗೆ ಭಾರತೀಯ ಪ್ರತಿನಿಧಿಗಳನ್ನು ಕಳುಹಿಸುವುದು. ಕಳೆದ ವರ್ಷ ಜಿನೀವಾದಲ್ಲಿ ನೆರವೇರಿದ ಜಗತ್ತಿನ ಉಪಾಧ್ಯಾಯರ ಸಂಘಕ್ಕೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಈ ಪಟ್ಟಣದಲ್ಲಿ ಏಷಿಯಾ ಖಂಡದ ವಿದ್ಯಾಭ್ಯಾಸ ಮಹಾಸಭೆಯನ್ನು ಸೇರಿಸಲು ಅನುಮತಿಯನ್ನು ಪಡೆದುದರಿಂದ ಇದು ಇಲ್ಲಿ ನೆರವೇರುವ ಸುಯೋಗವು ಒದಗಿತು. ಈ ಸಭೆಯನ್ನು ಸೇರಿಸಲು ಆಹ್ವಾನವನ್ನಿತ್ತಂದಿನಿಂದಲೂ ನಮ್ಮ ದೇಶವು ರಾಜಕೀಯ ಸಮರದಲ್ಲಿ ತೊಡಗಿರುವುದು ದುರ್ದೈವದಸಂಗತಿಯಾಗಿದೆ. ನಮ್ಮ ವೈಸ್‌ಛಾನ್ಸಲರಾದ ಪಂಡಿತ ಮದನಮೋಹನಮಾಲವೀಯರೇ ಮೊದಲಾದ ಅನೇಕ ಪ್ರಮುಖರು ಜೈಲಿನಲ್ಲಿರುವರಲ್ಲದೆ ನಮಗೆ ಸಹಾನುಭೂತಿಯನ್ನು ದಯಪಾಲಿಸುತ್ತಿದ್ದ ಅನೇಕ ಸಾಮಂತರಾಜರೂ ಇತರ ಭಾರತೀಯ ಪ್ರಮುಖರು ಲಂಡನ್ನಿನ ಚಕ್ರಗೋಷ್ಠಿಗೆ ಹೋಗಿರುವರು. ಆದರೂ ನಾವು ಎದೆಗುಂದದೆ ಈ ಸಭೆಯನ್ನು ಸೇರಿಸಿದೆವು. ಈ ಪಟ್ಟಣದ ಸ್ವಾಗತಸಂಘದವರಿಗೂ, ಬನಾರಸ್ ಶ್ರೀಮನ್ಮಹಾರಾಜರು, ಆ|| ಸರ್ ಮೋತೀಚಂದ್ ಮೊದಲಾದವರಿಗೂ, ವಾಯವ್ಯ ಸಂಯುಕ್ತಸ್ಥಾನದ ಹಾಗೂ ಇಂಡಿಯಾ ಸರ್ಕಾರಕ್ಕೂ, ನಮ್ಮ ಆಹ್ವಾನವನ್ನಂಗೀಕರಿಸಿ ಈ ಸಭೆಗೆ ಆಗಮಿಸಿರುವ ವಿದ್ವನ್ಮಣಿಗಳಿಗೂ ತುಂಬಾ ಕೃತಜ್ಞರಾಗಿರುವೆವು. ನಮ್ಮ ನೆರೆಯವರಾದ ಥಿಯಾಸಫಿಕಲ್ ಸೊಸೈಟಿಯವರು ಈ ಕಾರ್ಯಕ್ಕೆ ತುಂಬಾ ಸಹಾಯಮಾಡಿದುದರಿಂದಲೇ ಈ ಸಭೆಯು ಇಲ್ಲಿ ಸೇರಲು ಅವಕಾಶವಾಯಿತು.

ಈ ಸಭೆಯ ಕಾರ್ಯಕಲಾಪಗಳನ್ನು ಪೂರೈಸಿ ನೀವು ಹಿಂದಿರುಗಿ ಹೋದಾಗ ಏಷಿಯಾಖಂಡದ ಮತ್ತು ಹಿಂದೂಸ್ಥಾನದ ವಿದ್ವಾಂಸರ ಸಂಗಡ ಕಲೆತುದರಿಂದ ಲಾಭವಾಯಿತೆಂದು ಭಾವಿಸದಿರಲಾರಿರೆಂದು ನಂಬುತ್ತೇನೆ.

ನಮ್ಮ ದೇಶದ ಜನರ ಅವಿದ್ಯೆಯು ನಮ್ಮ ಮುಖ್ಯ ಸಮಸ್ಯೆಯಾಗಿದೆ. ಈಗ ನಮ್ಮ ದೇಶದ ಅಕ್ಷರಸ್ಥರ ಸಂಖ್ಯೆಯು ಒಟ್ಟಿನ ಮೇಲೆ ಶೇಕಡಾ 14 ರಂತೆಯೂ ಸ್ತ್ರೀವಿದ್ಯಾವತಿಯರ ಸಂಖ್ಯೆಯು ಶೇಕಡಾ 2 ರಂತೆಯೂ ಇರುವುದು ಕೇವಲ ಖೇದಾಸ್ಪದವಾದ ಸಂಗತಿಯಾಗಿದೆ. ಶಾಲೆಗೆ ಹೋಗುವ ಬಾಲಕರ ಸಂಖ್ಯೆಯು ಶೇಕಡ 7 ರಂತೆಯೂ, ಬಾಲಕಿಯರ ಸಂಖ್ಯೆಯು ಶೇಕಡ 2 ರಂತೆಯೂ ಸಹ ಇರುವುದಿಲ್ಲ. ನಮ್ಮ ಮಕ್ಕಳೆಲ್ಲಾ ವಿದ್ಯಾವಂತರಾಗುವರೆಂದು ನಮಗೆ ಸಮಾಧಾನವಾಗಬೇಕಾದರೆ ಈಗ ಶಾಲೆಗೆ ಹೋಗುವ ಬಾಲಕರ ಸಂಖ್ಯೆಯನ್ನು ಇನ್ನು ಡಿಯೂ ಬಾಲಕಿಯರ ಸಂಖ್ಯೆಯು ಏಳರಷ್ಟು ಹೆಚ್ಚಿಸಬೇಕು. ಇತ್ತೀಚೆಗೆ ಸೇರಿದ ಹರ್ಟಾಗ್ ಕಮಿಟಿಯವರು ನಮ್ಮ ದೇಶದಲ್ಲಿರುವ ಅವಿದ್ಯೆಯನ್ನು ನಿರ್ಮೂಲ ಮಾಡಬೇಕಾದರೆ ವರ್ಷ ಒಂದಕ್ಕೆ 20 ಕೋಟಿ ರೂಪಾಯಿಗಳು ಬೇಕಾಗುವುವೆಂದೂ, ಈ ಕಠಿಣಸಮಸ್ಯೆಯನ್ನು ನಿರ್ವಹಿಸಲು ನಮ್ಮ ರಾಜನೀತಿಜ್ಞರು ತಮ್ಮ ಬುದ್ಧಿ ಸಹಾಸಗಳನ್ನೆಲ್ಲಾ ವೆಚ್ಚಮಾಡಬೇಕೆಂದೂ ತಿಳುಹಿಸುತ್ತಾರೆ. ಬೆಂಗಾಲ ಪ್ರಾಂತದವರು ಧೈರ್ಯದಿಂದ ಮುಂದೆ ಬಂದು ಪ್ರಾಥಮಿಕ ಶಿಕ್ಷಣದ ಕಾಯಿದೆಯನ್ನು ಮಾಡಿ ಇನ್ನು ಹತ್ತುವರ್ಷಗಳೊಳಗೆ ಬೆಂಗಲದಲ್ಲೆಲ್ಲಾ ಬಲಾತ್ಕಾರದ ವಿದ್ಯಾಭ್ಯಾಸವು ಜಾರಿಯಲ್ಲಿ ಬರುವಂತೆ ಮಾಡಿರುವುದು ಕೇವಲ ಆನಂದಕರವಾದ ಸಂಗತಿಯಾಗಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದುಕೋಟಿ ಮೂವತ್ತುಲಕ್ಷ ರೂಪಾಯಿಗಳನ್ನು ಒದಗಿಸುವ ಏರ್ಪಾಡು ಮಾಡಿರುವರು. ಹಿಂದೂದೇಶದಲ್ಲಿ 2500 ಕ್ಕಿಂತಲೂ ಹೆಚ್ಚು ಹೈಸ್ಕೂಲುಗಳು ಇರುವುದಾಗಿಯೂ ಸುಮಾರು 8 ಲಕ್ಷ ವಿದ್ಯಾರ್ಥಿಗಳು ಅಲ್ಲಿ ಅಭ್ಯಾಸಮಾಡುತ್ತಿರುವುದಾಗಿಯೂ ಕಂಡುಬರುತ್ತದೆ. ಹೈಸ್ಕೂಲ್ ವಿದ್ಯಾಭ್ಯಾಸವು ವಿದ್ಯಾರ್ಥಿಗಳು ಯಾವುದಾದರೂ ಯೋಗ್ಯವೃತ್ತಿಯನ್ನು ಕೈಕೊಳ್ಳುವುದಕ್ಕೆ ಮಾತ್ರವೇ ಸಹಕಾರಿಯಾಗದೆ ಅವರ ಮೇಧಾಶಕ್ತಿಯು ಪ್ರಫುಲ್ಲಿತವಾಗಲು ಸಹಕಾರಿಯಾಗಬೇಕು. ಇದರಿಂದ ನಮ್ಮ ದೇಶದಲ್ಲಿ ಸದ್ಯಃ ಕಂಡುಬರುವ ನಿರುದ್ಯೋಗದ ಸಮಸ್ಯೆಯನ್ನೂ ಸಹ ನಾವು ಸುಲಭವಾಗಿ ನಿರ್ವಹಿಸಬಹುದು.

ಹಿಂದೂಸ್ಥಾನದಲ್ಲಿ ಬರ್ಮಾದೇಶವನ್ನೂ ಸೇರಿಸಿಕೊಂಡರೆ 18 ವಿಶ್ವವಿದ್ಯಾನಿಲಯಗಳಿವೆ. ಅವುಗಳಲ್ಲಿ ಸುಮಾರು ಒಂದುಲಕ್ಷ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಲಿರುವರು. ಪಾಶ್ಚಿಮಾತ್ಯ ವಿಶ್ವವಿದ್ಯಾನಿಲಯಗಳಿಗಿರುವ ಎಲ್ಲಾ ಸೌಕರ್ಯಗಳೂ ನಮ್ಮ ವಿದ್ಯಾಪೀಠಗಳಿಗುಂಟಾಗಬೇಕಾದರೆ ಇನ್ನೂ ಸ್ವಲ್ಪ ಕಾಲಬೇಕಾಗುವುದು. ಈಗಿನ ನಮ್ಮ ವಿಶ್ವವಿದ್ಯಾನಿಲಯಗಳು ಲಂಡನ್ನಿನ ವಿಶ್ವವಿದ್ಯಾನಿಲಯದ ಮಾದರಿಯ ಮೇಲೆ ರಚಿಸಲ್ಪಟ್ಟಿವೆ. ಪರೀಕ್ಷೆಗಳನ್ನು ಮಾಡುವುದು ಪದವಿಗಳನ್ನು ಕೊಡುವುದು ಮಾತ್ರವೇ ವಿಶ್ವವಿದ್ಯಾನಿಲಯಗಳ ಕೆಲಸವಲ್ಲ. ಪುಸ್ತಕ ಭಂಡಾರಗಳನ್ನು ಕಲ್ಪಿಸುವುದು, ಹೊಸ ವಿಷಯಗಳನ್ನು ಶೋಧಿಸುವುದು, ಮನುಷ್ಯನ ಜ್ಞಾನವನ್ನು ವೃದ್ಧಿಪಡಿಸತಕ್ಕ ವಿಷಯಗಳನ್ನು ಪರ್ಯಾಲೋಚಿಸುವುದಕ್ಕೆ ಪಂಡಿತರಿಗೆ ಉತ್ತೇಜನಕೊಡುವುದು ಇವೇ ಮೊದಲಾದುವುಗಳು ವಿಶ್ವವಿದ್ಯಾನಿಲಯಗಳ ಕರ್ತವ್ಯಗಳಾಗಿವೆ. ಏಷಿಯಾಖಂಡದ ಅನೇಕ ಪೌರ್ವಾತ್ಯದೇಶಗಳಿಂದ ವಿದ್ಯಾಭ್ಯಾಸದ ಸಲುವಾಗಿ ಎಷ್ಟೋ ಜನ ವಿದ್ಯಾಕಾಂಕ್ಷಿಗಳು ಪೂರ್ವದಲ್ಲಿ ಈ ದೇಶಕ್ಕೆ ಬಂದು ಇಲ್ಲಿ ಕಲಿತ ವಿದ್ಯೆಯ ಲಾಭವನ್ನು ತಮ್ಮ ದೇಶಗಳಲ್ಲಿ ಹರಡುತ್ತಿದ್ದರು. ನಾವು ಈಗ ಅಂಥ ಉನ್ನತಸ್ಥಾನವನ್ನೇರಿರುವೆವೆಂದು ಹೇಳಲಾಗುವುದಿಲ್ಲ.

ಸ್ತ್ರೀ ವಿದ್ಯಾಭ್ಯಾಸ.

ನಮ್ಮ ಮಹಿಳೆಯರು ವಿದ್ಯಾವಿಹೀನರಾಗಿರುವುದೊಂದು ನಮ್ಮ ಪ್ರಗತಿಗೆ ವಿಘ್ನಕಾರಿಯಾಗಿದೆ. ನಮ್ಮ ಮಹಿಳೆಯರು ಒಂದು ಸಮಯದಲ್ಲಿ ಪಾತಿವ್ರತ್ಯ, ನೀತಿ, ಸತ್ಯ, ದಯೆ, ಧರ್ಮಬುದ್ಧಿ ಮೊದಲಾದ ಸದ್ಗುಣಗಳಿಂದಲೂ ಗೃಹಕೃತ್ಯ ಮಾಡುವ ಜಾಣ್ಮೆಯಿಂದಲೂ ಉಚ್ಚಸ್ಥಾನದ ಶಿಖರವನ್ನೇರಿ ಪಾಶ್ಚಿಮಾತ್ಯ ಸ್ತ್ರೀಯರನ್ನು ನಾಚಿಸುವ ಹಾಗಿದ್ದರು. ಸ್ತ್ರೀಸಂತಾನವು ವಿದ್ಯಾಸಂಪತ್ತಿಯನ್ನು ನಿರಾತಂಕವಾಗಿ ಹೊಂದುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಭಾರತೀಯ ವ್ಯವಸಾಯನಿದರ್ಶನರಾಜಸಮಿತಿಯವರು ಚಿಕ್ಕ ತಾಯಿಯವರಿಗೆ ವೇತನವನ್ನು ಕೊಟ್ಟು ವಿದ್ಯಾಭ್ಯಾಸ ಮಾಡಿಸಬೇಕೆಂಬ ಸಲಹೆಯನ್ನು ಕೊಟ್ಟರು.

ಚಿಕ್ಕತಾಯಿಯವರ ವಿದ್ಯಾಭ್ಯಾಸದಿಂದ ಆ ಮನೆಯಲ್ಲಿರುವ ಮಕ್ಕಳೆಲ್ಲರೂ ವಿದ್ಯಾಭ್ಯಾಸಮಾಡುವರು. ಹಾರ್ಟಾಗ್‌ಕಮಿಟಿಯವರು ಬಾಲಕರ ವಿದ್ಯಾಭ್ಯಾಸಕ್ಕಿಂತಲೂ ಬಾಲಕಿಯರ ವಿದ್ಯಾಭ್ಯಾಸಕ್ಕೆ ಹೆಚ್ಚು ಸೌಕರ್ಯಗಳನ್ನೊದಗಿಸಬೇಕೆಂದು ಅಭಿಪ್ರಾಯಪಡುವರು. ಮಹಿಳೆಯರಿಗೂ ಪುರುಷರಿಗೂ ವಿದ್ಯೆಯಲ್ಲಿ ಅಂತರವಿರುವುದರಿಂದ ಅನೇಕ ಗೃಹಗಳಲ್ಲಿ ಸುಖಶಾಂತಿಗಳಿಗೆ ಬದಲಾಗಿ ಅನೇಕ ಅನಾಹುತಗಳು ನಡೆಯುತ್ತವೆ. ಸ್ತ್ರೀವಿದ್ಯಾಭ್ಯಾಸವು ಇನ್ನು ಮೇಲೆ ಮುಂದುವರಿಯುವುದೆಂಬುದು ಭಾರತೀಯಮಹಿಳೆಯರ ವಾರ್ಷಿಕಸಭೆ ಮುಂತಾದುವುಗಳಿಂದ ವ್ಯಕ್ತವಾಗುವುದು. ಲಾಹೋರಿನಲ್ಲಿ ಈ ಸಭೆಯು ಪೂರೈಸಿದಮೇಲೆ ಅಖಿಲಏಷಿಯಾಖಂಡದ ಮಹಿಳೆಯರ ಸಭೆಯು ಸೇರುವುದು. ನಾವು ಮಹಿಳೆಯರ ವಿದ್ಯಾಭ್ಯಾಸದ ವಿಷಯದಲ್ಲಿ ಸಂಪೂರ್ಣ ಸಹಕರಿಸಿ ಕೆಲಸಮಾಡಿರುವೆವು. ಈ ಸಭೆಗೆ ಆಗಮಿಸಿರುವ ಮಹಿಳೆಯರೆಲ್ಲರೂ ಆ ಸಭೆಗೂ ದಯೆಮಾಡಿಸಿ ಅಲ್ಲಿಯ ಕಾರ್ಯಕಲಾಪಗಳಿಗೆ ಸೂಕ್ತಸಲಹೆಗಳನ್ನಿತ್ತು ಅದನ್ನೂ ಸಹ ಜಯಪ್ರದವಾಗಿ ಮಾಡುವರೆಂದು ಆಶಿಸುತ್ತೇನೆ. ಏಕೆಂದರೆ ಭರತಖಂಡದ ಭವಿತವ್ಯಕ್ಕೆ ಸ್ತ್ರೀಯರ ವಿದ್ಯಾಭ್ಯಾಸವು ವಿಶೇಷ ಸಹಕಾರಿಯಾಗುವುದು. ಬನಾರಸ್ಸಿನಲ್ಲಿ ಮಹಿಳೆಯರಿಗೋಸ್ಕರ ಸೆಂಟ್ರಲ್ ಟ್ರೇನಿಂಗ್ ಇನ್ಸ್ಟಿಟ್ಯೂಟ್ ಎಂಬ ಒಂದು ಶಾಲೆಯನ್ನು ನಿರ್ಮಿಸುವ ಏರ್ಪಾಡು ನಡೆದಿರುವುದು. ನಿಮ್ಮ ಜನರ

[6ನೇ ಘಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜನವರಿ ತಾ|| ೫ ನೆಯ ಸೋಮವಾರ.

ನಿರಾಭಾರಿ.

ನಮ್ಮ ಪತ್ರಿಕೆಯ ಆಚೆಯವಾರದ ಸಂಚಿಕೆಯಲ್ಲಿ ವೀರಶೈವಸಿದ್ಧಾಂತವನ್ನನುಸರಿಸಿ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬೀ ಮೂವರ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದುದು ಸರಿಯಷ್ಟೆ! ಅದನ್ನೇ ಮುಂದುವರಿಸುತ್ತೇವೆ.

ನಿರಾಭಾರಿಯೆಂಬ ಶಬ್ದವು ಅವಯವಾರ್ಥದಿಂದ ಬಂದುದಲ್ಲದೆ, ರೂಢಿಯಿಂದಾಗಲಿ, ತಂದೆಯಿಂದ ಮಗನಿಗೆ ನಾಮಕರಣ ಮಾಡಲ್ಪಡುವ ಶಿವಪ್ಪ, ಶಂಕರಪ್ಪ ಮುಂತಾದ ಶಬ್ದಗಳಂತೆ ಕೇವಲ ಅಂಕಿತದಿಂದಾಗಲಿ ಬಂದುದಲ್ಲ; ಇದು ರೂಢಿಯಿಂದಾಗಲಿ ಅಂಕಿತದಿಂದಾಗಲಿ ಬಂದುದಾಗಿದ್ದರೆ ಯಾರು ಬೇಕಾದರೂ ನಿರಾಭಾರಿಗಳೆಂದು ಕರೆಯಿಸಿಕೊಳ್ಳಬಹುದಾಗಿತ್ತು. ಈ ನಿರಾಭಾರಿಯೆಂಬ ವ್ಯವಹಾರವು ಕೇವಲ ಯೋಗಾರ್ಥದಿಂದಲೇ ಬರಬೇಕಾಗಿದೆಯೇ ಹೊರತು ಬಲಾತ್ಕಾರದಿಂದ ಬರಲಾರದು. "ನಿವೃತ್ತಕರ್ಮಭಾರತ್ವಾನ್ನಿರಾಭಾರ ಇತಿಸ್ಮೃತಃ" ಯಾರು ಪ್ರಾಪಂಚಿಕವ್ಯವಹಾರವನ್ನೆಲ್ಲಾ ತ್ಯಜಿಸಿರುವರೋ ಅವರೇ ನಿರಾಭಾರಿಗಳೆಂಬ ಸಿದ್ಧಾಂತೋಕ್ತಿಯಿಂದ ಇದೇ ಅರ್ಥವು ಸ್ಪಷ್ಟವಾಗುತ್ತದೆ. ಹಾಗೆ ಯೋಗಾರ್ಥವನ್ನು ಬಿಟ್ಟು ಸಿದ್ಧಾಂತಕ್ಕೆ ವಿರೋಧವಾಗಿ ಒಬ್ಬ ನಿರಾಭಾರಿಯು ಮೃತ್ಯುವಶವಾದರೆ ಅವನ ಸ್ಥಾನದಲ್ಲಿ ಮತ್ತೊಬ್ಬನು, ಅವನು ತೀರಿದರೆ ಬೇರೊಬ್ಬನು. ಹೀಗೆ ನಿರಾಭಾರಿಗಳೆಂದು ಹೇಳಿಸಿಕೊಳ್ಳುವುದು ಅದು ಕೇವಲ ಹಾಸ್ಯಾಸ್ಪದವಾಗಿಯೂ, ನಾಟಕವಾಗಿಯೂ ಪರಿಣಮಿಸುವುದಲ್ಲದೆ, ತಂದೆಯು ಮಗನನ್ನು ಫಾಲಾಕ್ಷನೆಂದು ಕರೆದುಕೊಳ್ಳುವಂತೆ ಕೇವಲ ಅಂಕಿತನಾಮವಾಗಿ ಪರಿಣಮಿಸುತ್ತದೆ. ಸಿದ್ಧಾಂತರೀತಿಯಾಗಿ ಜಾತಿಕುಲಾಶ್ರಮಗಳ ತೊಡಕಿಲ್ಲದ ಈ ನಿರಾಭಾರಿಯೆಂಬುವನು ಸಿದ್ಧವರ್ಗದಲ್ಲಿ ಸೇರುತ್ತಾನಲ್ಲದೆ ಸಾಧಕವರ್ಗದಲ್ಲಿ ಸೇರುವುದಿಲ್ಲ. ಯಾವನು ಸಾಧಕನೋ ಅವನೇ ಜಾತಿಕುಲಾಶ್ರಮಗಳಿಂದ ಬದ್ಧನಾಗುತ್ತಾನೆ. ದೀಕ್ಷಾಸಮಯದಲ್ಲಿ ಶ್ರೀಗುರುವಿನಿಂದುಪದೇಶಿಸಲ್ಪಟ್ಟ ಉಪಾಸನಾಸಾಮರ್ಥ್ಯವನ್ನು ಪಡೆದು ಪರಿಪಕ್ವಚಿತ್ತನಾಗಿ ವೈರಾಗ್ಯವನ್ನವಲಂಬಿಸಿ, ಸತೀಸುತಾದಿಪ್ರಪಂಚವ್ಯಾಮೋಹವನ್ನೂ, ಹೊನ್ನು ಹೆಣ್ಣು ಮಣ್ಣಿನಾಶೆಯನ್ನೂ ಬಿಟ್ಟು "ಕರತಲಭಿಕ್ಷೆ, ತರುತಲವಾಸ" ಎಂಬುಕ್ತಿಯಂತೆ ಆಚರಿಸುತ್ತ, "ನಕುರ್ಯಾದ್ವಸ್ತುಸಂಗ್ರಹಂ" ಎಂಬ ಪ್ರಮಾಣಾನುಸಾರವಾಗಿ ಸಂಸಾರಿಗಳು ಮಾಡುವಂತೆ ಧನಧಾನ್ಯಸಂಗ್ರಹವನ್ನು ಮಾಡದೆ, ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಗಳಂತೆ ಕಾಲಕಳೆಯುತ್ತ, ದೇಹವನ್ನು ಜೀರ್ಣಗೊಳಿಸುತ್ತಿರುವವನೇ ನಿಜವಾದ ನಿರಾಭಾರಿಯೆನಿಸಿಕೊಳ್ಳುತ್ತಾನೆ. ಇದಕ್ಕೆ ವಿರುದ್ಧವಾಗಿ ಸಂಸಾರಿಗಳಂತೆ ಮನೆಮಠಗಳನ್ನು ಅಭಿವೃದ್ಧಿಗೊಳಿಸುತ್ತ ಕಟಕಮುಕುಟಾದ್ಯಾಭರಗಳಿಂದಲೂ, ಜರತಾರಿವಸ್ತ್ರಗಳಿಂದಲೂ, ಕೋರೆಮೀಸೆಗಳಿಂದಲೂ ಭೂಷಿತರಾಗಿ, ಕೊರಳಿನಲ್ಲಿ ಮಿನುಗುತ್ತಿರುವ ಮುತ್ತಿನ ಏಕಾವಳಿಯನ್ನೂ, ಪಾದಗಳಲ್ಲಿ ರತ್ನಖಚಿತನೂಪುರಗಳನ್ನೂ, ಹತ್ತುಬೆರಳುಗಳಲ್ಲಿ ಬಂಗಾರದ ಉಂಗುರಗಳನ್ನೂ ಧರಿಸಿ, ಸಾಲದುದಕ್ಕೆ ತಲೆಯಲ್ಲಿ ತುರಾಯಿಯನ್ನು ಏರಿಸಿ, ಪ್ರತಿದಿವಸವೂ ಸದ್ಯೋಘೃತದಿಂದೊಡಗೂಡಿದ ಶಾಲ್ಯನ್ನವನ್ನುಂಡು, ವಾಹನಾರೂಢರಾಗಿ ಮಹಾರಾಜರಂತೆ ನಗಾರಿ ನೌಬತ್ತುಗಳಿಂದೊಡಗೂಡಿದ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ವರ್ಷೋತ್ಸವ, ರಜತೋತ್ಸವ, ಸುವರ್ಣೋತ್ಸವಗಳಲ್ಲಿ ಆಸಕ್ತರಾದವರು ಸಾಭಾರಿಗಳಾಗುವರಲ್ಲದೆ ನಿರಾಭಾರಿಗಳು ಎಂದೂ ಆಗಲಾರರು. "ಹಸರಿಗೆ ಕ್ಷೀರಭಟ್ಟ ಕುಡಿಯಲಿಕ್ಕೆ ಮಜ್ಜಿಗೆಯಿಲ್ಲ" ಎಂಬ ಗಾದೆಯಂತೆ ಇಂಥವರು ನಿರಾಭಾರಿಗಳೆಂದು ಹೇಳಿಸಿಕೊಳ್ಳುತ್ತಬಂದರೆ "ತೇಷಾಮಿಂದ್ರಿಯನಿಗ್ರಹೋ ಯದಿಭವೇದ್ವಿಂಧ್ಯಃ ಪ್ಲವೇತ್ಸಾಗರೇ" ಎನ್ನುವಂತೆ ಇಂಥವರಿಗೆ ಇಂದ್ರಿಯನಿಗ್ರಹವಾಗುವುದೆಂತು? ಇಂದ್ರಿಯನಿಗ್ರಹವಾಗದಿದ್ದಲ್ಲಿ ಶ್ರೀಜಗದ್ಗುರು ರೇಣುಕಾದಿ ಪೂರ್ವಾಚಾರ್ಯರು ಬೋಧಿಸಿದ ಪ್ರಕಾರ ಅಂಗೇಂದ್ರಿಯಗಳೆಲ್ಲವೂ ಲಿಂಗೇಂದ್ರಿಯಗಳಾಗುವುದೆಂತು? ಇಂಥ ನಾಮಧಾರಿನಿರಾಭಾರಿಗಳಿಗೆ ಷಟ್‌ಸ್ಥಲಸಿದ್ಧಿರೂಪವಾದ ಮೋಕ್ಷವೆಂಬುದಂತೂ ಶಶವಿಷಾಣದಂತೆ ಅಪ್ರಸಿದ್ಧವೇ ಸರಿ! ಎಂದಿನವರೆಗೆ ಸಂಸಾರಸಮುದ್ರದಲ್ಲಿ ಅಲೆಗಳಂತೆ ಹೊರಡುತ್ತಿರುವ ಸುಖದುಃಖಗಳ ತೊಡಕವನ್ನು ಯಾರು ತಪ್ಪಿಸಿಕೊಳ್ಳುವುದಿಲ್ಲವೋ, ಅವರು ನಿರಾಭಾರಿ ಎಂಬ ಶಬ್ದಕ್ಕೆ ಬಹುದೂರರೇ ಹೊರತು ಸಮೀಪದವರಲ್ಲ. ಜನನಮರಣಾತ್ಮಕವಾದೀ ಘೋರಸಂಸಾರವೆಂಬ ವಿಷಗರ್ತದಲ್ಲಿ ಬಿದ್ದು ಬಹಿರಿಂದ್ರಿಯಗಳಲ್ಲೆಲ್ಲಾ ವಿಷವು ವ್ಯಾಪಿಸಿ ಅಂತರಿಂದ್ರಿಯದೊಳಗೂ ಪ್ರವೇಶಿಸಿ ಮೂರ್ಛಿತನಾಗಿ ವಿಷಜ್ವಾಲೆಯಿಂದ ಬೆಂದು ಬೆಂಡಾಗಿ ಬಳಲುತ್ತಿರುವ ಈ ಹೀನಮಾನವದೇಹವನ್ನು ಆಚಾರ್ಯಭಗವತ್ಪಾದರು ಶಿವದೀಕ್ಷಾಲಿಂಗಧಾರಣೋಪದೇಶಾದಿಗಳಿಂದ ಪರಿಶುದ್ಧಗೊಳಿಸಿ, ಅವರವರ ಮಂದ-ತೀವ್ರ-ತೀವ್ರತರಶಕ್ತಿಪಾತಗಳನ್ನು ದಿವ್ಯದೃಷ್ಟಿಯಿಂದವಲೋಕಿಸಿ, ಸಾಮಾನ್ಯ ವಿಶೇಷ ಅಥವಾ ನಿರಾಭಾರಿಗಳ ಧರ್ಮರಹಸ್ಯವನ್ನು ಬೋಧಿಸಿ ಆಶೀರ್ವದಿಸುತ್ತಾರೆ. ಶಿಷ್ಯನು ಮಂದಾಧಿಕಾರಿಯಾಗಿದ್ದರೆ ಸಾಮಾನ್ಯವೀರಶೈವನೆನಿಸಿಕೊಳ್ಳುತ್ತಾನೆ. ತೀವ್ರಾಧಿಕಾರಿಯಾಗಿದ್ದರೆ ವಿಶೇಷವೀರಶೈವನೆನಿಸಿಕೊಳ್ಳುತ್ತಾನೆ. ತೀವ್ರತರಾಧಿಕಾರಿಯಾಗಿದ್ದರೆ ನಿರಾಭಾರಿಯೆನಿಸಿಕೊಳ್ಳುತ್ತಾನೆ. ಅಥವಾ ಕ್ರಮದಿಂದ ಮಂದಾಧಿಕಾರಿಯಾದ ಶಿಷ್ಯನೇ ಮುಂದೆ ತೀವ್ರತರಾಧಿಕಾರಿಯಾಗಿ ನಿರಾಭಾರಿಯೆನಿಸಿಕೊಳ್ಳಲೂಬಹುದು. ವೀರಶೈವಮತದಲ್ಲಿ ಜನ್ಮವೆತ್ತಿದವರೆಲ್ಲರೂ ನಿರಾಭಾರಿಗಳಾಗಲಾರರು. "ಸರ್ವಸಂಸಾರಸೌಖ್ಯಾನಿ ತ್ಯಕ್ತ್ವಾ ಚಿತ್ತಂ ಶಿವೇ ಲಯೇತ್" ಇತ್ಯಾದಿ ವಾಕ್ಯಗಳಂತೆ ನಿರಾಭಾರಿಯೆನಿಸಿಕೊಂಡ ಮಹಾನುಭಾವನು ಶಿವರೂಪಿಯಾಗುತ್ತಾನೆ. ಮುಮುಕ್ಷುವಾದ ಪ್ರತಿಯೊಬ್ಬ ಲಿಂಗಾಂಗಿಯೂ ಆರೂಢಸ್ಥಾನದಂತೆ ಪವಿತ್ರವಾಗಿರುವ ನಿರಾಭಾರಿಯ ಸ್ಥಲವನ್ನು ಹೊಂದುವುದಕ್ಕೆ ಅರ್ಹನಾಗಿದ್ದರೂ ಇತ್ತೀಚೆಗೆ ಒಂದೊಂದು ಜಾತಿಯಂತೆ ನಿರಾಭಾರಿಗಳ ಜಾತಿಯೇ ಒಂದು ಬೇರೆಯಾಗಿ ಮಾರ್ಪಾಡಾದುದೊಂದು ಶೋಚನೀಯವಾದ ವಿಷಯವಾಗಿದೆ. ಒಬ್ಬ ನಿರಾಭಾರಿಯು ತಾನು ತನ್ನ ಸ್ಥೂಲಶರೀರವನ್ನು ಬಿಟ್ಟರೆ ಆ ಸ್ಥಲದಲ್ಲಿ ಏನೊಂದೂ ತಿಳಿಯದ ಒಬ್ಬ ಹುಡುಗನನ್ನು ತಂದು ಕುಳ್ಳಿರಿಸಿ ಅತನನ್ನು ನಿರಾಭಾರಿಯೆಂದು ಕರೆಯುವ ಸಂಪ್ರದಾಯವನ್ನು ಇಟ್ಟುಕೊಂಡಿರುತ್ತಾರೆ. ಅಪಕ್ವಮತಿಯಾದ ಆ ಹುಡುಗನು ನಾನು ನಿರಾಭಾರಿಯಾದೆನೆಂಬ ಅಹಂಭಾವದಿಂದ, ನಾನು ಏರಿದ ಸ್ಥಲದವನೂ, ಶೂನ್ಯಸ[illegible]ವನೂ ಎಂದುಕೊಂಡು, ಅಷ್ಟಾವರಣ ಷಟ್‌ಸ್ಥಲಗಳನ್ನು ಭೂಲೋಕದಲ್ಲಿ ಸ್ಥಾಪಿಸಿ ಎಲ್ಲರನ್ನೂ ಉದ್ಧರಿಸಿದ ಜಗದಾಚಾರ್ಯರಿಗಿಂತಲೂ ತಾನು ಮೇಲೆಂದು ಬಡಬಡಿಸಲು ಪ್ರಕ್ರಮಿಸುತ್ತಾನೆ. ಅಂತಹ ವಾಸ್ತವನಿರಾಭಾರಿಯಾದವನೂ ಸಹ ತಾನು ನಿರಾಭಾರಿಯಾಗುವುದಕ್ಕೆ ಅರ್ಹವಾದ ಶಿವದೀಕ್ಷೆಯನ್ನು ತನಗೆ ಮಾಡಿದವರಾರು? ಈ ಮತಕ್ಕೆ ಮೂಲಾಚಾರ್ಯರಾರು? ಶಿವಲಿಂಗವನ್ನು ಅನುಗ್ರಹಿಸಿದವರಾರು? ಅವರನುಗ್ರಹದಿಂದಲ್ಲವೇ ಈ ದಶೆಯು ನನಗುಂಟಾದುದು? ಎಂದು ಪ್ರತಿಕ್ಷಣವೂ ಆ ಜಗದಾಚಾರ್ಯರ ನಾಮಸ್ಮರಣವನ್ನು ಮಾಡುತ್ತಿರುವಲ್ಲಿ, ಇನ್ನು ಕೇವಲ ಹಸಿವು ಬಾಯಾರಿಕೆಗಳಿಂದ ಕೂಡಿರುವ ಈ ಆಭಾಸನಿರಾಭಾರಿಗೆ ಜಗದಾಚಾರ್ಯರಲ್ಲಿ ಎಷ್ಟರಮಟ್ಟಿಗೆ ಭಕ್ತಿಯು ಇರಬೇಕೆಂಬುವುದನ್ನು ಬೇರೆ ಹೇಳಬೇಕಾಗಿಲ್ಲ. ಮತಸ್ಥಾಪನಾಚಾರ್ಯರು ಸಾಮಾನ್ಯ-ವಿಶೇಷ-ನಿರಾಭಾರಿಗಳಿಗೆಲ್ಲಾ ಮುಖ್ಯಗುರುಗಳಾಗಿರುತ್ತಾರೆ. ಈ ಸ್ವರೂಪವನ್ನು ತಿಳಿಯದೆ ಮನಬಂದಂತೆ ನಡೆದವರಿಗೆ ಲಿಂಗಾಂಗಸಾಮರಸ್ಯವು ಸಂಘಟಿಸುವದಿಲ್ಲವಾದುದರಿಂದ ವೀರಶೈವಧರ್ಮವನ್ನು ಅನುಷ್ಠಿಸಲಿಚ್ಛೆಯುಳ್ಳ ಸಕಲಾಶ್ರಮಿಗಳೂ ಮೂಲಮತಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯಜೀವಿಗಳಾಗಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು.

ರಾಜಧಾನಿಯ ಪ್ರಸಿದ್ಧ ವರ್ತಕರಾದ ಮ|| ರಾ|| ಧರ್ಮಪ್ರಕಾಶ ಡಿ. ಬಸುಮಯ್ಯನವರು ತಗಡೂರು ಖಾದೀಸಂಸ್ಥೆಗೆ 500 ರೂಪಾಯಿಗಳನ್ನು ಕೊಟ್ಟಿರುವರು ಸ್ತುತ್ಯ!

ಮಿ|| ಅನ್ನಪುಷ್ಪಂ, ಬಿ.ಎ., ಎಂಬ ಕ್ರೈಸ್ತ ಸ್ತ್ರೀಯು ಹಿಂದೂಧರ್ಮವನ್ನು ಸ್ವೀಕರಿಸಿ ಹಾಸನದಲ್ಲಿ ವ್ಯವಸಾಯದ ಇಲಾಖೆಯ ಡೆ|| ಡೈರೆಕ್ಟರ್ ಮಿ|| ವೆಂಕಟರಾಯರನ್ನು ಮದುವೆಯಾದಳೆಂದು ಕೇಳುತ್ತೇವೆ.

ರಾಜಧಾನಿಗೆ ಸಮೀಪದಲ್ಲಿರುವ ರಾಯನಕೆರೆಯಲ್ಲಿ ಕೆಲವರು ಒಂದು ದೊಡ್ಡ ಮೊಸಳೆಯನ್ನು ಹಿಡಿದು ಅದನ್ನು ಗಾಡಿಯ ಕೆಳಗೆ ದೊಡ್ಡ ಕೋಲೆಯಂತೆ ಕಟ್ಟಿಕೊಂಡು ಬಂದು ಚಾಸಬಂಗಲೆಗೆ ಸಾಗಿಸಿದರು. ಇದರ ಅದ್ಭುತಾಕಾರವನ್ನು ನೋಡಿ ಬಹು ಜನರು ಆಶ್ಚರ್ಯಪಟ್ಟರು.

ರಾಜಧಾನಿಯ ವೆಸ್ಲಿಯನ್ ಮಿಷನ್ ಪ್ರೆಸ್ಸಿನವರೂ ಮೆ|| ಕೆ. ವಿ. ರಾಮಶೆಟ್ಟಿ ಅಂಡ್ ಕಂಪನಿಯವರೂ, ಮೆ|| ಎಸ್. ಎನ್. ಪಂಡಿತರೂ, ಮದ್ರಾಸಿನ ಮೆ|| ವ್ಯಾಕ್ಯೂಂ ಆಯಿಲ್ ಕಂಪನಿಯವರೂ ಕಳುಹಿಸಿರುವ 1931 ನೆಯ ವರ್ಷದ ಬಹು ಮನೋಹರಗಳಾದ ಕ್ಯಾಲೆಂಡರುಗಳನ್ನು ಅತ್ಯಾದರದಿಂದ ಸ್ವೀಕರಿಸಿದ್ದೇವೆ.

ರಾಜಧಾನಿಯಲ್ಲಿ ನೆರವೇರಿದ ಅಖಿಲಭಾರತಾಯುರ್ವೇದ ಸಮ್ಮೇಳನದ ಕೊನೆಯ ದಿವಸ ಧರ್ಮಪ್ರಕಾಶ ಡಿ. ಬಸುಮಯ್ಯನವರು ಅಧ್ಯಕ್ಷರಾದ ಕವಿರಾಜ ಗಣನಾಥಸೇನರವರ ಹೆಸರಿನಲ್ಲಿ 1000 ರೂಪಾಯಿಗಳನ್ನು ಕೊಟ್ಟು, ಅದರ ಉತ್ಪತ್ತಿಯಿಂದ ಆಯುರ್ವೇದ ವಿದ್ಯಾರ್ಥಿಗಳಿಗೆ ಬಹುಮಾನ ಕೊಡಬೇಕೆಂದು ತಿಳುಹಿಸಿದರು. ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರೂ ಸಹ ಆಯುರ್ವೇದಶಾಸ್ತ್ರದ ಆಧಾರದ ಮೇಲೆ ಉಪನ್ಯಾಸವನ್ನು ಬರೆಯುವವರಿಗೆ 100 ರೂ. ಗಳ ಬಹುಮಾನವನ್ನು ಕೊಡುವುದಾಗಿ ಹೇಳಿದರು.

ಶ್ರೀಮದ್ಯುವರಾಜರವರ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರು ತಮ್ಮ ಸಹಾಧ್ಯಾಯಿಗಳೊಡನೆ ಕಳೆದ ತಿಂಗಳು 28 ನೆಯ ತಾರೀಖಿನ ದಿವಸ ರಾಜಧಾನಿಯಿಂದ ಹೊರಟು ಆ ದಿವಸ ರಾತ್ರಿ ಭದ್ರಾವತಿಯಲ್ಲಿ ವಾಸವಾಗಿದ್ದು ಮಾರನೆಯದಿವಸ ಜೋಗ್ ಜಲಪಾತಕ್ಕೆ ದಯಮಾಡಿಸಿ ಅಲ್ಲಿಯ ಸ್ವಭಾವಸಿದ್ಧ ಸೌಂದರ್ಯಾದಿಗಳನ್ನು ನೋಡಿ ಸಂತುಷ್ಟಚಿತ್ತರಾಗಿ ಈ ತಿಂಗಳು 1 ನೆಯ ತಾರೀಖಿನ ದಿವಸ ರಾಜಧಾನಿಗೆ ಚಿತ್ತೈಸಿದರು. ಅವರ ಸಂಗಡ ಅವರ ವಿದ್ಯಾಗುರುಗಳಾದ ಮಿ|| ಜೆ. ಟಿ. ಟರ್ನರ್‌ರವರೂ, ಮಿ|| ಡಿ. ರಾಮಯ್ಯನವರೂ, ಮಿ|| ಡಿ. ಕೃಷ್ಣರಾಜೇ ಅರಸಿನವರೂ ಹೋಗಿದ್ದರೆಂದು ತಿಳಿದುಬರುತ್ತದೆ.

ಸೆನ್ಸೆಸ್.

ಕಳೆದವಾರದ ನಮ್ಮ ಪತ್ರಿಕೆಯಲ್ಲಿ ಸೆನ್ಸೆಸ್ಸಿನ ಬಗ್ಗೆ ಒಂದು ಅಗ್ರಲೇಖ ಬರೆದಿರುವುದನ್ನು ಸರ್ವರೂ ಓದಿ ನೋಡಿರಬಹುದು. ಆ ವಿಷಯವು ಪ್ರತಿಯೊಬ್ಬರಿಗೂ ತಿಳಿಯುವಂತೆ ಸ್ಪಷ್ಟವಾಗಿ ಬರೆಯಲ್ಪಟ್ಟಿದ್ದರೂ ಕೆಲವರು ಮತ ಮತ್ತು ಜಾತಿಗಳ ವಿಷಯವು ಗೊತ್ತಾಗುವದಿಲ್ಲವೆಂದು ಬರೆದಿದ್ದಾರೆ. ಮತದ ಕಾಲಮ್ಮಿನಲ್ಲಿ "ವೀರಶೈವ" ಎಂದು ಬರೆಯಿಸಬೇಕು. ಜಾತಿಯ ಕಾಲಮ್ಮಿನಲ್ಲಿ "ಬಣಜಿಗರು, ಪಂಚಮಸಾಲಿಯವರು, ನಾಗಲೀಕರು" ಈ ರೀತಿಯಾಗಿ ತಮ್ಮ ತಮ್ಮ ಒಳಭೇದಗಳು ಯಾವವಿರುವವೋ ಅವುಗಳನ್ನು ಬರೆಯಿಸಬೇಕು. ಮತ್ತೆ ಕೆಲವರು ವೀರಶೈವರೆಂದು ನಾವು ಹೇಳಿದರೂ ಬರೆದುಕೊಳ್ಳುವವರು ಬರೆಯುವದಿಲ್ಲವೆಂದು ಬರೆಯುತ್ತಾರೆ. ಜನರು ತಮ್ಮ ಸಂಪ್ರದಾಯವನ್ನು ಹೇಳಿದಂತೆ, ಬರೆಯುವವರು ಬರೆದುಕೊಳ್ಳುವರಲ್ಲದೆ ಅದಕ್ಕೆ ವಿರೋಧವಾಗಿ ಬರೆದುಕೊಳ್ಳುವದಿಲ್ಲ. ಇದನ್ನು ಸರ್ವರೂ ಗಮನಕ್ಕೆ ತಂದುಕೊಂಡು ಸರಿಯಾಗಿ ಬರೆಯಿಸಬೇಕೆಂದಾಶಿಸುತ್ತೇವೆ.

ಕಳೆದ ತಿಂಗಳು 29 ನೆಯ ತಾರೀಖಿನ ದಿವಸ ಪ್ರಾತಃಕಾಲ ದೊಡ್ಡಬಳ್ಳಾಪುರದ ದೇವಾಂಗಜಾತಿಯ ಒಬ್ಬ ಸ್ತ್ರೀಯಳು ಕೆರೆಗೆ ಹೋಗಿ ನೀರು ತುಂಬುತ್ತಿರುವಾಗ ಬಿಂದಿಗೆಯು ಕೈತಪ್ಪಿ ಹೋಯಿತು. ಆಕೆಯು ಅದನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನಿಸಿ ನೀರಿನಲ್ಲಿ ಮುಳುಗಿದಳು. ಆಕೆಯ ಸಹಾಯಕ್ಕೆ ಹೋದ ಇಬ್ಬರು ಸ್ತ್ರೀಯರೂ ಸಹ ನೀರಿನಲ್ಲಿ ಮುಳುಗಿದರು. ಆಗ ಆ ಕೆರೆಯ ಕಾವಲುಗಾರನಾದ ಅಬ್ದುಲ್‌ರಹಿಮಾನ್ ಎಂಬವನು ಅವರನ್ನು ಉಳಿಯಿಸಿಕೊಳ್ಳಲು ಕೆರೆಯೊಳಗಿಳಿಯಲು ತಾನೂ ನೀರಿನಲ್ಲಿ ಮುಳುಗಿಹೋದನು. ಅಷ್ಟರಲ್ಲೇ ಇಮಾಮ್‌ಖಾನ್ ಸಾಹೇಬ ಎಂಬವರು ಅಲ್ಲಿಗೆ ಬಂದು ನೀರಿನಲ್ಲಿ ಮುಳುಗಿದ್ದ ಅವರೆಲ್ಲರನ್ನೂ ಹೊರಗೆ ತೆಗೆದು ಪ್ರಾಣಗಳನ್ನುಳಿಸಿದರೆಂದು ಕೇಳುತ್ತೇವೆ.

21 ನೆಯ ಅಖಿಲಭಾರತಾಯುರ್ವೇದ ಮಹಾಸಭೆಯು ಕಳೆದ ತಿಂಗಳು 27ನೆಯ ತಾರೀಖಿನ ಪ್ರಾತಃಕಾಲ 8-30 ಗಂಟೆಗೆ ಸರಿಯಾಗಿ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಬಹು ಅಟ್ಟಹಾಸದಿಂದ ನೆರವೇರಿತು. ದೇಶದೇಶಗಳಿಂದ ಭಾರತಾಯುರ್ವೇದಕೋವಿದರೂ, ಅನಂತ ಪ್ರೇಕ್ಷಕರೂ ಈ ಸಮ್ಮೇಳನಕ್ಕೆ ಆಗಮಿಸಿದ್ದರು. ಕಾರ್ಯಕಾರಿ ಮಂಡಲಿಯವರು ಅತಿಥಿಗಳಾಗಿ ಬಂದಿದ್ದವರಿಗೆಲ್ಲಾ ಉಚಿತಾಸನಗಳನ್ನೇರ್ಪಡಿಸಿ ಸಮರ್ಪಕವಾದ ಆದರಾತಿಥ್ಯಗಳನ್ನು ಮಾಡಿದರು. ಶ್ರೀ ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನರವರು ಈ ಮಹಾ ಸಭಾಧ್ಯಕ್ಷತೆಯನ್ನು ವಹಿಸಿದುದೂ, ರಾಜಕಾರ್ಯಪ್ರಸಕ್ತ ಮೆ|| ಡಿಸೋಜಾರವರು ಈ ಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸಿದುದೂ ಸಭೆಗೆ ಅತ್ಯಂತ ಭೂಷಣವಾಗಿದ್ದಿತು. 2-3 ದಿವಸಗಳ ವರೆಗೂ ಭಾರತ ವೈದ್ಯಶಾಸ್ತ್ರ ವಿಷಯಕವಾಗಿ ಅನೇಕ ಪಂಡಿತರು ತಮ್ಮ ತಮ್ಮ ಅನುಭವಗಳನ್ನು ಮುಂದಿರಿಸಿ ಉಪನ್ಯಾಸಗಳನ್ನು ಮಾಡಿದರು. ಮೈಸೂರು ದೇಶೀಯರು ಇದುವರೆಗೂ ಭಾರತಾಯುರ್ವೇದ ವಿಷಯದಲ್ಲಿ ಅನಂತ ಸಭೆಗಳನ್ನು ನಡೆಯಿಸಿ ಭಾರತೀಯರಿಗೆ ಆಯುರ್ವೇದದಲ್ಲಿ ಶ್ರದ್ಧೆಯನ್ನುಂಟುಮಾಡಿದುದಲ್ಲದೆ, ಈ ಸಾರೆ ರಾಜಧಾನಿಯಲ್ಲಿ ಈ ಮಹಾಸಮ್ಮೇಳನವನ್ನು ನಿರ್ವಿಘ್ನವಾಗಿ ನಡೆಯಿಸಿ ಜಗದ್ವಿಖ್ಯಾತರಾದರು. ಇನ್ನು ಮುಂದೆ ಖಿಲವಾಗಿ ಹೋಗಿದ್ದ ನಮ್ಮ ಪವಿತ್ರವಾದ ಆಯುರ್ವೇದಶಾಸ್ತ್ರವು ಭರತಖಂಡದಲ್ಲಿ ಇಂಥ ಮಹಾಸಮ್ಮೇಳನಗಳ ಆಧಾರದಿಂದ ಸರ್ವತ್ರ ವ್ಯಾಪಕವಾಗಿ ತನ್ನ ಪೂರ್ವವೈಭವದಿಂದ ಮೆರೆಯಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ.

ವೈಸರಾಯರವರು ಈ ತಿಂಗಳು 17 ನೆಯ ತಾರೀಖಿನ ದಿವಸ ಲೆಜಿಸ್ಲೇಟಿವ್ ಅಸೆಂಬ್ಲಿಯ ಅಧ್ಯಕ್ಷರನ್ನು ಆರಿಸಬೇಕೆಂದು ನಿರ್ಣಯಿಸಿರುವರು.

ಲಾಹೋರಿನಲ್ಲಿ ಗೌರ್ನರನ ಮೇಲೆ ಗುಂಡುಹಾರಿಸಿದ ಮೊಕದ್ದಮೆಯಲ್ಲಿ ಮಿ|| ಹರಿಕೃಷ್ಣ ಎಂಬವನನ್ನು, ಅವನ ಚಿಕ್ಕಪ್ಪನಾದ ಚಮನಲಾಲ್ ಎಂಬವನನ್ನೂ ದಸ್ತಗಿರಿಮಾಡಿರುವರು.

ಹುಬ್ಬಳ್ಳಿಯ ಸುಪ್ರಸಿದ್ಧ ವಕೀಲರೂ ಬೊಂಬಾಯಿ ಪ್ರಾ. ವ್ಯವಸಾಯಖಾತೆಯ ಸಚಿವರೂ ಆದ ಮಿ|| ಎಸ್. ಟಿ. ಕಂಬಳಿಯವರಿಗೆ ಜಾರ್ಜ್‌ಸಾರ್ವಭೌಮರು ದಿವಾನ್‌ಬಹದ್ದೂರ್ ಎಂಬ ಪ್ರತಿಷ್ಠೆಯನ್ನು ದಯಪಾಲಿಸಿರುವರು.

ಬೊಂಬಾಯಿಪಟ್ಟಣದ ಮ್ಯುನಿಸಿಪಾಲಿಟಿಗೆ ಪ್ರಾಥಮಿಕಶಿಕ್ಷಣಕ್ಕಾಗಿ ಸರ್ಕಾರದವರು ಪ್ರತಿವರ್ಷವೂ ಕೊಡುತ್ತಿದ್ದ ಗ್ರಾಂಟನ್ನು, ಆರ್ಥಿಕಸ್ಥಿತಿಯು ಕುಗ್ಗಿದ್ದುದರಿಂದ ಮುಂದಿನವರ್ಷದಿಂದ ಶೇಕಡಾ 5 ರಂತೆ ಕಮ್ಮಿಮಾಡಿಕೊಡುವರಂತೆ!

ಮುಂದಿನ ವೈಸರಾಯರಾಗಿ ನೇಮಕವಾಗಿರುವ ಲಾರ್ಡ್ ವಿಲಿಂಗ್ಡನ್‌ರವರು ಏಪ್ರಿಲ್ 17 ನೆಯ ತಾರೀಖಿನ ದಿವಸ ಹಿಂದೂಸ್ಥಾನಕ್ಕೆ ಆಗಮಿಸುವರೆಂದೂ, ಮರುದಿವಸವೇ ಲಾರ್ಡ್ ಇರ್ವಿನ್‌ರವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸುವರೆಂದೂ ತಿಳಿದುಬರುತ್ತದೆ.

ಗದಗಿನ ವಕೀಲರಾದ ಮ|| ರಾ|| ದತ್ತಾತ್ರೇಯ ನಾಡಗೀರರವರು ಕ್ರಿ. ಲಾ. ಅ. ಆಕ್ಟ್ ಪ್ರಕಾರ ದಸ್ತಗಿರಿಮಾಡಲ್ಪಟ್ಟು 4 ತಿಂಗಳುಗಳ ಕಠಿಣಶಿಕ್ಷೆ ಮತ್ತು 200 ರೂ. ಜುಲ್ಮಾನೆ ಅಥವಾ 1 ತಿಂಗಳು ಶಿಕ್ಷೆಗೆ ಗುರಿಮಾಡಲ್ಪಟ್ಟು "ಸಿ" ಕ್ಲಾಸಿನಲ್ಲಿಡಲ್ಪಟ್ಟಿರುವರು.

ರಾಮದುರ್ಗದ ವೇ|| ಮುರುಘಾರಾಧ್ಯಶಾಸ್ತ್ರಿಗಳು ಉಪ್ಪಿನಕಾಯಿದೆ ಪ್ರಕಾರ ಗುರಿಮಾಡಲ್ಪಟ್ಟಿರುವ 4 ತಿಂಗಳುಗಳ ಶಿಕ್ಷೆಯ ಜೊತೆಯಲ್ಲಿ ಇ. ಪಿ. ಕೋಡು 117 ನೆಯ ಸೆಕ್ಷನ್ ಪ್ರಕಾರ ಪುನಃ 3 ತಿಂಗಳುಗಳ ಕಠಿಣಶಿಕ್ಷೆಗೆ ಗುರಿಯಾಗಿರುವರೆಂದು ತಿಳಿದುಬರುತ್ತದೆ.

ಚೀನಾದೇಶದಲ್ಲಿ ಪೀಕಿಂಗಿನಿಂದ ಮುಕ್ಡೆನ್ನಿಗೆ ಹೋಗುತ್ತಿದ್ದ ರೈಲ್ವೆಗಾಡಿಯು ಬಿದ್ದು, ಇಂಜನ್ನಿನ ಬಾಯಿಲರಿಗೆ ಬೆಂಕಿಹತ್ತಿ ಅನೇಕ ಗಾಡಿಗಳು ಸುಟ್ಟುಹೋದುವಲ್ಲದೆ ಅನೇಕರು ಸುಟ್ಟು ಭಸ್ಮೀಭೂತರಾದರು. ಸುಮಾರು 80 ಜನರು ಮೃತಪಟ್ಟಿರುವರು. 40 ಜನರಿಗೆ ಗಾಯಗಳಾಗಿವೆ.

ಚಿನ್ನಾರ್ ಫಾರೆಸ್ಟ್ ಕೇಸಿನಲ್ಲಿ ದಸ್ತಗಿರಿ ಮಾಡಲ್ಪಟ್ಟ 47 ಜನರು 3 ಚಿಕ್ಕ ಕೋಣೆಗಳಲ್ಲಿ ಇರಿಸಲ್ಪಟ್ಟಿರುವರೆಂದೂ, ಎರಡು ಕೋಣೆಗಳು 15 ಅಡಿ ಉದ್ದ 12 ಅಡಿ ಅಗಲವಿದ್ದು ಇನ್ನೊಂದು ಕೋಣೆಯು ಇನ್ನೂ ಚಿಕ್ಕದಾಗಿರುವುದೆಂದೂ, ಅವರಿಗೆ ಕೈಕಾಲು ಚಾಚಿಕೊಂಡು ಮಲಗಲೂ ಸಹ ಸರಿಯಾದಷ್ಟು ಸ್ಥಳವಿಲ್ಲವೆಂದೂ ಪ್ರಕಟವಾಗಿದೆ.

ಧಾರವಾಡ ಡಿ|| ಶಿಗ್ಗಾವಿ ತಾ|| ಮಂತ್ರವಾಡಿ ಗ್ರಾಮದಲ್ಲಿ ಶ್ರೀ ರೇವಣಸಿದ್ಧೇಶ್ವರ ಜಾತ್ರೆಯು ಇದೇ ತಿಂಗಳು 14 ನೆಯ ತಾರೀಖಿನಿಂದ ಪ್ರಾರಂಭವಾಗಿ 8 ದಿವಸಗಳ ವರೆಗೆ ನಡೆಯುವುದೆಂದೂ, ಪುರಾಣ, ಕೀರ್ತನಾದಿಗಳು ನಡೆಯುವವೆಂದೂ, ಬಂದ ಜನರಿಗಾಗಿ ದಾಸೋಹವು ಏರ್ಪಟ್ಟಿರುವದೆಂದೂ ವೇ|| ಕಂಬೋಟಿಸ್ವಾಮಿಗಳೆಂಬವರು ತಿಳುಹಿಸುತ್ತಾರೆ.

ಜಳಗಾಂವದಲ್ಲಿ ನೆರವೇರಿದ ವರ್ಣಾಶ್ರಮಧರ್ಮಸಭೆಗೆ ಅಸ್ಪೃಶ್ಯರು ತಮ್ಮನ್ನು ಬಿಟ್ಟುಕೊಳ್ಳಲಿಲ್ಲವೆಂದು ಆ ಸಭೆಯ ಮಹಾದ್ವಾರದ ಹತ್ತರ ಸತ್ಯಾಗ್ರಹವನ್ನಾಚರಿಸುತ್ತಿರುವರು. ಸುಮಾರು 29 ಜನರು ದಸ್ತಗಿರಿಮಾಡಲ್ಪಟ್ಟಿರುವರು. ಈ ಪೈಕಿ ಮೂವರು ಹೆಂಗಸರು ಇರುವರು. ಸಭೆಯಲ್ಲಿ ಹಾಕಿದ್ದ ಸ್ವಾಮಿಶ್ರದ್ಧಾನಂದರ ಭಾವಚಿತ್ರಪಟವನ್ನು ಆ ಸಭೆಯ ಮೆಂಬರರು ತೆಗೆದುಹಾಕಿದರೆಂದೂ, ಮಹಾತ್ಮಾ ಗಾಂಧಿಯವರ ಭಾವಚಿತ್ರಪಟವನ್ನೂ ಸಹ ತೆಗೆಯಲು ಪ್ರಯತ್ನಿಸಿದರೆಂದೂ, ತಿಳಿದುಬರುತ್ತದೆ.

ಕೊಲ್ಲಾಪುರ ಸಂಸ್ಥಾನಕ್ಕೆ ಸಂಬಂಧಪಟ್ಟ ಕಾಗಲ ಕರಂಜೆಸಂಸ್ಥಾನಿಕರು ಕಂದಾಯವನ್ನು ಹೆಚ್ಚಿಸಿದುದರಿಂದ ಶ್ರೀ ಮಹಾರಾಜರವರನ್ನು ಪ್ರಾರ್ಥಿಸಲು ಸುಮಾರು 2000 ಜನರು ಕಾಲು ನಡಿಗೆಯಿಂದ 50 ಮೈಲುಗಳ ವರೆಗೂ ನಡೆದು ಕೊಲ್ಲಾಪುರಕ್ಕೆ ಬಂದರೆಂದೂ, ಆದರೂ ಮಹಾರಾಜರವರ ದರ್ಶನವಾಗದೆ ದಿವಾನ್ ರಾವ್‌ಸಾಹೇಬ್ ಘೋಸಲೆಯವರು ಅವರನ್ನು ಸಮಾಧಾನಪಡಿಸಿ ಹಿಂದಕ್ಕೆ ಕಳುಹಿಸಿದರೆಂದೂ, ಅವರು ಅಲ್ಲಿಗೆ ಬಂದಾಗ ಆ ಪಟ್ಟಣದ ವರ್ತಕರು ಅವರಿಗೆ ಆದರಾತಿಥ್ಯಗಳನ್ನು ಮಾಡಿ ಸತ್ಕರಿಸಿದರೆಂದೂ ಗೊತ್ತಾಗುತ್ತದೆ.

ಪಂಡಿತ ಜವಾಹರಲಾಲರವರ ಪತ್ನಿಯವರಾದ ಶ್ರೀಮತಿ ಕಮಲಾನೆಹರೂರವರು ಜನರಿಗೆ ಕಂದಾಯ ಕೊಡದಂತೆ ಬೋಧಿಸಿದರೆಂದು ಅಲಹಾಬಾದಿನ ಆನಂದಭವನದಲ್ಲಿ ದಸ್ತಗಿರಿಮಾಡಲ್ಪಟ್ಟು ಆರು ತಿಂಗಳುಗಳ ಸಾದಾ ಶಿಕ್ಷೆಗೆ ಗುರಿಮಾಡಲ್ಪಟ್ಟರು. ಪಂಡಿತ ಮೋತೀಲಾಲನೆಹರೂರವರು ಈ ವಾರ್ತೆಯನ್ನು ಕೇಳಿ ಸಂತೋಷಪಟ್ಟರೂ, ತಮ್ಮ ಚಿಕ್ಕ ಮೊಮ್ಮಗಳೊಬ್ಬಳೇ ಮಾತಾಪಿತೃಗಳ ವಿಯೋಗದುಃಖವನ್ನನುಭವಿಸಬೇಕಾಯಿತೆಂದು ವ್ಯಾಕುಲಪಟ್ಟು, ಆ ಮೊಮ್ಮಗಳ ಲಾಲನೆಪಾಲನೆಗಳಿಗೋಸ್ಕರ ತಮ್ಮ ಮಗಳಾದ ಶ್ರೀಮತಿ ಕೃಷ್ಣಾನೆಹರೂರವರನ್ನು ಕಲಕತ್ತೆಯಿಂದ ಅಲಹಾಬಾದಿಗೆ ಕಳುಹಿಸಿದರು.

ಕಳೆದ ತಿಂಗಳು 31 ನೆಯ ತಾರೀಖಿನ ದಿವಸ ಕಾರವಾರ್ ಜಿಲ್ಲೆಯ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಬೊಂಬಾಯಿಯ ಡಿಸ್ಟ್ರಿಕ್ಟ್ ಪೋಲೀಸು ಆಕ್ಟ್ 46 ನೆಯ ಸೆಕ್ಷನ್ ಪ್ರಕಾರ ಅಂಕೋಲಾದಲ್ಲಿರುವ ಮಿ|| ಎಸ್. ಬಿ. ಪಡಕಿ ತೇಲುವಳ್ಳಿ, (2) ಮಿ|| ಜಿ. ಕೃಷ್ಣಮೂರ್ತಿ ಬೆಂಗಳೂರು, (3) ಮಿ|| ಸಿ. ಎಚ್. ಧೀರಪ್ಪ, ಬಾಗಲಕೋಟೆ, (4) ಮಿ|| ಕೆ. ಜಿ. ಕುಲಕರ್ಣಿ ಹುಬ್ಬಳ್ಳಿ, (5) ಮಿ|| ರಾಮಚಂದ್ರಭಟ್ಟ ಉಡಪಿ, (6) ಮಿ|| ಎಚ್. ಆರ್. ವೆಂಕಟರಾಮಯ್ಯ ಮೈಸೂರು, ಈ ಆರು ಜನರು ಕೂಡಲೆ ಆ ಜಿಲ್ಲೆಯನ್ನು ಬಿಟ್ಟು ಹೋಗಬೇಕೆಂದೂ, ಪುನಃ ನೋಟೀಸು ಕೊಡುವವರೆಗೂ ಆ ಜಿಲ್ಲೆಗೆ ಹಿಂದಿರುಗಬಾರದೆಂದೂ ನೋಟೀಸು ಕೊಟ್ಟಿರುವರಂತೆ!

ಶ್ರೀಯುತ ವಿಠ್ಠಲಭಾಯಿಪಟೇಲರವರ ದೇಹಸ್ಥಿತಿಯನ್ನು ಪರೀಕ್ಷಿಸಲು ಬೊಂಬಾಯಿಯಿಂದ ಕೊಯಮತ್ತೂರಿಗೆ ಬಂದಿದ್ದ ಮಿ|| ಪಿ. ಟಿ. ಪಟೇಲ್ ಮತ್ತು ಆರ್. ಪಿ. ಪಟೇಲ್‌ರವರು ತಿಳುಹಿಸುವುದೇನೆಂದರೆ:— "ಮಿ|| ಪಟೇಲರವರು ಕೇವಲ ಅಶಕ್ತರಾಗಿರುವರು. ಇವರು ಮಲಬದ್ಧ, ಅಂಡವಾಯು, ಮೂಲವ್ಯಾಧಿ ಇವುಗಳಿಂದ ನರಳುತ್ತಿರುವರಲ್ಲದೆ, ಎಡಪಾರ್ಶ್ವದ ಹೊಟ್ಟೆಯಲ್ಲಿ ನೋವು ಇರುವುದು. ಇದನ್ನು ತತ್‌ಕ್ಷಣದಲ್ಲಿಯೇ ಚಿಕಿತ್ಸೆಮಾಡಬೇಕಾಗಿರುವುದರಿಂದ ಅಲ್ಲಿ ಎಕ್ಸ್‌ರೇಯಂತ್ರದ ಮೂಲಕ ಪರೀಕ್ಷಿಸಲು ತಕ್ಕ ಅನುಕೂಲ್ಯಗಳಿರುವುದಿಲ್ಲ. ಅವರು ಸರಿಯಾದ ಚಿಕಿತ್ಸೆಯನ್ನು ತೆಗೆದುಕೊಳ್ಳಲು ಇಂಡಿಯಾದೇಶದಲ್ಲಿಯಾಗಲಿ, ಯೂರೋಪಿನಲ್ಲಿಯಾಗಲಿ ಯಾವುದಾದರೊಂದು ಅನುಕೂಲವಾದ ಸ್ಥಳದಲ್ಲಿಡಬೇಕು.

ರಾಜಮಹೇಂದ್ರದ ಸಮೀಪದಲ್ಲಿರುವ ಪೆಡ್ಡಾಪುರದ ಮಿ|| ಪಿ. ರಾಜಪರೆ ಎಂಬ ಸದ್ಗೃಹಸ್ಥರು ಧನುರ್ಮಾಸದ ವನಭೋಜನಕ್ಕೋಸ್ಕರ ಆ ಜಿಲ್ಲೆಯಲ್ಲಿರುವ ತಮ್ಮ ಆಪ್ತೇಷ್ಟರಿಗೆ ಆಮಂತ್ರಣವನ್ನಿತ್ತು ಕರೆಯಿಸಿಕೊಂಡಿದ್ದರು. ಅವರು ಹುಲ್ಲಿನಮೇಲೆ ಕುಳಿತುಕೊಂಡು ಊಟಮಾಡುತ್ತಿರುವಾಗ, 50 ಜನ ಪೋಲೀಸರೂ, 3 ಜನ ಯೂರೋಪಿಯನ್ ಸಾರ್ಜಂಟರೂ ಬಂದು ಚದುರಿಹೋಗಬೇಕೆಂದು ಆಜ್ಞಾಪಿಸಿದರು. ಅವರ ಅಪ್ಪಣೆಯನ್ನನುಸರಿಸುವುದರೊಳಗೇನೇ ಪೋಲೀಸರು ಜನರ ಮೇಲೆ ಬಿದ್ದು ಅರ್ಧಗಂಟೆಯಕಾಲ ಲಾಠೀಪ್ರಯೋಗ ಮಾಡಿದರೆಂದೂ, ಅನೇಕ ಜನರಿಗೂ ಕೆಲವು ಸ್ತ್ರೀಯರಿಗೂ ತುಂಬಾ ಗಾಯಗಳಾಗಿವೆ ಎಂದೂ, ಈ ಗಾಯಪಟ್ಟ ಜನರಿಗೆ ಚಿಕಿತ್ಸೆಮಾಡಲು ಕಾಕಿನಾಡದಿಂದ ಡಾ|| ವಿ. ಗೋಪಾಲಕೃಷ್ಣಯ್ಯನವರು ತಕ್ಕ ಉಪಕರಣಗಳೊಂದಿಗೆ ಅಲ್ಲಿಗೆ ಹೋದಾಗ ಅವರನ್ನೂ ಸಹ ಪೋಲೀಸರು ನಿರ್ದಯೆಯಿಂದ ಹೊಡೆದರೆಂದೂ ತಿಳಿದುಬರುತ್ತದೆ.

ಸ್ವೀಕಾರ.

ಧಾರವಾಡ ಡಿ|| ಹುಲಗೂರು ಗ್ರಾಮದಲ್ಲಿರುವ ಮ|| ರಾ|| ಅತ್ತೀಗೇರಿ ಸಂಗಪ್ಪನವರು ತಮ್ಮ ಪತ್ನಿಯವರಿಗೆ ಪ್ರಾಪ್ತವಾಗಿದ್ದ ಪ್ಲೇಗುರೋಗವು ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಗಳು ಸದರಿಯವರ ವಂಶಗುರುಗಳಾದ ಶ್ರೀ|| ಷ|| ಬ್ರ|| ಹಿರೇಬೆಂಡಿಗೇರಿ ಕಂಬಾಳಿಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಹಾಸನ ಡಿ|| ಹಲ್ಕೂರುಗ್ರಾಮದ ಮ|| ರಾ|| ಶ್ರೀಮಂತ ಧರ್ಮಧುರಂಧರ ಮರುಳಸಿದ್ಧಪ್ಪಶೆಟ್ಟರ ಪುತ್ರಿಯವರೂ ಮ|| ರಾ|| ಸಾಹುಕಾರ್ ರುದ್ರಪ್ಪಶೆಟ್ಟರವರ ಧರ್ಮಪತ್ನಿಯವರೂ ಆದ ಸೌ|| ಗೌರಮ್ಮನವರು ಶಿವಸಾಯುಜ್ಯವನ್ನು ಹೊಂದಿದ್ದು, ಅವರ ಆತ್ಮಶಾಂತ್ಯರ್ಥವಾಗಿ ಬೆಂಗಳೂರಲ್ಲಿ ನೆರವೇರಿದ ಸಮಾರಾಧನಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಜಿ. ಗಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ನೇ ಪುಟದಿಂದ ಮುಂದುವರಿದುದು.]

ವಿದ್ಯಾಭ್ಯಾಸದ ವಿಷಯಕ್ಕೆ ಈ ಸಭೆಯಲ್ಲಿ ಪ್ರತ್ಯೇಕವಾದ ಭಾಗವನ್ನು ಏರ್ಪಡಿಸದಿರುವುದು ನಾವು ಅದರ ವಿಷಯದಲ್ಲಿ ಅನಾದರತೋರಿಸುವೆವೆಂದರ್ಥವಲ್ಲ. ಪ್ರಾಥಮಿಕಶಿಕ್ಷಣದ ಭಾಗದಲ್ಲಿ ಅವರ ವಿದ್ಯಾಭ್ಯಾಸ ವಿಷಯಕ್ಕೆ ಹೆಚ್ಚು ಲಕ್ಷ್ಯಕೊಟ್ಟಿದ್ದೇವೆ. ಭರತಖಂಡದಲ್ಲಿರುವ ಲಕ್ಷಾಂತರ ನಿಮ್ನ ಜನರ ಅಭಿವೃದ್ಧಿಯು ಮುಂದಿನದೇಶದ ಪ್ರಗತಿಗೆ ಅತ್ಯಾವಶ್ಯಕವಾದುದಾಗಿದೆ.

ವಿದ್ವಸ್ತಣಗಳ ಪರಸ್ಪರ ಸಂಸರ್ಗವು ಉಪಾಧ್ಯಾಯರ ಸಂಘಶಕ್ತಿಯನ್ನು ಹೆಚ್ಚಿಸಲು ಕಾರಣೀಭೂತವಾಗಿರುವುದಲ್ಲದೆ ಉಪಾಧ್ಯಾಯರ ಈಗಿನ ಸ್ಥಿತಿಯನ್ನೂ ಸಹ ಸುಧಾರಿಸಲು ಸಹಕಾರಿಯಾಗುವುದು. ಉಪಾಧ್ಯಾಯರ ಸ್ಥಿತಿಯನ್ನು ಸುಧಾರಿಸುವುದು ಕೇವಲ ಅವರ ಹಿತಕ್ಕೋಸ್ಕರ ಮಾತ್ರವಲ್ಲದೆ ವಿದ್ಯಾಭ್ಯಾಸ ಪ್ರಗತಿಯ ಹಿತದೃಷ್ಟಿಯಿಂದಲೂ ಅವಶ್ಯಕವಾಗಿರುವುದು. ಶಿಕ್ಷಕವೃತ್ತಿಯನ್ನವಲಂಬಿಸಿರುವವರು ಜಗತ್ತಿನ ಯಾವ ಭಾಗದಲ್ಲಿ ನೋಡಿದರೂ ಕೇವಲ ಕಡಿಮೆಸಂಬಳದಿಂದ ದುಡಿಯಬೇಕಾಗಿದೆ. ಪ್ರಾಚೀನ ಹಿಂದೂಸ್ಥಾನದಲ್ಲಿ ಉಪಾಧ್ಯಾಯರು ಅಶನವಸನಗಳಿಗೆ ವಿದ್ಯಾರ್ಥಿಗಳ ಮೂಲಕವಾಗಿಯಾಗಲಿ ಬೇರೆ ವಿಧಾನದಿಂದಾಗಲಿ ಭಿಕ್ಷೆಬೇಡಬೇಕಾಗಿದ್ದಿತು. ಅದು ಹಾಗಿರಲಿ, ಈಗಿನ ಸ್ಥಿತಿಯಂತೂ ಇನ್ನೂ ಶೋಚನೀಯವಾಗಿದೆ. ಸಾಮಾಜಿಕಸ್ಥಿತಿಯು ಈಗಿನ ನಾಗರಿಕತೆಗನುಸರಿಸಿ ರೂಪಾಂತರವನ್ನು ಹೊಂದಿದೆ. ಲೌಕಿಕ ಸುಖವನ್ನು ತೃಣೀಕರಿಸಿ ವಿದ್ಯಾಸ್ನೇಹಿಗಳಾಗಿ ವಿದ್ಯಾಸೇವೆಯನ್ನೇ ಮುಖ್ಯಧ್ಯೇಯವಾಗಿಟ್ಟುಕೊಂಡು, ಘನವಾದ ಶಿಕ್ಷಕವೃತ್ತಿಯನ್ನು ಕೈಕೊಳ್ಳುವ ಅನೇಕಜನ ಸ್ವಾರ್ಥತ್ಯಾಗಿಗಳು ಕಂಡುಬರುವರು. ಆದರೂ ಸರಿಯಾದ ಪ್ರತಿಫಲವಿಲ್ಲದೆ ಉದಾತ್ತಧ್ಯೇಯದ ಬಲದ ಮೇಲೆಯೇ ಉಪಾಧ್ಯಾಯರು ವಿದ್ಯಾಸಂಸ್ಥೆಗಳನ್ನು ನಡೆಯಿಸುವುದು ಕ್ಲಿಷ್ಟವಾದುದಾಗಿದೆ.

ನನ್ನ ಭಾಷಣವನ್ನು ವಿರಮಿಸುವುದಕ್ಕೆ ಪೂರ್ವದಲ್ಲಿ ಜಪಾನ, ಚೀನಾ, ಜಾರ್ಜಿಯ, ಫಿಲಿಪೈನ ಮೊದಲಾದ ದೂರದೇಶದವರು ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ಆಗಮಿಸಿದುದಕ್ಕೆ ಭರತಖಂಡದ ಉಪಾಧ್ಯಾಯ ಸಂಘದವರು ತುಂಬಾ ಕೃತಜ್ಞರಾಗಿರುವರು. ಏಷಿಯಾಖಂಡದ ಬೇರೆ ಬೇರೆ ದೇಶಗಳ ಸುಶಿಕ್ಷಿತ ಪ್ರತಿನಿಧಿಗಳು ಒಂದೇ ಉಪನ್ಯಾಸವೇದಿಕೆಯ ಮೇಲೆ ಸೌಹಾರ್ದದಿಂದ ಸಮ್ಮಿಲಿತರಾಗಿರುವುದು ಇದೇ ಮೊದಲು. ಈ ಸಂಘಟನೆಯು ಏಷಿಯಾಖಂಡದ ಜಾಗೃತಿಯ ಕುರುಹುಗಳಲ್ಲೊಂದೆಂಬುದಾಗಿ ಚಾರಿತ್ರ್ಯಪೂರ್ಣವಾಗಬಹುದು. ಏಷಿಯಾಖಂಡದ ನಾವೆಲ್ಲರೂ ಒಂದೇ ನಾಗರಿಕತೆಗೆ ಭಾಗಿಗಳಾಗಿರುವುದರಿಂದ ಪರಸ್ಪರ ಒಂದು ವಿಧವಾದ ಬಾಂಧವ್ಯವಿದೆ ಎಂದು ಹೇಳಬಹುದು. ಜಪಾನಿನ ಹೊರತು ಉಳಿದ ರಾಷ್ಟ್ರಗಳು ಪಾಶ್ಚಿಮಾತ್ಯದೇಶಗಳಂತೆ ತೃಪ್ತಿಕರವಾದಷ್ಟು ವಿದ್ಯಾಭಿವೃದ್ಧಿಯನ್ನು ಹೊಂದಿರುವುದಿಲ್ಲ.

ಪಾಶ್ಚಿಮಾತ್ಯ ರಾಷ್ಟ್ರಗಳು ಅಜ್ಞಾನಾಂಧಕಾರದಲ್ಲಿ ಮುಳುಗಿರುವಾಗ ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲು ಜ್ಞಾನದ ಜ್ಯೋತಿಯನ್ನು ಹಚ್ಚಿ ಅದರ ಕಾಂತಿಯಿಂದ ಇಡೀ ಪ್ರಪಂಚವನ್ನೇ ಪ್ರಕಾಶಗೊಳಿಸಿದವರು ನಾವು. ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಇಂದಿನವರೆಗೂ ಅಸಾಧ್ಯವಾಗಿರುವ ಅಧ್ಯಾತ್ಮಜ್ಞಾನವನ್ನು ನಮ್ಮವರು ತಿಳಿದುಕೊಂಡು ಅನುಷ್ಠಾನದಲ್ಲಿ ತಂದರು. ಈಗ ನಮ್ಮ ಲೌಕಿಕಸ್ಥಿತಿಯು ಶೋಚನೀಯವಾಗಿದ್ದರೂ ನಾವು ಜಗತ್ತಿನ ಮೇಲೆ ಅದ್ಭುತಪರಿಣಾಮವನ್ನುಂಟುಮಾಡಿದ ಪ್ರಾಚೀನ ನಾಗರಿಕತೆಯಲ್ಲಿ ಭಾಗಿಗಳಾಗಿರುವುದರಿಂದ ಜಗತ್ತಿನ ರಾಷ್ಟ್ರಗಳಲ್ಲಿ ಹೆಮ್ಮೆಯಿಂದಲೂ ದರ್ಪದಿಂದಲೂ ತಲೆಯೆತ್ತಿನಿಂತುಕೊಳ್ಳಬಹುದು. ಹಿಂದೆ ಇದ್ದ ನಮ್ಮ ಘನತೆಯನ್ನು ಪುನಃ ಸಂಪಾದಿಸಲು ಜಾಗರೂಕತೆಯಿಂದ ಕೆಲಸಮಾಡೋಣ! ಈಗಿನ ನವಜೀವನದಲ್ಲಿ ನಾವು ಧೈರ್ಯದಿಂದ ಕೆಲಸಮಾಡಿ ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಔನ್ನತ್ಯದಲ್ಲಿ ಹಿಂದುಳಿಯಲಿಲ್ಲವೆಂದು ಚರಿತ್ರೆಯಲ್ಲಿ ಉಲ್ಲೇಖಿಸಲ್ಪಡಲಿ.

ಏಷಿಯಾಖಂಡದ ಅನೇಕ ರಾಷ್ಟ್ರಗಳಿಗಿಂತ ಕಡಿಮೆ ರಾಜಕೀಯಸ್ವಾತಂತ್ರ್ಯವನ್ನು ಹೊಂದಿರುವ ನಮ್ಮಾ ದೇಶಕ್ಕೆ ನಿಮ್ಮಗಳ ಸುಬಾಗಮನವಿನ್ನೇಯಲು ದ.ಚಿಸೆನಿಸು...

ತ್ತಿದೆ. ಆದರೂ ಅಗಣಿತ ಪ್ರಾಚೀನ ವಸ್ತುಗಳಿಂದಲೂ, ನಾಶರಹಿತಗಳಾದ ಅನೇಕ ಕಲಾಕೌಶಲ್ಯಗಳಿಂದಲೂ, ಅನಂತ ಸುಂದರದೃಶ್ಯಗಳಿಂದಲೂ, ರಾಜಕೀಯ ಚೈತನ್ಯದ ಚಿಹ್ನೆಗಳಿಂದಲೂ, ಘನತರವಾದ ವಿದ್ಯಾಸಂಸ್ಥೆಗಳಿಂದಲೂ ನವಿನ್ಯ ಭಾರತಭೂಮಿಯು ನಿಮ್ಮ ಆಗಮನಕ್ಕೆ ಸಂತೋಷವನ್ನೀಯದಿರಲಾರದು. ಇನ್ನೊಂದು ಸಾರೆ ಏಷಿಯಾಖಂಡದ ಮಹಾಸಭೆಯು ಇಲ್ಲಿ ಸೇರಿರುವಾಗ ಭರತಖಂಡವು ಈಗಿರುವುದಕ್ಕಿಂತಲೂ ಹೆಚ್ಚಿನ ರಾಜಕೀಯಸ್ವಾತಂತ್ರ್ಯವನ್ನು ಪಡೆದು ಅತ್ಯಂತಗೌರವದಿಂದ ಶೋಭಿಸುವುದೆಂದು ಧೈರ್ಯದಿಂದ ಹೇಳಬಲ್ಲೆನು ಎಂದು ಹೇಳಿ ಪ್ರೊ|| ಶೇಷಾದ್ರಿಯವರು ತಮ್ಮ ಭಾಷಣವನ್ನು ಪೂರ್ತಿಗೊಳಿಸಿದರು. ಆ ಸಭೆಯು ಸುದೈವದಿಂದ ಪಂಡಿತ ಮದನಮೋಹನಮಾಲವೀಯರವರು ಕಳೆದ ತಿಂಗಳು 30 ನೆಯ ತಾರೀಖಿನ ದಿವಸದ ಅಧಿವೇಶನಕ್ಕೆ ಆಗಮಿಸಿ "ವಿದ್ಯೆಯು ಯಾವ ಜನಾಂಗದ ಅಥವಾ ವಂಶದ ಗುತ್ತಿಗೆಯಲ್ಲ. ಇದು ಪ್ರತಿಯೊಬ್ಬ ಮಾನವ ಪ್ರಾಣಿಗೆ ಅತ್ಯಾವಶ್ಯಕವಾದ ವಿಷಯವು. ಪ್ರತಿಯೊಬ್ಬರೂ ದ್ವೇಷಾಸೂಯೆಗಳನ್ನು ಬಿಟ್ಟು ಶಾಂತಿಯನ್ನೂ ಸೌಹಾರ್ದವನ್ನೂ ವೃದ್ಧಿಪಡಿಸಬೇಕೆಂದು ಅಮೃತವಾಣಿಯಿಂದ ಹೇಳಿದರು. ಸರ್ ಸಿ. ವಿ. ರಾಮನ್‌ರವರಿಗೆ ನೋಬೆಲ್ ಬಹುಮಾನವು ದೊರೆತುದಕ್ಕಾಗಿ ಅವರಿಗೆ ಅಭಿನಂದನ ಪೂರ್ವಕವಾದ ಗೊತ್ತುವಳಿಯೊಂದು ತೀರ್ಮಾನವಾಯಿತು. ಆ ಸಭೆಯಲ್ಲಿ ಡಾ|| ಬೆರ್ಫುಂಟಮ್ಮನವರೂ, ಮಿ|| ಬಾಬುಭಗವಾನದಾಸ್, ಮಿ|| ಬಿಯಯುದ್ದೀನ ಮೊದಲಾದ ವಾಗ್ಮಿಗಳು ಭಾಷಣ ಮಾಡಿದರು. ಆ ದಿವಸದ ಸಭಾಧ್ಯಕ್ಷಸ್ಥಾನವನ್ನು ವಹಿಸಿದ್ದ ಮಿ|| ವಾಂಗರವರು ಈ ಸಭೆಯನ್ನು ಮುಂದಿನ ವರ್ಷ ಚೀನಾದೇಶದಲ್ಲಿ ನಡೆಯಿಸಲು ಅನುಮತಿನ್ನಿತ್ತು ಆಮಂತ್ರಣವನ್ನು ಸ್ವೀಕರಿಸಬೇಕೆಂದು ಆಶಿಸಿದರು.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳುವುದು ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಬಹಿಷ್ಕಾರದ ವಿಜಯ.

೧೯೩೦ ನೇ ಏಪ್ರಿಲ್ ೧ ರಿಂದ ಅಕ್ಟೋಬರ ೩೧ರ ವರೆಗೆ (ಏಳು ತಿಂಗಳಲ್ಲಿ) ಹಿಂದುಸ್ಥಾನಕ್ಕೆ ಬಂದ ಪರದೇಶೀ ಸರಕುಗಳ, ಅದರ ಹಿಂದಿನ ವರ್ಷ ಬಂದ ಸರಕುಗಳ ಬೆಲೆಯ ಪಟ್ಟಿಯನ್ನು ಈ ಕೆಳಗೆ ಕೊಟ್ಟಿದೆ.

(ಸರಕಿನ ಹೆಸರು)	(೧೯೨೯ ರಲ್ಲಿ ರೂ.)	(೧೯೩೦ ರಲ್ಲಿ ರೂ.)
ಮದ್ಯಪಾನ	೧,೬೬,೩೬,೮೮೬	೧,೪೧,೯೩,೬೭೪
ಸಕ್ಕರೆ	೯,೧೬,೩೩,೩೯೩	೬,೧೯,೬೭,೮೬೬
ಹೊಗೆಸೊಪ್ಪು	೧,೩೭,೮೨,೯೬೩	೬೯,೪೦,೬೨೫
ಸಿದ್ಧವಾದ ಉಡುಪು	೧,೪೮,೩೬,೪೧೭	೧,೧೯,೩೫,೪೪೯
ಸ್ಟೇಶನರಿ ಸಾಮಾನುಗಳು	೪,೪೨,೯೮,೨೯೪	೩,೩೯,೫೨,೧೧೪
ಬಣ್ಣಗಳು	೨,೧೫,೦೮,೫೯೧	೨,೨೮,೦೦,೯೪೪
ಗಾಜಿನ ಸಾಮಾನು, ಮಣ್ಣಿನಪಾತ್ರೆ	೧,೯೧,೪೪,೩೨೪	೧,೯೧,೪೪,೨೨೪
ವಸ್ತ್ರ ನೂಲು ಮುಂತಾದುವು	೩೫,೧೮,೮೬,೧೬೧	೧೮,೨೮,೪೫,೧೬೨
ರೇಶಿಮೆ ವಸ್ತ್ರ, ನೂಲು	೨,೧೩,೪೯,೫೪೪	೧,೨೬,೨೦,೧೪೯
ಉಣ್ಣೆ ವಸ್ತ್ರ, ನೂಲು	೨,೮೯,೮೨,೧೪೩	೧,೬೪,೬೯,೦೮೮
ನಾರಿನ ವಸ್ತ್ರ, ನೂಲು	೧೩,೬೬,೬೪೨	೧೧,೬೯,೨೬೮
ಇತರ ವಸ್ತ್ರ ಮತ್ತು ನೂಲು	೩,೦೯,೨೫,೦೦೨	೨,೪೦,೪೯,೬೨೦

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವೆ, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[23]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಎನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಶುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಏಕೋರಾಮಾರಾಧ್ಯ ... ಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಧನ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ ಆಕಾರದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮಿಶನ್. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮಿಶನ್. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿನಿತ್ಯ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರಾದಿ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ಪಗಡೆ, ಕೆಮ್ಮು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಿಗೂ ವಿಲ್ಲದೆ ಕೂತಲ್ಲೇ ಕೂಡಿರಬೇಕಾದವರಿಗೂ, ಧೀಮಂತ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ಮನೆಯಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[38] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ಶಿಶ್ನಶೈಥಿಲ್ಯ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಪೂರ್ಣ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[24]

ಪತ್ತೆ :—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ ? ಇದಕ್ಕೆ ಇದರಿಂದ ಸುಖವಾಗಬೇಕೆಂಬ ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿ ರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕಾಣಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶೀಘ್ರವಾಗಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ತಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—0—0.

ಟಾನಿಕ್ ವಿಶ್ಮ ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[22] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೭೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜ್ಜ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[25] ಪೋ. ಬಾ. ೫೧೧೦, ಮದರಾಸ್.

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕದಾಜ್ಞ್ಯಾರಹಸ್ಯ	೪ ಆಣೆ
ಶಿವತತ್ವಚಿಂತಾಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಸಟಿಕ ರಚಪಿಕ್ಷತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಟಿಕವೇದಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀವ್ಯಾಖ್ಯಾ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ಓಂ.

ಸುಸಮಯ ! **ಸಾಲವು ದೊರಕುವುದು !!** **ಅಪೂರ್ವಲಾಭ !!!**

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರೆಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (6)

ಮೆ॥ ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್. **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಃ ಪಂಚಾಸ್ಯಪೀಠಾಧಿಪಃ । ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ॥
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ । ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಪದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಜನವರಿ ೧೯೩೧ [ಸಂಚಿಕೆ ೩೭

ಸಿದ್ಧಾಂತಸಾರಾವಳಿ.

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ.

ಆಗಮಪರಿಜ್ಞಾನ.

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಕೇದಾರ ಪೀಠಾಧೀಶ್ವರರ ಆಂದೋಲಿಕೋತ್ಸವ.

ಗದಗ ಬೆಟಗೇರಿ.

ಧಾರವಾಡ ಜಿಲ್ಹಾ ಗದಗ ಬೆಟಗೇರಿ ಟವನ್ನಿಗೆ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಚಿದ್ಘನಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಹಡಗಲಿಯಿಂದ ಫ್ರೀಗ್ರಾಂ ನಿಶ್ಚಯಿಸಿದಪ್ರಕಾರ ತಾ॥ ೫-೧-೩೧ ನೆಯ ಸೋಮವಾರ ದಿನಸ ಚತುರಂಗಬಲಸಮೇತರಾಗಿ ದಯಮಾಡಿಸಿದರು. ಕೊಣತಿ ಗ್ರಾಮದ ಯಾವತ್ತು ಭಕ್ತಮಾಹೇಶ್ವರರು ಮಹಾಗುರುಗಳನ್ನು ಎದುರ್ಗೊಂಡು ಪುಷ್ಪಾಂದೋಲಿಕೆಯಲ್ಲಿ ಮೂರ್ತಮಾಡಿಸಿ ಒಳ್ಳೆ ವೈಭವದೊಡನೆ ಪುರಪ್ರವೇಶಮಾಡಿಸಿದರು. ಸದರಿ ಮಹೋತ್ಸವಕ್ಕೆ ಸ್ಥಳೀಯ ಭಜನಾಸಂಘದವರೂ, ನರಸಾಪುರಗ್ರಾಮದ ಪಂಚಾಚಾರ್ಯಭಜನಾಸಂಘದವರೂ ಬಂದು ಜನರ ಮನಸ್ಸಿಗೆ ಆನಂದವಾಗುವಂತೆ ಭಜನೆಯನ್ನು ಮಾಡಿದರು. ಉತ್ಸವವು ತಳಿರುತೋರಣಗಳಿಂದ ಅಲಂಕೃತವಾದ ರಾಜಬೀದಿಯಲ್ಲಿ ಹೊರಟು ವೀರಭದ್ರದೇವಸ್ಥಾನಕ್ಕೆ ಬಂದು ತಲುಪಿತು. ಬಂದೋಬಸ್ತಿಗಾಗಿ ಗವರ್ನಮೆಂಟ್ ಪೋಲೀಸರು ಬಂದಿದ್ದರು. ಇಲ್ಲಿಯ ಸ್ವಮತ ಪರಮತೀಯ ಜನಸಮೂಹವು ಒಕ್ಕಟ್ಟಿನಿಂದ ಉತ್ಸವವನ್ನು ನೆರವೇರಿಸಿದ್ದನ್ನು ನೋಡಿ ಸರ್ವರಿಗೂ ಆನಂದವೆನಿಸಿತು. ಈ ಪ್ರಕಾರ ಪ್ರತಿಯೊಂದು ಸಮಾಜದ ಗುರುಗಳು ಬಂದ ಕಾಲದಲ್ಲಿ ಒಗ್ಗಟ್ಟಿನಿಂದ ಕಾರ್ಯವನ್ನು ನಡೆಯಿಸುವದು ನಮ್ಮ ಆರ್ಯಾವರ್ತಭೂಮಿಗೆ ಶ್ರೇಯಸ್ಕರವು. ಶ್ರೀ ಜಗದ್ಗುರುಗಳು ಪಂಚಾಚಾರ್ಯರ ಜಯಘೋಷವು ಭೋರ್ಗರೆಯುತ್ತಿರಲು ಸಿಂಹಪೀಠವನ್ನು ಅಲಂಕರಿಸಿದರು. ಅನಂತರ ಸಂಸ್ಥಾನದ ಸರ್ವಾಧಿಕಾರಿಗಳಾದ ಶ್ರೀ॥ ಷ॥ ಬ್ರ॥ ರೇವಣಸಿದ್ಧಶಿವಾಚಾರ್ಯಪಟ್ಟದಸ್ವಾಮಿಗಳು ಬೃಹನ್ಮಠ ಚಿಕ್ಕಮಗಳೂರು ಇವರು ವೀರಶೈವ ಪೀಠಾಚಾರ್ಯರು ಸಂಚಾರಮಾಡದೆ ಇರೋಣದರಿಂದ ಸಮಾಜದ ಕಟ್ಟಳೆಗಳು ಕೇವಲ ಶಿಥಿಲಗಳಾಗಿವೆ; ಪ್ರತಿಯೊಂದು ಪೀಠಾಧಿಪತಿಗಳು ಭಕ್ತವೃಂದಕ್ಕೆ ದರ್ಶನಾಶೀರ್ವಾದಗಳನ್ನು ಮಾಡುತ್ತ ದೇಶಮಧ್ಯದಲ್ಲಿ ಸಂಚರಿಸುವದು ಯೋಗ್ಯವೆಂಬ ವಿಷಯದಲ್ಲಿ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇವರ ಭಾಷಣವನ್ನು ಕೇಳಿ ಸರ್ವರೂ ಆನಂದಪಟ್ಟರು. ಸಂಸ್ಥಾನದ ವಿದ್ವಾನ್ ಅನ್ನದಾನಶಾಸ್ತ್ರಿಗಳು ಹುಲಿಕಂಥಿ ಮಠ ಎರೆಹಂಚಿನಾಳ ಇವರು ಪೀಠದ ಪ್ರಾಚೀನತ್ವವನ್ನೂ ರಾಜರಿಂದ ಕೊಡಲ್ಪಟ್ಟ ಗೌರವಾದಿಗಳನ್ನೂ ಕುರಿತು ಹೇಳಿದರು. ಆ ಮೇಲೆ ಜಗದ್ಗುರುಗಳು ತಮ್ಮ ಅಮೃತವಾಣಿಯಿಂದ ಮಾನವಧರ್ಮಕ್ಕೆ ಭಕ್ತಿಯೇ ಮುಖ್ಯವಾದುದೆಂದು ಅಪ್ಪಣೆಕೊಡಿಸಿದರು. ಆ ಮೇಲೆ ಜಗದ್ಗುರುಗಳ ಅನುಷ್ಠಾನಕ್ಕೆ ಸಮಯವಾದುದರಿಂದ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಪ್ರಕಾರ ಗುರುಭಕ್ತಿಯನ್ನು ವ್ಯಕ್ತಮಾಡಿದ ಬೆಟಗೇರಿಗ್ರಾಮದ ಸದ್ಭಕ್ತರೇ ಧನ್ಯರು. ಸದರಿಯವರ ಮಾರ್ಗವನ್ನು ಪ್ರತಿಯೊಂದು ಗ್ರಾಮದವರೂ ಅನುಸರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಲೆಂದು ಹಾರೈಸುವ,

ಓರ್ವ ಉತ್ಸವಭಾಗಿ.

ಅಲಹಾಬಾದಿನಲ್ಲಿ ಕಂದಾಯ ಕೊಡದ ಚಳವಳಿಯನ್ನು ನಡೆಯಿಸಿದ್ದಕ್ಕಾಗಿ 35 ಜನರಿಗೆ 6 ತಿಂಗಳ ಕಠಿಣ ಶಿಕ್ಷೆಯಾಯಿತು.

ಜವಾಹಿರಲಾಲರವರ ಧರ್ಮಪತ್ನಿಯವರಾದ ಶ್ರೀಮತಿ ಕಮಲಾನೆಹರೂರವರನ್ನು ಅಲಹಾಬಾದ್ ಡಿಸ್ಟ್ರಿಕ್ಟ್ ಜೈಲಿನಿಂದ ಲಕ್ನೋ ಜೈಲಿಗೆ ವರ್ಗಾಯಿಸಿರುವರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೧ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೂರು ಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ಅತ್ಯಂತ ಮನೋಹರವಾದ ಭಾವಚಿತ್ರ ದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦೦ಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಸರ್ ತೇಜ್‌ಬಹದ್ದೂರ್ ಸಪ್ರೂರವರ ಹೇಳಿಕೆ.

50 ಅಥವಾ 60 ಸಾವಿರ ಜನರು ಜೈಲಿನಲ್ಲಿರುವದು ಸರ್ಕಾರಕ್ಕೆ ಗೌರವವಾದುದಲ್ಲ. ಜೈಲಿನಲ್ಲಿರುವವರಲ್ಲಿ ಅನೇಕರು ಇಲ್ಲಿಗೆ ಬಂದಿರುವ ಪ್ರತಿನಿಧಿಗಳ ಆಪ್ತಮಿತ್ರರೂ, ಬಂಧುವರ್ಗದವರೂ ಆಗಿದ್ದಾರೆ. ಆದರೆ ಅವರು ಅತ್ಯಂತ ಶ್ರಮಪಡುತ್ತಿದ್ದಾರೆ. ಎಲ್ಲಾ ವಿಧದ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಏತಕ್ಕೆಂದರೆ; ಬ್ರಿಟಿಷ್ ಸರ್ಕಾರದಲ್ಲಿ ಅವರಿಗೆ ನಂಬಿಗೆಹೋಗಿದೆ. ನಾನು ಬ್ರಿಟಿಷ್ ಸರ್ಕಾರವನ್ನು ಬೆದರಿಸುವದಿಲ್ಲ. ಹಿಂದೂಸ್ಥಾನದ ತರುಣತರುಣಿಯರ ಯೋಚನಾತರಂಗಗಳು ಅಪಾಯಕರವಾದ ಮಾರ್ಗಗಳನ್ನು ಅನುಸರಿಸುತ್ತಿವೆಯೆಂಬುದನ್ನು ವಿಶ್ವಾಸಪೂರ್ವಕವಾಗಿ ನಿಮಗೆ ತೋರಿಸುವದೇ ನನ್ನ ಉದ್ದೇಶವಾಗಿದೆ. ದೇಶವನ್ನು ಆರ್ಡಿನೆನ್ಸ್‌ಗಳಿಂದಾಗಲಿ ಅಥವಾ ಮಿಲಿಟರಿ ಕಾನೂನುಗಳಿಂದಾಗಲಿ ಆಳುವದು ಕೇವಲ ಅನ್ಯಾಯವು. ಹಿಂದೀಯರಲ್ಲಿ ನಂಬಿಕೆಯನ್ನು ಹುಟ್ಟಿಸುವದಕ್ಕೆ ಬ್ರಿಟಿಷರಿಗೆ ಕಾಲವಿಳಂಬವಾಗಿಲ್ಲ. ಬ್ರಿಟಿಷರ ಮುಂದಿನ ಯೋಚನೆಯು ಏನೇ ಇರಲಿ, ಸದ್ಯಃ ಸಾಕಷ್ಟು ಪರಿಹಾರ ಕಾರ್ಯಗಳನ್ನು ನಡೆಯಿಸದೆ ಇದ್ದರೆ ದುಷ್ಪರಿಣಾಮವುಂಟಾಗುವುದು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮದುಜ್ಜಯಿನೀ ಸಂಸ್ಥಾನ ಪ್ರತಿನಿಧಿಗಳ ಆಗಮನವು

ನೈಜಾಂ ಇಲಾಖಾ ಕಲುಬುರ್ಗಿ ಜಿಲ್ಲಾ ಚಿತಾಪುರ ತಾಲ್ಲೂಕು ಪೈಕಿ ನಾಲ್ವಾರಗ್ರಾಮಕ್ಕೆ ಸನ್ನಿಧಿಯವರು ಪ್ರೋಗ್ರಾಮ್ ನಿಶ್ಚಯಿಸಿದ ಪ್ರಕಾರ ತಾ|| 12-12-30 ಕ್ಕೆ ಆಗಮಿಸಿದರು. ಊರ ಪ್ರಮುಖನ್ನುಹಾಜರು ದರ್ಶನಾಕಾಂಕ್ಷಿಗಳಾಗಿ ಭಕ್ತಿಯಿಂದ ಎದುರುಗೊಂಡು ಮರ್ಯಾದೆಯೊಡನೆ ಪುರಪ್ರವೇಶಮಾಡಿಸಿ ಪ್ರತಿದಿನದಲ್ಲಿ ಶ್ರೀ ಸನ್ನಿಧಿಯವರ ದರ್ಶನವಂ ಪಡೆಯುತ್ತ ಗುರುಭಕ್ತಿಯನ್ನು ವ್ಯಕ್ತಗೊಳಿಸುತ್ತ ಫಲಾಶೀರ್ವಾದವನ್ನು ಪಡೆಯುತ್ತಿದ್ದರು. ಮತ್ತು ಈ ಗ್ರಾಮದ ಮಠಾಧಿಕಾರಿ ಮಟಪತ್ತಿ ಮುಂತಾದವರು ಏಕಮತ್ಯದಿಂದ ಗುರುಗಳ ಸನ್ನಿಧಿಗೆ ಪ್ರತಿದಿನವೂ ಬಂದು ಗುರುಗಳು ಬೋಧಿಸುವ ಸದಾಚಾರ ಸುನೀತಿಗಳನ್ನು ಕೇಳಿ ಸಂತೋಷಗೊಳ್ಳುತ್ತಿದ್ದರು. ಮುಂದೆ ಇದರಂತೆ ನಮ್ಮ ಗ್ರಾಮದವರಿಗೆ ಗುರುಭಕ್ತಿಯು ದಿನೇದಿನೇ ಹೆಚ್ಚಿ ಹರಗುರುಗಳ ಸೇವೆಯಿಂದ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳುವಂತೆ ಶ್ರೀ ರೇಣುಕಾದಿ ಜಗದ್ಗುರುಗಳು ಅನುಗ್ರಹಿಸಲೆಂದು ಅಪೇಕ್ಷಿಸುತ್ತೇನೆ.

ಒರ್ವ ಪ್ರತ್ಯಕ್ಷದರ್ಶಿ.

ದೇಶಭಕ್ತರಾದ ದೇಶಪಾಂಡೆ ಗಂಗಾಧರರಾಯರ ವತನ ಜಪ್ತಿಯ ವಿಚಾರಣೆಯು.

ದೇಶಭಕ್ತದೇಶಪಾಂಡೆಗಂಗಾಧರರಾಯರು ತುರಂಗದಿಂದ ಬಂಧಮುಕ್ತರಾಗಿ ಬಂದಬಳಿಕ ಮುಂಬಯಿಗೆ ಹೋದರು. ಇವರು ಊರಲ್ಲಿಲ್ಲದಿರುವಾಗ, ನಿಮ್ಮ ವತನವನ್ನೇಕೆ ಜಪ್ತಮಾಡಬಾರದೆಂಬ ಕಾರಣ ಕೋರಿಸಿರೆಂದು ಇವರ ಮನೆಗೆ ನೋಟೀಸು ಹಚ್ಚಿದರು. ನಾಮದಾರಬೆಳವಿಯವರು ಇವರ ಪತಿಯಿಂದ ಮಿ. ಕಲೆಕ್ಟರಸಾಹೇಬರ ಕಡೆಗೆ ಹೋಗಿ ಕೆಲಸ ನಡೆಯಿಸಿದರು. ಆಗ ಇವರು ಮಾಡಿದ ಆರ್ಗ್ಯುಮೆಂಟೇನೆಂದರೆ ;

ಶ್ರೀ ಗಂಗಾಧರರಾಯರಿಗೆ ಉಪ್ಪಿನ ಕಾಯಿದೆ ಮುರಿಯಲು ಉತ್ತೇಜನ ಕೊಟ್ಟ ೧೧೭ ಕಲಮಿನ ಪ್ರಕಾರ ಶಿಕ್ಷೆಯಾಗಿದೆ. ಕಾಯಿದೆ ಮುರಿಯುವದು ರಾಜದ್ರೋಹವಾಗುವುದಿಲ್ಲ. ಇವರು ಕಾಂಗ್ರೆಸ್ಸಿನ ಮೆಂಬರರಿರುವದು ನಿಜ. ಕಾಂಗ್ರೆಸ್ಸಿನ ಧ್ಯೇಯವು ವಸಾಹತಿನ ಸ್ವರಾಜ್ಯವಾಗಿದ್ದು, ಅದು ಬೇಕಾದಾಗ ಬ್ರಿಟಿಶ್ ಸರಕಾರದಿಂದ ಅಲಿಪ್ತರಾಗಲಿಕ್ಕೆ ಬರಬೇಕೆಂಬ ಶರ್ತುಳ್ಳ ಧ್ಯೇಯವಾಗಿದೆ. ಈ ಉದ್ದೇಶಸಾಧನೆಗಾಗಿಯೇ ಇವರು ಕಾಯಿದೆಭಂಗಮಾಡಿದ್ದಾರೆ. ಲಾರ್ಡ್ ಇರ್ವಿನ್ ಮತ್ತು ನಾಮದಾರ ಶ್ರೀನಿವಾಸಶಾಸ್ತ್ರಿಗಳವರ ಭಾಷಣಗಳು ನಮಗೆ ಅನುಕೂಲವಾಗಿವೆ.

ವಿಚಾರಣೆಯಲ್ಲಿ ರಾಜಕೀಯ ವಿಷಯವನ್ನು ತರಬೇಡಿರೆಂದು ಸಾಹೇಬರನ್ನಲು ಅದು ಅಷ್ಟಕ್ಕೆ ನಿಂತಿತು.

ಹತ್ತುವರ್ಷದ ಹಿಂದೆಯೇ ಶ್ರೀ ದೇಶಪಾಂಡೆಯವರು ತಮ್ಮ ಆಸ್ತಿಯ ಕೆಲಭಾಗವನ್ನು ರಾಜಕೀಯ ಮತ್ತು ಧಾರ್ಮಿಕ ಕೆಲಸಕ್ಕೆ ಕೊಟ್ಟು ಅದನ್ನು ಕಾಯಿದೆ ಪ್ರಕಾರ ರಿಜಿಸ್ಟರ್‌ಮಾಡಿಸಿದ್ದಾರೆ. ಪುಣೆಯ ಶ್ರೀ ಕೇಳಕರ ಬೆಳಗಾವಿಯ ಶ್ರೀ ಪೋತದಾರ ಮತ್ತು ತಾವು ಸ್ವತಃ ಈ ಟ್ರಸ್ಟಿನ ಪಂಚರಾಗಿದ್ದಾರೆ. ಇದರ ತರುವಾಯ ೧೯೨೯ ನೆಯ ಇಸವಿಯಲ್ಲಿ ಗಾಂಧಿ ಸೇವಾಸಂಘವೆಂಬ ಹೆಸರಿನ ಇನ್ನೊಂದು ಟ್ರಸ್ಟಮಾಡಿದ್ದಲ್ಲದೆ ಇನ್ನು ಕೆಲ ಆಸ್ತಿಯನ್ನು ಅಪ್ತೇಷ್ಟರಿಗೆ ಕೊಟ್ಟಿದ್ದಾರೆ. ಹೋದ ಅಕ್ಟೋಬರದಲ್ಲಿ ತುರಂಗದಿಂದ [illegible] ಸಹ ನೋಂದಾಯಿಸಿದ್ದಾರೆ. ಈ ಪ್ರಕಾರ ಶ್ರೀ ಗಂಗಾಧರರಾಯರು ತಮ್ಮ ಆಸ್ತಿಯ ವಿಶೇಷಭಾಗವನ್ನು [illegible] ಮಾಡಿದ್ದಾರೆ. ೧೯೧೧ ನೆಯ ಇಸವಿಯಲ್ಲಿಯೇ ಸರಕಾರದವರು ಇವರ ಇನಾಮು ಜಪ್ತಮಾಡಿದ್ದು, ಈಗ ಸರಕಾರಕ್ಕೆ ಹೊಸದಾಗಿ ಮಾಡತಕ್ಕದ್ದೇನೂ ಉಳಿದಿರುವದಿಲ್ಲ.

ಈ ಪ್ರಕಾರ ನಾಮದಾರಬೆಳವಿಯವರು ಆರ್ಗ್ಯುಮೆಂಟ್ ಮಾಡಿದ ಬಳಿಕ, ಸರಕಾರಿ ವಕೀಲರಾದ ಮಿ|| ದಳವಿಯವರು ಉತ್ತರ ಕೊಡುವುದಕ್ಕೆ ಅವಕಾಶ ತೆಗೆದುಕೊಂಡಿದ್ದಾರೆ. ಇದನ್ನು ಕಲೆಕ್ಟರಸಾಹೇಬರೇ ನಿರ್ಣಯಮಾಡುವುದಿಲ್ಲ. ಸರಕಾರಕ್ಕೆ ರಿಪೋರ್ಟ ಮಾತ್ರ ಮಾಡುವರು.

ಶ್ರೀ ದೇಶಪಾಂಡೆಯವರು ಮಾಡಿದ ಗಾಂಧೀ ಸೇವಾ ಸಂಘದ ವಾರ್ಷಿಕ ಆದಾಯವು ಐದು ಸಾವಿರದ್ದಾಗುತ್ತದೆ. ಶ್ರೀ ಜಮುನಾಲಾಲಬಜಾಜರು ಈ ಟ್ರಸ್ಟಿನ ಅಧ್ಯಕ್ಷರಿದ್ದು, ಶ್ರೀ ವಲ್ಲಭಭಾಯಿ ಪಟೇಲ, ಶ್ರೀ ರಾಜಗೋಪಾಲಾಚಾರ್ಯ, ಬಾಬುರಾಜೇಂದ್ರ ಪ್ರಸಾದ ಮತ್ತು ಸ್ವತಃ ತಾವು ಮೆಂಬರರಾಗಿದ್ದಾರೆ.

ಅನೇಕ ವತನದಾರರು ಈಗಿನ ಚಳವಳಿಯಲ್ಲಿ ಸೇರಿದ್ದಾರೆ ಮುಂದಾದರೂ ಸೇರಬಹುದಾಗಿದೆ. ಆದುದರಿಂದ ಇವರ ವತನ ವಿಚಾರವಾಗಿ ಸರಕಾರದಿಂದ ಮುಂದಾಗುವ ನಿರ್ಣಯವು ಮಹತ್ವದ್ದಾಗುವದೆಂದು ಹೇಳುವಂತಾಗಿದೆ. (ವಿಜಯ.)

ನೀತಿಸುಧಾರಸ.

[ಮ|| ರಾ|| ಅನವಟ್ಟಿ ರಾಮರಾಯರಿಂದ]

ಪಾತಿವ್ರತ್ಯ.

ಮರೆಯದಿರುಮಾನಿನಿ ! ವಿವೇಕವ |
ನೊರೆವೆ ಸತ್ಪಥ ಮಾರ್ಗಮುಳಿಯದೆ |
ಪಿರುಪನಿನ್ನಯ ಹೃದಯದೊಳಿಡೆ ವಿವೇಕಬೋಧೆಗಳ ||
ಭರದೆ ನಿನ್ನಂಗಕವು ಕಾಂತಿಯ |
ಪರಪಿಸೌಂದರ್ಯವನು ಪೆರ್ಚಿಸಿ |
ಕರಜದಂದದಿಗೈಸಿ ಮನ್ನಣೆಯೊಂದಿಸುತ್ತಿಹವು ||೧||

* * *

ನಿರುಪಮಾನಂದ ಕರಮೆನಿಸಾ |
ಸುರಭಿಯೆಂಬಾ ಯೌವನದೆನೀ |
ಮೆರೆಯುತಿರೆ ಮಾನವರ ದಿಟ್ಟಿಗಳರ್ಥಮೇನೆನುತೆ ||
ಭರದೊಳರಿಯಾ ! ನಿನ್ನ ಚಿತ್ತದೆ |
ಮರುಕವನು ಪುಟ್ಟಿಸುವ ಮೋಹಾ |
ಕರದ ಸೊಲ್ಲಿಗೆ ಹೃದಯವಂ ನೀಡದಲೆ ಬಾಳುತಿರು||೨||

* * *

ಪುರುಷನಿಗೆ ನಿಜಗೆಳತಿಯಲ್ಲದೆ |
ಪಿರಹಪುರುಷನ ದಾಸ್ಯಳಲ್ಲವು |
ನಿರುತವಲ್ಲಥ ಗೂಢಗಿದಳಲನು ನೀನುಮಾಂಸುತ ||
ಮರುಕದಿಂ ನರಸೋಕ್ತಿಗಳೊರೆದು |
ಮರಸುತಾತನ ಕೋಟಲೆಗಳಾ |
ತುರದೆ ಳಿನಿನಗೆ ಧರ್ಮಮಾರ್ಗದ ಬೋಧೆಯೊರೆಯುತಿರು ||೩||

* * *

ನಿಜಸತಿಯುಳಾದವಳು ಪತಿಯಂ |
ಭಜಿಸುತವನಂ ತನ್ನೊಲುಮೆಗೆ ಸ|
ಹಜತನದೊಳೇ ಪ್ರೀತಿಯಾರ್ಜಿಸಿ ಹೃದಯದೊಳು ||
ಅಜನು ತಾನರನಿಜದೊಳಿಹಪರಿ |
ನಿಜಮನುಕೆಯಿಂದಿರುತೆ ನಿರ್ಜರ |
ಕುಜದವೊಲು ಸತಿಯಿಷ್ಟವೆಲ್ಲವ ಸಲ್ಲಿಸುತ್ತಿಹುದು ||೪||

* * *

ಗಮನದೊಳು ಹಂಸೆಯನು ಪೋಲುತೆ |
ವಿಮಲಮಾನಸಳಾಗಿ ಪದಪಿನೊ |
ಳೆಮೆಲೆವ ನಿಗರ್ವವನು ತೋರುತೆ ಗೃಹದಕಾರ್ಯದೊಳು||
ಸಮಯಮರಿತೆಸೆಯುತಲಿ ಕರೆಯದ |
ರಮಣೆಗಂ ನೀಪೋಗದಿರುತಲಿ |
ವಿಮಲಸುಗುಣ ಕಿರೀಟವಾಂತುರೆ ಸಂತವೆರೆಯುವುದು

* * *

ಪತಿಯು ಸುಗುಣಾವಳಿಯ ಪಡಿಸುತೆ |
ಸತಿಗೆ ಪತಿಯೇ ದೈವವೆನ್ನುತೆ |
ಹಿತವಚನ ಸುಧೆಯನ್ನು ನೀರುತೆ ಸಂತಸಕ್ಕವನು ||
ಸತತ ಬಿಡದಂತಿರುತತಿ ವಿಧೇ
ಯತೆಯ ತೋರುತೆ ಸಾಧ್ವಿವೀಯುತೆ |
ಚತುರಕಲೆಗಳನರಿತು ಸಾಧ್ವೀಮಣಿಯುಮೆನಿಸುತಿರು ||

* * *

ಪತಿಯುಳಲವಾಲಿಸುತೆ ಸುತರಿಗೆ |
ಹಿತದಬುದ್ಧಿಯ ನೊರೆವುತಂ ಗೃಹ |
ಕತ್ಯದ ಮರ್ಮವಾರೊಳುಸಿಂದೆ ನಿನ್ನಿರುವಿಕೆಯನು ||
ಸುತರು ಕಂಡನುಸರಿಪ ಪರಿಯನು |
ಮತಿಸಿನಡೆವಂತೆ ನಡೆದೊಡೆ ನಾ |
ನಿತೆಯಿವಳೆಂಬ ಕಿರದೊಳಿಹುದು ಧರ್ಮಮಾರ್ಗದೊಳು ||

* * *

ಮಾಣಿಸೌಜ್ಞೆಯ ಚಾರುನೋಡುತೆ |
ನಾಡೆಕಾರ್ಯವ ಜವದೆಮಾಳ್ಪನು |
ಮೂಡಿದಾಮಮತೆಯಿದು ಮುಖ್ಯವಾಗಿರೆ ಮಾನಿನಿಗೆ ||
ನಾಡಿಗಚ್ಚರಿಯಾಗಿ ಪಾಡುತೆ |
ಬೇಡಿಕೊಂಬುದು ಗೈದಕಪ್ಪಿಗೆ |
ಮಾಡುತಿರೆ ಹಾಸ್ಯವನು ಶಾಂತದೆನೋಡಿ ನಗುತಿಹುದು

* * *

ಜನುಮ ಸಾರ್ಥಕಗೊಳಿಸೆ ನೆರೆಸ |
ಜ್ಜನರ ಸೇವಿಸುತೆ ಮರಪದ್ದೋ |
ಧನೆಯಿಹ ಮಧುಮನೀಂಟಿ ಮನಕೆಶಾಂತಿಯನು ||
ಅನುಗೊಳಿಸುತಲಿ ವೇದಗೋಚರ |
ನೆನಿಸಿ ಭಕ್ತರಭೀಷ್ಟವ ಸಲಿಸು |
ತನುಪಮ ಪದವನೀವ ದೇವನಕೃಪೆಯನಾರ್ಜಿಪುದು

* * *

ಅವನಿಂತಪ್ಪ ಸುದತಿಯನಳನು |
ಕಾವುತಲಿ ಸಂಸ್ಕೃತಿಯ ನಾಸುತೆ |
ಜೀವಿಸುತ್ತಿರೆ ಭಾವಜಾರಿಯ ಪದವಪೂಜಿಪೊಡೆ ||
ಭೂಪರರಿಗಿಂತಧಿಕ ಸೌಖ್ಯವ |
ಭಾವದೊಳು ತಾಳ್ದಿರುತೆ ಸತಿಯಳ |
ಬೇವಸನನೂಡಿಸುತೆ ಮೋಕ್ಷವನಾಂತು ರಾಜಿಸನು ||

ಶ್ರೀಯುತ ದಿವಾಕರ್ ಮತ್ತು ಕರ್ಮಾರ್ಕರ್‌ರವರು ನಾರ್ತ್‌ಕನರ ಜಿಲ್ಲೆಯನ್ನು ಕೂಡಲೇ ಬಿಟ್ಟುಹೋಗಬೇಕೆಂದು ಸರ್ಕಾರದವರು ಹುಕುಂ ಮಾಡಿರುವರು. ಮತ್ತು ಅಂಕೋಲಾದಲ್ಲಿದ್ದ ಶ್ರೀಯುತ ವಿಶ್ವನಾಥ ನಾರ್ವೇಕರ್‌ರವರನ್ನು ಜನಪರಿಗಣನೆಯನ್ನು ಬಹಿಷ್ಕರಿಸಬೇಕೆಂದು ಜನರಿಗೆ ಬೋಧಿಸಿದರೆಂಬ ಅಪರಾಧದ ಮೇಲೆ ಈ ತಿಂಗಳು 5ನೆಯ ತಾರೀಖಿನದಿವಸ ಸರ್ಕಾರದವರು ದಸ್ತಗಿರಿಮಾಡಿದರು.

ಮೈಸೂರು ರಾಜಧಾನಿಯಲ್ಲಿ ನೆರವೇರಿದ 21ನೆಯ ಅಖಿಲಭಾರತಾಯುರ್ವೇದ ಮಹಾಸಮ್ಮೇಳನ.

ರಾಜಧಾನಿಯಲ್ಲಿ 21 ನೆಯ ಅಖಿಲಭಾರತಾಯುರ್ವೇದ ಮಹಾಸಮ್ಮೇಳನವು ವಿಶೇಷ ವೈಭವದಿಂದ ನೆರವೇರಿತೆಂಬ ವಿಷಯವನ್ನು ಕಳೆದವಾರದ ಸಂಚಿಕೆಯಲ್ಲಿ ತಿಳುಹಿಸಿರುವುದು ಸರಿಯಷ್ಟೆ ! ಕಳೆದ ತಿಂಗಳು 27ನೆಯ ತಾರೀಖಿನ ದಿವಸ ಮೈಸೂರು ಸಂಸ್ಥಾನದ ತೃತೀಯ ಸಚಿವರಾದ ರಾಜಕಾರ್ಯಪ್ರವೀಣ ಮಿ|| ಪಿ. ಜಿ. ಡಿಸೌಜಾರವರು ಈ ಮಹಾಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಸ್ವಾಗತಸಂಘಾಧ್ಯಕ್ಷರಾದ ಲೋಕಹಿತೈಷಿ ಎಚ್. ನಂಜುಂಡರಾಜ ಅರಸರವರು ಮಹಾಸಮ್ಮೇಳನಕ್ಕೆ ಅನೇಕ ಪ್ರಾಂತಗಳಿಂದ ಆಗಮಿಸಿದ್ದ ಭಾರತೀಯ ಸ್ತ್ರೀಪುರುಷರಿಗೆ ಸುಸ್ವಾಗತವನ್ನಿತ್ತು ತಮ್ಮ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶವೇನೆಂದರೆ—ತಾವುಗಳು ನಮ್ಮ ಪವಿತ್ರವಾದ ಮಾತೃಭೂಮಿಯ ವಿಷಯದಲ್ಲಿ ಸಹಜವಾದ ಭಕ್ತಿಶ್ರದ್ಧೆಗಳಿಂದ ಯುಕ್ತರಾಗಿ ವಾಹೀಕೂಪ ತಟಾಕೋದ್ಯಾನಗಳಿಂದಲೂ, ಜಗಜ್ಜನನಿಯಾದ ಚಾಮುಂಡಾಂಬಿಯ ಸಾನ್ನಿಧ್ಯದಿಂದಲೂ, ಶ್ರೀಮತ್ಕರ್ಣಾಟಕ ಸಾರ್ವಭೌಮ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ನಿತ್ಯವಾಸದಿಂದಲೂ ಶೋಭಿಸುತ್ತಿರುವ ನಮ್ಮ ಮೈಸೂರು ನಗರಕ್ಕೆ ಆಗಮಿಸಿದುದಕ್ಕಾಗಿ ನಾನು ಸ್ವಾಗತಸಂಘದ ಪರವಾಗಿ ತಮ್ಮ ಸುಸ್ವಾಗತವನ್ನು ಬಯಸುತ್ತೇನೆ.

ಈ ಪಟ್ಟಣವು ಕರ್ಣಾಟಕದಲ್ಲಿ ಬಹು ಪ್ರಾಚೀನವಾದುದೆಂದೂ, ಗಂಗರು, ಹೊಯಿಸಳರು ಮೊದಲಾದ ಮಹಾಮಂಡಲೇಶ್ವರರು ಮತ್ತು ವಿಜಯನಗರದ ಸಾರ್ವಭೌಮರು ಮಾಡಿದ ಅದ್ಭುತಕಾರ್ಯಗಳಿಗೆ ಮಾತೃಸ್ಥಾನವೆಂದೂ, ಸಂಗೀತಾದ್ಯಸಂಕಲೆಗಳಿಗೆ ಆಶ್ರಯಸ್ಥಾನವೆಂದೂ ಚರಿತ್ರೆಯಲ್ಲಿ ಪ್ರಸಿದ್ಧವಾಗಿದೆ. ಅಧಾತ್ಮಿಕಹಿತಕ್ಕೋಸ್ಕರವಾಗಿ ವೀರಶೈವ, ಜೈನ ಮೊದಲಾದ ಮತಸ್ಥಾಪನಾಚಾರ್ಯರ ಪೀಠಗಳು ಈ ದೇಶದಲ್ಲಿ ವಿರಾಜಿಸುತ್ತಿರುವುವಲ್ಲದೆ, ಲೌಕಿಕಹಿತಕ್ಕೋಸ್ಕರ ವಿಜ್ಞಾನಶಾಸ್ತ್ರಪ್ರಯೋಗದಿಂದ ಕೃಷ್ಣರಾಜಸಾಗರ ಮೊದಲಾದ ಪ್ರಜಾಹಿತ ಕಾರ್ಯಗಳು ನಮ್ಮ ಸಂಸ್ಥಾನದಲ್ಲಿ ನಿರ್ಮಿಸಲ್ಪಡುತ್ತಲಿವೆ. ಈ ಮಹಾಸಮ್ಮೇಳನದ ಕಾರ್ಯವು ಜಯಪ್ರದವಾಗುವುದಕ್ಕೆ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಕೃಪಾವಿಶೇಷವೇ ಮುಖ್ಯಕಾರಣವಾದುದೆಂದು ಹೇಳದಿರಲಾರೆನು. ಶ್ರೀಮನ್ಮಹಾರಾಜ ಸರ್ಕಾರದವರು ಆಯುರ್ವೇದ ವಿದ್ಯೆಗೆ ಪೂರ್ಣ ಸಹಾಯ ಸಂಪತ್ತಿಯನ್ನು ದಯಪಾಲಿಸುತ್ತಿರುವರು. ಮಹಾರಾಜ ಸಂಸ್ಕೃತ ಕಾಲೇಜಿನ ಒಂದು ಭಾಗವಾಗಿ ಆಯುರ್ವೇದ ಮಹಾವಿದ್ಯಾಲಯವು ಈಗ 50 ವರ್ಷಗಳ ಕೆಳಗೆ ನಿರ್ಮಿತವಾಯಿತು. ಅದು 1909 ನೆಯ ಇಸವಿಯಲ್ಲಿ ಸ್ವತಂತ್ರಸಂಸ್ಥೆಯಾಗಿ ಮಾಡಲ್ಪಟ್ಟಿತು. 1928 ನೆಯ ಇಸವಿಯಲ್ಲಿ ಸರ್ಕಾರದವರು ವಿದ್ಯಾಭ್ಯಾಸಕ್ರಮವನ್ನು ಪುನಃ ವ್ಯವಸ್ಥೆಮಾಡಿದುದಲ್ಲದೆ ಹೊರಗಿನಿಂದ ಬರುವ ರೋಗಿಗಳಿಗೂ, ವೈದ್ಯಶಾಲೆಯಲ್ಲಿರುವ ರೋಗಿಗಳಿಗೂ ಅನುಕೂಲವಾದ ಆಯುರ್ವೇದದ ಮಂದಿರವನ್ನು ನಿರ್ಮಿಸಿದರು. ಇದರಲ್ಲಿ ಯುನಾನಿವೈದ್ಯದ ಅಭ್ಯಾಸಕ್ಕೂ ಸಹ ಉತ್ತೇಜನವು ಕೊಡಲ್ಪಟ್ಟಿದೆ. ವಿಶ್ವವಿದ್ಯಾಲಯದ ಮೆಡಿಕಲ್‌ಕಾಲೇಜಿನ ಸಮೀಪದಲ್ಲಿ ಅತ್ಯಂತ ಮನೋಹರವಾದ ಆಯುರ್ವೇದ ಮಹಾವಿದ್ಯಾಲಯವನ್ನು ನೆಲೆಗೊಳಿಸಿದ ವೈದ್ಯರತ್ನಂ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರು ತಮ್ಮ ಕೃತಜ್ಞತೆಯನ್ನು ಅಂಗೀಕರಿಸಲು ನಮ್ಮ ಮಧ್ಯದಲ್ಲಿಲ್ಲದಿರುವುದು ನಮಗೆ ತುಂಬಾ ಖೇದವನ್ನುಂಟುಮಾಡಿದೆ. ಕೇವಲ ಉದಾರಬುದ್ಧಿಯುಳ್ಳ ರಾಜಧಾನಿಯ ಸಾಹುಕಾರ್ ಧರ್ಮಪ್ರಕಾಶ ಡಿ. ಬನುಮಯ್ಯನವರು ಮಧ್ಯಮಂದಿರದಲ್ಲಿರುವ ರೋಗಿಗಳ ವಾಸಕ್ಕೆ ಒಂದು ಮಂದಿರವನ್ನು ಕಟ್ಟಿಸಿಕೊಡಲು ಸಿದ್ಧರಾಗಿರುವರು.

ಆಯುರ್ವೇದವಿದ್ಯೆಯ ಪುರೋಭಿವೃದ್ಧಿಯನ್ನು ಬಯಸಿ ಸಭೆಯು ಜಯಪ್ರದವಾಗುವ ವಿಷಯದಲ್ಲಿ ನೈಜವಾದ ಕುತೂಹಲಪೂರಿತರಾಗಿ ಈ ಮಹಾಸಭೆಯ ಪ್ರಾರಂಭೋತ್ಸವವನ್ನು ನೆರವೇರಿಸಿದ ತೃತೀಯ ಸಚಿವರಾದ ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾರವರಿಗೆ ಸ್ವಾಗತಸಂಘದ ಪರವಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ತಾವೆಲ್ಲರೂ ಬಹು ಶ್ರಮವಹಿಸಿ ಈ ಪಟ್ಟಣಕ್ಕೆ ಆಗಮಿಸಿರುವಿರಿ. ತಾವು ಇಲ್ಲಿರುವವರೆಗೂ ತಮಗೆ ಸರಿಯಾದ ಆದರಾತಿಥ್ಯವನ್ನು ಮಾಡಿ ಎಲ್ಲಾ ಅನುಕೂಲ್ಯಗಳನ್ನು ಒದಗಿಸುವುದರಲ್ಲಿ ಏನಾದರೂ ಲೋಪ ಉಂಟಾಗಬಹುದೆಂಬ ಭಯವು ನಮ್ಮನ್ನು ಬಾಧಿಸುತ್ತಿರುವುದು. ಆದರೂ ಈ ಸಂಘಟನೆಯಿಂದ ಪರಸ್ಪರ ಮೈತ್ರಿಯೂ, ಸೌಹಾರ್ದವೂ, ಸ್ವದೇಶಾಭಿಮಾನವೂ ನಿಸ್ಸಂಶಯವಾಗಿ ವೃದ್ಧಿಯಾಗುವುದೆಂದು ನಾವೆಲ್ಲರೂ ಆಶಿಸೋಣ !

ಮಹಾಸಭಾಧ್ಯಕ್ಷರಾದ ಮಹಾಮಹೋಪಾಧ್ಯಾಯ ಬಾಬು ಕವಿರಾಜ ಗಣನಾಥಸೇನರವರ ಶ್ಲಾಘನೀಯವಾದ ಭಾಷಣದ ಸಾರಾಂಶ.

ಸುಪ್ರಸಿದ್ಧರಾದ ನೋಜರ್ ಬಿ. ಡಿ. ಬಸು ಐ. ಎಂ. ಎಸ್. ಮೊದಲಾದ ಆಯುರ್ವೇದ ವಿಬ್ರಸ್ತಣಿಗಳ ನಿಧನಕ್ಕೋಸ್ಕರ ನನ್ನ ಹೃತ್ಪೂರ್ವಕವಾದ ವ್ಯಸನವನ್ನು ವ್ಯಕ್ತಪಡಿಸುವುದು ಅದ್ಯಕರ್ತವ್ಯವಾಗಿದೆ. ಆಯುರ್ವೇದದ ಸೇವೆಯಲ್ಲಿ ನಿರತರಾಗಿದ್ದ ಅಲಹಾಬಾದ್, ಲಕ್ನೊ ಮೊದಲಾದ ಸ್ಥಳಗಳ ಪಂಡಿತ ಜಗನ್ನಾಥ ಪ್ರಸಾದ ಶುಕ್ಲ ಮೊದಲಾದ ವಿದ್ವಾಂಸರು ರಾಜಕೀಯ ಕಾರಣದಮೇಲೆ ಕಾರಾಗೃಹಗಳಲ್ಲಿರುವುದು ನಮ್ಮೆಲ್ಲರಿಗೆ ದುಃಖವನ್ನುಂಟುಮಾಡಿದೆ. ಮಹಾತ್ಮಾಗಾಂಧಿ, ಪಂಡಿತ ಮದನಮೋಹನಮಾಲವೀಯ, ಮಿ|| ವಿಠ್ಠಲಭಾಯಿಪಟೇಲ್, ವಲ್ಲಭಭಾಯಿಪಟೇಲ್, ಪಂಡಿತ ಮೋತೀಲಾಲ್‌ನೆಹರು, ಪಂಡಿತ ಜವಾಹರಲಾಲ್ ನೆಹರು ಮೊದಲಾದ ಉಜ್ವಲದೇಶಭಕ್ತರು ಸರ್ಕಾರದ ಕ್ರೋಧವೆಂಬ ಅಗ್ನಿಕುಂಡಕ್ಕೆ ಆಹುತಿಯಾಗಿರುವುದು ನಮ್ಮೆಲ್ಲರಿಗೂ ಪರಮ ದುಃಖವನ್ನುಂಟುಮಾಡಿದೆ. ರಾಜಕೀಯಾಂದೋಳನದಲ್ಲಿ ನಾನು ಎಂದೂ ಸೇರಿರುವುದಿಲ್ಲ. ಆಯುರ್ವೇದದ ಸೇವೆಯೇ ನನ್ನ ಮುಖ್ಯಧ್ಯೇಯವೆಂದು ಎಣಿಸಿರುವೆನು. ಭಾರತೀಯರಿಗುಂಟಾಗಿರುವ ದುಃಖದಲ್ಲಿ ನಾನು ಸಂಪೂರ್ಣ ಭಾಗಿಯಾಗಿದ್ದೇನೆ. ಜಗತ್ತಿಗೆ ಕಲ್ಯಾಣದಾಯಕನಾದ ಪರಮೇಶ್ವರನು ಭಾರತೀಯರ ತಪಸ್ಸಿಗೆ ಮೆಚ್ಚಿ ಕೃಪಾಶೀರ್ವಾದವನ್ನು ಮಾಡಿ ನಮ್ಮ ಆಳರಸರು ಸ್ವಾರ್ಥತ್ಯಾಗದ ಇಂಗಿತವನ್ನು ತಿಳಿದು ನಮ್ಮ ಉದ್ದೇಶವು ನ್ಯಾಯಸಮ್ಮತವಾದುದೆಂಬುದನ್ನು ಅರಿತುಕೊಳ್ಳುವ ಹಾಗೆ ಅವರಿಗೆ ಸದ್ಬುದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ. ಆಯುರ್ವೇದದ ಅನುಯಾಯಿಗಳು ರಾಜಕೀಯ ಚಳವಳಿಗಿಂತಲೂ ಆಯುರ್ವೇದದ ಪುರೋಭಿವೃದ್ಧಿಗೆ ಹೆಚ್ಚು ಲಕ್ಷ್ಯಕೊಡಬೇಕೆಂದು ಅಭಿಪ್ರಾಯಪಡುತ್ತೇನೆ.

ಮೈಸೂರು ಮತ್ತು ತಿರುವಾಂಕೂರು ಸಂಸ್ಥಾನಗಳಲ್ಲಿ ಸರ್ಕಾರದವರು ಆಯುರ್ವೇದಕ್ಕೆ ಹೆಚ್ಚು ಪ್ರೋತ್ಸಾಹಕೊಟ್ಟು ಆಯುರ್ವೇದ ಕಾಲೇಜುಗಳನ್ನೂ ಮತ್ತು ಅನೇಕ ಆಸ್ಪತ್ರೆಗಳನ್ನೂ ಸ್ಥಾಪಿಸಿ ದಕ್ಷತೆಯಿಂದ ನಡೆಯಿಸುತ್ತಿರುವುದರಿಂದ, ಇವುಗಳು ಅಭಿವೃದ್ಧಿಗೆ ಬಂದು ಸಮರ್ಪಕವಾದ ಕೆಲಸವನ್ನು ಮಾಡುತ್ತಿರುವುದು ಸಂತೋಷಕರವಾದ ಸಂಗತಿಯಾಗಿದೆ. ಆದರೂ ಒಟ್ಟಿನಮೇಲೆ ಜನತೆಯಿಂದಲೂ, ಸರ್ಕಾರದಿಂದಲೂ ತೃಪ್ತಿಕರವಾದ ಪ್ರೋತ್ಸಾಹವು ಲಭಿಸಿರುವುದಿಲ್ಲವಾದುದರಿಂದಲೂ ಇನ್ನೂ ಅನೇಕ ಕಾರಣಗಳಿಂದಲೂ ಆಯುರ್ವೇದವು ಸಾಕಾದಷ್ಟು ಅಭಿವೃದ್ಧಿಯನ್ನು ಹೊಂದಿರುವುದಿಲ್ಲ. ಆಯುರ್ವೇದ ಸಂಸ್ಥೆಗಳ ಕಾರ್ಯಕಾರಿ ಸಮಿತಿಗಳಲ್ಲಿ ಆಯುರ್ವೇದದ ಜ್ಞಾನವಿಲ್ಲದಿರುವ ಅನೇಕ ಜನ ಮೆಂಬರರು ಸೇರಿರುವುದೊಂದು ಅದರ ಅಭಿವೃದ್ಧಿಗೆ ಕುಂದಕವಾಗಿದೆ. ಮತ್ತು ರೋಗಪರೀಕ್ಷೆಯೂ ಮತ್ತು ಅದರ ಯುಕ್ತ ಚಿಕಿತ್ಸೆಯೂ ಶಸ್ತ್ರಪ್ರಯೋಗವೂ ಆಯುರ್ವೇದ ಪಂಡಿತರಿಂದ ಆಗಬಹುದೆಂಬ ನಂಬಿಕೆಯು ಜನರಿಗೆ ಇನ್ನೂ ಉತ್ಪನ್ನವಾಗಿಲ್ಲ. ಅನೇಕ ಆಯುರ್ವೇದ ವೈದ್ಯರು ಹಳೇ ವಿಧಾನಗಳನ್ನು ಬಿಟ್ಟು ನೂತನ ಶೋಧನಗಳನ್ನು ಮಾಡಲು ಜಾಗ್ರತರಾಗಿರುವುದಿಲ್ಲ. ಪಾಶ್ಚಿಮಾತ್ಯರಾಷ್ಟ್ರಗಳು ಈ ವಿಷಯದಲ್ಲಿ ಹೇಗೆ ಮುಂದುವರೆಯುತ್ತಿರುವುವೆಂಬುದನ್ನು ಕಣ್ದೆರೆದು ನೋಡಬೇಕು. ಪಾಶ್ಚಿಮಾತ್ಯವೈದ್ಯರು ಅವಿಶ್ರಾಂತಶ್ರಮವಹಿಸಿ ರೋಗಗಳನ್ನು ಪರೀಕ್ಷಿಸುವ ಮತ್ತು ಅವುಗಳಿಗೆ ತಕ್ಕ ಚಿಕಿತ್ಸೆಗಳನ್ನು ಮಾಡುವ ಹೊಸವಿಧಾನಗಳನ್ನು ನಿರಂತರವೂ ಶೋಧಿಸಿ ರೋಗಗಳನ್ನು ಬಡಿದೋಡಿಸುವ ನೂತನಾಯುಧಗಳನ್ನು ಜಗತ್ತಿಗೆ ಕೊಡುತ್ತಿರುವರು. ಅನ್ಯದೇಶಗಳಲ್ಲಿರುವ ಯೋಗ್ಯಔಷಧಗಳನ್ನು ಪ್ರಯೋಗಮಾಡಿ ಪ್ರತ್ಯಕ್ಷಪ್ರಮಾಣದಿಂದ ಅನುಭವಮಾಡಿಕೊಳ್ಳುವುದಕ್ಕೆ ಎಷ್ಟೂ ಹಿಂಜರಿಯುವುದಿಲ್ಲ. ಸಿಂಕೋನ ಮೊದಲಾದ ಔಷಧಗಳನ್ನು ಅಸ್ಪೃಶ್ಯವೆಂದು ನಮ್ಮ ವೈದ್ಯರು ಭಾವಿಸಿದ ಹಾಗೆ ಕುಟಜ ಮತ್ತು ಅರ್ಜುನ ಮೊದಲಾದ ಭಾರತೀಯ ಔಷಧಗಳನ್ನು ಅಸ್ಪೃಶ್ಯವೆಂದು ಪಾಶ್ಚಿಮಾತ್ಯರು ಭಾವಿಸಿಲ್ಲ. ರೋಗಗಳ ನಿವಾರಣೆಗೆ ಯಾವುದು ಯೋಗ್ಯವಾದುದೋ ಅದೇ ಶ್ರೇಷ್ಠ ಔಷಧವೆಂಬ ಚರಕಮಹರ್ಷಿಗಳ ಮಹಾಸೂತ್ರವನ್ನು ನಮಗಿಂತಲೂ ಅವರೇ ಹೆಚ್ಚು ಆಚರಣೆಗೆ ತಂದ ಹಾಗೆ ಕಾಣುತ್ತದೆ. ಇತ್ತೀಚೆಗೆ ಆಯುರ್ವೇದವು ಭಿನ್ನಭಿನ್ನವಾಗಿ ನಮ್ಮ ಹಸ್ತಗತವಾಗಿರುವದರಿಂದ ರಸಾಯನಶಾಸ್ತ್ರ, ಶಾರೀರಶಾಸ್ತ್ರ, ಶಸ್ತ್ರಶಾಸ್ತ್ರ ಮೊದಲಾದ ನೂತನ ಶಾಸ್ತ್ರಗಳ ತಥ್ಯಾಂಶಗಳನ್ನೂ ಸಹ ಅದರಲ್ಲಿ ಸಮಾವೇಶಮಾಡಿಕೊಳ್ಳಬೇಕು. ಇಲ್ಲದಿದ್ದರೆ ಆಯುರ್ವೇದವು ಅಪೂರ್ಣವಾಗುವುದೆಂದು ಹೇಳಬೇಕಾಗುವುದು. ನಮ್ಮ ಪ್ರಾಚೀನ ಮಹರ್ಷಿಗಳು ಮಹಾಜ್ಞಾನಿಗಳಾದರೂ ಸರ್ವಜ್ಞರೆಂದು ಹೇಳಲಾಗುವುದಿಲ್ಲ. ಸರ್ವಜ್ಞತ್ವವು ಪರಮೇಶ್ವರನಲ್ಲಿಯಲ್ಲದೆ ಏನಾ ಅನ್ಯರಲ್ಲಿರುವುದಿಲ್ಲ. ಮತ್ತು ಪರಮಪ್ರಮಾಣವಾಗಿರುವ ಆಧಾರಗ್ರಂಥಗಳು ನಮಗೆ ಹೇರಳವಾಗಿ ಸದ್ಯಃ ದೊರೆತಿರುವುದಿಲ್ಲ. ಪರಮಪ್ರಮಾಣಭೂತಗಳಾದ ಮುಖ್ಯ ಪ್ರಾಚೀನಸಂಹಿತೆಗಳು ಒಂದುಸಾವಿರ ವರ್ಷಗಳ ಪೂರ್ವದಲ್ಲಿ ಇದ್ದುವೆಂದೂ, ಅವುಗಳಲ್ಲಿ ಔಷಧ, ಶಸ್ತ್ರಪ್ರಯೋಗ, ನೇತ್ರ, ಕಿವಿ, ಮೂಗು, ಗಂಟ್ಲು, ಮಾನಸಿಕರೋಗಗಳು, ಮಕ್ಕಳರೋಗಗಳು, ಪುರುಷತ್ವವನ್ನು ಉಂಟುಮಾಡುವ ಔಷಧ ಮೊದಲಾದವುಗಳು ವಿವರಿಸಲ್ಪಟ್ಟಿದ್ದವೆಂದೂ ನಾನು ಸಿದ್ಧಮಾಡಿರುವೆನು. ಒಂದು ಸಾವಿರ ವರ್ಷಗಳ ಪೂರ್ವದಲ್ಲಿ ಭರತಖಂಡದ ಆಯುರ್ವೇದವು ಸಂಪೂರ್ಣ ವಿಕಾಸವನ್ನು ಹೊಂದಿ ಅನುಪಮವಾದ ಕೀರ್ತಿಯನ್ನು ಪಡೆದುದರಿಂದ ಇಡೀ ಪ್ರಪಂಚವೇ ಇದರ ಘನತೆಯನ್ನು ಅತ್ಯಾಶ್ಚರ್ಯದಿಂದ ನೋಡುತ್ತಿದ್ದಿತು. ಈಜಿಪ್ಟ್ ಅರೇಬಿಯಾ, ಗ್ರೀಸ್ ಮತ್ತು ರೋಮ್ ಮೊದಲಾದ ದೇಶಗಳಿಂದ ವಿದ್ಯಾಕಾಂಕ್ಷಿಗಳು ಇಲ್ಲಿಗೆ ಬಂದು ನೈಪುಣ್ಯವನ್ನು ಪಡೆಯುತ್ತಿದ್ದರು. ಭರತವರ್ಷವು ಆಗ ವೈದ್ಯವಿದ್ಯೆಗೆ ಮಾತೃಸ್ಥಾನವಾಗಿತ್ತು. ಕಳೆದ ಎರಡುಸಾವಿರ ವರ್ಷಗಳಿಂದ ಭರತಖಂಡವು ಅನೇಕ ಕಷ್ಟಪರಂಪರೆಗಳಿಗೀಡಾಗಿರುವುದರಿಂದ ವಿದ್ಯೆಯೆಂಬ ದಿವ್ಯಧನವು ಕಳಚಿಬಿದ್ದು ಅದರ ಗುರುತುಮಾತ್ರ ಉಳಿದಿದೆ. ಆದುದರಿಂದ ಆಯುರ್ವೇದದಲ್ಲಿ ನಾವು ಪ್ರಕೃತೋಚಿತಸುಧಾರಣೆಗಳನ್ನು ಮಾಡಿ ನಮ್ಮ ಪ್ರಾಚೀನಾರ್ಯರು ಪಡೆದಿದ್ದ ಘನತೆಯನ್ನು ಸಂಪಾದಿಸಲು ಪ್ರಯತ್ನಿಸೋಣ.

ರೋಗಗಳನ್ನು ಪರೀಕ್ಷಿಸುವಾಗ ನೂತನ ಯಂತ್ರಗಳಾದ ಥರ್ಮಾಮೀಟರ್, ಸ್ಟೆತಸ್ಕೋಪ್ ಮೊದಲಾದುವುಗಳನ್ನು ಉಪಯೋಗಿಸುವುದರಲ್ಲಿ ಎಳ್ಳಷ್ಟೂ ಸಂದೇಹಪಡಬಾರದು. ನಾಡಿಗಳನ್ನು ಸ್ಪರ್ಶಿಸುವುದರಿಂದ ಎಲ್ಲ ರೋಗಗಳ ಮೂಲವನ್ನು ಕಂಡುಹಿಡಿಯಬಹುದೆಂದು ಕೆಲವು ವೈದ್ಯರೂ, ಮತ್ತು ಜನರೂ ಭಾವಿಸಿರುವರು. ಆದರೆ ಇದು ಶುದ್ಧ ತಪ್ಪು. ಪುರಾತನಾಚಾರ್ಯರಾದ ಚರಕ, ಸುಶ್ರುತ, ಭಾಗವತ ಮತ್ತು ಚಕ್ರಪಾಣಿ ಮೊದಲಾದವರು ನಾಡೀಪರೀಕ್ಷೆಯ ವಿಷಯದಲ್ಲಿ ಚಕಾರಶಬ್ದವನ್ನೂ ಹೇಳಿರುವುದಿಲ್ಲ. ಇದು ಇತ್ತೀಚೆಗೆ ಬಂದುದೆಂಬುದು ನಿಸ್ಸಂಶಯವು. ನಾಡೀಸ್ಪರ್ಶದಿಂದ ರೋಗಗಳನ್ನು ಪರೀಕ್ಷಿಸಲು ಸ್ವಲ್ಪಮಟ್ಟಿಗೆ ಸಹಕಾರಿಯಾಗುವುದೇ ವಿನಾ ಅದರಿಂದ ಸರ್ವ ವಿಷಯವು ಗೊತ್ತಾಗುವುದೆಂಬ ಮೂಢಭಕ್ತಿಯನ್ನು ಮುಕ್ತಕಂಠದಿಂದ ಖಂಡಿಸುತ್ತೇನೆ. ಜಗತ್ಕಲ್ಯಾಣಾರ್ಥವಾಗಿ ನಿಷ್ಕಾಮಬುದ್ಧಿಯಿಂದ ರೋಗಿಗಳಿಗೆ ಚಿಕಿತ್ಸೆಮಾಡಬೇಕೆಂಬುದೇ ವೈದ್ಯರಿಗೆ ಭರತಖಂಡದ ಪ್ರಾಚೀನ ಮಹರ್ಷಿಗಳ ಅನುಜ್ಞೆ. ಆದರೆ ಈಗ ಆಯುರ್ವೇದ ವೈದ್ಯರು, ಪಾಶ್ಚಿಮಾತ್ಯ ವಿದ್ಯೆಯನ್ನು ಕಲಿತ ವೈದ್ಯರು ಮೊದಲಾದವರೆಲ್ಲರೂ ಈ ಉದಾತ್ತಧ್ಯೇಯದಿಂದ ವಿಮುಕ್ತರಾಗಿರುವರು. ಮಹರ್ಷಿಗಳ ಅನುಯಾಯಿಗಳಾದ ನಾವು ಸಾಧ್ಯವಾದಷ್ಟು ಮಟ್ಟಿಗೆ, ಅವರ ಉಚ್ಚಧ್ಯೇಯವನ್ನು ಪಾಲಿಸಿ ಈಗಿನ ಸ್ಥಿತಿಗತಿಗಳನುಸಾರವಾಗಿ ಮಿತಿಯಾದ ಪ್ರತಿಫಲವನ್ನು ಹೊಂದಿ ಮಾನವಪ್ರಾಣಿಯ ಸಂಕಟವನ್ನು ನಿವಾರಣೆಮಾಡಬೇಕು. ಆಯುರ್ವೇದ ಸುಧಾರಣೆಗೆ ಉಪಯುಕ್ತಗಳಾದ ಎಂಟು ಸಲಹೆಗಳನ್ನು ಕೊಟ್ಟು ಅವರು ತಮ್ಮ ಭಾಷಣವನ್ನು ಪೂರೈಸಿದರು.

ಅನಂತರ ಈ ಮಹಾಸಭೆಯ ಅ|| ಜನರಲ್ ಸೆಕ್ರೆಟರಿಗಳಾದ ಶ್ರೀಯುತ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ಸಭಾಧ್ಯಕ್ಷರಿಗೂ, ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾರವರಿಗೂ, ಅನೇಕ ಪ್ರಾಂತಗಳಿಂದ ಬಂದ ಪ್ರತಿನಿಧಿಗಳಿಗೂ, ಅವರು ಕೈಕೊಂಡ ಮಹಾಕಾರ್ಯವು ನಿರಾತಂಕವಾಗಿ ಜರುಗುವುದಕ್ಕೆ ಸಹಾಯಮಾಡಿದ ಸಮಸ್ತ ಮಹನೀಯರಿಗೂ ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

ಈ ಮಹಾಸಭೆಯು ಮೂರು ದಿವಸಗಳ ವರೆಗೆ ಅತ್ಯುತ್ತಮರೀತಿಯಿಂದ ನೆರವೇರಿತು. ಸಭೆಯ ಸ್ವಾಗತಮಂಡಳಿಯವರು ಮತ್ತು ಸೆಕ್ರೆಟರಿಗಳವರು ಪ್ರತಿನಿಧಿಗಳ ವ್ಯವಸ್ಥೆಯನ್ನು ಸರ್ವರೀತಿಯಿಂದಲೂ ಅತ್ಯುತ್ತಮವಾಗಿಟ್ಟಿದ್ದರು. ಈ ರೀತಿಯಾದ ವ್ಯವಸ್ಥೆಯು ಎಲ್ಲಿಯೂ ಆಗಿಲ್ಲವೆಂದು ಅನೇಕರು ಸಂತೋಷಪಟ್ಟರು. ಈ

[6 ನೆಯ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಯಾವತ್ತು ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ—ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳ ವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವುದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾಮುಗಿದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ನಾವು ಮುಂದಾಗಿ ತಿಳುಹಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವಿರೆಂದು ಪೂರ್ಣ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವುದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜನವರಿ ತಾ|| ೧೨ ನೆಯ ಸೋಮವಾರ.

ಮೌಲಾನಾ ಮಹಮ್ಮದಾಲಿಯವರ ಮರಣ.

ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಮೌಲಾನಾಮಹಮ್ಮದಾಲಿಯವರೆಂಬ ಉಜ್ವಲದೇಶಭಕ್ತರು ಈ ತಿಂಗಳು 4 ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ವಿಧಿವಶರಾದರೆಂಬ ವಿಷಯವನ್ನು ಕೇಳಿ ಇಡೀ ಭರತಖಂಡವೇ ಚಿಂತಾಕ್ರಾಂತವಾಗಿದೆ. ಈ ಮಹೋದಯರು ಚಕ್ರಗೋಷ್ಠಿಗೆ ಹೋಗುವ ಮೊದಲು ಅಸ್ವಸ್ಥತೆಯಲ್ಲಿದ್ದುದರಿಂದ ಜಲಪ್ರಯಾಣಮಾಡುವದುಚಿತವಲ್ಲವೆಂದು ವೈದ್ಯರು ಅಭಿಪ್ರಾಯಪಟ್ಟರೂ ಸಹ, ದೇಶಭಕ್ತಿಯ ಪಾರವಶ್ಯದಿಂದ ದೇಹಾಲಸ್ಯವನ್ನು ಲಕ್ಷಿಸದೆ, ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಚರ್ಚೆಗಳನ್ನು ನಡೆಯಿಸಿ ತನ್ನ ಮಾತೃಭೂಮಿಗೆ ಸ್ವಾತಂತ್ರ್ಯದ ತಿರುಳನ್ನು ಸಂಪಾದಿಸಬೇಕೆಂಬ ಉತ್ಕಟೇಚ್ಛೆಯಿಂದ ಪ್ರಯಾಣಮಾಡಿದರು. ಈ ಮಹಾಶಯರು ಕಾನ್ಫರೆನ್ಸಿನ ಆರಂಭದಲ್ಲಿ—"ನನಗೆ ಇಲ್ಲಿಯೇ ಸಮಾಧಿಯಾದರೂ ಚಿಂತೆಯಿಲ್ಲ; ಸ್ವಾತಂತ್ರ್ಯದ ತಿರುಳಿಲ್ಲದೆ ಗುಲಾಮಗಿರಿಯಲ್ಲಿರುವ ನನ್ನ ದೇಶಕ್ಕೆ ಹಿಂದಿರುಗಲಾರೆನು" ಎಂದು ಮಾಡಿದ ಸಿಂಹಗರ್ಜನೆಯು ಇಂದಿನವರೆಗೂ ಪ್ರತಿಯೊಬ್ಬ ಭಾರತೀಯನ ಹೃದಯಕುಹರದಲ್ಲಿ ಪ್ರತಿಧ್ವನಿ ಮಾಡುತ್ತಿರುವುದು. ದೇಶಕಲ್ಯಾಣಕ್ಕಾಗಿ ಪ್ರಯಾಣಮಾಡಿದ ಇವರ ಅಕಾಲಿಕಮರಣದಿಂದ ಇಡೀ ಭರತಖಂಡವೇ ಚಿಂತಾಗ್ನಿಯಿಂದ ಕುದಿಯುತ್ತಿರುವದಲ್ಲದೆ, ಗುಣಪಕ್ಷಪಾತಿಗಳಾದ ವಿದೇಶದ ರಾಂಸೇಮ್ಯಾಕ್ಡೋನಾಲ್ಡ್ ಮೊದಲಾದ ರಾಜನೀತಿಜ್ಞರೂ ಸಹ ಭಾರತದಿವ್ಯಜ್ಯೋತಿಯೆನಿಸಿದ ಈ ಮಹೋದಯರ ವಿಯೋಗದುಃಖವನ್ನು ವ್ಯಕ್ತಗೊಳಿಸುತ್ತಿರುವರು. ಅಸಾಧಾರಣಶಕ್ತಿಯುಳ್ಳ ಇಂಥ ದೇಶಭಕ್ತರು ವಿಯೋಗವಾಗುವದನ್ನು ನೋಡಿದರೆ ಇದು ಭಾರತೀಯರ ದುರದೃಷ್ಟವೆಂದೇ ಹೇಳಬೇಕಾಗಿದೆ. ಸ್ವಾಮಿ ವಿವೇಕಾನಂದ, ಲೋಕಮಾನ್ಯ ಬಾಲಗಂಗಾಧರತಿಲಕ, ದೇಶಬಂಧು ಸಿ. ಆರ್. ದಾಸ, ಪಂಜಾಬಸಿಂಹ ಲಾಲಾಲಜಪತರಾಯ ಮೊದಲಾದ ಮಹಾಮಹಾಮೇಧಾವಿಗಳು ಭಾರತಮಾತೆಯನ್ನುದ್ಧರಿಸಲು ತನುಮನೋಧನಗಳಿಂದ ದೀರ್ಘಸಾಹಸವನ್ನು ಮಾಡಿದರೂ ಉದ್ದಿಷ್ಟಫಲವು ಹಸ್ತಗತವಾಗದೆ ತದೇಕಧ್ಯಾನಾಸಕ್ತರಾಗಿ ಅಕಾಲದಲ್ಲಿ ತಮ್ಮ ಭೌತಿಕಶರೀರವನ್ನು ತ್ಯಜಿಸಿದರು. ಆಂಗ್ಲೀಯ ದೇಶಭಕ್ತರಾದ ಗ್ಲ್ಯಾಡಸ್ಟನ್, ವಿಲಿಯಂಪಿಟ್, ಬರ್ಕ ಮೆಕಾಲೆ ಮೊದಲಾದವರು ಸ್ವದೇಶೋದ್ಧಾರಕ್ಕಾಗಿ ಅಸಮಸಾಹಸವನ್ನು ಮಾಡಿದುದಲ್ಲದೆ ಉದ್ದಿಷ್ಟಫಲವು ತಮ್ಮ ಹಸ್ತಗತವಾಗುವವರೆಗೂ ಬಾಳಿ ಫಲಾನುಭವವನ್ನು ಮಾಡಿಕೊಂಡು ಯೋಗ್ಯಕಾಲದಲ್ಲಿ ಶರೀರವನ್ನು ಬಿಟ್ಟರು. ಕಾಲಚಕ್ರವು ತಿರುಗುತ್ತಹೋದಹಾಗೆಲ್ಲ ಇತ್ತೀಚೆಗೆ ಭಾರತೀಯರು ಸುಖಕ್ಕೆ ಪ್ರತಿಯಾಗಿ ದುಃಖಾನುಭವವನ್ನು ಮಾಡುತ್ತಿರುವರು. ಆದರೆ "ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ||" ಎಂಬ ನೀತಿಯಂತೆ ಭರತಖಂಡಕ್ಕೆ ಪ್ರಾಪ್ತವಾಗಿರುವ ದುಃಖವು ಬದಲಾವಣೆಯಾಗಿ ಮುಂದೆ ಸುಖವು ಉಂಟಾಗಲೇಬೇಕು. ಅಸ್ತು! ಪ್ರಕೃತದಲ್ಲಿ—"ಎಲೈ ಮನುಷ್ಯನೇ! ನೀನು ಮಾತೃಗರ್ಭದಿಂದ ಬರುವಾಗ ಎಲ್ಲರೂ ಆನಂದಿಸಿದರೂ ನೀನು ಮಾತ್ರ ದುಃಖಿಸುತ್ತಿರಬೇಕು. ನೀನು ಪರಲೋಕವನ್ನೈದುವ ಸಮಯದಲ್ಲಿ ಎಲ್ಲರೂ ದುಃಖಿಸುತ್ತಿದ್ದರೆ ನೀನು ಮಾತ್ರ ಹಸನ್ಮುಖಿಯಾಗಿರಬೇಕು" ಎಂದು ಸಾದಿಯೆಂಬ ಪರ್ಷಿಯನ್ ಮಹಾಕವಿಯು ಹೇಳಿರುವ ಅನುಭವಸಿದ್ಧವಾದ ವಚನವನ್ನು ಜ್ಞಾಪಿಸಿಕೊಂಡು ಮೌಲಾನಾಮಹಮ್ಮದಾಲಿಯವರ ವಿಯೋಗವಿಷಯದಲ್ಲಿ ಸರ್ವರೂ ಸಮಾಧಾನಪಡಬೇಕಾಗಿದೆ.

ಮೌಲಾನಾ ಮಹಮ್ಮದಾಲಿಯವರು 1878 ನೆಯ ಇಸವಿಯಲ್ಲಿ ರಾಮಪುರದ ಜಹಗೀರದಾರರ ಮನೆತನದಲ್ಲಿ ಜನಿಸಿದರು. ಇವರು ಚಿಕ್ಕವರಿರುವಾಗಲೇ ಇವರ ತಂದೆಯವರು ವಿಧಿವಶರಾದುದರಿಂದ ತಮ್ಮ ತಾಯಿಯ ಪೋಷಣೆಯಲ್ಲಿಯೇ ಬೆಳೆದರು. ಮಹಾರಾಷ್ಟ್ರಸಾಮ್ರಾಜ್ಯಸ್ಥಾಪಕರಾದ ಶಿವಾಜಿಮಹಾರಾಜರಿಗೆ ಹಿಂದೂಧರ್ಮದಲ್ಲಿ ಅಧಿಕವಾದ ಭಕ್ತಿಯು ಹುಟ್ಟುವುದಕ್ಕೆ ಅವರ ತಾಯಿಯವರು ಹೇಗೆ ಕಾರಣೀಭೂತರೋ, ಹಾಗೆಯೇ ಮೌಲಾನಾ ಮಹಮ್ಮದಾಲಿಯವರಿಗೆ ಇಸ್ಲಾಂ ಧರ್ಮದಲ್ಲಿ ಅಸಾಧಾರಣವಾದ ಭಕ್ತಿಶ್ರದ್ಧೆಗಳುತ್ಪನ್ನವಾಗುವುದಕ್ಕೆ ಅವರ ತಾಯಿಯವರೇ ಕಾರಣೀಭೂತರು. ಇವರ ತಾಯಿಯು ಇವರಿಗೆ ಉತ್ತಮಶಿಕ್ಷಣವನ್ನು ಕೊಡಿಸಬೇಕೆಂಬಾಶೆಯಿಂದ ತನ್ನ ಆಸ್ತಿಪಾಸ್ತಿಗಳನ್ನು ಮಾರಿ ಇವರನ್ನು ವಿಶೇಷ ವಿದ್ಯಾವಂತರನ್ನಾಗಿ ಮಾಡಲು ಯತ್ನಿಸಿದಳು. ಇವರು ಅಲಿಗಢ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಪಡೆದು ಲಂಡನ್ನಿಗೆ ಹೋಗಿ ಆಕ್ಸ್‌ಫರ್ಡ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡಿದ ಬಳಿಕ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭರತಖಂಡಕ್ಕೆ ಹಿಂದಿರುಗಿದರು. ಅನಂತರ ಇವರು ಬಡೋದಾಸಂಸ್ಥಾನದಲ್ಲಿ ಸ್ವಲ್ಪಕಾಲ ಅಬಕಾರಿಖಾತೆಯ ಅಧಿಕಾರಿಗಳಾಗಿ ಕೆಲಸಮಾಡಿದರು. ಆ ಮೇಲೆ ಅದನ್ನು ಬಿಟ್ಟು ವಕೀಲಿವೃತ್ತಿಯನ್ನವಲಂಬಿಸಿ ತಮ್ಮ ಪಾಂಡಿತ್ಯಬಲದಿಂದ ಲಕ್ಷಾಂತರ ರೂಪಾಯಿಗಳನ್ನು ಗಳಿಸಹತ್ತಿದರು. ಅನಂತರ ಇವರು ಅದನ್ನೂ ಬಿಟ್ಟು ಭಾರತಮಾತೆಯ ಹಾಗೂ ಇಸ್ಲಾಂ ಧರ್ಮದ ಸೇವೆಯೇ ತಮ್ಮ ಮುಖ್ಯಧ್ಯೇಯವೆಂದೆಣಿಸಿ, ಕಾಮ್ರೇಡ್ ಮತ್ತು ಹಮದರ್ದ ಎಂಬ ಪತ್ರಿಕೆಗಳನ್ನು ಹೊರಡಿಸಿ ಜನಜಾಗೃತಿಯ ಕಾರ್ಯವನ್ನು ಕೈಕೊಂಡರು. ಇವರ ಚಮತ್ಕಾರವೂ, ನ್ಯಾಯಸಮ್ಮತವೂ, ನಿರ್ಭಯಪೂರಿತವೂ ಆದ ಲೇಖನಗಳು ಜಗತ್ತಿನ ಮೆಚ್ಚಿಗೆಗೆ ಪಾತ್ರಗಳಾದುವು.

1914 ನೆಯ ವರ್ಷದಲ್ಲಿ ಇಂಗ್ಲೆಂಡಿಗೂ ಜರ್ಮನಿಗೂ ಘೋರಯುದ್ಧವು ಸಂಭವಿಸಿದಾಗ ಮಹಮ್ಮದೀಯರ ಸ್ಥಿತಿಯು ಬಹು ವಿಲಕ್ಷಣವಾಗಿತ್ತು. ಭರತಖಂಡದಲ್ಲಿ ವಿಶೇಷಸಂಖ್ಯೆಯುಳ್ಳ ಸುನ್ನೀ ಧರ್ಮದ ಮಹಮ್ಮದೀಯರು ಮಹಮದ್ ಪೈಗಂಬರರ ಪ್ರತಿನಿಧಿಗಳೆಂದು ಅತ್ಯಂತ ಪೂಜ್ಯಬುದ್ಧಿಯಿಂದ ಕಾಣುತ್ತಿದ್ದ ತುರ್ಕಸ್ಥಾನದ ಸುಲ್ತಾನರು ಜರ್ಮನಿಯ ಪಕ್ಷವನ್ನು ಹಿಡಿದಿದ್ದುದರಿಂದ, ಆಗ ಭರತಖಂಡದ ಮಹಮ್ಮದೀಯರು ಸುಲ್ತಾನರಿಗೆ ಬೆಂಬಲವಾಗಬೇಕೇ ಅಥವಾ ಇಂಗ್ಲೆಂಡಿಗೆ ಸಹಾಯಮಾಡಬೇಕೇ ಎಂಬ ಬಿಕ್ಕಟ್ಟಾದ ಪ್ರಶ್ನೆಯು ಬಂದೊದಗಿತು. ಆಗ ಅಖಿಲಭಾರತ ಮಹಮ್ಮದೀಯರು ಇಂಗ್ಲೆಂಡಿಗೇ ಸಹಾಯಮಾಡಬೇಕೆಂದು ನಿರ್ಧರಿಸಿದರೂ ಸಹ ಇವರ ನೇತೃತ್ವದಲ್ಲಿ ಹೊರಡುವ ಕಾಮ್ರೇಡ್ ಮತ್ತು ಹಮದರ್ದ ಪತ್ರಿಕೆಯಲ್ಲಿ ಆಕ್ಷೇಪಕರಗಳಾದ ಲೇಖನಗಳವೆ ಎಂದು ಸರ್ಕಾರದವರು ಇವರನ್ನು 1915 ನೆಯ ವರ್ಷದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಆಕ್ಟು ಪ್ರಕಾರ ಬಂಧನದಲ್ಲಿರಿಸಿದರು. ಹಿಂದೂಸ್ಥಾನದ ವಿಶೇಷ ವರ್ತಮಾನಪತ್ರಿಕೆಗಳೂ ಅನೇಕ ಮುಖಂಡರೂ ಇವರನ್ನು ಬಂಧವಿಮೋಚನೆಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದರೂ ಅದು ನಿಷ್ಫಲವಾಯಿತು. ಕಟ್ಟಕಡೆಗೆ ರಾಜಕೀಯಖೈದಿಗಳನ್ನು ಬಿಡಬೇಕೆಂದು ಚಕ್ರವರ್ತಿಗಳು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದ ಮೇಲೆ 1919 ನೆಯ ಇಸವಿ ಡಿಸೆಂಬರ್ 25 ನೆಯ ತಾರೀಖಿನ ದಿವಸ ಇವರು ಬಿಡುಗಡೆಮಾಡಲ್ಪಟ್ಟರು. ಅನಂತರ ಇವರು ಬೊಂಬಾಯಿಪಟ್ಟಣಕ್ಕೆ ಬಂದಿಳಿದರು. ಆ ಪಟ್ಟಣವು ಇವರಿಗೆ ಅಭೂತಪೂರ್ವವಾದ ಸ್ವಾಗತವನ್ನಿತ್ತು ಗೌರವಿಸಿತು. ಬೊಂಬಾಯಿ ಪುರನಿವಾಸಿಗಳು ದಿವಂಗತ ಲೋಕಮಾನ್ಯ ಬಾಲಗಂಗಾಧರತಿಲಕರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿ ಇವರನ್ನು ಸನ್ಮಾನಿಸಿದರು.

ಇಂಗ್ಲೆಂಡಿಗೂ ಜರ್ಮನಿಗೂ ನಡೆದ ಮಹಾಯುದ್ಧವು ವಾರ್ಸೇಲ್ಸ್ ಒಪ್ಪಂದದ ಪ್ರಕಾರ ಪರಿಸಮಾಪ್ತಿಯಾಗಿ ಆ ಒಪ್ಪಂದದಲ್ಲಿ ತುರ್ಕಸ್ಥಾನದಸುಲ್ತಾನರ ಅಧಿಕಾರವು ಮಣ್ಣುಪಾಲಾಯಿತು. ಅದರಿಂದ ಅವರ ಕಲೀಫ್ ಪದವಿಯೂ ಹೋಯಿತು. ಇದು ಮಹಮ್ಮದೀಯಪ್ರಪಂಚಕ್ಕೆ ಪರಮದುಃಖವನ್ನುಂಟುಮಾಡಿದುದರಿಂದ ಕಲೀಫ ಪದವಿಯನ್ನು ಪುನರುತ್ಥಾಪನಗೊಳಿಸಬೇಕೆಂದು ಮಹಮ್ಮದೀಯರು ಚಳವಳಿಯನ್ನೆಬ್ಬಿಸಿದರು. ಆಗ ಮೌಲಾನಾಮಹಮ್ಮದಾಲಿಯವರೇ ಆ ಚಳವಳಿಗೆ ನಾಯಕರಾದರು. ಇಂಗ್ಲೆಂಡಿನ ರಾಜನೀತಿಜ್ಞರಲ್ಲಿ ಈ ವಿಷಯವನ್ನು ಆಲೋಚಿಸಿ ಕಲೀಫ ಪದವಿಯನ್ನು ಮೊದಲಿನಂತೆ ನೆಲೆಗೊಳಿಸಬೇಕೆಂದು ಮೌಲಾನಾಅಬ್ದುಲ್‌ಬಾರಿ, ಸಯ್ಯದ್‌ಹುಸೇನರೊಂದಿಗೆ ಇಂಗ್ಲೆಂಡಿಗೆ ತೆರಳಿದರು. ಅಲ್ಲಿ ಇವರ ಪ್ರಯತ್ನಗಳೆಲ್ಲವೂ ವಿಫಲವಾದವು. ಇವರು ಇಟಲಿ ಮೊದಲಾದ ಅನೇಕ ರಾಷ್ಟ್ರಗಳಿಗೆ ಹೋಗಿ ತಮಗೊದಗಿರುವ ಸಂಕಟವನ್ನು ವಿವರಿಸಿದರು. ಆದರೂ ಏನೂ ಪ್ರಯೋಜನವಾಗಲಿಲ್ಲ.

ಅನಂತರ ಹಿಂದೂಸ್ಥಾನಕ್ಕೆ ಹಿಂದಿರುಗಿ ಮಹಾತ್ಮಗಾಂಧಿಯವರು ಆಗತಾನೆ ಪ್ರಾರಂಭಮಾಡಿದ್ದ ಸಹಾಯನಿರಾಕರಣಚಳವಳಿಯಲ್ಲಿ ಮುಖ್ಯಪಾತ್ರವನ್ನು ವಹಿಸಿದರು. ಆಗ ಇವರು ಮಹಾತ್ಮರಿಗೆ ಬಲಭುಜದಂತಿದ್ದರು. ಇವರು ಮಹಾತ್ಮರ ಜೊತೆಯಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಸಂಚರಿಸಿ ತಮ್ಮ ಅನುಪಮ ವಾಗ್ಝರಿಯಿಂದ ಜನಜಾಗೃತಿಯನ್ನು ಮಾಡಿದರು. ಇವರು ವಕ್ತೃತ್ವಕಲೆಯಲ್ಲಿ ಅಸಾಧಾರಣವಾದ ನೈಪುಣ್ಯವನ್ನು ಪಡೆದಿದ್ದರು. ಇವರು ಇಂಗ್ಲೀಷ್ ಮತ್ತು ಉರ್ದುಭಾಷೆಗಳಲ್ಲಿ ಭಾಷಣಮಾಡುವಾಗ ಬೆಂಕಿಯ ಕಿಡಿಗಳನ್ನುಗುಳುವರೋ ಏನೋ ಎಂದು ಸಭಿಕರಿಗೆ ಭಾಸವಾಗುತ್ತಿತ್ತು. ಇವರು ಮಹಾತ್ಮಾಗಾಂಧಿಯವರ ಜೊತೆಯಲ್ಲಿ ದಕ್ಷಿಣಹಿಂದೂಸ್ಥಾನದಲ್ಲಿ ಸಂಚರಿಸುವಾಗ ವಿಶಾಖಪಟ್ಟಣದಲ್ಲಿ ರಾಜದ್ರೋಹಿಗಳೆಂಬ ಅಪಾದನೆಯ ಮೇಲೆ ದಸ್ತಗಿರಿಮಾಡಲ್ಪಟ್ಟು ಕರಾಚಿಯಲ್ಲಿ ವಿಚಾರಣೆಯು ನಡೆದಮೇಲೆ ಇವರೂ ಇವರ ಸಹೋದರರಾದ ಮೌಲಾನಾ ಷೌಕತಾಲಿಯವರೂ ಎರಡು ವರ್ಷಗಳ ಕಠಿಣಶಿಕ್ಷೆಗೆ ಗುರಿಯಾದರು. ಜೈಲಿನಿಂದ ಹಿಂದಿರುಗಿ ಬಂದ ಮೇಲೂ ಇವರು ಮಹಾತ್ಮಾಗಾಂಧಿಯವರ ಸಹಾಯನಿರಾಕರಣ ಚಳವಳಿಯಲ್ಲಿ ಪ್ರಮುಖರೆನಿಸಿಕೊಂಡಿದ್ದರು. 1923ನೆಯ ವರ್ಷ ಕಾಕಿನಾಡಿನಲ್ಲಿ ನೆರೆವೇರಿದ ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಆಗ ಇವರು ಮಾಡಿದ ಭಾಷಣವು ಭಾರತೀಯರ ಸ್ವಾತಂತ್ರ್ಯಸಾಧನೆಗೂ, ಹಿಂದೂಮಹಮ್ಮದೀಯರ ಐಕಮತ್ಯಕ್ಕೂ ತುಂಬಾ ಸಹಕಾರಿಯಾಗಿದೆ. 1924 ನೆಯ ವರ್ಷದಲ್ಲಿ ಗುಲ್ಬರ್ಗಾದಲ್ಲಿ ಹಿಂದೂಮಹಮ್ಮದೀಯರ ಗಲಭೆಯಾದಾಗ ಮಹಾತ್ಮಾಗಾಂಧಿಯವರು ದಿಲ್ಲಿಯಲ್ಲಿ ಇವರ ಮನೆಯಲ್ಲಿಯೇ 21 ದಿವಸಗಳವರೆಗೆ ನಿರಶನವ್ರತವನ್ನು ಕೈಕೊಂಡಿದ್ದರು. ಮಹಾತ್ಮರ ಆ ವ್ರತವು ಪೂರೈಸಿದಮೇಲೆ ಇವರು ಮಹಾತ್ಮರಿಗೆ ಸುಂದರವಾದ ಗೋದಾನಮಾಡಿ ಹಿಂದೂಮಹಮ್ಮದೀಯರ ಐಕಮತ್ಯಕ್ಕೆ ತಮ್ಮ ಪ್ರಾಣವನ್ನಾದರೂ ಸಮರ್ಪಿಸುವೆವೆಂದು ಭರವಸೆಯನ್ನಿತ್ತರು. ಇದರಿಂದ ಇವರಿಗೆ ಹಿಂದೂಮಹಮ್ಮದೀಯರ ಸಖ್ಯವನ್ನು ಭದ್ರಗೊಳಿಸಬೇಕೆಂಬ ಉತ್ಕಟೇಚ್ಛೆಯು ಎಷ್ಟಿತ್ತೆಂಬುದು ವ್ಯಕ್ತವಾಗುತ್ತದೆ. ಇವರು ಸ್ವಲ್ಪ ಸಿಟ್ಟಿನ ಸ್ವಭಾವದವರು. ನಿಷ್ಕಪಟವಾದಿಗಳು. ಇದನ್ನು ಮಹಾತ್ಮರೂ ಕೂಡ ಅರಿತಿದ್ದರು. ಸರ್ವತೋಪಮಾನವಾದ ಧೈರ್ಯವೂ, ಅದ್ಭುತಕಾರ್ಯಸಾಧನ ಶಕ್ತಿಯೂ ಇವರ ನೈಜವಾದ ಗುಣಗಳಾಗಿದ್ದವು. ಇವರು ಅವಸಾನವನ್ನೈದುವದಕ್ಕೆ 2-3 ದಿವಸಗಳ ಪೂರ್ವದಲ್ಲಿ ಹಿಂದೂಮಹಮ್ಮದೀಯರ ಕಠಿಣಪ್ರಶ್ನೆಯನ್ನು ಬಿಡಿಸಲು ಒಂದು ಉಪಾಯವನ್ನು ಸೂಚಿಸಿದ್ದರು. ಅಸ್ತು! ಇವರಿಗೆ ಈ ತಿಂಗಳು 4 ನೆಯ ತಾರೀಖಿನ ದಿವಸ ಪ್ರಾತಃಕಾಲ 5 ಘಂಟೆಯಿಂದ ಸ್ಮೃತಿಯೇ ಇರಲಿಲ್ಲ. ಇವರ ಸಹೋದರರಾದ ಮೌಲಾನಾಷೌಕತಾಲಿಯವರು ಐರ್ಲೆಂಡಿಗೆ ಹೋಗಿದ್ದರು. ಹಿಂದಿರುಗಿಬಂದಾಗ ಇವರಿಗೆ ಸ್ಮೃತಿಯೇ ಇಲ್ಲದುದರಿಂದ ಅವರ ಸಂಗಡ ಕೊನೆಯ ಮಾತುಗಳನ್ನಾಡಲು ಸಾಧ್ಯವಾಗಲಿಲ್ಲ. ಮಹಮ್ಮದಾಲಿಯವರು ನಿಧನವನ್ನೈದುವಾಗ ಅವರ ಸಹೋದರರೂ, ಅವರ ಪತ್ನಿಯರೂ, ಅವರ ಮಗಳೂ, ಇಬ್ಬರು ಅಳಿಯಂದಿರೂ ಇದ್ದರು. ಅವರ ಕಳೇಬರವು ಸರ್ಕಾರದವರ ಖರ್ಚಿನಿಂದ ಜೆರೂಸಲೇಮಿಗೆ ಸಾಗಿಸಲ್ಪಟ್ಟು ಅಲ್ಲಿಯ ಪ್ರಸಿದ್ಧ ಓಮರ್ ಮಸೀದಿಯಲ್ಲಿ ನಿಕ್ಷೇಪಮಾಡಲ್ಪಡುವುದೆಂದು ಪ್ರಸಿದ್ಧವಾಗಿದೆ. ಈ ವೀರಪುರುಷನ ಆತ್ಮಕ್ಕೆ ಶ್ರೀ ಪರಮೇಶ್ವರನು ಶಾಂತಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶಿವಮೊಗ್ಗಾ ಬಾರ್ಲೈನಿನ ಹತ್ತಿರವಿರುವ ಮಸೀದಿಯ ವಿಷಯವಾಗಿ ಬಾರ್ಲೈನಿನ ಮಹಮ್ಮದೀಯರಿಗೂ ಲಷ್ಕರ್‌ಮೊಹಲ್ಲೆಯ ಮಹಮ್ಮದೀಯರಿಗೂ ಈ ತಿಂಗಳು 2-3 ನೆಯ ತಾರೀಖುಗಳಲ್ಲಿ ಹೊಡೆದಾಟವಾಗಿ ೭ ಜನರಿಗೆ ಗಾಯವಾಗಿದೆಯೆಂದೂ, ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರೆಂದೂ ತಿಳಿದು ಬರುತ್ತದೆ.

ಈ ತಿಂಗಳು 6 ನೆಯ ತಾರೀಖಿನದಿವಸ ರಾಜಧಾನಿಯ ಇರ್ವಿನ್‌ರೋಡಿನ ಸೇತುವೆಯಮೇಲೆ ಅರಮನೆ ಇಲಾಖೆಯ ವೆಂಕಟಜೋಶಿಯವರ 11 ವರ್ಷ ವಯಸ್ಸಿನ ರಂಗನಾಥ ಎಂಬ ಹುಡುಗನು ಮೋಟಾರಿಗೆ ಸಿಲುಕಿ ಮೃತಪಟ್ಟನು. ಆ ಮೋಟಾರಿನಲ್ಲಿ ಒಬ್ಬ ಯೂರೋಪಿಯನ್ ಅಧಿಕಾರಿಯು ಕುಳಿತಿದ್ದು, ಅಬ್ದುಲ್ ಕರೀಂ ಎಂಬ ಡ್ರೈವರನು ಮೋಟಾರು ನಡೆಯಿಸುತ್ತಿದ್ದನು. ಇವನ ಮೇಲೆ ಸರ್ಕಾರದವರು ಮೊಕದ್ದಮೆ ನಡೆಯಿಸಿರುವುದಾಗಿ ತಿಳಿದುಬರುತ್ತದೆ.

ದೊಡ್ಡಬಳ್ಳಾಪುರದ ಟೌನಿನಲ್ಲಿಯೂ, ಆ ತಾಲೂಕಿನಲ್ಲಿಯೂ ಕಾಲರಾ ರೋಗವು ವ್ಯಾಪಿಸಿದ್ದುದರಿಂದ ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿಯ ರಥೋತ್ಸವವೂ ಮತ್ತು ಜಾತ್ರೆಯೂ ಪುಷ್ಯ ಶುದ್ಧ ಷಷ್ಠಿಯ ದಿವಸ (26-12-30) ನಡೆಯಬೇಕಾದುದು ನಿಂತುಹೋಯಿತು. ಆದಕಾರಣ ಮೆ|| ಡೆಪ್ಯೂಟಿಕಮಿಷನರ್ ಸಾಹೇಬರವರು ಸದರಿ ಶ್ರೀ ಘಾಟಿಸುಬ್ರಹ್ಮಣ್ಯಸ್ವಾಮಿಯ ರಥೋತ್ಸವವನ್ನೂ ಮತ್ತು ಜಾತ್ರೆಯನ್ನೂ ಇದೇ ಮಾಘ ಶುದ್ಧ ಷಷ್ಠಿ (25-1-31) ಯ ದಿವಸ ನಡೆಯಿಸಬೇಕೆಂದು ಹುಕುಂ ಮಾಡಿರುವರು. ಆ ಜಾತ್ರೆಯು 25-1-31 ರ ಲಾಗಾಯಿತು 1-2-31 ರ ವರೆಗೂ ನಡೆಯುವುದೆಂದು ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರ ಸಮ್ಮೇಳನದ ಮೊದಲನೆಯ ಅಧಿವೇಶನವು ತುಮಕೂರುಪಟ್ಟಣದಲ್ಲಿ ಈ ತಿಂಗಳು 3 ನೆಯ ತಾರೀಖಿನ ದಿವಸ ಆರಂಭವಾಯಿತು. ದ್ವಿತೀಯಸಚಿವರಾದ ಮ್ಯಾಥ್ಯೂರವರು ಈ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ದಿವಾನ್ ಸಾಹೇಬರವರು ಅಮೂಲ್ಯವಾದ ಸಂದೇಶವನ್ನು ಕಳುಹಿಸಿದ್ದರೆಂದೂ, ವಿದ್ಯಾಖಾತೆಯ ಡೈರೆಕ್ಟರ್ ಪ್ರೊ|| [illegible] ಆರ್. ವಾಡಿಯಾರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರೆಂದೂ, ಈ ಸಮ್ಮೇಳನವು ಅಲ್ಲಿ ನೆರೆದು ಜಯಪ್ರದವಾಗುವುದಕ್ಕೆ ಉಪಾಧ್ಯಾಯರ ಅಭಿವೃದ್ಧಿಯಲ್ಲಿ ಉತ್ಕಟೇಚ್ಛೆಯುಳ್ಳ ತುಮಕೂರು ಡಿ|| ಎಜ್ಯುಕೇಷನಲ್ ಆಫೀಸರ್ ಮಿ|| ಮಹಮ್ಮದ್‌ದಾವೂದ್‌ರವರ ಪ್ರಯತ್ನವಿಶೇಷವೇ ಮೂಲಕಾರಣವೆಂದೂ ತಿಳಿದು ಬರುತ್ತದೆ.

ಮೈಸೂರು ಸಂಸ್ಥಾನದ ಪ್ರಥಮಸಚಿವರಾದ ರಾಜಮಂತ್ರಪ್ರವೀಣ ಸಿ. ಎಸ್. ಬಾಲಸುಂದರಂ ಅಯ್ಯರವರು ಕೆಲವು ದಿವಸಗಳಿಂದ ಅಸ್ವಸ್ಥರಾಗಿದ್ದುದರಿಂದ ಹವೆಯ ಬದಲಾವಣೆಗೋಸ್ಕರ ಘಟ್ಟಕ್ಕೆ ಹೋಗಿದ್ದರು. ಕಳೆದವಾರ ಇವರು ಹಾಸನಕ್ಕೆ ಬಂದಾಗ ಅಕಸ್ಮಾತ್ತಾಗಿ ಪಾರ್ಶ್ವವಾಯುವು ಕಾಣಿಸಿಕೊಂಡು ಇವರ ಬಲದ ತೋಳು ಮತ್ತು ತೊಡೆಯು ಕೆಲಸಕ್ಕೆ ಬಾರದಂತಾಗಿವೆ. ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಮೆಡಿಕಲ್ ಆಫೀಸರ್ ರಾಬರ್ಟ್‌ಸನ್‌ರವರು ಸೀನಿಯರ್ ಸರ್ಜನ್ ಡಾ|| ಸುಬ್ಬರಾಯರು, ಮತ್ತು ಡಾ|| ಕಜೂರಿಯವರು ಚಿಕಿತ್ಸೆಯನ್ನು ನಡೆಯಿಸುತ್ತಿರುವರು. ಪರಮೇಶ್ವರನ ಅನುಗ್ರಹದಿಂದ ಇವರು ಸದ್ಯಃ ಗುಣಮುಖವಾಗುತ್ತಿರುವರೆಂದು ಕೇಳುತ್ತೇವೆ. ಜನಾನುರಾಗಿಗಳೂ ಪ್ರಜಾಹಿತಚಿಂತಕರೂ ಆದ ಇವರು ಶೀಘ್ರವಾಗಿ ಆರೋಗ್ಯವನ್ನು ಹೊಂದುವಂತೆ ಕರುಣಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಲೋಕಪ್ರಸಿದ್ಧಳಾದ ಗೋಹರ್‌ಜಾನ್ ಎಂಬ ಗಾಯಿಕೆಯು ಅರಮನೆಯಲ್ಲಿ ಸಂಗೀತಕ್ಕಾಗಿ ನೇಮಕವಾಗಿದ್ದಳು. ಈಕೆಯು ಸುಮಾರು 14 ತಿಂಗಳುಗಳ ಕೆಳಗೆ ಕಾಯಿಲೆಬಿದ್ದು ಮೃತಪಟ್ಟಳು. ಈಕೆಯ ವಿಶಿಷ್ಟ ನಗನಾಣ್ಯಗಳನ್ನೂ, ಬೆಲೆಯುಳ್ಳ ಬಟ್ಟೆಗಳನ್ನೂ ಪೋಲೀಸರು ಮಹಜರ್ ಮಾಡಿ ಡಿಸ್ಟ್ರಿಕ್ಟ್ ಖಜಾನೆಯಲ್ಲಿಟ್ಟಿದ್ದಾರೆ. ಮೈಸೂರು ನಿವಾಸಿಯಾದ ಮಿ|| ಮಿರ್ಜಾ ಕಂಬರಅಲ್ಲಿ ಎಂಬಾತನು ತಾನು ಆಕೆಯ ಮದುವೆಯ ಗಂಡನೆಂದೂ, ಆಕೆಯ ಆಸ್ತಿಯೆಲ್ಲಾ ತನಗೆ ಬರಬೇಕೆಂದೂ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದಹೂಡಿದನು. ಅನಂತರ ಕಲ್ಕತ್ತೆಯ ಮಿ|| ಅಬ್ಬಾಸ್‌ಸಬ್ಜುವಾರಿ ಎಂಬಾತನು ತಾನೇ ಆಕೆಯ ಮದುವೆಯ ಗಂಡನೆಂದೂ, ಆಕೆಯ ಆಸ್ತಿಯೆಲ್ಲಾ ತನಗೆ ಬರಬೇಕೆಂದೂ ಎದುರು ಅರ್ಜಿಯನ್ನು ಹಾಕಿದನು. ಸಿಟಿಮ್ಯಾಜಿಸ್ಟ್ರೇಟರು ಇವರೀರ್ವರೂ ಆಕೆಯ ಆಸ್ತಿಗೆ ಹಕ್ಕುದಾರರಲ್ಲವೆಂದು ನಿರ್ಧರಿಸಿ, ಆಕೆಯ ನಿಜವಾದ ಹಕ್ಕುದಾರರು ಆ ಕೋರ್ಟಿಗೆ ಅರ್ಜಿಹಾಕಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಂಡು ಆಸ್ತಿಯನ್ನು ಪಡೆಯಬಹುದೆಂದು ತೀರ್ಮಾನಿಸಿರುವರು.

ವರ್ತಮಾನಸಂಗ್ರಹ.

ಈಗ ಎರಡುವಾರಗಳ ಕೆಳಗೆ ದಸ್ತಗಿರಿಮಾಡಲ್ಪಟ್ಟಿದ್ದ ಮಹಾತ್ಮಾ ಗಾಂಧಿಯವರ ಮಕ್ಕಳಾದ ಶ್ರೀಯುತ ರಾಮದಾಸಗಾಂಧಿಯವರನ್ನು ಈ ತಿಂಗಳು ಜನವರಿ 6 ನೆಯ ತಾರೀಖಿನ ದಿವಸ ಸೂರತ್ ಅಡಿಷನಲ್ ಮ್ಯಾಜಿಸ್ಟ್ರೇಟ್‌ರವರು 6 ತಿಂಗಳ ಕಠಿಣಶಿಕ್ಷೆಗೆ ಗುರಿಮಾಡಿದರು.

ಮಹಾತ್ಮಗಾಂಧಿಯವರು ಕೆಲವು ದಿವಸಗಳಿಂದ ಅಜೀರ್ಣ ಮತ್ತು ಮಲಬದ್ಧತೆಯಿಂದ ಹಾಲನ್ನು ಸಹ ತೆಗೆದುಕೊಳ್ಳುವದಿಲ್ಲವೆಂದೂ, ಜೋಳದ ರೊಟ್ಟಿ, ಬಾದಾಮಿ, ಕಾಯಿಪಲ್ಯಗಳನ್ನು ಮಾತ್ರ ಸೇವಿಸುತ್ತಿರುವರೆಂದೂ, ಪೂನಾದ ಹವೆಯು ಮತ್ತು ಅಲ್ಲಿಯ ನೀರು ಅವರ ಪ್ರಕೃತಿಗೆ ಸೇರುವದಿಲ್ಲವಾದುದರಿಂದ ಮಹಾತ್ಮರು ಶೀಘ್ರದಲ್ಲಿಯೇ ಬೇರೆ ಸ್ಥಳಕ್ಕೆ ಸಾಗಿಸಲ್ಪಡುವರೆಂದೂ ಕೇಳುತ್ತೇವೆ.

ಅಲಹಾಬಾದಿನಲ್ಲಿ ವಿದೇಶೀಯವಸ್ತ್ರ ಬಹಿಷ್ಕಾರ ಚಳವಳಿಯನ್ನು ನಡೆಯಿಸುವುದಕ್ಕಾಗಿ 25 ಜನ ಸತ್ಯಾಗ್ರಹಿಗಳು ಉಪವಾಸವ್ರತವನ್ನಾಚರಿಸುತ್ತಿರಲು, ಅಲಹಾಬಾದಿನ ಸುಮಾರು ಎರಡು ಸಾವಿರ ಜನರು ತಾವೂ ಸಹ ಉಪವಾಸವ್ರತವನ್ನಾಚರಿಸಲು ಪ್ರಾರಂಭಿಸಿದರು. ಇದನ್ನು ನೋಡಿ ವರ್ತಕರು ಗಾಬರಿಯಾಗಿ ಇನ್ನು ಮೂರುತಿಂಗಳುಗಳವರೆಗೆ ವಿದೇಶೀಬಟ್ಟೆಯ ಒಂದು ತುಂಡನ್ನೂ ಕೂಡ ಮಾರುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವರು.

ಈ ಮಾಹೆ 17 ನೇ ತಾರೀಖಿನ ದಿವಸ ಸೇರುವ ದಿಲ್ಲಿ ನ್ಯಾಯವಿಧಾಯಕಸಭೆಯಲ್ಲಿ ಹಾಜಿ ಅಬ್ದುಲ್ ಹರೂನ್‌ರವರು ದೇಶದಲ್ಲಿ ವ್ಯಾಪಾರ ಮುಂತಾದವುಗಳು ಬಹಳ ವಿಷಮಪರಿಸ್ಥಿತಿಯಲ್ಲಿರುವದರಿಂದಲೂ, ನಿರುದ್ಯೋಗದ ಜನರ ಸಂಖ್ಯೆಯು ಹೆಚ್ಚಾಗುತ್ತಿರುವುದರಿಂದಲೂ, ಇಂಡಿಯಾ ಸರ್ಕಾರದ ಆದಾಯವು ಬಹಳಮಟ್ಟಿಗೆ ಕಡಿಮೆ ಬರುವುದರಿಂದಲೂ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಂಬಳವನ್ನು ಶೇಕಡಾ 12½ ಯಂತೆ ಕಡಿಮೆಮಾಡಬೇಕೆಂದು ಪ್ರಾರ್ಥಿಸುವ ಠರಾವನ್ನು ಚರ್ಚೆಗೆ ತರುವರು.

ಅಮೇರಿಕೆಯಲ್ಲಿ ವಿದ್ಯುಚ್ಛಕ್ತಿಯಿಂದ ಪ್ರಾಣಪ್ರತಿಷ್ಠೆಯನ್ನು ಮಾಡುವದಕ್ಕೆ ಹೊಸ ಶೋಧಗಳು ಆಗುತ್ತಿವೆ. ಆ ಶೋಧದಲ್ಲಿ ಡಾ|| ಜೆ. ಡಬ್ಲ್ಯೂ. ಕ್ರಿಲ್‌ರವರು ವಿಜಯಶಾಲಿಗಳಾಗಿರುವರು. ಆಗತಾನೇ ಸತ್ತುಹೋದ ಒಂದು ಪ್ರಾಣಿಯ ಮೆದುಳಿನ ಸಂಗಳನ್ನೆಲ್ಲಾ ಸೇರಿಸಿ ವಿದ್ಯುಚ್ಛಕ್ತಿಯಿಂದ ಬೂದಿಮಾಡಿ ಅನಂತರ ಕೆಲವು ಉಪ್ಪುಗಳನ್ನು ಬೆರಸಿ ಪ್ರೋಟೀನ್ ಎಂಬ ಸಸ್ಯಬೀಜವನ್ನು ಅದರೊಂದಿಗೆ ಸೇರಿಸಿ ಮತ್ತೆ ವಿದ್ಯುಚ್ಛಕ್ತಿಯನ್ನು ಬಿಟ್ಟರೆ ಆ ಶರೀರದಲ್ಲಿ ಪ್ರಾಣಪ್ರತಿಷ್ಠೆಯಾಗುವದೆಂದು ಗೊತ್ತಾಗಿರುವದು.

ಅಮೇರಿಕೆಯ ಸುಪ್ರಸಿದ್ಧ ಶ್ರೀಮಂತನೊಬ್ಬನು ಹತ್ತುವರ್ಷಗಳ ಅವಧಿಯಲ್ಲಿ ತನ್ನ ನಾಡಿನಲ್ಲಿ ಹೆಚ್ಚು ಸಂಖ್ಯೆಯ ಮಕ್ಕಳನ್ನು ಹಡೆದ ತಾಯಿಗೆ 15 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇಚ್ಛಿಸಿರುವನು. ಈಗ ಈ ಬಹುಮಾನಕ್ಕೆ ಇಬ್ಬರು ಉಮೇದುವಾರರಿರುವರು. ಜಾಗ್ನಟೋ ಎಂಬ 37 ವರ್ಷದ ಮಹಿಳೆಯು ಈಗ 20 ನೆಯ ಮಗುವನ್ನು ಹಡೆದಿರುವಳು. ಬ್ರಾಮ್ ಎಂಬ ಮತ್ತೊಬ್ಬಳಿಗೆ ಈಗ 42 ವರ್ಷ ವಯಸ್ಸಾಗಿರುವದು. ಕಳೆದ 22 ವರ್ಷಗಳಲ್ಲಿ ಈಕೆಗೆ 26 ಮಕ್ಕಳಾಗಿರುವರು. ಇವರಿಬ್ಬರಲ್ಲಿ ಬ್ರಾಮಳಿಗೆ ಬಹುಮಾನವು ದೊರೆಯುವದಂತೆ!

ಲಂಡನ್ನಿನ ಗಾಂಧಿ ಸೊಸೈಟಿಯುಪರವಾಗಿ ಮಿ|| ಫೆನ್ನರ್ ಬ್ರಾಕ್ವೇಯವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಮಿ|| ಜೆ. ಎಸ್. ದಾರಾರವರು ಭರತಖಂಡದಲ್ಲಿ ಮಹಾತ್ಮಾ ಗಾಂಧಿಯವರಾದಿಯಾಗಿ ಸದ್ಯಃ ಕಾರಾಗೃಹಗಳಲ್ಲಿರುವ ಸುಮಾರು 50,000 ರಾಜಕೀಯ ಖೈದಿಗಳಿಗೆ ಬ್ರಿಟಿಷ್‌ಗಾರ್ನಮೆಂಟಿನವರು ಬಂಧವಿಮೋಚನೆಮಾಡುವುದರಿಂದಲೇ ಹಿಂದೂಸ್ಥಾನದ ಭಾವಿರಾಜ್ಯಾಂಗದ ಸಂಸ್ಕರಣವು ಸಫಲವಾಗುವದೆಂದೂ, ಇದಕ್ಕೆ ಇನ್ನು ಬೇರೆ ಯಾವ ಉಪಾಯವಿರುವದಿಲ್ಲವೆಂದೂ, ಆದುದರಿಂದ ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆಮಾಡಬೇಕೆಂದೂ ತಂದ ಠರಾವು ಸರ್ವಾನುಮತದಿಂದ ಪಾಸಾಯಿತು.

ಬೊಂಬಾಯಿಯಲ್ಲಿ ಶಾಂತಾಬಾಯಿ ಎಂಬ 15 ವರ್ಷ ವಯಸ್ಸಿನ ಬಾಲಿಕೆಯು ಪಿಕೆಟ್ ಮಾಡಿ ದಸ್ತಗಿರಿಯಾದಳು. ಪೋಲೀಸರು ಈಕೆಯನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡಲು ಅವರು ಈಕೆಯ ಚಿಕ್ಕ ವಯಸ್ಸನ್ನೂ ಪೋಲೀಸರು ಈಕೆಯ ಮೇಲೆ ಹೊರಿಸಿರುವ ಅಪರಾಧವನ್ನೂ ನೋಡಿ ಆಶ್ಚರ್ಯಪಟ್ಟರು. ಮ್ಯಾಜಿಸ್ಟ್ರೇಟರು ಇನ್ನು ಮುಂದೆ ನೀನು ಪಿಕೆಟ್ ಮಾಡುವುದಿಲ್ಲವೆಂದು ಹೇಳಿಬಿಟ್ಟರೆ ನಿನ್ನನ್ನು ಬಿಡುಗಡೆಮಾಡುತ್ತೇನೆಂದು ಹೇಳಿದರು. ಅದಕ್ಕೆ ಆ ಬಾಲಿಕೆಯು "ನನ್ನನ್ನು ಬಿಡುಗಡೆ ಮಾಡಿದರೆ ಪುನಃ ಪಿಕೆಟಿಂಗಿಗೆ ಹೋಗುತ್ತೇನೆ" ಎಂದು ಮ್ಯಾಜಿಸ್ಟ್ರೇಟರಿಗೆ ಹೇಳಲು, ಮ್ಯಾಜಿಸ್ಟ್ರೇಟರು ಆ ಬಾಲಿಕೆಗೆ 3 ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿದರಂತೆ!

ಸ್ವೀಕಾರ.

ಧಾರವಾಡ ಡಿ|| ಶಿಗ್ಗಾವಿ ತಾ|| ತಡಸದಲ್ಲಿರುವ ಮ|| ರಾ|| ವಾರದ ಗುರುಸಿದ್ಧಪ್ಪನವರ ಪುತ್ರಿ ಚಿ|| ಕುಂ|| ಸೌ|| ಕೊಟ್ರಮ್ಮನನ್ನು ಹಾನಗಲ್ಲ ತಾ|| ಅಲೂರಲ್ಲಿರುವ ಮ|| ರಾ|| ಮಿರ್ಜಿ ಬಸಪ್ಪನವರ ಪುತ್ರ ಚಿ|| ಸ|| ಸಂಗಪ್ಪನಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ವೇ|| ಪ್ರಭುಸ್ವಾಮಿ ಹಿರೇಮಠ ಇವರ ಪ್ರೋತ್ಸಾಹದ ಮೇರೆಗೆ ಪ್ರಭಾಪೋಷಣೆಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು. ವೇ|| ಹಿರೇಮಠದ ಮುರಿಗಯ್ಯನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(3ನೇ ಪುಟದಿಂದ ಮುಂದುವರಿದುದು.)

ಸಭೆಯಿಂದ ತಮಗುಂಟಾದ ಆನಂದವನ್ನು ಮೈಸೂರು ಸರ್ಕಾರದ ತೃತೀಯ ಸಚಿವರಾದ ಪಿ. ಜಿ. ಡಿಸೌಜಾರವರು ಅ|| ಜನರಲ್ ಸೆಕ್ರೆಟರಿಗಳಾದ ಶ್ರೀಯುತ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳವರಿಗೆ ಈ ಕೆಳಗೆ ಕಂಡಂತೆ ತಿಳುಹಿಸಿರುವರು.—" ಅಖಿಲಭಾರತಾಯುರ್ವೇದ ಮಹಾಸಮ್ಮೇಳನವು ಜಯಪ್ರದವಾಗುವ ಹಾಗೆ ಸುವ್ಯವಸ್ಥೆ ಮಾಡಿದುದಕ್ಕೂ, ಆ ಕಲೆಯಲ್ಲಿ ನಿಷ್ಣಾತರಾದ ಭರತವರ್ಷದ ಸುಪ್ರಸಿದ್ಧರಾದ ಅನೇಕ ಪಂಡಿತರು ಮೈಸೂರಿಗೆ ಆಗಮಿಸುವಂತೆ ಪ್ರೋತ್ಸಾಹಿಸಿ ಇದೀ ಸಂಸ್ಥಾನಕ್ಕೆ ಗೌರವಪ್ರತಿಷ್ಠೆಗಳು ಲಭಿಸುವಂತೆ ಮಾಡಿದುದಕ್ಕೂ ನಿಮ್ಮನ್ನು ಅಭಿನಂದಿಸುತ್ತೇನೆ. ಆ ಸಭೆಯಲ್ಲಿ ಕೆಲವು ಶ್ರೇಷ್ಠವಾದ ಉಪನ್ಯಾಸಗಳನ್ನು ಕೇಳಿದುದೂ, ವಿಶೇಷವಾಗಿ ಪ್ರಸಿದ್ಧ ಪಂಡಿತರಲ್ಲಿ ನವಚೈತನ್ಯವು ವ್ಯಕ್ತವಾಗಿರುವುದೂ ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿದೆ. ನೂತನ ವಿಜ್ಞಾನಶಾಸ್ತ್ರದ ವಿಧಾನಗಳನ್ನೂ, ಹೊಸ ಶೋಧನೆಗಳನ್ನೂ ಆಯುರ್ವೇದದಲ್ಲಿ ಸಮಾವೇಶಮಾಡುವುದರಿಂದ ಅದು ಲೋಕಪ್ರಸಿದ್ಧವಾಗಿ ಜಗತ್ತಿಗೆ ಹಿತಕಾರಿಯಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು ಅಭಿಪ್ರಾಯಪಡುತ್ತೇನೆ. ಪರದೇಶಗಳಿಂದ ಬಂದಿರುವ ಪ್ರತಿನಿಧಿಗಳಿಗೆ ನನ್ನ ಕೃತಜ್ಞತೆಯನ್ನು ದಯವಿಟ್ಟು ಸಮರ್ಪಿಸಿರಿ. ಈ ಶಾಸ್ತ್ರದ ವಿಷಯದಲ್ಲಿ ಸಂಸ್ಥಾನಕ್ಕೆ ಕೀರ್ತಿಯನ್ನು ತರುವ ಉದ್ದೇಶದಿಂದ ಅವಿಶ್ರಾಂತಶ್ರಮವನ್ನು ವಹಿಸಿ ಉತ್ಸಾಹದಿಂದಲೂ ಕುತೂಹಲದಿಂದಲೂ ನೀವು ಪ್ರಯತ್ನಿಸಿದುದು ಸಫಲವಾದುದಕ್ಕೆ ತುಂಬಾ ಸಂತೋಷಪಡುತ್ತೇನೆ.

ಮೈಸೂರು ವಿದ್ಯಾಖಾತೆಯ ಆಕ್ಟಿಂಗ್ ಡೈರೆಕ್ಟರ್ ಪ್ರೊ|| ವಾಡಿಯಾರವರು ಢಾಕಾದಲ್ಲಿ ನೆರವೇರಿದ ತತ್ವಸಭೆಯ ಅಧ್ಯಕ್ಷರಾಗಿ ಮಾಡಿದ ಭಾಷಣದ ಒಂದು ಭಾಗ.

(ಕಳೆದ ವಾರದ ಸಂಚಿಕೆಯ ಶೇಷ)

ರಾಷ್ಟ್ರಗಳ ಸಂಸ್ಥೆಯವರು ಯುದ್ಧಮಾಡಬೇಕೆಂದು ದೃಢಸಿಶ್ಚಯಮಾಡಿರುವ ರಾಷ್ಟ್ರಕ್ಕೆ ವ್ಯಾಪಾರ ಮುಂತಾದ ಸಹಾಯಗಳನ್ನು ನಿಲ್ಲಿಸಿ ಅನ್ಯಾಯವನ್ನು ತಡೆಯಬಹುದು. ವ್ಯಾಪಾರ ಮಾಡಿ ಶ್ರೀಮಂತರಾಗಬೇಕೆಂಬ ಆಸೆಯು ರಾಷ್ಟ್ರಗಳಲ್ಲಿ ಕಡಿಮೆಯಾಗಿ ಪರಸ್ಪರ ನೈತಿಕ ಸಂಬಂಧವನ್ನು ತಿಳಿದುಕೊಂಡಾಗ ಮಹಾತ್ಮಾ ಗಾಂಧಿಯವರ ತತ್ವಶಾಸ್ತ್ರವು ಜಗತ್ತಿನ ಇತಿಹಾಸದಲ್ಲಿ ಯೋಗ್ಯಸ್ಥಾನವನ್ನು ಪಡೆಯಬಹುದು. ಅವರು ರಾಜಕೀಯ ವಿಷಯವೆಂಬ ಸುಳಿಯಲ್ಲಿ ಸಿಲುಕಿರುವ ಒಬ್ಬ ಧಾರ್ಮಿಕ ಯತಿಗಳು. ಧರ್ಮವು ಕೇವಲ ವ್ಯಕ್ತಿವಿಷಯಕವಾಗಿದೆ. ಧಾರ್ಮಿಕ ಮನುಷ್ಯನು ಪರಮಾತ್ಮನೇ ತನಗೆ ಎಲ್ಲಾ ವಿಷಯಗಳಲ್ಲಿಯೂ ಸಹಾಯಕನಾಗಿರುವನೆಂದು ನಂಬಿರುವಾಗ ಇತರರಿಗೂ, ಸಮಾಜಗಳಿಗೂ ಸರ್ಕಾರದಿಂದ ಸ್ವತಂತ್ರನಾಗಿರುವನು. ಆದುದರಿಂದಲೇ ಮಹಾತ್ಮಾ ಗಾಂಧಿಯವರು 1915ನೆಯ ವರ್ಷದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ರಾಜಭಕ್ತರಾಗಿರುವಾಗಲೇ ಹೀಗೆ ಹೇಳಿರುವರು. " ನಾನು ಯಾವ ಸರ್ಕಾರವನ್ನೂ ಪ್ರೀತಿಸುವವನಲ್ಲ. ಯಾವ ಸರ್ಕಾರವು ಕಡಿಮೆ ಪ್ರಮಾಣದಿಂದ ಅಧಿಕಾರಮಾಡುವುದೋ ಆ ಸರ್ಕಾರವೇ ಶ್ರೇಷ್ಠವಾದ ಸರ್ಕಾರವು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಆ ರೀತಿ ಆಳಲ್ಪಡುವುದು ಸಾಧ್ಯವೆಂದು ನನಗೆ ತೋರುವುದರಿಂದ ನನಗೆ ಆ ರಾಜ್ಯದಲ್ಲಿ ಭಕ್ತಿಯಿದೆ." ಟಾಲ್‌ಸ್ಟಾಯರವರ ಮನೋವೃತ್ತಿಯೂ ಹೀಗೆಯೇ ಇತ್ತು. ಉಭಯರೂ ಭಗವದ್ಭಕ್ತರು. ಉಭಯರೂ ನವೀನನಾಗರೀಕತೆಯ ಗೊಂದಲಕ್ಕೆ ಜಿಗುಪ್ಸೆಪಟ್ಟು ಸಾಧುವಾದ ಮೊದಲಿನ ಕೃಷಿಕನನ್ನು ಸಂತೋಷದಿಂದ ಅಂಗೀಕರಿಸುವವರು. ಹೃದಯದೊಳಗಿರುವ ಪರಮಾತ್ಮನನ್ನು ಪ್ರತಿಯೊಬ್ಬನೂ ನೋಡುವಂತೆ ಬೋಧಿಸುವ ಮಹರ್ಷಿಗಳು. ಉಭಯರೂ ತಮ್ಮ ಅಂತಃಶಕ್ತಿಯನ್ನು ಅರಿತವರಾದ್ದರಿಂದ ಸರ್ಕಾರವನ್ನು ತೃಣೀಕರಿಸುವವರು. ಒಬ್ಬರು ರಷಿಯಾದಲ್ಲಿಯೂ ಒಬ್ಬರು ಹಿಂದೂಸ್ಥಾನದಲ್ಲಿಯೂ ಜನ್ಮವೆತ್ತಿರುವುದೊಂದು ದೈವಯೋಗದಿಂದ ನಡೆದ ಸಂಗತಿಯಾಗಿದೆ. ಅವರು ಜಗತ್ತಿನ ಯಾವ ಭಾಗದಲ್ಲಿ ಜನ್ಮವೆತ್ತಿದ್ದರೂ ಸರ್ಕಾರಗಳ ಸಂಗಡ ಹೋರಾಟವು ತಪ್ಪುತ್ತಿರಲಿಲ್ಲ. ಅವರು ಏಕೆಂದರೆ ಜಗತ್ತಿನ ಪುರೋವೃದ್ಧಿಗೆ ಜನರ ಮನಸ್ಸನ್ನು ಆತ್ಮದ ಕಡೆಗೆ ತಿರುಗಿಸುವವರೇ ಹೊರತು ಬಹಿರಂಗವಾಗಿರುವ ಸರ್ಕಾರಗಳ ಕಡೆಗೆ ತಿರುಗಿಸುವವರಲ್ಲ. ಟಾಲ್‌ಸ್ಟಾಯರವರು ಅನೇಕ ವಿಷಯಗಳನ್ನು ಬರೆದು ಬೋಧಿಸಿದರೂ ಶ್ರೀಮಂತರ ವರ್ಗಕ್ಕೆ ಸೇರಿದವರಾದ್ದರಿಂದ ಕ್ರೂರವಾದ ತೊಂದರೆಗಳಿಗೆ ಸಿಗಲಿಲ್ಲ. ಆದರೆ ಮಹಾತ್ಮಾ ಗಾಂಧಿಯವರು ಗೀತೆಯಲ್ಲಿ ಬೋಧಿಸುವ ಕರ್ಮತತ್ವವನ್ನು ಅರಿತವರಾದುದರಿಂದ ಅಹಿಂಸಾಮಯ ಸತ್ಯಾಗ್ರಹ ಸಮರಕ್ಕೆ ಯೋಧನಂತೆ ಹೊಂಟರು. ಸೆರೆಮನೆಯ ಕಬ್ಬಿಣದ ಸರಪಳಿಗಳು ಅವರ ಆತ್ಮಜ್ಯೋತಿಯನ್ನೂ, ಆತ್ಮಸ್ವಾತಂತ್ರ್ಯವನ್ನೂ ಬಂಧಿಸಲಾರವು.

ದಿವಂಗತ ಲೋಕಮಾನ್ಯ ತಿಲಕರವರು ರಾಜನೀತಿಯು ಸಾಧುಗಳಿಗಲ್ಲವೆಂದರು. ಧರ್ಮಕ್ಕೂ ರಾಜನೀತಿಗೂ ಏನೂ ಸಂಬಂಧವಿಲ್ಲವೆಂದು ಹೇಳುವವರಿಗೆ ಧರ್ಮವೇನೆಂಬುದೇ ಗೊತ್ತಿಲ್ಲವೆಂದು ಮಹಾತ್ಮರು ಹೇಳಿರುವರು. ರಾಜಕೀಯ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ, ಒಂದು ರಾಜ್ಯವು ನೆಲಗೊಂಡು ನೀತಿಬೋಧಕ ಸಂಸ್ಥೆಯಾಗಿ ಅದರ ಉದ್ದೇಶವು ಸಾಧನೆಯಾಗಬೇಕಾದರೆ ಮಹಾತ್ಮಾ ಗಾಂಧಿಯವರ ಮೇಲ್ಪಂಕ್ತಿಯನ್ನು ಲಕ್ಷ್ಯದಲ್ಲಿಟ್ಟು ಅನುಸರಿಸಲೇ ಬೇಕಾಗುವುದು. ಜಗತ್ತಿನ ರಾಜರು ತಮ್ಮ ವಕ್ರಮಾರ್ಗಗಳಿಂದಲೂ, ಗುಪ್ತರಾಜ್ಯವ್ಯವಹಾರ ಚಾತುರ್ಯದಿಂದಲೂ, ಜಗತ್ತಿಗೆ ಎಷ್ಟು ನಷ್ಟವಾಗಿದೆ ಎಂಬುದನ್ನೂ ತಮ್ಮ ಸರಳತ್ವ ಮತ್ತು ಸತ್ಕಾರ್ಯವನ್ನು ಮಾಡುವ ಆಕಾಂಕ್ಷೆ ಇವುಗಳಿಂದ ಜಗತ್ತಿಗುಂಟಾಗುವ ಲಾಭವನ್ನೂ ತಿಳಿದುಕೊಂಡರೆ ಮಹಾತ್ಮರು ಅವತರಿಸಿದ್ದುದು ಸಾರ್ಥಕವಾಗುವುದು. ಕಷ್ಟದಿಂದ ಕಲ್ಯಾಣವಾಗುವುದು.

ಮಹಾತ್ಮರು 1908 ನೆಯ ವರ್ಷದಲ್ಲಿ " ಹಿಂದ್ ಸ್ವರಾಜ್ " ಎಂಬ ಗ್ರಂಥವನ್ನು ಬರೆದರು. ಅದು ಈಗಿನ ನಾಗರೀಕತೆಯನ್ನು ಸಮಗ್ರವಾಗಿ ಖಂಡಿಸುತ್ತದೆ. ದಕ್ಷಿಣಾಫ್ರಿಕದ ಕ್ರೈಸ್ತಧರ್ಮಕ್ಕೆ ವಿರೋಧವರ್ತನೆಯುಳ್ಳ ಸರ್ಕಾರದವರ ಅಪಮಾನಗಳಿಂದ ಅವರ ಕೋಮಲವಾದ ಆತ್ಮವು ಬೆಂದು ಬೇಸತ್ತು ತಪಿಸುವಾಗ ಈ ಗ್ರಂಥವು ಬರೆಯಲ್ಪಟ್ಟಿತು. ಪಾಶ್ಚಿಮಾತ್ಯ ನಾಗರೀಕತೆಯೇ ಇವುಗಳಿಗೆಲ್ಲಾ ಮೂಲಾಧಾರವೆಂದು ತಿಳಿದು ಹೀಗೆ ಬರೆದಿರಬಹುದೆಂದು ಊಹಿಸಿದೆನು. ಆದರೆ 1924 ನೆಯ ವರ್ಷದಲ್ಲಿ ಅವರು ಬರೆದಿರುವ " ತರುಣಭಾರತ " ವೆಂಬ ಗ್ರಂಥದಲ್ಲಿಯೂ ಸಹ ಅದೇ ಅಭಿಪ್ರಾಯವೇ ಕಂಡುಬರುವುದು. ಈ ವಿಷಯದಲ್ಲಿ ಮಾತ್ರ ಮಹಾತ್ಮರ ಅಭಿಪ್ರಾಯವನ್ನು ಒಪ್ಪಲಾರೆನು. ಆ ಗ್ರಂಥದಂತೆ ಅನುಸರಿಸುವುದಾದರೆ ಭರತಖಂಡದ ಸ್ಥಿತಿಯು ಸಾವಿರಾರು ವರ್ಷಗಳ ಹಿಂದೆ ಇದ್ದಂತೆ ಇರಬೇಕಾಗುವುದು. ಮೊದಲಿನ ಗ್ರಂಥದಲ್ಲಿ ಕಂಡುಬರುವ ಕಾಠಿಣ್ಯವನ್ನು ತರುಣಭಾರತದಲ್ಲಿ ಮೃದುಮಾಡುವುದು ನ್ಯಾಯಸಮ್ಮತವಾದುದು. ವಕೀಲರೂ, ವೈದ್ಯರೂ, ಉಪಾಧ್ಯಾಯರೂ ಅವರ ತೀಕ್ಷ್ಣವಾದ ಖಂಡನೆಗೆ ಒಳಗಾಗಿರುವರು. ಸಾಮಾನ್ಯವಾಗಿ ಜಗತ್ತಿಗೂ ಮುಖ್ಯವಾಗಿ ಭರತಖಂಡಕ್ಕೂ ಅಲ್ಪಸಂಖ್ಯೆಯ ವಕೀಲರು ಸಾಕಾಗುವರೆಂಬುದನ್ನು ನಮ್ಮಲ್ಲಿ ವಿಶೇಷ ಜನರು ಒಪ್ಪಬಹುದು. ಆದರೆ ಅಪೂರ್ಣಮಾನವೀ ಸ್ವಭಾವದಿಂದ ಕೂಡಿರುವ ಜಗತ್ತಿನಲ್ಲಿ ವಕೀಲರು ಅಸಾಧಾರಣಗಳಾದ ಕೃತಿಗಳನ್ನು ಮಾಡಿರುವರು. ಅವರಿಂದ ಜಗತ್ತಿಗೆ ಲಾಭವಾಗಿದೆ. ಗಾಂಧೀಜಿಯವರು ವಕೀಲರಾಗಿದ್ದುದರಿಂದಲೇ ದಕ್ಷಿಣಾಫ್ರಿಕದಲ್ಲಿ ದೈವಿಕ ಮಹಾತ್ಕಾರ್ಯವನ್ನು ಮಾಡಿದರು. ಆದ ಪ್ರಯುಕ್ತ ವಕೀಲರು ಅಪ್ರಯೋಜಕರೆಂದು ಹೇಳಲಾಗುವುದಿಲ್ಲ. ಪ್ರತಿಯೊಬ್ಬ ವಕೀಲರೂ ಮಹಾತ್ಮರ ಹಾಗೂ ಅಬ್ರಹಾಂಲಿಂಕನ್ನರವರ ಮೇಲ್ಪಂಕ್ತಿಯನ್ನನುಸರಿಸಿ ಒಂದೂ ಅಸಹ್ಯಕರವಾದ ಮೊಕದ್ದಮೆಯನ್ನು ಹಿಡಿಯಬಾರದು. ಇದರಿಂದ ಯೋಗ್ಯಸುಧಾರಣೆಯಾಗುವುದು. ಮಹಾತ್ಮಾ ಗಾಂಧಿಯವರು " ಆರೋಗ್ಯಮಾರ್ಗದರ್ಶಕ "ವೆಂಬ ಗ್ರಂಥವನ್ನು ಬರೆದಿರುವರು. ಇದು ಅತ್ಯುತ್ತಮವಾದ ಗ್ರಂಥವಾಗಿದೆ. ಇದರಲ್ಲಿ ಡಾಕ್ಟರ್ ಕುನ್ಹೆ ಮತ್ತು ಡಾ|| ಜಸ್ಟ್ ಎಂಬ ಪಾಶ್ಚಾತ್ಯ ವೈದ್ಯರುಗಳಿಂದ ಅನೇಕ ವಿಷಯಗಳನ್ನು ಕ್ರೋಡೀಕರಿಸಿರುವರು.

ಯಾವ ಮನುಷ್ಯನೂ ಕಾಯಿಲೆಬೀಳದೆ ಹಾಗೇ ಇರುವುದಾದರೆ ವೈದ್ಯರ ಗೋಜನ್ನು ಬಿಡಬಹುದು; ಅದು ಸಾಧ್ಯವಲ್ಲದುದರಿಂದ ವೈದ್ಯರನ್ನು ಬಿಡುವುದು ಅಶಕ್ಯವು. ಯಂತ್ರಗಳು ಅವರ ದೃಷ್ಟಿಯಲ್ಲಿ ನವೀನ ನಾಗರೀಕತೆಯ ಚಿಹ್ನೆಗಳಾಗಿವೆ. ಅವು ಹೆಚ್ಚಿನ ಪಾಪದ ಕುರುಹುಗಳಾಗಿವೆ. ಯಂತ್ರಗಳ ಸಂಬಂಧವಾಗಿ ಒಂದಾದರೂ ಒಳ್ಳೇ ಅಂಶವು ನನಗೆ ತೋರುವುದಿಲ್ಲವೆಂದು ಮಹಾತ್ಮರು ಹೇಳಿದರೂ ರೈಲ್ವೆಗಳು, ಕಾರುಗಳು, ತಂತಿ ಮತ್ತು ಮುದ್ರಣ ಯಂತ್ರಗಳು ಇವುಗಳು ಈಗಿನ ಕಾಲಕ್ಕೆ ಅತ್ಯವಶ್ಯಕಗಳಾಗಿವೆ.

ಮಹಾತ್ಮರಿಗೆ ನೀತಿಯಲ್ಲಿರುವ ಆಸಕ್ತಿಯೂ, ಪಟುತರವಾದ ತಪಃಪ್ರಭಾವವೂ ನಮ್ಮೆಲ್ಲರಲ್ಲಿ ಭಕ್ತಿವಿಶ್ವಾಸಗಳನ್ನು ಹುಟ್ಟಿಸುತ್ತವೆ. ಜನಭರಿತವಾಗಿರುವ ಸ್ಥಳಗಳಲ್ಲಿ ಉದ್ಭವಿಸುವ ವೈರಾಗ್ಯವು ನಿರ್ಜನಪ್ರದೇಶದಲ್ಲಿ ಹುಟ್ಟುವದಕ್ಕಿಂತಲೂ ಹೆಚ್ಚಿನ ಮಹತ್ವವನ್ನು ಪಡೆಯುವುದು. ನಿಜವಾದ ವೈರಾಗ್ಯವು ಸುತ್ತುಮುತ್ತಿನ ಸನ್ನಿವೇಶಗಳನ್ನವಲಂಬಿಸದೆ ಆತ್ಮವನ್ನವಲಂಬಿಸಿದೆ. ತತ್ವಶಾಸ್ತ್ರವೂ ನೀತಿಯೂ ಗುಹೆಗಳಲ್ಲಿಯೂ, ಕಾಡುಜನರ ಕುಟೀರಗಳಲ್ಲಿಯೂ ಹುಟ್ಟಿಲ್ಲವು.

ವಿಷಯಗಳನ್ನು ಒಪ್ಪುವುದು, ಕೊಂಡಾಡುವುದು, ಒಪ್ಪದಿರುವುದು, ಆಕ್ಷೇಪಿಸುವುದು ನಮಗಿರುವ ಸ್ವಾಭಾವಿಕವಾದ ಹಕ್ಕು. ನಾನು ಇವೆರಡನ್ನೂ ಉಪಯೋಗಿಸಿರುವೆನು. ಈಗ ಇಡೀ ಪ್ರಪಂಚಕ್ಕೇ ಆದರ್ಶಪ್ರಾಯರಾಗಿರುವವರು ನಮ್ಮ ಭರತಖಂಡದ ಮಹಾತ್ಮರು. ಈ ಸಭೆಯು ಅವರ ಅನುಪಮ ಧೈರ್ಯವನ್ನೂ, ನಿಃಸ್ವಹತೆಯನ್ನೂ ಕಲಿತುಕೊಳ್ಳುವುದು ಅವಶ್ಯಕವಾಗಿದೆ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋದು. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಶೀಘ್ರಸ್ಖಲನವಾದರೂ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸಧೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [24]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಸಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ಸಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ನಿಯಮಿತವಿಲ್ಲದೆ ಇರೋದು ಅನಿಯಮಿತಮುಟ್ಟು ಬರೋದು ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋದು ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟ ಸಾಯೋದು ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತವೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—ವೈದ್ಯ ಹಾಮಿರಪ್ಪ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಶೇಷ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೯ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಹೆ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ಕೊಂಡು ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಚಾರಜಾಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[39] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸದೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಶೀಘ್ರಸ್ಖಲನವಾದ ಕೂಡಲೆ ವೀರ್ಯಸ್ಖಲನ, ತೆಳುವುತನ, ಕೈಕಾಲು ಮೂತ್ರ ಉರಿಯೋದು, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸಧೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು. [25]

ಪತ್ತೆ :—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕೆಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ಸಂಬಧಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ಕೂಡಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ ? ಆದರೆ **ಕೆಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕೆಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಚಿಂತಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಸ್ಯು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[23] **ಮಲೇರಿಯಾನ ಕಂಪೆನಿ,** ನಂಬ್ರ 21 ಹಂಪನಕಟ್ಟೆ, **ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಹದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

(Registered Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[26] ಪೋ. ಬಾ. ೫೧೦. ಮದರಾಸ

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶನ	೨ ಆಣೆ
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಫುಟೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕದಾಜ್ಞಿಯರಹಸ್ಯ	೪ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ಶಿವಾಧಿಕ್ಯರತ್ನಾವಳಿ (ಪಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಕೇನೋಪನಿಷತ್ (ಶಾಂಕರೀಭಾಷ್ಯ)	೧ ರೂ.
ಈಶಾವಾಸ್ಯೋಪನಿಷತ್ (ಶಾಂಕರೀಭಾಷ್ಯ)	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! ಸಾಲವು ದೊರಕುವುದು !! ಅಪೂರ್ವಲಾಭ !!!

ದಿ ಏಂಜಲ್ಸ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರಿಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (7)

ಮೆ|| ಎಂ. ಜಿ. ಆರಾಧ್ಯ,
ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಜನವರಿ ೧೯೩೧ [ಸಂಚಿಕೆ ೩೮

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ಶಿವಮೊಗ್ಗಾ ಜಿಲ್ಲೆಯಲ್ಲಿ ಒಂದೆರಡುವಾರ ಸಂಚಾರಮಾಡುವವರಾಗಿದ್ದು, ಮೊನ್ನೆಯದಿವಸ ರಾಜಧಾನಿಯಿಂದ ದಯಮಾಡಿಸಿದರೆಂದು ತಿಳಿಯಬರುತ್ತದೆ.

ಮೈಸೂರು ಸರ್ಕಾರದವರು ಪೋಲೀಸು ಖಾತೆಯ ವಿಚಾರದಲ್ಲಿ ಒಂದು ವರದಿಯನ್ನು ಹೊರಡಿಸಿರುವರು. ಅದರಲ್ಲಿ ಹೋದವರ್ಷ ಮೋಟಾರಿನಿಂದ 164 ಅಪಾಯಗಳೂ, ಈ ವರ್ಷ 196 ಅಪಾಯಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

ನ[illegible] ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎ[illegible] ಯಿಲ್‌ರವರು ಈ ತಿಂಗಳು 24 ನೆಯ ತಾ[illegible]ವಸ ಲಂಡನ್ ಪಟ್ಟಣವನ್ನು ಬಿಟ್ಟು, ಮ[illegible]ಂಗಳು 7 ಅಥವಾ 8 ನೆಯ ತಾರೀಖಿನ ದಿವಸ [illegible]ಗಳೂರಿಗೆ ಬರುವರೆಂದು ವರ್ತಮಾನವಿದೆ.

ಮದರಾಸ್ ಮೆ|| ಸೆಲ್ವಿನ್ ಅಂಡ್ ಕಂಪನಿಯವರು, ಮೈಸೂರು ಸ್ಟೂಡೆಂಟ್ಸ್‌ಹಾಲಿನವರು ಮತ್ತು ಮೆ|| ಟಿ. ಎಲ್. ಉಪಾಧ್ಯಾಯರು ಕಳುಹಿಸಿರುವ 1931 ನೆಯ ವರ್ಷದ ಮನೋಹರಗಳಾದ ಕ್ಯಾಲೆಂಡರುಗಳನ್ನು ಆತ್ಯಾನಂದದಿಂದ ಸ್ವೀಕರಿಸಿರುತ್ತೇವೆ.

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮೊಕ್ಕಾಂ ಸದ್ಯಃ ದೊಳಕಾಲ್ಕುರು ತಾ|| ಭೀಮಸಮುದ್ರದಲ್ಲಿದ್ದು, ಇಷ್ಟರಲ್ಲಿಯೇ ಕೊಟ್ಟೂರಿಗೆ ದಯಮಾಡಿಸುವುದಾಗಿ ತಿಳಿದುಬರುತ್ತದೆ.

ಬೀರೂರು ಶಿವಮೊಗ್ಗಾ ರೈಲ್ವೆ ಟಪ್ಪಾಲ್ ಕಳ್ಳತನದ ವ್ಯವಹಾರದಲ್ಲಿ ಅಪರಾಧಿಗಳಾದ ಮಹಬೂಬ್‌ಖಾನನಿಗೆ ೮ ವರ್ಷ ಕಠಿಣಶಿಕ್ಷೆಯಾಯಿತಷ್ಟೆ! ಇದು ಹೈಕೋರ್ಟಿಗೆ ಅಪೀಲಾಗಿದ್ದು ತಾ|| 12 ರಲ್ಲಿ ವಿಚಾರಣೆಯಾಯಿತು. ಸರಕಾರದ ಪರವಾಗಿ ಶ್ರೀ ಎಂ. ರಾಮಚಂದ್ರರಾಯರೂ, ಅಪರಾಧಿಯ ಪರವಾಗಿ ಶಿವಮೊಗ್ಗೆಯ ಶ್ರೀ ವೈ. ವೆಂಕಟಕೃಷ್ಣಯ್ಯನವರೂ ವಾದಿಸಿದರು.

ಬೆಂಗಳೂರು ಸಿಟಿಮಾರ್ಕೆಟ್ಟಿನ ಹೂ ಪ್ರದರ್ಶನವು ಈ ತಿಂಗಳು 13 ನೆಯ ತಾರೀಖಿನದಿವಸ ಪ್ರಾತಃಕಾಲ ನಡೆಯಿತು. ಆಕ್ಟಿಂಗ್ ದಿವಾನರಾದ ದಿವಾನ್ ಬಹದ್ದೂರ್ ಎಂ. ಎನ್. ಕೃಷ್ಣರಾಯರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅನೇಕ ಸರ್ಕಾರಿ ಅಧಿಕಾರಿಗಳೂ ಖಾಸಗೀ ದೊಡ್ಡಮನುಷ್ಯರೂ ಸ್ತ್ರೀಯರೂ ಬಂದು ಸಭೆಯನ್ನು ಅಲಂಕರಿಸಿದ್ದರು. ದಿವಾನ್ ಸಾಹೇಬರವರು ಈ ಬಗ್ಗೆ ಮನೋಹರವಾದ ಭಾಷಣವನ್ನು ಮಾಡಿದರು.

ಕನ್ನಂಬಾಡಿ ಕಟ್ಟೆಗೆ ಸಮೀಪದಲ್ಲಿರುವ ಚಿಕ್ಕಾಯದಹಳ್ಳಿಯ ಮ|| ರಾ|| ಶಂಭುಗೌಡರವರು ಬೆನ್ನುಫಣಿ (ರಾಜಹುಣ್ಣು)ಗೆ ಯಾವ ಪ್ರತಿಫಲವೂ ಇಲ್ಲದೆ ಔಷಧಿಯನ್ನು ಕೊಟ್ಟು ಚಿಕಿತ್ಸೆಮಾಡುತ್ತಿರುವರು. ಇದು ಅವರ ಮನೆತನದಲ್ಲಿ ಸಂಪ್ರದಾಯವಾಗಿ ನಡೆದುಬಂದಿದೆ. ಬೆನ್ನುಫಣಿಯೆಂಬುದು ಬಹು ಕೆಟ್ಟ ಜಾಡ್ಯವಿದ್ದು ಆಂಗ್ಲೇಯ ಔಷಧಗಳಿಂದಲೂ ಗುಣವಾಗುವುದು ಕಷ್ಟವಿರುತ್ತದೆ. ಈ ರೋಗಪೀಡಿತರಾದವರು ಅವರಲ್ಲಿಗೆ ಹೋಗಿ ಚಿಕಿತ್ಸೆಹೊಂದಿ ಗುಣಹೊಂದಲೆಂದು ಆಶಿಸುತ್ತೇವೆ.

ಅರಮನೆಯ ಜೋಯಿಸರಾದ ಶ್ರೀಯುತ ನಂಜಕೃಷ್ಣಜೋಯಿಸರು ತಾವು ರಚಿಸಿದ ಪ್ರಜೋತ್ಪತ್ತಿ ಸಂವತ್ಸರದ ಪಂಚಾಂಗವನ್ನು ನಮ್ಮ ಕಡೆಗೆ ಕಳುಹಿಸಿರುತ್ತಾರೆ. ಸದರಿ ಪಂಚಾಂಗಕರ್ತರು ಜ್ಯೋತಿಶ್ಯಾಸ್ತ್ರದಲ್ಲಿ ಒಳ್ಳೆ ನಿಷ್ಣಾತರಿರುವದರಿಂದ ಈ ಪಂಚಾಂಗದ ಮಹತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ಪಂಚಾಂಗವು ಸಶಾಸ್ತ್ರೀಯವಾಗಿ ಗುಣಿಸಲ್ಪಟ್ಟಿದ್ದು ಮನೋಹರವಾದ ಮುದ್ರಣದಿಂದೊಡಗೂಡಿದೆ. ಸನಾತನ ಧರ್ಮಾವಲಂಬಿಗಳೆಲ್ಲರೂ ಸದರಿ ಪಂಚಾಂಗವನ್ನು ತರಿಸಿಕೊಂಡು ಪಂಚಾಂಗಕರ್ತೃಗಳಿಗೆ ಪ್ರೋತ್ಸಾಹವನ್ನೀಯಬೇಕೆಂದು ಆಶಿಸುತ್ತೇವೆ. ಬೆಲೆ ೩ ಆಣೆ ಮಾತ್ರ. ದೊರೆಯುವ ಸ್ಥಳ—ವಿದ್ವಾನ್ ನಂಜಕೃಷ್ಣಜೋಯಿಸರು ದೇವೀರಾಂಬಾ ಅಗ್ರಹಾರ, ಮೈಸೂರು.

ಸ್ವೀಕಾರ.

ಬೆಳಗಾಂವ ಡಿ|| ದೇಶನೂರು ಹಿರೇಮಠದ ವೇ|| ಶ್ರೀ ಶೈಲನಾಥಶಾಸ್ತ್ರಿಗಳು ತಮ್ಮ ಪುತ್ರ ಚಿ|| ಕಾಶೀನಾಥಶಾಸ್ತ್ರಿಯ ಚೌಲಕರ್ಮಮಹೋತ್ಸವವನ್ನು ಕಾಶೀಕ್ಷೇತ್ರದಲ್ಲಿ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಧಾರವಾಡ ಡಿ|| ಸಿಗ್ಗಾವಿ ತಾ|| ಬಸನಾಳಗ್ರಾಮದ ಮ|| ರಾ|| ಶಂಕರಪ್ಪನವರ ಸಹೋದರಿ ಸೌ|| ಗಂಗವ್ವನವರಿಗೆ ಪ್ರಾಪ್ತವಾಗಿದ್ದ ಪ್ಲೇಗರೋಗವು ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ವೇ|| ಹಿರೇಮಠದ ರುದ್ರಯ್ಯನವರ ದ್ವಾರಾ ತಲ್ಪಿರುತ್ತದೆ.

ಮೂಡಗೆರೆ ತಾ|| ಕಸಬಾ ಉಗ್ಗಹಳ್ಳಿ ಆರುನಾಡು ಮಲ್ಲೇಶ್ವರ ಮ|| ರಾ|| ಪಟೇಲ್ ಚನ್ನಪ್ಪಗೌಡರ ಪುತ್ರರಾದ ಮ|| ರಾ|| ದೇವಪ್ಪಗೌಡರು ಶಿವಾಧೀನರಾದ ಸಮಯದಲ್ಲಿ ಶ್ರೀ ಜಗದ್ಗುರು ರಂಭಾಪುರೀ ಸಂಸ್ಥಾನದ ದೀಪಾರಾಧನಾಕಾಣಿಕೆಗಾಗಿ ಆಗಮಿಸಿರುವ ವೇ|| ಎನ್. ಬಿ. ಯಂ. ಹಾಲಯ್ಯನವರ ಅಧ್ಯಾಪಕರ ಮೇರೆಗೆ ಸಮರ್ಪಿಸಿದ 1 ರೂ. ಯು ಬೆಟ್ಟದಮನೆ ಗದ್ದೆಮಠದ ವೇ|| ವೀರಯ್ಯನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಹೊಸದಿಲ್ಲಿಯಲ್ಲಿ ಲೆಜಿಸ್ಲೇಟಿವ್ ಅಸೆಂಬಲಿಯ ಅಧಿವೇಶನವು ಈ ತಿಂಗಳು 14 ನೆಯ ತಾರೀಖಿನ ದಿವಸ ಪ್ರಾರಂಭವಾಯಿತು. ಹೊಸ ಅಧ್ಯಕ್ಷರ ಚುನಾವಣೆಯಾಗುವವರೆಗೂ ಮಿ|| ಆರ್. ಕೆ. ಷಣ್ಮುಖಂಚೆಟ್ಟಿಯಾರ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ನಿರ್ಧರಿಸಲ್ಪಟ್ಟಿತು. ಅವರು ಅಸೆಂಬ್ಲಿಗೆ ಹೋಗದಂತೆ ತಡೆಯಬೇಕೆಂದು ಸ್ವಯಂಸೇವಕಿಯರು ರಸ್ತೆಯಲ್ಲಿ ಕುಳಿತು ಪಿಕೆಟ್‌ಮಾಡಿದರು. ಆದರೆ ಮಿ|| ಷಣ್ಮುಖಂಚೆಟ್ಟಿಯಾರ್‌ರವರು ಬೇರೊಂದು ದಾರಿಯಿಂದ ಅಸೆಂಬ್ಲಿಗೆ ಹೋದರು. ಸ್ವಯಂಸೇವಕಿಯರು ಅವರಿಗೆ ಬರೆದಿರುವ ಪತ್ರದ ಸಾರಾಂಶವೇನಂದರೆ:—

"ಲೆಜಿಸ್ಲೇಟಿವ್ ಅಸೆಂಬ್ಲಿಯ ನಿಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಬೇಕೆಂದು ನಿಮಗೆ ವಿಜ್ಞಾಪಿಸುವದಕ್ಕಾಗಿ ನಿಮ್ಮ ಮನೆಯ ಹತ್ತಿರ ನಾವು ಪಿಕೆಟಿಂಗ್ ಮಾಡಬೇಕಾಗಿದೆ. ನೀವು ಹಿಂದೆ ಸ್ವರಾಜ್ಯಪಾರ್ಟಿಯಲ್ಲಿ ಪ್ರಬಲರೆಂಬವರಾಗಿ ಮಹಾತ್ಮಾ ಗಾಂಧಿಯವರ ಪ್ರಸಿದ್ಧ ಅನುಯಾಯಿಗಳಾಗಿದ್ದಿರಿ. ಸರ್ಕಾರಿ ಅಧಿಕಾರಿಗಳಿಗೆ ಸಿಂಹನಂತೆ ಭಯಂಕರಸ್ವರೂಪರೂ, ರಾಷ್ಟ್ರೀಯಪಕ್ಷಕ್ಕೆ ಸ್ತಂಭದಂತೆ ಬಲಿಷ್ಠರೂ ಆಗಿದ್ದಿರಿ. ಆದರೆ ಈಗ ಆ ಉಚ್ಚಧ್ಯೇಯದಿಂದ ವಿಮುಕ್ತರಾಗಿ ಲೆಜಿಸ್ಲೇಟೀವ್ ಅಸೆಂಬ್ಲಿಗೆ ಬಂದಿರುವುದಲ್ಲದೆ, ಪರಮ ದೇಶಾಭಿಮಾನಿಗಳೂ, ವೀರಾಗ್ರಣಿಗಳೂ ಆದ ಶ್ರೀಯುತ ವಿಠ್ಠಲಬಾಯಿ ಪಟೇಲ್‌ರವರು ಕಾಯಿಲೆಯಿಂದ ನರಳುತ್ತಿರುವಾಗ ನೀವು ಅಧ್ಯಕ್ಷಸ್ಥಾನವನ್ನು ವಹಿಸಲೊಪ್ಪಿರುವುದು ಕೇವಲ ನಿಂದ್ಯವಾಗಿದೆ. ಮಿ|| ಜಯಕರ್, ಡಾ|| ಮೂಂಜೆ, ಪಂಡಿತ ಹೀರಾದಯಾನಾಥ ಕುಂಜ್ರು ಮತ್ತು ಮುನಸಿ ಈಶ್ವರಶರಣ ಮೊದಲಾದ ಮುಂದಿನ ಪಕ್ಷದ ಜನರೂ ಸಹ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಹೋಗಲು ತಿರಸ್ಕರಿಸುವರು. ಈ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ನಿಮ್ಮ ಸ್ಥಾನವಿರದೆ ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ್‌ರವರೊಂದಿಗೆ ಜೈಲಿನಲ್ಲಿ ನಿಮಗೆ ಯೋಗ್ಯಸ್ಥಾನವಿದೆ. ನಿಮ್ಮಲ್ಲಿ ಪೌರುಷೇಯ ಧೈರ್ಯವನ್ನೂ, ಸ್ವದೇಶಾಭಿಮಾನವನ್ನೂ ಘನಗಾಂಭೀರ್ಯವನ್ನೂ, ಆತ್ಮಗೌರವನ್ನೂ ಪುನರುಜ್ಜೀವನಗೊಳಿಸುವ ಕಾರ್ಯವನ್ನು ಭಾರತೀಯಮಹಿಳೆಯರಾದ ನಾವು ಕೈಕೊಂಡಿದ್ದೇವೆ. ನಾವು ಹೆಂಗಸರಾದಾಗ್ಯೂ ಅಪಮಾನಪಡಿಸಿದರೂ, ಲಾಠಿಗಳಿಂದ ಹೊಡೆದರೂ, ಜೈಲಿಗೆ ಹಾಕಿದರೂ ಹೆದರದೆ ಎದೆಗೊಟ್ಟು ನಿಂತಿರುವೆವು. ಸ್ವಾರ್ಥದ ಉದ್ದೇಶದಿಂದಲೋ ಮತಾನ್ತ್ವಕಾರಣದಿಂದಲೋ ನಿಮ್ಮಲ್ಲಿ ಉತ್ಪನ್ನವಾಗಿರುವ ಹೃದಯದೌರ್ಬಲ್ಯವನ್ನು ಮೂಲೋತ್ಪಾಟನಮಾಡಿ ಸ್ವರಾಜ್ಯರಣರಂಗಕ್ಕೆ ಸಿದ್ಧರಾಗುವಂತೆ ಧೈರ್ಯಕೊಡಲು ನಾವು ಇಲ್ಲಿಗೆ ಬಂದಿರುವೆವು. ನೀವು ರಾಜೀನಾಮೆ ಕೊಡುವವರೆಗೂ ಈ ಸ್ಥಳದಿಂದ ಕದಲಕೂಡದೆಂದು ದೃಢನಿಶ್ಚಯಮಾಡಿರುವೆವು. ನೀವು ಅಸೆಂಬ್ಲಿಯಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವುದು ಹುಣ್ಣಿನಮೇಲೆ ಬರೆಹಾಕಿದಹಾಗೆ ದೇಶಕ್ಕೆ ಅಪಮಾನಕಾರಕವಾಗಿರುವುದರಿಂದ ನೀವು ಹೋಗದಂತೆ ಅಡ್ಡಿಪಡಿಸಬೇಕೆಂಬುದೇ ನಮ್ಮ ಆಶಯವಾಗಿದೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸಾದಂಕ

ಕಾಮದಹನದ ಸಂಕ್ಷಿಪ್ತ ಪರಿಚಯವು

ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬ್ರಹ್ಮಚರ್ಯ ಧುರಂಧರ ಪ್ರಮ
ಶ್ರೀ ರೇಣುಕಬಾಗ, ಪಾಲಕೊಪ್ಪ

ಪೂರ್ವದಲ್ಲಿ ತಾರಕಾಸುರನೆಂಬ ರಾಕ್ಷಸನಿದ್ದನು. ಆತನು ಬಹುವಾಯವಿಯೂ ಪ್ರಸಿದ್ಧಪರಾಕ್ರಮಿಯೂ ಆಗಿದ್ದನಲ್ಲದೆ ರಾಕ್ಷಸರೆಲ್ಲರಿಗೂ ನಾಯಕನಾಗಿದ್ದನು. ಇವನ ಸಂಪತ್ತಿಗೆ ಎಣೆ ಇದ್ದಿಲ್ಲ. ಸಂಪತ್ತು ಹೆಚ್ಚಿದಂತೆ ಆಶೆಯೂ ಸಹ ಹೆಚ್ಚುತ್ತ ಹೋಗುತ್ತದೆಂಬ ವಿಷಯವನ್ನು ಎಲ್ಲರೂ ತಿಳಿದಿರಬಹುದು. ಈ ತಾರಕಾಸುರನು ಸಕಲೈಶ್ವರ್ಯಸಂಪನ್ನನಾಗಿದ್ದರೂ ಇನ್ನೂ ಹೆಚ್ಚಬೇಕೆಂದು ಸೃಷ್ಟಿಕರ್ತನಾದ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡತೊಡಗಿದನು. ಈ ಕರಾಳರಾಕ್ಷಸನು ಕೆಲವು ದಿವಸ ಕೇವಲ ನೀರನ್ನು ಕುಡಿದು, ಕೆಲವು ದಿವಸ ಎಲೆಗಳನ್ನು ತಿಂದು, ಕೆಲಕಾಲದವರೆಗೆ ಗಾಳಿಯನ್ನು ಸೇವಿಸಿ, ಕೆಲವುದಿವಸ ನಿರಾಹಾರಿಯಾಗಿ, ಕಠಿಣತಪಸ್ಸನ್ನಾಚರಿಸುತ್ತ ಒಂದೇ ಪಾದದಂಗುಷ್ಠವನ್ನು ಭೂಮಿಯ ಮೇಲೂರಿ, ಒಂದು ಕೈಯನ್ನು ಮೇಲಕ್ಕೆತ್ತಿ, ಶೀತಕಾಲದಲ್ಲಿ ಒದ್ದೆಯನ್ನುಟ್ಟು, ಚಳಿಯಲ್ಲಿಯೂ, ಮಳೆಗಾಲದಲ್ಲಿಯೂ, ಬೇಸಿಗೆಯಲ್ಲಿಯೂ ಸಂಚಾಗ್ನಿ ಮಧ್ಯದಲ್ಲಿ ನಿಲ್ಲುವದಲ್ಲದೆ ಗಿಡಮರಗಳಲ್ಲಿ ಬೆಂಕಿಯನ್ನು ಹಾಕಿ ತಾನು ತೂಗಲಬಾವಲಿಹಕ್ಕಿಯಂತೆ ತಲೆಕೆಳಗಾಗಿ ನೇತಾಡುತ್ತ, ಆ ಬೆಂಕಿಯಿಂದ ಹೊರಡುವ ಸಣ್ಣ ಸಣ್ಣ ಕಿಡಿಗಳನ್ನೇ ತಿನ್ನುತ್ತ ಆನೇಕ ತರದ ಭಯಂಕರ ತಪಸ್ಸನ್ನು ಮಾಡಹತ್ತಿದನು. ಆತಪೋಜ್ವಾಲೆಯು ಎಲ್ಲೆಲ್ಲಿಯೂ ವ್ಯಾಪಿಸಿತು. ಇಂದ್ರಾ [illegible]

[illegible]

ಆಯುರ್ವೇದದ ಪ್ರಭಾವ.

[illegible]

... ಬೀರುತ್ತ ಬಡವರಿಗೆ ಆಧಾರಿಯಾಗಿ ಇಹಲೋಕದಲ್ಲಿ ಕೀರ್ತಿಯನ್ನೂ ಪರದಲ್ಲಿ ಸೌಖ್ಯವನ್ನೂ ಪಡೆಯುವಂತೆ ಅನುಗ್ರಹಿಸಲೆಂದು ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಧ್ಯಾನಿಸುತ್ತೇನೆ.

ಓರ್ವ ಪ್ರಜಾಹಿತೈಷಿ.

ಶ್ರೀ ರೇಣುಕಾಚಾರ್ಯರ ಪ್ರಸಾದಕು.

ಜಗದಾಚಾರ್ಯರ ಮಹಿಮೆ.

ಧಾರವಾಡ ಜಿಲ್ಲಾ ಸಿಗ್ಗಾಂವಿ ತಾ|| ಬಸವನಾಳ ಗ್ರಾಮದಲ್ಲಿ ಶಂಕರಪ್ಪ ಬಸಪ್ಪ ಚಾಕಲಬ್ಬಿ ಎಂಬ ಸದ್ಭಕ್ತ್ಯವರ್ಯರಿರುವರು. ಶ್ರೀ ಜಗದಾಚಾರ್ಯರ ವಿಷಯದಲ್ಲಂತೂ ಇವರ ಭಕ್ತಿಯು ಅನಾದೃಶವಾದುದು. ಇವರ ಪರಮ ಭಕ್ತಿಯನ್ನು ಪರೀಕ್ಷಿಸುವದಕ್ಕೆ ಇವರ (ತಂಗಿ) ಕುಂ|| ಸೌ|| ಗಂಗವ್ವ ಇವರಿಗೆ ಶ್ರೀ ಪರಮೇಶ್ವರನು ಪ್ಲೇಗರೋಗವನ್ನುಂಟುಮಾಡಿದನು. ಈ ರೋಗವು ಎರಡೂವರೆ ತಿಂಗಳ ಮಾತ್ರ ಬಹಳ ಜೋರಿನಿಂದ ಬಂದಿತು. ಆಗ ಅದೇ ಊರ ವೇ|| ರುದ್ರಯ್ಯಸ್ವಾಮಿ ಹಿರೇಮಠ, ಇವರು ಇಲ್ಲಿಗೆ ದಯಮಾಡಿಸಿದರು. ಇವರ ಯಾವ ಔಷಧದಿಂದಲೂ ಪ್ರಯೋಜನವಾಗಲಿಲ್ಲವೆಂಬ ವಿಷಯವನ್ನು ತಿಳಿದು ಈ ಮಹಾರೋಗವು ಭವರೋಗವೈದ್ಯನಾದ ಜಗದ್ಗುರುವಿನ ಆಶೀರ್ವಾದಬಲದಿಂದ ಶಮನವಾಗಬೇಕಲ್ಲದೆ ಮತ್ತಾವ ಮಾರ್ಗವಿಲ್ಲೆಂದು ಹೇಳಿ ತಮ್ಮ ಭಕ್ತನಿಗೆ ಜಗದಾಚಾರ್ಯರ ಪೂಜಾಧ್ಯಾನಾದಿಗಳನ್ನು ಅನಾಥಾರಣವಾದ ಭಕ್ತಿಯಿಂದ ಮಾಡಬೇಕೆಂದು ಅಪ್ಪಣೆಮಾಡಿದರು. ಅದರಂತೆ ಶ್ರೀಯುತ ಮ|| ರಾ|| ಶಂಕರಪ್ಪನವರು ಜಗದಾಚಾರ್ಯರನ್ನು ಮರೆಹೊಗಲು ಈ ಮಹಾರೋಗವು ದಿನೇ ದಿನೇ ಕಡಿಮೆಯಾಗುತ್ತ ಈಗ ಸಂಪೂರ್ಣವಾಗಿ ಗುಣವಾಗಿದೆ. ಇದ್ದಲ್ಲವೇ ಜಗದಾಚಾರ್ಯರ ಅದ್ಭುತ ಮಹಿಮೆಯು? ಈ ಸಂತೋಷಕ್ಕೋಸ್ಕರ ಸದರಿ ಶಂಕರಪ್ಪನವರು ವೇ|| ರುದ್ರಯ್ಯನವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಸಲ್ಲಿಸಿ ಕಳುಹಿಸಿರುವರು. ಜಗದಾಚಾರ್ಯರು ತಮ್ಮ ನಿಜ ಭಕ್ತರನ್ನು ಸದಾ ಕಾಪಾಡಲೆಂದು ಪ್ರಾರ್ಥಿಸುವ

ಮಲ್ಲೇಶಪ್ಪ ವೀರಸಂಗಪ್ಪ ಮಲೆನಾಡ,
ಹುಬ್ಬಳ್ಳಿ.

ಶ್ರೀ ಕೊಟ್ಟೂರೇಶನ ರಥೋತ್ಸವ,
ಕೊಟ್ಟೂರು.

ಬಳ್ಳಾರಿ ಡಿಸ್ಟ್ರಿಕ್ಟ ಕೊಟ್ಟೂರು ಪಟ್ಟಣದಲ್ಲಿ ಅಗಾಧಮಹಿಮಾಶೀಲನಾದ ಶ್ರೀ ಕೊಟ್ಟೂರೇಶನ ರಥೋತ್ಸವು ತಾ|| 12-2-1931 ನೆಯ ಮಾಘ ಬಹುಳ 10 ನೆಯ ಗುರುವಾರ ಮೂಲಾನಕ್ಷತ್ರದಲ್ಲಿ ಪ್ರತಿವರ್ಷಕ್ಕಿಂತಲೂ ಈ ವರ್ಷ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಏಕೆಂದರೆ—ಈ ವರ್ಷ ಹೊಸರಥವು ತಯಾರಾಗಿರುತ್ತದೆ ಈ ರಥಕ್ಕೆ 14 ಸಹಸ್ರ ರೂಪಾಯಿಗಳು ಖರ್ಚಾಗಿರುತ್ತವೆ. ರಥವು ಬಹಳ ಮನೋಹರವಾಗಿರುತ್ತದೆ. ಈ ವರ್ಷ ಯಾತ್ರಿಕರ ಸೌಕರ್ಯಕ್ಕಾಗಿ ವೀರಶೈವರಿಗೆ ಗಚ್ಚಿನಮಠದಲ್ಲಿಯೂ ಮತ್ತು ಏಕ್ಕವರ್ಗರಿಗೆ ಊರಮ್ಮನ ದೇವಸ್ಥಾನದಲ್ಲಿಯೂ ದಾಸೋಹದ ಏರ್ಪಾಟು ಮಾಡಿರುತ್ತದೆ. ಬರುವವರು ಸಕಾಲಕ್ಕೆ ಬಂದು ಮಹಾಸ್ವಾಮಿಯ ರಥೋತ್ಸವದಲ್ಲಿ ಭಾಗಿಗಳಾಗಿ ಕೃತಾರ್ಥರಾಗಬೇಕೆಂದು ಕೋರಿಕೆ.

ಪ್ರಭುನಸೆಯರಮಠದ ಮರುಳಸಿದ್ಧಯ್ಯ.
ಕೊಟ್ಟೂರು.

ಪಾಠಶಾಲಾಭಿವೃದ್ಧಿ.
ಅಳಗಂಚಿಪುರ.

[illegible]

ಓರ್ವ ಪ್ರೇಕ್ಷಕ.

ಧರ್ಮಸುಧಾರಣಸಭಾ, ಕದಡಿ.

[illegible]

ಓರ್ವ ವಿದ್ಯಾಭಿಮಾನಿ.

ನೀತಿಸುಧಾರಸ.

[ಮ|| ಅವಟ್ಟಿರಾಮರಾಯರಿಂದ]

೧೦. ಪಿತನ ಕರ್ತವ್ಯ.

[illegible]

ಫರಂಗಿ ಹಲಸಿನಹಣ್ಣು ಅಥವಾ ಅನಾನಸ್ ಹಣ್ಣನ್ನು ಗರ್ಭವತಿಯರಾದ ಸ್ತ್ರೀಯರು ತಿನ್ನಬಾರದು.

'ಅನಾನಸ್' ಹಣ್ಣು ಚೆನ್ನಾಗಿ ಹಣ್ಣಾಗಿದ್ದರೆ, ಬಹು ರುಚಿಯಾಗಿಯೂ, ಸುವಾಸನೆಯಾಗಿಯೂ ಇರುವದು. ಇದು ಪಿತ್ತವಿಕಾರವನ್ನು ಹೋಗಲಾಡಿಸುವದು. ಆದರೆ ಜಾಗ್ರತೆಯಾಗಿ ಜೀರ್ಣವಾಗುವದಿಲ್ಲ. ಬಿಸಿಲಿನಲ್ಲಿ ನಡೆದು ಶ್ರಮಪಟ್ಟು ಬಂದವರು ಈ ಹಣ್ಣನ್ನು ತಿಂದರೆ ಬಹಳ ಅನುಕೂಲವು. ಇದು ಬಾಯಿಯ ಅರುಚಿಯನ್ನು ಹೋಗಲಾಡಿಸುವದು.

"ಗರ್ಭವತಿಯರಾದ ಸ್ತ್ರೀಯರು ಈ ಹಣ್ಣನ್ನು ಎಂದೂ ತಿನ್ನಬಾರದು. ಈ ಹಣ್ಣನ್ನು ತಿಂದರೆ ಹನ್ನೆರಡು ಗಂಟೆಗಳೊಳಗೆ ಗರ್ಭಾಶಯವೆಲ್ಲವೂ ಸಂಕೋಚನವನ್ನು ಹೊಂದಿ ತತ್‌ಕ್ಷಣವೇ ರಕ್ತಸ್ರಾವವುಂಟಾಗುವದು. ಇವರಿಗೆ ಹಣ್ಣಿಗಿಂತಲೂ ಹಸಿಕಾಯಿಯು ಹಾನಿಕರವಾದುದು. ಹಸಿಕಾಯಿಯನ್ನು ತಿಂದರೆ ಕೆಲವರಿಗೆ ಕರುಳನ್ನು ಪ್ರಕೋಪಮಾಡಿ ಭೇದಿಯನ್ನು ಕೂಡ ಉಂಟುಮಾಡುವದು. 'ವಂಗ' ದೇಶದಲ್ಲಿ ವ್ಯಭಿಚಾರಿಣಿಯರಾದ ಸ್ತ್ರೀಯರಿಗೆ ಗರ್ಭೋತ್ಪತ್ತಿಯಾದರೆ ಗರ್ಭಸ್ರಾವವನ್ನು ಮಾಡಿಕೊಳ್ಳಲು ಅವರು ಹಸಿಯ 'ಅನಾನಸ್' ಕಾಯಿಯ ಹೋಳುಗಳನ್ನು ಉಪ್ಪು ಹಾಕಿ ಹುರಿದುಮಾಡಿ ತಿನ್ನುವರು. ಗರ್ಭೋತ್ಪತ್ತಿಯಾದ ಮೂರು ತಿಂಗಳೊಳಗೆ ಹೀಗೆ ಮಾಡಿದರೆ ತತ್‌ಕ್ಷಣವೇ ಗರ್ಭಸ್ರಾವವುಂಟಾಗುವದು. ಶರೀರವು ಬಲಹೀನವಾಗಿರುವ ಸ್ತ್ರೀಯರಿಗೆ ಮೂರು ತಿಂಗಳನಂತರವೂ ಕೂಡ ಇದನ್ನು ತಿನ್ನುವದರಿಂದ ಗರ್ಭಸ್ರಾವವುಂಟಾಗುವದು. ಇದನ್ನು ತಿಂದ ಇಪ್ಪತ್ತನಾಲ್ಕು ಗಂಟೆಯೊಳಗೆ ಗರ್ಭಪಾತವಾಗುವದು" ಎಂದು ಬಾಬುಕನ್ನಾಲಾಲ್‌ದೇ ಎಂಬವರು ಬರೆದಿರುತ್ತಾರೆ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಎಲ್ಲಾ ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ— ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳ ವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವುದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾ ಮುಗಿದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ನಾವು ಮುಂದಾಗಿ ತಿಳಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವರೆಂದು ಪೂರ್ಣ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವುದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜನವರಿ ತಾ|| ೧೯ ನೆಯ ಸೋಮವಾರ.

ರೌಂಡ್‌ಟೇಬಲ್ ಕಾನ್ಫರೆನ್ಸ್.

ಲಂಡನ್ ಪಟ್ಟಣದಲ್ಲಿ ಈಗ ಎರಡು ತಿಂಗಳುಗಳಿಂದಲೂ ಹಿಂದುಸ್ಥಾನದ ಮುಂದಿನ ರಾಜಕೀಯ ವಿಷಯವನ್ನು ನಿರ್ಣಯಿಸಲು ನೆರೆದಿದ್ದ ರೌಂಡ್‌ಟೇಬಲ್ ಸಮ್ಮೇಳನವು ಪರಿಸಮಾಪ್ತಿಗೆ ಬಂದಂತಾಯಿತು. ಈ ಸಂದರ್ಭದಲ್ಲಿ ಆ ಸಭೆಯು ನಡೆಯಿಸಿದ ಕಾರ್ಯಕಲಾಪಗಳನ್ನೂ, ಅದರ ಫಲಿತಾಂಶವನ್ನೂ ವಾಚಕರ ಅವಗಾಹನೆಗೆ ತರಬೇಕಾಗಿದೆ. 1924ನೆಯ ವರ್ಷದಲ್ಲಿಯೇ ಭಾರತೀಯ ಮುಖಂಡರು ಸಭೆಸೇರಿಸಿ ಆಂಗ್ಲೇಯರೂ, ಭಾರತೀಯರೂ ಸಹ್ಯದಾಮಯಿಕರಾಗಿ ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಪರ್ಯಾಲೋಚಿಸಿ, ಸೂಕ್ತರಾಜ್ಯಾಂಗವ್ಯವಸ್ಥೆಯನ್ನು ಮಾಡಲು ರೌಂಡ್ ಟೇಬಲ್ ಸಮ್ಮೇಳನವನ್ನು ಸೇರಿಸಬೇಕೆಂದು ಸರ್ಕಾರದವರನ್ನು ಬೇಡಿಕೊಂಡರು. ಆದರೆ ಬ್ರಿಟಿಷ್ ಗೌರ್ನಮೆಂಟಿನವರು ಅದಕ್ಕೆ ಪ್ರತಿಯಾಗಿ ಸೈಮನ್ ಕಮಿಷನ್ ಕಳುಹಿಸಿದರು. ಅದರ ಪರಿಣಾಮವೇನಾಯಿತೆಂಬುದು ಸರ್ವರಿಗೂ ಈ ಮೊದಲೇ ತಿಳಿದದ್ದಾಗಿದೆ. ಅನಂತರ ಭಾರತರಾಷ್ಟ್ರೀಯ ಕಾಂಗ್ರೆಸ್ಸಿನವರು ಹಿಂದುಸ್ಥಾನಕ್ಕೆ ಡೊಮಿನಿಯನ್‌ಸ್ಟೇಟಸ್ (ಸಾಮ್ರಾಜ್ಯಾಂತರ್ಗತಸ್ವರಾಜ್ಯ)ನ್ನು ಕೊಡಬೇಕೆಂದು ತೀರ್ಮಾನಿಸಿದರು. ಅವಕ್ಕೆ ವೈಸರಾಯರವರು 1929 ನೆಯ ನವಂಬರ್ ತಿಂಗಳಿನಲ್ಲಿ ಲಂಡನ್ನಿನಲ್ಲಿ ರೌಂಡ್‌ಟೇಬಲ್ ಸಮ್ಮೇಳನವನ್ನು ಸೇರಿಸುತ್ತೇವೆಂದು ಪ್ರಕಟಿಸಿದರು. ಆದರೆ ಕಾಂಗ್ರೆಸ್ಸಿನವರು 1929 ನೆಯ ವರ್ಷ ಲಾಹೋರಿನಲ್ಲಿ ನೆರವೇರಿದ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯವನ್ನು ಸ್ವಾವಲಂಬನದಿಂದ ಸಂಪಾದಿಸಬೇಕೆಂದು ನಿರ್ಧರಿಸಿದರು. ಅದರಂತೆ ಮಹಾತ್ಮಾ ಗಾಂಧಿಯವರು ಕಳೆದ ಮಾರ್ಚಿ 26 ನೆಯ ತಾರೀಖಿನಿಂದ ಭಯಂಕರವಾದ ಚಳವಳಿಯನ್ನೆಬ್ಬಿಸಿದರು. ಭಾರತರಾಷ್ಟ್ರವು ಮಹಾತ್ಮರಿಗೆ ಈ ಬಗ್ಗೆ ಪೂರ್ಣಬೆಂಬಲವನ್ನಿತ್ತು ಅವರ ಆಜ್ಞೆಯನ್ನು ಪಾಲಿಸುತ್ತಿತು. ಅನಂತರ ವೈಸರಾಯರು ತಾವು ಹಿಂದೆ ಪ್ರಕಟಿಸಿದ ಪ್ರಕಾರ ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಬ್ರಿಟಿಷ್ ಹಿಂದುಸ್ಥಾನದಿಂದ ಮೆಂಬರರನ್ನು ಆರಿಸಿ ಕಳುಹಿಸಿದರು.

ಆ ಸಭೆಯ ಪ್ರಾರಂಭದಲ್ಲಿ ಎಲ್ಲಾ ಭಾರತೀಯ ಮೆಂಬರರೂ ಏಕಾಭಿಪ್ರಾಯದಿಂದ ಹಿಂದುಸ್ಥಾನಕ್ಕೆ ಸಾಮ್ರಾಜ್ಯಾಂತರ್ಗತಸ್ವರಾಜ್ಯವನ್ನು ಕೊಡಬೇಕೆಂದು ಸಮರ್ಥನ ಮಾಡಲು, ಆಗ ಆಂಗ್ಲರು ಭಾರತೀಯರ ಏಕಮತ್ಯವನ್ನು ನೋಡಿ ಬೆರಗಾದರು. ಆ ಕಾಲಕ್ಕೆ ಲಾರ್ಡ್ ರಾಂಸೇಮ್ಯಾಕ್ಡೋನಾಲ್ಡರವರು ಈ ಮೆಂಬರರನ್ನು ನಿರಾಶೆಯಿಂದ ಹಿಂದಕ್ಕೆ ಕಳುಹಿಸುವುದಿಲ್ಲವೆಂಬ ಭರವಸೆಯನ್ನೂ ಸಹ ಕೊಟ್ಟರು. ಆದರೂ ಭಾರತೀಯರ ಆಕಾಂಕ್ಷೆಯು ನೆರವೇರಲಿಲ್ಲ. ದುರ್ದೈವವಶಾತ್ ಕಠಿಣವಾದ ಹಿಂದೂಮುಸಲ್ಮಾನ್ ಪ್ರಶ್ನೆಯು ಮಧ್ಯದಲ್ಲಿ ಬಂದೊದಗಿತಲ್ಲದೆ, ಆಶ್ರಿತಸಂಸ್ಥಾನಗಳು ಫೆಡರೇಷನ್ನಿಗೆ ಸೇರುವ ಪ್ರಶ್ನೆಯೂ ಬಂದೊದಗಿತು. ಹಿಂದೂಮುಹಮ್ಮದೀಯಸಮಸ್ಯೆಯನ್ನು ಉಭಯರಿಗೂ ತೃಪ್ತಿಕರವಾಗಿರುವಂತೆ ನಿರ್ವಹಿಸಬೇಕೆಂದು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದುವು. ಮುಖ್ಯಮಂತ್ರಿಗಳು ಕಾನ್ಫರೆನ್ಸನ್ನು ಕಮಿಟಿಗಳನ್ನಾಗಿ ವಿಂಗಡಿಸಿದ ಮೇಲೆ ಮೊದಲಿನ ಧೈರ್ಯಸಾಹಸಗಳು ಕುಗ್ಗಿಹೋದವು.

1920 ನೆಯ ವರ್ಷದಲ್ಲಿ ಐರ್ಲೆಂಡಿನ ಮೆಂಬರರು ರಾಜಕೀಯ ವಿಷಯಗಳನ್ನು ವಿಮರ್ಶಿಸಲು ಲಂಡನ್ನಿಗೆ ಹೋದಾಗ ಆಂಗ್ಲೇಯರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದೆ ಧೈರ್ಯದಿಂದಲೂ, ಗಾಂಭೀರ್ಯದಿಂದಲೂ ಚರ್ಚೆಗಳನ್ನು ನಡೆಯಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಂಡರು. ಮತ್ತು ಅವರು ಲಂಡನ್ನಿಗೆ ಹೋಗುವುದಕ್ಕೆ ಪೂರ್ವದಲ್ಲಿ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಿಸಿದ್ದರು. ಆದರೆ ಹಿಂದುಸ್ಥಾನದ ಮೆಂಬರರು ಲಂಡನ್ ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋಗುವಾಗ ಮಹಾತ್ಮಾ ಗಾಂಧಿ, ಮಿ|| ಜವಾಹರಲಾಲ್, ಮಿ|| ವಿಠ್ಠಲ್‌ಭಾಯಿ ಪಟೇಲ್, ಮಿ|| ವಲ್ಲಭಭಾಯಿಪಟೇಲ್ ಮೊದಲಾಗಿ ಜೈಲಿನಲ್ಲಿ ನರಳುತ್ತಿರುವ 40-50 ಸಾವಿರವರೆಗಿರುವ ರಾಜಕೀಯಖೈದಿಗಳನ್ನು ಬಿಡುಗಡೆ ಮಾಡಬೇಕೆಂದು ಯಾವ ತೀರ್ಮಾನವನ್ನೂ ಮಾಡದೆ ಹಾಗೆಯೇ ಹೊರಟುಹೋದರು. ಇವರು ಅಲ್ಲಿಗೆ ಹೋಗಿ ಹಿಂದೂಮುಹಮ್ಮದೀಯರ ವೈಷಮ್ಯವನ್ನು ಸರಿಪಡಿಸಬೇಕೆಂಬ ಪ್ರಯತ್ನದಲ್ಲಿಯೂ, ಸಂತೋಷಕೂಟಗಳಲ್ಲಿ ವಿನೋದಪಡುವುದರಲ್ಲಿಯೂ ತಮ್ಮ ಅಮೂಲ್ಯವಾದ ವೇಳೆಯನ್ನು ಕಳೆದರಲ್ಲದೆ, ವಿದೇಶದಲ್ಲಿ ಹೋಗಿ ನಿರರ್ಥಕವಾಗಿ ಕಾದಾಡಿ, ತಮ್ಮ ಶಿಥಿಲತ್ವವನ್ನು ಪ್ರದರ್ಶಿಸಿದರು. ಅಲ್ಲದೆ ಇವರ ಮುಖ್ಯೋದ್ದೇಶವು ಸಿದ್ಧಿಯಾಗದೆ ಹಿಂದಿರುಗಿ ಬರುವುದೇ ಆ ಸಮ್ಮೇಳನದ ಪರಿಣಾಮವಾಯಿತು. ಆದರೂ ಸ್ಯಾಂಕಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಕಮಿಟಿಯು ಒಂದು ರಿಪೋರ್ಟನ್ನು ತಯಾರಿಸಿರುವುದು. ಇದು ಸೈಮನ್ ರಿಪೋರ್ಟಿಗಿಂತ ಸ್ವಲ್ಪಮಟ್ಟಿಗೆ ಸುಧಾರಿಸಲ್ಪಟ್ಟಿದ್ದರೂ ಯಾವತ್ತು ಮುಖ್ಯಾಧಿಕಾರಗಳು ಇನ್ನೂ ಆಂಗ್ಲೇಯರ ಕೈಯಲ್ಲೇ ಉಳಿದಿರುವುದರಿಂದ ಈ ಕಮಿಟಿಯ ರಿಪೋರ್ಟು ತಮಗೆ ತೃಪ್ತಿಕರವಾಗಿಲ್ಲವೆಂದು ಭಾರತೀಯ ಪ್ರಮುಖರು ಅಭಿಪ್ರಾಯಪಡುತ್ತಿರುವರು.

ಮಿ|| ಬೆನ್ ಮತ್ತು ಸ್ಯಾಂಕಿಯವರು ಹಿಂದುಸ್ಥಾನಕ್ಕೆ ಬಂದು ಕೆಲವು ಮುಖಂಡರನ್ನು ಸಂದರ್ಶಿಸಿ ಆ ರಿಪೋರ್ಟಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆಮಾಡಿ ಪಾರ್ಲಿಮೆಂಟಿನಲ್ಲಿ ಅದು ತೀರ್ಮಾನವಾದಮೇಲೆ ಜಾರಿಯಲ್ಲಿ ಬರಬೇಕಾಗಿದೆಯಂತೆ! ಒಟ್ಟಿನಮೇಲೆ ಈ ರೌಂಡ್‌ಟೇಬಲ್‌ಕಾನ್ಫರೆನ್ಸಿನಿಂದ ಭಾರತೀಯರಿಗೆ ಪೂರ್ಣಸ್ವಾತಂತ್ರ್ಯವಾಗಲಿ ಅಥವಾ ಡೋಮಿನಿಯನ್‌ಸ್ಟೇಟಸ್ಸಾಗಲಿ ಯಾವುದೂ ಲಭ್ಯವಾಗಲಿಲ್ಲ. ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋಗಿರುವ ಮೆಂಬರರು ಪೂರ್ಣಡೊಮಿನಿಯನ್ ಸ್ಟೇಟಸ್ ಕೇಳುವರು; ಆದರೆ ಬ್ರಿಟಿಷರು ಸೈಮನ್ ರಿಪೋರ್ಟಿನಲ್ಲಿ ಕಂಡುಬರುವುದಕ್ಕಿಂತಲೂ ಸ್ವಲ್ಪ ಹೆಚ್ಚು ಅಂಶಗಳನ್ನು ಕೊಡಬೇಕೆಂದು ನಿರ್ಣಯಿಸುವ ಲಕ್ಷಣಗಳು ತೋರುತ್ತವೆ.

ಅಸಾಧಾರಣವಾದ ಸ್ವಾರ್ಥತ್ಯಾಗವನ್ನು ಮಾಡಿ, ದೌರ್ಜನ್ಯಯುಕ್ತವಾದ ಹಿಂಸಾಮಯಯುದ್ಧವನ್ನು ದೂರೀಕರಿಸಿ, ಅಹಿಂಸಾಮಯಸತ್ಯಾಗ್ರಹಸಮರವನ್ನು ಕೈಕೊಂಡು, 33 ಕೋಟಿ ಜನ ಭಾರತೀಯರಿಗೆ ಮಾನ್ಯನಾಗಿ ಮೆರೆಯುತ್ತಿರುವ ಮಹಾತ್ಮಾ ಗಾಂಧಿ ಮತ್ತು ಪಂಡಿತ ಜವಾಹರಲಾಲ್ ನೆಹರು, ಪಂಡಿತ ಮೋತೀಲಾಲ್ ನೆಹರು, ಮಿ|| ವಿಠ್ಠಲಭಾಯಿಪಟೇಲ್, ಮಿ|| ವಲ್ಲಭಭಾಯಿಪಟೇಲ್ ಮೊದಲಾದ ಉಜ್ವಲ ದೇಶಾಭಿಮಾನಿಗಳನ್ನು ಹಿಂದೂದೇಶಕ್ಕೆ ಬರುವುದರಲ್ಲಿರುವ ಮಿ|| ಬೆನ್ ಮತ್ತು ಮಿ|| ಸ್ಯಾಂಕಿಯವರು ಸಂದರ್ಶಿಸಿ ಅವರು ಈ ಮೊದಲು ಅಭಿಪ್ರಾಯಪಟ್ಟಿರುವಂತೆ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮುಂದಿನ ರಾಜ್ಯಾಂಗರಚನೆಯನ್ನು ಮಾಡುವುದಾದರೆ ಅದು ಶಾಶ್ವತವಾಗಿ ಉಳಿದು ಆಂಗ್ಲೇಯರಿಗೆ ಕೀರ್ತಿಯೂ ಭಾರತೀಯರಿಗೆ ಸುಖಶಾಂತಿಗಳೂ ಲಭಿಸುವುದರಲ್ಲಿ ಸಂಶಯವಿಲ್ಲ. ಇಂಥ ಸುಯೋಗವನ್ನು ದಯಾಮಯನಾದ ಶ್ರೀ ಪರಮೇಶ್ವರನು ಭರತಖಂಡಕ್ಕೆ ಎಂದು ತಂದುಕೊಡುವನೋ ಎಂದು, ಸಮಸ್ತ ಭಾರತೀಯರೂ ತ್ರಿಕಾಲಗಳಲ್ಲಿಯೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸತೊಡಗಿದ್ದಾರೆ. ಶ್ರೀ ಜಗದೀಶ್ವರನು ಈ ಬಡ ಭಾರತೀಯರ ಪ್ರಾರ್ಥನೆಯನ್ನು ನೆರವೇರಿಸಿ ಭರತಖಂಡವನ್ನು ಸೌಖ್ಯಾಗಾರವನ್ನಾಗಿ ಮಾಡಿ ಕರುಣಾರ್ಣವನೆಂಬ ತನ್ನ ನಾಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಆ ಭಗವಂತನನ್ನು ಭಕ್ತಿಭಾವದಿಂದ ಭಜಿಸುತ್ತೇವೆ.

ಕನ್ನಡನಾಡಿನ ವೀರರಾಣಿ ಕಿತ್ತೂರು ಚನ್ನಮ್ಮನ ನಾಟಕ.

ಧಾರವಾಡ ಡಿ|| ರೋಣ ತಾ|| ಅಬ್ಬೀಗೇರಿಯಲ್ಲಿ ಸ್ಥಾಪಿತವಾಗಿರುವ "ಕನ್ನಡಸಾಹಿತ್ಯ ಸೇವಾಸಂಗೀತ ನಾಟಕಮಂಡಳಿ" ಯವರು ರಾಜಧಾನಿಗೆ ಆಗಮಿಸಿ 4-5 ದಿವಸಗಳಾಗಿದ್ದು, ತಮ್ಮ ಲೋಕಪ್ರಿಯವಾದ ಮೋಳ್ಕಂಡ ನಾಟಕವನ್ನು ಅಭಿನಯಿಸಿ ಜನರ ಅಸಾಧಾರಣವಾದ ಪ್ರೇಮಕ್ಕೆ ಪಾತ್ರರಾಗಿರುವರು. ಈ ಸುಪ್ರಸಿದ್ಧರಾಜಧಾನಿಗೆ ಅನೇಕಾನೇಕ ದೇಶಗಳಿಂದ ಪ್ರಖ್ಯಾತನಾಟಕ ಕಂಪನಿಯವರು ಬಂದು ನಾನಾ ತರಹದ ನಾಟಕಗಳನ್ನು ಅಭಿನಯಿಸಿ ಹೋಗಿರುವರು. ಆದರೆ ಈ ತರಹದ ದೇಶಭಕ್ತಿಯನ್ನು ನಾಟಕಮುಖದಿಂದ ಜನರ ಹೃದಯದಲ್ಲಿ ಪ್ರಜ್ವಲಗೊಳಿಸತಕ್ಕ ಕಂಪನಿಯವರು ಇದುವರೆಗೆ ಯಾರೂ ಬಂದು ಅಭಿನಯಿಸಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ನಾಟಕವು ಕೇವಲ ವೀರರಸಭರಿತವಾಗಿದ್ದು, ಕನ್ನಡನಾಡಿಗೆ ಕಿರೀಟಪ್ರಾಯವಾಗಿ ರಾರಾಜಿಸುತ್ತಿರುವುದು. ಈಗ ಬೆಳಗಾಂವ ಡಿಸ್ಟ್ರಿಕ್ಟಿಗೆ ಸೇರಿದ ಕಿತ್ತೂರು ಸಂಸ್ಥಾನವನ್ನು ಬಹುಕಾಲದಿಂದ ವೀರಶೈವರಾಜರೇ ಆಳುತ್ತಿದ್ದರು. ಇಂಥ ಸಂಸ್ಥಾನವು ಕಾಲವೈಚಿತ್ರ್ಯದಿಂದ ಬ್ರಿಟಿಷರ ಕೈಸೇರಿತು. ಈಗ್ಗೆ 107 ವರ್ಷಗಳ ಪೂರ್ವದಲ್ಲಿ ಕಿತ್ತೂರುಕೇಸರಿಣಿಯೆಂದು ಮೆರೆದ ವೀರರಾಣಿಚನ್ನಮ್ಮನಿಗೂ, ಬ್ರಿಟಿಷರಿಗೂ ದತ್ತಕಪುತ್ರನ ವಿಷಯದಲ್ಲಿ ವಿವಾದ ವೃತ್ಪನ್ನವಾಗಿ ಉಭಯರಿಗೂ ಭಯಂಕರವಾದ ಯುದ್ಧವೇ ಆಗಿಹೋಯಿತು. ಈ ವೀರರಾಣಿಯು ಮೊದಲು ತನ್ನ ಕನ್ನಡನಾಡಿನ ಬಲವಾದ ಶೂರಸೈನಿಕರ ಸಹಾಯದಿಂದ ಬ್ರಿಟಿಷರ 10 ಸಾವಿರ ಸೈನ್ಯದೊಡನೆ ಘೋರವಾದ ಯುದ್ಧವನ್ನು ಮಾಡಿ ಮಿ|| ಥ್ಯಾಕರ್ ಎಂಬ ದೊರೆಯನ್ನು ಮರಣಕ್ಕೀಡುಮಾಡಿದಳು. ಈ ವಿಷಯವನ್ನು ಕೇಳಿ ಬ್ರಿಟಿಷರು ಅಸಾಧಾರಣಕೋಪದಿಂದೊಡಗೂಡಿ ಅಪರಿಮಿತವಾದ ಸೈನ್ಯವನ್ನು ತೆಗೆದುಕೊಂಡು ಬಂದು ಕಿತ್ತೂರನ್ನು ವಶಪಡಿಸಿಕೊಂಡರು. ಇದಾದರೂ ಕಿತ್ತೂರು ಸಂಸ್ಥಾನದಲ್ಲಿದ್ದ ಕೆಲಜನ ಕನ್ನಡ ದೇಶದ್ರೋಹಿಗಳ ಒಳಸಂಚಿನಿಂದ ನಡೆಯಿತೆಂದು ಆ ವೀರಮಾತೆಯ ಸಚ್ಚರಿತ್ರದಿಂದ ತಿಳಿದುಬರುತ್ತದೆ. ಹೇಗಾದರೂ ಇರಲಿ; ಪುರುಷಸಿಂಹನಂತೆ ಬ್ರಿಟಿಷರೊಡನೆ ರಣರಂಗದಲ್ಲಿ ಯುದ್ಧಮಾಡಿ ಕನ್ನಡನಾಡಿನ ವೀರಮಾತೆಯೆಂದು ಕೀರ್ತಿಶಾಲಿಯಾಗಿಹೋದ ಈ ವೀರರಾಣಿಯ ಜನ್ಮವೇ ಸಾರ್ಥಕವು. ಅಮ್ಮಾ! ಕನ್ನಡನಾಡಿನಲ್ಲಿ ನಿಜವಾಗಿ ನಡೆದ ಈ ಅದ್ಭುತಚರಿತ್ರವು ಇಲ್ಲಿಯವರೆಗೆ ಮಾಲಿನ್ಯದಿಂದೊಡಗೂಡಿದ ರತ್ನದಂತೆ ಅಪ್ರಕಾಶಮಾನವಾಗಿದ್ದಿತು. ಈ ಚರಿತ್ರರತ್ನವನ್ನು ಸದರಿ ಕಂಪನಿಯ ಮಾಲಿಕರಾದ ಮ|| ರಾ|| ಪಾಟೀಲ ಚನ್ನಬಸನಗೌಡರು ಬಹು ಶ್ರಮವಹಿಸಿ ನಾಟಕರೂಪದಿಂದ ಪ್ರಕಾಶಕ್ಕೆ ತಂದು, ಇದರ ದಿವ್ಯಜ್ಯೋತಿಯನ್ನು ಕನ್ನಡನಾಡಿನ ದಶದಿಕ್ಕುಗಳಲ್ಲಿ ಪಸರಿಸಿದುದಕ್ಕಾಗಿ ಕನ್ನಡನಾಡಿನ ವೀರಭಕ್ತರೆಲ್ಲರೂ ಇವರಿಗೆ ಚಿರಋಣಿಗಳಾಗಿದ್ದಾರೆಂದು ನಿಃಸಂದೇಹವಾಗಿ ಹೇಳಬಹುದಾಗಿದೆ. ಸದರಿ ಪಾಟೀಲರು ಅಸಂಖ್ಯ ದ್ರವ್ಯವನ್ನು ಖರ್ಚು ಮಾಡಿ ಇಂಥ ವೀರನಾರೀಮಣಿಗಳ ದಿವ್ಯಚರಿತ್ರೆಯನ್ನು ನಾಟಕಮುಖದಿಂದ ಜನರಿಗೆ ಬೋಧಿಸುತ್ತ ಕನ್ನಡನಾಡಿನ ವೈಭವವನ್ನು ಪ್ರಕಾಶಿಸುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಈ ಕಂಪನಿಯಲ್ಲಿ ಪಾತ್ರಗಳನ್ನು ವಹಿಸುವವರೆಲ್ಲಾ ನಾಟಕಕಲೆಯಲ್ಲಿ ಅತ್ಯಂತ ನಿಪುಣರಾಗಿದ್ದಾರೆ. ಪ್ರತಿಯೊಬ್ಬರೂ ತಮ್ಮ ತಮ್ಮ ಪಾತ್ರಗಳನ್ನು ಬಹು ಮನೋಹರವಾಗಿ ಅಭಿನಯಿಸುತ್ತಾರೆ. ವೀರರಾಣಿ ಚನ್ನಮ್ಮನ ಪಾತ್ರವನ್ನು ವಹಿಸುವ ಮಿಸ್. ಭಾಗೀರಥೀಬಾಯಿ, ಗುರುಗಳ ಪಾತ್ರವನ್ನು ವಹಿಸುವ ಮ|| ರಾ|| ಗಂಗಾಧರಪ್ಪ ಕರ್ನಾಟಕಗಂಧರ್ವ, ಮಲ್ಲಪ್ಪಶೆಟ್ಟಿಯ ಪಾತ್ರವನ್ನು ವಹಿಸುವ ಮ|| ವಿನೋದಸುಧಾಕರ ಶಿವಾಜಿ ಮಲ್ಲೂರು, ಲಿಂಗಪ್ಪ ಸುಬೇದಾರನ ಪಾತ್ರವನ್ನು ವಹಿಸುವ ಮ|| ರಾ|| ವೀರಭದ್ರಯ್ಯ ಇವರೇ ಮೊದಲಾದವರು ತೋರಿಸುವ ಅಭಿನಯಗಳು ಅವರ್ಣನೀಯಗಳಾಗಿವೆ. ಕನ್ನಡನಾಡಿನ ವೈಭವ, ಕನ್ನಡನಾಡಿನ ಶೌರ್ಯ, ಕನ್ನಡನಾಡಿನ ಧೈರ್ಯ, ಕನ್ನಡನಾಡಿನ ವೀರ್ಯ, ಕನ್ನಡನಾಡಿನ ಸೊಬಗು ಮೊದಲಾದವುಗಳಿಂದ ಕೂಡಿ ಮೆರೆಯುತ್ತಿರುವ ಈ ವೀರರಾಣಿಯ ನಾಟಕವನ್ನು ಕನ್ನಡನಾಡಿನ ರಕ್ತದಿಂದೊಡಗೂಡಿರುವ ಪ್ರತಿಯೊಬ್ಬ ಕನ್ನಡಿಗನೂ ಅವಶ್ಯವಾಗಿ ನೋಡಿಯೇ ತೀರಬೇಕೆಂದು ಆಗ್ರಹದಿಂದ ಹೇಳುತ್ತೇವೆ. ಆದುದರಿಂದ ಕರ್ನಾಟಕ ಸಿಂಹಾಸನಾಧೀಶ್ವರರ ರಾಜ್ಯಕ್ಕೆ, ಅದರಲ್ಲಿ ಕರ್ನಾಟಕ ಸಿಂಹಾಸನಾಧಿಪತಿಗಳ ರಾಜಧಾನಿಗೆ ಆಗಮಿಸಿರುವ ಕನ್ನಡನಾಡಿನ ಕನ್ನಡನುಡಿಯ ಕನ್ನಡಿಯಂತಿರುವ ಕನ್ನಡ ನಾಟಕವನ್ನು ಕನ್ನಡಿಗರೆಲ್ಲರೂ ನೋಡಿ ಕನ್ನಡ ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

. ಎಲ್. ಮರ್ ಎಂಬೊಬ್ಬರು ರಾಯಚೂರು ಸವಿಾಪದಲ್ಲಿ ಅಶೋಕಚಕ್ರವರ್ತಿಗಳ ಕಾಲದ ಒಂದು ಪ್ರಾಚೀನಪಟ್ಟಣವನ್ನು ಶೋಧಿಸಿರುವರಂತೆ!

ಅಂಕೋಲಾದಲ್ಲಿ 500-600 ಜನ ಸ್ತ್ರೀಯರು ಅರಣ್ಯಶಾಸನವನ್ನುಲ್ಲಂಘಿಸಿ ಕಟ್ಟಿಗೆಗಳನ್ನು ಕಡಿದುಕೊಂಡು ಬಂದು ಮಾರ್ಕೆಟ್ಟಿನಲ್ಲಿ ಮಾರುತ್ತಿರುವರಂತೆ!

ಹಿಂದೂಸ್ಥಾನ ಸೇವಾದಳದ ವ್ಯವಸ್ಥಾಪಕರಾದ ಡಾ|| ಹಾರ್ಡೀಕರ್‌ರವರು ಪುನಃ ದಸ್ತಗಿರಿಮಾಡಲ್ಪಟ್ಟು 9 ತಿಂಗಳು ಕಠಿಣಶಿಕ್ಷೆಗೆ ಗುರಿಯಾಗಿರುವರು.

ಚೀನಾದಲ್ಲಿ ಭಯಂಕರ ಶೀತದಿಂದ ಕೆಲವು ನದಿಗಳ ಕಾಲುವೆಗಳ ನೀರು ಹೆಪ್ಪುಗೊಂಡಿದೆ. ಮನೆಮಠಗಳಿಲ್ಲದ ನೂರಾರು ಜನ ಬಡವರು ಶೀತಾಧಿಕ್ಯದಿಂದ ಮೃತಪಟ್ಟಿರುವರು.

ರಾಜಮಹೇಂದ್ರದಲ್ಲಿ ಒಬ್ಬ ಮೋಟಾರ್ ಡ್ರೈವರನು ತಾನು ಹಾಕಿಕೊಂಡಿದ್ದ ಗಾಂಧಿಟೋಪಿ ಮತ್ತು ರಾಷ್ಟ್ರಧ್ವಜ ಇವುಗಳನ್ನು ಪೋಲೀಸರು ಕಿತ್ತುಕೊಂಡು ಹೋದುದು ಕಳ್ಳತನವಾಯಿತೆಂದು ಸದರಿ ಪೋಲೀಸರ ಮೇಲೆ ಮೊಕದ್ದಮೆ ನಡೆಯಿಸಿರುವನಂತೆ!

ಪಂಡಿತ ಮೋತಿಲಾಲ ನೆಹರೂರವರು ಕಲ್ಕತ್ತೆಯಿಂದ ಅಲಹಾಬಾದಿಗೆ ಹಿಂದಿರುಗಿರುವರು. ಕಲ್ಕತ್ತೆಯಲ್ಲಿ ಅವರಿಗೆ ಚಿಕಿತ್ಸೆಮಾಡುತ್ತಿದ್ದ ಕವಿರಾಜ ಶ್ಯಾಮದಾಸ್ ವಾಚಸ್ಪತಿಯವರು ಅವರ ದೇಹಸ್ಥಿತಿಯನ್ನು ಪುನಃ ಪರೀಕ್ಷಿಸಲು ಅಲಹಾಬಾದಿಗೆ ಬಂದಿರುವರು.

ಬೊಂಬಾಯಿಯ ಹೈಕೋರ್ಟು ನ್ಯಾಯಾಧೀಶರು, ಕ್ರಿ. ಲಾ. ಅ. ಆಕ್ಟ್ 17 ನೆಯ ಸೆಕ್ಷನ್ ಪ್ರಕಾರ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದ ಕೆ. ಎಫ್. ನರಿಮನ್‌ರವರ ಕೇಸನ್ನು ಪುನರ್ವಿಮರ್ಶೆಮಾಡಿ, ಅವರನ್ನು ನಾಸಿಕದ ಜೈಲಿನಿಂದ ಈ ತಿಂಗಳು 14 ನೆಯ ತಾರೀಖಿನ ದಿವಸ ಬಿಡುಗಡೆಮಾಡಿದರು.

ಪೇಶಾವರ್ ಪಟ್ಟಣಕ್ಕೆ ಸಂಬಂಧಪಟ್ಟ ಚರ್ಸದ್ದದಲ್ಲಿ ಹೆಂಡ ಸರಾಯಿ ಅಂಗಡಿಗಳ ಪಿಕೆಟಿಂಗ್ ಬಹುಜೋರಿನಿಂದ ನಡೆಯುತ್ತಿರುವುದು. ಈಗ ಸುಮಾರು 250 ಜನರು ದಸ್ತಗಿರಿ ಮಾಡಲ್ಪಟ್ಟಿರುವರು. ಅನೇಕ ಮುಖಂಡರು ಮೂರು ವರ್ಷಗಳ ಕಠಿಣಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು.

ಶ್ರೀಯುತ ಆರ್. ಎಸ್. ಹಿರೇಮಠ ಇವರು ಬೆಳಗಾಂವ ಜಿಲ್ಲೆಯ ಕಲೆಕ್ಟರರಾಗಿರುವರೆಂಬ ವಿಷಯವನ್ನು ಕೇಳಿ ಸಂತೋಷಿಸುತ್ತೇವೆ. ಗುರುವರ್ಗದವರಲ್ಲಿ ಇಂತಹ ಉನ್ನತಸ್ಥಾನವನ್ನು ಈ ವರೆಗೂ ಯಾರೂ ಪಡೆದಿರುವದಿಲ್ಲ. ಈ ಮಹೋದಯರಿಗೆ ಶ್ರೀ ಜಗದಾಚಾರ್ಯರು ಉತ್ತರೋತ್ತರಾಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇವೆ.

ಸಬರ್ಮತಿಜೈಲಿನಲ್ಲಿರುವ ಮಹಾತ್ಮಾ ಗಾಂಧಿಯವರ ಪ್ರೈವೇಟ್ ಸೆಕ್ರೆಟರಿಗಳಾದ ಶ್ರೀಯುತ ಮಹಾದೇವ ದೇಸಾಯಿಯವರು ರಾಜಕೀಯ ಖೈದಿಗಳಲ್ಲಿ ಯಾವ ವ್ಯತ್ಯಾಸವನ್ನೂ ಮಾಡಬಾರದೆಂದೂ, ಸದ್ಯಃ ಇರುವ ಎ. ಬಿ. ಸಿ. ಮೊದಲಾದ ತರಗತಿಗಳನ್ನು ತೆಗೆದುಹಾಕಬೇಕೆಂದೂ ಸೆರೆಮನೆಯ ಮುಖ್ಯಾಧಿಕಾರಿಗಳಿಗೆ ಬರೆದಿರುವುದಾಗಿ ತಿಳಿದುಬರುತ್ತದೆ.

ಈ ತಿಂಗಳು 11 ನೆಯ ತಾರೀಖಿನ ದಿವಸ ಕರಾಚಿಯಲ್ಲಿ ಜನರು ಮೆರವಣಿಗೆ ಹೊರಟ್ಟಿದ್ದರು. ಅಧಿಕಾರಿಗಳು ಇದು ಅಕ್ರಮವೆಂದೂ, ಮೆರವಣಿಗೆಯು ಮುಂದುವರಿಯಕೂಡದೆಂದೂ ಅಡ್ಡಿಪಡಿಸಿದರು. ಆದರೂ ಜನರು ಮೆರವಣಿಗೆಯನ್ನು ನಿಲ್ಲಿಸಲಿಲ್ಲ. ಪೋಲೀಸರು ಲಾಠೀಪ್ರಯೋಗಮಾಡಿದರು. 150 ಜನರಿಗೆ ಗಾಯಗಳಾಗಿವೆ. ಅನೇಕ ಜನ ಸ್ತ್ರೀಯರು ದಸ್ತಗಿರಿ ಮಾಡಲ್ಪಟ್ಟಿರುವರು.

ಇಂಡಿಯಾ ಸೆಕ್ರೆಟರಿ ಮಿ|| ವೆಡ್ಜ್‌ವುಡ್‌ಬೆನ್ ಮತ್ತು ಲಾರ್ಡ್ ಸ್ಯಾಂಕಿಯವರು ಹಿಂದೂಸ್ಥಾನಕ್ಕೆ ಬಂದು ಕೆಲವು ಮುಖಂಡರನ್ನು ಸಂದರ್ಶಿಸುವುದು ಅವಶ್ಯಕವೆಂದೂ, ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡುವ ಏರ್ಪಾಟುಮಾಡಬೇಕೆಂದೂ ಸರ್ ಪರಶುರಾಮ ಪೆಟ್ರೋರವರು ಮುಖ್ಯ ಪ್ರಧಾನರಾದ ರಾಂಸೇ ಮ್ಯಾಕ್ಡೋನಾಲ್ಡರವರಿಗೆ ಒಂದು ಪತ್ರವನ್ನು ಬರೆದಿರುವರು.

ಈ ತಿಂಗಳು 17ನೆಯ ತಾರೀಖಿನದಿವಸ ಹೊಸ ದಿಲ್ಲಿಯಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿ ಅಧ್ಯಕ್ಷಸ್ಥಾನಕ್ಕೆ ಸರ್ ಹರಿಸಿಂಗ್‌ಗೋರ್ ಮತ್ತು ಸರ್ ಇಬ್ರಾಹಿಂ ರಹಿಮುತುಲ್ಲಾರವರು ಉಮೇದುವಾರರಾಗಿ ನಿಂತಿದ್ದರು. ಮಿ|| ಇಬ್ರಾಹಿಂ ರಹಿಮುತುಲ್ಲಾರವರಿಗೆ 76 ಓಟುಗಳೂ, ಸರ್ ಹರಿಸಿಂಗ್‌ಗೋರ್‌ರವರಿಗೆ 36 ಓಟುಗಳೂ ಬಂದದ್ದರಿಂದ ಸರ್ ಇಬ್ರಾಹಿಂ ರಹಿಮುತುಲ್ಲಾರವರು ಅಧ್ಯಕ್ಷರಾದರು.

ಈ ತಿಂಗಳು 12 ನೆಯ ತಾರೀಖಿನ ದಿವಸ ಹಾವೇರಿ ತಾಲ್ಲೂಕು ಹೊಸರಿತ್ತಿಯಲ್ಲಿ ರೈತರ ಸಭೆಯು ಬೆಳಗಾಂವಿಯ ವಕೀಲರಾದ ಶ್ರೀಯುತ ಕೆ. ಎಸ್. ಪಾಟೀಲರವರ ಅಧ್ಯಕ್ಷತೆಯಲ್ಲಿ ನೆರೆದು, ಈ ವರ್ಷ ಭೂಕಂದಾಯವನ್ನು ಮಾಫ್ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದರೆಂದೂ, ಆ ಸಭೆಯನ್ನು ಸೇರಿಸಿದ ಮಿ|| ಗುದ್ಲೆಪ್ಪ ಹಳ್ಳಿಕೇರಿ ಎಂಬವರನ್ನು ಸರ್ಕಾರದವರು ಇ. ಪಿ. ಕೋಡು 117 ನೆಯ ಸೆಕ್ಷನ್ ಪ್ರಕಾರ ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಟ್ಟಿರುವರೆಂದೂ, ಹಾಗೂ ಇವರು ಎರಡು ತಿಂಗಳು ಧಾರವಾಡ ಜಿಲ್ಲೆಯಲ್ಲಿ ಭಾಷಣಮಾಡಬಾರದೆಂದು ಹುಕುಂಮಾಡಿರುವರೆಂದೂ ತಿಳಿದುಬರುತ್ತದೆ.

[illegible] ತಿಂಗಳು 14 ನೆಯ ತಾರೀಖಿನ ದಿವಸ ಲಂಡ[illegible] ರತೀಯ ಸ್ವಾತಂತ್ರ್ಯಸಂಘದ ಪತಿಯಿಂದ ಬಮಿ[illegible]ಘ್ಯಾಮ್ ಟೌನ್‌ಹಾಲ್‌ನಲ್ಲಿ ಮಿ|| ಹೊರೇಸ್ ಅಲೆಗ್ಸಾಂಡರ್‌ರವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಯು ಸೇರಿತ್ತು. ಆಗ ಮಿ|| ಫೆನ್ನರ್ ಬ್ರಾಕ್ವೇರವರು ಒಂದು ಭಾಷಣವನ್ನು ಮಾಡಿದರು. ಅವರು ಹೇಳಿದುದರ ಮುಖ್ಯಾಂಶವೇನೆಂದರೆ—ಸಪ್ರು ಮತ್ತು ರೀಡಿಂಗ್‌ರವರ ಸಲಹೆಗಳಿಂದ ನಿರ್ಮಿಸಲ್ಪಡುವ ರಾಜ್ಯಾಂಗವ್ಯವಸ್ಥೆಯು ಯಾವ ಭಾರತೀಯರಿಗೂ ತೃಪ್ತಿಕರವಾಗಲಾರದು. ಏಕೆಂದರೆ, ಇನ್ನೂ ಮುಖ್ಯ ಅಧಿಕಾರವು ಬ್ರಿಟಿಷ್ ಏಜೆಂಟರ ಕೈಯ್ಯಲ್ಲಿಯೇ ಇದೆ. ರಾಜಕೀಯ ಖೈದಿಗಳನ್ನೆಲ್ಲಾ ಬಿಡುಗಡೆಮಾಡಿ ಅವರ ಸಂಗಡ ಸಂಧಾನವನ್ನು ನಡೆಯಿಸಿ ನಿರ್ಣಯಮಾಡದಿದ್ದರೆ ಯಾವ ತೀರ್ಮಾನವೂ ಶಾಶ್ವತವಾಗಿರಲಾರದು. ಈ ಠರಾವನ್ನು 1200 ಜನರು ಪಾಸುಮಾಡಿದರು.

ವಿಠ್ಠಲಭಾಯಿ ಪಟೇಲರವರು ಕೊಯಮುತ್ತೂರು ಜೈಲಿನಿಂದ ಯಾವ ಕರಾರುಗಳೂ ಇಲ್ಲದೆ ಬಿಡುಗಡೆ ಮಾಡಲ್ಪಟ್ಟ ತರುವಾಯ ಬೊಂಬಾಯಿಗೆ ಹೋಗಿರುವರು. ಆ ಪಟ್ಟಣದ ಡಾಕ್ಟರುಗಳಾದ ಮಿ|| ದೇಶಮುಖ ಮಿ|| ಪಿ. ಟಿ. ಪಟೇಲ್ ಮೊದಲಾದವರು ಇವರನ್ನು ಪರೀಕ್ಷಿಸಿ ಬಂದು, ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿರುವುದೇನೆಂದರೆ:—ನಾವು ಅವರನ್ನು ಚನ್ನಾಗಿ ಪರೀಕ್ಷಿಸಿದ್ದೇವೆ. ಅವರಿಗೆ ಕೇವಲ ಅಶಕ್ತಿಯಿರುವುದಲ್ಲದೆ ಕೊಯಮುತ್ತೂರು ಆಸ್ಪತ್ರೆಯಲ್ಲಿ ಅಪರೇಷನ್ ಮಾಡಿಸಿದ್ದರಿಂದಲೂ ಅವರಿಗೆ ತಲೆತಿರುಗಿದ ಹಾಗೆ ಆಗುತ್ತಿರುವುದು. ಅವರ ಹೊಟ್ಟೆಯನ್ನೂ 'ಎಕ್ಸ್‌ರೇ' ಯಂತ್ರದಿಂದ ಪರೀಕ್ಷಿಸಿದ್ದೇವೆ. ಕರುಳಿನಮೇಲೆ ಒಂದು ವಿಧವಾದ ಉರಿಯಿರುವಂತೆ ಕಾಣುತ್ತದೆ. ಸರಿಯಾದ ಆಹಾರವೂ ಮತ್ತು ಚಿಕಿತ್ಸೆಯೂ ಇಲ್ಲದಿದುದರಿಂದ ಇನ್ನೂ ಜಾಸ್ತಿಯಾಗಿದೆ. ದುರ್ಬಲವ್ಯಾಧಿ ಮತ್ತು ಅಂಡವಾಯು ಇವುಗಳನ್ನು ಅವರು ಅಶಕ್ತಿಯಲ್ಲಿರುವ ಸ್ಥಿತಿಯಲ್ಲಿ ಅಪರೇಷನ್ ಮಾಡುವುದು ಹಿತಕಾರಿಯಾಗುವುದಿಲ್ಲ. ಯುರೋಪ್‌ಖಂಡಕ್ಕೆ ಹೋಗಿ ಅಲ್ಲಿ ಯಾವುದಾದರೂ ಆರೋಗ್ಯಸ್ಥಳದಲ್ಲಿ ಚಿಕಿತ್ಸೆಹೊಂದುವುದು ಕ್ಷೇಮಕರವಾದುದೆಂದು ತೋರುತ್ತದೆ.

ಲಾಹೋರಿನ ಸಜ್ಜನಸಿಂಗ್ ಎಂಬ ಪಂಜಾಬೀ ತರುಣನು ಈ ತಿಂಗಳು 13 ನೆಯ ತಾರೀಖಿನ ದಿವಸ ಮಿ|| ಎ. ಜಿ. ಕರ್ಟಿಸ್ ಎಂಬ ಸೈನ್ಯಾಧಿಕಾರಿಯ ಮನೆಗೆ ಅಕಸ್ಮಾತ್ತಾಗಿ ನುಗ್ಗಿ ಅವನ ಹೆಂಡತಿಯನ್ನು ಕತ್ತಿಯಿಂದ ಹೊಡೆದು ಕೊಂದನಲ್ಲದೆ, ಅವನ ಇಬ್ಬರು ಹೆಣ್ಣುಮಕ್ಕಳನ್ನೂ ಸಹ ಹೊಡೆದು ಗಾಯಗೊಳಿಸಿರುವನು. ಆಕೂಡಲೇ ಅವನು ದಸ್ತಗಿರಿ ಮಾಡಲ್ಪಟ್ಟಮೇಲೆ ಅವನು ಪೋಲೀಸರಿಗೆ ಕೊಟ್ಟ ವಾಜ್ಮೂಲದಲ್ಲಿ ಹೇಳಿರುವುದೇನೆಂದರೆ—"ನಾನು ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲಬೇಕೆಂಬ ಉದ್ದೇಶದಿಂದಲೇ ಹೋದವರ್ಷ ಸೈನ್ಯಕ್ಕೆ ಸೇರಿದೆನು. ಆದರೆ ನನ್ನ ಉದ್ದೇಶವು ಅಲ್ಲಿ ನೆರವೇರದಕಾರಣ ಅದನ್ನು ಬಿಟ್ಟು ಕಾಂಗ್ರೆಸ್ಸಿಗೆ ಸೇರಿ ಕಠಿಣಶಿಕ್ಷೆಯನ್ನನುಭವಿಸಿ ಬಂದೆನು. ಅನಂತರ ಈಗ ಮೂರು ತಿಂಗಳುಗಳಿಂದಲೂ ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲಬೇಕೆಂದು ಹೊಂಚು ಹಾಕುತ್ತಿದ್ದೆನು. ಆದರೂ ಅದು ಸಾಧ್ಯವಾಗದೆ ಹೋದುದಕ್ಕೆ ವ್ಯಸನಪಡುತ್ತೇನೆ. ನನ್ನ ಹಳ್ಳಿಯಲ್ಲಿ ಈ ಕಾರ್ಯವನ್ನು ಪೂರೈಸುವವರು ಅನೇಕ ಜನರಿದ್ದಾರೆ." ಸೈನ್ಯಾಧಿಕಾರಿಯ ಇಬ್ಬರು ಮಕ್ಕಳೂ ಗುಣಮುಖರಾಗುತ್ತಿರುವರು. ವೈಸ್‌ರಾಯರವರು ಮಿ|| ಕರ್ಟಿಸ್‌ರವರಿಗೆ ಉಂಟಾದ ಶೋಚನೀಯವಾದ ವಿಪತ್ತಿಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿರುವರು.

ಕ್ಯಾಲೆಂಡರ್

ಪಂಚಾಚಾರ್ಯಪ್ರಭಾ ಆಫೀಸಿನ ೧೯೩೧ ನೆಯ ಇಸ್ವಿಯ ಕ್ಯಾಲೆಂಡರುಗಳು ಮಾರಾಟಕ್ಕೆ ಸಿದ್ಧವಾಗಿವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೂರು ಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ ಅತ್ಯಂತ ಮನೋಹರವಾದ ಭಾವಚಿತ್ರದೊಡನೆ ಎರಡು ಬಣ್ಣಗಳಿಂದ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿವೆ.

ಬೆಲೆ ೧೦ಂಕ್ಕೆ ೨ ರೂಪಾಯಿ.

ಪ್ರಭಾ ಪತ್ರಿಕೆಯ ಹೊಸ ಮತ್ತು ಹಳೆ ಚಂದಾದಾರರಿಗೆ ಕ್ಯಾಲೆಂಡರು ಉಚಿತವಾಗಿ ಕಳುಹಿಸಲ್ಪಡುವದು.

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸೋಲಾಪುರದ ಧನಶೆಟ್ಟಿಮಲ್ಲಪ್ಪ, ಶ್ರೀಕೃಷ್ಣಶಾರದ, ಜಗನ್ನಾಥಸಿಂಧೆ, ಕುರ್ಬಾನ್‌ಹುಸೇನ ಇವರನ್ನು ಎರವಾಡಾಜೈಲಿನಲ್ಲಿ ಗಲ್ಲಿಗೇರಿಸಿದರು.

ಮರಣಶಾಸನಕ್ಕೆ ಗುರಿಮಾಡಲ್ಪಟ್ಟಿದ್ದ ಸೋಲಾಪುರದ ಮ|| ರಾ|| ಧನಶೆಟ್ಟಿಮಲ್ಲಪ್ಪ, ಮ|| ರಾ|| ಶ್ರೀಕೃಷ್ಣಶಾರದ, ಮ|| ರಾ|| ಜಗನ್ನಾಥಸಿಂಧೆ ಮತ್ತು ಅಬ್ದುಲ್ ರಸೂಲ್‌ಕುರ್ಬಾನಹುಸೇನ ಈ ನಾಲ್ವರನ್ನು ಈ ತಿಂಗಳು 12 ನೆಯ ತಾರೀಖಿನ ದಿವಸ ಪ್ರಾತಃಕಾಲ ಸರ್ಕಾರದವರು ಎರವಾಡಾಜೈಲಿನಲ್ಲಿ ಗಲ್ಲಿಗೆಹಾಕಿದರು. ಇವರನ್ನು ಗಲ್ಲಿಗೇರಿಸುವರೆಂಬ ಸುದ್ದಿಯು ಊರಲ್ಲೆಲ್ಲಾ ಹರಡಿದ ಕೂಡಲೆ ಎರವಾಡಾಜೈಲಿಗೆ ಪೂನಾಪಟ್ಟಣದಿಂದ ಒಂದು ಜನಗುಂಪು ಹೊರಟಿತು. ಆದರೆ ಮಧ್ಯದಾರಿಯಲ್ಲಿಯೇ ಪೋಲೀಸರು ಇವರನ್ನು ತಡೆದು ಲಾಠೀಪ್ರಯೋಗಮಾಡಿ ಚದರಿಸಿದರು. ಅನೇಕ ಜನರಿಗೆ ಸಣ್ಣ ಪುಟ್ಟಗಾಯಗಳಾದವು. ಎರವಾಡಾಜೈಲಿಗೆ ಹೋಗುವ ರಸ್ತೆಗಳಲ್ಲೆಲ್ಲಾ ಪೋಲೀಸರು ನಿಂತು ಜನರು ಹೋಗದಂತೆ ತಡೆಯುತ್ತಿದ್ದರು. ಬೊಂಬಾಯಿಯಲ್ಲಿ ಆ ದಿವಸ ಹರತಾಳವನ್ನಾಚರಿಸಿದರು. ಟ್ರಾಮ್‌ವೇ ಮೊದಲಾದವುಗಳೂ ಸಹ ನಿಂತುಹೋದವು.

ಬೊಂಬಾಯಿಯ ಕಾಲಬಾದೇವಿರಸ್ತೆಯಲ್ಲಿ ಜನರು ಮೂರುಜನ ಪೋಲೀಸರನ್ನು ಸುತ್ತಿಕೊಂಡು ಗಲ್ಲಿಗೇರಿಸಲ್ಪಟ್ಟ ಜನರ ಗೌರವಾರ್ಥವಾಗಿ ಶಿರೋವಸ್ತ್ರವನ್ನು ತೆಗೆಯಬೇಕೆಂದು ಬಲಾತ್ಕರಿಸಿದರೆಂದೂ, ಕಾಂಗ್ರೆಸ್ಸಿನವರು ಬಂದು ಪೋಲೀಸರನ್ನು ಕಾಪಾಡಿದರೆಂದೂ ತಿಳಿದುಬರುತ್ತದೆ. ಅನಂತರ ಆ ಜನರು ಮೋಟಾರುಕಾರುಗಳು ಓಡಾಡದಂತೆ ಅಡ್ಡಿಪಡಿಸುತ್ತಿದ್ದರೆಂದು ಪೋಲೀಸರು ಲಾಠೀಪ್ರಯೋಗಮಾಡಿದರು. ಆಗ 26 ಜನಗಳಿಗೆ ಗಾಯಗಳಾದುವು. ಟ್ರಾಮ್ ಕಾರುಗಳನ್ನು ನಿಲ್ಲಿಸುವುದಕ್ಕೆ ದಾರಿಯಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಇಡುತ್ತಿದ್ದರಂತೆ!

13 ನೆಯ ತಾರೀಖಿನ ದಿವಸ ಬೊಂಬಾಯಿಯ ಸುಮಾರು 20-25 ಸಾವಿರ ಜನರು ಚೌಕ್ಕದಲೆಯಿಂದ ಮೆರವಣಿಗೆ ಹೊರಟು ಎಸ್ಪ್ಲನೇಡ್ ಮೈದಾನದಲ್ಲಿ ಒಂದು ಪ್ರಚಂಡಸಭೆ ಸೇರಿಸಿ ಈ ನಾಲ್ವರನ್ನು ಸರ್ಕಾರದವರು ವಧಿಸಿದ್ದನ್ನು ನಿಷೇಧಿಸಿದರು. ಅವರು ನಿರಪರಾಧಿಗಳೆಂದೂ, ಅವರನ್ನು ವಧಿಸಿದುದು ಕೇವಲ ಅನ್ಯಾಯವೆಂದೂ, ಆ ಸೇತುಹಿಮಾಚಲ ಪರ್ಯಂತ ಸಮಸ್ತ ಭಾರತೀಯರು ಅವರ ಮರಣದಂಡನೆಯನ್ನು ತಪ್ಪಿಸಬೇಕೆಂದು ವೈಸರಾಯರಿಗೆ ಮೊರೆಯಿಟ್ಟರೂ ದಯೆಬರಲ್ಲಿಲ್ಲವೆಂದೂ, ಇದಕ್ಕೆ ಪ್ರತಿಯಾಗಿ ಬ್ರಿಟಿಷ್ ಸಾಮಾನುಗಳನ್ನು ಸಂಪೂರ್ಣ ಬಹಿಷ್ಕರಿಸುವುದೇ ಸರಿಯಾದ ಉಪಾಯವೆಂದೂ ಅನೇಕರು ಉಜ್ವಲಭಾಷಣಗಳನ್ನು ಮಾಡಿದರು. ಬಿಜಾಪುರ, ಕಲ್ಕತ್ತಾ, ಅಹಮ್ಮದಾಬಾದ್, ಜಬ್ಬಲ್‌ಪೂರ್ ಮೊದಲಾದ ಸ್ಥಳಗಳಲ್ಲಿ ಜನರು ಹರತಾಳವನ್ನಾಚರಿಸಿದರು.

ಸೋಮವಾರ ಇವರಿಗೆ ಫಾಶಿ ಆಗುತ್ತದೆಂಬ ಸುದ್ದಿಯು ಇವರ ಬಂಧುಗಳಿಗೆ ಒಂದುದಿವಸ ಮುಂಚಿತವಾಗಿ ತಿಳಿಸಲ್ಪಟ್ಟಿತ್ತು. ಆ ಪ್ರಕಾರ ಸೊಲ್ಲಾಪುರ ಕಡೆಯಿಂದ ಇವರ ಆಪ್ತೇಷ್ಟಮಿತ್ರರಾದ 30 ಜನರು ಆದಿತ್ಯವಾರವೇ ಪುಣೆಗೆ ಹೋಗಿದ್ದರು. ಇವರೆಲ್ಲರೂ ಕಾರಾಗೃಹದಲ್ಲಿ ಆ ನಾಲ್ಕುಜನರ ಕೊನೆಯ ದರ್ಶನವನ್ನು ತೆಗೆದುಕೊಂಡರು. ಫಾಶಿಯಾದಮೇಲೆ ಅವರ ಶವಗಳನ್ನು ಅವರ ಆಪ್ತೇಷ್ಟರಿಗೆ ಕೊಡಲಿಲ್ಲ. ಕಾರಾಗೃಹದಲ್ಲಿಯೇ ಅವರ ಧರ್ಮಪದ್ಧತಿಪ್ರಕಾರ ಅಂತ್ಯವಿಧಿಯು ಸರಕಾರಿ ನೌಕರರಿಂದಲೇ ಮಾಡಲ್ಪಟ್ಟಿತು. ಮಿ|| ಧನಶೆಟ್ಟಿ ಕುರ್ಬಾನಹುಸೇನ ಇವರ ಪ್ರೇತಗಳು ಸಮಾಧಿಮಾಡಲ್ಪಟ್ಟವು. ಮಿ|| ಸಿಂಧೆ, ಶಾರದಾ ಇವರ ಪ್ರೇತಗಳು ದಹನಮಾಡಲ್ಪಟ್ಟವು.

ಈ ನಾಲ್ವರ ಪರಿಚಯ.

ಮಿ|| ಮಲ್ಲಪ್ಪ ಧನಶೆಟ್ಟಿ ಇವರು ಲಿಂಗಾಯತ ತರುಣರು, 32 ವರ್ಷ ವಯಸ್ಸು. ಸೊಲ್ಲಾಪುರದ ಒಂದು ಅಂಗಡಿಯಲ್ಲಿ ಗುಮಾಸ್ತರಾಗಿದ್ದರು. ಕೆಲಕಾಲ ಹಿಂದೆ ಸೊಲ್ಲಾಪುರದಲ್ಲಿ ನಡೆದ ಹಿಂದೂಮುಸಲಮಾನರ ದಂಗೆಯುಕಾಲಕ್ಕೆ ಇವರು ಧೈರ್ಯದಿಂದ ಮುಂದೆ ನಿಂತು ಶಾಂತತೆಯನ್ನು ಕಾಯ್ದಿದ್ದರು. ಸೊಲ್ಲಾಪುರದ ಶ್ರೀ ಲೇಪಣಸಿದ್ದೇಶ್ವರದ ಕೆರೆಯನ್ನು ಉಳಿಸುವ ಕಾರ್ಯದಲ್ಲಿ ಮಿ|| ಧನಶೆಟ್ಟಿಯವರು ವಿಶೇಷ ಪ್ರಯತ್ನಮಾಡಿದರು. ಮಿ|| ಶ್ರೀ ಕಿಸನ ಲಕ್ಷ್ಮೀನಾರಾಯಣಶಾರದಾ ಇವರು ಒಬ್ಬ ಶ್ರೀಮಂತಮಾರವಾಡಿ ಗೃಹಸ್ಥರು; ಹಿಂದುಮಹಾಸಭೆಯ ಚಳವಳಿಯಲ್ಲಿದ್ದರು. ಮಿ|| ಜಗನ್ನಾಥ ಭಗವಂತ ಶಿಂಧೆ ಇವರು ಒಬ್ಬ ಮರಾಠತರುಣರು. ವಯಸ್ಸು 24 ವರ್ಷ. ಇವರು ಸೊಲ್ಲಾಪುರದಲ್ಲಿ ವ್ಯಾಯಾಮಶಾಲೆಗಳನ್ನು ತೆಗೆಯುವದರಲ್ಲಿ ತೊಡಗಿದ್ದರು. ಕಾಂಗ್ರೆಸ್ ಚಳವಳಿಯಲ್ಲಿಯೂ ಸ್ವಯಂಸೇವಕರಾಗಿ ಸೇರಿದ್ದರು. ಮಿ|| ಅಬ್ದುಲ್‌ರಸೂಲ್‌ಕುರ್ಬಾನಹುಸೇನ ಇವರು ಮುಸಲಮಾನ ತರುಣರು. ವಯಸ್ಸು 22 ವರ್ಷ. ಇವರು ಗಝನಫರ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು.

ರೌಂಡ್‌ಟೇಬಲ್ ಕಾನ್ಫರೆನ್ಸ್.

ಲಾರ್ಡ್ ಸ್ಯಾಂಕಿಯವರ ವರದಿಯು ಇಂಗ್ಲೆಂಡಿನಲ್ಲಿ ಕೋಲಾಹಲವನ್ನುಂಟುಮಾಡಿದೆ. ಕನ್ಸರ್‌ವೇಟಿವ್ ಪಂಗಡದವರು ಇದಕ್ಕೆ ವಿರೋಧವಾಗಿದ್ದಾರೆ. ಮಹಮ್ಮದೀಯರು ತಮ್ಮ ಹಕ್ಕುಬಾಧ್ಯತೆಗಳ ರಕ್ಷಣೆಯ ಏರ್ಪಾಡಿಲ್ಲದೆ ಈ ವರದಿಯು ಕಾಸಿಗೂ ಕಡೆಯೆಂದು ಹೇಳುತ್ತಿದ್ದಾರೆ.

ಭಾರತೀಯ ಮಾಡರೇಟ್ ಪಕ್ಷದವರು ಆ ವರದಿಯಲ್ಲಿ ಕಂಡುಬರುವ ಅನೇಕ ಹಕೋಟಿಗಳನ್ನು ಅನುಮಾನದಿಂದ ನೋಡುತ್ತಿದ್ದಾರೆ. ರಿಜರ್ವೇಷನ್ನುಗಳು ಬಹಳವಾಗಿರುವದೇ ಭಾರತೀಯ ಮಾಡರೇಟರುಗಳಿಗೆ ಅಸಮಾಧಾನ. ಬ್ರಿಟಿಷ್ ಪಾರ್ಲಿಮೆಂಟಿನವರು ಈ ವರದಿಯ ಆಧಾರದ ಮೇಲೆ ಕೆಲವು ಠರಾವುಗಳನ್ನು ಮಾಡುವರು. ಇದಾದನಂತರ ರೌಂಡ್‌ಟೇಬಲ್ ಸಮ್ಮೇಳನದ ಒಂದು ಕಮಿಟಿಯು ಇಂಡಿಯಾದಲ್ಲಿ ಸೇರುವುದು. ಇಲ್ಲಿ ಪುನಃ ಚರ್ಚೆಗೆ ಆರಂಭವಾಗುವುದು. ತಿದ್ದುಪಾಟುಗಳು ನಡೆಯುವವು. ಇದೆಲ್ಲಾ ಆದಮೇಲೆ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಕಾನೂನು ಮಾಡಲ್ಪಡುವುದು. ಮುಂದೆ ಏರ್ಪಡಿಸಲ್ಪಡುವ ಕಮಿಟಿಯಲ್ಲಿ ಲಾರ್ಡ್ ಸ್ಯಾಂಕಿಯವರೂ ಬೆನ್‌ರವರೂ ಇರುವರೆಂಬ ಆಶೆ ಇದೆ.

ದಿವಾನಬಹದೂರ್ ರಾಮಚಂದ್ರರಾಯರು ಹೇಳುವದೇನೆಂದರೆ—"ಈ ಕಮಿಟಿಯು ಇಂಡಿಯಾಕ್ಕೆ ಬಂದರೆ ಕಾಂಗ್ರೆಸ್ ಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಂಡು ಸರ್ವಾನುಮತವಾದ ತೀರ್ಮಾನಕ್ಕೆ ಬರಬೇಕು. ಏತನ್ಮಧ್ಯೆ ಲೇಬರ್ ಪಂಗಡದ ಸರ್ಕಾರವು ಹೋಗಿ ಕಾನ್‌ಸರ್‌ವೇಟಿವ್ ಪಂಗಡದ ಸರ್ಕಾರವು ಬರಬಹುದು.

ನ್ಯೂಟ್ ಕ್ರಾನಿಕಲ್ ಎಂಬ ಪತ್ರಿಕೆಯು ಸ್ಯಾಂಕೀ ಯೋಜನೆಯನ್ನು ಸ್ವಾಗತಮಾಡುತ್ತದೆ. ರಾಜರೆಲ್ಲಾ ಒಗ್ಗಟ್ಟಾಗಿ ಭಾರತೀಯ ಪ್ರಜೆಗಳ ಪ್ರತಿನಿಧಿಗಳೊಂದಿಗೆ ಸಹಕಾರದಿಂದ ವರ್ತಿಸಿದ್ದರಿಂದಲೇ ಇಷ್ಟೆಲ್ಲಾ ಕೆಲಸಗಳು ಸಾಧ್ಯವಾದವೆಂದು ಅಭಿಪ್ರಾಯಪಡುತ್ತದೆ.

ಮಹಮ್ಮದೀಯರು ತಮ್ಮ ವಾದವನ್ನು ಇನ್ನೂ ಬಿಟ್ಟಿಲ್ಲ. ದೇಶೀಯ ಸಂಸ್ಥಾನದವರು ತಮ್ಮ ಮೇಲಿನ ಅಧಿಕಾರವು ಫೆಡರಲ್ ಸರ್ಕಾರಕ್ಕೆ ಇರಕೂಡದೆಂದು ಹೇಳುತ್ತಿದ್ದಾರೆ. ಹಿಂದೂಮಹಮ್ಮದೀಯರು ಒಂದಾಗದೆ ಇರುವುದು ವಿಷಾದಕರವಾಗಿದೆ.

ಸ್ಯಾಂಕಿಯವರ ಕಮಿಟಿಯ ಮೀಟಿಂಗ್ ನಡೆಯಿತು. ಅದರಲ್ಲಿ ಅನೇಕರು ಭಾಷಣಮಾಡಿದರು. ಲಾರ್ಡ್ ರೀಡಿಂಗರು ಹಿಂದೂಮಹಮ್ಮದೀಯರ ಐಕಮತ್ಯವಿಲ್ಲದೆ ಯಾವ ರಾಜ್ಯಪದ್ಧತಿಯೂ ತಾಳಲಾರದು ಎಂದರು. ಸರ್. ಮಹಮ್ಮದ್ ಷಫಿಯವರು ಮಹಮ್ಮದೀಯರ ಹಕ್ಕುಬಾಧ್ಯತೆಗಳ ಸಂರಕ್ಷಣೆಯಿಲ್ಲದೆ ಮಹಮ್ಮದೀಯರು ಸಹಕಾರವನ್ನು ನಿರೀಕ್ಷಿಸುವುದಕ್ಕೆ ಆಗುವುದಿಲ್ಲವೆಂದರು.

ಮಿ|| ಜಿನ್ನಾರವರೂ ಮಹಮ್ಮದೀಯ ಪಕ್ಷವನ್ನು ಎತ್ತಿ ವಾದಿಸಿದರು. ಕ್ರೈಟ್‌ಆನರಬಲ್ ಶಾಸ್ತ್ರಿಯವರು ಇಂಡಿಯಾದೇಶದ ಪುರೋಭಿವೃದ್ಧಿಯನ್ನು ತಡೆಯಬೇಡಿರಿ ಎಂದು ಮಹಮ್ಮದೀಯರನ್ನು ಕೇಳಿಕೊಂಡರು.

ಲಾರ್ಡ್ ಪೀಲ್‌ರವರು ಸರ್ ಮಹಮ್ಮದ್‌ಷಫೀಯವರ ಭಾಷಣವನ್ನು ಕಂಡು ಚಕಿತರಾದರು. ಮ|| ರಾ ಮಸ್ವಾಮಿಮೊದಲಿಯಾರ್ರವರು ಇಂಡಿಯಾದಲ್ಲಿ ಇನ್ನೂ ನಾವು ಅನೇಕರನ್ನು ಕೇಳಬೇಕಾಗಿದೆ. ಈಗಲೇ ನಾವು ಯಾವ ತೀರ್ಮಾನಕ್ಕೂ ಬರುವ ಹಾಗಿಲ್ಲವೆಂದರು. ಮ|| ಜಯಕರ್‌ರವರು, ಇಂಗ್ಲೆಂಡಿನಲ್ಲಿ ಆಗದ ಕೆಲಸವು ಇಂಡಿಯಾದಲ್ಲಿ ಆಗುವುದಕ್ಕೆ ಅನೇಕ ಅವಕಾಶಗಳಿವೆ. ಆದುದರಿಂದ ನಾವು ನಿರಾಶರಾಗಬೇಕಾಗಿಲ್ಲವೆಂದರು. ಮಿ|| ಗಾರ್ಬಿಜೋನ್ಸ್‌ರವರು ಯೂರೋಪಿಯನ್ನರ ಹಕ್ಕುಬಾಧ್ಯತೆಗಳ ವಿಷಯವಾಗಿ ಹೇಳಿದರು. ಸರ್ ತೇಜಬಹದ್ದೂರ್ ಸಪ್ರೂರವರು ಈ ಸಣ್ಣ ಸಣ್ಣ ವಿಷಯಗಳೆಲ್ಲಾ ತಮ್ಮಷ್ಟಕ್ಕೇ ತಾವೇ ತೀರ್ಮಾನವಾಗುವವು. ಮಹಮ್ಮದೀಯರೂ ಹಿಂದುಗಳೂ ಒಗ್ಗಟ್ಟಿನಿಂದ ಕೆಲಸಮಾಡಬೇಕೆಂದರು. ಸರ್ ಮಿರ್ಜಾಮಹಮ್ಮದ್ ಇಸ್ಮಾಯಿಲ್‌ರವರು ಹಿಂದೂಗಳೂ ಮಹಮ್ಮದೀಯರೂ ತಮ್ಮಲ್ಲೇ ಒಗ್ಗಟ್ಟನ್ನು ತಂದುಕೊಳ್ಳುವರೆಂಬ ಆಶೆಯು ನನಗಿಲ್ಲ. ಇಂಡಿಯಾ ಸರ್ಕಾರದವರೇ ತಮ್ಮ ಅಧಿಕಾರದಿಂದ ಈ ಕೆಲಸವನ್ನು ನಡೆಯಿಸಬೇಕೆಂದರು. ಸರ್ ಎ. ಹೈದರಿಯವರು ಈ ದೊಡ್ಡ ಪ್ರಶ್ನೆಗಳ ವಿಷಯವಾಗಿ ನಾನೇನೂ ಹೇಳುವುದಿಲ್ಲ. ನೈಜಾಮರು ನನಗೆ ಏನು ಹೇಳಿಕಳುಹಿಸಿದ್ದಾರೋ ಅದನ್ನು ಮಾತ್ರ ಹೇಳುವೆನೆಂದರು. ಬಿಕಾನೇರ್ ಮಹಾರಾಜರು ನಾವು ಇಂಡಿಯಾದ ಶ್ರೇಯಸ್ಸನ್ನು ಕೋರುವವರೆಂದರು. ಭೂಪಾಲ ನವಾಬರು ನಿರ್ದಿಷ್ಟವಾದ ತೀರ್ಮಾನವಿಲ್ಲದೆ ಇಂಡಿಯಾಕ್ಕೆ ಹೋಗಬೇಕಲ್ಲಾ ಎಂದು ನನಗೆ ವ್ಯಸನವಾಗುತ್ತದೆಂದರು.

(ತಾ. ನಾ.)

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತಿಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಹೊಟ್ಟೆಗೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[25]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಗ್ಗದ ಶೆರಗು ಕಡೆಗಾಗುವ ಕಾಲಕ್ಕೆ ಕಿಪ್ಪಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕಟುಕುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ಹಾಮಿರಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧಿ ಆದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪ್ರ್ಯಾಕಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವಿಸಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಧಿ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜೆಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇನ್ನೂ ಸರ್ವರೋಗೋಪಯುಕ್ತಗಳಾದ ಬಹುವಿಧ ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಬಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲಾಗುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ ಧನ್ಯರಾಗತಕ್ಕದ್ದು. ಲಾಕೆಟು ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮಿಷನ್, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮಿಷನ್, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

[24]

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡುವವರಿಗೆ ಇಲ್ಲದೆ ಕೊಡಲೇ ಕೊಡಬೇಕಾದವುಗಳು. ಪುರುಷ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ದಾಕುತರರಿಗೂ ವೈದ್ಯರುಗಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[40] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಕರಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧೆ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುವಾಗುವ ಧಾತು, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಹೊಟ್ಟೆಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ, ತಮ್ಮ ತೂಕ ಬೆರೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದು ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಪೂರ್ಣ ಗುಣಬರುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ [illegible] ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿನಗಳ ೧೩ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರುಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[26]

ಪತ್ತೆ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಬೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ತೋರಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲಾ? ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಶಿಖಾಮಣಿ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗೆಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಪಿಸ್ತು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾರು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, **ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ
ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ[illegible] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ[illegible]

ಗಳನ್ನು ಕೊಟ್ಟಿರು[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿಂ[illegible] ಸ್ವಸ್ಥವಾಗುವ ವ್ಯಾ[illegible] ಧಿಗಳು ಯಾವವೆಂ[illegible] ರೆ:—ಪಿನಶಿ, ಒಂ[illegible] ತಲೆನೋವು, ತಲೆ[illegible] ಲ್ಲಿನ ರೋಗಗ[illegible] ಕಣ್ಣುಗಳಲ್ಲಿ ಉಂಟಾ[illegible] ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋ[illegible] ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-[illegible] ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ. ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[27] ಪೋ. ಬಾ. ೫೧೦. ಮದರಾಸ

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ಶಿವಶರಣದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತದಿವಾಮಾಂಸಾ	೨ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ಕನ್ನಡೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಸಟಿಪ್ಪಣಿಕಾರಸಹಿತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವ[illegible]	೮ ಆಣೆ
ಆಗಮಬಹಿಷ್ಕಾರ (ಶಂಭುಲಿಂಗಶಿವಾ[illegible]ರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಸಿದ್ಧಾಂತಶಿಖಾಮಣಿ (ಶ್ರೀಲೋಚನಶಿವಾಚಾರ್ಯಕೃತ ಬಹು ಪ್ರಾಚೀನಗ್ರಂಥ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.
ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾ[illegible] ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂ[illegible] ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ

ಓಂ.

ಸುಸಮಯ! **ಸಾಲವು ದೊರಕುವುದು!!** **ಅಪೂರ್ವಲಾಭ!!!**

ದಿ ಏಂಜಲ್ಸ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್:—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,
113, ಕೃಷ್ಣರಾಜಮೊಹಲ್ಲಾ, ಮೈಸೂರು.

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆ[illegible] ಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅನ[illegible] ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಖಾತರಿಯ ಮೇಲೂ ಹೊಂದಿ ಸುಖಿಸಬಹುದು. ಇಲ್ಲಿಯವರೆ[illegible] ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲೂಕುಗಳಲ್ಲಿಯೂ ಬೇಕಾಗಿದೆ. ಹೆಚ್ಚಾ[illegible] ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ವಿ[illegible] ಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (8)

ಮೆ|| ಎಂ. ಜಿ. ಆರಾಧ್ಯ,
ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಜನವರಿ ೧೯೩೧ [ಸಂಚಿಕೆ ೩೯

ಒಳದೇಶದ ವೃತ್ತಾಂತಗಳು.

ಮೈಸೂ[illegible] ಸಂಸ್ಥಾನದ ದಿವಾನ್ ಸಾಹೇಬರಾದ ಸರ್ [illegible] ಎಂ. ಇಸ್ಮಾಯಿಲ್‌ರವರ 23 ವರ್ಷ ವಯಸ್ಸಿನ ಮಕ್ಕಳಾದ ಮಿ|| ಹುಮಾಯೂನ್ ಮಿರ್ಜಾ ಎಂಬವರು ಲಂಡನ್ನಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯ ಅಭ್ಯಾಸಮಾಡುತ್ತಿರುವರು.

ಶ್ರೀಮನ್ಮಹಾರಾಜರವರು ಈ ತಿಂಗಳು 17 ನೆಯ ತಾರೀಖಿನ ದಿವಸ ಹಾಸನಕ್ಕೆ ಚಿತ್ತೈಸಿ ಅಲ್ಲಿ ಪಾರ್ಶ್ವವಾಯುಗ್ರಸ್ತರಾದ ಪ್ರಥಮಕೌನ್ಸಿಲರಾದ ಮಿ|| ಬಾಲಸುಂದರಂ ಐಯ್ಯರ್‌ರವರನ್ನು ನೋಡಿಕೊಂಡು ಮುಂದಕ್ಕೆ ದಯಮಾಡಿಸಿದರೆಂದು ಕೇಳುತ್ತೇವೆ.

ಬೀರೂರು ಶಿವಮೊಗ್ಗಾ ರೈಲ್ವೇ ಟಪಾಲ್ ಕಳ್ಳತನದ ವ್ಯವಹಾರದಲ್ಲಿ ಅಪರಾಧಿಯಾದ ಮಹಬೂಬ್‌ಖಾನನಿಗೆ ಶಿವಮೊಗ್ಗ ಸೆಷನ್ ಜಡ್ಜರು 8 ವರ್ಷ ಕಠಿಣ ಶಿಕ್ಷೆ ವಿಧಿಸಿದ್ದರು. ಅನಂತರ ಅವನು ಮೈಸೂರು ಹೈಕೋರ್ಟಿಗೆ ಅಪೀಲ್ ಮಾಡಿದನು. ಹೈಕೋರ್ಟ್ ನ್ಯಾಯಾಧೀಶರೂ ಸಹ ಕೆಳಕೋರ್ಟಿನ ತೀರ್ಪನ್ನು ಕಾಯಂ ಮಾಡಿದರು.

ರಾಜಧಾನಿಯ ಲಷ್ಕರ್‌ಮೊಹಲ್ಲಾದಲ್ಲಿ ದರ್ಜಿ ಬಾಬುರಾವ್ ಎಂಬವನು ಹಗಲು ಹೊತ್ತಿನಲ್ಲಿಯೇ ಒಂದು ಮನೆಯ ಬೀಗ ಮುರಿದು ಅನೇಕ ಸಾಮಾನುಗಳನ್ನು ಕದ್ದು ಹೊರಗೆ ಬರುವಾಗ ಸಿಕ್ಕಿಬಿದ್ದನು. ಸೆಷನ್ ಜಡ್ಜರು ವಿಚಾರಮಾಡುವಲ್ಲಿ ಅವನಿಗೆ ಈ ಮೊದಲು ಹದಿನಾರು ಸಾರಿ ಶಿಕ್ಷೆಯಾಗಿತ್ತೆಂದು ಗೊತ್ತಾಯಿತು. ಆದುದರಿಂದ 5 ವರ್ಷ ಕಠಿಣಶಿಕ್ಷೆ ವಿಧಿಸಿದರು.

ಮದರಾಸಿನ ಮೆ|| ಜಿ. ಬಿ. ಆದ್ವಾನಿ ಅಂಡ್ ಕಂಪನಿಯವರೂ, ರಾಜಧಾನಿಯ ಮೆ|| ಬಿ. ರುದ್ರಪ್ಪ ಅಂಡ್‌ಸನ್ಸ್‌ರವರೂ, ನಂಜನಗೂಡು ಸದ್ವೈದ್ಯಶಾಲಾ ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರೂ, ಮದರಾಸಿನ ಮೆ|| ನಾರ್ಟನ್ ಅಂಡ್ ಕಂಪನಿಯವರೂ ಕಳುಹಿಸಿರುವ 1931 ನೆಯ ವರ್ಷದ ಮನೋಹರಗಳಾದ ಕ್ಯಾಲೆಂಡರುಗಳನ್ನು ಆತ್ಯಾನಂದದಿಂದ ಸ್ವೀಕರಿಸುತ್ತೇವೆ.

ಬೆಂಗಳೂರು ಲೇಟ್ ಪರ್ಸನಲ್ ಅಸಿಸ್ಟೆಂಟ್ ದೇಶಮುಖ ರಾಮರಾಯರ ಒಬ್ಬರೇ ಮಕ್ಕಳಾದ ಮಿ|| ಗೋವಿಂದರಾಯರು ರಾಜಧಾನಿಯಲ್ಲಿರುವ ಡಾ|| ಪಿ. ಎಸ್. ರಾಮಸ್ವಾಮಯ್ಯಂಗಾರ್‌ರವರ ವಿಧವಾ ಪುತ್ರಿಯೊಡಗೂಡಿ ಬಹಳ ದ್ರವ್ಯವನ್ನು ವೆಚ್ಚಮಾಡಿದರೆಂದೂ, ಅವರಿಗೆ ಬುದ್ಧಿ ಸ್ವಾಧೀನವಿಲ್ಲವೆಂದೂ, ಅವರ ಭಾವಮೈದುನರಾದ ಮಿ|| ಇನಾಂದಾರರು ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿಗೆ ಅರ್ಜಿ ಹಾಕಿದರು. ಅನಂತರ ಮ್ಯಾಜಿಸ್ಟ್ರೇಟರು ಹುಂಗಾಮಿಯಾಗಿ ಮಿ|| ಗೋವಿಂದರಾಯರನ್ನು ಬೆಂಗಳೂರು ಹುಚ್ಚಾಸ್ಪತ್ರೆಗೆ ಕಳುಹಿಸಿರುವರು. ಮಿ|| ಇನಾಂದಾರರು ಡಿ|| ಕೋರ್ಟಿಗೆ ಹಾಕಿದ್ದ ಅರ್ಜಿಯ ಮೇಲೆ ಮ್ಯಾಜಿಸ್ಟ್ರೇಟರು ರೀಸೀ[illegible] ವರ್ ಮೂಲಕ ಡಾ|| ರಾಮಸ್ವಾಮಯ್ಯಂಗಾರ್ರ ಸ್ವಾಧೀನದಲ್ಲಿರುವ ಮಿ|| ಗೋವಿಂದರಾಯರ ಬಾಬತ ಸ್ವತ್ತುಗಳ ಪಟ್ಟಿ ಮಾಡಿಸಿಕೊಂಡಿದ್ದಾರೆ. ಬೆಂಗಳೂರು ಹುಚ್ಚರ ಆಸ್ಪತ್ರೆಯ ಡಾಕ್ಟರರು ಇಷ್ಟರಲ್ಲೇ ಅಭಿಪ್ರಾಯವನ್ನು ಹೇಳತಕ್ಕವರಿದ್ದಾರೆ.

ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ.

ಪಂಡಿತ ಮೋತಿಲಾಲ್ ನೆಹರೂರವರಿಗೆ ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿ, ಮಿ|| ಎಂ. ಆರ್. ಜಯಕರ್, ಸರ್ ಟಿ. ಬಿ. ಸಪ್ರುರವರ 22-1-31ರಲ್ಲಿ ತಂತಿ— "ನಾಳೆ ದಿವಸ ಹೊರಡುವೆವು. ನಾವು ಬರುವವರೆಗೂ ಕಾಂಗ್ರೆಸ್ಸಿನ ಕಾರ್ಯಕಾರಿಮಂಡಲದ ತೀರ್ಮಾನವನ್ನು ಮುಂದಕ್ಕೆ ಹಾಕಬೇಕೆಂದು ಪ್ರಾರ್ಥಿಸುತ್ತೇವೆ."

ಕಾರ್ಯಕಾರಿಸಮಿತಿಯವರು ಇದನ್ನು ಪರ್ಯಾಲೋಚಿಸಿ ಅದಕ್ಕೆ ಕೆಳಗೆ ಕಂಡಂತೆ ಉತ್ತರವನ್ನಿತ್ತಿರುವರು.

"ಈಗಿನ ಪರಿಸ್ಥಿತಿಯಲ್ಲಿ ಏನುಮಾಡಬೇಕೆಂಬ ತ[illegible] ರಾವು ಸರ್ವಾನುಮತದಿಂದ ತೀರ್ಮಾನವಾದಮೇಲೆ ನಿಮ್ಮ ತಂತಿಯು ತಲ್ಪಿತು. ನಿಮ್ಮ ಅಭಿಪ್ರಾಯಕ್ಕೆ ಗೌರವಕೊಟ್ಟು ನೀವು ಬಂದು ಸಂದರ್ಶಿಸುವವರೆಗೂ ಅದನ್ನು ಪ್ರಕಟಿಸುವುದಿಲ್ಲ."

ಕಾರ್ಯಕಾರಿಸಮಿತಿಯಲ್ಲಿ ಉಜ್ವಲದೇಶಾಭಿಮಾನಿಗಳಾದ ಮೌಲಾನಾ ಮಹಮ್ಮದಾಲಿಯವರ ಮರಣದಿಂದ ಕಾಂಗ್ರೆಸ್ ಮತ್ತು ಜನಾಂಗಕ್ಕೆ ಮಹಾ ಹಾನಿಯಾಗಿದೆಯೆಂಬ ಠರಾವು ಪಾಸಾಗಿದೆಯಂತೆ!

ಪಂಡಿತ ಮದನಮೋಹನ ಮಾಲವೀಯ, ಮಿ|| ಕೆ. ಎಂ. ಮುನಷಿ, ಬಾಬು ರಾಜೇಂದ್ರಪ್ರಸಾದ ಮತ್ತು ಡಾ|| ಮಹಮ್ಮದ್ ಇವರು ಸಮಿತಿಯಲ್ಲಿ ಹಾಜರಿದ್ದರು. ಪಂಡಿತ ಮೋತಿಲಾಲ್ ನೆಹರೂರವರು ಅಸ್ವಸ್ಥತೆಯಲ್ಲಿದ್ದಾಗ್ಯೂ ಹಿಂದೂಸ್ಥಾನದಲ್ಲಿಯೂ ಲಂಡನ್ನಿನಲ್ಲಿಯೂ ನಡೆಯುವ ವಿದ್ಯಮಾನವನ್ನು ತಿಳಿದುಕೊಂಡು ಸಮಿತಿಯವರಿಗೆ ಸೂಕ್ತ ಸಲಹೆಗಳನ್ನು ಕೊಡುತ್ತಿರುವರಂತೆ!

ದುಃಖವಾರ್ತೆ

ಬಾಣಾವರದ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾ ಸಂಘದ ಚೀಫ್ ಸೆಕ್ರೆಟರಿಯವರಾದ ಮ|| ರಾ|| ವಿರೂಪಾಕ್ಷಪ್ಪನವರು ಸಜ್ಜನಶೆಟ್ರು ಇವರ ಧರ್ಮಪತ್ನಿಯವರಾದ ಕಂ|| ಸೌ|| ಪಾರ್ವತಮ್ಮನವರು ತಾ|| 12-1-1931 ನೇ ಸೋಮವಾರ ಕೈಲಾಸವಾಸಿಗಳಾದರು. ಸದರಿಯವರು ಕಾಯಿಲೆಯಾದಂದಿನಿಂದ ಸರಿಯಾದ ಜ್ಞಾನದಿಂದ ಮಾತುಗಳನ್ನಾಡುತ್ತ ಎಲ್ಲರಿಗೂ ಸಮಾಧಾನವನ್ನು ಹೇಳುತ್ತ ಸದಾ ಶಿವಧ್ಯಾನ, ಗುರುಧ್ಯಾನಪರಾಯಣರಾಗಿದ್ದು, ವೀರಶೈವರಿಗೆ ಶುಭವಾರವೆನಿಸಿದ ಸೋಮವಾರ ಇಹಲೋಕವನ್ನು ಬಿಟ್ಟು ಪರಲೋಕವನ್ನು ಸೇರಿದರು. ಸದರಿಯವರ ಸಮಾಧಿಯನ್ನು ತೆಗೆದ ಸ್ಥಳದಲ್ಲಿ ಜಲವು ಉತ್ಪನ್ನವಾದದ್ದು ಎಲ್ಲರಿಗೂ ಆಶ್ಚರ್ಯವೆನಿಸಿತು. ಇದೆಲ್ಲಕ್ಕೂ ಸದರಿಯವರ ಲಿಂಗ್ಲ ಗುರುಭಕ್ತಿಯೇ ಕಾರಣವಾಗಿದೆ. ಇವರು ಅಗಾಧವಾದ ಗುರುಭಕ್ತಿಸಂಪನ್ನರೂ, ಪತಿವ್ರತಾಶಿರೋಮಣಿಗಳೂ ಆಗಿದ್ದರು. ಇವರ ಆತ್ಮಕ್ಕೆ ಜಗದೀಶ್ವರನು ಸದ್ಗತಿಯನ್ನೀಯಲೆಂದೂ, ಧರ್ಮಪತ್ನಿಯವರ ವಿಯೋಗದುಃಖವನ್ನು ಹೊಂದಿರುವ ಮ|| ರಾ|| ವಿರೂಪಾಕ್ಷಪ್ಪನವರಿಗೆ ಶ್ರೀ ಜಗದಾಚಾರ್ಯರು ಶಾಂತಿಯನ್ನುಂಟುಮಾಡಿ ಕಲ್ಯಾಣವನ್ನು ಕರುಣಿಸಲೆಂದೂ ಹಾರೈಸುತ್ತೇವೆ.

ಕೆ. ಎಂ. ಬಸವಾರಾಧ್ಯ,
ಶ್ರೀ|| ಜ|| ಪಂ|| ಭ|| ಪ್ರೆಸಿಡೆಂಟ್.

ಸ್ವೀಕಾರ.

ಶ್ರೀಮಂತ ಮ|| ರಾ|| ಸಿದ್ಧಲಿಂಗಪ್ಪ ಉರ್ಫ್ ಅಪ್ಪಾಸಾಹೇಬರು ಬಿನ್ ಬಸವಲಿಂಗಪ್ಪನವರು ದೇಸಾಯಿ ನಾಡಕರ್ಣಿಸಂಸ್ಥಾನ ಹಂದಿಗನೂರು ಮಾಮಲೆ ಬಂಕಾಪುರ ಇವರಿಗೆ ದ್ವಿತೀಯ ಪುತ್ರಸಂತಾನವಾಗಿದ್ದು ನಾಮಕರಣ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ರುದ್ರಪ್ಪ ಮಾಸ್ತರ್ ಬಿಸನಹಳ್ಳಿ ಇವರ ದ್ವಾರಾ ತಲ್ಪಿರುತ್ತವೆ.

ಬಾಣಾವರದ ಪಂಚಾಚಾರ್ಯ ಭಜನಾಸಂಘದ ಚೀಫ್ ಸೆಕ್ರೆಟರಿ ಮ|| ರಾ|| ಸಜ್ಜನಶೆಟ್ರು ವಿರೂಪಾಕ್ಷಪ್ಪನವರ ಧರ್ಮಪತ್ನಿ ಕಂ|| ಸೌ|| ಪಾರ್ವತಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ವೇ|| ಕೆ. ಎಂ. ಬಸವಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಯಾವತ್ತು ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ—ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳ ವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವುದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾಮುಗಿದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ನಾವು ಮುಂದಾಗಿ ತಿಳುಹಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವರೆಂದು ಭರವಸೆ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವುದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಕೇದಾರಜಗದ್ಗುರುಗಳವರ ತಿರ್ಕಗಾಂಡೋಲನ ಮಹೋತ್ಸವ.

ಜಾಲಹಳ್ಳಿ.

ಶ್ರೀ ಹಿಮವತ್ಕೇದಾರ್ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ 108 ಜಗದ್ಗುರು ನೀಲಕಂಠಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಆಗಮನವು ರಾಯಚೂರು ಜಿಲ್ಲಾ ದೇವದುರ್ಗ ಮುಕ್ಕಾಮಿನಿಂದ ಕಸಬಾ ಜಾಲಹಳ್ಳಿ ವೀರಶೈವಮಂಡಲಿಯವರ ಪ್ರಾರ್ಥನೆಯ ಮೇರೆಗೆ ತಾ|| 26-12-30 ರಲ್ಲಿ ಅತ್ಯಂತ ವೈಭವದಿಂದ ಜಾಲಹಳ್ಳಿ ಮೊಕ್ಕಾಂ ಮಾಡಿದ್ದು ಸರ್ವಶ್ರುತವಿರುವದಷ್ಟೆ! ಆದರೆ ಸದರಿ ಗ್ರಾಮದ ಭಕ್ತಮಾಹೇಶ್ವರರು ಸಂಸ್ಥಾನದ ಸರ್ವಾಧಿಕಾರಿಗಳಾದ ಶಿರ್ಹಿ ಉಜ್ಜಯಿನಿ ಮಠದ ಚರಪಟ್ಟಾಧ್ಯಕ್ಷ ಶ್ರೀ ಸಿದ್ಧರಾಮ ಶಿವಾಚಾರ್ಯರ ಅಪ್ಪಣೆಯ ಮೇರೆಗೆ ಗುರುಪೀಠಪದ್ಧತಿಪ್ರಕಾರ ಕಾಣಿಕೆಯನ್ನು ಸಮರ್ಪಿಸಿದರು. ಹಿರೆಹೇಟಿ ಚ|| ಶ್ರೀ ಶಿವಾರ್ಯಸ್ವಾಮಿಗಳ ಮೃದುಮಧುರ ವಾಣಿಯಿಂದ ಬೋಧಿಸುವ ವಿರಶೈವಾಮೃತಮಹಾಪುರಾಣಶ್ರವಣವು ಪ್ರತಿದಿವಸವೂ ನಡೆಯುತ್ತಿರುವುದು. ಮೇಲ್ಕಂಡಗ್ರಾಮದಲ್ಲಿ ಶ್ರೀ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವವು 72 ಬಿರುದಾವಳಿಗಳೊಡನೆ ಇದೇ ಪ್ರಮೋದೂತ ಸಂ|| ಮಾಘ ಬ|| 5 ಶನಿವಾರ (ತಾ|| 6-2-31) ದಿವಸ ಪ್ರಾತಃಕಾಲ ನೆರವೇರುವುದು. ಅದಸ್ಸಯುಕ್ತ ಸಮಸ್ತ ದೇಶಬಾಂಧವರು ಈ ಮಹೋತ್ಸವಕ್ಕೆ ತಪ್ಪದೆ ಬಂದು ಶ್ರೀ ಸನ್ನಿಧಿ ದರ್ಶನ ಫಲಾಶೀರ್ವಾದಗಳಂ ಪಡೆದು ಕೃತಾರ್ಥರಾಗಬೇಕೆಂದು ಪ್ರಾರ್ಥಿಸುವ,

ದೇಸಾಯಿ ಗೋವಿಂದರಾವ್ ಶೆಟ್ಟಿ, ಜಾಲಹಳ್ಳಿ.

ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲೆಯ ವಾರ್ಷಿಕವರದಿ.

ಮುಧೋಳ.

ನೈಜಾಂ ಸ್ಟೇಟಿನಲ್ಲಿ ಅತ್ಯಂತ ಸುಪ್ರಸಿದ್ಧಿಯನ್ನು ಹೊಂದಿ ಮೆರೆಯುತ್ತಿರುವ ಈ ಸಂಸ್ಥೆಯ ವಾರ್ಷಿಕ ಸಮಾಚಾರವೇನಂದರೆ—ಸರ್ವ ಪ್ರಾಂತಗಳಿಗಿಂತಲೂ ಈ ಕಲ್ಯಾಣಪ್ರಾಂತವು ವಿದ್ಯಾಬುದ್ಧಿ ಮೊದಲಾದವುಗಳಲ್ಲಿ ಅತ್ಯಂತ ಹೀನಸ್ಥಿತಿಯಲ್ಲಿರುವುದನ್ನು ಕಂಡು, ಮುಧೋಳ ಶ್ರೀ ಷ|| ಬ್ರ|| ಮಹಾಂತ ಡಂಬಳ್ಯರು "ಅನ್ನೇನಸಕ್ಷಣಿಕಾತೃಪ್ತಿರ್ಯಾವಜ್ಜೀವಂಚವಿದ್ಯಯಾ" ಎಂಬೀ ಉಕ್ತಿಗನುಸರಿಸಿ ವಿದ್ಯಾದಾನಕಾರ್ಯವನ್ನು ಕೈಕೊಂಡಿರುವರು. ಈ ಮಹತ್ಕಾರ್ಯಕ್ಕೆ ಕೆಳಗೆ ಕಂಡ ಮಹಾಶಯರು ದಾನರೂಪವಾಗಿ ಪ್ರೋತ್ಸಾಹವನ್ನಿತ್ತಿರುವರು. ಜಿಡಕಿ ಮ|| ರಾ|| ರಾಮಚಂದ್ರರಾವ ಬೋದನೆ 11 ರೂ. ಮ|| ರಾ|| ಬಂಡಪ್ಪ ಬಳೂರೆ 11 ರೂ. ಮ|| ರಾ|| ಭೀಮರಾವ ಮಾಳಗೆ 11 ರೂ. ಮ|| ರಾ|| ಗುಂಡಪ್ಪ ಬಳೂರೆ 6 ರೂ. ಮ|| ರಾ|| ಬಂಡಪ್ಪ ಗಂದಗುಡೆ 6 ರೂ. ಮ|| ರಾ|| ಮಹಾದಪ್ಪ ಗಂದಗುಡೆ 2 ರೂ. ಮ|| ರಾ|| ಹುಚ್ಚಪ್ಪ ಗಂದಗುಡೆ 2 ರೂ. ಮ|| ರಾ|| ಗುರುಬಸಪ್ಪ ಗಂದಗುಡೆ 2 ರೂ. ಮ|| ರಾ|| ಶಂಕರರಾವ ಗಂದಗುಡೆ 2 ರೂ. ಬೀಕಣೆ ಮ|| ರಾ|| ನಾಗಪ್ಪ ಬಿಚಗುಂದಿ 12 ರೂ. ಇವರು ಈ ರೀತಿಯಾಗಿ ವರ್ಗಣಿಯನ್ನು ಕೊಟ್ಟಿರುವರಲ್ಲದೆ ಧನರ್ಾದಾಯದ ರೂಪಾಯಿಗಳನ್ನೂ ಸಹ ಅರ್ಪಿಸುತ್ತೇವೆಂದು ವಾಗ್ದಾನಮಾಡಿದ್ದಾರೆ. ಈ ಮಹನೀಯರು ಹೋದವರ್ಷದ ವರ್ಗಣಿಯಂತೆ ಮುಂದಾದರೂ ವರ್ಗಣಿಯನ್ನು ಕೊಡುವರೆಂದು ಪೂರ್ಣ ನಂಬಿದ್ದೇವೆ. ಮುಧೋಳ ಗ್ರಾಮದ ಮ|| ರಾ|| ಗುರುಬಸವಪ್ಪ ಬಸನಾಳೆ, ಮ|| ರಾ|| ಶಂಕರರಾವ ಹರಡಿಗೆ, ಮ|| ರಾ|| ವಿಶ್ವನಾಥ ವ ಗುರುಬಸವಪ್ಪ ಬಿಡಕೆ, ಮ|| ರಾ|| ಗುಂಡಪ್ಪ ಬಿಚಗುಂದಿ, ಮ|| ರಾ|| ಮಹಾದಪ್ಪ ಶಕ್ತಿ, ಮ|| ರಾ|| ಅಂಣಾರಾವ ಬಿಂಡೆ, ಮ|| ರಾ|| ಶಿವಬಸಪ್ಪ ಹುಬುರಿಗಿ ಮೊದಲಾದ ಭಕ್ತರು ಅಧ್ಯಯನಕೋಸ್ಕರ ಪರಸ್ಥಳದಿಂದಾಗಮಿಸಿದ ವಿದ್ಯಾರ್ಥಿಗಳಿಗೆ ಅನ್ನೋದಕವನ್ನು ಕೊಟ್ಟಂತೆ ಮುಂದೆಯೂ ಈ ಸಂಸ್ಥೆಗೆ ಪ್ರೋತ್ಸಾಹವನ್ನು ಮಾಡುವರೆಂದು ಮನಸಾ ಹೇಳಬೇಕಾಗಿದೆ. ಸಂಸ್ಥೆಯ ಸೆಕ್ರೆಟರಿಗಳಾದ ಡೋಣಗಾಂವ ಮ|| ರಾ|| ಹಾವಗಿರಾವ ವ ಬಸವಂತರಾವ ದೇಶಮುಖ ವ ಮ|| ರಾ|| ನರಸಿಂಹರಾವ ಪಾಟೀಲ ತೋರಣಕರ ಇವರ ಸಹಾಯದಿಂದಲೂ ಮೇಲೆ ತೋರಿಸಿದ ವರ್ಗಣಿದಾರರ ಉದಾರತ್ವದಿಂದಲೂ ಈ ಸಂಸ್ಥೆಯು ಚಿರಕಾಲವಾಗಿ ನಡೆಯುವಂತೆ ಭಗವತ್ಪಾದ ಜಗದ್ಗುರು ರೇಣುಕರು ಈ ಸದ್ಭಕ್ತರಿಗೆ ಆಶೀರ್ವದಿಸಲೆಂದು ಕೋರುವ,

ಪಾಠಶಾಲಾಧ್ಯಾಪಕ,
ವಂದಲಿ ವಿರೂಪಾಕ್ಷ ಶಾಸ್ತ್ರೀ.

ಹೇರಂದ್ಯಾಪನಹಳ್ಳಿಗ್ರಾಮದಲ್ಲಿ ಸ್ವದೇಶಿ ಬಟ್ಟೆಗಳಿಗೆ ಪ್ರೋತ್ಸಾಹ.

ಕಾನಕಾನಹಳ್ಳಿ ತಾಲ್ಲೂಕು ಕೋಡಿಹಳ್ಳಿ ಹೋಬಳಿಗೆ ಸೇರಿದ ಹೇರಂದ್ಯಾಪನಹಳ್ಳಿ ಗ್ರಾಮದಲ್ಲಿ ತಾ|| 18-1-1931 ಭಾನುವಾರ ಅನೇಕ ಮಹಾಜನಗಳು ನೆರೆದು ಸಾಯಂಕಾಲ ಬ್ರಂ|| ಶ್ರೀ ಪುರೋಹಿತ ಶಂಕರನಾರಾಯಣಶಾಸ್ತ್ರಿಗಳವರಿಂದ "ಖಾದಿ" ಪ್ರಚಾರದ ವಿಷಯದಲ್ಲಿ ಮನೋಹರವಾದ ಭಾಷಣವನ್ನು ಕೇಳಿದರು. ಇವರ ಉಪನ್ಯಾಸವು ಅನೇಕರ ಮನಸ್ಸನ್ನು ಆಲ್ಹಾದಗೊಳಿಸಿತು. ಇವರು ಪರದೇಶೀವಸ್ತ್ರ ಬಹಿಷ್ಕಾರ ಸ್ವದೇಶಿವಸ್ತ್ರ ಪುರಸ್ಕಾರವನ್ನು ಬೋಧಿಸಿ ಇನ್ನು ಮುಂದೆ ಸ್ವದೇಶಿವಸ್ತ್ರಗಳನ್ನೇ ಧರಿಸುತ್ತೇವೆಂಬ ಪ್ರತಿಜ್ಞೆಯನ್ನು ಮಹಾಜನಗಳಿಂದ ಮಾಡಿಸಿದ್ದಕ್ಕಾಗಿ ಸರ್ವರೂ ಇವರಿಗೆ ಋಣಿಗಳಾಗಿದ್ದಾರೆ. ಇವರು ಕೈಕೊಂಡಿರುವ ದೇಶಸೇವೆಯು ನಮ್ಮ ಜನ್ಮಭೂಮಿಗೆ ಪ್ರೀತಿಯಾಗುವಂತೆ ದೇವರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸಿದ್ಧಾಂತಶಿಖಾಮಣಿಯ ಕಾಲಪರಿಚಯ.

ಶ್ರೀ ರೇಣುಕಾಗಸ್ತ್ಯ ಸಂವಾದರೂಪವಾದ ಸಿದ್ಧಾಂತಶಿಖಾಮಣಿಯ ಗ್ರಂಥಕರ್ತರಾದ ಶಿವಯೋಗಿ ಶಿವಾಚಾರ್ಯರು ಸೊಲ್ಲಾಪುರದ ಮರಡಿ ಮುದ್ದನಗೌಡನ ಹೆಂಡತಿ ಸುಗ್ಗವ್ವನ ಗರ್ಭದಲ್ಲಿ ಜನಿಸಿದ ಸಿದ್ಧರಾಮನ ವಂಶದವರೆಂದು ಕೆಲವರು ಬರೆಯುತ್ತಾರೆ. ಅದು ನಮಗೆ ಸಮರ್ಪಕವಾಗಿ ತೋರುವುದಿಲ್ಲ; ಯಾಕಂದರೆ, ಶ್ರೀಪತಿಪಂಡಿತರು ತಮ್ಮಿಂದ ರಚಿತವಾದ ಶ್ರೀಕರಭಾಷ್ಯವೆಂಬ ಉದ್ಗ್ರಂಥದಲ್ಲಿ ಸಿದ್ಧಾಂತಶಿಖಾಮಣಿಯ ವಾಕ್ಯಗಳನ್ನು ಪ್ರಮಾಣ್ಯಕ್ಕೋಸ್ಕರ ಅನೇಕ ಕಡೆಗೆ ಉದಾಹರಿಸಿದ್ದಾರೆ. ಅಲ್ಲದೆ ಸುಪ್ರಸಿದ್ಧ ಕರ್ನಾಟಕ ಕವಿಚರಿತ್ರಕಾರರು ತಮ್ಮಿಂದ ರಚಿಸಲ್ಪಟ್ಟ ಕವಿಚರಿತೆಯಲ್ಲಿ ಶ್ರೀಪತಿ ಪಂಡಿತರು ಚಾಲುಕ್ಯರಾಜನಾದ ಆರನೆಯ ವಿಕ್ರಮಾದಿತ್ಯನ(ಕ್ರಿ. ಶ. ೧೦೭೬-೧೧೨೬) ದಂಡನಾಯಕನಾದ ಅನಂತಪಾಲನ ಗುರುವೆಂಬ ಅಭಿಪ್ರಾಯವನ್ನು ತೋರಿಸಿದ್ದಾರೆ. ಶ್ರೀಪತಿ ಪಂಡಿತರಿಗಿಂತ ಈಚೆಗೆ ಅಂದರೆ ಕ್ರಿ. ಶ. ೧೧೬೦ ರಲ್ಲಿ ಸೊಲ್ಲಾಪುರದ ಸಿದ್ಧರಾಮನು ಇದ್ದನೆಂದು ಅದೇ ಕರ್ನಾಟಕ ಕವಿಚರಿತ್ರಕಾರರು ಬರೆದಿದ್ದಾರೆ. ಇದರಿಂದ ಶಿವಯೋಗಿ ಶಿವಾಚಾರ್ಯರಿಗಿಂತ ಶ್ರೀಪತಿ ಪಂಡಿತರು ಇತ್ತೀಚಿನವರೆಂದು ಸ್ಪಷ್ಟವಾಗುತ್ತದೆ. ಸಿದ್ಧರಾಮನು ಶ್ರೀಪತಿಪಂಡಿತರಿಗಿಂತ ಇತ್ತೀಚಿನವನಾಗಿದ್ದಾನೆ. ಹೀಗಿದ್ದಾಗ್ಯೂ ಸಿದ್ಧಾಂತಶಿಖಾಮಣಿಕಾರರು ಸೊಲ್ಲಾಪುರದ ಸಿದ್ಧರಾಮನ ವಂಶದವರೆಂದು ಕೆಲವರು ಹೇಳುವದು ಸರಿದೋರುವುದಿಲ್ಲ; ಆದರೆ ನಮಗೆ ಸಿದ್ಧಾಂತಶಿಖಾಮಣಿಯ ನಿಜವಾದ ಕಾಲಮಾನವನ್ನು ತಿಳಿದುಕೊಳ್ಳಬೇಕೆಂದು ಇಚ್ಛೆ ಇರುವದರಿಂದ ಆಧಾರಪೂರ್ವಕವಾಗಿ ವಿದ್ವಜ್ಜನರು ಒಪ್ಪುವಂತೆ ಬರೆದು ತಾ|| ೩೧-೩-೧೯೩೧ ನೆಯ ದಿವಸದೊಳಗಾಗಿ ಕೆಳಗಿನ ವಿಳಾಸಕ್ಕೆ ಮುಟ್ಟುವಂತೆ ಮಾಡಿದರೆ, ಅದು ನಮ್ಮಲ್ಲಿ ನಡೆಯುವ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಜಯಂತಿಗೆ ಉಪಯೋಗವಾಗುವದು. ಹಾಗೆ ತಾವು ಮಾಡಿದಲ್ಲಿ ಶ್ರೀ ರೇಣುಕ ಭಗವತ್ಪಾದರ ಕೃಪೆಗೆ ಪಾತ್ರರಾಗುವಿರಲ್ಲದೆ ತಮ್ಮ ಶ್ರಮಕ್ಕೆ ತಕ್ಕಂತೆ ಸಂಭಾವನೆಯೂ ಸಹ ದೊರೆಯಬಹುದು. ಆದ್ದರಿಂದ ಮೇಲಿನ ತಾರೀಖಿನೊಳಗಾಗಿ ಲೇಖವನ್ನು ಕಳುಹಿಸಬೇಕಾಗಿ ವೀರಶೈವ ವಿದ್ವನ್ಮಣಿಗಳಲ್ಲಿ ವಿಜ್ಞಾಪನೆಯು

ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಸೆಕ್ರೆಟರಿ,
ದುಂಡಯ್ಯ ಬಸಯ್ಯ ಕರ್ಪೂರಮಠ, ವಿಜಾಪುರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮಕರಸಂಕ್ರಾಂತಿ ಮಹೋತ್ಸವ,

ಪಾಲಿಕೊಪ್ಪ.

ಮಹಾಶಯರೇ, ಪ್ರತಿವರ್ಷಬರುವ ಮಕರಸಂಕ್ರಾಂತಿಯ ನಿಮಿತ್ತವಾಗಿ ಸರ್ವರೂ ಪವಿತ್ರ ತೀರ್ಥಗಳಿಗೆ ಹೋಗಿ ಸ್ನಾನಮಾಡಿ ಗುರುಪಾದೋದಕ ಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾಗುವ ಪದ್ಧತಿಯು ಪ್ರಾಚೀನಕಾಲದಿಂದ ಬಂದಿದೆಯಷ್ಟೇ? ಈ ತಿಥಿಯ ದಿವಸದಲ್ಲಿ ಕಾಶಿ, ಕೇದಾರ, ಗಯಾ, ಪ್ರಯಾಗ, ರಾಮೇಶ್ವರ ಮೊದಲಾದ ಪವಿತ್ರ ತೀರ್ಥಗಳಲ್ಲಿ ಅನೇಕ ಜನರು ಹೋಗಿ ಸದರಿ ಪರ್ವದ ಫಲವನ್ನು ಪಡೆಯುವರಲ್ಲದೆ, ಸಭೆಗಳನ್ನು ನೆರೆಯಿಸಿ ಜನರ ಲೌಕಿಕ ಪಾರಮಾರ್ಥಿಕ ಉನ್ನತಿಗೆ ಸಾಧನೀಭೂತಗಳಾದ ವಿಷಯಗಳನ್ನು ಕೀರ್ತನ ವ್ಯಾಖ್ಯಾನದ್ವಾರಾ ಸರ್ವರಿಗೂ ಬೋಧಿಸುವ ಪರಿಪಾಟಿಯಾದರೂ ಅನಾದಿಯಾಗಿದ್ದಾಗಿದೆ. ಇಂತಹ ತೀರ್ಥಯಾತ್ರೆಗಳಲ್ಲಿ ಅನೇಕ ದೇಶದ ಜನರ ಸಮಾವೇಶವಿರುವದರಿಂದ ಪರಸ್ಪರ ದೇಶೀಯರ ಪರಿಚಯವಾಗುವದಲ್ಲದೆ, ಪರಸ್ಪರ ವರ್ತನವನ್ನು ತಮ್ಮ ತಮ್ಮಲ್ಲಿ ನೋಡಿಕೊಂಡು ಒಳ್ಳೇ ಮಾರ್ಗದಿಂದ ನಡೆಯಲು ಅನುಕೂಲತೆಯು ದೊರೆಯುತ್ತದೆ. ಅತಏವ ನಮ್ಮ ಪೂರ್ವಜರು ತೀರ್ಥಯಾತ್ರೆಯಕಾರ್ಯವನ್ನು ಬಲವಾಗಿ ಆಚರಣೆಯಲ್ಲಿ ತಂದಿರುವರು. ಬರೀ ತೀರ್ಥಗಳಿರುವದಕ್ಕಿಂತಲೂ ಆ ತೀರ್ಥಗಳಲ್ಲಿ ಜನರನ್ನು ಸದ್ಬೋಧದಿಂದ ಎಚ್ಚರಿಸಿ ಸನ್ಮಾರ್ಗಕ್ಕೆ ಹಚ್ಚುವ ಸಾಧುವರ್ಯರಿದ್ದರೆ ಹಾಲಿನಲ್ಲಿ ಸಕ್ಕರೆಯು ಬೆರತಂತೆಯೂ, ಕಬ್ಬಿಗೆ ಕಾಯಿಗಳಾದಂತೆಯೂ ಮತ್ತಷ್ಟು ಶೋಭೆಯುಂಟಾಗುವುದು. ಯಾಕೆಂದರೆ ನೀತಿಬೋಧಕ ಸಾಧುಗಳಾದ ಹಿರಿಯರೇ ತೀರ್ಥಸ್ವರೂಪರಿರುವರು. ಅತಏವ ಹಿರಿಯರಿಗೆ ಪತ್ರಗಳನ್ನು ಬರೆಯಬೇಕಾದರೆ ಅವರ ಹೆಸರಿನ ಹಿಂದೆ "ತೀರ್ಥರೂಪ" "ತೀರ್ಥಸ್ವರೂಪ" ಎಂಬ ವಿಶೇಷಣವನ್ನು ಹಚ್ಚುವದು ವಾಡಿಕೆಯಾಗಿದೆ. ಜಲರೂಪತೀರ್ಥಕ್ಕಿಂತಲೂ ಸಾಧು, ಸತ್ಪುರುಷ, ಗುರುರೂಪ ತೀರ್ಥಗಳಿಗೆ ಪ್ರಾಜ್ಞರು ಹೆಚ್ಚುಗೌರವವನ್ನಿತ್ತಿರುವರು. ಈ ವಿಷಯದಲ್ಲಿ ಸರ್ವಜ್ಞಕವಿಯು "ಕಪ್ಪೆಗಳು ಸರ್ಪಗಳು ಇಪ್ಪವದು ತೀರ್ಥವೇ? | ತಪ್ಪೀಗರಿತ್ತು ಸಲಹುವ ಸತ್ಪುರುಷ | ನಪ್ಪುದೇ ತೀರ್ಥ" ಎಂದು ಅಂದಿರುವನು. ಜಲತೀರ್ಥವು ಸ್ಥೂಲಶರೀರಕ್ಕೆ ಹತ್ತಿದ ಮಲಿನತೆಯನ್ನು ತೊಳೆಯುವದು. ಆದರೆ ಸಾಧುಸತ್ಪುರುಷರು ತಮ್ಮ ಅಮೋಘವಾದ ಉಪದೇಶಜಲದಿಂದ ಜನರ ಮನಸ್ಸಿಗೆ ಹತ್ತಿದ ಪಾಪಪಂಕವನ್ನು ಸಮೂಲವಾಗಿ ತೊಳೆದು ಇಹಪರ ಸುಖದಾಯಿಯಾದ ಸದಾಚಾರವನ್ನು ಬೋಧಿಸುವರು. ಮನುಷ್ಯನು ಸಾರ್ವತ್ರಿಕಸುಖವನ್ನು ಪಡೆಯಬೇಕಾದರೆ ಅಂತಹ ಬಲವತ್ತರವಾದ ಬೋಧವು ಅವಶ್ಯಕವಾಗಿ ಬೇಕೇಬೇಕಾಗುತ್ತದೆ. ಶಸ್ತ್ರವಿದ್ಯಾ ಶಿಕ್ಷಣವನ್ನು ಪಡೆಯದ ಬಂಟನು ಯಾವ ಯುದ್ಧವನ್ನು ಮಾಡಬಲ್ಲನು. "ಬೋಧೋऽನ್ಯಸಾಧನೇಭ್ಯೋಹಿ ಸಾಕ್ಷಾನ್ಮೋಕ್ಷೈಕಸಾಧನಂ" ಎಂಬ ವಾಕ್ಯವಾದರೂ ಮನಸ್ಸ್ಥಿತಿಯನ್ನು ಸುಧಾರಿಸಿ ಮುಕ್ತಿಯನ್ನೀಯಲು ಬೋಧವೇ ಮುಖ್ಯವಾದುದೆಂದು ದೃಢೀಕರಿಸುವದಲ್ಲದೇ "ಸಾಧೂನಾಂ ದರ್ಶನಂ ಪುಣ್ಯಂ ತೀರ್ಥಂ ಭೂತಾಹಿಸಾಧವಃ | ಕಾಲೇನಫಲತೇ ತೀರ್ಥಂ ಸದ್ಯಃ ಸಾಧುಸಮಾಗಮಃ ||" ಎನ್ನುವಂತೆ ಸಾಧುಗಳ ದರ್ಶನವೇ ಪುಣ್ಯವಾಗಿರುವದು. ಏಕೆಂದರೆ ದರ್ಶನಕ್ಕಾಗಿ ಬಂದ ಮಾನವರಿಗೆಲ್ಲಾ ಆ ಅಮೃತಹೃದಯದ ಸದ್ಗುಣಸಾಧುಗಳು 'ಸದಾಚಾರದಿಂದ ನಡೆ' ಎಂಬಿವೇ ಮೊದಲಾದ ಪುಣ್ಯರಸಭರಿತಗಳಾದ ಮಹಾವಾಕ್ಯಗಳನ್ನು ಅನಾಯಾಸ ಬೋಧಿ

ಇಂಗ್ಲೆಂಡಿನ ಮುಖ್ಯಮಂತ್ರಿಗಳ ಭಾಷಣದ ಅಭಿಪ್ರಾಯವನ್ನು ಪರ್ಯಾಲೋಚಿಸುವುದಕ್ಕಾಗಿ ಮಹಾತ್ಮಾಗಾಂಧಿಯವರನ್ನೂ ಮತ್ತು ಕಾಂಗ್ರೆಸ್ಸಿನ ಇತರ ಮುಖಂಡರನ್ನೂ ವೈಸರಾಯರು ಶೀಘ್ರದಲ್ಲಿಯೇ ಬಿಡುಗಡೆಮಾಡುವರೆಂದು ಹೊಸ ದಿಲ್ಲಿಯಲ್ಲಿ ಬಲವಾದ ವಾರ್ತೆಯಿದೆ.

ವರ್ತಮಾನಸಂಗ್ರಹ.

ಈ ತಿಂಗಳು 22 ನೆಯ ತಾರೀಖಿನ ದಿವಸ ಲಂಡನ್ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿದ್ದ ಮೆಂಬರರು ಹಿಂದೂಸ್ಥಾನಕ್ಕೆ ಹೊರಟರು.

ಕೊಯಮುತ್ತೂರ್ ಮಿ|| ಆರ್. ಕೆ. ಷಣ್ಮುಖಂಚೆಟ್ಟಿಯಾರ್‌ರವರು ದೆಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಗೆ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ಕಲ್ಕತ್ತೆಯಲ್ಲಿ ಗುಪ್ತಪೋಲೀಸರ ಸಲುವಾಗಿ ಮೂರುಲಕ್ಷ ರೂಪಾಯಿ ಖರ್ಚುಮಾಡಿ ನಾಲ್ಕಂತಸ್ತಿನ ಮನೆಯನ್ನು ಕಟ್ಟಿಸುವ ಆಲೋಚನೆಯು ನಡೆದಿದೆಯಂತೆ!

ಪಂಡಿತ ಮದನಮೋಹನ ಮಾಲವೀಯರ ಆರೋಗ್ಯವು ಬಹುಮಟ್ಟಿಗೆ ಸುಧಾರಿಸಿದೆಯೆಂದೂ, ಆದಾಗ್ಯೂ ಇನ್ನೂ ಒಂದು ತಿಂಗಳುಕಾಲ ಚಿಕಿತ್ಸೆಹೊಂದಿ ವಿಶ್ರಾಂತಿ ತೆಗೆದುಕೊಳ್ಳಬೇಕೆಂದೂ ವೈದ್ಯರು ಅಭಿಪ್ರಾಯ ಪಡುವರು.

ಬೊಂಬಾಯಿಯಲ್ಲಿ ಸೋಲಾಪುರದ ವೀರರ ದಿವಸವನ್ನಾಚರಿಸಿದಾಗ ಪೋಲೀಸರ ಗುಂಡಿನೇಟಿನಿಂದ ಗಾಯಗೊಂಡಿದ್ದ ಶ್ರೀಯುತ ರಾಮಭಾಗವತನೆಂಬ ತರುಣನು ಈ ತಿಂಗಳು 21 ನೆಯ ತಾರೀಖಿನ ದಿವಸ ಆಸ್ಪತ್ರೆಯಲ್ಲಿ ಮೃತಪಟ್ಟನು.

ಮಹಾತ್ಮಾ ಗಾಂಧಿಯವರನ್ನು ಹವಾ ಬದಲಾವಣೆಗಾಗಿ ಸರ್ಕಾರದವರು ಎರವಾಡಾಜೈಲಿನಿಂದ ನಾಸಿಕ್ ಜೈಲಿಗೆ ಸಾಗಿಸುವರೆಂಬ ವರ್ತಮಾನವಿತ್ತು. ಇದು ಸುಳ್ಳೆಂದೂ ಅವರ ಆರೋಗ್ಯವು ಚನ್ನಾಗಿದೆ ಎಂದೂ ಸರ್ಕಾರದವರು ಅಭಿಪ್ರಾಯಪಡುವರು.

ಧಾರವಾಡದಲ್ಲಿ ಕರ್ನಾಟಕವೃತ್ತಪತ್ರಿಕೆಯ ಸಂಪಾದಕರಾಗಿಯೂ, ವಕ್ತೃತ್ವಕಲೆಯಲ್ಲಿ ನಿಪುಣರಾಗಿಯೂ ಇರುವ ಶ್ರೀಯುತ ಮುದವೇಡಕರ್ ಕೃಷ್ಣರಾಯರು ಸರ್ಕಾರಿ ಆಜ್ಞೆಯನ್ನು ಉಲ್ಲಂಘಿಸಿದರೆಂದು ಒಂದು ತಿಂಗಳು ಸಾದಾ ಶಿಕ್ಷೆಗೆ ಗುರಿಯಾಗಿರುವರು.

ಬೆಳಗಾಂವಿಯಲ್ಲಿ ಸೋಲಾಪುರದ ಶ್ರೀಯುತ ಮಲ್ಲಪ್ಪ ಧನಸೆಟ್ಟಿ ಮೊದಲಾದವರನ್ನು ಗಲ್ಲಿಗೇರಿಸಿದುದರ ಸ್ಮರಣಾರ್ಥವಾಗಿ ಹರತಾಳವನ್ನಾಚರಿಸಿ ಮೆರವಣಿಗೆ ಹೊರಟಾಗ ಪೋಲೀಸರು ಲಾಠೀಪ್ರಯೋಗವ ಮಾಡಿದ್ದರಿಂದ 150 ಜನರು ಗಾಯಗೊಂಡಿರುವರೆಂದು ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರ ಸಬರ್ಮತಿ ಆಶ್ರಮದಲ್ಲಿರುವ ಮಿಸ್ ಮೀರಾಬಾಯಿ ಎಂಬ ಆಂಗ್ಲೇಯ ಸ್ತ್ರೀಯಳು ಕರಾಚಿಗೆ ಹೋಗಿ ಖಾದಿಯ ವಿಷಯವಾಗಿ ಎರಡುಸಲ ಭಾಷಣ ಮಾಡಿದಳು. ಅಲ್ಲಿ ಸೇರಿದ್ದ ಸಾವಿರಾರು ಜನ ಮಹಿಳೆಯರು ಎಲ್ಲರೂ ಖಾದಿಯನ್ನೇ ಉಪಯೋಗಿಸಬೇಕೆಂದು ಪ್ರತಿಜ್ಞೆಮಾಡಿದರು.

ಶ್ರೀಯುತ ಧನಶೆಟ್ಟಿಮಲ್ಲಪ್ಪನವರನ್ನು ಗಲ್ಲಿಗೆಹಾಕಿದ ಮೇಲೆ ಅವರ ಪತ್ನಿಯವರು ಬಾವಿಯಲ್ಲಿ ಬಿದ್ದು ಆತ್ಮಹತ್ಯೆಮಾಡಿಕೊಂಡರೆಂಬ ವದಂತಿಯಿತ್ತು. ಆದರೆ ಅವರು ಈಗ ಮೂರು ತಿಂಗಳುಗಳಿಂದ ತಮ್ಮ ಪತಿಗುಂಟಾದ ವಿಪತ್ತಿಗಾಗಿ ಕೊರಗಿ ಹಾಸಿಗೆಹಿಡಿದಿರುವರೆಂದೂ, ಆತ್ಮಹತ್ಯೆಮಾಡಿಕೊಂಡರೆಂಬ ಸುದ್ದಿಯು ಸುಳ್ಳೆಂದೂ, ಅವರಿಗೆ ಒಂಬತ್ತು ವರ್ಷದ ಒಬ್ಬ ಮಗನಿರುವನೆಂದೂ ಕೇಳುತ್ತೇವೆ.

ಲಂಡನ್ನಿನ ಒಂದು ಸಿನಿಮಾಕಂಪನಿಯವರು ಮುಖ್ಯಮಂತ್ರಿಗಳ ಭಾಷಣವನ್ನು ಮಾತನಾಡುವ ಹಾಗೆ ಟಾಕಿ ಎಂಬ ಒಂದು ಯಂತ್ರವನ್ನು ನಿರ್ಮಿಸಿರುವರು. ಈ ತಿಂಗಳು 22 ನೆಯ ತಾರೀಖಿನ ದಿವಸ ಮ್ಯಾಕ್ಡೋನಾಲ್ಡರು ಜೇ-ಹೋರ್ ಮೊದಲಾದವರು ಅದು ಮುಖ್ಯಮಂತ್ರಿಗಳು ಮಾತನಾಡಿದ ಹಾಗೆಯೇ ಮಾತಾಡುವುದನ್ನು ಕೇಳಿ ಹರ್ಷಿಸಿದರು. ಆ ಯಂತ್ರವನ್ನು ಹಿಂದುಸ್ಥಾನಕ್ಕೆ ವಿಮಾನದಿಂದ ಕಳುಹಿಸುವರಂತೆ!

ತಿನ್ನವೆಲ್ಲಿ ಗೋಲ್ಡನ್ ಸಿನಿಮಾಕಂಪನಿಯಲ್ಲಿ ಒಬ್ಬ ದುರ್ಭಾಗ್ಯ ಸ್ತ್ರೀಯಳು ರಾಟೆಯನ್ನು ನೂತು ನೊಂದ ತನ ದಾರಿದ್ರ್ಯದಿಂದ ಬಿಡುಗಡೆಹೊಂದಿ ಅಭಿವೃದ್ಧಿಗೆ ಬಂದಳೆಂಬ ಒಂದು ಚಲನಚಿತ್ರವನ್ನು ಪ್ರದರ್ಶಿಸಲು, ಆಗ ಅಲ್ಲಿದ್ದ ಜನರೆಲ್ಲರೂ "ಮಹಾತ್ಮಾ ಗಾಂಧಿಕಿಜೈ" ಎಂದು ಜಯಘೋಷಮಾಡಿದರು. ಈ ಸುದ್ದಿಯು ಪೋಲೀಸು ಸೂಪರಿಂಟೆಂಡೆಂಟರವರ ಕಿವಿಗೆ ಬಿತ್ತು. ಆ ಕೂಡಲೇ ಸೂಪರಿಂಟೆಂಡೆಂಟರು ಕೋಪೋದ್ರಿಕ್ತರಾಗಿ ಆ ಸಿನೆಮಾದಲ್ಲಿ ಆ ಚಲನಚಿತ್ರವನ್ನು ತೋರಿಸಬಾರದೆಂದು ಆರ್ಡರ್ ಮಾಡಿದರಂತೆ!

ಮದರಾಸಿನಲ್ಲಿ ವಿದೇಶೀಯವಸ್ತ್ರ ಬಹಿಷ್ಕಾರ ಚಳವಳಿಯು ಬಹು ಜೋರಿನಿಂದ ನಡೆದಿದೆ. ಪೋಲೀಸರು ಸ್ವಯಂಸೇವಕರ ಮೇಲೆ ಲಾಠೀಪ್ರಯೋಗಮಾಡುತ್ತಿರುವರು. ವಸ್ತ್ರವ್ಯಾಪಾರಿಗಳು ವಿದೇಶಿ ಮಾಲು ಬಹಳ ಉಳಿದಿರುವುದರಿಂದ ಸದ್ಯಃ ಅವರ ಚಳವಳಿಗೆ ಪ್ರೋತ್ಸಾಹಕೊಡಲು ಸಾಧ್ಯವಿಲ್ಲವೆಂಬರ್ಥವುಳ್ಳ ಕಾಗದವನ್ನು ಬರೆದರು. ಆದರೂ ಕಾಂಗ್ರೆಸ್ಸಿನವರು ಪಿಕೆಟಿಂಗ್ ನಿಲ್ಲಿಸಲಾಗುವುದಿಲ್ಲವೆಂದು ಉತ್ತರವನ್ನಿತ್ತರು. ಕೆಲವು ವರ್ತಕರು ವಿದೇಶೀಯ ವಸ್ತ್ರಗಳನ್ನು ಮಾರುವುದಿಲ್ಲವೆಂದು ತಮ್ಮ ಗೋಡೌನ್ ಬೀಗದಕೈಗಳನ್ನು ಕೊಟ್ಟಿರುವರೆಂದು ಕೇಳುತ್ತೇವೆ.

ಅಖಿಲಭಾರತ ವಿಮಿಯಾಖಂಡದ ಮಹಿಳೆಯರ ಸಮ್ಮೇಳನವು ಈ ತಿಂಗಳು 19 ನೆಯ ತಾರೀಖಿನ ದಿವಸ ಆರಂಭವಾಗಿ 24 ನೆಯ ತಾರೀಖಿನ ದಿವಸದವರೆಗೂ ನಡೆಯಿತು. ಆ ಸಭೆಗೆ ಎರವಾಡಾ ಜೈಲಿನಲ್ಲಿರುವ ಶ್ರೀಮತಿ ಸರೋಜಿನೀದೇವಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ಜೈಲಿನಲ್ಲಿರುವುದರಿಂದ ಸಿಲೋನಿನ ಲೇಡಿ ಬಂಡರ್ನೀಕ್, ಹಿಂದೂಸ್ಥಾನದ ಡಾ|| ಮುತ್ತುಲಕ್ಷ್ಮಿ ರೆಡ್ಡಿ, ಚೀನ, ಜಪಾನ್, ಪರ್ಷಿಯಾ ದೇಶಗಳ ಕೆಲವು ಸ್ತ್ರೀವಿದ್ವನ್ಮಣಿಗಳು ಪ್ರತಿದಿವಸವೂ ಒಬ್ಬೊಬ್ಬರಂತೆ ಅಧ್ಯಕ್ಷಸ್ಥಾನವನ್ನು ವಹಿಸಿದರು.

ಲಾಹೋರಿನಲ್ಲಿ ವಿದೇಶೀವಸ್ತ್ರಗಳನ್ನು ಮಾರುವ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡಿದರೆಂದೂ, ಬರೀ ದಿವಸಾಡಿ ತೆಗೆದುಕೊಂಡು ಹೋಗುತ್ತಿದ್ದ ಗಿರಾಕಿಗಳ ಕೈಯಿಂದ ವಿದೇಶಿವಸ್ತ್ರಗಳನ್ನು ಕಿತ್ತುಕೊಂಡು ಬೈದು ಅಪಮಾನಪಡಿಸಿದರೆಂದೂ, 24 ಜನ ಹುಡುಗಿಯರು ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಗುರಿಯಾಗಿರುವರು. ನ್ಯಾಯಾಧೀಶರು ಪ್ರತಿಯೊಬ್ಬರೂ 1,000 ರೂ. ಜಾಮೀನು ಕೊಡುವುದಾದರೆ ಬಿಡುಗಡೆ ಮಾಡುವುದಾಗಿ ಹೇಳಿದರು. ಆ ಹುಡುಗಿಯರುಅದಕ್ಕೆ ಒಪ್ಪದೆ ಹೋದರು. ಅನಂತರ ಆ ಮೊಕದ್ದಮೆಯು 24ನೆಯ ತಾರೀಖಿಗೆ ಇಡಲ್ಪಟ್ಟಿತು.

ಕಲ್ಕತ್ತೆಯ ಪೌರಸಭಾಧ್ಯಕ್ಷರಾದ ಶ್ರೀಯುತ ಸುಭಾಷ್‌ಚಂದ್ರಬೋಸ್‌ರವರು ಸರ್ಕಾರದವರ ಆಜ್ಞೆಯನ್ನುಲ್ಲಂಘಿಸಿ ಮಾಲ್ಡಾ ಎಂಬ ಸ್ಥಳಕ್ಕೆ ಹೋದರೆಂದು ದಸ್ತಗಿರಿಮಾಡಲ್ಪಟ್ಟು ಏಳು ದಿವಸ ಸಾದಾ ಶಿಕ್ಷೆಗೆ ಗುರಿಯಾಗಿರುವರು. ಕಲ್ಕತ್ತ ಮುನಸಿಪಾಲಿಟಿಯವರು ಸರ್ಕಾರದವರ ಈ ವರ್ತನವನ್ನು ನಿಷೇಧಿಸುವುದಕ್ಕಾಗಿ ಆ ದಿವಸದಕಾರ್ಯವನ್ನು ನಿಲ್ಲಿಸಿದರು. ಅನಂತರ ಆ ಪಟ್ಟಣದ ಪ್ರಸಿದ್ಧ ವಕೀಲರಾದ ಮಿ|| ಬಸು ಎಂಬವರು ಕೆಳಕೋರ್ಟಿನ ತೀರ್ಮಾನವನ್ನು ವಿಮರ್ಶಿಸಿ ಅದನ್ನು ರದ್ದು ಪಡಿಸಬೇಕೆಂದು ಹೈಕೋರ್ಟು ನ್ಯಾಯಾಧೀಶರಲ್ಲಿ ಅರ್ಜಿ ಹಾಕಿದ್ದಕ್ಕೆ ಅವರು ಕೆಳಕೋರ್ಟಿನ ತೀರ್ಮಾನದಲ್ಲಿ ಕೈಹಾಕುವುದಿಲ್ಲವೆಂದರಂತೆ!

ಲಾಹೋರಿನಲ್ಲಿ ಪಂಜಾಬ್ ಗೌರ್ನರವರ ಮೇಲೆ ಗುಂಡು ಹಾರಿಸಿದನೆಂದು ದಸ್ತಗಿರಿಮಾಡಲ್ಪಟ್ಟ ಹರಿಕೃಷ್ಣನು ಸೆಷನ್ ಜಡ್ಜ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿರುವನು. ಅವನು ಕೋರ್ಟಿನಲ್ಲಿರುವಾಗ ಎಡಕ್ಕೂ ಬಲಕ್ಕೂ ಪೋಲೀಸರು ಕಾವಲಿದ್ದರು. ಅವನು ಹುಬ್ಬು ಗಂಟಿಕ್ಕಿ ವಿಜಾಸೆಯುರಿಮಾಡುತ್ತಲೂ, ಸ್ವಲ್ಪ ಹೊತ್ತು ಮುಗುಳ್ನಗೆಯಿಂದ ನಗುತ್ತಲೂ ಕುಳಿತಿದ್ದನು. ಅವನಿಗೆ ಪೋಲೀಸರು ನಾಲ್ಕು ದಿವಸಗಳವರೆಗೂ ಸ್ವಲ್ಪವೂ ವಿಶ್ರಾಂತಿ ಕೊಡದೆ ವಿಚಿತ್ರ ಹಿಂಸೆಮಾಡಿ ಬಳಿಯಕಾಗದದ ಮೇಲೆ ತನ್ನ ರುಜು ಹಾಕಿಸಿಕೊಂಡರೆಂದೂ, ಮಹಾತ್ಮಾ ಗಾಂಧಿಯವರ ಸೌಜನ್ಯಯುತವಾದ ಚಳವಳಿಯಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿದು ಆಂಗ್ಲೇಯ ಅಧಿಕಾರಿಗಳನ್ನು ಕೊಲ್ಲಬೇಕೆಂಬ ಉದ್ದೇಶದಿಂದ ತನ್ನ ಗ್ರಾಮದಿಂದ ಲಾಹೋರಿಗೆ ಬಂದೆನೆಂದೂ ಹೇಳಿರುವನು.

ಮೌಲಾನಾ ಮಹಮ್ಮದಾಲಿಯವರ ಕಳೇಬರವು ಈ ತಿಂಗಳು 21 ನೆಯ ತಾರೀಖಿನ ದಿವಸ ಪೋರ್ಟ್‌ಸೆಡ್ ಪಟ್ಟಣವನ್ನು ತಲ್ಪಿತು. ಪ್ರೇತದ ಗೌರವಾರ್ಥವಾಗಿ ಆದಿವಸ ಮಸೀದಿಯಲ್ಲಿ ದೇವರ ಪ್ರಾರ್ಥನೆಯು ಮಾಡಲ್ಪಟ್ಟಿತು. ಅನಂತರ ಆ ಕಳೇಬರವನ್ನು ಊರಲ್ಲೆಲ್ಲಾ ಮೆರವಣಿಗೆ ಮಾಡಿದರು. ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ಜನರು ಕಿಕ್ಕಿರಿದು ನಿಂತು ತಮ್ಮ ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸುತ್ತಿದ್ದರು. 23 ನೆಯ ತಾರೀಖಿನ ದಿವಸ ಜೆರೂಸಲೇಮಿಗೆ ತಲ್ಪಿತು. ಕೈರೋದ ರಾಜಕುಮಾರರಾದ ಮಹಮ್ಮದಾಲಿಯವರು ಮೌಲಾನಾ ಮಹಮ್ಮದಾಲಿಯವರ ಕಳೇಬರವನ್ನಿಡುವುದಕ್ಕೆ ಬಹು ಬೆಲೆಯುಳ್ಳ ಒಂದು ಜನಖಾನವನ್ನು ಕಳುಹಿಸಿರುವರು. ಆ ಪಟ್ಟಣದ ಪ್ರಸಿದ್ಧ ಮಸೀದಿಯಲ್ಲಿ ವಿಧಿವತ್ತಾಗಿ ಕಳೇಬರವನ್ನು ನಿಕ್ಷೇಪಮಾಡಿದರು. ಆಗ ಸಹಸ್ರಾರು ಜನರು ಸೇರಿ ತಮ್ಮ ಗೌರವವನ್ನೂ ಭಕ್ತಿವಿಶ್ವಾಸಗಳನ್ನೂ ಪ್ರದರ್ಶಿಸಿದರು.

ಬೆಳಗಾಂವ ಜಿಲ್ಲೆಗೆ ಸೇರಿದ ಸವದತ್ತಿ ಗ್ರಾಮದಲ್ಲಿ ಒಬ್ಬ ಪಟೇಲರು ರಾವ್‌ಸಾಹೇಬರಿರುವರಂತೆ! ಅವರ ಕೇವಲ 9ವರ್ಷ ವಯಸ್ಸಿನ ಮಗನು ಅಲ್ಲಿಯ ಕಾಂಗ್ರೆಸ್ ಆಫೀಸಿನಿಂದ 2 ರೂಪಾಯಿಗಳನ್ನು ಸಾಲಾ ತೆಗೆದುಕೊಂಡು ಹುಬ್ಬಳ್ಳಿಗೆ ಬಂದು, ಹಿಂದೂಸ್ಥಾನ ಸೇವಾದಳದಲ್ಲಿ ತನ್ನನ್ನು ಸ್ವಯಂಸೇವಕನನ್ನಾಗಿ ಸೇರಿಸಿಕೊಳ್ಳಬೇಕೆಂದು ಕೇಳಿದನಂತೆ! ಅದಕ್ಕೆ ಸೇವಾದಳದವರು ನೀನಿನ್ನೂ ಚಿಕ್ಕಮಗನಾಗಿರುವುದರಿಂದ ನಿನ್ನನ್ನು ಸೇರಿಸಿಕೊಳ್ಳುವುದು ಅನುಚಿತವಾಗುವುದೆಂದರಂತೆ! ಅದಕ್ಕೆ ಆ ಬಾಲಕನು ದೇಶಸೇವೆಮಾಡಲು ವಯಸ್ಸು ನೋಡುವುದು ಕಾರಣವಿಲ್ಲವೆಂದು ಹೇಳಲು, ಆಗ ಅವರು ನೀನು ಸವದತ್ತಿಯಲ್ಲಿಯೇ ದೇಶಸೇವೆಮಾಡಬಹುದೆಂದರಂತೆ! ಆ ಹುಡುಗನು ಅಲ್ಲಿ ನನ್ನ ತಂದೆಯು ಪಟೇಲನಾಗಿ ನೇಂದಿಗಿಡಗಳನ್ನು ಕಡಿಯುವ ಸ್ವಯಂಸೇವಕರಿಗೆ ಬಹಳವಾಗಿ ಹಿಂಸಿಸುವದರಿಂದ ನಾನು ಅದನ್ನು ನೋಡಲಾರೆನೆಂದೂ, ಆದುದರಿಂದಲೇ ನಾನು ಇಲ್ಲಿಗೆ ಬಂದಿರುವೆನೆಂದೂ, ಸ್ವರಾಜ್ಯವು ಸಿಗುವವರೆಗೂ ಒಪ್ಪತ್ತೇ ಊಟಮಾಡಬೇಕೆಂದು ಪ್ರತಿಜ್ಞೆ ಮಾಡಿರುವೆನೆಂದೂ ಹೇಳಿದನಂತೆ! ಇದು ಭರತಮಾತೆಯ ಸುದೈವ! ನವಚೈತನ್ಯದ ಪ್ರಭಾವ!!

ಇಂಗ್ಲೆಂಡಿನ ಮುಖ್ಯಮಂತ್ರಿಗಳ ಭಾಷಣದ ಮೇಲೆ ಶ್ರೀಯುತ ವಿಠ್ಠಲಭಾಯಿ ಪಟೇಲರವರ ಅಭಿಪ್ರಾಯವೇನೆಂದರೆ :—ಮುಖ್ಯಮಂತ್ರಿಗಳ ಭಾಷಣದಲ್ಲಿ ಭರತವರ್ಷದ ಭಾವಿರಾಜಕೀಯ ಪ್ರಗತಿಯ ವಿಷಯವಾಗಿ ಹೇಳಲ್ಪಟ್ಟಿರವುದು ಸ್ವಾತಂತ್ರ್ಯದ ನೆರಳೇ ವಿನಾ ಸ್ವಾತಂತ್ರ್ಯದ ತಿರುಳಲ್ಲ. ಅದು ಎಳ್ಳಷ್ಟೂ ಅಂಗೀಕರಿಸಲು ಅರ್ಹವಾಗಿಲ್ಲ. ಅದು ಹುಣ್ಣಿನ ಮೇಲೆ ಬರೆಹಾಕಿದಂತೆ ಮತ್ತಷ್ಟು ವ್ಯಥಾದಾಯಕವಾಗಿದೆ. ಸರ್ಕಾರದವರು ಉಳಿಸಿಕೊಂಡಿರುವ ಮೂರು ಅಂಶಗಳು ಉತ್ತರವಾದಿತ್ವದ ಬುಡವನ್ನೇ ನುಂಗಿ ಹಾಕುವಂತಿವೆ. ನ್ಯಾಯವಿಧಾಯಕ ಸಭೆಗೆ ಅರ್ಥಿಕಮಂತ್ರಿಯು ಜವಾಬ್ದಾರನಾಗಿರುವನೆಂಬುದು ಮರೀಮರೀಚಿಕಾ ಜಲದಂತೆ ಮಿಥ್ಯೆಯಾದುದು. ಹಣಕಾಸಿನ ಮತ್ತು ಸೈನ್ಯ ವಿಚಾರವನ್ನು ನಾವೇ ಕ್ರಮಕ್ಕೆ ತಂದು ನಡೆಯಿಸಬೇಕೆಂಬುದೇ ಭಾರತೀಯರು ಇದುವರೆಗೂ ಕೇಳಿರುವ ಅಂಶವು. ಮತ್ತು ಇದು ಅತ್ಯವಶ್ಯಕವಾಗಿಯೂ ಇದೆ. ಇಂಥ ಸ್ವಾತಂತ್ರ್ಯವಿಲ್ಲದೆ ಡೊಮಿನಿಯನ್‌ಸ್ಟೇಟಸ್ (ಬ್ರಿಟಿಷ್‌ಸಾಮ್ರಾಜ್ಯದೊಳಗಣ ಸ್ವರಾಜ್ಯ) ಎಂಬುದು ಸ್ವತಃ ಖಂಡನೀಯವಾಗಿದೆ. ಬದಲಾವಣೆಯ ಕಾಲದಲ್ಲಿ ಸೈನ್ಯದ ರಚನೆಯು ಹೇಗಿರಬೇಕೆಂಬ ವಿಷಯದಲ್ಲಿ ಯಾರು ಏನಾದರೂ ಹೇಳಲಿ; ಸೈನ್ಯದ ಅಡಳಿತವನ್ನು ಭಾರತೀಯರಿಗೆ ಕೊಡದಿರುವುದು ನ್ಯಾಯಸಮ್ಮತವಾಗಲಾರದು. ಸಂಯುಕ್ತ ಹಿಂದೂಸ್ಥಾನದ ಬಗ್ಗೆ ನಾನೊಂದು ಮಾತು ಹೇಳುವೆನು. ಇದು ಕೇವಲ ಹೊಸದಾದರು. ಸಂಯುಕ್ತ ಸಂಸ್ಥಾನದಲ್ಲಿ ಬ್ರಿಟಿಷ್‌ಹಿಂದೂಸ್ಥಾನದವರ ಮತ್ತು ಆಶ್ರಿತಸಂಸ್ಥಾನಗಳ ಸರಿಯಾದ ಪ್ರಾತಿನಿಧ್ಯವಿಲ್ಲದಿದ್ದರೆ ಅದು ಕೇವಲ ಅಪಾಯಕರವಾದುದು. ಈ ಸಂದರ್ಭದಲ್ಲಿ ಮಿ|| ಮ್ಯಾಕ್ಡೋನಾಲ್ಡರವರು ಹೇಳಿರುವುದೇ ಕೊನೆಯಮಾತಾದರೆ ಸಮಾಧಾನದ ಆಶೆಯನ್ನು ಬಿಟ್ಟು ಸತ್ಯಾಗ್ರಹಯುದ್ಧವನ್ನು ಮುಂದುವರಿಸಬೇಕು.

(೩ನೇ ಪುಟದಿಂದ ಮುಂದುವರಿದುದು.)

ಸರ್ ತೇಜ್‌ಬಹದ್ದೂರ್ ಸಪ್ರೂರವರು ಯುಕ್ತಿಯುಕ್ತವಾಗಿ ಮನಮುಟ್ಟುವಂತೆ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಬೇಕೆಂದು ಭಾಷಣಮಾಡಿದ್ದರು. ಅದರಂತೆ ರಾಜಕೀಯ ಖೈದಿಗಳ ಬಿಡುಗಡೆಮಾಡಿ ಸಮ್ಮೇಳನದಿಂದ ನಮ್ಮ ಮತ್ತು ಭಾರತೀಯರ ಸಂಬಂಧದಲ್ಲಿ ಹೊಸ ಅಧ್ಯಾಯವನ್ನು ನಿರ್ಮಿಸಬೇಕೆಂಬುದು ನನ್ನ ಮನಸ್ಸಿನಲ್ಲಿಯೂ ಇದೆ ಎಂದು ಈ ಸಮ್ಮೇಳನದ ಅವಗಾಹನೆಗೆ ತರುತ್ತೇನೆ. ಆದರೆ ಡಾ|| ಸಪ್ರೂರವರ ಪ್ರಾರ್ಥನೆಯನ್ನು ಭಾರತೀಯರು ಅಂಗೀಕರಿಸಿ ಶಾಂತಿಯನ್ನು ಸ್ಥಾಪಿಸುವೆವೆಂಬ ಭರವಸೆಯನ್ನು ಕೊಡುವುದಾದರೆ ಸಪ್ರು ಮತ್ತು ಅವರ ಸ್ನೇಹಿತರು ಅಭಿಪ್ರಾಯಪಡುವಂತೆ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಲು ಬ್ರಿಟಿಷ್‌ಸರ್ಕಾರವು ಹಿಂಜರಿಯುವುದಿಲ್ಲ. (ಹರ್ಷಧ್ವನಿಯಾಗುವುದು).

ಇನ್ನು ಕೆಲವು ದಿವಸಗಳಲ್ಲಿ ಸ್ವದೇಶದಿಂದ ಇಲ್ಲಿಗೆ ಬರುವ ಭರತಖಂಡದ ಭಾವೀ ವೈಸರಾಯರಾದ ಲಾರ್ಡ್ ವಿಲಿಂಗ್ಡನ್‌ರವರನ್ನು ನಾನು ಮತ್ತು ನನ್ನ ಸಹೋದ್ಯೋಗಿಗಳೂ ಸಂದರ್ಶಿಸಿ ನಾವು ಮಾಡಿರುವ ಕಾರ್ಯಕಲಾಪವನ್ನು ವಿವರಿಸಿ ಯುಕ್ತವಾದುದನ್ನು ಮಾಡುವೆವು.

ಕೇಂದ್ರ ಮತ್ತು ಪ್ರಾಂತಿಕ ಸರ್ಕಾರಗಳಲ್ಲಿ ಉತ್ತರವಾದಿತ್ವವು ಇರತಕ್ಕದ್ದು. ಆದರೆ ಹಳೆಯ ರಾಜ್ಯಾಂಗರಚನೆಯು ಬದಲಾಯಿಸಲ್ಪಟ್ಟು ಹೊಸ ರಾಜ್ಯಾಂಗರಚನೆಯು ಸ್ಥಾಪಿಸಲ್ಪಡುವ ಕಾಲದಲ್ಲಿ ಹಿಂದೆ ಮಾಡಿರುವ ಸಾಲಸೋಲ ಲೇವಾದೇವಿ ಮೊದಲಾದುವುಗಳನ್ನು ನಿರಾತಂಕವಾಗಿ ನಡೆಯಿಸಿಕೊಂಡು ಹೋಗುವುದಕ್ಕೂ ಚಿಕ್ಕ ಸಮಾಜಗಳ ಹಕ್ಕುಬಾಧ್ಯತೆಗಳ ಸಂರಕ್ಷಣೆಗೂ ಕೆಲವು ಕಟ್ಟುಗಳಿರಬೇಕು. ಅವು ಭಾರತೀಯರ ರಾಜಕೀಯ ಪುರೋಭಿವೃದ್ಧಿಗೆ ಅಡ್ಡಬರುವಂಥವುಗಳಾಗಿರಬಾರದು. ಈ ಸಮ್ಮೇಳನದಲ್ಲಿ ಸೇರಿದ ಎಲ್ಲಾ ಪಕ್ಷಗಳ ಪ್ರತಿನಿಧಿಗಳೂ ಕೇಂದ್ರ ಸರ್ಕಾರವು ಸಂಯುಕ್ತ ಸರ್ಕಾರವಾಗಿರಬೇಕೆಂಬುದನ್ನು ಒಪ್ಪಿದರು. ಸಾಮಂತರಾಜರುಗಳ ಮತ್ತು ಬ್ರಿಟಿಷ್ ಇಂಡಿಯಾ ಪ್ರತಿನಿಧಿಗಳ ಸಂಗಡ ಇನ್ನೂ ಚರ್ಚೆ ನಡೆಯಿಸಿ ಸಂಯುಕ್ತ ಸರ್ಕಾರಕ್ಕೆ ಯೋಗ್ಯವಾದ ರೂಪು ಕೊಡಲಾಗುವುದು. ಸಂರಕ್ಷಣ ಮತ್ತು ಪರದೇಶೀಯರೊಡನೆ ವ್ಯವಹಾರ ಇವುಗಳನ್ನು ಗೌರ್ನರ್ ಜನರಲ್‌ರವರ ಅಧಿಕಾರದಲ್ಲಿ ಉಳಿಸಿಕೊಡಲಾಗುವುದು. ಮಂತ್ರಿಗಳು ದಕ್ಷತೆಯಿಂದ ಸಂಪೂರ್ಣ ಜವಾಬ್ದಾರಿಯನ್ನು [illegible] ಗೌರ್ನರ್ ಜನರಲ್‌ರವರು ತಮ್ಮ ವಿಶೇಷ [illegible] ವನ್ನು ಉಪಯೋಗಿಸಲು ಅವಕಾಶಕೊಡಬಾರದು. [illegible] ಕಾಕಕೊಟ್ಟುದಾದರೆ ಜವಾಬ್ದಾರಿ ಸರ್ಕಾರದ ಬೆಳವಣಿಗೆಗೆ ಅಂದಕವಾಗುವುದು. ಪ್ರಾಂತಗಳಲ್ಲಿ ಮಂತ್ರಿಗಳು ನ್ಯಾಯವಿಧಾಯಕಸಭೆಯಿಂದ ಆರಿಸಲ್ಪಡುವರು. ಅದಷ್ಟುಮಟ್ಟಿಗೂ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಕೊಡುವ ಹಾಗೆ ಪ್ರಾಂತಿ ವಿಷಯಗಳ ವಿನಿಯೋಜನೆಮಾಡುವುದಾಗುವುದು. ಪ್ರಜಾಸಮೃದ್ಧಿಗೆ ಭಂಗಬರದಂತೆಯೂ, ಚಿಕ್ಕ ಸಮಾಜಗಳ ಸಂರಕ್ಷಣೆಗೂ ಅವಶ್ಯಕವಾದಷ್ಟು ವಿಶೇಷಾಧಿಕಾರವು ಗೌರ್ನರವರಿಗೆ ಇರುವುದು. ಈಗ ನಡೆಯಿಸಿರುವ ಕಾರ್ಯಕಲಾಪಗಳ ಮೇಲೆ ಭಾರತೀಯರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೆ ಸದ್ಯಃ ಮುಂದಿನ ಕೆಲಸವನ್ನು ನಿಲ್ಲಿಸಿರುವುದಾಗಿದೆ. ವೈಸರಾಯರು ಕೇಳಿಕೊಳ್ಳುವ ಹಾಗೆ ಶಾಸನೋಲ್ಲಂಘನ ಕಾರ್ಯದಲ್ಲಿ ತೊಡಗಿರುವವರು ಅದನ್ನು ನಿಲ್ಲಿಸಿ ಸಹಕಾರಕ್ಷೇತ್ರಕ್ಕೆ ಬರುವುದಾದರೆ ಅವರ ಅಭಿಪ್ರಾಯಗಳನ್ನೂ ಸಹ ತೆಗೆದುಕೊಳ್ಳುವ ಏರ್ಪಾಟುಮಾಡಲಾಗುವುದು.

ಸಾಮಂತರಾಜರು ಫೆಡರೇಷನ್ನಿಗೆ ಬಿಟ್ಟುಕೊಡದೇ ಇರುವ ವಿಷಯುಗಳಲ್ಲೆಲ್ಲಾ ವೈಸರಾಯರೊಡನೆ ನೇರವಾಗಿ ವ್ಯವಹಾರ ಮಾಡಬಹುದು.

ಭರತಖಂಡವು ಸಾಮ್ರಾಜ್ಯದ ಮಿಕ್ಕ ದೇಶಗಳಂತೆ ತನ್ನ ಜವಾಬ್ದಾರಿಯನ್ನೂ ತನ್ನ ಸುಖದುಃಖಗಳನ್ನೂ ತಾನೇ ನೋಡಿಕೊಳ್ಳುವಹಾಗೆ ಡೊಮಿನಿಯನ್ನುಗಳ ಸ್ಥಾನವನ್ನು ಹೊಂದಲೆಂದು ಆಶಿಸಿ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಮುಖ್ಯಮಂತ್ರಿಗಳ ಭಾಷಣದ ಮೇಲೆ ಪತ್ರಿಕಾಕರ್ತರ ಮತ್ತು ಕೆಲವು ಮುಖಂಡರ ಅಭಿಪ್ರಾಯಗಳು.

ಮ್ಯಾಂಚೆಸ್ಟರ್ ಗಾರ್ಡಿಯನ್

ಮಹಾತ್ಮಗಾಂಧಿಯವರು ಅಹಿಂಸಾಮಯ ಚಳವಳಿಯನ್ನು ಬಹಳ ಯಶಸ್ವಿಯಾಗಿ ನಡೆಯಿಸಿರುವರು. ಅವರ ಸಾಮರ್ಥ್ಯವನ್ನು ನಾವು ಒಪ್ಪುವೆವು. ಇಂಗ್ಲೆಂಡಿನೊಡನೆ ಕೈಜೋಡಿಸಿ ಸಹಕಾರವನ್ನು ಹೂಡಲಿ.

ಲಂಡನ್ ಟೈಮ್ಸ್

ಸರ್ ಸಪ್ರೂರಂಥವರು ತಮ್ಮ ದೇಶಿಯರಿಗೆ ಸರಿಯಾದ ಬುದ್ಧಿಯನ್ನು ಹೇಳಿ ಶಾಂತಿಯನ್ನು ಹಬ್ಬಿಸಬೇಕು.

ಲಂಡನ್ ಡೇಲಿ ಮೇಲ್

ಲಾರ್ಡ್‌ಪೀಲರು ಸಂಪೂರ್ಣವಾಗಿ ಸೋತರು.

ಡೇಲಿ ಎಕ್ಸ್‌ಪ್ರೆಸ್

ಕೊಂಬಾಯಿಯ ಗದ್ದಲದ ತಾಳಕ್ಕೆ ಅನುಗುಣವಾಗಿ ರೌಂಡುಟೇಬಲ್ ಸಮ್ಮೇಳನವು ಕುಣಿದಿದೆ.

ಲಂಡನ್ ಡೇಲಿ ಹೆರಾಲ್ಡ್

ಪಂಡಿತ ಮೋತಿಲಾಲರು ಕಳೆದ ಮೇ ತಿಂಗಳಿನಲ್ಲಿ ಕೇಳಿದ್ದಕ್ಕೂ ಈಗ ಮ್ಯಾಕ್ಡೊನಾಲ್ಡರು ಹೇಳಿರುವುದಕ್ಕೂ ಕೊಡಲಿ ನಷ್ಟು ಕೂಡ ವ್ಯತ್ಯಾಸವು ಕಂಡುಬರುವುದಿಲ್ಲ. ಭಾರತೀಯರು ಆಂಗ್ಲೇಯರನ್ನು ಶತ್ರುಗಳಂತೆ ಕಾಣುವ ಬದಲು ಮಿತ್ರರಂತೆ ಕಾಣಲಿ; ಕಾಂಗ್ರೆಸ್ ಸಂಗಡವು ಇಂಗ್ಲೆಂಡಿನ ಪ್ರೀತಿಯ ಹಸ್ತವನ್ನು ಸ್ವೀಕರಿಸಲಿ.

ಡೇಲಿ ಟೆಲಿಗ್ರಾಫ್

ಮ್ಯಾಕ್ಡೊನಾಲ್ಡರ ಭಾಷಣವು ಬರೀ ಬುರುಬುರಿಕೆಯವನ ಬರಾಯಿಯಲ್ಲ.

ಮಾರ್ನಿಂಗ್ ಪೋಸ್ಟ್

ಕನ್ಸರ್ವೇಟೀವ್ ಸಂಗಡದವರು ಏನನ್ನೂ ಬಿಟ್ಟುಕೊಟ್ಟಿಲ್ಲ. ಲಾರ್ಡ್‌ಪೀಲರ ಭಾಷಣವು ಕನ್ಸರ್ವೇಟಿವ್ ಸಂಗಡವನ್ನು ಬಹಳ ಮುಂದಕ್ಕೆ ಒಯ್ದಿದೆ.

ಹಿಂದೂಸ್ಥಾನ್ ಟೈಮ್ಸ್

ಆರ್ಡಿನೆನ್ಸುಗಳನ್ನು ತೆಗೆಯಬೇಕು. ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಬೇಕು.

ಆಗಾಖಾನ್

ಡೊಮಿನಿಯನ್ ಸ್ಟೇಟಸ್ಸಿನ ವಾಗ್ದಾನವಾಯಿತು. ಅದನ್ನು ನಾವು ತೆಗೆದುಕೊಳ್ಳುವುದೇ ಬಾಕಿ.

ರಾಮಸ್ವಾಮಿಮೊದಲಿಯಾರ್

ಇಂಡಿಯಾದ ಹೊಸರಾಜಕೀಯ ಅಧ್ಯಾಯವು ಆರಂಭವಾಯಿತು.

ಘಸ್ನಾವಿ

ನಾನು ಎಷ್ಟು ನಿರೀಕ್ಷಿಸಿದ್ದೆನೋ ಅದಕ್ಕಿಂತ ನಾವು ಬಹಳ ಮುಂದೆ ಬಂದಿದ್ದೇವೆ.

ಸರ್ ಸಪ್ರೂ

ಈಗ ಬೇಕಾಗಿರುವುದು ಇಂಗ್ಲೆಂಡಿನೊಡನೆ ಸ್ನೇಹ ಮತ್ತು ಸಹಕಾರ. ಈ ಬೀಗದ ಕೈ ಇಂಡಿಯಾದ ಕೈಯಲ್ಲಿರುವುದು.

ಸರ್ ಪಿ. ಸೇತ್ನಾ

ಕಾಂಗ್ರೆಸ್ಸಿನವರನ್ನು ಎದುರಿಸಿ ನಾವು ಈ ಸಮ್ಮೇಳನಕ್ಕೆ ಬಂದುದು ಸಾರ್ಥಕವಾಯಿತು.

ಕರ್ನಲ್‌ಗಿಡ್ನಿ

ನಾವು ಇಲ್ಲಿಗೆ ಬಂದಾಗ ಏನೋ ಕಳವಳವಿತ್ತು. ಈಗ ಏನೂ ಕಳವಳವಿಲ್ಲ. ಗೊತ್ತಾದ ನಿರ್ಣಯಗಳೇನೂ ಆಗದೆ ಹೋದರೂ, ನಿರ್ಣಯದ ದಾರಿಯಾವುದು ಎಂಬುವುದು ನಮಗೆ ಗೊತ್ತಾಯಿತು.

ಜಫ್ರುಲ್ಲಾ ಖಾನ್

ಮಹಮ್ಮದೀಯರಿಗೆ ಇನ್ನೂ ಸಮಾಧಾನವಿಲ್ಲ.

ಸರ್ ಎಂ. ಷಫೀ

ಈಗ ಉಳಿದಿರುವುದು ಪಂಜಾಬ ಮತ್ತು ಬಂಗಾಳದ ಕೋಮುವಾರ ಪ್ರಶ್ನೆ.

ಸರ್ ಎ. ಪಿ. ಪಾತ್ರೋ

ನಿಸ್ಸಂದೇಹವಾಗಿ ಹೃದಯ ಪರಿವರ್ತನೆಯಾಯಿತು.

ಬಿಕಾನೇರ್ ಮಹಾರಾಜರು

ಮುಂದಿನ ರಾಜ್ಯರಚನೆಯ ತಳಹದಿಯೊಂದು ನಮಗೆ ಸಿಕ್ಕಿತು. ಇದು ಸಿಗುವುದೆಂದು ನಾವು ಕನಸು ಮನಸ್ಸುಗಳಲ್ಲಿಯೂ ತಿಳಿದಿರಲಿಲ್ಲ.

ದಿವಾನ್ ಬಹದ್ದೂರ್ ರಾಮಚಂದ್ರರಾವ್

ರಾಜಕೀಯ ಖೈದಿಗಳ ಬಿಡುಗಡೆಯ ವಿಷಯದಲ್ಲಿ ಸರಕಾರ ಮಾಡಿರುವುದು ಸರಿಯಲ್ಲ; ಕಾಂಗ್ರೆಸ್ಸಿನವರನ್ನೆಲ್ಲಾ ಜೈಲಿನಲ್ಲಿಟ್ಟು ಸಮಾಧಾನ ಮಾಡಿಕೊಳ್ಳಿರೆಂದು ಹೇಳುವುದು ಯಾವ ರಾಜನೀತಿ?

ಲಾರ್ಡ್‌ಲೋಥಿಯನ್

ಈ ಸಂಧಿ ಎಂದರೇನು? ಸಮಾಧಾನವೆಂದರೇನು? ಇಂಡಿಯಾದೇಶವನ್ನು ಆಳುವುದಕ್ಕೆ ಇಂಗ್ಲೆಂಡಿಗೆ ಶಕ್ತಿ ಇಲ್ಲವೇ? ಗುಂಡು, ಮದ್ದು, ಸುವಾತಿಗಳು, ಮಿಲಿಟರಿ ಶಾಸನಗಳನ್ನೆಲ್ಲಾ ಚಲಾಯಿಸಿ ಇಂಡಿಯಾದೇಶವನ್ನು ಆಳಬೇಕೆ ಹೊರತು ಉಳಿದುದೆಲ್ಲಾ ಅಪ್ರಯೋಜನವು.

ಮ್ಯಾಕ್ಡೋನಾಲ್ಡರು

ನಾವು ಇಳಿದುಬಿಟ್ಟೆವೆಂದು ಭಾವಿಸುವುದು ಸರಿಯಲ್ಲ. ಕಾಂಗ್ರೆಸ್ಸಿನವರು ಏನೇಮಾಡಲಿ ಅವರು ಎಷ್ಟೇ ಹಟಮಾಡಲಿ ನಾವು ನಮ್ಮ ವಾಗ್ದಾನಗಳನ್ನು ಸಲ್ಲಿಸಲೇಬೇಕು; ಇಂಡಿಯಾಕ್ಕೆ ಹೆಚ್ಚು ಅಧಿಕಾರಗಳನ್ನು ಕೊಡಲೇಬೇಕು. ಇಲ್ಲದೆ ಹೋದರೆ ಇನ್ನೂ ಗಲಾಟೆಯು ಹೆಚ್ಚುತ್ತದೆ. ಮುಂದಿನ ವೈಸರಾಯರು ಇಂದೋ ನಾಳೆಯೋ ಇಲ್ಲಿಗೆ ಬರುತ್ತಾರೆ. ಮುಂದೆ ಮಾಡತಕ್ಕ ಕಾದ ಕೆಲಸಗಳನ್ನು ನಾವು ತೀವ್ರಗೊಳಿಸುತ್ತೇವೆ.

ಸರ್ ವಿಜರ್ಡ್ ಇಸ್ಮಾಯಿಲ್

ಏನು ಅಡ್ಡಿಗಳು ಬರಲಿ; ಬ್ರಿಟಿಷ್‌ಸರ್ಕಾರದವರು ತಮ್ಮ ಘನವಾದ ಉದ್ದೇಶವನ್ನು ಸಾಧಿಸಲೇಬೇಕು. ಭಾರತೀಯರು ಈಗಿನ ಅವಕಾಶವನ್ನು ಉಪಯೋಗಿಸಿಕೊಳ್ಳದಿದ್ದರೆ ಇತಿಹಾಸವು ಅವರನ್ನೇ ಖಂಡಿಸುವುದು.

ಮಿ|| ಲಾಯಿಡ್ ಜಾರ್ಜ್

ಈಗಲೇ ಹಿಗ್ಗುವುದಕ್ಕೆ ಕಾರಣವಿಲ್ಲ.

ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ

ಇಂಡಿಯಾದಲ್ಲಿ ಬೀಳುತ್ತಿರುವ ಲಾಠೀಏಟುಗಳನ್ನು ಮರೆಯಲು ಆದೀತೇ? ರಾಜಕೀಯ ಖೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು. ಅವರಿಂದ ಇನ್ನೂ ಕಷ್ಟವಾಗಬಹುದು. ನಾವು ಎಷ್ಟೋಸಾರಿ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿ ಎಂದು ಕೇಳಿಕೊಂಡೆವು. ಅದು ಇನ್ನೂ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿಲ್ಲ. ಬಲಿಷ್ಠವಾದ ಸರ್ಕಾರವು ಈ ಭಾಗದಲ್ಲಿ ಮುಂದೆ ಬರಬೇಕೇ ಹೊರತು ಕಾಂಗ್ರೆಸ್ಸಿನವರಲ್ಲ.

ಸರ್ ಅಕ್ಬರ್ ಹೈದರಿ

ವ್ಯತ್ಯಾಸಗಳಿಗಿಂತಲೂ ಒಪ್ಪಿಗೆಯಾಗಿರುವ ವಿಷಯುಗಳನ್ನು ನಾವು ಆಲೋಚಿಸಬೇಕು.

ಮುಂಬಯಿ ವರ್ತಕ ಮಂಡಲಿ

ರಾಜಕೀಯ ಖೈದಿಗಳನ್ನೆಲ್ಲಾ ಕೂಡಲೇ ಬಿಡುಗಡೆಮಾಡಲೇಬೇಕು.

ಚರ್ಚಿಲ್ಲರು

ಈ ಭಾಷಣವನ್ನು ನೋಡಿದರೆ ಇಂಗ್ಲೆಂಡು ಇಂಡಿಯಾದೇಶವನ್ನು ಬಿಟ್ಟು ತನ್ನ ಗಂಟುಮೂಟೆಗಳನ್ನು ಕಟ್ಟಿಕೊಂಡು ಬರುವಂತಿದೆ. ಇಂಗ್ಲಿಷ್ ಜನರು ಇದನ್ನು ಒಪ್ಪುವುದಿಲ್ಲ. ಲಾರ್ಡ್ ಬರ್ಕನ್ ಹೆಡ್ಡರು ನಮಗೆ ಕಲಿಸುವಂತೆ ನಾವು ಇಂಡಿಯಾಕ್ಕೆ ಸತ್ಯವನ್ನೇ ಹೇಳಬೇಕು.

ಸರ್ ಮೈಕಲ್ ಒಡ್ವೈರ್

ಬ್ರಿಟಿಷ್ ಸಿಂಹವು ಸಾಯುತ್ತಿದೆ. ಅದರ ಚರ್ಮವನ್ನು ಹಂಚಿಕೊಳ್ಳುವುದಕ್ಕಾಗಿ ಈ ಸಮ್ಮೇಳನದಲ್ಲಿ ಕಾದಾಟವಾಗುತ್ತಿದೆ.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಿ ಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋದು. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ಮಸ್ತಿರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಟಕ್ಕೆ ಸಾಧಾಗಿ ಹಸಿವು, ಶಕ್ತಿ ತಮ್ಮ ಸೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[26]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಏನುಬಾರದೆ ಇರೋದು ಅನಿಯಮಿತಮುಟ್ಟು ಬರೋದು ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋದು ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟ ಸಾಯೋದು ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ :—**ವೈದ್ಯ ಪಾಮಿರಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರ್ಯ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದರು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು [illegible] ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. [illegible]ಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ ರೂಪಾಯಿಯಿಂದ ೬೦ ರೂಪಾಯಿವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ [illegible] ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ [illegible]ವನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ [illegible] ಭಜನಾಸಂಘದವರೂ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ [illegible]ಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ [illegible]ದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ [illegible] ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ [illegible]ಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ [illegible] ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ[illegible] ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ [illegible] ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸಮಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ಸರ್ವರಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳಿಜ್ವರ, ಸರ್ಪಸುತ್ತು, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ [illegible] ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕಚೇರಿಯ ಕೂತಿರಬೇಕಾದವರಿಗೂ, ಪೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿದೆ. ಅಶುದ್ಧವಾದ ಮತ್ತು ಅಶ್ಲೀಲಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಜರಿಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[40] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವಯಸ್ಸಿನಲ್ಲಿ ಕ್ಷೀಣರಾಗಬೇಡಿರಿ.	## ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಧಿಕ್ಕರಿಸದೆ, ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿರುವುನ, ಕೈಕಾಲು ಮೂತ್ರ ಉರಿಯೋದು, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ತೌಟಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ಕೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ ಖರ್ಚ ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಜಾಸ್ತಿಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತತ್ಕಾಲ ತಯಾರುಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[27]

ಪತ್ತೆ :—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ಈ ದಿನಗಳಲ್ಲಿ ಅಗತ್ಯ ಬೇಕಾದದ್ದು.

ಉಷ್ಣ ಪಿತ್ತ ಉದ್ರೇಕದಿಂದ ನರಳುತ್ತಾ ಇರುವದೇತಕ್ಕೆ? ಇದಕ್ಕೆ ಇದರಿಂದ ಸುಖವಾಗಬೇಕೆಂದು ಇಚ್ಛೆಪಡುವದಾದರೆ ಕಂಪೌಂಡ್ ಸಿರಪ್ ಕಾರ್ಡಸ್ ಮತ್ತು ಪಿತ್ತಶಮನ ತೈಲ ಎಂಬವುಗಳನ್ನು ಉಪಯೋಗಿಸಿಕೊಂಡಲ್ಲಿ ಸಂಪೂರ್ಣ ಗುಣಪಟ್ಟು ಆರೋಗ್ಯದಲ್ಲಿರಬಹುದು—ಇದು ಖಂಡಿತ ನಂಬಿರಿ.

ತಲೆ ತಿರುಗುವುದು, ತಲೆ ಸಿಡಿತ, ಕಣ್ಣು ಕಿವಿ ಬೆಂಕಿಬರುವದು, ಕಣ್ಣುಗೊಂಚೆ ಅರಸಿನವಾಗುವುದು, ನಿದ್ರೆಯಿಲ್ಲದೆ ಸಂಕಟವಾಗುವುದು, ನಾಲಿಗೆ ರುಚಿಕೆಟ್ಟು ಆಹಾರ ಹೊಟ್ಟೆಗೆ ಸೇರದಿರುವುದು, ಹೊಟ್ಟೆಯಲ್ಲಿ ಬೆಂಕಿ ಮಲಬದ್ಧತೆಯಾಗುವುದು, ಮೂತ್ರ ಹಳದಿ ಬಣ್ಣದಲ್ಲಿದ್ದು ಉರಿ ಉಂಟಾಗುವುದು, ದೇಹವು ತುಂಬಾ ಆಯಾಸಕ್ಕೆ ಒಳಪಡುವುದು, ಇತ್ಯಾದಿ ಇನ್ನೂ ಅನೇಕ ಲಕ್ಷಣಗಳು ತೋರಿಬರುವ ರೋಗಗಳು ಉಷ್ಣ ಪಿತ್ತ ಉದ್ರೇಕದಿಂದಲೇ ಎಂದು ತಿಳಿಯಬೇಕಲ್ಲ. ಆದರೆ **ಕಂಪೌಂಡು ಸಿರಪ್ ಕಾರ್ಡಸ್** ಎಂಬುದನ್ನು ಹೊಟ್ಟೆಗೆ ಸೇವಿಸಿಕೊಂಡು, **ಪಿತ್ತಶಮನ** ತೈಲವನ್ನು ತಲೆಗೆ ಉಪಯೋಗಿಸಿಕೊಂಡಲ್ಲಿ ಮೇಲಿನ ಎಲ್ಲಾ ರೋಗಗಳು ಗುಣವಾಗಿ ದೇಹಕ್ಕೆ ಆರೋಗ್ಯ ಉಂಟುಮಾಡುವದು. ಕ್ರಯ ಪಿತ್ತಶಮನ ತೈಲ 8 ಔನ್ಸಿಗೆ ರೂ. 2—12—0 ಕಂಪೌಂಡ್ ಸಿರಪ್ ಕಾರ್ಡಸ್ 8 ಔನ್ಸಿಗೆ ರೂ. 3—8—0

ಮಲೆಜ್ವರಕ್ಕೆ ಮಲೇರಿಯಾನ.

ಹಿಮಾಮಗೆ ಮಲೇರಿಯಾನ ಮದ್ದು ಎಲ್ಲಾ ತರದ ಜ್ವರಗಳನ್ನೂ ಗುಣಪಡಿಸಿ, ಗಡ್ಡೆಯನ್ನು ಕರಗಿಸಿ ಬಿಡುವುದರಲ್ಲಿ ಇದಕ್ಕೆ ಯಾವ ಮದ್ದೂ ಸಾಗದು. ಕ್ರಯ. 8 ಔನ್ಸಿಗೆ ರೂ. 1—8—0, ಅರ್ಧ ಡಜನ್ ರೂ. 8—8—0, ಡಜನ್ 1 ಕ್ಕೆ ರೂಪಾಯಿ 16—8—0.

☞ ಟಿಕ್ಚರ್, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ. ಪ್ರಾಯಕ್ಕೆ ದೃಷ್ಟಿಗೆ ಸರಿಯಾದ ಒಳ್ಳೇ ನಮೂನೆವಾಗು ಜರ್ಮನ್ ಕನ್ನಡಕಗಳು ಸಿಕ್ಕುತ್ತವೆ. ಹೊಸದಾಗಿ ಛಾಪಿಸಿರುವ **ಆರೋಗ್ಯ ಭಾಗ್ಯದ ನೀತಿಸೂತ್ರ** ಎಂಬ ಪುಸ್ತಕವನ್ನು ಓದಿಕೊಳ್ಳುವ ಅಪೇಕ್ಷಕರಿಗೆ ಧರ್ಮಾರ್ಥ.

[25] **ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.**

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸರ್ವ ಸೀತಾರೋಹಣಮಾಡಿದಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯನ್ನು ಕಂಡುಹಿಡಿಯಲ್ಪಟ್ಟು, ಸಾವಿರಾರುವರುಷಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವ ಪ್ರಸಿದ್ಧವಾದ ನಶ್ಯದ ಪುಡಿಯು ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂದು ತಲೆನೋವು, ತಲೆಶೂಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ... ಸೆ ಪುಗಸಟ್ಟೆ ಕಳುಹಿಸಲಾದೀತು. ಬುಡ್ಡಿ ಒಂದ... ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦. ಮದರಾಸ (8)

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೨ನೆಯ ಆವೃತ್ತಿ (ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೨ನೆಯ ಆವೃತ್ತಿ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	೧ ಆಣೆ
ಬಸವಾದಿ ನಿಜತತ್ತ್ವದರ್ಪಣ ೩ನೆಯ ಆವೃತ್ತಿ	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮರ್ಶ	೨ ಆಣೆ
ಶಿವತತ್ತ್ವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	೨ ಆಣೆ ೬ ಪೈ.
ವೀರಶೈವಾಚಾರವಿಧಿ ೨ಯ ಆವೃತ್ತಿ	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	೩ ಆಣೆ
ಸನ್ಯಾಸಾಶ್ರಮ ವಿಮರ್ಶ ಶಕ್ತಿಸ್ಥಿರೀಕರಣ ೨ನೆಯ ಆವೃತ್ತಿ	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಸಟೀಕ ರಚಿತಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ	೮ ಆಣೆ
ಬಸವಸಿದ್ಧಾಂತ ದಿವಾಕರ ೨ನೆಯ ಆವೃತ್ತಿ	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ ಬಹು ಪ್ರಾಚೀನಗ್ರಂಥ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಮತಸ್ಥಾಪನಾಚಾರ್ಯರು	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಾಗುವದಿಲ್ಲ. ೫ ರೂಪಾಯಿಗಳ ಮೇಲ್ಪಟ್ಟು ತರಿಸುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಓಂ.

ಸುಸಮಯ ! ಸಾಲವು ದೊರಕುವುದು !! ಅಪೂರ್ವಲಾಭ !!!

ದಿ ಏಂಜಲ್ಸ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ ಕೆಲಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ ಅವರ ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲವನ್ನು ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Life Poticies) ಜಾಮೀನಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವರೆಗೆ ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಅದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕುಗಳಲ್ಲಿಯೂ ಬೇಕಾಗಿದೆ. ಹೆಚ್ಚಾದ ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (9)

ಮೆ|| ಎಂ. ಜಿ. ಆರಾಧ್ಯ,
ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, **ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಅಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಫೆಬ್ರವರಿ ೧೯೩೧ [ಸಂಚಿಕೆ ೪೦

ಸಿದ್ಧಾಂತಸಾರಾವಳಿ.

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಅದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ.**

ಆಗಮಪರಿಜ್ಞಾನ.

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಅದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನದ ಭವಿಷ್ಯ ರಾಜ್ಯಾಂಗರಚನೆಯ ಮೇಲೆ ಚರ್ಚೆಗಳು.

ಈ ತಿಂಗಳು 26 ನೆಯ ತಾರೀಖಿನ ದಿವಸ ಮುಖ್ಯಮಂತ್ರಿಗಳಾದ ರಾಂಸೇ ಮಾಕ್ಡೋನಾಲ್ಡರವರು ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಮೆಂಬರರ ಅವಗಾಹನೆಗೆ ತರಲೋಸುಗ ರೌಂಡ್‌ಟೇಬಲ್ ಸಮ್ಮೇಳನದ ಕಾರ್ಯಕಲಾಪಗಳನ್ನು ವಿವರಿಸಿ ಒಂದು ಭಾಷಣವನ್ನು ಮಾಡಿದರು. ಅದರ ಮುಖ್ಯ ಸಾರಾಂಶವೇನೆಂದರೆ:—ಈ ಸಭೆಯು ಪ್ರತಿಯೊಬ್ಬ ಮೆಂಬರೂ ರೌಂಡ್‌ಟೇಬಲ್ ಸಮ್ಮೇಳನದ ಕಾರ್ಯಕಲಾಪಗಳನ್ನು ಒಪ್ಪಲಿ; ಒಪ್ಪದಿರಲಿ: ಭರತಖಂಡದಿಂದ ಬಂದಿದ್ದ ಮೆಂಬರರಿಗೆ ನಾವು ತುಂಬಾ ಕೃತಜ್ಞರಾಗಿರಬೇಕು. ಅವರು ತಮ್ಮ ಗೌರವಕ್ಕೆ ಬಾಧೆಬಂದರೂ ಲಕ್ಷಿಸದೆ ಅನೇಕ ತೊಂದರೆಗಳನ್ನು ಸಹಿಸಿ ಬಹು ಉತ್ಸಾಹಪಟ್ಟು ಈ ಸಭೆಗೆ ಬಂದಿದ್ದರು. ರೌಂಡ್ ಟೇಬಲ್ ಸಮ್ಮೇಳನವನ್ನು ಜಯಪ್ರದವಾಗಿ ನಡೆಯಿಸುವುದಕ್ಕೆ ಸೈಮನ್ ರಿಪೋರ್ಟೇ ಆಧಾರಭೂತವಾಯಿತು. ಅನಂತರ ಇಂಡಿಯಾ ಗವರ್ನಮೆಂಟಿನ ಹಾಗೂ ಕೆಲವು ಪ್ರಾಂತಿಕಸರ್ಕಾರಗಳ ಸಲಹೆಗಳೂ ನೆಹರೂ ರಿಪೋರ್ಟೂ ತುಂಬಾ ಸಹಾಯಮಾಡಿದುವು. ಭಾರತೀಯರೂ ನಾವೂ ಏಕೀಭವಿಸಿ ನಮ್ಮ ಮತ್ತು ಅವರ ಅಭಿಪ್ರಾಯಗಳನ್ನು ನಿರಾಕ್ಷೇಪ್ಯವಾಗಿಯೂ ಸೌಹಾರ್ದದಿಂದಲೂ ಆಲೋಚಿಸಿ ಮುಂದಿನ ರಾಜ್ಯಾಂಗರಚನೆಗೆ ತಕ್ಕ ಯೋಜನೆಗಳನ್ನು ಮಾಡಲು ಅನುಕೂಲವಾಯಿತು. ಹಿಂದುಸ್ಥಾನದ ವಾತಾವರಣದಲ್ಲಿ ತುಂಬಿರುವ ಅವಿಶ್ವಾಸ ಮತ್ತು ಸಂಶಯಗಳನ್ನು ನಿವಾರಣೆಮಾಡಿ ವಿಶ್ವಾಸ ಮತ್ತು ಪರಸ್ಪರ ನಂಬಿಕೆಯನ್ನು ಸ್ಥಾಪಿಸಬೇಕೆಂಬ ಉತ್ಕಟೇಚ್ಛೆಯಿಂದ ಹಿಂದುಸ್ಥಾನದ ಸಾಮಂತರಾಜರೂ, ನಿಮ್ನ ಸಮಾಜಗಳ ಹಾಗೂ ಆಗ ಹಿಂದೂ ಮಹಮ್ಮದೀಯ ಪ್ರತಿನಿಧಿಗಳೂ ಇಲ್ಲಿಗೆ ಬಂದು ಸೂಕ್ತಸಲಹೆಗಳನ್ನು ಕೊಟ್ಟು ತಮ್ಮ ದೇಶಕ್ಕೆ ಹಿಂದಿರುಗಿರುವರು. ಭಾರತೀಯರಿಗೆ ಕೊಟ್ಟಿರುವ ಅಭಯವಚನವನ್ನು ನಡೆಯಿಸಲು ಸಭೆಯು ಎಲ್ಲಾ ಪಕ್ಷಗಳ ಮೆಂಬರರ ಸಹಾನುಭೂತಿಯು ಅತ್ಯವಶ್ಯಕವಾಗಿದೆ.

ಕೇಂದ್ರಸರ್ಕಾರವು ನ್ಯಾಯವಿಧಾಯಕ ಸಭೆಗೆ ಉತ್ತರವಾದಿಯಾಗಿರುವಂತೆ ಭರತಖಂಡದ ಭಾವಿರಾಜ್ಯಾಂಗರಚನೆಯನ್ನು ಮಾಡಬೇಕಾಗಿದೆ. ಹಾಗಿಲ್ಲವಾದರೆ ಎಲ್ಲಾ ಪ್ರಯತ್ನಗಳೂ ವಿಫಲವಾಗುತ್ತಿದ್ದುವು. ಅದುದರಿಂದ ಅದನ್ನು ಜಾರಿಯಲ್ಲಿ ತರುವುದು ಅವಶ್ಯಕರ್ತವ್ಯವಾಗಿದೆ ಎಂದು ಹೇಳಿ ಹಣಕಾಸಿನವಿಚಾರ, ಶಾಸನ, ರಕ್ಷಣೆ, ಚಿಕ್ಕಸಮಾಜಗಳ ಪ್ರಶ್ನೆ ಇವುಗಳನ್ನೆಲ್ಲಾ ವಿಮರ್ಶೆಮಾಡಿ ಉಪಸಂಹಾರ ಭಾಷಣದಲ್ಲಿ ಹೀಗೆ ಹೇಳಿದರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಸೈನ್ಯವನ್ನಿಟ್ಟು ದಬ್ಬಾಳಿಕೆಯಿಂದ ಪ್ರಭುತ್ವಮಾಡಬೇಕು. ಇಲ್ಲವೇ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ವಚನಕೊಟ್ಟಂತೆ ಅವರ ಮನೋಭೀಷ್ಟಗಳನ್ನು ಪೂರ್ತಿ ಮಾಡಬೇಕು. “ಅವರ ಮನೋಭೀಷ್ಟಗಳನ್ನು ಪೂರ್ತಿಮಾಡದಿದ್ದರೆ ಏನಾಗುವುದು ? ನಾವು ಬಲಾತ್ಕಾರದಿಂದ ಆಳಬೇಕಾಗುವುದು. ದಬ್ಬಾಳಿಕೆಯನ್ನು ಪ್ರಾರಂಭಿಸಬೇಕಾಗುವುದು. ಇದು ಬಹು ವಿಲಕ್ಷಣವೂ, ಅಸಹನೀಯವೂ ಆದ ದಬ್ಬಾಳಿಕೆಯಾಗಿದೆ. ಇದರಿಂದ ನಮಗೆ ಜಗತ್ತಿನಲ್ಲಿ ಗೌರವವೂ ಬರುವಹಾಗಿಲ್ಲ. ನಮ್ಮ ಕಾರ್ಯವು ಜಯವಾಗುವ ಹಾಗೆಯೂ ಇಲ್ಲ. ಜನಾಂಗದ ಪ್ರಜೆಗಳಮೇಲೆ ಅದರಲ್ಲೂ ಹೆಂಗಸರು ಚಿಕ್ಕಮಕ್ಕಳುಗಳಮೇಲೆ ದಬ್ಬಾಳಿಕೆಮಾಡುವುದು ವಿಲಕ್ಷಣವಾದುದೇ ಸರಿ! ಸಂಸ್ಥೆಗಳ ಮತ್ತು ಸಂಘಗಳ ಮೇಲೆ ಮಾತ್ರವೇ ದಬ್ಬಾಳಿಕೆಯಲ್ಲ; ಇಡೀ ರಾಷ್ಟ್ರದಮೇಲೆ ದಬ್ಬಾಳಿಕೆ ಮಾಡಬೇಕಾಗುವುದು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಸೈನಿಕರನ್ನು ನಡೆಯಿಸಿ ಮಿಲಿಟರಿ ಕಾಯಿದೆಯಿಂದ ಪ್ರಭುತ್ವಮಾಡಲು ತಯಾರಾಗಿದ್ದರೆ ಹಿಂದುಸ್ಥಾನದ ರಾಜಕೀಯ ಪ್ರಗತಿಗೆ ಸಹಾನುಭೂತಿಯನ್ನು ತಿರಸ್ಕರಿಸಿರಿ. ಇಡೀ ಜನಾಂಗವನ್ನು ಮಾತ್ರವಲ್ಲದೆ ಈಗಿನ ಕಾಲದ ಹೊಸ ಚೈತನ್ಯವನ್ನೂ ಸಹ ಒಗ್ಗಬಡಿಯಲು ಸಿದ್ಧರಾಗಿದ್ದರೆ ನಾವು ಮುಂದುವರಿಯುವುದಕ್ಕೆ ವಿಘ್ನಮಾಡಿರಿ. ನಮ್ಮಲ್ಲಿ ರಾಜಕೀಯ ಜಾಣ್ಮೆಯಿಲ್ಲವೆಂದು ಜಗತ್ತಿನ ಜನರು ತಿಳಿದುಕೊಳ್ಳುವಂತೆಯೂ ನಮ್ಮ ಗೌರವ ಮತ್ತು ಒಳ್ಳೆಯ ಹೆಸರಿಗೆ ಕುಂದುಕಬರುವಂತೆಯೂ ಮಾಡುವ ಹಾಗಿದ್ದರೆ ಮುಂದಿನ ಕೆಲಸಕ್ಕೆ ವಿಘ್ನಮಾಡಿರಿ. ಹಾಗಲ್ಲದೆ ಹಿಂದುಸ್ಥಾನಕ್ಕೂ ಇಂಗ್ಲೆಂಡಿಗೂ ಪರಸ್ಪರ ನಂಬಿಕೆಯುಂಟಾಗಿ, ಹಿಂದುಸ್ಥಾನವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸುಖವಾಗಿದ್ದು ನಿಮ್ಮನ್ನು ಕೃತಜ್ಞತೆಯಿಂದ ಸ್ಮರಿಸುವ ಹಾಗೆ ಮಾಡಬೇಕೆಂದು ನಿಮ್ಮ ಇಚ್ಛೆಯಿದ್ದಲ್ಲಿ ರೌಂಡ್‌ಟೇಬಲ್ ಸಮ್ಮೇಳನದ ಕಾರ್ಯಕಲಾಪಗಳನ್ನು ಒಪ್ಪಿ ಸರಕಾರದವರು ಮುಂದೆ ಮಾಡಬೇಕಾದ ಕಾರ್ಯದ ವಿಷಯದಲ್ಲಿ ಸೂಕ್ತಸಲಹೆಗಳನ್ನು ಕೊಡಿರಿ.

ಸ್ವೀಕಾರ.

ಮಿರಜ ಸಂಸ್ಥಾನಕ್ಕೆ ಸೇರಿದ ಲಕ್ಷ್ಮೇಶ್ವರದ ಮ|| ರಾ|| ಪಾಟೀಲ ಹೊಳಲಪ್ಪಗೌಡರು ಕಳೆದ ಮಕರಸಂಕ್ರಾಂತಿಯ ದಿವಸ ಶಿವೈಕ್ಯರಾದ ಸಮಯದಲ್ಲಿ ಸದರಿಯವರ ಪೌತ್ರರಾದ ಮ|| ರಾ|| ಪಾಟೀಲ ಸಿದ್ಧನಗೌಡರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ವೇ|| ಹಿರಿಯಮಠದ ಕಾಶಯ್ಯನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ಹಿಮವತ್ಕೇದಾರ್ಕ ಕೋಲಾವ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ.

ಶಿರ್ಯಗಾಂದೋಲನಮಹೋತ್ಸವಾಹ್ವಾನಪತ್ರಿಕಾ.

ಪಂಚಾನನ ಕನಾದಸ್ಥಿತಾನ್ |
ಪಂಚಾಕ್ಷರ ಮನೂಪವಾನ್ |
ಪಂಚಸೂತ್ರ ಕೃತೋವಂದೇ |
ಪಂಚಾಚಾರ್ಯಾನ್ ಜಗದ್ಗುರೂನ್ ||

ಈ ಮೂಲಕ ಸಮಸ್ತ ಭಕ್ತಮಾಹೇಶ್ವರರಿಗೆ ವಿನಯಪೂರ್ವಕ ಸೂಚಿಸುವದೇನಂದರೆ, ಮೇಲ್ಕಂಡ ಮಹಾಸ್ವಾಮಿಗಳವರ "ಅಡ್ಡಪಲ್ಲಕಿ" ಮಹೋತ್ಸವವು ೭೨ ಬಿರುದಾವಳಿಗಳೊಡನೆ ದೇವದುರ್ಗ ತಾ|| ಕಸಬಾ ಜಾಲಿಹಳ್ಳಿಗ್ರಾಮದಲ್ಲಿ ಇದೇ ಪ್ರಮೋದೂತನಾಮ ಸಂವತ್ಸರದ ಮಾಘ ಬ|| ೫ ಶನಿವಾರ ಉದಯ (೮) ಗಂಟೆಗೆ ಸದರಿ ಮಹಾಸ್ವಾಮಿಗಳವರಿಗೆ ಪ್ರಾಚೀನದಿಂದಿರುವ ಆರ್ಡರ್ ಪ್ರಕಾರ ಸದರಿ ಮಹೋತ್ಸವವು ಜರಗುತ್ತದಾದ್ದರಿಂದ ತಾವು ತಮ್ಮ ಪುತ್ರ, ಮಿತ್ರ, ಕಳತ್ರಾದಿ ಪರಿವಾರದೊಡನೆ ಆಗಮಿಸಿ ಮಹಾಸ್ವಾಮಿಗಳವರ ದರ್ಶನ ಫಲಾಶೀರ್ವಾದಂಗಳಂ ಪಡೆದು ಕೃತಾರ್ಥರಾಗಬೇಕೆಂದು ಕೋರುವ.

ಸೆಕ್ರೆಟರಿಗಳು — ದೇಸಾಯಿ ಗೋವಿಂದರಾವ್ ಸೆಟ್ರು, ಮಠದ ವಿರೂಪಾಕ್ಷಯ್ಯ

ಸ್ವಾಗತ ಸಂಘಾಧ್ಯಕ್ಷರು — ಕೋ|| ಪಾ|| ಕೆರೆ ಲಿಂಗಪ್ಪ, ಶಿ|| ಮಹಾದೇವಪ್ಪ ಸಾಹುಕಾರ

ವ್ಯವಸ್ಥಾಪಕರು

ಮಾ|| ಪಾ|| ವಿರೂಪಾಕ್ಷಗೌಡ
ಮೊಸಿನಕಾಯಿ ಮಹಾದೇವಪ್ಪ

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಹಿಮಾಲಯಪ್ರಾಂತದ ವೃತ್ತಾಂತ.

ಮಳೆಗಾಲವು ಹೋಗಿ ಚಳಿಗಾಲವು ಬಂದಿತು. ಈ ಚಳಿರಾಜನ ಭಯಕ್ಕೆ ಆಕಾಶದಲ್ಲಿರುವ ಮೋಡಗಳು ಹಿಮರೂಪದಿಂದ ಪರ್ವತಗಳ ಮೇಲೆ ಹಗಲು ರಾತ್ರಿ ಎಡಬಿಡದೆ ದೇವತೆಗಳ ಮೇಲೆ ಪುಷ್ಪವೃಷ್ಟಿ ಸುರಿಸುವಂತೆ ಸುರಿಸುತ್ತಿರುವವು. ಗಿರಿಗಳು ಚಳಿಯ ಭಯಕ್ಕೆ ಸ್ವಚ್ಛ ಮಲ್ಲಿನ ಬಟ್ಟೆಗಳನ್ನು ಹೊದ್ದುಕೊಂಡಿರುವವೋ ಎಂಬುವಂತೆ ತೋರುತ್ತಿರುವವು. ಪರ್ಣ, ಫಲ, ಪುಷ್ಪಾದಿಗಳು ವೃಕ್ಷಗಳನ್ನು ಬಿಟ್ಟು ಭೂಮಿಯ ಆಶ್ರಯವನ್ನು ಹೊಂದಿರುವವು. ವೃಕ್ಷಾದಿಗಳು ಕುಂಭಸ್ನಾನಕ್ಕೆ ಬಂದಿರುವ ನಗ್ನರಾದ ಸನ್ಯಾಸಿಗಳಂತೆ ಕಾಣುತ್ತಿರುವವು. ಬಂಡುಗಾರರ ಹಾವಳಿಗೆ ಹೆದರಿ ಜನರು ತಮ್ಮ ಆತ್ಮರಕ್ಷಣೆಗಾಗಿ ಗಿರಿಗುಹೆಗಳನ್ನು ಸೇರಿಕೊಂಡಂತೆ ಈ ಪ್ರದೇಶದಲ್ಲಿಯ ಜನರು ಚಳಿಯ ಭಯಕ್ಕೆ ಅಂಜಿ ಮನೆಯನ್ನು ಬಿಟ್ಟು ಹೊರಗೆ ಹೊರಡದೆ ಅಗ್ನಿಯ ಆಶ್ರಯವನ್ನು ಮಾಡಿಕೊಂಡಿರುವರು. ಸಿಂಹನ ಭಯಕ್ಕೆ ಅರಣ್ಯದಲ್ಲಿರುವ ಪಶುಗಳು ಆ ಅರಣ್ಯವನ್ನು ಬಿಟ್ಟು ಬೇರೆ ಅರಣ್ಯಕ್ಕೆ ಹೋಗಿ ಓಡಿಹೋಗುವವೋ ಅದರಂತೆ, ಚಳಿಯ ಭಯಕ್ಕೆ ಈ ಪ್ರದೇಶದಲ್ಲಿಯ ಪಶುಪಕ್ಷ್ಯಾದಿಗಳು ಅನ್ಯಪ್ರದೇಶಕ್ಕೆ ಹೋಗಿರುವವು. ನದೀಸರೋವರವಾಪೀಕೂಪಗಳು ಕುಪ್ಪದಂತೆ ಹೆಪ್ಪುಗೊಂಡಿರುವವು. ಈ ಚಳಿರಾಜನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಕಡಿಮೆಯಾಗಿದೆ. ಇರಲಿ; ಮುಂದಿನ ಸಮಾಚಾರ! ಕೇದಾರಪೀಠಾಧಿಪತಿಗಳಾದ ಶ್ರೀ ಜಗದ್ಗುರು ನೀಲಕಂಠ ಮಹಾಪ್ರಭುಗಳು ಆಯುರ್ವೇದವಿದ್ಯಾ ಪ್ರಚಾರಕ್ಕಾಗಿ ಸ್ಥಾಪಿಸಿದ ಆಯುರ್ವೇದ ಮಹಾವಿದ್ಯಾಲಯದ ಪರೀಕ್ಷೆಯಾಗಿ ಅದರ ರಿಜಲ್ಟು ಹೊರಟಿತು. ಈ ಪರೀಕ್ಷೆಯಲ್ಲಿ ಶ್ರೀ ರಾಮಸುಂದರ, ಶ್ರೀ ರುದ್ರದತ್ತ ಈ ಉಭಯರು ವೈದ್ಯಶಾಸ್ತ್ರೀಯ ಪರೀಕ್ಷೆಯಲ್ಲಿ ಪಾಸಾದರೆಂದು ನಮಗೆ ಸಂತೋಷವಾಯಿತು. ಮಹಾಗುರುಗಳ ಆಶೀರ್ವಾದದಿಂದ ಈ ಉಭಯರು ಶಾಸ್ತ್ರಿಪದವೀಧರರಾದರು. ಈ ಮಹಾಗುರುಗಳು ಸ್ವಾರ್ಥತ್ಯಾಗಿಗಳೂ ಪಕ್ಷಪಾತರಹಿತರೂ ಎಂಬುದು ಈ ಮಹಾಶಯರ ಕರ್ತವ್ಯದಿಂದಲೇ ಕಂಡುಬರುವದು. ಈ ಪ್ರಭುಗಳ ಕೀರ್ತಿಯನ್ನು ಈ ಪ್ರದೇಶದಲ್ಲಿಯ ಪ್ರತಿಯೊಂದು ಸಮಾಜದವರು ಕೊಂಡಾಡುತ್ತಿರುವರು. ಈ ಮಹಾಪ್ರಭುಗಳು ಸ್ಥಾಪಿಸಿರುವ ವ್ಯಾಕರಣ, ಜ್ಯೋತಿಷ, ಆಯುರ್ವೇದ, ವೈದಿಕ ಮೊದಲಾದ ಅಷ್ಟದಶ ವಿದ್ಯಾಲಯಗಳಲ್ಲಿ ಸದ್ಯ 300 ಜನ ವಿದ್ಯಾರ್ಥಿಗಳು ಓದುತ್ತಿರುವರು. ಶ್ರೀ ಕೇದಾರನಾಥನು ಶ್ರೀ ೧೦೮ ಜಗದ್ಗುರು ಮಹಾಸನ್ನಿಧಿಗೆ ದೀರ್ಘಾಯುಷ್ಯವನ್ನುಂಟುಮಾಡಲೆಂದು ಪ್ರಾರ್ಥಿಸುವ,

ಎಸ್. ಎಲ್. ಶರ್ಮಾ, ಉಖಾಮಠ.

ಈಗ ಎಲ್ಲರೂ ಸೆನ್ಸೆಸ್‌ನಲ್ಲಿ ವಿಶ್ವಕರ್ಮ ಎಂದು ಬರೆಯಿಸಬೇಕು.

ಸರ್ವಪ್ರಜಾಹಿತೈಷಿ, ಬ್ರಹ್ಮಶ್ರೀ ಎಸ್. ವಿ. ಗುರುಮೂರ್ತಿ ಆಚಾರ್ಯಸ್ವಾಮಿಗಳು ಈ ಮೂಲಕ ತಿಳಿಯಪಡಿಸುವುದೇನಂದರೆ, ಮೈಸೂರುಸಂಸ್ಥಾನದಲ್ಲಿ ಇದುವರೆಗೆ "ಪಂಚಾಲ" ಅಥವಾ "ಅಕ್ಕಸಾಲಿಗ" ಎಂಬುದಾಗಿ ಕರೆಯಲ್ಪಡುವ ಪಂಗಡವನ್ನು, ಇನ್ನು ಮುಂದೆ "ವಿಶ್ವಕರ್ಮ" ಎಂಬುದಾಗಿ, ಸರ್ಕಾರದ ಎಲ್ಲಾ ಕಾಗದಪತ್ರಗಳಲ್ಲಿಯೂ, ರಿಕಾರ್ಡುಗಳಲ್ಲಿಯೂ ತಿದ್ದಿ ಬರೆದುಕೊಳ್ಳಬೇಕೆಂದೂ, ಮತ್ತು ಈ ಜನಾಂಗದವರಿಗೆಲ್ಲಾ "ವಿಶ್ವಕರ್ಮ" ಎಂಬ ಸ್ಪೆಷಲ್ ಹೆಡ್ಡಿಂಗನ್ನು ಮಾಡಿಕೊಟ್ಟಿರಬೇಕೆಂದು, [illegible] ರಿಕಾರ್ಡ್ ಮಾಡಿದ್ದರ ಮೇಲೆ, 1929 ನೇ ದಸರಾ ಅಧಿವೇಶನದ ಪ್ರಜಾಪ್ರತಿನಿಧಿಮಹಾಸಭೆಯಲ್ಲಿ, ನಾವು ಸೂಚಿಸಿದ ಮೇಲ್ಕಂಡ 9 ನೆಯ ರೆಸಲ್ಯೂಷನನ್ನು ತುಂಬಾ ಚರ್ಚೆ ಮಾಡಿ ಅಧ್ಯಕ್ಷರನ್ನೂ ಎಲ್ಲಾ ಮತದ ಪ್ರತಿನಿಧಿಗಳನ್ನೂ ನಮ್ಮ ಮತಧರ್ಮಶಾಸ್ತ್ರರೀತಿಯಿಂದ ಒಪ್ಪಿಸಿ, ಆ ಮಹನೀಯರುಗಳೆಲ್ಲರ ಸಮ್ಮತಿಯನ್ನು ಪಡೆದು, ಪ್ಯಾಸ್ ಮಾಡಿಸಿದ ಮೇಲೆ ಸದರಿ ನಮ್ಮ ಅಭಿಪ್ರಾಯವನ್ನು ಜಾರಿಗೆ ತರಲು, ನಮ್ಮ ಶ್ರೀಮನ್ಮಹಾರಾಜರವರ ಘನಸರ್ಕಾರದವರು ಆರ್ಡರ್ ಮಾಡಿರುತ್ತಾರೆ. ಸದರಿ ಆರ್ಡರ್ ಕಾಪಿಗಳು ನಮ್ಮಲ್ಲಿ ಇರುತ್ತವೆ.

ಆದಕಾರಣ, ಮೈಸೂರು ಸರ್ಕಾರದ 1931 ನೆಯ ಸೆನ್ಸಸ್ ಕೋಡ್ 3 ನೆಯ ಭಾಗದ 23 ನೆಯ ಪೇಜು, ಜಂ. ನಂ. 28 ನೆಯ ಕಾಲಂನಲ್ಲಿ ನಮೂದಿಸಿರುವ ಒಳಜಾತಿ ಮತ್ತು ಒಳಪಂಗಡಗಳಿಗೆ ಉದಾಹರಣೆಯು ನಮ್ಮ ಮತಸಿದ್ಧಾಂತಕ್ಕೆ ಸಮರ್ಪಕವಾಗಿಲ್ಲ. ಆದುದರಿಂದ, ಮಹಾಜನಗಳು ಅಲ್ಲಲ್ಲಿ ಮೀಟಿಂಗ್ ಮಾಡಿ ಇದನ್ನು ರದ್ದುಪಡಿಸಲು ಸರ್ಕಾರಕ್ಕೆ ತಿಳಿಯಪಡಿಸಿರಿ. ಮತ್ತು ಸೆನ್ಸಸ್ ಷೆಡ್ಯೂಲ್ ಫಾರಂ (ಬಿ) ಕಾಲಂನಲ್ಲಿ, ನಮ್ಮಲ್ಲಿ ಪೌರುಷೇಯರಾಗಿ ಬಂದಿರುವ 1. ಮನು 2. ಮಯ 3. ತ್ವಷ್ಟೃ 4. ಶಿಲ್ಪಿ 5. ವಿಶ್ವಜ್ಞರೆಂದಾಗಲಿ, ಅಥವಾ ಆಂಧ್ರ, ದ್ರಾವಿಡ, ಕರ್ನಾಟಕ, ಮಹಾರಾಷ್ಟ್ರ, ಸೌರಾಷ್ಟ್ರರೆಂದಾಗಲಿ (ಅಂದರೆ ಪಂಚಕೃತ್ಯಗಳನ್ನು ನಮೂದಿಸಬೇಡಿರಿ) ಒಳಭೇದಗಳನ್ನು ಮಾತ್ರ ಹೇಳಿ, ಸೆನ್ಸಸ್ ಲೆಕ್ಕ ಬರೆದುಕೊಳ್ಳುವವರಿಗೆಲ್ಲಾ ತಿಳಿಯಿಸಿ, ಮೇಲ್ಕಂಡ ನಮ್ಮ ಮತ ಸಿದ್ಧಾಂತವನ್ನು ಸರಿಪಡಿಸಿಕೊಳ್ಳತಕ್ಕದ್ದು. ಮತ್ತು ನಾವುಗಳೆಲ್ಲಾ ಸಾಕ್ಷಾತ್ ಪರಶಿವ ಶ್ರೀ ವಿಶ್ವಕರ್ಮಪರಬ್ರಹ್ಮವಂಶದವರಾದ [illegible] "ಶೈವ" ರೆಂದು ಹೇಳಬೇಕಾದದ್ದೇ ಅನಾವ[illegible] ವಂಗರವು ಮಾತ್ರ "ಶೈವ" ರೆಂದರೆ ಉಳಿದ [illegible] ಎಂಬುದನ್ನು ಎಲ್ಲರೂ ಸ್ವಲ್ಪ ಆಲೋಚಿಸಿ ಹೇಳಿರಿ. [illegible] ಭೇದಭಾವವನ್ನು ಏರ್ಪಡಿಸಬಹುದೇ?

ಏಕೆಂದರೆ ನಾವು ಅಪೌರುಷೇಯರಲ್ಲ, ಪೌರುಷೇಯರು ಎಂಬುದಾಗಿ ಸರ್ಕಾರದಲ್ಲಿ ತೀರ್ಮಾನವಾಗಿರುತ್ತದೆ. ತಾ|| 15-12-1881 ರಲ್ಲಿ ಚಿತ್ರದುರ್ಗ ಜಿಲ್ಲಾ ಅದಾಲತ್ತು ಕೋರ್ಟಿನಲ್ಲಿ ನಡೆದ ಕೇಸ್ ನಂಬರ್ ಅಸಲ್ 205 ರಲ್ಲಿ, ಘನವನ್ನು ಹೊಂದಿದ ಜಡ್ಜ್ ದೇಕರ್ ದೊರೆಯವರು ಆರ್ಡರ್ ಮಾಡಿರುವ ತೀರ್ಮಾನವನ್ನು ತಪಶೀಲ್ ನೋಡಿ ತಿಳಿದುಕೊಳ್ಳಿರಿ. ಈ ರೀತಿ ಇರುವ, ನಮ್ಮ ವಿಶ್ವಕರ್ಮ ಮತಧರ್ಮಶಾಸ್ತ್ರವನ್ನು ಏನೇನೂ ತಿಳಿಯದೆ, ಅಹಂಕಾರದಿಂದ ಹೇಳುವ ಇನ್ನು ಮುಂದಿನ ಪ್ರಚಂಡ ಭಾಷಣಗಳಿಗೂ, ನಮ್ಮನ್ನು ನಿಂದಿಸುವವರ ಸುಳ್ಳುಮಾತಿಗೂ, ಲಿಖಿತಕ್ಕೂ ಯಾರೂ ಗಮನಕೊಡಕೂಡದು. ನಮ್ಮ ಸಮಾಜದ ಅಭಿವೃದ್ಧಿಗೋಸ್ಕರ ಏನೊಂದೂ ಒಳ್ಳೆಯ ಕಾರ್ಯಗಳನ್ನು ಮಾಡದೆ, ಅಲ್ಲಲ್ಲಿ ಮನಸ್ಸಿಗೆ ಬಂದಂತೆ ನೀತಿವಿರೋಧವಾದ ತಪ್ಪುಮಾತುಗಳನ್ನಾಡುವ ಅಯೋಗ್ಯರನ್ನೂ ಕೂಡ ನಂಬಬೇಡಿರಿ; ಯಾವಾಗಲೂ ಎಲ್ಲರೂ ಮೇಲ್ಕಂಡ ಧರ್ಮದಲ್ಲಿ ನಡೆದು, ನಮ್ಮ ಮತೋದ್ಧಾರಮಾಡಿರುವ ಮಹಾತ್ಮರನ್ನು ಪ್ರೀತಿಸಿ, ರಾಜಭಕ್ತಿ, ಗುರುಭಕ್ತಿ, ದೈವಭಕ್ತಿಯನ್ನು ಹೆಚ್ಚಿಸುತ್ತ, ಸದಾ ಶ್ರೀ ಕಾಳಿಕಾಂಬಾ ಕಮಟೇಶ್ವರೀ ಮಹಾದೇವೀ ಪಾದಪೂಜಕರಾಗಿ, ನಮ್ಮ ಬಾಬತ್ತು ಮದುವೆ ವಗೈರೆ ಕಲಶಕಾಣಿಕೆಗಳನ್ನು ಭಿನ್ನಾಭಿಪ್ರಾಯಪಡದೆ ಅಲ್ಲಲ್ಲಿ ಶಿಥಿಲವಾಗುತ್ತಿರುವ ಶ್ರೀ ದೇವಿಯ ಮಂದಿರಗಳಿಗೆ ಅರ್ಪಿಸಿ, ಅನಂತರ ಸಮಾಜಸೇವೆಮಾಡಲು ಅರ್ಹರೆಂಬುದಾಗಿ ತಿಳಿದು, ಮಠೋದ್ಧಾರಮಾಡಿಕೊಂಡು ಸುಖಪಡತಕ್ಕದ್ದು. ಮತ್ತು ನಮ್ಮ ಜನಗಳು ಈ ಮೂದರಿ ಸಂಸ್ಥಾನದಲ್ಲಿ ಪಡುತ್ತಿರುವ ಅನೇಕ ಕಷ್ಟನಷ್ಟಗಳನ್ನು, ಖುದ್ದು ಸಿಗಾಕೊಟ್ಟು ನಾವು ತಿಳಿದು ಪರಿಹಾರಮಾಡಲು ಶ್ರೀಮನ್ಮಹಾರಾಜರವರ ಘನಸರ್ಕಾರದವರನ್ನು, ಕಳೆದ ಪ್ರಜಾಪ್ರತಿನಿಧಿಮಹಾಸಭೆಗಳಲ್ಲಿ ಅನೇಕ ವಿಧವಾಗಿ ಒಪ್ಪಿಸಿ, ನಮ್ಮ ಜನಾಂಗದವರನ್ನು ಅಭಿವೃದ್ಧಿಗೆ ತರಲು ಮೊಟ್ಟಮೊದಲಾಗಿ ಸರ್ಕಾರದವರಿಂದ ಮಂಜೂರ್ಮಾಡಿಸಿರುವ, ನಮ್ಮ ಮತ ಸಂಬಂಧವಾದ ಅನೇಕ ಸರ್ಕಾರಿ ಮುಖ್ಯ ಆರ್ಡರುಗಳನ್ನು, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳತಕ್ಕದ್ದು; ಅಲ್ಲದೆ, ನಮ್ಮ ಮಠದ ವಿದ್ಯಾವಂತರು ಅವಿದ್ಯಾವಂತರಿಗೆ ಸದರಿ ವಿಚಾರಗಳನ್ನೆಲ್ಲಾ ಮನಸ್ಸಿಗೆ ನಾಟುವ ಹಾಗೆ ತಿಳಿಯಪಡಿಸಿ ಎಚ್ಚರಿಸುತ್ತಾರೆಂದು ಈ ಮೂಲಕ ಎಲ್ಲರೂ ಇನ್ನು ಮುಂದೆ ಪುಣ್ಯಸಂಪಾದಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತಿರುವ.

ಬ್ರಹ್ಮಶ್ರೀ ವಿಶ್ವಕರ್ಮ,
ಎಸ್. ವಿ. ಗುರುಮೂರ್ತಿ ಆಚಾರ್ಯಸ್ವಾಮಿಗಳು,
(ಮಾಜಿ ರೆಪ್ರಜೆಂಟೇಟೀವ್ ಅಸೆಂಬ್ಲಿ ಮೆಂಬರ್)
ಬ್ರಹ್ಮಚರ್ಯಾಶ್ರಮ,
ಶ್ರವಣಬೆಳಗೊಳ, (ಹಾಸನ ಡಿಸ್ಟ್ರಿಕ್ಟ್).

ಕೊರಟಗೆರೆತಾ|| ಸೀತಕಲ್ಲು.

ಈ ಗ್ರಾಮದಲ್ಲಿ ಸುಮಾರು ಮುನ್ನೂರು ಮನೆಗಳಿವೆ. ಗ್ರಾಮಪಂಚಾಯಿತಿ ಮೆಂಬರುಗಳಲ್ಲಿ ಪರಸ್ಪರ ಸೌಹಾರ್ದವಿಲ್ಲದೆ ಗ್ರಾಮನೈರ್ಮಲ್ಯದಕಡೆ ಯಾರ ದೃಷ್ಟಿಯೂ ಹೋಗಿರುವುದಿಲ್ಲ. ಬೀದಿಗಳಲ್ಲಿ ಹಳ್ಳಕೊಳ್ಳಗಳೂ, ಕಸದ ಗುಡ್ಡೆಗಳೂ ಹೆಚ್ಚಿ ಊರು ತುಂಬಾ ಗಲೀಜಾಗಿ ಆರೋಗ್ಯ ಕೆಡಲು ಕಾರಣವಾಗಿದೆ. ಊರಿನಲ್ಲಿಯ ಗಿಡಗಂಟೆಗಳು ಹೇಳತೀರದು. ಇಲ್ಲಿಯ ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲ್ ಅಭಿವೃದ್ಧಿಸ್ಥಿತಿಯಲ್ಲಿದೆ. ಹೆಡ್ಮಾಸ್ಟರು ಮುತವರ್ಜಿಯಿಂದ ಕೆಲಸಮಾಡುತ್ತಿದ್ದಾರೆ. ಈ ಊರಿನಲ್ಲಿರುವ ಬಸವೇಶ್ವರ ದೇವಸ್ಥಾನವು ತುಂಬಾ ಜೀರ್ಣವಾಗಿ ಹೋಗಿರುವುದರಿಂದ ಈ ಗ್ರಾಮವು ಈ ರೀತಿ ಪಾಳುಬೀಳಲು ಅವಕಾಶಕೊಟ್ಟಂತಾಗಿರುತ್ತದೆ. ಆದ್ದರಿಂದ ಗ್ರಾಮಸ್ಥರೂ ಮುಖ್ಯವಾಗಿ ಪಂಚಾಯಿತಿ ಮೆಂಬರುಗಳೂ ಶ್ರದ್ಧೆವಹಿಸಿ ಈ ದೇವಾಲಯವನ್ನು ಜೀರ್ಣೋದ್ಧಾರಮಾಡಬೇಕು. ಇದಕ್ಕಾಗಿ ದಯಾಳು ಸರ್ಕಾರದವರು ತಮ್ಮ ಗಮನವನ್ನು ಕೊಡುತ್ತಾರೆಂಬ ಭರವಸೆಯೂ ಇದೆ. ಈಚೆಗೆ ಸರ್ಕಾರದವರು ಈ ಗ್ರಾಮವನ್ನು ಕೊರಟಗೆರೆ ತಾಲ್ಲೋಕಿಗೆ ಸೇರಿಸಿರುತ್ತಾರೆ. ಇಲ್ಲಿಗೆ ತಾಲ್ಲೋಕ್ ಹೆಡ್‌ಕ್ವಾರ್ಟರ್ ಸುಮಾರು ಹದಿನೈದು ಮೈಲಿ ಫಾಸಲೆ ಇರುವುದರಿಂದ ಬಡಬಗ್ಗರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಸಬ್ ಡಿವಿಜನ್ ಮಧುಗಿರಿಗೆ ವರ್ಗಾಯಿಸಿರುವುದರಿಂದ ಜನಗಳ ಕಷ್ಟವಂತೂ ಹೇಳತೀರದು. ಮಧುಗಿರಿ ಸುಮಾರು ಇಲ್ಲಿಗೆ ಇಪ್ಪತ್ತೈದು ಮೈಲಿಗಳಿವೆ. ಆದ್ದರಿಂದ ದಯಾಳು ಸರ್ಕಾರದವರು ಕೃಪೆಮಾಡಿ ಮೊದಲಿನಂತೆಯೇ ಈ ಸುತ್ತುಮುತ್ತಿನ ಗ್ರಾಮಗಳನ್ನು ಹತ್ತುಮೈಲು ದೂರವಿರುವ ತುಮಕೂರಿಗೆ ಸೇರಿಸಿ ಪ್ರಜೆಗಳಿಗೆ ಅನುಕೂಲಮಾಡಬೇಕಾಗಿ ಪ್ರಾರ್ಥನೆ.

ಗ್ರಾಮಾಭಿಮಾನಿ.

ಮಹಾತ್ಮಾಗಾಂಧಿಯವರಾದಿಯಾಗಿ ರಾಷ್ಟ್ರೀಯ ಮುಖಂಡರ ಬಿಡುಗಡೆ.

ವೈಸರಾಯರವರ ನಿರೂಪ.

ಕಳೆದ ತಿಂಗಳು 25 ನೆಯ ತಾರೀಖಿನ ದಿವಸ ವೈಸರಾಯರವರು ಪ್ರಸಿದ್ಧಪಡಿಸಿರುವ ನಿರೂಪವೇನೆಂದರೆ—ಈ ತಿಂಗಳು 19 ನೆಯ ತಾರೀಖಿನ ದಿವಸ ಮುಖ್ಯ ಮಂತ್ರಿಗಳು ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಮಾಡಿದ ಭಾಷಣವನ್ನು ಭಾರತೀಯ ಮುಖಂಡರು ಆಲೋಚಿಸುವುದಕ್ಕೆ ತಕ್ಕ ಅನುಕೂಲ್ಯವನ್ನು ಒದಗಿಸಬೇಕೆಂಬ ಉದ್ದೇಶದಿಂದ ಪ್ರಾಂತಿಕ ಸರ್ಕಾರಗಳೊಂದಿಗೆ ಆಲೋಚನೆ ಮಾಡಿ, ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರಿಮಂಡಲದ ಸದಸ್ಯರನ್ನು ಯಾವ ಕರಾರುಗಳೂ ಇಲ್ಲದೆ ಬಿಡುಗಡೆಮಾಡಬೇಕೆಂದು ನಿರ್ಧರಿಸಿದ್ದೇನೆ. ಮತ್ತು ಕಾಂಗ್ರೆಸ್ ಕಮಿಟಿಯು ಅಕ್ರಮಕೂಟವೆಂದು ತೀರ್ಮಾನಿಸಿದ ಹಿಂದಿನ ಆಜ್ಞೆಯನ್ನು ರದ್ದುಪಡಿಸಿರುತ್ತೇನೆ. ಮುಖ್ಯ ಮಂತ್ರಿಗಳ ಭಾಷಣವನ್ನು ದೇಶದ ಮುಖಂಡರು ಶಾಂತರೀತಿಯಿಂದ ಆಲೋಚನೆ ಮಾಡಿ ಶಾಂತಿಸ್ಥಾಪನೆಯ ಕಾರ್ಯಕ್ಕೆ ನೆರವಾಗಿ ದೇಶದ ಅಭಿವೃದ್ಧಿಗೆ ಸಹಾಯ ಮಾಡುವರೆಂದು ನಂಬಿರುವೆನು.

ವೈಸರಾಯರವರ ಈ ಅಪ್ಪಣೆಯ ಮೇಲೆ ಈ ತಿಂಗಳು 26 ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರಾದಿಯಾಗಿ ಕೆಳಗೆ ಕಂಡ 24 ಜನ ಮುಖಂಡರನ್ನು ಸರ್ಕಾರದವರು ಬಿಡುಗಡೆ ಮಾಡಿದರು. (1) ಮಹಾತ್ಮಾಗಾಂಧಿ. (2) ಪಂಡಿತ ಜವಾಹರಲಾಲ್ ನೆಹರು. (3) ಸೇಟ್ ಜಮ್ನಾಲಾಲ್‌ಬಜಾಜ್. (4) ಮಿ|| ಶಿವಪ್ರಸಾದಗುಪ್ತ. (5) ಮೌಲಾನಾ ಅಬ್ದುಲ್‌ಕಲಾಮ್. (6) ಮಿ|| ಜಯರಾಮದಾಸ್ ದೌಲತ್‌ರಾಂ. (7) ಸರ್ದಾರ್ ಶಾರ್ದೂಲ್‌ಸಿಂಗ್ ಕವೀಶ್ವರ್. (8) ಸಿ. ರಾಜಗೋಪಾಲಾಚಾರ್. (9) ಸರ್ದಾರ್ ವಲ್ಲಭಭಾಯಿ ಪಟೇಲ್. (10) ಮಿ|| ಸೇನಗುಪ್ತ. (11) ಡಾ|| ಪಟ್ಟಾಭಿಸೀತಾರಾಮಯ್ಯ. (12) ಡಾ|| ಸತ್ಯಪಾಲ್. (13) ಮಿ|| ಹನುಮಂತರಾವ್ ಕೌಜಲಗಿ. (14) ಸರ್ದಾರ್ ಮಂಗಲಸಿಂಗ್. (15) ಲಾಲಾದುನಿಚಂದ್. (16) ಡಾ|| ಅನ್ಸಾರಿ. (17) ಮಿ|| ಮಥುರಾದಾಸ್ ತ್ರಿಕಂಜಿ. (18) ಮೌಲಾನಾಮಹ್ಮತ್‌ಯುತ್ತುಲ್ಲಾ. (19) ಮಿ|| ಸೈಯ್ಯದ್ ಅಬ್ದುಲ್ ಬ್ರೇಲ್ವಿ. (20) ಮಿ|| ಜಮ್ನಾದಾಸ್ ಮೆಹತಾ. (21) ಮಿ|| ಗೋವಿಂದಕಾಂತಮಾಲವೀಯ. (22) ಶ್ರೀಮತಿ ಸರೋಜಿನಿದೇವಿ. (23) ಮಿಸೆಸ್ ಸೇನಗುಪ್ತ. (24) ಶ್ರೀಮತಿ ಕಮಲಾದೇವಿ ನೆಹರು.

ಬೊಂಬಾಯಿಯಲ್ಲಿ ಅದ್ಭುತ ಸ್ವಾಗತ.

ಮಹಾತ್ಮಾಗಾಂಧಿಯವರು ಈ ತಿಂಗಳು 26 ನೆಯ ತಾರೀಖಿನ ದಿವಸ ಎರವಾಡಾ ಜೈಲಿನಿಂದ ಬಿಡುಗಡೆಹೊಂದಿ ಶ್ರೀಮತಿ ಸರೋಜಿನಿದೇವಿಯವರೊಂದಿಗೆ ಪ್ಯಾಸೆಂಜರ್ ಗಾಡಿಯಲ್ಲಿ ಕುಳಿತು 27 ನೆಯ ತಾರೀಖು ಪ್ರಾತಃಕಾಲ ಬೊಂಬಾಯಿಗೆ ಬಂದಿಳಿದರು. ಮಹಾತ್ಮರು ಬೊಂಬಾಯಿಗೆ ಬರುವರೆಂದು ತಿಳಿದ ಕೂಡಲೆ ಕಾಂಗ್ರೆಸ್ ಸ್ವಯಂಸೇವಕರು ಆ ಸುದ್ದಿಯನ್ನು ಪಟ್ಟಣದಲ್ಲೆಲ್ಲಾ ಹರಡಿದರು. ಪುರುಷರೂ, ಸ್ತ್ರೀಯರೂ ಮಕ್ಕಳೂ ಬೆಳಗಿನ ಝಾಮದಲ್ಲಿ ರಾಷ್ಟ್ರಧ್ವಜಗಳನ್ನು ಹಿಡಿದುಕೊಂಡು "ಮಹಾತ್ಮಾಗಾಂಧೀಕಿ ಜೈ" ಎಂದು ಜಯಘೋಷ ಮಾಡುತ್ತ ಬೋರಿಬಂದರ್ ಸ್ಟೇಷನ್ನಿನಲ್ಲಿ ಕಾದಿದ್ದರು. ಮಹಾತ್ಮರು ಬೆಳಗಿನ ಝಾವ 5½ ಘಂಟೆಗೆ ಬೊಂಬಾಯಿಯ ಸ್ಟೇಷನ್ನಿನಲ್ಲಿ ಇಳಿದ

ನಂತರ ಪುರನಿವಾಸಿಗಳು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಧೋಬಿತಲಾವ್ ಮಾರ್ಗವಾಗಿ ಮೆರವಣಿಗೆಯಿಂದ ಗಿರಗಾಂವಿಯಲ್ಲಿ ಮಹಾತ್ಮರಿಗಾಗಿ ಏರ್ಪಡಿಸಲ್ಪಟ್ಟಿದ್ದ ಬಿಡಾರಕ್ಕೆ ಕರೆದೊಯ್ದರು. ಮಹಾತ್ಮರು ಅಲ್ಲಿ ನೆರೆದಿದ್ದ ಲಕ್ಷೋಪಲಕ್ಷ ಜನರನ್ನು ನೋಡಿ ತಾವು ನನ್ನನ್ನು ಪ್ರೀತಿಸುವುದಾದರೆ ಮನೆಗೆ ಹೋಗಿ ರಾಟೆಯನ್ನು ನೂತು ನೂಲನ್ನು ತೆಗೆದುಕೊಂಡು ಸಮರ್ಪಿಸಿರಿ ಎಂದು ಅಪ್ಪಣೆ ಮಾಡಿದರು. ಅಧಿಕವಾದ ದಬ್ಬಾಳಿಕೆಗೆ ಗುರಿಯಾಗಿ ಕಳೆಗುಂದಿದ್ದ ಬೊಂಬಾಯಿನಗರಿಯು ಆ ದಿವಸ ತೇಜೋಮಯವಾಗಿ ಶೋಭಿಸುತ್ತಿದ್ದಿತು. ಜಯಜಯಧ್ವನಿಯು ನಭೋಮಂಡಲವನ್ನು ತುಂಬಿದ್ದಿತು. ಎತ್ತನೋಡಿದರೂ ಗಾಂಧಿಟೋಪಿಗಳೇ ಕಣ್ಣಿಗೆ ಬೀಳುತ್ತಿದ್ದವು. ಎಲ್ಲರ ಮುಖಗಳೂ ಮಂದಸ್ಮಿತದಿಂದ ಪ್ರಫುಲ್ಲಿತವಾಗಿದ್ದುವು. ಚಿಂತಾಕ್ರಾಂತವಾಗಿದ್ದ ಪಟ್ಟಣವು ಮಹಾತ್ಮರ ಆಗಮನದಿಂದ ಸಂತೋಷಸಾಗರದಲ್ಲಿ ಮುಳುಗಿತು.

ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ಸಾಯಂಕಾಲ 6 ಘಂಟೆಗೆ ಮೀಟಿಂಗನ್ನೇರ್ಪಡಿಸಿದ್ದರು. ಒಂದು ಸಾವಿರ ಜನ ಸ್ವಯಂಸೇವಕರು ಕೆಲಸಮಾಡುತ್ತಿದ್ದರು. ಆ ಸಭೆಗೆ ಸುಮಾರು 3 ಲಕ್ಷ ಜನರು ಸೇರಿದ್ದರು. ಪಟ್ಟಣದ ಮುಖಂಡರಾದ ಶ್ರೀಮತಿ ಹಂಸಾಮೆಹತಾ, ಶ್ರೀಯುತ ಕೆ. ಎಫ್. ನಾರಿಮನ್ ಮೊದಲಾದವರು 5 ಘಂಟೆಗೆ ಬಂದರು. ಜನಸಂದಣಿಯಲ್ಲಿ ಉಪನ್ಯಾಸವೇದಿಕೆಯ ಹತ್ತರ ಹೋಗುವುದು ಬಹು ಕಷ್ಟವಾಯಿತು. ಶ್ರೀಮತಿ ಸರೋಜಿನಿದೇವಿಯವರೂ ಸೇಟ್ ಜಮ್ನಾಲಾಲ್‌ಬಜಾಜ್‌ರವರೂ ಸಭೆಗೆ ಬಂದೊಡನೆಯೇ ಸಭಿಕರೆಲ್ಲರೂ "ಶ್ರೀಮತಿ ಸರೋಜಿನೀಕಿ ಜೈ" ಎಂದು ಜಯಘೋಷಮಾಡಿ ಆತ್ಮಾನಂದದಿಂದ ಸ್ವಾಗತಮಾಡಿದರು. 40 ಸಾವಿರ ಕೂಲಿಜನರು ಬ್ಯಾಂಡ್‌ಸಮೇತ ಕೆಂಪುನಿಶಾನೆಯನ್ನು ಹಿಡಿದುಕೊಂಡು ಮಹಾತ್ಮ ಗಾಂಧಿಯವರು ಬರುವುದಕ್ಕೆ ಬಿಟ್ಟಿದ್ದ ದಾರಿಯಲ್ಲಿ ಬಂದು ನಿಂತರು. ಮಹಾತ್ಮರು 6 ಘಂಟೆಗೆ ಸರಿಯಾಗಿ ಮೈದಾನದ ಪೂರ್ವದಿಕ್ಕಿನಲ್ಲಿ ಬಂದಿಳಿದರು. ಉಪನ್ಯಾಸ ವೇದಿಕೆಯ ಸಮೀಪಕ್ಕೆ ಹೋಗುವುದು ಬಹು ಕ್ಲಿಷ್ಟವಾದ ಪ್ರಕ್ರಿಯೆಯಾಯಿತು. ಜನಸಂದಣಿಯನ್ನು ನೋಡಬೇಕೆಂದು ಮೋಟಾರಿನ ಕಿಟಕಿಯಲ್ಲಿ ಮಹಾತ್ಮ[illegible] ಯಕ್ಷಣವೇ ಜಯಜಯಕಾರಗಳು ಪ್ರಾರಂಭವಾದುವು. ಜನರು ಆ ಮೋಟಾರಿನ ಕಡೆಗೆ ಬರಲಾರಂಭಿಸಿದರು. ಆಗ ಮಹಾತ್ಮರು ಜಮಖಾನ ಮೈದಾನದಿಂದ ಎಸ್ಪ್ಲನೇಡ್ ಮೈದಾನದ ಮಧ್ಯಭಾಗಕ್ಕೆ ಬಂದರು. ಅನಂತರ ಬಹು ಪ್ರಯಾಸಪಟ್ಟು ಅವರನ್ನು ಉಪನ್ಯಾಸವೇದಿಕೆಗೆ ಕರೆದುಕೊಂಡುಬಂದರು. ಜಯಜಯಕಾರಗಳಿಗೂ ಕೈಚಪ್ಪಾಳೆಗೂ ಮಿತಿಯಿಲ್ಲದಾಯಿತು. ಮಹಾತ್ಮರ ಪಾದವನ್ನು ಮುಟ್ಟಬೇಕೆಂದು ಜನರ ಗುಂಪು ಉಪನ್ಯಾಸವೇದಿಕೆಯ ಕಡೆಗೆ ಹೋಯಿತು, ಎಷ್ಟು ಪ್ರಯತ್ನಪಟ್ಟರೂ ಜನರನ್ನು ತಹಬಂದಿಗೆ ತರುವುದು ಕಷ್ಟವಾಯಿತು. ಮಹಾತ್ಮರು ಅವರ ಸ್ಥಾನದಲ್ಲಿ ನಿಂತು ಸಭಿಕರಿಗೆ ಕೈ ಮುಗಿದು ಆ ದಿವಸದ ಸಭೆಯನ್ನು ಬರಖಾಸ್ತುಮಾಡಬೇಕೆಂದು ಹೇಳಿದರು. ಆ ಸಭೆಯಲ್ಲಿ ಉಪನ್ಯಾಸಗಳಾಗದಿದ್ದರೂ ಮಹಾತ್ಮರ ದರ್ಶನಲಾಭವಾಯಿತೆಂದು ಜನರೆಲ್ಲರೂ ಸಂತುಷ್ಟರಾದರು. ಆ ಸಮಯದಲ್ಲಿ ಸ್ವಯಂಸೇವಕರು ದಕ್ಷತೆಯಿಂದಲೂ, ಚುರುಕಿನಿಂದಲೂ, ಶಿಸ್ತಿನಿಂದಲೂ ತಾಳ್ಮೆಯಿಂದಲೂ ಮಾಡಿದ ಕೆಲಸವನ್ನು ಎಷ್ಟು ವರ್ಣಿಸಿದರೂ ತೀರದು. ಆ ಗಲಾಟೆಯಲ್ಲಿ ಎಷ್ಟೋ ಜನ ಸ್ತ್ರೀಯರು ತಮ್ಮ ಮಕ್ಕಳುಗಳನ್ನು ಕಳೆದುಕೊಂಡಿದ್ದರು. ಸ್ವಯಂಸೇವಕರು ಆ ಮಕ್ಕಳುಗಳನ್ನು ಸಂರಕ್ಷಿಸಿ ಅವರ ತಾಯಿಯವರನ್ನು ಹುಡುಕಿಕೊಟ್ಟರು. ಅವರು ಅಷ್ಟು ಶಿಸ್ತಿನಿಂದ ಕೆಲಸಮಾಡಿದರೂ 3 ಲಕ್ಷ ಜನರು ಸೇರಿದ್ದ ಆ ಸಭೆಯಲ್ಲಿ ತಿಕ್ಕಾಟದಿಂದ 31 ಜನರು ಗಾಯಗೊಂಡು ಆಸ್ಪತ್ರೆಗೆ ಸೇರಿರುವರು. 60 ವರ್ಷದ ಸಿಭಾಗಗ್ಗ ಗುಜರಾತಿಯು ಉಸಿರುಕಟ್ಟಿ ಮೃತಪಟ್ಟಳು. ಆ ದಿವಸ ರಾತ್ರಿಯೇ ಮಹಾತ್ಮರು ಪಂಡಿತ ಮೋತಿಲಾಲ್ ನೆಹರೂರವರನ್ನು ಕಾಣಲು ಅಲಹಾಬಾದಿಗೆ ಹೊರಡಲು ಸಿದ್ಧರಾದರು. ಅನಂತರ ಲಕ್ಷೋಪಲಕ್ಷ ಜನರು ಬೋರಿಬಂದರ್ ಸ್ಟೇಷನ್ನಿಗೆ ಬಂದರು. ಆಗ ರೈಲ್ವೇ ಅಧಿಕಾರಿಗಳು ಗಾಡಿಯು ತಡವಾಗಿ ಹೊರಡುವುದೆಂದು ಹೊತ್ತಿಗೆ ಮುಂಚೆಯೇ ಗಾಡಿಯನ್ನು ಬಿಟ್ಟರು. ಮಹಾತ್ಮರು ಬೋರಿಬಂದರ್ ಸ್ಟೇಷನ್ನಿನಲ್ಲಿ ಗಾಡಿ ಹತ್ತುವುದು ಕಷ್ಟವಾಗುವುದೆಂದು ಬೊಂಬಾಯಿಯ ಉಪನಗರವಾದ ದಾದರ್ ಸ್ಟೇಷನ್ನಿನಲ್ಲಿ ಹತ್ತಿದರು. ಬೋರಿಬಂದರ್ ಸ್ಟೇಷನ್ನಿನಲ್ಲಿ ಕಾದಿದ್ದ ಜನರಿಗೆ ನಿರಾಶೆಯಾಯಿತು.

ಮಹಾತ್ಮಾ ಗಾಂಧಿಯವರು ಮೂರನೆಯ ಕ್ಲಾಸು ಗಾಡಿಯ ಒಂದು ಮೂಲೆಯಲ್ಲಿ ಪತ್ರಿಕೆಗಳನ್ನು ಓದುತ್ತ ಶಾಂತವಾಗಿ ಕುಳಿತಿದ್ದರು. ಚಳಿಯು ಬಹಳವಾಗಿದ್ದರೂ ಅವರು ಅದನ್ನು ಲಕ್ಷಿಸುತ್ತಿರಲಿಲ್ಲ. ಅವರ ಕಾರ್ಯದರ್ಶಿಗಳು ಹೊರತಾಗಿ ಇನ್ನಾರೂ ಆ ಕಂಪಾರ್ಟ್‌ಮೆಂಟಿನಲ್ಲಿರಲಿಲ್ಲ. ಒಬ್ಬ ಪತ್ರಿಕಾಪ್ರತಿನಿಧಿಯು ಮಹಾತ್ಮರಿಗೆ ನಮಸ್ಕಾರಮಾಡಿ ಶ್ರೀಮತಿ ಸರೋಜಿನಿದೇವಿಯವರು ಇದ್ದ ಗಾಡಿಗೆ ಹೋದರು. ಶ್ರೀಮತಿ ನಾಯಿಡುರವರು ಭೋಜನಮಾಡುತ್ತಿದ್ದರು. ಪಂಡಿತ ಮೋತಿಲಾಲ್‌ರು ಹೇಗಿದ್ದಾರೆಂದು ಪತ್ರಿಕಾಪ್ರತಿನಿಧಿಯನ್ನು ಶ್ರೀಮತಿಯವರು ಕೇಳಿದರು. ಅನಂತರ ಪ್ರತಿನಿಧಿಯು ಸರ್ದಾರ್ ಪಟೇಲ್, ಸೇಟ್ ಜಮನಾಲಾಲ್‌ಬಜಾಜ್, ಶ್ರೀ ತ್ರಿಕಮಜಿ, ಶ್ರೀ ಶಂಕರಲಾಲ್ ಬ್ಯಾಂಕರ್, ಡಾಕ್ಟರ್ ಜೀವರಾಜ್ ಮೆಹತಾ ಇವರುಗಳನ್ನು ನೋಡಿದನು. ಮಹಾತ್ಮರ ಆರೋಗ್ಯಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲವೆಂದೂ ಜೈಲಿನಲ್ಲಿದ್ದಾಗ ಅವರಿಗೆ ಆಮಶಂಕೆಯು ಆಗಿತ್ತೆಂದೂ ತೂಕವು 95 ಪೌಂಡುಗಳಿಗೆ ಇಳಿಯಿತೆಂದೂ ತಿಳಿದುಬಂದಿತು. ಬೊಂಬಾಯಿಯಲ್ಲಿ ಲಾಠೀಪ್ರಯೋಗವಾದ ಸಂದರ್ಭದಲ್ಲಿ ಹಣ್ಣು ತಿನ್ನುವುದನ್ನು ಮಹಾತ್ಮರು ಬಿಟ್ಟಿದ್ದರಷ್ಟೆ! ಈಗ ಪುನಃ ಹಣ್ಣನ್ನು ತಿನ್ನಲಾರಂಭಿಸಿರುವರೆಂದು ತಿಳಿದುಬಂದಿದೆ. ಅಲಹಾಬಾದಿಗೆ ಹೋಗುವ ರೈಲಿನಲ್ಲಿ ದಾರಿಯುದ್ದಕ್ಕೂ ಪ್ರತಿಯೊಂದು ಸ್ಟೇಷನ್ನಿನಲ್ಲಿಯೂ ಜನ ಸಂದಣಿಯು ನೆರೆದಿತ್ತು. ಛಾಕಿ ಸ್ಟೇಷನ್ನಿನಲ್ಲಿ ಪಂಡಿತ ಜವಾಹರಲಾಲರ ಅಪ್ಪಣೆಯಂತೆ ಭಾರಿ ಜನಸಂದಣಿಯು ನೆರೆದಿತ್ತು. ಮಹಾತ್ಮರು ಪಂಡಿತ ಜವಾಹರಲಾಲರನ್ನು ಎದುರುಗೊಂಡ ಸನ್ನಿವೇಶವು ಸ್ಮರಣೀಯವಾದುದು. ಮಹಾತ್ಮರ ಹದಿಮೂರು ಸಾಮಾನುಗಳು ಜಾಗರೂಕತೆಯಿಂದ ತೆಗೆದುಕೊಳ್ಳಲ್ಪಟ್ಟವು. ಅವುಗಳ ಪೈಕಿ ಒಂದು ಸಣ್ಣ ರಾಟೆಯೂ ಇತ್ತು. ಮಹಾತ್ಮರು ಕಳೆದುಕೊಂಡಿದ್ದ ಕಾಗದದ ಚೀಲವೂ ಸಹ ಸಿಕ್ಕಿತು. ಅವರ ಕಾರ್ಯಕ್ರಮವು ಇನ್ನೂ ನಿರ್ದಿಷ್ಟವಾಗಿಲ್ಲ. ಅವರು ಪಂಡಿತ್ ಜವಾಹರಲಾಲ್‌ನೆಹರೂರವರ ಅಧೀನದಲ್ಲಿಯೇ ಇರುವರು, ಇನ್ನು ಒಂದು ಎರಡು ದಿವಸಗಳಲ್ಲಿಯೇ ಡೆಲ್ಲಿಗೆ ಪ್ರಯಾಣಬೆಳಸಬಹುದು.

ಪಂಡಿತ್ ಮೋತೀಲಾಲರ ದೇಹಸ್ಥಿತಿಯು ಒಂದೇ ಸಮನಾಗಿದೆ. 27 ನೆಯ ರಾತ್ರಿ ಚೆನ್ನಾಗಿ ನಿದ್ರೆಯು ಬರಲಿಲ್ಲ. 28ನೆಯ ತಾರೀಖು ರಾತ್ರಿ ಚೆನ್ನಾಗಿ ನಿದ್ರೆಮಾಡಿದರು. ಆಹಾರವನ್ನು ತೆಗೆದುಕೊಳ್ಳುತ್ತಿದ್ದಾರೆ.

ಮಹಾತ್ಮರ ಆಗಮನವು ಪಂಡಿತ್ ಮೋತೀಲಾಲರಿಗೆ ಬಹಳ ಸಂತೋಷವನ್ನುಂಟುಮಾಡಿದೆ. ಬೆಳಗ್ಗೆ ಗಾಂಧಿಯವರು ಒಂದು ಕಪ್ಪು ಟೀಯನ್ನು ಕುಡಿದರು. ಅವರ ಮೈ ಕೈಕಾಲಿನ ಊದು ಇನ್ನೂ ಇಳಿದಿಲ್ಲ. ಬಹಳ ನಿಶ್ಶಕ್ತಿಯಾಗಿದೆ. ಉತ್ತರ ಹಿಂದೂಸ್ಥಾನದಿಂದ ಜನಗಳು ಸುಮ್ಮನೆ ಕಿಕ್ಕಿರಿದು ಬರುತ್ತಿದ್ದಾರೆ. ಪಂಡಿತ್ ಮೋತಿಲಾಲರ ಆರೋಗ್ಯದ ವಿಷಯವಾಗಿ ಪ್ರತಿದಿನ ಎರಡು ದೊಡ್ಡ ಪ್ರಕಟನೆಗಳು ಜನಗಳಿಗೆ ಪ್ರದರ್ಶಿಸಲ್ಪಡುತ್ತವೆ. ಈ ದಿವಸ ಮೌಲಾನಾ ಅಬ್ದುಲ್ ಕಲಾಮ್ ಆಜಾದ್ ಶ್ರೀ ಮತ್ತು ಶ್ರೀಮತಿ ಸೇನ್ ಗುಪ್ತ ಇವರುಗಳು ಬಂದರು. ಪಂಡಿತ ಜವಾಹರಲಾಲರ ಮುಖದಲ್ಲಿ ಅಷ್ಟು ಉಲ್ಲಾಸವು ಕಾಣುವುದಿಲ್ಲ. ಆನಂದಭವನಕ್ಕೆ ಪ್ರೇಕ್ಷಕರು ಬರುತ್ತಿದ್ದಾರೆ. ಪತ್ರಿಕಾಪ್ರತಿನಿಧಿಗಳಿಗೆ ಆನಂದಭವನಕ್ಕೆ ಬರಲು ಅವಕಾಶ ಉಂಟು. ಸ್ವರಾಜ್ಯಭವನದಲ್ಲಿ ಅತಿಥಿಗಳೆಲ್ಲರಿಗೂ ಊಟ ಉಪಚಾರಗಳಿಗೆ ಏರ್ಪಾಡುಮಾಡಲ್ಪಟ್ಟಿವೆ. ಗಾಂಧಿಯವರು ಆನಂದಭವನದಲ್ಲಿಯೇ ಇದ್ದಾರೆ. ಮೊಟ್ಟಮೊದಲು ಅವರು ಪಂಡಿತ ಮೋತೀಲಾಲರ ದರ್ಶನವನ್ನು ತೆಗೆದುಕೊಂಡರು.

ಮಹಾತ್ಮರ ಅಮೋಘವಾದ ಅಭಿಪ್ರಾಯಗಳು. ಇನ್ನು ಕೆಲವು ದಿವಸಗಳಲ್ಲಿ ಸೇಂದಿ ಸಾರಾಯಿ ಮೊದಲಾದವುಗಳು ನಿರ್ಮೂಲವಾಗುವುವು.

ಅಮೇರಿಕಾಖಂಡದ ಒಬ್ಬ ಪತ್ರಿಕಾ ಪ್ರತಿನಿಧಿಯು ಮಹಾತ್ಮರನ್ನು ಸಂದರ್ಶಿಸಿದಾಗ ಮಹಾತ್ಮರು ಇನ್ನು ಕೆಲವು ದಿವಸಗಳಲ್ಲಿ ಸೇಂದಿ ಸರಾಯಿ ಮೊದಲಾದವುಗಳು ಹಿಂದೂಸ್ಥಾನದಲ್ಲಿ ನಿರ್ಮೂಲವಾಗುವುವು ಎಂದು ಹೇಳಿದರು. ಅದಕ್ಕೆ ಅವನು ಅಮೇರಿಕಾಖಂಡದಂತೆಯೇ ಹೇಗೆ? ಎಂದು ಪ್ರಶ್ನೆಮಾಡಿದನು. ಅದಕ್ಕೆ ಮಹಾತ್ಮರು ಹಿಂದೂಸ್ಥಾನದಲ್ಲಿ ಕುಡಿಕವಿದ್ದರೂ ಅಮೇರಿಕೆಯಲ್ಲಿದ್ದಷ್ಟು ಕುಡಿಕವಿಲ್ಲ.

ಅಮೇರಿಕಾದಲ್ಲಿ ಕುಡಿತವನ್ನು ನಿಲ್ಲಿಸುವುದಕ್ಕೆ ಕಾನೂನು ಮಾಡಿದ್ದರೂ ಅದು ಸರಿಯಾಗಿ ನಡೆಯಲಿಲ್ಲ ಬಂದಿಲ್ಲ. ಕುಡಿತದ ಸಂಪೂರ್ಣ ನಾಶವು ನಡೆಯಲ್ಲಿ ಕಂಡುಬರಬೇಕೇ ವಿನಾ ನುಡಿಯಲ್ಲಿಯೂ ಕಾಗದದಲ್ಲಿಯೂ ಕಂಡುಬರುವುದು ಪ್ರಯೋಜನವಿಲ್ಲವೆಂದು ಹೇಳಿದರು.

ಜೈಲಿನಲ್ಲಿ ಖೈದಿಗಳಿಗೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಜೈಲಿನಲ್ಲಿರುವ ಸಾಮಾನ್ಯ ಖೈದಿಗೆ ಜೋಳದರೊಟ್ಟಿ ವಿನಾ ಮತ್ತೊಂದಿರುವುದಿಲ್ಲ. ಸಾರು ಮತ್ತು ಪಲ್ಯದಲ್ಲಿ ಹಾಕಿರುವ ಉಪ್ಪೇ ವಿನಾ ಹೆಚ್ಚಿಗೆ ಉಪ್ಪು ಬೇಕೆಂದರೂ ಸಿಗುವ ಹಾಗಿಲ್ಲ. ಜೈಲಿನ ಅಧಿಕಾರಿಗಳು ಖೈದಿಗಳನ್ನು ಮನುಷ್ಯರಂತೆ ಕಾಣುವುದಿಲ್ಲ. ಎ. ಬಿ. ಸಿ. ಎಂದು ಖೈದಿಗಳಲ್ಲಿ ಮೂರು ವರ್ಗಗಳನ್ನು ಮಾಡಿರುವುದು ಬಹಳ ಅನ್ಯಾಯ ಮತ್ತು ಶೋಚನೀಯವಾದುದು. ಖೈದಿಗಳಿಗೆ ಅನುಕೂಲವಾಗುವಂತೆ ಮಾಡಬೇಕಾದ ಸುಧಾರಣೆಯು ಬೇಕಾದಷ್ಟಿದೆ.

"ವೈಸರಾಯರವರು ಕಾಂಗ್ರೆಸ್ಸಿನವರಿಗೂ ಮತ್ತು ಸರ್ಕಾರದವರಿಗೂ ಒಂದೇ ಧ್ಯೇಯ" ವಿದೆ ಎಂದೂ, ಕಾಂಗ್ರೆಸ್ಸಿನ ಕಾರ್ಯವು ವಿಷಾದಕರವಾದುದೆಂದೂ ಹೇಳಿರುತ್ತಾರೆ. ಆದರೆ ಇದು ತಪ್ಪು. ಕಾಂಗ್ರೆಸ್ಸಿನವರು ಅನಾವಶ್ಯಕವಾದ ಒಂದು ಕೆಲಸವನ್ನೂ ಮಾಡಿರುವುದಿಲ್ಲ. ಧೀರೋದಾತ್ತಗುಣಗಾಂಭೀರ್ಯಯುತರಾಗಿ ಲೌಕಿಕಸುಖವನ್ನು ತ್ಯಜಿಸಿ ಸೇಂದಿ ಸರಾಯಿ ಹಾಗೂ ವಿದೇಶಿವಸ್ತ್ರಗಳ ಮುಂದೆ ಸರ್ಪದಂತೆ ಕಾವಲಿದ್ದು ಹಸನ್ಮುಖಿಗಳಾಗಿ ಜೈಲಿಗೆ ಹೋಗಿ ದೇಶದ ಹಿತಕ್ಕಾಗಿ ಅನಂತ ಕಷ್ಟಪರಂಪರೆಗೀಡಾದ ತಮ್ಮ ಭಾರತ ಮಹಿಳೆಯರಿಗೆ ಮುಂದಿನ ಚರಿತ್ರೆಯಲ್ಲಿ ಪ್ರಥಮ ಗೌರವಸ್ಥಾನವು ದೊರೆಯುವುದು. ಅವರಿಂದ ಸ್ವರಾಜ್ಯವು ಸಮೀಪಕ್ಕೆ ಬರುತ್ತಿದೆ. ರಾಷ್ಟ್ರದ ಪ್ರಗತಿಗೆ ತುಂಬಾ ಸಹಕಾರಿಯಾದರೂ ಬ್ರಿಟಿಷರ ಸಹಾನುಭೂತಿಯನ್ನು ಸಂಪಾದಿಸಲು ಸರಾಯಿ ಕುಡಿಯಲಿಕ್ಕಾದೀತೇ?

ಬ್ರಿಟಿಷ್ ವಸ್ತುಗಳ ಬಹಿಷ್ಕಾರದಿಂದ ಬ್ರಿಟಿಷರ ಸಹಾನುಭೂತಿಯು ತಪ್ಪುವುದಿಲ್ಲವೆ? ಎಂದು ಒಬ್ಬ ಪತ್ರಿಕಾಪ್ರತಿನಿಧಿಯು ಮಹಾತ್ಮರನ್ನು ಕೇಳಿದನು. ಅದಕ್ಕೆ ಮಹಾತ್ಮರು ಅವರ ಸಹಾನುಭೂತಿಯು ತಪ್ಪಿದರೂ ಉಪಾಯವಿಲ್ಲ. ಅವರ ಸಹಾನುಭೂತಿಯನ್ನು ಸಂಪಾದಿಸಬೇಕೆಂದು ಬ್ರ್ಯಾಂಡಿ ಕುಡಿಯಲಿಕ್ಕಾಗುವುದೆ? ಎಂದು ಹೇಳಿದರು. "ನಾನು ಅಮೇರಿಕಾ, ಜರ್ಮನಿ, ಇಟಲಿ ಮುಂತಾದ ಎಲ್ಲಾ ದೇಶಗಳ ಬಟ್ಟೆಯನ್ನೂ ಬಹಿಷ್ಕರಿಸಬೇಕೆಂಬುದೇ ನನ್ನ ಉದ್ದೇಶ. ಬ್ರಿಟಿಷರ ವಸ್ತುಗಳ ಬಹಿಷ್ಕಾರವು ಹಂಗಾಮಿಯಾಗಿ ನಡೆಯುವುದು. ನಮ್ಮ ಅವರ ಸೌಹಾರ್ದವು ನೆಲೆಗೊಂಡರೆ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನು ನಿಲ್ಲಿಸಬಹುದು. ಆದರೆ ಪರದೇಶಿವಸ್ತುಗಳ ಬಹಿಷ್ಕಾರವನ್ನು ಎಂದಿಗೂ ನಿಲ್ಲಿಸಲಾಗುವುದಿಲ್ಲ. ಇದರಿಂದ ಕೋಟ್ಯಂತರ ಭಾರತೀಯರಿಗೆ ತೊಂದರೆಯಾಗಿದೆ. ನಾನು ಶಾಂತಿಯ ಸ್ಥಾನವನ್ನು ಬಿಟ್ಟು ಗಡಿಬಿಡಿಯ ಯುದ್ಧಸ್ಥಾನಕ್ಕೆ ಬಂದಂತಾಯಿತು. ನೀವು ನನ್ನ ಅಭಿಪ್ರಾಯವನ್ನು ಕೇಳಿದರೆ ನಾನು ಪುನಃ ಜೈಲಿಗೆ ಹೋಗಿ ಸ್ವರಾಜ್ಯವು ಸ್ಥಾಪನೆಯಾದಮೇಲೆ ಸ್ವರಾಜ್ಯದ ಶುದ್ಧವಾದ ವಾಯುವನ್ನು ಸೇವಿಸಬೇಕೆಂದು ಇಚ್ಛಿಸುತ್ತೇನೆ.

ಒಬ್ಬ ಪತ್ರಿಕಾಪ್ರತಿನಿಧಿಯ ಸಂಗಡ ಮಹಾತ್ಮರು ಹೇಳಿದ್ದೇನೆಂದರೆ:—ನಾನು ಮುಖ್ಯ ಮಂತ್ರಿಗಳ ಭಾಷಣವನ್ನು ಸರ್ ತೇಜಬಹದ್ದೂರ್ ಸಪ್ರೂ ಮೊದಲಾದವರೊಂದಿಗೆ ಕೇವಲ ನಿಸ್ಪೃಹತೆಯಿಂದ ವಿಮರ್ಶಿಸಬೇಕೆಂದೇ ಜೈಲಿನಿಂದ ಬಂದಿರುವೆನು. ನನ್ನ ಹೃದಯದಲ್ಲಿ ಯಾವ ದ್ವೇಷವೂ ಪಕ್ಷಪಾತವೂ ಇರುವುದಿಲ್ಲ. ಮ್ಯಾಕ್ಡೊನಾಲ್ಡರ ಭಾಷಣವನ್ನು ಚೆನ್ನಾಗಿ ಓದಿದ್ದೇನೆ. ಸರ್ ತೇಜ್ ಬಹದ್ದೂರ್ ಸಪ್ರೂ ಮೊದಲಾದವರು ತಾವು ಬಂದು ಆಲೋಚನೆಮಾಡುವವರೆಗೂ ನನ್ನ ಅಭಿಪ್ರಾಯವನ್ನು ಪ್ರಕಟಿಸಕೂಡದೆಂದು ಬೇಡಿಕೊಂಡಿರುವುದರಿಂದ ಸದ್ಯಃ ನನ್ನ ಅಭಿಪ್ರಾಯವನ್ನು ಹೇಳಲು ಸಾಧ್ಯವಿಲ್ಲ. ನಾನು ಮುಂದಿನ ಕಾರ್ಯಕ್ರಮ ಮುಂತಾದುದನ್ನು ಇನ್ನೂ ನಿಶ್ಚಯಿಸಿರುವುದಿಲ್ಲ. ಜೈಲಿನಲ್ಲಿರುವ ಎಲ್ಲಾ ರಾಜಕೀಯ ಖೈದಿಗಳ ಬಿಡುಗಡೆಯಾಗುವವರೆಗೂ ಯಾವ ಮುಖಂಡರಿಗೂ ಸಮಾಧಾನವಾಗಲಾರದು. ಜೈಲಿನ ಅಧಿಕಾರಿಗಳು ನನ್ನನ್ನು ಬಹು ಯೋಗ್ಯರೀತಿಯಿಂದ ಕಂಡರೆಂದು ಅವರನ್ನು ಪ್ರಶಂಸಿಸಿದರು.

ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಜವಾಹರಲಾಲ್ ನೆಹರೂರವರ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಕಮಲಾ ದೇವಿಯವರ ಬಿಡುಗಡೆ.

ಪಂಡಿತ ಜವಾಹರಲಾಲ್‌ನೆಹರವರ ಮತ್ತು ಕಮಲಾದೇವಿಯವರ ಬಿಡುಗಡೆಯಾಯಿತೆಂಬ ಸುದ್ದಿಯು ಅವರ ಸ್ವಸ್ಥಳವಾದ ಅಲಹಾಬಾದಿಗೆ ತಲುಪಿತೇ, ಆ ಪುರನಿವಾಸಿಗಳ ಆನಂದಕ್ಕೂ ಉತ್ಸಾಹಕ್ಕೂ ಪಾರವೇ ಇಲ್ಲದಂತಾಯಿತು. ಸಾಯಂಕಾಲ 4 ಘಂಟೆಯಿಂದ ಮೆರವಣಿಗೆಯು ಅನೇಕ ವಾದ್ಯವೈಭವಗಳಿಂದ ಪ್ರಾರಂಭವಾಯಿತು. ಲಕ್ಷೋಪಲಕ್ಷ ಜನರು ಆ ಮೆರವಣಿಗೆಯಲ್ಲಿ ಭಾಗಿಗಳಾಗಿದ್ದರು. ಮೆರವಣಿಗೆಯು ಪುರುಷೋತ್ತಮದಾಸ್ ಪಾರ್ಕಿನವರೆಗೂ ಹೋಯಿತು. ಅಲ್ಲಿಗೆ ಮೆರವಣಿಗೆಯು ಬರುವುದರೊಳಗೆ ಲಕ್ಷಾಂತರ ಜನರು ಆ ವೀರದಂಪತಿಗಳಿಗೆ ಸ್ವಾಗತವನ್ನೀಯಲು ಕಾದಿದ್ದರು.

ಪಂಡಿತ ಜವಾಹರಲಾಲರವರು ಹಸನ್ಮುಖಿಗಳಾಗಿ ಸಭಿಕರಿಗೆ ವಂದಿಸಿ ಆಗಮಿಸಿದರೊಡನೆ ಸರ್ವರೂ ಮೇಲಕ್ಕೆದ್ದು ಭಕ್ತಿವಿಶ್ವಾಸಗಳನ್ನು ಪ್ರದರ್ಶಿಸಿ ಜಯಘೋಷಮಾಡಿದರು. ಶ್ರೀಮತಿ ಕಮಲಾದೇವಿಯವರ ಮೇಲೆ ಹೂವಿನ ಮಳೆಗರೆಯಿತು. ಪ್ರಾರ್ಥನೆಯಾದ ತರುವಾಯ ಪಂಡಿತ ಜವಾಹರಲಾಲರು ಮಾಡಿದ ಭಾಷಣದ ಸಾರಾಂಶವೇನೆಂದರೆ:—ಸ್ನೇಹಿತರಿರಾ! ಅಭೂತಪೂರ್ವವಾದ ಇಂಥ ಸ್ವಾಗತಮಾಡಿದುದಕ್ಕಾಗಿ ನಿಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಇಂಥ ಗೌರವವನ್ನು ನನ್ನ ಪೂಜ್ಯ ತಂದೆಯವರೊಂದಿಗೆ ಹೊಂದಿದ್ದರೆ ನನಗೆ ಇನ್ನೂ ಸಂತೋಷವಾಗುತ್ತಿತ್ತು. ಅವರು ನಿಮಗೆಲ್ಲರಿಗೂ ತಿಳಿದಿರುವಂತೆ ಕಾಯಿಲೆಯಿಂದ ಹಾಸಿಗೆ ಹಿಡಿದಿರುವರು. ಕಳೆದವರ್ಷ ಜನವರಿ 26 ನೆಯ ತಾರೀಖಿನ ದಿವಸವನ್ನು ಕಾಂಗ್ರೆಸ್ಸಿನ ಅನುಜ್ಞೆಯನ್ನನುಸರಿಸಿ ಸ್ವಾತಂತ್ರ್ಯದಿವಸವನ್ನಾಗಿ ಆಚರಿಸಿದುದು ನಿಮಗೆ ನೆನಪಿರಬಹುದು! ಅದೇ ಜನವರಿ 26 ನೆಯ ಸ್ವಾತಂತ್ರ್ಯದ ದಿವಸ ನಿಮ್ಮ ಮಧ್ಯದಲ್ಲಿರುವ ಸುಯೋಗವು ದೊರೆತುದಕ್ಕಾಗಿ ಸಂತೋಷಿಸುತ್ತೇನೆ. ಆನಂದದಾಯಕವಾದ ಈ ದಿನದಲ್ಲಿ ಕಳೆದ ವರ್ಷದ ಕಾರ್ಯಕಲಾಪಗಳನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟುಕೊಳ್ಳೋಣ! ಕಾದಿರುವ ಭೂಮಿಗೆ ನೀರನ್ನು ಚೆಲ್ಲಿದ ಹಾಗೆ ರಾಷ್ಟ್ರಸ್ವಾತಂತ್ರ್ಯಕ್ಕೋಸ್ಕರ ತಮ್ಮ ರಕ್ತಗಳನ್ನು ಧಾರೆಯೆರೆದಿರುವ ಶೋಲಾಪುರದ ಹಾಗೂ ಮಿಡ್ನಾಪುರದ ವೀರರನ್ನು ಸ್ಮೃತಿಪಥಕ್ಕೆ ತಂದುಕೊಳ್ಳೋಣ.

ಸ್ವಾತಂತ್ರ್ಯಸಂಗ್ರಾಮದಲ್ಲಿ ಭಾಗಿಗಳಾಗಿ ತಮ್ಮ ಅನುಪಮ ದೇಶಭಕ್ತಿಯನ್ನೂ ಕಾರ್ಯದಕ್ಷತೆಯನ್ನೂ ಜಗತ್ತಿಗೆ ತೋರಿಸಿದ ವೀರಭಾರತಮಹಿಳೆಯರಿಗೆ ನಮ್ಮ ಕೃತಜ್ಞತೆಯನ್ನು ಸಮರ್ಪಿಸೋಣ! ನಿಸ್ಪೃಹತೆಯಿಂದಲೂ, ಉಜ್ವಲದೇಶಾಭಿಮಾನದಿಂದಲೂ, ನಿಷ್ಕಾಮಬುದ್ಧಿಯಿಂದಲೂ ಲಾಠಿಗಳಿಂದ ಪೆಟ್ಟುತಿಂದು ಶಾಂತರೀತಿಯಿಂದ ಜೈಲಿಗೆ ಹೋಗಿ ರಾಷ್ಟ್ರಸಮರಕ್ಕೆ ಪೂರ್ಣಸಹಾಯ ಮಾಡಿದ ವಾಲಂಟಿಯರ್ (ಸ್ವಯಂಸೇವಕ) ಮಹೋದಯರನ್ನು ಎಲ್ಲರೂ ಜ್ಞಾಪಕದಲ್ಲಿಟ್ಟು ಗೌರವಿಸಬೇಕು.

ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ಬೊಂಬಾಯಿ, ಬೆಳಗಾಂ, ಮದರಾಸ್, ಬಿಜಾಪುರ, ಪಾಟ್ನಾ ಮೊದಲಾದ ಅನೇಕಭಾಗಗಳಲ್ಲಿ ಸ್ವಾತಂತ್ರ್ಯ ದಿವಸವನ್ನಾಚರಿಸಿದರು.

ಪಂಚಾಚಾರ್ಯ ಪ್ರಭಾ.

೧೯೩೧ ನೇ ಫೆಬ್ರುವರಿ ತಾ|| ೨ ನೆಯ ಸೋಮವಾರ.

ಭಾರತೀಯಮುಖಂಡರ ಬಿಡುಗಡೆ.

ಲಂಡನ್ನಿನಲ್ಲಿ ಕಳೆದ ಎರಡುವರೆ ತಿಂಗಳುಗಳಿಂದ ಭರತಖಂಡದ ರಾಜಕೀಯ ಭವಿಷ್ಯವನ್ನು ನಿರ್ಣಯಿಸಲು ಸೇರಿದ ರೌಂಡ್‌ಟೇಬಲ್ ಸಮ್ಮೇಳನವನ್ನು ಸಮಾಪ್ತಿಗೊಳಿಸಿದ ದಿವಸ ಮುಖ್ಯಮಂತ್ರಿಗಳಾದ ರಾಂಸೇ ಮ್ಯಾಕ್ಡೋನಾಲ್ಡರವರು ಭರತಖಂಡದ ಪ್ರಬಲಪಕ್ಷವಾದ ಕಾಂಗ್ರೆಸ್ಸಿನ ಮುಖಂಡರು ತಮ್ಮ ಮುಕ್ತಾಯಭಾಷಣದ ಅಂಶಗಳನ್ನು ಪರಾಮರ್ಶಿಸಿ ಶಾಂತಿಸ್ಥಾಪನೆಗೆ ನೆರವಾಗಬೇಕೆಂದು ಕೋರಿದ ಪ್ರಕಾರ ಹಿಂದುಸ್ಥಾನದ ವೈಸರಾಯರಾದ ಲಾರ್ಡ್ ಇರ್ವಿನ್ ರವರು 1930 ನೆಯ ಇಸವಿ ಜನವರಿ 1 ನೆಯ ತಾರೀಖಿನಿಂದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಮೆಂಬರರಾಗಿ ಜೈಲಿನಲ್ಲಿರುವವರನ್ನೆಲ್ಲಾ ಯಾವ ಕರಾರುಗಳೂ ಇಲ್ಲದೆ ಬಿಡುಗಡೆಮಾಡಬೇಕೆಂದು ಮಾಡಿದ ಅನುಜ್ಞೆಯಂತೆ, ಆಯಾ ಪ್ರಾಂತಿಕ ಸರ್ಕಾರದವರು ಮಹಾತ್ಮಾಗಾಂಧಿಯವರೇ ಮೊದಲಾದ 24 ಜನ ಮುಖಂಡರನ್ನು ಬಂಧನದಿಂದ ಬಿಡುಗಡೆಮಾಡಿದರು. ಅಲ್ಲದೆ ಭಾರತೀಯಮುಖಂಡರು ನಿರಾತಂಕವಾಗಿ ಕಲೆತು ಶಾಂತರೀತಿಯಿಂದ ಮುಖ್ಯಮಂತ್ರಿಗಳು ಹೇಳುವ ಮುಖ್ಯಾಂಶಗಳನ್ನು ವಿಮರ್ಶಿಸಲೆಂಬುದ್ದೇಶದಿಂದ ಅಖಿಲಭಾರತಕಾಂಗ್ರೆಸ್‌ಕಮಿಟಿಯು ಅಕ್ರಮಕೂಟವೆಂದು ಹಿಂದೆ ಮಾಡಿದ ಅಪ್ಪಣೆಯನ್ನೂ ಸಹ ರದ್ದುಪಡಿಸಿರುವರು. ಈ ವಿಷಯದಲ್ಲಿ ವೈಸರಾಯರವರು ದೂರಾಲೋಚನೆ ಮಾಡಿ ತಮ್ಮ ಅಮೋಘವಾದ ದಯೆಯನ್ನೂ, ಔದಾರ್ಯವನ್ನೂ, ರಾಜನೀತಿಯನ್ನೂ ವ್ಯಕ್ತಪಡಿಸಿದರೆಂದು ಆನಂದದಿಂದ ಹೇಳಬೇಕಾಗಿದೆ. ವೈಸರಾಯರವರ ಆಜ್ಞೆಯು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಮುದ್ರಿತವಾಗಿದೆ, ವಾಚಕರು ಪರಾಮರ್ಶಿಸಬೇಕು. ಅಸ್ತು! ವೈಸ್‌ರಾಯರವರು ಈ ಇಪ್ಪತ್ತನಾಲ್ಕು ಜನ ಮುಖಂಡರನ್ನು ಬಿಡುಗಡೆಮಾಡಿದುದು ಭಾರತೀಯರಿಗೆ ಪರಮಸಂತೋಷವನ್ನುಂಟುಮಾಡಿದರೂ, 50-60 ಸಾವಿರ ಜನ ರಾಜಕೀಯ ಖೈದಿಗಳು ಇನ್ನೂ ಜೈಲಿನಲ್ಲಿಯೇ ನರಳುತ್ತಿರುವದನ್ನು ನೋಡಿ ವ್ಯಸನಪಡಬೇಕಾಗಿದೆ. ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆಮಾಡಿದಹೊರತು ದೇಶದಲ್ಲಿ ಶಾಂತಿಯು ಶಾಶ್ವತವಾಗಿ ನೆಲೆಗೊಳ್ಳಲಾರದೆಂದು ಮಹಾತ್ಮ ಗಾಂಧಿಯವರು ಸ್ವತಃ ಹೇಳಿರುವರಲ್ಲದೆ, ಇಡೀ ದೇಶವೇ ಈ ಮಂತ್ರವನ್ನೇ ಜಪಿಸಹತ್ತಿರುವುದು. ವೈಸರಾಯಪ್ರಭುಗಳು ರಾಷ್ಟ್ರದ ಈ ಸದಾಶಯವನ್ನು ಪೂರ್ತಿಗೊಳಿಸಿದರೆ ಹೊಸರಾಜ್ಯಾಂಗರಚನೆಯು ಸ್ಥಾಪಿತವಾಗುವ ಕಾಲದಲ್ಲಿ ಅತ್ಯವಶ್ಯಕಗಳಾದ ಶಾಂತಿಸಮಾಧಾನಗಳು ನೆಲೆಗೊಳ್ಳುವುದಕ್ಕೆ ತುಂಬಾ ಸಹಾಯಮಾಡಿದಂತಾಗುವುದೆಂದು ಹೇಳದಿರಲಾರೆವು. ಈ ಮೊದಲು ವೈಸರಾಯರವರು ಹೊರಡಿಸಿರುವ ಯಾವತ್ತು ಕಠಿಣ ಶಾಸನಗಳನ್ನೂ ಸಹ ತೆಗೆದುಹಾಕುವುದು ಅತ್ಯವಶ್ಯಕವಾಗಿದೆ. ಈ ಸಂದರ್ಭದಲ್ಲಿ ಗೌರವಯುತವಾದ ಶಾಂತಿಯು ಸ್ಥಾಪಿಸಲ್ಪಡುವುದಾದರೆ ಕಾಂಗ್ರೆಸ್‌ಪಕ್ಷದವರು ತಾವೂ ಸಹ ಹೃತ್ಪೂರ್ವಕವಾಗಿ ಸಹಾಯಮಾಡುವೆವೆಂದು ಅಭಯವಚನವನ್ನಿತ್ತಿರುವರು. ಶ್ರೀಯುತ ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ತೇಜಬಹದ್ದೂರ್ ಸಪ್ರು ಮತ್ತು ಮಿ|| ಎಂ. ಆರ್. ಜಯಕರ್ ಇವರ ಪ್ರಾರ್ಥನೆಯನ್ನು ಅಂಗೀಕರಿಸಿ ಅಖಿಲಭಾರತ ಕಾಂಗ್ರೆಸ್ಸ್ ಕಮಿಟಿಯವರು ಅವರು ಬರುವವರೆಗೂ ತಮ್ಮ ಮುಂದಿನ ಕಾರ್ಯಕ್ರಮವನ್ನು ಪ್ರಕಟಿಸುವುದಿಲ್ಲವೆಂದು ಹೇಳಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಪರಮಶಾಂತಮೂರ್ತಿಗಳಾದ ಮಹಾತ್ಮಾಗಾಂಧಿಯವರು—"ರೌಂಡ್‌ಟೇಬಲ್ ಸಮ್ಮೇಳನದ ಮುಕ್ತಾಯದಲ್ಲಿ ಮುಖ್ಯಮಂತ್ರಿಗಳ ಹೇಳಿಕೆಯು ಕೇವಲ ಅಸಮರ್ಪಕವಾದುದೆಂದು ತೋರಿದರೂ, ವಿಶೇಷ ಜನ ಕಾಂಗ್ರೆಸ್ ಮಹಾಶಯರೂ ನಾನೂ ನಿಷ್ಕಪಟಹೃದಯದಿಂದ ಮುಖ್ಯಮಂತ್ರಿಗಳ ಕೋರಿಕೆಯಂತೆ ಅವರ ಅಭಿಪ್ರಾಯಗಳನ್ನು ವಿಮರ್ಶಿಸಬೇಕೆಂದು ಮಿ|| ಶಾಸ್ತ್ರಿ, ಡಾ|| ಸಪ್ರು ಮತ್ತು ಮಿ|| ಜಯಕರ್ ಇವರು ಬರುವವರೆಗೂ ನಮ್ಮ ತೀರ್ಮಾನವನ್ನು ಪ್ರಕಟಿಸುವುದಿಲ್ಲ. ಭರತಮಾತೆಯ ಆ ಜನ್ಮಸಿದ್ಧವಾದ ಹಕ್ಕಾಗಿಯೂ ಮತ್ತು ಆ ದೇವಿಯು ಆಶಿಸುತ್ತಲೂ ಇರುವ ಸ್ವಾತಂತ್ರ್ಯವು ಲಭ್ಯವಾಗಿ ಗೌರವಯುತವಾದ ಶಾಂತಿಯನ್ನು ಹೇಗೆ ಸ್ಥಾಪಿಸಬೇಕೆಂಬ ಮಾರ್ಗಗಳನ್ನು ಆತುರದಿಂದ ಹುಡುಕುತ್ತಿರುವೆನು. ಶಾಂತರೀತಿಯಿಂದ ಚರ್ಚೆಗಳನ್ನು ನಡೆಯಿಸುವುದಕ್ಕೂ ಸಹ ಯೋಗ್ಯವಾದ ಶಾಂತವಾತಾವರಣವು ಅತ್ಯವಶ್ಯಕವಾಗಿರುವುದರಿಂದ ಕಾಂಗ್ರೆಸ್‌ಪಾರ್ಟಿಯ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಬೇಕು. ಕಠಿಣ ಶಾಸನಗಳನ್ನು ತೆಗೆದುಹಾಕಬೇಕು. ಕಿತ್ತುಕೊಂಡಿರುವ ಆಸ್ತಿಗಳನ್ನು ತಿರುಗಿ ಕೊಡಬೇಕು" ಎಂದು ಲಂಡನ್ನಿಗೆ ತಂತಿವರ್ತಮಾನವನ್ನು ಕಳುಹಿಸಿದ್ದಾರೆ. ಇರಲಿ; ರಾಷ್ಟ್ರದಿವ್ಯಜ್ಯೋತಿಗಳಾದ ಮಹಾತ್ಮಗಾಂಧಿ, ಪಂಡಿತ ಮೋತೀಲಾಲ್‌ನೆಹರು, ಜವಾಹರಲಾಲ್‌ನೆಹರೂ ಪ್ರಭೃತಿಗಳು ಶ್ರೀಯುತ ವಿ. ಎಸ್. ಶಾಸ್ತ್ರಿ, ಸಪ್ರೂ ಮೊದಲಾದವರು ಬರುವವರೆಗೂ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದಿಲ್ಲವೆಂದು ಹೇಳಿದುದು, ಅವರೂ ಸಹ ಶಾಂತಿಸ್ಥಾಪನೆಯನ್ನು ಮಾಡುವ ವಿಷಯದಲ್ಲಿ ಕುತೂಹಲವುಳ್ಳವರಾಗಿರುವರೆಂಬುದನ್ನು ವ್ಯಕ್ತಪಡಿಸುತ್ತದೆ.

ಸದ್ಯಃ ಭರತಖಂಡಕ್ಕೆ ಶಾಂತಿಯು ಅವಶ್ಯಕವಾಗಿ ಬೇಕಾಗಿದೆ. ಸುಮಾರು ಒಂದು ವರ್ಷದಿಂದಲೂ ಭರತಖಂಡವು ರಾಜಕೀಯಾಂದೋಳನವೆಂಬ ಅಗ್ನಿಗೆ ಸಿಲುಕಿ ಕುದಿಯಹತ್ತಿರುವುದು. ದುರ್ಭಿಕ್ಷಾಕಾಲದಲ್ಲಿ ಅಧಿಕಮಾಸವು ಬಂದೊದಗುವಂತೆ ಮೊದಲೇ ದಾರಿದ್ರ್ಯಪೀಡಿತರಾಗಿರುವ ಭಾರತೀಯರಿಗೆ ಅನೇಕ ಕಾರಣಗಳಿಂದ ಆರ್ಥಿಕಸ್ಥಿತಿಯು ದಿನೇ ದಿನೇ ಕುಗ್ಗುತ್ತ ಬಂದು ಅವರು ಅನೇಕ ಕಷ್ಟಪರಂಪರೆಗಳಿಗೀಡಾಗಲು ಅವಕಾಶವಾಯಿತು. ಸಾವಿರಾರುಜನವರ್ತಕರು ಅಪರಿಮಿತವಾದ ನಷ್ಟಕ್ಕೀಡಾಗಿರುವರಲ್ಲದೆ, ಅಸಂಖ್ಯರೈತರು ದವಸಧಾನ್ಯಗಳ ಧಾರಣೆಯು ಕಡಿಮೆಯಾದುದರಿಂದ ಧನಶೂನ್ಯರಾಗಿ ಪರಿತಪಿಸುತ್ತಿರುವರು. ಆದಪ್ರಯುಕ್ತ ಭಾರತೀಯ ರಾಷ್ಟ್ರಮುಖಂಡರೂ, ರೌಂಡ್‌ಟೇಬಲ್ ಸಮ್ಮೇಳನದಿಂದ ಬರುವ ಶ್ರೀಯುತ ವಿ. ಎಸ್. ಶಾಸ್ತ್ರಿ, ಸಪ್ರೂ ಮೊದಲಾದವರೂ, ಸರ್ಕಾರದವರೂ ಏಕೀಭವಿಸಿ ಭರತಖಂಡಕ್ಕೆ ಸುಖದಾಯಕ ರಾಜ್ಯಾಂಗರಚನೆಯನ್ನು ಮಾಡಿ ದೇಶದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವಂತೆ ಮಾಡಲೆಂದು ಹಾರೈಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಹೈಕೋರ್ಟು ಜಡ್ಜರಾದ ಜಸ್ಟಿಸ್ ಜಿ. ಶ್ರೀನಿವಾಸಯ್ಯಂಗಾರ್‌ರವರು ಕೋರ್ಟುಗಳ ಇನ್ಸ್‌ಪೆಕ್ಷನ್ ಮಾಡಲು ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಹೋಗಿರುವುದಾಗಿ ತಿಳಿಯಬರುತ್ತದೆ.

ರಾಜಧಾನಿಯ ಶ್ರೀ ರಾಜರಾಜೇಶ್ವರೀಹಾಲಿನವರೂ ಮತ್ತು ಶ್ರೀ ಶಾರದಾ ಬುಕ್ ಡಿಪೋದವರೂ ಕಳುಹಿಸಿರುವ 1931 ನೆಯ ವರ್ಷದ ಮನೋಹರಗಳಾದ ಕ್ಯಾಲೆಂಡರುಗಳನ್ನು ಅತ್ಯಾನಂದದಿಂದ ಸ್ವೀಕರಿಸಿರುತ್ತೇವೆ.

ಕಳೆದ ತಿಂಗಳು 31 ನೆಯ ತಾರೀಖಿನ ದಿವಸ ಮೈಸೂರಿನಿಂದ ಬೆಂಗಳೂರಿಗೆ ಹೊರಟ ಮೇಲುಗಾಡಿಯು ಕ್ಲೋಸ್‌ಪೇಟೆಯ ಹತ್ತಿರ ಇಂಜಿನ್ ಮತ್ತು ಒಂದು ಮೂರನೆಯ ತರಗತಿಯ ಗಾಡಿ ಸಹಿತ ಉರುಳಿ ಬಿದ್ದಿತೆಂದೂ, ಪ್ರಯಾಣಿಕರಿಗೆ ಯಾರಿಗೂ ಅನಾಯವಾಗಿಲ್ಲವೆಂದೂ ತಿಳಿದುಬರುತ್ತದೆ.

ದಾವಣಗೆರೆಯ ಖಾದಿಭಂಡಾರದವರೂ ಮತ್ತು ಪ್ರಾಣಿದಯಾಪ್ರಚಾರಕ ಸಂಘದವರೂ ಸೇರಿ ಮಹಾತ್ಮಗಾಂಧಿಯವರೇ ಮೊದಲಾದ ಮುಖಂಡರಿಗೆ ಬಿಡುಗಡೆಯಾದ ಸಂತೋಷಕ್ಕಾಗಿ ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ಶ್ರೀಮನ್ಮಹಾರಾಜರು, ಮಹಾತ್ಮಾಜಿ, ಪಂ|| ಜವಾಹರಲಾಲನೆಹರೂ, ಭಾರತಮಾತೆ ಮೊದಲಾದವರ ಭಾವಚಿತ್ರಪಟಗಳನ್ನು ಪಲ್ಲಕ್ಕಿಯಲ್ಲಿಟ್ಟು ಊರಲ್ಲೆಲ್ಲಾ ಮೆರವಣಿಗೆಮಾಡಿದರೆಂದೂ, ಆ ಸಮಯದಲ್ಲಿ ಪಟ್ಟಣವೆಲ್ಲವೂ ಅಲಂಕರಿಸಲ್ಪಟ್ಟು ಜನರೆಲ್ಲರೂ ಮಂಗಳಾರತಿಯನ್ನೆತ್ತಿದರೆಂದೂ, ಮರುದಿವಸ ಅನೇಕ ಬಡವರಿಗೆ ಅನ್ನದಾನಮಾಡಿದರೆಂದೂ ಕೇಳುತ್ತೇವೆ.

ಬೆಂಗಳೂರು ಮಿಥಿಕ್ ಸೊಸೈಟಿಯವರು ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ಒಂದು ಮೀಟಿಂಗ್ ನಡೆಯಿಸಿದರು. ಆಗ ಮಿ|| ಎಸ್. ಎನ್. ನರಹರಯ್ಯ ಬಿ. ಎ. ಎಲ್. ಎಲ್. ಬಿ. ಯವರು ವೀರಶೈವಮತಕ್ಕೆ ಸೇರಿದ "ಕೆಳದಿರಾಜವಂಶ" ದ ಮೇಲೆ ಒಂದು ಭಾಷಣಮಾಡಿದರು. ರಾವ್ ಬಹದ್ದೂರ್ ಎಂ. ಶಾಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮಿ|| ನರಹರಯ್ಯನವರು ಕೆಳದಿ ರಾಜಮನೆತನವು ಚಂಡಪ್ಪಗೌಡ ಎಂಬವರಿಂದ ಸ್ಥಾಪಿತವಾಯಿತೆಂದೂ, ಆ ಮನೆತನಕ್ಕೆ ಮಧ್ಯಮಧ್ಯದಲ್ಲಿ ಅನೇಕ ತೊಂದರೆಗಳು ಸಂಭವಿಸಿದುವೆಂದೂ, ಕೊನೆಗೆ ಹೈದರಾಲಿಯ ವಶವಾಯಿತೆಂದೂ, ಆಗ ಕೆಳದಿ ಸಂಸ್ಥಾನದಲ್ಲಿ 14 ಕೋಟಿ ರೂಪಾಯಿಗಳು ಇದ್ದುವೆಂದೂ ಹೇಳಿದರು.

ವರ್ತಮಾನಸಂಗ್ರಹ.

ಈ ಮೊದಲು ಹಿಂದುಸ್ಥಾನದ ವೈಸರಾಯರಾಗಿದ್ದು ಈಗ ಇಂಗ್ಲೆಂಡಿನ ಲಿಬರಲ್ ಪಾರ್ಟಿಯಮುಖಂಡರಾಗಿರುವ ಲಾರ್ಡ್ ರೀಡಿಂಗ್‌ರವರು ಇನ್‌ಫ್ಲುಯೆಂಜಾ ರೋಗದಿಂದ ಹಾಸಿಗೆ ಹಿಡಿದಿರುವರು.

ಪಂಡಿತ ಮೋತೀಲಾಲ್ ನೆಹರೂರವರ ದೇಹಸ್ಥಿತಿಯು ಯಥಾಪ್ರಕಾರವಿರುತ್ತದೆ. ಕಲ್ಕತ್ತೆಯ ಡಾ|| ದಾಸಗುಪ್ತ ಮತ್ತು ಡಾ|| ಜೀವರಾಜಮೆಹತಾರವರು ಚಿಕಿತ್ಸೆಮಾಡುತ್ತಿರುವರು. ಅವರನ್ನು ಚಿಕಿತ್ಸೆಗೋಸ್ಕರ ಪುನಃ ಕಲ್ಕತ್ತೆಗೆ ಕರೆದುಕೊಂಡುಹೋಗುವರೆಂಬ ವದಂತಿಯಿದೆ.

ದಿಲ್ಲಿಯ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಮಿ|| ಶಾಂತಸಿಂಗರವರು, ಹಿಂದುಸ್ಥಾನದಲ್ಲಿ ರಾಜಕೀಯ ಚಳವಳಿಯಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂದು ಪ್ರಶ್ನೆಮಾಡಿದ್ದಕ್ಕೆ, ಸರಕಾರದವರು 1930 ನೆಯ ಡಿಸಂಬರ್ ಅಂತ್ಯದೊಳಗೆ 54049 ಜನರಿಗೆ ಶಿಕ್ಷೆಯಾಗಿರುವದೆಂದು ಉತ್ತರವಿತ್ತರು.

ಕಲ್ಕತ್ತೆಯಲ್ಲಿ ಒಬ್ಬ ಮಾರ್ವಾಡಿಯ ಮನೆಗೆ ಒಬ್ಬ ಕಳ್ಳನು ಕನ್ನಹಾಕಿ ಅವನು ನಿದ್ರಿಸುತ್ತಿರುವಾಗ ಅವನನ್ನು ಚೂರಿಯಿಂದ ತಿವಿದು 6000 ರೂ. ಗಳನ್ನು ದೋಚಿಕೊಂಡು ಹೋಗುತ್ತಿದ್ದನು. ಅಷ್ಟರಲ್ಲೇ ಪೋಲೀಸರು ಬಂದು ಅವನನ್ನು ದಸ್ತಗಿರಿಮಾಡಿ 6000 ರೂ. ಗಳನ್ನು ಪತ್ತೇಮಾಡಿದರು.

ಇಂಗ್ಲೆಂಡಿನಲ್ಲಿ ಮರಣದಂಡನೆಯನ್ನು ಹಂಗಾಮಿಯಾಗಿ 5 ವರ್ಷ ತಪ್ಪಿಸಬೇಕೆಂದು ಅದರ ಯುಕ್ತಾಯುಕ್ತತೆಯನ್ನು ವಿಮರ್ಶಿಸುವುದಕ್ಕಾಗಿ ನಿಯಮಿಸಲ್ಪಟ್ಟ ಕಮಿಟಿಯು ಸರ್ಕಾರಕ್ಕೆ ಶಿಫಾರ್ಸು ಮಾಡಿದ್ದಿತಷ್ಟೆ! ಸರ್ಕಾರದವರು ಸದ್ಯಃ ಮರಣದಂಡನೆಯನ್ನು ತಪ್ಪಿಸುವುದಕ್ಕಾಗುವುದಿಲ್ಲವೆಂದು ಉತ್ತರವನ್ನಿತ್ತರು.

ಲಾಹೋರಿನ ಸಿಟಿಮ್ಯಾಜಿಸ್ಟ್ರೇಟ್ ರಾವ್‌ಸಾಹೇಬ್ ನಥೂರಾಮ್‌ರವರ ಮನೆಯಲ್ಲಿ ಕಳ್ಳರು 4000 ರೂ. ಗಳ ಬೆಲೆಬಾಳುವ ಆಭರಣಗಳನ್ನಿಟ್ಟಿದ್ದ ಪೆಟ್ಟಿಗೆಯನ್ನು ಕಳುವುಮಾಡಿಕೊಂಡು ಹೋಗಿದ್ದಾರೆ. ಪೋಲೀಸರು ಎಷ್ಟು ಹುಡುಕಿದರೂ ಕಳ್ಳರ ಪತ್ತೆ ಇರುವುದಿಲ್ಲ. ಅವರ ಅಡಿಗೆಯವನನ್ನು ಗುಮಾನಿಯಿಂದ ದಸ್ತಗಿರಿಮಾಡಿ ಲಾಕಪ್ಪಿನಲ್ಲಿಟ್ಟಿದ್ದಾರೆ.

ಕಾಠಿಯಾವಾಡ್ ಪ್ರಾಂತದಲ್ಲಿ ಖಾದಿಪ್ರಚಾರಮಾಡಬೇಕೆಂಬ ಉದ್ದೇಶದಿಂದ ಒಂದು ಖಾದಿಮಂಡಲವನ್ನು ಸ್ಥಾಪಿಸಿರುವರು. ಶ್ರೀಯುತ ಮಣಿಲಾಲ್ ಕೊಠಾರಿಯವರು ಆ ಮಂಡಲಿಗೆ ಅಧ್ಯಕ್ಷರಾಗಿರುವರು. ಇವರು 11 ಸಾವಿರ ರೂ. ಗಳನ್ನು ಚಂದಾ ಎತ್ತಿ ಆ ಪೈಕಿ ಈಗ 2500 ರೂ. ಗಳನ್ನು ಆ ಮಂಡಲಕ್ಕೆ ಕೊಟ್ಟಿರುವರು.

ಕಲ್ಕತ್ತೆಯಲ್ಲಿ ಈಗ ಕೆಲವು ದಿವಸಗಳ ಕೆಳಗೆ ಬಂಗಾಲಾ ಸೆರೆಮನೆಗಳ ಮುಖ್ಯಾಧಿಕಾರಿಯಾದ ಮಿ|| ಸಿಂಪರ್ಸನ್‌ರವರನ್ನು ಗುಂಡಿನಿಂದ ಹೊಡೆದು ಕೊಂದನೆಂದು ದಸ್ತಗಿರಿಮಾಡಲ್ಪಟ್ಟಿದ್ದ ಮಿ|| ದಿನೇಶಗುಪ್ತನು ತಪ್ಪಿತಸ್ಥನೆಂದು ಕೋರ್ಟಿನವರು ತೀರ್ಮಾನಿಸಿ ಅವನ ಮೇಲೆ ಛಾರ್ಜುಮಾಡಿದರು. ಅವನು ತಾನು ತಪ್ಪಿತಸ್ಥನಲ್ಲವೆಂದು ವಾದಿಸುತ್ತಿರುವನು.

ಬೊಂಬಾಯಿಯ ವರ್ತಕಸಂಘದವರು ಮಹಾತ್ಮಗಾಂಧಿಯವರೇ ಮೊದಲಾದ ಮುಖಂಡರನ್ನು ಬಿಡುಗಡೆಮಾಡಿದುದು ಸಂತೋಷಕರವಾದುದೆಂದೂ, ಅದರಂತೆ ಎಲ್ಲಾ ರಾಜಕೀಯ ಖೈದಿಗಳನ್ನೂ ಬಿಡುಗಡೆಮಾಡಬೇಕೆಂದೂ, ಆರ್ಡಿನೆನ್ಸುಗಳನ್ನು ತೆಗೆದುಹಾಕಬೇಕೆಂದೂ ವೈಸರಾಯರವರ ಪ್ರೈವೇಟ್ ಸೆಕ್ರೆಟರಿಯವರಿಗೆ ತಂತಿಯನ್ನು ಕಳುಹಿಸಿರುವರು.

ಕಲ್ಕತ್ತೆಯ ನವಶಕ್ತಿ ಎಂಬ ಸಾಪ್ತಾಹಿಕಪತ್ರಿಕೆಯ ಸಂಪಾದಕರಾದ ಶ್ರೀಯುತ ಸರೋಜಕುಮಾರ ರಾಯ್ ಚೌಧರಿ ಮತ್ತು ಪ್ರಿಂಟರ್ ಶ್ರೀಯುತ ಹೇಮಂತಕುಮಾರ ಸರ್ಕಾರ್ ಈ ಉಭಯರು, "ಬಂದೂಕಿನ ಸರ್ಕಾರ" ಎಂಬ ರಾಜದ್ರೋಹಕರವಾದ ಪದ್ಯವನ್ನು ಪ್ರಸಿದ್ಧಿಸಿದರೆಂಬ ಅಪರಾಧದಮೇಲೆ ಕಲ್ಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಇವರಿಗೆ ಒಂದುವರ್ಷ ಕಠಿಣಶಿಕ್ಷೆಯನ್ನು ವಿಧಿಸಿದರು.

ಲಾಹೋರಿನಲ್ಲಿ ಪಂಜಾಬ್ ಗವರ್ನರಮೇಲೆ ಗುಂಡುಹಾರಿಸಿ ಸಬ್‌ಇನ್ಸ್‌ಪೆಕ್ಟರ್ ಚನ್ನಸಿಂಗನ ಮರಣಕ್ಕೆ ಕಾರಣೀಭೂತನೆಂದು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಹರಿಕೃಷ್ಣನಿಗೆ ಲಾಹೋರ್ ಸೆಷನ್ ಜಡ್ಜರು ಮರಣದಂಡನೆಯನ್ನು ವಿಧಿಸಿದರು. ಪಂಜಾಬಿನ ಗವ. ದಯೆತೋರಿಸಿ ಮರಣದಂಡನೆಯನ್ನು ತಪ್ಪಿಸಬೇಕೆಂದು ಕೇಳಿಕೊಂಡರು. ಆದರೂ ಪ್ರಯೋಜನವಾಗಲಿಲ್ಲ. ಅವನು ಹೈಕೋರ್ಟಿಗೆ ಅಪೀಲ್ ಮಾಡುವನಂತೆ!

ರಂಗಾಪುರ ಡಿ|| ಗೆ ಸೇರಿದ ಸಿಲ್ಚಮರಿ ಎಂಬ ಪಟ್ಟಣದಲ್ಲಿ ಹಿಂದುಗಳು ಸರಸ್ವತಿ ಪೂಜೆಯನ್ನು ಮಾಡಿ ಮೆರವಣಿಗೆಗೆ ಹೊರಟಿದ್ದರು. ಆಗ ನೂರಾರು ಜನ ಮಹಮ್ಮದೀಯರು ಬಂದು ಮೆರವಣಿಗೆಯಲ್ಲಿದ್ದ ಜನರ ಮೇಲೆ ಬಿದ್ದು ದೊಣ್ಣೆಯಿಂದ ಹೊಡೆದು ಮೆರವಣಿಗೆಗೆ ಅಡ್ಡಿಪಡಿಸಿದರು. ಆಗ ಅನೇಕ ಹಿಂದುಗಳಿಗೂ ಕೆಲವು ಪೋಲೀಸರಿಗೂ ಪೆಟ್ಟಾಗಿದೆ. ಅನಂತರ ಪೋಲೀಸರು ಗುಂಡುಹಾರಿಸಿದರು. ಆಗ ಒಬ್ಬ ಮಹಮ್ಮದೀಯನು ಮೃತಪಟ್ಟನು. 20 ಜನರಿಗೆ ಗಾಯಗಳಾಗಿವೆ. ಸುಮಾರು 300 ಜನ ಮಹಮ್ಮದೀಯರನ್ನು ದಸ್ತಗಿರಿಮಾಡಿದ್ದಾರೆ.

ಲಂಡನ್ನಿನಲ್ಲಿ ಭಾನುವಾರ ಸಿನಿಮಾಆಟವನ್ನು ಪ್ರದರ್ಶಿಸಕೂಡದೆಂದು ಸರ್ಕಾರದವರು ಅಪ್ಪಣೆಮಾಡಿರುವದರಿಂದ ಸಿನಿಮಾ ಮ್ಯಾನೇಜರರು ಹೋಮ್ ಸೆಕ್ರೆಟರಿಯವರನ್ನು ಕಂಡು ಸಿನಿಮಾ ಕಂಪನಿಯವರು ವರ್ಷವೊಂದಕ್ಕೆ 2 ಲಕ್ಷ ಪೌಂಡುಗಳನ್ನು ದಾನಮಾಡುತ್ತಿರುವರೆಂದೂ, ಭಾನುವಾರದ ದಿವಸ ಮೋಟಾರ್ ಬಸ್ಸುಗಳೂ, ರೈಲ್ವೆಗಳೂ, ಕಾಫಿ ಹೋಟಲಂಗಡಿಗಳೂ, ಸೇಂದಿ ಸಾರಾಯಿ ಅಂಗಡಿಗಳೂ ಯಥಾಪ್ರಕಾರವಾಗಿ ನಡೆಯುತ್ತಿರುವಾಗ, ಸಿನಿಮಾಕಂಪನಿಗಳನ್ನು ಆ ದಿವಸ ಏಕೆ ನಡೆಸಬಾರದೆಂದೂ, ಆ ಆರ್ಡರನ್ನು ರದ್ದುಪಡಿಸಬೇಕೆಂದೂ ಅರ್ಜಿ ಹಾಕಿರುವರು.

ಹೊಸ ದಿಲ್ಲಿಯಲ್ಲಿ ಒಬ್ಬ ಮಹಮ್ಮದೀಯ ವರ್ತಕನು ವಿದೇಶೀವಸ್ತ್ರಗಳ ಬೇಲುಗಳನ್ನು ರೈಲ್ವೇಸ್ಟೇಷನಿನಿಂದ ತನ್ನ ಅಂಗಡಿಗೆ ಸಾಗಿಸುತ್ತಿರುವಾಗ ಮಧ್ಯದಾರಿಯಲ್ಲಿ ಕಾಂಗ್ರೆಸ್ ಸ್ವಯಂಸೇವಕರು ಬಂದು ತಡೆದರು. ಆಗ ಆ ವರ್ತಕನ ಕಡೆಯವರು ಸ್ವಯಂಸೇವಕರನ್ನು ಹೊಡೆದರು. ಸ್ವಯಂಸೇವಕರೆಲ್ಲರೂ ಹಿಂದುಗಳಿದ್ದರು. ಆಗ ಸಮೀಪದಲ್ಲಿದ್ದ ಹಿಂದುಗಳು ಬಂದುದರಿಂದ ಮಹಮ್ಮದೀಯರಿಗೂ ಹಿಂದುಗಳಿಗೂ ಹೊಡೆದಾಟವಾಯಿತು. ಈ ಮಧ್ಯದಲ್ಲಿ ಯಾರೋ ಆ ಬಟ್ಟೆಯ ಬೇಲುಗಳ ಮೇಲೆ ಸೀಮೆಯ ಎಣ್ಣೆಯನ್ನು ಚೆಲ್ಲಿ ಬೆಂಕಿ ಹಚ್ಚಲು, ಪೋಲೀಸರು ಜಾಗ್ರತೆಯಾಗಿ ಬಂದು ಬೆಂಕಿಯನ್ನು ಆರಿಸಿದರು. ಆಗ 17 ಜನರನ್ನು ದಸ್ತಗಿರಿಮಾಡಿ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅನಂತರ ಬಿಟ್ಟರು.

ಜಗತ್ತಿನ ಪೂರ್ವಪಶ್ಚಿಮದ ಉದ್ದಳತೆಯನ್ನೂ, ಉತ್ತರದಕ್ಷಿಣದ ಅಗಲಳತೆಯನ್ನೂ ಕಂಡುಹಿಡಿದು, ಈಗ ಅಂತರಿಕ್ಷದ ಹಾಗೂ ಸಮುದ್ರದ ಆಳವನ್ನು ಕಂಡುಹಿಡಿಯಲು ಕೆಲವರು ಪ್ರಯತ್ನಿಸಿರುವರು. ಲೆಫ್ಟಿನೆಂಟ್ ಸೋಸೆಕ್ ಎಂಬವನು ಕಳೆದ ತಿಂಗಳದ ಆದಿಯಲ್ಲಿ ಭೂಮಟ್ಟದಿಂದ 42,470 ಅಡಿಗಳಿಗಿಂತಲೂ ಮೇಲೆ ವಿಮಾನವನ್ನೇರಿಸಿದನು. ಇಷ್ಟು ಎತ್ತರದವರೆಗೂ ಯಾವ ವಿಮಾನವೂ ಇದುವರೆಗೂ ಏರಿರಲಿಲ್ಲ. 1927 ನೆಯ ವರ್ಷದಲ್ಲಿ ಹಾಥಾರ್ನ್‌ಗ್ರೇ ಎಂಬವನು 42,470 ಅಡಿಗಳವರೆಗೆ ಏರಿದ್ದನು. 1901ನೆಯ ವರ್ಷದಲ್ಲಿ ಜರ್ಮನಿಯ ಸೂರಿಂಗ್ ಮತ್ತು ಬರ್ಸನ್ ಎಂಬವರು 35,424 ಅಡಿಗಳವರೆಗೂ ಹೋಗಿದ್ದರು. 42,000 ಅಡಿಗಳ ಪ್ರಮಾಣದಲ್ಲಿ ನಾದರಸವೂ ಸಹ ಹೆಪ್ಪುಗಟ್ಟುವುದು. ಸೋಸೆಕ್ ಎಂಬವನು ತನ್ನ ಕಣ್ಣುಗುಡ್ಡೆಗಳಿಗೆ ವಿದ್ಯುಚ್ಛಕ್ತಿಯಿಂದ ಉಷ್ಣವು ಉತ್ಪನ್ನವಾಗುವಹಾಗೆ ಒಂದು ಉಪಾಯವನ್ನು ಮಾಡಿದ್ದನು. ಇಲ್ಲದಿದ್ದರೆ ಅವನ ಕಣ್ಣುಗುಡ್ಡೆಗಳು ಹೆಪ್ಪುಗಟ್ಟಿಗೊಳ್ಳುತ್ತಿದ್ದುವು. 1950 ನೆಯ ವರ್ಷದೊಳಗಾಗಿ ವಿಮಾನದಲ್ಲಿ ಘಂಟೆ 1ಕ್ಕೆ 1,000 ಮೈಲು ವೇಗದಿಂದ ಹೋಗುವಹಾಗೆ ಅದನ್ನು ಅಭಿವೃದ್ಧಿಗೆ ತರುವ ಯತ್ನವನ್ನು ಮಾಡುತ್ತಿರುವರು. ಪಾಶ್ಚಾತ್ಯರ ಸಾಹಸವೇ ಸಾಹಸ!

ಕಲ್ಕತ್ತೆಯಲ್ಲಿ ಈ ತಿಂಗಳು 26 ನೆಯ ತಾರೀಖಿನ ದಿವಸ ಸ್ವಾತಂತ್ರ್ಯ ದಿವಸವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ಪೌರಸಭಾಧ್ಯಕ್ಷರಾದ ಸುಭಾಷ್‌ಚಂದ್ರಬೋಸ್‌ರವರು ಆ ದಿವಸದ ಉತ್ಸವದಲ್ಲಿ ಮುಖ್ಯಭಾಗವನ್ನು ವಹಿಸಿದ್ದರು. ಆ ದಿವಸ ಸುಭಾಷ್ ಚಂದ್ರಬೋಸ್‌ರವರು ಮೆರವಣಿಗೆಗೆ ಹೋಗಬಾರದೆಂದು ಸರ್ಕಾರದವರು ಅಪ್ಪಣೆಮಾಡಿದ್ದರಂತೆ! ಇವರು ಸರ್ಕಾರದ ಅನುಜ್ಞೆಯನ್ನುಲ್ಲಂಘಿಸಿ ಮೆರವಣಿಗೆಯಲ್ಲಿ ಮುಂದಾಳುಗಳಾಗಿ ಹೋದರು. ಸರ್ಕಾರದವರು ಅರ್ಧದಾರಿಯಲ್ಲಿಯೇ ಮೆರವಣಿಗೆಯನ್ನು ತಡೆದು ಜನರಮೇಲೆ ಬಿದ್ದು ಲಾಠೀಪ್ರಯೋಗಮಾಡಿದರು. ಸುಭಾಷ್‌ಚಂದ್ರಬೋಸ್‌ರವರಿಗೂ ತುಂಬಾ ಪೆಟ್ಟು ಬಿತ್ತು. ಅನಂತರ ಸರ್ಕಾರದವರು ಇವರನ್ನು ದಸ್ತಗಿರಿಮಾಡಿ ಆರು ತಿಂಗಳು ಕಠಿಣಶಿಕ್ಷೆಯನ್ನು ವಿಧಿಸಿದರು. ಜೈಲಿನಲ್ಲಿ ಇವರನ್ನು ತಕ್ಕರೀತಿಯಿಂದ ಕಾಣುವುದಿಲ್ಲವೆಂದೂ ಅವರ ಗಾಯಗಳಿಗೆ ಸರಿಯಾದ ಚಿಕಿತ್ಸೆ ಮಾಡುವುದಿಲ್ಲವೆಂದೂ ತಿಳಿದುಬರುತ್ತದೆ. ಸುಭಾಷ್‌ಚಂದ್ರಬೋಸ್‌ರವರು ಬೆಂಗಾಲ್ ಪ್ರಾಂತದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಿದ್ದು ಉಜ್ವಲದೇಶಾಭಿಮಾನಿಗಳಿರುವರು. ಇವರನ್ನು ಪುನಃ ಜೈಲಿಗೆ ಕಳುಹಿಸಿದುದನ್ನು ನೋಡಿದರೆ, ಮುಖ್ಯಮಂತ್ರಿಗಳು ಆಶಿಸಿದಂತೆ ಶಾಂತಿಸ್ಥಾಪನೆ ಮಾಡುವುದು ಕಷ್ಟವಾಗುವುದೆಂದು ಅನೇಕ ಆಂಗ್ಲಪತ್ರಿಕಾಕರ್ತರು ಉದ್ಗಾರತೆಗೆದಿರುವರು.

ಸೋಲಾಪುರದ ಶ್ರೀಯುತ ಧನಶೆಟ್ಟಿ ಮಲ್ಲಪ್ಪನವರ ಪತ್ನಿ ಶ್ರೀಮತಿ ನೀಲಮ್ಮಬಾಯಿಯವರು ಮತ್ತು ಮ|| ರಾ|| ಶಿವಣಸಿದ್ಧಪ್ಪ ಧನಶೆಟ್ಟಿ, ಶ್ರೀಯುತ ಶ್ರೀ ಕೃಷ್ಣಶಾರದಾರವರ ಪತ್ನಿ ಶ್ರೀಮತಿ ರಾಮಕುಮಾರಿಬಾಯಿಯವರು, ಶ್ರೀಯುತ ಜಗನ್ನಾಥಸಿಂಧೆಯವರ ಪತ್ನಿಯವರಾದ ರಮಾಬಾಯಿಯವರು ಮತ್ತು ಮ|| ರಾ|| ಭರ್ವ ರಾಮಜಿಸಿಂಧೆ ಮತ್ತು ಮ|| ರಾ|| ದಂಡಾಭಾಯಿ ಕುರ್ಬಾನ್ ಹುಸೇನರವರು ತಿಳುಹಿಸಲಪೇಕ್ಷಿಸುವುದೇನಂದರೆ—"ನಮಗುಂಟಾದ ವಿಯೋಗದುಃಖಕ್ಕೆ ದೇಶದ ನಾನಾ ಪ್ರಾಂತ್ಯಗಳಿಂದಲೂ, ಸಂಸ್ಥೆಗಳಿಂದಲೂ ಅನುತಾಪವನ್ನು ಸೂಚಿಸುವ ಪತ್ರಿಕೆಗಳೂ ತಂತಿಗಳೂ ಬಂದಿವೆ. ಎಲ್ಲರಿಗೂ ಬೇರೆ ಬೇರೆಯಾಗಿ ಜವಾಬು ಕೊಡುವುದು ಶಕ್ಯವಲ್ಲವಾದುದರಿಂದ ಈ ಮೂಲಕ ನಮ್ಮ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ನಮ್ಮ ದುಃಖದಲ್ಲಿ ನಮ್ಮ ದೇಶಬಂಧುಗಳು ಭಾಗಿಗಳಾಗಿರುವರೆಂಬುದು ನಮ್ಮ ದುಃಖಶಮನಕ್ಕೆ ಅನುಕೂಲವಾಗಿದೆ. ಈ ನಾಲ್ವರು ಸೋಲಾಪುರದ ವೀರರು ನಿರಪರಾಧಿಗಳೆಂಬುದೇ ನಮ್ಮ ದೃಢವಾದ ನಂಬಿಗೆ. ಅವರನ್ನು ಗಲ್ಲಿಗೆ ಹಾಕುವುದಕ್ಕೆ ಒಂದು ದಿವಸ ಮುಂದೆ ನಾವು ಅವರನ್ನು ಎರವಾಡಾ ಜೈಲಿನಲ್ಲಿ ಸಂದರ್ಶಿಸಿದೆವು. ಅವರು ಹಸನ್ಮುಖಿಗಳಾಗಿದ್ದು ತಮ್ಮ ಕೊನೆಯಾಗಿ ವ್ಯಕ್ತಪಡಿಸಿದ ದೇಶಪ್ರೇಮಕಕ್ಕೆ ಸಹಾನುಭೂತಿಗೂ ತಮ್ಮ ಕೃತಜ್ಞತೆಯನ್ನು ದೇಶಬಂಧುಗಳಿಗೆ ತಿಳುಹಿಸಬೇಕೆಂದು ಹೇಳಿದರು. ಅವರ ಪ್ರಾಣಸಮರ್ಪಣವು ರಾಷ್ಟ್ರದ ಸ್ವಾತಂತ್ರ್ಯಸಂಗ್ರಾಮಕ್ಕೆ ಸ್ವಲ್ಪಮಟ್ಟಿಗಾದರೂ ಸಹಾಯವಾಗಲೆಂದು ಆಶಿಸುತ್ತೇವೆ.

ಮಹಾತ್ಮರ ಅಮೋಘವಾದ ಅಭಿಪ್ರಾಯಗಳು.

ಸತ್ಯಾಗ್ರಹಿ ಖೈದಿಗಳನ್ನು ಸರ್ಕಾರದವರು ಕೂಡಲೇ ಬಿಡಬೇಕು. ಮತ್ತು ದಬ್ಬಾಳಿಕೆಯನ್ನು ನಿಲ್ಲಿಸಬೇಕು. ರೌಂಡ್‌ಟೇಬಲ್ ಕಾನ್ಫರೆನ್ಸಿನಿಂದ ಬರುವ ಸ್ನೇಹಿತರ ಸಂಗಡ ಆಲೋಚನೆ ಮಾಡಿ ಇಂಗ್ಲೆಂಡಿನ ಮುಖ್ಯಮಂತ್ರಿಗಳ ಹೇಳಿಕೆಯಂತೆ ಸರ್ಕಾರದವರೊಡನೆ ಸಹಕಾರ ಮಾಡುವುದವಶ್ಯಕವೆಂದು ತಿಳಿದುಬಂದರೂ ಪಿಕೆಟಿಂಗ್ ಮಾಡುವ ಹಕ್ಕನ್ನು ಅಂತೊಟ್ಟಿಯ ಕೋಟ್ಯಾಂತರ ಭಾರತೀಯರು ಉಪ್ಪು ತಯಾರುಮಾಡುವ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ಈ ಪ್ರಾಥಮಿಕ ಹಕ್ಕುಗಳನ್ನು ಸರ್ಕಾರದವರು ಒಪ್ಪುವುದಾದರೆ ಈಗ ಪ್ರಚಲಿತವಾಗಿರುವ ಆರ್ಡಿನೆನ್ಸುಗಳನ್ನು ತೆಗೆದುಹಾಕುವುದವಶ್ಯಕವೆಂಬುದು ಸ್ವತಃಸಿದ್ಧವಾಗುವುದು. ಸರ್ಕಾರದವರೂ ಮತ್ತು ಜನಸಾಮಾನ್ಯರೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದುದೇನಂದರೆ:—(1) ಉಪ್ಪು ತಯಾರಿಸುವುದು (2) ವಿದೇಶಿವಸ್ತ್ರಬಹಿಷ್ಕಾರ (3) ಸೇಂದಿ ಸಾರಾಯಿಗಳ ಬಹಿಷ್ಕಾರ ಈ ಮೂರು ಅಂಶಗಳು ಸದ್ಯಃ ಇರುವ ಸರ್ಕಾರವನ್ನು ಪ್ರತಿಭಟಿಸುವ ಉದ್ದೇಶದಿಂದಲೇ ಅನುಷ್ಠಾನದಲ್ಲಿ ತರಲ್ಪಟ್ಟಿಲ್ಲ. ಸ್ವರಾಜ್ಯಸರ್ಕಾರವಾಗಲಿ, ಅಥವಾ ವಿದೇಶಿಸರ್ಕಾರವಾಗಲಿ ಯಾವಕಾಲಗಳಲ್ಲಿಯೂ ಉಪ್ಪು ತಯಾರಿಸುವುದಕ್ಕೂ, ವಿದೇಶಿವಸ್ತ್ರಬಹಿಷ್ಕಾರಕ್ಕೂ, ಮದ್ಯಪಾನನಿರೋಧಕ್ಕೂ ಅವಕಾಶವಿದ್ದೇ ಇರಬೇಕು. ಮತ್ತು ಮದ್ಯಪಾನವು ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟು ವಿದೇಶಿವಸ್ತ್ರಗಳಿಗೆ ಬಹಿಷ್ಕಾರವಾಗಿ, ಜನರಿಗೆ ಉಪ್ಪು ತಯಾರಿಸುವ ಹಕ್ಕಿರುವಂತೆ ಇತ್ಯರ್ಥವಾಗುವುದಾದರೆ ಭಾರತೀಯರಿಗೂ ಆಂಗ್ಲೇಯರಿಗೂ ಸೌಹಾರ್ದವು ಭದ್ರವಾಗಿ ನೆಲೆಗೊಳ್ಳುವುದು ಇಲ್ಲದಿದ್ದರೆ ಅಶಾಶ್ವತವಾಗುವುದು.

ಭಾರತೀಯರಿಗೆ ಶಾಂತಿಯು ಗೌರವದಿಂದ ಬರುವುದಾದರೆ ನನಗೆ ಶಾಂತಿಯು ಅವಶ್ಯವಾಗಿ ಬೇಕಾಗಿದೆ. ನಾನು ಅದನ್ನೇ ಹುಡುಕುತ್ತಿರುವೆನು. ಮೇಲ್ಕಂಡ ಮೂರು ಅಂಶಗಳು ತೃಪ್ತಿಕರವಾಗಿ ತೀರ್ಮಾನಿಸಲ್ಪಡದಿದ್ದರೆ ನಾನೊಬ್ಬನೇ ಇರುವುದಾದರೂ ಅಡ್ಡಿಯಿಲ್ಲ. ನಾನು ಅಂಥ ಶಾಂತಿಯಲ್ಲಿ ಭಾಗಿಯಾಗಲಾರೆನು. ರೌಂಡ್‌ಟೇಬಲ್ ಸಮ್ಮೇಳನವನ್ನು ಅದರ ಫಲದಿಂದ ನಿರ್ಣಯಿಸುವೆನು. ಈ ಮೂರು ಅಂಶಗಳನ್ನು ಪರೀಕ್ಷಾರ್ಥವಾಗಿ ಮುಂದಿಟ್ಟಿರುವೆನು. ಸರ್ವರೂ ತಿಳಿದಿರುವಂತೆ ಇನ್ನೂ ಎಂಟು ಅಂಶಗಳಿವೆ. ನನಗೆ ಸ್ವಾತಂತ್ರ್ಯದ ತಿರುಳು ಬೇಕೇ ವಿನಾ ನೆರಳು ಬೇಕಿಲ್ಲ. ವೈದ್ಯನು ಪರೀಕ್ಷೆಮಾಡಿ ರೋಗದ ಹೆಸರನ್ನು ಹೇಳುವ ಹಾಗೆ ನನ್ನ ಹನ್ನೊಂದು ಅಂಶಗಳ ಸಾಧನೆಗೆ ರೌಂಡ್‌ಟೇಬಲ್ ಸಮ್ಮೇಳನ ವ್ಯಕ್ತಿಕ್ಕೆ ಹೊಂದುವನು.

ನೂತನ ಭಾಷಣ! ನೂತನ ಭಾಷಣ!!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸತ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಇಂಡಿಯಾ ಸೆಕ್ರೆಟರಿ ವೆಜ್‌ವುಡ್‌ಬೆನ್ನರ ಭಾಷಣ.

ಮಿ|| ಚರ್ಚಿಲ್ಲರೇ ಮುಂತಾದವರು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಡಕೂಡದೆಂದು ವಾದಿಸುತ್ತಾರೆ. ಅವರಿಗೆ ಸರಿಯಾದ ಉತ್ತರ ಕೊಡಲು ನಾನು ಕಾದಿದ್ದೇನೆ. ನಮ್ಮ ಎಲ್ಲಾ ಪಕ್ಷದ ಮೆಂಬರುಗಳು ಮಾತ್ರವೇ ಅಲ್ಲ ಬ್ರಿಟಿಷ್ ಸರ್ಕಾರದ ಪ್ರತಿನಿಧಿಗಳು ಸಹ ಹಿಂದೂಸ್ಥಾನಕ್ಕೆ ಕೆಲವು ವಚನಗಳನ್ನು ಕೊಟ್ಟಿದ್ದಾರೆ. ಆ ವಚನಗಳು ಹಾಗೆಯೇ ನಿಂತಿವೆ. ಅವುಗಳನ್ನೆಲ್ಲಾ ನಾವು ಸಲ್ಲಿಸಬೇಕು. ಇಲ್ಲವೇ ತಿರಸ್ಕರಿಸಬೇಕು. ಹಿಂದುಸ್ಥಾನದ ಸರಕಾರದಮೇಲೆ ಜವಾಬ್ದಾರಿಕೆಯ ಭಾರವನ್ನು ಹೊರಿಸದಿದ್ದರೆ ಆ ವಚನಗಳನ್ನು ಸಜೀವವಾಗಿ ಉಳಿಸಿದಂತಾಗುವುದೇ ಇಲ್ಲ. ಇಂಗ್ಲೆಂಡಿನಲ್ಲಿ ಹಿಂದೆ ಇದ್ದ ರಾಜನೀತಿವಿಶಾರದರು ಎಲ್ಲ ಅಂಶಗಳನ್ನೂ ವಿಚಾರಮಾಡಿ ಹಿಂದೂಸ್ಥಾನದ ಮತ್ತು ಇಂಗ್ಲೆಂಡಿನ ಕ್ಷೇಮಕ್ಕಾಗಿಯೇ ಈ ವಚನಗಳನ್ನು ಮಾಡಿದರೆಂದು ಚರಿತ್ರೆಯು ಸಾರುತ್ತಿದೆ. ನಾವು ಹಿಂದೂಸ್ಥಾನಕ್ಕೆ ಜವಾಬ್ದಾರಿಯನ್ನು ಕೊಡುವುದು ರಾಜಕೀಯದೃಷ್ಟಿಯಿಂದಲೂ ನೀತಿದೃಷ್ಟಿಯಿಂದಲೂ ಅತ್ಯಂತ ಅಗತ್ಯವಾಗಿದೆ. ಹಿಂದುಸ್ಥಾನದಲ್ಲಿ ನಡೆಯುವ ರಾಜ್ಯಭಾರಕ್ಕೆ ಯಾರಾದರೂ ಜವಾಬ್ದಾರರಾಗಿರಲೇಬೇಕು. ನಾವು ಇಷ್ಟು ದೂರದಲ್ಲಿ ಕುಳಿತುಕೊಂಡು ಜವಾಬ್ದಾರರೆಂದು ಕೇಳುವುದು ಅಸಾಧ್ಯ! ...

ಚಂದಾದಾರರಲ್ಲಿ ವಿಜ್ಞಾಪನೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಮಿರ್ಜೆಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು
ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

[27]

ಸ್ತ್ರೀರೋಗ ನಿವಾರಣೆ ಚೂರ್ಣ.

ಪತ್ತೆ:—ವೈದ್ಯ ಪಾಮಿರಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜ

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ...

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಕ್ಚೆರ್ಸ್.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[41]

ಸತ್ವದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ವಜ್ರಾಂಗ ಸುಂದರಪಾಕ.

[28]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ರಾಜಮದ್ದು.

ಮಲೇರಿಯಾನ

ಪಿತ್ತರೋಗಕ್ಕೆ ಕಂಪೌಂಡು ಸಿರಪು

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—

[26] ಮಲೇರಿಯಾನ ಕಂಪೆನಿ, ನಂಬ್ರ 21 ಹಂಪನಕಟ್ಟೆ, ಮಂಗಳೂರು, ದ. ಕ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮಾಲಯ ಪ್ರದೇಶದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಡಾಕ್ಟರ್ ಜೇ. ಜೆ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ[illegible] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ[illegible] ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ[illegible]

ಗಳನ್ನು ಕೊಟ್ಟಿ[illegible] ರು. ಪ್ರಸಿದ್ಧವಾದ[illegible] ನಶ್ಯದ ಪುಡಿಯಿ[illegible] ಸ್ಪಷ್ಟವಾಗುವ ವ್ಯಾ[illegible] ಧಿಗಳು ಯಾವವೆ[illegible] ರೆ:—ಪಿನಶಿ, ಒ[illegible] ತಲೆನೋವು, ತಲೆ[illegible] ಲ್ಲಿನ ರೋಗಗ[illegible] ಕಣ್ಣುಗಳಲ್ಲಿ ಉಂಟ[illegible] ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ[illegible] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [illegible] ಲ್ಪಟ್ಟ ಆ ವ್ಯಾಧಿಗಳನ್ನು ಸ್ಪಷ್ಟಪಡಿಸಿ ಜ್ಞಾಪಕಶ[illegible] ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಲ್ಲ[illegible] ಸಾಧಾರಣ ನಶ್ಯದ [illegible] ಈ ಸುಗಂಧ ನಶ್ಯದಪು[illegible] ಯಲ್ಲಿ ಒಂದ[illegible]ನ್ನು ಮಿಶ್ರಮಾಡಿದರೆ ಎಲ್ಲ[illegible] ಪರಿಮಳವಾ[illegible] ಇದನ್ನು ಅನೇಕ ಪ್ರಭುಗ[illegible] ತಮ್ಮ ಗೃ[illegible]ಟುಂಬಔಷಧವಾಗಿ ಉಪಯೋ[illegible] ಸುತ್ತಾರೆ. [illegible]ಮೊಂಸೀಸೆ ಪುಗಸೆಟ್ಟೆ ಕಳುಹಿಸಲಾಗು[illegible] ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-[illegible] ಡಜನ್ ಒಂದಕ್ಕೆ ಕ್ರಯ ರೂ. ೩-೮-೦. ವಿ. ಪಿ. ೮ [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[29] ಪೋ. ಬಾ. ೫೧೦. ಮದರಾ[illegible]

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೨ ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	....	....	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೨ನೆಯ ಆವೃತ್ತಿ	....	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	....	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	....	....	೧ ಆಣೆ
ಸನ್ಯಾಸಾಶ್ರಮ ವಿಮರ್ಶೆ ೨ನೆಯ ಆವೃತ್ತಿ (ಸಂಸ್ಕೃತ)	....	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	....	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೬ನೆಯ ಆವೃತ್ತಿ	....	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	....	....	೧ ಆಣೆ
ಬಸವಾದಿ ನಿಜತತ್ವದರ್ಪಣ ೩ನೆಯ ಆವೃತ್ತಿ	....	....	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	....	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	....	೨ ಆಣೆ
ವೀರಶೈವಮತಮೀಮಾಂಸಾ	....	....	೨ ಆಣೆ
ಶಿವಸ್ವರಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	....		೨ ಆಣೆ ೬ ಪೈ.
ವೀರಶೈವಾಚಾರವಿಧಿ ೨ಯ ಆವೃತ್ತಿ	....	....	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	....	....	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ		....	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ		....	೪ ಆಣೆ
ವೈದಿಕವಾಙ್ಮಯರಹಸ್ಯ	....	....	೪ ಆಣೆ
ಶಿವಾಧಿಕ್ಯರತ್ನಾವಳಿ (ಸದಕ್ಷರದೇವವಿರಚಿತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ			೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	....	....	೮ ಆಣೆ
ಆಗಮಬೋಧನ್ಯಾನ (ಶಂಭುಲಿಂಗಶಿವಾಚಾರ್ಯಕೃತ)		....	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	....	....	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)		....	೧೨ ಆಣೆ
ಸಿದ್ಧಾಂತರತ್ನಾವಳಿ (ತ್ರಿಲೋಚನಶಿವಾಚಾರ್ಯಕೃತ ಬಹು ಪ್ರಾಚೀನಗ್ರಂಥ)			೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)		....	೧ ರೂ.
ಸಚಿತ್ರ ರೇಣುಕವಿಜಯ	....	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	....	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿ[illegible] ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರ[illegible] ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯ[illegible] ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ [illegible] ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ [illegible] ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವವು[illegible] ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ, ಪೋ॥ ಗುಳೇದಗುಡ್ಡ, ಡಿ॥ ಬಿಜಾಪು[illegible]

ಓಂ.

ಸುಸಮಯ ! **ಸಾಲವು ದೊರಕುವುದು !!** **ಅಪೂರ್ವಲಾಭ[illegible]**

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆ[illegible]

ಹೆಡ್ಡಾಫೀಸ್ :—**ದೇಹಲಿ.**

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಏಜೆನ್ಸಿಯವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, **ಮೈಸೂರು.**

ರೈತರೂ, ವ್ಯಾಪಾರಸ್ಥರೂ ಸಾಲದ ತೊಂದರೆ ಇರುವವರೂ, ಕೈಗಾರಿಕೆ[illegible] ಸೆಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಸಹ [illegible] ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲ[illegible] ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (L[illegible] Foticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯವ[illegible] ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು.

ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂ[illegible] ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ಮಾ[illegible] ಸಂಬಳ ಅಥವಾ ಕಮೀಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ [illegible] ಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (10)

ಮೆ॥ ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಏಜೆನ್ಸಿಸ್, **ಮೈಸೂ[illegible]**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ[illegible]

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ । ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರನಿಯಾಮಕಾನ್ ಪರಿಲಸತ್ಪಂಚಾಕ್ಷರೀಬೋಧಕಾನ್ । ಪಂಚಾಚಾರ್ಯಜಗದ್ಗುರೂತ್ತಮವರಾನ್ ನಾಳಿಪ್ರಿಯೇ ಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಫೆಬ್ರವರಿ ೧೯೩೧ [ಸಂಚಿಕೆ ೪೧

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿ ಮಹೋತ್ಸವವು.

(ಮಹಾಶಿವರಾತ್ರಿ)

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತಿ ಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವುದೇ ಆಸ್ತಿಕ ಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲ ಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಶ್ರೀ ಮೋತಿಲಾಲರು ಅಮರರಾದರು!

ತಾಯಿ! ಭಾರತಮಾತೆ! ಮ್ಲಾನವದನಳಾಗಿರುವೆಯಾ? ನಿನ್ನ ಮಕುಟದ ಶೋಭಾಮಣಿಯು ಉದುರಿ ಹೋಯಿತೆ! ನಿನ್ನ ನಚ್ಚಿನ ಕಂದನು ಮಾಯವಾದನೇ? ನಿನ್ನ ಮೆಚ್ಚಿನ ಕುಮಾರನು ಕಾಣದಾದನೇ? ಸ್ವಾತಂತ್ರ್ಯಸಂಗ್ರಾಮಸಿಂಹನು ಆತ್ಮಸಮರ್ಪಣ ಮಾಡಿದನೇ! ಎದೆಗೆಡಬೇಡ! ಕಿವಿಗೊಟ್ಟು ಕೇಳು! ರಣಭೇರಿಯು ನಿನಾದವು ಭೋರ್ಗರೆಯುತ್ತಿರುವುದು. ಜನನಿ! ಮೋತಿಲಾಲರು ಈ ನಶ್ವರವಾದ ಭೌತಿಕ ಶರೀರವನ್ನು ಬಿಟ್ಟು ಕೀರ್ತಿಕಾಯದಿಂದ ಚಿರಂಜೀವಿಯಾದರು. ಸುಖಸುಪ್ತಿಗೆಯಲ್ಲಿ ಮಲಗಿ ಸತ್ತ ಹೇಡಿಯಲ್ಲ, ಪ್ರಾಣಾಂತ್ಯದ ವರೆಗೂ, ನೀನು ಹೂಡಿರುವ ಶಾಂತಿಯುದ್ಧದಲ್ಲಿ ಎದೆಗೊಟ್ಟುನಿಂತು ಕಾರ್ಯಮಾಡಿದ ಅಪ್ರತಿಮವೀರನಾತನು. ಅಮ್ಮಾ! ಆತನೇ ಧನ್ಯನು! ಎಂಥೆಂಥ ಪುತ್ರರತ್ನಗಳನ್ನು ಕಳೆದುಕೊಂಡಿರುವೆನೆಂದು ಯೋಚಿಸುವೆಯಾ? ಬೇಡ! ಅವರೆಲ್ಲಾ ನಾಶವಾಗಿಲ್ಲ. ಅವರು ನಿತ್ಯಶರೀರಿಗಳು. ಇಲ್ಲಿ ನೋಡು! ನಿನ್ನ ಕರಕಮಲಗಳಲ್ಲಿರುವ ಪರದಾಸ್ಯದ ಸಂಕೋಲೆಗಳು ತಾವೇತಾವಾಗಿ ಸಡಿಲವಾಗಿ ಜಾರಿಬೀಳುತ್ತಿವೆ. ಅಗೋ! ಭಾರತದ ಸ್ವಾತಂತ್ರ್ಯಸೂರ್ಯನು ಉದಯಿಸುತ್ತಿರುವನು. ನಿನ್ನ ಮಂಗಳದಿನಗಳು ಮೂಡಿಬರುತ್ತಿವೆ. ಮೋತಿಲಾಲರು ಸ್ವರ್ಗದಲ್ಲಿ ಸಂಚರಿಸುತ್ತಿರುವ ಅಮರಗೀತೆಯು ಕೇಳಿಬರುತ್ತಿದೆ. ನೀನೇ ಧನ್ಯಳು! ಆ ಗತಕೀರ್ತಿಯನ್ನು ಹರಸು. ಅಂಥ ಆತ್ಮಶಕ್ತಿಯು ದಿವ್ಯತೇಜಸ್ಸನ್ನು ನಿನ್ನ ಇತರ ಮಕ್ಕಳಿಗೂ ಕರುಣಿಸು. ನೀನು ನಿನ್ನ ಮನೆಯ ಒಡತಿಯಾಗಿ ನಲಿಯುವಾಗ ಮೋತಿಲಾಲನು ನಿನ್ನ ಕೈಗೂಸಾಗಿ ಆನಂದಿಸುವನು. ವೀರಮಾತೇ! ದುಃಖಭಾಗಿನಿಯೆಂದು ಮರುಗಬೇಡ. ಆನಂದದಿಂದ ನಲಿಯುವ ಶುಭದಿವಸಗಳು ಬಂದೇಬರುವುವು. ಮೋತಿಲಾಲರ ವೀರಪತ್ನಿ, ಪುತ್ರ, ಪುತ್ರಿ, ಸೊಸೆಯರಿಗೆ ಅನಂತ ಶಕ್ತಿಯನ್ನು ಕೊಟ್ಟು ನಿನ್ನ ಸೇವೆಗೆ ಸಿದ್ಧರಾಗುವಂತೆ ಹರಸು. ದೇವಿ! ಶಾಂತಳಾಗು. ಭಗವಂತನು ನಿನ್ನನ್ನು ಅನುಗ್ರಹಿಸಲಿ. ಮೋತಿಲಾಲರ ಪವಿತ್ರಾತ್ಮಕ್ಕೆ ನಿರಂತರಶಾಂತಿಯಿರಲಿ! ಸನ್ಮಂಗಳಗಳಿರಲಿ!!

ದುಃಖಭಾಗಿ,

ಮುದಗೆರೆ ಓ. ಎಸ್. ಲಿಂಗಯ್ಯ, ಮೈಸೂರು.

ವರ್ತಮಾನಸಂಗ್ರಹ.

ದಿವಂಗತರಾದ ಪಂಡಿತ ಮೋತಿಲಾಲ್ ನೆಹರುರವರ ಅಳಿಯಂದಿರಾದ ಶ್ರೀಯುತ ಆರ್. ಎಸ್. ಪಂಡಿತರವರು ಯಾವ ಷರತ್ತುಗಳೂ ಇಲ್ಲದೆ ಬಿಡುಗಡೆ ಮಾಡಲ್ಪಟ್ಟಿರುವರು.

ಈ ವರ್ಷ ಮಾರ್ಚಿ ತಿಂಗಳಿನಲ್ಲಿ ಕರಾಚಿಯಲ್ಲಿ ನೆರವೇರುವ ಅಖಿಲಭಾರತರಾಷ್ಟ್ರೀಯ ಮಹಾಸಭೆಗೆ ಸರ್ದಾರ್ ವಲ್ಲಭಭಾಯಿ ಪಟೇಲರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸುವವರಾಗಿದ್ದಾರೆ.

ಈ ತಿಂಗಳು 4 ನೆಯ ತಾರೀಖಿನಿಂದ ಬೊಂಬಾಯಿ ಸಂಗ್ರಾಮಸಮಿತಿಯವರು ಸೇಂದಿ ಸರಾಯಿ ಅಂಗಡಿಗಳ ಪಿಕೆಟಿಂಗ್ ಕಾರ್ಯವನ್ನು ಬಹು ಜೋರಿನಿಂದ ನಡೆಯಿಸಿರುವರು. ಪಟ್ಟಣದಲ್ಲೆಲ್ಲಾ ಪಿಕೆಟಿಂಗ ನಡೆಯಿಸಬೇಕೆಂಬ ಉದ್ದೇಶದಿಂದ 500 ಜನ ಸ್ವಯಂಸೇವಕರು ಸಿದ್ಧರಾಗಿರುವರು.

ಈ ತಿಂಗಳು 3 ನೆಯ ತಾರೀಖಿನ ದಿವಸ ನ್ಯೂಜಿಲೆಂಡಿಗೆ ಸೇರಿದ ನೇಪಿಯರ್ ಪಟ್ಟಣದಲ್ಲಿ ಭೂಕಂಪದಿಂದ ವಿಶೇಷ ಅನಾಹುತವಾಗಿದೆ. ಮೋಟಾರಿನಲ್ಲಿ ಕುಳಿತಿರುವಾಗ ಜನರು ಅಲ್ಲೇ ಸತ್ತಿದ್ದರು. ಅನೇಕ ಬಡಸ್ತ್ರೀಯರನ್ನೂ ಮಕ್ಕಳನ್ನೂ ಹಡಗಿನಲ್ಲಿ ಕುಳ್ಳಿರಿಸಿ ಬೇರೆಕಡೆಗೆ ಸಾಗಿಸಿರುವರು. ಸುಮಾರು 1000 ಜನರಿಗೆ ಗಾಯಗಳಾಗಿವೆ. ಹೇಸ್ಟಿಂಗ್ಸ್ ಎಂಬ ಸ್ಥಳದಲ್ಲಿ 21 ಜನರು ಮೃತಪಟ್ಟರು.

ಬರ್ದವಾನ್ ಡಿಸ್ಟ್ರಿಕ್ಟಿಗೆ ಸೇರಿದ ಸಿಂಗಿ ಎಂಬ ಗ್ರಾಮದಲ್ಲಿ ಒಂದು ಕಳ್ಳರಗುಂಪು ಒಂದು ಮನೆಗೆ ನುಗ್ಗಿ ಸುಮಾರು 3000 ರೂ. ಬೆಲೆಬಾಳುವ ಪದಾರ್ಥಗಳನ್ನು ದೋಚಿಕೊಂಡು ಹೋಗುತ್ತಿರುವಾಗ, ಒಬ್ಬ ಸಬ್‌ಇನ್ಸ್‌ಪೆಕ್ಟರನು ಅವರನ್ನು ಎದುರಿಸಿ ಗುಂಡಿನಿಂದ ಹೊಡೆದು ಒಬ್ಬನನ್ನು ಕೆಳಗೆ ಕೆಡವಿದನು. ಆದರೆ ಕಳ್ಳರು ಆ ಇನ್ಸ್‌ಪೆಕ್ಟರನನ್ನು ಇಟ್ಟಿಗೆ ಚೂರುಗಳಿಂದ ಹೊಡೆದು ಗಾಯಗೊಳಿಸಿ ಕೆಳಗೆಬಿದ್ದ ಕಳ್ಳನನ್ನು ಸಾಗಿಸಿಕೊಂಡು ಹೋದರು. ಸರಕಾರದವರು ಅವರನ್ನು ಪತ್ತೆಮಾಡಿಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಪ್ರಕಟಿಸಿದ್ದಾರೆ.

ತುರ್ಕಸ್ಥಾನದಲ್ಲಿ ಘಾಜಿ ಮುಸ್ತಫಾ ಕಮಾಲ್ ಪಾಷಾರವರಿಗೆ ವಿರೋಧವಾದ ಚಳವಳಿಯು ಪ್ರಾರಂಭವಾಗಿದೆ ಎಂಬ ಸಂಗತಿಯನ್ನು ಈ ಮೊದಲು ಪ್ರಕಟಿಸಿದ್ದೆವಷ್ಟೆ! ತುರ್ಕಸ್ಥಾನದ ಮುಖ್ಯಪಟ್ಟಣವಾದ ಕಾನ್ಸ್ಟಾಂಟಿನೋಪಲ್ಲಿನಲ್ಲಿ 28 ಜನರನ್ನು ಈ ತಿಂಗಳು 3 ನೆಯ ತಾರೀಖಿನ ದಿವಸ ಗಲ್ಲಿಗೆ ಹಾಕಿದರು. ಗಲ್ಲಿಗೆ ಹಾಕುವುದಕ್ಕೆ ಪೂರ್ವದಲ್ಲಿ ಅವರಿಗೆ ಬಿಳಿಷರ್ಟ ತೊಡಿಸಿ "ಕಮಾಲ್‌ಪಾಷಾರವರ ಪ್ರಜಾಸತ್ತಾತ್ಮಕ ಪ್ರಭುತ್ವದ ವಿರೋಧಿಗಳಿಗಾಗುವ ಶಿಕ್ಷೆಯು ಹೀಗೆ" ಎಂದು ರಟ್ಟಿನಲ್ಲಿ ಬರೆದು ಅವರ ಎದೆಗೆ ಕಟ್ಟಿ ಊರಲ್ಲೆಲ್ಲಾ ಮೆರವಣಿಗೆಮಾಡಿ ಗಲ್ಲಿಗೆ ಹಾಕಿದರಂತೆ!

ಕಲ್ಕತ್ತೆಯ ಸುಪ್ರಸಿದ್ಧ ದೇಶಭಕ್ತರಾದ ಶ್ರೀಯುತ ಸೇನಗುಪ್ತರವರು ಜೈಲಿನಿಂದ ಬಿಡುಗಡೆಹೊಂದಿ ಕಲ್ಕತ್ತೆಗೆ ಬಂದಾಗ ರೇಲ್ವೆಸ್ಟೇಷನ್ನಿನಲ್ಲಿ ಸಹಸ್ರಾರು ಜನರು ಸ್ವಾಗತವನ್ನೀಯಲು ಕಾದಿದ್ದರು. ಆ ಸಮಯದಲ್ಲಿ ದೇವೇಂದ್ರನಾಥ ಚಕ್ರವರ್ತಿಯೆಂಬ ವಿದ್ಯಾರ್ಥಿಯು ಗಾಡಿಯು ನಿಲ್ಲುವುದಕ್ಕೆ ಮುಂಚಿತವಾಗಿಯೇ ಹೋಗಿ ಅದನ್ನು ಹಿಡಿದು ಗಾಲಿಗೆ ಸಿಕ್ಕು ಗಾಯಪಟ್ಟನು. ಕೂಡಲೆ ಆಸ್ಪತ್ರೆಗೆ ಸಾಗಿಸಿ ಶ್ರದ್ಧೆಯಿಂದ ಚಿಕಿತ್ಸೆ ನಡೆಯಿಸಿದರು. ಆಪರೇಷನ್ ಮಾಡಬೇಕೆಂದು ಡಾಕ್ಟರರು ಅವನ ಅನುಮತಿಯನ್ನು ಕೇಳಿದಾಗ ಅವನು "ನನ್ನ ಅಂತ್ಯಕಾಲವು ಸಮೀಪಿಸುತ್ತ ಬಂದಂತೆ ಕಾಣುವುದು, ಆದರೂ ಯತ್ನವಿಲ್ಲ: ಶ್ರೀಯುತ ಸೇನಗುಪ್ತರನ್ನು ನೋಡಲಿಲ್ಲವೆಂಬುದೇ ನನ್ನ ಆಶೆ" ಎಂದು ಕಣ್ಣೀರು ತಂದನು. ಡಾಕ್ಟರರು ಕೂಡಲೆ ಶ್ರೀಯುತ ಸೇನಗುಪ್ತರಿಗೆ ಟೆಲಿಫೋನ್ ಮಾಡಲು, ಶ್ರೀ ಸೇನಗುಪ್ತರು ತತ್‌ಕ್ಷಣವೇ ಪತ್ನೀಸಮೇತರಾಗಿ ಮೋಟಾರಿನಲ್ಲಿ ಆಸ್ಪತ್ರೆಗೆ ಬಂದರು. ಅಷ್ಟರೊಳಗೆ ಅವನು ಪ್ರಾಣಬಿಟ್ಟನು. ಪಟ್ಟಣಿಗರೆಲ್ಲರೂ ಕೂಡಿ ಅವನ ಸ್ಮಶಾನಯಾತ್ರೆಯನ್ನು ಬಹು ವೈಭವದಿಂದ ನೆರವೇರಿಸಿದರು.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಮಹಾ ಸನ್ನಿಧಿಯಲ್ಲಿ ಪ್ರಾರ್ಥನೆಯು.

ಶ್ರೀಮದಮಲವೇದಾಗಮೋಪನಿಷತ್ಪ್ರತಿಪಾದಿತ ವಿಮಲ ವೀರಶೈವ ಮಹಾ ಮತಸ್ಥಾಪನಾಚಾರ್ಯವರ್ಯ ಗುರುಸಾರ್ವಭೌಮ ಶ್ರೀ ೧೦೦೮ ಜಗದ್ಗುರು ಪಂಚಾಚಾರ್ಯ ಮಹಾಸನ್ನಿಧಿಯಲ್ಲಿ ಶಿರಸಾಷ್ಟಾಂಗ ಸಾಷ್ಟಾಂಗಪ್ರಣತಿಪೂರ್ವಕ ಪ್ರಾರ್ಥಿಸುವದೇನಂದರೆ ಪೂರ್ವಾಚಾರ್ಯರಿಂದ ನಿರ್ಮಿತವಾದ ವೀರಶೈವ ಮತದ ಕಟ್ಟಳೆಗಳು ಅತಿ ಮಹತ್ವವುಳ್ಳವುಗಳಾಗಿರುತ್ತವೆ. ರಾಜರು ಪ್ರಜಾಪಾಲನೆಗಾಗಿ ಜಿಲ್ಲಾ ತಾಲೂಕುಗಳಿಗೆ ಕಲೆಕ್ಟರ್ ಮಾಮಲೇದಾರ, ಫೌಜದಾರಾದಿಗಳನ್ನೂ ಪ್ರತಿಯೊಂದು ಹಳ್ಳಿಗೆ ಗೌಡಕುಲಕರ್ಣಿಗಳನ್ನೂ ನಿಯಮಿಸಿರುವಂತೆ ವೀರಶೈವಮತಕ್ಕಾದರೂ ಪಟ್ಟದಸ್ವಾಮಿಗಳು, ಚರಮೂರ್ತಿಸ್ವಾಮಿಗಳು, ಗೃಹಸ್ಥಮಠದವರು, ಮಠಪತಿ, ಗಣಾಚಾರ್ಯ, ಸ್ಥಾವರ, ಕೌಮಾರರನ್ನು ನಿಯಮಿಸಿರುವದು ಸರಿಯಷ್ಟೇ! ಅದೇ ಪ್ರಕಾರ ಇಲ್ಲಿಯವರೆಗೂ ಆ ಕಟ್ಟಳೆಗಳು ಸರಿಯಾಗಿ ಸಾಗುತ್ತ ಬಂದು ಈಗೀಗ ವೀರಶೈವರ ದುರ್ದೈವದಿಂದಲೋ ಅಥವಾ ಪಟ್ಟಚರಾಧೀಶರ ಅಜಾಗರೂಕತೆಯಿಂದಲೋ ಅವು ಶಿಥಿಲಗಳಾಗಿ ಸರ್ವರೂ ತಮ್ಮ ತಮ್ಮ ಇಚ್ಛಾನುಸಾರವಾಗಿ ಧರ್ಮದಹದ್ದು ಮೀರಿ ನಡೆಯುತ್ತಿರುವರೆಂದು ಬರೆಯಲು ಅತ್ಯಂತ ಖೇದವೆನಿಸುತ್ತದೆ. ಉದಾಹರಣಾರ್ಥವಾಗಿ "ಮಠಪತಿ" ಮಠದ ಪತಿ, ಕಾವಲು, (ಸೇವಕ) ಮಠದ ಸೇವಕನೆಂದು ಇದ್ದರೂ, ಕೆಲವು ಭಾಗಗಳಲ್ಲಿ ಮಠಪತಿಗಳೇ ...

ಶ್ರೀ ಧರ್ಮವೀರಶಂಕರಣ್ಣನವರ ಕೀರ್ತಿಗೆ ಕಲಂಕಹಚ್ಚುವ ಬೂಟಾಟಿಕೆಯು.

ರುಕ್ಮಾಫಂಡಿನ (ಉದ್ಯಮನಿಧಿಯ) ಕಾರ್ಯಕಾರಿ ಮಂಡಲಿ ಸಭಾ.

ಕುರ್ಡುವಾಡಿ.

ಶ್ರೀ ಜಗದ್ಗುರು ಪಂಚಾಚಾರ್ಯರು ಪ್ರಸೀದಂತು.

ನೂತನಗೃಹಪ್ರವೇಶ ಸಮಾರಂಭ,

ಹೊಸಯಡಹೊರಿ.

ದೇವಾಲಯ ಜೀರ್ಣೋದ್ಧಾರ ಮತ್ತು ನಾಗೇಶ್ವರ ದೀಕ್ಷಾಸಮಾರಂಭ.

ನಾಯಕನಹಟ್ಟಿ.

ನೆಯ ಸಾಯಂಕಾಲ 3 ಘಂಟೆಗೆ ಉಪನಯನ ವಟುಗಳ ಭಿಕ್ಷಾಟನದ ಉತ್ಸವವು ವೈಭವದಿಂದ ನೆರವೇರಿತು. ಆ ವೇಳೆ ಸಭೆ ಸೇರಿ ಸಮಾಜದ ಏಕಮತ್ಯದಿಂದುಂಟಾಗುವ ಪ್ರಯೋಜನವನ್ನೂ, ಧರ್ಮಫಂಡಿನ ಅವಶ್ಯಕತೆಯನ್ನೂ ಪಿ. ಎಂ. ಸುಬೇದಾರ್ರವರು ವಿಶದೀಕರಿಸಿದರು. ಧರ್ಮಾಭಿಮಾನಿಗಳಾದ ಶಾ|| ತಿಪ್ಪೆರುದ್ರಯ್ಯನವರು ನಂ|| ಚನ್ನಬಸವಯ್ಯನವರು ವಗೈರೆ ಮಹಾಶಯರು ಅಬಕಾರ್ಯ ಕ್ರಮದಿಂದ ನೆರವೇರಿಸುತ್ತಿರುವ ಶ್ರೀ ಪ್ಯಾಟಿ ನಂದೀಶ್ವರಾಲಯದ ವಿಚಾರವನ್ನು ಸಭೆಯಲ್ಲಿ ಪ್ರಸ್ತಾಪಿಸಲು ಆಶ್ರಯದಾತರಿಗೆ ಕಂಡಿಕೆಗಳನ್ನು ಹಂಚಿದರು. ಅದರ ಜೀರ್ಣೋದ್ಧಾರ ಧರ್ಮವಿಚಾರವು ಸಭಿಕರಲ್ಲಿ ವಿಸ್ತಾರಗೊಳಿಸುತ್ತಲೇ ಪ್ರತಿಯೊಬ್ಬರು ಉತ್ಸುಕತೆಯಿಂದ ಧನ್ಯಸಹಾಯವನ್ನಿತ್ತರು. ಈ ಸಾಧಿನ ಮಠಮಹಂತಿನವರು ಏಕಮತ್ಯವನ್ನು ವೃದ್ಧಿಮಾಡುತ ತಮ್ಮ ತಮ್ಮ ಧರ್ಮರಕ್ಷಣೆ ನೆರವೇರಿಸಿಕೊಳ್ಳಬೇಕೆಂತಲೂ, ಈ ಬಗ್ಗೆ ಒಂದು ಸ್ಟ್ಯಾಂಡಿಂಗ್ ಕಮಿಟಿಯು ಸ್ಥಾಪಿಸಿಯಾಗಬೇಕೆಂತಲೂ ಹೇಳಿದ ಎಂ. ಮಲ್ಲಣ್ಣಯ್ಯನವರ ಸೂಚನೆಯು ಸರ್ವಾನುಮತಿಯಿಂದ ಪಾಸಾಗಿ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

21 ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನದ ಆಫೀಸು,

ಕೃಷ್ಣರಾಜಮೊಹಲ್ಲಾ, ಮೈಸೂರು.

ಕರ್ನಾಟಕದ ವೈದ್ಯಮಹಾಶಯರೂ ಮತ್ತು ವೈದ್ಯಾಭಿಮಾನಿಗಳೂ ತಮ್ಮ ತನುಮನಧನ ಸಹಾಯದಿಂದ ಸಮ್ಮೇಳನ ಮತ್ತು ಪ್ರದರ್ಶನಗಳನ್ನು ಯಶಸ್ವಿಯನ್ನಾಗಿ ಮಾಡಿದುದಕ್ಕಾಗಿ ರಿಸೆಪ್ಷನ್ ಕಮಿಟಿಯವರು ಸಂಪೂರ್ಣ ಕೃತಜ್ಞರಾಗಿರುತ್ತಾರೆ.

ಪ್ರದರ್ಶನ ಸಾಮಗ್ರಿಗಳನ್ನೂ ಪ್ರಬಂಧಗಳನ್ನೂ ಪರೀಕ್ಷಿಸಲು ...

ಪ್ರಶಸ್ತಿ ಪತ್ರಗಳು. A. B. C. D.

ಮೈಸೂರು, ತಾ|| 1-2-1931. (Sd.) ವೈ. ಲಕ್ಷ್ಮೀನರಸಿಂಹಶಾಸ್ತ್ರಿ.

ತಂದೆಮಕ್ಕಳ ಸಂವಾದ.

ಪಂಚಪೀಠಗಳಿಗೆ ಶಿಷ್ಯ ಅನ್ನದಾತಯು | ಪಂಚಸ್ವಾಮಿಗಳಿಗೆ ಶಿಷ್ಯನಮನಗೈವನು ||೧೩||

ಲೇಖಕ—ಎ. ಆರ್. ಹಿರೇಮಠ ಹೆಡ್ ಮಾಸ್ತರ ಚಿಕ್ಕಮಗಿ ಡಿಸ್ಟ್ರಿಕ್ಟ—ವಿಜಾಪುರ.

ಶಿವಮೊಗ್ಗಾ ಡಿ|| ಸೊರಬ ತಾ|| ಜಡೇಹೋಬಳಿ ಬಂಕ್ಸಾಣದ ಗ್ರಾಮಸ್ಥರು.

ವಿನಯಪೂರ್ವಕ ಕೃತಪಡಿಸುವದೇನಂದರೆ—

ನಮ್ಮ ಗ್ರಾಮದ ಸಮೀಪದಲ್ಲಿ ವರದಾ ಮತ್ತು ದಂಡಕ ನದಿಗಳ ಸಂಗಮಸ್ಥಾನದಲ್ಲಿ ಲಿಂಗವು ಉದ್ಭವಿಸಿರುವದರಿಂದ ಈ ಸ್ಥಾನವು ಮಹಾಪುಣ್ಯಕ್ಷೇತ್ರಗಳಲ್ಲಿ ಒಂದಾಗಿದೆ. ಇದೇ ಪ್ರಮೋದೂತ ಸಂ|| ರದ ಮಾಘ ಬ|| ೧೩ ಭಾನುವಾರ (ತಾ|| 15—2—31) ಮಹಾಶಿವರಾತ್ರಿ ಇರುವ ಪ್ರಯುಕ್ತ ಶ್ರೀ ಹೊಳೆಲಿಂಗೇಶ್ವರ ದೇವರಿಗೆ ಪ್ರತಿವರ್ಷದ ಪದ್ಧತಿಪ್ರಕಾರ ಮಹಾರುದ್ರಾಭಿಷೇಕವು ಮತ್ತು ಷೋಡಶೋಪಚಾರಪೂಜಾ ಬ|| ೧೪ ಸೋಮವಾರ (ತಾ|| 16—2—31) ಪ್ರಾತಃಕಾಲ 10 ಘಂಟೆಗೆ ಸಂತರ್ಪಣೆ. ಇದೇ ಮಧ್ಯಾಹ್ನ 3 ಘಂಟೆಯಿಂದ 6 ಘಂಟೆವರೆಗೆ ವೀರಶೈವ ಸಮಾಜ ಸುಧಾರಣಾಸಭೆ. ಇದೇ ದಿವಸ ರಾತ್ರಿ 8 ಘಂಟೆಯಿಂದ 12 ಘಂಟೆ ವರೆಗೆ ಶಿವಕೀರ್ತನ ಮತ್ತು ಭಜನೆ ನಡೆಸಲ್ಪಡುತ್ತವೆ. ಆದಕಾರಣ ಸದ್ಭಕ್ತರು ಸಕಾಲಕ್ಕೆ ಆಗಮಿಸಿ ಮಹಾಶಿವರಾತ್ರಿ ಪೂಜಾ ವಿನಿಯೋಗಕ್ಕೆ ಭಾಗಿಗಳಾಗಿ ಶ್ರೀ ಹೊಳೆಲಿಂಗೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಕೋರುವ,

ಕ್ಯಾನವಳ್ಳಿ, ಮಾಳಿಗಿ ದೊಡ್ಡವೀರಪ್ಪಗೌಡ್ರು, ಬಂಕ್ಸಾಣದ ಪಟೇಲ್ ಪುಟ್ಟಪ್ಪಗೌಡ್ರು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ.

ಶ್ರೀ ನಂದೀಶ್ವರಪ್ರತಿಷ್ಠಾಮಹೋತ್ಸವಾಹ್ವಾನ ಪತ್ರಿಕಾ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೮೫೨ ನೇ ಪ್ರಮೋದೂತನಾಮಸಂವತ್ಸರದ ಫಾಲ್ಗುಣ ಶುದ್ಧ 3 (20-2-1931) ಶುಕ್ರವಾರ ಸೂರ್ಯೋದಯವಾದ ... ಗಳಿಗೆಗಳ ಮೇಲೆ ೧೧ ಗಳಿಗೆಗಳೊಳಗೆ ಸಲ್ಲುವ ಶುಭ ಮೇಷಲಗ್ನದಲ್ಲಿ, ಕೃಷ್ಣರಾಜಪೇಟೆ ತಾಲೂಕು ಕನ್ನಂಬಾಡಿ ಹೋಬಳಿ ಚಿಕ್ಕರಾಯರಹಳ್ಳಿಯಲ್ಲಿ ನೂತನವಾಗಿ ಕಟ್ಟಿರುವ ದೇವಾಲಯದಲ್ಲಿ ಶ್ರೀ ನಂದೀಶ್ವರ ಪ್ರತಿಷ್ಠೆ ಮಾಡಬೇಕೆಂದು ಅದ್ಯರು ನಿಶ್ಚಯಿಸಿರುವದರಿಂದ ತಾವು ಕುಟುಂಬಪರಿವಾರ ಸಮೇತರಾಗಿ ಆ ಮುಹೂರ್ತಕ್ಕೆ ದಯಮಾಡಿಸಿ ಶ್ರೀ ದೇವರ ಪ್ರತಿಷ್ಠಾ ಮಹೋತ್ಸವವನ್ನು ನೆರವೇರಿಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುವ,

ತಮ್ಮ ವಿಧೇಯರು,
ತಿಮ್ಮಪ್ಪ, ಪಟೇಲ್ ಶಂಭುಗೌಡ.

ಇದೇ ಸಂದರ್ಭದಲ್ಲಿ ವಟುಗಳಿಗೆ ದೀಕ್ಷಾ ಸಂಸ್ಕಾರವೂ ಸಹ ನಡೆಯಿಸಲ್ಪಡುತ್ತದೆ.

ನೀತಿಸುಧಾರಸ.

[ವ್ಯ|| ರಾ|| ಆನವಟ್ಟಿ ರಾಮರಾಯರಿಂದ]

೧೧. ಸತಿಯ ಕರ್ತವ್ಯ

ಸೂಚನೆ.

ಪ್ರತಿವರ್ಷದ ಪದ್ಧತಿಯಂತೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನವಾರದ ಪತ್ರಿಕೆಯು ಹೊರಡುವುದಿಲ್ಲ.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೧ ನೇ ಫೆಬ್ರುವರಿ ತಾ|| ೯ ನೆಯ ಸೋಮವಾರ.

ಭಾರತದ ದಿವ್ಯಜ್ಯೋತಿಯು ಮಾಯವಾಯಿತು.

ಭರತಖಂಡದಲ್ಲಿ ದಿವ್ಯಜ್ಯೋತಿಯಂತೆ ಪ್ರಕಾಶಿಸುತ್ತಿದ್ದ ಪಂಡಿತ ಮೋತಿಲಾಲ್‌ನೆಹರುರವರು ಈ ತಿಂಗಳು 6 ನೆಯ ತಾರೀಖಿನ ದಿವಸ ಪ್ರಾತಃಕಾಲ 6½ ಘಂಟೆಗೆ ಪರಂಧಾಮವನ್ನೈದಿದರೆಂದು ತಿಳುಹಿಸಲು ಅತ್ಯಂತ ವ್ಯಸನವೆನಿಸುತ್ತದೆ. ಈ ಮಹೋದಯರು ತಾವು ಮರಣಹೊಂದುವುದಕ್ಕೆ 3-4 ದಿವಸಗಳ ಮೊದಲು ತಮ್ಮ ಸ್ನೇಹಿತರ ಮುಂದೆ "ನನಗೆ ಹೆಚ್ಚುವಯಸ್ಸಾಗಿರುವುದರಿಂದ ಮರಣಕ್ಕೆ ಹೆದರುವುದಿಲ್ಲ. ಆದರೆ ಭಾರತಮಾತೆಯು ಸ್ವಾತಂತ್ರ್ಯಸುಖವನ್ನನುಭವಿಸುವುದನ್ನು ಸ್ವಲ್ಪ ಕಣ್ಣಿನಿಂದ ನೋಡಿ ಪ್ರಾಣವನ್ನು ಬಿಡಬೇಕೆಂದು ಧೃಡಸಂಕಲ್ಪಮಾಡಿರುವೆನು" ಎಂದು ಹೇಳಿದರು. ಆದರೆ ಪಂಡಿತರ ಸಂಕಲ್ಪವು ನೆರವೇರಲಿಲ್ಲ. ದೇಶದ ಕಲ್ಯಾಣಕ್ಕಾಗಿ ತನುಮನೋಧನಗಳಿಂದ ದೀರ್ಘ ಸಾಹಸಮಾಡಿ ಉದ್ದಿಷ್ಟಫಲವು ಹಸ್ತಗತವಾಗದೆ ತದೇಕಧ್ಯಾನಾಸಕ್ತರಾಗಿ ಅಕಾಲದಲ್ಲಿ ತಮ್ಮ ಭೌತಿಕ ಶರೀರವನ್ನು ತ್ಯಜಿಸಿದ ಪಂಡಿತ ಮೋತಿಲಾಲ್‌ನೆಹರೂರವರ ವಿಯೋಗದಿಂದ ಇಡೀ ಭರತಖಂಡವೇ ಚಿಂತಾಕ್ರಾಂತವಾಗಿರುವುದಲ್ಲದೆ, ಗುಣಪಕ್ಷಪಾತಿಗಳಾದ ಅನೇಕಜನವಿದೇಶೀಯರಾಜನೀತಿಜ್ಞರೂ ಸಹ ತಮ್ಮ ಅನುತಾಪವನ್ನು ವ್ಯಕ್ತಗೊಳಿಸುತ್ತಿರುವರು. ಬ್ರಿಟಿಷ್ ಸರಕಾರದವರು ಭಾರತೀಯರೊಡನೆ ಶಾಂತಿಸಂಧಾನವನ್ನು ಮಾಡಿಕೊಳ್ಳಬೇಕೆಂದು ಆಶಿಸಿ ಅನೇಕ ರಾಜಕೀಯ ಹಕ್ಕುಬಾಧ್ಯತೆಗಳನ್ನು ಕೊಡುವಕಾಲದಲ್ಲಿ ಭಾರತದಿವ್ಯಜ್ಯೋತಿಯು ಮಾಯವಾದುದು ಭಾರತಮಾತೆಯ ದುರ್ದೈವವಲ್ಲದೆ ಬೇರೆ ಅಲ್ಲ.

ಲೋಕಮಾನ್ಯ ಬಾಲಗಂಗಾಧರ ತಿಲಕರವರ ಮತ್ತು ಮಹಾತ್ಮಗಾಂಧಿಯವರ ತರುವಾಯ ಸಮಸ್ತಮತೀಯರ ಗೌರವವಿಶ್ವಾಸಗಳಿಗೆ ಪಾತ್ರರಾದವರೆಂದರೆ ಪಂಡಿತ ಮೋತಿಲಾಲ್‌ನೆಹರೂರವರೇ ಎಂದು ಮುಕ್ತಕಂಠದಿಂದ ಹೇಳಬಹುದು. ಇವರಲ್ಲಿದ್ದ ಅಸದೃಶಸ್ವಾರ್ಥತ್ಯಾಗವೂ, ಅಸಾಧಾರಣಮೇಧಾಶಕ್ತಿಯೂ, ಅನ್ಯಮತದ್ವೇಷರಾಹಿತ್ಯವೂ, ಶಮದಮದಯಾದಾಕ್ಷಿಣ್ಯಾದಿಸದ್ಗುಣಗಳೂ ಇವರ ಮಹೋನ್ನತಿಗೆ ಕಾರಣಗಳಾಗಿದ್ದುವು.

ಮೋತಿಲಾಲ್‌ನೆಹರುರವರು 1861 ನೆಯ ಇಸವಿಯಲ್ಲಿ ದಿಲ್ಲಿಯೊಳಗೆ ಕಾಶ್ಮೀರ ಬ್ರಾಹ್ಮಣ ಮನೆತನದಲ್ಲಿ ಜನ್ಮವೆತ್ತಿದರು. ಇವರು ಚಿಕ್ಕವರಿರುವಾಗಲೇ ಮಹಾಪುರುಷರ ಲಕ್ಷಣಗಳನ್ನು ವ್ಯಕ್ತಪಡಿಸುತ್ತಿದ್ದರು. ಇವರು ಪ್ರಾಪ್ತವಯಸ್ಕರಾದಮೇಲೆ ವಕೀಲರಾಗಿ ಅಲಹಾಬಾದಿನಲ್ಲಿ ಬಂದು ನೆಲೆಸಿದರು. ಇವರು ವಕೀಲಿವೃತ್ತಿಯಲ್ಲಿ ಅಸಾಧಾರಣವಾದ ನೈಪುಣ್ಯವನ್ನು ಪಡೆದಿದ್ದರು. ಇಡೀ ಹಿಂದುಸ್ಥಾನದಲ್ಲಿರುವ ಅನೇಕ ಸುಪ್ರಸಿದ್ಧ ವಕೀಲರಲ್ಲೆಲ್ಲಾ ಇವರು ಅಗ್ರಗಣ್ಯರಾಗಿದ್ದರು. ಇವರು ವಕೀಲಿವೃತ್ತಿಯಿಂದ ಲಕ್ಷಾಂತರವಲ್ಲ, ಕೋಟ್ಯಂತರ ರೂಪಾಯಿಗಳನ್ನು ಗಳಿಸಿದರು. ಇವರು ಸುಮಾರು 2 ವರ್ಷಗಳ ಕೆಳಗೆ ಒಬ್ಬರಾಜರ ಮೊಕದ್ದಮೆಯನ್ನು ಹಿಡಿದು ಲಂಡನ್ನಿನ ಪ್ರಿವಿಕೌನ್ಸಿಲಿಗೂ ಸಹ ಹೋಗಿ ವಾದಿಸಿದರು. ಆಗ ಇವರಿಗೆ ಫೀಜಿನರೂಪದಿಂದ ಅಪಾರ ದ್ರವ್ಯವು ದೊರೆಯಿತು. ಹಿಂದುಸ್ಥಾನದಲ್ಲಿ ವಕೀಲಿವೃತ್ತಿಯಿಂದ ಅಪರಿಮಿತವಾದ ದ್ರವ್ಯವನ್ನು ಸಂಪಾದಿಸುವ ಸುಯೋಗವು ಪಂಡಿತ ಮೋತಿಲಾಲ್‌ನೆಹರುರವರಿಗಿದ್ದಂತೆ ಇನ್ನಾರಿಗೂ ಇರುವುದಿಲ್ಲವೆಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಪ್ರಸಂಸೆ ಮಾಡಿತು. ಇವರು 1907 ನೆಯ ಇಸವಿಯಲ್ಲಿ ಸೂರತ್ತಿನಲ್ಲಿ ನೆರೆದ ಕಾಂಗ್ರೆಸ್ಸಿಗೆ ವಾಯುವ್ಯಪ್ರಾಂತದ ಪ್ರತಿನಿಧಿಗಳಾಗಿ ಹೋಗಿ ಬಂಗಾಲದ ರಾಷ್‌ಬಿಹಾರಿ ಘೋಷ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಸ್ವಾಗತಸಂಘದ ಸೆಕ್ರೆಟರಿಗಳು ತಂದ ಠರಾವನ್ನು ಅನುಮೋದಿಸಿ, ಅಂದಿನಿಂದ ರಾಜಕೀಯ ಕ್ಷೇತ್ರದಲ್ಲಿ ನಿಂತು ಕೆಲಸಮಾಡಲಾರಂಭಿಸಿದರು. ಇವರು ಮೊದಲು ವಾಯುವ್ಯಪ್ರಾಂತದ ನ್ಯಾಯವಿಧಾಯಕ ಸಭೆಗೂ, ಅನಂತರ ದಿಲ್ಲಿಯ ಇಂಪೀರಿಯಲ್ ಲೆಜಿಸ್ಲೇಟಿವ್‌ಕೌನ್ಸಿಲ್ಲಿಗೂ ಸದಸ್ಯರಾಗಿ, ಧೈರ್ಯದಿಂದಲೂ, ಉತ್ಸಾಹದಿಂದಲೂ ಜನತೆಯ ಹಿತವನ್ನು ಸಮರ್ಥನಮಾಡುತ್ತಿದ್ದರು. ಭಾರತಮಾತೆಯ ವಿರೋಧಿಗಳಿಗೆ ಸಿಂಹಪ್ರಾಯರಾಗಿದ್ದರು. ವಾಯುವ್ಯಪ್ರಾಂತದ ಕಾಯಿದೆ ಕೌನ್ಸಿಲ್ಲಿನಲ್ಲಿ ಒಂದು ಸಾರಿ ಅಧಿಕಾರಿಗಳು ಭಾರತೀಯರ ಹಕ್ಕುಬಾಧ್ಯತೆಗಳಿಗೆ ಭಂಗ ತರುವಂಥ ಕಾರ್ಯದಲ್ಲಿ ಉದ್ಯುಕ್ತರಾಗಲು, ಇವರು ಆ ಕೂಡಲೆ ಸಭೆಯಿಂದ ಎದ್ದುಹೋಗಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಿದರು. ಡಾ|| ಅನಿಬೆಸೆಂಟಮ್ಮನರು 1915-16 ರಲ್ಲಿ ಹೋಮ್‌ರೂಲ್ ಚಳವಳಿಯನ್ನು ಪ್ರಾರಂಭಿಸಿದ ಮೇಲೆ, ಇವರು ಕಾಂಗ್ರೆಸ್ಸಿನ ಪರಮಭಕ್ತರಾದರು. ಇವರು ಮೊದಲು ಮಂದಪಕ್ಷದಲ್ಲಿದ್ದರು. ಆ ಪಕ್ಷದ ರೀತಿನೀತಿಗಳು ತಮಗೆ ಸಮರ್ಪಕವಾಗಿ ಕಾಣದೆಹೋದುದರಿಂದ, ಆ ಪಕ್ಷವನ್ನು ಬಿಟ್ಟು ಉಗ್ರ ಪಕ್ಷದಲ್ಲಿ ಸೇರಿದರು. ಅಲಹಾಬಾದಿನಲ್ಲಿ ಶ್ರೀಯುತ ಸಿ. ವೈ. ಚಿಂತಾಮಣಿಯವರ ನೇತೃತ್ವದಲ್ಲಿ ಹೊರಡುತ್ತಿರುವ ಮಂದಪಕ್ಷದ ಲೀಡರ್ ಪತ್ರಿಕೆಯ ಡೈರೆಕ್ಟರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟು "ಇಂಡಿಪೆಂಡೆಂಟ್" ಎಂಬ ದೈನಂದಿನ ಪತ್ರಿಕೆಯನ್ನು ಹೊರಡಿಸಲು ಮಿ|| ಸಯ್ಯದ್‌ಹುಸೇನ್‌ರವರಿಗೆ ತುಂಬಾ ಸಹಾಯಮಾಡಿದರು. 1916 ನೆಯ ಇಸವಿಯಲ್ಲಿ ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಒಪ್ಪಂದವಾದಾಗ, ಹಿಂದೂಮಹಮ್ಮದೀಯರ ಮೈತ್ರಿಯು ಸ್ಥಿರವಾಗಿ ನಿಲ್ಲುವಹಾಗೆ ವ್ಯವಸ್ಥೆಮಾಡಬೇಕೆಂದು ಲೋಕಮಾನ್ಯ ಬಾಲಗಂಗಾಧರತಿಲಕರವರೊಂದಿಗೆ ಬಹು ಶ್ರಮವಹಿಸಿ ಕೆಲಸಮಾಡಿದರು. ಆನಂತರ ಹೋಮ್‌ರೂಲ್ ಲೀಗ್ (ಸ್ವರಾಜ್ಯಸಾಧನೆಯಸಂಘ) ಗಳನ್ನು ಸ್ಥಾಪಿಸುವುದರಲ್ಲಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿದರು. ಡಾ|| ಬೆಸೆಂಟಮ್ಮನವರ ಹೋಮ್‌ರೂಲ್ ಚಳವಳಿಯಿಂದ ಮಾಂಟೆಗ್ಯೂರವರು ಹಿಂದುಸ್ಥಾನಕ್ಕೆ ಬಂದು ಇಲ್ಲಿಯ ಸ್ಥಿತಿಯನ್ನು ಪರಾಮರ್ಶಿಸಿ, ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ್ ಸುಧಾರಣೆಗಳನ್ನು ಮಾಡಿದರು. ಆಗ ಮಂದಪಕ್ಷದವರಿಗೂ ಉಗ್ರ ಪಕ್ಷದವರಿಗೂ ಅನೇಕ ಭಿನ್ನಾಭಿಪ್ರಾಯಗಳು ಬಂದು ಮಂದಪಕ್ಷದವರು ಕಾಂಗ್ರೆಸ್ಸಿನೊಡನೆ ಸಹಕರಿಸುವುದನ್ನು ಬಿಟ್ಟು ಸ್ವತಂತ್ರರಾದರು. ಇವರು ಮಾತ್ರ ಕಾಂಗ್ರೆಸ್ ಪಕ್ಷವನ್ನು ಬಿಡದೆ ರಾಷ್ಟ್ರದ ಪ್ರಬಲ ಮುಖಂಡರಾದರು.

1919 ನೆಯ ಇಸವಿಯಲ್ಲಿ ರೌಲೆಟ್ ಆಕ್ಟಿನಿಂದ ಭಾರತೀಯರಿಗೆ ಬಹು ತೊಂದರೆಯುಂಟಾಗುವುದೆಂದು ತಿಳಿದು ಮಹಾತ್ಮಗಾಂಧಿಯವರು ಉಗ್ರವಾದ ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸಿ ರಾಷ್ಟ್ರವನ್ನು ಎಚ್ಚರಗೊಳಿಸಹತ್ತಿದಾಗ, ಜಾಲಿಯನ್‌ವಾಲಾಬಾಗಿನಲ್ಲಿ ಜನರಲ್ ಡೈಯರನು ಅನೇಕಜನರನ್ನು ಕೊಂದು ಅನೇಕಜನರನ್ನು ಗಾಯಗೊಳಿಸಿದನು. ಅನಂತರ ಸರ್ಕಾರದವರು ಪಂಜಾಬಿನಲ್ಲಿ ಮಿಲಿಟರಿ ಕಾಯಿದೆಯಿಂದ ಆಳಲು ಪ್ರಾರಂಭಮಾಡಿದರು. ಆದರಿಂದ ಪಂಜಾಬಿ ಜನರು ಅನೇಕ ಕಷ್ಟಪರಂಪರೆಗಳಿಗೀಡಾದರು. ಆಗ ಪಂಡಿತಮೋತೀಲಾಲ್‌ನೆಹರುರವರು ಮಾಡಿದ ಅನೇಕ ವಿಧವಾದ ಸಹಾಯಗಳನ್ನು ಈ ಹೊತ್ತಿನವರೆಗೂ ಪಂಜಾಬದೇಶದ ಜನರು ಹಾಡಿ ಹರಸುತ್ತಿರುವರು. ಇವರು ಪಂಜಾಬಿಜನರ ಸಲುವಾಗಿ ಪಟ್ಟ ಸಾಹಸಗಳನ್ನೂ, ಸ್ವಾರ್ಥತ್ಯಾಗವನ್ನೂ ತಿಳಿದು ಭಾರತೀಯರು ಇವರನ್ನು 1919 ನೆಯ ಇಸವಿಯಲ್ಲಿ ಅಮೃತಸರದಲ್ಲಿ ನೆರವೇರಿದ ಅಖಿಲಭಾರತರಾಷ್ಟ್ರೀಯಮಹಾಸಭೆಯ ಅಧ್ಯಕ್ಷರನ್ನಾಗಿ ಮಾಡಿದರು. ಆ ಮಹಾಸಭೆಯಲ್ಲಿ ಆಗ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ್ ಸುಧಾರಣೆಗಳನ್ನು ಕೊಟ್ಟುದಕ್ಕಾಗಿ ಬ್ರಿಟಿಷ್ ಸರ್ಕಾರದವರಿಗೆ ಕೃತಜ್ಞತೆಯ ಠರಾವನ್ನು ಮಾಡಬೇಕೇ, ಬೇಡವೇ ಎಂಬ ಪ್ರಶ್ನೆಯು ಬಂದಿತು. ಆಗ ಲೋಕಮಾನ್ಯ ಬಾಲಗಂಗಾಧರತಿಲಕರವರು:—"ನಾನು ಇಂಗ್ಲೆಂಡಿಗೆ ಹೋದಾಗ ಒಬ್ಬ ಆಂಗ್ಲೇಯ ಸ್ತ್ರೀಯಳು ಒಂದು ಕಪ್ ಚಹಾ (ಟೀ) ಕುಡಿಯಿರಿ ಎಂದು ಕೊಟ್ಟಳು. ಅದಕ್ಕೆ ನಾನು ನಿಮ್ಮ ಉಪಕಾರಕ್ಕೆ ವಂದಿಸುತ್ತೇನೆ, ಟೀ ಬೇಕಿಲ್ಲವೆಂದೆನು. ನನಗೆ ಟೀ ಕೊಡುವುದಕ್ಕೆ ಬಂದ ಸ್ತ್ರೀಯಳಿಗೆ ಕೃತಜ್ಞತೆಯನ್ನು ತೋರಿಸಿ ಟೀಯನ್ನು ತಿರಸ್ಕರಿಸಿದಂತೆ ವಂದನಾಪೂರ್ವಕವಾಗಿ ಆವರ ಸುಧಾರಣೆಗಳನ್ನು ತಿರಸ್ಕರಿಸುತ್ತೇನೆ" ಎಂದು ಸಿಂಹದಂತೆ ಗರ್ಜಿಸಿದರು. ಆಗ ಮಹಾತ್ಮಾಗಾಂಧಿಯವರು, "ಆಂಗ್ಲೇಯರು ಸೌಹಾರ್ದದ ಭಿಕ್ಷೆ ಬೇಡುತ್ತಿರುವರು; ಈಗ ತಿರಸ್ಕರಿಸುವುದಕ್ಕಾದೀತೇ? ಆದುದರಿಂದ ನಾವು ವಂದನಾಪೂರ್ವಕವಾಗಿ ಆ ಸುಧಾರಣೆಗಳನ್ನು ಅಂಗೀಕರಿಸಲೇಬೇಕು" ಎಂದು ಹೇಳಿದರು. ಆಗ ಪಂಡಿತ ಮೋತಿಲಾಲನೆಹರುರವರು ಮಹಾತ್ಮಗಾಂಧಿಯವರ ಪರವಾಗಿ ವಾದಿಸಿದರು. ಅಂದಿನಿಂದ ಮಹಾತ್ಮಾಗಾಂಧಿಯವರಿಗೂ ಪಂಡಿತ ಮೋತೀಲಾಲ್‌ನೆಹರುರವರಿಗೂ ಅಧಿಕವಾದ ಮೈತ್ರಿಯು ಬೆಳೆದು ಭಾರತರಾಷ್ಟ್ರೀಯೇತಿಹಾಸದಲ್ಲಿ ಅಗ್ರಸ್ಥಾನವನ್ನು ಹೊಂದಿತು.

ಮಾರನೆಯವರ್ಷ ಅನೇಕ ಅನಿರೀಕ್ಷಿತಕಾರಣಗಳಿಂದ ಆಂಗ್ಲೇಯರ ಮತ್ತು ಭಾರತೀಯರ ಮನಸ್ತಾಪವು ಮತ್ತಷ್ಟು ಹೆಚ್ಚಿತು. ಮಹಮ್ಮದೀಯರ ಖಿಲಾಫತ್ ಪ್ರಶ್ನೆಯು ಬಂದು ಇಸ್ಲಾಂ ಜಗತ್ತನ್ನೇ ತಲ್ಲಣಗೊಳಿಸಿತು. ಏಳುಕೋಟಿ ಮಹಮ್ಮದೀಯರ ಸಂಖ್ಯೆಯುಳ್ಳ ಹಿಂದುಸ್ಥಾನದಲ್ಲಿ ಎಲ್ಲೆಲ್ಲಿ ನೋಡಿದರೂ ಮಹಮ್ಮದೀಯರು ತಮ್ಮ ಧರ್ಮಕ್ಕುಂಟಾದ ವಿಪತ್ತಿಗಾಗಿ ಸಂಕಟಪಡುವುದು ಕಂಡುಬರುತ್ತಲಿದ್ದಿತು. ಜಾಲಿಯನ್‌ಬಾಗಿನಲ್ಲಿ ನಡೆದ ಕೊಲೆಗೆ ಕಾರಣೀಭೂತರಾದವರನ್ನು ಬ್ರಿಟಿಷ್ ಸರ್ಕಾರದವರು ಶಿಕ್ಷಿಸಿ ನ್ಯಾಯದೇವಿಯನ್ನು ತೃಪ್ತಿಪಡಿಸುವರೆಂಬ ಮಹಾತ್ಮರ ನಿರೀಕ್ಷಣೆಯು ನೊಲದ ಕೋಡಿನಂತೆ ಮಿಥ್ಯೆಯಾಯಿತು. ಆಗ ಮಹಾತ್ಮಾಗಾಂಧಿಯವರು ಖಿಲಾಫತ್ ಮತ್ತು ಜಾಲಿಯನ್‌ವಾಲಾಬಾಗಿನ ಅನ್ಯಾಯವನ್ನು ನೋಡಿ ಸಹಿಸಲಾರದೆ ಅಸಾಧಾರಣ ಧೈರ್ಯದಿಂದೊಡಗೂಡಿ ಸ್ವಾತಂತ್ರ್ಯಸಾಧನೆಯನ್ನು ಮಾಡಬೇಕೆಂದು 1920 ನೆಯ ಇಸವಿಯಲ್ಲಿ ಸಹಾಯನಿರಾಕರಣಚಳವಳಿಯನ್ನು ಪ್ರಾರಂಭಿಸಿದರು. 1920 ನೆಯ ಇಸವಿಯಲ್ಲಿ ನಾಗಪುರದಲ್ಲಿ ನೆರವೇರಿದ ಕಾಂಗ್ರೆಸ್ಸಿನಲ್ಲಿ ಸಹಾಯನಿರಾಕರಣದ ಠರಾವು ಸರ್ವಾನುಮತದಿಂದ ಪಾಸಾಯಿತು. ಆಗ ಮಿ|| ಬಿಪಿನ್ ಚಂದ್ರಪಾಲ್, ಪಂಡಿತ ಮದನಮೋಹನಮಾಲವೀಯ ಮೊದಲಾದ ಅಸಾಧಾರಣ ವಾಗ್ಮಿಗಳು ಈ ಸಹಾಯನಿರಾಕರಣವನ್ನು ವಿರೋಧಿಸಿ ವಾದಿಸಿದರು. ಮಹಾತ್ಮರ ಸಹಾಯನಿರಾಕರಣ ಕರಾವಿಗೆ ಓಟುಕೊಡುವುದರಲ್ಲಿ ಇವರೇ ಮೊದಲನೆಯವರಾದರು. ಆ ಚಳವಳಿಯು ಜನತೆಯಲ್ಲಿ ಅದ್ಭುತಜಾಗ್ರುತಿಯನ್ನುಂಟುಮಾಡಿತು. ಇವರು ಮಹಾತ್ಮರ ಅನುಜ್ಞೆಯಂತೆ ಕೋಟ್ಯಂತರ ರೂಪಾಯಿಗಳನ್ನು ಗಳಿಸುತ್ತಿದ್ದ ವಕೀಲಿವೃತ್ತಿಗೆ ತಿಲಾಂಜಲಿಯನ್ನು ಕೊಟ್ಟು ರಾಷ್ಟ್ರೀಯಚಳವಳಿಯಲ್ಲಿ ಪ್ರಧಾನಪಾತ್ರವನ್ನು ವಹಿಸಿದರು. ಇವರೀತರಹದ ಸ್ವಾರ್ಥತ್ಯಾಗವನ್ನು ನೋಡಿ ಇಡೀ ಜಗತ್ತೇ ಬೆರಗಾಯಿತು. ಇವರು ವಕೀಲರಾಗಿರುವಾಗ ಹಿಂದುಸ್ಥಾನದಲ್ಲಿರುವ ಅಗಸರು ಸರಿಯಾಗಿ ಬಟ್ಟೆಗಳನ್ನು ತೊಳೆದು ಇಸ್ತ್ರಿಮಾಡುವುದಿಲ್ಲವೆಂದು, ಬಹು ಬೆಲೆಯುಳ್ಳ ತಮ್ಮ ಬಟ್ಟೆಗಳನ್ನು ತೊಳೆಯುವುದಕ್ಕಾಗಿ ಪ್ಯಾರಿಸ್ಸಿಗೆ ಕಳುಹಿಸುತ್ತಿದ್ದರು. ಇಂಥವರು ಮಹಾತ್ಮಗಾಂಧಿಯವರ ಮೈತ್ರಿಯಿಂದ ಬಹುಬೆಲೆಯುಳ್ಳ ಯಾವತ್ತು ಉಡುಪುಗಳನ್ನು ತಮ್ಮ ಆನಂದಭವನದಲ್ಲಿ ಹೋಳಿಮಾಡಿ, ಒಂದು ಬನೀನು, ಒಂದು ಪಂಚೆ ಮತ್ತು ಒಂದು ಗಾಂಧಿಟೋಪಿ ಇಷ್ಟನ್ನು ಮಾತ್ರ ಧರಿಸಹತ್ತಿದರು. ಆಗ ಸರ್ಕಾರದವರು ವಾಯುವ್ಯಪ್ರಾಂತದ ಕಾಂಗ್ರೆಸ್ ಸಮಿತಿಯು ಅಕ್ರಮಸಂಸ್ಥೆಯೆಂದು ಸಾರಿ, ಆ ಸಮಿತಿಯ ಅಧ್ಯಕ್ಷರಾದ ಇವರನ್ನು ದಸ್ತಗಿರಿಮಾಡಿ ಜೈಲಿಗೆ ಕಳುಹಿಸಿದರು. ಆಗ ಉತ್ತರಹಿಂದುಸ್ಥಾನದ ಇವರ ಸಾವಿರಾರು ಜನ ಅನುಯಾಯಿಗಳು ಜೈಲಿಗೆ ಹೋದರು. ಜೈಲಿನಿಂದ ಇವರು ಹೊರಗೆ ಬಂದಾಗ ಮಹಾತ್ಮಾಗಾಂಧಿಯವರು ಜೈಲಿನಲ್ಲಿದ್ದರು. ಮಹಾತ್ಮರು ಜೈಲಿಗೆ ಹೋಗುವುದಕ್ಕೆ ಪೂರ್ವದಲ್ಲಿಯೇ ಜನರಿಗೆ ಕಾನೂನುಭಂಗ ಚಳವಳಿಯ ನಿಯಮಗಳು ಸರಿಯಾಗಿ ತಿಳಿದಿರಲಿಲ್ಲವಾದುದರಿಂದ ಅದನ್ನು ನಿಲ್ಲಿಸಿದ್ದರು. ಕಾಂಗ್ರೆಸ್ಸಿನವರು ಕಾನೂನುಭಂಗಚಳವಳಿಯನ್ನು ಪ್ರಾರಂಭಮಾಡಬೇಕೇ ಬೇಡವೇ ಎಂಬ ವಿಷಯವನ್ನು ವಿಮರ್ಶಿಸುವುದಕ್ಕಾಗಿ ಒಂದು ಸಮಿತಿಯನ್ನು ಏರ್ಪಡಿಸಿದರು. 1922 ನೆಯ ವರ್ಷ ನೆರವೇರಿದ ಗಯಾ ಕಾಂಗ್ರೆಸ್ಸಿನಲ್ಲಿ ಇವರು ಸದ್ಯಃ ಕಾನೂನುಭಂಗಚಳವಳಿಯನ್ನು ನಿಲ್ಲಿಸಬೇಕೆಂದೂ, ಕಾಯಿದೆಕೌನ್ಸಿಲ್, ಶಾಲೆ ಮತ್ತು ಕೋರ್ಟುಗಳಿಗೆ ಹಾಕಿದ್ದ ಬಹಿಷ್ಕಾರವನ್ನು ತೆಗೆಯಬೇಕೆಂದೂ ಅಭಿಪ್ರಾಯಪಟ್ಟರು. ಆಗ ಕಾಂಗ್ರೆಸ್ಸಿನಲ್ಲಿ ಎರಡು ಪಕ್ಷಗಳಾಗಿ, ದಿವಂಗತ ದೇಶಬಂಧು ಸಿ. ಆರ್. ದಾಸ್ ಮತ್ತು ಇವರು ಕೂಡಿ ಸ್ವರಾಜ್ಯಪಾರ್ಟಿಯನ್ನು ಸ್ಥಾಪಿಸಿದರು. ಆ ಪಾರ್ಟಿಯ ತತ್ವದ ಪ್ರಕಾರ ಕೌನ್ಸಿಲ್ಲಿನೊಳಗೆ ಹೋಗಿ ಅಲ್ಲಿ ಚಳವಳಿಮಾಡಿ ಸರ್ಕಾರವನ್ನು ಬಗ್ಗಿಸಬೇಕೆಂದು ಪ್ರಯತ್ನಿಸಿದರು. ಅನಂತರ ಇವರು ದಿಲ್ಲಿ ನ್ಯಾಯವಿಧಾಯಕಸಭೆಯ ಮೆಂಬರರಾಗಿ ಆರಿಸಲ್ಪಟ್ಟರು. ಇವರು ಅಲ್ಲಿ ಪ್ರಜಾಪಕ್ಷದ ಮುಖಂಡರಾಗಿ ಬಹು ಯುಕ್ತಿಯುಕ್ತವಾಗಿ ಕಾರ್ಯಕಲಾಪಗಳನ್ನು ನಡೆಯಿಸುತ್ತಿದ್ದರು. ಸಮಯಾನುಸಾರವಾಗಿ ಮಾತನಾಡುವ ಜಾಣ್ಮೆಯೂ, ಸುಸಮಯವೊದಗಿದಾಗ ಅದನ್ನು ಉಪಯೋಗಮಾಡಿಕೊಳ್ಳುವ ಚಾತುರ್ಯವೂ ಇವರಲ್ಲಿ ಮನೆಮಾಡಿಕೊಂಡಿದ್ದುವು. ಇವರ ಮಂದಹಾಸವು ಜನರನ್ನು ಆಕರ್ಷಿಸುವ ಸಜೀವಸೂಜಿಗಲ್ಲೋ ಏನೋ ಎಂದು ಜನರಿಗೆ ಭಾಸವಾಗುತ್ತಿತ್ತು. ಇವರು 1925 ಮತ್ತು 1929 ನೆಯ ನ್ಯಾಯವಿಧಾಯಕಸಭೆಯಲ್ಲಿ ರಾಷ್ಟ್ರೀಯ ಹಕ್ಕುಬಾಧ್ಯತೆಗಳನ್ನು ಕುರಿತು ಒಂದು ಠರಾವನ್ನು ತಂದು ಅದನ್ನು ಪಾಸ್‌ಮಾಡಿಸಲು, ಆಗ ಸರ್ಕಾರದವರು ಹಿಂದುಸ್ಥಾನದ ಸ್ಥಿತಿಗೆ ಅನುಗುಣವಾದ ರಾಜ್ಯಾಂಗರಚನೆಯನ್ನು ಮಾಡಬೇಕೆಂದು ಹೇಳಿದರು. ಅದು ಸಾಮಾನ್ಯಕೆಲಸವಾಗಿರಲಿಲ್ಲ; ಬಹು ಕ್ಲಿಷ್ಟವಾದುದಾಗಿತ್ತು. ಇದಕ್ಕಾಗಿ ಭರತಖಂಡದ ಸಮಸ್ತ ಪಕ್ಷಗಳ ಪ್ರತಿನಿಧಿಗಳೂ ಪಂಡಿತ ಮೋತಿಲಾಲ್‌ನೆಹರುರವರ ಅಧ್ಯಕ್ಷತೆಯಲ್ಲಿ ಸಭೆಸೇರಿದರು. ರಾಜ್ಯಾಂಗರಚನೆಯನ್ನು ಮಾಡುವ ಭಾರವು ಮೋತಿಲಾಲ್‌ನೆಹರುರವರ ಮೇಲೆಯೇ ಬಿದ್ದಿತು. ಅವಿಶ್ರಾಂತಶ್ರಮವಹಿಸಿ ಒಂದು ಅಮೋಘವಾದ ವರದಿಯನ್ನು ತಯಾರಿಸಿದರು. ಅದಕ್ಕೆ ಸರ್ಕಾರದವರು ಗೌರವಕೊಟ್ಟು ಅದರಲ್ಲಿ ಕಂಡುಬರುವ ಹಕ್ಕುಬಾಧ್ಯತೆಗಳನ್ನು ಕೊಡಬಹುದೆಂದು ಇಡೀ ಭರತಖಂಡವೇ ನಿರೀಕ್ಷಿಸಿದ್ದಿತು. ಆದರೆ ಸರ್ಕಾರದವರು ಅದನ್ನು ಗೌರವಿಸದೆ ಹೋದುದಕ್ಕಾಗಿ ಇವರ ಸತ್ಪುತ್ರರಾದ ಪಂಡಿತ ಜವಾಹರಲಾಲ್‌ನೆಹರುರವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ನೆರವೇರಿದ 1930 ನೆಯ ವರ್ಷದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಠರಾವು ಪಾಸಾಯಿತು. ಆಗ ಪಂಡಿತ ಮೋತಿಲಾಲ್ ನೆಹರುರವರು ತಮ್ಮ ನೈಜವಾದ ಉತ್ಸಾಹದಿಂದ ಕೆಲಸಮಾಡಲು ಪ್ರಾರಂಭಿಸಿದರು. ಮತ್ತು ಕಳೆದ ವರ್ಷ ಈ ಮಹೋದಯರು ಲಕ್ಷಾಂತರ ರೂಪಾಯಿ ಬೆಲೆಬಾಳುವ ತಮ್ಮ "ಆನಂದಭವನ"ವನ್ನು ರಾಷ್ಟ್ರಕ್ಕೆ ಸಮರ್ಪಿಸಿ ಅದಕ್ಕೆ "ಸ್ವರಾಜ್ಯಭವನ"ವೆಂದು ಹೆಸರಿಟ್ಟರು. ಅನಂತರ ಇವರ ಮಕ್ಕಳಾದ ಪಂಡಿತ ಜವಾಹರಲಾಲ್ ನೆಹರುರವರು ಏಪ್ರಿಲ್ 14 ನೆಯ ತಾರೀಖಿನದಿವಸ ಉಪ್ಪಿನ ಕಾಯಿದೆಯನ್ನು ಭಂಗಪಡಿಸಿದರೆಂದು ಆರುತಿಂಗಳುಗಳ ಶಿಕ್ಷೆಗೆ ಗುರಿಯಾದರು.

ಏಪ್ರಿಲ್ 18 ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರು ಬಂಧನದಲ್ಲಿಡಲ್ಪಟ್ಟರು. ಮಹಾತ್ಮಾಗಾಂಧಿಯವರು ತಾವು ಜೈಲಿಗೆ ಹೋಗುವುದಕ್ಕೆ ಪೂರ್ವದಲ್ಲಿ ಪಂಡಿತ ಮೋತಿಲಾಲ್‌ನೆಹರುರವರನ್ನು ಪಂಡಿತ ಜವಾಹರಲಾಲನೆಹರುರವರ ಸ್ಥಳದಲ್ಲಿ ಅಧ್ಯಕ್ಷರನ್ನಾಗಿ ನಿಯಮಿಸಿದರು. ಕಳೆದ ವರ್ಷ ಜೂನ್ 30 ನೆಯ ತಾರೀಖಿನ ದಿವಸ ಕಾಂಗ್ರೆಸ್ ಸಂಸ್ಥೆಯು ಅಕ್ರಮವಾದುದೆಂದು ತೀರ್ಮಾನಿಸಲ್ಪಟ್ಟಾಗ, ಅಧ್ಯಕ್ಷರಾದ ಪಂಡಿತ ಮೋತಿಲಾಲ್‌ನೆಹರುರವರು ದಸ್ತಗಿರಿಮಾಡಲ್ಪಟ್ಟು ಆರುತಿಂಗಳುಗಳ ಶಿಕ್ಷೆಗೆ ಗುರಿಯಾದರು. ಅಲ್ಲಿ ಇವರು ಕಾಯಿಲೆಬಿದ್ದ ಕಾರಣ ಇಡೀ ರಾಷ್ಟ್ರವೇ ಇವರನ್ನು ಬಂಧನದಿಂದ ವಿಮೋಚನಮಾಡಬೇಕೆಂದು ಕೇಳಿಕೊಂಡ ಮೇರೆಗೆ ಸರ್ಕಾರದವರು ಇವರನ್ನು ಬಂಧನದಿಂದ ಬಿಡುಗಡೆಮಾಡಿದರು. ಎಷ್ಟು ಚಿಕಿತ್ಸೆಮಾಡಿದರೂ ಪ್ರಯೋಜನವಾಗಲಿಲ್ಲ. ಅವರು ರೋಗಪೀಡಿತರಾಗಿ ಜೈಲಿನಿಂದ ಹೊರಗೆ ಬಂದಾಗ ಅವರ ಕುಟುಂಬದ ಮುಖ್ಯಜನರೆಲ್ಲರೂ ಜೈಲಿನಲ್ಲಿದ್ದರು. ಅವರ ಪ್ರೀತಿಯ ಮಗಳಾದ ಶ್ರೀಮತಿ ಕೃಷ್ಣಕುಮಾರಿಯವರಿಗೆ ದಸ್ತಗಿರಿಯಾಯಿ[illegible]ಹರಲಾಲರವರ ಧರ್ಮಪತ್ನಿಯವರಾದ [illegible]ಮಲಾದೇವಿಯವರು ಜೈಲಿಗೆ ಹೋದರು. [illegible] ಚಿಕ್ಕ ಮೊಮ್ಮಗಳು (ಜವಾಹರಲಾಲರ ಪುತ್ರಿಯು) ಅನಾಥವಾಯಿತಲ್ಲಾ? ಎಂಬ ದುಃಖವು ಇವರ ರೋಗವನ್ನು ಮೊದಲಿಗಿಂತಲೂ ಹೆಚ್ಚುಮಾಡಲು ಕಾರಣವಾಯಿತು. ಸದ್ಯಃ ಪ್ರಾಪ್ತವಾಗಿರುವ ರಾಜಕೀಯ ಪ್ರಸಂಗದಲ್ಲಿ ಪಂಡಿತ ಮೋತಿಲಾಲ್‌ನೆಹರುರವರ ವಿಯೋಗವು ಭರತಖಂಡಕ್ಕೆ ಮಾತ್ರವಲ್ಲದೆ ಬ್ರಿಟಿಷ್ ಸರ್ಕಾರಕ್ಕೂ ಸಹ ದುಃಖದಾಯಕವಾಗಿದೆ.

ಪಂಡಿತ ಮೋತಿಲಾಲ್‌ನೆಹರುರವರು ಕೇವಲ ವಿಚಾರಶೀಲರಾಗಿದ್ದು, ಯಾವ ಸಮಸ್ಯೆಯು ಬಂದರೂ ಅದನ್ನು ಪೂರ್ವಾಪರ ವಿಚಾರಮಾಡಿ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದರು. ಇವರು ಯಾವಾಗಲೂ ಹಸನ್ಮುಖಿಗಳಾಗಿದ್ದು ಸ್ವಭಾವತಃ ಶಾಂತರೂ, ಗುಣಪಕ್ಷಪಾತಿಗಳೂ ಆಗಿದ್ದರು. ಇವರಿಗೆ ಹಿಂದೂಮಹಮ್ಮದೀಯ ಮೊದಲಾದ ಭಿನ್ನಭೇದಗಳಂತೂ ಸ್ವಪ್ನದಲ್ಲಿಯೂ ಇರಲಿಲ್ಲ. ಸರ್ವತೋಪಮಾನವಾದ ಧೈರ್ಯವೂ, ಅದ್ಭುತಕಾರ್ಯಸಾಧನಸಾಮರ್ಥ್ಯವೂ ಇವರ ನೈಜವಾದ ಗುಣಗಳಾಗಿದ್ದುವು. ರಾಷ್ಟ್ರದ ಹಿತಕ್ಕಾಗಿ ಅಸಾಧಾರಣವಾದ ಸ್ವಾರ್ಥತ್ಯಾಗಮಾಡಿದರು. ಸ್ವಾತಂತ್ರ್ಯಸಾಧನೆಗಾಗಿ ಭಾರತಮಾತೆಯ ಪಾದಕ್ಕೆ ತಮ್ಮ ಕುಟುಂಬವನ್ನೇ ಸಮರ್ಪಿಸಿದರು. ರಾಷ್ಟ್ರಕ್ಕೆ ಇವರು ಮಾಡಿರುವ ಅನೇಕಾನೇಕ ದಾನಗಳಲ್ಲಿ, ಇವರು ತಮ್ಮ ವೀರಪುತ್ರರಾದ ಪಂಡಿತ ಜವಾಹರಲಾಲ ನೆಹರುರವರನ್ನು ಮಾಡಿರುವ ದಾನವೇ ಸರ್ವೋತ್ಕೃಷ್ಟವಾದ ದಾನವಾಗಿದೆ. ಈ ಪ್ರಕಾರವಾಗಿ ರಾಷ್ಟ್ರಕಾರ್ಯಕ್ಕೋಸುಗ ತನುಮನೋಧನಾದಿಗಳನ್ನು ವೆಚ್ಚಮಾಡಿ ಭರತಖಂಡದ ದಿವ್ಯಜ್ಯೋತಿಯಂತೆ ಪ್ರಕಾಶಿಸುತ್ತಿದ್ದ ಈ ಮಹೋದಯರ ಆತ್ಮಕ್ಕೆ ಪರಮೇಶ್ವರನು ಶಾಂತಿಯನ್ನುಂಟುಮಾಡಲೆಂದು ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಪಂಡಿತರ ಮರಣದ ವಾರ್ತೆ.

ಪಂಡಿತ ಮೋತೀಲಾಲನೆಹರೂರವರು ಈ ತಿಂಗಳು 4 ನೆಯ ತಾರೀಖಿನ ದಿವಸ ಅಲಹಾಬಾದಿನಿಂದ ಲಕ್ನೋಕ್ಕೆ ಚಿಕಿತ್ಸೆಗೋಸ್ಕರ ಮೋಟಾರಿನಲ್ಲಿ ಪ್ರಯಾಣಮಾಡಿದರು. ಅವರು ಮೋಟಾರಿನಲ್ಲಿ ಪ್ರಯಾಣ ಮಾಡಿದ್ದರಿಂದ ಅವರ ಪ್ರಕೃತಿಯು ಸುಧಾರಿಸಿತೆಂದು ಬಹು ಜನರು ನಿರೀಕ್ಷಿಸಿದರು. ಆದರೆ ಅದರ ಪರಿಣಾಮವು ವಿರೋಧವಾಯಿತು. 5 ನೆಯ ತಾರೀಖಿನ ರಾತ್ರಿಯ ಕಾಲದಲ್ಲೆಲ್ಲಾ ಪಂಡಿತ ಜವಾಹರಲಾಲ ನೆಹರುರವರು ತಮ್ಮ ತಂದೆಯವರ ಹಾಸಿಗೆಯ ಪಕ್ಕದಲ್ಲಿಯೇ ಕುಳಿತಿದ್ದರು. ಬೆಳಗಿನ ಝಾವ 5½ ಘಂಟೆಗೆ ಮಹಾತ್ಮಾ ಗಾಂಧಿ ಮತ್ತು ಸರೋಜಿನಿದೇವಿಯವರಿಗೆ ಹೇಳಿಕಳುಹಿಸಿದರು. ಕುಡಿಯಲಿಕ್ಕೆ ನೀರು ಬೇಕು ಎಂದು ಕೇಳಿದರು. ನೀರು ತರುವದರೊಳಗೆ ಅಕಸ್ಮಾತ್ತಾಗಿ ಸ್ಮೃತಿತಪ್ಪಿ ಪ್ರಾಣಬಿಟ್ಟರು. ಮಹಾತ್ಮ ಗಾಂಧಿ ಮತ್ತು ಸರೋಜಿನಿದೇವಿಯವರ ಸಂಗಡ ಅಂತ್ಯಕಾಲದಲ್ಲಿ ಮಾತನಾಡುವುದಾಗಲಿಲ್ಲ.

ಪಂಡಿತ ಮೋತೀಲಾಲನೆಹರೂರವರು ಸ್ವರ್ಗಸ್ಥರಾದರೆಂಬ ಸುದ್ದಿಯು ಕೂಡಲೆ ದಾವಾಗ್ನಿಯಂತೆ ಪಟ್ಟಣದಲ್ಲೆಲ್ಲಾ ವ್ಯಾಪಿಸಿತು. ಲಕ್ಷೋಪಲಕ್ಷ ಜನರು ತಂಡೋಪತಂಡವಾಗಿ ಅವರ ಅಂತ್ಯದರ್ಶನವನ್ನು ತೆಗೆದುಕೊಳ್ಳಬೇಕೆಂದು ಅವರಿಳಿದಿದ್ದ ಮನೆಯ ಹತ್ತರಕ್ಕೆ ಬಂದರು. ಎಲ್ಲರೂ ದರ್ಶನಮಾಡಿಕೊಳ್ಳಲೆಂಬ ಉದ್ದೇಶದಿಂದ ಅವರ ಕಳೇಬರವನ್ನು ಮನೆಯ ಹೊರಗಿಟ್ಟಿದ್ದರು. ಮಧ್ಯಾಹ್ನ 11 ಘಂಟೆಗೆ ಕಳೇಬರವನ್ನು ಅಲಂಕರಿಸಲ್ಪಟ್ಟಿದ್ದ ಕಾರಿನಲ್ಲಿಟ್ಟು ಲಕ್ನೋದ ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತ ಅಲಹಾಬಾದಿಗೆ ಹೊರಟರು. ರಸ್ತೆಯುದ್ದಕ್ಕೂ ಜನರು ಕಿಕ್ಕಿರಿದು ನಿಂತಿದ್ದರು. ಅಲಹಾಬಾದಿಗೆ ಹೋಗುವಾಗ ಪ್ರತಿಯೊಂದು ಸ್ಥಳದಲ್ಲಿಯೂ ಸಾವಿರಾರು ಜನರು ಬಂದು ಅಂತ್ಯದರ್ಶನವನ್ನು ಮಾಡಿಕೊಳ್ಳುತ್ತಿದ್ದರು. 30 ಮೈಲಿಯುದ್ದಕ್ಕೂ ಜನರು ಕಿಕ್ಕಿರಿದು ನಿಂತಿದ್ದರು. ಸಾಯಂಕಾಲ 4 ಗಂಟೆಗೆ ಅಲಹಾಬಾದನ್ನು ತಲ್ಪಿದರು. ಕಾಶ್ಮೀರಬ್ರಾಹ್ಮಣಪಂಡಿತರು ಅವರಿಗೆ ಅಂತ್ಯಸಂಸ್ಕಾರಗಳನ್ನು ಮಾಡಿ 6½ ಗಂಟೆಗೆ ತ್ರಿವೇಣೀಸಂಗಮಕ್ಕೆ ಕಳೇಬರವನ್ನು ತೆಗೆದುಕೊಂಡುಹೋದರು. ಅಲ್ಲಿ ಮಾಘಮೇಲದಲ್ಲಿ ಸೇರುವಂತೆ ಲಕ್ಷಾಂತರಜನರು ಸೇರಿದ್ದರು. ಮಹಾತ್ಮಾಗಾಂಧಿಯವರು ಅಲ್ಲಿರುವರೆಂದು ಮೊದಲು ಜನರಿಗೆ ತಿಳಿದಿರಲಿಲ್ಲ. ಅವರೇ ಚಿತೆಗೆ ಕಾಷ್ಠಗಳನ್ನು ಹಾಕುತ್ತಿರುವಾಗ ಜನರು ಅವರನ್ನು ಗುರ್ತಿಸಿದರು. ಆಗ ಮಹಾತ್ಮಗಾಂಧಿಯವರೂ, ಪಂಡಿತ ಮದನಮೋಹನಮಾಲವೀಯರವರೂ ಅವರ ಗುಣಕಥನಪೂರ್ವಕ ಮಹತ್ವದ ಭಾಷಣಮಾಡಿದರು. ಅವರ ಕಳೇಬರವು ಸಂಪೂರ್ಣ ಸುಟ್ಟು ಭಸ್ಮೀಭೂತವಾಗುವವರೆಗೂ ಎಲ್ಲರೂ ಅಲ್ಲಿಯೇ ಶಾಂತರಾಗಿ ಕುಳಿತಿದ್ದರು. ಅಲಹಾಬಾದ್ ಹೈಕೋರ್ಟ್ ಜಡ್ಜ್ ಸರ್ ಚಾರ್ಲ್ಸ್‌ಗ್ರಿಮ್‌ವುಡ್‌ಮಿಯರ್‌ರವರು, ಇವರ ಔದಾರ್ಯವನ್ನೂ ಸಭ್ಯವರ್ತನವನ್ನೂ, ಜಾಣ್ಮೆಯನ್ನೂ, ವಕೀಲಿವೃತ್ತಿಯನ್ನು ನಡೆಯಿಸುವುದರಲ್ಲಿ ಇವರಿಗಿದ್ದ ಅದ್ಭುತಶಕ್ತಿಯನ್ನೂ ಪ್ರಶಂಸೆಮಾಡಿ, "ರಾಣಿ ಕಿಶೋರಿಯವರ ಪಕ್ಷವನ್ನು ಹಿಡಿದು ಇಟಾವಾ ಮೊಕದ್ದಮೆ ನಡೆಯಿಸಿದುದನ್ನು ಜ್ಞಾಪಿಸಿಕೊಂಡರೆ ಇಡೀ ಪ್ರಪಂಚದಲ್ಲಿಯೇ ಇಂಥ ಅದ್ಭುತಸಾಮರ್ಥ್ಯವುಳ್ಳ ವಕೀಲರು ಸಿಗಲಾರರೆಂಬುದು ಸ್ಪಷ್ಟವಾಗುತ್ತದೆ" ಎಂದು ಹೇಳಿದರು. ಇಂಗ್ಲೆಂಡಿನ ಡೇಲಿಹೆರಾಲ್ಡ್ ಮೊದಲಾದ ಪ್ರಸಿದ್ಧ ಪತ್ರಿಕೆಗಳು ಇವರ ಸದ್ಗುಣಾವಳಿಯನ್ನು ಮುಕ್ತಕಂಠದಿಂದ ಸಾರಿರುವುವು. ಪರಮೇಶ್ವರನು ಭಾರತಮಾತೆಯ ಈ ವೀರಪುತ್ರನ ಆತ್ಮಕ್ಕೆ ಶಾಂತಿಯನ್ನೀಯಲಿ.

ಸ್ವೀಕಾರ.

ಚಳ್ಳಕೆರೆ ತಾ|| ನಾಯಕನಹಟ್ಟಿಯಲ್ಲಿ ನೆರವೇರಿದ ಮಾಹೇಶ್ವರದೀಕ್ಷಾ ಸಮಯದಲ್ಲಿ ಪ್ರಭಾಪ್ರೋತ್ಸಾಹಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಮೇ|| ಮೇಟಿ ಕುರಿಕೆಮುಟದ ಮಲ್ಲಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ನರಗುಂದ ಪೇಠಾ ಕಪ್ಪಲಿಗ್ರಾಮದ ಮ|| ರಾ|| ಸಣ್ಣಚಂದಿ ಬಸಪ್ಪನವರ ಅಕ್ಕಂದಿರಾದ ಶ್ರೀಮತಿ ಪಕ್ರವ್ವನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ವೇ|| ಶಿರೋಳ ಬೃಹನ್ಮಠದ ಪಂಚಾಕ್ಷರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಕಳೆದ ತಿಂಗಳು 30ನೆಯ ದಿವಸ ಲಂಡನ್ನಿನಲ್ಲಿ ರಾವಲ್ಪಿಂಡಿ ಎಂಬ ಹಡಗನ್ನು ಹತ್ತಿದರು. ಅವರು ಈ ತಿಂಗಳು 13 ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದಿಳಿದು ಗುಂತಕಲ್ ಮಾರ್ಗವಾಗಿ 15 ನೆಯ ತಾರೀಖಿನ ದಿವಸ ಬೆಂಗಳೂರಿಗೆ ಬರುವರೆಂದು ಕೇಳುತ್ತೇವೆ.

ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರ ಜೊತೆಯಲ್ಲಿ ಲಂಡನ್ನಿಗೆ ಹೋಗಿದ್ದ ವಿದ್ಯಾಖಾತೆಯ ಡೈರೆಕ್ಟರ್ ಮಿ|| ಎಚ್. ಎಸ್. ಸುಬ್ಬರಾಯರು ಕಳೆದ ತಿಂಗಳು 31 ನೆಯ ತಾರೀಖಿನ ದಿವಸ ಬೆಂಗಳೂರಿಗೆ ಬಂದು, ಈ ತಿಂಗಳು 2 ನೆಯ ತಾರೀಖಿನ ದಿವಸ ಛಾರ್ಜು ತೆಗೆದುಕೊಂಡರೆಂದೂ, ಇವರ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಮಿ|| ಎ. ಆರ್. ವಾಡಿಯಾರವರು ಒಂದು ತಿಂಗಳು ರಜಾಪಡೆಗರೆಂದೂ ತಿಳಿದುಬರುತ್ತದೆ.

ಅಲಹಾಬಾದಿನಲ್ಲಿ ಭಾರತೀಯ ಮುಖಂಡರ ತೀರ್ಮಾನ.

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನಗಳು.

1. ಕಳೆದ ತಿಂಗಳು 21 ನೆಯ ತಾರೀಖಿನ ದಿವಸ ನಿರ್ಣಯಿಸಿದ ತೀರ್ಮಾನಗಳನ್ನು ಸರ್ ಟಿ. ಬಿ. ಸಪ್ರೂ, ಮಿ|| ಶಾಸ್ತ್ರಿ ಮತ್ತು ಮಿ|| ಜಯಕರ್ ಇವರ ಪ್ರಾರ್ಥನೆಯನ್ನು ಪುರಸ್ಕರಿಸಿ ಪ್ರಕಟಿಸದೆ ಹೋದುದು ಸರಿಯಷ್ಟೆ! ಸದ್ಯ ಕಾನೂನುಭಂಗಚಳವಳಿಯು ನಿಲ್ಲಿಸಲ್ಪಟ್ಟಿದೆ ಎಂಬ ಭಾವನೆಯು ಜನತೆಯಲ್ಲಿ ಉತ್ಪನ್ನವಾಗಲು ಅವಕಾಶವಾದುದರಿಂದ ಈ ಸಮಿತಿಯವರು ಬೇರೆ ಸಲಹೆಗಳನ್ನು ಕೊಡುವವರೆಗೂ ಸದರಿ ಚಳವಳಿಯನ್ನು ನಿರಾಂತಕವಾಗಿ ನಡೆಸತಕ್ಕದ್ದು.

2. ವಿದೇಶಿ ವಸ್ತ್ರದ ಹಾಗೂ ಸೇಂದಿ, ಸರಾಯಿ, ಗಾಂಜಿ ಮತ್ತು ಅಫೀಮು ಮೊದಲಾದ ಮಾದಕವಸ್ತುಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುವುದು ಕಾನೂನುಭಂಗಚಳವಳಿಯ ಒಂದು ಭಾಗವಾಗಿರದೆ ಪ್ರತಿಯೊಬ್ಬರಿಗೂ ಇರುವ ಸರ್ವಸಾಮಾನ್ಯವಾದ ಹಕ್ಕೆಂಬುದನ್ನೂ, ಅದನ್ನು ಶಾಂತಿಯುತವಾಗಿ ನಡೆಯಿಸಬೇಕೆಂಬುದನ್ನೂ ಈ ಸಮಿತಿಯು ಜನಾಂಗದ ಜ್ಞಾಪಕಕ್ಕೆ ತರುತ್ತದೆ.

3. ಕಾಂಗ್ರೆಸ್ಸಿನ ತೀರ್ಮಾನದಂತೆ ವಿದೇಶಿ ವಸ್ತ್ರ ಮತ್ತು ಸಾಲಿನ ಬಹಿಷ್ಕಾರಕ್ಕೆ ಸಹಾಯಮಾಡಿದ ವರ್ತಕರ ದೇಶಾಭಿಮಾನವನ್ನು ಈ ಸಮಿತಿಯು ಶ್ಲಾಘಿಸುವುದು. ಆದರೆ ಯಾವ ಕಾಂಗ್ರೆಸ್ ಸಂಸ್ಥೆಯೇ ಆಗಲಿ ಹಾಲಿ ಉಳಿದಿರುವ ವಿದೇಶಿಮಾಲನ್ನು ಮಾರಲು ಅನುಕೂಲಪಡಿಸಿಕೊಡತಕ್ಕದ್ದೆಂಬ ಆಸೆಯನ್ನು ತೋರಿಸಬಾರದು.

ಮುಂದಿನ ಕಾಂಗ್ರೆಸ್ ಕರಾಚಿಯಲ್ಲಿ ಸೇರುವುದು.

ಲಾಹೋರ್ ಕಾಂಗ್ರೆಸ್ಸಿನಲ್ಲಿ ನಿರ್ಧರಿಸಲ್ಪಟ್ಟಂತೆ ಭಾರತರಾಷ್ಟ್ರೀಯ ಮಹಾಸಭೆಯು ವಾರ್ಷಿಕಾಧಿವೇಶನವು ಮಾರ್ಚಿ ತಿಂಗಳಲ್ಲಿ ಕರಾಚಿಯಲ್ಲಿ ಸೇರುವುದು. ಸಿಂಧ್ ಕಾಂಗ್ರೆಸ್ ಸಮಿತಿಯು ಪ್ರೆಸಿಡೆಂಟರೊಡನೆ ಆಲೋಚಿಸಿ ಕಾಂಗ್ರೆಸ್ ಸೇರುವ ತಾರೀಖನ್ನು ಪ್ರಕಟಿಸತಕ್ಕದ್ದು.

ಮುಖಂಡರು ಪರಸ್ಪರ ನಿರಾಂತಕವಾಗಿ ತಮ್ಮ ಅಭಿಪ್ರಾಯಗಳನ್ನು ವಿಶದಪಡಿಸಿದರು. ಬೊಂಬಾಯಿಯಲ್ಲಿ ಸಭೆಸೇರಿದಾಗ ಮಿ|| ಸಪ್ರೂ, ಮಿ|| ಶಾಸ್ತ್ರಿ ಮತ್ತು ಜಯಕರ್ ಇವರ ಸಂಗಡ ಚರ್ಚೆನಡೆಯಿಸಲು ತುಂಬಾ ಅನುಕೂಲವಾಯಿತು. ಆ ಸಮಿತಿಗೆ ಆಗಮಿಸಿದ್ದ ಮುಖಂಡರೆಲ್ಲರೂ ಈ ತಿಂಗಳು 2 ನೆಯ ತಾರೀಖಿನ ದಿವಸ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಪ್ರತಿಯೊಂದು ತಾಸಿನಲ್ಲಿಯೂ ದಬ್ಬಾಳಿಕೆಯಿಂದ ವಾತಾವರಣವು ಅಪರಿಶುದ್ಧವಾಗುತ್ತಲಿದೆ.

ಒಬ್ಬ ಪತ್ರಿಕಾ ಪ್ರತಿನಿಧಿಯು ಮಹಾತ್ಮರನ್ನು ಸಂದರ್ಶಿಸಿದಾಗ ಅವರು ಅಪ್ಪಣೆಕೊಡಿಸಿದುದೇನೆಂದರೆ:—ಕಾರ್ಯಕಾರಿ ಸಮಿತಿಯ ಮೆಂಬರರಲ್ಲಿ ಅನೈಕ್ಯಮತ್ಯವುಂಟಾಗುವುದೆಂದು ನಿರೀಕ್ಷಿಸಿದುದು ಬರೀ ಆಕಾಶಪುರಾಣ. ಮೆಂಬರರಲ್ಲಿ ಸಂಪೂರ್ಣ ಏಕಮತ್ಯವಿದ್ದು ಎಲ್ಲರೂ ಸ್ವಇಚ್ಛಾಪ್ರವರ್ತಕರಾಗಿ ಈ ಕಾರ್ಯದಲ್ಲಿ ಭಾಗಿಗಳಾದರು. ಸಂಧಾನವಾಗುವವರೆಗೂ ಚಳವಳಿಯನ್ನು ಸಂಪೂರ್ಣವಾಗಿಯಾಗಲಿ ಅಥವಾ ತಾತ್ಕಾಲಿಕವಾಗಿಯಾಗಲಿ ನಿಲ್ಲಿಸಲು ಸಾಧ್ಯವಿಲ್ಲವೆಂಬ ವಿಷಯದಲ್ಲಿ ಎಲ್ಲರೂ ಏಕಾಭಿಪ್ರಾಯವುಳ್ಳವರಾಗಿದ್ದರು. ಸಾರ್ವತ್ರಿಕವಾಗಿ ವ್ಯಾಪಿಸಿರುವ ಈ ಚಳವಳಿಯನ್ನು ಸಂಧಾನವಾಗುವುದೆಂಬ ಭರವಸೆಯಿಲ್ಲದೆ ಅಕಸ್ಮಾತ್ತಾಗಿ ನಿಲ್ಲಿಸಲಿಕ್ಕಾಗುವುದಿಲ್ಲವೆಂಬುದು ಪ್ರತಿಯೊಬ್ಬರಿಗೂ ತಿಳಿದ ಸಂಗತಿಯೇ ಆಗಿದೆ. ಶ್ರೀಯುತ ಭಾಷ್ಯಂ ಮತ್ತು ಸುಂದರಂ ಇವರ ಮೇಲೆ ಪೋಲೀಸರು ಅತ್ಯಾಚಾರ ನಡೆಯಿಸಿದುದು ಮೊದಲಾಗಿ ದಬ್ಬಾಳಿಕೆಯು ಕೇವಲ ಕ್ರೌರ್ಯದಿಂದ ನಡೆಯಿಸಲ್ಪಡುವಾಗ ಚಳವಳಿಯನ್ನು ನಿಲ್ಲಿಸುವುದು ಎಂದಿಗೂ ಸಾಧ್ಯವಾಗಲಾರದು. ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ದಬ್ಬಾಳಿಕೆಯು ಜೋರಿನಿಂದ ನಡೆಯುತ್ತಿರುವುದನ್ನು ನಾನು ಕೇಳುತ್ತಿರುವೆನು. ಮಿದ್ನಾಪುರ ಜಿಲ್ಲೆಯಲ್ಲಿ ಪೋಲೀಸರು ನಡೆಯಿಸಿರುವ ಅತ್ಯಾಚಾರಗಳನ್ನು ಕುರಿತು ಬರೆದಿರುವ ಪತ್ರವನ್ನು ನನ್ನ ಸ್ನೇಹಿತರೊಬ್ಬರು ಈಗ ನನ್ನ ಕೈಗೆ ಕೊಟ್ಟರು. ನಿಷ್ಪಕ್ಷಪಾತವಾಗಿಯೂ, ಕೂಲಂಕಷವಾಗಿಯೂ ಈ ಅತ್ಯಾಚಾರಗಳನ್ನು ವಿಚಾರಿಸತಕ್ಕ ಬಂದೋಬಸ್ತು ಮಾಡಿದಹೊರತು ಜನತೆಗಾಗಲಿ, ನ್ಯಾಯದೇವಿಗಾಗಲಿ ಸಮಾಧಾನವಾಗಲಾರದು. ತಾಸು ತಾಸಿಗೂ ವಾತಾವರಣವು ದಬ್ಬಾಳಿಕೆಯಿಂದ ಅಪರಿಶುದ್ಧವಾಗುತ್ತಿರುವಾಗ ಶಾಂತಿಸಂಧಾನವನ್ನು ನಡೆಯಿಸುವುದು ಹೇಗೆ ಸಾಧ್ಯವಾಗುವುದೋ ತಿಳಿಯದಾಗಿದೆ.

ಅಲಹಾಬಾದಿನಲ್ಲಿ ಮಹಾತ್ಮರ ಭಾಷಣ
"ನಮ್ಮ ಸತ್ಯಾಗ್ರಹ ಯುದ್ಧಕ್ಕೆ ದೈವಬಲವಿದೆ"

ಈ ತಿಂಗಳು 1 ನೆಯ ತಾರೀಖಿನ ದಿವಸ ಮಧ್ಯಾಹ್ನದ ಮೇಲೆ ಲಕ್ಷೋಪಲಕ್ಷ ಜನರು ಮಹಾತ್ಮಗಾಂಧಿಯವರ ಭಾಷಣವನ್ನು ಕೇಳಲು ಅಲಹಾಬಾದ್ ಪುರುಷೋತ್ತಮಬಾಗ್ ಪಾರ್ಕಿನಲ್ಲಿ ನೆರೆದಿದ್ದರು. ಸುಮಾರು 20 ಸಾವಿರ ಜನರು ಸುತ್ತಮುತ್ತಲಿನ ಹಳ್ಳಿಗಳಿಂದಲೂ ಪಟ್ಟಣಗಳಿಂದಲೂ ಬಂದಿದ್ದರೆಂದು ನಿರೀಕ್ಷಿಸಲಾಗಿದೆ. ಜನರು ಸಂತೋಷಕರವಾಗಿ ಪ್ರಾತಃಕಾಲ ಒಂಬತ್ತು ಗಂಟೆಯಿಂದ ಬರಲು ಪ್ರಾರಂಭವಾಯಿತು. ಪ್ರಚಂಡವಾದ ಬಿಸಿಲು ಸುರಿಯುತ್ತಿದ್ದರೂ ಜನರು ಲಕ್ಷಿಸದೆ ತಮ್ಮ ಸ್ಥಳಗಳನ್ನು ಬಿಟ್ಟು ಕದಲದೆ ಶಾಂತವಾಗಿ ಕುಳಿತಿದ್ದರು. ಮುಖಂಡರಿಗೆ ಒಂದು ಉಪನ್ಯಾಸ ವೇದಿಕೆಯನ್ನು ನಿರ್ಮಿಸಿದ್ದಲ್ಲದೆ ಮಹಾತ್ಮರಿಗೆ ಒಂದು ಉನ್ನತಾಸನವನ್ನು ಮಾಡಿದ್ದರು. ಶ್ರೀಮತಿ ಶಾಮಕುಮಾರಿದೇವಿಯವರು ಸ್ವಾತಂತ್ರ್ಯದ ಹಾಡನ್ನು ಬಹು ಅಂದವಾಗಿ ಹಾಡಿದರು. ಆಗಲೇ ಸಭಿಕರೆಲ್ಲರ "ಇನ್ಕ್ವಿಲಾಬ್ ಜಿಂದಬಾದ್! ಭರತಮಾತಾಕಿ ಜೈ!" ಎಂಬ ಜಯಧ್ವನಿಯು ಸಭಾಮಂಡಲವನ್ನು ವ್ಯಾಪಿಸಿತು. ಮಹಾತ್ಮಗಾಂಧಿಯವರು ಸಭೆಗೆ ಆಗಮಿಸಿದಕೂಡಲೆ ಎಲ್ಲರೂ ಎದ್ದು ನಿಂತು "ಮಹಾತ್ಮಾಗಾಂಧಿಕಿ ಜೈ" ಎಂದು ಜಯಘೋಷಮಾಡಿ ಅದ್ಭುತಸ್ವಾಗತವನ್ನಿತ್ತು ಹೂವಿನಮಳೆಗರೆದರು. ಅನಂತರ ಮಹಾತ್ಮರು ಮಾಡಿದ ಭಾಷಣದ ಸಾರಾಂಶವೇನೆಂದರೆ:—ಭರತಖಂಡದಲ್ಲೆಲ್ಲಾ ಪ್ರಚಲಿತವಾಗಿರುವ ಅಸಾಧಾರಣ ಸ್ವಾರ್ಥತ್ಯಾಗವನ್ನೂ, ಅಪರಿಮಿತವಾದ ಉತ್ಸಾಹವನ್ನೂ ನೋಡಿ ಸಂತೋಷಪಡುತ್ತೇನೆ. ಭಾರತ ಮಹಿಳೆಯರು ಸತ್ಯಾಗ್ರಹಯುದ್ಧದಲ್ಲಿ ವಹಿಸಿರುವ ಪಾತ್ರವು ಜಗತ್ಪ್ರಸಿದ್ಧವಾಗಿದೆ. ಅವರು ಅನೇಕ ಮಹತ್ಕಾರ್ಯಗಳನ್ನು ಮಾಡಿರುವರು. ಒಂದು ತಿಂಗಳು ಉತ್ಸಾಹಪೂರಿತರಾಗಿ ಕೆಲಸಮಾಡಿ ಘೋಷಾಪದ್ಧತಿಯನ್ನು ತಪ್ಪಿಸಿರುವರು. ಸತ್ಯಾಗ್ರಹಯುದ್ಧಕ್ಕೆ ತಮ್ಮ ಪ್ರಿಯರಾದ ಪತಿಯರನ್ನೂ, ಮಕ್ಕಳುಗಳನ್ನೂ ಆಹುತಿಕೊಟ್ಟಿರುವರು. ಅವರು ಮಾಡದೇ ಇರುವ ಸ್ವಾರ್ಥತ್ಯಾಗವು ಯಾವುದು? ಹಾಗೂ ಅವರು "ಭರತಮಾತಾಕಿ ಜೈ" ಎಂದು ಜಯಘೋಷಮಾಡುತ್ತ, ರಾಷ್ಟ್ರಗೀತೆಗಳನ್ನು ಹಾಡುತ್ತ ಹಸನ್ಮುಖಿಗಳಾಗಿ ತೋಪಿನ ಬಾಯಿಗೆ ಎದುರಾಗಿ ನಿಂತುಕೊಳ್ಳುವ ಅಸಾಧಾರಣ ಧೈರ್ಯವನ್ನೂ ಮನಸ್ಥೈರ್ಯವನ್ನೂ ವ್ಯಕ್ತಪಡಿಸಿ, ರಾಷ್ಟ್ರಗೌರವವನ್ನು ಹೆಚ್ಚಿಸಿರುವರಲ್ಲದೆ ಮುಂದೆಯೂ ಇತೋಪ್ಯತಿಶಯವಾಗಿ ಹೆಚ್ಚಿಸುವ ಭರವಸೆಯನ್ನು ಕೊಟ್ಟಿರುವರು. ನಮ್ಮ ಯುದ್ಧಕ್ಕೆ ಎಲ್ಲರೂ ಸೇರಬಹುದು. ಮುದುಕರೂ ಇದರಲ್ಲಿ ಭಾಗಿಗಳಾಗಿರುವರು. ವಾನರಸೇನೆಯೂ ಸಹ ಹಿಂದುಳಿದಿರುವುದಿಲ್ಲ. ಈ ವಾನರಸೇನೆಯಲ್ಲಿ ಎಳೆಂಟು ವರ್ಷಗಳ ಚಿಕ್ಕಮಕ್ಕಳು ಸಹ ಇರುವರೆಂಬುದು ನನಗೆ ಜೈಲಿನಲ್ಲಿ ಗೊತ್ತಾಯಿತು. ಅಂಥ ಚಿಕ್ಕ ಮಕ್ಕಳೂ ಸಹ ದೇಶದ ಸಲುವಾಗಿ ಕಷ್ಟಪಡುವರೆಂಬುದನ್ನು ಕೇಳಿದೊಡನೆಯೇ ನನ್ನ ಹೃದಯವು ಆನಂದದ ಪಾರವಶ್ಯದಲ್ಲಿ ಜಿಗಿದಾಡಿತು. ಆಗ ಈ ಸತ್ಯಾಗ್ರಹ ಯುದ್ಧಕ್ಕೆ ದೈವಬಲವಿದೆ ಎಂದು ತಿಳಿದೆನು. ಭಗವಂತನು ಯಾವಾಗಲೂ ನಮ್ಮ ಹಿಂದೆ ಇದ್ದಾನೆ. ಯಾರು ಅಹಿಂಸಾತತ್ವವನ್ನು ಪಾಲಿಸಿ ಸತ್ಯಸಂಧರಾಗಿರುವರೋ ಅವರೇ ಜಯಶಾಲಿಗಳಾಗುವರೆಂಬ ತತ್ವಜ್ಞರ ವಚನವು ಅಕ್ಷರಶಃ ನಿಜವಿರುತ್ತದೆ. ಆ ವಿಜಯದಿಂದ ಲಭ್ಯವಾಗುವ ಕೀರ್ತಿಗೆ ಎಲ್ಲರೂ ಭಾಗಿಗಳು, ಆ ಯುದ್ಧದಲ್ಲಿ ಉಚ್ಚನೀಚಭಾವನೆಗಳಿಗೆ ಎಡೆಯಿಲ್ಲ. ಹಿಂದೂ ಮುಸಲ್ಮಾನ, ಕ್ರಿಶ್ಚಿಯನ್ ಮೊದಲಾದ ಭಿನ್ನಭೇದವಿಲ್ಲ. ನೀವೆಲ್ಲರೂ ಅಹಿಂಸಾತತ್ವವನ್ನು ಪಾಲಿಸಿರುವಿರಿ. ನೀವು ಬೇಕಾದಷ್ಟು ಶ್ರದ್ಧೆಯಿಂದ ಕಾರ್ಯನಿರ್ವಾಹ ಮಾಡಿರುವಿರಿ. ಅದರಲ್ಲಿ ಏನಾದರೂ ದೋಷಗಳಿದ್ದರೆ ಅವುಗಳನ್ನು ತಿಳಿದುಕೊಂಡು ನಮ್ಮ ಮುಂದಿನ ವರ್ತನವನ್ನು ಸರಿಮಾಡಿಕೊಳ್ಳೋಣ.

ನ್ಯಾಯಸಮ್ಮತವಾದ ಈ ಯುದ್ಧದಲ್ಲಿ ಒಂದು ಹನಿರಕ್ತವನ್ನು ಚೆಲ್ಲದೆ ಅಹಿಂಸಾತತ್ವವನ್ನು ಪಾಲಿಸುವೆವೆಂದು ದೇವರಿಗೆ ಭಾಷೆಯನ್ನಿತ್ತಿರುವೆವು. ಇದಕ್ಕೆ ತಪ್ಪಿದರೆ ಇಡೀ ಪ್ರಪಂಚದ ಆಕ್ಷೇಪಣೆಗೂ ಪರಮಾತ್ಮನ ಕೋಪಕ್ಕೂ ಪಾತ್ರರಾಗುವೆವು. ನಾನು ನಿಮ್ಮನ್ನು ಕೇಳಿಕೊಳ್ಳುವ ವಿಷಯಗಳು ಎರಡೇ ಎರಡು. ಮೊದಲನೆಯದು, ವಿದೇಶೀವಸ್ತ್ರಗಳನ್ನು ಬಿಸಾಡಿ ಅವುಗಳನ್ನು ಮುಂದೆ ಯಾವ ಕಾರಣದಿಂದಲೂ ಧರಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿರಿ. ಎರಡನೆಯದು, ಮಾದಕಪದಾರ್ಥಗಳನ್ನು ಸಂಪೂರ್ಣ ತ್ಯಾಜ್ಯಮಾಡಿರಿ. ಇನ್ನೊಬ್ಬರಿಗೆ ಮನನೋಯಿಸುವ ಮಾತುಗಳನ್ನಾಡಬೇಡಿರಿ. ಮತ್ತು ಅಂಥ ಕಾರ್ಯಗಳನ್ನೂ ಮಾಡಬೇಡಿರಿ. ನೀವು ಪರಿಶುದ್ಧರಾಗಿರಬೇಕು. ನಾವು ಈಗ ಹೊಸ ರಾಜ್ಯವನ್ನು ಜಯಿಸುವವರಾಗಿದ್ದೇವೆ. ಈ ಪ್ರಚಂಡಸಭೆಯಲ್ಲಿ ಬಹು ಹೊತ್ತು ಮಾತಾಡಲು ಸಾಧ್ಯವಿಲ್ಲ. ನಿಮಗೆ ಪರಮಾತ್ಮನು ಕಲ್ಯಾಣಮಾಡಲಿ" ಎಂದು ಹೇಳಿದರು. ಅನಂತರ ರಾಷ್ಟ್ರೀಯ ಗೀತೆಯನ್ನು ಹಾಡಿ ಸಭೆಯನ್ನು ಬರಖಾಸ್ತು ಮಾಡಿದರು. ಅಲಹಾಬಾದ್ ಪಟ್ಟಣವು ಗಂಗಾ ಯಮುನಾ ಸಂಗಮಸ್ಥಳದಲ್ಲಿದ್ದು ಹಿಂದುಗಳಿಗೆ ಯಾತ್ರಾಸ್ಥಳವಾಗಿರುವುದರಿಂದ ಅಲ್ಲಿ ಆಗಾಗ್ಗೆ ನಡೆಯುವ ಕುಂಭಮೇಳ ಮತ್ತು ಮಾಘಮೇಲಾದಿಗಳಿಗೆ ಲಕ್ಷೋಪಲಕ್ಷ ಜನರು ಸೇರುತ್ತಾರೆ. ಆದರೂ ಇಷ್ಟು ಜನರು ಎಂದೂ ಸೇರಿರಲಿಲ್ಲವೆಂದು ಮುದುಕರು ಮಾತಾಡುತ್ತಿದ್ದರು. ಸುತ್ತುಮುತ್ತಲಿನ ಹಳ್ಳಿಗಳಿಂದ ಟಿಕೆಟಿಲ್ಲದೆ ಸಾವಿರಾರು ಜನರು ಬಂದು ಸ್ಟೇಷನ್ನಿನಲ್ಲಿದ್ದರು. ಪೋಲೀಸರು ಅವರನ್ನು ವಶಗಿರಿಮಾಡಿದ್ದರು. ಕಾಂಗ್ರೆಸ್ ಪ್ರೆಸಿಡೆಂಟರಾದ ಪಂಡಿತ ಜವಾಹರಲಾಲರವರು ಅಲ್ಲಿಗೆ ದಯಮಾಡಿಸಿ ಅವರ ಸಲುವಾಗಿ 200 ರೂ. ರೈಲು ಛಾರ್ಜು ಕೊಟ್ಟು ಅವರ ಕೈಸೆರೆ ಬಿಡಿಸಿದರು.

ಮಹಾತ್ಮಗಾಂಧಿಯವರು ಲಂಡನ್ ಡೇಲಿ ಹೆರಾಲ್ಡ್ ಪತ್ರಿಕೆಗೆ ಕಳುಹಿಸಿರುವ ತಂತಿ ವರ್ತಮಾನದ ಸಾರ.

ದಬ್ಬಾಳಿಕೆಯು ಬಂಧವಿಮೋಚನದ ಉದ್ದೇಶವನ್ನೂ ಅದರಿಂದುಂಟಾದ ಮಾಧುರ್ಯವನ್ನೂ ಹಾಳುಮಾಡುತ್ತಿರುವುದು.

ರೌಂಡ್‌ಟೇಬಲ್ ಸಮ್ಮೇಳನದ ಪರಿಸಮಾಪ್ತಿಯ ದಿವಸ ಮುಖ್ಯಮಂತ್ರಿಗಳು ಮಾಡಿದ ಭಾಷಣವು ಕೇವಲ ಅಸಮರ್ಪಕವಾದುದೆಂದು ತೋರಿದರೂ, ಮಿ|| ಶಾಸ್ತ್ರಿ, ಮಿ|| ಜಯಕರ್, ಡಾ|| ಸಪ್ರೂ ಇವರ ಪ್ರಾರ್ಥನೆಯನ್ನು ಅಂಗೀಕರಿಸಿ ನಾನು ಮತ್ತು ವಿಶೇಷಜನ ಕಾಂಗ್ರೆಸ್ಸಿನ ಮೆಂಬರರೂ ನಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವುದಿಲ್ಲ. ನಾನು ನಿಷ್ಕಪಟಿಯಾಗಿದ್ದೇನೆ. ಭಾರತಮಾತೆಯ ಜನ್ಮಸಿದ್ಧವಾದ ಹಕ್ಕಾಗಿ ಆ ದೇವಿಯು ನಿರಂತರದಲ್ಲಿಯೂ ಪಠಿಸುತ್ತಿರುವ ಮೂಲಮಂತ್ರವಾದ ಸ್ವಾತಂತ್ರ್ಯವು ಲಭಿಸುವುದರ ಮೂಲಕ ಗೌರವಯುತವಾದ ಶಾಂತಿಯನ್ನು ಸ್ಥಾಪಿಸುವ ಮಾರ್ಗಗಳನ್ನು ಆತುರದಿಂದ ಹುಡುಕುತ್ತಿರುವೆನು. ಶಾಂತರೀತಿಯಿಂದ ಚರ್ಚೆಗಳನ್ನು ನಡೆಯಿಸುವುದಕ್ಕಾದರೂ ಸಹ ಶಾಂತವಾತಾವರಣವು ಉತ್ಪತ್ತಿಯಾಗಬೇಕಾಗಿರುವುದರಿಂದ ಕಾಂಗ್ರೆಸ್‌ಪಕ್ಷದ ಎಲ್ಲಾ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡುವುದು, ಕಠಿಣ ಶಾಸನಗಳನ್ನು ತೆಗೆದುಹಾಕುವುದು, ಕಿತ್ತುಕೊಂಡಿರುವ ಆಸ್ತಿಪಾಸ್ತಿಗಳನ್ನು ವಾಪಸುಕೊಡುವುದು ಅತ್ಯವಶ್ಯಕವಾಗಿದೆ.

ಕಳೆದ ತಿಂಗಳು 21 ನೆಯ ತಾರೀಖಿನ ದಿವಸ ಬಹಾರದಲ್ಲಿ ಸುಪ್ರಸಿದ್ಧ ಸ್ತ್ರೀಯರು ಯಾವ ಕಾಯಿದೆ ವಿರೋಧವಾದ ಕಾರ್ಯದಲ್ಲಿಯೂ ತೊಡಗಿರಲಿಲ್ಲ. ತಮ್ಮ ಸಹೋದ್ಯೋಗಿಗಳಿಗುಂಟುಮಾಡಿದ ತೊಂದರೆಯನ್ನು ನಿಷೇಧಿಸುವುದಕ್ಕಾಗಿ ಮೆರವಣಿಗೆಮಾಡಿಕೊಂಡು ಮೀಟಿಂಗ್ ಸೇರಿಸಲು ಹೋಗುತ್ತಿದ್ದರು. ಆಗ ಸರ್ಕಾರದವರು ಆ ಸ್ತ್ರೀಯರನ್ನು ಅವಮಾನಕರವಾಗಿ ಬೈದು ನಿರ್ದಯೆಯಿಂದ ಹೊಡೆದರು. 150 ಸ್ತ್ರೀಯರು ಗಾಯಗೊಂಡಿರುವರು. ಸ್ವಾತಂತ್ರ್ಯ ದಿವಸವಾದ ಜನವರಿ 26 ರಲ್ಲಿ ಕಲ್ಕತ್ತೆಯಲ್ಲಿ ಸಭೆಗಳನ್ನು ಬಲಾತ್ಕಾರವಾಗಿ ಚದುರಿಸಿದುದೂ, ಸುಭಾಷ್‌ಚಂದ್ರಬೋಸ್‌ರವರನ್ನು ಹೊಡೆದು ಆರು ತಿಂಗಳು ಕಠಿಣಶಿಕ್ಷೆಗೆ ಗುರಿಮಾಡಿದುದೂ ನಿಂದನೀಯಗಳಾಗಿವೆ. ಬಿಹಾರಿನಲ್ಲಿಯೂ ಸಹ ಇಂಥ ಕೃತಿಗಳು ನಡೆದಿರುತ್ತವೆ. ಕಾಂಗ್ರೆಸ್ ಮೊದಲಾಗಿ ಇನ್ನು ಇತರ ಸಂಸ್ಥೆಗಳು ಅಕ್ರಮಕೂಟಗಳೆಂದು ಸಾರಲ್ಪಡುತ್ತಿವೆ. ಈ ಬಿಡುವಿಲ್ಲದ ದಬ್ಬಾಳಿಕೆಯು ಬಂಧವಿಮೋಚನದ ಉದ್ದೇಶವನ್ನೂ ಮತ್ತು ಅದರಿಂದುಂಟಾದ ಮಾಧುರ್ಯವನ್ನೂ ಹಾಳುಮಾಡುತ್ತಿರುವುದು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ಧಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು
ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯು ೧ ಡಬ್ಬಿಗೆ ೫ ರೂಪಾಯಿ.

[28]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನುಬಾರದೆ ಇರೋಣ ಅನಿಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದಿರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಿಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜಿ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೈತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವಾಗಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಶೇಷ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಮತ್ತು ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಸಣ್ಣವರೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಲೀಲೆಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಗುಂಡಿಗೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮುಂಬಯಿ ನಗರದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಸುಂದರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದ ಸಮಸ್ತ ಗುರುಭಕ್ತರೂ ಅವುಗಳನ್ನು ತರಿಸಿ ಧರಿಸಿ ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮಿಷನ್. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮಿಷನ್. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತೆ. ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಪ್ಲುಯೆಂಜಾ, ಪ್ಲೇಗು, ಎದೆನೋವು, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಚಳಿಯ ಜ್ವರ, ಕಫ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಚೀವಿನಿ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕಾಹಿಲೆ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ ೪ ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[42] ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದು ಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತೆಳುಧಾತು, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೨ ತೊಲೆಯು ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು, ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯು ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯು ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರವಾಗಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[29]

ಪತ್ತೆ:—ಮೂಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ರಾಜಮದ್ದು.

ಮಹಾಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0. ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉಪಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆನೋವು, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ ಕಂಪೌಂಡು ಸಿರಪು ಕಾರ್ಡಸ್ ಎಂಬ ಔಷಧವು ತೀವ್ರ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುರಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇವನ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೇಧವು, ಹೊಟ್ಟೆ ಹುಳಗಳ ತೊಂದರೆ ಇತ್ಯಾದಿ ವಿವಿಧ ರೋಗಗಳನ್ನೆಲ್ಲಾ ಬೇಬಿಟೋನ್ ಎಂಬ ಬಾಲಾಮೃತವು ಒಂದೇ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಚರ್ ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[27] ಮಲೇರಿಯಾನ ಕಂಪೆನಿ, ನಂಬ, 21 ಹಂಪನಕಟ್ಟೆ, ಮಂಗಳೂರು, ದ. ಕ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ...

...ಗಳನ್ನು ಕೊಟ್ಟ... ರು. ಪ್ರಸಿದ್ಧವಾದ... ನಶ್ಯದ ಪುಡಿ... ಸ್ವಸ್ಥವಾಗುವ... ಧಿಗಳು ಯಾವ... ರೆ:—ಪಿಸಿಕಿ, ... ತಲೆನೋವು, ... ಲ್ಲಿನ ರೋಗಗ... ಕಣ್ಣುಗಳಲ್ಲಿ ಉ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ... ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಲ್ಲೆ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆ... ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-... ಡಬ್ಬ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[30] ಪೋ. ಬಾ. ೫೧೦. ಮದರಾ...

ಸರ್ವೋತ್ತಮವಾದ ಗ್ರಂಥಗಳು

ಶ್ರೀ ಜಗದ್ಗುರು ರೇಣುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ದಾರುಕಾಚಾರ್ಯರ ನಾಮಾವಳಿ ೪ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ಏಕೋರಾಮಾರಾಧ್ಯರ ನಾಮಾವಳಿ ೩ ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ಪಂಡಿತಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	....	೧ ಆಣೆ
ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಾವಳಿ ೩ನೆಯ ಆವೃತ್ತಿ	....	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ ೩ನೆಯ ಆವೃತ್ತಿ	....	೧ ಆಣೆ
ಸನ್ಯಾಸಾಶ್ರಮ ವಿಮರ್ಶ ೩ನೆಯ ಆವೃತ್ತಿ (ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ ೩ ನೆಯ ಆವೃತ್ತಿ	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ ೭ನೆಯ ಆವೃತ್ತಿ	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ ೪ನೆಯ ಆವೃತ್ತಿ	....	೧ ಆಣೆ
ಉಪನಾದಿ ಷಟ್‌ಸ್ಥಲದರ್ಪಣ ೩ನೆಯ ಆವೃತ್ತಿ	....	೨ ಆಣೆ
ಶ್ರೀ ರೇಣುಕಾಚಾರ್ಯಶತಕಂ ೨ನೆಯ ಆವೃತ್ತಿ	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತಪ್ರಮಾಣಾಂಶ	....	೨ ಆಣೆ
ಶಿವಸ್ತವಶಿರೋಮಣಿ (ಕನ್ನಡ ಟಿಪ್ಪಣಿ ಸಹಿತ)	....	೨ ಆಣೆ ೬ ಪೈ.
ವೀರಶೈವಾಚಾರವಿಧಿ ೨ಯ ಆವೃತ್ತಿ	....	೩ ಆಣೆ
ವಿವಾಹವಿಧಿ ೨ನೆಯ ಆವೃತ್ತಿ	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಪಷ್ಟೀಕರಣ ೨ನೆಯ ಆವೃತ್ತಿ	....	೪ ಆಣೆ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ ೩ನೆಯ ಆವೃತ್ತಿ	....	೪ ಆಣೆ
ವೈದಿಕಸಾಮ್ರಾಜ್ಯರಹಸ್ಯ	....	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರಕವಿಕೃತ) ಅಪೂರ್ವಗ್ರಂಥ ಕನ್ನಡ ಟಿಪ್ಪಣಿ ಸಹಿತ		೮ ಆಣೆ
ಬಸವಧ್ವಾಂತ ದಿವಾಕರ ೨ನೆಯ ಆವೃತ್ತಿ	....	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	....	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	....	೧೦ ಆಣೆ
ಮಹೇಶ್ವರ ದೀಕ್ಷಾವಿಧಿ ೨ನೆಯ ಆವೃತ್ತಿ (ಮನೋಹರವಾದ ಮುದ್ರಣ)	....	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ ಬಹು ಪ್ರಾಚೀನಗ್ರಂಥ)		೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ—ಸಂಸ್ಕೃತ)	....	೧ ರೂ.
ಸಚಿತ್ರ ರೇಣುಕವಿಜಯ	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡುವುದಾಗುತ್ತದೆ.

ಮ್ಯಾನೇಜರ್

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿ... ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರ... ಸೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆ... ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ... ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ... ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವವು... ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ...

ಓಂ.

ಸುಸಮಯ! ಸಾಲವು ದೊರಕುವುದು !! ಅಪೂರ್ವಲಾಭ!

ದಿ ಏಂಜಲ್ಸ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡಾಫೀಸ್ :—ದೇಹಲಿ.

ಮೈಸೂರು ಮತ್ತು ಕೊಡಗುದೇಶಗಳ ಚೀಫ್ ಆರ್ಗನೈಸರವರ ಆಫೀಸ್,

113, ಕೃಷ್ಣರಾಜಮೊಹಲ್ಲಾ, ಮೈಸೂರು.

ರೈತರೂ, ವ್ಯಾಪಾರಸ್ಥರೂ, ಸಾಲದ ತೊಂದರೆ ಇರುವವರೂ, ಕೈಗಾರಿಕೆ... ಸಗಾರರೂ ಮುಂತಾಗಿ ಎಲ್ಲಾ ವಿಧದ ವ್ಯವಹಾರಸ್ಥರೂ, ಶ್ರೀಮಂತರೂ ಕೂಡ ... ಸುಸಮಯಕ್ಕೆ ಸರಿಯಾಗಿ 500 ರೂ. ನಿಂದ 5000 ರೂ. ಗಳ ವರೆಗೆ ಸಾಲ... ಅವರವರ ಆಸ್ತಿಯ ಮೇಲೂ ಈ ಕಂಪೆನಿಯ ಜೀವವಿಮಾ ಪಾಲಿಸಿ (Li... Poticies) ಖಾತರಿಯ ಮೇಲೂ ಹೊಂದಿ ಸುಖಪಡಬಹುದು. ಇಲ್ಲಿಯುವ... ನೂರಾರುಮಂದಿಗಳು ತೃಪ್ತಿಹೊಂದಿಯೂ ಮತ್ತು ಹೊಂದುತ್ತಲೂ ಇರುವರು... ಆದ್ದರಿಂದ ಸಾಲ ಬೇಕಾದವರು (ಮೈಸೂರು ಮತ್ತು ಕೊಡಗುದೇಶದವರು ಮಾತ್ರ) ಬರೆದುಕೊಳ್ಳಬಹುದು.

ಬೇಕಾಗಿದೆ.

ಕಂಪೆನಿಯ ಪರವಾಗಿ ಕೆಲಸಮಾಡಲು ಉತ್ಸಾಹಿತರಾದ ಏಜಂಟರು ಮೈಸೂರು ಮತ್ತು ಕೊಡಗುದೇಶಗಳ ಎಲ್ಲಾ ತಾಲ್ಲೋಕಿನಲ್ಲಿಯೂ ಬೇಕಾಗಿದೆ. ... ಸಂಬಳ ಅಥವಾ ಕಮಿಷನ್ ಕೊಡಲಾಗುವುದು. ಇಷ್ಟವುಳ್ಳವರು ಈ ಕೆಳಗಿನ ... ಸದಾರರಿಗೆ ಕೂಡಲೇ ಬರೆದುಕೊಳ್ಳಬೇಕು. (11)

ಮೆ|| ಎಂ. ಜಿ. ಆರಾಧ್ಯ,

ಮೈಸೂರು ಸೀಮೆ ಮತ್ತು ಕೊಡಗುದೇಶಗಳ ಆರ್ಗನೈಸರ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಫೆಬ್ರವರಿ ೧೯೩೧ [ಸಂಚಿಕೆ ೪೩

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹರ್ಷಿಯವರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಅದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಯಾವತ್ತು ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ—ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳ ವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾ ಮುಗಿದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ನಾವು ಮುಂದಾಗಿ ತಿಳುಹಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವಿರೆಂದು ಪೂರ್ಣ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ, ಮೈಸೂರು.

ಸ್ವೀಕಾರ.

ಬಳ್ಳಾರಿ ಜಿಲ್ಲಾ ಹೂವಿನಹಡಗಲಿ ತಾ|| ಹೊಳಗುಂದಿ ಗ್ರಾಮದ ಮ|| ರಾ|| ಪಾಟೀಲ ಗುರುಬಸವನಗೌಡರವರ ಧರ್ಮಪತ್ನಿ ಕುಂ|| ಸೌ|| ಸ|| ವೀರಮ್ಮನವರ ಗರ್ಭಾಂಬುಧಿಯಲ್ಲಿ ಶ್ರೀ ಜಗದಾಚಾರ್ಯರ ಕೃಪಾಬಲದಿಂದ ಪುತ್ರರತ್ನವು ಜನಿಸಿದ ಶುಭ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂಪಾಯಿಗಳು ಡಿ|| ಬೋರ್ಡ್ ಮೆಂಬರ್ ಮ|| ರಾ|| ಎಚ್. ಡಿ. ಹಾಲಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಆದವಾನಿ ತಾಲೂಕು ಕೋಟೆಕಲ್ಲು ಗ್ರಾಮದ ಮಠದ ವೇ|| ಗುರುಸಿದ್ಧಯ್ಯನವರ ಪುತ್ರ ಚಿ|| ರಾಚೋಟಯ್ಯನಿಗೆ ಅದೇ ತಾಲೂಕು ಗುಡಿಕಲ್ಲು ಗ್ರಾಮದ ಹಿರೇಮಠದ ಮಹಿಲಾರಾಧ್ಯರ ಪುತ್ರಿ ಚಿ|| ಸೌ|| ಮಹಾದೇವಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ವಧುವಿನ ಕಡೆಯವರಿಂದ ಸಮರ್ಪಿಸಿದ 2 ರೂ. ಗಳು, ವರನ ಕಡೆಯವರಿಂದ ಸಮರ್ಪಿಸಿದ 2 ರೂ. ಗಳು ಒಟ್ಟು 4 ರೂಪಾಯಿಗಳು ವೇ|| ಮಹಿಲಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾಲೂಕು ಗಾಳಿಪೂಜೆ ಹೋಸೆ ದೇವರಹಳ್ಳಿ ಪಟೇಲ್ ಮ|| ರಾ|| ಚನ್ನೇಗೌಡರಿಗೆ ಪ್ರಾಪ್ತವಾಗಿದ್ದ ಕಾಯಿಲೆಯು ಶ್ರೀ ಜಗದಾಚಾರ್ಯರ ಕೃಪಾಬಲದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಗಳೂ ಮತ್ತು ಬೇಲೂರು ಟೌನ್ ಮ|| ರಾ|| ವೀರಪ್ಪಶೆಟ್ಟರ ಧರ್ಮಪತ್ನಿಯವರು ಆಚಾರ್ಯರ ಹೆಸರಿನಲ್ಲಿ ಸಮರ್ಪಿಸಿದ 1 ರೂ. ಯು ಒಟ್ಟು 3 ರೂಪಾಯಿಗಳು ಮುಗುಳುವಳ್ಳಿ ಮಠದ ವೇ|| ಮುಪ್ಪಿನಯ್ಯನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಗದಗ ಟಿವನ್ನಿನಲ್ಲಿರುವ ಗುರುಸ್ವಾಮಿ ಮಠದ ವೇ|| ಶಿವಲಿಂಗಾರ್ಯರು ತಮ್ಮ ಚಿ|| ಶ್ರೀಕಂಠನ ಐದನೆಯ ವರ್ಷದ ವರ್ಧಂತ್ಯುತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮುಂಗಳೂರು ಅರಳೆಲೆ ಮಠದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗ ಡಿ|| ನಗರದ ತಾಲೂಕು ಮುಲ್ಲಾಪುರಗ್ರಾಮದ ಕಲ್ಯಾಣಮಠದ ವೇ|| ಕೋಟಯ್ಯನವರ ಪುತ್ರ ಚಿ|| ಈಶ್ವರಯ್ಯನಿಗೆ ಸಾಗರದ ತಾಲೂಕು ಕಾಳಸಮಠದ ವೇ|| ಹಾಲಯ್ಯನವರ ಪುತ್ರಿ ಚಿ|| ಸೌ|| ಲಿಂಗಮ್ಮನನ್ನೂ, ಕಾಳಸಮಠದ ವೇ|| ಹಾಲಯ್ಯನವರ ಪುತ್ರ ಚಿ|| ಹಾಲಯ್ಯನಿಗೆ ಕಲ್ಯಾಣಮಠದ ಕೋಟಯ್ಯನವರ ಪುತ್ರಿ ಚಿ|| ಸೌ|| ಶಿವಮ್ಮನನ್ನೂ ಕೊಟ್ಟು ವಿವಾಹ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ದಾಸನಗಡ್ಡೆ ವೇ|| ಡಿ. ಎಸ್. ರುದ್ರಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ತಾಲೂಕು ಲಕ್ಷ್ಮೀಪುರದಲ್ಲಿ ಮ|| ರಾ|| ಜಹಗೀರದಾರ್ ರಂಗನಗೌಡರು ನೂತನವಾಗಿ ಕಟ್ಟಿಸಿದ ಶಿವಾಲಯದಲ್ಲಿ ಲಿಂಗಪ್ರತಿಷ್ಠಾಪನೆ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಸಿದ್ಧಾಪುರದ ಶ್ರೀ|| ಷ|| ಬ್ರ|| ತ್ರಿಲೋಚನಶಿವಾಚಾರ್ಯಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಚಿತಾಪುರ ತಾಲೂಕು ದಂಡೋತಿಗ್ರಾಮದಲ್ಲಿ ಶ್ರೀಯುತ ಬಸವಣ್ಣ ಸಿದ್ಧರಾಮಪ್ಪ ಸಜ್ಜನಶೆಟ್ಟರ ಇವರು ಶ್ರೀ ಜಗದಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ದಿಗ್ಗಾವಿ ಬೃಹನ್ಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮಿರಜ್ ಸಂಸ್ಥಾನಕ್ಕೆ ಸೇರಿದ ಲಕ್ಷ್ಮೇಶ್ವರದಲ್ಲಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಮ|| ರಾ|| ಸಿದ್ಧಬಸಪ್ಪ ಸಜ್ಜನಶೆಟ್ಟರ ಇವರು ಸಮರ್ಪಿಸಿದ 1 ರೂಪಾಯಿಯು ವೇ|| ಹಿರೇಮಠದ ಕಾಶಯ್ಯನವರ ದ್ವಾರಾ ತಲ್ಪಿರುತ್ತದೆ.

ತುಮಕೂರು ಚಿಕ್ಕಪೇಟೆ ಷಾಪ್‌ಕೀಪರ್ ಮ|| ರಾ|| ಟಿ. ಎನ್. ನಂಜಪ್ಪನವರು ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೈಸೂರು ಟ್ರೇನಿಂಗ್ ಕಾಲೇಜ್ ಪಂಡಿತ ಕ್ಲಾಸಿನ ವಿದ್ಯಾರ್ಥಿ ವೇ|| ಎನ್. ಕರಿಬಸವಯ್ಯನವರು ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಧಾರವಾಡ ಡಿ|| ಅಬ್ಬಿಗೇರಿ ಕನ್ನಡಸಾಹಿತ್ಯಸೇವಾಸಂಗೀತ ನಾಟಕಮಂಡಲಿಯವರು ಈ ತಿಂಗಳು 11 ತಾರೀಖಿನ ದಿವಸ ವೀರರಾಣಿ ಕಿತ್ತೂರುಚನ್ನಮ್ಮನ ನಾಟಕವನ್ನು ರತ್ನಾವಳಿಥಿಯೇಟರಿನಲ್ಲಿ ಅಭಿನಯಿಸಿ ಆ ದಿವಸದ ಉತ್ಪತ್ತಿಯನ್ನೆಲ್ಲಾ ಸರ್ದಾರ್ ಗೋಪಾಲರಾಜಅರಸರವರ ಹಸ್ತದಿಂದ ರಾಜಧಾನಿಯ ಫಿಜಿಕಲ್ ಕಲ್ಚರ್ ಇನ್ಸ್ಟಿಟ್ಯೂಟಿನ ಸಹಾಯಾರ್ಥವಾಗಿ ಕೊಟ್ಟರು. ಆ ಸಮಯದಲ್ಲಿ ಇನ್ಸ್ಟಿಟ್ಯೂಟಿನಲ್ಲಿ ಮಿ|| ಎ. ಡಿ. ಎಸ್. ನಾಯುಡರವರಿಂದ ಶಿಕ್ಷಿತರಾದ ಯುವಕರು ಶಾರೀರಕ ಕಸರತ್ತುಗಳನ್ನು ಮಾಡಿದರು. ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮಿ|| ಎಂ. ರಾಮಸ್ವಾಮಿಯವರೂ ನಮ್ಮ ನಾಟಕಮಂಡಲಿಯ ಮಾಲೀಕರಾದ ಮಿ|| ಬಿ. ಪಿ. ಪಾಟೀಲರವರೂ ಕಸರತ್ತಿನ ಶ್ರೇಷ್ಠತೆಯನ್ನು ಕುರಿತು ಸ್ಫೂರ್ತಿದಾಯಕವಾದ ಭಾಷಣಗಳನ್ನು ಮಾಡಿದರು.

ಪತ್ರವ್ಯವಹಾರ.

ಪ್ರಾತ್ತೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮತ್ತ್ರಿಭುವನಗುರು ಪಂಚಾಚಾರ್ಯೋ ವಿಜಯತೇತರಾಮ್

ಶ್ರೀ ಶಿವಲಿಂಗಾದಿ ದೇವತಾ ಪ್ರತಿಷ್ಠಾ ಮಹೋತ್ಸವ

ಲಕ್ಷ್ಮೇಶ್ವರ.

ಬಳ್ಳಾರಿಜಿಲ್ಲಾ ಪೈಕಿ (ಭಟ್ಟರಹಳ್ಳಿ) ಲಕ್ಷ್ಮೇಶ್ವರವೆಂಬ ಜಹಗೀರ್‌ಗ್ರಾಮದಲ್ಲಿ ಷಟ್ಸ್ಥಲಾಧ್ಯಕ್ಷ ಶ್ರೀ ತ್ರಿಲೋಚನಶಿವಾಚಾರ್ಯರು ಸಿದ್ದಾಪುರ. ಇವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಶ್ರೀ ಗುರುಲಿಂಗಶಾಸ್ತ್ರಿಗಳವರ ಪೌರೋಹಿತ್ಯದಿಂದ ಸದರಿ ಜಹಗೀರ್‌ದಾರ್ ರಂಗನಗೌಡರು ತಾವು ಕಟ್ಟಿಸಿದ ನೂತನವಾದ ಶಿವಾಲಯದಲ್ಲಿ ಪಕ್ಷೀಸಮೇತರಾಗಿ ಇದೇ ಮಾಘ ಶು|| ೩ ಬುಧವಾರ ಪ್ರತಿಷ್ಠಾಕಾರ್ಯಕ್ಕೆ ಪ್ರಾರಂಭಿಸಿ ಪಕ್ಷದಲ್ಲಿಯೂ ಪ್ರತಿಷ್ಠಾಂಗವಾದ ಸ್ವಸ್ತಿವಾಚನ ಯಾಗಾದಿಗಳನ್ನು ಶ್ರದ್ಧಾಭಕ್ತಿಯುಳ್ಳವರಾಗಿಯೂ ವಿಧಿವತ್ತಾಗಿಯೂ ನೆರವೇರಿಸುತ್ತ ನವಮಿ ಬುಧವಾರ ಶಿವಾಲಯದ ಮುಂಭಾಗದಲ್ಲಿ ಧ್ವಜಸ್ತಂಭವನ್ನು ಪಠಿಸಿ ದಶಮಿ ಗುರುವಾರ ಬಹು ನವೀನವಾಗಿ ಕೆತ್ತಲ್ಪಟ್ಟ ಶಿವಲಿಂಗಕ್ಕೂ ವೀರ, ನಂದಿ, ಸ್ಕಂದಾದಿ ಗೋತ್ರಪುರುಷರಿಗೂ, ವಿಘ್ನನಿವಾರಕನಾದ ಗಣಪತಿಗೂ, ಪಾರ್ವತಿಗೂ, ಗ್ರಾಮದೇವತೆಯಾದ ದುರ್ಗಾದೇವತೆಗೂ ಪ್ರಾಣಪ್ರತಿಷ್ಠೆಯನ್ನೂ ಹಾಗೂ ನಿಜಾಂಸ್ಥಿರ್ ಧರ್ಮಗುರುಗಳು ದೇಶಿಕಮಠದ ದೇಶಿಕರು ಸದ್ಯ ಇಲ್ಲದ್ದರಿಂದ ಆ ಮಠಕ್ಕೆ ಅದೇ ಸಂತತಿಯ ಅಮರಯ್ಯನೆಂಬ 22 ವರ್ಷದ ವಟುವಿಗೆ ದೇಶಿಕತ್ವವನ್ನೂ, ಇಬ್ಬರು ಮಾಹೇಶ್ವರ ವಟುಗಳಿಗೆ ಮಾಹೇಶ್ವರದೀಕ್ಷೆಯನ್ನೂ ಆಗಮಿಸಿದಂಥ ಗುರುವರ್ಗದಿಂದ ಪೂರೈಸಿ, ಮಾಹೇಶ್ವರವರ್ಗಕ್ಕೆ ಅನ್ನಸಂತರ್ಪಣೆ ಭೂರಿದಕ್ಷಿಣೆಗಳಿಂದ ಸಂತೈಸಿ, ಋತ್ವಿಜರಾದ ಶ್ರೀ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ಷೋಡಶೋಪಚಾರ, ರಾಜೋಪಚಾರ, ಮಹಾನೈವೇದ್ಯಾದಿಗಳನ್ನು ನೆರವೇರಿಸಿ ಕಂಕಣವಿಸರ್ಜನೆಯನ್ನು ಮಾಡಿದರು. ಈ ಕಾರ್ಯಕ್ಕೆ ಬೆಂಗಳೂರು, ಕೆಂದಗಲ್ಲು, ಗೆಜ್ಜಲಗಟ್ಟಿ, ಬನ್ನಿಗೋಳ ಇತ್ಯಾದಿ ಗ್ರಾಮಗಳ ಶಾಸ್ತ್ರಿಜನರನ್ನೂ ಸಹ ಬರಮಾಡಿಕೊಂಡಿದ್ದರು. ಶ್ರೀ ಗುರುಲಿಂಗಶಾಸ್ತ್ರಿಗಳ ಪೌರೋಹಿತ್ಯವನ್ನು ವಹಿಸಿದ್ದರಿಂದ ಸುತ್ತುಮುತ್ತಿನ ಬಹುಜನರು ವೇದಾಧ್ಯಯನವನ್ನು ಕೇಳಲಿಕ್ಕೆ ನೆರೆದಿದ್ದರು. ಈ ಕಾರ್ಯವು ಸಮಾಪ್ತಿಯಾಗುವವರೆಗೂ ಈ ಸಮೂಹಕ್ಕೆಲ್ಲಾ ಪ್ರತಿನಿತ್ಯದಲ್ಲೂ ಯಜಮಾನರು ಬಹುಜಾಗರೂಕತೆಯಿಂದ ಆತಿಥ್ಯವನ್ನು ಕೈಕೊಂಡಿದ್ದರು. ಒಟ್ಟಿನಮೇಲೆ ಅಧಿಕಾರಿಗಳಿಂದಾಗಲಿ ಅಶೀರ್ವಾದ ವಚನಗಳಿಂದಲೂ, ಭಕ್ತಮಾಹೇಶ್ವರರಿಂದ ಆಗಾಗ್ಗೆ ಮಧ್ಯದಲ್ಲಿ ಮಾಡುತ್ತಿದ್ದ ಪಂಚಾಚಾರ್ಯರ ಜಯಘೋಷದಿಂದಲೂ ಆ ಗ್ರಾಮವು ಕೈಲಾಸದಂತೆ ಒಪ್ಪುತ್ತಿತ್ತು. "ಧಿಗ್ಗ್ರಾಮಮಶಿವಾಲಯಂ" ಎಂಬ ಶ್ರುತಿವಾಕ್ಯವನ್ನು ಕೇಳಿ ತಮ್ಮ ಗ್ರಾಮದಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿ ಎರಡು ಸಹಸ್ರರೂ. ಗಳನ್ನು ವೆಚ್ಚಮಾಡಿ ಈ ಮೇಲ್ಕಂಡ ಮಹತ್ಕಾರ್ಯಗಳೆಲ್ಲವನ್ನೂ ಸರಾಗವಾಗಿ ನಡೆಯಿಸಿದ ಈ ಮಹೋದಯರಿಗೆ ಶೀಘ್ರವಾಗಿ ಇಂಥ ಧರ್ಮಬುದ್ಧಿಯುಳ್ಳ ಒಬ್ಬ ಸತ್ಪುತ್ರನಾಗಲೆಂದು ಜಗತ್ಪೂಜ್ಯರಾದ ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ.

ಓರ್ವಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ವಿಶ್ವಾರಾಧ್ಯರ ಮತ್ತು ಪಂಡಿತಾರಾಧ್ಯರ ಜಯಂತಿಮಹೋತ್ಸವ,

ಲಕ್ಷ್ಮೇಶ್ವರ.

ತಾ|| ೧೫-೨-೧೯೩೧ ನೆಯ ಶಿವರಾತ್ರಿಯ ದಿವಸ ಪ್ರತಿವರ್ಷದ ಪದ್ಧತಿಯಂತೆ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮತ್ತು ಪಂಡಿತಾರಾಧ್ಯರ ಲಿಂಗೋದ್ಭವ ರಜತಮೂರ್ತಿಗಳನ್ನು ಅಂದೋಳಿಕೆಯಲ್ಲಿ ಮೂರ್ತಗೊಳಿಸಿ ವಾದ್ಯವೈಭವದಿಂದ ಉತ್ಸವವು ಶಿವಭಜನಾ ಸಮೇತವಾಗಿ ಅಲಂಕರಿಸಲ್ಪಟ್ಟ ಬಜಾರ ಮೊದಲಾದ ಸ್ಥಾನಗಳಲ್ಲಿ ಉತ್ಸವವು ಬರಲು ಸದ್ಭಕ್ತರು ಸ್ವಾಮಿಯ ಫೋಟೋ ತೆಗೆಯಿಸಿಕೊಂಡರು. ಕೆಲವರು ಕಾಯಿ ಕರ್ಪೂರಗಳನ್ನೂ ದಕ್ಷಿಣೆಯನ್ನೂ ಸಮರ್ಪಿಸಿ ಧನ್ಯರಾದರು. ಈ ಪ್ರಕಾರ ಭಕ್ತಿಪುರಸ್ಸರವಾಗಿ ಉತ್ಸವವು ಸಂಜೆ ೫|| ಘಂಟೆಯ ಸುಮಾರಕ್ಕೆ ಮ|| ರಾ|| ಶ್ರೀ ಸಿದ್ಧಬಸಪ್ಪನವರು ಸಜ್ಜನಶೆಟ್ಟಿ ಇವರ ಮನೆಗೆ ತಲ್ಪಿತು. ವೇದಿಕೆಯ ಸಿದ್ಧಮಾಡಲ್ಪಟ್ಟ ಭವ್ಯಸಿಂಹಾಸನದಲ್ಲಿ ಉಭಯ ಜಗದ್ಗುರುಗಳ ದಿವ್ಯಮೂರ್ತಿಗಳನ್ನು ಸ್ಥಾಪಿಸಿ ಅಷ್ಟವಿಧಾರ್ಚನ ಪೂಜೆಯನ್ನು ಮಾಡಿದ ತರುವಾಯ ಮ|| ರಾ|| ಶ್ರೀ ಗಂಜೀಚನ್ನಪ್ಪನವರ ಅಧ್ಯಕ್ಷತೆಯ ಕೆಳಗೆ ಸಭೆಯು ಪ್ರಾರಂಭವಾಯಿತು. ಗುರುಬಸಪ್ಪ ಹೂವಿನ ಎಂಬ ವಿದ್ಯಾರ್ಥಿಯು ಜಗದ್ಗುರುಗಳವರ ಜಯಂತ್ಯುತ್ಸವಗಳನ್ನು ವಿದ್ಯುಕ್ತವಾಗಿಯೂ ಸಕ್ರಮವಾಗಿಯೂ ಮಾಡಬೇಕೆಂದೂ ಅವರಿಂದ ಸ್ಥಾಪಿಸಲ್ಪಟ್ಟ ವೀರಶೈವಧರ್ಮದ ಚತುರ್ವರ್ಣಾಶ್ರಮದವರು ಭಕ್ತಿಪೂರ್ವಕವಾಗಿ ಆಚರಿಸಿದ್ದಾದರೆ ವೀರಶೈವನಾಮಕ್ಕೆ ಸಾರ್ಥಕವೆಂದೂ ಇಲ್ಲದಿದ್ದರೆ ಕೇವಲ ನಾಮಧಾರಿಗಳೆಂದೂ ಸರಸವಾಗಿ ಭಾಷಣಮಾಡಿದನು. ಸಿದ್ಧಯ್ಯ ಹಿರೇಮಠ ಎಂಬ ವಿದ್ಯಾರ್ಥಿಯು ಅಷ್ಟಾವರಣ, ಷಟ್ಸ್ಥಲಗಳ ಸ್ವರೂಪವನ್ನು ಗುರುಮುಖದಿಂದ ತಿಳಿದು ಪೂಜಿಸುವದು, ಧ್ಯಾನಿಸುವದರ ವಿನಾ ಅನ್ಯದೇವತಾದಿಗಳ ನಾಮಸ್ಮರಣೆಯನ್ನು ಸ್ವಪ್ನದಲ್ಲಿಯೂ ಸಹ ದೀಕ್ಷಿತನಾದ ವೀರಶೈವನು ಮಾಡುವುದು ಯೋಗ್ಯವಲ್ಲವೆಂದೂ, ವೀರಶೈವ ಧರ್ಮದಲ್ಲಿ ನಿಷ್ಠರಾದವರಿಗೇನೇ ಲಿಂಗಾಂಗಸಾಮರಸ್ಯರೂಪ ಮೋಕ್ಷವು ಲಭಿಸುವದೆಂದೂ ಮನೋಹರವಾಗಿ ಭಾಷಣವನ್ನು ಮಾಡಿದನು. ವೀರಸೋಮಯ್ಯ ಹಿರೇಮಠ ಈ ವಿದ್ಯಾರ್ಥಿಯು ಶಿವೇತರದೇವತಾದಿಗಳ ಭಜಕರಿಗೆ ಅನಿತ್ಯವಾದ ಇಹಪರದ ಫಲಗಳು ಅವರವರ ಇಚ್ಛಾನುಸಾರವಾಗಿ ದೊರೆಯುವವೇ ವಿನಾ ಜನನಮರಣ ನಿವಾರಣರೂಪ ಮೋಕ್ಷವು ಸಾಧ್ಯವಲ್ಲವೆಂದೂ ಅಷ್ಟಾವರಣಸ್ವರೂಪಿಯಾದ ಸದ್ಗುರುವಾದರೋ ಸದ್ಭಕ್ತರಿಗೆ ಭುಕ್ತಿಮುಕ್ತಿಗಳೆರಡನ್ನೂ ದಯಪಾಲಿಸುವನಾದ್ದರಿಂದ ಗುರುಸಾರ್ವಭೌಮರಾದ ಜಗದ್ಗುರು ಪಂಚಾಚಾರ್ಯರ ಜಯಂತ್ಯುತ್ಸವಗಳ ದ್ವಾರಾ ಇವರ ಕೃಪೆಗೆ ಪಾತ್ರರಾಗಿ ಚತುರ್ವಿಧ ಪುರುಷಾರ್ಥಗಳನ್ನು ಹೊಂದಿ ಕೃತಾರ್ಥರಾಗತಕ್ಕದ್ದೆಂದೂ ಯುಕ್ತಿಯುಕ್ತವಾಗಿ ಹೇಳಲು ಎಲ್ಲರೂ ಸಂತೋಷಪಟ್ಟರು. ಕಡೆಗೆ ವೇ|| ಕಾಶಪ್ಪಯ್ಯನವರು ಹಿರೇಮಠ, ಇವರು ವೀರಶೈವಧರ್ಮದ ಸೂತ್ರಧಾರಿಗಳಾದ ಗುರುಸ್ಥಲದವರು ಸದ್ಯ ತಮ್ಮ ಕರ್ತವ್ಯಕರ್ಮದಲ್ಲಿ ಪರಾಙ್ಮುಖರಾಗಿದ್ದುದರಿಂದಲೇ ಈ ಸಮಾಜವು ನಾಶವನ್ನು [illegible] ಸ್ಥಿತಿಯಲ್ಲಿಲ್ಲವೆಂದೂ, ಸಮಾಜಸುಧಾರಣೆಗಾಗಿ ಪ್ರತಿ[illegible] ಗ್ರಾಮದಲ್ಲಿ ಗುರುಸ್ಥಲ ಮಠಗಳನ್ನು ಸಿಂಹಾಸನಾಧಿ[illegible]ಳು ಎಂದು ನಿಯೋಜಿಸಿದರೋ ಅಂದಿನಿಂದ ಭಕ್ತಾದಿಗಳು ವತನ, ಹಕ್ಕುಬಾಬು, ಮಾನಮರ್ಯಾದೆಗಳಿಂದ ಈವರೆಗೂ ಆದರಿಸುತ್ತ ಬರುತ್ತಿರುತ್ತಾರೆಂದೂ, ಆದರೂ ಗುರುಸ್ಥಲ ಮಠಾಧಿಪತಿಗಳು ತಮ್ಮ ಶಾಸ್ತ್ರೋಕ್ತ ಕರ್ತವ್ಯ ಜಾಗರೂಕತೆಯುಳ್ಳವರಾಗದ ಕಾರಣ ಈ ಸಮಾಜದಲ್ಲಿಯ ಧಾರ್ಮಿಕ ತಾತ್ವಿಕಬಾಬುಗಳಲ್ಲಿ ಅನೈಕ್ಯವಾಗಿದೆಯೆಂದೂ, ಆದರೂ ವೀರಶೈವಮತದ ಪ್ರತಿಯೊಂದು ವ್ಯಕ್ತಿಯು ಗುರುಸ್ಥಲದವರನ್ನು ಜಾಗೃತ ಮಾಡಲು ಪ್ರಯತ್ನಿಸಿದರೆ ಶೀಘ್ರವಾಗಿ ನಿರಾಯಸದಿಂದ ಸ್ವಲ್ಪ ಕಾಲದಿಂದಲೇ ನಮ್ಮ ಸಮಾಜದ ಧಾರ್ಮಿಕ ಬಾಬಿನಲ್ಲಿ ಮುಂದೊರೆಯದಿರಲಾರದೆಂದೂ, ಈ ಸುಧಾರಣೆಯ ಕ್ರಮಕ್ಕೆ ಜಗದ್ಗುರುಗಳವರ ಜಯಂತಿಗಳೇ ಮುಖ್ಯಸಾಧನಗಳೆಂದೂ ಕಳಕಳಿಯಿಂದ ಭಾಷಣಮಾಡಿದರು. ಅನಂತರ ಮಂಗಳಾರತಿಯಾಗಿ ಸಕಲರಿಗೂ ಪ್ರಸಾದವು ಹಂಚಲ್ಪಟ್ಟಿತು. ಸಿದ್ಧಬಸಪ್ಪನವರು ಸಜ್ಜನಶೆಟ್ಟಿ, ಇವರು ಈ ಜಯಂತಿಗಳುತ್ಪತ್ತಿಗೆ "ಪಂಚಾಚಾರ್ಯಪ್ರಭಾ" ಪತ್ರಿಕೆಯೇ ಕಾರಣವಾದ್ದರಿಂದ ಸದರಿ ಪತ್ರಿಕೆಯ ಪೋಷಣೆಕ್ಕೋಸ್ಕರ ಒಂದು ರೂಪಾಯಿಯನ್ನು ಅರ್ಪಿಸಿದರು.

ಸಿದ್ಧಬಸಪ್ಪ ಸಜ್ಜನಶೆಟ್ಟಿ, ಲಕ್ಷ್ಮೇಶ್ವರ.

ದೇಶದೇಳಿಗೆಗೆ ಇದೊಂದು ಸೋಪಾನವಲ್ಲವೇ?

ಯಾವದೊಂದು ದೇಶವಾಗಲಿ ಸಮಾಜವಾಗಲಿ ಅಭ್ಯುದಯವನ್ನು ಹೊಂದಬೇಕಾದರೆ ಆ ದೇಶವು ಅಥವಾ ಆ ಸಮಾಜವು ತನ್ನ ಧರ್ಮವನ್ನೂ ತನ್ನ ಉದ್ಯೋಗವನ್ನೂ ಚೆನ್ನಾಗಿ ರಕ್ಷಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಾಡುವುದರಿಂದ ದೇಶ ಮತ್ತು ಸಮಾಜಗಳು ಉನ್ನತಾವಸ್ಥೆಯ ಮೆಟ್ಟಿಲನ್ನು ಕಾಣಬಹುದು. ಇತ್ತೀಚೆಗೆ ಆಧುನಿಕಪರಿಸ್ಥಿತಿಯ ಅನಾರೋಗ್ಯದ ವಾತಾವರಣವು ಊರುಊರುಗಳಲ್ಲೆಲ್ಲ ವ್ಯಾಪಿಸಿಹೋದದ್ದರಿಂದ ಬಹುಜನರು ಬಹು ರೋಗಗಳಿಗೊಳಪಟ್ಟು ವಿದೇಶೀಯ ಔಷಧಿಗಳಿಗಾಗಿ ಅಸಂಖ್ಯಾತದ್ರವ್ಯ ಸುರಿಯುವುದನ್ನು ನೋಡಿದರೆ ಯಾರಿಗೆ ತಾನೇ ಖೇದವಾಗಲಿಕ್ಕಿಲ್ಲ? ಅಂದಮೇಲೆ ದೇಶದ ಸಿರಿಯನ್ನು ನಾವಾಗಿ ಹೊರದೂಡಿದಂತಾಗಲಿಲ್ಲವೇ? ಇನ್ನು ಈವರೆಗೆ ನಮ್ಮನ್ನು ರಕ್ಷಿಸಿದ ನಮ್ಮ ಧರ್ಮದೇವತೆಯನ್ನಾದರೂ ನಾವು ಕಾಪಾಡಿಕೊಳ್ಳಬಾರದೇ? ಅಂಥ ಪವಿತ್ರದೇವತೆಯನ್ನು ಸಹ ಸಮುದ್ರದಲ್ಲಿ ಚೆಲ್ಲಲು ಸಿದ್ಧರಾಗಿ ನಿಂತಿದ್ದೇವೆ. ನೋಡಿರಿ! ಪರದೇಶದ ಸಕ್ಕರೆ, ಬಿಸ್ಕಿಟ್ ಇತ್ಯಾದಿ ಪದಾರ್ಥಗಳು ಇದಲ್ಲದೆ ಬಟ್ಟೆಬರೆಗಳೂ ಸಹ ಅಪವಿತ್ರವೆಂದು ತಿಳಿದರೂ ಅವುಗಳನ್ನು ಗ್ರಹಿಸಿದಿರಿ. ಇನ್ನು ಅದಕ್ಕೂ ಹೆಚ್ಚು ಅಪವಿತ್ರವಾದ ಹೊಸ ಹೊಸ ಸುಧಾರಣೆಯ ಗ್ಲ್ಯಾಂಡ್ಸ್ ಪ್ರೊಡಕ್ಟ್ಸ್ (Glonds Products) ಎಂಬ ಔಷಧಿಗಳನ್ನು ಮಾತ್ರ ಕಣ್ಣುಮುಚ್ಚಿ ನುಂಗಬಲ್ಲಿರಿ. ಧರ್ಮಾಭಿಮಾನಿಗಳೇ! ಇಂಥ ಔಷಧಿಗಳು ಯಾವದರಿಂದ ಹುಟ್ಟಿರುತ್ತವೆಂಬುದನ್ನು ಸ್ವಲ್ಪ ಕಣ್ತೆರೆದು ನೋಡಿರಿ! ಶರೀರದೊಳಗಿನ ಮಾಂಸಪಿಂಡಗಳು ಅಂದರೆ ಮೂತ್ರಾಶಯ, ಪಿಂಡಾಶಯ, ಗರ್ಭಾಶಯ, ಲಾಲಾಶಯ, ರಕ್ತಾಶಯ, ಮಿದುಳು, ರಕ್ತ, ಮಾಂಸ ಮುಂತಾದ ಅಶುಚಿಪದಾರ್ಥಗಳಿಂದ ತುಪ್ಪಿಮಾಡಿದ ದ್ರವ್ಯಗಳೇ ಒಳ್ಳೇ ಪರಿಶುದ್ಧವಾದ ಔಷಧಿಗಳು. ಇಂಥ ಸಿದ್ಧೌಷಧಿಗಳು ಹುಟ್ಟಿದಮೇಲೆ ನಮ್ಮ ಧರ್ಮದೇವತೆಯು ಹೇಳ ಹೆಸರಿಲ್ಲದೆ ಹೋಗಬೇಕಾಯಿತಲ್ಲವೆ? ವೀರಶೈವರು ತಾವು ಧು[illegible] ಪದಾರ್ಥಗಳನ್ನು ತಮ್ಮ ಶಿವಲಿಂಗಕ್ಕೆ ಅರ್ಪಿಸದ ಹೊರತು [illegible]ಗನೆಂದೂ ಇದಲ್ಲದೆ ಬ್ರಾಹ್ಮಣ, ಜೈನ, ಕ್ಷತ್ರಿಯ, ವೈ[illegible] ವವರು ಸಹ ತಮ್ಮ ದೇವರಿಗೆ ಅಂದರೆ ಶಿವ, ವಿಷ್ಣು, ಅರ್ಹಂತ, ರಾಮ, ಶ್ರೀಕೃಷ್ಣರಿಗೂ ಅರ್ಪಿಸದೆ ತೆಗೆದುಕೊಳ್ಳಕೂಡದೆಂದೂ ಹೇಳಿರುವಾಗ ನಾವು ಅಂಥ ಪವಿತ್ರ ದೈವಿಕವಿಗ್ರಹಗಳಿಗೂ ಕೂಡಾ ಅರ್ಪಿಸಿ ತಿನ್ನಬೇಕಲ್ಲವೇ. ಹಾಯ್ ಹಾಯ್ ಕಲಿಯೇ! ಇನ್ನಾದರೂ ಧರ್ಮದೇವತೆಯ ಸಂಕೋಲೆಯನ್ನು ಬಿಟ್ಟು ಇತ್ತ ನಾವಾಗಿ ನಮ್ಮ ಅಧರ್ಮಾಸಕ್ತಿಯಿಂದ ಭೋಗಿಸಬಾರದಷ್ಟು ಸ್ತ್ರೀಯರನ್ನು ಭೋಗಿಸಿ ನಮ್ಮ ವೀರ್ಯವನ್ನೆಲ್ಲ ಹಾಳುಮಾಡಿಕೊಂಡು ಪರರ ವೀರ್ಯಕ್ಕೆ ಕೈಯೊಡ್ಡಿ ಕುಡಿಯುವದು ಮಹಾಮೂರ್ಖತನವಲ್ಲವೆ? ಹೀಗೆ ನಾವಾಗಿ ನಮ್ಮ ಧರ್ಮವನ್ನೂ ದ್ರವ್ಯವನ್ನೂ ಪರದೇಶದ ಪಾಲಾಗಿಮಾಡಿದರೆ ಈ ನಮ್ಮ ದೇಶೋನ್ನತಿಯು ಆದೀತೆ? ಈ ಉದ್ದೇಶಾರ್ಥವಾಗಿ ಆರ್ಯವೈದ್ಯಕಲೆಯನ್ನು ಹೆಚ್ಚು ಪ್ರಸಾರಗೊಳಿಸುವದು ವಿದ್ವಜ್ಜನರ ಕಾರ್ಯವಾಗಿ ಪ್ರತಿಯೊಬ್ಬ ಚಿಕಿತ್ಸಕರೂ ಹಾಗೂ ಚಿಕಿತ್ಸೆಯನ್ನು ಹೊಂದುವವರೂ ಕೂಡಾ ನಮ್ಮ ಆರ್ಯ ಔಷಧಿಗಳನ್ನೇ ಹೆಚ್ಚಾಗಿ ಉಪಯೋಗಿಸಿಕೊಳ್ಳಹತ್ತಿದಲ್ಲಿ ಸ್ವಲ್ಪಸ್ವಲ್ಪ ಧರ್ಮದ್ರವ್ಯಗಳ ಸಿರಿಯನ್ನು ಕಾಯ್ದುಕೊಂಡಂತಾಗುವದಿಲ್ಲವೇ? ಇಂಥ ಸದಭಿಪ್ರಾಯದ ಉತ್ಕಟೇಚ್ಛೆಯಿಂದಲೇ ಕರ್ನಾಟಕ ಆಯುರ್ವೇದಶಾಲೆಯೊಂದನ್ನು ಆರಂಭಿಸುವದಾಗಿದೆ.

ಕರ್ನಾಟಕ ಆಯುರ್ವೇದಶಾಲಾ

೧. ಸದರಿ ಶಾಲೆಯು ಚೈತ್ರ ಶುದ್ಧ ಪ್ರತಿಪದದಿಂದ ಪ್ರಾರಂಭವಾಗುವದು. ೨. ಶಾಲೆಯ ಶಿಕ್ಷಣವು ಎರಡು ವರ್ಷದಿದ್ದು ಅಷ್ಟೇ ಅವಧಿಯಲ್ಲಿ ನಿಘಂಟು, ನಿದಾನ, ಅಷ್ಟಾಂಗಹೃದಯ, ಶಾರ್ಙ್ಗಧರ, ಯೋಗರತ್ನಾಕರ, ಭಾವಪ್ರಕಾಶ, ರಸಂತ್ನಸಮುಚ್ಚಯ ಇತ್ಯಾದಿ ಗ್ರಂಥಗಳನ್ನು ಕಲಿಸುವದಲ್ಲದೆ, ಪಾಶ್ಚಿಮಾತ್ಯ ಪದ್ಧತಿಯ ಮೇರೆಗೆ ಶಾರೀರಶಾಸ್ತ್ರ, ಇಂದ್ರಿಯವಿಜ್ಞಾನಶಾಸ್ತ್ರಗಳನ್ನು ಸಹ ಕಲಿಸುವದರಲ್ಲಿ ಬರುವದು. ಇಲ್ಲಿ ಕೇವಲ ವಿದ್ಯಾರ್ಥಿಗಳಿಗೆ ಪುಸ್ತಕಜ್ಞಾನವನ್ನಷ್ಟೇ ಮಾಡಿಕೊಡದೆ ಪ್ರತ್ಯಕ್ಷ ಅನುಭವವನ್ನು ಸಹ ಮಾಡಿಕೊಡುತ್ತದೆ. ವಿದ್ಯಾರ್ಥಿಗಳಿಗೆ ಪ್ರವೇಶ ಹಾಗೂ ಮಾಸಿಕ ಫೀ ವಗೈರೆ ಇಲ್ಲದೆ ಶಿಕ್ಷಣವು ಧರ್ಮಾರ್ಥವಾಗಿ ಕೊಡಲ್ಪಡುತ್ತದೆ. ೩. ಈ ಶಾಲೆಯಲ್ಲಿ ಇಂಗ್ಲಿಷ್ ಪದನೇಯತ್ತೆ ಇಲ್ಲವೆ ತಕ್ಕಮಟ್ಟಿಗೆ ಸಂಸ್ಕೃತವನ್ನು ಬಲ್ಲ ಪಾಠಶಾಲೆಯ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವದರಲ್ಲಿ ಬರುವದು. ಸೇರಲಿಚ್ಛೆಯುಳ್ಳ ವಿದ್ಯಾರ್ಥಿಗಳು ಆ ಅವಧಿಯೊಳಗಾಗಿ ಅರ್ಜಿಯಿಂದ ತಿಳಿಸಬೇಕು. ಇದಲ್ಲದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪತ್ರದ್ವಾರದಿಂದ ತಿಳಿದುಕೊಳ್ಳಬೇಕು. ಸದರಿ ಶಾಲೆಯಲ್ಲಿ ಉತ್ತೀರ್ಣರಾದ ಎರಡು ವಿದ್ಯಾರ್ಥಿಗಳಿಗೆ ಅವರ ಯೋಗ್ಯತೆಯಂತೆ ಪಗಾರವು ಸಹ ಕೊಡಲ್ಪಡುವುದು.

ಡಾಕ್ಟರ್ ಸ್ವಾಮಿಚಂದ್ರಶೇಖರ,
ಸದ್ವೈದ ಕ್ಯಾಂಪ್, ಕೊಂಣೂರ ಪೋಸ್ಟ್,
ಜಿಲ್ಲಾ ಧಾರವಾಡ.

ಜಗದಾಚಾರ್ಯರ ಜಯಂತಿಯು ಮತ್ತು ಅಗಣಿತಮಹಾಮಹಿಮರೆನಿಸಿದ ಅಂಕಲಡವಿಸ್ವಾಮಿಯರ ರಥೋತ್ಸವವು.

ಎಮ್ಮಿಗನೂರು

ಈ ಗ್ರಾಮದ ಪ್ರಮುಖಜನರು ಮಾಘ ಬ|| ೧೩ ಭಾನುವಾರ ಶಿವರಾತ್ರಿಯ ದಿವಸ ಅಂಕಲಡವಿಸ್ವಾಮಿಗಳ ಮಠದಲ್ಲಿ ಪುರಾಣಕೀರ್ತನವನ್ನು ಹಾಗೂ ಬಂದ ಜನಗಳಿಗೆ ವ್ರತನಿಯಮವನ್ನು ನಡೆಯಿಸಿದ್ದಲ್ಲದೆ ಮಾರನೆಯ ದಿವಸ ಮಹಾಗಣಾರಾಧನೆಯನ್ನು ನೆರವೇರಿಸಿದರು. ಆ ದಿವಸ 600-700 ಬಡಜನಗಳಿಗೆ ಅನ್ನದಾನವು ಮಾಡಲ್ಪಟ್ಟಿತು. ಸಾಯಂಕಾಲ ಸಕಲ ವೈಭವಗಳೊಡನೆ ಗುರುಗಳ ಭಾವಚಿತ್ರಪಟದ ಹಾಗೂ ಸ್ವಾಮಿಗಳ ವಿಗ್ರಹದ ರಥೋತ್ಸವವು ನಡೆದು ಸಕಲರೂ ಸಂತೋಷಭರಿತರಾದರು. ಪುರಾಣಕೀರ್ತನದ ಸಮಯದಲ್ಲಿ ಮ|| ರಾ|| ಮರಡಿಕಲ್ಯಾಣಪ್ಪನವರು ಬಹುಮನೋಹರವಾಗಿ ಅಹಿಂಸಾ, ಭಕ್ತಿ, ಜ್ಞಾನ ಈ ವಿಷಯಗಳಮೇಲೆ ಈಗಿನ ನವನಾಗರೀಕತೆಗಳಿಗನುಸರಿಸಿ ಉಪನ್ಯಾಸ ಮಾಡಿ ಸಕಲಜನಾಂಗದವರ ಮನಸ್ಸುಗಳನ್ನು ಆನಂದಸಾಗರದಲ್ಲಿ ಮುಳುಗಿಸಿದರು. ಜಗದ್ಗುರುಗಳ ಜಯಂತಿಯ ಜ್ಞಾಪಕಾರ್ಥವಾಗಿ ಮ|| ರಾ|| ನವಲಿಕೈರುದ್ರಪ್ಪನವರು ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೨ ರೂ. ಗಳನ್ನು ಸಮರ್ಪಿಸಿದರು. ಈ ರಥೋತ್ಸವ ಮತ್ತು ಜಗದ್ಗುರುಗಳ ಜಯಂತಿಗಾಗಿ ಬಹು ರೀತಿಯಾಗಿ ಸಹಾಯವನ್ನಿತ್ತ ಮ|| ರಾ|| ಮಾಯಿಡಿರಾಮಲಿಂಗಪ್ಪ, ಬಿದ್ದಯ್ಯ, ಗಾಣಿಗರಸಿದ್ಧಪ್ಪ, ಯಜಮಾನ ಗಡಿಗೆವೀರಪ್ಪ, ಇಜಾರುದಾರ ಮಾಚಿನಿಗಂಗಪ್ಪ, ಕೋಡುಗಂಟಿಬಸಪ್ಪ, ಕೆಂಚುಗುಡು ಹನುಮಂತಪ್ಪ, ಪಾಲುಪಾಟಿ ತಿಪ್ಪಣ್ಣ, ಬಂಡಿ ತಿಪ್ಪಣ್ಣ ಇವರಿಗೆ ಜಗದೀಶ್ವರನು ನಿತ್ಯಸನ್ಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವಿವಾಹಮಹೋತ್ಸವ.

ಬಳ್ಳಾರಿ ಜಿಲ್ಲಾ ಆದವಾನಿ ತಾಲ್ಲೂಕು ಕೋಟೇಕಲ್ಲು ಗ್ರಾಮದ ಮಠಾಧಿಕಾರಿ ಗುರುಸಿದ್ಧಯ್ಯನವರ ಪುತ್ರನಾದ ಚಿ|| ರಾಚೋಟಯ್ಯನಿಗೆ ಆದವಾನಿ ತಾಲ್ಲೂಕು ಗುಡಿಕಲ್ಲು ಗ್ರಾಮದ ಹಿರೇಮಠಾಧಿಕಾರಿ ಪಂಡಿತಾರಾಧ್ಯರ ಸುಪುತ್ರಿ ಚಿ|| ಸೌ|| ಕಂ|| ಮಹಾದೇವಮ್ಮನನ್ನು ಕೊಟ್ಟು ಪಾಣಿಗ್ರಹಣಮಹೋತ್ಸವವು ಇದೆ ಪ್ರಮೋದಸಂವತ್ಸರ ಮಾಘ ಬ|| ೪ ಶುಕ್ರವಾರ ನಂದಿಕೊಟ್ಕೂರು ಶ್ರೀಶೈಲಸದಾಶಿವಾಚಾರ್ಯಲ ಮಠಾಧಿಕಾರಿ ವೇ|| ಧರ್ಮಭೂಷಣ ವೈಯಾಕರಣ ನೀಲಕಂಠಶಾಸ್ತ್ರಿಗಳವರ ಪೌರೋಹಿತ್ಯದಲ್ಲಿ ಶಾಸ್ತ್ರೀಯವಾಗಿ ಜರುಗಿಸಲ್ಪಟ್ಟಿತು. ಆ ಸಮಯದಲ್ಲಿ [illegible] ಪರಸ್ಪರಗಳಿಂದ ಬಂದಿರತಕ್ಕ ಸಕಲರಿಗೂ ಅನ್ನಸಂತರ್ಪಣೆಯೂ ಆಯಿತು. ಸಾಯಂಕಾಲ 5 ಘಂಟೆಗೆ [illegible] ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಸಭೆಗೆ [illegible] ಮಂತ್ರಗಳಿಂದ, ಯತಿವರ್ಯರು, ಮೈಲಾರ, ತಿಲಕಾದಿ, ಜಿ[illegible] ಗುಂಡಿ, ದಿಗ್ವಾವಿ ಮೊದಲಾದ ಗ್ರಾಮಗಳ ಭಕ್ತಮಾಹೇಶ್ವರರು ವಿರಾಜಮಾನರಾಗಿದ್ದರು. ಉಭಯ ಶ್ರೀಗಳು ಧಾರ್ಮಿಕ ವಿಷಯಗಳನ್ನು ಸರ್ವರಿಗೂ ತಿಳಿಯುವಂತೆ ಬೋಧಿಸಿದರು. ಅದೇ ಸಮಯಕ್ಕೆ ದಿಗ್ವಾವಿ ಶ್ರೀಗಳ ಪ್ರೋತ್ಸಾಹ ಮೇರೆಗೆ ಶ್ರೀಯುತ ವಿರೂಪಾಕ್ಷಯ್ಯನವರು ಪ್ರಭಾಪೋಷಣಕ್ಕಾಗಿ 1 ರೂಪಾಯಿ ಸಮರ್ಪಿಸಿದರು. ಸಭೆಯಲ್ಲಿ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳಿಂದ ರಚಿತಗಳಾದ ಗ್ರಂಥಗಳು ಹಂಚಲ್ಪಟ್ಟವು. ಅನಂತರ ಶ್ರೀ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಗುರುಶಂಕರ,
ಬಸಪ್ಪ ಗಣಾಪುರ, ಬಸರಾಬಾದ.

ಮಹಾತ್ಮಗಾಂಧಿಯವರ ಭಾವಚಿತ್ರಪಟದ ಮೆರವಣಿಗೆ.

ಅರಸೀಕೆರೆ ತಾ|| ಪಾವಗಡದಲ್ಲಿ 1500 ಪ್ರಜಾಸಂಖ್ಯೆಯಿದ್ದರೂ ಒಂದುವರ್ಷದ ಲಾಗಾಯ್ತು ಮ|| ಹಯಾತ್‌ಬೇಗ್‌ಸಾಹೇಬರೂ, ಮ|| ಕುರುಗೋಡುಮಠದ ಬಸವರಾಜೇಂದ್ರಯ್ಯನವರೂ ಸ್ವದೇಶಸೇವೆಯ ಚಿಹ್ನೆಯಾದ ಶುದ್ಧಖಾದಿಯ ಉಡುಪನ್ನು ಧರಿಸುತ್ತ ಸದಾಕಾಲದಲ್ಲಿ ಖಾದಿಪ್ರಚಾರಕ ಕಾರ್ಯಗಳಲ್ಲಿಯೇ ನಿರತರಾಗಿ ಇವರು ತಾ|| 18-1-1931 ನೆಯ ಭಾನುವಾರ ಸಾಯಂಕಾಲ ಸಭೆಗೂಡಿಸಿ ಸೋಲಾಪುರದ ನಿರಪರಾಧಿಗಳಾದ ನಾಲ್ವರು ವೀರರು ಮಾತೃಭೂಮಿಯ ಸೇವೆಗಾಗಿ ಯತಿಶ್ವರೀರಿಗಳಾಗಿ ವೀರಸ್ವರ್ಗವನ್ನು ಸೇರಿದರೆಂಬುದನ್ನು ವಿವರಿಸಿದರು. ಮಹಾತ್ಮಗಾಂಧಿಯವರಾದಿಯಾಗಿ ಭರತಖಂಡದ ಅನೇಕ ಮುಖಂಡರು ಬಂಧನದಿಂದ ಬಿಡುಗಡೆ ಹೊಂದಿದ ಸಂಗತಿಯನ್ನು ವೃತ್ತಪತ್ರಿಕೆಗಳಿಂದ ತಿಳಿದ ಕೂಡಲೆ 5-2-31 ನೆಯ ಗುರುವಾರ, ಈ ಪುರನಿವಾಸಿಗಳು ಮಹಾತ್ಮರ ಭಾವಚಿತ್ರಪಟವನ್ನು ಕೈಯಿಂದ ನೂತ ದಾರದಂಡೆಗಳ ಮಾಲೆಗಳಿಂದಲಂಕರಿಸಿ, ಸಮಸ್ತ ಪ್ರಜೆಗಳೊಂದಿಗೆ ತಾಳಮೇಳ ವಾದ್ಯಗಳಿಂದ ಮೆರವಣಿಗೆ ಹೊರಟು ದೇವಾಲಯಗಳಲ್ಲಿ ಫಲಸಮರ್ಪಣೆ ಮಂಗಳಾರತಿಗಳನ್ನು ಪೂರೈಸಿಕೊಂಡು ಗ್ರಾಮಮುಂಭಾಗದ ಮೈದಾನದಲ್ಲಿ ಸಭೆಸೇರಿಸಿ ಮಹಾತ್ಮರ ಪಟವನ್ನು ಉಚ್ಚಸ್ಥಾನದಲ್ಲಿ ಅಲಂಕರಿಸಿದರು. ಮ|| ಕೆ. ಭೀಮರಾಯರು ಆಮೂಲಾಗ್ರವಾಗಿ ಮಹಾತ್ಮರ ಮಾಹಾತ್ಮ್ಯವನ್ನು ಕುರಿತು ಭಾಷಣಮಾಡಿದರು. ಆಗ ಎಲ್ಲರೂ ಆನಂದಪಟ್ಟು "ಗಾಂಧಿಮಹಾತ್ಮಕೀ ಜೈ" ಎಂದು ಉದ್ಘೋಷಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಓರ್ವ ಉತ್ಸವಭಾಗಿ.

ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಸದ್ಧತಿಯಪ್ರಕಾರ ಇದೇ ಪ್ರಮೋದ ಸಂ|| ಫಾಲ್ಗುಣ ಶು|| ೧೩ ಸೋಮವಾರ (ತಾ|| 2-3-1931) ದಿವಸ ಈ ಕೆಳಗೆ ನಮೂದಿಸಿರುವ ಕಾರ್ಯಕ್ರಮದ ಪ್ರಕಾರ ಬೆಂಗಳೂರು ಪಟ್ಟಣದಲ್ಲಿ ನಡೆಸಲು ನಿರ್ಧರಿಸಿರುತ್ತದೆ.

ಕಾರ್ಯಕ್ರಮ

ತಾ|| 2-3-1931 ಸೋಮವಾರ—

I. ಪ್ರಾತಃಕಾಲ ೭ ಘಂಟೆಯಿಂದ ೧೨ ರ ವರೆಗೆ ಮಹಾಂತಿನಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಏಕಾದಶವಾರ ಮಹಾರುದ್ರಾಭಿಷೇಕ. ಸಹಸ್ರಬಿಲ್ವಾರ್ಚನೆ.

ಮಧ್ಯಾಹ್ನ ೧೨ ಘಂಟೆಗೆ

II. ಮಹಾಂತಿನಮಠದಲ್ಲಿ ಭಕ್ತಮಾಹೇಶ್ವರ ಸಮಾರಾಧನೆ.

ಮಧ್ಯಾಹ್ನ ೨ ಘಂಟೆಯಿಂದ ೫ ರ ವರೆಗೆ

III. ಶ್ರೀ ರೇಣುಕಾಚಾರ್ಯರು ಪ್ರಪಂಚದಲ್ಲಿ ಮಾಡಿರುವ ಲೀಲೆಗಳ ವಿಷಯದಲ್ಲಿ ಭಾಷಣಗಳು.

ಸಾಯಂಕಾಲ ೫|| ಘಂಟೆಗೆ

IV. ಶ್ರೀಮನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ. ಸಿ. ಐ. ಇ. ಇವರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆ.

1. ಸ್ತೋತ್ರ ಮತ್ತು ವೇದಘೋಷ.

2. ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಫಂಡಿನ ವಾರ್ಷಿಕ ವರದಿಯನ್ನೋದುವುದು.

3. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಕೃಪಾಪೋಷಿತ ವೀರಶೈವ ಧರ್ಮಗ್ರಂಥ ಭಾಂಡಾರದ ವಾರ್ಷಿಕ ವರದಿಯನ್ನೋದುವುದು.

4. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯಕೃಪಾಪೋಷಿತ ಸಂಸ್ಕೃತಪಾಠಶಾಲಾ ಫ್ರೀಬೋರ್ಡಿಂಗಿನ ವರದಿಯನ್ನೋದುವುದು.

5. ಅಧ್ಯಕ್ಷರ ಭಾಷಣ.

V. 1. ಸಾಯಂಕಾಲ ೭ ಘಂಟೆಯಿಂದ ೧೧ ರ ವರೆಗೆ ಮಹಾಂತಿನಮಠದಿಂದ ರಾಜಬೀದಿಗಳಲ್ಲಿ ನಂದಿಧ್ವಜ ಸಹಿತ ಪೂಜ್ಯನಾದ ಜಗದಾಚಾರ್ಯರ ಮೂರ್ತಿಯ ಪುಷ್ಪಕೋತ್ಸವವು.

2. ಆಚಾರ್ಯರ ಉತ್ಸವಮೂರ್ತಿಯು ಮಠಕ್ಕೆ ಬಿಜಯಂಗೈದನಂತರ ಷೋಡಶೋಪಚಾರ ರಾಜೋಪಚಾರ ಪೂಜಾಪೂರ್ವಕ ಪ್ರಸಾದ ವಿನಿಯೋಗ.

3. ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ.

ಬೆಂಗಳೂರು,
19-2-31. ದೇಶದಶೆಟ್ಟರು, ಯಜಮಾನರು.

ರೇಯವರು ಸ್ವದೇಶಬಟ್ಟೆಯ ಪೂನಾಪಟ್ಟಣದಲ್ಲಿ ಭಾಷಣದ ಸಾರಾಂಶ.

ಯಾರಿಸಲುತ್ತಿದ್ದ ಮಸ್ಲಿನ್ ಬಟ್ಟೆಗಳಿಂ ಭೋಗಕ್ಕೆ ಉಪಯುಕ್ತಗಳಾದ ಅನೇಕ ಕಿಂದಲೂ ಇಟಲಿಯ ಸಂಪತ್ತೆಲ್ಲಾ ಹಿಂದೂ ರುವುದೆಂದು ರೋಮ್ನಿನ ಸುಪ್ರಸಿದ್ಧ ಐತಿ ವರು ವ್ಯಸನಪಟ್ಟು ಇತಿಹಾಸದಲ್ಲಿ ಬರೆದಿ ಮ ಆಸಮಿಯಲ್ಲಿ ಪಾಶ್ಚಿಮಾತ್ಯವಾಗುವ ಬಗದಾದ್, ಪರ್ಷಿಯಾ, ತುರ್ಕಸ್ಥಾನ ಖಂಡದ ರಾಷ್ಟ್ರಗಳಿಗೂ, ಅನೇಕ ಪದೋಪಯುಕ್ತಗಳಾದ ಸಾಮಾನುಗಳನ್ನು ಕಳುಹಿಸುವುದು ನಮ್ಮ ದೇಶವಾಗಿದ್ದಿತು. ಈಗ್ಗೆ ಒಂದುನೂರು ವರ್ಷಗಳ ಕಾಲದಲ್ಲಿ ತಯಾರಾಗುತ್ತಿದ್ದ ಬಟ್ಟೆಕ್ಕೆ ಸಾಕಾಗುತ್ತಿದ್ದಿತಲ್ಲದೆ ಇಂಗ್ಲೆಂಡಿಗೆ ಯುಗಳವರಿಗೂ ಕಳುಹಿಸಲು ಸಾಧ್ಯವಾ ಮುಯಿಯೇಯಿತು. ಪ್ರಸಿದ್ಧಚರಿತ್ರಕಾರರು, "ಪರಕೀಯ ಪ್ರಭುಗಳು ರಾಜನೀತಿಬಂಧದ ಕೈಗಾರಿಕೆಯನ್ನು ಬಗ್ಗುಬಡಿದರು" ಎಂದು ವಿಷಾದದಿಂದ ಹೇಳಿದೇಶದ ಕಲೆಗಳೆಲ್ಲವೂ ನಾಶವಾಗಿಯೂ ವೆ. ಪಾಶ್ಚಿಮಾತ್ಯನಾಗರೀಕತೆಯು ನಮ್ಮ ಸಂಪೂರ್ಣವಾಗಿ ಸೆಳೆದು ತನ್ನ ಗುಲಾಮನನ್ನಾಗಿಮಾಡಿಕೊಂಡಿರುವ ದುರವಸ್ಥೆಯನ್ನು ಏನೆಂದು ವರ್ಣಿಸೋಣ! ನಮ್ಮ ಭಾರತೀಯರನೇಕರಿಗೆ ನಮ್ಮ ದೇಶದ ಕಲೆಗಳಲ್ಲಿ ಯೋಗ್ಯವಾದುದಾವುದೂ ಕಣ್ಣಿಗೇ ಬೀಳುವುದಿಲ್ಲ. ಗುಲಾಮರಂತೆ ಪಾಶ್ಚಿಮಾತ್ಯರ ನಡೆನುಡಿಗಳನ್ನು ಇವರು ಅನುಕರಣಮಾಡುವುದರಿಂದ ನಮ್ಮ ಶ್ರೇಷ್ಠ ಕಲೆಗಳು ಸಂಪೂರ್ಣನಾಶವಾಗುವ ದುಷ್ಪರಿಣಾಮವಾಯಿತು. ಪೂನಾಪಟ್ಟಣದ ಸಾರ್ವಜನಿಕಸಭೆಯ ಸ್ಥಾಪಕರಾದ ಶ್ರೀಯುತ ಗಣೇಶವಾಸುದೇವಜೋಷಿಯವರು ಸ್ವದೇಶಿಯನ್ನು ಸಾರ್ವತ್ರಿಕವಾಗಿ ಪ್ರಸಾರಮಾಡಬೇಕೆಂದು ಮಾಡಿದ ಉತ್ಕಟೇಚ್ಛಾಭವಮಾನತಂತ್ರವೂ ಅರಣ್ಯರೋದನದಂತೆ ನಿಷ್ಫಲವಾಯಿತು. ಏಕೆಂದರೆ ಪಾಶ್ಚಿಮಾತ್ಯನಾಗರೀಕತೆಯೆಂಬ ಮಹೇಂದ್ರಜಾಲಕ್ಕೆ ಪೂರ್ಣ ಸಿಲುಕಿದುದರಿಂದ ನಾವು ಅವರ ಪ್ರಯತ್ನಕ್ಕೆ ನೆರವಾಗಲಿಲ್ಲ. ಈಗ್ಗೆ ಇಪ್ಪತ್ತೈದುವರ್ಷಗಳ ಕೆಳಗೆ ಬಂಗಾಲವು ಎರಡು ಭಾಗವಾಗಿ ವಿಂಗಡಿಸಲ್ಪಟ್ಟಾಗ ಪ್ರಚಲಿತವಾದ ರಾಜಕೀಯಾಂದೋಳನದಿಂದ ಸ್ವದೇಶ ಚಳವಳಿಗೆ ಸ್ವಲ್ಪಮಟ್ಟಿಗೆ ಪ್ರೋತ್ಸಾಹ ಸಿಕ್ಕಿತು. ಲೋಕಮಾನ್ಯಬಾಲಗಂಗಾಧರತಿಲಕರವರು ನಮ್ಮ ದೇಶಕ್ಕೆ ಅಗಮಿಸಿ ಆಕರ್ಷಣೀಯವಾದ ತಮ್ಮ ಸಾನ್ನಿಧ್ಯದಿಂದ ನಮಗೆ ಅತ್ಯವಶ್ಯಕವಾದ ಸ್ಫೂರ್ತಿಯನ್ನಿತ್ತರು. ಬಂಗಾಲದಿಂದ ಹಿಂದಿರುಗಿಬಂದಮೇಲೆ ಪೈಸಾಫಂಡನ್ನು ಪ್ರಾರಂಭಿಸಿ ಗಾಜಿನ ಕಾರ್ಖಾನೆಯನ್ನು ಸ್ಥಾಪಿಸಿದರು. ಅಂದಿನಿಂದಲೂ ಅದು ಅಭಿವೃದ್ಧಿಯಾಗಿ ನಡೆಯುತ್ತಬಂದಿದೆ. 50 ವರ್ಷಗಳ ಕೆಳಗೆ ಬಂಗಾಲದವರು ಹೇರಳವಾಗಿ ಸಕ್ಕರೆಯನ್ನು ತಯಾರಿಸುತ್ತಿದ್ದರು. ಆ ಸಕ್ಕರೆಯು ಬಂಗಾಲಪ್ರಾಂತಕ್ಕೆ ಸಾಕಾಗಿ ವಿಶೇಷವಾಯಿ ಇಂಗ್ಲೆಂಡಿಗೆ ಸಾಗುತ್ತಿತ್ತು. ಈಗ ಅದೆಲ್ಲ ಹೋಯಿತು. ಬಟ್ಟೆಗಳಿಗಾಗಿ ಇಂಗ್ಲೆಂಡ್ ಮತ್ತು ಜಪಾನಿಗೆ 70 ಕೋಟಿ ರೂಪಾಯಿಗಳನ್ನೂ ಸಕ್ಕರೆಗಾಗಿ ಜಾವಾದ್ವೀಪಕ್ಕೆ 14-15 ಕೋಟಿ ರೂಪಾಯಿಗಳನ್ನೂ ಭಾರತೀಯರು ತೆರುವ ದುಸ್ಥಿತಿಯೊದಗಿದೆ. ಈ ವಿಷಯವನ್ನು ದಿವಂಗತರಾದ ದಾದಾಭಾಯಿನವರೋಜಿ, ರಾನಡೆ, ಗೋಪಾಲಕೃಷ್ಣಗೋಖಲೆ ಮೊದಲಾದ ಮೇಧಾವಿಗಳು ಸಮಗ್ರವಾಗಿ ವಿಮರ್ಶಿಸಿದ್ದಾರೆ. ಎಂಥ ಸಂದರ್ಭಗಳಲ್ಲಿಯೂ ಸ್ವದೇಶಿವಾಲನ್ನೇ ಉಪಯೋಗಿಸುವೆವೆಂಬ ದೃಢಪ್ರತಿಜ್ಞೆ ಮಾಡಿದರೆ ಹಿಂದೂಸ್ಥಾನದಿಂದ ಸಾಗುತ್ತಿರುವ ಕೋಟ್ಯಂತರ ರೂಪಾಯಿಗಳನ್ನು ಉಳಿಸಿ ಪುಣ್ಯಭಾಜನರಾಗಬಹುದು. ಇದಕ್ಕೊಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ಮಹಾತ್ಮಾ ಗಾಂಧಿಯವರು ಉಪ್ಪಿನಕಾಯಿದೆಯನ್ನು ಭಂಗಪಡಿಸುವುದಕ್ಕೋಸ್ಕರ ಹೊರಟಕೂಡಲೆ ಬಂಗಾಲದಲ್ಲಿ ಅದ್ಭುತಪರಿಣಾಮವಾಯಿತು. ಶ್ರೀಮಂತರೂ, ಬಡವರೂ, ಸುಶಿಕ್ಷಿತರೂ, ಅಶಿಕ್ಷಿತರೂ, ವಿಲಾಯತಿ ಸಿಗರೇಟುಗಳನ್ನು ತ್ಯಾಜ್ಯಮಾಡಿ ಬೀಡಿ ಸೇದಲು ಪ್ರಾರಂಭಮಾಡಿದರು. ತಂಬಾಕು ಹಿಂದೂಸ್ಥಾನದ ಎಲ್ಲ ಭಾಗಗಳಲ್ಲಿಯೂ ಯಥೇಚ್ಛವಾಗಿ ಬೆಳೆದಾಗ್ಯೂ ಹುಕ್ಕಾ ಅಥವಾ ಬೀಡಿ ಸೇದುವುದು ಅನಾಗರೀಕತೆಯ ಲಕ್ಷಣವೆಂದೂ, ಸಿಗರೇಟ್ ಸೇದುವುದು ನಾಗರೀಕತೆಯ ಲಕ್ಷಣವೆಂದೂ ಭಾವಿಸಿರುವವರು ನೋಡಿರಿ ವ್ಯತ್ಯಯವನ್ನು ನಾಯೆಯನ್ನೋಡಿದೀರೇ ಅಥವಾ ಭ್ರಾಂತಿಯನ್ನೋಡಿದೀರೇ? ಕಲ್ಕತ್ತೆಯಲ್ಲಿ ಕಳ್ಳತನದಿಂದಲೂ ದುಷ್ಟವರ್ತನದಿಂದಲೂ ಜೀವನಮಾಡುತ್ತಿದ್ದ ಅನೇಕ ನೀಚಜನರೂ ಸಹ ಬೀಡಿ ಕಟ್ಟಲು ಪ್ರಾರಂಭಮಾಡಿ ದಿನ ಒಂದಕ್ಕೆ 12 ಆಣೆ ಅಥವಾ 1 ರೂ. ಯನ್ನು ಸಂಪಾದನೆ ಮಾಡುತ್ತಿರುವರು. ಇದರಿಂದ ಸಿಗರೇಟುಗಳಿಗಾಗಿಯೇ ಹೋಗುತ್ತಿದ್ದ ಮೂರುಕೋಟಿ ರೂ. ಉಳಿಸಿದ ಹಾಗಾಯಿತು.

ಹಿಂದೂಸ್ಥಾನಕ್ಕೆ ಬರತಕ್ಕ ಮಾಲುಗಳ ಪೈಕಿ ನೂಲು ಮತ್ತು ಬಟ್ಟೆಗಳೇ ಪ್ರಥಮಸ್ಥಾನವನ್ನು ಹೊಂದಿರುವುದರಿಂದಲೇ ಮಹಾತ್ಮಾಗಾಂಧಿಯವರು ಅಂಗ್ಲೇಯರು ಬರುವುದಕ್ಕೆ ಪೂರ್ವದಲ್ಲಿದ್ದ ಕೈಗಾರಿಕೆಯನ್ನು ಪುನರುತ್ಥಾಪನಗೊಳಿಸಬೇಕೆಂದು

[೯ ನೆಯ ಪುಟವನ್ನು ನೋಡಿ.]

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು.

ಫಾಲ್ಗುಣ ಶುದ್ಧ ತ್ರಯೋದಶಿ (2-3-31) ಸೋಮವಾರ.

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರವು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ತ್ರಯೋದಶಿ ಸೋಮವಾರ (**2-3-31**) ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತ ಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಹೊಸದಿಲ್ಲಿಯಲ್ಲಿ ಶಾಂತಿಸಂಧಾನ.

ರೌಂಡ್‌ಟೇಬಲ್ ಕಾನ್ಫರೆನ್ಸಿನಿಂದ ಹಿಂದಿರುಗಿ ಬಂದ ಸರ್. ಟಿ. ಬಿ. ಸಪ್ರೂ, ಮಿ|| ಜಯಕರ್ ಮತ್ತು ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿ ಇವರು ಮಹಾತ್ಮಾಗಾಂಧಿಯವರಿಗೂ ಮತ್ತು ವೈಸರಾಯರಿಗೂ ಭೆಟ್ಟಿಮಾಡಿಸಿ ಪರಸ್ಪರ ಸಂಭಾಷಣೆಮಾಡಿಸುವುದರ ಮೂಲಕ ಶಾಂತಿಯನ್ನು ಸ್ಥಾಪಿಸಬೇಕೆಂದು ಪ್ರಯತ್ನಪಟ್ಟು ಉಭಯರೂ ಸಂಭಾಷಣೆಮಾಡುವ ಸಮಯವನ್ನು ಒದಗಿಸಿದರು. ಮಹಾತ್ಮಾಗಾಂಧಿಯವರು ವೈಸರಾಯರವರಿಗೆ ತಮ್ಮನ್ನು ಕಾಣಲು ಅನುಮತಿಯನ್ನು ಕೊಡಬೇಕೆಂದು ಒಂದು ಪತ್ರವನ್ನು ಬರೆದು ದಿಲ್ಲಿ ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರಾಗಿದ್ದ ಮಿ|| ಕೆಣ್ಣಿಯವರ ಮೂಲಕ ಕಳುಹಿಸಿದರು. ಈ ಮಧ್ಯೆ ಶ್ರೀಯುತ ಶಾಸ್ತ್ರಿ ಪ್ರಭೃತಿಗಳು ವೈಸರಾಯರವರನ್ನು ಕಂಡು ಈ ವಿಷಯವನ್ನು ಕುರಿತು ಮಾತನಾಡಿದರು. ವೈಸರಾಯರವರ ಉತ್ತರವು ತಲ್ಪಿದನಂತರ ಮಹಾತ್ಮಾಗಾಂಧಿಯವರು ಈ ತಿಂಗಳು 17 ನೆಯ ತಾರೀಖಿನ ದಿವಸ ಹೊಸದಿಲ್ಲಿಗೆ ಹೋದರು. ಆಗ ದಿಲ್ಲಿಯ ರೈಲ್ವೆ ಸ್ಟೇಷನ್ನಿನಲ್ಲಿ ಲಕ್ಷೋಪಲಕ್ಷ ಜನರು ಮಹಾತ್ಮರ ದರ್ಶನಾಕಾಂಕ್ಷಿಗಳಾಗಿ ಬಂದಿದ್ದರು. ಆದರೆ ಮಹಾತ್ಮಾಗಾಂಧಿಯವರು ದಿಲ್ಲಿಯ ಮುಖ್ಯ ಸ್ಟೇಷನ್ನಿನಲ್ಲಿಳಿಯದೆ ಘಾಜಿಯಾಬಾದಿನಲ್ಲಿ ಇಳಿದು ಮೋಟಾರಿನಿಂದ ಷಹಾದ್ರವೆಂಬ ಸ್ಥಳಕ್ಕೆ ಹೋಗಿ ಅಲ್ಲಿಂದ ಪಾದಚಾರಿಗಳಾಗಿಯೇ ಡಾ|| ಅನ್ಸಾರಿಯವರ ಮನೆಗೆ ತೆರಳಿದರು. ಈಗ ಅವರ ಮನೆಯಲ್ಲಿಯೇ ಇಳಿದು ಕೊಂಡಿರುವರು.

ಆ ದಿವಸ ಮಧ್ಯಾಹ್ನ 2-30 ಗಂಟೆಗೆ ಮಹಾತ್ಮಾಗಾಂಧಿಯವರು ವೈಸರಾಯರವರ ನಿಲಯವನ್ನು ಸೇರಿ ಅವರೊಡನೆ ಸಾಯಂಕಾಲ 6¼ ಗಂಟೆಯವರೆಗೂ ಸಂಭಾಷಣೆ ನಡೆಯಿಸಿದರು. ಮಾರನೆಯ ದಿವಸ ಪುನಃ 2½ ಘಂಟೆಗೆ ಮಹಾತ್ಮಾಗಾಂಧಿಯವರು ವೈಸರಾಯರನ್ನು ಸಂದರ್ಶಿಸಿ ಸಾಯಂಕಾಲ 5½ ಘಂಟೆಯವರೆಗೂ ಮಾತನಾಡಿದರು. ಮಹಾತ್ಮರು ವೈಸರಾಯರ ಮನೆಗೆ ಹೋಗುವಾಗ ದಾರಿಯುದ್ದಕ್ಕೂ ಜನರು ಕಿಕ್ಕಿರಿದುನಿಂತು ದರ್ಶನಮಾಡಿಕೊಂಡು ಸಂತುಷ್ಟರಾದರು. ವೈಸರಾಯರ ಆಫೀಸಿನಲ್ಲಿರುವ ಸಮಸ್ತ ನೌಕರರೂ ಎರಡು ತಾಸುಗಳವರೆಗೂ ತಮ್ಮ ಕೆಲಸಗಳನ್ನು ಬಿಟ್ಟು ಮಹಾತ್ಮರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಅವರೆಲ್ಲರೂ ಮಹಾತ್ಮರ ದರ್ಶನಮಾಡಿಕೊಂಡು ನಮಸ್ಕರಿಸಿದರು. ಈಗ ನಾಲ್ಕೈದು ದಿವಸಗಳ ಕೆಳಗೆ ಸರ್ಕಾರದವರು ಕೆನಡಾ, ದಕ್ಷಿಣಆಫ್ರಿಕಾ ಮೊದಲಾದ ದೇಶಗಳ ಪ್ರತಿನಿಧಿಗಳನ್ನು ಕರೆಯಿಸಿಕೊಂಡು ವಾದ್ಯವೈಭವದಿಂದಲೂ, ಅನೇಕ ಸುಂದರ ವೃಕ್ಷಗಳ ನಿರ್ಮಾಣದಿಂದಲೂ, ಬಹು ಅಟ್ಟಹಾಸದಿಂದಲೂ ಡೊಮಿನಿಯನ್ ಕಾಲಂಗಳನ್ನು ನಿಲ್ಲಿಸಿದಾಗ ಎಷ್ಟು ಜನರು ಸೇರಿದ್ದರೇ? ಎಂದು ಒಬ್ಬ ನ್ಯಾಯವಿಧಾಯಕಸಭೆಯ ಮೆಂಬರರು ನೆರೆದಿದ್ದ ಜನರನ್ನು ಕುರಿತು ಹಸನ್ಮುಖಿಗಳಾಗಿ ಹೇಳಿದರಂತೆ!

ಮಹಾತ್ಮಾಗಾಂಧಿಯವರು ವೈಸರಾಯರ ಮನೆಯಿಂದ ಹೊರಗೆ ಬಂದೊಡನೆಯೇ ಪತ್ರಿಕಾ ಪ್ರತಿನಿಧಿಗಳು ಮಹಾತ್ಮರ ಸುತ್ತಲೂ ಸುತ್ತಿಕೊಂಡರು ಪ್ರಶ್ನೆಮಾಡಲಾರಂಭಿಸಿದರು. ಒಬ್ಬ ಪ್ರತಿನಿಧಿಯು ನಿಮ್ಮ ಸಂಭಾಷಣೆಯ ಪರಿಣಾಮವೇನಾಯಿತೆಂದು ಪ್ರಶ್ನಿಸಿದನು. ಆಗ ಮಹಾತ್ಮರು ಪ್ರತಿಯೊಂದೂ ಮೋಡದಲ್ಲಿ ತೇಲಾಡುತ್ತಿದೆ ಎಂದು ಹೇಳಿದರಂತೆ! ಅಸ್ತು!

19 ನೆಯ ತಾರೀಖಿನ ದಿವಸ ಮಹಾತ್ಮರು ವೈಸರಾಯರನ್ನು ಕಾಣುವೆನೆಂದು ನಿರೀಕ್ಷಿಸಿರಲಿಲ್ಲ. ಆದರೂ ವೈಸರಾಯರು ಅಕಸ್ಮಾತ್ತಾಗಿ ಹೇಳಿಕಳುಹಿಸಿದರು. ಉಭಯರೂ ಅರ್ಧಘಂಟೆ ಹೊತ್ತು ಮಾತನಾಡಿದರು. ಪಂಡಿತ ಮದನಮೋಹನಮಾಲವೀಯ, ಪಂಡಿತ ಜವಾಹರಲಾಲ್‌ನೆಹರು, ಸರ್ದಾರ್ ವಲ್ಲಭಭಾಯಿಪಟೇಲ್, ಸೇಟ್ ಜಮನಾಲಾಲ್ ಬಜಾಜ್ ಮೊದಲಾದವರೊಡನೆ ಸಭೆ ನಡೆಯಿಸಿದರು. ವೈಸರಾಯರವರು ಇಂಡಿಯಾ ಸೆಕ್ರೆಟರಿ ಮಿ|| ಬೆನ್, ಬೊಂಬಾಯಿ ಮತ್ತು ಮದರಾಸ್ ಗವರ್ನರ್‌ರವರ ಸಲಹೆಗಳನ್ನು ತೆಗೆದುಕೊಂಡು ಮುಂದಿನ ಕಾರ್ಯಕ್ರಮವನ್ನು ಪಕ್ರಮಿಸುವವರಾಗಿದ್ದಾರೆಂದು ತಿಳಿದುಬರುತ್ತದೆ. ಮಹಾತ್ಮಾಗಾಂಧಿ ಮತ್ತು ವೈಸರಾಯರ ಸಂಭಾಷಣದಿಂದ ಶಾಂತಿಯು ಸ್ಥಾಪನೆಯಾಗುವುದಾದರೆ ಇಂಡಿಯಾ ಸೆಕ್ರೆಟರಿ ಮಿ|| ಬೆನ್‌ರವರು ಇಂಗ್ಲೆಂಡಿನ ಮುಖ್ಯ ಮೆಂಬರುಗಳೊಡನೆ ಹಿಂದುಸ್ಥಾನಕ್ಕೆ ಬಂದು ಕಾಂಗ್ರೆಸ್‌ಮುಖಂಡರ ಸಹಾನುಭೂತಿಯನ್ನು ಸಂಪಾದಿಸಿ ಲಂಡನ್ನಿನಲ್ಲಿ ನೆರವೇರಿದ ರೌಂಡ್‌ಟೇಬಲ್‌ಕಾನ್ಫರೆನ್ಸಿನ ತೀರ್ಮಾನಗಳನ್ನನುಸರಿಸಿ ರಾಜ್ಯಾಂಗರಚನೆಯನ್ನು ನಿರ್ಮಿಸಲು ಕಮಿಟಿಗಳನ್ನು ನೇಮಿಸಬೇಕೆಂದು ಸರ್ಕಾರದವರು ಆಲೋಚಿಸುತ್ತಿರುವರು.

ದಿಲ್ಲಿಯಲ್ಲಿ ಮಹಾತ್ಮಗಾಂಧಿಯವರ ಭಾಷಣ.

ಈ ತಿಂಗಳು 20 ನೆಯ ತಾರೀಖಿನ ದಿವಸ ಮಹಾತ್ಮಾಗಾಂಧಿಯವರು ದಿಲ್ಲಿಯಲ್ಲಿ ಭಾಷಣಮಾಡಿದರು. ಆಗ್ಗೆ ಸುಮಾರು ಒಂದುವರೆ ಲಕ್ಷ ಜನರು ನೆರೆದಿದ್ದರು. ಅವರು ಭಾಷಣಮಾಡಿದುದರ ಸಾರಾಂಶವೇನೆಂದರೆ :—

ನೀವೆಲ್ಲರೂ ವೈಸರಾಯರಿಗೂ ನನಗೂ ನಡೆದಿರುವ ಸಂಭಾಷಣೆಯ ವಿಷಯವನ್ನು ಕೇಳಬೇಕೆಂದು ಕುತೂಹಲವುಳ್ಳವರಾಗಿದ್ದೀರಿ. ನಾನು ಸದ್ಯಃ ಅದನ್ನು ಪ್ರಕಟಿಸುವುದಿಲ್ಲ. ಆದರೂ ನನಗೂ ಅವರಿಗೂ ಸಂಭಾಷಣೆಯು ಕೇವಲ ಮೈತ್ರೀಭಾವನೆಯಿಂದ ನಡೆಯಿತು. ಅದರ ಫಲಿತಾಂಶವೇನಾಗುವುದೆಂಬುದನ್ನು ಈಗ ಹೇಳಲು ಸಾಧ್ಯವಿಲ್ಲ. ಅದು ಪರಮಾತ್ಮನ ಕೈಯ್ಯಲ್ಲಿದೆ. ನೀವು ಮಾತ್ರ ಅವಿಚ್ಛಿನ್ನವಾಗಿ ನಿಮ್ಮ ಕೆಲಸವನ್ನು ಮಾಡುತ್ತಿರಬೇಕು. ದಿಲ್ಲಿಯಲ್ಲಿಯೂ ಸಹ ಸ್ತ್ರೀಯರು ಅತ್ಯಂತ ಧೈರ್ಯದಿಂದ ಕೆಲಸಮಾಡುತ್ತಿರುವರೆಂಬುದನ್ನು ಹೇಳುವದಕ್ಕೆ ನನಗೆ ಪರಮ ಸಂತೋಷವಾಗುತ್ತದೆ.

ಈ ಚಳವಳಿಯ ಇತಿಹಾಸವು ಬರೆಯಲ್ಪಟ್ಟಾಗ ಅದ್ಭುತ ಸ್ವಾರ್ಥತ್ಯಾಗವನ್ನು ಮಾಡಿರುವ ನಮ್ಮ ಭಾರತಸಹೋದರಿಯರಿಗೆ ಪ್ರಥಮಗೌರವಸ್ಥಾನವು ದೊರೆಯುವುದು. ಚಿಕ್ಕ ಮಕ್ಕಳು ಸಹ ಈ ಸಮರದಲ್ಲಿ ಪಾತ್ರವನ್ನು ವಹಿಸಿಕೊಂಡು ಕೆಲಸಮಾಡುತ್ತಿರುವವನ್ನು ನೋಡಿ ಸಂತೋಷವೆನಿಸುತ್ತದೆ. ಅವರಿಗೆ ದೇವರೇ ಬುದ್ಧಿಯನ್ನು ಕೊಟ್ಟು ಮಾರ್ಗದರ್ಶಕನಾಗಿರಬೇಕು. ನಮ್ಮ ಶಾಂತಿಮಯ ಯುದ್ಧಕ್ಕೆ ದೈವಸಹಾಯವಿದೆ ಎಂಬುದು ಇದರಿಂದ ಮನದಟ್ಟಾಗಿದೆ.

ನಾವು ಕೇವಲ ಶಾಂತಿಯುದ್ಧವನ್ನು ಹೂಡಿ ಪೂರ್ಣಸ್ವರಾಜ್ಯವನ್ನು ಸಂಪಾದಿಸಬೇಕೆಂದು ಪ್ರತಿಜ್ಞೆ ಮಾಡಿದ್ದೇವೆ. ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಆದರಲ್ಲೂ ಹಳ್ಳಿಗಾಡಿನ ಸಹೋದರರು ಸತ್ಯ ಮತ್ತು ಸೌಜನ್ಯದ ಪ್ರತಿಜ್ಞೆಯನ್ನು ಸಂಪೂರ್ಣ ನಡೆಯಿಸಿರುವರು. ಆದರೂ ಸತ್ಯ ಮತ್ತು ಸೌಜನ್ಯವನ್ನು ಧರ್ಮದ ಒಂದು ಅಂಗವಾಗಿ ಮಾಡಿಕೊಂಡಿರುವುದಿಲ್ಲ. ಅಹಮ್ಮದಾಬಾದ್ ಕಾಂಗ್ರೆಸ್ಸಿನಲ್ಲಿ ಸೌಜನ್ಯಯುದ್ಧವನ್ನು ಮಾಡಬೇಕೇ ಅಥವಾ ದೌರ್ಜನ್ಯಯುದ್ಧವನ್ನು ಮಾಡಬೇಕೆ? ಎಂಬಂಶವು ಸಂಪೂರ್ಣ ವಿಮರ್ಶಿಸಲ್ಪಟ್ಟು ಸೌಜನ್ಯಮಯಸತ್ಯಾಗ್ರಹಯುದ್ಧವನ್ನು ಮಾಡುವುದೇ ಉಚಿತವಾದುದೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟಿದೆ. ಮನೋವಾಕ್ಕಾಯಗಳಲ್ಲಿಯೂ ಸತ್ಯವೂ, ಸೌಜನ್ಯವೂ ರೂಢಮೂಲವಾಗಿರಬೇಕು. ಹಾಗಿಲ್ಲದಿದ್ದರೆ ಪ್ರತಿಜ್ಞೆಗೆ ಭಂಗ ಬರುವುದು.

ಪಿಕೆಟಿಂಗ್‌ಮಾಡುವಾಗ ಅಲ್ಲಲ್ಲಿ ಸ್ವಲ್ಪ ಅತ್ಯಾಚಾರವು ನಡೆಯುವುದೆಂದು ಕೆಲವರು ನನಗೆ ತಿಳಿಸಿರುತ್ತಾರೆ. 1921-22 ನೆಯ ಇಸವಿಯಲ್ಲಿ ಜನರು ಸೌಜನ್ಯವನ್ನು ಬಿಟ್ಟಿದ್ದರಿಂದ ನಾವು ಚಳವಳಿಯನ್ನು ನಿಲ್ಲಿಸಬೇಕಾಯಿತು. ಈಗ ಹಾಗೆ ನಿಲ್ಲಿಸುವುದು ಸಾಧ್ಯವಿಲ್ಲ. ವಿದೇಶಿ ವಸ್ತ್ರ ಮಾರುವುದು ಮತ್ತು ಸೇಂದಿ ಸರಾಯಿ ಮಾರುವುದು ಸಂಪೂರ್ಣ ನಿಲ್ಲದಿದ್ದರೂ ಅಡ್ಡಿಯಿಲ್ಲ, ಶಾಂತರೀತಿಯಿಂದ ಪಿಕೆಟಿಂಗ್‌ಮಾಡಿದರೆ ಶ್ರೇಯಸ್ಕರವಾಗುವುದು. ಹಾಗಲ್ಲದೆ ಅತ್ಯಾಚಾರ ನಡೆಯಿಸುವುದಾದರೆ ಪಿಕೆಟಿಂಗ್ ಮಾಡದಿರುವುದೇ ಒಳ್ಳೆಯದು. ನಾವು ಹಾಗೆ ಮಾಡುವುದಾದರೆ ಅತ್ಯವಿನಾಶವು ಸನ್ನಿಹಿತವಾಯಿತೆಂದು ಹೇಳಬೇಕಾಗುವುದು. ನಾನು ಪಿಕೆಟಿಂಗಿನಲ್ಲಿ ತುಂಬಾ ಅನುಭವಿಯಿದ್ದೇನೆ. ದೌರ್ಜನ್ಯವನ್ನು ನಡೆಯಿಸದೆ ಪಿಕೆಟಿಂಗ್ ನಡೆಯಿಸಿದರೆ ಸೇಂದಿ ಸರಾಯಿ ಹಾಗೂ ವಿದೇಶಿ ಬಟ್ಟೆ ಮಾರುವವರ ಮನಸ್ಸಿನ ಮೇಲೆ ಪರಿಣಾಮವಾಗಿ ಅವರೇ ಅದನ್ನು ನಿಲ್ಲಿಸುವಹಾಗೆ ಮಾಡುವುದು ಸಾಧ್ಯವಿದೆ.

ವಿದೇಶಿ ವಸ್ತ್ರಗಳನ್ನು ಮಾರುವ ವರ್ತಕರು ಕೆಲವು ತಿಂಗಳುಗಳ ಮಟ್ಟಿಗೆ ಅವುಗಳನ್ನು ಮಾರುವುದು ಬಿಡುವುದರಿಂದ ದೇಶಸೇವೆ ಮಾಡಿದಂತಾಗುವುದಿಲ್ಲ. ಅದನ್ನು ಸಂಪೂರ್ಣಬಿಟ್ಟು ಬಿಡಬೇಕು. ಪೂರ್ಣಸ್ವರಾಜ್ಯವನ್ನು ಸಂಪಾದಿಸಬೇಕೆಂಬ ರಾಷ್ಟ್ರದ ಪ್ರಯತ್ನಕ್ಕೆ ಎಷ್ಟು ಸ್ವಾರ್ಥತ್ಯಾಗಮಾಡಿದರೂ ಸಾಲದು. ಶಾಂತಿಸ್ಥಾಪನೆ ಮಾಡಬೇಕೆಂದು ವೈಸರಾಯರವರೊಡನೆ ಸಂಭಾಷಣೆ ಮಾಡಿರುತ್ತೇನೆ. ದೇಶವು ಇನ್ನು ಮುಂದೆಯೂ ಸಹ ಅನುಭವಿಸಬೇಕಾಗುವ ಕಷ್ಟಪರಂಪರೆಗಳನ್ನು ನಿಲ್ಲಿಸಬೇಕೆಂಬುದೇ ನನ್ನ ಉದ್ದೇಶ. ಇದಕ್ಕೆ ದೇವರು ಸಹಾಯ ಮಾಡಬೇಕು. ಹಾಗಿಲ್ಲದಿದ್ದರೆ ಇನ್ನೋಽ ಕಠಿಣವಾದ ಸ್ವಾರ್ಥತ್ಯಾಗಕ್ಕೂ ಕಷ್ಟಾನುಭವಕ್ಕೂ ಸಿದ್ಧರಾಗಿರಬೇಕು.

ವರ್ತಮಾನಸಂಗ್ರಹ.

ಕಲ್ಕತ್ತೆಯ ಹತ್ತಿರದಲ್ಲಿರುವ ದೂಬ್ರಿ ಎಂಬ ಸ್ಥಳದಲ್ಲಿದ್ದ ಒಂದು ನೇಪಾಳಿ ಕುಟುಂಬದ ಹತ್ತುಜನರನ್ನು ಯಾರೋ ದುರಾತ್ಮರು ಕೊಂದುಹಾಕಿ ಅವರ ಚರಾಸ್ತಿಯನ್ನೆಲ್ಲಾ ದೋಚಿಕೊಂಡು ಹೋಗಿರುವರೆಂದು ತಿಳಿದುಬರುತ್ತದೆ.

ಬೆಳಗಾವಿಯಲ್ಲಿ ಸಾರಲ್ಪಟ್ಟಿರುವ 144 ನೇ ಕಲಮನ್ನು ಧಿಕ್ಕರಿಸಿ ಪ್ರಭಾತಸಂಕೀರ್ತನೆಯನ್ನು ಮಾಡಿದರೆಂಬ ಆರೋಪದ ಮೇಲೆ ಬಂಧಿಸಲ್ಪಟ್ಟಿದ್ದ 18 ಜನ ಸ್ತ್ರೀಯರಿಗೆ 100 ರೂಪಾಯಿ ದಂಡ ಇಲ್ಲವೆ 4 ತಿಂಗಳ ಸಕ್ರಮ ಶಿಕ್ಷೆಯಾಯಿತು.

ಇಂಗ್ಲೆಂಡಿನಲ್ಲಿ ಬ್ರಿಟಿಷ್ ಕೆಲಸಗಾರರಿಂದ ರಚಿಸಲ್ಪಟ್ಟ ಸಮುದ್ರದ ಅಂತಃಪ್ರದೇಶದಲ್ಲಿ ಸಂಚರಿಸುವ ಸಬ್‌ಮೆರೀನ್ ಎಂಬ ಹಡಗನ್ನು ಪರೀಕ್ಷಿಸುತ್ತಿರುವಾಗ ಅದರೊಳಗೆ ಅಕಸ್ಮಾತ್ತಾಗಿ ಸಿಡಿತಹುಟ್ಟಿ ಇಂಜಿನ್‌ಗಳು ಒಡೆದುಹೋಗಿ ಹನ್ನೆರಡುಮಂದಿ ಗಾಯಪಟ್ಟರು. ಹಡಗವೂ ಸಹ ಕೆಟ್ಟುಹೋಯಿತು. ಆದರೆ ಅದನ್ನು ಸುರಕ್ಷಿತವಾಗಿ ಚೌಧಾಂತೀರಕ್ಕೆ ಸಾಗಿಸಿದರೆಂದು ತಿಳಿದುಬರುತ್ತದೆ.

ರೌಂಡ್‌ಟೇಬಲ್‌ಕಾನ್ಫರೆನ್ಸಿಗಾಗಿ ಲಂಡನ್ನಿಗೆ ದಯಮಾಡಿದ್ದ ನಮ್ಮ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಈ ತಿಂಗಳ 15 ನೆಯ ತಾರೀಖಿನ ದಿವಸ ಪ್ರಾತಃಕಾಲ ಬೆಂಗಳೂರು ಸಿಟಿ ಸ್ಟೇಷನ್ನಿಗೆ ಬಂದಿಳಿದರು. ಆಗ ಸ್ಟೇಷನ್ನಿನಲ್ಲಿ ನೂರಾರು ಜನ ಅಧಿಕಾರಿಗಳೂ, ರಿಟೈರ್ಡ್ ಅಧಿಕಾರಿಗಳೂ, ಪ್ರಜಾಪ್ರತಿನಿಧಿಗಳೂ, ಮಹಿಳೆಯರೂ ಅವರ ಸುಖಾಗಮನವನ್ನು ಬಯಸಿ ಹಾರತುರಾಯಿಗಳನ್ನೊಪ್ಪಿಸಿದರು.

ಕಾಶಿಯಲ್ಲಿ ಪರದೇಶೀ ಬಟ್ಟೆಗಳ ವ್ಯಾಪಾರಿಗಳಾದ ಮಿ|| ಮಹಮ್ಮದ ಜಾನಬಾಸ ಎಂಬವರನ್ನು 12 ನೇ ತಾರೀಖಿನ ದಿವಸ ಯಾರೋ ಒಬ್ಬರು ಗುಂಡುಹಾಕಿ ಕೊಂದರು. ಅವರ ಸ್ಮಶಾನಯಾತ್ರೆಯ ಸಮಯದಲ್ಲಿ ಕೆಲ ದುಷ್ಟಜನರು ಕಲ್ಲುಗಳನ್ನು ಎಸೆದದ್ದರಿಂದ ಹಿಂದೂ ಮುಸಲ್ಮಾನರಲ್ಲಿ ಹೊಡೆದಾಟವಾಗಿ 15-20 ಜನರು ಮೃತರಾಗಿರುವರೆಂದೂ, ನೂರಾರುಜನರು ಗಾಯಗೊಂಡಿರುವರೆಂದೂ, ಇತ್ತೀಚೆಗೆ ಪಟ್ಟಣದಲ್ಲಿ ಶಾಂತಿಯುಂಟಾಗುತ್ತ ನಡೆದಿದೆಯೆಂದೂ ತಿಳಿದುಬರುತ್ತದೆ.

ಗಾಂಧಿ ವೈಸರಾಯರ ಸಂಭಾಷಣಗಳು ಮುಗಿದ ನಂತರ ಇಷ್ಟರಲ್ಲಿಯೇ ದೆಹಲಿಯಲ್ಲಿ ವೈಸರಾಯರು, ಅವರ ಮಂತ್ರಿಮಂಡಲದವರು, ಒಬ್ಬಿಬ್ಬರು ರಾಜರು, ಮಿತವಾದಿ ಪಕ್ಷದ ಕೆಲ ನಾಯಕರು, ಮಹಾತ್ಮಾಗಾಂಧಿಯವರು ಮತ್ತು ಅವರು ಬಯಸುವ ಕೆಲ ಜನ ಕಾಂಗ್ರೆಸ್ಸು ಮುಖಂಡರು ಇವರೆಲ್ಲರೂ ಒಟ್ಟಿಗೆ ಸೇರಿ ಒಂದು ಉಪಸಭೆಯನ್ನು ನಡೆಯಿಸುವರೆಂದೂ, ಆ ಸಭೆಯಲ್ಲಿ ಶಾಂತಿಸಂಧಾನದ ಕೊನೆಯ ತೀರ್ಮಾನವು ಉಭಯಪಕ್ಷದವರಿಂದಲೂ ನಿರ್ಧರಿಸಲ್ಪಡುವುದೆಂದೂ ಬೊಂಬಾಯಿ ಟೈಂಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಈ ತಿಂಗಳು 14 ನೆಯ ತಾರೀಖಿನ ದಿವಸ ಅರಮನೆಯ ಒಬ್ಬ ಮೋಟಾರು ಡ್ರೈವರನು ಬೆಂಗಳೂರುಸಿಟಿಯಲ್ಲಿ ಲಿಂಗಣ್ಣನೆಂಬ ಇನ್ನೊಬ್ಬ ಅರಮನೆಯ ಮೋಟಾರ್ ಡ್ರೈವರನನ್ನೂ ಮತ್ತಿಬ್ಬರನ್ನೂ ಕಳ್ಳಿರಿಸಿಕೊಂಡು ರಾತ್ರಿ ಸುಮಾರು 11½ ಗಂಟೆಯ ಸಮಯದಲ್ಲಿ ಮೋಟಾರನ್ನು ಬಹು ವೇಗವಾಗಿ ನಡೆಯಿಸಿಕೊಂಡು ಹೋಗುತ್ತಿರುವಾಗ ಪಬ್ಲಿಕ್ ಲೈಬ್ರರಿಯ ಹತ್ತಿರ ಅಪಾಯವಾದೀತೆಂದು ಥಟ್ಟನೆ ನಿಲ್ಲಿಸಿದನೆಂದೂ, ಗಾಡಿಯು ಹಾರಿ ಮಗಚಿಕೊಂಡಿತೆಂದೂ ತಿಳಿದುಬರುತ್ತದೆ. ಮೋಟಾರಿನಲ್ಲಿ ಕುಳಿತಿದ್ದ ಮೂವರಿಗೂ ತುಂಬಾ ಪೆಟ್ಟು ಬಿತ್ತು. ಲಿಂಗಣ್ಣನು ಅಲ್ಲಿಯೇ ತೀರಿಹೋದನು. ಆತನ ಶವವನ್ನು ಮರುದಿನ ಮೈಸೂರಿಗೆ ಮೋಟಾರಿನಲ್ಲಿ ತಂದು ಸೋಮವಾರ ಬೆಳಿಗ್ಗೆ ಸಮಾಧಿಮಾಡಿದರು. ಲಿಂಗಣ್ಣನು ಇನ್ನೂ ಚಿಕ್ಕಪ್ರಾಯದವನಾಗಿಯೂ ಬಾಲ್ಯಸಂಸಾರಿಯಾಗಿಯೂ, ಗುಣಾಢ್ಯನಾಗಿಯೂ ಇದ್ದನು. ಆತನ ಶವಸಂಸ್ಕಾರಕಾಲದಲ್ಲಿ ಅರಮನೆ ಗ್ಯಾರೇಜಿನ ಬಹು ಮಂದಿ ನೌಕರರು ಹಾಜರಿದ್ದು ದುಃಖಪಟ್ಟರು.

[3 ನೆಯ ಪುಟದಿಂದ ಮುಂದುವರಿದುದು]

ಪ್ರಯುಕ್ತಿಸುತ್ತಿರುವುದು ಸ್ವಾಭಾವಿಕವಾಗಿಯೇ ಇದೆ. ರಾಟೆಯನ್ನು ಪುನರುಜ್ಜೀವನಗೊಳಿಸುವುದೇ ಅವರ ಮುಖ್ಯೋದ್ದೇಶವಾಗಿದೆ. ಯಂತ್ರಗಳ ಅವಶ್ಯಕತೆ ಮತ್ತು ಅನಾವಶ್ಯಕತೆಯ ಮೇಲೆ ಅರ್ಥಶಾಸ್ತ್ರಜ್ಞರು ಭಿನ್ನಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಕೆಲವರು ಯಂತ್ರಗಳು ಜಗತ್ತಿಗೆ ಹಾನಿಕಾರಕವೆನ್ನುವರು. ಕೆಲವರು ಕೇವಲ ಉಪಯುಕ್ತವೆನ್ನುವರು. ಇಂಗ್ಲೆಂಡಿನ ಸುಪ್ರಸಿದ್ಧ ರಾಜನೀತಿವಿಶಾರದರೂ, ಅನೇಕ ಕಾರ್ಖಾನೆಯ ಅಧಿಪತಿಗಳೂ ಆದ ಜೋಸೆಫ್ ಚೆಂಬರ್ಲೇನ್‌ರವರು ಕಳೆದ ಶತಮಾನದಲ್ಲಿಯೇ ಯಂತ್ರಗಳಿಂದ ಹಾನಿಕಾರಕಪರಿಣಾಮವಾಗುವುದೆಂದು ಭಯಭ್ರಾಂತರಾಗಿ ಹೇಳುತ್ತಿದ್ದರು. ಲ್ಯಾಂಕಶೈರಿನ ಸಂಗಡ ಪೋಟಾಪೋಟಿಯು ಆರಂಭವಾಗಿ ಅದರ ಉಚ್ಛ್ರಾಯವು ಬಹುಕಾಲ ನಿಲ್ಲಲಾರದೆಂದು ಕೇವಲ ದೂರದರ್ಶಿತ್ವದಿಂದ ಹೇಳಿದರು. ಮತ್ತು ತಮ್ಮ ದೇಶೀಯರಿಗೆ ಹೇಳಿದ ಬುದ್ಧಿವಾದವೇನೆಂದರೆ "ವ್ಯವಸಾಯಮಾಡಲು ಪ್ರಾರಂಭಮಾಡಿರಿ. ಮೂರು ಎಕರೆ ಜಮೀನು, ಒಂದು ಆಕಳು ಸಂಪಾದಿಸಿಕೊಳ್ಳಿರಿ." ಆದರೂ ಇಂಗ್ಲೆಂಡಿನಲ್ಲಿ ಒಂದುನೂರಕ್ಕೆ ಎಂಬತ್ತರಂತೆ ಜನರು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರಿರುವರು. ಹಳ್ಳಿಯಪ್ರಾಂತವೆಲ್ಲ ಹುಲ್ಲುಗಾವಲಾಗಿದೆ. ಆದ್ದರಿಂದ ಈಗ ಇಂಗ್ಲೆಂಡಿನಲ್ಲಿ ಎರಡು ತಿಂಗಳು ಜನರಿಗೆ ಹೊಟ್ಟೆತುಂಬ ಅನ್ನವನ್ನು ಹಾಕುವಷ್ಟು ದವಸಧಾನ್ಯಗಳು ಬೆಳೆಯುವುದಿಲ್ಲ. ಮ್ಯಾಂಚೆಸ್ಟರ್ ಅರ್ಥಶಾಸ್ತ್ರಜ್ಞರು ಜಗತ್ತಿನ ಇತರ ರಾಷ್ಟ್ರಗಳು ತಮ್ಮ ದೇಶಕ್ಕೆ ಅವಶ್ಯಕಗಳಾದ ಪದಾರ್ಥಗಳೊನ್ನದಗಿಸುವುದೆಂದೂ, ಲ್ಯಾಂಕಶೈರ್‌ಪಟ್ಟಣವು ವಾಣಿಜ್ಯಜಗತ್ತಿನಲ್ಲಿ ನಿರ್ವಿವಾದವಾದ ಔನ್ನತ್ಯವನ್ನು ಪಡೆಯುವುದೆಂದೂ ಮಾಡಿದ ಯೋಚನೆಯು ಗಗನಪುಷ್ಪದಂತೆ ಮಿಥ್ಯಾಲಾಪವಾಯಿತು. ಬೊಂಬಾಯಿ, ಜಪಾನ್ ಮತ್ತು ಚೀನಾ ದೇಶಗಳ ಬಟ್ಟೆಮಿಲ್ಲುಗಳು ಬೇಕಾದಷ್ಟು ಬಟ್ಟೆತಯಾರಿಸಿ ಲ್ಯಾಂಕಶೈರಿನ ವ್ಯಾಪಾರವನ್ನು ಹರಣಮಾಡುತ್ತಿರುವುವು. ಇಂಗ್ಲೆಂಡ್ ದೇಶವು ಜರ್ಮನಿಯೊಡನೆ ಮಹಾಯುದ್ಧವನ್ನು ನಡೆಸಿದಾಗ ಚೈನಾದೇಶೀಯರು ಅನೇಕ ಅಂತಃಕಲಹಗಳಿಂದ ಕೂಡಿದಾಗ್ಯೂ ಷಾಂಘೇ, ಹ್ಯಾಂಕೋ ಮೊದಲಾದ ಅನೇಕ ಸ್ಥಳಗಳಲ್ಲಿ ಬಟ್ಟೆಮಿಲ್ಲುಗಳನ್ನು ತಯಾರಿಸಿ ಪರದೇಶಗಳಿಗೆ ಕಳುಹಿಸಿದರು. ಇಟಲಿದೇಶವು ಲ್ಯಾಂಕಶೈರಿನಿಂದ ಬಟ್ಟೆತಯಾರಿಸುವುದನ್ನು ಬಿಟ್ಟಿರುವುದು ಮಾತ್ರವೇ ಅಲ್ಲ, ಆ ರಾಷ್ಟ್ರವು ಈಗ ಹಿಂದೂಸ್ಥಾನಕ್ಕೂ ಸಹ ವಿಶೇಷವಾಗಿ ಮಾಲು ಕಳುಹಿಸುತ್ತಿರುವುದು. ಅಮೇರಿಕೆಯು ಈ ವಿಷಯದಲ್ಲಿ ಎಷ್ಟು ಮುಂದುವರಿದಿದೆ ಎಂಬುದನ್ನು ಹೇಳುವುದನಾವಶ್ಯಕವು. ಲ್ಯಾಂಕಶೈರಿನ ವ್ಯಾಪಾರವು ನಾಶವಾಗುತ್ತಿರುವುದೆಂಬುದು ಕೈಗನ್ನಡಿಯಂತೆ ಸ್ಪಷ್ಟವಾಗುತ್ತದೆ. ಅಮೇರಿಕಾಕ್ಕೂ ಮತ್ತು ಅನೇಕ ಪಾಶ್ಚಿಮಾತ್ಯರಾಷ್ಟ್ರಗಳಿಗೂ ಬಟ್ಟೆ, ಕಬ್ಬಿಣ, ಉಕ್ಕು, ಔಷಧೀಸಾಮಾನು ಇವುಗಳನ್ನು ಏಷಿಯಾಖಂಡದಲ್ಲಿ ವ್ಯಾಪಾರಮಾಡುವುದಕ್ಕೆ ಪರಸ್ಪರ ಪೈಪೋಟಿಯಿದೆ. ಭಾರತಭೂಮಿಯಲ್ಲಿ ಮುಂದುವರಿದ ಪಾಶ್ಚಿಮಾತ್ಯದೇಶಗಳ ಮತ್ತು ಜಪಾನ್ ದ್ವೀಪದ ಯಂತ್ರಸಾಮಗ್ರಿಗಳು ಬಂದು ಸೇರಿಗೊಂಡು ಸ್ವದೇಶಿ ಕೈಗಾರಿಕೆಯು ನಾಶವಾಗುವದಕ್ಕೆ ಅವಕಾಶವಾಗಿದೆ. ಯಂತ್ರಗಳಿಂದ ಅಪರಿಮಿತವಾಗಿ ಸಾಮಾನುಗಳು ತಯಾರಾಗಿರುವುದೊಂದು ಜಗತ್ತಿನ ಆರ್ಥಿಕಸ್ಥಿತಿಯು ಕುಗ್ಗುವುದಕ್ಕೆ ಕಾರಣವಾಗಿದೆ. 1921 ನೆಯ ಇಸವಿಯಲ್ಲಿ ಹೆನ್ರಿಫೋರ್ಡ್ ಎಂಬುವರೊಬ್ಬರೇ ದಿವಸ ಒಂದಕ್ಕೆ 4000 ಮೋಟಾರುಗಳನ್ನು ತಯಾರಿಸುತ್ತಿದ್ದರು. ಅನಂತರ ಪೈಪೋಟಿಯಿಂದ ದಿವಸ ಒಂದಕ್ಕೆ 6000 ಮೋಟಾರುಗಳನ್ನು ತಯಾರಿಸಲು ಹತ್ತಿದರು. ಹೀಗೆ ಲೆಕ್ಕವಿಲ್ಲದಷ್ಟು ಮೋಟಾರುಗಳು ತಯಾರಾಗುತ್ತಿರುವುದನ್ನು ಯೋಚಿಸಲು ಸಹ ಸಾಧ್ಯವಿಲ್ಲ. ಜಗತ್ತಿನ ಜನರು ಇವೆಲ್ಲವನ್ನೂ ಕೊಂಡುಕೊಳ್ಳುವುದು ಸಾಧ್ಯವೇ? ಯಂತ್ರಗಳ ತಯಾರಿಯಿಂದ ಉಂಟಾಗಿರುವ ನಾಗರೀಕತೆಯನ್ನು ಅಮೇರಿಕೆಯ ಒಬ್ಬ ಅರ್ಥಶಾಸ್ತ್ರಜ್ಞರು ಖಂಡಿಸುತ್ತಿರುವರು. ಜಗತ್ತಿನ ಅರ್ಧಭಾಗ ನಾಗರೀಕ ಜನರು ಯಂತ್ರಗಳಿಂದಲೇ ಎಲ್ಲಾ ಕೆಲಸಗಳನ್ನೂ ಮಾಡಿಸುವ ಉಪಾಯಗಳನ್ನು ಕಂಡುಹಿಡಿಯುವುದರಲ್ಲಿ ತಮ್ಮ ಬುದ್ಧಿಯನ್ನೆಲ್ಲಾ ಖರ್ಚುಮಾಡುತ್ತಿರುವರು. ಉಳಿದ ಅರ್ಧಭಾಗ ನಾಗರೀಕರು ನಿರುದ್ಯೋಗ ಸಮಸ್ಯೆಯನ್ನು ಹೇಗೆ ನಿವರ್ತಿಸಬೇಕೆಂಬುದರಲ್ಲಿ ತಮ್ಮ ಮೇಧಾಶಕ್ತಿಯನ್ನು ವಿನಿಯೋಗಿಸುತ್ತಿರುವರು. ಅಸ್ವಾಭಾವಿಕ ಸಂಪತ್ತಿಗೆ ಆವಾಸಸ್ಥಾನವಾಗಿರುವ ಅಮೇರಿಕಾಖಂಡದಲ್ಲಿಯೇ 80 ಲಕ್ಷ ಜನ ನಿರುದ್ಯೋಗಿಗಳಿರುವರು. ಸಾವಿರಾರು ಜನ ಗುಮಾಸ್ತರು ಸಾಮಾನ್ಯ ಕೂಲಿಗಳಂತೆ ಕೆಲಸ ಮಾಡುತ್ತಿರುವರು. ನಾನು ಎಡಿನ್‌ಬರ್ಗ್ ಕಾಲೇಜಿನಲ್ಲಿ ವಿದ್ಯಾರ್ಥಿಯಾದಂದಿನಿಂದಲೂ ಎಪ್ಪತ್ತು ವರ್ಷ ಮುದುಕನಾಗುವ ವರೆಗೂ ಪಾಶ್ಚಿಮಾತ್ಯ ವಿಜ್ಞಾನಶಾಸ್ತ್ರ ಶೋಧನೆಯಲ್ಲಿಯೇ ನನ್ನ ಕಾಲವನ್ನು ಕಳೆದಿರುವೆನು. ರಸಾಯನಶಾಸ್ತ್ರದಲ್ಲಿ ಅನೇಕ ಶೋಧಗಳನ್ನು ಮಾಡಿರುವೆನು. 1921 ನೆಯ ವರ್ಷದಲ್ಲಿ ಮಹಾತ್ಮಗಾಂಧಿಯವರು ರಾಟೆಯನ್ನು ನವೀನ ಚಳವಳಿಯಲ್ಲಿ ಪ್ರಧಾನಾಂಗವಾಗಿಟ್ಟು ಅದರ ವಿಷಯದಲ್ಲಿ ಮಮಕಾರವನ್ನು ವ್ಯಕ್ತಪಡಿಸಿದಾಗ ಪೂರ್ವಕಾಲದ ಅನಾಗರೀಕ ಪದ್ಧತಿಯನ್ನು ಜಾರಿಗೆ ತರಲೆತ್ನಿಸುವರೆಂದು ನಾನು ಸಹ ಹುಸಿನಗೆ ನಕ್ಕವನೆ! ಆದರೆ ಬಂಗಾಲದಲ್ಲಿ ಪ್ರವಾಹದಿಂದ ಅನೇಕ ಜನರು ಮನೆಮಠಗಳನ್ನು ಕಳೆದುಕೊಂಡು ಅನಂತ ಕಷ್ಟಪರಂಪರೆಗಳಿಗೀಡಾದಾಗ ಅವರಿಗೆ ಯಾವ ವೃತ್ತಿಯನ್ನು ಕಲ್ಪಿಸಿಕೊಡಬೇಕೆಂಬ ಯೋಚನೆಯು ಬಂದಾಗ ಮಹಾತ್ಮರ ಚರಕದ ಅಮೂಲ್ಯಯೋಗ್ಯತೆಯು ನನಗೆ ಮನದಟ್ಟಾಯಿತು. ಆಂಗ್ಲೇಯರು ಹಿಂದೂಸ್ಥಾನದಲ್ಲಿ ಕಾಲಿಡುವುದಕ್ಕೆ ಪೂರ್ವದಲ್ಲಿ ಪಾಶ್ಚಿಮಾತ್ಯರ ಪೈಪೋಟಿಯು ಇಲ್ಲದಿರುವಾಗ ನಮ್ಮ ದೇಶದಲ್ಲಿ ಪ್ರತಿಯೊಂದು ಹಳ್ಳಿಯೂ ಕೇವಲ ಸ್ವಾವಲಂಬನದಿಂದ ತೃಪ್ತಿಹೊಂದಿದ್ದಿತು. ಚರಕದಿಂದ ನೂಲು ತಯಾರಾದೊಡನೆಯೇ ನೇಕಾರರಿಗೆ ಕೆಲಸವು ಸಿಕ್ಕುತ್ತಿತ್ತು. ಬಡಗಿಗಳಿಗೂ, ಕಮ್ಮಾರರಿಗೂ, ಬಂಡಿಮಾಡುವವರಿಗೂ, ದೋಣಿಯವರಿಗೂ ಕೆಲಸವು ಒದಗಿ ಅವರಿಗೆ ಆಹಾರವು ದೊರೆಯುತ್ತಿತ್ತು.

ಈಗ ವಿದೇಶದ ಯಂತ್ರಗಳಿಂದ ತಯಾರಿಸಲ್ಪಟ್ಟ ಸಾಮಾನುಗಳು ಹೇರಳವಾಗಿ ಬಂದು ನಮ್ಮ ಕೈಗಾರಿಕೆಯನ್ನು ನಾಶಮಾಡಿ ನಮ್ಮ ಬಡವರಿಗೆ ಕೆಲಸವಿಲ್ಲದಂತಾಗಿ ಅಶನವಸನಗಳಿಗೆ ಕೊಂದರೆಯಾಗಿದೆ ದೇಶದ ದಾರಿದ್ರ್ಯವು ದಿನೇ ದಿನೇ ಹೆಚ್ಚುತ್ತಲಿದೆ. ಮಿ|| ಡಾರ್ಲಿಂಗ್ ಎಂಬೊಬ್ಬ ಆಂಗ್ಲೇಯ ವಿದ್ವಾಂಸರು ಹಿಂದೂಸ್ಥಾನದ ರೈತರಿಗೆ 500 ಕೋಟಿ ರೂಪಾಯಿಗಳ ಸಾಲವಿದೆಯೆಂದು ನಿಶ್ಚಯಿಸಿದ್ದಾರೆ. ಬಂಗಾಲ ಪ್ರಾಂತವು ಗಂಗಾನದಿಯು ಹರಿಯುವುದರಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ ಹಿಂದೂಸ್ಥಾನದಲ್ಲೆಲ್ಲ ಅತ್ಯಂತ ಫಲವತ್ತಾದ ದೇಶವಾಗಿದೆ. ಆದರೂ ಆ ಪ್ರಾಂತ್ಯದಲ್ಲಿ ರೈತರು 100 ಕೋಟಿ ರೂ. ಗಳ ಸಾಲಕ್ಕೀಡಾಗಿರುವರು. ಮಹಾರಾಷ್ಟ್ರ ಪ್ರಾಂತದ ಸಾಲವನ್ನು ಹೇಳುವುದೇನು? ಮಿ|| ಜೆ. ಟಿ. ಗ್ಯಾರೆಟ್‌ರವರು ಮಹಾರಾಷ್ಟ್ರದ ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬದುಕಿ, ಸಾಲದಲ್ಲಿ ಅವಸಾನವನ್ನೈದುವರೆಂದು ಹೇಳಿರುವರು. ಸುಗ್ಗಿಯಿಲ್ಲದಿರುವ ಕಾಲದಲ್ಲಿ ಅಸಂಖ್ಯ ಜನರು ನಿರರ್ಥಕವಾಗಿ ಸೋಮಾರಿತನದಲ್ಲಿ ಹೊತ್ತುಕಳೆಯುವರು. ಇವರಲ್ಲಿ ಸ್ವಲ್ಪಜನರಾದರೂ ರಾಟೆಯನ್ನು ನಡೆಯಿಸಲು ಪ್ರಾರಂಭಿಸಿದರೆ, ನಮ್ಮ ದೇಶಕ್ಕೆ ಸಾಕಾಗುವಷ್ಟು ಬಟ್ಟೆಯನ್ನು ತಯಾರಿಸಬಹುದು. ನಮ್ಮ ದೇಶದಲ್ಲಿ 32 ಕೋಟಿ ಪ್ರಜೆಗಳಿದ್ದಾರೆ. ಸೆನ್ಸಸ್ ರಿಪೋರ್ಟು ಪ್ರಕಾರ ಪ್ರತಿಯೊಂದು ಕುಟುಂಬದಲ್ಲಿಯೂ ಸರಾಸರಿ ಐವರು ಜನರಿರುವರೆಂದು ನಿಶ್ಚಯಿಸಲ್ಪಟ್ಟಿದೆ. ಆದ್ದರಿಂದ ಹಿಂದೂಸ್ಥಾನದಲ್ಲಿ 6 ಕೋಟಿ 40 ಲಕ್ಷ ಕುಟುಂಬಗಳಿವೆ ಎಂಬುದು ಸಿದ್ಧವಾಗುತ್ತದೆ. ಪ್ರತಿಯೊಂದು ಕುಟುಂಬವೂ ದಿನ ಒಂದಕ್ಕೆ ಅರ್ಧಾಣೆಯಂತೆ ಸಂಪಾದಿಸಿದರೆ ದಿನ ಒಂದಕ್ಕೆ ಭಾರತೀಯರು 20 ಲಕ್ಷ ರೂ. ಗಳನ್ನು ಸಂಪಾದಿಸಿದಂತಾಗುವುದು. ವರ್ಷ ಒಂದಕ್ಕೆ 73 ಕೋಟಿ ರೂಪಾಯಿಗಳು ಸಂಪಾದನೆಯಾಗುವುದು.

ಚೈನಾದಲ್ಲಿ ವಿದೇಶಿವಸ್ತ್ರ ಧರಿಸುವ ಸ್ತ್ರೀಯರ ವಸ್ತ್ರಗಳ ಮೇಲೆ ಮುದ್ರೆ ಹಾಕುವರು.

ಚೈನಾ ದೇಶದ ಸ್ಥಿತಿಗತಿಗಳು ಬಹುಮಟ್ಟಿಗೆ ಹಿಂದೂಸ್ಥಾನದ ಸ್ಥಿತಿಗತಿಗಳಿಗೆ ಸರಿಹೋಲುವುದರಿಂದ ಇತ್ತೀಚೆಗೆ ದೇಶದ ಆರ್ಥಿಕ ಸ್ಥಿತಿಯನ್ನು ಕೂಲಂಕಷವಾಗಿ ಅಭ್ಯಾಸ ಮಾಡುತ್ತಿರುವೆನು. ಆ ದೇಶದಲ್ಲಿ 48 ಕೋಟಿ ಜನ ಪ್ರಜೆಗಳಿದ್ದಾರೆ. ಅಲ್ಲಿಯೂ ಸಹ ವಿದೇಶಗಳಿಂದ ಬರುವ ಯಂತ್ರಗಳ ಸಾಮಾನುಗಳಿಂದ ದೇಶೀಯರು ನಿರುದ್ಯೋಗಿಗಳಾಗಿಯೂ, ಕೇವಲ ಬಡವರಾಗಿಯೂ ಇದ್ದಾರೆ. ಸ್ವದೇಶಿ ಸಾಮಾನುಗಳನ್ನು ಸಾರ್ವತ್ರಿಕವಾಗಿ ಪ್ರಸಾರಮಾಡಬೇಕೆಂದು ಚೈನಾ ದೇಶದ ತರುಣರು ಅತ್ಯಂತ ಸಾಹಸ ಮಾಡುತ್ತಿರುವರು.

ಈ ವಿಷಯದಲ್ಲಿ ಒಬ್ಬ ಅಮೇರಿಕೆಯ ವಿದ್ವಾಂಸರು ಹೇಳುವುದೇನೆಂದರೆ—"ಪರದೇಶಿ ವಸ್ತುಗಳನ್ನು ನಿರೋಧಿಸತಕ್ಕ ಸಾಂಘೀಪಟ್ಟಣದ ತರುಣರು ವಿದೇಶಿವಸ್ತ್ರಗಳನ್ನು ಧರಿಸುವ ಸ್ತ್ರೀಯರನ್ನು ಅವಹೇಳನಕ್ಕೀಡುಮಾಡುವರು. ಈ ತರುಣರು ದೊಡ್ಡ ರಬ್ಬರ್ ಸ್ಟ್ಯಾಂಪುಗಳನ್ನೂ ಕೆಂಪುಮಸಿ ಪ್ಯಾಡನ್ನೂ ತಮ್ಮ ಅಂಗಿಗಳಲ್ಲಿ ಬಚ್ಚಿಟ್ಟುಕೊಳ್ಳುವರು. ಯಾವ ಸ್ತ್ರೀಯಳೇ ಆಗಲಿ ವಿದೇಶಿ ವಸ್ತ್ರಗಳನ್ನು ಧರಿಸಿಕೊಂಡು ಬೀದಿಯಲ್ಲಿ ಬಂದಕೂಡಲೆ ಕಣ್ಣುಮುಚ್ಚಿ ಕಣ್ಣು ತೆರೆಯುವುದರೊಳಗೆ ಅವರ ಬಟ್ಟೆಯ ಮೇಲೆ ಮುದ್ರೆ ಒತ್ತುವರು. ಅದರಲ್ಲಿ ಚೀನಾ ಅಕ್ಷರಗಳಿಂದ ನಾನು ವಿದೇಶಿವಸ್ತ್ರಗಳನ್ನು ಧರಿಸುವುದರಿಂದ ಮಾನ್ಯಸ್ತ್ರೀಯಳಲ್ಲವೆಂದು ಬರೆಯಲ್ಪಟ್ಟಿರುವುದು. ಹೀಗೆ ಮುದ್ರೆಯೊತ್ತಿದೊಡನೆಯೇ ಕೆಲವು ಜನರೊಂದಿಗೆ ಅದೃಶ್ಯರಾಗುವರು. ಅನಂತರ ಆ ಸ್ತ್ರೀಯರು ಅಳುತ್ತಾ ಜನರ ಅವಮಾನಕ್ಕೊಳಗಾಗಿ ಖಿನ್ನವದನರಾಗಿ ಹಿಂದಿರುಗುವರು." ಯೂರೋಪ್, ಅಮೇರಿಕಾ ಮತ್ತು ಜಪಾನಿನವರು ತಮ್ಮ ಸ್ವದೇಶಿ ಕೈಗಾರಿಕೆಗಳನ್ನು ವೃದ್ಧಿಪಡಿಸಲು ಅವಿಶ್ರಾಂತ ಶ್ರಮಪಡುತ್ತಿರುವರು. ನಾವು ಸರಕಾರದ ಸಹಾಯವಿಲ್ಲದೆ ನಮ್ಮ ಕೈಗಾರಿಕೆಗಳನ್ನು ವೃದ್ಧಿಪಡಿಸಬೇಕಾಗಿದೆ. ಸ್ವದೇಶಿ ಎಂಬುದು ದೇಶಾಭಿಮಾನವೆಂಬುದರ ಪರ್ಯಾಯನಾಮವಾಗಿದೆ. ಪ್ರತಿಯೊಬ್ಬ ಭಾರತೀಯ ತರುಣ ತರುಣಿಯರು ವಿದೇಶಿವಸ್ತ್ರಗಳು ನುಣುಪಾಗಿ ಆಕರ್ಷಣೀಯವಾಗಿದ್ದರೂ ಅವುಗಳನ್ನು ತ್ಯಜಿಸಿ ಸ್ವದೇಶಿವಸ್ತ್ರಗಳು ಒರಟಾಗಿದ್ದರೂ ಅವುಗಳನ್ನೇ ಉಪಯೋಗಿಸಬೇಕೆಂದು ಬೋಧಿಸುವೆನು. ಯಾರು ಸ್ವದೇಶಿ ವಸ್ತುಗಳನ್ನು ತಿರಸ್ಕರಿಸಿ ವಿದೇಶಿಸಾಮಾನುಗಳನ್ನು ಉಪಯೋಗಿಸುವರೋ ಅವರನ್ನು ದೇಶದ್ರೋಹಿಗಳೆಂದು ಕರೆಯಲು ಹಿಂಜರಿಯುವುದಿಲ್ಲ.

ಇಂಡಿಯಾದೇಶದ ರೈಲ್ವೆ ಲೆಕ್ಕದಲ್ಲಿ ಮುಂದಿನ ವರ್ಷ 5 ಕೋಟಿ ರೂಪಾಯಿಗಳ ವರಮಾನವು ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಕಲ್ಕತ್ತೆಯ ಪೌರಸಭಾಧ್ಯಕ್ಷರಾದ ಶ್ರೀಯುತ ಸುಭಾಷಚಂದ್ರಬೋಸ್‌ರವರು ಕಳೆದ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಪೋಲೀಸಿನವರ ಲಾಠಿಯಿಂದ ಹೊಡೆಯಲ್ಪಟ್ಟಂದಿನಿಂದಲೂ ಅವರ ಬಲ ಮುಂಗೈ ಸ್ವಾಧೀನದಲ್ಲಿಲ್ಲದೆ ಬಹು ವ್ಯಥೆಯನ್ನುಂಟುಮಾಡಿದೆ ಎಂದೂ ಆದಕಾರಣ ಅವರನ್ನು ಅಲಿಪುರದ ಜೈಲಿನಲ್ಲಿ ಎಕ್ಸ್ ರೇ ಯಂತ್ರದ ಮೂಲಕ ಪರೀಕ್ಷಿಸುವರೆಂದೂ ತಿಳಿದುಬರುತ್ತದೆ.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳುವದು ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ವಾದಿಸಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತೆ ಮತ್ತು ತೆಳುವಾಗುವದು, ಸ್ತ್ರೀಸ್ಪರ್ಶಮಾತ್ರದಿಂದ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಚಿಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೋಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೨೧ ದಿವಸ ಸಾಕಾಗುವಷ್ಟು ೨೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ. [30]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಗ್ಗೆದ ಶೆರಗು ಕಡೆಗಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ವಿನುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭನಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಭದೋಷದಿಂದ ಸುಟ್ಟ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಶುದ್ಧವಾಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೨೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—**ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.**

ತರ
ಗಳು,
...ರಿ.

...ವಾಗಲಿ, ಹಾಗೆಯಾಗಲಿ ಪ್ರತಿದಿನವೂ ...ದೇಹಕ್ಕೆ ವಿರುದ್ಧವಾಗಬಹುದಾದ ಆಹಾರವನ್ನಾದರೂ ಜೀರ್ಣೀಕರಿಸಿ ...ರೋಗಗಳಿಗೆ ದಾರಿಗೊಡದೆ ನರಗಳಿಗೆ ...ಮಂದ, ಶೀತ, ಶೀತವಾತ, ನಗಡಿ, ...ರದ ಹೊಟ್ಟೆನೋವು, ಮಲಬದ್ಧ, ...ಅಜೀರ್ಣಭೇದಿ, ಮಕ್ಕಳ ಎಳವು, ...ಮ ಜ್ವರ, ಕೆಂಪ ಜೀರ್ಣಿಸದ ಭೇದಿ ...ದೆ. ಬಾಣಂತಿಯರಿಗೆ ಸಂಜೀವನ ...ಲ ವ್ಯಾಪಾರವನ್ನು ಮಾಡಲುವರಾ... ...ವರ್ಧನಕ್ಕೆ ಈ ಮಾತ್ರೆಗಳು ಸರಿಯ... ...ಮಾತ್ರೆಗಳಲ್ಲಿ ಸೇರಿಲ್ಲವಾದುದ ...ಯಹರ ಕಸೂರಿಮಾತ್ರೆಯ ಒಂದು ...ಗೆ ಅರಿಯುವುದೂ ತಪ್ಪುತ್ತದೆ. ಈ ...ದೆ.
...ಶವನ್ನೂ ಯಥೇಷ್ಟರಾದ ವ್ಯಾಪಾರಕ

ವೈದ್ಯಶಾಲಾ, ಮೈಸೂರು.
ಸಿಟಿ.

SUPPLEMENT TO THIS ISSUE.

...ಮು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ...೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಖರತೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ...ನ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ...ಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ...ಪ್ರದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ...ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ...ಗುಂಜೆಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (೫೬) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ...ಲ್ಲಿ ಸರ್ವರೋಗೋಪಯುಕ್ತಗಳಾದ ಮಿಯತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ರಿಪೋರ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ...ಶಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೊರಳಿನ ...ಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ...ಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ... ...ರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ...ರಿಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರ್ಮದಲ್ಲಿ ರತರಾದ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ... ...ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ...ಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ...ಮಿಷನ್. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ...ಮಿಷನ್. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ...ಮಿಷನ್ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ಏನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪ ವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] **ವಜ್ರಾಂಗ ಸುಂದರಪಾಕ.** [ಸ್ಟರ್ಡ	ಧಿಕ್ಕರಿಸದೆ, ಕ್ಷೀಣತೆಯನ್ನು ಕಾಯ್ದುಕೊಳ್ಳುವಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶಮಾತ್ರ ಕೂಡಲೆ ವೀರ್ಯಸ್ಖಲನ, ಶಿಲುಭಸನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹಳೇ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಕೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೋಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೨ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾವೆ ೨ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮಾರ್ಗ ಗುಣಬರುತ್ತದೆ. ಇದರಲ್ಲಿ ೫೨ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ವಲ್ಪ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಡಬ್ಬಿಗೆ ಕಡಿಮೆ ಕಳುಹಿಸಲಾಗದು. [31]

ಪತ್ತೆ:—**ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.**

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿವಸಗಳ ಜ್ವರ, 8 ದಿವಸಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸಾಕಿಸಂಪತ್ತಿದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ೧—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಗ್ನಿಜ್ವರ, ಉಬ್ಬಸ ಶೀತಸ, ಎದೆಗೂಡು ಕೆಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಳಹೀನರಾಗುವುದು, ಮೂತ್ರದಲ್ಲಿ ಬಿಳೀಭಾಗ, ಹೊಟ್ಟೆ ಹುಳಗಳ ಕೆಡಕಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಬಿಸ್ಕತ್ತು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[29] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ.) ಮಂಗಳೂರು, ದ. ಕ.**

[3 ನೆಯ ಪುಟದಿಂದ ಮುಂ

ಪ್ರಯತ್ನಿಸುತ್ತಿರುವನು ಸ್ವಾಭಾವಿಕ ... ಯನ್ನು ಪುನರುಜ್ಜೀವನಗೊಳಿಸುವುದೇ ... ವಾಗಿದೆ. ಯಂತ್ರಗಳ ಅವಶ್ಯಕತೆ ... ಮೇಲೆ ಅರ್ಥಶಾಸ್ತ್ರಜ್ಞರು ಭಿನ್ನಭಿ... ದ್ದಾರೆ. ಕೆಲವರು ಯಂತ್ರಗಳು ಜ... ವರು. ಕೆಲವರು ಕೇವಲ ಉಪಯು... ಸುಪ್ರಸಿದ್ಧ ರಾಜತಂತ್ರವಿಶಾರದರೂ, ಅಧಿಪತಿಗಳೂ ಆದ ಜೋಸೆಫ್ ಚೆಂಬರ್... ನದಲ್ಲಿಯೇ ಯಂತ್ರಗಳಿಂದ ಹಾ... ದೆಂದು ಭಯಭ್ರಾಂತರಾಗಿ ಹೇಳ... ಸಂಗದ ಪೋಟಾಪೋಟಿಯು ಆರಂಭ... ಬಹುಕಾಲ ನಿಲ್ಲಲಾರದೆಂದು ಕೇವಲ ... ದರು. ಮತ್ತು ತಮ್ಮ ದೇಶೀಯರಿಗೆ ... ದರೆ. "ವ್ಯವಸಾಯಮಾಡಲು ... ಎಕರೆ ಜಮೀನು, ಒಂದು ಆಕಳು ಸಂ... ಇಂಗ್ಲೆಂಡಿನಲ್ಲಿ ಒಂದುನೂರಕ್ಕೆ ... ಳನ್ನು ಬಿಟ್ಟು ಪಟ್ಟಣಗಳನ್ನು ಸೇ... ವೆಲ್ಲ ಹುಲ್ಲುಗಾವಲಾಗಿದೆ. ಆದ್ದ... ಎರಡು ತಿಂಗಳು ಜನರಿಗೆ ಹೊಟ್ಟೆಗೆ ... ದವಸಧಾನ್ಯಗಳು ಬೆಳೆಯುವುದಿಲ್ಲ. ವ್ಯಾ... ಜ್ಞರು ಜಗತ್ತಿನ ಇತರ ರಾಷ್ಟ್ರಗಳು ತ... ಗಳಾದ ಪದಾರ್ಥಗಳೊನ್ನದಗಿಸುವುದೆಂದೂ ... ವ ವಾಣಿಜ್ಯಜಗತ್ತಿನಲ್ಲಿ ನಿರ್ನಾಮವಾದ ... ವುದೆಂದೂ ಮಾಡಿದ ಯೋಚನೆಯು ಗಗನ... ಕುಸುಮವಾಯಿತು. ಬೊಂಬಾಯಿ, ಜಪಾನ್ ಮ... ಬಟ್ಟೆಮಿಲ್ಲುಗಳು ಬೇಕಾದಷ್ಟು ಬಟ್ಟೆ ತಯಾರಿಸಿ ಲ್ಯಾಂಕಷೈರಿನ ವ್ಯಾಪಾರವನ್ನು ಹಣವಮಾಡುತ್ತಿರುವುವು. ಇಂಗ್ಲೆಂಡ್ ದೇಶವು ಜರ್ಮನಿಯೊಡನೆ ಮಹಾಯುದ್ಧವನ್ನು ನಡೆಸಿದಾಗ ಜೈನಾದೇಶೀಯರು ಅನೇಕ ಅಂತಃಕಲಹಗಳಿಂದ ಕೂಡಿದಾಗ್ಯೂ, ಷಾಂಘೈ, ಹ್ಯಾಂಕೋ ಮೊದಲಾದ ಅನೇಕ ಸ್ಥಳಗಳಲ್ಲಿ ಬಟ್ಟೆಮಿಲ್ಲುಗಳನ್ನು ತಯಾರಿಸಿ ಪರದೇಶಗಳಿಗೆ ಕಳುಹಿಸಿದರು. ಇಟಲಿದೇಶವು ಲ್ಯಾಂಕಷೈರಿನಿಂದ ಬಟ್ಟೆ ತಯಾರಿಸುವುದನ್ನು ಬಿಟ್ಟಿರುವುದು ಮಾತ್ರವೇ ಅಲ್ಲ, ಆ ರಾಷ್ಟ್ರವು ಈಗ ಹಿಂದೂಸ್ಥಾನಕ್ಕೂ ಸಹ ವಿಶೇಷವಾಗಿ ಮಾಲು ಕಳುಹಿಸುತ್ತಿರುವುದು. ಅಮೇರಿಕೆಯು ಈ ವಿಷಯದಲ್ಲಿ ಎಷ್ಟು ಮುಂದುವರಿದಿದೆ ಎಂಬುದನ್ನು ಹೇಳುವುದ ನಾವಶ್ಯಕವು. ಲ್ಯಾಂಕಷೈರಿನ ವ್ಯಾಪಾರವು ನಾಶವಾಗುತ್ತಿರುವುದೆಂಬುದು ಕೈಗನ್ನಡಿಯಂತೆ ಸ್ಪಷ್ಟವಾಗುತ್ತದೆ. ಅಮೆರಿಕಾಕ್ಕೂ ಮತ್ತು ಅನೇಕ ಪಾಶ್ಚಿಮಾತ್ಯರಾಷ್ಟ್ರಗಳಿಗೂ ಬಟ್ಟೆ, ಕಬ್ಬಿಣ, ಉಕ್ಕು, ಔಷಧಿಸಾಮಾನು ಇವುಗಳನ್ನು ಏಷಿಯಾಖಂಡದಲ್ಲಿ ವ್ಯಾಪಾರಮಾಡುವುದಕ್ಕೆ ಪರಸ್ಪರ ಪೈಪೋಟಿಯಿದೆ. ಭಾರತಭೂಮಿಯಲ್ಲಿ ಮುಂದುವರಿದ ಪಾಶ್ಚಿಮಾತ್ಯದೇಶಗಳ ಮತ್ತು ಜಪಾನ್ ದೇಶದ ಯಂತ್ರಸಾಮಗ್ರಿಗಳು ಬಂದು ಸೇರಿರೆಂದು ಸ್ವದೇಶಿ ಕೈಗಾರಿಕೆಯು ನಾಶವಾಗುವದಕ್ಕೆ ಅವಕಾಶವಾಗಿದೆ. ಯಂತ್ರಗಳಿಂದ ಅಪರಿಮಿತವಾಗಿ ಸಾಮಾನುಗಳು ತಯಾರಾಗಿರುವುದೊಂದು ಜಗತ್ತಿನ ಆರ್ಥಿಕಸ್ಥಿತಿಯು ಕುಗ್ಗುವುದಕ್ಕೆ ಕಾರಣವಾಗಿದೆ. 1921 ನೆಯ ಇಸವಿಯಲ್ಲಿ ಹೆನ್ರಿಫೋರ್ಡ್ ಎಂಬುವರೊಬ್ಬರೇ ದಿವಸ ಒಂದಕ್ಕೆ 4000 ಮೋಟಾರುಗಳನ್ನು ತಯಾರಿಸುತ್ತಿದ್ದರು. ಅನಂತರ ಪೈಪೋಟಿಯಿಂದ ದಿವಸ ಒಂದಕ್ಕೆ 6000 ಮೋಟಾರುಗಳನ್ನು ತಯಾರಿಸಲು ಹತ್ತಿದರು. ಹೀಗೆ ಲೆಕ್ಕವಿಲ್ಲದಷ್ಟು ಮೋಟಾರುಗಳು ತಯಾರಾಗುತ್ತಿರುವುದನ್ನು ಯೋಚಿಸಲು ಸಹ ಸಾಧ್ಯವಿಲ್ಲ. ಜಗತ್ತಿನ ಜನರು ಇವೆಲ್ಲವನ್ನೂ ಕೊಂಡುಕೊಳ್ಳುವುದು ಸಾಧ್ಯವೇ? ಯಂತ್ರಗಳ ತಯಾರಿಯಿಂದ ಉಂಟಾಗಿರುವ ನಾಗರೀಕತೆಯನ್ನು ಅಮೆರಿಕೆಯ ಒಬ್ಬ ಅರ್ಥಶಾಸ್ತ್ರಜ್ಞರು ಖಂಡಿಸುತ್ತಿರುವರು. ಜಗತ್ತಿನ ಅರ್ಧಭಾಗ ನಾಗರೀಕ ಜನರು ಯಂತ್ರಗಳಿಂದಲೇ ಎಲ್ಲಾ ಕೆಲಸಗಳನ್ನೂ ಮಾಡಿಸುವ ಉಪಾಯಗಳನ್ನು ಕಂಡುಹಿಡಿಯುವುದರಲ್ಲಿ ತಮ್ಮ ಬುದ್ಧಿಯನ್ನೆಲ್ಲಾ ಖರ್ಚುಮಾಡುತ್ತಿರುವರು. ಉಳಿದ ಅರ್ಧಭಾಗ ನಾಗರೀಕರು ನಿರುದ್ಯೋಗ ಸಮಸ್ಯೆಯನ್ನು ಹೇಗೆ ನಿರ್ವಹಿಸಬೇಕೆಂಬುದರಲ್ಲಿ ತಮ್ಮ ಮೇಧಾಶಕ್ತಿಯನ್ನು ವಿನಿಯೋಗಿಸುತ್ತಿರುವರು. ಅಸಾಧ್ಯವಾದ ಸಂಪತ್ತಿಗೆ ಆವಾಸಸ್ಥಾನವಾಗಿರುವ ಅಮೆರಿಕಾಖಂಡದಲ್ಲಿಯೇ 80 ಲಕ್ಷ ಜನ ನಿರುದ್ಯೋಗಿಗಳಿರುವರು. ಸಾವಿರಾರು ಜನ ಗುಮಾಸ್ತರು ಸಾಮಾನ್ಯ ಕೂಲಿಗಳಂತೆ ಕೆಲಸ ಮಾಡುತ್ತಿರುವರು. ನಾನು ಎಡಿನ್‌ಬರ್ಗ್ ಕಾಲೇಜಿನಲ್ಲಿ ವಿದ್ಯಾರ್ಥಿಯಾದಂದಿನಿಂದಲೂ ಎಪ್ಪತ್ತು ವರ್ಷ ಮುದುಕನಾಗುವ

ಇಂಡಿಯಾದೇಶದ ರೇಲ್ವೆ ಲೆಕ್ಕದಲ್ಲಿ ಮುಂದಿನ ವರ್ಷ 5 ಕೋಟಿ ರೂಪಾಯಿಗಳ ವರಮಾನವು ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಕಲ್ಕತ್ತೆಯ ಪೌರಸಭಾಧ್ಯಕ್ಷರಾದ ಶ್ರೀಯುತ ಸುಭಾಷಚಂದ್ರಬೋಸ್‌ರವರು ಕಳೆದ ಸ್ವಾತಂತ್ರ್ಯ ದಿನಾಚರಣೆ ಸಂಬಂಧವಾಗಿ ಪೋಲೀಸಿನವರ ಲಾಠಿಯಿಂದ ಹೊಡೆಯಲ್ಪಟ್ಟಂದಿನಿಂದಲೂ ಅವರ ಬಲ ಮುಂಗೈ ಸ್ವಾಧೀನದಲ್ಲಿಲ್ಲದೆ ಬಹು ವ್ಯಥೆಯನ್ನುಂಟು ಮಾಡಿದೆ ಎಂದೂ ಆದಕಾರಣ ಅವರನ್ನು ಅಲಿಪುರದ ಜೈಲಿನಲ್ಲಿ ಎಕ್ಸ್‌ರೇ ಯಂತ್ರದ ಮೂಲಕ ಪರೀಕ್ಷಿಸುವರೆಂದೂ ತಿಳಿದುಬರುತ್ತದೆ.

ನದಿಯು ಹರಿಯುವುದರಿಂದಲೂ, ಇನ್ನೂ ಅನೇಕ ಕಾರಣಗಳಿಂದಲೂ ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಫಲವತ್ತಾದ ದೇಶವಾಗಿದೆ. ಆದರೂ ಆ ಪ್ರಾಂತ್ಯದಲ್ಲಿ ರೈತರು 100 ಕೋಟಿ ರೂ. ಗಳ ಸಾಲಕ್ಕೀಡಾಗಿರುವರು. ಮಹಾರಾಷ್ಟ್ರ ಪ್ರಾಂತದ ಸಾಲವನ್ನು ಹೇಳುವುದೇನು? ಮಿ|| ಜಿ. ಟಿ. ಗ್ಯಾರೆಟ್‌ರವರು ಮಹಾರಾಷ್ಟ್ರದ ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬದುಕಿ, ಸಾಲದಲ್ಲಿ ಅವಸಾನವನ್ನೈದುವರೆಂದು ಹೇಳಿರುವರು. ಸುಗ್ಗಿಯಿಲ್ಲದಿರುವ ಕಾಲದಲ್ಲಿ ಅಸಂಖ್ಯ ಜನರು ನಿರರ್ಥಕವಾಗಿ ಸೋಮಾರಿತನದಲ್ಲಿ ಹೊತ್ತು ಕಳೆಯುವರು. ಇವರಲ್ಲಿ ಸ್ವಲ್ಪ ಜನರಾದರೂ ರಾಟಿಯನ್ನು ನಡೆಯಿಸಲು ಪ್ರಾರಂಭಿಸಿದರೆ, ನಮ್ಮ ದೇಶಕ್ಕೆ ಸಾಕಾಗುವಷ್ಟು ಬಟ್ಟೆಯನ್ನು ತಯಾರಿಸಬಹುದು. ನಮ್ಮ ದೇಶದಲ್ಲಿ 32 ಕೋಟಿ ಪ್ರಜೆಗಳಿದ್ದಾರೆ. ಸೆನ್ಸಸ್ ರಿಪೋರ್ಟಿನ ಪ್ರಕಾರ ಪ್ರತಿಯೊಂದು ಕುಟುಂಬದಲ್ಲಿಯೂ ಸರಾಸರಿ ಐವರು ಜನರಿರುವರೆಂದು ನಿಶ್ಚಯಿಸಲ್ಪಟ್ಟಿದೆ. ಆದ್ದರಿಂದ ಹಿಂದುಸ್ಥಾನದಲ್ಲಿ 6 ಕೋಟಿ 40 ಲಕ್ಷ ಕುಟುಂಬಗಳಿವೆ ಎಂಬುದು ಸಿದ್ಧವಾಗುತ್ತದೆ. ಪ್ರತಿಯೊಂದು ಕುಟುಂಬವೂ ದಿನ ಒಂದಕ್ಕೆ ಅರ್ಧಾಣೆಯಂತೆ ಸಂಪಾದಿಸಿದರೆ ದಿನ ಒಂದಕ್ಕೆ ಭಾರತೀಯರು 20 ಲಕ್ಷ ರೂ. ಗಳನ್ನು ಸಂಪಾದಿಸಿದಂತಾಗುವುದು. ವರ್ಷ ಒಂದಕ್ಕೆ 73 ಕೋಟಿ ರೂಪಾಯಿಗಳು ಸಂಪಾದನೆಯಾಗುವುದು.

ಚೈನಾದಲ್ಲಿ ವಿದೇಶಿವಸ್ತ್ರ ಧರಿಸುವ ಸ್ತ್ರೀಯರ ವಸ್ತ್ರಗಳ ಮೇಲೆ ಮುದ್ರೆ ಹಾಕುವರು.

ಚೈನಾ ದೇಶದ ಸ್ತ್ರೀಗಳು ಬಹುಮಟ್ಟಿಗೆ ಹಿಂದುಸ್ಥಾನದ ಸ್ತ್ರೀಗಳಿಗೆ ಸರಿಹೋಲುವುದರಿಂದ ಇತ್ತೀಚೆಗೆ ದೇಶದ ಆರ್ಥಿಕಸ್ಥಿತಿಯನ್ನು ಕೂಲಂಕಷವಾಗಿ ಅಭ್ಯಾಸ ಮಾಡುತ್ತಿರುವೆನು. ಆ ದೇಶದಲ್ಲಿ 48 ಕೋಟಿ ಜನ ಪ್ರಜೆಗಳಿದ್ದಾರೆ. ಅಲ್ಲಿಯೂ ಸಹ ವಿದೇಶಗಳಿಂದ ಬರುವ ಯಂತ್ರಗಳ ಸಾಮಾನುಗಳಿಂದ ದೇಶೀಯರು ನಿರುದ್ಯೋಗಿಗಳಾಗಿಯೂ, ಕೇವಲ ಬಡವರಾಗಿಯೂ ಇದ್ದಾರೆ. ಸ್ವದೇಶಿ ಸಾಮಾನುಗಳನ್ನು ಸಾರ್ವತ್ರಿಕವಾಗಿ ಪ್ರಸಾರಮಾಡಬೇಕೆಂದು ಚೈನಾ ದೇಶದ ತರುಣರು ಅತ್ಯಂತ ಸಾಹಸ ಮಾಡುತ್ತಿರುವರು.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸತ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳುವದು ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು.

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪೌಷ್ಟಿಕ ಶಕ್ತಿವರ್ಧಕವಾದ ಅನೇಕ ವನಸ್ಪತಿಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತೆ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶವಾದಕೂಡಲೆ ವೀರ್ಯಸ್ಖಲನ. ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟಿ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಕೌಚಕ್ಕೆ ಸಾಫಾಗಿ ಹಸಿವು, ಶಕ್ತಿ ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೇಚ್ಛೆ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯ ೧ ಡಬ್ಬಿಗೆ ೫ ರೂಪಾಯಿ.

[30]

ಸ್ತ್ರೀರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಸೆರಗು ಕಡೆಗಾಗುವ ಕಾಲಕ್ಕೆ ಕಿಬ್ಬಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ. ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ಪಿಸುಬಾರದೆ ಇರೋಣ ಅನಿಯಮಿತಮುಟ್ಟು ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದೆ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮಿದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಳಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ದಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯವು ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೂಮ್ಯಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಧಿ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗ್ರಹಮಾತೆಯು—೧ ಶೀಶೆಗೆ ೧೨ ಆಣೆ (ಶಿ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಮಹತ್ತ ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿ ಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರಣಿಯಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೩೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತೆ. ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿದೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರ.

ಪ್ರತಿದಿವಸವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[44] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೆ ನಿನು ನೋಡೋಣ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೆ.

ಅಲ್ಪವಯಸ್ಕರಿಗಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಪರ್ಧ	ಧಿಕ್ಕರಿಸಿದರೆ ಕ್ಷೀಣತೆಯನ್ನು ಕಾಯ್ದುಕೊಳ್ಳಿರಿ.

ಮೂತ್ರದಿಂದ ಮತ್ತು ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಸ್ತ್ರೀಲಂಪಟದಿಂದ ಧಾತುಕ್ಷೀಣತೆ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನ, ತಿಳುಪುತನ, ಕೈಕಾಲು ಮೂತ್ರ ಉರಿಯೋಣ, ಉಷ್ಣತೆ, ಪಿತ್ತಾಂಶ, ಹುಳೀ ಪರಮಾ, ಗರಮಿದೋಷ ಯಾವ ತರದ ರೋಗದಿಂದ ಎದ್ದ ಮೇಲೆ ಕ್ಷೀಣತಾ ಇತ್ಯಾದಿ ರೋಗಗಳು ಪೂರ್ಣ ನಷ್ಟವಾಗಿ ಶೌಚಕ್ಕೆ ಸಾಫ ಆಗುತ್ತದೆ. ಹಸಿವೆ, ಶಕ್ತಿ ತಮ್ಮ ತೂಕ ಬೆಳೆಯುತ್ತದೆ. ಶರೀರ ವಜ್ರದಂತೆ ಸದೃಢವಾಗುತ್ತದೆ. ಗರ್ಭಧಾರಣೆಗೆ ಸಹಾಯಕರವಾಗುತ್ತದೆ. ವೀರ್ಯಶುದ್ಧಿ, ವೃದ್ಧಿ, ಕಾಮೋತ್ಪತ್ತಿ ವೀರ್ಯಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ ೬೦ ವರ್ಷ ವೃದ್ಧನಿಗಾದರೂ ತರುಣರಂತೆ ಕಾಮೇಚ್ಛೆ ಬೆಳೆದು ರತಿಸುಖ ಬೆಳೆದು ಬಹಳ ವೇಳೆ ಉಪಯೋಗಿಸುವಿರಿ. ಈ ಪಾಕದಲ್ಲಿ ಧಾತುಪೌಷ್ಟಿಕ, ಶಕ್ತಿವರ್ಧಕ, ೫೩ ವನಸ್ಪತಿಗಳು ಹಾಕಿರುತ್ತವೆ. ಸ್ಥಲಸಂಕೋಚದಿಂದ ವನಸ್ಪತಿಗಳ ಹೆಸರು ಬರೆದಿಲ್ಲ. ಅನುಭವದಿಂದ ಆಶ್ಚರ್ಯಚಕಿತರಾಗುವಿರಿ. ಮುಂಜಾನೆ ೩ ತೊಲೆಯ ೧ ವಡಿ ತಿಂದು ಅದರ ಮೇಲೆ ೧ ಕಪ್ ಹಾಲು ಯಾವದಾದರೂ ಕುಡಿಯಬೇಕು. ಇದರಂತೆ ರಾತ್ರಿ ಊಟವಾದ ನಂತರವಾದರೂ ತಕ್ಕೊಳ್ಳಬೇಕು. ಪಥ್ಯ ಯಾವತರದ್ದೂ ಇಲ್ಲ. ೮೪ ತೊಲೆಯ ೧ ಡಬ್ಬಿಗೆ ೫| ರೂಪಾಯಿ. ೩ ಡಬ್ಬಿಗೆ ೧೪| ರೂಪಾಯಿ. ಪೋಸ್ಟ್ ಖರ್ಚು ಬೇರೆ. ಮೂರು ಡಬ್ಬಿ ಪಾಕ ತಕ್ಕೊಂಡರೆ ತಮ್ಮ ಮನಸ್ಸಿನಂತೆ ಮರ್ದ ಗುಣಬರುತ್ತದೆ. ಇದರಲ್ಲಿ ೫೩ ವನಸ್ಪತಿಗಳು ಹಾಕಿಲ್ಲೆಂದು ಮತ್ತು ಅದರಲ್ಲಿ ಧಾತುಪುಷ್ಟಿಕ ಗುಣವಿಲ್ಲೆಂದು ಸಿದ್ಧಮಾಡಿದವರಿಗೆ ೧೦೦೦ ರೂಪಾಯಿ ಇನಾಮು. ತಾತ್ಕಾಲ ಮತ್ತು ಅತ್ಯಂತ ಧಾತುಪೌಷ್ಟಿಕ ಸ್ಪೆಶಲ ಪಾಕ ಇದರಲ್ಲಿ ಅಮೂಲ್ಯ ಕಿಮ್ಮತ್ತಿನ ಔಷಧಗಳು ಶಾಸ್ತ್ರಪ್ರಮಾಣದಿಂದ ಉಪಯೋಗಿಸಿರುತ್ತದೆ. ಅದ್ಭುತ ಚಮತ್ಕಾರ ತೋರುವ ೨೮ ದಿವಸಗಳ ೧೧೨ ತೊಲೆಯ ಪಾಕ ಮತ್ತು ೫೬ ಗುಳಿಗೆಗಳ ಸಹ ಕಿಮ್ಮತ್ತು ೨೫ ರೂಪಾಯಿ. ೫ ರೂಪಾಯಿ ಅಡ್ವಾನ್ಸ ಕಳುಹಿಸಬೇಕು. ತಾತ್ಕಾಲ ತಯಾರಮಾಡಿ ಕಳುಹಿಸುತ್ತೇವೆ. ೧ ಪೆಟ್ಟಿಗೆ ಕಡಿಮೆ ಕಳುಹಿಸಲಾಗದು.

[31]

ಪತ್ತೆ:—ಮಾಲಕವೈದ್ಯ ವಿ. ಎಸ್. ಕಾಪಸೆ, ಮು. ಪೋ. ಮಿರಜ.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತ ಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೇವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆ ಹುಳ ಕೆರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—3.

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0. ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಪಾತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

☞ ಟಿಕ್ಕು, ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[29] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ.) ಮಂಗಳೂರು, ದ. ಕ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೩ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಾಗುವದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು [illegible]×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-[illegible]

ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. [illegible]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[32] ಪೋ. ಬಾ. ೫೧೦. ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨ನೇ ಮಾರ್ಚಿ ೧೯೩೧ [ಸಂಚಿಕೆ ೪೪

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇ[illegible] ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಎಲ್ಲಾ ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ—ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳ ವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾಹಣದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ನಾವು ಮುಂದಾಗಿ ತಿಳುಹಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವಿರೆಂದು ಪೂರ್ಣ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ, ಮೈಸೂರು.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿತು.

ಮೈಸೂರುನಗರದಲ್ಲಿ ವಿಶ್ವವಿದ್ಯಾನಿಲಯಗಳ ಸಮಿತಿಯ ಅಧಿವೇಶನವು ಕಾಶೀ ಹಿಂದೂವಿಶ್ವವಿದ್ಯಾನಿಲಯದ ಪ್ರೊ|| ಛಾನ್ಸಲರಾದ ಡಾ|| ಎ. ಬಿ. ಧ್ರುವರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಸಿಟಿ ಮುನಿಸಿಪಾಲಿಟಿಯವರು ದಿವಾನ್ ಸಾಹೇಬರಿಗೆ ಗೌರವಪತ್ರವನ್ನು ಒಪ್ಪಿಸಬೇಕೆಂದಿದ್ದ ಸನ್ನಾಹಕ್ಕೆ ದಿವಾನರವರು ಒಪ್ಪದೆ ಪ್ರಯುಕ್ತ ಆ ಪ್ರಯತ್ನವನ್ನು ತಟಸ್ಥಮಾಡಿದರು.

ಹೋದತಿಂಗಳು ೨೨ ನೆಯ ಭಾನುವಾರ ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ಸ್ವಾಮಿ ರಾಮಕೃಷ್ಣ ಪರಮಹಂಸರ ಜಯಂತಿಯು ಆಚರಿಸಲ್ಪಟ್ಟಿತು. ಕಾನ್ಪುರದ ಸನಾತನ ಧರ್ಮ ಕಾಲೇಜಿನ ಅಧ್ಯಕ್ಷರಾದ ಶ್ರೀ|| ಪಿ. ಶೇಷಾದ್ರಿ, ಎಂ.ಎ., ಇವರು ಅಧ್ಯಕ್ಷರಾಗಿದ್ದರು.

ಹಳೇಅಗ್ರಹಾರದ ಗುರಿಕಾರ್ ದೇವಣ್ಣನವರ ಬೀದಿಯಲ್ಲಿರುವ ಭಕ್ಷಿ ಸೋಮಶೇಖರಪ್ಪನವರು ರಾಜಧಾನಿಗೆ ಕನ್ನಡ ಮತ್ತು ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಬರುವ ಪರಸ್ಥಳದ ವಿದ್ಯಾರ್ಥಿಗಳಿಗೆ ಅನ್ನೋದಕವನ್ನು ಕೊಡುವುದಲ್ಲದೆ ವಾಸಸ್ಥಳವನ್ನೂ ಸಹ ಏರ್ಪಡಿಸಿದ್ದರಿಂದ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ಮುಂಚಿತವಾಗಿಯೇ ಸದರಿಯವರಿಗೆ ಪತ್ರಮುಖದಿಂದ ತಿಳಿಸಬೇಕೆಂದು ಕೋರುತ್ತಾರೆ.

ಕಳೆದ ತಿಂಗಳು ೨೪ ರ ಮಧ್ಯಾಹ್ನ ಹಳೇಅಗ್ರಹಾರದ ಆಂಜನೇಯ ದೇವಸ್ಥಾನದ ಬಳಿ ಅರಮನೆಗೆ ಸಂಬಂಧಪಟ್ಟ ಒಂದು ಗಾಡಿಯನ್ನು ಹೊಡೆದುಕೊಂಡು ಹೋಗುತ್ತಿದ್ದ ಅಂದಾಜ ಮುವತ್ತೈದು ವರ್ಷದ ಒಬ್ಬ ಮನುಷ್ಯನು ಮದಿಸಿದ ಎತ್ತುಗಳನ್ನು ಹಿಡಿದು ನಿಲ್ಲಿಸಲು ಶಕ್ತಿಸಾಲದೆ ಆ ಕ್ಷಣದಲ್ಲಿಯೇ ಗಾಡಿಯಿಂದ ಕೆಳಕ್ಕೆ ಬಿದ್ದು ತಲೆಯಮೇಲೆ ಗಾಲಿಯು ಹರಿದು ಪ್ರಾಣವನ್ನು ಬಿಟ್ಟನು. ಕಣ್ಣುಗುಡ್ಡೆಗಳು ಹೊರಕ್ಕೆ ಹೊರಟು ರಕ್ತವು ಹರಿದುಹೋಗುತ್ತಿದ್ದ ಈ ಭೀಕರ ಮರಣವನ್ನು ನೋಡಲು ಸಾವಿರಾರು ಜನಗಳು ನೆರದಿದ್ದರು.

ಕಳೆದ ತಿಂಗಳು 18 ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಹದಿಮೂರನೆಯ ವಾರ್ಷಿಕೋತ್ಸವವು ಧಾರವಾಡದ ಲಿಂಗಾಯಿತ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ|| ಎಸ್. ಎಸ್. ಬಸವನಾಳ, ಎಂ.ಎ., ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೈ. ಶಾಂತಕವಿಗಳ ಮತ್ತು ಕೆರೂರು ವಾಸುದೇವಾಚಾರ್ಯರ ಛಾಯಾಪಟಗಳ ಅನಾವರಣ ಮಹೋತ್ಸವವು ನಡೆದ ಬಳಿಕ ಅಧ್ಯಕ್ಷರವರು ಕರ್ಣಾಟಕ ಸಾಹಿತ್ಯ ವಿಷಯದಲ್ಲಿ ಮನೋರಂಜಕವಾದ ದೀರ್ಘ ಭಾಷಣವನ್ನು ಮಾಡಿದರು.

ಕಳೆದ ತಿಂಗಳು ೨೫ ನೆಯ ಬುಧವಾರ ದಿವಸ ಸಾಯಂಕಾಲ ಟೌನ್‌ಹಾಲಿನಲ್ಲಿ ಹಿಂದೀ ಸೇವಾಸಮಾಜ ಮತ್ತು ಪ್ರೇಮಿಮಂಡಲಿಯವರು ಕಾಶೀ ವಿಶ್ವವಿದ್ಯಾನಿಲಯದ ಪ್ರೊ|| ವೈಸ್ ಛಾನ್ಸಲರ್ ಶ್ರೀಮಾನ್ ಧ್ರುವರವರ ಅಧ್ಯಕ್ಷತೆಯಲ್ಲಿ ನಾಲ್ಕನೆಯ ವಾರ್ಷಿಕಸಭೆಯನ್ನು ಆಚರಿಸಿದರು. ಹಿಂದೂ ಭಾಷಾಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅಧ್ಯಕ್ಷರ ಹಸ್ತದಿಂದ ಪಾರಿತೋಷಕವು ಕೊಡಿಸಲ್ಪಟ್ಟಿತು. ಅಧ್ಯಕ್ಷರವರು ಹಿಂದೀಭಾಷೆಯ ಮಹತ್ವವನ್ನುದ್ದೇಶಿಸಿ ಆಂಗ್ಲಭಾಷೆಯಲ್ಲಿಯೂ, ಹಿಂದೀಭಾಷೆಯಲ್ಲಿಯೂ ಸರಸ ಭಾಷಣವನ್ನು ಮಾಡಿದರು. ಅಲಹಾಬಾದದ ಪ್ರೊ|| ಶ್ರೀಯುತ ಅಮರನಾಥಝಾ ಮತ್ತು ಪ್ರೊ|| ಶ್ರೀಯುತ ಎ. ಆರ್. ವಾಡಿಯಾ ಮುಂತಾದ ಅಧಿಕಾರಿಗಳು ಸಮಯೋಚಿತ ಭಾಷಣಗಳನ್ನು ಮಾಡಿದರು. ಕೊನೆಯಲ್ಲಿ ಸಮಾಜದವರು ಹಿಂದಿ[illegible] ಒಂದು ನಾಟಕವನ್ನು ಸಹ ಅಭಿನಯಿ[illegible]ವಾದ ಹಿಂದೀಭಾಷಾಲತೆಯು ಕ[illegible]ಲ್ಲ ಮೆಲ್ಲನೆ ಹಬ್ಬುತ್ತಿರುವದ[illegible]ಗತಿಯಾಗಿದೆ.

ಬೆಂಗಳೂರು ಕಂಟೋನ್ಮೆಂಟಿನ[illegible]ಜೋಸೆಫ್ ಕಾಲೇಜಿನಲ್ಲಿ ಸೀನಿಯರ್ ಇಂಟರ್‌ಮೀಡಿಯಟ್ ಕ್ಲಾಸಿನಲ್ಲಿ ಓದುವ ನಂಜುಂಡಯ್ಯನೆಂಬ ಹಿಂದೂ ವಿದ್ಯಾರ್ಥಿಯು ಪ್ರತಿದಿವಸವೂ ಪರದೇಶದ ಉಡುಪನ್ನೇ ಹಾಕಿಕೊಂಡು ಕ್ಲಾಸಿಗೆ ಹೋಗುತ್ತಿದ್ದು ಹೋದತಿಂಗಳು 18 ನೆಯ ತಾರೀಖಿನ ದಿವಸ ಮಾತ್ರ ಗಾಂಧಿ ಟೋಪಿಯನ್ನು ಹಾಕಿಕೊಂಡು ತನ್ನ ತರಗತಿಗೆ ಹೋಗಿದ್ದನು. ಆ ಕ್ಲಾಸಿನಲ್ಲಿಯೇ ಓದುತ್ತಿದ್ದ ರೈಸ್ ಎಂಬ ಆಂಗ್ಲೊ ಇಂಡಿಯನ್ನನು ಗಾಂಧಿ ಟೋಪಿಯನ್ನು ತೆಗೆದುಹಾಕೆಂದನು; ಅದಕ್ಕೆ ನಂಜುಂಡಯ್ಯನು ಒಪ್ಪದೆ ಇದ್ದುದನ್ನು ಮನಸ್ಸಿನಲ್ಲಿಟ್ಟಿದ್ದು ಕ್ಲಾಸಿನಲ್ಲಿ ತಮ್ಮ ಪಾಠದ ವೇಳೆಯಾದೊಡನೆ ಆಂಗ್ಲೊ ಇಂಡಿಯನ್ನನು ನಂಜುಂಡಯ್ಯನನ್ನು ಹಾಸ್ಟಲಿನಲ್ಲಿದ್ದ ತನ್ನ ಕೊಟಡಿಗೆ ಎಳದೊಯ್ದು ಬಾಗಿಲನ್ನು ಮುಚ್ಚಿಕೊಂಡು ಕಣ್ಣು ಮೂಗು ಮುಖಗಳೆನ್ನದೆ ರಕ್ತಸುರಿಯುವಂತೆ ಹೊಡೆಯಲಾರಂಭಿಸಿದ್ದರಿಂದ ನಂಜುಂಡಯ್ಯನು ಏಟು ಸಹಿಸದೆ ಪ್ರಜ್ಞೆತಪ್ಪಿ ಬಿದ್ದನು. ಅಲ್ಲಿಗೂ ಬಿಡದೆ ಒದೆಯಲಾರಂಭಿಸಿದನು. ಅಷ್ಟರೊಳಗಾಗಿ ಹೊರಗಣ ವಿದ್ಯಾರ್ಥಿಗಳು ಬಂದು ಬಿಡಿಸಿ ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಮರುದಿವಸ ಒಕ್ಕಟ್ಟಿನಿಂದ ಎಲ್ಲರೂ ಗಾಂಧಿಟೋಪಿಗಳನ್ನೇ ಧರಿಸಿಕೊಂಡು ಶಾಲೆ[illegible]ಪ್ರವೇಶಿಸಿದರು. ಈಗ ಆ ವಿದ್ಯಾರ್ಥಿಗಳು ಮೀಟಿಂಗ್ ನಡೆಯಿಸಿ ಆ ರೈಸ್‌ನನ್ನು ಡಿಸ್‌ಮಿಸ್ ಮಾಡಬೇಕೆಂದು ಪ್ರಿನ್ಸಿಪಾಲರಿಗೆ ತಿಳುಹಿಸಿಕೊಂಡಿದ್ದಾರೆ. ಉಪಾಧ್ಯಾಯ ಸಮಿತಿಯವರು ರೈಸ್‌ನನ್ನು ಕ್ಷಮಾಪಣೆ ಕೇಳಬೇಕೆಂದು ತೀರ್ಮಾನಿಸಿಕೊಂಡಿರುವರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಸೀದಂತು.

ಸುಶ್ರಾವ್ಯಶಂಖಧ್ವನಿ!

ವಿಶ್ವನಾಟಕ ಸೂತ್ರಧಾರಿಯಾದ ಶ್ರೀ ಪರಶಿವಮೂರ್ತಿಯ ಲೀಲೆಯು ವಿಚಿತ್ರವಾದುದು. ಈ ಲೀಲೆಯು ಜ್ಞಾನಿಗಳಲ್ಲದೆ ವಿವೇಕಹೀನರಿಗೆ ಸರ್ವಥಾ ತಿಳಿಯದು. ಲೋಕದ ನಾಟಕದಲ್ಲಿ ಸೂತ್ರಧಾರನು ತಾನು ಪರದೆಯ ಮರೆಗಿದ್ದು ರಂಗಭೂಮಿಯಲ್ಲಿರುವ ಪಾತ್ರಗಳಿಗೆ ತನ್ನ ಸೂತ್ರವಿಶೇಷದಿಂದ ಚಾಲನೆಯನಿತ್ತು ಆಯಾಯ ಭೂಮಿಕೆಗಳ ಕಡೆಯಿಂದ ಆಯಾಯ ಕಾರ್ಯಗಳನ್ನು ನಡಿಸಿ, ಸರ್ವತ್ರ ತನ್ನ ವ್ಯಾಪನೆಯಿದ್ದರೂ ರಸಿಕಮಹಾಶಯರಿಗೆ ತನ್ನ ಈ ಅಂತರಿಕಕೃತಿಯು ತಿಳಿಯುತ್ತಿದ್ದರೂ ಅರಸಿಕರಿಂದರೆ ಮೇಲೆ ಮೇಲೆ ಆಡಂಬರಕ್ಕೆ ಮರುಳಾಗಿ ಅಂತಸ್ಸಾರವನ್ನರಿಯದ ಮರುಳಬುದ್ಧಿಯ ಮಂದಮಾನವರ ಕಣ್ಣುಗಳಿಗೆ ...

... ಗುರುಗಳಿಗೆ ಭಕ್ತರಿಂದ ಮೇಲೆ ಶಾಖಾಗುರುಗಳಿಗೂ ಭಕ್ತರಿನ್ನಲಿಕ್ಕೆ ತಿಲಮಾತ್ರವೂ ಸಂಶಯವಿಲ್ಲ.

ಶ್ರೀ ಜಗದ್ಗುರು ವಿಶ್ವಾರಾಧ್ಯರ ಮತ್ತು ಪಂಡಿತಾರಾಧ್ಯರ ಜಯಂತಿಮಹೋತ್ಸವ,

ದಾವಣಗೆರೆ.

ಕಳೆದ ತಿಂಗಳು 15 ನೆಯ ತಾರೀಖಿನ ದಿವಸ ಇಲ್ಲಿ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಅಲಂಕರಿಸಲ್ಪಟ್ಟ ಪಂಚಕಳಸಯುಕ್ತವಾದ ಪಲ್ಲಕ್ಕಿಯಲ್ಲಿ ಜಗದಾಚಾರ್ಯರ ಭಾವಚಿತ್ರಪಟಗಳನ್ನಿಟ್ಟು ಪ್ರಾತಃಕಾಲ 6 ಘಂಟೆಯಿಂದ ವೇ|| ಹಿರೇಮಠದ ಮಹಾಲಿಂಗಯ್ಯನವರ ಮಠದಿಂದ ಆಸ್ತಗಿರಿ, ಭೂಚಕ್ರದಕೊಡೆ, ಉಭಯಚಾಮರ ಮೊದಲಾದ ಬಿರುದಾವಳಿಗಳೊಡನೆ ಮೆರವಣಿಗೆಯು ಹೊರಟಿತು. ಪಂಚಾಚಾರ್ಯ ಭಜನಾಮಂಡಲಿಯವರು ಸುಶ್ರಾವ್ಯವಾಗಿ ಗುರುಸ್ತೋತ್ರ ಮಾಡುತ್ತಿದ್ದರು. ಅನಂತ ವಾದ್ಯಗಳು ಭೋರ್ಗರೆಯುತ್ತಿದ್ದವು. ಅಗಾಗ್ಗೆ ಭಕ್ತಮಹೇಶ್ವರರು "ಶ್ರೀ ಜಗದ್ಗುರು ...

... "ಸುಶ್ರಾವ್ಯಶಂಖಧ್ವನಿಯು"

ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಬೃಹನ್ಮಠ ಹಾಲೇಶಸ್ವಾ, ಪುಣ್ಯಾಶ್ರಮ ಶ್ರೀ ರೇಣುಕಭಾಗ ತಾ|| ಹುಬ್ಬಳ್ಳಿ, ಜಿಲ್ಲಾ ಧಾರವಾಡ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಲೇಖಕ:—ಜ್ಯೋತಿಷಾಲಂಕಾರ ವೇ|| ಸಿದ್ಧಾಂತಿ ಶಿವಬಸವಶಾಸ್ತ್ರಿಗಳು ಪಂಚವರ್ಣ ಬೃಹನ್ಮಠ ಹೂಲಿ.

ಹಿಂದೂದೇಶದ ಭಿಕ್ಷುಕರು.

ವಿಜಾಪೂರದಲ್ಲಿ ಹೊರಡುವ ನವಕರ್ನಾಟಕದ ತಾ|| 22-1-31 ನೆಯ ಸಂಚಿಕೆಯಲ್ಲಿ "ಶಿವಲಿಂಗಪ್ಪ ವೇ|| ಮಾಸ್ತರ" ಎಂಬ ...

... ಡಿ ವಿರಕ್ತಸ್ವಾಮಿಗಳು, ವೇ|| ಹಿರೇಮಠದ ಪಡಕ್ಷರಪ್ಪಯ್ಯನವರು, ವೇ|| ಮಳೀಬೆನ್ನೂರು ಮಠದ ಹಾಲಸಿದ್ಧಯ್ಯನವರು ಮೊದಲಾದ ಅನೇಕ ಭಕ್ತಮಹೇಶ್ವರರು ಕೇವಲ ಶ್ರದ್ಧೆಯಿಂದ ನೆರವೇರಿಸಿ ಈ ಕಾರ್ಯವು ಜಯಪ್ರದವಾಗುವ ಹಾಗೆ ಮಾಡಿದರು. ಇದರಂತೆಯೇ ಪ್ರತಿ ವರ್ಷವೂ ತಪ್ಪದೆ ಮತಸ್ಥಾಪನಾಚಾರ್ಯರ ಜಯಂತ್ಯುತ್ಸವಗಳನ್ನು ನೆರವೇರಿಸಿ ಗುರುಕೃಪೆಗೆ ಪಾತ್ರರಾಗಲೆಂದು ಹಾರೈಸುತ್ತೇನೆ. ಈ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೧ ರೂ. ಯು ತೆಗೆಯಿಸಲ್ಪಟ್ಟಿತು.

ಬೆಳ್ಳೂಡಿ ಯಜಮಾನ್ ಮಲ್ಲಪ್ಪ.

ಶ್ರೀ ಜಗದ್ಗುರು ವಿಶ್ವಾರಾಧ್ಯರ ಮತ್ತು ಪಂಡಿತಾರಾಧ್ಯರ ಜಯಂತಿಮಹೋತ್ಸವ,

ನಾಮಗಿರಿಪೇಟೆ.

ಸೇಲಂ ಜಿಲ್ಲಾ ರಾಶಿಪುರದ ತಾಲೂಕು ನಾಮಗಿರಿಪೇಟೆಯಲ್ಲಿ ೫-೬ ವರ್ಷಗಳ ಹಿಂದೆ ಪಂಚಾಚಾರ್ಯ ಭಜನಾಸಂಘವು ಸ್ಥಾಪಿಸಲ್ಪಟ್ಟಿದೆ. ಪದ್ಧತಿ ಪ್ರಕಾರ ಈ ವರ್ಷವೂ ಕಳೆದ ತಿಂಗಳು 15 ನೆಯ ತಾರೀಖಿನ ದಿವಸ ಶ್ರೀ ಜಗದಾಚಾರ್ಯರ ಜಯಂತಿಮಹೋತ್ಸವವು ಅತ್ಯಂತ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು. ಕುಮಾರಸ್ವಾಮಯ್ಯನವರು ವೀರಮಾಹೇಶ್ವರರನ್ನು ತಮ್ಮ ಗೃಹಕ್ಕೆ ಕರೆಕೊಂಡು ಸತ್ಕರಿಸಿದರು. ಮತ್ತು ಆ ರಾತ್ರಿ ಅಶೇಷ ಭಕ್ತಮಾಹೇಶ್ವರರು ಷೋಡಶೋಪಚಾರದಿಂದಲೂ, ಸಹಸ್ರಬಿಲ್ವಾರ್ಚನೆಗಳಿಂದಲೂ ಶಿವಲಿಂಗಪೂಜೆಯನ್ನು ಮಾಡಿದರು. ಅನಂತರ ಸದರಿ ಗ್ರಾಮದ ಸಬ್‌ರಿಜಿಸ್ಟ್ರಾರ್ ಮ|| ರಾ|| ಶ್ರೀನಿವಾಸಯ್ಯ ಬಿ.ಎ., ಯವರು ಶಿವರಾತ್ರಿ ಮಹಾತ್ಮ್ಯವನ್ನು ಕುರಿತು ಮೂರು ತಾಸುಗಳ ವರೆಗೂ ಮನೋಹರವಾಗಿ ಭಾಷಣ ಮಾಡಿದರು. ಮಾರನೆಯ ದಿವಸ ಪ್ರಾತಃಕಾಲದಲ್ಲಿ ಸದರಿ ಸಬ್‌ರಿಜಿಸ್ಟ್ರಾರ್‌ರವರು ಶೈವಮತ ತತ್ವವನ್ನೂ ಶಿವಾಧಿಕ್ಯವನ್ನೂ ವಿವರಿಸಿದ್ದಲ್ಲದೆ ಸಾಯಂಕಾಲ 4-30 ಘಂಟೆಗೆ ಪರಮ ಶಿವಭಕ್ತ ನಾದ ... ಸಮಸ್ತ ಭಕ್ತಮಾಹೇಶ್ವರರು ಫಲಪುಷ್ಪಗಳನ್ನಿತ್ತು ಆ ಉತ್ಸವದಲ್ಲಿ ಭಾಗಿಗಳಾಗಿ ಗುರುಕೃಪೆಗೆ ಪಾತ್ರರಾದರು.

ಓರ್ವ ಉತ್ಸವಭಾಗಿ.

ದುಃಖವಾರ್ತೆ.

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ನಾಗರಕಟ್ಟೆಗ್ರಾಮದ ಮ|| ರಾ|| ಶ್ರೀಮಂತ ಬಸಪ್ಪನವರು ಕಳೆದ ತಿಂಗಳು 14 ನೆಯ ತಾರೀಖಿನ ದಿವಸ ಶಿವಾಧೀನವಾದರು. ಇವರು ಬಹಳ ಶಾಂತಸ್ವಭಾವಿಗಳೂ, ಧರ್ಮಿಷ್ಠರೂ ಆಗಿದ್ದರು. ಇವರು ಶ್ರೀಮಂತರಾಗಿದ್ದು ಅನೇಕ ಜನರಿಗೆ ಸಾಲವನ್ನು ಕೊಟ್ಟಿದ್ದರು. ಅವರು ಎಂದೂ ಸರ್ಕಾರದ ಮೇಲೆ ದಾವಾ ಮಾಡದೆ ಶಾಂತರೀತಿಯಿಂದ ಬಡವರ ಕಷ್ಟಗಳನ್ನರಿತು ಲೇವಾದೇವಿ ಮಾಡಿಕೊಳ್ಳುತ್ತಿದ್ದರು. ಅನೇಕ ಜನರು ಇವರು ಮೃತಪಟ್ಟಿದ್ದಕ್ಕಾಗಿ ವ್ಯಸನಪಟ್ಟರು. ಮಂಗನಹಳ್ಳಿ ಮಠದ ವೇ|| ಮಹಾಗ್ನಾಮಪ್ಪಯ್ಯನವರು ಮತ್ತು ಮ|| ರಾ|| ಸಾಹುಕಾರ್ ಸಾಸ್ವಿಹಳ್ಳಿ ಕಲ್ಲಪ್ಪನವರು ವಿಧಿವತ್ತಾಗಿ ಇವರ ಉತ್ತರಕ್ರಿಯೆಗಳನ್ನು ಮಾಡಿಸಿದರು. ಅನಂತರ ಭಾನುವಾರ ಮಹಾಶಿವರಾತ್ರಿಯಾದುದರಿಂದ ಎಲ್ಲರೂ ವ್ಯಸನವನ್ನು ಬಿಟ್ಟು ಆ ರಾತ್ರಿಯನ್ನು ಶಿವಸ್ತೋತ್ರದಲ್ಲಿಯೂ, ಶಿವಲಿಂಗಕ್ಕೆ ರುದ್ರಾಭಿಷೇಕ ಮಾಡಿಸುವುದರಲ್ಲಿಯೂ ಕಳೆದರು. ಅನಂತರ ಮೃತರ ಪುತ್ರರು ವಿಶೇಷವಾಗಿ ಜಂಗಮರನ್ನು ಮೃಷ್ಟಾನ್ನದಿಂದಲೂ, ಭೂರಿದಕ್ಷಿಣೆಯಿಂದಲೂ ಸಂತುಷ್ಟಪಡಿಸಿದರು. ಆ ಸಮಯದಲ್ಲಿ ಮೃತರ ಆತ್ಮಕ್ಕೆ ಶಾಂತಿಯುಂಟಾಗಲೆಂದು ಪ್ರಭಾಪೋಷಣಕ್ಕೋಸ್ಕರ ೨ ರೂ. ಗಳು ಸಮರ್ಪಿಸಲ್ಪಟ್ಟವು.

ಓರ್ವ ದುಃಖಭಾಗಿ.

ಫಿಜಿದ್ವೀಪದಲ್ಲಿ ಬಿರುಗಾಳಿಯಿಂದಲೂ, ಪ್ರವಾಹದಿಂದಲೂ ಒಂದು ಗಾಡಿಯೂ ರೇಲುಹಳಿಯೂ ಕೊಚ್ಚಿಕೊಂಡು ಹೋದುವು. ಸುಮಾರು 230 ಜನರು ನೃತಪಟ್ಟಿರುವುದಾಗಿ ತಿಳಿದುಬರುತ್ತದೆ.

ಮಹಾತ್ಮಾ ಗಾಂಧಿಯವರು ಕಳೆದ ತಿಂಗಳು 27 ನೆಯ ತಾರೀಖಿನದಿವಸ ವೈಸರಾಯರವರೊಡನೆ ಸಂಭಾಷಣೆ ನಡೆಯಿಸಿದರು. ಅಖಿಲಭಾರತ ರಾಷ್ಟ್ರೀಯ ಮಹಾಸಭಾ ಸಮಿತಿಯವರು ಶಾಂತಿಸಂಧಾನದಲ್ಲಿ ತಮಗೆ ತೋಚಿದಹಾಗೆ ಮಾಡಬಹುದೆಂದು ಪೂರ್ಣಾಧಿಕಾರ ಕೊಟ್ಟಿರುವರು.

ಪಂಚಾಚಾರ್ಯ ಪ್ರಭಾ.

೧೯೩೧ ನೇ ಮಾರ್ಚಿ ತಾ|| ೨ ನೆಯ ಸೋಮವಾರ.

ಮತಸ್ಥಾಪನಾಚಾರ್ಯರೂ ಷಟ್‍ಸ್ಥಲಗಳೂ.

ವೀರಶೈವಪ್ರಪಂಚದಲ್ಲಿ ಕೆಲವು ಅಜ್ಞ ಜನಗಳು ವೀರಶೈವಸಿದ್ಧಾಂತಗಂಧವನ್ನರಿಯದ ದೋಷದಿಂದ ವೀರಶೈವಮತಸ್ಥಾಪನಾಚಾರ್ಯರೇ ಬೇರೆಯೆಂತಲೂ, ಷಟ್‍ಸ್ಥಲಸ್ಥಾಪನಾಚಾರ್ಯರೇ ಬೇರೆಯೆಂತಲೂ ಅಲ್ಲಲ್ಲಿ ಪ್ರವಾದವನ್ನು ಹುಟ್ಟಿಸುತ್ತಲಿದ್ದಾರೆ; ಇದರ ಯಥಾರ್ಥ ತತ್ವವನ್ನು ಸರ್ವರೂ ತಿಳಿಯಲೆಂಬುದ್ದೇಶದಿಂದ ಸದ್ಯಃ ಇದೇ ವಿಷಯವು ಪ್ರತಿಪಾದಿಸಲ್ಪಡುತ್ತದೆ. ಮೊದಲು ಭೂಲೋಕದಲ್ಲಿ "ವೀರಶೈವ" ಎಂಬೀ ನಾಮವನ್ನು ಶ್ರೀ ಜಗದ್ಗುರು ಪಂಚಾಚಾರ್ಯರೇ ನೆಲೆಗೊಳಿಸಿದರು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್‍ಸ್ಥಲಗಳೂ, ಅಷ್ಟಾವರಣಗಳೂ, ಪಂಚಾಚಾರಗಳೂ ಈ ಮತದ ಧರ್ಮಗಳಾಗಿರುತ್ತವೆ. ಈ ಧರ್ಮಗಳಲ್ಲಿ ಕೆಲವು ಕ್ರಿಯಾರೂಪಗಳಾಗಿಯೂ ಕೆಲವು ಜ್ಞಾನರೂಪಗಳಾಗಿಯೂ ವಿಭಾಗಿಸಲ್ಪಟ್ಟಿರುತ್ತವೆ. ವೀರಶೈವಮತವಾದರೋ ಕೇವಲ ಕ್ರಿಯಾಪ್ರಧಾನವಾದುದೂ ಅಲ್ಲ. ಕೇವಲ ಜ್ಞಾನಪ್ರಧಾನವಾದುದೂ ಅಲ್ಲ. ಜೀವಾತ್ಮವೆಂಬ ಪಕ್ಷಿಗೆ ಕ್ರಿಯೆಯು ಒಂದು ರೆಕ್ಕೆಯಂತೆಯೂ, ಜ್ಞಾನವು ಮತ್ತೊಂದು ರೆಕ್ಕೆಯಂತೆಯೂ ಇರುತ್ತವೆ. ಪ್ರಪಂಚದಲ್ಲಿ ಪಕ್ಷಿಗೆ ಎರಡು ರೆಕ್ಕೆಗಳೂ ಏಕಕಾಲದಲ್ಲಿ ಸಹಾಯವಿಲ್ಲದೆ ಹೋದರೆ ಪ್ರಯಾಣಸಾಮರ್ಥ್ಯವು ಹುಟ್ಟದಂತೆ ಎಲ್ಲಾ ಕಾಲದಲ್ಲಿ ಕ್ರಿಯಾಜ್ಞಾನಗಳೆರಡೂ ಇಲ್ಲದಿದ್ದಲ್ಲಿ ಮುಕ್ತಿಯನ್ನು ಪಡೆಯುವ ಸಾಮರ್ಥ್ಯವು ಆತ್ಮನಿಗೆ ಪ್ರಾಪ್ತವಾಗುವುದಿಲ್ಲ. ಆದುದರಿಂದ ಈ ಷಟ್‍ಸ್ಥಲಗಳಲ್ಲಿ ಭಕ್ತ, ಮಹೇಶ, ಪ್ರಸಾದಿ ಎಂಬ ಮೂರುಸ್ಥಲಗಳು ಕ್ರಿಯಾರೂಪಗಳಾಗಿಯೂ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಮೂರುಸ್ಥಲಗಳು ಜ್ಞಾನರೂಪಗಳಾಗಿಯೂ ಇರುತ್ತವೆ. ಇಂಥ ಷಟ್‍ಸ್ಥಲಗಳೆಂಬ ಜ್ಞಾನಕ್ರಿಯಾಧರ್ಮಗಳನ್ನು ಮುಮುಕ್ಷುವಾದ ಪ್ರತಿಯೊಬ್ಬ ವೀರಶೈವನು ಅನುಷ್ಠಿಸಲೇಬೇಕಾಗಿರುತ್ತದೆ. ಯಾವನು ಶ್ರೀಗುರುವಿನಿಂದ ಶಿವದೀಕ್ಷಾಪೂರ್ವಕ ಶಿವಲಿಂಗವನ್ನು ಪಡೆದು ಶ್ರೀಗುರುವಿನ ಉಪದೇಶದಂತೆ ಅಷ್ಟಾವರಣನಿಷ್ಠನಾಗಿ ಷಟ್‍ಸ್ಥಲಾಚರಣೆಯಲ್ಲಿ ನಿರತನಾಗಿರುತ್ತಾನೆಯೋ ಅಂಥವನಲ್ಲಿ ವೀರಶೈವ ಎಂಬ ಅಭಿಧಾನವು ಅನ್ವರ್ಥವಾಗುತ್ತದೆ.

ವೀಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ | ತಸ್ಯಾಂರಮಂತೇಯೇಶೈವಾ ವೀರಶೈವಾ ಇತಿ ಸ್ಮೃತಾಃ ||

ಎಂಬ ಶಿವಾಗಮವಾಕ್ಯವೂ ಇದೇ ಅರ್ಥವನ್ನು ಬೋಧಿಸುತ್ತದೆ. ಇದರಿಂದ ಈ ಷಟ್‍ಸ್ಥಲಗಳು ವೀರಶೈವನು ಅನುಷ್ಠಿಸುವ ಧರ್ಮಾಚರಣೆಗಳೆಂದು ಸಿದ್ಧವಾಗುವದು. ಇಂಥ ಸಂಪೂರ್ಣ ಧರ್ಮಾಚರಣೆಯುಳ್ಳವರೆಲ್ಲರೂ ಷಟ್‍ಸ್ಥಲಬ್ರಹ್ಮಿಗಳೆಂದು ಹೇಳಿಸಿಕೊಳ್ಳಲ್ಪಡುವರಲ್ಲದೆ ಷಟ್‍ಸ್ಥಲಸ್ಥಾಪನಾಚಾರ್ಯರೆಂದು ಹೇಳಿಸಿಕೊಳ್ಳಲಾರರು. ಹೀಗೆ ಧರ್ಮಾಚರಣೆಯುಳ್ಳವರೆಲ್ಲರನ್ನೂ ಸ್ಥಾಪನಾಚಾರ್ಯರೆಂದು ಹೇಳುವುದಾದರೆ, ಅನವಸ್ಥಾದೋಷವು ಪ್ರಾಪ್ತವಾಗುವುದಲ್ಲದೆ ಈ ಷಟ್‍ಸ್ಥಲಗಳನ್ನು ಪದೇಶಿಸಿದ ಗುರುವಿಗೇನೇ ಗುಟುಕುನೀರು ಕುಡಿಸಿದಂತಾಗುತ್ತದೆ. ಇಂದು ಕೆಲವರು ಷಟ್‍ಸ್ಥಲಸ್ಥಾಪಕರೆನಿಸಿಕೊಂಡರೆ ಇನ್ನುಮುಂದೆ ಇದರೊಳಗಿನ ಭಕ್ತಸ್ಥಲಾಚರಣೆಯುಳ್ಳವನು ಭಕ್ತಸ್ಥಲಸ್ಥಾಪನಾಚಾರ್ಯನೆಂತಲೂ, ಮಹೇಶಸ್ಥಲಾಚರಣೆಯುಳ್ಳವನು ಮಹೇಶಸ್ಥಲಸ್ಥಾಪನಾಚಾರ್ಯನೆಂತಲೂ ಹೇಳಿಸಿಕೊಳ್ಳಬಹುದಾಗಿದೆ. ಇದರಂತೆ ಅಷ್ಟಾವರಣಕ್ಕೂ ಹೇಳಬಹುದು. ಆಗ ಈ ವೀರಶೈವಮತವು ಬೇಲಿಯಿಲ್ಲದ ಹೊಲದಂತೆ ನಾಶೋನ್ಮುಖವಾಗಲು ಸಂದೇಹವಿಲ್ಲ. ಒಂದು ಮರದಲ್ಲಿ ಶಾಖೋಪಶಾಖೆಗಳೂ ಫಲಪುಷ್ಪಪರ್ಣಾದಿಗಳೂ ಹೇಗೆ ಅವಯವವಾಗಿರುತ್ತವೆಯೋ, ಒಂದು ಶರೀರದಲ್ಲಿ ಹಸ್ತ, ಪಾದ, ಅಂಗುಲಿ, ಕರ್ಣ, ಮುಖ, ಕಂಠಾದಿಗಳು ಹೇಗೆ ಅಂಗಗಳಾಗಿರುತ್ತವೆಯೋ, ಹಾಗೆ ರೇಣುಕಾದಿಭಗವತ್ಪಾದರಿಂದ ಭೂಲೋಕದಲ್ಲಿ ಸ್ಥಾಪಿಸಲ್ಪಟ್ಟ ಈ ವೀರಶೈವನೆಂಬ ಮಹಾವೃಕ್ಷಕ್ಕೆ ಅಥವಾ ದೇಹಕ್ಕೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳೆಂಬ ಎಂಟು ಆವರಣಗಳಾಗಲಿ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಗಳೆಂಬ ಷಟ್‍ಸ್ಥಲಗಳಾಗಲಿ, ಪಂಚಾಚಾರಗಳಾಗಲಿ ಇವೆಲ್ಲವುಗಳೂ ಅಂಗ(ಧರ್ಮ) ಗಳಾಗಿರುತ್ತವೆ.

ಪರ್ಣಪುಷ್ಪಶಾಖೋಪಶಾಖೆಗಳೆಂಬ ಅಂಗಗಳಿಂದ ಕೂಡಿದುದಕ್ಕೆ ಮರವೆಂದು ಕರೆಯುವಂತೆಯೂ, ನಖಮುಖಾದ್ಯಂಗಗಳುಳ್ಳದಕ್ಕೆ ಪುರುಷನೆಂದು ಕರೆಯುವಂತೆಯೂ ಪಂಚಾಚಾರ, ಅಷ್ಟಾವರಣ, ಷಟ್‍ಸ್ಥಲಾದ್ಯಂಗಗಳುಳ್ಳವನು ನಿಜವಾದ ವೀರಶೈವನೆಂದು ಕರೆಯಲ್ಪಡುವುದು ನ್ಯಾಯಸಮ್ಮತವೂ, ಶಾಸ್ತ್ರಸಮ್ಮತವೂ ಆಗಿರುತ್ತದೆ. ಹಾಗಿಲ್ಲದಿದ್ದಲ್ಲಿ ಧರ್ಮಾಚರಣೆಯುಳ್ಳವರೆಲ್ಲರೂ ಸ್ಥಾಪನಾಚಾರ್ಯರೆನಿಸಿಕೊಳ್ಳುತ್ತ ಬಂದರೆ, ಶ್ರೀ ರೇಣುಕಾದಿ ಪೂರ್ವಾಚಾರ್ಯರು ಸೃಷ್ಟ್ಯಾದಿಯಲ್ಲಿ ಶಿವಾಜ್ಞೆಯಿಂದ ಭೂಮಿಯಲ್ಲಿ ಲಿಂಗಮುಖದಿಂದವತರಿಸಿ ಷಟ್‍ಸ್ಥಲಾದ್ಯಂಗಗಳುಳ್ಳ ಈ ವೀರಶೈವಮತವನ್ನು ಸ್ಥಾಪನೆಗೊಳಿಸಿದುದಕ್ಕೆ ಪ್ರಯೋಜನವೇ ಇಲ್ಲದಂತಾಗುವುದು. ಜಗತ್ತಿನಲ್ಲಿ ಬೌದ್ಧ, ಕ್ರೈಸ್ತ, ಸ್ಮಾರ್ತ, ವೈಷ್ಣವ, ಶ್ರೀವೈಷ್ಣವಾದ್ಯನಂತ ಮತಗಳುಂಟು. ಆಯಾ ಮತದವರು ತಮ್ಮ ತಮ್ಮ ಮೂಲಗುರುಗಳಿಂದ ಹೇಳಲ್ಪಟ್ಟ ಮತಧರ್ಮಗಳನ್ನು ಎಷ್ಟು ಎಷ್ಟು ವಿಶೇಷ ರೀತಿಯಿಂದ ಅನುಷ್ಠಿಸುತ್ತ ಬರುತ್ತಾರೆಯೋ ಅಷ್ಟು ಅಷ್ಟು ಹೆಚ್ಚಾಗಿ ಆ ಮತದ ಮೂಲಗುರುಗಳಲ್ಲಿ ಅವರಿಗೆ ಭಕ್ತಿಯು ಹೆಚ್ಚುತ್ತಹೋಗುವ ವಿಷಯವು ಸರ್ವಮತಗಳಲ್ಲಿಯೂ ಸಂಪ್ರದಾಯಸಿದ್ಧವಾಗಿ ಬಂದಿರುತ್ತದೆ. ಅದ್ವೈತಸಿದ್ಧಿಯುಳ್ಳವನು ಅದ್ವೈತಮತಸ್ಥಾಪನಾಚಾರ್ಯನೆಂದು ಹೇಳಿಕೊಳ್ಳುವುದಿಲ್ಲ. ಬೌದ್ಧಮತಸಿದ್ಧಿಯುಳ್ಳವನು ಬೌದ್ಧಮತಸ್ಥಾಪಕನೆಂದು ಹೇಳಿಕೊಳ್ಳುವುದಿಲ್ಲ. ಹೀಗಿದ್ದರೂ ಇತ್ತೀಚೆಗೆ ಈ ಮತದಲ್ಲಿ ಮಾತ್ರ ಷಟ್‍ಸ್ಥಲಗಳ ಸಿದ್ಧಿಯಿದ್ದರೂ ಇಲ್ಲದಿದ್ದರೂ ದೊಡ್ಡದೊಡ್ಡ ಮಠಾಧಿಕಾರಿಗಳಾದ ಮಾತ್ರದಿಂದ ಷಟ್‍ಸ್ಥಲಸಿದ್ಧಿಯುಂಟಾಯಿತೆಂಬ ಅಹಂಭಾವದಿಂದೊಡಗೂಡಿ ಷಟ್‍ಸ್ಥಲಸ್ಥಾಪನಾಚಾರ್ಯರೆಂದು ಹೇಳಿಕೊಳ್ಳುತ್ತಿರುವರು: ಇದು ಅವರಿಗೆ ಎಷ್ಟು ಭೂಷಣವೆಂಬುದನ್ನು ವಾಚಕರೇ ಊಹಿಸಬೇಕಾಗಿದೆ. ಆದರೆ ಇಲ್ಲಿಯವರೆಗೂ ವೀರಶೈವಮತದ ಧರ್ಮಗಳೆನಿಸಿದ ಷಟ್‍ಸ್ಥಲಗಳನ್ನು ಮಾತ್ರ ಮುಂದಿರಿಸಿಕೊಂಡು ಷಟ್‍ಸ್ಥಾಪನಾಚಾರ್ಯರೆಂದು ಹೇಳಿಸಿಕೊಳ್ಳಲು ಸಿದ್ಧರಾಗಿರುವರು. ಮುಂದೆ ಇಂಥ ಷಟ್‍ಸ್ಥಲಗಳಿಂದ ಕೂಡಿದ ವೀರಶೈವಮತಸ್ಥಾಪನಾಚಾರ್ಯರೇ ತಾವೆಂದು ಹೇಳಿಸಿಕೊಂಡು ತಮಗೆ ಷಟ್‍ಸ್ಥಲಗಳ ಸಾಧನೆಗೆ ಮೂಲವಾದ ಶಿವಲಿಂಗವನ್ನು ಕೊಟ್ಟ ಶ್ರೀ ರೇಣುಕಾದಿ ಜಗದಾಚಾರ್ಯರನ್ನು ಮೂಲೆಗೆ ಒತ್ತರಿಸಲು ಪ್ರಯತ್ನಪಡಲೂಬಹುದು. ವಾಸ್ತವವಾಗಿ ಗುರುಭಕ್ತಿ, ದೈವಭಕ್ತಿ, ಪಿತೃಭಕ್ತಿ, ಮಾತೃಭಕ್ತಿಯುಳ್ಳ ಆಸ್ತಿಕ ಜನಗಳಿಗೆ ಇದು ಸಾಧುವಾದ ಮಾರ್ಗವಲ್ಲ. ಲೋಕದಲ್ಲಿ ತಂದೆಯು ಗಳಿಸಿದ ಹಣದಿಂದ ತಾನು ಸುಖಪಟ್ಟು ತಂದೆಯಲ್ಲಿ ತಾನು ಭಕ್ತಿಯುಳ್ಳವನಾಗಿರುವುದೇ ಮಗನ ಕರ್ತವ್ಯವಾಗಿರುವಂತೆ, ಮತಸ್ಥಾಪನಾಚಾರ್ಯರಾದ ಶ್ರೀ ರೇಣುಕಾದ್ಯಾಚಾರ್ಯರು ದೀಕ್ಷಾಪೂರ್ವಕವಾಗಿ ಕೊಟ್ಟ ಷಟ್‍ಸ್ಥಲ, ಅಷ್ಟಾವರಣಗಳೆಂಬ ಧನವನ್ನು ವೀರಶೈವಮತದಲ್ಲಿ ಮಕ್ಕಳಂತಿರುವ ಬ್ರಹ್ಮಚಾರಿಯಾಗಲಿ, ಗೃಹಸ್ಥನಾಗಲಿ, ವಾನಪ್ರಸ್ಥನಾಗಲಿ, ಸನ್ಯಾಸಿ (ನಿರಾಭಾರಿ) ಯಾಗಲಿ ಎಲ್ಲರೂ ಈ ಧನದಿಂದ ಜನನಮರಣರೂಪವಾದ ಮಹಾದುಃಖವನ್ನು ಪರಿಹರಿಸಿಕೊಂಡು ಅವಿರಳ ಶಿವಾನಂದವನ್ನು ಪಡೆದು ತಾನೇ ಷಟ್‍ಸ್ಥಲಸ್ಥಾಪನಾಚಾರ್ಯರೆಂದಾಗಲಿ, ವೀರಶೈವಮತಸ್ಥಾಪನಾಚಾರ್ಯರೆಂದಾಗಲಿ ಹೆಮ್ಮೆಗೆ ಹೋಗದೆ "ನಗುರೋರಧಿಕಂ" ಎಂಬ ಶಿವಾಜ್ಞೆಯನ್ನು ಪಾಲಿಸಿ ಧನ್ಯಜೀವಿಗಳಾಗಿ ಆಚಾರ್ಯಭಗವತ್ಪಾದರ ಕೃಪೆಗೆ ಪಾತ್ರರಾಗಲೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ.

ಬಿಜಾಪುರದ ಬಟ್ಟೆಯ ವ್ಯಾಪಾರಿಗಳು ಪರದೇಶದ ಬಟ್ಟೆಗಳನ್ನೂ, ಬಹಿಷ್ಕೃತ ಮಿಲ್ಲುಬಟ್ಟೆಗಳನ್ನೂ ಮಾರುವುದಿಲ್ಲವೆಂದು ಕಾಂಗ್ರೆಸ್ಸಿನವರಿಗೆ ಮುಚ್ಚಳಿಕೆ ಬರೆದುಕೊಟ್ಟಿರುವರೆಂದು ತಿಳಿದುಬರುತ್ತದೆ.

ಭರತಖಂಡದಲ್ಲಿರುವ ವಿದೇಶೀಯ ವಸ್ತ್ರಗಳನ್ನೆಲ್ಲ 10 ಕೋಟಿ ರೂ. ಗಳಿಗೆ ತೆಗೆದುಕೊಂಡು ಯಾವುದಾದರೂ ಪರದೇಶಕ್ಕೆ ಮಾರಾಟಕ್ಕಾಗಿ ಕಳುಹಿಸಬೇಕೆಂದು ರಾಷ್ಟ್ರಸಭೆಯು ಆಲೋಚಿಸಿರುವುದಂತೆ!

ಕಳೆದವರ್ಷ ಮಹಾತ್ಮಗಾಂಧಿಯವರು ಪ್ರಥಮತಃ ಉಪ್ಪಿನಕಾಯಿದೆ ಭಂಗಪಡಿಸಿದ ದಂಡಿಯ ಹತ್ತಿರವಿರುವ ಕರಾಡಿ ಎಂಬ ಗ್ರಾಮದಲ್ಲಿ ಬಹುಜನರು ಉಪ್ಪನ್ನು ತಯಾರಿಸಿದರು. ಪೋಲೀಸರು ಅದನ್ನು ತಡೆಯಲಿಲ್ಲವಂತೆ!

ಗದಗಿನಲ್ಲಿ ಸಿಗರೇಟು ಮುಂತಾದ ಪರದೇಶೀ ವಸ್ತುಗಳನ್ನು ಮಾರಲಾಗದೆಂದು ಅಲ್ಲಲ್ಲಿಯೇ ಸ್ವಯಂಸೇವಕರು ನಿರೋಧಿಸುತ್ತಿರುವರು. ಅನೇಕ ವ್ಯಾಪಾರಿಗಳು ಇದಕ್ಕಾಗಿ ಒಪ್ಪಂದವನ್ನು ಹಸ್ತಾಕ್ಷರ ಮೂಲಕ ಕೊಡುತ್ತಾರೆಂದು ಕೇಳುತ್ತೇವೆ.

ಕಳೆದ ತಿಂಗಳು 25 ನೆಯ ತಾರೀಖಿನದಿವಸ ಕಲ್ಕತ್ತೆಯಲ್ಲಿ ಸರ್. ಪಿ. ಸಿ. ರೇಯವರ ಅಧ್ಯಕ್ಷತೆಯಲ್ಲಿ ಪ್ರಚಂಡಸಭೆಸೇರಿ ದೇಶದಲ್ಲಿ ಶಾಂತಿವಾತಾವರಣವು ಉತ್ಪನ್ನವಾಗಬೇಕಾದರೆ ಎಲ್ಲ ರಾಜಕೀಯಖೈದಿಗಳನ್ನು ಬಿಡಬೇಕೆಂದು ತೀರ್ಮಾನಿಸಿದರು.

ಸಿಸಿಲಿಯಲ್ಲಿ ಚಕ್ರವಾತದಿಂದ ಕಳೆದ ತಿಂಗಳು 21 ನೆಯ ತಾರೀಖಿನಿಂದ ಎರಡು ದಿವಸಗಳವರೆಗೆ ಭಯಂಕರ ಅನಾಹುತವಾಗಿದೆ. ವಿಶೇಷ ಮಳೆಯಿಂದಲೂ ಗಾಳಿಯಿಂದಲೂ ಹೊಲಗಳ ಪೈರುಗಳೂ, ತೋಟಗಳೂ ಹಾಳಾಗಿವೆ. ಬಹು ಜನರು ಮತ್ತು ದನಕರುಗಳೂ ಮೃತಪಟ್ಟಿವೆ.

ಮಣಿಲಾಲ್‍ದಹಭಾಯಿ ಎಂಬ ಹನ್ನೆರಡು ವರ್ಷ ವಯಸ್ಸಿನ ಹುಡುಗನು ಕಾಂಗ್ರೆಸ್ ಬುಲಟಿನ್ ಎಂಬ ಅಖಿಲಭಾರತರಾಷ್ಟ್ರೀಯ ಮಹಾಸಭೆಯ ಪ್ರಸಿದ್ಧ ಪತ್ರಿಕೆಯನ್ನು ಮಾರಿದನೆಂಬ ಅಪರಾಧದ ಮೇಲೆ ನದಿಯಾಡ್ ಮ್ಯಾಜಿಸ್ಟ್ರೇಟರು ಅವನನ್ನು ಒಂದುವರೆ ತಿಂಗಳು ಕಠಿಣಶಿಕ್ಷೆಗೆ ಗುರಿಪಡಿಸಿದರು.

ಲಾಹೋರಿನಲ್ಲಿ ಪಂಜಾಬ್ ಗೌರ್ನರವರನ್ನು ಕೊಲ್ಲಲು ಪ್ರಯತ್ನಿಸಿದನೆಂದೂ, ಸಬ್ ಇನ್ಸ್ಪೆಕ್ಟರ್ ಚರ್ನಸಿಂಗನ ಕೊಲೆಗೆ ಕಾರಣೀಭೂತನೆಂದೂ ಸೆಷನ್ ಜಡ್ಜರಿಂದ ಮರಣದಂಡನೆಗೆ ಗುರಿಯಾಗಿದ್ದ ಹರಿಕೃಷ್ಣನು ಪಂಜಾಬ್ ಹೈಕೋರ್ಟಿಗೆ ಅಪೀಲ್ ಮಾಡಿದ್ದುದು ಸರಿಯಷ್ಟೆ! ಹೈಕೋರ್ಟು ಜಡ್ಜರೂ ಸಹ ಕೆಳಕೋರ್ಟಿನ ತೀರ್ಮಾನವನ್ನೇ ದೃಢಪಡಿಸಿದರು.

ಇಂಗ್ಲೆಂಡ್ ಲೇಬರ್ ಪಾರ್ಟಿಯ ಮಿ|| ಡಬ್ಲ್ಯು. ಜೆ. ಬ್ರೌನ್ ಎಂಬ ಮೆಂಬರರು ಮಿ|| ಸ್ನೋಡೆನ್ ಎಂಬೊಬ್ಬ ಮಂತ್ರಿಗಳನ್ನು ಕುರಿತು ಕಾಯಿದೆ ವಿರುದ್ಧವಾಗಿ ಮನಸ್ವೀ ಪ್ರಶ್ನೆಗಳನ್ನು ಮಾಡಿದರೆಂದು 5 ದಿವಸಗಳವರೆಗೆ ಸಸ್ಪೆಂಡ್ ಮಾಡಲ್ಪಟ್ಟರು. ಆಗ ವೋಟು ಹಾಕಲಾಗಿ ಮೆಂಬರರ ಪರವಾಗಿ 17 ಓಟುಗಳೂ, ವಿರೋಧವಾಗಿ 296 ಓಟುಗಳೂ ಬಿದ್ದುವು.

ಬೆಳಗಾಂವಿಯಲ್ಲಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಅತಿಕ್ರಮಿಸಿ ಪ್ರಭಾತಪೇರಿಯನ್ನು ಮಾಡಿದ್ದಕ್ಕಾಗಿ 18 ಜನ ಸ್ತ್ರೀಯರ ವಿಚಾರಣೆಯಾಗಿ 10 ಜನ ಸ್ತ್ರೀಯರಿಗೆ ಮಾತ್ರ 100 ರೂ. ಗಳು ದಂಡ ಅಥವಾ 4 ತಿಂಗಳು ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಈ ಸಮಯದಲ್ಲಿ ದಂಡದ್ರವ್ಯವನ್ನು ಪೂರ್ಣಮಾಡಿಕೊಳ್ಳಲು ಕೆಲವರ ಮನೆಗಳಲ್ಲಿರುವ ದನಕರುಗಳು ಜಪ್ತಿಮಾಡಲ್ಪಟ್ಟವು.

ಕಳೆದ ತಿಂಗಳು 26 ನೆಯ ತಾರೀಖಿನದಿವಸ ಹೊಸದಿಲ್ಲಿಯ ಹಿಂದೂಕಾಲೇಜಿನ ವಿದ್ಯಾರ್ಥಿಗಳು ಮಹಾತ್ಮಗಾಂಧಿಯವರ ಹಸ್ತದಿಂದ ಪಂಜಾಬ್ ಸಿಂಹ ಲಾಲಾಲಜಪತ್‍ರಾಯರವರ ಭಾವಚಿತ್ರಪಟದ ಅನಾವರಣಮಹೋತ್ಸವವನ್ನು ನೆರವೇರಿಸಿದರು. ಆಗ ಮಹಾತ್ಮಗಾಂಧಿಯವರು ವಿದ್ಯಾರ್ಥಿಗಳು ರಾಜಕೀಯ ಚಳವಳಿಯಲ್ಲಿ ಸಂಪೂರ್ಣ ಭಾಗವಹಿಸಬೇಕೆಂದೂ, ಖಾದಿಯು ಸರ್ವತ್ರ ವ್ಯಾಪಿಸಲ್ಪಡಬೇಕೆಂದೂ ಭಾಷಣ ಮಾಡಿದರು.

ಹಬೀಬ್‍ನೂರ್ ಎಂಬ ಮಹಮ್ಮದೀಯನು ಕಳೆದ ತಿಂಗಳು 18 ನೆಯ ತಾರೀಖು ಮಂಗಳವಾರ ಚಾರ್ಸದ್ದ ಅ|| ಕಲೆಕ್ಟರ್ ಮಿ|| ಕ್ಯಾಪ್ಟನ್ ಬಾರ್ನ್‍ರವರನ್ನು ಕೊಲ್ಲುವುದಕ್ಕಾಗಿ ಮೇಲೆಬಿದ್ದನೆಂದು ಮಾರನೆಯ ದಿವಸ ಪೆಷಾವರ್‍ನಲ್ಲಿ ವಿಚಾರಣೆನಡೆಯಿಸಿ ಬೃಹಸ್ಪತಿವಾರ ಪ್ರಾತಃಕಾಲ ಗಲ್ಲಿಗೇರಿಸಿದರು. ವಿಚಾರಣೆಯಾದ 24 ತಾಸುಗಳೊಳಗೇನೇ ಇವನನ್ನು ಗಲ್ಲಿಗೇರಿಸಿದ ವರ್ತಮಾನವನ್ನು ಕೇಳಿ ಆ ದೇಶದಲ್ಲಿ ಹಾಹಾಕಾರ ಹುಟ್ಟಿರುವುದು.

ಕಲ್ಕತ್ತೆಯ ಹತ್ತಿರ ಹರಿಯುವ ಹುಗ್ಲಿ ನದಿಯಲ್ಲಿ ಒಬ್ಬ ಸ್ತ್ರೀಯಳು ಮುಳುಗುತ್ತಿದ್ದುದನ್ನು ನೋಡಿ ಅವಳನ್ನು ಬದುಕಿಸಬೇಕೆಂದು ಮಿ|| ಸಿ. ಸಿ. ಮರೀ ಎಂಬವರು ಪ್ರಯತ್ನಪಟ್ಟು ತಮ್ಮ ಪ್ರಾಣವನ್ನು ಕಳೆದುಕೊಂಡರು. ಸ್ತ್ರೀಯಳ ಪ್ರೇತವನ್ನು ಬೇರೆಕಡೆಗೆ ಸಾಗಿಸಿರುವರು. ಮಿ|| ಮರೆಯವರ ಕಳೇಬರವು ಇನ್ನೂ ಸಿಕ್ಕಿರುವುದಿಲ್ಲ. ಅವರು ಆ ದಿವಸವೇ ಲಂಡನ್ನಿಗೆ ಹೊರಡಬೇಕೆಂಬ ಯತ್ನ ನಡೆಯಿಸಿದ್ದರು. ಆದರೆ ದೈವವಿಲಾಸವು ಹೀಗೆ ಪರಿಣಮಿಸಿತು.

ಶ್ರೀಯುತ ವಿಠ್ಠಲಭಾಯಿ ಜೆ. ಪಟೇಲ್‍ರವರು ಕಳೆದ ತಿಂಗಳು 24 ನೆಯ ತಾರೀಖಿನ ದಿವಸ ಚಿಕಿತ್ಸೆಗೂ, ಮತ್ತು ಹವಾ ಬದಲಾವಣೆಗೂ ವಿಯನ್ನಾಕ್ಕೆ ಹೊರಟರು. ಅವರು ಹಡಗುಹತ್ತುವಾಗ ಬೊಂಬಾಯಿಯ ಅಲೆಗ್ಝಾಂಡರ್‍ಡಾಕ್ಕಿಗೆ ಸಹಸ್ರಾರು ಜನರು ಬಂದು ಇವರು ಶೀಘ್ರ ಗುಣಹೊಂದಿ ಮಾತೃಭೂಮಿಗೆ ಹಿಂದಿರುಗಲೆಂದು ಹರಸಿದರು. ಮಹಾತ್ಮಗಾಂಧಿಯವರೂ ಸಹ ಇವರ ಜಲಪ್ರಯಾಣವು ಸುಖಕರವಾಗಲೆಂದೂ, ಶೀಘ್ರ ಗುಣಹೊಂದಿ ಎಂದಿನಂತೆ ತಮ್ಮ ಜನತೆಯ ಸೇವೆಗೆ ಸಿದ್ಧರಾಗಲೆಂದೂ ಹರಸಿ ಪತ್ರವನ್ನು ಬರೆದಿರುವರು.

ಧಾರವಾಡದಲ್ಲಿ ಕಂದಾಯ ಕೊಡಕೂಡದೆಂದು ಭಾಷಣಮಾಡಿದರೆಂಬ ಅಪರಾಧದಮೇಲೆ ಕಳೆದ ತಿಂಗಳು 24 ನೆಯ ತಾರೀಖಿನ ದಿವಸ ಒಬ್ಬ ಸ್ವಯಂಸೇವಕನಿಗೆ 4 ತಿಂಗಳು ಕಠಿಣಶಿಕ್ಷೆಯನ್ನೂ ಇನ್ನೊಬ್ಬನಿಗೆ 3 ತಿಂಗಳು ಕಠಿಣಶಿಕ್ಷೆಯನ್ನೂ ನ್ಯಾಯಾಧೀಶರು ವಿಧಿಸಿದರು. ಹಾವೇರಿ ತಾಲೂಕಿನಿಂದ ಬಂದಿದ್ದ ಕೆಲವು ಸ್ವಯಂಸೇವಕರು ಪಿಕೆಟಿಂಗ್ ಮಾಡುತ್ತಿದ್ದರೆಂದು ದಸ್ತಗಿರಿಮಾಡಲ್ಪಟ್ಟಿದ್ದಾರೆ. ಇತ್ತೀಚೆಗೆ ಆಕ್ರಮಕೂಟದಿಂದ ಸಾರಲ್ಪಟ್ಟಿರುವ ಪಂಚಾಯಿತಿಯ ಮೆಂಬರರಾದ ಅಂಕೋಲ ಮತ್ತು ಕನ್ನಡಜಿಲ್ಲೆಗಳಲ್ಲಿಯ ಕೆಲವರು ದಸ್ತಗಿರಿಮಾಡಲ್ಪಟ್ಟಿರುವರು.

ಕರಾಚಿಯಲ್ಲಿ ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು ನೆರವೇರುವುದಕ್ಕೆ ಅವಶ್ಯಕಗಳಾದ ಕಾರ್ಯಗಳು ಉತ್ಸುಕತೆಯಿಂದ ನಡೆಯುತ್ತಲಿವೆ. ಮಹಾಸಭೆಯು ಸೇರುವ ಸ್ಥಳವು ಹರಚಂದ್ರಾಯಿ ನಗರವೆಂದು ಕರೆಯಲ್ಪಡುವುದು. ಮತ್ತು ಖರ್ಚಿನ ಸಲುವಾಗಿ 3 ಲಕ್ಷ ರೂಪಾಯಿಗಳನ್ನು ಕೇರಿಸುವ ಏರ್ಪಾಡು ನಡೆದಿದೆ. ವ್ಯಾಪಾರಿ ಮಹಾಮಂಡಲದವರೂ ಮತ್ತು ಅಖಿಲ ಭಾರತ ನೂಲುವ ಸಂಸ್ಥೆಯವರೂ ಮಹಾತ್ಮ ಗಾಂಧಿಯವರ ಸಂಗಡ ಆಲೋಚನೆಮಾಡಿ ಮಾರ್ಚ 15 ನೆಯ ತಾರೀಖಿನ ದಿವಸದಿಂದ ಖಾದಿ ಪ್ರದರ್ಶನವನ್ನು ನಡೆಯಿಸುವರು. ಮತ್ತು ಸ್ವದೇಶೀ ವಸ್ತುಗಳ ಬಜಾರವನ್ನು ತೆರೆಯುವರು.

ಅಂಕೋಲೆ ತಾಲೋಕಿನ ಸುಮಾರು 45 ಗ್ರಾಮಗಳಲ್ಲಿ ಕರನಿರಾಕರಣ ಚಳವಳಿಯು ಜೋರಿನಿಂದ ಸಾಗಿದೆ. ಅಮಲ್ದಾರರು ಆಯುಧಪಾಣಿಗಳಾದ ಪೋಲೀಸರೊಡನೆ ಶಿಂಗಣಮ ಎಂಬ ಗ್ರಾಮಕ್ಕೆ ಇದರ ವ್ಯವಸ್ಥೆಗಾಗಿ ಹೋಗಿದ್ದರು. ಅಲ್ಲಿ ಅಮಲ್ದಾರರಿಗೆ ಇಳಿದುಕೊಳ್ಳಲು ಸ್ಥಲವುಸಹ ಸಿಕ್ಕದೆ ಶಾಲೆಯಲ್ಲಿ ಇಳಿದುಕೊಂಡರು. ಇವರಿಗೆ ಚಹಾಮಾಡಿಕೊಳ್ಳುವುದಕ್ಕಾಗಿ ಹಾಲು, ಸಕ್ಕರೆ ಮುಂತಾದುವುಗಳೂಸಹ ಸಿಗಲಿಲ್ಲವಂತೆ! ಅಲ್ಲಲ್ಲಿಯೇ ಅನೇಕ ಪಟೇಲರು ರಾಜೀನಾಮೆಯನ್ನು ಕೊಡಲುಪಕ್ರಮಿಸಿದಾರೆ. ಇದಲ್ಲದೆ ಅನೇಕ ಹಳ್ಳಿಗಳಲ್ಲಿ ಜನಗಳು ಕೋರ್ಟಿಗೆ ಹೋಗದಂತೆ ತಮ್ಮತಮ್ಮಲ್ಲಿಯೇ ಪಂಚಾಯಿತಕೋರ್ಟುಗಳನ್ನು ಮಾಡಿಕೊಂಡಿರುವರು. ಸರ್ಕಾರದವರು ಈ ಪಂಚಾಯಿತ ಕೋರ್ಟಿಗೆ ಯಾರೂ ಹೋಗಬಾರದೆಂದು ನೋಟೀಸು ಮೂಲಕ ಸೂಚಿದಾರೆ. ಮುಂಬೈಸರ್ಕಾರವು ಈರೀತಿ ಪಂಚಾಯಿತ ಕೋರ್ಟುಗಳನ್ನು ಮಾಡಿಕೊಳ್ಳುವದು ಕಾಯಿದೆ ವಿರುದ್ಧವೆಂದು ಪ್ರಕಟಿಸಿದೆ.

"ನವಜೀವನ" ಪತ್ರಿಕೆಯಲ್ಲಿ ಮಹಾತ್ಮಾಗಾಂಧಿಯವರು ತಿಳುಹಿಸುವುದೇನೆಂದರೆ—"ನಾನು ವೈಸರಾಯರಲ್ಲಿಗೆ ಹೋಗಿ ಶಾಂತಿಸಂಧಾನವನ್ನು ನಡೆಯಿಸುತ್ತಿರುವುದರಿಂದ ಯಾರೂ ತಪ್ಪಭಿಪ್ರಾಯ ಪಡಬಾರದು. ನೀವು ಎಂದಿನಂತೆ ದೇಶಸೇವೆಯನ್ನು ಮಾಡುತ್ತಲೇ ಇರಬೇಕು. ಶಾಂತಿಸಂಧಾನವು ಪ್ರಾರಂಭವಾದಾಗ, ನಿಮ್ಮ ಕಾರ್ಯವು ಶಿಥಿಲವಾದರೆ, ಶಾಂತಿಯಾಗುವುದು ಸಾಧ್ಯವಿಲ್ಲ; ಮತ್ತು ಹೋರಾಟವು ಮುಂದುವರಿಯಬೇಕಾದೀತು. ಕಾಂಗ್ರೆಸ್ಸಿನವರು ಗೌರವದಿಂದ ಬರುವ ಶಾಂತಿಯನ್ನು ಮಾತ್ರ ಒಪ್ಪುವರೇ ವಿನಾ ಅನ್ಯಥಾ ಇಲ್ಲ. ಜನರು ತಮ್ಮ ಶಕ್ತಿಯನ್ನು ವ್ಯಕ್ತಪಡಿಸಿದರೇನೇ ಶಾಂತಿಯು ಶೀಘ್ರವಾಗಿ ಲಭಿಸುವುದು. ದೇಶದಲ್ಲಿ ಈಗ ಪ್ರಾಮುಖ್ಯವಾಗಿರುವುದು ವಿದೇಶೀವಸ್ತ್ರ ಬಹಿಷ್ಕಾರ. ಮಿಲ್ಲುಗಳ ಮಾಲೀಕರು ವರ್ತಕರ ಕಡೆಯಿಂದ ವಿದೇಶೀವಸ್ತ್ರಗಳನ್ನು ತೆಗೆದುಕೊಂಡು ತಮ್ಮ ಮಿಲ್ಲುಗಳಲ್ಲಿ ತಯಾರಾಗಿರುವ ಬಟ್ಟೆಗಳನ್ನು ಕೊಡಬೇಕು. ಮಿಲ್ಲುಗಳ ಮಾಲೀಕರು ಅವುಗಳನ್ನು ವಿದೇಶಗಳಿಗೆ ಮಾರಬಹುದು, ಸುಡಬಹುದು ಅಥವಾ ಸೀಲುಮಾಡಿ ಸ್ವರಾಜ್ಯ ಸಿಗುವವರೆಗೂ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಹೆಚ್ಚು ನಷ್ಟವಾಗುವುದಾದರೆ ನೂತನ ಸರ್ಕಾರದಿಂದ ಲುಕ್ಸಾನು ಕೇಳಬಹುದು.

ವೈಸ್‍ರಾಯ್ ಪದವೀಧರರಾದ ಲಾರ್ಡ್ ಇರ್ವಿನ್‍ರವರು ತಮ್ಮ ಅಧಿಕಾರದಿಂದ ವಿಶ್ರಾಂತಿಯನ್ನು ಹೊಂದುವ ಪೂರ್ವದಲ್ಲಿ ಇರ್ವಿನ್ನರಿಗೆ ಮುಂಬೈ ಮುನಿಸಿಪಾಲಿಟಿಯವರ ಪರವಾಗಿ ಒಂದು ಮಾನಪತ್ರವನ್ನರ್ಪಿಸಬೇಕೆಂದು ಶ್ರೀ ಬೈರಾಮ್ಜಿ ಜೀಜಿಭಾಯಿಯವರ ಇಚ್ಛೆಯಂತೆ ಕಳೆದ ತಿಂಗಳು 23 ನೆಯ ತಾರೀಖಿನ ದಿವಸ ಮೀಟಿಂಗನ್ನು ಮಾಡಿದ್ದರು. ಅದಕ್ಕಾಗಿ ದೇಶಸೇವಾನಿರತರಾದ ದೊಡ್ಡ ದೊಡ್ಡ ಮನೆತನದ ಸ್ತ್ರೀಯರು ಪಿಕೆಟಿಂಗ್‍ಮಾಡಲುಪಕ್ರಮಿಸಿದರು. ಅಷ್ಟರಲ್ಲಿ ಮುನಿಸಿಪಾಲಿಟಿ ಕಮಿಷನರು ಬಂದು ಸ್ತ್ರೀಯರ ಮೇಲೆ ತಮ್ಮ ಅಧಿಕಾರ ದರ್ಪವನ್ನು ತೋರಿಸಿದರು. ಆದರೂ ಸ್ತ್ರೀಯರು ಪಿಕೆಟಿಂಗನ್ನು ನಿಲ್ಲಿಸಲಿಲ್ಲ. ಕಮಿಷನರು ಅವರನ್ನು ಹೊರಗೆ ಹಾಕಿಸಲು ಪ್ರಯತ್ನಪಟ್ಟು ಪೋಲೀಸಿನವರಿಗೆ ಅಪ್ಪಣೆಯನ್ನಿತ್ತರು. ಅವರು ತಮ್ಮ ಕೈಯಲ್ಲಿರುವ ದಂಡದಿಂದ ಸ್ತ್ರೀಯರನ್ನು ತಳ್ಳಲಿಕ್ಕೆ ಹತ್ತಿದರು. ಈ ಗದ್ದಲದಲ್ಲಿ ಒಬ್ಬ ಸ್ತ್ರೀಯಳು ಮೂರ್ಛೆಗೊಂಡಳು. ಇದರಿಂದ ಬಹು ಕೋಲಾಹಲವುಂಟಾಯಿತು. ಅಷ್ಟರಲ್ಲಿ ಕಮಿಟಿಯು ಪ್ರಾರಂಭವಾಯಿತು. ಶ್ರೀಯುತ ಕೆ. ಎಫ್. ನರಿಮನ್ ಮುಂತಾದ ಸದಸ್ಯರು ಕಮಿಷನ್ನರ ವಿಷಮವರ್ತನವನ್ನು ಬಹಳವಾಗಿ ಖಂಡಿಸಿದರು. ಸಭೆಗೆ ಇರತಕ್ಕಷ್ಟು ಸದಸ್ಯರು ಇಲ್ಲದೆ ಹೋದುದರಿಂದ ಆ ದಿವಸ ಸಭೆಯು ಮುಂದಕ್ಕೆ ಅಡ್ಜರ್ನ್ ಮಾಡಲ್ಪಟ್ಟಿತು

ಗುಜರಾಥ ವಿದ್ಯಾಪೀಠದ ಪ್ರೊ|| ಶ್ರೀಯುತ ಕುಮಾರಪ್ಪನವರನ್ನು, ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆದ ಲೇಖನಗಳು ಆಕ್ಷೇಪಣೀಯವಾದವುಗಳಾದುದರಿಂದ ಒಂದು ವರ್ಷದವರೆಗೆ ಸುಮ್ಮನಿರುವದಕ್ಕಾಗಿ 500 ರೂ. ಜಾಮೀನು ಕೊಡಬೇಕೆಂದು ಸರ್ಕಾರದವರು ಕೇಳಿದರು. ಅದಕ್ಕವರು ಒಪ್ಪಲಿಲ್ಲ. ಅದಕಾರಣ ಅಹಮದಾಬಾದ್ ಸಿಟಿಮ್ಯಾಜಿಸ್ಟ್ರೇಟರು ಅವರನ್ನು ಒಂದು ವರ್ಷ ಸಾದಾ ಸಜೆಗೆ ಗುರಿಪಡಿಸಿ ಎ ಕ್ಲಾಸಿನಲ್ಲಿಡುವಂತೆ ಆರ್ಡರ್‍ಮಾಡಿರುತ್ತಾರೆ. ಶ್ರೀಯುತ ಕುಮಾರಪ್ಪನವರು ಕೋರ್ಟಿನ ಮುಂದೆ ಕೊಟ್ಟ ವಾಙ್ಮೂಲವೇನೆಂದರೆ—"ಕಾಯಿದೆ ಪ್ರಕಾರ ನೆಲೆಗೊಳಿಸಲ್ಪಟ್ಟಿರುವ ಸರ್ಕಾರಕ್ಕೆ ಅನಾದರಣೆಯುಂಟುಮಾಡುವ ಮತ್ತು ಜನರಲ್ಲಿ ಅಶಾಂತಿಯುತ್ಪನ್ನವಾಗುವ ರಾಜದ್ರೋಹಕರವಾದ ಲೇಖನಗಳನ್ನು ಬರೆದಿರುವುದರಿಂದ ನಾನು ಅಪಾದಿತನಾಗಿ ಮಾಡಲ್ಪಟ್ಟಿರುವೆನೆಂದು ಸರ್ಕಾರದ ಹುಕುಮಿನಲ್ಲಿ ಬರೆಯಲ್ಪಟ್ಟಿದೆ. ಇದು ಸಿದ್ಧವಾಗುವುದಾದರೆ ನಾನು ನನ್ನ ದೇಶಕ್ಕೆ ಪರಮದ್ರೋಹಿಯಾಗುವೆನು. ಆದರೆ ಈಗಿನ ಇಂಡಿಯಾ ಸರ್ಕಾರವು ಭಾರತೀಯ ಪ್ರಜೆಗಳು ಮಾಡಿರುವ ಕಾಯಿದೆಯಿಂದ ಸ್ಥಾಪಿಸಲ್ಪಟ್ಟಿರದೆ ಇಂಗ್ಲೆಂಡಿನ ಪಾರ್ಲಿಮೆಂಟಿನ ಆಕ್ಟ್ ಪ್ರಕಾರ ನೆಲೆಗೊಳಿಸಲ್ಪಟ್ಟಿದೆ. ಆದುದರಿಂದ ಇದು ಆಂಗ್ಲೇಯರಿಗೆ ಉತ್ತರವಾದಿಯಾಗಿದೆ. ಈ ಸರ್ಕಾರವು ಲಂಡನ್ನಿನಲ್ಲಿ ಕಾಯಿದೆಯಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಾಗಬಹುದೇ ವಿನಾ ಪೀಕಿಂಗ್, ಟೆಂಬಕ್ಟೂ ದಿಲ್ಲಿಯಲ್ಲಿ ಆಗಬಲ್ಲದೆ? ಆದಪ್ರಯುಕ್ತ ನನ್ನ ಮೇಲೆ ಅಪರಾಧವು ನಿಲ್ಲಲಾರದು. ನಾನು ಸರ್ಕಾರಕ್ಕೆ ಅನಾದರಣೆಯುಂಟು ಮಾಡುವಕಾರ್ಯದಲ್ಲುದ್ಯುಕ್ತನಾಗಿರುವೆನೆಂಬುದು ಸಿದ್ಧವಾಗಲಾರದು. ಬೀದಿಯಲ್ಲಿ ಚಿಕ್ಕಚಿಕ್ಕ ಹುಡುಗರನ್ನು ಬೆನ್ನಟ್ಟಿ ಅವರ ಕೈಗಳಿಂದ ಪತ್ರಿಕೆಗಳನ್ನೂ ಗಾಂಧಿಟೋಪಿಗಳನ್ನೂ ಕಿತ್ತುಕೊಳ್ಳುವ ಸಾರ್ಜಂಟರಿಂದ ಸರ್ಕಾರದ ವಿಷಯದಲ್ಲಿ ಉಪೇಕ್ಷೆಯುಂಟಾಗುವುದೇ ವಿನಾ ನನ್ನಿಂದಲ್ಲ.

ಸ್ವೀಕಾರ.

ದಾವಣಗೆರೆ ಮ|| ರಾ|| ಶ್ರೀಮಂತ ಮಾಗಾನಹಳ್ಳಿ ಷಡಕ್ಷರಪ್ಪನವರ ಪುತ್ರರಾದ ಮ|| ಷಣ್ಮುಖಪ್ಪನವರ ಧರ್ಮಪತ್ನಿ ಶ್ರೀಮತಿ ನಾಗಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ **2** ರೂ. ಮ|| ರಾ|| ಮುಂಡರಗಿ ಮಹದೇವಪ್ಪನವರ ಪುತ್ರರಾದ ರುದ್ರಪ್ಪನವರ ಧರ್ಮಪತ್ನಿ ಶ್ರೀಮತಿ ಕೊಟ್ರಮ್ಮನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಲ್ಪಟ್ಟ **2** ರೂ. ಜಗದಾಚಾರ್ಯರ ಜಯಂತಿಯುತ್ಸವದಲ್ಲಿ ಸಮರ್ಪಿಸಲ್ಪಟ್ಟ **1** ರೂ. ಒಟ್ಟು **5** ರೂ. ಗಳು ವೇ|| ಮಲೇಬೆನ್ನೂರುಮಠದ ಹಾಲಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಹೂವಿನಹಡಗಲಿ ತಾ|| ಹಿರೇಮಲ್ಲನಕೇರಿಯಲ್ಲಿರುವ ಮ|| ರಾ|| ಕಂದಗಲ್ಲು ಮಲ್ಲಪ್ಪ ಎಂಬಾತನು ಮುಂಡರಗಿಯಲ್ಲಿ ಮಠದಿಂದ ದೂರನಾದವನೊಡನೆ ಸಮ್ಮಿಶ್ರಾದಿಗಳನ್ನು ಮಾಡಿದ ಅಪರಾಧಕ್ಕಾಗಿ ಶ್ರೀ|| ಷ|| ಬ್ರ|| ಪುರದ ಪಟ್ಟಾಧ್ಯಕ್ಷರಿಂದ ಪ್ರಾಯಶ್ಚಿತ್ತವನ್ನು ಹೊಂದಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2-8-0** ರೂ. ಗಳು ಮ|| ರಾ|| ಹೊಳಗುಂದಿ ಕರಣಂ ಸಿದ್ಧಪ್ಪನವರದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ಡಿ|| ಹೊನ್ನಾಳಿ ತಾ|| ನ್ಯಾಮತಿಯಲ್ಲಿರುವ ಮ|| ರಾ|| ಹಳ್ಳೂರು ವಿರುಪಣ್ಣನವರ ಪುತ್ರಿ ಚಿ|| ಸೌ|| ಚನ್ನಮ್ಮನನ್ನು ಮ|| ಹಾರ್ನಹಳ್ಳಿ ದುಮ್ಮಿ ಶಿವಲಿಂಗಪ್ಪನವರ ಪುತ್ರ ಚಿ|| ಗುರುಸಿದ್ಧಪ್ಪನಿಗೆ ಕೊಟ್ಟು ನಿಶ್ಚಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂಪಾಯಿಗಳು ಮ||ರಾ|| ಚೀನಕೆರೆ ಮುದ್ವೀರಪ್ಪನವರದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಆದವಾನಿ ತಾ|| ಯಮ್ಮಿಗನೂರು ಗ್ರಾಮದಲ್ಲಿ ನಡೆಯಿಸಿದ ಜಗದಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಮ|| ರಾ|| ನವಲಿ ಕೈರುಪ್ಪಳಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಗಳು ಮ|| ರಾ|| ಮಾವಿಮಡಿ ಕೈರುಪ್ಪಳಪ್ಪನವರದ್ವಾರಾ ತಲ್ಪಿರುತ್ತವೆ.

ದಿಬ್ಬೂರು ಗ್ರಾಮದಲ್ಲಿ ಜಗದಾಚಾರ್ಯರ ಜಯಂತಿ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಮ|| ರಾ|| ಎಂ. ರುದ್ರಪ್ಪನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂಪಾಯಿಯು ಸ್ಕೂಲ್‍ಮಾಸ್ಟರ್ ಮ|| ರಾ|| ಎ. ಚನ್ನಪ್ಪನವರದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮೈಸೂರು ತಾ|| ೩ ನೇ ಮಾರ್ಚಿ ೧೯೩೧ ನೇ ಸೋಮವಾರ ಪಂಚಾಚಾರ್ಯಪ್ರಭಾ ೭

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಶ್ರೀ ಹಿಮವತ್ಕೇದಾರ್ವೈಕೋರಾಮವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳ ಅಡ್ಡಪಲ್ಲಕ್ಕಿಯ ಮಹೋತ್ಸವ.

ಜಾಲಿಹಳ್ಳಿ

ಶಕ ೧೮೫೩ ಪ್ರಮೋದ ಸಂ|| ಪು|| ಶು|| ೬ ತಿಥಿಯಲ್ಲಿ ಜಾಲಿಹಳ್ಳಿ ಗೌಡ, ನಾಡಗೌಡ, ಕುಲಕರ್ಣಿ ಮುಂತಾದ ವೀರಶೈವ ಸಮಸ್ತ ದೈವದವರ ಬಿನ್ನಹ ಪತ್ರದ ಪ್ರಕಾರ ಮಹಾಸವಾರಿಯು ಜಾಲಿಹಳ್ಳಿಗೆ ದಯಮಾಡಿಸಿತು. ಪ್ರತಿನಿತ್ಯ ಮಹಾಸನ್ನಿಧಿಯಲ್ಲಿ ಪುರಾಣಶ್ರವಣ, ಉಪನ್ಯಾಸ, ಕೀರ್ತನಗಳು ನಡೆಯುತ್ತಲೇ ಇದ್ದವು. ಜಗದ್ಗುರುಗಳ ದರ್ಶನಾರ್ಥವಾಗಿ ದೂರ ದೂರ ಪ್ರಾಂತದ ಜನರು ಬಂದು ಮಹಾಗುರುಗಳ ಅಮೃತವಾಣಿಯಿಂದ ನೈತಿಕ, ಸಾಮಾಜಿಕ, ತತ್ವಬೋಧೆಯನ್ನು ಕೇಳಿ ಆಶೀರ್ವಾದವನ್ನು ಹೊಂದಿ ಹೋಗುತ್ತಿದ್ದರು. ಇಂತಹ ಸುಸಮಯದಲ್ಲಿ ಮಹಾಚಾರ್ಯರ ತಿರ್ಯಗಾಂದೋಲನೋತ್ಸವವನ್ನು ಮಾಡಿ ಕೃತಾರ್ಥರಾಗಬೇಕೆಂದು ಸ್ಥಳಿಕ ವೀರಶೈವರು, ಗೌಡ, ಕುಲಕರ್ಣಿಯವರು ಸನ್ನಿಧಿಯಲ್ಲಿ ಕೇಳಿಕೊಂಡರು. ಮಹಾಚಾರ್ಯರು ಉತ್ಸವದಿಂದ ಏನು ಪ್ರಯೋಜನ? ಇಲ್ಲದ ತೊಂದರೆ ಏತಕ್ಕೆ? ದರ್ಶನಾಶೀರ್ವಾದಗಳಿಂದ ಕೃತಾರ್ಥರಾಗಿರೆಂದು ಅಪ್ಪಣೆಕೊಡಿಸಿದರೂ ಸಹ, ಪ್ರಮುಖರು ಕೇಳದೆ ಉತ್ಸವಕ್ಕೆ ಒಪ್ಪಲೇಬೇಕೆಂದು ಪ್ರಾರ್ಥಿಸಿಕೊಂಡದ್ದರಿಂದ ಆಗಲೆಂದು ಅಪ್ಪಣೆಕೊಡಿಸಿದರು. ೭೨ ಬಿರುದಾವಳಿ ಸಹಿತವಾಗಿ ತಿರ್ಯಗಾಂದೋಲನೋತ್ಸವವು ಮಾಘ ಬ|| ೫ ತಿಥಿಯಲ್ಲಿ ಜರಗುವದೆಂದು ಹಸ್ತಪತ್ರಿಕೆಗಳನ್ನು ಹಂಚಿದರು. ಉತ್ಸವದ ೨-೩ ದಿನಗಳ ಮುಂಚಿತವಾಗಿಯೇ ಜಗದಾಚಾರ್ಯರ ಉತ್ಸವನ್ನು ನಿರೀಕ್ಷಿಸುವುದಕ್ಕಾಗಿ ಬಳ್ಳಾರಿ, ಆದವಾನಿ, ರಾಯಚೂರು, ಯಾದಗಿರಿ, ಗುಲ್ಬರ್ಗ, ಸುರಪುರ, ಶಹಪುರ, ಮುಂತಾದ ದೂರ ದೂರ ಪ್ರಾಂತಗಳಿಂದಲೂ, ಸುತ್ತಮುತ್ತಿನ ಗ್ರಾಮಗಳಿಂದಲೂ ಭಜನಾಮಂಡಲಿ ಸಹಿತವಾಗಿ ಅನೇಕ ಜನರು ತಂಡೋಪತಂಡವಾಗಿ ಬರುತ್ತಿದ್ದರು. ಸುಮಾರು ೩೦ ಸಹಸ್ರಗಳವರೆಗೆ ಜನರು ಕೂಡಿದ್ದರು. ಉತ್ಸವವು ಶನಿವಾರ ೮ ಘಂಟೆಗೆ ಹೊರಡಬೇಕಾಗಿತ್ತು. "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಆರ್ಯೋಕ್ತಿಯಂತೆ ಉತ್ಸವಕ್ಕೆ ವಿಘ್ನವು ಪ್ರಾಪ್ತವಾಯಿತು. ಕೆಲಜನ ಕುಹಕರಾದ ಹಾರವರು ತಾವು ಮುಂದೆ ಬರದೆ ಸ್ಥಳಿಕ ದೊರೆಗಳಿಗೂ, ಅನುಯಾಯಿಗಳಿಗೂ ಈ ಉತ್ಸವದಲ್ಲಿ ರಂಗನಾಥನ ತೋಳನ್ನು ಕಟ್ಟುವರೆಂದು ವಿಪರೀತವಾಗಿ ಬೋಧಿಸಿ ಅವರನ್ನು ಹುರಿದುಂಬಿಸಿಬಿಟ್ಟಿದ್ದರು. ಮೋಸವು ಒದಗುತ್ತದೆಂದು ಯಾರೂ ತಿಳಿದಿರಲಿಲ್ಲ. ಸರ್ವಮತೀಯರ ಏಕೀಕರಣದಿಂದ ಈ ಕಾರ್ಯವು ನೆರವೇರುವದೆಂದು ಸ್ಥಳಿಕ ವೀರಶೈವರು ನಂಬಿದ್ದರು. "ನಚಿದೆವ್ಮ ಕೋಣವನ್ನೀಯಿತು" ಎಂಬ ಗಾದೆಯಂತೆ ವಿಪರೀತವಾಗುವದು ಯಾರು ಬಲ್ಲರು? ಏನೊಂದೂ ವಿಘ್ನವಿಲ್ಲೆಂದು ಉತ್ಸವದ ವ್ಯವಸ್ಥೆಗಾಗಿ ತಕ್ಕಷ್ಟು ಪೋಲೀಸರ ಇಂತಿಜಾಮುಮಾಡಿರಲಿಲ್ಲ. ಆದ್ದರಿಂದ ಸದ್ಯಃ ಉತ್ಸವವು ನಿಲ್ಲಿಸಬೇಕೆಂದು ನಿಶ್ಚಯಿಸಿ ಆ ದಿವಸದ ಉತ್ಸವವು ನಿಲ್ಲಿಸಲ್ಪಟ್ಟಿತು.

ಪರಮತೀಯರ ಅಸೂಯಾಗ್ನಿಯಿಂದ ನೊಂದ ಜನರೆಲ್ಲರೂ ಕಳವಳಗೊಂಡು "ಬಂದ ದಾರಿಗೆ ಸುಂಕವಿಲ್ಲ" ಎಂಬ ಗಾದೆಯಂತೆ ಖಿನ್ನಮನಸ್ಕರಾಗಿ ತಮ್ಮ ತಮ್ಮ ಗ್ರಾಮದ ದಾರಿಯನ್ನು ಹಿಡಿದರು. ಸ್ಥಳಿಕ ವೀರಶೈವ ಧರ್ಮಾಭಿಮಾನಿಗಳು ಎದೆಗುಂದದೆ ಘನತೆಯನ್ನು ಹೊಂದಿದ ನಮ್ಮ ನೈಜಾಂ ಸರಕಾರದವರ ಅಪ್ಪಣೆಯನ್ನು ಪಡೆದು ಉತ್ಸವವನ್ನು ನೆರವೇರಿಸಬೇಕೆಂದು ಜಿಲ್ಲಾ ಕೋರ್ಟಿನಲ್ಲಿ ಅಂದರೆ ಅವ್ವಲ್ ತಾಲೂಕದಾರ್ ಸಾಹೇಬರಲ್ಲಿ ಅರ್ಜಿಮೂಲಕ ವ್ಯಾಸನತೋಳು, ನಂದಿಧ್ವಜ ಸಹಿತ ಅಡ್ಡಪಲ್ಲಕ್ಕಿ ಉತ್ಸವನ್ನು ನೆರವೇರಿಸುವದಕ್ಕೆ ಹುಕುಂ ದಯಪಾಲಿಸಬೇಕೆಂದು ಕೇಳಿಕೊಂಡರು. ಜನಾಬ ಅವ್ವಲ್ ತಾಲೂಕದಾರ ಸಾಹೇಬ ಬಹದ್ದೂರರವರು ಮಹಾಸಂಸ್ಥಾನದ ರಿಕಾರ್ಡುಗಳನ್ನು ಪರಿಶೋಧಿಸಿ ನಿಷ್ಪಕ್ಷಪಾತತೆಯಿಂದ ಫಾ|| ಶು|| ೫ ತಿಥಿಯಲ್ಲಿ ವ್ಯಾಸಹಸ್ತ ಸಹಿತವಾಗಿ ಉತ್ಸವವನ್ನು ನೆರವೇರಿಸಬೇಕೆಂದು ಹುಕುಮನ್ನು ಕೊಟ್ಟಿದ್ದರಿಂದ ದೈವದವರು ಮೊದಲಿನಂತೆ ಪ್ರಸಿದ್ಧಪತ್ರಿಕೆಗಳನ್ನು ಹಂಚಿದರು. ಮೊದಲಿನಂತೆಯೇ ಜನರು ಬಂದು ಸೇರಹತ್ತಿದರು. ಗ್ರಾಮವು ಕಿಕ್ಕಿರಿದು ತುಂಬಿ ತುಳುಕಿತು. ಆಗ ಮಾಡಬೇಕೇನು? ಮರ್ದುಂಷುಮಾರಿ ಲೆಖ್ಖ ಆಗುವ ತನಕ ಉತ್ಸವವು ಮಾಡಕೂಡದೆಂದು ಜನಾಬ ಕೊತ್ವಾಲಿ ಮೊಹತ್‌ಮಿಮನ ಮದ್ದತಗಾರ ಸಾಹೇಬರು ಹುಕುಮನ್ನು ಕಳಿಸಿದರು. ಆಗ ವೀರಶೈವರಿಗೆಲ್ಲಾ ಹುಣ್ಣಿನ ಮೇಲೆ ಬರೆಕೊಟ್ಟಂತಾಯಿತು. ಇವರ ದುಃಖಕ್ಕೆ ಮೇರೆಯೇ ಇರಲಿಲ್ಲ. ಆದರೂ ಧೈರ್ಯವನ್ನು ಬಿಡದೆ ಜನಾಬ ತಾಲೂಕದಾರ್ ಸಾಹೇಬರ ಸನ್ನಿಧಿಯಲ್ಲಿ ಹೋಗಿ ತಮ್ಮ ನಿಜಸ್ಥಿತಿಯನ್ನು ಹೇಳಿಕೊಂಡರು. ದಯಾಳುಗಳಾದ ತಾಲೂಕದಾರ್ ಸಾಹೇಬರು ಮಹಾಚಾರ್ಯರ ಉತ್ಸವವನ್ನು ನೆರವೇರಿಸುವುದಕ್ಕೆ ತಾವೇ ಸ್ವತಃ ಜಾಲಿಹಳ್ಳಿಗೆ ಬಂದರು. ಆ ವೇಳೆಯಲ್ಲಿ ದೇವದುರ್ಗದ ಜನಾಬ ತಹಸೀಲ್‌ದಾರಸಾಹೇಬರು, ಕೊತ್ವಾಲಿ ಮೊಹತಮಿಮ ಮದ್ದತಗಾರಸಾಹೇಬರು, ಕೋರ್ಟ ಇನಸ್ಪೆಕ್ಟರ್‌ಸಾಹೇಬರು, ಸರ್ಕಲ್‌ಸಾಹೇಬರು, ಸ್ಥಳಿಕ ಅಮೀನ ಸಾಹೇಬರು, ಪೋಲೀಸ್ ಶಿಬ್ಬಂದಿ ಸಹಿತ ಸುವ್ಯವಸ್ಥೆಗಾಗಿ ಬಂದಿದ್ದರು. ರವಿವಾರ ೯ ಘಂಟೆಯಲ್ಲಿ ಜಗದ್ಗುರುಗಳ ಹಾಗೂ ತಾಲೂಕದಾರಸಾಹೇಬರ ಪರಸ್ಪರ ದರ್ಶನಸಂಭಾಷಣವಾದನಂತರ ಉತ್ಸವವನ್ನು ಹೊರಡಲು ಇಜಾಜತ್ ಕೊಟ್ಟರು. ಗುರುನಾಮದ ಜಯಜಯಕಾರಧ್ವನಿಯು ಆಕಾಶವೆಲ್ಲಾ ತುಂಬಿತು. ಜಗದಾಚಾರ್ಯರು ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯಲ್ಲಿ ಮಂಡಿಸಿದರು. ಸಾಲುಸಾಲಾಗಿ ಮಕರತೋರಣ, ಶ್ವೇತಚ್ಛತ್ರ, ನಂದಿಧ್ವಜ, ವ್ಯಾಸನತೋಳು, ಹಗಲುದೀವಟಿಗೆ ಮುಂತಾದ ೭೨ ಬಿರುದಾವಳಿಗಳು ಶೋಭಿಸುತ್ತಿದ್ದವು. ಉತ್ಸವವು ಹಿರೇಮಠದಿಂದ ಹೊರಟಿತು. ಜನರು ಭಜನೆಯನ್ನು ಮಾಡಹತ್ತಿದರು. ತಮ್ಮಟಿ, ಕಹಳೆ, ಬ್ಯಾಂಡು ಮುಂತಾದ ವಾದ್ಯಗಳು ಭೋರ್ಗರಿಯಹತ್ತಿದವು. ರಂಭಾಸ್ತಂಭಗಳಿಂದಲೂ, ತಳಿರುತೋರಣಗಳಿಂದಲೂ, ಪತಾಕೆಗಳಿಂದಲೂ ಅಲಂಕೃತವಾದ ಪುರವೀಧಿಯಲ್ಲಿ ಉತ್ಸವವು ಸಾಗಿತು. ಅಲ್ಲಲ್ಲಿ ಪುರಂಧ್ರಿಯರು ಮಹಾಪಾದಕ್ಕೆ ಆರತಿಯನ್ನು ಮಾಡಿ ಫಲಗಳನ್ನು ಸಮರ್ಪಿಸುತ್ತಿದ್ದರು. ಉತ್ಸವವು ಈಶ್ವರದೇವಾಲಯದವರೆಗೆ ಹೋಗಿ ಪುನಃ ಹಿಂದಿರುಗಿತು. ಸುಮಾರು ೩ ಘಂಟೆಗೆ ಉತ್ಸವವು ಹಿರೇಮಠಕ್ಕೆ ತಲ್ಪಿತು. ಜನರ ಕರತಾಡನ ಮತ್ತು ಜಯಘೋಷದೊಡನೆ ಮಹಾಚಾರ್ಯರು ಪಲ್ಲಕ್ಕಿಯಿಂದಿಳಿದು ಭವ್ಯವಾಗಿ ರಚಿಸಿದ ಸಿಂಹಾಸನವನ್ನು ಆರೋಹಣಮಾಡಿದರು. ಬಳಿಕ ಸರ್ವರು ಸಾಷ್ಟಾಂಗನಮಸ್ಕಾರಗಳನ್ನು ಸಮರ್ಪಿಸಿದನಂತರ ಮಹಾಶಿವಾಚಾರ್ಯರು ನಮ್ಮ ನೈಜಾಂಪ್ರಭುಗಳಾದ ಬಾದಷಹರಿಗೆ ದೀರ್ಘಾಯುವನ್ನು ಕೋರಿದರು. ಸಾಯಂಕಾಲ ೫ ಘಂಟೆಯಲ್ಲಿ ಕೀರ್ತನ ವ್ಯಾಖ್ಯಾನಗಳು ನಡೆಯುವದರಿಂದ ಸರ್ವರೂ ಬಂದು ಶ್ರವಣ ಮಾಡಿ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಜಗದ್ಗುರುಗಳು ಅಪ್ಪಣೆಕೊಡಿಸಲು, ಅನೇಕರು ಬಂದು ಸಭೆಯನ್ನು ಅಲಂಕರಿಸಿದರು. ದೇವದುರ್ಗದ ಸಂಗೀತ ರಾಚಪ್ಪನವರು ಗುರುಭಕ್ತಿಯ ಬಗ್ಗೆ ಕೀರ್ತನಮಾಡಿದರು. ಆಮೇಲೆ ಸಂ|| ವಿ|| ಆನಂಪಲ್ಲಿ ಶಾಂತಮೂರ್ತಿಗಳವರು ಶ್ರೋತೃಗಳಿಗೆ ಆನಂದವಾಗುವಂತೆ ಶ್ರೀಜಗದ್ಗುರು ರೇಣುಕಾಚಾರ್ಯರ ಕೀರ್ತನವನ್ನು ಮಾಡಿದರು. ಬಳಿಕ ನಾಯಕಲ್‌ಶಾಸ್ತ್ರಿಗಳು ನಮ್ಮ ವೀರಶೈವಸಮಾಜದಲ್ಲಿ ಐಕ್ಯವಿಲ್ಲದ್ದರಿಂದ ಪರಮತೀಯರ ಆಘಾತದಿಂದ ಕಂಠಗತಪ್ರಾಣವಾಗಿರುವದು. ತಾವೆಲ್ಲರೂ ಐಕ್ಯದಿಂದಿರಬೇಕೆಂದು ಶ್ರಾವ್ಯವಾದ ಭಾಷಣಮಾಡಿದರು. ಅನಂತರ ಜಗದ್ಗುರುಗಳು ಇದೇ ವಿಷಯವನ್ನೇ ಪುಷ್ಟೀಕರಿಸಿ ಪರಮತೀಯರಿಂದ ನಮಗಾಗತಕ್ಕ ವಿಘ್ನಪರಂಪರೆಯನ್ನು ಸೂಚಿಸಿ ಇನ್ನು ಮೇಲಾದರೂ ನೀವೆಲ್ಲರೂ ಐಕ್ಯವಾಗಿದ್ದು ಸಮಾಜದ ಕಾರ್ಯಗಳನ್ನು ನಮ್ಮ ಸಮಾಜದ ಪುರೋಹಿತರಿಂದಲೇ ನೆರವೇರಿಸಬೇಕೆಂದು ಹಿಂದೀಭಾಷೆಯಿಂದ ಮನೋಹರವಾಗಿ ಅಪ್ಪಣೆಕೊಡಿಸಿದರು. ಅನಂತರ ಮಹಾಪಾದಕ್ಕೆ ನೀರಾಜನವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಇದೇ ಸಂಸ್ಥಾನದ ಸರ್ವಾಧಿಕಾರಿಗಳಾದ ಚರಮೂರ್ತಿ ಸಿದ್ಧರಾಮಸ್ವಾಮಿಗಳು, ಮುದಗಲ್ಲು ಗ್ರಾಮದ ಅಮರಪ್ಪ ದೇಶಾಯಿಗಳು, ಮಾ|| ಪಾ|| ಟಾಕನಗೌಡರು, ಪೊ|| ಪಾ|| ವಾಮನಗೌಡರು, ಲಕ್ಕ್ಯಾಳ ವೀರನಗೌಡರು, ಮುದವಾಳ ಪೊ|| ಪಾ|| ರಾಮರಡ್ಡಿ ಗೌಡರು, ದೇವದುರ್ಗದ ರೇವಣ ಮುದ್ದಪ್ಪನವರು ಶಹಪುರದ ಜ. ಚೋಳಿ ದೊಡ್ಡಪ್ಪನವರು, ರಾಯಚೂರು [illegible] ಜನಾಬ ಸಯ್ಯಾದುತ್ ವಕೀಲ ಸಾಹೇಬರು, ಜಾಲಿಹಳ್ಳಿ ಹಿರೇಮಠದ ಪಟ್ಟದದೇವರು, ಉದೇಶಿ ಮಠದ ವಿರೂಪಾಕ್ಷಪ್ಪನವರು, ವಿರೂಪಾಕ್ಷಪ್ಪ ಮ|| ಪಾ|| ಕೆರೆಲಿಂಗಪ್ಪ, ಪೊ|| ಪಾ|| ಸಿರಿಣೆ ಮಹದೇವಪ್ಪ, ಮೆಣಸಿನಕಾಯಿ ಮಹದೇವಪ್ಪ, ತುಪ್ಪದ ಚನ್ನವೀರಪ್ಪ, ಹುರಕಡ್ಲಿ, ಬಸಪ್ಪ ಮತ್ತು ವೀರಪ್ಪ, ಸಣ್ಣ ಮಡಿವಾಳಪ್ಪ, ಮೆಣಸಿನಕಾಯಿ ಮೊದಲಾದವರು ಗುರುಕಾರ್ಯವನ್ನು ತ್ರಿಕರಣಪೂರ್ವಕವಾಗಿ ಉತ್ಸಾಹದಿಂದ ಮಾಡಿ ಆಚಾರ್ಯರ ಕೃಪೆಗೆ ಪಾತ್ರರಾಗಿರುವರು. ಇವರಲ್ಲವೇ ನಿಜವಾದ ಗುರುಭಕ್ತರು?

ಶ್ರೀಯುತ ಮಾಕಿ ಪಟ್ಟದದೇವರು, ಈ ಸಂಸ್ಥಾನದ ಅಮಾತ್ಯರಾದ ಕುಡತಿನಿ ಪಟ್ಟದದೇವರು, ಕಾಮಿನಹಾಳ ಪಟ್ಟದದೇವರು, ಹ್ಯಾಟಿ ಚರವರ್ಯ ಶಿವಾರ್ಯರು, ಕೆ. ಎಂ. ಮುನ್ಸಿ ವೀರಾನಂದಶರ್ಮರು ಮತ್ತು ಸರಕಾರಿ ಅಧಿಕಾರಿಗಳು ಉತ್ಸವದಲ್ಲಿ ಏನೊಂದು ಗಲಭೆಯಾಗದಂತೆ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದಕ್ಕೆ ಜಗದಾಚಾರ್ಯರು ಇವರಿಗೆ ದೀರ್ಘಾಯುವನ್ನಿತ್ತು ಕಾಪಾಡಲೆಂದು ಕೋರಿ ಈ ಲೇಖನವನ್ನು ಪೂರೈಸುವೆನು.

ಓರ್ವ ಉತ್ಸವಭಾಗಿ

ಮಿರ್ಜಿಯಲ್ಲಿಯ ಪ್ರಸಿದ್ಧವೈದ್ಯ ವಿರುಪಾಕ್ಷ ಸಿದ್ದಪ್ಪ ಇವರ ಸಶಾಸ್ತ್ರ ಸ್ವದೇಶಿ ಔಷಧಗಳು

ಗುಣಕಾರಿಯಿಲ್ಲವೆಂದು ನಿಶ್ಚಯಿಸಿದರೆ ೧೦೦ ರೂಪಾಯಿ ಇನಾಮು.

ಪುರುಷತ್ವವೃದ್ಧಿ ಮತ್ತು ಧಾತುಪುಷ್ಟಮಾಡುವ ಚೂರ್ಣ.

ಈ ಚೂರ್ಣವು ಧಾತುಪುಷ್ಟಿಕ ಶಕ್ತಿವರ್ಧಕವಾದ ಅನೇಕ ವಸ್ತುಗಳಿಂದ ತಯಾರುಮಾಡಿರುತ್ತದೆ. ಸ್ವಪ್ನಾವಸ್ಥೆಯಿಂದ ಮೂತ್ರದಿಂದ ಧಾತುಹೋಗೋಣ. ಅತಿ ಸ್ತ್ರೀಲಂಪಟದಿಂದ ಧಾತುಕ್ಷೀಣತಾ ಮತ್ತು ತೆಳುವಾಗುವದು. ಸ್ತ್ರೀಸ್ಪರ್ಶಮಾತ್ರದಿಂದ ವೀರ್ಯಸ್ಖಲನ, ಉಷ್ಣತೆ ವಗೈರೆ ಹೋಗಿ ವೀರ್ಯಶುದ್ಧ ವೃದ್ಧಿ ಘಟ್ಟ ಕಾಮೋತ್ಪತ್ತಿ ವೀರ್ಯ ಸ್ತಂಭನವಾಗಿ ಪುರುಷತ್ವವು ಹೆಚ್ಚುತ್ತದೆ. ಶೌಚಕ್ಕೆ ಸಾಫಾಗಿ ಹಸಿವು, ಶಕ್ತಿ, ತಮ್ಮ ತೂಕಾ ಬೆಳೆದು ದೇಹವು ಸದೃಢವಾಗುತ್ತದೆ. ೬೦ ವರ್ಷದ ವೃದ್ಧನಿಗಾದರೂ ಕಾಮೋತ್ಪತ್ತಿ ಬೆಳೆಯುತ್ತದೆ. ಗರ್ಭಧಾರಣೆಗೆ ಸಹಾಯವಾಗುತ್ತದೆ. ೩೧ ದಿವಸ ಸಾಕಾಗುವಷ್ಟು ೩೧ ತೊಲೆಯು ೧ ಡಬ್ಬಿಗೆ ೫ ರೂಪಾಯಿ.

[30]

ಸ್ತ್ರೀರೋಗ ನಿವಾರಣ ಚೂರ್ಣ.

ಎಲ್ಲಾ ಬಣ್ಣದ ಸೆರಗು ಆದೇನಾಗುವ ಕಾಲಕ್ಕೆ ಕಿಬ್ಬೊಟ್ಟೆಯಲ್ಲಿ, ಹೊಟ್ಟೆಯಲ್ಲಿ, ನಡುವಿನಲ್ಲಿ ಶೂಲೆ, ಮುಟ್ಟು ಕುಸುಮುಟ್ಟು ಅಥವಾ ಬಹಳಮುಟ್ಟು ಅಥವಾ ನಿಯಮಿತವಾಗಿ ಇರೋಣ ಅನಿಯಮಿತಮುಟ್ಟು, ಬರೋಣ ಗರ್ಭಾಶಯರೋಗದಿಂದಾ ಗರ್ಭವಿಲ್ಲದ ಇರೋಣ ಗರ್ಭಪಾತ ಅಶಕ್ತ ಮತ್ತು ಅಶಕ್ತಸಂತತಿ ಮತ್ತು ಗರ್ಮಿದೋಷದಿಂದ ಹುಟ್ಟಿ ಸಾಯೋಣ ಇತ್ಯಾದಿ ಎಲ್ಲ ರೋಗಗಳು ಹೋಗಿ ಮುಟ್ಟಾಗುವದು ನಿಯಮಿತ ಸುರುಆಗುತ್ತದೆ. ಗರ್ಭಪಾತ ಆಗದೆ ಮಕ್ಕಳು ಸಶಕ್ತ ಮತ್ತು ನಿರೋಗಿ ಹುಟ್ಟುತ್ತವೆ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಗರ್ಭಧಾರಣವಾಗುವದು. ೩೧ ದಿವಸ ಸಾಕಾಗುವಷ್ಟು ೧ ಡಬ್ಬಿಗೆ ೪ ರೂಪಾಯಿ.

ಪತ್ತೆ:—ವೈದ್ಯ ವಿರುಪಾಕ್ಷ ಸಿದ್ಧಪ್ಪಾ ಕಾಪಸೆ, ಪೋ|| ಮಿರಜ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧಿ ಆದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ [illegible] ಆದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವಸ್ತುಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಗತ ದೋಷಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. [illegible] ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೩೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. [illegible] ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯತಾಪದಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಪ್ರಮೇಹ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. [illegible]ಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (೫೬) [illegible]ಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ [illegible] ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

[illegible] ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ [illegible] ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸುವೆವು.

[illegible] ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

[illegible] ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

[illegible] ಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ [illegible] ಸಂಘದವರೂ ಜಗದಾಚಾರ್ಯರ ಲಿಂಗೋದ್ಭವ [illegible]ವನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ [illegible]ದಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ [illegible] ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ [illegible]ವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯಲ್ಲಿ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರಾ [illegible] ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ [illegible] ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ [illegible]ವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತ [illegible] ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ [illegible]ರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೩೫ರ [illegible] ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ [illegible] ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ [illegible] ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ [illegible] ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜ [illegible] ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳು[illegible]ಸಲಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ, ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಪ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಿಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಬೇರೆ ಬೇರೆ ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಟಮಾಟಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[45] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. —8—0. ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಿಚ್ಚಲು, ರಕ್ತಭಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸುತ್ತ, ತಲೆತಿರುಗುವುದು, ನಿದ್ರೆ ಇಲ್ಲದ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸೇದುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀನಸ, ಎದೆಗೂಡು ಕೆಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆ ಹುಳಗಳ ಕೆಡರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಟಿಕ್ಚು, ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[30] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು, ದ. ಕ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ) ೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ) ೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) ೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) .... ೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) .... ೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ .... ೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ) ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.) ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ) .... ೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ) .... ೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ) ೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.) ೪ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ) .... ೮ ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ) .... ೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ) .... ೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು) .... ೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಒನ್ನು ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬೇಗ ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವುವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ ಪತ್ರ

(Registered Trade Mark)

ಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ನಶ್ಯದ ಪುಡಿಯು ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ... ತಲೆನೋವು, ... ಲ್ಲಿನ ರೋಗಗಳು ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಿಲ್ಲೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಡಬ್ಬಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುವುದಿಲ್ಲ.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[33] ಪೋ. ಬಾ. ೫೧೦, ಮದರಾಸ್.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 || ಶ್ರೀ जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಮಾರ್ಚಿ ೧೯೩೧ [ಸಂಚಿಕೆ ೪೫

ಒಳದೇಶದ ವೃತ್ತಾಂತಗಳು.

ಕಳೆದ ಸೋಮವಾರ ಮಿ|| ಎಂ. ಚನ್ನರಾಜೆ ಅರಸಿನವರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು ಮಿ|| ಡಿ. ಸಿ. ಸುಬ್ಬರಾಯಪ್ಪನವರಿಗೆ ವಹಿಸಿರುತ್ತಾರೆ.

ಬೆಂಗಳೂರಲ್ಲಿ ಅಡ್ವೋಕೇಟ್ ಮಿ|| ಕೆ. ಟಿ. ಭಾಷ್ಯಂ ಮುಂತಾದ ಹನ್ನೊಂದು ಜನಗಳು ಅಕ್ರಮಕೂಟ ಪ್ರವಿಷ್ಟರೆಂದು ಕೆಳಕೋರ್ಟಿನಲ್ಲಿ ಕೊಡಲ್ಪಟ್ಟಿದ್ದ ಶಿಕ್ಷೆಯು ಹೈಕೋರ್ಟಿನಲ್ಲಿ ವಜಾಮಾಡಲ್ಪಟ್ಟಿತು.

ಸದ್ಯಃ ಹುಚ್ಚರ ಆಸ್ಪತ್ರೆಯಲ್ಲಿರುವ ಮು|| ರಾ|| ದೇಶಮುಖ ಗೋವಿಂದರಾಯರವರು ಡಾ|| ರಾಮಸ್ವಾಮಯ್ಯಂಗಾರ್ರವರ ವಿಧವಾಕುಮಾರಿಯನ್ನು ಪರಿಣಯಮಾಡಿಕೊಂಡು ಆಸ್ತಿಯನ್ನು ಕೊಟ್ಟಿರುವ ಪ್ರಯುಕ್ತ ಮೈಸೂರು ಸೆಷನ್ ಜಡ್ಜ್ ಕೋರ್ಟಿನಲ್ಲಿ ನಡೆಯುತ್ತಿರುವ ಮೊಕದ್ದಮೆಯು ಬೆಂಗಳೂರು ಹೈಕೋರ್ಟಿಗೆ ವರ್ಗಮಾಡಲ್ಪಟ್ಟಿರುವುದೆಂದು ಕೇಳುತ್ತೇವೆ.

ಕಳೆದ ತಿಂಗಳು 26 ನೆಯ ತಾರೀಖಿನ ರಾತ್ರಿ ರಾಜಧಾನಿಯಲ್ಲಿ ಸೆನ್ಸಸ್ ಲೆಕ್ಕಗಳು ಪೂರೈಸಿದ್ದರಲ್ಲಿ ಮನೆಗಳ ಸಂಖ್ಯೆಯು 21715 ಎಂತಲೂ, ಆ ದಿವಸ ರಾಜಧಾನಿಯಲ್ಲಿ ವಾಸವಾಗಿದ್ದ ಗಂಡಸರು 56.862 ಹೆಂಗಸರು 50,288 ಒಟ್ಟು 107150 ಪ್ರಜಾಸಂಖ್ಯೆಯೆಂದು ಪರಿಗಣಿಸಲ್ಪಟ್ಟಿರುತ್ತದೆ. ಈಗ ಹತ್ತು ವರ್ಷಗಳ ಹಿಂದೆ ನಡೆಯಿಸಿದ ಪ್ರಜಾಪರಿಗಣನೆಯಲ್ಲಿ 83.956 ಪ್ರಜಾಸಂಖ್ಯೆಯು ಇದ್ದು ಈ ಹತ್ತು ವರ್ಷಗಳಲ್ಲಿ 23194 ಜನಸಂಖ್ಯೆಯು ಹೆಚ್ಚಾಗಿದೆಯೆಂದು ತಿಳಿದುಬರುತ್ತದೆ.

ಕಳೆದ ಶುಕ್ರವಾರ ದಿವಸ ರಾಜಧಾನಿಯ ಪ್ರಸಿದ್ಧ ವರ್ತಕರಾದ ಸಾ|| ಬನುಮಯ್ಯನವರು ಮಹಾತ್ಮ ಗಾಂಧಿ, ಇರ್ವಿನರಿಗೆ ನಡೆಯುತ್ತಿರುವ ಶಾಂತಿಸಂಧಾನವು ಸಮಾಪ್ತಿಗೊಂಡು ಸಫಲವಾಯಿತೆಂಬ ಸಂತೋಷಕ್ಕಾಗಿ ಬೀದಿ ಬೀದಿಗಳಲ್ಲೆಲ್ಲಾ ಸಕ್ಕರೆಯನ್ನು ಹಂಚಿಸಿದರು. ಪುರಪ್ರಮುಖರು ಸಾಯಂಕಾಲ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಕೂಡಿ ಶಾಂತಿಸಂಧಾನ ವಿಜಯದಿಂದುಂಟಾದ ಸಂತೋಷವನ್ನು ಉದ್ಗಾರಮಾಡಿದುದಲ್ಲದೆ ಮಹಾತ್ಮರ ಸತ್ಸಂಕಲ್ಪವನ್ನು ವಿಶೇಷತಃ ಕೊಂಡಾಡಿದರು.

ಬೆಂಗಳೂರು ಸಿಟಿಯಲ್ಲಿ ಕಳೆದ ನಾಲ್ಕನೆಯ ತಾರೀಖಿನ ಕಾಮದಹನದ ದಿವಸ ಮಹಮ್ಮದೀಯ ತರುಣರಿಗೂ, ಹಿಂದೂ ತರುಣರಿಗೂ ಫುಟ್‌ಬಾಲ್ ಆಟವು ನಡೆದು ಹಿಂದೂ ತರುಣರು ಗೆದ್ದುದರಿಂದ ಮಹಮ್ಮದೀಯ ತರುಣರು ಆಟವೆಂದು ಪರಿಭಾವಿಸದೆ ಕೋಪಗೊಂಡು ಹಿಂದು ತರುಣರ ಮೇಲೆ ಬೀಳಲು ಒಬ್ಬರಿಗೊಬ್ಬರಿಗೆ ಭಯಂಕರವಾದ ಹೊಡೆದಾಟಗಳು ಪ್ರಾರಂಭವಾದುವು. ಅಷ್ಟರಲ್ಲಿಯೇ ಆಯುಧಧಾರಿಗಳಾದ ಪೋಲೀಸ್ ದಳವು ಬಂದು ತಮ್ಮ ಶಕ್ತಿಯನ್ನು ಪಯೋಗಿಸಿ ಪರಸ್ಪರ ಹೊಡೆದಾಟವನ್ನು ಶಾಂತಿಗೊಳಿಸಿದರು. ಅಲ್ಲಿಗೂ ಶಾಂತರಾಗದೆ ರಾತ್ರಿ ಪಟ್ಟಣದ ಅನೇಕ ಕಡೆಗಳಲ್ಲಿ ಗುಂಪು ಗುಂಪು ಸೇರಿ ಹೊಡೆದಾಟವನ್ನು ಮಾಡುತ್ತಲೇ ಇದ್ದರು. ಅಷ್ಟರಲ್ಲಿಯೇ ಕಂಟೋನ್‌ಮೆಂಟಿನಿಂದ ಬರುತ್ತಿದ್ದ ಮಹಮ್ಮದೀಯರ ಗುಂಪನ್ನು ಅಶ್ವಾರೂಢವಾದ ಪೋಲೀಸ್ ದಳವು ಹುಸಿಗುಂಡಿನ ಶಬ್ದ ಮಾಡಿ ಹೆದರಿಸಿ ಹಿಂದಕ್ಕೆ ಕಳುಹಿಸಿತು. ಈ ಹೊಡೆದಾಟದಲ್ಲಿ ನೂರಾರು ಜನಗಳಿಗೆ ಗಾಯಗಳಾಗಿರುವುದಲ್ಲದೆ 33 ಹಿಂದುಗಳು, 31 ಜನ ಮಹಮ್ಮದೀಯರೂ ಒಟ್ಟು 64 ಜನಗಳು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುತ್ತಾರೆ. ಇವರಲ್ಲಿ ಮೂರು ನಾಲ್ಕು ಜನಗಳು ಮಾತ್ರ ಅಪಾಯಸ್ಥಿತಿಯಲ್ಲಿರುತ್ತಾರೆ. ಈ ಮಧ್ಯದಲ್ಲಿ ಪರಸ್ಪರ ಕಲಹ ಶಾಂತಿಗೊಳಿಸಲು ಪ್ರಯತ್ನಪಟ್ಟ ಪೋಲೀಸು ದಳದಲ್ಲಿ 20 ಜನ ಪೋಲೀಸಿನವರಿಗೆ ಸಾಧಾರಣ ಏಟು ಬಿದ್ದಿರುತ್ತವೆ. ಈ ಸಮಯದಲ್ಲಿ ಪೋಲೀಸಿನವರು ಬಹು ದರ್ಪದಿಂದಲೂ ಧೈರ್ಯದಿಂದಲೂ ನುಗ್ಗಿ ಉಭಯ ಪಕ್ಷಗಳನ್ನು ಶಾಂತಿಗೊಳಿಸದಿದ್ದಲ್ಲಿ ವಿಪರೀತವಾಗಿ ಪರಿಣಮಿಸುತ್ತಿದ್ದಿತು. ಮಾರನೆಯ ದಿವಸ ದಿವಾನ್ ಸಾಹೇಬರು ಮುಂತಾದ ಅಧಿಕಾರಿಗಳು ಆಸ್ಪತ್ರೆಯಲ್ಲಿರುವವರನ್ನು ನೋಡಿಕೊಂಡುಬಂದರು. ಸೋತರೂ ವಿನೋದವೇ ಗೆದ್ದರೂ ವಿನೋದವೇ ಎಂಬುದನ್ನು ತಿಳಿಯುವುದೇ ವಿನೋದಕೂಟಗಳ ಧರ್ಮವಾಗಿದ್ದರೂ ಇದನ್ನು ಪರಿಭಾವಿಸದೆ ವಿಪರೀತವಾಗಿ ಭ್ರಮಿಸಿಕೊಂಡು ಮಾಡಬಾರದ ದುಷ್ಕರ್ತವ್ಯಗಳಲ್ಲಿ ಲೋ... ದೇಶದೇಶಕ್ಕೂ, ಪಂಗಡಪಂಗಡಗಳಿಗೂ ಕಳಂಕ... ಟುಮಾಡುವುದು ಸರ್ವಥಾ ಯೋಗ್ಯವಲ್ಲ.

ಲಾಹೋರಿನ ಸೀನಿಯರ್ ಪೋಲೀಸು ಸೂಪರಿಂಟೆಂಡೆಂಟರೂ, ಅ|| ಪೋ|| ಸೂಪರಿಂಟೆಂಡೆಂಟರೂ ಪೋಲೀಸು ಇನ್ಸ್‌ಪೆಕ್ಟರೂ ಕಳೆದ ವರ್ಷ ಆಗಸ್ಟ್ 8 ನೆಯ ತಾರೀಖಿನ ದಿವಸ ಕ್ಲಾಸಿಗೆ ನುಗ್ಗಿ ತಮ್ಮನ್ನು ಅನ್ಯಾಯವಾಗಿ ಹೊಡೆದು ಅಪಮಾನಪಡಿಸಿದರೆಂದು ಅವರ ಮೇಲೆ ದಯಾನಂದ ಆಂಗ್ಲೋವೇದಿಕ್ ಕಾಲೇಜ್ ಪ್ರೊ|| ಸಂತಾರಾಮ ಸಯಾಲ್‌ರವರು 10,000 ರೂ. ಗಳಿಗೆ ಮಾನನಷ್ಟ ದಾವಾಮಾಡಿದ್ದಾರೆ.

ಬಳ್ಳಾರಿ ಡಿ|| ಕೊಟ್ಟೂರು ಪಟ್ಟಣದಲ್ಲಿ ತಾ|| 12-2-31 ನೆಯ ದಿವಸ ಶ್ರೀ ಕೊಟ್ಟೂರೇಶ್ವರನ ರಥೋತ್ಸವವು ಅತ್ಯಂತ ವೈಭವದಿಂದ ನೆರವೇರಿತೆಂದೂ, ಲಕ್ಷಾಂತರ ಜನರು ಸೇರಿದ್ದರೆಂದೂ, ಇಷ್ಟು ಜನರು ಯಾವ ಕಾಲದಲ್ಲಿಯೂ ಕೂಡಿದ್ದಿಲ್ಲವೆಂದೂ, ಆ ಸಮಯಕ್ಕೆ ಅನೇಕ ಜನ ಪುಣ್ಯಾತ್ಮರು ಅನ್ನಸತ್ರಗಳನ್ನಿಡಿಸಿದ್ದರೆಂದೂ, ಇದೆಲ್ಲ ಶ್ರೀ ಕೊಟ್ಟೂರೇಶನ ಮಹಿಮಾಪ್ರಭಾವವೆಂದೂ ಮ|| ರಾ|| ಹೆಗಡಾಳು ಶೆಟ್ರು ತಿ|| ವೀರಭದ್ರಪ್ಪನವರು ತಿಳುಹಿಸುತ್ತಾರೆ.

ಸ್ವೀಕಾರ.

ಧಾರವಾಡ ಡಿ|| ಹಾವೇರಿಪಟ್ಟಣದಲ್ಲಿ ನೆರವೇರಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಮ|| ರಾ|| ಯರೆಸೀಮೆ ರಾಚಪ್ಪನವರ ದ್ವಾರಾ ತಲ್ಪಿರುತ್ತವೆ.

ರೋಣ ತಾ|| ಹೊಳೆಆಲೂರುಗ್ರಾಮದ ವೇ|| ಹಿಟ್ಟಿನಮಠದ ಅಡವಯ್ಯನವರು ತಮ್ಮ ಮೊಮ್ಮಕ್ಕಳಾದ ಚಿ|| ಚನ್ನಬಸವಯ್ಯ ಮತ್ತು ಶಿವಲಿಂಗಯ್ಯ ಈ ಉಭಯರಿಗೆ ನೆರವೇರಿಸಿದ ಮಾಹೇಶ್ವರದೀಕ್ಷಾ ಸಮಯದಲ್ಲಿ ಶ್ರೀ|| ಷ|| ಬ್ರ|| ಮಂಗಳೂರು ಅರಳೆಲೆಮಠದ ಪಟ್ಟದಸ್ವಾಮಿಗಳವರ ಅಪ್ಪಣೆಯಮೇರೆಗೆ **2** ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಕೂಡ್ಲಿಗಿ ತಾ|| ನಾಗರಕಟ್ಟೆಗ್ರಾಮದ ಮ||ರಾ|| ಸಾಹುಕಾರ ವೀರಭದ್ರಪ್ಪನವರ ತಂದೆಯವರಾದ ಮ|| ರಾ|| ಬಸಪ್ಪನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ವೇ|| ನಾಗರಕಟ್ಟೆಮಠದ ರಾಚೋಟಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ತಾ|| ಮಿಂಚೇರಿಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಸಮರ್ಪಿಸಿದ **1** ರೂ. ಯು ಶ್ರೀ|| ಷ|| ಬ್ರ|| ಆನೆಸಿದ್ದಾಪುರದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಚಂದಾದಾರರಲ್ಲಿ ವಿಜ್ಞಾಪನೆ.

ಈ ವರ್ಷದ ಜನವರಿ 1 ನೆಯ ತಾರೀಖಿನಿಂದ ಹಿಂದುಸ್ಥಾನದಲ್ಲಿರತಕ್ಕ ಯಾವತ್ತು ಪೋಸ್ಟಾಫೀಸುಗಳಲ್ಲಿ ವಿ. ಪಿ. ಮೊದಲಾದವುಗಳ ಬಗ್ಗೆ ಹೊಸದಾಗಿ ಒಂದು ಏರ್ಪಾಟು ಮಾಡಿದ್ದಾರೆ. ಈ ಏರ್ಪಾಟಿನಿಂದ ವರ್ತಮಾನ ಪತ್ರಿಕೆಯವರಿಗಂತೂ ವಿಶೇಷ ತೊಂದರೆಯಾಗಿದೆ. ಅದೇನೆಂದರೆ—ಈ ಮೊದಲು ವಿ. ಪಿ. ರಜಿಸ್ಟರ್ ಮೊದಲಾದವುಗಳು ಬಂದರೆ ಪೋಸ್ಟಾಫೀಸಿನಲ್ಲಿ ಹತ್ತು ದಿವಸಗಳವರೆಗೆ ಇಡುತ್ತಿದ್ದರು. ಇದನ್ನು ಈಗ ತಪ್ಪಿಸಿ 3 ದಿವಸಗಳ ವರೆಗೆ ಮಾತ್ರ ಇಡುವಂತೆ ಮಾಡಿದ್ದಾರೆ. ಇದರಿಂದ ವಿ. ಪಿ. ಕಳುಹಿಸುವುದೇ ದುಸ್ತರವಾಗುತ್ತದೆ. ಆದಕಾರಣ ಚಂದಾದಾರರು ತಮ್ಮ ಚಂದಾಮುಗಿದ ಬಗ್ಗೆ ನಮ್ಮ ಸೂಚನೆಯು ಬಂದಕೂಡಲೆ ಮನಿಯಾರ್ಡರ್ ದ್ವಾರಾ 2 ರೂ. 8 ಆಣೆಗಳನ್ನು ಕಳುಹಿಸಬೇಕು. ಚಂದಾದಾರರು ಮನಿಯಾರ್ಡರ್ ಮಾಡುವುದರಿಂದ ಅವರಿಗೆ 2 ಆಣೆಗಳು ಉಳಿಯುತ್ತವೆ. ಈ ವಿಷಯವನ್ನು ಪ್ರತಿಯೊಬ್ಬರೂ ಲಕ್ಷ್ಯಕ್ಕೆ ತಂದು ಸಾಧ್ಯ ಮುಂದಾಗಿ ತಿಳುಹಿಸಿದ ಕೂಡಲೆ ಮನಿಯಾರ್ಡರ್ ಮಾಡಿಸುವಿರೆಂದು ಪೂರ್ಣ ನಂಬಿದ್ದೇವೆ. ಮನಿಯಾರ್ಡರ್ ಕಳುಹಿಸುವುದಾಗದಿದ್ದರೆ ವಿ. ಪಿ. ಬಂದ ದಿವಸವೇ ಹಣವನ್ನು ಕೊಟ್ಟು ವಿ. ಪಿ. ಯನ್ನು ಸ್ವೀಕರಿಸಬೇಕಾಗಿ ಕೋರಿಕೆ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ, ಮೈಸೂರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಮಹೋತ್ಸವಗಳು.

ಬಿಡದಿ.

ಶ್ರೀಮದ್ವೇದವೇದಾಂತ ಸಿದ್ಧಾಂತಪ್ರತಿಪಾದಿತ ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಬಿಡದಿಗ್ರಾಮದಲ್ಲಿ ತಾ|| 2-3-31 ನೆಯ ಸೋಮವಾರದ ದಿವಸ ಭಕ್ತಮಂಡಲಿಯಿಂದ ಅತ್ಯಂತವೈಭವದೊಡನೆ ನೆರವೇರಿಸಲ್ಪಟ್ಟಿತು. ಆ ದಿವಸ ಪ್ರಾತಃಕಾಲ 8 ಘಂಟೆಯಿಂದ ಮಧ್ಯಾಹ್ನ 12 ಘಂಟೆಯವರೆಗೆ ದೊಡ್ಡ ಹಸ್ತಪತ್ರಿಕೆಗಳು ಹಂಚಲ್ಪಟ್ಟಿದ್ದ ಪ್ರಕಾರ ತಳಿರುತೋರಣ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟಿದ್ದ ಶ್ರೀ ವೃಷಭೇಶ್ವರ ದೇವಸ್ಥಾನದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಶ್ರೀಯುತ ಬಿ. ಸಿ. ರೇವಣ್ಣಶಾಸ್ತ್ರಿಗಳವರಿಂದ ವೇದಾಗಮೋಕ್ತರೀತಿಯಾಗಿ ಸಹಸ್ರಬಿಲ್ವಾರ್ಚನೆಯು ನಡೆಯಿಸಲ್ಪಟ್ಟಿತು. ಮಧ್ಯಾಹ್ನ 2 ಘಂಟೆಯ ಮೇಲೆ ಸಾರ್ವಜನಿಕ ಸಭೆಯು ಬಿಡದಿಗ್ರಾಮ ಪಂಚಾಯಿತಿಮಂದಿರದಲ್ಲಿ ನೆರೆಯಿತು. ಸಭಾ ಪ್ರಾರಂಭದಲ್ಲಿ ಪಿಟೀಲ್ ಮೊದಲಾದ ಮಂಜುಳವಾದ್ಯದೊಡನೆ ಸಂಗೀತವು ನಡೆಯಿತು. ಸಭೆಗೆ ಶ್ರೀಯುತ ಮ|| ರಾ|| ಚನ್ನಶೆಟ್ಟರವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ಸೂಚನೆಯನ್ನು ಸಭಾಸದರ ಪರವಾಗಿ ಮ|| ಬಿ. ಸಿ. ರೇವಣ್ಣನವರು ತಂದರು. ಒಡನೆಯೇ ಸರ್ವಾನುಮತದಿಂದ ಮ|| ಚನ್ನಶೆಟ್ಟರವರು ಅಗ್ರಾಸನವನ್ನಲಂಕರಿಸಿ ಸಭಾಕಾರ್ಯಕಲಾಪಗಳಿಗೆ ಅಪ್ಪಣೆಯನ್ನಿತ್ತರು. ಪ್ರೋಗ್ರಾಂಪ್ರಕಾರ ಶ್ರೀಯುತ ಬಿ. ಸಿ. ರೇವಣ್ಣಶಾಸ್ತ್ರಿಗಳವರು ವೀರಶೈವ ಮತಸ್ಥಾಪಕರಾದ ಶ್ರೀ ರೇಣುಕಾದಿ ಪಂಚಾಚಾರ್ಯರು ಜಗತ್ತಿನಲ್ಲಿ ನಡೆಸಿರತಕ್ಕ ಅದ್ಭುತಲೀಲೆಗಳನ್ನೂ ಹಾಗೂ ಪ್ರತಿಯೊಬ್ಬ ಲಿಂಗಾಂಗಿಯೂ ಗುರುಸಾರ್ವಭೌಮರ ಜಯಂತಿಗಳನ್ನು ಆಯಾಯ ಶುಭದಿವಸಗಳಲ್ಲಿ ಅತ್ಯವಶ್ಯಕವಾಗಿ ಆಚರಿಸಬೇಕೆಂಬ ವಿಷಯವನ್ನೂ ಸಹ ಸವಿಸ್ತಾರವಾಗಿ ಒಂದು ಘಂಟೆಯಕಾಲ ಸಭಿಕರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಸರ್ವರೂ ಮಹಾಗುರುಗಳ ಮಹಿಮೆಯನ್ನು ಕೇಳಿ ಸಂತೋಷಸಿಕ್ತಾಂತರಾಗಿ ಕರತಾಡನ ಮೂಲಕ "ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ" ಎಂಬ ಜಯಧ್ವನಿಯಿಂದ ತಮ್ಮ ಆನಂದಾತಿರೇಕವನ್ನು ವ್ಯಕ್ತಪಡಿಸುತ್ತಿದ್ದರು. ಅನಂತರ ಶ್ರೀಯುತ ... ಪ್ರಸನ್ನಯ್ಯನವರು ಹಾಲಿ ಪಂಚಸಿಂಹಾಸನಾಧೀಶ್ವರರಾಗಿ ಯತಿಕುಲಸಾರ್ವಭೌಮರೆನಿಸಿ ಶೋಭಿಸುತ್ತಿರುವ ಜಗದ್ಗುರು ಪಂಚಾಚಾರ್ಯರ ವಿಷಯವನ್ನು ಸಭಿಕರ ಮನಸ್ಸು ಪ್ರಸನ್ನಗೊಳ್ಳುವಂತೆ ವಿವರಿಸಿದರು. ಬಳಿಕ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟು, ಸಭಿಕರಿಗೆ ಹೂವು, ಗಂಧ, ಪ್ರಸಾದ ವಿನಿಯೋಗವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ರಾತ್ರಿ 8 ಘಂಟೆಯ ಮೇಲೆ ಮ|| ರಾ|| ಬಿ. ವಿ. ವೀರಣ್ಣನವರು ತಮ್ಮ ಕರಕೌಶಲ್ಯದಿಂದ ವಿಚಿತ್ರವಾಗಿ ನಿರ್ಮಿಸಲ್ಪಟ್ಟಿದ್ದ ಪ್ರಭಾವಳಿಯನ್ನು ರಥದ ಮೇಲಿರಿಸಿ ಅತ್ಯಂತ ಮನೋಹರವಾಗಿ ಶೃಂಗರಿಸಿದರು. ಸಕಲ ಗುರುಭಕ್ತರೂ ಸೇರಿ ಶ್ರೀ ಜಗದ್ಗುರು ರೇಣುಕಾಚಾರ್ಯ ಲಿಂಗೋದ್ಭವ ರಜತಮೂರ್ತಿಯನ್ನು ರಥದ ಮೇಲೆ ಮೂರ್ತಮಾಡಿಸಿದನಂತರ ವಿಶೇಷ ವಾದ್ಯವೈಭವದೊಡನೆ ವೃಷಭೇಶ್ವರದೇವಸ್ಥಾನದಿಂದ ರಥೋತ್ಸವವು ಹೊರಟು ಗ್ರಾಮದ ಬೀದಿಗಳಲ್ಲೆಲ್ಲಾ ಬಹಳ ವಿಜೃಂಭಣೆಯಿಂದ ಸಾಗಿತು. ಗ್ರಾಮದ ಭಕ್ತರು ತಮ್ಮ ತಮ್ಮ ಮನೆಯ ಮುಂದೆ ಹಣ್ಣು, ಕಾಯಿ, ಕರ್ಪೂರ, ನೀರಾಜನವನ್ನು ಸಮರ್ಪಿಸಿ ಗುರುದೇವತಾಭಕ್ತಿಯನ್ನು ವ್ಯಕ್ತಪಡಿಸುತ್ತಿದ್ದರು. ಉತ್ಸವಮೂರ್ತಿಯು ಸ್ವಸ್ಥಾನಕ್ಕೆ ಬಿಜಯಂಗೈಸಿದನಂತರ ಷೋಡಶೋಪಚಾರ ರಾಜೋಪಚಾರಪೂರ್ವಕ ಪ್ರಸಾದವು ವಿನಿಯೋಗಿಸಲ್ಪಟ್ಟಿತು. ಬಿಡದಿಗ್ರಾಮದ ಸರ್ವವೀರಶೈವರೂ ಜಗದಾಚಾರ್ಯರ ಜಯಂತಿಮಹೋತ್ಸವದಲ್ಲಿ ಭಾಗಿಗಳಾಗಿದ್ದುದು ಬಹಳ ಸಂತೋಷದ ಸಂಗತಿಯಾಗಿರುವುದಲ್ಲದೆ ಇತರ ಮತದ ಮಹೋದಯರೂ ಸಹ ಭಾಗಿಗಳಾಗಿದ್ದುದು ಅಭಿನಂದನೀಯವಾಗಿದೆ. ಮುಂದೆ ಪ್ರತಿವರ್ಷವೂ ನಡೆಯತಕ್ಕ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಇದೇ ರೀತಿಯಲ್ಲಿ ಸರ್ವರೂ ಸಹಕರಿಸಿ ನಡೆಯಿಸಿ ಜಗದಾಚಾರ್ಯರ ಕೃಪಾಪಾತ್ರರಾಗಬೇಕಾಗಿ ಕೋರುವ,

ದೇವದಶೆಟ್ಟರು, ಬಿಡದಿ.

ಲಕ್ಷ್ಮೇಶ್ವರ.

ಫಾಲ್ಗುಣ ಶುದ್ಧ ತ್ರಯೋದಶಿಯಲ್ಲಿ ನಡೆಯುವ ಶ್ರೀ ಜಗದ್ಗುರು ರೇಣುಕಶಿವಾಚಾರ್ಯರ ಜಯಂತಿಯ ದಿವಸವು ವೀರಶೈವಜನಾಂಗದ ಪವಿತ್ರಪರ್ವಕಾಲದ ದಿವಸವಾದುದರಿಂದ ಇಲ್ಲಿಯ ಗುರುಭಕ್ತಧುರೀಣರಾದ ಮ|| ರಾ|| ತಮ್ಮಣ್ಣ ಕುಂಬಾರ ಇವರು ತಮ್ಮ ಮನೆಯಲ್ಲಿ ಉಣ್ಣೆಯಿಂದ ರಚಿತವಾದ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಪೀಠದಲ್ಲಿ ಅಲಂಕರಿಸಿ ಭಕ್ತಿಪುರಸ್ಸರವಾಗಿಯೂ ವಿಧ್ಯುಕ್ತರೀತಿಯಾಗಿಯೂ ಪೂಜಿಸಿ ಗಣಾರಾಧನೆಯನ್ನು ನೆರವೇರಿಸಿದರು. ಸಂಧ್ಯಾಕಾಲದ ೫ ಘಂಟೆಗೆ ಅವರ ಮನೆಯಿಂದ ಆಂದೋಳಿಕೋತ್ಸವವು ಅತ್ಯಂತ ವೈಭವದಿಂದ ಹೊರಟು ೭ ಘಂಟೆ ಸಮಯಕ್ಕೆ ಸದರಿ ತಮ್ಮಣ್ಣನವರ ಮನೆಗೆ ಹಿಂದಿರುಗಿತು. ಉತ್ಸವಕ್ಕೆ ರಾವಸಾಹೇಬ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಸಹಾನುಭೂತಿಯಿಂದ ಪೋಲೀಸರು ಮತ್ತು ಪಾಟೀಲರು ಬಂದು ಉತ್ಸವಪೂರ್ತಿಯಾಗುವವರೆಗೆ ಇದ್ದು ತಮ್ಮ ಪೂಜ್ಯಬುದ್ಧಿಯನ್ನು ವ್ಯಕ್ತಮಾಡಿದರು. ಆಮೇಲೆ ಸುರಗೀಮಠಾಧ್ಯಕ್ಷ ಷ|| ಬ್ರ|| ಚರಮೂರ್ತಿಗಳ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಶ್ರೀ ಶಾಂತಪ್ಪಯ್ಯನವರು ಹಿರೇಮಠ, ಇವರು ಮೂಢಭಕ್ತಿಗೂ ಪ್ರೌಢಭಕ್ತಿಗೂ ಇರುವ ತಾರತಮ್ಯವನ್ನು ತಿಳುಹಿಸಿ ವೀರಶೈವರು ಪ್ರೌಢಭಕ್ತಿಯುಳ್ಳವರೆಂಬುದನ್ನು ಸಪ್ರಮಾಣವಾಗಿಯೂ ಯುಕ್ತಿಯುಕ್ತವಾಗಿಯೂ ಸಮರ್ಥನಗೊಳಿಸಿದರು. ಆಮೇಲೆ ಶ್ರೀ ಅಡಿವಯ್ಯನವರು ಲಿಂಬಯ್ಯನವರ ಮಠ ಇವರು ಲಿಂಗಾಂಗಸಾಮರಸ್ಯರೂಪವಾದ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವು ಗುರುಮೂಲಕವಾಗಿ ಭಾಷ್ಯಾದಿಗಳನ್ನು ಅಭ್ಯಾಸ ಮಾಡದಿದ್ದವರಿಗೆ ಎಂದೂ ಗೋಚರವಾಗಲಾರದೆಂಬ ವಿಷಯವನ್ನು ಭಾಷಣಮಾಡಿದರು. ಆ ಮೇಲೆ ಅಧ್ಯಕ್ಷರು ತಮ್ಮ ಸಮಾರೋಪಣ ಭಾಷಣದಲ್ಲಿ ಪ್ರಕೃತಿವಶವರ್ತಿಗಳಾಗಿ ಸ್ವಕರ್ಮಾನುಸಾರ ಮನುಷ್ಯಯೋನಿಜರಾಗಿ ಬೆಳೆದು ಅನೇಕ ಧಾರ್ಮಿಕಗ್ರಂಥಗಳನ್ನು ನೋಡಿ ತಮ್ಮ ಬುದ್ಧಿಗನುಗುಣವಾಗಿ ಮತಗಳನ್ನು ಕಲ್ಪಿಸಿದ ಇತರ ಆಚಾರ್ಯರಂತೆ ವೀರಶೈವಮತಸ್ಥಾಪನಾಚಾರ್ಯರುಗಳು ಇರುವುದಿಲ್ಲ. ಈ ಆಚಾರ್ಯರು ಸಾಕ್ಷಾತ್ ಮುಕ್ಕಣ್ಣನ ಆಜ್ಞೆಯಿಂದ ಅಯೋನಿಜರಾಗಿ ಜ್ಯೋತಿರ್ಲಿಂಗಗಳಿಂದ ಉದ್ಭವಿಸಿ ಶುದ್ಧಾಂತಃಕರಣರಾದವರನ್ನು ಉದ್ಧರಿಸಿ ಗುರುಸಾರ್ವಭೌಮರೆಂದು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಆದ್ದರಿಂದ ಇಂಥ ಮಹಾಮಹಿಮರುಗಳ ಜಯಂತ್ಯುತ್ಸವಗಳನ್ನು ಸಕಾಲಗಳಲ್ಲಿ ಒಳ್ಳೇ ಭಕ್ತಿ ಉತ್ಸಾಹಗಳಿಂದ ವೀರಶೈವರೆಲ್ಲರೂ ಆಚರಿಸಿ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಬೋಧಿಸಿದರು. ಆಮೇಲೆ ಮಂಗಳಾರತಿಯಾಗಿ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟಿತು. ಅನಂತರ ರಾ|| ತಮ್ಮಣ್ಣ ಕುಂಬಾರ ಇವರು ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕೆ ಒಂದುರೂಪಾಯಿಯನ್ನು ಅಧ್ಯಕ್ಷರ ಕಡೆಗೆ ಒಪ್ಪಿಸಿದ ಬಳಿಕ ಸಭಾ ವಿಸರ್ಜನವಾಯಿತು.

ಉತ್ಸವಭಾಗಿ.
ಮರುಳಸಿದ್ದಪ್ಪ ಗಾಂಜಿ ಲಕ್ಷ್ಮೇಶ್ವರ.

ಸೇಲಂ ಸ್ತಲಮಲೆ.

ಸೇಲಂದಿಂದ ಎರಡುವರೆ ಮೈಲುಗಳಲ್ಲಿರುವ ಸ್ತಲಮಲೆ ಎಂಬ ಬಿಲ್ವಪರ್ವತದ ಅಗ್ರಭಾಗದಲ್ಲಿ ಸೇಲಂ, ಗುಹೆ, ವೈ. ಕೆ. ಗುರುಸ್ವಾಮಿ ಅಯ್ಯರವರು ಸ್ವಂತ ಖರ್ಚಿನಿಂದ ಅಗಸ್ತ್ಯಾಶ್ರಮ ಎಂಬ ಹೆಸರಿನಿಂದ ಒಂದು ದೇವಸ್ಥಾನವನ್ನು ಕಟ್ಟಿಸಿದ್ದಾರೆ. ಶ್ರೀ ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗಳಿಗೆ ಉಪದೇಶಮಾಡಿದ ಭಾವಚಿತ್ರಗಳನ್ನು ಆ ದೇವಸ್ಥಾನದೊಳಗಿರುವ ಶಿಲೆಯಲ್ಲಿ ಕೆತ್ತಿಸಿರುತ್ತಾರೆ. ಈ ದೇವಸ್ಥಾನದಲ್ಲಿ ತಾ|| 1-3-31 ನೆಯ ಭಾನುವಾರ ರಾತ್ರಿ ಆಚಾರ್ಯಭಜನಾಸಪ್ತಾಹಲಕ್ಷೋತ್ಸವವು ನಡೆಯಿಸಲ್ಪಟ್ಟು ಮರುದಿವಸ ತಾ|| 2-3-31ನೆಯ ಸೋಮವಾರ ಪ್ರಾತಃಕಾಲ ಆಚಾರ್ಯವಿಗ್ರಹಕ್ಕೆ ಏಕಾದಶರುದ್ರಾಭಿಷೇಕ, ಸಹಸ್ರಬಿಲ್ವಾರ್ಚನ ಷೋಡಶೋಪಚಾರಾದಿಗಳು ನಡೆಯಿಸಲ್ಪಟ್ಟವು. ತರುವಾಯ ಮಾಹೇಶ್ವರಪೂಜೆಯು ನಡೆದು ಭಕ್ತವೃಂದಕ್ಕೆ ಅನ್ನಸಂತರ್ಪಣಕಾರ್ಯವು ವಿಶೇಷರೀತಿಯಿಂದ ಜರುಗಿತು. ಪುನಃ ಸಾಯಂಕಾಲದಲ್ಲಿ ಗುರುಭಜನೆಯು ನಡೆಯಿಸಲ್ಪಟ್ಟಿತು. ಗುರುಸ್ವಾಮಯ್ಯನವರು ತಮ್ಮ ಸ್ವಂತ ಖರ್ಚಿನಿಂದ ಹೀಗೆ ಪ್ರತಿವರ್ಷವೂ ಭಕ್ತಿಪೂರ್ವಕವಾಗಿ ಆಚಾರ್ಯ ಜಯಂತಿಯನ್ನು ಆಚರಿಸುತ್ತಿರುವದು ಸ್ತುತ್ಯವಾದ ಸಂಗತಿಯಾಗಿದೆ. ಜಗದ್ಗುರು ಪಂಚಾಚಾರ್ಯರು ಇವರಿಗೆ ಆಯುರಾರೋಗ್ಯಾದಿ ಭಾಗ್ಯಗಳನ್ನೀಯಲೆಂದು ಅಪೇಕ್ಷಿಸುವ,

ಓರ್ವ ಉತ್ಸವಭಾಗಿ.

ಸಿಂಗಟಾಲೂರು ದೇವಾಲಯ.

ವೀರಶೈವ ಮತಾಂತರ್ಗತ ಸಕಲ ವರ್ಣಾಶ್ರಮದವರಿಗೂ ಮುಖ್ಯಗುರುಗಳೆಂದೆನಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರೊಳ್ಬರಾದ ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವವು ಫಾಲ್ಗುಣ ಶು|| ೧೩ ನೆಯ ಸೋಮವಾರ ದಿವಸ ಸಿಂಗಟಾಲೂರು ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ನೆರವೇರಿತು. ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವದ ರಜತವಿಗ್ರಹಕ್ಕೂ ಶ್ರೀ ವೀರೇಶ್ವರಮೂರ್ತಿಗೂ ಶ್ರೀ ರುದ್ರಾಭಿಷೇಕ ಸಹಸ್ರಬಿಲ್ವಾದಿ ಷೋಡಶೋಪಚಾರ ಪೂಜಾದಿಕಾರ್ಯಗಳು ಮಾಗಳದ ವೇ|| ಗಂಗಾಧರಶಾಸ್ತ್ರಿಗಳವರ ಹಾಗೂ ಸಿಂಗಟಾಲೂರು, ಹಮ್ಮಿಗಿ, ನವಲಿ ಗ್ರಾಮದ ಮಠಾಧಿಕಾರಿಗಳ ಪೌರೋಹಿತ್ಯದಿಂದ ಅತ್ಯಂತವೈಭವದೊಡನೆ ನೆರವೇರಿದ್ದಲ್ಲದೆ ಮಹಾಗಣಾರಾಧನೆಯೂ ತದನಂತರ ಶ್ರೀ ಜಗದಾಚಾರ್ಯ ಹಾಗೂ ಶ್ರೀ ವೀರೇಶ್ವರನ ಬೆಳ್ಳಿಯ ಉತ್ಸವಮೂರ್ತಿಯ ಪಂಚಕಲಶಯುಕ್ತವಾದ ಪಲ್ಲಕ್ಕಿ ಮಹೋತ್ಸವವೂ ಸಕಲ ಬಿರುದಾವಳಿಗಳಿಂದ ಅನಂತ ವಾದ್ಯವೈಭವದೊಡನೆ ನೆರವೇರಿತು. ಸದರಿ ಉತ್ಸವಕ್ಕೆ ಅಜುಬಾಜು ಗ್ರಾಮಗಳಿಂದ ಅನಂತ ಭಕ್ತಮಾಹೇಶ್ವರರು ಬಂದಿದ್ದರಲ್ಲದೆ ಶ್ರೀಮಂತ ಶಿವಶಂಕರಗೌಡ ಬಹದ್ದೂರದೇಸಾಯಿ ಹಮ್ಮಿಗಿ ಮತ್ತು ಶಿಗ್ಗಲಿ ಶಿ|| ಕೊಡಲಮಠದ ಸಂಗಯ್ಯನವರು ಶ್ರೀಮಂತ ಗುಗ್ಗರಿ ಹುಚ್ಚಪ್ಪನವರೇ ಮೊದಲಾದ ಪ್ರಮುಖಜನರು ಆಗಮಿಸಿದ್ದರು. ಜಯಂತ್ಯುತ್ಸವದ ಖರ್ಚಿಗಾಗಿ ಮ|| ರಾ|| ಬೂಕಲ್ಲು ಪಾಟೀಲ ಬಸವನಗೌಡ್ರು ಈ ಮೊದಲೇ ದಾನಮಾಡಿದ ಜಮೀನಿನ ಉತ್ಪನ್ನದ ಬಾಬತು ಆರು ರೂಪಾಯಿಗಳನ್ನೂ ಹಾಗೂ ಹಮ್ಮಿಗಿ ಸಾಳೀದ ಫಕೀರಪ್ಪನವರು ಹತ್ತು ರೂಪಾಯಿಗಳನ್ನೂ ಭಕ್ತಿಪುರಸ್ಸರವಾಗಿ ಕಳುಹಿಸಿದ್ದರು. ಸದರಿ ದೇವಾಲಯದಲ್ಲಿ ಇಮಾರತಿಗಳ ಕೊರತೆ ಇರುವದನ್ನು ಕಂಡು ಶ್ರೀಮಂತ ಗುಗ್ಗರಿ ಹುಚ್ಚಪ್ಪನವರು ಒಂದು ಸ್ವತಂತ್ರ ಇಮಾರತಿಗಾಗಿ ಒಂದುನೂರು ರೂಪಾಯಿಗಳನ್ನು ತ್ರಿಕರಣಶುದ್ಧಿಯಿಂದ ದಾನ್ಯಮಾಡಿದರು. ಉತ್ಸವಕಾಲದಲ್ಲಿ ಶ್ರೀದೇವಸ್ಥಾನದ ಪಂಚಕಮಿಟಿಯ ಯಾವತ್ತೂ ಜನರು ಅತ್ಯಂತ ಶ್ರದ್ಧೆಯಿಂದ ಸೇವಾಸತ್ಕಾರಾದಿಗಳನ್ನು ಮಾಡಿದ್ದಲ್ಲದೆ ಕಮಿಟಿಯ ಪ್ರೆಸಿಡೆಂಟರಾದ ಗುರುಭಕ್ತಕೇಸರಿಯವರು ಗಾಢಾಂಧಕಾರದಲ್ಲಿ ಮುಳುಗಿದ್ದ ವೀರಶೈವ ಸಮಾಜದ ಆಬಾಲವೃದ್ಧರಾದಿಯಾಗಿ ಸಮಸ್ತರ ಹೃತ್ಪಟಲದಲ್ಲಿ ನಮ್ಮ ಧರ್ಮಗುರುಗಳಾದ ಪಂಚಾಚಾರ್ಯರ ನಾಮಸ್ಮರಣವೂ ನಮ್ಮ ಧರ್ಮಕ್ಕೆ ಪಂಚಪ್ರಮುಖರೇ ಗೋತ್ರಾಧಿಪತಿಗಳೆಂಬ ಜ್ಞಾನವು ಯಾವ ಪ್ರಭೆಯ ಪ್ರಭಾವದಿಂದ ಪ್ರಾದುರ್ಭವಿಸಿರುವದೋ ಅಂಥ ಜಗದ್ವಿಖ್ಯಾತ ಪಂಚಾಚಾರ್ಯಪ್ರಭೆಗೆ ಎರಡು ರೂ. ಗಳನ್ನು ಕಾಣಿಕಾರೂಪವಾಗಿ ಸಮರ್ಪಿಸಿದರು. ಅನಂತರ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸುಮಸ್ತ ಕಾರ್ಯವು ಮುಕ್ತಾಯವಾಯಿತು. ಶ್ರೀ ಜಗದಾಚಾರ್ಯರ ಜಯಂತ್ಯುತ್ಸವದಲ್ಲಿ ಭಾಗಿಗಳಾದ ಸಮಸ್ತ ಜನರಿಗೂ ಶ್ರೀ ರೇಣುಕಾಚಾರ್ಯರು ಹಾಗೂ ಸ್ಥಾನಾಧಿಪತಿಯಾದ ಶ್ರೀ ವೀರೇಶನು ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಹಾರೈಸುತ್ತೇನೆ.

ಶ್ರೀ ದೇವಸ್ಥಾನದ ಅರ್ಚಕ, ಅಡವಯ್ಯ.

ಮಿಂಚೇರಿ.

ಅನೇಸಿದ್ಧಾಪುರ ಪಟ್ಟಾಧ್ಯಕ್ಷ ಶ್ರೀ ತ್ರಿಲೋಚನಶಿವಾಚಾರ್ಯರ ಅಧ್ಯಕ್ಷತೆಯ ಕೆಳಗೆ ಬಳ್ಳಾರಿ ತಾ|| ಮಿಂಚೇರಿ ಗ್ರಾಮದ ಹಲಕುಂದಿ ಶಾನುಭೋಗ ಶಿವಾರೆಡ್ಡಿ, ಮೂಡಿಗೌಡ, ರೆಡ್ಡಿ ಪೊಂಪನಗೌಡ, ಊಡೇದ ಹನುಮನಗೌಡ, ಚಿಕ್ಕಲಕೋಟೆ ರಂಗಪ್ಪ, ಶಾನುಭೋಗ ಶಿವಾರೆಡ್ಡಿ ಇವರೇ ಮೊದಲಾದ ಸಮಸ್ತ ವೀರಶೈವರು 2-3-31 ಸೋಮವಾರ ಫಾಲ್ಗುಣಶುದ್ಧ ೧೩ ದಿವಸ ಸಭೆಸೇರಿ ಶ್ರೀಮತ್ತ್ರಿಭುವನಗುರು ರೇಣುಕಾಚಾರ್ಯರ ಭಾವಪಟವನ್ನು ಪ್ರತಿಷ್ಠಿಸಿ ಆ ಮಹಾನುಭಾವರು ಪ್ರಪಂಚದಲ್ಲಿ ವಿಹರಿಸಿದ ಲೀಲಾ ವಿಷಯಗಳನ್ನು ಸಮಸ್ತರಿಗೂ ತಿಳಿಯುವಂತೆ ರೇಣುಕವಿಜಯವೆಂಬ ಗ್ರಂಥದಿಂದ ಗಂಗಾವತಿ ತಾಲ್ಲೋಕು ನವಲಿ ಹಿರೇಮಠದ ಗುರುಬಾಳೇಶ್ವರ ವಕೀಲರು ಪ್ರಕಟಪಡಿಸಿದನಂತರ ಸದರಿ ಭಾವಚಿತ್ರವನ್ನು ಪ್ರಭಾವಳಿಯಲ್ಲಿ ಮೂರ್ತಗೊಳಿಸಿ ಗ್ರಾಮದ ಮುಖ್ಯವೀಧಿಗಳಲ್ಲಿ ವಾದ್ಯವೈಭವಗಳಿಂದ ನೆರವೇರಿಸಿದರು. ಆಮೇಲೆ ಅಧ್ಯಕ್ಷರು ವೀರಶೈವಾಚಾರಾದಿಗಳನ್ನು ಬೋಧಿಸಲು ಸರ್ವರೂ ಮನಾನಂದವನ್ನು ಹೊಂದಿ ಆಚಾರ್ಯರ ಜಯಘೋಷಗಳೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಸಮಯದಲ್ಲಿ ಪ್ರಭಾಪೋಷಣೆಗೆ 1 ರೂ. ತೆಗೆಯಲ್ಪಟ್ಟಿತು.

ಓರ್ವಪ್ರೇಕ್ಷಕ.

ಹಾವೇರಿ.

ಇದೇ ಫಾಲ್ಗುಣ ಶು|| ೧೩ ಸೋಮವಾರ ದಿವಸ ನಡುವಿನ ಮಠದಲ್ಲಿ ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ಶ್ರೀ ಬಣ್ಣದ ಮಠದ ಜಗದ್ಗುರುಗಳವರ ಚರಮೂರ್ತಿಸ್ವಾಮಿಗಳವರು ರಜತವಿಗ್ರಹಕ್ಕೆ ರುದ್ರಾಭಿಷೇಕ ಷೋಡಶೋಪಚಾರಗಳಿಂದ ಪೂಜಾಸಮಾರಂಭವು ನಡೆದು ಭಕ್ತಮಾಹೇಶ್ವರರ ಅನ್ನಸಂತರ್ಪಣೆಯು ನಡೆಯಿತು. ಆ ಮೇಲೆ ಸಾಯಂಕಾಲ 5 ಘಂಟೆಗೆ ಜಗದ್ಗುರುಗಳವರ ರಜತವಿಗ್ರಹವನ್ನು ಪಂಚಕಲಶಯುಕ್ತವಾದ ಅಡ್ಡಪಲ್ಲಕ್ಕಿಯಲ್ಲಿ ಮೂರ್ತಮಾಡಿಸಿ ಸಕಲ ಬಿರುದಾವಳಿಗಳಿಂದಲೂ, ಹಾವೇರಿ ಮತ್ತು ಬಕ್ಕಾಪುರದ ಜಗದಾಚಾರ್ಯ ಭಜನಾಸಂಘದವರ ಪಂಚಾಚಾರ್ಯ ಸ್ತೋತ್ರಗಳಿಂದಲೂ, ಅನಂತ ವಾದ್ಯ ವೈಭವಗಳಿಂದಲೂ, ರಂಭಾಸ್ತಂಭಾದಿಗಳಿಂದಲಂಕೃತಗಳಾದ ಪುರದ ಸರ್ವಬೀದಿಗಳಲ್ಲಿ ಅಡ್ಡಪಲ್ಲಕ್ಕಿ ಮಹೋತ್ಸವವು ಹೊರಟಿತು. ಅಲ್ಲಲ್ಲಿ ಸುಮಂಗಲೆಯರು ಆರತಿಯನ್ನೆತ್ತುತ್ತ ಕಾಯಿ ಕರ್ಪೂರ ಫಲಪುಷ್ಪಗಳನ್ನರ್ಪಿಸಿ ಫಲಾಶೀರ್ವಾದಗಳನ್ನು ಪಡೆಯುತ್ತಿದ್ದರು. ಉತ್ಸವವು ರಾತ್ರಿ 1 ಘಂಟೆಗೆ ನಡುವಿನಮಠಕ್ಕೆ ತಲಿಪಿತು. ಆ ಮೇಲೆ ಸರ್ವ ಭಕ್ತಮಾಹೇಶ್ವರರು ಮೈಸೂರು ರಾಜಧಾನಿಯಲ್ಲಿ ಹೊರಡುವ ಪಂಚಾಚಾರ್ಯ ಪ್ರಭಾ ಪೋಷಣಕ್ಕೆ 2 ರೂಪಾಯಿ ಕಳುಹಿಸುವದಕ್ಕಾಗಿ ಮ|| ರಾ|| ಯರೇಸೀಮೆ ರಾಚಪ್ಪನವರ ವಶಕ್ಕೆ ಕೊಟ್ಟರು. ಆಮೇಲೆ ಫಲಪುಷ್ಪಗಳನ್ನರ್ಪಿಸಿ ಆಶೀರ್ವಾದ ಪಡೆದುಕೊಂಡು ಜಗದ್ಗುರುವಿನ ಕೃಪೆಗೆ ಪಾತ್ರರಾದರು. ಈ ಗುರುಪುತ್ರರ ಜನ್ಮವೇ ಸಾರ್ಥಕವು.

ಓರ್ವ ಉತ್ಸವಭಾಗಿ.

ಹುಬ್ಬಳ್ಳಿ.

ತಾ|| ೨-೩-೩೧ ನೆಯ ಸೋಮವಾರ ದಿವಸ ಇಲ್ಲಿಯ ಹಸ್ತರದು ಮಠದಲ್ಲಿ ಜಯಂತಿಯ ಸಮಾರಂಭವು ಒಳ್ಳೇ ವೈಭವದಿಂದ ನೆರವೇರಿತು. ಪ್ರಸಿದ್ಧ ಪತ್ರಿಕೆಯಲ್ಲಿ ಪ್ರಕಟಿಸಿದಂತೆ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು. ಪ್ರಾತಃಕಾಲ ೪ ಘಂಟೆಯಿಂದ ೬ ಘಂಟೆಯವರೆಗೆ ಜಗದಾಚಾರ್ಯರ ರಜತವಿಗ್ರಹಕ್ಕೆ ಪಂ|| ಶ್ರೀಕಂಠಶಾಸ್ತ್ರೀನಲವಡಿ ಇವರಿಂದ ವಿಧಿಪ್ರಕಾರವಾಗಿ ಶ್ರೀ ರುದ್ರಾಭಿಷೇಕವು ಮಾಡಲ್ಪಟ್ಟಿತು. ಆ ಮೇಲೆ ೭ ಘಂಟೆಯಿಂದ ೧೧ ಘಂಟೆಯವರೆಗೆ ನಗರದ ಎಲ್ಲಾ ಬೀದಿಗಳಲ್ಲಿ ಛತ್ರಚಾಮರಾದಿ ಬಿರುದುಗಳೊಡನೆ ಪಲ್ಲಕ್ಕಿಯಲ್ಲಿ ಉತ್ಸವವು ನೆರವೇರಿತು. ಬಳಿಕ ಮಧ್ಯಾಹ್ನ ೨ ಘಂಟೆಯಿಂದ ಸಾಯಂಕಾಲದವರೆಗೆ ಸಮಾರಾಧನೆಯ ಕಾರ್ಯವು ನಡೆಯಿತು. ಸಾಯಂಕಾಲ ೬ ಘಂಟೆಗೆ ಬೆಲದೂರಗೆವಾಯಿ ಗುರುಚನ್ನಯ್ಯನವರ ಗಾಯನವಾಯಿತು. ಆ ಮೇಲೆ ರಾತ್ರಿ ೯ ಘಂಟೆಯವರೆಗೆ ಶ್ರೀಮತಿ ವೀರಮ್ಮ ಮುದೇನೂರ ಇವರ ಸುಶ್ರಾವ್ಯವಾದ "ಶ್ರೀಯಾಳ ಸತ್ವಪರೀಕ್ಷಾ" ಎಂಬ ಭಕ್ತಿರಸವಾದ ಕೀರ್ತನವಾಗಿ ಅಖಿಲ ಶ್ರೋತೃವೃಂದಕ್ಕೆ ಪರಮಾನಂದವಾಯಿತು.

ರಾತ್ರಿ ೯ ಘಂಟೆಯಿಂದ ಸಭೆಯು ಪ್ರಾರಂಭವಾಗಿ ಸರ್ವಸಮ್ಮತಿಯ ಮೇರೆಗೆ ಸಭಾಧಿಪತ್ಯವನ್ನು ಪಾಲೀಕೊಪ್ಪ ಬೃಹನ್ಮಠದ ಪಟ್ಟಾಧ್ಯಕ್ಷರು ವಹಿಸಿದರು. ಅಧ್ಯಕ್ಷರ ಪ್ರಾಸ್ತಾವಿಕ ಭಾಷಣವಾದ ಮೇಲೆ ಪಂ|| ಶ್ರೀಕಂಠಶಾಸ್ತ್ರೀ ಅಮರಾಯ, ಹಿರೇಮಠ, "ಕರ್ನಾಟಕ ಕವಿಚಂದ್ರ" ಇವರು ಜಯಂತಿಯನ್ನು ಮಾಡುವದರ ಉದ್ದೇಶ ಮತ್ತು ಸಾಫಲ್ಯ, ಈ ಬಗ್ಗೆ ಸಯುಕ್ತಿಕವಾಗಿ ಮಾತನಾಡಿ ಸಮಸ್ತರು ತಮ್ಮ ತಮ್ಮ ಮನೆಯಲ್ಲಿ ದೊಡ್ಡ ಹಬ್ಬದಂತೆ ಪ್ರತಿವರ್ಷ ಜಗದಾಚಾರ್ಯರ ಜಯಂತಿಯನ್ನು ಮಾಡಲೇಬೇಕೆಂದು ಜನಜಾಗೃತೆಯನ್ನು ಮಾಡಿದ್ದಲ್ಲದೆ, ಶ್ರೀಮಜ್ಜಗದ್ಗುರು ರೇಣುಕಶಿವಾಚಾರ್ಯರ ಅನಂತಮಹಿಮೆಗಳನ್ನೂ, ಅದ್ಭುತ ಲೀಲೆಗಳನ್ನೂ ರೇಣುಕವಿಜಯದ ಆಧಾರದ ಮೇಲಿಂದ ಸವಿಸ್ತಾರವಾಗಿ ವಿವರಿಸಿ, ಶ್ರೋತೃವೃಂದವನ್ನು ಸಂತೋಷಪಡಿಸಿದರು. ಅನಂತರ ಧರ್ಮದಮೇಲೆ ಪಂ|| ಸಿದ್ಧಲಿಂಗಶಾಸ್ತ್ರೀ ಹೆಬ್ಬಳ್ಳಿ, ಕಾವ್ಯತೀರ್ಥ ಇವರ ಪ್ರವಚನವಾಯಿತು. ಬಳಿಕ ಶ್ರೀಯುತ ಚನಮಲ್ಲಪ್ಪ ಕಟ್ಟಿ ಹೆ|| ಮಾಸ್ತರ ಮಂಟೂರ ಇವರು ಧರ್ಮಾಚರಣೆಯಮೇಲೆಯೂ, ಮಹಾದೇವಪ್ಪ ಮಾಸ್ತರ ನೂಲ್ವಿ ಇವರು ವೀರಶೈವಮತಪ್ರಾಚೀನತೆಯಮೇಲೆಯೂ ಭಾಷಣಮಾಡಿದರು. ಹುಬ್ಬಳ್ಳಿಯ ಎಲ್ಲ ವೀರಶೈವ ಭಕ್ತಮಾಹೇಶ್ವರರು ಈ ಸಮಯದಲ್ಲಿ ಮಹದಾನಂದವನ್ನನುಭವಿಸಿದರು. ಕಡೆಗೆ ಶ್ರೀಮದಾಚಾರ್ಯರ ಸುಮಂಗಲಗೀತೆಗಳಿಂದ ಮಂಗಲಾರತಿಯಾಗಿ ಜಯಂತಿಯ ಕಾರ್ಯವು ಸಮಾಪ್ತವಾಯಿತು. ಜಗದಾಚಾರ್ಯರ ಜಯಂತಿಯನ್ನು ಮಾಡುವ ವೀರಶೈವಜನಾಂಗವು ಧನ್ಯವಾದದ್ದಲ್ಲವೇ?

ತೀರ್ಥಪ್ಪ ಬಳ್ಳೊಳ್ಳಿ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ನಂದೀಶ್ವರಪ್ರತಿಷ್ಠಾ.

ಫಾಲ್ಗುಣ ಶು|| ೩ (20-2-31) ಶುಕ್ರವಾರದಿವಸ ಕೃಷ್ಣರಾಜಸಾಗರ ನಾರ್ತ್‌ಬ್ಯಾಂಕು ಚಿಕ್ಕಾಯರಹಳ್ಳಿ ಗ್ರಾಮದಲ್ಲಿ ನೂತನವಾಗಿ ಕಟ್ಟಿಸಿರುವ ದೇವಾಲಯದಲ್ಲಿ ಶ್ರೀ ನಂದೀಶ್ವರಪ್ರತಿಷ್ಠೆಯು ಬೆಂಗಳೂರು ಶ್ರೀ ಗುರುಲಿಂಗಶಾಸ್ತ್ರಿಗಳ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟಿತು. ಅದೇ ಸಮಯದಲ್ಲಿ ಕೆಲವರಿಗೆ ದೀಕ್ಷಾಸಂಸ್ಕಾರವು ಸಹ ನಡೆಯಿತು. ಮಧ್ಯಾಹ್ನ 5 ಗಂಟೆಗೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರೂ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರೂ, ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಸಾಹೇಬರವರೂ ಮತ್ತು ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್‌ರವರೂ ಆಗಮಿಸಿದ್ದಲ್ಲದೆ ಅನೇಕ ಭಕ್ತರ ಸಮುದಾಯವೂ ಆಗಮಿಸಿದ್ದಿತು. ಈ ಅಧಿಕಾರಿ ಮಂಡಲಿಯು ಸ್ವಾಮಿಯ ಪ್ರತಿಷ್ಠಾಕಾರ್ಯವನ್ನು ಪರಾಮರ್ಶಿಸಿದ ಬಳಿಕ ಮಂಗಳಾರತಿಯು ನಡೆದು ಗಂಧಪುಷ್ಪ ಫಲ ತಾಂಬೂಲಗಳ ವಿನಿಯೋಗವು ನಡೆಯಿತು. ಗ್ರಾಮಸ್ಥರು ಸುಂದರವಾಗಿ ತಯಾರುಮಾಡಿಸಿದ್ದ ಬೆಳ್ಳಿಯತಟ್ಟೆಯು ನಂದೀಶ್ವರದೇವಸ್ಥಾನವನ್ನು ಮುತುವರ್ಜಿವಹಿಸಿ ಕಟ್ಟಿಸಿದ ಕಂಟ್ರಾಕ್ಟುದಾರ್ ಮ|| ರಾ|| ಮೊಹದೀನ್ ಸಾಹೇಬರವರಿಗೆ ಹಜರತ್ ಡೆಪ್ಯುಟಿಕಮಿಷನ್ ಸಾಹೇಬರವರ ಅಮೃತಹಸ್ತದಿಂದ ಕೊಡಿಸಲ್ಪಟ್ಟಿತು. ಅದೇ ದಿವಸ ರಾತ್ರಿ ಶ್ರೀ ಸ್ವಾಮಿಯ ಉತ್ಸವವು ನೆರವೇರಿತು. ಎರಡು ದಿವಸಗಳಿಂದಲೂ ಬಡಬಗ್ಗರ ಆದಿಯಾಗಿ ಸರ್ವರಿಗೂ ಅನ್ನಸಂತರ್ಪಣೆಯು ವಿತರಣೆಯಿಂದ ನಡೆಯಿಸಲ್ಪಟ್ಟಿತು. ಈ ದೇವತಾಕಾರ್ಯವನ್ನು ಮುತುವರ್ಜಿವಹಿಸಿ ನೆರವೇರಿಸಿದ ಮ|| ರಾ|| ಪಟೇಲ್ ಶಂಭುಗೌಡರಿಗೂ, ಗ್ರಾಮದವರಿಗೂ ಶ್ರೀ ವೃಷಭೇಶ್ವರನು ಅನೇಕ ಸನ್ಮಂಗಳವನ್ನುಂಟುಮಾಡಲೆಂದು ಅಪೇಕ್ಷಿಸುವ

ಕಾರ್ಯಭಾಗಿ,
ಸಿ. ಶಂಭುಲಿಂಗಯ್ಯ. ಚಿಕ್ಕಾಯರಹಳ್ಳಿ.

ಶ್ರೀ ಶಿರೋಳ ಹಿರೇಮಠದ ಪಟ್ಟದಸ್ವಾಮಿಗಳವರ ಸಮಸ್ತ ಶಿಷ್ಯಮಂಡಲಿಗೆ ಸೂಚನೆ.

ಧಾರವಾಡ ಜಿಲ್ಲಾ ನರಗುಂದಪೇಟಾ ಪೈಕಿ ಶಿರೋಳ ಹಿರೇಮಠವು ಬಹು ಪ್ರಾಚೀನ ಮಠವು. ಇದು ಶ್ರೀಮದ್ರಂಭಾಪುರಿ (ಬಾಳೇಹಳ್ಳಿ) ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ರೇಣುಕಾಚಾರ್ಯರ ಶಾಖಾಮಠವು. ಈ ಮಠದಲ್ಲಿ ಅನೇಕರು ಪಟ್ಟಾಧಿಕಾರಿಗಳಾಗಿ ಹೋಗಿದ್ದಾರೆ. ಅವರಲ್ಲಿ ಮೂರುನೂರು (300) ವರ್ಷಗಳ ಪೂರ್ವದಲ್ಲಿ ರೇವಣಸಿದ್ಧಶಿವಾಚಾರ್ಯರೆಂಬ ಪಟ್ಟದಸ್ವಾಮಿಗಳು ಅತ್ಯಂತ ಮಹಿಮಾಶಾಲಿಗಳಾಗಿದ್ದರು. ಅವರ ತರುವಾಯ ಗುರುಪರಂಪರೆಯಿಂದ ಬಂದವರಲ್ಲಿ ಶ್ರೀ ಪ್ರಭುಸ್ವಾಮಿ ಪಟ್ಟಾಧಿಕಾರಿಗಳೆಂಬುವರು ಬಹಳ ಪ್ರಸಿದ್ಧಿಯನ್ನು ಪಡೆದಿದ್ದರು. ಇವರ ಕಾಲದಲ್ಲಿ ಈ ಮಠವು ವಿಶೇಷ ಪ್ರಕಾಶಕ್ಕೆ ಬಂದಿತು. ಇವರು ಲಿಂಗೈಕ್ಯರಾಗಿ ಇಂದಿಗೆ ೩೮ ವರ್ಷಗಳಾದವು. ಈ ಮಹಾಸ್ವಾಮಿಗಳು ನಡೆಯಿಸಿದ ಅನಂತ ಮಹಿಮೆಗಳನ್ನು ಕಂಡವರು ಈಗಲೂ ಅನೇಕರು ಇರುತ್ತಾರೆ. ಕರ್ನಾಟಕದಲ್ಲಿ ೪-೫ ಶಿರೋಳವೆಂಬ ಗ್ರಾಮಗಳಿದ್ದು ನಮ್ಮ ಗ್ರಾಮಕ್ಕೆ ಈ ಸ್ವಾಮಿಗಳ ದಿವ್ಯ ಪ್ರಭಾಶಕ್ತಿಯಿಂದ "ಪಟ್ಟದ ಸ್ವಾಮಿಗಳು ಶಿರೋಳ" ಯೆಂಬ ವಿಶೇಷಣವು ಬಂದಿದೆ. ಸದರಿ ಸ್ವಾಮಿಗಳ ತರುವಾಯ ಅವರ ಸಹೋದರರ ಪುತ್ರರಾದ ಚನ್ನವೀರ ಶಿವಾಚಾರ್ಯರು ಅಧಿಕಾರಿಗಳಾದರು. ಇವರ ಕಾಲದಲ್ಲಿ ಮಠದ ಉನ್ನತಿಯ ಕಾರ್ಯಗಳಾವುವೂ ನಡೆಯಲಿಲ್ಲ. ತರುವಾಯ ಇವರ ಅಣ್ಣಂದಿರ ಪುತ್ರರಾದ ವಿರೂಪಾಕ್ಷ ಶಿವಾಚಾರ್ಯರಿಗೆ ಅಧಿಕಾರವನ್ನು ವಹಿಸಿದರು. ಇವರು ಅಲ್ಪ ವಯಸ್ಸಿನಲ್ಲಿಯೇ ಶಿವಾಧೀನರಾದರು. ಇವರು ಲಿಂಗೈಕ್ಯರಾಗಿ ೧೭ ವರ್ಷಗಳಾದವು. ಇವರ ತರುವಾಯ ಪಟ್ಟಾಧಿಕಾರ ವಹಿಸುವವರು ಯಾರೂ ಇಲ್ಲದಂತಾಯಿತು. ಸದರಿ ವಿರೂಪಾಕ್ಷ ಶಿವಾಚಾರ್ಯರಿಗೆ ಒಬ್ಬರೇ ಸಹೋದರರಿದ್ದುದರಿಂದ ಪಟ್ಟಾಧಿಕಾರವನ್ನು ವಹಿಸಲಿಲ್ಲ. ಯಾಕೆಂದರೆ ಗುರುವರ್ಗದ ಮಠಗಳಲ್ಲಿ ಪುತ್ರವರ್ಗ, ಶಿಷ್ಯವರ್ಗ ಎಂಬೆರಡು ಪ್ರಭೇದಗಳಿರುವದು ಸರಿಯಷ್ಟೆ! ಅದರಂತೆ ಈ ಮಠವು ಪುತ್ರವರ್ಗಕ್ಕೆ ಸೇರಿದ್ದರಿಂದ ಮಠಾಧಿಕಾರಕ್ಕೆ ಸದ್ಯದಲ್ಲಿ ಒಬ್ಬರೇ ಇರುವ ವೇ|| ಪಂಚಾಕ್ಷರಶಾಸ್ತ್ರಿಗಳು ಗೃಹಸ್ಥಾಶ್ರಮವನ್ನು ಸ್ವೀಕರಿಸಿದ್ದಾರೆ. ಈ ಮಠದ ಐತಿಹಾಸಿಕವಿಷಯವು ವಿಶೇಷ ಮಹತ್ವದ ಕಾರ್ಯಗಳಿಂದ ಕೂಡಿದೆ. ಸದ್ಯದ ಮಠದ ಅವಸ್ಥೆಯು ಗತವೈಭವದ ಸ್ಮರಣೆಯೂ ಕೂಡ ಉಳಿಯದಂತಾಗುವ ಮಟ್ಟಿಗೆ ಬಂದಿದೆ. ಕಾಲಚಕ್ರದಿಂದ ಈ ಮಠಕ್ಕೊದಗಿದ ಪರಿಸ್ಥಿತಿಯನ್ನು ಗುರುಸಾರ್ವಭೌಮರಾದ ಪಂಚಾಚಾರ್ಯರೇ ದೂರಮಾಡಬೇಕಾಗಿದೆ. ಸದ್ಯಃ ಈ ಮಠವು ಅತ್ಯಂತ ಜೀರ್ಣವಾಗಿದೆ. ಇದಕ್ಕೆ ಭೂಮಿಗಳಾಗಲಿ ಇತರ ಆಸ್ತಿಗಳಾಗಲಿ ವಿಶೇಷವಾಗಿಲ್ಲ. ಪೂರ್ವದಲ್ಲಿದ್ದ ಭೂಮಿಗಳು ಒಂದೊಂದು ಸಮಯದಲ್ಲಿ ಕೈಬಿಟ್ಟುಹೋಗಿವೆ. ಈ ಮಠದ ಶಿಷ್ಯಸಮೂಹವು ಮಾತ್ರ ಹತ್ತು ಸಾವಿರ ಮನೆಗಳಿಗೆ ವಿಖಿರದೆಯೆಂದು ರಿಕಾರ್ಡುಗಳಿಂದ ತಿಳಿದುಬರುತ್ತದೆ. ಆದರೆ ಆ ಕಾಗದಪತ್ರಗಳಲ್ಲಿ ಕೆಲವು ಭಾಗಗಳು ಗಲಿತವಾಗಿರುವುದಲ್ಲದೆ ಅಪೂರ್ಣವಾಗಿರುವವು. ಈಗಿರುವ ವೇ|| ಪಂಚಾಕ್ಷರಶಾಸ್ತ್ರಿಗಳ ಪ್ರಯತ್ನದಿಂದ ಒಂದು ಸಾವಿರದವರೆಗೆ ಶಿಷ್ಯರ ಮನೆಗಳು ಗೊತ್ತಾಗಿವೆ. ಉಳಿದ ಮನೆಗಳನ್ನು ಸಂಚರಿಸಿ ಶೋಧನಮಾಡಲು ಗೃಹಸ್ಥಾಶ್ರಮಿಗಳಾದ ಇವರಿಗೆ ಸಾಧ್ಯವಿಲ್ಲ. ಇವರು ತಮ್ಮ ಮಠದ ಜೀರ್ಣೋದ್ಧಾರಕ್ಕಾಗಿ ವಿಶೇಷವಾಗಿ ಪ್ರಯತ್ನಪಡುತ್ತಿರುವರು. "ಶ್ರೇಯಾಂಸಿ ಬಹು ವಿಘ್ನಾನಿ" ಎಂಬ ನಾಣ್ಣುಡಿಯಂತೆ ಇವರ ಪ್ರಯತ್ನಕ್ಕೆ ವಿಶೇಷ ವಿಘ್ನಗಳಿವೆ. ಈ ಮಠದ ಶಿಷ್ಯರೂ, ಅಭಿಮಾನಿಗಳೂ ಜಾಗ್ರತರಾಗಿ ಸಂಪೂರ್ಣ ಸಹಾಯಮಾಡಬೇಕು. ಇನ್ನು ಯಾವ ಶಿಷ್ಯರು ತಮ್ಮ ಗುರುಗಳ ನಿಜವೃತ್ತಾಂತವನ್ನು ತಿಳಿಯದೆ 'ಶಿರೋಳ ಹಿರೇಮಠದ ಪಟ್ಟದಸ್ವಾಮಿಗಳು' ಎಂಬ ಹೆಸರನ್ನು ಹೇಳುತ್ತಿರುವರೋ ಅವರು ಮೇಲಿನ ವಿಷಯವನ್ನು ನೋಡಿ ಗುರುಸನ್ನಿಧಿಯ ದರ್ಶನಲಾಭವನ್ನು ಪಡೆಯಬೇಕು. ಮತ್ತು ತಮ್ಮ ಗ್ರಾಮ ಮುಂತಾದ ಅಡ್ರೆಸನ್ನು ಪತ್ರದಿಂದ ತಿಳುಹಿಸಬೇಕು. ಈ ವಿಷಯದಲ್ಲಿ ಗುರುಭಕ್ತಿನಿಷ್ಠರಿಗೆ ವಿಶೇಷ ತಿಳಿಸುವದೇನಿದೆ. ಶಿವಂಭೂಯಾತ್.

ಮಠದ ಅಡ್ರೆಸ್,
ವೇ|| ಪಂಚಾಕ್ಷರಶಾಸ್ತ್ರಿಗಳು ಹಿರೇಮಠ, ಶಿರೋಳ.
ಪೋಸ್ಟು—ಶಿರೋಳ-ನರಗುಂದ.

ತಾ|| 25-2-31. ಜಿ||—ಧಾರವಾಡ.

ಶ್ರೀಶೈಲಮಹಾಕ್ಷೇತ್ರದ ಸಂಕ್ಷಿಪ್ತ ಚರಿತ್ರೆಯು.

ಶ್ರೀಶೈಲಮಹಾಕ್ಷೇತ್ರದ ಮಾಹಾತ್ಮ್ಯೆಯು ಶ್ರೀಸ್ಕಾಂದಪುರಾಣದಲ್ಲಿಯೂ, ಮಹಾಭಾರತದಲ್ಲಿಯೂ ಉಲ್ಲೇಖಿಸಲ್ಪಟ್ಟಿರುವುದರಿಂದ ಪ್ರಸಿದ್ಧಪವಿತ್ರಕ್ಷೇತ್ರಗಳಲ್ಲಿ ಇದೊಂದಾಗಿದೆ. ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿ ಈ ದೇಶಕ್ಕೆ ಬಂದಿದ್ದ ಚೈನಾದೇಶದ ಪ್ರಯಾಣಿಕರು ಈ ಮಹಾಕ್ಷೇತ್ರವನ್ನು ವಿಶೇಷವಾಗಿ ಪ್ರಶಂಸೆಮಾಡಿರುವರು. ಅದೂ ಅಲ್ಲದೆ ನಾಗಾರ್ಜುನಸ್ವಾಮಿ ಎಂಬೊಬ್ಬ ಬೌದ್ಧಸನ್ಯಾಸಿಯು ಈ ಮಹಾಕ್ಷೇತ್ರದಲ್ಲಿದ್ದು ಇಲ್ಲಿಯೇ ನಿರ್ವಾಣಹೊಂದಿದನೆಂಬುದಕ್ಕೆ ಆಧಾರವಿದೆ. ಪ್ರಾಚೀನಶಾಸನಸಂಶೋಧಕರೂ ಘನವಿದ್ವಾಂಸರೂ ಆದ ಶ್ರೀಕೃಷ್ಣಶಾಸ್ತ್ರಿಗಳು ಬರೆದಿರುವ ವರದಿಯನ್ನು ಓದಿದರೆ ಶ್ರೀಶೈಲಮಹಾಕ್ಷೇತ್ರದ ಅಡವಿಗಳೆಲ್ಲವೂ 6 ನೆಯ ಶತಮಾನದಲ್ಲಿ ದಕ್ಷಿಣದಲ್ಲಿ ಆಳಿದ ಕದಂಬ ಸಂತತಿಯ ಮಯೂರವರ್ಮನ ಆಳ್ವಿಕೆಗೆ ಸೇರಿದ್ದುವೆಂಬುದು ತಿಳಿದುಬರುತ್ತದೆ. ಅನೇಕ ಜಮೀನ್ದಾರರೂ ಮತ್ತು ಮಹಾರಾಜರೂ ಕುಟುಂಬಸಮೇತರಾಗಿ ಆಧ್ಯಾತ್ಮಿಕಸೌಖ್ಯವನ್ನು ಪಡೆಯುವುದಕ್ಕೋಸ್ಕರ ಇಲ್ಲಿಗೆ ಬಂದು ಶ್ರೀ ಮಲ್ಲಿಕಾರ್ಜುನಸ್ವಾಮಿಯ ಸೇವೆಯನ್ನು ಮಾಡಿ ಅನೇಕ ವಿಧ ದಾನಗಳನ್ನು ಮಾಡಿರುವರೆಂಬುದು ಅನೇಕ ಶಾಸನಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಂಧ್ರಸಾಮ್ರಾಜ್ಯವನ್ನು ಅತ್ಯಂತ ವೈಭವದಿಂದ ಆಳಿದ ಶ್ರೀ ಪ್ರತಾಪರುದ್ರ ಮಹಾರಾಜನ ಪ್ರಭುತ್ವದ ವಿಧಾನವು ಹದಿನಾಲ್ಕನೆಯ ಶತಮಾನದ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಆ ಕಾಲದಲ್ಲಿ ಶ್ರೀಶೈಲ ದೇವಸ್ಥಾನದ ಟ್ರಸ್ಟಿಗಳಾಗಿದ್ದ ಈಶ್ವರಶಿವಾಚಾರ್ಯ ಮತ್ತು ಇತರ ಮೂವರು ಪ್ರಾಚೀನರಾಜರು ದೇವಸ್ಥಾನದ ಉಪಯೋಗಕ್ಕಾಗಿ ದಾನಮಾಡಿದ್ದ ಎಪ್ಪತ್ತು ಹಳ್ಳಿಗಳ ವರಮಾನದಿಂದ ದೇವಸ್ಥಾನದ ರಿಪೇರಿ ಮೊದಲಾದ ಸುಧಾರಣೆಗಳನ್ನು ಮಾಡುತ್ತಿದ್ದರೆಂಬುದು ಗೊತ್ತಾಗುತ್ತದೆ.

ಹದಿನಾಲ್ಕನೆಯ ಶತಮಾನದಲ್ಲಿ ನೇಮುರೆಡ್ಡಿಯವರು ಯಾತ್ರಿಕರ ಅನುಕೂಲಕ್ಕಾಗಿ ಪಾತಾಳಗಂಗೆಗೆ ಹೋಗಲು ಸೋಪಾನಗಳನ್ನು ನಿರ್ಮಿಸಿದರು. ಕೆಲವು ಕಾಲಗಳನಂತರ ಕದಂಬ ಸಂತತಿಯ ರಾಣಿ ವಿಶ್ವಲಾಂಬಾ ಎಂಬವರು ರಿಪೇರಿಮಾಡಿಸಿದರು. ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ವೀರಮಂಟಪವು ವೇಮರೆಡ್ಡಿಯಮಗನಾದ ಅನವೇಮರೆಡ್ಡಿಯಿಂದ ಕಟ್ಟಿಸಲ್ಪಟ್ಟಿತು.

ಕ್ರಿಸ್ತಶಕ 1405 ರಲ್ಲಿ ಸುಪ್ರಸಿದ್ಧ ವಿಜಯನಗರದ ರಾಜರಾದ ಹರಿಹರರಾಯರು ಮಲ್ಲಿಕಾರ್ಜುನಸ್ವಾಮಿಯ ಮುಖ್ಯಮಂಟಪವನ್ನೂ ಸಮೀಪದಲ್ಲಿ ಕೆಲವು ಕೆರೆಗಳನ್ನೂ ನಿರ್ಮಿಸಿದರು. ಕೆಲವು ಕಾಲಗಳ ಮಟ್ಟಿಗೆ ವಿಜಯನಗರ ಪ್ರಭುಗಳಾದ ಶಾಲ್ವದೊರೆಗಳು ಅನೇಕ ದಾನಗಳನ್ನು ಮಾಡಿದರು. ಶ್ರೀ ಕೃಷ್ಣದೇವರಾಯರ ಸಹೋದರರಾದ ವೀರನರಸಿಂಹರಾಯರು ಈ ಕ್ಷೇತ್ರಕ್ಕೆ ಬಂದು ಅನಂತ ದಾನಗಳನ್ನು ಮಾಡಿರುವರೆಂಬುದು ಅನೇಕ ಶಾಸನಗಳಿಂದ ವ್ಯಕ್ತವಾಗುತ್ತದೆ. ಹದಿನಾರನೆಯ ಶತಮಾನದ ಆದಿಯಲ್ಲಿ ಶ್ರೀಕೃಷ್ಣದೇವರಾಯನು ಜಯಶೀಲನಾಗಿ ತನ್ನ ದೇಶಕ್ಕೆ ಹಿಂದಿರುಗಿ ಹೋಗುತ್ತಿರುವಾಗ ಈ ಕ್ಷೇತ್ರಕ್ಕೆ ಬಂದು ದೇವಸ್ಥಾನದ ಹೆಬ್ಬಾಗಿಲಿನಿಂದ ಪಾತಾಳಗಂಗೆಗೆ ಹೋಗತಕ್ಕ ದಾರಿಯ ಉಭಯಪಾರ್ಶ್ವಗಳಲ್ಲಿಯೂ ಮಂಟಪಗಳನ್ನು ಕಟ್ಟಿಸಿ ದೇವಸ್ಥಾನದ ಪ್ರಾಕಾರದ ಪೂರ್ವ ದಕ್ಷಿಣ ಮತ್ತು ಉತ್ತರದಿಕ್ಕಿನ ಗೋಡೆಗಳ ಮೇಲೆ ಸುಂದರಗಳಾದ ವಿಗ್ರಹಗಳನ್ನು ಸಹ ಕೆತ್ತಿಸಿದನು.

ಹಂಪಿದೇವಸ್ಥಾನದಲ್ಲಿ ಕಂಡುಬರುವ ಕಲಾಕೌಶಲ್ಯವು ಈ ಕ್ಷೇತ್ರದಲ್ಲಿಯೂ ಕಂಡುಬರುವುದರಿಂದ ಇಲ್ಲಿರುವ ಪ್ರತಿಮೆಗಳು ಶ್ರೀ ಕೃಷ್ಣದೇವರಾಯನಿಂದ ಕಳುಹಿಸಲ್ಪಟ್ಟಿದ್ದ ಶಿಲ್ಪಿಗಳಿಂದಲೇ ನಿರ್ಮಿಸಲ್ಪಟ್ಟಿರಬಹುದೆಂದು ಕಂಡುಬರುತ್ತದೆ. ಆ ಕಾಲದಲ್ಲಿ ಶ್ರೀಶೈಲವು ದೊಡ್ಡ ಪಟ್ಟಣವಾಗಿದ್ದಿತೆಂದೂ ಶ್ರೀಕೃಷ್ಣದೇವರಾಯನಿಂದ ಕಳುಹಿಸಲ್ಪಟ್ಟ ಚಂದ್ರಶೇಖರರಾಯಲು ಎಂಬವರ ಆಳ್ವಿಕೆಗೆ ಒಳಪಟ್ಟಿದ್ದಿತಲ್ಲದೆ ಅವರು ನಂದಿಯನ್ನೂ ಸುವರ್ಣಮಯ ಕೆಲವು ವಾಹನಗಳನ್ನೂ ನಿರ್ಮಿಸಿ ದೇವಸ್ಥಾನದ ಗೌರವವನ್ನು ಹೆಚ್ಚಿಸಿದರು. ಹಾಳುಬಿದ್ದಿರುವ ದೇವಸ್ಥಾನಗಳನ್ನೂ, ಬೀದಿ ಮತ್ತು ಮನೆಗಳನ್ನೂ ನೋಡಿದರೆ ಇದು ಒಂದು ಕಾಲದಲ್ಲಿ ಅಭಿವೃದ್ಧಿಯನ್ನು ಪಡೆದಿದ್ದ ಪಟ್ಟಣವಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಹದಿನಾರನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದ ಆಶ್ರಿತಸಂಸ್ಥಾನದ ಪ್ರಭುವರ್ಯರಾದ ಕಾಂತಲಿಂಗರಾಜು ಎಂಬವರು ಪ್ರವೇಶ ಗೋಪುರವನ್ನೂ ನಂದಿ ಮೊದಲಾದ ವಾಹನಗಳನ್ನೂ ರಿಪೇರಿಮಾಡಿಸಿ ಗೋಡೆಗಳಿಗೂ ಸಹ ಬಂಗಾರದ ತಗಡನ್ನು ಹಾಕಿಸಿದ್ದರು. ಹದಿನೇಳನೆಯ ಶತಮಾನದಲ್ಲಿ ವಿಜಯನಗರರಾಜ್ಯವು ಮಹಮ್ಮದೀಯರ ಕೈವಶವಾದಾಗ ಶ್ರೀಶೈಲಪಟ್ಟಣವು ಹಾಳಾಯಿತು. ಮತ್ತು 18 ನೆಯ ಶತಮಾನದಲ್ಲಿ ಮುನಾವರ್ ಖಾನ್ ಎಂಬ ಮಹಮ್ಮದೀಯ ದೊರೆಯ ಆಳ್ವಿಕೆಯಲ್ಲಿ ದೇವಸ್ಥಾನವು ಲೂಟಿಮಾಡಲ್ಪಟ್ಟಿತು. ಮತ್ತು ಕಳ್ಳರು ಅನೇಕ ವಸ್ತುಗಳನ್ನು ದೋಚಿಕೊಂಡು ಹೋದರು. ಆಗ ಶ್ರೀಶೈಲಪಟ್ಟಣದ ಜನರು ಆ ಸ್ಥಳವನ್ನು ಬಿಟ್ಟು ಬೇರೆ ರಾಜ್ಯಗಳಲ್ಲಿ ನೆಲೆಸಿದರು. ಆ ಪಟ್ಟಣವು ಸಂಪೂರ್ಣ ನಾಶವಾದಮೇಲೆ ಅದು ಚೆಂಚು ಮೊದಲಾದ ಕಾಡುಜನರ ವಾಸಸ್ಥಾನವಾಯಿತು. ಆಗಾಗ್ಗೆ ರೋಹಿಲ್ಲಾಜನರು ಬಂದು ಲೂಟಿಮಾಡುತ್ತಿದ್ದರು. ಅಲ್ಲಿ ವಾಸವಾಗಿದ್ದ ಚೆಂಚುಜನರು ದೇವಸ್ಥಾನದ ಬಂಗಾರದ ತಗಡುಗಳನ್ನು ಕಳುವು ಮಾಡುತ್ತಿದ್ದರು. ಹಾಗೂ ಹೀಗೂ ಉಳಿದಂಥ ಕೆಲವು ಬಂಗಾರದ ತಗಡುಗಳು ಕರ್ನೂಲಿಗೆ ತರಲ್ಪಟ್ಟು ಹರಾಜುಹಾಕಲ್ಪಟ್ಟವು. ಗೌರ್ನಮೆಂಟಿನವರು ಅವುಗಳನ್ನು ಕೊಂಡುಕೊಂಡು ಮದರಾಸ್ ಮ್ಯೂಜಿಯಂನಲ್ಲಿಟ್ಟಿರುವರು. ಅಲ್ಲಿ ಅವು ಶ್ರೀಶೈಲದ ಗತವೈಭವವನ್ನು ಸಾರುತ್ತವೆ. ಹಿಂದಿನ ಪಂಗಡಗಳಿಗೆ ಈಗ ಸೆಟ್ಲ್‌ಮೆಂಟ್ ಆಗಿರುವ ಸಿದ್ಧಾಪುರಂ ಎಂಬ ಸ್ಥಳವು ಮತ್ತು ಅದರ ವಿಶಾಲವಾದ ಕೆರೆಯೂ ಈ ದೇವಸ್ಥಾನಕ್ಕೆ ಪೂರ್ವದಲ್ಲಿ ಸರ್ವಾಗ್ರಹಾರವಾಗಿದ್ದಿತು.

ಅನೇಕ ಶತಮಾನಗಳವರೆಗೂ ರಾಜಾಧಿರಾಜರುಗಳಿಂದ ಅನಂತ ಜಹಗೀರುಗಳನ್ನೂ ಮತ್ತು ಗೌರವವನ್ನೂ ಪಡೆದು ಈ ಕ್ಷೇತ್ರವು ಅತ್ಯಂತ ವೈಭವವನ್ನು ಹೊಂದಿದ್ದಿತು. ಈ ಮಹಾಕ್ಷೇತ್ರಕ್ಕೆ ಈಗ ಪ್ರತಿದಿವಸದ ಪೂಜಾದಿಕಾರ್ಯಗಳನ್ನು ನಡೆಯಿಸಲು ಸಾಕಾದಷ್ಟು ಆಸ್ತಿಯಿಲ್ಲದಿರುವ ಸ್ಥಿತಿಯನ್ನು ನೋಡಿದರೆ ಯಾರಿಗೆ ತಾನೆ ದುಃಖದಿಂದ ಕಣ್ಣೀರುಬರಲಿಕ್ಕಿಲ್ಲ. ಒಂದಾನೊಂದುಕಾಲದಲ್ಲಿ ಬಂಗಾರದ ತಗಡುಗಳಿಂದ ಕೆತ್ತಲ್ಪಟ್ಟಿದ್ದ ಗೋಡೆಗಳಿಗೆ ಈಗ ಸರಿಯಾದ ಗಾರೆಗಿಲಾಯಿ ಸಹ ಇರುವುದಿಲ್ಲ. ಅನೇಕ ಗೋಪುರಗಳು ಬಿದ್ದುಹೋಗಿವೆ. ಅನೇಕ ಜಲಾಶಯಗಳು ಮುಚ್ಚಿಹೋಗಿವೆ. ಗರ್ಭಾಲಯದ ಕಲ್ಲುಕಂಬಗಳೂ ಜಂತಿಗಳೂ ಬಿದ್ದುಹೋಗಿವೆ. ಮೂರುಶತಮಾನಗಳಲ್ಲಿ ಎಂಥ ಅದ್ಭುತಬದಲಾವಣೆ! ಅಯ್ಯೋ! "ಓ ಮಲ್ಲಿಕಾರ್ಜುನಾ! ನಿನ್ನ ಶಕ್ತಿಯು ರಾಜಾಧಿರಾಜರ ಹೃದಯದಲ್ಲಿ ಬಂಬಿಸಿ ಪ್ರೇರೇಪಿಸಿದ್ದರೆ ನಾವೇನು ಶಿಥಿಲವಾಗಿರುವ ನಿನ್ನ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಲು ಸಾಧ್ಯವಿಲ್ಲ.

ಆಂಧ್ರದೇಶದಲ್ಲಿ ರಕ್ತಪ್ರಾಯರಾದ ಶ್ರೀ ದೇಶೋದ್ಧಾರಕ ಕೆ. ನಾಗೇಶ್ವರರಾವ್‌ರವರ ಅಧ್ಯಕ್ಷತೆಯಲ್ಲಿ ಶ್ರೀಶೈಲಕ್ಷೇತ್ರದ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಯ ಸಂಘ ಎಂಬ ಸಂಸ್ಥೆಯು ಏರ್ಪಟ್ಟಿದೆ. ಮಲ್ಲಿಕಾರ್ಜುನಸ್ವಾಮಿಯ ಭಕ್ತರೆಲ್ಲರೂ ಧನರೂಪದಲ್ಲಿಯಾಗಲೀ ಅಥವಾ ಇನ್ನಾವ ವಿಧಾನದಲ್ಲಿಯಾಗಲೀ ಸೇವೆಮಾಡದಿದ್ದರೆ ಮೇಲ್ಕಂಡ ಸಂಘದವರ ಪ್ರಯತ್ನಗಳು ಸಿದ್ಧಿಸಲಾರವು.

ಪಿ. ರಾಮಯ್ಯ, ಪ್ರೆಸಿಡೆಂಟ್,
ಶ್ರೀಶೈಲಂ ಮ್ಯಾನೇಜಮೆಂಟ್‌ಬೋರ್ಡ್

ಪಂಚಾಚಾರ್ಯ ಪ್ರಭಾ.

೧೯೩೧ ನೇ ಮಾರ್ಚಿ ತಾ|| ೯ ನೆಯ ಸೋಮವಾರ.

ಶಾಂತಿಸಂಧಾನವು ಸಫಲವಾಯಿತು.

ಹೊಸದಿಲ್ಲಿಯಲ್ಲಿ ಮಹಾತ್ಮಗಾಂಧಿಯವರೂ ಮತ್ತು ವೈಸರಾಯರಾದ ಲಾರ್ಡ್ ಇರ್ವಿನ್‌ರವರೂ ಕಳೆದ 15 ದಿವಸಗಳಿಂದಲೂ ಕೇವಲ ಸರಳತನದಿಂದಲೂ, ಶುದ್ಧಮನಸ್ಸಿನಿಂದಲೂ, ಮೈತ್ರಿಯಿಂದಲೂ ನಡೆಯಿಸಿದ ಶಾಂತಿಸಂಧಾನವು ಜಯಪ್ರದವಾಗಿ ಪರಿಣಮಿಸಿ ದೇಶದಲ್ಲಿ ಶಾಂತಿಯು ನೆಲೆಗೊಳ್ಳಲು ಅವಕಾಶವಾಯಿತೆಂಬುದನ್ನು ತಿಳುಹಿಸಲು ಪರಮಾನಂದವಾಗುತ್ತದೆ. ಸಾರ್ವಭೌಮ ಸರ್ಕಾರದ ಪ್ರತಿನಿಧಿಗಳಾದ ವೈಸರಾಯರವರೂ, ಭರತಖಂಡದ ಪ್ರತಿನಿಧಿಗಳಾದ ಮಹಾತ್ಮಗಾಂಧಿಯವರೂ ಒಪ್ಪಂದವನ್ನು ಮಾಡಿಕೊಂಡಿರುವ ಅಂಶವು ಭಾರತೀಯರಿಗೂ ಆಂಗ್ಲೇಯರಿಗೂ ಕ್ಷೇಮಕರವಾದ ವಿಷಯವಾಗಿದೆ. ಮಹಾತ್ಮ ಗಾಂಧಿಯವರ ಅನುಜ್ಞೆಯು ಭಾರತೀಯರಿಗೆ ವೇದಸದೃಶವಾಗಿದೆ. ಮಹಾತ್ಮರವರ ಮಹೋನ್ನತಿಗೆ ಅವರ ಅದ್ಭುತ ಸ್ವಾರ್ಥತ್ಯಾಗವೂ, ಅಸಾಧಾರಣ ಮೇಧಾಶಕ್ತಿಯೂ, ಶಮದಮದಯಾದಾಕ್ಷಿಣ್ಯಾದಿ ಸದ್ಗುಣಗಳೂ, ಅನುಪಮ ವೈರಾಗ್ಯವೂ ಕಾರಣೀಭೂತಗಳಾಗಿವೆ.

ದಿವಂಗತ [illegible]ಗೋಪಾಲಕೃಷ್ಣ ಗೋಖಲೆಯವರು ಮಹಾತ್ಮಗಾಂಧಿಯವರನ್ನು ಕುರಿತು, ಇವರು ಜೇಡಿಮಣ್ಣಿನ ಪ್ರತಿಮೆಗಳಿಗೆ ಜೀವಕಳೆಯನ್ನು ತುಂಬಿ ವೀರರನ್ನುಮಾಡಿ ಯುದ್ಧಕ್ಕೆ ಕಳುಹಿಸುವಂಥ ಸಾಮರ್ಥ್ಯವುಳ್ಳವರೆಂದು ಪ್ರಶಂಸೆಮಾಡಿದರು. ಶ್ರೀ|| ಗೋಖಲೆಯವರ ಅಭಿಪ್ರಾಯದಂತೆ ಅತ್ಯದ್ಭುತಶಕ್ತಿಯುಳ್ಳ ಮಹಾತ್ಮಗಾಂಧಿಯವರು ಬಿಸಲಿನ ಮುಖವನ್ನು ನೋಡದ ಭಾರತಮಹಿಳೆಯರಿಗೂ, ಚಿಕ್ಕ ಚಿಕ್ಕ ಬಾಲಕರಿಗೂ ಸಹ ಸತ್ಯಾಗ್ರಹ ಯುದ್ಧದಲ್ಲಿ ಪ್ರಧಾನ ಪಾತ್ರವನ್ನು ವಹಿಸುವ ಹಾಗೆ ಸ್ಫೂರ್ತಿಯನ್ನಿತ್ತರು. ರೈತರೂ, ವರ್ತಕರೂ, ಮಹಾಮಹಾಮೇಧಾವಿಗಳೂ, ಅಗಣಿತ ಸ್ತ್ರೀ ಪುರುಷರೂ ಈ ಸತ್ಯಾಗ್ರಹ ಸಮರದಲ್ಲಿ ಲೌಕಿಕ ಸುಖವನ್ನು ತೃಣೀಕರಿಸಿ ಮಹಾತ್ಮರ ಅನುಜ್ಞೆಯನ್ನು ಪಾಲಿಸಿ ೬೦ ಸಾವಿರ ಜನಗಳವರೆಗೆ ಜೈಲಿಗೆ ಹೋದರು. ಮಹಾತ್ಮಗಾಂಧಿಯವರ ಆಯುಧವಾದರೋ ಜಗತ್ತಿನ ಇತಿಹಾಸದಲ್ಲಿ ಅಭೂತಪೂರ್ವವಾದ ಅಹಿಂಸಾರೂಪ ಸತ್ಯಾಗ್ರಹವಾಗಿದೆ. ಪಾಶ್ಚಿಮಾತ್ಯರು ಇದುವರೆಗೂ ಹಿಂಸಾಮಯವಾದ ಚಳವಳಿಯ ಹೊರತು ಸ್ವಾತಂತ್ರ್ಯವನ್ನು ಸಾಧಿಸುವುದು ಅಸಾಧ್ಯವೆಂದು ಭಾವಿಸಿದ್ದರು. ಅವರೀತರಹದ ಭಾವನೆಯು ಮಹಾತ್ಮರ ಕೃತಿಯಿಂದ ದೂರಾಯಿತೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಅಸ್ತು!

ಮಹಾತ್ಮ ಗಾಂಧಿ ಮತ್ತು ಇರ್ವಿನ್‌ರವರ ಒಪ್ಪಂದದಿಂದ ಭಾರತೀಯರ ಉದ್ದಿಷ್ಟಕಾರ್ಯವು ಹಸ್ತಗತವಾಯಿತೆಂದರ್ಥವಲ್ಲ; ಹಿಂದುಸ್ಥಾನದಲ್ಲಿ ನಡೆಯುವ ಎರಡನೆಯ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಸಮಸ್ತ ಪಕ್ಷಗಳ ಭಾರತೀಯರೆಲ್ಲರೂ ಏಕೀಭವಿಸಿ ದೇಶದ ಅಭಿವೃದ್ಧಿಗೆ ಅನುಕೂಲವಾದ ರಾಜ್ಯಾಂಗರಚನೆಯನ್ನು ನಿರ್ಮಿಸಲು ಅವಕಾಶವು ದೊರೆಯಿತು. ಮಹಾತ್ಮಗಾಂಧಿಯವರು ಅನೇಕ ವರ್ಷಗಳಿಂದಲೂ ಸರ್ಕಾರದವರ ಹೃದಯಪರಿವರ್ತನೆಯಾಗಬೇಕೆಂದು ಆಶಿಸುತ್ತಿದ್ದರು. ಅದರಂತೆ ಈ ಒಪ್ಪಂದದಿಂದ ಅವರ ಹೃದಯ ಪರಿವರ್ತನೆಯಾದಂತಾಯಿತು.

ವೈಸ್‌ರಾಯರವರು ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ಭಾರತೀಯರು ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವ ವಿಷಯವನ್ನು ತಿಳಿದುಕೊಂಡು 1929 ನೆಯ ವರ್ಷದಲ್ಲಿ ಲಂಡನ್ನಿಗೆ ಹೋಗಿ ಅಲ್ಲಿ ಮುಖ್ಯಮಂತ್ರಿಗಳೇ ಮೊದಲಾದವರೊಡನೆ ಆಲೋಚಿಸಿ ಹಿಂದುಸ್ಥಾನದ ರಾಜಕೀಯಸ್ಥಿತಿಯು ಮುಂದುವರಿಯಲೇಬೇಕೆಂಬ ಸತ್ಸಂಕಲ್ಪಮಾಡಿಕೊಂಡೇ ಈ ದೇಶಕ್ಕೆ ಹಿಂದಿರುಗಿ, ಹಿಂದುಸ್ಥಾನದ ಭವಿಷ್ಯರಾಜಕೀಯಸ್ಥಾನವು ಸಾಮ್ರಾಜ್ಯಾಂತರ್ಗತಸ್ವರಾಜ್ಯ (ಡೊಮಿನಿಯನ್‌ಸ್ಟೇಟಸ್)ವೆಂದು ಸಾರಿದರು. ವೈಸ್‌ರಾಯ್ ಪ್ರಭುಗಳು ಈ ಸದುದ್ದೇಶವನ್ನು ಆಗಲೇ ಅನುಷ್ಠಾನದಲ್ಲಿ ತರಲು ಪ್ರಯತ್ನಿಸಿದ್ದರೆ ಅವರಿಗಿನ್ನೂ ಭೂಷಣವಾಗುತ್ತಿತ್ತು. ಆದರೆ ದುರ್ದೈವವಶಾತ್ ಭಾರತೀಯರು ಅನೇಕ ಕಷ್ಟಪರಂಪರೆಗಳಿಗೀಡಾಗಬೇಕಾಯಿತು. ವೈಸರಾಯರವರು ಒಂಭತ್ತು ಕಠಿಣಶಾಸನಗಳನ್ನು ಹೊರಡಿಸಿ ದಬ್ಬಾಳಿಕೆಯಿಂದ ಪ್ರಭುತ್ವ ಮಾಡಬೇಕಾಯಿತು. ಕಠಿಣ ಶಾಸನಗಳೆಂಬ ಸರಕಾರದ ಆಗ್ನೇಯಾಸ್ತ್ರಕ್ಕೆ ಮಹಾತ್ಮ ಗಾಂಧಿಯವರ ಸತ್ಯಾಗ್ರಹವು ವಾರುಣಾಸ್ತ್ರವಾಗಿ ಪರಿಣಮಿಸಿತು. ಇದನ್ನರಿತು ಇಂಗ್ಲೆಂಡಿನ ಮುಖ್ಯಮಂತ್ರಿಗಳಾದ ರಾಂಸೇಮ್ಯಾಕ್ಡೋನಾಲ್ಡರವರು ನಾವು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಮಿಲಿಟರಿ ಕಾಯಿದೆಯಿಂದ ಪ್ರಭುತ್ವಮಾಡಿ ಜಗತ್ತಿನಲ್ಲಿ ಅವಹೇಳನಕ್ಕೆ ಗುರಿಯಾಗದೆ ಭಾರತೀಯರ ಆಕಾಂಕ್ಷೆಗಳನ್ನು ನೆರವೇರಿಸಬೇಕೆಂದು ಹೇಳಿದರು. ಕಗ್ಗತ್ತಲು ಮುಸುಕಿದನಂತರ ಅರುಣೋದಯವಾಗುವಂತೆ ಕಳೆದ ವರ್ಷ ಭಾರತೀಯರು ಅನಿರ್ವಚನೀಯ ಕಷ್ಟಪರಂಪರೆಗಳನ್ನನುಭವಿಸಿದನಂತರ ಉಭಯ ರಾಷ್ಟ್ರಗಳಿಗೂ ಗೌರವಪ್ರದವಾದ ಗಾಂಧಿ ಇರ್ವಿನ್‌ರವರ ಒಪ್ಪಂದವಾಯಿತು.

ಈ ಒಪ್ಪಂದದ ವಿಷಯದಲ್ಲಿ ನಾನಾ ಜನರು ನಾನಾ ರೀತಿಯಾಗಿ ಅಭಿಪ್ರಾಯಪಡುತ್ತಿರುವರು. ಕೆಲ ಜನ ಭಾರತೀಯರು ಮಹಾತ್ಮ ಗಾಂಧಿಯವರು ಅನೇಕ ಅಂಶಗಳನ್ನು ಬಿಟ್ಟುಕೊಟ್ಟರೆಂದೂ, ಕೆಲ ಜನ ಆಂಗ್ಲೇಯರು ವೈಸರಾಯರು ಅನೇಕ ವಿಷಯಗಳನ್ನು ಬಿಟ್ಟುಕೊಟ್ಟರೆಂದೂ ಆಕ್ಷೇಪಣೆಮಾಡುವರು. ಇದು ಸರಿಯಾದುದಲ್ಲವೆಂದು ಹೇಳಬಹುದಾಗಿದೆ. ಯಾಕೆಂದರೆ, ಮಹಾತ್ಮ ಗಾಂಧಿಯವರು ಈ ತಿಂಗಳು 5 ನೆಯ ತಾರೀಖಿನ ದಿವಸ ಅಮೇರಿಕೆಯ ಮತ್ತು ಹಿಂದುಸ್ಥಾನದ ಪತ್ರಿಕಾಪ್ರತಿನಿಧಿಗಳ ಮುಂದೆ ಈ ಸಂಧಿಯಿಂದ ಎರಡನೆಯ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಸಹಕರಿಸಿ ಕೆಲಸಮಾಡಲು ನಿಜವಾದ ಅನುಕೂಲ್ಯವು ದೊರೆತಿರುವುದೆಂದು ಹೇಳಿರುವರು. ಲಂಡನ್ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ನಿರ್ಧರಿಸಲ್ಪಟ್ಟಿರುವ ವಿಷಯಗಳಿಗಿಂತಲೂ ವಿಶೇಷಾಂಶಗಳನ್ನು ಚರ್ಚಿಸಲು ಅವಕಾಶವಿರುತ್ತದೆಂಬುದು ಈ ಒಪ್ಪಂದದಿಂದ ಸ್ಪಷ್ಟಪಡುತ್ತದೆ. ಆದಕಾರಣ ಮಹಾತ್ಮ ಗಾಂಧಿಯವರ ಒಪ್ಪಂದವನ್ನು ಸಮಸ್ತ ಭಾರತೀಯರೂ ವಿಶ್ವಾಸದಿಂದಲೂ ಭಕ್ತಿಯಿಂದಲೂ ಅಂಗೀಕರಿಸಿ ಮೊದಲಿನಂತೆ ಅವರ ಅನುಜ್ಞೆಯನ್ನು ಪಾಲಿಸುವರೆಂದು ನಿರೀಕ್ಷಿಸುತ್ತೇವೆ.

ಈಗ ನಡೆದಿರುವ ಶಾಂತಿಸಂಧಾನವು ವಿಫಲವಾಗಿದ್ದರೆ ರಾಷ್ಟ್ರವು ಹಿಂದೆ ಅನುಭವಿಸಿದ್ದಕ್ಕಿಂತಲೂ ನೂರರಷ್ಟು ಕಷ್ಟಾನುಭವಮಾಡಬೇಕಾಗಿದ್ದಿತೆಂದು ಮ|| ಗಾಂಧಿಯವರು ಪತ್ರಿಕಾಪ್ರತಿನಿಧಿಗಳ ಮುಂದೆ ಹೇಳಿರುವರು. ಕಷ್ಟಾನುಭವವೂ ಸ್ವಾರ್ಥತ್ಯಾಗವೂ ನಮ್ಮ ನಿರ್ದೇಶವಾದ ಗುರಿಯನ್ನು ಸಾಧಿಸುವ ಮಾರ್ಗವೇ ಹೊರತು ನಿಜವಾದ ಗುರಿಯಲ್ಲ. ಕಷ್ಟಾನುಭವಕ್ಕೂ ಸ್ವಾರ್ಥತ್ಯಾಗಕ್ಕೂ ಒಂದು ಮಿತಿಯುಂಟು. ಆ ಮಿತಿಯನ್ನು ಮೀರಿಹೋಗುವುದು ಯೋಗ್ಯವಲ್ಲ; ಆದಕಾರಣ ಸದ್ಯಃ ಭಾರತದೇಶಾಭಿಮಾನಿಗಳು ರಾಜ್ಯಾಂಗರಚನೆಯ ಮಹತ್ಕಾರ್ಯದಲ್ಲಿ ತಮಗೆ ಪೂರ್ಣ ಸಹಾಯಸಂಪತ್ತಿಯನ್ನಿತ್ತು ಭಾರತಮಾತೆಯ ಸೇವೆಮಾಡುವುದರಲ್ಲಿ ಹಿಂಜರಿಯಲಾರರೆಂದು ಮಹಾತ್ಮರು ನಿರೀಕ್ಷಿಸುವರು.

ಲಂಡನ್ನಿನ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ನಿರ್ಧರಿಸಲ್ಪಟ್ಟಿರುವ ಅಂಶಗಳು ಭಾರತೀಯರ ಉದ್ದೇಶಸಾಧನೆಗೆ ಅರ್ಧಭಾಗದಷ್ಟೂ ಸಹ ಸಹಕಾರಿಯಾಗಿರುವುದಿಲ್ಲವೆಂದು ಮಹಾತ್ಮರು ಹೇಳಿರುತ್ತಾರೆ. ಹಿಂದುಸ್ಥಾನದಲ್ಲಿ ನಡೆಯುವ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಎಲ್ಲ ನ್ಯೂನತೆಗಳನ್ನೂ ಸರಿಪಡಿಸಿಕೊಂಡು ಸ್ವಾತಂತ್ರ್ಯದ ತಿರುಳನ್ನು ಸಾಧಿಸಬಹುದೆಂಬ ಉತ್ಕಟೇಚ್ಛೆಯಿಂದಲೂ, ಆಂಗ್ಲೇಯರಿಗೂ ಭಾರತೀಯರಿಗೂ ಮೈತ್ರಿಯುಂಟಾಗುವುದರ ಮೂಲಕ ಜಗತ್ತಿನಲ್ಲಿ ಶಾಂತಿಯು ನೆಲೆಗೊಳ್ಳುವುದೆಂಬ ಮಹತ್ವಾಕಾಂಕ್ಷೆಯಿಂದಲೂ ಮಹಾತ್ಮರು ಉದಾರಮನಸ್ಸಿನಿಂದ ಹಿಂದೆ ನಡೆದ ಎಲ್ಲ ಅನ್ಯಾಯಗಳನ್ನೂ ಬದಿಗೊತ್ತಿ ಸಂಧಿಗೊಪ್ಪಿರುವರು.

ಮಹಾತ್ಮರ ಔದಾರ್ಯದ್ಯೋತಕವಾಗಿರುವ ಈ ಸುಸಂಧಿಯಲ್ಲಿ ಆಂಗ್ಲೇಯರೂ ಸಹ ಉಭಯರಾಷ್ಟ್ರಗಳಿಗೂ ಮೈತ್ರಿಯು ನೆಲೆಗೊಳ್ಳುವ ಹಾಗೆ ಶುದ್ಧಮನಸ್ಸಿನಿಂದ ಭಾರತೀಯರ ಉದ್ದೇಶಸಾಧನೆಗೆ ಸಹಾಯಮಾಡುವರೆಂದು ಇಡೀ ಪ್ರಪಂಚವೇ ನಿರೀಕ್ಷಿಸುತ್ತಿರುವುದು.

ಆಂಗ್ಲೇಯರು ಕೇವಲ ರಾಜತಂತ್ರವಿಶಾರದರೂ, ಚಾಣಾಕ್ಷ ಶಿರೋಮಣಿಗಳೂ, ಸ್ವಾತಂತ್ರ್ಯಪ್ರಿಯರೂ ಆಗಿರುವರು. ಇಂಗ್ಲೆಂಡಿನಲ್ಲಿ ಬರ್ಕ್, ಗ್ಲ್ಯಾಡ್‌ಸ್ಟನ್, ಮೆಕಾಲೆ, ಬೈರನ್ ಮೊದಲಾದ ಅದ್ವಿತೀಯ ಪುರುಷರು ಅವತರಿಸಿರುವರು. ಲಾರ್ಡ್ ಬೈರನ್‌ರವರು ಗ್ರೀಸ್ ದೇಶಕ್ಕೆ ಹೋಗಿ ಪ್ರಜಾಪಕ್ಷವನ್ನು ಹಿಡಿದು ಅವರಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟರು. ಆಂಗ್ಲೇಯರು ತಮ್ಮ ಪುರಾತನರ ಶ್ರೇಷ್ಠ ಕೃತಿಗಳನ್ನು ಸ್ಮರಣಕ್ಕೆ ತಂದುಕೊಂಡು ಭಾರತೀಯರ ಮಹತ್ವಾಕಾಂಕ್ಷೆಯು ಸಿದ್ಧಿಸಲು ಸಹಾಯಮಾಡುವ ಸದ್ಬುದ್ಧಿಯನ್ನೀಯಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ. ಶಾಂತಿಸಂಧಾನವು ಜಯಪ್ರದವಾಗುವುದಕ್ಕೆ ಹೃತ್ಪೂರ್ವಕವಾಗಿ ಕೆಲಸಮಾಡಿ ಉಭಯರಾಷ್ಟ್ರಗಳ ಕೃತಜ್ಞತೆಗೆ ಪಾತ್ರರಾದ ಮಹಾತ್ಮಗಾಂಧಿಯವರಿಗೂ ಮತ್ತು ಲಾರ್ಡ್ ಇರ್ವಿನ್‌ರವರಿಗೂ ಮತ್ತು ಈ ಸಂಧಾನಕ್ಕೆ ಕಾರಣೀಭೂತರಾದ ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ತೇಜಬಹದ್ದೂರ್ ಸಪ್ರು ಮತ್ತು ಶ್ರೀಯುತ ಎಂ. ಆರ್. ಜಯಕರ್‌ರವರಿಗೂ ಹೃದ್ಗತವಾದ ಅಭಿನಂದನಗಳನ್ನು ಸಮರ್ಪಿಸುತ್ತೇವಲ್ಲದೆ ಮಹಾತ್ಮಗಾಂಧಿಯವರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುತ್ತೇವೆ.

ಮಹಾತ್ಮ ಗಾಂಧಿಯವರ ಭಾಷಣ.

ಮಹಾತ್ಮಗಾಂಧಿಯವರು ಈ ತಿಂಗಳು ೫ನೆಯ ತಾರೀಖಿನದಿವಸ ಅಮೇರಿಕಾ ಮತ್ತು ಹಿಂದುಸ್ಥಾನದ ಪತ್ರಿಕಾಪ್ರತಿನಿಧಿಗಳ ಮುಂದೆ ಹೇಳಿರುವದೇನೆಂದರೆ:—

ವೈಸರಾಯರವರು ಅಪರಿಮಿತವಾದ ತಾಳ್ಮೆಯಿಂದಲೂ, ಶ್ರದ್ಧೆಯಿಂದಲೂ, ನಿಶ್ಚಲವಾದ ಸಭ್ಯತನದಿಂದಲೂ ವರ್ತಿಸದಿದ್ದರೆ ಒಪ್ಪಂದವು ಅಸಾಧ್ಯವಾಗುತ್ತಿತ್ತು. ನಾನು ಅನೇಕ ಸಂದರ್ಭಗಳಲ್ಲಿ ಉದ್ದೇಶವಿಲ್ಲದೆ ಅವರನ್ನು ಸಿಟ್ಟಿಗೆಬ್ಬಿಸುವ ಹಾಗೆ ಮಾಡಿರಬಹುದು. ಆದರೆ ಅವರು ಎಂದೂ ತಮ್ಮ ತಾಳ್ಮೆಯನ್ನು ಬಿಡಲಿಲ್ಲ. ಅವರು ನಿಷ್ಕಾಪಟ್ಯದಿಂದ ವರ್ತಿಸಿ ಒಪ್ಪಂದ ಮಾಡಿಕೊಳ್ಳಲೇಬೇಕೆಂದು ಪೂರ್ವಭಾವಿಯಾಗಿ ನಿಶ್ಚಯಿಸಿರಬಹುದೆಂದು ನಂಬಿದ್ದೇನೆ. ನಾನು ವೈಸರಾಯರಿಗೆ ಅವರನ್ನು ಕಾಣಲು ಅವಕಾಶಕೊಡಬೇಕೆಂದು ಪತ್ರವನ್ನು ಬರೆದಾಗಲೂ ಸಂಧಾನವು ಜಯಪ್ರದವಾಗುವುದೆಂದು ನಂಬಿರಲಿಲ್ಲ. ಸಂಧಾನವಾಗದೆ ಹೋಗಿದ್ದರೆ ರಾಷ್ಟ್ರವು ಇದುವರೆಗೂ ಅನುಭವಿಸಿರುವ ಕಷ್ಟಕ್ಕಿಂತಲೂ ನೂರು ಪಾಲು ಹೆಚ್ಚು ಕಷ್ಟವನ್ನನುಭವಿಸಬೇಕಾಗಿತ್ತು. ಅಂಥ ಕಠಿನಸ್ಥಿತಿಯನ್ನು ತಪ್ಪಿಸಿದುದಕ್ಕಾಗಿ ಪರಮಾತ್ಮನಿಗೆ ಕೃತಜ್ಞನಾಗಿದ್ದೇನೆ.

ಈ ವಿಧವಾದ ಒಪ್ಪಂದದಲ್ಲಿ ಯಾರು ಜಯಶೀಲರು ಎಂಬುದನ್ನು ಹೇಳುವುದು ಸಾಧ್ಯವೇ ಇಲ್ಲ; ಅದು ಜಾಣತನವೂ ಅಲ್ಲ. ಅದರಲ್ಲಿ ಏನಾದರೂ ಜಯವಾಗಿರುವುದು ತೋರಿದರೆ ಅದಕ್ಕೆ ಉಭಯರೂ ಭಾಗಿಗಳೆಂದು ಹೇಳಬಹುದು. ಕಾಂಗ್ರೆಸ್ಸಿನವರು ಒಂದು ಉದ್ದೇಶವನ್ನು ಸಾಗಿಸುವವರಾಗಿದ್ದಾರೆ. ಆ ಉದ್ದೇಶವು ಸಿದ್ಧಿಸುವವರೆಗೂ ಜಯದಮಾತೇ ಎತ್ತುವ ಹಾಗಿಲ್ಲ. ಈ ಒಪ್ಪಂದದಲ್ಲಿ ಸಂತೋಷಪಡಲು ಕಾರಣವಿದ್ದರೆ ನನ್ನ ದೇಶದ ಬಂಧು ಭಗಿನಿಯರು ಹೆಮ್ಮೆಪಡದೆ ನಮ್ರರಾಗಿ ಕಷ್ಟಾನು[illegible]ಂದಾಗಲೀ, ಶಾಂತಿಸಂಧಾನದಿಂದಲಾಗಲಿ, ಪರಸ್ಪರ ಆಲೋಚನೆಯಿಂದಲಾಗಲಿ, ಸಭೆ ಸೇರುವುದರಿಂದಲಾಗಲಿ ತಮ್ಮ ಆ ದೇಶಸಾಧನೆಗೆ ತಕ್ಕ ಬುದ್ಧಿ ಕೌಶಲ್ಯಗಳನ್ನು ದಯಪಾಲಿಸಲು ಭಗವಂತನನ್ನು ಪ್ರಾರ್ಥಿಸಬೇಕೆಂದು ಒತ್ತಾಯಮಾಡುತ್ತೇನೆ.

ಭರತಖಂಡದ ನವೀನಚರಿತ್ರೆಯಲ್ಲಿ "ವೀರಯುಗ" ವೆನಿಸಿದ ಕಳೆದ ವರ್ಷದಲ್ಲಿ ನಡೆದ ಸತ್ಯಾಗ್ರಹ ಯುದ್ಧದಲ್ಲಿ ಭಾಗಿಗಳಾಗಿ ಅಸಾಧಾರಣ ಸ್ವಾರ್ಥತ್ಯಾಗ ಮಾಡಿರುವ ಕೋಟ್ಯಂತರ ನನ್ನ ಭಾರತೀಯ ಬಂಧುಗಳು ಸಭೆಯನ್ನು ನಡೆಯಿಸಿ ರಾಜ್ಯಾಂಗರಚನೆಯನ್ನು ಮಾಡುವ ಕಾಲದಲ್ಲಿಯೂ ಏಕಮತ್ಯವನ್ನೂ, ಜಾಣ್ಮೆಯನ್ನೂ ಪ್ರದರ್ಶಿಸುವರೆಂದು ಆಶಿಸುತ್ತೇನೆ.

ಈ ಶಾಂತಿಸಂಧಾನದಿಂದ ಸಂತೋಷಪಡುವವರು ಕೆಲವರಿದ್ದರೆ ಅಸಮಾಧಾನದಿಂದ ನಿರಾಶೆಪಡುವವರೂ ಕೆಲವರಿದ್ದಾರೆ. ಅಂಥ ನಮ್ಮ ದೇಶಬಂಧುಗಳಿಗೆ ವೀರಾವೇಶದಿಂದ ಕಷ್ಟಾನುಭವಪಡುವುದು ಅವರಿಗೆ ಶ್ವಾಸೋಚ್ಛ್ವಾಸದಂತೆ ಅತಿ ಸುಲಭವಾಗಿದೆ. ಅವರು ಸಂತೋಷದಿಂದ ತೊಂದರೆಯನ್ನು ಸಹಿಸುವರು. ಕಷ್ಟಾನುಭವಮಾಡುವುದು ನಿಂತಕೂಡಲೆ ಗುರಿಯು ದೂರ ಉಳಿಯಿತೆಂದು ಭಾವಿಸುವರು. ಅಂಥ ನನ್ನ ಬಂಧುಗಳಿಗೆ ಹೇಳುವುದೇನೆಂದರೆ:—

ಸ್ವಲ್ಪತಾಳಿರಿ; ನೋಡೋಣ! ದೇವರಮೇಲೆ ಹೊರೆಹಾಕಿ ನಿರೀಕ್ಷಿಸೋಣ! ಕಷ್ಟವನ್ನನುಭವಿಸುವುದಕ್ಕೂ ಒಂದು ಮಿತಿಯುಂಟು. ಆ ಮಿತಿಯನ್ನು ಮೀರಿ ಕಷ್ಟಪಡುವುದು ಜಾಣತನವಲ್ಲ. ಮತ್ತು ವಿರೋಧಿಯಾದವರು ನಿಮ್ಮ ಇಚ್ಛೆಯನ್ನರಿತು ಅದರ ವಿಷಯದಲ್ಲಿ ಚರ್ಚೆಯನ್ನು ನಡೆಯಿಸಲು ಅನುಕೂಲ್ಯಗಳನ್ನು ಒದಗಿಸುವೆವೆಂದು ಹೇಳುವಾಗ ಕಷ್ಟಪಡುವುದು ಅನಾವಶ್ಯಕವು. ನಿಜವಾದ ಅನುಕೂಲ್ಯವು ಒದಗಿದಾಗ ಅದನ್ನು ಉಪಯೋಗಮಾಡಿಕೊಳ್ಳಬೇಕು. ಈಗ ಅಂಥ ಅನುಕೂಲ್ಯವು ಒದಗಿದೆ ಎಂದು ನನ್ನ ಮತಿಯಿಂದ ಅಭಿಪ್ರಾಯಪಡುತ್ತೇನೆ.

ಫೆಡರೇಷನ್ ಉತ್ತರವಾದಿತ್ವ ಸಂರಕ್ಷಣೆಗಳ ವಿಚಾರ.

ಈಗ ಮಾಡಿಕೊಂಡಿರುವ ಒಪ್ಪಂದವು ಹಂಗಾಮಿಯಾಗಿದೆ. ಅನೇಕ ಷರತ್ತುಗಳಮೇಲೆ ಶಾಂತಿಸಂಧಾನದ ಒಪ್ಪಿಗೆಯಾಗಿದೆ. ಕಾಂಗ್ರೆಸ್ಸಿನವರು ಮುಂದಿನ ರೌಂಡುಟೇಬಲ್ ಕಾನ್ಫರೆನ್ಸಿನಲ್ಲಿ ಭಾಗವಹಿಸುವುದಕ್ಕೆ ಪೂರ್ವದಲ್ಲಿ ಅನೇಕ ಅನ್ಯಾಯಗಳನ್ನು ಸರಿಮಾಡಬೇಕಾದುದು ಅವಶ್ಯವಾಗಿತ್ತು. ಈ ಅಂಶವು ಪ್ರಾಮುಖ್ಯವಾದುದಾದರೂ, ಅದು ಕಾಂಗ್ರೆಸ್ಸಿನವರ ಗುರಿಯಲ್ಲ. ಕಾಂಗ್ರೆಸ್ಸಿನವರ ಗುರಿಯು ಸಂಪೂರ್ಣ ಸ್ವರಾಜ್ಯವಾಗಿದೆ. ಇದು ಭಾರತೀಯರ ಆ ಜನ್ಮಸಿದ್ಧವಾದ ಹಕ್ಕು. ಈ ಹಕ್ಕು ಸಿದ್ಧಿಯಾಗದ ಹೊರತು ರಾಷ್ಟ್ರವು ತೃಪ್ತಿಪಡಲಾರದು. ಒಪ್ಪಂದದಲ್ಲಿ ಆಕರ್ಷಣೀಯವಾದ ಈ ಶಬ್ದವು ಇರುವುದಿಲ್ಲ. ಫೆಡರೇಷನ್ ಎಂಬ ಶಬ್ದವು ಉಪಯೋಗಿಸಲ್ಪಟ್ಟಿದೆ. ಇದಕ್ಕೆ ಎರಡರ್ಥಗಳಿವೆ. ಕೆಲವರಿಗೆ ಇದು ಮೃಗಜಲದಂತೆ ಭ್ರಾಂತಿಯಾಗಿರಬಹುದು. ಕೆಲವರಿಗೆ ಸಜೀವ ಪ್ರಾಣಿಯಂತೆ ಅತ್ಯವಶ್ಯಕವಾಗಿರಬಹುದು. ಕಾನ್ಫರೆನ್ಸಿನ ಕಾರ್ಯಕಲಾಪಗಳಲ್ಲಿ ಫೆಡರೇಷನ್ನನ್ನು ಉತ್ತರವಾದಿಯಾಗಿ ಮಾಡುವುದರ ಮೂಲಕ ಭಾರತೀಯರ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ಥಿತಿಯನ್ನು ವೃದ್ಧಿಗೊಳಿಸಬಹುದೆಂಬ ಆಶೆಯಿಂದ ಕಾಂಗ್ರೆಸ್ಸಿನವರು ಅದರಲ್ಲಿ ಭಾಗವಹಿಸಲು ಸಿದ್ಧರಾಗಿರುವರು. ಈ ಪರಿಸ್ಥಿತಿಯನ್ನು ಕಾನ್ಫರೆನ್ಸಿನವರು ಒಪ್ಪುವಹಾಗೆ ಮಾಡುವುದಾದರೆ, ಆ ಕಾನ್ಫರೆನ್ಸಿನ ಪರಿಣಾಮಫಲವು ಸಂಪೂರ್ಣಸ್ವಾತಂತ್ರ್ಯವಾಗುವುದು. ಈ ಉದ್ದೇಶವನ್ನು ಸಾಧಿಸಬೇಕಾದರೆ ಮಧ್ಯದಲ್ಲಿ ಅನಂತ ವಿಘ್ನಗಳಿವೆ. ಕಾಂಗ್ರೆಸ್ಸಿನವರು ತಮ್ಮ ಮುಂದಿನಕಾರ್ಯವನ್ನು ನಂಬಿಗೆಯಿಂದಲೂ ಧೈರ್ಯದಿಂದಲೂ ಮಾಡುವುದಾದರೆ ಪ್ರತಿಫಲವು ಶ್ರೇಯಸ್ಕರವಾಗುವುದೆನ್ನುವುದರಲ್ಲಿ ಸಂದೇಹವಿಲ್ಲ. ಕಾಂಗ್ರೆಸ್ಸಿನವರು ತಮ್ಮ ಉದ್ದೇಶವನ್ನು ಸಾಧಿಸಬೇಕಾದರೆ ಭಾರತೀಯಸಾಮಂತರಾಜರ ಮತ್ತು ಆಂಗ್ಲೇಯರ ಸಹಾಯವು ಅತ್ಯಾವಶ್ಯಕವಾಗಿದೆ.

ಸಾಮಂತರಾಜರಿಗಿಟ್ಟ ಮೊರೆ.

ಹಿಂದುಸ್ಥಾನದಲ್ಲಿರುವ ಇತರ ಪಂಗಡಗಳಿಗೆ ಈ ವಿಷಯದಲ್ಲಿ ಮೊರೆಯಿಡುವುದನಾವಶ್ಯಕವಾಗಿದೆ. ಏಕೆಂದರೆ—ಅವರೆಲ್ಲರೂ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದಾರೆ. ಆದರೆ ಸಾಮಂತರಾಜರ ಸ್ಥಿತಿಯು ಬೇರೆಯಾಗಿದೆ. ಅವರು ಫೆಡರೇಷನ್ನಿಗೆ ಸೇರುವರೆಂಬುದನ್ನು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಫೆಡರಲ್ ಹಿಂದೂಸ್ಥಾನದಲ್ಲಿ ಸಮಾನಭಾಗಿಗಳಾಗಬೇಕಾದರೆ ಅವರು ಅಪ್ರೇರಿತವಾಗಿ ರಾಜಕೀಯ ವಿಷಯದಲ್ಲಿ ಮುಂದುವರಿಯಬೇಕು. ಶುದ್ಧನಿರಂಕುಶಪ್ರಭುತ್ವ, ಶುದ್ಧಪ್ರಜಾಪ್ರಭುತ್ವವು ಒಂಕೊಂದು ಸೇರುವುದು ಸಾಧ್ಯವಿಲ್ಲ. ಸೇರಿದೊಡನೆಯೇ ಅದು ಒಡೆದು ಹಾರಿಹೋಗುವುದು ಶಕ್ಯವಿದೆ. ಆದ್ದರಿಂದ ಆ ಸಾಮಂತರಾಜರು ತಮ್ಮ ಸಮಾನಭಾಗಿಗಳ ಮೊರೆಯನ್ನು ಕೇಳಿ ಔದಾರ್ಯದಿಂದ ಮುಂದಿನಕಾರ್ಯವನ್ನು ನಡೆಯಿಸುವರೆಂದು ನಿರೀಕ್ಷಿಸುತ್ತೇನೆ. ಅವರು ಕಾಂಗ್ರೆಸ್ಸಿನವರ ಮೊರೆಯನ್ನು ಲಾಲಿಸದಿದ್ದರೆ ಕಾಂಗ್ರೆಸ್ಸಿನವರ ಸ್ಥಿತಿಯು ಅಸಹನೀಯವೂ ಅವಲಕ್ಷಣವೂ ಆಗುವುದು. ಕಾಂಗ್ರೆಸ್ಸಿನವರಿಗೆ ಬ್ರಿಟಿಷ್ ಇಂಡಿಯಾಕ್ಕೂ ಆಶ್ರಿತಸಂಸ್ಥಾನಗಳಿಗೂ ಯಾವ ವ್ಯತ್ಯಾಸವು ಕಂಡುಬರುವುದಿಲ್ಲ. ಕಾಂಗ್ರೆಸ್‌ಸಂಸ್ಥೆಯು ಇಡೀ ಭರತಖಂಡದ ಪ್ರತಿನಿಧಿಯೆಂದು ನಾನು ಭಾವಿಸುತ್ತೇನೆ.

ಸಾಮಂತರಾಜರ ಮನವನ್ನು ನೋಯಿಸಬಾರದೆಂಬ ಭಾವನೆಯಿಂದಲೂ ಸುಸಮಯ ಒದಗಿದಾಗ ಹೇಳಬಹುದೆಂಬ ಉದ್ದೇಶದಿಂದಲೂ ಕಾಂಗ್ರೆಸ್ಸಿನವರು ಇದುವರೆಗೂ ಆಶ್ರಿತ ಸಂಸ್ಥಾನಗಳ ಕಾರ್ಯಗಳಲ್ಲಿ ಕೈಹಾಕಿರುವುದಿಲ್ಲ. ಆಶ್ರಿತಸಂಸ್ಥಾನಗಳ ಪರವಾಗಿ ಕಾಂಗ್ರೆಸ್ಸಿನವರು ಸಾಮಂತರಾಜರಿಗೆ ಮೊರೆಯಿಡುವ ಕಾಲವು ಈಗ ಒದಗಿರುವುದು. ಸಾಮಂತರಾಜರು ಕಾಂಗ್ರೆಸ್ಸಿನ ಮೊರೆಯು ನಿರರ್ಥಕವಾಗುವಂತೆ ಮಾಡಲಾರರೆಂದು ಆಶಿಸುತ್ತೇನೆ.

ಭಾರತೀಯರು ತಮ್ಮ ಉದ್ದೇಶವನ್ನು ಸಾಧಿಸಬೇಕಾದರೆ ಆಂಗ್ಲೇಯರ ಸಹಾನುಭೂತಿಯು ಅತ್ಯಾವಶ್ಯಕವಾಗಿ ಬೇಕಾಗಿದೆ. ಲಂಡನ್ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ನಿರ್ಧರಿಸಲ್ಪಟ್ಟಿರುವ ಅಂಶಗಳು ಭಾರತೀಯರ ಉದ್ದೇಶಸಾಧನೆಗೆ ಅರ್ಧದಮಟ್ಟಿಗೂ ಸಹ ಸಹಕಾರಿಯಾಗುವುದಿಲ್ಲವೆಂದು ನಾನು ಧೃಢವಾಗಿ ಹೇಳುತ್ತೇನೆ. ಆಂಗ್ಲೇಯರು ಯಾವ ಸ್ವಾತಂತ್ರ್ಯಕ್ಕೋಸ್ಕರ ತಮ್ಮ ಪ್ರಾಣಗಳನ್ನು ಸಮರ್ಪಿಸಲು ಸಿದ್ಧರಾಗಿರುವರೋ ಅಂಥ ಸ್ವಾತಂತ್ರ್ಯವು ಭಾರತೀಯರಿಗೂ ಲಭಿಸುವಹಾಗೆ ಸಹಾಯಮಾಡಲು ಸಿದ್ಧರಾಗಬೇಕು.

ಅಮೇರಿಕಾಖಂಡದ ಜನರಿಗೆ ಮೊರೆ.

ಅಮೇರಿಕಾ ಮತ್ತು ಇತರ ಜನಾಂಗದವರೂ ಭಾರತೀಯರ ಸ್ವಾತಂತ್ರ್ಯಸಾಧನೆಗೆ ನೆರವಾಗಬೇಕೆಂದು ಆಶಿಸುತ್ತೇನೆ. ಈ ಸತ್ಯಾಗ್ರಹ ಸಮರವು ಸತ್ಯ ಮತ್ತು ಸೌಜನ್ಯವನ್ನವಲಂಬಿಸಿದೆ. ಈ ಮಾರ್ಗಾವಲಂಬಿಗಳಾದ ನಾವು ಕೆಲವು ಸಂದರ್ಭಗಳಲ್ಲಿ ದಾರಿತಪ್ಪಿ ಹೋಗಿರಬಹುದು. ನಮ್ಮ ಸಮರವನ್ನು ನೋಡಿ ಪರರಾಷ್ಟ್ರೀಯರು ಆಶ್ಚರ್ಯಯುತರಾಗಬಹುದು. ಅಮೇರಿಕಾ ಖಂಡದ ಜನರು ಸಹಾನುಭೂತಿಯನ್ನು ತೋರಿಸುವುದರ ಮೂಲಕ ನಮಗೆ ಸಹಾಯಮಾಡಿರುವರು. ಈ ಮಹಾಶಯರಿಗೆ ನನ್ನ ಪರವಾಗಿಯೂ, ಕಾಂಗ್ರೆಸ್ಸಿನ ಪರವಾಗಿಯೂ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಕಾಂಗ್ರೆಸ್ಸಿನವರು ಮಾಡತಕ್ಕ ಕಾರ್ಯದಲ್ಲಿ ಅವರ ಸಹಾನುಭೂತಿಯನ್ನು ಅಂಗೀಕರಿಸುವುದು ಮಾತ್ರವೇ ಅಲ್ಲ; ಅದು ದಿನೇ ದಿನೇ ವೃದ್ಧಿಯಾಗುತ್ತ ಹೋಗುವುದು. ಭರತಖಂಡವು ಸತ್ಯ ಮತ್ತು ಅಹಿಂಸಾಮಾರ್ಗದಿಂದ ತನ್ನ ಗುರಿಯನ್ನು ಸಾಧಿಸುವುದಾದರೆ ಶಾಂತಿತೃಷಾಪೀಡಿತವಾಗಿರುವ ಜಗತ್ತಿಗೆ ಹಿಂದೂಸ್ಥಾನವು ಸ್ವಲ್ಪಮಟ್ಟಿಗೆ ಸಹಾಯ ಮಾಡಿದಂತಾಗುವುದೆಂದು ಅತ್ಯಂತ ದೈನ್ಯದಿಂದ ಹೇಳುತ್ತೇನೆ. ಪರದೇಶೀಯರು ಮಾಡಿದ ಸಹಾಯಕ್ಕೆ ಭಾರತೀಯರು ಕೊಡುವ ಪ್ರತಿಫಲವೇ ಅದು.

ಸಿವಿಲ್ ಮತ್ತು ಪೋಲೀಸ್ ಅಧಿಕಾರಿಗಳಿಗೆ ಮೊರೆ.

ಕೊನೆಯಲ್ಲಿ ಪೋಲೀಸು ಮತ್ತು ಸಿವಿಲ್ ಅಧಿಕಾರಿಗಳಿಗೆ ಮೊರೆಯಿಡುವುದೇನೆಂದರೆ—ಪೋಲೀಸರು ಮಾಡಿದ ಅತ್ಯಾಚಾರಗಳನ್ನು ವಿಚಾರಿಸುವುದಕ್ಕೆ ಒಂದು ಸಮಿತಿಯು ಏರ್ಪಾಡಾಗಬೇಕೆಂದು ನಾನು ವೈಸರಾಯರಿಗೆ ತಿಳುಹಿಸಿರುವುದು ಒಪ್ಪಂದದಲ್ಲಿ ಬರೆಯಲ್ಪಟ್ಟಿದೆ. ಏತಕ್ಕೋಸ್ಕರ ವಿಚಾರಣಾ ಸಮಿತಿಯು ಏರ್ಪಾಡಾಗಲಿಲ್ಲವೆಂಬಂಶವೂ ಸಹ ಒಪ್ಪಂದದಲ್ಲಿ ವಿವರಿಸಲ್ಪಟ್ಟಿದೆ.

ಪೋಲೀಸ್ ಮತ್ತು ಸಿವಿಲ್ ಅಧಿಕಾರಿಗಳೂ ತಾವು ದೇಶದ ಸೇವಕರೆಂದು ಭಾವಿಸಿ ಕೆಲಸಮಾಡಬೇಕೇ ಹೊರತು ಯಜಮಾನರೆಂದು ಭಾವಿಸಿ ಕೆಲಸಮಾಡುವುದುಚಿತವಲ್ಲ.

ಹಿಂದುಸ್ಥಾನದಲ್ಲಿ ಹಿಂಸಾಮಾರ್ಗದಿಂದ ಸ್ವಾತಂತ್ರ್ಯವನ್ನು ಸಾಧಿಸಬೇಕೆಂಬ ಉದ್ದೇಶವುಳ್ಳ ಒಂದು ಚಿಕ್ಕ ಸಂಸ್ಥೆಯು ಇರುವುದೆಂದು ಕಂಡುಬರುತ್ತದೆ. ಆ ಮಾರ್ಗವನ್ನು ತ್ಯಾಜ್ಯಮಾಡಬೇಕೆಂದು ಅಂಥವರಿಗೂ ಸಹ ನಾನು ಮೊರೆಯಿಡುತ್ತೇನೆ. ಕಳೆದ ಒಂದು ವರ್ಷದಿಂದ ಅಹಿಂಸೆಯ ಅದ್ಭುತಶಕ್ತಿಯನ್ನು ಅವರು ತಿಳಿದುಕೊಂಡಿರಬಹುದು. ಸತ್ಯ ಮತ್ತು ಅಹಿಂಸಾಮಾರ್ಗದಲ್ಲಿ ಕಾಂಗ್ರೆಸ್ಸಿನವರು ಕಾರ್ಯಭಾಗ ನಡೆಯಿಸಲು ಅವಕಾಶಕೊಟ್ಟು ಶಾಂತರೀತಿಯಿಂದ ಸ್ವಲ್ಪ ತಾಳಬೇಕು. ದಂಡಿಗೆ ಉಪ್ಪಿನ ಸತ್ಯಾಗ್ರಹವನ್ನು ಕೈಕೊಂಡು ಹೊರಟು ಇನ್ನೂ ಒಂದು ವರ್ಷ ಸಂಪೂರ್ಣ ಮುಗಿದಿರುವುದಿಲ್ಲ. ಇಂಥ ಅಲ್ಪಕಾಲದಲ್ಲಿ 33 ಕೋಟಿ ಜನ ಭಾರತೀಯರಲ್ಲಿ ಅದ್ಭುತ ಜಾಗೃತಿಯುಂಟಾಗಿದೆ. ಕ್ರಾಂತಿಕಾರಕಪಕ್ಷದವರು ತಮ್ಮ ಹಿಂಸಾಯುತಕಾರ್ಯಗಳನ್ನು ನಿಲ್ಲಿಸಿ ಫಾಶಿ ಶಿಕ್ಷೆಗೊಳಗಾಗಿರುವವರ ಅಮೂಲ್ಯಪ್ರಾಣಗಳನ್ನುಳುಹಿಸುವುದಕ್ಕೂ ಸಹ ಕಾಂಗ್ರೆಸ್ಸಿನವರಿಗೆ ಅವಕಾಶವನ್ನೊದಗಿಸಿಕೊಡಿರಿ.

ಫಾಶಿ ಶಿಕ್ಷೆಗೆ ಗುರಿಯಾಗಿರುವವರ ಪ್ರಾಣಗಳನ್ನು ಕಾಪಾಡಬೇಕೆಂಬುದೇ ನನ್ನ ಮತ್ತು ಕಾಂಗ್ರೆಸ್ಸಿನ ಮಹತ್ವಾಕಾಂಕ್ಷೆ. ಆಬಗ್ಗೆ ನಾವು ಆತ್ಮಸಾಕ್ಷಿಯಾಗಿ ಪ್ರಯತ್ನಮಾಡೋಣ! ಅದರ ಫಲಿತಾಂಶವು ಭಗವಂತನ ಕೈಯ್ಯಲ್ಲಿದೆ.

ಸದ್ಯಃ ಹಂಗಾಮಿಯಾಗಿ ಮಾಡಲ್ಪಟ್ಟಿರುವ ಈ ಸಂಧಾನವು ಭಾರತೀಯರ ಗುರಿಯನ್ನು ಸಾಧಿಸುವುದಕ್ಕೆ ಪೂರ್ವಗಾಮಿಯಾಗಿ ಪರಿಣಮಿಸಲೆಂದು ಆಶಿಸುತ್ತೇನೆ. ನಾನು ಈಒಪ್ಪಂದದ ಷರತ್ತುಗಳನ್ನು ಹೃತ್ಪೂರ್ವಕ ಪಾಲಿಸುವೆನೆಂದು ವೈಸರಾಯರಿಗೆ ಭಾಷೆಕೊಟ್ಟಿರುವೆನು. ಈ ಒಪ್ಪಂದವು ಜಯಪ್ರದವಾಗುವಂತೆ ಸಹಾಯಮಾಡಿದವರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ವರ್ತಮಾನಸಂಗ್ರಹ.

ಮುಂದೆ ನಡೆಯಬೇಕಾದ ರೌಂಡುಟೇಬಲ್‌ಕಾನ್ಫರೆನ್ಸಿನಲ್ಲಿ ಸಲಹೆಗಳನ್ನು ವಿಮರ್ಶಿಸುವುದಕ್ಕಾಗಿ ಬೆಂಗಳೂರಲ್ಲಿ ಇದೇ ತಿಂಗಳು 23 ನೆಯ ತಾರೀಖಿನ ದಿವಸ ದಿವಾನ್‌ಸಾಹೇಬರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯುವುದೆಂದು ಕೇಳುತ್ತೇವೆ.

ಎರವಾಡಾ ಜೈಲಿನಿಂದ ಬಿಡುಗಡೆಹೊಂದಿದಮೇಲೆ ಮಹಾತ್ಮಾಗಾಂಧಿಯವರ ತೂಕವು ಒಂದು ಪೌಂಡ್ ಜಾಸ್ತಿಯಾಗಿದೆ. ಅವರು ಅವಿಶ್ರಾಂತಶ್ರಮವಹಿಸಿ ಕೆಲಸಮಾಡತಕ್ಕವರಾದುದರಿಂದ ತೂಕವು ಇನ್ನೂ ಜಾಸ್ತಿಯಾಗುವುದವಶ್ಯಕವೆಂದು ಡಾ|| ಅನ್ಸಾರಿಯವರು ಅಭಿಪ್ರಾಯಪಡುವರು. ಮತ್ತು ಬಿಡುಗಡೆಯಾದಮೇಲೆ ಆಡಿನಹಾಲನ್ನು ತೆಗೆದುಕೊಳ್ಳಲು ಪ್ರಾರಂಭಿಸಿರುವರು.

ಗುಂಟೂರಿಗೆ ಸಮೀಪದಲ್ಲಿರುವ ಮಂಗಲಗಿರಿ ಎಂಬ ಸ್ಥಳದಲ್ಲಿ ೪ ನೆಯ ತಾರೀಖಿನ ದಿವಸ ರಥೋತ್ಸವವು ನಡೆಯಬೇಕಾಗಿದ್ದಿತು. ಜನರು ಮಹಾತ್ಮ ಗಾಂಧಿಯವರ ಭಾವಚಿತ್ರಪಟವನ್ನು ರಥದಲ್ಲಿಡದಿದ್ದರೆ ತಾವು ರಥವನ್ನೆಳೆಯುವುದಿಲ್ಲವೆಂದು ಹಟಹಿಡಿದರು. ಮಹಾತ್ಮಾ ಗಾಂಧಿಯವರ ಚಿತ್ರಪಟವನ್ನಿಡುವುದಕ್ಕೆ ಪೋಲೀಸರು ಒಪ್ಪಲಿಲ್ಲ. ಒಬ್ಬ ಸ್ವಯಂಸೇವಕನು ರಥಕ್ಕೆ ಮಹಾತ್ಮರ ಫೋಟೋ ಕಟ್ಟಲು ಪ್ರಯತ್ನಿಸಲು ಪೋಲೀಸರು ಅದನ್ನು ಕಿತ್ತುಕೊಂಡು ಹೋದರು. ಕೂಡಲೆ "ಮಹಾತ್ಮ ಗಾಂಧಿಕಿ ಜೈ" ಎಂಬ ಜಯಧ್ವನಿಯು ನಭೋಮಂಡಲವನ್ನು ವ್ಯಾಪಿಸಿತು. ರಥದ ಹಗ್ಗಗಳನ್ನು ಹಿಡಿದಿದ್ದ ಜನರು ಬಿಟ್ಟು ಹೋದರು. ಅಧಿಕಾರಿಗಳು ಜನರನ್ನು ಎಷ್ಟು ಪ್ರೋತ್ಸಾಹಿಸಿದರೂ ಸಾಧ್ಯವಾಗಲಿಲ್ಲ. ಆಗ 200 ಜನರನ್ನು ಕೂಲಿ ತೆಗೆದುಕೊಂಡು ರಥವನ್ನೆಳೆಯಬೇಕೆಂದರೂ ಯಾರೂ ಬರಲಿಲ್ಲವಂತೆ!

ಶಾಂತಿಸಂಧಾನದ ವಿಜಯ.

ಮಹಾತ್ಮಗಾಂಧಿಯವರೂ ಮತ್ತು ವೈಸರಾಯರೂ ಕಳೆದ 15 ದಿವಸಗಳಿಂದಲೂ ಹೊಸದಿಲ್ಲಿಯಲ್ಲಿ ಮೈತ್ರಿಯಿಂದಲೂ, ಶಾಂತಮನಸ್ಸಿನಿಂದಲೂ, ನಿಷ್ಪಕ್ಷಪಾತದೃಷ್ಟಿಯಿಂದಲೂ ಚರ್ಚೆಗಳನ್ನು ನಡೆಯಿಸಿ ಶಾಂತಿ ಸಂಧಾನವನ್ನು ಜಯಪ್ರದವಾಗಿ ಮಾಡಿ ಈ ತಿಂಗಳು 3 ನೆಯ ತಾರೀಖಿನ ದಿವಸ ಒಪ್ಪಂದವನ್ನು ಮಾಡಿಕೊಂಡರು.

ಒಪ್ಪಂದದ ಷರತ್ತುಗಳು.

(1) ಗಾಂಧಿಯವರಿಗೂ ವೈಸರಾಯರಿಗೂ ಮಾತುಕಥೆಗಳು ಪರಿಣಾಮವಾಗಿ ಕಾನೂನು ಭಂಗಚಳವಳಿಯು ನಿಲ್ಲಿಸಲ್ಪಡಬೇಕೆಂದು ಇಂಡಿಯಾ ಸರ್ಕಾರದಿಂದಲೂ ಪ್ರಾಂತಿಕಸರ್ಕಾರದಿಂದಲೂ ಕೆಲವು ಕಾರ್ಯಭಾಗಗಳು ನಡೆಯಿಸಲ್ಪಡಬೇಕು.

(2) ರೌಂಡ್‌ಟೇಬಲ್ ಸಮ್ಮೇಳನದ ತೀರ್ಮಾನದ ಪ್ರಕಾರ ಫೆಡರೇಷನ್ ಅಂಶವು ಮುಖ್ಯವಾಗಿದೆ.

(3) ಕಳೆದ ಜನವರಿ 19 ನೆಯ ತಾರೀಖಿನ ದಿವಸ ಮುಖ್ಯಮಂತ್ರಿಗಳು ಹೇಳಿದಂತೆ, ಕಾಂಗ್ರೆಸ್ ಪ್ರತಿನಿಧಿಗಳು ಭಾವಿರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಸೇರಿ ಚರ್ಚೆಗಳನ್ನು ನಡೆಯಿಸಲು ಅನುಕೂಲವುಮಾಡಲ್ಪಡುವುದು. ಲಂಡನ್ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ನಡೆಯಿಸಿರುವ ಅಂಶಗಳಿಗಿಂತಲೂ ಹೆಚ್ಚು ವಿಷಯಗಳನ್ನು ಇಲ್ಲಿ ಚರ್ಚಿಸಬಹುದು.

(4) ಈ ಕರಾರು ಶಾಸನೋಲ್ಲಂಘನ ಚಳವಳಿಯ ಕಾರ್ಯಕಲಾಪಗಳಿಗೆ ಅನ್ವಯಿಸುತ್ತದೆ.

(5) ಕಾಂಗ್ರೆಸ್ಸಿನವರು ಶಾಸನೋಲ್ಲಂಘನದ ಚಳವಳಿಯನ್ನು ನಿಲ್ಲಿಸಬೇಕು.

(6) ಶಾಸನೋಲ್ಲಂಘನ ಚಳವಳಿಯಲ್ಲಿ ಪರದೇಶಿವಸ್ತುಬಹಿಷ್ಕಾರವು ಬ್ರಿಟಿಷ್ ವಸ್ತುಬಹಿಷ್ಕಾರವಾಗಿ ಪರಿಣಮಿಸಿತ್ತು. ಆದರೆ ಇದರಿಂದ ಮುಂದೆ ನಡೆಯುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಬ್ರಿಟಿಷ್ ಪ್ರತಿನಿಧಿಗಳೂ, ಸಾಮಂತರಾಜರೂ, ಹಿಂದುಸ್ಥಾನದ ಪ್ರತಿನಿಧಿಗಳೂ ಏಕೀಭವಿಸಿ ಕೆಲಸಮಾಡಬೇಕಾಗಿರುವುದರಿಂದ ಪರಸ್ಪರ ಸೌಹಾರ್ದಕ್ಕೆ ಕುಂದಕ ಬರುವುದರಿಂದ ಅದನ್ನು ನಿಲ್ಲಿಸಬೇಕು.

(7) ವಿದೇಶಿಬಟ್ಟೆಯ ಅಂಗಡಿಗಳ ಮತ್ತು ಸೇಂದಿಸಾರಾಯಿ ಅಂಗಡಿಗಳ ಮುಂದೆ ಶಾಂತರೀತಿಯಿಂದ ಪಿಕೆಟಿಂಗ್ ಮಾಡಬಹುದು.

(8) ಪೋಲೀಸರ ವರ್ತನದ ಬಗ್ಗೆ ಮಿ|| ಗಾಂಧಿಯವರು ಮಾಡಿರುವ ಕೆಲವು ಆಕ್ಷೇಪಗಳನ್ನು ಕುರಿತು ಸರ್ಕಾರದವರು ಲಕ್ಷ್ಯಕ್ಕೆ ತಂದಿರುವರಲ್ಲದೆ ಈ ಬಗ್ಗೆ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಅಭಿಪ್ರಾಯಪಟ್ಟರು. ಈಗಿನ ಸ್ಥಿತಿಯಲ್ಲಿ ವಿಚಾರಣೆ ನಡೆಯಿಸುವುದು ಬಹುಕಷ್ಟದಾಯಕವಾಗಿರುವುದರಿಂದಲೂ, ಇದು ಶಾಂತಿಸ್ಥಾಪನೆಗೆ ಸಹಕಾರಿಯಾಗುವುದಿಲ್ಲವಾದುದರಿಂದಲೂ ಮಿ|| ಗಾಂಧಿಯವರು ಅದನ್ನು ಒತ್ತಾಯಮಾಡಲಿಲ್ಲ.

(9) ಶಾಸನೋಲ್ಲಂಘನ ಚಳವಳಿಯು ನಿಲ್ಲಿಸಲ್ಪಟ್ಟ ತರುವಾಯ ಸರ್ಕಾರದವರು ಈ ಕೆಳಗೆ ಕಂಡುಬರುವ ಕಾರ್ಯಗಳನ್ನು ಮಾಡುವರು.

(10) ಸರ್ಕಾರದವರು ಹೊರಡಿಸಿದ್ದ ಆರ್ಡಿನೆನ್ಸ್ (ಕಠಿಣಶಾಸನ) ಗಳನ್ನು ತೆಗೆದುಹಾಕಬೇಕು. ಆದರೆ ಒಂದನೆಯ ಆರ್ಡಿನೆನ್ಸ್ ಮಾತ್ರ ಕ್ರಾಂತಿಕಾರಕರ ಮತ್ತು ಭಯಪ್ರವರ್ತಕರ ಚಳವಳಿಯ ನಿಮಿತ್ತವಾಗಿ ಹೊರಡಿಸಲ್ಪಟ್ಟಿರುವದರಿಂದ ಅದನ್ನು ತೆಗೆದುಹಾಕುವುದಿಲ್ಲ.

(11) ಕೆಲವು ಸಂಸ್ಥೆಗಳು ಅಕ್ರಮಕೂಟಗಳೆಂದು ಸಾರಲ್ಪಟ್ಟಿರುವ ಅಪ್ಪಣೆಯನ್ನು ವಾಪಸು ತೆಗೆದುಕೊಳ್ಳಲಾಗುವುದು.

(12) ಶಾಸನೋಲ್ಲಂಘನ ಚಳವಳಿಯ ನಿಮಿತ್ತವಾಗಿ ಸದ್ಯಃ ನಡೆಯುತ್ತಿರುವ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳತಕ್ಕದ್ದು. ಈ ಚಳವಳಿಯಲ್ಲಿ ಭಾಗಿಗಳಾಗಿದ್ದರೆಂದು ವಕೀಲರ ಮೇಲೆ ಕಾರ್ಯಭಾಗವನ್ನು ಯಾವ ಕೋರ್ಟಿನವರಾಗಲೀ ಸರ್ಕಾರದವರಾಗಲೀ ನಡೆಯಿಸಿದ್ದರೆ ಅದನ್ನೂ ಸಹ ಹಿಂದಕ್ಕೆ ತೆಗೆದುಕೊಳ್ಳಲಾಗುವುದು.

(13) ಹಿಂಸಾಕಾರ್ಯದಲ್ಲಿ ಪ್ರಸಕ್ತರಾಗದೆ ಇರುವ ಎಲ್ಲ ರಾಜಕೀಯಖೈದಿಗಳನ್ನೂ ಬಿಡುಗಡೆ ಮಾಡತಕ್ಕದ್ದು.

(14) ವಸೂಲ್ಮಾಡದಿರುವ ಜುಲ್ಮಾನೆಗಳು ಮನ್ನಾ ಮಾಡಲ್ಪಡುವುವು.

(15) ಬಿಹಾರ್ ಮೊದಲಾದ ಸ್ಥಳಗಳಲ್ಲಿ ಸರಕಾರದವರು ಹೆಚ್ಚಾಗಿ ಇಟ್ಟಿದ್ದ ಪೋಲೀಸರನ್ನು ತೆಗೆಯಬೇಕು. ಇದುವರೆಗೂ ಕೊಡದಿರುವ ಪುಂಡುಗಂದಾಯವನ್ನು ವಜಾಮಾಡಬೇಕು.

(16) ಆರ್ಡಿನೆನ್ಸ್ ಪ್ರಕಾರ ಜಪ್ತಿಮಾಡಲ್ಪಟ್ಟಿದ್ದ ಚರಾಸ್ತಿಗಳು ಸರ್ಕಾರದವರ ಸ್ವಾಧೀನದಲ್ಲಿದ್ದರೆ ತಿರುಗಿ ಕೊಡಲ್ಪಡುವುವು. ಅನ್ಯರ ಕೈಸೇರಿದ್ದರೆ ಸರ್ಕಾರದವರು ಜವಾಬ್ದಾರರಲ್ಲ. ಕಾಯಿದೆ ವಿರೋಧವಾಗಿ ರೆವಿನ್ಯೂ ಅಧಿಕಾರಿಗಳು ಚರಾಸ್ತಿಗಳನ್ನು ಕಿತ್ತುಕೊಂಡಿದ್ದರೆ ಕೋರ್ಟು ಮೂಲಕ ಆ ಅನ್ಯಾಯವನ್ನು ಸರಿಪಡಿಸಿಕೊಳ್ಳಬಹುದು.

(17) ಆರ್ಡಿನೆನ್ಸ್ ಪ್ರಕಾರ ಕಿತ್ತುಕೊಂಡಿದ ಸ್ಥಿರಾಸ್ತಿಗಳನ್ನು ಸರ್ಕಾರದವರು ತಮ್ಮ ಸ್ವಾಧೀನದಲ್ಲಿದ್ದರೆ ವಾಪಸು ಕೊಡುವರು. ಕಂದಾಯದ ಬಾಕಿಯನ್ನು ಸಲ್ಲಿಸಬೇಕು. ಕಂದಾಯಕೊಡುವುದಕ್ಕೆ ವಾಯಿದೆಬೇಕಾದರೆ ತೆಗೆದುಕೊಳ್ಳಬಹುದು. ಜಫ್ತಿಮಾಡಿದ ಸ್ಥಿರಾಸ್ತಿಗಳು ಬೇರೆಯವರ ಕೈಸೇರಿದ್ದರೆ ಸರ್ಕಾರದವರು ಜವಾಬ್ದಾರರಾಗಲಾರರು. ಕಾಯಿದೆ ವಿರೋಧವಾಗಿ ಎಲ್ಲಿಯಾದರೂ ಜಫ್ತಿಮಾಡಿರುವುದಾದರೆ ಅವರು ಕೋರ್ಟಿಗೆ ಹೋಗಿ ಸರಿಪಡಿಸಿಕೊಳ್ಳಬಹುದು.

(18) ಕೆಲವೆಡೆಗಳಲ್ಲಿ ಕಾಯಿದೆಯನ್ನತಿಕ್ರಮಿಸಿ ಕಂದಾಯ ವಸೂಲ್ಮಾಡಿರುವರೆಂದು ಸರ್ಕಾರದವರ ದೃಷ್ಟಿಗೆ ಬಂದಿದೆ. ಅಂಥ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಹೋಗಿ ಅನ್ಯಾಯವನ್ನು ಸರಿಪಡಿಸುವಂತೆ ಪ್ರಾಂತೀಯ ಸರ್ಕಾರದವರಿಗೆ ತಿಳುಹಿಸಲಾಗುವುದು.

(19) ರಾಜೀನಾಮೆ ಕೊಟ್ಟಿದ್ದ ಹಳ್ಳಿಯ ಅಧಿಕಾರಿಗಳು ಅರ್ಜಿಯನ್ನು ಹಾಜರ್ಮಾಡಿದರೆ ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕು.

(20) ಸಮುದ್ರತೀರದಲ್ಲಿರುವ ಬಡಜನರು ಉಪ್ಪನ್ನು ತಯಾರಿಸಿ ಸಮೀಪಗ್ರಾಮಗಳಲ್ಲಿ ಮಾತ್ರ ಮಾರಬಹುದು. ಈ ಸ್ವಾತಂತ್ರ್ಯವು ಸರ್ಕಾರದವರ ಉಪ್ಪನ್ನು ತಯಾರಿಸಿ ಮಾರುವ ಹಕ್ಕಿಗೆ ಅಡ್ಡಿಬರುವುದಿಲ್ಲ.

(21) ಕಾಂಗ್ರೆಸ್ಸಿನವರು ಈ ಒಪ್ಪಂದದಂತೆ ನಡೆಯದೆ ಹೋಗುವುದಾದರೆ ಜನರ ಸಂರಕ್ಷಣಾರ್ಥವಾಗಿಯೂ ಶಾಸನ ಪಾಲನಾರ್ಥವಾಗಿಯೂ ಸರ್ಕಾರದವರು ತಕ್ಕ ಕೆಲಸಗಳನ್ನು ಮಾಡುವರು.

ಮಹಾತ್ಮ ಗಾಂಧಿಯವರು ವೈಸರಾಯರವರೊಡನೆ ಸಂಭಾಷಣೆ ಮಾಡುತ್ತಿರುವಾಗ ಅಲ್ಲಿಗೆ ಮೀರಾಬಾಯಿ ಎಂದು ಕರೆಯಲ್ಪಡುತ್ತಿರುವ ಆಂಗ್ಲೇಯ ಸ್ತ್ರೀಯಳು ಹಿಂದುಸ್ಥಾನದ ಹಳ್ಳಿಯ ಹುಡುಗಿಯಂತೆ ಖಾದಿಯಬಟ್ಟೆಯನ್ನು ಧರಿಸಿಕೊಂಡು ಒಂದು ಪುಟ್ಟಿಯಲ್ಲಿ ಮಹಾತ್ಮರಿಗೆ ಆಹಾರವನ್ನು ತೆಗೆದುಕೊಂಡು ಹೋದಳು. ವೈಸರಾಯರವರು ಮಹಾತ್ಮ ಗಾಂಧಿಯವರಿಗೆ ಪರಮ ಶಿಷ್ಯಳಾದ ಈಕೆಯನ್ನು ನೋಡಿ ಆಶ್ಚರ್ಯಪಟ್ಟರು.

ಮಹಾತ್ಮ ಗಾಂಧಿಯವರು ಅಹಮ್ಮದಾಬಾದದ ಕೆಲವು ಮಿಲ್ಲುಗಳ ಮಾಲೀಕರಾದ ಶ್ರೀಯುತ ಅಂಬಾಲಾಲ್ ಸರಭಾಯಿ ಮತ್ತು ಕಸ್ತೂರಭಾಯಿರವರನ್ನು ಹೊಸದಿಲ್ಲಿಗೆ ಬರಮಾಡಿಕೊಂಡಿದ್ದರು. ಶ್ರೀಯುತ ಜಿ. ಡಿ. ಬಿರ್ಲಾ, ಭಾರತವಾಣಿಜ್ಯಸಂಘದ ಪ್ರೆಸಿಡೆಂಟ ಲಾಲ ಶ್ರೀರಾಮ, ಶಂಕರಲಾಲ್ ಬ್ಯಾಂಕರ್ ಮೊದಲಾದವರು ಅಲ್ಲಿಗೆ ಸೇರಿದರು. ಇವರು ಒಂದು ಸಂಘವನ್ನೇರ್ಪಡಿಸಬೇಕೆಂದೂ ಅದಕ್ಕೆ ಸಮಸ್ತಬಟ್ಟೆಯ ಮಿಲ್ಲುಗಳ ಮಾಲೀಕರೂ ಮತ್ತು ಜವಳಿಯವರ್ತಕರೂ ಮೆಂಬರರಾಗಬೇಕೆಂದೂ. ವರ್ತಕರಲ್ಲಿರುವ ವಿದೇಶಿಬಟ್ಟೆಗಳನ್ನು ಮಿಲ್ಲುಗಳ ಮಾಲೀಕರು ಕೊಂಡುಕೊಂಡು ಅವಕ್ಕೆ ಬದಲಾಗಿ ತಮ್ಮ ಮಿಲ್ಲುಗಳಲ್ಲಿ ತಯಾರಾದ ಬಟ್ಟೆಗಳನ್ನು ಕೊಡಬೇಕೆಂದೂ, ವಿದೇಶಿಬಟ್ಟೆಗಳನ್ನು ದಕ್ಷಿಣಆಫ್ರಿಕ, ಇರಾಕ್ ಮೊದಲಾದ ಪರದೇಶಗಳಿಗೆ ಮಾರಬೇಕೆಂದೂ, ಲುಕ್ಸಾನು ಆದರೆ ಎಲ್ಲರೂ ಅದಕ್ಕೆ ಭಾಗಿಗಳಾಗಬೇಕೆಂದೂ ನಿರ್ಣಯಿಸಲ್ಪಟ್ಟಿರುವಂತೆ ತಿಳಿದುಬರುತ್ತದೆ.

ಒಪ್ಪಂದದ ಬಗ್ಗೆ ಸ್ಟೇಟ್ಸ್‌ಮನ್ ಪತ್ರಿಕೆಯ ಅಭಿಪ್ರಾಯವೇನೆಂದರೆ.—

"ಯೂರೋಪಿನ ಮಹಾಯುದ್ಧವು ನಿಲ್ಲುವದಕ್ಕಾಗಿ 1918 ನೆಯ ಇಸವಿ ನವಂಬರ್ 11 ನೆಯ ತಾರೀಖಿನ ದಿವಸ ಯೂರೋಪಿನ ರಾಜನೀತಿಜ್ಞರು ಮಾಡಿಕೊಂಡ ಒಪ್ಪಂದವು ಎಷ್ಟು ಮಹತ್ವವುಳ್ಳದ್ದೋ ಗಾಂಧಿ ಇರ್ವಿನ್‌ರವರ ಒಪ್ಪಂದವೂ ಅಷ್ಟೇ ಮಹತ್ವವುಳ್ಳುದು. ಈ ಸಂಧಾನವು ಜಯಪ್ರದವಾದುದಕ್ಕೆ ಈರ್ವರ ಪ್ರಯತ್ನವಿಶೇಷವೇ ಕಾರಣವಾದುದರಿಂದ ಈರ್ವರೂ ನಮ್ಮೆಲ್ಲರ ಕೃತಜ್ಞತೆಗೆ ಅರ್ಹರಾಗಿದ್ದಾರೆ. ವೈಸರಾಯರವರು ಒಂದು ಪವಾಡವನ್ನು ಗೆದ್ದಹಾಗಾಯಿತು. ಯೂರೋಪ್ ಮತ್ತು ಏಷಿಯಾ ಖಂಡಗಳಿಗೆ ಮಾರ್ಗದರ್ಶಕರಾದರು. ಮಹಾತ್ಮ ಗಾಂಧಿಯವರು ಕೇವಲ ಸರಳಸ್ವಭಾವಿಗಳು. ಎರಡನೆಯ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿಯೂ ಇವರು ತಮ್ಮ ಶಕ್ತಿಸಾಹಸಗಳನ್ನು ವಿನಿಯೋಗಿಸುವರೆಂದು ನಿರೀಕ್ಷಿಸಲಾಗಿದೆ."

ಒಪ್ಪಂದದ ಷರತ್ತುಗಳ ವಿಷಯದಲ್ಲಿ ಮಹಾತ್ಮ ಗಾಂಧಿಯವರು ಬಹಳಮಟ್ಟಿಗೆ ಬಿಟ್ಟುಕೊಟ್ಟಿರುವರೆಂದು ಕೆಲವರು ಹೇಳುವರು. ಇನ್ನು ಕೆಲವರು ವೈಸರಾಯರವರು ಬಿಟ್ಟುಕೊಟ್ಟಿರುವರೆಂದು ಹೇಳುವರು. ಮುಖ್ಯವಾಗಿ ಉಭಯರೂ ಶಾಂತಿಸಂಧಾನವು ಜಯಪ್ರದವಾಗುವುದಕ್ಕೆ ಹೃತ್ಪೂರ್ವಕವಾಗಿ ನಿಷ್ಕಾಪಟ್ಯದಿಂದ ಪ್ರಯತ್ನಿಸಿರುವರೆಂದು ಹೇಳಬಹುದು. ಮಹಾತ್ಮ ಗಾಂಧಿ ಮತ್ತು ವೈಸರಾಯರವರ ಶಾಂತಿಸಂಧಾನದ ವಿಜಯವು ರಾಜನೀತಿಯವಿಜಯ. 45 ವರ್ಷಗಳ ಕಾಂಗ್ರೆಸ್ಸಿನ ಇತಿಹಾಸದಲ್ಲಿ ಗೌರ್ನಮೆಂಟಿನವರೂ ಕಾಂಗ್ರೆಸ್ಸಿನವರೂ ಹೀಗೆ ಏಕಾಭಿಪ್ರಾಯಕ್ಕೆ ಬಂದಹಾಗೆ ಹಿಂದೆ ಎಂದೂ ಬಂದಿರಲಿಲ್ಲ. ಗಾಂಧಿಯವರು ಪೋಲೀಸರ ವರ್ತನ ವಿಚಾರಣೆಯನ್ನು ನಡೆಯಿಸಲೇಬೇಕೆಂದು ಹಟಹಿಡಿಯದೆ ಹೋದರೂ, ಸರ್ಕಾರದವರು ಜನರಿಗೆ ಉಪ್ಪು ತಯಾರುಮಾಡಲು ಅನುಮತಿಯನ್ನಿತ್ತುದೂ ಜಫ್ತಿಮಾಡಿದ ಭೂಮಿಮೊದಲಾದವುಗಳನ್ನು ವಾಪಸು ಕೊಡಿಸಲೊಪ್ಪಿದುದೂ ಈ ಸಂಧಿಯ ಜಯಪ್ರದಕ್ಕೆ ಕಾರಣವಾದುವು. ಹಿಂದುಸ್ಥಾನದ ಸರ್ವಪಕ್ಷಗಳ ಜನರೆಲ್ಲರೂ ಏಕೀಭವಿಸಿ ಒಂದು ಮೇಜಿನ ಹತ್ತಿರ ಕುಳಿತು ಭವಿಷ್ಯರಾಜ್ಯಾಂಗ ರಚನೆಯನ್ನು ಮಾಡುವ ಸುಯೋಗವು ಒದಗಿದ್ದಕ್ಕಾಗಿ ಭಾರತೀಯರು ಆನಂದಿಸುತ್ತಿರುವರು.

ಗಾಂಧಿಯವರು 4 ನೆಯ ತಾರೀಖಿನ ದಿವಸ ಶಾಂತಿಸಂಧಾನದ ಕಾರ್ಯವನ್ನು ಪರಿಸಮಾಪ್ತಿಗೊಳಿಸಬೇಕೆಂಬ ಉದ್ದೇಶದಿಂದ 12 ಘಂಟೆಗೆ ವೈಸರಾಯರ ಮನೆಗೆ ಹೋದರು. ಒಂದು ಘಂಟೆಯೊಳಗೆ ಹಿಂತಿರುಗಿ ಬರಬಹುದೆಂದು ಜನರಿಂದ ನಿರೀಕ್ಷಿಸಲ್ಪಟ್ಟಿದ್ದರೂ ಆರು ಘಂಟೆಗಳಾದರೂ ಹಿಂದಿರುಗಲಿಲ್ಲ. ಅಷ್ಟರಲ್ಲಿ ಮಹಾತ್ಮ ಗಾಂಧಿಯವರು ವೈಸರಾಯರ ಮನೆಗೆ ಆಹಾರವನ್ನು ತೆಗೆದುಕೊಂಡು ಬರುವಂತೆ ಮೀರಾಬೆಳಿಗೆ ಟೆಲಿಫೋನ್ ಮಾಡಿದರು. ಅದರಂತೆ ಮೀರಾಬೆನ್‌ಳು ಆಹಾರವನ್ನು ತೆಗೆದುಕೊಂಡು ಹೋದಳು. ಅನಂತರ ಮಹಾತ್ಮಗಾಂಧಿಯವರು 6½ ಘಂಟೆಗೆ ಡಾ|| ಅನ್ಸಾರಿಯವರ ಮನೆಗೆ ಬಂದರು. ಅಲ್ಲಿ ಅವರನ್ನೇ ನಿರೀಕ್ಷಣೆಮಾಡುತ್ತಲಿದ್ದ ಮಿ|| ವಿ. ಎಸ್. ಶಾಸ್ತ್ರಿ ಮಿ|| ಟಿ. ಬಿ. ಸಪ್ರು ಮತ್ತು ಜಯಕರ್‌ರವರ ಸಂಗಡ ಮಾತನಾಡಿದರು.

ಶಾಂತಿಸಂಧಾನದ ಷರತ್ತುಗಳು ಇಂಗ್ಲೆಂಡಿನ ಸಾರ್ವಭೌಮಸರ್ಕಾರದವರ ಅವಗಾಹನೆಗೆ ಕಳುಹಿಸಲ್ಪಟ್ಟಿದ್ದವು. ಜವಾಬು ಬಂದೊಡನೆಯೇ ಸರ್ಕಾರದವರು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದರು.

ಕಾಂಗ್ರೆಸ್ ಕಾರ್ಯಕಾರಿಮಂಡಲದವರು ಗಾಂಧಿ ಇರ್ವಿನ್ನರವರ ಒಪ್ಪಂದದ ಷರತ್ತುಗಳ ವಿಷಯದಲ್ಲಿ ಎರಡು ತಾಸುಗಳ ವರೆಗೂ ಚರ್ಚೆ ನಡೆಯಿಸಿದರು. ಎಲ್ಲ ಮೆಂಬರರೂ ಏಕಾಭಿಪ್ರಾಯದಿಂದ ಅನುಮತಿಯನ್ನಿತ್ತರು. ಕಾಂಗ್ರೆಸ್ ಕಮಿಟಿಯವರು ಮುಂದೆ ಮಾಡಬೇಕಾದ ಅಂಶಗಳನ್ನು ಚರ್ಚೆಮಾಡಿ 5 ನೆಯ ತಾರೀಖಿನ ದಿವಸ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಶ್ರೀಯುತ ಸೇನಗುಪ್ತ ಮತ್ತು ಶ್ರೀಮತಿ ಸರೋಜಿನಿದೇವಿಯವರು ಇನ್ನೂ ಕೆಲವು ದಿವಸಗಳು ದಿಲ್ಲಿಯಲ್ಲಿರುವರು. ಕಳೆದ ವರ್ಷ ಮಾರ್ಚಿ 2 ನೆಯ ತಾರೀಖಿನ ದಿವಸ ಮಹಾತ್ಮಗಾಂಧಿಯವರು ರೆಜಿನಾಲ್ಡ್ ರವರ ಸಂಗಡ ವೈಸರಾಯರಿಗೆ ಪತ್ರವನ್ನು ಬರೆದು ಕಳುಹಿಸಿದ್ದರು. ಶಾಂತಿಸಂಧಾನವಾದುದು ಸಹ ಈ ವರ್ಷ ಮಾರ್ಚಿ 3 ನೆಯ ತಾರೀಖಿನ ದಿವಸವೇ ಆಗಿದೆ. ಆದಕಾರಣ ಈ ಸಂಧಾನವಲ್ಲಿ ಒಂದು ಮಹತ್ವವಿದೆ ಎಂದು ದಿಲ್ಲಿಯ ಜನರು ಅಭಿಪ್ರಾಯಪಡುತ್ತಿರುವರು.

ಆಶ್ರಿತಸಂಸ್ಥಾನಗಳ ಪ್ರಜೆಗಳೂ ಮಹಾತ್ಮ ಗಾಂಧಿಯವರ ಸಹಾನುಭೂತಿಯೂ.

ಶ್ರೀಯುತ ಪಿ. ಜಿ. ಆಚಾರ್ಯ.

ಬ್ರಿಟಿಷ್‌ಹಿಂದುಸ್ಥಾನದ ಪ್ರಜೆಗಳಿಗುಂಟಾಗುವಂತೆಯೇ ವಾಕ್ಸ್ವಾತಂತ್ರ್ಯ, ವರ್ತಮಾನಪತ್ರಿಕೆಗಳ ಸ್ವಾತಂತ್ರ್ಯ, ನಿರುಪಾಧಿಕ ಸಂಘಸ್ವಾತಂತ್ರ್ಯ, ನಿರಾತಂಕವಾದ ನ್ಯಾಯವಿಚಾರಣೆ, ಜನರ ಪ್ರಾಣ ಮತ್ತು ಸ್ವಾತಂತ್ರ್ಯಸಂರಕ್ಷಣೆ, ಇವುಗಳು ಆಶ್ರಿತಸಂಸ್ಥಾನಗಳ ಪ್ರಜೆಗಳಿಗೂ ದೊರೆಯುವುವೆಂಬ ಭರವಸೆಯನ್ನು ಕೊಡುವುದಾದರೆ ಫೆಡರೇಷನ್ನಿಗೆ ಆಶ್ರಿತಸಂಸ್ಥಾನದಪ್ರಜೆಗಳು ಸೇಲುವುದಕ್ಕೆ ಸಿದ್ಧರಿರುವರು.

ಸಾಮಂತರಾಜರು ಕೇಂದ್ರ ಫೆಡರಲ್ ನ್ಯಾಯವಿಧಾಯಕ ಸಭೆಗೆ ನಾಮಕರಣಮಾಡುವ ಸದಸ್ಯರಲ್ಲದೆ ಪ್ರಜೆಗಳೂ ಸಹ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಹಕ್ಕುಳ್ಳವರಾಗಿರಬೇಕು.

ಭೋಪಾಲ, ಬಿಕನೇರ್, ಜಮ್ನಾಗರ ಮೊದಲಾದ ಸ್ಥಳಗಳಿಂದ ನರೇಂದ್ರಮಂಡಲದ ಪ್ರತಿನಿಧಿಗಳನ್ನು ಆಹ್ವಾನಿಸಿರುವಂತೆ ಅಖಿಲಹಿಂದುರಾಜಸ್ಥಾನ ಪರಿಷತ್ತಿನ ಪ್ರತಿನಿಧಿಗಳೂ ಸಹ ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳುಹಿಸಲು ಆಹ್ವಾನಿಸಲ್ಪಡಬೇಕು.

ಸಂಸ್ಥಾನಪ್ರಜೆಗಳ ಪ್ರತಿನಿಧಿಗಳು ಕಾನೂನುಭಂಗನಿಮಿತ್ತವಾಗಿ ಈಗ ಬ್ರಿಟಿಷ್ ಹಿಂದುಸ್ಥಾನಗಳ ಜೈಲುಗಳಲ್ಲಿರುವರು. ಆದಕಾರಣ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಬಿಟ್ಟುಬಿಡಬಾರದು.

ರೌಂಡ್ ಟೇಬಲ್ ಕಾನ್ಫರೆನ್ಸಿನ ಮೆಂಬರಾಗಿದ್ದ ಒಬ್ಬ ಸಾಮಂತರಾಜರು ಕಳೆದ ವರ್ಷ ನಿಷೇಧಿಸಲ್ಪಟ್ಟಿದ್ದ ವರ್ತಮಾನಪತ್ರಿಕೆಯನ್ನು ಓದಿದುದಕ್ಕಾಗಿಯೇ ಒಬ್ಬ ಪ್ರಜೆಯನ್ನು ಏಳು ವರ್ಷ ಕಠಿಣಶಿಕ್ಷೆಗೆ ಗುರಿಪಡಿಸಿದರು. ಇನ್ನೊಬ್ಬ ರಾಜರು ಪ್ರಜಾಪರಿಷತ್ತನ್ನು ಸೇರಿಸಬೇಕೆಂದು ಪ್ರಯತ್ನಿಸಿದುದಕ್ಕಾಗಿಯೇ ಮೂವರು ಪ್ರಜೆಗಳನ್ನು ಶಿಕ್ಷೆಗೆ ಗುರಿಪಡಿಸಿದರು.

ಕಾಥಿಯವಾಡದ ಒಂದು ಆಶ್ರಿತಸಂಸ್ಥಾನದಲ್ಲಿ ಮೂವರು ಪ್ರಜೆಗಳು ಯಾವ ತಪ್ಪಿತವೂ ನಿರ್ಣಯಿಸಲ್ಪಡದೆ ವಿಚಾರಣೆಯಿಲ್ಲದೆ ಐದು ವರ್ಷಗಳಿಗಿಂತಲೂ ಹೆಚ್ಚಾಗಿ ಬಂಧನದಲ್ಲಿಡಲ್ಪಟ್ಟಿರುವರು.

ಇನ್ನೊಬ್ಬ ರಾಜರು ಶ್ರೀಮಂತನೆಂದು ಭಾವಿಸಲ್ಪಟ್ಟ ಒಬ್ಬ ಅಧಿಕಾರಿಯನ್ನು ದಸ್ತಗಿರಿಮಾಡಿ ಯಾವ ಕೋರ್ಟಿನ ಮುಂದೆಯೂ ಹಾಜರ್ಮಾಡದೆ ಅವನ ಬಂಧುಗಳೊಡನೆ ಬಂಧವಿಮೋಚನೆಗೆ ತಕ್ಕಷ್ಟುಗಡೆ ಹಣವನ್ನು ಕೊಡಬೇಕೆಂದು ಸಂಧಾನನಡೆಯಿಸುತ್ತಿರುವರಂತೆ!

ಇಂಥ ಅಸಹ್ಯಕೃತಿಗಳು ಕಾಯಿದೆಯಿಂದ ಬಂದಾಗಬೇಕು.

ಬ್ರಿಟಿಷ್‌ಹಿಂದೂಸ್ಥಾನದ ರಾಜಕೀಯಖೈದಿಗಳನ್ನು ಬಿಡುಗಡೆಮಾಡುವ ಸಂದರ್ಭದಲ್ಲಿ ಆಶ್ರಿತಸಂಸ್ಥಾನಗಳ ರಾಜಕೀಯ ಖೈದಿಗಳನ್ನು ಬಿಟ್ಟುಬಿಡಬೇಕು.

ಕೆಲವು ಪ್ರಾಂತಗಳು ಪೊಲಿಟಿಕಲ್ ಏಜೆಂಟರ ಸ್ವಾಧೀನದಲ್ಲಿವೆ. ಬ್ರಿಟಿಷ್‌ಹಿಂದೂಸ್ಥಾನಕ್ಕೆ ಸೇರಿದವುಗಳೆಂದಾಗಲಿ ಆಶ್ರಿತಸಂಸ್ಥಾನಗಳಿಗೆ ಸೇರಿದವುಗಳೆಂದಾಗಲೀ ಹೇಳಲಾಗುವುದಿಲ್ಲ.

ನಮ್ಮ ಪ್ರಾಂತದಲ್ಲಿರುವ ವರ್ತಕರು ರಾಜಕೀಯ ಚಳವಳಿಗೆ ಸಹಾನುಭೂತಿಯನ್ನು ತೋರಿಸಿದ್ದಾದರೆ, ಅವರ ದಾವೆಗಳನ್ನು ನಡಿಯುವುದಿಲ್ಲವೆಂದು ಒಬ್ಬ ಪೊಲಿಟಿಕಲ್ ಏಜೆಂಟರು ವರ್ತಕರಿಗೆ ಕಳೆದ ವರ್ಷ ಎಚ್ಚರಿಕೆಕೊಟ್ಟರು. ಇಂಥ ವಿಚಿತ್ರಪ್ರಾಂತಗಳನ್ನು ಬ್ರಿಟಿಷ್‌ಪ್ರಾಂತಗಳೆಂದು ನಿರ್ಣಯಿಸಬೇಕು.

ಈ ವಿಷಯಗಳನ್ನೆಲ್ಲ ಕೂಲಂಕಷವಾಗಿ ವಿಮರ್ಶಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ಅಖಿಲಹಿಂದುಸ್ಥಾನ ಪ್ರಜಾಪರಿಷತ್ತಿನ ಪ್ರತಿನಿಧಿಗಳಾದ ಸೆಕ್ರೆಟರಿ ಶ್ರೀಯುತ ಕಕಾಲಭಾಯಿ ಕೋಠಾರಿ ಪ್ರೆಸಿಡೆಂಟ್ ಶ್ರೀಯುತ ಅಭ್ಯಂಕರ್, ಜಾಯಿಂಟ್ ಸೆಕ್ರೆಟರಿ ರಂಗಿಲದಾಸ್‌ಕಪಾಡಿಯವರನ್ನು ದಿಲ್ಲಿಗೆ ಕರೆಯಿಸಿಕೊಂಡಿರುವರು. ವಿಶಾಲಹೃದಯರಾದ ಮಹಾತ್ಮಾಗಾಂಧಿಯವರು ಬ್ರಿಟಿಷ್‌ಹಿಂದೂಸ್ಥಾನದ ಪ್ರಜೆಗಳ ಮೇಲಿರುವ ತಮ್ಮ ಕೃಪಾದೃಷ್ಟಿಯನ್ನು ಆಶ್ರಿತಸಂಸ್ಥಾನಗಳ ಪ್ರಜೆಗಳ ಮೇಲೂ ಸಹ ಬೀರುವರು. ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿರುವ ಅಖಂಡ ಭಾರತವರ್ಷವು ಅವರ ಪ್ರಾಣಸದೃಶವಾಗಿದೆ.

ಮಹಾತ್ಮಗಾಂಧಿಯವರೂ ಅಮೇರಿಕೆಯೂ.

ಮಹಾತ್ಮ ಗಾಂಧಿಯವರು ಕಳೆದ ವರ್ಷ ಪ್ರಭುತ್ವದವರೊಂದಿಗೆ ಸತ್ಯಾಗ್ರಹಸಮರವನ್ನು ಹೂಡಿದಂದಿನಿಂದಲೂ ಅಮೇರಿಕಾದವರು ಹಿಂದುಸ್ಥಾನದ ಕಡೆ ಹೆಚ್ಚು ಲಕ್ಷ್ಯಕೊಡುತ್ತಿರುವುದು. ಅಲ್ಲಿನ ರಾಜನೀತಿಜ್ಞರೂ, ಸುಪ್ರಸಿದ್ಧ ವರ್ತಮಾನಪತ್ರಿಕೆಯವರೂ ಮಹಾತ್ಮಗಾಂಧಿಯವರ ಸದ್ಗುಣಾವಳಿಯನ್ನು ಪ್ರಶಂಸೆಮಾಡುತ್ತಿರುವರು. ಅಮೇರಿಕೆಯ ಅಸೋಸಿಯೇಟೆಡ್ ಪ್ರೆಸ್ಸಿನವರು ಕಳೆದ ವರ್ಷ ಜಗತ್ತಿನಲ್ಲಿ ಹತ್ತು ಮಹತ್ವದ ವಿಷಯಗಳು ನಡೆದಿರುವವೆಂದೂ, ಅದರಲ್ಲಿ ಮಹಾತ್ಮಗಾಂಧಿಯವರ ಸತ್ಯಾಗ್ರಹ ಚಳವಳಿಯು ನಾಲ್ಕನೆಯದೆಂದೂ ಹೇಳಿರುವರು. ಅವರು ಹೇಳುವುದೇನೆಂದರೆ—"ಮಿ|| ಗಾಂಧಿಯವರು ನೋಡುವುದಕ್ಕೆ ಸುಂದರಕಾಯರಲ್ಲ. ಆದರೆ ಕೋಟ್ಯಂತರ ಭಾರತೀಯರು ಅವರನ್ನು ಮಹಾತ್ಮರೆಂದೂ, ನಾಯಕರೆಂದೂ ಅನನ್ಯಭಕ್ತಿಯಿಂದ ಹಿಂಬಾಲಿಸುತ್ತಿರುವರು. ಹಿಂಸೆಯನ್ನು ತ್ಯಜಿಸಿ ಶಾಂತರೀತಿಯಿಂದ ಪ್ರಭುತ್ವದವರೊಡನೆ ಹೋರಾಡುತ್ತ ಒಂದು ನೂತನ ವಿಧಾನವನ್ನು ಕಂಡುಹಿಡಿದು ತಮ್ಮ ಜನರಿಗೆ ಬೋಧಿಸುತ್ತಿರುವರು. ಇದು ಅಮೇರಿಕೆಯ ಜನರಿಗೆ ವಿಲಕ್ಷಣವಾಗಿ ತೋರಬಹುದು. ಕೋಟ್ಯಂತರ ಜನರು ಸ್ವರಾಜ್ಯವನ್ನು ಸಾಧಿಸಬೇಕೆಂದು ದೃಢಸಂಕಲ್ಪಮಾಡಿ ಆಯುಧಗಳನ್ನು ಬಿಸಾಡಿ ಶಾಂತಮನಸ್ಕರಾಗಿ ಮಹಾತ್ಮರ ಅನುಜ್ಞೆಯಂತೆ ಕಾಯಿದೆಭಂಗ ಚಳವಳಿಯನ್ನನುಸರಿಸಿ ಪ್ರಭುತ್ವದವರ ಸಂಗಡ ಹೋರಾಡುತ್ತಿರುವುದು ಜಗತ್ತಿಗೆ ಪರಮಾಶ್ಚರ್ಯವನ್ನುಂಟುಮಾಡುವ ವಿಷಯವಾಗಿದೆ. ವಿದೇಶೀಯವಸ್ತುಗಳ ಬಹಿಷ್ಕಾರವು ಅಲ್ಪವಿಷಯವೆಂದು ತಿರಸ್ಕರಿಸುವಹಾಗಿಲ್ಲ."

'ರಿಜಿಸ್ಟರ್' ಎಂಬ ಪತ್ರಿಕೆಯು ಬರೆಯುವುದೇನೆಂದರೆ—"ಮಿ|| ಗಾಂಧಿಯವರ ಶಾಂತಿಸತ್ಯಾಗ್ರಹದ ಅಂಗವಾಗಿರುವ ವಿದೇಶೀಯವಸ್ತುಗಳ ಬಹಿಷ್ಕಾರವು ಆಯುಧಸಹಿತವೂ ದಾರ್ಜನ್ಯಯುತವೂ ಆದ ದಂಗೆಗಿಂತಲೂ ಭೀಕರವಾದುದು. ಆಂಗ್ಲೇಯರ ಸ್ಥಿತಿಯು ಈಗ ಬಹು ಬಿಕ್ಕಟ್ಟಾಗಿದೆ. ಆರ್ಥಿಕಮುಗ್ಗಟ್ಟಿನ ಈ ಕಾಲದಲ್ಲಿ ಇಂಗ್ಲೆಂಡಿನ ವಸ್ತ್ರಮೊದಲಾದ ವಸ್ತುಗಳನ್ನು ಭಾರತೀಯರು ಬಹಿಷ್ಕರಿಸುವುದರಿಂದ ಅವರಿಗೆ ದಾರಿಯೇ ತೋರದಂತಾಗಿದೆ. ಜಗತ್ತಿನ ಐದನೆಯ ಒಂದುಭಾಗ ಜನಸಂಖ್ಯೆಯುಳ್ಳ ಭರತಖಂಡದ ಮೇಲೆ ಆರುಸಾವಿರ ಮೈಲಿಗಳ ದೂರದಲ್ಲಿರುವ ಅಲ್ಪ ಸಂಖ್ಯಾಕರಾದ ಆಂಗ್ಲೇಯರು ಪ್ರಭುತ್ವಮಾಡುತ್ತಿರುವ ವಿಷಯವೇ ಸದ್ಯಃ ಚಳವಳಿಗೆ ಕಾರಣವಾಗಿದೆ. ಭಾರತೀಯರು ಚತುರರೂ, ರಾಜತಂತ್ರವಿಶಾರದರೂ ಆಗಿದ್ದು ಪರೋಪಕ್ಷರ ಪದ್ಧತಿಗಳನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಸ್ವಾತಂತ್ರ್ಯವನ್ನು ಹೊಂದುವ ಸುಸಮಯವನ್ನು ಆತುರದಿಂದಲೂ, ಲವಲವಿಕೆಯಿಂದಲೂ ನಿರೀಕ್ಷಿಸುತ್ತಿರುವರು.

ಲಂಡನ್ನಿನ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಭಾರತೀಯ ಮೆಂಬರರು ಮಾಡಿರುವ ಭಾಷಣಗಳು ಜಗತ್ತಿಗೆ ಆಶ್ಚರ್ಯವನ್ನುಂಟುಮಾಡಿದುವು. ಆದರೆ ಅವರ ಭಾಷಣಗಳಿಗೆ ಸ್ಫೂರ್ತಿಯು ಎಲ್ಲಿಂದ ಬಂದಿತು? ಅದು ಮಿ|| ಗಾಂಧಿಯವರ ಸತ್ಯಾಗ್ರಹ ಚಳವಳಿಯಿಂದಲ್ಲದೆ ಅನ್ಯಥಾ ಇಲ್ಲ. ಮಿ|| ಗಾಂಧಿಯವರು ಆಗ ಜೈಲಿನಲ್ಲಿದ್ದರೂ, ಅವರ ಚೈತನ್ಯವು ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಪ್ರಚಲಿತವಾಗಿತ್ತು.

ಷಿಕಾಗೋ ಪಟ್ಟಣದ 'ಯೂನಿಟಿ' ಪತ್ರಿಕೆಯು ಅಮೇರಿಕೆಯ ಅಭಿಪ್ರಾಯವನ್ನು ಸಂಕ್ಷೇಪವಾಗಿ ವಿವರಿಸುವುದೇನೆಂದರೆ—"ಮಹಾತ್ಮ ಗಾಂಧಿಯವರು ಚಳವಳಿಯನ್ನಾರಂಭಿಸದಿದ್ದರೆ ರೌಂಡ್‌ಟೇಬಲ್ ಕಾನ್ಫರೆನ್ಸ್ ನಡೆಯುವ ಸಂಭವವೇ ಇರಲಿಲ್ಲ. ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋಗಿದ್ದ ಮೆಂಬರರು ಮಹಾರಾಜರು ಮೊದಲ್ಗೊಂಡು ಅಸ್ಪೃಶ್ಯರ ವರೆಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟೇತೀರಬೇಕು, ಇಲ್ಲದಿದ್ದರೆ ಭಯಂಕರ ಅನಾಹುತವಾಗುತ್ತದೆಂದು ಬೆದರಿಸುವುದಕ್ಕೆ ಮಹಾತ್ಮ ಗಾಂಧಿಯವರ ಅಪ್ರತಿಮಸಾತ್ವಿಕವೇ ಕಾರಣ. ಈ ವಿಷಯದಲ್ಲಿ ಯಾರೂ ಸಂದೇಹಪಡುವ ಹಾಗಿಲ್ಲ. ಭರತಖಂಡದ ಭವಿಷ್ಯರಾಜ್ಯಾಂಗದ ಸೂತ್ರವು ಜೈಲಿನಲ್ಲಿದ್ದು ಶಾಂತಿಯಿಂದ ರಾಟಿ ನೂಲುತ್ತಿದ್ದ ಮಹಾತ್ಮ ಗಾಂಧಿಯವರ ಕೈಯ್ಯಲ್ಲಿದೆ. ಮಿ|| ವಿನ್ಸ್ಟನ್ ಚರ್ಚಿಲ್‌ರು ಭಾರತೀಯರ ಆಕಾಂಕ್ಷೆಗಳಿಗೆ ವಿರೋಧವಾಗಿ ಘುಡುಘುಡಿಸುತ್ತಿದ್ದರೂ ಕನ್ಸರ್ವೇಟಿವ್ ಪಕ್ಷದ ಕೆಲವು ಮೆಂಬರರು ಮಾತ್ರ ಅವರಿಗೆ ಬೆಂಬಲವಾಗಬಹುದೇ ವಿನಾ ಒಟ್ಟಿನ ಮೇಲೆ ಆಂಗ್ಲೇಯರು ಭಾರತೀಯ ಸಮಸ್ಯೆಯನ್ನು ಔದಾರ್ಯದಿಂದ ನಿರ್ವಹಿಸದಿರಲಾರರೆಂದು ಎಲ್ಲರೂ ನಿರೀಕ್ಷಿಸುತ್ತಲಿರುವರು."

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ
ಆಯುರ್ವೇದೀಯ ಸಿದ್ಧೌಷಧಗಳು,
ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿವಸವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂಥಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎರವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಕುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.

[46]

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಡಿಸ್ಪಿಗೆ ರೂ. 1—8—0. ½ ಡಜನಿಗೆ ರೂ. 8—0—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸೀತಿನೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವ, ಹೊಟ್ಟೆಹುಳಗಳ ಕೆದರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಟಿಕ್ಚರು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[31] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು, ದ. ಕ.**

ದಿಲ್ಲಿಯಲ್ಲಿ ನಡೆದ ಗಾಂಧಿ ಇರ್ವಿನ್ನರ ಒಪ್ಪಂದದಬಗ್ಗೆ ಲಂಡನ್ನಿನಲ್ಲಿ ಅಭಿಪ್ರಾಯಗಳು.

ಈ ಒಪ್ಪಂದವು ಲಂಡನ್ ಪಾರ್ಲಿಮೆಂಟಿನಲ್ಲಿ ಚರ್ಚಿಹಿಲ್ ಮತ್ತು ಆವರ ಅನುಯಾಯಿಗಳ ವಿನಾ ಉಳಿದ ಮೆಂಬರರಿಗೆ ತೃಪ್ತಿಕರವಾಗಿದೆ. ಈ ಶಾಂತಿಯಿಂದ ಲ್ಯಾಂಕಷೈರಿನಲ್ಲಿಯೂ, ಇನ್ನೂ ಅನೇಕ ವ್ಯಾಪಾರ ಸ್ಥಳಗಳಲ್ಲಿಯೂ ಈಗ ಕುಗ್ಗಿರುವಆರ್ಥಿಕ ಮತ್ತು ಔದ್ಯೋಗಿಕ ಸ್ಥಿತಿಯು ಇತಃಪರ ಸುಧಾರಿಸಬಹುದೆಂದು ಆನಂದದಿಂದ ನಿರೀಕ್ಷಿಸುತ್ತಿರುವರು. ಕನ್ಸರ್ವೇಟಿವ್ ಪಕ್ಷದ ಕೆಲವು ಪತ್ರಿಕೆಗಳುಈ ಒಪ್ಪಂದವು ಕೇವಲ ಅಸಮರ್ಪಕವಾದುದೆಂದೂ ಇದನ್ನು ಕೂಡಲೆ ಬಗ್ಗುಬಡಿಯಬೇಕೆಂದೂ ಅಭಿಪ್ರಾಯಪಡುವುವು.

"ಈವನಿಂಗ್‌ನ್ಯೂಸ್" ಪತ್ರಿಕೆಯ ಅಭಿಪ್ರಾಯ. "ಇನ್ನೊಂದು ಸಮ್ಮೇಳನವನ್ನು ನೆರವೇರಿಸುವುದಾದರೆ ಅದರಲ್ಲಿ ಗಾಂಧಿ ಮತ್ತು ಕಾಂಗ್ರೆಸ್ಸಿನ ರಿಪಬ್ಲಿಕನ್ ಜನರೇ ಪ್ರಾಧಾನಪಾತ್ರನನ್ನು ವಹಿಸುವರು. ಬ್ರಿಟಿಷರು ಹಿಂದುಸ್ಥಾನದ ಅಧಿಪತಿಗಳಾಗಿರುವರೆಂಬುದನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಇಂಗ್ಲೆಂಡಿಗೆ ಶೋಚನೀಯಸ್ಥಿತಿಯೊದಗುವುದು."

ಸರ್ ಮೈಕಿಯಲ್ ಓಡ್ವೈಯರ್ ಎಂಬವನು. ಮಿ|| ಗಾಂಧಿಯು ತನ್ನ ಉದ್ದೇಶಗಳೆಲ್ಲವನ್ನೂ ಸಾಧಿಸಿಕೊಂಡನು. ವೈಸರಾಯರು ಏನೂ ಸಾಧಿಸಿಕೊಳ್ಳಲಿಲ್ಲ. ಪೋಲೀಸರ ವರ್ತನವನ್ನು ವಿಚಾರಿಸುವುದನ್ನು ಒತ್ತಾಯಮಾಡುವುದಿಲ್ಲವೆಂದು ಹೇಳಿ ಜಾಣತನದಿಂದ ವೈಸರಾಯರ ಕಣ್ಣಲ್ಲಿ ಮಣ್ಣೆರಚಿದನು. ಗಾಂಧಿಯು ಕುಟಿಲಾಗ್ರಣಿಯು ಮತ್ತು ವಂಚಕನು. ಈಗ ಭಾರತೀಯರು ಗಾಂಧಿಯನ್ನು ವೈಸರಾಯರಿಗಿಂತಲೂಹೆಚ್ಚಿನವನೆಂದು ಭಾವಿಸಹತ್ತುವರು.

ನ್ಯೂಸ್‌ಕ್ರಾನಿಕಲ್ "ಫ್ರಾನ್ಸ್ ದೇಶಕ್ಕೂ ಇಟಲಿಗೂ ಇತ್ತೀಚೆಗೆ ನಡೆದಿರುವ ನೌಕಾಒಪ್ಪಂದಕ್ಕಿಂತಲೂ ಮಿ|| ಗಾಂಧಿ ಮತ್ತು ವೈಸರಾಯ್ ಇರ್ವಿನ್ನರವರ ಒಪ್ಪಂದವು ಮಹತ್ವದ್ದಾಗಿದೆ. ಈ ಶಾಂತಿಸಂಧಾನವು ಹಿಂದುಸ್ಥಾನಕ್ಕೆ ಮಾತ್ರವಲ್ಲದೆ ಇಂಗ್ಲೆಂಡಿಗೂ ಸಹ ಕೇವಲ ಹಿತಕಾರಿಯಾಗಿದೆ. ಹಿಂದುಸ್ಥಾನಕ್ಕೂ ಇಂಗ್ಲೆಂಡಿಗೂ ಮೊದಲಿನಂತೆ ವ್ಯಾಪಾರನಡೆಯಲು ಅನುಕೂಲವೊದಗಿತು. ಲಾರ್ಡ್ ಇರ್ವಿನ್ನರವರು ಈ ಶಾಂತಿಸಂಧಾನವನ್ನು ಜಯಪ್ರದವನ್ನಾಗಿ ಮಾಡಿದುದು ಇವರಿಗೆ ಭೂಷಣಾಸ್ಪದವಾಗಿದೆ. ಈ ಮಹತ್ಕಾರ್ಯವನ್ನು ಮಾಡಿದುದಕ್ಕೆ ಲಾರ್ಡ್ ಇರ್ವಿನ್ನರವರಿಗೆ ಇಡೀ ಇಂಗ್ಲೀಷ್ ಜನಾಂಗವೇ ಕೃತಜ್ಞತೆಯನ್ನು ತೋರಿಸಬೇಕು. ನವೀನರಾಜ್ಯರಚನೆಯು ಅನುಷ್ಠಾನದಲ್ಲಿ ಬರಬೇಕಾದರೆ ಇನ್ನೂ ಮಾಡತಕ್ಕ ಕೆಲಸಗಳು ಬೇಕಾದಷ್ಟಿವೆ. ಮುಂದಿನ ರೌಂಡ ಟೇಬಲ್ ಕಾನ್ಫರೆನ್ಸಿನಲ್ಲಿ ಕಾಂಗ್ರೆಸ್‌ಪ್ರತಿನಿಧಿಗಳನ್ನು ಸೇರಿಸುವ ವಿಷಯದಲ್ಲಿ ಕೆಲವು ಉಗ್ರವಾದಿಗಳ ಹೊರತು ಯಾರೂ ಸಂದೇಹಪಡಲಾರರು.

ಮ್ಯಾಂಚೆಸ್ಟರ್‌ಗಾರ್ಡಿಯನ್—ಹಿಂದುಸ್ಥಾನದ ಹಿತೈಷಿಗಳಾದ ಭಾರತೀಯರಾಗಲಿ ಆಂಗ್ಲೇಯರಾಗಲಿ ಲಾರ್ಡ್ ಇರ್ವಿನ್ ಮತ್ತು ಗಾಂಧಿಯವರ ಒಪ್ಪಂದವನ್ನು ಆನಂದದಿಂದ ಅಂಗೀಕರಿಸಬೇಕು.

ಡೇಲಿಮೇಲ್, ಮಾರ್ನಿಂಗ್‌ಪೋಸ್ಟ್ ಪತ್ರಿಕೆಗಳು ಈ ಒಪ್ಪಂದವನ್ನು ಖಂಡಿಸಿ ಲಾರ್ಡ್ ಇರ್ವಿನ್ನರವರು ಶರಣಾಗತರಾದರೆಂದು ಬರೆದಿರುವುವು.

ಗಾಂಧಿ ಇರ್ವಿನ್ ಒಪ್ಪಂದದ ಬಗ್ಗೆ ಲಂಡನ್ ಪಾರ್ಲಿಮೆಂಟಿನಲ್ಲಿ ಚರ್ಚೆಗಳು.

ಲಂಡನ್ ಪಾರ್ಲಿಮೆಂಟಿನಲ್ಲಿ ಇಂಡಿಯಾ ಸೆಕ್ರೆಟರಿ ಮಿ|| ಬೆನ್‌ರವರು ದಿಲ್ಲಿಯಲ್ಲಿ ಗಾಂಧಿಯವರಿಗೂ ವೈಸರಾಯರಿಗೂ ಈ ತಿಂಗಳು 3 ನೆಯ ತಾರೀಖಿನ ದಿವಸ ಒಪ್ಪಂದವಾಯಿತೆಂದು ಹೇಳಿದ ಕೂಡಲೆ ಹರ್ಷಧ್ವನಿಯಾಯಿತು. ವೈಸರಾಯರು ಈಗಿನ ಸ್ಥಿತಿಯನ್ನು ಕುರಿತು ಶೀಘ್ರವಾಗಿ ಒಂದು ವಾಙ್ಮೂಲವನ್ನು ಹೊರಡಿಸುವರು. ಅದನ್ನು ಕೂಡಲೆ ಪಾರ್ಲಿಮೆಂಟಿನ ಅವಗಾಹನೆಗೆ ತರುವೆನೆಂದು ಮಿ|| ಬೆನ್‌ರವರು ಹೇಳಿದರು.

ಆಗ ಮಿ|| ವಾರ್ಡ್ಲಮಿಲ್ಸ್ ಎಂಬ ಮೆಂಬರರು, ಹಿಂದುಸ್ಥಾನದಲ್ಲಿ ಇದುವರೆಗೂ ಗೋಪ್ಯವಾಗಿ ಉಪ್ಪು ತಯಾರಿಸುತ್ತಿದ್ದವರು ಈಗ ಬಹಿರಂಗವಾಗಿಯೂ ನಿರಾತಂಕವಾಗಿಯೂ ಉಪ್ಪನ್ನು ತಯಾರಿಸಲು ಅನುಮತಿ ಕೊಟ್ಟಿರುವರೆ? ಎಂದು ಕೇಳಿದರು.

ಅದಕ್ಕೆ ಅವರು "ಪೂರ್ಣ ವಾಙ್ಮೂಲವು ದೊರೆಯುವ ವರೆಗೂ ಶಾಂತವಾಗಿರಬೇಕು" ಎಂದು ಹೇಳಿದರು.

ಮಿ|| ಐಜಾಕ್‌ಫುಟ್ ಎಂಬ ಮೆಂಬರರು "ವೈಸರಾಯರ ಸಂಭಾಷಣೆಯಲ್ಲಿ ಸಾಮಂತರಾಜರೂ, ರೌಂಡ್‌ಟೇಬಲ್ ಕಾನ್ಫರೆನ್ಸಿನ ಮೆಂಬರರೂ ಭಾಗಿಗಳಾಗಿದ್ದಾರೆಯೇ?" ಎಂದು ಪ್ರಶ್ನೆಮಾಡಿದರು.

ಬೆನ್‌ರವರು ಇಲ್ಲವೆಂದು ಉತ್ತರವಿತ್ತರು.

ಸರ್ ಅಲ್ಫ್ರೆಡ್‌ನಾಕ್ಸ್ ಎಂಬವರು, "ಈ ಒಪ್ಪಂದವು ಪಾರ್ಲಿಮೆಂಟಿನ ನಿರ್ಧಾರಕ್ಕೆ ಒಳಪಟ್ಟಿರುವುದೆ?" ಎಂದು ಪ್ರಶ್ನೆಮಾಡಿದರು.

ಅದಕ್ಕೆ ಬೆನ್‌ರವರು ಉತ್ತರವನ್ನು ಕೊಡಲಿಲ್ಲ.

ಅನಂತರ ಸರ್ ಆಲ್ಫ್ರೆಡ್‌ನಾಕ್ಸ್‌ರವರು ಭಾರತೀಯರು ಶಾಸನೋಲ್ಲಂಘನ ಚಳವಳಿಯನ್ನೂ ಬ್ರಿಟಿಷ್ ವಸ್ತುಗಳ ಬಹಿಷ್ಕಾರವನ್ನೂ ನಿಲ್ಲಿಸುವ ವರೆಗೆ ಹಿಂದುಸ್ಥಾನದ ರಾಜಕೀಯ ಸುಧಾರಣೆಯನ್ನು ಮುಂದಕ್ಕೆ ಹಾಕುವ ವ್ಯವಸ್ಥೆ ಮಾಡಲಾಗುವುದೆ? ಎಂದು ಕೇಳಿದರು. ಅದಕ್ಕೆ ಬೆನ್‌ರವರು ಇಲ್ಲವೆಂದು ಉತ್ತರವಿತ್ತರು.

ಗಾಂಧಿ ಇರ್ವಿನ್ನರವರ ಒಪ್ಪಂದದ ಬಗ್ಗೆ ಅಮೇರಿಕೆಯ ಅಭಿಪ್ರಾಯ.

ಗಾಂಧಿ ಇರ್ವಿನ್ನರವರ ಒಪ್ಪಂದವಾಯಿತೆಂಬ ವರ್ತಮಾನವು ಅಮೇರಿಕೆಗೆ ತಿಳಿದೊಡನೆ ಆ ದೇಶೀಯರು ಹರ್ಷಭರಿತರಾದರು. ವ್ಯಾಪಾರದ ಮುಗ್ಗಟ್ಟು ಸುಧಾರಿಸಬಹುದೆಂದು ನಿರೀಕ್ಷಿಸುತ್ತಿರುವರು. ಅಮೇರಿಕೆಯಲ್ಲಿ ರಾಶಿರಾಶಿಯಾಗಿ ಬಿದ್ದಿರುವ ಬೆಳ್ಳಿಯನ್ನು ಹಿಂದುಸ್ಥಾನಕ್ಕೆ ಮಾರಲು ಅನುಕೂಲವಾಗಬಹುದೆಂದೂ ಅಮೇರಿಕೆಯ ಮೆಕ್ಸಿಕೊ ಗಣಿಗಳ ಕೆಲಸವು ಚುರುಕಾಗಿ ನಡೆಯಬಹುದೆಂದೂ ಆಶಿಸುತ್ತಿರುವರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[34] ಪೋ. ಬಾ. ೫೧೦, ಮದರಾಸ

ಮನೋಹರವಾದ ಫೋಟೋಗಳು.

	ರೂ. ಆ. ಪೈ
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦X೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗು[illegible]ವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗೆ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದನ್ತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಗಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ್ ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ ನೇ ಮಾರ್ಚಿ ೧೯೩೧ [ಸಂಚಿಕೆ ೪೬

ಮುಲಕೀ ಪರೀಕ್ಷೆಗೆ ಬರುವ ವೀರಶೈವ ವಿದ್ಯಾರ್ಥಿಗಳಿಗೆ ಅನ್ನೋದಕ ವ್ಯವಸ್ಥೆಯು

ವಿಜಾಪೂರ ಜಿಲ್ಲೆಗೆ ಸೇರಿದ ಕೊರವಿಗ್ರಾಮದ ಶ್ರೀ ಪಟ್ಟದ ಮಹಾಸ್ವಾಮಿಗಳು ವಿಜಾಪೂರಸೆಂಟರಿನಲ್ಲಿ ನಡೆಯುವ ಮುಲಕಿ ಪರೀಕ್ಷೆಗೆ ಬರುವ ಬಡವಿದ್ಯಾರ್ಥಿಗಳಿಗೆ ಈ ವರ್ಷವೂ ಊಟದ ವ್ಯವಸ್ಥೆಯನ್ನು ಮಾಡಿರುವರು. ಆದ್ದರಿಂದ ವಿದ್ಯಾರ್ಥಿಗಳು ತಾವು ಬಡವರೆಂಬ ವಿಷಯದಲ್ಲಿ ಹೆಡ್‌ಮಾಸ್ತರ ಅಥವಾ ಊರಿನ ಪ್ರಮುಖಜನರ ಸರ್ಟಿಫಿಕೇಟಿನೊಂದಿಗೆ ಅರ್ಜಿಯನ್ನು ವ್ಯವಸ್ಥಾಪಕರ ಕಡೆಗೆ ಕಳುಹಿಸತಕ್ಕದ್ದು. ವ್ಯವಸ್ಥಾಪಕರ ಉತ್ತರಪಡೆದು ಪರೀಕ್ಷೆಗೆ ಬರತಕ್ಕದ್ದು. ತಾಜಬಾವಡಿ ಹತ್ತಿರ ಮುಪ್ಪಯ್ಯನವರ ಮಠದಲ್ಲಿ ಊಟದ ವ್ಯವಸ್ಥೆಯು ಮಾಡಲ್ಪಟ್ಟಿರುತ್ತದೆ.

ದುಂಡಪ್ಪ ಬಸಪ್ಪ ಅಕ್ಕಿ ವಿಜಾಪೂರ
ವ್ಯವಸ್ಥಾಪಕ.

21 ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನದ ಆಫೀಸು.

ಕೃಷ್ಣರಾಜ ಮೊಹಲ್ಲಾ ಮೈಸೂರು.

ಡಾ|| ಕೆ. ಎಸ್. ಮಸ್ಕರ್ ಎಂ. ಎ. ಎಂ. ಡಿ. ಡಿ. ಪಿ. ಎ. ಹಾಫ್‌ಕಿನ್ ಇನ್ಸ್ಟಿಟ್ಯೂಟ್ ಪಾರೆಲ್ ಬೊಂಬಾಯಿರವರು ಈ ಕೆಳಗೆ ಹೇಳುವ ಉಪನ್ಯಾಸಗಳನ್ನು ಬರೆದು ಮುಂದಿನ ವರ್ಷ ಗ್ವಾಲಿಯರ್‌ನಲ್ಲಿ ನಡೆಯುವ ಸಮ್ಮೇಳನಕ್ಕೆ ಕಳುಹಿಸದಲ್ಲಿ ಯೋಗ್ಯವಾದ ಪ್ರತಿಯೊಂದು ಉಪನ್ಯಾಸಕ್ಕೂ ಬಹುಮಾನವನ್ನು ಕೊಡುವುದಾಗಿ ಸಮ್ಮೇಳನದ ಕಾಲದಲ್ಲಿ ವಾಗ್ದಾನಮಾಡಿರುತ್ತಾರೆ. ವಿಷಯಸಮರ್ಥನಗಳೆಲ್ಲವೂ 18 ನೆಯ ಶತಮಾನಕ್ಕೆ ಪೂರ್ವದಲ್ಲಿ ಬರೆಯಲ್ಪಟ್ಟ ಆಯುರ್ವೇದ ಗ್ರಂಥಾಧಾರಗಳಿಂದ ಮಾತ್ರವೇ ಕೂಡಿದ್ದಾಗಿರಬೇಕೆಂಬುದು ಅವರ ಇಚ್ಛೆ.

ಇಷ್ಟವುಳ್ಳವರಾರು ಬೇಕಾದರೂ ಸ್ಪರ್ಧಿಸಬಹುದು.

ವಿಷಯ	ಬಹುಮಾನ
1. ಮಧುಮೇಹದ ಚಿಕಿತ್ಸೆ	250 ರೂ.
2. ಕುಷ್ಠರೋಗದ ಚಿಕಿತ್ಸೆ	150 ರೂ.
3. ಆಯುರ್ವೇದೀಯ ಮೂಲಿಕೆಗಳನ್ನು ನಿರ್ಧರಿಸುವುದರಲ್ಲಿ ಆಯುರ್ವೇದದಲ್ಲಿ ಹೇಳುವ ಶೋಧನಾ ಕ್ರಮಗಳು	100 ರೂ.

N. B. ಹೆಚ್ಚು ವಿಷಯಗಳನ್ನು ತಿಳಿಯಬೇಕೆಂದಿರುವವರು ಮೇಲ್ಕಂಡ ಡಾಕ್ಟರವರಿಗೆ ಬರೆದು ತಿಳಿಯಬಹುದು.

ಮೈಸೂರು ಆನರರಿ ಜನರಲ್ ಸೆಕ್ರೆಟರಿ.
ತಾ|| 27-2-31

ನಿಖಿಲ ಭಾರತಾಯುರ್ವೇದ ಸಮ್ಮೇಳನದ ಆಫೀಸು ಮೈಸೂರು.

ಸಮ್ಮೇಳನಕ್ಕಾಗಿ ಚಂದಾ ವಸೂಲಿಯ ಬಗ್ಗೆ ಪರಸ್ಥಳದ ಕೆಲವು ದೊಡ್ಡ ಮನುಷ್ಯರುಗಳಿಗೆ ಕೊಟ್ಟು ಕಳುಹಿಸಿದ್ದ ಆಫೀಸು ರಸೀದಿಯ ಬುಕ್ಕುಗಳು ಇದುವರಿಗೂ ವಾಪ್ಸು ಬಂದಿರುವುದಿಲ್ಲ. ಅವೆಲ್ಲವೂ ವಾಪ್ಸು ಬಂದಲ್ಲದೆ ಜಮಾಖರ್ಚನ್ನು ಮುಗಿಸಿ ವರದಿಯನ್ನು ಕಮಿಟಿಯ ಮುಂದೆ ಒಪ್ಪಿಸಲು ಸಹ ಸಾಧ್ಯವಿಲ್ಲದೆ ಬಹು ತೊಂದರೆಯಾಗಿದೆ. ಇದೇ ವಿಚಾರದಲ್ಲಿ ಅವರುಗಳಿಗೆಲ್ಲಾ ಅನೇಕಾವರ್ತಿ ಪತ್ರ ಬರೆದರೂ ಫಲಕಾರಿಯಾಗಲಿಲ್ಲ. ಆದುದರಿಂದ ಅಂತಹ ಪುಸ್ತಕಗಳನ್ನಿಟ್ಟುಕೊಂಡಿರುವ ಮಹಾಶಯರೆಲ್ಲರೂ ಅವುಗಳನ್ನು ಕೂಡಲೆ ಈ ಆಫೀಸಿಗೆ ದಯವಿಟ್ಟು ಕಳುಹಿಸಿ ಕೊಡಬೇಕಾಗಿ ಪ್ರಾರ್ಥನೆ.

ತಾ|| 28-2-30 ವೈ. ಲಕ್ಷ್ಮೀನರಸಿಂಹಶಾಸ್ತ್ರೀ
ಆ|| ಜನರಲ್ ಸೆಕ್ರೆಟರಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ೧೦೮ ಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರ

ಸುವರ್ಣ ರಜತಾಂದೋಲಿಕೋತ್ಸವ.

ಚಿಕ್ಕನಾಯ್ಕನಹಳ್ಳಿ.

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ೧೮೫೩ನೆಯ ಪ್ರಜೋತ್ಪತ್ತಿನಾಮಸಂವತ್ಸರದ ಚೈತ್ರ ಶುದ್ಧ ೩ ತಾ. 22-3-31 ನೆಯ ಭಾನುವಾರ ಉದಯ ೮ ಘಂಟೆಯಿಂದ ಭಗವತ್ಪಾದರವರ ಆಂದೋಲಿಕೋತ್ಸವವು ಚತುರಂಗಬಲಸಮೇತ ಸಕಲ ಬಿರುದಾವಳಿಗಳೊಡನೆ ನೆರವೇರಿಸಲ್ಪಡುವುದಾದಕಾರಣ ಸಕಲರೂ ಪುತ್ರಮಿತ್ರಕಳತ್ರ ಸಮೇತರಾಗಿ ಆಗಮಿಸಿ ಉತ್ಸವಭಾಗಿಗಳಾಗಿ ಶ್ರೀ ಮಹಾಸನ್ನಿಧಾನದ ದರ್ಶನಾಶೀರ್ವಾದವನ್ನು ಪಡೆಯುವದಲ್ಲದೆ ನಮ್ಮಗಳ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕಾಗಿ ಹಾರೈಸುತ್ತೇವೆ.

ಚಿಕ್ಕನಾಯ್ಕನಹಳ್ಳಿ, ವೀರಶೈವ ಭಕ್ತಮಂಡಳಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಬಳ್ಳಾರಿ ವೀರಶೈವ ಶ್ರೀ ಗುರುನಿವಾಸ ಸಂಸ್ಕೃತವಿದ್ಯಾಲಯ

(ಅಧ್ಯಯನಕ್ಕಾಗಿ ಬರತಕ್ಕ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ)

ಈ ವಿದ್ಯಾಲಯವು ಶುಕ್ಲನಾಮಸಂವತ್ಸರದಲ್ಲಿ ಬಳ್ಳಾರಿ ಸಕ್ರಿ ಕರಡಪ್ಪನವರ ಚೌಕಿಯಲ್ಲಿ ಪ್ರಮುಖಜನರ ಸಹಾಯದಿಂದ ಶ್ರೀ|| ಷ|| ಬ್ರ|| ಅಸಗೋಡು ಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯಸ್ವಾಮಿಗಳವರಿಂದ ಕೇವಲ ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಮತ್ತು ಕಲಕತ್ತಾ ಅಸೋಸಿಯೇಶನ್ ಆದ್ಯ. ಮಧ್ಯಮ, ತೀರ್ಥ (ನ್ಯಾಯ, ವ್ಯಾಕರಣ, ಸಾಹಿತ್ಯ) ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂಬ ವಿದ್ಯಾರ್ಥಿಗಳ ಸಲುವಾಗಿ ಸ್ಥಾಪಿಸಲ್ಪಟ್ಟಿದೆ. ಶ್ರೀ|| ಷ|| ಬ್ರ|| ಅಸಗೋಡುಸ್ವಾಮಿಗಳವರ ಅಧ್ಯಾಪಕತ್ವದಲ್ಲಿ ನ್ಯಾಯ, ವ್ಯಾಕರಣ ಪಾಠಗಳೂ, ವೇ|| ಪಂ|| ಅಬ್ಬಿಗೇರಿ ಎಸ್. ಎಂ. ಜಗದೀಶಶಾಸ್ತ್ರಿಗಳ ಅಧ್ಯಾಪಕತ್ವದಲ್ಲಿ ಸಾಹಿತ್ಯದ ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಮತ್ತು ಕಲಕತ್ತಾ ಆದ್ಯ, ಮಧ್ಯಮ, ತೀರ್ಥ ಪರೀಕ್ಷೆಗಳ ಪಾಠಗಳೂ ಜರಗುತ್ತವೆ. ಇದೇ ವರ್ಷ ಸಾಹಿತ್ಯ ವ್ಯಾಕರಣದಲ್ಲಿ ಕಲಕತ್ತಾ ಪರೀಕ್ಷೆಗೂ, ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಪರೀಕ್ಷೆಗಳಿಗೂ ಹೋಗುತ್ತಾರೆ. ಪರೀಕ್ಷಾರ್ಥಿಗಳು ಪ್ರಜೋತ್ಪತ್ತಿ ಸಂ|| ರ ವೈಶಾಖ ಶುದ್ಧದೊಳಗಾಗಿಯೇ ಕೆಳಗಿನ ಅಡ್ರೆಸ್ಸಿಗೆ ತಮ್ಮ ನಿವೇದನ ಪತ್ರವನ್ನು ಯೋಗ್ಯತಾಪತ್ರಿಕೆಯೊಡನೆ ಕಳುಹಿಸಬೇಕು. ಬರತಕ್ಕ ವಿದ್ಯಾರ್ಥಿಗಳ ಸಲುವಾಗಿ ವಸತಿ ಭೋಜನವ್ಯವಸ್ಥೆಯು ಮಾಡಲ್ಪಡುವುದು.

ಕೊಂಡಕುಂದಿ ಭೋಗಪ್ಪ ಸೆಕ್ರೆಟರಿ
ವೀರಶೈವ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯ
ಕರಡಪ್ಪ ಚೌಕಿ, ಬಳ್ಳಾರಿ.

ಪ್ರಸಿದ್ಧ ಪತ್ರಿಕೆ.

ತುಮಕೂರು ಡಿಸ್ಟ್ರಿಕ್ಟು ಕುಣಿಗಲು ತಾಲ್ಲೋಕು ಯಡಿಯೂರು ಗ್ರಾಮದಲ್ಲಿ ಇರುವ ಶ್ರೀಸಿದ್ಧಲಿಂಗೇಶ್ವರಸ್ವಾಮಿಯವರ ಜಾತ್ರೆ ಮತ್ತು ರಥೋತ್ಸವವು ಪ್ರಜೋತ್ಪತ್ತಿನಾಮಸಂವತ್ಸರದ ಚೈತ್ರ ಶುದ್ಧ ಷಷ್ಠಿಲಾಗಾಯ್ತು ಅಂದರೆ 1931 ನೇ ಇಸವಿ ಮಾರ್ಚಿ ಮಾಹೇ ತಾರೀಖು 25 ನೇ ದಿವಸದಲಾಗಾಯ್ತು 8 ದಿವಸಗಳು ನಡೆಯುತ್ತದೆ.

ಈ ಜಾತ್ರೆಗೆ ಯಾತ್ರಾರ್ಥಿಗಳು ಮತ್ತು ವ್ಯಾಪಾರಸ್ಥರು ಬಹುಜನ ಸೇರುತ್ತಾರೆ. ಲಕ್ಷಾಂತರ ರೂಪಾಯಿಗಳವರಿಗೆ ವ್ಯಾಪಾರವು ನಡೆಯುತ್ತದೆ.

ಜಾತ್ರೆ ನಡೆಯುತಕ್ಕ ಯಡಿಯೂರು ಗ್ರಾಮವು ಬೆಂಗಳೂರು, ಮಂಗಳೂರು ಹೈರೋಡು 56 ನೇ ಮೈಲಿಪಕ್ಕದಲ್ಲಿ ಇದ್ದು ಪ್ರಯಾಣಿಕರಿಗೆ ಮೋಟಾರುಗಳ ಸೌಲಭ್ಯ ಇರುವುದಲ್ಲದೆ ಸ್ಥಳ ಆರೋಗ್ಯ ಮತ್ತು ನೀರು ನೆರಳಿನ ಸೌಕರ್ಯ ಅನುಕೂಲವಾಗಿರುತ್ತೆ.

ಜಾತ್ರೆಯಲ್ಲಿ ಮಾರಾಟಕ್ಕೆ ಜಾನುವಾರುಗಳು ಸೇರಲ್ಪಟ್ಟು ಉತ್ತಮ ರಾಸುಗಳಿಗೆ ಬಹುಮಾನವನ್ನು ಸಹ ಕೊಡಲ್ಪಡುತ್ತದೆ.

ಜಾತ್ರೆಕಾಲದಲ್ಲಿ ಶ್ರೀ ದೇವರ ಉತ್ಸವಾದಿಗಳು ಮಾಮೂಲಿನಂತೆ ಬಹು ವಿಜೃಂಭಣೆಯಿಂದ ನಡೆಯುತ್ತವೆ.

8-3-1931 ಸಿ. ಕೆ. ಚಲ್ಲಪ್ಪ ಐಯ್ಯರ್.
ಕೆ. ಎಸ್. ರುದ್ರಪ್ಪ ಧರ್ಮದರ್ಶಿ ಅಮಲ್‌ದಾರ್
(ಕನ್ವಿನರ್) ಕುಣಿಗಲ್ ತಾಲ್ಲೋಕು

ಸ್ವೀಕಾರ.

ಧಾರವಾಡ ಡಿ|| ಸಿಂಗಟಾಲೂರುಗ್ರಾಮದ ವೀರೇಶ್ವರ ದೇವಸ್ಥಾನದಲ್ಲಿ ನೆರವೇರಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಗಳು ಚಿತ್ರವಾಡಿಗಿ ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಡಿ|| ಆನೆಕಲ್ ಟೌನಿನಲ್ಲಿ ನೆರವೇರಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂ. ಯು ಮ|| ರಾ|| ಹೆಬ್ಬೂರು ಹುಚ್ಚುವೀರಪ್ಪನವರ ದ್ವಾರಾ ತಲ್ಪಿರುತ್ತದೆ.

ಸೋಲಾಪುರ ಡಿ|| ದರ್ಗನಹಳ್ಳಿಗ್ರಾಮದಲ್ಲಿ ಪಂಚಾಚಾರ್ಯ ಭಜನಾಸಂಘವನ್ನು ಸ್ಥಾಪಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂ. ಯು ಮ|| ರಾ|| ಶಿವಸಪ್ಪ ಬಿರಜದಾರ ಇವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಜಪಾನ್ ಚಕ್ರವರ್ತಿಗಳಿಗೆ ಹೆಣ್ಣುಮಗು ಹುಟ್ಟಿತು. ಮುಂದೆ ರಾಜ್ಯಭಾರ ವಹಿಸಲು ಗಂಡುಮಗು ಇಲ್ಲದ್ದರಿಂದ ಅಲ್ಲಿಯ ಪ್ರಜೆಗಳು ವ್ಯಸನವುಳ್ಳವರಾಗಿದ್ದಾರೆ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವಗಳು.

ಬೆಂಗಳೂರು.

ಈ ನಗರವಾಸಿಗಳಾದ ವೀರಶೈವ ಮಂಡಲಿಯವರು ಪದ್ಧತಿಯಂತೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ತಾ|| 2-3-31ನೆಯ ಸೋಮವಾರ ಸಿಟಿ ಚಿಕ್ಕಪೇಟೆ ಶ್ರೀ ಮಹಂತಿನ ಮಠದಲ್ಲಿ ಅತಿ ವಿಜೃಂಭಣೆಯಿಂದ ನಡೆಯಿಸಿದರು. ಆ ದಿನ ಪ್ರಾತಃಕಾಲದಲ್ಲಿ ಜಗದಾಚಾರ್ಯರ ಉತ್ಸವಮೂರ್ತಿಗೆ ವಿಧ್ಯುಕ್ತವಾಗಿ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳು ಮಾಡಲ್ಪಟ್ಟು ಮಧ್ಯಾಹ್ನದಲ್ಲಿ ಭಕ್ತಮಾಹೇಶ್ವರ ಸಂತರ್ಪಣೆಯೂ, ನಡೆದು ಸಾಯಂಕಾಲ 5 ಘಂಟೆಗೆ ಶ್ರೀಮಾನ್ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಕೆ.ಟಿ.ಸಿ.ಐ.ಇ. ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಶ್ರೀಮಾನ್ ಲಾ ಸೆಕ್ರಟರಿ ಪಿ. ಮಹದೇವಯ್ಯನವರು, ಶ್ರೀಮಾನ್ ಜಿ. ಮಲ್ಲಿಕಾರ್ಜುನಯ್ಯನವರು ಬಿ.ಎ., ಸಿಟಿ ಮ್ಯಾಜಿಸ್ಟ್ರೇಟರು, ಶ್ರೀಮಾನ್ ಜಿ. ಶಾಂತವೀರಪ್ಪನವರು ಬಿ.ಎ., ಅಸಿಸ್ಟೆಂಟ್ ಐ. ಜಿ. ಆಫ್ ಪೋಲೀಸ್, ಶ್ರೀಮಾನ್ ಜಿ. ಕೆ. ರುದ್ರಾರ್ಯರು ಇಕ್ ಕಂಟ್ಯಾಕ್ಸ್ ಇನ್ಸ್ಪೆಕ್ಟರ್, ಶ್ರೀಮಾನ್ ಕಾಲಕುಂಟೆ ಗಂಗಾಧರಪ್ಪನವರೂ, ಶ್ರೀಮಾನ್ ಎಸ್. ವಿ. ನರಸಿಂಹಯ್ಯಂಗಾರ್ ಅಡ್ವೋಕೇಟ್ ಬಿ.ಎ.ಎಲ್ ಇವರೂ ಶ್ರೀಮಾನ್ ಎಂ. ಬಿ. ವರದರಾಜಯ್ಯಂಗಾರ್ ಅಡ್ವೊಕೇಟ್ ಬಿ.ಎ., ಬಿಎಲ್., ಇವರೂ, ಶ್ರೀಮಾನ್ ಎಸ್. ನರಸಿಂಹಯ್ಯಂಗಾರ್ ರಿಟೈರ್ಡ್ ಮುನಸೀಫ್, ಶ್ರೀಮಾನ್ ದೇಶದ ಶಿವಬಸಪ್ಪಶೆಟ್ಟರು, ಶ್ರೀಮಾನ್ ಯಜಮಾನ್ ಪುಟ್ಟಪ್ಪನವರು, ಶ್ರೀಮಾನ್ ಚೆನ್ನಯ್ಯನವರು ಅಡ್ವೋಕೇಟ್ ಬಿ.ಎ.ಬಿ.ಎಲ್., ಇವರು ಶ್ರೀಮಾನ್ ಚಿಕ್ಕವೀರಪ್ಪನವರು, ಅಡ್ವೊಕೇಟ್ ಬಿ.ಎ.,ಬಿ.ಎಲ್., ಇವರು ಶ್ರೀಮಾನ್ ಪಿ. ಎಂ. ಬಸಪ್ಪನವರೂ, ಶ್ರೀಮಾನ್ ಎಂ. ನಾಗಪ್ಪನವರೂ, ಶ್ರೀಮಾನ್ ಗುರುಕಾರ್ ಜೋಗಪ್ಪನವರೂ, ಶ್ರೀಮಾನ್ ಗುರುಕಾರ್ ಮಾದಪ್ಪನವರೂ, ಶ್ರೀಮಾನ್ ಕಂಬಿ ಶಿವಪ್ಪನವರೂ, ಶ್ರೀಮಾನ್ ಸಾವಂದಶೆಟ್ಟರು, ಶ್ರೀಮಾನ್ ಟಿ. ಎಸ್. ಚೆನ್ನಪ್ಪನವರು, ಶ್ರೀಮಾನ್ ಶಂಕರಪ್ಪನವರ ಶಿವಣ್ಣನವರು, ಶ್ರೀಮಾನ್ ಕೆ. ನಾಗಪ್ಪನವರು, ಶ್ರೀಮಾನ್ ಅಣ್ಣಪ್ಪನವರ ಮಲ್ಲಶೆಟ್ಟಪ್ಪನವರು, ಶ್ರೀಮಾನ್ ಪಿ. ಎ. ಭದ್ರಪ್ಪನವರ ವಿಶ್ವನಾಥಪ್ಪನವರು, ಶ್ರೀಮಾನ್ ಗಾಡದ ವೀರಭದ್ರಪ್ಪನವರ ರುದ್ರಪ್ಪನವರು, ಶ್ರೀಮಾನ್ ಹೊಸಕೋಟೆ ಭದ್ರಪ್ಪನವರು, ಶ್ರೀಮಾನ್ ಬುಳ್ಳಪ್ಪನವರ ನಂಜಪ್ಪನವರು, ಶ್ರೀಮಾನ್ ಕಾಳಕುಂಟೆ ಶಿವಪ್ಪನವರು, ಶ್ರೀಮಾನ್ ಜಿ. ಗಂಗಪ್ಪನವರು, ಶ್ರೀಮಾನ್ ಸರಾಫ್ ಬಿ. ಬಸಪ್ಪನವರು, ಶ್ರೀಮಾನ್ ಗ್ರಂಧಿಗೆ ಅಂಗಡಿ ಗುರುಶಿದ್ಧಪ್ಪನವರು, ಶ್ರೀಮಾನ್ ಶಂಕರಪ್ಪನವರ ಬುಳ್ಳಪ್ಪನವರು, ಶ್ರೀಮಾನ್ ಗ್ರಂಧಿಗೆ ಅಂಗಡಿ ಭದ್ರಪ್ಪನವರು, ಶ್ರೀಮಾನ್ ಕಾಯಿಅಂಗಡಿ ಗುಬ್ಬಣ್ಣನವರು ಮೊದಲಾದ ಪುರಪ್ರಮುಖರು ಸಭೆಗೆ ಆಗಮಿಸಿದ್ದರು. ಸಭಾ ಪ್ರಾರಂಭದಲ್ಲಿ ಭಗವತ್ಪಾದ ರೇಣುಕಾಚಾರ್ಯರ ಸ್ತೋತ್ರರೂಪ ಮಂಗಳಾಚರಣವೂ ವೈದಿಕವಿದ್ಯಾರ್ಥಿಗಳಿಂದ ಏಕಕಂಠವಾಗಿ ವೇದಘೋಷವೂ ಮಾಡಲ್ಪಟ್ಟ ಬಳಿಕ, ವೇ|| ಎಸ್. ರುದ್ರಯ್ಯನವರು ಶ್ರೀಮಜ್ಜಗದ್ಗುರು ರೇಣುಕಾದಿ ಕೃಪಾಪೋಷಿತ ವೀರಶೈವಧರ್ಮಗ್ರಂಥಭಾಂಡಾರದ ವರದಿಯನ್ನೂ, ಭಗವತ್ಪಾದ ರೇಣುಕಾಚಾರ್ಯರ ಜಯಂತಿಯ ವರದಿಯನ್ನೂ, ಸದರಿ ಸಂಸ್ಥಾಪನಾಕಾಲದ ಫ್ರೀ ಬೋರ್ಡಿಂಗ್ ವರದಿಯನ್ನೂ ಓದಿ ಹೇಳಿದರು. ತದನಂತರ ಸಂಸ್ಕೃತಕಾಲೇಜು ಪಂಡಿತರಾದ ವೇ|| ಕಂಬಾಳಮಠದ ವಿಶ್ವನಾಥಶಾಸ್ತ್ರಿಗಳು ಭಗವತ್ಪಾದ ರೇಣುಕಾಚಾರ್ಯರ ಅನುಪಮ ಲೀಲೆಗಳ ವಿಷಯವಾಗಿಯೂ ಸದರಿ ಪಾಠಶಾಲೆಯ ವಿದ್ಯಾರ್ಥಿ ಟಿ. ಎಮ್. ಶಿವಶಂಕರಯ್ಯ, ಕೆ. ಸಿ. ಬಸವರಾಜ ಇವರಿಬ್ಬರು ಲಿಂಗಧಾರಣ ದೀಕ್ಷಾ ವಿಷಯಕವಾಗಿಯೂ ಶ್ರೀಮಾನ್ ಗ್ರಂಧಿಗೆ ಅಂಗಡಿ ಶಿದ್ಧವೀರಪ್ಪನವರು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ವಿಷಯವಾಗಿಯೂ, ಶ್ರೀಮಾನ್ ಗುಂಡುರಾವ್ ಖಾದ್ರಿಯವರು ವೀರಶೈವ ಪ್ರಾಶಸ್ತ್ಯ ವಿಷಯವಾಗಿಯೂ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ತರುವಾಯ ಶ್ರೀಮಾನ್ ದೇಶದಶೆಟ್ಟರು ಶ್ರೀಭಗವತ್ಪೂಜ್ಯಪಾದ ರೇಣುಕಾಚಾರ್ಯ ಜಯಂತಿ ಹಬ್ಬದ ದಿವಸವನ್ನು ಸರ್ಕಾರದಿಂದ ರಜಾದಿನವನ್ನಾಗಿ ಮಂಜೂರು ಮಾಡಿಸಬೇಕೆಂದು ರೆಜ್ಯುಲೇಷನ್ ತಂದರು. ಅದನ್ನು ವೇ|| ಎಸ್. ರುದ್ರಯ್ಯನವರು ಅನುಮೋದಿಸಿದರು. ಸಭಿಕರೆಲ್ಲರೂ ಕರತಾಡನ ಮೂಲಕ ತಮ್ಮ ಅಭಿಮತಪ್ರದರ್ಶನವನ್ನು ಮಾಡಿದರು. ಸಭಾಧ್ಯಕ್ಷರು ಗುರುಜಯಂತಿಕಾರ್ಯವನ್ನು ನೆರವೇರಿಸಿದ ವೀರಶೈವ ಮಂಡಲಿಯವರಿಗೆ ತಮ್ಮ ಸಂತೋಷವನ್ನು ಸೂಚಿಸಿದ್ದಲ್ಲದೆ ಉಪನ್ಯಾಸಕರ ಭಾಷಣ ಸಾರಾಂಶಗಳನ್ನು ಸೂಚಿಸಿ ಭಗವತ್ಪೂಜ್ಯಪಾದರ ವಿಷಯದಲ್ಲಿ ತಮಗಿರುವ ಸಹಜಭಕ್ತಿಯನ್ನು ವ್ಯಕ್ತಗೊಳಿಸಿದರು. ಮಂಗಳಾರತಿಯಾಗಿ ಫಲಮಂತ್ರಾಕ್ಷತೆ ಪುಷ್ಪಹಾರಗಳು ಸಮರ್ಪಿಸಲ್ಪಟ್ಟವು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು. ಅನಂತರ ನಕ್ಷತ್ರಗಳಂತೆ ಒಪ್ಪುತ್ತಿರುವ ಎಲೆಕ್ಟ್ರಿಕ್ ದೀಪಾವಳಿಗಳಿಂದಲೂ ಮಲ್ಲಿಕಾಪುಷ್ಪಗಳಿಂದಲೂ ಅಲಂಕೃತವಾದ ಭವ್ಯಾಂದೋಲಿಕೆಯಲ್ಲಿ ರೇಣುಕಪೂಜ್ಯಪಾದರ ಉತ್ಸವಮೂರ್ತಿಯನ್ನು ಮೂರ್ತಗೊಳಿಸಿ ರಾತ್ರಿ 8 ಘಂಟೆಗೆ ಉತ್ಸವವು ಪ್ರಾರಂಭವಾಯಿತು. ವೇದಘೋಷವೂ ನಾನಾವಿಧ ಮಂಗಳವಾದ್ಯಧ್ವನಿ ವಿಶೇಷಗಳೂ ಸ್ತೋತ್ರನೃತ್ಯಗಳೂ ಅಲ್ಲಲ್ಲಿಗೆ ನಡೆಯುತ್ತಿದ್ದುವು. ಸಹಸ್ರಾರು ಸಂಖ್ಯೆಯುಳ್ಳ ಭಕ್ತಮಂಡಲಿಯು ಮುಂದು ಮುಂದು ಸಾಗಿತು. ಉತ್ಸವವು ಚಿಕ್ಕಪೇಟೆ, ಬಳ್ಳಾಪುರದಪೇಟೆ, ದೊಡ್ಡಪೇಟೆ, ಮಾಮೂಲ್‌ಪೇಟೆ, ಅಕ್ಕಿಪೇಟೆ, ಅರಳೆಪೇಟೆ ಮುಂತಾದ ಕಡೆಗಳಲ್ಲಿ ನಡೆಯಿತು. ಮತಭೇದವಿಲ್ಲದೆ ಸರ್ವರೂ ಆಚಾರ್ಯಭಗವತ್ಪಾದರಿಗೆ ಅಲ್ಲಲ್ಲಿ ಫಲಪುಷ್ಪ ಕರ್ಪೂರಾದಿಗಳನ್ನು ತಮ್ಮ ತಮ್ಮ ಅಂಗಡಿಗಳ ಮುಂಭಾಗದಲ್ಲಿಯೂ, ಮನೆಗಳ ಮುಂಭಾಗದಲ್ಲಿಯೂ ಸಮರ್ಪಿಸುತ್ತಿದ್ದರು. ಉತ್ಸವವು ಮಹಂತಿನ ಮಠವನ್ನು ಸೇರಿದಬಳಿಕ ಷೋಡಶೋಪಚಾರ ರಾಜೋಪಚಾರ ಪೂಜಾನಂತರ ಮಂಗಳಾರತಿಯಾಗಿ ಪ್ರಸಾದಗಳು ಹಂಚಲ್ಪಟ್ಟವು. ಅನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಶ್ರೀ ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಆಚರಿಸಿದ ಭಕ್ತಮಂಡಲಿಗೆ ಶ್ರೀಮತ್ಪಂಚಾಚಾರ್ಯರು ಶ್ರೇಯಸ್ಸನ್ನುಂಟುಮಾಡಲೆಂದು ಹಾರೈಸುತ್ತೇವೆ.

ಓರ್ವ ಪ್ರತ್ಯಕ್ಷದರ್ಶಿ.

ದೊಡ್ಡಬಾಣಾವರ.

ಇದೇ ಪ್ರಮೋದ ಸಂ|| ರದ ಫಾಲ್ಗುಣ ಶು|| 13 ಸೋಮವಾರ ತಾ|| 2-3-31 ನೇ ದಿವಸ ವೇ|| ಕೊಂಡಜ್ಜಿ ಹಿರೇಮಠದ ಬಸವಾರಾಧ್ಯರು ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಪ್ರೆಸಿಡೆಂಟ್ ಇವರು ಬೆಳಿಗ್ಗೆ ಪದ್ಧತಿಮೇರೆಗೆ ಶ್ರೀ ಜಗದ್ಗುರು ಪಂಚಾಚಾರ್ಯರ ರಜತವಿಗ್ರಹಕ್ಕೆ ವಿಧಿವತ್ತಾಗಿ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಷೋಡಶೋಪಚಾರ ಪೂಜೆಯನ್ನು ಮಾಡಿಸಿ 10 ಘಂಟೆಗೆ ಸರಿಯಾಗಿ ಸಮಸ್ತ ಭಕ್ತಾದಿಗಳನ್ನು ತಮ್ಮ ಕ್ಯಾಂಪಿಗೆ ಬರಮಾಡಿಕೊಂಡು ಭಜನಾ ಮಂಗಳಾರತಿ ವಗೈರೆ ನಡೆಯಿಸಿ ಸಮಸ್ತ ಭಕ್ತಾದಿಗಳಿಗೆ ಪಾನಕಫಲಾಹಾರಗಳನ್ನು ಮಾಡಿಸಿದರು. ರಾತ್ರಿ 8 ಘಂಟೆಗೆ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀ ಜಗದಾಚಾರ್ಯರ ಭಾವಪಟವನ್ನಿರಿಸಿ ಭಜನಾ, ವಾದ್ಯ, ವೈಭವಗಳಿಂದ ಮುಖ್ಯ ಮುಖ್ಯ ಬೀದಿಗಳಲ್ಲಿ ಉತ್ಸವ ನಡಿಸಿ ವಾಪಸು ತಮ್ಮ ಕ್ಯಾಂಪಿಗೆ ಬಂದನಂತರ ಮಹಾಮಂಗಳಾರತಿ ರಾಜೋಪಚಾರಗಳು, ನಡೆದು ಸಮಸ್ತರಿಗೂ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟವು. ಅದೇ ದಿವಸ ಮ|| ರಾ|| ಪೇಟೆ ಯಜಮಾನ ನಂಜುಂಡಶೆಟ್ರು ಮ|| ರಾ|| ಮಾದಯ್ಯಶೆಟ್ರು ಶ್ರೀ ಜಗದ್ಗುರು ಪಂಚಾಚಾರ್ಯಭಜನಾಸಂಘದ ಜಾಯಿಂಟ್ ಸೆಕ್ರೆಟರಿ ಪ್ರಾಕ್ಟೀಸ್ ಮ್ಯಾನೇಜರ್ ಮ|| ರಾ|| ಕಾಡಿ ಕಂಟ್ರಾಕ್ಟರ್ ಚಿನ್ನಪ್ಪನವರು ಇವರುಗಳು ಶ್ರೀ ಜಗದ್ಗುರು ರೇಣುಕಜಯಂತಿಯನ್ನು ದೊಡ್ಡ ಹಬ್ಬದಂತೆ ತಮ್ಮ ಕ್ಯಾಂಪುಗಳಲ್ಲಿ ವಿಶೇಷ ವೈಭವದಿಂದಾಚರಿಸಿದರು. ಆದರೆ ಸದರಿ ಬಸವಾರಾಧ್ಯರು ಹಾಲಿ ಪ್ಲೇಗು ಗಲಾಟೆಯಿಂದ ಊರುಬಿಟ್ಟು ಕ್ಯಾಂಪಿನಲ್ಲಿ ಇದ್ದರೂ ಗುರುಭಕ್ತಿಯಿಂದ ಹಿಡಿದ ವ್ರತವನ್ನು ಪೂರ್ಣಮಾಡಿದರು. ಇವರುಗಳಿಗೂ ಇವರ ತಮ್ಮಂದಿರುಗಳಿಗೂ ಅವರ ಕುಟುಂಬ ವರ್ಗಕ್ಕೂ ಸಮಸ್ತ ಭಕ್ತಮಂಡಳಿಯವರಿಗೂ ಶ್ರೀ ಜ|| ರೇಣುಕಾಚಾರ್ಯರು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

ಗುರುಭಕ್ತ ಕಿಂಕರ.

ಆನೆಕಲ್.

ಈ ತಿಂಗಳು 2 ನೆಯ ತಾರೀಖು ಸೋಮವಾರ ಶ್ರೀ ಜಗದಾಚಾರ್ಯರವರ ಜಯಂತಿ ಮಹೋತ್ಸವವು ಗುರುಕಟಾಕ್ಷದಿಂದ ನೆರವೇರಿತು ಆ ದಿವಸ ಶ್ರೀ ವೀರಭದ್ರಸ್ವಾಮಿ ಶ್ರೀ ಭದ್ರಕಾಳಮ್ಮನವರ ವಿಗ್ರಹಗಳಿಂದಲಂಕರಿಸಿದ ಪೀಠದಲ್ಲಿ ಶ್ರೀ ಜಗದಾಚಾರ್ಯರವರ ಭಾವಚಿತ್ರಪಟವನ್ನು ಇಟ್ಟು ಈ ದಿವಸ ಪ್ರಾತಃಕಾಲ 9 ಘಂಟೆ ಲಾಗಾಯ್ತು ಮಧ್ಯಾಹ್ನ 12 ಘಂಟೆವರಿವಿಗೂ ಪೇಟೆಯ ಮುಖ್ಯಮುಖ್ಯ ಬೀದಿಗಳಲ್ಲಿ ಮೆರವಣಿಗೆಯು ಅತಿ ವಿನೋದದಿಂದ ನಡಿಸಲ್ಪಟ್ಟಿತು. ಸ್ವಾಮಿಯ ಉತ್ಸವವು ಪ್ರೇಕ್ಷಕರ ಮನಸ್ಸಿಗೆ ತುಂಬಾಸಂತೋಷವನ್ನುಂಟುಮಾಡುತ್ತ ಶ್ರೀನಂದೀಶ್ವರದೇವಾಲಯಕ್ಕೆ ಬಿಜಮಾಡಿಸಿದಕೂಡಲೆ ಮಹಾಮಂಗಳಾರತಿಯಾಗಿ ಅನಂತರ ಭಕ್ತಮಾಹೇಶ್ವರರಾದಿಯಾಗಿ ಸರ್ವರೂ ಪಾನಕ ಹೆಸರಬೇಳೆ ವಿನಿಯೋಗವನ್ನು ಸ್ವೀಕರಿಸಿ ಜಯಘೋಷವನ್ನು ಮಾಡುತ್ತ ಸಂತೋಷದಿಂದ ಅವರವರ ಮನೆಗಳಿಗೆ ತೆರಳಿದರು. ಆದರೆ ಇಂತಹ ಮಹಾದಿವಸದಲ್ಲಿ ಉತ್ಸವಮುಂದೆ ನಂದಿಧ್ವಜವು ಇಲ್ಲದೆ ಇದ್ದುದು ಒಂದು ಕುಂದುಕವುಂಟಾಗಿತ್ತು. ಅತ್ತಿಬೆಲೆ ಸಾಹುಕಾರು ಮ||ರಾ|| ಕರಭಂಣ್ಣನವರು ಆನೆಕಲ್ ಯಜಮಾನ್ ರೈ||ಅ||ಮಾ|| ಮುದ್ದೀರಪ್ಪನವರು, ಯಜಮಾನ್ ಶಾಂತವೀರಪ್ಪನವರು, ಗು|| ಗುರುನಂಜಪ್ಪನವರು ಗ|| ನಂಜಪ್ಪನವರು ನಾ|| ಶಿದ್ರಾಮಶೆಟ್ಟರು ಮು|| ಮುದ್ದಪ್ಪನವರು ಪು|| ವೀರಭದ್ರಪ್ಪನವರು ಮೊದಲಾದ ಭಕ್ತಮಾಹೇಶ್ವರರು ಮಾಡಿದ ಸಹಾಯದಿಂದ ಈ ಕಾರ್ಯವು ಜಯಪ್ರದವಾಯಿತು. ನಮ್ಮ ಮೈಸೂರು ಗಾರ್ನಮೆಂಟು ಸರ್ಕಾರಿ ಕ್ಯಾಲೆಂಡರಿನಲ್ಲಿ ಇತರ ಜಯಂತಿಗಳಂತೆ ಶ್ರೀ ಜಗದಾಚಾರ್ಯರ ಜಯಂತಿಯಿಲ್ಲದಿರುವದು ವೀರಶೈವಜನಾಂಗಕ್ಕೆ ಗಾಢಾಂಧಕಾರವು ಕವಿದಂತೆ ಆಗಿರುತ್ತದೆ. ಆದ್ದರಿಂದ ನಮ್ಮನ್ನಾಳುವ ಪ್ರಭುಗಳಾದ ಶ್ರೀಮನ್ಮಹಾರಾಜರವರು ತಮ್ಮ ಘನವಾದ ಚಿತ್ತಕ್ಕೆ ತಂದು ತಮ್ಮ ಸರ್ಕಾರಿ ಕ್ಯಾಲೆಂಡರಿನಲ್ಲಿ (ರೇಣುಕಜಯಂತಿ) ಎಂಬ ಹಬ್ಬವನ್ನು ಸೇರಿಸುವಂತೆ ಹುಕುಂ ದಯಪಾಲಿಸುವರೆಂದು ಹಾರೈಸುತ್ತೇವೆ. ಮೇಲ್ಕಂಡ ಜಯಂತಿಯು ಯಾವ ವಿಘ್ನವೂ ಇಲ್ಲದೆ ಶ್ರೀ ಗುರುಕಟಾಕ್ಷದಿಂದ ನೆರವೇರಿದ ಸಂತೋಷದಿಂದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ಶ್ರೀಮದ್ಯುವರಾಜರವರಿಗೂ ರಾಜಕುಟುಂಬದವರಿಗೂ ಮೇಲ್ಕಂಡ ಕಾರ್ಯದಲ್ಲಿ ಭಾಗಿಗಳಾದ ಮಹಾಶಯರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಸಂಪದಾಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಭಗವತ್ಪಾದರವರನ್ನು ಪ್ರಾರ್ಥಿಸುತ್ತೇವೆ.

ಓರ್ವ ಗುರುಸೇವಕ.

ದೊಡ್ಡಬಳ್ಳಾಪುರ.

2-3-31ನೆಯ ಸೋಮವಾರ ದಿವಸ ದೊಡ್ಡಬಳ್ಳಾಪುರದ ರಿಟೈರ್ಡ್ ಹೆಡ್‌ಗುಮಾಸ್ತೆ ಬಸವಾರಾಧ್ಯಮಹಾಂತಪಾದರು ಮತ್ತು ಅವರ ತಮ್ಮಂದಿರಾದ ಧಾರಾಂತಶಾಸ್ತ್ರಿಗಳೂ ಸಹ ತಮ್ಮ ಮಠದಲ್ಲಿ ಮಾಮೂಲ್ ಮೇರಿಗೆ ನಡೆಯತಕ್ಕ ಶ್ರೀ ರೇಣುಕಾಚಾರ್ಯರ ಜಯಂತಿ ಉದ್ದಿಶ್ಯ ದೇವಾಲಯಗಳಲ್ಲಿ ರುದ್ರಾಭಿಷೇಕ, ಸಹಸ್ರನಾಮ ಪೂಜಾದಿಗಳಿಂದ ದೇವತಾತೃಪ್ತಿಯೂ, ಮಠದಲ್ಲಿ ಶ್ರೀಮದಾಚಾರ್ಯರ ಪೂಜೆಯೂ, ಮಧ್ಯಾಹ್ನ ಮಾಹೇಶ್ವರಾರಾಧನೆಯೂ ನಡೆದು ರಾತ್ರಿ ಮ|| ರಾ|| ಹೆಚ್. ಜಿ. ರುದ್ರಪ್ಪನವರಿಂದ ಶ್ರೀ ರೇಣುಕಪುರಾಣವು ಶ್ರವಣಮಾಡಿಸಲ್ಪಟ್ಟು ಮಹಾಮಂಗಳಾರತಿಯೂ ನಡೆದು ಬಂದಿದ್ದ ಮಹನೀಯರಿಗೆ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು ಆಚಾರ್ಯರ ಜಯಘೋಷದೊಂದಿಗೆ ಮುಕ್ತಾಯಗೊಂಡಿತು.

ಓರ್ವಪ್ರೇಕ್ಷಕ.

ಮುಧೋಳ.

ಸೋಮೇಶಲಿಂಗಸಂಜಾತಂ ರೇಣುಕಾರ್ಯಂ ಜಗದ್ಗುರುಂ |
ಕದಲೀವನಪೀಠಸ್ಥಂ ವಂದೇಽಹಂ ಭಕ್ತರಕ್ಷಕಂ ||೧||

ನಿಜಾಂ ಇಲಾಖಾ ಉದಗೀರ ತಾಲೂಕಿನ 3000 ಗೃಹಗಳಿಂದ ರಾರಾಜಿಸುತ್ತಿರುವ ಮುಧೋಳಪುರದಲ್ಲಿ ಶ್ರೀ|| ಷ|| ಬ್ರ|| ಮಹಾಂತಚರವರ್ಯರು, ಶ್ರೀ ರೇಣುಕರ ಜಯಂತಿಯನ್ನು ಸರ್ವ ಭಕ್ತರೊಡನೆ ಬಹು ವಿಜೃಂಭಣೆಯಿಂದ ಫಾಲ್ಗುಣ ಶು|| 13 ಸೋಮವಾರ ದಿವಸ ನೆರವೇರಿಸಿದರು. 5 ಘಂಟೆಗೆ ಸಭೆ ಸೇರಿತು. ಪ್ರಥಮತಃ ವಿದ್ಯಾರ್ಥಿಗಳು ಶ್ರೀ ಜಗದ್ಗುರು ರೇಣುಕರ ಭಾವಪಟವನ್ನು ಪಂಚೋಪಚಾರಗಳಿಂದ ಅರ್ಚಿಸಿದರು. ಆ ಮೇಲೆ ವೇ|| ಶಿದ್ಧರಾಮಶರ್ಮ ಬಿಜಲಗಾಂವ ವೇ|| ಬಸವರಾಜಶರ್ಮ ಇವರ ಸಂವಾದರೂಪ ಭಾಷಣಗಳು ನಡೆದವು. ವೇ|| ಶಿವರುದ್ರಶರ್ಮ ವೇ|| ಓಂಕಾರಶರ್ಮ ಮ|| ರಾ|| ನೀಲಕಂಠರಾವ ಬಸನಾಳೆ ಮ|| ರಾ|| ನಾಗಭೂಷಣ ಬಿಚಗುಂದೆ ಮುಂತಾದವರ ಭಾಷಣಗಳಾದವು. ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ವಂ|| ವಿರೂಪಾಕ್ಷಶಾಸ್ತ್ರಿ ವಂದಲಿಕರ ಇವರು, ಆಚಾರ್ಯರ ಪ್ರಾಚೀನತೆಯನ್ನು ಕುರಿತು ಭಾಷಣಮಾಡಿದರು. ಶ್ರೀ ವೇ|| ರಾಚಯ್ಯಸ್ವಾಮಿ ಉರ್ಫ್ ಧರ್ಮವೀರ ಉದಗೀರಕರ ಇವರು ಭಗವತ್ಪಾದ ರೇಣುಕರು ಮಾಡಿದ ಅನಂತ ಮಹಿಮೆಗಳನ್ನು ವರ್ಣಿಸಿದರು. ಅನಂತರ ಶ್ರೀ ಪಂಚಾಚಾರ್ಯ ಭಜನಾಸಂಘದ ಬಾಲಕರು ಪಂಚಮಸ್ವರದಿಂದ ಪಂಚಾಚಾರ್ಯರ ಭಜನೆಯೊಡನೆ ಆಚಾರ್ಯಮೂರ್ತಿಗೆ ಮಂಗಲಾರತಿಯನ್ನು ಮಾಡಿದಮೇಲೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ವೀರಶೈವ ಮಂಡಲಿ ಶ್ರೀಮಂತ ಶಂಕರಪ್ಪ ಹರಡಿಗೆ.

ಗುರುಬಸಪ್ಪ ಬಸನಾಳೆ	ವಿಶ್ವನಾಥ ಮಿಡಚೆ.
ಮಹಾದೇವಪ್ಪ ಶಕ್ತಿ.	ಗುಂಡಪ್ಪ ಬೀರಗುಂಡೆ.
ಖಂಡೆ ಅಣ್ಣಾರಾವ.	ವೀರಪ್ಪ ಹರಡಿಗೆ.

ಸೋಲಾಪೂರ.

ಈ ಹೊತ್ತಿನ ದಿವಸವು ವರ್ಷದ 360 ದಿವಸಗಳ ಪೈಕಿ ಅತಿ ಶುಭದಿವಸಗಳಲ್ಲೊಂದಾಗಿದೆ. ವಿಶೇಷವಾಗಿ ವೈದಿಕಧರ್ಮದಲ್ಲಿ ಸ್ಮಾರ್ತಮತದವರು ಶಂಕರಾಚಾರ್ಯರ ಜಯಂತಿಯ ದಿವಸವನ್ನೂ ಶ್ರೀ ವೈಷ್ಣವರು ರಾಮಾನುಜಾಚಾರ್ಯರ ಜಯಂತಿಯ ದಿವಸವನ್ನೂ ಅತಿ ಪವಿತ್ರವಾದ ಹಬ್ಬದ ದಿವಸಗಳೆಂತ ತಿಳಿದು, ಆ ದಿವಸಗಳಲ್ಲಿ ತಮ್ಮ ದಿನದ ವ್ಯವಹಾರದ ಕಾರ್ಯಗಳನ್ನು ಬಿಟ್ಟು ತಮ್ಮ ತಮ್ಮ ಮತಸ್ಥಾಪಕರ (ಗುರುಗಳ) ಪ್ರಾರ್ಥನೆ, ಭಜನೆ, ಕೀರ್ತನ, ಮತ್ತು ಸ್ತುತಿಪರ ಭಾಷಣಗಳನ್ನು ಮಾಡಿ ಅವರ ವಿಷಯವಾಗಿ ತಮ್ಮಲ್ಲಿದ್ದ ಪೂಜ್ಯಬುದ್ಧಿಯನ್ನು ಮತ್ತು ಪ್ರೇಮವನ್ನು ವ್ಯಕ್ತಗೊಳಿಸುವಂತೆ, ಯಾವ ಮಹಾತ್ಮನು ಅಗಸ್ತ್ಯ ಮೊದಲಾದ ಮಹರ್ಷಿಗಳಿಗೆ ವೀರಶೈವ ಧರ್ಮವನ್ನು ಬೋಧಿಸಿದನೋ, ಯಾವ ಮಹಾತ್ಮನು ಶ್ರೀ ಚಂದ್ರಮೌಳೀಶ್ವರಲಿಂಗವನ್ನು ಶಂಕರಾಚಾರ್ಯರಿಗೆ ಅನುಗ್ರಹಿಸಿದನೋ ಅಂತಹ ವೀರಶೈವ ಮತದ ಪರಮಗುರುಗಳಾದ ಶ್ರೀ ರೇಣುಕಾಚಾರ್ಯರ ಜಯಂತಿ ಉತ್ಸವವನ್ನು ಫಾಲ್ಗುಣ ಶು|| ೧೩ ದಿವಸ ಎಲ್ಲರೂ ಅವಶ್ಯವಾಗಿ ಮಾಡಿಯೇ ತೀರಬೇಕು. ಇಲ್ಲವಾದರೆ ಕೃತಘ್ನರಾಗಿ ಉಚ್ಚನೀಚ ಭಾವಗಳನ್ನರಿಯದ ಪಶುಗಳಂತೆ ವರ್ತಿಸಿದಂತಾಗುವದು. ಆದ್ದರಿಂದ ಸರ್ವರೂ ಪಶುವಿನಂತೆ ಆಚರಿಸದೆ ಮಾನವರಿಗೆ ಯೋಗ್ಯವಾದ ಆಚಾರಗಳಿಂದ ಆಚರಿಸುವದೇ ಸರ್ವರ ಆದ್ಯಕರ್ತವ್ಯವಾಗಿರುವದು.

ಈ ಹೊತ್ತಿನ ದಿವಸ ವಾರದ ಪಾಠಶಾಲೆಯ ವಿದ್ಯಾರ್ಥಿಗಳ, ಜೈನಾಪುರ ಚರಮೂರ್ತಿಸ್ವಾಮಿಗಳಾದ ಗುರುಸ್ವಾಮಿ ಹಿರೇಮಠ ಇವರ ಮತ್ತು ಮಿ|| ಭೀಮಾಶಂಕರ ಮುಚಗೊಂಡ ಇವರ ಉತ್ಕಟೇಚ್ಛೆಯನ್ನು ಶ್ರೀಮಂತ ಬಾಬಾಸಾಹೇಬ ವಾರದ ಇವರು

ಅವಲೋಕಿಸಿ ಈ ಜಯಂತಿಯ ಕಾರ್ಯವು ನಿರ್ವಿಘ್ನವಾಗಿ ನೆರವೇರುವದಕ್ಕೆ ಒಳ್ಳೇ ಪ್ರೋತ್ಸಾಹವನ್ನು ಕೊಟ್ಟರು.

ಜಯಂತಿಯ ದಿವಸ ಸಾಯಂಕಾಲ 5 ಘಂಟೆಗೆ ಶ್ರೀ ಚನ್ನಬಸಪ್ಪ ಮಡಕಿ ಇವರ ರಮಣೀಯವಾದ ಮಂದಿರದಲ್ಲಿ ದೊಡ್ಡದೊಡ್ಡ ವ್ಯಾಪಾರಸ್ಥರೂ, ಪಟ್ಟಾಧ್ಯಕ್ಷ ಚರಮೂರ್ತಿಸ್ವಾಮಿಗಳೂ, ವಿದ್ಯಾರ್ಥಿವರ್ಗದವರೂ ಮತ್ತು ಭಗಿನೀವರ್ಗದವರೂ, ಆಗಮಿಸಿದರಲ್ಲದೆ ವೇ|| ರಾ|| ಮಲ್ಲಿಕಾರ್ಜುನಸ್ವಾಮಿ ಕೊಗ್ಗಿ ರಾ|| ಸಿದ್ಧರಾಮಪ್ಪ ಪಟ್ನೆ ರಾ|| ಅಣ್ಣಾರಾವ ಕುರೇ, ರಾ|| ದುಮಣೆ, ರಾ|| ಮಲ್ಲಿಕಾರ್ಜುನಪ್ಪಾ ಎಣಪೆ ರಾ|| ಶಂಕರರಾವ್ ಚಕೋತೆ, ಸೌ|| ಪಂಚವ್ವಬಾಯಿ ಸಂದಾರ ಸೌ|| ಸಂಗವ್ವಬಾಯಿ ಮಡಕೀ ಶ್ರೀಮತಿ ಗೌರವ್ವಬಾಯಿ ವಾರದ ಸೌ|| ಭಾಗೀರಥೀಬಾಯಿ ಕಟಾವ ಮತ್ತು ಶ್ರೀಮತಿ ಮುಕ್ತಾಬಾಯಿ ಶೀಟೆ ಮುಂತಾದವರು ಆಗಮಿಸಿದ್ದರು.

ಮೊದಲು ಹತ್ತು ನಿಮಿಷಗಳವರೆಗೆ ಶ್ರೀ ರೇಣುಕರ ಭಾವಚಿತ್ರಕ್ಕೆ ವೇದೋಕ್ತ ಪೂಜೆಯನ್ನು ಮಾಡಿ ಹೂವಿನಹಾರಗಳಿಂದ ಅಲಂಕರಿಸಿದನಂತರ ಮಿ|| ಲೋಣಿಮಾಸ್ತರ ಇವರು ಶ್ರೀ ಪಟ್ಟಾಧಿಕಾರಿಗಳು ಸಾಹುರಬೇಡ ಇವರಿಗೆ ಅಧ್ಯಕ್ಷರಾಗಬೇಕೆಂತಲೂ ಮತ್ತು ಇವರ (ಅಧ್ಯಕ್ಷರ) ಅನುಮತಿಗನುಸಾರವಾಗಿ ಶ್ರೀ ಮಹಾಲಿಂಗಸ್ವಾಮಿ ಕಾಶೀಕರ ಇವರು ಉಪಾಧ್ಯಕ್ಷರಾಗಬೇಕೆಂತಲೂ ಸೂಚನೆಯನ್ನು ತಂದರು. ಅದಕ್ಕೆ ಚಿಂಚೋಳಿಪಟ್ಟದ ದೇವರು ಅನುಮೋದನೆಯನ್ನು ಕೊಟ್ಟನಂತರ ಸದರಿಯವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು.

ಹಿಂಚಗೇರಿ ಪಟ್ಟದಸ್ವಾಮಿಗಳು ಆರ್ಥಿಕದೃಷ್ಟಿಯಿಂದ ಲಕ್ಷ್ಮೀದೇವಿಯ ಸಮಾರಂಭದ ದಿವಸವಾದ ದೀಪಾವಳಿಯು ಹೇಗೆ ಮಹತ್ವವುಳ್ಳದೋ ಹಾಗೆಯೇ ಧಾರ್ಮಿಕದೃಷ್ಟಿಯಿಂದ ಶ್ರೀ ರೇಣುಕರ ಜಯಂತಿಯ ದಿವಸವು ಮಹತ್ವವುಳ್ಳದೆಂದೂ, ಬಂಗಾರದಲ್ಲಿ ಉತ್ತಮವಾದ ಮೂರ್ತಿಯನ್ನು ಮಾಡಿದ ಪತ್ತಾರನನ್ನು ಜನರು ಹೊಗಳುವರೆಂದಮೇಲೆ ಬಂಗಾರವನ್ನೇ ಮಾಡಿದಂಥವನನ್ನು ಯಾವ ರೀತಿಯಿಂದ ಹೊಗಳಬೇಕೆಂದೂ ಮನೋಹರವಾಗಿ ಭಾಷಣಮಾಡಿದರು.

ಮಲ್ಲಿಕಾರ್ಜುನಶಾಸ್ತ್ರಿಗಳು ರೇಣುಕಾಚಾರ್ಯರ ಅವತಾರವು ಹ್ಯಾಗೆ ಆಯಿತೆನ್ನುವದನ್ನೂ ಪರಮೇಶ್ವರನ ಮುಖಗಳಿಂದ ಹುಟ್ಟಿದವರೆಲ್ಲರೂ ಬ್ರಾಹ್ಮಣರೆನ್ನುವದನ್ನೂ ವೇದಾಗಮ ಪ್ರಮಾಣಗಳಿಂದ ಸಿದ್ಧಮಾಡಿದರು.

ಅಲ್ಲಮಪ್ರಭು ಆಲೂರ ಇವರು ಲಂಕೆಯಲ್ಲಿ ಶ್ರೀ ಜಗದ್ಗುರುಗಳು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿ ಮೂರುಕೋಟಿ ಗುರುರೂಪವನ್ನು ತಾಳಿ ಮೂರುಕೋಟಿ ಲಿಂಗಗಳನ್ನು ಸ್ಥಾಪಿಸಿದರೆಂಬ ಬಗ್ಗೆ ಒಳ್ಳೇ ಮನೋಹರವಾಗಿ ಭಾಷಣವನ್ನು ಮಾಡಿದರು.

ಬಸವಲಿಂಗಪ್ಪ ಕಲ್ಯಾಣಶೆಟ್ಟಿ ಇವರು ಶ್ರೀ ರೇಣುಕಾಚಾರ್ಯರು ಮಾಸನೂರಿನಲ್ಲಿದ್ದ ದುಷ್ಟರಾಕ್ಷಸನನ್ನು ಹ್ಯಾಗೆ ಸಂಹರಿಸಿದರೆಂದೂ, ಮತ್ತು ಆ ಊರವರ ಸಂಕಟವನ್ನು ಹ್ಯಾಗೆ ಹೋಗಲಾಡಿಸಿದರೆಂದೂ ಭಾಷಣಮಾಡಿದರು.

ಕಡೆಗೆ ಉಪಾಧ್ಯಕ್ಷರಾದ ಶ್ರೀ ಮಹಾಲಿಂಗಸ್ವಾಮಿ ಕಾಶೀಕರ ಇವರು ಎಲ್ಲರ ಭಾಷಣಗಳ ಸಾರವನ್ನು ತೆಗೆದು ಹೇಳಿ ಶ್ರೀ ರೇಣುಕಾಚಾರ್ಯರ ಜಯಂತಿ ಉತ್ಸವವು ಸೋಲಾಪೂರದಲ್ಲಿ ಸದಾ ನಡೆಯುತ್ತ ಹೋಗಲೆಂದು ಹೇಳಿ ಭಾಷಣವನ್ನು ಮುಗಿಸಿದರು.

ಅಂತ್ಯದಲ್ಲಿ ಮಿ|| ಲೋಣೆ ಇವರು ಎಲ್ಲರ ಆಭಾರಮನ್ನಿಸಿದನಂತರ ಎಲ್ಲರೂ ಎದ್ದು ನಿಂತು ಶ್ರೀ ಜಗದ್ಗುರುಗಳ ಮಂಗಲಸ್ತೋತ್ರವನ್ನು ಮಾಡಿದರು. ಆ ಮೇಲೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪುಷ್ಪಹಾರಗಳಿಂದ ಅಲಂಕರಿಸಲ್ಪಟ್ಟರು. ಕೂಡಲೇ ಉಪಾಧ್ಯಕ್ಷರು ತಮ್ಮ ಕಂಠದೊಳಗಿನ ಹೂಮಾಲೆಯನ್ನು ಆಶೀರ್ವಾದರೂಪದಿಂದ ಶ್ರೀಮಂತ ಬಾಬಾಸಾಹೇಬ ವಾರದ ಇವರ ಕೊರಳಲ್ಲಿ ಹಾಕಿ ದರವರ್ಷ ಇದೇ ಪ್ರಕಾರ ಶ್ರೀ ಜಗದ್ಗುರುಗಳ ಜಯಂತಿಯನ್ನು ತಪ್ಪದೆ ಮಾಡಬೇಕೆಂದು ಆಜ್ಞಾಯಿತ್ತರು. ಅದಕ್ಕೆ ಶ್ರೀಮಂತರು ಎಲ್ಲರ ಸಹಾನುಭೂತಿಯನ್ನು ಬೇಡಿದರು. ಕೂಡಲೇ ಸಭಿಕರೆಲ್ಲರೂ ಅನುಮೋದನವನ್ನು ಕೊಟ್ಟರು. ಅನಂತರ ತಾಂಬೂಲಾದಿವಿನಿಯೋಗವಾಗಿ ಶ್ರೀ ರೇಣುಕಾಚಾರ್ಯರ ಜಯಘೋಷವಾಗಿ ಸಭೆಯು ಮುಕ್ತಾಯವಾಯಿತು.

ಗುರುವರ್ಯಸ್ವಾಮಿ ಸುತ್ತಗಟ್ಟಿ.
ವಾರದ ಪಾಠಶಾಲಾ ಸೋಲಾಪುರ.

ನಿಖಿಲಭಾರತಾಯುರ್ವೇದ ವಿದ್ಯಾಪೀಠದ ಪರೀಕ್ಷೆಗಳು.

ಬರುವ ಏಪ್ರಿಲ್ ತಿಂಗಳು 6 ನೆಯ ತಾರೀಖು ಲಾಗಾಯಿತು 12 ರವರಿಗೆ ನಡೆಯುವವು

ದರಖಾಸ್ತುದಾರರು ಬರುವ ಮಾರ್ಚಿ ತಿಂಗಳು 30 ನೆಯ ತಾರೀಖಿನೊಳಗಾಗಿ ವಿದ್ಯಾಪೀಠದ ಆಫೀಸಿಗೆ ತಲುಪುವಂತೆ ತಮ್ಮ ಅಪ್ಲಿಕೇಷನ್‌ಗಳನ್ನು ಕಳುಹಿಸಬೇಕು.

ಈ ಸಂಬಂಧದಲ್ಲಿ ಹೆಚ್ಚು ತಿಳಿಯಬೇಕಾದ ಅಂಶಗಳನ್ನು ದರಖಾಸ್ತು ಫಾರಂಗಳಲ್ಲಿ ವಿದ್ಯಾಪೀಠದ ಆಫೀಸಿನಿಂದ ಸೀದಾ ಪಡೆಯಬಹುದು.

ಅ|| ಸೆಕ್ರೆಟರಿ,
ನಿಖಿಲಭಾರತಾಯುರ್ವೇದಮಹಾಮಂಡಲ
ಮತ್ತು ವಿದ್ಯಾಪೀಠದ ಆಫೀಸು 990 ಸದಾಶಿವಪೇಟೆ, ಪೂನಾ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ವೀರಶೈವರಲ್ಲಿ ಬಿನ್ನಹ.

ತಾ. 2-3-31 ಬೆಂಗಳೂರು ಚಿಕ್ಕಪೇಟೆ ಮಹಂತಿನಮಠದಲ್ಲಿ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಜರುಗಿದ ಶ್ರೀ ರೇಣುಕ ಜಯಂತ್ಯುತ್ಸವ ಸಮಯದಲ್ಲಿ "ಪ್ರಾಣಿಸುಮ" ಸಂಪಾದಕರಾದ ಶ್ರೀ ಗುಂಡುರಾವ್ ಖಾದ್ರಿಯವರು ಮಾಡಿದ ಉಪನ್ಯಾಸವು :—

ಅಧ್ಯಕ್ಷಮಹಾಶಯರೇ! ವೀರಶೈವಬಾಂಧವರೇ!

ಈ ದಿವಸವು ಎರಡು ಕಾರಣಗಳಿಂದ ಸುದಿವಸವಾಗಿದೆ. ನಾವೆಲ್ಲರೂ ಶ್ರೀ ರೇಣುಕ ಜಯಂತ್ಯುತ್ಸವಕ್ಕಾಗಿ ಅತಿ ಸಂಭ್ರಮದಿಂದ ಕೂಡಿರುವುದೊಂದು ಸಂತೋಷವು ಸರಿಯಷ್ಟೆ! ಕೆಲವುದಿವಸಗಳ ಹಿಂದೆ ನಾವೆಲ್ಲರೂ ಕಳವಳಪಡುವಷ್ಟು ಅನಾರೋಗ್ಯ ಸ್ಥಿತಿಯಲ್ಲಿದ್ದ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಆರೋಗ್ಯಭಾಗ್ಯವನ್ನು ಹೊಂದಿ ಇಂದು ಅಧ್ಯಕ್ಷಸ್ಥಾನವನ್ನು ವಹಿಸಿರುವುದು ಸಮಸ್ತರಿಗೂ ಆನಂದಜನಕವಾದದ್ದಾಗಿದೆ. (ಕರತಾಳ) ಶ್ರೀ ಶೆಟ್ಟರವರು ಕೇವಲ ವೀರಶೈವರಿಗೆ ಮಾತ್ರವಲ್ಲದೆ ಇಡೀ ಹಿಂದೂ ಸಮಾಜಕ್ಕೇ ತಿಲಕಪ್ರಾಯರಾಗಿದ್ದಾರೆ. ಇಂತಹ ಧರ್ಮಾಭಿಮಾನಿಗಳು ನೂರಾರು ವರ್ಷಗಳು ಬಾಳಿ ಸಮಾಜಸೇವೆಯನ್ನು ಮಾಡಲೆಂದು ಜಗದೀಶ್ವರನನ್ನು ನಾವೆಲ್ಲರೂ ಏಕಮನಸ್ಕರಾಗಿ ಪ್ರಾರ್ಥಿಸಬೇಕು.

ನಾನು ಆಮಂತ್ರಿತನಾಗಿ ಪ್ರತಿವರ್ಷವೂ ಈ ಮಹೋತ್ಸವದಲ್ಲಿ ಭಾಗಿಯಾಗುತ್ತಾ ಇದ್ದೇನೆ. ಇಂದಿನ ಸಭೆಯಲ್ಲಿ ಸ್ವಾರಸ್ಯವಾಗಿ ಉಪನ್ಯಾಸಮಾಡಿದ ಯುವಕರೆಲ್ಲರಲ್ಲಿ ಒಂದು ಹೊಸರೂಪು ತೆಗೆದುಕೊಂಡಿರುವುದಕ್ಕಾಗಿ ನಾನು ಅವರೆಲ್ಲರನ್ನೂ ಅಭಿನಂದಿಸಬೇಕಾಗಿದೆ. ಅದೇನೆಂದರೆ ಪರಮತಸಹಿಷ್ಣುತೆ. ಇದು ಈಗಿನ ಕಾಲದಲ್ಲಿ ಮುಖ್ಯವಾಗಿ ಗಮನಿಸುವ ವಿಚಾರವಾಗಿದೆ. ವೀರಶೈವಮತವು ಹಿಂದೂ ಧರ್ಮದ ಒಂದು ಮುಖ್ಯಾಂಗವಾಗಿದೆ. ವೀರಶೈವರು ಸತ್ಕರ್ಮನಿಷ್ಠರಾಗಿರುವುದರಿಂದ ಉತ್ತಮವರ್ಗದವರೆಂದು ಪ್ರಖ್ಯಾತರಾಗಿರುವರು. ಉತ್ತಮರ ಧ್ಯೇಯವು ಯಾವಾಗಲೂ ಉದಾತ್ತವಾದದ್ದಾಗಿರಬೇಕು. ವಿದ್ಯಾವಂತರಿಗೆ ವಿನಯವೇ ಭೂಷಣವಾಗಿರುವುದರಿಂದ, ಈ ಸಂಪತ್ತಿಯು ಅವರಲ್ಲಿ ತುಂಬಿತುಳುಕಾಡುತ್ತಿರಬೇಕು. ಈ ಶುಭಲಕ್ಷಣವು ನವಯುವಕರಲ್ಲಿ ಒಡಮೂಡಿದುದನ್ನು ನೋಡಿ ನನಗೆ ಅಪಾರ ಸಂತೋಷವಾಗಿದೆ.

ನಾನು ಹಿಂದೂಸಮಾಜದ ಪರವಾಗಿ ತಮ್ಮಲ್ಲಿ ಒಂದೆರಡು ಭಿಕ್ಷೆಗಳನ್ನು ಬೇಡಲು ಬಂದಿರುತ್ತೇನೆ. ಇಂದು ನಮ್ಮ ಸಮಾಜದ ಪರಿಸ್ಥಿತಿಯು ಅತ್ಯಂತ ಭಯಂಕರವಾಗಿದೆ. ನಮ್ಮಗಳ ಅಂದರೆ ಉತ್ತಮವರ್ಗದವರೆನಿಸಿಕೊಂಡಿರುವವರ ಬೇಜವಾಬ್ದಾರಿಯೇ ಇದಕ್ಕೆ ಮೂಲಕಾರಣವು. ಪವಿತ್ರಭೂಮಿಯಲ್ಲಿ ನಮ್ಮ ಪೂರ್ವಭವದ ಪುಣ್ಯದಿಂದ ಜನಿಸಿರಲು ನಮಗಿರುವ ಅಲ್ಪಾವಧಿಯಲ್ಲಿ ವಿಶಾಲದೃಷ್ಟಿಯಿಂದ ಪರೋಪಕಾರಬುದ್ಧಿಯುಳ್ಳವರಾಗಿರದೆ ಸಣ್ಣ ಸಣ್ಣ ವಿಷಯಗಳಿಗೆ ಹೆಚ್ಚು ಗಮನಕೊಡುತ್ತಾ ಅಂತಃಕಲಹಗಳನ್ನು ಹೆಚ್ಚಿಸಿ ಮಹತ್ಕಾರ್ಯವನ್ನು ಮಾಡುತ್ತಿರುವೆವೆಂದು ಹಿಗ್ಗುತ್ತಿರುವೆವು. ಮತ್ತು ನಮ್ಮ ಬಾಲಬಾಲಿಕೆಯರನ್ನು ಧರ್ಮಗ್ರಂಥಗಳ ಗಂಧವೇ ಇಲ್ಲದ ಕೇವಲ ಲೌಕಿಕವಿದ್ಯಾಭ್ಯಾಸಕ್ಕೆ ಹಾಕಿ ಅವರುಗಳನ್ನು ಆಟದಗೊಂಬೆಗಳನ್ನಾಗಿ ಮಾಡಿರುವೆವು. ಇದನ್ನೆಲ್ಲಾ ತಿಳಿದ ಕ್ರೈಸ್ತರು ನಮ್ಮನ್ನು ಮೋಸಗೊಳಿಸಿ ನಮ್ಮ ಮಕ್ಕಳುಗಳನ್ನೆಲ್ಲಾ ತಮ್ಮ ಬಲೆಯಲ್ಲಿ ಹಾಕಿಕೊಳ್ಳಲು ಮಾಡುತ್ತಿರುವ ಪ್ರಯತ್ನಕ್ಕೆ ನಾವುಗಳು ಸರ್ವಸಹಾಯವನ್ನೀಯುತ್ತಿರುವೆವು. ಇದರಿಂದ ಕ್ರೈಸ್ತ ಸಂಪ್ರದಾಯಗಳು ಚಿಕ್ಕವರಲ್ಲಿ ಬೇರೂರಿ ದೊಡ್ಡವರಾದ ಕೂಡಲೆ ಇವರೆಲ್ಲರೂ ಸ್ವಸಮಾಜನಿಂದಕರಾಗುವರು. ಇದು ನಮ್ಮಗಳ ತಪ್ಪಲ್ಲವೇ? ಲತೆಯನ್ನು ಚಪಾತಕಳ್ಳಿಯ ಸಮೀಪದಲ್ಲಿ ಊರಿದರೆ ಅದರ ಮೇಲೆ ಹಬ್ಬುವುದು. ಚಂದನವೃಕ್ಷದ ಹತ್ತಿರಿಟ್ಟರೆ ಅದರ ಮೇಲೆ ಹಬ್ಬುವುದು. ಇಂತಹ ಮುಖ್ಯವಿಷಯಗಳಿಗೆ ಹೆಚ್ಚುಗಮನವನ್ನು ಕೊಟ್ಟುಕೊಳ್ಳಲು ಸರ್ವಸಹಾಸವನ್ನು ನಡೆಯಿಸತಕ್ಕ ಕಾರ್ಯವು ತಮ್ಮೆಲ್ಲರದಾಗಿದೆ.

ಈಗ ನಮ್ಮ ಕರ್ನಾಟಕದಲ್ಲಿ ಕ್ರೈಸ್ತಮತ ಬೋಧಕರ ಹೆಸರುಗಳನ್ನು ಕೇಳಿದರೆ ಅವರಲ್ಲಿ ವೀರಶೈವರಾಗಿದ್ದವರೇ ಹೆಚ್ಚಾಗಿ ದೊರೆಯುವರು. ಗುರುಪಾದಪ್ಪ, ಗುರುಲಿಂಗಪ್ಪ, ಗುರುಷಂಜಪ್ಪ, ಚರಂತಯ್ಯ ಮುಂತಾದ ನಾಮಗಳು ಶುದ್ಧಾಂಗವಾಗಿ ವೀರಶೈವರವು. ನಮ್ಮ ಸಮಾಜದಲ್ಲಿ ವಿದ್ಯಾವಂತರಾದವರು ಪರಮತೀಯರ ಥಾಳಿಗೆ ಸಿಲ್ಕಿ ಕಾಂಚನಕಾಮಿನಿಗಳಿಗೆ ಮರುಳಾಗಿ ಹೋಗಿ ಸಮಾಜಘಾತುಕರಾಗುತ್ತಿರುವುದನ್ನು ನೀವುಗಳು ಸಹಿಸುವುದು ಲಜ್ಜಾಸ್ಪದವಲ್ಲವೇ?

ಮತ್ತೊಂದು ವಿಚಾರ. ವೀರಶೈವಮತವು ಅಹಿಂಸಾತತ್ವದಲ್ಲಿ ಜೈನರಿಗೆ ಕಡಿಮೆಯಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಅನೇಕ ಕಡೆಗಳಲ್ಲಿ ಪಟೇಲರಾಗಿರುವ ಮತ್ತು ರೈತಾಪಿಗಳಾದ ವೀರಶೈವರು ವಧಾಪೂರ್ವಕ ಮಾರಿಜಾತ್ರೆಗಳಿಗೆ ಹೆಚ್ಚಾಗಿ ಬೆಂಬಲವನ್ನು ಕೊಡುತ್ತಿರುವುದು ದುಃಖಪ್ರದವಾದದ್ದಾಗಿದೆ. ಕಳೆದ ತಿಂಗಳಲ್ಲಿ ಅನೇಕ ವೀರಶೈವರಿಂದ ತುಂಬಿರುವ ಶಿವಮೊಗ್ಗದಲ್ಲಿ ಭಯಂಕರಕೊಲೆಯಿಂದ ಕೂಡಿದ ಮಾರೀಜಾತ್ರೆ ಕಾಲದಲ್ಲಿ ಪ್ರಬಾರಮಾಡಲು ನಾನು ಹೋಗಿರಲು ಶ್ರೀ ಪಂಚಾಕ್ಷರಯ್ಯನವರೊಬ್ಬರು ಮಾತ್ರ ದಯಾಧರ್ಮಕ್ಕೆ ಬೆಂಬಲವನ್ನು ಕೊಟ್ಟರು. ಮಿಕ್ಕ ಉತ್ತಮವರ್ಗದವರನೇಕರು ಈ ಕರಾಳಸ್ವರೂಪದ ಉತ್ಸವಕ್ಕೆ ದ್ರವ್ಯಸಹಾಯಮಾಡಿದರಂತೆ! ಇಂತಹ ಅಜ್ಞಾನವನ್ನು ಸಮಾಜದಿಂದ ಕಿತ್ತುಹಾಕುವ ಕೆಲಸವು ನಿಮ್ಮೆಲ್ಲರಿಗೂ ಸೇರಿದೆ.

ನಾವು ಉತ್ತಮವರ್ಗದವರು. ಭಸ್ಮ ರುದ್ರಾಕ್ಷಿಗಳ ಧಾರಣೆ, ಶಿವಪೂಜೆ ಮಾಡುತ್ತೇವೆಂದು ಸಂತುಷ್ಟರಾದರೆ ಸಾಲದು. ಪರಮಾತ್ಮನ ಪ್ರೀತ್ಯರ್ಥವಾಗಿಮಾಡುವ ಕೆಲಸಗಳು ಅನೇಕವಿರುತ್ತವೆ. ಒಂದೇ ಹಡಗಿನಲ್ಲಿ ಕೂತಿರುವವರಲ್ಲಿ 3-4 ಜನಗಳು ಮಾತ್ರ ವಿವೇಕಿಗಳಿದ್ದು ಉಳಿದವರು ಸುರಾಪಾನವನ್ನು ಮಾಡುತ್ತಿದ್ದರೆ ನೋಡಿ ಸುಮ್ಮನೆಕುಳಿತರೆ ಆ ಮೇಲೆ ಕುಡಿದವರು ಮತ್ತರಾಗಿ ಕುಣಿದಾಡಿ ಹಡಗು ಕೀಳುಮೇಲಾಗಿ ಮುಳುಗಿದರೆ ವಿವೇಕಿಗಳೂ ನೀರುಪಾಲಾಗಬೇಕಲ್ಲವೆ? ಈ ದೃಷ್ಟಿಯಿಂದ ನೋಡಿದರೆ ನಮ್ಮಗಳ ಜವಾಬ್ದಾರಿಯು ಎಷ್ಟೆಂಬುದನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ.

ಈ ದಿವಸ ನಮ್ಮ ಅಧ್ಯಕ್ಷಮಹಾಶಯರು ಅಸ್ವಸ್ಥರಾಗಿದ್ದು ಹೆಚ್ಚಿಗೆ ಕಾಲ ಕೂಡಲವಕಾಶವಿಲ್ಲದಿರುವದರಿಂದ ಈ ಒಂದೆರಡು ವಿಚಾರಗಳನ್ನು ಮಹಾಜನರ ಮುಂದಿಟ್ಟು ವಿರಮಿಸುತ್ತೇನೆ.

ಓರ್ವಪ್ರೇಕ್ಷಕ.

ಶ್ರೀ ವೀರೇಶಾಯ ನಮಃ

ಜಾಹೀರವಿನಂತಿ.

ಶಿಂಗಟಾಲೂರ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಪಂಚಕಮಿಟಿಯಿಂದ.

ಶ್ರೀ ಸ್ವಾಮಿಯ ರಥೋತ್ಸವವು ಪುರಾತನ ಪದ್ಧತಿಗನುಸರಿಸಿ ಪ್ರಜೋತ್ಪತ್ತಿ ಸಂ|| ರದ ಚೈತ್ರ ಶು|| ೧ ರಿಂದ ಚೈತ್ರ ಶು|| ೪ ವರೆಗೆ ರಥೋತ್ಸವ ಸಂಬಂಧಿ ಪೂರ್ವೋಕ್ತಕಾರ್ಯಕ್ರಮಗಳು ಹಾಗೂ ಶ್ರೀ ರುದ್ರಾಭಿಷೇಕವು ನಡೆದು ಶು|| ೫ ತಾ|| ೨೪-೩-೧೯೩೧ ನೇ ಮಂಗಳವಾರ ದಿವಸ ನವೀನ ರಥೋತ್ಸವವು ಮತ್ತು ಶು|| ೬ ಬುಧವಾರ ಉದಯಕ್ಕೆ ಅಗ್ನಿಕುಂಡಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರುವದಾದ ಪ್ರಯುಕ್ತ ಸರ್ವರೂ ಆಗಮಿಸಿ ಉತ್ಸವಭಾಗಿಗಳಾಗಬೇಕೆಂದು ಆಶಿಸುತ್ತೇವೆ.

ಸದರಿ ಜಾತ್ರೆಗೆ ಬರುವ ಮತ್ತು ಬಂದ ಜನರು ಪಾಲಿಸತಕ್ಕ ನಿಯಮಗಳು.

೧. ಇಲ್ಲಿಗೆ ಬರುವ ವ್ಯಾಪಾರಿ ಜನರು ಈಗಿನ ಪರಿಸ್ಥಿತಿಗನುಸರಿಸಿ ತಿಂಬುಂಬುವ (ವ) ಉಡುಕೊಡುವ ಮತ್ತು ಗಾಜಿನಬಳೆ ವಗೈರೇ ಯಾವ ಪ್ರಕಾರದ ಪರದೇಶಿ ಸಾಮಾನುಗಳನ್ನು ಖಂಡಿತವಾಗಿ ತರಕೂಡದು, ಕದಾಚಿತ್ ತಂದಲ್ಲಿ ವ್ಯಾಪಾರದ ಲಾಭವನ್ನು ಪಡೆಯದೆ ದೇಶದ್ರೋಹವನ್ನು ಮಾತ್ರ ತಮ್ಮ ಪದರಿನಲ್ಲಿ ಕಟ್ಟಿಕೊಳ್ಳಬೇಕಾದೀತು.

೨. ಜೂಜಾದ ಅಂಗಡಿಯವರಿಗೆ ಖಂಡಿತವಾಗಿ ಸ್ಥಳವು ಸಿಗಲಾರದು.

೩. ಇಲ್ಲಿಗೆ ಬಂದಂಥ ಜನರು ಶು|| ೬ ಬುಧವಾರ ದಿವಸ ಜರುಗುವ ಅಗ್ನಿಕುಂಡಪೂಜಾ ಕಾಲಕ್ಕೆ ತಾವು ಸಿಂಹಜಾಗದಿಂದಲೇ ಕಾಯಿ ಒಗೆಯುವದೂ ಮತ್ತು ಅಗ್ನಿಕುಂಡವನ್ನು ಮುಚ್ಚುವ ಕಾಲಕ್ಕೆ ಸಿಂಹಸ್ಥಳದಿಂದಲೇ ಮಣ್ಣು ಒಗೆಯುವದೂ ಇತ್ಯಾದಿ ಮೂಢಭಕ್ತಿಯನ್ನು ತೋರಿಸುವುದರಿಂದ ಜನರಿಗೆ ಅಪಾಯವಾಗುವ ಸಂಭವವದೆ, ಆದ ಪ್ರಯುಕ್ತ ಈ ತರದ ಮೂಢಭಕ್ತಿಯನ್ನು ಖಂಡಿತವಾಗಿ ಮಾಡಕೂಡದು.

೪. ಸದರಿ ಅಗ್ನಿಕುಂಡದಲ್ಲಿ ದೇವರನ್ನು ಧರಿಸಿದವರು ಮಾತ್ರ ಹಾಯತಕ್ಕದ್ದು. ಇತರ ಜನರು ಹಾಯಬಾರದು. ಕದಾಚಿತ್ ಹರಕೆ ಇದ್ದವರಾಗಲಿ ಭಕ್ತಿಭಾವದವರಾಗಲಿ ಅಗ್ನಿಕುಂಡದಲ್ಲಿ ಹಾಯಬೇಕೆಂಬ ಅಭಿಲಾಷೆ ಇದ್ದರೆ ಒಂದುದಿವಸ ಮುಂಚಿತವಾಗಿ ಕಮಿಟಿಯವರಿಗೆ ತಿಳಿಸಿ ದೇವರಿಗೊಂದು ರೂಪಾಯಿ ಕಾಣಿಕೆಯನ್ನು ಕೊಟ್ಟು ಕಮಿಟಿಯವರಿಂದ ಪಾಸುಹೊಂದಿ ಹೋಗಬಹುದು.

೫. ನದೀತೀರದಲ್ಲಿ ಮಲಮೂತ್ರವಿಸರ್ಜನೆ ಮಾಡಕೂಡದು. ಜನದಟ್ಟಣೆಯನ್ನು ಬಿಟ್ಟು ಅಜಮಾಸು ಎರಡು ಫರ್ಲಾಂಗು ದೂರದಲ್ಲಿ ಹೋಗತಕ್ಕದ್ದು.

೬. ದನಗಳಿಗೆ ನೀರು ಕುಡಿಸುವದು, ಮೈ ತೊಳೆಯುವದು, ಜನದಟ್ಟಣೆಯುಳ್ಳ ಸ್ಥಳದಲ್ಲಿ ಅಥವಾ ನದಿ ಮೇಲ್ಭಾಗದಲ್ಲಿ ಮಾಡುವದರಿಂದ ಜನರ ಆರೋಗ್ಯಕ್ಕೆ ಭಂಗಬರುವದಾದಕಾರಣ ಅಗ್ನಿಕುಂಡದ ಕೆಳಭಾಗದ ನದಿಯಲ್ಲಿ ಮಾಡತಕ್ಕದ್ದು.

೭. ಇದೇ ಶು|| ೭ ಗುರುವಾರ ತಾ|| ೨೬-೩-೧೯೩೧ ನೇ ದಿವಸ ದೇವಸ್ಥಾನದ ವಾರ್ಷಿಕ ಜನರಲ್ ಕಮಿಟಿ ಕೂಡುವದು. ಯಾವತ್ತು ಜನರು ದಯಮಾಡಿ ಕಮಿಟಿಗೆ ಬಂದು ತಮಗೆ ಯೋಗ್ಯಕಂಡ ಸಲಹೆಗಳನ್ನು ಕಮಿಟಿಯಲ್ಲಿ ತರಬಹುದು.

೮. ಅಂಗಡಿಕಾರರು ಗುಡಾರಹೊಡೆಯುವ ತಮ್ಮ ಜಾಗಾ ೨ ದಿವಸ ಮುಂಚಿತವಾಗಿ ಕಮಿಟಿಯರಿಗೆ ತಿಳಿಸಿ ಪರವಾನಗಿ ಪಡೆಯತಕ್ಕದ್ದು. ಹೀಗೆ ಮಾಡಿದರೆ ಜಾಗಾದ ತಕರಾರು ನಡೆಯಲಾರದು.

ಈ ಎಲ್ಲ ನಿಯಮಗಳನ್ನು ಅತ್ಯವಶ್ಯವಾಗಿ ಸರ್ವರೂ ಪಾಲಿಸತಕ್ಕ ಸದ್ಬುದ್ಧಿಯನ್ನು ಸ್ಥಾನಾಧಿಪತಿಯಾದ ಶ್ರೀ ವೀರೇಶನು ಕೊಡಲೆಂದು ಹಾರೈಸುತ್ತೇವೆ.

ಶ್ರೀ ದೇವಸ್ಥಾನ
ತಾ. ೧೦-೩-೧೯೩೧.

ಪ್ರೆಸಿಡೆಂಟ
ಗುರುಭಕ್ತ ಕೇಸರಿ
S.V. Kubasad, ಹಮ್ಮಿಗಿ.

ಪಂಚಾಚಾರ್ಯ ಪ್ರಭಾ.

೧೯೩೧ ನೇ ಮಾರ್ಚಿ ತಾ|| ೧೬ನೆಯ ಸೋಮವಾರ.

ನೂತನವರ್ಷ.

ನಾವು ಪರಮೇಶ್ವರನ ಅನುಗ್ರಹದಿಂದ ಈ ಪ್ರಮೋದಸಂವತ್ಸರವನ್ನು ಕಳೆದೆವು. ಇನ್ನು ಒಂದೆರಡು ದಿವಸಗಳು ಮಾತ್ರ ಉಳಿದಿರುತ್ತವೆ. ಈ ಸಂವತ್ಸರವು ತನ್ನ ನಾಮಕ್ಕನುಸಾರವಾಗಿ ಜನಗಳಿಗೆ ಆನಂದವನ್ನುಂಟುಮಾಡುವುದೆಂದು ಜನರು ಪರಿಭಾವಿಸಿದ್ದರು. ಆದರೆ ಇದಕ್ಕೆ ಪ್ರತಿಯಾಗಿ ಭಾರತೀಯರು ಅನೇಕ ಕಷ್ಟಪರಂಪರೆಯನ್ನೇ ಅನುಭವಿಸಿದರು. ಸತ್ಯಾಗ್ರಹನಿಮಿತ್ತವಾಗಿ ವ್ಯಾಪಾರಕ್ಕವಕಾಶವಿಲ್ಲದುದರಿಂದ ಅನೇಕ ವ್ಯಾಪಾರಿಗಳು ನಷ್ಟವನ್ನು ಹೊಂದಿ ವ್ಯಸನಾಕ್ರಾಂತರಾದರು. ಆದರೂ ದೇಶಭಕ್ತಿಯ ಉದ್ರೇಕದಿಂದ ಧೈರ್ಯಗುಂದದೆ ಸ್ವರಾಜ್ಯಲಾಭಕ್ಕಾಗಿ ಹೂಡಿದ ಅಹಿಂಸಾಮಯಸತ್ಯಾಗ್ರಹಸಮರದಲ್ಲಿ ಭಾಗವನ್ನು ವಹಿಸಿ ಸಂಪೂರ್ಣ ಸ್ವಾರ್ಥತ್ಯಾಗಮಾಡಿ ಏಕಮುಖವಾಗಿ ಕಾರ್ಯಾಸಕ್ತರಾದುದರಿಂದ ಪ್ರಮೋದಸಂವತ್ಸರದ ಆದಿಭಾಗದಲ್ಲಿ ಮಹಾದುಃಖವನ್ನು ಅನುಭವಿಸಿದರೂ ಅಂತ್ಯಭಾಗದಲ್ಲಿ ಆ ದುಃಖಗಳೆಲ್ಲವೂ ಏಕಕಾಲದಲ್ಲಿಯೇ ನಿವಾರಣೆಯಾಗಿ ಸಂತೋಷದ ಚಿಹ್ನಗಳು ಒಡಮೂಡಿರುತ್ತವೆ. ಇದರಿಂದ ಪ್ರಮೋದಸಂವತ್ಸರವು ಅಲ್ಪಸ್ವಲ್ಪವಾಗಿ ತನ್ನ ಕಾರ್ಯವನ್ನು ಮಾಡಿಕೊಂಡಂತಾಯಿತು. ಇನ್ನು ಪ್ರಜೋತ್ಪತ್ತಿಸಂವತ್ಸರವು ಮೆಲ್ಲನೆ ಸ್ವರಾಜ್ಯವೆಂಬ ಪುತ್ರನನ್ನು ಪಡೆದು ಭಾರತೀಯರನ್ನು ಸಂತೋಷಪಡಿಸುವುದೆಂದು ನಂಬಲರ್ಹವಾದ ಚಿಹ್ನಗಳು ಕಂಡುಬರುತ್ತಿರುವುವು. ಇಂತಹ ಶುಭಾವಹವಾದ ಪ್ರಜೋತ್ಪತ್ತಿ ಸಂವತ್ಸರವು ಇದೇ ಚೈತ್ರಶುದ್ಧ ಪ್ರತಿಪ್ರತ್ (20-3-31) ಶುಕ್ರವಾರ ದಿವಸದಿಂದ ಪ್ರಾರಂಭವಾಗುವುದು. ಈ ದಿವಸವನ್ನು ನಮ್ಮ ಭಾರತೀಯರು ಯುಗಾದಿಯೆಂದು ವ್ಯವಹಾರಮಾಡುತ್ತಾರೆ. ಈ ಹೆಸರು ಬರಲು ಕಾರಣವನ್ನು ಅನೇಕರು ಅನೇಕವಿಧವಾಗಿ ಹೇಳುತ್ತಾರೆ. ಸೃಷ್ಟ್ಯಾರಂಭದಲ್ಲಿ ಅಖಿಲಬ್ರಹ್ಮಾಂಡನಾಯಕನಾದ ಶ್ರೀಪರಶಿವನು ಒಂದು ದಿವಸ ಸ್ಥಾವರ ಜಂಗಮಾತ್ಮಕವಾದ ಜಗತ್ತನ್ನು ಇಚ್ಛಾಮಾತ್ರದಿಂದ ಸೃಷ್ಟಿಸಿ ಆ ದಿವಸಕ್ಕೆ ಯುಗಾದಿ ಅಥವಾ ಚೈತ್ರಶುದ್ಧಪ್ರತಿಪತ್ ಎಂಬ ಹೆಸರನ್ನಿಟ್ಟು ತಿಥಿ ವಾರ ನಕ್ಷತ್ರಗಳನ್ನು ಯೋಜಿಸಿ ದೇವತೆಗಳನ್ನು ಕರೆದು ಅವರವರ ಯೋಗ್ಯತಾನುಸಾರವಾಗಿ ಜಗದ್ರಕ್ಷಣೆಯ ಭಾರವನ್ನು ವಹಿಸಿದನು. ಆಗ ದೇವತೆಗಳು ಹಿಮಾಲಯಕ್ಕೆ ಬಂದು ತಮ್ಮತಮ್ಮ ಅಧಿಕಾರವನ್ನು ನಡೆಯಿಸಲು ಪ್ರಾರಂಭಮಾಡಿದರು. ಅಂದಿನಿಂದಲೂ ಈ ದಿವಸವನ್ನು ಯುಗಾದಿಯೆಂದು ಕರೆಯುವ ರೂಢಿಯು ಬಿದ್ದಿತೆಂದು ಹೇಳುವರು.

ಪ್ರಪಂಚೇಚ್ಛೆಯುಳ್ಳ ನಾರದನು ಸ್ತ್ರೀ ರೂಪವನ್ನು ಧರಿಸಲು ದೇವತೆಗಳು ಆಕೆಯ ಹೊಟ್ಟೆಯಲ್ಲಿ ಅರವತ್ತು ಜನ ಪುತ್ರರನ್ನು ಪಡೆದರು. ಆ ಪುತ್ರರೇ ಪ್ರಭವಾದಿ ಅರವತ್ತುಸಂವತ್ಸರಗಳಾದವು. ದೇವತೆಗಳು ಪುತ್ರೋದ್ಭವ ನಿಮಿತ್ತವಾಗಿ ಪ್ರತಿಯೊಂದು ಸಂವತ್ಸರ ಆರಂಭದಲ್ಲಿ ಆನಂದೋತ್ಸವವನ್ನು ಮಾಡಿದರು. ಅಂದಿನಿಂದಲೂ ಜನಗಳು ಈ ದಿವಸವನ್ನು ದೊಡ್ಡಹಬ್ಬದ ದಿನವನ್ನಾಗಿ ಆಚರಿಸುತ್ತಾರೆಂದು ಐತಿಹ್ಯವುಂಟು.

ದೂರ್ವಾಸ ಮಹರ್ಷಿಗಳ ಶಾಪದಿಂದ ದೇವೇಂದ್ರನ ಸಂಪತ್ತೆಲ್ಲವೂ ಸಮುದ್ರದಲ್ಲಿ ಬೀಳಲು ಮಹಾವಿಷ್ಣುವಿನ ಆಜ್ಞೆಯಮೇರೆಗೆ ದೇವದಾನವರೆಲ್ಲರೂ ಒಟ್ಟುಗೂಡಿ ಸಮುದ್ರವನ್ನು ಕಡೆದರು. ಒಂದು ಸಮಯದಲ್ಲಿ ಅತಿಭಯಂಕರವಾದ ವಿಷವು ಹುಟ್ಟಿ ಪ್ರಪಂಚವನ್ನು ಸುಡಲು ಆರಂಭಿಸಿತು. ದೇವತೆಗಳು ಆ ಸಂಕಟವನ್ನು ಸಹಿಸದೆ ಪರಶಿವನನ್ನು ಪ್ರಾರ್ಥಿಸಲು ಆತನು ಪ್ರತ್ಯಕ್ಷನಾಗಿ ಇದೇ ಚೈತ್ರಶುದ್ಧ ಪ್ರತಿಪದೆಯ ದಿವಸವೇ ಆ ಹಾಲಾಹಲವನ್ನು ಪಾನಮಾಡಿ ಕಂಠದಲ್ಲಿ ಧರಿಸಿ ಜಗತ್ತನ್ನು ರಕ್ಷಿಸಿದನು. ಇದರ ಜ್ಞಾಪಕಾರ್ಥವಾಗಿ ಈ ದಿವಸ ನಿಂಬಪತ್ರವ (ಬೇವ) ನ್ನು ಸೇವಿಸುವ ಸಂಪ್ರದಾಯವು ಬಂದಿರುತ್ತದೆ ಎಂದು ಕೆಲವರು ಹೇಳುವರು.

ಈ ದಿವಸ, ಪೂರ್ವಕಾಲದಿಂದಲೂ ನಮ್ಮ ಹಿರಿಯರು ಕೆಲವು ಕ್ರಮಗಳನ್ನು ತೋರಿಸಿಕೊಟ್ಟಿರುತ್ತಾರೆ. ಪ್ರಾತಃಕಾಲದಲ್ಲೆದ್ದು ದೇವರ ಸ್ಮರಣಮಾಡಿ ಶೌಚಾಚಮನಗಳನ್ನು ಪೂರ್ತಿಗೊಳಿಸಿ ಮುಖಮಾರ್ಜನಾದಿಗಳನ್ನುಮಾಡಿಕೊಂಡು ತೈಲಾಭ್ಯಂಜನಪೂರ್ವಕ ಬಿಸಿನೀರಿನಿಂದ ಸ್ನಾನಮಾಡಿ ಮನೆಯನ್ನು ಸಾರಣೆ ಕಾರಣೆಗಳಿಂದಲೂ ತೋರಣಾದಿಗಳಿಂದಲೂ ಅಲಂಕರಿಸಿ ಸಾಂಗವಾಗಿ ತಮ್ಮ ಇಷ್ಟದೇವರನ್ನರ್ಚಿಸಿ ಪೀಠದಲ್ಲಿ ಕುಳಿತು ಆಚಮನ ಪ್ರಾಣಾಯಾಮಾದಿಗಳನ್ನು ಮಾಡಿ ಅಕ್ಷತಪಾಣಿಯಾಗಿ ದೇಶಕಾಲಗಳನ್ನು ಕೀರ್ತಿಸಿ "ಅಸ್ಮದ್ಗೃಹೇ ವರ್ಷಾಂತಂ ನಿತ್ಯಮಂಗಳಾವಾಪ್ತ್ಯೈಆತ್ಮನಃ ಆರೋಗ್ಯಪ್ರಾಪ್ತ್ಯರ್ಥಂ ಗುರುಪೂಜಾಂ ನಿಂಬಪತ್ರಭಕ್ಷಣಂಚ ಕರಿಷ್ಯೇ" ಎಂದು ಸಂಕಲ್ಪಮಾಡಿ ಗಣಪತಿಯನ್ನು ಧ್ಯಾನಿಸಿ ತನ್ನ ಕುಲಗುರುವಿನ ಪೂಜೆಯನ್ನು ನೆರವೇರಿಸಿ ನಿಂಬಪತ್ರವನ್ನು ಭಕ್ಷಿಸತಕ್ಕದು. ಆ ಮೇಲೆ ತನ್ನ ಇಷ್ಟಮಿತ್ರರೊಂದಿಗೆ ಮೃಷ್ಟಾನ್ನಭೋಜನಮಾಡಿ, ರಾಕ್ಷಸನಂತೆ ಕರಾಳಸ್ವರೂಪವಾದ ಪರದೇಶೀಯವಸ್ತ್ರಗಳನ್ನು ತ್ಯಜಿಸಿ, ಸ್ವದೇಶಪ್ರಜಾಸಂತೋಷಸೂಚಕವಾದ ಸ್ವದೇಶೀಯ ನೂತನಾಂಬರಗಳನ್ನು ಧರಿಸಿ ಗುರುಮಠಗಳಲ್ಲಿ ನಡೆಯುವ ಧಾರ್ಮಿಕೋಪನ್ಯಾಸಗಳನ್ನು ಕೇಳಿ ದೇವಗುರುಗಳ ಆಶೀರ್ವಾದವನ್ನು ಪಡೆದು ಸಾಯಂಕಾಲದಲ್ಲಿ ಗುರುಮುಖದಿಂದ ಪಂಚಾಂಗವನ್ನು ಶ್ರವಣಮಾಡಿ ಮರುದಿವಸ ಯಥಾಪ್ರಕಾರವಾಗಿ ತನ್ನ ಕಾರ್ಯವನ್ನಾರಂಭಿಸಿದ್ದಾದರೆ ಆ ವರ್ಷದ ಕಾರ್ಯಗಳೆಲ್ಲವೂ ಜಯಪ್ರದವಾಗುವುವು.

ನಚಲಂತ್ಯಖಿಲಾ ಲೋಕಾ ಸ್ವಸ್ವಮಾರ್ಗಾತ್ಕಥಂಚನ|ಅಬ್ದೇ ಪ್ರಜಾಪತೇರ್ನೂನಂ ಬಹುಸಸ್ಯಾರ್ಘವೃಷ್ಟಯಃ || ಎಂಬ ಪ್ರಮಾಣದಿಂದ ಈ ಪ್ರಜೋತ್ಪತ್ತಿ ಸಂವತ್ಸರದಲ್ಲಿ ಜನಗಳು ತಮ್ಮ ತಮ್ಮ ಧರ್ಮಗಳನ್ನು ಬಿಡದೆ ನಡೆಯಿಸುವರು. ಈ ವರ್ಷ ಸಂಪೂರ್ಣವಾಗಿ ಸುಭಿಕ್ಷೆಯೂ, ಸುವೃಷ್ಟಿಯೂ, ವ್ಯಾಪಾರವೃದ್ಧಿಯೂ ಆಗುವವು. ಅಲ್ಲದೆ ಈ ವರ್ಷ ಶುಕ್ರನು ರಾಜನಾಗಿರುವುದರಿಂದ ಮಳೆಬೆಳೆಗಳು ಚೆನ್ನಾಗಿ ನಡೆಯಿಸುವವು. ಚಂದ್ರನು ಮಂತ್ರಿಯಾಗಿರುವುದರಿಂದ ಜನರಿಗೆ ಸೌಖ್ಯವುಂಟಾಗುವುದು. ಚಂದ್ರನು ಸೇನಾಧಿಪತಿಯಾದುದರಿಂದ ರಾಜನು ಪ್ರಸನ್ನನಾಗುವುದಲ್ಲದೆ ಜನಗಳಲ್ಲಿ ಪರಸ್ಪರ ಮೈತ್ರಿಯು ಬೆಳೆಯುವದು. ಗುರುವು ಸಸ್ಯಾಧಿಪತಿಯಾದ್ದರಿಂದ ಧಾನ್ಯವು ಸಮೃದ್ಧಿಯಾಗುವದು. ಮಂಗಳನು ಧಾನ್ಯಾಧಿಪನಾಗಿರುವದರಿಂದ ಕೆಲವೆಡೆಯಲ್ಲಿ ಖಂಡವೃಷ್ಟಿಯಾಗುವದು. ಚಂದ್ರನು ಮೇಘಾಧಿಪನಾದುದರಿಂದ ಗೋಮಹಿಷಾದಿ ಪಶುಗಳು ವೃದ್ಧಿಗೊಳ್ಳುವವು. ಶನಿಯು ರಸಾಧಿಪನಾದುದರಿಂದ ರಸಪದಾರ್ಥಗಳು ಕಡಿಮೆಯಾಗುವವು. ಗುರುವು ನಿರಸಾಧಿಪನಾಗಿರುವದರಿಂದ ಬಂಗಾರವು ಅಗ್ಗವಾಗುವದು. ಚಂದ್ರನು ಅರ್ಘಾಧಿಪನಾದುದರಿಂದ ವ್ಯಾಪಾರಿಗಳಿಗೆ ಲಾಭವು ಹೆಚ್ಚುವದು. ಸೂರ್ಯನು ಫಲಾಧಿಪನಾದುದರಿಂದ ಜನರು ಆನಂದದಿಂದ ನಲಿಯುವರು. ಹೀಗೆ ಈ ಸಂವತ್ಸರದ ಫಲಗಳೆಲ್ಲವೂ ಅನುಕೂಲವಾಗಿಯೇ ಇರುತ್ತವೆ. ಆದ್ದರಿಂದ ಈ ಪ್ರಜೋತ್ಪತ್ತಿ ಸಂವತ್ಸರದಲ್ಲಿ ರಾಜ್ಯವು ಸುಖಶಾಂತಿಯನ್ನು ಪಡೆದು ಜನರು ದೀರ್ಘಾಯುರಾರೋಗ್ಯಭಾಗ್ಯಶಾಲಿಗಳಾಗಿಯೂ, ದೈವಭಕ್ತಿ ಗುರುಭಕ್ತಿಯುತರಾಗಿಯೂ, ಪರಮ ಆಸ್ತಿಕರಾಗಿಯೂ ಆಗುವಂತೆ ಶ್ರೀ ಭಗವದವತಾರ ಮೂರ್ತಿಗಳಾದ ಶ್ರೀ ಜಗದ್ಗುರು ಪಂಚಾಚಾರ್ಯರು ಎಲ್ಲರನ್ನೂ ಅನುಗ್ರಹಿಸಲಿ.

ಅರಮನೆಯಲ್ಲಿ ಕಿತ್ತೂರು ಚನ್ನಮ್ಮನ ನಾಟಕ.

ಧಾರವಾಡ ಡಿ|| ಅಬ್ಬೀಗೇರಿ ಕನ್ನಡ ಸಾಹಿತ್ಯ ಸೇವಾ ನಾಟಕಮಂಡಳಿಯವರು ತಮ್ಮ ಲೋಕಪ್ರಿಯಗಳಾದ ಕಿತ್ತೂರು ಚನ್ನಮ್ಮ ಮೊದಲಾದ ನಾಟಕಗಳನ್ನು ಕರ್ನಾಟಕದೇಶದ ಯಾವತ್ತು ಭಾಗಗಳಲ್ಲಿ ಅಭಿನಯಿಸಿ ಪ್ರಖ್ಯಾತಿ ಪಡೆದು ಮೈಸೂರು ರಾಜಧಾನಿಗೆ ಆಗಮಿಸಿರುವ ವಿಷಯವು ನಮ್ಮ ಪತ್ರಿಕಾ ವಾಚಕರಿಗೆ ವೇದ್ಯವೇ ಆದೆ. ಈ ಕಂಪನಿಯವರು ವಿಶೇಷವಾಗಿ ನಾಟಕಕಲಾಭಿಜ್ಞರಾಗಿರುವದರಿಂದ ಇವರು ಅಭಿನಯಿಸತಕ್ಕ ಯಾವತ್ತು ನಾಟಕಗಳು ಅತ್ಯಂತ ಪ್ರೇಕ್ಷಣೀಯಗಳಾಗಿವೆ. ಅದರಲ್ಲಿ ಕಿತ್ತೂರು ಚನ್ನಮ್ಮನ ನಾಟಕವಂತೂ ಮಹಾಜನಗಳನ್ನು ಆನಂದಪರವಶರನ್ನಾಗಿ ಮಾಡಿಬಿಡುವುದು. ಚರಿತ್ರನಾಯಿಕೆಯಾದ ಲೋಕವಿಖ್ಯಾತ ವೀರ ನಾರೀಮಣಿ ಚನ್ನಮ್ಮ ಮಹಾರಾಣಿಯ ಶಕ್ತಿಸಾಹಸಗಳು ಬಹು ಪ್ರಶಂಸನೀಯಗಳಾಗಿವೆ. ಸರ್ವಾಂಗಸುಂದರವಾದ ಈ ನಾಟಕದ ವರ್ಣನೆಯನ್ನು ನಮ್ಮ ಶ್ರೀಮನ್ಮಹಾರಾಜರವರು ಕೇಳಿ ತಾ|| 1-3-31 ನೆಯ ಭಾನುವಾರ ದಿವಸ ಜಗನ್ಮೋಹನ ಬಂಗಲೆಯಲ್ಲಿ ಸದರಿ ನಾಟಕವನ್ನಾಡಿಸಿದರು. ಈ ನಾಟಕವನ್ನು ನೋಡಲಿಕ್ಕೆ ಅರಸುಮನೆತನದವರೂ, ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳೂ ಆಗಮಿಸಿದ್ದರು. ಕಂಪನಿಯವರು ತಮ್ಮ ಅಸಾಧಾರಣವಾದ ಅಭಿನಯಕಲಾಕೌಶಲ್ಯದಿಂದ ಸರ್ವ ಸಾಮಾಜಿಕರನ್ನು ಸಂತೋಷಪಡಿಸಿದರೆಂದೂ, ಇದಕ್ಕಾಗಿ ಅರಮನೆಯಿಂದ ಯೋಗ್ಯ ಬಹುಮಾನವು ದೊರೆಯಿತೆಂದೂ ಕೇಳಿ ಸಂತೋಷಿಸುತ್ತೇವೆ. ಈ ನಾಟಕದಲ್ಲಿ ಕನ್ನಡ ದೇಶಾಭಿಮಾನವು ತುಂಬಿತುಳುಕುತ್ತದೆ. ಕನ್ನಡನಾಡಿನ ವೀರರಾಣಿಯೆಂದು ಭರತಖಂಡದಲ್ಲೆಲ್ಲಾ ಈ ಹೊತ್ತಿನವರೆಗೆ ಕೀರ್ತಿಕಾಯದಿಂದ ಪ್ರಜ್ವಲಿಸುತ್ತಿರುವ ಆ ಚನ್ನಮ್ಮರಾಣಿಯ ಚರಿತ್ರವನ್ನು ಕನ್ನಡನುಡಿಯನ್ನಾಡುವ ಕನ್ನಡದೇಶಭಕ್ತರೆಲ್ಲರೂ ಕೇಳಿ ಧನ್ಯರಾಗಬೇಕೆಂದಾಶಿಸುತ್ತೇವೆ. ಮೇಲ್ಕಂಡ ಕಂಪನಿಯವರು ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣಮಾಡಿರುವರು. ಬೆಂಗಳೂರು ನಗರವು ಕನ್ನಡನಾಡಿಗೆ ಮುಕುಟಮಣಿಯಂತಿರುವದರಿಂದ ಅಲ್ಲಿಯ ಯಾವತ್ತು ಕನ್ನಡಬಂಧುಗಳು ಕನ್ನಡದೇಶಾಭಿಮಾನವನ್ನು ವಹಿಸಿ ಕನ್ನಡದೇಶಾಭಿಮಾನದಿಂದ ಕೆಲಸಮಾಡುತ್ತಿರುವ ಈ ಕನ್ನಡ ಕಂಪನಿಯವರಿಗೆ ವಿಶೇಷ ಪ್ರೋತ್ಸಾಹವನ್ನೀಯಬೇಕೆಂದು ಕೋರುತ್ತೇವೆ.

ವರ್ತಮಾನಸಂಗ್ರಹ.

ವಿಸಾರತ್ತಿನ ಖೈದಿಗಳು ಇನ್ನು ಒಂದು ವಾರದೊಳಗೆ ಬಿಡುಗಡೆ ಹೊಂದುವ ಸಂಭವವಿದೆ ಎಂದು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯು ಪ್ರಕಟಿಸಿರುತ್ತದೆ.

ಸರ್ಕಾರದವರು ನವಜೀವನ ಮುದ್ರಣಾಲಯವನ್ನು ಜಪ್ತುಮಾಡಿದ್ದರಿಂದ ನಿಂತುಹೋಗಿದ್ದ ಮಹಾತ್ಮ ಗಾಂಧಿಯವರ ಯಂಗ್ ಇಂಡಿಯಾ ಪತ್ರಿಕೆಯು ಈ ತಿಂಗಳು 13 ನೆಯ ತಾರೀಖಿನ ದಿವಸ ಪುನಃ ಪ್ರಾರಂಭವಾಯಿತು.

ಆಫ್ರಿಕಾಖಂಡಕ್ಕೆ ಸೇರಿದ ಟ್ರಾನ್ಸ್‌ವಾಲ್ ವಜ್ರದ ಗಣಿಯಲ್ಲಿ ಡ್ಯುಟಾಯಿಟ್ ಮತ್ತು ಬೋಥ ಎಂಬವರು 200 ಕ್ಯಾರಟ್‌ಗಳ ತೂಕವುಳ್ಳ ಒಂದು ವಜ್ರವನ್ನು ತೆಗೆದರು. ದಕ್ಷಿಣ ಆಫ್ರಿಕದಲ್ಲಿ ದೊರೆತಿರುವ ವಜ್ರಗಳಲ್ಲೆಲ್ಲಾ ಇದು ಅಮೂಲ್ಯವಾದುದೆಂದು ಪರಿಗಣಿಸಲ್ಪಟ್ಟಿದೆಯಂತೆ!

ಲಖನೋ ಪ್ರಾಂತದಲ್ಲಿ ನಾನೇರು ಎಂಬ ಗ್ರಾಮಕ್ಕೆ ಪೋಲೀಸಿನವರೊಂದಿಗೆ ಮಾಮಲೇದಾರನು ಹಪ್ತೆ ವಸೂಲಿಗಾಗಿ ಹೋಗಿದ್ದನು. ಕಾಂಗ್ರೆಸ್ಸಿನ ವಾಲಂಟಿಯರಿಗೂ ಮಾಮಲೇದಾರರಿಗೂ ಚರ್ಚೆಯಾಗಿ ವಾಲಂಟಿಯರ ಬಡಗಿಯ ಏಟಿನಿಂದ ಮಾಮಲೇದಾರನು ಮೃತಿಹೊಂದಿದನು. ಪೋಲೀಸಿನವರಿಗೂ ಏಟುಗಳು ಬಿದ್ದಿರುತ್ತವೆ. ಇಷ್ಟರೊಳಗಾಗಿ ಜಿಲ್ಲಾಧಿಕಾರಿಗಳು ಹೋಗಿ 46 ಜನರನ್ನು ದಸ್ತಗಿರಿಮಾಡಿರುವರು.

ಎರಡನೆಯ ರೌಂಡ್‌ಟೇಬಲ್ ಸಮ್ಮೇಳನವು ಹಿಂದುಸ್ಥಾನದಲ್ಲಿ ನೆರೆಯುವುದೆಂದು ಮೊದಲು ಪ್ರಕಟವಾದುದು ಸರಿಯಷ್ಟೆ! ಕಾರಣಾಂತರಗಳಿಂದ ಆ ಸಮ್ಮೇಳನವು ಲಂಡನ್‌ಪಟ್ಟಣದಲ್ಲಿಯೇ ನಡೆಯಬೇಕೆಂದೂ, ಮಹಾತ್ಮಗಾಂಧಿ ಮೊದಲಾದ ಕಾಂಗ್ರೆಸ್ ಪಕ್ಷದ ಮುಖಂಡರು ಆ ಸಭೆಗೆ ಬರಬೇಕೆಂದು ಆಹ್ವಾನವನ್ನೀಯುವರೆಂದೂ ಇಂಡಿಯಾ ಸೆಕ್ರೆಟರಿಗಳು ಅಭಿಪ್ರಾಯಪಡುತ್ತಾರೆ.

ಜರ್ಮನಿಯಲ್ಲಿ ಈ ತಿಂಗಳು 12 ನೆಯ ತಾರೀಖಿನ ದಿವಸ 24 ಘಂಟೆಗಳವರೆಗೂ ಹಿಮದಿಂದ ಕೂಡಿದ ಭಯಂಕರ ಬಿರುಗಾಳಿಯು ಬೀಸಿತು. ಬರ್ಲಿನ್ ಪಟ್ಟಣದಿಂದ ಆಕಾಶವಿಮಾನಗಳು ಆ ದಿವಸ ಹೊರಡಲಿಲ್ಲ. ಹಳ್ಳಿಗಳಲ್ಲಿ ಮೋಟಾರ್ ಬಸ್ ಸಂಚಾರವು ಸಂಪೂರ್ಣ

ನಿಂತುಹೋಯಿತು. ಬರ್ಲಿನ್‌ಪಟ್ಟಣದ ಬೀದಿಗಳಲ್ಲಿ ಬಿದ್ದಿದ್ದ ಹಿಮವನ್ನು ತೆಗೆದುಹಾಕುವುದಕ್ಕೆ 6000 ಜನ ಕೂಲಿಯವರನ್ನು ನಿಯಮಿಸಬೇಕಾಯಿತಂತೆ!

ಹೋದವಾರ ಅಹಮ್ಮದಾಬಾದಿಗೆ ಮಹಾತ್ಮರು ಬಂದ ಸಮಯದಲ್ಲಿ ಲಕ್ಷಾಂತರವರಿವಿಗೂ ಜನಗಳು ಸೇರಿ ಒಂದು ಸಭೆಯನ್ನು ನಡೆಯಿಸಿ ಮಹಾತ್ಮರಿಗೆ 70 ಸಾವಿರ ರೂಪಾಯಿಗಳನ್ನೂ ಒಂದು ಭಂಗಾರದ ತಕಲಿಯನ್ನೂ ಒಪ್ಪಿಸಿದರು. ಸಭಿಕರಲ್ಲಿ ಒಬ್ಬನು ಆ ತಕಲಿಯನ್ನು 1 ಸಾವಿರ ರೂಪಾಯಿಗಳಿಗೆ ಕೊಂಡುಕೊಂಡನು. ಮಹಾತ್ಮರು ನಾಳೆಯದಿವಸ ಮುಂಬೈಪಟ್ಟಣಕ್ಕೆ ಆಗಮಿಸುತ್ತಾರೆ. ಅಲ್ಲಿ ಹಿಂದುಸ್ಥಾನದಿಂದ ಮುಖ್ಯ ಮುಖ್ಯ ವರ್ತಕರು ಬಂದು ವಿದೇಶೀವಸ್ತ್ರಬಹಿಷ್ಕಾರ ವಿಷಯವಾಗಿ ಮಹಾತ್ಮರೊಂದಿಗೆ ಆಲೋಚನೆಮಾಡುವರು.

ಯರವಾಡಾ ಕಾರಾಗೃಹದಿಂದ 1,500 ಜನಗಳು ಒಮ್ಮೆಗೆ ಬಿಡಲ್ಪಟ್ಟರು. ಸಹಸ್ರಾರು ಜನಗಳು ಜೈಲಿನ ಬಾಗಿಲನ್ನು ಕಾದಿದ್ದರು. ವೀರನಾರೀಮಣಿಗಳು ಅರಸಿನಬಣ್ಣದ ಸೀರೆಗಳನ್ನುಟ್ಟು ಸಾಲುಸಾಲಾಗಿ ಶಿಸ್ತಿನಿಂದ ಹೊರಗೆ ಬಂದರು. ಒಂದು ಕೈಯಲ್ಲಿ ರಾಟೆಯನ್ನು ಇನ್ನೊಂದು ಕೈಯಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡಿದ್ದ ಶ್ರೀ ಗೋಖಲೆ ಅವಂತಿಕಾಬಾಯಿಯವರು ಮುಂದೆ ಬಂದು ಧ್ವಜವನ್ನು ಮೇಲಕ್ಕೇರಿಸಿದರು. ಪ್ರೇಕ್ಷಕರಾಗಿ ಬಂದಿದ್ದ ಜನರೆಲ್ಲರೂ ದೇಶಸೇವಾಧುರಂಧರರಾದ ಈ ನಾರೀಮಣಿಗಳ ಹರ್ಷೋತ್ಸಾಹವನ್ನು ನೋಡಿ ಜಯಘೋಷವನ್ನು ಮಾಡಿದರು.

ರಾಜಧಾನಿ ನಿವಾಸಿಗಳಾದ ಬೊಂಬಾಯಿ ಆರ್ಟ್ ಸ್ಟುಡಿಯೋ ಪ್ರೊಪ್ರೈಟರ್ ಮ|| ರಾ|| ವೀರಪ್ಪನವರು ಚಿತ್ರಕಲೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದುದರಿಂದ ಈ ಚಿತ್ರಕಲೆಯ ಬಗ್ಗೆ ಅನೇಕ ಸಂಸ್ಥೆಗಳಿಂದ ಬಹುಮಾನಗಳನ್ನು ಪಡೆದಿರುತ್ತಾರೆ. ಇವರು ಸದ್ಯಃ ರಾಜಧಾನಿಯ ಮ|| ರಾ|| ಧರ್ಮಪ್ರಕಾಶ ಬನುಮಯ್ಯನವರ ಭಾವಚಿತ್ರವನ್ನು ದೊಡ್ಡಸೈಜಿನಲ್ಲಿ ಬಹು ಅಂದವಾಗಿ ಬರೆದಿದ್ದಾರೆ. ಅದರಲ್ಲಿ ಇವರು ತಮ್ಮ ಕಲಾನೈಪುಣ್ಯವನ್ನು ಚನ್ನಾಗಿ ವ್ಯಕ್ತಮಾಡಿದ್ದಾರೆ. ಈ ತರಹದ ಕಲಾಕುಶಲರಿಗೆ ದೇಶಾಭಿಮಾನಿಗಳು ಪ್ರೋತ್ಸಾಹವನ್ನಿತ್ತು ಚಿತ್ರಕಲಾಭಿವೃದ್ಧಿಯನ್ನುಂಟುಮಾಡಬೇಕೆಂದು ಕೋರುತ್ತೇವೆ.

ಮೈಸೂರುಸೀಮೆಯಲ್ಲಿ ಹುಣುಸೂರು ತಾಲ್ಲೂಕು ಮಾದಹಳ್ಳಿಯ ಮಠಕ್ಕೆ ಪಟ್ಟಾಧಿಕಾರಮಾಡಲು ಒಬ್ಬ ಯೋಗ್ಯವಟುವು ಬೇಕಾಗಿದೆ. ಮಠಕ್ಕೆ ತರಿ, ಖುಷ್ಕಿ ಜಮೀನುಗಳು ವಿಶೇಷವಾಗಿರುತ್ತವೆ. ಮಠದ ವರಮಾನವು ವರ್ಷಕ್ಕೆ ಅಂದಾಜು 4000 ಸಾವಿರ ರೂ. ಗಳವರೆಗಿರುತ್ತದೆ. ಈ ಮಠದಲ್ಲಿ ಈಗ ಒಬ್ಬರು ಚರಮೂರ್ತಿಗಳಿದ್ದಾರೆ. ವಟುಗಳ ದಾರುಕಶಾಖೆಯವರೂ ಶಿಷ್ಯಸಂಪತ್ತುಳ್ಳವರೂ 18 ರಿಂದ 25 ವರ್ಷಗಳೊಳಗಿನವರೂ ಸಂಸ್ಕೃತಪಂಡಿತರೂ ಆಗಿರಬೇಕು. ಒಂದೆರಡು ತಿಂಗಳೊಳಗಾಗಿ ಅಧಿಕಾರವು ನಡೆಯಬೇಕಾಗಿದೆ. ಆದ್ದರಿಂದ ಈ ಅಧಿಕಾರಕ್ಕೆ ಇಷ್ಟವುಳ್ಳ ಉಮೇದವಾರರೂ ಜಾಗ್ರತೆಯಾಗಿ ಬಿ. ಚನ್ನಪ್ಪ ಡಿ|| ಬೋರ್ಡ್ ಮತ್ತು ಆರ್. ಎ. ಮೆಂಬರ್ ಇವರ ಹೆಸರಿಗೆ ಅರ್ಜಿಯನ್ನು ಹಾಕಿಕೊಳ್ಳತಕ್ಕದ್ದು. ಸಮುಕ್ಷಮಬಂದರೂ ಚಿಂತೆಯಿಲ್ಲ. ಮಠದ ಎಲ್ಲ ವಿಷಗಳೂ ಅವರಿಗೆ ಗೊತ್ತಾಗುತ್ತದೆ ಎಂದು ನಮ್ಮಲ್ಲಿಗೆ ಸದರಿಯವರು ತಿಳುಹಿಸಿರುತ್ತಾರೆ.

ಒಪ್ಪಂದವಾದ ಮೇಲೆ ಮಹಾತ್ಮಗಾಂಧಿಯವರು ಏನು ಹೇಳಿರುವರು?

ಹೊಸದಿಲ್ಲಿಯಲ್ಲಿ ಮಹಾತ್ಮಗಾಂಧಿಯವರು ಪ್ರಕೃತಸ್ಥಿತಿಯನ್ನು ಕುರಿತು ಅಮೋಘವಾದ ಭಾಷಣ ಮಾಡಿದರು. ಹಿಂಸಾಮಯವಾದ ರಾಜಕೀಯ ಚಳವಳಿಯ ದೆಸೆಯಿಂದ ಜೈಲಿನಲ್ಲಿರುವವರೂ, ಮಿಲಿಟರಿ ಕಾಯಿದೆ ಪ್ರಕಾರ ಶಿಕ್ಷಿಸಲ್ಪಟ್ಟಿರುವವರೂ ಬಿಡುಗಡೆ ಹೊಂದದಿರುವುದರಿಂದ ಈ ಒಪ್ಪಂದದಿಂದ ಶಾಂತಿಯು ಸ್ಥಾಪನೆಯಾಗಲಾರದೆಂದು ಬರೆಯಲ್ಪಟ್ಟಿದ್ದ ಕೆಂಪುಬಣ್ಣದ ನೂರಾರು ಹಸ್ತಪತ್ರಿಕೆಗಳು ಹಂಚಲ್ಪಟ್ಟವು. ಆಗ ಮಹಾತ್ಮ ಗಾಂಧಿಯವರು ಹೇಳಿದುದೇನಂದರೆ—ಈ ಒಪ್ಪಂದವನ್ನು ಪುರಸ್ಕರಿಸಬೇಕೆಂದು ನಾನು ಕರಾಚಿ ಕಾಂಗ್ರೆಸಿನಲ್ಲಿಡುತ್ತೇನೆ. ಆ ಕಾಂಗ್ರೆಸ್ಸಿನವರು ಅದನ್ನು ಒಪ್ಪದೆಹೋದರೆ ಸದ್ಯಃ ಜಾರಿಯಲ್ಲಿರುವ ಕಾರ್ಯಕಾರಿ ಸಮಿತಿಯಲ್ಲಿ ನಂಬಿಗೆಯಿಲ್ಲವೆಂಬ ಠರಾವು ಪಾಸು ಮಾಡಿ ಮುಂದಿನ ಕಾರ್ಯಕ್ರಮವನ್ನು ನಡೆಯಿಸಲು ನೂತನ ಕಾರ್ಯಕಾರಿ ಸಮಿತಿಯನ್ನು ನಿರ್ಮಾಣ ಮಾಡಬಹುದು. ವೈಸರಾಯರ ಸಂಗಡ ನಾನೊಬ್ಬನೇ ಸಂಭಾಷಣೆಯನ್ನು ಮಾಡಿದಾಗ್ಯೂ ಕಾರ್ಯಕಾರಿ ಸಮಿತಿಯ ಒಪ್ಪಿಗೆಯಿಲ್ಲದೆ ಯಾವ ಕೆಲಸವನ್ನೂ ಮಾಡಿರುವುದಿಲ್ಲ. ಆದ್ದರಿಂದ ಈ ಒಪ್ಪಂದವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಂದವೆಂದು ಧಾರಾಳವಾಗಿ ಹೇಳಬಹುದು. ನಮ್ಮ ತರುಣರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತಮಗಿಂತಲೂ ಬುದ್ಧಿ ಕಡಿಮೆಯುಳ್ಳದಾಗಿಯೂ, ದೌರ್ಬಲ್ಯಯುಕ್ತವಾಗಿಯೂ ಇರುವುದೆಂದು ಭಾವಿಸಿದರೆ, ಕಾಂಗ್ರೆಸ್ಸಿನ ಸೂತ್ರವನ್ನೂ ಹಾಗೂ ಭರತವರ್ಷದ ಭವಿಷ್ಯವನ್ನೂ ತಮ್ಮ ಕೈಯ್ಯಲ್ಲಿ ತೆಗೆದುಕೊಳ್ಳಬಹುದು. ಹಿಂಸಾಮಯವಾದ ಚಳವಳಿಯಿಂದ ಶಿಕ್ಷೆಗೆ ಗುರಿಯಾಗಿರುವವರನ್ನು ಬಿಡುಗಡೆಮಾಡಿಸುವ ವಿಷಯವನ್ನೂ ಸಹ ಕಾರ್ಯಕಾರಿ ಸಮಿತಿಯವರು ಪರಾಮರ್ಶಿಸುವರು. ಈ ಒಪ್ಪಂದವನ್ನು ಅಕ್ಷರಶಃ ಪಾಲಿಸುವುದಾದರೆ ಹಿಂಸಾಮಯ ಚಳವಳಿಯಿಂದ ಶಿಕ್ಷೆಗೆ ಗುರಿಯಾಗಿರುವವರು ಮಾತ್ರವೇ ಅಲ್ಲ. ಗರವಾಲಿಗಳೂ ಸಹ ಬಿಡುಗಡೆ ಹೊಂದುವರು. ನನ್ನ ಅಭಿಪ್ರಾಯವನ್ನು ಕೇಳುವುದಾದರೆ ಧಕಾಯಿತಿಮಾಡುವವರು, ಕಳ್ಳರು ಸಹ ಬಿಡುಗಡೆಹೊಂದಬೇಕೆಂಬುದೇ ನನ್ನ ಮತವು. ಏಕೆಂದರೆ ಭೌತಿಕಶರೀರವನ್ನು ಶಿಕ್ಷಿಸುವುದರಿಂದ ಮನುಷ್ಯನು ಸುಧಾರಿಸುವನೆಂಬುದನ್ನು ನಾನು ನಂಬುವುದಿಲ್ಲ.

ಶಾಂತಿಪಥವನ್ನು ಬಿಟ್ಟು ಶಕ್ತಿಯ ಪಥವನ್ನು ಅವಲಂಬಿಸಿ ತಮ್ಮ ಉದ್ದೇಶವನ್ನು ಸಾಧಿಸಬೇಕೆಂದು ಅಭಿಪ್ರಾಯಪಡುವವರಲ್ಲಿ ಒಬ್ಬ ಭಗತ್‌ಸಿಂಗನನ್ನು ಮಾತ್ರವೇ ಅಲ್ಲ. ಸಾವಿರಾರು ಭಗತ್‌ಸಿಂಗರನ್ನು ಆಹುತಿಕೊಡಬೇಕಾಗುವುದು. ಇದಕ್ಕೆ ನಾನು ತಯಾರಾಗಿಲ್ಲ. ನಾವು ಒಬ್ಬ ಮನುಷ್ಯನನ್ನೂ ಗಲ್ಲಿಗೆ ಕಳುಹಿಸಲು ಅವಕಾಶವಿಲ್ಲದ ಶಾಂತಿಮಯ ಮಾರ್ಗವನ್ನನುಸರಿಸಿ ಸ್ವರಾಜ್ಯವನ್ನು ಸಂಪಾದಿಸೋಣ! ನೀವು ಶಕ್ತಿಯನ್ನವಲಂಬಿಸುವುದಾದರೆ ಅದು ಇಂಗ್ಲೀಷರನ್ನು ಮಾತ್ರವೇ ನೋಯಿಸುವುದಿಲ್ಲ. ಶಕ್ತಿಯನ್ನು ರೂಢಿಯಲ್ಲಿ ತರುವುದಾದರೆ ಅದನ್ನು ಮುಂದೆ ಪ್ರತಿಬಂಧ ಮಾಡುವುದು ದುಸ್ತರವಾಗುವುದು. ಚರಿತ್ರೆಯಲ್ಲಿ ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಈಗ ನಡೆದಿರುವ ಒಪ್ಪಂದದಿಂದ ಫಾಶಿಶಿಕ್ಷೆಗೆ ಗುರಿಯಾಗಿರುವವರನ್ನೂ ಸಹ ಉಳಿಸಬೇಕೆಂದು ಇಚ್ಛಿಸುವುದಾದರೆ ಇನ್ನು ಆರು ತಿಂಗಳುಗಳಮೇಲೆ ನನ್ನಲ್ಲಿಗೆ ಬಂದು ಕೇಳಿರಿ.

ವಿದೇಶಿ ವಸ್ತ್ರ ಬಹಿಷ್ಕಾರ.

ಈ ಒಪ್ಪಂದದಿಂದ ವಿದೇಶಿವಸ್ತ್ರ ಹಾಗೂ ಸೇಂದಿ ಸರಾಯಿ ಅಂಗಡಿಗಳ ಮುಂದೆ ಪಿಕೆಟಿಂಗ್ ನಡೆಯಿಸುವಾಗ ಜನರಿಗೆ ಹೆದರಿಸುವುದನ್ನೂ, ಬಲಾತ್ಕಾರಪಡಿಸುವುದನ್ನೂ ನಿಲ್ಲಿಸಬೇಕೆಂದೂ, ಶಾಂತರೀತಿಯಿಂದಲೇ ಪಿಕೆಟಿಂಗ್ ನಡೆಯಿಸಬೇಕೆಂದೂ ನಿರ್ಣಯಿಸಲ್ಪಟ್ಟಿದೆ. ಎಲ್ಲಾ ವಿದೇಶಿ ಸಾಮಾನುಗಳನ್ನು ಬಹಿಷ್ಕರಿಸಿದರೂ, ಇಂಗ್ಲೆಂಡಿನ ಸಾಮಾನುಗಳನ್ನು ಬಹಿಷ್ಕರಿಸಬಾರದೆಂದು ನಿಷ್ಕರ್ಷಿಸಲ್ಪಟ್ಟಿದೆ. ಇಂಗ್ಲೆಂಡ್ ಸಾಮಾನುಗಳ ಬಹಿಷ್ಕಾರವು ಕಳೆದ ಒಂದು ವರ್ಷದಿಂದ ರಾಜಕೀಯಾಯುಧವಾಗಿತ್ತು. ಈಗ ನಾವೂ ಆಂಗ್ಲೇಯರೂ ಏಕೀಭವಿಸಿ ಶಾಂತರೀತಿಯಿಂದ ಮುಂದಿನ ಕಾರ್ಯಕ್ರಮಗಳಿಗುಪಕ್ರಮಿಸಬೇಕಾಗಿರುವುದರಿಂದ ಅದನ್ನು ನಿಲ್ಲಿಸಬೇಕಾಗಿದೆ. ಆದರೆ ಪರದೇಶಿ ಬಟ್ಟೆಗಳ ಬಹಿಷ್ಕಾರವು ರಾಜಕೀಯಾಯುಧವಾಗಿರದೆ ದೇಶದ ಕೋಟ್ಯಂತರ ಜನರ ಹೊಟ್ಟೆ ಬಟ್ಟೆಗೆ ಅನುಕೂಲಪಡಿಸಿಕೊಡುವ ನಿಮಿತ್ತವಾಗಿ ಪ್ರಾರಂಭಿಸಲ್ಪಟ್ಟಿರುವ ರಾಷ್ಟ್ರದ ಕರ್ತವ್ಯವಾಗಿದೆ. ಆದ್ದರಿಂದ ಅದನ್ನು ನಿಲ್ಲಿಸುವುದು ಸಾಧ್ಯವಿಲ್ಲ. ವಿದೇಶಿ ವಸ್ತ್ರಗಳ ಹಾಗೂ ಸೇಂದಿ ಸರಾಯಿಗಳ ಬಹಿಷ್ಕಾರವು ಜಯಪ್ರದವಾಗಿ ಪರಿಣಮಿಸುವುದಾದರೆ ಅದು ಜಗತ್ತಿನಲ್ಲಿ ಅದ್ಭುತ ನೈತಿಕ ಪರಿಣಾಮವನ್ನುಂಟುಮಾಡುವುದು.

ಜಾತಿಗಳ ಐಕಮತ್ಯ.

ಮ|| ಶೌಕತಾಲಿಯವರು ದಿಲ್ಲಿಗೆ ಬಂದಿದ್ದರೂ ಈ ಸಭೆಗೆ ಬಾರದಿರುವುದು ವಿಷಾದಕರವಾದ ಸಂಗತಿಯಾಗಿದೆ. ನಾನು ಮೌಲಾನಾ ಶೌಕತಾಲಿಯವರನ್ನು ಕಾಂಗ್ರೆಸ್ ಉಪನ್ಯಾಸವೇದಿಕೆಯಮೇಲೆ ನಿಲ್ಲಿಸಲು ವಿಶ್ವಪ್ರಯತ್ನಮಾಡುತ್ತೇನೆ. ನನಗೂ ಅವರಿಗೂ ಒಂದು ತಾಯಿಯ ಮಕ್ಕಳಲ್ಲಿ ಭಿನ್ನಾಭಿಪ್ರಾಯವಿರುವಂತೆ ಇರುವುದೇಹೊರತು ಬೇರೆಯಿಲ್ಲ. ಮ|| ಶೌಕತಾಲಿಯವರು ಗಾಂಧಿಯ ತತ್ವದಂತೆ ಭಾರತಮಾತೆಯ ಸೇವೆಮಾಡಬೇಕೆಂದು ಇಚ್ಛೈಸುತ್ತೇನೆ. ಗಾಂಧಿ ಇರ್ವಿನ್ ಒಪ್ಪಂದದ ಇಂಗಿತವನ್ನು ತಿಳಿದುಕೊಳ್ಳುವುದಾದರೆ ಜಾತಿಗಳಲ್ಲಿ ಐಕಮತ್ಯವನ್ನು ಸ್ಥಾಪಿಸುವುದೇ ಪ್ರಥಮಕರ್ತವ್ಯವೆಂಬುದು ಸ್ಪಷ್ಟಪಡುತ್ತದೆ. ಈ ಐಕಮತ್ಯವನ್ನು ಸ್ಥಾಪಿಸುವುದು ಸಾಧ್ಯವಿಲ್ಲದಿದ್ದರೆ ರೌಂಡುಟೇಬಲ್ ಸಮ್ಮೇಳನಕ್ಕೆ ಹೋಗುವುದೇ ಅನಾವಶ್ಯಕ. ಐಕಮತ್ಯವನ್ನು ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಸ್ಥಾಪಿಸುವೆನೆಂಬುದು ಸಾಧ್ಯವಿಲ್ಲ. ಆದುದರಿಂದ ಜಾತಿಜಾತಿಗಳಲ್ಲಿ ಐಕಮತ್ಯವನ್ನು ಸಾಧಿಸುವ ಕಾರ್ಯಕ್ಕೆ ನೀವೆಲ್ಲರೂ ಮನೋವಾಕ್ಕಾಯಗಳಿಂದ ಸಹಾಯಮಾಡುವುದಾದರೆ ನನ್ನ ಶಕ್ತಿಮೀರಿ ಕೆಲಸಮಾಡುತ್ತೇನೆಂದು ನಿಮಗೆ ಭಾಷೆ ಕೊಡುತ್ತೇನೆ. ಗಾಂಧಿ ಇರ್ವಿನ್‌ರು ಒಪ್ಪಂದಮಾಡಿಕೊಳ್ಳುವಾಗ ಅನುಸರಿಸಿದ ಮಾರ್ಗವನ್ನೇ ಐಕಮತ್ಯ ಸ್ಥಾಪನಕಾರ್ಯದಲ್ಲಿಯೂ ಅನುಸರಿಸಬೇಕೆಂದು ತಂತಿಯು ಬಂದಿರುತ್ತದೆ. ನಾನು ಅದೇ ಮಾರ್ಗವನ್ನೇ ಅನುಸರಿಸುತ್ತೇನೆ. ಪ್ರತಿಯೊಬ್ಬ ಮಹಮ್ಮದೀಯ ಮುಖಂಡರ ಸವಿಾಪಕ್ಕೆ ಹೋಗಿ ಐಕಮತ್ಯವನ್ನು ಸ್ಥಾಪಿಸುವ ಮಹಾಕಾರ್ಯದಲ್ಲಿ ನನಗೆ ಸಹಾಯಮಾಡಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ನಾನು ಮನುಷ್ಯಶಕ್ತಿಗೆ ಸಾಧ್ಯವಾದುದನ್ನೆಲ್ಲಾ ಮಾಡುತ್ತೇನೆ. ಅಂಥ ದೊಡ್ಡ ಕಾರ್ಯವನ್ನು ಒಂದು ವ್ಯಕ್ತಿಯು ಮಾಡುವುದು ಸ್ವಾಭಾವಿಕನಿಯಮಕ್ಕೆ ವಿರೋಧವಾಗಿದೆ. ಒಬ್ಬನೇ ಒಬ್ಬ ಮನುಷ್ಯನು ಅಂಥ ಮಹತ್ಕಾರ್ಯವನ್ನು ಮಾಡುವನೆಂದು ದುರಭಿಮಾನ ಪಡಬಾರದೆಂದು ಪರಮೇಶ್ವರನ ಇಚ್ಛೆಯಿದೆ. ಚಿಕ್ಕಮಗುವು ಸಹಾಯಮಾಡಿದರೂ ಅಂಥ ಸಹಾಯವನ್ನು ಕೃತಜ್ಞತೆಯಿಂದ ಅಂಗೀಕರಿಸುತ್ತೇನೆ.

ಸರ್ಕಾರಿ ಕೆಲಸಗಳಲ್ಲಿಯೂ ಕಾಯಿದೆ ಕೌನ್ಸಿಲ್‌ಗಳಲ್ಲಿಯೂ ಪ್ರಾತಿನಿಧ್ಯ.

1921 ನೆಯ ವರ್ಷದಲ್ಲಿ ಹೇಳಿದ ಬುದ್ಧಿವಾದವನ್ನೇ ಈಗಲೂ ಹೇಳುತ್ತೇನೆ. ಹಿಂದೂಮಹಮ್ಮದೀಯ ಎರಡು ಸಮಾಜಗಳಲ್ಲಿ ಒಂದು ಸಮಾಜವು ಇನ್ನೊಂದು ಸಮಾಜಕ್ಕೆ "ನಿಮಗೆ ಬೇಕಾದುವುಗಳನ್ನೆಲ್ಲಾ ತೆಗೆದುಕೊಳ್ಳಿರಿ. ನೀವು ಬಿಟ್ಟದ್ದು ನಮಗಿರಲಿ" ಎಂದು ಧೈರ್ಯವಾಗಿ ಹೇಳಿದರೆ ಈ ಪ್ರಶ್ನೆಯು ಸುಲಭವಾಗಿ ನಿರ್ವಹಿಸಲ್ಪಡುವುದು. ಹಿಂದೂಸಮಾಜವು ದೊಡ್ಡ ಸಮಾಜವಾಗಿರುವುದರಿಂದ ಇವರು ಮೊದಲು ಮಾರ್ಗದರ್ಶಕರಾಗಬೇಕು. ಹಿಂದುಗಳು ಲಾಭದಕಡೆಗೆ ಲಕ್ಷ್ಯಕೊಡದೆ ಧೈರ್ಯಮಾಡಬೇಕು. ಹಿಂದುಗಳು ಕಳೆದ ಹನ್ನೆರಡು ತಿಂಗಳುಗಳಿಂದ ಎಲ್ಲ ಕಾಯಿದೆಗಳನ್ನೂ ಮತ್ತು ಕಠಿಣಶಾಸನ (ಆರ್ಡಿನೆನ್ಸ್) ಗಳನ್ನೂ ಉಲ್ಲಂಘಿಸಿದರೂ ಜಗತ್ತಿನ ಯಾವ ಪ್ರಬಲರಾಷ್ಟ್ರವೂ ಅವರ ಅಸ್ತಿತ್ವವನ್ನೂ ಹಕ್ಕುಬಾಧ್ಯತೆಗಳನ್ನೂ ನಾಶಮಾಡಲಾರದು. ಮಹಮ್ಮದೀಯರು ಚಿಕ್ಕ ಸಮಾಜದವರು. ಇವರು ಕಾಯಿದೆ ಕೌನ್ಸಿಲ್‌ಗಳಲ್ಲಿ ಎಲ್ಲ ಸ್ಥಾನಗಳನ್ನಾಕ್ರಮಿಸಿದರೂ ಹಿಂದುಗಳಿಗೆ ಹೆಚ್ಚು ನಷ್ಟವಾಗಲಾರದು. ನಾವು ಭರತಖಂಡದ ನಮ್ರಸೇವಕರಾಗಿರಬೇಕೆಂದು ಇಚ್ಛಿಸುತ್ತೇವಲ್ಲದೆ ಸರ್ಕಾರಿ ನೌಕರಿಮಾಡಬೇಕೆಂದಿಚ್ಛಿಸುವುದಿಲ್ಲ. ಈ ಸಲಹೆಯನ್ನು ಹಿಂದುಗಳು ಅಂಗೀಕರಿಸದಿದ್ದರೆ, ನನ್ನ ಸಂಗವನ್ನು ಬಿಟ್ಟುಬಿಡಲಿ. ಜಾತಿಗಳಲ್ಲಿ ಸೌಹಾರ್ದವನ್ನು ಸ್ಥಾಪಿಸಬೇಕೆಂದು ಇಚ್ಛೆ ಇದ್ದರೆ, ನಮಗೆ ಏನೂ ಬೇಕಿಲ್ಲವೆಂದು ಹೇಳಿ ಪೂರ್ಣಸ್ವರಾಜ್ಯವನ್ನು ನೆಲೆಗೊಳಿಸಬೇಕು.

ಗಾಂಧಿ ಇರ್ವಿನ್ ಒಪ್ಪಂದವನ್ನು ಸರ್ವರೂ ಮಾನಿಸಬೇಕು.

ಬೊಂಬಾಯಿಯಲ್ಲಿ ಸರ್ದಾರ್ ವಲ್ಲಭ ಭಾಯಿ ಪಟೇಲರವರ ಮಹತ್ವದ ಭಾಷಣ.

ಭಾರತೀಯರೇ !

ಮಹಾತ್ಮಾ ಗಾಂಧಿಯವರ ಅನುಜ್ಞೆಯನ್ನು ನೀವು ಇದುವರೆಗೂ ಪಾಲಿಸಿದಂತೆ ಇನ್ನು ಮುಂದೆಯೂ ಪಾಲಿಸುವರಾಗಬೇಕು. ದಿಲ್ಲಿಯಲ್ಲಿ ಒಪ್ಪಂದಮಾಡಿಕೊಂಡ ವಿಷಯದಲ್ಲಿ ಚಾಣಕ್ಯೆಯನ್ನು ವ್ಯಕ್ತಪಡಿಸಲಿಲ್ಲವೆಂದು ನೀವು ಅಭಿಪ್ರಾಯಪಡುವುದಾದರೆ ಯಾವ ಆಕ್ಷೇಪಣೆಯೂ ಇರುವುದಿಲ್ಲ. ನನ್ನ ಈ ಅಭಿಪ್ರಾಯವು ಕಳೆದವರ್ಷದ ಸಂಗ್ರಾಮದಲ್ಲಿ ಭಾಗಿಗಳಾದವರಿಗೆ ಮಾತ್ರ ಅನ್ವಯಿಸುವುದೇ ವಿನಾ ಇತರರಿಗಲ್ಲ. ಆ ಸಂಗ್ರಾಮದಲ್ಲಿ ಭಾಗಿಗಳಾಗದವರು ದಿಲ್ಲಿ ಒಪ್ಪಂದವನ್ನು ಆಕ್ಷೇಪಿಸುವುದು ನ್ಯಾಯವಲ್ಲ. ಕಾರ್ಯಕಾರಿಸಮಿತಿಯವರು ಬಂಧವಿಮೋಚನೆಯಾದ ಕೂಡಲೆ ದಿಲ್ಲಿಗೆ ಹೋಗಿ ಎಲ್ಲ ಅಭಿಪ್ರಾಯಗಳನ್ನು ಪರಾಮರ್ಶಿಸಿದರು. ರೌಂಡ್ ಟೇಬಲ್ ಸಮ್ಮೇಳನದಲ್ಲಿ ನಾವು ಇಂಥಿಂಥ ನಿರ್ಧರಗಳನ್ನು ಮಾಡಿರುವೆವು. ಕಾಂಗ್ರೆಸ್‌ಮುಖಂಡರಾದ ನೀವು ಅವುಗಳನ್ನು ಸಮಗ್ರವಾಗಿ ವಿಮರ್ಶಿಸಬೇಕು. ಎಂದು ವೈಸರಾಯರು ಹೇಳಿದರು.

ನಾವು ರೌಂಡ್‌ಟೇಬಲ್ ಸಮ್ಮೇಲನದ ಕಾರ್ಯಕ್ರಮಗಳನ್ನು ಚನ್ನಾಗಿ ಅರಿತುಕೊಳ್ಳಬೇಕೆಂದು ವೈಸರಾಯರು ಹೇಳಿರುವರಲ್ಲದೆ ಅವುಗಳನ್ನು ಚರ್ಚಿಸುವುದಕ್ಕೂ ಸಹ ಆಹ್ವಾನವನ್ನಿತ್ತಿರುವರು. ಬ್ರಿಟಿಸ್ ಸರ್ಕಾರದವರೂ, ಇಂಡಿಯಾ ಸರ್ಕಾರದವರೂ ನಮ್ಮ ಆಕಾಂಕ್ಷೆಗಳನ್ನು ಮೊದಲಿಗಿಂತಲೂ ಈಗ ಚನ್ನಾಗಿ ತಿಳಿದುಕೊಂಡಿದ್ದಾರೆಂಬುದು ನಮಗೆ ಮನಗಂಡಿತು. ರಾಷ್ಟ್ರೀಯಮಹಾಸಭೆಯು ಭಿಕ್ಷುಕರ ಆಕ್ರೋಶ್ತ್ರರಗಳಿಗೆ ಜವಾಬುಕೊಡುವಂತೆ ವೈಸರಾಯರು ಜವಾಬುಕೊಡಲಿಲ್ಲ.

ರಾಷ್ಟ್ರೀಯ ಮಹಾಸಭೆಯು ಸರ್ಕಾರವನ್ನು ಸರಿಸಮಾನವಾಗಿ ಎದುರಿಸತಕ್ಕ [illegible]ವಾದ ಶಕ್ತಿಯುಳ್ಳ ಸಂಸ್ಥೆಯೆಂದು ವೈಸರಾಯ[illegible]ತಿಳಿದುಕೊಂಡರು. ಭಾರತೀಯ ಜನಸಾಮಾನ್ಯದ ಪ್ರತಿನಿಧಿಯಾದ ಈ ರಾಷ್ಟ್ರೀಯಸಂಸ್ಥೆಯು ತುಂಬಾ ಬಲಿಷ್ಠಸಂಸ್ಥೆ ಎಂದೂ ಬ್ರಿಟಿಸ್ ಸಾಮ್ರಾಜ್ಯವೂ ಸಹ ಇದನ್ನು ತಿರಸ್ಕರಿಸುವುದು ಸಾಧ್ಯವಿಲ್ಲವೆಂದೂ ತಿಳಿದುಕೊಂಡರು. ಮುಖ್ಯಮಂತ್ರಿಗಳ ಹೇಳಿಕೆಯೂ ಸಹ ಇದೇ ಅರ್ಥವನ್ನೇ ವ್ಯಕ್ತಪಡಿಸುವುದರಿಂದ ಅವರೂ ಸಹ ಭಾರತೀಯರು ಸಮಾನರಾಗಿ ಬಂದು ಭರತಖಂಡದ ಭಾವಿರಾಜ್ಯಾಂಗರಚನೆಯನ್ನು ಚರ್ಚಿಸಬೇಕೆಂದು ಇಚ್ಚಿಸುವರೆಂಬುದು ಸ್ಪಷ್ಟಪಡುತ್ತದೆ. ದಿಲ್ಲಿ ಒಪ್ಪಂದದಿಂದ ಕಂಡುಬರುವ ಮೊದಲನೆಯ ಅಂಶವೇನೆಂದರೆ, ಇದುವರೆಗೂ ಬ್ರಿಟಿಸ್ ಸರ್ಕಾರದವರು ಹಿಂದುಸ್ಥಾನವನ್ನು ಒಂದು ರಾಜ್ಯವನ್ನಾಗಿ ಭಾವಿಸಿರಲಿಲ್ಲ. ಈಗ ಬ್ರಿಟಿಸ್ ಸರ್ಕಾರದವರು ಬ್ರಿಟಿಸ್ ಹಿಂದೂಸ್ಥಾನ ಮತ್ತು ಆಶ್ರಿತಸಂಸ್ಥಾನಗಳು ಸೇರಿ ಒಂದೇ ಭರತಖಂಡವೆಂಬಂಶವನ್ನು ತಿಳಿದುಕೊಂಡರು. ಇನ್ನು ಮೇಲೆ ಬ್ರಿಟಿಸ್ ಹಿಂದುಸ್ಥಾನ ಮತ್ತು ಆಶ್ರಿತಸಂಸ್ಥಾನಗಳೆಂಬ ವಾರ್ತೆ ಇರುವುದಿಲ್ಲ. ಈ ಉಭಯಭಾಗಗಳೂ ಜನತೆಯ ಹಿತಕ್ಕೋಸ್ಕರ ಕೆಲಸಮಾಡಬೇಕಾಗಿದೆ. ಭಾರತೀಯರಿಗೆ ಉತ್ತರವಾದಿಸರ್ಕಾರವನ್ನು ಕೊಡಬೇಕೆಂದು ಬ್ರಿಟಿಸ್ ಸರ್ಕಾರದವರು ಅಭಿಪ್ರಾಯಪಡುವುದು ಎರಡನೆಯ ಅಂಶವಾಗಿದೆ. ಬ್ರಿಟಿಸ್ ಸರ್ಕಾರದವರು ಈ ಅಂಶವನ್ನು 1929 ನೆಯ ವರ್ಷದಲ್ಲಿಯೇ ಒಪ್ಪಿಕೊಂಡಿದ್ದರೆ ಕರನಿರಾಕರಣಚಳವಳಿಗೆ ಅವಕಾಶವೇ ಇರಲಿಲ್ಲ. ಆಗ ನಮ್ಮ ವಿರೋಧಿಗಳ ಸಂಗಡ ಈ ವಿಷಯವನ್ನು ಚರ್ಚಿಸಿದಾಗ ನಾವು ಸ್ವರಾಜ್ಯಕ್ಕೆ ಅರ್ಹರಾಗಿರುವೆವೆಂದು ಅವರು ಒಪ್ಪಲಿಲ್ಲ. ಮೂರನೆಯ ಪರತ್ತು ರಕ್ಷಾಕವಚಗಳನ್ನು ಅಂಗೀಕರಿಸುವ ವಿಷಯಗಳನ್ನು ಪ್ರತಿಪಾದಿಸುತ್ತದೆ.

ದಿಲ್ಲಿ ಒಪ್ಪಂದದಲ್ಲಿ ರಕ್ಷಾಕವಚಗಳೂ, ಸರ್ಕಾರದವರು ಉಳಿಸಿಕೊಳ್ಳುವ ವಿಷಯಗಳೂ ಭಾರತೀಯರ ಹಿತಕ್ಕೋಸ್ಕರವಾಗಿವೆ ಎಂದು ಉಲ್ಲೇಖಿಸಲ್ಪಟ್ಟಿದೆ. ಹಿಂದುಸ್ಥಾನಕ್ಕೆ ಹಿತಕಾರಿಯಾದಂಶಗಳಾವುವೆಂಬುದು ಭಾರತೀಯರಾದ ನಮಗೆ ಚನ್ನಾಗಿಗೊತ್ತು. ಅದನ್ನು ನಾವೇ ನಿರ್ಧರಿಸಬಲ್ಲೆವು. ರೌಂಡುಟೇಬಲ್ ಸಮ್ಮೇಳನದವರು ನಿರ್ಮಿಸಿರುವ ರಾಜ್ಯಾಂಗ ವ್ಯವಸ್ಥೆಯು ನಮ್ಮ ಮುಂದೆ ಇರುವುದಾದರೂ, ಅದರ ಸಂಪೂರ್ಣ ರಚನಾಕ್ರಮವು ರಾಷ್ಟ್ರೀಯಮಹಾಸಭೆಯ ಅನುಮತಿಯಿಂದ ಮಾಡಲ್ಪಡುವುದು. ಎರಡನೆಯ ರೌಂಡ್‌ಟೇಬಲ್‌ಸಮ್ಮೇಳನವು ಸೇರುವಾಗ ನಮಗೆ ಅನುಗುಣವಾದ ರಾಜ್ಯಾಂಗರಚನೆಮಾಡಲು ಸಿದ್ಧರಾಗಿರಬೇಕು. ಚಿಕ್ಕ ಸಮಾಜಗಳ ಸಂರಕ್ಷಣೆ, ಆಶ್ರಿತಸಂಸ್ಥಾನಪ್ರಜೆಗಳ ಸಂರಕ್ಷಣೆ, ಭಾರತೀಯರ ಸಂರಕ್ಷಣೆ, ಕೆಲಸಗಾರರ ಸಂರಕ್ಷಣೆ, ರೈತರ ಸಂರಕ್ಷಣೆ ಇವುಗಳೇ ಭಾರತೀಯರಿಗೆ ಹಿತಕಾರಿಗಳಾದ ಅಂಶಗಳಾಗಿವೆ.

ಇಡೀಪ್ರಪಂಚವೇ ನಾವು ಸತ್ಯದಿಂದ ಕಾದಾಡತಕ್ಕವರೆಂದು ತಿಳಿದುಕೊಂಡಿರುವುದು.

ಎರಡನೆಯ ರೌಂಡ್‌ಟೇಬಲ್‌ಸಮ್ಮೇಳನದಲ್ಲಿ ನಮ್ಮ ಉದ್ದೇಶವನ್ನು ಸಾಧಿಸಲು ಸಾಧ್ಯವಿಲ್ಲವಾದರೆ ನಮ್ಮ ಮುಂದಿನ ಕಾರ್ಯವನ್ನು ಯಾರೂ ತಡೆಯಲಾರರು. ನಮ್ಮ ವಿರೋಧಿಗಳ ಸಂಗಡ ವರ್ತಿಸುವಾಗ ನಾವು ತಾಳ್ಮೆಯನ್ನು ಬಿಡಬಾರದು. ಏಕೆಂದರೆ ಲೋಕಮತವು ನಮ್ಮ ಪಕ್ಷವಾಗಿದೆ. ಇಡೀ ಪ್ರಪಂಚವೇ ನಾವು ಪರಿಶುದ್ಧತೆಯಿಂದಲೂ, ಸತ್ಯದಿಂದಲೂ ಕಾದಾಡತಕ್ಕವರೆಂದು ತಿಳಿದುಕೊಂಡಿರುವುದು. ಆದುದರಿಂದ ಜಗತ್ತಿನ ಸಹಾನುಭೂತಿಯು ತಪ್ಪಲು ಅವಕಾಶಕೊಡಬಾರದು. ದಿಲ್ಲಿಯ ಒಪ್ಪಂದವನ್ನು ಮಾಡಿಕೊಂಡಿರುವುದರಿಂದ ನಾವು ಇದುವರೆಗೂ ಹೋರಾಡಿರುವ ಅದ್ಭುತಶಕ್ತಿಗೆ ಕುಂದುಕಬರುವುದೆಂದು ಕೆಲವರು ಅಭಿಪ್ರಾಯಪಡುವರು. ಆದರೆ ಇದು ಸರಿಯಾದ ಅಭಿಪ್ರಾಯವಲ್ಲ. ಅಂಥ ಅದ್ಭುತಶಕ್ತಿಯಿಂದ ಹೋರಾಡಿದ ರಾಷ್ಟ್ರವು ಕೆಲವು ತಿಂಗಳುಗಳೊಳಗೆ ಶಕ್ತಿಕುಗ್ಗಿ ನಿದ್ರಿಸಲಾರದು. ಹಾಗೆ ರಾಷ್ಟ್ರದ ಶಕ್ತಿಯು ಕುಗ್ಗಿತೆಂದರೆ ನಾವು ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ಹೇಳಬೇಕಾಗುವುದು. ಜನಾಂಗದಲ್ಲಿ ಅದ್ಭುತಜಾಗೃತಿಯುಂಟಾಗಿರುವುದರಿಂದ ಮುಖಂಡರು ಹೇಳಿದ ನಿಮಿಷಾರ್ಧದಲ್ಲಿ ರಾಷ್ಟ್ರವು ಮುಂದಿನ ಸಮರಕ್ಕೆ ಸಿದ್ಧವಾಗುವುದು. ಆದಕಾರಣ ಹಾಗೆ ಎಂದೂ ಯೋಚಿಸಬಾರದೆಂದು ಅಭಿಪ್ರಾಯಪಡುತ್ತೇನೆ.

ಗುಜರಾಥಿನ ರೈತರು ನನ್ನನ್ನು ಚೆನ್ನಾಗಿ ಬಲ್ಲರು.

ಜಪ್ತುಮಾಡಿರುವ ಭೂಮಿಗಳ ವಿಷಯವಾಗಿ ಸ್ವಲ್ಪ ಪ್ರಸ್ತಾಪಿಸುತ್ತೇನೆ. ಬೊಂಬಾಯಿಗೆ ಬಂದಂದಿನಿಂದಲೂ ಅನೇಕರು ನನ್ನನ್ನು ಈ ವಿಷಯವಾಗಿ ಪ್ರಶ್ನೆ ಮಾಡುತ್ತಿರುವರು. ನಾನು ಅವರಿಗೆ ನಿಸ್ಸಂದೇಹವಾಗಿ ಉತ್ತರ ಕೊಡುತ್ತೇನೆ. ಗುಜರಾಥಿನ ರೈತರು ನನ್ನನ್ನು ಚನ್ನಾಗಿ ಬಲ್ಲರು. ನಾನು ಗುಜರಾಥಿಗೆ ಹೋಗಿ ಕೈತಪ್ಪಿ ಹೋಗಿರುವ ಒಂದು ಅಂಗುಲ ಭೂಮಿಯೂ ಸಹ ನಿಜವಾದ ಮಾಲಕನಿಗೇ ಸಿಗುವಹಾಗೆ ಮಾಡುತ್ತೇನೆ. ಈ ವಿಷಯದಲ್ಲಿ ಅನ್ಯಥಾ ಯೋಚಿಸುವುದನಾವಶ್ಯಕವಾಗಿದೆ. ಸರ್ಕಾರದವರು ಹೊಲಗಳನ್ನು ಮಾರಾಟಮಾಡಿರುವುದರಿಂದ ಸ್ವಂತ ಮಾಲೀಕರಿಗೆ ಕೊಡಿಸುವುದು ದುಸ್ತರವೆಂದು ಹೇಳಿದರೂ ಸ್ವಂತಮಾಲೀಕರಿಗೆ ಅವರವರ ಜಮೀನುಗಳು ಲಭ್ಯವಾಗುವವರೆಗೂ ಸುಮ್ಮನೆ ಬಿಡುವುದಿಲ್ಲ.

ಬಟ್ಟೆವರ್ತಕರಿಗೆ ಕೊಟ್ಟ ಎಚ್ಚರಿಕೆ.

ಬಟ್ಟೆಯ ಮೇಲೆ ಹಾಕಿದ್ದ ಬಹಿಷ್ಕಾರವನ್ನು ಸದ್ಯಃ ತೆಗೆದಿರುವೆವಾದರೂ, ಒಂದು ಅಂಗುಲ ಪರದೇಶಿಬಟ್ಟೆಯೂ ಸಹ ನಮ್ಮ ದೇಶದಲ್ಲಿಲ್ಲದ ಹಾಗೆ ಮಾಡುವವರೆಗೂ, ನಾವು ತೃಪ್ತರಾಗಲಾರೆವು. ದೇಶದ ರೈತರ ಮತ್ತು ಕೆಲಸಗಾರರ ಹಿತದ ಸಲುವಾಗಿ ಒಂದಂಗುಲ ಪರದೇಶಿ ಬಟ್ಟೆಯನ್ನೂ ಸಹ ನಮ್ಮ ದೇಶಕ್ಕೆ ತರಿಸಬಾರದು. ಅನ್ನವಿಲ್ಲದೆ ಸಾಯುತಕ್ಕ ನಮ್ಮ ರೈತರಿಗೂ ಮತ್ತು ಕೆಲಸಗಾರರಿಗೂ ನಮ್ಮ ದೇಶದ ಬಟ್ಟೆಯನ್ನು ತಯಾರಿಸುವುದರ ಮೂಲಕ ಹೊಟ್ಟೆ ಬಟ್ಟೆಗೆ ಅನುಕೂಲಮಾಡಬೇಕೆಂಬುದೇ ನಮ್ಮ ಆಕಾಂಕ್ಷೆ. ಜೀವನೋಪಾಯಕ್ಕೆ ಸರಿಯಾದಕೆಲಸವಿಲ್ಲದೆ ಬೀದಿಯಲ್ಲಿ ಬಟ್ಟೆಬರೆಯಿಲ್ಲದೆ ಅಲೆದಾಡತಕ್ಕ ನಮ್ಮ ಜನರಿಗೆ ಕೆಲಸವನ್ನು ಒದಗಿಸಬೇಕು. ಬಟ್ಟೆಯ ವರ್ತಕರು 1930ನೆಯ ವರ್ಷದಲ್ಲಿ ವಿದೇಶಿಬಟ್ಟೆಗಳ ವ್ಯಾಪಾರಮಾಡಿದ್ದರ ಪರಿಣಾಮವೇನಾಯಿತೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಅವರಿಗೆ 1921 ನೆಯ ವರ್ಷದಲ್ಲಿಯೂ, 1930 ನೆಯ ವರ್ಷದಲ್ಲಿಯೂ ಎಚ್ಚರಿಕೆಕೊಟ್ಟಿರುವೆವು. 1931 ನೆಯ ವರ್ಷದಲ್ಲಿ ಪುನಃ ಎಚ್ಚರಿಕೆಕೊಡುತ್ತೇವೆ. ಈ ಎಚ್ಚರಿಕೆಯನ್ನು ಅವರು ಗಮನಕ್ಕೆ ತರದಿದ್ದರೆ ನಮ್ಮ ಮುಂದಿನ ಸಂಗ್ರಾಮದಲ್ಲಿ ಅವರ ಸ್ಥಿತಿಯು ಬಹು ಶೋಚನೀಯವಾಗುವುದು.

ಧರ್ಮಯುದ್ಧ ಮಾಡುವ ಯೋಧರಂತೆ ನಮ್ಮ ನಾಯಕನು ಮಾಡಿಕೊಂಡಿರುವ ಒಪ್ಪಂದವನ್ನು ಇಡೀ ರಾಷ್ಟ್ರವು ಪ್ರತ್ಯುತ್ತರವನ್ನಾಡದೆ ಪಾಲಿಸುವುದೆಂಬುದನ್ನು ನಮ್ಮ ವಿರೋಧಿಗಳು ಸಹ ತಿಳಿದುಕೊಳ್ಳಲಿ. ಆ ಒಪ್ಪಂದವನ್ನು ನಾವು ಮನೋವಾಕ್ಕಾಯಗಳಿಂದ ಅಕ್ಷರಶಃ ಮಾನಿಸೋಣ! ನಾವು ಹಾಗೆ ವರ್ತಿಸುವುದಾದರೆ ನಮ್ಮ ಋಷಿಗಳೂ ಮತ್ತು ನಮ್ಮ ಮಹಾತ್ಮರೂ ಹೇಳಿರುವಂತೆ ಭರತಖಂಡವು ವಾಸ್ತವವಾಗಿಯೂ ಧರ್ಮಭೂಮಿಯೆಂಬುದನ್ನು ಜಗತ್ತಿನ ಜನರು ಒಪ್ಪುವರು. ನಮ್ಮ ಕಾರ್ಯಕಲಾಪಗಳನ್ನು ನಿಲ್ಲಿಸುವುದರಿಂದಲೂ, ಸರ್ಕಾರದವರು ಕಠಿಣಶಾಸನಗಳನ್ನು ತೆಗೆದುಹಾಕುವುದರಿಂದಲೂ ಇನ್ನು ಆರು ತಿಂಗಳುಗಳ ತರುವಾಯ ಯುದ್ಧಮಾಡುವ ಪ್ರಸಂಗಬಂದಾಗದರೂ ನಾವು ಚೇತರಿಸಿಕೊಂಡು ಯುದ್ಧಕ್ಕೆ ಸನ್ನದ್ಧರಾಗಿರುವೆವು.

ಮೀರತ್ತಿನ ಖೈದಿಗಳು.

ಮೀರತ್ತಿನ ಖೈದಿಗಳ ಬಗ್ಗೆ ಅನೇಕರು ನನ್ನನ್ನು ಪ್ರಶ್ನಿಸುತ್ತಿರುವರು. ಈಗ ಮಾಡಿಕೊಂಡಿರುವ ಒಪ್ಪಂದವು ಕಳೆದ ವರ್ಷ ನಡೆದ ಸಂಗತಿಗಳಿಗೆ ಮಾತ್ರವೇ ಅನ್ವಯಿಸುತ್ತದೆ. ಮೀರತ್ ಖೈದಿಗಳ ಸಲುವಾಗಿ ಸಂಧಾನಕ್ಕೆ ಭಂಗತರುವುದು ಯುಕ್ತವಾಗಿಕಂಡುಬರಲಿಲ್ಲ. ಆದರೂ ಅವರ ಬಿಡುಗಡೆಮಾಡಿಸಬೇಕೆಂದು ಪ್ರಯತ್ನಪಟ್ಟೆವು. ಅವರು ಜೈಲಿನಲ್ಲಿ ನರಳಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲ. ಶೀಘ್ರವಾಗಿ ಅವರೂ ಸಹ ಬಿಡುಗಡೆಹೊಂದುವಹಾಗೆ ಪ್ರಯತ್ನಿಸುತ್ತೇವೆ. ಅವರು ಕೂಲಿಗಳ ಪಕ್ಷವಾಗಿ ಕೆಲಸಮಾಡಿದವರಾಗಿರುವುದರಿಂದ ಅವರ ವಿಷಯದಲ್ಲಿ ಯಾರೂ ಭಿನ್ನಾಭಿಪ್ರಾಯಪಡುವಹಾಗಿಲ್ಲ.

ಶ್ರೀಮಂತರ ಸಂಗಡ ಕಲಹಮಾಡಬೇಡಿರಿ.

ಕೆಂಪುನಿಶಾನೆಯಾಗಲಿ, ಬಿಳಿಯ ನಿಶಾನೆಯಾಗಲಿ, ಕರಿಯ ನಿಶಾನೆಯಾಗಲಿ ಅಂಗೀಕರಿಸಬಹುದು. ಆದರೆ ಹಿಂಸಾದ್ಯೋತಕವಾದ ನಿಶಾನೆಯು ಮಾತ್ರ ಅಂಗೀಕರಿಸಲು ಯೋಗ್ಯವಾಗಿರುವುದಿಲ್ಲ. ಹಿಂದುಸ್ಥಾನದ ಸ್ವರಾಜ್ಯಸಾಧನೆಯ ಮಾರ್ಗವು ಅಹಿಂಸಾಮಯವಾದ ಸಂಗ್ರಾಮದಲ್ಲಿದೆ ಎಂದು ನಂಬಿದ್ದೇವೆ. ಕೂಲಿಕಾರರ ಪರವಾಗಿ ನಾವು ಏನೂ ಮಾಡಿಲ್ಲವೆಂದು ಕೆಲವರು ಅಭಿಪ್ರಾಯಪಡುವರು. ಅವರ ಹಿತವನ್ನು ನಾವು ಎಂದಿಗೂ ಬಿಟ್ಟುಕೊಡುವುದಿಲ್ಲ. ಆದರೂ ಶ್ರೀಮಂತರ ವಿರೋಧವಾಗಿ ಈಗ ಕಾದಾಡಬೇಕೆಂದು ನಾನು ಹೇಳಲಾರೆನು. ಪ್ರಥಮತಃ ಭಾರತೀಯರ ಜೀವನೋಪಾಯವನ್ನು ಹರಣಮಾಡುತ್ತ ವಿದೇಶಿ ಸಾಮ್ರಾಜ್ಯವಾದಿಗಳಿಗೆ ವಿರೋಧವಾಗಿ ಹೋರಾಡಬೇಕು. ಕೂಲಿಕಾರರ ಹಿತಕ್ಕೆ ವಿರೋಧವಾಗಿ ಶ್ರೀಮಂತರು ವರ್ತಿಸುವುದಾದರೆ ಅವರ ಸಂಗಡ ಯುದ್ಧಮಾಡಲು ಹಿಂಜರಿಯುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಪರದೇಶದ ಶತ್ರುವನ್ನು ಜಯಿಸಿದ ಮೇಲೆ ನಮ್ಮ ದೇಶದ ಶತ್ರುಗಳನ್ನು ಜಯಿಸುವುದು ಕಷ್ಟವಾಗುವುದಿಲ್ಲ.

ಯಾವ ವ್ಯಕ್ತಿಯನ್ನೂ ಹಿಂಸೆಪಡಿಸದೆ ಈ ಸಂಗ್ರಾಮವು ಜಯಪ್ರದವಾಗುವ ಹಾಗೆ ಕಾರ್ಯಭಾಗ ನಡೆಯಿಸಿದ ಬೊಂಬಾಯಿಯ ವೀರಮಹಿಳೆಯರನ್ನು ವಂದಿಸುತ್ತೇನೆ. ಇನ್ನು ಮುಂದೆಯೂ ಸಹ ಬೊಂಬಾಯಿ ನಗರಿಯು ತನ್ನ ಕೀರ್ತಿಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವುದೆಂದು ದೃಢವಾಗಿನಂಬಿದ್ದೇನೆ.

ಮಹಾತ್ಮ ಗಾಂಧಿಯರು ತಾವು ಹಿಂದೆ ಸಂಕಲ್ಪಮಾಡಿದ ಪ್ರಕಾರ ಸ್ವರಾಜ್ಯವನ್ನು ಸಂಪಾದಿಸದೆ ಸಬರ್ಮತಿ ಆಶ್ರಮಕ್ಕೆ ಹೋಗುವುದಿಲ್ಲವೆಂದು ಹೇಳಿದರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಭೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವಿಸಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಧಿ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿ ಯುಂಟುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ [illegible]—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು [illegible]ಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಪತ್ರಗಳನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರ್ಮಾಭಿಮಾನದಲ್ಲಿ ರತರಾದ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೭೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೧ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0. ½ ಡಜನಿಗೆ ರೂ. 8—8—0, ಡಜನಿಗೆ 16—8—0.

½ ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಿಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀನಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ರಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರವಲಿ ಬೀಳುವುದು, ಹೊಟ್ಟೆ ಹುಳಗಳ ಕಿರುಕುಳದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಸು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[32] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ) **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಕ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ ೬ ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[47] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಒಮ್ಮೆ ತರಿಸಿ ಅನುಭವ ತೆಗೆದುಕೊಳ್ಳಿರಿ.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಶನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[35] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜ ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೩ನೇ ಮಾರ್ಚಿ ೧೯೩೧ [ಸಂಚಿಕೆ ೪೭

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜ ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ರತು ವರ್ಷಕ್ಕೊಂದುಸಾರೆ ಮಾಮಾಂಗು ಜರುಗುತ್ತದೆ. ಆ ಸಮಯಕ್ಕೆ ಕಾಶೀ ಮುಂತಾದ ಸ್ಥಾನಗಳಿಂದ ಮಹಾಜನಗಳು ಬರುವುದಲ್ಲದೆ ಅನೇಕ ಜನ ಮಹಾರಾಜರು ಸಹ ಬರುತ್ತಾರೆ. ಮತ್ತು ಈ ಮಠವಿರುವ ಸ್ಥಲವು ಬಹಳ ಎತ್ತರವಾಗಿರುತ್ತದೆ. ಮತ್ತು ಮಠದ ೧-೨ ಪಾರ್ಶ್ವಗಳಲ್ಲಿ ದೊಡ್ಡ ರಸ್ತೆಗಳು ಇರುತ್ತವೆ. ಮತ್ತೊಂದು ಪಾರ್ಶ್ವದಲ್ಲಿ ಮಾಮಾಂಗ ಕೊಳವುಂಟು. ಇನ್ನೊಂದು ಪಾರ್ಶ್ವದಲ್ಲಿ ದೊಡ್ಡ ಕಾಲುವೆ ಇರುತ್ತದೆ. ಈ ಮಠಕ್ಕೆ ಯೋಗ್ಯ ಗುರುಗಳನ್ನು ಮಾಡಿ ವ್ಯವಸ್ಥೆಯಿಂದ ಪರಿಪಾಲಿಸಿದ್ದಾದರೆ ವಿಶೇಷವಾದ ಲಾಭವನ್ನು ಪಡೆಯಬಹುದು. ಈ ಮಠಕ್ಕೆ ಮಧುರೆ, ಕೊಯಮತ್ತೂರು, ತಿರುಚನಾಪಳ್ಳಿ, ತಿರುವಾಂಗೂರು ಮುಂತಾದ ಜಿಲ್ಲೆಗಳಲ್ಲಿ ಅಂದಾಜು 10-15 ಸಾವಿರದ ವರೆವಿಗೂ ಶಿಷ್ಯರಿದ್ದಾರೆ. ಅನೇಕ ಭೂಮಿಗಳು ಪರವಶವಾಗಿರುತ್ತವೆ. ಹೀಗಿದ್ದರೂ ಇಂಥ ಗುರುಸ್ಥಲ ಮಠಕ್ಕೆ ಯೋಗ್ಯ ಗುರುಗಳಿಲ್ಲದೆ ಅನಾಯಕವಾಗಿ ಆಸ್ತಿಪಾಸ್ತಿಗಳುಗೊತ್ತಿಲ್ಲದಂತಾಗಿ ಬಹಳ ಹೀನಾವಸ್ಥೆಗೀಡಾಗಿದೆ. ಗುರುವರ್ಗಾಭಿಮಾನಿಗಳು ಇತ್ತಕಡೆಗೆ ಗಮನಕೊಡಬೇಕು.

ಮಠಾಭಿಮಾನಿ,
ವೈ. ಕೆ. ಗುರುಸ್ವಾಮಯ್ಯ, ಗುಹಾ ಸೇಲಂ.

ಲೋವರ್ ಸೆಕೆಂಡರಿ ಪರೀಕ್ಷೆಗೆ ಬರತಕ್ಕ ಆರಾಧ್ಯ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರಲ್ಲಿರುವ ಸಿ. ಎಸ್. ಎಂ. ಆರಾಧ್ಯರು ತಿಳಿಯಪಡಿಸುವುದೇನೆಂದರೆ—

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗೆ ಮೈಸೂರು ಸೆಂಟರಿಗೆ ಬರತಕ್ಕ "ಆರಾಧ್ಯ" ವಿದ್ಯಾರ್ಥಿಗಳಿಗೆ ಮೈಸೂರು ದೇವರಾಜ ಮೊಹಲ್ಲಾ ಬೆಳ್ಳಿಕಟ್ಟೆಗೆಮಿಸಲ್ 878 ನೇ ನಂಬರ್ ಮನೆಯಲ್ಲಿರುವ "ಗುರುದೇವಪ್ರಕಾಶಕ ಗ್ರಂಥಮಾಲಾ ಆಫೀಸ್ ಮ್ಯಾನೇಜರವರಾದ ಎಂ. ಜಿ. ಆರಾಧ್ಯರವರು ತಮ್ಮ ಗೃಹದಲ್ಲಿ ಪರೀಕ್ಷೆ ಮುಗಿಯುವವರೆಗೂ ಧರ್ಮಾರ್ಥವಾಗಿ ಊಟದ ವ್ಯವಸ್ಥೆಯನ್ನು ಏರ್ಪಡಿಸಿರುವುದರಿಂದ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ಒಂದು ದಿವಸ ಮುಂಚಿತವಾಗಿ ಬಂದು ಮೇಲ್ಕಂಡವರಲ್ಲಿ ತಿಳಿಸಬೇಕಾಗಿ ಕೋರಿದೆ.

ಬಾಬರನ ಚರಿತ್ರ.

ಮೇಲ್ಕಂಡ ಈ ಪುಸ್ತಕವನ್ನು ಅರಮನೆಯಲ್ಲಿ ಅಧ್ಯಾಪಕರಾಗಿರುವ ಮ|| ರಾ|| ಬಿ. ನಾರಾಯಣಸ್ವಾಮಿರಾವ್ ಬಿ.ಎ., ಇವರು ಬರೆದಿರುವರು. ಈ ಪುಸ್ತಕವು ಚಿಕ್ಕದಾದಾಗ್ಯೂ ಇದರಲ್ಲಿ ಬಾಬರನ ಜನನ, ರಾಜ್ಯಪಾಲನ, ಕಷ್ಟದೂರೀಕರಣ, ಅನ್ಯರಾಜ್ಯಸಂಪಾದನ, ಪರಮತಸಹನ, ದೀನದಯಾದರ್ಶನ, ಪುತ್ರನಿಗೋಸುಗ ಪ್ರಾಣಾರ್ಪಣ ಮೊದಲಾದ ವಿಷಯಗಳು ಬಹು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಬಾಬರನ ಸಮಗ್ರವೃತ್ತಾಂತವನ್ನು ಸ್ವಲ್ಪದರಲ್ಲಿಯೇ ತಿಳಿದುಕೊಳ್ಳಲಪೇಕ್ಷಿಸುವ ಪ್ರತಿಯೊಬ್ಬರಿಗೂ ಈ ಪುಸ್ತಕವು ಆದರ್ಶಪ್ರಾಯವಾಗಿದ್ದು ಅವಶ್ಯ ಸಂಗ್ರಾಹ್ಯವಾಗಿದೆ. ಮುದ್ದಾದ ಮುದ್ರಣ. ಬೆಲೆ 3 ಆಣೆ.

ದೊರೆಯುವಸ್ಥಳ:—ಸಿ. ಕೃಷ್ಣಸ್ವಾಮಿರಾವ್,
151 ಡಿ. ಸುಬ್ಬಯ್ಯರೋಡ್, ಮೈಸೂರು.

ಶ್ರೀಗುರುಪಂಚಾಚಾರ್ಯೇಭ್ಯೋನಮಃ.

ಅಪೂರ್ವ ವೃತ್ತಾಂತ.

ಶಂಕರಸಂಸ್ಕೃತಕಾಲೇಜಿನ ವಿದ್ಯಾರ್ಥಿಗಳು ಸದರಿ ಕಾಲೇಜಿನ ಪ್ರೆಸಿಡೆಂಟರಾದ ಗುಣಮರಕಲ್ ಶಾಂತವೀರಸ್ವಾಮಿಗಳನ್ನೂ ಪಂ|| ಚಂದ್ರಶೇಖರಶಾಸ್ತ್ರಿಗಳನ್ನೂ ಹೊಡೆದಿರುತ್ತಾರೆಂದು ವದಂತಿ ಸ್ವಾಮಿಗಳೆಲ್ಲಿ? ಪರೀಕ್ಷೆಗೋದಲ್ಲಿರುವ ವಿದ್ಯಾರ್ಥಿಗಳೆಲ್ಲಿ! ಕೇವಲ ವಿಷಾದ! ಕಲಿಗಾಲದ ಮಹಿಮೆ ಹೇಳಲಸಾಧ್ಯ!

ಓರ್ವ ವಿದ್ಯಾರ್ಥಿ, ಯಾದಗಿರಿ.

ಶ್ರೀ ರುದ್ರಾಭಿಷೇಕ ಸಮಾರಂಭ

ಪರಮಪುಣ್ಯಪ್ರದವಾದ ಶ್ರೀ ಬಿಲ್ವವೃಕ್ಷದ ಮೂಲಸ್ಥಾನದೊಳು ಕುಳಿತು ಶಿವಪೂಜಾ ಮಂತ್ರಪುರಶ್ಚರಣ ಜಪತಪಾನುಷ್ಠಾನಾದಿಗಳನ್ನಾಚರಿಸಿದವರ ಕರ್ಮಸಂಚಯವಳಿದು ಇಷ್ಟಾರ್ಥಗಳು ಸಿದ್ಧಿಯಾಗುವವೆಂದು ಆಗಮೋಪನಿಷತ್ತುಗಳಲ್ಲಿ ಉಕ್ತವಾಗಿರುವದರಿಂದ ಈ ತತ್ವವನ್ನರಿತವರಾದ ಹಿರೇಹಡಗಲಿ ಪುರಾಣಿಕಮಠದ ವೇ|| ವಿರೂಪಾಕ್ಷಶಾಸ್ತ್ರಿಗಳೂ ಇವರ ಅಗ್ರಜರಾದ ವೇ|| ಪರಗೋಷ್ಠರಪ್ಪಯ್ಯನವರೂ ಧಾರವಾಡ ಡಿ|| ತುಂಗಭದ್ರಾನದೀತೀರದೊಳ್ ರಾಜಮಾನವಾದ ಶಿಂಗಟ್ಟಾಲೂರು ಶ್ರೀ ವೀರಭದ್ರಸ್ವಾಮಿ ಗಿರಿಯಲ್ಲಿರುವ 2 ನೇ ಬಿಲ್ವವೃಕ್ಷದ ಮೂಲಸ್ಥಾನದೊಳು ಯಾತ್ರಿಕವಾಗಿ ಬರುವ ಭಕ್ತಮಾಹೇಶ್ವರಾದಿ ಮಂಡಳಿಯು ಜಪತಪೋನುಷ್ಠಾನಗಳನ್ನಾಚರಿಸಿ ಪುಣ್ಯಭಾಗಿಗಳಾಗಲೆಂಬ ಸದುದ್ದೇಶದಿಂದ ಸದರಿ ಬಿಲ್ವವೃಕ್ಷಕ್ಕೆ (ಪ್ರೆಸಿಡೆಂಟರಾದ ಗುಮ್ಮಗೋಳ ಶ್ರೀಶೈಲಯವರ ಮುಖ್ಯತ್ವದಲ್ಲಿ) ನೂತನವಾಗಿ ಕಟ್ಟೆಯನ್ನೂ ಕಂಪೌಂಡನ್ನೂ ಸಿಂಹಸುರ್ಕಿಯಿಂದ ಕಟ್ಟಿಸಿ (ಪ್ರಮೋದ|| ಫಾಲ್ಗುಣ ಬಹುಳ ೯ರಲ್ಲು) ಶ್ರೀ || || ದೇವರಿಗೆ ಶ್ರೀ ರುದ್ರಾಭಿಷೇಕ ಬಿಲ್ವಾರ್ಚನೆ ಸೋದರ ಲೋಕಪಾಲಾದಿಗಳಿಂ ವಿಧ್ಯುಕ್ತವಾಗಿ ನೆರವೇರಿಸಿ ಮಹಾಗಣಾರಾಧನೆಯನ್ನು ಮಾಡಿಸಿ ಅತಿಥಿಗಳನ್ನು ಆನಂದಗೊಳಿಸಿದರು. ಈ ಸಮಾರಂಭಕ್ಕೆ ಹಿರೆಹಡಗಲಿ ಶಿವರುದ್ರಗೌಡರು, ಹಮ್ಮಿಗಿ ಶಾ|| ಶಾಂತಪ್ಪನವರು, ಹೊಳಲು ಹಿರೇಮಠದ ಚಂದ್ರಯ್ಯನವರು ಶಿಂಗಟ್ಟಾಲೂರು ಬಸಲಿಂಗಯ್ಯನವರು ಸವಲಿಹಂತಿ ವೀರಪ್ಪನವರು ಮುಂಡರಗಿ ಹೇಮಯ್ಯ ಮುಂತಾದವರು ಆಗಮಿಸಿದ್ದರು.

ಇದರಂತೆ ಪ್ರತಿಯೊಬ್ಬರೂ ಈ ಗಿರಿಯಲ್ಲಿ ಸರ್ವಜನೋಪಯುಕ್ತಗಳಾದ ಕಾರ್ಯಗಳಂ ಮಾಡಿಸುತ್ತ ಈ ಪುಣ್ಯಕ್ಷೇತ್ರವಂ ವೃದ್ಧಿಗೊಳಿಸಿ ಕೀರ್ತಿಗೂ ಮುಕ್ತಿಗೂ ಪಾತ್ರರಾಗಬೇಕೆಂದು ಬಯಸುತ್ತೇನೆ.

ಕೊಟ್ರಯ್ಯ ಮಾಸ್ತರ ಪುರವರ್ಗಮಠ ಜಾಲವಾಡಿಗಿ.
ಶಿವಾನಂದಾರ್ಯ.

ಕುಂಭಕೋಣದಲ್ಲಿರುವ ವೀರಶೈವ ಗುರುಸ್ಥಲಮಠ

ಮದರಾಸಿಗೆ ಸೇರಿದ ತಂಜಾವೂರ್ ಡಿಸ್ಟ್ರಿಕ್ಟಿನಲ್ಲಿ ಕುಂಭಕೋಣವೆಂಬುವುದೊಂದು ಪ್ರಸಿದ್ಧಪಟ್ಟಣವಿರುವುದು. ಈ ಪಟ್ಟಣದಲ್ಲಿ ಮಾಮಾಂಗಕೊಳ ಎಂಬುದೊಂದು ದೊಡ್ಡ ಕೊಳವಿರುತ್ತದೆ. ಈ ಕೊಳದ ಸಮೀಪದಲ್ಲಿ ಶಾರ್ಙಪಾಣಿಯೆಂಬುದೊಂದು ವಿಷ್ಣುಮೂರ್ತಿಯ ಭಾರಿ ದೇವಸ್ಥಾನವುಂಟು. ಮತ್ತು ಈ ಕೊಳದ ಎದುರಿಗೆ ಸಮೀಪದಲ್ಲಿ ಸಾರಂಗಪಾಣಿ ಎಂಬ ಹೆಸರುಳ್ಳ ವೀರಶೈವರ ಪ್ರಸಿದ್ಧ ಗುರುಸ್ಥಲ ಮಠವಿರುತ್ತದೆ. ಈ ಮಠವು ಬಹು ಪುರಾತನಕಾಲದ್ದೆಂದು ಅಲ್ಲಿಯ ಚಿಹ್ನಗಳಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಗ್ರಾಮದಲ್ಲಿ ವೀರಶೈವರ ಒಂದು ಮನೆಯೂ ಇರುವುದಿಲ್ಲ. ಈ ಮಠವು ಗುರುಗಳಿಲ್ಲದೆ ಅನಾಯಕವಾದ್ದರಿಂದ ಸದ್ಯಃ ತಿರುಚನಾಪಳ್ಳಿಯ ರತ್ನಪಡಿ ವ್ಯಾಪಾರಿ ಮ|| ರಾ|| ಬಸವಣ್ಣಶೆಟ್ರ ಅಧೀನದಲ್ಲಿರುತ್ತದೆ. ಮಠದ ಕಟ್ಟಡದಲ್ಲಿ ಕೆಲಭಾಗಗಳು ಜೀರ್ಣವಾಗಿ ಬಿದ್ದುಹೋಗಿರುತ್ತವೆ. ಮಠದ ಮುಂದಿರುವ ಮಂಟಪದಲ್ಲಿ ಮಾತ್ರ ಒಬ್ಬ ಲಿಂಗಾಂಗಿಯು ವಾಸವಾಗಿರುತ್ತಾನೆ. ಮಠಕ್ಕೆ ಸೇರಿದ ಸ್ಥಲವಾದರೂ ಬಹಳ ವಿಶಾಲವಾಗಿದೆ. ಈ ಸ್ಥಲಗಳ ಕೆಲ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ಕೆಲವರು ವಾಸವಾಗಿರುತ್ತಾರೆ. ಕೆಲವೆಡೆಗಳಲ್ಲಿ ಅಂಗಡಿಗಳನ್ನು ಕಟ್ಟಿಕೊಂಡು ಕಟ್ಟಿಗೆ ವ್ಯಾಪಾರವನ್ನು ಮಾಡುತ್ತಲಿದ್ದಾರೆ. ಈ ಮಠಕ್ಕೆ ಸೇರಿದ ಭೂಮಿಯಾದರೂ ಬಹಳವಾಗಿದೆಯೆಂದು ತೋರುತ್ತದೆ. ಈ ಮಠದ ಒಳಭಾಗದ ಗೋಡೆಯ ಕಲ್ಲಿನ ಮೇಲೆ ಕೆಲವು ಶಿಲಾಶಾಸನಗಳು ಕಂಡುಬರುತ್ತವೆ. ಈ ಶಾಸನಗಳನ್ನು ಓದಿಸುವುದು ಅತ್ಯವಶ್ಯಕವಾಗಿದೆ. ಮತ್ತು ಈ ಮಠದ ಒಂದೆರಡು ಫರ್ಲಾಂಗಿನಲ್ಲಿ ಕಾವೇರಿಯು ಹರಿಯುತ್ತದೆ. ಮತ್ತು ಈ ಮಠದ ಎದುರು ಇರುವ ರಸ್ತೆಯ ಬಳಿಯಲ್ಲಿರುವ ಮಾಮಾಂಗಕೊಳದಲ್ಲಿ ಹನ್ನೆ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವಗಳು.

ಧಾರವಾಡ

ಇದೇ ಫಾಲ್ಗುಣ ಶುದ್ಧ ೧೩ ಸೋಮವಾರ ಪ್ರಾತಃಕಾಲ ಮೂಲಿಮಠದಲ್ಲಿ ಶ್ರೀರೇಣುಕವಿಗ್ರಹಕ್ಕೆ ಮಹಾರುದ್ರಾಭಿಷೇಕವು ನಡೆದು ಮಧ್ಯಾಹ್ನ 4 ಘಂಟೆಗೆ ಸಂಸ್ಕೃತ ಪಾಠಶಾಲಾಧ್ಯಾಪಕರಾದ ವಂ|| ವೇ|| ವೀರಭದ್ರಶಾಸ್ತ್ರಿಗಳು ಚರಂತಿಮಠಹುನಗುಂದ ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಈ ಉತ್ಸವಕ್ಕೆ ಅಧಿಕಾರಿಗಳೂ ಧುರಧುರೀಣರೂ ಆಗಮಿಸಿದ್ದರಲ್ಲದೆ ಫಲಪುಷ್ಪ ನೀರಾಜನ ಸಹಿತವಾಗಿ ಅನೇಕ ಸ್ತ್ರೀಯರು ಆಗಮಿಸಿದ್ದರು. ಮೊದಲು ಪಾಠಶಾಲಾ ವಿದ್ಯಾರ್ಥಿಗಳು ಶಾಂತಿ ಮಂತ್ರವನ್ನು ಪಠಿಸಿದ ಬಳಿಕ ಶಾಸ್ತ್ರಿಗಳು ಅಮೃತವಾಣಿಯಿಂದ ಆಬಾಲವೃದ್ಧರ ಹೃದಯದಲ್ಲಿ ಪರಿಣಾಮವಾಗುವಂತೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಮಹಿಮೆಗಳನ್ನು ಪ್ರತಿಪಾದನಮಾಡಿದರು. ಸಭಿಕರೆಲ್ಲರೂ ಪರಮಸಂತೋಷಭರಿತರಾಗಿ ಸಿಂಹಾಸನದಲ್ಲಿ ಮೂರ್ತಿಗೊಳಿಸಿದ ಶ್ರೀಜಗದ್ಗುರುಗಳ ಪ್ರತಿಮೆಗೆ ಮಂಗಳಾರತಿಯನ್ನು ಮಾಡಿ ಫಲಪುಷ್ಪಗಳನ್ನು ಸಮರ್ಪಿಸಿ ಆಶೀರ್ವಾದವನ್ನು ಪಡೆದ ನಂತರ ಜಗದ್ಗುರುಗಳ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಎಸ್. ಬಿ. ಶಿವ್ವಗಿರಿಮಠ.

ಹುಮನಾಬಾದ್

ಫಾಲ್ಗುಣ ಶು|| ೧೩ ಸೋಮವಾರ ದಿವಸ ಕಲ್ಮಠದಲ್ಲಿ ಸರ್ವಗುರುಭಕ್ತರೂ ಸೇರಿ ಶ್ರೀ ಜಗದ್ಗುರುಗಳ ಭಾವಪಟಕ್ಕೆ ವಿಧ್ಯುಕ್ತಪೂಜೆಯನ್ನು ನಡೆಯಿಸಿ ಗುರುಭಕ್ತಿಯಿಂದ ಭಜನೆಯನ್ನು ಮಾಡಿ ಸಾಯಂಕಾಲ ಮಾಣಿಕರಾವ ಪೆಸಗಾರ, ಇವರು ಮತ್ತು ಸೆಕ್ರೆಟರಿ ಬಸವಣ್ಣಪ್ಪಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ರಾಮಚಂದ್ರರಾವ್ ಮಾಸ್ತರ್ ಪರಶುರಾಮ ರಂಗಧಾಳೀ ರಾಮಚಂದ್ರ ಇಂಗಳೇ ಸಿದ್ಧರಾಮಯ್ಯ ಭಂಗೀ ದಾನಯ್ಯನವರು ಮಠಪತಿ ವೀರಭದ್ರಪ್ಪ, ಭುಶೆಟ್ಟಿ ವೀರಭದ್ರಪ್ಪ, ಚಿಂಚೋಳಿ ಗುರಪ್ಪ ರಾಮಣ್ಣ ಗೋವಿಂದಪ್ಪ ಮೊದಲಾದವರು ವಿದ್ಯೆ, ಹೋಳಿಹಬ್ಬದಲ್ಲಿ ಮಾಡುವ ಅತ್ಯಾಚಾರನಿಷೇಧ, ಏಕಮತ್ಯ, ಪಂಚಾಚಾರ್ಯ ಪ್ರಭಾವ ಮುಂತಾದ ವಿಷಯಗಳ ಮೇಲೆ ಸಭಿಕರಿಗೆ ಹೃದಯಾನಂದವಾಗುವಂತೆ ಉಪನ್ಯಾಸಗಳನ್ನು ಮಾಡಿದರು. ಬಳಿಕ ಆಚಾರ್ಯಮೂರ್ತಿಗೆ ಮಂಗಳಾರತಿಯು ನಡೆದು ಜಯಜಯಕಾರದೊಡನೆ ಸಭೆಯು ಮುಕ್ತಾಯವಾಯಿತು.

ಓರ್ವ ಗುರುಭಕ್ತ.

ಹುಬ್ಬಳ್ಳಿ

ಇದೇ ಫಾಲ್ಗುಣ ಶು|| ೧೩ ಸೋಮವಾರ ತಾ|| 2-3-31 ನೇ ದಿವಸ ಪಂಚಾಚಾರ್ಯ ಸ್ಟೋರಿನಲ್ಲಿ ಜಯಂತಿಯ ಸಮಾರಂಭವು ವೈಭವದಿಂದ ನೆರವೇರಿತು. ಪ್ರಾತಃಕಾಲ 7 ಘಂಟೆಯವರೆಗೆ ಶ್ರೀ|| ಷ|| ಬ್ರ|| ಪಟ್ಟಾಧ್ಯಕ್ಷ ಪುಣ್ಯಾಕ್ರಮ ರೇಣುಕಬಾಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ವಿಚಿತ್ರವಾದ ಕದಳೀಧ್ವಜಗಳಿಂದಲೂ ತಳಿರುತೋರಣಗಳಿಂದಲೂ ಪುಷ್ಪಮಾಲಿಕೆಗಳಿಂದಲೂ ಅಲಂಕೃತವಾದ ಪೀಠದ ಮೇಲೆ ರೇಣುಕ ಶಿವಾಚಾರ್ಯರ ರಜತ ವಿಗ್ರಹವನ್ನು ಮೂರ್ತಮಾಡಿಸಿ ವೇದೋಕ್ತ ಪೂಜಾಸಮಾರಂಭವು ನಡೆಯಿಸಲ್ಪಟ್ಟಿತು. ಮಧ್ಯಾಹ್ನ ಗಣಾರಾಧನೆಯು ನಡೆದು ನಾಲ್ಕರಿಂದ 5 ಘಂಟೆಯವರೆಗೆ ಪಾಲೀಕೊಪ್ಪದಿಂದಲೂ ತಿರುಮಲಕೊಪ್ಪದಿಂದಲೂ ಬಂದ ಆಚಾರ್ಯಭಜನಾಸಂಘದವರು ಮುಂಚಳ ವಾದ್ಯಸಮೇತವಾಗಿ ಗುರುಭಜನೆಯನ್ನು ಮಾಡಿದರು. ಪ್ರಾಸಂಗಿಕ ಭಾಷಣಗಳು ನಡೆದ ಬಳಿಕ ಮಂಗಳಾರತಿಯಾಗಿ ಗುರುಪೂಜೆಯನ್ನು ಸಮಾಪ್ತಿಗೊಳಿಸಿ ಹನ್ನೆರಡು ಮಠದಲ್ಲಿ ನಡೆಯುವ ಜಯಂತ್ಯುತ್ಸವಕ್ಕೆ ಎಲ್ಲರೂ ದಯಮಾಡಿಸಿದರು.

ಶ್ರೀ ಪಂಚಾಚಾರ್ಯ ಸ್ಟೋರ್, ಮ್ಯಾನೇಜರ್.

ಶ್ರೀ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವು ಕೊಳ್ಳೇಗಾಲ ತಾಲ್ಲೂಕು ಶ್ರೀ ರೇವಣಸಿದ್ಧೇಶ್ವರ ಬೆಟ್ಟದಲ್ಲಿ ಫಾಲ್ಗುಣ ಶುದ್ಧ ತ್ರಯೋದಶಿ (2-3-31) ದಿವಸ ಅರ್ಚಕರು ಶಿವರುದ್ರಯ್ಯನವರು ಪಾರುಪತ್ತೆಗಾರ್ ರುದ್ರಪ್ಪನವರು ಮತ್ತು ಭಕ್ತಮಂಡಲಿಯಿಂದ ನೆರವೇರಿಸಲ್ಪಟ್ಟಿತು. ಶ್ರೀ ಗಿರಿಯ ಮೇಲ್ಭಾಗದಲ್ಲಿ ಶ್ರೀ ರೇಣುಕಲಿಂಗೋದ್ಭವಮೂರ್ತಿಗೆ ಮಹಾರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಯು ನಡೆಸಲ್ಪಟ್ಟಿತು. ಮಧ್ಯಾಹ್ನ ಶ್ರೀ ಭೀಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸ್ವಾಮಿಯವರ ಉತ್ಸವವು ನಡೆಸಲ್ಪಟ್ಟಿತು. ಶ್ರೀ ಜಗದಾಚಾರ್ಯರು ಕೊಲ್ಲಿಪಾಕಿ ಲಿಂಗದಲ್ಲುದ್ಭವಿಸಿ ಅಲ್ಲಲ್ಲಿ ಅನೇಕ ಪವಾಡಗಳನ್ನು ಕೈಕೊಂಡು ಈ ಗಿರಿಗೆ ದಯಮಾಡಿಸಿ ನೆಲೆಗೊಂಡರೆಂಬುದು ಸ್ಥಳಪುರಾಣದಿಂದ ಸ್ಪಷ್ಟವಾಗುತ್ತದೆ. ಇಂತಹ ಪರಮಪವಿತ್ರವಾದ ಈ ಗಿರಿಯಲ್ಲಿ ಶ್ರೀ ಸ್ವಾಮಿಯ [illegible]ಮಹೋತ್ಸವಕ್ಕೆ ಅಷ್ಟು ಪ್ರೋತ್ಸಾಹವಿಲ್ಲದೆ ಇರುವುದನ್ನು [illegible] ಇದರೆ ತುಂಬಾ ವ್ಯಸನವಾಗುತ್ತದೆ. ಗಿರಿಯ ತಪ್ಪಲಲ್ಲಿ ಶ್ರೀ ರಂಭಾಪುರೀಪೀಠಕ್ಕೆ ಸಂಬಂಧಪಟ್ಟ ರಾಜಾಪುರಮಠವೆಂದು ಕರೆಯುವ ಒಂದು ಮಠವುಂಟು. ಈ ಮಠಕ್ಕೆ ಪಟ್ಟವಾಗಿರುವ ಸ್ವಾಮಿಗಳು ಚಿಕ್ಕವರಾದ್ದರಿಂದ ಬೆಂಗಳೂರಿಗೆ ಸಂಸ್ಕೃತ ವಿದ್ಯಾಭ್ಯಾಸ ಮಾಡುವುದಕ್ಕೆ ಹೋಗಿದ್ದರಿಂದ ಇವರ ಸಂಬಂಧಿಗಳಾದ ಚನ್ನವೀರದೇವರೆಂಬುವರು ಈ ಮಠದ ಆಡಳಿತವನ್ನು ನೋಡುತ್ತಲಿದ್ದಾರೆ. ಮಠದಲ್ಲಿ ಇವರು ತಮ್ಮ ಮೂಲಾಚಾರ್ಯರ ಜಯಂತಿಯನ್ನು ಆಚರಿಸದೆ ಇರುವುದೂ ಬಂದ ಭಕ್ತಾದಿಗಳಿಗೆ ಅನ್ನದಾನವನ್ನು ನಡೆಯಿಸದೆ ಇರುವುದೂ ವ್ಯಸನಕರವಾದ ಸಂಗತಿಯಾಗಿದೆ. ಅಲ್ಲದೆ ಜಯಂತಿಯದಿವಸ ಶ್ರೀ ಗಿರಿಯಲ್ಲಿ ನಡೆಯುತ್ತಿದ್ದ ಮಹಾರುದ್ರಾಭಿಷೇಕಕ್ಕೆ ಸ್ವಲ್ಪ ಹಾಲುಬೇಕೆಂದು ಹೇಳಿಕಳುಹಿಸಿದ್ದಕ್ಕೆ ದೊರೆಯಲಾರದೆಂದು ವಾಪಸು ಕಳುಹಿಸಿದರಂತೆ! ಇಂಥ ಸ್ವಾರ್ಥಕಾಮಿಗಳು ಮಠಗಳಲ್ಲಿದ್ದರೆ ಆ ಮಠದ ಪರಿಣಾಮವನ್ನು ಹೇಳಲು ಶಕ್ಯವಲ್ಲ. ಮತ್ತು ಈ ಚನ್ನವೀರದೇವರೆಂಬುವರು ಅನೇಕಕಡೆ ಭಕ್ತಾದಿಗಳ ಕಡೆ ಸಂಚಾರಮಾಡಿ ನಾವು ಶ್ರೀ ರಂಭಾಪುರೀ ಪೀಠದ ಶಾಖಾಮಠಕ್ಕೆ ಸೇರಿದವರೆಂತಲೂ ಯಾವಾಗ್ಯೂ ಅನ್ನದಾನ ವಗೈರೆ ನಡೆಸಿ ಶ್ರೀ ರೇಣುಕರ ಸೇವಾತತ್ಪರರಾಗಿರುತ್ತೇವೆಂತಲೂ ಹೇಳಿಕೊಂಡು ನಾವು ರಥ ಮತ್ತು ಕಲ್ಲುಮಂಟಪ ವಗೈರೆ ಕಟ್ಟಿಸುತ್ತೇವೆಂದು ಭಕ್ತಾದಿಗಳನ್ನು ಮರುಳುಮಾಡಿ ದ್ರವ್ಯಶೇಖರ ಮಾಡಿಕೊಂಡು ಮೇಲ್ಕಂಡ ಕಾರ್ಯಗಳನ್ನು ಯಾವುದನ್ನೂ ಮಾಡದೆ ತಮ್ಮ ಸ್ವಂತಕ್ಕೋಸ್ಕರ ಜಮೀನು ವಗೈರೆ ದರ್ಕಾಸ್ ಮೂಲಕ ಚರಸ್ಥಿರಾಸ್ತಿಗಳನ್ನು ಮಾಡಿಸುತ್ತಾ ಸ್ವಪ್ರಯೋಜನಾರ್ಥಿಗಳಾಗಿರುತ್ತಾರೆಂದು ಭಕ್ತಾದಿಗಳು ದೂರಿಯುಡುತ್ತಾರೆ. ಶ್ರೀಮಠಕ್ಕೆ ಸುಮಾರು 40-50 ಎಕರೆ ಜಮೀನು ಇದ್ದರೂ ಅದರ ಅಭಿವೃದ್ಧಿಯಲ್ಲಿ ಲಕ್ಷ್ಯವಿಡದೆ ಹೋಗಿದ್ದಾರೆ. ಇದನ್ನು ಇದುವರಿವಿಗೂ ಯಾರೂ ವಿಚಾರಮಾಡಿ ತಕ್ಕ ಏರ್ಪಾಡುಮಾಡಲಿಲ್ಲ. ಈಗಲಾದರೂ ನಮ್ಮ ಬೆಂಗಳೂರು ಮತ್ತು ಬಿಡದಿ ಮಹಾಜನಗಳು ಮನಸ್ಸಿಗೆ ತಂದುಕೊಂಡು ಮಠದ ನ್ಯೂನತೆಯನ್ನು ಸರಿಪಡಿಸಿ ಬೇರೆ ಒಬ್ಬ ಸ್ವಾರ್ಥತ್ಯಾಗಿಗಳಾದವರನ್ನು ನೇಮಿಸಿ ಶ್ರೀ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಆಶಿಸುತ್ತೇನೆ. ಮತ್ತು ಶ್ರೀಗಿರಿಯಲ್ಲಿರುವ ದೇವಸ್ಥಾನವು ಕೈಸಾಲೆಯು ಮತ್ತು ಮಂಟಪವು ಕುಂಭಿಯಲ್ಲಿರುವ ಶಿಖರಕ್ಕೆ ಸಿಡಿಲುಹೊಡೆದುದರಿಂದ ಅತ್ಯಂತ ಶಿಥಿಲವಾಗಿರುವುವು. ಈಗ್ಗೆ 2 ತಿಂಗಳ ಹಿಂದೆ ದಯಮಾಡಿಸಿದ್ದ ನಮ್ಮ ಹಜರತ್ ಡೆಪ್ಯುಟಿಕಮಿಷನರ್ ಸಾಹೇಬರವರು ಮತ್ತು ಕೊಳ್ಳೇಗಾಲ ಅಮಲ್ದಾರ್ ಸಾಹೇಬರವರು ಖುದ್ದು ಪರಾಮರ್ಶಿಸಿ ಶೀಘ್ರದಲ್ಲಿಯೇ ಇವುಗಳೆಲ್ಲವನ್ನೂ ರಿಪೇರಿಮಾಡಿಸಲು ಆರ್ಡರ್ ಮಾಡುತ್ತೇವೆಂದು ಅಪ್ಪಣೆಕೊಡಿಸಿದರು. ಈ ವರಿವಿಗೂ ಯಾವುದೂ ಆಗಲಿಲ್ಲ. ಜಾತ್ರೆಯು 1½ ತಿಂಗಳು ಮಾತ್ರ ಉಳಿಯಿತು. ಅಷ್ಟರೊಳಗೆ ಶಿಥಿಲವಾಗಿರುವ ಮಂಟಪ ವಗೈರೆ ರಿಪೇರಿಯಾಗದೆ ಹೋದರೆ ಜಾತ್ರೆಗೆ ಸೇರುವ ಜನಸಂದಣಿಯಲ್ಲಿ ಅಪಾಯವಾದೀತೆಂಬ ಸಂಶಯವುಂಟಾಗಿದೆ. ಇದನ್ನು ನಮ್ಮ ಅಮಲ್ದಾರ್ ಸಾಹೇಬರವರು ದಿವ್ಯಚಿತ್ತಕ್ಕೆ ತಂದುಕೊಂಡು ಶೀಘ್ರದಲ್ಲಿ ರಿಪೇರಿಗೆ ಆರ್ಡರ್ ದಯಪಾಲಿಸುತ್ತಾರೆಂದು ನಿರೀಕ್ಷಿಸುವ,

ಓರ್ವ ಪ್ರತ್ಯಕ್ಷದರ್ಶಿ.

ವರ್ಗನಹಳ್ಳಿ

ಫಾಲ್ಗುಣ ಶು|| ೧೩ ಸೋಮವಾರ ಸೊಲ್ಲಾಪುರ ಜಿಲ್ಲಾ ಪೈಕಿ ಹೋಟಗಿ ಬೃಹನ್ಮಠಾಧ್ಯಕ್ಷ ಬಾಲತಪಸ್ವಿ ಷ|| ಬ್ರ|| ಚನ್ನವೀರಶಿವಾಚಾರ್ಯ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಸೋಲಾಪೂರು ಸಿದ್ಧರಾಮೇಶ್ವರ ಕಮಿಟಿಯ ಪಂಚರೂ, ಪ್ರಸಿದ್ಧಪುರುಷರೂ, ಶ್ರೀಮಂತರೂ, ಗುರುಭಕ್ತಿಪರಾಯಣರೂ ಆದ ಶ್ರೀ|| ಶಿವಲಿಂಗಪ್ಪಾ ಶಿದ್ರಾಮಪ್ಪಾ ಮಾಳಗೆಯವರು ಸ್ವತಃ ಖರ್ಚಿನಿಂದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವೈಭವದಿಂದ ನೆರವೇರಿಸಿದರು. ಆ ದಿವಸ ಪ್ರಾತಃಕಾಲದಲ್ಲಿ ಆಚಾರ್ಯಬಿಂಬಕ್ಕೆ ರುದ್ರಾಭಿಷೇಕ, ಸಹಸ್ರಬಿಲ್ವ, ಸಹಸ್ರಕಮಲ, ಸಹಸ್ರದೀಪ ಇತ್ಯಾದಿಗಳಿಂದ ಪೂಜೆಯು ಮಾಡಲ್ಪಟ್ಟನಂತರ ಭಕ್ತಮಾಹೇಶ್ವರರು ಪ್ರಸಾದವನ್ನು ಸ್ವೀಕರಿಸಿದರು. ಅನ್ನಸಂತರ್ಪಣೆಯು ಚನ್ನಾಗಿ ನಡೆಯಿತು. ರಾತ್ರಿ 9 ಘಂಟೆಗೆ ಶ್ರೀ ಆಚಾರ್ಯಮೂರ್ತಿಯನ್ನು ಅಂದವಾದ ಆಂದೋಲಿಕೆಯಲ್ಲಿ ಮೂರ್ತಗೊಳಿಸಿ ಮೆರವಣಿಗೆಯು ತಗಿಯಲ್ಪಟ್ಟು ಈ ಗ್ರಾಮದ ಬೃಹನ್ಮಠ (ಹೋಟಗೀ ಶಾಖಾಮಠ) ಕ್ಕೆ ತಲ್ಪಿತು. ಜಯಜಯಕಾರದೊಡನೆ ಆಚಾರ್ಯರ ಬಿಂಬವನ್ನು ತೊಟ್ಟಿಲಲ್ಲಿರಿಸಿ ಮಲಕಪ್ಪಾ ಕಲ್ಲಿಶೆಟ್ಟಿ, ಶಿದ್ದಪ್ಪಾ ಶಾಂತವೀರಪ್ಪಾ ಜೋರಟೆ ಇವರು ಆಚಾರ್ಯರ ಮೇಲೆ ಜೋಗುಳಪದವನ್ನು ಪಾಡಿದನಂತರ ಹೋಟಗೀ ಬಾಲತಪಸ್ವಿಗಳ ಅಧ್ಯಕ್ಷತೆಯಲ್ಲಿ ಸಭೆಸೇರಿ ಶಿವಲಿಂಗಪ್ಪಾ ಮಾಳಗೆ, ದತ್ತಪಂತರಾವದೇಶಮುಖ, ಕುಲಕರ್ಣಿ, ರಾಮಭಾವು ಇವರು ಭಾಷಣವನ್ನು ಮಾಡಿದರು. ಅನಂತರ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

1. ಶ್ರೀ ಶಿವಲಿಂಗಪ್ಪಾ ಮಾಳಗೆ ಸೋಲಾಪೂರ ಇವರು ಈ ಗ್ರಾಮದಲ್ಲಿ ಆಚಾರ್ಯರ ಹೆಸರಿನಿಂದ ಭಜನಾಸಂಘವನ್ನು ಸ್ಥಾಪಿಸಬೇಕೆಂದು ಸೂಚನೆಯನ್ನು ತಂದರು. ಈ ಸೂಚನೆಯು ಸರ್ವಾನುಮತದಿಂದ ಪಾಸಾಗಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಜನಾಸಂಘವೆಂದು ನಾಮಕರಣಮಾಡಲ್ಪಟ್ಟಿತು.

2. ದತ್ತೂಪಂತರಾವ ದೇಶಮುಖರು ಸದರೀ ಬಾಲತಪಸ್ವಿ ಮಹಾಸ್ವಾಮಿಗಳವರ ಶಾಖಾಮಠವಾದ ನಮ್ಮೂರ ಮಠವು ಅತ್ಯಂತ ಶಿಥಿಲಸ್ಥಿತಿಯಲ್ಲಿರುತ್ತದೆ. ಅದನ್ನು ದೃಢಗೊಳಿಸಿ ಮಹಾಸ್ವಾಮಿಗಳನ್ನು ಇಲ್ಲಿಯೇ ಸ್ಥಿರವಾಗಿ ನಿಲ್ಲುವಂತೆ ಮಾಡಿ ಇವರ ಮುಖದಿಂದ ಧಾರ್ಮಿಕವಿಷಯಗಳನ್ನು ತಿಳಿದುಕೊಳ್ಳಬೇಕೆಂದು ಸೂಚಿಸಿದ್ದಕ್ಕೆ ಸರ್ವಾನುಮತದಿಂದ ಒಪ್ಪಿಗೆಯಾಗಿ ತಕ್ಷಣದಲ್ಲಿಯೇ 950 ರೂಪಾಯಿಗಳ ವಾಗ್ದಾನವಾಯಿತು.

3. ಅಧ್ಯಕ್ಷರು—ಪ್ರತಿಯೊಬ್ಬ ವೀರಶೈವನು ತಮ್ಮ ಮತಸ್ಥಾಪಕರ ಜಯಂತಿಗಳನ್ನು ಹಬ್ಬಗಳಂತೆ ಪಾಲಿಸಿ ಗುರುಕೃಪೆಗೆ ಪಾತ್ರರಾಗಬೇಕು ಎಂದು ಅಪ್ಪಣೆಮಾಡಲು ಸರ್ವರೂ ಕಂಠಾದನ ಜಯಘೋಷಗಳೊಡನೆ ಎದ್ದುನಿಂತು ಅನುಮೋದಿಸಿದರು.

4. ಅಧ್ಯಕ್ಷರು—ಧಾರವಾಡ ಜಿಲ್ಲಾ ಪೈಕಿ ಪಾಲೀಕೊಪ್ಪದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯರು, ವಿಶ್ವಪ್ರಯತ್ನದಿಂದ ಹೋಳೀಹುಣ್ಣಿಮೆಯಲ್ಲಿ ನೆರವೇರುವ ದುಷ್ಪವರ್ತನ ದೂರೀಕರಣರೂಪವಾದ "ಭಾರತೀಯ ಬಿಲ್ಲ" ನ್ನು ಸ್ಥಾಪಿಸಿ ಪ್ರಯತ್ನ ನಡೆಸಿರುವುದರಿಂದ ಸದರಿ ಶ್ರೀಗಳನ್ನು ಈ ಸಭೆಯವರ ಶಿರಸಾ ವಂದಿಸುವದಲ್ಲದೆ ಆ ಪ್ರಕಾರ ವರ್ತನಶೀಲರಾಗಬೇಕೆಂದು ಸೂಚಿಸಿದರು. ಈ ಊರಲ್ಲಿ ಬೊಬ್ಬೆ ಹೊಡೆಯುವದು, [illegible] ಯಾಟವನ್ನು ಆಡುವುದು, ಅಪಶಬ್ದಗಳನ್ನು ಉಚ್ಚರಿಸು[illegible]ಂದೂ, ಬೆಂಕಿ ತರುವುದಕ್ಕೆ ಹೊಲಗೇರಿಗೆ ಹೋಗುವುದು ಮೊ[illegible] ದುಷ್ಪದ್ಧತಿಗಳನ್ನು ಬಿಟ್ಟು ಬೃಹನ್ಮಠದಿಂದಲೇ ಅಗ್ನಿಯನ್ನು [illegible]ಬೇಕೆಂ[illegible] ಊರ ಪಾಟೀಲರಾದ ಅಪ್ಪಾರಾವ್ ಶಿದ್ದಪ್ಪ ಇವರು) ಜಯಜಯಕಾರಗಳೊಡನೆ ಕಾಮದಹನಮಾಡಿಸಿದರು. ಜಯಂ[illegible] ಕಾಲದಲ್ಲಿ ಶ್ರೀ ಶಾಂತವೀರಪ್ಪ ರೇವಣಶಿದ್ದಪ್ಪ ಇವರು, ಬ[illegible] ರಾವ ಮಾಳಗೆ, ಚನ್ನಪ್ಪ ಶಿವಮೂರ್ತಿ ಇವರು ವಿಶೇಷ ಶ್ರಮ[illegible] ಮಾಡಿದರು. ಜಯಂತಿಯಕಾಲಕ್ಕೆ ನೆನ್ನೆಗಾಂವ, ನೇಲಿಗಾಂವ, [illegible] ಗಾಂವ, ಧೋತ್ರಿ, ಮುಸ್ತಿ, ದಿವಸಂಗಿ, ಜವಳ ಇತ್ಯಾದಿ ಗ್ರಾಮಗಳಿಂದ ಸರ್ವಜಾತಿಯವರು ಭಕ್ತಿಪುರಸ್ಸರವಾಗಿ ನೆರೆದಿದ್ದರು. ಇಲ್ಲಿಯ ಭಜನಾಸಂಘದವರು ವೀರಶೈವರ ಉನ್ನತಿಯನ್ನು [illegible]ಸುವ ವೃತ್ತಪತ್ರಿಕೆಗಳನ್ನು ತರಿಸಲಿಕ್ಕೆ ಒಪ್ಪಿ ಶ್ರೀ ಪಂಚಾಚಾರ್ಯ ಪ್ರಭೆಗೆ 1 ರೂಪಾಯಿಯನ್ನು ಅರ್ಪಿಸಿದರು. ಇಲ್ಲಿಯ ಭಜನಾಸಂಘವು ಮುಂದೆ ನಿರ್ವಿಘ್ನವಾಗಿ ಸಾಗಲೆಂಬುದ್ದೇಶದಿಂದ ಕೆಳಗಿನವರು ನಿಯಮಿಸಲ್ಪಟ್ಟಿರುತ್ತಾರೆ.

ಮೆಂಬರರು.

ಕಲ್ಲಪ್ಪ ಶಿವಲಿಂಗಪ್ಪ ಬಿರಜದಾರ, ಶಿವಣ್ಣ ಗುರುಪಾದಪ್ಪ ಬಿರಜದಾರ, ಬಾಬುರಾವ್ ರುದ್ರಪ್ಪ ಮಾಳಗೆ, ಶಿದ್ರಾಮಪ್ಪಾ ಭೋಜಪ್ಪ ಮಾಳಗೆ, ಮಲಕಪ್ಪ ಚನ್ನಬಸಪ್ಪ ಕಲ್ಲಿಶೆಟ್ಟಿ ನೀಲಪ್ಪ ರೇವಪ್ಪ ತಾನವಾಡೆ, ಅಂದಪ್ಪ ಸಿದ್ರಾಮಪ್ಪ ಸ್ವಾವಾಡೆ.

ಸೆಕ್ರೆಟರಿ
ಶ್ರೀ ಮಡಿವಾಳಯ್ಯ ಶಿದ್ರಾಮಯ್ಯ ಮಠಪ
ಮಡಿವಾಳಪ್ಪ ಚನ್ನಬಸವಪ್ಪ ಕಲ್ಲಿಶೆಟ್ಟಿ

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವಿನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶಿವದೀಕ್ಷಾ ಸಮಾರಂಭ

ಪಲ್ಲಾಗಟ್ಟ ಗ್ರಾಮದಲ್ಲಿರುವ ಬೇಬೋಡುಮಠದ ದೇವಪ್ಪಯ್ಯ ಮತ್ತು ಚನ್ನಪ್ಪಯ್ಯ ಇವರು ಪ್ರಮೋದ ಮಾಘ ಶುದ್ಧ 10 ಯಲ್ಲು ತಮ್ಮ ಗೃಹದಲ್ಲಿ ಹನ್ನೆರಡು ವಟುಗಳಿಗೆ ಧರ್ಮಾರ್ಥವಾಗಿ ಮಾಹೇಶ್ವರ ದೀಕ್ಷೆಯನ್ನು ಮಾಡಿಸಿದ್ದ ವೇ|| ಬ್ರ|| ಅರಸೀಕೆರೆ ಸಾಲಂಗಿಮಠದ ಪಟ್ಟಾಧ್ಯಕ್ಷರು ಹ್ಯರನಹಳ್ಳಿ ಗುರುಪಾದದೇವರಮಠದ ಪಟ್ಟಾಧ್ಯಕ್ಷರು ಬಳ್ಳಾರಿ ಗುರುನಿವಾಸ ಪಾಠಶಾಲಾಧ್ಯಾಪಕರಾದ ಅಸಗೋಡುಪಟ್ಟಾಧ್ಯಕ್ಷರು ಇವರು ಆಜ್ಞೆಯಂತೆ ಈ ಶುಭಕಾರ್ಯವು ವಿಧ್ಯುಕ್ತವಾಗಿ ಮೂರು ದಿವಸಗಳವರೆಗೆ ನಡೆಯಿತು. ವೇ|| ಗಳ ಕೂಡ್ಲಿಗಿ ತಾ|| ಕುಂತಿಮಠದ ರಾಚಪ್ಪಯ್ಯನವರು ಬೇಬೋ—ಚರಂತಿಮಠದ ರುದ್ರಾರಾಧ್ಯರು ಹಾಳೆಕಲ್ಲುಮಠದ ಮಲ್ಲಯ್ಯನವರು ಕುಂಚೂರುಮಠದ ಕರಿಬಸವಯ್ಯನವರು ಸತ್ಕಾರ್ಯಧುರಂಧರರೂ ಭಕ್ತಾಗ್ರೇಸರರೂ ಆದ ಜಗಲೂರು ಸಾಹುಕಾರ ರೇವಣ್ಣನವರು ವೀರಭದ್ರಪ್ಪನವರು ಕಲ್ಲಪ್ಪನವರು ಆದಿಯಾದ ಅನೇಕರು ಆಗಮಿಸಿದ್ದರು. ಶುಕ್ರವಾರ ದಿವಸ ಮತಾಭಿವೃದ್ಧಿಗಾಗಿ ಸಭೆಯು ನಡೆಯಿಸಲ್ಪಟ್ಟಿತು. ಮ|| ರಾ|| ಡಿಸ್ಟ್ರಿಕ್ಟ್ ಬೋರ್ಡು ಮೆಂಬರೂ ಸಾಹುಕಾರರೂ ಆದ ರೇವಣ್ಣನವರ ಫೋನೋಗ್ರಾಫಿನ ಹಾಡುಗಾರಿಕೆಯೂ ಚನ್ನಪ್ಪಯ್ಯನವರ ಪಿಟೀಲಿನ ಸುನಾದವೂ ವಟುಗಳ ಗೀತವೂ ಸಭಿಕರಿಗೆ ಆನಂದವನ್ನುಂಟುಮಾಡಿತು. ವೇ|| ಕುಂ|| ಮ|| ಕರಿಬಸವಯ್ಯನವರು ಸಭೆಯ ಉದ್ದೇಶ ವಿಷಯದಲ್ಲಿಯೂ ವೇ|| ರುದ್ರಾರಾಧ್ಯರು ವಟುಗಳ ಮುಂದೆ ಆಚರಿಸಬೇಕಾದ ಆಚರಣೆಯ ವಿಷಯದಲ್ಲಿಯೂ ಮನೋಹರಗಳಾದ ಉಪನ್ಯಾಸಗಳನ್ನು ಮಾಡಿದರು. ಬಳ್ಳಾರಿ ಗುರುನಿವಾಸ ಪಾಠಶಾಲಾಧ್ಯಾಪಕರಾದ ಶ್ರೀ|| ಪಟ್ಟದ ಮಹಾಸ್ವಾಮಿಗಳು ಶಾಸ್ತ್ರಾಧಾರದಿಂದ ವೀರಶೈವ ಮತೋತ್ಕರ್ಷ ವಿಚಾರವಾಗಿ ಭಾಷಣವನ್ನು ಮಾಡಿ ಸಭಿಕರಿಗೆ ಅತ್ಯಾನಂದವನ್ನುಂಟುಮಾಡಿದರು. ವೇ|| ರುದ್ರಾರಾಧ್ಯರು ಸೂಚಿಸಿದಪ್ರಕಾರ ಪಂಚಾಚಾರ್ಯಪ್ರಭೆಗೆ ಮಹಾದೇವಪ್ಪಯ್ಯನವರು ಒಂದು ರೂಪಾಯಿಯನ್ನು ಅರ್ಪಿಸಿದರು. ಅನಂತರ ಫೋಟೋಗ್ರಾಫರ್ ವೇ|| ಉಜ್ಜಯಿನಿ ಶಿವಲಿಂಗಯ್ಯನವರಿಂದ ನೆರೆದಿದ್ದ ಭಕ್ತಮಾಹೇಶ್ವರರ ಫೋಟೋ ತಗೆಯಲ್ಪಟ್ಟಿತು. ಈ ಮಹೋತ್ಸವಕ್ಕಾಗಿ ಆಗಮಿ[illegible]

ಅಮೇರಿಕೆಯ ಕೆಲವು ದೊಡ್ಡ ಶ್ರೀಮಂತರೂ, ಪತ್ರಿಕಾಪ್ರತಿನಿಧಿಗಳೂ ಈ ತಿಂಗಳು 22 ನೆಯ ತಾರೀಖಿನ ದಿವಸ ಮಹಾತ್ಮರನ್ನು ಸಂದರ್ಶಿಸಿ ಹಿಂದೂಸ್ಥಾನಕ್ಕೂ ಅಮೇರಿಕೆಗೂ ಮೈತ್ರಿಯು ವೃದ್ಧಿಯಾಗಲೆಂದೂ, ಮಹಾತ್ಮಗಾಂಧಿಯವರಿಗೆ ಜಯವಾಗಲೆಂದೂ ಹಾರೈಸಿದರು.

ಲಂಡನ್ನಿನಿಂದ ಮಿ|| ಫೆನ್ನರ್‌ಬ್ರಾಕ್ವೇ, ಮಿ|| ದಾರಾ, ಮಿ|| ಮಜೀದ್ ಮೊದಲಾದವರು ಮಹಾತ್ಮಗಾಂಧಿ ಮತ್ತು ಪಂ|| ಜವಾಹರಲಾಲರವರಿಗೆ ವೈಸರಾಯರೊಡನೆ ನಡೆಯಿಸಿದ ಶಾಂತಿಸಂಧಾನವು ವಿಜಯವಾದುದಕ್ಕಾಗಿ ಅಭಿನಂದನಮಾಡಿ ತಂತಿಯನ್ನು ಕಳುಹಿಸಿರುವರು.

ಅಹಮ್ಮದಾಬಾದಿನ ವಿದೇಶಿವರ್ತಕರು ಮೇ 8 ನೆಯ ತಾರೀಖಿನವರೆಗೆ ವಿದೇಶಿವಸ್ತ್ರಗಳನ್ನು ಮಾರುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟಿದ್ದಾಗ್ಯೂ ಗಾಂಧಿ ಇರ್ವಿನ್ ಒಪ್ಪಂದವಾದ ಮೇಲೆ ವಿದೇಶಿಬಟ್ಟೆಗಳನ್ನು ಮಾರಲು ಪ್ರಯತ್ನಿಸಿದ್ದರಿಂದ ಪುನಃ ಪಿಕೆಟಿಂಗ್ ಪ್ರಾರಂಭವಾಗಿದೆ.

ಚೀಣಾದೇಶದಲ್ಲಿ ಹರಿಯುವ ಯಾಂಗ್‌ಟಿಸಿ ನದಿಯಲ್ಲಿ ಬರುತ್ತಿದ್ದ ಒಂದು ಜಹಜು ಆಕಸ್ಮಾತ್ ಒಡೆದು ಮುಳುಗಿಹೋದುದರಿಂದ ೩೦೦ ಜನಗಳವರೆಗೂ ಜಲಸಮಾಧಿಯನ್ನು ಹೊಂದಿದರು. ಕೆಲವು ಸೋಲ್ಜರುಗಳು ಸಿಗರೇಟು ಸೇದಿ ಹತ್ತಿಯು ತುಂಬಿದ ಸ್ಥಳಕ್ಕೆ ಎಸೆದಿದ್ದರಿಂದ ಈ ಅನಾಹುತವುಂಟಾಯಿತೆಂದು ಅನುಮಾನಿಸಲ್ಪಡುತ್ತಲಿದೆ.

ಈ ವಾರದಲ್ಲಿ ಕಲ್ಕತ್ತಾ ಜೈಲಿನಿಂದ ೧೦೦ ಜನಗಳೂ, ಲಕ್ನೋ ಜೈಲಿನಿಂದ ೧೬ ಜನ ಹೆಂಗಸರೂ, ೧೨೦೦ ಜನ ಗಂಡಸರೂ, ಪೆಷಾವರ ಜೈಲಿನಿಂದ ೧೩೦ ಜನಗಳೂ, ಅಹಮ್ಮದಾಬಾದ ಜೈಲಿನಿಂದ ೪೦ ಜನ ಸ್ತ್ರೀಯರೂ ಬಿಡಲ್ಪಟ್ಟರು. ಮತ್ತು ಕನ್ನಾನೂರು, ಬಳ್ಳಾರಿ, ಮದರಾಸ್, ಸೂರತ್ ಮುಂತಾದ ಜೈಲುಗಳಿಂದ ಅನೇಕರು ಬಿಡಲ್ಪಡುತ್ತಲಿದ್ದಾರೆ.

ಮರಣದಂಡನೆಗೆ ಗುರಿಮಾಡಲ್ಪಟ್ಟಿರುವ ಲಾಹೋರಿನ ಮಿ|| ಭಗತ್‌ಸಿಂಗ್, ರಾಜಗುರು, ಸುಖದೇವ ಇವರ ವಿಷಯದಲ್ಲಿ ದಯೆಯನ್ನು ತೋರಿಸಿ ಮರಣದಂಡನೆಯನ್ನು ತಪ್ಪಿಸಬೇಕೆಂದು ಲಾಹೋರ್ ಮೊದಲಾದ ಪ್ರಾಂತಗಳಿಂದ ಹೋಗಿದ್ದ ಅರ್ಜಿಗಳನ್ನು ವೈಸರಾಯರವರು ತಿರಸ್ಕರಿಸಿದರೆಂದೂ, ಅವರ ಬಂಧುಗಳಿಗೆ ಈಹೊತ್ತಿನದಿವಸದೊಳಗಾಗಿ ಬಂದು ಕೊನೆಯ ಸಂದರ್ಶನವನ್ನು ಮಾಡಿಕೊಳ್ಳಬೇಕೆಂದು ಜೈಲು ಅಧಿಕಾರಿಗಳು ತಿಳುಹಿಸಿರುವರೆಂದೂ ಪ್ರಕಟಿಸಲ್ಪಟ್ಟಿದೆ.

ಚಿಕಿತ್ಸೆ ಹೊಂದುವುದಕ್ಕೋಸ್ಕರ ವಿಯನ್ನಾಕ್ಕೆ ಹೋಗಿರುವ ಶ್ರೀಯುತ ವಿಠ್ಠಲಭಾಯಿ ಪಟೇಲರವರ ಸ್ಥಿತಿಯು ಸುಧಾರಿಸುತ್ತಲಿದೆ ಎಂದೂ, ಅವರು ಪತ್ರಿಕಾಪ್ರತಿನಿಧಿಗಳ ಮುಂದೆ ರೌಂಡ್‌ಟೇಬಲ್ ಸಮ್ಮೇಳನದಿಂದ ಹಿಂದುಸ್ಥಾನಕ್ಕೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯ ಲಭಿಸಿದರೂ ಬ್ರಿಟಿಷ್ ಸಂಬಂಧವನ್ನು ಇಟ್ಟುಕೊಳ್ಳುವುದೂ ಬಿಡುವುದೂ ಭಾರತೀಯರ ಹಕ್ಕಾಗಿರಬೇಕೆಂದು ಹೇಳಿದರೆಂದೂ, ಅವರು ಇನ್ನು ಎರಡು ತಿಂಗಳು ವಿಯನ್ನಾದಲ್ಲಿದ್ದು ಅನಂತರ ಇಂಗ್ಲೆಂಡಿಗೆ ಹೋಗುವರೆಂದೂ ಪ್ರಕಟವಾಗಿದೆ.

ಈ ತಿಂಗಳು 17 ನೆಯ ತಾರೀಖಿನದಿವಸ ಮಹಾತ್ಮಗಾಂಧಿಯವರು ಷೌಕತಾಲಿಯವರೊಡನೆ ಅನೇಕ ತಾಸುಗಳವರೆಗೂ ಸಂಭಾಷಣಮಾಡಿದರು. ಮೌ|| ಷೌಕತಾಲಿಯವರು ಪತ್ರಿಕಾಪ್ರತಿನಿಧಿಗಳ ಸಮಕ್ಷಮ ಮಹಾತ್ಮಾಗಾಂಧಿಯವರು ಹಿಂದೂಮಹಮ್ಮದೀಯರ ಪ್ರಶ್ನೆಯನ್ನು ತೃಪ್ತಿಕರವಾಗಿ ತೀರ್ಮಾನಿಸಲು ಕುತೂಹಲಪಡುವರೆಂದೂ, ತಾವು ದಿಲ್ಲಿಯ ಕೆಲವು ಮಹಮ್ಮದೀಯಮುಖಂಡರೊಡನೆ ಮಾತುಕಥೆ ನಡೆಯಿಸಿ ಮಹಾತ್ಮಾಗಾಂಧಿಯವರಿಗೂ, ಕಾಂಗ್ರೆಸ್ಸಿನವರಿಗೂ ಮಹಮ್ಮದೀಯರ ಹಕ್ಕುಬಾಧ್ಯತೆಗಳನ್ನು ಕುರಿತು ಒಂದು ಪ್ರಸಿದ್ಧಪತ್ರಿಕೆಯನ್ನು ಹಾಜರ್ಪಡಿಸುವೆನೆಂದು ಹೇಳಿದರೆಂದೂ ತಿಳಿದುಬರುತ್ತದೆ.

ಹೊಸದಿಲ್ಲಿಯಲ್ಲಿ ಸಾಮಂತರಾಜರು ವೈಸರಾಯರವರಿಗೆ ಒಂದು ಔತಣವನ್ನೇರ್ಪಡಿಸಿದ್ದರು. ಆ ಸಮಯದಲ್ಲಿ ಡಾ|| ಅನ್ಸಾರಿ ಮತ್ತು ಪಂಡಿತ ಮದನಮೋಹನಮಾಲವೀಯರು ಅತಿಥಿಗಳಾಗಿದ್ದರು. ಆಗ ವೈಸರಾಯರವರು ಮಹಾತ್ಮ ಗಾಂಧಿಯವರ ಪ್ರಾಮಾಣಿಕತನ, ನಿಸ್ಪೃಹತೆ ಮತ್ತು ದೇಶಾಭಿಮಾನವನ್ನು ಪ್ರಶಂಸೆಮಾಡಿ ಮಹಾತ್ಮ ಗಾಂಧಿಯವರೊಡನೆ ಕೆಲಸ ಮಾಡುವುದು ತಮಗೆ ಕೇವಲ ಸಂತೋಷದಾಯಕವಾಗಿದ್ದಿತೆಂದೂ, ತಾವು ಕೆಲಸದಿಂದ ನಿವೃತ್ತಿಹೊಂದಿ ಲಂಡನ್ನಿಗೆ ಹೋದರೂ ಒಪ್ಪಂದದಮಹತ್ವವನ್ನು ಆಂಗ್ಲೇಯರಿಗೆ ತಿಳುಹಿಸಿ ಹಿಂದುಸ್ಥಾನಕ್ಕೂ ಇಂಗ್ಲೆಂಡಿಗೂ ಮೈತ್ರಿಯುಳಿಯುವಹಾಗೆ ಕೆಲಸಮಾಡುತ್ತೇನೆಂದೂ ಭಾಷಣ ಮಾಡಿದರು.

ಮಹಾತ್ಮಾಗಾಂಧಿಯವರು ಬೊಂಬಾಯಿಯಿಂದ ಈ ತಿಂಗಳು 19 ನೆಯ ತಾರೀಖಿನದಿವಸ ಮಧ್ಯಾಹ್ನ ದಿಲ್ಲಿಗೆ ಬಂದೀಳಿದಕೂಡಲೆ ವೈಸರಾಯರವರ ಭವನಕ್ಕೆ ಚಿತ್ತೈಸಿ ಅವರೊಡನೆ ಒಪ್ಪಂದದಪ್ರಕಾರ ಎಲ್ಲ ರಾಜಕೀಯಖೈದಿಗಳನ್ನು ಬಿಡುಗಡೆಮಾಡಬೇಕೆಂಬ ವಿಷಯದಲ್ಲಿ ಎರಡು ತಾಸುಗಳವರೆಗೆ ಮಾತನಾಡಿದರು. ಅನಂತರ ಹೋಮ್ ಸೆಕ್ರೆಟರಿ ಮಿ|| ಎಮರ್ಸನ್ನರವರ ಬಂಗಲೆಗೆ ದಯಮಾಡಿಸಿ ರಾತ್ರಿ 7½ ಘಂಟೆಯವರೆಗೂ ಮಾತನಾಡಿದರು. ೨೦ ನೆಯ ತಾರೀಖಿನದಿವಸ ಬಡೋದಾ, ಕಪುರ್ಥಲ ಮತ್ತು ಬಿಕಾನೀರ್ ಮಹಾರಾಜರೂ, ಪಾಲನ್ಪುರ, ನವಾನಗರ ಮತ್ತು ಭೋಪಾಲ್‌ನವಾಬರೂ ಮಹಾತ್ಮಾಗಾಂಧಿಯವರ ಸಂಗಡ ಭರತಖಂಡದ ಭಾವಿ ಫೆಡರೇಷನ್ ರಚನೆಯ ವಿಷಯವನ್ನು ಕುರಿತು ಚರ್ಚೆನಡೆಯಿಸಿದರು.

ಈ ತಿಂಗಳು 18 ನೆಯ ತಾರೀಖಿನ ದಿವಸ ಹೊಸದಿಲ್ಲಿಯಲ್ಲಿ ಅಖಿಲಭಾರತ ಮಹಿಳಾ ವಿದ್ಯಾಫಂಡ್ ಅಸೋಸಿಯೇಷನ್ನಿನ ವತಿಯಿಂದ ವೈಸರಾಯರವರ ಪತ್ನಿಯವರಾದ ಲೇಡಿ ಇರ್ವಿನ್ನರವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆ ಸೇರಿತ್ತು. ಆ ಸಭೆಗೆ ಅನೇಕ ಸಾಮಂತಭೂಪಾಲರೂ, ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರರೂ, ಪ್ರಸಿದ್ಧ ಸ್ತ್ರೀಪುರುಷರೂ ಸೇರಿದ್ದರು. ಲೇಡಿ ಇರ್ವಿನ್ನರವರೂ, ಬೇಗಂ ಷಹನವಾಜ್‌ರವರೂ, ಶ್ರೀಮತಿ ಸರೋಜಿನಿದೇವಿಯವರೂ, ಭೋಪಾಲ್ ನವಾಬರೂ, ಸರ್ ಕಾಸಾಜಿ ಜಹಂಗೀರ್‌ರವರೂ ಮನೋಹರಗಳಾದ ಭಾಷಣಗಳನ್ನು ಮಾಡಿದರು. ಹೊಸದಿಲ್ಲಿಯಲ್ಲಿ ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ಸೆಂಟ್ರಲ್ ಕಾಲೇಜನ್ನು ಸ್ಥಾಪಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ತಮ್ಮ ಹೆಸರನ್ನು ಪ್ರಕಟಿಸಬಾರದೆಂದು ಹೇಳಿ ಒಬ್ಬ ನಾರೀಮಣಿಯು 8000 ರೂ. ಗಳನ್ನು ಆ ಸಂಸ್ಥೆಗೆ ದಾನಮಾಡಿದಳು. ಜಯಪುರದ ಮಹಾರಾಜರು 8000 ರೂ. ಗಳನ್ನೂ, ಸರ್ ವಿಕ್ಟರ್ ಸಸೂನ್ ರವರು 50,000 ರೂ. ಗಳನ್ನೂ, ನೈಜಾಮರವರು 200000 ರೂ. ಗಳನ್ನೂ ದಾನಮಾಡುವುದಾಗಿ ಒಪ್ಪಿದರು.

ಈ ತಿಂಗಳು 17 ನೆಯ ತಾರೀಖಿನ ದಿವಸ ಬೊಂಬಾಯಿಯ ಆಜಾದ್ ಮೈದಾನದಲ್ಲಿ ಪ್ರಚಂಡಸಭೆ ಸೇರಿತ್ತು. ಸುಮಾರು 5 ಲಕ್ಷ ಜನರು ಸೇರಿದ್ದರು. ಅದರಲ್ಲಿ ಒಂದುಲಕ್ಷ ಸ್ತ್ರೀಯರೇ ಇದ್ದರು. ಅಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವನ್ನೇರ್ಪಡಿಸಿದ್ದರು. ಪಂಡಿತ ಜವಾಹರಲಾಲರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದು ಮಹಾತ್ಮಗಾಂಧಿಯವರು ನಿಜವಾದ ಸತ್ಯಾಗ್ರಹಿಯ ಕರ್ತವ್ಯದ ಮೇಲೆ ಭಾಷಣಮಾಡಿದರು. ಆ ಸಮಯದಲ್ಲಿ ಅವರು ಹೇಳಿದ್ದೇನೆಂದರೆ—ಕಾಂಗ್ರೆಸ್ ಪಕ್ಷದವರು ದಿಲ್ಲಿ ಒಪ್ಪಂದವನ್ನು ನಡೆಯಿಸುವುದಾದರೆ ಎಲ್ಲ ರಾಜಕೀಯ ಖೈದಿಗಳೂ ಬಿಡುಗಡೆ ಹೊಂದುವರೆಂದೂ, ಸರ್ಕಾರದವರು ಒಪ್ಪಂದವನ್ನು ಪಾಲಿಸದಿದ್ದರೆ ಪುನಃ ತಮ್ಮ ಆಯುಧವನ್ನು ತೆಗೆದುಕೊಳ್ಳುವುದಕ್ಕೆ ಯಾವ ಪ್ರತಿಬಂಧಕವೂ ಇರುವುದಿಲ್ಲವೆಂದೂ, ಮುಂದೆ ನಡೆಯುವ ರೌಂಡ್‌ಟೇಬಲ್ ಸಮ್ಮೇಳನದಿಂದ ಪೂರ್ಣಸ್ವರಾಜ್ಯವು ಲಭ್ಯವಾಗದಿದ್ದರೆ ಇನ್ನೂ ತೀಕ್ಷ್ಣರೀತಿಯಿಂದ ಚಳವಳಿಯನ್ನು ಪ್ರಾರಂಭಿಸಲಾಗುವುದೆಂದೂ, ಲಾಹೋರ್ ಪೂರ್ಣಸ್ವರಾಜ್ಯದ ಠರಾವನ್ನು ಹಿಂದಕ್ಕೆ ಹಾಕುವುದಿಲ್ಲವೆಂದೂ, ಈ ಮಧ್ಯೆ ವಿದೇಶಿವಸ್ತ್ರ ಮತ್ತು ಸೇಂದಿ ಸರಾಯಿ ಬಹಿಷ್ಕಾರ, ಪತಿತೋದ್ಧಾರ ಈ ಕಾರ್ಯಗಳನ್ನು ರಾಷ್ಟ್ರವು ತಪ್ಪದೆ ನಡೆಯಿಸಬೇಕೆಂದೂ ಮೊರೆಯಿಟ್ಟರು.

ಮಹಾತ್ಮಗಾಂಧಿಯವರು ಬೊಂಬಾಯಿಯಲ್ಲಿ ಮಿಲ್ಲುಗಳ ಮಾಲೀಕರೊಡನೆ ಹಿಂದುಸ್ಥಾನದಲ್ಲಿರುವ ವಿದೇಶಿವಸ್ತ್ರಗಳನ್ನು ಪರದೇಶಗಳಿಗೆ ಸಾಗಿಸುವ ಯೋಚನೆ ನಡೆಯಿಸುತ್ತಿದ್ದುದು ಸರಿಯಷ್ಟೆ! ಈ ತಿಂಗಳು 18 ನೆಯ ತಾರೀಖಿನ ಪ್ರಾತಃಕಾಲ ಮಹಾತ್ಮಗಾಂಧಿಯವರಿಗೂ ಸದರಿ ಮಿಲ್ ಮಾಲೀಕರಿಗೂ ಒಪ್ಪಂದವಾಯಿತೆಂದೂ, ಈ ಒಪ್ಪಂದದಿಂದ ಬಟ್ಟೆ ವರ್ತಕರಿಗೆ ಈ ದೇಶದ ಮಿಲ್ಲು ಬಟ್ಟೆಗಳನ್ನು ಕೊಟ್ಟು ಅವರಲ್ಲಿರುವ ವಿದೇಶಿ ಬಟ್ಟೆಗಳನ್ನು ಇರಾಕ್ ಮೊದಲಾದ ಪರದೇಶಗಳಿಗೆ ಕಳುಹಿಸುವುದಕ್ಕೆ ೨೮ ಲಕ್ಷ ರೂ. ಬಂಡವಾಳದ ಮೇಲೆ ಒಂದು ಏಜನ್ಸಿಯು ನಿರ್ಮಿಸಲ್ಪಟ್ಟಿದೆ ಎಂದೂ ತಿಳಿದುಬರುತ್ತದೆ. ಈ ಸಂಗತಿಯು ಲಂಡನ್ನಿಗೆ ತಲ್ಪುತ್ತಲೇ ಆಂಗ್ಲೇಯರಿಗೆ ಬಹು ಗಾಬರಿಯನ್ನುಂಟುಮಾಡಿತು. ಮಿ|| ಹ್ಯಾಕಿಂಗ್ ಎಂಬ ಪಾರ್ಲಿಮೆಂಟಿನ ಮೆಂಬರರು ಹಿಂದುಸ್ಥಾನದಲ್ಲಿರುವ ಇಂಗ್ಲಿಷ್ ಬಟ್ಟೆಗಳನ್ನು ಬೇರೆ ಕಡೆ ಸಾಗಿಸುವುದಕ್ಕೆ ಮಿ|| ಗಾಂಧಿಯವರು ಪ್ರಯತ್ನಪಟ್ಟಿರುವುದು ಗಾಂಧಿ ಇರ್ವಿನ್ ಒಪ್ಪಂದಕ್ಕೆ ವಿರೋಧವಾಗುವುದಿಲ್ಲವೇ? ಎಂದು ಇಂಡಿಯಾ ಸೆಕ್ರೆಟರಿಯವರನ್ನು ಪ್ರಶ್ನೆಮಾಡಿದರು. ಅದಕ್ಕವರು ನಾವು ಈ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇವೆ ಹೊರತು ಸರ್ಕಾರಿಯಾಗಿ ಏನೂ ಬಂದಿಲ್ಲವೆಂದೂ, ಈ ವಿಷಯವನ್ನು ವಿಚಾರಿಸಿ ತಿಳುಹಿಸುವೆವೆಂದೂ ಹೇಳಿದರಂತೆ!

ಈ ತಿಂಗಳು 16ನೆಯ ತಾರೀಖಿನ ರಾತ್ರಿ ಬೊಂಬಾಯಿಯಲ್ಲಿ ಮಿಲ್ಲುಗಳ ಪ್ರದೇಶದಲ್ಲಿ ಒಂದು ಪ್ರಚಂಡಸಭೆ ಸೇರಿತ್ತು. ಆಗ ಸುಮಾರು ೩೦ ಜನ ಕೂಲಿಕಾರ ಪಕ್ಷದವರು ಬಂದು ಮೂರು ಬಣ್ಣದ ರಾಷ್ಟ್ರನಿಶಾನೆಯನ್ನು ಕಿತ್ತುಹಾಕಿ ತಮ್ಮ ಕೆಂಪು ನಿಶಾನೆಯನ್ನು ಏರಿಸಿದರು. ಸ್ವಲ್ಪಹೊತ್ತಿನಮೇಲೆ ಕಾಂಗ್ರೆಸ್ ಪಕ್ಷದವರು ಬಂದು ಪುನಃ ಮೂರು ಬಣ್ಣದ ರಾಷ್ಟ್ರಧ್ವಜವನ್ನೇ ಆರೋಹಣ ಮಾಡಿದರು. ಆಗ ಕೂಲಿಕಾರಪಕ್ಷದ ರಣದೇವ ಎಂಬವರು ಮೀರತ್ತಿನ ಖೈದಿಗಳನ್ನು ಬಿಡುಗಡೆ ಮಾಡಿಸದೆ ಸರ್ಕಾರದವರೊಡನೆ ರಾಜಿಮಾಡಿಕೊಂಡಿರುವುದರಿಂದ ಕಾಂಗ್ರೆಸ್ ಸಂಸ್ಥೆಯೂ, ಮಹಾತ್ಮಾ ಗಾಂಧಿಯವರೂ ತಮಗೆ ದ್ರೋಹ ಮಾಡಿದರೆಂದು ಉಗ್ರಭಾಷಣ ಮಾಡಿದರು. ಆಗ ಮಹಾತ್ಮ ಗಾಂಧಿಯವರು ಈಗಿನ ಕೂಲಿಕಾರ ಮುಖಂಡರು ಹುಟ್ಟುವುದಕ್ಕೆ ಮೊದಲೇ ತಾವು ಅವರ ಪಕ್ಷವನ್ನು ಹಿಡಿದಿರುವೆವೆಂದೂ, ಲಾಹೋರ್ ಕಾಂಗ್ರೆಸ್ಸಿನಲ್ಲಿ ಪಾಸಾದ ಪೂರ್ಣ ಸ್ವರಾಜ್ಯದ ಠರಾವನ್ನೇ ಕರಾಚಿ ಕಾಂಗ್ರೆಸ್ಸಿನಲ್ಲಿ ಪುನಃ ಸಮರ್ಥನ ಮಾಡುವುದಾಗುವುದೆಂದೂ, ಮುಂದೆ ನಡೆಯುವ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಪೂರ್ಣಸ್ವರಾಜ್ಯಕ್ಕೆ ಕಡಿಮೆಯಾಗಿರುವ ಯಾವ ರಾಜಕೀಯ ಹಕ್ಕನ್ನೂ ಅಂಗೀಕರಿಸುವುದಿಲ್ಲವೆಂದೂ, ಮೀರತ್ತಿನ ಖೈದಿಗಳನ್ನು ಬಿಡುಗಡೆ ಮಾಡಲು ಇನ್ನೂ ಪ್ರಯತ್ನಪಡುವೆವೆಂದೂ ಭಾಷಣ ಮಾಡಿದರು.

ಸ್ವೀಕಾರ.

ಶುಕ್ಲ ಸಂ|| ಫಾಲ್ಗುಣ ಬ|| ೧೦ ದಿವಸ ಗದಗಿನ ಮ|| ರಾ|| ಹಂಚಿನಾಳ ವಿರೂಪಾಕ್ಷಪ್ಪನವರ ಚಿ|| ಗುರುಶಾಂತಪ್ಪನಿಗೆ ಬ್ಯಾಡಿಗಿ ಮ|| ರಾ|| ಹೊಂಬಿ ವೀರಭದ್ರಪ್ಪನವರ ಪುತ್ರಿ ಚಿ|| ಕುಂ|| ಸೌ|| ಕೊಟ್ರವ್ವನನ್ನು ತಂದು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಕನ್ಯೆಯಕಡೆಯವರು ಪ್ರಭಾಪೋಷಣಕ್ಕಾಗಿ ವಿರೋಧಭಾವದಿಂದ ಏನೂ ಸಮರ್ಪಿಸಲಿಲ್ಲ. ಈ ಬಗ್ಗೆ ಮೊನ್ನೆಮೊನ್ನೆ ಕನ್ಯಾತಂದೆಯು ಕ್ಷಮಾಪಣೆ ಬೇಡಿಕೊಂಡು ಸಮರ್ಪಿಸಿದ 2 ರೂಪಾಯಿಗಳು ಗದಗಿನ ಮುನಸಿಪಲ್ ವೈಸ್ ಪ್ರೆಸಿಡೆಂಟ ವೇ|| ಗುಡ್ಡಿಮಠದ ಸಂಗಯ್ಯನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3ನೇ ಪುಟದಿಂದ ಮುಂದುವರಿದುದು.]

ವಾದ ಕಾರ್ಯ. ಆದರೆ ಈಗ ಚಳವಳಿಯು ನಿಂತುಹೋಗಿದೆ. ಅದರ ವಿಚಾರದಲ್ಲಿ ಪ್ರಸ್ತಾಪ ಮಾಡುವುದರಿಂದ ವಿಶೇಷ ಪ್ರಯೋಜನವೇನೂ ಇಲ್ಲ. ಆದರೆ ಆ ಸಮಯದಲ್ಲಿ ಹಿಂದೂಸ್ಥಾನದ ಅಧಿಕಾರಿಗಳು ಹತೋಟಿಯಲ್ಲಿ ದೇಶವನ್ನು ರಕ್ಷಿಸಿದ ಅಂಶವು ಅತ್ಯಂತ ಶ್ಲಾಘನೀಯವಾಗಿದೆ. ಹಿಂದೀ ಪೋಲೀಸಿನವರೂ ಕೂಡ ಬಹಳ ದಕ್ಷತೆಯಿಂದ ಕೆಲಸಮಾಡಿದ್ದಾರೆ. ಈ ವಿಷಯದಲ್ಲಿ ಮಿ|| ಗಾಂಧಿಯವರು ನಾವು ಈಗ ಪೋಲೀಸಿನ ಅತಿಕ್ರಮಗಳ ವಿಚಾರಕ್ಕೆ ಕೈಯಿಟ್ಟರೆ ನಮ್ಮ ದೇಶಕ್ಕೆ ಹೊಸರಾಜ್ಯಾಂಗ ರಚನೆಯನ್ನು ನಿರ್ಮಾಣಮಾಡುವ ಈ ಸುಸಮಯದಲ್ಲಿ ಆತ್ಮಘಾತ ಮಾಡಿಕೊಂಡಂತಾಗುತ್ತದೆಂದು ಹೇಳಿರುತ್ತಾರೆ.

ಈ ಕಾಯಿದೇ ಭಂಗದ ಚಳವಳಿಯು ನಡೆಯುತ್ತಿದ್ದ ಸಮಯದಲ್ಲಿ ನಾವು ನಮ್ಮ ಕರ್ತವ್ಯವನ್ನು ಸಮರ್ಪಕವಾಗಿ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಕೈ ಸ್ವಲ್ಪ ಬಿಗುವಾಗಿದ್ದರೂ ತಲೆಯನ್ನು ಸರಿಯಾಗಿಟ್ಟುಕೊಂಡು ಹೃದಯವನ್ನು ಸರಿಯಾಗಿಟ್ಟುಕೊಳ್ಳುವುದಕ್ಕೆ ಅಡ್ಡಿಯೇನೂ ಇಲ್ಲ. ಕಾಯಿದೇಭಂಗದ ಚಳವಳಿಯು ನಡೆಯುತ್ತಿರುವಾಗಲೂ ಸರ್ಕಾರದ ರೀತಿ ನೀತಿಗಳು ಸರಿಯಾಗಿಯೇ ಇದ್ದುವು. ಸರ್ಕಾರವು ಹಿಂದೂಸ್ಥಾನದ ಅಭಿಪ್ರಾಯದ ಸಹಕಾರವನ್ನು ಸ್ವೀಕರಿಸುತ್ತಲೇ ಇತ್ತು. ಆ ಕಾನ್ಫರೆನ್ಸಿಗೆ ಬಂದಿದ್ದ ಪ್ರತಿನಿಧಿಗಳಿಗೆ ಎಷ್ಟೋ ತೊಂದರೆಗಳಿದ್ದುವು. ಅದನ್ನು ಅವರು ಲೆಕ್ಕಿಸದೆ ಇಲ್ಲಿಗೆ ಬಂದು ಆ ಕಾನ್ಫರೆನ್ಸಿನಲ್ಲಿ ಬಹಳ ಸಹಾಯಮಾಡಿದರು. ಇದರಿಂದ ನಮ್ಮ ಕಾರ್ಯಕ್ಕೆ ಪ್ರಥಮ ಜಯವಾಯಿತು.

ಹಿಂದೂಸ್ಥಾನದಿಂದ ಬಂದಿದ್ದ ಪ್ರತಿನಿಧಿಗಳು ನಮ್ಮ ವಿಷಯದಲ್ಲಿ ಸಂದೇಹಗ್ರಸ್ತರಾಗಿಯೇ ಇದ್ದರು. ಅವರು ಈ ಸಮ್ಮೇಳನವನ್ನು ಪೂರೈಸಿಕೊಂಡು ಹಿಂದಿರುಗುವಾಗ ನಮ್ಮ ಸದುದ್ದೇಶದಲ್ಲಿ ಅತ್ಯಂತ ಭರವಸೆಯುಳ್ಳವರಾಗಿ ನಮ್ಮಲ್ಲಿ ಸಂಪೂರ್ಣ ನಂಬಿಕೆಯುಳ್ಳವರಾಗಿದ್ದರು.

ಈ ಸಭೆಗೆ ಯಾರು ಬರಲಿಲ್ಲವೋ ಅವರನ್ನು ಸಂಧಿಸಿ ಅವರ ಸಹಾಯವನ್ನು ಸಂಪಾದಿಸುವುದು ನಮ್ಮ ಎರಡನೆಯ ಕೆಲಸ. ಇಲ್ಲಿಗೆ ಬಂದಿದ್ದ ಪ್ರತಿನಿಧಿಗಳ ಅಪೇಕ್ಷೆಯಂತೆ ಪ್ರಧಾನ ಮಂತ್ರಿಗಳು ಹಿಂದೂಸ್ಥಾನದ ಕಾಂಗ್ರೆಸ್ ಪಕ್ಷದವರಿಂದ ಸಹಾನುಭೂತಿಯು ದೊರೆಯುವುದಾದರೆ ಅದನ್ನು ಆದರದಿಂದ ಸ್ವೀಕರಿಸುವುದಾಗಿ ಅಪ್ಪಣೆಕೊಟ್ಟರು. ಅನಂತರ ಇಲ್ಲಿಂದ ಹೋದ ಪ್ರತಿನಿಧಿಗಳು ಕಾಂಗ್ರೆಸ್ಸಿನ ಮುಖಂಡರಾದ ಮಿ|| ಗಾಂಧಿಯವರೊಡನೆ ಸಂಧಾನವನ್ನು ನಡೆಯಿಸಿ ಮಿ|| ಗಾಂಧಿಯವರು ವೈಸ್ರಾಯರವರ ಭೇಟಿಯನ್ನು ಕೋರುವಂತೆ ಮಾಡಿದರು. ಅವರ ಉದ್ದೇಶವು ಈಗ ಹತ್ತು ವರ್ಷಗಳಿಂದ ಮಾಡುತ್ತಿರುವ ಅಸಹಕಾರಕ್ಕೆ ಪ್ರತಿಯಾಗಿ ಸಹಕಾರಮಾಡುವುದೇ ಎಂಬು ಗೊತ್ತಾಯಿತು. ಆದ್ದರಿಂದ ನಮ್ಮ ಎರಡನೆಯ ಧ್ಯೇಯವು ಜಯವಾದಂತೆಯೇ ಆಯಿತು. ಇದರಿಂದ ಕಠಿಣವೆಂದು ಭಾವಿಸಲ್ಪಟ್ಟಿದ್ದ ಪ್ರಶ್ನೆಗಳು ಸುಲಭಗಳಾದವು. ಕಾನೂನುಭಂಗದ ಚಳವಳಿಯಲ್ಲಿ ಸೇರಿ ಜೈಲಿಗೆ ಹೋದವರನ್ನೆಲ್ಲಾ ಬಿಡುಗಡೆ ಮಾಡಿದರು. ಆರ್ಡಿನೆನ್ಸುಗಳನ್ನು ಕಿತ್ತುಹಾಕಿದರು. ಆ ದೇಶಾಭಿಮಾನಿಗಳಿಗೆಲ್ಲ ರಚನಾತ್ಮಕ ಕಾರ್ಯದಲ್ಲಿ ತೊಡಗಿ ದೇಶಸೇವೆಯನ್ನು ಮಾಡುವ ಅವಕಾಶವು ಪ್ರಾಪ್ತವಾಯಿತು. ಈ ಚಳವಳಿಯ ದೆಸೆಯಿಂದ ಹಿಂದೂಸ್ಥಾನದ ಹಣಕಾಸುಗಳ ಸ್ಥಿತಿಯು ಬಹಳ ಕೆಟ್ಟುಹೋಗಿತ್ತಲ್ಲದೆ ವ್ಯಾಪಾರವೆಲ್ಲ ಮುಗ್ಗಟ್ಟಾಗಿ ಹೋಗಿತ್ತು. ಈಗ ಸಂಧಿಯಾದ್ದರಿಂದ ಈಗಿನಿಂದಲೇ ಸುಚಿಹ್ನೆಗಳು ಕಂಡುಬರುತ್ತವೆ.

ಲಂಡನ್ನಿನ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆಗಳು.

ಲಾರ್ಡ್ ಸ್ಯಾಂಕಿಯವರ ಮಹತ್ವದ ಭಾಷಣ.

ಹಿಂದುಸ್ಥಾನಕ್ಕೆ ಅನುಗುಣವೂ ತೃಪ್ತಿಕರವೂ ಆದ ರಾಜ್ಯಾಂಗರಚನೆಯನ್ನು ನಿರ್ಮಿಸಬೇಕಾದರೆ ಹಿಂದುಸ್ಥಾನದ ಅನೇಕ ದೊಡ್ಡಮನುಷ್ಯರ ಸಹಾನುಭೂತಿಯು ಅತ್ಯವಶ್ಯಕವಾಗಿರುವುದರಿಂದ, ಫೆಡರಲ್‌ಸ್ಟ್ರಕ್ಚರ್ ಕಮಿಟಿಯವರು ಹಂಗಾಮಿಯಾಗಿ ತಮ್ಮ ವರದಿಯನ್ನು ತಯಾರಿಸಿದ್ದಾರೆ. ಫೆಡರಲ್ ರಾಜ್ಯಾಂಗರಚನೆಯನ್ನು ನಿರ್ಮಿಸಬೇಕಾದರೆ ಪೌರ್ವಾತ್ಯಪಾಶ್ಚಿಮಾತ್ಯರ ರಾಜಕೀಯ ಪಾಂಡಿತ್ಯವನ್ನು ಏಕೀಕರಣಮಾಡಬೇಕು. ಹಿಂದುಸ್ಥಾನದ ಪ್ರಶ್ನೆಯು ಇಂಗ್ಲೆಂಡಿನ ರಾಜಕೀಯಕ್ಷೇತ್ರದಲ್ಲಿ ಒಂದುಪಕ್ಷದ ಪ್ರಶ್ನೆಯಾಗಿರದೆ ಇಡೀ ಜನಾಂಗದ ಪ್ರಶ್ನೆಯಾಗಿದೆ. ಆದ್ದರಿಂದ ಪ್ರಯುಕ್ತ ಇಂಗ್ಲೆಂಡಿನ ಎಲ್ಲ ಪಕ್ಷಗಳ ಮೆಂಬರರೂ ಏಕಮತ್ಯದಿಂದ ಹಿಂದುಸ್ಥಾನದ ಪ್ರಶ್ನೆಯನ್ನು ನಿರ್ವಹಿಸುವುದಾದರೆ ನಮ್ಮ ಪ್ರಯತ್ನಗಳು ಫಲಕಾರಿಯಾಗುವುವು. ರೌಂಡ್‌ಟೇಬಲ್ ಸಮ್ಮೇಳನವನ್ನು ನೆರೆಯಿಸಿದ್ದು ಪ್ರಮಾದವಾಯಿತೆಂದು ಭಾವಿಸಿರುವವರು ನಮ್ಮಲ್ಲಿ ಕೆಲವರಿದ್ದಾರೆ. ಅವರ ಅಭಿಪ್ರಾಯವು ಕೇವಲ ತಪ್ಪಾದುದೆಂದು ನಾವು ಸಿದ್ಧಮಾಡಿಕೊಡಬಲ್ಲೆವು.

ಇಂಡಿಯ ಮತ್ತು ಇಂಗ್ಲೆಂಡಿನ ಹಿತಕ್ಕೋಸ್ಕರ ಇರುವ ಕೆಲವು ಸಂರಕ್ಷಣೆಗಳೊಂದಿಗೆ ಕೂಡಿರುವ ಉತ್ತರವಾದಿ ಸರ್ಕಾರವನ್ನು ಇಂಡಿಯಾದೇಶಕ್ಕೆ ಕೊಡಬೇಕೆಂಬುದನ್ನು ಫೆಡರಲ್ ಕಮಿಟಿಯು ಸೂಚಿಸುತ್ತದೆ. ಸೈನ್ಯ ಮತ್ತು ಪರರಾಜರೊಡನೆ ವ್ಯವಹಾರ, ಈ ವಿಷಯಗಳು ವೈಸರಾಯರವರ ಅಧಿಕಾರಕ್ಕೊಳಪಡುವುವಲ್ಲದೆ, ಚಿಕ್ಕಸಮಾಜಗಳ ಸಂರಕ್ಷಣೆ, ಹಣಕಾಸಿನ ವಿಚಾರ ಮೊದಲಾದ ವಿಷಯಗಳಲ್ಲಿಯೂ ಸಹ ವೈಸರಾಯರಿಗೆ ತಕ್ಕ ಅಧಿಕಾರವಿದ್ದೇ ಇರುವುದು. ಈ ವಿಧವಾದ ಸಂರಕ್ಷಣೆಗಳು ಅತ್ಯವಶ್ಯಕಗಳಾಗಿವೆ. ಭಾರತೀಯರೇ ರಾಜ್ಯಾಂಗರಚನೆಯನ್ನು ಅನುಷ್ಠಾನದಲ್ಲಿ ತರುವವರಾದುದರಿಂದ ಅವರ ಅಭಿಪ್ರಾಯಗಳನ್ನು ವಿಚಾರಿಸುವುದು ಯುಕ್ತವಾಗಿದೆ. ಭಾರತೀಯರು ಎಷ್ಟು ಹೆಚ್ಚುಹೆಚ್ಚಾಗಿ ಜವಾಬ್ದಾರಿಯನ್ನು ವಹಿಸುವರೋ, ಅಷ್ಟು ಹೆಚ್ಚುಹೆಚ್ಚಾಗಿ ಮುಂದಿನ ರಾಜ್ಯಾಂಗರಚನೆಯನ್ನು ಜಾರಿಯಲ್ಲಿ ತರಲು ಅರ್ಹರಾಗುವರು. ಅವರು ಜಾಣತನದಿಂದಲೂ ಜವಾಬ್ದಾರಿಯಿಂದಲೂ ರಾಜನೀತಿಯನ್ನನುಸರಿಸಿ ಕಾರ್ಯನಿರ್ವಹಮಾಡುವುದಾದರೆ ಮುಂದಿನ ಪರಿಣಾಮದ ವಿಷಯದಲ್ಲಿ ವ್ಯಾಕುಲಪಡುವುದನಾವಶ್ಯಕವಾಗಿದೆ. ವೈಸರಾಯರಿಗೆ ಇರುವ ಅಧಿಕಾರವು ನಿಮಿತ್ತಮಾತ್ರವಾಗಿರುವುದು. ಫೆಡರಲ್ ಕಮಿಟಿಯ ಕಾರ್ಯಕಲಾಪಗಳನ್ನು ಅನೇಕರು ಆಕ್ಷೇಪಿಸಬಹುದು. ಆದರೆ ಆಕ್ಷೇಪಿಸುವುದು ಸುಲಭ; ರಚನೆಮಾಡುವುದು ಕಷ್ಟ. ನಾವು ಹಿಂದೆ ಮಾಡಿರುವ ಕಾರ್ಯಕಲಾಪಗಳನ್ನು ನಾಶಮಾಡಬೇಕೆಂದು ನಾವು ಇಲ್ಲಿ ಸೇರಿರದೆ, ಅದನ್ನು ಯುಕ್ತವಾಗಿ ಕಟ್ಟಬೇಕೆಂದು ಸೇರಿದ್ದೇವೆ. ಹಿಂದುಸ್ಥಾನದ ಬಗ್ಗೆ ನಮ್ಮ ಧ್ಯೇಯವೇನಿರಬೇಕು? ನಿಮಗೆ ಶಾಂತಿಯುತವಾಗಿರುವ ಹಿಂದುಸ್ಥಾನಬೇಕೋ? ಅಥವಾ ರಾಜದ್ರೋಹದಿಂದ ಪ್ರಜ್ವಲಿಸುವ ಹಿಂದುಸ್ಥಾನಬೇಕೋ? ಈಪ್ಸಿತ ನಿಮಗೆ ಯಾವುದುಬೇಕಾದರೂ ಸ್ವಲ್ಪ ಸ್ವಾರ್ಥತ್ಯಾಗಮಾಡಲೇಬೇಕಾಗುವುದು. ನಿಮಗೆ ಸೌಹಾರ್ದವು ಬೇಕಾದರೆ, ನಿಮ್ಮ ಮನೋಭೀಷ್ಟಗಳೆಲ್ಲ ಸಿದ್ಧಿಯಾಗಿ ನೀವು ಕಳೆದುಕೊಳ್ಳುವುದಕ್ಕಿಂತಲೂ ಸಂಪಾದನೆ ಜಾಸ್ತಿಯಾಗುವುದು. ದಬ್ಬಾಳಿಕೆಯನ್ನಾರಂಭಿಸಿದರೆ ಸೈನ್ಯದ ವೆಚ್ಚವು ಜಾಸ್ತಿಯಾಗುವುದು. ಭೂಗಂದಾಯವೂ, ವ್ಯಾಪಾರದ ಉತ್ಪನ್ನವೂ ಕಡಿಮೆಯಾಗಿ ಅನೇಕ ಕಷ್ಟಪರಂಪರೆಗಳಿಗೀಡಾಗಬೇಕಾಗುವುದು. ದಬ್ಬಾಳಿಕೆಗವಕಾಶ ಕೊಡುವುದಾದರೆ ರಾಜನೀತಿಯು ಶೂನ್ಯವಾಯಿತೆಂದರ್ಥವಾಗುವುದು. ನೀವು ಬಲಾತ್ಕಾರದಿಂದ ಚಳವಳಿಯನ್ನು ಜಗ್ಗು ಬಡಿದು ಶಾಂತಿಯನ್ನು ನಿರ್ಮಿಸಬಹುದು. ಆದರೆ ಅಂಥ ಶಾಂತಿಯನ್ನು ಗಿಡಮರಗಳಿಲ್ಲದ ನಿರ್ಜನಪ್ರದೇಶವಾದ ಉಸುಬಿನಬೈಲಿ (ಮರುಭೂಮಿ) ಗೆ ಹೋಲಿಸಬಹುದು. ರೌಂಡ್‌ಟೇಬಲ್ ಸಮ್ಮೇಳನದ ಪ್ರತಿಫಲವಾಗಿರುವ ಒಂದು ವಿಷಯವನ್ನು ಮಾತ್ರ ನೀವು ಖಾತ್ರಿಯಾಗಿ ನಂಬಬಹುದು. ಅದೇನೆಂದರೆ, ಹಿಂದುಸ್ಥಾನದ ಭವಿಷ್ಯವು ಇತಃಪರ ಉಗ್ರಸ್ವಭಾವದಲ್ಲಿರುವುದಿಲ್ಲ. ಹಿಂದುಸ್ಥಾನದ ರಾಜ್ಯಾಂಗರಚನೆಯ ವಿಷಯದಲ್ಲಿ ಅನೇಕಾನೇಕ ಜನರು ಭಿನ್ನಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವರು. ಅಂತ್ಯದಲ್ಲಿ ಅದರ ನಿಜತ್ವವು ಭದ್ರವಾಗಿ ನಿಲ್ಲುವುದು. ಈಗ ಆಂಗ್ಲೇಯರ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಈಮೊದಲು ನಾವು ಹಿಂದುಸ್ಥಾನವನ್ನು ಜಯಿಸಿ ಆಳಬೇಕೆಂಬ ಉದ್ದೇಶದಿಂದ ಹಿಂದುಸ್ಥಾನಕ್ಕೆ ಹೋದವರಲ್ಲ. ನಾವು ಅಲ್ಲಿಗೆ ವ್ಯಾಪಾರಮಾಡಲಿಕ್ಕೆ ಹೋದವರು. ನಮ್ಮ ವಂಶಕ್ಕೆ ಅನುಗುಣವಾದ ಜಾಣ್ಮೆಯಿಂದಲೂ ಸುದೈವದಿಂದಲೂ ನಾವು ಸಾಮ್ರಾಜ್ಯವನ್ನು ಸಂಪಾದಿಸಿದೆವು. ಅಲ್ಲಿಯ ಅನೇಕ ಜಾತಿಗಳನ್ನೂ ಪಂಗಡಗಳನ್ನೂ ಸಂರಕ್ಷಣೆ ಮಾಡುವೆವೆಂಬ ಭರವಸೆಯಮೇಲೆ ಆ ಸಾಮ್ರಾಜ್ಯವನ್ನು ಆಳುತ್ತಿರುವೆವು.

ಭಾರತೀಯರಿಗೆ ಪಾಶ್ಚಿಮಾತ್ಯಧ್ಯೇಯಗಳನ್ನು ಕಲಿಸಿದ್ದೇವೆ. ಪಾಶ್ಚಿಮಾತ್ಯಪದ್ಧತಿಗಳನ್ನು ಅನುಸರಿಸುವಂತೆ ಅವರನ್ನು ಪ್ರೋತ್ಸಾಹಿಸಿದ್ದೇವೆ. ಪಾಶ್ಚಿಮಾತ್ಯಪದ್ಧತಿಯಮೇಲೆ ರಾಜಕೀಯ ಸಂಸ್ಥೆಗಳನ್ನೇರ್ಪಡಿಸಿ ಕಾಯಿದೆ ಕೌನ್ಸಿಲ್‌ಗಳಲ್ಲಿ ಅವರನ್ನು ಸೇರಿಸಿಕೊಂಡಿದ್ದೇವೆ. ನಾವು ಹೀಗೆ ಮಾಡಿರುವುದು ಒಳ್ಳೆಯದೋ ಅಥವಾ ಕೆಟ್ಟದೋ ತಿಳಿಯದು. ಅವರ ನ್ಯಾಯವಿಧಾಯಕ ಸಭೆಯಲ್ಲಿಯೂ ಹಾಗೂ ಕಾಂಗ್ರೆಸ್ಸಿನಲ್ಲಿಯೂ, ರೂಢಿಯಲ್ಲಿರುವುದು ನಮ್ಮ ಮಾತೃಭಾಷೆ. ಭಾರತೀಯರು ಪಾಶ್ಚಿಮಾತ್ಯನಾಗರೀಕತೆಯ ಕೆಲವು ಮಾತುಗಳನ್ನು ಮಾತ್ರವೇ ಕಲಿತುಕೊಂಡು ವಿಜೃಂಭಿಸದೆ, ಪಾಶ್ಚಿಮಾತ್ಯ ವಿದ್ಯೆಯಲ್ಲಿ ಪಾರಂಗತರಾಗಿದ್ದಾರೆ. ಇದೂ ಅಲ್ಲದೆ ನಾವು ಅವರಿಗೆ ಅನೇಕ ಸಂದರ್ಭಗಳಲ್ಲಿ ವಚನಕೊಟ್ಟಿದ್ದೇವೆ. 1919 ನೆಯ ವರ್ಷದಲ್ಲಿ ಮಾಂಟೆಗ್ಯೂ ಚೆಲ್ಮ್ಸ್‌ಫೋರ್ಡ್ ಸುಧಾರಣೆಗಳನ್ನು ಕೊಟ್ಟಿದ್ದಲ್ಲದೆ ಪಾರ್ಲಿಮೆಂಟಿನಲ್ಲಿಯೂ ಸಹ ಅವರಿಗೆ ಭಾಷೆಕೊಟ್ಟಿದ್ದಾಗಿದೆ.

ಕನ್ಸರ್ವೇಟಿವ್ ಪಕ್ಷದ ಹಾಲಿ ವೈಸರಾಯಲಾರ್ಡ್ ಇರ್ವಿನ್‌ರವರಲ್ಲಿ ಲೇಬರ್ ಪಕ್ಷದವರು ಪೂರ್ಣ ವಿಶ್ವಾಸವಿಟ್ಟಿದ್ದಾರೆ. ಅವರು ನಮ್ಮ ಪ್ರಾಚೀನ ಉದಾತ್ತತತ್ವದಂತೆ ವರ್ತಿಸಿದ್ದಾರೆ. ಸೈಮನ್‌ಸಮಿತಿಯೂ ಸಹ ಭರತಖಂಡದ ರಾಜಕೀಯ ಗುರಿಯು ಅಖಿಲ ಭಾರತ ಫೆಡರೇಷನ್ ಸರ್ಕಾರವೆಂಬುದನ್ನು ಒಪ್ಪಿರುವದು. ಮುಖ್ಯಮಂತ್ರಿಗಳು ಇದಕ್ಕೆ ತಮ್ಮ ಸಂಪೂರ್ಣ ಅನುಮತಿಯನ್ನಿತ್ತಿರುವರು. ಮಿ|| ಬಾಲ್ಡ್‌ವಿನ್‌ರವರೂ ಸಹ ರೌಂಡ್‌ಟೇಬಲ್ ಸಮ್ಮೇಳನದ ಕಾರ್ಯಕಲಾಪಗಳಿಗೆ ಸಹಾಯಮಾಡುವುದೇ ತಮ್ಮ ಕರ್ತವ್ಯವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದುಸ್ಥಾನದ ರಾಜಕೀಯ ವಿಷಯದಲ್ಲಿ ಪ್ರಗತಿಯ ಮಾರ್ಗವನ್ನನುಸರಿಸುವುದೇ ಕೇವಲ ಗೌರವಯುತವಾದ ಮಾರ್ಗವಾಗಿದೆ. ಇದೇ ನಮ್ಮ ಪ್ರಾಚೀನಧ್ಯೇಯ; ಇದೇ ನಮ್ಮ ಜಯದಧರ್ಮ. ಈ ಗೌರವಪಂಥವನ್ನನುಸರಿಸುವುದಾದರೆ ಸರ್ಕಾರವು ಭದ್ರವಾಗಿ ನಿಲ್ಲುವುದು. ಲೌಕಿಕಪುರೋಭಿವೃದ್ಧಿಗೂ ಕಾಯಿದೆಯು ನಿರುಪಾಧಿಕವಾಗಿ ಜಾರಿಯಲ್ಲಿರುವುದಕ್ಕೂ ತುಂಬಾ ಸಹಾಯವಾಗುವುದು. ಹಣಕಾಸಿನ ವಿಷಯವೂ ಸಹ ಕೇವಲ ಪ್ರಾಮುಖ್ಯವಾದುದು. ಈ ವಿಷಯದಲ್ಲಿಯೂ ಆಂಗ್ಲೇಯರಿಗೆ ಸರಿಯಾದ ಅಧಿಕಾರ ಬೇಕೆಂದು ಅಭಿಲಾಷೆಯುಳ್ಳವನಾದರೂ, ನನ್ನ ರಾಜನೀತಿಯು ಜಗದ್ವಿಖ್ಯಾತವಾಗಬೇಕೆಂಬುದೇ ನನ್ನ ಮಹತ್ವಾಕಾಂಕ್ಷೆಯಾಗಿರುವುದರಿಂದ ವ್ಯಾಪಾರದ ಅಭಿವೃದ್ಧಿಗಿಂತಲೂ ರಾಜನೀತಿಯ ವಿಜಯವೇ ಮಹತ್ವದ್ದಾಗಿದೆ.

ಸಾಮ್ರಾಜ್ಯಗಳು ಲೌಕಿಕಪುರೋಭಿವೃದ್ಧಿಯಿಂದ ಜಗತ್ತಿನಲ್ಲಿ ಗಣನೆಗೆ ಬಾರದೆ ಅವುಗಳ ನೀತಿಕಾರ್ಯಗಳಿಂದ ಜಗತ್ಪ್ರಸಿದ್ಧವಾಗುವುವಲ್ಲದೆ ಚರಿತ್ರೆಯಲ್ಲಿ ಮಾನ್ಯವಾಗುವುವು. ಒಂದು ರಾಷ್ಟ್ರದ ವಿಜಯವೂ ಕೀರ್ತಿಯೂ ಕಾಲಕ್ರಮೇಣ ಮರೆಯಲ್ಪಟ್ಟರೂ ಆ ರಾಷ್ಟ್ರದ ಆಧ್ಯಾತ್ಮಿಕಶಕ್ತಿಗಳು ಜಗತ್ತಿನಲ್ಲಿ ಅಚಂಬ್ರಾಕರವಾಗಿ ವಿರಾಜಿಸುವುವು. ನಮ್ಮ ದೇಶದಲ್ಲಿ ಶಾಂತಿಯೂ, ಸೌಖ್ಯವೂ, ಸತ್ಯವೂ ಮತ್ತು ನ್ಯಾಯವೂ ನೆಲೆಗೊಂಡಿರುವಂತೆಯೇ ಹಿಂದೂಸ್ಥಾನದಲ್ಲಿಯೂ ಭದ್ರವಾದ ತಳಹದಿಯಮೇಲೆ ನಿಲ್ಲುವಂತೆ ಹಿಂದುಸ್ಥಾನಕ್ಕೆ ಫೆಡರಲ್ ಸರ್ಕಾರವನ್ನು ಕೊಟ್ಟು ಅವರ ಅಭಿವೃದ್ಧಿಗೆ ಉಪಯುಕ್ತವಾದುದನ್ನು ಮಾಡೋಣ.

ಶುದ್ಧವನಸ್ಪತಿಗಳಿಂದ ಸಿದ್ಧನಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪುಷ್ಪಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವಿಸಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಘನ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂಢೇಂದ್ರಿಯ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣೆಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿ ಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೋಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಧರಾಮಂಡಲದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಮುಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಗ್ರಾಹಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹರ್ಷಿಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಬಹು ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಶಬ್ಬಗಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಡ್ರಾಮಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆನೋವು, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೇನೆ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇದಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳಿ ಪುಡಿ, ಹೊಟ್ಟೆ ಹುಳಗಳ ಕೆಡುಕಿನ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

☞ ಟಿಕ್ಸು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[33] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು. ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥಾ ಕಠಿನವಾದ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅತಿಸಾರಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ. ಬೇಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗ ಸ್ತ್ರೀಯರಿಗೂ ಆರೋಗ್ಯವರ್ಧಕಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

[48] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ, ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತನಿರಾಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ಕೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸಮ್ಯಕ್ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ಧವಳಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಖಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಳ್ಳಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವನಲ್ಲದೆ ಕಂಠಕ್ಕೆ ಮೇಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸ

(Registered Trade Mark)

[36]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ ನೇ ಮಾರ್ಚಿ ೧೯೩೧ [ಸಂಚಿಕೆ ೪೮

ಕಾನ್ಪುರದಲ್ಲಿ ಹಿಂದೂಮಹಮ್ಮದೀಯರ ಭಯಂಕರ ಗಲಭೆ.

ಈ ತಿಂಗಳು 23 ನೆಯ ತಾರೀಖಿನ ದಿವಸ ಸರ್ದಾರ್ ಭಗತ್‌ಸಿಂಗ್, ರಾಜಗುರು, ಸುಖದೇವರನ್ನು ಗಲ್ಲಿಗೆ ಹಾಕಿದ ಮಾರನೆಯ ದಿವಸ ಇಡೀ ಹಿಂದೂಸ್ಥಾನದಲ್ಲಿ ಹರತಾಳವನ್ನಾಚರಿಸಿದಂತೆ ಕಾನ್ಪುರದಲ್ಲಿಯೂ ಹರತಾಳವನ್ನಾಚರಿಸಿದರು. ಆ ದಿವಸ ಕೆಲವು ಮಹಮ್ಮದೀಯರು ಹರತಾಳವನ್ನಾಚರಿಸಲಿಲ್ಲವೆಂದು ಹಿಂದೂಮಹಮ್ಮದೀಯರ ಗಲಭೆಗೆ ಅವಕಾಶವಾಯಿತಂತೆ! ಆ ದಿವಸ ಹಗಲೆಲ್ಲ ಹಿಂದೂಮುಸಲ್ಮಾನರ ಹೊಡೆದಾಟವಾಯಿತು. ಮಿಲಿಟರಿ ಮತ್ತು ರಿಜರ್ವ್ ಪೋಲೀಸ್ ಬಂದದ್ದರಿಂದ ಸ್ವಲ್ಪ ಶಾಂತಿಯಾಯಿತು. 25 ನೆಯ ತಾರೀಖು ಪ್ರಾತಃಕಾಲ ಪುನಃ ಹೊಡೆದಾಟಕ್ಕೆ ಪ್ರಾರಂಭವಾಯಿತು. ಬೆಂಕಿಹಚ್ಚುವುದು, ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯಿಸುವುದು, ಮಕ್ಕಳುಗಳನ್ನು ಕೊಲ್ಲುವುದು, ಮುಂತಾದ ದುಷ್ಕೃತ್ಯಗಳನ್ನು ವರ್ಣಿಸಲಸದಳವಾಗಿದೆ. ಶ್ರೀಯುತ ಲಾಲಾಕಲ್ಲೂಮಲ್ಲ ಎಂಬ ಶ್ರೀಮಂತರ ಏಳುಲಕ್ಷ ರೂಪಾಯಿ ಬೆಲೆ ಬಾಳುವ ಮನೆಯು ಸುಟ್ಟು ಭಸ್ಮವಾಗಿದೆಯಂತೆ! ಈ ಗಲಭೆಯಲ್ಲಿ 150 ಜನರು ಸತ್ತಿರುವರೆಂದೂ, 500 ಜನರು ಗಾಯಗೊಂಡಿರುವರೆಂದೂ ತಿಳಿದುಬಂದಿದೆ. ಅಲಹಾಬಾದ್, ಲಕ್ನೋ ಮೊದಲಾದ ಸ್ಥಳಗಳಿಂದ ಸೈನ್ಯವು ಬಂದಮೇಲೆ ಸ್ವಲ್ಪ ಸಮಾಧಾನವಾಗಿರುವ ಪಂಡಿತ ಜವಾಹರಲಾಲರು ತಮ್ಮ ಭಾವಮೈದುನರಾದ ಶ್ರೀಯುತ ಆರ್. ಎಸ್. ಪಂಡಿತ್ ಮೊದಲಾದ ಹಿಂದೂಮಹಮ್ಮದೀಯ ಮುಖಂಡರಿಗೆ ಕಾನ್ಪುರಕ್ಕೆ ಹೋಗಿ ಶಾಂತಿಯನ್ನು ಸ್ಥಾಪಿಸಬೇಕೆಂದು ತಂತಿ ಕಳುಹಿಸಿರುವರು.

ಕರಾಚಿಗೆ ನಾಯಕರ ಆಗಮನ.

ಈ ತಿಂಗಳು ೨೫ ನೆಯ ತಾ|| ನ ದಿವಸ ಮಹಾತ್ಮ ಗಾಂಧಿಯವರು ಕರಾಚಿಗೆ 13 ಮೈಲಿ ದೂರದಲ್ಲಿದ್ದ ಮಾಲಿರ್ ಎಂಬ ಸ್ಟೇಷನ್ನಲ್ಲಿ ಇಳಿದರು. ಕೆಲವು ತರುಣರು ಕೆಂಪು ಬಟ್ಟೆಗಳನ್ನು ಧರಿಸಿ ಕರಿಯ ನಿಶಾನೆಗಳನ್ನು ಹಿಡಿದುಕೊಂಡು "ಮುಖಂಡರೇ ಹಿಂದಿರುಗಿ ಹೋಗಿರಿ ಒಪ್ಪಂದವು ನಾಶವಾಗಲಿ" ಎಂದು ಕೂಗಿದರು. ಕೆಂಪು ಬಟ್ಟೆಯನ್ನು ಧರಿಸಿದ್ದ ಒಬ್ಬ ತರುಣನು ಗಾಂಧಿಯವರಿಗೆ ಕರಿಯ ಹೂವನ್ನು ಕೊಟ್ಟನು. ಗಾಂಧಿಯವರು ತಮ್ಮ ಸ್ವಾಭಾವಿಕವಾದ ಮಂದಹಾಸದಿಂದ ಅದನ್ನು ಅಂಗೀಕರಿಸಿದರು. ಗಾಂಧಿಯವರು ಸರ್ದಾರ ವಲ್ಲಭಭಾಯಿ ಪಟೇಲ್, ಪಂಡಿತ ಜವಾಹರಲಾಲ್ ನೆಹರು, ಪಂಡಿತ ಮಾಲವೀಯ, ಡಾ|| ಅನ್ಸಾರಿಯವರೊಂದಿಗೆ ತಮ್ಮ ಬಿಡಾರಕ್ಕೆ ಮೋಟಾರಿನಲ್ಲಿ ಹೋಗುತ್ತಿರುವಾಗ ಕೆಂಪು ಬಟ್ಟೆಯ ಕೆಲವು ತರುಣರು ಮೋಟಾರುಲಾರಿಯಲ್ಲಿ ಕುಳಿತು ವಿರೋಧಪ್ರದರ್ಶನ ಮಾಡುತ್ತ ಹಿಂಬಾಲಿಸಿದರು. ಆಗ ಪಂಡಿತ ಜವಾಹರಲಾಲನೆಹರುರವರು ಅವರ ಸಂಗಡ ಮಾತನಾಡುತ್ತ ಸಮಾಧಾನಪಡಿಸುತ್ತಲಿದ್ದರು. ಆದರೆ ಗಾಂಧಿಯವರು ಬರುವಾಗ ಮಾರ್ಗದಲ್ಲಿ ಸಹಸ್ರಾರು ಜನರು ಅವರಿಗೆ ಸುಖಾಗಮವನ್ನು ಬಯಸುತ್ತಿದ್ದರಲ್ಲದೆ ಕರಾಚಿ ಕಾಂಗ್ರೆಸ್ ನಗರದಲ್ಲಿಯೂ ಅವರಿಗೆ ಅದ್ಭುತಸ್ವಾಗತವಾಯಿತು.

ಕರಾಚಿಗೆ ಬಂದೀದ ಕಾಂಗ್ರೆಸ್ ಪ್ರತಿನಿಧಿಗಳು ಕಾಂಗ್ರೆಸ್ಸಿನಲ್ಲಿ ಅನೈಕಮತ್ಯವುಂಟಾಗಿ ಒಪ್ಪಂದಕ್ಕೆ ವಿರೋಧವಾಗಿ ಠರಾವಾಗುವುದಾದರೆ ಇಂಗ್ಲೆಂಡು ಮತ್ತು ಹಿಂದುಸ್ಥಾನದಲ್ಲಿರುವ ಅಗ್ನಿಭಕ್ಷಕರಿಗೆ ಅನುಕೂಲವಾಗುವುದೆಂದು ವೈಸರಾಯರು ಆತುರದಿಂದ ನಿರೀಕ್ಷಿಸುತ್ತಿರುವರೆಂದು ಅಭಿಪ್ರಾಯಪಡುವರು. ಭಗತ್‌ಸಿಂಗ್ ಮತ್ತು ಅವರ ಸಂಗಡಿಗರನ್ನು ಸರ್ಕಾರದವರು ವಧಾಮಾಡಿದ್ದರಿಂದ ಜನರ ಮನಸ್ಸು ಕ್ಷೋಭೆಯುಕ್ತವಾಗಿದ್ದರೂ, ಗಾಂಧಿಯವರು ಮಾಡಿಕೊಂಡ ಒಪ್ಪಂದಕ್ಕೆ ಭಂಗಬರಲಾರದೆಂದು ನಿರೀಕ್ಷಿಸಲ್ಪಟ್ಟಿದೆ.

ಕಾಂಗ್ರೆಸ್ಸಿನ ಹಿಂದಿನ ಪ್ರೆಸಿಡೆಂಟರು ಒಂದೇ ಗಾಡಿಯಲ್ಲಿ ಈ ಸಲ ಪ್ರಯಾಣಮಾಡಿದಂತೆ ಹಿಂದೆ ಎಂದೂ ಮಾಡಿರಲಿಲ್ಲ. ಮಹಾತ್ಮ ಗಾಂಧಿಯವರು, ಪಂಡಿತ ಜವಾಹರಲಾಲ್‌ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ|| ಎಂ. ಎ. ಅನ್ಸಾರಿ, ಮೌಲಾನಾ ಅಬ್ದುಲ್‌ಕಲಾಂ ಆಜಾದ್, ಪಂಡಿತ ಮಾಲವೀಯ ಇವರೆಲ್ಲರೂ ಒಂದೇ ಗಾಡಿಯಲ್ಲಿ ದಿಲ್ಲಿಯಿಂದ ಬಂದರು. ದಿಲ್ಲಿಯನ್ನು ಬಿಟ್ಟಂದಿನಿಂದ ಮುಖಂಡರಿಗೆ ವಿಶ್ರಾಂತಿಯೇ ಇರಲಿಲ್ಲ. ಪ್ರತಿಯೊಂದು ಸ್ಟೇಷನ್ನಿನಲ್ಲಿಯೂ ಜನರು ಮಹಾತ್ಮರ ದರ್ಶನಾಕಾಂಕ್ಷಿಗಳಾಗಿ ನೆರೆದಿದ್ದರು. ಕೆಲವರು ೬೦ ಮೈಲುಗಳ ದೂರದಿಂದ ಪಾದಚಾರಿಗಳಾಗಿ ಬಂದಿದ್ದರು. ಅವರಲ್ಲಿ ಸ್ತ್ರೀಯರೇ ವಿಶೇಷವಾಗಿದ್ದರು. ಹಿಂದು, ಮಹಮ್ಮದೀಯ, ಸಿಕ್, ಬ್ರಾಹ್ಮಣ, ಬ್ರಾಹ್ಮಣೇತರ ಮೊದಲಾದ ಎಲ್ಲ ಜಾತಿಗಳ ಜನರು ಬಂದು ಮಹಾತ್ಮರ ದರ್ಶನ ತೆಗೆದುಕೊಂಡು "ಮಹಾತ್ಮ ಗಾಂಧಿಕಿ ಜೈ" ಎಂದು ಜಯಘೋಷಮಾಡಿ ಫಲಪುಷ್ಪಗಳನ್ನೂ ಆಡಿನ ಹಾಲನ್ನೂ ಸಮರ್ಪಿಸುತ್ತಿದ್ದರು. ಭಗತ್‌ಸಿಂಗರ ವಧೆಯಾದ ಮೇಲೆ ಸ್ಟೇಷನ್‌ಗಳಲ್ಲಿ ಜನರು ಟೋಪಿಗಳನ್ನೂ ರುಮಾಲುಗಳನ್ನೂ ತೆಗೆದು ಖಿನ್ನವದನರಾಗಿ ನಿಂತಿದ್ದರು. ಮಹಾತ್ಮರು ಅವರಿಗೆ "ಹರತಾಳವನ್ನಾಚರಿಸಿರಿ, ಶೋಕಪ್ರದರ್ಶನ ಮೆರವಣಿಗೆಯನ್ನು ಹೊರಡಿಸಿರಿ" ಎಂದು ಹೇಳಿದೊಡನೆಯೇ ಎಲ್ಲರೂ ಹಿಂದಿರುಗುತ್ತಿದ್ದರು.

ಭಗತ್‌ಸಿಂಗರ ವಧೆಯಾದ ಮೇಲೆ ತರುಣರ ಮನೋಭಾವನೆಗಳು.

ಕರಾಚಿ ಕಾಂಗ್ರೆಸ್ಸಿಗೆ ಪ್ರಯಾಣಮಾಡುವಾಗ ದಾರಿಯುದ್ದಕ್ಕೂ ಭಗತ್‌ಸಿಂಗರ ವಧೆಯ ವಿಷಯವೇ ಜನರು ಮಾತನಾಡುವ ಮುಖ್ಯ ಅಂಶವಾಗಿದ್ದಿತು ಇನ್ನು ಮುಂದೆ ಗಾಂಧಿಯವರು ಕಾಂಗ್ರೆಸ್ಸಿನಲ್ಲಿ ತಮ್ಮ ನಾಯಕತ್ವವನ್ನು ಕಾಪಾಡಿಕೊಳ್ಳುವುದು ಶಕ್ಯವೇ ಎಂದು ಮಾತನಾಡುತ್ತಿದ್ದರು. ಕೆಲವರು ಬಂಗಾಲ, ಪಂಜಾಬ್ ಮತ್ತು ವಾಯವ್ಯ ಸಂಯುಕ್ತ ಸಂಸ್ಥಾನಗಳ ಪ್ರತಿನಿಧಿಗಳು ಕಾಂಗ್ರೆಸ್ಸಿನಲ್ಲಿ ಮಹಾತ್ಮ ಗಾಂಧಿಯವರಿಗೆ ವಿರೋಧವಾಗಿ ವರ್ತಿಸುವರೆಂದೂ ಕೊನೆಯಲ್ಲಿ ಮಹಾತ್ಮರು ಎಲ್ಲರನ್ನೂ ತಮ್ಮ ಪಕ್ಷಕ್ಕೆ ಎಳೆದುಕೊಳ್ಳದೆ ಬಿಡುವುದಿಲ್ಲವೆಂದೂ ಮಾತನಾಡುತ್ತಿದ್ದರು. ತರುಣರು ಮಹಾತ್ಮರ ಅಭಿಪ್ರಾಯವನ್ನು ಒಪ್ಪದಿದ್ದರೂ, ಕಾಂಗ್ರೆಸ್ ಸಂಸ್ಥೆಗೆ ಆವ ಸಹಾನುಭೂತಿಯನ್ನು ಕಳೆದುಕೊಳ್ಳಲು ಸಿದ್ಧರಾಗಿಲ್ಲವೆಂದೂ ತಿಳಿದುಬರುತ್ತದೆ. ಭಗತ್‌ಸಿಂಗರನ್ನು ಶೂಲದಿಂದ ತಪ್ಪಿಸುವುದಕ್ಕೆ ಮಹಾತ್ಮ ಗಾಂಧಿಯವರು ಮಾಡಬೇಕಾದ ಎಲ್ಲ ಪ್ರಯತ್ನಗಳನ್ನೂ ಮಾಡಿದರೆಂಬುದು ಸಾಮಾನ್ಯವಾಗಿ ಗೊತ್ತಿಲ್ಲ. ಭಗತ್‌ಸಿಂಗ್‌ರನ್ನು ಬಿಡುಗಡೆ ಮಾಡಬೇಕೆಂದು ಒಪ್ಪಂದದಲ್ಲಿ ಷರತ್ ಹಾಕಲಿಲ್ಲವೆಂಬುದೇ ಮಹಾತ್ಮ ಗಾಂಧಿಯವರ ಮೇಲೆ ತರುಣರ ಸಿಟ್ಟು. ಐರ್ಲೆಂಡಿನ ನಾಯಕರಾದ ಮಿ|| ಡಿವೆಲರಾರವರು ಇಂಗ್ಲೆಂಡಿನ ಮುಖ್ಯ ಮಂತ್ರಿಗಳಾಗಿದ್ದ ಮಿ|| ಲಾಯಿಡ್ ಜಾರ್ಜರೊಡನೆ ಸಂಧಾನಮಾಡುವಾಗ ಫಾಶಿಶಿಕ್ಷೆಗೆ ಗುರಿಯಾದವರನ್ನು ಬಿಡುಗಡೆ ಮಾಡದ ಹೊರತು ಸಂಧಿಗೆ ಒಪ್ಪುವುದಿಲ್ಲವೆಂದು ಹಟಹಿಡಿದು ಅವರನ್ನು ಶೂಲದಿಂದ ತಪ್ಪಿಸಿದಂತೆ ಮಹಾತ್ಮರು ತಪ್ಪಿಸಲಿಲ್ಲವೆಂದು ತರುಣರ ವಾದ. ಲಾಹೋರ್ ಕಾಂಗ್ರೆಸ್ಸಿನಲ್ಲಿ ಮಹಾತ್ಮ ಗಾಂಧಿಯವರ ವಿರೋಧವಾಗಿ ವಾದಿಸಿದವರೂ ಸಹ ಭಗತ್‌ಸಿಂಗರ ವಧೆಯಿಂದ ಒಪ್ಪಂದವನ್ನು ನಾಶಮಾಡಿದರೆ ಭರತಖಂಡದ ರಾಜಕೀಯ ಪ್ರಗತಿಯು ಕುಂಠಿತವಾಗುವುದೆಂದು ಅಭಿಪ್ರಾಯಪಡುವರು.

ಸ್ವೀಕಾರ.

ಕಡೂರು ಡಿ|| ನಂದಿಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ವೇ|| ಹಿರೇಮಠದ ರುದ್ರಮುನಿಯಯ್ಯನವರ ದ್ವಾರಾ ತಲ್ಪಿರುತ್ತದೆ.

ದಾವಣಗೆರೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಮ|| ರಾ|| ಯಜಮಾನ್ ಬೆಳ್ಳೂಡಿ ವೀರಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಶಿವ ಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಶೈಲಕ್ಷೇತ್ರಯಾತ್ರೆ.

ನಾವು ಕುಟುಂಬ ಸಹಿತವಾಗಿ ನಮ್ಮ ಇಷ್ಟಮಿತ್ರರಿಂದೊಡಗೂಡಿ ಅಂದಾಜು 55 ಜನರವರೆವಿಗೂ ಶ್ರೀ ಶೈಲ ಮಹಾಕ್ಷೇತ್ರಕ್ಕೆ ಇದೇ ಮಾಘ ಬ|| 14 ದಿವಸ ಹೋಗಿದ್ದೆವು. ಆ ಕಾಲಕ್ಕೆ ನಾಗಲೋಟಿ ವೀರಣ್ಣನ ಸ್ಥಾನದಲ್ಲಿ ವೇ|| ವೀರಭದ್ರಸ್ವಾಮಿಗಳವರು ಯಾತ್ರಿಕರಿಗೆ ಅನ್ನಛತ್ರದಲ್ಲಿ ಬಹಳವಾಗಿ ಸೌಕರ್ಯವನ್ನು ಕಲ್ಪಿಸಿದ್ದರು. ನಮ್ಮಗಳಿಗೆ ವಿಶೇಷವಾದ ಸತ್ಕಾರವನ್ನು ಮಾಡಿದ್ದಲ್ಲದೆ ಹುಡುಗರಾದಿಯಾಗಿ ಎಲ್ಲರಿಗೂ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಸರಿಯಾಗಿ ಇಟ್ಟಿದ್ದರು. ಹೀಗೆ ಭಕ್ತರಲ್ಲಿ ತೋರಿಸುವ ಪ್ರೇಮ, ವಿನಯ, ದಯಾದಾಕ್ಷಿಣ್ಯ ಮೊದಲಾದ ಇವರ ಗುಣಗಳು ವರ್ಣನೀಯವಾಗಿರುವವು. ಇದರಿಂದ ಯಾತ್ರಿಕರಾಗಿ ಹೋಗಿರುವ ನಮ್ಮಗಳಿಗೆ ಅತ್ಯಾನಂದವಾಯಿತು. ಇನ್ನು ಯಾರಾದರೂ ಯಾತ್ರಾರ್ಥಿಗಳು ಸದರಿ ಕ್ಷೇತ್ರಕ್ಕೆ ಹೋಗುವ ಕಾಲದಲ್ಲಿ ಛತ್ರದಲ್ಲಿ ಪ್ರಸಾದವನ್ನು ಸ್ವೀಕರಿಸಿ ತೃಪ್ತರಾಗಿ ಮುಂದಕ್ಕೆ ಪ್ರಯಾಣ ಬೆಳೆಸಬೇಕೆಂದು ಆಶಿಸುವೆವು.

ವಿರೂಪಾಕ್ಷಪ್ಪ ಶಿವಮೂರ್ತಪ್ಪ ಭಾವಿ
೨ನೇ ವರ್ಗದ ಬೆಂಚ್‌ಮ್ಯಾಜಿಸ್ಟ್ರೇಟ್,
ಗುಳೇದಗುಡ್ಡ ಡಿ|| ವಿಜಾಪುರ.

ವಾರದ ಸಂ|| ಪಾಠಶಾಲೆಯ ೫೪ ನೆಯ ವರ್ಧಂತ್ಯುತ್ಸವ.

ಸೊಲ್ಲಾಪುರ

ಈ ಉತ್ಸವವು ತಾ|| 20-3-31ರ ದಿವಸ ವಿಜೃಂಭಣೆಯಿಂದ ನಡೆಯಿತು. ಈ ಪಾಠಶಾಲೆಯನ್ನು ಶ್ರೀಮಂತ ರಾವಬಹದ್ದೂರ್ ಅಪ್ಪಾಸಾಹೇಬ ವಾರದ ಇವರು ಶಕೆ ೧೮೦೦ ಚೈತ್ರಶುದ್ಧ ಪ್ರತಿಪತ್ತಿನ ದಿವಸ ಸ್ಥಾಪಿಸಿದರು. ಇವರು ಇರುವವರೆಗೂ ನೂರಾರು ವಿದ್ಯಾರ್ಥಿಗಳಿಗೆ ವಸನಾಶನ ಪುಸ್ತಕಗಳನ್ನು ಕೊಟ್ಟು ಔಷಧೋಪಚಾರದ ಸಲುವಾಗಿ ತಿಂಗಳೊಂದಕ್ಕೆ 75 ರೂಪಾಯಿಗಳನ್ನು ಕೊಟ್ಟು ಓರ್ವ ಡಾಕ್ಟರನ್ನಿಟ್ಟು ಇಬ್ಬರು ಶಾಸ್ತ್ರಿಗಳನ್ನಿಟ್ಟು ಪಾಠಶಾಲೆಯನ್ನು ಅವ್ಯಾಹತವಾಗಿ ನಡೆಯಿಸಿದರು. ಈ ಶಾಲೆಯಿಂದ ಈವರೆಗೂ ಸಾವಿರಾರು ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಮಾಡಿ ಹೋಗಿರುವರು. ಅವರ ಪೈಕಿ ಅನೇಕರು ಮಠಾಧಿಕಾರಿಗಳಾಗಿಯೂ, ಧರ್ಮಬೋಧಕರಾಗಿಯೂ, ಶಾಲಾಧ್ಯಾಪಕರಾಗಿಯೂ ಇರುವರು. ಸದರಿ ಶ್ರೀಮಂತರು ಗತಿಸಿದ ಬಳಿಕ ಶ್ರೀಮಂತ ಕಾಡಾದಿಯವರು ಶ್ರೀಮಂತ ಉಮರಜಿಯವರು ಅಧ್ಯಾಪಕರ ವೇತನ ಮತ್ತು ಇತರ ಖರ್ಚು ಕೊಟ್ಟು ಈ ಸಂಸ್ಥೆಯನ್ನು ಐದುವರ್ಷಗಳವರೆಗೂ ನಡೆಯಿಸುತ್ತಲಿದ್ದು ಬಳಿಕ ಶ್ರೀಮಂತ ಬಂದೆಪ್ಪ ಅಣ್ಣಾ ಕಾಡಾದಿ ಇವರು ಸ್ವಂತ ಖರ್ಚಿನಿಂದ 15-16 ವರ್ಷ ಈ ಸಂಸ್ಥೆಯನ್ನು ಉದಾರಬುದ್ಧಿಯಿಂದ ನಡೆಯಿಸುತ್ತ ಬಂದಿರುವರು.

ಈ ಸಂಸ್ಥೆಯು ಮೊದಲು ಖಾಸಗಿಸ್ವರೂಪವಾಗಿ ಇದ್ದಿತು. ಆದರೆ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀಯುತ ಮಲ್ಲಿಕಾರ್ಜುನಪ್ಪ ಅಣ್ಣಾಪಾಟೀಲ ಇವರು ಪ್ರಯತ್ನದಿಂದ ಸರಕಾರಿ ರಜಿಸ್ಟರ್ ಮಾಡಿಸಿರುವರು. ಇದಕ್ಕೆ ಸರಕಾರದಿಂದಲೂ ಮ್ಯುನಿಸಿಪಾಲಿಟಿಯಿಂದಲೂ ಗ್ರ್ಯಾಂಟು ದೊರೆಯುತ್ತಿರುವದು. ಕಲಕತ್ತಾ ಯೂನಿವರ್ಸಿಟಿಯಲ್ಲಿ ಇತರ ಮಾನ್ಯಭಾಷೆಗಳಂತೆ ಕನ್ನಡಕ್ಕೆ ಸ್ಥಾನವಿದ್ದಿಲ್ಲ. ಅದು ಶ್ರೀ|| ಪಾಟೀಲರ ಪ್ರಯತ್ನದಿಂದ ದೊರೆತಿರುತ್ತದೆ. ಹೋದವರ್ಷ ಈ ಸಂಸ್ಥೆಯಿಂದ ಕಾವ್ಯತೀರ್ಥದಲ್ಲಿ ಮತ್ತು ಕಾವ್ಯಪ್ರಥಮದಲ್ಲಿ ಪರೀಕ್ಷೆಗೆ ಆರುಜನ ವಿದ್ಯಾರ್ಥಿಗಳು ಕುಳಿತಿದ್ದು 6 ಜನರೂ ಉತ್ತೀರ್ಣರಾಗಿರುವರು. ಈ ವರ್ಷ 13 ಜನರು ಕಾವ್ಯಮಧ್ಯಮ ಮತ್ತು ಕಾವ್ಯಾದ್ಯಗಳಲ್ಲಿ ಪರೀಕ್ಷೆಯನ್ನು ಕೊಟ್ಟು ಬಂದಿರುವರು. ಫಲಿತಾಂಶವು ಬಹುಶಃ ಆಷಾಢ ಅಥವಾ ಶ್ರಾವಣಮಾಸದಲ್ಲಿ ತಿಳಿಯಬಹುದು. ಸಧ್ಯದಲ್ಲಿ 29 ಜನರು ಅಭ್ಯಾಸ ಮಾಡುತ್ತಿದ್ದು 13 ಜನರು ಮುಂದಿನ ವರ್ಷದ ಕಾವ್ಯತೀರ್ಥ, ಕಾವ್ಯಮಧ್ಯಮ, ವೇದಾಂತಾದ್ಯಗಳಲ್ಲಿ ಅಭ್ಯಾಸ ಮಾಡುತ್ತಿರುವರು. ಇವರುಗಳ ಭೋಜನಕ್ಕೂ ಶಿಕ್ಷಣಕ್ಕೂ ಚಿರಸ್ಥಾಯಿಯಾದ ಫಂಡಿನ ಆವಶ್ಯಕತೆಯಿದೆ. ಈ ಬಗ್ಗೆ ಸಹಾಯವೆಂದು ಶ್ರೀಮತಿ ಅನ್ನಪೂರ್ಣಾಬಾಯಿ ಲಿಗಾಡೆ ಇವರು ಮತ್ತು ಶ್ರೀಯುತ ಶಂಕರಪ್ಪ ಅಣ್ಣಾವಾಯಿಲಾ ಇವರು ಉದಾರಬುದ್ಧಿಯಿಂದ ಒಂದೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುವರು. ಅದ್ದರಿಂದ ಇವರಿಗೆ ಗೌರವರೂಪವಾದ ಅಭಿನಂದನವನ್ನು ಮಾಡುವದರಲ್ಲಿ ಬಂದಿತು. ಉತ್ಸವಕ್ಕೆ ಅನೇಕ ಪ್ರಮುಖಪುರುಷರು ಕೆಲವು ಪ್ರಮುಖಸ್ತ್ರೀಯರು ಬಂದಿದ್ದರು. ಸರದಾರ ಬ್ಯಾರಿಸ್ಟರ ಸಾಹೇಬರು, ಬಸವಲಿಂಗಶಾಸ್ತ್ರಿಗಳು ಪುರಾಣಿಕ, ಡಾ|| ದೇಶಮುಖರು, ಶ್ರೀ|| . ಪಾಟೀಲರು, ಶ್ರೀ|| ಅಬ್ದುಲಪುರಕರರು, ಶ್ರೀ|| ಕಲ್ಯಾಣಶೆಟ್ಟಿಯವರು, ಮಿ|| ಲೋಣಿಮಾಸ್ತರರು ಮೊದಲಾದ ವಕ್ತೃಗಳು ಸಮಯೋಚಿತ ಭಾಷಣಗಳನ್ನು ಮಾಡಿದ ಬಳಿಕ ಅಧ್ಯಕ್ಷರಾದ ಶ್ರೀ|| ನಿಜಗುಣಸ್ವಾಮಿಗಳು ಸ್ವಾರಸ್ಯವಾಗಿ ಉಪಸಂಹಾರ ಭಾಷಣಮಾಡಿದರು. ಉದಾರದೇಣಿಗೆಯನ್ನಿತ್ತ ಉಭಯಮಹಾಶಯರಿಗೆ ಹಾರತುರಾಯಿಗಳನ್ನು ಅರ್ಪಿಸಿದನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವಚಂದಾದಾರ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಬಲ್ಕಿ ಪಟ್ಟದ್ದೇವರ ಬಾಲ ಬೆಳೆಯಿತು.

ನಾವು ಕಲ್ಯಾಣಪ್ರಾಂತದಲ್ಲಿ ಅನೇಕ ದಿವಸದಿಂದ ಪಾದಚಾರಿಗಳಾಗಿ ಸಂಚರಿಸಿ ಬೇಸತ್ತು ಮೋಟರಿನಲ್ಲಿ ಕುಳಿತು ಶಿಲಾಪತ್ತನಕ್ಕೆ ಬರುವದರೊಳಗಾಗಿ ಬಲ್ಕಿ ಶ್ರೀಗಳು ಸ್ವೇಚ್ಛೆಯಾಗಿ ಅಶಾಸ್ತ್ರೀಯವಾದ ಆಶ್ರಿತವಾಣಿಯಿಂದ ಬಜಾರದಲ್ಲಿ ಕುಳಿತು ನಿಂದಾಸ್ಪದ ಮಾತುಗಳನ್ನು ಬೆಳೆಯಿಸಿದರು. ಇವರೇ ಧನ್ಯರಲ್ಲವೇ? ಗಂಡಬಿಟ್ಟ ಗಯ್ಯಾಳಿಯಂತಿರುವ ಇಂಥ ಅಧಿಕಾರಿಗಳು, ಶಾಸ್ತ್ರವಿರುದ್ಧಾಚರಣೆಯನ್ನು ಮಾಡಲುಜ್ಜುಗಿಸಿದರೆ ನಮ್ಮಂಥ ವಿದ್ಯಾಹೀನರು ಎಷ್ಟು ಬೊಗಳಬಹುದು. "ನಗುರೋರಧಿಕಂ ನಗುರೋರಧಿಕಂ" ಎಂಬ ಪ್ರಮಾಣವನ್ನು ತಿಳಿಯದೆ ಮನಸ್ಸಿಗೆ ಬಂದಂತೆ ಮಾತನಾಡಿದರೆ ಪ್ರಯೋಜನವಿಲ್ಲ. ಭೋ! ಆಶ್ರಿತನಿರತಪಟ್ಟಾಧಿಕಾರಿಗಳೇ! ವೀರಶೈವರಿಗೆ (ಶಿವಿ) ಇಲ್ಲೆನ್ನುವ ಶಾಸ್ತ್ರವು ನಿಮ್ಮಲ್ಲಿದ್ದರೆ ಸಭೆಗೂಡಿಸಿ ಸ್ವಪಕ್ಷವನ್ನು ಸಮಾಧಾನಗೊಳಿಸುವದು ಅಧಿಕಾರಿಗಳ ಕರ್ತವ್ಯವು. ಇದನ್ನು ಬಿಟ್ಟು ಮನಸ್ವಿಯಾಗಿ ಭಕ್ತರನ್ನು ವಿರುದ್ಧವಾದ ದಾರಿಗೆಳೆಯುವದು ಉಚಿತವಲ್ಲ. ಸರಿಯಾದ ಮಾರ್ಗದಿಂದ ನಡೆಯದೆ ಬಂದಿಬಿಡುವ ಸ್ಥಳದಲ್ಲಿ ಮುಂಡಿಸಿ ಪಾಖಂಡಿಜನರಿಗೆ ಬೋಧಮಾಡಿದರೆ ಸರ್ವರೂ ಪಾಖಂಡಿಗಳಾಗಿ ಆಚರಿಸುವರೆಂದು ಖಂಡಿತವಾಗಿ ಹೇಳುತ್ತೇನೆ. ಆದರೆ ಇವರು ಈ ವಕ್ರಮಾರ್ಗದಿಂದ ದೂರರಾಗಿ ಶಿವಾಚಾರಧರ್ಮಕ್ಕೆ ಯೋಗ್ಯವಾದ ಶಿಷೆಯನ್ನಿರಿಸಿಕೊಂಡು ಭಗವತ್ಪಾದ ರೇಣುಕರ ಕೃಪೆಗೆ ಪಾತ್ರರಾಗುವುದು ಅಧಿಕಾರಿಗಳ ಕರ್ತವ್ಯವು. ಭೋ ಮೋಟಾರ ಖಾನಿ ಏಜಂಟ ಮುಂಗಳ ಸವರೇ ನೀವು ಜನಿಸಿದ್ದೀ ನಿಮಗೆ ಗೊತ್ತಿಲ್ಲೆಂದ ಪಕ್ಷದಲ್ಲಿ ಇತರ ಮಹನೀಯರು ಜನಿಸಿದ ವಿಚಾರವು ನಮ್ಮಂಥ ಅಲ್ಪಜ್ಞರಿಗೆ ಹೇಗೆ ಗೊತ್ತಾಗುವದು? ಇದನ್ನರಿಯದೆ ಹಾದಿಯಲ್ಲಿ ಕುಳಿತು ಹಾವಾಡಿಗರ ಹಾಗೆ ಹೇಳುತ್ತ ಕೇಳುತ್ತ ಹೋದರೆ ಜನಗಳು ಛೀ ಅಂದಾರೆಂಬ ಭೀತಿಯಿಲ್ಲವೇ? ಜಾತಿಜಂಗಮನಾಗಿ ಬೋಧಿಸಬೇಕಲ್ಲದೆ ನೀತಿಜಂಗಮನಾಗಿ ಎಂದೂ ಬೋಧಿಸಬಾರದೆಂದು ಕೋರುವ

ವೀರಶೈವಾಚಾರಾಭಿಲಾಷಿ.

ಬಳ್ಳಾರಿಯ ಕೆಲವರು ಮುರಿಗಿಮಠದವರನ್ನು ಬಳ್ಳಾರಿಗೆ ಕರೆತರುವರಂತೆ!

ಚಿತ್ರಕಲ್ಲದುರ್ಗದ ಮುರಿಗಿಮಠದವರು ಮಠಸ್ಥಾಪನಾಚಾರ್ಯರ ಪೀಠಗಳಿಗೆ ಪರಮಶತ್ರುಗಳಾಗಿ ವರ್ತಿಸುತ್ತಿರುವ ವಿಷಯವು ಇಡೀ ಜಗತ್ತಿಗೇ ಗೊತ್ತಾಗಿದೆ. ಆದುದರಿಂದ ಇವರು ಎಲ್ಲಿ ಹೋದರೂ ಗೌರವವು ದೊರೆಯದೆ ಈಗ ೩-೪ ವರ್ಷಗಳಿಂದ ಸುಮ್ಮನೆ ಮಠವನ್ನು ಹಿಡಿದು ಕುಳಿತುಬಿಟ್ಟಿದ್ದಾರೆ. ಈಗ ಬಳ್ಳಾರಿಯಲ್ಲಿರುವ ಒಬ್ಬಿಬ್ಬರು ಸದರಿಯವರನ್ನು ಇಲ್ಲಿಗೆ ಕರೆದುಕೊಂಡು ಬರುವಂತೆ ಪ್ರಯತ್ನ ಮಾಡಹತ್ತಿದ್ದಾರೆ. ಇಲ್ಲಿ ರಸಕ್ಕವರಿಗೆ ದುಡ್ಡು ಕೊಡಬೇಕಂತೆ! ದುಡ್ಡುಕೊಟ್ಟು ಉತ್ಸವ ಮಾಡಿಸಿಕೊಳ್ಳುವ ಸ್ವಾಮಿಗಳ ಶಿವಪೂಜಾಫಲವನ್ನು ಎಷ್ಟು ಹೇಳಿದರೂ ತೀರದಾಗಿದೆ. ಈ ಕಾಲವೇ ಅಂಥದು; ಕಾಲಕ್ಕೆ ತಕ್ಕಂತೆ ಸ್ವಾಮಿಗಳು: ಅಂದಮೇಲೆ ಕೇಳುವದೇನು? ಇಲ್ಲಿಯ ಯಾವ ದೈವದವರ ಅಭಿಪ್ರಾಯವಿಲ್ಲದೆ ಇಲ್ಲಿಯವರು ಹೇಗೆ ಕರೆಯಿಸುತ್ತಾರೋ ಅವರು ಹೇಗೆ ಬರುತ್ತಾರೋ ತಿಳಿಯದು. ದುಡ್ಡು ಬೇಕಾದ ಕೆಲಸವನ್ನು ಮಾಡಬಲ್ಲದು. ಆದುದರಿಂದ ಒಬ್ಬಿಬ್ಬರು ದುಡ್ಡಿನ ಮಾಯಾಜಾಲಕ್ಕೊಳಗಾಗಿದ್ದಾರೆ. ಈ ವಿಷಯದಲ್ಲಿ ಕರೆತರುವವರೂ ಬರುವವರೂ ಪೂರ್ಣ ಆಲೋಚಿಸಬೇಕಾಗಿ ಕೋರಿಕೆ.

ಓರ್ವ ವೀರಶೈವ, ಬಳ್ಳಾರಿ.

ದುಃಖಪ್ರದರ್ಶನ.

ತಾ|| 22-3-31 ರಲ್ಲಿ ಶ್ರೀ|| ಹೀರದ ಸೂಗಮ್ಮನವರ ಚೌಕಿಯಲ್ಲಿ ಮದ್ರಾಸು ವೀರಶೈವ ವಿದ್ಯಾವರ್ಧಕಸಂಘದ ಮ್ಯಾನೇಜಿಂಗ್ ಕಮಿಟಿ ಮಿಟಿಂಗಿನಲ್ಲಿ ಕೊಟ್ಟೂರು ಜಾಗಟಗೇರಿ ಮಿರಾಳ ಭಟ್ಟಿಮಠದ ವೇ|| ದೊಡ್ಡವೀರಪ್ಪಯ್ಯನವರು ತಾ|| 18-3-31 ರಲ್ಲಿ ಕೈಲಾಸವಾಸಿಗಳಾದ ಬಗ್ಗೆ ದುಃಖಪ್ರದರ್ಶನವು ಮಾಡಲ್ಪಟ್ಟಿತು. ವೇ|| ದೊಡ್ಡವೀರಪ್ಪಯ್ಯನವರು ಮದ್ರಾಸು ವೀರಶೈವ ವಿದ್ಯಾವರ್ಧಕಸಂಘ ಸ್ಥಾಪನೆಯ ಪೂರ್ವಪ್ರಯತ್ನದಲ್ಲಿ ಮುಂದಾಳುಗಳಾಗಿದ್ದರು. ಇವರ ಪ್ರಯತ್ನ ವಿಶೇಷವೇ ಸಂಘಸ್ಥಾಪನೆಯ ತಳಹದಿಯೆಂದು ಹೇಳಬಹುದು. ಇವರು ಸಂಘಕ್ಕೆ ಹೆಚ್ಚು ಧನಸಹಾಯವನ್ನು ಮಾಡಿರುವುದಲ್ಲದೆ ತಮ್ಮ ಪ್ರಾಂತದಲ್ಲಿಯೂ ಅನೇಕರಿಂದ ಧನವನ್ನು ಸಂಗ್ರಹಿಸಿ ಫಂಡನ್ನು ವೃದ್ಧಿಪಡಿಸಿದರು. ಇವರು ಯಾವಾಗಲೂ ಸಂಘದ ಕಾರ್ಯಕಾರಿಮಂಡಲದ ಮೆಂಬರರಾಗಿದ್ದು ತಮ್ಮ ಮನೆಗೆಲಸಗಳನ್ನು ಬದಿಗಿಟ್ಟು ಬಹಳಮಟ್ಟಿಗೆ ಎಲ್ಲಾ ಮಿಟಿಂಗುಗಳಿಗೂ ಹಾಜರಾಗುತ್ತಿದ್ದರಲ್ಲದೆ, ಕಮಿಟಿಯವರಲ್ಲಿ ಉಂಟಾಗುತ್ತಿದ್ದ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವುದರಲ್ಲಿ ಮುಖ್ಯ ಯಜಮಾನರಾಗಿದ್ದರು. ಇವರು ಈ ಸಂಘದ ಕಾರ್ಯದಲ್ಲಿ ಮಾತ್ರವಲ್ಲದೆ, ಎಷ್ಟೋ ಸಮಾಜದ ಮಹತ್ಕಾರ್ಯಗಳಲ್ಲಿ ಮುಂದಾಳುಗಳಾಗಿದ್ದರು. ಇವರಿಗೆ ವಯಸ್ಸು ಗಳಿತವಾಗುತ್ತ ಬಂದಿದ್ದರೂ ಪ್ರತಿಯೊಂದು ಕಾರ್ಯದಲ್ಲಿ ದಕ್ಷತೆಯಿಂದ ಮುಂದುವರಿಯುತ್ತಿದ್ದ ಇವರ ಮನಸ್ಸು ಮಾತ್ರ ತಾರುಣ್ಯದಲ್ಲಿಯೇ ಕಂಗೊಳಿಸುತ್ತಿದ್ದಿತು. ಇವರು ಬಳ್ಳಾರಿ ಜಿಲ್ಲೆಯ ವೀರಶೈವಮಂಡಲಿಗೆ ಮಾತ್ರವಲ್ಲದೆ ಇಡೀ ವೀರಶೈವ ಸಮಾಜಕ್ಕೇನೇ ಹಿತಚಿಂತಕರಾಗಿದ್ದರು. ಇಂತಹ ವ್ಯಕ್ತಿಯನ್ನು ಕಳೆದುಕೊಂಡದ್ದು, ವೀರಶೈವ ಸಮಾಜಕ್ಕೆ ಕೊರತೆಯುಂಟಾಯಿತಲ್ಲದೆ ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘಕ್ಕಂತೂ ದೊಡ್ಡ ಕೊರತೆಯುಂಟಾಯಿತು. ಸಂಘದವರು ಇಂತಹ ಉದಾರಪುರುಷರ ಮರಣಕ್ಕಾಗಿ ದುಃಖಪ್ರದರ್ಶನವನ್ನು ಮಾಡಿ, ಇವರ ಆತ್ಮಕ್ಕೂ ಇವರ ಕುಟುಂಬದವರಿಗೂ ಶಾಂತಿಯನ್ನುಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸಿದರು. ಮತ್ತು ಈ ವಿಷಯವನ್ನು ಇವರ ಕುಟುಂಬದವರಿಗೆ ತಿಳುಹಿಸುವಂತೆಯೂ ಕೀರ್ತಿಶೇಷರಾದ ಈ ದೊಡ್ಡವೀರಪ್ಪಯ್ಯನವರ ಭಾವಚಿತ್ರವನ್ನು ಸಂಘದ ಸ್ಕೂಲಿನಲ್ಲಿ ಸ್ಥಾಪಿಸುವಂತೆಯೂ ತೀರ್ಮಾನವನ್ನು ಮಾಡಿದರು. ವೇ|| ದೊಡ್ಡವೀರಪ್ಪಯ್ಯನವರು ತಮ್ಮ ಸ್ಥೂಲದೇಹವನ್ನು ತ್ಯಜಿಸಿದರೂ ಕೀರ್ತಿಶರೀರಿಗಳಾಗಿ ನಮ್ಮ ಕಣ್ಣು ಮುಂದೆ ವಿರಾಜಿಸುತ್ತಿರುವರಲ್ಲವೆ?

ವೃ|| ಅಡಗಿನ ಮುದ್ದೆಯಾ ದೊಡಲಿದೇಂ ಸ್ಥಿರಮಲ್ಲಮದೊಂದು ಕಾಲದೊಳ್ |
ಕೆಡುವುದೆ ಸತ್ಯಮೆಂದು ಬಗೆದಾಕ್ಷಣ ಭಂಗುರಮಪ್ಪ ದೇಹಮಂ ||
ಬಿಡದೆ ಸಮಾಜಸೇವೆಗೊಲಿದೀಯುತೆ ತಾಂ ಕೆಡದಿರ್ಪ ಕೀರ್ತಿಯಂ |
ಪಡೆದುದು ಜಾಣ್ಮೆಯಲ್ತೆ! ಕುಲಭೂಷನ ಜಾಗಟಗೇರಿ ಯಾರ್ಯನಾ ||

ಕೊಟ್ಟೆ ವಿರೂಪಾಕ್ಷಪ್ಪ,
ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘದ
ಕಾರ್ಯದರ್ಶಿ, ಬಳ್ಳಾರಿ.

ಮುಧೋಳ ಶ್ರೀ ಶಿವಲಿಂಗ ಸಂಸ್ಕೃತ ಪಾಠಶಾಲೆಯ ಸೂಟಿಯು.

ಇದೇ ಪ್ರಮೋದಸಂ|| ಫಾಲ್ಗುಣ ಬ|| ೩೦ ಗುರುವಾರ ದಿವಸದಿಂದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಬೇಸಿಗೆಯ ಕಾಲದ ಪ್ರಯುಕ್ತ ಒಂದು ತಿಂಗಳು ಮಾತ್ರ ರಜವನ್ನು ಕೊಟ್ಟಿರುವದರಿಂದ ಪಾಠಶಾಲಾಧ್ಯಾಪಕರಾದ ವೇ|| ವಿರುಪಾಕ್ಷಶಾಸ್ತ್ರಿ ವಂದಲಿ ದಾಸೋಹಮಠ ಇವರು ಸ್ವಗ್ರಾಮಕ್ಕೆ ಪ್ರಯಾಣಮಾಡಿದರು.

ಶ್ರೀಮಹಾಂತಚರವರ್ಯ,
ಬೃಹನ್ಮಠ ಸಂಸ್ಥಾನ ಮುಧೋಳ ಸಜಾಂ.

ಪ್ರಾಚೀನ ವ್ಯಾಖ್ಯಾನ ಪದ್ಧತಿ.

(ಕಳೆದ ವಾರದ ಶೇಷ.)

ರಾಜಾಕಾಲಸ್ಯಕಾರಣಂ, ಕಾಲಸ್ಯರಾಜಾಭೂತಾನಾಂ ಇತ್ಯಾದಿ ಸ್ಮೃತಿಪ್ರಮಾಣಗಳಂತೆ ಸಾರ್ವಭೌಮನಾದ ಶ್ರೀರಾಮಚಂದ್ರಸ್ವಾಮಿಯು ಕಾಲಪುರುಷನು. ಈತನು ತನ್ನ ಮನದನ್ನೆ ಸೀತಾದೇವಿಯನ್ನು ಕಾಡಿಗೆ ಕಳುಹಿಸಿರುವುದರಿಂದ ಈ ವಿಷಯದಲ್ಲಿ ದಯಾದಾಕ್ಷಿಣ್ಯಾದಿ ಗುಣರಹಿತನಾಗಿ ನಿರ್ಗುಣನಾಗಿರುತ್ತಾನೆ. ಹೀಗೆ ಅರ್ಥವಾಗುವ ಬ್ರಹ್ಮ, ರವಿ, ರಾಮರನ್ನು ವಿಷಯೀಕರಿಸಿ ಕವಿಯು ಮಂಗಳವನ್ನು ಮಾಡಿರುವನು. ಪೂರ್ವಕವಿಗಳೆಲ್ಲಾ ಮಂಗಳವನ್ನು ಈ ರೀತಿ ಮಾಡಿರುವುದು ಎಲ್ಲರಿಗೂ ಗೊತ್ತಾದ ವಿಷಯವೇ ಆಗಿರುತ್ತದೆ. ಶ್ರೀರಾಮಚಂದ್ರನು ಕಥಾನಾಯಕನಾದುದರಿಂದ ತತ್ಸಂಬಂಧವಾದ ಕಥಾಸೂಚನೆಯನ್ನು ಮುದ್ರಾಲಂಕಾರೋಕ್ತಿಯಿಂದ ವ್ಯಕ್ತಪಡಿಸಿರುವನು. ಈ ಬ್ರಹ್ಮ, ರವಿ, ರಾಮಪರವಾದ ಅರ್ಥಗಳು ಮಂಗಳಾಂತವಾಕ್ಯಪೂರ್ತಿಯಾಗಿ ನಿರಾತಂಕವಾಗಿಯೇ ಸ್ಪಷ್ಟವಾಗುತ್ತಲಿವೆ. ಈ ಮೂವರಿಗೂ ಒಂದೊಂದಾವರ್ತಿ ಭದ್ರಂ ಎರಳ್=ಎರಡಾವರ್ತಿ, ಭದ್ರಂಶುಭಂ, ಮೂರು ಮೂರಾವರ್ತಿ ಭದ್ರಂಶುಭಂ ಮಂಗಳಂ ಎಂದು ಘಂಟಾಘೋಷವಾಗಿ ಮಂಗಳವಾಚಕಗಳನ್ನು ಹೇಳಿ ಮಂಗಳಾಚರಣೆಯನ್ನು ಮಾಡಿರುವನು, ಆದರೂ ಉಪನಿಷನ್ಮಾರ್ಗದಲ್ಲಿ ಕವಿಯು ಹೇಳಿರುವುದರಿಂದ ಸಾಮಾನ್ಯರು ತಿಳಿಯಲಾರರೆಂದು ಯೋಚಿಸಿ ತನ್ನ ಮಂಗಳಾಚರಣಚಮತ್ಕಾರಕ್ಕೆ ತಾನೇ ಹಿಗ್ಗಿ ಹೀ ಹೀ ಎಂದು ನಗುವನು. ಮತ್ತು ಪಾಠಕರಿಗೆ ಮಂಗಳಾರ್ಥಸ್ಫುರಣೆಯಾಗುವುದಕ್ಕಾಗಿ ಹೀ, ಹೀ ಎಂಬದ್ಯೋತಕಪದವನ್ನು ಇಟ್ಟಿರುವನು. ಮಂಗಳವೆಂದರೇನು? ಪ್ರಾರಿಪ್ಸಿತಗ್ರಂಥವಿಘ್ನರೂಪವಾದ ನೋವು ಮಾಯುತಕ್ಕುದೆಂದೇ; ಆ ಫಲಿತಾಂಶವನ್ನೇ ನೋವುಮಾಯ್ವುದು, ಸಂದೆಯಮುಣಮಿಲ್ಲಂ ಎಂದು ಹೇಳಿರುವನು. ಈ ಸಿದ್ಧಾಂತಾರ್ಥವನ್ನೇ ದ್ವಿತೀಯಾಶ್ವಾಸಪ್ರಾರಂಭದಲ್ಲಿ ಚೈತನ್ಯರೂಪಂ ಮಾಯಾದೇವಿಯಂ ಮದುವೆನಿಂದ ಪದದೊಳ್ ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸಿ ತಾನು ಅದ್ವೈತಿಯೆಂದು ಪ್ರಕಟಗೊಳಿಸಿರುವನು. ಆದುದರಿಂದ ಓಪೋ ಕಾಲಪುರುಷಂಗೆ ಗುಣಮಣಮಿಲ್ಲಂಗಡ ಇತ್ಯಾದಿ ಗ್ರಂಥವಾಕ್ಯಗಳಿಗೆ ಇದೇ ಅರ್ಥವನ್ನು ಹೇಳಿಯೇ ತೀರಬೇಕಾಗಿರುವುದು. ಕಾಲಪುರುಷನೂ, ನಿರ್ಗುಣನೂ ಆದ ಪರಮಾತ್ಮನು ಅಥವಾ ಬ್ರಹ್ಮವು=ಅರಸು, ಇವನ ಮನೆ=ಶರೀರ, ಇದರ ಬಾಗಿಲ್=ಹೃದಯಕವಾಟ, ಇದನ್ನು ಮುಗಿಲ್ದೆರೆಯಂ=ಮುಗಿಲ್=ಮೋಡದಂತಿರುವ ಮಾಯೆ, ಇದರ ತೆರೆಯಿಂದ ಬಾಸಣಿಸಿರ್ದ್=ಮುಚ್ಚಿರುವರು. (ಘಂಸಕ್ಷಂಗಗನಮುಚ್ಛಿತಸ್ಯಗ್ರಹೀಣಮಾಯೇತಿ) ಇತ್ಯಾದಿ ಪ್ರಬೋಧಚಂದ್ರೋದಯ ಶ್ಲೋಕಾರ್ಥವನ್ನು ಅನುಸಂಧಾನಮಾಡಿ ನೋಡಿಕೊಳ್ಳತಕ್ಕದ್ದು.

ನಿಸ್ತೇಜಂಗಡ=ನಿಷ್ಕಲಂ, ನಿಷ್ಕ್ರಿಯಂ, ಶಾಂತಂ ಎಂಬ ಶ್ರುತಿವಾಕ್ಯದಂತೆ ನಿಸ್ತೇಜ ಅಥವಾ ಶಾಂತನಾಗಿಯೂ ಮಾಯೆಯಲ್ಲಿ ಪ್ರತಿಫಲಿಸಿ ಶರೀರವನ್ನು ಹೊಂದಿ ಜೀವಾತ್ಮವನ್ನು ಪಡೆದು ಜೀವಾತ್ಮನೆಂದು ಹೆಸರುಗೊಂಡು ಅನಾದ್ಯವಿದ್ಯಾವಾಸನೆಯಿಂದ ಸ್ವಸ್ವರೂಪಪ್ರಕಾಶಜ್ಞಾನರಹಿತನಾಗಿ "ಜಡತ್ವಪ್ರಿಯಮೋದತ್ವಧರ್ಮಾಃ ಕಾರಣದೇಹಗಾಃ" ಎಂಬ ಮಹಾವಾಕ್ಯರತ್ನಾವಳಿಯ ಪ್ರಮಾಣದಂತೆ ಶರೀರಭೂತವಾದ ಪ್ರಪಂಚದಲ್ಲಿ ಕಾರಣಗುಣವು ಚೈತನ್ಯದಲ್ಲಿಯೂ ಸಂಕ್ರಮಿಸಿದ ಕಾರಣ ಜಡಂಗಡ ಎಂಬ ಗ್ರಂಥೋಕ್ತಿಯಂತೆ ಜಡನಾಗುತ್ತಾನೆ. ಆದರೆ ಬ್ರಹ್ಮಾಭಿನ್ನನಾದ ಈ ಜೀವನು ಶರೀರದಲ್ಲಿ ಗುಡುಗಾಡುತ್ತಿರುವನು. ಜಡಪದಾರ್ಥಕ್ಕೆ ಸ್ವಸ್ವಸ್ವಯಂಭಾಸಮಾನತ್ವಧರ್ಮವು ಹೇಗಿಲ್ಲವೋ ಶರೀರಾಧಿಷ್ಠಿತನಾದ ಬ್ರಹ್ಮನಿಗೂ ಹಾಗೆ ಇಲ್ಲವಾಯಿತು. ಆದರೂ ಶರೀರಭೂತವಾದ ಈ ಪ್ರಪಂಚದಲ್ಲಿ "ಶ್ರೋತ್ರಾಮಂತಾ" ಇತ್ಯಾದಿ ಶ್ರುತಿಗಳ ಪ್ರಕಾರ ಇದ್ದುಕೊಂಡು ಓಡಾಡುತ್ತಿರುವನು. ಈತನೇ ಜೀವನು. ಇಂತಹ ಈತನಿಗೆ ಸ್ವಸ್ವರೂಪಪ್ರಕಾಶವೇ ಇಲ್ಲದೇ ಹೋಯಿತೇ? ಎಂದರೆ ಉಂಟು. ಕಾಲ ಬರಬೇಕು. ಈ ವರ್ಷಋತು ಸ್ವಸ್ವರೂಪಪ್ರಕಾಶ ಅಥವಾ ಮೋಕ್ಷಪ್ರಾಪ್ತಿಗೆ ತಕ್ಕದ್ದಲ್ಲ. ವರ್ಷಋತುವು ದಕ್ಷಿಣಾಯನಕ್ಕೆ ಸೇರಿದುದು. ಧೂಮಾದಿಮಾರ್ಗಕ್ಕೆ ಸೇರಿಹೋಗಿದೆ. ಆದುದರಿಂದ ಮುಕ್ತಿಗೆ ಪ್ರತಿಬಂಧಕವಾದ ಕಾಲವು. ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗುವ ಅರ್ಚಿರಾದಿ ಮಾರ್ಗಗಳು ಉತ್ತರಾಯಣದಲ್ಲಿ. ಆಗ ಮೋಕ್ಷವು ಸಿಕ್ಕುವ ದಾರಿಯುಂಟು. ಇದರಿಂದಲೇ ಈಗ ವೈಕುಂಠ ಕೈಲಾಸಗಳಿಗೆ ಪುಗಲಾರ್ಗಂ ಅಣತಿಯಲ್ಲ=ಪ್ರವೇಶಿಸಲಪ್ಪನೆಯಲ್ಲ. ಎಂದು "ಸೋಽಹಂ ಅಥವಾ ತತ್ವಮಸಿ" ವಾಕ್ಯಾರ್ಥಜ್ಞಾನಿಯಾದ ಬ್ರಹ್ಮಪ್ರಕಾರಾಂತರರೂಪಿಯಾದ ಜೀವಾತ್ಮನ ಗತಿಚಿಂತೆಯನ್ನು ಮಾಡಿರುತ್ತಾನೆ. ಬಳಿಕ ಬ್ರಹ್ಮನ ಸ್ವರೂಪಜ್ಞಾನಕ್ಕೆ ನಿರೋಧಕವಾದ ಮಾಯಾಚೇಷ್ಟೆಯನ್ನು ಮದದಿಬಾಸ್ಸೀರೆಯೊರ್ವಳ್ ಇತ್ಯಾದಿ ವಾಕ್ಯಗಳಿಂದ ಹೇಳಿರುವನು. ಶ್ರೀ ಕೃಷ್ಣಮಿಶ್ರರು ಪ್ರಬೋಧಚಂದ್ರೋದಯ ನಾಟಕ 27 ನೇ ಶ್ಲೋಕದ ವಾಕ್ಯದಲ್ಲಿ ರಾಜಾ-ಪ್ರಿಯೆ! "ಅವಿಚಾರಸಿದ್ಧೇಯಂ ವಾರವಿಲಾಸಿನೀವ ಮಾಯಾ ಅಸತೋಽಪಿ ಭಾವಾನುಪದರ್ಶಯಂತೀ ಪರಮ ಪುರುಷಂ ವಂಚಯತಿ" ಎಂದು ಶ್ರುತ್ಯರ್ಥವನ್ನು ಸಂಗ್ರಹಿಸಿ ಹೇಳಿರುವಂತೆ ಈ ವಾಕ್ಯಾರ್ಥವಿದೆ. ಬಾಸ್=ಆಕಾಶಬ್ಬವಾಚ್ಯನಾದಬ್ರಹ್ಮ ಇವನಸೀರೆ ಮಾಯೆ. ಈಕೆಯು ವಾರವಿಲಾಸಿನೀ ಚೇಷ್ಟೆಯನ್ನವಲಂಬಿಸಿ ಪರಮಪುರುಷನನ್ನು ವಂಚಿಸುತ್ತ ಚಂಚಲಾಪಾಂಗದಿಂದತ್ಮಮಿತ್ತಂ ನೋಳ್ಪಳ್ ಎಂದು ಹೇಳುತ್ತಾನೆ. ಆಕಾಶಶಬ್ದಕ್ಕೆ ಬ್ರಹ್ಮಸೂತ್ರ ಪ್ರಥಮಾಧ್ಯಾಯ ಪ್ರಥಮಪಾದ 23 ನೇ "ಆಕಾಶಸ್ತಲ್ಲಿಂಗಾತ್" ಎಂಬ ಸೂತ್ರಪ್ರಕಾರ ಬ್ರಹ್ಮನೆಂದು ಅರ್ಥವು ಹೇಳಲಾಗಿದೆ. ಈ ಮಾಯಾದೃಷ್ಟಿಯು ಬಿದ್ದಕ್ಷಣದಲ್ಲೇ ಮೋಕ್ಷವಿರೋಧಿಗಳಾದ ಕ್ರೋಧಾದಿಗಳು ಹುಟ್ಟಿ ಎದೆಯ ನಡುವೆಟ್ಟುಗಳಂತೆ ಅಚಲವಾಗಿಯೂ ಉನ್ನತೋನ್ನತವಾಗಿಯೂ ಇರುವ ಅಖಂಡ ಸ್ವಪ್ರಕಾಶ ಜ್ಞಾನದ ಮೇಲೆ ಸಿಡಿಲಾಳಿನಂತೆ ಬಂದೆರಗುಗುಂ ಎಂದು ನರಕಹೇತುಗಳನ್ನು ಸಮಾಲೋಚಿಸಿರುವನು. ಮತ್ತು "ಮಾಯಾಂತು ಪ್ರಕೃತಿಂ ವಿದ್ಯಾತ್ ಮಾಯಿನಂತು ಮಹೇಶ್ವರಂ" ಎನ್ನುವಂತೆ ಮಾಯಾವರಣವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಶ್ರೀರಾಮರಹಸ್ಯೋಪನಿಷತ್ತೇ ಮೊದಲಾದ ಶ್ರುತಿಗಳು "ನಿತ್ಯಂತ್ರಿಷವಣಸ್ನಾಯೀ ಪಯೋಮೂಲಫಲಾದಿಭುಕ್" ಎಂದು ವಿಧಿಸಿರುತ್ತವೆ. ಈ ಪ್ರಮಾಣವನ್ನನುಸರಿಸಿ "ಮೂಲಗೆ ಮರ್ದಂ ಕೊಂಡೊಯ್ವುದಕ್ಕಂ" ಕಂದಮೂಲಫಲಾದಿಗಳನ್ನು ತೆಗೆದುಕೊಂಡು ಬರಬೇಕು. ಏಕೆ? ವ್ರತಿಯಾದರೆ ಮಾಯೆಯನ್ನು ಗೆದ್ದು ಬ್ರಹ್ಮಜ್ಞಾನವನ್ನು ಹೊಂದಬಹುದು. (ಆಹಾರಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಧ್ರುವಾಸ್ಮೃತಿಃ) ಎಂಬಂತೆ ಬ್ರಹ್ಮನಿಗೆ ಮಾಯಾವರಣವು ದೋಷವಲ್ಲವೇ ಎಂದು ಕೇಳುವುದಾದರೆ ದೋಷವಲ್ಲವೆಂದು "ಕುತ ಮೇಂ" ಎಂಬ ವಾಕ್ಯದಿಂದ ತೋರ್ಪಡಿಸಿರುವನು ಇದರ ಅಭಿಪ್ರಾಯವು "ಪ್ರಜಾಪತಿರಕಾಮಯತ ಪ್ರಜಾಸ್ಸೃಜೇಯೇತಿ" ಎಂಬ ಶ್ರುತಿಯಂತೆ ಬ್ರಹ್ಮನಿಗೆ ವಿಶ್ವಸೃಷ್ಟಿ ಸಂಕಲ್ಪವಾದಾಗ ಮಾಯಾಸಂಕಲ್ಪವು ಅನಿವಾರ್ಯವೆಂದು ಹೇಳುವುದೇ ಆಗಿದೆ. ಬ್ರಹ್ಮನು ಸ್ವಸಂಕಲ್ಪದಂತೆ ಮಾಯಾವರಣವನ್ನು ಹೊಂದತಕ್ಕದ್ದು ಸುಗ್ಗಿಯೊಳುಂಡುದಕ್ಕೆ ಸಮಾನವು. ಈ ಮಾಯಾವರಣವನ್ನು ಹೊಂದಿದ ಮೇಲೆ ಸ್ವಸ್ವರೂಪಜ್ಞಾನವು ಮರೆಸಲ್ಪಟ್ಟು ಸ್ವರ್ಗ ನರಕಾದಿ ಫಲಗಳನ್ನುಂಟುಮಾಡುವ ಕರ್ಮವನ್ನು ಮಾಡಿ "ಹಸದ್ಭಿಃ ಕ್ರಿಯತೇಕರ್ಮ ರುದದ್ಭಿರನುಭೂಯತೇ" ಎಂಬಂತೆ ಜೀವನಾಹಾತ್ಮವನ್ನು ಪ್ರಾಪಂಚಿಕ ವ್ಯವಹಾರಸಮಯದಲ್ಲಿ ಕಾರುವನಕ್ಕು=ಹೊರಗೆಡಹುತ್ತ ಅನುಭವಿಸಬೇಕು. ಅಂದರೆ ಸಂಕಲ್ಪಾನುಗುಣಪ್ರಪಂಚರೂಪವಾಗಿ ಪರಿಣಮಿಸಿ ವ್ಯಾವಹಾರಿಕದಶಾವಸ್ಥೆಯನ್ನನುಭವಿಸಬೇಕು. ಇದರಿಂದ

ನನ್ನು ಕಟ್ಟಿದರು. ಹಲಾಲುಕೋರರೂ ಸಹ ಪ್ರತಿಫಲವಿಲ್ಲದೆ ಕೆಲಸಮಾಡುತ್ತಿರುವರೆಂದು ಕರಾಚಿ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರು ಹೇಳಿದರು. ಸ್ವರಾಜ್ಯವು ಸಮಾಪಿಸುತ್ತಿದೆ ಎಂಬುದು ಅವರಿಗೆ ಆನಂದದ ಸಂಗತಿಯಾಗಿದೆ.

ಮಹಾತ್ಮರ ಈ ಅರ್ಥಗರ್ಭಿತವಾದ ಭಾಷಣವನ್ನು ಎಲ್ಲರೂ ಶಾಂತಚಿತ್ತರಾಗಿ ಕೇಳಿ ಹೊರಟು ಹೋದರು. ಸಭೆಯು ಮುಗಿದನಂತರ ತಿಕ್ಕಾಟದಲ್ಲಿ ಶ್ರೀಯುತ ಚಾಯಿ.ತರಾಮ ಪಿಸನದಾಸ್ ಎಂಬೊಬ್ಬ ಸಿಂಧು ಹೈದರಾಬಾದ್ ಡಾಕ್ಟರರು ಉಸಿರುಕಟ್ಟಿ ಪ್ರಾಣಬಿಟ್ಟರು. ಅನೇಕ ಮಕ್ಕಳುಗಳು ತಪ್ಪಿಸಿಕೊಂಡು ಹೋಗಿದ್ದುವು. ಸ್ವಯಂಸೇವಕರು ಶಿಶುಗಳನ್ನು [illegible]ನರವರ ತಾಯಿಯರಿಗೆ ಒಪ್ಪಿಸಿದರು.

ಕರಾಚಿಯ ವಿದ್ಯಾರ್ಥಿಗಳ ಸಭೆಯಲ್ಲಿ ಅಧ್ಯಕ್ಷರಾದ ಪಂಡಿತ ಜವಾಹರಲಾಲರವರು ಮಾಡಿದ ಭಾಷಣದ ಸಾರಾಂಶ.

ನಮ್ಮ ದೇಶದಲ್ಲಿ ಇತ್ತೀಚೆಗೆ ನಡೆದ ಕೃತ್ಯ[illegible]ಯಿಂದ ನನ್ನ ಮನಸ್ಸು ಅಲ್ಲೋಲಕಲ್ಲೋಲ[illegible]ವಾಗಿದೆ. ಭಗತ್‌ಸಿಂಗ್ ಮತ್ತು ಆತನ ಸಂಗಡಿಗರನ್ನು [illegible]ಯಿಂದ ಉಳಿಯಿಸದೆಹೋದ ವಿಷಯವು ನಮ್ಮ [illegible]ರ್ಬಲ್ಯವನ್ನು ಪುನಃ ಸ್ಥಿತಿಪಥಕ್ಕೆ ತರುತ್ತಲಿದೆ. [illegible]ನ್ಪುರದಲ್ಲಿ ಭಯಂಕರ ಕೃತ್ಯಗಳು ನಡೆದು ಅನೇಕ [illegible]ನರು ಮೃತಪಟ್ಟಿರುವರೆಂಬುದು ತಿಳಿದುಬರುತ್ತದೆ. [illegible]ಗಲಭೆಯಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ [illegible]ಧ್ಯಕ್ಷರೂ, ನನ್ನ ಸ್ನೇಹಿತರೂ ಆದ ಪಂಡಿತ ಗಣೇಶ[illegible]ಶಂಕರ ವಿದ್ಯಾರ್ಥಿಗಳು ಮಡಿದರೆಂದು ಕೇಳುತ್ತೇನೆ. [illegible]ಕಾಂಗ್ರೆಸ್ ಪಕ್ಷದವನಾಗಿ ಹಿಂದೂಮಹಮ್ಮದೀಯರು [illegible]ಡಿದಾಡುವ ಸ್ಥಳಕ್ಕೆ ಹೋಗಿ ಜನರನ್ನು ಸಮಾಧಾನ[illegible]ಡಿಸುವಾಗ ಮೃತಪಟ್ಟಿರಬಹುದು. ಹೀಗೆ ಅವರಿಗೆ [illegible]ರಣ ಪ್ರಾಪ್ತವಾಗಿದ್ದರೆ ಮಿಕ್ಕ ಭಾರತೀಯರಿಗೆ ಅದ[illegible]ನ್ಯಾಯವಾಗಿದೆ. ಕಾನ್ಪುರದ ದುಃಖಕರವಾದ ಸಂ[illegible]ತಿಯನ್ನು ನೋಡಿದರೆ, ಎಂಥ ಸಮುದ್ದೇಶದಿಂದ ಹಿಂ[illegible]ರೂ ಅದು ಪ್ರತೀಕಾರಮಾಡಿ ನಮ್ಮಲ್ಲಿ ಯಾ[illegible]ಲಹಕ್ಕೆ ಅವಕಾಶ ಕೊಡುವುದು. ಈ ಕಲಹ[illegible]ದ ನಮ್ಮ ವಿರೋಧಿಗಳಿಗೆ ಅನುಕೂಲವಾಗುವುದು. [illegible]ನೆಯಿಂದ ಜಾತಿಯ ಪ್ರಶ್ನೆಯನ್ನಾಗಲೀ, ಮತ್ತಾವ [illegible]ಶ್ನೆಯನ್ನಾಗಲಿ ತೀರ್ಮಾನಿಸಲಾರೆವು. ರೋಗದ [illegible]ಮೂಲವನ್ನರಿಯುವುದರಿಂದ ರೋಗವು ನಾಶವಾಗಬ[illegible]ದು. ಈ ಪ್ರಶ್ನೆಗಳನ್ನು ನಿರ್ಣಯಿಸುವುದಕ್ಕೆ ತರು[illegible]ರು ಶ್ರಮವಹಿಸಿ ಕೆಲಸಮಾಡಬೇಕಾಗುವುದು. ತರು[illegible]ರು ಹೊಸಪರಿಸ್ಥಿತಿಯನ್ನು ತಿಳಿದುಕೊಂಡು ನಮ್ಮ [illegible]ನ್ನತಿಗೆ ಕುಂದಕಗಳಾಗಿರುವ ಕೆಡಕುಗಳನ್ನು [illegible]ದುಹಾಕಬೇಕು. ನೂತನ ರಾಜ್ಯಾಂಗವು ಸ್ಥಾಪನೆ[illegible]ಯಾಗುವವರೆಗೂ ಸ್ವಾತಂತ್ರ್ಯವು ಕೇವಲ ನುಡಿಯಲ್ಲಿ [illegible]ಮಾತ್ರವೇ ಇರುವುದು. ನೂತನ ರಾಜ್ಯಾಂಗದಿಂದ [illegible]ವಮಾನತ್ವಗಳೂ, ಪರಕೀಯ ಸುಲಿಗೆಯೂ, ಮತ[illegible]ಭ್ರಾಂತಿಯೂ ನಾಶವಾಗುವುವು. ಒಪ್ಪಂದದ ವಿಷಯ[illegible]ದಲ್ಲಿ ಅನೇಕ ಚರ್ಚೆಗಳು ನಡೆಯುತ್ತಿವೆ. ಆದರೆ [illegible]ಯಾವ ಸಜೀವರಾಷ್ಟ್ರವೂ ಸಂಪೂರ್ಣ ಸ್ವಾತಂತ್ರ್ಯವಿ[illegible]ಲ್ಲದ ಯಾವ ಒಪ್ಪಂದವನ್ನೂ ಒಪ್ಪಿಕೊಳ್ಳುವುದಿಲ್ಲ[illegible]ವು ತರುಣರು ಸ್ಪಷ್ಟ ತಿಳಿಯಿರಿ. ಆರ್ಥಿಕ ಮರ್ಥ[illegible]ತಂತ್ರ್ಯದಿಂದುಂಟಾದ ಒಪ್ಪಂದವು ಸ್ಥಿರವಾಗಿರಲಾ[illegible]. ಆಂಗ್ಲೇಯರೊಡನೆ ಸಹಕರಿಸುವುದರಿಂದ ಪೂ[illegible]ರ್ಣ ಸ್ವಾತಂತ್ರ್ಯವು ಲಭಿಸದಿದ್ದರೆ ಪುನಃ ಸಂಗ್ರಾಮ[illegible] ಹೂಡಬೇಕಾಗುವುದು. ಆದ್ದರಿಂದ ತರುಣರು ಪೂರ್ಣ ಸ್ವಾತಂತ್ರ್ಯ ಸಾಮಾಜಿಕ ಸಮಾನತೆ ಇವು[illegible] ವಿಷಯದಲ್ಲಿ ಎಷ್ಟೂ ಸಂದೇಹಿಸಲಾಗದು. ಇದು [illegible]ಮಧ್ಯಸ್ಥಿಕೆಗಳನ್ನು ಮಾಡುವ ಸಮಯವಲ್ಲ. ತರುಣ[illegible] ದೇಶಾಭಿಮಾನವನ್ನು ಕೃತಿಯಿಂದ ತೋರಿಸಬೇಕು. [illegible]ಯೇ ಜಗತ್ತಿನಲ್ಲಿ ಮಾನ್ಯವಾಗುವುದು.

ಕರಾಚಿಯಲ್ಲಿ [illegible]ಭಾಸ್ ಚಂದ್ರಬೋಸ್‌ರವರ ಭಾಷಣ.

[illegible]ಅಖಿಲ ಭಾರತ ನವಜೀವನ ಸಭೆಯ ಪ್ರೆಸಿಡೆಂಟ[illegible] ಸುಭಾಸ್ ಚಂದ್ರಬೋಸ್‌ರವರು ಭಾಷಣಮಾಡ[illegible] ಹಂದರದ ಒಳಭಾಗದಲ್ಲಿ ಕೆಂಪುಬಾವುಟಗಳು [illegible]ಡುತ್ತಿದ್ದುವು. "ಭರತಖಂಡದ ಸುಲಿಗೆದಾರರಾದ ಬ್ರಿಟಿಷರ ಮಿತ್ರ ಗಾಂಧಿ" "ಒಪ್ಪಂದಕ್ಕೂ ರೌಂಡ್‌ಟೇಬಲ್ ಸಮ್ಮೇಳನಕ್ಕೂ ಧಿಕ್ಕಾರವಿರಲಿ, ಚೀನಾಸಾವಿಯಟ್‌ಸರ್ಕಾರವೂ, ಮಾರ್ಕ್ಸ್ ಮತ್ತು ಲೆನಿನ್‌ರವರ ತತ್ವಗಳು ಚಿರಜೀವಿಗಳಾಗಿರಲಿ" ಎಂದು ಬಾವುಟಗಳ ಮೇಲೆ ಬರೆಯಲ್ಪಟ್ಟಿದ್ದಿತು. "ಸಾಮ್ರಾಜ್ಯಕ್ಕೆ ಧಿಕ್ಕಾರವಿರಲಿ" ಎಂದು ಧ್ವನಿಮಾಡುತ್ತಿದ್ದ ಸ್ವಯಂಸೇವಕರು ಕೆಂಪುವಸ್ತ್ರಗಳನ್ನು ಧರಿಸಿ ಶಿಸ್ತಿನಿಂದ ಕೆಲಸಮಾಡುತ್ತಿದ್ದರು. ಸ್ತ್ರೀಯರಿಂದಲೂ ಪುರುಷರಿಂದಲೂ ಹಂದರವು ತುಂಬಿ ಕಿಕ್ಕಿರಿದಿತ್ತು. ಅಲ್ಲಿ ಹಾಜರಿದ್ದವರಲ್ಲಿ ಶ್ರೀಮತಿ ಕಮಲಾನೆಹರು, ಶ್ರೀಯುತ ದೇವಿದಾಸ್‌ಗಾಂಧಿ, ಪಂಡಿತ ಗೋವಿಂದ ಕಾಂತಮಾಲವೀಯ, ಶ್ರೀಯುತ ಸಾಂಬಮೂರ್ತಿ ಮತ್ತು ಭಗತ್‌ಸಿಂಗರವರ ತಂದೆ ಇವರೇ ಮುಖ್ಯರಾಗಿದ್ದರು. ಸುಭಾಸ್ ಚಂದ್ರಬೋಸ್‌ರವರು ಕೆಂಪುಬಟ್ಟೆಯನ್ನು ಧರಿಸಿ ಮಾಡಿದ ಭಾಷಣದ ಸಾರಾಂಶವೇನೆಂದರೆ:—ಮಾತೃಭೂಮಿಯ ಸಲುವಾಗಿ ಎಷ್ಟು ಕಷ್ಟಬಂದರೂ ಸಹಿಸುವುದಕ್ಕೆ ತರುಣರು ಸಿದ್ಧರಾಗಿರಬೇಕು. ನ್ಯಾಯ, ಸಮತೆ, ಸ್ವಾತಂತ್ರ್ಯ, ಶಿಸ್ತು ಮತ್ತು ಪ್ರೀತಿ ಈ ತತ್ವಗಳನ್ನು ಅನುಸರಿಸಬೇಕು. ನಾವು ಹಿಂದುಸ್ಥಾನದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಸ್ಥಾಪಿಸಬೇಕು. ಸಂಪೂರ್ಣ ಸ್ವಾತಂತ್ರ್ಯವೆಂದರೆ ಆಂಗ್ಲೇಯರ ಸಂಬಂಧವನ್ನು ಕಿತ್ತುಹಾಕುವುದು. ರಕ್ಷಾಕರಚಗಳು ಸರ್ಕಾರದವರು ಉಳಿಸಿಕೊಳ್ಳುವ ಅಂಶಗಳು ಇಲ್ಲದ ಪೂರ್ಣಸ್ವರಾಜ್ಯವು ನಮ್ಮ ಗುರಿಯಾಗಿರಬೇಕು. ಭಗತ್‌ಸಿಂಗರಂಥ ವೀರರನ್ನು ಉಳಿಸದ ಒಪ್ಪಂದದ ಷರತ್ತುಗಳಿಂದ ಪ್ರಯೋಜನವೇನು? ಐರಿಷ್ ಜನರು ಆಂಗ್ಲೇಯರೊಡನೆ ಸಂಧಾನಮಾಡಿದಾಗ ಫಾಶಿ ಶಿಕ್ಷೆಗೆ ಗುರಿಯಾದವರನ್ನು ಬಿಡುಗಡೆಮಾಡಿಸಿದರು. ಇಡೀ ಹಿಂದುಸ್ಥಾನದಲ್ಲಿ ಒಪ್ಪಂದದಿಂದ ಸಮಾಧಾನವಾಗಿ ಶಾಂತಿಸ್ಥಾಪನೆಮಾಡಲು ಕ್ರಾಂತಿಕಾರಪಕ್ಷದ ಹಾಗೂ ಕೂಲಿಕಾರಪಕ್ಷದ ಎಲ್ಲ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ಕಾಂಗ್ರೆಸ್ಸಿನವರು ಒತ್ತಾಯಮಾಡಬೇಕಾಗಿತ್ತು. ಹಾಗೆ ಮಾಡಿದ್ದರೆ ಕಾಂಗ್ರೆಸ್‌ಸಂಸ್ಥೆಯು ಹಿಂಸಾಸಂಸ್ಥೆಯಾಗದೆ ಕ್ರಾಂತಿಕಾರ ಮತ್ತು ಕೂಲಿಕಾರ ಪಕ್ಷಗಳನ್ನೂ ಸಹ ತಮ್ಮ ಪಂಥಕ್ಕೆ ತೆಗೆದುಕೊಂಡ ಕೀರ್ತಿಗೆ ಪಾತ್ರವಾಗುತ್ತಿತ್ತು. ಗಾಂಧಿ ಇರ್ವಿನ್ ಒಪ್ಪಂದವು ಕೇವಲ ಅತೃಪ್ತಿಕರವೂ ನಿರಾಶಾಜನಕವೂ ಆಗಿದೆ. ಬಂಗಾಲ್ ಮತ್ತು ಬರ್ಮಾ ಪ್ರಾಂತಗಳ ಮೇಲೆ ಸಾರಲ್ಪಟ್ಟಿರುವ ಕಠಿಣ ಶಾಸನಗಳನ್ನು ಇನ್ನೂ ತೆಗೆದುಹಾಕಿಲ್ಲ. ಈಗ ಕೊಟ್ಟಿರಪಟ್ಟ ಜುಲ್ಮಾನೆಗಳನ್ನು ಸರ್ಕಾರದವರು ಹಿಂದಕ್ಕೆ ಕೊಡಬೇಕು. ಸ್ತ್ರೀಯರಮೇಲೆ ಪೋಲೀಸರು ಮಾಡಿದ ದೌರ್ಜನ್ಯವಿಚಾರಣೆಯ ಪ್ರಶ್ನೆಯನ್ನು ಬಿಡಬಾರದಾಗಿತ್ತು. ಸರ್ಕಾರದವರು ತಮ್ಮ ಪೋಲೀಸು ಮತ್ತು ಇತರ ಅಧಿಕಾರಿಗಳ ಪಕ್ಷವನ್ನು ಹಿಡಿದು ವಿಚಾರಣೆಮಾಡುವುದನ್ನು ತಿರಸ್ಕರಿಸದಂತೆ ಕಾಂಗ್ರೆಸ್ಸಿನವರು ಅಧಿಕಾರಗಳಿಗೆ ತಿಲಾಂಜಲಿಯನ್ನು ಕೊಟ್ಟು ರಾಜಕೀಯ ಯುದ್ಧದಲ್ಲಿ ಸೇರಿದ ಅಧಿಕಾರಿಗಳ ಹಾಗೂ ಪೆಷಾವರ್ ಪ್ರಾಂತದಲ್ಲಿ ತಮ್ಮ ದೇಶೀಯರನ್ನು ಗುಂಡಿನಿಂದ ಹೊಡೆಯುವುದಿಲ್ಲವೆಂದು ತಿರಸ್ಕರಿಸಿದ ಧೀರರಾದ ಘರವಾಲಿ ಶಿಪಾಯಿಗಳ ಪಕ್ಷವನ್ನು ಹಿಡಿದು ಸಮರ್ಥನೆಮಾಡಬೇಕಾಗಿತ್ತು."

ಶ್ರೀಯುತ ವಿಠ್ಠಲಭಾಯಿ ಪಟೇಲರ ಸಂದೇಶ.

ಚಿಕಿತ್ಸೆಗೋಸ್ಕರ ವಿಯನ್ನಾಕ್ಕೆ ಹೋಗಿರುವ ಲೆಜಿಸ್ಲೇಟಿವ್ ಅಸೆಂಬ್ಲಿಯ ಪ್ರೆಸಿಡೆಂಟರಾಗಿದ್ದ ಶ್ರೀಯುತ ವಿಠ್ಠಲಭಾಯಿಪಟೇಲ್‌ರವರು ಕರಾಚಿ ಕಾಂಗ್ರೆಸ್ ಪ್ರೆಸಿಡೆಂಟರವರಿಗೆ ಕಳುಹಿಸಿರುವ ತಂತಿ ಏನೆಂದರೆ:—"ಗಾಂಧಿ ಇರ್ವಿನ್ ಒಪ್ಪಂದವು ಕೇವಲ ನಿರಾಶಾಜನಕವಾಗಿದೆ. ಈ ಒಪ್ಪಂದದಿಂದ ಹಿಂದೂಸ್ಥಾನದ ರಾಜಕೀಯಸ್ಥಿತಿಯು ಅಭಿವೃದ್ಧಿಯನ್ನು ಹೊಂದುವುದಕ್ಕೆ ಬದಲಾಗಿ ಕುಂಠಿತವಾಗುವುದಾದರೆ ಕಾಂಗ್ರೆಸ್ಸಿನಲ್ಲಿ ಬೇರಕ್ಕೆ ಹಾನಿಕರವಾದ ಅನೈಕಮತ್ಯವುಂಟಾಗಬಹುದು. ಮಹಾತ್ಮ ಗಾಂಧಿಯವರು ಬ್ರಿಟಿಷ್ ಸರ್ಕಾರದವರಿಂದ ಸಂಪೂರ್ಣಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕಿಂತ ಕಡಿಮೆಯಾದ ಯಾವ ರಾಜಕೀಯ ಸುಧಾರಣೆಗಳನ್ನೂ ಅಂಗೀಕರಿಸದಂತೆ ಕಾಂಗ್ರೆಸ್ ವತಿಯಿಂದ ಸ್ಪಷ್ಟವಾಗಿ ಅಪ್ಪಣೆ ಮಾಡಬೇಕು.

[ಮೂರನೆಯ ಪುಟದಿಂದ ಮುಂದುವರಿದುದು.]

ಶಾಂತವಾದ ಸಾಗರಮಧ್ಯದಲ್ಲಿ ಬಡಬಾಗ್ನಿಯು ಹುದುಗಿಕೊಂಡಿರುವಂತೆ ಲಾಹೋರ್ ಪಟ್ಟಣಿಗರು ಕೋಪೋದ್ರಿಕ್ತರಾಗಿದ್ದರೂ ಮರ್ದಿತರೆಗಳೂ, ದುಃಖಭಾಷಣಗಳೂ ಅವಕಾಶ ಕೊಡದೆ ಗಂಭೀರವಾದ ಮುಖಮುದ್ರೆಯುಳ್ಳವರಾಗಿ 50,000 ಸಾವಿರ ಜನರು ಬೊಕ್ಕದಲಿಯಿಂದ ಮಿಂಟೋಪಾರ್ಕಿನಲ್ಲಿ ಸೇರಿ ಈ ವೀರರ ಆತ್ಮಕ್ಕೆ ಶಾಂತಿಯನ್ನೀಯಲೆಂದು ದಯಾಘನನಾದ ಪರಮೇಶ್ವರನನ್ನು ಧ್ಯಾನಿಸಿದರು.

ಭಗತ್‌ಸಿಂಗರ ತಾಯಿತಂದೆಗಳೂ, ರಾಜಗುರುವಿನ ತಾಯಿ ಮತ್ತು ಸಹೋದರಿಯೂ ಬಂದು ವೇದಿಕೆಯಮೇಲೆ ನಿಂತುಕೊಳ್ಳುತ್ತಲೇ ಸಭಿಕರೆಲ್ಲರೂ "ಭಗತ್‌ಸಿಂಗ್ ಜಿಂದಾಬಾದ್ ಸುಖದೇವ ಜಿಂದಾಬಾದ್, ರಾಜಗುರುಜಿಂದಾಬಾದ್" ಎಂದು ಕೂಗಿದ ಧ್ವನಿಯು ದಶದಿಕ್ಕುಗಳನ್ನೂ ಭೇದಿಸಿತು. ಆಗ ಕೆಲ ಸ್ತ್ರೀ ಪುರುಷರು ಮೂರ್ಛಿತರಾದರು. ಈ ವಧೆಯನ್ನು ನಿಷೇಧಿಸಿ ಸಭಿಕರೆಲ್ಲರೂ ಕೋಪದಿಂದ ಗರ್ಜಿಸಿದರು.

ಅದ್ಭುತ ಮೆರವಣಿಗೆ.

24 ನೆಯ ತಾರೀಖು ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಈ ಮೂವರ ಬೂದಿ ಮತ್ತು ಮೂಳೆಗಳನ್ನು ಅಲಂಕರಿಸಲ್ಪಟ್ಟಿದ್ದ ಸಿದಿಗೆಯ ಮೇಲಿಟ್ಟು ಪ್ರಚಂಡ ಮೆರವಣಿಗೆಯು ಹೊರಟಿತು. ಎರಡು ಮೈಲಿಯುದ್ದಕ್ಕೂ ಜನರು ಕಿಕ್ಕಿರಿದು ನಿಂತಿದ್ದರು. ಎಲ್ಲರೂ ಕರಿಯ ಬಟ್ಟೆಗಳನ್ನೇ ಧರಿಸಿದ್ದರು. ಕಾಂಗ್ರೆಸ್ಸಿನವರು ಯಾವ ಧ್ವನಿಯನ್ನೂ ಮಾಡದೆ ಶಾಂತವಾಗಿ ಹೋಗಬೇಕೆಂದು ಅನುಜ್ಞೆ ಮಾಡಿದ್ದರು. ಆದರೆ ಅಲ್ಲಿ ನೆರೆದಿದ್ದ ಸ್ತ್ರೀಯರು ಈ ಅನುಜ್ಞೆಯನ್ನುಲ್ಲಂಘಿಸಿ ಭಗತ್‌ಸಿಂಗ್ ಜಿಂದಾಬಾದ್ ಎಂದು ಹೇಳಲು ಪ್ರಾರಂಭಿಸಿದರು. ಲಕ್ಷೋಪಲಕ್ಷ ಜನರು ಈ ಮೆರವಣಿಗೆಯಲ್ಲಿ ಭಾಗಿಗಳಾಗಿದ್ದರೂ ನೆಮ್ಮದಿಗೆ ಭಂಗಬರುವ ಯಾವ ಕೆಲಸವನ್ನೂ ಮಾಡಲಿಲ್ಲ.

ಈ ಮೂವರ ತಾಯಿಯವರು ಉತ್ಸವದಲ್ಲಿ ಪ್ರಧಾನವ್ಯಕ್ತಿಗಳಾಗಿದ್ದರು. ಒಬ್ಬ ಇಂಗ್ಲಿಷ್ ಸ್ತ್ರೀಯಳು ಹಿಂದೂಗಳಂತೆ ಸೀರೆಯನ್ನುಟ್ಟುಕೊಂಡು ಮೆರವಣಿಗೆಗೆ ಬಂದು ಭಗತಸಿಂಗರ ತಾಯಿಯ ಕಾಲಿಗೆ ಬಿದ್ದು ಅವರಿಗೆ ಮುದ್ದಿಟ್ಟಳು. ಮೆರವಣಿಗೆಯು ರಾವಿನದಿಯನ್ನು ತಲ್ಪಿದಮೇಲೆ ಅಲ್ಲಿ ಒಂದು ಸಭೆ ಸೇರಿತು. ಶ್ರೀಯುತ ಮೌಲಾನಾ ಅನಂದಿಸೋರ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದರು. ಲಾಲಾಲಜಪತರಾಯರು ಮೃತಪಟ್ಟಾಗ ಜನರು ಸೇರಿದಂತೆಯೇ ಈಗಲೂ ಸೇರಿದ್ದರು. ಅಧ್ಯಕ್ಷರು ಸರ್ಕಾರದವರ ವರ್ತನವನ್ನು ಖಂಡಿಸಿ ಠರಾವುಮಾಡಿದರು. ಅನಂತರ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅನಂತರ ಟ್ರಿಬ್ಯೂನ್ ಪತ್ರಿಕೆಯವರು ಆ ದಿವಸ ಆಫೀಸನ್ನು ಬಂದುಮಾಡದೆ ಹೋದುದಕ್ಕಾಗಿ ಕೆಲವು ತರುಣರು ಆಫೀಸಿಗೆ ನುಗ್ಗಿ ಗಾಜಿನ ಕಿಟಿಕಿ ಹಲಗೆಗಳನ್ನು ಒಡೆದು ಕೆಲವು ಪತ್ರಿಕೆಗಳನ್ನು ಸುಟ್ಟು ಮುದ್ರಣ ಯಂತ್ರವನ್ನು ಕೆಡಿಸಿಹೋದರೆಂದು ವರ್ತಮಾನವಿದೆ. ವಧೆಯ ವರ್ತಮಾನವನ್ನು ಕೇಳಿದಕೂಡಲೆ ಬೊಂಬಾಯಿ, ಮದರಾಸು, ಕಲ್ಕತ್ತ, ಅಲಹಾಬಾದ್ ಮೊದಲಾದ ಪಟ್ಟಣಗಳಲ್ಲಿ ಹರತಾಳವನ್ನಾಚರಿಸಿದರು.

ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರರ ಸಭಾ ಪರಿತ್ಯಾಗ.

ಈ ವರ್ತಮಾನವು ಹೊಸದಿಲ್ಲಿಗೆ ತಲ್ಪಿದಕೂಡಲೆ ನ್ಯಾಷನಲ್ ಲಿಸ್ಟ್ ಪಾರ್ಟಿಯ ಮುಖಂಡರಾದ ಶ್ರೀಯುತ ದಿವಾನ್ ಬಹದ್ದೂರ್ ಟಿ. ರಂಗಾಚಾರ್‌ರವರು ಸರ್ಕಾರದವರ ವರ್ತನವನ್ನು ಖಂಡಿಸಿ ಒಂದು ವಾಖ್ಯಾನವನ್ನು ಹಾಜರ್ಮಾಡಿ ತಮ್ಮ ಪಾರ್ಟಿಯ ಮೆಂಬರರೊಡನೆ ಹೊರಗೆ ಹೋಗಲು ಸಿದ್ಧರಾದರು. ಆಗ ಸರ್ಕಾರಿ ಮೆಂಬರ್ ಮಿ|| ಕ್ರೆರಾರ್ ಎಂಬವರು ಇವರು ತಪ್ಪಿತಸ್ಥರು ಇವರಿಗೆ ಶಿಕ್ಷೆಯಾದುದು ನ್ಯಾಯಸಮ್ಮತವಾದುದು ಆದಕಾರಣ ಮೆಂಬರರು ಹೊರಗೆ ಹೋಗುವುದು ಯುಕ್ತವಾದುದಲ್ಲವೆಂದು ಹೇಳಿದರು. ಆಗ ಮಿ|| ಅಮರದತ್ತ ಎಂಬವರು ನಿಮ್ಮ ಕಡೆಯಿಂದ ಆ ಪುರಾಣ ಕೇಳಲಿಕ್ಕೆ ಬಂದಿಲ್ಲ. ನಾವು ಈಗ ಹೊರಗೆ ಹೋಗಲೇಬೇಕೆಂದರು. ಅನಂತರ ಸರ್ ಜಾರ್ಜ್‌ರೇನಿಯವರು ಮೆಂಬರರು ಇಂಥ ಪದ್ಧತಿಯನ್ನು ಹಾಕುವುದು ಸರಿಯಲ್ಲ; ಈಗ ಸಭೆಯ ಮುಂದೆ ಮಹತ್ವದ ವಿಷಯಗಳು ಚರ್ಚೆಗೆ ಬಂದಿವೆ. ಇವುಗಳನ್ನು ಬಿಟ್ಟು ಹೋದರೆ ನಿಮ್ಮನ್ನು ಕಳುಹಿಸಿರುವ ಓಟರರಿಗೆ ಅನ್ಯಾಯಮಾಡಿದ ಹಾಗಾಗುವುದು ಎಂದರು. ಆಗ ಆ ಮೆಂಬರರು ನಮ್ಮ ಕರ್ತವ್ಯ ನಮಗೆ ಗೊತ್ತಿದೆ. ನಿಮ್ಮ ಕಡೆಯಿಂದ ಧರ್ಮಬೋಧೆ ಕೇಳಲಿಕ್ಕೆ ಬಂದಿಲ್ಲವೆಂದು ಹೊರಗೆಹೋದರು. ಆ ಪಾರ್ಟಿಮೆಂಬರರ ಪೈಕಿ ಸರ್ ಹರಿಸಿಂಗಗೌರ್‌ರವರು ಸ್ವಲ್ಪಹೊತ್ತು ಕುಳಿತಿದ್ದು ಅನಂತರ ಅವರೂ ಹೊರಗೆ ಬಂದರು. ಆಗ ಇಂಡಿಪೆಂಡೆಂಟ್ ಮೆಂಬರರ ಪೈಕಿ ಮಿ|| ಎಸ್. ಸಿ. ಮಿತ್ರ, ಮಿ|| ಲಾಹಿರಿ ಚೌಧರಿ, ಮತ್ತು ಸಾದಿಕ್‌ಹುಸೇನರೂ ಹೊರಗೆ ಬಂದರು.

ಈ ಮೂವರನ್ನು ಗಲ್ಲಿಗೆ ಹಾಕಿದ ವಿಷಯದಲ್ಲಿ ಭಾರತೀಯ ಮುಖಂಡರ ಅಭಿಪ್ರಾಯಗಳು.

ಮಹಾತ್ಮ ಗಾಂಧಿ—"ಭಗತ್‌ಸಿಂಗ್ ಮತ್ತು ಅವರ ಸಂಗಡಿಗರನ್ನು ಸರ್ಕಾರದವರು ವಧಮಾಡಿದ್ದರಿಂದ ಅವರಿಗೆ ವೀರಸ್ವರ್ಗವು ಪ್ರಾಪ್ತಿಯಾಯಿತು. ಅವರು ಕೀರ್ತಿಕಿರೀಟವನ್ನು ಧರಿಸಿದರು. ನಮ್ಮ ದೇಶದಲ್ಲಿ ಸಹಸ್ರಾರು ಜನರು ತಮ್ಮ ಬಂಧುಬಳಗದವರು ಮೃತಪಟ್ಟರೆ ವ್ಯಸನಪಡುವಂತೆ ಚಿಂತಾಕ್ರಾಂತರಾಗಿದ್ದಾರೆ. ಅವರನ್ನು ಪ್ರಶಂಸಿಸುವ ಪ್ರತಿಯೊಂದು ಮಾತಿಗೂ ನನ್ನ ಅನುಮತಿಯುಂಟು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ನಮ್ಮ ದೇಶದ ಯುವಕರು ಅವರ ಉದಾಹರಣೆಯನ್ನು ಅನುಕರಿಸಬಾರದೆಂದು ಎಚ್ಚರಿಸುತ್ತೇನೆ. ನಾವೆಲ್ಲರೂ ಅವರ ಅದ್ಭುತ ಸ್ವಾರ್ಥತ್ಯಾಗ, ಕಾರ್ಯಪಟುತ್ವ, ಮತ್ತು ಹಿಮ್ಮೆಟ್ಟದ ಧೈರ್ಯ ಇವುಗಳನ್ನು ಅನುಕರಣ ಮಾಡೋಣ. ಇವರು ಈ ಗುಣಾತಿಶಯಗಳನ್ನು ವಿನಿಯೋಗಿಸಿದಂತೆ ನಾವು ವಿನಿಯೋಗಿಸಬಾರದು. ನಮ್ಮ ಸ್ವಾತಂತ್ರ್ಯಸಾಧನೆಯು ಮಾರ್ಗವು ಕೊಲೆಯ ಮಾರ್ಗವಲ್ಲ. ಕ್ರಾಂತಿಕಾರಕ ಪಕ್ಷವನ್ನು ಒಲಿಸಿಕೊಳ್ಳುವ ಸಂಯೋಗವನ್ನು ಸರ್ಕಾರದವರು ಕಳೆದುಕೊಂಡರು. ಒಪ್ಪಂದದ ದೃಷ್ಟಿಯಿಂದಲಾದರೂ ಮರಣಶಿಕ್ಷೆಯನ್ನು ಮುಂದಕ್ಕೆ ಹಾಕಬೇಕಾಗಿತ್ತು. ಒಪ್ಪಂದವನ್ನು ಸರ್ಕಾರದವರು ಬಹುಮಟ್ಟಿಗೆ ನೋಯಿಸಿದ್ದಾರೆ. ಪ್ರಜಾಭಿಪ್ರಾಯವನ್ನು ಧಿಕ್ಕರಿಸಿದ್ದಾರೆಂಬುದೂ ವ್ಯಕ್ತವಾಗುತ್ತದೆ. ತಮ್ಮಲ್ಲಿರುವ ಪಶುಬಲವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸುತ್ತಿರುವರೆಂಬುದೂ, ಅವರಿಗೆ ತಾವು ಆಡುವ ಮಾತಿನಲ್ಲಿ ವಿಶ್ವಾಸವಿಲ್ಲವೆಂಬುದೂ, ಅಧಿಕಾರವನ್ನು ಸ್ವಲ್ಪವೂ ಬಿಟ್ಟುಕೊಡಲು ಇಷ್ಟವಿಲ್ಲವೆಂಬುದೂ ಕಣ್ಣಿಡಿಯುಂತೆ ಸ್ಪಷ್ಟಪಡುತ್ತದೆ. ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನವರು ತಮ್ಮ ಪಥವನ್ನು ಬಿಟ್ಟು ಎಳ್ಳಷ್ಟೂ ಕದಲಬಾರದು. ಸಿಟ್ಟಿಗೆಬ್ಬಿಸುವ ಎಷ್ಟೋ ಪ್ರಸಂಗಗಳಿದ್ದರೂ, ಒಪ್ಪಂದದಂತೆ ನಡೆದು ಅದರ ಫಲಿತಾಂಶವನ್ನು ನಿರೀಕ್ಷಿಸೋಣ. ಈ ಮರಣದಂಡನೆಯನ್ನು ವಜಾಮಾಡುವುದು ನಮ್ಮ ಶಕ್ತಿಯಲ್ಲಿ ಒಂದಲ್ಲವೆಂಬುದನ್ನು ಜ್ಞಾಪಕದಲ್ಲಿಡೋಣ. ಅದ್ದರಿಂದ ಒಪ್ಪಂದ ಭಂಗಪಡಿಸಿದರೆಂದು ಅವರ ಮೇಲೆ ಆಕ್ಷೇಪಣೆ ಮಾಡುವಹಾಗಿಲ್ಲ. ಯಾವ ಸ್ವಾತಂತ್ರ್ಯಸಾಧನೆಗಾಗಿ ಭಗತ್‌ಸಿಂಗ್ ಮೊದಲಾದವರು ಮಡಿದರೋ ಆ ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ಸರ್ಕಾರದವರು ಮಾಡಿದ ಅನ್ಯಾಯದಿಂದ ನಮ್ಮ ಶಕ್ತಿಯು ಹೆಚ್ಚಿತು. ರೋಷದ ಭರದಲ್ಲಿ ಈ ಅವಕಾಶವನ್ನು ಹಾಳುಮಾಡದೆ ಇರೋಣ. ಸಾರ್ವತ್ರಿಕವಾಗಿ ಹರತಾಳವು ಆಚರಿಸಲ್ಪಡಬೇಕು. ಮೌನದಿಂದಲೂ ಶಾಂತಿಯಿಂದಲೂ ಮೆರವಣಿಗೆ ಮಾಡಬೇಕು. ಈ ಸಂದರ್ಭದಲ್ಲಿ ನಾವು ಆತ್ಮಶುದ್ಧಿಯನ್ನು ಮಾಡಿಕೊಂಡು ದೇಶದ ಕಾರ್ಯಕ್ಕೆ ಎಲ್ಲರೂ ಸಿದ್ಧರಾಗೋಣ."

ಜವಾಹರಲಾಲನೆಹರೂ—"ನಾನು ಏನಾದರೂ ಮಾತನಾಡಿ ಅವರ ಮರಣದಂಡನೆಯನ್ನು ತಪ್ಪಿಸುವ ಅವಕಾಶವನ್ನು ಹಾಳುಮಾಡೇನಲ್ಲ ಎಂದು ಉಕ್ಕಿಬರುತ್ತಿದ್ದ ನನ್ನ ಅಭಿಪ್ರಾಯಗಳನ್ನು ಅದಿಮಿಕೊಂಡಿದ್ದೆನು. ಈಗ ಎಲ್ಲಾ ಆಗಿಹೋಯಿತು. ನಾವೆಲ್ಲರೂ ಅವರನ್ನು ಉಳಿಸಿಕೊಳ್ಳಲಾರದೆ ಹೋದೆವು. ನಮಗೆ ಅವರು ಎಷ್ಟು ಪ್ರಿಯರಾಗಿದ್ದರು. ಅವರ ಉದಾತ್ತಧೈರ್ಯವೂ ಮತ್ತು ಸಾರ್ಥತ್ಯಾಗವೂ ಇಂಡಿಯಾದೇಶದ ಯುವಕರಿಗೆಲ್ಲಾ ಸ್ಫೂರ್ತಿದಾಯಕವಾಗಿದೆ. ಇಂದು ಭಾರತದಲ್ಲಿ ತನ್ನ ಪ್ರೀತಿಪಾತ್ರರಾದ ಮಕ್ಕಳನ್ನು ಕೂಡ ಕೊಲೆಯಿಂದ ಯಾರೂ ತಪ್ಪಿಸಲಾರರು. ಭರತಖಂಡದಲ್ಲೆಲ್ಲ ಹರತಾಳಗಳೂ ಶೋಕಮೆರವಣಿಗೆಗಳೂ ನಡೆದಿವೆ. ನಮ್ಮ ದೌರ್ಬಲ್ಯಕ್ಕೆ ವ್ಯಸನವಾಗುವುದು. ಆದರೆ ಭಗತ್‌ಸಿಂಗರ ಸ್ವಾಭಿಮಾನವು ನಮ್ಮನ್ನು ಹುರುಪುಗೊಳಿಸುವುದು. ಒಪ್ಪಂದಕ್ಕೂ ನಮಗೂ ವಿಘ್ನಕಾರಿಯಾಗಿ ಭಗತ್‌ಸಿಂಗರ ಶವವಿರುವುದನ್ನು ಮರೆತು ಮುಂದಿನ ಕಾರ್ಯದಲ್ಲಿ ಪ್ರಸಕ್ತರಾಗೋಣ."

ಶ್ರೀಯುತ ಸೇನಗುಪ್ತರು—"ಪರಮೇಶ್ವರನು ಈ ವೀರರ ಆತ್ಮಕ್ಕೆ ಶಾಂತಿಯನ್ನುಂಟುಮಾಡಲಿ. ಶಾಂತಿಮಾರ್ಗದಿಂದಲೇ ಭಾರತವರ್ಷವು ಸ್ವಾತಂತ್ರ್ಯವನ್ನು ಸಾಧಿಸಲಿ. ಇದೇ ಜನಾಂಗವೇ ಪ್ರಾರ್ಥಿಸಿದರೂ ಸರ್ಕಾರಕ್ಕೆ ದಯೆಬರಲಿಲ್ಲ. ಹಳೆಯ ಅಧಿಕಾರ ಮನೋವೃತ್ತಿಯೇ ಪ್ರವರ್ಧಮಾನಸ್ಥಿತಿಯಲ್ಲಿದೆ. ನಮ್ಮ ಐಕಮತ್ಯವನ್ನು ನಾಶಮಾಡಲು ಶತ್ರುಗಳು ಹಾಕಿರುವ ಬಲೆಯಲ್ಲಿ ನಾವು ಬೀಳದಂತೆ ಜಾಗರೂಕರಾಗಿರಬೇಕು. ಮಹಾತ್ಮ ಗಾಂಧಿಯವರ ಅಪ್ರತಿಮ ನಾಯಕತ್ವಕ್ಕೆ ಭಂಗ ತಂದು ನಮ್ಮಲ್ಲಿ ಅನೈಕಮತ್ಯವನ್ನುಂಟುಮಾಡಬೇಕೆಂದಿಚ್ಛಿಸುವ ಶತ್ರುವಿಗೆ ನಿರಾಶೆಯನ್ನುಂಟುಮಾಡೋಣ. ಈ ವಧೆಯಿಂದ ಕರಾಚಿ ಕಾಂಗ್ರೆಸ್ಸಿನ ಮೇಲೆ ದುಷ್ಪರಿಣಾಮವಾಗಬಹುದೆಂಬ ಭೀತಿಯಿದೆ."

ಪಂಡಿತ ಮದನಮೋಹನ ಮಾಲವೀಯರು—"ನನ್ನ ದುಃಖವು ಮೇರೆದಪ್ಪಿದೆ; ನಾನು ಮಾತನಾಡುವುದೂ ಸಹ ಸಾಧ್ಯವಿಲ್ಲ."

ಸರ್ದಾರ ವಲ್ಲಭಭಾಯಿಪಟೇಲ್—ಪಾರ್ಟೀ ಸರ್ದಾರ್ ಮಾಡದೆ, ಸರಿಯಾದ ಸಾಕ್ಷ್ಯವಿಲ್ಲದೆ ಯಾರನ್ನೂ ಗಲ್ಲಿಗೆ ಹಾಕುವುದಿಲ್ಲವೆಂಬ ಇಂಗ್ಲಿಷರ ಮಾತು ಸುಳ್ಳಾಯಿತು. ಯಾರಾದರೂ ದಾರಿತಪ್ಪಿ ಹೋದರೆ ಅವರನ್ನು ಶಿಕ್ಷಿಸಬಹುದು. ಮರಣದಂಡನೆಯನ್ನು ವಿಧಿಸಬಾರದು.

ದಿವಾನ್ ಬಹದ್ದೂರ್ ಟಿ. ರಂಗಾಚಾರ್—"ಸರ್ಕಾರವು ಪ್ರಜಾಭಿಪ್ರಾಯವನ್ನು ಧಿಕ್ಕರಿಸಿತು. ಇದರ ಪರಿಣಾಮವೇನಾಗುವುದೋ ಹೇಳಲಸದಳವಾಗಿದೆ. ಸಂಧಿಗೆ ಅವಶ್ಯಕವಾದ ಶಾಂತಿವಾತಾವರಣವು ಇಲ್ಲದುದಕ್ಕಾಗಿ ತುಂಬಾ ವಿಷಾದಿಸುತ್ತೇನೆ."

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಉತ್ತಮವಾದ ಕಾಗದ! **ಅಂದವಾದ ಮುದ್ರಣ!!**

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಒಂದರಿಂದ ಸಾವಿರದವರೆಗಿನ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3.

ಸಚಿತ್ರ ಕರ್ನಾಟಕ ಗುಣಿತಾಕ್ಷರ ಬೋಧೆ:—ಗುಣಿತಾಕ್ಷರವನ್ನು ಸುಲಭರೀತಿಯಲ್ಲಿ ಕಲಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0.

ಸಿಲಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು.

ಪ್ರಕಾಶಕರು:—**ಜಿ. ರೇವಣ್ಣ ಅಂಡ್ ಬ್ರದರ್**
1 ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಬೆಂಗಳೂರು ಡಿ||

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಶಂಕಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪೃಶ್ನಿಕಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯ ವರೆಗೂ ಬೆಳಿಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ४೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ४೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ४ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇನೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಿಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿಯುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆ ಹುಳುಗಳ ಕಡರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಕ್ಷಿ ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

☞ ಟಿಕ್ಚರ್, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[34] **ಮಲೇರಿಯಾನ ಕಂಪೆನಿ**, ನಂಬ್ರ 21 (ಹಂಪನಕಟ್ಟೆ) **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧-೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನಿ ಜೌಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಘೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[46] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಅಖಿಲಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿ.

ಈ ತಿಂಗಳು 27ನೆಯ ತಾರೀಖಿನ ದಿವಸ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಸೇರಿತು. ಶ್ರೀ ಜವಾಹರಲಾಲರವರು ಕಳೆದ ವರ್ಷದ ವರದಿಯನ್ನು ಓದಿದರು. ಅನಂತರ ಅಜ್ಮೀರದ ಶ್ರೀಯುತ ಗೌರೀಶಂಕರ ಭಾರ್ಗವರವರು ಲಾಹೋರಿನ ಭಗತ್‌ಸಿಂಗ್ ಮತ್ತು ಅವರ ಮಿತ್ರರಾದ ರಾಜಗುರು, ಸುಖದೇವರನ್ನು ಗಲ್ಲಿಗೆ ಹಾಕಿದ ದುಃಖಪ್ರದರ್ಶನದ ಬಗ್ಗೆ 15 ನಿಮಿಷಗಳು ಸಭೆಯನ್ನು ಬರಖಾಸ್ತು ಮಾಡಬೇಕೆಂದು ಠರಾವನ್ನು ತಂದರು. ಮೌಲಾನಾ ಜಫರ್ ಅಲಿಯವರು ಅನುಮೋದಿಸಿದರು. ಆ ಠರಾವಿನಲ್ಲಿದ್ದುದೇನೆಂದರೆ:— ಭಗತ್ಸಿಂಗರು ಮಹಾತ್ಮ ಗಾಂಧಿಯವರಿಗೆ ಎರಡನೆಯವರಾದ ಮಹಾವ್ಯಕ್ತಿ. ಇಡೀ ಹಿಂದೂಸ್ಥಾನವನ್ನೇ ತಮ್ಮಕಡೆಗೆ ಆಕರ್ಷಣ ಮಾಡಿದ್ದರು. ಈ ಸಮಯದಲ್ಲಿ ಅವರನ್ನು ಗಲ್ಲಿಗೆ ಹಾಕಿದುದರಿಂದ ಕಾಂಗ್ರೆಸ್ಸಿನಲ್ಲಿ ದೊಡ್ಡ ಒಡಕುಂಟಾಯಿತು. ಹಳೆಯದೇ ಒಂದು ಗುಂಪು; ತರುಣರದೇ ಒಂದು ಗುಂಪು. ಈ ಒಡಕು ಹುಟ್ಟಿಸಬೇಕೆಂದು ಮಾಡಿದ ಹಂಚಿಕೆಯು ಸಫಲವಾಗುವುದಿಲ್ಲ. ತರುಣರು ಕಾಂಗ್ರೆಸ್ ಬಿಟ್ಟು ಹೋಗುವುದಿಲ್ಲ. ಪಂಡಿತ ಜವಾಹರಲಾಲರು ಸಭೆಯನ್ನು 5 ನಿಮಿಷಗಳವರೆಗೆ ಬರಖಾಸ್ತು ಮಾಡಬೇಕೆಂದು ಸೂಚಿಸಿದ ಪ್ರಕಾರ ಪ್ರತಿಮತವಿಲ್ಲದೆ ಠರಾವು ಅಂಗೀಕರಿಸಲ್ಪಟ್ಟಿತು.

ರಾಜಕೀಯ ಖೈದಿಗಳಬಗ್ಗೆ ತಯಾರಿಸಲ್ಪಟ್ಟಿರುವ ಠರಾವ್ ಏನೆಂದರೆ:—ಪಂಜಾಬಿನ ಮಾರ್ಷಲ್ ಲಾ ಖೈದಿಗಳು, ಎರಡನೆಯ ಲಾಹೋರ್ ಫಿತೂರಿ ಖೈದಿಗಳು, ಮಲಬಾರ್ ಮೊಪ್ಲದೊಂಬಿ ಖೈದಿಗಳು, ಕಕೋರಿದೊಂಬಿ ಖೈದಿಗಳು, ಗಡೀಪಾರಾದವರು, ವಿಚಾರಣೆಯಿಲ್ಲದೆ ಬಂದೀಖಾನೆಯಲ್ಲಿರುವವರು, ಫ್ರಾಂಟಿಯರ್ ಖೈದಿಗಳೂ, ಬಂಗಾಳಾ ಮತ್ತು ಪಂಜಾಬಿನ ಗುಮಾನಿ ಖೈದಿಗಳೂ, ಬಬ್ಬರ್ ಅಕಾಲಿಗಳೂ, ಗರ್ವಾಲಿ ಸಿಪಾಯಿಗಳೂ, ಅಹಮದ್ ನಗರದ ರೈಲ್ ದರೋಡೆಖೈದಿಗಳೂ, ಲಾತೋಖೈದಿಗಳೂ, ಈ ದೇಶಕ್ಕೆ ಬರಲು ಅಪ್ಪಣೆಯಿಲ್ಲದೆ ಪರದೇಶದಲ್ಲಿರುವವರೂ ಇವರನ್ನೆಲ್ಲಾ ಬಿಡುಗಡೆ ಮಾಡಬೇಕೆಂದು ಕಾಂಗ್ರೆಸ್ ಸಭೆಯು ಒತ್ತಿ ಹೇಳುತ್ತದೆ.

ಮಹಾತ್ಮಾ ಗಾಂಧಿಯವರು ಪತ್ರಿಕಾಪ್ರತಿನಿಧಿಗಳ ಸಮಕ್ಷಮ ಹೇಳಿದ್ದೇನೆಂದರೆ:—

"ಭಗತ್‌ಸಿಂಗರ ಜೀವನವು ಬಹು ಅಪರೂಪ ಜೀವನವೆಂದು ಕೇಳಿದ್ದೇನೆ. ಅವರು ಬಹು ಉದಾರಿಗಳೆಂದೂ, ಕೇವಲ ನಿಸ್ಪೃಹ ಭಾವದವರೆಂದೂ, ಅದ್ಭುತ ಸ್ವಾರ್ಥತ್ಯಾಗ ಮಾಡುವ ಸ್ವಭಾವವುಳ್ಳವರೆಂದೂ, ಸೇವೆಮಾಡತಕ್ಕ ಚೈತನ್ಯವುಳ್ಳವರೆಂದೂ ಅನೇಕರು ಹೇಳಿ ಅವರ ಪ್ರಾಣವನ್ನುಳಿಸಬೇಕೆಂದು ಕೇಳಿದರು. ಆದ್ದರಿಂದ ಅವರ ಪ್ರಾಣವನ್ನುಳಿಸುವುದು ಅಧಿಕವಾದ ಸ್ವಂತಪ್ರಯೋಜನವೆಂದು ಭಾವಿಸುತ್ತಿದ್ದೆನು. ಕ್ರಾಂತಿಕಾರರ ಪ್ರಾಣಕ್ಕೆ ನನ್ನ ಪ್ರಾಣವನ್ನು ಕೊಡಲು ಸಿದ್ಧನಾಗಿದ್ದೇನೆ. ಹಾಗೆ ಮಾಡುವುದರಿಂದ ಹಿಂಸಾಮಯವಾದ ಕ್ರಾಂತಿತತ್ವವನ್ನು ಅಹಿಂಸಾತತ್ವಕ್ಕೆ ಬದಲಾಯಿಸಬಹುದು. ನನ್ನ ರೀತಿಯಲ್ಲಿ ನಾನೂ ಕ್ರಾಂತಿಕಾರಕನೆಂದು ಹೇಳುತ್ತೇನೆ.

ಸರ್ಕಾರದವರು ದೊಡ್ಡ ತಪ್ಪುಮಾಡಿದರು. ಒಪ್ಪಂದಕ್ಕೆ ಭಂಗ ತರುವುದಕ್ಕೆ ತಮ್ಮ ಕೈಲಾದುದನ್ನು ಮಾಡಿದರು.

ಭಗತ್‌ಸಿಂಗರ ವಧೆಯಿಂದ ನಿಮ್ಮ ಅಭಿಪ್ರಾಯವೇನಾದರೂ ಬದಲಾವಣೆಯಾಗಿದೆಯೋ? ಎಂದು ಪತ್ರಿಕಾಪ್ರತಿನಿಧಿಯು ಪ್ರಶ್ನೆಮಾಡಿದನು. ಆಗ ಮಹಾತ್ಮರು—ಸಿಟ್ಟಿಗೆಬ್ಬಿಸುವ ಎಂಥ ಕಾರ್ಯಮಾಡಿದರೂ ನನ್ನ ಅಭಿಪ್ರಾಯವು ಬದಲಾವಣೆಯಾಗಲಾರದು. ಭಗತ್‌ಸಿಂಗ್ ಮತ್ತು ಅವರ ಮಿತ್ರರ ವಧೆಯನ್ನು ನಿಲ್ಲಿಸಬೇಕೆಂದು ಒಪ್ಪಂದದ ಷರತ್ತಾಗಿರಲಿಲ್ಲ. ಒಪ್ಪಂದದಿಂದ ಸರ್ಕಾರದ ಹೃದಯಪರಿವರ್ತನೆಯಾಗಿದೆಯೆಂದು ನಾನು ಎಲ್ಲಿಯೂ ಹೇಳಿಲ್ಲ.

ಪ್ರತಿನಿಧಿ—ವೈಸ್‌ರಾಯರು ಭಗತ್‌ಸಿಂಗರ ಮರಣದ ದಂಡನೆಯನ್ನು ತಪ್ಪಿಸಿ ಶಿಕ್ಷೆಯನ್ನು ಕೊಡಬೇಕೆಂದು ವ್ಯಕ್ತಿಶಃ ಅಭಿಪ್ರಾಯ ಪಟ್ಟಿದ್ದರೆ?

ಗಾಂಧಿಜಿ—ನಾನು ಅದನ್ನು ಹೇಳಲಾರೆನು. ಹಾಗಿದ್ದರೆ ಭಗವತ್‌ಸಿಂಗ್ ಮತ್ತು ಅವರ ಸ್ನೇಹಿತರನ್ನು ಉಳಿಸುವುದಕ್ಕೆ ನನ್ನ ಪ್ರಾಣವನ್ನು ಕೊಡುತ್ತಿದ್ದೆನು.

ಪ್ರತಿನಿಧಿ—ಭಗವತ್‌ಸಿಂಗರ ಪ್ರಾಣಕ್ಕಿಂತಲೂ ನಿಮ್ಮ ಪ್ರಾಣವು ರಾಷ್ಟ್ರಕ್ಕೆ ಬೆಲೆಯುಳ್ಳದ್ದಲ್ಲವೇ?

ಗಾಂಧಿಜಿ—ನನ್ನ ಪ್ರಾಣವು ಬೆಲೆಯುಳ್ಳದ್ದಾದರೂ ಭಗವತ್ಸಿಂಗರ ಸಲುವಾಗಿ ನನ್ನ ಪ್ರಾಣವನ್ನು ಕೊಟ್ಟಿದ್ದರೆ ಭಗವತ್ಸಿಂಗರೂ ಅವರ ಅನುಯಾಯಿಗಳೂ ಕ್ರಾಂತಿಮಾರ್ಗವನ್ನು ಬಿಟ್ಟು ಅಹಿಂಸಾಮಾರ್ಗವನ್ನವಲಂಬಿಸುತ್ತಿದ್ದರು. ಆದರಿಂದ ಅಹಿಂಸಾತತ್ವವು ವೃದ್ಧಿಯಾಗುತ್ತಿತ್ತು.

ಪ್ರತಿನಿಧಿ—ಸತ್ಯಾಗ್ರಹಿಗಳನ್ನೂ ಕ್ರಾಂತಿಕಾರರನ್ನೂ ಪ್ರತ್ಯೇಕಿಸಬೇಕೆಂದು ಕಾಂಗ್ರೆಸ್ ಕೂಡುವುದಕ್ಕೆ ಮುಂಚೆ ಭಗವತ್‌ಸಿಂಗರನ್ನು ವಧಾಮಾಡಿದರಲ್ಲವೆ?

ಗಾಂಧಿಜಿ—ಜಗತ್ತಿನಲ್ಲಿ ಅನೇಕ ಕೃತಿಗಳು ನಡೆಯುತ್ತವೆ. ಯಾವ ಆಕ್ಷೇಪಣೆಯೂ ಇಲ್ಲದ ಸಾಕ್ಷ್ಯವು ಬರುವವರೆಗೂ ಯಾವ[illegible]ನ್ನೂ ನಾನು ನಂಬಲಾರೆನು.

ವಿಜ್ಞಾಪನೆ.

ಕರ್ನಾಟಕಾಯುರ್ವೇದ ವಿದ್ಯಾಪೀಠವೆಂಬುದು ನಾಮಮಾತ್ರಾವಶಿಷ್ಟವಾಗಿದೆಯೇ ವಿನಾ ಅದರಲ್ಲಿ ಕೆಲಸವೇನೂ ನಡೆಯಲು ಅನುಕೂಲವಿಲ್ಲ. ಕರ್ನಾಟಕವೈದ್ಯರ ಜ್ಞಾನಾಭಿವೃದ್ಧಿಗೆ ತಕ್ಕ ಪ್ರಯತ್ನಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ನಿಖಿಲ ಭಾರತಾಯುರ್ವೇದ ವಿದ್ಯಾಪೀಠದಲ್ಲಿ ನಡೆಯುವ ಪರೀಕ್ಷೆಗಳೆಲ್ಲವೂ ಸಂಸ್ಕೃತದಲ್ಲಿ ಮಾತ್ರವೇ ಇವೆ. ಸಂಸ್ಕೃತ ತಿಳಿಯದ ಕರ್ನಾಟಕ ವೈದ್ಯರಿಗೆ ತಕ್ಕಂತೆ ಅವುಗಳನ್ನೇ ಸರಿಮಾಡಿಕೊಂಡು ಕರ್ನಾಟಕಾಯುರ್ವೇದ ವಿದ್ಯಾಪೀಠವನ್ನು ಬಿಟ್ಟೇ ಬಿಡುವುದೆ? ಅಥವಾ ಕನ್ನಡಿಗರಿಗೆ ಕನ್ನಡ ಭಾಷೆಯಲ್ಲೇ ಸಂಪೂರ್ಣ ಪ್ರಜ್ಞೆಯುಂಟಾಗುವಂತೆ ಮಾಡಬೇಕಾದ ಪ್ರಯತ್ನಗಳನ್ನು ಮಾಡುವುದೇ ಎಂಬ ಆಲೋಚನೆಗಳು ಅನೇಕ ಮುಖಂಡರಿಂದ ಬರುತ್ತಲಿವೆ.

ಈ ವಿಚಾರಗಳಲ್ಲಿ ಮಂಗಳೂರ ಸಮ್ಮೇಳನದಲ್ಲಿ ಸಾಕಾದಷ್ಟು ಚರ್ಚೆಗಳು ನಡೆದು ಕರ್ನಾಟಕ ವಿದ್ಯಾಪೀಠದ ಪಾಠಕ್ರಮಗಳನ್ನು ನಿರ್ಣಯಿಸುವ ಒಂದು ಸಬ್ ಕಮಿಟಿಯು ಏರ್ಪಡಿಸಲ್ಪಟ್ಟಿತು. ಆ ಕಮಿಟಿಯಿಂದ ಮಂಜೂರಾದ ಕಾಪಿಯನ್ನು ಪ್ರಿಂಟುಮಾಡಿಸುವುದಕ್ಕಾಗಿ, ಧಾರವಾಡದ ಸಮ್ಮೇಳನದಲ್ಲಿ ನಡೆದ ತೀರ್ಮಾನದಂತೆ ಶ್ರೀಯುತ ಮಹಿಷಿ ರಾಮರಾಯರವರಿಗೆ ಕಳುಹಿಸಿ ಒಂದು ವರ್ಷದ ಮೇಲಾದರೂ ಅದರ ವಿಚಾರವೇ ತಿಳಿಯದಾಗಿದೆ.

ಪರೀಕ್ಷೆಗೆ ಕೂಡಲು ಕುತೂಹಲಿಗಳಾದವರಿಂದ ಬರುವ ಕಾಗದಗಳಿಗೆ ಉತ್ತರಬರೆಯಲು ಕೂಡ ತಪ್ಪಿದೆ. ಈ ವಿಚಾರದಲ್ಲೇನು ಮಾಡಬಹುದೆಂಬ ಬಗ್ಗೆ ಮಹಾಸಮ್ಮೇಳನಾಂಗವಾಗಿ ನಡೆದ ೮ ನೇ ಕರ್ನಾಟಕ ಸಮ್ಮೇಳನದ ಕಡೆಯಲ್ಲಿ ಚರ್ಚೆ ನಡೆಸಬೇಕೆಂಬ ಆಲೋಚನೆಯಿತ್ತು. ಆದರೆ ಅನೇಕ ವೈದ್ಯರಿಗೆ ವಿರಾಮವಿರಲಿಲ್ಲವೆಂದು ತಿಳಿದುಬಂದುದರಿಂದ ಸಾಧ್ಯವಾಗಲಿಲ್ಲ. ಸದ್ಯದಲ್ಲೇ ಒಂದು ಮೀಟಿಂಗು ಮಾಡಿ ಕಾರ್ಯವು ಹೇಗೆ ನಡೆಯಬೇಕೆಂಬ ಬಗ್ಗೆ ಸಿದ್ಧಾಂತ ಮಾಡುವುದು ಅತ್ಯವಶ್ಯಕವಾಗಿದೆ. ಬರುವ ಏಪ್ರಿಲ್ ತಾ|| 28 ರ ಸುಮಾರಿನಲ್ಲಿ ಮೈಸೂರಲ್ಲಿ ಸಭೆ ಸೇರುವುದು ಅನುಕೂಲವೆಂದು ನನಗೆ ತೋರುತ್ತದೆ. ಅದೇ ಸ್ಥಳವು ಸಹ ತಮಗೂ ಸರಿಹೋದೀತೆಂದು ನಿರೀಕ್ಷಿಸುತ್ತೇನೆ. ಹಾಗಿಲ್ಲದೆ ಸರ್ವರಿಗೂ ಅನುಕೂಲವಾದ ಕಾಲ ಮತ್ತು ಸ್ಥಳವನ್ನು ಪ್ರತ್ಯೇಕವಾಗಿ ತಾವು ಸೂಚಿಸುವುದಾದರೆ ಸರ್ವಸಮ್ಮತವಾದಲ್ಲಿ ಅಂಗೀಕರಿಸಲ್ಪಡುವುದು.

ಆಯುರ್ವೇದಾಭಿವೃದ್ಧಿಯಲ್ಲಿ ಬದ್ಧಾದರರಾದ ತಾವು ಈ ಪ್ರಾರ್ಥನೆಯನ್ನು ನಿರಾಕರಿಸದೆ ಎಲ್ಲರೊಡನೆ ಒಟ್ಟು ಸೇರಿ ಆಲೋಚಿಸಲು ಸಹಾಯಕರಾದೀರೆಂದು ಹಾರೈಸುತ್ತೇನೆ. ತಮ್ಮ ಪ್ರತ್ಯುತ್ತರವನ್ನೇ ಎದುರುನೋಡುತ್ತಿರುವ,

ತಾ|| 15-3-1931 ತಮ್ಮ ವಿಧೇಯ,

ವೈ. ಲಕ್ಷ್ಮೀನರಸಿಂಹಶಾಸ್ತ್ರಿ, ಆ|| ಸೆಕ್ರೆಟರಿ.
ಕರ್ನಾಟಕಾಯುರ್ವೇದ ವಿದ್ಯಾಪೀಠದ ಆಫೀಸು,
1485 ಕೃಷ್ಣರಾಜಮೊಹಲ್ಲಾ, ಮೈಸೂರು.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರಿ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರುಕೂಡ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿಸಿಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾ

(Registered Trade Mark)

ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗದು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ.ಪಿ. ೦-೪-೦
ಡಬ್ಬ ಒಂದಕ್ಕೆ ಕ್ರಯ ರೂ. ೩-೮-೦. ವಿ.ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[37] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ ನೇ ಏಪ್ರಿಲ್ ೧೯೩೧ [ಸಂಚಿಕೆ ೪೯

ಕೈ|| ವೇ|| ಜಾಗಟಿಗೇರಿ ದೊಡ್ಡವೀರಪ್ಪನವರ ಪುಣ್ಯತಿಥಿ ಸಮಾರಂಭ ಕೊಟ್ಟೂರು.

ಬಳ್ಳಾರಿ ಡಿಸ್ಟ್ರಿಕ್ಟ್ ಕೊಟ್ಟೂರು ಪಟ್ಟಣ ನಿವಾಸಿಗಳಾದ ವೇ|| ಮಿ|| ಮ|| ದೊಡ್ಡವೀರಪ್ಪನವರು ಕಳೆದ ತಿಂಗಳು 18 ನೆಯ ತಾರೀಖಿನ ದಿವಸ ಶಿವಾಧೀನರಾದ ವಿಷಯವು ಸಮಸ್ತ ಜನರಿಗೂ ವೇದ್ಯವಾಗಿದೆ. "ಶರಣರ ಇರವು ಮರಣದಲ್ಲಿ" ಎಂಬ ವಾಣ್ನುಡಿಯಂತೆ ಈ ಗುಣೋದಯರು ತಾವು ಮರಣಹೊಂದುವ ದಿವಸ ಪ್ರಾತಃಕಾಲ ಸ್ನಾನ ಶಿವಾರ್ಚನಾಕ್ರಿಯೆಗಳನ್ನು ತೀರಿಸಿಕೊಂಡು ೧೧|| ಘಂಟೆಯವರೆಗೂ ತಮ್ಮ ಅಂಗಡಿಯ ಜಿನ್ನುಗಳ ಮತ್ತು ಜವಿಳಿನ ಮೊದಲಾದವುಗಳ ವ್ಯವಸ್ಥೆಯನ್ನು ಮಾಡಿಕೊಂಡು ಸ್ವಗೃಹಕ್ಕೆ ಬಂದು ಆನಂದದಿಂದ ಕುಳಿತುಕೊಂಡು ಮನೆಗೆ ಬಂದ ಅತಿಥಿಗಳನ್ನು ಕುರಿತು ನೀವು ಸ್ನಾನಮಾಡಿಕೊಡಲಿ ನಾವೂ ಸ್ನಾನಮಾಡುತ್ತೇವೆ. ಎಂದು ಹೇಳಿ ಅವರನ್ನು ಸ್ನಾನಕ್ಕೆ ಕಳುಹಿಸಿ ಕೆಲವು ಗೃಹಸ್ಥರೊಡನೆ ಮಾತುಗಳನ್ನಾಡುತ್ತಿರುವ ಸಮಯದಲ್ಲಿಯೇ ಪರಂಧಾಮವನ್ನೈದಿದರು. ಈ ತರಹದ ಮರಣವು ಪರಿಶುದ್ಧಾತ್ಮರಾದ ಸತ್ಪುರುಷರಿಗಲ್ಲದೆ ಬೇರೆಯವರಿಗೆಂದೂ ಉಂಟಾಗಲಾರದೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಈ ಮಹೋದಯರಲ್ಲಿದ್ದ ಬುದ್ಧಿಚಾತುರ್ಯ, ವಾಗ್ವೈಖರಿ, ಮತಪ್ರೇಮಲಹರಿ, ದಯಾರ್ದ್ರತೆ ಮೊದಲಾದ ಅಸಾಧಾರಣಗುಣಗಳನ್ನು ಎಷ್ಟು ವರ್ಣಿಸಿದರೂ ತೀರದಾಗಿದೆ. ಇವರಲ್ಲಿದ್ದ ಅದ್ಭುತಗುಣಗಳನ್ನು ಪರಿಶೀಲಿಸಿದರೆ ಇವರು ದೊಡ್ಡ ರಾಜರಾಗಿಯೇ ಜನಿಸಬೇಕಾಗಿತ್ತು. ಯಾವ ಕಾರಣದಿಂದಲೋ ಆಗರ್ಭ ಶ್ರೀಮಂತ ಮಾಹೇಶ್ವರ ಮನೆತನದಲ್ಲಿ ಜನ್ಮವೆತ್ತಿದರು. ಅಸ್ತು! ಈ ಮಹೋದಯರ ಆತ್ಮಶಾಂತ್ಯರ್ಥವಾಗಿ ಸದರಿಯವರ ಅನುಜರಾದ ವೇ|| ಸಣ್ಣವೀರಪ್ಪಯ್ಯನವರು ವೇ|| ಚನ್ನವೀರಪ್ಪಯ್ಯನವರು ೧೧ ದಿವಸಗಳವರೆಗೂ ಮಹಾರುದ್ರಾಭಿಷೇಕವನ್ನು ಶ್ರೀ|| ಷ|| ಬ್ರ|| ಜಮಖಂಡಿ ಮುತ್ತಿನಕಂಥಾಮಠದ ಶ್ರೀ ಚರಮೂರ್ತಿಸ್ವಾಮಿಗಳವರ ಆಚಾರ್ಯತ್ವದಿಂದಲೂ, ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾನ್ ವೇ|| ಪಂ|| ಶಂಕರಶಾಸ್ತ್ರಿಗಳವರ ಪೌರೋಹಿತ್ಯದಿಂದಲೂ ನೆರವೇರಿಸಿದರು ತಾ|| ೧-೪-೩೧ ನೇ ಬುಧವಾರ ದಿವಸ ಮಹಾಗಣಾರಾಧನೆಯು ಬಹು ಸಂಭ್ರಮದಿಂದ ನೆರವೇರಿತು. ಈ ಸಮಾರಂಭಕ್ಕೋಸ್ಕರ ವೇ|| ಪಂ|| ಉಜ್ಜಯಿನೀಮಠದ ಮರುಳಸಿದ್ಧಶಾಸ್ತ್ರಿಗಳು ವೇ|| ಪಂ|| ನಾಗೇನೂರು ಬೃಹನ್ಮಠದ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೊದಲಾದ ವಿದ್ವಾಂಸರೂ, ಇನ್ನೂ ಅನೇಕ ಸ್ಥಳ ಪರಸ್ಥಳದ ಮಠಗಳ ಪ್ರಸಿದ್ಧ ಮಾಹೇಶ್ವರರೂ ಉಜ್ಜಂಗಿದುರ್ಗದ ಮ|| ರಾ|| ಸಿದ್ಧನಗೌಡರೇ ಮೊದಲಾದ ಸುಪ್ರಸಿದ್ಧ ಭಕ್ತರೂ ಪುರಪ್ರಮುಖರೂ ಶ್ರೀಮಂತರೂ ಸಹ ಆಗಮಿಸಿದ್ದರು. ಸಾವಿರಾರು ಜನಗಳವರೆಗೂ ಅನ್ನಸಂತರ್ಪಣೆಯು ನೆರವೇರಿತು. ಜಂಗಮ ಸಮೂಹಕ್ಕೆಲ್ಲಾ ಭೂರಿದಕ್ಷಿಣೆಯು ಸಮರ್ಪಿಸಲ್ಪಟ್ಟಿತು. ಈ ಸಮಯದಲ್ಲಿ ಜಗದಾಚಾರ್ಯರ ಹೆಸರಿನಿಂದ ಪ್ರಭಾಪೋಷಣಕ್ಕೋಸ್ಕರ ೫ ರೂಪಾಯಿಗಳು ಸಮರ್ಪಿಸಲ್ಪಟ್ಟವು. ಮಹಾಗಣಾರಾಧನೆಗಾಗಿ ಆಗಮಿಸಿದ ಯಾವತ್ತು ಗಣಸ್ತೋಮವು ಈ ಮಹೋದಯರ ಆತ್ಮಕ್ಕೆ ಶ್ರೀ ಜಗದೀಶ್ವರನು ಶಾಂತಿಯನ್ನುಂಟುಮಾಡಲೆಂದು ಹಾರೈಸಿತು.

ಓರ್ವ ಪ್ರತ್ಯಕ್ಷದರ್ಶಿ.

ಮಹಾತ್ಮ ಗಾಂಧಿಯವರು ತಯಾರಿಸಿರುವ ಪ್ರಜೆಗಳ ಆಜನ್ಮಸಿದ್ಧ ಹಕ್ಕುಗಳು.

ಕರಾಚಿ ಕಾಂಗ್ರೆಸ್ಸಿನಲ್ಲಿ ಕಳೆದ ತಿಂಗಳು 30 ನೆಯ ತಾರೀಖಿನ ರಾತ್ರಿ, ಕೆಳಗೆ ಕಂಡ ಠರಾವು ಅಂಗೀಕರಿಸಲ್ಪಟ್ಟಿತು.

ಭಾವಿಸ್ವರಾಜ್ಯದಲ್ಲಿ ರಾಜಕೀಯ ಉನ್ನತಿಯು ಮಾತ್ರವಲ್ಲದೆ ಆರ್ಥಿಕ ಉನ್ನತಿಯನ್ನು ಪಡೆಯಬೇಕು ಇಲ್ಲದಿದ್ದರೆ ಹೊಟ್ಟೆಬಟ್ಟೆಗೆ ಗತಿಯಿಲ್ಲದೆ ಸಾಯುತ್ತಿರುವ ಕೋಟ್ಯಂತರ ಜನರಿಗೆ ಸುಖವಾಗುವುದಿಲ್ಲ.

ಸ್ವರಾಜ್ಯವೆಂದರೇನೆಂಬುದನ್ನು ಅವರಿಗೆ ಸುಲಭರೀತಿಯಿಂದ ಅರ್ಥಮಾಡಿ ವಿವರಿಸಬೇಕು. ಆದ್ದರಿಂದ ಕೆಳಗೆ ಕಂಡ ಅಂಶಗಳನ್ನೆಲ್ಲಾ ಮುಂದಿನ ರಾಜ್ಯರಚನೆಯಲ್ಲಿ ಸೇರಿಸಬೇಕು.

(ಅ) ಸಭಾಸ್ವಾತಂತ್ರ್ಯ.
(ಆ) ಭಾಷಣ ಸ್ವಾತಂತ್ರ್ಯ. ಲೇಖನ ಸ್ವಾತಂತ್ರ್ಯ.
(ಇ) ಮತಸಂಬಂಧವಾದ ಸ್ವಾತಂತ್ರ್ಯ (ಸಾರ್ವಜನಿಕ ಕಾರ್ಯಕ್ಕೆ ಪ್ರತಿಬಂಧವಿಲ್ಲದ್ದು.)
(ಈ) ಈ ಜಾತಿಮತಗಳ ಕಾರಣದಮೇಲೆ ಸರ್ಕಾರೀ ಉದ್ಯೋಗಗಳಿಗೆ ಬರಕೂಡದೆಂಬ ನಿರ್ಬಂಧವಿರಕೂಡದು.
(ಉ) ರಾಜಮಾರ್ಗಗಳು ಭಾವಿಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಾ ಜಾತಿಮತ ಕೋಮಿನವರೂ ಸೇರಬಹುದು.
(ಊ) ಕಾನೂನು ಪ್ರಕಾರ ಎಲ್ಲರೂ ಆಯುಧಗಳನ್ನು ಧರಿಸಬಹುದು. ಈ ಸಾರ್ವಜನಿಕ ಹಕ್ಕುಗಳು ಸ್ಥಾಪಿಸಲ್ಪಡಬೇಕು.

೧ ಸರ್ಕಾರದವರು ಮತಸಂಬಂಧವಾದ ವಿಷಯಗಳಲ್ಲಿ ಪ್ರವೇಶ ಮಾಡಕೂಡದು. ಕೆಲಸಗಾರರಿಗೆ ಹೊಟ್ಟೆತುಂಬುವಷ್ಟು ಕೂಲಿಯು ದೊರೆಯಬೇಕು. ಅವರ ಕೆಲಸದ ಕಾಲವು ಕ್ಲುಪ್ತವಾಗಿರಬೇಕು.

೨. ಅವರ ಮುದಿತನದಲ್ಲಿ ವ್ಯಾಧಿಗಳ ನಿಮಿತ್ತ ಕೆಲಸವಿಲ್ಲದ ಕಾಲದಲ್ಲಿ ಜೀವನವಾಗುವುದಕ್ಕೆ ತಕ್ಕ ಏರ್ಪಾಡು ಇರಬೇಕು.

೩. ಕೂಲಿಕಾರರಿಗೆ ಗುಲಾಮಗಿರಿಯನ್ನು ತಪ್ಪಿಸಬೇಕು.

೪. ಕೂಲಿಕಾರರಾದ ಹೆಂಗಸರಿಗೆ ವಿಶೇಷತಃ ಹೆರಿಗೆಕಾಲ ವಿಶೇಷ ರಕ್ಷಣೆಗೆ ಏರ್ಪಾಡಾಗಬೇಕು.

೫. ಕಾರ್ಖಾನೆಗಳಲ್ಲಿ ಸ್ಕೂಲಿಗೆ ಹೋಗುವ ಹುಡುಗರನ್ನು ಕೆಲಸಕ್ಕಿಟ್ಟುಕೊಳ್ಳದಂತೆ ನಿರ್ಬಂಧಿಸಬೇಕು.

೬. ಕೂಲಿಕಾರರ ಸಂಘಗಳನ್ನು ಮಾಡಿಕೊಳ್ಳುವ ಅಧಿಕಾರವಿರಬೇಕು. ಮಾಲೀಕರ ಮತ್ತು ಕೆಲಸಗಾರರ ಜಗಳಗಳನ್ನು ಇತ್ಯರ್ಥಮಾಡಲು ಸರಿಯಾದ ಪಂಚಾಯಿತಿ ಏರ್ಪಾಡು ಇರಬೇಕು.

೭. ಭೂಕಂದಾಯಗಳನ್ನು ಬಹಳವಾಗಿ ಕಡಿಮೆಮಾಡಬೇಕು. ಬೆಳೆಯಾಗದೆ ಹೋದರೆ ಅವಶ್ಯಕವಾದಷ್ಟು ದಿನ ಬಾಡಿಗೆಯನ್ನು ವಜಾಮಾಡಬೇಕು.

೮. ಬೇಸಾಯದ ವರಮಾನದ ಮೇಲೆ ನ್ಯಾಯವಾದ ವರಮಾನದ ತೆರಿಗೆ ಹಾಕಬೇಕು.

೯. ಸ್ವಾಧೀನಾನುಭವದ ತೆರಿಗೆ ಹಾಕಬೇಕು.

೧೦. ಪ್ರಾಯಸ್ಥರಿಗೆಲ್ಲಾ ಓಟಿನ ಅಧಿಕಾರ ವಿರಬೇಕು.

೧೧. ಬಾಲವಿದ್ಯಾಭ್ಯಾಸವು ಉಚಿತವಾಗಿ ಮಾಡಿಸಲ್ಪಡಬೇಕು.

೧೨. ಕಪೇದಕ್ಷ ಸೈನ್ಯದ ಖರ್ಚನ್ನು ಈಗಿರುವುದರಲ್ಲಿ ಅರ್ಧದಷ್ಟಾದರೂ ಇಳಿಸಬೇಕು.

೧೩. ಸರ್ಕಾರೀ ಖರ್ಚುಗಳನ್ನೂ ಸಂಬಳಗಳನ್ನೂ ಬಹಳ ಕಡಿಮೆಮಾಡಬೇಕು. ಸ್ಪಷ್ಟವಾಗಿ ಪ್ರವೀಣತೆ ಹೊಂದಿದವರಿಗಲ್ಲದೆ ಇತರ ಎಲ್ಲಾ ಸರ್ಕಾರೀ ಅಧಿಕಾರಿಗಳಿಗೂ ತಿಂಗಳಿಗೆ ೫೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಇರಕೂಡದು.

೧೪. ದೇಶಾಂತರದ ಬಟ್ಟೆ ನೂಲುಗಳಿಗೆ ಸಹಾಯಮಾಡದೆ ದೇಶೀಯ ಬಟ್ಟೆಗಳಿಗೆ ಸಹಾಯಕೊಡಬೇಕು.

೧೫. ಮದ್ಯಪಾನ ಮತ್ತು ಮಾದಕವಸ್ತುಗಳನ್ನು ಪೂರ್ತಿ ನಿರೋಧಿಸಬೇಕು.

೧೬. ಉಪ್ಪಿನ ತೆರಿಗೆಯನ್ನು ಸಂಪೂರ್ಣ ವಜಾಮಾಡಬೇಕು.

೧೭. ಹಣಕಾಸಿನ ವಿನಿಮಯ ನಿಯಮಗಳನ್ನು ಹಿಂದುಸ್ಥಾನದ ಕೈಗಾರಿಕೆಗಳಿಗೂ ಹಳ್ಳಿಗಾಡಿನವರಿಗೂ ಲಾಭಕರವಾಗುವಂತೆ ಕಾನೂನುಗಳನ್ನು ಮಾಡಬೇಕು.

೧೮. ಮುಖ್ಯವಾದ ಕೈಗಾರಿಕೆಗಳನ್ನೂ ಖನಿಜ ಸಂಪತ್ತನ್ನೂ ಸರ್ಕಾರದ ಅಧೀನದಲ್ಲಿಯೇ ಇಟ್ಟುಕೊಳ್ಳಬೇಕು.

೧೯. ಸಾರ್ವಜನಿಕ ಲೇವಾದೇವಿಯು ಆದಷ್ಟು ಸರ್ಕಾರಕ್ಕೆ ಇರಬೇಕು. ನೇರವಾಗಿಯಾಗಲೀ, ಬೇರೆ ವಿಧಾನದಿಂದಾಗಲೀ, ಬಡವರಿಂದ ಹೆಚ್ಚು ಬಡ್ಡಿ ವಸೂಲ್ಮಾಡಲು ಅವಕಾಶಕೊಡುವುದಿಲ್ಲ.

ಸ್ವೀಕಾರ.

ಹಾಸನ ಡಿ|| ಬೇಲೂರು ಕಾಫಿಪ್ಲಾಂಟರ್ ಮ|| ರಾ|| ಎಸ್. ವೀರಪ್ಪಶೆಟ್ಟರವರ ಪುತ್ರಿ ಚಿ|| ಸೌ|| ಸೋಮಮ್ಮನನ್ನು ಕೋಡಿಹಳ್ಳಿ ಮ|| ರಾ|| ಮಲ್ಲಪ್ಪನವರ ಪುತ್ರ ಚಿ|| ಮಲ್ಲಪ್ಪನಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **3** ರೂ. ಗಳೂ ಮುಗುಳವಳ್ಳಿ ಪಟೇಲ್ ಮ|| ರಾ|| ವೀರಪ್ಪಗೌಡರು ಆಚಾರ್ಯರ ಹೆಸರಿನಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2-2-0** ರೂ. ಗಳೂ ಒಟ್ಟು **5-2-0** ರೂ. ಗಳು ಚಿಕ್ಕಮಗಳೂರು ತಾ|| ಮುಗುಳವಳ್ಳಿಮಠದ ವೇ|| ಮುಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೊಟ್ಟೂರು ಮಿರಾಳಘಟ್ಟದ ಮಠದ ಕೈ|| ವೇ|| ದೊಡ್ಡವೀರಪ್ಪಯ್ಯನವರ ಹೆಸರಿನಿಂದ ನೆರವೇರಿಸಿದ ಗಣಾರಾಧನಾ ಸಮಯದಲ್ಲಿ ಸದರಿಯವರ ಅನುಜರಾದ ವೇ|| ಸಣ್ಣವೀರಪ್ಪಯ್ಯನವರೂ ಮತ್ತು ವೇ|| ಚನ್ನವೀರಪ್ಪಯ್ಯನವರೂ ಪ್ರಭಾಪೋಷಣಕ್ಕೋಸ್ಕರ **5** ರೂ.ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಹುಣಸೂರು ತಾಲ್ಲೂಕು ಮಾಧಹಳ್ಳಿ ಉಕ್ಕಿನಕಂಥೆ ಮಠದಲ್ಲಿ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂ. ಗಳು ಶ್ರೀ ಬಸವಲಿಂಗಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಸೋಲಾಪುರದಲ್ಲಿರುವ ಮ|| ರಾ|| ವೀರಭದ್ರಪ್ಪ ಮಹಂತ ವಿಣಗೀಕರ್ ಇವರ ಪುತ್ರ ಚಿ|| ಸ|| ಲಿಂಗಪ್ಪನಿಗೂ, ಗುರುಸಿದ್ದಪ್ಪ ಬಳಕೋಟಿ ವಾಂಗಿ ಇವರ ಪುತ್ರಿ ಚಿ|| ಸೌ|| ಗುರುಶಾಂತಾಬಾಯಿಗೂ ವಿವಾಹ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂಪಾಯಿಗಳು ಜೈನಾಪುರ ಹಿರೇಮಠದ ಬ್ರಂ|| ಶ್ರೀ ಚರಮೂರ್ತಿ ಗುರುಸ್ವಾಮಿಗಳ ದ್ವಾರಾ ತಲ್ಪಿರುತ್ತವೆ.

ಕೂಡ್ಲಿಗಿ ತಾಲ್ಲೂಕು ಸಾಸಲವಾಡ ಗ್ರಾಮದ ಮ|| ಗೌಡರ ಉಜ್ಜಪ್ಪನವರ ಮಗ ಸಿದ್ಧರಾಮಪ್ಪನಿಗೆ ಹುವ್ವಿನಹಡಗಲಿ ತಾಲ್ಲೂಕು ಹೋಗುಂದಿಗ್ರಾಮದ ಮ|| ರಾ|| ಕಳ್ಳಪ್ಪನವರ ಪರಪ್ಪನವರ ಮಗಳು ಚಿ|| ಸೌ|| ಶಾಂತಮ್ಮನನ್ನು ಕೊಟ್ಟು ಹಿರೇ ವಿಳ್ಯಕಾರ್ಯವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಗಳು ಮ|| ರಾ|| ಡಿ. ಬೋ. ಮೆಂಬರ್ ಎಚ್. ಡಿ. ಹಾಲಪ್ಪನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮಜ್ಜಗದ್ಗುರು ರಂಭಾಪುರಿ ವೀರಸಿಂಹಾಸನಾಧೀಶ್ವರ
ಶ್ರೀ ೧೦೮ ಶಿವಾನಂದರಾಜೇಂದ್ರ ಶಿವಾಚಾರ್ಯ
ಮಹಾಸ್ವಾಮಿಗಳವರ

ಸುವರ್ಣರಜತ ಆಂದೋಳಿಕೋತ್ಸವ

ಚಿಕ್ಕನಾಯ್ಕನಹಳ್ಳಿ.

ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಕುಪ್ಪೂರು ಗದ್ದುಗೆಯ ಮಠದ ಮುಕ್ಕಾಂ ಪ್ರಧಾನವಾಗಿಟ್ಟುಕೊಂಡು ಸುತ್ತಮುತ್ತಣ ಸೆಟ್ಟಿಕೆರೆ ಸಾಸಲು ಮುಂತಾದ ಗ್ರಾಮಗಳ ಭಕ್ತರ ಪೂಜಾ ಕಾಣಿಕೆಗಳನ್ನು ಕೈಕೊಂಡು ತಾ॥ ೨೨-೩-೩೧ ರ ಭಾನುವಾರ ಚಿಕ್ಕನಾಯ್ಕನಹಳ್ಳಿಗೆ ದಯಮಾಡಿಸಿದರು. ಪುರವು ಚಪ್ಪರ ತಳಿರುತೋರಣಗಳಿಂದಲಂಕೃತವಾಗಿದ್ದಿತು. ತಾರತಮ್ಯಗಳಿಲ್ಲದೆ ಸಕಲ ಮತದವರೂ ಶ್ರೀ ಪೂಜ್ಯಪಾದರನ್ನು ಬರಮಾಡಿಕೊಳ್ಳುವದರಲ್ಲಿ ಬದ್ಧಾದರರಾಗಿದ್ದರು. ದರ್ಶನಾಕಾಂಕ್ಷಿಗಳಾಗಿ ನಾಲ್ಕೈದು ಸಾವಿರ ಜನಗಳು ಸೇರಿದ್ದರು. ಪಾಳ್ಯದ ಪ್ರಭುಗಳಾದ ಅಮಲ್ದಾರ್ ಸಾಹೇಬ್ ರಾಜಶೇಖರ ಒಡೆಯರವರೂ ಪೋಲೀಸ್ ಇನ್ಸ್‌ಪೆಕ್ಟರ್ ಸಾಹೇಬರೂ, ಸಬ್ ಇನ್ಸ್‌ಪೆಕ್ಟರ್ ಸಾಹೇಬರೂ, ಜಮಾದಾರ್ ಶೇಕದಾರ್ ಮುಂತಾದ ಸರ್ಕಾರಿಆಫೀಸರೂ ಆಗಮಿಸಿದ್ದರು. ಪೋಲೀಸು ಬಂದೋಬಸ್ತು ಚೆನ್ನಾಗಿದ್ದಿತು. ಪುರಪ್ರಮುಖರಾದ ಮಠಾಧಿಕಾರಿಗಳು ಶೆಟ್ರು ಯಜಮಾನರು ಸಾಹುಕಾರರು ಮುನಿಸಿಪಲ್ ವೈಸ್ ಪ್ರೆಸಿಡೆಂಟರು ಅತ್ಯುತ್ಸುಕತೆಯಿಂದ ಇಸ್ತಕವಾಲ ಸಮೇತ ಶ್ರೀ ಮಹಾಗುರುಗಳನ್ನು ಇದಿರ್ಗೊಂಡು ಬಿಜಯಂಗೈಸಿಕೊಂಡು ಬಂದರು. ವೇದ ಮತ್ತು ಪುರಾಣಗಳ ಘೋಷವು ಅತ್ಯಾನಂದದಾಯಕವಾಗಿದ್ದಿತು. ಸಕಲ ವಾದ್ಯಗಳು ಭೋರ್ಗರೆಯುತ್ತಿದ್ದುವು. ಈ ಪ್ರಕಾರ ಚತುರಂಗ ಬಲದೊಡನೆ ಸಕಲ ಬಿರುದಾವಳಿ ಸಮೇತವಾದ ಆಂದೋಳಿಕೋತ್ಸವವು ಸಕಲ ವೀಧಿಗಳಲ್ಲಿಯೂ ನಿರ್ವಿಘ್ನವಾಗಿ ನೆರವೇರಿ ಬಿಡಾರಕ್ಕೆ ಬಂದ ಕೂಡಲೇ ಶ್ರೀ ಮಹಾಸ್ವಾಮಿಗಳವರು ಪಲ್ಲಕ್ಕಿ ಇಳಿದು ಅಲಂಕೃತವಾದ ಸಿಂಹಾಸನಾರೋಹಣಂಗೈದರು. ಸರ್ವರೂ ಜಯಘೋಷದೊಡನೆ ಕರತಾಡನಮಾಡಿ ಸ್ವಸ್ಥಾನದಲ್ಲಿ ಕುಳಿತ ಬಳಿಕ ಪುರಾಣರತ್ನಂ ಸುಣ್ಣಕಲ್ಲು ಬಿದರಿ ಬಸವಲಿಂಗ ಶಾಸ್ತ್ರಿಗಳವರು ಆಸ್ತಿಕ್ಯಪ್ರಭಾವವನ್ನು ಚೆನ್ನಾಗಿ ವರ್ಣಿಸಿದರು. ಶ್ರೀ ಜಗದ್ಗುರುಗಳವರು ತಮ್ಮ ಅಮೃತವಾಣಿಯಿಂದ ಮತಗಳ ಸ್ವರೂಪವನ್ನು ವಿವರಿಸಿ ಭಗವದ್ಭಕ್ತರೆಲ್ಲರೂ ಆಸ್ತಿಕ್ಯಸಂಘದಲ್ಲಿದ್ದು ಧರ್ಮ ಜಾಗ್ರತೆಯಿಂದ ಐಹಿಕಾಮುಷ್ಮಿಕ ಫಲಗಳನ್ನು ಪಡೆಯತಕ್ಕದ್ದೆಂದು ಆಜ್ಞಾಪಿಸಿ ಪೂಜಾ ಸಮಯವಾದ್ದರಿಂದ ಸಭಾವಿಸರ್ಜನೆಗೆ ಅಪ್ಪಣೆಯನ್ನಿತ್ತರು. ಧರ್ಮವಿಚಾರಕ್ಕೆ ಅವಕಾಶವನ್ನು ಕೊಟ್ಟು ದೇಶವನ್ನು ಪಾಲಿಸುತ್ತಿರುವ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಆಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಮೇಲ್ಕಂಡ ಗೌರ್ನಮೆಂಟು ಆಫೀಸರುಗಳಿಗೂ ಪೌರರಿಗೂ ಶ್ರೀ ಜಗದ್ಗುರು ರೇಣುಕಾಚಾರ್ಯರು ಸಕಲ ಇಷ್ಟಾರ್ಥಗಳನ್ನು ಕೊಡಲೆಂದು ಸರ್ವದಾ ಭಗವತ್ಪಾದರನ್ನು ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಜಗದ್ಗುರು ರೇಣುಕಜಯಂತಿ. ದಾವಣಗೇರಿ.

ಫಾಲ್ಗುಣ ಶುದ್ಧ ೧೩ ಸೋಮವಾರ ಪ್ರಾತಃಕಾಲ ಹಿರೇಮಠದ ಮಹಲಿಂಗಪ್ಪಯ್ಯನವರ ಮಂದಿರದಲ್ಲಿ ಶ್ರೀ ಆಚಾರ್ಯಮೂರ್ತಿಗೆ ವಿಧ್ಯುಕ್ತಪೂಜೆಯು ನಡೆದು ಶ್ವೇತಛತ್ರ, ಉಭಯ ಚಾಮರ, ಅಡ್ಡಗಿರಿ ಮುಂತಾದ ಬಿರುದುಗಳಿಂದೊಡಗೂಡಿದ ಪಂಚಕಲಶಯುಕ್ತ ಆಂದೋಲಿಕೆಯ ಉತ್ಸವವು ನಡೆಯಿಸಲ್ಪಟ್ಟಿತು. ಭಕ್ತಿಯಿಂದ ಹಾಡುತ್ತಿರುವ ಭಜನಾಸಂಘದವರ ಆಚಾರ್ಯಗೀತಾವಳಿಗಳೂ, ಬ್ಯಾಂಡ್ ಮೊದಲಾದ ವಾದ್ಯಗಳೂ ಪ್ರೇಕ್ಷಕರ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದುವು. ದಾರಿಯುದ್ದಕ್ಕೂ ಭಕ್ತರು ಫಲಾವಳಿಗಳನ್ನು ಸಮರ್ಪಿಸುತ್ತ ಶ್ರೀ ಗುರುಮೂರ್ತಿಯ ಪ್ರಸಾದವನ್ನು ಪಡೆಯುತ್ತಿದ್ದರು. ಮುಖ್ಯ ಮುಖ್ಯ ಪುರಬೀದಿಗಳಲ್ಲೆಲ್ಲಾ ಉತ್ಸವವು ಬಹು ವೈಭವದಿಂದ ನಡೆದು ೧೨ ಘಂಟೆಗೆ ಉತ್ಸವವು ಮಠಕ್ಕೆ ತಲ್ಪಿತು. ಬಳಿಕ ಆಚಾರ್ಯಮೂರ್ತಿಗೆ ಮಹಾಮಂಗಳಾರತಿಯು ನಡೆಯಿಸಲ್ಪಟ್ಟು, ಉತ್ಸವಭಾಗಿಯಾದ ಭಕ್ತಮಾಹೇಶ್ವರರಿಗೆಲ್ಲಾ ಅಲ್ಪಾಹಾರದಿಂದ ಸಂತೋಷಗೊಳಿಸಲ್ಪಟ್ಟಿತು. ಈ ಪವಿತ್ರವಾದ ಗುರುಜಯಂತಿಯಲ್ಲಿ ವೇ॥ ಹಿ॥ ಮ॥ ಪಡಕ್ಷರಪ್ಪಯ್ಯನವರು, ವೇ॥ ತಿರುಕಪ್ಪನವರ ಮಠದ ಓಂಕಾರಪ್ಪಯ್ಯನವರು, ವೇ॥ ಮಲೆಬೆನ್ನೂರುಮಠದ ಹಾಲಸಿದ್ದಪ್ಪಯ್ಯನವರು, ಶ್ರೀಮಾನ್ ಮಾಗಾನಹಳ್ಳಿ ಪಡಕ್ಷರಪ್ಪನವರು. ಮತ್ತು ಅವರ ಪುತ್ರ ಉಮಾಪತಿಯಪ್ಪನವರು. ಶ್ರೀ ಮಾಗಾನಹಳ್ಳಿ ಚನ್ನವೀರಪ್ಪನವರ ಮಕ್ಕಳು ಚನ್ನಬಸಪ್ಪನವರು ಶ್ರೀಮಂತ ಯಜಮಾನ್ ಬೆಳ್ಳೂಡಿ ವೀರಪ್ಪ ಮಲ್ಲಪ್ಪನವರು, ತ್ಯಾಗಿಯವರ ಸಮಸ್ತ ಭಕ್ತರೂ, ಗುಂಡಾಭಕ್ತರೂ ಒಟ್ಟು ಗೂಡಿ ಶ್ರದ್ಧಾಯುಕ್ತವಾದ ಗುರುಭಕ್ತಿಯಿಂದ ಸೇವೆಯನ್ನು ಮಾಡಿ ಗುರುಕೃಪೆಗೆ ಪಾತ್ರರಾಗಿದ್ದಕ್ಕಾಗಿ ಇವರಿಗೆ ಶ್ರೀ ಆಚಾರ್ಯ ಭಗವತ್ಪಾದರು ಆಯುರಾರೋಗ್ಯೈಶ್ವರ್ಯಾದಿ ಭಾಗ್ಯಗಳನ್ನಿತ್ತು ಕಾಪಾಡಲೆಂದಿಚ್ಛಿಸುವ,

ಗುರುಕಿಂಕರ ಯಜಮಾನ ಬೆಳ್ಳೂಡಿ ವೀರಪ್ಪ ದಾವಣಗೆರೆ.

ಶ್ರೀ ಮಾಧಹಳ್ಳಿ ಉಕ್ಕಿನ ಕಂತೆಮಠದ ಪಟ್ಟಾಧಿಕಾರ ಮಹೋತ್ಸವ.

ಪ್ರಮೋದ ಸಂವತ್ಸರದ ಫಾಲ್ಗುಣ ಬಹುಳ ೮ ಭಾನುವಾರ (೮-೩-೩೧ನೆ) ದಿವಸ ಶ್ರೀ ಬಸವಲಿಂಗದೇವರೆಂಬ ವಟುವಿಗೆ ವಿಧಿವತ್ತಾಗಿ ದೀಕ್ಷಾಸಂಸ್ಕಾರವನ್ನು ನಡೆಯಿಸಿ ಮಠದ ಪಟ್ಟಾಧಿಕಾರವು ಕೊಡಲ್ಪಟ್ಟಿತು. ಸೋಮವಾರ ಮಠದಲ್ಲಿರುವ ಉಕ್ಕಿನ ಕಂತೆಗೆ ರುದ್ರಾಭಿಷೇಕವು ಸಹಸ್ರಬಿಲ್ವಾರ್ಚನೆಯು ಶ್ರೀಗುರುಪೂಜೆಯು ನಡೆಯಿತು. ೫-೬ ಸಾವಿರ ಭಕ್ತಮಹೇಶ್ವರರಿಗೆ ಆರಾಧನೆಯು ದಾನಧರ್ಮಗಳು ಮಾಡಲ್ಪಟ್ಟುವು. ರಾತ್ರಿ ನೂತನ ಪಟ್ಟಾಂಕಿತರಾದ ಬಸವಲಿಂಗಸ್ವಾಮಿಯವರ ಉತ್ಸವವು ನಡೆಯಿತು. ಈ ಮಹೋತ್ಸವಕ್ಕೆ ನಂಜನಗೂಡುತಾಲ್ಲೂಕು, ಮೈಸೂರು ತಾಲ್ಲೂಕು ಮತ್ತು ಯಡತೊರೆ ತಾಲ್ಲೂಕು ಹೆಗ್ಗಡದೇವನಕೋಟೆ ತಾಲ್ಲೂಕು ಇದೇ ಹುಣಸೂರು ತಾಲ್ಲೂಕು ಮತ್ತು ಹೊಳೇನರಸೀಪುರದ ತಾಲ್ಲೂಕು ಕೊಡಗು ಪ್ರಾಂತ್ಯದ ಅನೇಕ ಭಕ್ತಮಾಹೇಶ್ವರರು ಆಗಮಿಸಿದ್ದುದು ಗುರುಕಾರ್ಯಕ್ಕೆ ಆನಂದದ ಸಂಗತಿಯಾಗಿರುವದು. ಈ ಮಹಾಶಯರಿಗೂ ನೂತನ ಪಟ್ಟಾಧಿಕಾರಿಗಳಿಗೂ ಶ್ರೀ ಪಂಚಾಚಾರ್ಯರು ಆಯುರಾರೋಗ್ಯಾದಿ ಸಂಪತ್ತುಗಳನ್ನು ದಯಪಾಲಿಸಲಿ. ಚರಪಟ್ಟಾಧ್ಯಕ್ಷ ಶ್ರೀ ಸಿದ್ಧಲಿಂಗಶಿವಾಚಾರ್ಯರು ಈ ಮಹಾಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ 2 ರೂಪಾಯಿಗಳನ್ನು ಸಮರ್ಪಿಸಿರುತ್ತಾರೆ.

ಓರ್ವ ಗುರುಭಕ್ತ.

ಹರನಾಮಸಂಕೀರ್ತನ, ಬೆಂಗಳೂರು.

ಪ್ರಸಿದ್ಧ ಕೀರ್ತನಕಾರರಾದ ಹುಣಸೀಗಟ್ಟ ಮಠದ ವೇ॥ ಜಿ. ನಂಜುಂಡಾರಾಧ್ಯಶಾಸ್ತ್ರಿಗಳವರು ಕಳೆದ ತಿಂಗಳು ತಾ॥ ೨೪-೩-೩೧ನೆಯ ಸೋಮವಾರ ಸಾಯಂಕಾಲ ಬೆಂಗಳೂರು ಹೊಸತರಗಿನಪೇಟೆ ವರ್ತಕಮಂಡಲಿಯವರ ಕೋರಿಕೆಯಂತೆ ಅಕ್ಕಿಮಂಡಿ ಎಸ್. ರುದ್ರಯ್ಯನವರ ಅಂಗಡಿಯ ಮುಂಭಾಗದಲ್ಲಿ (ಮಹಾತ್ಮರ ಅವತಾರ) ವೆಂಬ ವಿಷಯವಾಗಿ ಶಿವಕೀರ್ತನೆಯನ್ನು ಮಾಡಿದರು. ಆ ಕಾಲಕ್ಕೆ ಲೌಕಿಕ-ವೈದಿಕ ಮಹಾಜನಗಳನೇಕರು ಸೇರಿದ್ದರು. ಆರಾಧ್ಯರವರು ಸಂಗೀತಸಾಹಿತ್ಯಗಳೊಡನೆ ಸನಾತನಧರ್ಮಗಳನ್ನು ಚೆನ್ನಾಗಿ ವಿವರಿಸಿ ಅದಕ್ಕೆ ತಕ್ಕ ಶಾಸ್ತ್ರವಚನಗಳನ್ನೂ ಸಾಧುಸಂತರ ಉಕ್ತಿಗಳನ್ನೂ ಉದಹರಿಸುತ್ತಾ ಪುರಾಣಪುರುಷರ ಆಧುನಿಕಮಹಾತ್ಮರ ಮತ್ತು ಮಹಾತ್ಮಾ ಜಿಯವರ ದೃಷ್ಟಾಂತಗಳಿಂದ ಪುಷ್ಟಿಗೊಳಿಸಿ, ಕ್ಷೋತೃಜನಗಳಿಗೆ ಸ್ವದೇಶಾಭಿಮಾನ ಅಹಿಂಸಾವ್ರತ ಖಾದೀವಸ್ತ್ರಧಾರಣ ಇವುಗಳಲ್ಲಿ ಆಸಕ್ತಿಯುಂಟಾಗುವಂತೆ ಹೇಳುತ್ತಿದ್ದರು. ಕೀರ್ತನಾಂತ್ಯದಲ್ಲಿ ಬ್ರಾಹ್ಮಣ ಮುಖಂಡರೊಬ್ಬರು ಎದ್ದುನಿಂತು ಇವರನ್ನು ಶ್ಲಾಘಿಸಿ ಅವರ ಶ್ರೇಯೋಭಿವೃದ್ಧಿಯನ್ನು ಕೋರಿದರು. ಮಹಾಶಯರೇ! ನಮ್ಮ ವರ್ತಕಮಂಡಲಿಯವರು ವೇ॥ ಆರಾಧ್ಯರವರಿಂದ ಹರನಾಮಸಂಕೀರ್ತನೆಯನ್ನು ಮಾಡಿಸಿ ಜನಗಳಲ್ಲಿ ರಾಷ್ಟ್ರೀಯಭಕ್ತಿಯುಂಟಾಗುವಂತೆ ಮಾಡಿ ಸಮಸ್ತರ ಶ್ಲಾಘನೆಗೆ ಪಾತ್ರರಾಗಿರುತ್ತಾರೆ.

ಜಿ. ಗುರುಸಿದ್ದಪ್ಪ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವ, ಸಿದ್ದಯ್ಯನಹುಂಡಿ.

ಶ್ರೀಮತ್ಪ್ರಮೋದ ಸಂವತ್ಸರದ ಫಾಲ್ಗುಣ ಶು॥ 13 ಸೋಮವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಮೇಲ್ಕಂಡ ಗ್ರಾಮದಲ್ಲಿ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಶ್ರೀಜಗದ್ಗುರುಗಳವರ ರಚನಾನಿರ್ಮಿತ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜಾಸಮಾರಂಭವು ನೆರವೇರಿಸಲ್ಪಟ್ಟಿತು. ಮಧ್ಯಾಹ್ನಾಂತರ, ನಾನಾ ಗ್ರಾಮಗಳಿಂದ ಆಹ್ವಾನಿಸಲ್ಪಟ್ಟಿದ್ದ ಆಗಣಿತಭಕ್ತಮಾಹೇಶ್ವರರ ವೃಂದಕ್ಕೆ ಸಂತರ್ಪಣೆಯು ನಡೆಯಿತು. ರಾತ್ರಿ ಇದೇ ಗ್ರಾಮದ ಮ॥ ಪೊನ್ನಾಚಾರ್ಯರು ನೂತನವಾಗಿ ರಚಿಸಿರುವ ಪುಷ್ಪಾಂದೋಳಿಕೆಯಲ್ಲಿ ಶ್ರೀ ಭಗವತ್ಪಾದರ ರಜತಮಯ ಭಾವಚಿತ್ರವನ್ನು ಮೂರ್ತಿಗೊಳಿಸಿ ಸುಗಂಧಮಯ ಪುಷ್ಪಹಾರಗಳಿಂದಲಂಕರಿಸಿ ಶ್ರೀ ಪಂಚಾಚಾರ್ಯ ಭಜನಾಮಂದಿರದಿಂದ ಉತ್ಸವವು ಹೊರಟಿತು. ಶ್ವೇತಛತ್ರ ನಂದೀಧ್ವಜವೇ ಮೊದಲಾದ ಬಿರುದಾವಳಿಗಳಿಂದಲೂ, ಎಡಬಲ ಪಾರ್ಶ್ವಗಳಲ್ಲಿ ಸಾಲ್ಹಿಡಿದು ಬರುತ್ತಿರುವ ಪತ್ತಿಗೆಗಳ ಮೊತ್ತಂಗಳಿಂದಲೂ ಮುಂಭಾಗದಲ್ಲಿ ಪಠಿಸುತ್ತಿದ್ದ ಬಾಲಕರ ಶ್ರೀ ರುದ್ರವೇದಘೋಷದಿಂದಲೂ, ಅದರ ಮುಂದುಗಡೆ ಶ್ರೀಮತ್ಪಂಚಾಕ್ಷರೀ ಭಜನಾಸಮ್ಮೇಳನದವರ ಭಜನೆಯಿಂದಲೂ ದಾರಿಯುದ್ದಕ್ಕೂ ಕಿಕ್ಕಿರಿದುನಿಂತಿರುವ ಪ್ರೇಕ್ಷಕರ ಸಮೂಹದಿಂದಲೂ, ಮುಂಗಡೆಯಲ್ಲಿ ಭೋರ್ಗರೆಯುವ ಮಂಗಳವಾದ್ಯಗಳ ರವದಿಂದಲೂ ಎಡಬಲಪಾರ್ಶ್ವಗಳ ಗೃಹದ್ವಾರಗಳಲ್ಲಿ ಫಲಪುಷ್ಪಗಳನ್ನು ಸಂದೊಪ್ಪಿಸುತ್ತಿದ್ದ ಸುವಾಸಿನಿಯರ ಸಮೂಹದಿಂದಲೂ ಉತ್ಸವವು ಮುಂದೆ ಸಾಗುತ್ತಿದ್ದಿತು. ಉತ್ಸವವು ರಾತ್ರಿ ಸುಮಾರು 1 ಘಂಟೆಗೆ ಯಜಮಾನ್ ಪುಟ್ಟಪ್ಪನವರ ಮನೆ ಮುಂಭಾಗದಲ್ಲಿ ರಂಭಾಸ್ತಂಭಗಳಿಂದ ಅಲಂಕರಿಸಲ್ಪಟ್ಟ ಚಪ್ಪರದಲ್ಲಿ ನಿರ್ಮಿಸಲ್ಪಟ್ಟಿದ್ದ ಮಂಟಪದಲ್ಲಿ ಶ್ರೀ ಜಗದ್ಗುರುಗಳವರ ಭಾವಚಿತ್ರವು ಮೂರ್ತಗೊಳಿಸಲ್ಪಟ್ಟ ಬಳಿಕ ವೇ॥ ವೇಮನಾರಾಧ್ಯಶಾಸ್ತ್ರಿಗಳವರು ಶ್ರೀ ರೇಣುಕಾಚಾರ್ಯರ ಅದ್ಭುತಲೀಲೆಯನ್ನು ಉಪನ್ಯಸಿಸಿ ಆನಸೂಯಾದೇವಿಯ ಕೀರ್ತನವನ್ನು ಮಾಡಿದರು. ಈ ಉತ್ಸವಕ್ಕಾಗಿ ನಾನಾಗ್ರಾಮಗಳಿಂದ ನೂರಾರು ಜನ ಗುರುಭಕ್ತಶಿರೋಮಣಿಗಳು ಆಗಮಿಸಿದ್ದರು.

ಓರ್ವ ಪ್ರತ್ಯಕ್ಷದರ್ಶಿ.

ವಿವಾಹಮಹೋತ್ಸವ.

ಮಾಗಡಿ.

ಸಾಗರದ ತಾ॥ ಮಾಗಡಿಯಲ್ಲಿ ಕಳೆದ ಪ್ರಮೋದನಾಮಸಂವತ್ಸರದ ಫಾಲ್ಗುಣ ಶು॥ ೭ ಸೋಮವಾರ ಮ॥ ರಾ॥ ಬಸವಣ್ಣಪ್ಪಗೌಡರವರು ತಮ್ಮ ಪುತ್ರ ಚಿ॥ ಚನ್ನವೀರಪ್ಪನಿಗೆ ಶಿಕಾರಿಪುರದ ತಾ॥ ಸಂಡದ ಮ॥ ರಾ॥ ಪುಟ್ಟಣ್ಣಯ್ಯಗೌಡರ ಪುತ್ರಿ ಚಿ॥ ಕುಂ॥ ಸೌ॥ ವಿಶಾಲಾಕ್ಷಮ್ಮನವರನ್ನು ತಂದು ಸ್ವಂತಗೃಹದಲ್ಲಿ ವಿವಾಹಮಹೋತ್ಸವವನ್ನು ಬೆಳೆಯಿಸಿದರು. ಆ ಕಾಲಕ್ಕೆ ಬಂಧುಬಾಂಧವರನೇಕರು ಬಂದಿದ್ದರಲ್ಲದೆ ಶ್ರೀಪೂಜ್ಯಪಾದ ಕ್ಯಾಸನೂರು ಮಠದ ಪಟ್ಟಾಧ್ಯಕ್ಷರವರು ದಯಮಾಡಿಸಿದ್ದರು. ಮತ್ತು ಸೊರಬದ ತಾ॥ ಅಮಲ್ದಾರರವರು ಪರಿವಾರ ಸಮೇತರಾಗಿ ಆಗಮಿಸಿದ್ದರು. ಈ ಸಮಯದಲ್ಲಿ ಹು॥ ವೇ॥ ಶಿವಕಥಾಪಂಡಿತ ಜಿ. ನಂಜುಡಾರಾಧ್ಯಶಾಸ್ತ್ರಿಗಳವರು ಜನಗಳಲ್ಲಿ ಆಧ್ಯಾತ್ಮ ವಿಚಾರವುಂಟಾಗುವಂತೆ ಬೋಧಪ್ರದವಾದ ಶಿವಕೀರ್ತನವನ್ನು ಮಾಡಿ ಕನ್ಯಾಶುಲ್ಕ ವರಶುಲ್ಕ ಮುಂತಾದವುಗಳಿಂದುಂಟಾಗುವ ಅನರ್ಥಗಳನ್ನು ಪ್ರತಿಪಾದಿಸಿ ಸಭಿಕರನ್ನು ಆನಂದಪಡಿಸಿದರು. ಇವರ ಕೀರ್ತನ ಪ್ರೌಢಿಮೆಯನ್ನು ನೋಡಿ ಅಮಲ್ದಾರರವರು ಸಂತೋಷಪಟ್ಟು ಸೊರಬಕ್ಕೆ ಬರುವಂತೆ ಅಪ್ಪಣೆಯನ್ನಿತ್ತರು. ಬಳಿಕ ಮ॥ ರಾ॥ ಹೊಸಸಂತೆ ಸಿದ್ದಲಿಂಗಪ್ಪಶೆಟ್ರವರು ವಧೂವರರ ಕಡೆಯಿಂದ ಪ್ರಭಾಪೋಷಣಾರ್ಥವಾಗಿ ಎರಡುರೂಪಾಯಿಗಳನ್ನು ತೆಗೆಯಿಸಿದನಂತರ ಮ॥ ರಾ॥ ಬಸವಣ್ಣಪ್ಪಗೌಡರವರು ಸಭಾಸದರನ್ನು ಗಂಧಪುಷ್ಪ ಫಲತಾಂಬೂಲಾದಿಗಳಿಂದ ಸತ್ಕರಿಸಿದರು. ಸರ್ವರೂ ನೂತನದಂಪತಿಗಳಿಗೆ ಶ್ರೇಯೋಭಿವೃದ್ಧಿಯನ್ನು ಕೋರಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಎ. ವೀರಭದ್ರಪ್ಪ, ಪಟೇಲ್.

ರಾಷ್ಟ್ರೀಯಮಹಾಸಭೆಯ ಆರಂಭ.

29ನೆಯ ತಾರೀಖಿನ ದಿವಸ ಸಾಯಂಕಾಲ ಮೋತಿಲಾಲ್‌ಮಂಟಪವೆಂಬ ವಿಶಾಲವಾದ ಬಯಲಿನಲ್ಲಿ 45ನೆಯ ಅಖಿಲಭಾರತೀಯ ಕಾಂಗ್ರೆಸ್ ಸಭೆಯು ಪ್ರಾರಂಭವಾಯಿತು. ನಾನಾ ಪ್ರಾಂತಗಳಿಂದ ಬಂದಿದ್ದ ಮೂರು ಸಾವಿರದ ಮೇಲ್ಪಟ್ಟ ಪ್ರತಿನಿಧಿಗಳಿಂದಲೂ 50-60 ಸಾವಿರ ಜನ ಪ್ರೇಕ್ಷಕರಿಂದಲೂ ಸಭೆಯು ತುಂಬಿಹೋಗಿದ್ದಿತು. ಆರುಗಂಟೆಯಾದ ಮೇಲೆ ಎರಡು ಸ್ವರಾಜ್ಯ ನಿಶಾನೆಗಳನ್ನು ಹಿಡಿದಿದ್ದ ಸಾವಿರಾರು ಜನ ಸ್ವಯಂಸೇವಕರೊಡನೆ ಉತ್ಸವಪೂರ್ವಕವಾಗಿ ಅಧ್ಯಕ್ಷರು ಚಪ್ಪರಕ್ಕೆ ದಯಮಾಡಿಸಿದರು. ಫ್ರಾಂಟಿಯರ ಪ್ರಾಂತದ ರಕ್ತಕವಚಧಾರಿಗಳು, ತುತೂರಿ, ತಮ್ಮಟಿ, ನಗಾರಿಗಳನ್ನು ಬಾರಿಸುತ್ತಿದ್ದರು. ಆ ಮೆರವಣಿಗೆಯಲ್ಲಿ, ಮಹಾತ್ಮಾ ಗಾಂಧಿಯವರೂ, ಮತ್ತು ಉಳಿದ ಕಾಂಗ್ರೆಸ್ ಕಾರ್ಯನಿರ್ವಾಹಕಮಂಡಳಿಯ ಸದಸ್ಯರೂ ಇದ್ದರು. ಸುಭಾಸ್ ಬೋಸ್‌ಕಿ ಜೈ! ಅಬ್ದುಲ್ ಗಫೂರ್ ಖಾನ್‌ಕಿ ಜೈ! ಪಟೇಲ್‌ಕಿ ಜೈ! ಮಹಾತ್ಮಾ ಗಾಂಧೀಕಿ ಜೈ! ಎಂಬುದಾಗಿ ಜನಗಳು ಘೋಷಿಸುತ್ತಾ ಇದ್ದರು. ಇವರು ಉತ್ತರಾಭಿಮುಖವಾಗಿ ತಮ್ಮ ತಮ್ಮ ಆಸನಗಳನ್ನು ಅಲಂಕರಿಸಿದರು. ಸಭಿಕರು ಧರಿಸಿದ ಬಿಳೀ ಟೋಪೀ ಮತ್ತು ಅಂಗಿಗಳು ಸಮುದ್ರದ ತರಂಗಗಳಂತೆ ಶೋಭಿಸುತ್ತಿದ್ದುವು. ಮಧ್ಯದಲ್ಲಿ, ನಾನಾ ಬಣ್ಣದ ಸೀರೆಗಳನ್ನುಟ್ಟಿದ್ದ, ಅನೇಕ ಜನ ಮಹಿಳೆಯರು ವರ್ತುಳಾಕಾರದಿಂದ ನಿಯಮಿತಸ್ಥಳದಲ್ಲಿ ಕುಳಿತಿದ್ದರು. ನಾನಾ ಬಣ್ಣದ ಉಡುಪುಗಳು ನೋಡುವವರ ಕಣ್ಣು ಮನಸ್ಸುಗಳನ್ನು ಸೆಳೆಯುತ್ತಿದ್ದುವು. ರವೀಂದ್ರನಾಥ ಠಾಕೂರರ "ಜನಗಣಮನ" ಎಂಬ ಗೀತೆಯನ್ನು ಹಾಡಿ, ಅನಂತರ ಕಾಂಗ್ರೆಸ್ ಅಧಿವೇಶನವು ಪ್ರಾರಂಭವಾಯಿತು. ಶ್ರೀಯುತ ವಲ್ಲಭಭಾಯಿ ಪಟೇಲರು ತಮ್ಮ ಭಾಷಣವನ್ನು ಪ್ರಾರಂಭಮಾಡುವ ಸಮಯಕ್ಕೆ ಕತ್ತಲಾಗುತ್ತಾ ಬಂದಿತು. ಭಾಷಣಮಾಡುವ ಸ್ಥಳವು ಅನೇಕ ಪ್ರಕಾಶಮಾನಗಳಾದ ದೀಪಗಳಿಂದ ಕೂಡಿ ಚಂದ್ರನ ಕಿರಣಗಳನ್ನು ವಿಜಾರಿಸುವ ಬೆಳಕಿನಿಂದ ಪ್ರಕಾಶಿಸುತ್ತಿತ್ತು. ಅನೇಕ ಬಣ್ಣಗಳ ಬಲ್ಬುಗಳು ಅಲ್ಲಲ್ಲಿ ಹಾಕಲ್ಪಟ್ಟಿದ್ದುವು. ಸೀಲಿ ಮತ್ತು ನೇರಳೆ ಹಣ್ಣಿನ ಬಣ್ಣದ ಛಾಯೆಗಳು ಅಲ್ಲಲ್ಲಿ ಕಾಣಬರುತ್ತಿದ್ದುವು. ಅಜಾದ ಮೈದಾನದ ಹೊರಭಾಗದಲ್ಲಿ ನೂರಾರು ದೀಪಗಳು ಉರಿಯುತ್ತಿದ್ದುವು. ಎರಡು ಮಾರ್ಗ ಪ್ರದೇಶಗಳಲ್ಲಿ ಬಹು ಪ್ರಕಾಶವನ್ನು ಕೊಡುವ, ದೊಡ್ಡ ದೊಡ್ಡ ದೀಪಗಳನ್ನು ಇಟ್ಟಿದ್ದರು. ಮೈದಾನದಲ್ಲೆಲ್ಲ ಶಾಂತಿಭಾವವೇ ತೋರಿಬರುತ್ತಲಿತ್ತು.

ಕರಾಚಿ ಕಾಂಗ್ರೆಸ್ ಪ್ರೆಸಿಡೆಂಟ್ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರ ಭಾಷಣದ ಸಾರಾಂಶ.

ಪರಮ ದೇಶಭಕ್ತರಾದ ಪಂ॥ ಮೋತೀಲಾಲನೆಹರು, ಮೌಲಾನಾ ಮಹಮ್ಮದಾಲಿ, ಸರ್ದಾರ್ ಭಗತ್‌ಸಿಂಗ್ ಇವರ ನಿಧನಕ್ಕೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿ ಭಾಷಣ ಮಾಡಿದ್ದೇನೆಂದರೆ:-

ಭಾರತೀಯನಿಗೆ ಕೊಡುವ ಅತ್ಯಂತ ಶ್ರೇಷ್ಠವಾದ ಪದವಿಯನ್ನು ಸರಳ ರೈತನಾದ ನನಗೆ ನೀವು ಕೊಟ್ಟಿದ್ದೀರಿ. ನೀವು ನನ್ನನ್ನು ರಾಷ್ಟ್ರದ ಪ್ರಥಮಸೇವಕನನ್ನಾಗಿ ಚುನಾಯಿಸಿರುವುದು ನಾನು ಮಾಡಿರುವ ಅಲ್ಪಸ್ವಲ್ಪ ಸೇವೆಗಾಗಿಯಲ್ಲವೆಂದೂ ಆದರೆ ಗುಜರಾಥ ಪ್ರಾಂತವು ಮಾಡಿದ ಅದ್ಭುತವಾದ ಸ್ವಾರ್ಥತ್ಯಾಗದ ಮೆಚ್ಚಿಕೆಗೆಂದೂ ನಾನು ತಿಳಿದಿರುತ್ತೇನೆ. ನೀವೆ ಬಿರಾದ್ರಿಂದ ಗುಜರಾಥನ್ನು ಆರಿಸಿದ್ದೀರಿ. ರಾಷ್ಟ್ರೀಯಜಾಗೃತಿಯು ಈ ನವಯುಗದಲ್ಲಿ ಪ್ರತಿಯೊಂದು ಪ್ರಾಂತವು ಹೃತ್ಪೂರ್ವಕವಾಗಿ ತನ್ನ ಯಾವತ್ತು ಶಕ್ತಿಯನ್ನು ವಿನಿಯೋಗಿಸಿ ಕೆಲಸಮಾಡಿದೆ. ದೇವರದಯೆಯಿಂದ ಈ ಜಾಗೃತಿಯು ನಮ್ಮ ಆತ್ಮಶುದ್ಧಿಗೆ ಸಾಧಕವಾಗಿದೆ.

ಅಹಿಂಸೆಯ ಮಹಿಮೆ.

ಇಂಡಿಯಾದೇಶವು ಪ್ರಪಂಚಕ್ಕೆ ಅಸಾಧಾರಣವಾದ ಅಹಿಂಸಾತ್ಮಕ ಸಾರ್ವಜನಿಕ ಆಂದೋಳನದ ಅದ್ಭುತ ಮಹಿಮೆಯನ್ನು ವ್ಯಕ್ತಪಡಿಸಿದೆ. ಜನಸಮುದಾಯದಲ್ಲಿ ಅಹಿಂಸೆಯ ಚಳವಳಿಯು ಒಬ್ಬ ಕನಸುಗಾರನ ಕನಸಲ್ಲವೆಂದೂ, ಅಥವಾ ಮನುಷ್ಯನ ಬರೀ ಆಲೋಚನೆಯ ಗಗನಕುಸುಮವಲ್ಲವೆಂದೂ, ಆದರೆ ಸತ್ಯಯುಕ್ತವಾದ ವ್ಯವಹಾರಿಕಧರ್ಮವೆಂದೂ ನಮ್ಮ ಜನಾಂಗವು ಜಗತ್ತಿಗೆ ತೋರಿಸಿಕೊಟ್ಟಿದೆ. ಇದುವರೆಗೂ ಹಿಂಸೆಯ ನೋಟದಲ್ಲಿಯೇ ಬಿದ್ದು ಅಹಿಂಸೆಯಲ್ಲಿ ವಿಶ್ವಾಸವಿಲ್ಲದೆ ತೊಳಲುತ್ತಿದ್ದ ಮಾನವಜಾತಿಗೆ ನಮ್ಮ ಚಳವಳಿಯಿಂದ ಅಹಿಂಸೆಯ ಸಾಧನದ ಮಹಿಮೆಯು ಎಷ್ಟು ಸಾಧುವಾದುದೆಂಬುದು ಕನ್ನಡಿಯಂತೆ ಗೊತ್ತಾಗುತ್ತದೆ.

ರೈತರು, ಹೆಂಗಸರು ಮತ್ತು ಹುಡುಗರು

ರೈತರನ್ನು ಅಹಿಂಸೆಯ ಆಂದೋಳನಕ್ಕೆ ತಯಾರುಮಾಡಲು ಆಗುವುದಿಲ್ಲವೆಂದು ಭಾವಿಸಿದ್ದವರಿಗೆಲ್ಲಾ ನಮ್ಮ ರೈತರು ತೋರಿಸಿದ ಧೈರ್ಯವೂ, ಸಹನೆಯೂ ಅತಿರೇಕವಾದುದಲ್ಲದೆ ಅಹಿಂಸಾಚಳವಳಿಯ ಶಕ್ತಿಯನ್ನೂ ವ್ಯಕ್ತಪಡಿಸಿದರು. ಹೆಂಗಸರೂ, ಮಕ್ಕಳೂ ಈ ಚಳವಳಿಯ ಬಹು ಭಾಗವನ್ನು ವಹಿಸಿ ದೇಶಮಾತೆಯ ಕೂಗನ್ನು ತಮ್ಮ ಅಕೃತ್ರಿಮವಾದ ಬುದ್ಧಿಯಿಂದ ತಿಳಿದು ಸೇವೆಗೆ ಬಂದರು. ನಾವು ಈ ಸಮಯದಲ್ಲಿಯೇ ಬದುಕಿರುವದರಿಂದ ನಮಗೆ ಸ್ತ್ರೀಯರೂ, ಮಕ್ಕಳೂ ಮಾಡಿದ ಸ್ವಾರ್ಥತ್ಯಾಗಸೇವೆಯ ನಿಜವಾದ ಪ್ರಮಾಣವನ್ನು ಗ್ರಹಿಸಲಾರೆವು. ಅಹಿಂಸೆಯನ್ನು ಕಾಪಾಡಿದ್ದುದರ ದೊಡ್ಡ ಭಾಗವು ಅವರಿಗೆ ಸೇರಿದ್ದು. ಜಯವು ಅವರಿಂದಲೇ ದೊರೆತಿದ್ದು. ಕೀರ್ತಿಯೂ ಅವರ ಭಾಗಕ್ಕೇ ಸೇರಿದ್ದು.

ಅಮೆರೀಕೆಯ ಸಹಾನುಭೂತಿ.

ಅಹಿಂಸಾದೃಷ್ಟಿಯಿಂದ ನಮ್ಮ ಚಳವಳಿಯು ಇಡೀ ಜಗದ್ವ್ಯಾಪಕವಾದುದು. ಇತರ ಜನಾಂಗಗಳೂ, ಅವರಲ್ಲಿಯೂ ಮುಖ್ಯವಾಗಿ ಅಮೇರಿಕೆಯ ಯುನೈಟೆಡ್‌ಸ್ಟೇಟ್ಸ್ ಜನಾಂಗವೂ ನಮಗೆ ಸಹಾನುಭೂತಿಯನ್ನು ತೋರಿಸಿರುವುದು ಶ್ಲಾಘನೀಯವಾದುದು.

ಗಾಂಧೀ ಇರ್ವಿನ್ ಒಪ್ಪಂದ.

ನಮ್ಮ ಈಗಿನ ಕಾಲವು ಇಂಡಿಯಾಕ್ಕೆ ವೀರಯುಗ. ಗಾಂಧಿ ಇರ್ವಿನ್ ಒಪ್ಪಂದದ ವಿಷಯವನ್ನು ನಾನು ವಿವರಿಸಬೇಕಾಗಿಲ್ಲ. ನಿಮ್ಮ ಒಪ್ಪಿಗೆಯ ನಿರೀಕ್ಷಣೆಯಮೇಲೆ ವರ್ಕಿಂಗ್ ಕಮಿಟಿಯು ಅದಕ್ಕೆ ಒಪ್ಪಿರುತ್ತದೆ. ವರ್ಕಿಂಗ್ ಕಮಿಟಿಯು ನಮ್ಮ ಪ್ರತಿನಿಧಿಯಾಗಿ ಸ್ವೀಕರಿಸುವುದನ್ನು ನೀವು ಅನುಮೋದಿಸಬೇಕೆಂದು ನಿಮ್ಮಗಳನ್ನು ಆಹ್ವಾನಿಸಿದೆ. ಅದನ್ನು ನಿರಾಕರಿಸಲು ನಿಮಗೆ ಯಾವ ಕಾರಣವೂ ಇಲ್ಲವೆಂದು ನನ್ನ ತಿಳವಳಿಕೆ. ಈಗಿನ ವರ್ಕಿಂಗ್‌ಕಮಿಟಿಯಮೇಲೆ ನಿಮಗೆ ವಿಶ್ವಾಸವಿಲ್ಲದಿದ್ದರೆ ಬೇರೆಯವರನ್ನು ನೇಮಿಸಬಹುದು. ಎರಡು ಪಕ್ಷಗಳಿಗೂ ಗೌರವಾರ್ಹವಾದ ಈ ಒಪ್ಪಂದವನ್ನು ನೀವು ಸ್ವೀಕರಿಸುವಿರೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ. ನಾವು ಸಂಧಿಗೆ ಒಪ್ಪದಿದ್ದರೆ ತಪ್ಪುಮಾಡಿದಂತಾಗಿ ಕಳೆದ ವರ್ಷದ ನಮ್ಮ ಸ್ವಾರ್ಥತ್ಯಾಗವು ನಿಷ್ಫಲವಾಗುತ್ತಿತ್ತು.

ಸತ್ಯಾಗ್ರಹಿಗಳಾದ ನಾವು ಯಾವಾಗಲೂ ಶಾಂತಿಗೆ ಸಿದ್ಧರಾಗಿಯೂ ಕಾತರಪಡುವರಾಗಿಯೂ ಇರಬೇಕಾದುದು ನಮ್ಮ ಧರ್ಮವಾಗಿದೆ. ಆದರಂತೆ ಸಮಾಧಾನಕ್ಕೆ ಅವಕಾಶವು ಒದಗಿದಾಗ ಅದನ್ನು ಉಪಯೋಗಮಾಡಿಕೊಂಡೆವು. ಇದಕ್ಕೆ ಅನೇಕ ಕಾರಣಗಳುಂಟು. ರೌಂಡುಟೇಬಲ್ ಸಮ್ಮೇಳನದಲ್ಲಿ ಬ್ರಿಟಿಷ್ ಇಂಡಿಯಾದ ಪ್ರತಿನಿಧಿಗಳು ಪೂರ್ಣ ಜವಾಬ್ದಾರಿಯನ್ನು ಸ್ಪಷ್ಟವಾಗಿ ಕೇಳಿದರು. ಬ್ರಿಟಿಷ್ ರಾಜಕೀಯ ಪಂಗಡಗಳು ಈ ಸ್ಥಿತಿಯನ್ನು ಒಪ್ಪಿದುವು. ಮುಖ್ಯಮಂತ್ರಿಗಳೂ, ವೈಸ್ರಾಯರೂ, ನಮ್ಮ ದೇಶದ ಅನೇಕ ದೊಡ್ಡ ಮನುಷ್ಯರೂ ಕಾಂಗ್ರೆಸ್ಸಿಗೆ ಮೊರೆಯಿಟ್ಟರು. ಅನಂತರ ವರ್ಕಿಂಗ್ ಕಮಿಟಿಯವರು ಆಲೋಚಿಸಿದ್ದೇನೆಂದರೆ ಗೌರವಾರ್ಹವಾದ ಸಂಧಿಗೆ ಅವಕಾಶವಿದ್ದು ಕಾಂಗ್ರೆಸ್ಸಿಗೆ ಯಾವ ಹಕೋಟಿಯೂ, ಅಪ್ರತಿಷ್ಠೆಯೂ ಇಲ್ಲದೆ ದೇಶಕ್ಕೆ ಅತ್ಯಂತ ಹಿತವಾದುದಾದರೋ ಅದನ್ನು ಮುಂದೆ ಚರ್ಚೆಗೆ ತರಲು ಅವಕಾಶವಿದ್ದರೆ, ಅದನ್ನು ಉಪಯೋಗಿಸೋಣ ಎಂಬುದೇ. ನಾವು ಈ ಪ್ರಯತ್ನದಲ್ಲಿ ವಿಫಲವಾದರೆ ಕಷ್ಟವನ್ನು ಅನುಭವಿಸುವುದಲ್ಲದೆ ಬೇರೆ ದಾರಿಯೇ ಇಲ್ಲ. ನಾವು ಪುನಃ ಸಮರವನ್ನು ಹೂಡಿದರೆ ಅದನ್ನು ಪೃಥ್ವಿಯಲ್ಲಿರುವ ಯಾವ ಶಕ್ತಿಯೂ ತಡೆಯಲಾರದು.

ಪೂರ್ಣಸ್ವರಾಜ್ಯ ಮತ್ತು ರಕ್ಷಣೆಗಳು.

ಒಪ್ಪಂದದ ಶರತ್ತಿನಲ್ಲಿ ನಮಗೆ ಪೂರ್ಣ ಸ್ವರಾಜ್ಯದ ಧರಾವನ್ನು ಒತ್ತಿ ಹೇಳುವುದಕ್ಕೂ ಸೈನ್ಯ, ಪರಕೀಯ ಆಡಳಿತ, ಆರ್ಥಿಕ ಬಾಬುಗಳು ಇವುಗಳ ಮೇಲೆ ಭಾರತೀಯರಿಗೆ ಸಂಪೂರ್ಣ ಅಧಿಕಾರವಿರಬೇಕೆಂದು ಕೇಳುವುದಕ್ಕೂ ನಮಗೆ ಪೂರ್ಣ ಅವಕಾಶವಿದೆ. ದಿವಂಗತರಾದ ಪಂಡಿತ ಮೋತೀಲಾಲರು ಹೇಳುತ್ತಿದ್ದಂತೆ ಎಬ್ಬರ ಕೈಯಿಂದ ಇನ್ನೊಬ್ಬರ ಕೈಯ್ಯಿಗೆ ಅಧಿಕಾರ ಹೋಗುವಾಗ್ಗೆ ಕೆಲವು ರಕ್ಷಣೆಗಳು ಇದ್ದೇ ಇರುತ್ತವೆ. ಇದುವರೆಗೂ ಅಧಿಕಾರವನ್ನು ಅನುಭವಿಸಿದವರಿಗೆ ಕೆಲವು ಪರಿಹಾರ ಅಥವಾ ಸಹಾಯವು ಕೊಡಲ್ಪಡಬೇಕು. ಇವೇ ರಕ್ಷಣೆಗಳು. ಎರಡು ನೂರು ವರ್ಷಗಳಿಂದಲೂ ಹೆಚ್ಚಾಗಿ ಇಂಡಿಯಾ ದೇಶವು ಅವ್ಯಕ್ತವಾದ ಸೂರೆಗೆ ಗುರಿಯಾಗಿರುವುದರಿಂದ ಈಗ ನಾವು ಅನೇಕ ಬಾಬುಗಳಲ್ಲಿ ಹೊರಗಿನವರ ಸಹಾಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಇಂಗ್ಲೆಂಡು ನಮಗೆ ಈ ಸಹಾಯವನ್ನು ಕೊಡಲು ಬಯಸಿದರೆ ನಾವು ಸಂತೋಷದಿಂದ ಅಂಗೀಕರಿಸುವೆವು. ನಮಗೆ ಸೈನ್ಯವು ದಕ್ಷತೆಯಿಂದಿರುವುದಕ್ಕೆ ಸಹಾಯವು ಬೇಕು. ಈ ಭಾಗದಲ್ಲಿ ನಾವು ಇಂಗ್ಲೀಷು ಸಹಾಯವನ್ನು ಏಕೆ ತೆಗೆದುಕೊಳ್ಳಬಾರದು? ನಾನು ನಿಮಗೆ ಒಂದು ಪರಿಣಾಮಕಾರಿಯಾದ ಉದಾಹರಣೆಯನ್ನು ಕೊಟ್ಟಿದ್ದೇನೆ. ಸೈನ್ಯದ ಭಾಗದಲ್ಲಿ ರಕ್ಷಣೆಯೆಂದರೆ—ನಾವು ಬ್ರಿಟಿಷ್ ಮಿಲಿಟರಿ ಅಧಿಕಾರಿಗಳನ್ನು ಇಟ್ಟುಕೊಳ್ಳಬಹುದು. ಬ್ರಿಟಿಷ್ ಸೈನಿಕರನ್ನೂ ಇಟ್ಟುಕೊಳ್ಳಬಹುದು. ಆದರೆ ನಮ್ಮ ದೇಶದ ಸೈನ್ಯದ ಆಡಳಿತವು ಬ್ರಿಟಿಷರಿಂದ ನಡೆಸಲ್ಪಡತಕ್ಕದ್ದಲ್ಲ. ನಮ್ಮಿಂದಲೇ ನಡೆಯಿಸಲ್ಪಡಬೇಕು. ಆದರೆ ಕೃತಜ್ಞತೆಯಿಂದ ನಾವು ಬ್ರಿಟಿಷರ ಹಿತೋಕ್ತಿಗಳನ್ನು ಸ್ವೀಕರಿಸಬಹುದು. ಆದರೆ ಅವರ ಅಧಿಕಾರವಾಣಿಯು ನಮಗೆ ಬೇಕಿಲ್ಲ. ನಿಜವಾದ ಸಂಗತಿ ಏನೆಂದರೆ, ಇಂಡಿಯಾದಲ್ಲಿ ಇರುವ ಈಗಿನ ಬ್ರಿಟಿಷ್ ಸೈನ್ಯವು ಇಂಡಿಯಾದ ಆಕ್ರಮಣಸೈನ್ಯ. ಅದನ್ನು ಇಂಡಿಯಾದ ರಕ್ಷಣೆಯ ಸೈನ್ಯವೆಂಬುದಾಗಿ ಕರೆಯುವುದು ತಪ್ಪು. ನಿಜವಾಗಿಯೂ ಈ ದೇಶದಲ್ಲಿ ಏನಾದರೂ ದಂಗೆ ಮೊದಲಾದುವುಗಳಾದರೆ ಬ್ರಿಟಿಷ್‌ರ ಹಿತವನ್ನೂ ಬ್ರಿಟಿಷರ ಗಂಡಸರು ಹೆಂಗಸರನ್ನೂ ಕಾಪಾಡುವುದಕ್ಕಾಗಿಯೇ ಆ ಸೈನ್ಯವು ಉಪಯೋಗಿಸಲ್ಪಡುತ್ತಿರುವುದು. ಯಾವ ಸಂದರ್ಭದಲ್ಲಿಯೂ ಭಾರತೀಯ ಸೈನ್ಯವು ಭಾರತೀಯ ರಕ್ಷಣೆಗಾಗಿ ಉಪಯೋಗಿಸಲ್ಪಟ್ಟಿದ್ದನ್ನು ನನ್ನ ನೆನಪಿಗೆ ತಂದುಕೊಳ್ಳಲಾರೆನು. ಇಂಡಿಯಾದ ಸೈನ್ಯವು ಪರದೇಶಗಳಮೇಲೆ ಅನೇಕ ಸಾರಿ ಉಪಯೋಗಿಸಲ್ಪಟ್ಟಿರುವುದು. ಆದರೆ ಅದು ಇಂಡಿಯಾದ ಸಂರಕ್ಷಣೆಗಲ್ಲ. ಅಫ್ಘಾನಿಸ್ತಾನದ ಮತ್ತು ಸರಹದ್ದಿನ ಪ್ರಾಂತಗಳಲ್ಲಿ ಬ್ರಿಟಿಷರೇ ತಾವಾಗಿಯೇ ದಂಡೆತ್ತಿ ಹೋದ ಸಂದರ್ಭಗಳು. ನಮಗೆ ಪರಕೀಯರು ದಂಡೆತ್ತಿ ಬರುವರೆಂಬ ಹೆದರಿಕೆಯು ಅನಾವಶ್ಯಕ. ನಮಗೆ ನಿಜವಾಗಿಯೂ ಸೈನ್ಯವು ಬೇಕಾದರೆ ಇಂಥಹ ಜನರ ಉತ್ಪನ್ನವನ್ನೆಲ್ಲ ತಿನ್ನುವ ಸೈನ್ಯವು ಬೇಕಿಲ್ಲ. ಕಾಂಗ್ರೆಸ್ಸಿಗೆ ಇಂದು ಅವಕಾಶವಿದ್ದರೆ ಸೈನ್ಯವು ಎಷ್ಟಿರಬೇಕೋ ಅಷ್ಟಕ್ಕೆ ಅದನ್ನು ತಗ್ಗಿಸುತ್ತಿತ್ತು.

ಆರ್ಥಿಕ ಬಾಬುಗಳು.

ಇಂಡಿಯಾದೇಶವು ಅಭಿವೃದ್ಧಿಯನ್ನು ಹೊಂದಬೇಕಾದರೆ ತನ್ನ ಸಂಪತ್ತಿನಮೇಲೆ ಸಂಪೂರ್ಣವಾದ ಅಧಿಕಾರವನ್ನು ಹೊಂದಿರಬೇಕು. ನಾವು ಆರ್ಥಿಕ ಬಾಬುಗಳಲ್ಲಿ ಬ್ರಿಟಿಷ್ ಸರ್ಕಾರದೊಡನೆ ವಿಭಾಗಮಾಡಿಕೊಳ್ಳುವುದಾಗುವುದಿಲ್ಲ.

(ಸಶೇಷ).

ಪ್ರೆಸಿಡೆಂಟರ ಭಾಷಣವಾದಮೇಲೆ ಮೂರು ಠರಾವುಗಳು ಸೂಚಿಸಲ್ಪಟ್ಟುವು. ಮೊದಲನೆಯದು ಪಂಡಿತ ಮೋತೀಲಾಲರ ಮತ್ತು ಮೌಲಾನಾ ಮಹಮ್ಮದಾಲಿಯವರ ಮರಣದ ಪ್ರಯುಕ್ತ ದುಃಖಸೂಚನೆಯ ಠರಾವು. ಎರಡನೆಯದು ಕಾನ್ಪುರದ ಗಲಭೆಗಳ ಠರಾವು. ಮೂರನೆಯದು ರಾಜಕೀಯ ಖೈದಿಗಳ ಬಿಡುಗಡೆಯ ಠರಾವು. ಅನಂತರ ಜವಾಹರಲಾಲರು ಭಗತ್‌ಸಿಂಗರ ಠರಾವನ್ನು ಸೂಚಿಸಿದರು. ಮಾಲವ್ಯರವರು ಅದನ್ನು ಅನುಮೋದಿಸುತ್ತಾ ಸಭಿಕರ ಕಣ್ಣಿನಲ್ಲಿ ಕಣ್ಣೀರು ತೊಟ್ಟಿಕ್ಕುವಂತೆ ಭಾಷಣಮಾಡಿದರು.

ಜವಾಹರಲಾಲರು ಮಾಡಿದ ಭಾಷಣದ ಸಾರಾಂಶವೇನೆಂದರೆ—

ಭಗತ್‌ಸಿಂಗರ ತಲಾರೋಹಣದ ಠರಾವು ಅದನ್ನು ತರುಣರು ಮಾಡಿದಂಥ ಗಾಂಧಿಯವರಿಂದಲೋ ಅಥವಾ ಈ ಕಾಂಗ್ರೆಸ್ಸಿನ ಸೂತ್ರಧಾರಿಗಳಾದಂಥ ಪಟೇಲರವರಿಂದಲೋ ಸೂಚಿಸಲ್ಪಡಲು ಅರ್ಹವಾದದ್ದು. ಈ ಸಣ್ಣವಯಸ್ಸಿನ ಹುಡುಗನು ಇಷ್ಟೊಂದು ಪ್ರಸಿದ್ಧಿಗೆ ಬಂದು ಇತರರಿಗೆ ಮಾರ್ಗದರ್ಶಕನಾದದ್ದು ಏಕೆ ಬಲ್ಲಿರಾ? ಅಹಿಂಸಾಧರ್ಮದ ಆಚಾರ್ಯನಾದ ಗಾಂಧಿಯು ಭಗತ್‌ಸಿಂಗನಿಗಾಗಿ ಅತ್ಯಂತ ಶ್ಲಾಘನೆಯನ್ನು ಕೊಡಲು ಆತುರಪಡುತ್ತಿರುವುದೇಕೆ ಬಲ್ಲಿರಾ? ಪೆಶಾವರ್ ಶೋಲಾಪುರ್ ಬೊಂಬಾಯಿ ಮತ್ತು ಇತರ ಕಡೆಗಳಲ್ಲಿ ನೂರಾರು ಜನರು ಸತ್ತದ್ದರೂ ಇವನೊಬ್ಬನಿಗೇಕೆ ಅಗ್ರಪೂಜೆ ಬಲ್ಲಿರಾ? ಭಗತ್‌ಸಿಂಗನ ಸ್ವಾರ್ಥತ್ಯಾಗ ಧೈರ್ಯ ಇವು ಅತ್ಯುನ್ನತ ಶಿಖರವನ್ನೇರಿದ್ದುವು. ಆದರೆ ಆತನನ್ನು ಮರಾಮಾಡುವ ಉದ್ವೇಗದಲ್ಲಿ ಅಹಿಂಸಾತತ್ವವನ್ನು ಮರೆಯಕೂಡದು.

ನಾನು ಹಿಂಸಾತತ್ವಕ್ಕೆ ಹಿಂಜರಿಯುವವನಲ್ಲ. ಆದರೆ ಈಗ ಆ ಮಾರ್ಗವು ದೇಶದ ಕ್ಷೇಮದೃಷ್ಟಿಯಿಂದ ಅನುಷ್ಠಾನಕ್ಕೆ ಯೋಗ್ಯವಾಗಿಲ್ಲ. ಒಂದು ಸಲ ಶಕ್ತಿಯನ್ನು ಹಿಂದಿನಮೇಲೆ ಆದೀ ಪ್ರತೀಕಾರದಮಾಡಿ ಮತ್ತರ್ಯೇಷಕ್ಕೆ ಅವಕಾಶಕೊಡಬಹುದೆಂಬ ಸಂದೇಹವಿದೆ. ಆದ್ದರಿಂದ ಅದನ್ನು ಮನಸ್ಸಿನಲ್ಲಿಯೇ ಇಟ್ಟುಕೊಳ್ಳುವುದು ಸರಿಯಲ್ಲ. ಆದ್ದರಿಂದಲೇ ಈ ಠರಾವಿನಲ್ಲಿ ಹಿಂಸಾಮಾರ್ಗಕ್ಕೆ ವ್ಯತಿರಿಕ್ತವಾದ ಅಂಶವು ಸೇರಿಸಲ್ಪಟ್ಟಿದೆ.

ಈಗ ದೇಶವು ಸಂಧಾನದಲ್ಲಿ ತೊಡಗಿದೆ. ನಿಜವಾದ ಶಾಂತಿಯು ಬರುತ್ತದೋ! ಇಲ್ಲವೋ ಹೇಳಲಾಗುವುದಿಲ್ಲ. ಪುನಃ ಯುದ್ಧವನ್ನು ಆರಂಭಿಸಬೇಕಾಗಬಹುದು. ಅದಕ್ಕೆ ನಾವು ಸಿದ್ಧರಾಗಿರಬೇಕು. ಹಿಂದುಸ್ಥಾನದ ಬಂಧವಿಮೋಚನೆಯಾಗುವುದರೊಳಗಾಗಿ ಎಷ್ಟು ಭಗತ್‌ಸಿಂಗರನ್ನು ಬಲಿಕೊಡಬೇಕೋ ಹೇಳಲಾಗುವುದಿಲ್ಲ. ನಮ್ಮ ದೇಶಾಭ್ಯುದಯಕ್ಕೋಸ್ಕರ ನಾವು ಗೆಲುವಿನಿಂದ ಧೀರತೆಯಿಂದ ಸಾಯುವುದನ್ನು ಭಗತ್‌ಸಿಂಗನಿಂದ ಕಲಿಯಬೇಕು.

ಪಂಡಿತ ಮಾಲವೀಯರು ಈ ಠರಾವನ್ನು ಅನುಮೋದಿಸುತ್ತಾ ಮಾಡಿದ ಭಾಷಣ.

ತರುಣರು ಕ್ರೂರಮಾರ್ಗಗಳನ್ನು ಸ್ವೀಕರಿಸುವುದನ್ನು ನೋಡಿ ಖೇದಪಡಿಸುತ್ತದೆ. ಯಾವುದರಿಂದಲೋ ನಿರಾಶರಾದಂತೆ ಕಾಣುವುದು.

ತರುಣರನ್ನು ಶಾಂತಿಪರರಾಗುವಂತೆ ಮಾಡುವುದಕ್ಕೆ ಸರ್ಕಾರದವರದೂ ಬಹಳ ಜವಾಬ್ದಾರಿ ಇದೆ. ಆದರೂ ನಾವು ತರುಣರನ್ನು ಕ್ರೂರಮಾರ್ಗಗಳನ್ನು ಬಿಡುವಂತೆ ಒತ್ತಿ ಹೇಳುವೆವು. ನಾವು ತರುಣರನ್ನು ಅತ್ಯಂತವಾಗಿ ಪ್ರೀತಿಸುವುದೇ ಇದಕ್ಕೆ ಕಾರಣ. ಹಿಂಸಾಮಾರ್ಗವು ಅತ್ಯಂತ ಅಪಾಯಕರವಾದುದೆಂದು ನಮಗೆ ಚೆನ್ನಾಗಿ ಗೊತ್ತು.

ನಮಗೆ ಇನ್ನೂ ಅನೇಕ ಭಗತ್‌ಸಿಂಗರನ್ನು ಬಲಿಕೊಡಲು ಇಷ್ಟವಿಲ್ಲ. ಹಿಂಸಾಮಾರ್ಗದಲ್ಲಿರುವುದಕ್ಕಿಂತಲೂ, ಅಧಿಕವಾದ ಧೈರ್ಯಸಾಹಸಗಳು ಅಹಿಂಸಾಮಾರ್ಗದಲ್ಲಿ ಅವಶ್ಯಕ. ಆದ್ದರಿಂದ ನಾನು ನಮ್ಮ ತರುಣರಿಗೆ ಉಪದೇಶಮಾಡುವುದೇನೆಂದರೆ ಭಗತ್‌ಸಿಂಗನ ಧೈರ್ಯಸಾಹಸಗಳನ್ನು ಗಾಂಧಿಯ ಅಹಿಂಸಾಮಾರ್ಗವನ್ನು ಉಪಯೋಗಿಸಿರಿ.

ಲಾಹೋರಿನ ತಲಾರೋಹಣದಿಂದ ಒಂದು ಅಂಶವು ಸ್ಪಷ್ಟವಾಯಿತು. ಪರರ ಆಳಿಕೆಯಲ್ಲಿ ನಮ್ಮ ಸ್ವಾಭಿಮಾನವನ್ನುಳಿಯಿಸಿಕೊಳ್ಳುವುದು ಸಾಧ್ಯವಿಲ್ಲ. ಜಗತ್ಪ್ರಸಿದ್ಧನಾದ ಗಾಂಧಿಯು ಅವರ ಶಿಕ್ಷೆಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತಿರುವಾಗ ಅದನ್ನು ಧಿಕ್ಕರಿಸುವುದಕ್ಕೆ ವೈಸ್ರಾಯರಿಗೆ ಹಿಂದೂಸ್ಥಾನದಲ್ಲಿ ಮಾತ್ರವೇ ಸಾಧ್ಯ. ಮತ್ತಾವ ದೇಶದಲ್ಲಿಯೂ ಸಾಧ್ಯವಿಲ್ಲ. ಆದ್ದರಿಂದ ತರುಣರು ರಾಷ್ಟ್ರವು ಸ್ವತಂತ್ರವಾಗುವವರೆಗೂ ವಿಶ್ರಾಂತರಾಗುವುದಿಲ್ಲವೆಂದು ಪ್ರತಿಜ್ಞೆಮಾಡಬೇಕು.

ನೂತನ ಕಾರ್ಯಕಾರಿ ಸಮಿತಿಗೆ ಮೆಂಬರರ ಚುನಾವಣೆ.

ಗಾಂಧಿಜೀಯವರ ಭಾಷಣ.

ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ 1 ನೇ ತಾ॥ ನ ದಿವಸ ಸೇರಿದ ಅಖಿಲಭಾರತ ಮಹಾಸಭೆಯು ಕಾರ್ಯಕಾರಿ ಸಮಿತಿಯು ಮೆಂಬರರನ್ನು ಹೊಸದಾಗಿ ಚುನಾಯಿಸಿಕೊಂಡಿತು. ಅದರಲ್ಲಿ ಶ್ರೀ ಸರದಾರ್ ಪಟೇಲ್. ಪಂಡಿತ ಜವಾಹಿರಲಾಲ್ ಮಿ॥ ಮಹಮದ್ ಜಯರಾಂದಾಸ್ ದೌಲತ್‌ರಾಮ್, ಜಮ್ನಾಲಾಲ ಬಜಾಜ್, ಮಹಾತ್ಮಾ ಗಾಂಧಿ, ಎಂ. ಎಸ್. ಅಣೆ, ಶ್ರೀಮತಿ ಸರೋಜಿನಿನಾಯುಡು, ಅಲಂ, ಬಾಬು ರಾಜೇಂದ್ರ ಪ್ರಸಾದ್, ಸರದಾರ್ ಶಾರ್ದೂಲಸಿಂಗ್, ಡಾ॥ ಅನ್ಸಾರಿ, ಮೌಲಾನಾ ಅಬ್ದುಲ್ ಕಲಾಮ್ ಅಜಾದ್, ಬಾಬು ಜೆ. ಎಂ. ಸೇನಗುಪ್ತ, ಮತ್ತು ಶ್ರೀ ಕೆ. ಎಫ್. ನರಿಮನ್.

ಮಹಾತ್ಮಾ ಗಾಂಧಿಯವರು ಈ ಮೆಂಬರುಗಳ ಲಿಸ್ಟನ್ನು ಸಭೆಯಮುಂದಿರಿಸಿ ಹೇಳಿದ್ದೇನೆಂದರೆ, ಈ ಲಿಸ್ಟಿಗೆ ನಾನೇ ಪೂರ್ತಿಯಾದ ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತೇನೆ. ಕೆಲವು ಹೆಸರುಗಳನ್ನು ಉದ್ದೇಶಪೂರ್ವಕವಾಗಿಯೇ ನಾನು ಬಿಟ್ಟಿರುತ್ತೇನೆ. ಪ್ರೆಸಿಡೆಂಟರೇ ತಮ್ಮ ಮಂತ್ರಿಮಂಡಲವನ್ನು ಚುನಾಯಿಸುವುದು ಸಂಪ್ರದಾಯವಿರುತ್ತದೆ. ಕಾಂಗ್ರೆಸ್ಸಿನ ನಿಯಮಗಳಲ್ಲಿ

[6ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೧ ನೇ ಏಪ್ರಿಲ್ ತಾ|| ೬ನೆಯ ಸೋಮವಾರ.

ಕರಾಚಿ ಕಾಂಗ್ರೆಸ್.

ಕಳೆದ ತಿಂಗಳು ೨೯ ನೆಯ ತಾರೀಖಿನ ದಿವಸದಿಂದ ಪ್ರಾರಂಭಗೊಂಡ ಕರಾಚಿಯ ಕಾಂಗ್ರೆಸ್ಸಿನ ಅಧಿವೇಶನವು 31 ನೆಯ ತಾರೀಖಿನ ದಿವಸ ಪರಿಸಮಾಪ್ತಿಗೊಂಡಿತು. ಈ ಸಾರಿಯ ಅಧಿವೇಶನವು ಅನೇಕ ಪ್ರಾಮುಖ್ಯವಿಷಯಗಳಿಂದೊಡಗೂಡಿರುವುದರಿಂದ ಚರಿತ್ರಾರ್ಹವಾದುದಾಗಿರುತ್ತದೆ. ಈ ಕಾಂಗ್ರೆಸ್ಸಿನ ತೀರ್ಮಾನಗಳಲ್ಲಿ ದಿಲ್ಲಿಯ ಒಪ್ಪಂದವನ್ನು ಸರ್ವಾನುಮತಿಯಿಂದ ಒಪ್ಪಿದುದೇ ಮೊದಲನೆಯದಾಗಿದೆ. ಕಾಂಗ್ರೆಸ್ಸಿನವರು ಈ ಒಪ್ಪಂದವನ್ನು ತಿರಸ್ಕರಿಸಿದ್ದರೆ ದೇಶವು ಇನ್ನೂ ಅನೇಕ ಕಷ್ಟಪರಂಪರೆಗಳಿಗೀಡಾಗಬೇಕಾಗಿದ್ದಿತು. ಈ ಒಪ್ಪಂದವನ್ನು ತೊಡಕಿಲ್ಲದೆ ಅಂಗೀಕರಿಸಿದ ವಿಷಯವು ಮಹಾತ್ಮಗಾಂಧಿಯವರಿಗೆ ಜಯಪ್ರದವಾದ ಅಂಶವಾಗಿದೆ. ಕಾಂಗ್ರೆಸ್ಸಿನವರು ದೀರ್ಘದೃಷ್ಟಿಯಿಂದ ಪರ್ಯಾಲೋಚಿಸಿ ಈ ವಿಷಯದಲ್ಲಿ ಬಹು ಜಾಣ್ಮೆಯನ್ನು ವ್ಯಕ್ತಪಡಿಸಿದರು. ಇನ್ನು ಕಾಲವಿಳಂಬವನ್ನು ಮಾಡದೆ ಕಾಂಗ್ರೆಸ್‌ನವರು ತೋರಿಸಿರುವ ನೈಜ ಸಹಾನುಭೂತಿಯನ್ನು ವಿಶ್ವಾಸಪೂರ್ವಕವಾಗಿ ಅಂಗೀಕರಿಸಿ ಕ್ಷಿಪ್ರದಲ್ಲಿಯೇ ಮುಂದಿನ ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಪ್ರಭುತ್ವದವರನ್ನವಲಂಬಿಸಿರುತ್ತದೆ.

ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೊರಡಲು ಕಾಂಗ್ರೆಸ್ ಪಕ್ಷದಿಂದ ಮಹಾತ್ಮಗಾಂಧಿಯವರು ರಾಯಭಾರದ ನಾಯಕತ್ವವನ್ನು ವಹಿಸಿರುವುದಂತೂ ಕೇವಲ ಪ್ರಶಂಸನೀಯವಾಗಿದೆ. ನಮ್ಮ ಪವಿತ್ರ ಭಾರತ ಮಾತೃಭೂಮಿಯ ಹಿತಾಹಿತಗಳನ್ನು ಕೂಲಂಕಷವಾಗಿ ತಿಳಿದು ಪ್ರಯತ್ನಶೀಲರಾಗಿರುವವರು ಇವರಿಗಿಂತಲೂ ಸಮರ್ಥರಾದವರು ನಮ್ಮ ಭರತಖಂಡದಲ್ಲಿಲ್ಲ. ಮಹಾತ್ಮರು ಗಾಢನಿದ್ರೆಯಲ್ಲಿದ್ದ ರಾಷ್ಟ್ರವನ್ನು ತಮ್ಮ ಅನುಪಮ ಚೈತನ್ಯದಿಂದಲೂ, ಆತ್ಮಶಕ್ತಿಯಿಂದಲೂ, ಅಸಾಧಾರಣ ಮೇಧಾಶಕ್ತಿಯಿಂದಲೂ ಜಾಗೃತಿಗೊಳಿಸಿರುತ್ತಾರೆ. ಇವರ ಅದ್ಭುತಶಕ್ತಿಯನ್ನು ನೋಡಿ ಪ್ರಪಂಚವೇ ಬೆರಗಾಗಿದೆ. ಮಹಾತ್ಮರು ಸಂಕುಚಿತಾತ್ಮರಾದ ರಾಷ್ಟ್ರನಾಯಕರಲ್ಲಿ ಸೇರಿದವರಲ್ಲ. ಅಮೇರಿಕೆಯ ಹೋಲ್ಮ್ಸ್ ಎಂಬ ಘನವಿದ್ವಾಂಸರು—ಈಗ ಹತ್ತುವರ್ಷಗಳ ಹಿಂದೆ ಜಗತ್ತಿನಲ್ಲಿ ರಷಿಯಾದೇಶದ ಲೆನಿನ್, ಫ್ರಾನ್ಸ್ ದೇಶದ ರೋಲೆಂಡ್, ಹಿಂದುಸ್ಥಾನದ ಗಾಂಧಿ, ಈ ಮೂರು ಜನಗಳು ಮಹಾಪುರುಷರು. ಇವರಲ್ಲಿ ಲೆನಿನ್‌ರವರು ನೆಪೋಲಿಯನ್‌ಬೋನಾಪಾರ್ಟ್‌ನಂತೆ ಅದ್ಭುತ ಕಾರ್ಯಸಾಧನಸಾಮರ್ಥ್ಯವುಳ್ಳವರು. ಫ್ರಾನ್ಸ್ ದೇಶದ ರೋಲೆಂಡ್‌ರವರು ಟಾಲಸ್ಟಾಯನಂತೆ ತತ್ವಜ್ಞಾನವಿಶಾರದರು. ಗಾಂಧಿಯವರು ಯೇಸುಕ್ರಿಸ್ತನಂತೆ ಜಗತ್ತಿನ ಹಿತಕ್ಕಾಗಿ ತಮ್ಮ ಪ್ರಾಣವನ್ನು ಸಮರ್ಪಿಸುವರು. ಲೆನಿನ್‌ನ ಕಾರ್ಯಸಾಧನಸಾಮರ್ಥ್ಯವೂ, ರೋಲೆಂಡ್‌ರವರ ತತ್ವಜ್ಞಾನನೈಪುಣ್ಯವೂ ಗಾಂಧಿಯವರೊಬ್ಬರಲ್ಲಿಯೇ ಸಮಾವೇಶವಾಗಿರುವುದರಿಂದ ಈ ಮೂರು ಜನ ಮಹಾಪುರುಷರಲ್ಲಿ ಗಾಂಧಿಯವರೇ ಅಗ್ರಸ್ಥಾನಪಡೆದವರೆಂದು ಮ|| ಗಾಂಧಿಯವರಲ್ಲಿ ನೈಜವಾಗಿರುವ ಅಸಿತರ ಸಾಧಾರಣ ಶಕ್ತಿಯನ್ನು ಕೊಂಡಾಡಿರುತ್ತಾರೆ. ಈ ಮಹಾಪಂಡಿತರ ಅಭಿಪ್ರಾಯಕ್ಕೆ ಜೆ. ಟಿ. ಸಂಡರ್‌ಲೆಂಡ್ ಮೊದಲಾದ ಇತರ ಅಮೇರಿಕೆಯ ವಿದ್ವನ್ಮಣಿಗಳು ಸಹ ತ್ರಿಕರಣಪೂರ್ವಕ ಒಪ್ಪಿಗೆಯನ್ನಿತ್ತಿರುವರು. ರೋಲೆಂಡ್‌ರವರು ಮಹಾತ್ಮಗಾಂಧಿಯವರ ಚರಿತ್ರೆಯನ್ನು ಫ್ರಾನ್ಸ್ ಜನರ ಉಪಯೋಗಾರ್ಥವಾಗಿ ಫ್ರೆಂಚ್ ಭಾಷೆಯಲ್ಲಿ ಬರೆದಿರುವರು. ಆದುದರಿಂದ ಇಂಥ ಭೂಮಿತೂಕದ ತಾಳ್ಮೆಯುಳ್ಳ ಮಹಾತ್ಮ ಗಾಂಧಿಯವರು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗುವ ರಾಯಭಾರದ ಮುಖ್ಯ ನಾಯಕತ್ವವನ್ನು ವಹಿಸಿರುವದು ಇಡೀ ಜಗತ್ತಿಗೇ ಶ್ಲಾಘನೀಯವಾಗಿರುವುದಲ್ಲದೆ ಭಾರತೀಯರ ಪುಣ್ಯೋದಯವಿಷ್ಟೆಂದು ವರ್ಣಿಸಲು ಶಕ್ಯವಿಲ್ಲ.

ಕರಾಚಿಯ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರು ತಯಾರಿಸಿರುವ ಪ್ರಜೆಗಳ ಆಜನ್ಮಸಿದ್ಧವಾದ ಹಕ್ಕುಗಳ ಠರಾವು ಸರ್ವಾನುಮತಿಯಿಂದ ಪಾಸಾದ ವಿಷಯವನ್ನು ನಮ್ಮ ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಕೊಟ್ಟಿರುತ್ತೇವೆ. ಮಹಾತ್ಮಾಗಾಂಧಿಯವರು ಈ ಹಕ್ಕುಗಳ ಪಟ್ಟಿಯನ್ನು ಹಂಗಾಮಿಯಾಗಿ ಅವಸರದಲ್ಲಿ ತಯಾರಿಸಿರುವುದಾಗಿ ಹೇಳಿದ್ದರೂ ಅವುಗಳನ್ನು ಪರಿಶೀಲಿಸಿದವರಿಗೆ ಇವರ ಸರಳಸ್ವಭಾವ, ಪ್ರಜಾಸೌಖ್ಯಾಕಾಂಕ್ಷೆ, ರಾಜನೀತಿನೈಪುಣ್ಯ ಮುಂತಾದ ಸದ್ಗುಣಗಳು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತವೆ. ಅದರಲ್ಲಿಯೂ ಕೂಲಿಕಾರರ ಹಿತವನ್ನು ಕೋರಿರುವ ಅಂಶವಂತೂ ಅತ್ಯಂತ ಶ್ಲಾಘನೀಯವಾದುದಾಗಿದೆ. ಇದರಿಂದ ಕಾಂಗ್ರೆಸ್‌ಸಂಸ್ಥೆಯು ಕೇವಲ ಶ್ರೀಮಂತರ ಸಂಸ್ಥೆಯೆಂದು ಹೇಳುವುದು ಕೇವಲ ಮಿಥ್ಯಾರೋಪವೇ ಹೊರತು ತಥ್ಯಾಂಶವಲ್ಲ. ಒಂದುಹನಿಯಷ್ಟು ರಕ್ತವನ್ನು ಸಹ ಚೆಲ್ಲದೆ ರೈತರ ಮತ್ತು ಕೂಲಿಕಾರರ ಹಿತವನ್ನು ಸಾಧಿಸಬೇಕೆಂಬುದೇ ಮಹಾತ್ಮರ ಮಹತ್ವಾಕಾಂಕ್ಷೆಯಾಗಿದೆ. ಈ ಮಹೋದ್ದೇಶವನ್ನು ಸಾಧಿಸಲು ಪಾಶ್ಚಿಮಾತ್ಯ ದೇಶಗಳಲ್ಲಿ ರಕ್ತದಕೋಡಿಯು ಸಹ ಹರಿದಿದೆ; ಇದಕ್ಕಾಗಿ ಅವರವರ ಧರ್ಮಗಳೂ, ಮನೆಮಠಗಳೂ ಧನಕನಕಾದಿ ವಸ್ತುಜಾಲವು ನಿರ್ಮೂಲವಾಗಿ ಹೋಗಿರುತ್ತವೆ. ಇಂದಿನವರೆವಿಗೂ ಆ ರಕ್ತಪ್ರವಾಹವು ಸ್ವಲ್ಪಮಟ್ಟಿಗೆ ಹರಿಯುತ್ತಲೇ ಇದೆ. ಈ ವಿಷಯವನ್ನರಿತ ದಿವಂಗತ ಲಾಲಾಲಜಪತರಾಯರು—ನಾನು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಸಂಚಾರಮಾಡಿ ಅಲ್ಲಿಯ ಸ್ಥಿತಿಗತಿಗಳನ್ನು ತಿಳಿದುಕೊಂಡಿರುವೆನು. ಅವರೆಲ್ಲರೂ ಸ್ವಾತಂತ್ರ್ಯಸಂಪಾದನಾರ್ಥವಾಗಿ ರಕ್ತವನ್ನು ಚೆಲ್ಲಿದರೂ ಉದ್ದೇಶವು ಕೈಗೂಡದೆ ಹತಾಶರಾಗಿರುತ್ತಾರೆ. ಅವರಿಗೂ ಈ ಪವಿತ್ರವಾದ ಗಾಂಧಿಯ ತತ್ವವು ಅವಶ್ಯೋಪಾದೇಯವಾಗಿದೆಂದು ಒಂದೆಡೆಯಲ್ಲಿ ಸಾರಿ ಹೇಳಿದ್ದಾರೆ. ಅಹಿಂಸಾ, ಸತ್ಯ, ಶಮ, ದಮ, ದಯೆ, ಧರ್ಮ ಇವುಗಳಿಂದ ಜಗತ್ತಿನಲ್ಲಿ ಶಾಂತಿಯಾಗಬಲ್ಲುದೇ ಹೊರತು ಅಸಿಧಾರೆಯಿಂದಾಗಲಾರದೆಂಬುದೇ ಮಹಾತ್ಮರ ತತ್ವಾರ್ಥದ ಸಾರವು. ಮಹಾತ್ಮರಿಂದ ಪ್ರಚಲಿತವಾಗಿರುವ ಈ ನಿಗೂಢವಾದ ತತ್ವವು ಭರತಖಂಡಕ್ಕಲ್ಲದೆ ಇಡಿ ಜಗತ್ತಿಗೇ ಆದರ್ಶಪ್ರಾಯವಾಗಿದೆ. 1688 ನೆಯ ಶಾಂತಿಯುತವಾದ ಕ್ರಾಂತಿಯ ತರುವಾಯ ಪಾರ್ಲಿಮೆಂಟಿನಿಂದ ತಯಾರಿಸಲ್ಪಟ್ಟ ಹಕ್ಕುಗಳ ಪಟ್ಟಿಯು ಇಂಗ್ಲೆಂಡಿನ ಅಭಿವೃದ್ಧಿಗೂ, ಅಮೇರಿಕೆಯ ಥಾಮಸ್‌ಪೇನ್‌ರವರು ರಚಿಸಿದ ಮನುಷ್ಯನ ಹಕ್ಕುಬಾಧ್ಯತೆಗಳು ಯುರೋಪ್‌ಖಂಡದ ಅನೇಕ ರಾಷ್ಟ್ರಗಳ ರಾಜಕೀಯಾಭಿವೃದ್ಧಿಗೂ ಹೇಗೆ ಪ್ರಾಧಾನ್ಯಗಳಾದವೋ ಹಾಗೆ ಮಹಾತ್ಮಗಾಂಧಿಯವರು ಈಗ ರಚಿಸಿರುವ ಪ್ರಜೆಗಳ ಆಜನ್ಮಸಿದ್ಧ ಹಕ್ಕುಗಳು ಭಾರತೀಯರ ಅಭಿವೃದ್ಧಿಗೆ ಸಾಧಕಗಳಾಗಿರುತ್ತವೆ.

ಭಾರತೀಯರಿಗೆ ಸ್ವರಾಜ್ಯಸಾಧನವೆಂಬುವದು ಹಿಂದೂಮುಸಲ್ಮಾನರ ಐಕಮತ್ಯದ ಆಧಾರದಲ್ಲಿರುವುದೆಂಬುದನ್ನು ಮಹಾಸಭೆಯು ಒಪ್ಪಿರುವಂತೆ ಮಹಾತ್ಮ ಗಾಂಧಿಯವರು ಹಿಂದೂಮಹಮ್ಮದೀಯರ ವಿಷಮ ಪ್ರಶ್ನೆಯನ್ನು ಇಲ್ಲಿಯೇ ತೀರ್ಮಾನಮಾಡಿಕೊಳ್ಳದೆ ಚಕ್ರಗೋಷ್ಠಿಗೆ ಹೋಗುವುದು ಅಪಮಾನಕರವಾದುದೆಂದು ಆಲೋಚಿಸಿ ಹಿಂದೂ ಮಹಮ್ಮದೀಯರ ಐಕಮತ್ಯವು ಶಾಶ್ವತವಾಗಿ ನಿಲ್ಲುವ ಹಾಗೆ ಕೆಲಸಮಾಡಲು ಉದ್ಯುಕ್ತರಾಗಿದ್ದಾರೆ. ಇವರೀರ್ವರಲ್ಲಿ ಐಕಮತ್ಯವನ್ನು ನೆಲೆಗೊಳಿಸದಿದ್ದರೆ ಭರತಖಂಡಕ್ಕೆ ಸ್ವರಾಜ್ಯವು ಲಭಿಸುವ ಕಾಲವು ಬಹುದೂರ ಉಳಿಯುವದೆಂಬುದನ್ನು ಹಿಂದೂ ಮಹಮ್ಮದೀಯರೀರ್ವರೂ ತಿಳಿದುಕೊಳ್ಳಬೇಕಾಗಿದೆ. ಹೀಗೆ ಕರಾಚಿ ಕಾಂಗ್ರೆಸ್ ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳನ್ನು ತೀರ್ಮಾನಿಸಲು ಅವಕಾಶಕೊಟ್ಟಿರುವುದಲ್ಲದೆ, ಸೇಂದಿ ಸರಾಯಿ ಮೊದಲಾದ ಮಾದಕಪದಾರ್ಥಗಳನ್ನು ನಿಲ್ಲಿಸುವುದಕ್ಕೆ ಶಾಂತರೀತಿಯಿಂದಲೂ ಉತ್ಸಾಹದಿಂದಲೂ ಪಿಕೆಟಿಂಗ್ ನಡೆಯಿಸಲು ಅವಕಾಶಕೊಟ್ಟಿರುತ್ತದೆ. ಈ ಕಾಂಗ್ರೆಸ್ ಸಂಸ್ಥೆಯಲ್ಲಿ ಶ್ರೀಮಂತರೂ, ಬಡವರೂ, ಸಮಸ್ತ ಜಾತಿ ಮತ್ತು ಪಂಗಡದವರೂ ಎಂಬ ಭೇದವಿಲ್ಲ. ಇಡೀ ರಾಷ್ಟ್ರಹಿತವೇ ಕಾಂಗ್ರೆಸ್ಸಿನ ಮುಖ್ಯ ಧ್ಯೇಯವಾಗಿರುತ್ತದೆ. ಆದುದರಿಂದ ಈ ಕಾಂಗ್ರೆಸ್ಸಿನ ಧ್ಯೇಯವು ಫಲೋನ್ಮುಖವಾಗಿ ಸರ್ವಾಂತರ್ಯಾಮಿಯಾದ ಪರಮೇಶ್ವರನು ಭಾರತೀಯರಿಗೊದಗಿದ ಪಾರತಂತ್ರ್ಯವನ್ನು ದೂರಮಾಡಿ ನೆಮ್ಮದಿಯನ್ನುಂಟುಮಾಡಲಿ.

ಒಳದೇಶದ ವೃತ್ತಾಂತಗಳು.

ರಾಜಧಾನಿಯಲ್ಲಿ ಬಿಸಲಿನ ತಾಪವು ಬಹಳವಾಗಿದ್ದು ಈಗ ಒಂದೆರಡು ದಿವಸಗಳಿಂದ ಮಳೆಯಾಗಿ ಸ್ವಲ್ಪಮಟ್ಟಿಗೆ ತಾಪವು ಶಾಂತವಾಗುತ್ತ ಬಂದಿರುತ್ತದೆ.

ಮ|| ನೀಲಗಿರಿ ಸಂಜೀವಯ್ಯನವರು ಬೆಂಗಳೂರಿನಲ್ಲಿರುವ ಪೀಟರ್ಸ್ ಕಂಪನಿಗೆ 4475 ರೂಪಾಯಿಗಳಿಗೆ ಬ್ಯಾಂಕಿನಲ್ಲಿ ತಮ್ಮ ಬಾಬ್ತು ಹಣವಿಲ್ಲದಿದ್ದರೂ ಚೆಕ್ಕುಗಳನ್ನು ಕೊಟ್ಟರೆಂಬ ಅಪಾದನೆಯ ಮೇಲೆ ವಿಧಿಸಿದ್ದ ಶಿಕ್ಷೆಯು ಅಪೀಲಿನಲ್ಲಿ ವಜಾಮಾಡಲ್ಪಟ್ಟಿತು.

ನಮ್ಮ ಮಹಾಪ್ರಭುವರ್ಯರ ಏಡಿಕಾಂಗರಾದ ಕ್ಯಾಪ್ಟನ್ ಮಹಮುದ್‌ನಬಿಖಾನರವರು, ಅರಮನೆ ಬ್ಯಾಂಡ್‌ಮಾಸ್ಟರ್ ಮಿ|| ಟಿಟೋಪ್ಲಿಡ್‌ರವರ ಕುಮಾರಿ ಮಿಸ್ ಮಾರ್ಗರೆಟ್ ಪ್ಲೀಡ್ ಎಂಬಾಕೆಯನ್ನು ಮುಂಬೈನಗರದಲ್ಲಿರುವ ಕ್ರೈಸ್ತದೇವಾಲಯದಲ್ಲಿ ವಿವಾಹವನ್ನು ಮಾಡಿಕೊಂಡರು.

ಬೆಂಗಳೂರು ತಾಯಿನಾಡು ಪತ್ರಿಕಾಸಂಪಾದಕರು ಕಳುಹಿಸಿರುವ ಕರಾಚಿ ಕಾಂಗ್ರೆಸ್ಸಿನ ವಿಶೇಷ ಸಂಚಿಕೆಯನ್ನು ಆತ್ಮಾನಂದದಿಂದ ಸ್ವೀಕರಿಸಿರುತ್ತೇವೆ. ಇದರಲ್ಲಿ ರಾಷ್ಟ್ರಮುಖಂಡರ ಉಜ್ವಲ ಭಾಷಣಗಳೂ ಭಾವಚಿತ್ರಗಳೂ ಅಡಕವಾಗಿರುವುದರಿಂದ ಈ ಸಂಚಿಕೆಯು ಪ್ರತಿಯೊಬ್ಬ ಕನ್ನಡಿಗನಿಂದಲೂ ಸಂಗ್ರಾಹ್ಯವಾಗಿದೆ.

ಈ ತಿಂಗಳಾದಿಯಿಂದ ಸರ್ಕಾರದಲ್ಲಿ ಆಗುವ ಖರ್ಚನ್ನು ಆದಷ್ಟು ಕಡಿಮೆಮಾಡಬೇಕೆಂಬುದ್ದೇಶದಿಂದ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿ ಇರುವ ಎಕನಾಮಿಕ್ ಸೂಪರಿಂಟೆಂಡೆಂಟರುಗಳ ಕೆಲಸವನ್ನು ವಜಾಮಾಡಿರುತ್ತಾರೆ. ಈ ಅಧಿಕಾರಿಗಳು ಬೇರೆ ಬೇರೆ ಇಲಾಖೆಗಳಿಗೆ ತೆಗೆದುಕೊಳ್ಳಲ್ಪಡುವರು. ಮುಂದೆ ಸಂಪದಭಿವೃದ್ಧಿ ಕಾರ್ಯಕಲಾಪಗಳೆಲ್ಲವೂ ರೆವಿನ್ಯೂ ಸಬ್‌ಡಿವಿಜನ್ ಆಫೀಸರುಗಳಿಂದ ನಡೆಯಿಸಲ್ಪಡತಕ್ಕದೆಂದು ನಿರ್ಧಾರವಾಗಿರುತ್ತದೆ. ಮತ್ತು ವಿದ್ಯಾ ಇಲಾಖೆಯ ಡೆಪ್ಯೂಟಿ ಡೈರೆಕ್ಟರುಗಳ ಅಧಿಕಾರಗಳೂ ಇಂಜನಿಯರಿಂಗ್ ಇಲಾಖೆಯ ಸೂಪರಿಂಟೆಂಡಿಂಗ್ ಇಂಜನಿಯರುಗಳ ಕೆಲಸಗಳೂ ಸಹ ವಜಾ ಆಗಬಹುದೆಂದು ಕೇಳುತ್ತೇವೆ.

ವರ್ತಮಾನಸಂಗ್ರಹ.

ಕಳೆದ ಕಾಂಗ್ರೆಸ್ ವಾರದಲ್ಲಿ ಕರಾಚಿಯಿಂದ ವರ್ತಮಾನಪತ್ರಿಕೆಗಳಿಗೆ 5 ಲಕ್ಷ ಶಬ್ದಗಳು ತಂತಿಯ ಮೂಲಕ ಕಳುಹಿಸಲ್ಪಟ್ಟಿರುವುವಂತೆ!

ಅಮೇರಿಕಾಖಂಡಕ್ಕೆ ಸೇರಿದ ಮನಗ್ವ ಎಂಬ ಸ್ಥಳದಲ್ಲಿ ಭೂಕಂಪದಿಂದ ಅನೇಕ ಮನೆಮಠಗಳೂ ಸುಮಾರು ನಾಲ್ಕುಕೋಟಿ ರೂಪಾಯಿ ಬೆಲೆಬಾಳುವ ಸಾಮಾನುಗಳೂ ನಾಶವಾಗಿವೆ. 5000 ಜನರು ಮೃತಪಟ್ಟಿರುವರು.

ಮಹಾರಾಷ್ಟ್ರ ಪತ್ರಿಕೆಯ ಸಂಪಾದಕರಾದ ಮಿ|| ಗೋಪಾಲ ಅನಂತವಾಗಳೆಯವರು ಒಂದು ವರ್ಷ ಕಠಿಣಶಿಕ್ಷೆಗೆ ಗುರಿಯಾಗಿರುವರು. ಇವರು ಜಾಮೀನು ಕೊಡಬೇಕೆಂದು ಹಾಕಿದ ಅರ್ಜಿಯನ್ನು ನ್ಯಾಯಾಧೀಶರು ತಿರಸ್ಕರಿಸಿದರು.

ಕೆಲವರು ಮುಂದಿನ ವರ್ಷದ ಕಾಂಗ್ರೆಸ್ಸನ್ನು ಸೋಲಾಪುರದಲ್ಲಿ ನಡೆಯಿಸಬೇಕೆಂದೂ ಕೆಲವರು ಉತ್ಕಲದಲ್ಲಿ ನಡೆಯಿಸಬೇಕೆಂದೂ ವಾದಿಸುತ್ತಿದ್ದರು. ಆದರೆ ಉತ್ಕಲದಲ್ಲಿಯೇ ಕಾಂಗ್ರೆಸ್ ನಡೆಯಿಸಬೇಕೆಂದು ಬಹುಮತದಿಂದ ತೀರ್ಮಾನವಾಯಿತು.

ಮಹಾತ್ಮ ಗಾಂಧಿಯವರು ಕಳೆದ 2 ತಿಂಗಳುಗಳಿಂದಲೂ ಅವಿಶ್ರಾಂತ ಶ್ರಮವಹಿಸಿ ಕೆಲಸಮಾಡಿರುವುದರಿಂದ ಕೆಲವು ದಿವಸಗಳವರೆಗಾದರೂ ಸಂಪೂರ್ಣ

ವಿಶ್ರಾಂತಿ ತೆಗೆದುಕೊಳ್ಳುವುದವಶ್ಯಕವೆಂದು ಡಾ|| ಅನ್ಸಾರಿಯವರು ತಿಳಿಸುತ್ತಾರೆ.

ಕರಾಚಿ ಕಾಂಗ್ರೆಸ್ಸಿನವರು ದಿಲ್ಲಿ ಒಪ್ಪಂದವನ್ನು ಪುರಸ್ಕರಿಸಿದ್ದರಿಂದ ಮಹಾತ್ಮಗಾಂಧಿಯವರು ಲಂಡನ್ನಿಗೆ ಬರುವರೆಂದು ತಿಳಿದು ಪಾರ್ಲಿಮೆಂಟಿನ ಮೆಂಬರ್ ಮಿ|| ಫ್ರೀಮನ್ ಮೊದಲಾದವರು ಅವರಿಗೆ ತಕ್ಕ ಸ್ವಾಗತಮಾಡಬೇಕೆಂದು ಏರ್ಪಾಟುಮಾಡುತ್ತಿರುವರು.

ಕಾನ್ಪುರದಲ್ಲಿ ಹಿಂದೂ ಮಹಮ್ಮದೀಯರ ಕಲಹಾಗ್ನಿಯು ಶಾಂತವಾದಂತೆ ತೋರಿದರೂ ಸುತ್ತುಮುತ್ತಿನ ಹಳ್ಳಿಗಳಲ್ಲಿ ಪ್ರಜ್ವಲಿಸುತ್ತಲೇ ಇದೆ. ಕಾನ್ಪುರದಿಂದ ಸಿಟಿ ಮ್ಯಾಜಿಸ್ಟ್ರೇಟರು ತಕ್ಕ ಸಿಬ್ಬಂದಿಯೊಡನೆ ಆ ಸ್ಥಳಗಳಿಗೆ ಹೋಗಿ ಸಮಾಧಾನಪಡಿಸುತ್ತಲಿದ್ದಾರೆ.

ಬಾರ್ಡೋಲಿಯ ಜವಳಿವ್ಯಾಪಾರಿಗಳು ಇತಃಪರ ವಿದೇಶಿವಸ್ತ್ರಗಳನ್ನು ಮಾರುವುದಿಲ್ಲವೆಂದೂ, ಕೊಂಡುಕೊಳ್ಳುವುದಿಲ್ಲವೆಂದೂ, ಸದ್ಯಃ ಇರುವ ವಿದೇಶಿ ಮಾಲಿಗೆ ಮೊಹರುಮಾಡಿ ಕಾಂಗ್ರೆಸ್ ಸಂಸ್ಥೆಯ ವಶಕ್ಕೆ ಕೊಡಲೊಪ್ಪಿ ಮುಚ್ಚಳಿಕೆ ಬರೆದುಕೊಟ್ಟಿರುವರೆಂದೂ ಕೇಳುತ್ತೇವೆ.

ಈ ತಿಂಗಳು 1 ನೆಯ ತಾರೀಖಿನ ದಿನಸ ಬಂಗಾಳದ ಗೌರ್ನರ್‌ರವರು ಡಾರ್ಜಿಲಿಂಗಿಗೆ ಹೋಗುವುದಕ್ಕಾಗಿ ಕಲ್ಕತ್ತಾ ಸ್ಟೇಷನ್ನಿಗೆ ಬಂದಿದ್ದರು. ಆ ಸಮಯದಲ್ಲಿ ಡ್ಯೂಟಿಯಮೇಲಿದ್ದ ಒಬ್ಬ ಕಾನ್‌ಸ್ಟೇಬಲ್ ಒಂದು ರೈಲುಗಾಡಿಗೆ ಸಿಕ್ಕು ತುಂಬಾ ಗಾಯಗೊಂಡಿರುವನು.

ಮೌಲಾನಾ ಷೌಕತಾಲಿಯವರು ಈ ತಿಂಗಳು 3 ನೆಯ ತಾರೀಖಿನ ದಿವಸ ಮಹಾತ್ಮ ಗಾಂಧಿಯವರನ್ನು ಸಂದರ್ಶಿಸಿ ಮೌ|| ಮಹಮ್ಮದಾಲಿಯವರ ಅಭಿಪ್ರಾಯದಂತೆ ಹಿಂದೂಮಹಮ್ಮದೀಯರ ವಿಷಮಸಮಸ್ಯೆವನ್ನು ತೀರ್ಮಾನಿಸಬೇಕೆಂದು ಚರ್ಚೆಮಾಡುತ್ತಿರುವರೆಂದು ತಿಳಿದುಬರುತ್ತದೆ.

ಲಾಹೋರಿನಲ್ಲಿರುವ ಹೊಷಿಯಾರ್‌ಪುರದ ಕಾಲೇಜಿನಲ್ಲಿ ದೀಪದಕಡ್ಡಿಗಳನ್ನು ತಯಾರುಮಾಡುವ ವಿಧಾನವನ್ನು ತೋರಿಸುತ್ತಿದ್ದ ಸಮಯದಲ್ಲಿ ಆಕಸ್ಮಿಕವಾಗಿ ಮದ್ದು ಸಿಡಿದು ಪ್ರೊಫೆಸರ್ ಪ್ರಕಾಶಚಂದ್ರರವರಿಗೂ ಇಬ್ಬರು ವಿದ್ಯಾರ್ಥಿಗಳಿಗೂ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಲಿದ್ದಾರೆ.

ಕಲ್ಕತ್ತೆಯಲ್ಲಿ ಸ್ವಾತಂತ್ರ್ಯ ದಿವಸವನ್ನಾಚರಿಸಿದ ಸಮಯದಲ್ಲಿ ಪೋಲೀಸರು ಲಾಠೀಪ್ರಯೋಗಮಾಡಿ ಮ್ಯುನಸಿಪಾಲಿಟಿಯ ಪ್ರೆಸಿಡೆಂಟ್ ಸುಭಾಷ್ ಚಂದ್ರಬೋಸ್ ಮೊದಲಾದವರನ್ನು ಗಾಯಗೊಳಿಸಿದುದು ಸರಿಯಷ್ಟೆ! ಆ ಬಗ್ಗೆ ಸರ್ ನೀಲಕಂಠ ಸರ್ಕಾರ್‌ರವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯು ಏರ್ಪಾಡಾಗಿದೆ.

ಮಹಾತ್ಮ ಗಾಂಧಿಯವರು ಈ ತಿಂಗಳು 2ನೆಯ ತಾರೀಖಿನ ದಿವಸ ಸರ್ದಾರ್ ವಲ್ಲಭಭಾಯಿ ಪಟೇಲ್ ಪಂ|| ಜವಾಹಿರಲಾಲ್ ಮೊದಲಾದ ಮುಖಂಡರೊಡನೆ ಕರಾಚಿಯಿಂದ ದಿಲ್ಲಿಗೆ ಪ್ರಯಾಣಬೆಳೆಯಿಸಿದರು. ಅಲ್ಲಿ ಹಿಂದೂ ಮಹಮ್ಮದೀಯ ಪ್ರಶ್ನೆಯನ್ನು ತೀರ್ಮಾನಮಾಡುವುದಕ್ಕೋಸ್ಕರ ಮಹಮ್ಮದೀಯ ಮುಖಂಡರೊಡನೆ ಚರ್ಚೆನಡೆಯಿಸುವವರಾಗಿದ್ದಾರೆ.

ಭರತಖಂಡದ ಭಾವಿ ವೈಸ್‌ರಾಯರಾದ ಲಾರ್ಡ್ ವಿಲ್ಲಿಂಗ್ಟನ್‌ರವರು ಈ ತಿಂಗಳು 2ನೆಯ ತಾರೀಖಿನ ದಿವಸ ಲಂಡನ್ನಿನಿಂದ ಹಿಂದುಸ್ಥಾನಕ್ಕೆ ಹೊರಟರು. ಆಗ ಇಂಡಿಯಾ ಸೆಕ್ರೆಟರಿ ವೆ|| ಬೆನ್ ಮೊದಲಾದ ದೊಡ್ಡ ಅಧಿಕಾರಿಗಳೂ, ಕೆಲವು ಪಾರ್ಲಿಮೆಂಟ್ ಮೆಂಬರುಗಳೂ ಸ್ಟೇಷನ್ನಿಗೆ ಬಂದು ಅವರನ್ನು ಕಳುಹಿಸಿದರು. ಅವರು ಹಿಂದುಸ್ಥಾನಕ್ಕೆ ಈ ತಿಂಗಳು 17ನೆಯ ತಾರೀಖಿಗೆ ಬರುವರೆಂದೂ, ಲಾರ್ಡ್ ಇರ್ವಿನ್‌ರವರು 18ನೆಯ ತಾರೀಖಿನ ದಿವಸ ಬೊಂಬಾಯಿಯಿಂದ ಲಂಡನ್ನಿಗೆ ಹೊರಡುವರೆಂದೂ ಗ|| ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

ಕರಾಚಿಕಾಂಗ್ರೆಸ್ಸಿನಲ್ಲಿ ದಿಲ್ಲಿಒಪ್ಪಂದದ ಠರಾವು ಸರ್ವಾನುಮತಿಯಿಂದ ಪಾಸಾಯಿತು.

ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಪಂ|| ಜವಹಿರಲಾಲರು ಗಾಂಧಿ ಇರ್ವಿನ್ ಒಪ್ಪಂದವನ್ನು ಅಂಗೀಕರಿಸಬೇಕೆಂದೂ ಗಾಂಧಿಯವರನ್ನೇ ರೌಂಡುಟೇಬಲ್ ಕಾನ್‌ಫರೆನ್ಸಿಗೆ ಹೋಗುವ ರಾಯಭಾರದ ಮುಂದಾಳಾಗಿ ನೇಮಿಸಬೇಕೆಂದೂ ಠರಾವನ್ನು ಸೂಚಿಸಿ ಹೇಳಿದ್ದೇನೆಂದರೆ:—ಎರಡು ವರ್ಷಗಳ ಹಿಂದೆ ಲಾಹೋರಿನಲ್ಲಿ ಸ್ವಾತಂತ್ರ್ಯ ಬಾವುಟವನ್ನು ಎತ್ತಿದೆವು. ಈ ವರ್ಷ ಉತ್ಸುಕತೆಯಿಂದ ಸಮರವನ್ನು ಹೂಡಿದೆ. ನಾವು ಇದುವರೆಗೆ ಕಾರ್ಯಸಾಧನೆಮಾಡಿದೆವು. ಇನ್ನು ಸಂಧಿಸಂಧಾನಗಳಿಂದ ನಮ್ಮ ಉದ್ದೇಶವನ್ನು ಸಾಧಿಸಲು ಸಾಧ್ಯವೇ ಎಂದು ಪರೀಕ್ಷಿಸುತ್ತೇವೆ. ಸಂಧಿಸಂಧಾನಗಳೆಲ್ಲಾ ನಮ್ಮ ಬಂಧನಕ್ಕೆ ಕಾರಣವಾಗುತ್ತವೆಂದು ತೋರಿದರೆ, ಅವನ್ನೆಲ್ಲಾ ಬಿಟ್ಟು ಹಿಂದುರಿಗಿ ಬಂದು ಪುನಃ ಭರದಿಂದ ಸಮರವನ್ನು ಸಾಗಿಸುತ್ತೇವೆ. ಈ ಠರಾವು ರಾಯಭಾರದವರು ಆ ಅನುಜ್ಞೆಯನ್ನು ವಿಸಾರಿಹೋಗದಂತೆ ನಿರ್ಬಂಧಪಡಿಸತಕ್ಕದ್ದೆ ಹೊರತು ಅನ್ಯಥಾ ಇಲ್ಲ.

ಇದನ್ನು ಅನುಮೋದಿಸಿ ಡಾ|| ಅನ್ಸಾರಿಯವರು ಹೇಳಿದ್ದೇನೆಂದರೆ—ಈ ಗಾಂಧೀ ಇರ್ವಿನ್ನರ ಒಪ್ಪಂದವು ನಮ್ಮ ದೇಶದಲ್ಲಿ ಅನೇಕರಿಗೆ ಇಷ್ಟವಿಲ್ಲವೆಂಬುದು ನನಗೆ ಚನ್ನಾಗಿ ಗೊತ್ತಿದೆ. ಆದರೂ ರೌಂಡ್‌ಟೇಬಲ್ ಕಾನ್‌ಫರೆನ್ಸಿಗೆ ಹೋಗುವ ರಾಯಭಾರವು ನಾವು ಕೊಡುವ ಆಜ್ಞೆಯಲ್ಲಿ "ಪೂರ್ಣಸ್ವರಾಜ್ಯ" ವೆಂಬರ್ಥವು ಸ್ಪಷ್ಟವಾಗಿದೆಯೋ ಇಲ್ಲವೋ ಎಂಬುದನ್ನು ನಾವು ಪರಿಶೀಲಿಸಿ ಈ ಠರಾವಿನಲ್ಲಿ ಸಂಪೂರ್ಣ ಸ್ವಾತಂತ್ರ್ಯವೇ ಧ್ಯೇಯವೆಂಬ ಬಗ್ಗೆ ಬೇಕಾದಷ್ಟು ಭದ್ರತೆಯನ್ನು ಕಲ್ಪಿಸಿದೆ.

ಈ ಠರಾವಿನಲ್ಲಿ ಸಂಪೂರ್ಣ ಸ್ವರಾಜ್ಯವೆಂದರೆ ಏನೆಂಬುದೂ ನಮೂದಿಸಲ್ಪಟ್ಟಿದೆ. ಎಂದು ಆ ಠರಾವನ್ನು ಸಮರ್ಥನಮಾಡಿದರು.

ಜಮುನಾದಾಸ್ ಮೇಥಾರವರು ಈ ಠರಾವನ್ನು ವಿರೋಧಿಸಿ ಗಾಂಧೀ ಇರ್ವಿನ್ನರ ಒಪ್ಪಂದವನ್ನು ಕಾಂಗ್ರೆಸ್ಸಿನವರು ರದ್ದುಮಾಡತಕ್ಕದ್ದು. ಈಗ ಮಾಡಿಕೊಂಡಿರುವ ಒಪ್ಪಂದವು ಲಾಹೋರ್ ಕಾಂಗ್ರೆಸ್ಸಿನ ತೀರ್ಮಾನಕ್ಕೆ ವಿರೋಧವಾಗಿದೆ. ಕಾಂಗ್ರೆಸ್ಸಿನವರು ರೌಂಡ್‌ಟೇಬಲ್ ಕಾನ್ಫರೆನ್ಸಿಗೆ ಹೋಗಲು ಒಪ್ಪಿಕೊಂಡಾಗಲೇ ಲಾಹೋರಿನ ಠರಾವು ತನ್ನಷ್ಟಕ್ಕೆ ತಾನೇ ಬಿದ್ದುಹೋಯಿತು. ಕಾಂಗ್ರೆಸ್ಸಿಗೆ ಒಂದು ಧ್ಯೇಯವಿಲ್ಲ. ಮೊದಲು ಪೂರ್ಣ ಸ್ವಾತಂತ್ರ್ಯ; ಆ ಮೇಲೆ ಹನ್ನೊಂದು ಕಲಂಗಳು; ಅನಂತರ ಸ್ವಾತಂತ್ರ್ಯದ ತಿರುಳು. ಅನಂತರ ಸ್ವಾಧಿಕಾರದಿಂದ ಸ್ವಂತ ಆಡಳಿತ. ಹೀಗೆ ದೋಲಾಯಮಾನವಾಗಿ ಒಂದೊಂದು ಮೆಟ್ಟಲು ಇಳಿಯುತ್ತಾ ಬಂದಿದೆ. ಅರಿಸ್ಟಾಟಲನಿಗೂ ಇದು ಅರ್ಥವಾಗುವುದಿಲ್ಲ. ಸಾರ್ವಜನಿಕಸಾಲಗಳ ವಿಷಯವು ಬಹಳ ಚರ್ಚೆಗೆ ಅವಕಾಶವಾಗಿದೆ. ಹಿಂದುಸ್ಥಾನಕ್ಕೋಸ್ಕರವೇ ಮಾಡಿದ ಸಾಲವೆಲ್ಲಾ ಸತ್ಯವಾಗಿಯೂ ತೀರಿಹೋಗಿದೆ. ಸ್ವಲ್ಪ ಬಾಕಿ ಇದ್ದರೂ ಇರಬಹುದು. ಇದಕ್ಕೆ ಉತ್ಪಾದಕ ಸಾಲಗಳೆಂದು ಹೆಸರು. ಇದು 1200 ಕೋಟಿ ಆಗಬಹುದು. ಇದರಲ್ಲಿ ಬಹಳ ಹಣ ರೈಲುಗಳಿಗೂ, ಮುನಸಿಪಾಲಟಿಗಳಿಗೂ ಕೊಡಲ್ಪಟ್ಟಿದೆ. 180 ಕೋಟಿ ದ್ರವ್ಯವು ವಿಧವಾಲಯಗಳಿಗೆ ಕೊಡಲ್ಪಟ್ಟಿದೆ. ಇಂಡಿಯಾಕ್ಕೋಸ್ಕರ ಮಾಡಿರುವ ಸಾಲದಲ್ಲಿ ಒಂದು ರೂಪಾಯನ್ನೂ ಸಹ ಬ್ರಿಟಿಷರು ಕೊಡುವುದಿಲ್ಲ. ಹೀಗೆ ಮಾಡಿದ ಭಾಷಣವು ಸಭಿಕರ ಮೇಲೆ ಬಹಳ ಪರಿಣಾಮವಾಗಿ ಜಯಧ್ವನಿಯಾಯಿತು.

ಅನಂತರ ಸ್ವಾಮಿ ಗೋವಿಂದಾನಂದರವರು ಠರಾವನ್ನು ಪ್ರತಿಭಟಿಸಿ ಹೇಳಿದ್ದೇನೆಂದರೆ—ನಮ್ಮ ಫಾರ್‌ವರ್ಡ್ ಪಕ್ಷದವರು ಗಾಂಧಿಯವರಿಗೂ ಅವರ ಪಕ್ಷದವರಿಗೂ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಲು ಅವಕಾಶಕೊಡುತ್ತಾರೆ. ಆದರೆ, ಅವರು ಅಲ್ಲಿಗೆ ಹೋಗಿ ಸ್ವರಾಜ್ಯವನ್ನು ತಂದರೆ ಸಂತೋಷ! ಎಲ್ಲರೂ ಸಾಷ್ಟಾಂಗಪ್ರಣಾಮ ಮಾಡುತ್ತೇವೆ. ಹಾಗಿಲ್ಲದೆ ಬರೀ ಕೈಯ್ಯಲ್ಲಿ ಬಂದರೆ, ಅವರು ಕಾಂಗ್ರೆಸ್ ಸಂಸ್ಥೆಯನ್ನು ನಮ್ಮ ಪಾರ್ಟಿಯವರಿಗೆ ಬಿಟ್ಟುಕೊಡಬೇಕು.

ಗಾಂಧಿಯವರು ಅಂತ್ಯದಲ್ಲಿ ಹೇಳಿದ್ದೇನೆಂದರೆ ಈ ಸಂಧಿಗೊಪ್ಪದೇಯಿರುವ ತರುಣರಲ್ಲಿ ನನಗೆ ಬಹಳ ವಿಶ್ವಾಸವಿದೆ. ಅವರು ಕೋಪಿಸಿಕೊಳ್ಳಲು ಅಧಿಕಾರವಿದೆ. ಆದರೆ ಸತ್ಯಾಗ್ರಹಿಯಾದ ನಾನುಮಾತ್ರ ನನ್ನ ಸತ್ಯದಿಂದ ಶತ್ರುವನ್ನು ಗೆಲ್ಲುತ್ತೇನೆ. ಸ್ನೇಹಕ್ಕೆ ಕೈ ನೀಡಿದಾಗ ಅದನ್ನು ಸತ್ಯಾಗ್ರಹಿಯು ತಿರಸ್ಕರಿಸಲು ಸಾಧ್ಯವಿಲ್ಲ. ಈ ಸಂಧಿಯನ್ನು ನಾನು ನನ್ನ ಸಹೋದ್ಯೋಗಿಗಳಾದ ವರ್ಕಿಂಗ್ ಕಮಿಟಿಯವರೂ ಪಾಲಿಸಬೇಕಾಗಿದೆ. ಆದರೆ ಕಾಂಗ್ರೆಸ್ಸಿನವರಿಗೆ ಅದನ್ನು ತಿರಸ್ಕರಿಸಿ ವರ್ಕಿಂಗ್‌ಕಮಿಟಿಯಮೇಲೆ ಅವಿಶ್ವಾಸದ ಠರಾವನ್ನು ತರುವ ಹಕ್ಕಿದೆ. ಅನಂತರ ಅವರು ತಮ್ಮ ಸೇವೆಮಾಡಲು ಹೊಸಬರನ್ನು ನೇಮಿಸಿಕೊಳ್ಳಬಹುದು. ಆ ಸಂಧಿಯಲ್ಲಿ ನನಗಾಗಲೀ, ವರ್ಕಿಂಗ್‌ಕಮಿಟಿಯವರಿಗಾಗಲೀ, ಅಪಮಾನವಾಗುವಂಥ ಷರತ್ತುಗಳೇನೂ ಇರುವುದಿಲ್ಲ. ಆ ಸಂಧಿಯಲ್ಲಿ ಮರ್ಯಾದೆಯಿದೆ. ಎಂದಾದರೊಂದುದಿನ ನಾವೂ ಆಂಗ್ಲೇಯರೂ ಒಪ್ಪಂದಕ್ಕೆ ಬರಲೇಬೇಕಾಗುತ್ತದೆ. ಯಾವ ಮನುಷ್ಯನು ಯಾವಾಗಲೂ ಸಂಧಿಗೊಪ್ಪದೆ [illegible]ತಿಗೆ ನಮ್ಮ ತಿಸದೇ ಇದ್ದರೆ ಆ ಮನುಷ್ಯನಲ್ಲಿ [illegible] ತಪ್ಪಿದೆಯೆಂದು ಊಹಿಸಬೇಕಾಗುವುದು. ನನ್ನ ವಿಷಯದಲ್ಲಿ ತಪ್ಪು ಅಭಿಪ್ರಾಯಪಡಬೇಡಿರಿ. ರೌಂಡ್‌ಟೇಬಲ್ ಕಾನ್‌ಫರೆನ್ಸಿಗೆ ಕಾಂಗ್ರೆಸ್ಸಿನ ರಾಯಭಾರವು ಹೋಗಿ [illegible] ಸ್ವರಾಜ್ಯವನ್ನು ತಂದೇತರುವುದೆಂದು ವಾ[illegible]ಗಲೀ, ಭರವಸೆಯನ್ನಾಗಲೀ ಕೊಡುವುದ[illegible] ರಾಯಭಾರಿಗಳ ಬಂಧನವು ಈಗಿರುವುದ[illegible] ಕಡಿಮೆಯಾಗುವುದೆಂದು ಹೇಳುತ್ತಾರೆ.

ತರುಣರು ಪಿಕೆಟಿಂಗ್ ಮತ್ತು ರಚನಾಕಾರ್ಯಗಳಲ್ಲಿ ನಮಗೆ ಸಹಾಯಮಾಡಬೇಕು. ಪ್ರತ್ಯೇಕ ಕಾರ್ಯಕ್ರಮವನ್ನು ಮಾಡಿಕೊಳ್ಳುವುದು ಸರಿಯಾಗಿ ತೋರುವುದಿಲ್ಲ.

ಅನಂತರ ಮೂರು ಗಂಟೆಗಳ ಕಾಲ ಬಹಳ ಸ್ವಾರಸ್ಯವಾಗಿ ಚರ್ಚೆಯಾದಮೇಲೆ ಡೆಲ್ಲಿ ಒಪ್ಪಂದದ ಠರಾವು ಸರ್ವಾನುಮತಿಯಿಂದ ಅಂಗೀಕರಿಸಲ್ಪಟ್ಟಿತು.

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡ[illegible]ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

[3ನೆಯ ಪುಟದಿಂದ ಮುಂದುವರಿದುದು]
ಈ ರೀತಿಯಾದ ಚುನಾವಣೆಯು ವಿಧಿಸಲ್ಪಡದಿದ್ದರೂ ಆ ಪದ್ಧತಿಯು ಜಾರಿಯಲ್ಲಿ ಬಂದಿದೆ.

ಕಾಂಗ್ರೆಸ್ಸು ರೌಂಡು ಟೇಬಲ್ ಸಮ್ಮೇಳನದಲ್ಲಿ ಭಾಗಿಯಾಗಬೇಕೆಂದು ತೀರ್ಮಾನವಾದರೆ, ಈ ವರ್ಕಿಂಗ್ ಕಮಿಟಿಯೇ ರಾಯಭಾರವಾಗುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಮತ್ತು ಬಂಗಾಳದ ಶ್ರೀ ಸುಭಾಷಚಂದ್ರ ಬೋಸರ ಹೆಸರನ್ನು ಬಿಡಲು ನಾನೇ ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತೇನೆ. ಬೋಸರು ನನ್ನೊಡನೆ ಸಹಕಾರ ಮಾಡುವುದಾಗಿ ವಾಗ್ದಾನಮಾಡಿರುತ್ತಾರೆ. ಅವರು ಕಮಿಟಿಯಲ್ಲಿರಲಿ, ಇಲ್ಲದಿರಲೀ, ನಾವಿಬ್ಬರೂ ನಮ್ಮ ನಮ್ಮ ಅಭಿಪ್ರಾಯಗಳನ್ನು ಪರಸ್ಪರ ಬದಲಾಯಿಸಿಕೊಳ್ಳುತ್ತೇವೆ. ನಮ್ಮಿಬ್ಬರ ಅಭಿಪ್ರಾಯಗಳು ಏಕರೀತಿಯಾಗಿ ಪರಿಣಮಿಸುತ್ತ ಬಂದಿವೆ. ಬಂಗಾಳಾ ಕಾಂಗ್ರೆಸ್ ಕಮಿಟಿಯಲ್ಲಿರುವ ವ್ಯತ್ಯಾಸಗಳೆಲ್ಲಾ ಶೀಘ್ರದಲ್ಲಿಯೇ ಕೊನೆಗುವವೆಂದು ನಾನು ನಂಬುತ್ತೇನೆ.

ಕಮಿಟಿಯಲ್ಲಿ ಶ್ರೀ ನರಿಮಾನರ ಹೆಸರನ್ನು ಸೇರಿಸಲು ನನಗೆ ಬಹಳ ಸಂತೋಷವಾಗುತ್ತದೆ. ಹಿಂದಿನ ವರ್ಷದ ಸ್ವಾತಂತ್ರ್ಯ ಸಮರದಲ್ಲಿ ಪಾರಸೀಜನಾಂಗವು ಬಹಳ ಸಹಾಯಮಾಡಿತು. ವರ್ಕಿಂಗ್ ಕಮಿಟಿಯಲ್ಲಿ ಒಬ್ಬ ಸ್ತ್ರೀಯು ಇರಬೇಕೆಂಬ ಉದ್ದೇಶವಿರುವುದರಿಂದ ಶ್ರೀಮತಿ ಸರೋಜಿನೀದೇವಿಯವರನ್ನು ಕಮಿಟಿಯಲ್ಲಿ ಸೇರಿಸಿಕೊಂಡಿದೆ.

ಈ ಸಂದರ್ಭದಲ್ಲಿ ನಾವು ಅನೇಕ ಪ್ರಾಂತಗಳನ್ನು ಬಿಟ್ಟುಬಿಟ್ಟದ್ದು ಅವಮರ್ಯಾದೆಯೆಂದು ಭಾವಿಸಲಾಗದು. ಏಕೆಂದರೆ ಕೆಲಸದ ಸ್ವರೂಪವು ಕೆಲವು ಜನರನ್ನು ಮಾತ್ರವೇ ಆರಿಸುವದಕ್ಕೆ ಅವಕಾಶವನ್ನು ಕೊಡುವುದು. ನೀವು ಸರದಾರ ವಲ್ಲಭಭಾಯಿಯವರಿಂದ ಪೂರ್ತಿಕೆಲಸವನ್ನು ತೆಗೆದುಕೊಳ್ಳಬೇಕೆಂದು ಬಯಸಿದರೆ ಅವರೊಡನೆ ಕಲೆತು ಭಿನ್ನಾಭಿಪ್ರಾಯವಿಲ್ಲದೆ ಕೆಲಸಮಾಡುವವರನ್ನು ತೆಗೆದುಕೊಳ್ಳಬೇಕು.

ಶ್ರೀ ಗಣೇಶ ಶಂಕರ ವಿದ್ಯಾರ್ಥಿಗಳ ವೀರಮರಣ.

140 ಜನ ಮುಹಮ್ಮದೀಯರ ಪ್ರಾಣಗಳನ್ನುಳಿಸಿದರು.

ಕಾನ್ಪುರದ ಪ್ರಸಿದ್ಧ ಮುಖಂಡರೂ ಅಪ್ರತಿಮ ದೇಶಭಕ್ತರೂ, ಪ್ರತಾಪ ಪತ್ರಿಕೆಯ ಸಂಪಾದಕರೂ ಆದ ಶ್ರೀ ಗಣೇಶ ಶಂಕರ ವಿದ್ಯಾರ್ಥಿಯವರು ಕಳೆದ ತಿಂಗಳು 25 ನೆಯ ತಾರೀಖಿನ ಸಾಯಂಕಾಲ ಮಹಮ್ಮದೀಯ ಮೊಹಲ್ಲಾದಲ್ಲಿ ಹೊಂದಿದ ವೀರಮರಣವನ್ನು ದೇವದಾಸಶಾಸ್ತ್ರಿಗಳು ವಿವರಿಸಿರುವರು. ಇವರು 24 ನೇ ತಾ|| ನ ದಿವಸ ಅನೇಕ ಮಹಮ್ಮದೀಯರನ್ನು ಹಿಂದೂಗಳ ಕೈಯಿಂದ ಬಿಡಿಸಿದರು. ಪೋಲೀಸಿನವರು ತಟಸ್ಥರಾಗಿರುವುದನ್ನು ಕಂಡು ತಾನೇ ಒಂದೊಂದು ಮೊಹಲ್ಲಾಕ್ಕೂ ಹೋಗಿ ಮಹಮ್ಮದೀಯ ಹೆಂಗಸರನ್ನೂ ಮಕ್ಕಳನ್ನೂ ಕಾಪಾಡಿದರು. 25 ನೆಯ ತಾ|| ಪ್ರಾತಃಕಾಲ ಇವರು ಮನೆಯಿಂದ ಬೆಳಗ್ಗೆ 9 ಘಂಟೆಗೆ ಬರೀ ತಲೆಯಲ್ಲಿ ಹೊರಟವರು ಪುನಃ ಮನೆಗೆ ಬರಲೇ ಇಲ್ಲ. ಇವರು ಯಾವ ಸಹಾಯವೂ ಇಲ್ಲದೆ ಒಬ್ಬಂಟಿಗರಾಗಿ ಗಲಾಟೆಯಾಗುತ್ತಿದ್ದ ಕಡೆಗಳಲ್ಲೆಲ್ಲಾ ಹೋಗಿ ಉದ್ರಿಕ್ತರಾದ ಹಿಂದುಗಳಿಗೆ ಅಡ್ಡಬಿದ್ದು 140 ಜನ ಮಹಮ್ಮದೀಯರನ್ನು ಉಳಿಸಿದರು. ಗಾಯಪಟ್ಟ ಮಹಮ್ಮದೀಯರನ್ನೆಲ್ಲ ಸಮಾಧಾನಪಡಿಸಿ ಅವರ ಗಾಯಗಳನ್ನು ತೊಳೆದು ಔಷಧಿ ಹಾಕಿ ಅವರನ್ನು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸುತ್ತಿದ್ದರು. ಮಧ್ಯಾಹ್ನವೂ ಇದೇ ಕೆಲಸವನ್ನು ಮಾಡಿದರು. ಇವರು ಊಟವನ್ನು ಸಹ ಮಾಡಲಿಲ್ಲ. ಆದರೂ ತಮ್ಮ ಶರೀರದಮೇಲೆ ಲಕ್ಷ್ಯವಿಲ್ಲದೆ ಮಹಮ್ಮದೀಯರಿಂದಲೇ ನಿಬಿಡಿತವಾಗಿದ್ದ ಮಚಲಿ ಬಜಾರಿಗೆ ಹೋದರು. ಇವರ ಜೊತೆಯಲ್ಲಿದ್ದ ಸ್ವಯಂಸೇವಕರು ಎಲ್ಲಿಯೋ ತಪ್ಪಿಸಿಕೊಂಡರು. ಆದಾಗ್ಯೂ ಧೈರ್ಯಗುಂದದೆ ಭಗವಂತನಲ್ಲಿ ವಿಶ್ವಾಸವಿಟ್ಟು ನೈಸರಕ್ ಮೊಹಲ್ಲಾಕ್ಕೆ ಹೋದರು. ಅಲ್ಲಿ ಮಹಮ್ಮದೀಯರ 3 ಗುಂಪು ಇವರ ಮೇಲೆ ಬೀಳಲಾರಂಭಿಸಿತು. ಇವರ ಜೊತೆಯಲ್ಲಿದ್ದ ಒಬ್ಬ ಮಹಮ್ಮದೀಯ ಸ್ವಯಂಸೇವಕನು ಆ ಮಹಮ್ಮದೀಯರನ್ನು "ಅಯ್ಯಾ, ಇವರನ್ನು ಕೊಲ್ಲಬೇಡಿ. ಇವರು ಬಹಳ ಒಳ್ಳೆಯನುಷ್ಯರು. ಇವರು ಅನೇಕ ಮಹಮ್ಮದೀಯರಿಗೆ ಪ್ರಾಣದಾನ ಮಾಡಿದ್ದಾರೆ. ಎಂಬುದಾಗಿ ಎಷ್ಟು ಬೇಡಿಕೊಂಡರೂ ಕೇಳದೆ ಶ್ರೀ ಗಣೇಶಶಂಕರ ವಿದ್ಯಾರ್ಥಿಯ ಮೇಲೆ ಬಿದ್ದರು. ವೀರನಾದ ಶ್ರೀ ಗಣೇಶಶಂಕರನು ಅಹಿಂಸೆಯಲ್ಲಿ ದೃಢವಾದವಿಶ್ವಾಸವನ್ನಿಟ್ಟದ್ದನಾದಕಾರಣ ಸ್ವಲ್ಪವೂ ಹಿಂಜರಿಯದೆ ತನ್ನ ಎದೆಯನ್ನು ಬಿಚ್ಚಿ ಅವರಿಗೆ ತೋರಿಸಿ, 'ಆಗಲಿ, ಸಹೋದರರೇ, ನನ್ನನ್ನು ಕೊಲ್ಲಿರಿ. ದೈವೇಚ್ಛೆಯು ಹಾಗಿರಬಹುದು. ಆದರೂ ನಾನು ನಿಮ್ಮನ್ನು ಪ್ರೀತಿಸುತ್ತೇನೆ. ನನ್ನ ರಕ್ತವು ಚೆಲ್ಲಲ್ಪಟ್ಟರೂ ಚಿಂತೆಯಿಲ್ಲ. ಪ್ರಾಣವು ಹೋದರೂ ಹೋಗಲಿ, ಹಿಂದೂ ಮಹಮ್ಮದೀಯ ಏಕಮತ್ಯವು ಸ್ಥಾಪಿತವಾದರೆ ನನ್ನ ಆತ್ಮಕ್ಕೆ ಶಾಂತಿಯುಂಟಾಗುವುದು ಎಂದು ಹೇಳಿ ಅವರ ವಶವಾದರು. ಅವರುಗಳು ಇವರನ್ನು ತಿವಿದು ಕೊಂದು ಸುಡುತ್ತಲಿರುವ ಒಂದು ಮನೆಯೊಳಕ್ಕೆ ಬಿಸಾಡಿದರು. ಈತನನ್ನು ಉಳಿಸಬೇಕೆಂದು ಪ್ರಯತ್ನಿಸಿದ ಸ್ವಯಂಸೇವಕನೊಬ್ಬನಿಗೂ ಗಾಯವಾಯಿತು. ವಿದ್ಯಾರ್ಥಿಯ ವೀರ ಮರಣವನ್ನು ನೋಡಿದ ಒಬ್ಬ ಸ್ವಯಂಸೇವಕನು ಹೇಳುವುದೇನಂದರೆ' ಈ ವೀರ ವಿದ್ಯಾರ್ಥಿಗಳು ಆ ಮಹಮ್ಮದೀಯರು ಹೊಡೆಯುವುದಕ್ಕೆ ಬರುತ್ತಲು ತಲೆಯನ್ನು ಬಗ್ಗಿಸಿದರು. ನಿಜವಾದ ಸತ್ಯಾಗ್ರಹಿಯಂತೆ ಸಂತೋಷಚಿತ್ತದಿಂದ ಪ್ರಾಣಬಿಟ್ಟರು. ಇವರು ಸತ್ತರೆಂಬ ವಿಷಯವು ೨೮ ನೇ ತಾ|| ಗೆ ತಿಳಿಯಿತು. ಇವರ ಜೇಬಿನಲ್ಲಿದ್ದ ಕಾಗದದಿಂದಲೂ ಮೈಮೇಲಿನ ಗಜೇಂದ್ರ ಎಂಬ ಪಚ್ಚೆಯಿಂದಲೂ ಇವರೇ ಗಣೇಶಶಂಕರ ವಿದ್ಯಾರ್ಥಿಗಳೆಂಬುದು ಗೊತ್ತಾಯಿತು. ೧೦೦೦೦ ಜನರು ಇವರ ಶವಸಂಸ್ಕಾರದಲ್ಲಿ ಭಾಗಿಗಳಾಗಿದ್ದರು. ಈ ವೀರರಿಗೆ ಒಂದು ಸ್ಮಾರಕವನ್ನು ಏರ್ಪಡಿಸಬೇಕೆಂದು ಸಂಯುಕ್ತ ಪ್ರಾಂತ್ಯದವರು ಸಂಕಲ್ಪಿಸಿದ್ದಾರೆ.

ಅಖಿಲಭಾರತ ಹಿಂದೂಸಮ್ಮೇಳನದಲ್ಲಿ ಪಂಡಿತ ಮಾಳವೀಯರ ಉಜ್ವಲಭಾಷಣ

ಅಖಿಲಭಾರತ ಹಿಂದೂ ಸಮ್ಮೇಳನವು ಮಾಡರ್ನ್‌ರಿವ್ಯೂ ಪತ್ರಿಕೆಯ ಸಂಪಾದಕರಾದ ಶ್ರೀ ರಾಮಾನಂದ ಚಟರ್ಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಳೆದ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಸಿಂಧೂದೇಶದ ಹಿಂದೂಗಳಿಗೆ ಪ್ರಾತಿನಿಧ್ಯವು ದೊರೆಯದೆ ಇದ್ದುದಕ್ಕಾಗಿಯೂ, ಸಿಂಧಪ್ರಾಂತ್ಯವು ಮುಂಬಯಿನಿಂದ ಪ್ರತ್ಯೇಕಿಸಲ್ಪಡಬೇಕೆಂದು ರೌಂ. ಟೇ. ಸ. ಸಬ್ ಕಮಿಟಿಯ ಠರಾವು ಮಾಡಿರುವುದಕ್ಕಾಗಿಯೂ ಖಂಡನಾತ್ಮಕವಾದ ನಿರ್ಧಾರಗಳು ಈ ಸಮ್ಮೇಳನದಲ್ಲಿ ಮಾಡಲ್ಪಟ್ಟವು. ಮುಂದೆ ನಡೆಯುವ ಲಂಡನ್ ಸಮ್ಮೇಳನದಲ್ಲಿ ಇವರಿಗೆ ಸರಿಯಾದ ಪ್ರಾತಿನಿಧ್ಯವು ದೊರೆಯಬೇಕೆಂದೂ, ಮುಂಬಯಿ ಸರಕಾರದವರೂ, ಮುಂಬಯಿ ಸ್ಟೈರ್ಯೂಕಮಿಟಿಯವರೂ ಸಿಂಧಪ್ರಾಂತ್ಯವನ್ನು ಮುಂಬಯಿನಿಂದ ಬೇರೆ ಮಾಡಕೂಡದೆಂಬುದಕ್ಕೆ ಕೊಟ್ಟಿರುವ ಕಾರಣಗಳು ಸರಿಯಾದುವುಗಳೆಂದೂ, ಠರಾವುಗಳು ಪಾಸುಮಾಡಲ್ಪಟ್ಟವು. ಚುನಾವಣೆಯಲ್ಲಿಯೂ, ಸರಕಾರಿ ನೌಕರಿಯಲ್ಲಿಯೂ ಕೋಮುವಾರು ಪ್ರಾತಿನಿಧ್ಯವು ಕೂಡದೆಂದು ನಿರ್ಧಾರವಾಯಿತು.

ಸಮ್ಮೇಳನದ ಆಖೈರಿನಲ್ಲಿ ಬಂದ ಪಂಡಿತ ಮಾಳವೀಯರು ಮಾಡಿದ ಭಾಷಣವೇನೆಂದರೆ:—ಈಗ ನನಗೆ ಅತ್ಯವಶ್ಯಕವಾಗಿ ಬೇಕಾಗಿರುವುದು ಸ್ವರಾಜ್ಯ. ಹಿಂದೂಗಳು ನ್ಯಾಯಕ್ಕೂ ಸತ್ಯಕ್ಕೂ ಬದ್ಧರಾಗಬೇಕು. ಸ್ವರಾಜ್ಯವು ಕೋಮುವಾರು ಏಕಮತ್ಯವಿಲ್ಲದೆ ಸಿದ್ಧಿಸುವುದಿಲ್ಲ. ಹಿಂದೂಗಳೂ ಮಹಮ್ಮದೀಯರೂ ತಮ್ಮ ಭೇದಭಾವಗಳನ್ನು ವರ್ಜಿಸಬೇಕು. ಸಿಂಧೂದೇಶವನ್ನು ಮುಂಬಯಿನಿಂದ ಬೇರೆ ಮಾಡುವ ವಿಷಯದಲ್ಲಿ ಸಿಂಧೂದೇಶದ ಹಿಂದುಗಳೂ ಮಹಮ್ಮದೀಯರೂ ಒಟ್ಟಿಗೆ ಕಲೆತು ಪರ್ಯಾಲೋಚಿಸಬೇಕು. ಮಹಮ್ಮದೀಯರನ್ನು ಹಿಂದುಗಳು ಮನಗಾಣಿಸಲು ಪ್ರಯತ್ನಿಸಬೇಕು. ವಿರೋಧಿಗಳ ಅಭಿಪ್ರಾಯವೇನೆಂಬುದನ್ನು ಅರಿತು ನ್ಯಾಯವಾಗಿ ಚರ್ಚಿಸಬೇಕು. ಕೋಮುವಾರು ಹೊಡೆದಾಟಗಳು ನಮ್ಮ ದೇಶಕ್ಕೆ ಬಹಳ ಹಾನಿಯನ್ನು ಉಂಟುಮಾಡುತ್ತಲಿವೆ. ಅವುಗಳನ್ನು ತಪ್ಪಿಸಲು ಸರ್ವರೂ ಪ್ರಯತ್ನಿಸಬೇಕು.

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಉತ್ತಮವಾದ ಕಾಗದ! **ಅಂದವಾದ ಮುದ್ರಣ!!**

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಒಂದರಿಂದ ಸಾವಿರದವರೆಗಿನ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹರ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿದೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3.

ಸಚಿತ್ರ ಕರ್ನಾಟಕ ಗುಣಿತಾಕ್ಷರ ಬೋಧೆ:—ಗುಣಿತಾಕ್ಷರವನ್ನು ಸುಲಭರೀತಿಯಲ್ಲಿ ಕಲಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0.

ಸಿಲಿಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು.

ಪ್ರಕಾಶಕರು:—**ಜಿ. ರೇವಣ್ಣ ಅಂಡ್ ಬ್ರದರ್**
ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಬೆಂಗಳೂರು ಡಿ||

2

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದ್ಗುರುಗಳಾದ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರುವ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರಿಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿವಸಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿವಸಗಳ ಜ್ವರ, 8 ದಿವಸಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, $\frac{1}{2}$ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಪಾಕಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ನೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳೀಪು, ಹೊಟ್ಟೆ ಹುಳಗಳ ಕೆಡವಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಬಿಸ್ಕು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ಸಿಗುತ್ತವೆ.

[35] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂಥಾ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವನೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ಪ್ರಾಪಾರವನ್ನು ಮಾಡುವವರಿಗಾದಿ ಇಲ್ಲದೆ ತೊಂದರೆ ಕೊಡತಿರಬೇಕಾದವರಿಗೂ, ಪುರುಷ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಅಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಾಡಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿವಸವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[50] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಪಟ್ಟಾಭಿಷೇಕಾರೋಹಣಮಾಡಿದತಕ್ಷಣ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯುಳ್ಳಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಬ್ಬಿ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[38] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಕಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾ ಪಂಚಾಸ್ಯಪೀಠಾಧಿಪಾ | ಪಂಚಕ್ಲೇಶವಿನಾಶಕಾ ಪರತರಶ್ರೀಪಂಚಲಿಂಗೋದ್ಭವಾ ||
ಪಂಚಾಚಾರನಿಯಾಮಕಾ ಪರಿಲಸತ್ಪಂಚಾಕ್ಷರೀಬೋಧಕಾ | ಪಂಚಾಚಾರ್ಯಜಗದ್ಗುರೂತ್ತಮವರಾ ಪಾಲಿಪ್ಸ್ವದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಕಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ ನೇ ಏಪ್ರಿಲ್ ೧೯೩೧ [ಸಂಚಿಕೆ ೫೦

ಮಿಡ್ನಾಪುರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಗುಂಡಿನೇಟಿನಿಂದ ಮಡಿದರು.

ಈ ತಿಂಗಳು 7 ನೆಯ ತಾರೀಖಿನ ದಿವಸ ಮಿಡ್ನಾಪುರದ ಡಿ|| ಮ್ಯಾಜಿಸ್ಟ್ರೇಟ್ ಮಿ|| ಜೇಮ್ಸ್ ಪೆಡ್ಡಿಯವರು ಪೇಟೆಗೆ ಹೋಗಿ ಸಾಯಂಕಾಲ ಹಿಂದಿರುಗಿ ಬಂದು ಶಾಲೆಯಲ್ಲಿ ಏರ್ಪಡಿಸಿದ್ದ ಪ್ರದರ್ಶನವನ್ನು ನೋಡಬೇಕೆಂದು ಹೊರಟರು. ಆಗ ಅಕಸ್ಮಾತ್ ಗುಂಡುಗಳು ಹಾರಲ್ಪಟ್ಟವು. ಮೂರು ಗುಂಡುಗಳು ಡಿ|| ಮ್ಯಾಜಿಸ್ಟ್ರೇಟರ ಬೆನ್ನಿನಮೇಲೂ, ಎರಡು ಗುಂಡುಗಳು ಭುಜದ ಮೇಲೂ, ಒಂದು ಗುಂಡು ಹೊಟ್ಟೆಯ ಮೇಲೂ ಬಿದ್ದುವು. ಅವರ ಜೊತೆಯಲ್ಲಿ ಅ|| ಮ್ಯಾಜಿಸ್ಟ್ರೇಟರೂ, ಡೆಪ್ಯೂಟಿಮ್ಯಾಜಿಸ್ಟ್ರೇಟರೂ ಶಾಲೆಯ ಉಪಾಧ್ಯಾಯರೂ ಇದ್ದರು. ಆ ಕೂಡಲೇ ಅವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ರಾತ್ರಿ ಮೂರು ಗಂಟೆ ಸಮಯದಲ್ಲಿ ಮಿಡ್ನಾಪುರದ ಡಾ|| ಮೇಜರ್‌ಮರೇ ಎಂಬವರು ಹೊಟ್ಟೆಯನ್ನು ಕೊಯಿದು ಆಪರೇಷನ್ ಮಾಡಿದರು. ನಾಲ್ಕು ಗಂಟೆ ಹೊಡೆಯುವವರೆಗೂ ಆಪರೇಷನ್ ಕೆಲಸವು ನಡೆಯಿತು. ಭುಜದಿಂದ ಒಂದು ಗುಂಡನ್ನು ತೆಗೆದರು. ಕರಳುಗಳೆಲ್ಲ ಹರಿದುಹೋಗಿದ್ದವು. ಕ್ಲೋರೊಫಾರ್ಮ್ ಕೊಟ್ಟಿದ್ದರಿಂದ ಪ್ರಾತಃಕಾಲ 7 ಗಂಟೆಯವರೆಗೂ ಸ್ಮೃತಿಯಿರಲಿಲ್ಲ. ಅನಂತರ ತಮಗೆ ಪೂರ್ಣವಿಶ್ರಾಂತಿಯು ಬೇಕೆಂದು ಹೇಳಿದ್ದರಿಂದ ಅವರ ಆಪ್ತೇಷ್ಟರು ಹೊರಗೆ ನಿಂತು ಅವರನ್ನು ನೋಡಿ ಹೋದರು. ಅನಂತರ 9 ಗಂಟೆಯಲ್ಲಿ ಡಾಕ್ಟರರು ಪರೀಕ್ಷಿಸಲಾಗಿ ಆಗ ಅವರ ಸ್ಥಿತಿಯು ಸುಧಾರಿಸಿದಂತೆ ಕಂಡುಬಂದಿತು. ಆಗ ಇನ್ನೊಂದುಸಲ ಆಪರೇಷನ್ ಮಾಡಬಹುದೆಂದು ತಿಳಿದು 10½ ಗಂಟೆಗೆ ಆಪರೇಷನ್ ಮಾಡಿದರೂ, ಗುಂಡು ತೆಗೆಯುವುದಾಗಲಿಲ್ಲ. ಅವರು ಗುಣಹೊಂದಬಹುದೆಂದು ಆಸ್ಪತ್ರೆಯಲ್ಲಿ ವ್ಯಥಾಪ್ರಯತ್ನವೆಲ್ಲ ಮಾತನಾಡಿದರು. ಸಾಯಂಕಾಲ 5¼ ಗಂಟೆಗೆ ಪ್ರಾಣವನ್ನು ಬಿಟ್ಟರು.

ಮಿಡ್ನಾಪುರದ ಕ್ರೈಸ್ತದೇವಾಲಯದಲ್ಲಿ ಅವರಿಗೆ ಮಿಲಿಟರಿಪದ್ಧತಿಯಂತೆ ಗೌರವವು ನೀಡಲ್ಪಟ್ಟಿತು. ಎಲ್ಲ ಸರ್ಕಾರದ ಅಧಿಕಾರಿಗಳು ಇನ್ನೂ ಅನೇಕ ಜನರು ಹಾಜರಿದ್ದು ಅಳೇಬಲಕ್ಕೆ ಮುಜರೆ ಮಾಡಿ ಗೌರವಿಸಿದರು.

ಡಿ|| ಮ್ಯಾಜಿಸ್ಟ್ರೇಟರ ಮೇಲೆ ಅತ್ಯಾಚಾರವು ನಡೆಸ್ಪಟ್ಟ ತರುವಾಯ ಹೈಸ್ಕೂಲ್ ಮತ್ತು ಕಾಲೇಜಿನ ಕಾಂಪೌಂಡಿನಲ್ಲಿ ಸಶಸ್ತ್ರರಾದ ಪೋಲೀಸರು ಕಾವಲಿದ್ದರು. ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನೇ ವಿಚಾರಣೆ ಮಾಡಿ ಒಳಗೆ ಬಿಡುತ್ತಿದ್ದರು. ಗುಂಡುಹಾರಿಸಿದ ಸ್ಥಳದಲ್ಲಿ ಬಿದ್ದಿದ್ದ ಗುಂಡೇ ಒಂದು ನಮೂನೆ; ಮ್ಯಾಜಿಸ್ಟ್ರೇಟರ ತೋಳಿನಿಂದ ಆಪರೇಷನ್ ಮಾಡಿ ತೆಗೆದ ಗುಂಡೇ ಒಂದು ನಮೂನೆ. ಅವರ ತೋಳಿನಲ್ಲಿದ್ದ ಗುಂಡು ಜರ್ಮನಿಯವರು ಮಹಾಯುದ್ಧದಲ್ಲಿ ಉಪಯೋಗಿಸುತ್ತಿದ್ದ ಗುಂಡಿನಂತಿದ್ದಿತು. ಅದುದರಿಂದ ಬೇರೆ ಬೇರೆ ಗುಂಡುಗಳನ್ನು ತಂದಿದ್ದ ಇಬ್ಬರು ಈ ಕೃತ್ಯವನ್ನು ನಡೆಯಿಸಿರಬೇಕೆಂದು ಅನುಮಾನಿಸಲ್ಪಟ್ಟಿದೆ. ದಸ್ತಗಿರಿಮಾಡಲ್ಪಟ್ಟವರಲ್ಲಿ ಅನೇಕ ಜನರು ಕಾಲೇಜುವಿದ್ಯಾರ್ಥಿಗಳಾಗಿದ್ದಾರೆ.

9 ನೆಯ ತಾರೀಖಿನ ಪ್ರಾತಃಕಾಲ ಕಾಲೇಜು ಉಪಾಧ್ಯಾಯರೂ ಗುಮಾಸ್ತರೂ ಸೇರಿ ಪ್ರಿನ್ಸಿಪಾಲ್ ಮಿ|| ಟಿ. ಸಿ. ವಿಶ್ವಾಸ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರಿಸಿ ಈ ಕೃತ್ಯವನ್ನು ಬಹು ತೀಕ್ಷ್ಣವಾಗಿ ಖಂಡಿಸಿ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದರು.

ಈ ಕೃತ್ಯವು ನಡೆದ ಕೂಡಲೆ ಹಬಿಬ್ಪೂರು ಬಾಬುರಸುಲಮೂಕರ್ಜಿಯ ಮಗನು ಸೈಕಲ್ ಹತ್ತಿಕೊಂಡು ತನ್ನ ಹಳ್ಳಿಯ ಕಡೆಗೆ ಹೊರಟನೆಂದೂ, ಅವನನ್ನು ಹಿಂಬಾಲಿಸಿ ಈರ್ವತರುಣರು ಹೋದರೆಂದೂ ಊಹಿಸಲ್ಪಟ್ಟಿದೆ. ದಸ್ತಗಿರಿಮಾಡಲ್ಪಟ್ಟ ತರುಣರ ಪೈಕಿ ಕ್ಷೀರೋದೆಕುಮಾರದತ್ತ ಮತ್ತು ವಿವೇಕಾನಂದಬೋಸ್ ಎಂಬವರಿದ್ದಾರೆ. ಈ ಪೈಕಿ ಮೊದಲನೆಯವನು 4 ನೇ ವರ್ಷದ ಬಿ. ಎಸ್. ಸಿ. ಕ್ಲಾಸಿನಲ್ಲಿಯೂ, ಎರಡನೆಯವನು ಇಂಟರ್ ಮೀಡಿಯೆಟ್ ಕ್ಲಾಸಿನಲ್ಲಿಯೂ ಅಭ್ಯಾಸಮಾಡುತ್ತಿದ್ದರು.

ಅಡಿಷನಲ್ ಪೋಲೀಸ್‌ಸೂಪರಿಂಟೆಂಡೆಂಟರೂ, ಸಬ್‌ಇನ್ಸ್‌ಪೆಕ್ಟರುಗಳೂ ಆ ಕೃತ್ಯನಡೆದ ಮೇಲೆ ತತ್‌ಕ್ಷಣವೇ ವಿಚಾರಣೆ ನಡೆಸಿದರು. ಆ ಸ್ಥಳದ ಫೋಟೋ ತೆಗೆದುಕೊಂಡರು. ಅಲ್ಲಿ ಒಂದು ಗೋಡೆಯ ಮೇಲೂ ಗುಂಡಿನಗುರ್ತು ಇದ್ದಿತು. ಇದನ್ನೆಲ್ಲಾ ನೋಡಿದರೆ ಹೊಡೆದವನು ಅವರ ಸಮೀಪದಲ್ಲಿಯೇ ಇದ್ದು ನೇರವಾಗಿ ತಲೆಗೆ ಹೊಡೆಯಬೇಕೆಂದು ಪ್ರಯತ್ನಸಿದ್ಧನೆಂದು ಗೊತ್ತಾಗುತ್ತದೆ.

ಈ ಕೃತ್ಯದ ಬಗ್ಗೆ ಮಹಾತ್ಮಗಾಂಧಿಯವರ ಅಭಿಪ್ರಾಯವೇನೆಂದರೆ:—"ಈ ವಿಷಯವನ್ನು ಕೇಳಿ ನನಗೆ ಬಹು ದುಃಖವೆನಿಸುತ್ತದೆ. ಈ ರೀತಿ ಕೊಲೆಗಳನ್ನು ಮಾಡುವ ತರುಣರು ದೇಶಕ್ಕೆ ಯಾವ ಹಿತವನ್ನೂ ಮಾಡುವುದಿಲ್ಲ. ಕಳೆದ ಅಹಿಂಸಾತ್ಮಕ ಚಳವಳಿಯಿಂದ ದೇಶಕ್ಕೆ ಅಗಣಿತವಾದ ಲಾಭವಾಗಿದೆ ಎಂಬುದನ್ನು ತರುಣರು ತಿಳಿದುಕೊಳ್ಳಬೇಕು. ಹಿಂಸಾಮಯಚಳವಳಿಯನ್ನು ಮಾಡದೆ ಬೋಧಿಸದೆ ಇದ್ದರೆ ದೇಶಕ್ಕೆ ಇನ್ನೂ ಲಾಭವಾಗುತ್ತಿತ್ತು. ಕಾಂಗ್ರೆಸ್ಸಿನವರು ಅಹಿಂಸಾ ಮತ್ತು ಸತ್ಯಗಳನ್ನು ತಮ್ಮ ತತ್ವವಾಗಿಟ್ಟುಕೊಂಡು ಅದರಂತೆ ಕಾರ್ಯಭಾಗನಡೆಯಿಸುತ್ತಿರುವಾಗ ರಾಜಕೀಯಕಾರಣದಿಂದ ಹಿಂಸಾಮಾರ್ಗವನ್ನನುಸರಿಸಿ ಪ್ರಯೋಜನಪಡೆಯಬೇಕೆಂದು ಭಾವಿಸುವವರು ತಮ್ಮ ಕೃತ್ಯವನ್ನು ನಿಲ್ಲಿಸಬೇಕು. ಅವರಿಗೆ ತಾಳ್ಮೆಯಿಲ್ಲದಿದ್ದರೆ ಒಂದು ಅವಧಿಯನ್ನು ಗೊತ್ತುಮಾಡಿ, ತಮ್ಮ ವಿಧಾನವನ್ನು ಧರ್ಮವಾಗಿಟ್ಟುಕೊಂಡು ಅದರಂತೆ ಚಳವಳಿಮಾಡಲಿ." ವೈಸರಾಯರವರು ತಮ್ಮ ಅನುತಾಪವನ್ನು ವ್ಯಕ್ತಪಡಿಸಿ ತಂತಿಯನ್ನು ಕಳುಹಿಸಿರುವರು.

ಸ್ವೀಕಾರ.

ನರಗುಂದಪೇಟಾ ಕೊಣ್ಣೂರುಗ್ರಾಮದ ಶಂಕರಪ್ಪನನ್ನು ವಿಧ್ಯುಕ್ತಪ್ರಾಯಶ್ಚಿತ್ತದಿಂದ ಸಮಾಜದಲ್ಲಿ ಸೇರಿಸಿಕೊಂಡ ಸಮಯದಲ್ಲಿ ಬ್ರ|| ಶ್ರೀ|| ಕೊಣ್ಣೂರು ಪಟ್ಟದಸ್ವಾಮಿಗಳು ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಕಳೆದ ಮಹಾಶಿವರಾತ್ರಿ ಪೂಜಾಸಮಾರಂಭದಲ್ಲಿ ಸೊರಬ ತಾ|| ಮಾವಲಿ ಸ್ಕೂಲುಮಾಸ್ಟರ್ ವೇ|| ಶ್ರೀಕಂಠಯ್ಯನವರು ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ ಯು ಬ್ರ|| ಶ್ರೀ|| ಕ್ಯಾಸನೂರು ಪಟ್ಟದ ಗುರುಬಸವ ಶಿವಾಚಾರ್ಯರ ದ್ವಾರಾ ತಲ್ಪಿರುತ್ತದೆ.

ಕರ್ಜಗಿ ತಾ|| ಇಜಾರಿ ಲಕ್ಮಾಪುರದಲ್ಲಿ ನೆರವೇರಿದ ರಥೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಹಾವೇರಿ ಮ|| ರಾ|| ಶೇಖರಪ್ಪ ಯರೇಶೀಮೆ ಇವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ವಾಯುವ್ಯಸರಹದ್ದಿನ ಗಾಂಧಿಯೆಂದು ಕರೆಯಲ್ಪಟ್ಟಿರುವ ಸರ್ದಾರ್ ಅಬ್ದುಲ್‌ಗಫ್ಫಾರ್‌ಖಾನರವರು ಬೊಂಬಾಯಿಯ ಆಜಾದ್‌ಮೈದಾನದಲ್ಲಿ ಅತ್ಯಂತ ಶ್ಲಾಘನೀಯವಾದ ಭಾಷಣಮಾಡಿದರು. ಅವರು ಹೇಳಿದ್ದೇನೆಂದರೆ:—

ಇಂಗ್ಲೀಷರ ಆಡಳಿತದಲ್ಲಿರುವುದಕ್ಕಿಂತಲೂ ಹಿಂದುಗಳ ಆಡಳಿತದಲ್ಲಿರುವುದು ಮೇಲು. ಇನ್ನು ಮೇಲೆ ಹಿಂದುಗಳ ಮೇಲೆ ಅಪನಂಬಿಕೆಯನ್ನು ಬಿಟ್ಟು ಅವರನ್ನು ವಿಶ್ವಾಸದಿಂದ ನಂಬಬೇಕು. ಗುಲಾಮರಾಗಿರುವಾಗ ಮಸೀದಿ ಮುಂದೆ ವಾದ್ಯ ಮೊದಲಾದ ಸಣ್ಣ ಸಣ್ಣ ಪ್ರಶ್ನೆಗಳಿಗೆ ಮಹಮ್ಮದೀಯರು ಮಹತ್ವಕೊಡಬಾರದು. ದೇಶದ ವಿನಾಶಕ್ಕೆ ಕಾರಣೀಭೂತವಾಗಿರುವ ವಿದೇಶಿ ಪ್ರಭುತ್ವದಿಂದ ಬಿಡುಗಡೆಹೊಂದುವುದು ನಮ್ಮ ಪ್ರಥಮಗುರಿಯಾಗಿರಬೇಕು. ಅಸ್ಪೃಶ್ಯಭೂತವು ಮಿಥ್ಯವಾದುದೆಂದೂ, ಇದಕ್ಕೋಸ್ಕರ ಸರಹದ್ದಿನಲ್ಲಿ ಸೈನ್ಯವನ್ನಿಟ್ಟು ಅಪಾರವಾದ ಹಣವನ್ನು ಖರ್ಚುಮಾಡುವುದು ವ್ಯರ್ಥವಾದುದು. ತಾವು ನಿಜವಾಗಿಯೂ ಕಷ್ಟಪಟ್ಟು ದುಡಿಯದೆ ಸ್ವರಾಜ್ಯವು ಬಂದರೂ ನಾನು ಅದನ್ನಂಗೀಕರಿಸುವುದಿಲ್ಲ. ಹಿಂದೂಸ್ಥಾನದ ಜಾಗೃತಿಗೆ ಕಾರಣರಾದ ಮಹಾತ್ಮಾಗಾಂಧಿಯವರನ್ನು ಮಹಮ್ಮದೀಯರು ಹಿಂಬಾಲಿಸಬೇಕು. ಯಾವ ಸಮಾಜವು ಮಹಾತ್ಮಾಗಾಂಧಿಯವರಿಗೆ ಸಹಾಯಮಾಡಲಿ ಮಾಡದಿರಲಿ ಅವರಿಗೆ ವಿಜಯವಾಗಿ ಹಿಂದೂಸ್ಥಾನವು ಸ್ವತಂತ್ರವಾಗುವುದೇನೋ ನಿಜ. ಮಿಳಿತಪ್ರಾತಿನಿಧ್ಯವಿರುವುದೇ ಒಳ್ಳೆಯದು. ಜಾತಿಮಾತ್ಸರ್ಯವಿರಬಾರದು. ಗುಲಾಮರಿಗೆ ಧರ್ಮವೇ ಇರುವುದಿಲ್ಲ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸಮಸ್ತ ವೀರಶೈವರಿಗೆ ಸೂಚನೆ.

ನರಗುಂದಪೇಟಾ ಪೈಕಿ ಕೊಣ್ಣೂರ ಗ್ರಾಮದ ವೀರಶೈವ ಧರ್ಮಕ್ಕೆ ಸೇರಿದ ಗೌಡರ ಪೈಕಿ ಶಂಕರವ್ವಾ ಸಾ|| ಶಿರಸಂಗಿ ಈಕೆಯು ಧರ್ಮದ ವಿರುದ್ಧವಾಗಿ ವರ್ತಿಸಿದ್ದರಿಂದ ಸಮಾಜದವರು ಆಕೆಯನ್ನು ಬಿಟ್ಟಿದ್ದರು. ಈಕೆಯು ತನ್ನ ತಪ್ಪಿಗೆ ಒಪ್ಪಿಕೊಂಡು ಸಮಾಜದವರನ್ನು ಕ್ಷಮಾ ಬೇಡಿದ್ದರಿಂದ ಅವರು ಪ್ರಾಯಶ್ಚಿತ್ತಸಂಸ್ಕಾರ ಮಾಡಿಸಿ ಧರ್ಮದಲ್ಲಿ ಸೇರಿಸಿಕೊಳ್ಳುವದಕ್ಕೆ ಒಪ್ಪಿಕೊಂಡರು. ಆ ಮೇಲೆ ಈ ಕರ್ಮವಿಧಿಯನ್ನು ಮಾಡಲಿಕ್ಕೆ ಅಧಿಕಾರಿಗಳು ಯಾರು? ಎಂಬ ಪ್ರಶ್ನೆಯು ನಡೆಯಿತು. ಅದಕ್ಕೆ ಚನ್ನಬಸವಯ್ಯನವರು ಮಣ್ಣೂರ, ಮುರಿಗಯ್ಯನವರು ಮಣ್ಣೂರ, ವೀರಯ್ಯ ಮಠಪತ್ತಿ, ಸಂಕನಗೌಡರು ಪೋಲೀಸ ಪಾಟೀಲ, ಸಂತನಗೌಡರು ಮುಳ್ಳಿಗೌಡರ, ಇವರೇ ಮೊದಲಾದ ಅನೇಕ ಜನರು ವೀರಶೈವ ಮತಸ್ಥಾಪನಾಚಾರ್ಯರಾದ ಪಂಚಾಚಾರ್ಯರೂ ಅವರ ಉಪಾಚಾರ್ಯರಾದ ಪಟ್ಟಚರಾಧಿಕಾರಿಗಳೂ ಅಧಿಕಾರಿಗಳೆಂದು ಉತ್ತರವನ್ನಿತ್ತರು. ಅನಂತರ ಅಲ್ಲಿಯ ಬೃಹನ್ಮಠದ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಸಭೆಯು ಸೇರಿತು. ಇದರ ಬಗ್ಗೆ ಸದರಿ ಮಹಾಸ್ವಾಮಿಗಳವರು ಚನ್ನಾಗಿ ವಿಚಾರಮಾಡಿ ಧರ್ಮಶಾಸ್ತ್ರೋಕ್ತಪ್ರಕಾರ ಪ್ರಾಯಶ್ಚಿತ್ತವಿಧಿಯನ್ನು ತಾ|| 26-3-31 ನೆಯ ರವಿವಾರ ದಿವಸ ಮಾಡಿದರು. ಈಗಿನ ನವೀನಕಾಲದಲ್ಲಿ ಹಲವು ಮಂದಿ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಪರಮತದವರನ್ನು ಸಮಾಜದಲ್ಲಿ ಸೇರಿಸಿಕೊಳ್ಳುತ್ತಿರುವರು. ಹೀಗೆ ಸೇರಿಸಿಕೊಳ್ಳುವದಕ್ಕಿಂತ ಧರ್ಮದಲ್ಲಿ ಆಚಾರಹೀನರಾದವರನ್ನು ಸಮಾಜದಿಂದ ತೆಗೆದುಹಾಕಿ ತಕ್ಕ ಶಾಸನವನ್ನು ಮಾಡಿದರೆ ಅಂಜಿಯಾದರೂ ಧರ್ಮದಂತೆ ನಡೆಯುವರು. ಇಲ್ಲವಾದರೆ "ಹೇಸಿಪಾಪ ಸನ್ಯಾಸಿಗೆ" ಎಂಬ ಗಾದೆಯಂತೆ ಸಮಾಜವನ್ನೇ ಹಾಳುಮಾಡುವರು. ಆದ್ದರಿಂದ ಸಿಂಹಾಸನಾಧಿಪತಿಗಳೂ ಅವರ ಪ್ರತಿನಿಧಿಗಳಾದ ಪಟ್ಟಚರಮೂರ್ತಿಗಳೂ ಇದರ ಕಡೆಗೆ ವಿಶೇಷ ಲಕ್ಷ್ಯಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಈ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸ್ವಾಮಿಗಳವರು 1 ರೂಪಾಯಿಯು ತೆಗೆಯಿಸಿ ಕಳುಹಿಸಿರುತ್ತಾರೆ.

ಸಮಾಜಸೇವಕರು
ತಿಮ್ಮಪ್ಪಾ, ಚೊಡಪ್ಪಾ, ಮುಳಗುಂದ,
ಸಾ|| ಕೊಣ್ಣೂರು.

ವೇ|| ಹಾಲಯ್ಯ ಹೊಳಲ್ಕೆರೆ ಪ್ರಭುದೇವರಮಠ ಎಂಬ ಲೇಖಕರಿಗೆ ಪ್ರೇಮಸೂಚನೆಯು.

ಲೋಕಮತ ತಾರೀಖು 15-1-31 ನೇ ಸಂಚಿಕೆಯಲ್ಲಿ ಮತ್ತು ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ತಮ್ಮಿಂದ ಕೊಡಲ್ಪಟ್ಟ ಉಳವಿ ಕ್ಷೇತ್ರದಲ್ಲಿ ನಡೆಯುವ ಧಾರ್ಮಿಕಸಭೆ ಎನ್ನುವ ಲೇಖದಲ್ಲಿಯ ಸುಳ್ಳು ವಿಷಯವನ್ನು ಖಂಡಿಸಿ ಸತ್ಯವಾದ ವಿಷಯವನ್ನು ಸಮಾಜಕ್ಕೆ ತಿಳುಹಿಸುವದಕ್ಕಾಗಿ ತಾ|| 19-2-31 ನೆಯ ಲೋಕಮತದಲ್ಲಿಯೂ ತಾ|| 9-2-31 ನೆಯ ಪಂಚಾಚಾರ್ಯ ಪ್ರಭೆಯಲ್ಲಿಯೂ ಧರ್ಮವೀರರ ಕೀರ್ತಿಗೆ ಕಳಂಕ ಹಚ್ಚುವ ಬೂಟಾಟಿಕೆಯನ್ನುವ ಲೇಖವನ್ನು ಪ್ರಕಟಿಸಿದ್ದೆವಷ್ಟೆ! ಈ ಲೇಖವನ್ನು ಪ್ರಕಟಿಸಿ ಒಂದು ತಿಂಗಳ ಮೇಲಾಯಿತು. ತಾವು ಇಲ್ಲಿಯವರೆಗೂ ಸುಮ್ಮನಿದ್ದು ಪುನಃ ತಾರೀಖು 2-4-31 ನೆಯ ನವಕರ್ನಾಟಕ ಸಂಚಿಕೆಯಲ್ಲಿ "ತಪ್ಪು ತಿಳುವಳಿಕೆ" ಯನ್ನುವ ಲೇಖವನ್ನು ಪ್ರಕಟಿಸಿರುವಿರಿ ಇದರ ಮೇಲಿಂದ ತಮ್ಮ ಮೊದಲಿನ ಲೇಖವು ಸುಳ್ಳೆಂದು ಓದುವವರಿಗೆ ಒಡೆದು ಕಾಣಿಸುವದಿಲ್ಲವೋ? ತಮ್ಮ ಲೇಖದಲ್ಲಿ ಕಾಲೇಜದ ಮೆಂಬರರೂ ಅಲ್ಲ ನಿಜಾಮುದೇಶದವರೂ ಸಹ ಅಲ್ಲೆಂದು ಒಪ್ಪಿಕೊಂಡಿರುವದು ಸರಿಯಷ್ಟೆ. ಆದರೆ ಕಾಲೇಜದ ಯಾವ ವಿಷಯವೂ ಗೊತ್ತಿಲ್ಲದೆ ದೂರದಲ್ಲಿದ್ದ ನೀವು ಸುಳ್ಳು ಲೇಖವನ್ನು ಬರೆಯುವದೇನವಶ್ಯವಿತ್ತು. ಧರ್ಮವೀರರ ಕೀರ್ತಿಗೆ ಕಳಂಕ ಹಚ್ಚುವ ಯಾವ ವಿಷಯವನ್ನೂ ಬರೆದಿಲ್ಲೆಂದು ಬರೆದಿರುವಿರಿ. ಇದು ಸತ್ಯವೋ. ಧರ್ಮವೀರರು ಲಕ್ಷಾಂತರ ರೂಪಾಯಿಗಳ ವೆಚ್ಚದಿಂದ ಕಾಲೇಜು ಸ್ಥಾಪನೆ ಮಾಡಿದ್ದು ಸರ್ವರಿಗೂ ಹಾಗೂ ತಮ್ಮ ಆಪ್ತರಿಗೆ ಗೊತ್ತಿದ್ದರೂ ಏನೂ ಗೊತ್ತಿಲ್ಲದವರಂತೆ ಅನ್ಯರು ಸ್ಥಾಪನೆಮಾಡಿರುವರೆಂದು ಬರೆಯುವದು ಆ ಧರ್ಮವೀರರ ಕೀರ್ತಿಗೆ ಕಳಂಕ ಹಚ್ಚುವ ಬೂಟಾಟಿಕೆಯಲ್ಲದೆ ಮತ್ತೇನು? ನಾನು ನಿಜವಾದ ವಿಷಯವನ್ನು ಬರೆದರೆ ಅಲ್ಲದ ಸಲ್ಲದ ಬರವಣಿಗೆಯನ್ನು ಬರೆದಿರುತ್ತಾರೆಂದು ಬರೆದಿರುವುದು ಭೂಷಣವೇ? ಪತ್ರಿಕೆಗೆ ಲೇಖವನ್ನು ಕಳುಹಿಸಿದವರನ್ನಾಗಲಿ ಅಥವಾ ಪತ್ರಿಕಾ ಸಂಪಾದಕರನ್ನಾಗಲಿ ವಿಚಾರಿಸಿ ಲೇಖವನ್ನು ಬರೆದಿದ್ದರೆ ಚನ್ನಾಗಿತ್ತೆಂದು ಬರೆದಿರುವಿರಿ. ಆದರೆ ತಾವು ತಮ್ಮ ಹೆಸರನ್ನು ಮೊದಲೇ ಪ್ರಕಟಿಸಲಿಲ್ಲ. ಪತ್ರಿಕಾಸಂಪಾದಕರನ್ನು ವಿಚಾರಿಸಿದರೆ ಅವರು ಈ ಲೇಖವು ನಿಮ್ಮಿಂದ ನಿಮ್ಮ ಇಲಾಖೆಯಿಂದ ಬಂದಿರುತ್ತದೆಂದು ಬರೆದರು. ಆದ್ದರಿಂದ ನಾನು ನಿಜಸಂಗತಿಯನ್ನು ಪ್ರಕಟಿಸಿದರಾಯಿತೆಂದು ತಿಳಿದು ಪಂಚಾಚಾರ್ಯಪ್ರಭೆ ಹಾಗು ಲೋಕಮತ ಪತ್ರಿಕೆಯ ಮೂಲಕ ಪ್ರಕಟಿಸಿದ್ದರೆ ತಪ್ಪೇನು? ಒಕ್ಕಣಿಕೆಯನ್ನು ಓದುವವರ ಮುಂದಿಡಲು ಬರೆದಿರುತ್ತಾರೆಂದು ಬರೆದಿರುವಿರಿ. ನಾನು ಒಕ್ಕಣಿಕೆಯ ಚಾತುರ್ಯವನ್ನು ತಿಳುಹಿಸುವದಕ್ಕಾಗಿ ಬರೆದವನಲ್ಲ. ತಾವು ಅಲ್ಲದ ಸಲ್ಲದ ವಿಷಯವನ್ನು ಬರೆದು ಸತ್ಯವಾದ ವಿಷಯವನ್ನು ಲಕ್ಷ್ಯಕ್ಕೆ ತಾರದ್ದು ತಪ್ಪು ತಿಳುವಳಿಕೆಯಲ್ಲವೋ? ನಿಮ್ಮ ತಪ್ಪು ತಿಳುವಳಿಕೆಯನ್ನು ತಿಳಿಯಲಾರದ ನೀವು ಅನ್ಯರು ಸತ್ಯವಾದ ವಿಷಯವನ್ನು ಬರೆದರೆ ತಪ್ಪು ತಿಳುವಳಿಕೆಯನ್ನು ಆರೋಪಿಸಿರುವಿರಿ. ಇದು ಪರಮಾಶ್ಚರ್ಯವಲ್ಲವೇ? ಶ್ರೀ ಧರ್ಮವೀರರಿಗೆ ಶಾಂತವೀರಸ್ವಾಮಿಗಳವರ ಸದ್ಬೋಧೆಯೆಂದರೆ ತಪ್ಪೇನೆಂದು ಕೇಳುವಿರಿ. ಹಾಗಾದರೆ ತಮ್ಮ ಮೊದಲಿನ ಲೇಖದಲ್ಲಿ ಸದ್ಬೋಧವೆಂಬ ಶಬ್ದ ಲೇಶವಾದರೂ ಉಂಟೋ? ಯಾವ ವಿಷಯವನ್ನೂ ತಿಳಿಯದೆ ಲೇಖದಲ್ಲಿ ಬರಬರೆದ ಹತ್ತಿದರೆ ನಿಮ್ಮ ಮೊದಲಿನ ಲೇಖದ ಸುಳ್ಳು ವಿಷಯವು ಮುಚ್ಚಬಹುದೇ? ನಿಮ್ಮ ಲೇಖದ ನಿಜಾಂಶವನ್ನು ತಿಳಿಯಲಾರದ ನೀವು ಕಾಲೇಜದ ನಿಜಾಂಶವನ್ನೂ ಹಾಗೂ ಎರಡನೆಯವರ ಲೇಖದ ನಿಜಾಂಶವನ್ನೂ ಹೇಗೆ ತಿಳಿಯುವಿರಿ? ಪ್ರಭುದೇವರಮಠದ ಹಾಲಯ್ಯನವರೇ! ನಿಜಾಂಶದ ಕಡೆಗೆ ಲಕ್ಷ್ಯಕೊಡಿರಿ. ತಪ್ಪಾಗಿದ್ದರೆ ತಿದ್ದಿಕೊಳ್ಳಿರಿ. ತಮಗೆ ನಿಜಸಂಗತಿ ತಿಳಿಯಬೇಕಾಗಿದ್ದರೆ ಯಾದಗಿರಿಗೆ ಬಂದು ಕಾಲೇಜದ ಸ್ಥಿತಿಯನ್ನು ಹಾಗೂ ಧರ್ಮವೀರರು ಬರೆದುಕೊಟ್ಟ ದಾನಪತ್ರಿಕೆಯನ್ನೂ ನೋಡಿ ನಿಜವಿಷಯವನ್ನು ತಿಳಿದುಕೊಳ್ಳಿರಿ. ಹಾಗೆ ಮಾಡದೆ ಸುಳ್ಳು ವಿಷಯವನ್ನು ಪ್ರತಿಪಾದಿಸುತ್ತ ಕುಳಿತರೆ ಸುಳ್ಳಿಗೆ ಸುಖವಿಲ್ಲ, ಸತ್ಯಕ್ಕೆ ಸಾವಿಲ್ಲೆಂಬಕೆ ನಿಮಗೂ ಮತ್ತು ಅನೇಕರಿಗೂ ದುಃಖ ಉಂಟಾದೀತೆಂಬ ಭಯದಿಂದಲೂ ನಿಮ್ಮ ಮೇಲಣ ಪ್ರೀತಿಯಿಂದಲೂ ಇದೊಂದು ಸಾರೆ ತಿಳಿಸಿರುವೆನು. ಶ್ರೀ|| ವಾ|| ಧರ್ಮವೀರರ ಕೀರ್ತಿಗೆ ಕಳಂಕ ಹಚ್ಚುವದು ಯಾರಿಗೂ ಸಾಧ್ಯವಿಲ್ಲೆಂಬದು ಸತ್ಯವು. ಅದನ್ನು ತಿಳಿಯದೆ ತಿಳಿಗೇಡಿತನವನ್ನು ಪ್ರಯೋಗಿಸಿದರೆ ಸಮಾಜಘಾತಕರೆನಿಸುವ ಬಿರುದನ್ನು ಹೊಂದಿ ಮಹಾಪಾಪಕ್ಕೆ ಗುರಿಯಾಗುವರೆಂಬದರಲ್ಲಿ ಏನೂ ಸಂಶಯವಿಲ್ಲವು.

ಬಸಪ್ಪ ಸಜ್ಜನಶೆಟ್ಟಿ, ಯಾದಗಿರಿ.

ಮುಖ್ಯೋಪಾಧ್ಯಾಯರ ವರ್ಗ.

ಪಾವಗಡ ತಾ. ಅರಸೀಕೆರೆ ಗ್ರಾಮದ ಗೌ. ಪ್ರೈ. ಸ್ಕೂಲಿನಲ್ಲಿ ನಾಲ್ಕು ವರ್ಷಗಳಿಂದಲೂ ಹೆಡ್ಮಾಸ್ಟರಾಗಿದ್ದು ಗ್ರಾಮದಲ್ಲಿನ ಸಮಸ್ತ ಆಬಾಲವೃದ್ಧರಾದಿಯಾಗಿ ಸರ್ವರನ್ನೂ, ನಾಗರೀಕ ಪ್ರಜೆಗಳನ್ನಾಗಿ ಮಾಡುವುದರಲ್ಲಿಯೂ ತಾಲ್ಲೂಕಿನ ಗ್ರಾಮಗಳಲ್ಲಿ ಈ ಹಳ್ಳಿಯನ್ನು ಪ್ರಸಿದ್ಧವಾದ ಗ್ರಾಮವಾಗಿ ಏರ್ಪಡಿಸುವುದಕ್ಕೆ ಸಹಾಯಮಾಡುವುದರಲ್ಲಿಯೂ ಬದ್ಧಕಂಕಣರಾಗಿದ್ದ ಮ|| ರಾ|| ಕೆ. ಭೀಮರಾಯರಿಗೆ ಈ ಗ್ರಾಮದಿಂದ ಬಡವನಹಳ್ಳಿ ಸ್ಕೂಲಿಗೆ ವರ್ಗವಾದುದರಿಂದ ಈ ಮಹಾಶಯರು ಹುಕುಮನ್ನು ಮಾನ್ಯಮಾಡಿದರು. ಇವರು ಬಾಲಕಬಾಲಿಕಿಯರಿಗೆ ವಿದ್ಯಾಭ್ಯಾಸವನ್ನು ಸುಲಲಿತವಾಗಿ ನೂತನಪದ್ಧತಿಯನ್ನನುಸರಿಸಿ ಪಾಠನಡೆಸುತ್ತಿದ್ದರು. ಎಲ್ಲ ಪ್ರಜೆಗಳನ್ನು ಕೂಡ ರಜಾ ದಿನಗಳಲ್ಲಿ ಸಭೆಸೇರಿಸಿ ತಮ್ಮ ಅಮೋಘವಾದ ಉಪನ್ಯಾಸಗಳಿಂದಲೂ, ನೀತಿಬೋಧೆಗಳಿಂದಲೂ ನಾಗರೀಕರನ್ನಾಗಿಮಾಡಿ ಈಶಸೇವಾದಿಕಾರ್ಯಗಳಲ್ಲಿ ನಿರತರಾಗಿ ವಿದ್ಯಾಭ್ಯಾಸದ ಇಲಾಖೆಯ ಅಫೀಸರುಗಳಿಂದ ಉತ್ತಮವಾದ ದರ್ಜೆಯ ಉಪಾಧ್ಯಾಯರೆಂದು ಪ್ರಶಸ್ತಿ ಪಡೆದಿದ್ದರು. ಈ ಮಹಾಶಯರ ವರ್ಗವು ಸರ್ವರಿಗೂ ಕೊರತೆಯನ್ನುಂಟುಮಾಡಿದ್ದರಿಂದ ತಾ|| 5-4-1931 ರಲ್ಲಿ ಗ್ರಾಮಪಂಚಾಯಿತರು ಸಭೆಸೇರಿಸಿ ಈ ಮಹಾಶಯರನ್ನು ಬರಮಾಡಿಕೊಂಡು ತಮ್ಮ ಕೃತಜ್ಞತೆಯನ್ನು ವ್ಯಕ್ತಗೊಳಿಸಿ ಅವರ ಕೀರ್ತಿಯು ಶಾಶ್ವತವಾಗಿರಲು ಈ ಮಹಾಶಯರ ಫೋಟೋವನ್ನು ಸ್ಕೂಲಿನಲ್ಲಿ ಅನಾವರಣಮಾಡಿಸಿ ಶ್ರೀಯಸ್ಸನ್ನು ಬಯಸಿದರು.

ಓರ್ವ ಪ್ರೇಕ್ಷಕ.

ನಂದೀಶ ರಥೋತ್ಸವ, ಇಜ್ಜಾರಿಲಕ್ಕಾಪೂರ.

ಕಜಗಿ ತಾ. ಇಜ್ಜಾರಿಲಕ್ಕಾಪುರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ಪ್ರಜೋತ್ಪತ್ತಿ ಸಂವತ್ಸರದ ಚೈತ್ರ ಶು|| ೧೧ ಸೋಮವಾರ ಶ್ರೀ ದುಂಡೀನಂದೀಶ್ವರ ರಥೋತ್ಸವವು ಒಳ್ಳೇವೈಭವದಿಂದ ನೆರವೇರಿತು. ಚೈತ್ರ ಶು|| ೧ ದಿವಸ ವಾದ್ಯವೈಭವಗಳೊಡನೆ ಹಾವೇರಿ ಚಂದ್ರಶೇಖರಪ್ಪ ಇವರು ರಥದಗಾಲಿಗಳನ್ನು ಶುಭಮುಹೂರ್ತದಲ್ಲಿ ಗ್ರಾಮದ ಭಕ್ತಮಾಹೇಶ್ವರ ಸಮೂಹದೊಡನೆ ಹೊರಿಗೆ ತೆಗೆದರು. ಶು|| ೯ ಶನಿವಾರ ಶುಭಮುಹೂರ್ತದಲ್ಲಿ ಪಂಚಕಲಶಸ್ಥಾಪನಾಪೂರ್ವಕ ಕಂಕಣಧಾರಣ ಕಾರ್ಯವು ಮಾಹೇಶ್ವರರಿಂದ ನಡೆಸಲ್ಪಟ್ಟಿತು. ಶು|| ೧೦ ರವಿವಾರ ಮಧ್ಯಾಹ್ನ ೧೦ ಘಂಟೆಯಿಂದ ಗಣಾರಾಧನೆಯು ಪ್ರಾರಂಭವಾಗಿ ರಾತ್ರಿ ೧೦ ಘಂಟೆವರೆಗೆ ಬಡಬಗ್ಗರಿಗೆ ಅನ್ನಸಂತರ್ಪಣೆಯು ನಡೆಯಿತು. ರಾತ್ರಿ ೧೧ ಘಂಟೆಯಿಂದ ವಾದ್ಯವೈಭವಗಳೊಡನೆ ಪುಷ್ಪರಥೋತ್ಸವವು ನಡೆಯಿತು. ಶು|| ಏಕಾದಶಿ ಸೋಮವಾರ ರಾತ್ರಿ ೧೦ ಘಂಟೆಗೆ ಇಲ್ಲಿಯ ಪಂಚಾಚಾರ್ಯ ತರುಣ ಭಜನಾಸಂಘದವರ ಭಜನಾಮೇಳದಿಂದಲೂ ಸಕಲ ವಾದ್ಯವೈಭವದಿಂದಲೂ ದೊಡ್ಡ ರಥೋತ್ಸವವು ದೇವಸ್ಥಾನದಿಂದ ತಳಿರು ತೋರಣ ರಂಭಾಸ್ತಂಭಗಳಿಂದಲಂಕೃತವಾದ ಥೇರಬೀದಿಯಲ್ಲಿ ಹೊರಟು ಮಾರನೇ ದಿವಸ ಮುಂಜಾನೆಯ ೮ ಘಂಟೆಯವಳಗಾಗಿ ದೇವಸ್ಥಾನವನ್ನು ತಲ್ಪಿತು. ಈ ಉತ್ಸವಕ್ಕೆ ಗ್ರಾಮದ ಕೆಲವು ಭಕ್ತರು ಹಾವೇರಿ ಕೆಳಗಿನ ಪೇಟಿ ಸಮಸ್ತ ಭಕ್ತರು ಸಂಪೂರ್ಣ ಸಹಾಯಕರಾದರು. ಮೇಲಿನ ಪೇಟಿಯಲ್ಲಿ ಮ|| ರಾ|| ಚನ್ನಬಸಪ್ಪನವರು ಮಾಗಾಂವಿ, ಶಿವಪ್ಪಶೆಟ್ಟಿ ಆನೂರ, ವಿರುಪಾಕ್ಷಪ್ಪ ಕುಪ್ಪದ, ಶಿವಪ್ಪಾ ಶಿಶಿ, ಇವರು ಸಹಾಯಕರಾಗಿದ್ದರು. ಇವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ. ಈ ವರ್ಷದ ರಥೋತ್ಸವದಕಾರ್ಯಕ್ಕೆ ಈ ಗ್ರಾಮದ ಮಠಾಧಿಕಾರಿಗಳಾದ ಬಸವಾ ಕೋಂ|| ಸಾವಳಗೆಯ್ಯ ಮಠದ ಇವರ ನರ್ದಿಇದ್ದು ಇವರು ಹೆಣ್ಣುಮಕ್ಕಳಾಗಿರುವದರಿಂದ ತಮ್ಮ ಪತಿಯಿಂದ ತಮ್ಮ ದಾಯಾದಿಗಳ ಪೈಕಿ ವೇ|| ಸಾವಳಗಯ್ಯನನ್ನು ನೇಮಿಸಿಕೊಟ್ಟಪ್ರಕಾರ ಈ ವರ್ಷ ಈ ರಥೋತ್ಸವಕ್ಕೆ ಗುರುತ್ವದ ಕಾರ್ಯವು ಸದರಿಯವರಿಂದಲೇ ನಡೆಸಲ್ಪಟ್ಟಿತು. ಈ ಉತ್ಸವಕ್ಕೆ ಆಗಮಿಸಿದ್ದ ಸರ್ವಭಕ್ತರೂ ವೇ|| ಮಠದ ಸಾವಳಗೆಯ್ಯನವರ ಕಡೆಯಿಂದ ಆಶೀರ್ವಾದವನ್ನು ಪಡೆದರು. ಈ ಸಮಯದಲ್ಲಿ ಪ್ರಭಾಪೋಷಣಕ್ಕೆ ೩ ರೂ. ಸಮರ್ಪಿಸಿರುತ್ತಾರೆ!

ಸಿಂಬನಗೌಡ, ಈರನಗೌಡ, ಅಂದಾನಿಗೌಡ್ರ.

ಶ್ರೀ ಜಗದ್ಗುರು ರೇಣುಕಾಚಾರ್ಯಾಯ ನಮಃ

ಬಾದಾಮಿ ತಾಲ್ಲೂಕ ಮಂದಕವಿಗ್ರಾಮದಲ್ಲಿ ಆದ ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವ.

ಫಾಲ್ಗುಣ ಶು|| ೧೩ ಸೋಮವಾರ ದಿವಸ ಶ್ರೀ ಆಚಾರ್ಯರ ಜಯಂತ್ಯುತ್ಸವವು ವೈಭವದಿಂದ ಜರುಗಿತು. ಇಲ್ಲಿಯ ಪ್ರಾಚೀನ ಶ್ರೀ ರೇವಣ ಸಿದ್ಧೇಶ್ವರ ಭವ್ಯಮಠವನ್ನು ತಳಿರುತೋರಣಗಳಿಂದ ಅಲಂಕರಿಸಿ ಶ್ರೀ ಜಗದ್ಗುರುಗಳ ಭಾವಪಟವು ಪೂಜಿಸಲ್ಪಟ್ಟಿತು. ಸಾಯಂಕಾಲದಲ್ಲಿ ಕರಡಿ, ಭಜಂತ್ರಿ ಮೊದಲಾದ ವಾದ್ಯದೊಡನೆ ಶ್ರೀ ಆಚಾರ್ಯರ ಮೆರವಣಿಗೆಯು ನಡೆಸಲ್ಪಟ್ಟಿತು. ಪ್ರತಿ ಬೀದಿಗಳಲ್ಲಿ ಭಕ್ತರು ಕುಂಬದಕೊಡಗಳಲ್ಲಿ ನೀರುಹಾಕುವುದು, ಆರತಿ ಬೆಳಗುವದು, ಕಾಯಿ ಕರ್ಪೂರ ಅರ್ಪಿಸುವುದು ಮೊದಲಾದವುಗಳಿಂದ ತಮ್ಮ ಭಕ್ತಿಯನ್ನು ಪ್ರಕಟಿಸುತ್ತಿದ್ದರು. ಪುನಃ ಮಠಕ್ಕೆ ಮೆರವಣಿಗೆಯು ಬಂದ ಬಳಿಕ ಜಗದಾಚಾರ್ಯರ ಮಂಗಲ ಸ್ತೋತ್ರಗಳನ್ನು ಮಾಡಿ ನೆರೆದಿದ್ದ ಜನರಿಗೆ ಪ್ರಸಾದವನ್ನು ಹಂಚಿ ರಥೆಯು ವಿಸರ್ಜಿಸಲ್ಪಟ್ಟಿತು.

ಕೇಶಿರಪ್ಪ, ಮಲ್ಲಪ್ಪ, ಬಟಕುರ್ಕಿ.
ಚೀರವರ್ಮ ವಾಚನಾಲಯ ಮುದಕವಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ.

ಪೂವಲ್ಲಿ (ಹೂಲಿ) ಪಂಚವರ್ಣಬೃಹನ್ಮಠ ಧರ್ಮೋತ್ತೇಜಕ ಸಂಸ್ಥೆಯ ೧೪ ನೆಯ ವಾರ್ಷಿಕ ಕಮಿಟಿಯು.

ಪ್ರತಿವರುಷ ಪದ್ಧತಿಯಂತೆ ಇದೇ ಚೈತ್ರ ಶು|| ೧ ಶುಕ್ರವಾರ ಪ್ರಾತಃಕಾಲಕ್ಕೆ ಶ್ರೀ ಜಗದಾಚಾರ್ಯ ಸಿದ್ಧಸಂಜೇಶ್ವರ ಮೂರ್ತಿಗೆ ಶ್ರೀ ರುದ್ರಾಭಿಷೇಕವು ಇಲ್ಲಿಯ ಧರ್ಮಾರ್ಥ ಪಾಠಶಾಲೆಯ ವಿದ್ಯಾರ್ಥಿಗಳಿಂದ ಜರುಗಿಸಲ್ಪಟ್ಟಿತು. ಸಂಜೆ ೫ ಘಂಟೆಗೆ ಶ್ರೀ ಜಗದ್ಗುರು ವಿಶ್ವಾರಾಧ್ಯ ವಾಚನಾಲಯದಲ್ಲಿ ಸದರಿ ಸಂಸ್ಥೆಯ ೧೪ ನೆಯ ವಾರ್ಷಿಕ ಕಮಿಟಿಯು ಜರುಗಿತು. ಇಲ್ಲಿ ಈ ಸಂಸ್ಥೆಯ ನಿಯಮದಂತೆ ಇಲ್ಲಿಯವರೆಗೆ ಜರುಗಿದ ಕಾರ್ಯಕ್ರಮದ ಪತ್ರಿಕೆಯು ಓದಲ್ಪಟ್ಟಿತು. ಈ ಸಂಸ್ಥೆಯ ಪತಿಯಿಂದ ಸಂಗ್ರಹಿಸಲ್ಪಟ್ಟ ಹಳೇ ತಾಳಪತ್ರದ ಮತ್ತು ಕೈಬರಹದ ಗ್ರಂಥಗಳ ಹಾಗೂ ಸದ್ಯಃ ಪ್ರಸಾರವಾಗುತ್ತಿರುವ ಧಾರ್ಮಿಕ, ಐತಿಹಾಸಿಕ ಪೌರಾಣಿಕ, ಜೋತಿಷವೈದಿಕ ಇತ್ಯಾದಿ ಕೆಲವು ಗ್ರಂಥಗಳ ಯಾದಿಯು ಓದಲ್ಪಟ್ಟಿತು. ಇಲ್ಲಿ ಸ್ಥಾಪಿಸಿದ ಗ್ರಂಥಪ್ರಸಾರಕಸಂಘದಿಂದ ಪ್ರಸಾರವಾಡಲ್ಪಟ್ಟ ಗ್ರಂಥಗಳ ಮತ್ತು ಪ್ರತಿವರುಷ ಹೊರಡುವ ಪಂಚಾಂಗಗಳ ಮತ್ತು ವಾಚನಾಲಯ, ಪಾಠಶಾಲೆ, ಗ್ರಂಥಗಳ ಸಂಶೋಧನೆ ಇತ್ಯಾದಿ ವಿಷಯಗಳಲ್ಲಿ ಇಲ್ಲಿಯವರೆಗೆ ಆದ ಆಯವ್ಯಯದ ಪತ್ರಿಕೆಯು ಸರ್ವರಿಗೂ ತಿಳಿಯುವಂತೆ ಓದಿ ಹೇಳಲ್ಪಟ್ಟಿತಲ್ಲದೆ ಈ ಕಾರ್ಯದಲ್ಲಿ ಸಹಾಯ ಮಾಡಿದ ಸ್ಥಲದ ಮಹನೀಯರನ್ನು ಕೊಂಡಾಡಿ ಇದರಂತೆ ಇವರಿಗೂ ಇವರ ಸಂಗಡಿಗರಿಗೂ ಮುಂದಾದರೂ ಸಹಾಯಮಾಡುವಂತೆ ಗುರುವರ್ಯರು ಪ್ರೇರಿಸಲೆಂದು ಆದಯಾಭವನನ್ನು ಸ್ತುತಿಸಿದರು. ಸದ್ಯಃ ನಡೆದ ಚಳವಳಿಯ ವಿಷಯದಲ್ಲಿ ಮಹಾತ್ಮಗಾಂಧಿ ಇರ್ವಿನ್ ಇವರ ನಡುವೆ ಆದ ಶಾಂತತೆಯು ಒಪ್ಪಂದವು ಮುಂದಿನ ಶುಭಸೂಚಕವೇ ಆಗಿರುವದು. ಇದರಂತೆ ಪುನಃ ಕೂಡುವ ದುಂಡುಮೇಜಿನ ಪರಿಷತ್ತಿನಲ್ಲಿ ಉಭಯಪಕ್ಷದ ಮುಖಂಡರು ಕೂಡಿ ಈಗ ಅತ್ಯಂತ ದರಿದ್ರಾವಸ್ಥೆಯಿಂದ ಕೆಟ್ಟ ನೋಳಗಿನ ಕೀಡಿಯಂತೆ ಬಳಲಿ ಒದ್ದಾಡುತ್ತಿರುವ ನಮ್ಮ ಭಾರತಮಾತೆಯ ಪುತ್ರರ ಕಷ್ಟವನ್ನು ಪರಿಹರಿಸುವ ಸುಯೋಗದ ಮಾರ್ಗವನ್ನು ಕೈಕೊಳ್ಳಬೇಕೆಂದೂ, ಈ ಕಾರ್ಯದಲ್ಲಿ ನಮ್ಮ ಪಂಚಮ ಜಾರ್ಜಬಾದಶಹರಿಗೆ ಸಹಾಯಮಾಡುವ ಸುಯೋಗವನ್ನು ಒದಗಿಸಿಕೊಟ್ಟು 'ರಾಜಾಪ್ರತ್ಯಕ್ಷದೇವತಾ'' ಎಂಬ ಗಾದೆಯ ವಚನವನ್ನು ಸಾರ್ಥಕಗೊಳಿಸುವಂತೆ ಶ್ರೀ ಸಿದ್ಧಸಂಜೇಶ್ವರನು ಶುಭಾಶೀರ್ವಾದವನ್ನಿತ್ತು ಅನುಗ್ರಹಿಸಲೆಂದೂ ಯಾವತ್ತರೂ ಆದಯಾಘನನನ್ನು ಸ್ಮರಿಸಿ ಮಂಗಲವನ್ನ ಹಾಡಿದಮೇಲೆ 8 ಘಂಟೆಗೆ ಕಮಿಟಿಯು ವಿಸರ್ಜನೆಯಾಯಿತು.

ಸೆಕ್ರೆಟರಿ, ಜಗದ್ಗುರು ವಿಶ್ವಾರಾಧ್ಯ ವಾಚನಾಲಯ.

ಕೈಲಾಸ ಸಮಾರಾಧನ.

ಬೀರೂರು.

ಬೀರೂರಿನಲ್ಲಿ ಪ್ರಸಿದ್ಧರೂ ಗುರುಲಿಂಗಜಂಗಮ ಪ್ರೇಮಿಗಳೂ ಆದ ಮ|| ರಾ|| ಸಾ|| ಶೆಟ್ಟರ ಬಸವಪ್ಪನವರ ತಾಯಿಯವರಾದ ಯಜಮಾನಿ ಚಂದಮ್ಮನವರು ತಾ|| 18-1-31 ನೆಯ ಭಾನುವಾರ ಪರಂಧಾಮವನ್ನೈದಿದರು. ಇವರ ಪುಣ್ಯತಿಥಿಯನ್ನು ನೆರವೇರಿಸಬೇಕೆಂಬ ಸತ್ಸಂಕಲ್ಪದಿಂದ ಶ್ರೀ|| ವಾಸಿಗಳವರ ಮಕ್ಕಳಾದ ಮ|| ರಾ|| ಬಸವಪ್ಪನವರು ತಾ|| 5-4-31 ನೆ ಭಾನುವಾರ, ಸೋಮವಾರ ಮತ್ತು ಮಂಗಳವಾರ ಈ ಮೂರು ದಿವಸಗಳು ನಡೆಯಿಸಲು ಈ ಮೊದಲೇ ತತ್ಸಂಬಂಧವಾದ ಆಹ್ವಾನಪತ್ರಿಕೆಗಳನ್ನು ಬೀರೂರು ಮೊದಲಾದ ಕಡೆಗೆ ಕಳುಹಿಸಿದ್ದಲ್ಲದೆ ಶ್ರೀ ಪೂಜ್ಯಪಾದರಾದ ಕೆರೆ ಹಿಂದಲಮಠದ ಶ್ರೀಗಳವರನ್ನೂ, ದೊಡ್ಡಗುಣಿಮಠದ ಶ್ರೀಗಳವರನ್ನೂ, ಬಿನ್ನಹಪೂರ್ವಕ ಬರಮಾಡಿಕೊಂಡು ತಮ್ಮ ಗೃಹದಲ್ಲಿ ಪಾದಪೂಜಾ ಸಮಾರಾಧನೆಯನ್ನು ನಡೆಯಿಸಿದರು. ಈ ಸಮಯಕ್ಕೆ ಇಷ್ಟಮಿತ್ರಬಾಂಧವರೂ, ಭಕ್ತಮಾಹೇಶ್ವರರೂ, ಆಗಮಿಸಿದ್ದರಲ್ಲದೆ ವಿಶೇಷ ಭಕ್ಷ್ಯಭೋಜ್ಯಗಳಿಂದಲೂ ದಕ್ಷಿಣೆ ವಸ್ತ್ರದಾನ ಮೊದಲಾದವುಗಳಿಂದಲೂ, ತೃಪ್ತಿಪಡಿಯಿಸಿ ಗುರುಮೂರ್ತಿಗಳಿಂದ ಆಶೀರ್ವಾದವನ್ನು ಪಡೆದು ನೈಜವಾದ ಮಾತೃಭಕ್ತಿಯನ್ನು ತೋರಿಸಿದರು. ಇದರ ನಿಮಿತ್ತವಾಗಿ ಪಂಚಾಚಾರ್ಯಪ್ರಭಾ ಪೋಷಣ ಬಗ್ಗೆ ಎರಡು ರೂಪಾಯಿಗಳನ್ನೂ, ಶ್ರೀ ಕ್ಷೇತ್ರ ಕಾಶಿಯಲ್ಲಿ ಅಭ್ಯಾಸಮಾಡುತ್ತಲಿರುವ ವಾಗೀಶ ಶಿವಾಚಾರ್ಯರವರ ವಿದ್ಯಾಭ್ಯಾಸಕ್ಕೋಸ್ಕರ 3 ರೂಪಾಯಿಗಳನ್ನೂ ಕಳುಹಿಸಿ ಧನ್ಯವಾದಗಳನ್ನು ಒಪ್ಪಿಸಿದರು. ಶ್ರೀ|| ಯಜಮಾನಿಯರಾದ ಚಂದಮ್ಮನವರು ಬಾಲ್ಯದಿಂದಲೂ ಕಷ್ಟಪಟ್ಟವರಾಗಿ ಸ್ವಜನರಲ್ಲಿಯೂ ಪರಜನರಲ್ಲಿಯೂ ಮಕ್ಕಳಲ್ಲಿಯೂ ಪ್ರೇಮವುಳ್ಳವರಾಗಿ ಅತಿಥಿ ಅಭ್ಯಾಗತರಸೇವೆಯಲ್ಲಿ ಬಹು ಜಾಣ್ಮೆಯುಳ್ಳವರಾಗಿದ್ದರು. ಇವರ ಗುಣಗಳನ್ನು ಅನೇಕರು ಕೊಂಡಾಡುತ್ತಿರುವರು. ಸದರಿ ಅಮ್ಮನವರ ಆತ್ಮಕ್ಕೆ ಜಗದೀಶ್ವರನು ಮುಕ್ತಿಯನ್ನು ಕೊಟ್ಟು ಬಂಧುಬಾಂಧವರ ಮನಸ್ಸಿಗೆ ಶಾಂತತೆಯನ್ನನುಗ್ರಹಿಸಲೆಂದು ಪ್ರಾರ್ಥಿಸುವ.

ಎಂ. ಕಲ್ಲಪ್ಪಶೆಟ್ಟಿ.

ಹಿಂದುಸ್ಥಾನದ ರಾಜಕೀಯ ಪ್ರಗತಿಯ ಬಗ್ಗೆ ಅಮೇರಿಕೆಯ ಅಭಿಪ್ರಾಯಗಳು.

ಡಾ|| ಸುಧೀಂದ್ರಬೋಸ್‌ರವರು ತಿಳುಹಿಸುವುದೇನಂದರೆ:— ಇಂಗ್ಲೀಷರು ಹಿಂದುಸ್ಥಾನದವರ ಅಧ್ಯಾತ್ಮಶಕ್ತಿ ಸಾಹಸಗಳನ್ನು ಇದುವರೆವಿಗೂ ಸರಿಯಾಗಿ ತಿಳಿದುಕೊಂಡಿರಲಿಲ್ಲ. ಕಳೆದ ವರ್ಷ ಭಾರತೀಯರು ಅನುಭವಿಸಿದ ಕಷ್ಟವನ್ನೂ, ಸ್ವಾರ್ಥತ್ಯಾಗವನ್ನೂ ನೋಡಿ ಅಮೇರಿಕೆಯ ಜನರು ಇವರನ್ನು ಗೌರವಿಸುತ್ತಿರುವರು. ಕೇವಲ ಹಿಂಸಾಮಾರ್ಗಗಳಿಂದಲೇ ಯುದ್ಧಮಾಡಿ ಕಂಡಿರುವ ಜಗತ್ತಿಗೆ ಭಾರತೀಯ ಸ್ತ್ರೀಪುರುಷರು ಅಹಿಂಸಾಮಾರ್ಗದಿಂದ ಹೂಡಿದ ಯುದ್ಧವು ಆದರ್ಶಪ್ರಾಯವಾಗಿದೆ.

ಹಿಂದುಸ್ಥಾನದ ರಾಜಕೀಯ ಪ್ರಗತಿಯ ಬಗ್ಗೆ ಹಾಕಿರುವ ಷರತ್ತುಗಳು.

ಹಿಂದುಸ್ಥಾನದ ಕಾಂಗ್ರೆಸ್ ಮುಖಂಡರೇ ದೇಶದ ನಿಜವಾದ ನಾಯಕರೆಂದೂ, ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿದ್ದ ಪ್ರತಿನಿಧಿಗಳು ದೇಶದ ಮುಖಂಡರಲ್ಲವೆಂದೂ, ಅಮೇರಿಕೆಯ ಜನರಿಗೆ ಮನದಟ್ಟಾಗಿದೆ. ರೌಂಡ್‌ಟೇಬಲ್ ಸಮ್ಮೇಳನದಿಂದ ಹಿಂದುಸ್ಥಾನದ ರಾಜಕೀಯಾಭಿವೃದ್ಧಿಗೆ ಏನಾದರೂ ಅನುಕೂಲವಾಗಿದ್ದರೆ, ಅದಕ್ಕೆ ಇಂಗ್ಲೀಷರೂ, ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿದ್ದ ಪ್ರತಿನಿಧಿಗಳೂ ಸ್ತೋತ್ರಾರ್ಹರಾಗಿರದೆ, ಹಿಂದುಸ್ಥಾನದಲ್ಲಿ ಜೈಲಿಗೆ ಹೋದ 60 ಸಾವಿರ ಜನರು ಸ್ತೋತ್ರಾರ್ಹರಾಗಿದ್ದಾರೆ. ಇಂಗ್ಲೆಂಡಿನ ಮುಖ್ಯಮಂತ್ರಿಗಳು ಕೊಡಲಿಚ್ಛಿಸುವ ಸ್ವರಾಜ್ಯವು ಕಾಗದದ ಮೇಲೆ ಬರೆಯಲು ಯೋಗ್ಯವೇ ಹೊರತು ಅನುಷ್ಠಾನಕ್ಕೆ ಯೋಗ್ಯವಾಗಿಲ್ಲವೆಂದು ಸರಳಹೃದಯರಾದ ಅಮೇರಿಕೆಯ ಜನರು ಸ್ಪಷ್ಟವಾಗಿ ತಿಳಿದಿದ್ದಾರೆ. ಹಣಕಾಸಿನ ವಿಚಾರದಲ್ಲಿ ಸಂಪೂರ್ಣಾಧಿಕಾರವನ್ನು ಹೊಂದುವವರೆಗೂ, ಹಿಂದುಸ್ಥಾನವು ತನ್ನ ದೇಶದ ಪ್ರಭುತ್ವವನ್ನು ತಾನೇ ನಡೆಯಿಸಲು ಅರ್ಹವಾಗಲಾರದು. ಇಂಗ್ಲೀಷರನ್ನು ಹೆದರಿಸತಕ್ಕ ಶಾಸನೋಲ್ಲಂಘನವೆಂಬ ಬಲವಾದ ಆಯುಧವು ಭಾರತೀಯರಲ್ಲಿದೆ ಎಂದು ಅಮೇರಿಕೆಯ ಜನರು ಸಾರುತ್ತಿರುವರು. ಕಳೆದ ವರ್ಷ ನಡೆದ ಸತ್ಯಾಗ್ರಹ ಚಳವಳಿಯಿಂದ ಇಂಗ್ಲೆಂಡಿನಲ್ಲಿ 20ಲಕ್ಷ ಜನರು ನಿರುದ್ಯೋಗಿಗಳಾಗಿರುವಾಗ ಅವರ ವ್ಯಾಪಾರವು ಬಹುಮಟ್ಟಿಗೆ ಕುಗ್ಗಿತು. ಹಿಂದುಸ್ಥಾನವು ಇದುವರೆವಿಗೂ ಆಂಗ್ಲೇಯರಿಗೆ ಹಾಲುಕರೆಯುವ ಹಸುವಿನಂತಿತ್ತು. ಆದರೆ ಇನ್ನು ಮುಂದೆ ಅದು ಸಾಧ್ಯವಿಲ್ಲ. ಹಿಂದುಸ್ಥಾನದಲ್ಲಿ ಇನ್ನೂ ಸಂಘದ ಏಕಮತ್ಯವೂ ಸಾಕಾದಷ್ಟು ವಿದ್ಯಾಪ್ರಸಾರವೂ ಇಲ್ಲದಿದ್ದರೂ ಆಂಗ್ಲೇಯರು ಹಿಂದಿನಂತೆ ಇಂಗ್ಲೆಂಡಿನ ಹಿತದೃಷ್ಟಿಯಿಂದ ಈ ದೇಶವನ್ನು ಆಳುವುದು ಸಾಧ್ಯವಿಲ್ಲವೆಂಬುದನ್ನು ಹಿಂದುಸ್ಥಾನದ ಮುಖಂಡರು ಜಗತ್ತಿಗೆ ಸ್ಪಷ್ಟಪಡಿಸಿದರು. ಹಿಂದುಸ್ಥಾನದಲ್ಲಿ ವಿದ್ಯಾಭಿವೃದ್ಧಿಯಿಲ್ಲದಿರುವುದಕ್ಕೂ ಆಂಗ್ಲೇಯರೇ ಕಾರಣರು. ವಿದ್ಯಾಭ್ಯಾಸಕ್ಕೆ ಖರ್ಚುಮಾಡುವುದಕ್ಕಿಂತಲೂ 12 ರಷ್ಟು ಹೆಚ್ಚಾಗಿ ಸೈನ್ಯಕ್ಕೆ ಖರ್ಚುಮಾಡುವರು. ಮುಖ್ಯಮಂತ್ರಿಗಳು ಹೇಳುವ ಹಾಗೆ ಸರಕಾರದವರು ಉಳಿಸಿಕೊಳ್ಳುವ ವಿಷಯಗಳಿಂದ ಹಿಂದುಸ್ಥಾನಕ್ಕೆ ಕೊಡಲ್ಪಡುವ ಅಲ್ಪಸ್ವಲ್ಪ ಸ್ವರಾಜ್ಯವು ನಾಶವಾಗುವುದು.

ನ್ಯೂಯಾರ್ಕಿನ ನ್ಯೂಫ್ರೀಮನ್ ಪತ್ರಿಕೆಯು ಬರೆಯುವುದೇನೆಂದರೆ:—

ಆಂಗ್ಲೇಯರು ಹಿಂದುಸ್ಥಾನಕ್ಕೆ ಕೊಡಬೇಕೆನ್ನುವ ರಾಜ್ಯಾಂಗವು ವಿಚಿತ್ರವಿಚಿತ್ರಗುಟ್ಟುತ್ತಿರುವುದು. ಪರದೇಶಿಯರೊಡನೆ ವ್ಯವಹಾರ, ಸಂರಕ್ಷಣೆ, ಪೋಲೀಸಧಿಕಾರ, ಹಣಕಾಸಿನ ವಿಚಾರ ಈ ವಿಷಯಗಳನ್ನು ಸಾರ್ವಭೌಮಸರ್ಕಾರದವರು ಉಳಿಸಿಕೊಂಡು, ಭಾರತೀಯರಿಗೆ ಸ್ವರಾಜ್ಯವನ್ನು ಕೊಡುವರೆಂದು ಜಗತ್ಪ್ರಸಿದ್ಧವಾಗಿದೆ. ಈ ನಾಲ್ಕು ವಿಷಯಗಳನ್ನು ತೆಗೆದುಬಿಟ್ಟರೆ ಉಳಿಯುವುದು ಸ್ವರಾಜ್ಯವಲ್ಲ.

ಅಮೇರಿಕೆಯ ಕೊಲಿಕಾರಪಕ್ಷದ ಜನರು ಹಿಂದುಸ್ಥಾನದ ರಾಜಕೀಯ ಚಳವಳಿಯು ಜಗತ್ತಿನ ಇತಿಹಾಸದಲ್ಲಿ ಬಹಳ ಮುಖ್ಯವಾದುದೆಂದೂ, ಸಂಪೂರ್ಣ ಸ್ವರಾಜ್ಯವು ಲಭಿಸುವವರೆಗೂ ಭಾರತೀಯರು ಶಾಸನೋಲ್ಲಂಘನಚಳವಳಿಯನ್ನು ನಿಲ್ಲಿಸಬಾರದೆಂದೂ, ಅಭಿಪ್ರಾಯಪಡುತ್ತಾರೆ.

ಅಮೇರಿಕೆಯಲ್ಲಿ ದೊಡ್ಡ ಧರ್ಮಬೋಧಕರೂ, 90 ವರ್ಷದ ವಯೋವೃದ್ಧರೂ, ದೀನಬಂಧುಗಳೂ, ಹಿಂದೂಸ್ಥಾನದ ವಿಷಯದಲ್ಲಿ ಅನೇಕ ಅಮೂಲ್ಯಗ್ರಂಥಗಳನ್ನು ಬರೆದು ಜಗತ್ಪ್ರಸಿದ್ಧರಾಗಿಯೂ ಇರುವ **ಡಾ|| ಜೆ. ಟಿ. ಸೆಂಡರ್ಲೆಂಡ್‌ರು** ರೌಂಡ್‌ಟೇಬಲ್ ಸಮ್ಮೇಳನದ ಬಗ್ಗೆ ಹೇಳುವುದೇನೆಂದರೆ:—"ಬ್ರಿಟಿಷ್‌ಪ್ರಭುತ್ವದವರು ಅನೇಕ ವಿಷಯಗಳನ್ನು ಉಳಿಸಿಕೊಂಡು ಭಾರತೀಯರಿಗೆ ಸ್ವರಾಜ್ಯವನ್ನು ಕೊಡುವ ವಿಷಯದಲ್ಲಿ ಅನೇಕ ಭಿನ್ನಮತಗಳಿವೆ. ಮೂರು ಸಾವಿರ ವರ್ಷಗಳವರೆಗೂ ಅದ್ವಿತೀಯವಾಗಿಯೂ ಅತ್ಯಂತವೈಭವದಿಂದಲೂ, ದರ್ಪದಿಂದಲೂ, ಘನತೆಯಿಂದಲೂ ಪ್ರಭುತ್ವವನ್ನು ಮಾಡಿದ ಭಾರತೀಯರಿಗೆ ಸೈನ್ಯ, ಹಣಕಾಸಿನ ವಿಚಾರ ಇವುಗಳನ್ನುಳಿಸಿಕೊಂಡು ಸ್ವರಾಜ್ಯಕೊಡಬೇಕೆ? ಹಿಂದೆ ಗೌರವದಿಂದ ಪ್ರಭುತ್ವಮಾಡಿದ ರಾಷ್ಟ್ರವು ಈಗ ಮಾಡಲಾರದೆ? ಸಹಸ್ರಾರುವರ್ಷಗಳವರೆಗೂ ಜಯಪ್ರದನಾಗಿ ಆಳಿದ ಜನಾಂಗವು ಈಗ ಆಳಲಾರದೆಂದು ಹೇಳಬೇಕಾದರೆ ಇಂಗ್ಲೀಷರು 170 ವರ್ಷಗಳವರೆಗೂ ಪ್ರಭುತ್ವಮಾಡಿ ದೇಶವನ್ನು ನಿರ್ವೀರ್ಯವನ್ನಾಗಿಮಾಡಿದೆ ಎಂದು ಹೇಳಬಹುದಲ್ಲವೆ? ಅನೇಕಾಂಶಗಳನ್ನು ಉಳಿಸಿಕೊಂಡು ಭಾರತೀಯರಿಗೆ ಸ್ವರಾಜ್ಯಕೊಡುವುದೆಂದರೆ ಏನೂ ಕೊಡುವುದಿಲ್ಲವೆಂದು ಹೇಳಿದಹಾಗೆಯೇ ಸರಿ?

1. ಇಂಗ್ಲೆಂಡ್‌ದೇಶವು ಹಿಂದೂಸ್ಥಾನದ ದೊಡ್ಡಸೈನ್ಯವನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುತ್ತದೆ. ಹೀಗೆ ಹತೋಟಿಯಲ್ಲಿಟ್ಟುಕೊಳುವುದರ ಅರ್ಥವೇನು? ಅಮೇರಿಕೆಯ ದೊಡ್ಡಸೈನ್ಯವನ್ನು ಜರ್ಮನಿಯವರೋ ಫ್ರಾನ್ಸಿನವರೋ, ಜಪಾನಿನವರೋ ಅಥವಾ ಇಂಗ್ಲೆಂಡಿನವರೋ ಸ್ವಾಧೀನದಲ್ಲಿಟ್ಟುಕೊಂಡು ಅಮೇರಿಕೆಯವರು ಸ್ವತಂತ್ರರಾಗಿ ಸ್ವರಾಜ್ಯಸುಖವನ್ನನುಭವಿಸುವರೆಂದು ಹೇಳಬಹುದೆ? ಯಾವ ರಾಷ್ಟ್ರದ ಸೈನ್ಯವು ಅನ್ಯದೇಶೀಯರ ಸ್ವಾಧೀನದಲ್ಲಿದೆಯೋ ಆ ದೇಶವು ಕೇವಲ ಅಪಾಯಕರವಾದ ಗುಲಾಮಗಿರಿಯಲ್ಲಿದೆ ಎಂದು ಧಾರಾಳವಾಗಿ ಹೇಳಬಹುದು.

2. ಭಾವಿ ರಾಜ್ಯಾಂಗದಲ್ಲಿ ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ಪರದೇಶಗಳ ವ್ಯವಹಾರವನ್ನು ಆಂಗ್ಲೇಯರೇ ನಡೆಯಿಸಬೇಕೆಂದು ಉಲ್ಲೇಖಿಸಲ್ಪಟ್ಟಿದೆ. ಆದ್ದರಿಂದ ಹಿಂದೂಸ್ಥಾನವು ಪರದೇಶಗಳ ಸಂಗಡ ಅಧಿಕಾರಸ್ಥಾನದಿಂದ ವ್ಯವಹಾರ ಮಾಡುವಹಾಗಿಲ್ಲ. ಭಾರತೀಯರು ವಿದೇಶೀಯರೊಡನೆ ಒಪ್ಪಂದ ಮಾಡಿಕೊಳ್ಳುವಹಾಗಿಲ್ಲ. ವಿದೇಶಗಳಿಗೆ ಪ್ರತಿನಿಧಿಗಳನ್ನು ಕಳುಹಿಸುವಹಾಗಿಲ್ಲ. ಹಿಂದೂಸ್ಥಾನಕ್ಕೆ ಜಗತ್ತಿನ ಇತರ ರಾಷ್ಟ್ರಗಳಲ್ಲಿ ಗಣ್ಯತೆಯಿಲ್ಲದೆ ಇಂಗ್ಲೆಂಡಿನ ಒಂದು ಆಶ್ರಿತರಾಜ್ಯವಾಗಿರುವುದು.

3. ಆಂಗ್ಲೇಯರೇ ಭಾರತೀಯರ ಹಣಕಾಸಿನ ವಿಚಾರ, ಪರದೇಶೀಯರಿಗೆ ಕೊಡಬೇಕಾದ ಸಾಲ, ಈ ವಿಷಯಗಳೆಲ್ಲವೂ ಆಂಗ್ಲೇಯರ ಕೈಯಲ್ಲಿರುವುವು. ಅರ್ಥಾತ್ ಹಿಂದುಸ್ಥಾನವು ಹಣಕಾಸಿನ ವಿಷಯದಲ್ಲಿ ಆಂಗ್ಲೇಯರ ಸ್ವಾಧೀನದಲ್ಲಿರುವುದು. ಯಾರು ರಾಷ್ಟ್ರದ ಆರ್ಥಿಕಸೂತ್ರವನ್ನು ಹಿಡಿದಿರುವರೋ ಅವರೇ ರಾಜಕೀಯ ಸೂತ್ರವನ್ನು ಹಿಡಿದಿರುವರೆಂಬುದು ರಾಜನೀತಿಯ ಸ್ವತಃ ಸಿದ್ಧವಾದ ನಿಯಮ. ಹಣಕಾಸಿನ ಅಧಿಕಾರವಿಲ್ಲದೆ ಭಾರತೀಯರು ಸ್ವರಾಜ್ಯವನ್ನನುಭವಿಸುವರೆಂಬುದು ನಕಲಿಯೇ ಹೊರತು ನಿಜವಲ್ಲ.

ಕಾಂಗ್ರೆಸ್ಸಿನಲ್ಲಿ ಕಾರ್ಯಕಲಾಪಗಳನ್ನು ಇಂಗ್ಲಿಷಿನಲ್ಲಿ ನಡೆಯಿಸುವದು ಕಷ್ಟವಾಗುವುದರಿಂದ ಬಂಗಾಲ ಮತ್ತು ದಕ್ಷಿಣ ಹಿಂದೂಸ್ಥಾನದ ಭಾರತೀಯರು ಹಿಂದಿ ಭಾಷೆಯನ್ನು ಕಲಿಯಬೇಕೆಂದೂ, ಪ್ರತಿ ದಿವಸವೂ ಮೂರು ತಾಸುಗಳಂತೆ ಮೂರು ತಿಂಗಳುಗಳವರೆಗೂ ಅಭ್ಯಾಸಮಾಡಿದರೆ ಹಿಂದಿ ಭಾಷೆಯನ್ನು ಸುಲಭವಾಗಿ ಕಲಿತುಕೊಳ್ಳಬಹುದೆಂದೂ, ಇತಃಪರ ಕಾಂಗ್ರೆಸ್ಸಿನಲ್ಲಿ ಇಂಗ್ಲಿಷನ್ನು ಉಪಯೋಗಿಸಬೇಕೆಂದು ಬಲಾತ್ಕಾರಪಡಿಸಲಾಗದೆಂದೂ ಸೂಚಿಸಿರುತ್ತಾರೆ.

(4) ಭಾವಿರಾಜ್ಯಾಂಗದಲ್ಲಿ ವೈಸರಾಯರು ಸ್ವಲ್ಪಮಟ್ಟಿಗೆ ನ್ಯಾಯವಿಧಾಯಕಸಭೆಗೆ ಉತ್ತರವಾದಿಗಳಾಗುವರೆಂಬುದೇನೋ ನಿಜ. ಆದರೆ ಮುಂದಿನ ವೈಸರಾಯರಿಗೆ ಹಿಂದೆ ಇದ್ದ ವೈಸರಾಯರಿಗಿಂತಲೂ ಹೆಚ್ಚು ಅಧಿಕಾರವಿರುವುದು. ತಮ್ಮ ಮನಸ್ಸು ಬಂದರೆ ಮಂತ್ರಿಮಂಡಲಗಳನ್ನು ವಜಾಮಾಡಬಹುದು. ನ್ಯಾಯವಿಧಾಯಕ ಸಭೆಯನ್ನು ಪ್ರತಿಬಂಧಮಾಡಬಹುದು. ಬೇಕಾದರೆ ವಜಾಮಾಡಲೂ ಬಹುದು. ಕಳೆದ ವರ್ಷ ಲಾರ್ಡ್ ಇರ್ವಿನ್‌ರವರು ಆಳಿದ ಹಾಗೆ ಕಠಿಣ ಶಾಸನಗಳಿಂದಾಗಲಿ, ಮಿಲಿಟರಿ ಕಾಯಿದೆಯಿಂದಲಾಗಲಿ ಪ್ರಭುತ್ವವನ್ನು ಮಾಡಬಹುದು."

ಅಮೇರಿಕೆಯಲ್ಲಿ ಅದಿಕ್ಕ್ರಾಂತಪ್ರಮವಹಿಸಿ ಗುಲಾಮಗಿರಿಯನ್ನು ವಜಾಮಾಡಿಸಿದ ಲಾಯಡ್ ಜಾರ್ಜ್‌ಗ್ಯಾರಿಜನ್‌ರವರಿಗೆ ಮಹಾತ್ಮಗಾಂಧಿಯವರನ್ನು ಹೋಲಿಸುತ್ತಾರೆ. ಅವರು ಹೇಳುವುದೇನೆಂದರೆ—ಗ್ಯಾರಿಜನ್‌ರವರು ಮೊಟ್ಟಮೊದಲು ಶತ್ರುಗಳನ್ನು ಶಾಂತರೀತಿಯಿಂದ ವಿರೋಧಿಸಬೇಕೆಂದು ಬೋಧಿಸಿದರು. ಆ ತತ್ವವನ್ನು ಟಾಲಸ್ಟಾಯರು ಅನುಸರಿಸಿದರು. ಅದೇ ತತ್ವವನ್ನೇ ಈಗ ಮಹಾತ್ಮ ಗಾಂಧಿಯವರು ಬೋಧಿಸುತ್ತಿರುವುದರಿಂದ ಮಹಾತ್ಮರು ಹಿಂದುಸ್ಥಾನದ ಗ್ಯಾರಿಜನ್‌ರವರೆಂದು ಅಭಿಮಾನಪಡುವರು.

ಕರಾಚಿ ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀಯುತ ವಲ್ಲಭಭಾಯಿಪಟೇಲರವರ ಭಾಷಣದ ಸಾರಾಂಶ.

(ಮುಂದೆ ಸಾಗಿದುದು.)

ಸಿವಿಲ್ ಸರ್ವೆಂಟುಗಳು.

ಭಾರೀ ಸಂಬಳಗಳನ್ನು ತೆಗೆದುಕೊಳ್ಳುವ ಬ್ರಿಟಿಷ್ ಅಧಿಕಾರಿಗಳ ಸಹಾಯಸಾಮರ್ಥ್ಯವನ್ನು ಕಳೆದುಕೊಂಡರೆ ನಮ್ಮ ಸಿವಿಲ್ ಆಡಳಿತವು ಬಲಹೀನವಾಗುವುದೆಂದು ಅನೇಕರು ಹೇಳುತ್ತಿರುವರು. ಆದರೆ ಕಳೆದ ಕೆಲವು ವರ್ಷಗಳಿಂದಲೂ ಕಾಂಗ್ರೆಸ್ಸಿನ ಸ್ವಯಂ ಸೇವಕ ಸೇವಕಿಯರು ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆಯನ್ನು ಮಾಡಿ ಅನುಪಮಸಾಮರ್ಥ್ಯವನ್ನು ತೋರಿಸಿ ನಮ್ಮಲ್ಲಿ ದೌರ್ಬಲ್ಯವೂ, ಅನೀತಿಯೂ ಇಲ್ಲವೆಂಬುದನ್ನು ದೃಢಪಡಿಸಿರುವರು.

ಸಾಲದ ನಿರಾಕರಣೆ.

ಹಿಂದುಸ್ಥಾನದ ಮೇಲೆ ಹೊರಿಸಲ್ಪಟ್ಟಿರುವ ಅನೇಕ ಸಾಲಗಳು ಕೇವಲ ಅನ್ಯಾಯವಾದವುಗಳೆಂದು ನಾವು ಹೇಳಿದ್ದೇವೆ. ಆದರೆ ನ್ಯಾಯವಾಗಿ ಕೊಡಬೇಕಾದ ಸಾಲದಲ್ಲಿ ಒಂದು ಕಾಸನ್ನೂ ನಾವು ನಿರಾಕರಿಸುವುದಿಲ್ಲ. ಯಾವ ಸಾಲವು ನ್ಯಾಯವಾದುದು, ಯಾವುದು ಅನ್ಯಾಯವಾದುದೆಂಬುದನ್ನು ವಿಚಾರಿಸಲು ನಿಷ್ಪಕ್ಷಪಾತವಾದ ವಿಚಾರಣಾಸಮಿತಿಯು ಏರ್ಪಡಿಸಲ್ಪಡಬೇಕು.

ಇಂಗ್ಲೆಂಡಿನೊಡನೆ ಬಾಂಧವ್ಯ.

ಲಾಹೋರ್ ಕಾಂಗ್ರೆಸ್ಸಿನ ಸಂಪೂರ್ಣ ಸ್ವರಾಜ್ಯದ ಠರಾವನ್ನು ಹಿಂದೆ ಹಾಕುವ ಹಾಗಿಲ್ಲ. ಸಂಪೂರ್ಣ ಸ್ವಾತಂತ್ರ್ಯವೆಂದರೆ ಇಂಗ್ಲೆಂಡಿನೊಡನೆ ಸಂಬಂಧವನ್ನು ಬಿಡಬೇಕೆಂದು ಅರ್ಥವಲ್ಲ. ಪರಸ್ಪರ ಸಲಹೆಗಳಿಂದಲೂ ಒಪ್ಪಂದದಿಂದಲೂ ಸಂಪೂರ್ಣ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಬ್ರಿಟಿಷರ ಸಂಬಂಧವನ್ನು ಇಟ್ಟುಕೊಳ್ಳುವುದು ನ್ಯಾಯವಾದುದೆಂದು ನನಗೆ ಕಾಣುತ್ತದೆ. ಆದರೆ ಇಂಡಿಯಾದೇಶದಲ್ಲಿ ಇಗ್ಲೆಂಡಿನ ಸಂಬಂಧವನ್ನು ಸಂಪೂರ್ಣವಾಗಿ ತೊರೆಯಬೇಕೆಂಬ ಭಾವನೆಯುಳ್ಳವರು ಅನೇಕರಿದ್ದಾರೆ. ನಾನು ಆ ವರ್ಗಕ್ಕೆ ಸೇರಿದವನಲ್ಲ.

ಫೆಡರೇಷನ್ ರಾಜ್ಯಪದ್ಧತಿ.

ಫೆಡರೇಷನ್ ರಾಜ್ಯಪದ್ಧತಿಯು ಕೇವಲ ಆಕರ್ಷಣೀಯವಾದುದು. ಆದರೆ ಅದರಲ್ಲಿ ಅನೇಕ ತೊಡಕುಗಳಿವೆ. ಸಾಮಂತರಾಜರು ಬ್ರಿಟಿಷರ ಸಂಬಂಧವನ್ನು ಬಿಡಲೊಪ್ಪುವುದಿಲ್ಲ. ಸತ್ಯಭಾವನೆಯಿಂದ ರಾಜರು ನಮ್ಮೊಡನೆ ಸೇರಿದರೆ ನಮಗೆ ಬಹಳ ಲಾಭ. ಅವರು ಸೇರುವುದರಿಂದ ಅಭಿವೃದ್ಧಿಗೂ ಪ್ರಜಾಸ್ವಾತಂತ್ರ್ಯಕ್ಕೂ ಕುಂದಕವಾಗಬಾರದು. ಸ್ವಾತಂತ್ರ್ಯಕ್ಕೆ ವಿರೋಧವಾಗಿ ಅವರು ಯೋಚಿಸದಿರಲೆಂದು ನಾನು ಆಶಿಸುತ್ತೇನೆ. ಈಗಿನ ಕಾಲಸ್ಥಿತಿಗನುಗುಣವಾಗಿ ಹೃತ್ಪೂರ್ವಕವಾಗಿ ಪ್ರಗತಿಯ ಕಾರ್ಯಗಳನ್ನು ನಡೆಸುವರೆಂದು ನಾನು ಕೋರುತ್ತೇನೆ. ಇಂಡಿಯಾದೇಶದ ಇತರ ಭಾಗಗಳ ಪ್ರಜೆಗಳಿರುವಂತೆಯೇ ತಮ್ಮ ಪ್ರಜೆಗಳಿಗೂ

[6ನೇ ಪುಟವನ್ನು ನೋಡಿ.]

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ
ಹಾಗೂ
ಶ್ರೀ ಜಗದ್ಗುರು ದಾರುಕಾಚಾರ್ಯರ
ಜಯಂತಿಮಹೋತ್ಸವಗಳು.

ವೈಶಾಖ ಶು|| ೨ ಸೋಮವಾರ. ವೈಶಾಖ ಶು|| ೪ ಬುಧವಾರ.

ಶ್ರೀ ದ್ರಾಕ್ಷಾರಾಮ ರಾಮನಾಥಲಿಂಗದಿಂದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಅವತಾರವು

ಶ್ರೀ ವಟವೃಕ್ಷ ಸಿದ್ಧೇಶ್ವರಲಿಂಗದಿಂದ ಶ್ರೀ ಜಗದ್ಗುರು ದಾರುಕಾಚಾರ್ಯರ ಅವತಾರವು.

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರ ಮಸ್ತಕಮಣೀಭೂತಗಳಾದ ಶ್ರೀ ಹಿಮವತ್ಕೇದಾರ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀ ರಾಮನಾಥ, ಶ್ರೀ ಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತ ಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶ ದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ ಅಂಥ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವದರಿಂದ ಸರ್ವ ಗುರುಭಕ್ತರೂ ಈ ಜಯಂತಿಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸತಕ್ಕದ್ದಾಗಿದೆ. ವೈಶಾಖ ಶು|| ೨ ಸೋಮವಾರ ತಾ|| ೨೦-೪-೩೧ ನೆಯ ದಿವಸ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನೂ, ವೈಶಾಖ ಶು|| ೪ ಬುಧವಾರ ತಾ|| ೨೨-೪-೩೧ ನೆಯ ದಿವಸ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿ ಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಾಂಪ್ರದಾಯದ ವೀರಶೈವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿ ಮಹೋತ್ಸವಗಳನ್ನು ಆಯಾಯ ಪವಿತ್ರತಿಥಿಗಳಲ್ಲಿ ಅತ್ಯಂತ ಭಕ್ತಿಯಿಂದಲೂ ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಈಗಲಾದರೂ ಶುದ್ಧಸಾಂಪ್ರದಾಯದ ವೀರಶೈವರು ಈ ಮೊದಲು ಮೂವರು ಆಚಾರ್ಯರ ಜಯಂತಿಗಳನ್ನು ಅತಿ ವೈಭವದಿಂದ ನೆರವೇರಿಸಿದಂತೆ ಈಗ ಪ್ರಾಪ್ತವಾಗಿರುವ ಆಚಾರ್ಯರ ಜಯಂತಿಮಹೋತ್ಸವಗಳನ್ನಾದರೂ ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಿ ಆಯುರಾರೋಗ್ಯಾದಿ ಸಕಲಸಂಪತ್ಸಮೃದ್ಧಿಯನ್ನು ಹೊಂದಿ ನಿತ್ಯಸುಖಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ಹೊಸದಿಲ್ಲಿಯಲ್ಲಿ ಮಹಾತ್ಮಗಾಂಧಿಯವರು ಮಾಡಿದ ಭಾಷಣದ ಸಾರಾಂಶ.

ಈ ತಿಂಗಳು 7 ನೆಯ ತಾರೀಖಿನ ದಿವಸ ಮಹಾತ್ಮ ಗಾಂಧಿಯವರು ಹೊಸದಿಲ್ಲಿಯಲ್ಲಿ ಅಖಿಲಭಾರತ ವರ್ತಕಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅನೇಕ ಆಂಗ್ಲೇಯ ಮತ್ತು ಭಾರತೀಯ ದೊಡ್ಡ ವರ್ತಕರೂ, ಪಂಡಿತ ಜವಾಹರಲಾಲ್ ನೆಹರು ಪಂಡಿತ ಮದನಮೋಹನ ಮಾಲವೀಯ ಮೊದಲಾದ ರಾಷ್ಟ್ರಭಕ್ತರೂ ಆಗಮಿಸಿದ್ದರು. ಮಹಾತ್ಮ ಗಾಂಧಿಯವರು ಮಾಡಿದ ಭಾಷಣದ ಸಾರಾಂಶವೇನೆಂದರೆ :-

ಯೂರೋಪಿನ ಮಹಾಯುದ್ಧದ ಸಮಯದಲ್ಲಿ ವೈಸರಾಯರಾಗಿದ್ದ ಲಾರ್ಡ್ ಚೆಲ್ಮ್ಸಫೋರ್ಡ್‌ರವರು ಇದೇ ಕಟ್ಟಡದಲ್ಲಿಯೇ ಸಭೆಸೇರಿಸಿದ್ದರು. ಆಗ ನಾನು ಎಲ್ಲರೂ ಹಿಂದಿಭಾಷೆಯಲ್ಲಿಯೇ ಮಾತನಾಡಬೇಕೆಂದು ಹೇಳಿದ್ದೆನು. ಅದಕ್ಕೆ ವೈಸರಾಯರೂ ಒಪ್ಪಿದ್ದರು. ಆ ಸಂಗತಿಯು ಈಗ ನನ್ನ ಜ್ಞಾಪಕಕ್ಕೆ ಬರುತ್ತದೆ. ಈ ಸಂಘವು ಭಾರತೀಯ ವರ್ತಕರ ಸಂಘವಾಗಿರುವುದರಿಂದ ತಮ್ಮ ಮಾತೃಭಾಷೆಯಲ್ಲಿಯೇ ಎಲ್ಲ ಕಾರ್ಯಕಲಾಪಗಳನ್ನು ನಡೆಯಿಸುವುದು ಅವರ ಧರ್ಮವಾಗಿದೆ. ಸ್ವಾತಂತ್ರ್ಯವನ್ನನುಭವಿಸುವ ಅಥವಾ ಗುಲಾಮಗಿರಿಯಲ್ಲಿರುವ ಜಗತ್ತಿನ ಯಾವ ರಾಷ್ಟ್ರವೂ ಅನ್ಯದೇಶದ ಭಾಷೆಯಲ್ಲಿ ಕಾರ್ಯಕಲಾಪಗಳನ್ನು ನಡೆಯಿಸುವುದಿಲ್ಲ. ಡಚ್ಚರೂ, ಇಂಗ್ಲೀಷರೂ ದಕ್ಷಿಣ ಆಫ್ರಿಕದಲ್ಲಿ ಯುದ್ಧಮಾಡಿದಾಗ ಉಭಯಭಾಷೆಗಳೂ ಜಾರಿಯಲ್ಲಿರಬೇಕೆಂದು ನಿರ್ಧರಿಸಿದ್ದರು.

ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಡುವುದು ಹಿಂದೂರಾಜ್ಯವೆಂದು ಭಾವಿಸಿದರೆ ಅದಕ್ಕಿಂತಲೂ ಹೆಚ್ಚಿನ ತಪ್ಪು ಯಾವುದೂ ಇರಲಿಕ್ಕಿಲ್ಲ. ಸ್ವರಾಜ್ಯವು ಹಾಗೆ ಪರಿಣಮಿಸುವುದಾದರೆ ನನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿ ಅದನ್ನು ವಿರೋಧಿಸುತ್ತೇನೆ. ನನ್ನ ದೃಷ್ಟಿಯಲ್ಲಿ ಸ್ವರಾಜ್ಯವೆಂದರೆ ನ್ಯಾಯವಾದ ಆಳ್ವಿಕೆ. ಅದರಲ್ಲಿ ಹಿಂದೂಗಳೂ, ಮುಸಲ್ಮಾನರೂ, ಸಿಖ್, ಪಾರ್ಸಿ ಮೊದಲಾದ ಎಲ್ಲ ಸಮಾಜಗಳ ಜನರೂ ಸುಖವಾಗಿಯೂ, ತೃಪ್ತರಾಗಿಯೂ ಇರಬೇಕು. ಅದು ನಿಜವಾದರೆ ಯಾವ ಆಂಗ್ಲೇಯನೂ ತನ್ನ ಹಕ್ಕುಗಳು ಸಂರಕ್ಷಿಸಲ್ಪಡಬೇಕೆಂದು ಕೇಳಬಾರದು. ಅದರಲ್ಲಿ ಯಾರೂ ಭಯಪಡುವ ಹಾಗಿಲ್ಲ.

ನಾನು ದಕ್ಷಿಣ ಆಫ್ರಿಕೆಯಲ್ಲಿರುವಾಗ ಜನರಲ್ ಸ್ಮಟ್ಸ್‌ರವರನ್ನು ಕುರಿತು, " ನೀನೂ ನಾನೂ ಇಂಗ್ಲೆಂಡಿನಲ್ಲಿ ಓದುತ್ತಿದ್ದೆವು. ಆಗ ನನಗೆ ನಿನ್ನ ಮೇಲೆ ದ್ವೇಷವಿರಲಿಲ್ಲ; ಈಗಲೂ ಇರುವುದಿಲ್ಲ. ಈ ಮೊದಲು ಇಂಗ್ಲೆಂಡಿನಲ್ಲಿ ಮೈತ್ರಿಯನ್ನು ಬೆಳೆಸಿದ ನಾವು ಇಲ್ಲಿಯೂ ಸಹೋದರರಂತೆ ವರ್ತಿಸಬೇಕು. ಇಲ್ಲಿ ನಾನೂ ಪರಸ್ಪರ ಕಲಹಮಾಡತಕ್ಕದ್ದೇನಿದೆ " ಎಂದು ಕೇಳಿದೆನು. ಅದಕ್ಕವನು ಅದು ವಂಶದ್ವೇಷ. ಈ ವಿಷಯವು ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಏಷಿಯಾಖಂಡದ ನಾಗರೀಕತೆಯೇ ಬೇರೆ. ಯೂರೋಪ್‌ಖಂಡದ ನಾಗರೀಕತೆಯೇ ಬೇರೆ. ನಮಗೆ ನಿಮ್ಮ ಪೌರ್ವಾತ್ಯನಾಗರೀಕತೆಯನ್ನನುಸರಿಸುವುದು ಇಷ್ಟವಿಲ್ಲ. ಅದಕ್ಕಾಗಿ ಈ ಕಾನೂನುಗಳನ್ನು ಮಾಡಬೇಕಾಗಿದೆ. ದಕ್ಷಿಣಆಫ್ರಿಕದಲ್ಲಿರುವವರೆಗೂ ನಾವು ಅವರ ನಾಗರೀಕತೆಯನ್ನನುಸರಿಸಬೇಕೆಂದು ನಿರ್ಧರಿಸಿದೆವು. ಹಿಂದುಸ್ಥಾನದಲ್ಲಿಯೂ ಅದೇ ಸ್ಥಿತಿಯೇ ಇರುತ್ತದೆ. ನಾವು ಅದನ್ನು ಚೆನ್ನಾಗಿ ಪರ್ಯಾಲೋಚಿಸಬೇಕು. ಇಂಗ್ಲೆಂಡು ಮತ್ತು ಹಿಂದುಸ್ಥಾನಗಳ ನಾಗರೀಕತೆಗಳು ಭಿನ್ನಭಿನ್ನವಾಗಿವೆ ಎಂದು ನನ್ನ ಇಂಗ್ಲೀಷ್ ಸ್ನೇಹಿತರಿಗೆ ಸ್ಪಷ್ಟವಾಗಿ ಹೇಳುತ್ತೇನೆ. ವೈಸರಾಯರು ಬಹಳ ಒಳ್ಳೆಯವರಾಗಿರಬಹುದು. ಆದರೆ ಅವರ ಜೀವನವೇ ಬೇರೆ; ನಮ್ಮ ಜೀವನವೇ ಬೇರೆ. ಅನೇಕ ಹಿಂದುಸ್ಥಾನದ ಶ್ರೀಮಂತರು ಯೂರೋಪಿನಲ್ಲಿದ್ದು ಮಾತೃಭೂಮಿಗೆ ಹಿಂದಿರುಗಿದ ಮೇಲೂ ಇಲ್ಲಿಯಂತೆಯೇ ಜೀವನ ಮಾಡಬೇಕಾಗುವುದು. ನಮ್ಮ ಕುಟುಂಬಜೀವನವು ಇನ್ನೂ ನಾಶವಾಗದಿರುವುದಕ್ಕೆ ಭಗವಂತನನ್ನು ವಂದಿಸುತ್ತೇನೆ.

ನಾವು ನಮ್ಮ ಶಿಷ್ಟಾಚಾರದಂತೆ ಜೀವನಮಾಡಿ ನಮ್ಮ ನಾಗರೀಕತೆಯನ್ನು ಕಾಪಾಡಿಕೊಳ್ಳಬೇಕು. ಯೂರೋಪ್, ಅಮೇರಿಕೆಗಳಲ್ಲಿ ಇದೇ ವಿಷಯವೇ ಸ್ಪಷ್ಟವಾಗಿ ಕಂಡುಬರುವುದು. ನಮ್ಮ ನಾಗರೀಕತೆಯು ವಿರೋಧಿಗಳ ನಾಗರೀಕತೆಗಿಂತ ಹೆಚ್ಚಿನದೆಂದು ಹೇಳುವುದಿಲ್ಲ. ಇಂಗ್ಲೀಷರ ನಾಗರಿಕತೆಯಂತೆ ನಾವು ಇರಬೇಕೆಂದು ಅಪೇಕ್ಷಿಸಿದರೆ ಉಭಯ ನಾಗರಿಕತೆಗಳಿಗೂ ಸಂಘರ್ಷಣವಾಗುವುದು.

ಕಾಂಗ್ರೆಸ್ ಸಂಸ್ಥೆಯು ಬಡವರನ್ನು ಸಂರಕ್ಷಿಸತಕ್ಕದಾದರೂ ವರ್ತಕರನ್ನು ನಾಶಪಡಿಸಬೇಕೆಂದು ಇಚ್ಛಿಸುವುದಿಲ್ಲ. ಕಾಂಗ್ರೆಸ್ಸಿನ ಸಲುವಾಗಿ ವರ್ತಕರು ಮಹತ್ತರವಾದ ಸ್ವಾರ್ಥತ್ಯಾಗವಮಾಡಿರುವರು. ದೇಶಾಭಿಮಾನದ ಸಲುವಾಗಿ ಇನ್ನೂ ಸ್ವಲ್ಪ ಸ್ವಾರ್ಥತ್ಯಾಗ ಮಾಡಿ ವರ್ತಕರು ಕಾಂಗ್ರೆಸ್ ಸಂಸ್ಥೆಯನ್ನು ತಮ್ಮ ಸಂಸ್ಥೆಯನ್ನಾಗಿ ಮಾಡಿಕೊಳ್ಳಬಹುದು. ಕಾಂಗ್ರೆಸ್ ಸಂಸ್ಥೆಯು, ಒಕ್ಕಲಿಗನಿಗೂ, ವರ್ತಕನಿಗೂ ಮತ್ತು ರಾಜರಿಗೂ ಸೇರಿದ್ದು. ಕಾಂಗ್ರೆಸ್‌ಸಂಸ್ಥೆಯು ಅವರಿಗೆ ಹೇಳುವುದೇನೆಂದರೆ:—ಇದುವರೆವಿಗೂ ನೀವು ಬಡವರ ಹೆಗಲಮೇಲೆ ಕುಳಿತಿದ್ದಿರಿ. ಇನ್ನು ಅವರ ಹೆಗಲು ಬಿಟ್ಟು ಇಳಿದು ಅವರ ರಕ್ಷಕರಾಗಬೇಕು. ಇಂಗ್ಲೀಷರು ಹಿಂದುಸ್ಥಾನದಲ್ಲಿರಬೇಕೆಂದು ಇಷ್ಟಪಟ್ಟರೆ, ಅವರೂ ಭಾರತದ ನಿಜವಾದ ಸೇವಕರಾಗಲಿ. ಅವರು ಸ್ನೇಹಿತರಾಗಿಯೂ, ಸಹೋದ್ಯೋಗಿಗಳಾಗಿಯೂ ಎಣಿಸಲ್ಪಡುವರಲ್ಲದೆ ಒಡೆಯರಾಗಿ ಎಣಿಸಲ್ಪಡಲಾರರು.

ಹಿಂದುಸ್ಥಾನಕ್ಕೆ ನಿಜವಾದ ಸ್ವರಾಜ್ಯ ಬಂದರೆ, ಆಂಗ್ಲೋಇಂಡಿಯನ್‌ರಂಥವರಿಗೆ ಯೋಗ್ಯಸ್ಥಾನವು ದೊರಕೇ ದೊರೆಯುವುದು. ಸರ್ ವಿಲಿಯಂವೆಡ್ಡರ್‌ಬರ್ನ್, ಹ್ಯೂಮ್ ಮತ್ತು ಬೆಸೆಂಟ್ ಇವರು ಆಂಗ್ಲೇಯರೆಂದು ಕೃತಜ್ಞತೆಯಿಂದ ಹೇಳುತ್ತೇನೆ. ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಮೊದಲು ಯೋಚಿಸಿದವನೂ ಆಂಗ್ಲೇಯನೇ. ಇಂಗ್ಲೀಷರು ಕಾಂಗ್ರೆಸ್ಸಿಗೆ ಸೇರಿ ಬಡವರಿಗೆ ಸಹಾಯಮಾಡಬೇಕೆಂದು ಇಚ್ಛಿಸುತ್ತೇನೆ.

ನಮ್ಮ ರಾಷ್ಟ್ರೀಯತ್ವವು ಅನ್ಯವಂಶೀಯರಿಗೆ ಭಯೋತ್ಪಾದಕವಾದುದಲ್ಲ. ಇತರ ರಾಷ್ಟ್ರಗಳನ್ನು ಸುಲಿಗೆಮಾಡುವುದು ನನಗೆ ಬೇಕಾಗಿಲ್ಲ. ನಮ್ಮನ್ನು ಇತರರು ಸುಲಿಗೆಮಾಡುವುದನ್ನು ಸಹಿಸಲಾರೆವು. ರಾಜರು, ವರ್ತಕರು ಒಕ್ಕಲಿಗರು ಮತ್ತು ಇಂಗ್ಲೀಷರು ಮೊದಲಾದ ಎಲ್ಲರಿಗೂ ಹಿತವನ್ನುಂಟುಮಾಡುವ ಸ್ವರಾಜ್ಯವು ನನಗೆ ಬೇಕು. ಆದುದರಿಂದಲೇ ಹಿಂದುಸ್ಥಾನದ ಸ್ವರಾಜ್ಯವು ಜಗತ್ತಿನ ಭ್ರಾತೃಭಾವಕ್ಕೆ ಮಾರ್ಗದರ್ಶಕವಾಗುವುದೆಂದು ಹೇಳಿದೆನು. ವರ್ತಕರಾದ ನೀವು ಇನ್ನು ಸ್ವಲ್ಪ ಸ್ವಾರ್ಥತ್ಯಾಗಮಾಡಿದರೆ ಸ್ವರಾಜ್ಯಚಳವಳಿಗೆ ಯಾರೂ ಎದುರಿಸಲಾರದಷ್ಟು ಶಕ್ತಿಯುಂಟಾಗುವುದು.

ಒಳದೇಶದ ವೃತ್ತಾಂತಗಳು.

ಮಂತ್ರಿ ಪದವೀಧರರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್‌ರವರು ಕಳೆದ 6 ನೆಯ ತಾರೀಖಿನ ದಿವಸ ಆನೇಕಲ್ ಎಂಬ ಪಟ್ಟಣಕ್ಕೆ ದಯಮಾಡಿಸಿ ವಿದ್ಯುದ್ದೀಪೋತ್ಸವವನ್ನು ನೆರವೇರಿಸಿ ಪ್ರಯೋಜನಯುಕ್ತವಾದ ಭಾಷಣವನ್ನು ಮಾಡಿದರು.

ದಾವಣಗೇರಿಯ ಹಿಂದುಮಹಮ್ಮದೀಯರಲ್ಲಿ ಸಂಭವಿಸಿದ ಕಲಹಸಂಬಂಧವಾಗಿ ಅಲ್ಲಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರು ಕೇಸನ್ನು ಸಮಗ್ರವಾಗಿ ವಿಚಾರಿಸಿ 17 ಜನ ಹಿಂದುಗಳಿಗೂ 7 ಜನ ಮಹಮ್ಮದೀಯರಿಗೂ 3 ತಿಂಗಳಿಂದ 6 ತಿಂಗಳವರಿವಿಗೆ ಶಿಕ್ಷೆಯನ್ನು ವಿಧಿಸಿ 40 ಜನ ಅಪರಾಧಿಗಳನ್ನು ಸೆಷನ್‌ಕೋರ್ಟಿಗೆ ವಿಚಾರಣೆಗಾಗಿ ಕಳುಹಿಸಿರುತ್ತಾರೆ.

ಮಿ|| ದೇಶಮುಖಿ ಗೋವಿಂದರಾಯರಿಗೆ ಬುದ್ಧಿಯು ಸ್ವಾಮಿತವಿಲ್ಲವೆಂಬ ಅಪೀಲ್ ಮೊಕದ್ದಮೆಯು ಕಳೆದ ಸೋಮವಾರ ಹೈಕೋರ್ಟಿನಲ್ಲಿ ನಡೆದು ಇಬ್ಬರು ನ್ಯಾಯಾಧಿಪತಿಗಳು ಮುಂಗೆ ತೀರ್ಮಾನ ಹೇಳುವುದಾಗಿ ಅಪ್ಪಣೆಯನ್ನಿತ್ತಿರುವರೆಂದೂ ಈ ಸಂದರ್ಭದಲ್ಲಿ ಮಿ|| ಗೋವಿಂದರಾಯರು ರಾಜಿಗೆ ಒಪ್ಪಿ ತಮ್ಮ ಆಸ್ತಿಯಲ್ಲಿ ಅರ್ಧಭಾಗವನ್ನು ತಾವು ಇಟ್ಟುಕೊಂಡು ಉಳಿದ ಅರ್ಧಭಾಗವನ್ನು ತಮ್ಮ ಪತ್ನಿಗೆ ಕೊಡುವಂತೆ ಒಪ್ಪಿರುವರೆಂದೂ ತಿಳಿಯುತ್ತೇವೆ.

ಪ್ರೊ|| ಎ. ಆರ್. ವಾಡಿಯಾರವರು ವಿದ್ಯಾಖಾತೆಯ ಡೈರೆಕ್ಟರ್ ಕೆಲಸಕ್ಕೆ ನಿಯಮಿಸಲ್ಪಟ್ಟನಂತರ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ ಪ್ರೊ|| ಜೆ. ಎಂ. ಕುಮಾರಪ್ಪ ಎಂ.ಎ., ಪಿ. ಎಚ್. ಡಿಯವರು ತತ್ವಶಾಸ್ತ್ರದ ಪ್ರೊಫೇಸರಾಗಿ ಕೆಲಸಮಾಡುತ್ತಿದ್ದರು. ಮ|| ರಾ|| ಎ. ಎಸ್. ಸುಬ್ಬರಾಯರು ಪುನಃ ಡೈರೆಕ್ಟರ್‌ಸ್ಥಾನಕ್ಕೆ ಬಂದಕಾರಣ ಪ್ರೋ|| ವಾಡಿಯಾರವರು ಮೊದಲಿನಂತೆ ತತ್ವಶಾಸ್ತ್ರದ ಪ್ರೊಫೇಸರಾದ್ದರಿಂದ ಶ್ರೀಯುತ ಜೆ. ಎಂ. ಕುಮಾರಪ್ಪನವರು ಕಳೆದ ತಿಂಗಳು ಅಂತ್ಯದಲ್ಲಿ ಕೆಲಸದಿಂದ ನಿವೃತ್ತಿಮಾಡಲ್ಪಟ್ಟರು. ಇವರು ಯೂರೋಪ್ ಅಮೇರಿಕಖಂಡಗಳಲ್ಲಿ ಅನೇಕ ವರ್ಷಗಳವರೆಗೆ ಸಂಚಾರಮಾಡಿ ಅಲ್ಲಿಯ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತು ಲೇಖನ ಮತ್ತು ವಕ್ತೃತ್ವಕಲೆಗಳಲ್ಲಿ ಅಸಾಧಾರಣವಾದ ನೈಪುಣ್ಯವನ್ನು ಪಡೆದಿದ್ದರಲ್ಲದೆ ಜನಾನುರಾಗಿಗಳಾಗಿದ್ದರು. ವಿದ್ಯಾರ್ಥಿಗಳು ಇವರನ್ನು ಬಹುಭಕ್ತಿಯಿಂದ ಕಾಣುತ್ತಿದ್ದರು. ಇವರು ಜಾಗ್ರತೆಯಾಗಿ ಕೆಲಸದಿಂದ ನಿವೃತ್ತಿಯಾದುದಕ್ಕಾಗಿ ವಿದ್ಯಾರ್ಥಿವೃಂದವೂ ಇತರ ವಿದ್ಯಾಪಕ್ಷಪಾತಿಗಳೂ ವ್ಯಸನಪಡುತ್ತಿರುವುದಾಗಿ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಸುಭಾಷ್‌ಚಂದ್ರಬೋಸ್‌ರವರು ಈ ತಿಂಗಳ 7ನೆಯ ತಾರೀಖಿನ ದಿವಸ ವಿಸಾರತ್ ಸಿತಾರಿ ಖೈದಿಗಳೊಡನೆ ಮಾತುಕಥೆ ನಡೆಸಿದರೆಂದು ತಿಳಿದುಬರುತ್ತದೆ.

ಮಹಾತ್ಮ ಗಾಂಧಿಯವರ ಶಿಷ್ಯಳಾದ ಮೀರಾಬೇ ಎಂಬ ಇಂಗ್ಲೀಷ್ ಸ್ತ್ರೀಯಳು ಸಿಡುಬುರೋಗ ಪೀಡಿತಳಾಗಿ ಕರಾಚಿ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವಳು.

ಲಾಹೋರ್ ಕಂಟೋನ್ಮೆಂಟಿನಲ್ಲಿ ಕರ್ಟಿಸ್ ಎಂಬ ಸೈನ್ಯಾಧಿಕಾರಿಯ ಹೆಂಡತಿಯನ್ನು ಕೊಂದ ಸಜ್ಜನಸಿಂಗ್ ಎಂಬವನನ್ನು ಸರ್ಕಾರದವರು ಗಲ್ಲಿಗೇರಿಸಿದರು.

ಜೂನ್ 26 ನೆಯ ತಾರೀಖಿನ ದಿವಸ ಲಂಡನ್ನಿನ ಸೆಂಟ್ ಆಂಡ್ರೂಸ್ ಯೂನಿವರ್ಸಿಟಿಯವರು ಲಾರ್ಡ್ ಇರ್ವಿನ್‌ರವರಿಗೆ ಎಲ್. ಎಲ್. ಡಿ. ಪದವಿಯನ್ನು ಕೊಡುವರಂತೆ !

ಬರೋಡ ಸಂಸ್ಥಾನದಲ್ಲಿ ಕನ್ಯಾಶುಲ್ಕವನ್ನು ತೆಗೆದುಕೊಳ್ಳುವವರಿಗೆ 6 ತಿಂಗಳು ಸಾದಾ ಸಜೆ ಅಥವಾ 500 ರೂ. ಜುಲ್ಮಾನೆಯನ್ನು ವಿಧಿಸಿ ಈ ನೀಚ ಪದ್ಧತಿಯನ್ನು ತಪ್ಪಿಸಲು ಕಾನೂನು ಮಾಡಬೇಕೆಂದು ಕಾಯಿದೆಕೌನ್ಸಿಲ್ಲಿನಲ್ಲಿ ಚರ್ಚೆ ನಡೆದಿದೆ.

ಮದರಾಸು ಸರ್ಕಾರದವರು ವೆಲ್ಲೂರು ಜೈಲಿನಲ್ಲಿದ್ದ 1700 ಜನ ರಾಜಕೀಯ ಖೈದಿಗಳ ಪೈಕಿ 74 ಜನರು ವಿನಾ ಉಳಿದವರನ್ನೆಲ್ಲಾ ಬಿಡುಗಡೆ ಮಾಡಿರುವರಂತೆ! ಈ 74 ಜನರು ಹಿಂಸಾಮಾರ್ಗವನ್ನನುಸರಿಸಿದ್ದರೆಂದು ಸರ್ಕಾರದವರು ಭಾವಿಸಿದ್ದಾರೆ.

ಸಾರ್ವಭೌಮಸರ್ಕಾರಕ್ಕೂ ಇತರ ವಿದೇಶಿ ಸರ್ಕಾರಕ್ಕೂ ದ್ವೇಷವುತ್ಪನ್ನವಾಗುವಹಾಗೆ ಮಾಡಿದರಾಗಲಿ, ಪ್ರಕಟಿಸಿದರಾಗಲೀ ಎರಡು ವರ್ಷ ಶಿಕ್ಷೆ ಅಥವಾ ಜುಲ್ಮಾನೆಗೆ ಗುರಿಯಾಗುವರೆಂದು ವೈಸರಾಯರು ಹೊಸದಾಗಿ ಒಂದು ಶಾಸನವನ್ನು ಹೊರಡಿಸಿರುವರು.

ಮಹಾತ್ಮ ಗಾಂಧಿಯವರು ಈ ತಿಂಗಳು 6 ನೆಯ ತಾರೀಖಿನ ದಿವಸ ವೈಸರಾಯರನ್ನು ಸಂದರ್ಶಿಸಿ ನಾಲ್ಕು ಘಂಟೆಗಳ ವರೆಗೂ ಮಾತನಾಡಿದರು. ರೌಂಡುಟೇಬಲ್ ಸಮ್ಮೇಳನದ ಹಾಗೂ ಹಿಂದೂ ಮಹಮ್ಮದೀಯ ಐಕಮತ್ಯದ ವಿಷಯವಾಗಿ ಅಷ್ಟುಹೊತ್ತು ಮಾತನಾಡಿರಬಹುದೆಂದು ಜನರು ಊಹಿಸುತ್ತಾರೆ. ಅವರು ಮಾತನಾಡಿದ ವಿಷಯವು ಬಹುಗುಟ್ಟಾಗಿರುತ್ತದೆ.

ಪ್ಯಾಲಸ್ಟೈನಿನಲ್ಲಿ ಇತ್ತೀಚೆಗೆ ಮಹಮ್ಮದೀಯ ಮತ್ತು ಎಹೂದಿ ಜನರಿಗೆ ವೈಮನಸ್ಯವು ದಿನೇ ದಿನೇ ಹೆಚ್ಚುತ್ತಲಿರುವುದು. ಈ ತಿಂಗಳು 6 ನೆಯ ತಾರೀಖಿನ ದಿವಸ 11 ಜನರು ಎಹೂದಿಗಳು ಎಗ್ರೂರು ಎಂಬ ಸ್ಥಳಕ್ಕೆ ಹೋಗುತ್ತಿರುವಾಗ ರಸ್ತೆಯ ಉಭಯ ಪಾರ್ಶ್ವಗಳಲ್ಲಿ ಗುಂಡುಗಳು ಹಾರಿದುವು. ಇಬ್ಬರು ಗಂಡಸರೂ, ಒಬ್ಬ ಹೆಂಗಸೂ ಆ ಕೂಡಲೇ ಮೃತಪಟ್ಟರು. 4 ಜನರಿಗೆ ತುಂಬಾ ಗಾಯಗಳಾಗಿವೆ.

ಮಹಾತ್ಮ ಗಾಂಧಿಯವರು ಅಮೃತಸರಕ್ಕೆ ಹೋಗಿದ್ದಾಗ ಅಲ್ಲಿ ಅದ್ಭುತ ಸ್ವಾಗತವಾಯಿತು. ಮ್ಯುನಿಸಿಪಾಲಿಟಿಯವರು ಮಾನಪತ್ರವನ್ನೊಪ್ಪಿಸಿದರು. ಆ ಸಮಯದಲ್ಲಿ ಮ್ಯುನಿಸಿಪಾಲಿಟಿ ಕಮಿಷನರ್ ಲಾಲಾ ದುನಿಚಂದ್‌ರವರ ಜೇಬಿನಲ್ಲಿದ್ದ 3,200 ರೂ. ಗಳನ್ನು ಯಾರೋ ಅಪಹರಿಸಿದರು. ಅನಂತರ ಒಬ್ಬ ಹುಡುಗನ ಹತ್ತಿರ ಒಂದುನೂರು ರೂಪಾಯಿ ನೋಟು ಸಿಕ್ಕಿರುವುದಂತೆ! ಪೋಲೀಸರು ಕಳ್ಳರನ್ನು ತಪಾಸುಮಾಡುತ್ತಿರುವರು.

ಕರನಿರಾಕರಣ ನಿಮಿತ್ತವಾಗಿ ಧಾರವಾಡಜಿಲ್ಲಾ ಹಿರೇಕೆರೂರು ತಾಲ್ಲೂಕಿನಲ್ಲಿ 7 ಜನ ಕುಲಕರ್ಣಿ(ಶ್ಯಾನುಭೋಗರು) ಗಳೂ ಒಬ್ಬ ಪಾಟೀಲನೂ ಸಸ್ಪೆಂಡ್ ಮಾಡಲ್ಪಟ್ಟಿರುವರೆಂದೂ, ವತನದಾರರಿಗೆ 24 ಜಪ್ತಿನೋಟೀಸು ಮಾಡಲ್ಪಟ್ಟಿರುವುದೆಂದೂ, ಅವೈಕಿ ಮಿ|| ವೀರನಗೌಡ ಪಾಟೀಲ ಎಂಬ ಮುಖಂಡರಿಗೂ ನೋಟೀಸು ಮಾಡಲ್ಪಟ್ಟಿರುವುದೆಂದೂ, ಜಿಲ್ಲಾ ಡೆಪ್ಯೂಟಿ ಕಲೆಕ್ಟರರು ತಾಲ್ಲೂಕಿನಲ್ಲಿ ಸಂಚಾರಮಾಡುತ್ತಿರುವರೆಂದೂ, ಜನರು ಕಂದಾಯ ಕೊಡಲು ಅಶಕ್ತರಾಗಿರುವುದರಿಂದ ಹಿರೇಕೆರೂರು, ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಕಂದಾಯವನ್ನು ಮನ್ನಾ ಮಾಡಲು ಕಮಿಷನರೊಡನೆ ಸಂಧಾನವು ನಡೆದು ಉಭಯರಿಗೂ ರಾಜಿಯಾಗಿದೆಯೆಂದೂ ತಿಳಿದುಬರುತ್ತದೆ.

ಈ ತಿಂಗಳು 6 ನೆಯ ತಾರೀಖಿನ ದಿವಸ ದಿಲ್ಲಿಯಿಂದ ಸಿಮ್ಲಾಕ್ಕೆ ಹೋಗುತ್ತಿದ್ದ ಎಕ್ಸ್‌ಪ್ರೆಸ್ ಗಾಡಿಯನ್ನು ಒಡೆಯಬೇಕೆಂದು ಯಾರೋ ಪ್ರಯತ್ನ ನಡೆಯಿಸಿದರು. ಗಾಡಿಯು ಸ್ಟೇಷನ್ ಬಿಟ್ಟು ಒಂದು ಮೈಲಿದೂರ ಹೋದಮೇಲೆ ಭಯಂಕರ ಧ್ವನಿಯಾಗಿ ನಿಂತುಬಿಟ್ಟಿತು. ಗಾಡಿಯಲ್ಲಿದ್ದ ಕೆಲವು ಪ್ರಯಾಣಿಕರು ಹೊರಗೆ ಬಿದ್ದರು. ಪರೀಕ್ಷೆ ಮಾಡುವಲ್ಲಿ ಹಳಿಯನ್ನೂ ತಟ್ಟೆಯನ್ನೂ ಯಾರೋ ಕಿತ್ತು ಹಾಕಿರುವುದಾಗಿ ಗೊತ್ತಾಯಿತು. ಇಂಜಿನ್ ನಡೆಯಿಸುತ್ತಿದ್ದ ಭಾರತೀಯ ಡ್ರೈವರನು ತತ್‌ಕ್ಷಣದಲ್ಲಿಯೇ ಗಾಡಿಯನ್ನು ನಿಲ್ಲಿಸದಿದ್ದರೆ ವಿಪರೀತ ಅನಾಹುತವಾಗುತ್ತಿತ್ತು. ಫಸ್ಟ್ ಕ್ಲಾಸ್ ಮತ್ತು ಸೆಕೆಂಡ್‌ಕ್ಲಾಸ್‌ಗಾಡಿಯೂ, ಮೂರು ಥರ್ಡ್‌ಕ್ಲಾಸ್‌ಗಾಡಿಗಳು ಮಾತ್ರ ಹಳಿ ಬಿಟ್ಟುಹೋದುವು. ಒಬ್ಬ ಯೂರೋಪಿಯನ್ ಹೆಂಗಸು ಮತ್ತು ಫೈರ್‌ಮನ್ ಇಬ್ಬರ ವಿನಾ ಇನ್ನಾರಿಗೂ ಜಖಂ ಆಗಿರುವುದಿಲ್ಲ. ಕಾಲ್ಕಾ ಎಂಬ ಸ್ಟೇಷನ್ನಿನಿಂದ ಒಂದು ರೈಲು ಗಾಡಿಯೂ, ಒಬ್ಬ ಡಾಕ್ಟರರೂ ಬಂದ ನಂತರ ಪ್ರಯಾಣಿಕರು ಸಿಮ್ಲಾಕ್ಕೆ ಸಾಗಿಸಲ್ಪಟ್ಟರು.

ಉಡುಪಿಗೆ 4 ಮೈಲಿ ದೂರದಲ್ಲಿರುವ ಕಟ್ಪಾಡಿ ಎಂಬ ಸ್ಥಳದಲ್ಲಿ ಈ ತಿಂಗಳು 6 ನೆಯ ತಾರೀಖಿನ ದಿವಸ 10-12 ವರ್ಷ ವಯಸ್ಸಿನ ಕೆಲವು ಬಾಲಕರು ಲಾಹೋರಿನಲ್ಲಿ ಗಲ್ಲಿಗೆ ಹಾಕಲ್ಪಟ್ಟ ಭಗತ್ಸಿಂಗ ಮತ್ತು ಅವನ ಇಬ್ಬರ ಜೊತೆಗಾರರ ಪಾರ್ಟು ಹಾಕಿ ಅಭಿನಯಿಸುತ್ತಿದ್ದರು. ಮೂರು ಜನ ಬಾಲಕರು ಮೂರು ಅಪರಾಧಿಗಳಂತೆಯೂ ಮತ್ತೆ ಕೆಲವರು ನ್ಯಾಯಾಧೀಶರಂತೆಯೂ ಪಾತ್ರವಹಿಸಿ ಅಪರಾಧಿಗಳಾದ ಮೂವರನ್ನೂ ಗಲ್ಲಿಗೆ ಹಾಕುವಂತೆ ಆಜ್ಞೆ ಮಾಡಲು ಭಗತ್ಸಿಂಗನ ಪಾತ್ರವನ್ನು ವಹಿಸಿದ್ದ ಹುಡುಗನ ಕತ್ತಿಗೆ ಹಗ್ಗವನ್ನು ಹಾಕಿದರು. ಅವನು ನಿಂತಿದ್ದ ಸ್ಟೂಲು ಜಾರಿದ್ದರಿಂದ ಅವನ ಕೊರಳಿಗೆ ನಿಜವಾಗಿಯೂ ಉರುಲು ಬಿದ್ದು ಸತ್ತುಹೋದನು. ಹುಡುಗರು ಕೂಗಿಕೊಂಡಿದ್ದರಿಂದ ಜನರು ಬಂದು ಮಿಕ್ಕ ಇಬ್ಬರ ಕೊರಳಿಗೆ ಹಾಕಿದ್ದ ಹಗ್ಗವನ್ನು ತಪ್ಪಿಸಿ ಅವರ ಪ್ರಾಣಗಳನ್ನು ಉಳಿಸಿದರು. ಗತಿಸಿದ ಹುಡುಗನು ಅಲ್ಲಿಯ ಒಬ್ಬ ಶ್ರೀಮಂತರ ಒಬ್ಬನೇ ಮಗನಾಗಿದ್ದನು. ಅಕಸ್ಮಾತ್ ಸಂಭವಿಸಿದ ಈ ಮರಣದಿಂದ ಎಲ್ಲರಿಗೂ ಖೇದವುಂಟಾಗಿದೆ.

[[illegible]ನೆಯ ಪುಟದಿಂದ ಮುಂದುವರಿದುದು.]

ಸಾಮಂತರಾಜರು ಆಜನ್ಮಸಿದ್ಧಹಕ್ಕುಗಳನ್ನು ಖಾತ್ರಿಯಾಗಿ ಕೊಡಬೇಕು. ಫೆಡರೇಟೆಡ್ ಹಿಂದುಸ್ಥಾನದ ಎಲ್ಲ ಪ್ರಜೆಗಳಿಗೂ ಸಮಾನವಾದ ಕೆಲವು ಆಜನ್ಮಸಿದ್ಧವಾದ ಹಕ್ಕುಗಳಿರಬೇಕು. ಈ ಹಕ್ಕುಗಳಿಗೆ ಬಾಧೆಬಂದಾಗ ಪರಿಹಾರವನ್ನೂ, ನ್ಯಾಯವನ್ನೂ ಹೊಂದಲು ಅಖಿಲಭಾರತಕ್ಕೆ ಅನ್ವಯಿಸುವ ಒಂದು ನ್ಯಾಯಾಸ್ಥಾನವು ಇರಬೇಕು. ಫೆಡರಲ್ ನ್ಯಾಯವಿಧಾಯಕ ಸಭೆಗಳಲ್ಲಿ ಸಂಸ್ಥಾನಿಕ ಪ್ರಜೆಗಳಿಗೂ ನೇರವಾಗಿ ಚುನಾವಣೆಯ ಪ್ರಾತಿನಿಧ್ಯದ ಹಕ್ಕು ಇರಬೇಕು.

ಕೋಮುವಾರು ಐಕಮತ್ಯ.

ಸದ್ಯಃ ಕೇವಲ ಮಹತ್ವವಾದುದು ಹಿಂದೂ ಮಹಮ್ಮದೀಯ ಅಥವಾ ಕೋಮುವಾರು ಸಮಸ್ಯೆಯು. ಎಲ್ಲ ಪಂಗಡಗಳಿಗೂ ತೃಪ್ತಿಕರವಾಗಿರುವಂತೆ ಈ ಪ್ರಶ್ನೆಯು ನಿರ್ಣಯಿಸಲ್ಪಡದಿದ್ದರೆ ಯಾವರಾಜ್ಯಾಂಗರಚನೆಯನ್ನೂ ಕಾಂಗ್ರೆಸ್ ಸಂಸ್ಥೆಯು ಸ್ವೀಕರಿಸಲಾರದು. ನಾನೊಬ್ಬ ಹಿಂದು. ಈ ಮೊದಲು ಅಧ್ಯಕ್ಷರಾಗಿದ್ದ ಪಂ॥ ಜವಾಹಿರಲಾಲರು ಅನುಸರಿಸಿದ ಮಾರ್ಗವನ್ನೇ ನಾನು ಅನುಸರಿಸುತ್ತೇನೆ. ನಮಗೆ ಹೃದಯದ ಐಕಮತ್ಯಬೇಕು. ಕಾಗದದ ಮೇಲಿನ ಐಕಮತ್ಯ ಬೇಡ. ಕಾಗದದ ಮೇಲಿನ ಐಕಮತ್ಯವು ಬಹುಕಾಲ ನಿಲ್ಲಲಾರದು. ಕೋಮುವಾರ ಸಮಸ್ಯೆಯನ್ನು ತೃಪ್ತಿಕರವಾಗಿ ನಿರ್ಣಯಿಸದಿದ್ದರೆ ಯಾವ ಸಮ್ಮೇಳನಕ್ಕೆ ಹೋದರೂ ವ್ಯರ್ಥ. ಸಮ್ಮೇಳನದಲ್ಲಿ ಬ್ರಿಟಿಷರಿಗೂ ನಮಗೂ ಒಪ್ಪಂದವಾಗಬಹುದು. ಸಾಮಂತರಾಜರಿಗೂ ನಮಗೂ ಸಾನ್ನಿಧ್ಯ ಉಂಟಾಗಬಹುದು. ಆದರೆ ಕೋಮುವಾರು ಐಕಮತ್ಯವು ಅಲ್ಲಿ ನಿರ್ಣಯಿಸಲ್ಪಡಲಾರದು. ಈ ಐಕಮತ್ಯವನ್ನು ನಾವು ಇಲ್ಲಿಯೇ ಸ್ಥಾಪಿಸಬೇಕು. ಕಾಂಗ್ರೆಸ್ಸಿನವರು ಈ ವಿಷಯದಲ್ಲಿ ಸರ್ವಪ್ರಯತ್ನವನ್ನೂ ಮಾಡಬೇಕು. ಒಪ್ಪಂದದ ಷರತ್ತುಗಳನ್ನು ನಾವು ಪೂರ್ತಿಗೊಳಿಸುವುದು ಒಂದು ವಿಧಾನ. ನಮ್ಮ ಲಾಭಗಳನ್ನು ಸಂಘಟನೆ ಮಾಡುವುದು ಮತ್ತೊಂದು ವಿಧಾನ.

ವಿದೇಶಿವಸ್ತ್ರ ಬಹಿಷ್ಕಾರ.

ವಿದೇಶಿ ವಸ್ತ್ರಬಹಿಷ್ಕಾರದಲ್ಲಿ ನಾವು ಬಹು ಮುಂದುವರಿದಿದ್ದೇವೆ. ಅದು ನಮ್ಮ ಹಕ್ಕು ಮತ್ತು ಕರ್ತವ್ಯ. ಅದಿಲ್ಲದಿದ್ದರೆ ನಮ್ಮ ದೇಶದ ಕೋಟ್ಯಂತರ ಬಡಜನರು ಹೊಟ್ಟೆಗಿಲ್ಲದೆ ಸಾಯಬೇಕಾಗುವುದು. ಅಗ್ಗವಾದ ಪರದೇಶಿ ವಸ್ತ್ರಗಳು ನಮ್ಮ ದೇಶದಲ್ಲಿ ನಿರಾತಂಕವಾಗಿ ಪ್ರವೇಶಿಸಿದರೆ ಹಳ್ಳಿಗಳಲ್ಲಿ ಕೈರಾಟೆಗಳು ತಲೆಯೆತ್ತಲಾರವು.

ಪರದೇಶಿ ಬಟ್ಟೆಯು ಬೆಲೆಯಿಲ್ಲದೆ ಸಿಕ್ಕಿದರೂ ಅದರಿಂದ ಬಹಳ ನಷ್ಟ. ಅದು ಬಹಳ ತಗ್ಗು. ಹಿಂದುಸ್ಥಾನದ ಕೋಟ್ಯಂತರ ಜನರು ಉದ್ಯೋಗವಿಲ್ಲದ್ದರಿಂದ ಹೊಟ್ಟೆಗಿಲ್ಲದೆ ಸಾಯುತ್ತಾರೆ. ಇದಕ್ಕೆ "ಚರಖ" ವೇ ಮದ್ದು. ನಾವು ಕೈರಾಟೆಗಳಲ್ಲಿ ನೂತ ಖಾದಿಯನ್ನೇ ಸ್ವೀಕರಿಸಬೇಕು. ಅಖಿಲ ಭಾರತ ಚರಕ ಸಂಘದವರು ಬಹಳ ಕೆಲಸವನ್ನು ಮಾಡಿದ್ದಾರೆ. ಕಾಂಗ್ರೆಸ್ಸಿನವರು ಅದನ್ನು ಮುಂದುವರಿಸಬೇಕು.

ದೇಶೀಯ ಗಿರಣಿಗಳು.

ದೇಶೀಯ ಗಿರಣಿಗಳಮೇಲೆಯೂ ಪರದೇಶೀವಸ್ತ್ರಗಳ ಮೇಲಿನ ಅಪವಾದನೆಯೇ ಇದೆ. ಆದರೆ ಸುದೈವದಿಂದ ಕೆಲವು ದೇಶೀಯ ಗಿರಣಿಗಳ ಮಾಲೀಕರು ಖದ್ದರಿನ ಮಹತ್ವವನ್ನರಿತು ಕಾಂಗ್ರೆಸ್ಸಿನೊಡನೆ ಈ ಭಾಗದಲ್ಲಿ ಸಹಕರಿಸಿ ಕೆಲಸಮಾಡುತ್ತಲಿರುವರು. ದೇಶೀಯ ಗಿರಣಿಗಳು ಖದ್ದರಿಗೆ ಅಡ್ಡಿಯಾಗಿ ಬಂದರೆ ಪರದೇಶೀ ವಸ್ತ್ರಗಳಿಗೆ ಆದ ಗತಿಯೇ ಅವುಗಳಿಗೂ ಆಗುವದು. ಪರದೇಶೀ ವಸ್ತ್ರವ್ಯಾಪಾರಗಾರರು ಬಹಿಷ್ಕಾರವು ಶಾಶ್ವತವಾದುದೆಂಬುದನ್ನರಿತು ದೇಶದ ಹಿತದ ದೃಷ್ಟಿಯಿಂದ ತಮ್ಮ ಸರಕುಗಳನ್ನು ಪ್ರಚಾರಮಾಡುವದನ್ನು ಬಿಟ್ಟೇಬಿಡಬೇಕು. ದೇಶವು ಅವರಿಗೆ ಸಾಧ್ಯವಾದಷ್ಟು ಪ್ರೋತ್ಸಾಹವನ್ನು ಕೊಡುವುದು. ಆದರೆ ಅವರೇ ಬಹು ಸ್ವಾರ್ಥತ್ಯಾಗವನ್ನು ಮಾಡಬೇಕಾಗುವುದು. ಇಂಗ್ಲಿಷ್, ಜಪಾನು ಮತ್ತು ಇತರ ಪರದೇಶೀವಸ್ತ್ರವ್ಯಾಪಾರಗಾರರು ಕಾಂಗ್ರೆಸ್ಸಿನ ಅಭಿಪ್ರಾಯವನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಪರದೇಶೀ ವಸ್ತ್ರಗಳನ್ನು ಇಂಡಿಯಾದಲ್ಲಿ ಪ್ರಸಾರಮಾಡದೆ ಹೋದರೆ ಅವರು ಇಂಡಿಯಾಕ್ಕೆ ನಿಜವಾದ ಸಹಾಯಮಾಡಿದಂತಾಗುವದು. ಅವರಿಗೆ ಗಿರಾಕಿಗಳು ಹೊರಗಿನ ದೇಶಗಳಲ್ಲಿ ಬೇಕಾದ ಹಾಗೆ ದೊರೆಯುವವು.

ಪಿಕೆಟಿಂಗ್.

ಕಾನೂನಿಗೆ ವಿರೋಧವಿಲ್ಲದಂತೆ ಪ್ರಜಾಭಿಪ್ರಾಯವನ್ನು ಅನುಸರಿಸಿ ಹಿಂಸೆಯಿಲ್ಲದಂತೆ ಸ್ತ್ರೀಯರಿಂದಲೇ ಪಿಕೆಟಿಂಗು ಶಾಂತವಾಗಿ ನಡೆಸಲ್ಪಡಬೇಕೆಂಬುದು ನನ್ನ ಕೋರಿಕೆ. ಶಾಂತವಾಗಿ ದೌರ್ಜನ್ಯವಿಲ್ಲದೆ ಪಿಕೆಟಿಂಗು ಎಲ್ಲಿ ಸಾಧ್ಯವಿಲ್ಲವೋ ಅಲ್ಲಿ ಅದನ್ನು ನಡೆಸಕೂಡದು. ಭಾರತರಮಣಿಯರು ಪಿಕೆಟಿಂಗಿನಕಡೆ ತಮ್ಮ ಗಮನವನ್ನು ಕೊಡಬೇಕೆಂದು ನಾನು ಕೋರುತ್ತೇನೆ.

ಬ್ರಿಟಿಷ್ ವಸ್ತು ಬಹಿಷ್ಕಾರ.

ಬ್ರಿಟಿಷ್ ವಸ್ತು ಬಹಿಷ್ಕಾರವು ಕಾಂಗ್ರೆಸ್ಸಿನಷ್ಟೇ ಹಳೆಯದು. ಅದು ರಾಜಕೀಯ ಅಸ್ತ್ರ. ಮ॥ ಗಾಂಧೀಯವರು ರಾಜಕೀಯಕ್ಷೇತ್ರಕ್ಕೆ ಬಂದ ಮೇಲೆ ಅದರ ಬದಲಾಗಿ ಪರದೇಶೀವಸ್ತ್ರಬಹಿಷ್ಕಾರವನ್ನು ಕಾರ್ಯಕ್ರಮದಲ್ಲಿ ತಂದರು. ಮೊದಲಿನ ಬಹಿಷ್ಕಾರಕ್ಕೂ ಈಗಿನ ಬಹಿಷ್ಕಾರಕ್ಕೂ ವ್ಯತ್ಯಾಸವಿದೆ. ಬ್ರಿಟಿಷ್ ವಸ್ತು ಬಹಿಷ್ಕಾರವು ಬ್ರಿಟಿಷರ ಮೇಲೆ ಒಂದು ಶಿಕ್ಷೆ. ಈಗ ಕೆಲವು ತಿಂಗಳುಗಳಿಂದಲೂ ಚಂಡಮಾರುತವೇಗದಿಂದ ನಡೆಸಿದಂತೆ ನಡೆಸಿದರೆ ಬ್ರಿಟಿಷರ ಹಿತಕ್ಕೆ ಬಹಳ ಧಕ್ಕೆಯುಂಟಾಗುವದು. ನಾವು ದೇಶೀಯವಸ್ತುಗಳು ಎಷ್ಟೋ ಸುಮಾರಾಗಿರಲಿ ಅವುಗಳಿಗೆ ಪ್ರೀತಿಯಿಂದ ಪ್ರೋತ್ಸಾಹವನ್ನು ಕೊಡಬೇಕು. ಸ್ವದೇಶಿಯು ಪ್ರತಿಯೊಂದು ಜನಾಂಗದ ಜನ್ಮಸಿದ್ಧಹಕ್ಕು. ಸ್ವದೇಶೀ ಇನ್ಷೂರೆನ್ಸ್ ಕಂಪನಿಗಳು, ಬ್ಯಾಂಕುಗಳು, ಹಡಗುಗಳು, ಕೈಗಾರಿಕೆಗಳು ಇವುಗಳಿಗೆ ನಮ್ಮ ಪ್ರೋತ್ಸಾಹವು ಅತ್ಯವಶ್ಯಕವಾಗಿದೆ.

ಮದ್ಯಪಾನ ನಿರೋಧ.

ಮದ್ಯಪಾನ ನಿರೋಧದ ಪಿಕೆಟಿಂಗು ಸಹ ಪರದೇಶೀ ವಸ್ತ್ರಬಹಿಷ್ಕಾರದ ಪಿಕೆಟಿಂಗಿನಂತೆಯೇ ಶಾಂತವಾಗಿ, ಸೌಜನ್ಯತೆಯಿಂದಲೇ ನಡೆಯಬೇಕು. ಇದು ನಮ್ಮ ಜನಾಂಗದ, ಜನತೆಯ ನೀತಿಯ ಬೆಳವಣಿಗೆಗೆ ಅತ್ಯಂತ ಅವಶ್ಯಕ. ಸರ್ಕಾರದವರು ತಮ್ಮ ಯಾವತ್ತು ಮದ್ಯದ ವರಮಾನವನ್ನು ಪಿಕೆಟಿಂಗ್ ನಿಲ್ಲಿಸಲು ಉಪಯೋಗಿಸಿದರೂ ಅದನ್ನು ನಿಲ್ಲಿಸಲಾಗುವುದಿಲ್ಲ.

ರೈತರ ಏಳಿಗೆಯೇ ಕಾಂಗ್ರೆಸ್ಸಿನ ಗುರಿ!

ನಮ್ಮ ದೇಶದ ವಿದ್ಯಾವಂತರಿಗೆ ರುಚಿಸುವ ಅನೇಕ ವಿಷಯಗಳಲ್ಲಿ ನನಗೆ ಆಸಕ್ತಿಯಿಲ್ಲ. ನನಗೆ ಅಧಿಕಾರಗಳ ಮೇಲೆ ಇಷ್ಟವಿಲ್ಲ. ನ್ಯಾಯವಿಧಾಯಕಸಭೆಗಳ ಮರ್ಯಾದೆಗಳು ನನಗೆ ಬೇಡ. ನಮ್ಮ ದೇಶದ ರೈತರಿಗೆ ಅವುಗಳಿಂದ ಪ್ರಯೋಜನವೂ ಇಲ್ಲ. ಅವುಗಳ ಅರ್ಥವು ಅವರಿಗೆ ಗೊತ್ತೂ ಇಲ್ಲ. ಮಹಾತ್ಮಾ ಗಾಂಧಿಯವರ 11 ಅಂಶಗಳಲ್ಲಿ ಸ್ವರಾಜ್ಯವು ಅಡಕವಾಗಿದೆ. ಅವುಗಳನ್ನು ಪೂರೈಸದೆ ಹೋದರೆ ಅದು ಸ್ವರಾಜ್ಯವಲ್ಲ. ಜಮೀನ್ದಾರರ, ರಾಜರ ಮತ್ತು ಮಹಾರಾಜರ ಹಕ್ಕುಬಾಧ್ಯತೆಗಳನ್ನು ನಾನು ಮರ್ಯಾದಿಸುತ್ತೇನೆ. ಬೆವರುಸುರಿಸಿ, ಕಷ್ಟಪಡುತ್ತಿರುವ ಕೋಟಿ ಸಂಖ್ಯಾಕರಾದ ಕೆಳಗಿರುವ ಪ್ರಜೆಗಳನ್ನು ತಮ್ಮ ದರ್ಜೆಗೆ ಎತ್ತಲು ಈ ಮಹಾಶಯರು ಪ್ರಯತ್ನಿಸಬೇಕು. ದೇವರ ದಯೆಯಿಂದ ಗಾಂಧಿಯವರ ಸತ್ಯ ಮತ್ತು ಅಹಿಂಸೆಯ ಸಂದೇಶವು ದೇಶಕ್ಕೆ ಗೌರವವನ್ನೂ ಶಕ್ತಿಯನ್ನೂ ತಂದಿದೆ. ನಾವುಗಳಿರುವುದು ಪ್ರಜಾಕೋಟಿಯ ಕ್ಷೇಮಕ್ಕೆ. ಅವರು ನಮ್ಮಗಳ ಕ್ಷೇಮಕ್ಕಲ್ಲವೆಂಬುದನ್ನು ನಮ್ಮ ಹೃದಯಪಟದಲ್ಲಿ ಒತ್ತಿಟ್ಟುಕೊಳ್ಳೋಣ.

ನೀವುಗಳು ನನ್ನನ್ನು ಬಹಳ ಆದರಣೆಯಿಂದ ಅಧ್ಯಕ್ಷನನ್ನಾಗಿ ಆರಿಸಿದ್ದೀರಿ. ನಮ್ಮ ಕಾರ್ಯಕಲಾಪಗಳು ಗಂಭೀರವಾಗಿಯೂ ಗೌರವಾರ್ಹವಾಗಿಯೂ ನಡೆಯುವಂತೆ ಏರ್ಪಟ್ಟು ನಮ್ಮ ಗುರಿಯನ್ನು ಸಾಧಿಸುವುದಕ್ಕೆ ಅನುಕೂಲವಾಗಲೆಂಬುದೇ ನನ್ನ ಪ್ರಾರ್ಥನೆ.

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ 14 ಪೌಂಡಿನ ಗ್ಲೇಜ್ ಕಾಗದದಲ್ಲಿ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಇದರಲ್ಲಿ ಒಂದರಿಂದ ಸಾವಿರದವರೆಗಿನ ಸಂಖ್ಯೆಗಳ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹರ ಅನುಲೋಮ, ವಿಲೋಮ, ಮಗ್ಗಿ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3 ಮಾತ್ರ.

ಸಚಿತ್ರ ಕರ್ಣಾಟಕ ಗುಣಿತಾಕ್ಷರಬೋಧೆ:—ಮಕ್ಕಳಿಗೆ ಕಲಿಯಲು ಕಷ್ಟವಾದ ಗುಣಿತಾಕ್ಷರಗಳನ್ನು ಸುಲಭರೀತಿಯಲ್ಲಿ ಬೋಧಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0 ಮಾತ್ರ.

ಸಿಲಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ. ಇಲಾಖೆಯ ಆಫೀಸರು ಒಪ್ಪಿಗೆಯನ್ನು ಕೊಟ್ಟಿರುವರು.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು. ಉಪಾಧ್ಯಾಯರಿಗೂ ವ್ಯಾಪಾರಿಗಳಿಗೂ ತಕ್ಕಂತ ಕಮಿಷನ್ ಉಂಟು.

ಪ್ರಕಾಶಕರು:—ಜಿ. ರೇವಣ್ಣ ಅಂಡ್ ಬ್ರದರ್
ಬುಕ್‌ಸೆಲ್ಲರ್ಸ್, ಪೋ॥ ಬಡವಿ, ಬೆಂಗಳೂರು ಡಿ॥

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯ ವರೆಗೂ ಬೆಳಿಗ್ಗೆ-ಸಾಯಂಕಾಲ [illegible] ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ [illegible] ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ದಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ॥ ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, $\frac{1}{2}$ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೇನೆ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇವನೆ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವ, ಹೊಟ್ಟೆ ಹುಳಗಳ ಕೆದರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಕು ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[36] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ) **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಜೊತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೋಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಗುತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು. ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಬದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾಡುವಂತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಷ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[51] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತವಿಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೨—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯ ಳ್ಳಿನ ರೋಗಗಳು, ಕಣ್ಣುಗಳ್ಳಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾರೆವು. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦ ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[39] ಪೋ. ಬಾ. ೫೧೦, ಮದರಾಸ

REGISTERED No. M. 2266 || श्री जगद्गुरु पंचाचार्याः प्रसीदन्तु || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ ನೇ ಏಪ್ರಿಲ್ ೧೯೩೧ [ಸಂಚಿಕೆ ೫೧

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಓರ್ವ ಮಠಪತ್ರಿಯವರ ಮೇಲೆ.

ವಾಚಕಮಹಾಶಯರೇ! ತಳಕಲ್ಲ ಮಠಪತಿ ಬಸವಯ್ಯನವರ ವಿಷಯಕ್ಕೆ "ಪಂಚಾಚಾರ್ಯಪ್ರಭಾ" ಪತ್ರಿಕೆಯಲ್ಲಿ "ನಿಜ ವೃತ್ತಾಂತನಿದರ್ಶನ" ವೆಂಬ ಲೇಖವನ್ನು ಎಸ್. ಎಸ್. ಪಾಟೀಲ ಎಂಬುವರು ಪ್ರಸಿದ್ಧಮಾಡಿದ್ದು ನಮಗೆ ವೇದ್ಯವೇ ಇರುವದು. ಸದರಿ ಬಸವಯ್ಯನವರು ನಮ್ಮ ಗ್ರಾಮದಲ್ಲಿ ಮನೆಮಾಡಿಕೊಂಡು ಕೆಲವು ದಿವಸಗಳ ವರೆಗೆ ಗಾಂವಠೀ ಶಾಲೆಯನ್ನು ಹಾಕಿಕೊಂಡಿದ್ದು ಪೂರ್ವದ ಮಠಪತಿ ಎಂಬ ನಾಮವನ್ನು ಬಿಟ್ಟು ಪತ್ರಿಕೆಗಳಲ್ಲಿ "ಬಸವಾರ್ಯಶಾಲಿ" ಎಂದು ಬರೆಯಲಿಕ್ಕೆ ಹತ್ತಿದರು. ಪೂಜ್ಯಮಠಾಧಿಕಾರಿಗಳ ಮತ್ತು ಗ್ರಾಮಾಧಿಕಾರಿಗಳ ಲಕ್ಷ್ಯವಿಲ್ಲದೆ ಒಂದು ಉತ್ಸವದ ನೆವದಿಂದ ಮಧ್ಯರಾತ್ರಿಯ ಕಾಲದಲ್ಲಿ ತಮ್ಮ ಮನೆಗೆ ನಾಲ್ಕು ಕಡೆಗೆ ಲಿಂಗಮುದ್ರೆಗಳನ್ನು ಪ್ರಕಾಶಗೊಳಿಸಬೇಕೆಂಬ ಆಲೋಚನೆಯಿಂದ ಕೂಡಿರಲು, ಮೇಲಿನ ಅಧಿಕಾರಿಗಳು ಒಪ್ಪದಕಾರಣ ಆ ಮಠಪತ್ತಿಯವರ ಕಾರ್ಯವು ನಿಷ್ಫಲವಾಯಿತು. ಇತ್ತೀಚೆಗೆ ಬಸವಜಯಂತಿಯನ್ನು ಮಾಡಲಿಕ್ಕೆ ಹತ್ತಿ ಜಗದಾಚಾರ್ಯರಲ್ಲಿ ಭಕ್ತಿಯುಳ್ಳ ಸದ್ವಂಶದ ಭಕ್ತವರ್ಗಕ್ಕೆ ಮೊದಲನೆಯ ವರ್ಷದ ಜಯಂತಿಯ ಪತ್ರಿಕೆಗಳಲ್ಲಿ "ಬಸವವಂಶಜ" ರೆಂದು ಬರೆದುಕೊಂಡಿರುವರು. ನೋಡಿದಿರಾ ಇವರ ಬುದ್ಧಿಯ ಪ್ರಭಾವವನ್ನು? ಇವರು ತಮ್ಮ ಮನೆತನದ ಅಡಚಣೆಯ ಮೂಲಕವಾಗಿ ನಮ್ಮಲ್ಲಿ ಕೆಲವು ಹಣವನ್ನು ಸಾಲವಾಗಿ ತೆಗೆದುಕೊಂಡು ಹೋಗಿ, ಸದ್ಯಃ ಮುಸಬಿನಹಂಚಿನಾಳ ಗ್ರಾಮದಲ್ಲಿ ಇರುವರು. ನಾವು ಹಣದ ವಸೂಲಿಗಾಗಿ ಪೂರ್ವದ ನಿಜನಾಮದಿಂದ ಪತ್ರವನ್ನು ಬರೆಯಲು ಈ ಬಸವಯ್ಯನವರು ಕೋಪಾಧಿಕದಿಂದ ನಮಗೆ ವಿಪರೀತವಾಗಿ ಪತ್ರವನ್ನು ಬರೆದಿರುವರು. ಅದನ್ನು ನೋಡಿದರೆ ಚಿಕ್ಕ ಬಾಲಕರಿಗೂ ಕೂಡ ನಗೆಬರುವಂತಿದೆ. ಆದುದರಿಂದ ಸದರಿ ಮಠಪತಿ ಬಸಯ್ಯನವರು ದುರಭಿಮಾನಕ್ಕೆ ಬೀಳದೆ ತಮ್ಮ ಕುಲಪದ್ಧತಿಯಂತೆ ನಡೆದು ಜಗದೀಶ್ವರನ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಸಮಾಜಬಂಧು, ವಿ. ವಿ. ಮಾಲೀಪಾಟೀಲ, ಕವಲೂರ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ಬಳ್ಳಾರಿ ವೀರಶೈವ ಶ್ರೀ ಗುರುನಿವಾಸ ಸಂಸ್ಕೃತವಿದ್ಯಾಲಯ.

(ಅಧ್ಯಯನಕ್ಕಾಗಿ ಬರತಕ್ಕ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ)

ಈ ವಿದ್ಯಾಲಯವು ಶುಕ್ಲನಾಮಸಂವತ್ಸರದಲ್ಲಿ ಬಳ್ಳಾರಿ ಸಕ್ರಿ ಕರಡಪ್ಪನವರ ಚೌಕಿಯಲ್ಲಿ ಪ್ರಮುಖಜನರ ಸಹಾಯದಿಂದ ಶ್ರೀ|| ಷ|| ಬ್ರ|| ಅಸಗೋಡು ಪಟ್ಟಾಧ್ಯಕ್ಷ ರುದ್ರಮುನಿ ಶಿವಾಚಾರ್ಯಸ್ವಾಮಿಗಳವರಿಂದ ಕೇವಲ ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಮತ್ತು ಕಲಕತ್ತಾ ಅಸೋಸಿಯೇಶನ್ ಆದ್ಯ, ಮಧ್ಯಮ, ತೀರ್ಥ (ನ್ಯಾಯ, ವ್ಯಾಕರಣ, ಸಾಹಿತ್ಯ) ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕೆಂಬ ವಿದ್ಯಾರ್ಥಿಗಳ ಸಲುವಾಗಿ ಸ್ಥಾಪಿಸಲ್ಪಟ್ಟಿದೆ. ಶ್ರೀ|| ಷ|| ಬ್ರ|| ಅಸಗೋಡುಸ್ವಾಮಿಗಳವರ ಅಧ್ಯಾಪಕತ್ವದಲ್ಲಿ ನ್ಯಾಯ, ವ್ಯಾಕರಣ ಪಾಠಗಳು, ವೇ|| ಪಂ|| ಅಬ್ಬಿಗೇರಿ ಎಸ್. ಎಂ. ಜಗದೀಶಶಾಸ್ತ್ರಿಗಳ ಅಧ್ಯಾಪಕತ್ವದಲ್ಲಿ ಸಾಹಿತ್ಯದ ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಮತ್ತು ಕಲಕತ್ತಾ ಆದ್ಯ, ಮಧ್ಯಮ, ತೀರ್ಥ ಪರೀಕ್ಷೆಗಳ ಪಾಠಗಳೂ ಜರಗುತ್ತವೆ. ಇದೇ ವರ್ಷ ಸಾಹಿತ್ಯ ವ್ಯಾಕರಣದಲ್ಲಿ ಕಲಕತ್ತಾ ಪರೀಕ್ಷೆಗೂ, ಮದ್ರಾಸ್ ಯೂನಿವರ್ಸಿಟಿಯ ಎ. ಬಿ. ವಿದ್ವಾನ್ ಎಂಟ್ರನ್ಸ್ ಪರೀಕ್ಷೆಗಳಿಗೂ ಹೋಗಿರುತ್ತಾರೆ. ಪರೀಕ್ಷಾರ್ಥಿಗಳು ಪ್ರತೀ ವೃತ್ತಿ ಸಂ|| ರವೈಶಾಖ ಶುದ್ಧದೊಳಗಾಗಿಯೇ ಕೆಳಗಿನ ಅಡ್ರಸ್ಸಿಗೆ ತಮ್ಮ ನಿವೇದನ ಪತ್ರವನ್ನು ಯೋಗ್ಯತಾಪತ್ರಿಕೆಯೊಡನೆ ಕಳುಹಿಸಬೇಕು. ಬರತಕ್ಕ ವಿದ್ಯಾರ್ಥಿಗಳ ಸಲುವಾಗಿ ವಸತಿ ಭೋಜನವ್ಯವಸ್ಥೆಯು ಮಾಡಲ್ಪಡುವುದು.

ಕೊಂಡಕುಂದಿ ಭೋಗಪ್ಪ ಸೆಕ್ರೆಟರಿ
ವೀರಶೈವ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯ
ಕರಡಪ್ಪ ಚೌಕಿ. ಬಳ್ಳಾರಿ.

ಒಳದೇಶದ ವೃತ್ತಾಂತಗಳು.

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ತಮ್ಮ ಸಂಚಾರವನ್ನು ಪೂರೈಸಿಕೊಂಡು ಮೊನ್ನೆ ದಿವಸ ಮೈಸೂರು ರಾಜಧಾನಿಗೆ ಆಗಮಿಸಿದರು.

ರಾಜಧಾನಿಯ ಹಿಂದೀ ಪ್ರೇಮಿಮಂಡಲದವರು ಈ ತಿಂಗಳು 10ನೆಯ ತಾರೀಖಿನ ದಿವಸ ಸಂಸ್ಕೃತಕಾಲೇಜಿನಲ್ಲಿ ಬೇಸಿಗೆಯ ನಿಮಿತ್ತವಾಗಿ ಹಿಂದೀಕ್ಲಾಸನ್ನು ಪ್ರಾರಂಭಮಾಡಿದರು. ಆಗ ಹಿಂದೀಭಾಷೆಯ ಆವಶ್ಯಕತೆಯನ್ನು ಕುರಿತು ಮಿ|| ರಾಮಚಂದ್ರಶೆಟ್ಟಿ, ಮಿ|| ಸುಬ್ಬನರಸಿಂಹಯ್ಯ, ವಿದ್ವಾನ್ ಶ್ರೀಪಾದಾಚಾರ್ಯ, ಮಿ|| ಎಂ. ವಿ. ಜಂಬುನಾಥನ್ ಮೊದಲಾದವರು. ಭಾಷಣಮಾಡಿದರು.

ವಾಣಿಯಂಬಾಡಿ ಚರ್ಮದ ವ್ಯಾಪಾರಿ ಮಿ|| ಅಬ್ದುಲ್ ವಹಬ್ ಎಂಬುವರು ತಮ್ಮ ಮೋಟಾರಿನಲ್ಲಿ ಆನೇಕಲ್ ತಾಲ್ಲೂಕಿನ ಒಂದು ಹಳ್ಳಿಯಿಂದ ಬೆಂಗಳೂರಿಗೆ ಬರುತ್ತಿದ್ದರು. ಚಂದಾಪುರವೆಂಬ ಸ್ಥಳದ ಹತ್ತರ ಮೋಟಾರ್‌ಗಾಡಿಯು ಒಂದು ಮರಕ್ಕೆ ಢಿಕ್ಕೆಹೊಡೆದು ಡ್ರೈವರನಿಗೂ ಮಿ|| ಅಬ್ದುಲ್‌ವಹಬಾರಿಗೂ ಪೂರಾಗಾಯವಾಯಿತು. ಅವರೀರ್ವರೂ ಬೆಂಗಳೂರು ಸೆಂಟ ಮಾರ್ಥಾಸ್ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಆದರೆ ಆ ಚರ್ಮದವ್ಯಾಪಾರಿಯು ಆ ದಿವಸವೇ ಮೃತಪಟ್ಟನೆಂದೂ, ಡ್ರೈವರನಿಗೆ ಗುಣವಾಗುತ್ತಲಿದೆ ಎಂದೂ ತಿಳಿದು ಬರುತ್ತದೆ.

ಬೆಂಗಳೂರು ನಿವಾಸಿಯಾದ ಗಂಗೂಬಾಯಿ ಎಂಬವರು ಸರ್ಕಾರಿ ಸೇವಿಂಗ್ಸ್‌ಬ್ಯಾಂಕಿನಲ್ಲಿ ಹಣ ಡಿಪಾಜಿಟ್ ಮಾಡಿದ್ದರು. ಕಳೆದ ಜೂನ್ 11 ನೆಯ ತಾರೀಖಿನ ದಿವಸ ಯಾರೋ ಒಬ್ಬರು ಗಂಗೂಬಾಯಿಯವರ ಸಹಿ ಮಾಡಿ 1000 ರೂ. ಗಳನ್ನು ಅಪಹರಿಸಿಕೊಂಡು ಹೋದರು. ಈ ಸಂದರ್ಭದಲ್ಲಿ ಟಿ. ಆರ್. ಸುಬ್ರಹ್ಮಣ್ಯಶಾಸ್ತ್ರಿ, ಎಲ್. ಎಸ್. ಶ್ರೀನಿವಾಸರಾವ್, ಡಿ. ಎಸ್. ಸುಬ್ಬರಾವ್ ಈ ಮೂವರು ಅಪರಾಧಿಗಳೆಂದು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಬೆಂಗಳೂರು ಸಿಟಿಮ್ಯಾಜಿಸ್ಟ್ರೇಟರು ಈ ಮೂವರನ್ನೂ ಅ|| ಸೆಷನ್ಸ್ ಕೋರ್ಟಿಗೆ ಕಮಿಟ್‌ಮಾಡಿದ್ದರು. ನ್ಯಾಯಾಧೀಶರು ಈ ಮೂವರೂ ನಿರಪರಾಧಿಗಳೆಂದು ತೀರ್ಮಾನಿಸಿದರು.

ತಿರುಮಕೂಡಲು ನರಸೀಪುರ ತಾಲ್ಲೂಕು ದೊಡ್ಡಪುರವೆಂಬ ಹಳ್ಳಿಯಲ್ಲಿ ಮರಿಗೌಡನೆಂಬಾತನು ತನ್ನ ಐದು ವರ್ಷದ ಮಗಳನ್ನು ಅದೇ ಗ್ರಾಮದ ಕುಸುಗೌಡನ ಮಗ ಸರೂಜ ಎಂಬವನಿಗೂ, ಮೈಸೂರು ತಾಲ್ಲೂಕು ಮುದಕಿಚಿಕ್ಕನಹುಂಡಿಯಲ್ಲಿ ಕೆಂಪಲಿಂಗೇಗೌಡನು ತನ್ನ ಎಂಟು ವರ್ಷದ ಮಗಳನ್ನು ಕೆಂಪಯ್ಯನೆಂಬವನಿಗೂ ಕೊಟ್ಟು ವಿವಾಹಮಾಡಿದ್ದರಿಂದ ಈ ಉಭಯ ವಧೂವರರ ತಂದೆತಾಯಿಗಳು ಮತ್ತು ಪುರೋಹಿತ ಪುಟ್ಟರಾಮಜೋಯಿಸನು ಕಾಯಿದೆ ವಿರೋಧವಾಗಿ ಚಿಕ್ಕಮಕ್ಕಳ ವಿವಾಹಮಾಡಿದರೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬನಿಗೆ 100 ರೂ. ಜುಲ್ಮಾನೆ ಅಥವಾ 6 ವಾರಗಳ ಸಾದಾಸಜೆಯನ್ನು ವಿಧಿಸಿದರೆಂದು ತಿಳಿದುಬರುತ್ತದೆ.

ಲಾಹೋರಿನಲ್ಲಿ ನೆರವೇರಿದ ಅಖಿಲಭಾರತ ಮಹಿಳಾ ಮಹಾಸಭೆಯ ಕಾರ್ಯಕಲಾಪಗಳನ್ನು ವಿವರಿಸುವುದಕ್ಕಾಗಿ ಈ ತಿಂಗಳು 11 ನೆಯ ತಾರೀಖಿನ ದಿವಸ ಬೆಂಗಳೂರಿನಲ್ಲಿ ಸರ್ ಕೆ. ಪಿ. ಪುಟ್ಟಣಶೆಟ್ಟರ ಪತ್ನಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸುಮಾರು 400-500 ಜನ ಸ್ತ್ರೀಯರು ಸಭೆಗೆ ಆಗಮಿಸಿದ್ದರು. ಅನೇಕ ಮಹನ್ಮಣಿಯ ಮಹಿಳೆಯರೂ ಸಹ ಆ ಸಭೆಯಲ್ಲಿ ಮುಖ್ಯಭಾಗವನ್ನು ವಹಿಸಿದ್ದರು. ಸ್ತ್ರೀಯರಿಗೆ ಬಲಾತ್ಕಾರ ವಿದ್ಯಾಭ್ಯಾಸ, ಘೋಷಾಪದ್ಧತಿಯ ನಿವಾರಣೆ, ಗಿರಿಣಿ ಕೂಲಿಹೆಂಗಸರ ಸುಧಾರಣೆ ಮೊದಲಾದುವುಗಳು ಅತ್ಯವಶ್ಯಕವೆಂದು ಶ್ರೀಯುತ ಆರ್. ಎ. ಶ್ರೀನಿವಾಸಯ್ಯಂಗಾರ್ಯ ಪತ್ನಿಯವರು ಭಾಷಣಮಾಡಿದನಂತರ ಇನ್ನೂ ಕೆಲವು ಸ್ತ್ರೀಯರು ಉಪನ್ಯಾಸಮಾಡಿದರು.

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ ಸಮಯದಲ್ಲಿ ನೆರವೇರುವ ಪ್ರಜಾಪ್ರತಿನಿಧಿಸಭೆಯ ಅಧಿವೇಶನದಲ್ಲಿ ಚರ್ಚಿಸುವ ಗೊತ್ತುವಳಿಗಳನ್ನು ನಿರ್ಧರಿಸುವುದಕ್ಕಾಗಿ ಬೆಂಗಳೂರು ಡಿ|| ಕಮಿಷನರ್ ಮಿ|| ಕೆ. ವಿ. ಅನಂತರಾಮರಾವರ ಅಧ್ಯಕ್ಷತೆಯಲ್ಲಿ 9-4-21ರಲ್ಲಿ ಕೆಲವು ಮೆಂಬರರ ಸಭೆಯು ಸೇರಿದ್ದಿತು. ಆಗ್ಗೆ ಮಿ|| ಕೆ. ಟಿ. ಭಾಷ್ಯಂಅಯ್ಯಂಗಾರ್ಯರು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನೇರ್ಪಡಿಸುವ ವಿಷಯವನ್ನು ನಿರ್ಣಯಿಸುವುದಕ್ಕಾಗಿ ಅಧಿಕಾರಿ ಮತ್ತು ಅನಧಿಕಾರಿ ಮೆಂಬರರ ಕಮಿಟಿಯನ್ನು ಸ್ಥಾಪಿಸಬೇಕೆಂದೂ, ಮಿ|| ಬಯಣ್ಣನವರು ಆರ್ಥಿಕಸ್ಥಿತಿಯು ಕುಗ್ಗಿರುವುದರಿಂದ ಭೂಗಂದಾಯವನ್ನು ಶೇಕಡ 25 ರಂತೆ ಕಡಿಮೆಮಾಡಬೇಕೆಂದೂ ಹೇಳಿದರು.

ಸ್ವೀಕಾರ.

ಅಜ್ಜಂಪುರ ಗ್ರಾಮನಿವಾಸಿಗಳಾದ ಮ|| ರಾ|| ಅನ್ನದಾನಪ್ಪನವರು ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖನಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶ್ರೀ ಜಗದ್ಗುರು ರೇಣುಕಾಚಾರ್ಯ ಮತ್ತು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತಿ ಮಹೋತ್ಸವಗಳು.

ಕುರುಗೋಡು.

ಶ್ರೀ ಪರಶಿವನ ಪಂಚಮುಖೋದ್ಭವರೂ, ವೀರಶೈವಧರ್ಮ ಸ್ಥಾಪಕರೂ, ಅಷ್ಟಾವರಣಷಟ್‌ಸ್ಥಲದೀಕ್ಷಾ ವೋಕ್ಷಾದಿಗಳಿಗೆ ಕಾರಣೀಭೂತರೂ ಆಗಿರುವ ಶ್ರೀ ರೇಣುಕಾಚಾರ್ಯ ಮತ್ತು ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತಿಮಹೋತ್ಸವಗಳು ಕ್ರಮವಾಗಿ ಪ್ರಮೋದೂತ ನಾಮಸಂವತ್ಸರದ ಮಹಾಶಿವರಾತ್ರಿಯಲ್ಲಿ ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಉತ್ಸವವೂ, ಫಾಲ್ಗುಣ ಶು|| ೧೩ ಯಲ್ಲಿ ಶ್ರೀ ರೇಣುಕಾಚಾರ್ಯರ ಉತ್ಸವವೂ ಶ್ರೀ ದೊಡ್ಡವೃಷಭೇಶ್ವರ ದೇವಾಲಯದಲ್ಲಿ ಈ ಪಟ್ಟಣದ ಸಕಲ ವೀರಶೈವಮಹಾಜನಗಳಿಂದ ಅಸಾಧಾರಣವಾದ ವೈಭವದೊಡನೆ ನೆರವೇರಿಸಲ್ಪಟ್ಟಿತು. ಶ್ರೀಮಂತ ನಾಡಗೌಡ್ರು ಮರೆಗೌಡರ ಮಕ್ಕಳಾದ ಮ|| ರಾ|| ಶ್ರೀ|| ಮರಿಬಸವನಗೌಡ್ರು, ಸಣ್ಣಮರೆಗೌಡ್ರು, ಮಲ್ಲಿಕಾರ್ಜುನಗೌಡ್ರು ಇವರು ಶ್ರೀ ವೃಷಭೇಶ್ವರನ ಆಲಯದಲ್ಲಿರುವ ಸಾಂಬಮೂರ್ತಿಗೂ, ಸದರಿ ಶ್ರೀ ರೇಣುಕಾದಿ ಮಹದಾಚಾರ್ಯರ ಲಿಂಗೋದ್ಭವಮೂರ್ತಿಗಳಿಗೂ ಮಹಾಭಿಷೇಕವನ್ನೂ ಅಷ್ಟವಿಧಾರ್ಚನೆಯನ್ನೂ ನೆರವೇರಿಸಿ ಜಯಂತಿವ್ರತವನ್ನು ಪೂರೈಸಿ ಭೂರಿಭೋಜನಾದಿಗಳಿಂದ ಮಾಹೇಶ್ವರರನ್ನು ತೃಪ್ತಿಗೊಳಿಸಿ ಶ್ರೀ ಗುರುಕೃಪೆಗೆ ಪಾತ್ರರಾದರು. ಶ್ರೀ ಜಗದ್ಗುರು ಪಂಚಾಚಾರ್ಯರ ಭಜನಾಸಂಘದ ಅಧ್ಯಕ್ಷರಾದ ವೇ|| ಕುರುಗೋಡು ಮೇಲುಮಠದ ಬಸವಲಿಂಗಯ್ಯನವರು ಮ|| ರಾ|| ಇಮ್ಮಡಿಗೌಡ್ರು ಚಂದ್ರಶೇಖರಪ್ಪನವರು ವ್ಯವಸ್ಥಾಪಕರಾಗಿಯೂ ಕಾರ್ಯದರ್ಶಿಗಳಾಗಿಯೂ ಇದ್ದರು. ಶ್ರೀ ವೃಷಭೇಶ್ವರಾಲಯದಲ್ಲಿ ಸುವಾಸಿತಪುಷ್ಪಮಾಲಿಕೆಗಳಿಂದ ಶೋಭಾಯಮಾನವಾಗಿ ಶೃಂಗರಿಸಲ್ಪಟ್ಟಿದ್ದ ಗುರುಸಾರ್ವಭೌಮರಾದ ರೇಣುಕಾದ್ಯಾಚಾರ್ಯರ ಭಾವಚಿತ್ರವನ್ನು ಶ್ವೇತಚ್ಛತ್ರಧ್ವಜಯುಕ್ತವಾದ ಪುಷ್ಪಮಯವಾದ ಆಂದೋಲಿಕೆಯಲ್ಲಿ ಬಿಜಯಮಾಡಿಸಿ ಮೇಲುಮಠದ ಬಸವಲಿಂಗಯ್ಯನವರ ಕಡೆಯ ಭಜನಾಸಂಘದವರ ಭಜನೆಯೊಡನೆಯೂ ಅನೇಕ ವಾದ್ಯಗಳೊಡನೆಯೂ ಜಗದಾಚಾರ್ಯರ ಜಯಜಯಕಾರದೊಡನೆಯೂ ಮಹೋತ್ಸವಗಳು ವೃಷಭೇಂದ್ರಾಲಯದಿಂದ ಹೊರಡಿಸಲ್ಪಟ್ಟವು. ಪುರಬೀದಿಗಳಲ್ಲಿ ಸ್ವಮತ ಪರಮತದವರೆಲ್ಲರೂ ಜಗದಾಚಾರ್ಯರಿಗೆ ಫಲಪುಷ್ಪಾದಿಗಳನ್ನರ್ಪಿಸಿ ಧನ್ಯರಾಗುತ್ತಿದ್ದರು. ಹೀಗೆ ಉತ್ಸವವು ನೆಲೆವೆಡೆಗೆ ಸೇರುವುದರೊಳಗಾಗಿ ೧೦|| ಘಂಟೆಯಾಯಿತು. ಅನಂತರ ಜಗದಾಚಾರ್ಯರಿಗೆ ಮಂಗಲವಾದ ಬಳಿಕ ಆಚಾರ್ಯಭಗವತ್ಪಾದರ ಜಯಜಯಕಾರದೊಡನೆ ಜಯಂತ್ಯುತ್ಸವಗಳು ಪರಿಸಮಾಪ್ತಿಗೊಳಿಸಲ್ಪಟ್ಟವು. ಭಕ್ತಿಪೂರ್ವಕವಾಗಿ ಈ ಜಯಂತಿಮಹೋತ್ಸವಗಳನ್ನು ನೆರವೇರಿಸಿದ ಶ್ರೀಮಂತ ನಾಡಗೌಡ ಸಣ್ಣಮರೆಗೌಡರೇ ಮೊದಲಾದ ವೀರಶೈವಮಹಾಜನರಿಗೆ ಶ್ರೀ ಜಗದಾಚಾರ್ಯರು ಸಕಲ ಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುವ,

ಭಜನಾಸಂಘದ ಸೆಕ್ರೆಟರಿ,
H. M. Thippaiah.

ಶ್ರೀ ಜಗದ್ಗುರು ರೇಣುಕಾಚಾರ್ಯಃ ಪ್ರಸೀದತು.

ಶ್ರೀ ರೇವಣಸಿದ್ಧೇಶ್ವರಸ್ವಾಮಿ ರಥೋತ್ಸವ.

ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್‌ಪೇಟೆ ತಾಲ್ಲೂಕು ಶ್ರೀ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟದಲ್ಲಿ ಪರಾಮರ್ಶಿ ಮೇರೆ ಇದೇ ಶ್ರೀಮತ್ ಪ್ರಜೋತ್ಪತ್ತಿನಾಮಸಂವತ್ಸರದ ವೈಶಾಖಶುದ್ಧ ಪೂರ್ಣಿಮಾ ಸ್ಥಿರವಾರದ ಲಾಗಾಯ್ತು ಶ್ರೀ ಸ್ವಾಮಿಯವರ ರಥೋತ್ಸವ ಕಾರ್ಯಗಳು ಮಹಾವೈಭವದಿಂದ ನಡೆಯುವವಾದ್ದರಿಂದ ಸಮಸ್ತಭಕ್ತರು ಆಗಮಿಸಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥನೆ.

ಜಾತ್ರೆ ಪ್ರೋಗ್ರಾಂ.

ವೈಶಾಖ ಶು|| ೧೪ ತಾ|| 1-5-31 ಶುಕ್ರವಾರ ಧ್ವಜಾರೋಹಣ ಅಂಕುರಾರ್ಪಣ ಮತ್ತು ಬಸವೇಶ್ವರ ದೇವರ ಅಗ್ನಿಕುಂಡ ವೈಶಾಖ ಶುದ್ಧ ೧೫ ಶನಿವಾರ ರಥಾರೋಹಣಮಹೋತ್ಸವವು; ವೈಶಾಖ ಬಹುಳ ೧ ಭಾನುವಾರ ಗಿರಿಪ್ರದಕ್ಷಿಣೆ, ರಾತ್ರಿ ರಾವಣೇಶ್ವರೋತ್ಸವ ಮತ್ತು ವೃಷಭೇಶ್ವರೋತ್ಸವ. ವೈಶಾಖ ಬಹುಳ ೨ ಸೋಮವಾರ ವಸಂತೋತ್ಸವ ತೀರ್ಥಸ್ನಾನ ವಗೈರೆ ಕಾರ್ಯಗಳು ನಡೆಯುತ್ತವೆ. ಶ್ರೀ ರೇವಣಸಿದ್ಧೇಶ್ವರಸ್ವಾಮಿ ಬೆಟ್ಟಕ್ಕೆ ಬರಬೇಕಾದರೆ ಕ್ಲೋಸ್‌ಪೇಟೆ ಸ್ಟೇಷನ್ನಲ್ಲಿ ಇಳಿದು ಕಾರ್ ಕಾರ್ ಹಳ್ಳಿಗೆ ಹೋಗುವ ಮೋಟಾರುಬಸ್ಸಿನಲ್ಲಿ ಕುಳಿತುಕೊಂಡು 6½ ಮೈಲಿ ಬಳಿ ಅವ್ವೇರಹಳ್ಳಿಯ ಹತ್ತಿರ ಇಳಿದರೆ ಒಂದು ಮೈಲು ಆಗುವದು.

ಅರ್ಚಕ ಶಿವರುದ್ರಯ್ಯ.

ಶ್ರೀ ಜಗದ್ಗುರು ರೇಣುಕಾಚಾರ್ಯ ಫ್ರೀಬೋರ್ಡಿಂಗ ವಿಜಾಪೂರ.

ಮೊದಲೇ ಎಲ್ಲ ವರ್ತಮಾನಪತ್ರಗಳಲ್ಲಿ ಪ್ರಸಿದ್ಧಪಡಿಸಿದ ಪ್ರಕಾರ ಶ್ರೀ ಕೊರವಿಹಿರೇಮಠದ ಪಟ್ಟದಸ್ವಾಮಿಗಳು ಮುಲಕಿ ಪರೀಕ್ಷೆಗೆ ಬಂದ ೫೦ ಜನ ಬಡವಿದ್ಯಾರ್ಥಿಗಳಿಗೆ ಅನ್ನೋದಕಕೊಡುವ ವ್ಯವಸ್ಥೆಯನ್ನು ಚೆನ್ನಾಗಿ ಮಾಡಿಸಿದ್ದರು. ಈ ಹುಡುಗರಲ್ಲಿ ವೀರಶೈವವಿದ್ಯಾರ್ಥಿಗಳಲ್ಲದೆ ಕಬ್ಬಲಿಗ 3, ಮರಾಠ 1, ಕುರುಬ 1, ಕ್ಷತ್ರಿಯ 1, ಲಮಾಣಿ 1, ಮುಸಲ್ಮಾನ 1, ಮಡಿಗಾರ 1. ಈ ಪ್ರಕಾರ 9 ಜನ ಇತರ ಜಾತಿಯ ವಿದ್ಯಾರ್ಥಿಗಳು ಬಂದಿದ್ದವರೆಲ್ಲರಿಗೂ ಊಟದ ವ್ಯವಸ್ಥೆಯನ್ನು ಮಾಡಿಸಿದರು. ಇದಕ್ಕೆ ಕೈ|| ಶ್ರೀಮಂತ ವೀರನಗೌಡರು ಪಾಟೀಲ ಬಬಲೇಶ್ವರ ಇವರ ಧರ್ಮಪತ್ನಿ ಶ್ರೀಮತಿ ಸಾತವ್ವನವರು ಪಾಟೀಲ ಬಬಲೇಶ್ವರ ಇವರು ಅಕ್ಕಿಯನ್ನು ಪೂರೈಸಿಕೊಟ್ಟರು ಮತ್ತು ಕೊರವಿಯ ಒಬ್ಬರು ಇಲ್ಲಿ ನಡೆದ ದಾಸೋಹ ವ್ಯವಸ್ಥೆಯನ್ನು ನೋಡಿ ತುಪ್ಪವನ್ನು ಕೊಟ್ಟರು ಮತ್ತು ಉಳಿದ ಎಲ್ಲ ಖರ್ಚನ್ನು ವ್ಯವಸ್ಥಾಪಕರೇ ವಹಿಸಿ ಕಾರ್ಯವನ್ನು ನೆರವೇರಿಸಿದರು. ಇದಕ್ಕೆ ವಿಜಾಪೂರ ಮುನಿಸಿಪಾಲಿಟಿ ಶಾಳಾಮಾಸ್ತರರು ಮತ್ತು ಮುಖ್ಯಸ್ವಾಮಿಮಠದ ವ್ಯವಸ್ಥಾಪಕರೂ ಬಹಳೇ ಸಹಾಯಮಾಡಿದರು. ಇದರಂತೆ ಎಲ್ಲ ಭಕ್ತರು ತಮ್ಮ ಕೈಲಾದಮಟ್ಟಿಗೆ ಸ್ವಾಮಿಗಳಿಗೆ ಸಹಾಯ ಮಾಡುತ್ತಾ ಹೋದರೆ ಸ್ವಾಮಿಗಳು ಮುಂದಾದರೂ ಇದಕ್ಕೂ ಹೆಚ್ಚಿಗೆ ವ್ಯವಸ್ಥೆಮಾಡುವರು. ಜಗದಾಚಾರ್ಯರು ಇವರೆಲ್ಲರಿಗೂ ಇದರಂತೆ ಪ್ರತಿವರ್ಷಮಾಡುವಂತೆ ಅನುಗ್ರಹಮಾಡಲೆಂದು ಅಪೇಕ್ಷಿಸುವೆನು.

ಜಿ. ಎಸ್. ಅಬ್ಬುಲಪೂರ.
ಹೆಡ್ಡಮಾಸ್ತರ, ಐಡಗುಂಡಿ.

ಶ್ರೀ ಗುರು ಪಂಚಾಚಾರ್ಯೇಭ್ಯೋನಮಃ

ವರದಕ್ಷಿಣಾಖಂಡನ.

ಅಯ್ಯಾ [illegible] ಬಂಧುಗಳೇ! ತಮ್ಮೊಳ್ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವದೇನೆಂದರೆ, ಪ್ರಸ್ತುತವಿಾ ಪ್ರಪಂಚದಲ್ಲಿ ಪರಮೇಶ್ವರನ ಕೃಪಾಬ್ಧಿಗೆ ಯೋಗ್ಯರೆನಿಸಿದ ನಮ್ಮ ವಂಶದಲ್ಲಿ ಯಶೋವಿಶಾಲರಾದ ಕೆಲವರು ಕೋಟಿಗೆ ಧ್ವಜವನ್ನೆತ್ತಿ ಕುಬೇರನ ಸಮಾನರೆಂದೆನಿಸಿ ಪ್ರಖ್ಯಾತಿವಹಿಸಿದ ಧನಾಢ್ಯರು, ಲಕ್ಷಾಧಿಕಾರರೆನಿಸಿದ ಶ್ರೀಮಂತರು, ಸ್ವಕೀಯ ಪುತ್ರಿಕಾರತ್ನಂಗಳಂ ಯೋಗ್ಯಾನುಸಾರವಾದ ಮರ್ಯಾದೆಯಿಂದ ವ್ಯಕ್ತಿಸ್ವಾಸ್ಥ್ಯಗೌರವಾದಿ ಸದ್ಗುಣಸಂಪನ್ನರಿಗಿತ್ತು ವಿವಾಹವಂ ಗೆಯ್ಯುದು ಶಾಸ್ತ್ರಸಮ್ಮತವಾಗಿರಲು ತಾವಿದಕ್ಕೆ ವ್ಯತಿರಿಕ್ತವಾಗಿ ಲೋಕಸ್ವಭಾವಗುಣಪ್ರವರ್ತಕರಾದ ಕೆಲ ಆಧುನಿಕರು ಪರದಕ್ಷಿಣಾಸಕ್ತಚಿತ್ತರಾಗಿ ಆಡಂಬರಪ್ರಖ್ಯಾತಿಪರಿಣಯಧುರಂಧರತ್ವಮಂ ವಹಿಸಿ ಬಡತನವನ್ನುಳ್ಳ ಬಾಂಧವರನ್ನಾದರಿಸದೆ ಪೂರ್ವೋತ್ತರ ಕರ್ಮಾಲೋಚನವಿಚಾರವಿಹೀನರಾಗುವರು. ಆಶ್ಚರ್ಯವು ಇದಂ ಶಾಸ್ತ್ರೀಯವಾಗಿಹುದೋ ಇಲ್ಲವೇ ಬಂಧುಜಾಲಾಂಗೀಕಾರವೋ ಅಥವಾ ಲೋಕಸಮ್ಮತವೋ ಸ್ವಕುಲಾಭಿಮಾನವೆನಿಸುವದೋ ಪಟಿಯೆಂದು ಸಾರಿ ಪೇಳುವ ಕನ್ಯಾಪ್ರದಾತನು ಸ್ವಶಕ್ತ್ಯನುಸಾರವಾಗಿ ಜಾಮಾತನಿಗಾಶೀರ್ವಚನಪೂರ್ವಕ ಮರ್ಯಾದೆಯಿಂದಿತ್ತ ವಸ್ತುವಾಹನವಸನಾಭರಣ ಮುಖ್ಯಾಲಂಕಾರವೇ ಶ್ರೇಯಸ್ಕರವೆಂದು ಭಾವಿಸುವದು ಪುರುಷಾರ್ಥವು. ಬಾಂಧವರೊಳಭಿಮಾನವು ಧನಾಭಿಮಾನವು ಈ ಎರಡರಲ್ಲಿ ಯುಕ್ತಾಯುಕ್ತಮಂ ಪರಿಗಣಿಸುವದಕ್ಕೆ ತಾವೇ ಸರ್ವಜ್ಞ ಸಮರ್ಥರು. ಸಂಬಂಧಾಭಿಮಾನಿಗಳಾದ ಸುಜ್ಞರಿಗೆ ದ್ರವ್ಯವು ಮೃತ್ತಿಕಾ ಸಮಾನವು. ಧನಾಪೇಕ್ಷೆಯುಳ್ಳ ಧನಾಢ್ಯರಿಗೆ ಬಾಂಧವ್ಯಾಭಿಮಾನವು ಗಗನಪುಷ್ಪಸದೃಶವು (ಅರ್ಥಾತುರಾಣಾಂ ನಗುರುರ್ನಬಂಧುಃ) ಅರ್ಥಾಶೆಯುಳ್ಳವರಿಗೆ ಗುರುಗಳು ಬಾಂಧವರಿಲ್ಲವೆಂಬುವ ನ್ಯಾಯ ಅಧಮಾಧಮರ ವಿಷಯವಾಗಿ ಪೇಳಲಬಹುದು. ಹೀನಧರ್ಮಾನುಕರಣವು ತಮ್ಮನ್ನು ಪೋಲ್ದ ಕೀರ್ತಿಪರರು ಸ್ವಪ್ನದೊಳಾದರೂ ಬಗೆಯಲಾರರು. ಮುಖ್ಯಾಂಶವೇನೆಂದೊಡೆ ಕನ್ಯಾದಾನ ಕರ್ತನು ತ್ರಿಕರಣಶುದ್ಧಿಯಿಂದಲೆ ಸಮರ್ಪಿಸಿದ ಕಿಂಚಿತ್ಸತ್ಕಾರವು ಕನಕಾಭಿಷೇಕವೆಂದು ಗ್ರಹಿಸಿ ಯುಕ್ತವಾದ ಬಂಧುತ್ವನನ್ನುಂಟುಮಾಡಿಕೊಳ್ಳುವದು ಸಜ್ಜನತ್ವಭಿಮಾನವೆಂದು ವಿಶದೀಕರಿಸಿ ವರದಕ್ಷಿಣೋಪೇಕ್ಷಿತರಾಗಿ ಮುಂದೆ ಮಾಳ್ಪ ವಿವಾಹಮಹೋತ್ಸವ ನಿರ್ವಹಣಶೀಲರಾಗುವಿರೆಂದು ವಿಜ್ಞಾಪನೆ.

ಶಿವನಾಗಪ್ಪ ಅಡಿವಪ್ಪ ಅವಟಿ ಸ್ಕೂಲ್
ಮಾಸ್ತರ್ ಮುಕ್ಕಾಮು ಚಂಡರಕಿ
ನೈಜಾಮು ಇಲಾಖಾ.

ನೀತಿಸುಧಾರಸ.

[ಮ|| ರಾ|| ಅನವಟ್ಟಿ ರಾಮರಾಯರಿಂದ]

ಸಂತೋಷ ಮತ್ತು ವ್ಯಸನ.

ಮತಿಗೆ ಬೆಮೆಯಂ ಗೊಳಿಸಿತರದಿಂ |
ದತಿಶಯದ ಸಂತಸಕೆ ಮನವಂ |
ಸತತ ಸೀಡದುಮೊಳಿತು ಹೃದಯವ ಕುಗ್ಗಿಸುವತೆರದೆ ||
ಅತಿಶಯದಲೊಲಿಗೆಡೆಯ ಸೀಡದು |
ಮಿತಿಯವಿಾರದ ಪರಿಯಯೋಚಿಸಿ |
ಮಿತದಿ ನಡೆದೊಡೆ ಮನುಜವೃದ್ಧಿಗೆ ಬರಲುಸಾಧಕವು ||೧||

ಸಿರುಕಿ ಪೊಡೆಯೂನಂದಕೆಡೆಯಿಸಿ |
ಸಿರುವ ಗೃಹವದು ವಿವಿಧ ಸೌಖ್ಯದೆ |
ಮೆರೆಯುತಲಿ ಕಂಗಳಿಗೆ ಕೌತುಕವಾಗಿ ಕಾಣೆವುದು ||
ಪರಿಪರಿಯ ಸುಖಸಂಜನಿತ ಸು |
ಸ್ವರಗಳಾಸುಕೆತೋಷಮಂ ಪಥಿ |
ಕರಿಗೆ ಬೀರಿರೆ ನಾಕಲೋಕದತೆರದಿ ರಾಜಿಪುದು ||೨||

ಮಾನವನಿಗೊದಗಿದಳಲವಾರವ |
ಜಾನಿಸುತಳುತ ಪರರ ಕೊರತೆಗ |
ಳೇನು ಮೆನುತಂ ನೀಚಗುಣಂಗಳಾವವೆಂದೆನುತೆ ||
ಸಾನುಮತದಿಂ ಗಣಿಸುತಪುಗಳ |
ಹೀನವೃತ್ತಿಗೆ ಮನುಜ! ಬೀಳ್ವೆಯ |
ಏನಗ್ಯೆಯುವೆಯೊಂದು ಕೇಳ್ವಳು ಸೌಖ್ಯಸುಂದರಿಯು ||೩||

ಇಂತಿಹ ಮನೆಯಬಾಗಿಲೊಳು ತಾ |
ನಿಂತಿರುವ ಯಜಮಾನಿ ಪಥಿಕರ |
ಹಂತಿಯಂ ನೋಡುತ್ತೆ ಕೈಬೀಸಿಕರೆಯುತ್ತಿಹಳು ||
ಸಂತಸವ ಪುಟ್ಟಿಸುವ ಸರದೆ ಸ |
ಮಂತು ಪಾಡುತೆ ಚೊಬ್ಬರಿದು ನಗು |
ತಿಂತು ವಿಟ್ಯಾತಿಯುನದಂತೆ ವಿಲಾಸವಾಂತಿಹಳು ||೪||

ಮನ್ನಣೆಗಳಂ ಹೊಂದಲಿಚ್ಛಿಸೆ |
ಬನ್ನಿರಿಲ್ಲಿಗೆ ತೋಷವೀವೆನು |
ನನ್ನ ತಾತ್ಕಾಲಿಕ ಜೀವಿತದ ಬೆಲೆಯನ್ನು ತಿಳಿಸುವೆನು ||
ಎನ್ನ ನಿಲಯಬ್ಯಾಯಿಯಂ ನೀಂ |
ನಿನ್ನು ಬಿಟ್ಟೊಡೆ ಸೌಖ್ಯಹೀನರೆ |
ನೆನ್ನುತಲಿ ಸಾರಯುತ ಬೋಧಾಮೃತವನೊರೆಯುವಳು ||೫||

ಈತೆರದಮಾ ಗೃಹಕದಾವಂ |
ಕಾತರದೆ ಸಾರದಲೆ ಪೋದೊಡೆ |
ಪೂತಮಾರ್ಗದ ಸುಖವನಾನದೆ ಬೆದೆಯನಾನುವನು ||
ಮಾತಿನೊಳು ಸರಸೋಕ್ತಿಗಳರದೆ |
ನೀತಿಬಾಹಿರನೆನಿಸಿ ಸೌಖ್ಯಕ |
ರಾತಿಯಾಗುತೆ ದೋಷಕಾರ್ಯವಗೈಯುತಿರುತಿಹನು ||೬||

ದುರುಳಕೃತ್ಯಂಗಳನು ಕಂಡಿಂ |
ದಿರಚಿಸುತ ಕೇಡಿಗೆಡೆಯಗುತೆ |
ಧರದೊಳಿಳಿಸುವ ಭಯವನಾನುತೆ ಲವವು ಯೋಚಿಸದೆ ||
ಪರಹರಿಪ ನಾಶಕರ ಪಳ್ಳವು |
ಚರಣ ತಳದೊಳಗಿರುವುದಂ ತಿಳಿ |
ದಿರೆಯು ಮುಲ್ಲಂಘಿಸುತೆ ನಾಶವನಾದಿರುನೋಡುವರೆ ||೭||

ಬಿಡದೆ ಬೇರಿಡೆಯಲ್ಲಿ ಮರಗಳ |
ಜಡುಪಿನೊಳು ಮಾನವನ ದಿಟ್ಟಿಗ |
ಳ್ಗಡೆಯುಗುಡದಂತಿರುವ ಬೆಸನಮದೆಂಬ ಮಾನಿನಿಯು ||
ಬಿಡುತಿರುವ ನಿಡುಸುಯಿಗೆ ಜವದಿಂ |
ಕಡುದುಗುಡದಾನುತಿಯ ನುತಿಯುತೆ |
ಕಡೆಗೆ ಮಾನವರಾಂಪ ಕಷ್ಟವಕುರಿತು ಸಾರುವಳು ||೮||

ಜಗದೆ ಕೋರುವ ಜೀವಕೋಟಿಗೆ |
ಳಗಣಿತ ಕೋಡುಗಳಂ ತುಂಬಿಹ |
ಬಗೆಯನೊಳ್ಗಳು ಕಾಣಮುಳಿವಳು ಚಿತ್ರವಸ್ತುಗಳ ||
ಬಗೆಯೊಳೇ ಕಲುಷಂಗಳಡಿದರೆ |
ಬಗೆಬಗೆಯಿಂದೆ ತೋರುತಿಹುದದ |
ಬಗೆಪೊಡಾಕೆಯ ನಿಲಯವದು ಶೋಕಮಯವಾಗಿಹುದು ||೯||

ಅವಳ ನೆರೆಯೊಳು ಪೋಗದಾಕೆಯು |
ಜವದೆ ಬಿಡುವಾಸುಯಿಯು ಸೋಂಕಲು |
ಬುವಿಯೊಳಗೆ ಸೋಂಕುರೋಗದ ಪರಿಪರಿಯಮಿಸುತ್ತಲಿ ||
ಅವಿರತಂ ಶೋಭಿಸುತ್ತಲಿಹ ಮಾ |
ನವನ ಜೀವಿತವೆಂಬ ತೋಟದೆ |
ನವಭಿಲಾಷೆಗಳೆಂಬ ಫಲಗಳು ನಶಿಸಿಪೋಗುವುವು ||೧೦||

ಸಂತಸದ ಗೃಹಮುಳಿವ ಕಾಲದೆ |
ಪಿಂತೆನೋಡಿದ ದುಃಖಗೃಹವಂ |
ಚಿಂತಿಸದದರ ಮೇರೆಯುಳಿಯುತೆ ಮಧ್ಯಮಾರ್ಗವನು ||
ಅಂತೆಪಿಡುತಕೆ ಜಾಗ್ರತೆಯಾಂತಿರು |
ವಂತೆ ನಡೆಯುತೆ ಶಾಂತವನಿತೆಯು ||
ಸಂತವಾಸಿಪಲ ತಾಗ್ರಹವಂ ಜವದೆಸಾರುವುದು ||೧೧||

ಅವಳಗೇಹದೆ ಸುಖವುತೋರಿಪು |
ದವಳಸನಿಹದೆ ತೃಪ್ತಿಯಾಂಪುದು |
ಮೃವಳುವಮಾನವಜೀವನವಾನದೆ ನಿತ್ಯ ಬೀರುತಿಹ ||
ಅವಿರತದ ಸುಖದುಃಖಗಳ ವಾ |
ರವನು ಸಮದೃಷ್ಟಿಯೊಳೆ ಪದಪಿಂ |
ದೆಮೆಯನಿಕ್ಕದೆ ನೋಡುತಿರ್ಪಳು ಪದಯದೊಳು ||೧೨||

ಇದರ ತತ್ವವನರಿತುಕೊಳ್ಳದೆ |
ಮದದೆ ಗರ್ವಿಸಿ ದುಷ್ಕೃತ್ಯವ |
ಮುದದಿ ಗೈದೊಡೆ ದಂದುಗಕೆ ಸಿಲುಕಿಕೋಟಲೆದು ||
ವಿಧವಿಧಳನುಭವಿಸಿ ಸೌಖ್ಯದ |
ಹದನಮುಳಿವುತೆ ಹೇಯಮಾರ್ಗದೊಳಿಹುದೆ ಮಾನವನೆ! ||೧೩||

ಬೊಂಬಾಯಿಗೆ ಮಹಾತ್ಮರ ಆಗಮನ ಮತ್ತು ಹಿಂದೂಪತ್ರಿಕಾಪ್ರತಿನಿಧಿಯೊಡನೆ ಸಂಭಾಷಣೆ.

ಈ ತಿಂಗಳು 16ನೆಯ ತಾರೀಖಿನ ದಿವಸ ಮಹಾತ್ಮ ಗಾಂಧಿಯವರು ಪತ್ನೀ ಸಮೇತರಾಗಿ ಬೊಂಬಾಯಿಯ ಉಪನಗರವಾದ ದಾದರ್ ಸ್ಟೇಷನ್ನಿನಲ್ಲಿ ಬಂದಿಳಿದರು. ಇವರಿಗೆ ಸುಸ್ವಾಗತವನ್ನು ಬಯಸುವುದಕ್ಕಾಗಿ ಮಿ|| ಕೆ. ಎಫ್. ನಾರಿಮನ್, ಮಿ|| ಮಥುರಾದಾಸ್ ತ್ರಿಕಂದಾಸ್ ಮೊದಲಾದವರು ಹಾಜರಿದ್ದರು. ಮಹಾತ್ಮ ಗಾಂಧಿಯವರು ಹಿಂದೂಪತ್ರಿಕೆಯ ಪ್ರತಿನಿಧಿಯ ಸಂಗಡ ಈ ಕೆಳಗೆ ಕಂಡಂತೆ ಸಂಭಾಷಣೆ ಮಾಡಿದರು.

ಪ್ರತಿನಿಧಿ—ಗುಜರಾಥಿನಲ್ಲಿ ಉಂಟಾಗಿರುವ ತೊಂದರೆಯನ್ನು ನೋಡಿದರೆ ಸರ್ಕಾರದವರು ಒಪ್ಪಂದ ಷರತ್ತುಗಳನ್ನು ತೃಪ್ತಿಕರವಾಗಿ ನಡೆಯಿಸುವರೆಂದು ನಿಮಗೆ ಖಾತ್ರಿಯಾಗಿದೆಯೇ?

ಗಾಂಧಿಜಿ—ಹುಸಿನಗೆ ನಗುತ್ತಾ ನನಗೆ ಆ ಪ್ರಶ್ನೆಯನ್ನು ಹಾಕಬೇಡಿರಿ. ಕೆಲವು ದಿವಸಗಳಲ್ಲಿ ಎಲ್ಲವೂ ಸರಿಯಾಗುತ್ತವೆ.

ಪ್ರತಿನಿಧಿ—ಬೊಂಬಾಯಿಯಲ್ಲಿ ಇತ್ತೀಚೆಗೆ ಪ್ರೊ॥ ಶಾಲಿಯವರು ಮಾಡಿದ ಭಾಷಣವನ್ನು ಓದಿದಿರಾ?

ಗಾಂಧಿಜಿ—ದೊಡ್ಡ ಸಹೋದರನಿಗೆ ಸಮಾಧಾನವಾಗಬೇಕಾದರೆ ಇನ್ನೂ ಸ್ವಲ್ಪಕಾಲ ಹೋಗಬೇಕು.

ಪ್ರತಿನಿಧಿ—ಹಿಂದೂ ಮಹಮ್ಮದೀಯರ ಸಮಸ್ಯೆಯು ತೃಪ್ತಿಕರವಾಗಿ ತೀರ್ಮಾನವಾಗುವುದರಲ್ಲಿ ನಿಮಗೇನಾದರೂ ನಿರಾಶೆಯಿದೆಯೇ?

ಗಾಂಧಿಜಿ—ನನಗೆ ಯಾವ ವಿಷಯದಲ್ಲಿಯೂ ನಿರಾಶೆಯಿರುವುದಿಲ್ಲ.

ಪ್ರತಿನಿಧಿ—ನಮ್ಮ ದೇಶದಲ್ಲಿರುವ ವಿದೇಶಿ ವಸ್ತ್ರಗಳನ್ನು ಪರದೇಶಗಳಿಗೆ ಸಾಗಿಸುವ ವಿಷಯದಲ್ಲಿ ಲಂಡನ್ ಪಾರ್ಲಿಮೆಂಟಿನಲ್ಲಿ ಇದು ಒಪ್ಪಂದಕ್ಕೆ ವಿರೋಧವಾಗಿದೆಯೆಂದು ಚರ್ಚೆ ನಡೆಯುತ್ತಿರುವುದು. ಈ ರೀತಿ ಮಾಡುವುದು ಒಪ್ಪಂದಕ್ಕೆ ವಿರೋಧವಾಗುವುದೆ?

ಗಾಂಧಿಜಿ—ಇದು ಒಪ್ಪಂದಕ್ಕೆ ವಿರೋಧವಾದುದಲ್ಲ. ಹಾಗೆ ಯೋಚಿಸಲು ಯಾವ ಕಾರಣವೂ ಇರುವುದಿಲ್ಲ.

ಪ್ರತಿನಿಧಿ—ಸೋಲಾಪುರದಲ್ಲಿ ಮಿಲಿಟರಿ ಕಾಯಿದೆಯಿಂದ ಶಿಕ್ಷಿಸಲ್ಪಟ್ಟ ಕೈದಿಗಳನ್ನು ಸರ್ಕಾರದವರು ಬಿಡಬೇಕೆಂದು ನಿರ್ಧರಿಸಿರುವರು.

ಗಾಂಧಿಜಿ—ಬಹಳ ಸಂತೋಷ! ಸರಕಾರದವರು ಏನೋ ಸ್ವಲ್ಪ ಮಾಡಿದಂತಾಯಿತು.

ಈ ಸಂಭಾಷಣೆಯು ಪೂರೈಸಿದನಂತರ ಮಹಾತ್ಮರು ದಾದರ್ ಸ್ಟೇಷನ್ನಿನಿಂದ ಒಂದು ಮೈಲಿಯವರೆಗೂ ನಡೆದುಕೊಂಡು ಹೋಗಿ ಅನಂತರ ಅಲ್ಲಿ ಸಿದ್ಧವಾಗಿದ್ದ ಮೋಟಾರ್‌ಕಾರಿನಲ್ಲಿ ಕುಳಿತುಕೊಂಡು ಪುರಪ್ರವೇಶ ಮಾಡಿದರು. ಈ ದೇಶದಲ್ಲಿರುವ ವಿದೇಶಿಬಟ್ಟೆಗಳನ್ನು ಅನ್ಯದೇಶಗಳಿಗೆ ಸಾಗಿಸುವ ವಿಷಯವನ್ನು ಕುರಿತು ಬೊಂಬಾಯಿ ಮತ್ತು ಅಹಮ್ಮದಾಬಾದ್ ಮಿಲ್ ಮಾಲೀಕರೊಂದಿಗೆ ಮಾತನಾಡಿದರು. ಅನಂತರ ಮಧ್ಯಾಹ್ನ 3 ಗಂಟೆಗೆ ಗೌರ್ನರ ಬಂಗಲೆಗೆ ಹೋಗಿ ವೈಸರಾಯರಸಂಗಡ 50 ನಿಮಿಷಗಳವರೆಗೂ ಮಾತನಾಡಿದರು.

ಹಿಂಸಾಧರ್ಮ.

ಮಹಾತ್ಮಾ ಗಾಂಧಿಯವರು ತಮ್ಮ ತರುಣಭಾರತವೆಂಬ ಪತ್ರಿಕೆಯಲ್ಲಿ ಬರೆಯುವದೇನೆಂದರೆ:—

ಆಗಾಗ್ಗೆ ಅಧಿಕಾರಿಗಳನ್ನು ಕೊಲ್ಲುವುದರಿಂದ ಸ್ವರಾಜ್ಯಸಾಧನೆಗೆ ಸಹಾಯಮಾಡಿದಂತಾಗುವುದೆಂದು ಅನೇಕರು ಭಾವಿಸಿರುವುದು ಶುದ್ಧ ತಪ್ಪು. ರಾಜಕೀಯ ಕಾರಣದಿಂದಮಾಡುವ ಪ್ರತಿಯೊಂದುಕೊಲೆಯೂ ನನ್ನ ಉದ್ದೇಶಕ್ಕೆ ಭಂಗವನ್ನುಂಟುಮಾಡುತ್ತದೆ. ಮಿ|| ಪೆಡ್ಡಿಯವರ ಕೊಲೆಮಾಡಿರುವುದನ್ನೂ, ಮತ್ತು ಸೈನ್ಯಾಧಿಕಾರಿಯಾದ ಮಿ|| ಕರ್ಟಿಸ್‌ರವರ ಹೆಂಡತಿಯನ್ನು ಕೊಲೆಮಾಡಿದ ಸಜ್ಜನಸಿಂಗನನ್ನು ಸಿಕ್‌ಸಭೆಯಲ್ಲಿ ವೀರನೆಂದುಸಾರಿರುವುದನ್ನೂ ನೋಡಿದರೆ ಹಿಂಸಾಧರ್ಮಕ್ಕೆ ಅನೇಕ ಭಕ್ತರಿರುವರೆಂದು ತಿಳಿದುಬರುತ್ತದೆ. ಇತ್ತೀಚೆಗೆ ಕೊಲೆಮಾಡುವವರನ್ನು ಕೊಂಡಾಡುವುದು ಅತಿಶಯವಾಗಿದೆ. ಕಾಂಗ್ರೆಸ್ಸಿನಲ್ಲಿ ಭಗತ್‌ಸಿಂಗನನ್ನು ಕೊಂಡಾಡಿರುವ ನನ್ನ ಅಭಿಪ್ರಾಯವು ಸ್ಪಷ್ಟವಾಗಿದೆ. ಅತನ ಕೃತಿಯನ್ನು ಖಂಡಿಸಿ ಧೈರ್ಯವನ್ನೂ, ಸ್ವಾರ್ಥತ್ಯಾಗವನ್ನೂ ಕೊಂಡಾಡಿದೆನು. ಈ ಕರಾಚಿ ಕಾಂಗ್ರೆಸ್ಸಿನ ತೀರ್ಮಾನದ ಪರಿಣಾಮವು ವಿಪರೀತವಾದಂತೆ ಕಾಣುತ್ತದೆ. ಈ ತೀರ್ಮಾನದಿಂದ ಕೊಲೆಯನ್ನು ಕೊಂಡಾಡುವುದಕ್ಕೆ ಅವಕಾಶವಾದಹಾಗೆ ತೋರುತ್ತದೆ. ಅನ್ಯದೇಶಗಳಲ್ಲಿ ರಾಜಕೀಯಕಾರಣದ ಮೇಲೆ ಮಾಡುವ ಕೊಲೆಗಳಿಂದ ಹಿತವಾಗಿರಬಹುದು. ಆದರೆ ಹಿಂದುಸ್ಥಾನದಲ್ಲಿ ಮಾತ್ರ ಇಂಥಾ ಕೊಲೆಗಳನ್ನು ಮಾಡುವುದರಿಂದ ದೇಶಕ್ಕೆ ತುಂಬಾ ಅಹಿತವಾಗುವುದು. ಮನೋವಾಕ್ಕಾಯಗಳಲ್ಲಿಯೂ ಹಿಂಸಾಮಾರ್ಗವನ್ನು ತ್ಯಜಿಸಿ ನನ್ನ ಅಹಿಂಸಾವಿಧಾನವನ್ನು ಪ್ರತ್ಯಕ್ಷಾನುಭವದಿಂದ ಪರಾಮರ್ಶಿಸಿದ್ದರೆ, ಭರತವರ್ಷವು ಈ ಹೊತ್ತಿನೊಳಗೆ ಪಾರತಂತ್ರ್ಯವನ್ನು ನೀಗುತ್ತಿತ್ತು. ಹಿಂಸಾಧರ್ಮವನ್ನು ಅಹಿಂಸಾಧರ್ಮದಲ್ಲಿ ಬೆರಕೆಮಾಡುವುದರಿಂದ, ದೇಶದದುಃಖವು ಇನ್ನೂ ಹೆಚ್ಚುವುದು. ಹಿಂಸಾಮಾರ್ಗವನ್ನನುಭವಿಸುವುದರಿಂದಲೇ ದೇಶಕ್ಕೆ ಹಿತವಾಗುವುದೆಂದು ಭಾವಿಸುವವರಿಗೆ ಸ್ಪಷ್ಟವಾಗಿ ಹೇಳುವುದೇನೆಂದರೆ:—

ನಿಮಗಿರುವಂತೆಯೇ ನನಗೂ ದೇಶಾಭಿಮಾನವು ಸಂಪೂರ್ಣವಾಗಿದೆ ಎಂದು ತಿಳಿಯಿರಿ. ನನ್ನ ಅಹಿಂಸಾವಿಧಾನದಲ್ಲಿ ಹಿಂಸಾವಿಧಾನವನ್ನು ಮಿಶ್ರಮಾಡುವುದರಿಂದ ದೇಶದದುಃಖವು ಇನ್ನೂ ಹೆಚ್ಚುವುದು. ಎಲ್ಲ ರಾಜಕೀಯಕೈದಿಗಳ ಬಿಡುಗಡೆಮಾಡಿಸಬೇಕೆಂಬ ಅಪೇಕ್ಷೆಯು ನಿಮಗಿರುವಂತೆಯೇ ನನಗೂ ಇದೆ. ನಿಮ್ಮ ಭಯಪ್ರವರ್ತಕಮಾರ್ಗದಿಂದ ರಾಜಕೀಯಕೈದಿಗಳನ್ನು ಬಿಡುಗಡೆಮಾಡಿಸುವುದು ಕಷ್ಟವಾಗುವುದೆಂಬುದನ್ನು ಸ್ಪಷ್ಟವಾಗಿ ತಿಳಿಯಿರಿ. ಸರಕಾರವು ಈಗಿರತಕ್ಕ ಸ್ಥಿತಿಯಲ್ಲಿ ಹಿಂಸಾಕೃತ್ಯವನ್ನು ಮಾಡಿರುವ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡುವುದಿಲ್ಲ. ಭಾರತೀಯಜನಾಂಗವು ಅಹಿಂಸಾಮಾರ್ಗವನ್ನನುಸರಿಸಿ ಅದರ ಪರಿಣಾಮವನ್ನು ಪ್ರತ್ಯಕ್ಷಾನುಭವದಿಂದ ತಿಳಿದುಕೊಳ್ಳಬೇಕೆಂಬ ಸಮಯದಲ್ಲಿ ಹಿಂಸಾಮಾರ್ಗವನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಬೇಡುತ್ತೇನೆ.

ಇಂಡಿಯಾದೇಶದಲ್ಲಿ ಗ್ರಾಮಗಳ ಆರೋಗ್ಯರಕ್ಷಣೆ.

ಈ ನಮ್ಮ ಇಂಡಿಯಾದೇಶವು ಕೇವಲ ವ್ಯವಸಾಯ ಪ್ರಧಾನವಾದ ದೇಶವು. ಇದರಲ್ಲಿ ದೊಡ್ಡ ನಗರಗಳಿಗಿಂತಲೂ ಗ್ರಾಮಗಳ ಸಂಖ್ಯೆಯೇ ಅಧಿಕವಾಗಿದೆ. ಬೊಂಬಾಯಿ, ಕಲ್ಕತ್ತ, ಮದರಾಸು, ಈ ಮೂರು ಪ್ರಧಾನಪಟ್ಟಣಗಳು ಹೊರತು, ಇಲ್ಲಿ ನಗರಗಳೆಂದು ಕರೆಯಲ್ಪಡಲು ಯೋಗ್ಯವಾದುವು ಬಹಳ ಸ್ವಲ್ಪವೇ ಇವೆ. ಎಂದರೆ, ಸ್ವಲ್ಪ ಹೆಚ್ಚು ಕಡಿಮೆ ಎರಡೂವರೆ ಲಕ್ಷ ಜನಸಂಖ್ಯೆಯುಳ್ಳ ನಗರಗಳು 8 ಕ್ಕಿಂತ ಹೆಚ್ಚಿಲ್ಲ. ಒಂದು ಲಕ್ಷ ಅಥವಾ ಅದಕ್ಕೆ ಸ್ವಲ್ಪ ಹೆಚ್ಚು ಜನಸಂಖ್ಯೆಯುಳ್ಳ ನಗರಗಳು 30 ಮಾತ್ರವೇ ಇವೆ. 5000 ಕ್ಕೆ ಮೇಲೆ ಒಂದು ಲಕ್ಷಕ್ಕೊಳಪಟ್ಟ ಜನಸಂಖ್ಯೆಯುಳ್ಳ ಊರುಗಳು ಸುಮಾರು 2200 ರ ವರೆಗೆ ಇರುವುವು. ಅದಕ್ಕಿಂತಲೂ ಕಡಿಮೆ ಜನಸಂಖ್ಯೆಯುಳ್ಳ ಗ್ರಾಮಗಳ ಸಂಖ್ಯೆಯಾದರೋ ಸುಮಾರು ಏಳೂವರೆ ಲಕ್ಷಕ್ಕಿಂತಲೂ ಹೆಚ್ಚಾಗಿಯೇ ಇವೆ. ಈ ಗ್ರಾಮಗಳ ಪೈಕಿ ಕೆಲವು ಐದಾರು ಗುಡಿಸಲುಗಳು ಮಾತ್ರವುಳ್ಳ ಸಣ್ಣಹಳ್ಳಿ ಅಥವಾ "ಕೊಪ್ಪಲು" ಗಳೆನಿಸಿಕೊಂಡಿವೆ. ಪ್ರಾಯಶಃವಾಗಿ ಇಂಡಿಯಾದೇಶದ ಒಟ್ಟು ಜನಸಮುದಾಯದಲ್ಲಿ, ಹೆಚ್ಚುಮಂದಿ ಇಂತಹ ಗ್ರಾಮವಾಸಿಗಳೇ ಆಗಿರುವರು. ಇವರೆಲ್ಲರೂ ಪ್ರಾಯಶಃವಾಗಿ ನಿಕೃಷ್ಟದರಿದ್ರರಾಗಿರುವರು. ಅವರಿಗೆ ಅಹನ್ಯಹನಿ ಕುಟುಂಬಭರಣವೇ ದೊಡ್ಡ ಭಾರವಾಗಿದೆ. ಹೀಗೆ ತಮ್ಮ ನಿತ್ಯಜೀವನವೇ ಬಹು ಕಷ್ಟವಾಗಿರುವಾಗಲೂ, ಅವರಿಗೆ ತಮ್ಮ ಪೂರ್ವಾಚಾರ ಸಂಪ್ರದಾಯಗಳಲ್ಲಿ ನಂಬಿಕೆಯು ಹೆಚ್ಚಾದುದರಿಂದ, ಅವರು, ತಮ್ಮ ಮತವಿಚಾರವಾಗಿಯೋ, ಸಾಮಾಜಿಕವಾಗಿಯೋ ನಡೆಯತಕ್ಕ ಹಬ್ಬ,ಹುಂದಿನ, ಅಪರಕ್ರಿಯೆ ಮುಂತಾದುವುಗಳನ್ನು ಸ್ವಲ್ಪವೂ ಲೋಪವಿಲ್ಲದೆ ನಡೆಸುವುದರಲ್ಲಿ ವೆಚ್ಚಕ್ಕೆ ಹಿಂಜರಿಯದೆ, ಹಣಗಾರರಿಂದ ಹೆಚ್ಚು ಬಡ್ಡಿಗೆ ಸಾಲ ತೆಗೆದು, ಅಲ್ಪಸ್ವಲ್ಪ ಜೀವನಕ್ಕೂ ಹಾನಿ ತಂದುಕೊಳ್ಳುವರು. ಅದರಲ್ಲಿಯೂ ಗ್ರಾಮಗಳಲ್ಲಿ, ಬಹಳ ಅನಾರೋಗ್ಯಕರಗಳಾದ ಅಶುಚಿತ್ವಪದ್ಧತಿಯಿಂದಲೂ, ರೋಗಚಿಕಿತ್ಸೆ ಮಾಡಲು ಸಮರ್ಥರಾದ ವೈದ್ಯರ ಸಹಾಯವಿಲ್ಲದುದರಿಂದಲೂ, ಬಡತನದ ಜೀವನದಿಂದಲೂ, ಮರಣಗಳು ಸಂಭವಿಸುವುದೂ ಹೆಚ್ಚು. ಈ ಅಪರಸಂಸ್ಕಾರಗಳಿಗಾಗಿ ವೆಚ್ಚಮಾಡುವುದರಲ್ಲಿ ಅವರಿಗಿರುವ ಮಹೋತ್ಸಾಹವು, ತಮ್ಮ ಗ್ರಾಮಗಳನ್ನು ಆರೋಗ್ಯವಾಗಿಟ್ಟುಕೊಳ್ಳುವುದರಲ್ಲಿ ಇರುವುದಿಲ್ಲ. ಈ ಸ್ಥಿತಿಯಲ್ಲಿದ್ದರೂ, ಗ್ರಾಮವಾಸಿಗಳಲ್ಲಿ ಅನೇಕರಿಗೆ, ನಡೆ, ನುಡಿ, ಉಡುಪು, ಆಹಾರ, ವ್ಯವಹಾರ ಮುಂತಾದುವುಗಳಲ್ಲೆಲ್ಲ ಪಟ್ಟಣದವರಂತೆಯೇ ತಾವೂ ಇರಬೇಕೆಂಬ ಆಸೆಯು ಮಾತ್ರ ಹೆಚ್ಚುತ್ತಿದೆ. ತಮಗಿರತಕ್ಕ ಸ್ವಲ್ಪ ವರಮಾನದಲ್ಲಿ, ಭಾಗ್ಯವಂತರನ್ನು ಅನುಸರಿಸುವುದಕ್ಕೆ ಪ್ರಯತ್ನಿಸಿ, ಉಭಯಭ್ರಷ್ಟರಾಗುವರು. ಇವರು ಆಗಾಗ ಪಟ್ಟಣಗಳನ್ನು ನೋಡುವ ಸಂಭವದಿಂದ, ಅವರ ಉಡುಪು, ಅವರ ನಡೆ, ಅವರ ಆಹಾರ ವ್ಯವಹಾರಗಳೊಳಗೆಲ್ಲ ಇವರಿಗೂ ಆಸೆಹುಟ್ಟಲು ಕಾರಣವಾಗಿದೆ. ಗ್ರಾಮಸ್ಥರು ಸ್ವಲ್ಪಮಟ್ಟಿಗೆ ತಿಳಿವಳಿಕೆಯುಳ್ಳವರಾಗಿದ್ದು, ಆರೋಗ್ಯನಿಯಮದಂತೆ ನಡೆದುಕೊಳ್ಳಲು ತಕ್ಕಷ್ಟು ಮನೋಬಲವುಳ್ಳವರಾಗಿದ್ದರೆ, ಮಲೇರಿಯಾ ಎಂಬ ಜ್ವರ, ಕೊಕ್ಕೆಹುಳದ ರೋಗ, ಮುಂತಾದ ವ್ಯಾಧಿಗಳನ್ನು ಸುಲಭವಾಗಿ ನಿವಾರಿಸಿಕೊಳ್ಳಬಹುದು. ಅಜ್ಞತೆಯಮೂಲಕವಾಗಿಯೇ ಬರುವ ಮೇಲ್ಕಂಡ ವ್ಯಾಧಿಗಳು, ಹಳ್ಳಿಯ ಜನಗಳಲ್ಲಿ ಹೆಚ್ಚಾಗಿ ವ್ಯಾಪಿಸಿ, ಅವರ ಕಾರ್ಯಸಾಮರ್ಥ್ಯವನ್ನೂ, ಚಟುವಟಿಕೆಯನ್ನೂ ತಗ್ಗಿಸಿ, ಅವರಿಗೆ ಅವರ ವೃತ್ತಿಯಲ್ಲಿ ಸರಿಯಾದ ಉತ್ಪತ್ತಿಯೂ ಇಲ್ಲದಂತಾಗಲು ಕಾರಣವಾಗಿವೆ.

ಹೀಗೆ ಕುಲವೃತ್ತಿಯಲ್ಲಿ ಅಭಿರುಚಿಯು ತಪ್ಪುವುದರಿಂದಲೇ, ಅನೇಕ ವ್ಯವಸಾಯಗಾರರು ಬೇರೆ ಜೀವನೋಪಾಯಕ್ಕಾಗಿ ಪಟ್ಟಣಪ್ರಾಂತ್ಯಗಳಿಗೆ ಬಂದು ಸೇರುವರು. ಹೀಗಾದುದರಿಂದಲೇ ಇದುವರೆಗೆ, ಅನೇಕ ಗ್ರಾಮಗಳ ಹೆಸರೇ ಮರೆತುಹೋಗುವಂತಾಗಿ, ಆ ಊರಿದ್ದ ಸ್ಥಳಗಳಲ್ಲಿ ಒಂದೆರಡು ಹಾಳು ಗೋಡೆಗಳು ಮಾತ್ರ ಉಳಿಯುವಂತಾಗಿದೆ. ಮೊದಮೊದಲು ಗ್ರಾಮಗಳಿಂದ ಬಂದು ಸೇರಿದವರಿಗೆ ಒಂದಿಲ್ಲದಿದ್ದರೆ ಮತ್ತೊಂದು ವಿಧದಿಂದ ಜೀವನಾರ್ಜನೆಗೆ ಅವಕಾಶವಿರುತ್ತಿತ್ತು. ಆ ಕಾರಣದಿಂದಲೇ ಈಗಲೂ ನಮ್ಮಲ್ಲಿ "ಕೆಟ್ಟು ಪಟ್ಟಣ ಸೇರು" ಎಂಬ ಗಾದೆಯು ಏರ್ಪಟ್ಟಿರುವಾಗಿದೆ. ಆದರೇನು? ಈಗಲಾದರೋ ನಗರಗಳಲ್ಲಿಯೂ ಜೀವನೋಪಾಯವಿಲ್ಲದ ಕಷ್ಟಗಳು ಜನರಿಗೆ ದಿನದಿನಕ್ಕೆ ಹೆಚ್ಚುತ್ತಾ ಬಂದು, ಗ್ರಾಮಗಳನ್ನು ಬಿಟ್ಟು ಪಟ್ಟಣಕ್ಕೆ ಹೋದವರೆಲ್ಲರೂ ತಮ್ಮ ತಮ್ಮ ಹಳ್ಳಿಗೆ ತಿರುಗಿ ಬರುವ ಕಾಲವು ಬಂದಿದೆ. ಇಂತಹ ಸ್ಥಿತಿಯು ನಮ್ಮ ದೇಶಕ್ಕೆ ಬಂದುದೇಕೆ? ಪಾಶ್ಚಾತ್ಯರ ನಾಗರಿಕತೆಯು ಇಲ್ಲಿ ಹರಡುತ್ತಿರುವುದೇ ಇದಕ್ಕೆ ಮುಖ್ಯ ಕಾರಣವೆನಬಹುದು.

ಪೂರ್ವಕಾಲದಲ್ಲಿ ನಮ್ಮ ಗ್ರಾಮಗಳ ಸ್ಥಿತಿಯೇ ಬೇರೆ ವಿಧವಾಗಿದ್ದಿತು. ಆಗಿನ ಗ್ರಾಮಸ್ಥರಿಗೆ ಜೀವನೋಪಾಯವು ಈಗಿನಂತೆ ಕಷ್ಟತರವಾಗಿರಲಿಲ್ಲ. ಆದರೆ, ಸಕಾಲಕ್ಕೆ ಮಳೆಯಿಲ್ಲದಂತಾಗಿ ಬೆಳೆಗಳು ಕೆಟ್ಟುಹೋಗುವುದರಿಂದಲೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ದವಸಧಾನ್ಯಗಳನ್ನು ಸಾಗಿಸಲು ಈಗಿನಂತೆ ಸೌಕರ್ಯಗಳಿಲ್ಲದುದರಿಂದಲೂ, ಅಲ್ಲಲ್ಲಿ ಎಂದಾದರೂ ಒಮ್ಮೊಮ್ಮೆ ಕ್ಷಾಮಬಾಧೆಯು ಕಾಣಿಸುತ್ತಿದ್ದುದುಂಟು. ಈಗೀಗ ಕ್ಷಾಮವೆಂಬ ಹೆಸರೇ ಜನಗಳಿಗೆ ಮರೆತುಹೋಗುವ ಸ್ಥಿತಿಯಲ್ಲಿದ್ದೂ, ಆಗಿನ ಕ್ಷಾಮಕಾಲದ ಬೆಲೆಗೆ ಈಗ ಧಾನ್ಯಗಳು ಮಾರುತ್ತಿವೆ. ಬಡತನದಲ್ಲಿರುವ ಗ್ರಾಮವಾಸಿಗಳಲ್ಲಿ ಕೆಲವರ ಜೀವನವು ಒಪ್ಪತ್ತಿನ ಊಟಕ್ಕೂ ಸಾಲದ ಸ್ಥಿತಿಯಲ್ಲಿದೆ. ರೈತವಾರೀ ಜನಗಳಲ್ಲಿ ಮೈಮುರಿದು ಕೆಲಸಮಾಡಿ ಒಳ್ಳೇ ಫಲವನ್ನು ಪಡೆಯುವುದಕ್ಕೆ ತಕ್ಕಷ್ಟು ದೇಹಬಲವಿಲ್ಲದಿರುವುದಕ್ಕೆ ಇದೊಂದೇ ಕಾರಣವು ಸಾಕಾಗಿದೆ. ಇದರ ಮೇಲೆ ಗ್ರಾಮಗಳಲ್ಲಿ ಜನಗಳ ಬಡತನದಿಂದ ಸುತ್ತುಮುತ್ತಿನ ಆರೋಗ್ಯರಕ್ಷಣೆಗೂ ಅನುಕೂಲಗಳು ಕಡಿಮೆ. ಪೂರ್ವಕಾಲದಲ್ಲಿ ಗ್ರಾಮಸ್ಥರು ತಮ್ಮೊಳಗೆ ತಾವು ಏಕಮತ್ಯದಿಂದ ಸೇರಿ ತಮ್ಮ ಗ್ರಾಮಕ್ಕೆ ಬೇಕಾದ ಸೌಕರ್ಯಗಳನ್ನು ತಾವಾಗಿಯೇ ಕಲ್ಪಿಸಿಕೊಳ್ಳುತ್ತಿದ್ದರು. ಈಗಿನಂತೆ ಯೂನಿಯನ್ ಮುನಿಸಿಪಾಲಿಟಿ, ಮುಂತಾದ ಹೆಸರುಗಳಿಲ್ಲದಂತೆಯೇ ಅವರು ತಮ್ಮೊಳಗಿನ ಏಕೀಭಾವದಿಂದ ಸ್ವರಾಜ್ಯಸುಖವನ್ನು ಅನುಭವಿಸುತ್ತಿದ್ದರು. ರಕ್ತಪಾತವಾಗುವಂತೆ ರಾಜರುಗಳಲ್ಲಿ ಅನ್ಯೋನ್ಯವಾಗಿ ಘೋರಯುದ್ಧಗಳು ನಡೆದಮೇಲೆಯೂ, ಅದರ ದುಷ್ಪರಿಣಾಮದಿಂದ ಗ್ರಾಮಗಳಿಗೇನೂ ಕಷ್ಟಗಳು ತೋರುತ್ತಿರಲಿಲ್ಲ. ಮತ್ತು ಪೂರ್ವಕಾಲದ ಗ್ರಾಮವಾಸಿಗಳು ಹೆಚ್ಚುವೆಚ್ಚವಿಲ್ಲದೆ ಒರಟುಮಾರ್ಗದಿಂದಲೇ ತಮ್ಮ ಗ್ರಾಮದ ಶುಚಿತ್ವವನ್ನೂ ಆರೋಗ್ಯವನ್ನೂ ಕಾಪಾಡಿಕೊಳ್ಳುತ್ತಿದ್ದರು. ಪೂರ್ವಾಚಾರಗಳಲ್ಲಿ ತಮಗಿರತಕ್ಕ ಒಂದು ಮೂಢವಿಶ್ವಾಸದಿಂದಲಾದರೂ, ಅನೇಕರು ಅಶುಚಿತ್ವಕ್ಕೆ ಎಡೆಗೊಡದೆ, ಶುದ್ಧಪ್ರವರ್ತನೆಯುಳ್ಳವರಾಗಿದ್ದರು.

ಗ್ರಾಮಶುದ್ಧೀಕರಣ ಕ್ರಮ—ಪೂರ್ವಕಾಲದಲ್ಲಿ ಬೀದಿಗಳನ್ನು ಶುದ್ಧಿಗೊಳಿಸುವುದಕ್ಕಾಗಿ ಈಗಿನಂತೆ ದಿನದಿನಕ್ಕೆ ಹೊಸಕರಗಳನ್ನು ಹೆಚ್ಚಿಸಬೇಕಾದ ಸಂಭವವಿರಲಿಲ್ಲ. ಗ್ರಾಮಗಳಲ್ಲಿ ಪ್ರತಿ ಮನೆಯವರೂ, ತಮ್ಮ ಮನೆಯ ಮುಂಭಾಗವನ್ನು ಚೆನ್ನಾಗಿ ಗುಡಿಸಿ, ಸಾರಿಸಿ, ರಂಗೋಲೆಗಳಿಂದ ಅಲಂಕರಿಸಿ, ಶುದ್ಧವಾಗಿಟ್ಟುಕೊಳ್ಳುವುದು ತಮ್ಮ ಮುಖ್ಯ ಕರ್ತವ್ಯವೆಂದು ಭಾವಿಸಿದ್ದರು. ಈ ಶುದ್ಧೀಕರಣವನ್ನು ದಿನಕ್ಕೆರಡುಸಾರಿ ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ತಪ್ಪದೆ ನಡೆಸುತ್ತಿದ್ದರು. ತಮ್ಮ ತಮ್ಮ ಮನೆಯ ಮುಂಭಾಗವನ್ನು ಚೊಕ್ಕಟವಾಗಿಟ್ಟುಕೊಳ್ಳ

[6ನೆಯ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ನಾಲ್ಕುವರ್ಷಗಳಾಗಿ ಐದನೆಯ ವರ್ಷವು ಪ್ರಾರಂಭವಾಗುವುದು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವುದು.(ಅಲ್ಲದೆ ಈಗ ಪೋಸ್ಟಿನ ಹೊಸ ರೂಲ್ಸಿನ ಪ್ರಕಾರ ವಿ. ಪಿ. ಗಳನ್ನು 3 ದಿವಸ ಮಾತ್ರ ಇಡುವರು. ಇದರಿಂದಂತೂ ಎಲ್ಲರಿಗೂ ತೊಂದರೆಯಾಗುವದು.) ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ.—

ಪಂಚಾಚಾರ್ಯ ಪ್ರಭಾ.

೧೯೩೧ ನೇ ಏಪ್ರಿಲ್ ತಾ|| ೨೦ ನೆಯ ಸೋಮವಾರ.

ಚತುರ್ಥವರ್ಷದ ಸಮಾಪ್ತಿ.

ಭಾರತೀಯರಿಗೆ ಅತ್ಯಂತ ಮಾನ್ಯಗಳಾಗಿರುವ ಅರವತ್ತು ಸಂವತ್ಸರಗಳಲ್ಲಿ ಮೊದಲನೆಯದಾಗಿ ಶ್ರೇಷ್ಠವೆನಿಸಿಕೊಂಡಿರುವ ಪ್ರಭವಸಂವತ್ಸರದ ವೈಶಾಖ ಶುದ್ಧ ೫ ಶುಭದಿವಸದಲ್ಲಿ ಪ್ರಾಪ್ತವಾಗುವ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವದ ದಿವಸ ವೀರಶೈವಮತೋದ್ಧಾರಕ್ಕಾಗಿ ಅವತಾರವೆತ್ತಿದ ಪಂಚಾಚಾರ್ಯಪ್ರಭಾ ನಾಮಕವಾದೀ ಪತ್ರಿಕೆಗೆ ಈ ಪ್ರಜೋತ್ಪತ್ತಿನಾಮಸಂವತ್ಸರದ ವೈಶಾಖಶುದ್ಧ ಪಂಚಮಿಗೆ ನಾಲ್ಕುವರ್ಷಗಳು ತುಂಬಿ ಐದನೆಯ ವರ್ಷವು ಪ್ರಾಪ್ತವಾಗುವುದು. ಲೋಕಮಾನ್ಯವಾದೀ ಪತ್ರಿಕೆಯು ತಾನು ಜನ್ಮವೆತ್ತಿದಂದೀಚೆಗೆ ನಾಲ್ಕು ವರ್ಷಗಳಲ್ಲಿ ನಾನಾ ರೀತಿಯಿಂದ ಮತಸುಧಾರಣಾಕಾರ್ಯವನ್ನು ಮಾಡಿತು. ತಾನು ಧರಿಸಿಕೊಂಡಿರುವ ನಾಮಕ್ಕನುಸಾರವಾಗಿ ಪಂಚಾಚಾರ್ಯರ ಪ್ರಭೆಯು ದಶದಿಕ್ಕುಗಳಲ್ಲಿ ಹರಡುವಂತೆ ಮಾಡಿತು. ಅತ್ಯದ್ಭುತ ಮಹಿಮಾತಿಶಯಗಳಿಂದೊಡಗೂಡಿದ ಆಚಾರ್ಯಭಗವತ್ಪಾದರ ಲೀಲೆಗಳನ್ನು ನಿರಂತರದಲ್ಲಿಯೂ ಪ್ರಕಾಶಪಡಿಸುತ್ತ ಸಕಲ ಜನಾಂಗದವರನ್ನು ಆಚಾರ್ಯರ ವಿಷಯದಲ್ಲಿ ನಿರತಿಶಯಭಕ್ತಿಯುಳ್ಳವರನ್ನಾಗಿ ಮಾಡಿತು. ಪ್ರತಿಯೊಬ್ಬರ ಹೃದಯಭೂಮಿಯಲ್ಲಿ ಗುರುಭಕ್ತಿಬೀಜವನ್ನು ಬಿತ್ತಿ ಅಂಕುರಿಸಿ ಪಲ್ಲವಿಸಿ ಫಲಿಸುವಂತೆ ಮಾಡಿತು. ಪರಮತೀಯರಲ್ಲಿದ್ದ ಮೋಹಗ್ರಂಥಿಯನ್ನು ಸಡಿಲಿಸಿ ಆಚಾರ್ಯರ ನಿಜಸ್ವರೂಪವನ್ನು ಪ್ರಕಾಶಗೊಳಿಸಿತು. ಎಂದೂ ಕೇಳದ ಮತ್ತು ನೋಡದ ವೀರಶೈವಮತದ ಉದಾತ್ತತತ್ವಗಳನ್ನು ಬೀರಿ ಸರ್ವರನ್ನು ಆನಂದತುಂದಿಲಹೃದಯರನ್ನಾಗಿ ಮಾಡಿತು. ಈ ರೀತಿಯಾಗಿ ಈ ಪತ್ರಿಕೆಯು ಧರ್ಮೋದ್ಧಾರ ಕಾರ್ಯವನ್ನು ಮಾಡುತ್ತಿರುವುದರಿಂದ ಸತ್ಪುರುಷರ ಪರಮಪ್ರೇಮಕ್ಕೆ ಪಾತ್ರವಾಯಿತು. ಭರತಖಂಡದಲ್ಲಿರುವ ಅನೇಕಜನ ಗುರುಭಕ್ತರು ಈ ಪತ್ರಿಕೆಯು ಕೈಕೊಂಡಿರುವ ಮಹೋದ್ಧಾರ ಕಾರ್ಯವನ್ನು ಕಂಡು ಇದರ ಅಭಿವೃದ್ಧಿಯ ವಿಷಯದಲ್ಲಿ ತ್ರಿಕರಣಪೂರ್ವಕವಾಗಿ ಕೆಲಸವನ್ನು ಮಾಡುತ್ತಿರುವರು. ಈ ಗುರುಭಕ್ತರು ಈ ಪತ್ರಿಕೆಯ ಮೇಲಿರತಕ್ಕ ಅಸಾಧಾರಣ ವಿಶ್ವಾಸದಿಂದ ಲಿಂಗಧಾರಣ, ದೀಕ್ಷಾ, ವಿವಾಹ, ಗಣಾರಾಧನ ಮೊದಲಾದ ಶುಭಕಾರ್ಯಗಳಲ್ಲಿ ಪ್ರಭಾಪೋಷಣಕ್ಕೋಸ್ಕರ ತಮ್ಮ ತಮ್ಮ ಶಕ್ತ್ಯನುಸಾರವಾಗಿ ತ್ರಿಕರಣಶುದ್ಧಿಯಿಂದ ದ್ರವ್ಯವನ್ನು ಸಮರ್ಪಿಸಿ ಕಳುಹಿಸುತ್ತಿರುವ ವಿಷಯವು ಪ್ರತಿವಾರದಲ್ಲಿಯೂ ಪ್ರಕಟವಾಗುತ್ತಿರುವ ಸ್ವೀಕಾರದಿಂದಲೇ ವೇದ್ಯವಾಗುವುದು.

ಗುರುಭಕ್ತಮಹಾಶಯರಿಂದ ಸಮರ್ಪಿಸಲ್ಪಟ್ಟ ಈ ವರ್ಷದ ಸ್ವೀಕಾರದ್ರವ್ಯವು **1059-2-0** ರೂ. ಆಗಿರುವುದು. ಇದರ ಮೇಲಿಂದ ನೋಡುತ್ತಿರಲಿಕ್ಕಾಗಿ ಈ ಪತ್ರಿಕೆಯ ವಿಷಯದಲ್ಲಿ ಜನರ ಪ್ರೇಮಬುದ್ಧಿಯು ಎಷ್ಟರಮಟ್ಟಿಗಿರಬಹುದೆಂಬುದು ವಾಚಕರಿಗೆ ವೇದ್ಯವಾಗದಿರದು. ಗುರುಭಕ್ತಿಸಂಪನ್ನಮಹೋದಯರು ಈ ಪತ್ರಿಕೆಯ ವಿಷಯದಲ್ಲಿ ಈವರೆಗಿದ್ದ ಪ್ರೇಮಕ್ಕಿಂತಲೂ ಇಮ್ಮಡಿಯಾದ ಪ್ರೇಮವನ್ನಿಟ್ಟು ಸರ್ವತೋಮುಖವಾಗಿ ಇದರ ಅಭಿವೃದ್ಧಿಯಾಗುವ ಕಾರ್ಯವನ್ನು ಕೈಕೊಳ್ಳಬೇಕೆಂದು ಆಶಿಸುತ್ತೇವೆ. ಈ ಪತ್ರಿಕೆಯ ಮುಖ್ಯೋದ್ದೇಶವು ಆಚಾರ್ಯರ ಮೂಲಧರ್ಮಗಳನ್ನು ಪ್ರಕಾಶಿಸುತ್ತಿರಬೇಕೆಂಬುದಾಗಿರುತ್ತದೆ. ಆದುದರಿಂದ ಪ್ರಾಚೀನವೈದಿಕಧರ್ಮಾವಲಂಬಿಗಳಾದ ಯಾವತ್ತು ಗುರುಭಕ್ತರು ಈ ಪತ್ರಿಕೆಯ ಉದಾತ್ತತತ್ವದ ಕಡೆಗೆ ದೃಷ್ಟಿಯನ್ನಿಟ್ಟು ಆಚಾರ್ಯಭಗವತ್ಪಾದರ ಕೃಪೆಗೆ ಪಾತ್ರರಾಗಲೆಂದೂ, ಆಚಾರ್ಯಭಗವತ್ಪಾದರು ಸದಾ ತಮ್ಮ ಸೇವೆಯಲ್ಲೇ ಕಾಲವನ್ನು ಕಳೆಯುತ್ತಿರುವ ಈ ಪತ್ರಿಕೆಗೆ ಜಯಾಶೀರ್ವಾದಗಳನ್ನು ಮಾಡಿ ಇದರ ವೈಭವವು ದಶದಿಕ್ಕುಗಳನ್ನು ವ್ಯಾಪಿಸುವಂತೆ ಮಾಡಲೆಂದೂ ಆ ಪೂಜ್ಯಪಾದರನ್ನು ಅಸಾಧಾರಣ ಭಕ್ತಿಭಾವದಿಂದ ಭಜಿಸುತ್ತೇವೆ.

ಸ್ಪೇನಿನಲ್ಲಿ ರಾಜ್ಯಕ್ರಾಂತಿ.

ಈ ತಿಂಗಳು 14 ನೆಯ ತಾರೀಖಿನ ದಿವಸ ಸ್ಪೇನ್ ದೇಶದ ರಾಜರಾದ ಆಲ್ಫಾನ್ಸೋರವರು ಅಧಿಕಾರವನ್ನು ಪರಿತ್ಯಾಗಮಾಡಿದರು. ಆಗ್ಗೆ ಮುಖ್ಯಪಟ್ಟಣವಾದ ಮೇಡ್ರಿಡ್‌ನಲ್ಲಿ ಜನರ ಆನಂದಕ್ಕೆ ಪಾರವೇ ಇರಲಿಲ್ಲ. ಜನರು ಕೆಂಪು ನಿಶಾನೆಗಳನ್ನು ಹಿಡಿದುಕೊಂಡು ರಾಜ್ಯಕ್ರಾಂತಿಯು ಸ್ಥಿರವಾಗಿರಲೆಂದು ಹಾರೈಸಿದರು. ಕ್ರಾಂತಿಪಕ್ಷದ ಮುಖಂಡರಾದ ಜಾಮೋರಾ ಎಂಬವರು ಅಧಿಕಾರಸೂತ್ರವನ್ನು ವಹಿಸಿ ದೇಶದಲ್ಲಿ ಶಾಂತಿರಕ್ಷಣೆಗೂ ಮತ್ತು ರಾಜರನ್ನು ಸುರಕ್ಷಿತವಾಗಿ ಸಾಗಹಾಕುವುದಕ್ಕೂ ಜವಾಬ್ದಾರಿಯನ್ನು ವಹಿಸಿದರು. ರಾಜರು ಮೊದಲು ತಮ್ಮ ಮಗನ ಸಲುವಾಗಿ ಅಧಿಕಾರವನ್ನು ಬಿಟ್ಟುಕೊಡುವುದಾಗಿ ಹೇಳಿದರಂತೆ! ಅನಂತರ ಕ್ರಾಂತಿಪಕ್ಷದವರು ಯಾವ ಷರತ್ತುಗಳೂ ಇಲ್ಲದೆ ಅಧಿಕಾರವನ್ನು ಬಿಟ್ಟುಬಿಡಬೇಕೆಂದು ಹೇಳಿದ್ದರಿಂದ ರಾಜರು ಹತಾಶರಾಗಿ ರಾಜ್ಯವನ್ನು ಬಿಡಲೊಪ್ಪಿದರು. ಆಲ್ಫಾನ್ಸೋರಾಜರು 15ನೆಯ ತಾರೀಖಿನ ದಿವಸ ಪ್ರಾತಃಕಾಲ ಗೊತ್ತಿಲ್ಲದಿರುವ ಯಾವುದೋ ಸ್ಥಳಕ್ಕೆ ಹೊರಟುಹೋದರು. ಆದರೆ ಕೆಲವು ಪತ್ರಿಕೆಗಳು ರಾಜರು ಪ್ಯಾರಿಸ್ ಪಟ್ಟಣಕ್ಕೆ ಯಾರಿಗೂ ತಿಳಿಯದಂತೆ ಹೋಗುವರೆಂದು ಅಭಿಪ್ರಾಯಪಡುತ್ತವೆ.

ರಕ್ತಪಾತ ಮತ್ತು ಗಲಭೆಗಳನ್ನು ತಡೆಯುವುದೇ ತಮ್ಮ ಪ್ರಥಮಕರ್ತವ್ಯವೆಂದು ಕ್ರಾಂತಿಪಕ್ಷದವರು ಸಾರಿರುವರು. ರಾಜಮನೆತನದವರು ಇಂಗ್ಲೀಷ್ ರಾಯಭಾರಿಯ ಮನೆಯಲ್ಲಿ ಇಳಿದುಕೊಳ್ಳುವರೆಂಬ ಸುದ್ದಿ ಹಬ್ಬಿತು. ಜನರು ಅದರ ನಿಷೇಧಾರ್ಥವಾಗಿ ಮೆರವಣಿಗೆ ಹೊರಟರು. ಆಗ ಕೆಲವು ಪೋಲೀಸರು ಜನರ ಮೇಲೆ ಗುಂಡುಹಾರಿಸಿದರು. ಅನೇಕರಿಗೆ ತುಂಬಾ ಗಾಯಗಳಾದುವು. ಜನಸಂದಣಿಯು ಗಾಬರಿಪಟ್ಟು ಚದುರಿಹೋಯಿತು. ಅನಂತರ ಜಾಮೋರಾ ಎಂಬವರು ಕ್ರಾಂತಿಪ್ರಭುತ್ವದ ಅಧ್ಯಕ್ಷರೆಂದು ಸಾರಲ್ಪಟ್ಟರು.

ರಾಣಿಯವರಿಗೂ ರಾಜಕುಟುಂಬದವರಿಗೂ ಏನಾದರೂ ಅಪಾಯವಾದೀತೆಂದು ಕ್ರಾಂತಿಪ್ರಭುತ್ವದವರು ಅರಮನೆಯ ಸುತ್ತಲೂ ಬಲವಾದ ಪೋಲೀಸು ಉಸ್ತುವಾರಿ ಇಟ್ಟಿದ್ದರು.

ಜಾಮೋರಾರವರು ಈಮೊದಲು ಎರಡು ಸಲ ಸಚಿವರಾಗಿದ್ದರು. ಇತ್ತೀಚೆಗೆ ಇವರು ಕ್ರಾಂತಿಪಕ್ಷಕ್ಕೆ ಸೇರಿದರು. ಇವರು ಆ ಪಕ್ಷಕ್ಕೆ ಸೇರಿದಮೇಲೆ ಅದಕ್ಕೆ ತುಂಬಾ ಶಕ್ತಿಬಂದಿತು. ಕಳೆದ ಡಿಶಂಬರ್ ತಿಂಗಳಲ್ಲಿ ಉಂಟಾದ ದಂಗೆಗೆ ಇವರೇ ಮುಖಂಡರು. ಅನಂತರ ಇವರು ಜೈಲಿಗೆ ಹೋದರು. ಅವರು ಅಲ್ಲಿ ಇದ್ದರೂ ಕ್ರಾಂತಿಪಕ್ಷಕ್ಕೆ ಜೀವವಾಗಿದ್ದು ಆಗಾಗ್ಯೆ ತಕ್ಕ ಸಲಹೆಗಳನ್ನು ಕೊಡುತ್ತಿದ್ದರು. ಸ್ಪೇನಿನ ಅಸಾಧಾರಣ ವಾಗ್ಮಿಗಳಲ್ಲಿ ಇವರೇ ಮೊದಲನೆಯವರು.

ರಿಪಬ್ಲಿಕ್ ಪ್ರಭುತ್ವವನ್ನು ಸ್ಥಾಪಿಸಿದಕೊಡಲೇ ಎಲ್ಲ ರಾಜಕೀಯ ಖೈದಿಗಳನ್ನೂ ಬಿಡುಗಡೆ ಮಾಡಿದರು. ಅನಂತರ ದೇಶದಿಂದ ಗಡೀಪಾರು ಮಾಡಲ್ಪಟ್ಟಿದ್ದ ಎಲ್ಲ ರಾಜಕೀಯ ಖೈದಿಗಳೂ ಹಿಂದಿರುಗಲು ಪ್ರಾರಂಭಿಸಿರುವರು. ಸಂಗ್ರಾಮಸಚಿವರು ತಮ್ಮ ಆಫೀಸು ಮುದ್ರೆಗಳನ್ನು ಕೊಡುವುದಿಲ್ಲವೆಂದು ಹೇಳಿದ್ದರಿಂದ ಅವರನ್ನು ದಸ್ತಗಿರಿ ಮಾಡಬೇಕೆಂದು ಅಪ್ಪಣೆಯಾಗಿದೆ.

ಆಲ್ಫಾನ್ಸೋ ರಾಜರು ಅರಮನೆ ಬಿಟ್ಟು ಹೊರಡುವಾಗ ತಮ್ಮ ಪರಿವಾರವನ್ನು ಕುರಿತು, “ನಾನು ಯಾವತಪ್ಪನ್ನೂ ಮಾಡಿಲ್ಲ, ನನ್ನ ಸದಸದ್ವಿವೇಕವು ಸ್ವಚ್ಛವಾಗಿದೆ” ಎಂದು ಹೇಳಿ ಸುಮ್ಮನಾದರು. ಇನ್ನೂ ಹೇಳಬೇಕೆಂದಿದ್ದರು. ಆದರೆ ದುಃಖಾತಿಶಯದಿಂದ ಅವರ ಮುಖದಿಂದ ಶಬ್ದಗಳೇ ಹೊರಬೀಳಲಿಲ್ಲ. ಅವರನ್ನು ಹಿಂಬಾಲಿಸಿ ೬ ಮೋಟಾರುಗಳು ಹೊರಟವು. ಅವರು ಹೊರಟಾಗ ಅವರ ಪರಿವಾರದವರು “ರಾಜರು ದೀರ್ಘಾಯುಗಳಾಗಲಿ” ಎಂದೂ, ರಾಜರು “ಸ್ಪೇನ್‌ದೇಶವು ಬಹುಕಾಲ ಬದುಕಲಿ” ಎಂದೂ ಹರಸಿದರು. ಅನಂತರ ತಮ್ಮ ಹೆಂಡರು ಮಕ್ಕಳನ್ನಾಲಂಗಿಸಿ ಮುದ್ದಾಡಿ ಒಬ್ಬರೇ ಮೋಟಾರಿನಲ್ಲಿ ಕುಳಿತು ತಮ್ಮ ನಿರ್ದೇಶಸ್ಥಳಕ್ಕೆ ಹೊರಟರು. ಆಗ ಕಣ್ಣೀರಿನ ಹೊಳೆಹರಿಯಿತು. ಅನಂತರ ರಾಜರು ಗಡಿನಾಡಿನ ಕಾರ್ಟಜೀನ ಎಂಬ ಪಟ್ಟಣಕ್ಕೆ ಪ್ರಾತಃಕಾಲ 4 ಗಂಟೆಗೆ ಹೋಗಿ ಅಲ್ಲಿಂದ ಹಡಗುಹತ್ತಿದರು. ನಾವಿಕರೆಲ್ಲರೂ ತಮ್ಮ ಪ್ರಭುಗಳಿಗುಂಟಾದ ದುಃಸ್ಥಿತಿಗೆ ಬಿಕ್ಕಿಬಿಕ್ಕಿ ಅತ್ತರು.

ರಾಜಕುಟುಂಬದವರು ವೆಲೆನ್ಷಿಯಾಕ್ಕೆ ಹೊರಟರು. ಆಗ ಒಬ್ಬ ರಾಜಪುತ್ರನು ಒಂದು ಕೆಟ್ಟ ರೋಗದಿಂದ ನರಳುತ್ತಿದ್ದನು. ಅವನನ್ನು ಸೇವಕರು ಹೊತ್ತುಕೊಂಡು ಹೋಗಿ ಗಾಡಿಯಲ್ಲಿ ಕುಳ್ಳಿರಿಸಿದರು. ರಾಜರು ಇಂಗ್ಲೆಂಡಿಗೆ ಹೋಗುವರೆಂದು ಕೆಲವರು ಅಭಿಪ್ರಾಯಪಡುವರು. ರಾಜರು ತಮ್ಮ ದೇಶವನ್ನು ಬಿಡುವಾಗ ಕೊಟ್ಟ ಸಂದೇಶವೇನೆಂದರೆ:—“ಕಳೆದ ಎಲೆಕ್ಷನ್ ನೋಡಿದರೆ ನಾನು ಜನರ ಪ್ರೇಮವನ್ನು ಕಳೆದುಕೊಂಡಿರುವೆನೆಂದು ಕಂಡುಬರುತ್ತದೆ. ಜನರ ಈ ಪ್ರೇಮರಾಹಿತ್ಯವು ಬಹುಕಾಲ ಇರಲಾರದೆಂದು ನನ್ನ ಆತ್ಮವು ಹೇಳುತ್ತದೆ. ಏಕೆಂದರೆ ನಾನು ಏನು ಕೆಲಸ ಮಾಡಿದರೂ ಸ್ಪೇನಿನ ಹಿತದೃಷ್ಟಿಯಿಂದ ಮಾಡಿರುವೆನೇ ಹೊರತು ಬೇರೆಯಿಲ್ಲ. ನಾನು ಎಂದಾದರೂ ಅಕಸ್ಮಾತ್ ತಪ್ಪುಮಾಡಿರಬಹುದು. ಆದರೆ ಕೆಡಕು ಮಾಡಬೇಕೆಂಬ ಉದ್ದೇಶವಿಲ್ಲದೆ ಮಾಡಿದ ಅಪರಾಧಿಗಳನ್ನು ಸ್ಪೇನಿನವರು ಕ್ಷಮಿಸುವ ಔದಾರ್ಯವನ್ನು ತೋರಿಸಿರುವರು. ರಾಜನಿಗಿರಬೇಕಾದ ವಿಶೇಷ ಅಧಿಕಾರವನ್ನು ಕಾಪಾಡಲು ವಿರೋಧಿಗಳ ಸಂಗಡ ಹೋರಾಡಿರಬಹುದು. ಆದರೆ ನಮ್ಮ ದೇಶದಲ್ಲಿ ಪರಸ್ಪರ ಭ್ರಾತೃಹತ್ಯ ಮತ್ತು ಸ್ವರಾಷ್ಟ್ರಕಲಹವನ್ನು ನಿಲ್ಲಿಸಬೇಕೆಂದು ದೃಢನಿಶ್ಚಯಮಾಡಿರುವೆನು. ನನ್ನ ಯಾವ ಹಕ್ಕುಗಳನ್ನೂ ಬಿಟ್ಟುಕೊಡದೆ ಜನಾಂಗದ ಅಭಿಪ್ರಾಯವು ಹೇಗೆ ಬರುವುದೋ ತಿಳಿದುಕೊಳ್ಳಬೇಕೆಂದು ನಿರೀಕ್ಷಿಸುತ್ತಿರುವೆನು. ಸದ್ಯಃ ರಾಜ್ಯದ ಅಧಿಕಾರಮಾಡುವುದನ್ನು ನಿಲ್ಲಿಸಿ ಸ್ಪೇನ್‌ಬಿಟ್ಟು ಹೊರಟುಹೋಗುತ್ತೇನೆ. ದೇಶದ ಮೇಲಿನ ಪ್ರೇಮದಿಂದ ನಾನು ಕಾರ್ಯಭಾಗ ನಡೆಸಿದ ಹಾಗೆ ಇತರ ಸ್ಪೇನ್‌ದೇಶದವರೂ ದೇಶದ ಸಲುವಾಗಿ ಕರ್ತವ್ಯನಿಷ್ಠರಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ವರ್ತಮಾನಸಂಗ್ರಹ.

ಈ ತಿಂಗಳು 25, 26, 27 ನೆಯ ತಾರೀಖುಗಳಲ್ಲಿ ಪೂನಾಪಟ್ಟಣದಲ್ಲಿ ಅಖಿಲಭಾರತ ವೈದ್ಯರ ಸಭೆಯು ಸೇರುವುದು.

ನೆಗಡಿ ಮತ್ತು ಕೆಮ್ಮಿನಿಂದ ಕಾಯಿಲೆಯಲ್ಲಿದ್ದ ಜಾರ್ಜ್ ಸಾರ್ವಭೌಮರು ದಿನೇ ದಿನೇ ಗುಣಹೊಂದುತ್ತಲಿರುವರೆಂದು ತಿಳಿದುಬರುತ್ತದೆ.

ಲಾರ್ಡ ವಿಲಿಂಗ್ಡನ್‌ರವರು ಪತ್ನೀಸಮೇತರಾಗಿ ಈ ತಿಂಗಳು 17 ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದಿಳಿದರು. ಮ್ಯುನಿಸಿಪಾಲಟಿಯವರು ಇವರಿಗೆ ಮಾನಪತ್ರವನ್ನೊಪ್ಪಿಸಿದರು. ಆಗ ಲಾ|| ವಿಲಿಂಗ್ಡನ್‌ರವರು ಪ್ರಸ್ತುತಲೋಚಿತವಾಗಿ ಭಾಷಣಮಾಡಿದರು.

ಕಾನ್ಸ್ಟ್ಯಾಂಟಿನೋಪಲ್ ಪಟ್ಟಣ ನಿವಾಸಿಯಾದ ಮಿ|| ಕುರ್ಡ್‌ಜಾರೋ ಆಘಾ ಎಂಬ 157 ವರ್ಷ ವಯಸ್ಸಿನ ಮುದುಕನು ಈ ತಿಂಗಳು 13 ನೆಯ ತಾ|| ದಿವಸ ಅಮೇರಿಕೆಗೆ ಹೋಗಿರುವನು. ಅನಂತರ ಅವನು ಲಂಡನ್ನಿಗೆ ಹೋಗಿ ಅಲ್ಲಿ ಅನೇಕ ವಾರಗಳವರೆಗೂ ಇದ್ದು ತನ್ನ ಗ್ರಾಮಕ್ಕೆ ಹಿಂದಿರುಗುವನಂತೆ!

ಬೊಂಬಾಯಿಯ ವರ್ತಕಸಂಘದವರೂ, ಗಿರಣಿಗಳ ಮಾಲೀಕರೂ ಲಾರ್ಡ್ ಇರ್ವಿನ್‌ರವರಿಗೆ ಮಾನಪತ್ರವನ್ನೊಪ್ಪಿಸಿದರು. ಅನಂತರ ಲಾ|| ಇರ್ವಿನ್‌ರವರು ಬೊಂಬಾಯಿಸರ್ಕಾರದ ಮಂತ್ರಿಗಳೊಡನೆಯೂ, ಅನೇಕ ಸಾಮಂತ ರಾಜರೊಡನೆಯೂ ಸಂಭಾಷಣೆ ಮಾಡಿ ಈ ತಿಂಗಳು 18ನೆಯ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಬೆಳೆಸಿದರು.

ಲಂಡನ್ನಿನಲ್ಲಿ ಸೂರ್ಯರಶ್ಮಿಸ್ನಾನಮಾಡುವ ಸಂಘವೊಂದು ಏರ್ಪಾಡಾಗಿದೆ. ಆ ಸಂಘಕ್ಕೆ ಮೆಂಬರರಾಗುವವರು ಮೂರುಜನರಿದ್ದ ಕುಟುಂಬ ಒಂದಕ್ಕೆ ಎರಡು ಗಿನಿಗಳಂತೆ ಚಂದಾ ಕೊಡಬೇಕು. ಮೆಂಬರಾಗುವ ಪ್ರತಿಯೊಬ್ಬ ಮನುಷ್ಯನೂ ಒಬ್ಬ ಸ್ತ್ರೀಯಳನ್ನಾಗಲೀ ಅಥವಾ ಚಿಕ್ಕ ಮಕ್ಕಳನ್ನಾಗಲೀ ಕರೆದುಕೊಂಡು ಬರಬೇಕೆಂಬ ನಿಯಮವಿರುವುದು.

ಸೋಲಾಪುರದಲ್ಲಿ ಮಿಲಿಟರಿ ಕಾಯಿದೆ ಪ್ರಕಾರ ಶಿಕ್ಷಿಸಲ್ಪಟ್ಟ ಖೈದಿಗಳ ಪೈಕಿ ಮೂವರ ಹೊರತು ಉಳಿದವರನ್ನೆಲ್ಲ ಬಿಡುಗಡೆಮಾಡುವುದಾಗಿ ಸರ್ಕಾರದವರು ಪ್ರಕಟಿಸಿರುವರು. ಸೊಲ್ಲಾಪುರ ಗಲಭೆಯಲ್ಲಿ ಸುಳ್ಳುಸಂಗತಿಗಳನ್ನು ಪ್ರಕಟಿಸಿದರೆಂಬ ಅಪರಾಧದಮೇಲೆ ಶಿಕ್ಷಿಸಲ್ಪಟ್ಟಿರುವ ಮಿ|| ಆರ್. ಎಸ್. ರಾಜವಾಡೆ ಎಂಬ ವಕೀಲರನ್ನು ಬಿಡುಗಡೆಮಾಡುವುದಿಲ್ಲವೆಂದು ಅಭಿಪ್ರಾಯಪಟ್ಟಿರುವರು.

ರಾವಲ್ಪಿಂಡಿಯಲ್ಲಿ ವೈಶಾಖ ಹಬ್ಬವನ್ನು ನೆರವೇರಿಸಲು ಅನೇಕ ಸಿಕ್ಕರೂ, ಇತರ ಜನಾಂಗದವರೂ ಬಂದಿದ್ದರು. ಸರ್ಕಾರದವರು ಜನರು ಒಂದೆಡೆಯಲ್ಲಿ ಸೇರಕೂಡದೆಂದು 144 ನೆಯ ಸೆಕ್ಷನ್ ಜಾರಿಮಾಡಿದರು. ಆದರೂ ಜನರು ಸರ್ಕಾರಿ ಅನುಜ್ಞೆಯನ್ನುಲ್ಲಂಘಿಸಿದರು. ಆಗ ಸರ್ಕಾರದವರು ನವಜೀವನ ಸಭೆಯ ಅಧ್ಯಕ್ಷರನ್ನೂ, ಸೆಕ್ರೆಟರಿಗಳನ್ನೂ, ಇತರ ಅನೇಕಜನ ಮೆಂಬರರನ್ನೂ ದಸ್ತಗಿರಿಮಾಡಿದರು.

ಅಖಿಲಭಾರತ ರಾಷ್ಟ್ರೀಯ ಮುಸಲ್ಮಾನ ಸಭೆಯು ಈ ತಿಂಗಳು 18 ನೆಯ ತಾರೀಖಿನ ದಿವಸ ಲಕ್ನೋದಲ್ಲಿ ಸೇರಿರುವುದು. ಅಲ್ಲಿ ಡಾ|| ಸಯ್ಯದ್ ಮಹಮ್ಮದ್‌ರವರು “ಮೌಲಾನಾ ಷೌಕತಾಲಿಯವರು ರಾಷ್ಟ್ರಪಕ್ಷದ ಮಹಮ್ಮದೀಯರನ್ನು ಪಡ್ಡುಹೊಡೆದು ಜಗಳಕ್ಕೆ ಕರೆಯುತ್ತಿರುವರು. ನಾವು ಮಾತ್ರ ಈ ವಿಷಮಪರಿಸ್ಥಿತಿಯಲ್ಲಿ ಶಾಂತರೀತಿಯಿಂದ ಮುಂದಿನ ಕಾರ್ಯವನ್ನು ನಡೆಸಬೇಕೆಂದು ಭಾಷಣಮಾಡಿದರು.” ಪಂಜಾಬ್, ಬಂಗಾಲ, ಬಿಹಾರ್, ವಾಯುವ್ಯಪ್ರಾಂತ, ಸಿಂಧ್ ಮೊದಲಾದ ಪ್ರಾಂತಗಳಿಂದ ಸಹಸ್ರಾರು ಜನರು ಲಕ್ನೋಕ್ಕೆ ಬಂದಿರುವರು.

ಮಹಾತ್ಮ ಗಾಂಧಿಯವರು ಲಾರ್ಡ್ ಇರ್ವಿನ್‌ರೊಡನೆ ಮಾಡಿದ ಸಂಭಾಷಣೆಯು ಪ್ರಕಟವಾಗಿಲ್ಲ. ಆದರೂ ಒಪ್ಪಂದವನ್ನು ಸರ್ಕಾರದವರು ಅಕ್ಷರಶಃ ಅನುಷ್ಠಾನದಲ್ಲಿ ತರುವ ವಿಷಯವೂ, ಮಹಾತ್ಮ ಗಾಂಧಿಯವರು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗುವ ವಿಷಯವೂ ಆ ಸಂಭಾಷಣೆಯ ಮುಖ್ಯಾಂಶವಾಗಿದ್ದಿತೆಂದೂ, ಮಹಾತ್ಮರು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಅವಶ್ಯಕವಾಗಿ ಬರಬೇಕೆಂದು ಒತ್ತಾಯಮಾಡಿದರೆಂದೂ, ಹಿಂದೂಮಹಮ್ಮದೀಯ ಪ್ರಶ್ನೆಯು ತೃಪ್ತಿಕರವಾಗಿ ನಿರ್ಣಯವಾಗದಿದ್ದರೆ ತಾವು ರೌಂಡ್ ಟೇಬಲ್ ಸಮ್ಮೇಳನಕ್ಕೆ ಬರುವುದಿಲ್ಲವೆಂದು ಹೇಳಿದರೆಂದೂ ತಿಳಿದುಬರುತ್ತದೆ.

ಚೀನಾದೇಶದಿಂದ 22 ವರ್ಷ ವಯಸ್ಸಿನ ಮಿಂಗ್ ಎಂಬಾತನು ಬೈಸಿಕಲ್ಲಿನ ಮೇಲೆ ಜಗತ್ತನ್ನೆಲ್ಲಾ ಸುತ್ತಿಕೊಂಡು ಬರಬೇಕೆಂದು ಹೊರಟಿರುವನು. ಅವನು ಕಳೆದ ಜೂನ್ ತಿಂಗಳಲ್ಲಿ ಕಾಲು ನಡಗೆಯಿಂದ ಹೋಗಬೇಕೆಂದು ಷಾಂಘಯಿಂದ ಹೊರಟನು. ಅವನ ಜೊತೆಗಾರರು ಅವನನ್ನು ಬಿಟ್ಟುಹೋದುದರಿಂದ ಬೈಸಿಕಲ್ ಮೇಲೆ ಸಂಚಾರ ಹೊರಟು ಮಲಯ ಮತ್ತು ಸಯಾಂಗಳನ್ನು ದಾಟಿ ಕಲ್ಕತ್ತೆಗೆ ಬಂದಿಳಿದಿರುವನು. ಅವನು ದಿನ ಒಂದಕ್ಕೆ 80 ಮೈಲುಗಳಂತೆ 5000 ಮೈಲುಗಳು ಪ್ರಯಾಣಮಾಡಿರುವನು. ಅಫ್ಘಾನಿಸ್ಥಾನ್, ಅರೇಬಿಯ, ಪರ್ಷಿಯ ಈ ದೇಶಗಳನ್ನು ನೋಡಿಕೊಂಡು ಅನಂತರ ಯೂರೋಪ್‌ಖಂಡಕ್ಕೆ ಹೋಗಿ ಅಲ್ಲಿಂದ ಅಮೇರಿಕಾಕ್ಕೆ ಹೋಗುವನಂತೆ!

ಜರ್ಮನಿಯಲ್ಲಿ 48 ವರ್ಷ ವಯಸ್ಸಿನ ಕರ್ಟೆನ್ ಎಂಬವನು ಡುಸಲ್‌ಡಾರ್ಫ್ ಎಂಬ ಜಿಲ್ಲೆಗೆ ಭೀಕರನಾಗಿದ್ದನು. ಇವನನ್ನು 11 ತಿಂಗಳ ಹಿಂದೆ ದಸ್ತಗಿರಿ ಮಾಡಿ ಜೈಲಿನಲ್ಲಿಟ್ಟಿರುವರು. ಈಗ ಅವನ ವಿಚಾರಣೆಯು ಪ್ರಾರಂಭವಾಗಿದೆ. ಇವನು 25 ಕೊಲೆಗಳನ್ನು ಮಾಡಿ ಈಗ ಬೈಬಲ್ ಹಿಡಿದುಕೊಂಡು ಜೈಲಿನಲ್ಲಿರುವನು. ಈ ತಿಂಗಳು 13 ನೆಯ ತಾರೀಖಿನ ದಿವಸ ತಾನು ಮಾಡಿದ ಕೃತ್ಯಗಳನ್ನೆಲ್ಲ ಹೇಳಿ ಕೋರ್ಟಿನಲ್ಲಿರುವವರನ್ನು ಭಯಭ್ರಾಂತರಾಗುವಂತೆ ಮಾಡಿದನು. ಮೊಟ್ಟಮೊದಲು ಇವನು ಕಳ್ಳತನಮಾಡುವುದಕ್ಕೆ ಒಂದು ಮನೆಗೆ ನುಗ್ಗಿ ಅಲ್ಲಿದ್ದ ಒಂಬತ್ತುವರ್ಷದ ಮಗುವನ್ನು ಕೊಂದನಂತೆ! ಜನರನ್ನು ಕೊಲ್ಲುವುದು, ಬೆಂಕಿಹಚ್ಚುವುದು, ಹೆಂಗಸರು ಅಳುವುದನ್ನು ಕೇಳುವುದು ಇವನಿಗೆ ಬಹುಸಂತೋಷವಂತೆ!

ಈ ತಿಂಗಳು 10 ನೆಯ ತಾರೀಖಿನ ರಾತ್ರಿ ಬಂಗಾಲಪ್ರಾಂತಕ್ಕೆ ಸೇರಿದ ಅತಾರ್‌ಜಾರಿ ಮತ್ತು ನಾಹಗಿ ಎಂಬ ಸ್ಟೇಷನ್‌ಗಳ ಮಧ್ಯದಲ್ಲಿ ರೈಲ್ವೆಗಾಡಿಯು ಹೋಗುತ್ತಿರುವಾಗ ಒಂದು ಕಳವಾಯಿತು. ಅತಾರಾಜಾರಿ ಸ್ಟೇಷನ್ನಿನ ಸಿಗ್ನಲ್ ದಾಟಿದ ಕೂಡಲೆ ಸುಮಾರು 24 ವರ್ಷ ವಯಸ್ಸಿನ ಮೂವರು ತರುಣರು ರಿವಾಲ್ವರ್ ತೆಗೆದುಕೊಂಡು ಬಂದು ಗಾಡಿಯಲ್ಲಿ ಕುಳಿತಿದ್ದ ಮಿ|| ಚಂದ್ರಪ್ರಹುರಾಯನೆಂಬ ಶ್ರೀಮಂತನನ್ನು ಹಣ ಕೊಡಬೇಕೆಂದು ಬಲಾತ್ಕರಿಸಿದರು. ಅವನು ತನ್ನ ಹತ್ತಿರ ಹಣವಿಲ್ಲವೆಂದನು. ಆಗ ಅವನ ಕಾಲಿಗೆ ಗುಂಡಿನಿಂದ ಹೊಡೆದರು. ಅನಂತರ ಅವನು ಸ್ವಲ್ಪ ರೂಪಾಯಿಗಳಿದ್ದ ಹಣದ ಚೀಲವನ್ನು ಕೊಟ್ಟನು. ಪುನಃ ಅವನ ತೊಡೆಗೆ ಗುಂಡಿನಿಂದ ಹೊಡೆದರು. ಅವನ ಸಮೀಪದಲ್ಲಿದ್ದ ಮಿ|| ಲಾಲಚಂದ ಎಂಬವನಿಗೂ ಮಿ|| ವಿಮಲನೆಂಬವನಿಗೂ ಗುಂಡಿನಿಂದ ಹೊಡೆದರು. ಗಾಡಿಯಲ್ಲಿದ್ದ ಮಿಕ್ಕ ಪ್ರಯಾಣಿಕರಿಗೆ ಗುಂಡಿನಿಂದ ಹೊಡೆಯುವೆವೆಂದು ಹೆದರಿಸಿ ಸುತ್ತುನಿರಿಸಿ ಅನಂತರ ಅವರಲ್ಲಿದ್ದ 9,160 ರೂ. ಗಳನ್ನು ತೆಗೆದುಕೊಂಡು ಗಾಡಿಯಿಂದ ಹಾರಿ ಹೊರಟುಹೋದರು. ಆಗ ಪ್ರಯಾಣಿಕರು ಗಾಡಿಯನ್ನು ನಿಲ್ಲಿಸಬೇಕೆಂದು ಸರಪಣಿಯನ್ನು ಎಳೆದರು. ಆದರೆ ಈ ಕಳ್ಳರು ವ್ಯಾಕುಂಬ್ರೇಕ್ ಎಂಬುದನ್ನು ತೆಗೆದಿದ್ದರಿಂದ ಗಾಡಿಯು ನಿಲ್ಲಲಿಲ್ಲ. ಕೆಲವು ಪ್ರಯಾಣಿಕರು ಹೆದರಿ ಗಾಡಿಯಿಂದ ಕೆಳಕ್ಕೆ ಹಾರಿದರು. ವಿಮಲ ಮತ್ತು ಲಾಲಚಂದ್ ಇವರೀರ್ವರೂ ಮೃತಪಟ್ಟರು. ಚಂದ್ರಪ್ರಹುರಾಯನು ಗುಣಹೊಂದುತ್ತಲಿರುವನು.

ಬರ್ಮಾದೇಶಕ್ಕೆ ಸೇರಿದ ಥಾಯೆಟ್ಮ್ಯೊ ಎಂಬ ಸ್ಥಳದಲ್ಲಿ ಅನೇಕರು ದಂಗೆ ಎದ್ದಿರುವರು. ಈ ತಿಂಗಳು 13 ನೆಯ ತಾರೀಖಿನ ದಿವಸ ಸಿವಿಲ್ ಮತ್ತು ಮಿಲಿಟರಿ ಪೋಲೀಸರಿಗೂ ಮತ್ತು ದಂಗೆಖೋರರಿಗೂ ಹೊಡೆದಾಟವಾಗಿ ಅನೇಕರು ಮೃತಪಟ್ಟರು. ಎಚ್. ಸಿ. ಸ್ಮಿತ್ ಎಂಬ ಪೋಲೀಸು ಸೂಪರಿಂಟೆಂಡೆಂಟ್‌ರಿಗೆ ತುಂಬಾ ಗಾಯವಾಗಿ ರಂಗೂನ್ ಆಸ್ಪತ್ರೆಯಲ್ಲಿರುವರು. ಈ ಗಲಭೆಯು ದಿನೇ ದಿನೇ ವೃದ್ಧಿಯಾಗುತ್ತಿರುವುದಂತೆ! ದಂಗೆಕೋರರ ಸಂಖ್ಯೆಯು ಹೆಚ್ಚುತ್ತಲಿರುವುದು. ಅವರೆಲ್ಲರೂ ಒಂದೇ ಉಡುಪನ್ನು ಧರಿಸಿ ಹಚ್ಚೆಹಾಕಿಸಿಕೊಳ್ಳುವರು. ಒಬ್ಬ ಪೋಲೀಸು ಅಧಿಕಾರಿಯೂ, ಇಬ್ಬರು ಶಿಪಾಯಿಗಳೂ, ಕಾಮ ಎಂಬ ಹಳ್ಳಿಯ ಪಟೇಲನೂ, ಫಾರೆಸ್ಟ್ ಅಧಿಕಾರಿಯೂ ಕೊಲ್ಲಲ್ಪಟ್ಟಿರುವರು. ಪ್ಯಾಪ್ಸ್ ಎಂಬ ಸ್ಥಳದಲ್ಲಿ ಈ ದಂಗೇಕೋರರ ವಿಚಾರಣೆ ಬಗ್ಗೆ ಒಂದು ಕೋರ್ಟು ಸ್ಪೆಷಲಾಗಿ ನಿಯಮಿಸಲ್ಪಟ್ಟಿರುವುದು. ಈ ಕೋರ್ಟಿನ ಮುಂದೆ ಒಬ್ಬ ಒಕ್ಕಲಿಗನು ಕೆಳಗೆ ಕಂಡಂತೆ ಸಾಕ್ಷಿಯನ್ನು ಕೊಟ್ಟಿರುವನು. “ಈಗ ಎರಡು ತಿಂಗಳುಗಳ ಕೆಳಗೆ ಕೆಲವರು ಬಂದು ನನ್ನನ್ನು ಕರೆದುಕೊಂಡು ಹೋದರು. ದಂಗೇಕೋರರು ಆಂಪ್ಲ ಎಂಬಲ್ಲಿದ್ದು ಜನರಿಗೆ ಡ್ರಿಲ್ ಕಲಿಸಿ ತರಪೇತುಮಾಡುತ್ತಿರುವರು. ಸುಮಾರು 500 ಸಂಖ್ಯೆ ಸೈನ್ಯವಿದೆ. ಅವರಲ್ಲಿ ಬಂದೂಕ, ಕತ್ತಿ, ಭರ್ಜಿ ಮೊದಲಾದ ಆಯುಧಗಳಿವೆ. ಅವರು ತಲೆಗಂದಾಯದ ನಿಷೇಧಾರ್ಥವಾಗಿ ಸರ್ಕಾರದವರನ್ನು ಎದುರಿಸಬೇಕೆಂದು ಪ್ರಯತ್ನಪಟ್ಟಿರುವುದಾಗಿ ಹೇಳಿದನು. ದಂಗೆಯ ಮುಖಂಡರು ಸರ್ಕಾರದವರ ಬಂದೂಕಿನ ಗುಂಡುಗಳಿಂದ ಪೆಟ್ಟಾಗುವುದಿಲ್ಲವೆಂದೂ, ಆ ಗುಂಡುಗಳು ಅವರ ಹತ್ತಿರಕ್ಕೆ ಬಂದಕೂಡಲೆ ಹೂವೋ ಅಥವಾ ಅಕ್ಕಿಯೋ ಆಗುವುವೆಂದೂ, ದಂಗೆಯ ಮುಖಂಡರು ಜನರಿಗೆ ಬೋಧಿಸುವುದಾಗಿ ಹೇಳಿದನು. ಟವಂಗೂ ಎಂಬಲ್ಲಿ ಭಾರತೀಯರ 16 ಮನೆಗಳನ್ನು ಸುಟ್ಟಿರುವರಂತೆ!

ಆರ್ಯಮಹಿಳಾಕೀರ್ತಿ.

ಈ ಮೇಲ್ಕಂಡ ಗ್ರಂಥವನ್ನು ರಾಜಧಾನಿ ನಿವಾಸಿಗಳಾದ ಮ|| ರಾ|| ಜಿ. ಆರ್. ಜೋಸ್ಯರ್ ಎಂ.ಎ., ಎಫ್.ಆರ್.ಇ.ಎಸ್., ಈ ಮಹೋದಯರು ರಚಿಸಿರುವರು. ಇವರು ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಪಡೆದುಕೊಂಡು ಅನೇಕ ಗ್ರಂಥಗಳನ್ನು ರಚಿಸಿ ಲೋಕವಿಶ್ರುತಕೀರ್ತಿಶಾಲಿಗಳಾಗಿರುವರು. ಇವರ ಗ್ರಂಥರಚನಾಶೈಲಿಯು ಪಾಶ್ಚಾತ್ಯರನ್ನೂ ಸಹ ತಲೆದೂಗಿಸಿರುವುದು. ಇಂಥ ಅದ್ಭುತಶಕ್ತಿಯುಳ್ಳ ಈ ಮಹೋದಯರು ನಮ್ಮ ಕನ್ನಡಿಗರ ಉಪಕಾರಕ್ಕಾಗಿ ಮೇಲ್ಕಂಡ ಗ್ರಂಥವನ್ನು ರಚಿಸಿರುವರು. ಭಾಷಾಶೈಲಿಯು ಬಹು ಗಂಭೀರವಾಗಿಯೂ, ಮನೋಹರವಾಗಿಯೂ, ಪ್ರಸಾದಗುಣಯುತವಾಗಿಯೂ ಇದ್ದು ವಾಚಕರ ಮನಸ್ಸನ್ನು ಆನಂದಾಬ್ಧಿಯಲ್ಲಿ ಮುಳುಗಿಸುವಂತಿದೆ. ನಮ್ಮ ಭರತಖಂಡದಲ್ಲಿ ಜನ್ಮವೆತ್ತಿ ಶೌರ್ಯ, ಧೈರ್ಯ, ರಾಜನೀತಿ, ಭಕ್ತಿ ಮೊದಲಾದ ಸದ್ಗುಣಸಮೂಹದಿಂದ ಇಡೀಜಗತ್ತನ್ನೇ ಬೆರಗುಮಾಡಿದ ಮಹಾರಾಣಿ ಸಂಯುಕ್ತೆ, ಚಿತ್ತೂರು ರಾಣಿಪದ್ಮಿನಿ, ತಾರಾಬಾಯಿ, ದುರ್ಗಾವತಿ, ಭವಾನಿ, ಜೋಧಪುರ ಮಹಾರಾಣಿ, ಜವರೇಶ್ವರಿ, ಗನೋರ್ ರಾಣಿ, ಕರ್ಮದೇವಿ, ಅಹಲ್ಯಾಬಾಯಿ, ಚಂದ್ರಾವತಿ, ಝಾಂಸಿರಾಣಿ, ವಿರಾಬಾಯಿ, ಮೈಸೂರು ಮಹಾರಾಣಿಲಕ್ಷ್ಮಮ್ಮಣ್ಣಿ ಇಂತಿಷ್ಟುಜನ ವೀರರಾಣಿಯರ ದಿವ್ಯಚರಿತ್ರಗಳು ಇದರಲ್ಲಿ ಅಡಕವಾಗಿವೆ. ಕರ್ನಾಟಕ ದೇಶದಲ್ಲಿ ಸ್ವದೇಶಾಭಿಮಾನದಿಂದ ಇಂಗ್ಲೀಷರೊಡನೆ ಭಯಂಕರವಾದ ಕಾಳಗವನ್ನು ಮಾಡಿ ಈ ಹೊತ್ತಿನವರೆಗೆ ಕೀರ್ತಿಕಾಯದಿಂದ ಶೋಭಿಸುತ್ತಿರುವ ಕಿತ್ತೂರುಚನ್ನಮ್ಮರಾಣಿಯ ಚರಿತ್ರವನ್ನು ಈ ಶೂರರಾಣಿಯರ ಗುಂಪಿನಲ್ಲಿ ಸೇರಿಸಿದ್ದರೆ ನಮ್ಮ ಕರ್ನಾಟಕ ದೇಶಕ್ಕೆ ಬಹುಭೂಷಣವಾಗುತ್ತಿತ್ತು. ಗ್ರಂಥಕರ್ತರು ಪುನರ್ಮುದ್ರಣಾವಸರದಲ್ಲಾದರೂ ಈ ಮಹಾರಾಣಿಯ ದಿವ್ಯಚರಿತ್ರವನ್ನು ಸೇರಿಸಬೇಕೆಂದಾಶಿಸುತ್ತೇವೆ. ಒಟ್ಟಿಗೆ ಈ ಗ್ರಂಥವು ಪ್ರತಿಯೊಬ್ಬ ದೇಶಭಕ್ತರ ಹಸ್ತವನ್ನಲಂಕರಿಸಲು ಯೋಗ್ಯವಾಗಿದೆ. ಆದುದರಿಂದ ದೇಶಾಭಿಮಾನಿಗಳು ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಓದಿನೋಡಿ ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ 8 ಆಣೆ.

ಗ್ರಂಥದೊರೆಯುವ ಸ್ಥಳ—

ಜೋಸ್ಯರ್ ಅಂಡ್ ಕೋ, ಮೈಸೂರು.

[3ನೆಯ ಪುಟದಿಂದ ಮುಂದುವರಿದುದು.]

ವುದು, ಅವರವರ ಜವಾಬ್ದಾರಿಯ ಕೆಲಸವಾಗಿತ್ತು. ಮನೆಯ ಮುಂಭಾಗವನ್ನು ಪ್ರತಿದಿನವೂ ತಪ್ಪದೆ ಸಾರಿಸಿ ಗುಡಿಸಿ ರಂಗೋಲೆಯಿಕ್ಕುವುದು ತಮಗೆ ಒಂದು ವಿಧಿವಿಹಿತಕರ್ಮವೆಂದೂ, ಅದನ್ನು ತಪ್ಪಿದರೆ ಅವಲಕ್ಷಣಸೂಚಕವೆಂದೂ ಅವರಿಗೆ ನಂಬಿಕೆ ಇದ್ದಿತು.

ಮೇಲೆ ಹೇಳಿದ ರೀತಿಯಲ್ಲಿ ಪ್ರತಿಯೊಬ್ಬ ಕುಟುಂಬಿಗಳೂ ಶ್ರದ್ಧೆಯಿಂದ ತಾವೇ ತಮ್ಮ ಮನೆಗಳ ಮುಂಭಾಗವನ್ನು ಶುಚಿಯಾಗಿಯೂ, ಅಲಂಕಾರವಾಗಿಯೂ ಇಡುತ್ತಿದ್ದುದರಿಂದ, ಬೀದಿಯುದ್ದಕ್ಕೂ ಶುಚಿಯಾಗಿ, ಒಳ್ಳೇ ಅಂದವಾಗಿಯೂ ಕಾಣಿಸಲು ಅವಕಾಶವಿತ್ತು. ಪ್ರತಿದಿನವೂ ತಪ್ಪದೆ ಎರಡಾವರ್ತಿ ಮನೆಯ ಮುಂದೆ ನೀರನ್ನು ಚೆಲ್ಲುವ ಪದ್ಧತಿಯಿದ್ದುದರಿಂದ, ಹೆಚ್ಚಾಗಿ ಬೀದಿಯ ಧೂಳು ಏಳುವುದಕ್ಕೂ ಅವಕಾಶವಿರಲಿಲ್ಲ. ಮನೆಯೊಳಗಿನ ಮತ್ತು ಬೀದಿಯ ಕಸಗಳನ್ನೆಲ್ಲ ದೂರಕ್ಕೆ ಸಾಗಿಸಿ, ಗೊಬ್ಬರದ ಗುಂಡಿಯಲ್ಲಿ ಕೂಡುಹಾಕಿದ್ದು, ಅದನ್ನು ಅವರವರ ವ್ಯವಸಾಯದ ಭೂಮಿಗೆ ಉಪಯೋಗಿಸುವ ಪದ್ಧತಿಯು ಈಗಲೂ ಗ್ರಾಮಗಳಲ್ಲಿದೆ. ಮನೆಯ ಮುಂದೆ ಸಗಣಿಯ ನೀರನ್ನು ಹಾಕುವುದೇನೋ ಒಳ್ಳೆಯದೇ! ಅದರಲ್ಲಿ ಒಂದು ಬಗೆಯ ವಿಷಹಾರಕ ಗುಣವುಂಟು. ಆದರೆ, ನೀರಿನಲ್ಲಿ ಕರಗಿಸುವುದಕ್ಕಾಗಿ ಉಪಯೋಗಿಸುವ ಸಗಣಿಯು ಹಳೆಯದಾಗಿರಬಾರದು.

ಗಾಳಿ ಬೆಳಕುಗಳು—ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸ್ವಲ್ಪ ಮಟ್ಟಿಗೆ ಜೀವನಕ್ಕೆ ನೆಮ್ಮದಿಯಾಗಿರುವವರೆಲ್ಲ, ಹಂಚು ಹೊದಿಸಿದ ತೊಟ್ಟಿಯ ಮನೆಗಳನ್ನು ಕಟ್ಟಿಕೊಂಡು, ಅದರಲ್ಲಿ ವಾಸಮಾಡುತ್ತಿರುವರು. ಮನೆಯನಡುವೆ ದೊಡ್ಡ ಮೈದಾನವನ್ನು ಬಿಟ್ಟಿರುವುದರಿಂದ ಗಾಳಿಬೆಳಕುಗಳಿಗೆ ಧಾರಾಳವಾದ ಅವಕಾಶವುಂಟು. ಶಕ್ಯವಷ್ಟು ಬಿಸಿಲೂ ಒಳಕ್ಕೆ ಪ್ರವೇಶಿಸಲು ದಾರಿಯಿದೆ. ಅಲ್ಲದೆ ಹಳ್ಳಿಯ ಜನರೆಲ್ಲರೂ ಪ್ರಾಯಶವಾಗಿ, ಮುಂದಿನ ಜಗುಲಿಯ ಮೇಲೆ, ಅಥವಾ ಪಡಸಾಲೆಗಳಲ್ಲಿ ಮಲಗುವದರಿಂದ, ಅವರ ಮನೆಗಳಿಗೆ ಕಿಟಕಿಗಳಿಲ್ಲದಿದ್ದರೂ ಬಾಧಕವೇನೂ ತೋರುವುದಿಲ್ಲ. ಮನೆಗೆ ಕಿಟಕಿಗಳಿರಬೇಕಾದುದೇನೋ ಅವಶ್ಯವೇ. ಆದರೆ, ಅನೇಕ ಗ್ರಾಮಸ್ಥರು ಮನೆಗೆ ಬಂದೂಬಸ್ತು ಕಡಿಮೆಯೆಂಬುದಾಗಿ ಕಿಟಕಿಗಳನ್ನಿಡಿಸಲು ಹಿಂತೆಗೆಯುವರು. ಆದರೆ, ಈಚೀಚೆಗೆ ನವನಾಗರಿಕತೆಯ ಪ್ರಭಾವವು ಗ್ರಾಮಾಂತರಗಳಿಗೂ ವ್ಯಾಪಿಸಿ, ಅಲ್ಲಿಯೂ ಹಂಚಿನಮನೆಯದ್ದಲ್ಲಿ ಇಟ್ಟಿಗೆಗಾರೆಗಳಿಂದ ಕಟ್ಟಿದ ಮಹಡಿಯ ಮನೆಗಳೇ ತಲೆಯೆತ್ತುತ್ತಿವೆ. ಅನೇಕ ಗ್ರಾಮಗಳಲ್ಲಿ ಕೇವಲ ಬಡವರಾದವರು ಗುಡಿಸಲುಗಳ[illegible] ವಾಸಮಾಡುತ್ತಿರುವರು. ಆ ಗುಡಿಸಲುಗಳಲ್ಲಿ ಸರಿ[illegible] ಬೆಳಕುಗಳಿಗೆ ಅವಕಾಶವಿರುವುದಿಲ್ಲ. ಇಂತಹ ಸಣ್ಣ ಗುಡಿಸಲುಗಳನ್ನು ಆರೋಗ್ಯಕ್ರಮದಿಂದಿರುವ ವಿಷಯದಲ್ಲಿ, ಡಾಕ್ಟರು ಫೋರ್‌ಡರವರು, ಜನಾರೋಗ್ಯವಿಷಯವಾಗಿ ಬರೆದಿರುವ ಒಂದು ಪುಸ್ತಕದಲ್ಲಿ ಕೊಟ್ಟಿರುವ ಈ ಕೆಳಗಿನ ಸೂಚನೆಗಳು, ನೆನಪಿನಲ್ಲಿಡತಕ್ಕಗಳು.

ಗ್ರಾಮಗಳಲ್ಲಿ ಮನೆಗಳ ಏರ್ಪಾಡು. ಗ್ರಾಮಗಳಲ್ಲಿ ಪ್ರಾಯಶವಾಗಿ ಅನೇಕರು ಗುಡಿಸಲುಗಳಲ್ಲಿಯೇ ವಾಸಮಾಡುತ್ತಿರುವರು. ಬಿದಿರಿನತಡಿಕೆಗಳನ್ನು ಮಾಡಿ ನಿಲ್ಲಿಸಿ ಅದರಮೇಲೆ ಮಣ್ಣನ್ನು ಮೆತ್ತಿ ಸುತ್ತಿನ ಗೋಡೆಗಳನ್ನು ಮಾಡುವರು. ಆ ಗೋಡೆಯಮೇಲೆ ಸಗಣಿಯ ನೀರನ್ನು ಬಳಿದು ಸುಣ್ಣವನ್ನು ಹಚ್ಚುವರು. ಗೋಡೆಗೆ ಕಿಟಕಿಗಳೇನೂ ಇರುವುದಿಲ್ಲವಾದದರಿಂದ, ಒಳ್ಳೇ ಗಾಳಿ ಬೆಳಕಿಗೆ ಅದರಲ್ಲಿ ಅವಕಾಶವು ಕಡಿಮೆ. ಅದರಲ್ಲಿ ಪ್ರತ್ಯೇಕವಾದ ರೂಮುಗಳೂ ಇರುವುದಿಲ್ಲ. ಆ ಚಿಕ್ಕ ಗುಡಿಸಲಿನಲ್ಲಿಯೇ ಒಂದು ಪಕ್ಕದಲ್ಲಿ ದನಕರುಗಳನ್ನು ಕಟ್ಟಿಕೊಂಡು, ಮತ್ತೊಂದು ಕಡೆಯಲ್ಲಿ ತಾವು ವಾಸಮಾಡುತ್ತಿರುವರು. ಆದರೆ ಮತ್ತೊಂದು ಪಾರ್ಶ್ವದಲ್ಲಿ ಕಣಜಗಳನ್ನಿಟ್ಟು, ಧಾನ್ಯಗಳನ್ನು ತುಂಬಿಡುವರು. ಈ ಗುಡಿಸಲುಗಳನ್ನು ಕಟ್ಟುವಾಗ, ಗೋಡೆಗಳಿಗೆ ಬೇಕಾದ ಮಣ್ಣನ್ನು ಅದರ ಪಕ್ಕದಲ್ಲಿಯೇ ತೋಡಿ ತೆಗೆಯುವುದರಿಂದ, ಅಲ್ಲಲ್ಲಿ ದೊಡ್ಡ ಹಳ್ಳಗಳಾಗಿ, ಕೊಳಕು ನೀರೆಲ್ಲ ಬಹುಕಾಲದವರೆಗೆ ಅದರಲ್ಲಿ ತಂಗಿ ನಿಲ್ಲಲು ಅವಕಾಶವಾಗುವುದು. ಹೀಗೆ ಹಳೇನೀರು ತಂಗಿ ನಿಂತ ಕಡೆಗಳಲ್ಲಿ ಸೊಳ್ಳೆಗಳು ಹೆಚ್ಚುವುದೇನೂ ಆಶ್ಚರ್ಯವಲ್ಲ. ಇದಲ್ಲದೆ, ಆ ಗುಂಡಿಯ ನೀರನ್ನೇ ಗ್ರಾಮಸ್ಥರು ಪಾತ್ರೆತೊಳೆಯುವುದು ಮುಂತಾಗಿ ಅನೇಕ ಕಾರ್ಯಗಳಿಗೆ ಉಪಯೋಗಿಸುವರು. ಇವೆಲ್ಲವೂ ಬಹಳ ಅನಾರೋಗ್ಯಕರವಾದ ಪದ್ಧತಿಯಾದುದರಿಂದ, ಗ್ರಾಮಸ್ಥರಿಗೆ ಮೊದಲು ಆರೋಗ್ಯ ಶುಚಿತ್ವ ಪದ್ಧತಿಗಳಿಗನುಸಾರವಾದ ವಸತಿಗಳನ್ನು ಮಾಡಿಕೊಳ್ಳಲು ದಾರಿತೋರಿಸಿಕೊಡಬೇಕು. ಇದಕ್ಕಾಗಿ ಅಲ್ಲಲ್ಲಿ ಕೆಲವು ಕಟ್ಟಡಗಳನ್ನು ಆದರ್ಶಪ್ರಾಯವಾಗಿ ಕಟ್ಟಿ ತೋರಿಸಬೇಕಾದುದು ಆರೋಗ್ಯ ಇಲಾಖೆಯವರ ಕರ್ತವ್ಯವೆಂದು ಭಾವಿಸಬೇಕು. ಪ್ರತಿ ಗುಡಿಸಲಿಗೂ ಕೊನೇಪಕ್ಷ ಅಡಿಗೆಮಾಡುವುದಕ್ಕೊಂದು, ಮಲಗುವುದಕ್ಕೊಂದು, ಹೀಗೆ ಪ್ರತ್ಯೇಕವಾಗಿ ಎರಡು ಕೋಣೆಗಳಿರಬೇಕು. ಮನೆಯ ಮುಂದೆ ಮೈದಾನವಿದ್ದು ಸುತ್ತಲೂ ಗೋಡೆಗಳಿರಬೇಕು. ಅವಕಾಶವಿದ್ದರೆ ಗುಡಿಸಲಿನ ಸುತ್ತಲೂ ಪಡಸಾಲೆಯೊಂದಿರುವುದು ಒಳ್ಳೆಯದು. ರೂಮಿನ ವಿಸ್ತೀರ್ಣವು ಕೊನೇ ಪಕ್ಷ 15 ಅಡಿಗಳ ಚದರವೂ, 12 ಅಡಿಗಳ ಎತ್ತರವೂ ಇರಬೇಕು. ಗುಡಿಸಲಿನ ನೆಲವು ಭೂಮಟ್ಟಕ್ಕಿಂತ ಒಂದಡಿಯಷ್ಟಾದರೂ ಎತ್ತರಿಸಿರಬೇಕು. ಅದರೊಳಗಿನ ಪ್ರತಿಯೊಂದು ಕೋಣೆಗೂ ಆರಡಿಗಳ ಚದರವುಳ್ಳ ಎರಡೆರಡು ಕಿಟಕಿಗಳಿದ್ದು, ಆ ಕಿಟಕಿಗಳೆರಡೂ ಇದಿರುಬದಿರಾಗಿರಬೇಕು. ಗುಡಿಸಲಿಗೆ ಸೇರಿದಂತೆಯೇ ಪಾಯಖಾನೆಯೊಂದಿರಬೇಕಾದರೆ, ಮೈದಾನದ ಒಂದು ಕಡೆ ಮೂಲೆಯಲ್ಲಿ ಪ್ರತ್ಯೇಕವಾಗಿ ಅದಕ್ಕೆ ಸ್ಥಳಮಾಡಿಡಬೇಕು. ಆ ಸ್ಥಳವನ್ನು ದಿನದಿನಕ್ಕೆ ತಪ್ಪದೆ ಶುಚಿಮಾಡುತ್ತಿರಬೇಕಾದುದು ಅತ್ಯವಶ್ಯವು. ಗುಡಿಸಲಿನ ನೆಲ

ವೆಲ್ಲ ಶೇವವೂ, ಧೂಳೂ ಇಲ್ಲದಂತೆ ಸಿಮೆಂಟಿನಿಂದ ಅಥವಾ ವಜ್ರಗಾರೆಯಿಂದ ಗಟ್ಟಿಮಾಡಿಸಿಡಬೇಕು."

ಕುಡಿಯುವ ನೀರು—ಹಳ್ಳಿಗಳಲ್ಲಿ ಇದರ ಕಷ್ಟವೇ ಹೆಚ್ಚಾಗಿದೆ. ಒಂದುವೇಳೆ ಒಳ್ಳೇ ಬಾವಿಗಳಿದ್ದು, ಸಮೃದ್ಧವಾದ ಜಲವಸತಿಯಿದ್ದರೂ, ಅದನ್ನು ಶುಚಿಯಾಗಿ ಕಾಪಾಡಿಕೊಳ್ಳುವ ದಾರಿಯು ಅಲ್ಲಿಯ ಜನರಿಗೆ ತಿಳಿಯದು. ಪೂರ್ವಕಾಲದಲ್ಲಿ ಗ್ರಾಮಸ್ಥರೆಲ್ಲರೂ ಬಹಳ ಕಟ್ಟುಪಾಡಾಗಿ, ಕುಡಿಯುವ ನೀರಿನ ಬಾವಿಗೆ ನೀರು ಬರುವ ಸ್ಥಳಗಳನ್ನೂ, ಆ ಬಾವಿಗಳನ್ನೂ, ಕಶ್ಮಲಮಾಡಿ ಕೆಡಿಸದಂತೆ ಕಾವಲುಕಟ್ಟುಗಳನ್ನೇರ್ಪಡಿಸಿ, ಅವುಗಳ ಶುಚಿತ್ವ ವಿಷಯದಲ್ಲಿ ಶ್ರದ್ಧೆಯಿಡುತ್ತಿದ್ದರು. ಈಗಿನ ಕಾಲದಲ್ಲಿ ಆ ಕಟ್ಟುಪಾಡುಗಳೆಲ್ಲವೂ ಹೋಗಿ, ಯಾರೇನು ಮಾಡಿದರೂ ಕೇಳುವವರಿಲ್ಲದಂತಾಗಿದೆ. ಎಲ್ಲರೂ ತಮ್ಮ ತಮ್ಮ ಪಾಡಿಗೆ ಅಲಕ್ಷ್ಯವಾಗಿರುವುದರಿಂದ, ಕುಡಿಯುವುದಕ್ಕಾಗಿ ಉಪಯೋಗಿಸುವ ಬಾವಿಗಳಲ್ಲಿ ಅನೇಕ ಕಶ್ಮಲಗಳು ಸೇರಲು ಅವಕಾಶವಾಗಿದೆ. ಪೂರ್ವದಲ್ಲಿ ಗ್ರಾಮಸ್ಥರೆಲ್ಲರೂ ಕೊಳದ ಕಾವಲುಗಾಗಿಯೇ ಒಬ್ಬನನ್ನು ನಿಯಮಿಸಿ, ಅವನಿಗೆ ಒಂದೊಂದು ಮನೆಯವರೂ ಧಾನ್ಯರೂಪವಾಗಿ ಪ್ರತಿಫಲವನ್ನು ಸಲ್ಲಿಸುತ್ತಿದ್ದರು. ಅಲ್ಲದೆ ಅಂತಹ ಬಾವಿಯ ನೀರನ್ನು ಕಶ್ಮಲಮಾಡಿ ಕೆಡಿಸಿದವರಿಗೆ, ಛಡಿಯಿಂದ ಹೊಡೆಸುವುದು, ಕೈಕೋಳ ಹಾಕಿಸುವುದು. ಮುಂತಾಗಿ ಕೆಲವು ತರದ ಒರಟು ಶಿಕ್ಷೆಗಳನ್ನೂ ವಿಧಿಸುತ್ತಿದ್ದರು. ಈ ವಿಚಾರದಲ್ಲಿ ಆಯಾ ಗ್ರಾಮದ ಪಟೇಲರಿಗೆ ಪೂರ್ಣಾಧಿಕಾರವಿತ್ತು. ಪ್ರತಿಗ್ರಾಮಗಳಲ್ಲಿಯೂ ಮುಖ್ಯಸ್ಥರಾದ ಕೆಲವರು ಪಂಚಾಯತರಾಗಿದ್ದುಕೊಂಡು, ಅವರು ಪಟೇಲನಿಗೆ ಉಚಿತವಾದ ಸೂಚನೆಗಳನ್ನು ಕೊಡುತ್ತಿದ್ದರು. ಈಗ ಆ ಪದ್ಧತಿಯೆಲ್ಲವೂ ಹೋಯಿತು. ಪಟೇಲನು ತಾನು ಸರಕಾರದ ನೌಕರನಂತೆ ಭಾವಿಸಿಕೊಂಡು, ಗ್ರಾಮಸ್ಥರಿಂದ ತೆರಿಗೆಯನ್ನು ವಸೂಲ್ಮಾಡಿ ಸರಕಾರಕ್ಕೆ ಕಟ್ಟುವುದೊಂದೇ ತನ್ನ ಕೆಲಸವೆಂದು ತಿಳಿದಿರುವನು. ಅವನಮೇಲೆ ಗ್ರಾಮಸ್ಥರಿಗೇನೂ ಅಧಿಕಾರವಿಲ್ಲ. ತಮ್ಮ ತಮ್ಮ ಗ್ರಾಮಗಳಿಗೆ ಬೇಕಾದ ಕಾರ್ಯವನ್ನು ಅಲ್ಲಿನ ನಿವಾಸಿಗಳೇ ನೋಡಿಕೊಳ್ಳಬೇಕಾದ ಪದ್ಧತಿಯು ಹೋಗಿ, ತಾಲ್ಲೂಕು ಬೋರ್ಡ್, ಡಿಸ್ಟ್ರಿಕ್ಟು ಬೋರ್ಡುಗಳೆಂಬ ಸಮಾಜಗಳಿಗೆ ಒಳಪಡಿಸಲ್ಪಟ್ಟಿವೆ. ಈ ಬೋರ್ಡುಗಳಿಗೆ ಒಳಪಟ್ಟ ಅನೇಕ ಗ್ರಾಮಗಳ ಆರೋಗ್ಯ, ವಿದ್ಯಾಭಿವೃದ್ಧಿ, ರಸ್ತೆ ಮುಂತಾದ ಎಲ್ಲಾ ಸೌಕರ್ಯಗಳನ್ನೂ ನೋಡಿಕೊಳ್ಳಲು ಅವರಿಗೆ ಸೌಕರ್ಯವೂ, ಕಾಲವೂ ಸಾಲದಂತಾಗಿದೆ. ಗ್ರಾಮಗಳಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ತಕ್ಕ ಏರ್ಪಾಡುಗಳಿರಬೇಕಾದುದು ಬಹಳ ಮುಖ್ಯವು. ಈ ಕಾರ್ಯವೇನೂ ಕಷ್ಟತರವಾದುದೂ ಅಲ್ಲ. ಹೆಚ್ಚು ವೆಚ್ಚವೂ ಇದಕ್ಕೆ ಬೇಕಾದುದಿಲ್ಲ. ದೊಡ್ಡಕೆರೆಗಳ ನೀರು ಸ್ವತಃ ಶುದ್ಧವಾಗಿಯೇ ಇರುವುದರಿಂದ, ವಿಶೇಷವಾಗಿ ಕಶ್ಮಲ ಮಾಡದೆ ಇದ್ದಲ್ಲಿ, ಅದನ್ನು ಬೇರೆ ಶೋಧನಸಂಸ್ಕಾರಗಳೇನೂ ಇಲ್ಲದಂತೆಯೇ ಕುಡಿಯುವುದಕ್ಕೆ ಉಪಯೋಗಿಸಬಹುದು. ಸೇದುವ ಬಾವಿಗಳಿಗೆ ನೀರನ್ನೆತ್ತುವ ಪಂಪುಗಳನ್ನು ಪಯೋಗಿಸುವುದು ಎಲ್ಲಕ್ಕಿಂತಲೂ ಒಳ್ಳೆಯದು. ಅದಕ್ಕೆ ಶಕ್ತಿಯಿಲ್ಲದಿದ್ದರೆ, ಸಿಕ್ಕಿದವರು ಸಿಕ್ಕಿದ ಪಾತ್ರೆಗಳನ್ನು ಆ ಬಾವಿಯಲ್ಲಿ ಬಿಡದಂತೆ ಅದಕ್ಕಾಗಿ ಪ್ರತ್ಯೇಕವಾದ ಒಂದು ತೊಟ್ಟಿಯನ್ನಿಡಿಸಬೇಕು.

ಇದುವರೆಗೆ ಹೇಳಿದಂತೆ ಗ್ರಾಮಗಳಲ್ಲಿ, ಒಳ್ಳೇ ನೀರಿನ ಸರಬರಾಜು, ವಾಸಕ್ಕಾಗಿ ಆರೋಗ್ಯಪದ್ಧತಿಯಿಂದ ಮನೆಗಳನ್ನು ಅಥವಾ ಗುಡಿಸಲುಗಳನ್ನು ಕಟ್ಟುವುದು, ಕಶ್ಮಲಗಳನ್ನು ದೂರ ಸಾಗಿಸುವುದು, ಈ ಏರ್ಪಾಡುಗಳಿದ್ದರೆ. ಗ್ರಾಮಸ್ಥರು ಅನೇಕ ರೋಗಗಳನ್ನು ಜಯಿಸಬಹುದು. ನಗರವಾಸಿಗಳಂತಲ್ಲದೆ, ಅವರಿಗೆ ಪ್ರಕೃತಿಲಭ್ಯಗಳಾದ ಒಳ್ಳೇ ಗಾಳಿ ಬೆಳಕುಗಳು, ತಪ್ಪವೂ, ವೆಚ್ಚವೂ, ಇಲ್ಲದೆ ಧಾರಾಳವಾಗಿ ದೊರೆಯುವುದರಿಂದ, ಅವರು ಸಹಜವಾಗಿಯೇ ಆರೋಗ್ಯದೃಢಕಾಯರಾಗಿರುವರು. ಅವರು ಮೈದುಡಿದು ಕೆಲಸಮಾಡುವುದರಿಂದ ಅದೇ ಅವರಿಗೆ ಅಂಗಸಾಧನೆಯೂ ಆಗಿದೆ. ಆದುದರಿಂದ ಅವರ ದೇಹಾರೋಗ್ಯಕ್ಕೆ ಶುಚಿತ್ವನಿಯಮವೊಂದೇ ಬೇಕಾದುದು. ಇದಕ್ಕಾಗಿ ಮೇಲ್ಕಂಡ ವಿಷಯಗಳನ್ನೆಲ್ಲ ಮೇಲ್ವಿಚಾರಣೆ ನೋಡಿಕೊಳ್ಳತಕ್ಕ ಮುಖ್ಯಸ್ಥನೊಬ್ಬನಿರಬೇಕು. ಮತ್ತು ಆಯಾ ಗ್ರಾಮಗಳಲ್ಲಿ ಪೂರ್ವದಂತೆ ಸ್ವಂತ ಆಡಳಿತದ ಪದ್ಧತಿಯನ್ನೂ ಏರ್ಪಡಿಸಬೇಕು. ಒಂದು ಗ್ರಾಮದಿಂದ ವಸೂಲಾಗುವ ತೆರಿಗೆಯ ಮೊತ್ತದಲ್ಲಿ ಕೊನೇಪಕ್ಷ ಅರ್ಧಭಾಗವನ್ನಾದರೂ, ಆಯಾ ಗ್ರಾಮಸ್ಥರು ತಮ್ಮ ಸ್ವಂತ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವುದಕ್ಕಾಗಿ ಕೊಡುವುದರೊಡನೆ, ಅವಶ್ಯವಿದ್ದಾಗ ಸರಕಾರದಿಂದಲೂ ಸಹಾಯದ್ರವ್ಯವನ್ನು ತಕ್ಕಮಟ್ಟಿಗೆ ಕೊಡಿಸಬೇಕು. "ರಾಯಲ್ ಕಮಿಷನ್ ಆಫ್ ಅಗ್ರಿಕಲ್ಚರ್" ಎಂಬ ರಾಜಕೀಯ ಸಮಿತಿಯವರು, ಹಳ್ಳಿಗಳಲ್ಲಿ ಪೂರ್ವಪದ್ಧತಿಯಿಂದ ಪಂಚಾಯತ ಸಭೆಯ ಮೂಲಕ ಸ್ವಂತ ಆಡಳಿತದ ಪದ್ಧತಿಯೇ ಬಹಳ ಉತ್ತಮವಾದುದೆಂದೂ, ಅದೇ ಕ್ರಮವನ್ನು ತಿರುಗಿ ಏರ್ಪಡಿಸುವುದೊಳ್ಳೆಯದೆಂದೂ ಸೂಚಿಸಿರುವರು. ಸಂಪೂರ್ಣವಾಗಿ ಈಗಿನ ಪದ್ಧತಿಯನ್ನು ಬದಲಾಯಿಸಿ, ಹೊಸಪದ್ಧತಿಯನ್ನಾರಂಭಿಸಲು ಸಾಧ್ಯವಿಲ್ಲದಿದ್ದ ಕಡೆಗಳಲ್ಲಿ, ಕ್ರಮಕ್ರಮವಾಗಿ ಅದನ್ನು ಹೆಚ್ಚಿಸಿಕೊಂಡುಬರಬೇಕು ಎಂಬ ಅಭಿಪ್ರಾಯವನ್ನು ಸೂಚಿಸಿರುವರು. (ಆ. ಚಂ.)

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ 14 ಪೌಂಡಿನ ಗ್ಲೇಜ್‌ಕಾಗದದಲ್ಲಿ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಇದರಲ್ಲಿ ಒಂದರಿಂದ ಸಾವಿರದವರೆಗಿನ ಸಂಖ್ಯೆಗಳ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹರ ಅನುಲೋಮ, ವಿಲೋಮ, ಮಗ್ಗಿ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3 ಮಾತ್ರ.

ಸಚಿತ್ರ ಕರ್ಣಾಟಕ ಗುಣಿತಾಕ್ಷರಬೋಧೆ:—ಮಕ್ಕಳಿಗೆ ಕಲಿಯಲು ಕಷ್ಟವಾದ ಗುಣಿತಾಕ್ಷರಗಳನ್ನು ಸುಲಭರೀತಿಯಲ್ಲಿ ಬೋಧಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0 ಮಾತ್ರ.

ಸಿಲಿಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ. ಇಲಾಖೆಯ ಆಫೀಸರು ಒಪ್ಪಿಗೆಯನ್ನು ಕೊಟ್ಟಿರುವರು.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು. ಉಪಾಧ್ಯಾಯರಿಗೂ ವ್ಯಾಪಾರಿಗಳಿಗೂ ತಕ್ಕಂತೆ ಕಮಿಷನ್ ಉಂಟು.

ಪ್ರಕಾಶಕರು:—**ಜಿ. ರೇವಣ್ಣ ಅಂಡ್ ಬ್ರದರ್**
ಬುಕ್‌ಸೆಲ್ಲರ್ಸ್, ಪೋ॥ ಬಿಡದಿ, ಬೆಂಗಳೂರು ಡಿ॥

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಪ್ರಕೃತಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ-ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ

ಗ್ರಹಮಾತೆಯು—೧ ಶೀಸೆಗೆ ೧೨ ಆಣೆ (ಶಿ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ॥ ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೇಜ್ವರಕ್ಕೆ
ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ಹಸಿವಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇವನೆ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆ ಹುಳುಗಳ ಕೆರವಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿ ಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಕು ಲವಣಗಳೂ, ಹೋಮಿಯೊಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[37] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ.) **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಶೈತ್ಯ ಬಾಯು ಸುವಾಸನೆಯಾಗಿರುತ್ತ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತವೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತವೆ. ಮತ್ತು ರೋಗವು ಬಂದಾಗ ಕೊಟ್ಟರೆ ಮುಂದೆ. ಶೀತ, ಶೀತವಾತ, ನೆಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಬಾಣಂತಿಯರಿಗೆ ಸಂಜೀವನ ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಒಂದಲ್ಲೇ ಕೂತಿರಬೇಕಾದವರಿಗೂ, ಧೋಷಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮನೆಮನೆಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[52] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ(೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟಿ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸಿ[illegible]ಕರಣ(೨ನೆಯ ಆವೃತ್ತಿ)	೪ ಆಣೆ
ಪಂಡಿತ [illegible]ರೀನಾಥಶಾ[illegible]ರ ಭಾಷಣ(೩ನೆಯ ಆ.)	೪ ಆಣೆ
ವೈದಿಕವಾ[illegible]ರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨॥ ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್(ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೦—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು.

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಸ್ವಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ೫೧೦, ಮದರಾಸ

[40]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿ[illegible] ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

5

0 — 1
1 — 8 — 0
— 0
1 — 0 — 0
0 — 1 — 0
0 — 1 — 0
0 — 6 — 0
0 — 4 — 0

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ಏಪ್ರಿಲ್ ೧೯೩೧ [ಸಂಚಿಕೆ ೧

ಚಂದಾದಾರರಲ್ಲಿ ವಿಜ್ಞಾಪನೆ.

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ನಾಲ್ಕುವರ್ಷಗಳಾಗಿ ಐದನೆಯ ವರ್ಷವು ಪ್ರಾರಂಭವಾಯಿತು. ಚಂದಾದಾರರು ಮೊದಲಿನಂತೆ ಅಭಿಮಾನವಹಿಸಿ ಚಂದಾದಾರರಾಗಬೇಕೆಂದು ಕೋರಿಕೆ. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನುಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೪ ಆಣೆ ಹೆಚ್ಚಿಗೆ ಬೀಳುವುದು. ಅಲ್ಲದೆ ಈಗ ಪೋಸ್ಟಿನ ಹೊಸ ರೂಲ್ಸಿನ ಪ್ರಕಾರ ವಿ. ಪಿ. ಗಳನ್ನು 3 ದಿವಸ ಮಾತ್ರ ಇಡುವರು. ಇದರಿಂದಂತೂ ಎಲ್ಲರಿಗೂ ತೊಂದರೆಯಾಗುವದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ. ೮ ಆಣೆಗಳನ್ನು ಮಣಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೨ ರೂ. ೧೨ ಆಣೆ ಬೀಳುವದು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟುಕೂಡಿಸಿ ಒಂದೇ ಸಾರೆ ಮಣಿಯಾರ್ಡರ್ ಮಾಡಬೇಕು. ಹೀಗೆ ಮಾಡುವದರಿಂದ ಸರ್ವರಿಗೂ ಹಿತವಾಗುತ್ತದೆ. ಮಣಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ **ನಂಬರನ್ನು** ಮಾತ್ರ ದಯೆಯಿಟ್ಟು ಮರೆಯದೆ ತಿಳುಹಿಸಬೇಕು. ನಂಬರು ತಿಳುಹಿಸದಿದ್ದರೆ ತೊಂದರೆಯಾಗುವದು. ಪತ್ರಿಕೆಯು ಯಾರಿಗಾದರೂ ಬೇಡವಾಗಿದ್ದರೆ ಅವರು ಕೂಡಲೆ ಬರೆದು ತಿಳುಹಿಸಬೇಕೆಂದು ಕೋರುತ್ತೇವೆ.

ಸಂ.—

ಜಗದಾಚಾರ್ಯರ ಜಯಂತಿಮಹೋತ್ಸವ ಮುತನಾಳ.

ಸ್ಮಾರ್ತಮತದವರು ಶಂಕರಾಚಾರ್ಯರ ಜಯಂತಿಯ ದಿವಸವನ್ನೂ ಶ್ರೀವೈಷ್ಣವರು ರಾಮಾನುಜಾಚಾರ್ಯರ ಜಯಂತಿಯ ದಿವಸವನ್ನೂ ಅತಿ ಪವಿತ್ರವಾದ ಹಬ್ಬದ ದಿನಗಳಂತೆ ತಿಳಿದು ಆ ದಿವಸಗಳಲ್ಲಿ ತಮ್ಮ ದಿನದ ವ್ಯವಹಾರದ ಕಾರ್ಯಗಳನ್ನು ತ್ಯಜಿಸಿ ತಮ್ಮ ತಮ್ಮ ಮತಸ್ಥಾಪಕರ ಪ್ರಾರ್ಥನೆ, ಭಜನೆ, ಕೀರ್ತನ ಮತ್ತು ಸ್ತುತಿಪರ ಭಾಷಣಗಳನ್ನು ಮಾಡಿ ತಮ್ಮಲ್ಲಿದ್ದ ಪೂಜ್ಯಭಾವನೆಯನ್ನು ಪ್ರಕಟಿಸುವಂತೆ, ಯಾವ ಮಹಾತ್ಮರು ಅಗಸ್ತ್ಯ, ಗೌತಮ, ದೂರ್ವಾಸ, ದಧೀಚಿ, ಸಾನಂದ, ವ್ಯಾಸ, ಕಶ್ಯಪ, ಹರಿಶ್ಚಂದ್ರ ಮೊದಲಾದ ಮಹರ್ಷಿಗಳಿಗೆ ವೀರಶೈವ ತತ್ವವನ್ನು ಬೋಧಿಸಿದರೋ ಅಂತಹ ಪರಮಗುರುಗಳಾದ ಶ್ರೀಪಂಚಾಚಾರ್ಯರ ಜಯಂತಿಗಳನ್ನು ಆಚರಿಸಬೇಕು. ಅದರಂತೆ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿ ಮಹೋತ್ಸವವನ್ನು ವೈಶಾಖ ಶು|| ೨ ಸೋಮವಾರ ಬೆಳಗಾಂವ ತಾಲೂಕ ಪೈಕಿ ಮುತನಾಳ ಬೃಹನ್ಮಠಾಧ್ಯಕ್ಷ ಷ|| ಬ್ರ|| ಗುರುಶಾಂತಸ್ವಾಮಿಗಳ ಅಪ್ಪಣೆಯ ಮೇರೆಗೆ ಮುತನಾಳ ಗ್ರಾಮದ ಸಮಸ್ತ ಭಕ್ತ ಮಾಹೇಶ್ವರರು ಅತಿ ವೈಭವದಿಂದ ನೆರವೇರಿಸಿದರು. ಮೊದಲು ಆಚಾರ್ಯರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯನ್ನು ಮಾಡಿ ಹೂವಿನ ಹಾರಗಳಿಂದ ಅಲಂಕರಿಸಿದ ನಂತರ ರಾತ್ರಿ ೮ ಗಂಟೆಗೆ ಆಚಾರ್ಯರ ಭಾವಚಿತ್ರವನ್ನು ಸುಂದರವಾದ ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿ ಛತ್ರ ಚಾಮರಗಳಿಂದಲೂ, ಘಂಟೆ, ಜಾಗಟೆ ಮೊದಲಾದ ವಾದ್ಯಗಳಿಂದಲೂ ಮೆರವಣಿಗೆಯು ತೆಗೆಯಲ್ಪಟ್ಟು ಆಚಾರ್ಯರ ಜಯ ಜಯಕಾರದೊಡನೆ ಮಠಕ್ಕೆ ತಲ್ಪಿತು. ಅನಂತರ ಷ|| ಬ್ರ|| ಗುರುಶಾಂತಸ್ವಾಮಿಗಳು ಈ ಆಚಾರ್ಯರ ಮಹತ್ವವನ್ನೂ ಹಾಗೂ ಈ ಗುರುಪುಂಗವರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ಪ್ರಾಶಸ್ತ್ಯವನ್ನೂ ಬಹು ವಿಶದವಾಗಿ ಹೇಳಿದರು. ಆಮೇಲೆ ಮ|| ರಾ|| ಬಸವಗೌಡ ಗುರುಸಿದ್ಧಪಗೌಡ ಪಾಟೀಲ ಇವರು ವೀರಶೈವರಾದಂಥ ನಾವೆಲ್ಲರೂ ಗುರುವರ್ಯರು ಕೊಟ್ಟಿರುವಂಥ ಇಷ್ಟಲಿಂಗವನ್ನೇ ಪೂಜಿಸಬೇಕಲ್ಲದೆ ದ್ಯಾಮವ್ವ, ದುರಗವ್ವ ಮೊದಲಾದ ದೇವತೆಗಳನ್ನು ಪೂಜಿಸಕೂಡದು. ಪತಿವ್ರತೆಯಾದ ಸ್ತ್ರೀಯಳು ತನ್ನ ಗಂಡನನ್ನು ಬಿಟ್ಟು ಇನ್ನೊಬ್ಬ ಪುರುಷನನ್ನು ಹೊಂದಿದರೆ ಹೇಗೆ ನರಕಕ್ಕೀಡಾಗುವಳೋ ಅದರಂತೆಯೇ ನಾವೆಲ್ಲರೂ ಅನ್ಯದೇವತೆಗಳನ್ನು ಪೂಜಿಸಿದ್ದಾದರೆ ನರಕಕ್ಕೀಡಾಗುವಿರಿ. ಆದ್ದರಿಂದ ಅನ್ಯದೇವತೆಗಳನ್ನು ಪೂಜಿಸಕೂಡದೆಂದೂ, ಭರತಖಂಡದಲ್ಲಿ ತಮ್ಮ ತಪಃಪ್ರಭಾವದಿಂದಲೂ, ಮಹಿಮಾಪ್ರಭಾವದಿಂದಲೂ ಜ್ಞಾನಪ್ರಭಾವದಿಂದಲೂ ಅಸಾಧಾರಣವಾದ ಕೀರ್ತಿಯನ್ನು ಹೊಂದಿ ಈ ಹೊತ್ತಿನವರೆಗೆ ಕೀರ್ತಿವಂತರಾಗಿ ಪ್ರಕಾಶಿಸುತ್ತಿರುವ ಅಗಸ್ತ್ಯ, ಗೌತಮ, ದೂರ್ವಾಸ, ವ್ಯಾಸ, ಕಶ್ಯಪ ಮೊದಲಾದ ಮಹರ್ಷಿಗಳು ಸಹ ಲಿಂಗಧಾರಣ ಮಹಿಮೆಯನ್ನರಿತು ಶ್ರೀ ಜಗದ್ಗುರು ಪಂಚಾಚಾರ್ಯರ ಪಾದಾರವಿಂದಗಳನ್ನಾಶ್ರಯಿಸಿ ಇಷ್ಟಲಿಂಗವನ್ನು ಪಡೆದು ಅವರಿಂದ ಲಿಂಗಾಂಗಸಾಮರಸ್ಯರೂಪವಾದ ಜ್ಞಾನವನ್ನು ಸಂಪಾದಿಸಿಕೊಂಡು ಮುಕ್ತರಾಗಿದ್ದಾರೆ. ಆದ್ದರಿಂದ ವೀರಶೈವರಾದಂಥ ನಾವೆಲ್ಲರೂ ಗುರುಗಳು ಕೊಟ್ಟಿರುವಂಥ ಇಷ್ಟಲಿಂಗವನ್ನು ಪೂಜಿಸಿ ಮೋಕ್ಷಭಾಗಿಗಳಾಗಬೇಕೆಂದು ಬಹು ವಿಶದವಾಗಿ ಹೇಳಿದರು. ಅನಂತರ ಮಂಗಲವಾಗಿ ಆಚಾರ್ಯರ ಜಯ ಜಯಕಾರದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಸವನಗೌಡ ಪಾಟೀಲ.

ಪತ್ರಿಕಾಪ್ರತಿನಿಧಿಗಳಿಗೆ ಮಹಾತ್ಮರ ಉತ್ತರ.

ಪ್ರಶ್ನೆ—ತಮ್ಮ ಮುಂದಿನ ಕಾರ್ಯಕ್ರಮವೇನು?

ಉತ್ತರ—ಜಾತಿಭೇದದ ಹೊಡೆದಾಟವು ಬಗೆಹರಿಯುವವರೆಗೆ ಯಾವ ಕಾರ್ಯಕ್ರಮವನ್ನೂ ನಿರ್ಧರಿಸಲಾರೆನು.

ಪ್ರಶ್ನೆ—ಮತವೈಷಮ್ಯದ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?

ಉತ್ತರ—ಆ ವಿಷಯದಲ್ಲಿ ಯಾವ ತೀರ್ಮಾನವನ್ನೂ ಹೇಳಲಾರೆನು. ಆದರೆ ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ನನ್ನ ಕೈಲಾದ ಪ್ರಯತ್ನವನ್ನೆಲ್ಲಾ ಮಾಡುವೆನು.

ಪ್ರಶ್ನೆ—ಪ್ರತ್ಯೇಕ ಚುನಾವಣೆಗೆ ತಾವು ವಿರೋಧಿಗಳೋ?

ಉತ್ತರ—ಮತವೈಷಮ್ಯವನ್ನು ಕಡಿಮೆಮಾಡುವ ಯಾವ ಪ್ರಯತ್ನಕ್ಕೂ ನಾನು ವಿರೋಧಿಯಲ್ಲ.

ಪ್ರಶ್ನೆ—ಪ್ರತ್ಯೇಕ ಚುನಾವಣೆಯು ಕೋಮುಗಳಿಗಿರುವ ಅಂತರವನ್ನು ಹೆಚ್ಚಿಸುವುದಿಲ್ಲವೇ?

ಉತ್ತರ—ಪ್ರಕೃತದಲ್ಲಿ ನಾನು ಆ ವಿಷಯದಲ್ಲಿ ಹೆಚ್ಚು ಯೋಚಿಸುವುದಿಲ್ಲ.

ಪ್ರಶ್ನೆ—ಎಲ್ಲಾ ಮಹಮ್ಮದೀಯರನ್ನು ತೃಪ್ತಿಪಡಿಸುವುದು ತಮ್ಮಿಂದ ಸಾಧ್ಯವೇ?

ಉತ್ತರ—ಆಗಬಹುದೆಂಬ ಭರವಸೆ ಇದೆ.

ಪ್ರಶ್ನೆ—ತಾವು ಹಿಂದುಸ್ಥಾನ ರಾಜಕೀಯ ವಿಷಯದಲ್ಲಿ ಕೈಹಾಕಲು ಬಹಳ ಅನಾಯಕರಾದವರೆಂದು ಹೇಳಿರುವ ಶೌಕತಾಲಿಯವರ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?

ಉತ್ತರ—ಅವರು ನನ್ನ ಪೂರ್ವ ಸ್ನೇಹಿತರಾದುದರಿಂದ ಅವರು ಹಾಗೆ ಹೇಳಿರುವುದು ನ್ಯಾಯ.

ಪ್ರಶ್ನೆ—ರಾಷ್ಟ್ರಸಭೆಯು ಸಂಧಾನದ ಷರತ್ತುಗಳನ್ನು ನಡೆಯಿಸಲಿಲ್ಲವೆಂದು ಹೇಳುವ ಆಂಗ್ಲೋ ಇಂಡಿಯನ್ನರಿಗೆ ನಿಮ್ಮ ಉತ್ತರವೇನು?

ಉತ್ತರ—ಅದು ಸುಳ್ಳು ಎಂಬುದಾಗಿ ಒತ್ತಿ ಹೇಳಬಲ್ಲೆ. ಏಕೆಂದರೆ—ಗುಜರಾಥದವರು ಕೂಡಲೆ ತಮ್ಮ ಕರ್ತವ್ಯವನ್ನು ಆಚರಿಸಿರುವರು. ಬಾರ್ಡೋಲಿಯವರು ತಾವು ಕೊಡಬೇಕಾಗಿದ್ದುದನ್ನು ಅದಷ್ಟು ಜಾಗ್ರತೆ ಕೊಡುತ್ತಿರುವರು. 16ನೇ ತಾರೀಖಿನವರೆಗೆ ಬಾರ್ಡೋಲಿ ಮತ್ತು ವಾಲೋಡ್ ಎರಡರಿಂದ 1,10,653 ರೂಪಾಯಿಗಳೂ, ಜಲಾಲ್‌ಪುರದಿಂದ 1,96,453 ರೂಪಾಯಿಗಳೂ ಕೊಡಲ್ಪಟ್ಟಿರುವುವು. ಜಮೀನಿನ ವಿಷಯದಲ್ಲಿ ಅವುಗಳು ಮೂರನೆಯವರ ಕೈವಶವಾಗಿದ್ದಲ್ಲಿ ಅವರನ್ನು ಪ್ರಾರ್ಥಿಸಿ ಆ ಜಮೀನುಗಳು ಹಿಂದಕ್ಕೆ ಬರುವಂತೆ ಮಾಡುವೆವು.

ಸ್ವೀಕಾರ.

ಶ್ರೀಮಂತ ಸರ್ದಾರ ಬುಳ್ಳಪ್ಪ ಬಸವಂತರಾವ್ ಮಾಮಲೆ ದೇಸಾಯಿ ಸಂಸ್ಥಾನ ಹಂದಿಗನೂರು ಇವರ ದ್ವಿತೀಯ ಧರ್ಮಪತ್ನಿ ಕುಂ|| ಸೌ|| ಚನ್ನವ್ವದೇಸಾಯಿಣಿಯವರು ಪುತ್ರರತ್ನವನ್ನು ಹೆತ್ತ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **5** ರೂ. ಗಳು ಶ್ರೀ|| ಷ|| ಬ್ರ|| ಮಳಲಿಮಠದ ನಾಗಾರ್ಜುನಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಮೈಸೂರು ರಾಜಧಾನಿ ನಿವಾಸಿಗಳಾದ ಹೊಸಮಠಾಧ್ಯಕ್ಷ ಶ್ರೀಮನ್ನಿರಂಜನ ಬಸವಲಿಂಗಸ್ವಾಮಿಗಳವರು ತಮ್ಮ ಮಠದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ **1** ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ಚಾಮರಾಜನಗರ ತಾಲ್ಲೂಕ. ಕುದೇರಲ್ಲಿರುವ ಮ|| ರಾ|| ಗುರುಲಿಂಗಪ್ಪನವರ ಪೌತ್ರಿ ಚಿ|| ಸೌ|| ಶಿವರುದ್ರಮ್ಮನನ್ನು ಸಿದ್ಧರಹಳ್ಳಿ ಮ|| ರಾ|| ಸದಾಶಿವಪ್ಪನವರ ಪುತ್ರ ಚಿ|| ಯಡೆಯೂರಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **1** ರೂ. ಯು ಮ|| ರಾ|| ಕಲ್ಯಾಣಿ ಮಹಾದೇವಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯ

(ಮುಕ್ಕಾಂ ಕಂಡೆಪ್ಪನ ಚೌಕಿ, ಬಳ್ಳಾರಿ.)

ಈ ವಿದ್ಯಾಲಯವು ಈ ವೈಶಾಖ ಶು|| ೩ ಗೆ ತೆಗೆಯಲ್ಪಟ್ಟಿರುವದು. ಪರೀಕ್ಷಾಪೇಕ್ಷೆಯಿಂದ ಬಂದುಸೇರತಕ್ಕ ವಿದ್ಯಾರ್ಥಿಗಳು ಜುನ್ಯ ತಿಂಗಳೊಳಗಾಗಿ ಬಂದು ಸೇರತಕ್ಕದ್ದು. ಪರೀಕ್ಷಾಗ್ರಂಥಗಳು ಶೀಘ್ರದಲ್ಲಿಯೇ ಪ್ರಾರಂಭ ಮಾಡಲ್ಪಡುವುವು.

ಚಿಕ್ಕ (ಎಲಿಮೆಂಟರಿ ಕ್ಲಾಸ್) ವಿದ್ಯಾರ್ಥಿಗಳನ್ನು ಮುಂದೆ ಜೇಷ್ಠ ಬಹುಳದಲ್ಲಿ ಸೇರಿಸಲಾಗುವದು.

ಸೆಕ್ರೆಟರಿ.

ರಾಜಧಾನಿಯ ದೊಡ್ಡಕೆರೆ.

ಈ ಕೆರೆಯನ್ನು ಆಳಿದ ಶ್ರೀ ಮಹಾಪ್ರಭುಗಳಾದ ದೊಡ್ಡ ದೇವರಾಜಒಡೆಯರವರು ಕಟ್ಟಿಸಿ ಈ ಕೆರೆಗೆ ದೇವರಾಜಸಾಗರವೆಂದು ನಾಮಕರಣಮಾಡಿದ್ದರು. ಇದು ಸಮುದ್ರದೋಪಾದಿಯಲ್ಲಿ ಅಲೆಗಳಿಂದ ಭೋರ್ಗರೆಯುತ್ತಿದ್ದಿತೆಂತಲೂ ವೀರಣಗೆರೆ (ರಾಜಧಾನಿ ಉತ್ತರದಿಕ್ಕು)ಯಿಂದ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಕೊಬ್ಬಳೆಕೆರೆಯವರೆಗೂ, ಇಟ್ಟಿಗೆಗೂಡಿನಿಂದ ಹಳೇಅಗ್ರಹಾರದವರೆಗೂ ಸುಮಾರು 4 ಚದರಮೈಲಿಯುಳ್ಳ ಸಾಗರ(ಸಮುದ್ರ)ದಂತೆ ಇದ್ದಿತೆಂತಲೂ ಪೂರ್ವಿಕರು ಹೇಳುತ್ತಾರೆ. ಪ್ರಕೃತದಲ್ಲಿ ಈ ಕೆರೆಯು ಸಾಗರದಿಂದ ದೊಡ್ಡ ಕೆರೆಗೆ ಇಳಿದಿರುತ್ತದೆ. ಸ್ವಲ್ಪದಿವಸಗಳಲ್ಲಿ ಕೆರೆಯಿಂದ ಕೊಳಗಳಿಗೂ, ಕೊಳಗಳಿಂದ ಭಾವಿಗಳಿಗೂ ಇಳಿದು, ಅನಂತರ ಇವೆಲ್ಲಾ ಮಾಯವಾಗಿ ದೇವರಾಜ ಪಾರ್ಕ್(ಉದ್ಯಾನವನ) ಆದರೂ ಆಗಬಹುದು. ನಮ್ಮನ್ನು ಆಳುವ ಘನವೆತ್ತ ಶ್ರೀಮತ್ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಜಿ. ಬಿ. ಇ. ಮಹಾಸ್ವಾಮಿಯವರಲ್ಲೂ ಅವರ ಘನಸರ್ಕಾರದಲ್ಲೂ ರಾಜಭಕ್ತಿಯಿಂದ ವಿಜ್ಞಾಪನೆಮಾಡಿಕೊಳ್ಳುವುದೇನೆಂದರೆ ಆಳಿದ ಮಹಾಪ್ರಭುಗಳಾದ ಶ್ರೀಮನ್ ದೇವರಾಜ ಒಡೆಯರ್ ಬಹದ್ದೂರ್‌ರವರಿಂದ ಕಟ್ಟಿಸಲ್ಪಟ್ಟಿರುವ ಈ ಕೆರೆಯನ್ನು ದಕ್ಷಿಣ ದಿಕ್ಕಿಗೂ ಪೂರ್ವ ದಿಕ್ಕಿಗೂ ನುತ್ತಷ್ಟು ವಿಸ್ತರಿಸಿ ಊರೊಳಗೆ ಬೀಳುವ ಮಳೆನೀರು ಸಹ ಈ ಕೆರೆಗೆ ಬಂದು ಬೀಳದಂತೆಯೂ ಬಯಲಲ್ಲಿ ಬೀಳುವ ನೀರು ಮಾತ್ರ ಬೀಳುವಂತೆಯೂ, ಶ್ರೀ ಚಾಮುಂಡಿ ಬೆಟ್ಟದ ಅಲಂಕಾರಕ್ಕೂ, ವರ್ಧಂತಿ, ನವರಾತ್ರಿ ಮಹೋತ್ಸವಗಳಿಗೆ ಬರುವ ಪ್ರಜೆಗಳ ಸ್ನಾನಪಾನೀಯಗಳಿಗೂ ಅನುಕೂಲವಾಗಿರುವಂತೆಯೂ, ಆಳಿದ ಶ್ರೀ ದೇವರಾಜ ಮಹಾಪ್ರಭುಗಳ ಶಾಶ್ವತವಾದ ಧರ್ಮ ಕಾರ್ಯವನ್ನು ಮತ್ತಷ್ಟು ಅಭಿವೃದ್ಧಿ ಆಗುವಂತೆಯೂ ಸಹ ರಾಜಾಜ್ಞೆ ದಯಪಾಲಿಸಬೇಕೆಂಬದಾಗಿ ಆಳುವ ನಮ್ಮ ಮಹಾಪ್ರಭುಗಳವರಲ್ಲಿ ಅತ್ಯಂತ ವಿನಯದಿಂದಲೂ, ರಾಜಭಕ್ತಿಯಿಂದಲೂ ಮೊರೆಯಿಟ್ಟು ಬೇಡಿಕೊಳ್ಳುತ್ತೇನೆ.

ರಾಜಧಾನಿಯ ಅಲಂಕಾರಪ್ರಿಯ.

ಮಹಾತ್ಮಗಾಂಧಿಯವರಿಗೆ ರೆಜಿನಾಲ್ಡ್ ರೇನಾಲ್ಡ್ಸ್‌ರವರ ಪತ್ರ.

ಇವರು ಮಹಾತ್ಮ ಗಾಂಧಿಯವರು ಸತ್ಯಾಗ್ರಹ ಚಳವಳಿಯನ್ನು ಪ್ರಾರಂಭಿಸುವುದಕ್ಕೆ ಪೂರ್ವದಲ್ಲಿ ಮಹಾತ್ಮರ ಹನ್ನೊಂದು ಮುಖ್ಯಾಂಶಗಳನ್ನೊಳಗೊಂಡ ಪತ್ರವನ್ನು ವೈಸರಾಯರಲ್ಲಿಗೆ ಪ್ರತ್ಯಕ್ಷವಾಗಿ ತೆಗೆದುಕೊಂಡುಹೋದವರು. ಇವರು ಎಂಗ್ ಇಂಡಿಯಾಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವ ಲೇಖನವೇನೆಂದರೆ :—

ದಿಲ್ಲಿಒಪ್ಪಂದದಿಂದ ಅರೆಕಾಸಿನ ಪ್ರಯೋಜನವಿಲ್ಲ.

ಈ ಮೊದಲು ನಾನು ಬರೆದ ಪತ್ರಕ್ಕೆ ಮಹಾತ್ಮರು ಬರೆದಿರುವ ಉತ್ತರವನ್ನು ನೋಡಿ ಸಂತೋಷವೆನಿಸುತ್ತದೆ. ಈಉತ್ತರವು ನನಗೆ ತಲ್ಪುವದಕ್ಕೆ ಪೂರ್ವದಲ್ಲಿಯೇ ವರ್ತಮಾನಪತ್ರಿಕೆಗಳಿಂದ ಎಲ್ಲಾ ವಿಷಯಗಳೂ ತಿಳಿದಿದ್ದುವು. ಮಹಾತ್ಮರಪತ್ರವು ನನ್ನನ್ನು ಎಷ್ಟೂ ಮನಗಾಣಿಸಲಾರದೆಹೋಯಿತು. ಮಹಾತ್ಮರ ಪರಿಚಿತರಾದ ಯಾರೂ ಅವರ ನಿಸ್ಪೃಹತೆಯನ್ನು ಆಕ್ಷೇಪಿಸುವಹಾಗಿರುವುದಿಲ್ಲ. ಮಹಾತ್ಮರು ಎಲ್ಲಿಯವರೆಗೆ ಹಿಂದುಸ್ಥಾನದ ಪ್ರತಿನಿಧಿಗಳಾಗಿ ಅದರ ಅಭಿಪ್ರಾಯವನ್ನು ಪ್ರತಿಪಾದಿಸುವರೋ ಅಲ್ಲಿಯವರೆಗೆ ಯಾವ ಆಂಗ್ಲೇಯನಾಗಲಿ ಅವರನ್ನು ಆಕ್ಷೇಪಿಸುವುದು ಧರ್ಮವಲ್ಲವಾದರೂ, ಕೆಲವಂಶಗಳಲ್ಲಿ ನಾನು ಭಿನ್ನಾಭಿಪ್ರಾಯಪಡುವುದಕ್ಕೆ ನನಗೆ ಪೂರ್ಣಸ್ವಾತಂತ್ರ್ಯವಿದೆ.

1. ಸಾರ್ವಭೌಮಸರ್ಕಾರದವರು ವಾಸ್ತವವಾಗಿ ಭಾರತೀಯರಿಗೆ ಪೂರ್ಣಸ್ವರಾಜ್ಯವನ್ನು ಕೊಡಬೇಕೆಂದು ಇಚ್ಛಿಸುವುದಿಲ್ಲ. ಹಾಗೆ ಪ್ರಯತ್ನಪಟ್ಟೊಡನೆಯೇ ಲೇಬರ್‌ಪಕ್ಷದ ಪ್ರಭುತ್ವವು ಬಿದ್ದುಹೋಗುವುದು. ಪೂರ್ಣಸ್ವರಾಜ್ಯಕ್ಕಿಂತ ಕಡಿಮೆಯಾಗಿರುವ ರಾಜಕೀಯಸುಧಾರಣೆಗಳನ್ನು ನೀವು ಅಂಗೀಕರಿಸಿದರೆ, ಲಾಹೋರ್ ಕಾಂಗ್ರೆಸ್ಸಿನಲ್ಲಿ ತೀರ್ಮಾನವಾದ ಸಂಪೂರ್ಣಸ್ವಾತಂತ್ರ್ಯಠರಾವಿನ ಗತಿಯೇನು? ಪೂರ್ಣಸ್ವರಾಜ್ಯಕ್ಕೂ ಸಾಮ್ರಾಜ್ಯಾಂತರ್ಗತಸ್ವರಾಜ್ಯಕ್ಕೂ ವ್ಯತ್ಯಾಸವೇನು? ಭಾರತೀಯರಿಗೆ ಹೆಚ್ಚಿಗೆ ಏನು ಲಭ್ಯವಾದಂತಾಯಿತು? ಮೊದಲಿನ ಪ್ರತಿಜ್ಞೆಯು ಏನಾಯಿತು?

2. ದಬ್ಬಾಳಿಕೆಯು ಒಂದೇ ಸಮನೆ ಹಿಂದುಸ್ಥಾನದಲ್ಲಿ ನಡೆದೇ ಇದೆ. ಸಾರ್ವಜನಿಕ ಅಭಿಪ್ರಾಯವನ್ನು ಧಿಕ್ಕರಿಸಿ ನಿಮ್ಮ ದೇಶದಲ್ಲಿಯೇ ಸಶಸ್ತ್ರಸೈನ್ಯದ ಬಲವನ್ನು ಪ್ರಯೋಗಮಾಡಿ ನಿಮ್ಮ ಕಡೆಯಿಂದ ತಮಗೆ ಅನುಕೂಲವಾದ ಒಪ್ಪಂದದ ಷರತ್ತುಗಳನ್ನು ಹೊಂದಿದರಿಂದ ಮೇಲೆ ಹೃದಯಪರಿವರ್ತನವೆಲ್ಲಿದೆ?

3. ಮಹಾತ್ಮರು ಆಗಾಗ್ಗೆ ಸರ್ಕಾರದವರಿಗೆ ಕೆಲವು ಷರತ್ತುಗಳನ್ನು ಹಾಕುತ್ತಲೇ ಇದ್ದಾರೆ ಅವುಗಳಲ್ಲಿ ಮೊದಲನೆಯದು 1929 ನೆಯ ವರ್ಷದ ದಿಲ್ಲಿ ಪ್ರಕಟನೆ, ಎರಡನೆಯದು ಹನ್ನೊಂದು ಮುಖ್ಯಾಂಶಗಳು, ಮೂರನೆಯದು ಸ್ಲೋಕೋಂಬರ ಸಮಕ್ಷಮ ಹೇಳಿದ ಷರತ್ತುಗಳು. ಇವುಗಳ ಗತಿಯೇನಾಯಿತು?

ಸರ್ಕಾರದವರು ಈ ಷರತ್ತುಗಳಿಗೆ ಪ್ರತಿಯಾಗಿ ಕೆಲವು ರಿಯಾಯಿತಿಗಳನ್ನು ಕೊಟ್ಟು ಸಮಾಧಾನಪಡಿಸುವುದರಲ್ಲಿರುವರೆಂದು ದಿಲ್ಲಿ ಒಪ್ಪಂದದಿಂದ ವ್ಯಕ್ತವಾಗುತ್ತದೆಯೇ ಹೊರತು ಸ್ವರಾಜವನ್ನು ಕೊಡುವ ಇರಾದೆಯುಳ್ಳವರಾಗಿರುವರೆಂಬುದು ತೋರುವುದಿಲ್ಲ. ಎರಡನೆಯಸಾರೆ ನಡೆಯುವ ರೌಂಡ್‌ಟೇಬಲ್‌ಸಮ್ಮೇಳನದಲ್ಲಿ ಕಾಂಗ್ರೆಸ್ಸಿನವರಿಗೆ ತಕ್ಕ ಪ್ರಾತಿನಿಧ್ಯವು ದೊರೆಯುವುದೆಂಬ ಭರವಸೆಯಾದರೂ ಎನಿದೆ? ಸರ್ಕಾರದಿಂದ ಕಳುಹಿಸಲ್ಪಡುವ ಪ್ರತಿನಿಧಿಗಳು ಕಾಂಗ್ರೆಸ್ ಪ್ರತಿನಿಧಿಗಳ ಅಭಿಪ್ರಾಯವನ್ನು ಎದುರಿಸಿ ಅದನ್ನು ನುಂಗಿ ಹಾಕಿ ಬಿಡಬಹುದು. ಸತ್ಯಾಗ್ರಹಚಳವಳಿಯು ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಜೈಲಿಗೆ ಹೋಗಿದ್ದ ರಾಜಕೀಯಕೈದಿಗಳು ಬಿಡುಗಡೆಹೊಂದುವುದಕ್ಕೆ ದಿಲ್ಲಿ ಒಪ್ಪಂದದಲ್ಲಿ ಯಾವ ಷರತ್ತೂ ಇರುವುದಿಲ್ಲ. ಆದುದರಿಂದ ಎಲ್ಲ ರಾಜಕೀಯ ಕೈದಿಗಳು ಬಿಡುಗಡೆಹೊಂದುವರೆಂಬ ಭರವಸೆಯಿರುವುದಿಲ್ಲ.

ಸತ್ಯಾಗ್ರಹಚಳವಳಿಯು ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಇಲ್ಲದೆ ಇರುವ ಯಾವಯಾವ ಅಂಶಗಳಲ್ಲಿ ಮಹಾತ್ಮರಿಗೆ ಲಾಭವಾಗಿದೆಯೋ ನನಗೆ ಬೇರೆ ತಿಳಿಯದು. ಮಹಾತ್ಮರ ಹನ್ನೊಂದು ಮುಖ್ಯಾಂಶಗಳೊತ್ತಟ್ಟಿಗಿರಲಿ; ಮದ್ಯಪಾನನಿಷೇಧ ಮೊದಲಾದ ನಾಲ್ಕಂಶಗಳನ್ನೂ ಸಹ ಸರ್ಕಾರದವರು ಅಂಗೀಕರಿಸಿರುವುದಿಲ್ಲ. ದಿಲ್ಲಿ ಒಪ್ಪಂದವನ್ನು ಸಮರ್ಥನಮಾಡಿ ಮಹಾತ್ಮರು ಯಾವ ಕಾರಣಗಳನ್ನು ಹೇಳುವರೋ, ಅವೇ ಕಾರಣಗಳನ್ನೇ ಮೊದಲು ಸರ್ಕಾರದವರೂ, ಮವಾಳಪಕ್ಷದವರೂ ಮಹಾತ್ಮರು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಬರಲೆಂದು ಹೇಳಿದರು. ಆ ಕಾರಣಗಳನ್ನು ಆಗ ಮಹಾತ್ಮರು ತಿರಸ್ಕರಿಸಿ, ಈಗ ಹೇಳಲು ಕಾರಣವೇನು? ಇಡೀ ಜನಾಂಗವು ಯಾವ ಕಾರಣದಿಂದ ವರ್ಣಿಸಲಸದಳವಾದ ಕಷ್ಟವನ್ನನುಭವಿಸಿತು? ಇನ್ನೂ ಅನೇಕರು ಜೈಲಿನಲ್ಲಿಯೇ ಇದ್ದಾರೆ. ಇನ್ನೂ ಅನೇಕರಿಗೆ ಚಳವಳಿಯಲ್ಲಿ ಕಿತ್ತುಕೊಂಡ ಆಸ್ತಿಪಾಸ್ತಿಗಳನ್ನು ವಾಪಸು ಕೊಟ್ಟಿರುವುದಿಲ್ಲ. ಸತ್ಯಾಗ್ರಹ ಚಳವಳಿಯಲ್ಲಿ ಅನೇಕರು ಮೃತಪಟ್ಟರು. ಜನರ ಮೇಲೆ ಪ್ರಯೋಗ ಮಾಡಿದ ಲಾಠೀ ಹೊಡೆತಕ್ಕೆ ಪ್ರಾಯಶ್ಚಿತ್ತವೇನು? ಸತ್ಯಾಗ್ರಹ ಚಳವಳಿಯು ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ ಲಾರ್ಡ್ ಇರ್ವಿನ್‌ರವರು ಕೊಡದಿದ್ದ ಯಾವುದಾದರೂ ಹಕ್ಕುಬಾಧ್ಯತೆಗಳನ್ನು ಈಗ ಕೊಟ್ಟಿರುವರೆ? ಉಪ್ಪಿನ ವಿಷಯದಲ್ಲಿ ಮಾತ್ರ ಸರ್ಕಾರದವರು ಸ್ವಲ್ಪ ಬದಲಾವಣೆ ಮಾಡಿರುವರೇ ಹೊರತು, ಮತ್ತೇನೂ ಇಲ್ಲ. ಸತ್ಯಾಗ್ರಹಸಮರದಲ್ಲಿ ಸರ್ಕಾರದವರು ಸುಲಿಗೆಮಾಡಿದ್ದ ಕೆಲವು ವಸ್ತುಗಳನ್ನು ಹಿಂದಿರುಗಿ ಪಡೆಯಲು ಸ್ವಲ್ಪಮಟ್ಟಿಗೆ ಅನುಕೂಲವಾಯಿತೇ ಹೊರತು ಮತ್ತೇನೂ ಲಾಭವಿಲ್ಲ. ಯಾವ ಉದ್ದೇಶದಿಂದ ಸಮರವನ್ನು ಹೂಡಿದ್ದರೋ ಆ ಉದ್ದೇಶವು ನೆರವೇರಲಿಲ್ಲ. ನಾನು ಮಹಾತ್ಮರಂತೆ ವಯೋವೃದ್ಧನೂ ಅನುಭವಿಯೂ ಅಲ್ಲದಿದ್ದರೂ, ನಿಜಸ್ಥಿತಿಯನ್ನು ಹೇಳಲಿಚ್ಛಿಸುವ ನನ್ನ ಮೊಂಡತನವನ್ನು ಮಹಾತ್ಮರು ಕ್ಷಮಿಸಬೇಕು. ಮಹಾತ್ಮರನ್ನು ನಾನು ಎರಡುಕಾರಣಗಳಿಂದ ವಿರೋಧಿಸುತ್ತೇನೆ. ಮೊದಲನೆಯದು, ಒಪ್ಪಂದದ ಷರತ್ತುಗಳು ಬಹು ಮಿತಿಯಾಗಿವೆ. ಎರಡನೆಯದು, ಮಹಾತ್ಮರ ಕೊನೆಯ ಸ್ಥಿತಿಯನ್ನು ನೋಡಿದರೆ ಅವರ ಸತ್ಯಾಗ್ರಹವೂ ಅದರ ವಿಧಾನಗಳೂ ಅನಾವಶ್ಯಕವಾಗಿ ಬಹು ಜನರಿಗೆ ತೊಂದರೆ ಕೊಟ್ಟವೆಂಬುದು. ಮಹಾತ್ಮರು ಮೊದಲಿನಿಂದಲೂ ಮಂದಪಕ್ಷದಲ್ಲಿದ್ದರೆ, ನಾನು ಭಿನ್ನಾಭಿಪ್ರಾಯಪಟ್ಟು ಬೇರೆಯಿದ್ದು ಅವರ ನಿಜಸ್ಥಿತಿಯನ್ನು ತಿಳಿದುಕೊಳ್ಳುತ್ತಿದ್ದೆನು. ಅದ್ಭುತ ಕಷ್ಟವನ್ನನುಭವಿಸಿ ಶಾಂತಚಳವಳಿಯನ್ನು ಮಾಡಿ ಕೊನೆಯಲ್ಲಿ ಏನೂ ಲಾಭವಾಗಲಿಲ್ಲವೆಂದರೆ ಅವರ ಧ್ಯೇಯವು ನನಗಂತೂ ತಿಳಿಯುವುದಿಲ್ಲ. ಭಾರತೀಯರಿಗೇನಾದರೂ ತಿಳಿಯುವುದೋ ಏನೋ ಹೇಳಲಾರೆನು.

ರಾಮನಿಗೆ ರಾಜ್ಯವಾದರೆ ರಾಗಿಬೀಸುವುದು ತಪ್ಪೀತೇ?

ನಾನು ಕೊನೆಯಲ್ಲಿ ಇನ್ನೊಂದು ಆಕ್ಷೇಪಣೆಮಾಡುತ್ತೇನೆ. ಮಹಾತ್ಮರೂ ರಾಷ್ಟ್ರೀಯ ಮಹಾಸಭೆಯೂ ದೇಶದ ಅಸಂಖ್ಯ ಜನ ಒಕ್ಕಲಿಗರ ಹಾಗೂ ಕೂಲಿಕಾರರ ಸಲುವಾಗಿ ಇರುವುದು. ಸ್ವರಾಜ್ಯವೆಂದರೆ ಬ್ರಾಹ್ಮಣರ ಹಾಗೂ ವ್ಯಾಪಾರಿಗಳ ರಾಜ್ಯವಲ್ಲವೆಂದೂ, ಬಡವರನ್ನು ಹಿಂಸಿಸುವುದಕ್ಕಲ್ಲವೆಂದೂ ನಾನು ಇಂಗ್ಲೆಂಡಿನಲ್ಲಿ ಎಷ್ಟೋ ಸಲ ಪ್ರತಿಪಾದಿಸಿರುವೆನು. ಸೆಂಟ್ ಜೇಮ್ಸ್ ಅರಮನೆಯಲ್ಲಿ ತೀರ್ಮಾನಿಸಲ್ಪಟ್ಟಿರುವ ರೌಂಡ್‌ಟೇಬಲ್ ಸಮ್ಮೇಳನದ ಷರತ್ತುಗಳು ಭಾರತೀಯರಿಗೆ ಹೇಗೆ ತೃಪ್ತಿಕರವಾಗುವವು? ಭಾರತೀಯರಿಗೆ ಕೊಡುವ ರಾಜಕೀಯ ಸುಧಾರಣೆಗಳಿಂದ ಹಿಂದುಸ್ಥಾನದಲ್ಲಿರುವ ಶ್ರೀಮಂತರನ್ನು ಸಮಾಧಾನಪಡಿಸಿ ಕೋಟ್ಯಂತರ ಅಶಿಕ್ಷಿತ ಜನರಮೇಲೆ ಅವರ ಅಧಿಕಾರವು ಹೆಚ್ಚುವಂತೆ ಮಾಡಬೇಕೆಂಬುದೇ ಮುಖ್ಯೋದ್ದೇಶವೆಂದು ಚರ್ಚ್‌ಹಿಲ್ ಮೊದಲಾದವರು ಹೇಳುತ್ತಾರೆ. ಈ ವಿಷಯದಲ್ಲಿ ನಾನು ಅವರ ಅಭಿಪ್ರಾಯವನ್ನು ಒಪ್ಪುತ್ತೇನೆ.

ಆದರೆ ಸ್ವರಾಜ್ಯವೆಂದರೆ ಹಾಗಲ್ಲ. ಹಿಂದುಸ್ಥಾನದ ಶ್ರೀಮಂತರ ಮತ್ತು ಇಂಗ್ಲೆಂಡಿನ ಸಾಮ್ರಾಜ್ಯವಾದಿಗಳ ಪಿತೂರಿಯನ್ನು ಕಿತ್ತೊಗೆದು ಸಜೀವ ಪ್ರಜಾಪ್ರಭುತ್ವವನ್ನು ನೆಲೆಗೊಳಿಸಬೇಕು. ಅಂಥ ಪ್ರಭುತ್ವದಿಂದ ಮಾತ್ರವೇ ಸಾಮಾಜಿಕ ಮತ್ತು ಆರ್ಥಿಕ ರೀತಿಗಳಲ್ಲಿ ಬಗ್ಗು ಬಡಿಯಲ್ಪಟ್ಟಿರುವ ಎಲ್ಲ ಭಾರತೀಯರ ಹಿತವನ್ನು ಕಾಪಾಡಬಹುದು. ಸ್ವರಾಜ್ಯವು ಹೀಗಲ್ಲದೆ ಬೇರೆರೀತಿಯಿಂದಿರುವುದೆಂದು ನನಗೆ ತಿಳಿದಿದ್ದರೆ ನಾನು ಸ್ವರಾಜ್ಯಚಳವಳಿಯಲ್ಲಿ ಭಾಗಿಯೇ ಆಗುತ್ತಿರಲಿಲ್ಲ. ಸಾಮಂತರಾಜರ, ಜಮೀನ್ದಾರರ, ಗಿರಣಿ ಮಾಲೀಕರಿಂದ ಕೂಡಿದ ಸಭೆಯಿಂದ ಪ್ರಜೆಗಳಿಗೆ ಯಾವ ಹಿತವಾದೀತು? ಅವರಲ್ಲಿ ಸ್ವಾರ್ಥತ್ಯಾಗಿಗಳು ಕೆಲವರಿರಬಹುದು. ಒಟ್ಟಿನಮೇಲೆ ಬ್ರಿಟಿಷ್ ಸಾಮ್ರಾಜ್ಯತ್ವಕ್ಕಿಂತಲೂ ಭಾರತೀಯ ಪ್ರಜಾಪ್ರಭುತ್ವಕ್ಕೆ ಮಹತ್ವಕೊಡುವವರು ವಿರಳ.

ಈ ಪತ್ರಕ್ಕೆ ಮಹಾತ್ಮರು ಉತ್ತರ ಬರೆಯುವುದೇನೆಂದರೆ :—

ಖಾಸಗಿ ವಿಷಯಗಳನ್ನು ಬಿಟ್ಟು ರೆಜಿನಾಲ್ಡ್ ರೇನಾಲ್ಡ್ಸ್‌ರವರು ಬರೆದಿರುವ ಪತ್ರವನ್ನು ಅವರಿಚ್ಛೆಯಂತೆ ಸಮಗ್ರವಾಗಿ ಪ್ರಕಟಿಸಿರುತ್ತೇನೆ. ನನ್ನಲ್ಲಿರುವ ಅಸಾಧಾರಣವಾದ ಪ್ರೇಮದಿಂದ ದಿಲ್ಲಿ ಒಪ್ಪಂದವನ್ನು ಕಾಂಗ್ರೆಸ್ಸಿನವರು ಒಪ್ಪಿದರು. ಈ ಇಂಗ್ಲಿಷ್ ಸ್ನೇಹಿತರಂತೆ ಅಭಿಪ್ರಾಯಪಡುವವರು ಎಷ್ಟೋ ಜನ ಭಾರತೀಯರಿದ್ದಾರೆ. ನಾನು ದಿಲ್ಲಿ ಒಪ್ಪಂದಮಾಡಿಕೊಂಡಿರುವುದನ್ನು ನೋಡಿ ಆಶ್ಚರ್ಯಪಡುವ ಇಂಗ್ಲೀಷ್ ಸ್ನೇಹಿತರು ಇನ್ನೂ ಕೆಲವರಿರಬಹುದು. ಈ ಇಂಗ್ಲಿಷ್ ಮಿತ್ರರ ಸಹಾನುಭೂತಿಯು ಅನೇಕ ವರ್ಷಗಳವರೆಗೂ ಅತ್ಯವಶ್ಯಕವಾಗಿಬೇಕಾಗಿರುವುದರಿಂದ ಅವರ ಸಲುವಾಗಿ ಮಿ|| ರೇನಾಲ್ಡ್ಸ್‌ರ ಆಕ್ಷೇಪಣೆಗಳಿಗೆ ಉತ್ತರಕೊಡುತ್ತೇನೆ. ನಾನು ಮವಾಳನಾಗಿರುವೆನೆಂಬ

ದೀಯರು ಆಗಮಿಸುವರೆಂದೂ, ಸಭೆಗೆ ಬರುವ ಎಲ್ಲ ಮಹಮ್ಮದೀಯ ಸಭ್ಯಗೃಹಸ್ಥರ ಊಟಕ್ಕೂ ವಸತಿಗೂ ಏರ್ಪಾಡು ನಡೆಯಿಸಿರುವರೆಂದೂ, ಊಟದ ಖರ್ಚಿಗಾಗಿ ಪ್ರತಿನಿಧಿಗಳು ದಿನ ಒಂದಕ್ಕೆ ಒಂದು ರೂಪಾಯಿಯಂತೆ ಕೊಡಬೇಕೆಂದೂ ಪ್ರಕಟಿಸಲ್ಪಟ್ಟಿದೆ.

ಸಂಸ್ಥಾನದ ಖರ್ಚನ್ನು ಕಡಿಮೆಮಾಡುವ ನಿಮಿತ್ತವಾಗಿ ಸರ್ಕಾರದವರು ಸ್ಥಾಪಿಸಿರುವ ರಿಟ್ರೆಂಚ್‌ಮೆಂಟ್ ಕಮಿಟಿಯು ಬೇರೆ ಬೇರೆ ಖಾತೆಗಳಿಂದ ಕಳುಹಿಸಲ್ಪಟ್ಟಿರುವ ಸಲಹೆಗಳನ್ನು ಪರ್ಯಾಲೋಚಿಸುತ್ತಿರುವುದು. ಸದರಿ ಕಮಿಟಿಯ ಕಾರ್ಯಕಲಾಪಗಳು ಜಯಪ್ರದವಾಗಬೇಕಾದರೆ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ರಾಜಸಭಾಭೂಷಣ, ಕೆ. ಆರ್. ಶ್ರೀನಿವಾಸಯ್ಯಂಗಾರ್, ಹಾಸನದಲ್ಲಿರುವ ರಾವ್‌ಬಹದ್ದೂರ್ ಎಚ್. ಎಸ್. ನಂಜುಂಡಯ್ಯ, ಬೆಂಗಳೂರು ಸಿಟಿ ಮ್ಯುನಸಿಪಲ್ ಪ್ರೆಸಿಡೆಂಟ್ ಪಿ. ಸುಬ್ರಾಮಶೆಟ್ಟರು, ಖಾನ್‌ಬಹದ್ದೂರ್ ಅಬ್ಬಾಸ್‌ಖಾನ್, ಶ್ರೀಯುತ ಡಿ. ವಿ. ಗುಂಡಪ್ಪ ಇವರ ಸಾಕ್ಷ್ಯಗಳನ್ನು ತೆಗೆದುಕೊಳ್ಳುವುದು ಅವಶ್ಯಕವಾದುದೆಂದು ದಿವಾನ್ ಸಾಹೇಬರವರು ಆ ಬಗ್ಗೆ ತಕ್ಕ ಏರ್ಪಾಟು ಮಾಡಿರುವುದಾಗಿ ತಿಳಿದುಬರುತ್ತದೆ.

ಈ ತಿಂಗಳು 24 ನೆಯ ತಾರೀಖಿನ ದಿವಸ ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಹಿಂದೀ ಪ್ರಚಾರದವರು ಒಂದು ಸಭೆಯನ್ನು ಸೇರಿಸಿದ್ದರು. ಆಗ ಶ್ರೀಯುತ ಎಂ. ವಿ. ಜಂಬುನಾಥನ್ ಎಂ.ಎ., ಬಿ.ಎಸ್.ಸಿ., ಯವರು ಬಹುಮನೋಹರವಾದ ಭಾಷಣವನ್ನು ಮಾಡಿದರು. ಹಿಂದುಸ್ಥಾನದಲ್ಲಿ ರಾಷ್ಟ್ರಭಾಷೆಯಾಗಲು ಅರ್ಹತೆಯು ಇಂಗ್ಲೀಷಿಗಿದೆಯೋ ಅಥವಾ ಹಿಂದೀಭಾಷೆಗಿದೆಯೋ ಎಂಬುದೇ ಮುಖ್ಯವಿಷಯವಾಗಿತ್ತು. ಈ ವಿಷಯವನ್ನು ಕುರಿತು ಶ್ರೀಯುತರುಗಳಾದ ಜಿ. ಕೆ. ನರಸಿಂಹಾಚಾರ್, ಬಿ. ಕೆ. ಪಿ. ಪಾರ್ಥ್, ವಿಶ್ವೇಶ್ವರ, ಶಾಮಾಶಾಸ್ತ್ರಿ ಇವರುಗಳು ಭಾಷಣಮಾಡಿದರು. ಪ್ರೆಸಿಡೆಂಟರು ಹಿಂದಿಭಾಷೆಯ ಮಹತ್ವವನ್ನು ಕುರಿತು ಹೃದಯಂಗಮವಾಗಿ ಮಾತನಾಡಿದರು. ಅಂತ್ಯದಲ್ಲಿ ಹಿಂದೀಭಾಷೆಯೇ ರಾಷ್ಟ್ರಭಾಷೆಯಾಗಲು ಅರ್ಹವಾದುದೆಂದು ಸರ್ವಾನುಮತಿಯಿಂದ ಪಾಸಾಯಿತು. ವಾಗ್ವರ್ಧಿನೀಸಭೆಯ ಸೆಕ್ರೆಟರಿ ಶ್ರೀಯುತ ಎಂ. ಜಿ. ಆನಂದಮೂರ್ತಿಯವರು ಅಧ್ಯಕ್ಷರನ್ನು ವಂದಿಸಿದ ತರುವಾಯ ಸಭೆಯು ವಿಸರ್ಜಿಸಲ್ಪಟ್ಟಿತು.

ವರ್ತಮಾನಸಂಗ್ರಹ.

ಪಂ|| ಜವಾಹರಲಾಲರವರು ಹವಾ ಬದಲಾವಣೆಯ ನಿಮಿತ್ತವಾಗಿ ಪತ್ನೀಸಮೇತರಾಗಿ ಸಿಂಹಳದ್ವೀಪಕ್ಕೆ ಹೋದರು. ಸಿಂಹಳೀಜನರು ಇವರನ್ನು ಅತ್ಯಂತ ಗೌರವದಿಂದ ಸ್ವಾಗತಿಸಿದರು.

ಭಾನುವಾರ ದಿವಸ ಸಿನಿಮಾ ಚಲನಚಿತ್ರವನ್ನು ಪ್ರದರ್ಶಿಸಕೂಡದೆಂದು ಲಂಡನ್ ಪಾರ್ಲಿಮೆಂಟಿನಲ್ಲಿ ಪಾಸಾಯಿತು. ಕೆಲವು ಧರ್ಮಬೋಧಕರೂ ಮದ್ಯವ್ಯಾಪಾರಿಗಳೂ ಈ ಠರಾವು ಪಾಸಾಗಲು ಕಾರಣೀಭೂತರಾಗಿದ್ದಾರೆ.

ಭರತಖಂಡದ ಕವಿವರ್ಯರಾದ ಡಾ|| ರವೀಂದ್ರನಾಥಟ್ಯಾಗೋರ್‌ರವರ 70 ನೆಯ ವರ್ಷದ ಜಯಂತಿ ಮಹೋತ್ಸವವು ಮೇ 8 ನೆಯ ತಾರೀಖಿನ ದಿವಸ ಕಲ್ಕತ್ತಾ ಮೊದಲಾದ ಸ್ಥಳಗಳಲ್ಲಿ ಅತ್ಯಂತ ವೈಭವದಿಂದ ನಡೆಯುವುದೆಂದು ತಿಳಿದುಬರುತ್ತದೆ.

ಚೀನಾದೇಶದಲ್ಲಿ ವಿಶೇಷವಾದ ಮಳೆಯಿಂದ ರೈಲ್ವೆ ಪಾದಿಗಳು ಕೆಟ್ಟುಹೋಗಿವೆ. ಹುಪ್ಪನ್‌ನಿಂದ ಬರುತ್ತಿದ್ದ ಗಾಡಿಯು 30 ಅಡಿ ಪ್ರಮಾಣದಿಂದ ಒಂದು ಕಂದಕಕ್ಕೆ ಬಿದ್ದು 30 ಜನರು ಕೂಡಲೇ ಮೃತಪಟ್ಟರು. 20 ಜನರಿಗೆ ತುಂಬಾ ಪೆಟ್ಟಾಗಿದೆ.

ಕಳೆದ ವರ್ಷ ಪೆಷಾವರ್ ಗಲಭೆಯಲ್ಲಿ ತಮ್ಮ … ತಾವು ಗುಂಡಿನಿಂದ ಹೊಡೆಯುವುದಿ… ರಿಸಿದ ಧೀರರಾದ ಘರ್ವಾಲಿ ಕೈದಿಗ… ಡೆಮಾಡಬೇಕೆಂದು ಫೆನ್ನರ್‌ಬ್ರಾಕ್ವೇಯ… ಪಾರ್ಲಿಮೆಂಟಿನಲ್ಲಿ ಚರ್ಚೆಹೂಡಿರುವರು. ಹೇಳಿದ ಳಂತೆ!

ಲಂಡನ್ನಿನಲ್ಲಿ ಕೆಲವು ಕೂಲಿಕಾರ ಸಂಸ್ಥೆಯವರು ಸಭೆ ಸೇರಿಸಿ ಭಾರತೀಯ ಕೂಲಿಕಾರರಲ್ಲಿಯೂ ಒಕ್ಕಲಿಗರಲ್ಲಿಯೂ ತಮಗೆ ಪೂರ್ಣ ಸಹಾನುಭೂತಿಯಿರುವುದೆಂದೂ, ಭಾರತೀಯರನ್ನು ಸುಲಿಗೆಮಾಡುವ ಕಾರ್ಯಕ್ಕೆ ಸಹಾಯಮಾಡಲಾಗದೆಂದೂ ತೀರ್ಮಾನಿಸಿದರು.

ಪೂನಾಪಟ್ಟಣದಲ್ಲಿ ಮಿ|| ಕಾರ್ನ್ಸ್‌ಫೀಲ್ಡ್ ಎಂಬ ೬೬ ವರ್ಷ ವಯಸ್ಸಿನ ಒಬ್ಬ ಆಂಗ್ಲೇಯ ದೊಡ್ಡಮನುಷ್ಯರು ಮೋಟಾರು ಸೈಕಲ್ ಹತ್ತಿಕೊಂಡು ಬರುತ್ತಿದ್ದಾಗ ಎದುರಾಗಿ ಬರುತ್ತಿದ್ದ ಮೋಟಾರು ಢಿಕ್ಕಿಹೊಡೆದು ಮಿ|| ಕಾರ್ನ್ಸ್‌ಫೀಲ್ಡರು ಸೈಕಲ್ಲಿನಿಂದ ಕೆಳಕ್ಕೆ ಬಿದ್ದರು. ತುಂಬಾ ಪೆಟ್ಟಾಯಿತು. ಕೂಡಲೆ ಸಸೂನ್ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಡಾಕ್ಟರರು ಅವರ ಮೊಣಕಾಲಿನ ಕೆಳಭಾಗವನ್ನು ಕತ್ತರಿಸಿಹಾಕಿದರು.

ದಿಲ್ಲಿ ಒಪ್ಪಂದವಾದ ಮೇಲೆ ಶಾಂತವಾಗಿದ್ದ ವಿದೇಶಿವಸ್ತ್ರಬಹಿಷ್ಕಾರವು ಬೊಂಬಾಯಿಯಲ್ಲಿ ಪುನಃ ಚುರುಕಾಗಿ ನಡೆಯಲು ಪ್ರಾರಂಭವಾಗಿದೆ. ಹಿಂದುಸ್ಥಾನಿ ಸೇವಾದಳದ ಮಹಿಳೆಯರು ಬಟ್ಟೆಯ ಅಂಗಡಿಗಳ ಮುಂದೆ ನಿಂತು ಗಿರಾಕಿಗಳಿಗೆ ಕೈಮುಗಿದು ವಿದೇಶಿ ಬಟ್ಟೆಗಳನ್ನು ಕೊಳ್ಳದಂತೆ ಶಾಂತರೀತಿಯಿಂದ ಬೋಧಿಸುತ್ತಿರುವರು. ಮತ್ತು ಕೆಲವು ಸ್ತ್ರೀಯರು ಖಾದಿ ವಸ್ತ್ರಗಳನ್ನು ಬೀದಿಯಲ್ಲಿ ಮಾರುತ್ತಿರುವರು.

ಕಲ್ಕತ್ತೆಯ ಮೇಚೂಬಜಾರ್ ಬಾಂಬುಕೇಸಿನಲ್ಲಿ ಸ್ಪೆಷಲ್‌ಕೋರ್ಟಿನವರು 19 ಜನರಿಗೆ ಶಿಕ್ಷೆವಿಧಿಸಿದ್ದು ಇವರಲ್ಲಿ ಎಂಟು ಜನರಿಗೆ ಹತ್ತು ವರ್ಷಗಳ ದ್ವೀಪಾಂತರ ಶಿಕ್ಷೆ ವಿಧಿಸಿದ್ದರು. ಕಲ್ಕತ್ತೆಯ ಹೈಕೋರ್ಟು ಜಡ್ಜರು ಈ ಎಂಟುಜನರಿಗೆ ಹತ್ತುವರ್ಷಗಳಿಗೆ ಬದಲಾಗಿ 7 ವರ್ಷಗಳ ದ್ವೀಪಾಂತರ ಶಿಕ್ಷೆಯನ್ನು ವಿಧಿಸಿ ಸತ್ಯವ್ರತಸೇನ್ ಮೊದಲಾದ 9 ಜನರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು.

ಈ ತಿಂಗಳು 23 ನೆಯ ತಾರೀಖಿನದಿವಸ ಪ್ರಾತಃಕಾಲ 4 ಗಂಟೆ ಸಮಯದಲ್ಲಿ ಕೊಯಮತ್ತೂರು ನಿವಾಸಿಗಳಾದ ರಿ|| ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಸಿ. ಎಸ್. ದೊರೆಸಾಮಯ್ಯನವರ ಮನೆಗೆ ಕಳ್ಳರು ಕನ್ನಾಹಾಕಿ ಕೆಲವು ನಗಗಳನ್ನೂ ವಸ್ತ್ರಗಳನ್ನೂ ದೋಚಿಕೊಳ್ಳುವ ಸಮಯದಲ್ಲಿ ಎಚ್ಚೆತ್ತು ಶಬ್ದಮಾಡಿದ ಅಡಿಗೆಯಾಳನ್ನು ಕಲ್ಲಿನಿಂದ ಹೊಡೆದು ತಪ್ಪಿಸಿಕೊಂಡು ಹೋಗಿದ್ದಾರೆ. ಪ್ರಾಮ್‌ಗ್ರೂವ್ ರೋಡಿನಲ್ಲಿ ಕೆಲವು ಕೆಲಸಕ್ಕೆ ಬಾರದ ಬಟ್ಟೆಗಳನ್ನೂ ಒಂದು ಪೆಟ್ಟಿಗೆಯನ್ನೂ ಬೀಸಾಡಿದ್ದರು. ಕಳ್ಳರು ಇನ್ನೂ ಸಿಕ್ಕಿಲ್ಲ.

ಲಂಡನ್ನಿನಲ್ಲಿ ಅಲೆದಾಡುತ್ತಿರುವ ಲಕ್ಷಾಂತರ ನಿರುದ್ಯೋಗಿಗಳಿಗೆ ಕೆಲಸವನ್ನೊದಗಿಸಬೇಕೆಂಬ ಉದ್ದೇಶದಿಂದ ಲೇಬರ್ ಪ್ರಭುತ್ವದವರು ಸಾಗು ಆಗದೆ ಇರುವ ಭೂಮಿಯನ್ನು ಸಾಗುಮಾಡುವ ನಿಮಿತ್ತವಾಗಿ ಒಂದು ಸಂಸ್ಥೆಯನ್ನೇರ್ಪಡಿಸಬೇಕೆಂದು ಕಾಮನ್ಸ್ ಸಭೆಯಲ್ಲಿ ಒಂದು ಠರಾವನ್ನು ತಂದರು. ಈ ಠರಾವು ಸರ್ವಾನುಮತಿಯಿಂದ ಪಾಸಾಗಿ ಈ ತಿಂಗಳು 22 ನೆಯ ತಾರೀಖಿನದಿವಸ ಸಾಮಂತರ ಸಭೆಗೆ ಹೋಯಿತು. ಆ ಸಭೆಯವರು ಅದನ್ನು ಸರ್ವಾನುಮತಿಯಿಂದ ತಿರಸ್ಕರಿಸಿದರು. ಪುನಃ ಈ ವಿಷಯವನ್ನು ಕಾಮನ್ಸ್ ಸಭೆಯಲ್ಲಿ ತರುವವರಿದ್ದಾರೆ. ಇದರಿಂದ ಉಭಯ ಪಾರ್ಲಿಮೆಂಟುಗಳಿಗೂ ತುಂಬಾ ವಿರೋಧವುಂಟಾಗಿದೆ.

ಮಿಡ್ನಾಪುರದ ಡಿ|| ಮ್ಯಾಜಿಸ್ಟ್ರೇಟ್ ಜೇಮ್ಸ್ ಪೆಡ್ಡಿಯವರ ಕೊಲೆಯ ವಿಷಯದಲ್ಲಿ ತಪ್ಪಿತಸ್ಥರನ್ನು ಹುಡುಕುತ್ತಲಿರುವರು. ಈಗ ಮೂರುದಿವಸಗಳ ಕೆಳಗೆ ಕಾಲೇಜ್ ಸಮೀಪದಲ್ಲಿ ವಾಸವಾಗಿರುವ ಮಿ|| ಅಸಾಯಕುಮಾರರ ಮಗ ವಿಮಲನೆಂಬವನು ಜೇಮ್ಸ್ ಪೆಡ್ಡಿಯವರನ್ನು ಕೊಂದನೆಂದು ಅವರ ದಾದಿಯ ಮಗನು ಹೇಳಿದನು. ಪೋಲೀಸರು ಮಿ|| ಅಸಾಯಕುಮಾರರನ್ನು ವಿಚಾರಿಸಲಾಗಿ ತಮ್ಮ ಮಗನು ಜಗಳವಾಡಿ ಮನೆಯನ್ನು ಬಿಟ್ಟು ಎಲ್ಲಿಯೋ ಹೋಗಿರುವನೆಂದು ಹೇಳಿದರು. ಪೋಲೀಸರು ಸುತ್ತಮುತ್ತಲಿನ 6-7 ಹುಡುಗರನ್ನು ಕರೆದುಕೊಂಡುಹೋಗಿ ವಿಚಾರಿಸಿದರು. ದಾದಿಯೂ ಸಹ ತನ್ನ ಮಗನ ಮಾತು ನಿಜವೆಂದು

ಸ್ಪೇನಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಪ್ರಜಾಪ್ರಭುತ್ವವನ್ನು ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು ಒಪ್ಪಿರುತ್ತವೆ. ಪದಚ್ಯುತರಾದ ಅಲ್ಫಾನ್ಸೊ ದೊರೆಗಳು ಈ ತಿಂಗಳು 21 ನೆಯ ತಾರೀಖಿನ ದಿವಸ ಲಂಡನ್ ಪಟ್ಟಣವನ್ನು ಸೇರಿ ಚಕ್ರವರ್ತಿ ಮತ್ತು ಚಕ್ರವರ್ತಿನಿಯರನ್ನು ಸಂದರ್ಶಿಸಿದರು. ಸ್ಪೇನ್ ರಾಣಿಯವರು ತಮ್ಮ ಮಕ್ಕಳೊಂದಿಗೆ ಫ್ರಾನ್ಸಿನ ಒಂದು ಹೋಟೆಲಿನಲ್ಲಿರುವರು. ಅಲ್ಫಾನ್ಸೊರವರು ಇವರನ್ನು ಶೀಘ್ರವಾಗಿ ಸೇರುವರು. ಸ್ಪೇನ್‌ದೇಶದ ಕೆಲವು ಉಗ್ರವಾದಿಗಳು ರಾಜರು ಅನೇಕ ಅಮಾನುಷಕೃತಿಗಳನ್ನು ಮಾಡಿ ತಪ್ಪಿಸಿಕೊಂಡು ಹೋಗಿರುವುದರಿಂದ ಅವರನ್ನು ಹಿಡಿದು ತಂದು ವಿಚಾರಣೆ ನಡೆಯಿಸಿ ಶಿಕ್ಷಿಸಬೇಕೆಂದು ಯೋಚಿಸುತ್ತಿರುವರು.

ಈ ತಿಂಗಳು 20 ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ಸ್ತ್ರೀಯರದೊಂದು ದೊಡ್ಡ ಸಭೆಸೇರಿತ್ತು. ಅನೇಕ ಸಂಸ್ಥೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಪಾರ್ಲಿಮೆಂಟಿನ ಮೆಂಬರರಾದ ಮಿಸೆಸ್ ಮ್ಯಾನಿಂಗ್‌ರವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಆಗ ಭಾರತೀಯ ಮಹಿಳೆಯರು ಕಳೆದವರ್ಷ ನಡೆದ ಸತ್ಯಾಗ್ರಹ ಸಮರದಲ್ಲಿ ತೋರಿಸಿದ ಅಸಾಧಾರಣ ಧೈರ್ಯವನ್ನೂ ದೇಶಭಕ್ತಿಯನ್ನೂ ಅನೇಕ ರೀತಿಯಿಂದ ಪ್ರಶಂಸೆಮಾಡಿದರು. ಮತ್ತು ಗಾಂಧಿ ಇರ್ವಿನ್ ಒಪ್ಪಂದವನ್ನು ಅಂಗೀಕರಿಸಿ ಹಿಂದುಸ್ಥಾನದಲ್ಲಿ ಸುಖಶಾಂತಿಗಳು ನೆಲೆಗೊಳ್ಳಲೆಂದೂ, ಇಂಗ್ಲೆಂಡಿನ ಸ್ತ್ರೀಯರು ಹಿಂದುಸ್ಥಾನದ ವಿಷಯದಲ್ಲಿ ನಿಜಸಂಗತಿಗಳನ್ನು ಪ್ರಕಟಿಸಿ ಸುಳ್ಳುಸಂಗತಿಗಳನ್ನು ತಡೆಯಬೇಕೆಂದೂ, ಮೀರತ್ತಿನಲ್ಲಿ ವಿಚಾರಣೆಯಿಲ್ಲದೆ ಜೈಲಿನಲ್ಲಿರುವ ಕೈದಿಗಳನ್ನು ಸರ್ಕಾರದವರು ಕೂಡಲೆ ಬಿಡುಗಡೆ ಮಾಡಬೇಕೆಂದೂ ತೀರ್ಮಾನಗಳನ್ನು ಮಾಡಿದರು.

ಸರ್ದಾರ್ ವಲ್ಲಭಭಾಯಿ ಪಟೇಲರು ಜಯರಾಮದಾಸ್ ದೌಲತ್‌ರಾಮರೊಡನೆ ಈ ತಿಂಗಳು 24 ನೆಯ ತಾರೀಖಿನ ದಿವಸ ಬಾರ್ಡೋಲಿಗೆ ಬಂದಿಳಿದರು. ಕರನಿರಾಕರಣ ಚಳವಳಿಯಲ್ಲಿ ಸುಡಲ್ಪಟ್ಟಿದ್ದ ಅನೇಕಮನೆಗಳನ್ನು ಪುನಃ ಕಟ್ಟಲು ಪಟೇಲರೇ ತಳಪದಿಯನ್ನು ಹಾಕಿ, ಹೇಳಿದ್ದೇನೆಂದರೆ—ನಾವು ಹಾರುವ ಹಕ್ಕಿಯಂತಿರಬೇಕು. ಹಕ್ಕಿಗಳು ಗೂಡುಕಟ್ಟಿಕೊಳ್ಳುವಂತೆ ನಮ್ಮ ವಿರೋಧಿಗಳು ನಮ್ಮ ಮನೆಯನ್ನು ನಾಶಮಾಡಿದರೆ ಪುನಃ ನಾವು ಕಟ್ಟಿಕೊಳ್ಳುವುದಕ್ಕೆ ಸಿದ್ಧರಾಗಿರಬೇಕು. ನಾಶವಾಗಿರುವ ಮನೆಗಳನ್ನು ಪುನಃ ಕಟ್ಟಿಕೊಳ್ಳುವುದು ಸಾಧ್ಯವಿದೆ; ಆದರೆ ರಾಷ್ಟ್ರದ ಗೌರವವು ನಾಶವಾದ ಮೇಲೆ ಅದನ್ನು ಪುನಃ ನೆಲೆಗೊಳಿಸಲಾಗುವುದಿಲ್ಲ. ಅಂಥ ರಾಷ್ಟ್ರದ ಗೌರವವನ್ನು ಬಾರ್ಡೋಲಿಯ ರೈತರು ಕಾಪಾಡಿದರು. ಮುಂದೆ ಸಮಯ ಬಂದರೆ ಎಂದಿನಂತೆ ದೇಶದಸಲುವಾಗಿ ಸ್ವಾರ್ಥತ್ಯಾಗಮಾಡಲು ಸಿದ್ಧರಾಗಿರಬೇಕು.

ಬಂಗಾಲದಲ್ಲಿ ದಶರಥಿ ಕಜೂರಿಯ ಎಂಬೊಬ್ಬ ಹಾವಾಡಿಗನು ತಾನು ಹಾವಾಡಿಸುವುದರಲ್ಲಿ ಬಹು ಬುದ್ಧಿವಂತನೆಂದೂ, ಎಂಥ ಹಾವು ಕಡಿದರೂ ಬದುಕಿಸಬಲ್ಲೆನೆಂದೂ, ಜನರಮುಂದೆ ಹೇಳುತ್ತಿದ್ದನು. ಹಳ್ಳಿಯ ಅನೇಕ ಜನರು ಅವನ ಮಾತನ್ನು ನಂಬಿ ಆ ವಿದ್ಯೆಯನ್ನು ಕಲಿತುಕೊಳ್ಳಬೇಕೆಂದು ಅವನ ಮನೆಗೆ ಹೋಗಲಾರಂಭಿಸಿದರು. ತನ್ನಲ್ಲಿ ಜನರಿಗೆ ಇನ್ನೂ ಹೆಚ್ಚಿನ ವಿಶ್ವಾಸವನ್ನು ಹುಟ್ಟಿಸಬೇಕೆಂದು ಗನ ಎಂಬ ವಿಷವನ್ನು ತಯಾರಿಸಿದ್ದೇನೆ. ಅದನ್ನು ಕುಡಿದರೆ ಯಾರಿಗೂ ಹಾವು ಕಡಿಯುವುದಿಲ್ಲವೆಂದು ಹೇಳುತ್ತಾ ಇದ್ದನು. ತನ್ನ ಮಾತನ್ನು ಧೃಢಪಡಿಸಬೇಕೆಂದು ಅವನ ಸ್ನೇಹಿತರ ಪೈಕಿ ಒಬ್ಬನಾದ ಉಜಯಿಖಾನ್ ಎಂಬವನನ್ನು ಕಬ್ಬಿನ ಗದ್ದೆಗೆ ಕರೆದುಕೊಂಡುಹೋಗಿ ಯಾರು ಹೇಳಿದರೂ ಕೇಳದೆ ನಾಗರಹಾವಿನಿಂದ ಅವನನ್ನು ಕಡಿಸಿದನು. ಆ ಕೂಡಲೇ ಅವನು ಜ್ಞಾನತಪ್ಪಿ ಬಿದ್ದನು. ಆಗ ದಶರಥಿಕಜೂರಿಯು ಅವನನ್ನು ಮನೆಗೆ ಸಾಗಿಸಿ ಮಂತ್ರಗಳನ್ನು ಹೇಳಲಾರಂಭಿಸಿದನು. ಯಾವ ಪ್ರಯತ್ನಪಟ್ಟರೂ ಅವನನ್ನು ಬದುಕಿಸುವುದು ಅಸಾಧ್ಯವಾಯಿತು. ದಶರಥಿ ಕಜೂರಿಯು ಆ ಕೂಡಲೆ ದಸ್ತಗಿರಿ ಮಾಡಲ್ಪಟ್ಟು ಸೆಷನ್‌ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿರುವನು.

ನೂತನ ವೈಸರಾಯರಾದ ಲಾರ್ಡ್ ವಿಲಿಂಗ್ಡನ್ ರವರ ಮಹತ್ವದ ಸಂಭಾಷಣ.

ಲಂಡನ್ನಿನಲ್ಲಿ ನ್ಯೂಸ್‌ಕ್ರಾನಿಕಲ್ ಪತ್ರಿಕಾಪ್ರತಿನಿಧಿಗಳ ಸಂಗಡ ಲಾರ್ಡ್ ವಿಲಿಂಗ್ಡನ್‌ರವರು ಮಾಡಿದ ಸಂಭಾಷಣ.

ಪ್ರತಿನಿಧಿ—ಇನ್ನು 5 ವರ್ಷಗಳ ತರುವಾಯ ಹಿಂದುಸ್ಥಾನದ ಸ್ಥಿತಿಯು ಹೇಗಾಗುವುದೆಂದು ತಾವು ಭಾವಿಸುವಿರಿ?

ವೈಸರಾಯರು—ಆ ಪ್ರಶ್ನೆಗೆ ಈಗ ಉತ್ತರ ಹೇಳುವುದು ಸಾಧ್ಯವಿಲ್ಲ.

ಪ್ರತಿನಿಧಿ—ತಾವು ಈಗ್ಗೆ 16 ವರ್ಷಗಳಲ್ಲಿ 9 ತಿಂಗಳುಗಳು ಮಾತ್ರವೇ ಇಂಗ್ಲೆಂಡಿನಲ್ಲಿರುವಿರಿ. ಇನ್ನು ಮುಂದೆ ಇಂಗ್ಲೆಂಡಿನಲ್ಲಿ ಕೆಲವು ಕಾಲವಿರಬೇಕೆಂದು ಇಚ್ಛಿಸುವುದಿಲ್ಲವೆ? (ಇವರು ಕನಡಾದಲ್ಲಿ ವೈಸರಾಯರಾಗಿದ್ದರು.)

ವೈಸರಾಯರು—ನಿರರ್ಥಕವಾಗಿ ಕಾಲಕಳೆಯುವುದು ನನಗೆ ಸೇರುವುದಿಲ್ಲ. ಕೆಲಸದ ಮೇಲಿರುವುದು ಯೋಗ್ಯವಾದುದೆಂದು ನನಗೆ ತಿಳಿಯುತ್ತದೆ. ಅದೂ ಅಲ್ಲದೆ ಹಿಂದುಸ್ಥಾನವೆಂದರೆ ನನಗೆ ಬಹು ಇಷ್ಟ. ನಾನು ವಯೋವೃದ್ಧನಾದಾಗ್ಯೂ ಹಿಂದುಸ್ಥಾನಕ್ಕೂ ಮತ್ತು ಇಂಗ್ಲೆಂಡಿಗೂ ಪರಸ್ಪರ ಸೌಹಾರ್ದವು ಪುನಃ ಉಂಟಾಗುವ ಹಾಗೆ ನನ್ನ ಕೈಲಾದುದನ್ನೆಲ್ಲಾ ಮಾಡಬೇಕೆಂದು ಕುತೂಹಲಪಡುತ್ತೇನೆ. ನೀವು ನನ್ನ ಹಾಗೆ 11 ವರ್ಷಗಳ ಕಾಲ ಹಿಂದುಸ್ಥಾನದಲ್ಲಿದ್ದಿದ್ದರೆ, ಆ ದೇಶದ ಮಹತ್ವವು ನಿಮಗೆ ಮನವರಿಕೆಯಾಗಿ ನೀವು ಅದನ್ನು ಬಿಡುತ್ತಿರಲಿಲ್ಲ.

ಪ್ರತಿನಿಧಿ—ಭಾರತೀಯರಲ್ಲಿ ಸಹಾನುಭೂತಿ, ಸರ್ವರಿಗೂ ಒಂದೇ ವಿಧವಾದ ಅನುಕೂಲ್ಯ, ಮನುಷ್ಯನ ಬಣ್ಣಕ್ಕೆ ಪ್ರಾಶಸ್ತ್ಯಕೊಡದೆ ಗುಣಕ್ಕೆ ಪ್ರಾಶಸ್ತ್ಯಕೊಡುವಿಕೆ ಈ ಮೂರಂಶಗಳೇ ಭಾರತವರ್ಷದ ನಿಮ್ಮ ಆಳ್ವಿಕೆಯ ಮುಖ್ಯತತ್ವಗಳೆಂದು ಕೆಲವು ದಿವಸಗಳ ಹಿಂದೆ ನೀವು ಹೇಳಿರುವುದು ಸರಿಯಷ್ಟೆ! ಈ ತತ್ವಗಳನ್ನು ಒದಗಿಸುವುದಕ್ಕೆ ಸದ್ಯಃ ಅನಿರೀಕ್ಷಿತಗಳಾದ ಕಾರ್ಯಗಳೇನೂ ನಡೆದಿರುವುದಿಲ್ಲವಷ್ಟೆ?

ವೈಸರಾಯರು—ಅಂಥದೇನೂ ನಡೆದಿಲ್ಲ. ನಾನು ಯಾವಾಗಲೂ ಈ ಮೂರಂಶಗಳನ್ನು ಪ್ರಧಾನವಾಗಿಟ್ಟುಕೊಂಡು ಅವುಗಳನ್ನನುಸರಿಸುತ್ತೇನೆ. ಈ ಅಂಶಗಳು ನನ್ನ ಮನಸ್ಸಿನಲ್ಲಿ ಅನೇಕ ವರ್ಷಗಳಿಂದಲೂ ಇವೆ.

1. ಸಹಾನುಭೂತಿ—ಸಾಮ್ರಾಜ್ಯದ ಇತರ ರಾಷ್ಟ್ರಗಳಲ್ಲಿ ಭರತಖಂಡವು ಸಮಾನಸ್ಥಾನವನ್ನು ಹೊಂದಿ ಸಂಪೂರ್ಣಜವಾಬ್ದಾರಿ ಸರ್ಕಾರವನ್ನು ಪಡೆಯುವಂತೆ, ಕಾರ್ಯಭಾಗ ನಡೆಯಿಸಲು ನನಗೆ ಸಮಸ್ತ ಭಾರತೀಯರೂ, ಸಾಮಂತರಾಜರೂ ಸಹಾನುಭೂತಿ ತೋರಿಸಬೇಕೆಂದು ಕೋರುತ್ತೇನೆ. ದೇಶದ ಕಾಯಿದೆಗಳನ್ನು ಕಾಪಾಡಿ ಜನರಲ್ಲಿ ಶಾಂತಿಯುಂಟಾಗುವಂತೆ ಮಾಡಲು ಸಹಕರಿಸಬೇಕೆಂದು ಅವರನ್ನು ಕೇಳುತ್ತೇನೆ.

2. ಸರ್ವರಿಗೂ ಒಂದೇ ವಿಧವಾದ ಅನುಕೂಲ್ಯ—ಅಸಂಖ್ಯ ಜಾತಿಕೋಮುಗಳಿಂದ ಕೂಡಿರುವ ಹಿಂದುಸ್ಥಾನದಲ್ಲಿ ಈ ಉದ್ದೇಶವನ್ನು ಸಾಧಿಸುವುದು ಸುಲಭವಾದ ಕೆಲಸವಲ್ಲ. ಸಾಧ್ಯವಾದಮಟ್ಟಿಗೆ ಎಲ್ಲ ಜಾತಿಯವರ ಅಭಿವೃದ್ಧಿಗೂ ತಕ್ಕ ಅನುಕೂಲ್ಯಗಳನ್ನು ಒದಗಿಸಲಿಚ್ಛಿಸುತ್ತೇನೆ.

3. ಮನುಷ್ಯನು ತನ್ನ ಬಣ್ಣದಿಂದ ಮಾನ್ಯನಾಗುವುದಿಲ್ಲ. ಸದ್ಗುಣವೇ ಪ್ರಧಾನವಾದುದು. ಅದೇ ಸರ್ವಮಾನ್ಯವು. ನನ್ನ ಸಾರ್ವಜನಿಕ ಜೀವನದಲ್ಲಿ ಈ ತತ್ವವನ್ನು ಅನುಸರಿಸಿದ್ದೇನೆ.

ಪ್ರತಿನಿಧಿ—ನೀವು ಬೊಂಬಾಯಿಯಲ್ಲಿ ಗೌರ್ನರಾಗಿದ್ದ ಕಾಲಕ್ಕೂ ಮತ್ತು ಈ ಕಾಲಕ್ಕೂ ಹಿಂದುಸ್ಥಾನದಲ್ಲಿ ಏನಾದರೂ ಹೆಚ್ಚುಕಡಿಮೆಯಾಗಿದೆಯೇ?

ವೈಸರಾಯರು—ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ಹಿಂದುಸ್ಥಾನದಲ್ಲಿ ಅನೇಕ ಬದಲಾವಣೆಗಳು ಕಂಡುಬರುತ್ತವೆ. ಹಿಂದುಸ್ಥಾನವು ಬಹುಮಟ್ಟಿಗೆ ಮುಂದುವರಿದಿದೆ. ಆದರೆ ಸಾಮಾನ್ಯಸಂಘಗಳು ಬಹುತೇಕ ಮೊದಲಿನಂತೆಯೇ ಇವೆ ಎಂದು ತೋರುತ್ತದೆ. ಭಾರತೀಯರೂ ಮತ್ತು ಇಂಗ್ಲೀಷರೂ ಆಗಾಗ್ಯೆ ಕೂಡುವಂಥ ಕೆಲವು ಸಂಘಗಳನ್ನೇರ್ಪಡಿಸುವುದರಿಂದ ಉಭಯರೂ ಒಬ್ಬರನ್ನೊಬ್ಬರು ಸರಿಯಾಗಿ ತಿಳಿದುಕೊಳ್ಳುವುದರಿಂದ ಉಭಯ ರಾಷ್ಟ್ರಗಳಿಗೂ ಮೈತ್ರಿಯು ಬೆಳೆಯುವುದಕ್ಕೆ ಅನುಕೂಲವಾಗುವುದು.

ಪ್ರತಿನಿಧಿ—ನೀವು ಹಿಂದುಸ್ಥಾನದ ವೈಸರಾಯರಾಗುವಿರೆಂದು ನಿರೀಕ್ಷಿಸಿದ್ದಿರಾ?

ವೈಸರಾಯರು—ನನಗೆ ಅದರ ಯೋಚನೆಯೇ ಇರಲಿಲ್ಲ. ನಾನು ಸಾರ್ವಜನಿಕಕಾರ್ಯಗಳಿಗೆ ಸೇರುವುದಕ್ಕೆ ನನ್ನ ಪಿತಾಮಹರೂ, ಪಾರ್ಲಿಮೆಂಟಿನ ಅಧ್ಯಕ್ಷರೂ ಆದ ಮಿ|| ಬ್ರಾಂಡರವರೇ ಕಾರಣೀಭೂತರು.

ಪ್ರತಿನಿಧಿ—ವೈಸರಾಯರಾಗಬೇಕೆಂಬುದು ನಿಮ್ಮ ಅತ್ಯಂತ ಹೆಚ್ಚಿನ ಆಶೆಯಾಗಿದ್ದಿತೋ?

ವೈಸರಾಯರು—ನನಗೆ ಯಾವುದೂ ಹೆಚ್ಚಿನ ಆಶೆಯಿರಲಿಲ್ಲ. ನಾನು ಯಾವಾಗಲೂ ಹೇಳಿದ್ದನ್ನು ಮಾಡಿದ್ದೇನೆ. ನಾನು ಯಾವ ಕೆಲಸಕ್ಕೆ ಹೋದರೂ ಅದನ್ನು ಕೇವಲ ಶ್ರದ್ಧೆಯಿಂದ ಮಾಡಿದ್ದೇನೆ.

ಪ್ರತಿನಿಧಿ—ನೀವು 65 ವರ್ಷವಯಸ್ಸಿನ ಮುದುಕರಾದರೂ ವಿಶೇಷವಾಗಿ ಕೆಲಸಮಾಡುತ್ತೀರಿ. ನಿಮಗೆ ಹೀಗೆ ಕೆಲಸಮಾಡಲು ಶಕ್ತಿಯೆಲ್ಲಿಂದ ಬರುವುದು? ಅದರ ಮರ್ಮವೇನು?

ವೈಸರಾಯರು—ಇದಕ್ಕೆ ಎರಡು ಕಾರಣಗಳಿವೆ.

1 ನೆಯದು ನಾನು ಹಾಸ್ಯರಸಕ್ಕೆ ಪ್ರಾಶಸ್ತ್ಯ ಕೊಟ್ಟು ಉಲ್ಲಾಸದಿಂದಿರುವೆನು.

2 ನೆಯದು ದೋಷರಹಿತವಾದ ಜೀವನ. ಅರ್ಥಾತ್ ವೀರ್ಯಸಂರಕ್ಷಣ. (ನಾನೇ ಅದನ್ನು ಹೇಳಬಾರದು; ಏಕೆಂದರೆ ಆತ್ಮಸ್ತುತಿಮಾಡಿಕೊಂಡಂತಾಗುವುದು).

ನಾನು ಹನ್ನೊಂದು ವರ್ಷಗಳ ಕಾಲ ಹಿಂದುಸ್ಥಾನದಲ್ಲಿದ್ದು ಕನಡಾಕ್ಕೆ ಹೋದೆನು. ಕನಡಾ ದೇಶವು ನನಗೇನೂ ಕೆಡಕುಮಾಡದೆ ಒಳ್ಳೆಯದನ್ನೇ ಮಾಡಿದೆ. ಪ್ರಭುತ್ವದವರು ಪುನಃ ನನ್ನನ್ನು ಹಿಂದುಸ್ಥಾನಕ್ಕೆ ಕಳ್ಳುತ್ತಾರೆ. ಹಿಂದುಸ್ಥಾನವು ನನಗೆ ಏನುಮಾಡುವುದೋ ನಿರೀಕ್ಷಿಸೋಣ.

ಪ್ರತಿನಿಧಿ—ನೀವು ಇಲ್ಲಿಂದ ಹಿಂದುಸ್ಥಾನಕ್ಕೆ ತಲುಪುವುದರೊಳಗೆ ಲಾರ್ಡ್ ಇರ್ವಿನ್‌ರವರು ಹಿಂದುಸ್ಥಾನವನ್ನು ಬಿಡುವಂತೆ ಕಾಣುತ್ತದಲ್ಲವೆ? ಮತ್ತು ನೀವು ಪ್ರತಿದಿವಸವೂ ಕೆಲಸಮಾಡುವ ಪದ್ಧತಿ ಹೇಗೆ?

ವೈಸರಾಯರು—ಇಲ್ಲ. ನಾವು ಹಿಂದುಸ್ಥಾನಕ್ಕೆ ತಲ್ಪಿದಮೇಲೆ 24 ತಾಸು ಅವಕಾಶವಿರುವುದು. ನಾನು ಯಾವಾಗಬೇಕಾದರೂ ಕೆಲಸಮಾಡಲು ಸಿದ್ಧನಿರುವೆನು.

ಬೇಸಿಗೆಯ ಬಿಸಲು ನನ್ನನ್ನು ಬಾಧಿಸುವುದಿಲ್ಲ. ಮಿಕ್ಕವರೆಲ್ಲರೂ ವಿಶ್ರಾಂತಿ ತೆಗೆದುಕೊಳ್ಳುವಾಗ ನಾನು ಕೆಲಸಮಾಡುತ್ತಿರುವೆನು. ಮತ್ತು ನಾನು ಮಿತಾಹಾರ ಮಾಡುತ್ತೇನೆ. ಆದರೂ ನನ್ನ ತೂಕವು ಕಡಿಮೆಯಾಗಿಲ್ಲ.

ಪ್ರತಿನಿಧಿ—ಕನಡಾದೇಶದ ನಿಮ್ಮ ಎಡಿಕಾಂಗರು ಸ್ತ್ರೀಲೋಲುಪರಾದಂತೆ ಹಿಂದುಸ್ಥಾನದ ಎಡಿಕಾಂಗರು ಆಗ ಬಹುದೇನು?

ವೈಸರಾಯರು—ಹಿಂದುಸ್ಥಾನದವರು ಹಾಗೆಮಾಡಲಿಕ್ಕಿಲ್ಲವೆಂದು ನಂಬಿದ್ದೇನೆ.

ಪ್ರತಿನಿಧಿ—ನಾವು ಹಿಂದುಸ್ಥಾನದ ವಿಷಯದಲ್ಲಿ ಜನರಿಗೆ ಸರಿಯಾದ ತಿಳುವಳಿಕೆ ಬರುವಂತೆ ಕೆಲಸಮಾಡುತ್ತಿರುವೆವು.

ವೈಸರಾಯರು—ಹೌದು, ನೀವು ಬಹು ದನ್ನಾಗಿ ಕೆಲಸಮಾಡುತ್ತಿರುವಿರಿ.

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ 14 ಪೌಂಡಿನ ಗ್ಲೇಜ್ ಕಾಗದದಲ್ಲಿ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಇದರಲ್ಲಿ ಒಂದರಿಂದ ಸಾವಿರದವರೆಗಿನ ಸಂಖ್ಯೆಗಳ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ ಅನುಲೋಮ, ವಿಲೋಮ, ಮಗ್ಗಿ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3 ಮಾತ್ರ.

ಸಚಿತ್ರ ಕರ್ನಾಟಕ ಗುಣಿತಾಕ್ಷರಬೋಧೆ:—ಮಕ್ಕಳಿಗೆ ಕಲಿಯಲು ಕಷ್ಟವಾದ ಗುಣಿತಾಕ್ಷರಗಳನ್ನು ಸುಲಭರೀತಿಯಲ್ಲಿ ಬೋಧಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0 ಮಾತ್ರ.

ಸಿಲಿಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ. ಇಲಾಖೆಯ ಆಫೀಸರು ಒಪ್ಪಿಗೆಯನ್ನು ಕೊಟ್ಟಿರುವರು.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟ್ಯಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು. ಉಪಾಧ್ಯಾಯರಿಗೂ ವ್ಯಾಪಾರಿಗಳಿಗೂ ತಕ್ಕಂತೆ ಕಮಿಷನ್ ಉಂಟು.

ಪ್ರಕಾಶಕರು:—ಜಿ. ರೇವಣ್ಣ ಅಂಡ್ ಬ್ರದರ್
ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಬೆಂಗಳೂರು ಡಿ||

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಫಲಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೪ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ವಿಶೇಷ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹರ್ಷಿಯವರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಡೋಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸುತ್ತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆಹುಳಗಳ ಕೆದರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಚರು, ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[38] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ,) **ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತಾ ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಗೊಡಿಸದೆ ಎಂತಹ ಕಠಿನವಾದ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ ಮತ್ತು ರೋಗವು ಬಂದಾಗ ಕೊಟ್ಟರೆ ಮುಂದೆ. ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು, (ಪಕ್ಕೆ ಎಳತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕಂಠ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಿನಿ ಜೋಗು ನೀರು ಪ್ರದೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲುವಕಾಶವಿಲ್ಲದೆ ಕೂತಲ್ಲೇ ಕೂತಿರಬೇಕಾದವರಿಗೂ, ಶ್ರೀಮಂತರಿಗೂ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ತರಿಸಿನೋಡಿರಿ. 256 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ.)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[53] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರವಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೭ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮುಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಶಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೩೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗುತ್ತದೆ.

(Registered Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೧, ಮದರಾಸ

[41]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 || ಶ್ರೀ ಜಗದ್ಗುರ ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ ನೇ ಮೇ ೧೯೩೧ [ಸಂಚಿಕೆ ೨

ಗುಜರಾಥದೇಶದಲ್ಲಿ ಮಹಾತ್ಮರ ಸಂಚಾರ.

ಮಹಾತ್ಮ ಗಾಂಧಿಯವರು ಕಳೆದ ತಿಂಗಳು 26ನೆಯ ತಾರೀಖಿನ ದಿವಸ ಬಾರ್ಡೋಲಿ ಹತ್ತಿರವಿರುವ ಬಬಲ ಎಂಬ ಹಳ್ಳಿಗೆ ಹೋದರು. ಸತ್ಯಾಗ್ರಹ ಚಳವಳಿಯಲ್ಲಿ ಸರ್ಕಾರದವರು ಮಾಡುವ ಹರಾಜುಗಳಿಗೆ ಜನರು ಹೋಗದಂತೆ ತಡೆಮಾಡುವುದರಲ್ಲಿ ಆ ಹಳ್ಳಿಯವರು ಮುಖ್ಯಭಾಗ ವಹಿಸಿದ್ದರು. ಗಾಂಧಿಜಿಯವರು ಹರಾಜಿನಲ್ಲಿ ಜಮೀನುಗಳನ್ನು ಕೊಂಡುಕೊಂಡು ತಮಗೆ ಅನ್ಯಾಯ ಮಾಡಿದವರನ್ನು ಹಿಂಸಿಸದೆ ಪ್ರೀತಿಸಬೇಕೆಂದು ಉಪದೇಶಿಸಿದರು.

ಅನಂತರ ಮಹಾತ್ಮರು ಆ ದಿವಸ ಸಾಯಂಕಾಲ ಬಾರ್ಡೋಲಿ ತಾಲೂಕಿನ ರೈತರನ್ನು ಸಂದರ್ಶಿಸಿದರು. ಅವರ ಸ್ಥಿತಿಯು ಹೇಗಿರುವುದೆಂದರೆ, ಸರ್ಕಾರದವರು ಅವರ ಜಮೀನುಗಳನ್ನು ಜಫ್ತು ಮಾಡಿದ್ದರೂ ಅವು ಮೂರನೆಯವರ ವಶವಾಗಿಲ್ಲ. ತಮ್ಮ ಹೊಲಗಳಲ್ಲಿ ಕೆಲಸ ಮಾಡುವುದಕ್ಕೆ ಸರ್ಕಾರದವರು ಅಡ್ಡಿಪಡಿಸುತ್ತಿರುವರೆಂದು ಕೆಲವು ರೈತರು ಹೇಳಿದರು. ಮಹಾತ್ಮರು ಅದನ್ನೆಲ್ಲ ಸರಿಪಡಿಸುವೆನೆಂದು ವಚನವನ್ನಿತ್ತರು.

ಅನಂತರ ಸರ್ದಾರ್ ವಲ್ಲಭಭಾಯಿ ಪಟೇಲರೊಡನೆ ಅಕೋಟಿ ಎಂಬ ಹಳ್ಳಿಗೆ ಹೋದರು. ಕಳೆದ ಸತ್ಯಾಗ್ರಹಚಳವಳಿಯಲ್ಲಿ ಆಹಳ್ಳಿಯೇ ಅತ್ಯಂತ ಕಷ್ಟಕ್ಕೀಡಾಗಿತ್ತು. 50,000 ರೂ. ಗಳ ಬೆಲೆಬಾಳುವ ತಮ್ಮ ಛತ್ರದ ಸ್ಥಳವನ್ನು ಸರ್ಕಾರದವರು ಜಫ್ತುಮಾಡಿ ಜಹಂಗೀರ್ ಪಾಟೇಲ್ ಎಂಬ ಪಾರ್ಸಿಯವನಿಗೆ 1400 ರೂ. ಗಳಿಗೆ ಮಾರಿದರೆಂದೂ, ಅವರಿಗೆ ಜೀವನೋಪಾಯಕ್ಕೆ ಏನೂ ಆಧಾರವಿಲ್ಲವೆಂದೂ, ಕಾಂಗ್ರೆಸ್ಸಿನವರು ಕೊಡುತ್ತಿರುವ ಅಲ್ಪಸ್ವಲ್ಪ ಸಹಾಯದಿಂದಲೇ ಇದುವರೆಗೂ ಜೀವಿಸಿರುವರೆಂದೂ, ಸ್ಥಿತಿಯು ಅಷ್ಟು ಶೋಚನೀಯವಾದರೂ ಮಾಮಲೇದಾರರು ಕಂದಾಯವನ್ನು ಕೊಡುವಂತೆ ಬಲಾತ್ಕಾರ ಮಾಡುತ್ತಿರುವರೆಂದೂ ಮಹಾತ್ಮರೊಡನೆ ಹೇಳಿದರು.

ದಿಲ್ಲಿ ಒಪ್ಪಂದದಿಂದ ಕಂದಾಯ ಕೊಡುವುದಕ್ಕೆ ಸರ್ಕಾರದವರು ವಾಯಿದೆಕೊಡಬೇಕೆಂದು ತೀರ್ಮಾನವಾಗಿದೆ. ನಿಮಗೆ ಬೇಕಾದಷ್ಟು ದಿವಸ ವಾಯಿದೆ ತೆಗೆದುಕೊಳ್ಳಿರಿ. ಅನುಕೂಲವಿದ್ದರು ಕಂದಾಯ ಕೊಡಿರಿ ಎಂದು ಮಹಾತ್ಮರು ಉತ್ತರವನ್ನಿತ್ತು ಬೋರ್ಸಾದಿಗೆ ಹೋದರು.

ಕಳೆದ ತಿಂಗಳು 28 ನೆಯ ತಾರೀಖು ರಾತ್ರಿ 3 ಗಂಟೆಗೆ ಬೋರ್ಸಾದನ್ನು ತಲ್ಪಿದರು. ಅವರಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡಬೇಕೆಂದು ಮೀಟಿಂಗ್ ನಗೈರೆ ಸಾರ್ವಜನಿಕಕಾರ್ಯಗಳನ್ನು ನಡೆಯಿಸಲಿಲ್ಲ. ಸರ್ಕಾರದವರು ಜಫ್ತುಮಾಡಿರುವ ಭೂಮಿ ಕಾಣಿಗಳನ್ನು ...ಾಲ ಎಂಬ ಅಶಿಕ್ಷಿತ ಕೇಡಿಜನರು ಕೊಂಡುಕೊಂ...ರೆ. ಬಾರ್ಡೋಲಿಯಲ್ಲಿ ಪಾರ್ಸಿ ಜನರು ಕೊಂಡಿ...ರೆ. ಅವರ ಸಂಗಡ ಸಂಧಾನ ನಡೆಯಿಸಿ ಅವರವನ್ನು ಕೊಟ್ಟು ನಿಜವಾದ ಮಾಲೀಕರಿಗೆ ಅವರ ಆಸ್ತಿಗಳನ್ನು ಕೊಡಿಸುವುದು ದುಸ್ತರವಲ್ಲ. ಆದರೆ ಬೋರ್ಸಾದದಲ್ಲಿ ಕೇವಲ ಅಶಿಕ್ಷಿತರೂ ಕೇಡಿಗಳೂ ಆದ ಧಾರಾಲ ಜನರು ಹರಾಜಿನಲ್ಲಿ ಜನರ ಆಸ್ತಿಗಳನ್ನು ಕೊಂಡಿರುವುದರಿಂದ ಪೂರ್ವ ಮಾಲೀಕರಿಗೆ ಕೊಡಿಸುವುದು ಕಷ್ಟವಾಗಿದೆ. ಜಮೀನುಗಳ ಮಾಲೀಕರಿಗೂ ಮತ್ತು ಈ ಧಾರಾಲ ಜನರಿಗೂ ಜಗಳಕ್ಕೆ ಉಪಕ್ರಮವಾಗಿದೆ. ಕಲೆಕ್ಟರ್ ಸಾಹೇಬರು ಧಾರಾಲಾ ಜನರಿಗೆ ಜಫ್ತು ಆಗಿರುವ ಜಮೀನುಗಳಲ್ಲಿ ಮನೆ ಕಟ್ಟಿಕೊಳ್ಳಬೇಕೆಂದು ಹೇಳಿರುವರಂತೆ! ಇದರಿಂದ ಧಾರಾಲಾ ಜನರಿಗೆ ಸರ್ಕಾರದಿಂದ ತುಂಬಾ ಪ್ರೋತ್ಸಾಹ ಸಿಕ್ಕಂತಾಗಿದೆ. ಕಲೆಕ್ಟರ್ ಸಾಹೇಬರು ಮೇಲ್ಕಂಡ ಆರ್ಡರು ಮಾಡದಿದ್ದರೆ ಧಾರಾಲ ಜನರು ಒಪ್ಪಂದಕ್ಕೆ ಒಂದು ಮೊದಲಿನ ಮಾಲೀಕರಿಗೆ ಜಮೀನುಗಳು ಲಭ್ಯವಾಗಲು ಸುಲಭವಾಗುತ್ತಿತ್ತೆಂದು ಜನರು ಮಾತನಾಡುತ್ತಿರುವರು. ಇದಲ್ಲದೆ ಕಂದಾಯಕೊಡುವದೊಂದು ಕಠಿಣ ಪ್ರಶ್ನೆಯಾಗಿದೆ. ಮಹಾತ್ಮರು ಕಲೆಕ್ಟರರೊಡನೆ ಮಾತನಾಡಿ ಎಲ್ಲ ಅಕ್ರಮಗಳನ್ನೂ ಸರಿಪಡಿಸುವುದರಲ್ಲಿದ್ದಾರೆ. ಇವೆಲ್ಲ ಇತ್ಯರ್ಥವಾಗುವವರೆಗೂ ಮಹಾತ್ಮರು ಬೋರ್ಸಾದಿನಲ್ಲಿಯೇ ಇರುವರೆಂದು ತಿಳಿದುಬರುತ್ತದೆ.

ಸತ್ಯಾಗ್ರಹಿಗಳ ಭೂಮಿ ಕಾಣಿಗಳನ್ನು ಕೊಂಡ ಪಾರ್ಸಿ ಜನರಿಗೆ ಸರಿಯಾದ ಬುದ್ಧಿವಾದವನ್ನು ಹೇಳುವುದಕ್ಕೆ ಬೊಂಬಾಯಿಯ ಶ್ರೀಯುತ ಕೆ. ಎಫ್. ನರಿಮನ್ ರೂ, ಶ್ರೀಮಂತ ಸರ್ ಕಾಸಜಿ ಜಹಂಗೀರ್ ರವರೂ ಬಾರ್ಡೋಲಿಗೆ ಹೋಗಿದ್ದರು. ತಮ್ಮ ಧರ್ಮದ ಪಾರ್ಸಿ ಜನರೊಡನೆ ಮಾತುಕಥೆ ನಡೆಯಿಸಿ ಕೆ. ಎಫ್. ನಾರಿಮನ್ ರವರು ಪ್ರಕಟಿಸುವುದೇನೆಂದರೆ—ಜಮೀನುಗಳನ್ನು ಕೊಂಡವರ ಪೈಕಿ ಮುಖಂಡ ಮನುಷ್ಯನು ಅವುಗಳನ್ನು ವಾಪಸು ಕೊಡುವುದಾಗಿ ಒಪ್ಪಿರುತ್ತಾನೆ. ಸರ್ದಾರ್ ಗದ್ರಾ ಎಂಬವನು 2 ಲಕ್ಷ ರೂಪಾಯಿ ಬೆಲೆಬಾಳುವ ಜಮೀನುಗಳನ್ನು 12 ಸಾವಿರ ರೂಪಾಯಿಗಳಿಗೆ ಕೊಂಡಿದ್ದನು. ಅವನು ತನ್ನ ಹಣವನ್ನು ತೆಗೆದುಕೊಂಡು ಜಮೀನುಗಳನ್ನು ವಾಪಸು ಕೊಡಲು ಸಿದ್ಧನಾಗಿರುವನು. ಇದರಂತೆ ಉಳಿದವುಗಳೆಲ್ಲ ಇತ್ಯರ್ಥವಾಗುವುವು.

ಸ್ವೀಕಾರ.

ಬೆಂಗಳೂರು ಸಿಟಿ ಚಾಮರಾಜಪೇಟೆ ಮಂಡಿ ಮ|| ರಾ|| ಬಿ. ಎಂ. ವೀರಪ್ಪನವರ ಪುತ್ರ ಚಿ|| ಸ|| ಶಿವಣ್ಣನ ವಿವಾಹದಲ್ಲಿ ಪ್ರಭಾಪೋಷಣಕ್ಕಾಗಿ ಮ|| ರಾ|| ವೀರಭದ್ರಪ್ಪನವರು ಸಮರ್ಪಿಸಿದ 2 ರೂ. ಗಳು ಹಾಗೂ ವಿಶ್ವೇಶ್ವರಪುರದಲ್ಲಿರುವ ಮ|| ರಾ|| ಹಾಸನದ ಮುಜ್ಜಣ್ಣನವರ ಮಕ್ಕಳು ಕಾಯಿ ಗುಬ್ಬಣ್ಣನವರು ನೂತನವಾಗಿ ಕಟ್ಟಿಸಿರುವ (ರೇಣುಕಾಲಯ) ಗೃಹಪ್ರವೇಶ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಒಟ್ಟು 4 ರೂಪಾಯಿಗಳು ಮ|| ರಾ|| ಜಿ. ಗಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಶಹರದಹಾವೇರಿಪೇಟೆಯಲ್ಲಿರುವ ಮ|| ರಾ|| ಕಲ್ಲಾಪುರ ಪರ್ವತಪ್ಪನವರ ಸಹೋದರ ಮ|| ರಾ|| ಮರಿತಮ್ಮಪ್ಪನಿಗೆ ಶಿರಗುಪ್ಪಿಗ್ರಾಮದ ಮ|| ರಾ|| ಧರಮಣ್ಣನವರ ಬಸಪ್ಪನವರ ಪುತ್ರಿ ಸೌ|| ಹೂವವ್ವನನ್ನು ಮತ್ತು ಸದರಿಯವರ ಅಳಿಯನಾದ ಚಿ|| ಲಿಂಗಬಸಪ್ಪನಿಗೆ ಕೊಣ್ಣೂರಗ್ರಾಮದ ಮ|| ರಾ|| ಶೇಖಣ್ಣನವರ ಪರಪ್ಪನವರ ಪುತ್ರಿ ಸೌ|| ಚನ್ನವ್ವನನ್ನು ತಂದು ನೆರವೇರಿಸಿದ ವಿವಾಹಕಾರ್ಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ 3 ರೂ. ಗಳು ವೇ|| ಶಿರೋಳ ಹಿರೇಮಠದ ಪಂಚಾಕ್ಷರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಸೊರಬ ತಾ|| ಬೊಪ್ಪಗೊಂಡನಕೊಪ್ಪದಲ್ಲಿರುವ ಶ್ರೀಮತಿ ಪುಟ್ಟವ್ವನವರು ಕನ್ಯಾದಾನಮಾಡಿ ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಗೇರಕೊಪ್ಪದ ಬಣಕಾರ ಬಸವಂತಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕಣೆಕಲ್ಲುಗ್ರಾಮದ ಹಿರೇಮಠದ ಶ್ರೀಮತಿ ಸಿದ್ಧಮ್ಮನವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂ. ಹಾಗೂ ಸದರಿ ಗ್ರಾಮದ ಪೂ|| ಸಿದ್ಧಯ್ಯನವರು ತಮಗೆ ಜಗದಾಚಾರ್ಯರ ಆಶೀರ್ವಾದಬಲದಿಂದ ಪುತ್ರನು ಜನಿಸಿದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಒಟ್ಟು 2 ಗಳು ವೇ|| ಹಿರೇಮಠದ ಚನ್ನವೀರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಕೊಟ್ಟೂರಲ್ಲಿರುವ ಮ|| ರಾ|| ಅಕ್ಕಸಾಲಿ ವೀರಪ್ಪನವರ ಪುತ್ರಿ ಸೌ|| ಓಂಕಾರಮ್ಮನ ಪ್ರಸ್ತದಲ್ಲಿ ತೆಗೆಯಿಸಿದ 1 ರೂ. ಯು ಕಟ್ಟಿಮನೆ ಶೆಟ್ಟರ ಮ|| ರಾ|| ಭದ್ರಶೆಟ್ಟರ ರುದ್ರಪ್ಪನವರ ದ್ವಾರಾ ತಲ್ಪಿರುತ್ತದೆ.

ಬಳ್ಳಾರಿ ಡಿ|| ಸೋಮಲಾಪುರದ ಮ|| ರಾ|| ಹೊನ್ನುಗೂಡಪ್ಪನವರ ಪುತ್ರ ಚಿ|| ಬಂಡೆಪ್ಪನಿಗೆ ಸದರಿ ಗ್ರಾಮದ ಶರಭನಗೌಡರ ಪುತ್ರಿ ಸೌ|| ಗಂಗಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ|| ಷ|| ಬ್ರ|| ಹಾವಳಗಿ ಹಿರೇಮಠದ ಚರಮೂರ್ತಿಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

"ಇಂಗ್ಲೆಂಡಿನ ಸಾಮ್ರಾಜ್ಯವಾದಿಗಳ ಹಾಗೂ ರಾಷ್ಟ್ರೀಯ ಸಭೆಯ ವಿರೋಧವಾಗಿ ನಿಮ್ಮ ಜನರನ್ನು ಪ್ರೋತ್ಸಾಹಿಸಿ ಕ್ರಾಂತಿಯನ್ನೆಬ್ಬಿಸಿರಿ: ಕೂಲಿಕಾರರನ್ನೂ ರೈತರನ್ನೂ ಹುರಿದುಂಬಿಸಿ ಅಖಿಲಭಾರತ ಬೋಲ್ಷಿವಿಕ್ ಸಂಘವನ್ನೂ ಕೂಲಿಕಾರ ಸಂಸ್ಥೆಗಳನ್ನೂ ಏರ್ಪಡಿಸಿ ರಾಜಕೀಯ ಸಂಘಮಾಡಿರಿ" ಹೀಗೆಂದು ಮಾಸ್ಕೋಬೋಲ್ಷಿವೀಕರು ಹಿಂದುಸ್ಥಾನದ ತಮ್ಮ ಏಜೆಂಟರಿಗೆ ತಿಳುಹಿಸಿರುವರಂತೆ!

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತಿಮಹೋತ್ಸವ,

ಕೆಲೂರು.

ಇಲ್ಲಿಯ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳು ಮತ್ತು ಬಸಯ್ಯನವರು, ಹಿರೇಮಠ ಗುರುಶಾಂತಯ್ಯನವರು, ಹಿರೇಮಠದ ಮ|| ಮಂಟಿಪ್ಪನವರು, ನಾಡಗೌಡರ, ಶರಣಾಡಗೌಡರು, ಸಂಗಪ್ಪ ಹೆಡ್‌ಮಾಸ್ತರ ಇವರು ಗುರುಗಳ ಜಯಂತ್ಯುತ್ಸವವನ್ನು ವೈ|| ಶು|| ೩ ದಿವಸ ನೆರವೇರಿಸಿದರು. ಓಣಿ ಓಣಿಗಳನ್ನು ತೋರಣಗಳಿಂದ ಮತ್ತು ಬಾಳಿನ ಬೇಳೆಗಳಿಂದ ಶೃಂಗರಿಸಿ ಬೆಳಿಗ್ಗೆ ೮ ಘಂಟೆಗೆ ಮಠದಿಂದ ಉತ್ಸವವನ್ನು ಹೊರಡಿಸಿದರು. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳ ಮುಂದೆ ನಿಂತು ಪೂಜೆಮಾಡಿ ಆಚಾರ್ಯರ ಜಯಘೋಷಮಾಡುತ್ತಿದ್ದರು. ಇದು ದೊಡ್ಡ ಹಬ್ಬವೆಂದು ಎಲ್ಲಾ ಮಠದವರು ತಮ್ಮ ತಮ್ಮ ಮನೆಗಳಲ್ಲಿ ಮೃಷ್ಟಾನ್ನ ಮಾಡಿಸಿದ್ದರು. ಆಮೇಲೆ ಮ|| ರಾ|| ಮಂಟಪ್ಪನವರು ನಾಡಗೌಡರ ಇವರು ಸಮಸ್ತ ದೈವದವರನ್ನು ಕೂಡಿಕೊಂಡು ಅತಿ ಶೃಂಗಾರದಿಂದ ಬಾಜಾಭಜಂತ್ರಿ ಭಜನಾ ಜಯಘೋಷದೊಡನೆ ಗ್ರಾಮದಲ್ಲೆಲ್ಲಾ ಉತ್ಸವಮಾಡಿಸಿದರು. ಆಮೇಲೆ ಉತ್ಸವವು ಹಿರೇಮಠಕ್ಕೆ ಮುಟ್ಟಿ ಅಲ್ಲಿ ರಾತ್ರಿ ೮ ಘಂಟೆಗೆ ಉಪನ್ಯಾಸಗಳೂ, ೧೦ ಘಂಟೆಯ ವರೆಗೆ ರೇಣುಕರ ಕೀರ್ತನವೂ ಆಗಿ ಸಭಾವಿಸರ್ಜನವಾಯಿತು.

ಓರ್ವ ಗುರುಭಕ್ತ.

ಶ್ರೀ ಜಗದ್ಗುರುಗಳ ಜಯಂತಿಮಹೋತ್ಸವ.

ಹುಟಗಿ ಗ್ರಾಮದ ಬೃಹನ್ಮಠದ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರಶಿವಾಚಾರ್ಯರ ನೇತೃತ್ವದಲ್ಲಿ ಶ್ರೀ ಜಗದ್ಗುರು ಏಕೋರಾಮಶಿವಾಚಾರ್ಯರ ಮತ್ತು ದಾರುಕಾಚಾರ್ಯರ ಜಯಂತಿಮಹೋತ್ಸವವು ವೈಶಾಖ ಶು|| ೧ ರಿಂದ ೫ ರವರೆಗೆ ಬಹು ವಿಜೃಂಭಣೆಯಿಂದ ನೆರವೇರಿತು. ಈ ಕಾರ್ಯವನ್ನು ಶ್ರೀ ಶುಕ್ರಪ್ಪ ಪಾಟೀಲ, ಮಲಕಪ್ಪ ಕಾರಕಲ್ಲಿ, ಕಲ್ಲಪ್ಪ ರೇಸ್ಕೆ ಇವರು ಬಹು ಭಕ್ತಿಯಿಂದ ನೆರವೇರಿಸಿದರು. ಮೊದಲನೆಯ ದಿವಸ ರುದ್ರಾಭಿಷೇಕಕಾರ್ಯವನ್ನು ಶರಣಪ್ಪ ಕೋಟಾಣಿ ಇವರು ನೆರವೇರಿಸಿದರು. ಎರಡನೆಯ ದಿವಸ ಸಾತಪ್ಪ ಕೋಟಾಣಿ ಇವರು ಬಹುಭಕ್ತಿಪೂರ್ವಕವಾಗಿ ರುದ್ರಾಭಿಷೇಕವನ್ನು ನೆರವೇರಿಸಿದರು. ಇಂಥ ಕಾರ್ಯಗಳಲ್ಲಿ ಆಸಕ್ತಿಯುಳ್ಳ ದರ್ಗನಹಳ್ಳಿ ಜನರು ಮೂರನೆಯ ದಿವಸದ ರುದ್ರಾಭಿಷೇಕವನ್ನು ಬಹುಭಕ್ತಿಪೂರ್ವಕವಾಗಿ ನೆರವೇರಿಸಿದರು. ನಾಲ್ಕನೆಯ ದಿವಸದ ರುದ್ರಾಭಿಷೇಕದಕಾರ್ಯವು ಮಲಕಪ್ಪನ ತಿಪ್ಪಣ್ಣ ಇವರಿಂದ ನೆರವೇರಿಸಲ್ಪಟ್ಟಿತು. ಐದನೆಯ ದಿವಸದ ರುದ್ರಾಭಿಷೇಕವು ಭೀಮಣ್ಣ ಮಡಿವಾಳರ ಇವರಿಂದ ನೆರವೇರಿಸಲ್ಪಟ್ಟಿತು. ಐದನೆಯ ದಿವಸ ಸಾಯಂಕಾಲಕ್ಕೆ ಶ್ರೀ ಜಗದಾಚಾರ್ಯರ ಭಾವಪಟದ ಮೆರವಣಿಗೆಯು ಶ್ರೀ ಗಳವರ ಮಠದಿಂದ ಹೊರಟು ಊರ ಯಾವತ್ತೂ ಬೀದಿಗಳಲ್ಲಿ ಬಹುವೈಭವದಿಂದ ಮೆರೆದು ತಿರುಗಿ ಮಠಕ್ಕೆ ಬಂದಿತು. ತರುವಾಯ ಆಚಾರ್ಯರ ಲಿಂಗೋದ್ಭವಬಿಂಬಗಳನ್ನು ಪೂಜಿಸಿ ತೊಟ್ಟಿಲಲ್ಲಿ ಇರಿಸಿ ಕಂ|| ಸೌ|| ಮಲಕವ್ವಬಾಯಿ ಪಡನೂರ ಸಂಗವ್ವಬಾಯಿ ಭಂಕಲಗಿ ಇವರು ಜೋಗುಳಪದವನ್ನು ಹಾಡಿದರು. ಸಾಯಂಕಾಲ 7 ಗಂಟೆಗೆ ಸಭೆಯು ಕೂಡಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಮಿ|| ಪಿ. ಎಂ. ಮೈತ್ರಿಚಿಂತಾಮಣಿ ಇವರು ಸ್ವೀಕರಿಸಿದರು. ಆದಿಯಲ್ಲಿ ಹುಟಗಿ ಬೃಹನ್ಮಠದ ಪಟ್ಟಾಧ್ಯಕ್ಷರಾದ ಶ್ರೀ ಚನ್ನವೀರಶಿವಾಚಾರ್ಯ ಮಹನೀಯರು ತಮ್ಮ ಮನೋಹರವಾಣಿಯಿಂದ ಜಯಂತಿ ಅಂದರೇನು? ವೀರಶೈವರು ಇಷ್ಟು ಅಧೋಗತಿಗೀಡಾಗಲು ಮುಖ್ಯಕಾರಣಗಳು ಅವವು? ಈ ಬಗ್ಗೆ ವಿಚಾರ ಮಾಡಿದರೆ ತಿಳಿಯುವದೇನೆಂದರೆ, ವೀರಶೈವರು ಮುಖ್ಯಮತಸ್ಥಾಪಕರನ್ನು ಮರೆತು ಕಂಡಕಂಡವರ ಬೆಂಬಲಬಿದ್ದು ವರ್ತಿಸುವದು. ಮತ್ತು ಮಹೇಶ್ವರರು ಉಪದೇಶಿಸಿ ಅದನ್ನು ತಿದ್ದದಿರುವದು ಇವೇ ಮೊದಲಾದವು ಬಲವಾದ ಕಾರಣಗಳಿವೆ ಎಂದು ಹೇಳಿ ಭಕ್ತಸಮೂಹವನ್ನು ಆನಂದಗೊಳಿಸಿದರು. ಅನಂತರ ಮಿ|| ಸದಾಶಿವಮುದಸಿ ಇವರು ಮಾನವಧರ್ಮಕ್ಕೆ ಗುರುವೇ ಮುಖ್ಯಕಾರಣನಿದ್ದುದರಿಂದ ಆಯಾ ಜಾತಿಯವರು ತಮ್ಮ ತಮ್ಮ ಧರ್ಮಗುರುಗಳ ಜಯಂತಿಮಹೋತ್ಸವವನ್ನು ಹಬ್ಬಗಳಂತೆ ಜರುಗಿಸುತ್ತ ಬರಬೇಕೆಂದು ಹೇಳಿದರು. ಈ ದಿವಸ ಸೊಲ್ಲಾಪುರದಿಂದ ಆಕಸ್ಮಾತ್ತಾಗಿ ಆಗಮಿಸಿದ ಶ್ರೀ|| ಷ|| ಬ್ರ|| ಜೈನಾಪುರ ಚರಮೂರ್ತಿಸ್ವಾಮಿಗಳು, ಎಂ. ಎಸ್. ಬಾರ್‌ಅಟ್‌ಲಾ ಸರದಾರ್ ಇವರ ಧರ್ಮಪತ್ನಿಯರಾದ ಕಂ|| ಸೌ|| ಪಂಚವ್ವಬಾಯಿ ಸರದಾರ್ ಸೌ|| ನೀಲಗಂಗವ್ವಬಾಯಿ ಸಿದ್ದೇಶ್ವರ ಜೋಡಭಾವೆ ಮತ್ತು ವಾರದ ಪಾಠಶಾಲೆಯ ಅಲ್ಲಮಪ್ರಭು ಆಲೂರು ಶರಣಯ್ಯ ಇವರು ಆವೇಶಭರಿತವಾದ ಭಾಷಣವನ್ನು ಮಾಡಿ ಸಭೆಗೆ ಹೆಚ್ಚು ಶೋಭೆಯನ್ನುಂಟುಮಾಡಿದರು. ಅಲ್ಲಮಪ್ರಭುಗಳು ಜಯಂತಿ ಬಗ್ಗೆ ಬಹುಸರಸವಾದ ಭಾಷಣವನ್ನು ಮಾಡಿ ಜನರ ಮನಸ್ಸಿನ ಮೇಲೆ ಒಳ್ಳೇಪರಿಣಾಮವನ್ನುಂಟುಮಾಡಿದರು. ಸೌ|| ನೀಲಗಂಗಾಬಾಯಿ ಜೋಡಭಾವೆ ಇವರು ಭಾರತೀಯರು ತಮ್ಮ ಧರ್ಮಕ್ಕನುಸರಿಸಿ ಶುದ್ಧವಾದಆಚರಣೆಯಿಂದ ನಡೆದರೆ ದೇಶವು ಊರ್ಜಿತಾವಸ್ಥೆಯನ್ನು ಹೊಂದಲು ಅವಕಾಶವುತ್ತವದಿಲ್ಲೆಂದು ಹೇಳಿದರು. ಸೌ|| ಪಂಚವ್ವಬಾಯಿ ಇವರು ತಮ್ಮ ಭಾಷಣದಲ್ಲಿ ಜಯಂತಿಗಳ ಏಳ್ಗೆಯನ್ನು ವ್ಯಕ್ತಪಡಿಸಿದರು. ಮತ್ತು ಭಕ್ತಜನರನ್ನು ಉದ್ಧರಿಸಲು ಕಳಕಳಿಯುಳ್ಳ ಹುಟಗಿ ಬೃಹನ್ಮಠದ ಪಟ್ಟಾಧ್ಯಕ್ಷರಾದ ಶ್ರೀ ಗುರುಗಳ ಮಹಿಮೆಯನ್ನು ಅವರ ಬ್ರಹ್ಮತೇಜವನ್ನೂ ವರ್ಣಿಸಿದರು. ಅನಂತರ ದೊಡ್ಡಯ್ಯ ಹಿರೇಮಠ ಅರ್ಜಗಿ ಇವರು ಗುರುಮಹತ್ವ ಈ ಬಗ್ಗೆ ಪರಿಣಾಮದಾಯಕವಾಗುವಂತೆ ಭಾಷಣಮಾಡಿದರು. ಅನಂತರ ಹುಟಗಿ ಶ್ರೀ ಗುರುಗಳವರು ಜೈನಾಪುರ ಶ್ರೀ ಚರಮೂರ್ತಿಸ್ವಾಮಿಗಳವರ ಕಡೆಯಿಂದ ದರ್ಗನಹಳ್ಳಿ, ಬುರ್ಗನಹಳ್ಳಿ, ಬೋರಾಮಣಿ, ಸಿಂದಖೇಡಗ್ರಾಮಗಳ ಜಗದ್ಗುರು ಪಂಚಾಚಾರ್ಯರ ಭಜನಾಸಂಘದವರಿಗೆ ಲಿಂಗೋದ್ಭವ ಲಾಕೆಟ್ಟುಗಳನ್ನು ಕೊಡಿಸಿದರು. ಆ ಮೇಲೆ ಸಭೆಯು ಮುಕ್ತಾಯವಾಯಿತು.

ಬಿ. ಎಸ್. ಚಡಚಣ ಅ|| ಮಾಸ್ತರ,
ಸೆಟ್ಲಮೆಂಟಸ್ಕೂಲ್, ಹುಟಗಿ.

ಕೈ|| ಶ್ರೀಮತಿ ಹಿರೇಮಠದ ಸಿದ್ಧಮ್ಮನವರ ಕೈಲಾಸ ಗಣಾರಾಧನಾಸಮಾರಂಭ.

ಬಳ್ಳಾರಿ ಜಿಲ್ಲಾ ರಾಯದುರ್ಗದ ತಾ|| ಕಣೇಕಲ್ಲು ಗ್ರಾಮದ ಹಿರೇಮಠದ ಮರಿಸ್ವಾಮಯ್ಯನವರ ಧರ್ಮಪತ್ನಿ ಸಿದ್ಧಮ್ಮನವರು ಇದೇ ತಿಂಗಳು ತಾ|| 10-4-31 ನೆಯ ಶುಕ್ರವಾರ ಮಧ್ಯಾಹ್ನ ಮೂರುವರೆ ಘಂಟೆಗೆ ಶಿವಸಾಯುಜ್ಯವನ್ನು ಹೊಂದಿದರು. ಈ ಪುಣ್ಯಪುರುಷಳು ಈ ಪ್ರಾಂತದ ವೀರಶೈವಜನಾಂಗದಲ್ಲಿ ಅತ್ಯಂತ ಖ್ಯಾತಿಯನ್ನು ಪಡೆದು ವೀರನಾರಿಯೆಂದು ಹೊಗಳಿಸಿಕೊಂಡಿದ್ದಳು. ಈ ಪ್ರಾಂತಕ್ಕೆಲ್ಲಾ ದೊಡ್ಡ ಮಠವಾಗಿಯೂ ಇನಾಮುಳ್ಳದ್ದಾಗಿಯೂ ಇರುವ ತಮ್ಮ ಆಸ್ತಿಯನ್ನೂ ಮಠದ ಸಾವಿರಾರು ಮನೆಶಿಷ್ಯರುಗಳನ್ನೂ ಪತಿವಿಯೋಗವಾದಂದಿನಿಂದಲೂ ಸರಿಯಾದ ವ್ಯವಸ್ಥೆಯಿಂದ ನಡೆಸಿಕೊಂಡು ಬಂದುದಲ್ಲದೆ ತಮಗೆ ಇದ್ದ ಒಬ್ಬ ಪುತ್ರನು ಪರಂಧಾಮವನೈದಿದ ಮೇಲೂ ಸಹ ತಮ್ಮ ಪುತ್ರನ ಇಬ್ಬರು ಹೆಣ್ಣುಮಕ್ಕಳನ್ನು ತಮ್ಮ ಚಿಕ್ಕಪ್ಪನವರ ಪುತ್ರರಾದ ಎರಡುಕೆರೆ ಹಿರೇಮಠದ ವೇ|| ಚನ್ನವೀರಶಾಸ್ತ್ರಿಗಳಿಗೆ ಕೊಟ್ಟು ವಿವಾಹಮಾಡಿ ಸದರಿ ಶಾಸ್ತ್ರಿಗಳನ್ನೇ ಮಠದ ಸರ್ವಾಧಿಕಾರಿಗಳನ್ನಾಗಿ ಮಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದರು. ಇವರು ತಮ್ಮ ಅಂತ್ಯಕಾಲದಲ್ಲಿ ನೂರಾರು ಜನ ಮಾಹೇಶ್ವರರಿಗೆ ಭೂರಿದಕ್ಷಿಣೆ, ವಿಭೂತಿಘಟ್ಟಿ, ರುದ್ರಾಕ್ಷಮಾಲಿಕಾದಿಗಳನ್ನು ದಾನಮಾಡಿದರು. ಇವರಿಗೆ ಅಂತ್ಯಕಾಲದಲ್ಲಿ 90 ವರ್ಷಗಳಾಗಿದ್ದವು. ಇವರ ವಿಯೋಗಾನಂತರ ಹೆಚ್. ಎಂ. ಚನ್ನವೀರಶಾಸ್ತ್ರಿಗಳು ಇವರ ಪುಣ್ಯತಿಥಿಯನ್ನು ತಾ|| 22-4-31 ನೆಯ ಬುಧವಾರ ದಿವಸ ನೆರವೇರಿಸಿದರು. ವೇ|| ಹಾವಳಗೆ ಹಿರೇಮಠದ ಚರಪಟ್ಟಾಧ್ಯಕ್ಷರನ್ನೂ, ವೇ|| ಪಾಲ್ತೂರು ಹಿರೇಮಠದ ಚರಪಟ್ಟಾಧ್ಯಕ್ಷರನ್ನೂ ಬರಮಾಡಿಕೊಂಡರು. ಅದೇ ತೇದಿಗೆ ಸರಿಯಾಗಿ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಮಹೋತ್ಸವವಿದ್ದುದರಿಂದ ಈ ಮಹನೀಯಳ ಪುಣ್ಯಭಾಗ್ಯವನ್ನು ಎಷ್ಟು ವರ್ಣಿಸಿದರೂ ತೀರದು. 300.400 ಜನ ಭಕ್ತಮಾಹೇಶ್ವರರಿಗೆ ಅನ್ನಶಾಂತಿನಡೆಯಿಸಿ ಮಾಹೇಶ್ವರರಿಗೆ ಭೂರಿದಕ್ಷಿಣೆ ತಂಬಿಗೆ ತಾಲಿಗಳು ದೀಪಸ್ತಂಭಾದಿಗಳನ್ನು ದಾನಮಾಡಿದರು. ಮೃತಳ ಆತ್ಮಕ್ಕೆ ಜಗದ್ಗುರು ಪಂಚಾಚಾರ್ಯರು ಶಾಂತಿಯನ್ನುಂಟುಮಾಡಲೆಂದು ಹಾರೈಸುವ,

ಪ್ರತ್ಯಕ್ಷದರ್ಶಿ.

ಶಾಂತಿಸಂಧಾನದ ಸಮಾರಾಧನೆ, ಮಾಗಳ.

ಬಳ್ಳಾರಿ ಡಿ|| ಹಡಗಲಿ ತಾ|| ಮಾಗಳ ಗ್ರಾಮದಲ್ಲಿ ಈಗ ೭-೮ ತಿಂಗಳುಗಳಿಂದ ಒಂದು ಸ್ವಯಂಸೇವಕ ಸಂಘವು ಸ್ಥಾಪಿತವಾಗಿದ್ದು ಪ್ರತಿನಿತ್ಯ ಶೇಂದಿ ಸಾರಾಯಿ ಕುಡಿಯಬೇಡಿರಿ; ಪರದೇಶೀಯ ಮಾಲನ್ನು ಬಹಿಷ್ಕರಿಸಿರಿ; ಖಾದಿಯನ್ನೇ ಧರಿಸಿರಿ; ಅಹಿಂಸಾವ್ರತವನ್ನು ಪಾಲಿಸಿರಿ; ಎಂದು ಉಪದೇಶ ಮಾಡುತ್ತ ರಾಷ್ಟ್ರಗೀತೆಯೊಡನೆ ಊರಲ್ಲೆಲ್ಲಾ ಪ್ರಭಾತಫೇರಿಯನ್ನು ತಿರುಗುತ್ತಿರುವುದು. ಜಗದ್ವಿಖ್ಯಾತರಾದ ಮಹಾತ್ಮಾ ಗಾಂಧಿಯವರು ಕೈಕೊಂಡ ಶಾಂತಿಸಂಗ್ರಾಮವು ಲಾರ್ಡ್ ಇರ್ವಿನ್ನರ ಮುಖಾಂತರ ನಡೆದ ಒಪ್ಪಂದದ ಮೇರೆಗೆ ಹಿಂದೂ ಮುಸಲ್ಮಾನರಲ್ಲಿ ಐಕ್ಯವು ನೆಲೆಗೊಂಡು ಭಾವಿ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಭಾರತ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಲಭಿಸಲೆಂಬ ಸತ್ಸಂಕಲ್ಪದಿಂದ ಇದೇ ವೈಶಾಖ ಶುದ್ಧ ಅಕ್ಷಯ ತೃತೀಯಾ ಶುಭದಿವಸದಲ್ಲಿ ಇಲ್ಲಿಯ ಎಲ್ಲಾ ಧರ್ಮದವರು ಕೂಡಿ ತುಂಗಭದ್ರಾ ನದಿಯ ತೀರದೊಳಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯಲ್ಲಿ ಭಗವನ್ನಾಮ ಪ್ರಾರ್ಥನಾಪೂರ್ವಕ ಸಹಸ್ರಾವಧಿ ಬಡಜನರಿಗೆ ಅನ್ನಸಂತರ್ಪಣೆಯನ್ನು ಮಾಡಿದರು. ನದಿಯ ತೀರದಿಂದ ಸಾಯಂಕಾಲ ಪುರಪ್ರವೇಶ ಮಾಡುವ ಕಾಲಕ್ಕೆ ಕೈನೂಲಿನಿಂದ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರವನ್ನಿಟ್ಟು ರಾಷ್ಟ್ರೀಯ ಧ್ವಜದೊಂದಿಗೆ ಉತ್ಸವವು ಹೊರಟು ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ಗ್ರಾಮದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ರಾತ್ರಿ ಹತ್ತು ಘಂಟೆಗೆ ಮೊದಲೇ ಶೃಂಗರಿಸಲ್ಪಟ್ಟ ಸಭಾಮಂಟಪಕ್ಕೆ ಬಂದು ತಲ್ಪಿತು. ಆಮೇಲೆ ಸಭೆಯು ಕೂಡಿತು. ಸಭಾಧ್ಯಕ್ಷತೆಯನ್ನು ಸರ್ವ ಸಮ್ಮತಿಯ ಮೇರೆಗೆ ಮ|| ರಾ|| ಗುರುಭಕ್ತಕೇಸರಿ ಶಾಂತಪ್ಪ, ವೀರಭದ್ರಪ್ಪ, ಕುಬಸದ ಹಮ್ಮಿಗಿ ಇವರು ವಹಿಸಿದರು. ಸಭೆಯಲ್ಲಿ ಮ|| ರಾ|| ಶ್ರೀಮಂತ ನಾಗರಾಜಪ್ಪ ಜಾಗಟಗೇರಿ, ಬಸವರಡ್ಡಿ ಹುಲಿಕೋಟಿ, ಬಾಜೀರಾವ ಹಾವೇರಿ, ಆದಿರಾಜಪ್ಪ ಸರಸಂಭುಮಿ, ಚಿಂತಾಮಣಿರಾವ್ ದೇಸಾಯಿ, ಚಂದ್ರಪ್ಪ ಜವಳಿ ಇವರೆಲ್ಲಾ ರಾಟಿಯ ನೂಲುವದು, ಖಾದಿಯ ಪ್ರಸಾರ, ಮದ್ಯಪಾನ ನಿಷೇಧ, ಅಹಿಂಸಾ, ಪರದೇಶಿಯ ಮಾಲಿನ ಮೇಲೆ ಬಹಿಷ್ಕಾರ, ಐಕಮತ್ಯ ಇತ್ಯಾದಿ ವಿಷಯಗಳ ಮೇಲೆ ಭಾಷಣ ಮಾಡಿದರು. ಅನಂತರ ಅಧ್ಯಕ್ಷರು ತಮ್ಮ ಸಮಾರೋಪಣ ಭಾಷಣದಲ್ಲಿ ಮೇಲಿನ ಯಾವತ್ತು ವಿಷಯಗಳನ್ನು ಕ್ರೋಢೀಕರಿಸಿ ಸರ್ವರ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ದೀರ್ಘವಾದ ಭಾಷಣವನ್ನು ಮಾಡಿದರು. ಅನಂತರ ಸಭಾಧ್ಯಕ್ಷರಿಗೂ ಭಾಷಣಕಾರರಿಗೂ ಕೈನೂಲಿನ ಮಾಲಿಕೆಗಳು ಹಾಕಲ್ಪಟ್ಟವು. ಕೂಡಿದ ಸಭಿಕರೆಲ್ಲರೂ ಹಿಂದುಮುಸಲ್ಮಾನರಲ್ಲಿ ಐಕ್ಯವು ನೆಲೆಗೊಳ್ಳಲಿ, ಶಾಂತಿಸಂಧಾನವು ಯಶಸ್ವಿಯಾಗಲಿ, ಭಾರತದೇಶಕ್ಕೆ ಸಂಪೂರ್ಣ ಸ್ವತಂತ್ರತೆಯು ಲಭಿಸಲಿ ಎಂದು ಜಗನ್ನಿಯಾಮಕನಾದ ಪರಮಾತ್ಮನ ಧ್ಯಾನವನ್ನು ಮಾಡಿ ಮಹಾತ್ಮಾ ಗಾಂಧಿಯವರೇ ಮೊದಲಾದ ರಾಷ್ಟ್ರಭಕ್ತರ ಜಯಘೋಷವನ್ನು ಮಾಡಿದರು. ಅಲ್ಲಿಗೆ ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ತೇರದಾಳ ಬೃಹನ್ಮಠದ ಪಟ್ಟಾಧಿಕಾರಿಗಳವರ ಉದಾರಾಶ್ರಯದಿಂದ ನೆರವೇರುವ ಏಕಾದಶ ಮಂಟಪರುದ್ರಪೂಜಾಮಹೋತ್ಸವಾಹ್ವಾನ ಪತ್ರಿಕೆ.

ಸದ್ಗುಣವೂ ಸದ್ಧರ್ಮವೂ ಸಿಡಿದುಹೋಗಿ ಅಸತ್ಯವೂ ಅಧರ್ಮವೂ ಅಬ್ಬರದಿಂದ ಉಬ್ಬುತ್ತಿರುವಾಗ ಜಗತ್ತನ್ನುದ್ಧರಿಸಲು ಯುಗಯುಗಗಳಲ್ಲಿ ಅವತಾರನೆತ್ತುವೆನೆಂ ಪರಮಾತ್ಮನ ಸೂಕ್ತಿಯಂತೆ, ವೀರಶೈವಧರ್ಮವು ನಶಿಸಿಹೋಗುವಕಾಲದಲ್ಲಿ ಯಾವ ಮಹಾತ್ಮನು ಕೈಲಾಸದಿಂದಿಳಿದು ಸೋಮನಾಥಲಿಂಗದಿಂದವತರಿಸಿ ಅಗಸ್ತ್ಯಮುನಿಗೆ ವೀರಶೈವತತ್ವವನ್ನು ಬೋಧಿಸಿ, ಪ್ರಚುರಪಡಿಸಿದನೋ? ಯಾವ ಅಪಾರಮಹಿಮಾಶಾಲಿಯು ವಿಭೀಷಣನ ಬಿನ್ನಹದಂತೆ ಲೀಲಾಮಾತ್ರದಿಂದ ಮುರುಕೋಟಿ ಗುರುರೂಪವನ್ನು ತಾಳಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ಖ್ಯಾತಿಪಡೆದು ಮೆರೆದನೋ? ಅಂಥ "ಶ್ರೀಮಜ್ಜಗದ್ಗುರು ರೇಣುಕಾಚಾರ್ಯನ ಪೂಜಾಮಹೋತ್ಸವವನ್ನು ಇದೇ ಪ್ರಜೋತ್ಪತ್ತಿ ನಾಮ ಸಂವತ್ಸರದ ವೈಶಾಖ ಬಹುಳ ಬಿದಿಗೆ ಸೋಮವಾರ ದಿವಸ ತೇರದಾಳಬೃಹನ್ಮಠದಲ್ಲಿ ಜರುಗಿಸಬೇಕೆಂತಲೂ, ವೈಶಾಖ ಬಹುಳ ತದಿಗೆ ಮಂಗಳವಾರ ಪ್ರಾತಃಕಾಲದಲ್ಲಿ ಏಕಾದಶ ಮಂಟಪದ ರುದ್ರಪೂಜಾಮಹೋತ್ಸವವನ್ನೂ ಆಮೇಲೆ ಗಣಾರಾಧನೆಯನ್ನೂ ಸಕಲ ವಿಧ ವೈಭವದಿಂದ ಕೊನೆಗಾಣಿಸಬೇಕೆಂತಲೂ ಯಾವತ್ತೂ ಭಕ್ತ ಮಾಹೇಶ್ವರರು ಕೂಡಿಕೊಂಡು ನಿಶ್ಚಯಿಸಿರುತ್ತೇವೆ. ಇದಲ್ಲದೆ ಈ ಮಂಗಲಕಾರ್ಯದಲ್ಲಿ ಅನುಕೂಲತೆಯ ಪ್ರಕಾರ ಶಿವಭಜನೆ, ಕೀರ್ತನೆಗಳು ಮತ್ತು ಧಾರ್ಮಿಕವಿಷಯದ ಮೇಲೆ ಉಪನ್ಯಾಸಗಳೂ ಜರುಗುವ ಏರ್ಪಾಟವನ್ನು ಸಹ ಮಾಡುವೆವು. ಆದುದರಿಂದ ಭಕ್ತಮಾಹೇಶ್ವರರೆಲ್ಲರೂ ಈ ಗುರುಪ್ರಸಾದವನ್ನು ಸ್ವೀಕರಿಸಿ ಪುನೀತರಾಗಬೇಕೆಂದು ನಮ್ಮ ಹಾರೈಕೆಯು.

ತೇರದಾಳ.
ತಾ. ೧೫-೪-೩೧. ವೀರಶೈವಮಂಡಲಿ.

ಧಾರವಾಡದಲ್ಲಿ ನೆರವೇರಿದ ದೀಕ್ಷಾವಿವಾಹ ಮಹೋತ್ಸವ.

ಧಾರವಾಡ ಶಹರದ ಹಾವೇರಿಪೇಟೆಯಲ್ಲಿರುವ ಮ|| ರಾ|| ಕಲ್ಲಾಪುರದ ಪರ್ವತಪ್ಪನವರು ತಮ್ಮ ಸಹೋದರನಾದ ಮ|| ರಾ|| ಮರಿತಮ್ಮಪ್ಪನ ವಿವಾಹಕಾರ್ಯದ ಪೂರ್ವದಲ್ಲಿಯೇ ಶಿವದೀಕ್ಷಾಸಂಸ್ಕಾರವನ್ನು ಅತ್ಯಂತ ವಿಜೃಂಭಣೆಯಿಂದ ಮಾಡಿಸಿದರು. ಆ ಸಮಯದಲ್ಲಿ ತಮ್ಮ ಮನೆಯ ಸರ್ವ ಮಂಡಲಿಯೂ ಇತರ ಬಾಂಧವ ಜನಗಳೂ ದೀಕ್ಷಾಸಂಸ್ಕಾರವನ್ನು ಹೊಂದಿದರು. ಸದ್ಯಃ ವೀರಶೈವ ಸಮಾಜದಲ್ಲಿ ಮುಖ್ಯವಾಗಿದ್ದ ದೀಕ್ಷಾಸಂಸ್ಕಾರವೇ ಲೋಪವಾಗ ತೊಡಗಿದ್ದನ್ನು ನೋಡಿ ಅತ್ಯಂತ ವಿಷಾದಿಸಬೇಕಾಗಿದೆ. ಈಗೀಗ ಗುರುವರ್ಗದ ಪುನರುದ್ಧಾರಕರ ಉದಯದಿಂದ ಸಮಾಜವು ಜಾಗ್ರತವಾಗತೊಡಗಿದ್ದುದು ಸಂತೋಷದ ಸಂಗತಿಯು. ಸದರಿಯವರು ಶಿವದೀಕ್ಷಾಕಾರ್ಯಾನಂತರ ತಮ್ಮ ತಮ್ಮನಾದ ಮ|| ರಾ|| ಮರಿತಮ್ಮಪ್ಪನಿಗೆ ಶಿಗ್ಗಾವಿ ಗ್ರಾಮದ ಮ|| ರಾ|| ಬಸಪ್ಪ ಧರಮಂಣನವರ ಇವರ ಸುಪುತ್ರಿ ಚಿ|| ಸೌ|| ಮುನ್ನವ್ವನನ್ನು ಮತ್ತು ಅಳಿಯನಾದ ಮ|| ರಾ|| ಲಿಂಗಬಸಪ್ಪನಿಗೆ ಕೊಂಣೂರು ಗ್ರಾಮದ ಮ|| ರಾ|| ಪರಪ್ಪ ಶೀಲಂಣನವರ ಇವರ ಪುತ್ರಿ ಚಿ|| ಸೌ|| ಚನ್ನವ್ವನನ್ನು ತಂದು ಸದರಿ ವಧುಗಳಿಗೂ (ಪೂರ್ವದಲ್ಲಿಯೇ) ದೀಕ್ಷಾಸಂಸ್ಕಾರವನ್ನು ಮಾಡಿಸಿ ವೈಶಾಖ ಶು|| ೪ ಬುಧವಾರ ಪ್ರಾತಃಕಾಲದಲ್ಲಿ ವಿವಾಹಕಾರ್ಯವನ್ನು ಮಾಡಿದರು. ಸಕಲ ವೈದಿಕ ಕಾರ್ಯಗಳು

ವರ್ತಮಾನಸಂಗ್ರಹ.

ಸರ್ ತೇಜಬಹದ್ದೂರ್ ಸಪ್ರೂರವರು ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ಡೆಹರಾಡೂನಿನಲ್ಲಿ ವೈಸರಾಯರನ್ನು ಸಂದರ್ಶಿಸಿದರು.

ಈಜಿಪ್ಟ್‌ದೇಶದಲ್ಲಿ ಕೈರೋದಿಂದ ಅಲೆಗ್ಝಾಂಡ್ರಿಯಾಕ್ಕೆ ಹೋಗುತ್ತಿದ್ದ ರೈಲ್ವೆಗಾಡಿಗಳಿಗೆ ಬೆಂಕಿಹತ್ತಿ 46 ಜನರು ಸತ್ತಿರುವರಲ್ಲದೆ 41 ಜನರಿಗೆ ಗಾಯಗಳಾಗಿವೆ.

ಲಾರ್ಡ್ ಇರ್ವಿನ್ನರವರು ಕಳೆದ ತಿಂಗಳು 29 ನೆಯ ತಾರೀಖಿನ ದಿವಸ ಮಾಲ್ವಾದಲ್ಲಿಳಿದು ಅಲ್ಲಿಯ ರಾಜರನ್ನು ಸಂದರ್ಶಿಸಿ, ಸುಂದರ ದೃಶ್ಯವಸ್ತುಗಳನ್ನು ನೋಡಿದರು.

ರಶಿಯಾದಲ್ಲಿ ಭೂಕಂಪದಿಂದ ಸುಮಾರು 400 ಜನರು ಮೃತಪಟ್ಟಿರುವರು. 800 ಜನರಿಗೆ ಪೆಟ್ಟಾಗಿದೆ. ಅನೇಕ ಹಳ್ಳಿಗಳು ನಿರ್ನಾಮವಾಗಿವೆ. ಅಸಂಖ್ಯ ದನಕರುಗಳು ಸತ್ತಿವೆ.

ಕರಾಚಿ ಸಿಟಿ ರೈಲ್ವೆಸ್ಟೇಷನ್ನಿನ 3 ನೆಯ ತರಗತಿಯ ಟಿಕೀಟುರೂಮಿಗೆ ಗುಮಾಸ್ತನಿಲ್ಲದ ಸಮಯದಲ್ಲಿ ಕಳ್ಳನೊಬ್ಬನು ಮಹಡಿಯಿಂದಿಳಿದು ಒಂದು ನಿಮಿಷದೊಳಗೆ 1000 ರೂ. ಗಳನ್ನು ದೋಚಿಕೊಂಡು ಹೋದನು.

ಈ ತಿಂಗಳು 1 ನೆಯ ತಾರೀಖಿನ ದಿವಸ ಬೊಂಬಾಯಿಯ ಭೇಂಡಿಬಜಾರ್ ಗಫೂರ್‌ಬೀದಿಯಲ್ಲಿ ಕೆಲವು ಮನೆಗಳಿಗೆ ಬೆಂಕಿಬಿದ್ದು 8 ಮನೆಗಳು ನೆಲಸಮವಾದುವೆಂದೂ, ಸುಮಾರು 40 ಲಕ್ಷ ರೂ. ಗಳವರೆಗೆ ನಷ್ಟವಾಗಿದೆ ಎಂದೂ ತಿಳಿದುಬರುತ್ತದೆ.

ಚಿತ್ತಗಾಂಗಿನಲ್ಲಿ ಕ್ರಾಂತಿಕಾರರು ಹೆಚ್ಚಿರುವರೆಂದು 400 ಜನ ಸೈನಿಕರನ್ನು ಹೆಚ್ಚಾಗಿ ತರಿಸಿರುವರು. 144 ಸೆಕ್ಷನ್ ಜಾರಿಯಲ್ಲಿದೆ. ರಾತ್ರಿ 10 ಗಂಟೆಯಿಂದ 4 ರ ವರೆಗೆ ಯಾರೂ ಮನೆಯನ್ನು ಬಿಟ್ಟು ಹೋಗಬಾರದೆಂದು ಕಲೆಕ್ಟರ್‌ರವರು ಅಪ್ಪಣೆಮಾಡಿರುವರು.

ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಪೂನಾಪಟ್ಟಣದಲ್ಲಿ ರಾ|| ಬ|| ಕೆ. ಎಸ್. ನಾಯುಡುರವರ ಅಧ್ಯಕ್ಷತೆಯಲ್ಲಿ ಬ್ರಾಹ್ಮಣೇತರ ಸಭೆಯು ಸೇರಿತು. ಆಗ ಅವರು ಸದ್ಯದ ರಾಜಕೀಯ ಸ್ಥಿತಿಯನ್ನು ಕುರಿತು ಭಾಷಣಮಾಡಿ ದಿಲ್ಲಿಒಪ್ಪಂದವನ್ನು ಸಮರ್ಥನೆಮಾಡಿದರು.

ಇಂಗ್ಲೆಂಡಿನಲ್ಲಿ ಕಳೆದ ತಿಂಗಳು 26 ನೆಯ ತಾರೀಖಿನ ರಾತ್ರಿ ಜನಪರಿಗಣನೆ (ಸೆನ್ಸಸ್)ಯನ್ನು ಮಾಡಿದರು. ಈಗ ಇಂಗ್ಲೆಂಡಿನಲ್ಲಿ 4 ಕೋಟಿ ಜನಸಂಖ್ಯೆಯಿರುವುದಾಗಿಯೂ, 1921 ನೆಯ ಇಸವಿಯಿಂದ ಇದುವರೆಗೆ 20 ಲಕ್ಷ ಪ್ರಜಾಸಂಖ್ಯೆಯು ಹೆಚ್ಚಿರುವುದಾಗಿಯೂ ತಿಳಿದುಬಂದಿದೆ.

ಕಲ್ಕತ್ತೆಯ ಐರೋಪ್ಯರ ವಿಲಾಸಮಂದಿರದಲ್ಲಿ ರಾತ್ರಿಯಸಮಯದಲ್ಲಿ ಯಾರೋ ಬಾಂಬನ್ನು ಎಸೆದರು. ಐರೋಪ್ಯರ ಮಧ್ಯದಲ್ಲಿ ಬಾಂಬುಬಿದ್ದರೂ ಅದರ ಶಕ್ತಿಯು ವಾತಾವರಣದಲ್ಲಿಯೇ ಸಂದಿ ಹೋಗಿತ್ತಾದಕಾರಣ ಯಾರಿಗೂ ಅಪಾಯವಾಗಲಿಲ್ಲ. ಬಿಸಾಡಿದವರು ಯಾರೆಂಬುದು ತಿಳಿದಿಲ್ಲ.

ಸಂಬಲ್‌ಪುರದಲ್ಲಿ ಸಾರಾಯಿ ಅಂಗಡಿಯ ಮುಂದೆ ಪಿಕೆಟಿಂಗ್ ಮಾಡಿದರೆಂದು ಪೋಲೀಸರು ಆರು ಜನರನ್ನು ದಸ್ತಗಿರಿಮಾಡಿದ್ದರು. ಬಾದರ್ ಸಬ್‌ಡಿವಿಜನ್ ಆಫೀಸರು ಅವರಲ್ಲಿ ಒಬ್ಬನಿಗೆ 75 ರೂ. ಜುಲ್ಮಾನೆಯನ್ನೂ ಮೂರು ಜನರಿಗೆ ಪ್ರತಿಯೊಬ್ಬನಿಗೆ 35 ರೂ. ನಂತೆ ಜುಲ್ಮಾನೆಯನ್ನೂ ವಿಧಿಸಿ ಉಳಿದ ಇಬ್ಬರನ್ನು ಬಿಡುಗಡೆಮಾಡಿದರು.

ಮಾಪಿಳ್ಳೆದಂಗೆಯಲ್ಲಿ 14 ವರ್ಷಗಳ ದ್ವೀಪಾಂತರ ಶಿಕ್ಷೆಗೆ ಗುರಿಯಾಗಿದ್ದ 120 ಜನ ಮಾಪಿಳ್ಳೆಯವರು ಕಳೆದ ತಿಂಗಳ ಅಂತ್ಯದಲ್ಲಿ ಬಿಡುಗಡೆಹೊಂದಿ, ಅಂಡಮಾನ್‌ದ್ವೀಪದಿಂದ ಮದರಾಸಿಗೆ ಬಂದಿಳಿದರು. 20 ವರ್ಷ ದ್ವೀಪಾಂತರಶಿಕ್ಷೆಗೆ ಗುರಿಯಾಗಿರುವ 300 ಜನ ಮಾಪಿಳ್ಳೆಗಳು ಕುಟುಂಬಸಮೇತ ಅಂಡಮಾನ್ ದ್ವೀಪಗಳಲ್ಲಿರುವರೆಂದು ಅವರು ಹೇಳಿದರು.

ರಂಗೂನಿನ 'ಷ್ವೇಡಗಾನ್ ಪಗೋಡಾ' ಎಂಬ ಬೌದ್ಧದೇವಾಲಯದ ಮೇಲಿನ 'ಸೀನ್ಬ್ಯೂ' ಎಂಬ ಚಿನ್ನದ ಗುಮ್ಮಟವು ಕಳೆದ ಮೇತಿಂಗಳಲ್ಲಿ ಭೂಕಂಪದಿಂದ ಹಾಳಾಗಿದ್ದಿತು. ಈಗ ಅದನ್ನು 780000 ರೂ. ಗಳ ಖರ್ಚಿನಿಂದ ಚಿನ್ನದ ತಗಡಿನಲ್ಲಿ ಮಾಡಿ ಅಲ್ಲಲ್ಲಿ ವಜ್ರಮಣಿಗಳನ್ನು ಸೇರಿಸಿ 'ಅಲಂಕಾರಮಾಡಿ ಸದರಿ ದೇವಾಲಯದ ಮೇಲಿಟ್ಟಿರುವರಂತೆ!

ಇತ್ತೀಚೆಗೆ ಚಲನಚಿತ್ರಗಳಲ್ಲಿ ಕಾಮಭಾವವನ್ನು ಹುಟ್ಟಿಸುವ ಹೇಯವಾದ ಪಟಗಳು ಪ್ರದರ್ಶಿಸಲ್ಪಡುತ್ತಿರುವುವು; ಇದು ನಮ್ಮ ನಾಗರೀಕತೆಯನ್ನು ಕೆಡಿಸುವ ಸಂಭವವಿರುವುದರಿಂದ, ಲೋಕಮತವು ಇದನ್ನು ಖಂಡಿಸುವ ವಿಷಯವಾಗಿ ಮುಂದೆ ಬರಬೇಕೆಂದು ಲಂಡನ್ನಿನ ಕೆಲವು ಪೋಲೀಸಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ವಿಷಯವಾಗಿ ಭರತಖಂಡದ ಪೋಲೀಸಧಿಕಾರಿಗಳು ಏನೆನ್ನುವರು?

ಈಜಿಪ್ಟ್‌ದೇಶದಲ್ಲಿ ಸೀಹೆಪ್ ಎಂಬ ರಾಜನ ಸಮಾಧಿಯನ್ನು ಅಗೆದು ಪರೀಕ್ಷಿಸುವಲ್ಲಿ ಈಗ್ಗೆ ಆರುಸಾವಿರ ವರುಷಗಳ ಹಿಂದೆ ಈಜಿಪ್ಟ್‌ದೇಶೀಯರು, ನಂದೀಶನನ್ನು ಪೂಜಿಸುತ್ತಿದ್ದರೆಂದೂ, ಸೀಹೆಪ್‌ರಾಜನು ನಂದೀಶನ ಪರಮಭಕ್ತನಾಗಿದ್ದನೆಂದೂ, ತಿಳಿದುಬಂದಿದೆ. ಪ್ರಾಚೀನಕಾಲದಲ್ಲಿ ಶೈವಮತವು ಪ್ರಪಂಚದ ಎಲ್ಲೆಡೆಯಲ್ಲಿಯೂ ಹಬ್ಬಿದ್ದಿತೆಂಬುದನ್ನು ಸಿದ್ಧಾಂತಪಡಿಸುವ ಶೋಧಗಳಲ್ಲಿ ಇದೊಂದಾಗಿದೆ.

ಮೌಲಾನಾ ಷೌಕತಾಲಿಯವರು ಕಳೆದತಿಂಗಳು 30 ನೆಯ ತಾರೀಖಿನದಿವಸ ಲಾಹೋರಿಗೆ ಹೋದರು. ಕಾಂಗ್ರೆಸ್ ಪಕ್ಷದ ಮಹಮ್ಮದೀಯರು ಅವರಿಗೆ ಕರೇನಿಶಾನೆಗಳನ್ನು ಹಿಡಿದು ಸ್ವಾಗತಮಾಡಿದರು. ಪ್ರತ್ಯೇಕ ಪ್ರಾತಿನಿಧ್ಯವನ್ನು ಪ್ರತಿಪಾದಿಸುವ ಕೆಲವು ಮಹಮ್ಮದೀಯರು ಮಾತ್ರ ಅವರನ್ನು ಗೌರವದಿಂದ ಸ್ವಾಗತಿಸಿದರು. ಉಭಯಪಕ್ಷಗಳಿಗೂ ಹೊಡೆದಾಟವಾದೀತೆಂದು ಪೋಲೀಸರು ಹಾಜರಿದ್ದರು.

ಗೋಸ್ವಾಮಿ ಶ್ರೀ ದಾಮೋದರಲಾಲಜಿ ಎಂಬ ವೈಷ್ಣವಗುರುಗಳು ಬೊಂಬಾಯಿಯಿಂದ ಉದಯಪುರ ಸಂಸ್ಥಾನದಲ್ಲಿರುವ ಶ್ರೀನಾಥದ್ವಾರಕ್ಕೆ ಯಾತ್ರೆಗಾಗಿ ಆಕಾಶವಿಮಾನದಲ್ಲಿ ಪ್ರಯಾಣಮಾಡಿದರು. ಬೊಂಬಾಯಿಯಿಂದ ಶ್ರೀನಾಥದ್ವಾರಕ್ಕೆ 600 ಮೈಲ.ಗಳ ದೂರವಿದ್ದರೂ 2½ ಗಂಟೆಗಳಲ್ಲಿ ತಲ್ಪಿದರು. ಅನಂತರ ತಮ್ಮ ಪೂಜಾದಿ ಕಾರ್ಯಗಳನ್ನು ಪೂರೈಸಿಕೊಂಡು ಅಲ್ಲಿಂದ ಹೊರಟು ಎರಡುವರೆ ಗಂಟೆಗಳಲ್ಲಿ ಬೊಂಬಾಯಿಗೆ ಬಂದಿಳಿದರು. ಹಿಂದುಸ್ಥಾನದಲ್ಲಿ ವಿಮಾನದಲ್ಲಿ ಯಾತ್ರೆಗಾಗಿ ಹೋದುದು ಇದೇ ಮೊದಲು.

ಕಲ್ಕತ್ತ ಹೈಕೋರ್ಟಿನಲ್ಲಿ ಒಂದು ಮೊಕದ್ದಮೆಯು ವಿಚಾರಣೆಯಾಗುತ್ತಿದ್ದಾಗ ಮಿ|| ಬಿ. ಸಿ. ಕಾರ್ ಎಂಬ ಪ್ರಸಿದ್ಧ ವಕೀಲರು ತಮ್ಮ ಕನ್ನಡಕವು ಆಕಸ್ಮಾತ್ತಾಗಿ ಮುರಿಯಿತೆಂದೂ, ಅದಿಲ್ಲದೆ ವಾದಿಸಲು ಸಾಧ್ಯವಿಲ್ಲವಾದುದರಿಂದ ಮೊಕದ್ದಮೆಯನ್ನು ಮುಂದಕ್ಕೆ ಹಾಕಬೇಕೆಂದೂ ನ್ಯಾಯಾಧೀಶರನ್ನು ಪ್ರಾರ್ಥಿಸಿದರು. ವಕೀಲರ ಕನ್ನಡಕವು ಮುರಿದುಹೋದುದು ಕೇಸನ್ನು ಮುಂದಕ್ಕೆ ಹಾಕಲು ಬಲವಾದ ಕಾರಣವಲ್ಲದಿದ್ದರೂ, ಅದೂ ಒಂದು ಹೊಸಪದ್ಧತಿಯೆಂದು ಭಾವಿಸಿ ಕೋರ್ಟಿನವರು ವಕೀಲರ ಪ್ರಾರ್ಥನೆಯಂತೆ ಮೊಕದ್ದಮೆಯನ್ನು ಮುಂದಕ್ಕೆ ಹಾಕಿದರು.

ದಕ್ಷಿಣ ಅಮೇರಿಕೆಗೆ ಸಂಚಾರ ಹೋಗಿದ್ದ ಪ್ರಿನ್ಸ್ ಆಫ್‌ವೇಲ್ಸ್ ಮತ್ತು ಪ್ರಿನ್ಸ್ ಜಾರ್ಜರವರು ಮೂರುತಿಂಗಳುಗಳಕಾಲ ದಕ್ಷಿಣ ಅಮೇರಿಕೆಯಲ್ಲೆಲ್ಲಾ ಸಂಚಾರಮಾಡಿ ಅನೇಕ ಸುಂದರ ದೃಶ್ಯಗಳನ್ನು ನೋಡಿ ಇಂಗ್ಲೆಂಡ್ ಮತ್ತು ಅಮೇರಿಕೆಗೆ ಇರುವ ಸಂಬಂಧವನ್ನು ಕುರಿತು ಅಲ್ಲಲ್ಲಿ ಭಾಷಣಮಾಡಿ ಪುನಃ ಸ್ವದೇಶಕ್ಕೆ ಕಳೆದ ತಿಂಗಳು 29 ನೆಯ ತಾರೀಖಿನ ದಿವಸ ಹಿಂದಿರುಗಿದರು. ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಚಕ್ರವರ್ತಿ ಚಕ್ರವರ್ತಿನಿಯರೂ ಮತ್ತು ಲಂಡನ್‌ಪುರನಿವಾಸಿಗಳೂ, ದೊಡ್ಡ ದೊಡ್ಡ ಅಧಿಕಾರಿಗಳೂ ಅವರನ್ನು ಆನಂದದಿಂದ ಸ್ವಾಗತಿಸಿದರು.

ನ್ಯೂಯಾರ್ಕ್‌ಪಟ್ಟಣದ ಮಿ|| ಮೆರಿಯಂಕಾರ್ಟರ್ ಎಂಬ ಗೃಹಸ್ಥನು ತನ್ನ ಹೆಂಡತಿಯು ಮಕ್ಕಳನ್ನು ಪಡೆಯುವೆನೆಂದು ವಚನಕೊಟ್ಟು ಮದುವೆಯಾದ ಮೇಲೆ ಮಕ್ಕಳಾಗದಂತೆ ಗರ್ಭಸ್ರಾವಮಾಡಿಕೊಳ್ಳುತ್ತಿರುವುದರಿಂದ ಅವಳ ಮದುವೆಯನ್ನು ರದ್ದುಪಡಿಸಬೇಕೆಂದು ಕೋರ್ಟಿನಲ್ಲಿ ದಾವಾ ಹಂದನು. ಮಕ್ಕಳಾದರೆ ತನ್ನ ಗಂಡನ ಸಂಬಳವು ಸಂಸಾರಕ್ಕೆ ಸಾಕಾಗುವುದಿಲ್ಲವಾದುದರಿಂದ ಮಕ್ಕಳನ್ನು ಪಡೆಯಬಾರದೆಂದು ನಿಶ್ಚಯಿಸಿರುವೆನೆಂದು ಹೇಳಿದಳು. ಅವಳ ಹೇಳಿಕೆಯು ನ್ಯಾಯಾಧೀಶರ ಮನಸ್ಸಿಗೆ ಬಂದು, ಅವನ ದಾವೆಯನ್ನು ವಜಾ ಮಾಡಿ ಅವಳ ಮದುವೆಯನ್ನು ಸ್ಥಿರಪಡಿಸಿದರು.

ರಾಜಮಹೇಂದ್ರದಲ್ಲಿ ಸೋಮಣ್ಣನೆಂಬ ವರ್ತಕನು ತನ್ನಲ್ಲಿ ಛತ್ರದ ಚೀಲಗಳಿವೆ ಎಂದೂ, ಅವುಗಳ ಮೇಲೆ ಹಣವನ್ನು ಸಾಲವಾಗಿ ಕೊಡಬೇಕೆಂದೂ ಅಲ್ಲಿಯ ಇಂಪೀರಿಯಲ್ ಬ್ಯಾಂಕಿಗೆ ಅರ್ಜಿಹಾಕಿದನು. ಬ್ಯಾಂಕಿನವರು ವರ್ತಕನು ತುಂಬಿದ್ದ ಚೀಲಗಳನ್ನು ನೋಡಿ ಅವುಗಳೆಲ್ಲ ಛತ್ರದಿಂದ ತುಂಬಲ್ಪಟ್ಟಿರಬೇಕೆಂದು ನಂಬಿ ಹಣವನ್ನು ಮುಂಗಡವಾಗಿ ಕೊಟ್ಟರು. ಸಾಲದ ಅವಧಿಯು ಮುಗಿದಾಗ ವರ್ತಕನು ಹಣವನ್ನು ಕೊಡಲಿಲ್ಲ. ಆಗ ಬ್ಯಾಂಕಿನವರು ಛತ್ರವನ್ನು ಹರಾಜುಹಾಕುವಲ್ಲಿ ಕೆಲವು ಚೀಲಗಳಲ್ಲಿ ಛತ್ರಕ್ಕೆ ಬದಲಾಗಿ ಹುಲ್ಲುತುಂಬಿದ್ದಿತು. ಬ್ಯಾಂಕಿನವರು ವರ್ತಕನು ಮೋಸಮಾಡಿದನೆಂದು ಮೊಕದ್ದಮೆ ಹಣಿಯಿಸಿದ್ದಾರೆ.

ಕರ್ನಾಟಕವನ್ನು ಏಕೀಕರಣ ಮಾಡುವ ವಿಷಯದಲ್ಲಿ ಸೂಕ್ತ ವಿಧಾನಗಳನ್ನು ಯೋಚಿಸುವುದಕ್ಕಾಗಿ ಧಾರವಾಡದಲ್ಲಿ ಕಳೆದತಿಂಗಳು 29ನೆಯ ತಾರೀಖಿನದಿವಸ ಶ್ರೀಯುತವೆಂಕಟರಾವ್ ಆಲೂರು ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿತ್ತು. ಕಾಂಗ್ರೆಸ್ ಕಾರ್ಯಕಾರಿ ಮಂಡಲದ ಹಾಗೂ ರೌಂಡ್‌ಟೇಬಲ್ ಸಮ್ಮೇಳನದ ಮೆಂಬರರನ್ನು ಕಂಡು ಈ ವಿಷಯವು ಅತ್ಯವಶ್ಯಕವಾದುದೆಂದು ಅರಿಕೆಮಾಡಿಕೊಳ್ಳಬೇಕೆಂದು ತೀರ್ಮಾನವಾದುದಲ್ಲದೆ ಈ ಬಗ್ಗೆ ಒಂದು ಸಬ್‌ಕಮಿಟಿಯು ನಿಯಮಿಸಲ್ಪಟ್ಟಿತು. ಶ್ರೀಯುತರುಗಳಾದ ದಿವಾಕರ್, ಹನುಮಂತರಾವ್ ಕೌಜಲಗಿ, ಎಸ್. ಎಸ್. ಮಳಿಮಠ ಕರ್ನಾಟಕ ಟೈಮ್ಸ್‌ಸಂಪಾದಕರಾದ ಶಿವಲಿಂಗಶಾಸ್ತ್ರಿಗಳು ಇನ್ನೂ ಮೊದಲಾದ ಸದ್ಗೃಹಸ್ಥರು ಹಾಜರಿದ್ದರು.

ಢಾಕಾಪಟ್ಟಣದಲ್ಲಿ ಬಹು ವಿಚಿತ್ರವಾದ ಮೊಕದ್ದಮೆಯೊಂದು ನಡೆಯುತ್ತಿದೆ. ಭೋವಾಲ್‌ರಾಜ ಎಂಬ ಕುಟುಂಬದವರು ದೊಡ್ಡ ಶ್ರೀಮಂತರು. ಇವರ ಕುಟುಂಬದಲ್ಲಿ ಎರಡನೆಯ ಮಗನೊಬ್ಬನು 1909 ರಲ್ಲಿ ಮೃತಪಟ್ಟನಂತೆ! ಮೃತಪಟ್ಟನೆಂದು ಭಾವಿಸಲ್ಪಟ್ಟಿರುವವನು ತಾನೆಂದೂ ಆಗ ತಾನು ಮರಣಹೊಂದದೆ ಕೇವಲ ಮೂರ್ಛೆಹೊಂದಿದ್ದೆನೆಂದೂ, ತನ್ನನ್ನು ದಹನಮಾಡುವುದಕ್ಕಾಗಿ ಶ್ಮಶಾನಭೂಮಿಗೆ ತೆಗೆದುಕೊಂಡು ಹೋದಾಗ ದೊಡ್ಡ ಮಳೆಯಾಯಿತೆಂದೂ, ಆಗ ಎಲ್ಲರೂ ಅವನನ್ನಲ್ಲಿರಿಸಿಹೋದರೆಂದೂ, ಅನಂತರ ಮೂರ್ಛೆಯಿಂದೆದ್ದಾಗ ತಾನು ಸನ್ಯಾಸಿಗಳ ಸಮೂಹದಲ್ಲಿದ್ದೆನೆಂದೂ, ಈಗ ಪುನಃ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕೆಂದು ಬಂದು ನನ್ನ ಹಕ್ಕಿನ ಆಸ್ತಿಯನ್ನು ಅಪೇಕ್ಷಿಸುವೆನೆಂದೂ ವ್ಯಾಜ್ಯಹೂಡಿರುತ್ತಾನೆ. ಆ ಕುಟುಂಬದ ಸತ್ತ ಎರಡನೆ ರಾಜಕುಮಾರನ ಪತ್ನಿಯು ಸದ್ಯಃ ಇದ್ದಾಳೆ. ಆಕೆಯು ಈತನು ತನ್ನ ಗಂಡನಲ್ಲವೆಂದೂ, ತನ್ನ ಗಂಡನು ಡಾರ್ಜಲಿಂಗಿನಲ್ಲಿ ಉದರಶೂಲೆಯಿಂದ ಮೃತಪಟ್ಟಾಗ ಸಾವಿರಾರು ಜನರು ಸೇರಿದಹನಮಾಡಿದರೆಂದೂ, ತನ್ನ ಗಂಡನ ವಿಮಾಹಣವನ್ನು ಹೊಂದುವುದಕ್ಕೆ ಸುಪ್ರಸಿದ್ಧ ಡಾಕ್ಟರರು ಸರ್ಟಿಫಿಕೇಟುಮಾಡಿದರೆಂದೂ ವಾದಿಸುತ್ತಾಳೆ.

ಪ್ರಕಟನೆ.

ಬೆಂಗಳೂರು ಸಿಟಿ ಚಿಕ್ಕಪೇಟೆ ಶ್ರೀ ಮಹಂತಿನ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ರೇಣುಕಾದಿ ಪಂಚಾಚಾರ್ಯ ವೈದಿಕ ಸಂಸ್ಕೃತ ಪಾಠಶಾಲಾ ಫ್ರೀ ಬೋರ್ಡಿಂಗಿನಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳು ತಮ್ಮ ಸ್ಥಳದ ಸರ್ಟಿಫಿಕೇಟಿನೊಂದಿಗೆ ಇದೇ ಎಪ್ರಿಲ್ ಆಖೈರಿನೊಳಗಾಗಿ ಬೋರ್ಡಿಂಗ್ ಸ್ಥಾಪಕರಾದ ಚಿಕ್ಕಪೇಟೆ ಆರ್ಕೋಗಂಮೊದಲಿಯಾರ್ ಗಲ್ಲಿಯಲ್ಲಿರುವ ಮ|| ರಾ|| ಶಾಂತವೀರಪ್ಪನವರ ಬುಳ್ಳಪ್ಪನವರಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು.

ಬೆಂಗಳೂರು, ಮ|| ರಾ|| ಬುಳ್ಳಪ್ಪನವರ
ತಾ|| 2-5-31. ಪರವಾಗಿ ಜಿ. ಗಂಗಪ್ಪ.

ಮಹಾತ್ಮಗಾಂಧಿಯವರೂ ಎರಡನೆಯ ರೌಂಡ್‌ಟೇಬಲ್ ಸಮ್ಮೇಳನವೂ.

ಹಿಂದುಸ್ಥಾನದಲ್ಲಿ ವೈಸರಾಯರಾಗಿದ್ದ ಲಾರ್ಡ್ ಇರ್ವಿನ್‌ರವರೊಡನೆ ಮಹಾತ್ಮ ಗಾಂಧಿಯವರು ಇಂಗ್ಲೆಂಡಿನ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಕಳುಹಿಸಿರುವರು. ಆ ಪತ್ರದಲ್ಲಿ ಮಹಾತ್ಮರು ಬರೆಯುವುದೇನೆಂದರೆ, ಸೈನ್ಯದಖರ್ಚನ್ನು ಕಡಿಮೆ ಮಾಡುವಿಕೆ, ಅಶ್ರಿತಸಂಸ್ಥಾನದ ಪ್ರಜೆಗಳ ಅಭಿವೃದ್ಧಿಗೆ ಉಪಯುಕ್ತಗಳಾದ ರಕ್ಷಾಕವಚಗಳು, ಹಣಕಾಸಿನ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯ, ಸರ್ಕಾರದವರು ಮಾಡಿರುವ ಸಾಲಗಳ ಯುಕ್ತಾಯುಕ್ತತೆಯನ್ನು ಪರಾಮರ್ಶಿಸುವ ಹಕ್ಕು ಇವುಗಳ ಪರತ್ತುಗಳನ್ನು ಸರ್ಕಾರದವರು ನಡೆಯಿಸಿಕೊಡುವುದಾದರೆ ಲಂಡನ್ನಿನಲ್ಲಿ ಎರಡನೆಯ ಸಲ ರೌಂಡ್‌ಟೇಬಲ್ ಸಮ್ಮೇಳನಕ್ಕೆ ತಾವು ಬರುವದಾಗಿ ಬರೆದಿರುವರಂತೆ! ಮಹಾತ್ಮರು ಲಂಡನ್ನಿಗೆ ಹೊರಡುವದಾದರೆ ಅವರನ್ನು ಹಿಂಬಾಲಿಸಲು ಕಾಂಗ್ರೆಸ್ ಕಮಿಟಿಯಿಂದ ಹಂಗಾಮಿಯಾಗಿ ಐದುಜನ ಸೆಕ್ರೆಟರಿಗಳನ್ನು ಚುನಾಯಿಸಿರುವರು. ಮಹಾತ್ಮರು ಲಂಡನ್ನಿಗೆ ಹೊರಡುವುದು ಇನ್ನೂ ನಿಶ್ಚಯವಾಗಿಲ್ಲವಾದರೂ, ಯೂರೋಪಿನ ವಿಶ್ವವಿದ್ಯಾಲಯಗಳಿಂದ ತಮ್ಮಲ್ಲಿಗೆ ಬಂದು ಭಾಷಣಮಾಡಬೇಕೆಂದು ಸಹಸ್ರಾರು ಆಮಂತ್ರಣ ಪತ್ರಿಕೆಗಳೂ, ತಂತಿಗಳೂ ಬರುತ್ತಿರುವುವು. ಮಹಾತ್ಮರು ತಮ್ಮಲ್ಲಿಗೆ ಬಂದು ಭಾಷಣ ಮಾಡುವುದಾದರೆ ಅದನ್ನೇ ಸಿನೆಮಾದಲ್ಲಿ ಮಾತನಾಡುವಂತೆ ತೋರಿಸುವುದಾಗಿ ಸಿನೆಮಾ ಕಂಪನಿಯವರೊಬ್ಬರು ಮಹಾತ್ಮರನ್ನು ಪ್ರಾರ್ಥಿಸಿಕೊಂಡಿರುವರು.

ಲಂಡನ್ನಿನ ಸಾಮಂತರಸಭೆಯಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆಗಳು.

ಕಳೆದ ತಿಂಗಳು 20 ನೆಯ ತಾರೀಖಿನ ದಿವಸ ಲಂಡನ್ನಿನ ಸಾಮಂತರ ಸಭೆಯಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆಯು ನಡೆಯಿತು. ಲೇಬರ್ ಪ್ರಭುತ್ವದವರು ಹಿಂದುಸ್ಥಾನದ ಕಾಂಗ್ರೆಸ್ಸಿನ ಆಕಾಂಕ್ಷೆಗಳನ್ನು ಖಂಡಿಸಿ ಚುರುಕಾಗಿ ಕೆಲಸಮಾಡುವುದಿಲ್ಲವೆಂದೂ, ಈ ಮೊದಲು ಸೇರಿದ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ತೀರ್ಮಾನವಾಗಿರುವ ಅಂಶಗಳಿಗಿಂತಲೂ ಎಳ್ಳಷ್ಟು ಹೆಚ್ಚು ರಾಜಕೀಯಸುಧಾರಣೆಗಳನ್ನು ಭಾರತೀಯರಿಗೆ ಕೊಡುವುದು ಸಾಧ್ಯವಿಲ್ಲವೆಂದೂ ಲಾರ್ಡ್ ಪೀಲ್‌ರವರು ಭಾಷಣ ಮಾಡಿದರು. ಇದೇ ಮಾರ್ಗವನ್ನೇ ಹಿಡಿದು ಲಾರ್ಡ್ ರೀಡಿಂಗ್‌ರವರು ಭಾಷಣಮಾಡುತ್ತ ಭಾರತೀಯರ ರಾಜ್ಯಾಂಗರಚನೆಯಲ್ಲಿ ರಕ್ಷಾಕವಚಗಳೂ, ಕೆಲವು ಹತೋಟಿಗಳೂ ಇರುವುದು ಅತ್ಯವಶ್ಯಕವಾದುದೆಂದೂ, ಅವುಗಳನ್ನು ಸ್ವಲ್ಪವೂ ಹೆಚ್ಚು ಕಡಿಮೆಮಾಡುವುದು ಸಾಧ್ಯವಿಲ್ಲವೆಂದೂ, ಒತ್ತಿಹೇಳಿದ್ದಲ್ಲದೆ ಕಾನ್ಪುರದ ಗಲಭೆಯನ್ನು ನಿರ್ದೇಶಿಸಿ ಲೇಬರ್‌ಪ್ರಭುತ್ವದವರು ದರ್ಪದಿಂದ ಕಾರ್ಯಭಾಗ ನಡೆಯಿಸುವುದಿಲ್ಲವೆಂದು ಲಿಬರಲ್‌ಪಾರ್ಟಿಯವತಿಯಿಂದ ಭಾಷಣಮಾಡಿದರು.

ಹಿಂದುಸ್ಥಾನದ ಅಂಡರ್ ಸೆಕ್ರೆಟರಿಗಳಾದ ಲಾರ್ಡ್ ಸ್ನೆಲ್‌ರವರು ದಿಲ್ಲಿ ಒಪ್ಪಂದದಲ್ಲಿ ತೀರ್ಮಾನವಾಗಿರುವುದಕ್ಕಿಂತಲೂ ನೂತನ ಅಂಶಗಳನ್ನೂ ಹೆಚ್ಚಾಗಿ ಕೊಡುವುದಿಲ್ಲವೆಂದು ಹೇಳಿದರು. ಒಟ್ಟಿನ ಮೇಲೆ ಆ ಸಭೆಯು ಹಿಂದುಸ್ಥಾನದ ರಾಜಕೀಯಪ್ರಗತಿಗೆ ವಿರೋಧವಾಗಿತ್ತು. ಈ ಚರ್ಚೆಯಲ್ಲಿ ಇನ್ನೊಂದು ಮಹತ್ವವಿದೆ. ಲಿಬರಲ್‌ಪಾರ್ಟಿಗೂ ಕನ್ಸರ್ವೇಟಿವ್ ಪಾರ್ಟಿಗೂ ಅನೇಕ ಭಿನ್ನಮತಗಳಿವೆ. ಆದರೂ ಹಿಂದುಸ್ಥಾನದ ವಿಷಯದಲ್ಲಿ ಮಾತ್ರ ಉಭಯಪಾರ್ಟಿಯವರೂ ಏಕೀಭವಿಸಿ ಹಿಂದುಸ್ಥಾನದ ಆಕಾಂಕ್ಷೆಗಳನ್ನು ಎದುರಿಸುವವರಾಗಿದ್ದಾರೆ. ಕಾಂಗ್ರೆಸ್ಸಿನವರು ಎರಡನೆಯ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಬಂದರೆ ಸ್ವಲ್ಪವೂ ತಗ್ಗದೆ ತಮ್ಮ ಆಕಾಂಕ್ಷೆಗಳನ್ನು ಸಮರ್ಥನಮಾಡುವರೆಂದು ಲಂಡನ್ನಿನಲ್ಲಿ ಜನರಿಗೆ ಮನದಟ್ಟಾಗುತ್ತಲಿದೆ. ಉಳಿದ ಪಕ್ಷಗಳು ವಿಶೇಷವಾಗಿ ವಿರೋಧಿಸುವುದಾದರೆ ತಮ್ಮ ಪಕ್ಷದಿಂದ ಮಾಡಿಕೊಂಡಿರುವ ಒಪ್ಪಂದವನ್ನು ನಡೆಯಿಸುವುದು ದುಸ್ತರವಾಗುವುದೆಂದು ಲೇಬರ್‌ಪಕ್ಷದವರು ಅನುಮಾನಿಸುತ್ತಿರುವರಂತೆ!

ಲಂಡನ್ನಿನ ಮಾರ್ನಿಂಗ್‌ಪೋಸ್ಟ್ ಮೊದಲಾದ ಪತ್ರಿಕೆಗಳು ಕಾನ್ಪುರದ ಗಲಭೆಯನ್ನು ಭಯಂಕರವಾಗಿ ವರ್ಣಿಸುತ್ತಿರುವುವು. ಬಹುಸಂಖ್ಯೆಯುಳ್ಳ ಹಿಂದುಗಳು ಅಲ್ಪಸಂಖ್ಯೆಯುಳ್ಳ ಮಹಮ್ಮದೀಯರಿಗೆ ಅನೇಕ ತೊಂದರೆಗಳನ್ನುಂಟುಮಾಡಿದರೆಂದೂ, ಹಿಂದುಸ್ಥಾನದ ರಾಜ್ಯಾಂಗರಚನೆಯಲ್ಲಿ ರಕ್ಷಾಕವಚಗಳೂ, ಚಿಕ್ಕಸಮಾಜಗಳ ಸಂರಕ್ಷಣೆಗೆ ತಕ್ಕ ಅನುಕೂಲ್ಯವೂ ಇರುವುದು ಅತ್ಯವಶ್ಯಕವಾದುದೆಂದೂ ಕನ್ಸರ್ವೇಟಿವ್ ಪಕ್ಷದ ಮೆಂಬರರು ವಾದಿಸಿದರು. ಗಾಂಧಿ ಇರ್ವಿನ್ ಒಪ್ಪಂದದಂತೆ ಭಾರತೀಯರು ಅನೇಕ ಸಂದರ್ಭಗಳಲ್ಲಿ ನಡೆದಿರುವುದಿಲ್ಲವೆಂದು ಕೆಲವು ಮೆಂಬರರು ಅಭಿಪ್ರಾಯಪಟ್ಟರು. ಕ್ರೈಸ್ತಪಾದ್ರಿಗಳು ಜನೋಪಕಾರಕಾರ್ಯಮಾಡುವ ನೆಪದಲ್ಲಿ ಅನೇಕರನ್ನು ಕ್ರೈಸ್ತಮತಕ್ಕೆ ಸೇರಿಸುವರೆಂದು ಮಹಾತ್ಮರು ಬರೆದ ಲೇಖನದಿಂದ ಹಿಂದುಸ್ಥಾನದ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುತ್ತಿದ್ದ ಅಲ್ಪಸ್ವಲ್ಪ ಜನರೂ ಸಹ ವಿರೋಧಿಸುತ್ತಿರುವರೆಂದು ತಿಳಿದುಬರುತ್ತದೆ.

ನಡುವಸ್ತ್ರದ ಗೂಢತತ್ವ.

ಮಹಾತ್ಮಾ ಗಾಂಧಿಯವರು ಎಂಗ್ ಇಂಡಿಯಾ ಪತ್ರಿಕೆಯಲ್ಲಿ ಪಾಶ್ಚಿಮಾತ್ಯ ನಾಗರೀಕತೆಯ ಅನುಕರಣವನ್ನು ಖಂಡಿಸಿ ಬರೆಯುವುದೇನೆಂದರೆ—"ನಾನು 1921 ನೆಯ ಇಸವಿಯಲ್ಲಿ ಮಧುರೆಗೆ ಹೋದಾಗ ಟೊಂಕಕ್ಕೆ ವಸ್ತ್ರವನ್ನು ಕಟ್ಟಲು ಪ್ರಾರಂಭಿಸಿದೆನು. ಇದು ನನಗೆ ಅವಶ್ಯಕವೆನಿಸಿತು. ಇದು ಕೇವಲ ಸರಳತ್ವವನ್ನು ಪ್ರದರ್ಶಿಸುವುದಲ್ಲದೆ, ಹಿಂದುಸ್ಥಾನದ ನಾಗರೀಕತೆಯ ಚಿನ್ಹೆಯಾಗಿದೆ. ಅನೇಕ ಸಂಸ್ಕೃತಿಗಳ ಏಕೀಕರಣದಿಂದಲೂ, ಇನ್ನೂ ಅನೇಕ ಸನ್ನಿವೇಶಗಳಿಂದಲೂ ಹಿಂದುಸ್ಥಾನದ ನಾಗರೀಕತೆಯು ಉತ್ಪನ್ನವಾಗಿದೆ. ಇಸ್ಲಾಂ ಸಂಸ್ಕೃತಿಯು ಅರಬಸ್ಥಾನ, ತುರ್ಕಸ್ಥಾನ, ಈಜಿಪ್ಟ, ಹಿಂದುಸ್ಥಾನ ಇವುಗಳಲ್ಲೆಲ್ಲ ಒಂದೇ ರೀತಿಯಾಗಿಲ್ಲ. ಆಯಾ ದೇಶಕ್ಕೆ ತಕ್ಕಂತೆ ಭಿನ್ನಭಿನ್ನವಾಗಿದೆ. ಹಿಂದುಸ್ಥಾನದ ನಾಗರೀಕತೆಯು ಕೇವಲ ಹಿಂದೂ ಅಥವಾ ಕೇವಲ ಇಸ್ಲಾಂ ಸಂಸ್ಕೃತಿಯಾಗಿರದೆ ಉಭಯ ಸಂಸ್ಕೃತಿಗಳ ಏಕೀಕರಣವಾಗಿದೆ.

ಯುರೋಪ್ಯರ ನಾಗರೀಕತೆಯು ಅವರಿಗೆ ಮಾತ್ರವೇ ಸಾಧುವಾಗಿರುವುದು. ನಾವು ಅದನ್ನು ಅನುಕರಣಮಾಡಿದರೆ ವಿನಾಶವು ಸನ್ನಿಹಿತವಾಯಿತೆಂದು ಭಾವಿಸಬೇಕು. ಯುರೋಪ್ಯರು ಹಗಲಿರುಳು ಲೌಕಿಕ ಸುಖವನ್ನನುಭವಿಸಲು ತಕ್ಕ ಸಾಮುಗ್ರಿಗಳನ್ನು ಕಂಡುಹಿಡಿಯುವುದರಲ್ಲಿಯೂ, ಅವುಗಳನ್ನು ದಿನೇ ದಿನೇ ಹೆಚ್ಚಿಸುವುದರಲ್ಲಿಯೂ ತಮ್ಮ ಕಾಲವನ್ನೆಲ್ಲ ಕಳೆಯುವರು. ಇದರಿಂದ ಅವರ ಲೌಕಿಕ ಸುಖದ ಸಾಮುಗ್ರಿಗಳು ಹೊರಲಾರದಷ್ಟು ಭಾರವಾಗಿವೆ. ಅವರೂ ಸಹ ಈ ವಿಷಯದಲ್ಲಿ ಸ್ವಲ್ಪ ಸುಧಾರಣೆ ಮಾಡಿಕೊಳ್ಳದಿದ್ದಲ್ಲಿ ನಾಶವು ತಪ್ಪುವುದಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ನಾನು ಹೇಳುವುದು ಪಾಶ್ಚಿಮಾತ್ಯರಿಗೆ ತಪ್ಪೆಂದು ತೋರಬಹುದು. ಆದರೆ ಭಾರತೀಯರು ಥಳಥಳಾಯಮಾನವಾಗಿರುವ ಪಾಶ್ಚಿಮಾತ್ಯ ನಾಗರೀಕತೆಯನ್ನು ಅನುಕರಣಮಾಡಿದರೆ ಮರಣಕ್ಕೆ ಸಂಚಕಾರವನ್ನು ಕೊಟ್ಟಂತೆಯೇ ಸರಿ.

"ಸರಳಜೀವನ, ಉಚ್ಚ ಚಿಂತನ" ಇವೆರಡೇ ಮನುಷ್ಯನ ಪುರೋಭಿವೃದ್ಧಿಗೆ ಸಾಧನವಾದುವುಗಳೆಂದು ಹೇಳಿರುವ ಪಾಶ್ಚಿಮಾತ್ಯ ಪಂಡಿತರ ಈ ಮಂತ್ರವು ನಮ್ಮ ಹೃದಯದಲ್ಲಿ ರೂಢಮೂಲವಾಗಿರಲಿ. ಈಗ ಲಕ್ಷಾಂತರ ಜನರು ವೈಭವದಿಂದ ಜೀವನ ಮಾಡುವುದು ಸಾಧ್ಯವಿಲ್ಲ. ಜನರ ಸುಲುವಾಗಿ ಉದಾತ್ತ ವಿಚಾರಗಳನ್ನು ಚಿಂತನಮಾಡುವೆನೆಂಬ ನಾವು ವೈಭವದ ಜೀವನಕ್ಕೆ ಉಪಕ್ರಮಿಸಿದರೆ, ಉಚ್ಚ ವಿಚಾರಗಳಿಗೆ ತಿಲಾಂಜಲಿಯನ್ನು ಕೊಟ್ಟು ಲೌಕಿಕ ಸುಖಕ್ಕೆ ಗುಲಾಮರಾಗಬೇಕಾದೀತು."

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ 14 ಪೌಂಡಿನ ಗ್ಲೇಜ್‌ಕಾಗದದಲ್ಲಿ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣಮಾಡಿಸಿದೆ. ಇದರಲ್ಲಿ ಒಂದರಿಂದ ಸಾವಿರದವರೆಗಿನ ಸಂಖ್ಯೆಗಳ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ ಅನುಲೋಮ, ವಿಲೋಮ, ಮಗ್ಗಿ ಮೊದಲಾದುದನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3 ಮಾತ್ರ.

ಸಚಿತ್ರ ಕರ್ನಾಟಕ ಗುಣಿತಾಕ್ಷರಬೋಧೆ:—ಮಕ್ಕಳಿಗೆ ಕಲಿಯಲು ಕಷ್ಟವಾದ ಗುಣಿತಾಕ್ಷರಗಳನ್ನು ಸುಲಭರೀತಿಯಲ್ಲಿ ಬೋಧಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0 ಮಾತ್ರ.

ಸಿಲಿಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ. ಇಲಾಖೆಯ ಆಫೀಸರು ಒಪ್ಪಿಗೆಯನ್ನು ಕೊಟ್ಟಿರುವರು.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು. ಉಪಾಧ್ಯಾಯರಿಗೂ ವ್ಯಾಪಾರಿಗಳಿಗೂ ತಕ್ಕಂತೆ ಕಮಿಷನ್ ಉಂಟು.

ಪ್ರಕಾಶಕರು:—**ಜಿ. ರೇವಣ್ಣ ಅಂಡ್ ಬ್ರದರ್**
ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಬೆಂಗಳೂರು ಡಿ||

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಘೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಮಲೇಜ್ವರ. ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀತಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು. ಮೂತ್ರದಲ್ಲಿ ಬಿಳೀಪುಡಿ, ಹೊಟ್ಟೆ ಹುಳಗಳ ಕೆಡರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಪ್ಪು ಲವಣಗಳೂ, ಹೋಮಿಯೊಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[39] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು, ದ. ಕ.**

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರ

ಆಯುರ್ವೇದೀಯ ಸಿದ್ಧೌಷಧಗಳು,

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ಈ ಮಾತ್ರೆಗಳಲ್ಲಿ ೧೨ ನ್ನು ಭೋಜನೋತ್ತರ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಪ್ರತಿದಿನವೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಬಾಯಿ ಸುವಾಸನೆಯಾಗಿರುತ್ತೆ. ದೇಹಕ್ಕೆ ವಿರುದ್ಧವಾಗಬಹುದಾದ ನೀರು ಮತ್ತು ಗಾಳಿಯ ವ್ಯತ್ಯಾಸವನ್ನು ಅಂಟಿಗೊಡಿಸದೆ ಎಂತಹ ಕಠಿನತರ ಆಹಾರವನ್ನಾದರೂ ಜೀರ್ಣೀಕರಿಸಿ ರಕ್ತವು ಶುದ್ಧಿಯಾಗಿ ವೃದ್ಧಿಯಾಗುವಂತೆ ಮಾಡುತ್ತದೆ. ಜ್ವರವೇ ಮೊದಲಾದ ರೋಗಗಳಿಗೆ ದಾರಿಗೊಡದೆ ನರಗಳಿಗೆ ಒಳ್ಳೆಯ ಬಲವನ್ನುಂಟುಮಾಡುತ್ತದೆ. ಮತ್ತು ರೋಗವು ಬಂದಾಗ ಕೊಟ್ಟರೆ ಮಂದ, ಶೀತ, ಶೀತವಾತ, ನಗಡಿ, ಕೆಮ್ಮಲು, ಜ್ವರ, ಚಳೀಜ್ವರ, ಇನ್‌ಫ್ಲುಯೆಂಜಾ, ಪ್ಲೇಗು, ಎದೆಭಾರ, ಅಜೀರ್ಣದ ಹೊಟ್ಟೆನೋವು, ಮಲಬದ್ಧ, ಪಕ್ಕೆಗಳ ನೋವು, ನರಗಳಲ್ಲಿಯೂ ಸಂದುಗಳಲ್ಲಿಯೂ ಉಂಟಾಗುವ ನೋವು, ಅಜೀರ್ಣಭೇದಿ, ಮಕ್ಕಳ ಎಳವು (ಪಕ್ಕೆ ಎಳೆತ) ವಾಯು ಶೀತ, ಅಜೀರ್ಣ, ಹೊಟ್ಟೆ ಕಟ್ಟಿಕೊಂಡಿರುವುದು ಹಳೆಯ ಜ್ವರ, ಕೆಂಪ ಜೀರ್ಣಸದೆ ಭೇದಿಗಳಾಗುವುದು ಮೊದಲಾಗಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ. ಬಾಣಂತಿಯರಿಗೆ ಸಂಜೀವಕ. ಜೌಗು ನೀರು ಪ್ರವೇಶದಲ್ಲಿಯೂ ಕಾಡಿನಲ್ಲಿಯೂ ಸಂಚರಿಸಬೇಕಾಗಿರುವವರಿಗೂ ವ್ಯಾಪಾರವನ್ನು ಮಾಡಲವಕಾಶವಿಲ್ಲದೆ ಕೂಡಲೇ ಕೂತಿರಬೇಕಾದವರಿಗೂ, ಭೋಗಾ ಸ್ತ್ರೀಯರಿಗೂ ಆರೋಗ್ಯವರ್ಧನಕ್ಕೆ ಈ ಮಾತ್ರೆಗಳು ಸರ್ವೋತ್ತಮವಾಗಿವೆ. ಅಶುದ್ಧವಾದ ಮತ್ತು ಆಕ್ಷೇಪಕರವಾದ ಯಾವ ವಸ್ತುವೂ ಈ ಮಾತ್ರೆಗಳಲ್ಲಿ ಸೇರಿಲ್ಲವಾದುದರಿಂದ ಸಂದೇಹವಿಲ್ಲದೆ ಧೈರ್ಯವಾಗಿ ಈ ಮಾತ್ರೆಗಳನ್ನು ಉಪಯೋಗಿಸಬಹುದು. ಈ ಲೋಕಾಮಯಹರ ಕಸ್ತೂರಿಮಾತ್ರೆಯ ಒಂದು ಸೀಸೆಯು ನಿಮ್ಮಲ್ಲಿದ್ದರೆ ಸಾಧಾರಣವಾದ ರೋಗಗಳಿಗೋಸ್ಕರ ಮಾತುಮಾತಿಗೂ ವೈದ್ಯರಬಳಿಗೆ ಅಲೆಯುವುದೂ ತಪ್ಪುತ್ತದೆ. ಈ ದಿನವೇ ಪರೀಕ್ಷಿಸಿನೋಡಿರಿ. 250 ರಿಂದ 300 ಮಾತ್ರೆಗಳ ವರೆಗಿರುವ 1 ಸೀಸೆ ಬೆಲೆ 4 ಆಣೆ ಮಾತ್ರವೆ.

ಪ್ರತಿದಿನವೂ ನಕಲೀ ಮಾಲುಗಳು ಅನೇಕವಾಗಿ ಸೃಷ್ಟಿಯಾಗುತ್ತಿವೆ. ನಮ್ಮ ವಿಳಾಸವನ್ನೂ ರಿಜಿಸ್ಟರಾದ ವ್ಯಾಪಾರದ ಗುರ್ತನ್ನೂ ನೋಡಿಯೇ ಕೊಂಡುಕೊಳ್ಳಿರಿ. (ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತವೆ)

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.
[2] **ಬ್ರಾಂಚ್ ಆಫೀಸ್ ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ) ೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ) ೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) ೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) .... ೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ) .... ೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ .... ೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ) ೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ) .... ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.) ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ) .... ೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ) .... ೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯ ಪ್ರಭಾಕರ .... ೨ ಆಣೆ
ವೀರಶೈವಮತಮೀಮಾಂಸಾ .... ೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೩ ಆಣೆ
ಸನ್ಯಾಸಾಶ್ರಮ ವಿಮರ್ಶೆ ತತ್ವಸ್ಥಿರೀಕರಣ (೩ನೆಯ ಆವೃತ್ತಿ) ೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.) ೪ ಆಣೆ
ವೈದಿಕವಾಙ್ಮಯರಹಸ್ಯ .... ೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ) .... ೮ ಆಣೆ
ಶಿವಸ್ತವಶಿರೋಮಣಿ .... ೨|| ಆಣೆ
ಬಸವಧ್ವಾಂತ ದಿವಾಕರ (೩ನೆಯ ಆವೃತ್ತಿ) .... ೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ) .... ೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು) .... ೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) .... ೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) .... ೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ೧ ರೂ.
ಸಚಿತ್ರ ರೇಣುಕವಿಜಯ .... ೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ) .... ೧ ರೂ.
ವೀರಶೈವಸಿದ್ಧಾಂತಸುಧಾಕರ .... ೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣಿಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಂ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಪಟ್ಟಾಭಿಷೇಕ ಮಾಡಿಸಿಕೊಂಡವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೨—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಿಶಿ, ಒಂಟಿ ತಲೆನೋವು, ತಲೆಯ ಳಗಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ಆ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುದ್ದಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-೦
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[42] ಪೋ. ಬಾ. ೫೧೦, ಮದರಾಸ

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೧ ನೇ ಮೇ ೧೯೩೧ [ಸಂಚಿಕೆ ೩

ಶ್ರೀ ಜಗದ್ಗುರು ದಾರುಕಾಚಾರ್ಯ ಜಯಂತಿಮಹೋತ್ಸವ.

ಉಡುಮನಹಳ್ಳಿ, ಡಿ|| ಬೀದರ್.

ಯಾವ ಮಹಾತ್ಮರು ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದ ಅವತರಿಸಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತ ಪ್ರತಿಪಾದಕವಾದ ವೀರಶೈವಮತವನ್ನು ನೆಲೆಗೊಳಿಸಿ ಶಿವಭಕ್ತಿಯ ವಿಜಯಧ್ವಜವನ್ನು ಸ್ಥಿರಗೊಳಿಸಿದರೋ ಆ ವೀರಶೈವಮತಸ್ಥಾಪನಾಚಾರ್ಯರ ಜಯಂತಿಹಬ್ಬಗಳನ್ನು ಮಾಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿರುವದರಿಂದ ಮೇಲ್ಕಂಡ ಗ್ರಾಮದಲ್ಲಿ ಇದೇ ಪ್ರಜೋತ್ಪತ್ತಿನಾಮ ಸಂ|| ವೈಶಾಖ ಶು|| ೫ ದಿವಸ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರೀ ಜಗದ್ಗುರು ದಾರುಕಾಚಾರ್ಯರ ಭಾವಚಿತ್ರವನ್ನು ಶ್ವೇತಚ್ಛತ್ರ ಪಂಚಕಲಶಗಳಿಂದ ಕೂಡಿದ ಪಲ್ಲಕ್ಕಿಯಲ್ಲಿರಿಸಿ, ಸುಗಂಧವನ್ನು ಬೀರುವ ಪುಷ್ಪಹಾರಗಳಿಂದಲಂಕರಿಸಿ, ಮುಂಗಡೆಯಲ್ಲಿ ಬೀಸುವ ಚಾಮರಗಳಿಂದಲೂ, ಘೋರ್ಗರೆವ ವಾದ್ಯಧ್ವನಿಗಳಿಂದಲೂ ನಂದಿಧ್ವಜವೇ ಮೊದಲಾದ ಬಿರುದಾವಳಿಗಳಿಂದಲೂ ಉತ್ಸವವು ಹಿರೇಮಠದಿಂದ ಹೊರಟು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿರುವ ಪ್ರೇಕ್ಷಕರಿಂದಲೂ, ಎಡಬಲಪಾರ್ಶ್ವಗಳ ಗೃಹದ್ವಾರಗಳಲ್ಲಿ ಫಲಪುಷ್ಪ ಆರತಿಗಳಂ ಹಿಡಿದು ನಿಂತಿರುವ ಸುವಾಸಿನಿಯರಿಂದಲೂ, ಭಜನಾಸಂಘದವರ ಗುರುಭಜನೆಗಳಿಂದಲೂ, "ಶ್ರೀಮಜ್ಜಗದ್ಗುರು ಪಂಚಾಚಾರ್ಯಮಹಾಪ್ರಭೋ" ಎಂದು ಹೊಗಳುವ ಸ್ತುತಿಪಾಠಕರಿಂದಲೂ ಉತ್ಸವವು ನೆರೆಯುತ್ತ ಪುನಃ 12 ಘಂಟೆಗೆ ಮಠಕ್ಕೆ ಆಗಮಿಸಿತು. ಮಠದ ಮುಂಭಾಗದಲ್ಲಿ ತಳಿರುತೋರಣಗಳಿಂದಲೂ, ಫಲಸಹಿತವಾದ ರಂಭಾಸ್ತಂಭಗಳಿಂದಲೂ ಜೋಲಾಡುತ್ತಿರುವ ನಾರಿಕೇಳಫಲದ ಗೊಂಚಲುಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ನಿರ್ಮಿಸಿದ್ದ ಭವ್ಯತರವಾದ ಮಂಟಪದಲ್ಲಿ ಶ್ರೀ ಗುರುಮೂರ್ತಿಯ ಭಾವಚಿತ್ರವನ್ನು ಮೂರ್ತಗೊಳಿಸಿ ಹಿರೇಮಠಾಧ್ಯಕ್ಷರಾದ ಪಟ್ಟದ ಸ್ವಾಮಿಗಳು ಶ್ರೀ ಜಗದ್ಗುರು ಪಂಚಾಚಾರ್ಯರ ಅದ್ಭುತಲೀಲಾಪ್ರತಿಪಾದಕವಾದ ಚರಿತ್ರೆಯನ್ನು ಕಥಾರೂಪದಿಂದ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಈ ಚರಿತ್ರೆಯನ್ನು ಕೇಳಿ ಉತ್ಸವವನ್ನು ನೋಡಿ ಆನಂದಭರಿತರಾಗಿ ಸರ್ವರೂ ಜಯಘೋಷವನ್ನು ಮಾಡಿದರು. ಪರಸ್ಥಳದವರಿಗೆ ಅನ್ನಸಂತರ್ಪಣೆಯ ಏರ್ಪಾಟು ಬಹಳ ಶ್ಲಾಘನೀಯವಾಗಿತ್ತು. ಶ್ರೀಗುರುಸಾರ್ವಭೌಮರ ಜಯಂತಿ ಹಬ್ಬಗಳನ್ನು ಪ್ರತಿವರ್ಷ ತಪ್ಪದೆ ನಡೆಯಿಸುತ್ತ ಬಂದಿರುವ ಈ ಗ್ರಾಮದ ಮ|| ರಾ|| ಯಜಮಾನ್ ಸಂಗಪ್ಪನವರು, ಪಾ|| ರಾಚಪ್ಪನವರು, ಪಾ|| ಗಂಗಾಧರರಾವ, ಪಾಟೀಲ ವಿರೂಪಾಕ್ಷಪ್ಪನವರು, ಕಪಾಟ ಮಡಿವಾಳಪ್ಪನವರು, ಉಂ|| ಬಸವಣ್ಣಪ್ಪನವರು ಇನ್ನೂ ಮುಂತಾದವರಿಗೂ, ಈ ಮಹತ್ಕಾರ್ಯಕ್ಕೆ ಪ್ರೋತ್ಸಾಹವನ್ನು ಕೊಟ್ಟು ನೆರವಾದ ಈ ಗ್ರಾಮದ ಸ್ಕೂಲ್ ಮಾಸ್ಟರ್ ಮಹಾರುದ್ರಪ್ಪನವರಿಗೂ ಸಹ ಶ್ರೀಮಜ್ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯವನ್ನುಂಟುಮಾಡಲೆಂದು ಹಾರೈಸುವ

ರಾಚೋಟಪ್ಪನವರು, ಕೊಳ್ಳೂರು.

21ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ವಸ್ತುಪ್ರದರ್ಶನದ ಸ್ವಾಗತ ಸಮಿತಿಯ ಆಫೀಸು, ಮೈಸೂರು.

ಈ ಸಮಿತಿಯ ಮ್ಯಾನೇಜಿಂಗ್ ಕಮಿಟಿಯ ಮೀಟಿಂಗು ತಾ|| 6-5-31 ರಲ್ಲಿ ನಡೆದು ಪ್ರದರ್ಶನ ಸಾಮಗ್ರಿಗಳು ಮತ್ತು ಪ್ರಬಂಧ ವಗೈರೆಗಳಿಗೆ ಈ ಕೆಳಗೆ ಹೇಳುವಂತೆ ಪ್ರಶಸ್ತಿಪತ್ರಗಳೂ ಬಹುಮಾನಗಳೂ ಆಯಾ ಜಡ್ಜಿಂಗ್ ಕಮಿಟಿಗಳ ತೀರ್ಮಾನಗಳನ್ನನುಸರಿಸಿ ನಿರ್ಧರಿಸಲ್ಪಟ್ಟವು.

1. ಆಯುರ್ವೇದಮೂಲಿಕೆಗಳು ಮತ್ತು ಸಿದ್ಧೌಷಧಗಳಿಗಾಗಿ ವಿಶೇಷ ಪ್ರಶಂಸಾಪೂರ್ವಕ ಪ್ರಥಮವರ್ಗದ ಪ್ರಶಸ್ತಿಪತ್ರಗಳು 12

ಸ್ವರ್ಣಪದಕ ಪ್ರಾಪ್ತಿಸೂಚಕ ಪ್ರಶಸ್ತಿಪತ್ರಗಳು 58

(ಪದಕಕ್ಕಾಗಿ 50 ರೂ. ಯನ್ನು ಪ್ರದರ್ಶಕರು ಕೊಡಬೇಕಾಗುವುದು.)

ಶ್ಲಾಘಾಪೂರ್ವಕ ಪ್ರಶಸ್ತಿಗಳು 57

2. ಪ್ರಬಂಧ ಪುಸ್ತಕ ವಗೈರೆಗಳಿಗೆ

ಪ್ರಥಮವರ್ಗದ ಪ್ರಶಸ್ತಿಪತ್ರಗಳು (ಸ್ವರ್ಣಪದಕಸಹಿತ) 8

" 20

ದ್ವಿತೀಯವರ್ಗದ ಪ್ರಶಸ್ತಿಪತ್ರಗಳು 27

3. ತ್ರಿದೋಷತತ್ವದವಿಚಾರದಲ್ಲಿ ಒಂದಕ್ಕೆ ಶ್ರೀಮಾನ್ ಪಾಕ್ಯದ ವೆಂಕಟಾಚಲಪಂಡಿತರ ಬಹುಮಾನವು ನಿಶ್ಚಯಿಸುವಹಾಗಿಲ್ಲ. ಅದಕ್ಕೆ ದೊರೆತ ಅಭಿಮತವು ದೊರೆಯದಿದ್ದಲ್ಲಿ ಆಫೀಸಿನಿಂದ ಒಂದು ಸ್ವರ್ಣಪದಕವೂ, ಇನ್ನೊಂದಕ್ಕೊಂದು ಸ್ವರ್ಣಪದಕವೂ ಪ್ರಥಮವರ್ಗದ ಪ್ರಶಸ್ತಿಪತ್ರವೂ ಕೊಡಲ್ಪಡತಕ್ಕದ್ದು.

ಮೈಸೂರು, ವೈ. ಲಕ್ಷ್ಮೀನರಸಿಂಹಶಾಸ್ತ್ರಿ,
ತಾ|| 9-2-31. ಆನರರಿ ಜನರಲ್ ಸೆಕ್ರೆಟರಿ.

ಪವಿತ್ರ ಗಂಗಾನದಿಯ ಬಗ್ಗೆ ಲಂಡನ್ನಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಲೇಖನವು.

ಹಿಂದುಸ್ಥಾನದಲ್ಲಿ ಗಂಗಾನದಿಯು ಅತ್ಯಂತ ಪವಿತ್ರವಾದುದೆನಿಸಿ ಹಿಂದೂ ಪುರಾಣಗಳಲ್ಲಿ ಹೇಳಲ್ಪಟ್ಟಿರುವ ಅನೇಕ ದೇವರುಗಳಿಗೆ ಸಂಬಂಧಪಟ್ಟಿರುವುದು. ಆ ನದಿಯ ಒಂದು ಹನಿ ನೀರನ್ನು ಪಾನಮಾಡಿದರೂ ಅಥವಾ ಅದರಲ್ಲಿ ಮುಳುಗೆದ್ದರೂ ಅದು ಪುಣ್ಯಪ್ರದವಾಗಿದೆ. ಆದುದರಿಂದಲೇ ದಹಿಸಲ್ಪಟ್ಟ ಮೃತ ಕಳೇಬರದ ಭಸ್ಮಾದಿಗಳನ್ನು ಹಿಂದೂಗಳು ಅದರಲ್ಲಿ ಹಾಕುವರು. ಸಾಮಾನ್ಯಜನರನ್ನು ಕೇಳಿದರೆ ದೇವರು ಅದನ್ನು ಪವಿತ್ರವಾಗಿ ಮಾಡಿರುವುದರಿಂದ ಅಲ್ಲಿ ಎಷ್ಟು ಕೊಳೆಮಾಡಿದರೂ ರೋಗಗಳು ಹುಟ್ಟುವುದಿಲ್ಲವೆಂದು ಹೇಳುವರು. ಗಂಗಾನದಿಯಿಂದ ಏನೂ ಕೇಡಾಗದಕಾರಣ ಪೂರ್ವಜನರು ಅದಕ್ಕೆ ದೇವತೆಯ ಹೆಸರುಕೊಟ್ಟಿರಬಹುದೆಂದು ಕೆಲವು ಕುತರ್ಕಿಗಳು ತರ್ಕಿಸುವರು. ಇದನ್ನು ವಿಜ್ಞಾನಶಾಸ್ತ್ರದೃಷ್ಟಿಯಿಂದ ಸ್ವಲ್ಪ ವಿಮರ್ಶಿಸೋಣ! ಗಂಗಾನದಿಯಲ್ಲಿ ಮನುಷ್ಯರೂ ಪಶುಗಳೂ ಯೋಚಿಸಲು ಸಾಧ್ಯವಿಲ್ಲದಷ್ಟು ಕೊಳೆಯನ್ನು ಹಾಕುವರು. ಹೆಣ ಮತ್ತು ಹೆಣದ ಬೂದಿ ಮೊದಲಾದವುಗಳನ್ನೆಲ್ಲ ನಿರಂತರವೂ ಬಿಸಾಡುವರು. ಆದಕಾರಣ ಮನುಷ್ಯನಿಗೆ ಕೇವಲ ಅಪಾಯಕರಗಳಾದ ರೋಗಗಳಿಗೆ ಕಾರಣೀಭೂತಗಳಾದ ವಿಷಕ್ರಿಮಿಗಳು ಹುಟ್ಟಬಹುದೆಂಬುದು ಸ್ವಾಭಾವಿಕವಾಗಿಯೇ ಇದೆ. ಆದಾಗ್ಯೂ ಆ ನದಿಯಿಂದ ಯಾವ ಕೆಡಕೂ ಎಂದೂ ಸಂಭವಿಸಿಲ್ಲ. ಅದರೂ ಕಾರಣವೇನೆಂಬುದನ್ನು ಯಾರೂ ವಿಚಾರಮಾಡಿದಂತೆ ಕಾಣುವುದಿಲ್ಲ. ಕೆಲವು ವರ್ಷಗಳ ಹಿಂದೆ ವಿಜ್ಞಾನಶಾಸ್ತ್ರಜ್ಞರು ಅದರ ಕಾರಣವನ್ನು ಕಂಡುಹಿಡಿಯಲು ಹೊರಟರು. ಸೂಕ್ಷ್ಮದರ್ಶಕ ಯಂತ್ರದಿಂದಲೂ ನೋಡಲು ಸಾಧ್ಯವಿಲ್ಲದಷ್ಟು ಸಣ್ಣಗಿರುವ ಕ್ರಿಮಿಗಳು ಅಲ್ಲಿ ಉತ್ಪತ್ತಿಯಾಗಿ ವಿಷಕ್ರಿಮಿಗಳನ್ನು ಕೊಲ್ಲುತ್ತಿರುವುವೆಂದು ಅವರ ಶೋಧದಿಂದ ಗೊತ್ತಾಯಿತು. ಇದು ಪ್ರತ್ಯಕ್ಷಪ್ರಮಾಣದಿಂದ ನೋಡಲಾಯಿತು. ಹೊರಗಿನಿಂದ ಎಂಥ ಸೂಕ್ಷ್ಮಜಂತುಗಳೂ ಹೋಗಲು ಅವಕಾಶವಿಲ್ಲದಂತೆ ಗಂಗಾನದಿಯ ನೀರನ್ನು ಶೋಧಿಸಿ ಕಾಲರಾ, ಹೊಟ್ಟೆನೋವು ಮೊದಲಾದ ರೋಗಗಳ ಕ್ರಿಮಿಗಳನ್ನೊಳಗೊಂಡ ನೀರಿನೊಳಗೆ ಹಾಕಿದ ಕೂಡಲೆ ಆ ವಿಷಕ್ರಿಮಿಗಳೆಲ್ಲ ನಿಮಿಷಾರ್ಧದಲ್ಲಿ ಸತ್ತುಹೋದುವು. ಅನಂತರ ಇನ್ನೂ ಸೂಕ್ಷ್ಮವಾಗಿ ವಿಚಾರಮಾಡಿ ನೋಡುವಲ್ಲಿ ಒಂದು ರೋಗವನ್ನು ಕೊಲ್ಲುವ ಕ್ರಿಮಿಗಳು ಉತ್ಪನ್ನವಾದ ಮೇಲೆ ಇನ್ನೂ ಅನೇಕ ರೋಗಗಳನ್ನು ಕೊಲ್ಲುವ ಕ್ರಿಮಿಗಳು ಒಂದರ ಹಿಂದೆ ಒಂದು ಉತ್ಪನ್ನವಾಗುತ್ತ ಹೋಗುವುವೆಂದು ಕಂಡುಬಂದಿತು. ಅನೇಕ ವಾರಗಳವರೆಗೂ ಗುಣವಾಗದಿರುವ ಹೊಟ್ಟೆ ಬೇನೆಯು ಗಂಗಾನದಿಯ ಕೆಲವು ಹನಿಗಳನ್ನು ಮಾತ್ರವೇ ಬಾಯಿಯಲ್ಲಿ ಹಾಕಿದ ಕೂಡಲೆ ಗುಣವಾಗುವುದಕ್ಕೆ ವಿಷಕ್ರಿಮಿಗಳನ್ನು ಕೊಲ್ಲುವ ಅದರ ಸಾಮರ್ಥ್ಯವೇ ಕಾರಣವೆಂದು ನಿರ್ಧರಿಸಲ್ಪಟ್ಟಿತು. ಗಂಗಾನದಿಯು ಮಾನವಪ್ರಾಣಿಯ ದುಃಖಪರಂಪರೆಗಳನ್ನು ನಿವಾರಣಮಾಡಿ ತನ್ನ ಕೀರ್ತಿಯಿಂದ ಜಗತ್ತಿನಲ್ಲಿ ರಾರಾಜಿಸಲೆಂದು ಪ್ರಾರ್ಥನೆ.

ಸಾತಾರೆಯಲ್ಲಿ ನಗರ ಸಂಕೀರ್ತನೆಯ ಕೆಲವು ಸ್ವಯಂಸೇವಕರು ವಿದೇಶಿ ಬಟ್ಟೆಯನ್ನು ಮಾರುವ ಅಂಗಡಿಗಳಮುಂದೆ ಸನುಸ್ಕಾರದಅನುಷ್ಠಾನವನ್ನು ಪ್ರಾರಂಭಿಸಿದರು. ಒಂದು ವರ್ಷದವರೆಗೂ ವಿದೇಶಿಮಾಲು ತರಿಸುವುದಿಲ್ಲವೆಂದೂ, ಹಾಲಿ ಇರುವ ಬಟ್ಟೆಗಳನ್ನು ಮಾರುವುದಿಲ್ಲವೆಂದೂ ವರ್ತಕರು ಕರಾರುಬರೆದುಕೊಟ್ಟು ಸ್ವಯಂಸೇವಕರ ಕೊರಳಿಗೆ ಹೂವಮಾಲೆಯನ್ನು ಹಾಕಿದ ತರುವಾಯ ಅವರು ತಮ್ಮ ಅನುಷ್ಠಾನವನ್ನು ಪರಿಸಮಾಪ್ತಿಗೊಳಿಸಿದರು.

ದಿಲ್ಲಿಯಲ್ಲಿ ಮೂರುಜನ ನ್ಯಾಯಾಧೀಶರ ಮುಂದೆ ದಿಲ್ಲಿ ಪಿತೂರಿಮೊಕದ್ದಮೆಯ ವಿಚಾರಣೆಯು ನಡೆಯುತ್ತಲಿರುವುದು. ಆರೋಪಿಗಳಲ್ಲಿ ಒಬ್ಬನಾದ ವಿಶ್ವಂಭರನಾಥನು ತೀರಿಕೊಂಡನು. ಅವನ ಸ್ಮರಣಾರ್ಥವಾಗಿ ಆ ದಿವಸದ ಕೆಲಸವನ್ನು ನಿಲ್ಲಿಸಬೇಕೆಂದು ಆರೋಪಿಗಳು ಕೋರ್ಟಿಗೆ ವಿಜ್ಞಾಪನೆಮಾಡಿಕೊಂಡರು. ಕೋರ್ಟಿನವರು ಅದನ್ನು ಮನ್ನಿಸದೆ ಹೋದಕಾರಣ ಆರೋಪಿಗಳು ವಿಚಾರಣೆಯಲ್ಲಿ ಭಾಗಿಗಳಾಗುವುದಿಲ್ಲವೆಂದು ಗೇಳಿ ಗೋಡೆಯ ಕಡೆಗೆ ಮುಖಮಾಡಿ ಮಧ್ಯಾಹ್ನ ಉಪಾಹಾರದ ಹೊತ್ತಿನವರೆಗೂ ರಾಷ್ಟ್ರಗೀತೆ ಮತ್ತು ಕ್ರಾಂತಿಗೀತೆಗಳನ್ನು ಹಾಡುತ್ತ ಕುಳಿತರು. ಆದಾಗ್ಯೂ ನ್ಯಾಯಾಧೀಶರು ಆರೋಪಿಗಳ ಕೆಲಸವು ಕೋರ್ಟಿಗೆ ಅಪಮಾನಕರವಾದುದೆಂದು ಹೇಳದೆ ಅವರು ಹಾಡುತ್ತ ಕುಳಿತಿದ್ದರೂ ಅವರ ವಾಙ್ಮೂಲಗಳನ್ನು ತೆಗೆದುಕೊಂಡರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರ್ಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಪಟೇಲ್ ಶಾನುಭೋಗರ ಸ್ಕೂಲ್.

ಮೈಸೂರು ಸಂಸ್ಥಾನವು 29,500 ಚದರಮೈಲುಗಳುಳ್ಳದ್ದಾಗಿರುತ್ತದೆ. ಈ ಸಂಸ್ಥಾನವು 8 ಜಿಲ್ಲೆಗಳಾಗಿ ವಿಂಗಡಿಸಲ್ಪಟ್ಟಿದೆ. 8 ಜಿಲ್ಲೆಗಳಲ್ಲಿ 79 ತಾಲೂಕುಗಳುಂಟು. ಈ ತಾಲೂಕುಗಳಿಗೆ 19,479 ಗ್ರಾಮಗಳು ಸೇರಿರುತ್ತವೆ. ಈ ಗ್ರಾಮಗಳಿಂದ ಸಂಸ್ಥಾನಕ್ಕೆ ಅನೇಕ ಬಾಬುಗಳಿಂದ ಬರತಕ್ಕ ರಾಜಾದಾಯ 3,86,00,000 ರೂಪಾಯಿಗಳು. (ಈ ಮೊಬಲಗಿನಲ್ಲಿ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಬೋರ್ಡುಗಳು, ಡಿಸ್ಟ್ರಿಕ್ಟು ಬೋರ್ಡುಗಳು, ಟೌನ್ ಮ್ಯುನಿಸಿಪಾಲಿಟಿ ಮತ್ತು ಸಿಟಿ ಮ್ಯುನಿಸಿಪಾಲಿಟಿಗಳ ವರಮಾನ ಸೇರಿರುವುದಿಲ್ಲ.) ಮೇಲ್ಕಂಡ ಮೊಬಲಗಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಜಮಿನ್‌ಕಂದಾಯವಾಗಿರುತ್ತದೆ. ಈ ಮೊಬಲಗನ್ನು ವಸೂಲ್ಮಾಡುವದಕ್ಕೂ, ಸರಿಯಾಗಿ ಲೆಕ್ಕಗಳನ್ನಿಡುವದಕ್ಕೂ, ಪಟೇಲ್ ಶ್ಯಾನುಭೋಗಿಯುಗಳು ಮುಖ್ಯಸ್ಥರಾಗಿರುತ್ತಾರೆ. 19,479 ಗ್ರಾಮಗಳ ಪಟೇಲ್ ಶ್ಯಾನುಭೋಗರುಗಳನ್ನು ಸುಧಾರಣೆಮಾಡುವ ಉದ್ದೇಶದಿಂದ ಬೆಂಗಳೂರಿನಲ್ಲಿ ಒಂದು ಪಾಠಶಾಲೆಯನ್ನು ನಮ್ಮ ಶ್ರೀಮನ್ ಮಹಾರಾಜರವರ ಸರ್ಕಾರದವರು ಏರ್ಪಡಿಸಿರುವುದು ಸರಿಯಷ್ಟೆ! ಇದರಿಂದ ಸೇಕಡಾ 5 ರ ಪ್ರಕಾರವೂ ಸಹ ಪಟೇಲ್ ಶ್ಯಾನುಭೋಗಿಯುಗಳು ತರಬೇತಾಗಲು ಬಹಳ ಅನಾನುಕೂಲವಿರುವದರಿಂದ ನಮ್ಮ ಘನಸರ್ಕಾರದವರು ದಯವಿಟ್ಟು ಸಂಸ್ಥಾನದ ಪ್ರತಿಯೊಂದು ತಾಲೂಕಿನಲ್ಲೂ 6 ತಿಂಗಳು ಮಾತ್ರ ತರಗತಿಗಳನ್ನು ಏರ್ಪಡಿಸಿದಲ್ಲಿ ಸರ್ಕಾರದವರ ಮನೋಭೀಷ್ಟವೂ ನೆರವೇರಿ ಪಟೇಲ್ ಶ್ಯಾನುಭೋಗರುಗಳು ತರಬೇತು ಹೊಂದಲು ತುಂಬಾ ಅನುಕೂಲವಾಗುತ್ತದೆ. ಈ ವಿಚಾರವನ್ನು ನಮ್ಮ ಘನಸರ್ಕಾರದವರು ಆದಷ್ಟು ಜಾಗ್ರತೆ ಜಾರಿಗೆ ತರುತ್ತಾರೆಂದು ನಂಬಿರುವ,

ಗ್ರಾಮವಾಸಿ.

ಹೂವಿನಹಡಗಲಿ ಊರಮ್ಮನ ಜಾತ್ರೆ.

ಇಲ್ಲಿಯ ಗ್ರಾಮದೇವತೆಯ ಜಾತ್ರೆಯು ವಿಜೃಂಭಣೆಯಿಂದ ವೈಶಾಖ ಶು|| ೧೧ ರಿಂದ ೧೪ ರವರೆಗೂ ನಡೆದು ಕೊನೆಗೊಂಡಿತು. ಇದು ಐದು ವರ್ಷಕ್ಕೊಮ್ಮೆ ನಡೆಯತಕ್ಕ ಎಲ್ಲಾ ಮತಸ್ಥರಿಗೆ ಸಂಬಂಧವಾದ ಜಾತ್ರೆಯು. ಸಂಪ್ರದಾಯಕ್ಕನುಸರಿಸಿ ಪಶುವಧೆ ಮೊದಲಾದ ಹಿಂಸೆಯೇ ಇದರ ಮೂಲತತ್ವವು. ಬಹು ಸಂಖ್ಯಾತರೂ ಪದವೀಧರರೂ ಆದ ವೀರಶೈವರೇ ಇದರ ಮೂಲ ಚಾಲಕರು. ಈ ಜಾತ್ರೆಯು ಜರುಗುವ ಮೊದಲೇ ಶ್ರೀ ಗುರುಗಳವರ ಪ್ರೇರಣೆಯಿಂದ ಉದ್ಭವಿಸಿದ ಅಹಿಂಸಾಮಯ ವಾತಾವರಣವು ಈ ಗ್ರಾಮದ ಮೇಲೆ ಬೀಸಿತು. ಆದರೆ ಸ್ವಾರ್ಥಮಯ ಜಗತ್ತಿನಲ್ಲಿ ಸೂಕ್ಷ್ಮತರ ಗಾಳಿಯುಸೊಬಗು ಎಷ್ಟು ದಿನಗಳು ತಾನೇ ಪಸರಿಸುವದು? ಕೆಲವರು ಸಾಹೇಬರಿಗೆ ಕುರಿ ಕೋಳಿಗಳನ್ನೊದಗಿಸುವ ತಮ್ಮ ಸೇವಾವೃತ್ತಿಯಿಲ್ಲವೂ ಹಿಂಸಾಮಯ ವಾಮಕಾರಣ ಸಂಪ್ರದಾಯಕ್ಕೆ ಅಡ್ಡಿಮಾಡಲು ಮನೋಧೈರ್ಯವಿಲ್ಲದವರಾದರು. ಇನ್ನು ಕೆಲವರು "ಓಟ್ಸ್" ಎಂಬ ಪಿಶಾಚಗ್ರಸ್ತರಾಗಿ ಜನಮನವಲಿಯುವಂತೆ ಮಾತನಾಡಿ ಕಣ್ಣುಮುಚ್ಚಿಕೊಂಡು ಗ್ರಾಮಾಂತರಕ್ಕೆ ತೆರಳಿದರು. ಕೆಲವು ನವನಾಯಕರು ಅನೇಕ ಸ್ವಾರ್ಥಕಾರಣಗಳಿಂದ ಛೀ! ಛೀ! ಸಂಪ್ರದಾಯಕ್ಕೆ ವಿರುದ್ಧವಾಗಿ ನಡೆಯುವದುಂಟೆ? ಅನಿಷ್ಟಕರವೆಂದು ಮುಂದು ಕೊಟ್ಟರು. ಒಂದೆರಡು ಹುಲಿಗಳ ಧರ್ಮಗರ್ಜನೆಯನ್ನು ಕೇಳುವರಾರು? ಆದರೆ ವೀರಶೈವರು ರಾಜಕಾರಣಪಟುಗಳು ತಮ್ಮ ಸವಿಮಾತಿನಿಂದಲೇ ದೇವಿಯು ಸಮ್ಮುಖದಲ್ಲಿ ವಿಶೇಷವಾಗಿ ನಡೆಯುವ ಪಶುವಧೆಯನ್ನು ನಿಲ್ಲಿಸಿದರು. ಇದು ಭಾವೀಕಲ್ಯಾಣದ ಕುರುಹು ಸ್ವಾರ್ಥಸುಖಹಿಂಸಾಮಯ ಬಿರುಗಾಳಿಯ ಮುಂದೆ ನಿಸ್ವಾರ್ಥದ ಅಹಿಂಸಾಮಯ ಮಂಗಮಾರುತವು ನಿಲ್ಲುವದೇ? ಶ್ರೀ ಮರುಳಸಿದ್ಧೇಶ್ವರನು ವೀರಶೈವಸಮಾಜದ ಬಾಂಧವರಿಗೆ ಸದ್ಬುದ್ಧಿಯನ್ನು ದಯಪಾಲಿಸಲಿ.

ಓರ್ವ ವೀರಶೈವ.

ಹನುಮಂತನ ಮುಂದೆ ಹಾರುಗುಬ್ಬೇ?

ಈ ದಿವಸ ಇಡೀ ಪ್ರಪಂಚದಲ್ಲಿ ಪ್ರಖ್ಯಾತಪುರುಷನಾರೆಂದರೆ ಮಹಾತ್ಮಾಗಾಂಧಿ ಎಂದು ಚಿಕ್ಕಮಕ್ಕಳು ಸಹ ಹೇಳುವರು. ನವಕೋಟಿ ನಾರಾಯಣರೆಂತಹ ಧನಸಂಪನ್ನರಿಲ್ಲವೇ? ವಿವಿಧವಿಜ್ಞಾನ ಶಾಸ್ತ್ರಜ್ಞರಾದ ಕಲಾಭೂಷಿತರಿಲ್ಲವೆ? ರಾಜಾಧಿರಾಜ ಮಹಾರಾಜರೆಂದೆನಿಸಿ ಪ್ರತಾಪಸಿಂಹರಾದ ಪ್ರಭುವರ್ಯರಿಲ್ಲವೆ? ವಿವಿಧ ಭೋಗಂಗಳನ್ನು ತ್ಯಾಗಮಾಡಿ ಸನ್ಯಾಸಿಗಳಾದ ವಿರಕ್ತರಿಲ್ಲವೇ? ಇವರೆಲ್ಲರಿರಲು ಸಾಮಾನ್ಯ ಗೃಹಸ್ಥಾಶ್ರಮಿಯಾದ ಈತನು ಇಂದು ಮಾನವಸಮೂಹದಲ್ಲಿ ಪ್ರತಿಸೂರ್ಯನಂತೆ ತೇಜಃಪುಂಜನಾಗಿ ಪ್ರತಿಭಾಶಾಲಿಯಾಗುವುದರ ರಹಸ್ಯವೇನಿರಬಹುದೆಂಬುದನ್ನು ವಿಚಾರಪರರು ಪರಿಶೀಲಿಸಬೇಕಲ್ಲದೆ ಆತನ ಮೇಲ್ಪಂಕ್ತಿಯನ್ನನುಸರಿಸಲು ಸರ್ವಪ್ರಯತ್ನ ಮಾಡಬೇಕು.

ಸ್ವರ್ಗಭೂಮಿ ಎಂದೆನಿಸಿದ ಈ ನಮ್ಮ ಪಾವನದೇಶವನ್ನು ಚತುರೋಪಾಯಗಳಿಂದ ವಶಪಡಿಸಿಕೊಂಡು ಅಪ್ರತಿಮ ಬಲಶಾಲಿಗಳಾಗಿ ಆಂಗ್ಲರು ಧರ್ಮವೇ ಜಯವೆಂದು ನಂಬಿದ ಭಾರತೀಯರನ್ನು ದಿನೆ ದಿನೆ ಕೇವಲ ದಾಸ್ಯವೃತ್ತಿಯಲ್ಲಿ ನರಳುವಂತೆಮಾಡಿ ಹೆಮ್ಮೆಯಿಂದ ಗರ್ವಿಸುತ್ತಿರುವುದನ್ನು ನೋಡಿ ದಯಾಸಾಗರನಾದ ಮಹಾತ್ಮನು ಕೇವಲ ಕಳವಳಗೊಂಡನು. ಇಂತಹ ಸ್ಥಿತಿಯಲ್ಲಿರುವವರನ್ನು ಹೇಗೆ ಉದ್ಧರಿಸಬೇಕೆಂದು ಪರಿತಪಿಸಿದನು. ಆಂಗ್ಲರಾದರೋ ಧನ, ಕನಕ, ವಾಹನ ವಿಭವಗಳಿಂದ ಸಬಿದರಾದ ಸಶಸ್ತ್ರಪ್ರಾಣಿಗಳು. ಇಂಥವರನ್ನು ಕೆಣಕುವುದು ಕೇವಲ ತಿಳಿಗೇಡಿತನವೆಂದು ಎಂತಹ ಹುಚ್ಚನು ಸಹ ಹೇಳುವನು. ಭಾರತೀಯರಿಗೆ ಬಲವಿಲ್ಲ, ಐಕಮತ್ಯವಿಲ್ಲ, ದೇಶಾಭಿಮಾನವಷ್ಟೂ ಇಲ್ಲ. ಹೆಬ್ಬುಲಿ ಹೂಂಕರಿಸುವ ಆಂಗ್ಲ ಸಿಂಹನ ಮುಂದೆ 'ಬೇ' ಎಂದು ಕೂಗುವ ಕುರಿಗಳು. ಇವರನ್ನು ಮೇಲಕ್ಕೆತ್ತುವ ಬಗೆ ಹೇಗೆಂದನು. 'ಸನಾತನಧರ್ಮಸೂತ್ರವನ್ನು ಮರೆತೆಯಾ?' ಎಂದು ಮಹಾತ್ಮನ ಅಂತರಾತ್ಮನು ನುಡಿದನು. ಅದೇನೆಂದು ಪುಣ್ಯಪುರುಷನು ಜಿಜ್ಞಾಸೆ ಮಾಡಲು "ಅಹಿಂಸಾ ಪರಮೋಧರ್ಮಃ!" ಎಂಬ ಅಮೃತಲಹರಿಯು ಪ್ರವಹಿಸಿತು. ಮಹಾತ್ಮನ ಆನಂದಕ್ಕೆ ಪಾರವೇಯಿಲ್ಲ. ಹುಚ್ಚನಂತೆ ಕುಣಿದನು. ಜಯವು ದೊರಕಿತೆಂದು ಹಿರಿ ಹಿರಿ ಹಿಗ್ಗಿದನು. ಆದರೆ ಭಾರತಭೂಮಿಯೊಂದು ಚಿಕ್ಕ ಮನೆಯಲ್ಲ. ವಿಶಾಲವಾದ ಪ್ರದೇಶ. ಜನಬಾಹುಳ್ಯ, ಮತಬಾಹುಳ್ಯ, ಸಂಪ್ರದಾಯ ಬಾಹುಳ್ಯ, ಇವರನ್ನು ಒಟ್ಟುಗೂಡಿಸುವುದೆಂತು? ಕಾಲಕರ್ಮ ಸಂಯೋಗದಿಂದ ವ್ಯಥಸಂಕಲ್ಪವನ್ನು ಹೂಡಿಯೇಬಿಟ್ಟನು. ಅಳುತ್ತಿರುವ ಭಾರತೀಯರಿಗೆ ಅಭಯದಾತನಾಗಿ ಆಸೇತು ಹಿಮಾಚಲಪರ್ಯಂತ ದೇಶ, ನಗರ, ಪಟ್ಟಣ, ಗ್ರಾಮ, ಗ್ರಾಮಾಂತರಗಳನ್ನೆಲ್ಲಾ ಅವಿಶ್ರಾಂತವಾಗಿ ತಿರುಗಿ ಅವರುಗಳಿಗೆ ಅಹಿಂಸಾಸೂತ್ರವನ್ನುಪದೇಶಿಸಿದನು. ಆರ್ಯವಂಶಜರೂ, ಸುಸಂಸ್ಕೃತರೂ ಆದ ಅನೇಕ ಸಜ್ಜನಾವಳಿಗೆ ಹರ್ಷವಾಯಿತು. ತಂಡೋಪತಂಡವಾಗಿ ಇವನನ್ನು ಅನುಕರಿಸಲಾರಂಭಿಸಿದರು. ಆಡಿದುದನ್ನು ಮಾಡಿತೋರಿಸುವ ಅಪ್ರತಿಮಮಲ್ಲನಾದುದರಿಂದ ಇವನ ನುಡಿಗಳು ವೇದವಾಕ್ಯಗಳಂತೆ ಮಾನ್ಯತೆಯನ್ನು ಹೊಂದಿದವು. ಭಗವಂತನಾದರೋ ಇವನನ್ನು ಪುಟಕ್ಕೆ ಹಾಕುವಷ್ಟು ಪರೀಕ್ಷಿಸಿಬಿಟ್ಟನು. ನಮ್ಮ ಹಿರಿಯರಲ್ಲಿ 'ಬಡಾ' ಎಂಬ ವಿಚಾರದ ಕಥೆಯೊಂದುಂಟು. ವಂಗದೇಶಕ್ಕೆ ಬಂಗಾಳವೆಂತಲೂ, ವಾನರಜಿಗೆ ಬಾನರಜಿ ಎಂತಲೂ ಪ್ರಯೋಗವಿರುವದರಿಂದ 'ಬಡಾ' ಎಂಬುದಕ್ಕೂ 'ವಡಾ' ಎಂಬುದಕ್ಕೂ ಭೇದವಿಲ್ಲ. ಈ ಆಂಧ್ರಶಬ್ದವನ್ನೇ ಕನ್ನಡದಲ್ಲಿ 'ವಡೆ' ಎಂದು ಅನ್ನುವರು, ಇದೊಂದು ಭಕ್ಷ್ಯವಿಶೇಷವು. ಇದರ ಮೂಲವು ಕೇವಲ ಕಪ್ಪಾಗಿರುವ ಉದ್ದು. ಇದನ್ನು ಬಿಳುಪುಮಾಡಲು ಒನಕೆಯಿಂದ ಕುಟ್ಟುವರು, ಸಿಪ್ಪೆಯನ್ನು ತೀರುವರು, ಬೇಳೆಯನ್ನು ನೀರಿನಲ್ಲಿ ನೆನೆಯಿಡುವರು, ಆಮೇಲೆ ಅದರ ಜೊತೆಯಲ್ಲಿ ಖಾರವಾದ ಮೆಣಸಿನಕಾಯಿ, ಕೋತುಂಬರಿಸೊಪ್ಪು, ಉಪ್ಪು, ಇಂಗು ಇವುಗಳನ್ನು ಸೇರಿಸಿ ಚೆನ್ನಾಗಿ ಮರ್ದಿಸುವರು. ಇಷ್ಟಾದಮೇಲೆ ಬಾಣಲಿಯಲ್ಲಿ ಕುದಿಯುವ ತುಪ್ಪದಲ್ಲಿ ಚಕ್ರಾಕಾರವಾಗಿ ಮಾಡಿ ಕರಿಯುವರು. ಈ ತೆರನಾದ ಧ್ವಂಸ ಪ್ರಧ್ವಂಸನಗಳಾದನಂತರ ಇದರ ಹೆಸರು 'ವಡೆ' ಆಂಧ್ರದಲ್ಲಿ 'ವಡಾ' ಹಿಂದಿಯಲ್ಲಿ 'ಬಡಾ' ಎಂದರೆ ದೊಡ್ಡದು ಎಂಬ ನಾಮಾಂಕಿತವನ್ನು ಹೊಂದಿತು. ಈ ಚಿಕ್ಕಕಥೆಯ ಸಾರಾಂಶವೇನೆಂದರೆ 'ಬಡಾ' ಎನಿಸಿಕೊಂಬುವುದು ಸುಲಭವಾರ್ಗವಲ್ಲವೆಂದಾಯಿತು. ನಮ್ಮ ಮಹಾತ್ಮನಾದರೋ ಈ ತೆರನಾದ ವಿವಿಧ ಕಷ್ಟಗಳೀಡಾಗಿ ದೊಡ್ಡವನಾದವನೇ ವಿನಾ ಬರೀ ವೇಷಧಾರಿಯಲ್ಲ. ಬಿರುದಾವಳಿಗಳಿಗಾಗಿ ಬುಡುಬುಡಿಕೆಯವರಂತೆ ಅಧಿಕಾರಿಗಳನ್ನು ಹೊಗಳಿದವನಲ್ಲ. ಅಹಿಂಸಾತತ್ವಪ್ರಭಾವದಿಂದ ಇದೊಂದು ಮಹಾ ವಿಭೂತಿಯಾಗಿ ವೈರಿವರ್ಗದವರಿಂದ ಸಹ ಸನ್ಮಾನಿತನಾಗಿ ಶಾಂತಿಯುದ್ಧದಿಂದ ಪುಟಕ್ಕೆಹಾಕಿದ ಬಂಗಾರದಂತೆ ಜಯಪ್ರದನಾಗಿ ಬಂದಿರುವನು. ಈ ಸುಸಂದರ್ಭದಲ್ಲಿ, ಜಗತ್ಪ್ರಖ್ಯಾತನಾದ ಮಹಾನುಭಾವನು ನಮ್ಮ ಮಧ್ಯದಲ್ಲಿರುವ ಕಾಲದಲ್ಲಿ, ಭಾರತೀಯರು ಅಹಿಂಸೆಯ ಉನ್ನತಶಿಖರವನ್ನೇರಿ ಪುನೀತರಾಗಬೇಕು. ದಯಾಧರ್ಮವು ನಮ್ಮಲ್ಲಿ ತುಂಬಿ ತುಳಕಾಡಬೇಕು. ಅಲ್ಪವಿಷಯಗಳೂ, ಕ್ರೂರಪದ್ಧತಿಗಳೂ ಆದ ಪ್ರಾಣಿವಧೆ ಮುಂತಾದವುಗಳಿಗೆ ತಿಲಾಂಜಲಿಯನ್ನು ಬಿಟ್ಟು, ಉದಾತ್ತವಾದ ಧ್ಯೇಯದ ಕಡೆಗೆ ದೃಷ್ಟಿಯನ್ನಿಡಬೇಕು. ಈ ಸದ್ಧರ್ಮವನ್ನು ದಶದಿಕ್ಕುಗಳಲ್ಲಿಯೂ ಹಬ್ಬಿಸಬೇಕು. "ಹನುಮಂತನ ಮುಂದೆ ಹಾರುಗುಬ್ಬಿ" ಎಂದು ಅನೇಕರು ದೊಡ್ಡವರು ಮಾಡುವ ಕಾರ್ಯದಲ್ಲಿ ಅಲ್ಪರಾದ ನಮ್ಮದೇನು ಕೆಲಸವೆಂದು ತಪ್ಪಿಸಿಕೊಳ್ಳುವರು. ಇದೊಂದು ತಪ್ಪುತಿಳುವಳಿಕೆ ಎಂದು ನಮ್ಮ ಅಭಿಪ್ರಾಯವು. "ಹೇಗುಬ್ಬೀ" ಹನುಮಂತನ ಮುಂದೇ ಹಾರು" ಎಂದೇಕೆ ಅರ್ಥಮಾಡಿಕೊಳ್ಳಬಾರದು.

ಗುಂಡೂರಾವ್ ಬಾದ್ರಿ.

ಕಾನ್ಪುರದ ಗಲಭೆಯ ವಿಚಾರಣಾ ಸಮಿತಿಯಲ್ಲಿ ಪ್ರಜೆಗಳ ಸಾಕ್ಷ್ಯವು.

ಹೃದಯದ್ರಾವಕಗಳಾದ ಕೃತಿಗಳು.

ಕಳೆದ ತಿಂಗಳು 17ನೆಯ ತಾರೀಖಿನ ದಿವಸದಿಂದ ಆರಂಭಗೊಂಡ ಕಾನ್ಪುರ ಗಲಭೆಯ ವಿಚಾರಣಾಸಮಿತಿಯು ತನ್ನ ಕಾರ್ಯಕಲಾಪಗಳನ್ನು ಈ ತಿಂಗಳು 8ನೇ ತಾರೀಖಿನ ದಿವಸ ಪರಿಸಮಾಪ್ತಿಗೊಳಿಸಿತು.

ಮಿ|| ರಾಮಬಾಲಕರ ಸಾಕ್ಷ್ಯವು—ಮಿ|| ರಾಮಬಾಲಕ ಎಂಬವರು ಗಲಭೆಗೆ ಮೊದಲು ಲಕ್ಷಾಧೀಶರಾಗಿದ್ದರು. ಈಗ ಅವರ ಸ್ಥಿತಿಯು ಪಾಪರನಿಗಿಂತಲೂ ಕಡೆಯಾಗಿದೆ. ಇವರು ಹಿಂದೂಗಳಲ್ಲಿ ಬನಿಯಾಜಾತಿಯವರು. ಇವರು ಹೇಳಿದ್ದೇನೆಂದರೆ—"ನನ್ನ ಅಂಗಡಿಯಲ್ಲಿ ಗಂಧಕ, ಪೆಟ್ರೋಲ್, ಸೀಮೆಯೆಣ್ಣೆ ಮೊದಲಾದ ಜಾಗ್ರತೆ ಉರಿಹತ್ತುವ ಸಾಮಾನುಗಳಿದ್ದುವು. ಮಹಮ್ಮದೀಯರು ನನ್ನ ಅಂಗಡಿಗೆ ಬಂದು ಎಲ್ಲ ಸಾಮಾನುಗಳನ್ನೂ ಲೂಟಿಮಾಡಿ ಆ ಕಟ್ಟಡಕ್ಕೇ ಬೆಂಕಿಹಚ್ಚಿದರು. 150 ಗ್ಯಾಲನ್ ಎಣ್ಣೆಯನ್ನು ತೆಗೆದುಕೊಂಡು ನನ್ನ ಅಂಗಡಿಯ ಕೆಳಗೆ ಬೆಂಕಿ ಹಚ್ಚಿದರು. ಅಂಗಡಿಯ ಮೇಲೆ ನಾನು ಕುಟುಂಬ ಸಹಿತನಾಗಿ ವಾಸಮಾಡುತ್ತಿದ್ದೆನು. ಆಗ ನಾನು ದಿಕ್ಕುತೋಚದೆ ಭಯಭ್ರಾಂತನಾಗಿ ಅಗ್ನಿದೇವನಿಗೆ ಆಹುತಿಯಾಗುವೆನೆಂದು ಸುಮ್ಮನಿದ್ದೆನು. ಆದರೆ ಧೈರ್ಯಶಾಲಿಗಳೂ ದಯಾಳುಗಳೂ ಆದ ಕೆಲವರು ನಮ್ಮ ಮನೆಪಕ್ಕದ ಮಹಡಿಗೆ ಬಂದು ಆ ಮಹಡಿಗೂ ನಮ್ಮ ವಾಸಸ್ಥಳಕ್ಕೂ ಮಧ್ಯದಲ್ಲಿದ್ದ ಕಿಂಡಿಯಿಂದ ನಮ್ಮನ್ನು ಎಳೆದುಕೊಂಡರು. ನನ್ನ ಹಿಂದೆಯೇ ನನ್ನ ತಂಗಿ ಇದ್ದಳು. ಅವಳೇನಾದಳೆಂಬುದು ನನಗೆ ಗೊತ್ತಿಲ್ಲ. ಅಂದಿನಿಂದ ಇದುವರೆಗೂ ನಾನು ಅವಳನ್ನು ನೋಡಿರುವುದಿಲ್ಲ.

ಒಬ್ಬ ಮಹಮ್ಮದೀಯ ಸ್ತ್ರೀಯಳ ಕಥೆ—ಅನಂತರ ಮುಸಮತು ಬಬ್ಬೂ ಎಂಬ ಮಹಮ್ಮದೀಯ ಸ್ತ್ರೀಯಳು ತನ್ನ ಕಥೆಯನ್ನು ಹೇಳಿದಳು. ಗಲಭೆಯಲ್ಲಿ ಸುಡಲ್ಪಟ್ಟಿದ್ದರಿಂದ ಆಕೆಯ ಎರಡು ಕಾಲುಗಳಿಗೂ ಬ್ಯಾಂಡೇಜು ಕಟ್ಟಲ್ಪಟ್ಟಿದ್ದಿತು. ಆಕೆಯು ಬಿಕ್ಕಿಬಿಕ್ಕಿ ಅಳುತ್ತ ಸಾಕ್ಷ್ಯವನ್ನು ನುಡಿದಳು. ಆಕೆಯು ಹೇಳಿದ್ದೇನೆಂದರೆ—"ಅಲ್ಪವಯಸ್ಸಿನ ನನ್ನ ಮಕ್ಕಳನ್ನು ನನ್ನ ಕಣ್ಣೆದುರಿಗೇನೇ ಕತ್ತರಿಸಿಹಾಕಿದರು. ನಾನು, ನನ್ನ ಗಂಡ ಮತ್ತು ಒಂದು ಹುಡುಗಿಮಾತ್ರ ತಪ್ಪಿಸಿಕೊಂಡೆವು. ನನ್ನ ಗಂಡನು ಒಂದು ಕೋಣೆಯೊಳಗೆ ಅವಿತುಕೊಂಡನು. ಇಬ್ಬರು ಹೆಂಗಸರು ಹೆಣಗಳ ಮಧ್ಯದಲ್ಲಿ ಅವಿತುಕೊಂಡು ಸತ್ತವರಂತೆ ನಟಿಸಿದರು. ಆದರೂ ನಮ್ಮ ಗುಡಿಸಲುಗಳಿಗೆ ಬೆಂಕಿ ಹಚ್ಚಿದರು. ಅಲ್ಲಾಡಿದ ಕೊಡಲಿ ನಮ್ಮ ಗುಟ್ಟು ಹೊರಬಿತ್ತು. ಆಕೂಡಲೆ ನಮ್ಮನ್ನು ಇರಿದು ಕೊಲ್ಲುವುದರಲ್ಲಿದ್ದರು. ನನ್ನಗಂಡನು ಹೊಗೆಯನ್ನು ತಡೆಯಲಾರದೆ ಹೇಗಿದ್ದರೂ ಸಾಯುತ್ತೇವೆ. ದೇವರ ಹೆಸರು ಹೇಳಿ ಸಾಯೋಣವೆಂದು "ಅಲ್ಲಾ, ನಮ್ಮನ್ನು ಯಾರಾದರೂ ಈ ಸಂಕಟದಿಂದ ತಪ್ಪಿಸಿರಪ್ಪಾ" ಎಂದು ಗಟ್ಟಿಯಾಗಿ ಕೂಗಿಕೊಂಡನು. ದೈವವಶಾತ್ ಮಹಮ್ಮದೀಯ ಸ್ವಯಂಸೇವಕರು ಅಲ್ಲಿಗೆ ಬಂದಿದ್ದರು. ಹಿಂದುಗಳಿಗೆ ಹೊರಡಿರೆಂದು ಹೇಳಿ ಬಾಗಿಲು ತೆರೆದು ನಮ್ಮನ್ನು ಹೊರಗೆ ತಂದರು" ಎಂದು ಹೇಳಿದಳು. ಆಗ ಸಮಿತಿಯ ಅಧ್ಯಕ್ಷರು ಇಲ್ಲಿ ನೆರೆದಿರುವವರ ಪೈಕಿ ಯಾರನ್ನಾದರೂ ಗುರ್ತಿಸಬಲ್ಲೆಯಾ ಎಂದು ಕೇಳಿದರು. ಅದಕ್ಕೆ ಅವಳು ಯಾರನ್ನೂ ಗುರ್ತಿಸಲಾರೆನು. ಆದರೆ ಆಗ ಬಂದವರೆಲ್ಲ ಖಾದಿಟೋಪಿಯನ್ನು ಧರಿಸಿ ಬಿಳಿಕೋಟು ಹಾಕಿದ್ದರೆಂದು ಹೇಳಿದಳು.

ಸಮಿತಿಯ ಮೆಂಬರರು ಈ ಗಲಭೆಯ ಕಾರಣವೇನೆಂದೂ, ಆಗ ಪೋಲೀಸರು ಸರಿಯಾಗಿ ಕೆಲಸಮಾಡಿದರೋ ಇಲ್ಲವೋ ಎಂದೂ ಕೇಳುತ್ತಿದ್ದರು. ವಿಶೇಷ ಸಾಕ್ಷಿಗಳು ಪೋಲೀಸರು ಸರಿಯಾಗಿ ಕೆಲಸ ಮಾಡಲಿಲ್ಲವೆಂದೇ ಸಾಕ್ಷ್ಯವನ್ನು ಹೇಳಿದರು. ಹಗಲಿನಲ್ಲಿ ಲೂಟಿ, ಖೂನು, ಬೆಂಕಿ ಹಚ್ಚುವಿಕೆ ಮೊದಲಾದುವುಗಳು ನಡೆಯುತ್ತಿದ್ದರೂ ಪೋಲೀಸರು ಆ ಸ್ಥಳಕ್ಕೇನೇ ಬರಲಿಲ್ಲವೆಂದು ಹೇಳಿದರು. ಕಂಟೋನ್ಮೆಂಟ್ ಪೋಲೀಸರನ್ನು ಸಹಾಯ ಮಾಡಿದರೆಂದು ಕೇಳಿದಾಗ ಸಾಧ್ಯವಾದಮಟ್ಟಿಗೆ ನಿಮಗೆ ನೀವೇ ಸಹಾಯಮಾಡಿಕೊಳ್ಳಬೇಕೆಂದು ಉತ್ತರ ಹೇಳಿದರೆಂದು ಮಹಮದ್ ಉಮರ್ ಎಂಬ ಸಾಕ್ಷಿಯು ಹೇಳಿದನು.

ಬಲದೇವಪ್ರಸಾದರ ಸಾಕ್ಷಿಯು—ಮಾರ್ಚಿ 24ನೆಯ ತಾರೀಖಿನ ದಿವಸ ಆಯುಧಪಾಣಿಗಳಾದ ಮಹಮ್ಮದೀಯರು ನಮ್ಮ ಮನೆಗೆ ಬಂದರು. ನಾವು ಭಯದಿಂದ ಗಡಗಡನೆ ನಡುಗುತ್ತಿದ್ದೆವು. ಆಗ ಅವರು ಬಂದು ನನ್ನನ್ನು ಹಿಡಿದು ಒಂದು ಸಾವಿರ ರೂಪಾಯಿ ಕೊಡು, ಇಲ್ಲದಿದ್ದರೆ ನಿನ್ನನ್ನು ಈಗ ತುಂಡುಮಾಡಿ ಹಾಕುವೆವೆಂದು ಹೇಳಿದರು. ಆಗ ನಮ್ಮಲ್ಲಿ ಏನೂ ಇಲ್ಲ, ಇದ್ದರೆ ತೆಗೆದುಕೊಳ್ಳಿರೆಂದು ಕೈಕಾಲಿಗೆ ಬಿದ್ದೆನು. ಆಗ ಹೋದರು. ಮಾರನೆಯ ದಿವಸ ಇನ್ನೂ ಹೆಚ್ಚು ಜನ ಮುಸಲ್ಮಾನರು ಬಂದು ಇಲ್ಲಿರುವ ಹಿಂದುಗಳೆಲ್ಲಾ ಮುಸಲ್ಮಾನರಾದರೆ ಸರಿ, ಇಲ್ಲದಿದ್ದರೆ ಎಲ್ಲರನ್ನೂ ಕೊಲ್ಲುತ್ತೇವೆಂದು ಹೆದರಿಸಿದರು. ಆ ದಿವಸ ನಮಗೆ ಯಾರ ಸಹಾಯವೂ ದೊರೆಯಲಿಲ್ಲ. ಯಾವ ಅಧಿಕಾರಿಯೂ ಇಲ್ಲಿ ಹಾಯಲಿಲ್ಲ. ಪ್ರಾಣಗಳು ಉಳಿದರೆ ಸಾಕೆಂದು ಮುಸಲ್ಮಾನ ಧರ್ಮಕ್ಕೆ ಸೇರುತ್ತೇವೆಂದು ಒಪ್ಪಿಕೊಂಡೆವು. ಆಗ 49 ಜನ ಹಿಂದುಗಳನ್ನು ಮಸೀದಿಗೆ ಕರೆದುಕೊಂಡು ಹೋದರು. ನಮ್ಮನ್ನು ಒಬ್ಬ ಖಾಜಿಯ ಹತ್ತಿರ ಕರೆದುಕೊಂಡು ಹೋದರು. ಈ ದಿವಸ ಬಹಳ ಜನರನ್ನು ಧರ್ಮಕ್ಕೆ ಸೇರಿಸಿಕೊಂಡಿರುವೆನು. ಈ ದಿವಸ ಮಾಡುವುದಾಗುವುದಿಲ್ಲವೆಂದು ಖಾಜಿಯು ಹೇಳಿದನು. ಆಗ ತಲೆಯನ್ನೂ ಮೀಸೆಯನ್ನೂ ಬೋಳಿಸಿ ಮುಸಲ್ಮಾನರ ಉಡುಪು ಕೊಟ್ಟು ನಾವು ಮಾಡಿದ ಆಹಾರವನ್ನು ತಿನ್ನಿರೆಂದರು. ಈ ರೀತಿ ನಾವು ನಾಲ್ಕು ದಿವಸಗಳ ವರೆಗೂ ಅಲ್ಲೇ ಇದ್ದೆವು" ಎಂದು ಹೇಳಿದನು.

ದಾವೆ ಎಂಬ ಮೆಂಬರರು ಈ ವಿಷಯವನ್ನು ಪೋಲೀಸರಿಗೆ ತಿಳಿಸಿದಿರಾ? ಎಂದು ಪ್ರಶ್ನೆ ಮಾಡಿದರು. ಆಗ ಅವನು ಕಾಂಗ್ರೆಸ್ಸಿಗೆ ತಿಳಿಸಿದೆನೆಂದನು. ಸ್ವಯಂಸೇವಕರಿಗೆ ಈ ಜನರು ತಮ್ಮ ಕಷ್ಟಗಳನ್ನು ಹೇಳುತ್ತಿದ್ದುದರಿಂದ ಅವನು ಹಾಗೆ ಉತ್ತರವಿತ್ತನು. ಈ ಸಂಗತಿಯನ್ನು ಪೋಲೀಸರಿಗೆ ತಿಳುಹಿಸುವುದಕ್ಕಿಂತ ಹೆಚ್ಚಿಗೆ ಕೆಲಸವು ಸ್ವಯಂಸೇವಕರಿಂದಾಗಲಿಲ್ಲ.

ಟಿಸ್‌ಜಾರವರು 1931 ನೆಯ ಜೂನ್ ಅಂತ್ಯದವರೆಗೆ ತೃತೀಯಸಚಿವ ಪದವಿಯಲ್ಲಿಯೇ ಇರಬೇಕೆಂದೂ, ಅಪ್ಪಣೆಮಾಡಿರುವದಾಗಿ ತಿಳಿದುಬರುತ್ತದೆ.

ನಮ್ಮ ಸಂಸ್ಥಾನದ ದಿವಾನ್‌ಸಾಹೇಬರವರಾದ ಅಮೀನ್ ಉಲ್ ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಮಲ್ಲೇಶ್ವರದಲ್ಲಿರುವ ಅನೇಕ ನಿವೃತ್ತ ಅಧಿಕಾರಿಗಳ ಪ್ರಾರ್ಥನೆಯಂತೆ ಮಲ್ಲೇಶ್ವರಕ್ಕೆ ಹೋಗಿ ಶ್ರೀಯುತ ಹೆಬ್ಬನಿ ಕೃಷ್ಣಶಾಸ್ತ್ರಿಗಳು ಮಾಡಿದ ಹರಿಕಥೆಯನ್ನು ಕೇಳಿ ಸಂತುಷ್ಟಚಿತ್ತರಾಗಿ, ಅನಂತರ ಹೊಸದಾಗಿ ನಿರ್ಮಿಸಲ್ಪಟ್ಟಿರುವ ವಿನಾಯಕನ ದೇವಸ್ಥಾನವನ್ನೂ ಮತ್ತು ಆಂಜನೇಯನ ದೇವಸ್ಥಾನವನ್ನೂ ಪರಾಮರ್ಶಿಸಿ ಕಾರ್ಲ್‌ಟನ್‌ಭವನಕ್ಕೆ ದಯಮಾಡಿಸಿದರು.

ಮೈದಾನಪ್ರಾಂತದ ರೈತರಿಗಿಂತ ಮಲನಾಡು ಪ್ರಾಂತದ ರೈತರು ಹಣದ ಮುಗ್ಗಟ್ಟಿನಿಂದಲೂ, ಬೆಳೆದ ಫಸಲು ಖರೀದಿಯಾಗದೆ ಇರುವುದರಿಂದಲೂ, ತುಂಬಾ ಕಷ್ಟಕ್ಕೀಡಾಗಿರುವರೆಂದು ದಿವಾನ್‌ರವರಲ್ಲಿ ವಿಜ್ಞಾಪನೆ ಮಾಡಿಕೊಂಡಪ್ರಕಾರ ಆ ಪ್ರಾಂತದ ಸ್ಥಿತಿಗತಿಗಳನ್ನು ವಿಚಾರಮಾಡಿ ತಿಳುಹಿಸುವುದಕ್ಕಾಗಿ ಅವರು ಒಂದು ಕಮಿಟಿಯನ್ನು ಏರ್ಪಡಿಸಿದ್ದಾರೆ. ರೆವಿನ್ಯೂ ಕಮಿಷನರ್ ಮಿ|| ಎಸ್. ಪಿ. ರಾಜಗೋಪಾಲಾಚಾರಿಯವರು ಆ ಕಮಿಟಿಯ ಅಧ್ಯಕ್ಷರಾಗಿಯೂ, ಶ್ರೀಯುತರುಗಳಾದ ಕೆ. ಎಚ್. ರಾಮಯ್ಯನವರು, ಸಿ. ಎಸ್. ಕುಪ್ಪುಸ್ವಾಮಯ್ಯಂಗಾರ್ರು, ಹೊಸಕೊಪ್ಪ ಕೃಷ್ಣರಾಯರು, ಧರ್ಮಪ್ರವೃತ್ತ ಎಂ. ಎಲ್. ನಾಗಪ್ಪಶೆಟ್ಟರು, ಬಾಬಾಸಾಹೇಬರು ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟಿರುವರು. ಈ ಕಮಿಟಿಯವರು ತಮ್ಮ ಸಲಹೆಗಳನ್ನು ಈ ತಿಂಗಳು 15ನೆಯ ತಾರೀಖಿನೊಳಗಾಗಿ ಸರ್ಕಾರಕ್ಕೆ ತಿಳುಹಿಸುವವರಾಗಿದ್ದಾರೆ.

ಮೈಸೂರು ಸಂಸ್ಥಾನದ ತೃತೀಯ ಯುವಕಸಮ್ಮೇಳನವು ಈ ತಿಂಗಳು 5 ನೆಯ ತಾರೀಖಿನ ದಿವಸ ಕಡೂರು ಡಿ|| ಅಜ್ಜಂಪುರದಲ್ಲಿ ಪ್ರಾರಂಭವಾಯಿತು. ಆ ಸಮ್ಮೇಳನದ ಅಧ್ಯಕ್ಷರಾದ ಶ್ರೀಯುತ [illegible] ಭಾಷ್ಯಂ ಅಯ್ಯಂಗಾರ್‌ರವರ ಮೇಲೆ ತರೀಕೆರೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು 144 ನೆಯ ಸೆಕ್ಷನ್ ಜಾರಿಮಾಡಿದರು. ಅವರು ಅದನ್ನುಲ್ಲಂಘಿಸಿ ಅಧ್ಯಕ್ಷಸ್ಥಾನವನ್ನು ವಹಿಸಿ ಭಾಷಣಮಾಡಿದರು. ಸರ್ಕಾರದವರು ಅವರನ್ನು ದಸ್ತಗಿರಿಮಾಡಿದ ಪಕ್ಷದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸುವುದಕ್ಕೋಸ್ಕರ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರನ್ನು ನಿಯಮಿಸಿದ್ದರು. ಸ್ವಲ್ಪ ಹೊತ್ತಿನ ಮೇಲೆ ಶ್ರೀಯುತ ಭಾಷ್ಯಂರವರು ದಸ್ತಗಿರಿಮಾಡಲ್ಪಟ್ಟರು. ಆಗ ವಂದೇ ಮಾತರಂ, ಇನ್‌ಕ್ವಿಲಾಬ್ ಜಿಂದಾಬಾದ್ ಎಂಬ ಜಯಧ್ವನಿಯು ಭೂಮಂಡಲವನ್ನು ವ್ಯಾಪಿಸಿತು. ಆ ದಿವಸ ಸಾಯಂಕಾಲವೇ ಅವರನ್ನು ಬಿಡುಗಡೆಮಾಡಿದರು. ಅವರು ಪುನಃ ಅಧ್ಯಕ್ಷಸ್ಥಾನವನ್ನು ವಹಿಸಿ ಕಾರ್ಯಕಲಾಪಗಳನ್ನು ನಡೆಯಿಸಿದರು.

ವರ್ತಮಾನಸಂಗ್ರಹ.

ಕರಾಚಿಯಲ್ಲಿರುವ ವಾಮನರಾವ್ ಲಾಗು ಎಂಬ ಪೂನಾಪ್ರಾಂತದ ಬ್ರಾಹ್ಮಣನು ಜಯವಂತಿ ಎಂಬ 27 ವರ್ಷ ವಯಸ್ಸಿನ ಕ್ರೈಸ್ತಯುವತಿಯನ್ನು ವಿವಾಹಮಾಡಿಕೊಂಡನು. ಅವಳು ಈಗ ಒಂದು ಆಸ್ಪತ್ರೆಯಲ್ಲಿ ನರ್ಸ್‌ಳಾಗಿರುವಳು.

ಕಳೆದ ತಿಂಗಳು 27 ನೆಯ ತಾರೀಖಿನ ದಿವಸ ಎಫ್. ಎಸ್. ಸ್ಮಿತ್ ಎಂಬ ಆಂಗ್ಲೇಯ ಸೈನಿಕನು ಒಂದು ಸೈಕಲ್ ಅಂಗಡಿಗೆ ಕನ್ನಾ ಹಾಕಿದನೆಂದು ಕಲ್ಕತ್ತಾ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಅವನನ್ನು 6 ತಿಂಗಳುಗಳ ಕಠಿಣಶಿಕ್ಷೆಗೆ ಗುರಿಪಡಿಸಿದರು.

ಲಂಡನ್ನಿನಲ್ಲಿ ಮೇಘಗಳ ನಡುವೆ ಹಾರಾಡುತ್ತಿದ್ದ ಒಂದು ವಿಮಾನದ ಮುಂಭಾಗಕ್ಕೆ ದೊಡ್ಡಪಕ್ಷಿಯು ತಿಲುಕಿ, ಯಂತ್ರದ ಚಲನೆಯು ನಿಂತು ವಿಮಾನವು ಕೆಳಕ್ಕೆ ಬಾಗಹೊಡೆಯಿತು. ವೈಮಾನಿಕನು ಅದರೊಂದಿಗೆ ತಲೆಕೆಳಗಾಗಿ ಬಿದ್ದನು. ಅವನು ಬದುಕಿದುದು ದೈವಕೃಪಾವಿಶೇಷವೇ ಹೊರತು ಮತ್ತೊಂದಲ್ಲ.

ಬಾರಿಯಲ್ ಎಂಬ ಗ್ರಾಮದಲ್ಲಿ ಶಶಿಕುಮಾರ ಪಾಲನೆಂಬವನ ಮನೆಗೆ 10 ಜನ ಕಳ್ಳರು ಬಾಗಿಲೊಡೆದು ಒಳಗೆ ನುಗ್ಗುತ್ತಿರುವಾಗ ಆ ಮನೆಯ ಮುದುಕಿಯೊಬ್ಬಳು ಆ ಬಾಗಿಲಹಿಂದೆಯೇ ನಿಂತು ಒಬ್ಬೊಬ್ಬರನ್ನೇ ಚನ್ನಾಗಿ ಪ್ರಹರಿಸುತ್ತಿದ್ದಳು. ಕೊನೆಯಲ್ಲಿ ಅವಳು ಕಳ್ಳರಿಂದ ಬಲವಾದ ಪೆಟ್ಟುತಿಂದು ಪ್ರಾಣಬಿಟ್ಟಳಂತೆ!

ಕಲ್ಕತ್ತೆಯಲ್ಲಿ ಹರಿಕೃಷ್ಣಬ್ಯಾನರ್ಜಿ ಎಂಬೊಬ್ಬ ಗೃಹಸ್ಥನು ಒಬ್ಬಳ ತರುವಾಯ ಮತ್ತೊಬ್ಬಳಂತೆ ಏಳು ಜನ ಹೆಂಗಸರನ್ನು ಮದುವೆಯಾಗಿರುವನು. ಆರುಜನ ಹೆಂಡರನ್ನು ಅವರವರ ಪಾಡಿಗೇ ಬಿಟ್ಟು ಏಳನೆಯವಳಲ್ಲಿ ಲೋಲುಪನಾಗಿರುವನು. ಈಗ ಅವರೆಲ್ಲರೂ ಜೀವನಾಂಶಕ್ಕಾಗಿ ಅವನಮೇಲೆ ದಾವೆಯನ್ನು ತಂದಿರುವರು.

ಬೊಂಬಾಯಿಯಲ್ಲಿ ಜಮುನಾಬಾಯಿ ಎಂಬೋರ್ವಳು ಡಿಸಿಲ್ವಾ ಬೀದಿಯಲ್ಲಿ ಹೋಗುತ್ತಿದ್ದಾಗ ಅವಳ ಗಂಡನು ಅವಳ ಹಿಂದೆಯೇ ಹೋಗಿ ಕುಡುಗೋಲಿನಿಂದ ಅವಳ ಕೈಯನ್ನು ಕತ್ತರಿಸಿದನು. ಜನರು ಕೂಡಲೆ ಇವನನ್ನು ಹಿಡಿದರು. ಜಮುನಾಬಾಯಿಯು ಆ ದಿವಸಸಾಯಂಕಾಲವೇ ಆಸ್ಪತ್ರೆಯಲ್ಲಿ ಸತ್ತುಹೋದಳು.

ಈ ತಿಂಗಳು 26, 27 ರಲ್ಲಿ ಕರ್ನಾಟಕ ಪ್ರಾಂತಿಕ ಸಭೆಯು ಬೆಳಗಾಂವ್ ಜಿಲ್ಲೆ ಹುಕ್ಕೇರಿಯಲ್ಲಿ ಸೇರುವುದು. ಶೇಟ್ ಜಮನಲಾಲ್ ಬಜಾಜ್‌ರವರು ಅಧ್ಯಕ್ಷರಾಗುವರು. ಅದೇ ಸಮಯದಲ್ಲಿಯೇ ಕರ್ನಾಟಕ ಏಕೀಕರಣಪರಿಷತ್ತೂ ಸಹ ಸೇರುವುದು. ಡಾ|| ಪಟ್ಟಾಭಿಸೀತಾರಾಮಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಬೇಕೆಂದು ಆಮಂತ್ರಣವು ಹೋಗಿದೆ. ಪರಿಷತ್ತಿನ ವ್ಯವಸ್ಥೆಯು ಬಹು ಉತ್ಸಾಹದಿಂದ ನಡೆದಿರುತ್ತದೆ.

ಬಂಗಾಲದಲ್ಲಿ ಪ್ರಫುಲ್ಲನಳಿನಿ ಎಂಬ ಬಾಲವಿಧವೆಯನ್ನು ಯಾರೋ ಅಪಹರಿಸಿಕೊಂಡು ಹೋಗಿರುವರೆಂದು ಅವಳ ತಂದೆಯು ಪೋಲೀಸರಿಗೆ ಫಿರ್ಯಾದು ಕೊಟ್ಟಿದ್ದನು. ಅವಳು ಕಾಂಗ್ರೆಸ್‌ಮಂದಿರದಲ್ಲಿ ಸಿಕ್ಕಳು ಇದಕ್ಕಾಗಿ ತಾಂಗಲಿ ಕಾಲಹಟ್ಟಿ ಎಂಬ ಗ್ರಾಮಗಳ ಇಬ್ಬರು ಕಾಂಗ್ರೆಸ್ ಸೆಕ್ರೆಟರಿಗಳನ್ನೂ 9 ಜನ ಮೆಂಬರರನ್ನೂ ಇಬ್ಬರು ಸ್ತ್ರೀಯರನ್ನೂ ದಸ್ತಗಿರಿ ಮಾಡಿದ್ದಾರೆ.

ಸೋಲಾಪುರದ ಪೋಲೀಸರು ಜಬದ್ಯಾನಪಾಂಧಿ ಎಂಬೊಬ್ಬ ಪ್ರಚಂಡಪುಂಡನನ್ನು ಹಿಡಿದಿದ್ದಾರೆ. ಇವನ ಹತ್ತಿರ ಬೆಂಕಿಯಂಥ ಒಂದು ಹಸುವಿದೆ. ಅವನನ್ನು ಹಿಡಿಯುವುದಕ್ಕೆ ಬಂದ ಜನರ ವಾಸನೆ ಹಿಡಿದಕೂಡಲೆ ಅದು ಹೇಕರಿಸುವುದು. ಇವನು ಅದರಮೇಲೆ ಕುಳಿತೊಡನೆಯೇ ಕುದುರೆಯ ಹಾಗೆ ವೇಗವಾಗಿ ಓಡಿ ಅವನ ವಿಪತ್ತನ್ನು ತಪ್ಪಿಸುವುದು. ಪೋಲೀಸರು ಈ ಆಕಳನ್ನೂ ಹಸ ದಸ್ತಗಿರಿ ಮಾಡಿದ್ದು, ಕೋರ್ಟಿಗೆ ಹಾಜರ್ಮಾಡಿರುವರು.

ಹೋದತಿಂಗಳಿನ ಕಡೆಯ ದಿವಸ ವೈಶಾಖ ಹಬ್ಬದ ಸಲುವಾಗಿ ಮುಲ್ತಾನಿನ ಸಮೀಪದಲ್ಲಿ ಹರಿಯುವ ಚೀನಾಬ್ ನದಿಯಲ್ಲಿ ಸಹಸ್ರಾರು ಜನರು ಸ್ನಾನಮಾಡುತ್ತಿದ್ದರು. ಆಗ 9 ವರ್ಷದ ಹುಡುಗಿಯೊಬ್ಬಳು ನೀರಿನಲ್ಲಿ ಮುಳುಗಿದಳು. ಅವಳನ್ನು ಉಳಿಸಬೇಕೆಂದು ಅವಳ ಅಣ್ಣನು ನದಿಯಲ್ಲಿಳಿದು ಅವನೂ ಮುಳುಗಿಹೋಗುತ್ತಿದ್ದನು. ಆಸಮಯದಲ್ಲಿ ಮಿ|| ಮೆಹತಾ ಗೋಪಾಲರಾವ್ ಎಂಬೊಬ್ಬ ವಕೀಲನು ಧೈರ್ಯದಿಂದ ನದಿಯಲ್ಲಿ ಧುಮಿಕಿ ಅವರಿಬ್ಬರ ಪ್ರಾಣಗಳನ್ನುಳಿಸಿದನು. ಸ್ತುತ್ಯ!

ವ್ಯಾರ್‌ಕ್ಲಾ ಜಿಲ್ಲೆಯ ಮ್ಯಾಜಿಸ್ಟ್ರೇಟ್‌ರಾದ ಮಿ|| ಮೈನಾಥ ಎಂಬವರು ತುಂಬಾ ಸತ್ಯಸಂಧರಿದ್ದು ಒಬ್ಬರಿಗೂ ನೋವನ್ನುಂಟುಮಾಡಬಾರದೆಂಬುದೇ ಅವರ ಸಂಕಲ್ಪವಾಗಿದೆ. ಕಳೆದ ತಿಂಗಳಿನಲ್ಲಿ ಒಂದು ದಿವಸ ಅವರು ಮೋಟಾರಿನಲ್ಲಿಹೋಗುತ್ತಿದ್ದಾಗ ಅಜಾಗರೂಕತೆಯಿಂದ ಅವರ ಮೋಟಾರು ಇನ್ನೊಬ್ಬರ ಮೋಟಾರಿಗೆ ಢಿಕ್ಕಿಹೊಡೆದದ್ದರಿಂದ ಆ ಕಾರಿಗೆ ನಷ್ಟವಾಯಿತು. ಅವರು ಮ್ಯಾಜಿಸ್ಟ್ರೇಟರಾದಕಾರಣ ನಷ್ಟಪಟ್ಟ ಮೋಟಾರಿನವರು ಫಿರ್ಯಾದುಮಾಡಲಿಲ್ಲ. ಆದಕಾರಣ ಅವರು ತಾವೇ ಸಮನ್ಸ್‌ಮಾಡಿಕೊಂಡು 5 ಡಾಲರ್‌ಗಳಜುಲ್ಮಾನೆ ವಿಧಿಸಿಕೊಂಡರಂತೆ!

ಬೊಂಬಾಯಿಯ ಗ್ರಾಂಟ್‌ರೋಡಿನಲ್ಲಿದ್ದ ರಾಮರಾವ್ ಪಿ. ಕಾಮತ್ ಎಂಬ 40 ವರ್ಷ ವಯಸ್ಸಿನ ಒಬ್ಬ ಹಿಂದುವು ಎಲ್ಲಿಯೂ ಕೆಲಸವು ಸಿಗದಕಾರಣ ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ಅಫೀಮು ತಿನ್ನಿಸಿಕೊಂದನಲ್ಲದೆ, ತಾನೂ ಕತ್ತಿಯಿಂದ ಇರಿದುಕೊಂಡು ಪ್ರಾಣಬಿಟ್ಟನು. ಅವನು ಆ ದಿವಸ ತನ್ನ ಮನೆಯಬಾಗಿಲಿನ ಒಳಭಾಗಕ್ಕೆ ಬೀಗ ಹಾಕಿದ್ದನು. ಪ್ರಾತಃಕಾಲ ನೆರೆಹೊರೆಯವರು ಸಂಶಯಪಟ್ಟು ಬಾಗಿಲು ತಟ್ಟಿದಾಗ ಒಳಗಿನಿಂದ ಉತ್ತರಬರಲಿಲ್ಲ. ಅನಂತರ ಜನರೂ ಪೋಲೀಸರೂ ಸೇರಿ ಬಲಾತ್ಕಾರವಾಗಿ ಬಾಗಿಲೊಡೆದು ನೋಡುವಲ್ಲಿ ಒಳಗೆ ಕಾಮತನು ರಕ್ತಮಯನಾಗಿ ಸತ್ತುಬಿದ್ದಿದ್ದನು. ಅವನ ಎರಡು ಮಕ್ಕಳೂ ಸತ್ತಿದ್ದರು. ಅವನು ಒಂದು ಕಾಗದವನ್ನು ಬರೆದಿಟ್ಟಿದ್ದನು. "1920 ನೆಯ ಇಸವಿಯಿಂದ ನನಗೆ ಯಾವ ಕೆಲಸವೂ ಸಿಗದಕಾರಣ ದಾರಿದ್ರ್ಯದಿಂದ ಜೀವಿಸಲು ಬೇಸತ್ತು ಆತ್ಮಹತ್ಯೆಮಾಡಿಕೊಂಡಿರುತ್ತೇನೆ. ಜಗತ್ತಿನಜನರು ಆಕ್ಷೇಪಕರವಾದುದೆಂದು ಹೇಳುವ ವಿಧಾನದಿಂದಲೇ ದೇವರ ಅಪ್ಪಣೆತೆಗೆದುಕೊಂಡು ಈ ದೇಹವನ್ನು ತ್ಯಜಿಸಿರುವೆನು" ಎಂದು ಅದರಲ್ಲಿ ಬರೆದಿತ್ತು.

ಸ್ವೀಕಾರ.

ಬಳ್ಳಾರಿ ಡಿ|| ಕೋರಣಗಲ್ಲು ಗ್ರಾಮದ ಬೈಲವದ್ದಿಗೇರಿ ಮಠದ ವೇ|| ರುದ್ರಯ್ಯನವರು ತಮ್ಮ ಪುತ್ರನಿಗೆ ಮಾಹೇಶ್ವರ ದೀಕ್ಷೆಯನ್ನು ಮಾಡಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ **2** ರೂ. ಹಾಗೂ ಸದರಿ ಗ್ರಾಮದ ಸಾವಕಾರ ಮ|| ರಾ|| ಕೊಡಾಲ್ ತಿಮ್ಮಪ್ಪನವರು ತಮ್ಮ ನೂತನ ಗೃಹಪ್ರವೇಶಮಾಡಿದ ಸಮಯದಲ್ಲಿ ಸಮರ್ಪಿಸಿದ **4** ರೂ. ಒಟ್ಟು **6** ರೂ. ಗಳು ಶ್ರೀ|| ಷ|| ಬ್ರ|| ಚಿಕ್ಕಮಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೊಟ್ಟೂರು ಮ|| ರಾ|| ಚಟ್ರಿಕಿ ಶಿವಬಸವಪ್ಪನವರ ಪುತ್ರ ಚಿ|| ಗುರುಪಾದಪ್ಪನಿಗೆ ಹಿರೇಹಡಗಲಿ ಗ್ರಾಮದ ಮ|| ರಾ|| ಶ್ರೀಮಂತ ಪಟ್ಟೇದ ಷಣ್ಮುಖಪ್ಪನವರ ಪುತ್ರಿ ಚಿ|| ಸೌ|| ದೇವೀರಮ್ಮನನ್ನು ಕೊಟ್ಟು ವೇ|| ಚಿಗಟೇರಿ ಮಠದ ಮರುಳಸಿದ್ಧಶಾಸ್ತ್ರಿಗಳವರ ಪೌರೋಹಿತ್ಯದಲ್ಲಿ ನೆರವೇರಿದ ವಿವಾಹ ಸಮಯದಲ್ಲಿ ವಧೂವರರಿಂದ ಸಮರ್ಪಿಸಿದ **4** ರೂ. ಗಳು ವೇ|| ಮಿ|| ಮ|| ಜಾಗಟಗೇರಿ ಚನ್ನಬಸಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಅರಸಿಕೆರೆ ತಾ|| ಯರಿಗೇನಹಳ್ಳಿ ಮ|| ರಾ|| ಪಟೇಲ ಸಿದ್ಧಬಸವೇಗೌಡರ ಪುತ್ರಿ ಚಿ|| ಸೌ|| ಪುಟ್ಟಸಿದ್ಧಮ್ಮನನ್ನು ದೊಡ್ಡಮೇಟಿಕುರಿಕೆ ಮ|| ರಾ|| ಪಟೇಲ ರಾಮೇಗೌಡರ ತಮ್ಮ ಚಿ|| ವೀರಭದ್ರೇಗೌಡನಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ತುಂಬಾಪುರದ ಶ್ರೀ ರುದ್ರಮುನಿಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ.

ಬೀದ ಜಿಲ್ಲಾ ವಿಶೋಭವಡಗಾಂವಗ್ರಾಮದ ಮ|| ರಾ|| ಕೇಶವರಾವ್ ಗಣಪತರಾವ್ ಪಾಟೀಲ ಇವರ ಪುತ್ರಿ ಚಿ|| ಸೌ|| ಪದ್ಮಾವತಿದೇವಿಯನ್ನು ಬಿದರಕೋಟಿ ಮ|| ರಾ|| ಸಂಗಪ್ಪಗೌಡ ಇವರ ಪುತ್ರ ಚಿ|| ಲಿಂಗಪ್ಪನವರಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ವೇ|| ವಂದಲಿಮಠದ ವಿರೂಪಾಕ್ಷಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿಟವನ್ನಿನಲ್ಲಿರುವ ವೇ|| ಬೇಗಲ್ಲುಮಠದ ಬಿಟ್ಟದಯ್ಯನವರು ತಮ್ಮ ಪುತ್ರನ ವಿವಾಹಸಮಯದಲ್ಲಿ ಸಮರ್ಪಿಸಿದ **1** ರೂ. ಹಾಗೂ ಮ|| ರಾ|| ಪವಾಡಶೆಟ್ಟಿ ಮಲ್ಲಿಕಾರ್ಜುನಪ್ಪನವರು ತಮ್ಮ ಪುತ್ರನ ಚೌಲಕರ್ಮದಲ್ಲಿ ಸಮರ್ಪಿಸಿದ **1** ರೂ. ಒಟ್ಟು **2** ರೂ. ಗಳು ಶ್ರೀ|| ಷ|| ಬ್ರ|| ಸಿಂಧುವಾಳ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಸೊರಾಬ್ ಪುರ ಡಿ|| ದರ್ಗನಹಳ್ಳಿಯಲ್ಲಿ ನೆರವೇರಿದ ಜಗದಾಚಾರ್ಯರ ಜಯಂತಿಮಹೋತ್ಸವ ಸಮಯದಲ್ಲಿ ಮ|| ಮಡಿವಾಳರ ಭೀಮಣ್ಣನು ಸಮರ್ಪಿಸಿದ **1** ರೂ. ಯು ಶ್ರೀ|| ಷ|| ಬ್ರ|| ಹೋಟಗಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[3 ನೆಯ ಪುಟದಿಂದ ಮುಂದುವರಿದುದು]

ಳಕೆಯನ್ನು ಜಗತ್ತಿಗೆ ಪ್ರಕಾಶಗೊಳಿಸುತ್ತವೆ. ಇಂಥ ಪ್ರಾಚೀನ ನಾಗರಿಕತೆ, ಪಾಂಡಿತ್ಯ, ಧರ್ಮಶಾಸ್ತ್ರ ಮುಂತಾದ ಇವುಗಳನ್ನು ನಿರ್ವಾದವಾಗಿ ತೋರಿಸುವ ಆಧಾರಗಳು ನಮ್ಮ ದೇಶದಲ್ಲಿರುವಂತೆ ಮತ್ತಾವ ದೇಶದಲ್ಲಿಯೂ ಇರುವುದಿಲ್ಲ. ನೂರಾರು ವರ್ಷಗಳ ಪೂರ್ವದಲ್ಲಿ ಎಷ್ಟೋ ಜನ ಪರದೇಶದ ಪ್ರಯಾಣಿಕರು ಇಲ್ಲಿಗೆ ಬಂದು ಭಾರತೀಯರ ಘನತೆಯನ್ನು ಕಂಡು ಬೆರಗಾದರು. ನಮ್ಮ ಗತವೈಭವವನ್ನು ನೋಡಿದರೆ ನನಗೆ ಪರಮ ದುಃಖವೆನಿಸುವುದು. ನಮ್ಮ ಪ್ರಾಚೀನನಾಗರೀಕತೆಯ ಗುರುತುಗಳನ್ನು ನೋಡಿ ದೇಶ ಭಕ್ತರನೇಕರು ಕಣ್ಣೀರುಸುರಿಸುವುದನ್ನು ನೋಡಿರುವೆನು. ನಮ್ಮ ಆಳರಸರ ಪೂರ್ವಜರು ಭಿಲ್ಲರು ಮೊದಲಾದ ಕಾಡುಜನರಂತೆ ವಾಸಮಾಡುತ್ತಿದ್ದಾಗ ನಾವು ಅನಂತಕಲೆಗಳಲ್ಲಿ ನೈಪುಣ್ಯವನ್ನು ಹೊಂದಿದ್ದೆವು. ಎಳುನೂರು ವರ್ಷಗಳ ಪೂರ್ವದಲ್ಲಿ ಇಂಗ್ಲೆಂಡ್ ಜನಾಂಗವೇ ಹುಟ್ಟಿರಲಿಲ್ಲ. ಅನಂತರ ಅನೇಕ ಶತಮಾನಗಳ ತರುವಾಯ ಅವರು ಕಪಿಗಳಂತೆ ವಾಸಿಸುತ್ತಿದ್ದರು. ಪಾಶ್ಚಾತ್ಯ ಸಹೋದರರಿಗೆ ಮೊಟ್ಟಮೊದಲು ಮನುಷ್ಯನಿಗಿರಬೇಕಾದ ನಡೆನುಡಿಗಳನ್ನು ಕಲಿಸಿದವರು ನಮ್ಮ ಪೂರ್ವಜರು. ಎಂಥ ಅದ್ಭುತಪತನ! ಜಗತ್ತಿನಲ್ಲಿ ಗುಲಾಮಗಿರಿಯಲ್ಲಿದ್ದು ಸ್ವಾತಂತ್ರ್ಯಕ್ಕಾಗಿಹೋರಾಡುವುದು ಭರತಖಂಡವಲ್ಲದೆ ಮತ್ತೊಂದು ದೇಶವಿಲ್ಲ. ಇದು ಎಂಥ ಖೇದಕರವಾದಸಂಗತಿ! ಅನೇಕ ವಿಧಗಳಿಂದ ಲೆಕ್ಕಹಾಕಿದರೆ ಜಗತ್ತಿನ ರಾಷ್ಟ್ರಗಳೆಲ್ಲೆಲ್ಲ ನಮ್ಮ ದೇಶವೇ ಅತ್ಯಂತ ಬಡದೇಶವೆಂಬುದು ಗೊತ್ತಾಗುತ್ತದೆ. ಎಲ್ಲರಿಗಿಂತಲೂ ನಾವು ಈಗ ಬಹು ಹಿಂದೆ ಇರುವೆವು. ನಮ್ಮ ಪ್ರಾಚೀನಶ್ರೈಗಾರಿಕೆಗಳೆಲ್ಲ ಹಾಳಾಗಿ ಹೋದವು. ನಮ್ಮ ಅನ್ಯಾದೃಶಸಂಪತ್ತು ಮಾಯವಾಯಿತು. ಹಾನಿಕರವಾದ ಈ ಅಧಃಪತನವನ್ನು ತಡೆಯದಿದ್ದರೆ ನಮ್ಮ ದೇಶವು ಭೂಪಟದಿಂದ ತೆಗೆದುಹಾಕಲು ಅರ್ಹವಾಗಬಹುದು. ಆಂಗ್ಲೇಯರ ಪ್ರಭುತ್ವವು ನೆಲೆಗೊಂಡ ತರುವಾಯ ಹಿಂದುಸ್ಥಾನದ ಹಣಕಾಸಿನ ಸ್ಥಿತಿಯನ್ನು ವಿಚಾರಮಾಡಿದರೆ ಬಂಗಾರದ ಹೊಗೆ ಹಾಯುತ್ತಿದ್ದ ನಮ್ಮ ದೇಶವು ಜಗತ್ತಿನಲ್ಲಿ ಅತ್ಯಂತ ಕೇವಲ ಬಡದೇಶವಾಗುವುದಕ್ಕೆ ನಿಜವಾದ ಕಾರಣಗಳು ಗೊತ್ತಾಗುವವು. ಆ ಕಾರಣಗಳನ್ನು ತಿಳಿದುಕೊಳ್ಳಬೇಕಾದರೆ ಶ್ರೀಮಾನ್ ರಮೇಶ ಚಂದ್ರದತ್ತರವರ ಹಾಗೂ ಭಾರತಪಿತಾಮಹ ದಾದಾಭಾಯಿನವರೋಜಿಯವರ [illegible]ಗಳನ್ನು ಅಭ್ಯಾಸಮಾಡಬೇಕು. ಇದರಿಂದ ನ[illegible]ದ್ರ್ಯಕ್ಕೆ ಪರಕೀಯರ ಅಬಾಧಿತವಾದ ಸುಲಿಗೆ[illegible]ರಣವೆಂಬುದು ಗೊತ್ತಾಗುವುದು. ಆದಕಾರಣ ನ[illegible] ಆ ಮಹಾಶಯರ ಗ್ರಂಥಗಳನ್ನು ಅಭ್ಯಾಸಮಾಡಬೇಕು. ಅವುಗಳನ್ನು ಶಾಲೆಗಳಲ್ಲಿ ಕಲಿಸುವುದಿಲ್ಲ. ಅವುಗಳನ್ನು ಪ್ರತ್ಯೇಕವಾಗಿ ಅಭ್ಯಾಸಮಾಡಬೇಕು. ಲಕ್ಷಾಂತರ ಹಳ್ಳಿಗಳಲ್ಲಿ ವಿಶೇಷಜನರು ಅನುಭವಿಸುತ್ತಿರುವ ಕಷ್ಟ ಪೂರ್ಣದಾರಿದ್ರ್ಯವೂ, ಅನ್ನವಿಲ್ಲದೆ ನರಳುವಿಕೆಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ತರುಣರಿಗೆ ಗೋಚರವಾಗುವುದಿಲ್ಲ. ಬ್ರಿಟಿಷ್ ಪ್ರಭುತ್ವದ ಮಹೋಪಕಾರಗಳನ್ನು ತಿಳಿದುಕೊಳ್ಳಬೇಕಾದರೆ ತರುಣರು ಹಳ್ಳಿಗಳಿಗೆ ಹೋಗಬೇಕು. ಅವುಗಳನ್ನು ಅಲ್ಲಿ ಯಥೇಚ್ಛವಾಗಿ ನೋಡಬಹುದು. ಜನರಿಗೆ ಸರಿಯಾದ ಉಡಿಗೆ ಇಲ್ಲ; ಹೊತ್ತುಹೊತ್ತಿಗೆ ಅನ್ನವಿಲ್ಲ; ವಾಸಕ್ಕೆ ಸರಿಯಾದ ಮನೆಗಳಿಲ್ಲ; ಕಾಯಿಲೆಬಿದ್ದರೆ ಸಮೀಪದಲ್ಲಿ ಆಸ್ಪತ್ರೆಗಳಿಲ್ಲ. ಹಳ್ಳಿಯ ನಾಯಿಗಳಂತೆ ಜೀವಿಸಿ ಪಟ್ಟಣದ ಇಲಿಗಳಂತೆ ಸಾಯುವರು. ಇದೇ ಹಳ್ಳಿಗಳ ದುಃಖಕರವಾದ ಚಿತ್ರ. ಪ್ರತಿಯೊಂದು ಹಳ್ಳಿಗೂ ಒಂದೊಂದು ಸರಾಯಿಅಂಗಡಿಯನ್ನಿಟ್ಟಿರುವುದೇ ದಯಾಳುಸರ್ಕಾರದವರು ಹಳ್ಳಿಯವರಿಗೆ ಮಾಡಿರುವ ಮಹೋಪಕಾರಗಳಲ್ಲೊಂದಾಗಿದೆ.

ಮಿಸ್. ಕ್ಯಾಥರಿನ್ ಮೇಯೊ.

(ಮ|| ಎ. ವೆಂಕಟಕೃಷ್ಣಯ್ಯನವರಿಂದ)

ಮಿಸ್ ಕ್ಯಾಥರಿನ್ ಮೇಯೊ ಎಂಬ ಅಮೇರಿಕೆಯ ಹೆಂಗಸು "ಮದರ್ ಇಂಡಿಯಾ" ಎಂಬ ಗ್ರಂಥವನ್ನು ಬರೆದು ಭಾರತಸ್ತ್ರೀಯರ ವಿಷಯದಲ್ಲಿ ಇರತಕ್ಕ ಕೆಲವು ವಿಷಯಗಳನ್ನೂ ಇಲ್ಲದ ಕೆಲವು ಅಸತ್ಯ ವಿಷಯಗಳನ್ನೂ ಸೇರಿಸಿ ಮುದ್ರಿಸಿದ್ದಳು. ಅವಳು ಬರೆದಿರತಕ್ಕ ಸುಳ್ಳುಗಳನ್ನು ಭಾರತೀಯರು ಮಾತ್ರವಲ್ಲದೆ ಅಮೇರಿಕಾಖಂಡದವರೂ ಕೂಡ ಉದ್ಘಾಟಿಸಿದ್ದರು. ಇಂಡಿಯಾದೇಶದ ಬ್ರಾಹ್ಮಣರಲ್ಲಿಯೂ, ವೈಶ್ಯರಲ್ಲಿಯೂ ಬಾಲ್ಯವಿವಾಹವು ರೂಢಮೂಲವಾಗಿರುವುದು. ಈ ವಿವಾಹವು ಬಾಲ್ಯವಾದಾಗ್ಯೂ (ನಿಜವಾದ ವಿವಾಹವು ನಿಷೇಕ) ಹಿಂದೂ ಶಾರೀರಕ ಧರ್ಮಶಾಸ್ತ್ರದಲ್ಲಿ ನಿಷೇಕ ಕಾಲವು ಸ್ತ್ರೀಯರಿಗೆ 16 ವರುಷದ ಮೇಲೂ, ಪುರುಷರಿಗೆ 20 ವರುಷದ ಮೇಲೂ ವಿಧಿಸಲ್ಪಟ್ಟಿರುವುದು. ಬ್ರಹ್ಮಚರ್ಯವು ಇಷ್ಟು ವಯಸ್ಸಿನೊಳಗಾಗಿ ಚರಿತಾರ್ಥವಾದರೆ ನಿಷೇಕಕ್ಕೆ ಅವಕಾಶವು ಕೊಡಲ್ಪಡಬಹುದು. ಹಾಗಿಲ್ಲದಿದ್ದರೆ ಬ್ರಹ್ಮಚರ್ಯವ್ರತವು ಪೂರೈಸುವವರೆಗೂ ಅಂದರೆ ದೇಹಶಕ್ತಿಯೂ ಬುದ್ಧಿಶಕ್ತಿಯೂ, ಮಾತಾಪಿತೃಪದವಿಯನ್ನು ಹೊಂದುವುದಕ್ಕೆ ಯೋಗ್ಯತಾಸಿದ್ಧಿಯನ್ನುಂಟುಮಾಡುವವರೆಗೂ ನಿಷೇಕವು ನಡೆಯಕೂಡದೆಂದು, ಶಾಸ್ತ್ರವಿಧಿಯು ಇರುವುದು. ಆದರೆ ಅಮೇರಿಕಾದೇಶದ ಹೆಂಗಸಿಗೆ ಈ ನಿಯಮವು ಗೊತ್ತಿಲ್ಲ. ಕಂಟೋನ್ಮೆಂಟುಗಳಲ್ಲಿ ಗ್ರಾಸ್‌ಕಟರ್‌ಗಳೇ ಮೊದಲಾದ ಗುಣಸೆಟ್ಟೆಯರನ್ನು ನೋಡಿ ಭಾರತಪುತ್ರಿಯರೂ ಹೀಗೆಯೇ ಇರುವರೆಂದು ಮನಸ್ವೀನಿಂದಿಸಿರುವಳು. ಭಾರತೀಯರಲ್ಲಿ ವ್ಯಭಿಚಾರವು ಈ ದೇಶದಲ್ಲಿ ಇರುವುದಿಲ್ಲ. ಎಲ್ಲಾ ಸ್ತ್ರೀಯರು ಸಾವಿತ್ರಿಯರೆಂದು ಯಾರೂ ಹೇಳುವುದಿಲ್ಲ. ನಾಯಿಗಳಂತೆನಡೆದುಕೊಳ್ಳುವ ಸ್ತ್ರೀಪುರುಷರು ಎಲ್ಲಾ ದೇಶಗಳಲ್ಲಿಯೂ ಇರುವರು. ಇಂಡಿಯಾದೇಶದಲ್ಲಿ ಇಂಥವರಸಂಖ್ಯೆಯುಕಡಿಮೆ. ಪತಿವ್ರತಾಶಿರೋಮಣಿಯರು ಹೇಗೋ ಹಾಗೆ ಜಿತೇಂದ್ರಿಯರಾದ ಪುರುಷರೂ ಕೂಡ ಇಂಡಿಯಾದೇಶದಲ್ಲಿ ಇತರದೇಶಗಳಲ್ಲಿರುವದಕ್ಕಿಂತಲೂ ಹೆಚ್ಚಾಗಿರುತ್ತಾರೆ. ಈ ಮಹಾರಾಯುತಿಗೆ ಈ ವಿಷಯವು ಗೊತ್ತಾಗದೆ ಮನಸ್ವೀ ಪ್ರಲಪಿಸಿರುವಳು. ಈಗ ಇದೇ ವಿಷಯದಲ್ಲಿ ಎರಡನೆಯಪುಸ್ತಕ ಒಂದನ್ನು ಬರೆದಿರುವಳು. ಅದರಲ್ಲಿ ಶಾರದಾಶಾಸನದಿಂದಲ್ಲಿ ಪ್ರಯೋಜನ ವಿಲ್ಲವೆಂಬುದಾಗಿಯೂ, ಬಾಲ್ಯವಿವಾಹದಿಂದ ಹುಟ್ಟಿದ ಮಕ್ಕಳಿಗೆ ದಾಯಭಾಗವನ್ನು ತಪ್ಪಿಸಬೇಕೆಂಬುದಾಗಿಯೂ ಬರೆದಿರುವಳು. ಬಾಲ್ಯವಿವಾಹದಿಂದ ಮಕ್ಕಳುಹುಟ್ಟುವರೆಂದು ಇವಳು ತಿಳಿದಿರುವುದೇತಪ್ಪು. ಮಕ್ಕಳಾಗಬೇಕಾದರೆ ಕ್ಷೇತ್ರವೂ, ಬೀಜವೂ ಎರಡೂ ಇಲ್ಲದೇ ಇರತಕ್ಕ ವಿವಾಹಕ್ಕೆ ಬಾಲ್ಯವಿವಾಹವೆಂದು ಹೇಳಬಹುದು. ಅದೆಂದಿಗೂ ನಿಷೇಕವಾಗುವುದಿಲ್ಲ. ಇವಳು ತಿಳಿಯದೆ ಇರತಕ್ಕ ವಿಷಯಗಳನ್ನು ಗರ್ಭೀಕರಿಸಿ ಪುಸ್ತಕವನ್ನು ಬರೆದು ಮುದ್ರಿಸಿ ತನಗೆ ದುರುಪದೇಶಮಾಡಿರತಕ್ಕವರ ಮುಖೋಲ್ಲಾಸವೇ ತನ್ನ ಮೆಹನತ್ತಿಗೆ ಪ್ರತಿಫಲವೆಂದು ತಿಳಿದುಕೊಂಡಿರುವಳು. ತನ್ನ ಲೇಖನದಿಂದ ಭಾರತೀಯ ಸ್ತ್ರೀಯರ ದೋಷಗಳನ್ನು ಉದ್ಘಾಟಿಸಿ ಮಹೋಪಕಾರವನ್ನು ಇವಳುಹೊಂದಿರುವಳು. ಸಾರಾಸಾರವಿಚಾರಹೀನಳಾದ ಇವಳ ಮಾತಿಗೆ ಭಾರತೀಯರಲ್ಲಿ ಯಾರೂ ಗಮನಕೊಡುವುದಿಲ್ಲ. ನಾಯಿ ಬೊಗಳಿದರೆ ದೇವಲೋಕವು ಹಾಳಾಗುವುದೇ? ಎಂಬುದಾಗಿ ಒಂದು ಗಾದೆ ಇರುವುದು. ಬೇಕಾದಷ್ಟು ಜನ ಮೇಯೋಗಳು ಇಲ್ಲದ ಸಲ್ಲದ ದೋಷಗಳನ್ನು ಭಾರತೀಯರಿಗೆ ಆರೋಪಿಸಿ ಸಂತೋಷಪಡಲಿ; ಅದರಿಂದ ಶೀಲವಂತರಾದ ಭಾರತೀಯ ಸ್ತ್ರೀಪುರುಷರಿಗೆ ಯಾವ ಹಾನಿಯೂ ಇಲ್ಲ. ನಮ್ಮನ್ನು ಆಕ್ಷೇಪಿಸತಕ್ಕವರು ಮಾಡಿರುವ ಉದ್ಘಾಟನೆಗಳಲ್ಲಿ ನಿಜವೇನಾದರೂ ಇದ್ದರೆ ಅದನ್ನು ತಿದ್ದಿಕೊಳ್ಳುವುದು ನಮ್ಮ ಕರ್ತವ್ಯ. ಅವಳು ಸುಳ್ಳನ್ನು ಹೇಳಿದರೆ ಅದಕ್ಕೆ ಉದಾಸೀನವೇ ಪ್ರತಿಕಾರ. ಆದರೆ ಅವಳು ಹೇಳತಕ್ಕ ಸುಳ್ಳು ಸುಳ್ಳೆಂಬುದಾಗಿ ತೋರಿಸಲ್ಪಡಬೇಕೆಂದು ಕೆಲವುಜನ ಭಾರತೀಯರು ಅಭಿಪ್ರಾಯಪಡುವರು. ಬೇರೆಕೆಲಸವಿಲ್ಲದವರು ಈ ಕೆಲಸವನ್ನು ಮಾಡಬಹುದು.

ಬಂಗಾಳಾ ಗೌರ್ನಮೆಂಟ್ ಸರ್ಕ್ಯುಲರ್.

ಸಿವಿಲ್‌ಡಿಸ್‌ಒಬೇಡಿಯನ್ಸ್ ರೂಪವಾದ ಸತ್ಯಾಗ್ರಹದಲ್ಲಿ ಭಾಗಿಗಳಾಗಿದ್ದ ವಿದ್ಯಾರ್ಥಿಗಳ ವಿಷಯದಲ್ಲಿ ಸರ್ಕಾರದವರು ನಿರ್ಮಿಸಿದ್ದ ಕಾನೂನನ್ನು ಗಾಂಧಿ ಇರ್ವಿನ್ ಕರಾರಿಗೆ ಅನುಸಾರವಾಗಿ ವಾಪಸ್‌ತೆಗೆದುಕೊಂಡಿರುವರು. Civil Disobedience ಚಳವಳಿಗಳನ್ನು ಹುಂಗಾಮಿಕೌಲು ಜಾರಿಯಲ್ಲಿರುವವರೆಗೂ ನಿಲ್ಲಿಸಬೇಕೆಂದು ಕಾಂಗ್ರೆಸ್ ಮುಖಂಡರಾದ ಮಹಾತ್ಮ ಗಾಂಧಿಯವರೇ ಮೊದಲಾದವರು ಆಜ್ಞೆಮಾಡಿರುವರು. ಈ ಹುಂಗಾಮಿ ಕೌಲು ಪೂರ್ಣ ಸ್ವರಾಜ್ಯಕ್ಕೆ ಸಾಧಕವಾಗಬಹುದು. ಹಾಗಾದಪಕ್ಷದಲ್ಲಿ ವಿದ್ಯಾರ್ಥಿಗಳು ಪೂರ್ಣಸ್ವರಾಜ್ಯದ ನಿರ್ಮಾಣಗಳಲ್ಲಿ ಭಾಗಿಗಳಾಗುವುದು ಅದರಲ್ಲಿ ಅವರಿಗೆ ಜೀವನವೂ ಸಿಕ್ಕುವುದು. ಈಗ ನಮ್ಮ ವಿದ್ಯಾರ್ಥಿಗಳಿಗೆ ಜೀವನವನ್ನೂ ಉದ್ಯೋಗವನ್ನೂ ಕಲ್ಪಿಸುವುದು ಕಾಂಗ್ರೆಸ್ಸಿನವರ ಮುಖ್ಯಕರ್ತವ್ಯವಾಗಿದೆ. ಭರತಖಂಡದಲ್ಲಿ 35 ಕೋಟಿ ಜನಗಳಿರುತ್ತಾರೆ. ಇವರಲ್ಲಿ ಅನೇಕರು ಲಕ್ಷಾಧಿಕಾರಿಗಳೂ, ಕೆಲವರು ಕೋಟೀಶ್ವರರೂ ಇರುವರು. ಇವರ ಪ್ರಾಣರಕ್ಷಣೆ ಮಾನ ಮತ್ತು ಆಸ್ತಿ ರಕ್ಷಣೆಗಳಿಗೆಲ್ಲಾ ಕಾಂಗ್ರೆಸ್ ವಾಲಂಟಿಯರುಗಳೂ, ಪದವಿಯನ್ನು ಹೊಂದಿರತಕ್ಕ ವಿದ್ಯಾರ್ಥಿಗಳೂ ಕಾರಣಭೂತರಾಗಿರುತ್ತಾರೆ. ಉಪಪನ್ನರಾದ ಜನಗಳು ತಮ್ಮ ಜೀವನಕ್ಕಾಗಿ ಮಿಕ್ಕದ್ರವ್ಯವನ್ನು ಕಾಂಗ್ರೆಸ್ ಖಜಾನೆಯಲ್ಲಿ ಡಿಪಾಜಿಟ್ಟಾಗಿಟ್ಟು ಸೇವಿಂಗ್ಸ್‌ಬ್ಯಾಂಕ್ ಬಡ್ಡಿಯಾಗಿ ತೆಗೆದುಕೊಳ್ಳಬಹುದು. ಸದರಿ ಮೊಬಲಗನ್ನು ಪೂರ್ಣ ಸ್ವರಾಜ್ಯ ಬರುವವರೆಗೂ ಸದರಿ ವಾಲಂಟಿಯರುಗಳ ಜೀವನಕ್ಕೆ ಸಾಲವಾಗಿ ಕೊಟ್ಟು ಪೂರ್ಣ ಸ್ವರಾಜ್ಯ ರಕ್ಷಣೆಗಾಗಿ ಯಾವ ಮಿಲಿಟರಿ ಮತ್ತು ಸಿವಿಲ್ ಶಿಕ್ಷಣಗಳು ಆವಶ್ಯಕವೋ ಆ ಶಿಕ್ಷಣವನ್ನು ಕೊಡುವುದಕ್ಕೆ ಸಾವಕಾಶವಿಲ್ಲದೆ ಏರ್ಪಾಡಾಗಬೇಕು. ಎಲ್ಲಾ ಸ್ವಯಂಸೇವಕರ ಅನ್ನವಸ್ತ್ರಗಳಿಗೂ ವಾಸಕ್ಕೂ ಏರ್ಪಾಡಾಗಬೇಕು. ಅವರು ಉದರ ಪೋಷಣೆಗೋಸ್ಕರ ಮಾಡಬಾರದ ಕೆಲಸವನ್ನು ಮಾಡುವುದಕ್ಕೆ ಅವಕಾಶ ಕೊಡಬಾರದು. ಅನ್ನವಸ್ತ್ರಗಳಿಗೆ ಮಿತವುಂಟು. ಧರ್ಮದಿಂದ ನಡೆಯುವುದು ಕಷ್ಟ. ಅನ್ನವಿಲ್ಲದ ಎಲ್ಲಾ ವಿದ್ಯಾರ್ಥಿಗಳಿಗೂ ನೆಮ್ಮದಿಯಾದ ಜೀವನಕ್ಕೆ ಏರ್ಪಾಡುಮಾಡಿ ಅವರು ದೇಶಸೇವೆಯಲ್ಲಿ ಧುರೀಣರಾಗುವಂತೆ ಮಾಡಲ್ಪಡಬೇಕು. ಈ ವಿಷಯಕ್ಕೆ ಕಾಂಗ್ರೆಸ್ಸಿನವರ ಗಮನವು ಇನ್ನೂ ಕೊಡಲ್ಪಟ್ಟಿಲ್ಲ. ಅನೇಕ ವಿದ್ಯಾರ್ಥಿಗಳು ಧರ್ಮೋಲ್ಲಂಘನಮಾಡುತ್ತಾರೆಂದು ಮುದ್ರಿಸಲ್ಪಡುತ್ತಲಿದೆ. ಇದಕ್ಕೆ ಕಾಂಗ್ರೆಸ್ಸಿನವರು ಸಾಕ್ಷಾತ್ತಾಗಿ ಉತ್ತರವಾದಿಗಳು. ಧನಿಕರಾದ ಮಹಾ ಜನಗಳು ಪರೋಕ್ಷವಾಗಿ ಉತ್ತರವಾದಿಗಳು. ಇವರೆಲ್ಲರೂ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿ ಧನ್ಯರಾಗುವಂತೆ ದೇವರು ಅನುಗ್ರಹಿಸಲೆಂದು ಕೋರುತ್ತೇನೆ.

ಇಂಡಿಯಾದೇಶದ ಸ್ವದೇಶೀಚಳವಳಿ.

ಭಾರತೀಯರು ಪರದೇಶೀವಸ್ತ್ರಗಳನ್ನು ಬಹಿಷ್ಕರಿಸಿದ ಕೂಡಲೇ ಅನೇಕ ಬಟ್ಟೆಮಿಲ್ಲುಗಳ ಕೆಲಸವನ್ನು ನಿಲ್ಲಿಸಬೇಕಾಯಿತು. ಸುಮಾರು 50 ಲಕ್ಷ ಜನಗಳಿಗೆ ಕೂಲಿ ಸಿಕ್ಕುವುದು ನಿಂತುಹೋಯಿತು. ಅನ್ನಕ್ಕಿಲ್ಲದೆ ಸಾಯುವ ಗತಿಯು ಬಂದಿರುವುದು. ಮಹಾತ್ಮಾ ಗಾಂಧಿಯವರು ಈ ಮರ್ಮವನ್ನು ತಿಳಿದುಕೊಂಡು ದುಷ್ಟನಿಗ್ರಹಕ್ಕೆ ನೂಲುವ ಚಕ್ರವೇ ಮಹಾವಿಷ್ಣುವಿನ ಚಕ್ರಾಯುಧವಾಗುವುದೆಂದು ಗೊತ್ತುಮಾಡಿದರು. ಅವರು ಹೇಳಿದಂತೆಯೇ ಆಯಿತು. ಅತ್ಯಂತ ಅಲ್ಪವಾದ ನೂಲುವ ಚಕ್ರದಿಂದ ಅಪ್ರತಿಹತವಾದ ಬ್ರಿಟಿಷ್‌ಚಕ್ರಾಧಿಪತ್ಯದ ನಿರಂಕುಶಪ್ರವರ್ತನೆಯೂ ಕೂಡ ಶಾಂಕುಶಪ್ರವರ್ತನವಾಗುವ ಸ್ಥಿತಿಯು ಬಂದಿತು. ದೇವರಿಗೆ ಲೀಲಾಮಾನುಷವಿಗ್ರಹವೆಂದು ಹೇಳುವುದುಂಟು. ಅವನ ಲೀಲೆಯು ಬ್ರಿಟಿಷ್ ಚಕ್ರಾಧಿಪತ್ಯದ ಮುಖಂಡರನ್ನು ಕೂಡ ಮಾರ್ಗಕ್ಕೆ ತರುವ ಶಕ್ತಿಯುಳ್ಳದ್ದಾಯಿತು. ಅವನ ಸಂಕಲ್ಪವಿನಾ ತೃಣವೂ ಚಲಿಸುವದಿಲ್ಲವೆಂದು ಶಾಸ್ತ್ರಗಳು ಹೇಳುತ್ತವೆ. ಇದು ಸತ್ಯವೆಂಬುವದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯವೇ ಇದಕ್ಕೆ ಸಾಕ್ಷಿಯಾಗಿರುವುದು.

ಆಷ್ಟ್ರೇಲಿಯಖಂಡದ ಪ್ರಕೃತಸ್ಥಿತಿ.

ಬ್ರಿಟಿಷ್ ಜನಗಳು ಈ ಖಂಡವನ್ನು ಆಕ್ರಮಿಸಿಕೊಂಡಿರುವರು. ಈ ಖಂಡದ ಜನಗಳು ಮೂಲೋತ್ಪಾಟನವಾಗಿ ರಾಜ್ಯವೆಲ್ಲಾ ಬಿಳೀಜನರ ಪಾಲಾಗಿರುವುದು. ಈ ದೇಶದ ಉತ್ಪತ್ತಿಯು ಬ್ರಿಟಿಷ್ ಸಾಮ್ರಾಜ್ಯದ ಉತ್ಪತ್ತಿಗಿಂತಲೂ ಹೆಚ್ಚಾಗಿರುವುದು. ಆದಾಗ್ಯೂ ಎಲ್ಲರೂ ನಿತ್ಯೋತ್ಸವಗಳಲ್ಲಿ ಬೇಕಾದ ಹಾಗೆ ಖರ್ಚುಮಾಡಿಕೊಂಡು ಸುಖವಾಗಿರುವರು. ಬ್ರಿಟಿಷ್‌ರಾಜ್ಯಕ್ಕೆ ಕೊಡಬೇಕಾದ ಸಾಲದ ಬಡ್ಡಿಯನ್ನು ಕೂಡ ಇವರು ತೀರಿಸಿಲ್ಲ. ಈ ಬಡ್ಡಿಯ ಮೊಬಲಗು ಸುಮಾರು 60,000,000 ಪೌನುಗಳಾಗುವುದು. ಈ ರೀತಿಯಲ್ಲಿ ಮದ್ರಾಸ್ ಮೇಲ್ ಪತ್ರಿಕೆಯಲ್ಲಿ ಮುದ್ರಿಸಲ್ಪಟ್ಟಿರುವುದು. ಇದನ್ನು ಯಾವ ಜನರು ಒಂದದನ್ನೆಲ್ಲಾ ನಿರ್ಮಾಣಮಾಡಿಕೊಂಡು ತಾವು ಮಾಡಿದ ಸಾಲದ ಬಡ್ಡಿಯನ್ನು ಕೂಡ ಕೊಡಬೇ ಇರುತ್ತಾರೋ ಅವರಿಗೆ ಪರಿಣಾಮದಲ್ಲಿ ಅಧೋಗತಿಯು ತಪ್ಪುವುದಿಲ್ಲ. ಪಾಶ್ಚಾತ್ಯರಲ್ಲಿ ಅನೇಕ ಸರಗತಿಯು ಈ ರೀತಿಯಲ್ಲಿ ಪರಿಣಮಿಸುತ್ತಲಿವೆ. ಇದು ಶೋಚನೀಯವಾದುದು. ಈ ವಿಷಯದಲ್ಲಿ ಅವರ ಮೇಲ್ಪಂಕ್ತಿಯನ್ನು ಭಾರತೀಯರಾದ ನಾವೂ ಕೂಡ ಅನುಸರಿಸಲು ಉಪಕ್ರಮಿಸಿದ್ದೇವೆ. ದೇವರೇ ನಮ್ಮನ್ನು ಕಾಪಾಡಬೇಕು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಸ್ವರ್ಣಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೋರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ೧ ಗುಂಜಿಯಿಂದ ಅರ್ಧಮಾಷೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಇ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ [illegible] ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳೂ ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾ[illegible] ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ [illegible]ದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಾಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸೂತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣ ಗುಣಪಡಿಸುತ್ತದೆ. [illegible]ಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಕೇವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳೀಪುಡಿ, ಹೊಟ್ಟೆ ಹುಳಗಳ ಕೆಲರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಾನ್ಸು, ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[40] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ.) ಮಂಗಳೂರು, ದ. ಕ.**

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಬಿಡಾರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—[illegible]—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ "ವೈಶ್ವಾನರಾಸವ"ವನ್ನು ಉಪಯೋಗಿಸಿದದಲ್ಲಿ ತುಂಬಾ ಗುಣ ಕಾಣಬಂತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ಸಾವಕಾಶವಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು.
ಪಟೇಲ್ ಮತ್ತು ಛೇರ್‌ಮನ್, ಬಾಸೂರು,
[3] ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಲ್ಲಿ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎ. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೭.೮ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ-

(Registered Trade Mark)

ಗಳನ್ನು ಕೊಟ್ಟಿರು... ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂಟಿ ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೪೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋಗಿಸುತ್ತಾರೆ. ಮಾದರಿಗೋಸ್ಕರ ಪುಗಸಟ್ಟೆ ಕಳುಹಿಸಲಾರೆವು.

ಡಬ್ಬಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-...

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆಣೆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[43] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ ನೇ ಮೇ ೧೯೩೧ [ಸಂಚಿಕೆ ೪

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಭಾಷಾಂತರಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಹಿಮಾಲಯ ಪ್ರಾಂತದ ಸಮಾಚಾರ.

ತಾ|| 27-4-31 ರಲ್ಲಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಗಢವಾಲ ಪ್ರಾಂತೀಯ ಸನಾತನಧರ್ಮಸಭೆಯು ನೆರವೇರಿತು. ಸಭೆಗೆ ಅನೇಕಜನ ಶಾಸ್ತ್ರಿಗಳೂ ಪ್ರೇಕ್ಷಕರೂ ಬಂದಿದ್ದರು. ಮೂರ್ತಿಪೂಜೆ ಮತ್ತು ಸನಾತನಧರ್ಮದ ಪ್ರಾಚೀನತ್ವದ ವಿಷಯದಲ್ಲಿ ವ್ಯಾಖ್ಯಾನಗಳು ನಡೆದವು. ಇದಲ್ಲದೆ ಸಂಸ್ಥಾನದ ಮ್ಯಾನೇಜರರು ಮತ್ತು ಎಸ್. ರಾಮೇಶ್ವರಪಾಂಡೆಯವರು ಸದ್ಯಃ ನಡೆದಿರುವ ಸ್ವರಾಜ್ಯಾಂದೋಲನ ಮತ್ತು ಸನಾತನಧರ್ಮದ ವಿಷಯದಲ್ಲಿ ವ್ಯಾಖ್ಯಾನಮಾಡಿದರು. ಆಮೇಲೆ ಶ್ರೀ ಜಗದ್ಗುರುಗಳ ಜಯಘೋಷದೊಡನೆ ಸಭೆಯ ಕಾರ್ಯವು ಪೂರೈಸಿತು.

ಪ್ರತಿವರ್ಷದಂತೆ ಈ ವರ್ಷ ತಾ|| ೨-೫-೩೧ ರಲ್ಲಿ ಶ್ರೀ ಕೇದಾರೇಶ್ವರನ ಬಾಗಿಲು ತೆರೆಯಲ್ಪಟ್ಟಿತು. ಬಾಗಿಲು ತೆಗೆಯುವ ಕಾಲದಲ್ಲಿ ಮಹಾಜ್ಯೋತಿಯ ದರ್ಶನಕ್ಕಾಗಿ 2000 ಜನರು ಸೇರಿದ್ದರು. ಈ ವರ್ಷ ಬಿಸಿಲು ಅಧಿಕವಿದ್ದುದರಿಂದ ಹಿಮವು ಅಲ್ಲಲ್ಲಿ ಕರಗಿರುವದು. ಮಾರ್ಗಸ್ಥರಿಗೆ ಮಾರ್ಗಾಯಾಸವು ಕಡಿಮೆ ಇರುವದು. ಆದಾಗ್ಯೂ ಹಿಮಗಡ್ಡೆಗಳ ಮೇಲೆ ಪ್ರಯಾಣ ಮಾಡುವ ಸಮಯದಲ್ಲಿ ೩೬ ಜನರು ಕಾಲುಜಾರಿ ಕೊಳ್ಳದ ಪಾಲಾದರು. ಅಷ್ಟರಲ್ಲಿಯೇ ಸ್ವಯಂಸೇವಕರು ಹೋಗಿ ಅವರನ್ನು ಮೇಲಕ್ಕೆ ತಂದರು. ಇವರಲ್ಲಿ ಕೆಲವರಿಗೆ ಪೆಟ್ಟು ತಗಲಿರುವದು. ಒಬ್ಬನು ಮೃತನಾದನು. ಪ್ರತಿನಿತ್ಯ ಸಾಯಂಕಾಲದಲ್ಲಿ ಮಲ್ಲಿಗೆಯ ಹುವ್ವಿನಂತೆ ಹಿಮವು ಸುರಿಯುತ್ತಿರುವದು. ಯಾತ್ರಿಕರು ಹಿಮ ಮತ್ತು ಛಳಿಯ ಬಾಧೆಗೆ ತಟ್ಟಿಕೊಳ್ಳಲಾರದೆ ಸ್ವಾಮಿಯ ದರ್ಶನ ಮಾಡಿಕೊಂಡಾಕ್ಷಣವೇ ಹಿಂದಿರುಗುತ್ತಿರುವರು. ಸ್ನಾನಪಾನಗಳಂತೂ ದೂರಿನವಾಹು. ಈ ವರ್ಷ ಶ್ರೀ ಕೇದಾರೇಶ್ವರನ ಪೂಜೆಗೆ ಸಿದ್ಧಲಿಂಗಶರ್ಮರು ಏರ್ಪಾಟು ಆಗಿರುವರು. ದೇವಾಲಯದ ಬಾಗಿಲು ತೆಗೆಯುವ ಕಾಲದಲ್ಲಿ ಗೌರ್ನಮೆಂಟಿನ ಕಡೆಯಿಂದ ಸರಿಯಾದ ವ್ಯವಸ್ಥೆಯು ಮಾಡಲ್ಪಟ್ಟಿತ್ತು. ಯಾತ್ರಿಕರು ದೇಶದೇಶಾಂತರಗಳಿಂದ ಚಿಕ್ಕವರೂ ತರುಣರೂ ವೃದ್ಧರೂ ತಂಡತಂಡಾಗಿ ಬರುತ್ತಿರುವರು.

ಓರ್ವ ಹಿಮಾಲಯನಿವಾಸಿ.

ಸ್ವೀಕಾರ.

ಬೆಳಗಾಂವ ಡಿ|| ತೇರದಾಳ ಗ್ರಾಮದ ಬೃಹನ್ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಪಟ್ಟದಸ್ವಾಮಿಗಳವರ ಉದಾರಾಶ್ರಯದಲ್ಲಿ ನೆರವೇರಿದ ಏಕಾದಶರುದ್ರಮಂಟಪ ಪೂಜಾಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 22 ರೂ. ಗಳು, ಪಟ್ಟಾಭಿಷೇಕ ಸಮಯದಲ್ಲಿ ತೆಗೆಯಿಸಿದ 4 ರೂ. ಗಳು ಒಟ್ಟು 26 ರೂ. ಗಳು ತೇರದಾಳ ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಬೆಟಗೇರಿ ಮುನಸಿಪಾಲಿಟಿಯ ಚುನಾವಣೆಯಲ್ಲಿ ವೇ|| ಗುಡ್ಡಿಮಠದ ಸಂಗಯ್ಯನವರು ಜಗದಾಚಾರ್ಯರ ಕೃಪೆಯಿಂದ ಒಂದನೆಯ ನಂಬರಿನಲ್ಲಿ ಆರಿಸಿಬಂದ ಸಂತೋಷಕ್ಕಾಗಿ ಸಮರ್ಪಿಸಿದ 5 ರೂ. ಗಳು ಮ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಡಿ|| ಗದಗ ಬೆಟಗೇರಿಯಲ್ಲಿರುವ ಮ|| ರಾ|| ಕುಂಬಾರ ಬಸಪ್ಪನ ಪುತ್ರ ಚಿ|| ಸೌ|| ಬಸವ್ವನನ್ನು ಮ|| ರಾ|| ನವಲಿ ಕುಂಬಾರ ಮುದಕಪ್ಪನ ಪುತ್ರ ಚಿ|| ಶಂಕರಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವಧೂವರರು ಸಮರ್ಪಿಸಿದ 2 ರೂ. ಗಳು. ಸದರಿ ಬಸಪ್ಪನ ದ್ವಿತೀಯ ಪುತ್ರಿ ಚಿ|| ಸೌ|| ಶಂಕರವ್ವನನ್ನು ಶಿರುನಾಳದಲ್ಲಿರುವ ಕುಂಬಾರ ಬಸಪ್ಪನ ಪುತ್ರ ಚಿ|| ಲಿಂಗಪ್ಪನಿಗೆ ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ವರನು ಸಮರ್ಪಿಸಿದ 1 ರೂ. ಮ|| ರಾ|| ಹಿರೇಮನಿ ಪಾಟೀಲ ನೀಲಪ್ಪಗೌಡರ ಮನೆಯಲ್ಲಿರುವ ಮ|| ರಾ|| ಉಮಚಗಿ ಬಸಪ್ಪನಿಗೆ ಮ|| ರಾ|| ಮಾಳೆಕೊಪ್ಪದ ಗೂಳಪ್ಪನ ಪುತ್ರಿ ಸೌ|| ಮಲ್ಲವ್ವನನ್ನು ಕೊಟ್ಟು ವಿವಾಹವನ್ನು ನಡೆಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಒಟ್ಟು 5 ರೂ. ಗಳು ಹಿರೇಮನಿ ಪಾಟೀಲ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ ಡಿ|| ತೇರದಾಳಗ್ರಾಮದ ಮ|| ರಾ|| ಬಜ್ಜರಗಿ ಮುರಿಗಪ್ಪನವರ ವಿವಾಹದಲ್ಲಿ ಸಮರ್ಪಿಸಿದ 1 ರೂ. ಮ|| ರಾ|| ಕಲತಿಪ್ಪಿ ರಾಮಣ್ಣನವರ ಚಿ|| ಬಾಳಪ್ಪನ ವಿವಾಹದಲ್ಲಿ ಸಮರ್ಪಿಸಿದ 1 ರೂ. ವಾಲಿ ವೀರಪ್ಪನವರ ಚಿ|| ಮುರಿಗಪ್ಪನ ವಿವಾಹದಲ್ಲಿ ಸಮರ್ಪಿಸಿದ 8 ಆಣೆಗಳು ಒಟ್ಟು 2-8-0 ರೂ. ಗಳು ಮ|| ರಾ|| ಶೆಟ್ಟರಮಹಾಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬೆಂಗಳೂರು ಸಿಟಿಯಲ್ಲಿರುವ ಘಂಟಾಮಠದ ಶ್ರೀಯುತ ರಾಜಯ್ಯನವರ ಪುತ್ರ ಚಿ|| ಚಂಗಳಾರಾಧ್ಯನಿಗೆ ಆರಳೆಪೇಟೆಯಲ್ಲಿರುವ ವೇ|| ಮುದ್ವೀರಶಾಸ್ತ್ರಿಗಳ ಪುತ್ರಿ ಸೌ|| ಭ್ರಮರಾಂಬಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ|| ಗುರುಲಿಂಗಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಶಿವಮೊಗ್ಗಾ ತಾ|| ಬಿದರೆಮಠದ ವೇ|| ಶಿವಾಲಯ್ಯನವರ ಪುತ್ರ ಚಿ|| ಸಂಗಯ್ಯನಿಗೆ ಬೆಟ್ಟತಾವರೆಕೆರೆ ಮಠದ ವೇ|| ಚಂದಯ್ಯನವರ ಪುತ್ರಿ ಸೌ|| ವೀರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ ಗಳು ಶ್ರೀ ದುಮ್ಮಳ್ಳಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಯಡತೊರೆ ತಾ|| ಕರತಾಳು ಗ್ರಾಮದಲ್ಲಿರುವ ಮ|| ರಾ|| ವಲ್ಲಾಂಬೂದಿ ಪಟೇಲ್ ಆಣ್ಣಾಜಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನನ್ನು ಟಿ ನರಸೀಪುರ ತಾ|| ಮಾಯಗೌಡನಹಳ್ಳಿ ಮ|| ರಾ|| ಪುಟ್ಟಸೋಮಪ್ಪನವರ ಪುತ್ರ ಚಿ|| ನಂಜಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲ ಸಮರ್ಪಿಸಿದ 2 ರೂ. ಗಳು ಕರತಾಳುಗ್ರಾಮ ಮಠದ ವೇ|| ಪುರೋಹಿತ ಮಲ್ಲಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಗದಗಶಹರ ನಿವಾಸಿಗಳಾದ ವೇ|| ಗುರುಸ್ವಾಮಿ ಮಠದ ಶಿವಲಿಂಗಾರ್ಯರ ಹೆಣ್ಣುಮಗುವು ಶಿವಾಧೀನವಾದ ಸಮಯದಲ್ಲಿ ಸಮರ್ಪಿಸಿದ 1—4—0 ಗಳು ಮ|| ರಾ|| ಹಂಚಿನಾಳ ಮುರಿಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದ ಮ|| ರಾ|| ಹಗರಿಬೊಮ್ಮನಹಳ್ಳಿ ಶೆಟ್ಟರ ತಿಪ್ಪಜ್ಜ ವೀರಭದ್ರಪ್ಪನವರು ತಮ್ಮ ಪುತ್ರಿ ಚಿ|| ಸೌ|| ವೀರವ್ವನನ್ನು ಹೆಗ್ಗಡಾಳಗ್ರಾಮದ ಮ|| ರಾ|| ವಿಭೂತಿನಾಗಪ್ಪನವರ ಪುತ್ರ ಚಿ|| ಮುರಿಗಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬೆಂಗಳೂರು ಸಿಟಿ ಮ|| ಜ|| ವೀರಭದ್ರಪ್ಪನವರ ಧರ್ಮಛತ್ರದಲ್ಲಿರುವ ವೇ|| ಯಂ. ಜಿ. ನಂಜುಂಡಾರಾಧ್ಯರು ಪ್ರಭಾಪೋಷಣಕ್ಕಾಗಿ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಗುರು ಸಿದ್ಧಲಿಂಗ ಪ್ರಸೀದ.

ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರಲ್ಲಿ ನನ್ನದೊಂದು ವಿಜ್ಞಾಪನೆ.

ವೀರಶೈವ ಮಹಾಶಯರೇ! ಸುಮಾರು 20 ವರ್ಷಗಳ ಹಿಂದೆ ಬಳ್ಳಾರಿಯಲ್ಲಿ ನೆರೆದ 5 ನೆಯ ಶ್ರೀಮದ್ವೀರಶೈವ ಮಹಾಸಭೆಯಲ್ಲಿ ನಿರ್ಧರಿಸಿದ ವಿಷಯಗಳಲ್ಲಿ ವೀರಶೈವವಿದ್ಯಾಭಿವೃದ್ಧಿ ಫಂಡು ನೇರಿಸುವ ವಿಷಯವೂ ಕೂಡ ಒಂದಾಗಿರುವದು. ಆ ಕಾಲಕ್ಕೆ ನಿರ್ಧರಿಸಿ ಹಣವನ್ನೊಪ್ಪಿಸಿದುದೊಂದೇ ಹೊರತು ಫಂಡಿನ ಯಾವ ಕಾರ್ಯಕ್ರಮಗಳೂ ನಡೆಯಲಿಲ್ಲ. ಹೀಗೆ 8-9 ವರ್ಷಗಳು ಸುಮ್ಮನಿದ್ದುದನ್ನು ಧರ್ಮಗುರುಗಳಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು ಕಂಡು ಸನ್ 1916 ರಲ್ಲಿ ವೀರಶೈವರ ಉದ್ಧಾರಕ್ಕಾಗಿ "ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘ" ವೆಂಬ ಅಭಿಧಾನದಿಂದ ಸಂಘವನ್ನೇರ್ಪಡಿಸಿ ಅದರಲ್ಲಿ ದಾಗ್ದಾನವಾದ ಮೂಲಧನವನ್ನು ಕೂಡಿಸಿ ಅದರಲ್ಲಿಯ ಅರ್ಧವರಮಾನದಿಂದ ಧರ್ಮವೃದ್ಧಿದಾಯಕವಾದ ಸಂಸ್ಕೃತ ವಿದ್ಯಾಭಿವೃದ್ಧಿಯನ್ನೂ ಉಳಿದರ್ಧದಿಂದ ರಾಜಕೀಯ ವಿದ್ಯಾಭಿವೃದ್ಧಿಯನ್ನೂ ಮಾಡಲು ವಿಭಾಗಿಸಿರುವಾಗ್ಗೆ ಅಲ್ಲಿ ನೆರೆದ ಪ್ರಮುಖಜನರು ಸದ್ಯಃ ಧರ್ಮವೃದ್ಧಿಗೆ ಸಹಕಾರಿ... ರಾಜಕೀಯ ಭಾಷೆಯಲ್ಲಿ ಮುಂದುವರಿಯುವುದು ಮೊದ... ದ ರಿಂದ ಈ ಭಾಷಾಭಿವೃದ್ಧಿಗೆ ವರಮಾನದ ಹೆಚ್ಚಿನ ... ನ್ನು ಸಂಸ್ಕೃತಭಾಷೆಗೆ ಏದಾಣೆ ಒಂದು ದುಡ್ಡನ್ನೂ ವಿಭಾಗಿಸಬೇಕೆಂದು ಸದರಿ ಸನ್ನಿಧಿಯಲ್ಲಿ ಆಗ್ರಹಪೂರ್ವಕ ಅರಿಕೆ ಮಾಡಿಕೊಂಡದ್ದರಿಂದ ಆ ಮಹಾಪಾದವು ಆಗಬಹುದಾಗಿ ಅನುಗ್ರಹಿಸಿರುವದು ಸರ್ವವೀರಶೈವ ವಿದ್ಯಾಭಿಮಾನಿಗಳಿಗೆ ತಿಳಿದದ್ದೇ ಇದೆ. ಅಂದಿನಿಂದಲೂ ಸಂಘದ ಮೂಲಧನವು ಅಭಿವೃದ್ಧಿಯಲ್ಲಿ ನಡೆದು 1917 ರಲ್ಲಿ 4 ಜನ ಇಂಗ್ಲೀಷ್ ವಿದ್ಯಾರ್ಥಿಗಳಿಗೂ, ಒಬ್ಬ ಸಂಸ್ಕೃತ ವಿದ್ಯಾರ್ಥಿಗೂ ಸನ್ನ ರೂಲ್ಸಿಗೊಳಪಟ್ಟ ವೇತನವನ್ನು ಮಾತ್ರ ಕೊಟ್ಟು 1918 ರಲ್ಲಿ ಇಂಗ್ಲೀಷ್ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯು ಪ್ರಾರಂಭಮಾಡಲ್ಪಟ್ಟು 572 ರೂಪಾಯಿಗಳು 7 ಆಣೆ ಇಂಗ್ಲೀಷಿಗೂ ರೂ. 138—6—0 ಸಂಸ್ಕೃತಕ್ಕೂ ವಿನಿಯೋಗಿಸಲ್ಪಟ್ಟಿರುತ್ತವೆ. ಹೀಗಾಗಲು ಕಾರಣವೇನೆಂದರೆ ಈ ಸಭೆಗಿಂತಲೂ ಪೂರ್ವದಲ್ಲಿಯೇ ಬಳ್ಳಾರಿಯಲ್ಲಿ ಸಕ್ಕರೆ ಕರಡಪ್ಪನವರ ಕಾಲದಿಂದಲೂ ಸಂಸ್ಕೃತವಿದ್ಯೆಯು ಪ್ರಚಾರದಲ್ಲಿದ್ದು ಆತನು ಶಿವೈಕ್ಯನಾದಕರುವಾಯ ಆತನ ಚೌಕಿಯಲ್ಲಿ ಅಭ್ಯಾಸಮಾಡುತ್ತಿದ್ದ ಪಟ್ಟಚರಾಧಿಕಾರಿಗಳು ತಮ್ಮ ಸ್ವಂತ ಕಷ್ಟದಿಂದ ಉಪಾಧ್ಯಾಯರನ್ನು ನೇಮಿಸಿಕೊಂಡು ಬಳ್ಳಾರಿ ವೀರಶೈವ ಪ್ರಮುಖಮನೆಗಳಲ್ಲೆಲ್ಲಾ ಭೋಜನ ವ್ಯವಸ್ಥೆಯನ್ನೊದಗಿಸಿಕೊಳ್ಳುವ ಪರಿಪಾಟಿ ಇರುತ್ತಲಿದ್ದುದರಿಂದ ಈ ಸಂಘದ ರಿಜಿಸ್ಟರಿಗಿಂತಲೂ ಪೂರ್ವದಲ್ಲಿಯೇ ಕೈ|| ಹೀರದ ಸಿದ್ಧಲಿಂಗಪ್ಪನವರ ಹೆಂಡತಿ ಸೂಗಮ್ಮನವರ ಹೆಸರಿನಮೇಲೆ ಅವರ ಮಕ್ಕಳಾದ ಗೌರಮ್ಮ ಬಸಮ್ಮನವರು ತಮ್ಮ ಸ್ವಂತಭಾಗದ ಆಸ್ತಿಯನ್ನು ವೆಚ್ಚಮಾಡಿ ಹೀರದ ಅಮರಮ್ಮನವರ ದತ್ತಕಪುತ್ರರಾದ ಮ|| ರಾ|| ಕರಿಬಸಪ್ಪನವರ ದ್ವಾರಾ 1913 ನೇ ಜೂನಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೋಸ್ಕರ ಕಟ್ಟಿಸಿದ್ದ ೩೦೦೦೦ ರೂ. ಬೆಲೆಬಾಳುವ ಒಂದು ಚೌಕಿಯನ್ನೂ ಅದಕ್ಕೆ ವರಮಾನವೆಂದರೆ ಒಟ್ಟು ಕನಿಷ್ಠಪಕ್ಷ ವರ್ಷ 1 ಕ್ಕೆ ಸಾವಿರ ರೂಪಾಯಿಗಳಿಗಿಂತಲೂ ಮೇಲ್ಪಟ್ಟು ಆದಾಯ ಬರುವ ಆರುಸಾವಿರ ಬೆಲೆಬಾಳುವ ತರೀ ಜಮೀನನ್ನೂ, ತಿಂಗಳು 1 ಕ್ಕೆ ಐವತ್ತುರೂಪಾಯಿ ಬಾಡಿಗೆ ಬರತಕ್ಕ ೧ ಮಳಿಗೆ 3-4 ಮನೆಗಳನ್ನೂ ಸಂಸ್ಕೃತ ಅಧ್ಯಯನ ಮಾಡಿಸಲಿಕ್ಕೆ ದಾನರೂಪದಿಂದ ರಿಜಿಸ್ಟರ್‌ಪೂರ್ವಕ ಪಂಚರ ಸ್ವಾಧೀನಮಾಡಿ, ತನ್ನ ಜೀವಿತಕಾಲದಲ್ಲೇ ಆ ಚೌಕಿಯಲ್ಲಿ ಸಂಸ್ಕೃತ ವೈದಿಕಾಭ್ಯಾಸಕ್ಕೆ ಬೋಧಕರನ್ನು ಇಂದಿಟ್ಟು ಶಾಲೆಯನ್ನು ನಡೆಸುತ್ತಿದ್ದುದರಿಂದಲೂ ಗ್ರಾಮಾಂತರಗಳಲ್ಲಿ ಸಂಸ್ಕೃತ ವಿದ್ಯೆಯ ಪ್ರೇಮವಿಲ್ಲದ್ದರಿಂದಲೂ ಸಂಘದ ವರಮಾನವನ್ನು ಬೇಡತಕ್ಕವರಿಲ್ಲದಂತಾಗಿ ಸಂಘದ ನೇಮಗಳೇ ವ್ಯತ್ಯಾಸವಾಗಿಹೋಗಿರುವವು. ಸಂಸ್ಕೃತವು ನಮ್ಮ ವೀರಶೈವರಲ್ಲಿಲ್ಲದಂತಾಗಿ ಇಂಗ್ಲೀಷಿನ ಕಾರಭಾರವೇ ಪ್ರಧಾನವಾದ್ದರಿಂದ 1919 ರಲ್ಲಿ ಸಾವಿರಕ್ಕೆ ಮೇಲ್ಪಟ್ಟು ಇಂಗ್ಲೀಷ್ ವಿದ್ಯಾರ್ಥಿಗಳ ವೇತನಕ್ಕೂ ರೂ. 418-8-0 ಊಟಕ್ಕೂ ಖರ್ಚಾಗಿ ಸಂಸ್ಕೃತಕ್ಕೆ ರೂ. 211-2-0 ವೇತನ ಮಾತ್ರ ಖರ್ಚಾಗಿರುವದು ಮುಂದೆ ಹೇಳುವುದೇನು? ಇದೇ ಪಟ್ಟಿಮಾರ್ಗವನ್ನೇ ಹಿಡಿಯುತ್ತಾ ಸಂಸ್ಕೃತ ವಿದ್ಯಾರ್ಥಿಗಳಿಗೆ ಮದ್ರಾಸ್ ಇರಾಖೆಯವರೆಂಬ ನೇಮವಿಲ್ಲದಿದ್ದಾಗ್ಯೂ ಅದನ್ನು ಸಾಧಿಸುತ್ತಾ ಹೆಚ್ಚು ವಿದ್ಯಾರ್ಥಿಗಳು ವೇತನವನ್ನು ಕೇಳಿದರೆ ವಾಪಸ್‌ಮಾಡಿ ನಿರ್ವಾಹವಾಗದಂತೆ ಒಬ್ಬಿಬ್ಬರಿಗೆ ಮಾತ್ರ ಕೊಟ್ಟು ಇಲ್ಲಿಯವರೆಗೂ ಸರ್ವಸ್ವವನ್ನೂ ಆಂಗ್ಲಭಾಷೆಗೇ ವೆಚ್ಚಮಾಡುತ್ತಾ ಬಂದಿರುವದು.

ಮತ್ತೊಂದು ವಿಚಿತ್ರವಿಷಯವೇನೆಂದರೆ 1922 ರಲ್ಲಿ ಸೂಗಮ್ಮನವರ ಚೌಕಿಯಲ್ಲಿ ಸಂಸ್ಕೃತ ವಿದ್ಯಾರ್ಥಿಗಳು ಹೆಚ್ಚಲು ಆಗ ಸಂಘದಿಂದ ಚೌಕಿಯಲ್ಲಿ ವ್ಯವಸ್ಥೆಗೊಳಿಸಲ್ಪಟ್ಟ ಹಾಸ್ಟಲ್ಲಿಗೂ ಅದಕ್ಕೆ ಸೇರಿದ ವಿದ್ಯಾರ್ಥಿಗಳಿಗೂ ಸ್ಥಳಸಂಕೋಚವಾಗಲು ಸಂಘದವರು ಬೇರೆ ಸ್ಥಳವನ್ನೇರ್ಪಡಿಸಬೇಕೆನ್ನುವಷ್ಟರಲ್ಲೇ ಮ|| ವಿದ್ಯಾಪ್ರವರ್ಧಕ ತೊಗರಿ ವೀರಪ್ಪನವರು ಗಾಂಧೀನಗರದಲ್ಲಿ ತಾವು ಕಟ್ಟಿಸಿಕೊಂಡಿದ್ದ ಬಿಲ್ಡಿಂಗನ್ನು ಸಂಘಕ್ಕೆ ದಾನರೂಪವಾಗಿ ಕೊಡದಿದ್ದರೂ ಕೂಡ ಸಂಘದ ಹಾಸ್ಟಲ್ (ಭೋಜನ ವ್ಯವಸ್ಥೆಯು) ಬಳ್ಳಾರಿಯಲ್ಲಿರುವವರೆಗೆ ಆ ಬಿಲ್ಡಿಂಗಿನಲ್ಲಿ ವಿದ್ಯಾರ್ಥಿಗಳ ವಸತಿ ಪಾಠಾದಿ ವ್ಯವಸ್ಥೆಯ ಬಗ್ಗೆ ರಿಪೇರಿ ವಗೈರಾ ಖರ್ಚುಗಳನ್ನು ವಹಿಸಿಕೊಂಡು ಇರಲಿಕ್ಕೆ ಯಾವ ಅಭ್ಯಂತರವಿಲ್ಲವೆಂದು ತಿಳಿಸಿದಮೇರೆಗೆ ಒಡಂಬಟ್ಟು ಅಷ್ಟರಮಟ್ಟಿಗೆ ಸಂಘದ ಸಂಕ್ರಾ... ವಹಮಾಡಿಕೊಂಡು ಸನ್ 1923 ರಲ್ಲಿ ವಿದ್ಯಾರ್ಥಿಗಳನ್ನು ಅಲ್ಲಿಗೆ ಸಾಗಿಸಿದ ತರುವಾಯ ಇಲ್ಲಿ ಸಂಸ್ಕೃತ ವಿದ್ಯಾರ್ಥಿಗಳು ಮತ್ತಷ್ಟು ಹೆಚ್ಚಿ ಭೋಜನ ವ್ಯವಸ್ಥೆಯ ಕೊರತೆಯಾಗಲು ಸಂಸ್ಕೃತಾಧ್ಯಾಪಕರಾದ ಪಂ|| ವಿಶ್ವನಾಥಶಾಸ್ತ್ರಿಗಳು ಗ್ರಾಮದಲ್ಲಿ ಸಾಹಸಪಟ್ಟು ಮುಷ್ಟಿಫಂಡನ್ನು ಏರ್ಪಡಿಸಿದತರುವಾಯ ವಾರಕ್ಕೆ 200 ಸೇರು ಅಕ್ಕಿ ಕೊಡಲು ಸಂಘದ ಚಾಲಕರು ಏದಾಣೆಯದ್ದು ಮಾತ್ರಕ್ಕೆ ಕಾಂತರಾಗದೆ ೩ ನೇ ವಾರವೇ ಇಂಗ್ಲೀಷ್ ವಿದ್ಯಾರ್ಥಿಗಳಿಂದ ಮುಷ್ಟಿಫಂಡನ್ನು ಎತ್ತಿಸಿಕೊಳ್ಳಲು ಜನಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ 1924 ರಲ್ಲಿ ಸಂಘದ ಉದ್ದೇಶಗಳೆಲ್ಲಾ ಹೊರಬಿದ್ದು ಸ್ಪೆಷಲ್ ಜನರಲ್ ಮೀಟಿಂಗ್ ಸೇರಿ ಏದಾಣೆ ದುಡ್ಡಿನ ವರಮಾನದಿಂದ ನವೀನ ಸಂಸ್ಕೃತಶಾಲೆಯೊಂದನ್ನು ಸ್ಥಾಪಿಸುತ್ತೇವೆಂದು ತೀರ್ಮಾನಿಸಿ ಮೊದಲಿದ್ದ ಸಂಸ್ಕೃತ ಶಾಲೆಯನ್ನು ಸಂಘದ ಶಾಲೆಯೆಂಬ ಹೋಮಕುಂಡದಲ್ಲಿ ಹವಿಸ್ಸಿನ ರೂಪದಿಂದ ಎರೆದು ಭಸ್ಮಮಾಡಿ ಎಂದರೆ ಆ ಚೌಕಿಯನ್ನೂ ಪಾಠಶಾಲೆಗೆ ಉಪಯೋಗವಾಗುತ್ತಿದ್ದ ಖರ್ಚನ್ನೂ ಕೊಡಬೇಕೆಂದು ಶಾಲಾಕರ್ತರುಗಳನ್ನು ಒಡಂಬಡಿಸಿಕೊಂಡು ಆರಂಭದಲ್ಲಿ ಅರ್ಧ ಸಂಸ್ಕೃತವನ್ನಿಟ್ಟು ಮುಗ್ಧಸ್ವಭಾವದವರಾದ ಸಂಸ್ಕೃತಾಭಿಮಾನಿಗಳನ್ನು ಶಾಂತಿಗೊಳಿಸಿ ಚಮತ್ಕಾರಬಲದಿಂದ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬ ಉಕ್ತಿಯಂತೆ ವೀರಶೈವ ಫಸ್ಟ್‌ಗ್ರೇಡ್ ಎಲಿಮೆಂಟರಿ ಸ್ಕೂಲೆಂಬ ಇಂಗ್ಲೀಷ್ ಶಾಲೆಯನ್ನೇ ಮಾಡಿಟ್ಟು ಅಕ್ಷರವಾಚನದಮಟ್ಟಿಗೆ ನಿರ್ವಾಹವಾಗದಂತೆ ಸಂಸ್ಕೃತವನ್ನುಳಿಸಿರುವದು ನೋಡಿದರೆ ಯಾರಿಗೆತಾನೇ ದುಃಖವಾಗಲಿಕ್ಕಿಲ್ಲ? ಇರಲಿ, ಆಗಿನ ಕಾಲಾನುಗುಣವಾಗಿ ವೆಚ್ಚಮಾಡಿದ್ದಂತೂ ಹೋಗಲಿ, ಇನ್ನು ಮುಂದೆ ಅರೀತಿ ಮಾಡದೆ ಸಂಸ್ಕೃತಭಾಗಕ್ಕೆ ಬಂದ ಅಂಶಗಳನ್ನೆಲ್ಲಾ ಸಂಸ್ಕೃತಕ್ಕುಳಿಸಿ ಇಂಗ್ಲೀಷಿಗೆ ಬಂದಂತವನ್ನೆಲ್ಲಾ ಅದಕ್ಕೆ ಉಪಯೋಗಿಸಿಕೊಂಡು ಸಮಾನದೃಷ್ಟಿಯಿಂದ ನೋಡಿಕೊಂಡು ಹೋದದ್ದಾದರೆ ಎರಡೂ ಉನ್ನತಿಗೆ ಬಂದು ನಮ್ಮ ಮತಕ್ಕೆ ಸುಖವಾಗುವುದು.

ಮತ್ತೊಂದು ಸವಿನಯಪ್ರಾರ್ಥನೆ ಏನೆಂದರೆ—

ಸಂಸ್ಕೃತದ ಸುದ್ದಿವರದಿಂದ ತಾನಾಗಿಯೇ ಜನರಲ್ ಕಮಿಟಿಯು ಒದಗಿರುವದು. ಆ ಕಾಲಕ್ಕೆ 0-5-4 ನ ಸದ್ವಿನಿಯೋಗದ ಬಗ್ಗೆ ಚರ್ಚಿಸಿ ಆ ವರಮಾನದಿಂದ ಪ್ರೌಢತರ ಪರೀಕ್ಷೆಗಳಿಂದೊಡಗೂಡಿದ ಸಂಸ್ಕೃತ ವಿದ್ಯಾಲಯವೊಂದನ್ನು ಆ ಚೌಕಿಯಲ್ಲಿಯೇ ಸ್ಥಾಪಿಸಿ ಅಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳ ಭೋಜನಾದಿಗಳ ಬಗ್ಗೆ 1. ಹೀರದ ಸೂರಮ್ಮನ ವರಮಾನವನ್ನೂ, 2. ಬಳ್ಳಾರಿ ಶ್ರೀ ನಿರಂಜನಮಂಕೊಟ್ಟೂರು ಸ್ವಾಮಿಗಳನ್ನೂ, 3 ಬಜಾರದಲ್ಲಿ ಬರತಕ್ಕ ಧರ್ಮದಾಯವನ್ನು ಕೊಡುವಂತೆ ಸಮಸ್ತ ವೀರಶೈವ ಮಂಡಲಿಯನ್ನೂ, 4. ಶ್ರೀಮಂತ ಕುಪ್ಪಗಲ್ಲು ಅಯ್ಯಪ್ಪನವರನ್ನೂ, 5. ಶ್ರೀಯುತ ಸಂದಗಿ ಬಸಮ್ಮನವರನ್ನೂ 6 ಒಡ್ಡಿನಪೆಟ್ಟಿ ಗುರುಲಿಂಗಯ್ಯನವರನ್ನೂ ಇತ್ಯಾದಿ ಸಂಸ್ಕೃತಾಭಿಮಾನಿಗಳನ್ನು ಸಂಘದವರು ಪ್ರಾರ್ಥಿಸಿಕೊಂಡು ಇದೇ ವರ್ಷದಲ್ಲಿಯೇ ವ್ಯವಸ್ಥೆಗೊಳಿಸಿ ಮತೋದ್ಧಾರಕವಾದ ಸಂಸ್ಕೃತವಿದ್ಯೆಯಲ್ಲಿ ಮಹೇಶ್ವರವಟುಗಳನ್ನು ಮುಂದುವರಿಸಿ ಉನ್ನತಪದವೀಧರರನ್ನಾಗಿ ಮಾಡಬೇಕಾಗಿ ವಿಜ್ಞಾಪಿಸಿಕೊಳುತ್ತೇವೆ.

ಓರ್ವ ನಿಷ್ಪಕ್ಷಪಾತಿ

ಶ್ರೀಮಜ್ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ತೇರದಾಳ ಷಟ್‌ಸ್ಥಲ ಬೃಹನ್ಮಠದ ಪಟ್ಟಾಧಿಕಾರಿಗಳವರ ಉದಾರಾಶ್ರಯದಿಂದ ನೆರವೇರಿದ

ಏಕಾದಶಮಂಟಪರುದ್ರಪೂಜಾಮಹೋತ್ಸವ.

ಇದೇ ಪ್ರಜೋತ್ಪತ್ತಿನಾಮಸಂವತ್ಸರದ ವೈಶಾಖ ಬ|| ೩ ದಿವಸ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಪೂಜಾಮಹೋತ್ಸವವನ್ನೂ ಮತ್ತು ಬ|| ೪ ದಿವಸ ಏಕಾದಶಮಂಟಪರುದ್ರಪೂಜಾಮಹೋತ್ಸವವನ್ನೂ ಸಾಂಗಗೊಳಿಸಲೋಸುಗ ಪ್ರಸಿದ್ಧಪಡಿಸಿದ ಹಸ್ತಪತ್ರಿಕೆಯು ಹೇಳಲಸದಳವಾದ ಎಷ್ಟೋ ವೀರಶೈವಭಕ್ತಾಗ್ರಣಿಗಳನ್ನು, ಯಾವಾಗ ಕಾಯಿಯನ್ನು ಕೂಡಿ ಸ್ತನ್ಯಪಾನದಿಂದ ತೃಪ್ತಿಪಡುವೆನೋ ಎಂದು ಹಂಬಲಿಸಿ ಅಂಬಾ ಎಂದು ಹಾತೊರೆಯುವ ಹಸುವಿನಂತೆ, ಬಹುಜನ ಸಮಾಜವನ್ನೂ ಹನ್ನೊಂದುಜನ ತಪೋನಿಧಿಗಳಿಂದಲಂಕೃತವಾದ ಮಂಟಪಗಳನ್ನೂ ಕಣ್ಣು ತುಂಬ ನೋಡಿ ಯಾವಾಗ ಪಾವನರಾದೇವೆಂದು ಅತ್ಯಾತುರಪಡಿಸಿತೆಂದು ಬೇರೆ ಹೇಳಬೇಕಾಗಿಲ್ಲ. ಅದರಂತೆಯೇ ಮಹೋತ್ಸವದ ಸುದಿನವು ಸಮೀಪಿಸಿದೊಡನೆಯೇ ಒಂದೆರಡು ದಿನ ಮುಂಚಿತವಾಗಿ ನಾವು ಅಲ್ಲಿಗೆ ಹೋದೆವು- ತೇರದಾಳ ಗ್ರಾಮವಾಸಿಗಳೆಲ್ಲ ವಿಶಾಲಮನದವರಾಗಿ ಹುರುಪಿನಿಂದ ಕಾರ್ಯದಕ್ಷಿಗಳಾದ ಸ್ವಯಂಸೇವಕರಿಗೆ ತನುಮನಧನಗಳಿಂದ ಸಹಾಯಮಾಡುತ್ತಿರುವದನ್ನು ಕಂಡು ಸಂತೋಷವಾಯಿತು. ಬೀದಿಬೀದಿಗಳಲ್ಲಿ ತಳಿರುತೋರಣಗಳನ್ನೂ ಪತಾಕೆಗಳನ್ನೂ ಕಟ್ಟಿ ಊರನ್ನು ಶೃಂಗರಿಸಿದ್ದರು. ಬೃಹನ್ಮಠವಂತೂ ತರತರದ ವಸ್ತುಗಳಿಂದ ಶೋಭಾಯಮಾನವಾಗಿ ಮಾಡಲ್ಪಟ್ಟಿತು- ಬಿದಿಗೆಯ ದಿವಸ ಕಾರ್ಯಕ್ರಮಕ್ಕನುಸಾರವಾಗಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಪೂಜಾಸಮಾರಂಭವು ಬೆಳಗ್ಗೆ 8 ಘಂಟೆಯಿಂದ 10 ಘಂಟೆಯವರೆಗೆ ಶಾಸ್ತ್ರೋಕ್ತವಾಗಿ ನೆರವೇರಿತು. ಕಾರ್ಯಕ್ರಮವನ್ನು ಪೂರ್ತಿಗೊಳಿಸಲು ಅನೇಕ ಸದಾಚಾರಸಂಪನ್ನರಾದ ಪಟ್ಟಾಧಿಕಾರಿಗಳೂ, ಶಾಸ್ತ್ರಪಾರಂಗತರಾದ ವಿದ್ವಜ್ಜನರೂ, ಗುರುಪ್ರೇಮಿಗಳಾದ ಭಕ್ತರೂ ಕೂಡಿ ಪೂಜೆಗೆ ಸುಶೋಭೆಯನ್ನುಂಟುಮಾಡಿದ್ದರು. ಪೂಜಾಸಮಾಪ್ತಿಯಾದೊಡನೆಯೇ ಸಹಸ್ರ ಗಣಾರಾಧನೆಯು ಪ್ರಾರಂಭವಾಗಿ ಸಂಜೆಯ 6 ಘಂಟೆಯವರೆಗೆ ನಡೆಯಿತು. ತದನಂತರ ಸದರಿ ಮಂಟಪಪೂಜೆಗೆ ಆಶ್ರಯದಾತರಾದ ತೇರದಾಳ ಷ|| ಬ್ರ|| ಪಟ್ಟಾಧಿಕಾರಿಗಳವರ ಮೆರವಣಿಗೆಯು ಪಂಚಕಲಶಯುಕ್ತವಾದ ಪಲ್ಲಕ್ಕಿ ಅನೇಕತರದ ವಾದ್ಯಗಳಿಂದೊಡಗೂಡಿ ಹೊರಟಿತು. ಜನರೆಲ್ಲರೂ ಜಯಜಯಕಾರದ ಘೋಷವನ್ನು ಮಾಡಿದೊಡನೆಯೇ ಪರಮಾತ್ಮನು ಪರಮಸಂತೋಷಪಟ್ಟು ಸದ್ವರ್ತನ ಸದಾಚಾರಸಂಪನ್ನರೂ, ಭಕ್ತಪ್ರೇಮಿಗಳೂ, ಅತುಲತಪೋನಿಧಿಗಳೂ ಲಿಂಗಪೂಜಾನಿಷ್ಠರೂ ಆದ ಶ್ರೀ ಷ|| ಬ್ರ|| ಪಟ್ಟಾಧಿಕಾರಿಗಳ ಜಯಜಯಕಾರವನ್ನು ಮಾಡುವದಕ್ಕೋಸ್ಕರ ಹತ್ತು ಹದಿನೈದು ಸೆಕೆಂಡುಗಳವರೆಗೆ ಆನಂದವೃಷ್ಟಿಯನ್ನು ಉದುರಿಸಿದನು. ಮುಗಿಲನ್ನು ಮುತ್ತಿ ಕತ್ತಲೆಯನ್ನು ಮಾಡಿ ಜನರ ಮನಸ್ಸನ್ನು ಅಲ್ಲೋಲಕಲ್ಲೋಲವನ್ನಾಗಿ ಮಾಡಿದ ಕಾರ್ಮೋಡಗಳು ಒಮ್ಮೆಲೇ ಇಲ್ಲದಂತಾಗಿ ಎತ್ತ ನೋಡಿದತ್ತ ಹಿಟ್ಟುಚೆಲ್ಲಿದ ಹಾಗೆ ಚಂದ್ರಪ್ರಕಾಶವು ಕಂಗೊಳಿಸಹತ್ತಿತು. ಕೂಡಿದ ಜನರೆಲ್ಲರೂ ಆತ್ಯಾಶ್ಚರ್ಯಭರಿತರಾಗಿ, ಚಂದ್ರನನ್ನು ಕಂಡು ವಿಕಾಸಪಡುವ ಕುಮುದಿನಿಯಂತೆ, ಪ್ರಫುಲ್ಲಿತವದನರಾಗಿಯೂ ಆನಂದಪರವಶರಾಗಿಯೂ ಪರಮಪೂಜ್ಯರಾದ ಪಟ್ಟಾಧಿಕಾರಿಗಳವರ ಜಯಘೋಷವನ್ನು ಇಮ್ಮಡಿ ಹುರುಪಿನಿಂದ ಮಾಡುತ್ತಿರುವ ಅಂದವನ್ನು ವರ್ಣಿಸಲು ವರ್ಷಗಳೇ ಸಾಲವು. ಮೆರವಣಿಗೆಯಲ್ಲಿ 8-10 ಸಾವಿರ ಜನರು ಕೂಡಿದ್ದರು. ನೂರಾರು ಜನ ವೀರಶೈವ ಸ್ತ್ರೀಯರು ಸಕಲಾಭರಣಯುಕ್ತರಾಗಿ ಗುರುಭಕ್ತಿಯಿಂದ ಮಂಗಲಾರತಿಗಳನ್ನೆತ್ತಿಕೊಂಡು ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಮೆರವಣಿಗೆಯು ಸಕಲ ತರದ ವೈಭವಗಳಿಂದೊಡಗೂಡಿ ತಿರುಗಿ ಮಠಕ್ಕೆ ಬರಬೇಕಾದರೆ ಮಧ್ಯರಾತ್ರಿಯಾಯಿತು. ಮರುದಿವಸದ ಕಾರ್ಯಕ್ರಮದ ಪ್ರಕಾರ ಬೆಳಗ್ಗೆ 8 ಘಂಟೆಗೆ ಪಟ್ಟದಸ್ವಾಮಿಗಳವರ ಊರಹೊರಗಿರುವ ಮಠದ ಪಟಾಂಗಣದಲ್ಲಿ ಭವ್ಯವಾಗಿಯೂ ಮನೋಹರವಾಗಿಯೂ ಕಟ್ಟಿದ್ದ ಮಂಟಪದಲ್ಲಿ ಏಕಾದಶ ಮಂಟಪರುದ್ರಪೂಜಾಮಹೋತ್ಸವವು ಹನ್ನೊಂದು ಜನ ಪಟ್ಟಾಧಿಕಾರಿಗಳಿಂದ ಯುಕ್ತವಾಗಿ ನೆರವೇರಿಸಲ್ಪಟ್ಟು 10ಘಂಟೆಗೆ ಪೂಜಾಸಮಾಪ್ತಿಯಾಯಿತು. ತದನಂತರ ಗುರುಭಕ್ತಶಿರೋಮಣಿಗಳಾದ ಎಷ್ಟೋ ಗ್ರಾಮಗಳಿಂದಾಗಮಿಸಿದ 20-25 ಸಾವಿರ ಜನ ವೀರಶೈವರು ಸ್ವಾಮಿಗಳವರ ದರ್ಶನಲಾಭವನ್ನು ಪಡೆದುಕೊಂಡು ಪುನೀತರಾಗುವ ಇಚ್ಛೆಯಿಂದ ತಮ್ಮ ತಮ್ಮ ಭಕ್ತಿಯ ಪ್ರಕಾರ ಗುರುದಕ್ಷಿಣೆಯನ್ನು ಅರ್ಪಿಸಿ ಧನ್ಯರಾದರು. 12ಘಂಟೆಯಿಂದ ಸ್ಥಳದ ಮತ್ತು ಪರಗ್ರಾಮಗಳಿಂದ ಬಂದ ಜನಸಮುದಾಯಕ್ಕೆ ಅನ್ನಸಂತರ್ಪಣೆಯು ಮಾಡಲ್ಪಟ್ಟಿತು. ಮಂಟಪಾರೂಢರಾದ ಪಟ್ಟಾಧಿಕಾರಿಗಳನ್ನೂ ಪೂಜೆಯಲ್ಲಿ ತತ್ಪರರಾದ ಭಕ್ತರನ್ನೂ ಶಾಸ್ತ್ರಪಾರಂಗತರಾದ ವಿಧಾಯಕರನ್ನೂ ಕಂಡರೆ ಕೈಲಾಸನಾಥನಓಲಗವು ಇದೇ ಎಂದು ಭಾಸವಾಗುತ್ತಿತ್ತು. ಸಾಯಂಕಾಲ 8 ಘಂಟೆಗೆ ಬೃಹನ್ಮಠದಲ್ಲಿ ಹುಕ್ಕೇರಿಯ ಸುಪ್ರಸಿದ್ಧರಾದ ಸದಾಶಿವಶಾಸ್ತ್ರಿಗಳ ಕೀರ್ತನವು ಗುರುಭಕ್ತಿಮಹತ್ವದ ವಿಷಯಕ್ಕೆ ಆಗಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು. ಪೂಜಾಸಮಾರಂಭಕ್ಕೆ ಮೂಲಕಾರಣರಾದ ಸ್ವಾಮಿಗಳವರ ಮಹಾಪಾದಮಹಿಮೆಯಿಂದ ಮಾಡಿದಂಥ ಅಡಿಗೆಯು ಎಷ್ಟೋ ಜನರನ್ನು ತೃಪ್ತಿಪಡಿಸಿದರೂ ಸವೆಯದೇ ಹೋಯಿತು. ಮರುದಿವಸ ಸಮೀಪದ ಹಳ್ಳಿಗಳಿಗೆ ಟಿಕಣಕೊಟ್ಟು ಪುನಃ ಪ್ರಸಾದಕ್ಕೆ ಬರಬೇಕೆಂದು ಹೇಳಕಳುಹಿಸುವ ಭಾಗಬಿತ್ತು. ಮರುದಿನಸ ಸಹ ಸಾಯಂಕಾಲದವರೆಗೂ ಅನ್ನಸಂತರ್ಪಣೆಯಾಯಿತು. ಈ ವರ್ಣಿಸಲಸದಳವಾದ ಅದ್ಭುತಚಮತ್ಕಾರವನ್ನು ಕಣ್ಣುಟ್ಟನೋಡಿ ಸಕಲ ಗ್ರಾಮವಾಸಿಗಳು ಚಕಿತರಾದರು. ತೇರದಾಳ ಊರಿಗೆ ಸ್ವಲ್ಪ ನೀರಿನ ಕೊರತೆಇದ್ದ ಮೂಲಕ ಇಂಥ ಅಗಣಿತವಾದ ಜನಸಮುದಾಯಕ್ಕೆ ನೀರು ಪೂರೈಸುವದೋ ಇಲ್ಲವೋ ಎಂದು ಚಿಂತಾಯುಕ್ತರಾದ ಸ್ವಾಮಿಗಳ ಮತ್ತು ಭಕ್ತರ ಕೋರಿಯನ್ನು ಪೂರೈಸುವದಕ್ಕಾಗಿ ಪಟ್ಟಾಧಿಕಾರಿಗಳ ಅತುಲದೃಢಭಕ್ತಿಗೆ ಮೆಚ್ಚಿ ಪರಮಾತ್ಮನು ಪೂಜಾಸಮಾರಂಭದ ಮುಂಚಿತವಾಗಿಯೇ ಮಳೆಯನ್ನು ಕೊಟ್ಟು ನೀರಿನ ಕೊರತೆಯನ್ನು ದೂರಮಾಡಿದನು. ಗ್ರಾಮದ ಸರಕಾರಿ ಅಧಿಕಾರಿಗಳೂ ಕೂಡ ಊರಲ್ಲಿಯ ಮಹತ್ವದ ಸ್ಥಳಗಳಲ್ಲಿಯ ನಳಗಳನ್ನು ಸಂಪೂರ್ಣವಾಗಿ ತೆರೆದಿಟ್ಟು ಸಹಾಯಮಾಡಿದರು. ಒಟ್ಟಿನಮೇಲೆ ಮಂಟಪಪೂಜೆಗೆ ಆಶ್ರಯದಾತರಾದ ಮಹಾಸ್ವಾಮಿಗಳವರ ಮಹಿಮೆಯು ಅಗಾಧವಾದ್ದರಿಂದ ಯಾವತ್ತು ಕಾರ್ಯಗಳು ನಿರ್ವಿಘ್ನವಾಗಿ ಪೂರ್ತಿಯಾದದ್ದನ್ನು ನೋಡಿ ಪ್ರತಿಯೊಬ್ಬ ಭಕ್ತಾಗ್ರಣಿಗಳು ಪರಮಾನಂದವನ್ನು ಹೊಂದಿ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಇಂಥ ಸತ್ಕಾರ್ಯಗಳು ಮೇಲಿಂದಮೇಲೆ ಜರುಗಿ ಸಕಲ ಭಕ್ತರ ಮನಸ್ಸನ್ನು ತೃಪ್ತಿಪಡಿಸಿ ಧನ್ಯರನ್ನಾಗಿ ಮಾಡಲು ಪ್ರೇರಣೆಮಾಡಲೆಂದು ಆ ಜಗದೀಶನನ್ನು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ವರ್ತಮಾನಸಂಗ್ರಹ.

ಕಳೆದವಾರ ನ್ಯೂಜಿಲೆಂಡಿನಲ್ಲಿ ಒಂದು ರಾತ್ರಿಯಲ್ಲಿಯೇ ನೂರುಸಾರೆ ಭೂಮಿಯು ಕಂಪಿಸಿತು. ಕೆಲವು ಮನೆಗಳು ಕುಸಿದು ಬಿದ್ದಿವೆ.

ಗಾಂಧಿ ಇರ್ವಿನ್ ಒಪ್ಪಂದವಾದರೂ ಸತ್ಯಾಗ್ರಹ ಚಳವಳಿಗೆ ಸಂಬಂಧಪಟ್ಟ 1095 ಜನ ಕೈದಿಗಳು ಬಿಡುಗಡೆಯಾಗಿರುವುದಿಲ್ಲವೆಂದು ಪ್ರಕಟವಾಗಿದೆ.

ಕೊಲೊಂಬೋದಲ್ಲಿ ಐದು ಜನ ಕಳ್ಳರು ಒಬ್ಬ ಪರೋಪ್ಯ ಹೋಟಲ್ ಮಾಲೀಕನನ್ನು ಬೆದರಿಸಿ 8000 ರೂ. ಗಳ ಥೈಲಿಯನ್ನು ತೆಗೆದುಕೊಂಡುಹೋದರು.

ಜರ್ಮನಿಯ ಡಾ|| ಎಕೇನಡ ಎಂಬವರು 'ಗ್ರೇಪ್ ಜೆಪಲೀನ್' ಎಂಬ ವಾಯುಯಾನವನ್ನು ರಚಿಸಿದ್ದು ಉತ್ತರಧ್ರುವವನ್ನು ಮುಟ್ಟಿಬರಲು ಇದನ್ನು ನಡೆಯಿಸಿಕೊಂಡು ಸದ್ಯದಲ್ಲಿಯೇ ಹೊರಡುವರೆಂದು ತಿಳಿದುಬರುತ್ತದೆ.

ನ್ಯೂಜೀಲೆಂಡ್ ದ್ವೀಪದ ಒಬ್ಬ ಹೆಂಗಸು 72 ಗಂಟೆ... ಗಳವರೆಗೆ ನೀರಿನಲ್ಲಿ ಈಜುತ್ತಲೇ ಇದ್ದಳು. ... ಗೂ ಇಷ್ಟು ಹೊತ್ತಿನವರೆಗೆ ಯಾರೂ ನೀರಿ... ಈಕೆಯು ಸಂಸಾರಿಯಾಗಿದ್ದು ಈಜುವು... ಜೀವಿಸುತ್ತಿರುವಳು.

ಇಂಗ್ಲಂಡಿನ ಮ್ಯಾಂಚಸ್ಟರ್ ಪ್ರಾಂತದಲ್ಲಿ ಭೂಕಂಪ... ಯಿತು. ಜವಾಸಿನವರಿಗಾದ ಅವಸ್ಥೆಯು ತನುಗೂ... ಜನರು ದಿಕ್ಕಾಪಾಲಾಗಿ ಓಡಲಾರಂಭಿಸಿ... ವು ಮನೆಗಳು ಮಾತ್ರ ಕುಸಿದುಬಿದ್ದಿರುವುವ... ನ ಪ್ರಾಣಾಪಾಯವೂ ಸಂಭವಿಸಿರುವುದಿಲ್ಲ.

ಬರ್ಮಾ ದೇಶದಲ್ಲಿ ಸರ್ಕಾರದವರು 95 ಜನರನ್ನು ... ಗೆಕೋರರೆಂದು ವಿಚಾರಣೆಗೆ ಗುರಿಪಡಿಸಿದ್ದರು. ... ಯಾಧೀಶರು ಅವರಲ್ಲಿ 15 ಜನ ಜನರಿಗೆ ಫಾಶಿಯನ್ನೂ, 56 ಜನರಿಗೆ ಆಮರಣಾಂತ ಸಜೆಯನ್ನೂ ... 26 ಜನರನ್ನು ನಿರಪರಾಧಿಗಳೆಂದು ಬಿಡುಗಡೆ ... ಡಿದರು.

ಶ್ರೀರಂಗದ ಸಮೀಪದಲ್ಲಿ ಮಧ್ಯವಯಸಿನ ಒಬ್ಬ ... ದೂ ಸ್ತ್ರೀಯಳು 10, 7 ಮತ್ತು 3 ವರ್ಷ ವಯ... ತನ್ನ ಮೂವರು ಮಕ್ಕಳನ್ನು ನದಿಯ ಪ್ರವಾಹ... ಬಿಸಾಡಿ ತಾನೂ ಆತ್ಮಹತ್ಯಮಾಡಿಕೊಂಡಳಂತೆ! ... ನದ ಜೀವನಕ್ಕಿಂತ ಆತ್ಮಹತ್ಯವೇ ಮೇಲೆಂದು ... ಯಲ್ಲಿ ಧುಮುಕಿದಳೆಂದು ನಿರ್ಣಯಿಸಲ್ಪಟ್ಟಿದೆ.

ಇಂಗ್ಲಂಡಿನಲ್ಲಿ ಅಭ್ಯಾಸಮಾಡುತ್ತಿದ್ದ ಜಗದೀಶ ... ಎಂಬ ವಿದ್ಯಾರ್ಥಿಯ ಕಳೇಬರವು ಹೊಲ... ಕಂಬಗಳ ಮೇಲೆ ಬಿದ್ದಿದ್ದಿತು. ಅವನಿಗೆ ಮರ... ಹೇಗೆ ಸಂಭವಿಸಿತೆಂಬುದರ ಬಗ್ಗೆ ವಿಚಾರಣೆಯು... ಅವನನ್ನು ಯಾರೂ ಕೊಲ್ಲಲಿಲ್ಲವೆಂದೂ, ... ನೇ ಆತ್ಮಹತ್ಯೆಮಾಡಿಕೊಂಡಿರುವನೆಂದೂ ತಿಳಿದುಬ... ತ್ತದೆ.

ಬ್ರಹ್ಮದೇಶದಲ್ಲಿದ್ದಿರುವ ಥರವಾಡಿ ಜನರ ದಂಗೆ ... ದಿನೇದಿನೇ ಹೆಚ್ಚುತ್ತಲಿದೆ. ಮಿ|| ಆರ್ಸ್ಟಿನ್ ಎಂಬ ... ಳೀಕಾಧಿಕಾರಿಗಳು ಕೆಲವು ಪೋಲೀಸ್ ಇನ್ಸ್ಪೆ... ರನ್ನೂ ಸಿಪಾಯಿಗಳನ್ನೂ ಕೂಡಿಕೊಂಡು ದಂಗೆ... ರರನ್ನು ಶಿಕ್ಷಿಸಬೇಕೆಂದು ಹೋದರು. ಆದರೆ ... ಗೆಕೋರರೇ ಸಾಹೇಬರನ್ನು ಚಿಕ್ಕಿಸಿ ಕೊಂದು ... ಕಿದರು.

ಮಾಜಿವೈಸರಾಯರಾದ ಲಾರ್ಡ್ ಇರ್ವಿನವ... ಚಾರ್ಲ್ಸ್ ಸಾರ್ವಭೌಮನವರು ತಮ್ಮ ಏನ್ಸರ್ ... ಸಲ್ ಎಂಬ ಅರಮನೆಗೆ ಬರಮಾಡಿಕೊಂಡು ನೈಟ್ ... ದಿ ಗಾರ್ಟರ್ ಎಂಬ ಘನವಾದ ಪ್ರಶಸ್ತಿಯನ್ನು ... ಪಾಲಿಸಿದರು. ಇದು ಇಂಗ್ಲಂಡಿನಲ್ಲಿ ಸರ್ವೋತ್ಕೃಷ್ಟ... ವಾದ ಪ್ರಶಸ್ತಿಯಾಗಿದೆ. ಇದುವರೆಗೆ 2? ಜನರಿಗೆ ... ತ್ರವೇ ಈ ಪ್ರಶಸ್ತಿಯು ಲಭ್ಯವಾಗಿದೆ.

ಲಾಹೋರಿಗೆ ನಾಲ್ಕು ಮೈಲುಗಳ ದೂರದಲ್ಲಿರುವ ... ಲಿಮರನೆಂಬ ತೋಟದಲ್ಲಿ ಸೆಳೆದಾಡುತ್ತಿದ್ದ ಜಗ... ಶ ಮತ್ತು ಸುಖದೇವರಾಜ ಎಂಬಿಬ್ಬರನ್ನು ಹಿಡಿಯಲು 125 ಜನ ಸಶಸ್ತ್ರ ಪೋಲೀಸರು ಹೋದರು. ಆಗ ಅವರಿಗೂ ಪೋಲೀಸರಿಗೂ ಗುಂಡಿನ ಕಾಳಗವಾಯಿತು. ಜಗದೀಶನು ಗುಂಡು ಬಡಿದು ಆ ಕೂಡಲೆ ಸತ್ತನು. ಸುಖದೇವರಾಜನು ಅರಜೀವಿಯಾದುದರಿಂದ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಮುಲ್ತಾನಿನ ಪಟ್ಟಣದಲ್ಲಿ ಒಬ್ಬ ದುಷ್ಟ ಮುಸಲ್ಮಾನನು ಖುರಾನಿನ ಕೆಲವು ಪುಟಗಳನ್ನು ಹರಿದು ಅದರಲ್ಲಿ ಅಮೇಧ್ಯವನ್ನು ಹಾಕಿ ಅದನ್ನು ಒಂದು ಮಸೀದಿಯಲ್ಲಿ ಡತಕ್ಕವನಿದ್ದನು. ಅಷ್ಟರಲ್ಲಿಯೇ ಜನರು ಅವನನ್ನು ಹಿಡಿದು ಚೆನ್ನಾಗಿ ತಳಿಸಿದರು. ಇಲ್ಲದಿದ್ದರೆ ಹಿಂದುಗಳೇ ಇಂಥ ನೀಚಕೃತ್ಯವನ್ನು ಮಾಡುವರೆಂದು ಮುಸಲ್ಮಾನರು ಭಾವಿಸಿ ಪರಸ್ಪರ ಮನಸ್ತಾಪಕ್ಕೆ ಕಾರಣವಾಗುತ್ತಿತ್ತು.

ಚಿನ್ಸುರ ಸಮೀಪದಲ್ಲಿ ಗಂಗಾನದಿಯ ಮೇಲೆ ಹೋಗುತ್ತಿದ್ದ ಒಂದು ದೋಣಿಯು ಬಿರುಗಾಳಿಯಿಂದ ಮುಳುಗಿಹೋಯಿತು. ಆ ದೋಣಿಯಲ್ಲಿ 12 ಜನ ಪ್ರಯಾಣಿಕರಿದ್ದರು. ಅವರಲ್ಲಿ ಕಲ್ಕತ್ತಾಸ್ಟೇಟ್ಸ್‌ಮನ್ ಪತ್ರಿಕೆಯ ಹಾಗೂ ಅಸೋಸಿಯೆಟೆಡ್ ಪ್ರೆಸ್ ಏಜನ್ಸಿಯ ಪ್ರತಿನಿಧಿಗಳೂ ಮತ್ತು ಇನ್ನೂ ಮೂವರು ಪ್ರಯಾಣಿಕರೂ ಸಿಕ್ಕಿರುವುದಿಲ್ಲ. ಉಳಿದ ಏಳು ಜನರು ಸಂರಕ್ಷಿಸಲ್ಪಟ್ಟಿದ್ದಾರೆ.

ಧಾರವಾಡದ ಕೆಲವುಜನ ತರುಣರು ಸರ್ದಾರ ಭಗತ್‌ಸಿಂಗರ ಸ್ಮರಣಾರ್ಥವಾಗಿ ಧಾರವಾಡದ ಹಳೇ ತಾಲ್ಲೂಕು ಕಛೇರಿ ಓಣಿಗೆ ಭಗತ್‌ಸಿಂಗ್‌ರೋಡ್ ಎಂಬ ಹೆಸರನಿಟ್ಟು ಆ ಓಣಿಯಲ್ಲಿರುವ ಸದ್ಗೃಹಸ್ಥರು ಇನ್ನುಮುಂದೆ ತಮ್ಮ ಪತ್ರವ್ಯವಹಾರಗಳಲ್ಲಿ ಭಗತ್‌ಸಿಂಗ್ ರೋಡ್ ಎಂದು ಬರೆಯಬೇಕಾಗಿ ವಿಜ್ಞಾಪನೆ ಮಾಡಿಕೊಂಡಿದ್ದಾರೆಂದೂ, ಅನೇಕ ಗೃಹಸ್ಥರು ಅದರಂತೆ ತಮ್ಮ ವಿಳಾಸವನ್ನು ಬದಲಾಯಿಸಿರುವರೆಂದೂ ಕೇಳುತ್ತೇವೆ.

ಅಮೇರಿಕಾಖಂಡದಲ್ಲೆಲ್ಲಾ ದೊಡ್ಡದಾದ ನ್ಯೂಯಾರ್ಕ್ ಪಟ್ಟಣದಲ್ಲಿ ನೀರಿನ ಕ್ಷಾಮವು ಒದಗುವ ಹಾಗೆ ಕಾಣುತ್ತದೆ. ಹೋದ ವರ್ಷ ಅಮೇರಿಕೆಯ ಸಂಯುಕ್ತಪ್ರಾಂತದಲ್ಲಿ ಮಳೆಯು ಬಹಳ ಕಡಿಮೆಯಾದುದರಿಂದ ಜಲಾಶಯಗಳು ತುಂಬಿರುವುದಿಲ್ಲ. ಪ್ರಜೆಗಳು ನೀರನ್ನು ಮಿತವಾಗಿಯೂ, ಜಾಗರೂಕತೆಯಿಂದಲೂ ಉಪಯೋಗಿಸಬೇಕೆಂದು ಎಚ್ಚರಿಕೆಯನ್ನು ಕೊಟ್ಟರೂ ನೀರಿನ ಖರ್ಚು ಕಡಿಮೆಯಾಗಿರುವುದಿಲ್ಲ. ನ್ಯೂಯಾರ್ಕ್‌ಪಟ್ಟಣದಲ್ಲಿ ಬೇಸಿಗೆಯು ಬಹು ತೀಕ್ಷ್ಣವಾಗಿದೆಯಂತೆ! ಸರಿಯಾಗಿ ನೀರಿನ ಸರಬರಾಯಿ ಆಗದಿದ್ದರೆ ತುಂಬಾ ಕಷ್ಟವಾಗುವುದೆಂದು ತಿಳಿದುಬರುತ್ತದೆ.

ಇಂಗ್ಲಿಷ್ ಸರ್ಕಾರದವರು ಚಿತ್ತಗಾಂಗಿನಲ್ಲಿ ಕ್ರಾಂತಿಯಾಗುವದೆಂದು ತಿಳಿದು ಈಗ ಅಲ್ಲಿಗೆ ಬಲವಾದ ದಂಡನ್ನು ಕಳುಹಿಸಿರುವುದಲ್ಲದೆ, ಚಿತ್ತಗಾಂಗಿನ ಸುತ್ತಮುತ್ತಲಿನ 42 ಹಳ್ಳಿಗಳು ಕ್ರಾಂತಿಪಕ್ಷಕ್ಕೆ ಸೇರಿದುವುಗಳೆಂದು ಪ್ರಕಟಿಸಿದ್ದಾರೆ. ಸರ್ಕಾರದವರು ದಂಗೆಕೋರರೆಂದು ಅನೇಕರನ್ನು ದಸ್ತಗಿರಿ ಮಾಡಿ ಜೈಲಿನಲ್ಲಿಟ್ಟಿದ್ದಾರೆ. ಇವರು ಜೈಲನ್ನೊಡೆದು ಬಂದು ದಂಗೆಯನ್ನು ಪ್ರಾರಂಭಿಸುವರೆಂದೂ, ಅವರ ಸಲುವಾಗಿ ಜೈಲಿನ ಹೊರಗಡೆಯಲ್ಲಿಯೇ ಕತ್ತಿ, ಬಂದೂಕು, ಮದ್ದುಗುಂಡು ಮೊದಲಾದುವುಗಳನ್ನು ಹುಗಿದಿಟ್ಟಿರುವರೆಂದೂ ಪ್ರಕಟವಾಗಿದೆ.

ಪ್ರಜೆಗಳಿಗೆ ಮಾದಕಪದಾರ್ಥಗಳ ಕೆಡುಕುಗಳನ್ನು ತಿಳುಹಿಸಿ ಅವರಲ್ಲಿ ಜಾಗೃತಿಯನ್ನುಂಟುಮಾಡಿ ಅವುಗಳ ಸೇವನೆಯನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಮದರಾಸ್ ಸರ್ಕಾರದವರು ೧ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ತೀರ್ಮಾನಿಸಿದ್ದಾರೆ. ಈ ಹಣದಲ್ಲಿ 16000 ರೂ. ಗಳನ್ನು ಕುಡಿತದಿಂದುಂಟಾಗುವ ಕಷ್ಟನಷ್ಟಗಳನ್ನು ಚಿತ್ರಗಳ ಹಾಗೂ ಪ್ರಕಟನೆಗಳ ಮೂಲಕ ತಿಳುಹಿಸುವುದಕ್ಕೂ ಉಳಿದ ಹಣವನ್ನು ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೂ ಹಂಚುವಂತೆ ಪ್ರಕಟಿಸಿದ್ದಾರೆ.

ಸ್ಪೇನ್ ದೇಶದಲ್ಲಿ ಕ್ರಾಂತಿಯಾದ ತರುವಾಯ ಅನೇಕ ಅನಾಹುತಗಳು ನಡೆಯುತ್ತಿವೆ. ಕ್ರಾಂತಿಕಾರರು ಅನೇಕ ದೇವಸ್ಥಾನಗಳನ್ನೂ ಸನ್ಯಾಸಿನಿಯರಿರುವ ಮಠಗಳನ್ನೂ ನಾಶಮಾಡುತ್ತಿರುವರು. ಕೆಲವು ದೇವಸ್ಥಾನಗಳಲ್ಲಿದ್ದ ವಿಗ್ರಹಗಳನ್ನು ಕಿತ್ತು ಅವುಗಳ ಕೊರಳಿಗೆ ಹಗ್ಗಹಾಕಿ ಊರಲ್ಲೆಲ್ಲ ಎಳೆದಾಡುತ್ತಿರುವರು. ಕೆಲವು ಮುಖ್ಯ ಧರ್ಮಗುರುಗಳು ಈ ಉಪದ್ರವನ್ನು ತಡೆಯಲಾರದೆ ಫ್ರಾನ್ಸಿಗೆ ಪಲಾಯನ ಮಾಡಿರುವರು. ಹೊಸ ಸರ್ಕಾರದವರು ಮಾಜಿ ದೊರೆಗಳಾದ ಅಲ್ಫಾನ್ಸೋರವರ ಆಸ್ತಿಗಳನ್ನೆಲ್ಲ ಜಪ್ತುಮಾಡಬೇಕೆಂದು ನಿರ್ಧರಿಸಿರುವರು. ಕೆಲವು ಕ್ಯಾಥೋಲಿಕ್ ವರ್ತಮಾನ ಪತ್ರಿಕೆಗಳ ಆಫೀಸುಗಳಿಗೆ ಬೆಂಕಿಹಚ್ಚಿರುವರು.

ಕಲ್ಕತ್ತೆಯ ಶ್ರೀಯುತ ಬೋಲಾನಾಥಸೇನರೆಂಬೋರ್ವ ಪುಸ್ತಕ ವ್ಯಾಪಾರಿಗಳು ಕೆಲವು ದಿವಸಗಳ ಹಿಂದೆ ಪ್ರಾಚೀನ ಕಥೆಯೆಂಬುದೊಂದು ಪುಸ್ತಕವನ್ನು ಪ್ರಕಟಿಸಿದ್ದರು. ಅದರಲ್ಲಿ ಮಹಮದ್ ಪೈಗಂಬರರ ಚರಿತ್ರೆಯಿದೆ. ಆ ಚರಿತ್ರೆಯು ಸ್ವಲ್ಪ ದೋಷಾರ್ಹವಾದುದೆಂಬ ಕಾರಣದ ಮೇಲೆ 3 ಜನ ಮುಸಲ್ಮಾನರು ಈ ತಿಂಗಳು 7 ನೇ ತಾರೀಖಿನ ದಿವಸ ಶ್ರೀ ಬೋಲಾನಾಥರ ಅಂಗಡಿಗೆ ನುಗ್ಗಿ ಅವರನ್ನು ಚಾಕುಗಳಿಂದ ಇರಿಯಲಾರಂಭಿಸಿದರು. ಅವರ ಸಹಾಯಕ್ಕೆಬಂದ ಇಬ್ಬರು ಗುಮಾಸ್ತರನ್ನೂ ಸಹ ಆ ಕೊಲೆಗಡುಕರು ಬಲವಾಗಿ ಗಾಯಪಡಿಸಿ ಓಡಿಹೋದರು. ಆ ಮೂರು ಜನರೂ ಆ ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟರೂ ಆ ದಿವಸವೇ ಮೃತಪಟ್ಟರು.

ಗುಜರಾಥದ ವಡಲಾ ಎಂಬ ಹಳ್ಳಿಯ ವಿಠಾಭಾಲಾ ಎಂಬ ಪಟೇಲನು ಕೊಲೆಮಾಡಿದ ಅಪರಾಧಕ್ಕಾಗಿ ಫಾಶಿಶಿಕ್ಷೆಗೆ ಗುರಿಯಾಗಿರುವನು. ಕಳೆದ ಕಾನೂನುಭಂಗ ಚಳವಳಿಯಲ್ಲಿ ಸರ್ಕಾರದವರು ಜಪ್ತುಮಾಡಿದ ಹೊಲಗಳನ್ನು ಇವನು ಕೊಂಡುಕೊಂಡನು. ಎರವಾಡಾ ಜೈಲಿನಿಂದ ಇವನು ಮಹಾತ್ಮ ಗಾಂಧಿಯವರಿಗೆ ಒಂದು ಪತ್ರವನ್ನು ಬರೆದಿರುವುದೇನೆಂದರೆ— "ನನ್ನ ಪಾಪಕ್ಕೆ ತಕ್ಕ ಶಿಕ್ಷೆಯಾಯಿತು. ನಾನು ಮಾಡಿದ ದೇಶದ್ರೋಹಕ್ಕಾಗಿ ಪಶ್ಚಾತ್ತಾಪಪಡುತ್ತೇನೆ. ನಾನು ಬಡವರಿಂದ ತೆಗೆದುಕೊಂಡ ಹೊಲಗಳನ್ನು ಪುನಃ ಅವರಿಗೆ ಬಿಟ್ಟುಕೊಡುವೆನು. ಅದಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲ ತಾವೇ ಮಾಡಬೇಕಲ್ಲದೆ ತಮ್ಮ ಆಶೀರ್ವಾದವು ನನ್ನ ಮೇಲಿರಬೇಕು."

ಮಹಾತ್ಮ ಗಾಂಧಿಯವರು ಈ ತಿಂಗಳು 13 ನೆಯ ತಾರೀಖಿನ ದಿವಸ ಸಿಮ್ಲಾಪಟ್ಟಣವನ್ನು ತಲ್ಪಿದರು. ಸಹಸ್ರಾರುಜನ ಸ್ತ್ರೀಪುರುಷರೂ, ಸ್ವಯಂಸೇವಕರೂ ಬಂದು ಮಹಾತ್ಮರ ಸುಸ್ವಾಗತವನ್ನು ಬಯಸಿ ಸ್ವತಃ ತಯಾರಿಸಿದ ಕೈನೂಲಿನ ಮಾಲೆಗಳನ್ನು ಮಹಾತ್ಮರ ಕೊರಳಿಗೆ ಹಾಕಿದರು. ಸುತ್ತಮುತ್ತಲಿನ ಹಳ್ಳಿಗಳಿಂದ ದರ್ಶನಾಕಾಂಕ್ಷಿಗಳಾಗಿ ಸಾವಿರಾರು ಜನರು ಬಂದಿದ್ದರು. ಮಹಾತ್ಮರು 14 ನೆಯ ತಾರೀಖಿನ ದಿವಸ ಇಂಡಿಯಾ ಸರ್ಕಾರದ ಹೋಮ್ ಸೆಕ್ರೆಟರಿ ಮಿ|| ಎಮರ್ಸನರವರೊಡನೆ ಸಂಭಾಷಣೆ ಮಾಡಿದರು. ಅ ದಿವಸ ಸಾಯಂಕಾಲವೇ ಒಂದು ದೊಡ್ಡ ವ್ಯಾಖ್ಯಾನದಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದರು. 15 ನೆಯ ತಾರೀಖಿನ ದಿವಸ ಸಾಯಂಕಾಲ ವೈಸರಾಯರನ್ನು ಸಂದರ್ಶಿಸಿ ಸಂಭಾಷಣೆ ಮಾಡಿದರು.

ಸಿಮ್ಲಾದ ವೈಸರಾಯರ ಭವನದಲ್ಲಿ ಸಣ್ಣದೊಂದು ರೌಂಡ್‌ಟೇಬಲ್ ಸಮ್ಮೇಳನವು ಸೇರಿರುವುದು. ಬಿಕಾನೇರ್ ಮಹಾರಾಜರು, ಭೋಪಾಲ್ ನವಾಬರು, ಸರ್ ತೇಜ್‌ಬಹದ್ದೂರ್ ಸಪ್ರು, ಸರ್ ಪ್ರಿ. ಸರ್ ಸಿ. ಪಿ. ರಾಮಸ್ವಾಮಯ್ಯರ್, ಸರ್ ಸುಲ್ತಾನ್ ಅಹಮ್ಮದ್, ಸರ್ ಅಕ್ಬರ್ ಹೈದರಿ, ದಿವಾನ್‌ಬಹದ್ದೂರ್ ರಾಮಸ್ವಾಮಿಮೊದಲಿಯಾರ್, ಮಿ|| ಎಂ. ಆರ್. ಜಯಕರ್, ಮಿ|| ಗಾವಿನ್‌ಜೋನ್ಸ್, ಸರ್ದಾರ್ ಉಜ್ಜಲಸಿಂಗ್, ಕರ್ನಲ್ ಹಕ್ಸರ್ ಇವರೇ ಮೊದಲಾದವರು ವೈಸರಾಯರೊಡನೆ ಸಂಭಾಷಣೆ ಮಾಡುತ್ತಿರುವರು. ಸೆಪ್ಟೆಂಬರ್ ತಿಂಗಳಲ್ಲಿ ಭಾರತೀಯ ಮತ್ತು ಆಂಗ್ಲೇಯ ಮೆಂಬರರು ಲಂಡನ್ನಿನಲ್ಲಿ ಸೇರಿ ಫೆಡರಲ್ ಕಮಿಟಿಯ ಭಾಷಾಭಿಪ್ರಾಯಗಳನ್ನು ನಿರ್ಣಯಿಸಬೇಕೆಂದೂ, ಆದಾದ ತರುವಾಯ ರೌಂಡ್‌ಟೇಬಲ್ ಸಮ್ಮೇಳನವನ್ನು ನೆರವೇರಿಸಬೇಕೆಂದೂ ವಿಶೇಷ ಜನ ಮೆಂಬರರು ಅಭಿಪ್ರಾಯಪಟ್ಟರು. ಸಭೆಯು ಮುಗಿದಮೇಲೆ ವೈಸರಾಯರವರು ಮೆಂಬರರಿಗೆ ಒಂದು ಔತಣವನ್ನು ಮಾಡಿಸಿದರು.

ಮಾಂಸದ ಪಾಡು.

ಮಾಂಸ ಹಿಂಸೆಯಿಂದ ದೊರೆವುದು |
ಮಾಂಸ ವಸಹ್ಯವಾಗಿ ಕಾಂಬುದು ||
ಮಾಂಸ ಗೊಬ್ಬು ನಾತಬಡಿವುದು |
ಮಾಂಸ ಭಕ್ಷಕ ರಾಕ್ಷಸ ||೧||

ಮಾಂಸ ತಿಂಬಗೆ ದಯೆಯುದಿಲ್ಲ |
ಮಾಂಸ ತಿಂಬಗೆ ತಾಳ್ಮೆಯಿಲ್ಲ ||
ಮಾಂಸ ತಿಂಬಗೆ ಸುಗುಣವಿಲ್ಲ |
ಮಾಂಸ ಭಕ್ಷಕ ರಾಕ್ಷಸ ||೨||

ಮಾಂಸ ತಿಂಬನ ಹೊಟ್ಟೆನಾತ |
ಮಾಂಸ ತಿಂಬನ ಬಟ್ಟೆನಾತ ||
ಮಾಂಸ ತಿಂಬನ ಕಟ್ಟೆನಾತ |
ಮಾಂಸ ಭಕ್ಷಕ ರಾಕ್ಷಸ ||೩||

ಮಾಂಸ ತಿಂಬನ ಬಾಯಿನಾತ |
ಮಾಂಸ ತಿಂಬನ ಹಸ್ತ ನಾತ ||
ಮಾಂಸ ತಿಂಬನ ದೇಹ ನಾತ |
ಮಾಂಸ ಭಕ್ಷಕ ರಾಕ್ಷಸ ||೪||

ಮಾಂಸ ತಿಂಬಗೆ ಕಾಮವಧಿಕ |
ಮಾಂಸ ತಿಂಬಗೆ ತಾಮಸಾಧಿಕ ||
ಮಾಂಸ ತಿಂಬಗೆ ಪ್ರೇಮವಧಿಕ |
ಮಾಂಸ ಭಕ್ಷಕ ರಾಕ್ಷಸ ||೫||

ಮಾಂಸ ತಿಂಬನ ಮನಸುಹಾಳು |
ಮಾಂಸ ತಿಂಬನ ಮನೆಯುಹಾಳು ||
ಮಾಂಸ ತಿಂಬನ ಮಾತುಹಾಳು |
ಮಾಂಸ ಭಕ್ಷಕ ರಾಕ್ಷಸ ||೬||

ಮಾಂಸ ತಿಂಬನ ಮುಖವು ಗಡಸು |
ಮಾಂಸ ತಿಂಬನ ದಿಟ್ಟಿ ಪೆಡಸು ||
ಮಾಂಸ ತಿಂಬನ ಜರೆಯು ಕೆಡಿಸು |
ಮಾಂಸ ಭಕ್ಷಕ ರಾಕ್ಷಸ ||೭||

ಮಾಂಸ ತಿಂಬನ ಹೊಟ್ಟೆ ಗೋರಿಯು |
ಮಾಂಸ ತಿಂಬನ ಮನೆ[illegible] ಗೋರಿಯು ||
ಮಾಂಸ ತಿಂಬನ ಜಗ ಗೋರಿಯು |
ಮಾಂಸ ಭಕ್ಷಕ ರಾಕ್ಷಸ ||೮||

ಮಾಂಸ ತಿಂಬನ ಕಣ್ಣು ಹುಣ್ಣು |
ಮಾಂಸ ತಿಂಬನ ಹಲ್ಲು ಕಲ್ಲು ||
ಮಾಂಸ ತಿಂಬನ ಕಿವಿಯು ಗವಿಯು |
ಮಾಂಸ ಭಕ್ಷಕ ರಾಕ್ಷಸ ||೯||

ಮಾಂಸ ತಿಂಬಗೆ ಧರ್ಮವಿಲ್ಲ |
ಮಾಂಸ ತಿಂಬಗೆ ವಿನಯವಿಲ್ಲ ||
ಮಾಂಸ ತಿಂಬಗೆ ಮೋಕ್ಷವಿಲ್ಲ |
ಮಾಂಸ ಭಕ್ಷಕ ರಾಕ್ಷಸ ||೧೦||

ಯಂ. ರಂಗಪ್ಪ,
ಪ್ರೆಸಿಡೆಂಟ್ ಟಿ. ಎಸ್. ಲಾಡ್ಜ್, ಮತ್ತು
ಕರ್ನಾಟಕವಚನರಚನಾಪ್ರವೀಣ ಮೊಳಕಾಲ್ಮುರು.

ಸರ್ ಪಿ. ಸಿ. ರಾಯರವರ ಅಮೋಘವಾದ ಭಾಷಣ.

ಕಡೂರು ಡಿ|| ಅಜ್ಜಂಪುರದಲ್ಲಿ ಖಾದಿಕೇಂದ್ರಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸರ್ ಪಿ. ಸಿ. ರಾಯರವರು ಮಾಡಿದ ಭಾಷಣದ ಸಾರಾಂಶವೇನೆಂದರೆ :—

"ನೀವು ಮಾಡಿದ ಅತ್ಯಂತ ಸುಖಮಯವಾದ ಸ್ವಾಗತಕ್ಕೋಸ್ಕರವಾಗಿ ನಿಮ್ಮನ್ನು ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ದೇಶಕಾರ್ಯಕ್ಕೋಸ್ಕರ ಕಷ್ಟಪಟ್ಟು ಜೈಲುಗಳಲ್ಲಿದ್ದು ಯಾರು ಹೊರಗೆ ಬಂದಿರುವರೋ ಅಂಥವರಿಗೆ ಮಾತ್ರ ಇಂಥ ಗೌರವಯುತವಾದ ಸ್ವಾಗತವು ಸಲ್ಲತಕ್ಕದ್ದೇ ಹೊರತು ನನ್ನಂಥವರಿಗಲ್ಲ. ನಾನು ರಾಷ್ಟ್ರೀಯ ಧ್ಯೇಯವುಳ್ಳವನಾಗಿಯೂ, ಖಾದೀಭಕ್ತನಾಗಿಯೂ ಇದ್ದು ಎಷ್ಟೋ ಭಾಷಣಗಳನ್ನು ಮಾಡಿದಾಗ್ಯೂ ಸರ್ಕಾರದವರು ನಮ್ಮ ಕೃಪಾಕಟಾಕ್ಷವನ್ನು ಇನ್ನೂ ಬೀರದಿರುವುದು ಆಶ್ಚರ್ಯಕರವಾದುದು.

ನಾನು ಇಲ್ಲಿ ಅರ್ಥಶಾಸ್ತ್ರದವಿದ್ಯಾರ್ಥಿಯಂತೆ ಸಿಂಕು ಖಾದಿ ಮತ್ತು ಚರಕ ಇವುಗಳ ವಿಷಯವನ್ನು ಕುರಿತು ಕೆಲವು ಮಾತುಗಳನ್ನಾಡುವೆನು. ಪೂರ್ವದಲ್ಲಿ ಪ್ರಖ್ಯಾತವಾಗಿದ್ದ ಮಸ್ಲಿನ್ ಬಟ್ಟೆಯು ತಯಾರಾಗುತ್ತಿದ್ದ ಢಾಕ್ಕಾದ ಸಮೀಪದಲ್ಲಿರುವ ಒಂದು ಹಳ್ಳಿಗೆ ನಾನು ಸೇರಿದವನು. ಢಾಕ್ಕಾ ಮಸ್ಲಿನ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಒಂದು ಥಾನುಬಟ್ಟೆಯನ್ನು ರಾತ್ರಿ ಹುಲ್ಲಿನ ಮೇಲೆ ಹಾಸಿ ಮರುದಿವಸ ಪ್ರಾತಃಕಾಲ ನೋಡಿದರೆ ಮಂಜಿನಿಂದ ತೊಯುದು ಆ ಬಟ್ಟೆಯು ಕಣ್ಣಿಗೆ ಕಾಣಿಸುತ್ತಿರಲೇ ಇಲ್ಲ. ನವಾಬರೂ, ಮಹಾರಾಜರೂ, ಧರಿಸುತ್ತಿದ್ದ ಈ ಬಟ್ಟೆಯ ಒಂದು ಥಾನು ಒಂದು ಉಂಗುರದಲ್ಲಿ ಸೇರಿಸುವಂತಿತ್ತು. ನನ್ನ ಜಿಲ್ಲೆಯಿಂದ ಪ್ರತಿವರ್ಷವೂ ಪರದೇಶಗಳಿಗೆ ಒಂದು ಕೋಟಿರೂಪಾಯಿಯಷ್ಟು ಬಟ್ಟೆಯು ರಫ್ತಾಗುತ್ತಿತ್ತು.

ಒಬ್ಬ ಆಂಗ್ಲೇಯನು ಈಗಿನ ಪರಿಸ್ಥಿತಿಯನ್ನು ನೋಡಿ ಒಂದು ಲೇಖನವನ್ನು ಬರೆದಿರುತ್ತಾನೆ. ಅವನು ಬರೆದಿರುವುದೇನೆಂದರೆ :— ಒಬ್ಬ ವಿಧವೆಯು ಒಂದೇ ರಾಟಿಯಿಂದ ನೂಲುತೆಗೆದು ಅದರಿಂದ ತನ್ನ ಚಿಕ್ಕಮಕ್ಕಳನ್ನಿಟ್ಟುಕೊಂಡು ಜೀವನಮಾಡುತ್ತಿದ್ದಳಲ್ಲದೆ, ಇಬ್ಬರು ಹೆಣ್ಣುಮಕ್ಕಳ ಲಗ್ನವನ್ನು ಸಹ ಮಾಡಿದ್ದಳು. ಈ ದೇಶದಲ್ಲಿ ದಿನೇ ದಿನೇ ಪರದೇಶಿ ಬಟ್ಟೆಗಳು ಬಂದು ಬೀಳಲಾರಂಭಿಸಿದುವು. ಇದರಿಂದ ಬಡವರ ಹೊಟ್ಟೆಗೆ ಮಣ್ಣುಬಿತ್ತು.

ಪ್ರತಿವರ್ಷವೂ ನಾವು 60 ಕೋಟಿ ರೂಪಾಯಿ ಬಟ್ಟೆಯನ್ನು ಲ್ಯಾಂಕಷೈರ್, ಜಪಾನ್, ಮುಂತಾದ ದೇಶಗಳಿಂದ ತರಿಸುತ್ತಿದ್ದೇವೆ. ಇದನ್ನು ತಡೆಯುವುದಕ್ಕೋಸ್ಕರ ಮಹಾತ್ಮರು ಚರಕವನ್ನು ಪುನರುದ್ಧಾರ ಮಾಡಿರುವರು.

ನಾನು 30 ವರ್ಷಗಳಿಂದಲೂ ಮಹಾತ್ಮರನ್ನು ಬಲ್ಲೆನು. ಈಗ ಅವರು ಲೋಕಪ್ರಸಿದ್ಧರಾಗಿದ್ದಾರೆ. ಕೋಟ್ಯಂತರಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ನಾನು ಅವರ ಆಪ್ತಮಿತ್ರನೆಂದು ಹೇಳುವುದಕ್ಕೆ ಸ್ವಲ್ಪ ಹಿಂಜರಿಯುತ್ತೇನೆ.

ನಾನು ಎಂದೂ ಮರೆಯದಂಥ ಪಾಠವನ್ನು ಅವರಿಂದ ಕಲಿತಿದ್ದೇನೆ. ಅವರು ದಕ್ಷಿಣಾಫ್ರಿಕದಲ್ಲಿರುವ ಭಾರತೀಯರ ಸ್ಥಿತಿಗತಿಗಳನ್ನು ತಿಳುಹಿಸುವುದಕ್ಕೆ ಅಫ್ರಿಕೆಯಿಂದ ಈ ದೇಶಕ್ಕೆ ಬಂದಿದ್ದರು. ಆಗ ಅವರು ಭಾರಿವಕೀಲರಾಗಿದ್ದರು. ತಿಂಗಳು ಒಂದಕ್ಕೆ 5-6 ಸಾವಿರ ರೂಪಾಯಿಗಳಿಸುತ್ತಿದ್ದರು. ಆ ಹಣವನ್ನು ದೇಶದ ಹಿತಕ್ಕಾಗಿಯೂ, ಬಡವರ ಉದ್ಧಾರಕ್ಕಾಗಿಯೂ ವಿನಿಯೋಗಿಸುತ್ತಿದ್ದರು. ನಾನು ಅವರನ್ನು ಸಂದರ್ಶಿಸಿದಾಗ ಇನ್ನು ಮೇಲೆ 3 ನೆಯ ತರಗತಿಯ ಗಾಡಿಯಲ್ಲಿಯೇ ಪ್ರಯಾಣಮಾಡುವೆನೆಂದು ಅವರು ಹೇಳಿದರು. ಹಾಗೇಕೆಮಾಡುವಿರೆಂದು ನಾನು ಪ್ರಶ್ನೆಮಾಡಿದೆನು. ಅದಕ್ಕವರು 3 ನೆಯ ತರಗತಿಯ ಗಾಡಿಯಲ್ಲಿ ಪ್ರಯಾಣಮಾಡಿದರೆ ಬಡವರ ಕಷ್ಟಸುಖಗಳೇನೆಂಬುದು ಚೆನ್ನಾಗಿ ತಿಳಿಯುತ್ತದೆ ಎಂದು ಉತ್ತರಕೊಟ್ಟರು.

ನಮ್ಮ ಭರತಖಂಡದಲ್ಲಿ ಎಷ್ಟೋಜನ ನಾಯಕರು ಆಗಿಹೋದರು. ಸುರೇಂದ್ರನಾಥಬ್ಯಾನರ್ಜಿ, ಗೋಪಾಲಕೃಷ್ಣಗೋಖಲೆ, ಬಾಲಗಂಗಾಧರತಿಲಕ್ ಮೊದಲಾದ ನಾಯಕರು ಪ್ರಖ್ಯಾತಿಯನ್ನು ಪಡೆದರು. ಇವರೆಲ್ಲರಿಗಿಂತಲೂ ಮಹಾತ್ಮರು ಹೆಚ್ಚು ಪ್ರಸಿದ್ಧಿಗೊಂಡು ಸರ್ವರ ಹೃದಯದಲ್ಲಿ ತಾಂಡವವಾಡುವುದರ ಮರ್ಮವೇನೆಂಬುದನ್ನು ಬಲ್ಲಿರಾ? ಹಿಂದುಸ್ಥಾನದಲ್ಲಿ ನಿರ್ಗತಿಕರಾದ ಕೋಟ್ಯಂತರ ಜನರ ಹಿತಾಹಿತಗಳನ್ನು ಸದಾ ಚಿಂತಿಸುತ್ತಿರುವುದೇ ಇದಕ್ಕೆ ಮೂಲಕಾರಣವಾಗಿದೆ. ಕೆಲವು ವರ್ಷಗಳ ಹಿಂದೆ ಗತಿಸಿದ ಭಾರತಪಿತಾಮಹ ದಾದಾಭಾಯಿನೌರೋಜಿಯವರು ಹಿಂದುಸ್ಥಾನದ ಪ್ರತಿಯೊಬ್ಬ ಮನುಷ್ಯನ ವರ್ಷದ ಸರಾಸರಿ ಉತ್ಪನ್ನವು 25 ರೂ. ಗಳು ಮಾತ್ರವೇ ಎಂದು ಹೇಳಿದರು. ಆಗ ವೈಸರಾಯರಾಗಿದ್ದ ಲಾರ್ಡ್‌ಕರ್ಜನ್‌ರವರು ಹಿಂದುಸ್ಥಾನದ ಪ್ರತಿವರ್ಷದ ಸರಾಸರಿ ಉತ್ಪನ್ನವು 30 ರೂ. ಗಳೆಂದರು. ಇದರಲ್ಲಿ ವರ್ತಕರ, ದಲ್ಲಾಳಿಗಳ, ಜಮೀನ್ದಾರರ, ರಾಜರ, ಶ್ರೀಮಂತರ ಉತ್ಪನ್ನವೂ ಸೇರಿದೆ. ಬಡಜನರ ಆದಾಯವು ಇತ್ತೀಚೆಗೆ ಇನ್ನೂ ಕಡಿಮೆಯಾಗಿರುವುದೆಂದು ಹೇಳಿದರೆ ತಪ್ಪಾಗಲಾರದು. ಈಗ ಪ್ರತಿಯೊಬ್ಬ ಮನುಷ್ಯನ ಪ್ರತಿದಿವಸದ ಆದಾಯವು ಸರಾಸರಿ 0-1-6 ಮಾತ್ರವಿರುತ್ತದೆ. ಬಡಜನರ ಕಷ್ಟಗಳನ್ನು ನಿವಾರಣೆಮಾಡಲು ಚರಕ ಮಾತ್ರವಲ್ಲದೆ ಬೇರೆ ಮಾರ್ಗವೇ ಇರುವುದಿಲ್ಲ.

ಬಂಗಾಲದಲ್ಲಿ ಖಾದಿಪ್ರಚಾರಕ್ಕಾಗಿ ಶ್ರೀ ಸತೀಶಚಂದ್ರದಾಸಗುಪ್ತರು ಅವಿಶ್ರಾಂತಶ್ರಮವಹಿಸಿಕೆಲಸಮಾಡುತ್ತಿರುವರು. ಹಿಂದಕ್ಕೆ ಅವರಿಗೆ ತಿಂಗಳಿಗೆ 1500 ರೂ. ಗಳನ್ನು ಸಂಪಾದಿಸುತ್ತಿದ್ದರು. ಮಹಾತ್ಮರು ಚರಕವನ್ನು ಪುನರುದ್ಧಾರಮಾಡಿದೊಡನೆಯೇ ಶ್ರೀ ಗುಪ್ತರು ತಮ್ಮ ಕೆಲಸಕ್ಕೆ ರಾಜೀನಾಮೆಕೊಟ್ಟು ತಾವು ಗಳಿಸಿದ್ದ ಒಂದು ಲಕ್ಷ ರೂ. ಗಳನ್ನು ಖರ್ಚುಮಾಡಿ ಒಂದು ಖಾದಿಸಂಸ್ಥೆಯನ್ನು ಸ್ಥಾಪಿಸಿದರು. ಅವರ ಧರ್ಮಪತ್ನಿಯವರು ಅವರಿಗಿಂತಲೂ ಹೆಚ್ಚು ಶ್ರದ್ಧೆವಹಿಸಿ ಖಾದಿಪ್ರಚಾರ ಕಾರ್ಯದಲ್ಲಿ ಉದ್ಯುಕ್ತರಾಗಿರುವರು.

ಹಿಂದುಸ್ಥಾನದಲ್ಲಿ 32 ಕೋಟಿ ಜನರಿರುವರು. ಪ್ರತಿಯೊಬ್ಬರೂ ಪ್ರಾತಃಕಾಲ 3 ತಾಸು ಸಾಯಂಕಾಲ 3 ತಾಸು ಚರಕವನ್ನು ತಿರುಗಿಸಿದರೆ, ಒಂದು ಕೋಟಿ ರೂ. ಗಳ ವರಮಾನವಾಗುವುದು. ಹಿಂದುಸ್ಥಾನದಲ್ಲಿ ಒಂದೊಂದು ಸಂಸಾರದಲ್ಲಿ ಸರಾಸರಿ ಐದು ಜನರಿರುವರೆಂದು ಎಣಿಸಲ್ಪಟ್ಟಿದೆ. ಈ ಐದು ಜನರಲ್ಲೊಳಗೊಂದು ಸಂಸಾರವು ಚರಕವನ್ನು ತಿರುಗಿಸಿ ನೂಲನ್ನು ತೆಗೆದರೆ 64 ಲಕ್ಷ ರೂ. ಗಳನ್ನು ಗಳಿಸಬಹುದು. ದೇಶದಲ್ಲಿ ಸರ್ವತ್ರ ವ್ಯಾಪ್ತವಾಗಿ ದೇಶದ ಹಣವನ್ನು ಸೂರೆಗೊಳ್ಳುತ್ತಿರುವ ವಿದೇಶಿವಸ್ತ್ರಗಳು ನಮ್ಮ ದೇಶಕ್ಕೆ ಬರಲು ಅವಕಾಶವಿಲ್ಲದಂತೆ ಈ ಮೂಲಕ ಮಾಡಬಹುದು. ಈ ಕಾರ್ಯವನ್ನು ಸಾಧಿಸಬೇಕಾದರೆ ಎಲ್ಲರೂ ಏಕಮತ್ಯದಿಂದ ಕೆಲಸಮಾಡಬೇಕು. ಹಿತೋಪದೇಶದಲ್ಲಿ ಹೇಳಿರುವಂತೆ ಒಂದು ಹುಲ್ಲುಕಡ್ಡಿಯನ್ನು ಸುಲಭವಾಗಿ ಮುರಿಯಬಹುದು. ಅವೇ ಹುಲ್ಲುಕಡ್ಡಿಗಳನ್ನು ಸೇರಿಸಿ ಬಲವಾದ ಹಗ್ಗವನ್ನು ಮಾಡಿ ಮದಿಸಿದ ಆನೆಯನ್ನಾದರೂ ಕಟ್ಟಿಹಾಕಬಹುದು. ಇದೇ ಚರಕದ ರಹಸ್ಯ ಮತ್ತು ಮಹತ್ವ.

ಮಹಾತ್ಮಗಾಂಧಿಯವರ ಬಗ್ಗೆ ಒಬ್ಬ ಅಮೇರಿಕನ್ ವಿದ್ವಾಂಸರ ಅಭಿಪ್ರಾಯವು

ಮಿ|| ಬಾಯ್ಡ್ ಎ. ಟಕ್ಕರ್ ಎಂಬೊಬ್ಬ ಅಮೆರಿಕೆಯ ವಿದ್ವಾಂಸರು ಈ ಮೊದಲು ಹಿಂದುಸ್ಥಾನದಲ್ಲಿ ಪಾದ್ರಿಗಳಾಗಿದ್ದ[illegible] ಈಗ ಇವರು ರವೀಂದ್ರನಾಥರವರ ಶಾಲೆಯಲ್ಲಿ ಉಪಾಧ್ಯಾ[illegible]ರಾಗಿರುವರು. ಇವರು ಪ್ರಕಟಿಸುವದೇನಂದರೆ—"ನಾನು [illegible]ಹಾತ್ಮರ ಶಿಷ್ಯನಾದುದರಿಂದ ದೇಶೀಯ ಹಿಂದೂ ಉಡುಪ[illegible] ಧರಿಸಲಾರಂಭಿಸಿದೆನು. ನೂತನಪಾಶ್ಚಾತ್ಯ ಸುಖೋಪಭೋಗಗಳ[illegible] ತ್ಯಜಿಸಿ ಮಹಾತ್ಮ ಗಾಂಧಿಯವರಂತೆ ನಾನು ಸರಳಜೀವನಮಾಡ[illegible]ದನ್ನು ನೋಡಿಪಾಶ್ಚಾತ್ಯರು ಆಶ್ಚರ್ಯಪಡಬಹುದು. ಪಾಶ್ಚಾತ್ಯ[illegible] ಸ್ವಾಭಾವಿಕವಾಗಿರುವ ಸುಖೋಪಭೋಗಗಳನ್ನು ಬಿಟ್ಟು ವಿಷಯ[illegible]ಕರಾಗಿರುವದು ಭಾರತೀಯರಿಗೂ ಆಶ್ಚರ್ಯಕರವಾಗಿರುವ[illegible] ನನ್ನನ್ನು ಹುಚ್ಚನೆಂದೂ, ಭ್ರಾಂತನೆಂದೂ ಪಾಶ್ಚಾತ್ಯರು ಕರೆ[illegible]ವುದೇಕೆ? ಏಕೆಂದರೆ ನಾನುಹಿಂದುಸ್ಥಾನದಲ್ಲಿರುವಾಗ ಹಿಂದೂ[illegible] ನಿಲುವಂಗಿಯನ್ನು ಧರಿಸುತ್ತೇನೆ. ನಡುವಿಗೆ ಕಟ್ಟುವ ವಸ್ತ್ರ, ಹ[illegible]ವಾಗಿರುವ ಕಾಶ್ಮೀರಶಾಲು ಇವೇ ಮೊದಲಾದುವುಗಳನ್ನು [illegible]ಶೀಯರು ತಯಾರಿಸದೆ, ಸಹಸ್ರಾರು ವರ್ಷಗಳವರೆಗೂ [illegible]ಯೇ ಇದ್ದು ಇಲ್ಲಿಯ ಹವಾಗುಣ, ಸ್ವದೇಶಗಳನ್ನರಿತ ಭಾ[illegible]ತೀಯರು ತಯಾರಿಸುವುದರಿಂದ ಇವುಗಳನ್ನು ಮಾತ್ರವೇ ನಾ[illegible] ಧರಿಸುತ್ತೇನೆ. ಫರಂಗಿಜನರು ತಾವು ಹೆಚ್ಚಿನವರೆಂಬ ದುರಭಿಮಾನ[illegible]ದಿಂದ ಹವಾ ಮತ್ತು ಸನ್ನಿವೇಶಗಳಿಗನುಗುಣವಾದ ಈ ದೇ[illegible] ಬಟ್ಟೆಗಳನ್ನು ಬಿಟ್ಟು ತಮ್ಮ ದೇಶದ ಬಟ್ಟೆಗಳನ್ನುಡುವರೇ ಹೊ[illegible]ತು ಬೇರೆಯಲ್ಲ. ಭಾರತೀಯರ ಊಟಾಟಿಕೆಯಲ್ಲದ ಸಾ[illegible] ಉಡುಪನ್ನು ಧರಿಸಿದರೆ, ಬಿಳಿಯ ಜನರು ಹೆಚ್ಚಿನವರೆಂದು ಜ[illegible] ಮನಸ್ಸಿನ ಮೇಲೆ ಪರಿಣಾಮವಾಗುವುದಿಲ್ಲವೆಂದು ಇವರ ಮತ[illegible]

ನಾನು ಮಹಾತ್ಮರ ಶಿಷ್ಯನಾಗಿರುವೆನು. ಯಾಕೆಂದರೆ ಈಗ [illegible] ಗತ್ತಿನಲ್ಲಿ [illegible] ಶಾಂತಿಕಪುರುಷರೆಂದರೆ ಅವರ ಹೊರತು ಮತ[illegible] [illegible] ನು ಜಗತ್ತಿಗೆ ಸುವಾರ್ತೆಯನ್ನು ಸಾ[illegible] [illegible] ಆ ಸುವಾರ್ತೆಯನ್ನು ರೂಢಿಗೆತರಲು [illegible] [illegible] ದೇಶಗಳೂ ಅನುಕೂಲವಾಗಿರಲಿಲ್ಲ. ಮಹಾ[illegible] ಗಾಂಧಿಯವರಾದರೋ ಯೇಸುವಿನ ಸಂದೇಶಕ್ಕೆ ಅಮೋಘ[illegible] ಸಮರ್ಪಕವೂ ಆದ ಅರ್ಥವನ್ನು ಹೇಳಿದರು. ಜಗತ್ತಿನ ಜನ[illegible] ಆತ್ಮೋನ್ನತಿಯನ್ನು ಹೊಂದಲು ಉಪಾಯವನ್ನು ಕಾಣದೆ [illegible] ಉತ್ತಿರುವ ಈ ಸಮಯದಲ್ಲಿ ಭಗವಂತನೇ ಈ ಮಹಾತ್ಮರ[illegible]ದಲ್ಲಿ ಅವತರಿಸಿರುವನು.

ಜಗತ್ತಿನಲ್ಲಿ ಈಗ ಎರಡು ಅದ್ವೈತತತ್ವಗಳು ಹುಟ್ಟಿ ಏಕಾ[illegible]ತ್ಮವನ್ನು ಹೊಂದಲು ಕಾದಾಡುತ್ತಿರುವುವು. ಅವು ಒ[illegible]ಕ್ಕೊಂದು ಪರಸ್ಪರ ವಿರೋಧವಾಗಿವೆ. ಮೊದಲನೆಯದು ಬೋ[illegible]ವಿಕ್ ತತ್ವ ; ಎರಡನೆಯದು ಗಾಂಧಿಯ ತತ್ವ.

ಬೋಲ್ಷವಿಕ್ ತತ್ವವು ಶ್ರೀಮಂತ ಮತ್ತು ಬಡವರೆಂಬ ಭೇ[illegible]ವನ್ನು ಕಲ್ಪಿಸಿ ಶ್ರೀಮಂತರನ್ನು ಬಗ್ಗುಬಡಿಯಲು ಬಡವ[illegible] ಉತ್ತೇಜನ ಕೊಡುತ್ತದೆ. ಆದರೆ ಗಾಂಧಿಯ ತತ್ವದಲ್ಲಿ ಯ[illegible] ಭಿನ್ನಭೇದವೂ ಇರದೆ ಮಾನವಪ್ರಾಣಿಯ ಪರಸ್ಪರ ಸಮಾ[illegible]ಯನ್ನು ಪ್ರತಿಪಾದಿಸುತ್ತದೆ. ಬೋಲ್ಷವಿಕ್ ತತ್ವವು ಕತ್ತಿಯ[illegible] ಹಾರದಿಂದ ಜಗತ್ತನ್ನು ಜಯಿಸಿದರೆ, ಗಾಂಧಿಯ ತತ್ವವು ಏ[illegible] ಮತ್ತು ಪ್ರೇಮದಿಂದ ಜಗತ್ತನ್ನು ಜಯಿಸುವುದು. ಜಗತ್ತಿ[illegible] ಯುದ್ಧಗಳೂ, ಜಾತಿಕಲಹಗಳೂ, ಜಗಳಗಳ ಬಿಡಿ[illegible] ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯರ ಮನಃಕಲ್ಮಷವೂ ನಿರ್ಮೂ[illegible]ವಾಗಬೇಕಾದರೆ, ಗಾಂಧಿಯ ತತ್ವವೇ ಪರಮಸಾಧುವಾದ ಮಾ[illegible]ವಾಗಿದೆ. ಇದನ್ನು ಬಿಟ್ಟು ಬೇರೆ ದಾರಿಯೇ ಇರುವುದಿ[illegible] ಪಾಶ್ಚಾತ್ಯದೇಶಗಳಲ್ಲಿ ಅನೇಕರು ಮಹಾತ್ಮರ ವಿಷಯ[illegible] ತಪ್ಪುಭಾವನೆಯುಳ್ಳವರಾಗಿದ್ದಾರೆ.

ಲಂಡನ್ನಿನ ರೌಂಡ್‌ಟೇಬಲ್‌ಸಮ್ಮೇಳನದಲ್ಲಿ ಕಾರ್ಯಕ[illegible]ಪಗಳನ್ನು ಪೂರೈಸಿಕೊಂಡು ಮಹಾತ್ಮರು ಯೂರೋಪ್ ಮ[illegible] ಅಮೇರಿಕಾಖಂಡಗಳಿಗೆ ಹೋಗುವರೆಂಬ ವದಂತಿಯಿದೆ. [illegible] ರೋಪ್ ಅಮೇರಿಕೆಗಳಿಗೆ ಮಹಾತ್ಮರು ಹೋದುದೇ ಆದರ[illegible] ಖಂಡಗಳಲ್ಲಿ ನವಚೈತನ್ಯವು ಪುನರುತ್ಥಾಪನಗೊಂಡು ಜಗತ್ತಿ[illegible] ಏಕಮತ್ಯವು ಸ್ಥಾಪನೆಯಾಗುವುದೇ ಸತ್ಯ.

ಕಾನ್ಪುರದಲ್ಲಿ ಹಿಂದೂಮುಸಲ್ಮಾನರ ಬಡಿದ[illegible]ವಾಗಿ ರಕ್ತಪಾತವಾದುದು ಸರಿಯಷ್ಟೆ! ಕೆಲವು ದಿ[illegible]ಗಳ ಹಿಂದೆ ಒಂದು ರಸ್ತೆಯಲ್ಲಿ ಒಂದು ತಲೆಬುರುಡೆ[illegible] ಸಿಕ್ಕಿತು. ಆ ತಲೆಬುರುಡೆಯು ತಮ್ಮದೆಂದು ಹಿಂ[illegible]ಗಳೂ, ತಮ್ಮದೆಂದು ಮಹಮ್ಮದೀಯರೂ ಜಗಳ[illegible]ವಾರಂಭಿಸಿದರು. ಆಗ ಉಭಯ ಪಕ್ಷಗಳ ಮು[illegible] ದರೂ ಬಂದು ಆ ತಲೆಬುರುಡೆಯನ್ನು ಮುಸಲ[illegible]ರಿಗೆ ಕೊಡಿಸಿದರು. ಅನಾಥ ಪ್ರೇತಸಂಸ್ಕಾರದ ಪು[illegible]ವು ಮಹಮ್ಮದೀಯರಿಗೆ ಲಭಿಸಿತು. ವ್ಯರ್ಥವಾಗಿ [illegible] ದಾಡಿದ ಶ್ರಮವು ಹಿಂದುಗಳ ಪಾಲಿಗೆ ಬಂದಿತು. [illegible] ಕಾರಣದ ಮೇಲೆ ಪುನಃ ಜಗಳವಾಗದಿದ್ದುದು ಸಂತ[illegible] ಷಕರವಾದ ಸಂಗತಿಯೇ ಸರಿ.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಋಷಿ-ಪವಿತ್ರಭೂಮಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಶಾಖೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ನಾನಾ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿನಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಪ್ರಮೇಹ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. [illegible]ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ರೂಪಾಯಿಯಿಂದ ೬೦ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಇ.) [illegible]ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ ದೊಡ್ಡವರೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಜೇಬಿಗೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯಲ್ಲಿ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯರೀತಿಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿದ್ದೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮೀಷನ್. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮೀಷನ್. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆ ಕಮೀಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಲು ಅವಕಾಶವಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ತಂಘುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸಚಿತ್ರಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆಹುಳಗಳ ಕೆಲರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಚರು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[41] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ.) **ಮಂಗಳೂರು,** ದ. ಕ.

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ— ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಬಿಡಾರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ನಾವಕಾಶಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,
ಪಟೇಲ್ ಮತ್ತು ಛೇರ್‌ಮನ್, ಬಾಸೂರು,
ಪೋಸ್ಟ್ ಸಖ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

[4]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೬ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨॥ ಆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ಸಚಿತ್ರ ರೇಣುಕವಿಜಯ	೧ ರೂ
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾ ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾ ಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣು ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದ ರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ. ಹೊಸಮನೆ, ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅವ್ಯಕ್ತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೬—೮
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜಿ ... ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರು ... ರು ಪ್ರಸಿದ್ಧವಾದ ... ನಶ್ಯದ ಪುಡಿಯಿಂದ ... ಸ್ವಸ್ಥವಾಗುವ ವ್ಯಾ ... ಧಿಗಳು ಯಾವವೆಂ ... ರ:—ಪೀನಸಿ, ಒಂ ... ತಲೆನೋವು, ತಲೆ ... ಲ್ಲಿನ ರೋಗಗಳು ... ಕಣ್ಣುಗಳಲ್ಲಿ ಉಂಟಾ ... ಗತಕ್ಕ ಸರ್ವವ್ಯಾ ... ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿ ಯನ್ನೂ ಸಹ ಹೆಚ್ಚು ಮಾಡುತ್ತದೆ. ಮೂರುಬಟ್ಟಲು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿ ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿ ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪...

ದಜ಼ಾ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[44] ಪೋ. ಬಾ. ೫೧೦, ಮದರಾಸ್

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ ನೇ ಮೇ ೧೯೩೧ [ಸಂಚಿಕೆ ೫

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರುಕೂಡ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮಹಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ

ಶ್ರೀ ಜಗದ್ಗುರು ಸಿದ್ಧಲಿಂಗಪಂಚಕಂ.

ಪೂರ್ವಂಚೆನ್ನವೃಷಾಭಿಧಾನ ಗುರುಸಿದ್ಧಾಂಬಾಸುಗರ್ಭೋದ್ಭವಂ |
ಶಶ್ವಾದುಜ್ಜಯಿನೀಪುರೀ ಗುರುಮಹಾಪೀಠಾಧಿಪತ್ಯೋತ್ಸವಂ ||
ಮುಕ್ತಿಶ್ರೀರಮಣತ್ವರಂಜಿತ ಮಹಾವೈರಾಗ್ಯಸದ್ವೈಭವಂ |
ವಂದೇ ಶ್ರೀಗುರುಸಿದ್ಧಲಿಂಗಯಮಿನಂ ಸದ್ಭಕ್ತಸಂಭಾವನಂ ||೧||

ಧರ್ಮಾಚಾರಸುಕೇತುರಂ ಪ್ರಜಪಿತಶ್ರೀಶೈವಪಂಚಾಕ್ಷರಂ |
ಸಾರಾಸಾರವಿಚಾರಣೈಕಚತುರಂ ಧೀರಂಗಭೀರಂಪರಂ ||
ಶಾಮತ್ರೀಧಹರಂಮಹಾಚರವರಂ ಶಂಭುಗ್ರಭಾಭಾಸುರಂ |
ವಂದೇ ಶ್ರೀಗುರುಸಿದ್ಧಲಿಂಗಯಮಿನಂ ಸದ್ಭಕ್ತಸಂಭಾವನಂ ||೨||

ಶಶ್ವಾನಂದಚಿದಾಲಯಂ ಗತಮಯಂ ನಿರ್ಧೂತರೋಗಾಮಯಂ |
ಮಾಯಾಮೋಹಲಯಂ ಸುಶಿಷ್ಯನಿಚಯಂ ತತ್ವಾರ್ಥಬೋಧಪ್ರಿಯಂ ||
ಶಿಷ್ಯಾನಿಷ್ಟಪದಾರ್ಥಶೋಧನಮಹಾಕಾರ್ಯೇ ಮನೋನಿಶ್ಚಯಂ |
ವಂದೇ ಶ್ರೀಗುರುಸಿದ್ಧಲಿಂಗಯಮಿನಂ ಸದ್ಭಕ್ತಸಂಭಾವನಂ ||೩||

ರುದ್ರಾಕ್ಷಾಭರಣಂ ಪವಿತ್ರಕರಣಂ ಲಿಂಗಾಂಗಸಂಯೋಜನಂ |
ಮುದ್ರಾಪಂಚಕಧಾರಿಣಂ ಶಮದಮಪ್ರಾಣಂ ಕ್ಷಮಾಭೂಷಣಂ ||
ಕಷ್ಟದ್ರೋಹಪದ್ರವನಾಶನಂ ವರಗುಣಂ ಯೋಗಿ... ...ಮಣಿಂ |
ವಂದೇ ಶ್ರೀಗುರುಸಿದ್ಧಲಿಂಗಯಮಿನಂ ಸ... ...ವನಂ ||೪||

ಶ್ರೀ ರುದ್ರಾಕ್ಷನಕುವ್ರತಂ ಬುಧನುತಂ ಸಚ್ಛೀಲಸಂರಾಜಿತಂ |
ಮಾಹೇಶಾಲಿವಿಭೂಷಿತಂ ಸುಚರಿತಂ ಶಾಸ್ತ್ರಾರ್ಥಶೋಭಾವೃತಂ ||
ಕ್ರೂರಾಚಾರನಿವಾರಣಾತ್ತುಲಲಿತಂ ಸಾರಕ್ರಿಯಾರಂಜಿತಂ |
ವಂದೇ ಶ್ರೀಗುರುಸಿದ್ಧಲಿಂಗಯಮಿನಂ ಸದ್ಭಕ್ತಸಂಭಾವನಂ ||೫||

ಸಿದ್ಧಲಿಂಗಶಿವಾಚಾರ್ಯಸ್ತವಂ ಲೋಕಪಾವನಂ |
ಗುರುಸಿದ್ಧಬುಧಪ್ರೋಕ್ತಂ ಯಃಪಠೇತ್ಸೋಽಶ್ನುತೇಗತಿಂ ||

ಮ॥ ರಾ॥ ವಾರದ ಚೆನ್ನಬಸವಪ್ಪನವರ ವಿವಾಹಮಹೋತ್ಸವ.

ಸೊಲ್ಲಾಪುರ.

ಭೂಮಂಡಲದಲ್ಲಿರತಕ್ಕ ಸಮಸ್ತ ವೀರಶೈವರ ಮತ್ತು ಅನ್ಯಮತೀಯರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿಯೂ, ರಾಜಾಧಿರಾಜಮಾನ್ಯರಾಗಿಯೂ ಮೆರೆದು ಹೋದ ಕೈ॥ ರಾವಬಹದ್ದೂರ್ ವಾರದ ಮಲ್ಲಪ್ಪನವರ ಪುತ್ರರಾದ ಮ॥ ರಾ॥ ಚೆನ್ನಬಸವಪ್ಪನವರ ವಿವಾಹ ಮಹೋತ್ಸವವು ಸೊಲ್ಲಾಪುರ ಶಹರದಲ್ಲಿ ಅತ್ಯಂತ ವೈಭವದಿಂದ ನೆರವೇರಿತು. ಈ ಸಮಾರಂಭಕ್ಕಾಗಿ ಅನೇಕಾನೇಕ ಜನರು ಸಮ್ಮಿಲಿತರಾಗಿದ್ದರು. ಚಿತ್ರಕಲ್ಲದುರ್ಗದ ಮುರಿಗಿ ಮಠದ ವಿರಕ್ತರು ತಮ್ಮ ಪತಿಯಿಂದ ವಿರುಪಾಕ್ಷಶಾಸ್ತ್ರಿಗಳೆಂಬವರನ್ನು ಕಳುಹಿಸಿದ್ದರು. ಈ ಶಾಸ್ತ್ರಿಗಳು ವಿವಾಹಸಮಯದಲ್ಲಿ ಆರು ಕಲಶಗಳನ್ನು ಹೂಡಬೇಕೆಂದು ಪ್ರಯತ್ನಮಾಡಿದರು. ಅದು ಸಾಧ್ಯವಾಗಲಿಲ್ಲ. ಆದುದರಿಂದ ಸದರಿ ಶಾಸ್ತ್ರಿಗಳು ಹತಾಶರಾಗಿ ವಿವಾಹಸಮಯದಲ್ಲಿ ಅಲ್ಲಿರದೆ ತಮ್ಮ ಊರಿಗೆ ಹೋಗಿಬಿಟ್ಟರು. ಯಾವತ್ತು ಕಾರ್ಯವನ್ನು ಜೈನಾಪುರ ಹಿರೇಮಠದ ಪಂಡಿತ ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳವರು ನೆರವೇರಿಸಿದರು. ಈ ಸಮಯದಲ್ಲಿ ಶ್ರೀಮಂತ ವಾರದವರ ಮನೆತನದ ಮೂಲಗೋತ್ರಗುರುಗಳಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಗೋಡೆಯ ಮೇಲೆ ಬರೆಯಿಸಿದ್ದರು. ಆದರೆ ಕೆಲವು ವಿರಕ್ತಪಕ್ಷದ ನೀಚಜನರು ಆ ಭಾವಚಿತ್ರವನ್ನು ಅಳಿಸಿ ಊಟಕ್ಕೆ ಹೋದರಂತೆ! ಮೂಲಗುರುಗಳ ಭಾವಚಿತ್ರವನ್ನು ಅಳಿಸಬೇಕಾದರೆ ಅವರೆಂಥ ಚಂಡಾಲರಿರಬಹುದು? ಅವರೆಂಥ ಗುರುದ್ರೋಹಿಗಳಿರಬಹುದು? ಅವರೆಂಥ ನಾಸ್ತಿಕರಿರಬಹುದು? ಈ ದೋಷವು ಆ ಪಾಪಿಗಳನ್ನು ಜನ್ಮಜನ್ಮಾಂತರದಲ್ಲಿಯೂ ಖಂಡಿತವಾಗಿ ಬಿಡುವದಿಲ್ಲವೆಂದು ಹೇಳಬಹುದಾಗಿದೆ. ಶ್ರೀ ಜಗದೀಶ್ವರನು ಗುರುದ್ರೋಹಿಗಳಾದ ಪಾಪಿಗಳಿಗೆ ಸರಿಯಾದ ಪ್ರಾಯಶ್ಚಿತ್ತವನ್ನುಂಟುಮಾಡಲೆಂದೂ, ಅನಾದಿಕಾಲದಿಂದ ಅಸಾಧಾರಣ ಗುರುಭಕ್ತಿನಿಷ್ಠರಾಗಿ ಬಂದ ಲೋಕವಿಖ್ಯಾತವಾದ ವಾರದವರ ಮನೆತನಕ್ಕೆ ಸಕಲ ವಿಧದಲ್ಲಿ ಸೌಭಾಗ್ಯವನ್ನುಂಟುಮಾಡಲೆಂದೂ ಕೋರುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಸ್ವೀಕಾರ.

ಚಿಕ್ಕಮಗಳೂರು ಕೋಟಿ ಮ॥ ರಾ॥ ಕಾಫಿಪ್ಲಾಂಟರ್ ರುದ್ರಪ್ಪಶೆಟ್ಟರ ಜ್ಯೇಷ್ಠ ಪುತ್ರ ಚಿ॥ ಸ॥ ಮಲ್ಲಪ್ಪಶೆಟ್ಟರಿಗೆ ಲಕ್ಷ್ಮೀನಹಳ್ಳಿ ಮ॥ ರಾ॥ ಚನ್ನಬಸವಪ್ಪನವರ ಪುತ್ರಿ ಚಿ॥ ಸೌ॥ ರುದ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 5 ರೂ. ಗಳು ಹಾಗೂ ಮುಗುಳುವಳ್ಳಿ ಗ್ರಾಮದ ಮ॥ ರಾ॥ ಶಾಂತಗೌಡರು ತಮ್ಮ ಮೊಮ್ಮಗನ ಕಾಯಿಲೆಯು ಜಗದಾಚಾರ್ಯರ ಕೃಪೆಯಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂ. ಗಳು ಒಟ್ಟು 7 ರೂ. ಗಳು ವೇ॥ ಮುಗುಳುವಳ್ಳಿ ಮಠದ ಮುಪ್ಪಿನಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿ ಟವನ್ನಿನಲ್ಲಿರುವ ಮ॥ ರಾ॥ ಮಹಾದೇವಪ್ಪ ಕೆಲಗೇರಿ ಇವರಿಗೆ ಧಾರವಾಡ ಟವನ್ನಿನಲ್ಲಿರುವ ಮ॥ ರಾ॥ ಮಹಾದೇವಪ್ಪ ಸಾಮ್ರಾಣಿ ಇವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಮ॥ ರಾ॥ ವೀರಪ್ಪಲಕ್ಕಿಮರ ಇವರ ದ್ವಾರಾ ತಲ್ಪಿರುತ್ತವೆ.

ಕಡೂರು ಡಿ॥ ನರಸಿಂಹರಾಜಪುರದಲ್ಲಿರುವ ಮ॥ ರಾ॥ ಯಂ-ನಿ-ಶಾಂತಪ್ಪಶೆಟ್ಟರವರು ತಮ್ಮ ಆಶ್ರಯದಲ್ಲಿರುವ ಮ॥ ರಾ॥ ಬಸಪ್ಪಶೆಟ್ಟರ ಪುತ್ರಿ ಚಿ॥ ಸೌ॥ ನೀಲಮ್ಮನನ್ನು ಹಲ್ಮೂರು ಮ॥ ರಾ॥ ಪುಟ್ಟಪ್ಪಶೆಟ್ಟರ ಪುತ್ರ ಚಿ॥ ರುದ್ರಪ್ಪನಿಗೆ ಕೊಟ್ಟು ಧರ್ಮಾರ್ಥವಾಗಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ನೈಜಾಂ ಸ್ಟೇಟ್ ಜಹಗೀರ್ ದಂಡಾವತಿಯಲ್ಲಿರತಕ್ಕ ಮ॥ ರಾ॥ ಮುಗುಳಿ ವಿರೂಪಾಕ್ಷಪ್ಪನವರ ಪುತ್ರ ಚಿ॥ ಕರವೀರಪ್ಪನ ಫಲಶೋಭನ ಕಾಲದಲ್ಲಿ ಸಮರ್ಪಿಸಿದ 1 ರೂ. ಯು ಶ್ರೀ॥ ಷ॥ ಬ್ರ॥ ದಿಗ್ಗಾವಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಚಿಕ್ಕಮಗಳೂರು ತಾ॥ ವಸ್ತಾರಗ್ರಾಮದ ಪಟೇಲ್ ಮ॥ ರಾ॥ ಚವುಡೇಗೌಡರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀಮತ್ಪಂಚಾಚಾರ್ಯಾಃ ಪ್ರಸೀದಂತು

ಗ್ರಂಥಾವಲೋಕನ.

ನಮ್ಮ ಶ್ರೀಮದ್ವೀರಶೈವ ಮತದಲ್ಲಿ ಅನೇಕರು ಪೂರ್ವದ ತಾಳ ಓಲೆಯಗ್ರಂಥಗಳನ್ನು ಪರಿಶೋಧಿಸುವುದೇ ಸದ್ಯಃ ಅಪರೂಪವಾಗಿ ಹೋಗಿದೆ. ಹಿಂದೆ ಅನೇಕ ಗುರುಸ್ಥಲಮಠದವರು ಇದನ್ನೇ ಒಂದು ಮುಖ್ಯ ವೃತ್ತಿಯನ್ನಾಗಿಟ್ಟುಕೊಂಡಿದ್ದರೆಂಬುದು ಅನೇಕ ಉದಾಹರಣೆಗಳಿಂದ ಗೊತ್ತಾಗುತ್ತದೆ. ಈ ವಿಷಯದಲ್ಲಿ ಈಗಲೂ ಕೆಲವು ಗುರುವರ್ಗದ ಮಠಗಳಲ್ಲಿರುವ ತಾಳಓಲೆಯ ಪ್ರಾಚೀನ ಗ್ರಂಥರಾಶಿಯೇ ಬಲವಾದ ಸಾಕ್ಷಿಯಾಗಿರುತ್ತದೆ. ಒಂದು ತಾಳಓಲೆಯ ಪುಸ್ತಕವನ್ನು ಬಿಚ್ಚಿ ಓದುತ್ತ ಹೋದರೆ ಒಂದರಲ್ಲಿಯೇ ಹತ್ತು ಹನ್ನೆರಡು ಗ್ರಂಥಗಳು ಇರುವುದು ಕಂಡುಬರುತ್ತದೆ. ಇಂಥ ಪುಸ್ತಕಗಳು ಒಂದೊಂದು ಮಠದಲ್ಲಿ ನೂರು, ಇನ್ನೂರು, ಸಾವಿರಗಟ್ಟಲೆಯಾಗಿ ಈಗಲೂ ವಿರಾಜಿಸುತ್ತವೆ. ಪೂರ್ವದಲ್ಲಿ ಇದಕ್ಕಿಂತಲೂ ಹೆಚ್ಚಿನ ಗ್ರಂಥರಾಶಿಯು ಅನೇಕ ಮಠಗಳಲ್ಲಿತ್ತೆಂಬುದು ಆಯಾಯ ಮಠಗಳ ಗ್ರಂಥಲಿಸ್ಟಿನಿಂದ ಗೊತ್ತಾಗುತ್ತದೆ. ಆದರೆ ದುರ್ದೈವವಶಾತ್ ಹಿಂದಿನ ಮಹಮ್ಮದೀಯ ರಾಜರು ಯಾತ್ರಾಕಾಲದಲ್ಲಿ ಹಿಂದುಗಳನ್ನು ಕೊಳ್ಳೆಹೊಡೆದು ಸಿಕ್ಕಿದ ಶಿಲ್ಪಕಲಾಚತುರರನ್ನೂ, ಒಳ್ಳೆ ಸ್ತ್ರೀಯರನ್ನೂ, ಅವರ ಗ್ರಂಥಗಳನ್ನೂ, ಅವರ ಅಪಾರ ದ್ರವ್ಯಸಂಪತ್ತನ್ನೂ ಶಕ್ತ್ಯುದ್ದೇಶದಿಂದ ದೆಹಲಿ ಪ್ರಾಂತಕ್ಕೆ ದೋಚಿಕೊಂಡು ಹೋಗುತ್ತಿದ್ದರೆಂತಲೂ, ಇಂಥ ಕೊಳ್ಳೆಗಳು ಅನೇಕಾವೃತ್ತಿ ನಡೆದವೆಂತಲೂ, ದೆಹಲಿಯಲ್ಲಿ ಒಂದು ಕಾಲದಲ್ಲಿ ಹದಿನೈದು ದಿವಸಗಳವರೆಗೆ ಅವಿಚ್ಛಿನ್ನವಾಗಿ ಮಳೆಯು ಸುರಿಯಿತೆಂತಲೂ, ಆಗ್ನೇಯದವರ ಅಡಿಗೆಗಾದೆಗಳಿಂದ ತುಂಬಾ ತೊಂದರೆಯಾಗಲು ಕೊಳ್ಳೆಹೊಡೆದುಕೊಂಡು ಹೋಗಿದ್ದ ಓಲೆಪುಸ್ತಕಗಳನ್ನೇ [illegible] ಒಲೆಗೆ ಉಪಯೋಗಿಸಿದರೆಂತಲೂ ತಿಳಿದುಬರು[illegible] ವಿಷಾದಜನಕವಾದ ಈ ವಿಷಯವನ್ನು [illegible] ಎದೆಯು ಒಡೆದು ನೀರಾಗಲಿಕ್ಕಿಲ್ಲ [illegible] ಷಯಗಳನ್ನು " ಹಳೇಬೀಡು ಪುರಾತನಚರಿತ್ರೆ [illegible] ಪುಸ್ತಕದಲ್ಲಿ ನೋಡಿಕೊಳ್ಳಬಹುದು. ಇರಲಿ;

ಈಗ ಅಲ್ಪಸ್ವಲ್ಪ ಉಳಿದಿರುವ ಗ್ರಂಥಗಳನ್ನಾದರೂ ಪರಿಶೋಧಿಸಿ ಜೋಪಾನವಾಗಿಟ್ಟುಕೊಳ್ಳಬೇಕೆಂಬ ಯೋಚನೆಯು ನಮ್ಮ ಮತೀಯರಿಗೆ ಎಳ್ಳಷ್ಟು ಕಂಡುಬರುವುದಿಲ್ಲ. ಈಗೀಗ ಇಂಥ ಶೋಧನಕಲೆಯಲ್ಲಿ ಕೇವಲ ಅಕ್ಕಲ್ಪ ಸ್ವಲ್ಪ ಜನಗಳು ಪ್ರವೇಶಿಸಿದರೂ ಅಂಥವರಿಗೆ ನಮ್ಮವರು ಪ್ರೋತ್ಸಾಹ ಕೊಡುವುದೇ ಕಷ್ಟವಾಗಿರುತ್ತದೆ. ಇಂಥ ಶೋಧಕರಲ್ಲಿ ದಾವಣಗೆರೆ ನಿರಾಸಿಮಠದ ಶ್ರೀ|| ವೇ|| ಶಾಂತವೀರಾರಾಧ್ಯರು ತಾ|| 26-4-31 ರಲ್ಲಿ ಶ್ರೀ|| ಮೈ|| ಶ್ರೀ|| ಅ|| ವಿ|| ಶ|| ಎತ್ತಗದ ಮಠಾಧಿಕಾರಸ್ಥಾನಕ್ಕೆ ಬಂದು ಅಲ್ಲಿಯ ಸರಸ್ವತಿ ಭಂಡಾರದಲ್ಲಿದ್ದ ಸಾವಿರಾರು ಓಲೆ ಪುಸ್ತಕಗಳನ್ನೂ ಇತರ ಪುಸ್ತಕಗಳನ್ನೂ ನೋಡಿ ತುಂಬಾ ಸಂತೋಷಪಟ್ಟು ಕೆಲಕೆಲವು ಪುಸ್ತಕಗಳನ್ನು ಶೋಧನೆ ನಡೆಯಿಸಿದರು. ಸದರಿ ಮಠಾಧ್ಯಕ್ಷರಾದ ಶ್ರೀ|| ವೇ|| ದೊಡ್ಡರಾವಣಾರಾಧ್ಯ ಮಹಾಸ್ವಾಮಿಗಳವರು ಅವರ ಶೋಧಕ್ಕೆ ತುಂಬಾ ಸಹಾಯಕರಾಗಿದ್ದರು. ಈ ಮೇರೆ ಪ್ರತಿನಿತ್ಯವೂ ಶೋಧನೆಡೆಸಿ ತಾರೀಖು 30-4-31 ನೇ ದಿವಸ ವಾಪಸು ತೆರಳಿದರು. ಈ ರೀತಿಯಾಗಿ ನಮ್ಮ ಮತದ ಅನೇಕರು ಇಂಥ ಕಾರ್ಯದಲ್ಲಿ ಆಸಕ್ತರಾಗಿ ಗ್ರಂಥಾವಲೋಕನವನ್ನು ನಡೆಸಿದರೆ ಸ್ವಲ್ಪ ದಿವಸಗಳಲ್ಲಿಯೇ ನಮ್ಮ ಮತಸಂಬಂಧವಾದ ಅನೇಕ ಗ್ರಂಥಗಳು ಹೊರಬಿದ್ದು ನಮ್ಮ ಮತದ ಯಶೋವೈಭವವು ಹೆಚ್ಚುವದರಲ್ಲಿ ಯಾವ ಸಂಶಯವೂ ಇಲ್ಲ. ಮತಾಭಿಮಾನಿಗಳು ಈ ಪ್ರಯತ್ನವನ್ನು ಅವಶ್ಯಕವಾಗಿ ಮಾಡಬೇಕೆಂದು ಕೋರಿಕೆ.

ಬಿ. ಮಲ್ಲಿಕಾರ್ಜುನಾರಾಧ್ಯ.
ಗ್ರಂಥಾವಲೋಕನಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮೂಲಪಂಡಿತಾಚಾರ್ಯರ ಉತ್ಪತ್ತಿ.

ಲೇಖಕ—ಎಂ. ಜಿ. ನಂಜುಂಡಾರಾಧ್ಯ, ಹಿರೇಮಠ, ಗುಂಡ್ಲಹಳ್ಳಿ.

ಪಂಚಾನನಸಮುದ್ಭೂತಾನ್ ಪಂಚಾಕ್ಷರಮನೂಪಮಾನ್ |
ಪಂಚಸೂತ್ರಕೃತೋ ವಂದೇ ಪಂಚಾಚಾರ್ಯಾನ್ ಜಗದ್ಗುರೂನ್ ||

ಶ್ರೀಮಚ್ಛಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕ ವೀರಶೈವಮತಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರು ಜಗದಾದಿಯಲ್ಲಿಯೇ ಪರಮಾತ್ಮನ ಪಂಚಮುಖಗಳಿಂದಾವಿರ್ಭವಿಸಿ ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳ ಆದಿಯಲ್ಲಿ ಭೂಮಂಡಲದಲ್ಲಿ ಅತ್ಯಂತ ಪ್ರಸಿದ್ಧಗಳಾದ ಪುಣ್ಯಕ್ಷೇತ್ರಗಳೆಂದು ಶಿವಾಗಮಗಳಲ್ಲಿಯೂ ಇತಿಹಾಸಗಳಲ್ಲಿಯೂ ಪ್ರಖ್ಯಾತಿಯನ್ನು ಪಡೆದಿರುವ ಕೊಲ್ಲಿಪಾಕಿ ಸೋಮನಾಥ, ವಟಕ್ಷೇತ್ರ ಸಿದ್ಧೇಶ್ವರ, ದ್ರಾಕ್ಷಾರಾಮ ರಾಮನಾಥ, ಶ್ರೀಶೈಲ ಮಲ್ಲಿಕಾರ್ಜುನ ಮತ್ತು ಭೂಕೈಲಾಸವೆಂದು ವಿಖ್ಯಾತಿಯನ್ನೈದಿದ ಶ್ರೀ ಕಾಶೀ ವಿಶ್ವನಾಥ ಈ ಲಿಂಗಗಳಿಂದ ಆವಿರ್ಭವಿಸಿ ವೀರಶೈವ ಸಿದ್ಧಾಂತವನ್ನು ಸ್ಥಾಪಿಸಿದವಿಷಯವು ಶಿವಾಗಮಗಳಲ್ಲಿ ಘಂಟಾಘೋಷವಾಗಿ ಪ್ರತಿಪಾದಿಸಲ್ಪಟ್ಟಿರುವುದು ಸರ್ವ ಜನ ವಿದಿತವಾಗಿಯೇ ಇರುತ್ತದೆ. ಈ ಜಗದಾಚಾರ್ಯರು ಅಗಸ್ತ್ಯ, ದಧೀಚಿ, ವ್ಯಾಸ, ಗೌತಮ, ಸಾನಂದ, ದೂರ್ವಾಸ, ಕಶ್ಯಪ, ಉಪಮನ್ಯು, ಹರಕಂಠ ಮುಂತಾದ ಪ್ರಾಚೀನಮಹರ್ಷಿಗಳ ಪ್ರಾರ್ಥನಾನುಸಾರವಾಗಿ ಅವರಿಗೆ ಲಿಂಗಧಾರಣವನ್ನು ಮಾಡಿ ಅವರಿಂದ ಸ್ತುತಿಸಲ್ಪಟ್ಟು ಜಗದ್ವಂದ್ಯರಾಗಿ ಹೋದವಿಷಯವು ಪಾಶುಪತತಂತ್ರ, ಕಾಶೀಖಂಡ, ಶ್ರೀ ಶೈಲಖಂಡ ಮುಂತಾದ ಗ್ರಂಥಗಳಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿರುವ ವಿಷಯವನ್ನು ವೀರಶೈವ ಧರ್ಮಶಾಸ್ತ್ರ ತತ್ವಜ್ಞರೆಂದು ಜಗದ್ವಿಖ್ಯಾತರಾದ ಹಾಗೂ ಕಲಕತ್ತಾ ಗವರ್ನಮೆಂಟಿನವರಿಂದ ಸನ್ಮಾನಿಸಲ್ಪಟ್ಟ "ಸಾಹಿತ್ಯತೀರ್ಥ" ಎಂಬ ಪದವೀಪ್ರತಿಷ್ಠಿತರಾದ ನಾಗನೂರು ಬೃಹನ್ಮಠಾಧ್ಯಕ್ಷ **ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು** ತಮ್ಮ ಭಾಷಣವೊಂದರಲ್ಲಿ ಸಪ್ರಮಾಣವಾಗಿ ಅಪ್ಪಣೆ ಕೊಡಿಸಿರುವಿಕೆಯು ದರ್ಶನೀಯವಾದ.ದಾಗಿದೆ. ಮತ್ತು ಸ್ಕಾಂದಪುರಾಣಾಂತರ್ಗತ ಶಂಕರಸಂಹಿತೆಯಲ್ಲಿ ಪರಶಿವನು ಜಗದ್ಗುರು ಪಂಚಾಚಾರ್ಯರ ಉತ್ಪತ್ತಿಯ ವಿಷಯವನ್ನು ಕುರಿತು ದೇವಿಯೊಡನೆ—

ಅತಃಪರಂಪ್ರವಕ್ಷ್ಯಾಮಿ ಪಂಚಾಚಾರ್ಯಸಮುದ್ಭವಂ |
ತೇಷಾಂನಾಮಾನಿ ದೇವಿತ್ವಂ ಶೃಣು ನಿಶ್ಚಲಚೇತಸಾ ||
ಘಂಟಾಕರ್ಣ ಗಣಶ್ರೇಷ್ಠೋ ಗಜಕರ್ಣೋ ದ್ವಿತೀಯಕಃ |
ತೃತೀಯೋ ರೇಣುಕಃ ಖ್ಯಾತಃ ಚತುರ್ಥೋ ದಾರುಕಸ್ತಥಾ ||
ಪಂಚಮೋ ವಿಶ್ವಕರ್ಣಸ್ತು ಪಂಚಾರಾಧ್ಯಾ ಇತಿಸ್ಮೃತಾಃ |
ತ ಏವಯುಗಭೇದೇನ ಪ್ರತಿನಾಮಾನ್ಯುಪಾಗತಾಃ ||
ಏಕಾಕ್ಷರೋ ದ್ವ್ಯಕ್ಷರಶ್ಚ ತ್ರ್ಯಕ್ಷರಶ್ಚತುರಕ್ಷರಃ |
ಪಂಚಾಕ್ಷರ ಇತಿಪ್ರೋಕ್ತಾಸ್ತೇತಾಯಾಂ ಮೇನಕಾತ್ಮಜೇ ||
ದ್ವಾಪರೇ ಚೈಕವಕ್ತ್ರಶ್ಚ ದ್ವಿಮುಖಸ್ತ್ರಿಮುಖಸ್ತಥಾ |
ಚತುರ್ಮುಖಃ ಪಂಚಮುಖಶ್ಚೇತಿತೇ ವಿಶ್ರುತಾಗಣಾಃ ||
ಏಕೋರಾಮಃ ಪಂಡಿತಾರ್ಯಸ್ತಥಾ ರೇವಣಸಿದ್ಧರಾಟ್ |
ತಥಾ ಮರುಳಸಿದ್ಧೇಶೋ ವಿಶ್ವಾರಾಧ್ಯ ಇತಿಕ್ರಮಾತ್ ||
ಭವಿತಾರಃ ಪ್ರವಕ್ಷ್ಯಾಮಿ ಶೃಣು ತಜ್ಜನನಕ್ರಮಂ |
ದ್ರಾಕ್ಷಾರಾಮೇ ರಾಮನಾಥಲಿಂಗಾದ್ಯುಗಚತುಷ್ಟಯೇ ||
ಏಕೋರಾಮಸ್ಯ ಜನನಮಾಪಾಶಸ್ತು ಹಿಮಾಲಯೇ |
ಸುಧಾಕುಂಡಾಖ್ಯ ಸುಕ್ಷೇತ್ರೇ ಮಲ್ಲಿಕಾರ್ಜುನ ಲಿಂಗತಃ ||
ಜನನಂ ಪಂಡಿತಾರ್ಯಸ್ಯ ಶಿವಾಶಕ್ತ್ಯೇಗಿರೌ ಶಿವೇ |
ತಥಾ ರೇವಣಸಿದ್ಧಸ್ಯ ಕೊಲ್ಲಿಪಾಕಿ ಪುರೋತ್ತಮೇ ||
ಸೋಮೇಶಲಿಂಗಾಜ್ಜನನಮಾಸೀತ್ ಕದಳೀಪುರೇ |
ತದ್ವನ್ಮರುಳಸಿದ್ಧಸ್ಯ ವಟಕ್ಷೇತ್ರೇಮಹತ್ತರೇ |
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ |
ಕಾಶ್ಯಾಂ ವಿಶ್ವೇಶ್ವರಾಲ್ಲಿಂಗಾದ್ವಿಶ್ವಾರಾಧ್ಯಸ್ಯಸಂಭವಃ |
ಸ್ಥಾನಂ ಶ್ರೀ ಕಾಶಿಕಾಕ್ಷೇತ್ರೇ ಶೃಣು ಪಾರ್ವತಿ ಸಾದರಂ ||
ಕೃತಾದ್ಯುಗಚತುಷ್ಕೇತೇ ಪಂಚಾರಾಧ್ಯಾ ಯಥಾವಿಧಿ |

ಈ ರೀತಿಯಾಗಿ ಚತುರ್ಯುಗಗಳಲ್ಲಿಯೂ ಈ ಭಗವತ್ಪಾದರು ಮೇಲೆ ಉದಾಹರಿಸಲ್ಪಟ್ಟಂತೆ ಕ್ರಮವಾಗಿ ಆಯಾ ಸ್ಥಾನಗಳಲ್ಲಿ ರಾರಾಜಿಸುತ್ತಿರುವ ಲಿಂಗಗಳಿಂದ ಅವತರಿಸಿ ಭೂಮಂಡಲವನ್ನೆಲ್ಲಾ ಸಂಚರಿಸಿ ಶಿವಸಿದ್ಧಾಂತವನ್ನು ಪ್ರಚಾರಮಾಡಿ ಮಹೀಮಂಡಲಕ್ಕೆ ಮಕುಟಮಣಿಪ್ರಾಯವಾದ ಈ ಭಾರತವರ್ಷದಲ್ಲಿಯೇ ಪಂಚಧರ್ಮಪೀಠಗಳನ್ನು ಸ್ಥಾಪಿಸಿರುತ್ತಾರೆ. ಪ್ರಾಚೀನಕಾಲದಲ್ಲಿ ಇಡೀ ಭಾರತವರ್ಷವೆಲ್ಲಾ ವೀರಶೈವಮಯವಾಗಿತ್ತೆಂಬುದಕ್ಕೆ ಪ್ರಾಚೀನಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದು ಆಸೇತು ಹಿಮಾಚಲ ಪರ್ಯಂತವಾಗಿಯೂ ಈ ಪೂಜ್ಯಪಾದರ ಸಿಂಹಾಸನಗಳು ಖ್ಯಾತಿಯನ್ನು ಹೊಂದದೆ ವರ್ತಮಾನಕಾಲ ಪರ್ಯಂತವೂ ರಾರಾಜಿಸುತ್ತಿರುವುದೇ ಬಲವಾದ ಪ್ರಮಾಣವಾಗಿರುತ್ತದೆ.

(ಸಶೇಷ.)

ಚಾಮರಾಜನಗರದ ತಾಲ್ಲೂಕು ಕುದೇರು.

ಕಾಲರಾ ಇನಾಕುಲೇಷನ್ ಆಫೀಸರವರಾದ ಮ|| ರಾ|| ಡಿ. ಶ್ರೀನಿವಾಸನ್‌ರವರು ತಾ. 10 ಮತ್ತು 12 ರಲ್ಲಿ ಕುದೇರುಗ್ರಾಮಕ್ಕೆ ಇನಾಕುಲೇಷನ್ ಮಾಡುವ ಕೆಲಸವಾಗಿ ಬಂದಿದ್ದರು. ಛೇರ್ಮನ್ನರವರಾದ ಮ|| ರಾ|| ಕೆ. ವಿ. ಶಾಂತವೀರಪ್ಪನವರು ಈ ಎರಡು ದಿವಸವೂ ಎಲ್ಲಾ ಕಾಲದಲ್ಲಿಯೂ ಇವರ ಸಂಗಡ ಇದ್ದು ಇವರಿಗೆ ತಮ್ಮ ಶಕ್ತಿಗನುಗುಣವಾಗಿ ಪ್ರತಿಯೊಂದು ವಿಧವಾದ ಸಲಹೆಯನ್ನೂ ಮಾಡಿಕೊಟ್ಟರು. ಮ|| ರಾ|| ಕೆ. ವಿ. ಶಾಂತವೀರಪ್ಪನವರು ಈ ಗ್ರಾಮದಲ್ಲಿ ಕಾಲರಾರೋಗ ತಲೆದೋರದಂತೆ ಮಾಡುವುದಕ್ಕಾಗಿ ಗ್ರಾಮನೈರ್ಮಲ್ಯ ವಿಚಾರದಲ್ಲೂ ಜನರಿಗೆ ತಕ್ಕ ಎಚ್ಚರಿಕೆಯನ್ನು ಕೊಡುವುದರಲ್ಲಿಯು ಸಹ ಬಹು ಶ್ರಮವನ್ನು ವಹಿಸಿಕೊಂಡು ಗ್ರಾಮದ ಸೌಖ್ಯವೇ ತಮ್ಮ ಸೌಖ್ಯವೆಂದು ತಿಳಿದು ನಡೆಯುತ್ತಲಿರುತ್ತಾರೆ. ಸ್ವಲ್ಪ ಕಾಲದಲ್ಲಿಯೇ ಸುಮಾರು 500 ಜನಗಳಿಗೆ ಇನಾಕ್ಯುಲೇಷನ್ ಮಾಡಿಸಿರುವುದನ್ನು ನೋಡಿದರೆ ಮ|| ರಾ|| ಕೆ. ವಿ. ಶಾಂತವೀರಪ್ಪನವರು ಜನರಿಗೆ ಕೊಡುತ್ತಿದ್ದ ಪ್ರೋತ್ಸಾಹವೂ ಮ|| ರಾ|| ಡಿ. ಶ್ರೀನಿವಾಸನ್ನರವರ ಕಾರ್ಯಗೌರವವೂ ಶ್ರದ್ಧೆಯೂ ವ್ಯಕ್ತಪಡುತ್ತದೆ. ಹಾಲಿ ಕಾಲರಾ ತಗುಲಿದ್ದ ಎರಡು ಜನರಿಗೆ ಔಷಧಿಯನ್ನು ಕೊಡಿಸಿ ಗುಣಪಡಿಸಿರುತ್ತಾರೆ. ಇದೇ ರೀತಿ ಕಾಲರಾ ಹೆಚ್ಚಾಗಿರುವ ಇನ್ನೂ ಅನೇಕ ಕಡೆಗಳಲ್ಲಿ ಹೆಚ್ಚು ಶ್ರಮವನ್ನು ವಹಿಸಿ ಮ|| ರಾ|| ಡಿ. ಶ್ರೀನಿವಾಸನ್‌ರವರು ಕೆಲಸಮಾಡುತ್ತಿರುತ್ತಾರೆಂದು ತಿಳಿದುಬರುತ್ತದೆ. ದೇಹಶ್ರಮವನ್ನೂ, ಅಂಟುರೋಗದ ಹೆದರಿಕೆಯನ್ನೂ ಸಹ ಮ|| ರಾ|| ಡಿ. ಶ್ರೀನಿವಾಸನ್‌ರವರು ಗಣನೆಗೆತಾರದೆ ಕೆಲಸಮಾಡಿ ಜನರ ಮತ್ತು ಸರ್ಕಾರದವರ ಎಲ್ಲಾ ವಿಧವಾದ ಪ್ರೋತ್ಸಾಹಕ್ಕೂ ಅರ್ಹರಾಗಿದ್ದಾರೆಂದು ತಿಳಿಸಲು ಸಂತೋಷಿಸುತ್ತೇನೆ.

ಪ್ರತ್ಯಕ್ಷದರ್ಶಿ,
ಕಲ್ಕುಣೆ ಮಹಾದೇವಪ್ಪ, ಮೈಸೂರು.

ವಿವಾಹಮಹೋತ್ಸವ, ಬಿದರಕೋಟಿ.

ನೈಜಾಂ ಸ್ಟೇಟ್ ಬಿದರಕೋಟಿನಿವಾಸಿಗಳಾದ ಮ|| ರಾ|| ಸಂಗಪ್ಪಕೌರೆಯವರು ತಮ್ಮ ಪುತ್ರನಾದ ಲಿಂಗಪ್ಪನಿಗೆ ಉಮನಾಬಾದ್ ತಾಲ್ಲೂಕು ವಿಸೂಫವಡಗಾಂವ್ ಗ್ರಾಮದ ಮ|| ರಾ|| ಕೇಶವರಾವ್ ಗಣಪತರಾವ್ ಪಾಟೀಲ ಇವರ ಪುತ್ರಿ ಹ|| ಕುಂ|| ಸೋ|| ಚಿ|| ಸೌ|| ಪದ್ಮಾವತಿಯೆಂಬ ಕನ್ಯೆಯನ್ನು ತಂದು ತಮ್ಮ ಗೃಹದಲ್ಲಿ ವಿವಾಹಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು. ಶ್ರೀ|| ಷ|| ಬ್ರ|| ಬಿದರ ಬೃಹನ್ಮಠಾಧ್ಯಕ್ಷರಾದ ರಾಚೋಟಿಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಮಸ್ತ ಕಾರ್ಯಗಳೂ ಸಾಂಗವಾಗಿ ನೆರವೇರಿದುವು. ಮುಧೋಳ ಶ್ರೀ ಶಿವಲಿಂಗಪಾಠಶಾಲಾಧ್ಯಾಪಕ ವೇ|| ವಂದಲಿವಿರೂಪಾಕ್ಷಶಾಸ್ತ್ರಿಗಳೂ ಶಿವಣಗಿಕರ ವೇ|| ಶಿವಶಂಕರಶಾಸ್ತ್ರಿಗಳೂ ಪೌರೋಹಿತ್ಯವನ್ನು ನಡೆಯಿಸಿದರು. ಅಲ್ಲಿ ಸೇರಿದ್ದ ಕೆಲವು ಪಂಡಿತರು ವೀರಶೈವರ ಸುಧಾರಣೆಯ ಬಗ್ಗೆ ಶ್ಲಾಘನೀಯಗಳಾದ ಭಾಷಣಗಳನ್ನು ಮಾಡಿದರು. ವೇ|| ವಂದಲಿ ವಿರೂಪಾಕ್ಷಶಾಸ್ತ್ರಿಗಳು ವೀರಶೈವಮತೋದ್ಧಾರಕ್ಕಾಗಿ ಜನ್ಮವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಕಾಣಿಕೆಯ[illegible] ಸಮರ್ಪಿಸಬೇಕೆಂದು ಸೂಚಿಸಿದ ಪ್ರಕಾರ [illegible]ರು ೨ ರೂ. ಗಳನ್ನು ಸಮರ್ಪಿಸಿದರ.

[illegible]ರಾಮ ಗುಣಾಜಿ ಸಾಳೆ, ಬಿದರಕೋಟಿ.

ದಿಲ್ಲಿಪಿತೂರಿ ಮೊಕದ್ದಮೆ.

ಮಾಫಿಸಾಕ್ಷಿ.

ಕ್ರಾಂತಿಪಕ್ಷದ ಗುಟ್ಟೆಲ್ಲ ಹೊರಬಿತ್ತು.

ನ್ಯಾಷನಲ್ ಬ್ಯಾಂಕಿನ ಮೇಲೆ ದಾಳಿಮಾಡುವ ಪ್ರಯತ್ನ.

ಕೈಲಾಸಪತಿ ಎಂಬ ಮಾಫಿಸಾಕ್ಷಿಯು ಹೇಳಿದ್ದೇನೆಂದರೆ:— ನಾವು ಲಾಹೋರಿನಲ್ಲಿರುವ ನ್ಯಾಷನಲ್‌ಬ್ಯಾಂಕಿಗೆ ದಾಳಿಮಾಡಬೇಕೆಂದು ಹಂಚಿಕೆಮಾಡಿ ಎಲ್ಲ ಆಯುಧಗಳನ್ನೂ ಸ್ವಚ್ಛವಾಗಿ ತೊಳೆದುಕೊಂಡು ಎಲ್ಲರೂ ಹಂಚಿಕೊಂಡಿದ್ದೆವು. ಆಜಾದನು ದಾಳಿಮಾಡುವುದರಲ್ಲಿ ಮುಖಂಡನಾಗಿರಬೇಕೆಂದೂ, ಅವನೂ ಅವನ ಸಂಗಡಿಗರೂ ಬ್ಯಾಂಕಿನಲ್ಲಿ ಹಣವನ್ನು ದೋಚುತ್ತಿರುವಾಗ ಹಂಸರಾಜ, ಭೋರ, ರಾಜಗುರು ಇವರು ಬ್ಯಾಂಕಿನ ಸುತ್ತಲೂ ಇತರರನ್ನು ಬಿಡದಂತೆ ಕಾವಲಿರಬೇಕೆಂದೂ, ನಾನು ಮತ್ತು ಭಗತ್‌ಸಿಂಗನು ಟೆಲಿಫೋನನ್ನು ನಮ್ಮ ಹತೋಟಿಯಲ್ಲಿಟ್ಟುಕೊಂಡಿರಬೇಕೆಂದೂ ಯೋಚಿಸಿದ್ದೆವು. ಸಮಯಬಂದರೆ ಟೆಲಿಫೋನ್ ತಂತಿಯನ್ನು ಕತ್ತರಿಸಬೇಕೆಂದೂ, ಜಯಗೋಪಾಲನೂ, ಕಿಶೋರಿಲಾಲನೂ ಬ್ಯಾಂಕಿನಿಂದ ಹಣವನ್ನು ತರಬೇಕೆಂದೂ ಮನೋಹರಲಾಲನು ಬ್ಯಾಂಕಿನ ಹತ್ತಿರ ಮೋಟಾರು ತಂದುಕೊಡಲಿ ಅವರನ್ನು ಕರೆದುಕೊಂಡು ಹೋಗಬೇಕೆಂದೂ ನಿಶ್ಚಯಿಸಿದ್ದೆವು. ಗೊತ್ತಾದ ದಿವಸ ಬ್ಯಾಂಕಿನ ಹತ್ತಿರ ಹೋದೆವು. ಅಂದು ಭಗತ್‌ಸಿಂಗನೂ ಮನೋಹರಲಾಲನೂ ಬಾರದ ಕಾರಣ ಹಂಚಿಕೆಯು ಸಿದ್ಧಿಸಲಿಲ್ಲ. ನನಗೆ ಬಂದೂಕ ಉಪಯೋಗಿಸುವುದು ಗೊತ್ತಿರಲಿಲ್ಲ. ಆಜಾದನಿಂದ ಕಲಿತುಕೊಂಡೆನು. ಆ ಮೇಲೆ ನಾನು ಅಮೃತಸರಕ್ಕೆ ಹೋಗಿ ರಘುನಾಥನೆಂದು ಹೆಸರಿಟ್ಟುಕೊಂಡೆನು. ಸಾಂಡರ್ಸನನ್ನು ಕೊಲೆಮಾಡಿದ ಮೇಲೆ ಭಗತ್‌ಸಿಂಗ್ ಮತ್ತು ಸುಖದೇವರು ನನ್ನನ್ನು ಕಾಣಲಿಕ್ಕೆ ಅಲ್ಲಿಗೆ ಬಂದರು. 1929 ನೆಯ ಇಸವಿ ಫೆಬ್ರುವರಿಯಲ್ಲಿ ದಿಲ್ಲಿಗೆ ಬಂದು ಯಮುನಾನದಿಯ ದಡದ ಮೇಲೆ ಕಾಶಿರಾಮನ ಜೊತೆಯಲ್ಲಿ ವಾಸಮಾಡಲು ಆರಂಭಿಸಿದೆನು. ಅಲ್ಲಿ ವಿಮಲಪ್ರಸಾದ, ಭವಾನಿಸಹಾಯ, ನಂದಿಕಿಶೋರ್ ಇವರ ಸ್ನೇಹ ಮಾಡಿಕೊಂಡೆನು.

ಬಾಂಬುಗಳ ತಯಾರಿ.

1929 ನೆಯ ಇಸವಿ ಜುಲೈನಲ್ಲಿ ಬಾಂಬುತಯಾರಿಸಲು ಪ್ರಾರಂಭಿಸಿದೆವು. ಬಾಂಬುಗಳಲ್ಲಿ ತುಂಬುವ ಪೆಕ್ರಿಕ್‌ಆಸಿಡ್ಡನ್ನು ತಯಾರಿಸಬೇಕೆಂದು ನಿಶ್ಚಯಿಸಿ, ಆ ಕೆಲಸಕ್ಕೆ ವೈಶಂಪಾಯನನ್ನು ನೇಮಿಸಿದೆವು. ಅವನು ಅದಕ್ಕೆ ಬೇಕಾದ ಉಪಕರಣಗಳನ್ನೆಲ್ಲಾ ತಂದನು. ಜಿ. ಎಸ್. ಪೋತದಾರ್, ಎಸ್. ಆರ್. ಮಲ್ಕಾಪುರಕರ್, ಆಜಾದ್, ವೈಶಂಪಾಯನ, ಭಗವಾನ್‌ದಾಸ್ ಮತ್ತು ನಾನು ಬಾಂಬ್‌ತಯಾರಿಸಲು ಪ್ರಯತ್ನಿಸಿದೆವು. ಮೊದಲು ಸಾಧ್ಯವಾಗಲಿಲ್ಲ. ಜಿ. ವಿ. ಟಿಲಂಗರು ಹೇಳಿದಪ್ರಕಾರ ಕೊಹೆನ್ ಪ್ರಾಕ್ಟಿಕಲ್‌ಕೆಮಿಸ್ಟ್ರಿ ಎಂಬ ಗ್ರಂಥವನ್ನು ನೋಡಿ ಬಾಂಬುತಯಾರಿಸುವದನ್ನು ಕಲಿತುಕೊಂಡೆವು. ಪಾಸಿಂಗ್‌ಶೋಸಿಗರೇಟಿನ ಟಿನ್ ಡಬ್ಬಿಯನ್ನು ಉಪಯೋಗಿಸಿ ಬಾಂಬುಮಾಡುತ್ತಿದ್ದೆವು. ಮೊದಲು ಆತ್ಮರಕ್ಷಣಾರ್ಥವಾಗಿ ಬಾಂಬುಗಳನ್ನು ತಯಾರಿಸಿದ್ದೆವು. ವೈಶಂಪಾಯನ ಮೊದಲಾದವರು ಅವುಗಳನ್ನು ಗ್ವಾಲಿಯರ್‌ಪಟ್ಟಣದ ಒಂದು ಗುಡ್ಡದ ಹತ್ತಿರಹೋಗಿ ಅವು ಸರಿಯಾಗಿ ಹಾರುವುವೋ ಇಲ್ಲವೋ ಪರೀಕ್ಷಿಸಬೇಕೆಂದು ಅಲ್ಲಿ ಹಾರಿಸಿದರು. ಅವು ಸರಿಯಾಗಿ ಹಾರಿದಕಾರಣ ತಮ್ಮ ಕಾರ್ಯವು ಜಯಪ್ರದವಾಯಿತೆಂದು ಹಿಂದಿರುಗಿಬಂದರು. ಆಜಾದನ ಹೇಳಿಕೆಯಪ್ರಕಾರ 1929 ನೆಯ ಇಸವಿ ಸೆಪ್ಟಂಬರ್ ತಿಂಗಳಿನಲ್ಲಿ ಕ್ರಾಂತಿಪಕ್ಷವನ್ನು ಸುವ್ಯವಸ್ಥೆಮಾಡಲು ದಿಲ್ಲಿಗೆ ಹೋದೆನು. 1929 ನೆಯ ಇಸವಿಯ ನವಂಬರ್ ತಿಂಗಳಿನಲ್ಲಿ ಪಿಗವು, ಭವಾನಿಸಹಾಯ, ಭಗೀರಥ, ಕಾಶೀರಾಮ ಇವರು ಹಿಂದುಸ್ಥಾನಕ್ರಾಂತಿಪಕ್ಷದ ಮೆಂಬರರಾಗಿದ್ದರು. ನಾನು ದಿಲ್ಲಿಗೆ ಬಂದ ಒಂದು ವಾರದ ತರುವಾಯ ಒಂದು ಕಬ್ಬಿಣದ ಬಾಂಬುಗುಂಡನ್ನು ವಿಮಲಪ್ರಸಾದನಿಗೆ ತೋರಿಸಿ ಇಂಥ ಗುಂಡುಗಳನ್ನು ಇಲ್ಲಿ ತಯಾರಿಸುವಿರಾ? ಎಂದು ಕೇಳಿದೆನು. ಅದಕ್ಕವನು ನಾವು ಅವುಗಳನ್ನು ತಯಾರಿಸಲು ಪ್ರಯತ್ನಿಸಿದೆವು. ಇದನ್ನು ಕಂಡು ಕೆಲವು ಕಮ್ಮಾರರಿಗೆ ಅನುಮಾನವಾದಕಾರಣ ಆ ಕಾರ್ಯವನ್ನು ಬಿಟ್ಟುಬಿಟ್ಟೆವು ಎಂದನು. ಅಕ್ಟೋಬರ್ ತಿಂಗಳಿನಲ್ಲಿ ಭಗವತೀಚರಣನ ಪರಿಚಯಮಾಡಿಕೊಂಡೆನು. ಅವನು ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ತಪ್ಪಿಸಿಕೊಂಡುಬಂದಿದ್ದನು. ಭಗವತೀಚರಣನು ಎಲೆಕ್ಟ್ರಿಕ್ ಬ್ಯಾಟರಿಯಿಂದ ವೈಸರಾಯರ ಗಾಡಿಯನ್ನು ಒಡೆಯುವ ಹಂಚಿಕೆಮಾಡುತ್ತಿದ್ದನು. ಈ ವಿಷಯವು ಅವನಿಂದಲೇ ಗೊತ್ತಾಯಿತು. ಲಾಹೋರ್ ಪೋಲೀಸಧಿಕಾರಿಯಾದ ಖಾನ್ ಬಹದ್ದೂರ್ ಅಬ್ದುಲ್‌ಅಜೀಜನನ್ನೂ ಹಾರ್ಟನ್ ಸಾಹೇಬನನ್ನೂ, ಸಂಯುಕ್ತಪ್ರಾಂತದ ಬೈರಕ್ಷಬಿಯನ್ನೂ ಕೊಲ್ಲಬೇಕೆಂದು ನನ್ನ ಉದ್ದೇಶವಿತ್ತು. ಈ ವಿಷಯವನ್ನು ಭಗವತಿಚರಣನ ಸಂಗಡ ಆಲೋಚನೆಮಾಡಿದೆನು. ಅವನು ಇವೆಲ್ಲ ಸಣ್ಣ ಕೆಲಸಗಳು; ಇಂಥ ಕೆಲಸಗಳಿಗೆ ನಮ್ಮ ಬುದ್ಧಿಶಕ್ತಿಯನ್ನು ಖರ್ಚುಮಾಡಬಾರದು. ನಾವು ಪ್ರಯತ್ನಮಾಡಿ ವೈಸರಾಯರು ಬರುವಗಾಡಿಯನ್ನು ಒಡೆಯಬೇಕೆಂದು ಹೇಳಿದನು. ಅನಂತರ ಕಾನ್ಪುರದಲ್ಲಿ ನಮ್ಮ ಪಕ್ಷದ ಮಿಟಿಂಗ್‌ಮಾಡಿದೆವು. ಆಗ ತಿವಾರಿಯು ಸಂಯುಕ್ತಪ್ರಾಂತದ ವ್ಯವಸ್ಥಾಪಕನಾಗಬೇಕೆಂದೂ, ನಾನು ದಿಲ್ಲಿ ಮತ್ತು ರಜಪೂತಸ್ಥಾನದ ವ್ಯವಸ್ಥಾಪಕನಾಗಬೇಕೆಂದೂ, ಆಜಾದನು ದಳಪತಿಯಾಗಿರಬೇಕೆಂದೂ ನಿರ್ಣಯಿಸಲಟ್ಟಿತು. ಲಾಹೋರಾಪಿತೂರಿ ಮೊಕದ್ದಮೆಯಿಂದ ನಮ್ಮ ಪಕ್ಷಕ್ಕೆ ಸ್ವಲ್ಪ ಬಲವುಕಡಿಮೆಯಾದಕಾರಣ, ದಿಲ್ಲಿ ಮತ್ತು ವಾಯುವ್ಯಪ್ರಾಂತಗಳಲ್ಲಿ ಲೂಟಿಮಾಡಿ ಫಂಡುಕೂಡಿಸಬೇಕೆಂದು ನಿರ್ಣಯಿಸಿದೆವು.

1929 ನೆಯ ಡಿಸಂಬರ್ ತಿಂಗಳಿನಲ್ಲಿ ಯಶಪಾಲನೂ ಮತ್ತು ಭಗವತಿಚರಣನೂ ವೈಸರಾಯರ ಗಾಡಿಯನ್ನು ಒಡೆಯುವ ವಿಷಯವನ್ನು ನಿಶ್ಚಯಿಸುವುದಕ್ಕಾಗಿ ಕಾನ್ಪುರಕ್ಕೆ ಹೋದರು. ಅವರು ಅಲ್ಲಿಂದ ದಿಲ್ಲಿಗೆ ಹಿಂದಿರುಗಿದ ಮೇಲೆ ವೈಸರಾಯರ ಗಾಡಿಗೆ ಬಾಂಬುಹಾಕಲೇ ಬೇಕೆಂದು ನಿಶ್ಚಯಿಸಿರುವುದಾಗಿ ತಿಳಿದುಬಂದಿತು. ಪೋಲೀಸರು ಕ್ರಾಂತಿಪಕ್ಷದವರನ್ನು ಹುಡುಕುತ್ತಿರುವುದರಿಂದ ದಿಲ್ಲಿ ಬಿಟ್ಟು [illegible]ಗಬೇಕೆಂದು ನನಗೆ ತಿಳುಹಿಸಿದರು. ನನ್ನ ಹತ್ತಿರ [illegible]ದ ಅಜ್ಮೀರದಲ್ಲಿರುವ ಅರ್ಜುನರಾಲ್‌ಸೇಠಿ[illegible] ಹಣವನ್ನು ತೆಗೆದುಕೊಂಡುಬರುವಂತೆ ಬಿ. ಪಿ. ಜೈ[illegible] ಕಳುಹಿಸಿದೆನು. ಸೇಠಿಯು ತನ್ನ ಹತ್ತಿರ ಹಣವಿಲ್ಲವೆಂದೂ ನಾನು ಕೆಲವು ಆಯುಧಗಳನ್ನು ಕಳುಹಿಸಿದರೆ ಎಲ್ಲಿಯಾದರೂ ಬಡಿದು ಹಣಕೂಡಿಸುವನೆಂದೂ ಬಿ. ಪಿ. ಜೈನನ ಸಂಗಡ ಹೇಳಿಕಳುಹಿಸಿದನು. 1929 ನೆಯ ಇಸವಿ ಡಿಸಂಬರ್ 22 ರಲ್ಲಿ ಆಜಾದನೂ ಮತ್ತು ವೈಶಂಪಾಯನೂ ಕಾನ್ಪುರದಿಂದ ದಿಲ್ಲಿಗೆ ಬಂದು ಕ್ವಾಡಿಸಿಕೋಟೆದಲ್ಲಿ ಒಂದು ಮಿಟಿಂಗ್‌ಮಾಡಿದರು. ಆ ಮಿಟಿಂಗಿಗೆ ಅಜೀಜ್, ಯಶಪಾಲ, ವೈಶಂಪಾಯನ, ಬಿ. ಬಿ. ತಿವಾರಿ ಮತ್ತು ಭಗವತಿಚರಣ ಇವರು ಹೋಗಿದ್ದರು. ವೈಸರಾಯರ ಗಾಡಿಯನ್ನು ಒಡೆಯುವ ವಿಷಯದಲ್ಲಿ ಬಹು ಹೊತ್ತು ಚರ್ಚೆನಡೆಯಿತು. ಕಾಂಗ್ರೆಸ್ ಮುಖಂಡರಾದ ಶ್ರೀಯುತ ಗಣೇಶಶಂಕರವಿದ್ಯಾರ್ಥಿ ಮೊದಲಾದವರು ಈ ಕಾರ್ಯವನ್ನು ನಿಷೇಧಿಸುವುದರಿಂದ ಸದ್ಯಕ್ಕೆ ಆ ಕೆಲಸವನ್ನು ನಿಲ್ಲಿಸಬೇಕೆಂದೆನು. ಭಗವತಿಚರಣ, ಯಶಪಾಲ, ತಿವಾರಿ ಇವರು ವೈಸರಾಯರ ಗಾಡಿಯನ್ನು ಒಡೆಯಲೇಬೇಕೆಂದು ಒತ್ತಾಯಮಾಡಿದರು. ಆದರೆ ಸದ್ಯಕ್ಕೆ ಆ ಕೆಲಸ ಮಾಡಬಾರದೆಂದು ನಿಶ್ಚಯಿಸಲಾಯಿತು. ಮಿಟಿಂಗಿನಲ್ಲಿ ಈ ವಿಷಯವು ಇತ್ಯರ್ಥವಾಗುವುದರೊಳಗೆ ಯಶಪಾಲನು ಹೊರಟುಹೋದನು. ಮಿಟಿಂಗ್ ಪೂರೈಸಿದ ಮೇಲೆ ಭಗವತಿಚರಣನು ತನ್ನ ಮನೆಯಿಂದ ಕೆಲವು ಹಸ್ತಪತ್ರಿಕೆಗಳನ್ನೂ ಎರಡು ಮುದ್ರೆಗಳನ್ನೂ ತಂದನು. ವೈಸರಾಯರ ಗಾಡಿ ಒಡೆದಮೇಲೆ ಆ ಹಸ್ತಪತ್ರಿಕೆಗಳನ್ನು ಹಂಚಬೇಕೆಂಬುದೇ ಅವನ ಉದ್ದೇಶ. ಅದರಲ್ಲಿ ವೈಸರಾಯರು ಹಿಂದುಸ್ಥಾನಕ್ಕೆ ಪರಮಶತ್ರುಗಳೆಂದು ಬರೆಯಲ್ಪಟ್ಟಿದ್ದಿತಲ್ಲದೆ ವೈಸರಾಯರ ಗಾಡಿ ಒಡೆಯುವುದರ ಕಾರಣಗಳು ಬರೆಯಲ್ಪಟ್ಟಿದ್ದುವು. ನಾನು ಆ ಹಸ್ತಪತ್ರಿಕೆಗಳನ್ನು ಮನೆಗೆ ತೆಗೆದುಕೊಂಡುಹೋಗಿ ಹಾಳುಮಾಡಿಬಿಟ್ಟೆನು. ಡಿಸಂಬರ್ 23 ನೆಯ ತಾರೀಖಿನ ದಿವಸ ರಾತ್ರಿ 9 ಗಂಟೆಗೆ ವೈಸರಾಯರ ಗಾಡಿಗೆ ಬಾಂಬು ಬಿದ್ದಿತೆಂದು ವರ್ತಮಾನವನ್ನು ವೈಶಂಪಾಯನನು ತಂದನು. ಮಾರನೇ ದಿವಸವೇ ಲಾಹೋರಿಗೆ ಹೋದರು. ನಾನೂ ಆಜಾದರೂ ಪೋಲೀಸರಿಗೆ ಸಿಗಬಾರದೆಂದೂ, ನಲಗರ ಎಂಬ ಸ್ಥಳದ ರಾಮಚಂದ್ರಶರ್ಮರ ಹತ್ತಿರ ಇರಬೇಕೆಂದೂ ಅಲ್ಲಿಗೆ ಹೋಗಿ ಜನವರಿ 1 ನೆಯ ತಾರೀಖಿನ ವರೆಗೂ ಅಲ್ಲಿದ್ದೆವು.

ಪಾರ್ಟಿಮಿಟಿಂಗಿನ ಠರಾವಿಗೆ ವಿರೋಧವಾಗಿ ಕೆಲವರು ವೈಸರಾಯರ ಗಾಡಿಗೆ ಬಾಂಬು ಹಾಕಿದರು. ಯಶಪಾಲನು ಮಿಲಿಟರಿ ಡ್ರೆಸ್ ಹಾಕುತ್ತಿದ್ದುದರಿಂದ ಪೋಲೀಸರಿಗೆ ಪತ್ತೆಹತ್ತಿರಲಿಲ್ಲ. ವೈಸರಾಯರ ಗಾಡಿಗೆ ಬಾಂಬು ಹಾಕುವುದರಲ್ಲಿ ಯಶಪಾಲನೂ, ಭಗವತೀಚರಣನೂ ಮುಖ್ಯಭಾಗ ವಹಿಸಿದ್ದರೆಂದು ಆಜಾದನು ನನ್ನ ಸಂಗಡ ಹೇಳಿದನು. ಇದಕ್ಕಾಗಿ ಅವರು 4000 ರೂ. ಕೊಡಿಸಿದ್ದರು. ಈ ಹಣವನ್ನು ಒಬ್ಬ ಹಿಂದೂ ಕಂಟ್ರಾಕ್ಟರನೂ, ಹಿಂದುಸ್ಥಾನ ಟೈಮ್ಸ್ ಪತ್ರಿಕೆಯ ಸುದ್ದಿಗಾರನಾದ ಚಮನಲಾಲನೂ ಕೊಟ್ಟರು. ಅದಾದಮೇಲೆ ಯಶಪಾಲನ ಮೋಟಾರ್ ಸೈಕಲನ್ನು ಮುರಿದು ಯಮುನಾನದಿಯಲ್ಲಿ ಹಾಕಿದರು. ಲಾಹೋರ್ ಕಾಂಗ್ರೆಸ್ಸಿನಲ್ಲಿ ಮ|| ಗಾಂಧಿಯವರು ವೈಸರಾಯರನ್ನು ಪ್ರಶಂಸೆಮಾಡಿ ಪಾಸುಮಾಡಿದ ಠರಾವನ್ನೂ ಅಹಿಂಸಾತತ್ವವನ್ನೂ ನಿಷೇಧಿಸಿ ಹಿಂದುಸ್ಥಾನದಲ್ಲೆಲ್ಲ ಹಸ್ತಪತ್ರಿಕೆಗಳನ್ನು ಹಂಚಬೇಕೆಂದು ಒಂದು ಮಿಟಿಂಗಿನಲ್ಲಿ ತೀರ್ಮಾನವಾಯಿತು. ಭಗವತೀಚರಣನು ಆ ಹಸ್ತಪತ್ರಿಕೆಯ ನಕಲನ್ನು ಮಾಡಿದನು. ಅನಂತರ ಹಸ್ತಪತ್ರಿಕೆಗಳು ಜನವರಿ 25 ರಲ್ಲಿ ಹಂಚಲ್ಪಟ್ಟುವು. ಮಾರನೆಯ ದಿವಸವೇ ನಾನು ಅಜ್ಮೀರಕ್ಕೆ ಹೋಗಿ ಅಲ್ಲಿ ಅನೇಕರನ್ನು ನಮ್ಮ ಪಾರ್ಟಿಗೆ ಮೆಂಬರರನ್ನಾಗಿ ಮಾಡಿದೆನು.

ಅನಂತರ ಪುನಃ ಕಾನ್ಪುರದಲ್ಲಿ ಮಿಟಿಂಗ್ ನಡೆಯಿಸಿದೆವು. ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಸಿಕ್ಕಿಬಿದ್ದಿದ್ದ ಕೆ. ಎನ್. ತಿವಾರಿ, ಬಿ. ಕೆ. ಸಿಂಹ, ರಾಜಗುರು, ಭಗತ್‌ಸಿಂಗ್ ಇವರನ್ನು ಉಳಿಸುವ ಸಲುವಾಗಿ ಒಂದು ವಿಧವಾದ ಗ್ಯಾಸ್ (ವಾಯು) ವನ್ನು ತಯಾರಿಸಬೇಕೆಂದೂ ಅದನ್ನು ಲಾಹೋರ್ ಕೋರ್ಟಿನಲ್ಲಿ ಊದಿ ಅವರನ್ನು ಬಿಡಿಸಿಕೊಂಡು ಬರಬೇಕೆಂದೂ, ಸುಖದೇವ, ಮಹಾವೀರಸಿಂಹ, ಪ್ರೇಮದತ್ತ ಮತ್ತು ದೇಶರಾಜ ಇವರು ಪೋಲೀಸರಿಗೆ ಸುದ್ದಿ ಕೊಡುವರೆಂಬ ಅನುಮಾನವಿರುವುದರಿಂದ ಅವರನ್ನು ಕೊಲ್ಲಬೇಕೆಂದೂ ನಿರ್ಣಯಿಸಲ್ಪಟ್ಟಿತು. ಗ್ಯಾಸನ್ನು ತಯಾರಿಸುವ ಕೆಲಸವು ಯಶಪಾಲನ ಮೇಲೆ ಬಿತ್ತು. ಅದನ್ನು ತಯಾರಿಸುವುದು ಸಾಧ್ಯವಾಗದಕಾರಣ ಭಗತ್‌ಸಿಂಗ್ ಮೊದಲಾದವರನ್ನು ಉಳಿಸುವ ಯತ್ನವನ್ನು ಬಿಟ್ಟುಬಿಟ್ಟೆವು.

ಮಂಗಳೂರಿನಲ್ಲಿ ಶ್ರೀಯುತ ಸೇನಗುಪ್ತರವರ ದಿವ್ಯಭಾಷಣ.

ಗಾಂಧಿ ಇರ್ವಿನ್‌ರವರ ಒಪ್ಪಂದ.

ಸರ್ಕಾರದವರೊಡನೆ ಒಪ್ಪಂದಮಾಡಿಕೊಂಡು ಸತ್ಯಾಗ್ರಹವನ್ನು ನಿಲ್ಲಿಸಿದುದು ತಪ್ಪೆಂದೂ, ಕಾಂಗ್ರೆಸ್ಸಿನವರು ಸರ್ಕಾರದಿಂದ ಇನ್ನೂ ಹೆಚ್ಚಿನ ಷರತ್ತುಗಳನ್ನು ಪಡೆಯಬೇಕಾಗಿದ್ದಿತೆಂದೂ, ಭಾವಿಸುವವರು ಕಾಂಗ್ರೆಸ್ ಸಂಸ್ಥೆಯಲ್ಲಿ ಇನ್ನೂ ಕೆಲವರಿದ್ದಾರೆ. ಈ ತರಹದ ವಿಪರೀತ ಭಾವನೆಯಾಗುವಂತೆ ನಿಮ್ಮ ಮನಸ್ಸನ್ನು ಕಲುಷಿತಮಾಡುವವರೂ ಸಹ ನಿಮ್ಮ ಶತ್ರುಗಳಲ್ಲದೆ ಅನ್ಯರು ಯಾರೂ ಇಲ್ಲ. ಕಾಂಗ್ರೆಸ್ಸಿನಲ್ಲಿ ಬಲವಿಲ್ಲವೆಂದೂ, ದೊಡ್ಡ ಅಧಿಕಾರಿಗಳ ಅಹವಾಲಿಗೆ ಮನಸೋತು ಒಪ್ಪಂದಮಾಡಿಕೊಂಡರೆಂದೂ, ಕಾಂಗ್ರೆಸ್ಸಿನ ವಿಷಯದಲ್ಲಿ ಗೌರವಬುದ್ಧಿಯು ಕಡಿಮೆಯಾಗಲೆಂದೂ ಅವರು ಹೀಗೆ ಹೇಳುತ್ತಿರುವರು. ಆದರೆ ಅದರ ನಿಜಾಂಶವೇ ಬೇರೆ ಇದೆ. ಇಂಗ್ಲೆಂಡ್ ಮತ್ತು ಹಿಂದೂಸ್ಥಾನದಲ್ಲಿರುವ ಬ್ರಿಟಿಷ್‌ಸರ್ಕಾರವು ಕಾಂಗ್ರೆಸ್ಸಿನ ಶಕ್ತಿಗೆ ಸೋತುಹೋಯಿತೇ ಹೊರತು ಭಾರತೀಯರು ಸೋಲಲಿಲ್ಲ. ಯಾಕೆಂದರೆ ಸಾರ್ವಭೌಮರ ಪ್ರತಿನಿಧಿಗಳಾದ ವೈಸರಾಯರು ಇಂಗ್ಲೆಂಡ್ ಮೊದಲಾದ ಎಲ್ಲ ವಿದೇಶಗಳ ವಸ್ತ್ರಗಳನ್ನು ಬಹಿಷ್ಕರಿಸಬಹುದೆಂದು ಒಪ್ಪಿ[illegible] ದರು. ನೀವು ಈಗ ಶಾಂತರೀತಿಯಿಂದ ಪಿಕೆಟಿಂಗ್‌ನಡ[illegible] ಶಾಂತರೀತಿಯಿಂದ ಪಿಕೆಟಿಂಗ್‌ನಡೆಯಿಸಿದರೆ ಬ್ರಿಟಿಷ್ [illegible] ಸಿನ ಮೇಲೆ ಏನೂ ಪರಿಣಾಮವಾಗುವುದಿಲ್ಲವೆಂದು ಕೆಲವು ರಾಜನೀತಿನಿಪುಣರು ಯೋಚಿಸುವರು. ನಾನು ಇದನ್ನು ಒಪ್ಪುವುದಿಲ್ಲ. ಸತ್ಯಾಗ್ರಹಚಳವಳಿಯು ಜನಸಾಮಾನ್ಯರ ಹೃದಯವನ್ನು ವ್ಯಾಪಿಸಿದೆ ಎಂದೂ, ಜನರು ಒಂದಂಗುಲ ಸಹ ಇಂಗ್ಲಿಷ್‌ಬಟ್ಟೆಯನ್ನು ಮುಟ್ಟಲು ಇಚ್ಛಿಸುತ್ತಿಲ್ಲವೆಂದೂ ಖಾತ್ರಿಯಾದುದರಿಂದಲೇ ವೈಸರಾಯರು ಜೈಲಿನಲ್ಲಿದ್ದ ಮಹಾತ್ಮಗಾಂಧಿಯವರನ್ನು ಕರೆಯಿಸಿಕೊಂಡು ಸಂಧಿಮಾಡಿಕೊಂಡದ್ದು; ವಿದೇಶಿವಸ್ತ್ರ ಬಹಿಷ್ಕಾರವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂಬುದು ಮನಗೊಂಡದ್ದರಿಂದಲೇ ಶಾಂತವಾದ ಪಿಕೆಟಿಂಗ್‌ನಡೆಯಿಸಲು ಸರ್ಕಾರದವರು ಅನುಮತಿಯಕೊಟ್ಟದ್ದು.

ಲಾರ್ಡ್ ಇರ್ವಿನ್‌ರನ್ನು ಇಂಗ್ಲಿಷರಲ್ಲಿ ಕೆಲವರು ಕೊಂಡಾಡುವರು. ಇಂಡಿಯಾ ಸೆಕ್ರೆಟರಿಗಳೂ ಸಹ ಅವರನ್ನು ಯಾರಾದರೂ ಆಕ್ಷೇಪಣೆಮಾಡಿದರೆ ಸಹಿಸುವುದಿಲ್ಲ. ಮಹಾತ್ಮಗಾಂಧಿಯವರು ದೂರದರ್ಶಿಗಳೂ ಪ್ರಾಮಾಣಿಕರೂ ಆದ ರಾಜನೀತಿಜ್ಞರು. ಅವರು ಹೇಳಿದ್ದೇನೆಂದರೆ:—

"ನಮ್ಮ ಜನರಿಗೆ ಉಪಯುಕ್ತವಾದ ಸಹಾಯವು ಬೇಕು. ಎಲ್ಲಿ ಉಪ್ಪುಮಾಡಬಹುದೋ ಅಲ್ಲಿ ನಿರಾಂತಕವಾಗಿ ಉಪ್ಪುಮಾಡುವುದಕ್ಕೆ ಒಪ್ಪಿಗೆಯುಬೇಕು." ಇದನ್ನು ಸರ್ಕಾರದವರು ಒಪ್ಪಿದರು. ಕಾಂಗ್ರೆಸ್ಸಿನವರು ಸರ್ಕಾರದವರಿಗೆ ಶರಣಾಗತರಾದರೇನು? ಕಾಂಗ್ರೆಸ್ಸಿನವರು ಸರ್ಕಾರದವರಿಗೆ ಶರಣಾಗತರಾದರೆಂದು ಅನೇಕರು ಹೇಳುತ್ತ ನಿಮ್ಮ ಮನಸ್ಸನ್ನು ಕೆಡಿಸುವರು. ಸರ್ಕಾರದವರು ಜಪ್ತಿಮಾಡಿರುವ ಭೂಮಿಕಾಣಿಗಳನ್ನೂ, ಇತರರಿಗೆ ಮಾರದಿರುವ ಚರಸ್ಥಿರಾಸ್ತಿಗಳನ್ನೂ ಹಿಂದಿರುಗಿಕೊಡುವುದಾಗಿ ಒಪ್ಪಿದರು. ಇದರಲ್ಲಿ ಕಾಂಗ್ರೆಸ್ಸಿನವರು ಏನು ಸೋತಿರುವರು?

ಹಿಂಸಾಮಾರ್ಗವು ಹಾನಿಕರವಾದುದು.

ಕಾಂಗ್ರೆಸ್ಸಿನ ಭಕ್ತರಂತೆಯೇ ಉಜ್ವಲದೇಶಾಭಿಮಾನಪೂರಿತರಾದ ತರುಣರಲ್ಲಿ ಒಂದು ವಿಜ್ಞಾಪನೆಯಿದೆ. ನಾನು ಅವರ ದೇಶಾಭಿಮಾನವನ್ನು ತ್ರಿಕರಣಪೂರ್ವಕವಾಗಿ ಕೊಂಡಾಡಿದರೂ, ಸದ್ಯಸ್ಥಿತಿಯಲ್ಲಿ ಎರಡು ಪಕ್ಷಗಳನ್ನು ಮಾಡುವುದು ಬುದ್ಧಿವಂತಿಕೆಯಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಮಹಾತ್ಮಗಾಂಧಿಯವರಿಗೆ ಸಹಾಯಮಾಡಿ ಅವರ ಶಕ್ತಿಯನ್ನು ವೃದ್ಧಿಗೊಳಿಸುವುದು ತರುಣರ ಧರ್ಮವಾಗಿದೆ. ಮಹಾತ್ಮರಿಗೆ ಬೆಂಬಲಕೊಡುವುದರಿಂದ ಕಾಂಗ್ರೆಸ್ಸಿಗೆ ಬಲಕೊಟ್ಟಂತಾಗುವುದು. ದೇಶದ ಅನೇಕ ಭಾಗಗಳಲ್ಲಿಯೂ, ಅದರಲ್ಲಿಯೂ ಬಂಗಾಲಪ್ರಾಂತದಲ್ಲಿಯೂ ರಾಜಕೀಯಕಾರಣದ ಮೇಲೆ ಅನೇಕ ಹಿಂಸಾಕಾರ್ಯಗಳು ನಡೆಯುತ್ತಿರುವುವು. ಇದಕ್ಕಾಗಿ ತುಂಬಾ ವ್ಯಸನವಾಗುವುದು. ಕಾಂಗ್ರೆಸ್ಸಿನವರಿಗೆ ಇದೊಂದುಸಲ ಕಾರ್ಯಭಾಗವಹಿಸಲು ಅವಕಾಶಕೊಡಬೇಕೆಂದು ಹಿಂಸಾವಾದಿಗಳಲ್ಲಿ ಬೇಡಿಯುವೆನು. ಹನ್ನೆರಡು ತಿಂಗಳುಗಳ ಕೆಳಗೆ ಅನ್ಯದೇಶಿಯರು ಹಿಂದುಸ್ಥಾನದ ಬಗ್ಗೆ ಏನು ತಿಳಿದಿದ್ದರು? ಈಗ ಏನು ಯೋಚಿಸುತ್ತಿರುವರು? ಕಾಂಗ್ರೆಸ್ಸಿನವರು ತಮ್ಮ ಶಾಂತಿಮಯವಾದ ಚಳವಳಿಯಿಂದ ಜಗತ್ತಿನಲ್ಲಿ ರಾಷ್ಟ್ರದ ಗೌರವವನ್ನು ಹೆಚ್ಚಿಸಿರುವರು. ಸ್ವಾತಂತ್ರ್ಯವನ್ನು ಪಡೆಯಲು ಭಾರತೀಯರಿಗೆ ಶಕ್ತಿಯಿದೆ ಎಂದು ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಮನವರಿಕೆಯಾಯಿತು. ತಮ್ಮ ಅಸ್ಪಷ್ಟವಾಗಿದ್ದ ಶಕ್ತಿಯು ಭಾರತೀಯರಿಗೂ ಗೊತ್ತಾಯಿತು. ನಮ್ಮ ದೇಶದಲ್ಲಿ ಕೆಲವರಿಗೆ ಇನ್ನೂ ಈ ವಿಷಯವು ತಿಳಿಯದಿರುವುದು ದುರ್ದೈವವೇ ಸರಿ.

ಫೆಡರೇಷನ್.

ಬ್ರಿಟಿಷ್ ಹಿಂದೂಸ್ಥಾನವು ಆಶ್ರಿತಸಂಸ್ಥಾನಗಳೊಂದಿಗೆ ಸೇರುವುದಕ್ಕೆ ಒಪ್ಪಿದುದು ಪ್ರಮಾದವಾಯಿತೆಂದು ಕೆಲವರು ಆಕ್ಷೇಪಿಸುವರು. ಆಶ್ರಿತಸಂಸ್ಥಾನಗಳು ಹಿಂದುಸ್ಥಾನದ ಮೂರರಲ್ಲಿ ಒಂದುಭಾಗವಾಗಿವೆ. ಮೂರರಲ್ಲಿ ಒಂದು ಭಾಗ ಹಿಂದುಸ್ಥಾನವು ಬ್ರಿಟಿಷರ ಅಧೀನದಲ್ಲಿರುವ ಸಾಮಂತರಾಜರ ಆಳ್ವಿಕೆಯಲ್ಲಿದ್ದರೆ, ಹಿಂದುಸ್ಥಾನವು ಸ್ವತಂತ್ರವಾಗಿದೆ ಎಂದು ಹೇಳಬಹುದೇ? ಆಸೇತು ಹಿಮಾಚಲಪರ್ಯಂತ ಅಖಂಡವಾದ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಬೇಕು. ಹಾಗಿಲ್ಲದಿದ್ದರೆ ಅದು ಸ್ವಾತಂತ್ರ್ಯವೆನ್ನಿಸಿಕೊಳ್ಳಲಾರದು.

ಕೇಂದ್ರಸರ್ಕಾರದಲ್ಲಿ ಉತ್ತರವಾದಿತ್ವವಿರುವ ವಿಷಯವು ಚರ್ಚಾಗ್ರಸ್ತದವಾಗಿದೆ. ಈ ವಿಷಯದಲ್ಲಿ ಎಷ್ಟೂ ಸಂಶಯಪಡಲು ಕಾರಣವಿರುವುದಿಲ್ಲ. ಉತ್ತರವಾದಿ ಸರ್ಕಾರವೆಂದರೆ, ಪ್ರಜೆಗಳಿಂದ ಆರಿಸಿ ಬಂದಿರುವ ಕಾಯಿದೆ ಕೌನ್ಸಿಲ್ ಮೆಂಬರರು, ಸರ್ಕಾರದವರು ನೇಮಿಸಿರುವ ಮಂತ್ರಿಗಳನ್ನು ವಜಾಮಾಡುವ ಅಧಿಕಾರ. ಸರ್ಕಾರವು ಪ್ರಜೆಗಳ ಕೈಯಲ್ಲಿರಬೇಕು. ಈ ಅಂಶವು ಒಪ್ಪಂದದಲ್ಲಿ ಸ್ಪಷ್ಟವಾಗಿದೆ. ರಕ್ಷಾಕವಚಗಳ ವಿಷಯದಲ್ಲಿ ಮಾತ್ರ ಸ್ವಲ್ಪ ಅನುಮಾನವಿರುವುದು. ಹಿಂದುಸ್ಥಾನಕ್ಕೆ ಹಿತಕಾರಿಯಾಗಿರುವ ರಕ್ಷಾಕವಚಗಳನ್ನು ಮಾತ್ರವೇ ಒಪ್ಪುವೆನೆಂದು ಮಹಾತ್ಮರು ಸ್ಪಷ್ಟವಾಗಿ ಹೇಳಿದ್ದಾರೆ. ಆದಕಾರಣ ಹಿಂದುಸ್ಥಾನಕ್ಕೆ ಹಿತಕಾರಿಗಳಾದ ರಕ್ಷಾಕವಚಗಳನ್ನು ಮಾತ್ರವೇ ಕಾಂಗ್ರೆಸ್ಸಿನವರು ಅಂಗೀಕರಿಸುವರು. ಹಿಂದುಸ್ಥಾನದ ಸಲುವಾಗಿ ಆಂಗ್ಲೇಯರು ಹಣಕಾಸಿನ ಆಡಳಿತ ನಡೆಯಿಸಿದರೆ, ಭಾರತೀಯರಿಗೆ ತೃಪ್ತಿಯಾಗುವುದು ಹೇಗೆ? ಅದು ಮುಂದಿನ ರಾಜ್ಯಾಂಗರಚನೆಯಲ್ಲಿ ಎಂದಿಗೂ ಸಾಧ್ಯವಿಲ್ಲ. ಸೈನ್ಯ ಮತ್ತು ಪರರಾಷ್ಟ್ರೀಯರೊಡನೆ ವ್ಯವಹಾರ ಇವುಗಳ ವಿಷಯದಲ್ಲಿಯೂ ಭಾರತೀಯರಿಗೆ ಅಧಿಕಾರವಿರಬೇಕೇ ಹೊರತು ಅನ್ಯರಿಗಿದ್ದರೆ ಸ್ವಾತಂತ್ರ್ಯವೆನಿಸಲಾರದು. ಹಿಂದುಸ್ಥಾನದ ಚಿಕ್ಕ ಸಮಾಜಗಳ ಪರವಾಗಿ ಸರ್ಕಾರದವರು ಯಾವುದಾದರೂ ರಕ್ಷಾಕವಚವನ್ನೊಡ್ಡಿದರೆ ಅದನ್ನು ಭಾರತೀಯರು ಅಂಗೀಕರಿಸಬಹುದು. ಮಹಮ್ಮದೀಯ, ಕ್ರಿಶ್ಚಿಯನ್, ಪಾರ್ಸಿ ಮುಂತಾದ ಚಿಕ್ಕ ಸಮಾಜಗಳ ಹಿತದೃಷ್ಟಿಯಿಂದ ಏನಾದರೂ ಮಾಡಬಹುದೇ ಹೊರತು ಇಂಗ್ಲೆಂಡಿನ ವರ್ತಕರ ಹಿತದೃಷ್ಟಿಯಿಂದ ಏನೂ ಸಹಾಯಮಾಡುವುದಿಲ್ಲ. ದಕ್ಷಿಣಹಿಂದುಸ್ಥಾನದಲ್ಲಿಯೂ ಅನೇಕ ಚಿಕ್ಕ ಸಮಾಜಗಳಿವೆ. ರೋಮನ್ ಕ್ಯಾಥೊಲಿಕ್ ಜನರಿದ್ದಾರೆ. ಅವರೂ ಸಹ ಮುಂದಿನ ರಾಜ್ಯಾಂಗರಚನೆಯಲ್ಲಿ ತಕ್ಕ ಸಂರಕ್ಷಣೆ ಬೇಕೆಂದು ಕೇಳಬಹುದು. ಆದರೆ ಈ ವಿಷಯದಲ್ಲಿ ಸ್ವಲ್ಪ ವಿಚಾರವಮಾಡತಕ್ಕದ್ದಿದೆ. ನಿಮಗೆ ಸಂರಕ್ಷಣೆಬೇಕೆಂದು ಕೇಳುವುದರಿಂದ ನೀವು ದುರ್ಬಲರೆಂದೂ ಅನ್ಯಸಹಾಯವಿಲ್ಲದೆ ನಿಮ್ಮನ್ನು ನೀವು ರಕ್ಷಣೆಮಾಡಿಕೊಳ್ಳುವ ಶಕ್ತಿ ಇಲ್ಲವೆಂದೂ ಒಪ್ಪಿಕೊಂಡಂ

(೬ ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೧ ನೇ ಮೇ ತಾ|| ೨೫ ನೆಯ ಸೋಮವಾರ.

ಗುರುವರ್ಗದವರ ಸುಧಾರಣೆ.

ವೀರಶೈವಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರು ತಮ್ಮ ಮತದ ಧರ್ಮನಿಯಮಗಳು ಸುಲಲಿತವಾಗಿ ಸಾಗಲೆಂಬ ಸದುದ್ದೇಶದಿಂದ ರಂಭಾಪುರೀ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ ಹಾಗೂ ಕಾಶೀ ಈ ಪಂಚಪುಣ್ಯಕ್ಷೇತ್ರಗಳಲ್ಲಿ ಪಂಚಧರ್ಮಪೀಠಗಳನ್ನು ಸ್ಥಾಪಿಸಿದರು. ಅನಂತರ ಮುಖ್ಯಪೀಠಗಳ ಶಾಖಾರೂಪದಿಂದ ಭರತಖಂಡದಲ್ಲಿ ಅನೇಕಾನೇಕ ಉಪಮಠಗಳು ಸ್ಥಾಪಿಸಲ್ಪಟ್ಟವು. ವೀರಶೈವರಿರತಕ್ಕ ಪ್ರತಿಯೊಂದು ಗ್ರಾಮದಲ್ಲಿಯೂ ಈಗಲೂ ಒಂದೊಂದು ಗುರುವರ್ಗದ ಮಠಗಳು ಉಂಟೇ ಉಂಟು. ಗ್ರಾಮಾಧಿಕಾರಿಯು ತನ್ನ ಗ್ರಾಮದ ಯಾವತ್ತು ಜವಾಬ್ದಾರಿಯನ್ನು ವಹಿಸಿರುವಂತೆ ಗ್ರಾಮಾಚಾರ್ಯನೆಂದು ಪ್ರಸಿದ್ಧನಾಗಿರುವ ಗುರುವರ್ಗದ ಮಠಾಧಿಕಾರಿಯು ತನ್ನ ...ನುದಲ್ಲಿರತಕ್ಕ ಸಕಲ ವೀರಶೈವರ ಧರ್ಮದ ಜವಾಬ್ದಾರಿಯನ್ನು ವಹಿಸಿರುವನು. ಗ್ರಾಮ ಮಠಾಧಿಕಾರಿಯು ತನ್ನ ಗ್ರಾಮದಲ್ಲಿರತಕ್ಕ ವೀರಶೈವರ ಧರ್ಮಾಧರ್ಮಾಚರಣಗಳನ್ನು ಪರೀಕ್ಷಿಸುತ್ತ ಧಾರ್ಮಿಕಪುರುಷರನ್ನು ರಕ್ಷಿಸುತ್ತಲೂ, ಅಧಾರ್ಮಿಕಪುರುಷರನ್ನು ಶಿಕ್ಷಿಸುತ್ತಲೂ, ಶಿಷ್ಯರನ್ನುದ್ಧರಿಸಲು ಮೋಕ್ಷಮಾರ್ಗಪ್ರತಿಪಾದಕವಾದ ಸದುಪದೇಶವನ್ನು ಮಾಡುತ್ತಲೂ, ಶಮದಮಾದಿ ಸುಂಗಲಗುಣಗಳಿಂದ ಯುಕ್ತನಾಗಿ ಸದಾ ಬ್ರಹ್ಮಚಿಂತನೆಯಲ್ಲಿ ಕಾಲಕಳೆಯುತ್ತಲೂ, ವೇದವೇದಾಂಗಾದಿ ಶಾಸ್ತ್ರಪಠನಪಾಠನಾದಿಕ್ರಿಯೆಗಳನ್ನು ನೆರವೇರಿಸುತ್ತಲೂ ಇರಬೇಕು. ಪೂರ್ವಕಾಲದಲ್ಲಿಯ ಮಠಾಧಿಕಾರಿಗಳು ಈ ಗುರುಲಕ್ಷಣಗಳಿಗನುಸಾರವಾಗಿಯೇ ವರ್ತಿಸುತ್ತಿದ್ದರು. ಆದುದರಿಂದಲೇ ಅವರ ಕೀರ್ತಿಪ್ರಭೆಯು ದಶದಿಕ್ಕುಗಳನ್ನು ವ್ಯಾಪಿಸಿತ್ತು. ಆದರೆ ಈ ಕಾಲದಲ್ಲಿರತಕ್ಕ ಗುರುವರ್ಗಮಠಾಧಿಕಾರಿಗಳ ಸ್ಥಿತಿಯು ಇದಕ್ಕೆ ಕೇವಲ ವಿಪರೀತವಾಗಿ ಪರಿಣಮಿಸಿಹೋಗಿದೆ. ಇವರು ಭಕ್ತರನ್ನುದ್ಧರಿಸುವದೊತ್ತಟ್ಟಿಗಿರಲಿ, ತಮ್ಮ ಗ್ರಾಮದಲ್ಲಿ ತಾವೇ ಪಾರ್ಟಿಗಳನ್ನೆಬ್ಬಿಸಿ ಎಲ್ಲರೊಡನೆ ವಿರೋಧವನ್ನು ಕಟ್ಟಿಕೊಳ್ಳಲಿಕ್ಕೆ ಹತ್ತುತ್ತಾರೆ. ವೇದವೇದಾಂಗಾದಿಗಳ ಅಧ್ಯಯನಾಧ್ಯಾಪನಗಳಂತೂ ಇವರನ್ನು ಬಿಟ್ಟು ಶತಯೋಜನದೂರ ಓಡಿಹೋಗಿವೆ. ಶಮದಮಾದಿಗಳಿಗೆ ಇವರಲ್ಲಿ ಆಶ್ರಯವೇ ದೊರೆಯುವಂತಿಲ್ಲ: ಆದುದರಿಂದಲೇ ಇವರ ವಿಷಯದಲ್ಲಿ ಭಕ್ತರ ಭಕ್ತಿಯು ದಿನೇ ದಿನೇ ಹ್ರಾಸವಾಗುತ್ತ ನಡೆದದೆ. ಈ ವಿಷಯವನ್ನು ಗುರುವರ್ಗದ ಮಠಾಧಿಕಾರಿಗಳು ಪೂರ್ಣಚಿತ್ತಕ್ಕೆ ತಂದುಕೊಂಡು ತಮ್ಮ ಧರ್ಮನಿಯಮದಂತೆಯೂ, ತಮ್ಮ ಪೂರ್ವಿಕರು ಆಚರಿಸಿದಂತೆಯೂ ಆಚರಿಸಿ ಶಿಷ್ಯೋದ್ಧಾರಕಾರ್ಯವನ್ನು ಕೈಕೊಳ್ಳಬೇಕು. ಹಾಗಿಲ್ಲದಿದರೆ ತಾವೂ ಕೆಡುವರಲ್ಲದೆ ಮತದ ಸ್ವರೂಪವೆಲ್ಲಾ ನಾಶವಾಗಿಹೋಗುವದು. ಗುರುವರ್ಗದವರು ಇಷ್ಟು ಹೀನಸ್ಥಿತಿಗೆ ಬರಬೇಕಾದರೆ ಧಾರ್ಮಿಕವಿದ್ಯೆಯ ಅಭಾವವೇ ಇದಕ್ಕೆ ಮೂಲಕಾರಣವಾಗಿದೆ. ಇವರು ಪೂರ್ವಕಾಲದಂತೆ ಈ ಕಾಲದಲ್ಲಿಯೂ ಧರ್ಮಶಾಸ್ತ್ರಾಭ್ಯಾಸವನ್ನು ಮಾಡಬೇಕು. ಗುರುಕುಲದಲ್ಲಿ ವಾಸವಾಗಿರಬೇಕು. ಮ್ಲೇಂಛಭಾಷೆಗೆ ತಿಲಾಂಜಲಿಯನ್ನು ಕೊಡಬೇಕು. ಶಮದಮಾದಿ ಗುಣಗಣಭೂಷಿತರಾಗಿರಬೇಕು. ಚಿಕ್ಕಚಿಕ್ಕ ಮಕ್ಕಳನ್ನು ಸಂಸ್ಕೃತಭಾಷಾಭ್ಯಾಸದಲ್ಲಿ ನಿಯೋಜಿಸಬೇಕು. ಹೀಗೆ ಮಾಡಿದರೆ ಇವರು ಮಾನ್ಯರಾಗುವರಲ್ಲದೆ ಬೇರೆ ಮಾರ್ಗವೇ ಇಲ್ಲದಾಗಿದೆ. ಕಲಿಕಾಲ ಪ್ರಭಾವದಿಂದ ದಿನೇದಿನೇ ಗುರುಗಳ ವಿಷಯದಲ್ಲಿ ಭಕ್ತರಲ್ಲಿಯ ಭಕ್ತಿಯು ಕ್ಷೀಣವಾಗುತ್ತ ನಡೆದದೆ. ಗುರುವೆಲ್ಲಿ? ಶಿಷ್ಯನೆಲ್ಲಿ? ಎಂದೆನ್ನುವ ಹೇಯಕಾಲವು ರಭಸದಿಂದ ಪ್ರಾಪ್ತವಾಗ ಹತ್ತಿದೆ. ಕೆಲಜನ ಕನ್ನಡಿಗರು ಪ್ರಾಚೀನಗುರುಗಳನ್ನು ಬಿಟ್ಟು ತಮ್ಮತಮ್ಮಲ್ಲಿಯೇ ಗುರುಗಳನ್ನು ಮಾಡಿಕೊಳ್ಳುತ್ತ ಸ್ವೇಚ್ಛೆಯಾಗಿ ಪ್ರವರ್ತಿಸುತ್ತಿರುವರಲ್ಲದೆ ಪೂರ್ವಗುರುಗಳಮೇಲೆ ಬಿದ್ದು ಜಗಳವಾಡಹತ್ತಿದ್ದಾರೆ. ಮೈಸೂರು ದೇಶದ ಕೆಲವು ಪ್ರಾಂತಗಳಲ್ಲಂತೂ ಪೂರ್ವದ ವಂಶೀಯಗುರುಗಳನ್ನು ದೂರೀಕರಿಸಿ ಭಕ್ತರು ತಾವೇ ಗುರುಗಳಾಗಿ ಮೆರೆಯಹತ್ತಿದ್ದಾರೆ. ಇಲ್ಲಿ ಗುರುವರ್ಗದ ಎಷ್ಟೋ ಮಠಗಳನ್ನು ಭಕ್ತರು ಆಕ್ರಮಿಸಿ ತಮ್ಮ ಸ್ವಾಧೀನಮಾಡಿಕೊಂಡಿರುತ್ತಾರೆ. ಗುರುಭಕ್ತಿಯ ಸ್ವರೂಪವೇ ಈ ಪ್ರಾಂತಗಳಲ್ಲಿ ಮಾಯವಾಗಿಹೋಗಿದೆ. ಭಕ್ತರೆಲ್ಲರೂ ಗುರುವರ್ಗದವರೆಂದು ಹೇಳಲು ಕಲಿಯಹತ್ತಿದ್ದಾರೆ. ಇಂಥ ಕಲಿರಾಜನ ಆಳ್ವಿಕೆಯ ಈ ಕಾಲದಲ್ಲಿ ವಂಶೀಯ ಗುರುಗಳು ವಿದ್ಯಾವಿಹೀನರಾದರೆ ಇವರನ್ನು ಕೇಳುವವರಾರು? ಆದರಿಸುವವರಾರು? ಪೂಜಿಸುವವರಾರು? ಆದುದರಿಂದ ಗುರುವರ್ಗದವರು ಇನ್ನುಮುಂದಾದರೂ ಎಚ್ಚತ್ತು ಮಾಹೇಶ್ವರರ ಶಿಕ್ಷಣಕ್ಕಾಗಿ ಬಳ್ಳಾರಿ, ಧಾರವಾಡ, ವಿಜಾಪುರ, ಸೊಲ್ಲಾಪುರ ಮೊದಲಾದ ಪ್ರಾಂತಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಸ್ಕೃತ ಪಾಠಶಾಲೆಗಳಿಗೆ ತಮ್ಮ ಬಾಲಕರನ್ನು ಕಳುಹಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿಸಬೇಕು. ಸುಧಾರಿಸಬೇಕು. ಶಿಷ್ಯೋದ್ಧಾರ ಕಾರ್ಯದಲ್ಲಿ ತೊಡಗಬೇಕು. ಧರ್ಮನಿಯಮಗಳನ್ನು ಸರ್ವತ್ರ ರೂಢಿಯಲ್ಲಿ ತರಬೇಕು. ನಾಸ್ತಿಕರನ್ನು ಆಸ್ತಿಕರನ್ನಾಗಿಮಾಡಬೇಕು. ವೀರಶೈವ ಮತದ ಸಿದ್ಧಾಂತವನ್ನು ಸರ್ವತ್ರ ಬೋಧಿಸಬೇಕು. ತಮ್ಮ ಮತದ ವೈಭವವನ್ನು ಹೆಚ್ಚಿಸಬೇಕು. ಮತಾಂತರದವರಲ್ಲಿ ಬೇರೂರಿರುವ ಅಸಮಂಜಸಾಭಿಪ್ರಾಯವನ್ನು ದೂರಮಾಡಬೇಕು. ಇತ್ಯಾದಿಕಾರ್ಯಗಳನ್ನು ಇವರು ಕೈಕೊಂಡರೆ ಇವರ ಪ್ರಭೆಯು ಸರ್ವತೋಮುಖವಾಗಿ ವ್ಯಾಪಿಸುವದು. ಧರ್ಮಪೀಠಾಧಿಪತಿಗಳು ಗುರುವಂಶೀಯಬಾಲಕರ ಸುಧಾರಣಾದಿಗಳ ಬಗ್ಗೆ ಅಲ್ಲಲ್ಲಿ ಗುರುಕುಲಗಳನ್ನೇರ್ಪಡಿಸಬೇಕು. ಸದಾ ಇವರ ಸುಧಾರಣೆಯಲ್ಲಿಯೇ ತಮ್ಮ ಕಾಲವನ್ನು ಕಳೆಯಬೇಕು. ಅಂದರೆ ಇವರು ಸುಧಾರಿಸುವರು, ಇಲ್ಲದಿದ್ದರೆ ಎಂದಿಗೂ ಸುಧಾರಿಸುವಂತಿಲ್ಲ. ಇವರ ಸುಧಾರಣೆಯಿಲ್ಲದೆ ಧರ್ಮರಾಜ್ಯಪಾಲನೆಯು ಎಂದೂ ಸುಖಕರವಾಗಿ ನಡೆಯಲಾರದು. ಆದುದರಿಂದ ಜಗದೀಶ್ವರನು ಗುರುವರ್ಗದವರಲ್ಲಿ ಸುಧಾರಣೆಯನ್ನು ಶೀಘ್ರವಾಗಿ ಉಂಟುಮಾಡಲೆಂದು ಆ ದಯಾಘನನನ್ನು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ಮಹಾರಾಜರವರು ವೇ|| ರಾಮಶಾಸ್ತ್ರಿಗಳ ಕುಮಾರರಾದ ಶ್ರೀನಿವಾಸಶಾಸ್ತ್ರಿಗಳನ್ನು ಶೃಂಗೇರಿ ಮಠದ ಪೀಠಕ್ಕೆ ಶ್ರೀ ಚಂದ್ರಶೇಖರಭಾರತಿಸ್ವಾಮಿಗಳ ತರುವಾಯ ಉತ್ತರಾಧಿಕಾರಿಗಳಾಗಬೇಕೆಂಬುದನ್ನು ಒಪ್ಪಿ ಸ್ಯಾಂಕ್ಷನ್ ಮಾಡಿರುವುದಾಗಿ ತಿಳಿದು ಬರುತ್ತದೆ.

ಈ ತಿಂಗಳು 27 ನೆಯ ತಾರೀಖಿನ ದಿವಸ ಅತ್ಯಂತ ವೈಭವದಿಂದ ನೆರವೇರುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂದರ್ಶನ ನಿಮಿತ್ತವಾಗಿ ಮದರಾಸ್ ಗೌರ್ನರವರು ಪತ್ನೀಸಮೇತರಾಗಿ ರಾಜಧಾನಿಗೆ ಆಗಮಿಸಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರೆಂದು ಕೇಳುತ್ತೇವೆ.

ದಿವಾನ್ ಬಹದ್ದೂರ್ ರಾಜಧರ್ಮಪ್ರವೀಣ ಮಿ|| ಕೆ. ಎಸ್. ಚಂದ್ರಶೇಖರಯ್ಯರವರ ಅಧ್ಯಕ್ಷತೆಯಲ್ಲಿ ಸೇರಿದ್ದ ರಿಟ್ರೆಂಚ್‌ಮೆಂಟ್ ಕಮಿಟಿಯು ಹಂಗಾಮಿಯಾಗಿ ರಿಪೋರ್ಟನ್ನು ತಯಾರಿಸಿರುವುದೆಂದೂ, ಸದ್ಯಃ ಕಮಿಟಿಯು ತನ್ನ ಕಾರ್ಯಕಲಾಪಗಳನ್ನು ನಿಲ್ಲಿಸಿ ಪ್ರಜಾಪ್ರತಿನಿಧಿಸಭೆಯ ಹಾಗೂ ಲೆಜಿಸ್ಲೇಟಿವ್ ಕೌನ್ಸಿಲ್‌ಗಳ ಅಧಿವೇಶನವು ಪೂರೈಸಿದ ತರುವಾಯ ಪುನಃ ಸೇರುವುದೆಂದೂ ತಿಳಿದುಬರುತ್ತದೆ.

ಕೋಲಾರದ ಎಗ್ಜಿಕ್ಯೂಟಿವ್ ಇಂಜನಿಯರ್ ಮಿ|| ಎಚ್. ಆರ್. ವೆಂಕಟಸುಬ್ಬರಾಯರು ಶ್ರೀಯುತ ವಿ. ಎಸ್. ಸಂಜೀವರಾಯರಮೇಲೆ ಮಾಡಿರುವ ಮಾನನಷ್ಟ ಮೊಕದ್ದಮೆಯು ಈ ತಿಂಗಳು 16 ನೆಯ ತಾರೀಖಿಗೆ ವಿಚಾರಣೆಯಾಗತಕ್ಕದ್ದಿತ್ತು. ಆದರೆ ಶ್ರೀಯುತ ಸಂಜೀವರಾಯರು ಕಾರಣಾಂತರದಿಂದ ಹಾಜರಾಗಲು ಸಾಧ್ಯವಿಲ್ಲವೆಂಬಂಶವನ್ನು ಸೂಚಿಸಿ ಅರ್ಜಿ ಮಾಡಿಕೊಂಡಮೇಲೆ ಮೊಕದ್ದಮೆಯು ಮುಂದಕ್ಕೆ ಹಾಕಲ್ಪಟ್ಟಿತು.

ಬೆಂಗಳೂರು ಅಡ್ವೋಕೇಟರಾದ ಶ್ರೀಯುತ ಕೆ. ಟಿ. ಭಾಷ್ಯಂರವರು ಅಜ್ಜಂಪುರದಲ್ಲಿ ನೆರವೇರಿದ ಯುವಕಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಭಾಷಣಮಾಡಕೂಡದೆಂದು ತರೀಕೆರೆ ಸಬ್ ಡಿವಿಜನ್ ಆಫೀಸರು ಮಾಡಿದ ಹುಕುಮನ್ನು ತಿರಸ್ಕರಿಸಿದರೆಂದು ಅವರ ಮೇಲೆ ಮಾಡಿರುವ ಮೊಕದ್ದಮೆಯ ವಿಚಾರಣೆಯು ತರೀಕೆರೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈ ತಿಂಗಳು 15 ನೆಯ ತಾರೀಖಿನ ದಿವಸ ನಡೆಯಿತು. ಶ್ರೀಯುತ ಭಾಷ್ಯಂರವರು ತನ್ನ ಮೇಲೆ ಜಾರಿ ಮಾಡಿದ ನೋಟೀಸು ನ್ಯಾಯಸಮ್ಮತವಾದುದಲ್ಲವೆಂದೂ, ನೋಟೀಸಿನಂತೆ ನಡೆಯದೆ ಹೋದುದು ಅಪರಾಧವಲ್ಲವೆಂದೂ ವಾದಿಸಿದರು. ಅನಂತರ ಆ ಮೊಕದ್ದಮೆಯ ವಿಚಾರಣೆಯು ಮುಂದುವರಿಸಲ್ಪಟ್ಟಿತು.

ವರ್ತಮಾನಸಂಗ್ರಹ.

ಕಳೆದ ಸತ್ಯಾಗ್ರಹ ಚಳವಳಿಯಲ್ಲಿ ಮಹಿಳೆಯರನ್ನು ಅಪಮಾನಪಡಿಸಿದ ಬೊಂಬಾಯಿಯ ಸಾರ್ಜಂಟ್ ಮ್ಯಾಕಂಜಿಯ ಮೇಲೆ ಮೊಕದ್ದಮೆಯು ನಡೆದಿದ್ದು ಕೆಲವು ಸಾಕ್ಷಿಗಳಾದುವು.

ಹಿಂದೂಸ್ಥಾನದಿಂದ ವಿಮಾನಗಳಲ್ಲಿ ಹೋಗುತ್ತಿದ್ದ ಟಪಾಲು ಇಂಗ್ಲೆಂಡನ್ನು 9 ದಿವಸಗಳಲ್ಲಿ ತಲ್ಪುತ್ತಿತ್ತು. ಈಗ ಕಳೆದವಾರದಿಂದ 6 ದಿವಸಗಳಲ್ಲಿಯೇ ಇಂಗ್ಲೆಂಡನ್ನು ತಲ್ಪುವ ಹಾಗೆ ವ್ಯವಸ್ಥೆ ಮಾಡಿದ್ದಾರೆ.

ಬೆಳಗಾಂವ ಜಿಲ್ಲಾ ಹುಕ್ಕೇರಿಯಲ್ಲಿ ಏದನೆಯ ಕರ್ನಾಟಕ ಏಕೀಕರಣ ಪರಿಷತ್ತು ಈ ತಿಂಗಳು 27 ನೆಯ ತಾರೀಖಿನ ದಿವಸ ಮಚಲಿ ಪಟ್ಟಣದ ಶ್ರೀಯುತ ಪಟ್ಟಾಭಿಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಕಳೆದ ವರ್ಷ ಸೋಲಾಪುರದಲ್ಲಿ ಜಾರಿಯಲ್ಲಿದ್ದ ಮಿಲಿಟರಿ ಕಾಯಿದೆಪ್ರಕಾರ ಏಳು ವರ್ಷ ಕಠಿಣ ಶಿಕ್ಷೆಗೆ ಗುರಿಯಾಗಿದ್ದ ಶ್ರೀಯುತ ರಾಜವಾಡೆಯವರನ್ನು ಸರ್ಕಾರದವರು ಬಿಜಾಪುರ ಜೈಲಿನಿಂದ ಬಿಡುಗಡೆಮಾಡಿದರು.

ಮಹಾತ್ಮ ಗಾಂಧಿಯವರ ಅನುಮತಿಯನ್ನು ಪಡೆದಿರುವೆನೆಂದೂ, ಅವರ ಹೆಸರಿನಲ್ಲಿ ಆಶ್ರಮವನ್ನು ಸ್ಥಾಪಿಸುವೆನೆಂದೂ ಹೇಳುತ್ತ ಜನರನ್ನು ಮೋಸಪಡಿಸಿ ಹಣವನ್ನು ಕೂಡಿಸುತ್ತಿದ್ದ ಬ್ರಹ್ಮದಿನ್ ಎಂಬ ಮಹಮ್ಮದೀಯನಿಗೆ ಅಲಹಾಬಾದ್ ಮ್ಯಾಜಿಸ್ಟ್ರೇಟರು 6 ತಿಂಗಳ ಶಿಕ್ಷೆಯನ್ನು ವಿಧಿಸಿದರು.

ಕಳೆದ ತಿಂಗಳು 17 ನೆಯ ತಾರೀಖಿನ ದಿವಸ ದಿಲ್ಲಿ ಪಟ್ಟಣದಲ್ಲಿ ಒಬ್ಬ ಮಿಠಾಯಿ ಮಾರುವವನು ತಿಂಡಿ ಪದಾರ್ಥಗಳನ್ನು ಬೇಯಿಸುತ್ತಿದ್ದಾಗ ಒಲೆಯು ಸಿಡಿದು ಕಾದ ತುಪ್ಪವು ಅವನ ಮೈಮೇಲೆ ಬಿದ್ದು ಗಾಯಪಟ್ಟನು. ಬೀದಿಯಲ್ಲಿ ಹೋಗುವವರು ಯಾರೋ ಸಿಡಿ ಮದ್ದನ್ನು ಹಾಕಿರಬಹುದೆಂದೂ, ಅದಕ್ಕೋಸ್ಕರವೇ ಒಲೆಯು ಸಿಡಿದಿರಬಹುದೆಂದೂ ಪೋಲೀಸರು ಯೋಚಿಸುತ್ತಿರುವರು.

ಫೆಡರಲ್ ಕಮಿಟಿಯ ನಿಮಿತ್ತವಾಗಿ ಮೆಂಬರರು ಲಂಡನ್ನಿಗೆ ಹೋಗುವುದಕ್ಕಾಗಿ ಸರ್ಕಾರದವರು ಎಸ್. ಎಸ್. ಕ್ಯಾಥೇ ಎಂಬ ಹಡಗನ್ನು ವ್ಯವಸ್ಥೆಮಾಡಿರುವರೆಂದೂ, ಮಹಾತ್ಮ ಗಾಂಧಿಯವರು ಹೊರಡುವುದು ಸಂಶಯವೆಂದೂ, ರಾಜಕುಮಾರರೂ ಮೆಂಬರರೂ ಹೊರಡಲು ಸಿದ್ಧರಾಗಿರುವರೆಂದೂ, ಮುಂದಿನ 13 ನೆಯ ತಾರೀಖಿನ ದಿವಸ ಹಡಗು ಲಂಡನ್ನಿಗೆ ಹೊರಡುವುದೆಂದೂ ತಿಳಿದುಬರುತ್ತದೆ.

ಮಹಾತ್ಮ ಗಾಂಧಿಯವರು ಪತ್ನೀ ಸಮೇತರಾಗಿ ಈ ತಿಂಗಳು 20 ನೆಯ ತಾರೀಖಿನ ದಿವಸ ಸಿಮ್ಲಾದಿಂದ ನೈನಿಟಾಲಿಗೆ ಬಂದಿಳಿದರು. ಸಹಸ್ರಾರು ಜನರು ಬಂದು ಮಹಾತ್ಮರನ್ನು ಸ್ವಾಗತಿಸಿದ್ದಲ್ಲದೆ, ನೈನಿಟಾಲ್ ಪುರನಿವಾಸಿಗಳು ಅವರಿಗೆ ಮಾನಪತ್ರವನ್ನರ್ಪಿಸಿದರು. ಸಂಯುಕ್ತ ಪ್ರಾಂತಗಳ ಗೌರ್ನರವರು ಅಲ್ಲಿ ಬಹುಶೋಚನೀಯವಾಗಿರುವ ರೈತರ ಸಮಸ್ಯೆಯನ್ನು ಕುರಿತು ಮಹಾತ್ಮರೊಡನೆ ಆಲೋಚಿಸುತ್ತಿರುವರು.

ಜಗತ್ಪ್ರಸಿದ್ಧ ಕವಿಗಳಾದ ಡಾ|| ರವೀಂದ್ರನಾಥ ಟಾಗೋರ್‌ರವರ ಎಪ್ಪತ್ತನೆಯ ವರ್ಷವರ್ಧಂತಿಮಹೋತ್ಸವವನ್ನು ಕಲ್ಕತ್ತಾ ಪಟ್ಟಣದಲ್ಲಿ ಬಹು ವೈಭವದಿಂದ ನೆರವೇರಿಸಿದರು. ಮುನಿಸಿಪಾಲಿಟಿಯವರು ಇವರ ನಿಮಿತ್ತವಾಗಿ ಮೀಟಿಂಗ್ ನಡೆಯಿಸಿ ಕವಿಗಳಿಗೆ ತಮ್ಮ ಅಭಿನಂದನವನ್ನು ಸಮರ್ಪಿಸಿದರು.

ಜಪಾನ್ ದ್ವೀಪದಲ್ಲಿ ಬೆಂಕಿಯು ಸಾಂಕ್ರಾಮಿಕ ಜಾಡ್ಯದಂತೆ ಅನೇಕ ಸ್ಥಳಗಳಲ್ಲಿ ವ್ಯಾಪಿಸಿ ಸಾವಿರಾರು ಮನೆ ಮಠಗಳನ್ನೂ, ಹೋಟೆಲ್‌ಗಳನ್ನೂ, ನಾಟಕ ಶಾಲೆಗಳನ್ನೂ, ಸಿನೆಮಾ ಮಂದಿರಗಳನ್ನೂ ಸುಟ್ಟು ನೆಲಸಮ ಮಾಡಿದೆ. ಕಾನೆಕೋಮಚಿ ಎಂಬ ಸ್ಥಳದ ಸಿನೆಮಾಕ್ಕೆ ಬೆಂಕಿಬಿದ್ದು 14 ಜನರು ಸುಟ್ಟುಕೊಂಡು ಸತ್ತರು. ಜನರು ಗಾಬರಿಪಟ್ಟು ಓಡಿ ಹೋಗುವ ಗಡಿಬಿಡಿಯಲ್ಲಿ ಅನೇಕರು ತುಳಿಯಲ್ಪಟ್ಟು ಸತ್ತರು.

ಈ ವರ್ಷ ಗೋಧಿಯನ್ನು ಬೆಳೆಯುವ ದೇಶಗಳಲ್ಲೆಲ್ಲ ವಿಶೇಷ ಬೆಳೆಯಾಗಿರುವುದರಿಂದ ಗಿರಾಕಿಗಳಿಲ್ಲದೆ ಬೆಳೆದವರಿಗೆಲ್ಲ ತುಂಬಾ ನಷ್ಟ ಸಂಭವಿಸುವಂತಿದೆ. ಆದಕಾರಣ ಆಸ್ಟ್ರೇಲಿಯ, ಅರ್ಗೆಂಟೈನ್, ಕನಡಾ, ಹಂಗೇರಿ, ಇಂಡಿಯಾ, ಪೋಲೆಂಡ್ ಮೊದಲಾದ ದೇಶಗಳ ಪ್ರತಿನಿಧಿಗಳು ಲಂಡನ್ನಿನಲ್ಲಿ ಸಭೆಸೇರಿ ರೈತರಿಗೆ ನಷ್ಟವಾಗದಂತೆ ಹೆಚ್ಚಾಗಿ ಬೆಳೆದಿರುವ ಗೋಧಿಯನ್ನು ಹೇಗೆ ದಾಸ್ತಾನು ಮಾಡಬೇಕೆಂಬುದನ್ನು ಕುರಿತು ಆಲೋಚಿಸುವವರಾಗಿದ್ದಾರೆ.

ಆಫ್ಘಾನಿಸ್ಥಾನದ ಸರ್ಕಾರದವರು ತಮ್ಮ ಸೈನ್ಯವನ್ನು ನೂತನ ಪದ್ಧತಿಯ ಮೇಲೆ ಸುವ್ಯವಸ್ಥೆ ಮಾಡುತ್ತಿ[illegible]ರು. ಅವರು ಪರದೇಶಗಳಿಂದ ತರಿಸಿರುವ 10,[illegible] [illegible]ಂದೂಕುಗಳೂ, ಒಂದು ಕೋಟಿ ತೋಟಾಗಳೂ ಕರಾಚಿ ಬಂದರಿನಲ್ಲಿ ಇಳಿಸಲ್ಪಟ್ಟಿವೆ. ಇವುಗಳನ್ನು ಕರಾಚಿಯಿಂದ ಪೆಶಾವರಿಗೆ ಸಾಗಿಸಲು 61,000 ರೂ. ಗಳು ರೈಲುಛಾರ್ಜು ಆಯಿತಂತೆ! ಈ ಆಯುಧಗಳನ್ನು ಪೆಶಾವರಿನಿಂದ ಕಾಬೂಲಿಗೆ 240 ಮೋಟಾರ್ ಲಾರಿಗಳು ಸಾಗಿಸುತ್ತಿರುವುವು.

ಕರಾಚಿಯಲ್ಲಿ ನಿರುದ್ಯೋಗಿಗಳು ಧಾನ್ಯವ್ಯಾಪಾರಿಗಳ ಅಂಗಡಿಗಳ ಮುಂದೆ ಪಿಕೆಟಿಂಗ್ ಮಾಡುತ್ತಿರುವರು. ಧಾನ್ಯಗಳನ್ನು ಸಾಗಿಸುತ್ತಿದ್ದ ಬಂಡಿಗಳ ಮುಂದೆ ಅಡ್ಡಲಾಗಿ ಮಲಗಿ ಬಂಡಿಗಳು ಹೋಗದಂತೆ ತಡೆಯುತ್ತಿರುವರು. ಮಿ|| ಗಜಾಧರ್ ಎಂಬ ಮುಖಂಡರೂ ಸಹ ಗೋಡೌನ್‌ಗಳ ಮುಂದೆ ಮಲಗಿ ಪಿಕೆಟಿಂಗ್‌ಮಾಡಿದರು. ನಿರುದ್ಯೋಗ ಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸದೆ ಇದ್ದರೆ ನಿರಶನ ವ್ರತವನ್ನು ತಾಳುವುವಾಗಿ ಹೆದರಿಸುತ್ತಿರುವರು.

ದಕ್ಷಿಣ ಆಫ್ರಿಕೆಯ ಮೇರಿಟ್ಜಬರ್ಗ್ ಎಂಬ ಗ್ರಾಮದಲ್ಲಿ ಅಲ್ಲಿಯ ಮೂಲನಿವಾಸಿಗಳು ಮಾರಮ್ಮನ ಪೂಜೆಯನ್ನು ಬಹು ವಿಜೃಂಭಣೆಯಿಂದ ನಡೆಯಿಸಿದರು. ಇದನ್ನು ನೋಡುವುದಕ್ಕೆ ಅನೇಕ ಹಿಂದೂಗಳೂ ಯೂರೋಪಿಯನ್ನರೂ ಹೋಗಿದ್ದರು. ಅಲ್ಲಿ ನಡೆದ ವಿಶೇಷ ಸಂಗತಿಯೇನೆಂದರೆ 32 ಅಡಿ ಉದ್ದ 12 ಅಡಿ ಅಗಲವುಳ್ಳ ಅಗ್ನಿಕುಂಡದಲ್ಲಿ 15 ಮಂದಿ ಗಂಡಸರೂ ಒಬ್ಬ ಹೆಂಗಸೂ ಬರಿಯ ಕಾಲಿನಲ್ಲಿ ನಡೆದು ನೆರೆದಿದ್ದವರನ್ನು ವಿಸ್ಮಯಗೊಳಿಸಿದರು.

ಉತ್ತರ ಹಿಂದುಸ್ಥಾನದಿಂದ ಬಂದಿದ್ದ ಸರ್ಹಾದಿನ ಡಕಾಯಿತಿ ಕಳ್ಳರನ್ನು ಹಿಡಿಯಬೇಕೆಂದು ಬೊಂಬಾಯಿಗೆ 12 ಮೈಲುಗಳ ದೂರದಲ್ಲಿರುವ ಘಾಟ್ಕೋಪರ್ ಎಂಬ ಸ್ಥಳದಲ್ಲಿ ಈ ತಿಂಗಳು 16 ನೆಯ ತಾರೀಖಿನ ದಿವಸ ಪೋಲೀಸ್ ಸಿಪಾಯಿಗಳೊಂದಿಗೆ ಒಬ್ಬ ಯೂರೋಪಿಯನ್ ಸಾರ್ಜಂಟ್‌ಬ್ರ್ಯಾಸ್ಪೋರ್ ಎಂಬವನು ಕಾಯುತ್ತಿದ್ದನು. ನಿರೀಕ್ಷಿಸಿದಂತೆ ಆ ಕಳ್ಳರು ಆ ದಿವಸ ಪ್ರಾತಃಕಾಲವೇ ಬಂದರು. ಪೋಲೀಸರಿಗೂ ಕಳ್ಳರಿಗೂ ಬಡಿದಾಟವಾಗಿ ಸಾರ್ಜಂಟನನ್ನು ಕಳ್ಳರು ಇರಿದುಕೊಂದರು.

ಹಿಂದುಸ್ಥಾನದ ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್‌ರವರು ಲಂಡನ್ನಿನಲ್ಲಿ ಭಾಷಣಮಾಡುವಾಗ್ಗೆ ಹಿಂದುಸ್ಥಾನದ ರಾಷ್ಟ್ರೀಯ ಜಾಗೃತಿಯನ್ನು ಪ್ರಶಂಸೆಮಾಡಿ, ಇನ್ನು ಮುಂದೆ ದಬ್ಬಾಳಿಕೆಯಿಂದ ಪ್ರಭುತ್ವಮಾಡುವುದು ಸಾಧ್ಯವಿಲ್ಲವೆಂದೂ, ಭಾರತೀಯರ ಸಹಾನುಭೂತಿಯನ್ನು ಸಂಪಾದಿಸಿದರೆ ಮಾತ್ರವೇ ಭರತಖಂಡವು ಬ್ರಿಟಿಷ್ ಸಾಮ್ರಾಜ್ಯದಲ್ಲುಳಿಯುವುದೆಂದೂ, ಭಾರತೀಯರ ರಾಜಕೀಯ ಮತ್ತು ನೈತಿಕ ಪ್ರಗತಿಗೆ ಸಹಾಯಮಾಡುವುದು ಬ್ರಿಟಿಷ್ ಸರ್ಕಾರದವರ ಮುಖ್ಯ ಕರ್ತವ್ಯವೆಂದೂ ಹೇಳಿದರು.

ಕಲ್ಕತ್ತೆಯ ಉಪನಗರವಾದ ಡಮ್ ಡಮ್ ಎಂಬ ಸ್ಥಳದ ಒಂದು ತೋಟಕ್ಕೆ ಒಬ್ಬ ಜಹಗೀರ್‌ದಾರನ ಮತ್ತು ಅವನ ಸಹೋದರನ ಮೂವರು ಹೆಣ್ಣು ಮಕ್ಕಳು ತಮ್ಮ ಸ್ನೇಹಿತರೊಂದಿಗೆ ವನಭೋಜನಕ್ಕಾಗಿ ಹೋಗಿದ್ದರು. ಆಗ ಒಬ್ಬಳು ಕಾಲುಗಳನ್ನು ತೊಳೆದುಕೊಳ್ಳಬೇಕೆಂದು ತೋಟದೊಳಗಿದ್ದ ಒಂದು ಕೆರೆಯೊಳಕ್ಕಿಳಿದು ಕಾಲುಜಾರಿ ಬಿದ್ದಳು. ಅವಳನ್ನುಳಿಸಿಕೊಳ್ಳಬೇಕೆಂದು ಅವಳ ಇಬ್ಬರು ಸಹೋದರಿಯರೂ ಪ್ರಯತ್ನಪಟ್ಟು ಅವರೂ ಸಹ ನೀರಿನಲ್ಲಿ ಬಿದ್ದು ಮುಳುಗಿಹೋದರು. ಅವರನ್ನು ಹೊರಕ್ಕೆ ತೆಗೆದುನೋಡುವಲ್ಲಿ ಮೂವರೂ ಸತ್ತಿದ್ದರು.

ಢಾಕಾದಲ್ಲಿ ಒಬ್ಬ ಪೋಸ್ಟಲ್ ಇನ್ಸ್‌ಪೆಕ್ಟರು ನಾಲ್ಕುಜನ ಜವಾನರನ್ನು ಕರೆದುಕೊಂಡು ಸಬ್ ಪೋಸ್ಟ್ ಆಫೀಸ್‌ಗಳನ್ನು ತನಿಖೆ ಮಾಡಲು ಹೋಗುತ್ತಿದ್ದರು. ಅವರ ಪೋಸ್ಟಾಫೀಸ್ ಮೋಟಾರ್ ಲಾರಿಯ ಹತ್ತಿರ ನಾಲ್ಕು ಜನ ತರುಣರು ರಿವಾಲ್ವರ್ ತೆಗೆದುಕೊಂಡು ಬಂದು ಅವರನ್ನು ಗುಂಡಿನಿಂದ ಹೊಡೆಯುವೆವೆಂದು ಹೆದರಿಸಿ 800 ರೂ. ಗಳ ಥೈಲಿಯನ್ನು ಕಿತ್ತುಕೊಂಡು, ಸಮೀಪದಲ್ಲಿದ್ದ ಮಿಷನ್ ಆಸ್ಪತ್ರೆಯ ಗೋಡೆಯನ್ನು ಹತ್ತಿ ಹಿಂಬಾಲಿಸಿದವರನ್ನು ಗುಂಡಿನಿಂದ ಹೊಡೆಯುತ್ತಾ ತಪ್ಪಿಸಿಕೊಂಡು ಹೋದರು. ಯಾರಿಗೂ ಪೆಟ್ಟಾಗಿರುವುದಿಲ್ಲ; ಸರ್ಕಾರದವರು ಇನ್ನೂ ಯಾರನ್ನೂ ದಸ್ತಗಿರಿ ಮಾಡಿರುವುದಿಲ್ಲ.

ಶ್ರೀಯುತ ವಲ್ಲಭ ಭಾಯಿಪಟೇಲರವರು ಬರ್ಡೋಲಿಯನ್ನು ಮಾದರಿ ಹಳ್ಳಿಯನ್ನಾಗಿ ಮಾಡಬೇಕೆಂದು ಪ್ರಯತ್ನಮಾಡುತ್ತಿರುವರು. ಆ ಹಳ್ಳಿಯವರು ತಮ್ಮ ಬಟ್ಟೆಯನ್ನು ತಾವೇ ತಯಾರಿಸಬೇಕೆಂದೂ, ತಮ್ಮ ಗ್ರಾಮದ ಶಾಲೆಯನ್ನು ತಾವೇ ನಡೆಸಿಕೊಳ್ಳಬೇಕೆಂದೂ, ಸರ್ಕಾರದವರೊಡನೆ ಏನು ಕೆಲಸ ನಡೆಯಿಸಬೇಕಾದರೂ ಪಂಚಾಯಿತರ ಮೂಲಕವೇ ನಡೆಯಿಸಬೇಕೆಂದೂ, ತಮ್ಮ ಹಳ್ಳಿಯ ಜಗಳವನ್ನು ತಾವೇ ಇತ್ಯರ್ಥಮಾಡಿಕೊಳ್ಳಬೇಕೆಂದೂ, ಯಾವ ವಿಷಯದಲ್ಲಿಯೂ ಸರ್ಕಾರದವರ ಸಹಾಯವನ್ನು ನಿರೀಕ್ಷಿಸದಂತೆ ಕಾಲ್ಯನಿರ್ವಾಹ ಮಾಡಬೇಕೆಂದೂ, ಶ್ರೀಯುತ ಪಟೇಲರವರು ಆ ಹಳ್ಳಿಯ ಜನರಿಗೆ ಬೋಧಿಸುತ್ತಿರುವರು. ಅವರ ಪ್ರಯತ್ನವು ಅಲ್ಲಿ ಜಯಪ್ರದವಾದ ಮೇಲೆ ಬೇರೆ ಹಳ್ಳಿಗಳಲ್ಲಿಯೂ ಆ ತತ್ವವನ್ನು ಪ್ರಸಾರ ಮಾಡುವವರಾಗಿದ್ದಾರೆ.

ಮದರಾಸು ರಾಯಪುರದಲ್ಲಿರುವ ಇಬ್ಬರು ಕುರಿವ್ಯಾಪಾರಿಗಳಲ್ಲಿಗೆ ಯಾವನೋ ಒಬ್ಬ ಮೋಸಗಾರನು ಹೋಗಿ ತಾನು ರೈಲ್ವೆ ಪೋಲೀಸು ಶಿಪಾಯಿಯೆಂದೂ ಒಂದು ಮೊಕದ್ದಮೆಯಲ್ಲಿ ಪೋಲೀಸು ಚಾವಡಿಯಲ್ಲಿ ಅವರ ವಿಚಾರಣೆಯಾಗಬೇಕಾಗಿರುವುದರಿಂದ ತನ್ನ ಸಂಗಡ ಬರಬೇಕೆಂದೂ, ಹೇಳಿ ಅವರನ್ನು ಒಂದು ಕಾಫಿಕ್ಲಬ್ಬಿಗೆ ಕರೆದುಕೊಂಡುಹೋಗಿ ಅವರಿಗೆ ಅನೇಕ ಪ್ರಶ್ನೆಗಳನ್ನು ಹಾಕಿ ಅವರನ್ನು ಶೋಧನಮಾಡಲಾಗಿ 900 ರೂಪಾಯಿಗಳು ದೊರೆತವು. ಅನಂತರ ಅವನು ತಾನು ಪೋಲೀಸ್ ಸ್ಟೇಷನ್ನಿಗೆ ಹೋಗಿ ಬರುವವರೆಗೂ ಅಲ್ಲಿಯೇ ಇರಬೇಕೆಂದು ಹೇಳಿ ಎಲ್ಲಿಯೋ ತಪ್ಪಿಸಿಕೊಂಡನು. ಇವರು ಬಹುಹೊತ್ತಿನವರೆಗೂ ಅವನನ್ನು ಕಾದಿದ್ದು ಅವನು ಬಾರದ ಕಾರಣ ಸಮೀಪದಲ್ಲಿದ್ದ ಪೋಲೀಸ್ ಸ್ಟೇಷನ್ನಿಗೆ ಹೋಗಿ ಫಿರ್ಯಾದುಕೊಟ್ಟರು. ಪೋಲೀಸರು ಈ ಮೋಸಗಾರನನ್ನು ಹುಡುಕುತ್ತಿರುವರು.

ಬೊಂಬಾಯಿಯ ಕಾಂಗ್ರೆಸ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಸ್ವಯಂ ಸೇವಕರನ್ನು ಸದ್ಯಃ ಯಾವ ಕೆಲಸವೂ ಇಲ್ಲದಕಾರಣ ಕಾಂಗ್ರೆಸ್ಸಿನವರು ಕಳುಹಿಸಿಬಿಟ್ಟರು. ಇವರು ಕಾಂಗ್ರೆಸ್ ಅಧಿಕಾರಿಗಳಿಗೆ ಆಗಾಗ್ಗೆ ತೊಂದರೆ ಕೊಡುತ್ತಲೇ ಇರುವರು. ಕಳೆದವಾರ ನಾಲ್ಕು ಜನ ಮಹಮ್ಮದೀಯರು ತಾವು ಸ್ವಯಂ ಸೇವಕರೆಂದೂ, ತಾವು ಕೇಳಿದಷ್ಟು ಹಣವನ್ನು ಕೊಡದಿದ್ದರೆ ಅಲ್ಲಿರುವವರನ್ನೆಲ್ಲಾ ಕೊಂದು ಆಫೀಸಿಗೆ ಬೆಂಕಿ ಹಾಕುತ್ತೇವೆಂದೂ ಹೆದರಿಸಿದರು. ಅನಂತರ ಅವರು ಜಾಯಿಂಟ್ ಸೆಕ್ರೆಟರಿ ಮಿ|| ಜಫರ್‌ಭಾಯಿಯವರ ಮೇಲೆ ಬಿದ್ದರು. ಆಗ ಸೆಕ್ರೆಟರಿಗಳು ತಮ್ಮ ಬಟ್ಟೆಯನ್ನು ತೆಗೆದು ಹಾಕಿ ತಮ್ಮನ್ನು ಕೊಲ್ಲುವ ಶಕ್ತಿಯಿದ್ದರೆ ಕೊಲ್ಲಬಹುದೆಂದು ಹೇಳಿದರು. ಅವರು ಆಗ ಸುಮ್ಮನೆ ಹೋಗಿ ಸ್ವಲ್ಪ ಹೊತ್ತಿನ ಮೇಲೆ ಪುನಃ ಬಂದರು. ಆಗ ಮೊದಲಿಗಿಂತಲೂ ಜೋರುಮಾಡಲು ಪ್ರಾರಂಭಿಸಿದರು. ಅಲ್ಲಿದ್ದ ಬೇರೆ ಸ್ವಯಂಸೇವಕರು ಆ ಸಂಗತಿಯನ್ನು ಪೋಲೀಸರಿಗೆ ತಿಳುಹಿಸಿ ಅವರನ್ನು ಹೊರಗೆ ಹಾಕಿಸಿದರು.

ಮಹಾತ್ಮ ಗಾಂಧಿಯವರು ಕಳೆದವಾರ ವೈಸರಾಯರನ್ನು ಸಂದರ್ಶಿಸಲು ಸಿಮ್ಲಾಕ್ಕೆ ದಯಮಾಡಿಸಿದ್ದು ಸರಿಯಷ್ಟೆ! ಅವರು ಸಿಮ್ಲಾಕ್ಕೆ ಮೋಟಾರಿನಲ್ಲಿಯೇ ಹೋದರು. ಅವರ ಗೌರವಾರ್ಥವಾಗಿ ಅವರ ಹಿಂದೆ ನಾಲ್ಕು ಮೋಟಾರುಗಳು ಹೋದುವು. ಇದುವರೆಗೂ ಸಿಮ್ಲಾದಲ್ಲಿ ವೈಸರಾಯರು, ಸೇನಾನಾಯಕರು ಮತ್ತು ಪಂಜಾಬ್ ಗೌರ್ನರು, ಇವರ ಹೊರತು ವಿನಾ ಯಾರೂ ಮೋಟಾರಿನಲ್ಲಿ ಹೋಗಿರಲಿಲ್ಲ. ಮಹಾತ್ಮರು ಮೋಟಾರಿನಲ್ಲಿ ಹೋಗುವಾಗ ಯಾವ ಸರ್ಕಾರಿ ಅಧಿಕಾರಿಯೂ ಪ್ರತಿಬಂಧ ಮಾಡಲಿಲ್ಲ. ಈ ವಿಷಯವು ಲಂಡನ್ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಅವಕಾಶವಾಗಿದೆ. ಹಿಂದುಸ್ಥಾನದ ರಾಜರಿಗೂ, ಅನೇಕ ದೊಡ್ಡ ಮನುಷ್ಯರಿಗೂ ಮೋಟಾರಿನಲ್ಲಿ ಸಂಚರಿಸಲು ಅನುಕೂಲ್ಯವನ್ನು ಕಲ್ಪಿಸದೆ, ಮ|| ಗಾಂಧಿಯವರಿಗೆ ಮೋಟಾರಿನಲ್ಲಿ ಹೋಗುವಾಗ ಸುಮ್ಮನಿರಲು ಕಾರಣವೇನೆಂದು ಕೆಲವು ಮೆಂಬರರು ಇಂಡಿಯಾ ಸೆಕ್ರೆಟರಿಗಳನ್ನು ಪ್ರಶ್ನೆಮಾಡಿದರು. ಅದಕ್ಕೆ ಸೆಕ್ರೆಟರಿಗಳು ಸ್ಥಳೀಯ ಅಧಿಕಾರಿಗಳು ಉತ್ತರವಾದಿಗಳೇ ಹೊರತು ತಾವಲ್ಲವೆಂದು ಹೇಳಿದರು.

ಮಿ|| ಗಂಗಾಧರರಾಯರ ಗುಬ್ಬಿನಾಟಕ ಕಂಪನಿಯವರು ಅನಂತಪುರ ಡಿ|| ಕದಿರಿ ಎಂಬಲ್ಲಿ ಮೊಕ್ಕಾಂ ಮಾಡಿದ್ದರು. ಬೆಲೆಯುಳ್ಳ ಆಭರಣಗಳಿಂದಲೂ, ಬಟ್ಟೆಗಳಿಂದಲೂ ತುಂಬಲ್ಪಟ್ಟಿದ್ದ ಅವರ ಮೂರು ಟ್ರಂಕುಗಳನ್ನು ಯಾರೋ ಕಳುವು ಮಾಡಿಕೊಂಡು ಹೋಗಲು, ಆಗ ಕಂಪನಿಯವರು ಹನುಮಂತಪ್ಪ ಮತ್ತು ಶಂಕರಪ್ಪ ಎಂಬಿಬ್ಬರ ಮೇಲೆ ಗುಮಾನಿಯಿದೆ ಎಂದು ಹೇಳಿದಕಾರಣ ಪೋಲೀಸರು ಅವರಿಬ್ಬರನ್ನೂ ದಸ್ತಗಿರಿ ಮಾಡಿದರು. ಪೋಲೀಸರು ಕಳುವನ್ನು ಪತ್ತೇಮಾಡಬೇಕೆಂದು ಅವರಿಗೆ ವಿಚಿತ್ರಹಿಂಸೆಮಾಡಿದರಂತೆ! ಅದನ್ನು ತಡೆಯಲಾರದೆ ಒಬ್ಬನು ಮೂತ್ರವಿಸರ್ಜನೆ ಮಾಡುತ್ತೇನೆಂದು ಹೇಳಿ ನಿರ್ಜನ ಸ್ಥಳಕ್ಕೆ ಹೋಗಿ ಒಂದು ಕತ್ತಿಯಿಂದ ತನ್ನ ಕೊರಳನ್ನು ಕೊಯಿದುಕೊಳ್ಳುತ್ತಿದ್ದನು. ಅಷ್ಟರಲ್ಲಿ ಪೋಲೀಸರು ಬಂದು ನೋಡಿದರು. ಅವನು ರಕ್ತಮಯನಾಗಿ ಬಿದ್ದಿದ್ದನು. ಅವನನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿದರು. ಪೋಲೀಸರು ಅನ್ಯಾಯವಾಗಿ ವಿಚಿತ್ರ ಹಿಂಸೆಮಾಡಿದರೆಂದು ಪೋಲೀಸರ ಮೇಲೆ ಮೊಕದ್ದಮೆ ನಡೆದು ಪೆನುಗೊಂಡೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಗುತ್ತಿದೆ.

ಚಿತ್ರದುರ್ಗ ಡಿ|| ದೇವನಗರ ಎಂಬ ಗ್ರಾಮದಲ್ಲಿರುವ ಬೈರಪ್ಪ ಎಂಬಾತನ 4 ತಿಂಗಳ ಕೂಸಿಗೆ ಬಾಯಿ ತುಂಬ ಹಲ್ಲುಗಳು ಬಂದಿರುತ್ತವೆಯೆಂದೂ, ಈ ಸೃಷ್ಟಿವೈಚಿತ್ರ್ಯವನ್ನು ನೋಡಲು ಸ್ಥಳಪರಸ್ಥಳಗಳಿಂದ ಜನರು ತಂಡೋಪತಂಡವಾಗಿ ಹೋಗುತ್ತಿರುವರೆಂದೂ ತಿಳಿದುಬರುತ್ತದೆ.

[೩ ನೆಯ ಪುಟದಿಂದ ಮುಂದುವರಿದುದು.]

ಹಾಗುವುದು. ಆದರೆ ತಮ್ಮ ನಿಜವಾದ ಶಕ್ತಿಯಿಲ್ಲದೆ ಹೊರಗಿನ ಸಹಾಯದಿಂದಲೇ ಅಭಿವೃದ್ಧಿಗೆ ಬರುವುವೆಂದು ಭಾವಿಸುವುದು ತಪ್ಪು. ನಿಮ್ಮ ಮೆಂಬರರು ಬುದ್ಧಿವಂತರಲ್ಲದೆಯೂ, ನೀವು ಅಶಿಕ್ಷಿತರಾಗಿಯೂ, ದೇಶಾಭಿಮಾನಶೂನ್ಯರಾಗಿಯೂ ಇದ್ದರೆ ಹೊರಗಿನ ಸಹಾಯದಿಂದ ನಿಮಗೇನೂ ಸುಖವಾಗುವುದಿಲ್ಲ. ನಿಮ್ಮಲ್ಲಿ ನಿಜವಾದ ಶಕ್ತಿಯಿದ್ದರೆ ಹೊರಗಿನ ಸಹಾಯವಿಲ್ಲದೆ ಇಡೀ ಭರತಖಂಡವನ್ನೇ ಆಳಬಹುದು. ಇದಕ್ಕೆ ಉದಾಹರಣೆಯಾಗಿ ಇಂಗ್ಲೆಂಡಿನಲ್ಲಿ ಯಾವ ಪಕ್ಷದವರೇ ಪ್ರಭುಗಳಾಗಿರಲಿ, ಅವರು ಜಗತ್ತಿನಲ್ಲಿ ಪ್ರಬಲಸಂಸ್ಥೆಯಾದ ಕಾಂಗ್ರೆಸ್ಸಿನ ಹಾಗೂ ಮಹಾಪುರುಷನಾದ ಮಹಾತ್ಮ ಗಾಂಧಿಯ ಶಕ್ತಿಗೆ ತಲೆಬಾಗಲೇ ಬೇಕು.

ಹಿಂದುಸ್ಥಾನಕ್ಕೆ ಬೇಕಾಗಿರುವ ಅಂಶಗಳೇ? ಇಂಗ್ಲೀಷರು ಈಜಿಪ್ಟ್ ದೇಶೀಯರಿಗೆ ಎಂಥ ಸ್ವಾತಂತ್ರ್ಯವನ್ನು ಕೊಟ್ಟಿರುವರೆಂಬುದು ನನಗೆ ಗೊತ್ತು. ಈಜಿಪ್ಟ್ ಪಾರ್ಲಿಮೆಂಟಿನವರು ಸಂಪೂರ್ಣಾಧಿಕಾರ ಹೊಂದಿರುವುದಾಗಿ ಒಂದು ಸಾಧುವಾದ ಠರಾವು ಮಾಡಿದರು. ಆ ಕೂಡಲೆ ಇಂಗ್ಲೆಂಡಿನಿಂದ ಯುದ್ಧದ ಹಡಗುಗಳು ಬಂದು ಮುಖ್ಯ ಬಂದರಗಳ ಮೇಲೆ ಗುಂಡಿನ ಮಳೆಯನ್ನು ಸುರಿಸಲು ಪ್ರಾರಂಭಿಸಿದುವು. ಆಗ ಈಜಿಪ್ಟ್ ಪಾರ್ಲಿಮೆಂಟಿನವರು ಶರಣಾಗತರಾದರು. ಅನಂತರ ಗುಂಡುಹಾರಿಸುವುದನ್ನು ನಿಲ್ಲಿಸಿದರು. ಅಂಥ ಸ್ವಾತಂತ್ರ್ಯವು ನಮಗೆ ಬೇಕಿಲ್ಲ. ಹಣಕಾಸಿನ, ಸೈನ್ಯದ, ಹಡಗಿನ ಪಟ್ಟಿನ ಮೇಲೆ ದೇಶದ ಆಡಳಿತದ ಮೇಲೆ ಸಂಪೂರ್ಣಾಧಿಕಾರಬೇಕು. ಅದನ್ನು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವೆನ್ನಿರಿ ಅಥವಾ ಪೂರ್ಣ ಸ್ವಾತಂತ್ರ್ಯವೆನ್ನಿರಿ. ಹಿಂದುಸ್ಥಾನಕ್ಕೆ ಬೇಕಾಗಿರುವ ಅಂಶವೇ ಇದು. ಇದೇ ವಿಷಯವನ್ನೇ ಮಹಾತ್ಮರು ಎರಡನೆಯ ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಒತ್ತಾಯಮಾಡುವುದು. ಮಹಾತ್ಮರು ಆತ್ಮಸಾಕ್ಷಿಯಾಗಿಯೂ, ಉಜ್ವಲದೇಶಾಭಿಮಾನದಿಂದಲೂ ಮುಂದಿನ ಕಾರ್ಯವನ್ನು ನಡೆಯಿಸಿರುವರು. ಈ ಮೊದಲು ಎರಡು ಸಲ ಬ್ರಿಟಿಷ್ ಸರ್ಕಾರದವರು ಮಹಾತ್ಮರನ್ನು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಬರಬೇಕೆಂದು ಆಹ್ವಾನಿಸಿದರು. ಆಗ ತಿರಸ್ಕರಿಸಿ ಈಗ ಅಂಗೀಕರಿಸಿರುವುದರ ಮರ್ಮವೇನು? ಬ್ರಿಟಿಷರ ದೌರ್ಬಲ್ಯವೂ ಭಾರತೀಯರ ಶಕ್ತಿಯೂ ಮಹಾತ್ಮರಿಗೆ ಮನದಟ್ಟಾಗಿವೆ. ಕಾಂಗ್ರೆಸ್ಸಿನವರು ತಪ್ಪುಮಾಡಿ ದೇಶದ ಹಿತವನ್ನು ಕೈಬಿಟ್ಟರೆಂದು ಭಾವಿಸಬೇಡಿರಿ. ಕಾಂಗ್ರೆಸ್ಸಿನವರು ಹಾಗೆ ಎಂದೂ ಮಾಡಿರುವುದಿಲ್ಲ. ಮಹಾತ್ಮರಲ್ಲಿ ಪೂರ್ಣವಿಶ್ವಾಸವಿಡಿರಿ. ಅವರು ನಿಮಗೆ ಸಂಪೂರ್ಣಸ್ವಾತಂತ್ರ್ಯವನ್ನು ತರುವರು.

ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಬಗ್ಗೆ ಚರ್ಚೆಗಳು.

ಲ್ಯಾಂಕೆಷೈರಿನ ಗೋಳಾಟ.

ಈ ತಿಂಗಳು 13 ನೆಯ ತಾರೀಖಿನ ದಿವಸ ಲಂಡನ್ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಬಗ್ಗೆ ಸರ್ ಫಿಲಿಫ್‌ಕನ್‌ಲಿಫ್‌ಲಿಸ್ಟರ್ ಎಂಬವರು ಚರ್ಚೆಯನ್ನು ಪ್ರಾರಂಭಿಸಿ, ದಿಲ್ಲಿ ಒಪ್ಪಂದವಾದ ಮೇಲೆ ಬ್ರಿಟಿಷ್ ಬಟ್ಟೆಗಳನ್ನು ದೇಶದಿಂದ ಹೊರಗೆ ಹಾಕಲು ಭಾರತೀಯರು ಒಂದು ಕಂಪನಿಯನ್ನೇರ್ಪಡಿಸಲು ಪ್ರಯತ್ನಮಾಡಿರುವುದನ್ನು ನೋಡಿದರೆ, ಒಪ್ಪಂದವನ್ನು ಉಲ್ಲಂಘಿಸುವರೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ ಎಂದು ಹೇಳಿದರು.

ಆಗ ಸರ್ ಸ್ಯಾಮ್ಯುಯಲ್‌ರವರು:—ಲ್ಯಾಂಕಷೈರ್‌ಮಿಲ್ಲಿನವರಿಗುಂಟಾದ ತೊಂದರೆಯನ್ನು ವರ್ಣಿಸುವುದು ಸಾಧ್ಯವಿಲ್ಲ. ಅವರ ಪಕ್ಷವನ್ನು ಸಮರ್ಥನಮಾಡಿದುದಕ್ಕೆ ಸರ್ ಫಿಲಿಪ್‌ರವರು ಅವರ ಕೃತಜ್ಞತೆಗೆಪಾತ್ರರಾಗಿದ್ದಾರೆ. ಲ್ಯಾಂಕಷೈರಿನ ಕಷ್ಟನಷ್ಟಗಳನ್ನು ಪಾರ್ಲಿಮೆಂಟಿನವರು ತುಚ್ಛೀಕರಿಸುವ ಹಾಗಿಲ್ಲ. ಜಪಾನಿನವರು ತಮ್ಮ ದೇಶದ ಬಟ್ಟೆಗಳನ್ನು ಹಿಂದುಸ್ಥಾನಕ್ಕೆ ಸಾಗಿಸಿ ಲ್ಯಾಂಕಷೈರಿನೊಡನೆ ಪೈಪೋಟಿಮಾಡುವುದರಿಂದಲೂ, ಹಿಂದುಸ್ಥಾನದವರು ಬಡವರಾಗಿ ವಿಲಾಯತಿಬಟ್ಟೆಗಳನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲದಿರುವುದರಿಂದಲೂ, ಲ್ಯಾಂಕಷೈರಿನ ವ್ಯಾಪಾರವು ಹಾಳಾಗಿಲ್ಲ. ಆದರೆ ಹಿಂದುಸ್ಥಾನದ ವಿದೇಶಿವಸ್ತ್ರ ಬಹಿಷ್ಕಾರದ ಉಗ್ರ ಚಳವಳಿಯಿಂದಲೂ, ಮತ್ತು ಲ್ಯಾಂಕ್‌ಷೈರ್‌ಮಾಲಿನ ಮೇಲೆ ಸುಂಕಹಾಕಿದ್ದರಿಂದಲೂ ಲ್ಯಾಂಕ್‌ಷೈರಿನ ವ್ಯಾಪಾರವು ನಾಶವಾಯಿತು. ರೌಂಡ್‌ಟೇಬಲ್ ಸಮ್ಮೇಳನದಲ್ಲಿ ತೀರ್ಮಾನಿಸಿರುವ ಮಾರ್ಗವನ್ನು ನಿಸ್ಪೃಹತೆಯಿಂದಲೂ ದಕ್ಷತೆಯಿಂದಲೂ ಅನುಸರಿಸುವುದರಿಂದಲೇ ಈ ತೊಂದರೆಯನ್ನು ನಿವಾರಣೆಮಾಡಲು ಸಾಧ್ಯವಿದೆಯೇ ಹೊರತು ಬೇರೆಯಿಲ್ಲ. ಇದಕ್ಕೆ ಹಿಂದುಸ್ಥಾನದಲ್ಲಿಯೂ ಇಂಗ್ಲೆಂಡಿನಲ್ಲಿಯೂ ಯೋಗ್ಯ ವಾತಾವರಣವು ಬೇಕು. ಈ ವಿಷಯದಲ್ಲಿ ಇಂಡಿಯಾಸೆಕ್ರೆಟರಿ ವೆ|| ಬೆನ್‌ರವರು ಆಲೋಚಿಸಿರುವುದೇನು?

ವೆ|| ಬೆನ್‌ರವರ ಮಹತ್ವದ ಭಾಷಣ.

ಆಗ ವೆ|| ವೆನ್‌ರವರು ಹೇಳಿದ್ದೇನಂದರೆ:—ಲ್ಯಾಂಕಷೈರಿಗೆ ನಷ್ಟವಾದುದಕ್ಕೆ ವ್ಯಸನವಾಗುತ್ತದೆ. ಆದರೆ, ಇಂಗ್ಲೆಂಡಿನ ಹಿತದಂತೆಯೇ ಭಾರತೀಯರ ಹಿತವನ್ನೂ ಸಹ ಸಂರಕ್ಷಿಸುವುದು ಈ ಸಭೆಯ ಕರ್ತವ್ಯವಾಗಿದೆ. ಲ್ಯಾಂಕಷೈರಿನ ವ್ಯಾಪಾರವು ಹಿಂದುಸ್ಥಾನದಲ್ಲಿ ಮಾತ್ರವೇ ಕಡಿಮೆಯಾಗಿಲ್ಲ. ಇತರ ದೇಶಗಳಲ್ಲಿಯೂ ಕಡಿಮೆಯಾಗಿದೆ. ರಾಜಕೀಯ ಪ್ರಶ್ನೆಯನ್ನು ಬಗೆಹರಿಸದಕಾರಣ ಹಿಂದುಸ್ಥಾನದಲ್ಲಿ ಲ್ಯಾಂಕ್‌ಷೈರ್‌ವ್ಯಾಪಾರಕ್ಕೆ ಧಕ್ಕೆಯಾಯಿತೆಂದು ಕೆಲವರು ಹೇಳುತ್ತಾರೆ. ಇದು ಶುದ್ಧತಪ್ಪು. ಈಗ್ಗೆ ಹತ್ತುವರ್ಷಗಳಿಂದಲೂ ಇಂಗ್ಲೆಂಡಿನ ಹೊರಗಿನ ವ್ಯಾಪಾರವು ಬಹುಮಟ್ಟಿಗೆ ಕುಗ್ಗಿಹೋಗಿದೆ. ಹಿಂದುಸ್ಥಾನದ ಹಳ್ಳಿಗಳ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕೆಂದೇ ಬ್ರಿಟಿಷ್‌ಸರ್ಕಾರದ ಉದ್ದೇಶ. ಹಳ್ಳಿಯ ಕೈಗಾರಿಕೆಗಳು ಅಭಿವೃದ್ಧಿಗೆ ಬಂದರೆ ಕೋಟ್ಯಂತರ ಭಾರತೀಯರಿಗೆ ಕ್ಷೇಮವಾಗುವುದೇ ಹೊರತು ಬೇರೆ ದಾರಿಯೇ ಇಲ್ಲ. ಇದರ ಮಹತ್ವವು ಇಲ್ಲಿ ಅನೇಕರಿಗೆ ತಿಳಿದಿಲ್ಲ. ಭಾರತೀಯರ ಹಣಕಾಸಿನ ಪರಿಸ್ಥಿತಿಯು ಸುಧಾರಿಸಿದರೆ ಲ್ಯಾಂಕ್‌ಷೈರಿನ ಬಟ್ಟೆವ್ಯಾಪಾರವು ಸುಧಾರಿಸುವುದು. ಹಿಂದುಸ್ಥಾನದ ಕೋಟ್ಯಂತರ ಜನರಿಗೆ ಸಾಕಾಗುವಷ್ಟು ಬಟ್ಟೆಯು ಅಲ್ಲಿಯ ಮಿಲ್ಲುಗಳಲ್ಲಿ ಉತ್ಪತ್ತಿಯಾಗುವುದಿಲ್ಲ. ಅವರು ಪರದೇಶಗಳಿಂದ ಬಟ್ಟೆಯನ್ನು ತಯಾರಿಸಲೇಬೇಕಾಗುವದು. ಅದರಲ್ಲೂ ಇದು ನಾಗರೀಕತೆಯಕಾಲ. ಒಳ್ಳೆಯ ಬಟ್ಟೆಗೆ ಗಿರಾಕಿಗಳು ಚನ್ನಾಗಿವೆ. ದಿಲ್ಲಿ ಒಪ್ಪಂದದಲ್ಲಿ ವಿದೇಶಿವಸ್ತ್ರಗಳನ್ನು ಶಿರಾತಂಕವಾಗಿ ಮಾರುವುದಕ್ಕೆ ಅವಕಾಶವು ದೊರೆತಿರುವುದಲ್ಲದೆ ದೇಶಿಯ ಕೈಗಾರಿಕೆಗಳ ಅಭಿವೃದ್ಧಿಗೂ ತಕ್ಕ ಅನುಕೂಲ್ಯವನ್ನುಂಟುಮಾಡಿದೆ. ಉಭಯ ದೇಶಗಳಲ್ಲಿಯೂ ಇರುವ ಉಗ್ರವಾದಿಗಳನ್ನು ಹತೋಟಿಯಲ್ಲಿಡಬೇಕು. ವ್ಯಾಪಾರದ ಪುನರುಜ್ಜೀವನವು ಒಪ್ಪಂದದ ಉದ್ದೇಶವಲ್ಲ. ಉಭಯದೇಶಗಳಿಗೂ ಸೌಹಾರ್ದವನ್ನು ನೆಲೆಗೊಳಿಸುವುದೇ ಒಪ್ಪಂದದ ಮುಖ್ಯೋದ್ದೇಶ. ಸರ್ಕಾರದವರುಶಾಂತಿಮಾರ್ಗವನ್ನೇ ಅವಲಂಬಿಸುತ್ತಾ ಬಂದಿರುವರು. ಹಿಂದುಸ್ಥಾನದಲ್ಲಿ ರಾಜಕೀಯ ಚಳವಳಿಯು ಕರಾಳಸ್ವರೂಪವನ್ನು ತಾಳಿದಾಗ ಭಾರತೀಯರು ರೌಂಡ್‌ಟೇಬಲ್‌ಸಮ್ಮೇಳನಕ್ಕೆ ಬರುವಂತೆ ಪ್ರೋತ್ಸಾಹಿಸಿದ ಕೆಲಸವೂ, ಭಾರತೀಯಮೆಂಬರರು ಹಿಂದಿರುಗಿ ವಿರೋಧಪಕ್ಷದವರೆಲ್ಲ ವಿರೋಧವನ್ನು ಬಿಟ್ಟು ಅನುಕೂಲಕ್ಕೆ ಬರುವಹಾಗೆಮಾಡಿರುವ ಕೆಲಸವೂ ಸಾಮಾನ್ಯವಾದುವುಗಳಲ್ಲ. ನಮ್ಮ ಕಾಲದಲ್ಲೆಲ್ಲಾ ಕೇವಲ ಗಣ್ಯರಾದ ವೈಸರಾಯ ಲಾರ್ಡ್‌ಇರ್ವಿನ್‌ರವರು ಹಿಂದುಸ್ಥಾನದ ಅದ್ವಿತೀಯ ಮುಖಂಡರಾದ ಮಿ|| ಗಾಂಧಿಯವರನ್ನು ಒಪ್ಪಂದಕ್ಕೆ ಬರುವಂತೆ ಮಾಡಿದರು. ಇದು ಶಾಂತಿಪಥಾವಲಂಬನೆಯ ಪರಿಣಾಮ. ನಾವು ಶಾಂತಿಪಥವನ್ನೇ ಅವಲಂಬಿಸುವುದಾದರೆ ಇನ್ನೂ ಮಹತ್ವದ ಕಾರ್ಯಗಳಾಗುವುವು.

ಮಿ|| ಚರ್ಚಿಲ್ಲರ ಪಟಾಟೋಪ.

ಲ್ಯಾಂಕ್‌ಷೈರ್ ಹಾಳಾಗುವವರೆಗೂ ಪಾರ್ಲಿಮೆಂಟಿನವರು ಕಣ್ಣು ಮುಚ್ಚಿಕೊಂಡಿರಬೇಕೆಂಬುದೇ ಮಿ|| ಬೆನ್ನರ ಉಪದೇಶ. ಸರ್ಕಾರದವರು ಈಗ ಅನುಸರಿಸಿರುವ ಮಾರ್ಗದಿಂದ ಹಿಂದುಸ್ಥಾನಕ್ಕೂ ಲ್ಯಾಂಕ್‌ಷೈರಿಗೂ ತುಂಬಾ ಹಾನಿಯುಂಟಾಗುವುದು. ವಿದೇಶಿವಸ್ತ್ರಬಹಿಷ್ಕಾರದ ಕಾರಣವು ರಾಜಕೀಯವಾಗಿರಲಿ, ಅಥವಾ ಬಡವರ ಸ್ಥಿತಿಯನ್ನು ಸುಧಾರಿಸುವುದಾಗಿರಲಿ; ಅದು ಕಾಯಿದೆವಿರೋಧವಾದುದೆಂದು ತರ್ಕಿಸಿ ಇವೇ ಸಾರಬೇಕು. ಬಹಿಷ್ಕಾರವು ದೌರ್ಬಲ್ಯದ ಫಲ. ಇದರಿಂದ ಆಂಗ್ಲೇಯರ ಸದುದ್ದೇಶಗಳಲ್ಲಿ ವಿಶ್ವಾಸವಿಲ್ಲವೆಂಬುದು ಗೊತ್ತಾಗುತ್ತದೆ. ಇದರಿಂದ ಪಾಲಿನಲ್ಲಿ ಉಪ್ಪುಹಾಕಿದಂತೆ ಹಿಂದೂಮಹಮ್ಮದೀಯರ ಬಾಂಧವ್ಯಕ್ಕೆ ಬಾಧೆಯುಂಟಾಯಿತು. ಇಂಗ್ಲೆಂಡ್ ಮತ್ತು ಭಾರತೀಯರ ಹಿತವನ್ನು ಕಾಪಾಡುವುದು ಪಾರ್ಲಿಮೆಂಟಿನಕರ್ತವ್ಯವೇನೋ ನಿಜ. ಲ್ಯಾಂಕ್‌ಷೈರ್ ಬಟ್ಟೆಯನ್ನು ಬಿಡುವುದರಿಂದ ಭಾರತೀಯರಿಗಾಗುವ ಹಾನಿಯು ಅಷ್ಟಿಷ್ಟಲ್ಲ. ಹಣಕಾಸಿನ ಮುಗ್ಗಟ್ಟಿನಿಂದ ಇಡೀ ಪ್ರಪಂಚವೇ ತಳಮಳಗೊಳ್ಳುತ್ತಿರುವಾಗ ಹಿಂದುಸ್ಥಾನದ ಬಟ್ಟೆ ಮಿಲ್ಲುಗಳ ಮಾಲೀಕರು ಅಪರಿಮಿತವಾದ ಲಾಭವನ್ನು ಹೊಂದಿದರು. ಪರದೇಶದ ಮಿಲ್ಲುಗಳಿಗಿಂತ ಹಿಂದುಸ್ಥಾನದ ಮಿಲ್ಲುಗಳಲ್ಲಿ ಖರ್ಚುಕಡಿಮೆ. ಆದಕಾರಣ ತಮ್ಮ ಬಟ್ಟೆಗಳನ್ನು ಅಗ್ಗವಾಗಿ ಮಾರಿ ತಾವು ಭಾರತೀಯರ ಹಿತಕ್ಕೋಸ್ಕರ ಬಾಳುವೆವೆಂದು ವಿಜೃಂಭಿಸಿ, ಲ್ಯಾಂಕ್‌ಷೈರ್ ವ್ಯಾಪಾರವನ್ನು ನಿಲ್ಲಿಸುವರು. ಈ ಮಿಲ್ಲುಗಳ ಮಾಲೀಕರು ಮಿ|| ಗಾಂಧಿಗೆ ತುಂಬಾ ಧನಸಹಾಯಮಾಡುತ್ತಿರುವರು. ಬಹಿಷ್ಕಾರದಚಳವಳಿಯಲ್ಲಿ ಅವರೇ ಹಣಕೊಟ್ಟವರು.

ಲಾರ್ಡ್ ಗ್ರ್ಯಾಕ್ಸ್ಟೆ:—ಜನರಿಗೆ ಯೋಗ್ಯರೀತಿಯಿಂದ ಮನಗಾಣಿಸಿ ವಿದೇಶಿವಸ್ತ್ರವ್ಯಾಪಾರವನ್ನು ನಿಲ್ಲಿಸುವುದು ಸಾಧ್ಯವಿಲ್ಲದ್ದರಿಂದ ಬಲಾತ್ಕಾರದಿಂದ ನಿಲ್ಲಿಸಲು ಬಹಿಷ್ಕಾರಾಯುಧವನ್ನು ತೆಗೆದುಕೊಂಡಿರುವರು. "ಬಲಹೀನವೈಸರಾಯ ಮತ್ತು ಬಲಹೀನ ಸರ್ಕಾರ" ವೆಂದುಟಬ್ಬ ಮೆಂಬರರು ಗೊಣಗುಟ್ಟಿದರು.

ಆಗ ಮಿ|| ಫುಟ್‌ರವರು:—ಕೇವಲ ಕಠಿಣಪರಿಸ್ಥಿತಿಯಲ್ಲಿ ತುಂಬಾ ಶ್ರಮವಹಿಸಿ ಕೆಲಸಮಾಡಿ ಜಯಶೀಲರಾಗಿ ಬಂದಿರುವ ವೈಸರಾಯರನ್ನು ಆಕ್ಷೇಪಿಸಿದರೆ ವಿಶೇಷ ಜನ ಆಂಗ್ಲೇಯರು ಅದನ್ನು ನಿಷೇಧಿಸದೆ ಸುಮ್ಮನಿರಲಾರರು.

ಕರ್ನಲ್ ಕೆನಿವರ್:—ಇಂಗ್ಲೀಷರು ಹಿಂದುಸ್ಥಾನವನ್ನು ಒಮ್ಮೆ ಕಾಮಧೇನುವೆಂದು ಭಾವಿಸಿದ್ದರು. ಈಗ ಆ ಕಾಲವು ಹೋಯಿತು. ಭಾರತೀಯರಿಗೂ ಇಂಗ್ಲೀಷರಿಗೂ ಅನೇಕ ಸಂಧಾನಗಳಾಗಬೇಕಾಗಿವೆ, ಆದಕಾರಣ ಇಂಗ್ಲಿಷ್‌ಬಟ್ಟೆಗೆ ಬಹಿಷ್ಕಾರಹಾಕಿದರೆ ಸಂಯಾದ ಶಾಂತಿವಾತಾವರಣವು ಉತ್ಪತ್ತಿಯಾಗುವುದಿಲ್ಲ.

ಸರ್ ಸ್ಯಾಮ್ಯುಯಲ್‌ಹೋರ್:—ಸರ್ಕಾರದ ಧ್ಯೇಯವು ದೋಲಾಯಮಾನವಾಗಿರುವುದರಿಂದ ಸೌಹಾರ್ದವನ್ನು ನೆಲೆಗೊಳಿಸಬೇಕೆಂಬ ರೌಂಡ್‌ಟೇಬಲ್ ಸಮ್ಮೇಳನದ ಉದ್ದೇಶವು ಫಲಕಾರಿಯಾದಂತೆ ಕಾಣುವುದಿಲ್ಲ. ಭಾರತೀಯರಿಗೂ ಆಂಗ್ಲೇಯರಿಗೂ ನಂಬಿಕೆಯೂ, ಸೌಹಾರ್ದವೂ ಉಂಟಾಗುವವರೆಗೂ ರಾಜಕೀಯ ಸುಧಾರಣೆಗಳನ್ನು ಕೊಡದೆ ನಿಲ್ಲಿಸುವ ಪ್ರಸಂಗಬಂದೀತೆಂದು ಭಾರತೀಯರಿಗೆ ಎಚ್ಚರಿಕೆಕೊಡುತ್ತೇನೆ. ರೌಂಡ್‌ಟೇಬಲ್‌ಸಮ್ಮೇಳನದಲ್ಲಿ ನಿರ್ಧರಿಸಲ್ಪಟ್ಟಿರುವ ರಕ್ಷಾಕವಚಗಳ ವಿಷಯವು ಗಾಂಧಿಇರ್ವಿನ್ ಒಪ್ಪಂದವಾದ್ದರಿಂದ ಪುನಃ ವಿಮರ್ಶೆಗೆ ಬರಬಹುದೋ ಎಂದು ವೆ|| ಬೆನ್ನರನ್ನು ಪ್ರಶ್ನೆಮಾಡಿದರು.

ಮಿ|| ಬೆನ್:—ರೌಂಡ್‌ಟೇಬಲ್ ಸಮ್ಮೇಳನವಾದ ಮೇಲೆ ಅನೇಕ ಅನಿರೀಕ್ಷಿತಕಾರ್ಯಗಳಾಗಿವೆ. ಗಾಂಧಿ ಇರ್ವಿನ್ ಒಪ್ಪಂದ, ಕರಾಚಿಕಾಂಗ್ರೆಸ್, ವೈಸರಾಯರ ಬದಲಾವಣೆ ಇವೆಲ್ಲ ನಡೆದಿವೆ. ಸರ್ಕಾರದವರು ನಿಮಿತ್ತವಿಲ್ಲದೆ ನಿಧಾನವಾಗಿ ಕೆಲಸ ಮಾಡುವರೆಂಬ ಆಕ್ಷೇಪಣೆಗೆ ಅವಕಾಶವೇ ಇರುವುದಿಲ್ಲ. ಆದರೂ ಮೆಂಬರರು ಜಾಗ್ರತೆಯಾಗಿ ಕಾರ್ಯಕಲಾಪಗಳನ್ನು ಮಾಡಬೇಕೆಂದು ಹೇಳುವುದನ್ನು ಅಂಗೀಕರಿಸಿ ಆ ಬಗ್ಗೆ ತಕ್ಕ ಸಲಹೆಗಳನ್ನು ನಿರೀಕ್ಷಿಸಿರುತ್ತಾರೆ.

ಮಿ|| ಫುಟ್:—ಫೆಡರಲ್ ಸರ್ಕಾರದ ರಚನೆಯಲ್ಲಿ ಎಲ್ಲಾ ಸಮಾಜದವರಿಗೂ ಪ್ರಾತಿನಿಧ್ಯವು ಕೊಡಲ್ಪಟ್ಟಿದೆಯೆ ಎಂದು ಕೇಳಿದರು. ಮಿ|| ಬ್ರ್ಯಾಕರ್:— ರಕ್ಷಾಕವಚಗಳನ್ನು ಮಿ|| ಗಾಂಧಿಯವರು ಒಪ್ಪಿ ಅಂಗೀಕರಿಸಿದರೆ ಹೇಗೆ? ಸ್ಪಷ್ಟೋತ್ತರ ಕೊಡಿರಿ ಎಂದು ವೆ|| ಬೆನ್ನರನ್ನು ಕೇಳಿದರು.

ಬೆನ್ನರು ಉತ್ತರ ಹೇಳುವ ಯತ್ನವನ್ನೇ ಮಾಡಲಿಲ್ಲ.

ಮಿ|| ಚರ್ಚಿಲ್ಲರು ಕೋಪೋದ್ದೀಪ್ತರಾಗಿ ನಮಗೆ ಉತ್ತರ ಹೇಳುತ್ತೀರೋ ಇಲ್ಲವೋ ಎಂದು ಕೇಳಿದರು. ಲೇಬರ್ ಮೆಂಬರರು ತಮಾಷೆಮಾಡಿ ನಗುವುದಕ್ಕಾರಂಭಿಸಿದರು. ಆ ನಗೆಯಲ್ಲಿ ಚರ್ಚಿಲ್ಲರ ಧ್ವನಿಯು ಅಡಗಿಹೋಯಿತು. ಗಾಂಧಿ ಇರ್ವಿನ್ ಒಪ್ಪಂದವಾದ ಮೇಲೆ ಸರ್ಕಾರದವರು ಹೊರಡಿಸಿರುವ ಪ್ರಕಟನೆಯಲ್ಲಿ ಅದಕ್ಕೆ ತಕ್ಕ ಉತ್ತರವಿದೆ ಎಂದು ಹೇಳಿದರು.

ಮದ್ಯದ ಪಾಡು.

(ಗೋವಿನ ಹಾಡಿನ ಮಟ್ಟು.)

ಮಧುವ ಕುಡಿದರೆ ಮತಿಯು ಕೆಡುವುದು |
ಮಧುವ ಕುಡಿದರೆ ಮಾನ ಕೆಡುವುದು ||
ಮಧುವ ಕುಡಿದರೆ ಹಣವು ಕೆಡುವುದು |
ಮಧುವ ಕುಡಿವವ ಮಾದಿಗ ||೧||

ಮಧುವ ಕುಡಿವನ ಮನಸು ಹೊಲಸು |
ಮಧುವ ಕುಡಿವನ ಮನೆಯು ಹೊಲಸು ||
ಮಧುವ ಕುಡಿವನ ಮಾತು ಹೊಲಸು |
ಮಧುವ ಕುಡಿವವ ಮಾದಿಗ ||೨||

ಮಧುವ ಕುಡಿದರೆ ಗುಣವು ಕೆಡುವುದು |
ಮಧುವ ಕುಡಿದರೆ ಪ್ರಾಣ ಕೆಡುವುದು ||
ಮಧುವ ಕುಡಿದವ ಸಭೆಗೆ ಬಾರನು |
ಮಧುವ ಕುಡಿವವ ಮಾದಿಗ ||೩||

ಮಧುವ ಕುಡಿವಗೆ ಸತ್ಯವಿಲ್ಲ |
ಮಧುವ ಕುಡಿವಗೆ ನೀತಿಯಿಲ್ಲ ||
ಮಧುವ ಕುಡಿವಗೆ ನಂಬುಗಿಲ್ಲ |
ಮಧುವ ಕುಡಿವವ ಮಾದಿಗ ||೪||

ಮಧುವ ಕುಡಿವಗೆ ಸಿಟ್ಟು ಹೆಚ್ಚು |
ಮಧುವ ಕುಡಿವಗೆ ಪೆಟ್ಟು ಹೆಚ್ಚು ||
ಮಧುವ ಕುಡಿವಗೆ ಕುಟ್ಟು ಹೆಚ್ಚು |
ಮಧುವ ಕುಡಿವವ ಮಾದಿಗ ||೫||

ಮಧುವ ಕುಡಿವಗೆ ಹುಚ್ಚು ಹೆಚ್ಚು |
ಮಧುವ ಕುಡಿವಗೆ ಮೆಚ್ಚು ಹೆಚ್ಚು ||
ಮಧುವ ಕುಡಿವಗೆ ಕಿಚ್ಚು ಹೆಚ್ಚು |
ಮಧುವ ಕುಡಿವವ ಮಾದಿಗ ||೬||

ಮಧುವ ಕುಡಿವವ ಪೋಲಿಯೆನಿಪನು |
ಮಧುವ ಕುಡಿವವ ಕೂಲಿಯೆನಿಪನು ||
ಮಧುವ ಕುಡಿವವ ಸಾಲಿಯೆನಿಪನು |
ಮಧುವ ಕುಡಿವವ ಮಾದಿಗ ||೭||

ಮಧುವ ಕುಡಿವನ ನೋಡ ಮಕ್ಕಳ |
ಮಧುವ ಕುಡಿವವ ಕಾಣ ಹೆಂಡಿರ ||
ಮಧುವ ಕುಡಿವವ ತಿಳಿಯ ನಂಟರ |
ಮಧುವ ಕುಡಿವನ ಮಾದಿಗ ||೮||

ಮಧುವು ಪಾಪದ ತಾಯಿಬೇರು |
ಮಧುವು ನರಕದ ವಾಟನೀರು ||
ಮಧುವು ದುಃಖದ ಮಾರಿಯೂರು |
ಮಧುವ ಕುಡಿವವ ಮಾದಿಗ ||೯||

ಮಧುವ ಕುಡಿವನ ಕೈಗೆ ಚಿಪ್ಪು |
ಮಧುವ ಕುಡಿವನ ಮೈಗೆ ಮುಪ್ಪು ||
ಮಧುವ ಕುಡಿವನ ಬಾಯಿ ಸೊಪ್ಪು |
ಮಧುವ ಕುಡಿವವ ಮಾದಿಗ ||೧೦||

ಯಂ. ರಂಗಪ್ಪ,
ಪ್ರೆಸಿಡೆಂಟ್ ಟಿ. ಎಸ್. ಲಾಡ್ಜ್, ಮತ್ತು
ಕರ್ನಾಟಕವಚನರಚನಾಪ್ರವೀಣ, ಮೊಳಕಾಲ್ಮುರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧು-ಪವಿತ್ರಧೃತಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜೆಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲಿಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲಿಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗ್ರಹಮಾತೆಯು—೧ ಶೀಸೆಗೆ ೧೨ ಆಣೆ (ಶಿ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆಯಿಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—

ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀವಸ, ಎದೆಗೂಡು ಕಟ್ಟುವುದು. ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳುಪು, ಹೊಟ್ಟೆಹುಳಗಳ ಕೆಡರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಕು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[42] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ) **ಮಂಗಳೂರು. ದ. ಕ.**

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ— ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಮೀರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯುವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ಸಾವಕಾಶಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,
ಪಟೇಲ್ ಮತ್ತು ಛೇರ್‌ಮನ್, ಬಾಸೂರು,
[5] ಪೋಸ್ಟ್ ಸಖ್ರಪಟ್ಣ, ಡಿಸ್ಟ್ರಿಕ್ಟ್ ಕಡೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)		೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)		೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)		೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	....	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	....	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	....	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)		೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	....	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	....	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)		೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	....	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	....	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	....	೨ ಆಣೆ
ಪಂಚಾಚಾರ್ಯ ಪ್ರಭಾಕರ	....	೨ ಆಣೆ
ವೀರಶೈವಮತಮೀಮಾಂಸಾ	....	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	....	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	....	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)		೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)		೪ ಆಣೆ
ವೈದಿಕವಾಙ್ಮಯರಹಸ್ಯ	....	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	....	೮ ಆಣೆ
ಶಿವಸ್ತವಶಿರೋಮಣಿ	....	೨|| ಆಣೆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	....	೮ ಆಣೆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	....	೮ ಆಣೆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	....	೧೦ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		೧ ರೂ.
ಸಚಿತ್ರ ರೇಣುಕವಿಜಯ	....	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	....	೧ ರೂ.
ವೀರಶೈವಸಿದ್ಧಾಂತಸುಧಾಕರ	....	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಾಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬಹು ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾಣುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವದರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ.	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪಿನಸಿ, ಒಂ... ತಲೆನೋವು, ತಲೆಯ... ಲ್ಲಿನ ರೋಗಗಳು ... ಕಣ್ಣುಗಳಲ್ಲಿ ಉಂಟಾ...

(Registered Trade Mark)

ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವನಲ್ಲದೆ ಕಂಠಕ್ಕೆ ಮೇ...ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋಗಿಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪-... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[45] ಪೋ. ಬಾ. ೫೧೦, ಮದರಾಸ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೩ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಜೂನ್ ೧೯೩೧ [ಸಂಚಿಕೆ ೬

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರಕ್ಷೆ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೩ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರುಕೂಡ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರಕ್ಷಸ್ವರೂಪವಾಗಿರುವ ಈ ಗ್ರಂಥವು ಹತ್ತಿರವಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಹಾತ್ಮಗಾಂಧಿಯವರಿಗೆ ಶ್ರೀಯುತ ವಿಠ್ಠಲಭಾಯಿ ಪಟೇಲರವರ ತಂತಿ.

ಶ್ರೀಯುತ ವಿಠ್ಠಲಭಾಯಿ ಪಟೇಲರವರು ಮಹಾತ್ಮಗಾಂಧಿಯವರಿಗೆ ಕೆಳಗೆ ವಿವರಿಸಿರುವಂತೆ ಲಂಡನ್ನಿನಿಂದ ತಂತಿ ಕಳುಹಿಸಿದ್ದಾರೆ.

"ನಾನು ಎಷ್ಟು ಸೂಕ್ಷ್ಮವಾಗಿ ವಿಚಾರಮಾಡಿದರೂ ನೀವು ಲಾರ್ಡ್ ಇರ್ವಿನರವರೊಡನೆ ಸಂಧಿಮಾಡಿಕೊಂಡ ನಿಷಯವು ಸರಿಯಾದುದಲ್ಲವೆಂದು ತಿಳಿಯುತ್ತದೆ. ಸಂಧಿಯ ಷರತ್ತುಗಳು ನಿರಾಶಾಜನಕವಾದುವುಗಳೆಂಬ ನನ್ನ ಅಭಿಪ್ರಾಯವನ್ನು ಮುಚ್ಚುಮರೆಮಾಡದೆ ಸ್ಪಷ್ಟವಾಗಿ ಹೇಳುತ್ತೇನೆ. ಕಾಂಗ್ರೆಸ್ಸಿನವರಿಗೆ ತೃಪ್ತಿಕರವಾಗುವಂತೆ ಕೊನೆಯ ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ ಎಂಥ ಕಠಿಣಸ್ಥಿತಿಯೊದಗುವುದೆಂಬುದನ್ನು ಬ್ರಿಟಿಷರು ಇನ್ನೂ ತಿಳಿದುಕೊಂಡಿಲ್ಲ. ನೀವು ಲಂಡನ್ನಿಗೆ ಕೂಡಲೆ ಹೊರಟುಬರುವುದು ಅತ್ಯಾವಶ್ಯಕವೆಂಬುವುದಕ್ಕೆ ಎರಡು ಕಾರಣಗಳಿವೆ. ಒಂದನೆಯದು, ನೀವು ಲಂಡನ್ನಿಗೆ ಬಂದುದಾದರೆ ಹಂಗಾಮಿ ಒಪ್ಪಂದವು ನಿರರ್ಥಕವಾಗದಂತೆ ಮಾಡಬೇಕೆಂಬ ನಿಮ್ಮ ದೃಢಸಂಕಲ್ಪವು ಜಗತ್ತಿಗೆ ತಿಳಿದುಬರುತ್ತದೆ. ಮತ್ತು ಬ್ರಿಟಿಷರು ನಿಮಗೆ ನಿರಾಶೆಯನ್ನು ಮಾಡಿ ಬರಿಗೈಲಿ ಕಳುಹಿಸುವುದರಿಂದ ಎಂಥ ವಿಘಾತವಾಗುವುದೆಂಬುದನ್ನು ತಿಳಿದುಕೊಂಡರೆ, ಅವರು ಖಾಯಂ ಆಗಿ ಒಪ್ಪಂದಮಾಡಿಕೊಂಡು ನಿಮ್ಮ ಮನೋಭೀಷ್ಟಗಳನ್ನು ನಡೆಸಿಕೊಡುವ ಸಂಭವವಿದೆ. (ಈ ವಿಷಯದಲ್ಲಿ ನನಗೆ ಸಂಶಯವೇನೋ ಇದೆ.) ಎರಡನೆಯದು, ಬ್ರಿಟಿಷರು ನಿಮ್ಮ ಅಭಿಪ್ರಾಯದಂತೆ ನಡೆಯದೆ ಒಪ್ಪಂದವು ಮುರಿದುಹೋದರೆ ಪುನಃ ಸತ್ಯಾಗ್ರಹಚಳವಳಿಯನ್ನು ಪ್ರಾರಂಭಿಸಿ ಬ್ರಿಟಿಷ್‌ವಸ್ತುಗಳನ್ನು ಬಹಿಷ್ಕರಿಸುವುದು ನ್ಯಾಯಸಮ್ಮತವಾಗುವುದು. ನೀವು ಲಾರ್ಡ್ ಇರ್ವಿನರೊಡನೆ ಸಂಧಿಮಾಡಿಕೊಂಡೂ ಸಹ ಲಂಡನ್ನಿಗೆ ಬಾರದಿದ್ದರೆ ನಿಮ್ಮನ್ನೂ ಕಾಂಗ್ರೆಸ್ ಸಂಸ್ಥೆಯನ್ನೂ ಜಗತ್ತಿನ ಜನರು ತಪ್ಪು ತಿ[illegible]ಸುದು. ನೀವು ಲಂಡನ್ನಿಗೆ ಬಂದ ಮೇ[illegible]ಹ ಒಪ್ಪಂದವು ಮುರಿದುಹೋದರೆ, ಆದಕ್ಕೆ ಬ್ರಿಟಿಷರು ಕಾರಣೀಭೂತರಾಗುವರಲ್ಲದೆ ಕಾಂಗ್ರೆಸ್ ಸಂಸ್ಥೆಯು ಎಂದಿಗೂ ಉತ್ತರವಾದಿಯಾಗಲಾರದು. ಆಗ ಸತ್ಯಾಗ್ರಹಸಮರವನ್ನು ಪ್ರಾರಂಭಿಸಿದರೆ ಜಗತ್ತಿನ ಸಹಾನುಭೂತಿಯು ಕಾಂಗ್ರೆಸ್‌ಪರವಾಗಿ ದೊರಕುವುದು. ಹಿಂದೂ, ಮಹಮ್ಮದೀಯ ಮತ್ತು ಸಿಕ್ ಸಮಸ್ಯೆಯನ್ನು ಹಿಂದುಸ್ಥಾನದಲ್ಲಿಯಾಗಲಿ ಅಥವಾ ಇಂಗ್ಲೆಂಡಿನಲ್ಲಿಯಾಗಲಿ ತೃಪ್ತಿಕರವಾಗಿ ಬಗೆಹರಿಸಬಲ್ಲನೆಂದು ನನಗೆ ತುಂಬಾ ನಂಬಿಕೆಯಿದೆ.

ರಾಜಧಾನಿಗೆ ಪಂಡಿತ ಜವಾಹರಲಾಲ ನೆಹರೂರವರ ಆಗಮನ.

ಲೋಕವಿಖ್ಯಾತರೂ, ಅಸಮದೇಶಾಭಿಮಾನಿಗಳೂ ಅದ್ಭುತ ರಾಜನೀತಿನಿಪುಣರೂ, ಅಸಾಧಾರಣ ಧೈರ್ಯಶಾಲಿಗಳೂ ಆದ ಪಂಡಿತ ಜವಾಹಿರಲಾಲ ನೆಹರೂರವರು ನೆನ್ನೆಯ ರಾತ್ರಿ 9 ಗಂಟೆಗೆ ಪತ್ನೀಸಮೇತರಾಗಿ ರಾಜಧಾನಿಗೆ ಆಗಮಿಸಿದರು. ಈ ದಿವಸ ಪ್ರಾತಃಕಾಲ 8ಗಂಟೆಗೆ ಟೌನ್‌ಹಾಲಿನಲ್ಲಿ ಧ್ವಜಾರೋಹಣವೂ ಮುಖ್ಯ ಮುಖ್ಯ ಬೀದಿಗಳಲ್ಲಿ 8 ರಿಂದ 9-30ರ ವರೆಗೆ ಮೆರವಣಿಗೆಯೂ ನೆರವೇರಿತು. ಆ ಮೇಲೆ ಟೌನ್‌ಹಾಲಿನಲ್ಲಿ ಮ್ಯುನಿಸಿಪಾಲಿಟಿಯವರು ಮಾನಪತ್ರವನ್ನರ್ಪಿಸಿದರು. ಮಧ್ಯಾಹ್ನದ ಮೇಲೆ ಕಾಂಗ್ರೆಸ್ ಕಮಿಟಿಯವರೂ, ಹಿಂದಿಪ್ರಚಾರಸಭೆಯವರೂ, ಸ್ತ್ರೀಯರೂ, ವಿದ್ಯಾರ್ಥಿಸಂಘದವರೂ ಮಾನಪತ್ರಗಳನ್ನರ್ಪಿಸುವರು. ಅನಂತರ ವಕೀಲರ ಸಂಘಕ್ಕೆ ಚಿತ್ತೈಸಿ ಸಾಯಂಕಾಲ ಆರುಕಾಲು ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಸೇರುವ ಸಾರ್ವಜನಿಕಸಭೆಯಲ್ಲಿ ಭಾಷಣಮಾಡುವರು. ಏಳುವರೆ ಗಂಟೆಯಿಂದ 8 ಗಂಟೆಯವರೆಗೆ ಟೌನ್‌ಹಾಲಿನಲ್ಲಿ ಹಿಂದಿಪ್ರೇಮಿಮಂಡಲದವರು ಹಿಂದಿ ನಾಟಕವನ್ನಭಿನಯಿಸುವರು. ಇದಾದ ತರುವಾಯ ರಾತ್ರಿ 10 ಗಂಟೆಯ ಮೇಲೆ ಮೋಟಾರಿನಲ್ಲಿ ಬೆಂಗಳೂರಿಗೆ ಪ್ರಯಾಣಮಾಡುವವರಾಗಿದ್ದಾರೆ.

ಸ್ವೀಕಾರ.

ನೇಮತಿ ಹುರಿಕಡ್ಲಿ ಮ|| ರಾ|| ಗಂಗಪ್ಪನವರ ಜ್ಯೇಷ್ಠಪುತ್ರ ಚಿ|| ವಿರುಪಪ್ಪನಿಗೂ, ಹಾರ್ನಹಳ್ಳಿ ಜವಳಿ ಮ|| ರಾ|| ರುದ್ರಪ್ಪನವರ ಪುತ್ರಿ ಚಿ|| ಸೌ|| ಕಾಳಮ್ಮನಿಗೂ, ಹುರಕಡ್ಲಿ ಮ|| ರಾ|| ಜಂಬಪ್ಪನವರ ಪುತ್ರ ಚಿ|| ಹೊಳೆಬಸಪ್ಪನಿಗೂ ಹಾರ್ನಹಳ್ಳಿ ಜವಳಿ ಮ|| ರಾ|| ಚನ್ನವೀರಪ್ಪನವರ ಪುತ್ರಿ ಚಿ|| ಸೌ|| ಗಂಗಮ್ಮನಿಗೂ, ಹುರಿಕಡ್ಲಿ ಮ|| ರಾ|| ಪುಟ್ಟಪ್ಪನವರ ಪುತ್ರ ಚಿ|| ನಾಗಪ್ಪನಿಗೂ ಭದ್ರಾವತಿಯಲ್ಲಿರುವ ಲಕ್ಕವಳ್ಳಿ ಸೆಟ್ಟರ ಮ|| ರಾ|| ಸಿದ್ರಾಮಪ್ಪನವರ ಪುತ್ರಿ ಚಿ|| ಸೌ|| ರುದ್ರಮ್ಮನಿಗೂ ನೌಲಿ ಮ|| ರಾ|| ಹಂಪಣ್ಣನವರ ಪುತ್ರ ಚಿ|| ವೀರುಪಪ್ಪನಿಗೂ ಹಾರ್ನಳ್ಳಿ ಜವಳಿ ಮ|| ರಾ|| ಗುರುಬಸಪ್ಪನವರ ಪುತ್ರಿ ಚಿ|| ಸೌ|| ಹಾಲಮ್ಮನಿಗೂ, ಯಲಬುರ್ಗಿ ಮ|| ರಾ|| ಮುರಿಗಪ್ಪನವರ ಪುತ್ರ ಚಿ|| ವೀರಪ್ಪನಿಗೂ ಮಂಗಲಿಗೆ ಮ|| ರಾ|| ಪುಟ್ಟಪ್ಪನವರ ಜ್ಯೇಷ್ಠಪುತ್ರಿ ಚಿ|| ಸೌ|| ಶಾಂತಮ್ಮನಿಗೂ, ಯಲಬುರ್ಗಿ ಮ|| ರಾ|| ಮುರಿಗಪ್ಪನವರ ಪುತ್ರ ಚಿ|| ಶೇಖರಪ್ಪನಿಗೂ ಮಂಗಲಿಗೆ ಮ|| ರಾ|| ಪುಟ್ಟಪ್ಪನವರ ಪುತ್ರಿ ಚಿ|| ಸೌ|| ನಾಗಮ್ಮನಿಗೂ, ಮ|| ರಾ|| ಜೀರಿಗೆ ವೀರಭದ್ರಪ್ಪನವರ ಪುತ್ರಿ ಚಿ|| ಸೌ|| ಹಾಲಮ್ಮನಿಗೂ, ಮ|| ರಾ|| ಹಳ್ಳೂರು ವೀರಪ್ಪನವರ ಪುತ್ರ ಚಿ|| ಮುರಿಗಪ್ಪನಿಗೂ, ನೆರವೇರಿದ ವಿವಾಹಮಹೋತ್ಸವದಲ್ಲಿ ಸಮರ್ಪಿಸಿದ 7 ರೂಪಾಯಿಗಳು ನೇಮತಿ ಹೊಮ್ಮರಡಿ ಮ|| ಸಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿಲ್ಲಾ ಕೊಟ್ಟೂರಲ್ಲಿರುವ ಬಣಕಾರ ಮ|| ರಾ|| ಮೂಗಜ್ಜನಪುತ್ರಿ ಚಿ|| ಸೌ|| ಕೆಂಚವ್ವನನ್ನು ತಿಮಲಾಪುರದ ಬಣಕಾರ ದೊಡ್ಡಮೂಗಪ್ಪನವರ ಪುತ್ರ ಚಿ|| ಕರಿಯಪ್ಪನಿಗೆ ಕೊಟ್ಟು ನಿಶ್ಚಿತಾರ್ಥವನ್ನು ನಡೆಯಿಸಿದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಮಿ|| ಮ|| ನಾಗಟಿಗೇರಿ ಚನ್ನಬಸವಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ಹುಬ್ಬಳ್ಳಿಯ ನಿವಾಸಿಗಳಾದ ಮ|| ರಾ|| ಅಡಿವಪ್ಪ ಬಳ್ಳೊಳ್ಳಿ ಇವರ ನಿಶ್ಚಯಕಾರಣದಲ್ಲಿ ವೇ|| ವಿರೂಪಾಕ್ಷಯ್ಯನವರು ನಂದಿಕೇಶ್ವರಮಠ ಇವರ ಪ್ರೋತ್ಸಾಹದಮೇಲೆ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯು ನಾರಾಯಣಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಮಜ್ಜಗದ್ಗುರು ರಂಭಾಪುರೀವೀರ ಸಿಂಹಾಸನಾಧೀಶ ಶ್ರೀ ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳ[illegible] ಸಂಚಾರ.

ಶ್ರೀ ಜಗದ್ಗುರುಗಳವರು [illegible] ಮುಕ್ಕಾಂ ಮಾಡಿ ಸುತ್ತಮುತ್ತಣ ಗ್ರಾಮಗಳ ಭಕ್ತರ ಸೇವಾಸತ್ಕಾರ ಕಾಣಿಕೆಗಳನ್ನು ಕೈಕೊಂಡು ತಾ ೨-೫-೧೯೩೧ ರವಿವಾರ ಕಟ್ಟಮನೆ ಎಣ್ಣೆಗೆರೆಗೆ ಸಕಲ ಬಿರುದಾವಳಿಗಳ ಸಮೇತ ತಮ್ಮ ಚತುರಂಗ ಬಲದೊಡನೆ ಬಿಜಯಂಗೈದರು. ಗುರುಭಕ್ತಿತತ್ಪರರಾದ ಲಿಂಗೇಗೌಡರು ತಮ್ಮ ಬಂಧುಗಳಾದ ಕೈಸೋಡು ಹುಚ್ಚೇಗೌಡರು ಹೊಸದುರ್ಗ ತಾಲೂಕು ಅಜ್ಜನಾಯಕನ ಹಳ್ಳಿ ವಕೀಲ ಬಸವಪ್ಪನಾಡಿಗರು ಕಾನಕೆರೆ ಗೌಡರು ಮುಂತಾದವರನ್ನು ಬರಮಾಡಿಕೊಂಡು ಇಸ್ತಕಬಾಲ ಸಹಿತ ಶ್ರೀ ಮಹಾಸ್ವಾಮಿಗಳನ್ನು ಅಲಂಕೃತವಾದ ಪುರವೀಧಿಗಳಲ್ಲಿ ಉತ್ಸವದಿಂದ ಬಿಜಮಾಡಿಸಿಕೊಂಡುಬಂದರು. ಭಗವತ್ಪಾದರ ದರ್ಶನಕ್ಕಾಗಿ ಅನೇಕ ಕಡೆಯಿಂದ ಬಂದ ಜನಸಮುದಾಯವು ಪ್ರಾಯಶಃ ಎರಡು ಸಾವಿರದವರೆಗಿದ್ದಿತು. ಸದರಿ ಲಿಂಗೇಗೌಡರು ಶ್ರೀ ಮಹಾಸಂಸ್ಥಾನದ ಸೇವಾಸತ್ಕಾರದ ವ್ಯವಸ್ಥೆಯನ್ನು ಸರಿಯಾಗಿಟ್ಟದ್ದಲ್ಲದೆ ಬಂದವರ ಆತಿಥ್ಯವನ್ನು ಬಹುಮುತುವರ್ಜಿಯಿಂದ ಮಾಡಿದರು. ಸದರಿಗೌಡರು ಶ್ರೀಮಹಾಗುರುಗಳನ್ನು ಅನುಮೋದನಗಳಿಂದ ಸೇವಿಸುತ್ತಿದ್ದಂತೆಯೇ ಇವರ ಪೂರ್ವಪುಣ್ಯಪ್ರಭಾವದಿಂದ ಶ್ರೀಮದುಜ್ಜಯಿನೀ ಜಗದ್ಗುರು ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಪರಿವಾರದೊಡನೆ ದಯಮಾಡಿಸಿದರು. ಶ್ರೀಮಹಾಸ್ವಾಮಿಗಳವರನ್ನು ಇಸ್ತಕಬಾಲದಿಂದ ಸಕಲ ಬಿರುದಾವಳಿಗಳ ಸಮೇತ ಬಿಜಮಾಡಿಸಿಕೊಂಡು ಬಂದರು. ಲಿಂಗೇಗೌಡರು ತಮ್ಮ ಗ್ರಾಮಕ್ಕಾದ ಈ ಅಪೂರ್ವ ಪುಣ್ಯಸುಯೋಗದಿಂದ ಸಂತುಷ್ಟರಾಗಿ ಉಭಯ ಜಗದ್ಗುರುಗಳವರ ಸೇವೆಯಲ್ಲಿ ನಿರತರಾದರು. ಈ ಆನಂದವಾರ್ತೆಯು ಆ ಪ್ರದೇಶದಲೆಲ್ಲ ಹಬ್ಬಿ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ದೊರಕಿಸಲು ತಂಡೋಪತಂಡವಾಗಿ ಬರುತ್ತಿರುವ ಜನಗಳಿಗೆ ಗೌಡರು ಮಾಡಿದ ಆತಿಥ್ಯವು ಶ್ಲಾಘನೀಯವಾಗಿದ್ದಿತು. ಉಜ್ಜಯಿನೀ ಜಗದ್ಗುರುಗಳವರು ಐದು ದಿವಸವಿದ್ದು ಸರ್ವರಿಗೂ ಆಶೀರ್ವದಿಸಿ ತಮ್ಮ ಸರ್ಕೀಟಿಗೆ ದಯಮಾಡಿಸಿದರು. ಇತ್ತ ಲಿಂಗೇಗೌಡರ ಭಕ್ತಿಯನ್ನು ಸ್ವೀಕರಿಸಿ ಶ್ರೀ ರಂಭಾಪುರೀ ಜಗದ್ಗುರುಗಳವರು ಎಳೆನೋಡಿಗೆ ದಯಮಾಡಿಸಿದರು. ಸಾವಕಾರ ಶಿವನಂಜಪ್ಪಶೆಟ್ಟರು ಮರುಳಪ್ಪಶೆಟ್ಟರು, ಮುದ್ದೀರಪ್ಪಶೆಟ್ಟರು, ಶಿವರುದ್ರಪ್ಪಶೆಟ್ಟರು, ಮುಂತಾದವರು ಮಹೋತ್ಸವದಿಂದ ಬಿಜಮಾಡಿಸಿಕೊಂಡು ಬಂದು ಸೇವಾಸತ್ಕಾರ ಕಾಣಿಕೆಗಳನ್ನು ಅರ್ಪಿಸಿದರು. ಹಾಗೆಯೇ ಹಗ್ಗೆರೆಗೂ ದಯಮಾಡಿಸಿ ಅಲ್ಲಿಯೂ ಭಕ್ತರ ಕಾಣಿಕೆಯನ್ನು ಸ್ವೀಕರಿಸಿ ಸರ್ವರಿಗೂ ಆಶೀರ್ವದಿಸಿ [illegible] ತಿಂಗಳು ತಾ ೬ನೇ ಬುಧವಾರ ಮುಹಾಸವಾರಿಯು ಹೊನ್ನವಳ್ಳಿಗೆ ದಯಮಾಡಿಸಿತು. ಪುರಶೃಂಗಾರವು ವರ್ಣನೀಯವಾಗಿದ್ದಿತು. ಇಲ್ಲಿಯ ಮಠಾಧಿಕಾರಿಗಳು ಶೆಟ್ಟರು ಶ್ರೀವರ್ಣ ಸಾಹುಕಾರ ಬೈರಪ್ಪಗೌಡರು ಮುಂತಾದವರು ಇಸ್ತಕಬಾಲ ಸಮೇತ ಮಹಾಸ್ವಾಮಿಗಳವರನ್ನು ಬರಮಾಡಿಕೊಂಡು ಬಂದರು. ಪ್ರೇಕ್ಷಕರ ಸಂಖ್ಯೆಯು ಮೂರುಸಾವಿರದ ಮೇಲ್ಪಟ್ಟಿದ್ದಿತು. ಶ್ರೀ ಪೂಜ್ಯಪಾದರು ಸುವರ್ಣ ರಜತ ಪಲ್ಲಕ್ಕಿಯಿಂದಿಳಿದು ಸಿಂಹಾಸನವನಾರೋಹಿಸಿದ ಕೂಡಲೆ ಆಚಾರ್ಯ ಜಯಘೋಷದೊಡನೆ ಕರತಾಡನಗಳನ್ನು ಮಾಡಿ ಸರ್ವರೂ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು. ಸಕಲ ವರ್ಣದವರೂ ಯಾವ ವಿಧವಾದ ಭೇದವಿಲ್ಲದೆ ಆಗಮಿಸಿದ್ದರು. ಆಸ್ಥಾನವಿದ್ವಾನ್ ಪುರಾಣರತ್ನ ಸೂಳೆಕಲ್ಲುಬದರಿ ಬಸವಲಿಂಗಶಾಸ್ತ್ರಿಗಳು ಉಭಯಲೋಕಸುಖಸಿದ್ಧಿಗೆ ಧರ್ಮಜಾಗ್ರತೆಯೇ ಮೂಲವೆಂದೂ ಗತಾನುಗತಿಕರಾಗದೆ ಸುಶಿಕ್ಷಣದಿಂದಲೂ ಸ್ವಾನುಭವದಿಂದಲೂ ಧರ್ಮವರ್ಗಗಾಮಿಗಳಾಗಿ ಶಾಸ್ತ್ರ ಶಿಷ್ಟಾಚಾರಗಳಂ ಸಾರ್ಥಕಗೊಳಿಸಬೇಕೆಂದು ಉಪನ್ಯಸಿಸಿದರು. ಶ್ರೀ ಜಗದ್ಗುರುಗಳವರು ಧರ್ಮಸ್ವರೂಪವನ್ನು ತಿಳುಹಿಸಿ ಎಲ್ಲ ಮತಗಳ ತತ್ತ್ವವನ್ನು ಸಂಕ್ಷೇಪದಿ ಬೋಧಿಸಿ ಕ್ರಿಯಾಜ್ಞಾನಗಳ ಅವಲಂಬನದಿಂದ ಸುಲಭವಾಗಿ ಮುಕ್ತಿಯನ್ನು ಪಡೆಯತಕ್ಕದ್ದೆಂದು ಬೋಧಿಸಿ ಸಭಿಕರನ್ನು ಆನಂದಸಮುದ್ರದಲ್ಲಿ ನಿಮಗ್ನರನ್ನಾಗಿ ಮಾಡಿದರು. ವೇಳೆಯಾದ್ದರಿಂದ ಅಪ್ಪಣೆಯನ್ನು ಪಡೆದು ಸಭೆಯು ಶ್ರೀ ಜಗದ್ಗುರು ಪಂಚಾಚಾರ್ಯರ ಶ್ರೀಮನ್ಮಹಾರಾಜರವರ ಜಯಘೋಷದೊಡನೆ ವಿಸರ್ಜಿತವಾಯಿತು. ಶ್ರೀ ಮಹಾಸನ್ನಿಧಾನದಲ್ಲಿ ಪುರಾಣರತ್ನ ಸೂಳೆಕಲ್ಲುಬದರಿ ಬಸವಲಿಂಗಶಾಸ್ತ್ರಿಗಳವರಿಂದ ಸಂಗೀತ ಮಾರ್ಗದಿಂದ ಪುರಾಣವು ಬೋಧಿಸಲ್ಪಡುತ್ತಿರುವುದು. ಶ್ರೀಜಗದ್ಗುರುಗಳವರ ಸಂಚಾರದಿಂದ ಲೋಕದಲ್ಲಿ ಧರ್ಮವು ವಿಸ್ತೃತವಾಗಿ ತದ್ವಾರಾ ಸರ್ವರೂ ಸುಖಿಸಲೆಂದು ಶ್ರೀ ಮಹಾಚಾರ್ಯರನ್ನು ಭಜಿಸುವೆವು.

ಓರ್ವ ಧರ್ಮಾಭಿಮಾನಿ.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಪ್ರತಿನಿಧಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆ. ಮುದ್ದಿಕೆರೆ.

ಕಡೂರುಜಿಲ್ಲಾ ಪತ್ತಗುಂಡಿ ತಾಲೂಕು ಮುದ್ದಿಕೆರೆ ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನ ಪ್ರತಿನಿಧಿಗಳಾದ ಶ್ರೀ|| ಷ|| ಬ್ರ|| ಶ್ರೀ ದೇವಾಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಹಿರೇಮಠ ಚಿಕ್ಕಮಂಗಳೂರು ಇವರು ಸಿಬ್ಬಂದಿಸಮೇತರಾಗಿ ದಯಮಾಡಿಸಿ ಧರ್ಮಬೋಧ ಮಾಡುತ್ತ ಭಕ್ತರಿಂದ ಕಾಣಿಕೆಯನ್ನು ವಸೂಲುಮಾಡುತ್ತಿರುವ ವಿಷಯವು ಸರ್ವರಿಗೂ ಪ್ರಭಾಪತ್ರಿಕೆಯಿಂದ ವೇದ್ಯವೇ ಆದೆ. ಮುದ್ದಿಕೆರೆ ಗ್ರಾಮದ ಪ್ರಮುಖರಾದ ವೇ|| ಮಂಸ್ವಾಮಯ್ಯನವರು, ಶೆಟ್ಟಿಬಸಯ್ಯನವರು, ಶ್ರೀಗುಂಡ ಬಂಡೇಗೌಡರು ಬಳ್ಳಾರಿ ದೊಡ್ಡಬಸಪ್ಪನವರು, ಬಳ್ಳಾರಿ ಕುರುಗೋಡಪ್ಪನವರು, ವೀರಪ್ಪನವರು, ಬಸರಿಮರ ಮುದ್ದಪ್ಪನವರು, ಕಟ್ಟಾರಿ ಇವರು ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ ಮೇರೆಗೆ ತಾ|| ೧೮-೫-೩೧ ನೆಯ ಸೋಮವಾರ ದಿವಸ ಸಾಯಂಕಾಲಕ್ಕೆ ಯಾವತ್ತೂ ಧರ್ಮದವರು ನಂದೀಶ್ವರ ದೇವಸ್ಥಾನಕ್ಕೆ ಆಗಮಿಸಿದರು. ಪ್ರಥಮದಲ್ಲಿ ವೀರಪ್ಪನವರು ಹೂಗಾರ ಹಾಗೂ ಪೆದ್ದಣ್ಣನವರು ಇವರ ಸಂಗೀತವಾಯಿತು ಅದನ್ನು ಕೇಳಿ ಸರ್ವರೂ ಆನಂದಪಟ್ಟರು. ಆ ಮೇಲೆ ಬಳ್ಳಾರಿ ಜ್ಯೋತಿಷ ಶಾಲಾಧ್ಯಾಪಕರಾದ ವೇ|| ಶಿವಯೋಗಿಶಾಸ್ತ್ರಿ ಶಿವಾಮಠ ಕೊಂಡಕುಂದಿ ಇವರು ಭಕ್ತಿಯ ವಿಷಯದಲ್ಲಿ ವ್ಯಾಖ್ಯಾನಮಾಡಿದರು. ಅನಂತರ ಮುದ್ದಿಕೆರೆ ವೇ|| ಸಾಲಂಕಯ್ಯನವರು ಕೋಳೂರು ಕೊಡಗೂರು ಪರಮಾತ್ಮನಿಗೆ ಹಾಲು ಕುಡಿಸಿ ಕೃತಾರ್ಥವಾದ ವಿಷಯವನ್ನು ಹೇಳಿದರು. ಬಳಿಕ ಸನ್ನಿಧಿಯವರು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಪಂಚಲಿಂಗಗಳಿಂದ ಪ್ರಾದುರ್ಭವಿಸಿ ವೀರಶೈವ ಮತವನ್ನು ಸ್ಥಾಪಿಸಿ ದುಷ್ಟನಿಗ್ರಹ ಶಿಷ್ಟಪರಿಪಾಲನಮಾಡುತ್ತ ಅಗಸ್ತ್ಯ, ಗೌತಮ, ದೂರ್ವಾಸ, ದಧೀಚಿ, ಸಾನಂದ, ವ್ಯಾಸ, ಶಕ್ತ್ಯ, ಉಪಮನ್ಯು, ಹರಕಂಠ ಮೊದಲಾದ ಋಷಿಪುಂಗವರಿಗೆ ಶಿವಸಿದ್ಧಾಂತೋಪದೇಶಮಾಡಿ ಮೋಕ್ಷಮಾರ್ಗಾವಲಂಬಿಗಳನ್ನಾಗಿ ಮಾಡಿದರೆಂದೂ, ಶ್ರೀ ರೇಣುಕಾಚಾರ್ಯರು ಲೋಕವಿಖ್ಯಾತರಾದ ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿ ಕೃತಾರ್ಥರನ್ನಾಗಿ ಮಾಡಿದರೆಂದೂ, ಏಕಚಕ್ರಾಧಿಪತಿಗಳಾದ ಅನೇಕ ಜನ ಮಹಾರಾಜರಿಗೆ ಅನಂತಮಹತ್ತುಗಳನ್ನು ತೋರ್ಪಡಿಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರೆಂದೂ ಪಂಡಿತ ಪಾಮರರಿಗೂ ತಿಳಿಯುವಂತೆ ಪ್ರಮಾಣಪುರಃಸರವಾಗಿ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಇವರ ಬೋಧಾಮೃತವನ್ನು ಪಾನಮಾಡಿ ಸ್ವಮತಪರಮತೀಯರು ಆನಂದಪಟ್ಟರು. ಸನ್ನಿಧಿಯವರು ದರ್ಶನಕ್ಕೆ ಬಂದ ಸಮಸ್ತ ಭಕ್ತಮಹೋತ್ಸವಕ್ಕೆ ಧರ್ಮಬೋಧಮಾಡುತ್ತಿರುವದನ್ನು ನೋಡಿದರೆ ಯಾರಿಗೆ ತಾನೇ ಸಂತೋಷವಾಗಲಿಕ್ಕಿಲ್ಲ? ಈ ಮಹನೀಯರಂತೆ ಅಧಿಕಾರಿಗಳು ಧರ್ಮಬೋಧಮಾಡುತ್ತ ಸಂಚರಿಸಿದರೆ ಗುರುಭಕ್ತಿಯು ಈ ಕಲಿಯುಗದಲ್ಲಿಯೂ ಕೂಡ ಉಳಿದ ಯುಗಗಳಲ್ಲಿದ್ದಂತೆ ಇರಲು ಎನೂ ಸಂಶಯವಿಲ್ಲವೆಂದು ದೃಢವಾಗಿ ಹೇಳಬಹುದು. ಸಂಸ್ಥಾನದ ಏಜಂಟರಾದ ಕೆ. ಎಂ. ಶಿ. ಮಲ್ಲಯ್ಯನವರು, ಮುನಸಿ ಭೀಮಲಿಂಗಯ್ಯನವರು, ಸ್ಥಳೀಯ ಬೃಹನ್ಮಠದ ಬಸವಯ್ಯನವರು ಸರಿಯಾದ ವ್ಯವಸ್ಥೆಮಾಡಿದ್ದರು. ಭಾಷಣಾನಂತರ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಬಂಡೀಗೌಡ ಮುದ್ದಿಕೆರೆ.

ಶ್ರೀಮತ್ಪಂಚಾಚಾರ್ಯೇಭ್ಯೋ ನಮಃ

ಯತ್ತಗದ ಮಠದ ವೇ|| ದೊಡ್ಡಾರಾಮಾರಾಧ್ಯ ಶ್ರೀಗಳವರ ಶಿವಸಾಯುಜ್ಯಪದವಿ.

ಮೇಲ್ಕಂಡ ಶ್ರೀಗಳವರು ಜನ್ಮವೆತ್ತಿ ಈಗ್ಗೆ ಐವತ್ತು ಸಂವತ್ಸರಗಳಾದವು. ಜನನ ಮೊದಲುಗೊಂಡು ಸೋಡಶ ವತ್ಸರಗಳ ವರೆಗೂ ಅಧಿಕಾರಕ್ಕೆ ಬೇಕಾದ ವಿದ್ಯಾ, ಬುದ್ಧಿ ಮುಂತಾದವುಗಳಲ್ಲಿ ಲೀನರಾಗಿದ್ದು ಅನಂತರ ತಮ್ಮ ಪೂರ್ವಿಕರು ಹಿಂದಣ ಮಹಾರಾಜಾಧಿರಾಜರುಗಳಿಂದಲೂ ಮತ್ತು ತಮ್ಮ ಮಹತ್ವದಿಂದಲೂ ಸಂಪಾದಿಸಲ್ಪಟ್ಟದ್ದ ಅಸ್ಖಾವರಣ ಪಂಚಾಚಾರಕ್ರಿಯಾಪಟ್ಟವರ ಮೇಲಣ ಆಚಾರವಿಚಾರಾಧಿಕಾರವನ್ನು ತಾವು ವಹಿಸಿಕೊಂಡು ಅಂದಿನಿಂದಲೂ ಆ ಕಾರ್ಯವನ್ನು ಬಹು ಶ್ರದ್ಧೆಯಿಂದ ನಡೆಯಿಸುತ್ತ ಸರ್ವರಿಂದಲೂ ಸ್ತುತ್ಯರಾಗಿ ಇದೇ ವೈಶಾಖ ಬಹುಳ ಸಪ್ತಮಿ ಶುಕ್ರವಾರ (8-5-1931) ಶಿವಸಾಯುಜ್ಯವನ್ನು ಹೊಂದಿದುದು ಸಮಾಜಕ್ಕೆ ಅತ್ಯಂತ ವಿಷಾದಕರವಾದ ಸಂಗತಿಯಾಗಿದೆ. ಶ್ರೀಗಳವರು ಸದಾ ದೈವಕಾರ್ಯಗಳನ್ನೂ, ದಾಸೋಹವನ್ನೂ, ಆಚಾರವ್ಯವಹಾರಗಳನ್ನೂ ಬಹು ಯುಕ್ತಿಯಿಂದ ನಡೆಸುತ್ತ ದೈವಭಕ್ತರೆನಿಸಿಕೊಂಡಿದ್ದುದು ಸರ್ವರಿಗೂ ತಿಳಿದಿದ್ದಾಗಿದೆ. ಇವರು ತಮ್ಮ ಮಠದಲ್ಲಿ ಅನೇಕ ಪ್ರಾಚೀನ ತಾಳೆವಾಲೆಯ ಹಾಗೂ ಮುದ್ರಿತಗ್ರಂಥಗಳನ್ನು ಬಹು ಜಾಗರೂಕತೆಯಿಂದ ಸಂಗ್ರಹಿಸಿ ಸಮಾಜದ ಹಿತಕ್ಕಾಗಿ ಒಂದು ಗ್ರಂಥಭಂಡಾರವನ್ನು ಅದೇ ಮಠದಲ್ಲಿಯೇ ಏರ್ಪಡಿಸಿದ್ದರು. ಸದ್ಯ ಮಠವು ಲಿಂಗವಿಲ್ಲದ ಗುಡಿಯಂತೆಯೂ, ಸೋಪಾನವಿಲ್ಲದ ಕೆರೆಯಂತೆಯೂ ಯಜಮಾನನಿಲ್ಲದ ಗೃಹದಂತೆಯೂ ಆಗಿಹೋಗಿದೆ. ಈ ಮಠದ ಮುಂದಣ ಅಧಿಕಾರವನ್ನು ವಹಿಸುವ ವಟುವು ಕೇವಲ ಬಾಲ್ಯಾವಸ್ಥೆಯಲ್ಲಿರುವದರಿಂದ ಜಗದೀಶ್ವರನೇ ರಕ್ಷಿಸಬೇಕಾಗಿದೆ. ವಟುವು ಪ್ರಾಪ್ತವಯಸ್ಕನಾಗುವವರೆಗೂ ಮಠಕ್ಕೆ ಸಂಬಂಧಪಟ್ಟ ಯಾವತ್ತೂ ಚರಸ್ಥಿರ ಆಸ್ತಿಗಳನ್ನೆಲ್ಲಾ ಸರಿಯಾದ ನಂಬಿಗೆಯುಳ್ಳ ಮೇಲ್ವಿಚಾರಕರು ವಹಿಸಿಕೊಂಡು ಅವರಿಗೆ ಸಂಬಂಧಪಟ್ಟ ಸಂಬಂಧಿಗಳಿಗೆಲ್ಲಾ ಅತ್ಯವಶ್ಯಕವಾದ ಸಲಕರಣೆಗಳನ್ನು ನಡೆಸುತ್ತ ಕೀರ್ತಿಭಾಜನರಾಗಲೆಂದು ಕೋರುವ,

ಶ್ರೀಗಳವರ ಪ್ರೇಮಪಾತ್ರ
ಮ್ಯಾನೇಜರ್,
ಗುರುದೇವ ಪ್ರಕಾಶಕ ಗ್ರಂಥಮಾಲಾ
ಆಫೀಸು, ಮೈಸೂರು.

ಶ್ರೀ ರೇವಣಸಿದ್ಧೇಶ್ವರಸ್ವಾಮಿ ರಥೋತ್ಸವ.

ಕೋಲಾರ್‌ಪೇಟೆಗೆ ಎಳು ಮೈಲು ದೂರದಲ್ಲಿರುವ ಪುರಾಣಪ್ರಸಿದ್ಧವಾದ ಶ್ರೀ ರೇಣುಕಗಿರಿಯಲ್ಲಿ ವಾರ್ಷಿಕ ಪದ್ಧತಿಯಂತೆ ಮೊದಲೇ ಹಂಚಲ್ಪಟ್ಟದ್ದ ರಥೋತ್ಸವಾಹ್ವಾನಪತ್ರಿಕೆಯ ಪ್ರೋಗ್ರಾಂ ಪ್ರಕಾರ ಸಕಲ ದೇವತಾಕಾರ್ಯಗಳು ಅತ್ಯಂತವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ನೀರಿನ ವಸತಿಯು ಕಡಿಮೆಯಾಗಿದ್ದರೂ ಅರವಟಿಗೆಯವರೆಲ್ಲಾ ಮುತಿವಿಾರಿ ಶ್ರಮವಹಿಸಿ ಅನ್ನಸಂತರ್ಪಣೆಗಳನ್ನು ಸರ್ವರ ಮೆಚ್ಚುಗೆಗೆ ಅರ್ಹವಾಗಿ ನಡೆಯಿಸಿದ್ದಲ್ಲದೆ ರಾಜಾಪುರದ ಮಠದಲ್ಲಿಯೂ ಸಹ ದಾಸೋಹವು ಯಥೇಚ್ಛವಾಗಿ ನಡೆಯಿಸಲ್ಪಟ್ಟಿತು. ಯಾತ್ರಾರ್ಥಿಗಳಿಂದ ಶೇಖರಿಸಲ್ಪಟ್ಟಿರುವ ಸ್ವಾಮಿಯ ಫಂಡು ಬಹಳವಾಗಿದ್ದರೂ ಅದನ್ನು ಯಾತ್ರಿಕರ ವಸತಿ ಮತ್ತು ನೀರಿನ ವ್ಯವಸ್ಥೆ ಮೊದಲಾದವುಗಳಿಗೆ ಅಂದರೆ (ಅತ್ಯವಶ್ಯಕವಾದ ಶಕ್ತ ಕಲ್ಯಾಣಿಯನ್ನು ಕಟ್ಟಿಸುವುದು ಮತ್ತು ಯಾತ್ರಿಕರು ಇಳಿದುಕೊಳ್ಳಲು ಸ್ಥಳಗಳನ್ನು ಕಲ್ಪಿಸುವುದು ಮೊದಲಾದ ಸತ್ಕಾರ್ಯಗಳಿಗೆ) ವಿನಿಯೋಗ ಮಾಡದೆ ಎಲ್ಲವೂ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆಂದೇ ಇಟ್ಟಿರುತ್ತಾರೆ. ಫಂಡಿನಲ್ಲಿ ಶೇಕಡಾ ಐವತ್ತನ್ನು ದೇವಸ್ಥಾನಗಳಿಗೂ ಉಳಿದ ಐವತ್ತನ್ನು ಯಾತ್ರಿಕರ ಸೌಕರ್ಯಕ್ಕೂ ವಿನಿಯೋಗಿಸುವುದು ಸರ್ವರಿಗೂ ಒಪ್ಪಿಕೆಯಾಗುವುದರಲ್ಲಿ ಸಂದೇಹವಿರಲಾರದು. ಧರ್ಮದರ್ಶಿಗಳೆಲ್ಲರೂ ತಮಗೆ ಈಗ ದೊರೆತಿರುವ ಆವಸರದಲ್ಲಿ ಸಕಲ ಕಾರ್ಯಗಳನ್ನು ಮುತುವರ್ಜಿಯಿಂದ ಮಾಡಿ ಫಂಡನ್ನು ಸರ್ವರ ಮೆಚ್ಚುಗೆಗೆ ಅರ್ಹವಾಗುವ ಹಾಗೆ ವಿನಿಯೋಗಮಾಡಲು ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಜನರಿಗೆ ಸೌಖ್ಯವನ್ನುಂಟು ಮಾಡಿ ದೇವರ ಕೃಪೆಗೆ ಪಾತ್ರರಾಗುವರೆಂದು ನಂಬಿದೆ.

ಯಾತ್ರಾರ್ಥಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮೂಲಪಂಡಿತಾರಾಧ್ಯರ ಉತ್ಪತ್ತಿ.

(ಲೇಖಕ: ಎಂ. ಜಿ. ನಂಜುಂಡಾರಾಧ್ಯ, ಹಿರೇಮಠ, ಗುಂಡ್ಲಹಳ್ಳಿ)

ಕಳೆದ ಸಂಚಿಕೆಯಲ್ಲಿ ವಿವರಿಸಲ್ಪಟ್ಟ ಶಂಕರಸಂಹಿತೆಯಲ್ಲಿ ಉಲ್ಲೇಖಿಸಲ್ಪಟ್ಟಂತೆಯೇ ಸುಪ್ರಭೇದಾಗಮದಲ್ಲಿಯೂ ಅದೇ ಅರ್ಥಗರ್ಭಿತವಾದ ಶ್ಲೋಕಪ್ಯಂಚಮೇ ರಂಜಿಸುತ್ತಿರುವುದು.

ಮತ್ಸ್ಯಮುಖೋದ್ಗತ ಪಂಚಾಚಾರ್ಯಾಃ ಪಂಚಪೀಠಾಧಿಪಾಸ್ತಥಾ |
ತಥಾ ವೀರಶೈವಾನಾಂ ಪ್ರತ್ಯಕ್ಷೇತ್ಯಧಿಕಾರಿಣಃ ||
ಮದ್ವ್ಯಾಪಕಾವತಾರೈಸ್ತಾವಮುಪಾಚಾರ್ಯಾಃ ಸೇವಕೋತ್ತಮಾಃ |
ತಸ್ಮಾತ್ತತ್ಸ್ವಾತ್ಮ ಗಿರಿಜೇ ಪಂಚಾನನ ಸಮುದ್ಭವಾಃ ||
ಮದಾದಿಸರ್ವಲೋಕಾನಾಂ ಜಗದ್ಗುರುವರೋತ್ತಮಾಃ ||

ಅಂದರೆ ನನ್ನ ಮುಖಗಳಿಂದ ಉತ್ಪನ್ನರಾದ ಪಂಚಪೀಠಾಧಿಕಾರಿಗಳಾದ ಪಂಚಾಚಾರ್ಯರೇ ವೀರಶೈವರಿಗೆ ಮುಖ್ಯ ಅಧಿಕಾರಿಗಳಾಗಿರುತ್ತಾರೆ. ಅವರು ಕೇವಲ ನನ್ನ ಸ್ವರೂಪಿಗಳಾಗಿರುತ್ತಾರೆ. ಆದುದರಿಂದ ನನ್ನ ಐದುಮುಖಗಳಿಂದ ಜನಿಸಿದ ಪಂಚಾಚಾರ್ಯರು ನನ್ನ ಲೋಕವನ್ನು ಮೊದಲು ಮಾಡಿಕೊಂಡು ಯಾವತ್ತೂ ಲೋಕಗಳಿಗೆ ಜಗದ್ಗುರು ಶ್ರೇಷ್ಠರಾಗಿರುತ್ತಾರೆಂದು ಸಾಕ್ಷಾತ್ಪರಶಿವನು ಪಾರ್ವತಿಗೆ ಅಪ್ಪಣೆ ಕೊಡಿಸಿ ಮತ್ತು ಅದೇ ಸುಪ್ರಭೇದಾಗಮದ ಮತ್ತೊಂದೆಡೆಯಲ್ಲಿ

ಮತ್ಪಂಚವದನೋದ್ಭೂತಾಃ ಸರ್ವಏವಗುರೂತ್ತಮಾಃ |
ತತ್ಸ್ವರೂಪಸ್ವಾನಾಂಚಸರ್ವೇಷಾಂ ತತ್ಸಾಮರ್ಥ್ಯಂ ಕಥಂ ಭವೇತ್ ||
ತಸ್ಮಾತ್ಪಂಚವಿಧಾಚಾರ್ಯಾಃ ಪಂಚಪೀಠಾಧಿದೇವತಾಃ |
ಪಂಚಸಿಂಹಾಸನಾಧೀಶಾ ಜಗದ್ಗುರುತಮಾಸ್ತಥೇ ||
ಪಂಚಾನಾಂಚ ಮಹಾಚಾರ್ಯಾಣಾಂ ತತ್ಸ್ವಾನಾಂಚತೈವಹಿ |
ಸಾಮಾನ್ಯಭಾವತಃ ಪೂಜಾಂ ಯೇಕುರ್ವಂತಿನರಾಧಮಾಃ ||
ಪೂಜಾಕರ್ತಾ ಪೂಜಕಶ್ಚ ನರಕಾನೇವಪಿಂಡಕೇ |
ಪಂಚಪೀಠಾಧಿದೇವಾನಾಂ ಯೇಜಾನಂತಿಸಮಾನಕಾಂ ||
ತೇಗರ್ಧಭಾಶ್ಚ ಸಂಪ್ರೋಕ್ತಾ ಜ್ಞಾನಶೂನ್ಯತತ್ವತೇ ||

ಅಂದರೆ ನನ್ನ ಐದುಮುಖಗಳಿಂದ ಜನಿಸಿದ ಪಂಚಾಚಾರ್ಯರೇ ಮುಖ್ಯ ಗುರುಗಳಾಗಿರುತ್ತಾರೆ. ಅವರಿಂದ ನಿರ್ಮಿತರಾದ ಸರ್ವರಿಗೆ (ಸರ್ವವೀರಶೈವರಿಗೆ) ಅವರ ಸಾಮರ್ಥ್ಯವು ಹೇಗೆ ಬಂದೀತು? ಆದಕಾರಣ ಪಂಚಪ್ರಕಾರರಾದ ಆಚಾರ್ಯರು ಪಂಚಪೀಠಗಳಿಗೆ ಅಧಿದೇವತೆಗಳೂ, ಅಧಿಪತಿಗಳೂ, ಜಗದ್ಗುರುಗಳೂ ಆಗುತ್ತಾರೆ. ಇಂಥ ಪೂಜ್ಯಪಾದರನ್ನು ಅಥವಾ ತದುಪಾಚಾರ್ಯರನ್ನು ಸಾಮಾನ್ಯ ಗುರುಭಾವದಿಂದ ಯಾವ ನರಾಧಮರು ಪೂಜಿಸುತ್ತಾರೆಯೋ ಅಂಥವರೆಲ್ಲರೂ ನರಕವನ್ನು ಹೊಂದುತ್ತಾರೆ. ಯಾವ ಜ್ಞಾನಶೂನ್ಯರು ಈ ಭಗವತ್ಪಾದರನ್ನು ತಮ್ಮ ಸಮಾನರೆಂದು ಗಣಿಸುತ್ತಾರೆಯೋ ಅವರು ಕತ್ತೆಗಳೆಂದು ಹೇಳಿಸಿಕೊಳ್ಳಲ್ಪಡುತ್ತಾರೆ. ಎಂದು ಪರಶಿವನು ಪಾರ್ವತಿಯ ಮುಂದೆ ಅಪ್ಪಣೆ ಕೊಡಿಸಿರುತ್ತಾನೆ. ಈ ರೀತಿಯಾಗಿ ಮೇಲೆ ಉದಾಹರಿಸಲ್ಪಟ್ಟಂತೆ ಅನೇಕ ಪುರಾತನ ಉದ್ಗ್ರಂಥಗಳಲ್ಲಿ ಲಕ್ಷಾಂತರಶ್ಲೋಕಗಳು ಉದ್ಘೋಷಿಸುವ ಸಂದರ್ಭಗಳನ್ನು ವಿಮರ್ಶಿಸಿ ನೋಡಿದರೆ ಇವರು ಕಾಲಾತೀತರೆಂದೂ, ನಿತ್ಯರೆಂದೂ ವ್ಯಕ್ತವಾಗುತ್ತದೆ. ಪ್ರಾಚೀನಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಿರುವ ಈ ಪೂಜ್ಯಪಾದರು ಪುಣ್ಯಕ್ಷೇತ್ರಗಳಲ್ಲಿ ಧರ್ಮಪೀಠಗಳೈದನ್ನು ಜಗದಾದಿಯಲ್ಲಿಯೇ ಸ್ಥಾಪಿಸಿ ರಾಜಾಧಿರಾಜರುಗಳಿಗೆ ವೀರಶೈವ ಸಿದ್ಧಾಂತವನ್ನು ಪದೇಶಿಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು ಜಗನ್ಮಾನ್ಯರಾಗಿ ದಿಗಂತವಿಶ್ರಾಂತವಾದ ಕೀರ್ತಿಯನ್ನು ಪಡೆದಿರುವ ವಿಷಯವು ಸರ್ವಜನವಿದಿತವಾದುದಾಗಿದೆ. ಈ ಪೀಠಗಳಿಗೆ ಪ್ರಾಚೀನ ಸಾರ್ವಭೌಮ ಚಕ್ರವರ್ತಿಗಳು, ರಾಜಭಕ್ತಿಪೂರ್ವಕವಾಗಿ ಅನೇಕ ದಾನಶಾಸನಗಳನ್ನು ಬರೆಯಿಸಿರುವವಿಷಯವನ್ನು ವೇ|| ಶಾಸ್ತ್ರಿಗಳವರು ತಮ್ಮ ಭಾಷಣದಲ್ಲಿ ಸಪ್ರಮಾಣಗಳಿಂದ ವ್ಯಕ್ತಗೊಳಿಸಿರುತ್ತಾರೆ. ಈ ರೀತಿಯಾಗಿ ಜಗದ್ವಿಖ್ಯಾತರಾದ ಜಗದ್ಗುರು ಪಂಚಾಚಾರ್ಯರು ತಮ್ಮ ಅಸಾಧಾರಣವಾದ ಮಹಿಮಾಬಲದಿಂದ ಅನೇಕಪವಾದಗಳನ್ನು ಜಯಿಸಿ ಭೂಮಂಡಲದಲ್ಲಿ ವೀರಶೈವಮತವು ಆಚಂದ್ರಾರ್ಕಪರ್ಯಂತ ಚ್ಯುತಿಯನ್ನು ಹೊಂದಲವಕಾಶವಿಲ್ಲದಂತೆ ಈ ಮತದತತ್ವಗಳು ಸರ್ವರಿಗೂ ತಿಳಿಯಬೇಕೆಂಬ ಉದ್ದೇಶದಿಂದ ಶಿವಸೂತ್ರ, ಬ್ರಹ್ಮಸೂತ್ರ, ಉಪನಿಷದಾದಿಗಳ ಮೇಲೆ ಭಾಷ್ಯಗಳನ್ನು ಬರೆದಿರುವುದಾಗಿಯೂ, ಅವುಗಳು ಕ್ರಮವಾಗಿ ಅಧಿಕರಣಭಾಷ್ಯ, ಪಂಡಿತಭಾಷ್ಯ, ದಾರುಕಭಾಷ್ಯ, ರೇಣುಕಭಾಷ್ಯ, ಮತ್ತು ವಿಶ್ವಾರಾಧ್ಯಭಾಷ್ಯ ಎಂಬ ಹೆಸರುಗಳಿಂದ ಪ್ರಸಿದ್ಧಗಳಾಗಿರುವುದಾಗಿಯೂ. ಇವುಗಳಲ್ಲಿ ಕೆಲವು ಸಿಕಿಂದರಾಬಾದ ನಿವಾಸಿಗಳಾದ ಮಾರ್ಕಂಡೇಯ ಶಾಸ್ತ್ರಿಗಳಲ್ಲಿಯೂ ಆಂಧ್ರದೇಶವಾಸಿಗಳಾದ ಆರಾಧ್ಯಬ್ರಾಹ್ಮಣರಲ್ಲಿ ದೊರೆಯುವದಾಗಿಯೂ ಗೊತ್ತಾಗುತ್ತದೆ. ಇವುಗಳಲ್ಲಿ ಕೆಲವು ನಮ್ಮ ಹಸ್ತಗತವಾಗಿ ಮತ್ತೆ ಕೆಲವು ನಮ್ಮ ಸಮಾಜದ ದುರ್ದೈವದಿಂದ ನಮ್ಮ ದೃಷ್ಟಿಗೋಚರಕ್ಕೆ ಬೀಳದೆ ಅವುಗಳ ವಿಷಯದಲ್ಲಿ ಉಲ್ಲೇಖಿಸಲ್ಪಟ್ಟ ಹಲವು ಉದ್ಗ್ರಂಥಗಳಿಂದ ಮಾತ್ರ ನೋಡಲು ಅವಕಾಶವಾಗಿ ಸಂತೋಷಪಡಬೇಕಾಗಿದೆ. ಈ ಮೇಲಿನ ವಿಷಯಗಳನ್ನೆಲ್ಲಾ ನೋಡಲಾಗಿ ಜಗದ್ಗುರು ಪಂಚಾಚಾರ್ಯರು ವೀರಶೈವಮತ ಗ್ರಂಥಗಳನ್ನು ಹೇರಳವಾಗಿ ಬರೆದು ವೀರಶೈವಮತವು ಸಮಸ್ತಮತಗಳಲ್ಲಿಯೂ ರತ್ನಪ್ರಾಯವಾಗಿ ಇರಲು ತಕ್ಕ ಉಪಕರಣಗಳನ್ನು ಕಲ್ಪಿಸಿ ಜಗನ್ಮಾನ್ಯರಾಗಿರುತ್ತಾರೆಂದು ವ್ಯಕ್ತವಾಗುತ್ತದೆ. ಆದುದರಿಂದ ಈ ಪೂಜ್ಯಪಾದರಲ್ಲೊಬ್ಬರಾದ ಭಗವತ್ಪಾದ ಪಂಡಿತಾರಾಧ್ಯರ ಉತ್ಪತ್ತಿಯ ವಿಷಯವು ಮುಂದಿನ ವಿಮರ್ಶಗಳಿಂದ ವ್ಯಕ್ತಗೊಳಿಸಲ್ಪಡುವುದರಿಂದ ವಾಚಕರು ಸಾವಧಾನದಿಂದ ಗಮನಿಸುವರೆಂದು ನಂಬಿರುವುದಾಗಿದೆ.

ಸಶೇಷ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಫಲದಾನದ ಫಲಿತಾಂಶ.

ತಾರೀಖು 28-5-31 ನೆಯ ಗುರುವಾರ ರಾತ್ರಿ 11 ಘಂಟೆಗೆ ಬೆಂಗಳೂರಿನ ಓರ್ವ ವೀರಶೈವ ಆಗರ್ಭಶ್ರೀಮಂತರ ಮನೆಯಲ್ಲಿ ಗರ್ಭಾದಾನಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಆ ಸಮಯದಲ್ಲಿ ಆ ಊರಿನ ಪ್ರಸಿದ್ಧ ಪುರೋಹಿತರಾದ ಗುರುಲಿಂಗಶಾಸ್ತ್ರಿಗಳೆಂಬುವರೇ ಸಕಲಕರ್ಮಗಳನ್ನೂ ವಿಧ್ಯುಕ್ತವಾಗಿ ನಡೆಯಿಸಿದರು. ಅಂತ್ಯದಲ್ಲಿ ಫಲಪೂಜೆಯನ್ನು ಮಾಡಿ ಅವುಗಳನ್ನು ಮಂತ್ರಸಹಿತ ವಧೂವರರ ಹಸ್ತಸ್ಪರ್ಶದಿಂದ ದಾನಕೊಡುವ ಪದ್ಧತಿಯಮೇರೆಗೆ ಅವರು ಪ್ರಥಮದಲ್ಲಿ ವೇದಾಧ್ಯಯನಸಂಪನ್ನರಾದ ಮೂವರು ಮಾಹೇಶ್ವರವಟುಗಳಿಗೆ ದಾನಕೊಡಿಸಿ ಅನಂತರ ತಾವು ಸ್ವೀಕರಿಸಿದುದು ಸ್ತುತ್ಯವಾಗಿದೆ. ದಾನವನ್ನು ಸ್ವೀಕರಿಸಿದ ತ್ರಿಮೂರ್ತಿಸ್ವರೂಪಿಗಳಾದ ಆ ವಟುಗಳು ಏಕಕಂಠದಿಂದ ವೇದಾಮೃತವು ಸ್ರವಿಸುತ್ತಿರುವುದೋ ಎಂಬಂತೆ ಆಶೀರ್ವಾದವನ್ನು ಹೇಳಿ ವಧೂವರರಿಗೆ ಮಂತ್ರಾಕ್ಷತಾರೋಪಣೆಯನ್ನು ಮಾಡಿ ತಮ್ಮ ಸ್ಥಾನವನ್ನಲಂಕರಿಸಿದರು. ಅನಂತರ ಓರ್ವ ಆಂಗ್ಲಜನಾಂಗದ ಮೇಲ್ಪಂಕ್ತಿಯನ್ನನುಸರಿಸಿ ಅವರಂತೆ ವೇಷಭೂಷಣಗಳನ್ನೂ ಆಹಾರವಿಹಾರಗಳನ್ನೂ ಹೊಂದಿದ ಮತ್ತು ತಂಕಳನ್ನು ಹೊಂದಿರುವ 'ಹ್ಯಾಟ್' ಎಂಬ ಕಿರೀಟಾಧರಣದಿಂದ ಕೂಡಿದ ಮಹಾಶಯರು ಶಾಸ್ತ್ರಿಗಳವರನ್ನು ತಮ್ಮ ಸವಿಾಪವನ್ನೈದಿಸಿಕೊಂಡು ಚರ್ಚಿಸುತ್ತಿದ್ದರು. ಆ ಚರ್ಚೆಯ ಫಲಿತಾಂಶವಿನ್ನೆ! ಫಲದಾನವನ್ನು ಯಾರಿಗೆ ಕೊಡಬೇಕು? ವಯಸ್ಸಿನಲ್ಲಿ ಕಡಿಮೆಯುಳ್ಳ ಮಾಹೇಶ್ವರರು ಆಶೀರ್ವಾದಗಳನ್ನು ವಧೂವರರಿಗೆ ಮಾಡಬಹುದೆ? ನನಗೇಕೆ ದಾನಕೊಡಿಸಬಾರದು? ಎಂದು ಪ್ರಶ್ನಿಸುತ್ತಿದ್ದರು. ಆ ಶಾಸ್ತ್ರಿಗಳೂ ಅವರ ದೃಷ್ಟಿಗೆ ಹೆದರಿ ಅವರ ವಾಗ್ಝರಿಗೆ ಬೆರಗಾಗಿ ಅವರಂತೆಯೇ ತಲೆದೂಗುತ್ತಾ ಸುಮ್ಮನಾದರು.

ನರಜನ್ಮ ವಕ್ತ್ರಧಿಕವವರೊಳು |
ಗುರುಹಿರಿಯರಿವರೆಂದು ದಾನ |
ಕ್ಕರುಹರಿವರಲ್ಲೆಂದು ನೋಡದೆ ಮೂಢನಾಗೀವರಿ ||
ಕರೆದಪಾತ್ರಂಗಿತ್ತು ಪಾತ್ರನ |
ಪರಿಹರಿಸಲೀ ಎರಡರಿಂ ಸಂ |
ಹರಣವೆಯ್ದುವುಪಾರ್ಜಿಸಿದ ಧನವರಸಕೇಳೆಂದ ||

ಎಂಬ ವಿದುರೋಕ್ತಿಯಂತೆ ದಾನಕ್ಕೆ ಯೋಗ್ಯರಾರು? ಎಂಬುದನ್ನರಿಯದೆ ಇಂಥ ಅಪಾತ್ರರಿಗೆ ಕೊಡಲು ತಾನುಮಾಡಿದ ಸುಕೃತವೆಂಬ ಧನವು ನಾಶವಾಗುವಾಗ ಇವರು ಅದನ್ನರಿಯದೆ ಯಾಚಿಸಿರುವರು. ಅಲ್ಲದೆ ಅನೇಕ ಮುನಿಪುತ್ರರು ಬ್ರಹ್ಮಚಾರಿಗಳಾಗಿದ್ದಾಗ ಅಸಂಖ್ಯಚಕ್ರವರ್ತಿಸಾರ್ವಭೌಮರು ಅವರಿಂದ ಆಶೀರ್ವಾದವನ್ನು ಪಡೆದಂತೆ ಅನೇಕ ಇತಿಹಾಸಗಳಲ್ಲಿ ಸಹಸ್ರಾರು ಉಲ್ಲೇಖಗಳಿರುವುದು. ಆ ಆಂಗ್ಲಭಾಷಾಭಿಜ್ಞರಿಗೆ ಹೇಗೆಗೊತ್ತಾಗಬೇಕು? ಮತ್ತು ಮೂರನೆಯ ಪ್ರಶ್ನೆಯ ಉತ್ತರವು ವಿಚಿತ್ರವಾದುದು. ಏನೆಂದರೆ—"ತೆಗೆದುಕೊಳ್ಳಲು ತಾವೇಕೆ ಸಿದ್ಧರಾಗಲಿಲ್ಲ?" ಎಂದಿದ್ದರೆ ಸಾಕಾಗುತ್ತಿತ್ತು. ಈ ರೀತಿಯಾಗಿ ಸ್ವಮತಶಾಸ್ತ್ರಗಳಲ್ಲಿ ಜ್ಞಾನವಿಲ್ಲದೆ ಕೇವಲ ತಮ್ಮ ದರ್ಪದಿಂದ ಚರ್ಚಿಸುವುದನ್ನು ನೋಡಿದರೆ ಯಾವ ಮತಬಾಂಧವನಿಗೆ ತಾನೆ ವ್ಯಸನವೆನಿಸಲಾರದು? ಆದುದರಿಂದ ಇವರು ಇನ್ನಾದರೂ ತನ್ನ ಗುರುಹಿರಿಯರ ಮೇಲ್ಪಂಕ್ತಿಯನ್ನನುಸರಿಸಿ ಪೂರ್ವಾಚಾರಗಳಿಗೆವಿರೋಧಿಗಳಾಗದೆ ಪೂರ್ವಾಚಾರ್ಯರ ಕೃಪೆಗೆಪಾತ್ರರಾಗಲು ಪ್ರಯತ್ನಿಸುವರೆಂದು ಭಾವಿಸಿರುವ,

ಓರ್ವ ಪ್ರತ್ಯಕ್ಷದರ್ಶಿ.

ವೀರಶೈವ ಸಂಘ, ಮದ್ರಾಸ್.

ಈ ಸಂಘದವರು ಮದ್ರಾಸ್ ಪಟ್ಟಣದಲ್ಲಿ ಈಗ ಒಂದುವರೆ ವರ್ಷ ಲಾಗಾಯಿತು ಬಾಡಿಗೆ ಮನೆಯಲ್ಲಿ ವೀರಶೈವ ವಿದ್ಯಾರ್ಥಿಗಳ ತಾತ್ಕಾಲಿಕವ್ಯವಸ್ಥೆ ಹಾಸ್ಟಲ್ ನಡೆಯಿಸಿಕೊಂಡುಬಂದಿರುತ್ತಾರೆ. ಸದರಿ ಮನೆಗೆ ಕರಾರು ಪೂರೈಸುವದರಿಂದ ಈ ತಿಂಗಳು ಒಂದನೇ ತಾರೀಖಿನಿಂದ ಆ ಮನೆಯನ್ನು ಬಿಟ್ಟಿರುತ್ತದೆ. ಈ ವರ್ಷ ಈ ಪಟ್ಟಣಕ್ಕೆ ಬರತಕ್ಕ ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ ಬೇರೆ ಮನೆಯಲ್ಲಿ ಹಾಸ್ಟಲ್ ನಡೆಯಿಸಲು ಈ ಸಂಘದವರು ಬಹಳ ಕುತೂಹಲವುಳ್ಳವರಾಗಿರುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಒಂದು ಅನುಕೂಲವಾದ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಬೇಕಾಗಿರುವುದರಿಂದ ಇಲ್ಲಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳು ತಮಗೆ ಹಾಸ್ಟಲ್ ಅನುಕೂಲ ಪಡೆಯಬೇಕೆಂದು ಈ ಸಂಘದ ಪ್ರೆಸಿಡೆಂಟರಾದ ಎಸ್. ಸಿ. ನಾಗಯ್ಯಶೆಟ್ಟರಿಗೆ ಈ ತಿಂಗಳ ಆಖೈರ್ ಒಳಗೆ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. ಇಲ್ಲವಾದರೆ ವಿದ್ಯಾರ್ಥಿಗಳಿಗೆ ಇಲ್ಲಿಗೆ ಬಂದಾಗ ಇಳಿದುಕೊಳ್ಳುವ ಸ್ಥಳ, ಊಟ ವಗೈರೆಗಳಿಗೆ ತೊಂದರೆಯಾಗಬಹುದೆಂದು ಈ ಮೂಲಕ ತಿಳಿಸಿರುತ್ತಾರೆ. ಆದಕಾರಣ ಮೇಲ್ಕಂಡ ತಾರೀಖಿನೊಳಗೆ ಹಲವು ವಂತೆ ವಿದ್ಯಾರ್ಥಿಗಳು ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು.

ಎಸ್. ಸಿ. ನಾಗಯ್ಯಶೆಟ್ಟರು, ಪ್ರೆಸಿಡೆಂಟ್. ಬಿ. ಬಸವಲಿಂಗಯ್ಯ, ಸೆಕ್ರೆಟರಿ.

Post Box No. 510 Park Town,
Madras.

ಶ್ರೀ ಶೃಂಗೇರಿ ಪೀಠದ ಪಟ್ಟಾಭಿಷೇಕ ಮಹೋತ್ಸವ.

ಈ ತಿಂಗಳು 22 ನೆಯ ತಾರೀಖಿನ ದಿವಸ ಪ್ರಾತಃಕಾಲ ಶ್ರೀ ಶೃಂಗೇರಿ ಚಂದ್ರಶೇಖರಭಾರತಿಸ್ವಾಮಿಗಳು ಬೆಂಗಳೂರು ನಿವಾಸಿಗಳಾದ ಶ್ರೀಯುತ ರಾಮಶಾಸ್ತ್ರಿಗಳ ಮಕ್ಕಳಾದ ಶ್ರೀನಿವಾಸಶಾಸ್ತ್ರಿಗಳಿಗೆ ವಿಧಿಪೂರ್ವಕವಾಗಿ ಸನ್ಯಾಸಾಶ್ರಮವನ್ನು ದಯಪಾಲಿಸಿದರು. ಶ್ರೀ ಶ್ರೀನಿವಾಸಶಾಸ್ತ್ರಿಗಳು ಶ್ರೀಯುತ ರಾಮಶಾಸ್ತ್ರಿಗಳ ದ್ವಿತೀಯ ಪುತ್ರರು. ೬ಂದು ವರ್ಷದ ಹಿಂದೆ ಶ್ರೀ ಶೃಂಗೇರಿಸ್ವಾಮಿಗಳು ಉತ್ತರಾಧಿಕಾರಕ್ಕೆ ವಟುವನ್ನು ಚುನಾವಣೆ ಮಾಡಬೇಕೆಂಬ ಉದ್ದೇಶದಿಂದ ಐದು ಜನ ಸಂಸ್ಕೃತವಿದ್ಯಾರ್ಥಿಗಳನ್ನು ಕರೆಯಿಸಿಕೊಂಡಿದ್ದರು. ಕೆಲವು ದಿವಸಗಳ ಹಿಂದೆ ಶ್ರೀಗಳವರು ಪೀಠದಲ್ಲಿರುವ ಶಾರದಾದೇವಿಯ ಪ್ರಸಾದವನ್ನು ಕೇಳಲಾಗಿ ಆ ದೇವಿಯು ಶ್ರೀನಿವಾಸನೆಂಬ ವಟುವಿನ ಪರವಾಗಿ ಅಪ್ಪಣೆಯಿತ್ತಳಂತೆ! ಅನಂತರ ಶ್ರೀಸ್ವಾಮಿಗಳವರು ಶ್ರೀನಿವಾಸನೆಂಬ ವಟುವಿಗೆ ತಮ್ಮ ಸನ್ಯಾಸಾಶ್ರಮವನ್ನಿತ್ತು, ಉತ್ತರಾಧಿಕಾರಕ್ಕೆ ತಕ್ಕ ಶಿಕ್ಷಣಕೊಡುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ಶ್ರೀಮುಖದ್ವಾರಾ ಮೈಸೂರು ಸರ್ಕಾರದವರಿಗೆ ಏಪ್ರಿಲ್ ತಿಂಗಳು 22ನೆಯ ತಾರೀಖಿನ ದಿವಸ ತಿಳುಹಿಸಿದರು. ಶ್ರೀನಿವಾಸನೆಂಬ ವಟುವು ಎಲ್ಲ ವಿಷಯಗಳಲ್ಲಿಯೂ ಶೃಂಗೇರಿ ಪೀಠಕ್ಕೆ ಅರ್ಹನೆಂದು ಸರ್ಕಾರಕ್ಕೆ ಅರಿಕೆಯಾದಕಾರಣ ಶ್ರೀಮನ್ಮಹಾರಾಜರವರು ಶ್ರೀ ಸ್ವಾಮಿಗಳವರ ಚುನಾವಣೆಯನ್ನಂಗೀಕರಿಸಿ ತಮ್ಮ ಅಭಿಮತವನ್ನಿತ್ತರು.

ಈ ಪಟ್ಟಾಭಿಷೇಕ ಮಹೋತ್ಸವಕ್ಕೆ ದರ್ಶನಾಕಾಂಕ್ಷಿಗಳಾಗಿ ಅನೇಕ ಕಡೆಯಿಂದ ನೂರಾರು ಜನಭಕ್ತರು ಆಗಮಿಸಿದ್ದರು. 21 ನೆಯ ತಾರೀಖಿನ ದಿವಸವೇ ಪ್ರಾರಂಭದ ಕೆಲಸಗಳೆಲ್ಲವೂ ಪೂರೈಸಿದವು. ಆ ದಿವಸ ಬ್ರಹ್ಮಚಾರಿಗಳು ಲೌಕಿಕಸುಖಗಳನ್ನು ತ್ಯಜಿಸಿ ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತೇನೆಂದು ಹೇಳಿ ತಮ್ಮ ಹಿರಿಯರ ಶ್ರಾದ್ಧಾದಿಗಳನ್ನು ನೆರವೇರಿಸಿ ತಮ್ಮ ಪಾಠಾಪಿತೃಗಳನ್ನು ಪೂಜಿಸಿದರು. 21 ನೆಯ ತಾರೀಖಿನ ರಾತ್ರಿಯನ್ನೆಲ್ಲ ಧ್ಯಾನಜಪತಪಾದಿಗಳಲ್ಲಿಯೇ ಕಳೆದರು. 22 ನೆಯ ತಾರೀಖಿನ ದಿವಸ ಪ್ರಾತಃಕಾಲ ಸಂಧ್ಯಾವಂದನಾದಿಗಳನ್ನು ಪೂರೈಸಿಕೊಂಡು ತುಂಗಾನದಿಯಲ್ಲಿ ನಿಂತು ಇನ್ನುಮೇಲೆ ನಿರ್ಭೀತನೂ ಸಾಧುವೂ ಆದ ಜೀವನವನ್ನು ನಡೆಯಿಸುವುದಾಗಿ ಪ್ರತಿಜ್ಞೆ ಮಾಡಿದರು. ಆದಾದ ತರುವಾಯ ಯಜ್ಞೋಪವೀತವನ್ನೂ ಶಿಖೆಯನ್ನೂ ತೆಗೆದುಹಾಕಿ ಜಗತ್ತಿನ ಸಂಬಂಧವನ್ನು ಸಂಪೂರ್ಣವಾಗಿ ತ್ಯಜಿಸಿದರು. ಅನಂತರ ಶ್ರೀಗಳವರು ಕಾಷಾಯವಸ್ತ್ರಧಾರಿಯನ್ನು ಸಾನ್ನಿಧ್ಯಕ್ಕೆ ಕರೆದುಕೊಂಡು ಅಲ್ಲಿ ಅವರಿಂದ ಇನ್ನೂ ಅನೇಕ ಪ್ರತಿಜ್ಞೆಗಳನ್ನು ಮಾಡಿಸಿ ಉಪದೇಶವನ್ನಿತ್ತರು. ಆ ದಿವಸ ಸಾಯಂಕಾಲವೇ ಧಾರ್ಮಿಕಸಭೆಯು ನೆರವೇರಿದ ಮೇಲೆ ಪಲ್ಲಕ್ಕಿಯಲ್ಲಿ ಅವರ ಉತ್ಸವವು ನಡೆಯಿತು. ಶ್ರೀಮಾನ್ ಶ್ರೀಕಂಠಶಾಸ್ತ್ರಿಗಳು 50ವರ್ಷಗಳವರೆಗೂ ಸೇವೆಯನ್ನು ಮಾಡಿ ಮಠವನ್ನು ಅಭಿವೃದ್ಧಿಗೆ ತಂದಕಾರಣ ಅವರಿಗೆ ವಿಶ್ರಾಂತಿಯು ಅತ್ಯಾವಶ್ಯಕವಾಗಿ ಬೇಕಾಗಿರುವುದೆಂದು ಶ್ರೀಸ್ವಾಮಿಗಳವರು ಅವರಿಗೆ ರತ್ನಖಚಿತವಾದ ಹಾರವನ್ನು ಆಶೀರ್ವದಿಸಿ ಅವರನ್ನು ಕೆಲಸದಿಂದ ನಿವೃತ್ತಿ ಮಾಡಿ, ಏಜೆಂಟ್ ಸ್ಥಾನಕ್ಕೆ ಹಾಸನದ ರಾವ್ ಬಹದ್ದೂರ್ ಎಂ. ಎಸ್. ನಂಜುಂಡಯ್ಯನವರನ್ನು ನಿಯಮಿಸಿದರು.

ಕರ್ನಾಟಕಾಯುರ್ವೇದ ವಿದ್ಯಾಪೀಠದ ಆಫೀಸು ಕೃಷ್ಣರಾಜಮೊಹಲ್ಲಾ, ಮೈಸೂರು. ಪ್ರಕಟನೆ.

1928 ನೆಯ ಇಸವಿಯಲ್ಲಿ ಮಂಗಳೂರಲ್ಲಿ ನಡೆದ 4 ನೆಯ ಕರ್ನಾಟಕಾಯುರ್ವೇದ ಸಮ್ಮೇಳನದಲ್ಲಿನ ಠರಾವಿನಂತೆ ಈ ನಿಯಮಾವಳಿಯು ಬರೆಯಲ್ಪಟ್ಟು ವಿದ್ಯಾಪೀಠದ ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳಲ್ಲೆಲ್ಲಾ ಸರ್ಕ್ಯುಲೇಷನ್ ಆಗಿ ಅವರುಗಳ ಅನುಮತಿಯನ್ನು ಪಡೆದು ಪ್ರಿಂಟಾಗುವುದರಲ್ಲಿ ಧನಸಹಾಯವಿಲ್ಲದೆ ನಿಂತಿತ್ತು. ಈ ವಿಚಾರವು 1929 ರಲ್ಲಿ ಧಾರವಾಡದಲ್ಲಿ ನಡೆದ 5 ನೇ ಕರ್ನಾಟಕಾಯುರ್ವೇದ ಸಮ್ಮೇಳನದಲ್ಲಿ ಚರ್ಚೆಗೆ ಬಂದು ಆ ವರ್ಷದಲ್ಲಿ ಕರ್ನಾಟಕಾಯುರ್ವೇದ ಮಂಡಳಿಕ್ಕೆ ಜಾಯಿಂಟ್‌ಸೆಕ್ರೆಟರಿಗಳಾಗಿ ಚುನಾಯಿಸಲ್ಪಟ್ಟ ಶ್ರೀಯುತರಾದ ಮಹಿಷಿ ರಾಮರಾವ್ ರು ಬಿ.ಎ., ಧಾರವಾಡ, ಇವರು ತಮ್ಮ ಸ್ವಂತಖರ್ಚಿನಿಂದ ಅಚ್ಚು ಹಾಕಿಸಿಕೊಡುವುದಾಗಿ ಮಾಡಿದ ವಾಗ್ದಾನದಂತೆ ಇದರ ಒಂದು ಕಾಪಿಯು ಆ ಕೂಡಲೆ ಅವರಿಗೆ ಕಳುಹಿಸ

(6 ನೆಯ ಪುಟವನ್ನು ನೋಡಿ)

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜೂನ್ ತಾ|| ೧ ನೆಯ ಸೋಮವಾರ.

ಶ್ರೀಮನ್ಮಹಾರಾಜರವರ ವರ್ಧಂತಿಮಹೋತ್ಸವ.

ನಮ್ಮ ಧರ್ಮಪ್ರಭುವರ್ಯರಾದ ಮೈಸೂರು ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ 48ನೆಯ ವರ್ಷದ ಜನ್ಮದಿನೋತ್ಸವವು ಕಳೆದ ತಿಂಗಳು ತಾ|| 27 ನೆಯ ಬುಧವಾರ ದಿವಸ ರಾಜಧಾನಿಯಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು. ಪದ್ಧತಿಪ್ರಕಾರವಾಗಿ ಪ್ರಾತಃಕಾಲ ಆಯುರ್ವರ್ಷಸೂಚಕಗಳಾದ 48 ತೋಪುಗಳು ಹಾರಿಸಲ್ಪಡುತ್ತಿರಲು ಮಹಾಪ್ರಭುಗಳು ಮಂಗಲಸ್ನಾನವನ್ನುಮಾಡಿ ನಿತ್ಯಾಹ್ನಿಕವನ್ನು ತೀರಿಸಿಕೊಂಡು ವಿಧ್ಯುಕ್ತವಾಗಿ ಗುರುಚರಣಪೂಜೆಯಂಗೈದು ರಾಜಸಭೋಚಿತವಾದ ಉಡುಪನ್ನು ಧಾರಣ ಮಾಡಿಕೊಂಡು ಭದ್ರಪೀಠವನ್ನು ಅಲಂಕರಿಸಿದ ಮೇಲೆ ವೈದಿಕವಿದ್ವಾಂಸರುಗಳು ಫಲಮಂತ್ರಾಕ್ಷತೆಯನ್ನರ್ಪಿಸಿ ರಾಜಾಶೀರ್ವಾದಂಗೈದರು. ಬಳಿಕ ಸಭೆಯಲ್ಲಿ ರಾರಾಜಿಸುತ್ತಿರುವ ರಾಜಬಂಧುಗಳು, ಸಚಿವೋಪಸಚಿವರು, ದೊಡ್ಡ ದೊಡ್ಡ ಅಧಿಕಾರಿಗಳು, ಪುರಪ್ರಮುಖರು ಕ್ರಮದಿಂದ ನಜರುಮುಜುರೆಗಳನ್ನರ್ಪಿಸಿ ಹೃದಯದಲ್ಲಿ ನೆಲೆಸಿರುವ ನೈಜವಾದ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಬಳಿಕ ಸಭಿಕರು ಪುಷ್ಪಮಾಲಿಕಾ ತಾಂಬೂಲಾದಿಗಳಿಂದ ಗೌರವಿಸಲ್ಪಟ್ಟರು. ಮಧ್ಯಾಹ್ನ 5½ ಘಂಟೆ ಸಮ[illegible] ಅರಮನೆಯಿಂದ ಮಹಾಪ್ರಭುಗಳ ಉತ್ಸವ[illegible]ವಾವಳಿಗಳೊಡನೆ ಹೊರಟಿತು. ಅಲಂಕೃತ[illegible]ಅಶ್ವರಥಪದಾತಿಸೈನ್ಯವು ಕ್ರಮವಿಡಿದು ಮುಂದುಮುಂದು ಹೊರಟಿತು. ರತ್ನಾಭರಣಾದಿಗಳಿಂದಲಂಕೃತವಾದ ಅಶ್ವದ ಮೇಲೆ ಮಹಾಪ್ರಭುಗಳು ಮಂಡಿಸಿದ್ದರು. ನಮ್ಮ ಭಾವಿಪ್ರಭುವರ್ಯರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಬಹದ್ದೂರ್‌ರವರು ಆರೋಹಿಸಿದ ಅಶ್ವವು ಮಹಾಪ್ರಭುಗಳ ವಾಮಪಾರ್ಶ್ವದಲ್ಲಿರಾರಾಜಿಸುತ್ತಿದ್ದಿತು. ಮಾರ್ಗದ ಉಭಯಪಾರ್ಶ್ವಗಳಲ್ಲಿ ಪ್ರೇಕ್ಷಕರು ಉಭಯಮಹಾರಾಜರವರ ದರ್ಶನವನ್ನು ಮಾಡಿ ಜಯಧ್ವನಿಯಿಂದಲೂ ಕರತಾಡನದಿಂದಲೂ ತಮ್ಮ ರಾಜಭಕ್ತಿಯನ್ನು ಪ್ರಕಾಶಗೊಳಿಸುತ್ತಿದ್ದರು. ತಮ್ಮ ತಮ್ಮ ಮನೆಗಳ ಮುಂಭಾಗಗಳಲ್ಲಿ ಮಹಾರಾಜರವರ ಚಿತ್ರಪಟವನ್ನು ಅಲಂಕರಿಸಿಕೊಂಡು ನಿರೀಕ್ಷಿಸಿಕೊಂಡಿದ್ದ ದೊಡ್ಡಪೇಟೆಯ ವರ್ತಕಜನರು ನಯವಿನಯ ಭಯಭಕ್ತಿಗಳಿಂದ ಉಭಯ ಮಹಾಪ್ರಭುಗಳಿಗೆ ಪುಷ್ಪಹಾರಗಳನ್ನರ್ಪಿಸಿದರು. ಉತ್ಸವವು ಸಾಯಂಕಾಲ 7½ ಘಂಟೆ ಸಮಯಕ್ಕೆ ದೊಡ್ಡಬಂಗಲೆಯನ್ನು ತಲ್ಪಿತು. ಉಭಯಮಹಾಪ್ರಭುಗಳು ಅಶ್ವಗಳಿಂದಿಳಿದು ವಿಶ್ರಾಂತಿ ತೆಗೆದುಕೊಂಡ ಬಳಿಕ ಸೈನ್ಯಮರ್ಯಾದೆಯು ನಡೆದು ಯಥಾಪ್ರಕಾರ ಉತ್ಸವವು ಹಿಂದಿರುಗಿತು. ಉತ್ಸವವು ಹಿಂದಿರುಗುವಾಗ ದೀಪಮಾಲಾದಿಗಳಿಂದ ಪ್ರೇಕ್ಷಕರ ಹೃದಯಾನಂದಕರವಾದ ಭವ್ಯಮೋಟಾರಿನಲ್ಲಿ ಉಭಯಪ್ರಭುಗಳು ಮಂಡಿಸಿದ್ದರು. ಉತ್ಸವವು ರಾತ್ರಿ 10 ಘಂಟೆ ಸಮಯಕ್ಕೆ ಅರಮನೆಯನ್ನು ತಲಪುವಷ್ಟರಲ್ಲಿ ಉತ್ಸವ ಸಮಾಪ್ತಿಸೂಚಕಗಳಾದ ಗುಂಡುಗಳು ಹಾರಿಸಲ್ಪಟ್ಟುವು. ಈ ವರ್ಷದ ವರ್ಧಂತಿಮಹೋತ್ಸವ ಸಮಯಕ್ಕೆ ಮದ್ರಾಸ್ ಗೌರ್ನರ್‌ರವರು, ಜಯಪುರ ಸಂಸ್ಥಾನದ ಮಹಾರಾಜರವರು, ಜೋಧಪುರ ಸಂಸ್ಥಾನದ ಮಹಾರಾಜರವರು, ಸುಪ್ರಸಿದ್ಧ ಐರೋಪ್ಯಾಧಿಕಾರಿಗಳೂ ಆಗಮಿಸಿದ್ದುದು ವಿಶೇಷವಾದ ಸಂಗತಿಯಾಗಿದ್ದಿತು.

"ಪಾತ್ರೇತ್ಯಾಗೀ ಗುಣೇರಾಗೀ ಭೋಗೀಪರಜನೈಸ್ಸಹ | ಭಾವಬೋದ್ಧಾ ರಣೇಯೋದ್ಧಾ ಪ್ರಭುಃ ಪಂಚಗುಣೋಭವೇತ್ ||" ಸತ್ಪಾತ್ರದಲ್ಲಿ ಅಸಾಧಾರಣವಾದ ತ್ಯಾಗಬುದ್ಧಿಯು, ಗುಣವಂತರಲ್ಲಿ ಅಸಾಧಾರಣವಾದ ಪ್ರೇಮಬುದ್ಧಿಯು, ತಮ್ಮ ಪರಿಜನಗಳೊಂದಿಗೆ ಸುಖಾನುಭವವು, ದೃಷ್ಟಿಮಾತ್ರದಿಂದ ಪ್ರಜೆಗಳ ಇಂಗಿತವನ್ನರಿಯುವುದು, ಶತ್ರುನಿಗ್ರಹದಲ್ಲಿ ಪರಾಕ್ರಮವು ಈ ಐದುಗುಣಗಳೇ ರಾಜರಿಗೆ ಮುಖ್ಯ ಗುಣಗಳಾಗಿರುವುವೆಂಬ ರಾಜನೀತಿಯಂತೆ ನಮ್ಮ ಮಹಾಪ್ರಭುಗಳು ಕಂಠದಲ್ಲಿ ಈ ಐದು ರಾಜಗುಣಮಾಲಿಕೆಯನ್ನು ಧರಿಸಿರುವುದಲ್ಲದೆ ಪರಮಾಸ್ತಿಕ್ಯವೆಂಬ ಶಿಖಾರತ್ನವನ್ನು ಧರಿಸಿರುವುದರಿಂದ ನಮ್ಮ ಭಾರತೀಯ ಮಹಾರಾಜರುಗಳಲ್ಲೆಲ್ಲ ಅಗ್ರಸ್ಥಾನವನ್ನು ಪಡೆದಿರುವರು. ಇವರಲ್ಲಿ ನೆಲೆಗೊಂಡಿರುವ ಪ್ರಜಾವಾತ್ಸಲ್ಯವೂ, ದೈವಭಕ್ತಿಯೂ, ರಾಜನೈಪುಣ್ಯವೂ ಅನಿತರಸಾಧಾರಣವಾದುದು. ನಮ್ಮ ಮಹಾರಾಜರವರ ಜ್ಞಾನಶಕ್ತಿಯಾನಿಷ್ಠೆಯನ್ನೂ ಸತ್ಯಪ್ರತಿಜ್ಞೆಯನ್ನೂ ನೋಡಿದರೆ ಅಚಲಿತಕೀರ್ತಿಕಾಯರಾಗಿಹೋದ ಪುರಾಣಪ್ರಸಿದ್ಧರಾದ ಜನಕರಾಮಾದಿಗಳ ಸ್ಮರಣಾಂಕುರವು ಪ್ರತಿಯೊಬ್ಬ ಮಾನವನ ಹೃದಯಕ್ಷೇತ್ರದಲ್ಲಿ ಪಲ್ಲವಿಸುತ್ತಲಿರುವುದು. ಇಂಥ ಮಹಾರಾಜರ ಆಳ್ವಿಕೆಗೆ ಸಂಬಂಧಪಟ್ಟ ಪ್ರಜೆಗಳೇ ಧನ್ಯರು! ಮಾನ್ಯರು! ಎಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಪರಮಪವಿತ್ರವೂ, ಭೋಗಮೋಕ್ಷಪ್ರದವೂ ಆದ ಭಾರತಧರ್ಮವು ಈಗಣ ನವೀನ ವಾತಾವರಣಕ್ಕೆ ಶಿಕ್ಕು ಜರ್ಝರಿತವಾಗುತ್ತಿರುವಲ್ಲಿ ಇಂಥ ಪರಮಾಸ್ತಿಕರಾದ ಮಹಾರಾಜರವರ ಸನ್ನಿವೇಶವುಳ್ಳವರ ಭಾಗ್ಯವನ್ನು ಎಷ್ಟೆಂದು ವರ್ಣಿಸಿದರೂ ತೀರದಾಗಿದೆ. ನಮ್ಮ ಮಹಾಪ್ರಭುಗಳ ಪಾಲನೆಯಿಂದ ಮೈಸೂರು ದೇಶಾಂಗನೆಯು ಅನೇಕ ಕಾಲ್ವೆಕಟ್ಟೆಗಳೆಂಬ ದಿವ್ಯಾಭರಣಗಳಿಂದ ಶೋಭಿಸುತ್ತಿರುವಳು. ಇಹಪರ ಸಾಧಕಗಳಾದ ರಾಜಕೀಯ ವೈದಿಕವಿದ್ಯೆಗಳೆರಡೂ ಈ ದಿವ್ಯಾಂಗನೆಯ ಉಭಯ ನೇತ್ರಗಳಂತೆ ಅಪ್ರತಿಹತವಾಗಿ ಶೋಭಿಸುತ್ತಿರುವುವು. ಜಗತ್ಪಾಲಕನಾದ ಪರಮೇಶ್ವರನು ಮಹಾಪ್ರಭುಗಳ ಹೃದಯದಲ್ಲಿದ್ದು ಪ್ರೇಮಪೂರ್ವಕವಾಗಿ ಸದಾ ಯೋಗಕ್ಷೇಮವನ್ನು ನೋಡುತ್ತಿರುವನು. ಆದ್ದರಿಂದ ಧರ್ಮಾವತಾರರಾದ ನಮ್ಮ ಮಹಾರಾಜರವರು "ಶತಾಯುರ್ವೈಪುರುಷಃ" ಎಂಬ ಶ್ರುತಿಯಂತೆ ಪರಿಪೂರ್ಣವಾದ ಆಯುರ್ಭಾಗ್ಯವನ್ನು ಪಡೆದು ಇತೋಽಪ್ಯಧಿಕವಾದ ಕೀರ್ತಿಪ್ರತಿಷ್ಠೆಗಳನ್ನು ಪಡೆದು ದಿಗಂತವಿಶ್ರಾಂತ ಕೀರ್ತಿಶಾಲಿಗಳಾಗುವಂತೆ ಆ ಶ್ರೀ ರೇಣುಕಾದಿಪಂಚಾಚಾರ್ಯರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಮೈಸೂರು ಪ್ರಜಾಪ್ರತಿನಿಧಿಸಭೆಯ ಅಧಿವೇಶನವು ಮೈಸೂರಿನಲ್ಲಿ ಈ ದಿವಸ ಪ್ರಾರಂಭವಾಗುವುದು.

ವರ್ಷವರ್ಧಂತಿಯ ನಿಮಿತ್ತವಾಗಿ ಶ್ರೀಮನ್ಮಹಾರಾಜರವರಿಗೆ ಶ್ರೀಯುತ ತಗಡೂರು ರಾಮಚಂದ್ರರಾಯರು ತಮ್ಮ ಹಳ್ಳಿಯ ಜನರು ತಯಾರಿಸಿದ ಖಾದಿಯ ಬಟ್ಟೆಯನ್ನು ಉಡುಗರೆಯಾಗಿ ಕಳುಹಿಸಿದ್ದಾರೆ.

ಮೈಸೂರು ಮಂದಿಮೊಹಲ್ಲಾ, ಲಷ್ಕರ್‌ಮೊಹಲ್ಲಾ, ಚಾಮುಂಡಿ ಎಕ್ಸ್ಟೆನ್ಷನ್‌ಗಳಲ್ಲಿ ಕಾಲರಾರೋಗದಿಂದ ಅಲ್ಲಲ್ಲಿ ಕೆಲವರು ಮೃತಪಟ್ಟಿರುವರು. ಈ ರೋಗವು ಸರ್ವತ್ರ ವ್ಯಾಪಿಸದಂತೆ ತಡೆಯಲು ಸರ್ಕಾರದವರು ತಕ್ಕ ಪ್ರಯತ್ನಗಳನ್ನು ಮಾಡಿದ್ದಾರೆ.

ಕೋಲಾರ ಚಿನ್ನದ ಗಣಿಗೆ ಸೇರಿದ ನಂದೀದುರ್ಗದ ಮೈನಿನ ಹೆನ್ರಿಪ್ಯಾಫ್ಟ್ ಎಂಬ ಗಣಿಯೊಳಗೆ ಕಳೆದ ತಿಂಗಳು 24 ನೆಯ ತಾರೀಖಿನ ದಿವಸ ಸಾಯಂಕಾಲ ಬೆಂಕಿಹುಟ್ಟಿ ಗಣಿಯೊಳಗೆ ಕೆಲಸಮಾಡುತ್ತಿದ್ದ ಅನೇಕ ಕೂಲಿಕಾರರು ಮೃತಪಟ್ಟರು. ಗಣಿಯ ಅಧಿಕಾರಿಗಳು ಸಾಹಸಪಟ್ಟು 38 ಶವಗಳನ್ನು ಮೇಲಕ್ಕೆ ತೆಗೆದಿರುವರು. ಇನ್ನು 20-30 ಶವಗಳು ಗಣಿಯೊಳಗೇ ಇರುವುವು. ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದ 60 ಜನರಲ್ಲಿ 5 ಜನರು ಮೃತಪಟ್ಟರು. ಆಸ್ಪತ್ರೆಯ ಹಾಗೂ ಗಣಿಯಕಾಂಪೌಂಡಿನಲ್ಲಿ ಮಕ್ಕಳ ಹಾಗೂ ಹೆಂಗಸರ ಅಳುವ ಆರ್ತಧ್ವನಿಯೇ ಕೇಳಬರುವುದು. ನಂದೀದುರ್ಗದಲ್ಲಿ ಮಾಡುವ ಕೆಲಸವು ಸದ್ಯಃ ನಿಲ್ಲಿಸಲ್ಪಟ್ಟಿದೆ.

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ಗುಡ್ ಷೆಪರ್ಡ್ ಕಾನ್ವೆಂಟ್ ಎಂಬ ಕ್ಯಾಥೋಲಿಕ್‌ರ ಮಂದಿರದಲ್ಲಿ ನೂರಾರು ಅನಾಥ ಬಾಲಕಬಾಲಕಿಯರು ವಾಸವಾಗಿರುವರು. ಕಳೆದ ತಿಂಗಳು 22 ನೆಯ ತಾರೀಖಿನ ದಿವಸ ರಾತ್ರಿ ಎಲ್ಲರೂ ಊಟಮಾಡಿ ಮಲಗಿದರು. ಅನಂತರ ಇಬ್ಬರು ಯುರೋಪಿಯನ್ ಸನ್ಯಾಸಿನಿಯರು ವಿಪರೀತ ಭೇದಿಯಾಗಿ ಸೂರ್ಯೋದಯವಾಗುವುದರೊಳಗಾಗಿ ಮೃತಪಟ್ಟರು. ಶನಿವಾರ ಇಬ್ಬರು ಭಾರತೀಯ ಸನ್ಯಾಸಿನಿಯರು ಮೃತಪಟ್ಟರು. ಹೀಗೆ ಏಳು ಜನರು ಮೃತಪಟ್ಟಿರುವರಲ್ಲದೆ 38 ಜನರು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಅವರಿಗೆ ಪ್ರಾಪ್ತವಾಗಿದ್ದ ರೋಗವೇನೆಂಬುದೂ ಅದು ಹೇಗೆ ಹರಡಿತೆಂಬುದೂ ವೈದ್ಯರಿಗೇ ತಿಳಿಯದಂತಾಗಿದೆ.

ಬೆಂಗಳೂರು ಪಟ್ಟಣದಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರಚಳವಳಿಯನ್ನು ವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ನೂತನವಾಗಿ ಸಿಟಿ ಕಾಂಗ್ರೆಸ್ ಕಮಿಟಿಯು ಸ್ಥಾಪಿಸಲ್ಪಟ್ಟಿದೆ. ವಿದೇಶಿ ವಸ್ತ್ರ ವ್ಯಾಪಾರವು ವಿಶೇಷವಾಗಿ ನಡೆಯುತ್ತಿರುವ ದೊಡ್ಡಪೇಟೆ ಮತ್ತು ಚಿಕ್ಕಪೇಟೆಗಳಲ್ಲಿ ಕಳೆದ ತಿಂಗಳು 24 ನೆಯ ತಾರೀಖಿನ ದಿವಸ ಸಿಟಿ ಕಾಂಗ್ರೆಸ್ ಕಮಿಟಿಯವರು ಪ್ರಚಂಡ ಮೆರವಣಿಗೆಯನ್ನು ಹೊರಡಿಸಿದ್ದರಲ್ಲದೆ ಪ್ರೆಸಿಡೆಂಟರೂ ಮೆಂಬರರೂ ವಿದೇಶಿವಸ್ತ್ರ ವ್ಯಾಪಾರಿಗಳೊಡನೆ ಸಂಭಾಷಣೆ ಮಾಡಿದರು. ಆ ವ್ಯಾಪಾರಿಗಳು ಕಾಂಗ್ರೆಸ್ಸಿನವರ ಸದುದ್ದೇಶಕ್ಕೆ ಸಹಾನುಭೂತಿಯನ್ನು ತೋರಿಸಿದರೆಂದೂ, 25 ಜನ ಸ್ತ್ರೀಯರೂ, 40 ಜನ ಪುರುಷರೂ ಪಿಕೆಟಿಂಗ್ ಮಾಡುತ್ತಿರುವರೆಂದೂ ತಿಳಿದುಬರುತ್ತದೆ.

ಶ್ರೀಯುತ ಎಂ. ವೆಂಕಟಕೃಷ್ಣಯ್ಯನವರು ಸುಮಾರು 15 ದಿವಸಗಳಿಂದಲೂ ಕಾಯಿಲೆಯಿಂದ ನರಳುತ್ತಿರುವರು. ರಾಜಧಾನಿಯ ಪ್ರಸಿದ್ಧ ವೈದ್ಯರು ಅವರ ಮನೆಗೆ ಹೋಗಿ ಚಿಕಿತ್ಸೆ ಮಾಡುತ್ತಿದ್ದರು. ಆದರೂ ಬಿಕ್ಕಳಿಕೆಯು ಕಡಿಮೆಯಾಗದ ಕಾರಣ ಡಾಕ್ಟರರು ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕಳೆದ ಸೋಮವಾರ ಸಾಗಿಸಿದರು. ಅಲ್ಲಿ ತಕ್ಕ ಔಷಧೋಪಚಾರಗಳು ನಡೆಯುತ್ತಲಿವೆ. ಅವರ ಬಂಧುಮಿತ್ರರೂ, ಅನೇಕ ಸರ್ಕಾರಿ ಅಧಿಕಾರಿಗಳೂ, ಪ್ರಜಾ ಮುಖಂಡರೂ ಇವರ ಯೋಗಕ್ಷೇಮವನ್ನು ವಿಚಾರಿಸುತ್ತಿರುವರು. ಇವರಿಗೆ ಈಗ 88ನೆಯ ವರ್ಷವು ನಡೆಯುತ್ತಿರುವುದು. ಅವರಿಗೆ ಪ್ರಾಪ್ತವಾಗಿರುವ ರೋಗವು ಶೀಘ್ರದಲ್ಲಿ ನಿವಾರಣೆಯಾಗಿ ಆರೋಗ್ಯವನ್ನು ಹೊಂದಲೆಂದು ಹಾರೈಸುತ್ತೇವೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಸಂಸ್ಕೃತ ಸಂಘದವರು ಸಂಸ್ಥಾನದ ಸಂಸ್ಕೃತಪಂಡಿತರ ಮತ್ತು ಸಂಸ್ಕೃತಾಭಿಮಾನಿಗಳ ಒಂದು ಸಭೆಯನ್ನು ಮುಂದಿನ ಆಗಸ್ಟ್ ತಿಂಗಳಲ್ಲಿ ನಡೆಯಿಸಬೇಕೆಂದು ಆಲೋಚಿಸುವುದಕ್ಕಾಗಿ ಕಳೆದವಾರ ತೀರ್ಮಾನಿಸಿ ತಕ್ಕ ಸನ್ನಾಹ ಮಾಡುತ್ತಲಿದ್ದಾರೆ. ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ರಾಜಧಾನಿಯ ವಾಚನಾಲಯದಲ್ಲಿ ವಿದ್ವಾಂಸರೂ ಕೆಲವು ದೊಡ್ಡ ಮನುಷ್ಯರೂ ಶ್ರೀಯುತ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನೇರ್ಪಡಿಸಿ ಸಂಸ್ಕೃತ ವಿದ್ಯಾಭಿಮಾನಿಗಳ ಸಭೆಯನ್ನು ಕೂಡಿಸುವುದು ಅತ್ಯವಶ್ಯಕವಾದುದೆಂದೂ, ಬೆಂಗಳೂರಿನವರು ಕೈಕೊಂಡ ಕೆಲಸವು ಸ್ತೋತ್ರಾರ್ಹವಾದುದೆಂದೂ ತೀರ್ಮಾನಿಸಿ ಆ ಕಾರ್ಯಕ್ಕೆ ಸಹಾಯ ಮಾಡಲು ಒಂದು ಕಮಿಟಿಯನ್ನೇರ್ಪಡಿಸಿದರು.

ಪ್ರಸಿದ್ಧ ಪತ್ರಿಕೆ.

ಯಾದಗಿರಿ.

ಶಂಕರ ಸಂಸ್ಕೃತ ಕಾಲೇಜಿನ ಅಧ್ಯಾಪಕರಾದ ಶಾಸ್ತ್ರಿಗಳಿಗೂ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಸೂಚಿಸುವುದೇನೆಂದರೆ, ಪದ್ಧತಿಯಂತೆ ಇದೇ ಜ್ಯೇಷ್ಠ ಬ|| ಪ್ರತಿಪದದಲ್ಲಿ ಕಾಲೇಜು ತೆರೆಯಲ್ಪಡುತ್ತಿತ್ತು. ಈ ವರ್ಷ ಬೇಸಿಗೆಯ ತಾಪವು ಹೆಚ್ಚಾಗುದರಿಂದ ಜ್ಯೇಷ್ಠ ಬ|| ನವಮಿವರೆಗೆ ಸೂಟಿಯಿರುವುದು. ಅದ್ದರಿಂದ ಸರ್ವರೂ ದಶಮಿತಿಥಿಗೆ ಹಾಜರಾಗಬೇಕೆಂದು ಸೂಚಿಸುತ್ತೇವೆ.

ಹಂಪಣ್ಣ ಶೆಕ್ರೆಟರಿ
ಶಂಕರಸಂಸ್ಕೃತ ಕಾಲೇಜು.
ಯಾದಗಿರಿ.

ವರ್ತಮಾನಸಂಗ್ರಹ.

ಅಖಿಲಭಾರತ ರಾಷ್ಟ್ರೀಯ ಮಹಾಸಭೆಯು ಮುಂದಿನ ವರ್ಷ ಜಗನ್ನಾಥಪುರಿಯಲ್ಲಿ ನಡೆಯಬೇಕೆಂದು ನಿರ್ಣಯವಾಗಿದೆ.

ಕಳೆದ ತಿಂಗಳು 21 ನೆಯ ತಾರೀಖಿನ ದಿವಸ ಬರ್ಮಾದೇಶಕ್ಕೆ ಸೇರಿದ ಯಾನಾಂಗ್‌ಯಾಂಗ್ ಎಂಬ ಗ್ರಾಮಕ್ಕೆ ಬೆಂಕಿಬಿದ್ದು 150 ಮನೆಗಳು ಸುಟ್ಟು ನೆಲಸಮವಾಗಿವೆ. 300 ಜನರಿಗೆ ಮನೆಮಠಗಳಿಲ್ಲದಂತಾಗಿದೆ. ಬೆಂಕಿಬಿದ್ದುದರ ಕಾರಣವು ಇನ್ನೂ ಪ್ರಕಟವಾಗಿರುವುದಿಲ್ಲ.

ಸತ್ಯಾಗ್ರಹಚಳವಳಿಯಲ್ಲಿ ಏಳುವರ್ಷಗಳ ಕಠಿಣಶಿಕ್ಷೆಗೆ ಗುರಿಯಾಗಿ ಬಿಡುಗಡೆಮಾಡಲ್ಪಟ್ಟಿರುವ ಶ್ರೀಯುತ ಸೇನಾಪತಿ ಬಾಪಟ್‌ರವರು ಮಹಾರಾಷ್ಟ್ರದಲ್ಲಿಯೂ, ಹಿಂದುಸ್ಥಾನದ ಇತರ ಭಾಗಗಳಲ್ಲಿಯೂ ಸಂಚರಿಸಿ ಕಾಂಗ್ರೆಸ್ ಸಂಸ್ಥೆಗೆ 1 ಲಕ್ಷ ಜನ ಸ್ವಯಂಸೇವಕರನ್ನು ಸೇರಿಸಬೇಕೆಂದು ದೃಢಸಂಕಲ್ಪಮಾಡಿರುವರು.

ಸರ್ಕಾರದವರು ದಿಲ್ಲಿ ಒಪ್ಪಂದದ ಷರತ್ತುಗಳನ್ನು ತೃಪ್ತಿಕರವಾಗಿ ಆಚರಣೆಗೆ ತರುವುದಾದರೆ ಮಹಾತ್ಮ ಗಾಂಧಿಯವರು ಲಂಡನ್ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೊರಡುವರೆಂದೂ, ಆ ಸಮ್ಮೇಳನದ ಕಾರ್ಯಕಲಾಪಗಳಲ್ಲಿ ಯಾವ ಭಾಗವನ್ನೂ ವಹಿಸದೆ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಮಾತ್ರವೇ ಅಲ್ಲಿ ವಿವರಿಸುವರೆಂದೂ ಪ್ರಕಟವಾಗಿದೆ.

ಬೆಳಗಾಂವಿ ಜಿಲ್ಲಾ ಹುಕ್ಕೇರಿಯಲ್ಲಿ ಕರ್ನಾಟಕ ಪ್ರಾಂತಿಕಪರಿಷತ್ತು ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ನೆರವೇರಿತು. ಅಧ್ಯಕ್ಷರಾದ ಶ್ರೀಯುತ ಶೇಟ್ ಜಮನಲಾಲ್ ಬಜಾಜರವರು ಹಿಂದೂಮಹಮ್ಮದೀಯ ಸಮಸ್ಯೆ, ಪತಿತೋದ್ಧಾರ, ರಾಷ್ಟ್ರೀಯ ವಿದ್ಯಾಪ್ರಸಾರ, ಕರ್ನಾಟಕ ಏಕೀಕರಣ ಇವುಗಳನ್ನು ಕುರಿತು ಮಹತ್ವದ ಭಾಷಣಮಾಡಿದರು.

ಕಳೆದವರ್ಷ ಅಕ್ಟೋಬರ್ 26 ನೆಯ ತಾರೀಖಿನ ದಿವಸ ಬೊಂಬಾಯಿಯ ಸತ್ಯಾಗ್ರಹ ಚಳವಳಿಯಲ್ಲಿ ದಸ್ತಗಿರಿಮಾಡಲ್ಪಟ್ಟಿದ್ದ ಮಿಸ್ ಲೀಲಾಸಯ್ಯದ್ ಎಂಬ ಸ್ತ್ರೀಯಳನ್ನು ಅಪಮಾನಪಡಿಸಿದರೆಂದು ವಿಚಾರಣೆಗೆ ಗುರಿಯಾಗಿದ್ದ ಸಾರ್ಜಂಟ್ ಮ್ಯಾಕೆಂಜಿ ಮತ್ತು ಪೋಲೀಸ್ ಕಾನ್ಸ್ಟೇಬಲ್ ವಿಚಾರೆ ಎಂಬವರನ್ನು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು.

ಗುಜರಾಥದಲ್ಲಿ ಒಬ್ಬ ಗೃಹಸ್ಥನು ತನ್ನ ಎಮ್ಮೆಯನ್ನು ಮಾರಿ 100 ರೂಪಾಯಿ ನೋಟು ಒಂದನ್ನು ತಂದು ಅವನ ಹೆಂಡತಿಯ ಕೈಗೆಕೊಟ್ಟನು. ಅವಳು ಅದನ್ನು ಒಂದು ಪುಟ್ಟಿಯಲ್ಲಿಟ್ಟಿದ್ದಳಂತೆ! ಆಕೆಯ ಮಗುವು ಅದನ್ನು ತೆಗೆದುಕೊಂಡು ಏನೋ ಒಂದು ಕಾಗದವೆಂದು ಬೆಂಕಿಯಲ್ಲಿ ಬಿಸಾಡಿತಂತೆ! ಇದನ್ನು ಕೇಳಿ ತಂದೆಯು ಸಿಟ್ಟಿನಿಂದ ಮಗುವನ್ನು ಹೊಡೆದು ಕೊಂದನಂತೆ! ಅವಿಚಾರತನ.

ಇಂಗ್ಲೆಂಡಿನಿಂದ ಹಿಂದುಸ್ಥಾನಕ್ಕೆ ಕಳೆದ ವರ್ಷಕ್ಕಿಂತಲೂ ಈ ವರ್ಷ 33,84,45000 ಚದುರಗಜ ಬಟ್ಟೆಯು ಕಡಿಮೆಯಾಗಿ ರಫ್ತಾಗಿದೆ. ಹೋದವರ್ಷ 47,83,62000 ಚದುರಗಜ ಬಟ್ಟೆಯು ರಫ್ತಾಗಿತ್ತು. ಆದರೆ ಈ ವರ್ಷ 13,99,17000 ಚದುರಗಜ ಬಟ್ಟೆ ಮಾತ್ರವೇ ರಫ್ತಾಗಿದೆ. ಇದನ್ನು ನೋಡಿದರೆ ಭಾರತೀಯರ ಸತ್ಯಾಗ್ರಹಚಳವಳಿಯಿಂದ ಇಂಗ್ಲೆಂಡಿನ ಬಟ್ಟೆವ್ಯಾಪಾರಕ್ಕೆ ಎಂಥ ಬಲವಾದ ಪೆಟ್ಟು ಬಿದ್ದಿದೆ ಎಂಬುದು ಸ್ಪಷ್ಟವಾಗುತ್ತದೆ.

ಮಹಾತ್ಮ ಗಾಂಧಿಯವರು ಸ್ವರಾಜ್ಯಸಾಧನೆಗಾಗಿ ನಡೆಯಿಸಿದ ಚಳವಳಿಗೆ ಅಮೇರಿಕೆಯ ಸಹಾನುಭೂತಿಯಿದೆ ಎಂಬುದನ್ನು ಜಗತ್ತಿಗೆ ವ್ಯಕ್ತಪಡಿಸುವುದಕ್ಕೋಸ್ಕರ ಈ ತಿಂಗಳು 1 ನೆಯ ತಾರೀಖಿನ ದಿವಸ ನ್ಯೂಯಾರ್ಕ್‌ಪಟ್ಟಣದಲ್ಲಿ ಭೋಜನಸಮಾರಂಭವು ನಡೆಯುತಕ್ಕದ್ದಿದೆ. ಇದಕ್ಕೆ "ಗಾಂಧಿಟೆಸ್ಟಿಮೋನಿಯಲ್ ಡಿನ್ನರ್" ಎಂಬ ಹೆಸರು ಕೊಟ್ಟಿದ್ದಾರೆ. ಆ ಸಮಾರಂಭದ ಸಮಯದಲ್ಲಿ ಅನೇಕ ಅಮೇರಿಕೆಯ ವಿದ್ವಾಂಸರು ಭಾಷಣಮಾಡುವರು.

ಕಳೆದ ತಿಂಗಳು 24 ನೆಯ ತಾರೀಖಿನ ರಾತ್ರಿ ಹನ್ನೆರಡುವರೆ ಗಂಟೆಯಿಂದ ಒಂದುವರೆ ಗಂಟೆಯವರೆಗೆ ಅದವಾನಿಯಲ್ಲಿ ಭಯಂಕರ ಬಿರುಗಾಳಿಯು ಬೀಸಿ ಬಹು ಅನಾಹುತವನ್ನುಂಟುಮಾಡಿತು. ಎರಡು ಮದ್ಯದ ಅಂಗಡಿಗಳು ನಿರ್ಮೂಲವಾದುವು. ಒಂದು ಅಷ್ಟಾರ್‌ಖಾನೆಯ ಮೇಲ್ಛಾವಣಿಯು ಮುರಿದು ಬಿದ್ದು ಒಬ್ಬ ಮನುಷ್ಯನ ಕಾಲುಗಳು ಮುಂದಿರುವುವಲ್ಲದೆ ಇಬ್ಬರು ಹುಡುಗಿಯರು ಮೃತಪಟ್ಟರು. ಗಾಯಪಟ್ಟ ಮನುಷ್ಯನು ಕೇವಲ ಪ್ರಾಣಾಪಾಯಸ್ಥಿತಿಯಲ್ಲಿರುವನು.

ಕರಾಚಿಯಲ್ಲಿ ಒಬ್ಬ ಗೃಹಸ್ಥನ ನಾಯಿಯು ಒಬ್ಬ ಮಹಮ್ಮದೀಯನ ಮಕ್ಕಳನ್ನು ಕಚ್ಚಿತೆಂದು ಆ ಮಹಮ್ಮದೀಯನು ನಾಯಿಯನ್ನು ಹೊಡೆದನು. ಅನಂತರ ನಾಯಿಯ ಮಾಲಕರಿಗೂ ಮಹಮ್ಮದೀಯನಿಗೂ ಕಲಹವಾಯಿತು. ಕೆಲವು ದಿವಸಗಳ ತರುವಾಯ ನಾಯಿಯ ಮಾಲಕನೂ ಅವನ ಸಹೋದರನೂ ಕೂಡಿಹೋಗಿ ಮಹಮ್ಮದೀಯನೂ, ಅವನ ಬಂಧುಗಳೂ ಬಯಲಿನಲ್ಲಿ ಮಲಗಿರುವಾಗ ಅವರ ಮೇಲೆ ಬಿದ್ದು ಏಳು ಜನರನ್ನು ಕೊಂದುಹಾಕಿದರು. ಕೊಲೆಮಾಡಿದ ಅವರೀರ್ವರಿಗೂ ಫಾಶಿ ಶಿಕ್ಷೆಯು ವಿಧಿಸಲಟ್ಟಿತು.

ಹೊಸದಿಲ್ಲಿಯಲ್ಲಿ ಕಳೆದ ತಿಂಗಳು 24 ನೆಯ ತಾರೀಖಿನ ರಾತ್ರಿ ವೈಸರಾಯರ ಭವನದ ದಕ್ಷಿಣ ಪಾರ್ಶ್ವಕ್ಕೆ ಬೆಂಕಿ ಬಿದ್ದು ಸ್ವಲ್ಪಭಾಗವು ಸುಟ್ಟುಹೋಗಿ ನಷ್ಟವುಂಟಾಗಿದೆ. ಸ್ವಲ್ಪ ಹೊತ್ತಿನಲ್ಲಿ ಫೈರ್‌ಬ್ರಿಗೇಡಿನವರು ಬಂದು ಬೆಂಕಿಯನ್ನು ಆರಿಸಿದರು. ಬೆಂಕಿಬಿದ್ದ ಸ್ಥಳವು ವೈಸರಾಯರು ಚಳಿಗಾಲದಲ್ಲಿ ಓದತಕ್ಕ ಸ್ಥಳವಾಗಿತ್ತು. ಬೆಲೆಯುಳ್ಳ ಕುರ್ಚಿ, ಮೇಜು ವಗೈರೆ ಸಾಮಾನುಗಳನ್ನು ಕೂಡಲೆ ಸಮೀಪದಲ್ಲಿರುವ ಕೋಟಕ್ಕೆ ಸಾಗಿಸಿದರು. ಅಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಕೂಲಿಯು ಬೀಡಿಸೇದಿ ಎಸೆದು ಹೋದುದೇ ಬೆಂಕಿಹತ್ತಲು ಮೂಲಕಾರಣವೆಂದು ತಿಳಿದುಬಂದಿದೆ.

ಕಳೆದ ತಿಂಗಳು 24ನೆಯ ತಾರೀಖಿನ ದಿವಸ ಕಲ್ಕತ್ತೆಯ ಇಂಜನಿಯರಿಂಗ್ ಕಾರ್ಖಾನೆಯಲ್ಲಿ ಒಂದು ದರೋಡೆಯಾಯಿತು. ಮಧ್ಯರಾತ್ರಿಯಾದ ಮೇಲೆ ನಾಲ್ಕು ಜನರು ಆ ಕಾರ್ಖಾನೆಗೆ ಮೋಟಾರಿನಲ್ಲಿ ಹೋಗಿ ಅಲ್ಲಿದ್ದವನನ್ನು ಪೆಟ್ರೋಲ್‌ಬೇಕೆಂದು ಕೇಳಿ ಅವನ ಕೈಗೆ ಹತ್ತು ರೂಪಾಯಿ ನೋಟು ಕೊಟ್ಟರು. ಅವನು ಅವರಿಗೆ ಕೇಳಿದಷ್ಟು ಪೆಟ್ರೋಲನ್ನು ಕೊಟ್ಟು ಚಿಲ್ಲರೆ ತರುವುದಕ್ಕೆ ಒಳಗೆ ಹೋದನು. ನಾಲ್ವರಲ್ಲಿ ಇಬ್ಬರು ಅವನಿಗೆ ಕಾಣದಂತೆ ಒಳಗೆ ಹೋಗಿ ಅವನನ್ನು ಚೂರಿಯಿಂದ ಇರಿದು ಹಣದ ಪೆಟ್ಟಿಗೆಯನ್ನು ಎತ್ತಿಕೊಂಡು ಮೋಟಾರಿನಲ್ಲಿ ಪಲಾಯನಮಾಡಿದರು.

ಬೊಂಬಾಯಿಯ ಮ್ಯುನಿಸಿಪಾಲಿಟಿಯವರು ಮಲೇರಿಯಾ ಜಾಡ್ಯವನ್ನು ನಿರ್ಮೂಲ ಮಾಡಬೇಕೆಂದು ಪ್ರಯತ್ನಮಾಡುತ್ತಿರುವರು. 1929 ರಲ್ಲಿ 101507 ಜನರು ಮಲೇರಿಯಾ ರೋಗಪೀಡಿತರಾಗಿದ್ದರು. 1930 ನೆಯ ಇಸವಿಯಲ್ಲಿ ಅವರ ಸಂಖ್ಯೆಯು 61384 ಕ್ಕೆ ಇಳಿಯಿತು. ಇದರಿಂದ ಶೇಕಡ 40ರಂತೆ ಮಲೇರಿಯಾ ರೋಗಿಗಳ ಸಂಖ್ಯೆಯು ಕಡಿಮೆಯಾಗಿದೆ. ಹಾಳುಬಿದ್ದಿರುವ ಬಾವಿಗಳಿಂದ ಮಲೇರಿಯಾಜಾಡ್ಯದ ಹುಳುಗಳು ಉತ್ಪತ್ತಿಯಾಗುವುವೆಂದು ಮ್ಯುನಿಸಿಪಾಲಿಟಿಯವರು 2429 ಬಾವಿಗಳಲ್ಲಿ 1100 ಬಾವಿಗಳನ್ನು ಮುಚ್ಚಿಸಿದರು. ಕ್ರಮೇಣ ಮಲೇರಿಯ ರೋಗವನ್ನು ಮೂಲೋತ್ಪಾಟನ ಮಾಡುವ ಯತ್ನವನ್ನು ನಡೆಯಿಸಿರುವರು.

ಕಳೆದ ತಿಂಗಳು 26 ನೆಯ ತಾರೀಖಿನ ದಿವಸ ಕರ್ನಾಟಕ ಪ್ರಾಂತಿಕ ಆರನೆಯ ಮಹಾಸಭೆಯು ಶ್ರೀಯುತ ಶೇಟ್ ಜಮನಲಾಲ್ ಬಜಾಜ್‌ರವರ ಅಧ್ಯಕ್ಷತೆಯಲ್ಲಿ ಬಹು ವೈಭವದಿಂದ ನೆರವೇರಿತು. ಸಹಸ್ರಾರು ಜನ ದೇಶಭಕ್ತರು ಆ ಸಭೆಗೆ ಆಗಮಿಸಿದ್ದರಲ್ಲದೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದ ನೀರನಾರೀಮಣಿಯರು ಹಾಜರಿದ್ದರು. ಮಹಾತ್ಮಗಾಂಧಿ ಮತ್ತು ಶ್ರೀಯುತ ಸರ್ದಾರ್ ವಲ್ಲಭಭಾಯಿ ಪಟೇಲ್ ಮೊದಲಾದ ಉಜ್ವಲ ದೇಶಾಭಿಮಾನಿಗಳು ಸಭೆಗೆ ಜಯವನ್ನುಕೋರಿ ತಂತಿಗಳನ್ನು ಕಳುಹಿಸಿದ್ದರು. ಗುಜರಾಥ ವಿದ್ಯಾಪೀಠದ ಕಾಕಾ ಕಲೇಲ್ಕರ್‌ರವರು ಕರ್ನಾಟಕ ಖಾದಿ ಮತ್ತು ಸ್ವದೇಶಿ ಪ್ರದರ್ಶನಾಲಯದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಕಲ್ಕತ್ತೆಯ ಉಜ್ವಲದೇಶಾಭಿಮಾನಿಗಳಾದ ಶ್ರೀಯುತ ಸುಭಾಸ್‌ಚಂದ್ರಬೋಸ್‌ರವರು ಕಳೆದ ತಿಂಗಳು 27ನೆಯ ತಾರೀಖಿನ ದಿವಸ ಬೊಂಬಾಯಿಗೆ ಬಂದಿಳಿದರು. ಲಕ್ಷಾವಧಿ ಜನರು ತಿಲಕಮೈದಾನದಲ್ಲಿ ಸಮ್ಮಿಲಿತರಾಗಿದ್ದರು. ಆಗ ಸುಭಾಸ್ ಚಂದ್ರಬೋಸ್‌ರವರು ಹೃದಯದ್ರಾವಕವಾದ ಭಾಷಣವನ್ನು ಮಾಡಿದರು. ಮಹಾತ್ಮ ಗಾಂಧಿಯವರು ಲಂಡನ್ನಿನ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋದರೂ ಸ್ವರಾಜ್ಯವು ಲಭಿಸದಿದ್ದರೆ ಪುನಃ ಸಂಗ್ರಾಮವನ್ನು ಪ್ರಾರಂಭಿಸಬೇಕೆಂದೂ, ಯೂರೋಪಿನಲ್ಲಿರುವ ರಾಷ್ಟ್ರಸಂಘವು ಕಳ್ಳರ ಸಂಘವೆಂದೂ, ಅದಕ್ಕೋಸ್ಕರವೇ ರಷಿಯಾದೇಶವು ಆ ಸಂಘದಲ್ಲಿ ಸೇರಿರುವುದಿಲ್ಲವೆಂದೂ, ತರುಣರು ಸ್ವರಾಜ್ಯಕ್ಕೋಸ್ಕರ ಸ್ವಾರ್ಥತ್ಯಾಗಮಾಡಬೇಕೆಂದೂ ಭಾಷಣಮಾಡಿದರು.

ಜಗತ್ತಿನ ಮಹಾವೀರರಲ್ಲೊಬ್ಬರಾದ ಜರ್ಮನ್ ಕೈಜರ್ ಚಕ್ರವರ್ತಿಗಳು ಪದಚ್ಯುತರಾಗಿ ಹಾಲೆಂಡ್ ದೇಶದಲ್ಲಿರುವುದು ಸರಿಯಷ್ಟೆ! ಇವರಿಗೆ ಸುಮಾರು 33 ಕೋಟಿ ರೂಪಾಯಿ ಬೆಲೆಬಾಳುವ ಭೂಮಿಯು ಇರುವುದು. ಜರ್ಮನ್ ರಿಪಬ್ಲಿಕ್ ಸರ್ಕಾರದವರು ಇವರ ಕೆಲವು ಆಸ್ತಿಗಳನ್ನು ಜಪ್ತುಮಾಡಿ ಅವರಿಗೆ 9 ಕೋಟಿ 75 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟರು. ಅವರು ಪದಚ್ಯುತರಾಗುವಾಗ ಅವರಲ್ಲಿ 3 ಕೋಟಿ 60ಲಕ್ಷ ರೂಪಾಯಿಗಳು ಇದ್ದುವಂತೆ! ಅದಲ್ಲದೆ ಸಾವಿರಾರು ಬೆಳ್ಳಿ ಬಂಗಾರದ ಚಮಚ ಮೊದಲಾದುವುಗಳನ್ನು ಮೊದಲೇ ಸಾಗಿಸಿದ್ದರು. ಇಷ್ಟು ಆಸ್ತಿಯೂ, ಸಂಪತ್ತೂ ಇದ್ದಾಗ್ಯೂ ಕೈಜರ್‌ರವರು ಈಗ ಜರ್ಮನ್ ನಾಣ್ಯದ ಬೆಲೆಯು ಇಳಿದುಹೋಗಿದೆ; ಹಣತೊಂದರೆ ಬಹಳವಿದೆ; ದಯೆಯಿಟ್ಟು ಎರಡು ಜೊತೆ ಪಾದರಕ್ಷೆ, ಎರಡು ಬೀರುಗಳು ಇನ್ನೂ ಮೊದಲಾದ ಸಾಮಾನುಗಳನ್ನು ಕಳುಹಿಸಿಕೊಡಬೇಕೆಂದು ಜರ್ಮನ್ ಸರ್ಕಾರದವರನ್ನು ಬೇಡಿಕೊಂಡಿರುವರಂತೆ! ಆಶೆಯು ಎಲ್ಲರನ್ನೂ ದಾಸರನ್ನಾಗಿ ಮಾಡುವುದಲ್ಲವೇ?

ಮುಲ್ತಾನ್ ಸಮೀಪದಲ್ಲಿರುವ ಗೋಜ್ರ ಎಂಬ ಹಳ್ಳಿಗೆ ಒಬ್ಬ ಮಹಮ್ಮದೀಯ ಫಕೀರನು ಯಂತ್ರ ತಂತ್ರಗಳನ್ನು ಮಾಡುವೆನೆಂದು ಜನರನ್ನು ಮರುಳುಮಾಡಿ ಹಣವನ್ನು ಎತ್ತಿಹಾಕಿದನು. ಅವನು ಮೊಟ್ಟಮೊದಲು ಊರಿಗೆ ಬಂದೊಡನೆಯೇ ಸಣ್ಣಮಕ್ಕಳು ಅವನ ಸುತ್ತಲೂ ಸುತ್ತಿಕೊಂಡರು. ಆಗ ಅವನು ತನ್ನ ಕೈಗಳನ್ನು ಮೇಲಕ್ಕೆತ್ತಲು ರೂಪಾಯಿಗಳು ಬೀಳುತ್ತಿದ್ದವು. ಆ ರೂಪಾಯಿಗಳನ್ನು ಸುತ್ತುಮುತ್ತಲಿದ್ದ ಹುಡುಗರಿಗೆಲ್ಲ ಹಂಚಿದನು. ಒಬ್ಬ ಫಕೀರನು ಬಂದು ಆಕಾಶದಿಂದ ರೂಪಾಯಿಗಳನ್ನು ಸುರಿಸುವನೆಂದು ಊರಲ್ಲೆಲ್ಲ ಸುದ್ದಿಯು ಹರಡಿತು. ಅವನು ತಾನು ಬೆಳ್ಳಿಯನ್ನು ಬಂಗಾರಮಾಡುವೆನೆಂದೂ, 1 ರೂಪಾಯಿಗೆ ನಾಲ್ಕು ರೂಪಾಯಿಗಳನ್ನು ಮಾಡುವೆನೆಂದೂ ಜನರಿಗೆ ಹೇಳಹತ್ತಿದನು. ಇವನ ಕೈಗೆ ಕೊಟ್ಟರೆ ನಗಗಳೂ ರೂಪಾಯಿಗಳೂ ಹೆಚ್ಚಾಗುವುವೆಂದು ತಿಳಿದು ಜನರು ದುರಾಶೆಯಿಂದ ತಮ್ಮ ನಗಗಳನ್ನೂ, ರೂಪಾಯಿಗಳನ್ನೂ ಕೊಟ್ಟರು. ಈ ರೀತಿಯಾಗಿ ದೊರೆತ 15000 ಸಾವಿರ ಬೆಲೆಬಾಳುವ ಆಭರಣಗಳನ್ನೂ ಮತ್ತು ನಗದು ಹಣವನ್ನೂ ದೋಚಿಕೊಂಡು ಓಡಿಹೋದನು. ಪೋಲೀಸರು ಆ ಫಕೀರನನ್ನು ಹುಡುಕುತ್ತಿರುವರು.

ಸೂಚನೆ.

ಬಳ್ಳಾರಿ ಡಿ|| ಕೊಟ್ಟೂರಲ್ಲಿರುವ ಶ್ರೀ ಜಗದ್ಗುರು ದಾರುಕಾಚಾರ್ಯ ಸಂಸ್ಕೃತ ಪಾಠಶಾಲೆಗೆ ಬೇಸಿಗೆಯ ನಿಮಿತ್ತವಾಗಿ ರಜೆಕೊಡಲ್ಪಟ್ಟಿತ್ತು. ಇದೇ ತಿಂಗಳ ೧ ನೆಯ ತಾರೀಖಿನಿಂದ ಪಾಠಶಾಲೆಯು ಪ್ರಾರಂಭವಾಗುವದು. ಆದುದರಿಂದ ವಿದ್ಯಾರ್ಥಿಗಳು ಬರಬೇಕೆಂದು ಸೂಚಿಸಿದೆ.

ಅಧ್ಯಾಪಕ, ಪಂಡಿತ ಶಂಕರಶಾಸ್ತ್ರೀ.

(3ನೆಯ ಪುಟದಿಂದ ಮುಂದುವರಿದುದು.)

ಲ್ಪಟ್ಟಿತು. ಕಾರಣಾಂತರದಿಂದ ಅವರಿಗೆ ಅಚ್ಚು ಹಾಕಿಸಲು ಅವಕಾಶವಾಗಲಿಲ್ಲವೆಂಬ ಅಂಶವು ಈಚೆಗೆ ತಿಳಿದುಬಂದುದರಿಂದ ಇನ್ನುಮುಂದೆ ಈ ವಿಚಾರದಲ್ಲಿ ಕಾಲಹರಣಮಾಡುವುದರಿಂದ ವೈದ್ಯಪ್ರಚಾರಕ್ಕೆ ತುಂಬಾ ತೊಂದರೆಯಾಗುತ್ತದೆಯಾಗಿ ಹೇಗಾದರೂ ಕೂಡಲೆ ಅಚ್ಚು ಹಾಕಿಸುವ ಪ್ರಯತ್ನ ಮಾಡಬೇಕೆಂದು ವೈಸ್ ಪ್ರೆಸಿಡೆಂಟ್ ಡಾ|| ಎಚ್. ವಿ. ಸವಣೂರರವರು ಬರೆದುದರಿಂದ ಮೈಸೂರಲ್ಲಿ ನಡೆದ ಆಯುರ್ವೇದ ಸಮ್ಮೇಳನದ ಖರ್ಚಿನಿಂದ ಪ್ರಿಂಟುಮಾಡಿಸಿಕೊಡಬೇಕೆಂದು ಆ ಮ್ಯಾನೇಜಿಂಗ್‌ಕಮಿಟಿಯನ್ನು ಪ್ರಾರ್ಥಿಸಲಾಯಿತು. ಅದರಂತೆ ಅವರು ಅನುಜ್ಞೆಕೊಟ್ಟು ಈಗ ಅಚ್ಚುಹಾಕಿಸಿ ಪ್ರಕಟಿಸಲು ಅನುಕೂಲಪಡಿಸಿ ನಮ್ಮಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ವೈದ್ಯರೂ ವೈದ್ಯಾಭಿಮಾನಿಗಳೂ ಈ ಸುಸಮಯವನ್ನು ಕಳೆದುಕೊಳ್ಳಬಾರದಾಗಿ ನನ್ನ ವಿನಂತಿ. ಇಷ್ಟವುಳ್ಳವರು 1 ಆಣೆ ಪೋಸ್ಟುಸ್ಟಾಂಪನ್ನು ಕಳುಹಿಸಿದಲ್ಲಿ ಈ ನಿಯಮಾವಳಿಯನ್ನು ಮುಫತ್ತಾಗಿ ಕಳುಹಿಸಲಾಗುವದು.

ವೈ. ಲಕ್ಷ್ಮೀನರಸಿಂಹಶಾಸ್ತ್ರೀ,
ಮೈಸೂರು, ಅ|| ಸೆಕ್ರೆಟರಿ, ಕರ್ನಾಟಕಾಯುರ್ವೇದ
ತಾ|| 15-5-1931. ವಿದ್ಯಾಪೀಠ.

ಕರ್ನಾಟಕ ಏಕೀಕರಣಪರಿಷತ್ತು.

ಪ್ರೆಸಿಡೆಂಟರಾದ ಡಾ|| ಪಟ್ಟಾಭಿಸೀತಾರಾಮಯ್ಯನವರ ಮಹತ್ವದಭಾಷಣ.

ಕರ್ನಾಟಕ ಏಕೀಕರಣವು ನಿರ್ವಿವಾದವಾದುದು.

ಈಗ್ಗೆ 12 ವರ್ಷಗಳಿಂದಲೂ ಕರ್ನಾಟಕ ಏಕೀಕರಣದ ಪ್ರಶ್ನೆಯು ರಾಷ್ಟ್ರದ ಮಹತ್ವದ ವಿಚಾರಗಳೊಳ್ಳೊಂದಾಗಿದೆ. ಕರ್ನಾಟಕದ ಏಕೀಕರಣವು ನಿರ್ವಿವಾದವಾದ ಅಂಶವಾಗಿದೆ. ಕರ್ನಾಟಕ ಪ್ರಾಂತವು ಮಹಾತ್ಮಗಾಂಧಿಯವರಿಗೆ ಬಂಧವಿಮೋಚನೆಯಾದ 1924 ನೆಯ ಇಸವಿಯಲ್ಲಿ ಬೆಳಗಾಂವಿಯಲ್ಲಿ ...

[illegible]

ಅಂಧ್ರದೇಶದ ಜಾಗೃತಿ.

[illegible]

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

[illegible]

ಆಯುರ್ವೇದ ಮಹೌಷಧಾಲಯ, ... ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

[illegible]

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹರ್ಷಿಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಅದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಅದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಪುಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0. ½ ಡಜನಿಗೆ ರೂ. 8—3—0, ಡಜನಿಗೆ 16—[illegible]—0.

ಆರೋಗ್ಯಭಾಗ್ಯದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪ್ ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಭಾಯಿ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕೆ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತರೋಗಗಳನ್ನೆಲ್ಲಾ **ಕಂಪೌಂಡು ಸಿರಪ್ ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳುಪು, ಹೊಟ್ಟೆ ಹುಳಗಳ ಕೆರಳಾಟದ ಇವೇ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಚಿಕ್ಕ ಲವಣಗಳು, ಹೋಮಿಯೊಪತೀ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[43] ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ,) ಮಂಗಳೂರು. ದ. ಕ.

ತಮ್ಮ ನಿರಿಷೋರಿಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಳ್ಳಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ ಕೊಟ್ಟ ನಿಮಿಷದ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈನಾಡಿಕೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0 ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಣೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ಸಾವಕಾಶಮಾಡದೆ ಇನ್ನೂ 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,
ಪಟೇಲ್ ಮತ್ತು ಛೇರ್‌ಮನ್, ಬಾಣೂರು,
ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

[6]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತನಿರ್ಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆ[ಣೆ]
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ[ಣೆ]
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ[ಣೆ]
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆ[ಣೆ]
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ[ಣೆ]
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ[ಣೆ]
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ[.]
ಸಚಿತ್ರ ರೇಣುಕವಿಜಯ	೧ ರೂ[.]
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ[.]
ವೀರಶೈವಸಿದ್ಧಾಂತಸುಧಾಕರ	೨ ರೂ[.]

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದ[ಾ]ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗ[ೂ] ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡ[ಲ್ಪಡು]ಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುಖಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರರಾದ ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯ[ಿಂದ] ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ಬ[ೇ]ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ಕಾ[ಣ]ುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವ[ದರ]ಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಸ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪು[ರ]

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯ[ನ್ನು] ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ[ತ್ರ]

(Registered Trade Mark)

ಗಳನ್ನು ಕೊಟ್ಟಿರು[ವ]ರು. ಪ್ರಸಿದ್ಧವಾದ ನಶ್ಯದ ಪುಡಿಯಿ[ಂದ] ಸ್ವಸ್ಥವಾಗುವ ವ್ಯಾ[]ಧಿಗಳು ಯಾವವೆ[ಂದ]ರೆ:—ಪಿಸರಿ, ಒ[] ತಲೆನೋವು, ತಲೆ[] ಲ್ಲಿನ ರೋಗಗಳ[ು] ಕಣ್ಣುಗಳಲ್ಲಿ ಉಂಟ[ಾ]ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ[ದ] ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ [] ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ[ಕ್ತಿ]ಯನ್ನೂ ಸಹ ಹೆಚ್ಚುಮಾಡುತ್ತದೆ. ಮಾರುಬಿಟ್ಟ[] ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು[ಡಿ]ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲ[ಾ] ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ[ಳು] ತಮ್ಮ ಗೃಹದಲ್ಲಿ ಕುಟುಂಬಸಹಿತವಾಗಿ ಉಪಯೋ[ಗಿ]ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ[ತು]. ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪[] ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮ ಆ[ಣೆ]

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[49] ಪೋ. ಬಾ. ೫೧೦, ಮದರಾ[ಸ್]

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರ|| ಪಂಡಿತ ಶಿರ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟ[ಿತು].

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೮ ನೇ ಜೂನ್ ೧೯೩೧ [ಸಂಚಿಕೆ ೭

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹಸ್ತದಲ್ಲಿದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. ಬೆಲೆ ೪ ಆಣೆ.

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಹಾತ್ಮಗಾಂಧಿಯವರು ಮತ್ತು ರೌಂಡ್ ಟೇಬಲ್ ಸಮ್ಮೇಳನವು.

ಎಂಗ್ ಇಂಡಿಯಾ ಪತ್ರಿಕೆಯಲ್ಲಿ ಮಹಾತ್ಮ ಗಾಂಧಿಯವರು ಬರೆಯುವುದೇನಂದರೆ :—ನಾನು ಯಾವಾಗಲೂ ನನ್ನ ಅಭಿಪ್ರಾಯವನ್ನು ಗೋಪ್ಯವಾಗಿಟ್ಟಿರುವುದಿಲ್ಲ. ಲಾರ್ಡ್ ಇರ್ವಿನ್‌ರವರೊಡನೆ ಸಂಧಾನವು ನಡೆಯುತ್ತಿರುವಾಗಲೂ ಹಿಂದೂಮಹಮ್ಮದೀಯರ ಸಮಸ್ಯೆಯನ್ನು ನಾವೇ ತೃಪ್ತಿಕರವಾಗಿ ತೀರ್ಮಾನ ಮಾಡಿಕೊಳ್ಳದ ಹೊರತು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗುವುದನುಚಿತವೆಂದು ಸ್ಪಷ್ಟವಾಗಿ ಹೇಳಿದ್ದೇನೆ. ಆ ಅಭಿಪ್ರಾಯವನ್ನು ಬದಲಾಯಿಸುವಂಥ ಪರಿಸ್ಥಿತಿಯು ಇನ್ನೂ ಒದಗಿಲ್ಲ. ದಿಲ್ಲಿಒಪ್ಪಂದವಾದ ಮೇಲೆ ನಾನು ಲಂಡನ್ನಿಗೆ ಹೊರಡುವುದು ಇನ್ನೂ ದುಸ್ತರವಾಗಿದೆ. ನನ್ನ ಪ್ರಾಣವನ್ನಾದರೂ ಬಲಿಗೊಟ್ಟು ದಿಲ್ಲಿ ಒಪ್ಪಂದವು ಮುರಿಯದಂತೆ ನೋಡಿಕೊಳ್ಳುವುದು ನನ್ನ ಧರ್ಮವಾಗಿದೆ. ಒಪ್ಪಂದವು ಮುರಿಯದಿರುವುದಕ್ಕಾಗಿ ನಾನು ಇಲ್ಲಿರುವುದಾವಶ್ಯಕವಾಗಿದೆ. ಲಂಡನ್ನಿನ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಸೆಪ್ಟೆಂಬರ್‌ನಲ್ಲಿ ಹೊರಡಬೇಕಾಗುವದು. ಅಷ್ಟರೊಳಗೆ ಈ ಎರಡು ತೊಂದರೆಗಳೂ ನಿವಾರಣೆಯಾಗಲೆಂದು ಹಾರೈಸೋಣ. ಕಾಂಗ್ರೆಸ್ಸಿನವರು ಸರ್ಕಾರದವರೊಡನೆ ಒಪ್ಪಂದಮಾಡಿಕೊಂಡಿರುವುದರಿಂದ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿ ತಮ್ಮ ಮನೋಭೀಷ್ಟಗಳನ್ನು ಮಿ|| ಚರ್ಚಿಲ್ಲರು ಮೊದಲುಗೊಂಡು ಎಲ್ಲ ರಾಜನೀತಿಜ್ಞರಿಗೂ ತಿಳುಹಿಸುವುದು ಅತ್ಯಾವಶ್ಯಕವಾಗಿದೆ. ಇದರಿಂದ ಕಾಂಗ್ರೆಸ್ ಸಂಸ್ಥೆಯು ಜಗತ್ತಿನಲ್ಲಿ ತನ್ನ ಒಳ್ಳೆಯ ಹೆಸರನ್ನು ಕಾಪಾಡಿಕೊಂಡಂತಾಗುವುದು. ಚರ್ಚಿಲ್ಲರೂ ಮತ್ತು ಅವರ ಪಕ್ಷದವರೂ ಕಾಂಗ್ರೆಸ್‌ಸಂಸ್ಥೆಯನ್ನು ಇಂಗ್ಲೆಂಡಿಗೆ ವಿರೋಧಸಂಸ್ಥೆಯನ್ನಾಗಿ ಭಾವಿಸುವುದೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅದಕಾರಣ ನನಗೆ ಲಂಡನ್ನಿಗೆ ಹೋಗುವದಕ್ಕೆ ಯಾರ ಪ್ರೋತ್ಸಾಹವೂ ಬೇಕಾಗಿಲ್ಲ. ಹಿಂದೂಮಹಮ್ಮದೀಯ ಸಮಸ್ಯೆಯು ತೀರ್ಮಾನಿಸಲ್ಪಡದಿದ್ದರೂ, ದಿಲ್ಲಿ ಒಪ್ಪಂದವನ್ನು ಕಾಂಗ್ರೆಸ್ ಮತ್ತು ಸರ್ಕಾರದವರು ಪಾಲಿಸುವುದಾದರೆ ಲಂಡನ್ನಿಗೆ ಹೋಗಿ ಜವಾಬ್ದಾರಿ ಅಧಿಕಾರಿಗಳಿಗೆ ಕಾಂಗ್ರೆಸ್ಸಿನವರ ಉದ್ದೇಶವನ್ನು ವಿವರಿಸುವನೆಂದು ನನ್ನ ಸ್ನೇಹಿತರಸಂಗಡ ಹೇಳಿದ್ದೇನೆ. ನಮ್ಮ ರಾಷ್ಟ್ರವು ಕಷ್ಟದಾಯಕವಾಗಿರುವ ಚೆಳವಳಿಗೆ ಇನ್ನೊಂದು ಸಲ ಸಿಲುಕದಂತೆ ಗೌರವಯುತವಾದ ಶಾಂತಿಯನ್ನು ನೆಲೆಗೊಳಿಸಬೇಕೆಂಬುದೇ ನನ್ನ ಮನದಿಚ್ಛೆಯಾಗಿದೆ. ಲಂಡನ್ನಿಗೆ ಹೋಗುವುದರಿಂದ ಯಾವ ಪ್ರಯೋಜನವಿಲ್ಲವೆಂದೂ, ಅಲ್ಲಿ ಹೋದರೆ ಕಾಂಗ್ರೆಸ್ ರಾಯಭಾರಿಗಳು ಅವಹೇಳನಕ್ಕೀಡಾಗಬಹುದೆಂದೂ ನಾನು ಮೊದಲ್ಗೊಂಡು ಇತರ ಕಾಂಗ್ರೆಸ್ ಮೆಂಬರರು ದೇಶಕ್ಕೆ ಹಿಂದಿರುಗಿ ಬರುವುದು ಕಷ್ಟವಾಗಬಹುದೆಂದೂ ಸ್ನೇಹಿತರೊಬ್ಬರು ಹೇಳುತ್ತಾರೆ. ನಮ್ಮ ಕೋರಿಕೆಗಳನ್ನು ಇಂಗ್ಲೀಷರು ತಿರಸ್ಕರಿಸುವರೆಂಬ ಭಯದಿಂದ ರೌಂಡ್‌ಟೇಬಲ್‌ಸಮ್ಮೇಳನಕ್ಕೆ ಹೋಗದಿರುವುದು ತಪ್ಪು. ಕಾಂಗ್ರೆಸ್ ರಾಯಭಾರಿಗಳು ಲಂಡನ್ನಿನಲ್ಲಿ ಅವಹೇಳನಕ್ಕೀಡಾಗುವರೆಂಬುದನ್ನು ನಾನು ನಂಬುವುದಿಲ್ಲ. ಇಂಗ್ಲೀಷರು ಉದ್ದೇಶಪೂರ್ವಕವಾಗಿ ಕಾಂಗ್ರೆಸ್ ರಾಯಭಾರಿಗಳನ್ನು ಅವಮಾನಮಾಡಿದರೆ ಕಾಂಗ್ರೆಸ್ಸಿನ ಘನತೆಗೆ ಚ್ಯುತಿಬರ[ದು]. ಆದು ಅವರಿಗೇನೆ ಹಾನಿಕರವಾ[ಗಿ] ಪರಿಣಮಿಸುವುದು.

ದುಃಖವಾರ್ತೆ.

ಧಾರವಾಡದ ಡಿ|| ಹಾವೇರಿಶಹರದಲ್ಲಿ ಪ್ರಸಿದ್ಧ ವೀರಶೈವಮುಖಂಡರೂ, ಅಸಾಧಾರಣ ಗುರುಭಕ್ತರೂ, ಪರೋಪಕಾರನಿರತರೂ, ಗಮದಮಗುಣಸಂಪನ್ನರೂ, ಉತ್ಕಟಗುರುವರ್ಗಾಭಿಮಾನಿಗಳೂ ಆದ ಮ|| ರಾ|| ಯರೇಸೀಮೆ ರಾಚಪ್ಪನವರು ಈ ತಿಂಗಳು 3 ನೆಯ ತಾರೀಖಿನ ದಿವಸ ಆಕಸ್ಮಾತ್ತಾಗಿ ಪರಂಧಾಮವನ್ನೈದಿದರೆಂಬ ವಿಷಯವನ್ನು ಕೇಳಿ ಅತ್ಯಂತ ವಿಷಾದವೆನಿಸುತ್ತದೆ. ಇಂಥ ಅಸದೃಶ ಗುರುಭಕ್ತರನ್ನು ಕಳೆದುಕೊಂಡುದು ವೀರಶೈವ ಸಮಾಜದ ದುರ್ದೈವವೆಂದು ಹೇಳಬಹುದಾಗಿದೆ. ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನುಂಟುಮಾಡಿ ಮನೆತನದವರಿಗುಂಟಾದ ದುಃಖವನ್ನು ಶಮನಗೊಳಿಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಸ್ವೀಕಾರ.

ಧಾರವಾಡ ಡಿ|| ಹಾವೇರಿ ಶಹರ ನಿವಾಸಿಗಳಾದ ಗುರುಭಕ್ತಶಿಖಾಮಣಿ, ಮ|| ರಾ|| ಯರೇಸೀಮೆ ರಾಚಪ್ಪನವರು ಶಿವಾಧೀನರಾದ ಸಮಯದಲ್ಲಿ ಜಗದಾಚಾರ್ಯರ ನಾಮಸ್ಮರಣಪೂರ್ವಕ ಮೃತರ ಆತ್ಮಶಾಂತ್ಯರ್ಥವಾಗಿ ಸಮರ್ಪಿಸಿದ 5 ರೂ. ಗಳು ಹಾಗೂ ಸದರಿ ಮ|| ರಾ|| ರಾಚಪ್ಪನವರ ಮೊಮ್ಮಗ ಚಿ|| ಶಿವಾನಂದಪ್ಪನು ಶಿವಾಧೀನನಾದ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ಒಟ್ಟು 7 ರೂ. ಗಳು ಸದರಿಯವರ ತಮ್ಮಂದಿರಾದ ಮ|| ರಾ|| ಯರೆಸೀಮೆ ಶೇಖರಪ್ಪನವರ ದ್ವಾರಾ ತಲ್ಪಿರುತ್ತವೆ.

ಗದಗ ತಾ|| ಮುಂಡರಗಿ ಪೇಟಾ ಹಮ್ಮಿಗಿ ಗ್ರಾಮದಲ್ಲಿರುವ ಮ|| ರಾ|| ಗುಡದೀರಪ್ಪನವರು ತಮ್ಮ ಮಕ್ಕಳ ವಿವಾಹಸಮಯದಲ್ಲಿ ಸಮರ್ಪಿಸಿದ 2 ರೂ. ಹಾಗೂ ಸದರಿ ಗ್ರಾಮದಲ್ಲಿರುವ ಮ|| ರಾ|| ಬಳಿಮಗ್ಗದ ಚನ್ನಬಸಪ್ಪನವರು ತಮ್ಮ ಮಕ್ಕಳ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಒಟ್ಟು 4 ರೂ. ಗಳು ಮ|| ರಾ|| ಗುರುಭಕ್ತಕೇಸರಿ ಶಾಂತಪ್ಪನವರ ದ್ವಾರಾ ತಲ್ಪಿರುತ್ತವೆ.

ಹರಿಹರ ಸಬ್ ತಾಲೂಕು ಎಳೆಹೊಳೆಮಠದ ವೇ|| ಬಸವಯ್ಯನವರು ಮತ್ತು ಬೆಳಗುತ್ತಿ ಪ್ರೈಮರಿಸ್ಕೂಲ್ ಹೆಡ್‌ಮಾಸ್ಟರ್ ವೇ|| ಚನ್ನಯ್ಯನವರು ಸಮ್ಮಿಲಿತರಾಗಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಕಳುಹಿಸಿರುತ್ತಾರೆ.

ಹರಪನ ಹಳ್ಳಿ ತಾ|| ತೆಲಗಿ ಗ್ರಾಮದಲ್ಲಿ ನೆರವೇ[ರಿ]ದ ಹಿರೇಮಠದ ಪಟ್ಟಾಧಿಕಾರ ಸಮಯದಲ್ಲಿ ತೆಗೆಯ[ಲ್ಪಟ್ಟ]ದ 2 ರೂ. ಗಳು ಮ|| ರಾ|| ಎಚ್. ತಿರಕನಗೌಡರ ದ್ವಾರಾ ತಲ್ಪಿರುತ್ತವೆ.

ಕೊಟ್ಟೂರು ಟವನಿನಲ್ಲಿರುವ ಮ|| ರಾ|| ಅಲಬೂರು ಸಿದ್ಧಲಿಂಗಪ್ಪನಿಗೆ ಇದೇ ಗ್ರಾಮದ ಮ|| ರಾ|| ಜಡೆತಲೆ ಸಿದ್ಧಲಿಂಗಪ್ಪನ ಪುತ್ರಿ ಚಿ|| ಸೌ|| ಚನ್ನವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ|| ಮಿ|| ಮ|| ಜಾಗಟಗೇರಿ ಚನ್ನಬಸವಸ್ವಯ್ಯನವರ ದ್ವಾರಾ ತಲ್ಪಿರುತ್ತವೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಕಡೂರು ತಾಲ್ಲೂಕು ಪುರ (ಯಗಟಿ) ದಲ್ಲಿ ತಾ|| 20-5-1931 ರಲ್ಲಿ ನಡೆದ ಆರ್ಥಿಕ ಸಮಾಜ ಸುಧಾರಣೆ ಮೀಟಿಂಗ್

ಈ ದಿವಸ ಸಭೆಯು ಶ್ರೀಗುರು ಆರ್. ಸಿ. ಆರಾಧ್ಯಸ್ವಾಮಿ ಮತ್ತು ಮ|| ರಾ|| ಎಸ್. ಎಂ. ಶಿವಲಿಂಗಪ್ಪಯ್ಯ ವಗೈರೆಯವರುಗಳಿಂದ ಏರ್ಪಡಿಸಲ್ಪಟ್ಟು ಮಧ್ಯಾಹ್ನ 3 ಘಂಟೆಗೆ ಪ್ರಾರಂಭವಾಯಿತು. ದೇವತಾಪ್ರಾರ್ಥನೆಯಾದನಂತರ ಶ್ರೀಗುರು ಆರಾಧ್ಯಸ್ವಾಮಿಗಳವರು ಈ ಮೀಟಿಂಗನ್ನು ನಡೆಯಿಸಲು ಹಿಂದೆ ಮೂರು ಸಾರಿ ವಿಘ್ನಗಳು ಬಂದು ನಿಂತುಹೋಗಿದ್ದು ಈ ದಿವಸ ಸಭೆಯು ನಡೆದಿದ್ದು ಶುಭಸೂಚನೆಯಾಗಿದೆ. ಸಭೆಗೆ 400—500 ಜನಗಳವರೆಗೆ ಸೇರಿದ್ದರು. ನಮ್ಮ ಕೋರಿಕೆಯಂತೆ ಚಿಕ್ಕಮಗಳೂರು ರಾಫಿಪ್ಲಾಂಟರು ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರರು ಆದ ಶ್ರೀಯುತ ಬಾಗುಮನೆ ದೇವೇಗೌಡರು ಈ ಊರಿಗೆ ರಸ್ತೆ ವಗೈರೆ ಸೌಕರ್ಯಗಳಿಲ್ಲದಿದ್ದರೂ, ತಮ್ಮ ದೇಹಶ್ರಮವನ್ನು ಲಕ್ಷಿಸದೆ ಕೇವಲ ಗ್ರಾಮಾಂತರಗಳ ಅಭ್ಯುದಯ ದೃಷ್ಟಿಯಿಂದ ದಯಮಾಡಿಸಿದ್ದುದು ನಮ್ಮೆಲ್ಲರಿಗೂ ಸಂತೋಷವನ್ನುಂಟುಮಾಡಿರುತ್ತದೆ. ಈ ಪ್ರಾಂತಕ್ಕೆ ಇದೇ ಮೊದಲನೇ ಮೀಟಿಂಗ್ ಆಗಿರುವುದರಿಂದಲೂ, ಮತ್ತು ಕಾರ್ಯಕ್ರಮವನ್ನು ನಡೆಯಿಸಲು ತಿಳುವಳಿಕೆಯುಳ್ಳವರು ಬೇಕಾಗಿರುವುದರಿಂದಲೂ, ಶ್ರೀಯುತ ಗೌಡರವರೇ ಅಧ್ಯಕ್ಷರಾಗಬೇಕೆಂದು ಕೆಲವರು ಸೂಚಿಸಲು ಸಭಿಕರೆಲ್ಲರೂ ಆನಂದದಿಂದ ಕರತಾಡನ ಮೂಲಕ ತಮ್ಮ ಅನುಮತಿಯನ್ನಿತ್ತರು.

ಅನಂತರ ಅಧ್ಯಕ್ಷರು ಪೀಠವನ್ನಲಂಕರಿಸಿ ಸಮಾರಂಭ ಭಾಷಣವನ್ನು ಮಾಡಿ "ಸಭೆಗಳ ಆವಶ್ಯಕತೆ" ಎಂಬ ವಿಚಾರದ ಮೇಲೆ ಭಾಷಣಮಾಡಿದರು. ಅನಂತರ ವಿದ್ಯಾಭ್ಯಾಸದ ವಿಚಾರದಲ್ಲಿ ಮ|| ರಾ|| ಹಿರಣ್ಯಪ್ಪನವರೂ, ಮುಂದುಗಾರಿಕೆ ವಿಚಾರದಲ್ಲಿ ಮ|| ಸಿ.ಬಿ. ಮರುಳಪ್ಪನವರೂ, ಸಭೆಗಳ ಆವಶ್ಯಕತೆ ವಿಚಾರದಲ್ಲಿ ಮ|| ಪಿ. ಆರ್. ರುದ್ರಾರಾಧ್ಯರವರೂ ಉಪನ್ಯಾಸಗಳನ್ನು ಮಾಡಿದರು. ಅನಂತರ ಶ್ರೀ ಆರಾಧ್ಯಸ್ವಾಮಿಯವರು (1) ರೈತರು ಈಗ ಎರಡು ವರ್ಷಗಳಿಂದ ಧಾರಣೆವಾಸಿಗಳು ಬಿದ್ದುಹೋಗಿ ಬಹಳ ಕಷ್ಟಪಡುವುದರಿಂದಲೂ, ಈ ಸಾಲಿನ ಕಂದಾಯದಲ್ಲಿ ಶೇಕಡ 30 ರಷ್ಟು ಕಂದಾಯ ಕಮ್ಮಿಮಾಡಿ ನಿರ್ಬಂಧ ತಗಾದೆಯನ್ನು ತಪ್ಪಿಸಿ ಮುಂದೆ ಜಮೀನ್ ಸಾಗುವಳಿ ಬಗ್ಗೆ ತಕಾವಿ ಲ್ಯಾಂಡ್ ಇಂಪ್ರೂಮೆಂಟ್ ಸಾಲಗಳನ್ನು ಧಾರಾಳವಾಗಿ ಕೊಡಿಸಿಕೊಡಬೇಕೆಂದೂ, ಮ|| ರಾ|| ಬಿ. ಮಲ್ಲೇಸಿಂಗಪ್ಪನವರು (2) ಲಗ್ನಕಾಲದಲ್ಲಿ ಖರ್ಚು ಕಮ್ಮಿಮಾಡಬೇಕೆಂದೂ, ಶ್ರೀ ಆರಾಧ್ಯಸ್ವಾಮಿಗಳು (3) ಕೋರ್ಟು ಕಛೇರಿ ವ್ಯಾಜ್ಯಗಳನ್ನು ಬಿಟ್ಟು ತಕರಾರುಗಳನ್ನು ಪಂಚಾಯಿತಿಗಳಲ್ಲಿ ತೀರ್ಮಾನ ಪಡೆಯಬೇಕೆಂದೂ, ಮ|| ಉಬ್ರಾಣಿಮಠದ ಎಸ್. ಎಂ. ಶಿವಲಿಂಗಪ್ಪಯ್ಯನವರು (4) ಸರ್ಕಾರದವರು ಕೆಳದರ್ಜೆಯ ನೌಕರರಿಗೆ ತೊಂದರೆ ಮಾಡದೆ 100 ರೂ. ಸಂಬಳಕ್ಕೆ ಮೇಲ್ಪಟ್ಟ ಅಧಿಕಾರಿಗಳ ವೇತನದಲ್ಲಿ ಶೇಕಡ 30 ರಷ್ಟು ಕಡಿಮೆಮಾಡಿಕೊಳ್ಳಬೇಕಾಗಿಯೂ ಮತ್ತು (5) ಜವಾಬ್ದಾರಿ ಸರ್ಕಾರಕ್ಕೆ ಬೇಕಾಗುವ ಹೆಚ್ಚಿನ ರಾಜಕೀಯ ಸುಧಾರಣೆಗಳನ್ನು ದಯಪಾಲಿಸುವಂತೆ ಸರ್ಕಾರದವರನ್ನು ಕೇಳಿಕೊಳ್ಳಬೇಕಾಗಿಯೂ, ಶ್ರೀ ಆರಾಧ್ಯಸ್ವಾಮಿಯವರು (6) ಮದೇರಹಳ್ಳಿ, ಹಿರಿಯೂರು, ಹಿರೆಗರ್ಜೆ, ಯತ್ತಗಕೆರೆ, ಮಾದಾಪುರ, ಶಿವನ್ನಾಪುರ ದೊಡ್ಡಮೈಲೇನಹಳ್ಳಿ, ಸೀತಾಪುರದಹಟ್ಟಿ ಈ ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಕರ್ಯವು ಇಲ್ಲದೇ ಇರುವುದನ್ನು ಡೆ|| ಕ|| ಸಾಹೇಬರವರಾಗಲಿ, ಅಥವಾ ಡಿ|| ಬೋ|| ಪ್ರೆಸಿಡೆಂಟರಾಗಲಿ ಈ ಹಳ್ಳಿಗಳವರಿಗೂ ಇಲ್ಲಿಗೆ ಬಂದು ವಿಚಾರಮಾಡದೆ ಇರುವುದರಿಂದ ಈಗಲಾದರೂ ಸರಾಂಬರಿಸಿ ಈ ತೊಂದರೆಯನ್ನು ನಿವಾರಿಸಿಕೊಡಬೇಕೆಂದೂ ಮ|| ಮಲ್ಲೇಸಿಂಗಪ್ಪನವರು (7) ಶುಕ್ಲ ಸಮುದ್ರದಕೆರೆಯಹಿಂದೆ ಸರೀ ಪೈರಾಗದೆ ಇರೋಣದರಿಂದ ಸದರಿ ಜಮೀನುಗಳಿಗೆ ಕುಷ್ಕಿ ಕಂದಾಯ ದಾಖಲ್ಮಾಡಿಸಿಕೊಡಬೇಕೆಂದೂ ಮ|| ವೀರೇಗೌಡರವರು (8) ಮದೇರಹಳ್ಳಿ, ಅಲದಹಳ್ಳಿ, ಬಸವನಹಳ್ಳಿ ಈ ಗ್ರಾಮಗಳಿಗೆ ಒಂದು ಸ್ಕೂಲನ್ನು ಕೊಡಿಸಿಕೊಡಬೇಕೆಂದೂ ಮ|| ಪಟೇಲ್ ನಾಗಪ್ಪನವರು (9) ಯಗಟಿಗೆ ಒಂದು ಆಸ್ಪತ್ರೆಯನ್ನು ಕೊಡಿಸಬೇಕೆಂದೂ ಮ|| ಮುತ್ತುಜಾನಸಾಹೇಬರು (10) ಈ ಮೀಟಿಂಗಿನ ನಡವಳಿಕೆಗಳನ್ನು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೂ ಪತ್ರಿಕೆಗಳಿಗೂ ಕಳುಹಿಸಿಕೊಡಬೇಕೆಂದು ನಿರ್ಣಯಗಳನ್ನು ತಂದ ಪ್ರಕಾರ ಎಲ್ಲವೂ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಅನಂತರ ಅಧ್ಯಕ್ಷರು ಈ ಸಭೆಯನ್ನೇರ್ಪಡಿಸಿದ ಮುಖ್ಯಸ್ಥರುಗಳಿಗೂ ಮತ್ತು ಆಯಾಸಪಟ್ಟು ಬಹಳ ದೂರದಿಂದ ಬಂದು ಸಮಾಧಾನದಿಂದ ಕುಳಿತುಕೊಂಡು ಈ ಸಭೆಯ ಕಾರ್ಯವನ್ನು ನಿರ್ವಿಘ್ನವಾಗಿ ನಡೆಯಿಸಿದ ಸಭಿಕರಿಗೂ ವಂದನೆಗಳನ್ನು ಸಮರ್ಪಿಸಿ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದ ಬಳಿಕ ಸಭೆಯು ಮುಕ್ತಾಯವಾಡಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ತೆಲಿಗಿ ಹಿರೇಮಠದ ಪಟ್ಟಾಧಿಕಾರದ ಸಮಾರಂಭ

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾಲೂಕು ತೆಲಿಗಿ ಗ್ರಾಮದ ಕಲ್ಲುಮಠದ ಪಟ್ಟದ ಸೋಮಶೇಖರ ಶಿವಾಚಾರ್ಯಮಹಾಸ್ವಾಮಿಗಳವರು ಮರ್ಯೋವೃದ್ಧರಾಗಿದ್ದುದರಿಂದ ತಮ್ಮ ಗ್ರಾಮದ ಸಮಸ್ತ ದೈವದವರನ್ನೂ ಮ|| ರಾ|| ಶ್ಯಾನುಭೋಗ್ ನರಸಿಂಗರಾಯರನ್ನೂ ಕರೆಯಿಸಿಕೊಂಡು ತಮ್ಮ ಜ್ಞಾತಿಗಳಾದ ಮಹಾಂತಪ್ಪನವರ ಮಕ್ಕಳು ಕೊಟ್ರಪ್ಪಯ್ಯನವರ ಗರ್ಭಸಂಜಾತರಾದ ವೀರಪ್ಪಯ್ಯನವರೆಂಬ ಮರಿಗೆ ತಮ್ಮ ಉತ್ತರಾಧಿಕಾರವನ್ನು ವಹಿಸಬೇಕೆಂದು ಅಪ್ಪಣೆಕೊಡಿಸಿದ್ದಕ್ಕೆ ಸರ್ವರೂ ಒಪ್ಪಿದರು. ಅನಂತರ ತಮ್ಮ ಮಠಕ್ಕೆ ಮುಖ್ಯ ಶಿಷ್ಯರಾದ ಮತ್ತು ಪ್ರೀತಿಪಾತ್ರರಾದ ದಾವಣಗೆರೆ ಶ್ರೀಮಂತ ಸೀಬಗುಂದದ ಮುರಿಗೆಪ್ಪನವರ ಮಕ್ಕಳು ಮ|| ರಾ|| ಸಿದ್ಧರಾಮಪ್ಪನವರನ್ನು ಕರೆಯಿಸಿಕೊಂಡು ನಾಳೆ ಭಾನುವಾರ ರಾತ್ರಿ 9 ಗಂಟೆಗೆ ಶಿವನ ಪ್ಪಣೆಯಂತೆ ನಾವು ಶಿವಲೋಕಕ್ಕೆ ದಯಮಾಡಿಸುತ್ತೇವೆ. ನಮ್ಮ ಉತ್ತರಾಧಿಕಾರದ ಭಾರವನ್ನು ನಿಮಗೆ ವಹಿಸಿರುತ್ತೇವೆ. ಎಂಬುದಾಗಿ ಅಪ್ಪಣೆಕೊಡಿಸಿದೊಡನೆ ಸದರಿಯವರು ಅತ್ಯಂತ ಉತ್ಸಾಹಶಾಲಿಗಳಾಗಿ ಸ್ವಾಮಿಗಳ ಅಪ್ಪಣೆಪ್ರಕಾರ ಸಕಲ ಸಂಭಾರಗಳನ್ನು ಮರುದಿನವೇ ದಾವಣಗೆರೆಯಿಂದ ತರಿಸಿದ್ದರು. ಸ್ವಾಮಿಗಳು ಅಪ್ಪಣೆಕೊಡಿಸಿದಂತೆ ಮರುದಿವಸ ಅಂದರೆ ತಾ|| 24-5-21 ಆದಿತ್ಯವಾರ ರಾತ್ರಿ ಒಂಬತ್ತು ಗಂಟೆಗೆ ಶ್ರೀ ಗುರುಧ್ಯಾನಪೂರ್ವಕ ಸರ್ವರಿಗೂ ಸದ್ಬೋಧವನ್ನು ಮಾಡುತ್ತ ಆಶೀರ್ವದಿಸಿ ಕಳೇಬರವನ್ನು ಬಿಟ್ಟರು. ಸ್ವಮತ ಪರಮತ ಜನಗಳು ಪರಮಾಶ್ಚರ್ಯಭರಿತರಾಗಿ ಅಡಿಗಡಿಗೂ ಕೊಂಡಾಡಲು ಉಮ್ಮತ್ತರಾದರು. ಅನಂತರ ಸಿದ್ರಾಮಣ್ಣನವರು ತಮ್ಮ ಗುರುಗಳ ಅಂತ್ಯೇಷ್ಟಿ ಕಾರ್ಯವನ್ನು ತಾ|| 25-5-31 ನೇ ಸೋಮವಾರ ಸಾಯಂಕಾಲ 5 ಗಂಟೆಗೆ ಬಹು ವೈಭವದಿಂದ ನೆರವೇರಿಸಿದರು. ಮರುದಿನ ಹರಪನಹಳ್ಳಿ ಗುರುಪಾದದೇವರಮಠದ ಶ್ರೀ ಷಟ್‌ಸ್ಥಲಬ್ರಹ್ಮಿ ಪಟ್ಟದ ಗುರುಪಾದಸ್ವಾಮಿಗಳವರಿಂದ ಸದರಿ ಕಲ್ಲುಮಠದ ಕೊಟ್ರಪ್ಪನವರ ಮಕ್ಕಳು ವೀರಪ್ಪಯ್ಯನವರೆಂಬ ಮರಿಗೆ ಗುರುಪಟ್ಟಾಧಿಕಾರವಂ ಕೊಡಿಸಿ ಸೋಮಶೇಖರ ಶಿವಾಚಾರ್ಯರೆಂಬ ಅಭಿದಾನವು ಮಾಡಲ್ಪಟ್ಟಿತು. ತಾ|| 28-5-31 ನೇ ಗುರುವಾರ ಸದರಿ ಸಿದ್ರಾಮಣ್ಣನವರ ತಾಯಿ ಗುರುಭಕ್ತಿಶೀಲರಾದ ವೀರಮ್ಮನವರ ಅಪೇಕ್ಷಾಪ್ರಕಾರ ಮಹಾಪಾದಪೂಜೆಯು ನಡೆದು 3-4 ಸಾವಿರ ಭಕ್ತಮಹೇಶ್ವರರಿಗೆ ತೃಪ್ತಿಪಡಿಸಿದ್ದಲ್ಲದೆ ಸಾಯಂಕಾಲ 6 ಗಂಟೆಗೆ ನೂತನಸ್ವಾಮಿಗಳವರ ಮೆರವಣಿಗೆಯು ನಡೆಯಿತು. ತಾ|| 29-5-31 ನೇ ಶುಕ್ರವಾರ ರಾತ್ರಿ ಬೂದಿಹಾಳ ಮಠದ ಚನ್ನಪ್ಪಶಾಸ್ತ್ರಿಗಳ ಪುರಾಣವು ನಡೆದ ತರುವಾಯ ಅದೇ ಗ್ರಾಮದ ಹಾಲಪ್ಪದೇವರಮಠದ ವೇ|| ಮಹಲಿಂಗಶಾಸ್ತ್ರಿಗಳವರ ಸಮಯೋಚಿತವಾದ ಉಪನ್ಯಾಸವಾದ ಬಳಿಕ ಹರಪನಹಳ್ಳಿ ಗುರುಪಾದದೇವರಮಠದ ಪಟ್ಟದಸ್ವಾಮಿಗಳವರು ಲಿಂಗಧಾರಣ ವಿಷಯದಮೇಲೂ ನೂತನ ಪಟ್ಟದಸ್ವಾಮಿಗಳ ಪುರೋಭಿವೃದ್ಧಿ ವಿಷಯದ ಮೇಲೂ ಉಪನ್ಯಾಸವನ್ನು ಮಾಡಿದರು. ಈ ಮಹಾಕಾರ್ಯಕ್ಕೆ ದಾವಣಗೆರೆಯಿಂದ ಶ್ರೀಮಂತ ಮಾಗಾನಹಳ್ಳಿ ಗುರುಬಸಪ್ಪನವರು ಮತ್ತೀಹಳ್ಳಿ ಚನ್ನಬಸಪ್ಪನವರು ರಾಘವಾಂಕಪ್ಪನವರ ಮಠದ ಚನ್ನಬಸಪ್ಪಯ್ಯನವರು ಗಡದಯ್ಯನವರ ಮಠದ ಕೊಟ್ರಪ್ಪಯ್ಯನವರು, ಮಾಗೋಡು ಇಟಿಗಿ ಸಮಸ್ತ ಶಿಷ್ಯಮಂಡಳಿಯೂ ಧಾರ್ವಾಡ ಜಿಲ್ಲಾ ಹಾದರಗೇರಿ ಆರಾಧ್ಯಮಠದ ಗುದ್ದಿನಪ್ಪಯ್ಯನವರು ಇವರೇ ಮೊದಲಾದ ಅಜುಬಾಜು ಗ್ರಾಮದ ಪುರಪ್ರಮುಖ ಜನಗಳು ಸಾಧಾರಣ ನಾಲ್ಕುನೂರು ಐದುನೂರುವರಿವಿಗೂ ಬಂದಿದ್ದರು. ಹೊಸಪ್ಯಾಟಿ ತಾಲ್ಲೂಕು ಕಡವೀ ಬಸಾಪುರದ ಹವಾಲ್‌ದಾರ್ ಪಟೇಲ ರಾಜಪ್ಪಗೌಡ್ರ ಮಮ್ಮಕ್ಕಳು ತಿರುಕಪ್ಪಗೌಡ್ರ, ತೆಲಿಗಿ ಶ್ಯಾನುಭೋಗ ನರಸಿಂಗರಾಯರು ತೆಲಿಗಿ ಗ್ರಾಮದಶೆಟ್ರು, ಯಜಮಾನರು, ಗೌಡ್ರು, ಶ್ಯಾನುಭೋಗರು ಬಣಕಾರರು ಮೊದಲಾದವರೆಲ್ಲರೂ ೬-೭ ದಿನಗಳವರೆಗೂ ತಮ್ಮ ತಮ್ಮ ಗೃಹಕೃತ್ಯಗಳನ್ನು ಬಿಟ್ಟು ಈ ಕಾರ್ಯನಿರ್ವಾಹದಲ್ಲಿಯೇ ಆಸಕ್ತರಾಗಿದ್ದುದು ಶ್ಲಾಘನೀಯವಾಗಿದೆ. ಶ್ರೀಮಂತ ಸಿದ್ಧರಾಮಣ್ಣನವರು ತಮ್ಮ ತಾಯಿ ವೀರಮ್ಮನವರ ಇರಾದೆಯಂತೆ ತಮ್ಮ ತಂದೆಯವರಾದ ಮುರಿಗೆಪ್ಪನವರ ಜ್ಞಾಪಕಾರ್ಥವಾಗಿ ಪಟ್ಟದ ಉತ್ತರಾಧಿಕಾರ ಮಾಡುವ ಭಾರವನ್ನು ವಹಿಸಿದ್ದಲ್ಲದೆ ಆಗಮಿಸಿದ್ದ ಪಟ್ಟ ಚರಂತಸ್ವಾಮಿಗಳವರಿಗೂ ಪಂಡಿತ ಮಂಡಳಿಗೂ ಯಥೋಚಿತ ಸಂಭಾವನೆಯನ್ನು ಸಮರ್ಪಿಸಿ ಪರಸ್ಥಳಗಳಿಂದ ಬಂದ ಮಾಹೇಶ್ವರಮಂಡಳಿಗೆ ದಕ್ಷಿಣೆಯನ್ನು ಕೊಟ್ಟು ಸಮಸ್ತ ಸಭಿಕರಿಗೆ ಫಲಪುಷ್ಪ ತಾಂಬೂಲಾದಿಗಳನ್ನು ಸಮರ್ಪಿಸಿ ಉಭಯ ಮಹಸ್ವಾಮಿಗಳವರ ಆಶೀರ್ವಾದವಂ ಪಡೆದರು.

ಶೆಟ್ರ ಬಸೆಟ್ಟೆಪ್ಪ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಸೌ|| ತ್ರಿವೇಣೀಬಾಯಿಯವರ ನಿಧನ.

ಬಾರ್ಶಿ ವೀರಪ್ರಭಾ ವರ್ತಮಾನಪತ್ರಿಕೆಯ ಸಂಪಾದಕಿಯರಾದ ಇಸಾಪುರೆ ತ್ರಿವೇಣಿಬಾಯಿಯವರು ತಾ. ೨೭-೫-೧೯೩೧ ನೆಯ ಬುಧವಾರ ರಾತ್ರಿ ೧೦||| ಘಂಟೆಗೆ ಥಾಯಬ್ರಾಯಿಡ್ ಟುವಾಲ್ ಎಂಬ ರೋಗದಿಂದ ವಿಧಿವಶರಾದರೆಂದು ತಿಳುಹಿಸಲು ಖೇದಪಡುತ್ತದೆ. ಶಕೆ ೧೮೩೩ ನೆಯ ವೈಶಾಖ ಶುದ್ಧ ಏಕಾದಶಿಯ ದಿವಸ ಶಿಸಟೂರಿನಲ್ಲಿ ಇವರು ಜನ್ಮವೆತ್ತಿದರು. ಹನ್ನೆರಡು ವರ್ಷದವರೆಗೂ ಕರ್ನಾಟಕದೇಶದಲ್ಲಿದ್ದು ಉಚ್ಚಶಿಕ್ಷಣವನ್ನು ಸಂಪಾದಿಸಿದರು. ಸೋಲಾಪುರ ಜಿಲ್ಲಾ ತಾ|| ಬಾರ್ಶಿಯಲ್ಲಿ ಇವರಿಗೆ ಶರೀರಸಂಬಂಧವಾಯಿತು. ಇವರು ಮಹಾರಾಷ್ಟ್ರವಿದ್ಯೆಯಲ್ಲಿಯೂ ಪ್ರಾವೀಣ್ಯವನ್ನು ಹೊಂದಿದ್ದರು. ಇತ್ತೀಚೆಗೆ ಅಂದರೆ, ೭-೮ ವರ್ಷಗಳಿಂದ ವೀರಶೈವಸಮಾಜೋನ್ನತಿಗಾಗಿ ಬಹು ಪರಿಶ್ರಮವನ್ನು ವಹಿಸಿ ಅನೇಕಕಾರ್ಯಗಳನ್ನು ನೆರವೇರಿಸಿದರು. ೧೯೨೮ ನೆಯ ಇಸವಿಯಲ್ಲಿ ಬೆಂಗಳೂರಲ್ಲಿ ನಡೆದ ಅಖಿಲಭಾರತ ವೀರಶೈವ ಮಹಾಸಭೆಯಲ್ಲಿ ಇವರು ಅಸ್ಖಲಿತವಾಗಿ ಜನಾನಂದಕರವಾಗುವಂತೆ ಭಾಷಣಮಾಡಿದರು. ಕಳೆದವರ್ಷ ಪರಳಿ ಮಹಾರುದ್ರಾಭಿಷೇಕ ಸಮಾರಂಭಸಮಯದಲ್ಲಿ ದಯಮಾಡಿಸಿದ ೧೦೮ ಜಗದ್ಗುರು ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳು ಇವರ ಭಾಷಣವನ್ನು ಪರಾಮರ್ಶಿಸಿ ವೀರಶೈವ ಮಹಾಬ್ಧಿಚಂದ್ರಿಕಾ ಎಂಬ ಬಹುಮಾನದ ಸುವರ್ಣಪದಕವನ್ನು ಆಶೀರ್ವದಿಸಿದರು. ಇದೇ ಪ್ರಕಾರ ಸೋಲಾಪುರ, ಬಾರ್ಶಿ, ಲಾತೂರ, ಕಲಬುರ್ಗಿ, ಪರಳಿ, ಹೊಟಗಿ ಮೊದಲಾದ ಪಟ್ಟಣಗಳಲ್ಲಿಯೂ ಇನ್ನು ಅನೇಕ ಗ್ರಾಮಗಳಲ್ಲಿಯೂ ಪುರಾಣ, ಕೀರ್ತನ, ಪ್ರವಚನ, ವ್ಯಾಖ್ಯಾನಗಳ ದ್ವಾರಾ ಸಮಾಜಸೇವೆಯನ್ನು ಮನಮುಟ್ಟಿಮಾಡಿದ್ದು ಸರ್ವವಿದಿತವಾದದ್ದೇ ಇರುತ್ತದೆ. ಇವರಿಗೆ ಲೇಖನಕಲೆಯು ಎಷ್ಟರಮಟ್ಟಿಗಿತ್ತೆಂಬುದನ್ನು ಒಂದೂವರೆ ವರುಷದಿಂದ ಬಾರ್ಶಿಯಲ್ಲಿ ಹೊರಡುತ್ತಿರುವ ವೀರಪ್ರಭಾ ವೃತ್ತಪತ್ರದಿಂದ ತಿಳಿದಿರಬಹುದು. ಬಾರ್ಶಿಯ ಸ್ಕೂಲಬೋರ್ಡಿನಲ್ಲಿ 6 ವರ್ಷಗಳವರಿವಿಗೂ ಕೌನ್ಸಿಲರಾಗಿದ್ದರು. ಹೀಗೆ ಇವರು ವೀರಶೈವಸಮಾಜದಲ್ಲಿ ಮಾಡಿರುವ ಮಹತ್ಕಾರ್ಯಗಳು ಸ್ತುತ್ಯವಾಗಿರುವುವಲ್ಲದೆ ಸಮಾಜಬಂಧು ಭಗಿನಿಯರಿಗೆ ಮೇಲ್ಪಂಕ್ತಿಯಾಗಿದ್ದರು. ಇಂಥವರು ಅಕಾಲದಲ್ಲಿ ಶರೀರವನ್ನು ತ್ಯಜಿಸಿದುದರಿಂದ ಇವರ ಮನೆತನದವರಿಗಾದ ವ್ಯಸನವಂತು ಹೇಳತೀರದು. ಸಮಾಜದವರು ಸಹ ಅವರ ದುಃಖಕ್ಕೆ ಸಮಭಾಗಿಗಳಾಗಿರುತ್ತಾರೆ. ಜಗನ್ನಿಯಾಮಕನಾದ ಪರಮೇಶ್ವರನು ತ್ರಿವೇಣಿಬಾಯಿಯವರ ಆತ್ಮಕ್ಕೆ ಸುಖಶಾಂತಿಯನ್ನೀಯಲೆಂದು ಅಪೇಕ್ಷಿಸುವ.

ಸಮಾಜಬಂಧು.

ಮೈಸೂರು ಮ್ಯುನಿಸಿಪಾಲಿಟಿಯವರು ಅರ್ಪಿಸಿದ ಮಾನಪತ್ರಕ್ಕೆ ಪಂಡಿತ ಜವಾಹಿರಲಾಲ್ ನೆಹರೂರವರ ಉತ್ತರ.

ಮ್ಯುನಿಸಿಪಾಲಿಟಿಯು ಅನುಸರಿಸಬೇಕಾದ ಉಚ್ಚಧ್ಯೇಯ.

ಈ ತಿಂಗಳು 1 ನೆಯ ತಾರೀಖಿನ ದಿವಸ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯವರು ಶ್ರೀಗಂಧದಿಂದ ತಯಾರಿಸಲ್ಪಟ್ಟ ಒಂದು ಸಣ್ಣ ಪೆಟ್ಟಿಗೆಯಲ್ಲಿ ಪಂಡಿತ ಜವಾಹಿರಲಾಲನೆಹರೂರವರಿಗೆ ಮಾನಪತ್ರವನ್ನರ್ಪಿಸಿದರು. ಅದರಲ್ಲಿ ಅವರ ಉಜ್ವಲದೇಶಾಭಿಮಾನವೂ, ಅಸಾಧಾರಣ ಸ್ವಾರ್ಥತ್ಯಾಗವೂ, ದಯಾದಾಕ್ಷಿಣ್ಯಾದಿ ಸದ್ಗುಣಗಳೂ ವರ್ಣಿಸಲ್ಪಟ್ಟಿದ್ದುವು. ಆಗ ಪಂಡಿತಂತ್ರ ಉತ್ತರವೇನೆಂದರೆ— ಅಧ್ಯಕ್ಷರೇ ಮತ್ತು ಸದಸ್ಯರೇ!

ನೀವು ಅರ್ಪಿಸಿದ ಮಾನಪತ್ರ ಮತ್ತು ಈ ಮನೋಹರವಾದ ಶ್ರೀಗಂಧದ ಪೆಟ್ಟಿಗೆಯೂ ನನಗೆ ಬಹು ಸಂತೋಷವನ್ನುಂಟುಮಾಡಿವೆ. ಇದಕ್ಕಾಗಿ ನಿಮಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಮೈಸೂರಿಗೆ ಬರುವುದಕ್ಕಾಗಿ ನಾನು ಸ್ವಲ್ಪ ತೊಂದರೆಯನ್ನನುಭವಿಸಿದೆನೆಂದೂ, ನನ್ನಲ್ಲಿ ಅಸಂಖ್ಯ ಸದ್ಗುಣಗಳಿರುವುವೆಂದೂ ನೀವು ವರ್ಣಿಸಿದ್ದೀರಿ. ಮೈಸೂರಿಗೆ ಬರುವುದರಿಂದ ನನಗೆ ಏನೂ ನಷ್ಟವಾಗಿರದೆ ಬಹುದಿವಸಗಳಿಂದ ಚಿಂತಿಸಿದ್ದ ನನ್ನ ಆಶೆಯು ಕೈಗೂಡಿತು. ಮನುಷ್ಯನು ಯಾವಾಗಲೂ ತನ್ನ ಇಷ್ಟದಂತೆ ನಡೆಯುವನೇ ಹೊರತು ಅನ್ಯರಪ್ರೇರಣೆಯಂತೆ ನಡೆಯುವುದು ವಿರಳ. ಜನಗಳು ಬೇರೆ ಬೇರೆ ರೀತಿಗಳಿಂದ ಸಂತೋಷಪಡುತ್ತಾರೆ.

ರಾಷ್ಟ್ರೀಯ ಚಳವಳಿಯಲ್ಲಿ ಭಾಗಿಗಳಾದವರು ಸ್ವಾರ್ಥತ್ಯಾಗ ಮಾಡಲಿ; ಮಾಡದಿರಲಿ. ಆ ಮಹಾಕಾರ್ಯದಲ್ಲಿ ಸೇರಿಕೈಲಾದ ಸೇವೆಮಾಡಿದ್ದಕ್ಕೋಸ್ಕರ ಸಂತೋಷಪಡುತ್ತಾರೆ. ಸಂತೋಷಕ್ಕೆ ಕಾರಣೀಭೂತವಾದ ಕೆಲಸವನ್ನು ಮಾಡಿದರೆ, ಅದನ್ನು ಸ್ವಾರ್ಥತ್ಯಾಗವೆಂದು ಹೇಳುವುದು ಮಿಥ್ಯೆಯೇ ಸರಿ. ಆತ್ಮಸಂತೋಷವಾಗುವುದಕ್ಕೋಸ್ಕರ ದೇಶಸೇವೆಯಲ್ಲಿ ತೊಡಗಿದವನು ನಾನೊಬ್ಬನೇ ಅಲ್ಲ. ಲಕ್ಷಾಂತರ ಜನರು ಉತ್ಕಟದೇಶಾಭಿಮಾನದಿಂದ ಮಾತೃಭೂಮಿಯ ಸೇವೆಮಾಡಿ ಸಂತೋಷ ಸುಖವನ್ನನುಭವಿಸಿದರು. ಅಂಥ ನನ್ನ ಬಂಧುಗಳಿಗೆ ದೇಶಸೇವೆಯ ಸುಖದ ಮುಂದೆ ಇತರ ಸುಖಗಳೆಲ್ಲ ಕ್ಷಣಭಂಗುರವೂ, ನಿರರ್ಥಕವೂ ಆದುವುಗಳಾಗಿವೆ. ಆದಕಾರಣ ನಾನು ಸ್ವಾರ್ಥತ್ಯಾಗ ಮಾಡಿರುವೆನೆಂದು ಪ್ರಶಂಸಿಸುವುದನಾವಶ್ಯಕವಾಗಿದೆ.

ಈ ಪಟ್ಟಣವನ್ನು ಸುಂದರವಾಗಿಸುವುದೂ, ಅದನ್ನು ಊರ್ಜಿತಸ್ಥಿತಿಗೆ ತರುವುದು ಮ್ಯುನಿಸಿಪಾಲಿಟಿಯ ಮೆಂಬರರಾದ ನಿಮ್ಮ ಪಾಲಿಗೆ ಬಂದಿದೆ. ಇಂಥ ನಿಮ್ಮ ಉನ್ನತಸ್ಥಿತಿಯು ನಮಗೆಲ್ಲ ಸ್ಪೃಹಣೀಯವಾಗಿದೆ ಎಂದು ಹೇಳಿಬಿಡಬಾರದೆನು. ಸಾರ್ವಜನಿಕ ಉದ್ಯಾನಗಳಿಂದಲೂ ಇತರ ಅನೇಕ ಅನುಕೂಲ್ಯಗಳಿಂದಲೂ ಈ ಪಟ್ಟಣವು ಸುಂದರವಾಗಿರುವುದಕ್ಕೆ ನಿಮ್ಮ ಪ್ರಯತ್ನಗಳೇ ಕಾರಣಗಳಾಗಿವೆ. ಹೀಗೆ ನಿಮ್ಮ ಪ್ರಯತ್ನಗಳು ಪ್ರತಿಫಲಿಸುವ ಸುಖವನ್ನನುಭವಿಸುವ ಆನಂದವು ಮಹತ್ವವಾದುದೇ ಸರಿ. ನಿಮ್ಮ ಪಟ್ಟಣವನ್ನು ನಾನು ಸಮಗ್ರವಾಗಿ ನೋಡದಿದ್ದರೂ, ನೋಡಿರುವ ಸ್ವಲ್ಪಭಾಗವೇ ತನ್ನ ಸೌಂದರ್ಯದಿಂದ ನನ್ನ ಮನಸ್ಸಿಗೆ ಬಹು ಸಂತೋಷವನ್ನುಂಟುಮಾಡಿದೆ.

ಈ ಪಟ್ಟಣದ ಉಪವನಗಳು ಬಹು ಸುಂದರಗಳಾಗಿವೆ. ಅವುಗಳನ್ನು ನೀವು ಇನ್ನೂ ಸುಂದರವಾಗಿಮಾಡಬೇಕು.

ಪಟ್ಟಣದ ನಿಜವಾದ ಸೌಂದರ್ಯದ ಬಗ್ಗೆ ಒಂದು ವಿಷಯವನ್ನು ನಿಮ್ಮ ಅವಗಾಹನೆಗೆ ತರುತ್ತೇನೆ. ಬಡವರ ಮನೆಗಳ ಸೌಂದರ್ಯದಿಂದ ಪಟ್ಟಣದ ಸೌಂದರ್ಯವನ್ನು ನಿರ್ಣಯಿಸಬೇಕೇ ಹೊರತು ಶ್ರೀಮಂತರ ಪ್ರಾಸಾದಗಳಿಂದ ನಿರ್ಣಯಿಸಬಾರದು. ಪಟ್ಟಣದ ಸೌಂದರ್ಯದಲ್ಲಿ ಇದು ಪ್ರಾಮುಖ್ಯವೂ ಪ್ರಥಮವೂ ಆದ ಕರ್ತವ್ಯವಾಗಿದೆ. ಉದ್ಯಾನಗಳು ಮತ್ತು ಶ್ರೀಮಂತರ ಮನೆಗಳ ನೈರ್ಮಲ್ಯವು ನಗರಜೀವನದ ನಿಕಷೋಪಲವಲ್ಲ. ಬಡವರ ಗುಡಿಸಲುಗಳೇ ನಗರಜೀವನದ ಒರೆಗಲ್ಲು. ಮೈಸೂರು ಪಟ್ಟಣದ ಸೌಂದರ್ಯವನ್ನು ಯೋಚಿಸಿದಾಗ ಬಡವರಿರುವ ಭಾಗಗಳು ಸುಂದರವಾಗಿಯೂ ಆರೋಗ್ಯಕರವಾಗಿಯೂ, ಚೊಕ್ಕಟವಾಗಿಯೂ ಇವೆಯೇ? ಇಲ್ಲವೇ? ಎಂಬುದನ್ನು ಮೊದಲು ಯೋಚಿಸಬೇಕು.

ಪಟ್ಟಣದ ಹಾಗೂ ದೇಶದ ಸೌಂದರ್ಯವು ಇಟ್ಟಿಗೆ, ಗಾರೆಗಳನ್ನವಲಂಬಿಸಿರದೆ ಪರಸ್ಪರ ರಕ್ತಸಂಬಂಧವನ್ನವಲಂಬಿಸಿದೆ. ಬಡವರಿಗೆ ವಾಸದ ಮನೆಗಳೂ, ಹೊಟ್ಟೆತುಂಬ ಅನ್ನವೂ, ಮೈತುಂಬ ಬಟ್ಟೆಯೂ ಇದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಆ ಬಗ್ಗೆ ತಕ್ಕ ಅನುಕೂಲ್ಯಗಳನ್ನು ಮಾಡುವುದು ಮ್ಯುನಿಸಿಪಾಲಿಟಿಯ ಪ್ರಥಮ ಕರ್ತವ್ಯವಾಗಿದೆ. ಅದರಿಂದಲೇ ಮ್ಯುನಿಸಿಪಾಲಿಟಿಯ ನಿಜವಾದಯೋಗ್ಯತೆಯು ಪರೀಕ್ಷಿಸಲ್ಪಡುವುದು. ಪ್ರತಿಯೊಂದು ದೇಶವೂ ಅನುಸರಿಸಬೇಕಾದ ಉಚ್ಚಧ್ಯೇಯವೇ ಅದು. ಅದು ರೂಢಿಯಲ್ಲಿ ಬರಬೇಕಾದರೆ ಬಹುಕಾಲ ಹಿಡಿಯಬಹುದು. ಆದರೆ ಪ್ರತಿಯೊಂದು ಮ್ಯುನಿಸಿಪಾಲಿಟಿಗೂ ಈ ಧ್ಯೇಯವಿರಲೇಬೇಕು. ಈ ಕೆಲಸಕ್ಕೆ ಹಣವಿಲ್ಲ; ಆ ಕೆಲಸಕ್ಕೆ ಹಣವಿಲ್ಲ; ಎಂದು ಹೇಳುವ ಮ್ಯುನಿಸಿಪಾಲಿಟಿಯಿಂದ ಏನೂ ಪ್ರಯೋಜನವಿಲ್ಲ. ಬಡವರ ಮಾನಸಿಕ ಮತ್ತು ಶಾರೀರಕ ಆರೋಗ್ಯವನ್ನು ಕಾಪಾಡಲು ಈ ಪಟ್ಟಣದ ಮ್ಯುನಿಸಿಪಾಲಿಟಿಯವರು ಪ್ರಯತ್ನಿಸಬೇಕು. ನೀವು ಅರ್ಪಿಸಿದ ಮಾನಪತ್ರಕ್ಕೋಸ್ಕರ ನಿಮ್ಮನ್ನು ಪುನಃ ವಂದಿಸುತ್ತೇನೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನ್ ಸಾಹೇಬರು ಅಪ್ಪಣೆ ಕೊಡಿಸಿದ ಭಾಷಣ

1931 ನೆಯ ಇಸವಿ ಜೂನ್ 1 ನೆಯ ತಾರೀಖು.

ಚಿನ್ನದ ಗಣಿಯಲ್ಲಿ ಘೋರ ಪ್ರಾಣಹಾನಿ.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ,—ಇಂದಿನ ಸಭಾಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು ನಮ್ಮೆಲ್ಲರಿಗೂ ಹೃದಯವೇಧಕವೆನಿಸಿ ಬಂದೊದಗಿದ ದಾರುಣವಾದ ವಿಷಾದವಾರ್ತೆಯೊಂದನ್ನು ಕುರಿತು ನಾನು ಪ್ರಸ್ತಾಪಿಸಬೇಕಾಗಿದೆ. ಕೋಲಾರದ ಚಿನ್ನದ ಗಣಿಗಳಲ್ಲೊಂದಾದ ನಂದೀದುರ್ಗದ ಗಣಿಯಲ್ಲಿ ಸಂಭವಿಸಿದ ಬೆಂಕಿಯ ಅನಾಹುತದಿಂದ ಅನೇಕರು ವಿಪತ್ತಿಗೊಳಗಾದುದೇ ಆ ವಿಷಾದವಾರ್ತೆ. ಇದರ ದೆಸೆಯಿಂದ ಈಗ ಮೃತಿಪಟ್ಟಿರುವಷ್ಟು ಹೆಚ್ಚು ಜನರು ಕೋಲಾರದ ಚಿನ್ನದ ಗಣಿಗಳಲ್ಲಿ ಬೆಂಕಿಯ ಅನಾಹುತದಿಂದಾಗಲಿ, ಬಂಡೆಗಳ ಸಿಡಿತದಿಂದಾಗಲಿ ಹಿಂದೆ ಯಾವಾಗಲೂ ಮೃತಪಟ್ಟಿರಲಿಲ್ಲವೆಂದು ತಿಳಿಯಬಂದಿದೆ.

ಈ ಅನಾಹುತವು ಸಂಭವಿಸಿದುದಕ್ಕೆ ಮೂಲಕಾರಣವೇನೆಂಬುದನ್ನು ತಿಳಿದುಕೊಳ್ಳಲು ಗಣಿಗಳ ಚೀಫ್ ಇನ್‌ಸ್ಪೆಕ್ಟರವರು ಅನೇಕ ತನಿಖೆಗಳನ್ನು ನಡೆಯಿಸುತ್ತಿದ್ದಾರೆ. ಸಾಮಾನ್ಯವಾಗಿ ಕೋಲಾರದ ಚಿನ್ನದ ಗಣಿಗಳಲ್ಲಿ ವಿಷಸ್ವಭಾವವುಳ್ಳ ಅನಿಲಗಳ ಉಪದ್ರವವೊದಗುವ ಅಪಾಯದ ಲವಲೇಶವೂ ಇಲ್ಲದಿದ್ದುದು ದೊಡ್ಡ ಅನುಕೂಲವಾಗಿದ್ದಿತು. ಹೀಗಿದ್ದೂ, ಭೂಮಟ್ಟದ ಕೆಳಗೆ ಆಳವಾಗಿ ಗಣಿಗಳಲ್ಲಿ ಕೆಲಸಮಾಡುತ್ತಿದ್ದವರಿಗೆ ಈಗಿನ ಅನಾಹುತದ ದೆಸೆಯಿಂದ ವಿಷಸ್ವಭಾವದ ಅನಿಲಗಳನ್ನು ಸೇವಿಸಿ ವಿಪತ್ತಿಗೆ ಗುರಿಯಾಗುವ ಉಪದ್ರವವುಂಟಾಯಿತು.

ಪ್ರೀತಿಪಾತ್ರರಾದ ಬಂಧುಗಳನ್ನೂ, ಕೆಲವು ಸಂದರ್ಭಗಳಲ್ಲಿ ಕುಟುಂಬದ ಜೀವನಕ್ಕೆ ಅವಲಂಬನವಾಗಿದ್ದು ಧನಾರ್ಜನೆ ಮಾಡುತ್ತಿದ್ದ ಗಂಡಸರನ್ನು ಕಳೆದುಕೊಂಡು ಸಂಕಟಪಡುತ್ತಿರುವವರಿಗೆ ನಮ್ಮ ಸಭೆಯ ಹೃತ್ಪೂರ್ವಕವಾದ ಅನುಕಂಪವನ್ನೂ, ಸಹಾನುಭೂತಿಯನ್ನೂ ತಿಳಿಸುವ ಕಾರ್ಯದಲ್ಲಿ ತಾವುಗಳೆಲ್ಲರೂ ನನ್ನೊಡನೆ ಭಾಗಿಗಳಾಗುವಿರೆಂದು ನಾನು ನಂಬಿರುವೆನು. ಅವರಿಗೆ ಯಾವ ರೀತಿಯಲ್ಲಿ ಸಹಾಯವಾಗಬೇಕೆಂಬ ವಿಚಾರವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಈಗಿನ ಅನಾಹುತವು ನಡೆದಾಗಲೂ, ಈಗ್ಗೆ ಸ್ವಲ್ಪ ಕಾಲಕ್ಕೆ ಹಿಂದೆ ಬಂಡೆಗಳ ಸಿಡಿತದಿಂದ ಅಪತ್ತುಗಳು ಸಂಭವಿಸಿದ್ದಾಗಲೂ ಗಣಿಯ ಕೆಲಸಗಾರರಲ್ಲಿ ಕೇವಲ ಕನಿಷ್ಠ ದರ್ಜೆಯವರೂ, ಇತರರೂ, ಕೆಲವರು ತಮ್ಮ ಜೊತೆಯ ಕೆಲಸಗಾರರನ್ನುಳಿಸಿಕೊಳ್ಳುವ ಪ್ರಯತ್ನದಲ್ಲಿ ತಮ್ಮ ಪ್ರಾಣದ ಮೇಲಿನ ಆಸೆಯನ್ನೂ ತೊರೆದು ಧೈರ್ಯದಿಂದಲೂ ಸಾಹಸದಿಂದಲೂ ತಾವಾಗಿಯೇ ಮುಂದೆ ಬಂದು ಕೆಲಸಮಾಡಿದರು. ಅದಕ್ಕಾಗಿ ಸರ್ಕಾರದವರು ತಮ್ಮ ಮೆಚ್ಚಿಕೆಯನ್ನು ತೋರ್ಪಡಿಸುವ ವಿಚಾರವನ್ನೂ ಸಹ ಪರ್ಯಾಲೋಚಿಸುತ್ತಿದ್ದಾರೆ.

ಸಭೆಯ ಕಾರ್ಯಗಳು.

ನಾವು ಈ ದಿನ ಇಲ್ಲಿ ಸಭೆ ಸೇರಿರುವುದರ ಉದ್ದೇಶಕ್ಕೆ ಇನ್ನು ಗಮನಕೊಡೋಣ. ಎಂದರೆ ಈ ತಿಂಗಳಿನ ಕೊನೆಗೆ ಪೂರೈಸುವುದಾಗಿರುವ ಸರ್ಕಾರಿ ವರುಷದಲ್ಲಿ ನಡೆದ ಆಡಳಿತದ ಫಲಿತಾಂಶಗಳನ್ನು ವಿಮರ್ಶಿಸುವುದಕ್ಕೂ, ಅದಕ್ಕಿಂತ ಹೆಚ್ಚಾಗಿ ಆ ಅವಧಿಯಲ್ಲಿ ಸಂಸ್ಥಾನದ ಆಯವ್ಯಯಗಳ ಸ್ಥಿತಿಯು ಹೇಗಿದ್ದಿತೆಂಬುದನ್ನು ಪರಿಶೀಲಿಸುವುದಕ್ಕೂ ಸಹ ಇನ್ನು ನಾವು ಗಮನಕೊಡೋಣ. ಈ ವರುಷದ ಪರಿಸ್ಥಿತಿಯು ನಮ್ಮಲ್ಲಿ ಪ್ರತಿಯೊಬ್ಬರೂ ಮುಂದಿನ ಕರ್ತವ್ಯವನ್ನು ಕುರಿತು ಬಹಳ ದೀರ್ಘವಾಗಿ ಆಲೋಚಿಸುವಂತೆ ಮಾಡಿದೆ.

ಆರ್ಥಿಕಸ್ಥಿತಿಯು ಬಹಳ ಮುಗ್ಗಟ್ಟಿಗೆ ಬಂದು ಪ್ರಪಂಚದ ಸಮಸ್ತ ದೇಶಗಳಲ್ಲಿಯೂ ಕಳವಳವನ್ನುಂಟುಮಾಡಿರುವುದು ಈಗಿನ ಭಯಾನಕವಾದ ಸ್ಥಿತಿಯಾಗಿದೆ; ಯಾವ ದೇಶವೂ ಇದರ ಬಾಧೆಯಿಂದ ತಪ್ಪಿಸಿಕೊಂಡಿಲ್ಲ.

ಸರ್ವಸಾಮಾನ್ಯವಾಗಿ ಆರ್ಥಿಕದುರ್ದಶೆಯೇ ರಾಜಕೀಯವಾದ ತೊಂದರೆಗಳ ಜನ್ಮಸ್ಥಾನವಾಗಿರುತ್ತದೆ. ಈಗ ಪ್ರಪಂಚದ ಅನೇಕಾನೇಕ ದೇಶಗಳಲ್ಲಿ ಅಶಾಂತಿಯು ತಾಂಡವವಾಡುತ್ತ ತೊಂದರೆ ಪಡಿಸುತ್ತಿರುವುದಕ್ಕೆ ಆರ್ಥಿಕದುರ್ದಶೆಯೇ ಬಹುಮಟ್ಟಿಗೆ ಮುಖ್ಯಕಾರಣವಾಗಿದೆ.

ಹಿಂದೆ ಕೂಡ ಅನೇಕವೇಳೆ ವ್ಯಾಪಾರವು ಮುಗ್ಗಟ್ಟಿಗೆ ಬಂದಿದ್ದುದುಂಟು. ಆದರೆ ಈಗಿನಷ್ಟು ವ್ಯಾಪಕವಾಗಿಯೂ, ಈಗಿನಷ್ಟು ಶೀಘ್ರವಾಗಿಯೂ, ಧಾರಣೆಗಳು ಇಳಿದುಹೋಗಿ ಒಟ್ಟು ಪ್ರಪಂಚವೇ ಆತಂಕದಿಂದ ತಲ್ಲಣಿಸುತ್ತ ತೊಂದರೆ ಪಡುವ ದಾರುಣ ಪರಿಸ್ಥಿತಿಯು ಹಿಂದೆ ಎಂದೂ ಸಂಭವಿಸಿರಲಿಲ್ಲ.

ಈ ಬಗೆಯ ಪರಿಸ್ಥಿತಿಯುಂಟಾಗುವುದಕ್ಕೆ ಕಾರಣಗಳೇನೆಂಬುದನ್ನು ನಿರ್ಧರಿಸುವ ಕೆಲಸವು ಕ್ಲೇಶದಾಯಕವಾದುದು. ಈಗಿನ ವಿಷಮಸ್ಥಿತಿಗೆ ತಕ್ಕ ಪರಿಹಾರಗಳನ್ನೆಸಗಿ ಅದನ್ನು ನಿವಾರಣೆ ಮಾಡುವುದು ಇನ್ನೂ ಕಷ್ಟ. ನಾವು ಈ ಕೆಲಸಗಳ ಗೊಡವೆಗೇ ಹೋಗದೆ, ಅರ್ಥಶಾಸ್ತ್ರಜ್ಞರೂ, ಹಣಕಾಸಿನ ಆಡಳಿತದಲ್ಲಿ ವಿಶೇಷ ಸಾಮರ್ಥ್ಯವುಳ್ಳ ಮೇಧಾವಿಗಳೂ, ತಮ್ಮಿಂದ ಸಾಧ್ಯವಾದರೆ ಇವುಗಳನ್ನು ನೆರವೇರಿಸಲೆಂದು ಬಿಟ್ಟುಬಿಡೋಣ. ಪ್ರಪಂಚವನ್ನೇ ದಿಂಡುಗೆಡಿಸುತ್ತ ಎಲ್ಲೆಲ್ಲಿಯೂ ವ್ಯಾಪಿಸಿರುವ ಮುಗ್ಗಟ್ಟಿನ ಸ್ಥಿತಿಗೆ ಪ್ರಪಂಚದಲ್ಲಿ ಚಿನ್ನವು ದೊರೆಯುವ ಪರಿಮಾಣವು ಕಡಿಮೆಯಾದುದು ಕಾರಣವೋ, ಅಥವಾ ಕೆಲವು ದೇಶದವರು ಮಿತಿಮೀರಿದ ಪ್ರಮಾಣದಲ್ಲಿ ಚಿನ್ನವನ್ನು ಶೇಖರ ಮಾಡಿಟ್ಟುಕೊಳ್ಳುತ್ತಿರುವುದರಿಂದ ಉಂಟಾಗಿರುವ ಅವ್ಯವಸ್ಥೆಯು ಕಾರಣವೋ; ಗಿರಾಕಿದೊರೆಯುವುದಕ್ಕಿಂತ ಹೆಚ್ಚಿನ ವಸ್ತು ರಚನೆಯು ಕಾರಣವೋ; ಅಥವಾ ವಸ್ತುಗಳ ಬಳಕೆಯ ಪ್ರಮಾಣವೇ ಇಳಿಮುಖವಾದುದು ಕಾರಣವೋ; ಬೆಳ್ಳಿಯ ಧಾರಣೆಯು ಕಡಿಮೆಯಾದುದು ಕಾರಣವೋ, ಯೂರೋಪಿನ ಘೋರ ಯುದ್ಧವು ಮುಗಿದಾಗಿನಿಂದ ನಾನಾ ದೇಶಗಳಲ್ಲಿ—ಅದರಲ್ಲಿಯೂ ಮುಖ್ಯವಾಗಿ ಯೂರೋಪು ಖಂಡದಲ್ಲಿ—ವಸ್ತುಗಳ ಮೇಲೆ ಹೇರಿರುವ ಬಗೆಬಗೆಯ ಭಾರಿಭಾರಿ "ಟ್ಯಾರಿಫ್" ಸುಂಕಗಳ ಅಡಚಣೆಯು ಕಾರಣವೋ; ಅಥವಾ ಇವೆಲ್ಲವೂ ಕಾರಣವೋ—ಎಂಬುದನ್ನು ನಿಷ್ಕರ್ಷೆಯಾಗಿ ನಿರ್ಧರಿಸಲು ಯಾರಿಗೂ ಸಾಧ್ಯವಿರುವಂತೆ ತೋರುವುದಿಲ್ಲ. ಹೀಗಿರುವಲ್ಲಿ ಆದರ ಕಾರಣವನ್ನು ನಿರ್ಧರಿಸುವ ಸಾಹಸಕ್ಕೆ ಕೈಹಾಕಿ ದುಡುಕಿ ವರ್ತಿಸಲು ನನಗೆ ಸರ್ವಥಾ ಇಷ್ಟವಿಲ್ಲ. ಈಗಿನ ವಿಷಮ ಪರಿಸ್ಥಿತಿಗೆ ಕಾರಣಗಳೇನೇ ಆಗಿರಲಿ, ಪ್ರಪಂಚದವರೆಲ್ಲರ ಕಷ್ಟಗಳಿಗೂ ಪರಿಹಾರವೇನೋ ನಮ್ಮ ಕೈಯ್ಯಲ್ಲಿಲ್ಲ. ಈಗಿನ ಸಮಯದಲ್ಲಿ ನಾವು ಇಲ್ಲಿ ಪರಿಗಣಿಸಬೇಕಾಗಿರುವುದು ಆದರ ಫಲಿತಾಂಶವಾಗಿ ನಮ್ಮ ಸಂಸ್ಥಾನಕ್ಕೆ ಒದಗಿರುವ ಸಂಗತಿಗಳನ್ನು ಮಾತ್ರವೇ. ಪ್ರಪಂಚವನ್ನೇ ದಿಂಡುಗೆಡಿಸುವ ಆರ್ಥಿಕ ಚಂಡಮಾರುತವೇನೋ ಭೀಕರವಾಗಿ ಬೀಸುತ್ತಿದೆ; ಆದರೆ, ಅದರ ಹಾವಳಿಯೂ, ದುಷ್ಪರಿಣಾಮವೂ, ಆದಷ್ಟು ಕಡಿಮೆಯಾಗಿರುವಂತೆ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಬೇಕಾದುದೇ ಈಗ ನಮ್ಮ ಕರ್ತವ್ಯವಾಗಿದೆ.

ಹೆಚ್ಚಿನ ಹವ್ಯಾಸಗಳನ್ನು ತಗ್ಗಿಸಿ ಕಡಿಮೆಮಾಡಿಕೊಂಡು ವರ್ತಿಸುವುದೇ ಈಗಿನ ವಿಷಮ ಪರಿಸ್ಥಿತಿಯಿಂದ ಪಾರಾಗುವ ಮಾರ್ಗವೆಂಬುದಾಗಿ ಈಚೆಗೆ ಎಲ್ಲೆಲ್ಲಿಯೂ ವಾರ್ತೆಯು ಕೇಳಬರುತ್ತಿದೆ. ಮಾನಸಿಕ ಪರಿಸ್ಥಿತಿಯಲ್ಲಿ ಕೂಡ ಅತಿ ಹೆಚ್ಚಿನ ಹವ್ಯಾಸಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳುವುದೇ ನಾವು ಈಗ ಅನುಸರಿಸಬೇಕಾದ ಮಾರ್ಗವಾಗಿದೆ? ಹೆಚ್ಚಿನ ಉಚ್ಛ್ರಾಯಸ್ಥಿತಿಯಲ್ಲಿದ್ದ ಸಮಯಗಳಲ್ಲಿ ದೊರೆಯುತ್ತಿದ್ದ ಹುಟ್ಟುವಳಿಗಳಿಗನುಸಾರವಾಗಿ ನಾವು ಕಲ್ಪಿಸಿದ ವೆಚ್ಚದ ಪ್ರಮಾಣಗಳನ್ನು ತಗ್ಗಿಸುವುದೇ ನಾವು ಅವಲಂಬಿಸಬೇಕಾದ ಉಪಾಯವಾಗಿದೆ. ಸಂಸ್ಥಾನದ ಹಣವನ್ನು ವೆಚ್ಚಮಾಡುವುದರಲ್ಲಿ ಈಗಿನ ಸ್ಥಿತಿಗೆ ಸರಿಹೊಂದಿಕೆಯಿಂದ ಪುನರ್ವ್ಯವಸ್ಥೆ ಮಾಡಿಕೊಂಡು ವರ್ತಿಸಬೇಕಾದುದು ಅವಶ್ಯಕ. ಆದಕಾರಣ ಸರ್ಕಾರದ ಆಡಳಿತ ವಿಚಾರಗಳಲ್ಲಿ ಈಗಿನ ಪರಿಸ್ಥಿತಿಗೆ ಅನ್ವಯವಾಗಿ ತೋರುವ ಪ್ರಮಾಣದಲ್ಲಿ ನಮ್ಮ ಭಾವನೆಗಳನ್ನು ಕೂಡ ಬಳೆಯಿಸದೆ, ಈಗ ನಮಗೆ ಒದಗಿರುವ ಹೊಸ ಸನ್ನಿವೇಶಗಳಿಗನುಸಾರವಾಗಿ ನಾನಾ ಕ್ಷೇತ್ರಗಳ ಕಾರ್ಯಕಲಾಪಗಳಲ್ಲಿಯೂ ವೆಚ್ಚವನ್ನು ವಿಶೇಷವಾಗಿ ತಗ್ಗಿಸಿ ಆಡಳಿತವನ್ನು ನಿರ್ವಹಿಸುವುದು ಆವಶ್ಯಕವಾಗಿದೆ.

1930-31 ನೆಯ ಸಾಲಿನ ಸ್ಥಿತಿ.

ಈ ಬಗೆಯ ವಿದ್ಯಮಾನಗಳಿಂದ ಸಂದುಹೋದ ಸಾಲಿನ ಆಯವ್ಯಯಗಳ ಕಾರ್ಯಕ್ರಮದ ಮೇಲೆ ಎಷ್ಟರಮಟ್ಟಿಗೆ ಪರಿಣಾಮವುಂಟಾಗಿದೆಯೆಂಬುದನ್ನು ವಿವರಿಸುವುದಕ್ಕೆ ಮುಂಚೆ ಚಾಲ್ತಿ ಸಾಲಿನ ಹುಟ್ಟುವಳಿಯ ಮತ್ತು ಬಂಡವಾಳದ ವಹಿವಾಟುಗಳ ಸಂಬಂಧದಲ್ಲಿ ನಾವು ನಿರೀಕ್ಷಿಸಿರುವ ಫಲಿತಾಂಶಗಳನ್ನು ಕುರಿತು ಸಂಕ್ಷೇಪವಾಗಿ ಕೆಲವು ಸಂಗತಿಗಳನ್ನು ತಿಳಿಸುತ್ತೇವೆ. ಚಾಲ್ತಿ ಸಾಲಿನಲ್ಲಿ 3 ಕೋಟಿ 80 ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರಬಹುದೆಂದು ನಿರೀಕ್ಷಿಸಿದ್ದೆವು. ಈ ಅಂದಾಜಿನ ಮೇಲೆ ಬಡ್ಜೆಟ್ಟಿನಲ್ಲಿ ಸುಮಾರು 3 ಕೋಟಿ 86 ಲಕ್ಷ ರೂಪಾಯಿಗಳ ವೆಚ್ಚಕ್ಕೆ ಅವಕಾಶವನ್ನು ಕಲ್ಪಿಸಲಾಗಿದ್ದಿತು. ಈ ವೆಚ್ಚದಲ್ಲಿ $6\frac{1}{2}$ ಲಕ್ಷ ರೂಪಾಯಿಗಳನ್ನು ನೀರಾವರಿ ಕಾಮಗಾರಿಗಳ ನಿಧಿಯಿಂದ ತೆಗೆದುಕೊಳ್ಳಬೇಕೆಂದು ನಿರ್ಧರವಾಗಿದ್ದಿತು. ಇದುವರೆಗೆ ದೊರೆತಿರುವ ಲೆಕ್ಕಗಳ ಪ್ರಕಾರ ಬಗಣಿಸಿ ನೋಡಿದರೆ ಚಾಲ್ತಿ ಸಾಲಿನ ವೆಚ್ಚವೇನೋ ಬಡ್ಜೆಟ್ಟಿನಲ್ಲಿ ಅಂದಾಜಾಗಿದ್ದುದಕ್ಕಿಂತ ಹೆಚ್ಚಾಗಿ ನಡೆಯದೆ ಇರಬಹುದೆಂದೂ, ಆದರೆ ಹುಟ್ಟುವಳಿಯು ಮಾತ್ರ ಬಡ್ಜೆಟ್ಟಿನ ಅಂದಾಜಿಗಿಂತಲೂ 37 ಲಕ್ಷ ರೂಪಾಯಿಗಳಷ್ಟು ಕಡಿಮೆ ಬೀಳುವ ಸಂಭವವುಂಟೆಂದೂ ಕಂಡುಬಂದಿದೆ.

ಜಮೀನು ಕಂದಾಯದ ವಸೂಲಿಗಳಲ್ಲಿ 14 ಲಕ್ಷ ರೂಪಾಯಿಗಳು ಕಡಿಮೆ ಬೀಳುವಂತೆ ತೋರಿಬಂದಿದೆ.

ಚೌಬೀನೆಯ ಮತ್ತು ಗಂಧದ ಎಣ್ಣೆಯ ಧಾರಣೆಗಳು ಕಡಿಮೆಯಾಗಿವೆ. ಗಂಧದ ಎಣ್ಣೆಗೆ ವಿಶೇಷವಾಗಿ ಗಿರಾಕಿಯಿದ್ದುದು, ಯೂರೋಪು, ಅಮೇರಿಕಾ, ಮತ್ತು ಜಪಾನ್‌ದೇಶ—ಇವುಗಳಲ್ಲಿ ವ್ಯಾಪಾರವು ಮುಗ್ಗಟ್ಟಿನ ದೆಸೆಗೆ ಬಂದಿರುವುದರಿಂದ ಗಂಧದ ಎಣ್ಣೆಯ ಧಾರಣೆಯು ಕಡಿಮೆಯಾಗಿದೆ. ಈ ಎರಡು ಕಾರಣಗಳಿಂದ ಫಾರೆಸ್ಟ್ ಬಾಬಿನ ವರಮಾನವು 7 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುವಂತಿದೆ.

ಈಗ ಒಂದು ವರ್ಷದ ಹಿಂದೆ ಎಕ್ಸೈಜು ಹರಾಜು ನಡೆದುವಷ್ಟೆ; ಆಗ ಭಾರಿ ಸವಾಲುಗಳು ಮಾಡಲ್ಪಟ್ಟುವು. ಅದನ್ನು ನೋಡಿಕೊಂಡು, ಚಾಲ್ತಿ ಸಾಲಿನಲ್ಲಿ ಎಕ್ಸೈಜು ಹುಟ್ಟುವಳಿಯು 72 ಲಕ್ಷ ರೂಪಾಯಿಗಳಾಗುವುದಾಗಿ ಅಂದಾಜು ಮಾಡಿದ್ದೆವು. ಆದರೆ, ಮದ್ಯಪಾನವು ಕಡಿಮೆಯಾಗಿರುವುದರಿಂದಲೂ, ಸೇಂದಿ ಅಂಗಡಿಗಳ ಗುತ್ತಿಗೆದಾರರುಗಳಿಂದ ಬಾಕಿ ಬರಬೇಕಾದ ಮೊಬಲಗುಗಳನ್ನು ವಸೂಲ್ಮಾಡುವುದು ದುಸ್ತರವಾಗಿ ಕಂಡುಬಂದಿರುವುದರಿಂದಲೂ, ಎಕ್ಸೈಜು ಬಾಬಿನಲ್ಲಿ ಹುಟ್ಟುವಳಿಯು ಸುಮಾರು $4\frac{1}{2}$ ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗುವುದಾಗಿ ತೋರುತ್ತದೆ.

ನಮ್ಮ ಸಂಸ್ಥಾನದಲ್ಲಿರುವ ಎರಡು ಶಾಖೆಯ ರೈಲ್ವೆಗಳಿಂದಲೂ—ಎಂದರೆ, ಕಂಪನಿಯವರು ಆಡಳಿತ ನಡೆಯಿಸತಕ್ಕ ರೈಲ್ವೆಲೈನುಗಳಿಂದಲೂ ಮತ್ತು ಸರ್ಕಾರದವರು ಆಡಳಿತ ನಡೆಯಿಸತಕ್ಕ ಲೈನುಗಳಿಂದಲೂ—ಬರತಕ್ಕ ಒಟ್ಟು ಹುಟ್ಟುವಳಿಯು ಮೊದಲು ಅಂದಾಜು ಮಾಡಿದ್ದುದಕ್ಕಿಂತಲೂ ಬಹಳ ಮಟ್ಟಿಗೆ ಕಡಿಮೆಯಾಗುವುದಾಗಿದೆ. 90 ಲಕ್ಷ ರೂಪಾಯಿಗಳು ಹುಟ್ಟುವಳಿಯಾಗುವುದಾಗಿ ಬಡ್ಜೆಟ್ಟಿನಲ್ಲಿ ಅಂದಾಜಾಗಿದ್ದುದಕ್ಕೆ 81 ಲಕ್ಷ ರೂಪಾಯಿಗಳು ಮಾತ್ರ ಹುಟ್ಟುವಳಿಯಾಗಬಹುದೆಂದು ಈಗ ತೋರಿಬಂದಿದೆ.

ಬಡ್ಜೆಟ್ಟು ಅಂದಾಜಿಗಿಂತಲೂ ಬಹಳ ಹೆಚ್ಚಾಗಿ ಹುಟ್ಟುವಳಿಯು ಕಂಡು ಬರುವುದಾಗಿರುವುದು ಬಡ್ಡಿಯ ಬಾಬು ಒಂದರಲ್ಲೇ. ಕಳೆದ ಆಗಸ್ಟ್ ತಿಂಗಳಿನಲ್ಲಿ ನಾವು ಸಾಲವನ್ನು ತೆಗೆದ ವಿಷಯವು ತಮ್ಮೆಲ್ಲರಿಗೂ ತಿಳಿದೇ ಇದೆ. ಶೇಕಡ 7 ರಂತೆ ಹೆಚ್ಚಿಗೆ ಬಡ್ಡಿಯುಳ್ಳ ಹಿಂದಿನ ಸಾಲದ ಪತ್ರಗಳಿಗೆ 1931 ನೆಯ ಇಸವಿ ನವೆಂಬರ್ 1 ನೆಯ ತಾರೀಖಿನ ದಿನ ಹಣ ಪಾವತಿಯಾಗುವಂತೆ ಗೊತ್ತಾಗಿದ್ದುದು ಸರಿಯಷ್ಟೆ. ಆ ಸಾಲದ ಪತ್ರಗಳನ್ನು ಕಡಿಮೆ ದರಗಳ ಬಡ್ಡಿಯ ಹೊಸ ಸಾಲದ ಪತ್ರಗಳಿಗೆ ಪರಿವರ್ತನಗೊಳಿಸುವ ಉದ್ದೇಶದಿಂದಲೂ, ಈಗ ಕೈಗೊಂಡಿರುವ ಭಾರಿಭಾರಿ ಬಂಡವಾಳದ ಕೆಲವು ಕಾಮಗಾರಿಗಳನ್ನು ಪೂರ್ತಿಗೊಳಿಸುವುದಕ್ಕೆ ಬೇಕಾದಷ್ಟು ಮೊಬಲಗನ್ನು ಒದಗಿಸುವ ಉದ್ದೇಶದಿಂದಲೂ, ಈ ಹೊಸ ಸಾಲವನ್ನು ಎತ್ತಲಾಯಿತು. ಈ ಸಾಲದ ಪತ್ರಗಳನ್ನು ಜನಗಳು ವಿಶೇಷವಾಗಿ ತೆಗೆದುಕೊಂಡರು. ಈ ರೀತಿಯಾಗಿ ಸಾಲದ ಪತ್ರಗಳಿಂದ 4 ಕೋಟಿ 16 ಲಕ್ಷ ರೂಪಾಯಿಗಳು ದೊರೆತವು. ಖಜಾನೆಯ ವಹಿವಾಟುಗಳಿಗೆ ಆವಶ್ಯಕವಿಲ್ಲದೆ ಹೆಚ್ಚು ಹಣವನ್ನು ಇಂಡಿಯಾ ಸರ್ಕಾರದ "ಟ್ರೆಜರಿ ಬಿಲ್ಲು" ಗಳಲ್ಲಿಯೂ ಮತ್ತು ಅಲ್ಪಾವಧಿಯ ಠೇವಣಾತಿಗಳಲ್ಲಿಯೂ ಬಡ್ಡಿಗೆ ಹಾಕಲಾಯಿತು. ಬಡ್ಡಿಯ ಬಾಬಿನಲ್ಲಿ $10\frac{1}{2}$ ಲಕ್ಷ ರೂಪಾಯಿಗಳಷ್ಟು ಹೆಚ್ಚಿಗೆ ಹುಟ್ಟುವಳಿಯು ಬಂದುದಕ್ಕೆ ಇದೇ ಕಾರಣ. ಆದರೆ ಹೀಗೆ ಹುಟ್ಟುವಳಿಯು ಹೆಚ್ಚಿದುದಕ್ಕೆ ಪ್ರತಿಯಾಗಿ, ಹೊಸದಾಗಿ ಸಾಲವನ್ನು ತೆಗೆದುದರ ಸಂಬಂಧದಲ್ಲಿ ಬಡ್ಡಿ ಮತ್ತು ಇತರ ವೆಚ್ಚಗಳಿಗಾಗಿ ಹೆಚ್ಚು ಹಣವೂ ವ್ಯಯವಾಯಿತು.

ಭದ್ರಾವತಿ ಕಬ್ಬಿಣದ ಕಾರ್ಖಾನೆ.

ಕಬ್ಬಿಣದ ಕಾರ್ಖಾನೆಯ ಸಂಬಂಧವಾದ ಲೆಕ್ಕಗಳಿಂದ ನಷ್ಟದ ಮೊಬಲಗುಗಳನ್ನು ವಜಾಮಾಡಬೇಕೆಂಬುದಾಗಿ ಉದ್ದೇಶಿಸಿದ್ದೇವೆ. ಆದಕಾರಣ, ಈ ಕಾರ್ಖಾನೆಯ ಈಗಿನ ಸ್ಥಿತಿಯು ಯಾವರೀತಿಯಲ್ಲಿದೆಯೆಂಬ ವಿಚಾರವಾಗಿ ಒಂದೆರಡು ಮಾತುಗಳನ್ನು ನಾನು ಹೇಳಬೇಕೆಂದು ತಾವು ನ್ಯಾಯವಾಗಿ ನಿರೀಕ್ಷಿಸಿಯೇ ನಿರೀಕ್ಷಿಸುವಿರಿ. ಹಿಂದಣವರ್ಷದ ಜೂನ್ ತಿಂಗಳಿನಲ್ಲಿ ನಾನು ಮಾಡಿದ ಭಾಷಣದಲ್ಲಿ ವಿವರಿಸಿದ ಪ್ರಕಾರ, ಈ ಕಾರ್ಖಾನೆಯ ಕೆಲಸವನ್ನು ನಡೆಯಿಸುವುದರಲ್ಲಿ ಚಾಲ್ತಿ ವರ್ಷದಲ್ಲಿ ನಷ್ಟವೇನೂ ಉಂಟಾಗಲಾರದೆಂದು ನಿರೀಕ್ಷಿಸಿದ್ದೆವು. ಆದರೆ ಈ ನಿರೀಕ್ಷೆಯು

[6 ನೆಯ ಪುಟವನ್ನು ನೋಡಿ]

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜೂನ್ ತಾ|| ೮ ನೆಯ ಸೋಮವಾರ.

ರಾಜಧಾನಿಗೆ ಪಂಡಿತ ಜವಾಹರಲಾಲರವರ ಆಗಮನ.

ಯಾವ ಮನುಷ್ಯನು ಸ್ವಾರ್ಥಬುದ್ಧಿಯನ್ನು ದೂರಮಾಡಿ ತನ್ನ ದೇಶಹಿತಕ್ಕಾಗಿ ಪ್ರಯತ್ನಶೀಲನಾಗಿರುತ್ತಾನೆಯೋ, ಯಾವ ಮನುಷ್ಯನು ಸ್ವದೇಶಾಭ್ಯುದಯವೇ ಸ್ವಾಭ್ಯುದಯವೆಂದು ತ್ರಿಕರಣಗಳಲ್ಲಿ ಭಾವಿಸಿರುತ್ತಾನೆಯೋ, ಯಾವ ಮನುಷ್ಯನು ತನ್ನ ಮಾತೃಭೂಮಿಯಲ್ಲಿ ಭಕ್ತಿಯುಳ್ಳವನಾಗಿ ಬಡಜನಗಳ ಕಷ್ಟವನ್ನು ಪರಿಹರಿಸುವುದರಲ್ಲಿ ನಿರತನಾಗಿರುತ್ತಾನೆಯೋ, ಯಾವ ಮನುಷ್ಯನು ಪ್ರತಿಷ್ಠಾಕಾಮಿಯಾಗದೆ ಆತ್ಮೋನ್ನತಿಸಾಧಕಗಳಾದ ಕರ್ಮಗಳನ್ನಾಚರಿಸುತ್ತಾನೆಯೋ, ಯಾವ ಮನುಷ್ಯನು ಪರರಾಷ್ಟ್ರಗಳ ಅಭ್ಯುದಯವನ್ನು ನೋಡಿ ಹಿಗ್ಗುತ್ತ ಸ್ವರಾಷ್ಟ್ರಾಭಿವೃದ್ಧಿಯಲ್ಲಿ ಆತುರನಾಗಿರುತ್ತಾನೆಯೋ, ಯಾವ ಮನುಷ್ಯನು ಸೃಷ್ಟಿಕರ್ತನ ಆಜ್ಞೆಗೆ ವಿರೋಧವಿಲ್ಲದಂತೆ ಸರ್ವಜನಾಂಗವನ್ನು ಏಕೀಕರಿಸಿ ರಾಷ್ಟ್ರವನ್ನು ಮುಂದರಿಸುತ್ತಾನೆಯೋ, ಯಾವ ಮನುಷ್ಯನು ದೇವರಿಲ್ಲ ಪರಲೋಕವಿಲ್ಲ ಸುಖವೇ ಸ್ವರ್ಗ ದುಃಖವೇ ನರಕವೆಂಬ ದುರ್ಭಾವಕ್ಕೆ ಬೀಳದೆ ದೈವಭಕ್ತನಾಗಿಯೂ, ಶಾಸ್ತ್ರಶ್ರದ್ಧೆಯುಳ್ಳವನಾಗಿಯೂ, ಪ್ರಜಾಸೇವಾನಿರತನಾಗಿರುತ್ತಾನೆಯೋ, ಯಾವ ಮನುಷ್ಯನು ತನ್ನಂತೆ ಎಲ್ಲರೂ ಸೌಖ್ಯಾನುಭವವುಳ್ಳವರಾಗಲೆಂದು ತಿಳಿದಿರುತ್ತಾನೆಯೋ ಅಂಥವನನ್ನೇ ಮಹಾತ್ಮನೆಂದು ಲೋಕವು ಹೇಳುತ್ತಿರುವುದಲ್ಲದೆ ಸ್ವಾರ್ಥಾಪೇಕ್ಷಿಯೂ ಸ್ವಪ್ರತಿಷ್ಠಾಕಾಮಿಯೂ ಆದವನು ಕೋಟ್ಯಧೀಶ್ವರನಾಗಿದ್ದರೂ ಅಂಥವನನ್ನು ಮಹಾತ್ಮನೆಂದು ಹೇಳುವುದಿಲ್ಲ. ಯಾವನಲ್ಲಿ ಇಂಥ ಅಸಾಧಾರಣಗಳಾದ ಸದ್ಗುಣಗಳು ವಾಸಮಾಡಿಕೊಂಡಿರುವುವೋ ಅವನಿಗೆ ಜಗತ್ತೇ ಬಂಧುವಾಗಿರುತ್ತದೆ. "ಉದಾರಚರಿತಾನಾಂತು ವಸುಧೈವಕುಟುಂಬಕಂ" ಎಂಬ ನೀತಿವಾಕ್ಯವು ಇದೇ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ನಮ್ಮ ಪವಿತ್ರಭಾರತಭೂಮಿಯಲ್ಲಿ ಹಿಂದೆ ಇಂಥ ಮಹಾತ್ಮರು ಅಸಂಖ್ಯಾಕವಾಗಿ ಜನ್ಮವೆತ್ತಿ ಸೂರ್ಯಚಂದ್ರರಿರುವವರೆಗೂ ತಮ್ಮ ಕೀರ್ತಿಕಾಯವನ್ನು ನಿಲ್ಲಿಸಿರುತ್ತಾರೆಂಬುದು ನಮ್ಮ ಪುರಾಣೇತಿಹಾಸಾದಿಗಳಿಂದ ಕಂಡುಬರುತ್ತಲಿದೆ. ನಮ್ಮ ಭಾರತಭೂಮಿಯ ದುರದೃಷ್ಟದಿಂದ ಇತ್ತೀಚೆಗೆ ಅಂಥ ಮಹಾತ್ಮರು ಹುಟ್ಟುವುದು ನಿಂತುಹೋಗಿ ಕೇವಲ ಸ್ವಾರ್ಥಿಗಳೇ ಹುಟ್ಟುತ್ತಲಿದ್ದುದರಿಂದ ಭಾರತಮಾತೆಯು ಪರದಾಸ್ಯಶೃಂಖಲೆಯಿಂದ ನರಳುತ್ತಲಿದ್ದಳು. ಇತ್ತೀಚೆಗೆ ಭಾರತಮಾತೆಯ ಪುಣ್ಯೋದಯದಿಂದ ಅನೇಕ ಮಹಾಪುರುಷರು ಜನ್ಮವನ್ನು ಧರಿಸಿ ಅಲ್ಲಲ್ಲಿ ಭಾರತಧ್ವಜವನ್ನೇರಿಸುತ್ತಲಿರುವರೆಂಬುದು ಮೊನ್ನೆ ನಡೆದ ಸತ್ಯಾಗ್ರಹಸಮರದಲ್ಲಿ 50-60 ಸಾವಿರದವರೆಗೆ ಕಾರಾಗೃಹದಲ್ಲಿದ್ದುದೇ ಸಾಕ್ಷಿಯಾಗಿರುತ್ತದೆ. ಇಂಥ ದೇಶಭಕ್ತರೆಂಬ ಮಣಿಮಾಲಿಕೆಯಲ್ಲಿ ಮಹಾತ್ಮಗಾಂಧಿಯವರು ಶಿರೋರತ್ನದಂತೊಪ್ಪುತ್ತಿರುವದಂತೂ ಪ್ರಸಿದ್ಧವೇ ಆಗಿರುತ್ತದೆ. ಇಂಥ ದೇಶಭಕ್ತಮಣಿಮಾಲಿಕೆಯಲ್ಲಿ ಪ್ರಜ್ವಲಿಸುತ್ತಲಿದ್ದ ಪಂಡಿತ ಮೋತೀಲಾಲರೆಂಬ ಅನರ್ಘ್ಯರತ್ನವು ಕಳಚಿಹೋದುದರಿಂದ ಈ ಮಾಲಿಕೆಯ ಸೊಬಗು ಸ್ವಲ್ಪ ಕಡಿಮೆಯಾಗಿದ್ದಿತು. ಆ ಸ್ಥಾನದಲ್ಲಿ ಅವರ ಪುತ್ರರಾದ ಪಂಡಿತ ಜವಾಹರಲಾಲರವರು ಬಂದದ್ದರಿಂದ ಆ ಮಾಲಿಕೆಯು ಮೊದಲಿಗಿಂತ ವಿಶೇಷವಾಗಿ ಪ್ರಕಾಶಿಸಹತ್ತಿದೆ. ಇವರು ಕೋಟ್ಯಧೀಶ್ವರರಾಗಿದ್ದರೂ ತಮ್ಮ ಸೌಖ್ಯಾನುಭವವನ್ನೆಲ್ಲ ತ್ಯಜಿಸಿ ಅಹೋರಾತ್ರಿಗಳಲ್ಲಿಯೂ ದೇಶಹಿತಕ್ಕಾಗಿ ಅಪಾರವಾದ ಕಷ್ಟಗಳನ್ನು ಸಹಿಸಿಕೊಂಡು ಭಾರತಮಾತೆಯ ಸೇವೆಯಲ್ಲಿ ನಿರತರಾಗಿರುವುದರಿಂದಲೇ ಇವರ ಕೀರ್ತಿಲತೆಯು ಎಲ್ಲೆಲ್ಲಿಯೂ ಹಬ್ಬುತ್ತಿರುವುದು. ಇದುವರೆಗೂ ಈ ಮಹೋದಯರ ಕೀರ್ತಿವೈಭವವು ನಮ್ಮ ಮೈಸೂರು ದೇಶೀಯರ ಶ್ರವಣೇಂದ್ರಿಯವನ್ನಲಂಕರಿಸಿದ್ದುದರಿಂದ ಚಕ್ಷುರೇಂದ್ರಿಯವು ಈ ಮಹೋದಯರನ್ನು ನೋಡಿ ಸಂತೋಷಪಡಲು ತವಕಪಡುತ್ತಲಿತ್ತು. ಅಷ್ಟರಲ್ಲಿಯೇ ಆಕಸ್ಮಿಕವಾಗಿ ಪಂಡಿತಜಿಯವರು ನಮ್ಮ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಕಳೆದ 31 ನೆಯ ಭಾನುವಾರ ರಾಜಧಾನಿಗೆ ಕುಟುಂಬಸಹಿತರಾಗಿ ಆಗಮಿಸಿದುದೊಂದು ಸುಯೋಗವೇ ಸರಿ!

ಈ ಮಹೋದಯರು ಎಂಥವರಿರಬಹುದೆಂದು ನೋಡಲು ರಾಜಧಾನಿಯ ಸ್ತ್ರೀಪುರುಷರೆಲ್ಲರೂ ತಂಡೋಪತಂಡವಾಗಿ ಪುರವೀಧಿಗಳಲ್ಲಿಯೂ ಟೌನ್‌ಹಾಲ್ ಮೈದಾನದಲ್ಲಿಯೂ ಕಿಕ್ಕಿರಿದು ನೋಡುತ್ತಲಿದ್ದರು. ಅವರ ಮುಖದಿಂದ ಹೊರಡುವ ಉಜ್ವಲಭಾಷಣವನ್ನು ಕೇಳಲು ಸಹಸ್ರಾರು ಜನಗಳು ಸೇರಿದ್ದರು. ಕಾಂಗ್ರೆಸ್ಸಿನ ತರುಣರಂತೂ ಖಾದಿ ಉಡುಪುಗಳಿಂದಲಂಕೃತರಾಗಿ ಬಹು ಶಿಸ್ತಿನಿಂದ ಸಾಲ್ಹಿಡಿದು ನಿಂತುಕೊಂಡು ಭರತಮಾತೆಯ ಜಯಘೋಷವನ್ನು ಮಾಡುತ್ತಿದ್ದರು. ಇಷ್ಟು ವೈಭವವು ನಡೆಯಬೇಕಾದರೆ ಪಂಡಿತಜಿಯವರ ವಿದ್ವತ್ತಿಗಲ್ಲ, ಇವರ ಅಪಾರವಾದ ದ್ರವ್ಯಕ್ಕಲ್ಲ, ಮಹಾತ್ಮರ ಆಜ್ಞೆಯಂತೆ ಭಾರತಮಾತೆಯ ಉದ್ಧಾರಕ್ಕಾಗಿ ಮಾಡುತ್ತಿರುವ ಅಸಮಸಾಹಸವೇ ಇವರ ದಿಗಂತವಿಶ್ರಾಂತವಾದ ಕೀರ್ತಿಗೆ ಅವಕಾಶವನ್ನುಂಟುಮಾಡಿರುತ್ತದೆ. ಇದರಂತೆ ಪ್ರತಿಯೊಬ್ಬ ಭಾರತೀಯನೂ ಸ್ವಾರ್ಥತ್ಯಾಗಿಯಾಗಿ ದೇಶಸೇವೆಯಲ್ಲಿ ಆತುರನಾದರೆ ಸ್ವರಾಜ್ಯಲಾಭವೆಂಬುವದು ಸುಲಭವಾಗಿ ಕರಗತವಾಗುವುದರಲ್ಲಿ ಸಂದೇಹವೇನೂ ಇರುವುದಿಲ್ಲ. ಒಬ್ಬೊಬ್ಬ ಉಜ್ವಲದೇಶಭಕ್ತರಿಂದಲೇ ಭಾರತಮಾತೆಯು ಪ್ರಸನ್ನೋನ್ಮುಖವಾಗುತ್ತಿರುವಲ್ಲಿ, ಭಾರತೀಯ ಜನಾಂಗವೆಲ್ಲವೂ ದೇಶಸೇವೆಯಲ್ಲಿ ಕಟಿಬದ್ಧವಾದರೆ ಕೇಳುವುದೇನು? ಹಾಗಿಲ್ಲದಿದ್ದರೆ ಸ್ವರಾಜ್ಯವು ಮರುಮರೀಚಿಕಾಜಲದಂತೆ ತೋರಿ ಅಡಗಬೇಕಾಗುವುದು. ಆದುದರಿಂದ ಭಾರತೀಯರೆಲ್ಲರೂ ಕಾರ್ಯೋದ್ಯುಕ್ತರಾಗಿ ದೇಶಸೇವೆಯ ಭಾರವನ್ನು ಎಲ್ಲರೂ ಸಮವಾಗಿ ಹಂಚಿಕೊಂಡು ಮಹಾ ಧೈರ್ಯಶಾಲಿಗಳೂ, ರಾಜನೀತಿನಿಪುಣರೂ, ಅಹಿಂಸಾವಾದಿಗಳೂ ಪ್ರಯತ್ನಶೀಲರೂ ಆಗಿರುವ ಪಂಡಿತ ಜವಾಹರಲಾಲರ ಮೇಲ್ಪಂಕ್ತಿಯನ್ನನುಸರಿಸಿ ದೇಶಭಕ್ತರೆನಿಸುವಂತೆ ಈಶ್ವರನಿಂದ ಪ್ರೇರಿತರಾಗಲಿ.

ಒಳದೇಶದ ವೃತ್ತಾಂತಗಳು.

ಮೈಸೂರು ರೈಲ್ವೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ 700 ಜನ ಕೆಲಸಗಾರರು ಕೆಲಸದ ದಿವಸಗಳನ್ನು 6 ರಿಂದ 4 ದಿವಸಗಳಿಗೆ ಇಳಿಸಿದುದರಿಂದಲೂ ಈ ಮೂಲಕ ತಮಗೆ ಬರುತ್ತಿದ್ದ ಕೂಲಿಯು ಕಡಿಮೆಯಾದುದರಿಂದಲೂ, ಈ ತಿಂಗಳು 4 ನೆಯ ತಾರೀಖಿನಿಂದ ಕೆಲಸವನ್ನು ನಿಲ್ಲಿಸಿ ಆ ದಿವಸ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆಯಿಂದ ಹೋದರು.

ಪಂಡಿತ ಜವಾಹರಲಾಲರವರು ಈ ತಿಂಗಳು 1ನೆಯ ತಾರೀಖಿನ ರಾತ್ರಿ 7 ಗಂಟೆಗೆ ಅರಮನೆಗೆ ಆಗಮಿಸಿ ಶ್ರೀಮನ್ಮಹಾರಾಜರವರೊಡನೆ ಸ್ವಲ್ಪ ಹೊತ್ತು ಸಂಭಾಷಣೆ ನಡೆಯಿಸಿ, 8-30 ಕ್ಕೆ ಚಾಮುಂಡಿಬೆಟ್ಟವನ್ನು ನೋಡಿಕೊಂಡು ಬಂದು ದಿವಾನ್‌ಸಾಹೇಬರವರು ಏರ್ಪಡಿಸಿದ್ದ ಔತಣವನ್ನು ಅಂಗೀಕರಿಸಿ ಆ ರಾತ್ರಿ 10 ಗಂಟೆ ಗಾಡಿಯಲ್ಲಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಈ ತಿಂಗಳು 1 ನೆಯ ತಾರೀಖಿನ ದಿವಸ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಜಗನ್ಮೋಹನ ಪ್ರಾಸಾದದಲ್ಲಿ ಪ್ರಾರಂಭವಾಯಿತು. ಆ ಸಭೆಗೆ ಪಂಡಿತ ಜವಾಹಿರಲಾಲನೆಹರೂರವರೂ, ಅವರ ಪತ್ನಿ ಕಮಲಾದೇವಿಯರೂ, ಪುತ್ರಿ ಇಂದಿರಾದೇವಿಯರೂ, ಸರ್ ಹರಿಸಿಂಗ್ ಗೋರ್‌ರವರೂ, ಸರ್ ಚಾರ್ಲ್ಸ್ ಟಾಡ್‌ಹಂಟರವರೂ, ದಿವಾನ್ ಬಹದ್ದೂರ್ ಎಂ. ರಾಮಚಂದ್ರರಾಯರೂ, ಆಗಮಿಸಿದ್ದರು.

ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ರಾಜಧಾನಿಯ ಮೆಡಿಕಲ್ ಕಾಲೇಜಿನ ಹಿಂಭಾಗದ ಈದಿಗಾ ರೋಡಿನ ಪಕ್ಕದಲ್ಲಿರುವ ಜಾಗದಲ್ಲಿ ಬೆಂಗಳೂರಿನ ಸುಪ್ರಸಿದ್ಧ ಶ್ರೀಮಂತರಾದ ಹಾಜಿ ಸರ್ ಇಸ್ಮಾಯಿಲ್ ಸೇಟರವರು ಮಹಮ್ಮದೀಯ ಅನಾಥಾಲಯದ ತಳಹದಿ ಕಲ್ಲನ್ನು ಹಾಕುವ ಸಮಾರಂಭವನ್ನು ನಡೆಯಿಸಿದರು. ಆ ಕಾಲದಲ್ಲಿ ರೆಸಿಡೆಂಟರು, ದಿವಾನ್‌ಸಾಹೇಬರು, ಹೈಕೋರ್ಟ್ ಜಡ್ಜರು, ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಇನ್ನೂ ಮೊದಲಾದ ಅಧಿಕಾರಿಗಳು ಬಂದಿದ್ದರು. ಸರ್ ಹಾಜಿ ಇಸ್ಮಾಯಿಲ್ ಸೇಟರವರು ಆ ಕಟ್ಟಡಕ್ಕೆ 10,000 ರೂಪಾಯಿಗಳನ್ನು ದಾನಮಾಡಿರುತ್ತಾರೆ.

ಈ ತಿಂಗಳು 6 ನೆಯ ತಾರೀಖಿನ ದಿವಸ ಪ್ರಜಾಪ್ರತಿನಿಧಿಸಭೆಯಲ್ಲಿ ಶ್ರೀಯುತ ಡಿ. ಎಸ್. ಮಲ್ಲಪ್ಪನವರು ಈ ವರ್ಷದ ಕಂದಾಯವನ್ನು ಶೇಕಡ 25 ರಂತೆ ಕಡಿಮೆಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿದರೆಂದೂ, ಸರ್ಕಾರದವರು ಆ ಪ್ರಾರ್ಥನೆಯನ್ನು ನೆರವೇರಿಸಲು ಸಾಧ್ಯವಿಲ್ಲವೆಂದು ಉತ್ತರವಿತ್ತುದರಿಂದ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಹೊರಗೆ ಹೋದರೆಂದೂ, ಅವರನ್ನು ಹಿಂಬಾಲಿಸಿ ಸುಮಾರು 120 ಜನ ಮೆಂಬರರು ಹೊರಗೆ ಹೋದರೆಂದೂ ತಿಳಿದುಬರುತ್ತದೆ.

ಈಗ ಜಾರಿಯಲ್ಲಿರುವ ವರಮಾನದ ತೆರಿಗೆಯು ಬ್ರಿಟಿಷ್ ಹಿಂದುಸ್ಥಾನದ ತೆರಿಗೆಗಿಂತಲೂ ಬಹಳ ಕಡಿಮೆಯಾಗಿರುವುದರಿಂದಲೂ, ಆರ್ಥಿಕ ಮುಗ್ಗಟ್ಟಿನಿಂದ ರೈತರ ಕಂದಾಯ ವಸೂಲ್ಮಾಡುವುದು ದುಸ್ತರವಾಗಿರುವುದರಿಂದಲೂ, ವರ್ಷ 1ಕ್ಕೆ 5,000 ರೂ. ಗಳಿಗಿಂತಲೂ ಹೆಚ್ಚಿನ ವರಮಾನವಿರುವವರು ಕೊಡುವ ವರಮಾನತೆರಿಗೆಯನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದವರು ಒಂದು ಗೊತ್ತುವಳಿಯನ್ನು ತಂದರು. ಮಿ|| ಚಂಗಲರಾಯರೆಡ್ಡಿ, ಮಿ|| ಡಿ. ಎಸ್. ಮಲ್ಲಪ್ಪ ಮೊದಲಾದ ಮೆಂಬರರು ಈ ಗೊತ್ತುವಳಿಯನ್ನು ವಿರೋಧಿಸಿಯೂ, ಮಿ|| ಬಿ. ಎಸ್. ಪುಟ್ಟಸ್ವಾಮಿ ಮೊದಲಾದವರು ಅನುಮೋದಿಸಿಯೂ ಮಾತನಾಡಿದರು. ಓಟಿಗೆ ಹಾಕಲು ಗೊತ್ತುವಳಿಯು ಬಹುಮತದಿಂದ ಅನಂಗೀಕೃತವಾಯಿತು.

ಈ ತಿಂಗಳು 4 ನೆಯ ತಾರೀಖಿನ ದಿವಸ ಸಾಯಂಕಾಲ 5 ಗಂಟೆಯಿಂದ 6 ಗಂಟೆಯವರೆಗೆ ಬೆಂಗಳೂರು ಕ್ವೀನ್ಸ್ ಓನ್ ರಾಯಲ್ ವೆಸ್ಟ್‌ಕೆಂಟ್ ಕ್ಲಬ್ಬಿನವರಿಗೂ ಬೆಂಗಳೂರು ಮುಸ್ಲಿಂ ಕ್ಲಬ್ಬಿನವರಿಗೂ ರಾಜಧಾನಿಯಲ್ಲಿ ಫುಟ್‌ಬಾಲ್ ಪಂದ್ಯವು ನಡೆಯಿತು. ಅದನ್ನು ಸಂದರ್ಶಿಸುವುದಕ್ಕಾಗಿ ಶ್ರೀಮನ್ಮಹಾರಾಜರವರೂ, ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್‌ರವರೂ, ದಿವಾನ್‌ಸಾಹೇಬರವರೂ ಆಗಮಿಸಿದ್ದರಲ್ಲದೆ ಸುಮಾರು 2-3 ಸಾವಿರ ಜನರು ಸೇರಿದ್ದರು. ಈರ್ವರೂ ಬಹು ಶಕ್ತಿಯಿಂದಲೂ ಧೈರ್ಯದಿಂದಲೂ ಆಟವನ್ನಾಡಿದರು. ಅಂತ್ಯದಲ್ಲಿ ವಿಜಯಲಕ್ಷ್ಮಿಯು ಆಂಗ್ಲೇಯರ ಕೈಹಿಡಿದಳು. ಶ್ರೀಮನ್ಮಹಾರಾಜರು ಆಂಗ್ಲೇಯ ಟೀಮಿನ ಮುಸ್ಲಿಂ ಟೀಮಿನ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ಬಟ್ಟಲುಗಳನ್ನು ದಯಪಾಲಿಸಿದ್ದಲ್ಲದೆ ಆಂಗ್ಲೇಯ ಟೀಮಿನವರಿಗೆ ಒಂದು ದೊಡ್ಡ ಬೆಳ್ಳಿಬಟ್ಟಲವನ್ನೂ ದಯಪಾಲಿಸಿದರು.

ಮೈಸೂರು ಕೂಲಿಕಾರರ ಪ್ರಥಮಸಭೆಯ ಪ್ರಾರಂಭೋತ್ಸವವನ್ನು ಬೆಂಗಳೂರಿನಲ್ಲಿ ಈ ತಿಂಗಳು 2ನೆಯ ತಾರೀಖಿನ ದಿವಸ ಪಂಡಿತ ಜವಾಹರಲಾಲರವರು ನೆರವೇರಿಸಿದರು. ಸುಮಾರು 20 ಸಾವಿರ ಜನರು ಸೇರಿದ್ದರು. ಮಿ|| ವಿ. ಪಿ. ಗಿರಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಜವಾಹರಲಾಲರವರು ಅಪ್ಪಣೆಕೊಡಿಸಿದ್ದೇನಂದರೆ—"ಯಾವ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯಕಗಳಾದ ಆಹಾರ, ಬಟ್ಟೆ ಮತ್ತು ವಾಸದಮನೆ, ಇವುಗಳ ಕೊರತೆಯಿಲ್ಲವೋ ಆ ದೇಶವನ್ನೇ ಅಭಿವೃದ್ಧಿ ದೇಶವೆಂದು ಹೇಳಬೇಕು. ಕೂಲಿಕಾರರಿಗೆ ಈ ಮೂರು ಅನುಕೂಲ್ಯಗಳು ನಿರಾತಂಕವಾಗಿ ದೊರೆಯುವುವೇ ಇಲ್ಲವೇ ಎಂಬುದನ್ನು ತಿಳಿದು ತಕ್ಕ ಸಹಾಯಗಳನ್ನು ಮಾಡಬೇಕು. ಕೂಲಿಕಾರರು ಸಂಘಗಳನ್ನೇರ್ಪಡಿಸಬೇಕು. ಅವುಗಳಿಗೆ ಸರ್ಕಾರದವರು ಸಹಾಯಮಾಡಬೇಕು. ಈ ಮೂಲಕವೇ ಬಡವರ ತೊಂದರೆಗಳು ನಿವಾರಣೆಯಾಗಬೇಕು. ಇದೇ ಸ್ವರಾಜ್ಯದ ತಿರುಳು."

ಮೈಸೂರು ಲಲಿತಕಲಾಸಮಿತಿಯ ಕಲಾಪ್ರದರ್ಶನವು ವರ್ಷವರ್ಧಂತಿ ಪ್ರಯುಕ್ತವಾಗಿ ರಾಜಧಾನಿಯಲ್ಲಿ

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಕಳೆದ ತಿಂಗಳು 23 ನೆಯ ತಾರೀಖಿನಿಂದ ನಡೆಯುತ್ತಿರುವ ರಾಜಧಾನಿಯ ಕಲಾಪರಿಣತರನೇಕರ ಚಿತ್ರಕೌಶಲಪ್ರದರ್ಶನವೂ ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಸಂಪ್ರದಾಯಬದ್ಧವಾದ ಕೇಶವವಿಗ್ರಹವೂ ಪ್ರೇಕ್ಷಕರಿಗೆ ಆನಂದವನ್ನು ಉಂಟುಮಾಡಿವೆ. ಮದರಾಸಿನ ಗವರ್ನರ್ ಮತ್ತು ಪತ್ನಿಯವರು ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಗಳಾದ ಸರ್ ಚಾರ್ಲ್ಸ್ ಟಾಡ್‌ಹಂಟರ್‌ರವರೂ ಜಯಪುರ ಸಂಸ್ಥಾನದ ಮಹಾರಾಜಪರಿವಾರವೂ ಪಂಡಿತ ಜವಾಹಿರಲಾಲನೆಹರೂ ಮತ್ತು ಶ್ರೀಮತಿ ಕಮಲಾನೆಹರೂರವರು ಮುಂತಾದ ಅನೇಕ ಅತಿಥಿಗಳೂ ದೊಡ್ಡಮನುಷ್ಯರೂ ದಯೆಮಾಡಿಸಿ ಕಲಾವೈವಿಧ್ಯವನ್ನೂ ಕೌಶಲವನ್ನೂ ನೋಡಿ ಸಂತೋಷಪಟ್ಟರು. ಲಲಿತಕಲಾಸಮಿತಿಯವರು ಅಲ್ಪಕಾಲದಲ್ಲಿ ಈ ಕಲಾಪ್ರದರ್ಶನವನ್ನು ಏರ್ಪಡಿಸಿ ಸಮರ್ಪಕವಾಗಿ ನಡೆಯಿಸಿ ಸಂತೋಷಗೊಳಿಸಿದುದು ಬಹಳ ಸ್ತೋತ್ರಾರ್ಹವಾಗಿದೆ.

ವರ್ತಮಾನಸಂಗ್ರಹ.

ಜಗತ್ತಿನಲ್ಲೆಲ್ಲ ಅತ್ಯಂತ ಸಂಪತ್ತಿನ ಖಂಡವಾದ ಅಮೇರಿಕೆಯ ಸರ್ಕಾರದವರು ಆದಾಯವು ಖರ್ಚಿಗಿಂತ ಕಡಿಮೆ ಬರುವುದೆಂದು ಸಾಲವನ್ನು ಎತ್ತಲಿರುವರು. 80 ಕೋಟಿ ಡಾಲರ್‌ಗಳ ಸಾಲ ಕೊಡಬೇಕೆಂದೂ, ಆ ಹಣವನ್ನು 1946-49 ರಲ್ಲಿ ವಾಪಸು ಕೊಡುವೆವೆಂದೂ ಈ ತಿಂಗಳು 15 ನೆಯ ತಾರೀಖಿನ ದಿವಸದಿಂದ ಪ್ರಕಟನೆ ಹೊರಡಿಸುವವರಾಗಿದ್ದಾರೆ.

ಈ ತಿಂಗಳು 4 ನೆಯ ತಾರೀಖಿನ ದಿವಸ ಪ್ರಾತಃಕಾಲ ಬಾರ್ಡೋಲಿಯಲ್ಲಿ ಮಹಾತ್ಮ ಗಾಂಧಿಯವರು ರೈಲು ಕಂಬಿಯನ್ನನುಸರಿಸಿ ವಿಹಾರಾರ್ಥವಾಗಿ ಹೋಗಿದ್ದರು. ದಾರಿಯಲ್ಲಿ ಒಂದು ಬೂದಿಯ ಗುಡ್ಡೆಯ ಮೇಲೆ ಕಾಲಿಟ್ಟರು. ಅದರಲ್ಲಿ ಸುಡುತ್ತಿದ್ದ ಇದ್ದಲಿದ್ದ ಕಾರಣ ಅವರ ಒಂದು ಪಾದವು ಸ್ವಲ್ಪಮಟ್ಟಿಗೆ ಸುಟ್ಟಿತು. ಅದರೂ ಆಶ್ರಮಕ್ಕೆ ನಡಿಗೆಯಿಂದಲೇ ಹಿಂದಿರುಗಿದರು.

ಬೊಂಬಾಯಿಯಿಂದ ಕರಾಚಿಗೆ ಹೋಗುತ್ತಿದ್ದ ಆಕಾಶವಿಮಾನವು ಕರಾಚಿಗೆ 90 ಮೈಲಿದೂರದಲ್ಲಿ [illegible]ಟೆಲ್‌ಬೆ ಎಂಬ ಸ್ಥಳದಲ್ಲಿ ಮುರಿದು ಬಿತ್ತೆಂದೂ, ಆ ವಿಮಾನದಲ್ಲಿದ್ದ ಮೇಜರ್‌ವಾಚ ಮತ್ತು ಛವಾಂದಿಲಾಲ ಎಂಬವರಿಗೆ ಏನೂ ಅಪಾಯವಾಗಿಲ್ಲವೆಂದೂ, ಈ ವರ್ತಮಾನವು ಕರಾಚಿಯನ್ನು ತಲ್ಪುತ್ತಲೇ ಒಂದು ವಿಮಾನವೂ ಒಬ್ಬ ವೈಮಾನಿಕನೂ ಹೋಗಿ ಅವರನ್ನು ಕರಾಚಿಗೆ ಕರೆತಂದರೆಂದೂ ತಿಳಿದುಬರುತ್ತದೆ.

ಬ್ರಿಟಿಷ ಸಾಮ್ರಾಜ್ಯದಲ್ಲೆಲ್ಲ ಪಂಚಮ ಜಾರ್ಜ್ ಸಾರ್ವಭೌಮರವರ 66 ನೆಯ ವರ್ಷವರ್ಧಂತ್ಯುತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಿದರು. ಲಂಡನ್ ಪಟ್ಟಣದ ಎಲ್ಲ ಮನೆಗಳ ಮೇಲೂ ಧ್ವಜಗಳು ಹಾರಾಡಿದುವು. ಆ ಪಟ್ಟಣದ ಹೈಡ್‌ಪಾರ್ಕಿನಲ್ಲಿ ಸಾರ್ವಭೌಮರ ಗೌರವಾರ್ಥವಾಗಿ 21 ಗುಂಡುಗಳು ಹಾರಿಸಲ್ಪಟ್ಟವು. ಹಿಂದುಸ್ಥಾನದ ಸಿಮ್ಲಾ, ನೈನಿಟಾಲ್, ಬೆಂಗಳೂರು ಮೊದಲಾದ ಸ್ಥಳಗಳಲ್ಲಿಯೂ ಸಾರ್ವಭೌಮರ ವರ್ಧಂತ್ಯುತ್ಸವವು ನೆರವೇರಿಸಲ್ಪಟ್ಟಿತು.

ಮಹಾತ್ಮ ಗಾಂಧಿಯವರ ಸಲಹೆಯಂತೆ ಬೊಂಬಾಯಿಯ ಬಟ್ಟೆಯ ಮಿಲ್ಲುಗಳ ಮಾಲೀಕರು ಪರದೇಶಿ ಬಟ್ಟೆಗಳನ್ನು ಈ ದೇಶದಿಂದ ಹೊರಗೆ ಹಾಕುವುದಕ್ಕೆ ಒಂದು ಕಂಪನಿಯನ್ನು ಸ್ಥಾಪಿಸಿ ರಿಜಿಸ್ಟರ್ ಮಾಡಿಸಿರುತ್ತಾರೆ. ಅದರ ಮೂಲಧನವು 10 ಲಕ್ಷ ರೂಪಾಯಿ ಆಗಿದೆ. ವರ್ತಕರಿಂದ ಪರದೇಶಿ ಬಟ್ಟೆಗಳನ್ನು ಕೊಳ್ಳುವ ಮತ್ತು ಅವುಗಳನ್ನು ದೇಶದಿಂದ ಗಡೀಪಾರುಮಾಡುವ ವಿಧಾನಗಳನ್ನು ಯೋಚಿಸುವುದಕ್ಕಾಗಿ ಈ ತಿಂಗಳು 4 ನೆಯ ತಾರೀಖಿನ ದಿವಸ ಬೊಂಬಾಯಿಯಲ್ಲಿ ಒಂದು ಸಭೆಯು ಸೇರಿದ್ದಿತು.

ಬರ್ಮಾದೇಶದ ದಂಗೆಯು ಇನ್ನೂ ಶಮನವಾಗಿರುವುದಿಲ್ಲ. ಈ ತಿಂಗಳು 2 ನೆಯ ತಾರೀಖಿನ ದಿವಸ ದಂಗೆಕೋರರು ರಂಗೂನಿಗೆ 30 ಮೈಲಿಗಳ ದೂರದಲ್ಲಿರುವ ಇನ್‌ಸೇಜ ಎಂಬ ಸ್ಥಳದಲ್ಲಿ 6 ಜನ ರೈಲ್ವೆ ಕೂಲಿಗಳನ್ನು ಖೂನಿಮಾಡಿದರು. ಮತ್ತು ಥರವಾಡಿಯ ಎರಡು ಸ್ಥಳಗಳಲ್ಲಿ ಡಕಾಯಿತಿಮಾಡಿ ಒಬ್ಬ ಭಾರತೀಯನನ್ನು ಖೂನಿಮಾಡಿದರು. ದಂಗೆಕೋರರು ಭಾರತೀಯರನ್ನು ಪರಮಶತ್ರುಗಳನ್ನಾಗಿ ಕಾಣುವರೆಂದೂ ಅನೇಕ ಜನ ಭಾರತೀಯರು ತಮ್ಮ ಮನೆಮಠಗಳನ್ನು ಬಿಟ್ಟು ರಂಗೂನಿಗೆ ಬಂದಿರುವರೆಂದೂ ಪ್ರಕಟವಾಗಿದೆ.

ಕಳೆದ ತಿಂಗಳು 30 ನೆಯ ತಾರೀಖಿನ ದಿವಸ ಕಾನ್ಪುರದಲ್ಲಿ ಪುನಃ ಹಿಂದೂ ಮಹಮ್ಮದೀಯರ ಗಲಭೆಯಾಯಿತು. ಪೋಲೀಸರು ಜನರಮೇಲೆ ಗುಂಡು ಹಾರಿಸಿದರು. ಒಬ್ಬ ಹಿಂದುವೂ ಒಬ್ಬ ಮಹಮ್ಮದೀಯನೂ ಮೃತಪಟ್ಟರು. 15 ಜನ ಮುಸಲ್ಮಾನರಿಗೂ, 3 ಜನ ಹಿಂದೂಗಳಿಗೂ ತುಂಬಾ ಗಾಯಗಳಾಗಿ ಆಸ್ಪತ್ರೆಯಲ್ಲಿದ್ದಾರೆ. ಗುಂಡುಹಾರಿಸಿದನಂತರ ಗಲಭೆಯು ಶಮನವಾಯಿತು. ಮುಖ್ಯ ಬೀದಿಗಳಲ್ಲಿ ಸಹಸ್ರ ಪೋಲೀಸರು ಕಾವಲಿದ್ದಾರೆ. ಕ್ರಮವಾಗಿ ಗಸ್ತು ನಡೆಯುತ್ತಲಿದೆ. ರಾತ್ರಿ 9 ಗಂಟೆಯ ಮೇಲೆ ಯಾರೂ ಹೊರಗೆ ಹೋಗಕೂಡದೆಂದು ಸರ್ಕಾರದವರು ಆರ್ಡರ್ ಮಾಡಿದ್ದಾರೆ. ಅಂಗಡಿಗಳೂ ಮಿಲ್ಲುಗಳೂ ಮುಚ್ಚಿವೆ.

ಕಲ್ಕತ್ತೆಯಲ್ಲಿ ಕಿರಣಮಯಿಾ ಎಂಬೊಬ್ಬ ಸ್ತ್ರೀಯು ತನ್ನ ಮೈಸುಟ್ಟುಕೊಂಡು ಆತ್ಮಹತ್ಯೆಮಾಡಿಕೊಂಡಳು. ಆವಳು ಬಹು ದಿವಸಗಳಿಂದ ಮಲೇರಿಯಾ ಜ್ವರದಿಂದ ನರಳುತ್ತಿದ್ದಳು. ಈಕೆಯ ಗಂಡನಾದ ವೀರೇಂದ್ರಶೇಖರನೆಂಬವನು ತನಗೆ ತಿಂಗಳು ಒಂದಕ್ಕೆ 80 ರೂ. ಗಳು ಸಂಬಳಬರುತ್ತಿದ್ದರೂ ತಕ್ಕ ಚಿಕಿತ್ಸೆ ಮಾಡಿಸಲಿಲ್ಲ. ಇವಳು ಆ ಖಾಯಿಲೆಯಲ್ಲಿ ನರಳುವುದಕ್ಕಿಂತ ಆತ್ಮಹತ್ಯೆ ಮಾಡಿಕೊಳ್ಳುವದೇ ಮೇಲೆಂದು ಹೇಳುತ್ತಿದ್ದಳೆಂದು ಗಂಡನು ಕೋರ್ಟಿನಲ್ಲಿ ಹೇಳಿದನು. ಆತ್ಮಹತ್ಯೆಮಾಡಿಕೊಳ್ಳುವದಕ್ಕೆ ಅವನ ಔದಾಸೀನ್ಯವೇ ಕಾರಣವಾದ್ದರಿಂದ ಅವನೇ ಅಪರಾಧಿಯೆಂದು ಪಂಚಾಯಿತರು ಅಭಿಪ್ರಾಯಪಡುತ್ತಾರೆ.

ಜಪಾನ್ ದ್ವೀಪದ ಮುಖ್ಯಪಟ್ಟಣವಾದ ಟೋಕಿಯೋನಗರದಲ್ಲಿ ಹಿರೋಶಿಚೀಬಾ ಎಂಬೊಬ್ಬ ಬಣ್ಣದ ಕಾರ್ಖಾನೆಯ ಕೂಲಿಯವನು ಕಾರ್ಖಾನೆಗಳ ಮಾಲಕರಿಗೂ ಮತ್ತು ಕೂಲಿಕಾರರಿಗೂ ಅಸಮಾಧಾನವುಂಟಾಗಿ ಕೂಲಿಕಾರರು ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿದಾಗ, ಚೀಬನು ಬಹು ಎತ್ತರವಾದ ಧೂಮಸ್ತಂಭವನ್ನೇರಿ ಅನ್ನೋದಕಗಳನ್ನು ಬಿಟ್ಟು ಅಲ್ಲಿಯೇ ಕುಳಿತಿದ್ದನು. ಕೂಲಿಕಾರರ ಬೇಡಿಕೆಗಳೆಲ್ಲವೂ ತೃಪ್ತಿಕರವಾಗಿ ತೀರ್ಮಾನಿಸಲ್ಪಟ್ಟಿರುವ ವರ್ತಮಾನವನ್ನು ಕೇಳಿದಾಗ ಕೆಳಗಿಳಿದನು. ಇವನು ಕೇವಲ ಶಕ್ತಿಗುಂದಿರುವುದರಿಂದ ಆಸ್ಪತ್ರೆಯಲ್ಲಿರುವನು. ಇದಲ್ಲವೆ! ಭ್ರಾತೃವಾತ್ಸಲ್ಯ ಮತ್ತು ನಿಜವಾದ ಸತ್ಯಾಗ್ರಹ.

ಅಮೇರಿಕೆಯ ಮುಖ್ಯ ಪಟ್ಟಣವಾದ ನ್ಯೂಯಾರ್ಕಿನಲ್ಲಿ ಅಲ್ಲಿಯ ಮಾಜಿ ಗೌರ್ನರ್ ಮಿ|| ಸ್ಮಿಥ್ ಎಂಬವರು ಜಗತ್ತಿನಲ್ಲೆಲ್ಲ ಅತ್ಯಂತ ಸುಂದರವೂ ಮತ್ತು ದೊಡ್ಡದೂ ಆದ ಕಟ್ಟಡದ ಪ್ರಾರಂಭೋತ್ಸವವನ್ನು ಕಳೆದ ತಿಂಗಳು 1 ನೆಯ ತಾರೀಖಿನ ದಿವಸ ನೆರವೇರಿಸಿದರು. ಆ ಕಟ್ಟಡವು ಭೂಮಿಯಿಂದ 3 ಫರ್ಲಾಂಗ್ ಎತ್ತರವಾಗಿದೆ. ಅದರಲ್ಲಿ 86 ಅಂತಸ್ತುಗಳಿವೆ. ಆ ಕಟ್ಟಡದ ಪ್ರಾರಂಭೋತ್ಸವವನ್ನು ಮಾಡಿದಾಗ ಅತಿಥಿಗಳು ಕೊನೆಯ ಅಂತಸ್ತಿಗೆ ಬಂದಕೂಡಲೆ ಪ್ರೆಸಿಡೆಂಟ್ ಹೂವರ್‌ರವರು ವಾಷಿಂಗ್ಟನ್ ಪಟ್ಟಣದಲ್ಲಿ ಕುಳಿತುಕೊಂಡು ಒಂದು ಬಿರುಡೆಯನ್ನು ಒತ್ತಿದ ಕೂಡಲೆ ಆ ಕಟ್ಟಡದಲ್ಲೆಲ್ಲ ದೀಪೋತ್ಸವವಾಯಿತು. ಮೊದಲು ಆ ಸ್ಥಳದಲ್ಲಿ ಒಂದು ಖಾನಾವಳಿಯಿದ್ದಿತು. ಅದನ್ನು ನಾಶಮಾಡಿ 1929 ನೆಯ ಇಸವಿ ಅಕ್ಟೋಬರ್‌ನಲ್ಲಿ ಕಟ್ಟಡ ಕಟ್ಟುವುದನ್ನು ಪ್ರಾರಂಭಿಸಿ 1930 ನೆಯ ಮಾರ್ಚ್ ಅಂತ್ಯದಲ್ಲಿ ಪೂರೈಸಿದರು. ಜಗತ್ತಿನಲ್ಲೆಲ್ಲ ದೊಡ್ಡದಾದ ಆ ಕಟ್ಟಡವನ್ನು ಅಷ್ಟು ಅತ್ಯಲ್ಪಕಾಲದಲ್ಲಿ ಪೂರೈಸಿದ್ದಕ್ಕೋಸ್ಕರ ಕೆಲಸಗಾರರಿಗೆ ವಿಶೇಷವಾಗಿ ಬಹುಮಾನವು ಕೊಡಲ್ಪಟ್ಟಿತು.

ಲಾಹೋರ್ ಪಿತೂರಿ ಮೊಕದ್ದಮೆಯಲ್ಲಿ ಶ್ರೀಯುತ ಭಗತ್‌ಸಿಂಗ್, ರಾಜಗುರು ಇವರೊಡನೆ ಗಲ್ಲಿಗೇರಿಸಲ್ಪಟ್ಟ ಸುಖದೇವರ ಸಹೋದರಿ ಲೀಲಾವತಿಯು ಲಾಹೋರಿಗೆ ಸಮೀಪದಲ್ಲಿರುವ ಲ್ಯಾಲ್ಪೂರ್ ಗ್ರಾಮದ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡುತ್ತಿದ್ದಳು. ಕಳೆದ ಮಾರ್ಚ್ ತಿಂಗಳಲ್ಲಿ ಬಂಧುಮಿತ್ರರೊಡನೆ ತನ್ನ ಅಣ್ಣನ ಅಂತ್ಯ ದರ್ಶನವನ್ನು ತೆಗೆದುಕೊಳ್ಳಲು ಲಾಹೋರಿಗೆ ಹೋದಳು. ಅದೇ ಕಾರಣದ ಮೇಲೆ ಶಾಲೆಯ ಅಧಿಕಾರಿಗಳು ಆಕೆಯನ್ನು ಶಾಲೆಯಿಂದ ವಜಾಮಾಡಿದರಂತೆ! ಅವಳು ಲಾಹೋರಿನಿಂದ ಹಿಂದಿರುಗಿ ಬಂದಮೇಲೆ ಅವಳ ಹೆಸರನ್ನು ಪುನಃ ರಿಜಿಸ್ಟರಿನಲ್ಲಿ ದಾಖಲ್ಮಾಡಿಕೊಳ್ಳುತ್ತೇವೆಂದು ಅಧಿಕಾರಿಗಳು ಹೇಳಿದ್ದರಿಂದ ಇದುವರೆವಿಗೂ ಶಾಲೆಗೆ ಹೋಗುತ್ತಿದ್ದಳು. ಇತ್ತೀಚೆಗೆ ಅವಳ ಹೆಸರನ್ನು ಪುನಃ ರಿಜಿಸ್ಟರಿನಲ್ಲಿ ಸೇರಿಸಿಕೊಳ್ಳುವುದು ಸಾಧ್ಯವಿಲ್ಲವೆಂದೂ, ಅವಳು ಶಾಲೆಗೆ ಬರಕೂಡದೆಂದೂ ಶಾಲೆಯ ಅಧಿಕಾರಿಗಳು ಅಪ್ಪಣೆಮಾಡಿರುವುದಾಗಿ ತಿಳಿದುಬರುತ್ತದೆ.

ಜರ್ಮನಿಯಲ್ಲಿ ಕುಷ್ಠರೋಗವು ಕೇವಲ ಕಡಿಮೆ ಪ್ರಮಾಣದಲ್ಲಿರುವದು. ಕಳೆದ ವರ್ಷ ಹತ್ತೇಹತ್ತು ಜನರು ಕುಷ್ಠರೋಗಿಗಳಿದ್ದರು. ಆದರೆ ಹಿಂದುಸ್ಥಾನದಲ್ಲಿ ಸುಮಾರು ಹತ್ತು ಲಕ್ಷ ಜನರು ಕುಷ್ಠರೋಗಿಗಳಿರುವರು. ಡಾ|| ಒಟ್ಟೋಫಿಶರ್ ಎಂಬವರು ಈ ರೋಗದ ಚಿಕಿತ್ಸೆಯಲ್ಲಿ ನಿಷ್ಣಾತರಾಗಿದ್ದಾರೆ. ಕುಷ್ಠರೋಗಕ್ಕೆ ಆವಾಸಸ್ಥಾನವಾಗಿರುವ ಮಧ್ಯಆಫ್ರಿಕೆಯಲ್ಲಿ ಇವರು ಸಂಚರಿಸಿ ಬಂದು ಅಭಿಪ್ರಾಯಪಡುವದೇನಂದರೆ, "ಕುಷ್ಠರೋಗವು ಅಂಟುರೋಗವಲ್ಲ. ಅದನ್ನು ಗುಣಪಡಿಸುವದು ಸಾಧ್ಯವಿದೆ. ರೋಗವು ಪ್ರಾರಂಭವಾದ 3 ವರ್ಷಗಳಿಂದ 20 ವರ್ಷಗಳವರೆಗೆ ಅದರ ಕುರುಹುಗಳೇ ಕಾಣಿಸದಿರುವ ಕಾರಣ ಅದನ್ನು ಕಂಡುಹಿಡಿದು ಗುಣಪಡಿಸುವದು ಕಷ್ಟವಾಗುವದು. ಈ ರೋಗವು ರೋಗಿಗಳ ಉಗುಳು, ಶ್ವಾಸ ಮೊದಲಾದುವುಗಳಿಂದ ಇತರರಿಗೆ ಹರಡುವದೇ ಹೊರತು ಸ್ಪರ್ಶಮಾತ್ರದಿಂದ ಅಂಟುವದಿಲ್ಲ. ಅವರ ಮೂಗು ಮತ್ತು ಹುಣ್ಣುಗಳಿಂದ ಹೊರಡುವ ದ್ರವವೇ ರೋಗದ ಸೋಂಕನ್ನು ಪ್ರಸಾರಮಾಡುವುವು. ದೇವರು ಈ ರೋಗನಿವಾರಣೆಗೆ ತಕ್ಕ ವನಸ್ಪತಿಗಳನ್ನು ನಿರ್ಮಿಸಿರುವನು." ಭಾರತೀಯ ವೈದ್ಯರು ಈ ವಿಷಯವನ್ನು ಸ್ವಲ್ಪ ಗಮನಿಸಿ ಚಿಕಿತ್ಸಾಕ್ರಮಗಳನ್ನೂ, ನಿವಾರಣೋಪಾಯವನ್ನೂ ಕಂಡುಹಿಡಿದು ಅವುಗಳನ್ನು ಪ್ರಸಾರಮಾಡಿದರೆ, ಈ ರೋಗದಿಂದ ನರಳುತ್ತಿರುವ ಅಸಂಖ್ಯ ಭಾರತೀಯರಿಗೆ ಮಹೋಪಕಾರಮಾಡಿದ ಪುಣ್ಯವು ಲಭಿಸುವುದು.

ಕಲ್ಕತ್ತೆಯಲ್ಲಿ ಶ್ರೀಯುತ ಸೇನಗುಪ್ತ ಮತ್ತು ಶ್ರೀಯುತ ಸುಭಾಸ್‌ಚಂದ್ರಬೋಸ್ ಎಂಬಿಬ್ಬರು ಉಜ್ವಲದೇಶಾಭಿಮಾನಿಗಳಿರುವರು. ದೇಶಾಭಿಮಾನದಲ್ಲಿಯೂ, ಸ್ವಾರ್ಥತ್ಯಾಗದಲ್ಲಿಯೂ, ಶೌರ್ಯೌದಾರ್ಯಾದಿ ಸದ್ಗುಣಗಳಲ್ಲಿಯೂ ಒಬ್ಬರಿಗಿಂತಲೂ ಇನ್ನೊಬ್ಬರು ಕಡಿಮೆಯಾಗಿಲ್ಲ. ಆದರೆ ಇವರೀರ್ವರಿಗೂ ಏಕಮತ್ಯವಿಲ್ಲದಿರುವುದೇ ಪರಸ್ಪರ ಮನಸ್ತಾಪಕ್ಕೆ ಕಾರಣವಾಗಿದೆ. ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಲೆಕ್ಷನ್ ಬಗ್ಗೆ ಈ ತಿಂಗಳು 2 ನೆಯ ತಾರೀಖಿನ ದಿವಸ ಹೌರ ಟೌನ್‌ಹಾಲ್‌ನಲ್ಲಿ ಮೀಟಿಂಗ್ ನಡೆಯಿತು. ಶ್ರೀಯುತ ಸೇನಗುಪ್ತರು ಭಾಷಣಮಾಡಿದರು. ಪ್ರೆಸಿಡೆಂಟ್ ಗಂಗಲಿ ಎಂಬವರು ಭಾಷಣ ಮಾಡುವುದಕ್ಕೇಳಲು ತರುಣರು ಗಲಭೆಯನ್ನೆಬ್ಬಿಸಿ ಭಾಷಣವನ್ನು ನಿರೋಧಿಸಿದರು. ಆಗ ಸೇನಗುಪ್ತರ ಪಕ್ಷದವರಿಗೂ ಸುಭಾಸ್‌ಚಂದ್ರಬೋಸ್‌ರ ಪಕ್ಷದವರಿಗೂ ಪರಸ್ಪರ ಮುಷ್ಟಾಮುಷ್ಟಿ ಹಣಾಹಣಿಯುದ್ಧಗಳಾದುವು. ಸೇನಗುಪ್ತರೇ ಅಂತ್ಯದಲ್ಲಿ ಸಮಾಧಾನಮಾಡಿದರು. ಈ ವಿಷಯವನ್ನು ಎಲೆಕ್ಷನ್ ಪೂರೈಸಿದಮೇಲೆ ಪಂಚಾಯಿತರಿಗೆ ಹಾಕಿಕೊಡಬೇಕೆಂದು ಸುಭಾಸ್‌ಚಂದ್ರಬೋಸರು ಹೇಳಿದುದಕ್ಕೆ ಇದು ನ್ಯಾಯ ಸಮ್ಮತವಾದುದಲ್ಲವೆಂದು ಸೇನಗುಪ್ತರೊಂದು ತಂತಿಯನ್ನು, ಸುಭಾಸ್‌ಚಂದ್ರಬೋಸರೊಂದು ತಂತಿಯನ್ನು ಎಲೆಕ್ಷನ್ ನಿಲ್ಲಿಸುವುದು ಅನ್ಯಾಯವಾಗುವುದೆಂದೂ, ಜನರ ಸಹಾನುಭೂತಿಯು ತಮ್ಮಕಡೆಗಿರುವುದೆಂದೂ ಮಹಾತ್ಮರಿಗೆ ಕಳುಹಿಸಿರುತ್ತಾರೆ. ಭರತಖಂಡದಲ್ಲಿ ದೇಶಭಕ್ತಿಗೆ ತವರ್ಮನೆಯೆನಿಸಿದ ಬಂಗಾಲದಲ್ಲಿ ಹೀಗೆ ಇಬ್ಬಣವಾಗಿರುವುದು ದುಃಖಕರವಾದ ಸಂಗತಿಯಾಗಿದೆ.

[3ನೆಯ ಪುಟದಿಂದ ಮುಂದುವರಿದುದು]

ನೆರವೇರದೆ ಹೋಯಿತೆಂದು ತಿಳಿಸಲು ವಿಷಾದಿಸುತ್ತೇನೆ. ಬೀಡು ಕಬ್ಬಿಣದ ಧಾರಣೆಯೂ, ಕೆಮಿಕಲ್ಸುಗಳ ಧಾರಣೆಯೂ, ಒಂದೇ ಸಮವಾಗಿ ತಗ್ಗುತ್ತಾ ಬಂದುದರಿಂದಲೂ, ಮರದ ಭಟ್ಟಿಯಿಂದ ಇದ್ದಿಲಿನ ಜೊತೆಗೆ ದೊರೆಯುವ ಉಪವಸ್ತುಗಳಲ್ಲಿ ಮುಖ್ಯವಸ್ತುವಾದ "ಲೈಂ ಅಸಿಟೇಟ್" ಎಂಬ ಲವಣಕ್ಕೆ ಗಿರಾಕಿಯು ಹಟಕ್ಕನೆ ವಿಪರೀತವಾಗಿ ಹೋದುದರಿಂದಲೂ, ವರ್ಷದ ಪೂರ್ವಭಾಗದಲ್ಲಿ ಸುಮಾರು 4 ಲಕ್ಷ ರೂಪಾಯಿಗಳು ನಷ್ಟವುಂಟಾಗಿದೆ. ಈಗ ನಡೆಯುತ್ತಿರುವ ಅರ್ಧವರ್ಷದ ಪರಿಸ್ಥಿತಿಯೂ ಕೂಡ, ಪ್ರೋತ್ಸಾಹಕರವಾಗಿಲ್ಲ. ಕಬ್ಬಿಣವನ್ನು ತಯಾರಿಸುವುದಕ್ಕೆ ತಗಲುವ ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಸರ್ವಪ್ರಯತ್ನವನ್ನೂ ಮಾಡಿದ್ದರೂ ಸಹ, 1931 ನೇ ಜೂನ್ 30 ನೆಯ ತಾರೀಖಿಗೆ ಅಖೈರ್ ವರ್ಷಕ್ಕೆ ಕಾರ್ಖಾನೆಯ ಹುಟ್ಟುವಳಿ ಕೆಲಸದಲ್ಲಿ $4\frac{1}{2}$ ಲಕ್ಷ ರೂಪಾಯಿಗಳ ನಷ್ಟವು ಕಂಡುಬರುವುದಾಗಿದೆ. ಇದೂ ಅಲ್ಲದೆ, ಹೋದವರ್ಷದಲ್ಲಿ ಕೆಲಸ ನಡೆಯಿಸಿದುದರ ಸಂಬಂಧದಲ್ಲಿ ಸುಮಾರು $1\frac{1}{2}$ ಲಕ್ಷ ರೂಪಾಯಿಗಳ ನಷ್ಟವುಂಟಾಗಿದೆ. ಇದನ್ನು ಅಮಾನತ್ತಿನಲ್ಲಿಟ್ಟಿದೆ.

ಕಬ್ಬಿಣದ ವ್ಯಾಪಾರವು ಈಗಿರುವ ಸ್ಥಿತಿಯಲ್ಲಿ, ಕಾರ್ಖಾನೆಯ ವೆಚ್ಚವು ಕಳೆದು ಉಳಿಯುವ ಹಣದಿಂದ ಇನ್ನು ಸ್ವಲ್ಪಕಾಲದಲ್ಲೇ ಈ ನಷ್ಟವನ್ನು ಭರ್ತಿಮಾಡುವ ಸಂಭವವು ಸ್ವಲ್ಪವೂ ಕಾಣಬರುವುದಿಲ್ಲ. ಆದಕಾರಣ, ನಷ್ಟದ ಮೊಬಲಗನ್ನು ಈ ವರ್ಷದ ಸಾಮಾನ್ಯ ಲೆಕ್ಕಗಳಿಂದ ವಜಾಮಾಡಬೇಕೆಂದು ಉದ್ದೇಶಿಸಲಾಗಿದೆ.

ಈ ಕಾರ್ಖಾನೆಯ ಕೆಲಸಕಾರ್ಯಗಳನ್ನು ಇನ್ನು ಮುಂದೆ ಯಾವರೀತಿಯಲ್ಲಿ ನಡೆಯಿಸಬೇಕೆಂಬ ವಿಷಯವನ್ನು ಸರ್ಕಾರದವರು ತೀವ್ರಾಸಕ್ತಿಯಿಂದ ಪರ್ಯಾಲೋಚಿಸುತ್ತಿದ್ದಾರೆ. ಈ ಕಾರ್ಖಾನೆಯಲ್ಲಿ ತಯಾರಾಗುವ ಪದಾರ್ಥಗಳ ಧಾರಣೆಗಳು ವಿಪರೀತವಾಗಿ ಇಳಿಯುತ್ತಾ ಬಂದಿವೆ. ಪದಾರ್ಥಗಳ ಧಾರಣೆಗಳು ಹೀಗೆ ಇಳಿದು ಹೋಗುತ್ತ ಬಂದು ಆ ರೀತಿಪ್ರತಿಕೂಲಸ್ಥಿತಿಯಲ್ಲಿ ಅವಿಚ್ಛಿನ್ನವಾಗಿ ಹೆಣಗಬೇಕಾಗಿ ಬಂದುದರಿಂದ, ಈ ಕಾರ್ಖಾನೆಯನ್ನು ಏರ್ಪಡಿಸಿದ್ದಾಗ್ಗೆ ಇದರಿಂದ ನಿರೀಕ್ಷಿಸಿದ್ದಂತೆ ಲಾಭವು ದೊರೆಯಲು, ಅವಕಾಶವೇ ಉಂಟಾಗಿಲ್ಲ.

ಎರಡು ವಿಭಾಗಗಳಲ್ಲಿ ಬದಲಾವಣೆಗಳನ್ನು ನಡೆಯಿಸಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ. ಸೌದೆಯ ಭಟ್ಟಿಯಿಂದ ಇದ್ದಿಲಿನ ಜೊತೆಗೆ ದೊರೆಯುವ ಇತರ ವಸ್ತುಗಳು ಲಾಭದಾಯಕವಾಗಿ ಮಾರಾಟವಾಗಲು ಅವಕಾಶವು ತಪ್ಪಿಹೋಯಿತು. ಆದಕಾರಣ, ಸೌದೆಯನ್ನು ಭಟ್ಟಿ ಇಳಿಸಿ ಇದ್ದಿಲನ್ನು ಒದಗಿಸಿಕೊಳ್ಳುವ ಕೆಲಸಗಳನ್ನು ನಿಲ್ಲಿಸಬೇಕೆಂಬ ವಿಷಯವೂ, ಗುಂಡಿಗಳಲ್ಲಿ ಸೌದೆಯನ್ನು ಸುಟ್ಟು ತಯಾರಿಸಿದ ಇದ್ದಿಲನ್ನೇ ಬ್ಲಾಸ್ಟ್ ಫರ್ನೆಸ್ಸಿಗೆ ಒದಗಿಸಿಕೊಳ್ಳಬೇಕೆಂಬ ವಿಷಯವೂ ಈಗ ಪರ್ಯಾಲೋಚನೆಯಲ್ಲಿವೆ. ಕಾರ್ಖಾನೆಯಲ್ಲಿ ತಯಾರಾದ ಬೀಡು ಕಬ್ಬಿಣವೆಲ್ಲಕ್ಕೂ ಬೆಲೆ ಹೊಂದಿಸಿ ಗಿರಾಕಿದೊರೆಯುವಂತೆ ಮಾಡಬೇಕಾದರೆ, ಅದರಿಂದ ಉಕ್ಕನ್ನು ತಯಾರುಮಾಡುವ ಏರ್ಪಾಡನ್ನು ಕುರಿತು ಮತ್ತಷ್ಟು ಪರ್ಯಾಲೋಚನೆ ಮಾಡುವುದೂ ಅವಶ್ಯಕವಾಗಿದೆ.

1930-31ನೆಯ ಸಾಲಿನ ಆಯವ್ಯಯಗಳ ತಿದ್ದುಪಾಟು ಅಂದಾಜು.

ಈಗ ರಚಿಸಿರುವ ತಿದ್ದುಪಾಟು ಅಂದಾಜುಗಳ ಮೇರೆಗೆ ಒಟ್ಟು ವೆಚ್ಚವು 3 ಕೋಟಿ 99 ಲಕ್ಷ ರೂಪಾಯಿಗಳಿಗೆ ಏರಬಹುದೆಂದು ತೋರಿಬಂದಿದೆ. ಇದರಲ್ಲಿ 5 ಲಕ್ಷ ರೂಪಾಯಿಗಳನ್ನು ನೀರಾವರಿ ಕಾಮಗಾರಿಗಳ ನಿಧಿಯಿಂದ ಒದಗಿಸಲಾಗುವುದು. ಆದಕಾರಣ 1930-31 ನೆಯ ಸಾಲಿನಲ್ಲಿ ವಾರ್ಷಿಕ ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ, ನಿವ್ವಳ ವೆಚ್ಚವು 3 ಕೋಟಿ 94 ಲಕ್ಷ ರೂಪಾಯಿಗಳು ಹೊಸ ಸಾಲವನ್ನು ತೆಗೆಯುವ ಸಂಬಂಧದಲ್ಲಿ ಮಾಡಿದ ಹೆಚ್ಚಿನ ವೆಚ್ಚಕ್ಕೆ, ಹಣವನ್ನೊದಗಿಸಿದುದಲ್ಲದೆ, ಈ ವರ್ಷದಲ್ಲಿ ಒದಗಿದ ಜರೂರು ವೆಚ್ಚಗಳಿಗಾಗಿ 7 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿಯೂ ಕೂಡ, ಒಟ್ಟು ವೆಚ್ಚವು ಬಜೆಟ್ಟಿನಲ್ಲಿ ಕಾಣಿಸಿರುವ ಪರಿಮಿತಿಗೆ ಮೀರದಹಾಗಿರುವಂತೆ ಮಾಡಲು ಸಾಧ್ಯವಾದೀತೆಂದು ನಾನು ಭಾವಿಸಿದ್ದೇನೆ.

1930-31ನೆಯ ಸಾಲಿನ ಬಂಡವಾಳದ ವೆಚ್ಚ.

ಬಂಡವಾಳದ ಕಾಮಗಾರಿಗಳ ಕಾರ್ಯಕ್ರಮದ ವೆಚ್ಚಕ್ಕಾಗಿ ಬಜೆಟ್ಟಿನಲ್ಲಿ $77\frac{1}{2}$ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದ್ದಿತು. ಇರ್ವಿನ್ ನಾಲಾ ಕಾಮಗಾರಿಗಳ ಮೊದಲನೆಯಭಾಗವನ್ನು ಮುಗಿಸಿ 15,000 ದಿಂದ 20,000 ಎಕರೆಗಳಷ್ಟು ಪ್ರದೇಶವನ್ನು ಮುಂದಣ ಜುಲೈ ತಿಂಗಳೊಳಗಾಗಿ ನೀರಾವರಿ ಸಾಗುವಳಿಗೆ ಅನುಕೂಲಿಸುವಂತೆ ನಾಲೆಯಿಂದ ನೀರೊದಗಲು ಹಕ್ಕಷ್ಟು ಶೀಘ್ರವಾಗಿ [illegible]ವನ್ನು ನೆರವೇರಿಸುವುದಕ್ಕಾಗಿ, 6 ಲಕ್ಷ ರೂಪಾಯಿಗಳ ಹೆಚ್ಚಿಗೆ ಗ್ರ್ಯಾಂಟೊಂದನ್ನು ಕೃಷ್ಣರಾಜಸಾಗರದ ಕಾಮಗಾರಿಗಳ ಚೀಫ್ ಇಂಜನಿಯರವರ ವಶಕ್ಕೆ ಕೊಡಲಾಗಿದೆ; ಬಂಡವಾಳದ ಕಾಮಗಾರಿಗಳ ಕಾರ್ಯಕ್ರಮದಲ್ಲಿ ಕೆಲವು ಪುನರ್ವ್ಯವಸ್ಥೆಯ ಏರ್ಪಾಡುಗಳನ್ನು ಮಾಡಿದ ಮೇಲೆ ಚಾಲ್ತಿ ಸಾಲಿನಲ್ಲಿ ಬಂಡವಾಳದ ಕಾಮಗಾರಿಗಳ ಒಟ್ಟು ವೆಚ್ಚವು ಸುಮಾರು 81 ಲಕ್ಷ ರೂಪಾಯಿಗಳಿಗೆ ಬರುವುದೆಂದು ನಿರೀಕ್ಷಿಸಿದೆ.

1931-32ನೆಯ ಸಾಲಿನ ಆಯವ್ಯಯಗಳ ಅಂದಾಜು.

ಇನ್ನು ಮುಂದಿನ ವರ್ಷದ ಆಯವ್ಯಯಗಳ ವಿಷಯವನ್ನು ಕುರಿತು ವಿಚಾರಮಾಡೋಣ. ನಾನಾ ಇಲಾಖೆಗಳ ವೆಚ್ಚಕ್ಕಾಗಿ ಒದಗಿಸಬೇಕಾದ ಮೊಬಲಗುಗಳಲ್ಲೇ ಒಟ್ಟು $22\frac{1}{2}$ ಲಕ್ಷ ರೂಪಾಯಿಗಳನ್ನು ಕಡಿಮೆ ಮಾಡಿದುದಾಯಿತು. ಇಷ್ಟುಭಾರಿಯಾಗಿ ಹಣವನ್ನು ಕಡಿಮೆಮಾಡಿದಾಗ್ಯೂ ಆಯವ್ಯಯಗಳನ್ನು ಸಮತೂಕಕ್ಕೆ ತರಲು ಇದರಿಂದಲೇ ಸಾಧ್ಯವಾಗಲಿಲ್ಲ. ಆದಕಾರಣ ಹೆಚ್ಚಿಗೆ ತೆರಿಗೆಯನ್ನು ಹಾಕುವ ಕೆಲವು ಸಲಹೆಗಳನ್ನು ಸೂಚಿಸಬೇಕಾಗಿ ಬಂದಿದೆ.

ಮೈಸೂರು ಸೀಮೆಯಲ್ಲಿ ತೆರಿಗೆಗಳ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಸರ್ ಚಾರ್ಲ್ಸ್ ಟಾಡ್‌ಹಂಟರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ಏರ್ಪಟ್ಟಿದ್ದಿತಷ್ಟೆ. ತೆರಿಗೆಯ ಭಾರವು ಎಲ್ಲರ ಮೇಲೂ ಸಂಸಮವಾಗಿರುವಂತೆ ಮಾಡುವ ಏರ್ಪಾಡುಗಳಲ್ಲಿ ವರಮಾನದ ತೆರಿಗೆಯ ದರವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವುದೂ ಒಂದಾಗಿದೆಯೆಂದು ಆ ಸಮಿತಿಯವರು 1929 ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಸಲಹೆಮಾಡಿದರು. ಈ ಸಲಹೆಯನ್ನು "ರಿಟ್ರೆಂಚ್‌ಮೆಂಟ್ ಕಮಿಟಿ" ಯವರೂ ಅನುಮೋದಿಸಿದ್ದಾರೆ. ಅಲ್ಲದೆ ಈ ವಿಚಾರದಲ್ಲಿ ಆವಶ್ಯಕವಾದ ಕಾನೂನೊಂದನ್ನು ಕೂಡಲೆ ಏರ್ಪಡಿಸುವುದಕ್ಕಾಗಿ ಸರ್ಕಾರದವರಿಗೆ ಒಂದು ನಿರ್ಣಯವನ್ನೂ ಕಳುಹಿಸಿದ್ದಾರೆ. ಸಂಬಳಗಳಲ್ಲಿ ಒಂದು ಶೇಕಡಾವಾರು ಮೊಬಲಗುಗಳನ್ನು ಕಡಿಮೆಮಾಡಬೇಕೆಂಬುದಾಗಿ ಅನೇಕ ಸಾರಿ ಸಲಹೆಗಳು ಬಂದಿವೆ. ವರಮಾನದ ತೆರಿಗೆಯ ದರಗಳನ್ನು ಹೆಚ್ಚಿಸಿದಲ್ಲಿ ವಸ್ತುತಃ ಆ ರೀತಿ ಸಂಬಳಗಳಲ್ಲಿ ಶೇಕಡಾವಾರು ಮೊಬಲಗನ್ನು ಕಡಿಮೆ ಮಾಡಿದಂತೆಯೇ ಆಗುವುದು. ಇದಲ್ಲದೆ ಸರ್ಕಾರಿ ಅಧಿಕಾರಿಗಳು ಮಾತ್ರವೇ ಅಲ್ಲದೆ, ಸಾಮಾನ್ಯವಾಗಿ ಹಣಗಾರರಾಗಿರುವ ಇತರರಿಂದಲೂ ಹೀಗೆ ತೆರಿಗೆಯು ಬರಲು ಅದರಿಂದ ಅನುಕೂಲವಾಗುತ್ತದೆ. ಆದಕಾರಣ ವರಮಾನದ ತೆರಿಗೆಯ ದರಗಳನ್ನು ಹೆಚ್ಚಿಸುವ ಈ ಮಸೂದಾ ಕಾನೂನಿಗೆ ಮಹಾಜನರಿಂದ ವಿಶೇಷ ಹೆಚ್ಚಾಗಿ ಒತ್ತಾಸೆಯು ದೊರೆಯುವುದೆಂದು ನಿರೀಕ್ಷಿಸಲಾಗಿದೆ. ಸಂಸ್ಥಾನದ ಆಯವ್ಯಯಗಳ ಈಗಣ ಸ್ಥಿತಿಯಲ್ಲಿ ಈ ಏರ್ಪಾಡನ್ನು ಶೀಘ್ರವಾಗಿ ಆಚರಣೆಗೆ ತರತಕ್ಕುದು ಅವಶ್ಯಕವೆಂದು ಸರ್ಕಾರದವರು ಭಾವಿಸಿದ್ದಾರೆ. ಈ ಸಂಬಂಧದಲ್ಲಿ ರಚಿಸಿರತಕ್ಕ ಮಸೂದಾ ಕಾನೂನಿನ ಮುಖ್ಯ ನಿಯಮಗಳ ವಿವರವೊಂದನ್ನು ಈ ಸಭೆಯವರ ಪರ್ಯಾಲೋಚನೆಗಾಗಿ ಒಪ್ಪಿಸಿದೆ. ಈ ಕಾನೂನನ್ನು ವಿಧಾಯಕಮಾಡುವ ವಿಷಯದಲ್ಲಿ ಸರ್ಕಾರದವರಿಗೆ ಈ ಸಭೆಯವರಿಂದ ಸಂಪೂರ್ಣವಾಗಿ ಒತ್ತಾಸೆಯು ದೊರೆಯುವುದೆಂದು ನಾನು ನಂಬಿದ್ದೇನೆ.

1920 ನೆಯ ಇಸವಿ ಜನವರಿ ತಿಂಗಳಲ್ಲಿ, ಸರ್ಕಾರದವರು ಮಿಡ್ಲ್ ಸ್ಕೂಲುಗಳಲ್ಲಿ ಫೀಜುಗಳನ್ನು ವಜಾಮಾಡತಕ್ಕುದೆಂದು ಹುಕುಂಮಾಡಿದರು. ಇದರಿಂದ ಸರ್ಕಾರಕ್ಕೆ ಬರತಕ್ಕ ವರಮಾನದಲ್ಲಿ ಸುಮಾರು 1,03,758 ರೂಪಾಯಿಗಳು ಕಡಿಮೆಯಾಗುವುದೆಂದು ಅಂದಾಜಾಗಿದ್ದಿತು. ಮಿಡ್ಲ್ ಸ್ಕೂಲು ವಿದ್ಯಾಭ್ಯಾಸವನ್ನು ನಡೆಯಿಸುವುದಕ್ಕೆ ಸರ್ಕಾರದವರಿಗೆ ತಗಲುವ ವೆಚ್ಚವು ವಿಪರೀತವಾಗಿ ಏರುತ್ತಾ ಬರುತ್ತಿದೆ. ಅದು 1919-20 ನೆಯ ಇಸವಿಯಲ್ಲಿ 4,10,901 ರೂಪಾಯಿಗಳಾಗಿದ್ದುದು, ಈಗ 9,16,824 ರೂಪಾಯಿಗಳಿಗೆ ಹೆಚ್ಚಿದೆ. ಸರ್ಕಾರದ ವೆಚ್ಚವು ಹೆಚ್ಚಿರುವುದರ ಪ್ರಯುಕ್ತ, ಹುಟ್ಟುವಳಿಯನ್ನು ಹೆಚ್ಚಿಸುವುದಕ್ಕೂ, ವೆಚ್ಚವನ್ನು ತಗ್ಗಿಸುವುದಕ್ಕೂ, ಸಾಧ್ಯವಿರುವ ಎಲ್ಲ ಮಾರ್ಗಗಳನ್ನೂ ಗುರುತಿಸಬೇಕಾದುದು ಅವಶ್ಯಕವಾಗಿದೆ. ಇದು ತಮಗೆ ವೇದ್ಯವಾಗಿಯೇ ಇರಬೇಕು. ಆದುದರಿಂದ ಈ ಸಂಬಂಧದಲ್ಲಿ, ಮಿಡ್ಲ್ ಸ್ಕೂಲುಗಳಲ್ಲಿ ಮತ್ತೆ ಫೀಜನ್ನು ವಿಧಿಸಿ ವಸೂಲ್ಮಾಡುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಬೇಕಾಗಿ ಬಂದಿತು. ಪ್ರಾಥಮಿಕ ವಿದ್ಯಾಭ್ಯಾಸದ ಪ್ರಚಾರಣೆಯು ಸಂಸ್ಥಾನದ ದ್ರವ್ಯಾನುಕೂಲತೆಯನ್ನು ಅವಲಂಬಿಸಿದೆಯೆಂದು ಹೇಳಬಹುದು. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲು ಹುಟ್ಟುವಳಿಯಿಂದ ಮೊದಲು ಹಣವನ್ನೊದಗಿಸಬೇಕಾದುದು ಅತ್ಯಗತ್ಯವೆಂಬುದನ್ನು ತಾವೆಲ್ಲರೂ ಅನುಮೋದಿಸಿಯೇ ಅನುಮೋದಿಸುವಿರಿ. ಸರ್ಕಾರದವರು ರಿಟ್ರೆಂಚ್‌ಮೆಂಟ್ ಕಮಿಟಿಯವರೊಡನೆ ಆಲೋಚಿಸಿ, ಮಿಡ್ಲ್ ಸ್ಕೂಲು ತರಗತಿಗಳಲ್ಲಿ ಫೀಜುಗಳನ್ನು ಪುನಃ ವಸೂಲ್ಮಾಡತಕ್ಕುದೆಂತಲೂ, ಆದರೆ "ಫ್ರೀ ಷಿಪ್" ಗಳಿಗೆ ಹಕ್ಕಷ್ಟು ಅವಕಾಶ ಕೊಡತಕ್ಕುದೆಂತಲೂ ತೀರ್ಮಾನಿಸಿರುತ್ತಾರೆ. ಈ ತೀರ್ಮಾನದಂತೆ ಮುಂದಣವರ್ಷದಿಂದ ಆಚರಣೆಗೆ ತರಲು ಆವಶ್ಯಕವಾದ ಹುಕುಮುಗಳನ್ನು ಸಾದರಮಾಡಲಾಗುವುದು.

1931-32 ನೆಯ ಸಾಲಿನಲ್ಲಿ ವೆಚ್ಚವನ್ನು ತಗ್ಗಿಸುವುದಕ್ಕಾಗಿ ಮಾಡಿರುವ ಏರ್ಪಾಡುಗಳು.

ಮುಂದಣ ವರ್ಷದಲ್ಲಿ ಎಷ್ಟು ಹಣವನ್ನು ವ್ಯಯಮಾಡಬೇಕೆಂಬ ಅಂದಾಜನ್ನು ಸಿದ್ಧಪಡಿಸಿರುವುದರಲ್ಲಿ, ಎಷ್ಟುಮಟ್ಟಿಗೆ ವೆಚ್ಚವನ್ನು ತಗ್ಗಿಸುವ ಏರ್ಪಾಡುಗಳನ್ನು ಮಾಡಿದ್ದೇವೆಂಬ ಅಂಶವನ್ನು ತಮ್ಮ ಅವಗಾಹನೆಗೆ ತರುವುದಕ್ಕಾಗಿ, ಅವುಗಳಲ್ಲಿ ಹೆಚ್ಚು ಪ್ರಾಮುಖ್ಯವಾದುವುಗಳನ್ನು ಈಗ ಸಂಕ್ಷೇಪವಾಗಿ ಸೂಚಿಸುತ್ತೇನೆ.

ಪಬ್ಲಿಕ್ ವರ್ಕ್ಸ್ ಬಾಬಿನಲ್ಲಿಯೂ, ಸಾರ್ವಜನಿಕ ಏರ್ಪಾಡುಗಳಿಗೆ ಗ್ರ್ಯಾಂಟುಗಳು—ಎಂಬ ಬಾಬಿನಲ್ಲಿಯೂ 9 ಲಕ್ಷ ರೂಪಾಯಿಗಳಷ್ಟು ಭಾರಿಯಾಗಿ ವೆಚ್ಚಗಳನ್ನು ಕಡಿಮೆಮಾಡಿ ಹಣವನ್ನು ಒದಗಿಸಲಾಗಿದೆ.

ಸಂಪದಭಿವೃದ್ಧಿ ಸಮಾಜದ ಕಾರ್ಯಕಲಾಪಗಳನ್ನು ಸದ್ಯ ನಿಲ್ಲಿಸಿ ಬಿಡಬೇಕೆಂದು ಉದ್ದೇಶಿಸಲಾಗಿದೆ. ಸಂಪದಭಿವೃದ್ಧಿ ಬಾಬಿನಲ್ಲಿ ಒದಗಿಸುತ್ತಿದ್ದ ಮೊಬಲಗನ್ನು ಸಂಪೂರ್ಣವಾಗಿ ಬಿಡಲಾಗಿದೆ. ಆದರೆ ಮುಂದಿನ ದಸರಾದಲ್ಲಿ ವಾಡಿಕೆಯ ವಸ್ತುಪ್ರದರ್ಶನವನ್ನು ನಡೆಯಿಸುವುದಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಸಿವಿಲ್ ಆಡಳಿತದ ಬಾಬಿನಲ್ಲಿ, ಅದರಲ್ಲಿಯೂ ಸಾಮಾನ್ಯ ಆಡಳಿತದ ಬಾಬಿನಲ್ಲಿ 2 ಲಕ್ಷ ರೂಪಾಯಿಗಳವರೆಗೂ ವೆಚ್ಚಗಳನ್ನು ಕಡಿಮೆಮಾಡಲಾಗಿದೆ.

ವಿದ್ಯಾಭಿವೃದ್ಧಿಗೂ ಮತ್ತು ಸಂಪದಭಿವೃದ್ಧಿಗೂ ಸಂಬಂಧಪಟ್ಟ ನಾನಾ ಇಲಾಖೆಗಳ ಕಾರ್ಯಕಲಾಪಗಳಿಗೆ ಚಾಲ್ತಿ ವರ್ಷ 72 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು: ಮುಂದಿನ ವರ್ಷ ಅವುಗಳಿಗೆ 66 ಲಕ್ಷ ರೂಪಾಯಿಗಳನ್ನು ಮಾತ್ರವೇ ಒದಗಿಸಿದ್ದೇವೆ.

ಸೈನ್ಯದ ಇಲಾಖೆಯಲ್ಲಿ ವಿಶೇಷ ಮಿಗುತಾಯ ಉಂಟಾಗುವುದಾಗಿ ಕಳೆದ ಬಜೆಟ್ ಅಧಿವೇಶನದ ಭಾಷಣದಲ್ಲಿ ನಾನು ತಮಗೆ ತಿಳಿಸಿದ್ದೆನು. ಹೀಗೆ ಮಿಗುತಾಯವುಂಟಾಮುದಕ್ಕೆ [illegible]ದಿಂದ ಸ್ಥಳಕ್ಕೆ ಸಾಮಾನುಗಳೇ ಮುಂತಾದುವುಗಳನ್ನು ಸಾಗಿಸಲು ಎತ್ತಿನ ಗಾಡಿಗಳಿಗೆ ಬದಲಾಗಿ ಮೋಟಾರು ಲಾರಿಗಳನ್ನು [illegible]ದುದೇ ಮುಖ್ಯಕಾರಣ. ಈ ಬಾಬಿನಲ್ಲಿಯೂ ಮತ್ತು ಇತರ ಬಾಬುಗಳಲ್ಲಿಯೂ ವೆಚ್ಚವನ್ನು ಇನ್ನೂ ಕಡಿಮೆಮಾಡಿರುವುದರಿಂದ ಸೈನ್ಯದ ಇಲಾಖೆಯ ವೆಚ್ಚದಲ್ಲಿ ಚಾಲ್ತಿಸಾಲಿಗಿಂತಲೂ ಮುಂದಿನ ಸಾಲಿನಲ್ಲಿ ಸುಮಾರು 2 ಲಕ್ಷ ರೂಪಾಯಿಗಳಷ್ಟು ಕಡಿಮೆಮಾಡಿ ಹಣವನ್ನೊದಗಿಸಲಾಗಿದೆ.

ಸಿಬ್ಬಂದಿಯ ಬಾಬಿನಲ್ಲಿಯೂ, ಪ್ರಯಾಣದ ಭತ್ಯ, ಸಾದಿಲ್ವಾರು ಮುಂತಾದ ಖರ್ಚಿನ ಬಾಬುಗಳಲ್ಲಿಯೂ ವೆಚ್ಚವನ್ನು ಬಹಳಮಟ್ಟಿಗೆ ತಗ್ಗಿಸಿದ್ದೇವೆ. ಸಂಸ್ಥಾನದ ಎಲ್ಲ ಇಲಾಖೆಗಳಲ್ಲಿಯೂ ವಿಶೇಷ ಸ್ವಭಾವದ ವೆಚ್ಚಗಳನ್ನು ಸಾಧ್ಯವಾದಮಟ್ಟಿಗೆ ಕಡಿಮೆಮಾಡಿದ್ದೇವೆ. ಅಲ್ಲದೆ, ಹುಟ್ಟುವಳಿಯು ಬರತಕ್ಕ ಇಲಾಖೆಗಳ ವಿಷಯದಲ್ಲಿಯೂ ಕೂಡ ಮುಂದಣ ವರ್ಷದ ಅಂದಾಜುಗಳನ್ನು ತಯಾರಿಸುವಾಗ್ಗೆ ವೆಚ್ಚದ ಮೊಬಲಗುಗಳನ್ನು ಬಹಳಮಟ್ಟಿಗೆ ಕಡಿಮೆಮಾಡಬೇಕಾಯಿತು.

ಆಯಾ ವರ್ಷದ ಹುಟ್ಟುವಳಿಯಿಂದಲೇ ವೆಚ್ಚಕ್ಕೆ ಹಣವನ್ನು ಒದಗಿಸಬೇಕಾಗಿರುವ ಬಾಬುಗಳಲ್ಲಿ 3 ಲಕ್ಷ ರೂಪಾಯಿಗಳಷ್ಟು ಮಿಗುತಾಯಮಾಡಿದ್ದೇವೆ. ರೈಲ್ವೆಗಳ ಬಾಬಿನಲ್ಲಿ ಕೆಲಸ ನಡೆಯಿಸುವ ವೆಚ್ಚಕ್ಕಾಗಿ ಚಾಲ್ತಿಸಾಲಿನ ತಿದ್ದುಪಾಟು ಅಂದಾಜಿಗಿಂತಲೂ ಮುಂದಿನ ಸಾಲಿಗೆ ಸುಮಾರು 7 ಲಕ್ಷ ರೂಪಾಯಿಗಳಷ್ಟು ಕಡಿಮೆ ಮೊಬಲಗನ್ನು ಒದಗಿಸಲಾಗಿದೆ. ಕೆಟ್ಟುಹೋಗುವ ಯಂತ್ರೋಪಕರಣಗಳನ್ನು ಸರಿಪಡಿಸುವುದಕ್ಕೂ, ಹಳೆಯವುಗಳಿಗೆ ಬದಲಾಗಿ ಹೊಸ ಯಂತ್ರೋಪಕರಣಗಳನ್ನು ಹಾಕುವುದಕ್ಕೂ ಮುಂದೆ ಕೆಲವು ವರ್ಷಗಳ ಕಾಲದಲ್ಲಿ ತಗಲುವ ವೆಚ್ಚಗಳಿಗಾಗಿ ಸಾಕಾಗುವಷ್ಟು ಹಣವು ಈಗಾಗಲೇ ಶೇಖರವಾಗಿರತಕ್ಕ ವಾಣಿಜ್ಯ ಸ್ವಭಾವವುಳ್ಳ ಇಲಾಖೆಗಳಲ್ಲಿ ಸವೆಯಲು ಕಿಮ್ಮತ್ತು ಭರ್ತಿ ನಿಧಿಗಳಿಗೆ (ಡಿಪ್ರೀಸಿಯೇಷನ್ ರಿಜರ್ವುಗಳಿಗೆ) ವಾರ್ಷಿಕ ಹುಟ್ಟುವಳಿಯಿಂದ "ಕಂಟ್ರಿಬ್ಯೂಷನು" ಮೊಬಲಗುಗಳನ್ನು ಕೊಡುವುದನ್ನು ಸ್ವಲ್ಪಕಾಲ ನಿಲ್ಲಿಸುವಂತೆ ಉದ್ದೇಶಿಸಿದ್ದೇವೆ. ಹೀಗೆ ಹಣವನ್ನು ಕೊಡದೆ ನಿಲ್ಲಿಸಲು ಮನಸ್ಸಿಲ್ಲದಿದ್ದರೂ ನಾವು ಈ ಏರ್ಪಾಡನ್ನು ನಿರ್ವಾಹವಿಲ್ಲದೆ ಕೇವಲ ತಾತ್ಕಾಲಿಕವಾಗಿ ಅಂಗೀಕರಿಸಬೇಕಾಗಿದೆ. ಸಂಸ್ಥಾನದ ಹುಟ್ಟುವಳಿಯು ಸ್ವಲ್ಪ ಮೇಲ್ಪಟ್ಟೊಡನೆಯೇ ಪುನಃ ಈ ನಿಧಿಗಳಿಗೆಹಣವನ್ನು ಕೊಡಲಾಗುವುದು.

ಮೇಲೆ ವಿವರಿಸಿರತಕ್ಕ ನಾನಾ ಏರ್ಪಾಡುಗಳ ಫಲಿತಾಂಶವಾಗಿ ಮುಂದಣ ಸಾಲಿನಲ್ಲಿ 3 ಕೋಟಿ $77\frac{1}{2}$ ಲಕ್ಷ ರೂಪಾಯಿಗಳ ಹುಟ್ಟುವಳಿಯು ಬರುವುದೆಂದು ಅಂದಾಜು ಮಾಡಿದ್ದೇವೆ. ಹುಟ್ಟುವಳಿಗೆ ಖರ್ಚು ಬೀಳತಕ್ಕ ವೆಚ್ಚವು 3 ಕೋಟಿ 76[illegible] ಲಕ್ಷ ರೂಪಾಯಿಗಳಾಗಿರತಕ್ಕುದೆಂದು ಗೊತ್ತುಮಾಡಿದ್ದೇವೆ. ಈ ವೆಚ್ಚವು ಕಳೆದ ಹುಟ್ಟುವಳಿಯಲ್ಲಿ ಸುಮಾರು $\frac{3}{4}$ ಲಕ್ಷ ರೂಪಾಯಿಗಳು ಮಿಗುತಾಯವಾಗುವುದೆಂದು ಅಂದಾಜುಮಾಡಲಾಗಿದೆ.

1931-32 ನೆಯ ಸಾಲಿನ ಬಂಡವಾಳದ ವೆಚ್ಚ.

ಮುಂದಿನ ವರುಷದಲ್ಲಿ ನೆರವೇರಿಸಬೇಕಾದ ಬಂಡವಾಳದ ಕಾಮಗಾರಿಗಳಿಗಾಗಿ $85\frac{1}{2}$ ಲಕ್ಷ ರೂಪಾಯಿಗಳ ಗ್ರ್ಯಾಂಟನ್ನು ತಾತ್ಕಾಲಿಕವಾಗಿ ಒದಗಿಸಲಾಗಿದೆ; ಈ ಮೊಬಲಗನ್ನು ವಿನಿಯೋಗಿಸಬೇಕೆಂದಿರುವ ಬಗೆ ಹೇಗೆಂದರೆ :—

	ಲಕ್ಷ ರೂಪಾಯಿಗಳಲ್ಲಿ
ರೈಲ್ವೆಗಳು ಮತ್ತು ಟ್ರ್ಯಾಂಬೆಗಳಿಗೆ	12
ಕೃಷ್ಣರಾಜಸಾಗರದ ನೀರಾವರಿಯ ಕಾಮಗಾರಿಗಳಿಗೆ	23
ವಿದ್ಯುಚ್ಛಕ್ತಿಯ ಕಾಮಗಾರಿಗಳಿಗೆ	11
ಬೆಂಗಳೂರು ನೀರು ಸರಬರಾಯಿಯ ಹೊಸ ಏರ್ಪಾಡಿಗೆ	$27\frac{1}{2}$
ಇತರ ಕೈಗಾರಿಕೆಯ ಕಾಮಗಾರಿಗಳಿಗೆ	1
ಕಬ್ಬಿಣದ ಕಾರ್ಖಾನೆಗೆ	11
ಜುಮಾ	$85\frac{1}{2}$

(ಸಶೇಷ)

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧುಪವಿತ್ರಭೃಕಾದಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಖರತೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ತಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೂನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ

ಗ್ರಹನಾಶಿನಿಯು—೧ ಶೀಶೆಗೆ ೧೨ ಆಣೆ (ಶಿಒ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋದ್ಭವ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ಆಣೆಯಂತೆಯೂ ಕಮಿಶನ್ ಕೊಡಲಾಗುವದು. ವಿ. ಪಿ. ಚಾರ್ಜ ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇನೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, $\frac{1}{2}$ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಸೂತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಭಾಯೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜಾಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೇವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳೀಪು, ಹೊಟ್ಟೆ ಹುಳಗಳ ಕೆದರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿ ಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಬಿಸ್ಕು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[44] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ.) ಮಂಗಳೂರು. ದ. ಕ.**

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಬಿಡಾರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ" ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡ್ ತಲ್ಪಿದ ಮರುಟಪಾಲಿಗೇನೆ ತಾವೇತಾತಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,
ಪಟೇಲ್ ಮತ್ತು ಛೇರ್‌ಮನ್. ಬಾಸೂರು,
[7] ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೩ನೆಯ ಆವೃತ್ತಿ)	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೩ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಪದಚ್ಛೇದ ಟೀಕಾಸಹಿತ)	೮ ಆಣೆ
ಶಿವಸ್ತವಶಿರೋಮಣಿ	೨॥
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸಲ್ಪಡುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೬ ಆಣೆಯಂತೆ ಕಮಿಷನ್ ಕೊಡಲಾಗುವದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ... ಬರಕಕ್ಕವಾಗಿಯೂ ಇರುತ್ತವೆ. ಇವುಗಳನ್ನು ... ಸೇಯ್ಗೆಯವರಿಂದ ... ವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆಯಿಂದ ತಯಾರಿಸುತ್ತೇವೆ. ... ಗಿಯೂ ಮತ್ತು ನಯವಾಗಿಯೂ ಇರುವದರಿಂದ ತಲೆಗೆ ... ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ... ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿ ... ರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಪಂಚಪೀಠಾರೋಹಣಮಾಡಿದಕಕ್ಕೆ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪·೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ... ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ ...

(Registered Trade Mark)

ಗಳನ್ನು ಕೊಟ್ಟ ... ರು. ಪ್ರಸಿದ್ಧವಾದ ... ನಶ್ಯದ ಪುಡಿಯ ... ಸ್ವಸ್ಥವಾಗುವ ... ಧಿಗಳು ಯಾವವೆ ... ತೆ:—ಪಿನಶಿ, ... ತಲೆನೋವು, ತಲೆ ... ಳ್ಳಿನ ರೋಗಗ ... ಕಣ್ಣುಗಳಲ್ಲಿ ಉ ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾದ ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ ... ಪರಿಮಳವಾಗುವುದು. ಇದನ್ನು ಅನೇಕ ಪ್ರಭು ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-...

ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[50] ಪೋ. ಬಾ. ೫೧೦, ಮದರಾಸ್.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ॥ ಬ್ರ॥ ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರನರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಜೂನ್ ೧೯೩೧ [ಸಂಚಿಕೆ ೮

ಹಿಮಾಲಯಪ್ರದೇಶದ ಸಮಾಚಾರ.

ಶ್ರೀ ಜಗದ್ಗುರು ಕೇದಾರ ಪೀಠಾಧೀಶ್ವರರ ಅಧೀನದಲ್ಲಿರುವ ೨೨ ಕ್ಷೇತ್ರಗಳಲ್ಲೊಂದಾದ ಮಧ್ಯಮೇಶ್ವರ ಕ್ಷೇತ್ರವು ೬ ತಿಂಗಳು ದೇವತೆಗಳಿಂದಲೂ ೬ ತಿಂಗಳು ಮಾನವರಿಂದಲೂ ಪೂಜಿಸಲ್ಪಡುವುದೆಂದು ಶಾಸ್ತ್ರವಿರುವದು. ತಾ॥ ೬-೬-೩೧ ರಲ್ಲಿ ಶ್ರೀ ಮಧ್ಯಮೇಶ್ವರ ದೇವಾಲಯದ ಬಾಗಿಲು ತೆಗೆಯುವದಕ್ಕೆ ಸಂಸ್ಥಾನದ ಮ್ಯಾನೇಜರವರೂ ಮತ್ತು ಪೂಜೆಗೆ ಜಯಲಿಂಗಶರ್ಮರವರೂ ಪ್ರಸ್ಥಾನವಾಡಿದರು. ತಾ॥ ೮-೬-೩೧ ರಲ್ಲಿ ದೇವಾಲಯದ ಬಾಗಿಲು ತೆಗೆಯುವದು. ಈ ಕ್ಷೇತ್ರವು ಮಠದಿಂದ ೧೮ ಮೈಲು ಎತ್ತರವಾದ ಹಿಮಪರ್ವತ ಮೇಲ್ಭಾಗದಲ್ಲಿ ಇರುವದು. ಇಲ್ಲಿ ಅಧಿಕ ಚಳಿ ಇರುವದು ಈ ಪ್ರದೇಶವು ಅತ್ಯಂತ ಮನೋಹರವಾಗಿಯೂ ಪವಿತ್ರವಾಗಿಯೂ ಶ್ರೀಕೇದಾರ ಕ್ಷೇತ್ರದಂತೆ ರಮ್ಯವಾಗಿಯೂ ಇರುವದು. ಈ ವರ್ಷ ಯಾತ್ರಿಕರು ವಿಶೇಷವಾಗಿ ಬರುತ್ತಿರುವದರಿಂದ ಕಾಲರಾ ಬೇನೆಯು ಹಬ್ಬಿರುವದು. ರೋಗಿಗಳ ಹಿತಕ್ಕಾಗಿ ಸಂಸ್ಥಾನದ ವತಿಯಿಂದ ಮೂರುಜನ ವೈದ್ಯರನ್ನು ನೇಮಿಸಿರುವದು. ಪ್ರತಿಯೊಬ್ಬರೂ 25 ಮೈಲು ವಿಸ್ತಾರದಲ್ಲಿ ಸಂಚರಿಸಿ ಔಷಧೋಪಚಾರ ಕಾರ್ಯಮಾಡುತ್ತಿರುವರು. ಶ್ರೀಜಗದ್ಗುರು ಆಂಗ್ಲೋ ವರ್ನಾಕ್ಯುಲರ ಮಿಡ್ಲಸ್ಕೂಲು ಮತ್ತು ಸಂಸ್ಕೃತ ಮಹಾ ವಿದ್ಯಾಲಯದ ಪರೀಕ್ಷಾ ರಿಜಲ್ಟು ಇನ್ನೂ ಹೊರಟಿಲ್ಲ. ಇಷ್ಟರಲ್ಲಿಯೇ ಹೊರಡಬಹುದು. ಪುಣ್ಯಕಾರ್ಯದಲ್ಲಿ ನಿರತರಾದ ಶ್ರೀ 108 ಜಗದ್ಗುರು ಕೇದಾರ ಮಹಾಸನ್ನಿಧಿಯು ಚಿರಕಾಲ ಸುಖದಿಂದ ಬಾಳಲೆಂದು ಬೇಡುವ,

ಪ್ರತ್ಯಕ್ಷದರ್ಶಿ.

ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರಿಗೂ ಬಳ್ಳಾರಿ ವೀರಶೈವರಿಗೂ ನನ್ನದೊಂದು ವಿಜ್ಞಾಪನೆ.

ಬಾಂಧವರೇ, ನಮ್ಮ ಸಮಾಜದಲ್ಲಿ ಅನೇಕ ಸಂಸ್ಕೃತಶಾಲೆಗಳಿರುತ್ತವೆ. ಈ ಶಾಲೆಗಳಲ್ಲೆಲ್ಲಾ ಸಂಸ್ಕೃತ ವಿದ್ಯಾವಿಘಾತಕವಾದ ಒಂದು ಮುಖ್ಯ ಕಾರಣವಿರುವುದು. ಅದೇನಂದರೆ—ಸಂಸ್ಕೃತ ವಿದ್ಯೆಯು ಇಂಗ್ಲೀಷ್ ವಿದ್ಯೆಯಂತೆ ಸಾಹಿತ್ಯ (ಭಾಷಾಜ್ಞಾನ) ವ್ಯಾಕರಣ, ನ್ಯಾಯ, ವೇದಾಂತ, ಮೀಮಾಂಸೆ, ಜ್ಯೋತಿಷ, ಸಾಂಖ್ಯ, ಯೋಗ, ವೈದ್ಯ, ಆಯುರ್ವೇದ ಮೊದಲಾದ ಅನೇಕ ಭಾಗಗಳಿಂದ ಕೂಡಿರುವದು. ಇಂಗ್ಲೀಷ್ ಶಾಲೆಗಳಾದರೋ ಮೊದಲು ಭಾಷಾಜ್ಞಾನವನ್ನುಂಟುಮಾಡಿ ಮುಂದೆ ತಮಗಿಷ್ಟವಾದ ಯಾವದಾದರೊಂದು ಶಾಖೆಯಲ್ಲಿ ಪ್ರವೇಶಿಸಲು ಅನುಕೂಲಗಳಾಗಿವೆ. ಈ ಸಂಸ್ಕೃತ ಶಾಲೆಗಳಲ್ಲಿಯಾದರೋ ಸಂಸ್ಕೃತವೆಂದರೆ ಸರ್ವವೂ ಒಂದೇ ಎಂಬ ಭಾವನೆಯಿಂದ ಒಂದು ಶಾಲೆಗೆ ಸಾಹಿತ್ಯವನ್ನು ತಿಳಿದ ಒಬ್ಬನೇ ಒಬ್ಬ ಉಪಾಧ್ಯಾಯನಿದ್ದು ಕೆಲವು ದಿನಗಳಮೇಲೆ ಕಾರಣಾಂತರಗಳಿಂದ ಆತನು ಆ ಶಾಲೆಯನ್ನು ಬಿಟ್ಟರೆ ಆ ಸ್ಥಾನಕ್ಕೆ (ಸರ್ವವೂ ಒಂದೇ ಎಂಬ ಗುರುಮಂತ್ರದ ಮೇಲಿಂದ) ನೈಯ್ಯಾಯಿಕನನ್ನು ತರೆಯುಸುತ್ತಾರೆ. ಆತನು ಮೊದಲು ಕಲಿಸಿದ್ದನ್ನೆಲ್ಲಾ ಮೂಲೆಗೊತ್ತಿ ತನ್ನ ತರ್ಕವಿದ್ಯೆಯನ್ನು ಬೋಧಿಸಲು ಪ್ರಾರಂಭಿಸುತ್ತಾನೆ. ಅದು ಹುಡುಗರ ತಲೆಯಲ್ಲಿ ಹೊಗದೆ ಇರುವುದರಿಂದ ಶಾಸ್ತ್ರಿಗಳು ಚನ್ನಾಗಿ ಪಾಠ ಹೇಳುವದಿಲ್ಲವೆಂಬ ಪಾರಾಯಣವನ್ನು ಪಠಿಸುತ್ತಾ ಸ್ವಾಭಿಪ್ರಾಯಸ್ಥರಾಗಿ ಮುಂದಿನ ಶಾಲೆಗೆ ಹೋಗಲು ಅಲ್ಲಿ ವೈಯಾಕರಣಿಗಳು ಹೇಳುವ ಸಿದ್ಧಾಂತ ಕೌಮುದ್ಯಾದಿ ಪಾಠಗಳಿಗೆ ಹೆದರಿ ಮುಂದು ಮುಂದಿನ ಪಾಠಶಾಲೆಗಳನ್ನು ನೋಡುತ್ತ ದಿಕ್ಕುತೋರದೆ ಅಮೂಲ್ಯವಾದ ವಿದ್ಯಾಭ್ಯಾಸದ ವಯಸ್ಸನ್ನು ಕಳೆದುಕೊಂಡು ಮನೆಯನ್ನು ಸೇರಿ ತಮ್ಮ ಮೊದಲಿನ ಉದ್ಯೋಗದಲ್ಲಿಯೂ ಮೈಬಗ್ಗದೆ ಸೋಮಾರಿಗಳಾಗಿ ತಂದೆತಾಯಿಗಳ ಹಣದ ಕೂಳಿನಲ್ಲಿ ಬೆಳೆಯಬೇಕಾಗುವದು. ಇಂಥ ವಿದ್ಯಾರ್ಥಿಗಳಿಗೂ ಪಂಡಿತರಿಗೂ ಶಾಲಾಸ್ಥಾಪಕರಿಗೂ ಬಹಳ ಕಷ್ಟನಷ್ಟಗಳುಂಟಾಗುತ್ತವೆ. ಅದ್ದರಿಂದ ಮದ್ರಾಸ್ ಯೂನಿವರ್ಸಿಟಿಯು ಆಯಾಯ ಶಾಲೆಗಳಲ್ಲಿ ಇಂಥ ಪರೀಕ್ಷಾಗ್ರಂಥಗಳೇ ನಡೆಯುತ್ತವೆ ಎಂಬುದನ್ನು ತಿಳಿದು ಅನ್ಯಸಮಾಜದವರು ಶಾಲೆಗಳನ್ನೇರ್ಪಡಿಸಿಕೊಂಡಿರುವಂತೆ ನಮ್ಮ ಸಮಾಜದ ಪ್ರತಿಯೊಂದು ಶಾಲೆಯವರು ತಮ್ಮ ತಮ್ಮ ಶಾಲೆಗಳಲ್ಲಿ ಭಿನ್ನ ಭಿನ್ನ ರೀತಿಯಿಂದ ಶಾಸ್ತ್ರಪಾಠಗಳಲ್ಲಿ ಇಂಥವುಗಳೇ ನಡೆಯಬೇಕೆಂದು ನಿರ್ಣಯಿಸಿ ಮೊದಲಿನ ಪಂಡಿತರನ್ನು ತೆಗೆದಬಿಟ್ಟರೆ ಇಂಗ್ಲೀಷ್ ಶಾಲೆಗಳಲ್ಲಿ ಚರಿತ್ರೆಯ ಉಪಾಧ್ಯಾಯನನ್ನು ತೆಗೆದರೆ ಸೈನ್ಸ ಉಪಾಧ್ಯಾಯನನ್ನು ಆ ಸ್ಥಾನಕ್ಕೆ ಹೇಗೆ ತರುವದಿಲ್ಲವೋ ಅದರಂತೆ ಅನ್ಯರಿಷ್ಟದದೆ ಅದೇ ಶಾಸ್ತ್ರಾಧ್ಯಾಪಕರನ್ನೇರ್ಪಡಿಸುವಂತೆಯೂ ವಿದ್ಯಾರ್ಥಿಗಳು ಸರಿಯಾದ ಕಾರಣಗಳಿಂದ ಒಂದು ಶಾಲೆಯನ್ನು ಬಿಟ್ಟು ಮತ್ತೊಂದು ಶಾಲೆಗೆ ಹೋಗಬೇಕಾದರೆ ತಾವು ಅಭ್ಯಾಸಮಾಡುತ್ತಲಿದ್ದ ಶಾಸ್ತ್ರಬೋಧೆಯುಳ್ಳ ಶಾಲೆಗೆ ಬಿಟ್ಟಶಾಲೆಯ ಸರ್ಟಿಫಿಕೇಟನ್ನು ಪಡೆದೇ ಹೋಗುವಂತೆಯೂ ಪ್ರತಿಯೊಂದು ಶಾಲೆಯವರು ತಮ್ಮ ತಮ್ಮ ಶಾಲೆಗಳನ್ನು ಇಂಗ್ಲೀಷ್ ಶಾಲೆಗಳಂತೆ ಒಂದಕ್ಕೊಂದು ಸಂಬಂಧವಿರುವಂತೆಯೂ ಕಲ್ಪಿಸಿಕೊಂಡಿದ್ದಾದರೆ ಎಲ್ಲಾ ಶಾಲೆಗಳು ಸಾಂಗವಾಗಿ ನಡೆದು ವಿದ್ಯಾರ್ಥಿಗಳಿಗೂ ಪಂಡಿತರಿಗೂ ಸುಖವಾಗುವುದಲ್ಲದೆ ಶಾಲಾಸ್ಥಾಪಕರಿಗೆ ಕೀರ್ತಿಮೋಕ್ಷಗಳು ಲಭಿಸದಿರಲಾರವು.

ಸದ್ಯದಲ್ಲಿ ಸೂಚಿಸುವದೇನಂದರೆ—ಈ ನಮ್ಮ ಬಳ್ಳಾರಿ ಪಟ್ಟಣದಲ್ಲಿ ಹಣವನ್ನು ಸ್ವಲ್ಪಸ್ವಲ್ಪವಾಗಿ ಪ್ರತ್ಯೇಕ ಉಪಯೋಗಿಸುವದರಿಂದ "ಅಲ್ಪಾನಾಮಪಿ ವಸ್ತೂನಾಂ ಸಂಹತಿಃ ಕಾರ್ಯಸಾಧಿಕಾ | ತೃಣೈರ್ಗುಣತ್ವಮಾಪನ್ನೈರ್ಬಧ್ಯಂತೇ ಮತ್ತದಂತಿನಃ" ಎಂಬ ನೀತಿಯಂತೆ ಕೊಬ್ಬಿದ ಆನೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿರುವ ನಾರಿನ ಹುಲ್ಲುಗಳಿಂದ ಕಟ್ಟಿ ನಿಲ್ಲಿಸುವದು ಹೇಗೆ ಅಸಾಧ್ಯವೋ ಹಾಗೆ ಅಮೂಲ್ಯವಾದ ಸಂಸ್ಕೃತ ವಿದ್ಯೆಯನ್ನು ಕಲಿಸುವದು ಕೂಡ ಅಸಾಧ್ಯವೇಸರಿ. ಅದ್ದರಿಂದ ಒಟ್ಟಿಗೆ ಒಂದು ದೊಡ್ಡ ಕಾರ್ಯವನ್ನು ಸಾಧಿಸುವುದು ಯುಕ್ತವಾಗಿದೆ. ಪ್ರಕೃತದಲ್ಲಿ ಶ್ರೀಮಂತ ಕುಪ್ಪಗಲ್ಲು ಅಯ್ಯಪ್ಪನವರು ತಮ್ಮ ಛತ್ರದಲ್ಲಿ ಸಂಸ್ಕೃತ ಶಾಖೆಯೆಂದೆನಿಸಿದ ಜ್ಯೋತಿಷ್ಯಭಾಗಕ್ಕೆ ಸಂಸ್ಕೃತವಿದ್ಯಾವಿಶಾರದರಾದ ವಿದ್ವಾನ್ ಸಮದರ್ಶನತೀರ್ಥ ಶ್ರೀಯುತ ನಾಗೇಶಶಾಸ್ತ್ರಿಗಳನ್ನು ನಿಯಮಿಸಿ ಅವರಿಗೆ ಜ್ಯೋತಿಷ್ಯ ಕನ್ನಡ ಪರೀಕ್ಷಾಗ್ರಂಥಗಳನ್ನೂ ಶ್ರೀ ಗುರುನಿವಾಸ ಸಂಸ್ಕೃತ ವಿದ್ಯಾಲಯಾಧ್ಯಕ್ಷರಾದ ಪಂ॥ ಅಸಗೋಡು ಪಟ್ಟಾಧ್ಯಕ್ಷ ಶ್ರೀ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ನ್ಯಾಯವ್ಯಾಕರಣಾದಿ ಗ್ರಂಥಗಳನ್ನೂ ಗ್ರಾಂಟುಪಡೆಯುವ ಬಗ್ಗೆ ಒಬ್ಬ ಶಿರೋಮಣಿ ಅಧ್ಯಾಪಕರನ್ನಿಟ್ಟು ಸಾಹಿತ್ಯ ಶಿರೋಮಣಿ ಪರೀಕ್ಷಾದಿ ಕಾವ್ಯಗ್ರಂಥಗಳನ್ನೂ ಟ್ರೈಟಿಲುಳ್ಳ ಮತ್ತೊಬ್ಬ ಪಂಡಿತರಿಂದ ಕೆಳಗಿನ ತರಗತಿಗಳ ಪಾಠಗಳನ್ನೂ ಒಂದೇ ಸ್ಥಾನದಲ್ಲಿ ಬೋಧಿಸುವಂತೆ ಏರ್ಪಡಿಸುವದಲ್ಲದೆ ಈ ಮೇಲ್ಕಂಡ ವಿದ್ಯಾರ್ಥಿಗಳನ್ನೆಲ್ಲಾ ಶಾಲೆಯ ರೂಢಿಗೆ ತಕ್ಕಂತೆ ವೈದಿಕಾಭ್ಯಾಸ ಮಾಡಿಸಲಿಕ್ಕೆ ಶ್ರೀಯುತ ಸೋಮಶೇಖರಶಾಸ್ತ್ರಿಗಳನ್ನು ಏರ್ಪಡಿಸಬೇಕು. ಊಟದ ವಿಷಯದಲ್ಲಿ ತಮ್ಮ ಸಂಕಲ್ಪದಂತೆ ೧೫ ಜನ ವಿದ್ಯಾರ್ಥಿಗಳಿಗೇ ಪಡಿಸಿ ಉಳಿದ ವಿದ್ಯಾರ್ಥಿಗಳನ್ನು ಚೌಕಿಯಲ್ಲಿಯೇ ಇಡತಕ್ಕದ್ದು. ಹೀಗೆ ಮಾಡಿದ್ದಾದರೆ ಎಂಟ್ರನ್ಸ್ ಪರೀಕ್ಷೆಯವರೆಗೂ ಗವರ್ನಮೆಂಟು ಗ್ರಾಂಟು ಪಡೆದು ಪ್ರೈವೇಟಾಗಿ ವಿದ್ವಾನ್ ಶಿರೋಮಣಿ ಪರೀಕ್ಷೆಗೆ ಕಳುಹಿಸಲು ಅನುಕೂಲವಾಗಿ ದೇವಾನುಗ್ರಹದಿಂದ ಮುಂದೆ ಕಾಲೇಜಾದರೆ ಈ ಯೂನಿವರ್ಸಿಟಿ ಪದವೀಧರರಾದ ವೀರಶೈವ ಪಂಡಿತರು ದೊರೆಯಬಹುದು. ಅದ್ದರಿಂದ ಹೆಚ್ಚು ದ್ರವ್ಯ ಖರ್ಚಿಲ್ಲದೆ ನಡೆಸುವಕಕ್ಕೆ ಈ ವಿಷಯವನ್ನು ಶಿರೋಧಾರ್ಯವಾಗಿ ತೆಗೆದುಕೊಂಡು ಸಮ್ಮತಿಸುವ ಮಹೋದಯರು ಯಥಾರ್ಥ ವಿಚಾರದಿಂದ ಉದಾರ ಮನಸ್ಸುಳ್ಳವರಾಗಿ

1 ಸಾಹಿತ್ಯ, ಜ್ಯೋತಿಷ್ಯ ಶಿರೋಮಣಿ.
2 ಸಂಸ್ಕೃತ, ಕನ್ನಡ ವಿದ್ವಾನ್.
(A. ವಿದ್ವಾನ್) (B. ವಿ...)
3 ಈ ಎಂಟ್ರೆನ್ಸುಗಳು.

ಈ ಪರೀಕ್ಷೆಗಳಿಂದ ಬಳ್ಳಾರಿ ಕರಡಿಪ್ಪನ ಚೌಕಿ ಶ್ರೀ ಗುರುನಿವಾಸಸಂಸ್ಕೃತವಿದ್ಯಾಲಯವನ್ನು ಭೂಷಿಸಬೇಕಾಗಿ ಕೋರಿಕೆ.

ಪಟ್ಟಾಧ್ಯಕ್ಷ ಶ್ರೀ ತ್ರಿಲೋಚನ ಶಿವಾಚಾರ್ಯರು,
ಸಿದ್ಧಾಪುರ.

ಸ್ವೀಕಾರ.

ಧಾರವಾಡ ಡಿ॥ ಸೂಡಿಗ್ರಾಮದ ಮ॥ ರಾ॥ ಮಾರನಬಸರಿ ರುದ್ರಪ್ಪನವರ ಪುತ್ರಿ ಸ॥ ಕುಂ॥ ಸೋ॥ ಚಿ॥ ಸೌ॥ ಗಂಗಾದೇವಿಯನ್ನು ಕಲವಡಿ ಶಾನಭೋಗರ ಮ॥ ರಾ॥ ಮಲ್ಲಿಕಾರ್ಜುನಪ್ಪನವರ ಪುತ್ರ ಚಿ॥ ವೀರಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ಸಮರ್ಪಿಸಿದ 4 ರೂಪಾಯಿಗಳು ಶ್ರೀ॥ ಷ॥ ಬ್ರ॥ ಜುಕ್ತಿಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾತಲ್ಪಿರುತ್ತವೆ.

ನಿಜಾಮಇಲಾಖಾ ಉದಗಿರಿ ತಾಲೂಕು ಮುಧೋಳ ಬೃಹನ್ಮಠದ ವೇ॥ ಹಾವಯ್ಯನವರ ಪುತ್ರ ಚಿ॥ ಮಹಾದೇವಶರ್ಮನಿಗೆ ವೇ॥ ರ್ಯಾವಣಗಾಂವ ಮಠದ ಮಹಾಂತಯ್ಯನವರ ಪುತ್ರಿ ಚಿ॥ ಸೌ॥ ರತ್ನಬಾಯಿ (ಪಾರ್ವತೀಬಾಯಿ) ಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂಪಾಯಿಗಳು ಮ॥ ರಾ॥ ವಿಶ್ವನಾಥಪ್ಪ ಖಡಕೆ ಇವರ ದ್ವಾರಾ ತಲ್ಪಿರುತ್ತವೆ.

ರಾಜಧಾನಿಯಲ್ಲಿರುವ ಮ॥ ರಾ॥ ಮಿಠಾಯಿ ಸುಬ್ಬಣ್ಣನವರ ಪುತ್ರ ಚಿ॥ ಚನ್ನಪ್ಪನಿಗೂ ತಗಡೂರು ದಾಖಲೆ ದೊಡ್ಡನಕಟ್ಟೆಯಲ್ಲಿರುವ ಮ॥ ರಾ॥ ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಕೆಂಪದೇವಮ್ಮನಿಗೂ ಹಾಗೂ ಮ॥ ರಾ॥ ದಫೇದಾರ್ ಲಿಂಗಣ್ಣನವರ ಪುತ್ರ ಚಿ॥ ಮಲ್ಲಪ್ಪನಿಗೂ ತೊರೆಮಾವು ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಸುಬ್ಬಮ್ಮನಿಗೂ ನೆರವೇರಿದ ವಿವಾಹಸಮಯದಲ್ಲಿ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಹೊನ್ನಾಳಿ ತಾಲೂಕು ಶಿಂಗಟಗೆರೆ ಕಂಬಾಳಿ ಮಠದ ವೇ॥ ಬಸವಯ್ಯನವರು ಮೈಸೂರು ಟ್ರೈನಿಂಗ್ ಕಾಲೇಜಿನ ಪಂಡಿತ ಪರೀಕ್ಷೆಯಲ್ಲಿ ಜಗದಾಚಾರ್ಯರ ಕೃಪೆಯಿಂದ ಪಾಸಾದ ಸಂತೋಷಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯೇಭ್ಯೋನಮಃ

ನೀರಲ್‌ಕೇರಿ ಚರವರ್ಯ ಬಸವಲಿಂಗ ಶಿವಾಚಾರ್ಯರು.

(ಲೇಖಕ ವೇ|| ಶಿವಮೂರ್ತಿಸ್ವಾಮಿ ಗುರುನಿವಮಠ ಕರಡಿ.)

ನಿಜಾಮ ಇಲಾಖಾ ರಾಯಚೂರು ಜಿಲ್ಲೆಯಲ್ಲಿ ಲಿಂಗಸೂಗೂರು ಅಥವಾ ಭಾವಣೆಯೆಂಬ ಹೆಸರುಳ್ಳ ಒಂದು ಗ್ರಾಮವಿರುತ್ತದೆ. ಇದರ ಪಶ್ಚಿಮಕ್ಕೆ ಸುಮಾರು 5-6 ಮೈಲುಗಳ ಮೇಲೆ ನೀರಲ್‌ಕೇರಿ ಎಂಬ ಗ್ರಾಮವುಂಟು. ಇದು ಗುಡ್ಡ ದಿಣ್ಣೆಗಳಿಂದಲೂ, ವೃಕ್ಷಗಳಿಂದಲೂ, ಉಪವನಗಳಿಂದಲೂ, ವಾಪೀಕೂಪತಟಾಕಗಳಿಂದಲೂ, ಕೂಡಿ ಸ್ವರ್ಗದಂತೊಪ್ಪುತ್ತಿರುವದು. ಗ್ರಾಮದ ಹೊರಗೆ ಪೂರ್ವದಿಕ್ಕಿನಲ್ಲಿ ಪಂಚಾಕ್ಷರಿ ಮಠವೆಂಬುದೊಂದು ಭವ್ಯವಾದ ಮಠವಿರುತ್ತದೆ. ಈ ಮಠದ ಸಚ್ಚರಿತ್ರನಾಯಕರು ಈಶ ಚಿಂತನೆಯಲ್ಲಿಯೂ, ಧರ್ಮಬೋಧನೆಯಲ್ಲಿಯೂ, ಕಾವ್ಯರಚನೆಯಲ್ಲಿಯೂ, ಧರ್ಮಕಾರ್ಯನಿರ್ವಾಹದಲ್ಲಿಯೂ ಕಾಲಕಳೆಯುತ್ತಿದ್ದರು. ಈ ಸ್ವಾಮಿಗಳು ಶಿವೈಕ್ಯರಾಗಿ 60-65 ವರ್ಷಗಳಾದವು. ಇವರು ಮಹಾಯೋಗಿಗಳೂ ಅಲೌಕಿಕ ಸಾಮರ್ಥ್ಯವುಳ್ಳವರೂ, ಮಹಾಕವಿಗಳೂ ಆಗಿದ್ದರೆಂದು ಈಗಿನ ಮುದುಕರಿಂದಲೂ ಈ ಪೂಜ್ಯಪಾದರಿಂದ ರಚಿತವಾದ ಕವನಗಳಿಂದಲೂ ತಿಳಿಯುತ್ತದೆ. ಇವರು ನಿರ್ಜನಸ್ಥಾನಗಳಲ್ಲಿ ಮಠಗಳನ್ನು ಕಟ್ಟಿಸಿ, ದ್ರಾಕ್ಷಿ ಗೇರುಬೀಜ, ಕಲ್ಲುಸಕ್ಕರೆ ಹೊಡೆಯುತ್ತ ಆಲಸ್ಯದಿಂದ ಕಾಲಕಳೆಯುವ ಸ್ವಾಮಿಗಳಂತಿರಲಿಲ್ಲ. ಜನರೊಡನೆ ಒಡನಾಡುತ್ತಿದ್ದರೂ ಇಂದ್ರಿಯಜಯವನ್ನು ಹೊಂದಿ ಸಚ್ಚರಿತ್ರೆಯಿಂದಲೂ ಧರ್ಮಬೋಧೆಯಿಂದಲೂ, ಶಿಷ್ಯರನ್ನು ಸನ್ಮಾರ್ಗಕ್ಕೆ ಹಚ್ಚುತ್ತಿದ್ದರೆಂಬುದಕ್ಕೆ, ಈಗಲೂ ನೀರಲ್‌ಕೇರಿಯ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರ ಆಚಾರ ವಿಚಾರಗಳೇ ಹೆಗ್ಗುರುತುಗಳಾಗಿವೆ. ಸ್ವಾಮಿಗಳು ಸೂರ್ಯೋದಯಕ್ಕೆ ಮೊದಲು ಉಷಃಕಾಲದಲ್ಲಿ ಎದ್ದು ಪ್ರಾತರ್ವಿಧಿಗಳು ತೀರಿದನಂತರ ಮಠದ ಪಕ್ಕದಲ್ಲಿರುವ ರಮ್ಯವಾದ ಕೈದೋಟದಲ್ಲಿ ಪತ್ರಿಪುಷ್ಪಗಳನ್ನು ಕೊಯ್ದುಕೊಂಡುಬಂದು ಸ್ನಾನ ಶಿವಾರ್ಚನೆಗಳನ್ನು ಮುಗಿಸಿಕೊಂಡು ಮಠಕ್ಕೆ ಬಂದ ಭಕ್ತರಿಗೆ ತಮ್ಮ ಅಮೃತತುಲ್ಯವಾಣಿಯಿಂದ ಬೋಧನಮಾಡುತ್ತಿದ್ದರು. ವರ್ಷದಲ್ಲಿ ಕೆಲವು ತಿಂಗಳು ದೂರದಲ್ಲಿರುವ ತಮ್ಮ ಶಿಷ್ಯವೃಂದದ ಉದ್ಧಾರಕ್ಕಾಗಿ ಸಂಚರಿಸುತ್ತಿದ್ದರು.

ಪಾಪಿಷ್ಠರ ಕಣ್ಣಿಗೆ ಸರ್ವವೂ ಪಾಪಮಯವಾಗಿ ಕಾಣುತ್ತದೆಂಬುದು ಸುಳ್ಳಲ್ಲವು. ಆ ಊರ ಪ್ರತಿಷ್ಠಿತ ಭಕ್ತನೊಬ್ಬನು ಸ್ವಾಮಿಗಳು ಏಳುವದರಲ್ಲಿಯೇ ಹೋಗಿ ಅವರ ದರ್ಶನ ತೆಗೆದುಕೊಂಡುಬರುವ ಪರಿಪಾಠಿಯಿಟ್ಟಿದ್ದನು. ಒಂದು ದಿವಸ ಸ್ವಾಮಿಗಳಿಗೆ ನಿದ್ರಾಭಂಗವಾಗುವದೆಂದು ತಿಳಿದು ಆ ಭಕ್ತನು ದೂರದಿಂದಲೇ ಸಾಷ್ಟಾಂಗ ಹಾಕಿ ಮನೆಯ ಕಡೆಗೆ ತಿರುಗಿದನು. ಅವನು ಮಠದ ಮಹಾದ್ವಾರವನ್ನು ದಾಟಲಿಕ್ಕೂ ಸ್ವಾಮಿಗಳು ಹೊರಗಿನಿಂದ ಎದರು ಬರಲಿಕ್ಕೂ ಒಂದು ಶಕ್ತಿಯು ಗಂಟುಬಿದ್ದಿತ್ತು. ಆಗ ಸಂಶಯ ಪಿಶಾಚಿಯು ಆ ಭಕ್ತನನ್ನು ತಟ್ಟನೆ ಹಿಡಿದುಕೊಂಡಿತು! ಹಾಗೆಯೇ ಅವನು ಗುರುವರ್ಯರ ಬೆನ್ನು ಹತ್ತಿ ಒಳಗೆ ಹೋದನು. ಅಲ್ಲೇನಿದೆ! ಎಲ್ಲವೂ ಅದೃಶ್ಯವೇ! ತ್ರಿಕಾಲಜ್ಞರಾದ ಯೋಗಿಗಳಿಗೆ ಯಾವದುತಾನೆ ಅಸಾಧ್ಯವು! ಸ್ವಾಮಿಗಳು ಪರಮ ಪಾಪಿಷ್ಠನಾದ ಆ ಭಕ್ತನ ದುರ್ಹೇತುವನರಿತು "ಎಲೋ ನೀಚನೇ? ನನ್ನನ್ನು ಸ್ತ್ರೀಲಂಪಟನೆಂದು ತಿಳಿದಿರುವೆಯೊ ನೋಡು! ಎನ್ನುತ್ತ" ಆ ಕ್ಷಣದಲ್ಲಿಯೇ ಇಪ್ಪತ್ತರಷ್ಟು ನುಡಿಯುಳ್ಳ ಪದ್ಯಗಳಿಂದ ದೇವಿಯನ್ನು ಸ್ತೋತ್ರಮಾಡಿದ ಕೂಡಲೆ ಮಹಾಪ್ರಭೆಯಿಂದೊಡಗೂಡಿದ ಅಷ್ಟಭುಜವುಳ್ಳ ದೇವಿಯು ಪ್ರತ್ಯಕ್ಷಳಾದಳು. ಸ್ವಾಮಿಗಳು "ಪಾಪರೂಪಿನಾದ ಪಶುವೇ ನೋಡು! ಆದಿಮಾತೆಯು ನನ್ನ ಪ್ರತ್ಯಕ್ಷ ಜನನಿಯಾಗಿದ್ದುದರಿಂದ ಜಗತ್ತಿನ ಸ್ತ್ರೀವರ್ಗವೆಲ್ಲವನ್ನೂ ಈ ಮಹಾಮಾತೆಯ ಸ್ವರೂಪವೆಂದು ತಿಳಿದಿರುವ ನನಗೆ, ವಿಷಯಲಂಪಟತ್ವದಲ್ಲಿ ಬಿದ್ದು ಹೊರಳಾಡುವ ನೀನು ಪರಸ್ತ್ರೀದೋಷವನ್ನು ಹೊರಿಸುವೆಯೊ, ನಿನ್ನ ಕುಲಕ್ಷಯವಾಗಲಿ" ಎಂದು ಶಾಪವಿತ್ತು ಹೊರಟುಹೋದರು. ಅದುವರೆಗೆ ಆ ಮಹಾಪ್ರಭೆಯಿಂದ ಮೂರ್ಛಿತನಾಗಿ ಬಿದ್ದಿದ್ದ ಆ ಭಕ್ತನು ಕಣ್ತೆರೆದು ನೋಡುತ್ತಾನೆ! ಅಲ್ಲೇನಿದೆ! ಎಲ್ಲವೂ ಬಯಲೇ! ಸ್ವಾಮಿಗಳ ಶಾಪವು ಸಳ್ಳಾಗಲಿಲ್ಲವು. ಭಕ್ತನ ಕುಲಕ್ಷಯವಾಯಿತು. ಸ್ವಾಮಿಗಳು 4-5 ಮೈಲುದೂರದಲ್ಲಿರುವ ಐದನಾಳು ಗ್ರಾಮದಲ್ಲಿಯೇ ನಿಂತುಬಿಟ್ಟರು. ನೀರಲ್‌ಕೇರಿಯ ಜನಗನ್ನು ಸನ್ಮಾರ್ಗಕ್ಕೆ ತಂದಿರುವ ಬೆಳಕು ಹೋಯಿತು. ಎಲ್ಲವೂ ತಮೋಮಯವಾಗಿ ಮತ್ತೆ ಸೈತಾನನ ರಾಜ್ಯಕ್ಕೆ ಆರಂಭವಾಯಿತು. ಜನರೆಲ್ಲರೂ ಅಜ್ಞಾನಾಂಧಕಾರದಲ್ಲಿಯರಾಗಿ ತೊಳಲ ಹತ್ತಿದರು. ಅಜ್ಞಾನದ ತುಳಿಯು ಹತ್ತಿದರು. ಆದರೂ ಸ್ವಾಮಿಗಳ ಕವನವೆಂಬ ಸರ್ಚ್‌ಲೈಟು ಅವರಿಗೆ ಮಾರ್ಗದರ್ಶಕವಾಗಿದೆ. ಅದರ ಬೆಳಕಿನಿಂದಲೇ ಇದುವರೆಗೆ ಗ್ರಾಮದಲ್ಲಿ ಅನಾಚಾರವೆಂಬ ಕತ್ತಲೆಯು ಹೆಚ್ಚಿರುವದಿಲ್ಲವು.

ಹೀಗೆ ಸ್ವಾಮಿಗಳು ಅಗಣಿತಮಹಿಮಾಶಾಲಿಗಳಾಗಿ ಐದನಾಳು ಗ್ರಾಮದಲ್ಲಿಯೇ ಶಿವೈಕ್ಯರಾದರು. ಈ ಪೂಜ್ಯಪಾದರ ಗದ್ದುಗೆಯ ಮೇಲೆ ಭಕ್ತರು ಒಂದು ಸುಂದರವಾದ ಮಠವನ್ನು ನಿರ್ಮಿಸಿದ್ದಾರೆ. ಆ ಮಠದಲ್ಲಿ ಶ್ರಾವಣ ಮಾಸದಲ್ಲಿ, ಸ್ವಾಮಿಗಳಿಂದಲೇ ರಚಿಸಲ್ಪಟ್ಟ ಪದಗಳಿಂದ ಭಜನೆಯೂ ಪುರಾಣಶ್ರವಣವೂ, ಮಹಾಗಣಾರಾಧನೆಯೂ ತಪ್ಪದೇ ನಡೆಯುತ್ತವೆ. ಸ್ವಾಮಿಗಳು ಮಾಡಿತೋರಿಸಿದ ಅದ್ಭುತ ಕಾರ್ಯಗಳನ್ನು ಬರೆಯುತ್ತ ಹೋದರೆ ಅದು ಒಂದು ದೊಡ್ಡ ಹೊತ್ತಿಗೆಯೇ ಆಗಬಹುದು. ಇರಲಿ, ಇನ್ನು ಅವರ ಕವನಗಳ ಕಡೆಗೆ ಹೊರಳುವಾ.

ಸ್ವಾಮಿಗಳು ನರಕವಿಗಳಲ್ಲ, ವರಕವಿಗಳು. ಅವರ ಬಾಯಿಂದ ಹೊರಟದ್ದೇ ಹಾಡು. ಈಗಿನವರಂತೆ ಅವರು ಗುರುಕುಲಗಳಲ್ಲಿ ಓದಿದವರಲ್ಲ, ಶಾಸ್ತ್ರಾಧ್ಯಯನಮಾಡಿದವರಲ್ಲ. ಅವರಲ್ಲಿ ಕವಿತಾಶಕ್ತಿಯು ಸ್ವಾಭಾವಿಕವಾಗಿ ನೆಲೆಗೊಂಡಿತ್ತು. ಸ್ವಾಮಿಗಳು ತಮ್ಮ ಪದಗಳನ್ನು ಬರೆದಿಟ್ಟಿರುವದಿಲ್ಲ. ಅವರ ಬಾಯಿಂದ ಹೊರಟ ಪದಗಳನ್ನೇ ಆಗಿನ ಕಾಲದಲ್ಲಿ ಕೇಳಿದ ಭಕ್ತರು ಬರೆದಿಟ್ಟುಕೊಂಡಿದ್ದಾರೆ. ಹೀಗೆ ಬರೆದಿಟ್ಟುಕೊಂಡ ಪದಗಳು ಈಗ 600 ರವರೆಗೆ ಇರುವವೆಂದು ಹೇಳುತ್ತಾರೆ. ಆದರೆ ಆ ಪದ್ಯಪುಸ್ತಕವು ಸಿಗುವದು ದುರ್ಲಭವಾಗಿದೆ. ಆದರೂ ಅಲ್ಲಿ ಈ ಪದಗಳನ್ನು ಅನ್ಯವ ಜನರ ಬಾಯಿಂದ ಕೇಳಿಕೊಂಡು ಒಂದೆರಡನ್ನು ಬರೆದುಕೊಂಡಿರುತ್ತೇನೆ. ಮಾದರಿಗಾಗಿ ಒಂದನ್ನು ಕೆಳಗೆ ಕೊಟ್ಟಿದೆ.

ಪದ. (ರಾಗ—ಕಲ್ಯಾಣಿ. ತಾಳ—ಆದಿ)

ಹುಡದಿಯ ನಾಡಿರೇ ತಮ್ಮಾ| ಹುಡದಿಯ ನಾಡಿರೋ|| ಕಡಿದು ಭವದ ಬೇರನು ಕಿತ್ತು| ಜಡಿದು ಬ್ರಹ್ಮದೊಡನೆ ಬೆರಿದು|| ಹುಡದಿಯ ನಾಡಿರೋ ತಮ್ಮಾ|| ಪಲ್ಲ || ಅಡಿಗಿಮ್ಮಡಿಯಾಗಿ ಧೃಡನಾಗೆಲಿದು| ನಡಿದುನಾಸಿಕಾಗ್ರದಿ ಹಿಡಿದು|| ಕಡಿದು ರಕ್ತ ಪೀತವಳಿದು| ಹುಡಗ ಯಮುನ ಬಲವಗೆಲಿದು|| ಹುಡುದಿಯ ||೧|| ನಾದ ಮೂಲ ಓಣಿಯಲ್ಲಿ| ಸಾಧುಸಂಗುದುದ್ದಿಯ ಹಿಡಿಸಿ|| ಕಾಡುಕದುಣ ಬುದ್ಧಿಯಿಂದಾ| ಆದ ಜೀವ ಶಿವನಕೂಡಿ|| ಹುಡ|| ||೨|| ಇಂಥ ಹುಡದಿಯನ್ನು ರಚಿಸಿ| ಭ್ರಾಂತಿ ವೈರಿಗಳನು ಜಯಿಸಿ|| ಅಂತರಂಗದಷ್ಟದಳದಿ| ನಿಂತು ಪಂಚಾಕ್ಷರವನು ಭಜಿಸಿ|| ಹುಡದಿಯನಾಡಿರೋ||೩||

ಈ ಕವನದಲ್ಲಿ [illegible] ಅರ್ಥಗಾಂಭೀರ್ಯವು ಎಷ್ಟರಮಟ್ಟಿಗಿರುವುದೆಂ[illegible]ತರಿಗೆ ಗೊತ್ತಾಗುವುದು. ಮತ್ತು ಈ ಪದಗಳ[illegible] ವೈರಾಗ್ಯ ಬೋಧಕಗಳಾಗಿಯೂ, ವೇದಾಂತ ವಿಷಯದಿಂದ ತುಂಬಿದವುಗಳಾಯೂ, ವೀರಶೈವ ಧರ್ಮ ಪ್ರತಿಪಾದಕಗಳಾಗಿಯೂ ಇವೆ. ಸ್ವಾಮಿಗಳಾದರೂ ಸರ್ವಜ್ಞನಂತೆ ರೂಢಿಗನ್ನಡದಲ್ಲಿ ಕವಿತೆಗಳನ್ನು ರಚಿಸಿರುವದರಿಂದ, ಅವು ಬಹು ಜನ ಪ್ರಿಯವಾಗಿವೆ. ಪಂಡಿತ ಪಾಮರರೂ, ಆಬಾಲವೃದ್ಧರೂ, ಅದೇಕೆ! ಕುಲ ಹದಿನೆಂಟು ಜಾತಿಯವರೂ ಅವುಗಳನ್ನು ಬಹು ಪ್ರೀತಿಯಿಂದ ಅನ್ನುತ್ತಾರೆ. ಈ ಹಾಡುಗಳು ಅಲ್ಲಲ್ಲಿ ಪ್ರಸಿದ್ಧಿಯವೆ. ನಾನೊಮ್ಮೆ ನೀರಲ್‌ಕೇರಿಗೆ ಹೋದಾಗ ಅಲ್ಲಿ ಕುಟ್ಟುವ, ಬೀಸುವ ಹೆಂಗಸರೂ ದನಕಾಯುವ ಹುಡುಗರೂ ಸಹ ಸ್ವಾಮಿಗಳಿಂದ ರಚಿತವಾದ ಪದಗಳನ್ನು ಹಾಡುವುದನ್ನು ಕೇಳಿದೆನು. ಇಂಥ ಬಹು ಜನ ಪ್ರಿಯಕರಗಳಾದ ಕವಿತೆಗಳನ್ನು ರಚಿಸಿದ ಮಹನೀಯರ ಚರಿತ್ರವು 'ಕರ್ನಾಟಕ ಕವಿ ಚರಿತ್ರೆ'ಯಲ್ಲಿ ಪ್ರಕಟವಾಗದಿರುವುದನ್ನೂ, ಇವರ ಕವಿತೆಗಳು ಬೆಳಕಿಗೆ ಬೀಳದಿರುವದನ್ನೂ ನೋಡಿದರೆ "Some Gems of the purest ray serene| In the deep ocean lay|" ಎಂದು ಹೇಳಿದ ಆಂಗ್ಲಕವಿವರ ಥಾಮಸ್ ಗ್ರೇಯವರ ಮಾತು ನೆನಪಿಗೆ ಬರುತ್ತದೆ. ಈ ಜೀವನರೂಪೀ ಮಹಾಸಾಗರದಲ್ಲಿ ಮುಳುಗಿಕೊಂಡಿರುವ ಅತ್ಯುಜ್ವಲ ರತ್ನಗಳು ಬಯಲಿಗೆ ಬೀಳಬೇಕಾದರೆ ಶೋಧಕರು ಬಹಳ ಪ್ರಯತ್ನಮಾಡಬೇಕು. ಇವರ ಕವಿತಾಪುಸ್ತಕವು ಪ್ರಸಿದ್ಧವಾದರೆ ಅದೊಂದು ಗುರುವರ್ಗದವರ ಸಾಹಿತ್ಯ ಮಾಲಿಕೆಯಲ್ಲಿ ಸೇರಲು ಅರ್ಹವಾದ ಮಣಿಯಾಗಿದೆ ಹಾಗೂ ಗುರುವರ್ಗದವರು ಅಭಿಮಾನ ಪಡತಕ್ಕ ವಸ್ತುವಾಗಿದೆ. ಇಂಥ ಗುರುವರ್ಗದ ಮಹನೀಯರಿಂದಲೇ ನಮ್ಮ ಸಮಾಜವು ಹಿಂದಕ್ಕೆ ಬಹು ವೈಭವ ಶಿಖರಕ್ಕೇರಿತ್ತು. ಇಂಥವರೇ ನಮ್ಮ ಪಂಚಮಹಾಪೀಠಗಳಿಗೆ ಆಧಾರಸ್ತಂಭಗಳು! ಇಂಥ ಮಹನೀಯರಲ್ಲಿ ನಮ್ಮ ಗುರುಪೀಠಗಳ ಭದ್ರತೆಯು! ಈ ಮಹನೀಯರ ಚರಿತ್ರವನ್ನೂ ಹಾಗೂ ಅವರ ಸಂಗಡ ಅವರ ಪದ್ಯಗಳನ್ನೂ ಸಂಗ್ರಹಿಸಿ ಪ್ರಕಟಿಸಬೇಕೆಂದಿರುತ್ತೇನೆ. ಈ ಕಾರ್ಯದಲ್ಲಿ ಜಗದ್ಗುರು ಪಂಚಾಚಾರ್ಯ ಗುರು ಸಾರ್ವಭೌಮರ ಪವಿತ್ರಾಶೀರ್ವಾದವನ್ನು ಬಯಸಿ, ಈ ಲೇಖನಿಗೆ ವಿಶ್ರಾಂತಿ ಕೊಡುತ್ತೇನೆ.

ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ

ಪ್ರತಿನಿಧಿಗಳ ಆಂದೋಲಿಕೋತ್ಸವ.

ಮದ್ದಿಕೆರೆ.

ಕರ್ನೂಲು ಜಿಲ್ಲಾ ಪತ್ತಿಗುಂಡಿ ತಾಲೂಕ ಪೈಕಿ ಮದ್ದಿಕೆರೆ ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತಮಹಾಸಂಸ್ಥಾನದ ಪ್ರತಿನಿಧಿಗಳಾದ ಶ್ರೀ|| ಷ|| ಬ್ರ|| ರೇವಣಸಿದ್ಧ ಶಿವಾಚಾರ್ಯ ಹಿರೇಮಠ ಚಿಕ್ಕಮಂಗಳೂರು, ಇವರು ದಯಮಾಡಿಸಿ ಅಲ್ಲಿರುವ ಭಕ್ತ ಮಹೇಶ್ವರರ ಭಕ್ತಿಪೂರ್ವಕವಾದ ಆತಿಥ್ಯವನ್ನು ಒಂದು ತಿಂಗಳವರಿವಿಗೂ ಸ್ವೀಕರಿಸಿದ್ದು ತಾ|| 4-6-31 ನೆಯ ದಿವಸ ಯಾವತ್ತೂ ಸಿಬ್ಬಂದಿಯೊಡನೆ ನಂಚೆರ್ಲ ಎಂಬ ಗ್ರಾಮಕ್ಕೆ ದಯಮಾಡಿಸಿದರು. ಪ್ರಮುಖರಾದ ವೇ|| ಮಠದ ಮರಿಸ್ವಾಮಯ್ಯನವರು, ವೇ|| ಮಠದ ಬಸಯ್ಯನವರು, ಶ್ರೀಮಂತ ಬಂಡೇಗೌಡರು ಬಂಟನಹಾಳ, ಗೋನಾಳ ಬಸಪ್ಪನವರು, ದೊಡ್ಡ ಬಸಪ್ಪನವರು ಬಳ್ಳಾರಿ, ಕುರುಗೋಡಪ್ಪನವರು ಬಳ್ಳಾರಿ, ಬಸಂಮರ ವೀರಪ್ಪನವರು, ಕಟಾರಿ ಮುದ್ದಪ್ಪನವರು ಮೊದಲಾದ ಯಾವತ್ತು ಭಕ್ತ ಮಹೇಶ್ವರರು ಬ್ಯಾಂಡ್‌ಭಜಂತ್ರಿ ಫಲಕರ್ಪೂರಗಳನ್ನು ತೆಗೆಯಿಸಿಕೊಂಡು ಹೋಗಿ ನಂದೀಶ್ವರ ದೇವಸ್ಥಾನದಲ್ಲಿ ಸ್ವಾಮಿಗಳನ್ನು ಎದುರುಗೊಂಡು ಆಂದೋಲಿಕೆಯಲ್ಲಿ ಮೂರ್ಚಮಾಡಿಸಿ ಶೃಂಗರಿಸಿದ ಬೀದಿಗಳಲ್ಲೆಲ್ಲ ಉತ್ಸವವನ್ನು ಮಾಡಿಸಿದರು. ಈ ಉತ್ಸವ ಇಂಚಿಕ್ಕೆ ಸ್ಥಳೀಯ ಗೌರ್ನಮೆಂಟ ಪೋಲೀಸರು ಬಂದಿದ್ದರು. ಉತ್ಸವವು ಬಜಾರದಲ್ಲಿ ಬಂದ ಕೂಡಲೆ ಸುವಾಸಿನಿಯರು ತಮ್ಮ ತಮ್ಮ ಮನೆಯ ಮುಂದೆ ನೀರು ಹಾಕುತ್ತ ಆರತಿ ಬೆಳಗಿ ಮಂಗಲಮಾಡಿ ಸನ್ನಿಧಿಯವರ ಆಶೀರ್ವಾದವನ್ನು ಪಡೆಯುತ್ತಿದ್ದರು. ಉತ್ಸವವು ಸ್ವಸ್ಥಾನವನ್ನು ಸೇರಿತು. ಇವರ ಸದ್ಬೋಧವನ್ನು ಕೇಳುತ್ತ ಅಲ್ಲಲ್ಲಿ ಗ್ರಾಮದ ಭಕ್ತರು ಬಹಳವಾಗಿ ಸುಧಾರಣೆಯನ್ನು ಹೊಂದುತ್ತಿರುವರು. ಇಷ್ಟರಮಟ್ಟಿಗೆ ಮಹಾಸ್ವಾಮಿಗಳ ಉತ್ಸವಾದಿಗಳು ನಡೆಯಬೇಕಾದರೆ ಇವರ ಧರ್ಮಬೋಧದ ಪ್ರಭಾವವೇ ಕಾರಣವಾಗಿದೆ.

ಮ|| ರಾ|| ವೀರಪ್ಪನವರು ಬಸಂಮರ ಮದ್ದಿಕೆರೆ.

ಸದ್ಭಕ್ತ ಶಿಖಾರತ್ನ ಯರೆಸೀಮೆ ರಾಚಪ್ಪನವರ ನಿಧನ.

ಹಾವೇರಿ ಗ್ರಾಮದ ಸದ್ಭಕ್ತರಲ್ಲಿ ರತ್ನದಂತೆ ರಾರಾಜಿಸುತ್ತಿದ್ದ ಮ||ರಾ|| ಯರೆಸೀಮೆ ರಾಚಪ್ಪನವರು ಇದೇ ತಿಂಗಳು 3 ನೆಯ ತಾರೀಖು ಬುಧವಾರ ಸಾಯಂಕಾಲ ೬ ಘಂಟೆಗೆ ಕೈಲಾಸವಾಸಿಗಳಾದರು. ಇವರು ಹಾವೇರಿ ಗ್ರಾಮದ ಪ್ರಮುಖರೂ ಸದಾಚಾರಸಂಪನ್ನರೂ ಆದ ಶ್ರೀ|| ಯರೇಸೀಮೆ ಚನ್ನಬಸವಪ್ಪನವರ ಉದರದಲ್ಲಿ ಬಹುಧಾನ್ಯ ಸಂವತ್ಸರ ಮಾಘ ಶುದ್ಧ ೮ ದಿವಸ ಜನಿಸಿದರು. ಮ|| ರಾ|| ಚನ್ನಬಸಪ್ಪನವರು ಬಹಳ ಕಾಳಜಿ ತೆಗೆದುಕೊಂಡು ಇವರನ್ನು ವ್ಯವಹಾರದಲ್ಲಿ ನಿಪುಣರನ್ನಾಗಿ ಮಾಡಿದ್ದಲ್ಲದೆ ತಮ್ಮಂತೆ ಜಗದ್ಗುರು ಪಂಚಾಚಾರ್ಯರ ಕೀರ್ತಿಯನ್ನು ಹಬ್ಬಿಸಲಿಕ್ಕೆ ಸಿದ್ಧರನ್ನಾಗಿಮಾಡಿದರು. ರಾಚಪ್ಪನವರ ರೋಮರೋಮದಲ್ಲಿಯೂ ಜಗದ್ಗುರು ಪಂಚ ಸಿಂಹಾಸನಾಧೀಶ್ವರರ ಭಕ್ತಿಯು ತುಂಬಿ ತುಳುಕಾಡುತ್ತಿತ್ತು. ಇವರು ಸತ್ಯಾಗ್ರಹಿಗಳಾಗಿ ಯಾವಾಗಲೂ ಸತ್ಯಪಕ್ಷಕ್ಕಾಗಿ ಕೆಲಸಮಾಡುತ್ತಿದ್ದುದರಿಂದ ಪ್ರತಿಯೊಂದು ಕಾರ್ಯದಲ್ಲಿಯೂ ಜಯಶೀಲರಾಗುತ್ತಿದ್ದರು.

ಹಾವೇರಿ ಹಾಗೂ ಇದರ ಸುತ್ತುಮುತ್ತಲಿನ ಪ್ರದೇಶದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಕಾರವನ್ನು ಪಸರಿಸಿದ ಮಹಾನುಭಾವರಾದ ಶ್ರೀ|| ಮ|| ರಾ|| ಯರೇಸೀಮೆ ರಾಚಪ್ಪನವರಿಗೆ ಒಬ್ಬ ತಮ್ಮನು ಒಬ್ಬ ಮಗನು ಇರುವರು. ಇವರಿಗೆಲ್ಲಾ ಅಪರಿಮಿತವಾದ ದುಃಖವುಂಟಾಗುವುದು ಸ್ವಾಭಾವಿಕವಾಗಿದೆ. ಮ|| ರಾ|| ರಾಚಪ್ಪನವರ ಮರಣದಿಂದುಂಟಾದ ತಮ್ಮ ಅನುತಾಪವನ್ನು ಪ್ರದರ್ಶಿಸುವದಕ್ಕಾಗಿ ಇಲ್ಲಿಯ ಯಾವತ್ತು ವ್ಯಾಪಾರಸ್ಥರು 4 ನೆಯ ತಾರೀಖಿನ ದಿವಸ ತಮ್ಮ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಸಾವಿರಾರು ಜನ ಸ್ತ್ರೀಪುರುಷರು ಕೂಡಿ ಸಮಾಧಿಕಾರ್ಯವನ್ನು ಸಾಂಗಗೊಳಿಸಿದರು. ಇವರ ಮರಣದ ವಿಷಯವು ಬಹು ಸೋಜಿಗವಾಗಿದೆ. ಇವರು ಮೃತಿಹೊಂದುವವರೆಗೆ ಚನ್ನಾಗಿ ಮಾತನಾಡುತ್ತಿದ್ದರು. ಇವರಿಗೆ ಜಡ್ಡು ವಗೈರೆ ಏನೂ ಆಗಿದ್ದಿಲ್ಲ. ಸಾಯಂಕಾಲ ೬ ಘಂಟೆಯ ಸಮಯಕ್ಕೆ ೩-೪ ಸಾರೆ ವಾಂತಿಭೇದಿಯಾಗಿದ್ದಿತು. ಮುಂದೆ ಎರಡೇ ಘಂಟೆಯಲ್ಲಿ ಇವರು ತಮ್ಮ ಜಡದೇಹವನ್ನು ತ್ಯಜಿಸಿ ಪರಶಿವನಲ್ಲಿ ಐಕ್ಯರಾದರು. ಮೃತರ ಆತ್ಮಕ್ಕೆ ಜಗದಾಚಾರ್ಯರು ಶಾಂತಿಯನ್ನೂ ತಮ್ಮನಿಗೂ ಪುತ್ರನಿಗೂ ಬಂಧುವರ್ಗದವರಿಗೂ ದುಃಖಶಮನವನ್ನೂ ಉಂಟುಮಾಡಲೆಂದು ಕೋರುತ್ತೇನೆ.

ಭೀಮಾಜಿ ಕೃಷ್ಣಗಿತ್ತೆ, ಹಾವೇರಿ.

ಆಶ್ರಿತ ಸಂಸ್ಥಾನ ಪ್ರಜೆಗಳ ಪರಿಷತ್ತು.

ಈ ಪರಿಷತ್ತಿನ ಅಧಿವೇಶನವು ಈ ತಿಂಗಳು 9 ನೆಯ ತಾರೀಖಿನ ದಿವಸ ಬೊಂಬಾಯಿಯಲ್ಲಿ ಜಗತ್ಪ್ರಸಿದ್ಧರಾದ ಶ್ರೀಯುತ ಬಾಬು ರಾಮಾನಂದಚಟ್ಟರ್ಜಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಎಲ್ಲ ಸಂಸ್ಥಾನಗಳ ಪ್ರಜಾಪ್ರತಿನಿಧಿಗಳೂ ಸಭೆಗೆ ಆಗಮಿಸಿದ್ದರು. ಆಗ ಬಾಬು ರಾಮಾನಂದಚಟ್ಟರ್ಜಿಯವರು ಮಾಡಿದ ಭಾಷಣದ ಸಾರಾಂಶ.

"ಅರಸಿಂಗಂ ಪ್ರಜೆಯೇ ದೈವ"

ಭಾರತರಾಷ್ಟ್ರೀಯ ಮಹಾಸಭೆಯು ಜನ್ಮವೆತ್ತಿದಂದಿನಿಂದ ಭಾರತೀಯರ ಪ್ರಾಮುಖ್ಯವಾದ ರಾಜಕೀಯ ಸಂಸ್ಥೆಯಾಗಿದೆ. ಈ ಸಂಸ್ಥೆಯವರು ಬಹು ವರ್ಷಗಳವರೆಗೂ ಅನೇಕ ಕಾರಣಗಳಿಂದ ಆಶ್ರಿತಸಂಸ್ಥಾನಗಳ ಆಡಳಿತದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳದೆ ತಟಸ್ಥರಾಗಿದ್ದರು. ಆದರೆ ಸುದೈವದಿಂದ ಇವರು 1929 ನೆಯ ಇಸವಿಯಲ್ಲಿ ಕಲ್ಕತ್ತೆಯಲ್ಲಿ ನಡೆದ ಅಧಿವೇಶನದಲ್ಲಿ ಸಾಮಂತರಾಜರು ತಮ್ಮ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರವನ್ನು ನೆಲೆಗೊಳಿಸುವುದು ಅತ್ಯಾವಶ್ಯಕವೆಂದು ನಿರ್ಧರಿಸಿದರು. ರಾಷ್ಟ್ರೀಯ ಮಹಾಸಭೆಯು ಆಶ್ರಿತಸಂಸ್ಥಾನಗಳ ಪುರೋಭಿವೃದ್ಧಿಯ ವಿಷಯದಲ್ಲಿ ಎಷ್ಟು ಕುತೂಹಲವುಳ್ಳದಾಗಿದೆ ಎಂಬುದು ಈ ತೀರ್ಮಾನದಿಂದ ವ್ಯಕ್ತವಾಗುತ್ತದೆ. ರಾಜರಿಂದಾಗಲಿ, ರೈತರಿಂದಾಗಲಿ, ಕೂಲೀಕರಿಂದಾಗಲಿ ಕೇವಲ ತನಗೆ ಹಿತಕಾರಿಯಾದ ಕೆಲಸವನ್ನೂ ಸಹ ಬಲಾತ್ಕಾರವಾಗಿಮಾಡಿಸುವುದು ಸಾಧ್ಯವಿಲ್ಲ. ಅವರು ತಮ್ಮ ಶುದ್ಧಮನಸ್ಸಿನಿಂದ ತಮಗೂ ಇತರರಿಗೂ ಹಿತಕಾರಿಯಾದ ಕೆಲಸವನ್ನು ಮಾಡಬೇಕು. ಸಾಮಂತರಾಜರು ಅನ್ಯರ ಪ್ರೇರಣೆಯಿಲ್ಲದೆ ತಮ್ಮ ಪ್ರಜೆಗಳ ಪುರೋಭಿವೃದ್ಧಿಗೆ ಅತ್ಯಾವಶ್ಯಕವಾದ ಕಾರ್ಯದಲ್ಲಿ ಉದ್ಯುಕ್ತರಾಗಿ ಆ ಮೂಲಕ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡರೆ ಬ್ರಿಟಿಷ್ ಹಿಂದೂಸ್ಥಾನದಲ್ಲಿಯೂ ಆಶ್ರಿತಸಂಸ್ಥಾನಗಳಲ್ಲಿಯೂ ಇರುವ ಪ್ರಜಾಸೇವಕರಿಗೆ ತುಂಬಾ ಸಂತೋಷಕರವಾಗುವುದು. ಹಾಗೆ ಮಾಡಿದ್ದಾದರೆ ಅನೇಕ ವಿಷಯಗಳಲ್ಲಿ ನಮ್ಮ ಸಾಮಂತರಾಜರು ಬ್ರಿಟಿಷ್‌ಪ್ರಭುತ್ವದವರಿಗೆ ಮೇಲ್ಪಂಕ್ತಿಯಾಗುವರೆಂದು ಅಭಿಮಾನದಿಂದ ಹೇಳಿ ನಾವು ಜಗತ್ತಿನಲ್ಲಿ ತಲೆಯೆತ್ತಿಕೊಂಡು ಓಡಾಡಬಹುದು. ಅನೇಕ ವಿಷಯಗಳಲ್ಲಿ ಕೆಲವು ಸುಧಾರಿಸಿದ ಸಂಸ್ಥಾನಗಳು ಮೇಲ್ಪಂಕ್ತಿಯಾಗಿರುವುವೆಂಬುದನ್ನು ನಾನು ಅಭಿಮಾನದಿಂದ ಹೇಳದಿರಲಾರೆನು. ಸಾಮಂತರಾಜರು ಸ್ವಬುದ್ಧಿಯಿಂದಲೇ ರಾಜಸೂತ್ರಗಳನ್ನು ಪ್ರಜೆಗಳ ಕೈಗೆ ಕೊಟ್ಟು ಅವರು ಮಾಡುವ ನಿಯಮಗಳನ್ನನುಸರಿಸಿ ಆಡಳಿತವನ್ನು ನಡೆ[illegible]ತದರ ಮೂಲಕ ಸಾಂಕುಶಪ್ರಭುಗಳಾದರೆ ಆಂಗ್ಲೇಯಪ್ರ[illegible] ಮೇಲ್ಪಂಕ್ತಿಯಾಗುವರು. ಕೇವಲ ಅಗ್ರಗಣ್ಯನಾದ [illegible] ಅಧಿಕಾರಕ್ಕೂ ಮತ್ತು ಜಾಣ್ಮೆಗೂ ಪರಿಮಿತಿಯುಂಟು. ಆದಕಾರಣ ನಿರಂಕುಶಪ್ರಭುಗಳು ಎಷ್ಟೇ ಪ್ರಜಾಹಿತೈಷಿಗಳಾದರೂ ಅವರ ಅಧಿಕಾರಕ್ಕೂ ಮತ್ತು ಜಾಣ್ಮೆಗೂ ಪರಿಮಿತಿಯುಂಟೆಂದು ಪ್ರತಿಯೊಬ್ಬ ಸುಶಿಕ್ಷಿತರಾಜರೂ ತಿಳಿದುಕೊಳ್ಳಬೇಕು. ಮತ್ತು ವಂಶಪಾರಂಪರ್ಯವಾಗಿ ಬರುವ ನಿರಂಕುಶಪ್ರಭುಗಳೆಲ್ಲರೂ ಪ್ರಜಾಹಿತೈಷಿಗಳಾಗಿರುವರೆಂಬುದಕ್ಕೆ ಯಾವ ಭರವಸೆಯೂ ಇಲ್ಲ. ಅಂಥ ಭರವಸೆಯುಂಟೆಂದು ಭಾವಿಸೋಣ, ಆದರೆ ನಿರಂಕುಶಪ್ರಭುತ್ವದಲ್ಲಿ ಒಂದು ನ್ಯೂನತೆಯುಂಟು. ನಿರಂಕುಶಪ್ರಭುವು ಪ್ರಜಾಹಿತೈಷಿಯಾಗಿದ್ದರೆ ದೇಶವಾತ್ಸಲ್ಯದಿಂದ ಪ್ರಜಾಸೇವೆಮಾಡುವುದಕ್ಕೆ ಅವರಿಗೆ ಮಾತ್ರವೇ ಅವಕಾಶವು ದೊರೆತು, ದೇಶದಲ್ಲಿರುವ ಇತರ ದೇಶಾಭಿಮಾನಿಗಳ ದೇಶಾಭಿಮಾನವು ವಿಕಾಸವಾಗುವುದಕ್ಕೂ ಅವರ ಶಕ್ತಿಯನ್ನು ಪ್ರಕಾಶಿಸುವುದಕ್ಕೂ ಅವಕಾಶವಿರುವುದಿಲ್ಲ. ಸರ್ವರಿಗೂ ತಮ್ಮ ದೇಶಾಭಿಮಾನವನ್ನು ಅನುಷ್ಠಾನದಲ್ಲಿ ತರಲು ಅವಕಾಶವು ದೊರೆಯದಿದ್ದರೆ ಜಗತ್ತಿಗೂ, ಆ ರಾಷ್ಟ್ರಗಳಿಗೂ ಸಮಾಜಕ್ಕೂ ತುಂಬಾ ನಷ್ಟವಾಗುವುದು. ಹಾಗಲ್ಲದೆ ದೇಶದಲ್ಲಿ ಪ್ರಜಾ ಸತ್ತಾತ್ಮಕವಾದ ಪ್ರಭುತ್ವವಿದ್ದರೆ ಪ್ರತಿಯೊಬ್ಬ ತರುಣನಿಗೂ ರಾಜಕಾರ್ಯದಲ್ಲಿ ಭಾಗಿಯಾಗಿ ತನ್ನ ಬುದ್ಧಿಸಾಮರ್ಥ್ಯವನ್ನೂ ದೇಶಾಭಿಮಾನವನ್ನೂ ಅನುಷ್ಠಾನದಲ್ಲಿ ತಂದು ಪ್ರಜಾಸೇವೆಮಾಡಲು ಸಾಧ್ಯವಾಗುವುದು. ನಾನು ಇದುವರೆಗೂ ನಿರಂಕುಶಪ್ರಭುಗಳು ಪ್ರಜಾಹಿತೈಷಿಗಳೆಂಬ ಭಾವನೆಯ ಮೇಲೆಯೇ ಮಾತನಾಡಿರುವೆನು. ಆದರೆ ನಮ್ಮ ದುರ್ದೈವವಶಾತ್ ನಿರಂಕುಶಪ್ರಭುಗಳು ಪ್ರಜಾಹಿತೈಷಿಗಳಾಗಿರುವುದು ಅಪೂರ್ವವಾಗಿದೆ. ಅಧಿಕಾರಕ್ಕೆ ಲಗಾಮು ಇಲ್ಲದಿದ್ದರೆ ಅದು ದುರುಪಯೋಗವಾಗಿ ಪ್ರಜೆಗಳ ಮೇಲೆ ದಬ್ಬಾಳಿಕೆಯಲ್ಲಿ ಪರಿಣಮಿಸುವುದು.

ಈ ಕಾರಣದಿಂದಲೂ, ಪ್ರತಿಯೊಂದು ಸಂಸ್ಥಾನಕ್ಕೂ ಪ್ರಜೆಗಳೇ ಮುಖ್ಯಾಂಗವಾಗಿರುವುದರಿಂದಲೂ, ಸಾಮಂತರಾಜರು ತಮ್ಮ ಪ್ರಜೆಗಳನ್ನು ಸಹೋದ್ಯೋಗಿಗಳನ್ನಾಗಿ ಮಾಡಿಕೊಳ್ಳಬೇಕು. ಪ್ರತಿಯೊಂದು ರಾಜ್ಯದಲ್ಲಿಯೂ ಪ್ರಜೆಗಳೇ ಮುಖ್ಯರೆಂದು ಹೇಳಿದರೆ ಯಾವ ರಾಜರಿಗೂ ಆಶ್ಚರ್ಯವೆನಿಸಲಿಕ್ಕಿಲ್ಲ. ಫರಂಗಿ ಆಳರಸರು ಭಾರತೀಯರು ಸ್ವರಾಜ್ಯಕ್ಕೆ ಅರ್ಹರಲ್ಲವೆಂದೂ, ಭಾರತೀಯರಿಗೆ ಪ್ರಜಾಪ್ರಭುತ್ವವೇನೆಂಬುದು ಗೊತ್ತಿಲ್ಲವೆಂದೂ, ಹಿತಕಾರಿಯಾಗಿರುವ ನಿರಂಕುಶಪ್ರಭುತ್ವವು ಮಾತ್ರವೇ ಗೊತ್ತಿರುವುದೆಂದೂ ಹೇಳುತ್ತಾ ಭಾರತೀಯರ ಜನ್ಮಸಿದ್ಧವಾದ ಸ್ವರಾಜ್ಯದ ಹಕ್ಕನ್ನು ನಿರಾಕರಿಸುವಂತೆ, ವಿಶೇಷ ಜನ ಸಾಮಂತರಾಜರು ಪ್ರಜಾ ಸತ್ತಾತ್ಮಕ ಪ್ರಭುತ್ವವನ್ನು ಸ್ಥಾಪಿಸಿದರೆ ಪ್ರಾಚೀನ ಸಂಪ್ರದಾಯವನ್ನತಿಕ್ರಮಿಸಿದಂತಾಗುವುದೆಂದು ಹೇಳುವರು. ಹಿಂದುಸ್ಥಾನದಲ್ಲಿ ಆಳಿದ ಬೇರೆಬೇರೆ ಧರ್ಮಗಳ ಜನರಿಗೆ ಸಾಂಕುಶಪ್ರಭುತ್ವದ ಮರ್ಮವು ತಿಳಿದಿರಲಿಲ್ಲವೆಂಬುದು ಶುದ್ಧತಪ್ಪು. ಆಂಗ್ಲೇಯರು ಆಳುವುದಕ್ಕೆ ಪೂರ್ವದಲ್ಲಿ ಹಿಂದುಸ್ಥಾನದಲ್ಲಿ ಹಿಂದೂಗಳೂ ಜೈನರೂ, ಬೌದ್ಧರೂ, ಮುಸಲ್ಮಾನರೂ, ಸಿಕ್ಕರೂ ಆಳಿದರು. ಇವರೆಲ್ಲರೂ ಪ್ರಜಾಸತ್ತಾತ್ಮಕ ಪ್ರಭುತ್ವದ ಮಹತ್ವವನ್ನೂ, ಅಮೋಘವಾದ ಪ್ರಯೋಜನವನ್ನೂ ಚನ್ನಾಗಿ ತಿಳಿದುಕೊಂಡಿದ್ದರು.

ಪ್ರಜಾಸತ್ತಾತ್ಮಕ ಪ್ರಭುತ್ವವಾದಿಗಳು ನಿರೀಕ್ಷಿಸಿದಂತೆ ಎಲ್ಲ ಹಿತಗಳೂ ಲಭಿಸದಿದ್ದರೂ, ಸ್ವಲ್ಪ ನ್ಯೂನತೆಗಳು ಕಂಡುಬಂದರೂ ಒಟ್ಟಿನಮೇಲೆ ನಿರಂಕುಶಪ್ರಭುತ್ವಕ್ಕಿಂತಲೂ ಪ್ರಜಾಸತ್ತಾತ್ಮಕ ಪ್ರಭುತ್ವವೇ ಸರ್ವಶ್ರೇಷ್ಠವಾದುದೆಂಬುದು ನಿರ್ವಿವಾದವು. ಜಗತ್ತಿನಲ್ಲಿ ಎಷ್ಟೋ ಜನರು ರಾಜ್ಯಗಳಲ್ಲಿ ಸರ್ವಾಧಿಕಾರಿಗಳಾಗಿ ನಿರಂಕುಶಪ್ರಭುತ್ವನಡಸುತ್ತಿರುವರು. ಅವರೆಲ್ಲರೂ ತಾವು ಪ್ರಜಾಹಿತಕ್ಕೋಸ್ಕರ ಪ್ರಭುತ್ವಮಾಡುವೆವೆಂದು ಹೇಳಲೇಬೇಕು. ಆದಕಾರಣ ಪ್ರಜಾಸತ್ತಾತ್ಮಕ ಪ್ರಭುತ್ವವೇ ನಿಜವಾದ ಪ್ರಭುತ್ವವು. ಪ್ರಜಾಸತ್ತಾತ್ಮಕ ಪ್ರಭುತ್ವವು ಜಗತ್ತಿನಲ್ಲಿ ವಿಜಯವಾಗಿ ವಿರಾಜಿಸುವುದರಲ್ಲಿ ಸಂಶಯವಿಲ್ಲ. ಸ್ಪೇನಿನಲ್ಲಿ ಇತ್ತೀಚೆಗೆ ಪ್ರಜಾಭಿಪ್ರಾಯಕ್ಕೆ ಜಯವಾಯಿತು. ನಿರಂಕುಶಭಾವನೆಗಳಿಗೆ ಮುದ್ದಿಡುವ ಭಾರತೀಯರಾಜರು ಈ ಐತಿಹಾಸಿಕ ಘಟನೆಯಿಂದ ಬುದ್ಧಿಕಲಿತುಕೊಳ್ಳಬೇಕು. ಆದರೆ ತಗ್ಗುದಿಣ್ಣೆಗಳನ್ನು (ಅರ್ಥಾತ್ ಶ್ರೀಮಂತರನ್ನು ತುಳಿದು ಬಡವರಿಗೆ ಹಂಚಬೇಕೆಂಬ ತತ್ವ) ಸಮಮಾಡಬೇಕೆಂಬ ಬೋಲ್ಷವಿಕ್ ತತ್ವವನ್ನು ನಾನು ಒಪ್ಪುವದಿಲ್ಲ. ನಾನು ಬೋಲ್ಷವಿಕರನ್ನು ಖಂಡಿಸುತ್ತೇನೆ. ಪ್ರಜೆಗಳಿಗೆ ರಾಜಕೀಯ ಹಕ್ಕುಗಳನ್ನು ಕೊಟ್ಟು, ಸಾರ್ವಜನಿಕಹಿತವನ್ನುಂಟುಮಾಡುವುದರಿಂದಲೇ ಬೋಲ್ಷವಿಕ್ ತತ್ವದ ದಾಳಿಯನ್ನ ಆಗಿಸುವುದು ಸಾಧ್ಯವಿದೆ ಎಂಬುದು ನನಗೆ ಮನಗಂಡಿದೆ. ನನಗೆ ಹಿಂಸಾವಾದಿಗಳಲ್ಲಿ ವಿಶ್ವಾಸವಿಲ್ಲ. ಅಹಿಂಸಾವಾದಿಗಳಿಂದಲೇ ನಮ್ಮ ಉದ್ದೇಶಗಳನ್ನು ಸಾಧಿಸಬೇಕು.

ಸಾಮಂತರಾಜರ ನಿರಂಕುಶ ಪ್ರಭುತ್ವಕ್ಕೆ ಆಶ್ರಯವಾವುದು?

ಅನೇಕ ಭಾರತೀಯ ರಾಜರ ನಿರಂಕುಶ ಪ್ರಭುತ್ವವು ನಿರಾತಂಕವಾಗಿ ಜಾರಿಯಲ್ಲಿರುವುದಕ್ಕೆ ಬ್ರಿಟಿಷ್ ಸರಕಾರವು ಆಧಾರಭೂತವಾಗಿದೆ. ಹಿಂದುಸ್ಥಾನದಲ್ಲಿ ಬ್ರಿಟಿಷ್ ಅಧಿಕಾರಿಗಳು ಸಂಸ್ಥಾನಗಳಲ್ಲಿರುವ ನಿರಂಕುಶ ಪ್ರಭುತ್ವವನ್ನು ಕಾಪಾಡುವುದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಮೊದಲನೆಯದು ಸಂಸ್ಥಾನಗಳ ಆಡಳಿತಕ್ಕೂ ಬ್ರಿಟಿಷ್ ಹಿಂದುಸ್ಥಾನದ ಆಡಳಿತಕ್ಕೂ ಇರುವ ವ್ಯತ್ಯಾಸವನ್ನು ವ್ಯಕ್ತಪಡಿಸಿ ಬ್ರಿಟಿಷ್ ಹಿಂದುಸ್ಥಾನದ ಆಡಳಿತವೇ ಶ್ರೇಷ್ಠವಾದುದೆಂದು ಜಗತ್ತಿಗೆ ತೋರಿಸಬೇಕೆಂಬುದು. ಎರಡನೆಯದು ಸಮಯ ಬಿದ್ದಾಗ ಸಂಸ್ಥಾನಗಳ ಸಹಾಯದಿಂದ ರಾಷ್ಟ್ರೀಯ ಚಳವಳಿಯನ್ನು ಅಡಗಿಸಬೇಕೆಂಬುದು. ಭಾರತೀಯರು ಸ್ವರಾಜ್ಯವನ್ನು ಸಂಪಾದಿಸಿದರೆ ಈ ಎರಡು ಕಾರ್ಯಗಳಿಗೂ ಅವಕಾಶ ಸಿಗುವುದಿಲ್ಲ. ಸರಕಾರದವರು ಯಾವ ಬದಲಾವಣೆಯನ್ನೂ ಮಾಡುವ ಸ್ಥಿತಿಗತಿಗಳನ್ನು ಮೊದಲಿನಂತೆಯೇ ಬಿಡುವರೆಂದು ಭಾವಿಸೋಣ. ಈಗಿನ ಕಾಲದವರ ಚೈತನ್ಯವನ್ನು ಎದುರಿಸಲು ಜಗತ್ತಿನ ಯಾವ ಪ್ರಭುಗಳಿಗೂ ಸಾಧ್ಯವಿಲ್ಲ. ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಈ ಚೈತನ್ಯವು ಪ್ರಜ್ವಲಿಸಿ ಫಲಕಾರಿಯಾಗಿರುವಂತೆ ಇಲ್ಲಿಯೂ ಆಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ದೇಶದಲ್ಲಿ ವರ್ತಮಾನ ಪತ್ರಿಕೆಗಳಿರಲಿ, ಇಲ್ಲದಿರಲಿ ವಿಚಾರತರಂಗಗಳು ಸರ್ವತ್ರ ಪ್ರವಹಿಸಿ ನಿರಂಕುಶ ಪ್ರಭುತ್ವದ ಕೋಟೆಗಳನ್ನು ಕೊಚ್ಚಿಕೊಂಡು ಹೋಗುತ್ತಿರುವುವು. ಯಾವ ಶಕ್ತಿಯೂ ಈ ಪ್ರವಾಹವನ್ನು ತಡೆಯಲಾರದು. ಸಾಮಂತರಾಜರು ಆಂಗ್ಲೇಯ ಸರಕಾರದೊಡನೆ ಅನೇಕ ಕರಾರುಗಳನ್ನು ಮಾಡಿಕೊಂಡು ತಮ್ಮ ಹಕ್ಕುಗಳನ್ನು ಭದ್ರಮಾಡಿಕೊಂಡಿರುವರು. ಆದರೆ ಈಭದ್ರತೆಯು ಬಹುಕಾಲ ನಿಲ್ಲಲಾರದು. ಎಷ್ಟು ಒಪ್ಪಂದಗಳನ್ನು ಮಾಡಿಕೊಂಡರೂ, ಜಗತ್ತಿನ ಜನರು ತಮ್ಮ ಹಕ್ಕುಬಾಧ್ಯತೆಗಳನ್ನು ಸಾಧಿಸಿದಂತೆ ನಮ್ಮ ಸಂಸ್ಥಾನಗಳ ಪ್ರಜೆಗಳೂ ಸಹ ತಮ್ಮ ಹಕ್ಕುಬಾಧ್ಯತೆಗಳನ್ನು ಸಾಧಿಸಿಯೇ ಸಾಧಿಸುವರು. ಈ ವಿಷಯವನ್ನು ಸಾಮಂತ ರಾಜರು ನಿಸ್ಸಂದೇಹವಾಗಿ ತಿಳಿದಿರಲಿ. ಆಂಗ್ಲೇಯ ಸರಕಾರದ ಸಂಗಡ ಮಾಡಿಕೊಂಡಿರುವ ಒಪ್ಪಂದದಲ್ಲಿ ತಮ್ಮ ಪ್ರಜೆಗಳ ಸೌಖ್ಯಕ್ಕೂ ಪುರೋಭಿವೃದ್ಧಿಗೂ ಹೆಚ್ಚು ಗಮನಕೊಡಬೇಕೆಂಬ ಷರತ್ತು ಇರುವುದು ಸಾಮಂತರಾಜರ ಜ್ಞಾಪಕದಲ್ಲಿದ್ದಂತೆ ತೋರುವುದಿಲ್ಲ. ಪಾಟಿಯಾಲ, ಕೊಲ್ಲಾಪುರ, ಪ್ರತಾಪಗಡ, ರಾಮಪುರ, ಕೂಚ್‌ಬಿಹಾರ್, ಅಯುಧರ ಮೊದಲಾದ ಸಂಸ್ಥಾನಗಳು ಬ್ರಿಟಿಷ್ ಸರಕಾರದ ಸಂಗಡ ಮಾಡಿಕೊಂಡಿರುವ ಒಪ್ಪಂದದಲ್ಲಿ ಮೇಲ್ಕಂಡ ಷರತ್ತು ಸ್ಪಷ್ಟವಾಗಿದೆ. ಆದಾಗ್ಯೂ ಸಂಸ್ಥಾನಗಳಲ್ಲಿ ನದರಿ ಷರತ್ತು ಜಾರಿಯಲ್ಲಿ ಬರದೆ ನಿಷ್ಪ್ರಯೋಜನವಾಗಿದೆ. ಏಕೆಂದರೆ ಸಾರ್ವಭೌಮ ಸರಕಾರದವರು ಈ ಷರತ್ತನ್ನು ಜಾರಿಯಲ್ಲಿ ತರಬೇಕೆಂದು ಸಾಮಂತರಾಜರನ್ನು ಒತ್ತಾಯಪಡಿಸಿಲ್ಲ. ಅವರು ಬಲಾತ್ಕಾರ ಪಡಿಸಿದ ಹೊರತು ಇವರು ಪ್ರಜೆಗಳನ್ನು ಸರಿಯಾಗಿ ಆಳುವುದಿಲ್ಲ.

ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಭಾರತೀಯರ ಭಾವಿ ಸರಕಾರವು ಫೆಡರಲ್ (ಸಂಯುಕ್ತ ಸರಕಾರ) ಸರಕಾರವಾಗಿರಬೇಕೆಂದು ತೀರ್ಮಾನಿಸಲ್ಪಟ್ಟಿರುವುದರಿಂದ ಸಂಸ್ಥಾನಗಳಲ್ಲಿ ಪ್ರಜೆಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂಬಂಶವು ಮೊದಲಿನಂತಲೂ ಚನ್ನಾಗಿ ಸ್ಪಷ್ಟವಾಗುವುದು. ಸಂಯುಕ್ತಪ್ರಭುತ್ವದ ಹಿತಾಹಿತವನ್ನು ಇಲ್ಲಿ ಚರ್ಚಿಸುವುದು ಅನಾವಶ್ಯಕವಾಗಿದೆ. ಹಿಂದುಸ್ಥಾನದ ಸದ್ಯಸ್ಥಿತಿಯಲ್ಲಿ ಭರತಖಂಡದ ಎಲ್ಲ ಪ್ರಾಂತಗಳ ಮತ್ತು ಸಂಸ್ಥಾನಗಳ ಏಕೀಕರಣವಾಗಿ ಪ್ರಜಾಸತ್ತಾತ್ಮಕ ಪ್ರಭುತ್ವವು ನೆಲೆಗೊಳ್ಳುವುದರ ಮೂಲಕ ಸಂಯುಕ್ತ ಪ್ರಭುತ್ವವು ಸ್ಥಾಪಿತವಾದರೇನೇ ಇಡೀ ಭರತಖಂಡವು ಸ್ವಾತಂತ್ರ್ಯವನ್ನು ಸಂಪಾದಿಸಿದಂತಾಗುವುದು. (ಸಶೇಷ.)

ಲಂಡನ್ನಿನಲ್ಲಿ ಶ್ರೀಯುತ ವಿಠ್ಠಲಭಾಯಿ ಪಟೇಲರವರ ಭಾಷಣ.

ಈ ತಿಂಗಳು 5 ನೆಯ ತಾರೀಖಿನ ದಿವಸ ಲಂಡನ್ನಿನಲ್ಲಿ ವಿಸ್ ಮಟ್ರೀಲ್ ಲೆಸ್ಟರ್ ಎಂಬವರ ಅಧ್ಯಕ್ಷತೆಯಲ್ಲಿ ಶ್ರೀಯುತ ವಿಠ್ಠಲಭಾಯಿಪಟೇಲ್‌ರವರು ಮಾಡಿದ ಭಾಷಣದ ಸಾರಾಂಶವೇನೆಂದರೆ:—ಭಾರತೀಯರು ತಮ್ಮ ದೇಶದ ಒಳ ಆಡಳಿತವನ್ನೂ ಹೊರಗಿನ ಆಡಳಿತವನ್ನೂ ತಾವೇ ನಡೆಯಿಸಲಿಚ್ಛಿಸುತ್ತಾರೆ. ಭಾರತೀಯರು ಇನ್ನು ಮುಂದೆ ಪರದಾಸ್ಯದಿಂದುಂಟಾಗುವ ಅವಮಾನವನ್ನು ಸಹಿಸಲಾರರು. ಭಾರತೀಯರಲ್ಲಿ ವಿಶೇಷ ಜನರು ಇಂಗ್ಲೀಷರ ಸಂಬಂಧವನ್ನು ಸಂಪೂರ್ಣ ಬಿಟ್ಟುಬಿಡಬೇಕೆಂದು ಅಪೇಕ್ಷಿಸುತ್ತಾರೆ. ನಿರಾತಂಕವಾದಸ್ವಾತಂತ್ರ್ಯವು ಲಭಿಸುವುದಾದರೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಒಪ್ಪಬಹುದೆಂದು ಕಾಂಗ್ರೆಸ್ಸಿನವರು ಒಪ್ಪಿರುತ್ತಾರೆ. ಭಾರತೀಯರಿಗೆ ಶಾಂತಿಯುಬೇಕು. ತಮ್ಮ ಷರತ್ತುಗಳ ಮೇಲೆ ಶಾಂತಿಯು ಲಭ್ಯವಾದರೆ ಅದನ್ನು ಅಂಗೀಕರಿಸುವರೇ ಹೊರತು ಬೇರೆಯಿಲ್ಲ. ಈ ದೇಶದ ರಾಜತಂತ್ರ ವಿಚಾರದವರೊಡನೆ ಮಾತನಾಡಲಾಗಿ ಶಾಂತಿಯುತ ಒಪ್ಪಂದವಾಗುವುದು ದುಸ್ತರವೆಂದು ನನಗೆ ತಿಳಿಯುತ್ತದೆ. ಗಾಂಧಿಯವರು ಗೌರವಯುತವಾದ ಒಪ್ಪಂದವನ್ನು ಮಾಡಿಕೊಂಡು ಶಾಂತಿಯನ್ನು ನೆಲೆಗೊಳಿಸಬೇಕೆಂದು ಧೃಢಸಂಕಲ್ಪ ಮಾಡಿರುವರು. ಆದರೆ ಇದು ಸಿದ್ಧಿಸುವಂತೆ ತೋರುವುದಿಲ್ಲ. ಸಂಧಾನವು ಮುರಿದುಬಿದ್ದರೆ ಭಾರತೀಯರು ಪುನಃ ಸಂಗ್ರಾಮಕ್ಕೆ ಸಿದ್ಧರಾಗಬೇಕಾಗುವುದು.

ಇಂಗ್ಲಿಷ್ ವರ್ತಕರು ತಮ್ಮ ಹಿತದ ಸಲುವಾಗಿ ಮುಂದಿನ ರಾಜ್ಯಾಂಗರಚನೆಯಲ್ಲಿ ಕೆಲವು ರಕ್ಷಣೆಗಳಿರಬೇಕೆಂದು ಒತ್ತಾಯಮಾಡುವರು. ಭಾರತೀಯರ ಸೌಹಾರ್ದವನ್ನು ಸಂಪಾದಿಸಿದರೆ, ಇಂಗ್ಲಿಷರು ಭರತಖಂಡದಲ್ಲಿ ತಮ್ಮ ಹಿತವನ್ನು ಕಾಪಾಡಿಕೊಳ್ಳಬಲ್ಲರೇ ಹೊರತು ಸರಕಾರದಲ್ಲಿ ರಕ್ಷಣೆಗಳನ್ನು ನಿಯೋಜನೆಮಾಡುವುದರಿಂದ ಎಂದಿಗೂ ತಮ್ಮ ಹಿತವನ್ನು ಸಾಧಿಸಲಾರರು. ಭಾರತೀಯರ ಸೌಹಾರ್ದವೇ ಇಂಗ್ಲಿಷರಿಗೆ ಬಲವಾದ ಆಸ್ತಿಯಲ್ಲದೆ ರಕ್ಷಣೆಗಳಲ್ಲ. ಈ ವಿಷಯವನ್ನು ಇಂಗ್ಲೀಷರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಭಾರತೀಯರು ಈಗ ಸಂಪೂರ್ಣ ಗುಲಾಮಗಿರಿಯನ್ನನುಭವಿಸುತ್ತಿರುವರು. ಇವರಿಗೆ ಸಂಪೂರ್ಣ ಸ್ವಾತಂತ್ರ್ಯವು ಲಭಿಸಬೇಕು. ಇಲ್ಲವೆ ಗುಲಾಮಗಿರಿಯೇ ಇರಬೇಕು. ಸಂಪೂರ್ಣ ಗುಲಾಮಗಿರಿಗೂ ಸಂಪೂರ್ಣ ಸ್ವಾತಂತ್ರ್ಯಕ್ಕೂ ಮಧ್ಯೆ ಒಂದು ಬೆರಕೆಯ ಪ್ರಭುತ್ವವು ಭಾರತೀಯರಿಗೆ ತೃಪ್ತಿಯಾಗಲಾರದು. ಭಾರತೀಯ ಪರಿಸ್ಥಿತಿಯನ್ನು ಇಂಗ್ಲೀಷರು ತಿಳಿದುಕೊಳ್ಳಬೇಕಾದರೆ ಸಾಮಾನ್ಯ ಚಳವಳಿಯಿಂದ ಸಾಧ್ಯವಿಲ್ಲ. ಭರತಖಂಡದಲ್ಲಿ ಭಯಂಕರ ಚಳವಳಿಯಾಗದಿದ್ದರೆ ಇಂಗ್ಲೀಷರ ಮನಸ್ಸಿನಮೇಲೆ ಪರಿಣಾಮವಾಗುವುದಿಲ್ಲ. ಭರತಖಂಡದ ಸ್ಥಿತಿಯೇನೆಂಬುದನ್ನು ಕಣ್ತೆರೆದು ನೋಡುವುದಿಲ್ಲ. ಭರತಖಂಡದಲ್ಲಿ ಭಯಂಕರ ಚಳವಳಿಯಾದರೇನೆ ಇಂಗ್ಲೀಷರು ಎಚ್ಚೆತ್ತು ಭಾರತೀಯ ಸ್ಥಿತಿಗತಿಗಳನ್ನು ತಿಳಿದುಕೊಂಡು ಭರತಖಂಡಕ್ಕೆ ಅಲ್ಪಸ್ವಲ್ಪ ನ್ಯಾಯವಾದ ಕೆಲಸಮಾಡಬೇಕೆಂಬ ಬುದ್ಧಿಯುಳ್ಳವರಾಗಿರುವರು. ಇಂಗ್ಲೀಷರ ಹೃದಯ ಪರಿವರ್ತನೆಯಾಗದ ಹೊರತು ಬ್ರಿಟಿಷ್ ಸರಕಾರದ ಆಟವು ಎಷ್ಟೂ ನಡೆಯದಂತೆ ಮಾಡಬೇಕೆಂಬುದೇ ಭಾರತೀಯ ರಾಷ್ಟ್ರಭಕ್ತರ ಧೃಢಸಂಕಲ್ಪವಾಗಿದೆ.

ಶ್ರೀಯುತ ವಿಠ್ಠಲಭಾಯಿ ಪಟೇಲ್‌ರವರ ಭಾಷಣವು ಪೂರೈಸಿದಮೇಲೆ ಮಿ|| ಫೆನ್ನರ್ ಬ್ರಾಕ್ವೇಯವರು ಹೇಳಿದ್ದೇನೆಂದರೆ :-

'ಹಿಂದುಸ್ಥಾನದಲ್ಲಿ ರಾಜಕೀಯ ಕ್ರಾಂತಿಯು ಪ್ರಬಲವಾಗಿರುವುದಲ್ಲದೆ ಸಾಮಾಜಿಕಕ್ರಾಂತಿಯೂ ಪ್ರಾರಂಭವಾಗಿದೆ. ಹಿಂದುಸ್ಥಾನದಕೂಲಿಕಾರರಲ್ಲಿ ಮತ್ತು ರೈತರಲ್ಲಿ ಕ್ರಾಂತಿಯನ್ನೆಬ್ಬಿಸಿ ಸ್ವಾತಂತ್ರ್ಯ ಸಂಗ್ರಾಮವನ್ನು ಹೂಡಬೇಕು. ದೇಶದ ಒಳಶತ್ರುಗಳಾದ ಶ್ರೀಮಂತರ ಮತ್ತು ಜಮೀನ್ದಾರರ ಸುಲಿಗೆಯಿಂದ ಕೂಲಿಕಾರರನ್ನೂ ರೈತರನ್ನೂ ಕಾಪಾಡಬೇಕು.

ಭಾರತೀಯರಿಗೆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯಕ್ಕಿಂತಲೂ ಬ್ರಿಟಿಷರ ಸಂಬಂಧವಿಲ್ಲದಿರುವ ಸ್ವರಾಜ್ಯವೇ ಮೇಲಾದುದು. ಕಳೆದ ವರ್ಷ ಬ್ರಿಟಿಷ್ ಸರಕಾರದವರು ಮಾಡಿದ ಕೃತಿಗಳಿಗೆ ಆಂಗ್ಲೇಯನಾದ ನನಗೆ ನಾಚಿಕೆಯಾಗುತ್ತದೆ. ಅನೇಕ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿದ್ದರೂ, ಮೀರತ್ ಮತ್ತು ಘರವಾಲಿ ಖೈದಿಗಳನ್ನು ಬಿಡುಗಡೆಮಾಡದಿರುವುದು ಖಂಡನೀಯವಾಗಿದೆ. ಸರಕಾರದವರು ಈ ಮೊದಲು ಸೂಚಿಸಿರುವ ಅಂಶಗಳಿಂದಲೇ ಒಪ್ಪಂದವಾಗುವುದೆಂದರೆ ಮೂರ್ಖತನವೇ ಸರಿ. ಸರಕಾರದವರು ಒಪ್ಪಂದವನ್ನು ಮಾಡಿಕೊಳ್ಳಬೇಕೆಂಬ ಇರಾದೆಯಿದ್ದರೆ ಉದಾರಮನಸ್ಸಿನಿಂದ ಮುಂದೆ ಬರಬೇಕು.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ದಿವಾನ್ ಸಾಹೇಬರು ಅಪ್ಪಣೆ ಕೊಡಿಸಿದ ಭಾಷಣ

(ಕಳೆದವಾರದ ಶೇಷ.)

ಬಂಡವಾಳದ ವೆಚ್ಚವನ್ನು ಪಡೆಯತಕ್ಕ ಇಲಾಖೆಗಳಲ್ಲಿ, ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಹೊರತು ಇತರ ಇಲಾಖೆಗಳಿಗೆ ಕೊಟ್ಟಿರುವ ಮೊಬಲಗುಗಳು ಈಗ ಅನಿವಾರ್ಯವಾಗಿ ನಡೆದಿರುವ ಕಾಮಗಾರಿಗಳನ್ನು ಪೂರ್ತಿಗೊಳಿಸುವುದಕ್ಕೂ, ಈಗಾಗಲೇ ಕೆಲಸವು ನಡೆಯುತ್ತಿರುವವುಗಳನ್ನು ಮತ್ತಷ್ಟು ಲಾಭಕರವಾಗುವಂತೆ ಅಭಿವೃದ್ಧಿಪಡಿಸುವುದಕ್ಕೂ ಆವಶ್ಯಕವಾಗಿವೆ. ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ವಿಷಯದಲ್ಲಿ ಮುಂದೆ ಅನುಸರಿಸಬೇಕಾದ ಕಾರ್ಯಕ್ರಮದ ಸಂಬಂಧದಲ್ಲಿ ನಾನು ತಮಗೆ ಕೆಲವು ಸಂಗತಿಗಳನ್ನು ಆಗಲೇ ಪ್ರಸ್ತಾಪಿಸಿಯೇ ಇದ್ದೇನೆ. ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಸಂಬಂಧದಲ್ಲಿ ಬಂಡವಾಳದ ವೆಚ್ಚಕ್ಕಾಗಿ 11 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಪೈಕಿ 1 ಲಕ್ಷ ರೂಪಾಯಿಗಳನ್ನು ಕಾರ್ಖಾನೆಯಲ್ಲಿ ನಡೆಯಬೇಕಾದ ಬಗೆಬಗೆಯ ಮೂಲಧನದ ಕಾಮಗಾರಿಗಳಿಗಾಗಿ ಒದಗಿಸಲಾಗಿದೆ. ಅಲ್ಲದೆ ಉಕ್ಕನ್ನು ತಯಾರಿಸುವುದಕ್ಕಾಗಿ ಅಂದಾಜು 10 ಲಕ್ಷ ರೂಪಾಯಿಗಳನ್ನು ತಾತ್ಕಾಲಿಕವಾಗಿ ಒದಗಿಸಿದ್ದೇವೆ. ಒಟ್ಟಿನಲ್ಲಿ ಉಕ್ಕನ್ನು ತಯಾರಿಸುವ ಏರ್ಪಾಡಿಗಾಗಿ 16 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಉಕ್ಕಿನ ಕೈಗಾರಿಕೆಯಲ್ಲಿ ವಿಶೇಷ ಪರಿಶ್ರಮವಿರತಕ್ಕ ನಿಪುಣರ ಸಲಹೆಗಳನ್ನು ಕೇಳಿ ಈ ಏರ್ಪಾಡಿನ ಸಾಧಕಬಾಧಕಗಳನ್ನೆಲ್ಲಾ ಸರ್ವತೋಮುಖವಾಗಿಯೂ ಕೂಲಂಕಷವಾಗಿಯೂ ಪರ್ಯಾಲೋಚಿಸುವವರೆಗೂ ಯಾವುದೊಂದನ್ನೂ ನಿರ್ಧಾರವಾಗಿ ಗೊತ್ತುಮಾಡುವುದು ಸಾಧ್ಯವಿಲ್ಲ. ಬಜೆಟ್ಟಿನಲ್ಲಿ ಇದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಒದಗಿಸಿರುವ ಮಾತ್ರದಿಂದಲೇ ಸರಕಾರದವರು ಈ ಏರ್ಪಾಡನ್ನು

[6 ನೇ ಪುಟವನ್ನು ನೋಡಿ.]

ಪಂಚಾಚಾರ್ಯ ಪ್ರಭಾ.

೧೯೩೧ ನೇ ಜೂನ್ ತಾ|| ೧೫ ನೆಯ ಸೋಮವಾರ.

ರಾಜಗುರು ಕರ್ತವ್ಯ.

ಪರಮ ಕೃಪಾಳುವಾದ ಪರಮೇಶ್ವರನು ಸ್ಥಾವರ ಜಂಗಮರೂಪವಾದ ಪ್ರಪಂಚವನ್ನು ಸೃಷ್ಟಿಮಾಡಿ ಪ್ರಪಂಚವು ಅವ್ಯಾಹತವಾಗಿ ನಡೆದು ಸಕಲಾತ್ಮರೂ ದುಷ್ಟಮಾರ್ಗಗಳಲ್ಲಿ ಪ್ರವೇಶಿಸದೆ ಸನ್ಮಾರ್ಗಪ್ರವಿಷ್ಟರಾಗಿ ತಮ್ಮ ತಮ್ಮ ಪವಿತ್ರಧ್ಯೇಯಗಳನ್ನು ಪಡೆಯಲೆಂಬ ಮಹಾಸಂಕಲ್ಪದಿಂದ ರಾಜರನ್ನೂ ಗುರುಗಳನ್ನೂ ನಿಯಮಿಸಿರುತ್ತಾನೆ. ಈಶ್ವರನು ಇಂಥ ರಾಜರ ಮತ್ತು ಗುರುಗಳ ದ್ವಾರಾ ಪ್ರಪಂಚದ ಯೋಗಕ್ಷೇಮಗಳನ್ನು ನೋಡುತ್ತಾನಲ್ಲದೆ ಪ್ರತ್ಯಕ್ಷವಾಗಿ ತಾನೇ ನೋಡುವುದಿಲ್ಲವು. ಆದ್ದರಿಂದ ಪ್ರಜೆಗಳು ರಾಜಾಜ್ಞೆಯನ್ನೂ, ಶಿಷ್ಯರು ಗುರುವಿನಾಜ್ಞೆಯನ್ನೂ ಈಶ್ವರಾಜ್ಞೆಯೆಂದು ಭಾವಿಸಿ ವರ್ತಿಸಬೇಕಾಗಿದೆ. ರಾಜನಾದರೂ ತನಗೆ ಪ್ರಾಪ್ತವಾದ ಪ್ರಜಾಪಾಲನೆಯ ಭಾರವು ಪರಮೇಶ್ವರನಿಂದ ಅನುಗ್ರಹೀತವಾದುದೆಂದು ತಿಳಿದು ಅಹೋರಾತ್ರಿಯಲ್ಲಿ ಈಶ್ವರಾಜ್ಞೆಗೆ ವಿರೋಧವಿಲ್ಲದಂತೆ ನ್ಯಾಯಮಾರ್ಗದಿಂದ ಪ್ರಜೆಗಳ ಕಷ್ಟನಷ್ಟಗಳನ್ನು ವಿಚಾರಿಸುತ್ತಿರಬೇಕಾಗಿದೆ. ಮಹಾರಾಜನಿಗೆ ತಾನು ಆಚರಿಸುವ ಪ್ರಜಾರಕ್ಷಣೆಯೇ ಪರಮ ತಪಸ್ಸಾಗಿದೆ. ತನ್ನ ರಾಜ್ಯದಲ್ಲಿರುವ ಸಕಲ ಪ್ರಜೆಗಳೂ ಈತಿಬಾಧೆಗಳಿಗೊಳಗಾಗದೆ ಸೌಖ್ಯವನ್ನು ಅನುಭವಿಸುವಂತೆ ಯಾವ ರಾಜನು ನೋಡಿಕೊಳ್ಳುತ್ತಾನೆಯೋ ಆ ರಾಜನು ತನ್ನ ಕರ್ತವ್ಯವನ್ನು ಪರಿಪೂರ್ಣ ಮಾಡಿದಂತಾಗುವುದಲ್ಲದೆ ರಾಜಶಾಸನದಿಂದ ಶಿಕ್ಷಿತರಾದ ಪ್ರಜೆಗಳು ನೀತಿಕುಶಲರಾಗಿಯೂ ಪ್ರತಿಷ್ಠಿತರಾಗಿಯೂ ಬಾಳುವರು. ಮಾನವಜನ್ಮವನ್ನು ಧರಿಸಿದ ಮೇಲೆ ಕೀರ್ತಿಪ್ರತಿಷ್ಠೆಗಳನ್ನು ಪಡೆದು ಸೌಖ್ಯದಿಂದಿರುವುದೊಂದೇ ಮುಖ್ಯಕರ್ತವ್ಯವಲ್ಲ. ಆತ್ಮರೂ ಸಹ ಪವಿತ್ರರಾಗಬೇಕಾಗಿದೆ. ಮಾನವರು ಗೌರವಪ್ರತಿಷ್ಠೆಗಳನ್ನು ಪಡೆದ ಮಾತ್ರದಿಂದ ಸೃಷ್ಟಿಕರ್ತನಾದ ಈಶ್ವರನ ಸಂಕಲ್ಪವನ್ನು ನೆರವೇರಿಸಿದಂತಾಗುವುದಿಲ್ಲ. ಈಶ್ವರನ ಸಂಕಲ್ಪವನ್ನು ನೆರವೇರಿಸಬೇಕಾದರೆ ಲೌಕಿಕಜ್ಞಾನದಂತೆ ಆಧ್ಯಾತ್ಮಿಕಜ್ಞಾನವೂ ಅವಶ್ಯಕವಾಗಿರುತ್ತದೆ. ಅತ್ಮರಿಗೆ ಇಂಥ ಆಧ್ಯಾತ್ಮಿಕಜ್ಞಾನವನ್ನು ಬೋಧಿಸಿ ಧರ್ಮಾಧರ್ಮಗಳ ಜ್ಞಾನವನ್ನುಂಟುಮಾಡಿ ಕೊಡುವುದಕ್ಕಾಗಿಯೇ ಗುರುಗಳು ಏರ್ಪಟ್ಟಿರುತ್ತಾರೆ. ಗುರುಗಳು ನಿವೃತ್ತಿಮಾರ್ಗವನ್ನು ಬೋಧಿಸುವುದರಿಂದ ವೈದಿಕ ರಾಜ್ಯವನ್ನಾಳುವರು. ರಾಜರು ಐಹಿಕಸುಖಸಾಧಕವಾದ ಪ್ರವೃತ್ತಿಮಾರ್ಗವನ್ನು ಬೋಧಿಸುವುದರಿಂದ ಲೌಕಿಕ ರಾಜ್ಯವನ್ನಾಳುವರು. ಪ್ರತಿಯೊಬ್ಬ ಆಸ್ತಿಕನೂ ಲೌಕಿಕಮಾರ್ಗದಲ್ಲಿ ಎಷ್ಟು ಆದರಬುದ್ಧಿಯುಳ್ಳವನಾಗಿರುತ್ತಾನೆಯೋ ವೈದಿಕಮಾರ್ಗದಲ್ಲಿಯೂ ಅಷ್ಟೇ ಆದರವುಳ್ಳವನಾಗಿರಬೇಕಾಗಿದೆ. ಗುರುಗಳು ರಾಜರು ಪ್ರಜೆಗಳಿಗೆ ಎರಡು ಕಣ್ಣುಗಳಂತಿರುತ್ತಾರೆ. ಪ್ರತಿಯೊಬ್ಬನಿಗೂ ಒಂದು ಕಣ್ಣಿದ್ದು ಒಂದು ಕಣ್ಣಿಲ್ಲದಿದ್ದರೆ ಕಾರ್ಯವನ್ನು ಮಾಡುವ ಸಾಮರ್ಥ್ಯವು ಕುಂಠಿತವಾಗಿ ಹೋಗುವಂತೆ ರಾಜನಿಲ್ಲದಿದ್ದರೆ ಪ್ರಜೆಗಳಿಗೆ ನೆಮ್ಮದಿಯುಂಟಾಗುವುದಿಲ್ಲ. ಜ್ಞಾನಿಗಳಾದ ಗುರುಗಳು ನೆಮ್ಮದಿ ಇಲ್ಲದ ಅಂಥ ಕಲುಷಿತಾತ್ಮರಾದ ಪ್ರಜೆಗಳಿಗೆ ಉಪದೇಶಿಸಿದ ಜ್ಞಾನವು ಸಹ ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವುದು. ಆದ್ದರಿಂದ ರಾಜರಾಗಲಿ ಗುರುಗಳಾಗಲಿ ಈರ್ವರೂ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡುವ ಮಹಾಭಾರವನ್ನು ಹೊತ್ತಿರುವುದರಿಂದ ತಮ್ಮ ತಮ್ಮ ಕರ್ತವ್ಯಗಳನ್ನು ನಡೆಯಿಸಿ ಪ್ರಜೆಗಳ ದೇಹಸಂರಕ್ಷಣೆಯನ್ನೂ ಆತ್ಮಸಂರಕ್ಷಣೆಯನ್ನೂ ಮಾಡಲೇಬೇಕು. ರಾಜ್ಯವನ್ನುದ್ಧರಿಸದ ರಾಜನು ರಾಜನಲ್ಲ. ಆತ್ಮರನ್ನುದ್ಧರಿಸದ ಗುರುವು ಗುರುವಲ್ಲ. ರಾಜನಲ್ಲಿ ಭಕ್ತಿಯಿಂದ ನಡೆಯದ ಮನುಷ್ಯನು ಪ್ರಜೆಯಲ್ಲ. ಗುರುವಿನಲ್ಲಿ ಭಕ್ತಿಯನ್ನಿಡದ ಮಾನವನು ಶಿಷ್ಯನಲ್ಲ. ಪೂರ್ವಕಾಲದಲ್ಲಿ ಇಂಥ ಮಹಾಧರ್ಮಿಷ್ಠರಾದ ಮಹಾರಾಜರೂ ಗುರುಗಳೂ ಇದ್ದುದರಿಂದಲೇ ಪ್ರಜೆಗಳು ತಾವಿರುವವರೆಗೂ ಸೌಖ್ಯವಾಗಿ ಬಾಳಿ ಪುನಃ ಸಂಸಾರಸಾಗರದಲ್ಲಿ ಬೀಳದೆ ಮುಕ್ತಿಸಾಮ್ರಾಜ್ಯಸೌಖ್ಯವನ್ನನುಭವಿಸುತ್ತಿದ್ದರು. ಇತ್ತೀಚೆಗೆ ಕೆಲ ರಾಜರು ಮತ್ತು ಗುರುಗಳು ತಮ್ಮ ಕರ್ತವ್ಯಪರಾಙ್ಮುಖರಾಗಿ ಹಸ್ತಿ ಅಶ್ವರಥ ಪದಾತಿ ಎಂಬ ಚತುರಂಗಸೈನ್ಯದಿಂದೊಡಗೂಡಿ ಹಿಂದೆ ದೈವಾನುಗ್ರಹದಿಂದ ಬಂದ ಬಿರುದಾವಳಿಗಳನ್ನು ಹಿಡಿಸಿಕೊಂಡು ಹೊಗಳಿಸಿಕೊಳ್ಳುವುದೊಂದನ್ನೇ ಪರಮಾವಧಿಯಾಗಿಟ್ಟುಕೊಂಡಿರುವುದರಿಂದಲೂ ರಾಜರು ಪ್ರಜೆಗಳಿಂದ ಕಂದಾಯವನ್ನೂ ಗುರುಗಳು ಶಿಷ್ಯರಿಂದ ಕಾಣಿಕೆಯನ್ನೂ ಎತ್ತಿ ತಮ್ಮ ಬಂಧುಬಾಂಧವರನ್ನು ಪೋಷಿಸಿಕೊಳ್ಳುತ್ತಲಿರುವುದರಿಂದಲೂ ಪ್ರಜೆಗಳಲ್ಲಿ ರಾಜಭಕ್ತಿಯೂ ಶಿಷ್ಯರಲ್ಲಿ ಗುರುಭಕ್ತಿಯೂ ಕಡಿಮೆಯಾಗಿ ರಾಜರಂದರೇನು? ಗುರುಗಳಂದರೇನು? ಎಂಬ ದುರ್ಭಾವವು ಹೆಚ್ಚಲು ಕಾರಣವಾಯಿತು. ಕಳೆಯನ್ನು ತೆಗೆದು ಹಸನುಮಾಡಿದ ಹೊಲದಲ್ಲಿ ಬೀಜಬಿತ್ತಿದರೆ ಆ ಹೊಲದಲ್ಲಿ ಆ ಬೀಜವು ಚೆನ್ನಾಗಿ ಬೆಳೆಯುತ್ತದೆ. ಹಸನಿಲ್ಲದ ಹೊಲದಲ್ಲಿ ಬಿತ್ತಿದ ಬೀಜವು ಅಲ್ಲಿಯೇ ನಿರ್ನಾಮವಾಗುತ್ತದೆ. ಅದರಂತೆ ರಾಜನು ತಾನು ದೈವನಿಷ್ಠನಾಗಿ ತನ್ನ ಆಳ್ವಿಕೆಯಲ್ಲಿರುವ ಪ್ರಜೆಗಳನ್ನು ದುರಾಚಾರ, ದುರಾಹಾರ ದುರ್ನೀತಿ ಮುಂತಾದ ದುರ್ಮಾರ್ಗಕ್ಕೆ ಕಾಲಿಡದಂತೆ ಶಿಕ್ಷಿಸಿ ಸದಾಚಾರ, ಸುನೀತಿ, ವಿದ್ಯಾಕೌಶಲಾದಿಗಳಿಂದ ಸನ್ಮಾರ್ಗಿಗಳನ್ನಾಗಿ ಮಾಡುತ್ತ ಬಂದರೆ ಅಂಥ ಪವಿತ್ರವಾದ ಪ್ರಜಾಕ್ಷೇತ್ರದಲ್ಲಿ ಈಶ್ವರಸ್ವರೂಪಿಗಳಾದ ಗುರುಗಳು ಆಧ್ಯಾತ್ಮಿಕಜ್ಞಾನವೆಂಬ ಅಮೃತಬೀಜವನ್ನು ಬಿತ್ತಿ ಪುಣ್ಯಕರ್ಮಾನುಷ್ಠಾನವೆಂಬ ಬೇಲಿಯನ್ನು ಹಾಕಿ ನರಕಕ್ಕೆ ಎಳೆದೊಯ್ಯುವ ಕಾಮಕ್ರೋಧಾದಿಗಳೆಂಬ ದುಷ್ಟಪಶುಗಳನ್ನು ಹೊಡೆದೋಡಿಸಿ ಪರಮಾನಂದವೆಂಬ ಮಹಾಫಲವು ಕೈಸೇರುವಂತೆ ಮಾಡುವರು. ಇದರಿಂದ ದೇಹಸಂರಕ್ಷಣೆಯೂ ಆತ್ಮಸಂರಕ್ಷಣೆಯೂ ಆಗಿ ಲೋಕವು ಸಂಪೂರ್ಣ ತಮ್ಮ ಕರ್ತವ್ಯವನ್ನು ಮುಗಿಸಿದಂತಾಗಿ ಈಶ್ವರಸಂಕಲ್ಪವನ್ನು ನೆರವೇರಿಸಿದಂತಾಗುವದು. ಹಾಗಿಲ್ಲದೆ ರಾಜನು ತನ್ನ ಕರ್ತವ್ಯನಿಷ್ಠನಾಗಿ ಗುರುಗಳು ತಮ್ಮ ಕರ್ತವ್ಯನಿಷ್ಠರಾಗದಿದ್ದಲ್ಲಿ ಪ್ರಜೆಗಳಿಗೆ ಪಾರಮಾರ್ಥಿಕ ಸೌಖ್ಯವಿಲ್ಲದಂತಾಗುವುದು. ಗುರುವು ತನ್ನ ಕರ್ತವ್ಯನಿಷ್ಠನಾಗಿ ರಾಜನು ತನ್ನ ಕರ್ತವ್ಯನಿಷ್ಠನಾಗದಿದ್ದಲ್ಲಿ ಪ್ರಜೆಗಳಿಗೆ ಐಹಿಕಸುಖವಿಲ್ಲದಂತಾಗುವುದು. ಆತ್ಮರು ಮನುಷ್ಯಜನ್ಮವನ್ನು ಧರಿಸಿದ ಮೇಲೆ ಇಹಪರಸುಖಗಳೆರಡನ್ನು ಪಡೆಯಲೇಬೇಕು. ಆದ್ದರಿಂದ ಪ್ರಜೆಗಳ ಇಹಸುಖಕ್ಕೆ ಸಾಧಕರಾದ ರಾಜರೂ ಶಿಷ್ಯರ ಪರಸುಖಕ್ಕೆ ಸಾಧಕರಾದ ಗುರುಗಳೂ ಸ್ವಾರ್ಥಿಗಳಾಗದೆ ಈಶ್ವರಾಯತ್ತವಾದ ತಮ್ಮ ಅಧಿಕಾರವನ್ನು ನಡೆಯಿಸಿ ಪ್ರಜೆಗಳನ್ನೂ ಶಿಷ್ಯರನ್ನೂ ಉದ್ಧರಿಸಿ "ರಂಜನಾದ್ರಾಜಾ" ಎಂಬ ವ್ಯುತ್ಪತ್ತಿಯಿಂದ ಬಂದ ರಾಜಶಬ್ದವನ್ನೂ, "ಗೃಣಾತೀತಿಗುರುಃ" ಎಂಬ ವ್ಯುತ್ಪತ್ತಿಯಿಂದ ಬಂದ ಗುರುಶಬ್ದವನ್ನೂ ಉಭಯರೂ ಅಂಕಿತನಾಮಗಳನ್ನಾಗಿ ಮಾಡಿಕೊಳ್ಳದೆ ಅನ್ವರ್ಥಕಗಳನ್ನಾಗಿ ಮಾಡಿಕೊಳ್ಳುವಂತೆ ಜಗಚ್ಚಾಲಕನಾದ ಈಶ್ವರನು ಪ್ರೇರಿಸಲಿ.

ಒಳದೇಶದ ವೃತ್ತಾಂತಗಳು.

ಮ|| ಎಂ ವೆಂಕಟಕೃಷ್ಣಯ್ಯನವರು ದೈವಕೃಪೆಯಿಂದ ಆರೋಗ್ಯವನ್ನು ಹೊಂದಿ ಕೃಷ್ಣರಾಜ ಆಸ್ಪತ್ರೆಯಿಂದ ಮನೆಗೆ ಬಂದಿರುತ್ತಾರೆಂದು ಕೇಳಿ ಸಂತೋಷಿಸುತ್ತೇವೆ.

ಶ್ರೀಮನ್ಮಹಾರಾಜರವರು ಹಿಮಾಲಯ ಪರ್ವತದಲ್ಲಿ ರಾರಾಜಿಸುತ್ತಿರುವ "ಮಾನಸಸರೋವರ" ಎಂಬ ಪುಣ್ಯಸ್ಥಳಕ್ಕೆ ಈ ವಾರದಲ್ಲಿ ದಯಮಾಡಿಸುವರೆಂದು ಕೇಳುತ್ತೇವೆ.

ಶ್ರೀಮದ್ರಂಭಾಪುರೀ ಸಂಸ್ಥಾನದ ಜಗದ್ಗುರು ಶಿವಾನಂದರಾಜೇಂದ್ರಮಹಾಸ್ವಾಮಿಗಳ ಉತ್ಸವವು ಸಕಲ ಬಿರುದಾವಳಿಗಳ ಸಹಿತವಾಗಿ ಇದೇ 18 ನೆಯ ತಾರೀಖಿನ ದಿವಸ ತಿಪಟೂರು ಟವನ್ನಿನಲ್ಲಿ ನಡೆಯುವುದು.

ಬೆಂಗಳೂರಲ್ಲಿ ಮಿಸೆಸ್ ವಿ. ರಾಮಲಿಂಗಂರವರು ಜವಾಹರಲಾಲರವರಿಗೆ ಆತಿಥ್ಯವನ್ನು ಮಾಡಿ, ಅಲಹಾಬಾದಿನಲ್ಲಿ ಇಟ್ಟಿರುವ ಕಾಂಗ್ರೆಸ್ಸಿನ ವೈದ್ಯಶಾಲೆಗೆ 1000 ರೂಪಾಯಿಗಳನ್ನು ಅರ್ಪಿಸಿ ದೇಶಭಕ್ತಿಯನ್ನು ಪ್ರಕಾಶಗೊಳಿಸಿರುತ್ತಾರೆ.

1920 ನೆಯ ವರ್ಷದಲ್ಲಿ ವಜಾಮಾಡಿದ್ದ ಮಾಧ್ಯಮಿಕಶಿಕ್ಷಣದ ಫೀಜನ್ನು ಪುನಃ ಹಾಕಬೇಕೆಂದು ದಿವಾನ್ ಸಾಹೇಬರು ತಮ್ಮ ಭಾಷಣದಲ್ಲಿ ಹೇಳಿದ್ದರು. ಸದರಿ ಫೀಜನ್ನು ಹಾಕುವುದರಿಂದ ಪ್ರಜೆಗಳ ವಿದ್ಯಾಭ್ಯಾಸವು ಕುಂಠಿತವಾಗುವುದೆಂದು ಮೆಂಬರರು ಮೊರೆಯಿಟ್ಟ ಕಾರಣ ಸರ್ಕಾರದವರು ಅದನ್ನು ವಜಾಮಾಡಿದರು.

ರಾಜಧಾನಿಯ ಕೃಷ್ಣರಾಜೇಂದ್ರಆಸ್ಪತ್ರೆಯ ಡಾ|| ಮಿ|| ಜೆ. ಎಫ್. ರಾಬಿನ್ಸನ್‌ರವರು ರಕ್ತಾಭಾವದಿಂದುಂಟಾದ ಪಾಂಡುರೋಗದಿಂದ ನರಳುತ್ತಿದ್ದ 24 ವರ್ಷ ವಯಸ್ಸಿನ ಒಬ್ಬ ಕೊಡಗಿನ ಸ್ತ್ರೀಯಳಿಗೆ ತಮ್ಮ ದೇಹದಿಂದ 6 ಔನ್ಸ್ ರಕ್ತವನ್ನು ತೆಗೆದು ಆಕೆಯ ದೇಹದಲ್ಲಿ ಸೇರಿಸಿ ಚಿಕಿತ್ಸೆಮಾಡುತ್ತಿರುವರು. ಆಕೆಯು ಈಗ ದಿನೇದಿನೇ ಗುಣಹೊಂದುತ್ತಿರುವಳು. ತಮ್ಮ ದೇಹದ ರಕ್ತವನ್ನೇ ಕೊಟ್ಟು, ಗುಣಪಡಿಸಲಸಾಧ್ಯವಾದ ರೋಗವನ್ನು ಸದರಿ ಡಾ|| ರವರು ವಾಸಿಮಾಡುತ್ತಿರುವುದು ಕೇವಲ ಸ್ತೋತ್ರಾರ್ಹವೂ, ಜಗತ್ತಿನ ಇತರ ವೈದ್ಯರಿಗೆ ಮೇಲ್ಪಂಕ್ತಿಯೂ ಆಗಿದೆ.

ಪ್ರಜಾಪ್ರತಿನಿಧಿಸಭೆಗೆ ಬಂದ ಮೆಂಬರರಿಗೆ ಈ ತಿಂಗಳು 8 ನೆಯ ತಾರೀಖಿನ ದಿವಸ ಸಭೆಯ ಆಫೀಸಿನಲ್ಲಿ ಭತ್ಯವನ್ನೂ ರೈಲು ಛಾರ್ಜನ್ನೂ ಪಾವತಿಮಾಡಿದರು. ಸಭಾಪರಿತ್ಯಾಗಮಾಡಿದ ಮೆಂಬರರು ಹೋಗಿ ರೈಲು ಛಾರ್ಜನ್ನು ಕೇಳಿದಾಗ ನೀವು ಸಭೆಯನ್ನು ಬಿಟ್ಟು ಎದ್ದು ಹೋದುದರಿಂದ ನಿಮಗೆ ರೈಲು ಛಾರ್ಜ ದೊರೆಯಲಾರದು ನಿಮ್ಮ ಸ್ಥಳಕ್ಕೆ ಹೋಗಿ ಬಿಲ್ ಕಳುಹಿಸಿ ಎಂದು ಹೇಳಿದರು. ಆಗ ಮಿ|| ಬಿ. ಎಲ್. ಬಯ್ಯಣ್ಣರವರು ಹೀಗೆ ಮಾಡುವುದು ಮೆಂಬರರಿಗೆ ಅಪಮಾನಮಾಡಿದಂತಾಗುವುದೆಂದು ದಿವಾನ್ ಸಾಹೇಬರಲ್ಲಿ ಅರಿಕೆಮಾಡಿಕೊಳ್ಳಲು, ಅದಕ್ಕೆ ಅವರು ಬಜಾನೆಹಣದ ವಿಷಯದಲ್ಲಿ ನಮಗೆ ತುಂಬಾ ಜವಾಬ್ದಾರಿಯಿದೆ ಎಂದೂ, ಪ್ರಜಾಪ್ರತಿನಿಧಿಗಳಾಗಿ ಬಂದವರು ಸಭೆಯ ಕಾರ್ಯಕಲಾಪಗಳನ್ನು ಬಿಟ್ಟು ಹೋಗಿ ಸಭೆಯಲ್ಲಿ ಮನಸ್ತಾಪವನ್ನೂ ಅಸಮಾಧಾನವನ್ನೂ ಉಂಟುಮಾಡುವುದು ವಿಷಾದಕರವಾದ ಸಂಗತಿಯಾಗಿದೆ ಎಂದೂ ನಿಮ್ಮ ರೈಲುಛಾರ್ಜ ತೆಗೆದುಕೊಳ್ಳಿರಿ. ಇನ್ನೊಂದುಸಲ ಹೀಗೆಮಾಡಿದರೆ ಈ ವಿಷಯಲ್ಲಿ ಸರ್ಕಾರದವರು ಆಲೋಚಿಸಿ ತೀರ್ಮಾನಿಸಬೇಕಾಗುತ್ತದೆಂದು ಉತ್ತರವಿತ್ತರು.

ಹಣಕಾಸಿನ ಮುಗ್ಗಟ್ಟಿನಿಂದ ದವಸಧಾನ್ಯಗಳ ಬೆಲೆಯು ವಿಪರೀತವಾಗಿ ಇಳಿದಿರುವ ಕಾರಣ ರೈತರು ವರ್ಣಿಸಲಸದಳವಾದ ಕಷ್ಟಕ್ಕೀಡಾಗಿರುವುದರಿಂದ ಮಾಹೆಯಾನ 100 ರೂ. ಗಳಿಗಿಂತ ಹೆಚ್ಚಿನ ಸಂಬಳದ ಅಧಿಕಾರಿಗಳ ಸಂಬಳವನ್ನು ಕಡಿಮೆಮಾಡಿ ಶೇಕಡಾ 25 ರಂತೆ ಕಂದಾಯವನ್ನು ಕಡಿಮೆಮಾಡಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಬಹುಜನ ಮೆಂಬರರು ಪ್ರಾರ್ಥಿಸಿಕೊಂಡರು. ಸರ್ಕಾರದವರು ಅವರ ಪ್ರಾರ್ಥನೆಯನ್ನಂಗೀಕರಿಸಿ ನಿಷ್ಕೃಷ್ಟವಾದ ಉತ್ತರವನ್ನು ಹೇಳದೆ ಹೋದಕಾರಣ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುವುದಕ್ಕಾಗಿ 138 ಜನ ಮೆಂಬರರು ಹೊರಗೆ ಬಂದರು. ಈ ಬಗ್ಗೆ 8 ನೆಯ ತಾರೀಖಿನ ಸಾಯಂಕಾಲ ಟೌನ್‌ಹಾಲ್ ಮೈದಾನದಲ್ಲಿ ಒಂದು ದೊಡ್ಡ ಸಭೆಸೇರಿತು. ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಮಿ|| ಚಂಗಲರಾಯರೆಡ್ಡಿ ಮತ್ತು ಮಿ|| ಬಿ. ದೇವಗೌಡ, ಮಿ|| ಮಲ್ಲಯ್ಯ ಮೊದಲಾಗವರು ಭಾಷಣಮಾಡಿದರು. ಮಿ|| ಚಂಗಲರಾಯರೆಡ್ಡಿ ಮತ್ತು ಮಿ|| ಬಿ. ದೇವಗೌಡರು ರೈತರ ಸ್ಥಿತಿಯನ್ನು ಕುರಿತು ಕಲ್ಲೆದೆಯೂ ಸಹ ಕರಗುವಂತೆ ಮಾತನಾಡಿದರು. ಮಿ|| ಮಲ್ಲಯ್ಯನವರು ಸಭೆಯಿಂದ ಮೆಂಬರರು ಎದ್ದುಬಂದುದು ತಪ್ಪೆಂದೂ, ಸರ್ಕಾರದವರು ಪ್ರಜಾವಾತ್ಸಲ್ಯಶೀಲರೆಂದೂ ಹೇಳಿದರು. ಕೆಲವು ಮೆಂಬರರು ಸಭೆಯನ್ನು ಪರಿತ್ಯಾಗ ಮಾಡದೆ ಸಭೆಯಲ್ಲಿದ್ದುದರಿಂದ ಸಭೆಯ ಕಾರ್ಯಕಲಾಪಗಳನ್ನು ನಡೆಯಿಸುವುದಕ್ಕೆ ಸರ್ಕಾರದವರಿಗೆ ಸಹಾಯ ಮಾಡಿದಂತಾಯಿತೇ ಹೊರತು ರೈತರ ಹಿತವನ್ನು ಕಾಪಾಡಿದಂತಾಗಲಿಲ್ಲವೆಂದೂ, ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಏರ್ಪಡಿಸುವುದು ಅತ್ಯಾವಶ್ಯಕವಾದುದೆಂದೂ ಅಧ್ಯಕ್ಷರು ಭಾಷಣಮಾಡಿದರು.

ವರ್ತಮಾನಸಂಗ್ರಹ.

ಈ ತಿಂಗಳು 9 ನೆಯ ತಾರೀಖಿನ ದಿವಸ ವೈಸರಾಯರು 1000 ಜನ ಅತಿಥಿಗಳಿಗೆ ವನಭೋಜನಮಾಡಿಸಿದರು.

ಧಾರವಾಡದಲ್ಲಿ ಈ ತಿಂಗಳು 10 ನೆಯ ತಾರೀಖಿನ ದಿನದಿಂದ ವಿದೇಶಿ ಬಟ್ಟೆಗಳನ್ನೂ ಬಹಿಷ್ಕೃತ ಮಿಲ್ಲುಗಳ ಬಟ್ಟೆಯನ್ನೂ ಮಾರದಂತೆ ಪಿಕೆಟಿಂಗ್ ಪ್ರಾರಂಭವಾಗಿದೆ.

ಮದರಾಸಿನಲ್ಲಿ ಸೀಸದ ಕಡ್ಡಿಗಳನ್ನು ತಯಾರಿಸುವ ಕಾರ್ಖಾನೆಗೆ ಅಕಸ್ಮಾತ್ ಬೆಂಕಿಬಿದ್ದು ಸುಮಾರು 10,000 ರೂಪಾಯಿ ಬೆಲೆಬಾಳುವ ಸಾಮಾನುಗಳು ಸುಟ್ಟು ಭಸ್ಮವಾದುವು.

ಉತ್ತರಸಾಗರದಲ್ಲಿ ನೀರಿನೊಳಗೆ ಸಂಚರಿಸುವ ಇಂಗ್ಲೆಂಡಿನ ಹಡಗೊಂದು ವರ್ತಕರ ಹಡಗಿಗೆ ಢಿಕ್ಕಿ ಹೊಡೆದು ಒಡೆದು ಹೋಯಿತು. ಆಗ ಇಬ್ಬರು ಸತ್ತರೆಂದೂ 20 ಜನರು ಪತ್ತೆಯಿಲ್ಲವೆಂದೂ ತಿಳಿದು ಬರುತ್ತದೆ.

ಇಡೀ ಪ್ರಪಂಚದ ಸ್ತ್ರೀಯರಲ್ಲಿ 10 ಜನ ಸ್ತ್ರೀಯರು ಘನಪದ್ಧತಿಗಳಿರುವರೆಂದೂ, ಅವರಲ್ಲಿ ಡಾ|| ಬೆಸೆಂಟಮ್ಮನವರು ಮತ್ತು ಶ್ರೀಮತಿ ಸರೋಜಿನಿ ದೇವಿಯವರೂ ಸೇರಿರುವರೆಂದೂ ಅಮೇರಿಕೆಯ ರೆ|| ಹೋಲ್ಮ್ಸ್ ರವರು ಅಭಿಪ್ರಾಯ ಪಡುತ್ತಾರೆ.

ಮೊಗಾಕ್‌ಗೆ ಸೇರಿದ ಒಂದು ಮಾಣಿಕ್ಯದ ಗಣಿಯಲ್ಲಿ 17 ಕ್ಯಾರಟ್ಟುಗಳ ತೂಕವುಳ್ಳ ಒಂದು ದೊಡ್ಡ ಮಾಣಿಕ್ಯವು ಪಾಟ್ಟಿಂಜ ಎಂಬವನಿಗೆ ಸಿಕ್ಕಿದೆ. ಅದು ಬಹು ಪ್ರಕಾಶಮಾನವಾಗಿದ್ದು ಈಗ 5 ಲಕ್ಷ ರೂಪಾಯಿ ಬೆಲೆಬಾಳುವುದೆಂದು ನಿರ್ಣಯಿಸಲ್ಪಟ್ಟಿದೆ.

ಪಂಜಾಬ್ ಗೌರ್ನರವರನ್ನು ಕೊಲ್ಲಬೇಕೆಂದು ಅವರ ಮೇಲೆ ಗುಂಡು ಹಾರಿಸಿದ ಹರಿಕೃಷ್ಣನನ್ನು ಸರ್ಕಾರದವರು ಈ ತಿಂಗಳು 9 ನೆಯ ತಾರೀಖಿನ ದಿವಸ ಗಲ್ಲಿಗೇರಿಸಿದರು. ಪ್ರಜೆಗಳು 10ನೆಯ ತಾರೀಖಿನ ದಿವಸ ಲಾಹೋರಿನಲ್ಲಿ ಹರತಾಳವನ್ನಾಚರಿಸಿದರು.

ಪಂಜಾಬಿಗೆ ಸೇರಿದ ಸೈಲ್ಕೋಟೆಯಲ್ಲಿ ಮೂವರು ಗಂಡಸರೂ ಒಬ್ಬ ಹೆಂಗಸೂ ಕೃತ್ರಿಮನಾಣ್ಯಗಳನ್ನು ತಯಾರಿಸುತ್ತಿರುವರೆಂದು ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಆ ನಾಣ್ಯಗಳನ್ನು ಪ್ರಸಾರ ಮಾಡುವುದಕ್ಕೆ ಪಂಜಾಬ್ ದೇಶದ ಅನೇಕ ಭಾಗಗಳಲ್ಲಿ ಅವರ ಪ್ರತಿನಿಧಿಗಳಿರುವರಂತೆ!

ದಿನಾಕರ ಸ್ಟಾರ್ಟ್ ಒಪ್ಪಂದಕ್ಕೆ ವಿರೋಧವಾಗಿ ಸರ್ಕಾರದವರು ಸಿರ್ಸಿ ಸಿದ್ದಾಪುರ ತಾಲ್ಲೂಕುಗಳಲ್ಲಿ ವಿಠನೆಯ ಪಟ್ಟಿಯನ್ನು ಬಹು ಜೋರಿನಿಂದ ವಸೂಲ್ ಮಾಡುತ್ತಿರುವರು. ರೆವೆನ್ಯೂ ಇನ್ಸ್‌ಪೆಕ್ಟರು ಸಿರ್ಸಿ ತಾಲ್ಲೂಕಿನಲ್ಲಿ ಒಬ್ಬ ವಿಧವೆಯ ಮನೆಗೆ ನುಗ್ಗಿ ಭಾಂಡೆ ಸಾಮಾನುಗಳನ್ನು ಜಪ್ತು ಮಾಡಿದರು.

ಲೆಜಿಸ್ಲೇಟಿವ್ ಅಸೆಂಬ್ಲಿಯ ನಿವೃತ್ತ ಪ್ರೆಸಿಡೆಂಟರೂ, ಉಜ್ವಲದೇಶಾಭಿಮಾನಿಗಳೂ ಆದ ಶ್ರೀಯುತ ವಿಠ್ಠಲಭಾಯಿ ಪಟೇಲ್‌ರವರು ಇಂಡಿಯಾ ಅಂಡರ್ ಸೆಕ್ರೆಟರಿ ಲಾರ್ಡ್ ಸ್ನೆಲ್‌ರೊಡನೆ 4-5 ತಾಸುಗಳವರೆಗೂ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಹೇಳಿದರು. ಆಗ ಮಿ|| ಎಂ. ಎ. ಜಿನ್ನಾರವರೂ ಹಾಜರಿದ್ದರು.

ಹಿಂದೂಸ್ತಾನದ ಪೋಸ್ಟಲ್ ಇಲಾಖೆಯವರು ಈ ತಿಂಗಳು 15 ನೆಯ ತಾರೀಖಿನ ದಿವಸದಿಂದ ಪಾರ್ಸಲ್‌ಗಳ ಛಾರ್ಜನ್ನು ಹೆಚ್ಚಿಸುವುದಾಗಿ ಪ್ರಕಟಿಸಿದ್ದಾರೆ. 20 ತೊಲೆಗಿಂತಲೂ ಹೆಚ್ಚಿರುವ ಪಾರ್ಸಲ್ಲಿಗೆ 2 ಆಣೆ, 20 ರಿಂದ 40 ತೊಲ ತೂಕದವರೆಗೆ 4 ಆಣೆ, ಅದಕ್ಕಿಂತ ದೊಡ್ಡ ಪಾರ್ಸಲ್ಲಿಗೆ ಪ್ರತಿ 40 ತೊಲ ಅಥವಾ ಅದರ ಭಿನ್ನಾಂಶಕ್ಕೆ 4 ಆಣೆ.

ಪೆಶಾವರಿನಲ್ಲಿ ಬೋಲ್ಷೆವಿಕರ ತತ್ವವನ್ನು ಅವಲಂಬಿಸಿದ ಕೆಂಪುಅಂಗಿಯ ಜನರ ಪ್ರಾಬಲ್ಯವು ವಿಶೇಷವಾಗಿರುವುದರಿಂದ ಜಮೀನ್ದಾರರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕೋಸ್ಕರ ಕೆಂಪುಅಂಗಿ ಜನರ ವಿರುದ್ಧವಾಗಿ ಹಸುರುಅಂಗಿ ಜನರ ಸಂಸ್ಥೆಯೊಂದು ಸ್ಥಾಪಿತವಾಗಿದೆ. ಇವರು ಪೆಶಾವರಿಗೆಸಮೀಪದಲ್ಲಿರುವ ಟೆರ್ರಾ ಎಂಬ ಸ್ಥಳದಲ್ಲಿ ತಮ್ಮ ಆಫೀಸನ್ನು ನಿರ್ಮಿಸಿದ್ದಾರೆ.

ಕಲ್ಕತ್ತೆಯ ಬಾಬುಲಾಲನೆಂಬ ಝೂಡಮಾಲಿಯು ತನ್ನ ಜೀವನದಲ್ಲಿ 114000 ರೂಪಾಯಿಗಳನ್ನು ಗಳಿಸಿದ್ದಲ್ಲದೆ ಅನೇಕ ಸ್ಥಿರಾಸ್ತಿಗಳನ್ನು ಸಂಪಾದಿಸಿದ್ದನು. ಅವನು ಸತ್ತಮೇಲೆ ಅವನ ಆಸ್ತಿಯಬಗ್ಗೆ ಕೋರ್ಟಿನಲ್ಲಿ ವಿವಾದ ಹುಟ್ಟಿತು. ಮುಸಾಮತ್ ಹೀರಾಬೀಬಿ ಎಂಬಾಕೆಯು ತಾನು ಬಾಬುಲಾಲನ ಮಗಳೆಂದು ರುಜುವಾತು ಮಾಡಿ 9000 ರೂಪಾಯಿಗಳನ್ನು ಪಡೆದಿರುವಳು.

ಲಂಡನ್ನಿನಲ್ಲಿ ಕಳೆದ 12 ನೆಯ ತಾರೀಖಿನ ದಿವಸ 10½ ಘಂಟೆಯ ರಾತ್ರಿ ಸಮಯದಲ್ಲಿ ಭೂಕಂಪವಾದ್ದರಿಂದ ಅನೇಕರು ಹೆದರಿ ಮನೆಗಳನ್ನು ಬಿಟ್ಟು ಹೊರಗೆ ಓಡಿಬಂದರೆಂದೂ, ಮನೆಗಳಿಗೆ ತೊಂದರೆಗಳೇನೂ ಸಂಭವಿಸಲಿಲ್ಲವೆಂದೂ, ಸೆಂಟ್‌ಪಾಲ್ಸ್ ಎಂಬ ದೇವಾಲಯವು ಮಾತ್ರ ಸಡಿಲವಾಗಿರಬಹುದೆಂದು ಯೋಚಿಸಿ ಇಂಜನಿಯರುಗಳು ಆ ದೇವಾಲಯವನ್ನು ಪರಿಶೋಧಿಸುತ್ತಿರುವರೆಂದೂ ಕೇಳುತ್ತೇವೆ.

ಮಹಾತ್ಮಗಾಂಧಿಯವರು ಪತ್ರಿಕಾ ಪ್ರತಿನಿಧಿಗಳ ಸಂಗಡ ಮಾತನಾಡುವಾಗ ತೆಗೆದ ಧ್ವನಿಯುಕ್ತಚಲನಚಿತ್ರವು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಡುತ್ತಿರುವುದು. ಸಾವಿರಾರು ಜನರು ಮಹಾತ್ಮರ ವಚನಗಳನ್ನು ಕೇಳಬೇಕೆಂದು ತಂಡೋಪತಂಡವಾಗಿ ಹೋಗುತ್ತಿರುವರು. ಅರ್ಧನಗ್ನನಾದ ವೈರಾಗ್ಯ ಚಕ್ರವರ್ತಿಯನ್ನೂ, ಆತನ ಹಸನ್ಮುಖವನ್ನೂ ರಾಜಕೀಯ ಅಭಿಪ್ರಾಯಗಳನ್ನೂ ಕೇಳಿ ಬೆರಗಾಗಿರುವರು.

ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಎಲೆಕ್ಷನ್ ಬಗ್ಗೆ ವಿವಾದ ಹುಟ್ಟಿ ಇಬ್ಬಣವಾಗಿದೆ. ಎಂದು ಕಳೆದವಾರ ತಿಳುಹಿಸಿದುದು ಸರಿಯಷ್ಟೆ! ಬೊಂಬಾಯಿಯಲ್ಲಿ ಸೇರಿದ್ದ ಅಖಿಲಭಾರತರಾಷ್ಟ್ರೀಯ ಸಭೆಯ ಸಮಿತಿಯವರು ಮಿ|| ಆನೇಯವರನ್ನು ಮಧ್ಯವರ್ತಿಗಳನ್ನಾಗಿ ನಿಯಮಿಸಿ ನ್ಯಾಯಾನ್ಯಾಯವನ್ನು ಶೋಧಿಸಿ ತೀರ್ಪುಕೊಡಬೇಕೆಂದು ಸದರಿಯವರಿಗೆ ಅಪ್ಪಣೆ ಮಾಡಿರುತ್ತಾರೆ.

ಕಲ್ಲಿಕೋಟೆಯಲ್ಲಿ 50 ವರ್ಷ ವಯಸ್ಸಿನ ಒಬ್ಬ ನಂಬೂದರಿ ಬ್ರಾಹ್ಮಣನು 16 ವರ್ಷ ವಯಸ್ಸಿನ ಕನ್ಯೆಯನ್ನು ಮದುವೆಯಾಗುವುದರಲ್ಲಿರುವನು. ಅವನಿಗೆ ಇಬ್ಬರು ಪತ್ನಿಯರಿದ್ದು ಅನೇಕ ಜನ ಮಕ್ಕಳೂ ಇದ್ದಾರೆ. ಆದರೂ ಮೂರನೆಯವಳನ್ನು ಮದುವೆಯಾಗಬೇಕೆಂದು ಹವಣಿಸಿರುವನು. ಇದನ್ನು ನಿಲ್ಲಿಸಬೇಕೆಂದು ಅವನ ಮನೆಯ ಮುಂದೆ 50 ಜನ ನಂಬೂದರಿಬ್ರಾಹ್ಮಣಯುವಕರು ಪಿಕೆಟಿಂಗ್ ನಡೆಯಿಸುತ್ತಿರುವರು.

ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಮಹಾತ್ಮ ಗಾಂಧಿಯವರು ಲಂಡನ್ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿ ಕಾಂಗ್ರೆಸ್ಸಿನ ಅಭಿಮತವನ್ನು ಪ್ರತಿಪಾದಿಸಬೇಕೆಂದು ತೀರ್ಮಾನಿಸಿದರು. ಹಿಂದೂ ಮಹಮ್ಮದೀಯರ ಸಮಸ್ಯೆಯು ತೃಪ್ತಿಕರವಾಗಿ ತೀರ್ಮಾನವಾಗದಿದ್ದರೂ ಕಾಂಗ್ರೆಸ್ ಕಮಿಟಿಯ ಅಪ್ಪಣೆಯನ್ನು ನಿರಾಕರಿಸುವುದು ಸಾಧ್ಯವಿಲ್ಲವೆಂದೂ, ತಾವು ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗುತ್ತೇವೆಂದೂ ಮಹಾತ್ಮರು ಹೇಳಿದರು.

ಜರ್ಮನಿಯು ಹಣಕಾಸಿನ ಮುಗ್ಗಟ್ಟಿನಿಂದ ಬಹು ತೊಂದರೆಗೀಡಾಗಿರುವುದರಿಂದ ಅಲ್ಲಿಯ ಮಂತ್ರಿಗಳು ಇಂಗ್ಲೆಂಡಿಗೆ ಬಂದು ತಾವು ಕೊಡುತ್ತಲಿರುವ ಕಳೆದ ಮಹಾಯುದ್ಧದ ಖರ್ಚನ್ನು ಕಡಿಮೆ ಮಾಡಬೇಕೆಂದೂ, ಈ ವರ್ಷದ ಮಟ್ಟಿಗೆ ತಗಾದೆ ಮಾಡಕೂಡದೆಂದೂ ಕೇಳುತ್ತಿರುವರು. ಇಂಗ್ಲೆಂಡಿನ ಮಂತ್ರಿಗಳಾದರೋ ಜರ್ಮನಿಯ ಕಷ್ಟವನ್ನು ಕೇಳಿ ಅವರ ಪ್ರಾರ್ಥನೆಯನ್ನು ಅಂಗೀಕರಿಸುವ ಧೋರಣವಿದೆ. ಆದರೆ ಫ್ರೆಂಚರು ಈ ವಿಷಯದಲ್ಲಿ ಎಷ್ಟೂ ದಾಕ್ಷಿಣ್ಯ ತೋರಿಸಲಾಗುವುದಿಲ್ಲವೆಂದು ಮಿ|| ಬ್ರಿಯಂಡರವರು ಹೇಳುತ್ತಿರುವರು.

ಕಳೆದ ವರ್ಷದ ಸತ್ಯಾಗ್ರಹ ಚಳವಳಿಯಲ್ಲಿ ಬೊಂಬಾಯಿಯ ಪೋಲೀಸರು ಮಾಡಬೇಕಾದ ಹೆಚ್ಚು ಕೆಲಸಕ್ಕೋಸ್ಕರ ಪ್ರತಿಯೊಬ್ಬ ಶಿಪಾಯಿಗೆ 5 ರೂಪಾಯಿಯಂತೆಯೂ, ಜಮಾದಾರ್ ಮತ್ತು ಹೆಡ್ ಕಾನ್‌ಸ್ಟೇಬಲ್‌ರಿಗೆ ಪ್ರತಿಯೊಬ್ಬರಿಗೂ 7 ರೂಪಾಯಿಯಂತೆಯೂ ಭತ್ಯವನ್ನು ಕೊಡುತ್ತಿದ್ದರು. 1930 ನೆಯ ಸೆಪ್ಟಂಬರ್ ವರೆಗೂ ಈ ಭತ್ಯವನ್ನು ಕೊಡಬೇಕೆಂದು ನಿರ್ಣಯಿಸಲ್ಪಟ್ಟಿದ್ದಿತು. ಆದರೆ ಈಗ 1931 ನೆಯ ಜೂನ್ ತಿಂಗಳಾಗಿ ಸತ್ಯಾಗ್ರಹ ಚಳವಳಿಯು ನಿಲ್ಲಿಸಲ್ಪಟ್ಟಿದ್ದರೂ ಈ ಭತ್ಯವು ಮಾತ್ರ ನಿಲ್ಲಿಸಲ್ಪಟ್ಟಿಲ್ಲ. ಇದರಿಂದ ಸರ್ಕಾರದವರಿಗೆ ಮಾಹೆಯಾನಾ 20,000 ರೂಪಾಯಿ ಹೆಚ್ಚು ಖರ್ಚು ಬರುತ್ತಿರುವುದು.

ಬೊಂಬಾಯಿಯಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ವಿದೇಶಿ ವಸ್ತ್ರ ಬಹಿಷ್ಕರಣ ಕಂಪನಿಯ ಡೈರೆಕ್ಟರರು ಮಹಾತ್ಮರ ಸಂಗಡ ಆಲೋಚನೆ ನಡೆಯಿಸಿ ಶೀಘ್ರದಲ್ಲಿಯೇ ದೇಶದಲ್ಲಿರುವ ವಿದೇಶಿ ವಸ್ತ್ರಗಳನ್ನು ಗಡೀಪಾರು ಮಾಡುವವರಿದ್ದಾರೆ. ಮೊಟ್ಟಮೊದಲು ಬೊಂಬಾಯಿ, ಕಲ್ಕತ್ತಾ, ಮದರಾಸು, ಕರಾಚಿ ಈ ಸ್ಥಳಗಳಲ್ಲಿರುವ ವಿದೇಶಿ ವಸ್ತ್ರಗಳನ್ನು ಬೇರೆ ದೇಶಗಳಿಗೆ ಸಾಗಿಸುತ್ತಾರೆ. ಅಫ್ಘಾನಿಸ್ಥಾನ, ಪರ್ಷಿಯ, ಮಕ್ಕಾ, ಮದೀನ, ತುರ್ಕಸ್ಥಾನ, ಪೂರ್ವಆಫ್ರಿಕ, ದಕ್ಷಿಣಆಫ್ರಿಕ ಈ ದೇಶಗಳಿಗೂ, ಸಿಂಗಾಪುರ, ಹಿಂದೂ ಚೀಣಾ, ಸುಮಾತ್ರಾ, ಜಾವಾ ಮತ್ತು ಇತರ ಪೆಸಿಫಿಕ್ ಸಾಗರದ ದ್ವೀಪಗಳಿಗೂ ವಿದೇಶಿ ಬಟ್ಟೆಗಳನ್ನು ಸಾಗಿಸಬೇಕೆಂದು ನಿರ್ಣಯಿಸಲ್ಪಟ್ಟಿದೆ.

ಕೊಲಂಬೋಪಟ್ಟಣದಲ್ಲಿ ಯಾವನೋ ಒಬ್ಬನು ಒಂದು ಜಾತ್ರೆಯಲ್ಲಿ ಮತ್ಸ್ಯಕನ್ಯೆಯನ್ನು ತೋರಿಸುತ್ತೇನೆಂದು ಹೇಳಿ ಜನರನ್ನು ಮೋಸಪಡಿಸಿ ಬಹಳ ಹಣವನ್ನು ಸಂಪಾದಿಸಿದನು. ಅದನ್ನು ನೋಡುವುದಕ್ಕೆ ಹೋದವರೆಲ್ಲರೂ ಜನರಲ್ಲಿ ನಗೆಗೀಡಾಗಬಾರದೆಂದು ಮತ್ಸ್ಯಕನ್ಯೆಯನ್ನು ನೋಡಿದೆವೆಂದೇ ಹೇಳಿದರು. ಹೀಗೆ ಒಬ್ಬರನ್ನು ನೋಡಿ ಮತ್ತೊಬ್ಬರು ಹೋಗಲಾರಂಭಿಸಿದರು. ಇದರ ನಿಜಾಂಶವನ್ನು ಪರಾಮರ್ಶಿಸಬೇಕೆಂದು ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರು ಹೋಗಿ ನೋಡುವಲ್ಲಿ ಏನೂ ಇರಲಿಲ್ಲ. ಅವರು ಪೋಲೀಸರಿಗೆ ತಿಳಿಸಲಾಗಿ ಪೋಲೀಸರು ಬಂದು ತನಿಖೆಮಾಡಿದರು. ನಿಜವಾಗಿಯೂ ಮತ್ಸ್ಯಕನ್ಯೆಯಿರಲಿಲ್ಲ. ಅವರು ಅವನ ಮೇಲೆ ಮ್ಯಾಜಿಸ್ಟ್ರೇಟಕೋರ್ಟಿನಲ್ಲಿ ಮೊಕದ್ದಮೆ ಹೂಡಿದರು. ನ್ಯಾಯಾಧೀಶರು ಮೋಸಹೋದದ್ದು ಜನರ ತಪ್ಪೇ ಹೊರತು ಮೋಸಗಾರನ ತಪ್ಪಲ್ಲವೆಂದು ಅವನನ್ನು ಬಿಡುಗಡೆ ಮಾಡಿದರು. ಮಾಡಿದರೆ ಇಂಥ ಸಂಪಾದನೆಯನ್ನೇ ಮಾಡಬೇಕು.

ಬೊಂಬಾಯಿಯ ಉಪನಗರವಾದ ಡೊಂಗ್ರಿಯಲ್ಲಿ ಈ ತಿಂಗಳು 10 ನೆಯ ತಾರೀಖಿನ ದಿನಸ ಕಾಂಗ್ರೆಸ್ ಮೀಟಿಂಗ್ ಸೇರಿತು. ಆಗ ಡಾ|| ಅನ್ಸಾರಿ, ಡಾ|| ಸಯ್ಯದ್ ಮಹಮುದ್, ಅಬ್ದುಲ್‌ಗಫರ್‌ಖಾನ್, ಪಂಡಿತ ಜವಾಹರಲಾಲ ಇವರು, ಮಹಮ್ಮದೀಯರೂ ದಿಲ್ಲಿ ಒಪ್ಪಂದವೂ ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಕಾಂಗ್ರೆಸ್ ತತ್ವಕ್ಕೆ ವಿರೋಧಿಗಳಾದ ಕೆಲವು ಮಹಮ್ಮದೀಯರು ಬಂದು ಉಪನ್ಯಾಸವನ್ನು ಆತಂಕಪಡಿಸುತ್ತಿದ್ದರು. ಸಭೆಯಲ್ಲಿದ್ದ ಪಠಾಣರು ಅವರನ್ನು ಬಲಾತ್ಕಾರವಾಗಿ ಹೊರಗೆ ಹಾಕಿದರು. ಅದೂ ಅಲ್ಲದೆ ಆಗ ಬೊಂಬಾಯಿಯ ಪೋಲೀಸ್ ಕಮಿಷನರೂ 6 ಜನ ಪೋಲೀಸ್ ಅಧಿಕಾರಿಗಳೂ 50 ಜನ ಶಿಪಾಯಿಗಳೂ ಬಂದಿದ್ದರು. ಸಭೆಯ ಕಾರ್ಯಕಲಾಪಗಳು ಪೂರೈಸಿದ ಮೇಲೆ ಕೆಲವು ಮಹಮ್ಮದೀಯರು ಕಲ್ಲಿನಿಂದ ಹೊಡೆಯಲುಪಕ್ರಮಿಸಿ ಪಠಾಣರ ಮೇಲೆ ಬಿದ್ದು ಗಲಭೆಮಾಡಲೆತ್ನಿಸಿದರು. ಆಗ ಪೋಲೀಸರು ಬಂದು ಅವರನ್ನು ಚದುರಿಸಿದರು.

[೩ನೆಯ ಪುಟದಿಂದ ಮುಂದುವರಿದುದು.]

ಕೈಕೊಂಡೇ ತೀರಬೇಕೆಂಬ ಬದ್ಧತೆಯೇನನ್ನೂ ಕಲ್ಪಿಸಿಲ್ಲ. ಉಕ್ಕನ್ನು ತಯಾರಿಸಿರುವುದರಿಂದ ಕಲ್ಪಿಸಿದ ಕಾರ್ಖಾನೆಯ ಸ್ಥಿತಿಯು ಮೇಲ್ಪಟ್ಟು, ಅದು ಲಾಭದಾಯಕವಾಗಿ ಪರಿಣಮಿಸುವುದೆಂದು ಸರ್ಕಾರದವರಿಗೆ ಯುಕ್ತವಾದ ಭರವಸೆಯು ತೋರಿಬಂದಲ್ಲದೆ, ಈ ನೊಬಲಗಿನಲ್ಲಿ ಸ್ವಲ್ಪವನ್ನೂ ವೆಚ್ಚಮಾಡುವುದಿಲ್ಲ.

ಮುಂದಿನ ಪರಿಸ್ಥಿತಿ.

ವೆಚ್ಚವನ್ನು ತಗ್ಗಿಸಿರುವುದೇ ಈ ವರುಷ ತಮಗೆ ಒಪ್ಪಿಸಿರತಕ್ಕ ಆಯವ್ಯಯಗಳ ಅಂದಾಜಿನ ಮುಖ್ಯ ಲಕ್ಷಣವಾಗಿದೆ. ವೆಚ್ಚವನ್ನು ಈಗಾಗಲೇ 22½ ಲಕ್ಷ ರೂಪಾಯಿಗಳವರೆಗೂ ತಗ್ಗಿಸಿರುತ್ತೇವೆಂಬ ವಿಷಯವು ತಮಗೆ ವೇದ್ಯವಾಗುವುದು. ಮುಂದಿನ ವರುಷದಲ್ಲಿ ವೆಚ್ಚವನ್ನು ಮತ್ತಷ್ಟು ತಗ್ಗಿಸಬೇಕೆಂದು ಉದ್ದೇಶಿಸಿದ್ದೇವೆ. ರಾಜಧರ್ಮಪ್ರವೀಣ ದಿವಾನ್ ಬಹದೂರ್ ಕೆ. ಎಸ್. ಚಂದ್ರಶೇಖರ ಅಯ್ಯರವರ ವಿಶೇಷ ದಕ್ಷತೆಯುಳ್ಳ ನೇತೃತ್ವದಲ್ಲಿ ರಿಟ್ರೆಂಚ್‌ಮೆಂಟ್ ಸಮಿತಿಯವರು ಯಾವ ಯಾವ ಬಾಬುಗಳಲ್ಲಿ ವೆಚ್ಚವನ್ನು ಕಡಿಮೆಮಾಡಬಹುದೆಂಬುದನ್ನು ಪರಿಶೀಲಿಸುತ್ತಿದ್ದಾರೆ. ಈ ಸಮಿತಿಯ ಅಧ್ಯಕ್ಷತೆಯನ್ನು ಸಿದ್ಧತೆಯಿಂದ ವಹಿಸಿ ಕೇವಲ ಕ್ಲೇಶದಾಯಕವಾದ ಈ ಕಾರ್ಯವನ್ನು ಕೈಕೊಂಡುದಕ್ಕಾಗಿ ರಾಜಧರ್ಮಪ್ರವೀಣ ದಿವಾನ್ ಬಹದೂರ್ ಕೆ. ಎಸ್. ಚಂದ್ರಶೇಖರ ಅಯ್ಯರವರಿಗೆ ನಮ್ಮ ವಂದನೆಗಳು ಸಲ್ಲಬೇಕಾಗಿವೆ. ಈ ಸಮಿತಿಯವರು ತಮ್ಮ ಕೆಲಸವನ್ನು ಮುಗಿಸಿ ಸಲಹೆಗಳನ್ನೊಪ್ಪಿಸಿದ ಮೇಲೆ ಮುಂದಣ ವರುಷಗಳಲ್ಲಿ ಆಯವ್ಯಯಗಳನ್ನು ನಿರುಪಾಧಿಕವಾದ ಮತ್ತು ಸಮತೆ ತಪ್ಪದಂಥ ಅವಿಕಲ ಸ್ಥಿತಿಯಲ್ಲಿ ಮತ್ತಷ್ಟು ದೃಢತರವಾಗಿ ನೆಲೆಗೊಳಿಸುವುದಕ್ಕೆ ಯಾವ ಯಾವ ಏರ್ಪಾಡುಗಳನ್ನು ಕೈಕೊಳ್ಳಬೇಕೆಂಬುದನ್ನು ಇನ್ನೂ ಉತ್ತಮ ರೀತಿಯಲ್ಲಿ ನಿರ್ಧರಿಸಲು ಸರ್ಕಾರದವರಿಗೆ ಸಾಧ್ಯವಾಗುವುದು.

ನಮ್ಮ ಆಯವ್ಯಯಗಳ ವಿಷಯಕವಾದ ಪರಿಸ್ಥಿತಿಯನ್ನು ಸೊಂಪುಸೊಗಸುಗಳಿಂದ ತುಂಬಿ ಮನೋಹರವಾಗಿರುವ ರೀತಿಯಲ್ಲಿ ಬಣ್ಣಿಸಿ ಚಿತ್ತಾಕರ್ಷಕವಾಗುವಂತೆ ನಾನು ಮಾಡಿಲ್ಲವೆಂದು ತಮಗೆ ತೋರಬಹುದು. ನಿಶ್ಚಯ; ನಾನು ಆ ರೀತಿ ಮಾಡಿಲ್ಲ. ವಾಸ್ತವ ವಿದ್ಯಮಾನಗಳು ಯಾವ ರೀತಿಯಲ್ಲಿವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಬಿಡುವುದೇ ಉತ್ತಮವೆಂದು ನಾನು ಭಾವಿಸಿದ್ದೇನೆ. ಆದ ಮಾತ್ರವೇ ಸಂಸ್ಥಾನದ ಆಯವ್ಯಯಗಳ ಸ್ಥಿತಿಯೇ ಆಗಲಿ ಅಥವಾ ಆರ್ಥಿಕ ಸ್ಥಿತಿಯೇ ಆಗಲಿ ಅಸಮರ್ಪಕವಾಗಿದೆ ಎಂಬುದು ನನ್ನ ಭಾವನೆಯೆಂಬುದಾಗಿ ಮಾತ್ರ, ತಾವು ಯಾರೊಬ್ಬರೂ ಯೋಚಿಸತಕ್ಕದಲ್ಲ. ಅದೆಂದಿಗೂ ನನ್ನ ಭಾವನೆಯೇ ಅಲ್ಲ. ಮುಂದಿನ ವರುಷದ ತೊಂದರೆಗಳನ್ನು ನಾವು ಪರಿಹರಿಸಿಕೊಂಡು ಮುಂದುವರಿದಲ್ಲಿ, ಆ ತರುವಾಯ ನಮ್ಮ ಸ್ಥಿತಿಯು ಪರಿಣಾಮದಲ್ಲಿ ಸುವ್ಯವಸ್ಥಿತವಾಗಿ ಉತ್ತಮಪಡುವ ಭಾಗದಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ನಾವು ಆ ರೀತಿ ತೊಂದರೆಗಳನ್ನು ಪರಿಹರಿಸಿಕೊಂಡು ಮುಂದುವರಿಯುವುದೂ ನಿಜವೆಂಬುದು ನನ್ನ ಮನಸ್ಸಿಗೆ ನಿಸ್ಸಂದೇಹವಾಗಿದೆ. ಇಷ್ಟಕ್ಕೂ, ಈಗಿರುವ ಸನ್ನಿವೇಶಗಳಲ್ಲಿ ಕೂಡ, ನಮ್ಮ ಆಯವ್ಯಯಗಳ ಪರಿಸ್ಥಿತಿಯು ಕೇವಲ ನಿರಪಾಯವಾದ ರೀತಿಯಲ್ಲಿದ್ದು ವಿಶೇಷ ಸಮರ್ಪಕವಾಗಿಯೇ ಇದೆ. ಮೈಸೂರು ಸಂಸ್ಥಾನದ ಸಾಲಸೋಲಗಳೇ ಮುಂತಾದುವುಗಳಿಗಾಗಿ ಹಾಕಿದ ಹಣಕ್ಕೆ ಲೇಶಮಾತ್ರವೂ ಅಪಾಯವಿಲ್ಲವೆಂಬುದಾಗಿ, ಸಂಬಂಧಪಟ್ಟ ಸ್ಥಳ ಪರಸ್ಥಳಗಳ ಜನರೆಲ್ಲರಿಗೂ ಪೂರ್ಣ ಭರವಸೆಯಿದೆ. ಈ ಭಾಗದಲ್ಲಿ ಸಂಸ್ಥಾನಕ್ಕೆ ವಿಶೇಷ ಕೀರ್ತಿಯೂ, ಗುರುತ್ವವೂ ಉಂಟೆಂಬ ನಂಬಿಕೆಯು ಜನರಲ್ಲಿ ಸಾರ್ವತ್ರಿಕವಾಗಿಯೂ, ದೃಢಮೂಲವಾಗಿಯೂ, ನೆಲೆಗೊಂಡಿದೆ. ಸಂಸ್ಥಾನದ ಆಯವ್ಯಯಗಳ ಸ್ಥಿತಿಯು ಹೀಗೆ ಸಮರ್ಪಕವಾಗಿದ್ದಾಗ್ಯೂ ಕೂಡ ಒಂದು ವಿಚಾರದಲ್ಲಿ ಮಾತ್ರ ನನ್ನ ಮನಸ್ಸಿಗೆ ತುಂಬ ವಿಷಾದವುಂಟಾಗಿದೆ. ಪ್ರಜೆಗಳಿಗೆ ಪ್ರಯೋಜನಕರವಾದ ಬಗೆಬಗೆಯ ಸಂಪದಭಿವೃದ್ಧಿ ವಿಚಾರಗಳಲ್ಲಿ ಅದರಲ್ಲಿಯೂ ವಿಶೇಷತಃ ವ್ಯವಸಾಯ ಮತ್ತು ವಿದ್ಯಾಭ್ಯಾಸಗಳ ವಿಚಾರಗಳಲ್ಲಿ ಬಗೆಬಗೆಯ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಬೇಕೆಂದಿದ್ದೆವು. ಆದರೆ ಸದ್ಯದಲ್ಲಿ ಅವುಗಳನ್ನು ಕೈಕೊಂಡು ಮುಂದುವರಿಸುವುದಕ್ಕೆ ಈಗಿನ ಸ್ಥಿತಿಯಲ್ಲಿ ಅವಕಾಶವಿಲ್ಲದಂತಾಯಿತಲ್ಲಾ ಎಂದು ನಾನು ವಿಷಾದಿಸುತ್ತೇನೆ. ಇದೇರೀತಿ ತಮಗೂ ವಿಷಾದವುಂಟಾಗಿದೆಯೆಂದು ನಂಬಿದ್ದೇನೆ. ಈಗಿನ ಸ್ಥಿತಿಯು ಮೇಲ್ಪಟ್ಟು ದ್ರವ್ಯಾನುಕೂಲತೆಯುಂಟಾಗುವವರೆಗೂ ಈ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವಂತಿಲ್ಲ. ಅವುಗಳನ್ನು ನೆರವೇರಿಸುವ ಕಾಲವೂ ಶೀಘ್ರವಾಗಿಯೇ ಬರುತ್ತದೆ. ಅದು ದೀರ್ಘಕಾಲ ತಡವಾಗುವುದಿಲ್ಲವೆಂದು ನನಗೆ ನಂಬಿಕೆಯುಂಟು. ಈಗ ನಮ್ಮ ಮನಸ್ಸನ್ನಾವರಿಸಿ ಆತಂಕವನ್ನುಂಟುಮಾಡುತ್ತಿರುವ ನಿರುತ್ಸಾಹಭಾವವನ್ನು ದೂರಮಾಡಿ ಮುಂದುವರಿವುದು ನಮ್ಮ ಆವಶ್ಯಕರ್ತವ್ಯವಾಗಿದೆ.

ಶ್ರೀಮಾನ್ ಬಾಲಸುಂದರಂ ಅಯ್ಯರವರು.

ರಾಜಮಂತ್ರಪ್ರವೀಣ ಶ್ರೀಮಾನ್ ಎ. ಎಸ್. ಬಾಲಸುಂದರಂ ಅಯ್ಯರವರು ಈ ಅಧಿವೇಶನದಲ್ಲಿ ನಮ್ಮೊಡನೆ ಸೇರಿಲ್ಲದಿರುವ ವಿಷಯವಾಗಿ ನಮ್ಮೆಲ್ಲರ ವಿಷಾದವನ್ನೂ ತಮ್ಮ ಪರವಾಗಿ ನಾನು ಸೂಚಿಸಿ ಈ ಭಾಷಣವನ್ನು ಮುಕ್ತಾಯಗೊಳಿಸುವೆನು. ನಾನು ಆ ರೀತಿ ಮಾಡಿದರೆಂದು ತಾವುಗಳೂ ನಿರೀಕ್ಷಿಸಿಯೇ ಇರುವಿರೆಂದು ನಂಬಿದ್ದೇನೆ.

ಶ್ರೀಮಾನ್ ಬಾಲಸುಂದರಂ ಅಯ್ಯರವರು ತಮ್ಮೆಲ್ಲರಿಗೂ ವಿಶೇಷ ಪರಿಚಿತರಾಗಿಯೇ ಇರುವುದರಿಂದ ಅವರು ಎಷ್ಟು ಒಳ್ಳೆಯವರೂ, ಸಮರ್ಥರೂ ಆದ ಅಧಿಕಾರಿಗಳೆಂಬುದನ್ನು ನಾನು ತಮಗೆ ತಿಳಿಸಬೇಕಾದ ಆವಶ್ಯಕತೆಯೇ ಇಲ್ಲ. ಶ್ರೇಷ್ಠವಾದ ವಿಮರ್ಶಾ ವಿಚಕ್ಷಣೆಯ ಪ್ರಯುಕ್ತವೂ, ಸರ್ಕಾರದ ನಾನಾ ಆಡಳಿತಗಳಲ್ಲಿಯೂ ಭಾಗಿಗಳಾಗಿದ್ದ ದೀರ್ಘಾನುಭವದ ಪ್ರಯುಕ್ತವೂ ಅವರಿಂದ ಸರ್ಕಾರಕ್ಕೆ ಅಮೂಲ್ಯವಾದ ಸಹಾಯವು ದೊರೆಯುತ್ತಿದ್ದಿತು. ಇದಲ್ಲದೆ ಅವರ ಸದ್ಗುಣಗಳ ದೆಸೆಯಿಂದ ಅವರೊಡನೆ ಕೆಲಸಮಾಡುವುದೇ ನಮಗೊಂದು ಉಲ್ಲಾಸವಾಗಿದ್ದಿತು. ಅವರಿಗೆ ಶೀಘ್ರದಲ್ಲಿಯೇ ಆರೋಗ್ಯ ಭಾಗ್ಯವು ಲಭಿಸಲೆಂದು ನಾವು ಕೇವಲ ಹೃತ್ಪೂರ್ವಕವಾಗಿ ಹಾರೈಸಿ, ಭಗವಂತನನ್ನು ಪ್ರಾರ್ಥಿಸೋಣ.

ಮಹನೀಯರೆ, ಈಗ ನಮಗೆ ಪ್ರಾಪ್ತವಾಗಿರುವ ಆರ್ಥಿಕ ದುರ್ದೆಶೆಯು ಕೇವಲ ತಾತ್ಕಾಲಿಕವಾದುದೇ ಹೊರತು, ಅದೆಂದಿಗೂ ಶಾಶ್ವತವಾಗಿ ನಿಲ್ಲತಕ್ಕದಲ್ಲ. ದೇಶೋನ್ನತಿಸಾಧನೆಯೆಂಬ ದೊಡ್ಡ ಬೆಟ್ಟವನ್ನೇರುವುದಕ್ಕೇನೋ ನಾವು ಹೊರಟಿದ್ದೇವೆ. ಆದರೆ ಮಧ್ಯದಲ್ಲಿ ಒಂದು ಗವಿಯನ್ನು ಹಾಯ್ದು ಮುಂದುವರಿಯುವಂತಾಗಿದೆ, ನಮ್ಮ ಈಗಿನ ಆರ್ಥಿಕ ಪರಿಸ್ಥಿತಿ. ಸದ್ಯದಲ್ಲಿ ನಾವು ಕಗ್ಗತ್ತಲೆಯಿಂದ ಕೂಡಿದ ಗವಿಯಲ್ಲಿ ಸಿಕ್ಕಿಬಿದ್ದು, ಬೆಟ್ಟದ ಮೇಲಕ್ಕೆ ಕರೆದೊಯ್ಯುವ ಸುಗಮವಾದ ಸೋಪಾನ ಮಾರ್ಗವನ್ನು ಕಾಣದೆ, ಗವಿಯಿಂದ ಪಾರಾಗಲು ಹೆಣಗುತ್ತಿರುವುದೇನೋ ನಿಜ. ಆದರೆ, ನಾವು ಆಗಲೇ ಗವಿಯ ಕೊನೆಯನ್ನು ಸೇರುತ್ತಿದ್ದೇವೆ. ಅಲ್ಲಿಗೆ ಸೇರಿದೊಡನೆಯೇ, ಬೆಟ್ಟವನ್ನೇರಲು ಸುಗಮವಾದ ಸೋಪಾನಮಾರ್ಗವು ಮತ್ತೊಮ್ಮೆ ನಮಗೆ ದೊರೆಯುತ್ತದೆ. ಈಗ ಗವಿಯಲ್ಲಿ ನಾವು ಎಷ್ಟು ಆತಂಕದಿಂದಲೂ ಕಳವಳದಿಂದಲೂ ಕೂಡಿ ಪಾಡುಪಡುತ್ತಿದ್ದೇವೋ, ಆಗ ಅಷ್ಟೂ ಅಷ್ಟು ಹೆಚ್ಚಿನ ಉಲ್ಲಾಸದಿಂದಲೂ ಉತ್ಸಾಹದಿಂದಲೂ, ಬೆಟ್ಟವನ್ನು ಹತ್ತುತ್ತ, ಆನಂದಪರವಶರಾಗಿ ನಮ್ಮ ದೇಶಸೇವಾವ್ರತವನ್ನು ಮುಂದುವರಿಸುತ್ತೇವೆ. ಮುಂದೆ ವಿಶೇಷ ತೊಡಕಾದ ಗಭೀರಸಮಸ್ಯೆಗಳು ಸಿದ್ಧವಾಗಿರಬಹುದಾದರೂ, ನಮ್ಮ ಮುಂದಿರುವ ಭವಿಷ್ಯತ್ತು ಸಾಕಷ್ಟು ಉತ್ಸಾಹಜನಕವಾಗಿ, ಆಶಾಭರವಸೆಗಳಿಂದ ತುಂಬಿದ ಭವಿಷ್ಯತ್ತಿನ ಶುಭಾವಹವಾದ ಭಾವನೆಯು ಸುಖದ ಸೂರೆಯನ್ನು ಹಿಂದೆ ಯಾರೊಬ್ಬರೂ ಕಂಡುದಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಏಕೆಂದರೆ, ಪ್ರಪಂಚದ ಇತಿಹಾಸದಲ್ಲಿ ಈಗ ಗೋಚರವಾಗಿರುವಷ್ಟು ಮಟ್ಟಿನ ವಿಶ್ವಕುಟುಂಬ ಭಾವನೆಯು ಆವಶ್ಯಕತೆಯು ಈಗಿನಷ್ಟು ವ್ಯಾಪಕವಾಗಿಯೂ, ಈಗಿನಷ್ಟು ಹೃತ್ಪೂರ್ವಕವಾಗಿಯೂ, ಹಿಂದೆ ಎಂದೂ ಕಂಡುಬಂದಿರಲಿಲ್ಲ. ಎಲ್ಲ ಜನಾಂಗಗಳ ಅಭ್ಯುದಯವೂ, ಧ್ಯೇಯಗಳೂ, ಯೋಗಕ್ಷೇಮಗಳೂ ಪರಸ್ಪರವಾಗಿ ಅಧೀನವೆನಿಸಿ, ಒತ್ತೊತ್ತೀತವಾಗಿ ಒಂದರೊಡನೆ ಮತ್ತೊಂದು ಸೇರಿ ಒಟ್ಟುಗೂಡಿರುವುವೆಂಬ ಭಾವನೆಯು ಪ್ರಪಂಚದ ಇತಿಹಾಸದಲ್ಲಿ ಈಗ ಗೋಚರವಾಗಿರುವಷ್ಟು ಮ[illegible] ವ್ಯಾಪಕವಾಗಿಯೂ, ಹೃತ್ಪೂರ್ವಕವಾಗಿಯೂ, ಹಿಂದೆ ಎಂದೂ ಕಂಡುಬಂದಿರಲಿಲ್ಲ. "ಎಲ್ಲ ಜನಾಂಗಗಳ ಹಾನಿವೃದ್ಧಿಗಳೂ ಪರಸ್ಪರವಾಗಿ ಸ್ನಿಗ್ಧ ಸಂಬಂಧವುಂಟೆಂಬ ಅಂಶವನ್ನೂ, ಜನಾಂಗಗಳ ಯೋಗಕ್ಷೇಮಗಳೂ ಒತ್ತೊತ್ತೀತವಾಗಿ ಸೇರಿಕೊಂಡಿರುವುವೆಂಬ ಅಂಶವನ್ನೂ, ಅಮೇರಿಕಾ ಖಂಡಕ್ಕೆ ಒದಗಿದ ಕಷ್ಟಗಳೇ ಪ್ರಜಾಸಾಮಾನ್ಯರಿಗೆ ಮನದಟ್ಟು ಮಾಡಿಕೊಡುತ್ತಿವೆ" ಎಂಬುದಾಗಿ ಅಮೇರಿಕಾ ಖಂಡದ ಸಂಯುಕ್ತರಾಷ್ಟ್ರಗಳ ಪ್ರೆಸಿಡೆಂಟರಾದ ಮಿ|| ಹೂವರ್‌ರವರು ಹೇಳಿದ್ದಾರೆ. ಅಂತೂ, ಹಬ್ಬಿ ಹರಡುತ್ತಿರುವ ಈ ಬಗೆಯ ಉದಾತ್ತಭಾವನೆಗಳೆಲ್ಲ[illegible] ಪರಿಣಾಮಫಲವಾಗಿ, ನಾನಾ ಜನಾಂಗಗಳವರಲ್ಲಿಯೂ ನಾನಾ ದೇಶಗಳವರಲ್ಲಿಯೂ ಈಗಿರುವುದಕ್ಕಿಂತಲೂ ಹೆಚ್ಚಾಗಿ ನಿಕಟವಾದ ಮತ್ತು ಗಾಢವಾದ ಮೈತ್ರಿಯಿಂದ ತುಂಬಿದ ಸ[illegible]ನೆಯ ಸ್ನಿಗ್ಧಸಂಬಂಧವುಂಟಾಗುವುದು ಖಂಡಿತ. ಅದರಲ್ಲಿ[illegible] ಮುಖ್ಯವಾಗಿ, ದೀರ್ಘಕಾಲದಿಂದ ಪರಸ್ಪರ ಸಂಬಂಧವು ಬೆಳೆದುಬಂದಿರುವ ಇಂಗ್ಲೆಂಡ್ ಮತ್ತು ಭರತ ಖಂಡಗಳಂತಹ ದೇಶಗಳ ವಿಚಾರದಲ್ಲಿ ಹೀಗಾಗುವುದಂತೂ, ಸ್ವತಸ್ಸಿದ್ಧವಾದ ಸಂಗತಿಯೇ ಸರಿ. ಒಟ್ಟು ಪ್ರಪಂಚದ ಶಾಂತಿಯೇ, ಒಟ್ಟು ಪ್ರಪಂಚದ ಯೋಗಕ್ಷೇಮವೇ, ಇವೆರಡು ದೇಶಗಳ ಜನರೂ ಸೌಹಾರ್ದದಿಂದ ಅವಿಚ್ಛಿನ್ನವಾಗಿ ಒಟ್ಟುಗೂಡಿ, ತಮ್ಮ ಮನೋಭಾವಗಳನ್ನೂ, ತಮ್ಮ[illegible]ಯಗಳನ್ನೂ ಪರಸ್ಪರವಾಗಿ ತೀವ್ರಾಸಕ್ತಿಯಿಂದ ಮನದಟ್ಟು ಮಾಡಿಕೊಂಡು, ಸ್ನೇಹಶೀಲರಾಗಿ ವರ್ತಿಸುತ್ತ ಬರುವುದಕ್ಕೆ ಅಧೀನವಾಗಿ ಅವನ್ನೇ ಆಶ್ರಯಿಸಿ ನಿಂತಿದೆ. ಆದಕಾರಣ, ಇವೆರಡು ದೇಶಗಳಿಗೂ ಮೇಲೆ ಹೇಳಿದಂತೆ ಸ್ನಿಗ್ಧಸಂಬಂಧವುಂಟಾಗಬೇಕಾದುದು ತಪ್ಪುವಂತೆಯೇ ಇಲ್ಲ. ಭಾರತೀಯರ ಮನೋರಥಗಳೆಲ್ಲ ಪೂರ್ತಿಯಾಗಿ ನೆರವೇರಿ ಕಾರ್ಯಸಿದ್ಧಿಯು ಕೈಗೂಡಬೇಕಾದರೆ ಮಹೋನ್ನತವೆನಿಸಿರುವ ಬ್ರಿಟಿಷ್ ಜನಾಂಗದೊಡನೆ ಈ ರೀತಿ ಸ್ನಿಗ್ಧಸಂಬಂಧವಿರಬೇಕಾದುದು ತೀರ ಅವಶ್ಯಕವೆಂಬುದೇ ನ[illegible]ರುವ ಅಚಲವಾದ ನಂಬಿಕೆ. ಭಾರತೀಯರಿಂದ ಸ್ವತಂತ್ರವಾ[illegible] ಮತ್ತು ಮನಃಪೂರ್ವಕವಾದ ಸಹಕಾರವು ದೊರೆಯುವಂತಾದ[illegible] ಆಗ್ಗೆ ಭರತಖಂಡಕ್ಕೆ ಬ್ರಿಟಿಷರಿಂದ ಎಷ್ಟು ಪ್ರಯೋಜನಗಳಾ[illegible]ವವೋ ಅಷ್ಟೇ ಪ್ರಯೋಜನಗಳು ಭರತಖಂಡದಿಂದ ಅವರಿ[illegible] ಲಭಿಸುವುದೆಂಬುದೇ ಖಚಿತವಾಗಿ ನನ್ನ ಮನಸ್ಸಿನಲ್ಲಿರು[illegible] ಭಾವನೆ.

ಮೈಸೂರು, ಮಿರ್ಜಾ. ಎಂ. ಇಸ್ಮಾಯಿಲ್,
1 ನೆಯ ಜೂನ್ 31. ಮೈಸೂರು ಸಂಸ್ಥಾನದ ದಿವಾನ್‌ರವ[illegible]

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.
ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.
ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಈಗ ತಾನೆ ಪ್ರಕಟವಾಗಿವೆ.

ಸಚಿತ್ರ ಕನ್ನಡ ಮಕ್ಕಳ ಗಣಿತ:—ಮಕ್ಕಳು ಆಟದ ರೂಪದಲ್ಲಿಯೇ 14 ಪೌಂಡಿನ ಗ್ಲೇಜ್ ಕಾಗದದಲ್ಲಿ ಪಾಠಮಾಡಲನುಕೂಲಿಸುವಂತೆ ಚಿತ್ರಗಳ ಸಹಿತ ಅಂದವಾಗಿ ಮುದ್ರಣ ಮಾಡಿಸಿದೆ. ಇದರಲ್ಲಿ ಒಂದರಿಂದ ಸಾವಿರದವರೆಗಿನ ಸಂಖ್ಯೆಗಳ ಅಂಕಕರಣ, ಸಂಖ್ಯಾಪಠನ, ಸ್ಥಾನಭೇದ, ಮಗ್ಗಿ, ಸಂಕಲನ, ವ್ಯವಕಲನ, ಗುಣಾಕಾರ, ಭಾಗಹರ, ಅನುಲೋಮ, ವಿಲೋಮ, ಮಗ್ಗಿ ಮೊದಲಾದುವನ್ನು ಬೋಧಿಸಲನುಕೂಲವಾದ ಸುಮಾರು 750 ಪ್ರಶ್ನೆಗಳಿವೆ. ವಿಭಾಗಕ್ರಮವೂ ಬೋಧನಕ್ರಮವೂ ಮಕ್ಕಳಿಗೆ ಮನೋಹರವಾಗಿರುವಂತೆ ನವೀನಕ್ರಮವನ್ನನುಸರಿಸಿವೆ. ಪ್ರಾಥಮಿಕಶಾಲೆಗಳಲ್ಲೆಲ್ಲಾ ಉಪಯೋಗಕ್ಕೆ ಬರುವುದು. ಬೆಲೆ 0—4—3 ಮಾತ್ರ.

ಸಚಿತ್ರ ಕರ್ಣಾಟಕ ಗುಣಿತಾಕ್ಷರಬೋಧೆ:—ಮಕ್ಕಳಿಗೆ ಕಲಿಯಲು ಕಷ್ಟವಾದ ಗುಣಿತಾಕ್ಷರಗಳನ್ನು ಸುಲಭರೀತಿಯಲ್ಲಿ ಬೋಧಿಸಲನುಕೂಲಿಸುವಂತೆ ರಚಿಸಿರುವ ಚಿತ್ರಪಟ. ಬೆಲೆ 0—1—0 ಮಾತ್ರ.

ಸಿಲಿಬಸ್ ಫಾರಂ:—ಉಪಾಧ್ಯಾಯರು ತಮ್ಮ ಸ್ಕೂಲಿನ ಪ್ರೋಗ್ರಾಮನ್ನು ತಯಾರಿಸಿಕೊಳ್ಳಲನುಕೂಲವಾದುದು. 0—0—6 ಮಾತ್ರ. ಇನ್‌ಸ್ಪೆಕ್ಟಿಂಗ್ ಆಫೀಸರು ಒಪ್ಪಿಗೆಯನ್ನು ಕೊಟ್ಟಿರುವರು.

N. B. ಒಂದು ರೂಪಾಯಿಗಿಂತ ಕಡಿಮೆ ವಿ. ಪಿ. ಕಳುಹಿಸುವುದಿಲ್ಲ. ಕಡಿಮೆಯಾಗಿ ಆರ್ಡರ್ ಕೊಡುವವರು ಪುಸ್ತಕದ ಬೆಲೆಯಮೇಲೆ ಪ್ರತಿಯೊಂದು ಪುಸ್ತಕಕ್ಕೂ ಒಂದಾಣೆ ಹೆಚ್ಚಿಗೆ ಪೋಸ್ಟಲ್ ಸ್ಟ್ಯಾಂಪ್‌ಗಳನ್ನು ಕಳುಹಿಸಿದಲ್ಲಿ ಬುಕ್‌ಪೋಸ್ಟ್ ಮೂಲಕ ಕಳುಹಿಸುವೆವು. ಉಪಾಧ್ಯಾಯರಿಗೂ ವ್ಯಾಪಾರಿಗಳಿಗೂ ತಕ್ಕಂತೆ ಕಮಿಷನ್ ಉಂಟು.

ಪ್ರಕಾಶಕರು:—ಜಿ. ರೇವಣ್ಣ ಅಂಡ್ ಬ್ರದರ್
7 ಬುಕ್‌ಸೆಲರ್ಸ್, ಪೋ|| ಬಿಡದಿ, ಬೆಂಗಳೂರು ಡಿ||

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ಶೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ವೃದ್ಧಿ-ಋದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಮಧುಪವಿತ್ರಭೂಮಿ ಹಾಗೂ ಪೂರ್ವೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ರಸಾಯನವು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಿಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಔಷಧ ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ೮೦ ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಭೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು, ಪುನಃ ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿಂಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಸ್ವಪ್ನದೋಷ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. 1 ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ. ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟ್ಯಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,
ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂಲಾಚಾರ್ಯರ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆಯಂತೆಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆಯಂತೆಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆಯಂತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,
ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್
ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚುಊ, ರಕ್ತಭಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆಸಿಡಿತ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೇನೆ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸೇವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳುಪು, ಹೊಟ್ಟೆ ಹುಳಗಳ ಕೆದರಾಟದ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟುಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ನೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

☞ ಟಿಕ್ಕು ಲವಣಗಳೂ, ಹೋಮಿಯೋಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[45] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ) ಮಂಗಳೂರು. ದ. ಕ.**

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಿಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಮು ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ನೋಡಲಸೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಮೀರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಣೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ತಾಮಸಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,
ಪಟೇಲ್ ಮತ್ತು ಛೇರ್‌ಮನ್, ಬಾಣೂರು,
[8] ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨|| ಆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರು
ಸಚಿತ್ರ ರೇಣುಕವಿಜಯ	೧ ರು
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರು
ವೀರಶೈವಸಿದ್ಧಾಂತಸುಧಾಕರ	೨ ರು

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ... ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿ... ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡ... ಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿ... ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತುರ... ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮೆ... ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ... ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ... ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿ... ರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇ...

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ|| ಗುಳೇದಗುಡ್ಡ, ಡಿ|| ಬಿಜಾಪು...

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂ... ...ಟೊ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ರೇಬಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ...

(Registered Trade Mark)

...ಗಳನ್ನು ಕೊಟ್ಟಿ... ರು. ಪ್ರಸಿದ್ಧವಾದ... ನಶ್ಯದ ಪುಡಿಯ... ಸ್ವಸ್ಥವಾಗುವ ... ಧಿಗಳು ಯಾವವೆಂದ... ರೆ:—ಪಿಸಿತಿ, ... ತಲೆನೋವು, ತಲೆ... ಲ್ಲಿನ ರೋಗಗ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಲ್ಲೆ... ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪು... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ... ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗ... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾದೀ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-೪...
ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[51] ಪೋ. ಬಾ. ೫೧೦, ಮದರಾಸ್...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿ...

REGISTERED No. M. 2266 || ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದನ್ತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಃ ಪಂಚಾಸ್ಯಪೀಠಾಧಿಪಃ | ಪಂಚಕ್ಲೇಶವಿನಾಶಕಃ ಪರತರಶ್ರೀಪಂಚಲಿಂಗೋದ್ಭವಃ ||
ಪಂಚಾಚಾರನಿಯಾಮಕಃ ಪರಿಲಸತ್ಪಂಚಾಕ್ಷರೀಬೋಧಕಃ | ಪಂಚಾಚಾರ್ಯಜಗದ್ಗುರೂತ್ತಮವರಃ ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ ನೇ ಜೂನ್ ೧೯೩೧ [ಸಂಚಿಕೆ ೯

ಹಿಮಾಲಯಪ್ರಾಂತದ ಸಮಾಚಾರ.

ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಮಹಾಸ್ವಾಮಿಗಳು ಸ್ಥಾಪಿಸಿರುವ ಆಯುರ್ವೇದ ಮಹಾವಿದ್ಯಾಲಯದಲ್ಲಿ ೧-೬-೩೧ ರಿಂದ ರಸಾಯನಿಕ ಔಷಧಿಗಳೂ ಸುವರ್ಣಮಕರಧ್ವಜ, ಸುವರ್ಣಸಿಂಧೂರ, ರಸಸಿಂಧೂರ, ಮಲ್ಲಸಿಂಧೂರ, ಸುವರ್ಣಬಲಿಜಾರಿತ ಮಲ್ಲಸಿಂಧೂರ, ಸುವರ್ಣಭಸ್ಮ, ರಜತಭಸ್ಮ, ಮುಂತಾದ ಭಸ್ಮಗಳೂ ಶುದ್ಧಪಡಿಸಲಾಗುವವು. ಪ್ರಕ್ರಿಯೆಗಳನ್ನು ನೋಡಿ ಕಲಿಯಲಪೇಕ್ಷೆಯುಳ್ಳ ವೈದ್ಯರೂ ವಿದ್ಯಾರ್ಥಿಗಳೂ ಮೇಲ್ಕಂಡ ತಾರೀಖಿನೊಳಗಾಗಿ ಬರಬೇಕು. ಬರತಕ್ಕವರಿಗೆ ಸಂಸ್ಥಾನದವತಿಯಿಂದ ಭೋಜನ ಮತ್ತು ವಾಸಮಾಡುವದಕ್ಕೆ ಸ್ಥಳದ ವ್ಯವಸ್ಥೆಯೂ ಮಾಡಲ್ಪಡುವದು. ಈ ರಸಾಯನ ಶಾಲೆಯಲ್ಲಿ ಇನ್ನೂ ಅನೇಕ ತರಹದ ರಸೌಷಧಿಗಳು ಶುದ್ಧವಾಗುವವು. ಆದ್ದರಿಂದ ಇಂಥ ಸುಸಮಯವನ್ನು ಕಳೆದುಕೊಳ್ಳಬಾರದು.

ಸಿದ್ಧಲಿಂಗಶರ್ಮ.

ಮೈಸೂರು ಸಂಸ್ಥಾನದಲ್ಲಿ ಸ್ತ್ರೀಯರ ಹಕ್ಕುಬಾಧ್ಯತೆಗಳು.

ಮೈಸೂರು ಸಂಸ್ಥಾನದಲ್ಲಿ ಸ್ತ್ರೀಯರಿಗೆ 'ಹಿಂದೂ ಲಾ' ಪ್ರಕಾರ ಈಗ ಇರುವುದಕ್ಕಿಂತಲೂ ಹೆಚ್ಚಿನ ಹಕ್ಕುಬಾಧ್ಯತೆಗಳನ್ನು ಕೊಡಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರರು ಅನೇಕ ವರ್ಷಗಳಿಂದಲೂ ಸರ್ಕಾರದವರ ಗಮನಕ್ಕೆ ತರುತ್ತಲಿದ್ದರು. 1928 ನೆಯ ವರ್ಷದ ದಸರಾ ಅಧಿವೇಶನದಲ್ಲಿ ಈ ಬಗ್ಗೆ ಒಂದು ಕಮಿಟಿಯನ್ನೇರ್ಪಡಿಸಬೇಕೆಂದು ತೀರ್ಮಾನವಾದಂತೆ ಘನ ಸರ್ಕಾರದವರು 1929 ನೆಯ ಇಸವಿ ಜೂನ್ ತಿಂಗಳಲ್ಲಿ ಹತ್ತು ಜನ ಮೆಂಬರುಗಳನ್ನೊಳಗೊಂಡ ಒಂದು ಕಮಿಟಿಯನ್ನೇರ್ಪಡಿಸಿದರು. ಈ ಕಮಿಟಿಗೆ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಕೆ. ಎಸ್. ಚಂದ್ರಶೇಖರಯ್ಯರ್‌ರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಈ ಕಮಿಟಿಯವರು ಸದರಿ ಸಮಸ್ಯೆಯನ್ನು ಕೂಲಂಕಷವಾಗಿ ಪರಿಶೋಧಿಸಿ ಒಂದು ವರದಿಯನ್ನು ತಯಾರಿಸಿ ಪ್ರಭುತ್ವದವರ ಮುಂದಿಟ್ಟರು. ಸ್ತ್ರೀಯರ ಹಕ್ಕುಬಾಧ್ಯತೆಗಳ ಠರಾವನ್ನು ಲೀಗಲ್ ರಿಮೆಂಬರೆನ್ಸರ್ ಆಗಿದ್ದ ಶ್ರೀಮಾನ್ ಪಿ. ಮಹಾದೇವಯ್ಯ, ಬಿ. ಎ., ಬಿ. ಎಲ್., ರವರು ಕಳೆದ ಪ್ರಜಾಪ್ರತಿನಿಧಿಸಭೆಯ ಮುಂದಿಟ್ಟು ಅದರ ನಿಯಮಗಳನ್ನು ಮೆಂಬರರಿಗೆ ಹೃದಯಂಗಮವಾಗುವಂತೆ ವಿವರಿಸಿದರು. ಈ ಠರಾವಿನ ಮುಖ್ಯಾಂಶವೇನೆಂದರೆ—

1. ಸ್ತ್ರೀಯರಾಗಿ ಜನಿಸಿರುವರೆಂಬ ಕಾರಣದಿಂದಾಗಲೀ ಶಾಸ್ತ್ರದಲ್ಲಿ ಆಧಾರವಿಲ್ಲವೆಂಬ ನಿಮಿತ್ತವಾಗಿಯಾಗಲೀ ಸ್ತ್ರೀಯರನ್ನು ವಾರಸಾ ಹಕ್ಕಿನಿಂದ ದೂರ ಮಾಡಲಾಗದು.

2. ಅವಿಭಕ್ತಕುಟುಂಬದ ವಿಚಾರ:—ಅವಿಭಕ್ತ ಕುಟುಂಬದಲ್ಲಿ ಪುರುಷನು ತಾನು ಸ್ವಂತ ಗಳಿಸಿದ ಆಸ್ತಿಗೆ ಅವನೇ ಹಕ್ಕುದಾರನಾಗುತ್ತಾನೆ ಅವನ ತರುವಾಯ ಆ ಆಸ್ತಿಯು ಅವನಿಗೆ ಗಂಡುಮಕ್ಕಳಿಲ್ಲದ್ದರೆ ಅವನ ಹೆಂಡತಿಗಾಗಲೀ, ಅಥವಾ ಇತರ ಸ್ತ್ರೀಬಂಧುಗಳಿಗಾಗಲಿ, ಪ್ರಾಪ್ತವಾಗುವುದು. ಈ ವಿಷಯವು ಬ್ರಿಟಿಷ್ ಹಿಂದುಸ್ಥಾನದಲ್ಲಿ ಪಾಸಾದ ಕೆಲವು ತೀರ್ಪುಗಳಿಂದ ಸಂಶಯಾತ್ಮಕವಾಗಿತ್ತು. ಕುಟುಂಬದ ಆಸ್ತಿಯ ಸಹಾಯವಿಲ್ಲದೆ ಕಲಿತ ವಿದ್ಯಾಬಲದಿಂದ ಮಾಡಿದ ಸಂಪಾದನೆಗೆ ಅವನು ಮಾತ್ರವೇ ಹಕ್ಕುದಾರನೆಂಬ ಕಾನೂನು ಪಾಸಾದ ಕಾರಣ ಆ ಸಂಶಯಗಳು ನಿವಾರಣೆಯಾದುವು.

ಈ ಸಂಸ್ಥಾನದಲ್ಲಿಯೂ ಸಹ ಅಂಥ ಮಸೂದೆಯು ಪಾಸಾಗಿ ಯಾವ್ಯಾವು ಸ್ವಯಾರ್ಜಿತ ಸ್ವತ್ತುಗಳೆಂಬುದು ಸ್ಪಷ್ಟವಾಗಿ ಕಾನೂನಾಗತಕ್ಕದ್ದು. ಮತ್ತು ಅವಿಭಕ್ತ ಕುಟುಂಬದಲ್ಲಿ ಪ್ರಾಪ್ತವಯಸ್ಕನಾದವನು ಆ ಕುಟುಂಬದಿಂದ ತಾನು ಪ್ರತ್ಯೇಕವಾಗಬೇಕೆಂಬ ಉದ್ದೇಶವನ್ನು ದ್ವಂದ್ವಾರ್ಥಕ್ಕೆ ಅವಕಾಶವಿಲ್ಲದಂತೆ ಸ್ಪಷ್ಟವಾಗಿಯೂ ಕುಟುಂಬಕ್ಕೆ ಸೇರಿದ ಇತರ ಮನುಷ್ಯರ ತಿಳುವಳಿಕೆಗೆ ಬರುವಂತೆಯೂ ತನ್ನ ನಡತೆಯಿಂದಾಗಲೀ ಅಥವಾ ಶಂತೋಕ್ತವಾಗಿಯಾಗಲೀ ತಿಳಿಯಪಡಿಸಿದಲ್ಲಿ ಆರೀತಿ ತನ್ನ ಉದ್ದೇಶವನ್ನು ತಿಳಿಯಪಡಿಸಿದ ಕಾಲದಿಂದ ಅರ್ಥಸಂಬಂಧದಲ್ಲಿ ಅವನು ಅಂಥ ಇತರ ಮನುಷ್ಯರಿಂದ ವಿಭಾಗವಾಗಿ ಪ್ರತ್ಯೇಕವಾದಂತೆಯೇ ಭಾವಿಸಲ್ಪಡತಕ್ಕದ್ದು. ಹೀಗೆ ಪ್ರತ್ಯೇಕವಾದಂತೆ ಭಾವಿಸಲ್ಪಡತಕ್ಕವನು ಮೃತಪಟ್ಟರೆ ಅವನ ಆಸ್ತಿಗೆ ಸ್ತ್ರೀಯರಾಗಿದ್ದರೂ ಪುರುಷರಾಗಿದ್ದರೂ ಹಕ್ಕುದಾರರಾಗತಕ್ಕದ್ದು.

3. ದತ್ತಕ ವಿಚಾರ:—ಈಗ ಗಂಡನು ತನಗೆ ಮಗನನ್ನು ದತ್ತಕ ತೆಗೆದುಕೊಳ್ಳಬೇಕೆಂದು ಹೆಂಡತಿಗೆ ಅಧಿಕಾರಕೊಟ್ಟಾಗಲೂ, ಗಂಡನ ಸಪಿಂಡದವರು ದತ್ತಕಕ್ಕೆ ಅನುಮತಿಕೊಟ್ಟಾಗಲೂ ಸ್ತ್ರೀಯಳಿಗೆ ದತ್ತಕಮಾಡಿಕೊಳ್ಳಲು ಹಕ್ಕಿರುತ್ತದೆ. ಆದರೆ ಸಪಿಂಡದವರು ದತ್ತಕಮಾಡಿಕೊಳ್ಳುವುದಕ್ಕೆ ಅನುಮತಿಕೊಡುವುದು ಸುಲಭವಲ್ಲ. ಬೊಂಬಾಯಾಧಿಪತ್ಯದಲ್ಲಿ ಗಂಡನು ದತ್ತಕಕ್ಕೆ ಅಧಿಕಾರಕೊಡದಿದ್ದರೂ, ದತ್ತಕಮಾಡಿಕೊಳ್ಳಬಾರದೆಂದು ಹೇಳದಿದ್ದರೆ ಅಧಿಕಾರಕೊಟ್ಟಂತೆಯೇ ಭಾವಿಸಲ್ಪಡತಕ್ಕದೆಂದು ಕಾನೂನು ಪಾಸಾಗಿದೆ. ಈ ಕಾನೂನು ಇಲ್ಲಿಯೂ ಪಾಸಾಗಬೇಕು. ಇದರಿಂದ ಅನಾವಶ್ಯಕವಾದ ಕೋರ್ಟುವ್ಯವಹಾರವು ನಿಂತು ಹೋಗುವುದು.

4. ಸ್ತ್ರೀಧನ—ಮಿತಾಕ್ಷರಸಿದ್ಧಾಂತಪ್ರಕಾರ ಸ್ತ್ರೀಯರಿಗೆ ಸೇರಿದ ಎಲ್ಲವಿಧವಾದ ಆಸ್ತಿಯೂ ಸ್ತ್ರೀಧನವೆಂದು ಕರೆಯಲ್ಪಡುತ್ತಿತ್ತು. ಆದರೆ ಇತ್ತೀಚೆಗೆ ಪಾಸಾದ ಅನೇಕ ತೀರ್ಪುಗಳಿಂದ ಕೆಲವು ಆಸ್ತಿಗಳು ಸ್ತ್ರೀಧನವಲ್ಲವೆಂದು ಹೇಳಲ್ಪಟ್ಟಿದೆ. ಆದ್ದರಿಂದ ಇನ್ನುಮೇಲೆ ಸ್ತ್ರೀಯಳಿಂದಾಗಲೀ, ತನ್ನ ಗಂಡನಿಂದಾಗಲೀ, ಮಗನಿಂದಾಗಲೀ, ರಕ್ತಸಂಬಂಧವುಳ್ಳ ಪುರುಷಬಂಧುವಿನಿಂದಾಗಲೀ, ದೊರೆತ ಆಸ್ತಿಯೂ ಸ್ತ್ರೀಧನವೆಂದು ಕರೆಯಲ್ಪಡಬೇಕು.

5. ಜೀವನಾಂಶ—ಹೆಂಗಸಿಗೆ ಜೀವನಾಂಶ ಕೊಡುವ ವಿಷಯದಲ್ಲಿ ಗಂಡಸು ಕೆಲವು ಸಂದರ್ಭಗಳಲ್ಲಿ ಕಾನೂನುಮೇರೆಗೆ ಹೊಣೆಗಾರನಾಗಿರುತ್ತಾನೆ. ಅಂಥ ಸಂದರ್ಭಗಳಲ್ಲಿ ಅವನು ಜೀವನಾಂಶವನ್ನು ಕೊಟ್ಟೇ ತೀರಬೇಕಾಗುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಕಾನೂನು ನಿರ್ಬಂಧವಿಲ್ಲದಿದ್ದರೂ ಜೀವನಾಂಶವನ್ನು ಕೊಡುವುದು ಅವನ ಧರ್ಮವಾಗಿದೆ. ಜೀವನಾಂಶದ ಹಕ್ಕಿರುವ ಸ್ತ್ರೀಯರು:—ಮುದುಕರಾದ ತಾಯಿತಂದೆಗಳು, ವ್ಯಭಿಚಾರಮಾಡದಿರುವ ಹೆಂಡತಿ, ಮೈನರಾದ ಗಂಡುಮಕ್ಕಳು ಮತ್ತು ಮದುವೆಯಾಗದಿರುವ ಹೆಣ್ಣುಮಕ್ಕಳು ಇವರೆಲ್ಲರಿಗೂ ಕಾನೂನುಮೇರೆಗೆ ಜೀವನಾಂಶಕ್ಕೆ ಹಕ್ಕಿರುತ್ತದೆ. ಆದರೆ ಬಲತಾಯಿ, ವಿಧವೆಯಾದಸೊಸೆ, ಮದುವೆಯಾಗದಿರುವ ಸಹೋದರಿ, ವಿಧವೆಯಾಗಿ ನಿರ್ಗತಿಕಳಾಗಿರುವಮಗಳು ಇವರು ಜೀವನಾಂಶವನ್ನು ಪಡೆಯಲು ಕಾನೂನಿನಮೇರೆಗೆ ಯಾವಹಕ್ಕೂ ಇಲ್ಲದಿದ್ದರೂ ಅವರಿಗೆ ಜೀವನಾಂಶವನ್ನು ಕೊಡುವುದು ಧರ್ಮ.

ಯಾವನೊಬ್ಬ ಮನುಷ್ಯನೇ ಆಗಲಿ, ಕಾನೂನಿಂದ ಬದ್ಧನಾಗಿಯೋ ಅಥವಾ ಧರ್ಮದಿಂದ ಬದ್ಧನಾಗಿಯೋ ಯಾರ ಯಾರ ಜೀವನಾಂಶವನ್ನು ನಡೆಯಿಸತಕ್ಕದೋ ಅಂಥವರೆಲ್ಲರಿಗೂ, ವಾರಸಹಕ್ಕಿನಿಂದ ಆಸ್ತಿಯನ್ನು ಪಡೆದವನು ಆ ಆಸ್ತಿಯಿಂದ ಜೀವನಾಂಶವನ್ನು ಕೊಡಲು ಬದ್ಧನಾಗಿರುತ್ತಾನೆ.

ಮೇಲ್ಕಂಡ ಮಸೂದೆಯು ಪ್ರಜಾಪ್ರತಿ ಸಭೆಯಲ್ಲಿಯೂ ನ್ಯಾಯವಿಧಾಯಕ ಸಭೆಯಲ್ಲಿಯೂ ಬಹುಮತದಿಂದ ಪಾಸಾಯಿತು. ಈ ಮಸೂದೆಯನ್ನು ತಂದ ಶ್ರೀಮಾನ್ ಪಿ. ಮಹಾದೇವಯ್ಯ ಬಿ. ಎ. ಬಿ. ಎಲ್. ರವರು ಈ ವಿಷಯವನ್ನು ಬಹು ಯುಕ್ತಿಯುಕ್ತವಾಗಿಯೂ ಸಮಂಜಸವಾಗಿಯೂ ಮೆಂಬರರಿಗೆ ವಿವರಿಸಿ ಈ ಮಸೂದೆಯು ಯಾವ ಅಂತರಾಯವೂ ಇಲ್ಲದಂತೆ ಪಾಸಾಗುವ ಹಾಗೆ ಬಹು ದಕ್ಷತೆಯಿಂದ ಕಾರ್ಯಭಾಗ ಮಾಡಿದರು. ಈ ಮಸೂದೆಯನ್ನು ಪಾಸುಮಾಡಿದುದಕ್ಕೆ ಸರ್ಕಾರದವರು ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಬೊಂಬಾಯಿ ಸರಾಫ್ ಸಂಘದ ಸೆಕ್ರೆಟರಿಗಳು ಇಂಡಿಯಾ ಸರ್ಕಾರದ ಸೆಕ್ರೆಟರಿಗಳಿಗೂ ಟೈಮ್ಸ್ ಪತ್ರಿಕೆಗೂ ಒಂದು ಲೇಖನವನ್ನು ಕಳುಹಿಸಿದ್ದಾರೆ. ಅದರಲ್ಲಿ ತಿಳುಹಿಸಿರುವುದೇನೆಂದರೆ:—" ಜನರು ಹಣಕಾಸಿನ ಅಭಾವದಿಂದ ತಳಮಳಗೊಳ್ಳುತ್ತಿರುವುದೂ, ವ್ಯಾಪಾರಕ್ಕೆ ತಕ್ಕ ಅನುಕೂಲ್ಯಗಳನ್ನು ಒದಗಿಸುವುದು ಅವಶ್ಯಕವೆಂಬುದೂ ಸರ್ಕಾರದವರಿಗೆ ತಿಳಿದೇ ಇದೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ಸರ್ಕಾರದವರು ವರ್ತಕರಿಗೆ ಅವಶ್ಯ ಸಹಾಯಮಾಡಬೇಕಾಗಿತ್ತು. ಆದರೆ ಅದಕ್ಕೆ ಬದಲಾಗಿ ಅವರನ್ನು ಇನ್ನೂ ಹೆಚ್ಚಿನ ಕಷ್ಟಕ್ಕೀಡುಮಾಡಿದ್ದಾರೆ. ಇದುವರೆಗೂ 20 ತೊಲೆಗಳಿಗಿಂತ ಜಾಸ್ತಿತೂಕವಿರುವ ಪಾರ್ಸಲ್ಲಿಗೆ 3 ಆಣೆ ಪೋಸ್ಟುಛಾರ್ಜು ಇತ್ತು. ಈಗ ನಾಲ್ಕಾಣೆ ಮಾಡಿದ್ದಾರೆ. ಇದರಿಂದ ವ್ಯಾಪಾರಸ್ಥರಿಗೆ ಬಹು ತೊಂದರೆಯಾಯಿತು. ಇದನ್ನು ಸರ್ಕಾರದವರು ಕೂಡಲೆ ವಜಾಮಾಡಬೇಕು."

ಪತ್ರವ್ಯವಹಾರ.

ಬಾತ್ಮೀದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪರ್ವತ ಮಹಾ ಸಂಸ್ಥಾನ ಪ್ರತಿನಿಧಿಗಳವರ ಆಗಮನ

ಚಿಪ್ಪಗಿರಿ.

ಸವಾಜ ಬಂಧುಗಳೇ ಬಳ್ಳಾರಿ ಜಿಲ್ಲಾ ಆಲೂರು ತಾಲೂಕ ಪೈಕಿ ಚಿಪ್ಪಗಿರಿ ಗ್ರಾಮವು ಅಜುಬಾಜು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿರುವುದಲ್ಲದೆ ವಿಶೇಷವಾಗಿ ವೀರಶೈವರ ಜನ ಸಂಖ್ಯೆಯುಳ್ಳದಾಗಿರುವುದು. ಮತ್ತು ಸುಪ್ರಸಿದ್ಧರಾದ ಅಕ್ಕಣಾಚಾರ್ಯರಿಂದ ಕಟ್ಟಲ್ಪಟ್ಟ ದೊಡ್ಡದೊಡ್ಡ ದೇವಸ್ಥಾನಗಳಿಂದ ಶೋಭಿಸುತ್ತಿರುವದು. ಈ ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತ ಮಹಾ ಸಂಸ್ಥಾನ ಪ್ರತಿನಿಧಿಗಳಾದ ಶ್ರೀ|| ಷ|| ಬ್ರ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಸ್ವಾಮಿಗಳು ಬೃಹನ್ಮಠ ಚಿಕ್ಕಮಂಗ್ಲೂರು, ಇವರು ತಮ್ಮ ಸಿಬ್ಬಂದಿ ಸಮೇತವಾಗಿ ಸಂಚಾರ ಗ್ರಾಮದ ಕಾಣಿಕೆಯನ್ನು ಪೂರೈಸಿಕೊಂಡು ತಾರೀಖು ೧೧-೬-೩೧ ನೆಯ ದಿವಸ ಚಿಪ್ಪಗಿರಿ ಗ್ರಾಮಕ್ಕೆ ದಯಮಾಡಿಸಿದರು. ಪುರಪ್ರಮುಖರು ಇಷ್ಟ ಕವಾಲಸಹಿತರಾಗಿ ಬಂದು ಸನ್ನಿಧಿಯ ದರ್ಶನ ಮಾಡಿಕೊಂಡು ಉತ್ಸವದಿಂದ ಸನ್ನಿಧಿಯವರನ್ನು ಭೋಗೇಶ್ವರ ದೇವಸ್ಥಾನಕ್ಕೆ ಕರೆತಂದರು. ಮಹಾ ಸನ್ನಿಧಿಯು ಭದ್ರಾಸನದ ಮೇಲೆ ಮೂರ್ತಮಾಡಿದ ಕೂಡಲೆ ಸ್ತ್ರೀ ಪುರುಷರು ಜಯಜಯಕಾರ ಮಾಡುತ್ತ ತಮ್ಮಲ್ಲಿರುವ ಗುರುಭಕ್ತಿಯನ್ನು ಪ್ರಕಾಶಗೊಳಿಸಿದರು. ಸಂಸ್ಥಾನ ಸೆಕ್ರೇಟರಿ ಅಧ್ಯಕ್ಷರಾದ ರಾಜೋಳಿ ಅದಿವಿಸ್ವಾಮಿ ಮಠದ ಬಸಯ್ಯಾಖ್ಯ ಶಿವಾನಂದ ಯೋಗಿಗಳು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಆ ಮೇಲೆ ಪ್ರತಿನಿಧಿಗಳು ಅಪ್ಪಣೆಕೊಡಿಸಿದ್ದೇನೆಂದರೆ:—ಯಾವದೇ ರಾಷ್ಟ್ರವಾಗಲಿ ಧರ್ಮವಾಗಲಿ, ಸುಧಾರಿಸಬೇಕಾದರೆ ಆಯಾಯ ಮತದ ಧರ್ಮಗುರುಗಳು ದೇಶಮಧ್ಯದಲ್ಲಿ ಸಂಚರಿಸಿ ಯಾವತ್ತೂ ಧರ್ಮವಂತರಿಗೆ ಶಿವಸಿದ್ಧಾಂತೋಪದೇಶವನ್ನು ಬೋಧಮಾಡುತ್ತ ಧರ್ಮವನ್ನು ಜಾಗ್ರತಗೊಳಿಸುತ್ತಿರಬೇಕು. ಹಿಂದಕ್ಕೆ ಕೆಲ ಪೀಠಾಚಾರ್ಯರು ದೇಶಮಧ್ಯದಲ್ಲಿ ಸಂಚರಿಸದೆ ಸುಮ್ಮನೇ ಪೀಠದಲ್ಲಿ ಕುಳಿತಕಾರಣ ನಮ್ಮ ಪರಮ ಪವಿತ್ರವಾದ ವೀರಶೈವ ಧರ್ಮದಲ್ಲಿ ಕೆಲಕೆಲ ಧರ್ಮಲಂಡರು ನಾವೇ ಗುರುಗಳೆಂದು ಭಕ್ತರಮುಂದೆ ನಟನಮಾಡಲಿಕ್ಕೆ ಹತ್ತಿದರು. ಇದೂ ಅಲ್ಲದೆ ಪರದೇಶದ ಬೋಧಕರು ಬಂದು ಜನರ ಮನಸ್ಸಿಗೆ ಪರಿಣಾಮವಾಗುವಂತೆ ಬೋಧಿಸುತ್ತ ಎಷ್ಟೋ ಜನ ನಮ್ಮ ಭಾರತೀಯರನ್ನು ಧರ್ಮಭ್ರಷ್ಟರನ್ನಾಗಿ ಮಾಡಿದರು. ಗುರುಗಳು ತಮ್ಮ ಕರ್ತವ್ಯವನ್ನು ಬಿಟ್ಟಿದ್ದರಿಂದ ಇಂಥ ದುರವಸ್ಥೆಯು ಪ್ರಾಪ್ತವಾಯಿತು. ಆಯಾಮತದ ಧರ್ಮಗುರುಗಳು ಶಿಷ್ಯರ ಸುಖದುಃಖಗಳಿಗೆ ಭಾಗಿಗಳಾಗಿ ದೇಶಸಂಚಾರ ಮಾಡುತ್ತ ಭಕ್ತರಿಗೆ ಆಗಾಗ್ಗೆ ಧರ್ಮವನ್ನು ಬೋಧಿಸುತ್ತಾ ಶಿಷ್ಯರಿಂದ ಗುರುಕಾಣಿಕೆಯನ್ನು ತೆಗೆದುಕೊಂಡು ಸದ್ವಿನಿಯೋಗ ಮಾಡುತ್ತ ಶಿಷ್ಯರ ಧರ್ಮಕರ್ಮಾಚರಣೆಗಳನ್ನು ತಿದ್ದುತ್ತ ಬಂದಿದ್ದರೆ ಹೀಗಾಗುತ್ತಿದ್ದಿಲ್ಲ. ಗುರುಗಳು ಯಾವನು ಧರ್ಮದಲ್ಲಿರುವನೋ ಯಾವನು ಅಧರ್ಮದಲ್ಲಿರುವನೋ ಎಂಬುದನ್ನು ಪರ್ಯಾಲೋಚಿಸಿ ದಂಡನ ಖಂಡನಗಳಿಂದ ಅಧರ್ಮವನ್ನು ನಾಶಮಾಡಿ ಶಿಷ್ಯರನ್ನು ಉದ್ಧರಿಸಲೇಬೇಕೆಂದು ಬೋಧಮಾಡಿದರು. ಇವರ ಬೋಧಾಮೃತವನ್ನು ಕೇಳಿ ಸ್ವಮತ ಪರಮತೀಯರು ತಲೆದೂಗಿದರು. ಸಮಾಜ ಬಾಂಧವರೇ ಸ್ವಾಮಿಗಳಂತೆ ಇತರ ಸ್ವಧರ್ಮ ಪರಧರ್ಮದ ಗುರುಗಳು ದೇಶಮಧ್ಯದಲ್ಲಿ ಸಂಚರಿಸಿ ತಮ್ಮ ತಮ್ಮ ಶಿಷ್ಯವರ್ಗಕ್ಕೆ ಬೋಧ ಮಾಡುತ್ತ ಧರ್ಮ ಜಾಗ್ರತೆಗೊಳಿಸಿದರೆ ಶಿಥಿಲವಾಗಿ ಹೋಗುತ್ತಿರುವ ಧರ್ಮವು ಭದ್ರಗೊಳ್ಳುವದು.

ಸಂಗೀತ ಶಿರೋಮಣಿ ಚನ್ನಬಸವಯ್ಯ
ಬೃಹನ್ಮಠ ಚಿಪ್ಪಗಿರಿ.

ಶಿವಾಚಾರಯುಕ್ತ ದೀಕ್ಷಾಸಂಸ್ಕಾರ.

ಮುಧೋಳ.

ನೈಜಾಂ ಪ್ರಾಂತಕ್ಕೆ ಸೇರಿದ ಮುಧೋಳ ಗ್ರಾಮದಲ್ಲಿರುವ ಮ|| ರಾ|| ವಿಶ್ವನಾಥಪ್ಪ ವ. ಹಾವರ್ಣ ಖಡಕಿ ಇವರು ತಮ್ಮ ಜನ್ಮಗುರುಗಳಾದ ವಸಮತ ಬೃಹನ್ಮಠಾಧೀಶರಾದ ಶ್ರೀ|| ಷ|| ಬ್ರ|| ರಂಬಸವ ಪಟ್ಟಾಧಿಕಾರಿಗಳನ್ನು ಇದೇ ಮಾಘ ಶು|| ಬುಧವಾರ ದಿವಸ ವಿಜೃಂಭಣೆಯಿಂದ ಬರಮಾಡಿಕೊಂಡರು. ಶು|| ೧೦ ಗುರುವಾರ ಶ್ರೀ|| ಷ|| ಬ್ರ|| ಮಹಾಂತಚರಮೂರ್ತಿಗಳು, ಇತರ ಸತ್ಯಾಗ್ರಹಿಗಳಾದ ಈ ಗ್ರಾಮದ ಸದ್ಭಕ್ತರೂ ಶ್ರೀ ಉಜ್ಜಯಿನಿ ಸಿಂಹಾಸನಾಧಿಪತಿಗಳು ಕೊಟ್ಟ ಹುಕುಮನ್ನು ತೋರಿಸಲಾಗಿ, ಅದನ್ನು ಆ ಪಟ್ಟಾಧಿಕಾರಿಗಳು, ಶಿರಸಾವಹಿಸಿ, ಶಾಸ್ತ್ರದೃಷ್ಟಿಯಿಂದ ಪರ್ಯಾಲೋಚಿಸಿ "ಸತ್ಯಂಜನವಿರೋಧಂಚ ಅಸತ್ಯಂಜನರಂಜನಂ" ಎಂಬುಕ್ತಿಯಂತೆ ಮೂಢರಿಗೆ ಸತ್ಯವು ವಿರೋಧವಾಗಿಯೂ ಅಸತ್ಯವು ಹಿತವಾಗಿಯೂ ಕಾಣುವುದು. ಪ್ರಕೃತದಲ್ಲಿ ಸತ್ಯವೆಂಬ ಚಂದ್ರನು ಅಸತ್ಯವೆಂಬ ರಾಹುವಿನಿಂದ ಹಿಡಿಯಲ್ಪಟ್ಟಿರುವುದರಿಂದ ಸತ್ಯಚಂದ್ರನ ಪ್ರಕಾಶವಿಲ್ಲದೆ ಜನಾಂಗದಲ್ಲಿ ಅಜ್ಞಾನಾಂಧಕಾರವು ವ್ಯಾಪಿಸಿರುತ್ತದೆ. ಎಲ್ಲಿ ಒಮ್ಮೆ ಅಕ್ಷರದ ಬೋಧೆಯು ಹೆಚ್ಚಿದಂತೆ ಶಾಸ್ತ್ರಾಚಾರವು ಬಿಲವಾಗಿಹೋಗಿದೆ ಎಂದು ಗುರುಗಳು ಬೋಧಿಸಿ ಈ ಭವಸಾಗರವನ್ನು ದಾಟಲು ಸಾಧನವಾದ ದೀಕ್ಷಾಸಂಸ್ಕಾರವನ್ನು ಮಾಡಿಕೊಳ್ಳಲಿಕ್ಕೆ ಸಿದ್ಧರಾದ ಮ|| ರಾ|| ವಿಶ್ವನಾಥಪ್ಪ ವ|| ಹಾವಪ್ಪ ವ. ಮಲ್ಲಿಕಾರ್ಜುನಪ್ಪ ವೀರಪ್ಪ ಖಡಕಿ ಮೊದಲಾದ ಶಿಷ್ಯವರ್ಗವನ್ನು ಕುರಿತು ಶುಕ್ರವಾರ ಪ್ರಾತಃಕಾಲ ಶ್ರೀಗಳು ಶಿವಾಚಾರಬದ್ಧರಾಗಿಯೇ ದೀಕ್ಷಾಸಂಸ್ಕಾರವನ್ನು ಸ್ವೀಕರಿಸುವುದೇ ವೈದಿಕಪದ್ಧತಿಯೆಂದು ಆಜ್ಞೆ ಮಾಡಿದರು. ಆಕ್ಷಣದಲ್ಲಿಯೇ ಸದರಿಯವರು ಸಂಸ್ಕೃತ ಪಾಠಶಾಲಾಧ್ಯಾಪಕರಾದ ವೇ|| ವಿರೂಪಾಕ್ಷಶಾಸ್ತ್ರಿ ವಂದಲಿ ದಾಸೋಹಮಠ ಇವರ ಪೌರೋಹಿತ್ಯದಲ್ಲಿ ವಿಧ್ಯುಕ್ತಚೌಲಕರ್ಮಾನುಷ್ಠಾನದಿಂದ ಗೋಪಾದದಷ್ಟು ಶಿಖೆಯನ್ನು ಬಿಡಿಸಿಕೊಂಡು ಮಂಗಲಸ್ನಾನವನ್ನು ಮಾಡಿ "ಜನ್ಮನಾ ಜಾಯತೆ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ" ಎಂಬುಕ್ತಿಯಿಂದ ಬ್ರಾಹ್ಮಣ್ಯದ ಸಿದ್ಧಿಗೋಸ್ಕರವಾಗಿ, ಪೂರ್ವದಲ್ಲಿ ರಂಭಾಸ್ತಂಭಗಳಿಂದಲೂ ಇತರ ತಳಿರುತೋರಣಗಳಿಂದಲೂ ಅಲಂಕರಿಸಲ್ಪಟ್ಟ ಪಂಚಾಚಾರ್ಯರ ವೇದಿಕೆಯ ಮುಂಭಾಗದಲ್ಲಿ ಆಸನಾರೂಢರಾಗಿ ಕುಳಿತ ಗುರುಗಳ ಮುಂದೆ ಸರ್ವಶಿಷ್ಯರೂ ಬದ್ಧಾಂಜಲಿಯಿಂದ ನಿಂತು "ಮಾಂಸಪಿಂಡಮಿವತ್ಯಾತ್ಯ ಮಂತ್ರಪಿಂಡೀಕರ್ತುಂ ಶಿವದೀಕ್ಷಯಾ ಮಾಮನುಗೃಹ್ಣಂತು ಭವಂತಃ" ಎಂದು ಶಿಷ್ಯರು ಉಚ್ಚರಿಸಿದಾಕ್ಷಣವೇ ಗುರುಗಳು (ಅನುಗೃಹ್ಣಾಮಃ) ಎಂದು ಹೇಳಿದ ಬಳಿಕ ಶಿಷ್ಯರು ತಮ್ಮ ತಮ್ಮ ಆಸನಗಳಲ್ಲಿ ಮಂಡಿಸಿದರು. ಅಧ್ಯಾಪಕರು, ಪ್ರಥಮತಃ ಆಚಮನ ಪ್ರಾಣಾಯಾಮ ಸಂಕಲ್ಪಾದಿಗಳನ್ನು ಮಾಡಿಸಿ ದೀಕ್ಷಾಂಗವಾದ ಗಣಪತಿಪೂಜಾ ಕಲಶಪೂಜಾ ಪುಣ್ಯಾಹವಾಚನ ನಾಂದಿ ಸಮಾರಾಧನ ಅಂಕುರಾರ್ಪಣ ಮಂಟಪದೇವತಾಪ್ರತಿಷ್ಠೆ ಶಿವಲಿಂಗಸಂಸ್ಕಾರ ಪಂಚಾಚಾರ್ಯರ ಪೂಜಾ ಸದರ್ಭನ್ಯಾಸಾದಿ ಕರ್ಮಗಳನ್ನೆಲ್ಲಾ ಮಾಡಿಸಿ ಗುರುಗಳಿಂದ ಪಂಚಸೂತ್ರ ಸ್ಫಟಿಕ ಶಿವಲಿಂಗವನ್ನು ಧಾರಣಮಾಡಿಸಿ ೧೦೮ ರುದ್ರಾಕ್ಷಿ ಮಾಲೆಯ ಯಜ್ಞೋಪವೀತವನ್ನು ಶಿಷ್ಯರ ಕಂಠದಲ್ಲಿ ಹಾಕಿಸಿದರು. ತದನಂತರ ವೇ|| ಶಿದ್ಧಯ್ಯಸ್ವಾಮಿ ಅವರಾದಿಕರ ಇವರಿಗೆ ಅನುಗ್ರವನ್ನು ಕೊಟ್ಟ ನಂತರ ಶಿಷ್ಯಮಂಡಲಿಗೂ ಸಹ ಮಂತ್ರೋಪದೇಶವನ್ನು ಮಾಡಿ ವೀರಶೈವಾಚಾರವಿಧಿಯನ್ನು ಬೋಧಿಸಿದರು. ಗುರುವರ್ಗದ ಚರಪಟ್ಟಾಧಿಕಾರಿಗಳೇ ಇನ್ನು ಮುಂದೆ ನೀವುಗಳು ಶಾಸ್ತ್ರಪದ್ಧತಿಯಂತೆ ಶಿಷ್ಯರನ್ನು ಪುನೀತರನ್ನಾಗಿಮಾಡುವದು ನಿಮ್ಮಗಳ ಕರ್ತವ್ಯವೆಂದು ನಿಮಗೆ ಅನೇಕ ಸಾರೆ ಹೇಳಬೇಕಾಗಿದೆ. ಈ ವಿಧಿಮಾರ್ಗವನ್ನು ಬಿಟ್ಟು ಮುಷ್ಟಾನ್ನಕ್ಕೆ ಮೆಚ್ಚಿ (ಆಗದೆ ಹುಗ್ಗಿ ಜಡೀರಪ್ಪ ಜಗ್ಗಿ) ಎಂಬ ಗಾಧೆಯಂತೆ ಹುಗ್ಗಿಗಾಗಿ ಬಗ್ಗಿ ನುಗ್ಗಾಗಬೇಡಿರಿ. ಧರ್ಮದ ಸುಗ್ಗಿಯಲ್ಲಿ ನೀವು ಪ್ರವೀಣರಾದರೆ ಇಂಥ ಹುಗ್ಗಿಯ ಸುಗ್ಗಿಗಳು ಹಣಗಟ್ಟಿ ಸಿಗುತ್ತವೆಂದು ನಿಶ್ಚಂದೇಹವಾಗಿ ಹೇಳುತ್ತೇನೆ. ಅಜ್ಞಾನದಿಂದ ನಷ್ಟ ಹೊಂದಿದ ಶಿಖೆಯನ್ನು ಕೇವಲ ವಿದ್ವನ್ಮಣಿಗಳಾದ ಪಂಡಿತರು ದೀಕ್ಷಾಕಾಲದಲ್ಲಿ ಆಗಲಿ ಅಥವ ಚೂಡಾಕರ್ಮಕಾಲದಲ್ಲಿ ಆಗಲಿ ವಿಧಿಯನ್ನು ಚನ್ನಾಗಿ ಕಣ್ಣರೆದು, ಶಾಸ್ತ್ರೋಕ್ತ ರೀತಿಯಿಂದ ಬಿಡಿಸುವದು ಸರ್ವ ಶಾಸ್ತ್ರಗಳ ಮತ್ತು ಗುರುಗಳ ಕರ್ತವ್ಯವಾಗಿದೆ. ಸಂಪಾದಕರ ಭಯದಿಂದ ಸಂಪಿಗಿರೂಪನಾದ ಇಂಪಾದ ಸ್ಥಲವು ಪಂಚಾಚಾರ್ಯಪ್ರಭಾ ದೇವಿಯು ಕೊಡದೆ ಇದ್ದಾಳೆಂಬ ಭಯದಿಂದ ಈ ಅಲ್ಪಲೇಖನವನ್ನು ಕಳಿಸಿರುವೆನು. ಈ ಸಂಸ್ಕಾರದಲ್ಲಿ ಪ್ರಭಾಪೋಷಣೆಕ್ಕೋಸ್ಕರವಾಗಿ ಮ|| ರಾ|| ವಿಶ್ವನಾಥಪ್ಪ ಖಡಕಿ ಇವರು 1 ರೂಪಾಯಿಯನ್ನು ಅರ್ಪಣಮಾಡಿರುತ್ತಾರೆ ಇನ್ನು ಮುಂದೆ ಸರ್ವರೂ ಶಿವಾಚಾರಪೂರ್ವಕವಾಗಿಯೇ ಶಿವದೀಕ್ಷೆಯನ್ನು ಹೊಂದುವಂತೆ ಶ್ರೀ ರೇಣುಕ ಭಗವತ್ಪಾದರು ಸದ್ಬುದ್ಧಿಯನ್ನೀಯಲಿ.

ಗುರುಬಸಪ್ಪ ಬಸನಾಳ ಗುಂಡಪ್ಪ ಬಜಗುಂದಿ
ಶಂಕರಪ್ಪ ಹರಡಿಗೆ ಗುರುಬಸವ ಖಡಕಿ.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಶಾಸ್ತ್ರೀಯ ವಿವಾಹ.

ಮುಧೋಳ.

ನೈಜಾಂ ಪುದಗಿರಿ ತಾ|| ಪೈಕಿ ಮುಧೋಳ ಶ್ರೀ|| ಷ|| ಬ್ರ|| ಮಹಾಂತಸ್ವಾಮಿ ಚರಮೂರ್ತಿ ಬೃಹನ್ಮಠದಲ್ಲಿ ವೇ|| ಜಾವಯ್ಯಸ್ವಾಮಿ ಇವರ ಆತ್ಮಜರಾದ ವೇ|| ಮಹಾದೇವಶರ್ಮ ಇವರಿಗೆ ವೇ|| ಮಹಾಂತಯ್ಯಸ್ವಾಮಿ ರ್‍ಯಾವಣಗಾಂವ ಮಠ, ಇವರ ಸುಪುತ್ರಿ ಕುಂ|| ಸೌ|| ರತ್ನಬಾಯಿ ಉಪನಾಮ ಪಾರ್ವತಿಬಾಯಿ ಇವರನ್ನು ಕೊಟ್ಟು ಮಾಘ ಬ|| ೨ ಬುಧವಾರ ದಿವಸ ವಿಧ್ಯುಕ್ತವಾಗಿ ವಿವಾಹವು ನಡೆಸಲ್ಪಟ್ಟಿತು. ಪೂರ್ವದಿವಸಗಳಲ್ಲಿ ವಧುವಿಗೆ ಶಿವದೀಕ್ಷೆಯನ್ನು ಪಿರವೇರಿಸಿ ಗಣಪತಿಪೂಜಾ ಪುಣ್ಯಾಹವಾಚನ ನಾಂಧಿ ಅಂಕುರಾರ್ಪಣ ಮಂಟಪ ದೇವತಾಪ್ರತಿಷ್ಠೆ ಮೊದಲಾದ ಮಂಗಳಕಾರ್ಯಗಳು ನಡೆದವು. ವಿವಾಹಪೂರ್ವಭಾವಿಯಾಗಿ ಪಡ್ಡಿಗೋಕ್ಷೀರ ಪೂರ್ಣವಾದ ವರನಕಡೆಯಿಂದ ಶ್ರೀ|| ಷ|| ಬ್ರ|| ಹಾಲಹಳ್ಳಿ ಪಟ್ಟಾಧಿಕಾರಿಗಳಿಗೆ ಸುವರ್ಣ ಸಹಿತ ಕಪಿಲಗೋದಾನವು ಮಾಡಿಸಲ್ಪಟ್ಟಿತು. ವೃಷಿ ಗೋತ್ರೋತ್ಪನ್ನವಾದ ವಧುವಿನ ಕಡೆಯಿಂದ ಶ್ರೀ|| ಷ|| ಬ್ರ|| ವಸಮತ ಬೃಹನ್ಮಠಾಧೀಶ ಕರಿಬಸವಸ್ವಾಮಿ ಪಟ್ಟಾಧಿಕಾರಿಗಳಿಗೆ ರಜತದಕ್ಷಿಣೆಸಹಿತ ಕಪಿಲಗೋದಾನವು ಮಾಡಿಸಲ್ಪಟ್ಟಿತು. ವಧುವಿನ ತಾಯಿತಂದೆಗಳು ಷೋಡಶದಾನಾಂತರ್ಭೂತ ಕನ್ಯಾದಾನವನ್ನು ಮಾಡಿ ವರನಿಗೆ ೧೧ ತೊಲೆ ಬಂಗಾರವನ್ನು ವರದಕ್ಷಿಣೆಯಾಗಿ ಒಪ್ಪಿಸಿದರು. ಈ ಮಹೋತ್ಸವ ಸಮಯದಲ್ಲಿ ವೇ|| ವಿರೂಪಾಕ್ಷಶಾಸ್ತ್ರಿ ವಂದಲಿ ದಾಸೋಹಮಠ ಇವರ ಸೂಚನೆಯಿಂದ ವೀರಶೈವಮತದ ಉದಾರತತ್ವಗಳನ್ನು ಸದ್ಯಃ ಪ್ರಕಟಿಸುತ್ತಿರುವ ಪಂಚಾಚಾರ್ಯಪ್ರಭೆಗೆ ವೇ|| ಜಾವಯ್ಯಸ್ವಾಮಿಗಳು ೨ ರೂಪಾಯಿಗಳನ್ನು ಒಪ್ಪಿಸಿದರು. ಈ ಮಹೋದಯರು ವಿವಾಹಮಹೋತ್ಸವವನ್ನು ಶಾಸ್ತ್ರೀಯವಾಗಿ ನಡೆಯಿಸಿ ಅಸಂಖ್ಯಾತವಾಗಿ ಆಗಮಿಸಿದ್ದ ಭಕ್ತಮಾಹೇಶ್ವರರಿಗೆ ಮಾರ್ಗದರ್ಶಿಗಳಾಗಿದ್ದುದು ಅತ್ಯಂತ ಶ್ಲಾಘನೀಯವಾಗಿದೆ.

ಗುರುಬಸಪ್ಪ, ಬಸನಾಳ.

ನೀತಿಸುಧಾರಸ

[ಮ|| ರಾ|| ಅನವಟ್ಟಿ ರಾಮರಾಯರಿಂದ]

೧೩. ಸ್ಪರ್ಧೆ.

ಘನತೆಗೋಸುಗ ಮನವರಳಿದೊಡೆ |
ಸಕುಮತದ ಪೊಗಳಿಕೆಗೆ ಕರ್ಣವು |
ಬಿನದದಿಂದಾಲಿಪುದಕಾಸಿಸೆ ಮನುಜ ! ನೀನಂದು ||
ಅನುಪಮದ ಕಾರ್ಯಗಳ ರಚಿಸುತೆ |
ಜನರು ಮನ್ನಣೆ ಯೀವಪರಿಯಂ |
ಮನದಗುರಿಯಾವುದೆನೆ ಯೋಚಿಸುತದನು ನೆಗಳುವುದು ||೧||

ಮೆರೆಯುವಾಲದ ಬೀಜವೊದಲೊಳು |
ಕಿರಿಯದಾಗಿರಲದು ಬರಬರುತೆ |
ಧರೆಯೊಳಗೆ ಬಿಮ್ಮುಲಪ್ರ ತಾನಾಗಿ ಬೆಳೆಯುವಂದದಲಿ ||
ವಿರಚಿಸುವ ಕಾರ್ಯದಪರಿಫಲಗ |
ಳಿರುವುದೆಂಬುದ ಯೋಚಿಸುತೆ ಪರಿ |
ಪರಿಯುಕ್ತಿಯ ರಚಿಸೆ ಸತ್ಫಲಲಾಭ್ಯವಾನುವೆಯೊ ||೨||

ಅವಕಾಲವದೆಂದು ಯೋಚಿಸ |
ದಾವಕಾರ್ಯವದೆಂದು ನಿಲಿಸದೆ |
ನೀವಕಾಶವಗ್ಯೆಯುವಲಿ ಸಕಾರ್ಯಕೆರಗುತಲಿ ||
ಅವನಿಗುಮೆಡೆಗುಡಲುಬಿಲ್ಲದೆ |
ಭಾವದೊಳಗನ್ಯರನು ಕಂಬುವ |
ಲಾವಗಂ ಯೋಗ್ಯತೆಯು ಮೇಲ್ಮೆಗೆ ಬರಲು ಯತ್ನಿಪುದು ||೩||

ಸುಗುಣದಾ ಪ್ರೇರಣೆಯು ಮಾನವ |
ನಗಣಿತ ಖ್ಯಾತಿಯನು ಪಡೆಯುತ |
ಸೊಗವನಾಂಪುದ ಕಾಂತೆಯುಣ್ಮೆ ಸುತಿಹುದುದಿಃ ಬಿಡದೆ ||
ಜಗದೆ ಹಯುವಂ ಜೂಜಿಗೊಡ್ಡುವ |
ಬಗೆಯದಾಗುತೆ ಕೊನೆಗೆ ಗೆಲ್ಲಲು |
ನಗುತೆ ನಂದಿವನಂತೆವಾಳ್ದುದು ಖಚಿತದೀನುಡಿಯು ||೪||

ಎಚರಿಕೊಳುತಾ ತೆಂಗಿನಂಚದಿ |
ಬಿಡದೆ ಬೆಳೆಯುತೆ ನಭದೆಚರಿಸಗೆ |
ರುಡನಕೆರದಿಂ ವೃದ್ಧಿಗಾಸಿಸಿ ತಾನಿಡುದಿಟ್ಟಿಯ ||
ಜಡಜ ಸಮೊಳಗಿರುವವಾಂಗಿಂ |
ಕಡೆಗೆ ಯುತವಮಂ ಸತತವಾನಲು |
ದೃಢಮನವನಾಂತಿಹನು ಧರೆಯೊಳ ಗಮಿತಧನ್ಯನಲೆ ||೫||

ಮಹಿಮೆಯಿಂದಲೆ ಸತತಮೆರೆಯುವ |
ಮಹಿಮರಂಜಾನಿಸುತೆ ಮನದೊಳು |
ವಿಹಿತಮೆಂದೊರೆದಿದ್ದು ಮಾರ್ಗವ ಪಿಡಿದು ನಡೆಯುತಲಿ ||
ಸಹನೆಯಿಂತಾಳುತ್ತ ಯಶವಂ |
ಬಹುವಿಧದೆ ಧಾತ್ರಿಯೊಳುಪರವಿರೆ ||
ಮಿಹಿರಕಿರಣವತೆರದ ಮುದವಂ ಜಗಕೆ ನೀಚೆಗ್ಗವುದು ||೬||

ಕ್ರಿಮತ್ಸರ ವಾಂತಮನದೊಳ |
ಪಾರದಿಪದಿಂದಿಡದ ದುಗ್ಗಣೆ |
ಘೋರಕ್ರತ್ಯವ ಗೈಮ ನುಡಿಯೊಳು ವಿಷದ ಕಾರುತಲಿ ||
ದೇರಿಗಾಕರನೆನಿಸಿ ನೆರೆಯುವ |
ರಾರು ಜೀವಿಸದಂತೆ ಮಾನ್ಯವಿ |
ದೂರನಾಗುತ ಲಸ್ಮರೇಳ್ಗೆಯ ಕರುಬಿ ಮಾನವೊಳು ||೭||

ಕೊಳಕುಗೊಳಗುಕರನ್ಯರಿಗೊದವಿ |
ದಳಲಿ ಗತಿಪಯಿಕೋಪವಾನುತೆ |
ಪಳಿಪುಮತ್ಸರಗಳನು ಕಾರ್ಯದೆ ತೋರಿ ಜೃಂಭಿಸುತೆ ||
ನಿಲದ ಮನದಿಂ ದಿಡಿದು ತಾಪರ |
ರೊಳಗೆ ನಂಬುಗೆಯ ನಿಡದಂತೆಯು |
ಪಲುಪಿಸುತಾ ಭಂಕನಂದದಿ ಕಾಲಕಳೆಯುವನು ||೮||

ತನಗೆ ಮೇಲೆನಿಸಿಹನ ಕೀಳನ |
ವನೆನುತೊರೆಯುತಲಸ್ಯರೆಸೆದಿ |
ದ್ದರನಿತು ಕಾರ್ಯದ ಕುಂದುಕೊರತೆಯ ದೋಷದೃಕ್ಕೆನಿಸಿ ||
ಕೆನಿಸಿಸಿಂ ದುಷ್ಟ ಕೃತ್ಯವೆಸಗುತೆ |
ಮನಕೆ ಹೇಸಿಕೆಯಾಗಿರುತೆ ಗೊ |
ಡಿನೊಳು ಜೇಡವು ಜೀವಬಿಡುವಂತವನು ಪಳಿಯುವನು ||೯||

ಉಭಯಪಕ್ಷದವರೂ ಇಟ್ಟಿಗೆ ಮತ್ತು ಕಲ್ಲುಗಳಿಂದ ಹೊಡೆದಾಡಿದರು. ಉಭಯಪಕ್ಷಗಳಲ್ಲಿ ಬಹು ಜನರಿಗೆ ಗಾಯಗಳಾಗಿವೆ. ಅಮಲ್ದಾರರೂ ಪೋಲೀಸರೂ ಹೋಗಿ ಆಕಾಶದಲ್ಲಿ ಗುಂಡು ಹಾರಿಸಿ ದೊಂಬಿಯನ್ನು ಚದರಿಸಿದರು. ಈ ಗಲಭೆಯು ಈ ತಿಂಗಳು 11 ಮತ್ತು 12 ನೆಯ ತಾರೀಖಿನ ದಿವಸ ನಡೆಯಿತು. ಈಗ ಶಾಂತವಾಗಿದೆ.

ವರ್ಷವರ್ಧಂತಿ ನಿಮಿತ್ತವಾಗಿ ಶ್ರೀಮನ್ಮಹಾರಾಜರವರಿಗೆ ಮ|| ರಾ|| ತಗಡೂರು ರಾಮಚಂದ್ರರಾಯರು ಖಾದಿಯವಸ್ತ್ರಗಳನ್ನು ಕಳುಹಿಸಿದ್ದುದು ಸರಿಯಷ್ಟೆ ! ಶ್ರೀಮನ್ಮಹಾರಾಜರವರ ಹುಜೂರ್ ಸೆಕ್ರೆಟರಿಯವರಿಂದ ಮ|| ರಾಯರಿಗೆ ಉತ್ತರವು ಬಂದಿದೆ. ಅದರಲ್ಲಿ ಬರೆದಿರುವುದೇನೆಂದರೆ:—"ಶ್ರೀಮನ್ಮಹಾರಾಜರವರು ನಿಮ್ಮ ಮತ್ತು ನಿಮ್ಮ ಹಳ್ಳಿಯ ನಿವಾಸಿಗಳ ರಾಜಭಕ್ತಿವಿಶ್ವಾಸಗಳಿಗಾಗಿ ಬಹಳ ಸಂತೋಷಪಟ್ಟರು. ನೀವು ಕಳುಹಿಸಿದ ಖಾದಿವಸ್ತ್ರಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿ ನಿಮ್ಮನ್ನು ಕೊಂಡಾಡಿದರು.

ಈ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಸಿನೇಟಿಗೆ ಸದಸ್ಯರಾಗಲು 57 ಜನರು ಅಭ್ಯರ್ಥಿಗಳಾಗಿದ್ದರು. ಅವರಲ್ಲಿ ಶ್ರೀಯುತರುಗಳಾದ ಮಿ|| ಜಿ. ಆರ್. ಜೋಸ್ಯರ್, ಎಂ.ಎ., ಎಫ್. ಆರ್. ಇ. ಎಸ್. ರವರೂ, ಎಸ್. ಜಿ. ಶಾಸ್ತ್ರಿಗಳೂ, ಬೆಂಗಳೂರು ಅಡ್ವೋಕೇಟರಾದ ಎಸ್. ವೆಂಕಟಸುಬ್ಬಯ್ಯ, ಬಿ.ಎ., ಬಿ.ಎಲ್., ರವರೂ, ಮೈಸೂರು ಸಬ್‌ಡಿವಿಜನಲ್ ಆಫೀಸರ್ ಇಸ್ಮಾಯಿಲ್ ಶರೀಫ್‌ರವರೂ, ಕೆ. ಕೃಷ್ಣಸ್ವಾಮಿರಾವ್, ಬಿ.ಎ., ಬಿ.ಎಲ್., ರವರೂ ಬಹುಮತದಿಂದ ಸದಸ್ಯರಾಗಿ ಆರಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ.

ಈ ತಿಂಗಳು 9 ನೆಯ ತಾರೀಖಿನ ದಿವಸ ಉರಿಗಾಂಕ್ಕೆ ಸೇರಿದ ನಂದೀದುರ್ಗದ ಚಿನ್ನದ ಗಣಿಯ ಹತ್ತಿರದಿಂದ ಮಹಮ್ಮದೀಯ ಗಲಭೆಯು ವಿಪರೀತವಾದುದರಿಂದ ತಡೆಯಬೇಕೆಂದು ಪೋಲೀಸರು ಗುಂಡು ಹಾರಿಸಿದರು. ಈ ಗುಂಡಿಗೆ ಈಡಾದವರೆಲ್ಲ ಗಣಿಯಲ್ಲಿ ಕೆಲಸಮಾಡುತ್ತಿದ್ದ ಕೂಲಿಗಳು. ಅವರಲ್ಲಿ ವಿಶೇಷ ಜನರು ಆದಿದ್ರಾವಿಡರಿದ್ದಾರೆ. ಪೋಲೀಸು ಇನ್‌ಸ್ಪೆಕ್ಟರು ಕ್ಲಾಸ್ ಮ್ಯಾಜಿಸ್ಟ್ರೇಟರ ಮುಂದೆ ಪ್ರತ್ಯೇಕವಾಗಿ ನಾಲ್ಕು ಛಾರ್ಜ್ ಷೀಟುಗಳನ್ನಿಟ್ಟರು. ಈ ಕೇಸಿನಲ್ಲಿ 6 ಜನ ಹಿಂದುಗಳೂ, 14 ಜನ ಮಹಮ್ಮದೀಯರೂ ಪಾದಿತರಾಗಿರುವರೆಂದು ಕೇಳುತ್ತೇವೆ.

ತುಮಕೂರು ಜಿಲ್ಲೆಯಲ್ಲಿ ಸಾರ್ವಜನಿಕಸಭೆ ಸೇರಬಾರದೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿದರು. ಆ ಅನುಜ್ಞೆಯನ್ನುಲ್ಲಂಘಿಸಿದರೆಂದು ಶ್ರೀಯುತ ರಂಗಅಯ್ಯರ್. ಮ|| ರಾ|| ಯಜಮಾನ್ ಸಿದ್ದಪ್ಪ, ಮ|| ಸೆಟ್ಲೂರು ಸುಬ್ರಮಣ್ಯಯ್ಯ ಇವರ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟರು ಮೊಕದ್ದಮೆ ನಡೆಯಿಸಿದರು. ಆದರೆ ಆ ಮೊಕದ್ದಮೆಯ ವಿಚಾರಣೆನಡೆಸಿದ ತುಮಕೂರು ಎರಡನೆಯ ತರಗತಿ ಮ್ಯಾಜಿಸ್ಟ್ರೇಟರು ಇವರು ನಿರ್ದೋಷಿಗಳೆಂದೂ, ಜಿಲ್ಲಾ ಮ್ಯಾಜಿಸ್ಟ್ರೇಟರ ಹುಕುಂ ಕಾಯಿದೆವಿರೋಧವಾದುದೆಂದೂ, ತೀರ್ಪುಹೇಳಿರುವುದಾಗಿ ತಿಳಿದುಬರುತ್ತದೆ.

ವರ್ತಮಾನಸಂಗ್ರಹ.

ಸತ್ಯೇಂದ್ರಸಿಂಹನೆಂಬ ಬಂಗಾಲಿತರುಣನು ರಂಗೂನಿನಲ್ಲಿ ನೌಕರಿಯನ್ನು ಹುಡುಕಿ ಬೇಸತ್ತು ಆತ್ಮಹತ್ಯೆ ಮಾಡಿಕೊಂಡನು.

ಕಲ್ಕತ್ತೆಯಲ್ಲಿ ಒಬ್ಬ ಮುದುಕನು 13 ವರ್ಷದ ಹುಡುಗಿಯನ್ನು ಮದುವೆಯಾಗಬೇಕೆಂದು ಹವಣಿಸಿದ್ದನು. ಆದರೆ ಪೋಲೀಸರು ಅದನ್ನು ನಿಲ್ಲಿಸಿದರು.

ನಾಟಿಯಾಲಾ ಮಹಾರಾಜರು ರೌಂಡ್‌ಟೇಬಲ್ ಸಮ್ಮೇಳನದಲ್ಲಿ ಗೊತ್ತಾಗಿರುವ ಫೆಡರೇಷನ್ ತತ್ವವನ್ನು ವಿಘಟಿಸಿ ತನ್ನ ದೊಂದು ನವೀನತತ್ವವನ್ನು ಸೂಚಿಸಿದ್ದಾರೆ.

ಧಾರವಾಡ ಜಿ|| ಸಂಸ್ಥಾನ ಸವಣೂರಿನಲ್ಲಿ ಈ ತಿಂಗಳು 11 ನೆಯ ತಾರೀಖಿನ ದಿವಸ ವೀರಶೈವ ಸಂಸ್ಕೃತ ಪಾಠಶಾಲೆಯು ಸ್ಥಾಪಿಸಲ್ಪಟ್ಟಿತೆಂಬ ವಿಷಯವನ್ನು ಶ್ರೀಯುತ ಬಸವಲಿಂಗಯ್ಯಗೌಡ್ರ ಗುರುಸ್ವಾಮಿಮಠ ಎಂಬವರು ತಿಳುಹಿಸುತ್ತಾರೆ.

ಬೊಂಬಾಯಿಯಲ್ಲಿ ಸಟ್ಟಾ ವ್ಯಾಪಾರದ ವಿಷಯದಲ್ಲಿ ಇಬ್ಬರು ಮುಸಲಮಾನರು ಮಾತನಾಡುತ್ತಿರುವಾಗ ಜಗಳ ಹುಟ್ಟಿತು. ಯುಸೆಫ್‌ಪಾರ್ಟಿವಾಲ ಎಂಬವನನ್ನು ಮತ್ತೊಬ್ಬನು ಚೂರಿಯಿಂದ ಚುಚ್ಚಿ ಪಲಾಯನಮಾಡಿದನು. ಯುಸುಫನು ಮರಣಹೊಂದಿದನು.

ಅಫ್ಘಾನಿಸ್ಥಾನಕ್ಕೆ ಸೇರಿದ ಪಂಚಶೇರ್ ಎಂಬ ಜಿಲ್ಲೆಯಲ್ಲಿ ಭೂಕಂಪವಾಗಿ 18 ಜನರು ಮೃತಪಟ್ಟಿರುವರು. 50 ಮನೆಗಳು ನಾಶವಾದುವು. ಹೀಗೆ ಭೂಕಂಪವಾಗಲು ಸಮೀಪದಲ್ಲಿರುವ ಒಂದು ಜ್ವಾಲಾಮುಖಿಯೇ ಕಾರಣವೆಂದು ಕಾಬೂಲ್ ಪತ್ರಿಕೆಯು ತಿಳುಹಿಸುತ್ತದೆ

ಮದರಾಸಿನಲ್ಲಿ ಪೋಲೀಸರು ಒಬ್ಬ ಮಾರ್ವಾಡಿಯನ್ನು ಸೆರೆಹಿಡಿದರು. ಇವನು ಪುದುಚೇರಿಯಿಂದ ಮದರಾಸಿಗೆ 300 ಬೆಳ್ಳಿಗಟ್ಟಿಗಳನ್ನು ಕಳುವಿನಿಂದ ತೆಗೆದುಕೊಂಡುಬಂದಿರುವನೆಂದು ಇವನ ಮೇಲೆ ಆರೋಪವಿದೆ. ಇವನ ಹತ್ತಿರವಿದ್ದ ಬೆಳ್ಳಿಗಟ್ಟಿಗಳನ್ನು ಜಫ್ತು ಮಾಡಿದರು.

ಪದಚ್ಯುತರಾದ ಇಂದೂರು ಸಂಸ್ಥಾನದ ಹೋಳಕರ್ ಮಹಾರಾಜರು ಪ್ಯಾರಿಸ್ ಪಟ್ಟಣದಲ್ಲಿ ಒಂದು ಮನೆಯನ್ನು ಕೊಂಡುಕೊಂಡಿದ್ದರು. ಈಗ ಸದರಿ ಮಹಾರಾಜರು ಆ ಮನೆಯನ್ನು 26 ಲಕ್ಷ ರೂಪಾಯಿಗಳಿಗೆ ಮಾರಿ ಇನ್ನೊಂದು ಮನೆಯಲ್ಲಿರಬೇಕೆಂದು ಯೋಚಿಸಿರುವರು.

ಜಪಾನಿನ ರಾಜಧಾನಿಯಾದ ಟೋಕಿಯೋ ಪಟ್ಟಣಕ್ಕೆ ಕಳೆದವಾರ ಎಂಪ್ರೆಸ್‌ಆಫ್ ಕನಡ ಎಂಬ ಹಡಗು ಬಂದಿತು. ಅದರಲ್ಲಿ ಒಬ್ಬ ಪ್ರಯಾಣಿಕನು ತಲೆತಿರುಕನಾಗಿದ್ದನು. ಅವನು ಹಡಗು ಇಳಿದೊಡನೆ ಕೆಲವರನ್ನು ಗುಂಡಿನಿಂದ ಹೊಡೆದು ಕೊಂದನು. ಆ ತಲೆತಿರುಕನ ಬಗ್ಗೆ ಈಗ ವಿಚಾರಣೆಯು ನಡೆಯುತ್ತಲಿದೆ.

ಬೊಂಬಾಯಿಯ ಶ್ರೀಮತಿ ಗಂಗಾಬೆನ್ ಎಂಬ ಸ್ತ್ರೀಯಳು ಮಹಾತ್ಮ ಗಾಂಧಿಯವರಿಗೆ ಒಂದು ಬೆಳ್ಳಿಯ ಕುರ್ಚಿಯನ್ನು ಕಾಣಿಕೆಯಾಗಿ ಸಮರ್ಪಿಸಿರುವಳು. ಆ ಕುರ್ಚಿಯ ಮೇಲೆ ಚಿತ್ರದ ಕೆಲಸವು ಮಾಡಲ್ಪಟ್ಟು ಬಹುಮನೋಹರವಾಗಿದೆ. ಅದರ ಬೆಲೆಯು ಸುಮಾರು ಮೂರುಸಾವಿರ ರೂಪಾಯಿ ಆಗಬಹುದೆಂದು ಊಹಿಸಲಾಗಿದೆ.

ಜೋಧಪುರದಲ್ಲಿ 3 ತಿಂಗಳವರೆಗೂ ಸಾರ್ವಜನಿಕ ಸಭೆಯನ್ನು ಸೇರಿಸಬಾರದೆಂದು ಸರ್ಕಾರದವರು ಹುಕುಂ ಮಾಡಿದ್ದರಿಂದ ಮಾರ್ವಾಡಿ ತರುಣಸಂಘದ ಮೆಂಬರರು ಸಭೆಸೇರಿ ಮಹಾತ್ಮರಿಗೆ ಒಂದು ರಾಯಭಾರವನ್ನು ಕಳುಹಿಸಿರುವರು. ಅವರು ಮಹಾತ್ಮರಿಗೆ ಅರಿಕೆಮಾಡಿಕೊಳ್ಳುವುದೇನೆಂದರೆ:—"ನಮ್ಮ ಸ್ವಾತಂತ್ರ್ಯವನ್ನು ಹರಣಮಾಡುವ ಜನರಿಂದ ನಮ್ಮನ್ನು ಪಾರುಮಾಡಿ ವ್ಯಕ್ತಿಸ್ವಾತಂತ್ರ್ಯವನ್ನು ಕೊಡಿಸಿರಿ; ಇಲ್ಲವೆ ಯುದ್ಧಕ್ಕೆ ಅಪ್ಪಣೆಕೊಡಿರಿ."

ಲಂಡನ್ನಿನಲ್ಲಿ ಕಾಂಗ್ರೆಸ್ ಕಮಿಟಿಯೊಂದಿದೆ. ಶ್ರೀಯುತ ಶಕಲತ್ವಾಲಾ ಮೊದಲಾದವರು ಅದರ ಮೆಂಬರಾಗಿದ್ದಾರೆ. ಕಾಂಗ್ರೆಸ್ಸಿನ ಧ್ಯೇಯವು ಪೂರ್ಣಸ್ವರಾಜ್ಯವಿದ್ದು ಈಗ ರೌಂಡ್‌ಟೇಬಲ್ಲಿಗೆ ಹೋಗಿ ಸರ್ಕಾರದೊಡನೆ ಸಹಕರಿಸುವುದರಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಲಾರದೆಂದು ಶ್ರೀಯುತ ಶಕಲತ್ವಾಲರವರು ಕಾರ್ಯಕಾರಿಮಂಡಲದ ಸದಸ್ಯತ್ವಕ್ಕೆ ರಾಜೀನಾಮೆಕೊಟ್ಟರು. ಆದರೂ ತಮ್ಮಲ್ಲಿ ಇಬ್ಬಗೆಯಾಗಬಾರದೆಂದು ಕಾಂಗ್ರೆಸ್ಸಿನಲ್ಲಿ ಮೆಂಬರರಾಗಿಯೇ ಇದ್ದಾರೆ.

ವಾಯುವ್ಯಪ್ರಾಂತದಲ್ಲಿ ರೈತರ ವಿಪ್ಲವವು ಇನ್ನೂ ಶಮನವಾಗಿಲ್ಲ. ಜಮೀನ್‌ದಾರರು ಕೆಲವೆಡೆಗಳಲ್ಲಿ ಕಂದಾಯವನ್ನು ಮಾಫಿಮಾಡಿದ್ದಾರೆ. ಕೆಲವೆಡೆಗಳಲ್ಲಿ ಕಂದಾಯ ವಸೂಲಿಗೆ ಶಕ್ತ ತಗಾದೆ ಮಾಡುತ್ತಲಿರುವರು. ಬಾರಾಬಾಂಕಿ ಜಿಲ್ಲೆಯೊಂದರಲ್ಲಿಯೇ 80 ಜನರ ದಸ್ತಗಿರಿಯಾಗಿದೆ. ಕಾಂಗ್ರೆಸ್ ಕಮಿಟಿಯ ಇಬ್ಬರು ಸ್ವಯಂಸೇವಕರೂ ಅ|| ಸೆಕ್ರೆಟರಿಯೂ ದಸ್ತಗಿರಿ ಮಾಡಲ್ಪಟ್ಟು ಒಂದುವರ್ಷ ಕಠಿಣಶಿಕ್ಷೆಗೆ ಗುರಿಯಾಗಿರುವರು. ರೈತರು ಬೆಳೆಯಿಲ್ಲದ್ದರಿಂದಲೂ, ದವಸಧಾನ್ಯಗಳ ಬೆಲೆಯು ಕಡಿಮೆಯಾಗಿರುವುದರಿಂದಲೂ, ಕೊಡಬೇಕಾದ ತೆರಿಗೆಯು ಜಾಸ್ತಿಯಾಗಿರುವುದರಿಂದಲೂ ಕಂದಾಯಕೊಡುವುದು ಸಾಧ್ಯವಿಲ್ಲವೆಂದು ಹೇಳುತ್ತಿರುವರು. ಅನೇಕ ಹಳ್ಳಿಗಳಲ್ಲಿ ನಾಲ್ವರು ಒಂದುಕಡೆ ಸೇರಕೂಡದೆಂದು ಸರ್ಕಾರದವರು ಹುಕುಂಮಾಡಿದ್ದಾರೆ.

ಸ್ವೀಕಾರ.

ದಾವಣಗೆರೆ ನಿವಾಸಿಗಳಾದ ಶ್ರೀಯುತ ಮುಂಡರಗಿ ಮಹಾದೇವಪ್ಪನವರ ಜೇಷ್ಠಪುತ್ರ ಚಿ|| ಸೌ|| ರುದ್ರಪ್ಪನಿಗೂ ಮ|| ರಾ|| ಬ್ಯಾಡಗಿ ಗೌಡರ ಮಲ್ಲಪ್ಪನವರ ಪುತ್ರಿ ಚಿ|| ಸೌ|| ನೀಲಮ್ಮನಿಗೂ, ಎರಡನೆಯ ಪುತ್ರ ಚಿ|| ಸ|| ವೀರಪ್ಪನಿಗೂ ಮ|| ರಾ|| ಬ್ಯಾಡಗಿ ಗೌಡರ ಹಾಲಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನಿಗೂ, ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯವರು ಸಮರ್ಪಿಸಿದ 2 ರೂ. ಗಳೂ ವಧುವಿನ ಕಡೆಯವರು ಸಮರ್ಪಿಸಿದ 1 ರೂ. ಯೂ ಒಟ್ಟು 3 ರೂ. ಗಳು ವೇ|| ಆವರಗೊಳ್ಳದ ಮಠದ ಶಾಂತವೀರಪ್ಪಯ್ಯನವರ ದ್ವಾರಾ ತಲ್ಪಿರುತ್ತವೆ.

ತೀರ್ಥಹಳ್ಳಿ ತಾಲ್ಲೂಕು ಸಂಪಿಗೆಸರುವುಗ್ರಾಮ ನಿವಾಸಿಗಳಾದ ದೇವಪ್ಪಗೌಡರ ಪುತ್ರ ಚಿ|| ಸ|| ಬಸವಪ್ಪನಿಗೂ ಮ|| ರಾ|| ಹೆರಗಡ್ಡೆ ಬಸವಪ್ಪಗೌಡರ ಪುತ್ರಿ ಚಿ|| ಸೌ|| ಹಾಲಮ್ಮನಿಗೂ, ಮ|| ರಾ|| ದೇವಪ್ಪಗೌಡರ ಪುತ್ರಿ ಚಿ|| ಸೌ|| ನಾಗಮ್ಮನಿಗೂ ಸದರಿ ಬಸವಪ್ಪಗೌಡರ ಪುತ್ರ ಚಿ|| ಸ|| ಚನ್ನಪ್ಪನಿಗೂ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಬೀಸಿನ ಶಿವಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಗದಗ ಬೆಟಗೇರಿ ನಿವಾಸಿಗಳಾದ ಮ|| ರಾ|| ಪ್ರಥಣ್ಣ ಮಾನೇದ, ಇವರ ತಮ್ಮ ಮಲ್ಲಪ್ಪನಿಗೂ ಮ|| ರಾ|| ಮರಿಗೌಡರ ಬಸವನಗೌಡರ ಪುತ್ರಿ ಚಿ|| ಸೌ|| ಲಿಂಗಮ್ಮನಿಗೂ ನೆರವೇರಿದ ವಿವಾಹ ಸಮಯದಲ್ಲಿ ವರನ ಕಡೆಯವರಿಂದ ಸಮರ್ಪಿಸಿದ 2 ರೂ. ಗಳೂ ವಧುವಿನ ಕಡೆಯವರಿಂದ ಸಮರ್ಪಿಸಿದ 1 ರೂ. ಯೂ ಹಾಗೂ ಗದಗಿನ ಮ|| ರಾ|| ಹೊಂಬಳದ ಬಸವಪ್ಪನವರ ದತ್ತ ಪುತ್ರ ಚಿ|| ಸ|| ಬಸವಪ್ಪನಿಗೂ ಮ|| ರಾ|| ಲಿಂಗದಾಳ ಲಿಂಗಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೂ ನೆರವೇರಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂ. ಯೂ ಒಟ್ಟು 4 ರೂ. ಗಳು ಮ|| ರಾ|| ಹಿರೇಮನಿ ನೀಲಪ್ಪಗೌಡರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ ಜಿ|| ತೇರದಾಳ ಗ್ರಾಮದಲ್ಲಿರುವ ಮ|| ರಾ|| ಗಂಗಪ್ಪ, ಮ|| ರಾ|| ಬಾಳಪ್ಪಶೆಟ್ಟಿ ಮತ್ತು ಮ|| ರಾ|| ಗುರಪ್ಪ ನಿಡೋಣಿ ಉರ್ಫ ಹತ್ತಿಮನಿ ಈ ಮೂವರ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 3 ರೂಪಾಯಿಗಳು ತೇರದಾಳ ಬೃಹನ್ಮಠದ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಕರ್ನೂಲ ಜಿ|| ಆಲಂಪೂರ ಮ|| ರಾ|| ಬಳೆವೀರಯ್ಯನವರ ಪುತ್ರನಿಗೂ ಬೋಯಪಾಡು ಗ್ರಾಮದ ಮ|| ರಾ|| ವೀರಯ್ಯನವರ ಪುತ್ರಿ ಚಿ|| ಸೌ|| ಪುಟ್ಟಮ್ಮನಿಗೂ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ವೇ|| ನಂದಿಕೋಟಕೂರು ಮಠದ ನೀಲಕಂಠಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಗುಲ್ಬರ್ಗಾ ಜಿ|| ದಿಗ್ಗಾಂವಿ ಬೃಹನ್ಮಠದ ಶ್ರೀ|| ಷ|| ಬ್ರ|| ಪಟ್ಟದ ಸ್ವಾಮಿಗಳವರು ಶ್ರೀ ಜಗದ್ಗುರು ರೇಣುಕಾಚಾರ್ಯರ ಉತ್ಪತ್ತಿಸ್ಥಾನವಾದ ಕೊಲ್ಲಿಪಾಕಿ ಕ್ಷೇತ್ರಯಾತ್ರೆಯನ್ನು ಮಾಡಿಬಂದ ಸಂತೋಷಕ್ಕಾಗಿ 1 ರೂಪಾಯಿಯನ್ನು ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೩ ನೆಯ ಪುಟದಿಂದ ಮುಂದುವರಿದುದು.]

29,60,000 ರೂ. ಹೋಗುವುದು. ಇದು ಒಟ್ಟು ಆದಾಯದಲ್ಲಿ ಶೇಕಡಾ 12 ಕ್ಕಿಂತಲೂ ಸ್ವಲ್ಪ ಕಡಿಮೆಯಾಗುವುದು. ಇನ್ನೊಂದು ಸಂಸ್ಥಾನದ ವರ್ಷದ ಆದಾಯವು 247 ಲಕ್ಷವಿದ್ದು ಅರಮನೆ ಖರ್ಚಿಗೆ 13,67,900 ರೂ. ಹೋಗುವುದು. ಇದರಿಂದ ಶೇಕಡಾ 6.54 ರಂತೆ ಅರಮನೆ ಖರ್ಚಿಗೆ ಕೊಟ್ಟಂತಾಗುವುದು. ಈ ಸಂಸ್ಥಾನವು ವಿದ್ಯಾಖಾತೆಗೆ ಶೇಕಡಾ 20.12 ರಂತೆ ವೆಚ್ಚಮಾಡುತ್ತಿರುವುದು. ಈ ಸಂಸ್ಥಾನದ ಅರಮನೆವೆಚ್ಚವು ಇಂಗ್ಲೆಂಡಿನ ಅರಮನೆಯ ವೆಚ್ಚಕ್ಕಿಂತಲೂ ಕಡಿಮೆಯಾಗದಿದ್ದರೂ ಈ ದೇಶದ ದೃಷ್ಟಿಯಿಂದ ಕಡಿಮೆ ಎಂದೇ ಹೇಳಬೇಕು. ಇಂಗ್ಲೆಂಡಿನ ಅಪಾರವಾದ ಉತ್ಪನ್ನವನ್ನು ನೋಡಿದರೆ ಅರಮನೆಯ ಖರ್ಚಿಗೋಸ್ಕರ ಕೊಡುವ ವೊಬಲಗು ತೀರ ಕಡಿಮೆಯೆಂದೇ ಹೇಳಬೇಕು. ಜಾರ್ಜ್ ಸಾರ್ವಭೌಮರು ಜಗತ್ತಿನಲ್ಲೆಲ್ಲ ದೊಡ್ಡ ಸಾಮ್ರಾಜ್ಯದ ಅಧಿಪತಿಗಳು. ಆದಾಗ್ಯೂ ಅವರಿಗೆ ಸಲ್ಲುವ ಅರಮನೆಯ ಖರ್ಚು ಮೇಲ್ಕಂಡ ಎರಡು ಸಂಸ್ಥಾನಗಳ ಅರಮನೆಯ ಖರ್ಚಿಗಿಂತಲೂ ಕೇವಲ ಕಡಿಮೆ ಎಂದು ಹೇಳಬೇಕಾಗುತ್ತದೆ. ಈ ಸಂಸ್ಥಾನಗಳು ಹಿಂದುಸ್ಥಾನದಲ್ಲಿ ಮುಂದುವರಿದ ಸಂಸ್ಥಾನಗಳು. ವಿದ್ಯಾಖಾತೆಗಿಂತಲೂ, ತಮ್ಮ ಮೋಟಾರಿಗೂ, ಕುದುರೆಗಳಿಗೂ, ನಾಯಿಗಳಿಗೂ ಹೆಚ್ಚು ಹಣವನ್ನು ವೆಚ್ಚಮಾಡುವ ಸಾಮಂತರಾಜರು ಎಷ್ಟೋ ಜನರಿದ್ದಾರೆ. ನಮ್ಮ ಸಾಮಂತರಾಜರು ಅನೇಕ ವಿಷಯಗಳಿಗೆ ಗಮನ ಕೊಡಲಿ; ಕೊಡದಿರಲಿ. ತಮ್ಮ ಆದಾಯವು ವೃದ್ಧಿಯಾಗುವುದಕ್ಕಾದರೂ ಹೆಚ್ಚು ಲಕ್ಷ್ಯ ಕೊಡಲೇಬೇಕು. ಆ ರಾಜಾದಾಯವು ಹೆಚ್ಚಬೇಕಾದರೆ ದೇಶಕ್ಕೆ ಆಧಾರವಾದ ಭೂವಿಶಾಲ ಮೊದಲಾದವುಗಳನ್ನು ವೃದ್ಧಿಪಡಿಸಿ ಉಪಯೋಗಿಸಿಕೊಳ್ಳಬೇಕು. ಇದು ಸಾಧ್ಯವಾಗಬೇಕಾದರೆ ಪ್ರಜೆಗಳು ಆರೋಗ್ಯವಂತರಾಗಿಯೂ ವಿದ್ಯಾವಂತರಾಗಿಯೂ ಇರಬೇಕು. ಸುಶಿಕ್ಷಿತರಾದ ಕೆಲಸಗಾರರು ಹೆಚ್ಚಾಗಬೇಕು. ಇದರಿಂದ ರಾಜರ ಹಾಗೂ ಪ್ರಜೆಗಳ ಉತ್ಪನ್ನವು ವೃದ್ಧಿಯಾಗುವುದು. ಆಶ್ರಿತಸಂಸ್ಥಾನಗಳ ಎಷ್ಟೋ ಜನ ಪ್ರಜೆಗಳು ಬ್ರಿಟಿಷ್ ಹಿಂದೂಸ್ಥಾನದಲ್ಲಿದ್ದು ಶ್ರೀಮಂತರಾಗಿದ್ದಾರೆ. ಇದನ್ನು ನೋಡಿದರೆ ಅವರು ಕಾರ್ಯದಕ್ಷರೂ, ಬುದ್ಧಿಶಾಲಿಗಳೂ ಆಗಿರುವರೆಂಬುದು ತಿಳಿದುಬರುತ್ತದೆ. ಇದೇ ಬುದ್ಧಿಶಕ್ತಿಯನ್ನೇ ತಾವು ಹುಟ್ಟಿದ ಸಂಸ್ಥಾನಗಳಲ್ಲಿಯೇ ವಿನಿಯೋಗಿಸಬಹುದು.

ಸಂಸ್ಥಾನಗಳಲ್ಲಿ ಜನಸಂಖ್ಯೆಯು ಹೆಚ್ಚುವುದರಿಂದ ಅನೇಕ ತೊಂದರೆಗಳುಂಟಾಗಬಹುದೆಂದು ಅನೇಕರು ಯೋಚಿಸಬಹುದು. ಆದರೆ ಸ್ಥಿತಿಯು ಹಾಗಿರುವುದಿಲ್ಲ. ಬ್ರಿಟಿಷ್ ಹಿಂದುಸ್ಥಾನದಲ್ಲಿ ಚದರಮೈಲಿಯೊಂದಕ್ಕೆ 226 ಜನರಿದ್ದಾರೆ. ಸಂಸ್ಥಾನಗಳಲ್ಲಿ 101 ಜನರಿದ್ದಾರೆ. ಮದರಾಸ್ ಅಧಿಪತ್ಯಕ್ಕೆ ಸೇರಿದ ಸಂಸ್ಥಾನಗಳಲ್ಲಿ ಮಾತ್ರ ಚದರ ಮೈಲಿಯೊಂದಕ್ಕೆ 511 ಜನರಿದ್ದಾರೆ ಉಳಿದ ಸಂಸ್ಥಾನಗಳಲ್ಲಿ ಜನಸಂಖ್ಯೆಯು ಬಹು ಕಡಿಮೆಯಾಗಿದೆ. ಹಿಂದುಸ್ಥಾನದ ಎಲ್ಲ ಸಂಸ್ಥಾನಗಳ ವಿಸ್ತೀರ್ಣವು ಒಟ್ಟು 7,18,032 ಚದುರ ಮೈಲಿಗಳಿವೆ. ಜನಸಂಖ್ಯೆಯು 7,19,39,187 ಇರುತ್ತದೆ. ಆದರೆ ಬ್ರಿಟಿಷ್ ಹಿಂದುಸ್ಥಾನದ 10,94,301 ಚದುರ ಮೈಲಿಗಳಿಗೆ 24,70,03,293 ಜನಸಂಖ್ಯೆಯಿದೆ. ಬ್ರಿಟಿಷ್ ಹಿಂದೂಸ್ಥಾನದ ವಿಸ್ತೀರ್ಣವು ಸಂಸ್ಥಾನಗಳ ವಿಸ್ತೀರ್ಣಕ್ಕಿಂತ ಶೇಕಡಾ 50 ರಂತೆ ಜಾಸ್ತಿಯಿದೆ. ಜನಸಂಖ್ಯೆಯು ಸಂಸ್ಥಾನಗಳ ಜನಸಂಖ್ಯೆಯ ಮೂರರಷ್ಟಿದೆ. ಬರ್ಮಾದೇಶವನ್ನು ಹಿಂದುಸ್ಥಾನದಲ್ಲಿ ಸೇರಿಸಿಕೊಳ್ಳದೆ ಈ ಲೆಕ್ಕ ಮಾಡಿದೆ. ಸಂಸ್ಥಾನಗಳ ಜನಸಂಖ್ಯೆಯು ಕೇವಲ ಕಡಿಮೆಯಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಸಂಸ್ಥಾನಗಳಲ್ಲಿರುವುದಕ್ಕಿಂತಲೂ ಬ್ರಿಟಿಷ್ ಹಿಂದುಸ್ಥಾನದಲ್ಲಿ ಫಲವತ್ತಾದ ಮತ್ತು ವ್ಯವಸಾಯ ಯೋಗ್ಯವಾದ ಭೂಮಿಗಳಿವೆ. ಮತ್ತು ಹಿಂದುಸ್ಥಾನದಲ್ಲಿ ಸಂಪದ್ಯುಕ್ತವಾದ ಅನೇಕ ಗಣಿಗಳಿವೆ. ವ್ಯಾಪಾರಕ್ಕೆ ಅನುಕೂಲವಾದ ಬಂದರುಗಳು ಹಿಂದುಸ್ಥಾನದಲ್ಲಿದ್ದು ಪ್ರಜೆಗಳಿಗೆ ಹಡಗಿನ ವ್ಯಾಪಾರಕ್ಕೆ ತುಂಬಾ ಸಹಕಾರಿಯಾಗಿವೆ. ಆದರೆ ಆಶ್ರಿತ ಸಂಸ್ಥಾನಗಳಿಗೆ ಈ ಅನುಕೂಲ್ಯವಿರುವುದಿಲ್ಲ. ಇವೂ ಅಲ್ಲದೆ ಗ್ರಾಮಸ್ವರಾಜ್ಯ, ಆಸ್ಪತ್ರೆಗಳು, ವಿದ್ಯೆ, ವ್ಯಾಪಾರ ಮತ್ತು ವ್ಯವಸಾಯಕ್ಕೆ ತಕ್ಕ ಅನುಕೂಲ್ಯಗಳೂ ಸಂಸ್ಥಾನಗಳಲ್ಲಿರುವುದಕ್ಕಿಂತ ಹೆಚ್ಚಿನ ವ್ಯಕ್ತಿಸ್ವಾತಂತ್ರ್ಯ, ವಾಕ್ಸ್ವಾತಂತ್ರ್ಯ, ಸಭಾಸ್ವಾತಂತ್ರ್ಯ, ಪತ್ರಿಕಾಸ್ವಾತಂತ್ರ್ಯಾದಿಗಳು ಬ್ರಿಟಿಷ್ ಹಿಂದುಸ್ಥಾನದಲ್ಲಿ ಪ್ರಚಲಿತವಾಗಿರುವುವು. ಸಂಸ್ಥಾನಗಳ ಜನಸಂಖ್ಯೆಗಿಂತ ಬ್ರಿಟಿಷ್ ಹಿಂದುಸ್ಥಾನದಲ್ಲಿ ಜನಸಂಖ್ಯೆಯು ಹೆಚ್ಚಾಗಿರುವುದಕ್ಕೆ ಇವೇ ಕಾರಣಗಳಾಗಿವೆ. ಕೆಲವು ಸಂಸ್ಥಾನಗಳಲ್ಲಿ ಬ್ರಿಟಿಷ್ ಹಿಂದುಸ್ಥಾನದಲ್ಲಿರುವಂತೆಯೇ ಪದ್ಧತಿಯುಕ್ತವಾದವಾಗಿದೆ. ಇನ್ನೂ ಕೆಲವು ಸಂಸ್ಥಾನಗಳು ಬ್ರಿಟಿಷ್ ಹಿಂದುಸ್ಥಾನಕ್ಕಿಂತ ಮುಂದೆ ಹೋಗಿವೆ. ಆದರೆ ಒಟ್ಟಿನ ಮೇಲೆ ಲೆಕ್ಕಹಾಕಿದರೆ ನಮ್ಮ ಸಂಸ್ಥಾನಗಳು ಬ್ರಿಟಿಷ್ ಹಿಂದುಸ್ಥಾನಕ್ಕಿಂತಲೂ ಮೇಲೆ ಹೇಳಿದ ಎಲ್ಲಾ ವಿಷಯಗಳಲ್ಲಿಯೂ ಬಹು ಹಿಂದುಳಿದಿವೆ ಎಂದು ಹೇಳಲು ನಾಚಿಕೆಯಾಗುತ್ತದೆ. ಮನೋವಿಕಾಸವನ್ನು ಕುಗ್ಗಿಸುವಂಥ ಸ್ಥಿತಿಯು ಸಂಸ್ಥಾನಗಳಲ್ಲಿದೆ ಎಂದು ಹೇಳದಿರಲಾರೆವು.

(ಸಶೇಷ.)

ತಂಗಾಳಿಯು ಉತ್ತಮವಾದ ಜೀವನೌಷಧ.

ತಂಪಾದ ಗಾಳಿಯನ್ನು ನಾವು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ, ತಂದುಕೊಂಡರೆ, ಅದೊಂದು ಅತ್ಯುತ್ತಮವಾದ ಔಷಧವೆಂದೂ, ದೇಹಾರೋಗ್ಯಕ್ಕೆ ಅದು ಬಹಳ ಮುಖ್ಯವೆಂದೂ, ದೃಢವಾಗಿ ನಂಬಬಹುದು. ಅನೇಕರಿಗೆ ಇನ್ನೂ ಇದರ ನಿಜಾಂಶವು ತಿಳಿಯದು. ತಂಗಾಳಿಯೆಂಬುದು ಒಂದು ಉದ್ದೀಪನ ವಸ್ತುವಾಗಿದೆಯಲ್ಲದೆ, ಅದರಲ್ಲಿ ಟಾನಿಕ್ ಅಥವಾ ಒಳ್ಳೆಯ ರಸಾಯನ ಗುಣವುಂಟು. ಇದರಿಂದ ದೇಹಕ್ಕೆ ಯಾವುದೊಂದು ಕೆಡಕೂ ಇಲ್ಲವು. ಮುಖ್ಯವಾಗಿ ತಣ್ಣಗೆ ಬೀಸುವ ಗಾಳಿಯಿಂದ ಶ್ವಾಸಕೋಶಗಳಿಗೆ ಬಹಳ ಪ್ರಯೋಜನವುಂಟು. ಏಕೆಂದರೆ, ಗಾಳಿಯು ತಣ್ಣಗೆ ಬೀಸುವಾಗ, ಉಸಿರಾಟವು ವೇಗವಾಗಿ ಶ್ವಾಸಕೋಶಗಳಿಗೆಲ್ಲ ಚೆನ್ನಾಗಿ ಗಾಳಿಯು ವ್ಯಾಪಿಸುವಂತೆ ತಲಸ್ಪರ್ಶಿಯಾಗಿ ಆಳಕ್ಕೆ ಎಳೆಯಲ್ಪಡುವುದು. ಇದರಿಂದ ಸಹಜವಾಗಿ ದೇಹದ ಉಷ್ಣಾಂಶವು ಹೆಚ್ಚುವುದು. ಮತ್ತು ಜೀವಾಗ್ನಿಗೆ ಇಂಧನರೂಪವಾದ ಆಹಾರವು ಇದರಿಂದ ತೀವ್ರವಾಗಿ ಪಚನವಾಗುವುದರೊಡನೆ, ದೇಹದೊಳಗೆ ಉತ್ಪನ್ನವಾಗುವ ಕಶ್ಮಲಗಳೆಲ್ಲ ಚೆನ್ನಾಗಿ ಒಟ್ಟಿಗೆ ಸಂಗ್ರಹಿಸಲ್ಪಟ್ಟು, ಸುಲಭವಾಗಿ ಹೊರಬೀಳುವಂತಾಗುವುದು. ಶೀತಲವಾಯುವು ರಕ್ತಕ್ಕೆ ಸೇರುವುದರಿಂದ ದೇಹದೊಳಗಿನ ಎಲ್ಲಾ ಅವಯವಗಳೂ ಚೆನ್ನಾಗಿ ಕೆಲಸಮಾಡುವಂತಾಗುವುದು.

ಶೀತಲವಾದ ಗಾಳಿಯು, ನರಗಳಿಗೆಲ್ಲ ಉತ್ತೇಜನ ಕೊಟ್ಟು ಅವುಗಳನ್ನು ದೃಢಪಡಿಸುವುದು. ತಂಗಾಳಿಗೆ ಸ್ವಲ್ಪಹೊತ್ತು ಮೈಬಿಟ್ಟುಕೊಂಡಿದ್ದರೆ, ಮನಸ್ಸಿಗೆ ಒಂದು ಬಗೆಯ ಅಪೂರ್ವವಾದ ಉಲ್ಲಾಸವು ತೋರುವುದು. ಆದರೆ, ಈ ಗಾಳಿಯು ಚರ್ಮದ ಮೇಲೆಯೂ, ಶ್ವಾಸಕೋಶಗಳೊಳಗೂ ನೇರವಾಗಿ ವ್ಯಾಪಿಸುವಂತಾಗಬೇಕು. ಬೇಸಗೆಕಾಲದಲ್ಲಿ ಮೈಯನ್ನು ತೆರೆದಿಡುವುದರಿಂದ, ಈ ಗುಣವು ಲಭಿಸುವುದು. ಹೇಗೆಂದರೆ, ಆ ಗಾಳಿಯೂ ಸೂರ್ಯನ ತೀವ್ರವಾದ ಬಿಸಿಲೂ, ಇವೆರಡೂ [illegible] ಮೈಯೊಳಗೆ ವ್ಯಾಪಿಸುವುವು. ಸೂರ್ಯ[illegible] ಮೈಯೊಡ್ಡುವುದರ ಫಲವು ಆ ಗಾಳಿಯು [illegible]ಗಿ ಮೈಯೊಳಗೆ ಪ್ರವೇಶಿಸುವುದರಿಂದಲೇ ಲಭಿಸಬೇಕು. ಚಳಿಗಾಲದಲ್ಲಿ ಬ್ರಿಟಿಷ್ [illegible] ಮಲಗುವ ಮನೆಯಲ್ಲಿರುವ ಗಾಳಿಯು ಸರಿ[illegible] ಉಷ್ಣಾಂಶದಲ್ಲಿರುವುದು. ಹಾಸಿಗೆಯಿಂದೆದ್ದೊ[illegible] ಪ್ರತಿದಿನವೂ ಬೆಳಗ್ಗೆ ಅಂತಹ ಗಾಳಿಗೆ ಮೈಯೊ[illegible] ಶ್ವಾಸಸಾಧನೆಯನ್ನು ಮಾಡುವುದರಲ್ಲಿ ಬಹಳ ಗು[illegible]ವಿದೆ. ಮತ್ತು ಬೆಳಗ್ಗೆ ಹಾಸಿಗೆಯನ್ನು ಬಿಟ್ಟು ಎ[illegible] ಮೈಮೇಲೆ ಹೆಚ್ಚು ಉಡುಪುಗಳೇನೂ ಇಲ್ಲದಿರುವಾ[illegible] ಅದೇ ಸ್ಥಿತಿಯಲ್ಲಿ ಸ್ವಲ್ಪ ಹೊತ್ತು ಆ ವಾತಾವರ[illegible]ಲ್ಲಿಯೇ ಶತಪಥ ಮಾಡುತ್ತಾ ಬಂದರೆ, ಮನಸ್ಸಿ[illegible] ಎಷ್ಟೋ ಉಲ್ಲಾಸವೂ ಹಿತವೂ ತೋರುವುದು. [illegible] ನೆಗಡಿ, ಮುಂತಾದ ಶೀತದೋಷಗಳನ್ನು ಬಾರದಂ[illegible] ತಡೆಯುವುದಕ್ಕೆ, ಇದೊಂದು ಉತ್ತಮವಾದ ನಿವಾರ[illegible]ಣೌಷಧಿಯೆನಬಹುದು. ಇಂಥ ವ್ಯಾಧಿಗಳು ನಾಗರಿಕ[illegible] ಜನಾಂಗವನ್ನೇ ಹೆಚ್ಚಾಗಿ ಪೀಡಿಸುತ್ತಿವೆ.

ಈ ಕಾಲದ ನಾಗರಿಕ ಜನಾಂಗದಲ್ಲಿ ಮೈಮೇಲೆ ಬಹಳ ಹೆಚ್ಚಾಗಿ ಉಡುಪುಗಳನ್ನು ಹೇರಿಕೊಳ್ಳುವ ಪದ್ಧತಿಯು ಪ್ರಬಲವಾಗಿದೆ. ಇದರಿಂದ ಚರ್ಮದ ಕೆಲಸಗಳು ಸರಿಯಾಗಿ ನಡೆಯಲು ಅವಕಾಶವು ತಪ್ಪಿಹೋಗುವುದು. ಇದರಿಂದ ಆಗಾಗ ಹವಾ ಬದಲಾವಣೆಯಾಗಿ, ಶೀತೋಷ್ಣಗಳ ಸ್ಥಿತಿಯು ಹೆಚ್ಚು ಕಡಿಮೆಯಾಗುವುದರಿಂದ, ಅದಕ್ಕೆ ತಕ್ಕಂತೆ ನಮ್ಮ ದೇಹವು ಅನುಕೂಲಿಸಿ ಬರುವುದು ಕಷ್ಟವಾಗುವುದು. ಆದುದರಿಂದ ಯಾವಾಗಲೂ ಮೈಮೇಲೆ ಗಾಳಿ ತಗಲುವಂತೆ ತೆಳುವಾದ ಬಟ್ಟೆಗಳನ್ನು ಧರಿಸುವ ಅಭ್ಯಾಸವೇ ಒಳ್ಳೆಯದು. ಇದರಿಂದ ಚರ್ಮಕ್ಕೆ ಸಹಜವಾದ ಶಕ್ತಿಯು ಕೆಡದಂತೆ ನಿಲ್ಲುವುದು. ಆಗ ಶೀತೋಷ್ಣಗಳ ಸ್ಥಿತಿಯು ಎಷ್ಟೋ ಪ್ರಬಲವಾದ ಮಾರ್ಪಾಡುಗಳನ್ನು ಹೊಂದಿದರೂ, ದೇಹಕ್ಕೇನೂ ಕೆಡುಕಾಗದೆ, ಚರ್ಮವೂ, ಶ್ವಾಸೇಂದ್ರಿಯಗಳೂ, ತಮ್ಮಲ್ಲಿಗೆ ವ್ಯಾಧಿಗಳೊಂದೂ ಹೊಂದದಂತೆ ಕಾಪಾಡಿಕೊಳ್ಳಬಹುದು.

"ಗುಡ್ ಹೆಲ್ತ್"

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, [illegible] ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ [illegible] ಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮ[illegible] ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.

ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.

ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಮಂಗಳಗೀತಾದರ್ಶ.

ಶುಭ-ಶೋಭನ ಕಾಲಗಳಲ್ಲಿ ಹೆಣ್ಣುಮಕ್ಕಳು ಹೇಳಿಕೊಳ್ಳಲನುಕವಾದ ಹಾಡುಗಳಲ್ಲದೆ, ಸ್ತ್ರೀಪುರುಷ ಭೇದವಿಲ್ಲದೆ ಸರ್ವರೂ ನಿತ್ಯವೂ ಪಠಿಸಬಹುದಾದ ಶ್ರೀ ಪಾರ್ವತೀಪರಮೇಶ್ವರ ಸಂಬಂಧವಾದ ಕೀರ್ತನೆಗಳೂ ಇವೆ. ಒಂದುನೂರು ಪ್ರತಿಗಳು ಮಾತ್ರವೇ ಉಳಿದಿರುವುದರಿಂದ ಗ್ರಾಹಕರು ತ್ವರೆಮಾಡಬೇಕು.

ಬೆಲೆ ೧ಕ್ಕೆ ೦—೪—೦ ಮಾತ್ರ.

N. B.—ಒಂದು ರೂ. ಗಿಂತ ಕಡಿಮೆ ವಿ. ಪಿ. ಕಳುಹುವುದಿಲ್ಲ. ಒಂದೊಂದೇ ಪುಸ್ತಕಗಳನ್ನು ಅಪೇಕ್ಷಿಸುವವರು ಪುಸ್ತಕ ಒಂದಕ್ಕೆ 4½ ಆಣೆಯಂತೆ ಪೋಸ್ಟಿನ ಸ್ಟಾಂಪುಗಳನ್ನು ರವಾನಿಸಿದಲ್ಲಿ ಪುಸ್ತಕವು ಬುಕ್‌ಪೋಸ್ಟ್ ಮೂಲಕ ರವಾನಿಸಲ್ಪಡುವುದು.

ಸಚಿತ್ರ ಕನ್ನಡ ಮಕ್ಕಳ ಗಣಿತ.

ಮಕ್ಕಳಲ್ಲಿ ಕಂಡುಬರುವ ಬೆರಳೆಣಿಸುವ ಕುರುಡು ಪದ್ಧತಿಯು ಪರಿಹಾರವಾಗಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟು, ಮೈಸೂರು ಸರಕಾರದ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್ ಸಾಹೇಬರಿಂದ ಮಂಜೂರು ಮಾಡಲ್ಪಟ್ಟಿದೆ. ಪ್ರೈಮರಿ ೧ ಮತ್ತು ೨ ನೆಯ ತರಗತಿಗಳಿಗೆ ಉಪಯುಕ್ತವಾದುದು. ಬೆಲೆ ೦—೪—[illegible]

ಕರ್ಣಾಟಕ ಗುಣಿತಾಕ್ಷರಬೋಧೆ.

ಕಾ. ಗುಣಿತಗಳನ್ನು ಕಲಿಸಲನುಕೂಲವಾದ [illegible] ಪಟ ಬೆಲೆ ೦—೧—೦.

ಸಿಲಬಸ್ ಫಾರಂ.

ಉಪಾಧ್ಯಾಯರು ತಮ್ಮ ಸ್ಕೂಲಿನ ವಾರ್ಷಿಕ ಪ್ರೋಗ್ರಾಂ ತಯಾರಿಸಿಕೊಳ್ಳಲನುಕೂಲ. ೦-೦-[illegible]

ಕನ್ನಡ

೨ ಮತ್ತು ೩ ನೆಯ ರೀ. ಗಳ ನೋಟ್ಸುಗಳು

ಪ್ರಶ್ನೋತ್ತರಗಳ ಸಹಿತವಾಗಿವೆ. ಬೆಲೆ ಪ್ರತಿಯೊಂದಕ್ಕೆ ೦—೪—೦.

N.B.—ಸಂಸ್ಥಾನದ ಸುಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತವೆ.

ಪ್ರಕಾಶಕರು:—**ಜಿ. ರೇವಣ್ಣ ಅಂಡ್ ಬ್ರದರ್**

ಬುಕ್ ಸೆಲ್ಲರ್ಸ್, ಪೋ|| ಬಿಡದಿ, ಡಿ|| ಬೆಂಗಳೂರು.

8

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ವೃದ್ಧಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿದೆ.

ಚ್ಯವನಪ್ರಾಶ— ಈ ಮಹೌಷಧವು ಹಿಮಾಲಯದ [illegible] ಅಷ್ಟವರ್ಗ ಪ್ರಭೃತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗ [illegible] ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ [illegible]ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋ[illegible] ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರ ದೋಷಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ [illegible]ಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿ [illegible] ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿ [illegible]ಆದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ [illegible] ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವಿಸಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯ [illegible] ಬೆಳಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. [illegible] ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. [illegible] ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಿಂದ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ [illegible]ಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು [illegible] ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ [illegible]ಮೇಹ, ಮಧುಮೇಹ, ಪ್ರದರ, [illegible] ಹಿಸ್ಟೀರಿಯಾ, ವಾತರೋಗ, [illegible]ವಾದ ಅನೇಕ ರೋಗಗಳನ್ನು [illegible] ನಿವಾರಣಮಾಡುತ್ತದೆ. [illegible]ಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿ ಯಾಗುವದು.

[illegible] ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿವರೆಗೆ

[illegible]ಹಮಾತೆಯು—೧ ಶೀಶೆಗೆ ೧೨ ಆಣೆ (ಪ್ರ.) [illegible]ಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ [illegible] ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ [illegible] ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಕಾರ್ಡನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ [illegible] ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ[illegible]ಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ[illegible]ಗಳಿಂದ ಧನ್ಯರಾಗಬೇಕೆಂಬ ಉದ್ದೇಶದಿಂದ ಕೋಟಿನ [illegible] ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ [illegible]ಕೊಳ್ಳುವದಕ್ಕೂ, ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ[illegible] ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರೂ [illegible] ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ[illegible]ಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ [illegible]ವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತ[illegible]ದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿ[illegible] ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ಎಸರ[illegible] ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ [illegible]ಯೂ, ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ [illegible]ಯೂ, ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ [illegible]ಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ [illegible] ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ

ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿವಸಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಪೀಠಿಕೆ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪು ಕಾರ್ಡಸ್—ಪಿತ್ತ, [illegible] ಉರಿಜ್ವರ, ಕೈಕಾಲು ಬತ್ತಲು, ರಕ್ತಭ್ರಾಂತಿ, [illegible] ಶರೀರ, ರುಚಿ ಕೆಟ್ಟಿರುವ ನಾಲಿಗೆ, [illegible] ಕಣ್ಣು ಮತ್ತು ಶರೀರ, [illegible]ವುದು, ನಿದ್ರೆ ಇಲ್ಲದೆ ಸಂಕಟ[illegible], ಹೊಟ್ಟೆ ಬೆಂಕಿ, ಎದೆ ಉರಿ ಮ[illegible], ನಾಲಿಗೆ ಒಣಗುವುದು, ಮಲಮೂತ್ರಕ್ಕೆ[illegible], ಪಿತ್ತ ಕಾರುವುದು, ಇತ್ಯಾದಿ ಪಿತ್ತ ರೋಗಗಳಿಗೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತಿ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ನೀವಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬೀಳುವುದು, ಹೊಟ್ಟೆ ಹುಳಗಳ ತೊಂದರೆ ವಿವಿಧ ರೋಗಗಳಿಗೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಪ್ಪು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[46] **ಮಲೇರಿಯಾನ ಕಂಪೆನಿ, ನಂಬ್ರ 21 (ಹಂಪನಕಟ್ಟೆ,) ಮಂಗಳೂರು. ದ. ಕ.**

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಿಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಮೀರಿತೆಂದು ತೋರಿದಾಗಲೂ ಈ ವೈಶ್ವಾನರಾಸವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ" ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಕೂಡಲೇ ಅವಕಾಶಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,

ಪಟೇಲ್ ಮತ್ತು ಛೇರ್‌ಮನ್, ಬಾಸೂರು,

[9] ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಲಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨॥
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧
ಸಚಿತ್ರ ರೇಣುಕವಿಜಯ	೧
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧
ವೀರಶೈವಸಿದ್ಧಾಂತಸುಧಾಕರ	೨

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸು...ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವ... ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊ...ಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾ... ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ಚತು... ಸೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ಷ್ಮವಾದ ಕಾಶ್ಮೀರದೇಶದ ರೇಶಿಮ... ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದ... ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ... ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರು... ರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಇವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತ...

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನೆ, ಪೋ॥ ಗುಳೇದಗುಡ್ಡ, ಡಿ॥ ಬಿಜಾಪುರ.

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಪಂಚಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಲಿಂಗದ ಮುಂದಿರುವ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾ...

(Registered Trade Mark)

...ಗಳನ್ನು ಕೊಟ್ಟ... ರು ಪ್ರಸಿದ್ಧವಾ... ನಶ್ಯದ ಪುಡಿಯ... ಸ್ವಸ್ಥವಾಗುವ ... ಧಿಗಳು ಯಾವ... ರೆ:—ಪೀನಸಿ, ... ತಲೆನೋವು, ... ಕ್ಷಿಸ ರೋಗಗ... ಕಣ್ಣುಗಳಲ್ಲಿ ಉ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ಈ ವ್ಯಾಧಿಗಳನ್ನು ಸ್ವಸ್ಥಪಡಿಸಿ ಬ್ರಾ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರು... ಸಾಧಾರಣ ನಶ್ಯದ ಜೊತೆ ಈ ಸುಗಂಧ ನಶ್ಯದ... ಯಲ್ಲಿ ಒಂದು ಚಿಟಿಕಿಯನ್ನು ಮಿಶ್ರಮಾಡಿದರೆ ... ಪರಿಮಳವಾಗುವುದು. ಇದನ್ನು ಅನೇಕ ಪ್ರ... ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾ... ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ... ಡಜನ್ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ... ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿ...

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[82] ಪೋ. ಬಾ. ೫೧೦, ಮದರಾ...

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಪಾದಕರು—ಆಸ್ಥಾನ ವಿದ್ವಾನ್ ವೇ॥ ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ ನೇ ಜೂನ್ ೧೯೩೧ [ಸಂಚಿಕೆ ೧೦

ಶೋಕವಾರ್ತೆ.

ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಎಂಬ ಗ್ರಾಮದಲ್ಲಿ ಸತ್ಯಬದ್ಧ ಸೂಕರೂ ಗುರುಲಿಂಗ ಜಂಗಮಪ್ರೇಮಿಗಳೂ ಆದ ಬಸಪ್ಪಶೆಟ್ಟರ ಪುತ್ರ ಚಂದ್ರಶೆಟ್ಟರು ಎರಡು ಮೂರು ತಿಂಗಳಿಂದ ಅಸ್ವಸ್ಥರಾಗಿದ್ದು ಜ್ಯೇಷ್ಠ ಬಹುಳ ೬ ನೇ ಶನಿವಾರ ದಿವಸ ಶಿವಾಧೀನರಾದರು. ಇವರು ತಮ್ಮ ತಂದೆಗಳಂತೆ ಜನಾನುರಾಗಗಳೂ ಪುಣ್ಯಕಾರ್ಯಾಸಕ್ತರೂ ಪ್ರಸಿದ್ಧರೂ ಆಗಿದ್ದರು. ಬಂದ ಅತಿಥಿ ಅಭ್ಯಾಗತರನ್ನು ಗುರುಜಂಗಮರನ್ನು ಆದರಿಸುವದರಲ್ಲಿ ಬಹು ಶ್ರದ್ಧೆಯುಳ್ಳವರಾಗಿದ್ದರು. ಇವರಿಗೆ ಈಗ ಚಿಕ್ಕವಯಸ್ಸಿನ ಒಬ್ಬ ಮಗನೂ ಒಬ್ಬಳು ಮಗಳೂ ಇದ್ದಾರೆ. ಇವರ ಉತ್ತರಕ್ರಿಯಾದಿಗಳನ್ನು ಅಳಿಯಂದಿರಾದ ಮ॥ ರಾ॥ ನಾರಾಣಪ್ಪಶೆಟ್ಟರು ಅಂತ್ಯ... ವಿಧಿಗನುಸಾರವಾಗಿ ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ ೨ ರೂಪಾಯಿಗಳನ್ನು ಸಮರ್ಪಿಸಿದ್ದಾರೆ. ಶ್ರೀ ಜಗದ್ಗುರು ಪಂಚಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬದವರಿಗೆ ದುಃಖಶಮನವನ್ನೂ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಸಿ. ಆರ್. ಮಲ್ಲಪ್ಪಶೆಟ್ಟಿ.

NOTICE.

Veerasiva students of Mysore State, who have passed S.S.L.C. Examination and desire to study for higher Examinations may apply for Scholorship from the Marimallappa's Charities Fund, before the 15th July 1931, on a priscribed from to the undersigned. Forms can be had from the secretary by sending him half-anna postal stamp.

T. S. SIDDAPPA,
Secretary, Marimallappa's
Charities, Mysore.

ಒಳದೇಶದ ವೃತ್ತಾಂತಗಳು.

ಮೈಸೂರು ಸಂಸ್ಥಾನದ ದ್ವಿತೀಯ ಸಚಿವರಾದ ಮೆ॥ ರಾಜಕಾರ್ಯಪ್ರವೀಣ ಡಿಸೌಜಾಸಾಹೇಬರವರು ನಾಳೆದಿವಸ ತಮ್ಮ ಅಧಿಕಾರದಿಂದ ನಿವೃತ್ತರಾಗುವರು.

ಬೆಂಗಳೂರು ಸಿಟಿ ಮಾರ್ಕೆಟ್ಟಿನಲ್ಲಿ ಒಬ್ಬ ತರಕಾರಿ ವ್ಯಾಪಾರಿಯು ತನ್ನ ಮಗುವು ಮೃತಪಟ್ಟಿತೆಂದು ಕೇಳಿ ವ್ಯಸನದಿಂದ ಹೋಗುತ್ತಿರುವಾಗ ದೊಡ್ಡಣ್ಣ ಹಾಲಿನ ಹಿಂಭಾಗದಲ್ಲಿ ಕಲ್ಲು... ...ದ್ದು ಕೂಡಲೆ ಮೃತಪಟ್ಟನಂತೆ!

ಶ್ರೀರಂಗಪಟ್ಟಣದ ... ...ಡಿಯಾಲ ಗ್ರಾಮದಲ್ಲಿ ಈ ತಿಂಗಳು 26 ನೆಯ ತಾರೀಖಿನಿಂದ ಪ್ರತಿ ಶುಕ್ರವಾರವೂ ಸಂತೆ ಸೇರುವುದೆಂದೂ, ವರ್ತಕರು ಅದರಲ್ಲಿ ಭಾಗಿಗಳಾಗಬೇಕೆಂದೂ ಮ॥ ಸಾಹುಕಾರ್ ಸಿ. ಲಕ್ಷ್ಮಯ್ಯನವರು ತಿಳುಹಿಸುತ್ತಾರೆ.

ಬೆಂಗಳೂರು ನಗರಕ್ಕೆ ಕುಡಿಯುವನೀರನ್ನೊದಗಿಸಬೇಕೆಂದು ಕಟ್ಟಲ್ಪಡುತ್ತಿರುವ ಮಾಗಡಿ ತಾ॥ ತಿಪ್ಪಗೊಂಡನಹಳ್ಳಿ ಕೆರೆಯು ಏರಿಯು ನದಿಯ ವಿಶೇಷ ಪ್ರವಾಹದಿಂದ ಕೊಚ್ಚಿಹೋಗಿ 25,000 ರೂ. ಗಳು ನಷ್ಟವಾಗಿರುವುದೆಂದು ತಿಳಿದು ಬರುತ್ತದೆ.

ಬೆಂಗಳೂರು ಮತ್ತು ಮೈಸೂರಿನ ಸರ್ಕಾರಿ ಹೈಸ್ಕೂಲುಗಳಲ್ಲಿ ಮೂರು ವರ್ಷಗಳವರೆಗೆ ಗಣಿತಶಾಸ್ತ್ರ, ಚರಿತ್ರೆ ಮತ್ತು ಭೂಗೋಳವನ್ನು ಕನ್ನಡ ಭಾಷೆಯಲ್ಲಿ ಬೋಧಿಸಬೇಕೆಂದೂ, ಸರ್ಕಾರಿ ಗ್ರ್ಯಾಂಟುಗಳನ್ನು ಪಡೆಯುವ ಖಾಸಗಿಸ್ಕೂಲುಗಳಲ್ಲಿ ಕನ್ನಡದಲ್ಲಿ ಪಾಠವನ್ನು ಹೇಳಲು ಅನುಮತಿಯಿಸ್ತಿತ್ತಿರುವರೆಂದೂ, ಮೂರು ವರ್ಷಗಳ ಅವಧಿಯಲ್ಲಿ ಆವಶ್ಯಕವಾದ ಕನ್ನಡ ಪಠ್ಯಪುಸ್ತಕಗಳನ್ನು ತಯಾರಿಸಬೇಕೆಂದೂ ಸರ್ಕಾರದವರು ಆಜ್ಞಾಪಿಸಿದ್ದಾರೆ.

ಲಂಡನ್ ಪಟ್ಟಣದಲ್ಲಿ ನಡೆಯುವ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಪ್ರಜಾಪಕ್ಷದಿಂದ ಪ್ರತಿನಿಧಿಗಳನ್ನಾರಿಸಬೇಕೆಂದು ಪುದುಕೋಟೆ, ಕೊಚ್ಚಿ ಮೊದಲಾದ ಸಂಸ್ಥಾನಗಳ ನ್ಯಾಯವಿಧಾಯಕ ಸಭೆಯ ಮೆಂಬರರು ವೈಸ್‌ರಾಯರವರನ್ನೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನೂ ಪ್ರಾರ್ಥಿಸಿಕೊಂಡಂತೆ ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರರೂ ಸಹ ಕಳೆದವಾರ ವೈಸ್‌ರಾಯರಿಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ವಿಜ್ಞಾಪಿಸಿಕೊಂಡಿರುವರೆಂದು ಕೇಳುತ್ತೇವೆ.

ವಿದೇಶವಸ್ತ್ರಗಳ ಹಾಗೂ ಸೇಂದಿ, ಸಾರಾಯಿ ಅಂಗಡಿಗಳ ಮುಂದೆ ಶಾಂತರೀತಿಯಲ್ಲಿ ಪಿಕೆಟಿಂಗ್ ಮಾಡಬಹುದೆಂದೂ, ಪಿಕೆಟಿಂಗ್ ಮಾಡುವವರು ಭಯವನ್ನಾಗಲೀ, ಹಿಂಸೆಯನ್ನಾಗಲೀ ಪ್ರದರ್ಶಿಸದಿದ್ದರೆ ಪೋಲೀಸಿನವರು ಈ ಕಾರ್ಯದಲ್ಲಿ ಪ್ರವೇಶ ಮಾಡದಂತೆ ನೋಡಿಕೊಳ್ಳುತ್ತೇವೆಂದೂ, ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ತುಮಕೂರಿನಲ್ಲಿ ಪಿಕೆಟಿಂಗ್ ನಡೆದಾಗ ಪೋಲೀಸರು ಹೇಗೆ ವರ್ತಿಸಿದರೆಂಬುದನ್ನು ವಿಚಾರಿಸುವವಾಗಿ ಸರ್ಕಾರದವರು ಅಭಯವನ್ನಿತ್ತಿರುವರು.

19-6-29 ರಲ್ಲಿ ದಾವಣಗೆರೆಯಲ್ಲಿ ಹಿಂದೂಗಳು ಮುಸಲ್ಮಾನರ ಬೀಡಿ ಅಂಗಡಿ ವಗೈರೆಗಳನ್ನು ಸುಟ್ಟು ಮಸೀದಿಗಳಲ್ಲಿ ಅತ್ಯಾಚಾರ ಮಾಡಿದರೆಂದು ವಗೈರೆ ತಕ್ಕೀರುಗಳಿಗೋಸ್ಕರ ದಾವಣಗೆರೆ 1 ನೆಯ ಕ್ಲಾಸ್ ಮ್ಯಾಜಿಸ್ಟ್ರೇಟರು 1929-30 ನೆಯ ಸಾಲ್ 35, 36, 37, ನೆಯ ಮೊಕದ್ದಮೆಗಳನ್ನು ಶಿವಮೊಗ್ಗಾ ಸೆಷನ್ ಕೋರ್ಟಿಗೆ ಕಮಿಟ್ ಮಾಡಿದ್ದರಷ್ಟೆ! ಅಪರಾಧಿಗಳ ಪರವಾಗಿ ಮಿ॥ ಎಲ್. ಎಸ್. ರಾಜುರವರು ಈ ತಿಂಗಳು 1 ನೆಯ ತಾರೀಖು ಲಾಗಾಯ್ತು 20 ನೆಯ ತಾರೀಖಿನವರೆಗೆ ನಡೆಯಿಸಿದರು. 22-6-31 ರಲ್ಲಿ ನ್ಯಾಯಾಧೀಶರು ಮೂರೂ ಮೊಕದ್ದಮೆಗಳಲ್ಲಿ ಎಲ್ಲ ಅಪರಾಧಿಗಳನ್ನೂ ಖುಲಾಸೆಮಾಡಿರುತ್ತಾರೆಂದೂ, 18-6-29 ಕ್ಕೆ ಸಂಬಂಧಪಟ್ಟ ಹಿಂದೂಗಳ ಮೇಲಿನ ದೊಂಬಿ ಮೊಕದ್ದಮೆಯಲ್ಲಿ ಸಹ ಇನ್ನೂ 4 ಜನ ಹಿಂದೂಗಳಿಗೆ ಖುಲಾಸೆ ಮಾಡಿರುತ್ತಾರೆಂದು ತಿಳಿದು ಬರುತ್ತದೆ.

ವರ್ಷಾವರ್ಧಂತಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ತಿರಸ್ಕೃತವಾದ ಹೊಸ ಆದಾಯತೆರಿಗೆಯ ಮಸೂದೆಯು ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಅಂಗೀಕರಿಸಲ್ಪಟ್ಟಿತು. ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು, ಶ್ರೀಯುತ ಡಿ. ಎಚ್. ಚಂದ್ರಶೇಖರಯ್ಯನವರೇ ಮೊದಲಾದವರು ಈ ಮಸೂದೆಯನ್ನು ಸಮರ್ಥನೆಮಾಡಿ ಮಾತನಾಡಿದರು. ಶ್ರೀ॥ ಗಳಾದ ಚಂಗಲರಾಯರೆಡ್ಡಿ, ಬಿ. ಕೆ. ಗರುಡಾಚಾರ್, ಪಿ. ಸುಬ್ಬರಾಮಶೆಟ್ಟರು, ಡಿ. ಎಸ್. ಮಲ್ಲಪ್ಪನವರು ವಿರೋಧಿಸಿ ಮಾತನಾಡಿದರು. ವರಮಾನವು 5000 ರೂ. ಗಳು ಅಥವಾ ಮೇಲ್ಪಟ್ಟಿದ್ದು 10,000 ರೂ. ಯವರೆಗೆ 45 ರೂ. 10,000 ರೂ. ಗಳಿಂದ 15,000 ರೂ. ಗಳವರೆಗೆ 90 ರೂ. 15,000 ರೂ. ಗಳಿಂದ 20,000 ರೂ. ಗಳ ವರೆಗೆ 230 ರೂ. 20,000 ರೂ. ಗಳಿಂದ 30,000 ರೂ. ಗಳ ವರೆಗೆ 400 ರೂ. 30,000 ರೂ. ಗಳ ಮೇಲೆ 1000 ರೂ. ಈ ರೀತಿಯಾಗಿ ಹೆಚ್ಚಿಗೆ ವರಮಾನತೆರಿಗೆಯನ್ನು ಕೊಡಬೇಕಾಗುವುದು. ಸರ್ಕಾರಕ್ಕೆ ಇದರಿಂದ 3½ ಲಕ್ಷ ರೂ. ಗಳ ಆದಾಯವಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಸ್ವೀಕಾರ.

ರಾಯಚೂರು ಡಿ॥ ಮಸಿಗಿಮಠದ ವೇ॥ ಗುರುಶಾಂತಾರ್ಯರ ಪುತ್ರರಾದ ಶ್ರೀ ಷಡಕ್ಷರ ಮರಿದೇವರಿಗೆ ಪಟ್ಟಾಭಿಷೇಕವಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 4 ರೂ. ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ॥ ಕೊಟ್ಟೂರಲ್ಲಿ ನೆರವೇರಿದ ಶ್ರೀ ಮಲ್ಲಿಕಾರ್ಜುನಾದಿ ದೇವತಾಪ್ರತಿಷ್ಠಾಸಮಾರಂಭದಲ್ಲಿ ಸಮರ್ಪಿಸಿದ 2 ರೂ. ಗಳು ವೇ॥ ಪಂ॥ ಶಂಕರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾ॥ ಉಪ್ಪಳ್ಳಿಗ್ರಾಮದ ರಾ॥ ಸಾ॥ ಚಂದಪ್ಪಶೆಟ್ಟರ ಗಣಾರಾಧನೆಯ ಸಮಯದಲ್ಲಿ ಸಮರ್ಪಿಸಿದ 2 ರೂ. ಗಳು ವೇ॥ ಮುಗುಳವಳ್ಳಿ ಮಠದ ಮುಪ್ಪಿನಯ್ಯನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ॥ ಹಡಗಲಿ ತಾ॥ ತಂಬ್ರಹಳ್ಳಿ ಮ॥ ರಾ॥ ಕನಕೇರಿ ಲಿಂಗಪ್ಪನವರ ಪುತ್ರ ಚಿ॥ ವೀರಸಂಗಪ್ಪನಿಗೆ ಸದರಿ ತಾ॥ ಹೊಳಗುಂದಿ ಮ॥ ರಾ॥ ಸಣ್ಣಕ್ಕಿ ಮರುಲಸಿದ್ದಪ್ಪನವರ ಪುತ್ರಿ ಚಿ॥ ಸೌ॥ ಸೊಲಬವ್ವನನ್ನು ಕೊಟ್ಟು ನಿಶ್ಚಯಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂ. ಯು ಮೈ॥ ರಾ॥ ಹಲಗಪ್ಪನವರ ದೊಡ್ಡ ಹಾಲಪ್ಪನವರ ದ್ವಾರಾ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರ.

ಪತ್ರಿಕೆದಾರರು ಅಭಿಪ್ರಾಯಪಡುವ ಲೇಖಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಆಕಸ್ಮಿಕ ಗುರುದರ್ಶನ.

ಶ್ರೀ ಕೊಲ್ಲಿಪಾಕಿ

ಶಾಲೆಗೆ ಅಭ್ಯಾಸಕ್ಕಾಗಿ ಹೊರಟ ನಾನು ಕೆಲವು ಗ್ರಾಮಗಳಲ್ಲಿ ಸಂಚಾರಮಾಡುತ್ತಾ ಮೈಲಾರಕ್ಕೆ ಬಂದೆನು. ಅಲ್ಲಿ ಶ್ರೀ ಷ|| ಬ್ರ|| ಪಟ್ಟಾಧ್ಯಕ್ಷ ರುದ್ರಮುನಿಶಿವಾಚಾರ್ಯ ಬೃಹನ್ಮಠ ದಿಗ್ಗಾವಿ ಇವರ ಸಮಾಗಮವಾಯಿತು. ಆಗ್ಗೆ ಅವರು ರೇಣುಕೋತ್ಪತ್ತಿಸ್ಥಾನವಾದ ಕೊಲ್ಲಿಪಾಕಿಗೆ ಹೊರಡುವ ವಿಷಯವನ್ನು ವಿಚಾರಿಸಿದರು. ಅಭ್ಯಾಸಕ್ಕಾಗಿ ಹೊರಡುತ್ತಿದ್ದ ನನಗೆ ಗುರುದರ್ಶನವನ್ನು ತೆಗೆದುಕೊಂಡು ಹೊರಡುವುದುಚಿತವೆಂದು ತೋರಿತು. ಅನಸುಮಸಮಯಗಳಲ್ಲಿಯೂ ನೆನೆಯುವ ಇಂಥಾ ಸುಯೋಗವದಗಿದ್ದರಿಂದ ಸದರಿ ಶ್ರೀಗಳವರ ಸಮೇತ ತಾ|| ೧೩-೬-೩೧ ಶನಿವಾರ ಪ್ರಯಾಣಮಾಡಿ ಸೋಮವಾರ ದಿವಸ ಶ್ರೀ ಸೋಮೇಶ್ವರ ಲಿಂಗವನ್ನು ದರ್ಶನಮಾಡಿದೆನು. ಆಗ್ಗೆ ಆಚಾರ್ಯರ ವಿಷಯದಲ್ಲಿ ಮತ್ಸರ ಬುದ್ಧಿಯಿಂದ ಮಾಡುತ್ತಿದ್ದ [illegible] ಸುಳ್ಳಾಯಿತು. ಅನಂತರ ೨-೩ ದಿವಸ ಮುಕ್ಕಾಂಮಾಡಿ ಅಲ್ಲಿದ್ದ ಮುಖ್ಯಸ್ಥಾನಗಳನ್ನು ನೋಡಿ ಊರಿಗೆ ಬಂದೆವು. ಪರಸ್ಪರ ಇಂಥ ಅಲಭ್ಯಲಾಭವದಗಿದ್ದರಿಂದ ಆಚಾರ್ಯರ ಕೃಪಾದೃಷ್ಟಿಯು ಸಂಪೂರ್ಣವಾಗಿದ್ದದ್ದು ಮನವರಿಕೆಯಾಯಿತು. ಇದೇ ರೀತಿಯಾಗಿ ನಮ್ಮ ಪ್ರತಿಯೊಂದು ಕಾರ್ಯಗಳಲ್ಲಿ ಶ್ರೇಯೋಭಿವೃದ್ಧಿಯನ್ನು ಅಪೇಕ್ಷಿಸುವೆನು.

ಸಿದ್ಧೇಶ್ವರನಾರಾಯಣಪೇಟೆ,
ಹುಗ್ಗೆಳ್ಳಿ ಮಠ

ಶ್ರೀ ಮಲ್ಲಿಕಾರ್ಜುನ ಪ್ರಸೀದ

ಶ್ರೀ ಮಲ್ಲಿಕಾರ್ಜುನ ಮಾರ್ಕಾಂಡೇಯಾದಿ ದೇವತಾಪ್ರತಿಷ್ಠಾ ಮಹೋತ್ಸವ.

ಕೊಟ್ಟೂರು.

ಶ್ರೀ ಪ್ರಜೋತ್ಪತ್ತಿ ಸಂವತ್ಸರದ ಜೇಷ್ಠ ಬ|| ಬುಧವಾರ ದಿವಸ ಶ್ರೀ ಮಲ್ಲಿಕಾರ್ಜುನಸ್ವಾಮಿ, ಹಾಗೂ ಶ್ರೀ ನಂದಿ ಮಾರ್ಕಾಂಡೇಯ ಈ ದೇವತೆಗಳ ಪ್ರತಿಷ್ಠೆಯು ಅತಿವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ದೇವತಾ ಪ್ರತಿಷ್ಠೆಯನ್ನು ಮಾಡಿಸಬೇಕೆಂದು ಇಲ್ಲಿಯ ಪದ್ಮಸಾಲಿಯ ಬಹುತ್ತಮ ಸಂಘದವರು 3—4 ವರ್ಷಗಳಿಂದಲೂ ಧನಸಂಗ್ರಹಮಾಡಿ ಸುಂದರವಾಗಿಯೂ ಭದ್ರವಾಗಿಯೂ ಇರುವ ವಿಶಾಲವಾದ ಶಿಲಾಮಯ ದೇವಾಲಯವನ್ನು ಕಟ್ಟಿಸಿ, ಅದರಲ್ಲಿ ಶ್ರೀ|| ಷ|| ಬ್ರ|| ಬಿಲಕೇರಿ ಬೃಹನ್ಮಠದ ಪಟ್ಟಾಧ್ಯಕ್ಷರ ಆಚಾರ್ಯತ್ವದಿಂದಲೂ ತಮ್ಮ ವಿದ್ಯಾರ್ಥಿಮಂಡಳಿ ಸಮೇತರಾದ ಆಸ್ಥಾನ ವಿದ್ವಾನ್ ವೇ|| ಪಂ|| ಶಂಕರಶಾಸ್ತ್ರಿಗಳವರ ಪೌರೋಹಿತ್ಯದಿಂದಲೂ ನಡೆಯಿಸಿದ ಮೇಲ್ಕಂಡ ದೇವತಾಪ್ರತಿಷ್ಠಾ ಕಾರ್ಯದಲ್ಲಿ ಮಿ|| ಮ|| ಜಾಗಟಗೇರಿ ಸಣ್ಣವೀರಪ್ಪಯ್ಯನವರೂ, ಹಾಗೂ ಮ|| ರಾ|| ಕೂಲಹಳ್ಳಿ ಸೆಟ್ರು ಚನ್ನಬಸಪ್ಪನವರೂ ಮ ರಾ|| ಮೋಟ್ಯಾಳ ಶಾಂತವೀರಪ್ಪನವರೂ ತುಂಬಾ ಸಹಾಯಕರಾಗಿದ್ದರು. ಪ್ರಜೋತ್ಪತ್ತಿ ಸಂವತ್ಸರದ ಜ್ಯೇಷ್ಠ ಬ|| 10 ಬುಧವಾರ ಪ್ರಾತಃಕಾಲದಲ್ಲಿ ಶ್ರೀ ದಾರುಕಾಶ್ರಮದಲ್ಲಿ ಮೊದಲೇ ಇರಿಸಿದ್ದ ಮೇಲ್ಕಂಡ ದೇವತಾವಿಗ್ರಹಗಳನ್ನು ರಥದಮೇಲೆ ರಚಿಸಿದ ಆನೆಯಮೇಲೆ ಮುಹೂರ್ತಗೊಳಿಸಿ ಮುಂದುಗಡೆಯಲ್ಲಿ ಡೊಳ್ಳು ಮೊದಲಾದ ಅನೇಕವಾದ್ಯಗಳಿಂದಲೂ ಶ್ವೇತಛತ್ರ ಮೊದಲಾದ ಬಿರುದಾವಳಿಗಳಿಂದಲೂ ಭಜನಾಸಂಘದವರ ಭಜನೆಯಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದಿಂದಲೂ ಉತ್ಸವವು ಹೊರಟು, ತಳಿರುತೋರಣ ರಂಭಾಸ್ತಂಭಾದಿಗಳಿಂದ ಅಲಂಕೃತವಾದ ಪುರದ ಮುಖ್ಯಬೀದಿಗಳಲ್ಲಿ ಉತ್ಸವವು ಬಹು ವಿಜೃಂಭಣೆಯಿಂದ ನಡೆದು ಉದಯ 8 ಗಂಟೆಗೆ ಸರಿಯಾಗಿ ದೇವಾಲಯವನ್ನು ತಲ್ಪಿತು. ಆ ಮೇಲೆ ಪ್ರತಿಷ್ಠಾ ಕಾರ್ಯವು ಸಾಂಗವಾಗಿ ನೆರವೇರಿಸಲ್ಪಟ್ಟಿತು. ಮತ್ತು ಮರುದಿವಸ ಗಣಸಂತರ್ಪಣೆಯು ಜರುಗಿತು. ಹಾಗೂ ಪದ್ಮಸಾಲಿಯ ಬಹುತ್ತಮ ಸಂಘದವರಿಂದ ವೈದಿಕರಿಗೆ ಬಹುಮಾನವು ಮತ್ತು ಪ್ರಭಾಪೋಷನಗಾಗಿ ಮ|| ರಾ|| ಅರವ ಮುಲ್ಲಾರಪ್ಪನವರು ವೇ|| ಪಂ|| ಶಂಕರಶಾಸ್ತ್ರಿಗಳವರ ವಶಕ್ಕೆ ಎರಡು ರೂ. ಗಳನ್ನು ಅರ್ಪಿಸಿದರು. ಈಶ್ವರದೇವಾಲಯವನ್ನು ಕಟ್ಟಿಸುವಾಗ ಒಂದು ಕಲ್ಲನ್ನು ಹೊತ್ತು ತಂದುಕೊಟ್ಟ ಪಾಪಿಗೂ ಕೂಡ ಸದ್ಗತಿಯಾಯಿತೆಂದು ಪುರಾಣೇತಿಹಾಸಗಳಲ್ಲಿ ಹೇಳುತ್ತಿರುವಾಗ ಶಿಲಾಮಯವಾದ ದೇವಸ್ಥಾನವನ್ನೇ ಕಟ್ಟಿಸಿ, ಅದರಲ್ಲಿ ಶ್ರೀ ಮಲ್ಲಿಕಾರ್ಜುನಾದಿ ದೇವತೆಗಳನ್ನು ಪ್ರತಿಷ್ಠೆ ಮಾಡಿಸಿದ ಮ|| ರಾ|| ಅರವ ಮುಲ್ಲಾರಪ್ಪನವರು, ಮ|| ರಾ|| ಕಾಸಲ ದೊಡ್ಡತಿಪ್ಪಣ್ಣನವರು, ಮ|| ರಾ|| ಕಾಸಲ ಸಣ್ಣತಿಪ್ಪಣ್ಣನವರು, ಮ|| ರಾ|| ಬಿನುಗೊಂಡ ದೊಡ್ಡತಿಮ್ಮಪ್ಪನವರು, ಮ|| ರಾ|| ಮೋದಂ ಬಾಲಪ್ಪನವರು ಮ|| ರಾ|| ಮೋದಂ ಹನುಮಂತಪ್ಪನವರು ಮ|| ರಾ|| ಪಂಬಿರಿ ಗೌರಪ್ಪನವರು, ಮ|| ರಾ|| ಕೆಂಚೆ ಹನುಮಂತಪ್ಪನವರು, ಮ|| ರಾ|| ವಾಸೆ ಹನುಮಂತಪ್ಪನವರು, ಮ|| ರಾ|| ಕಾಸಲ ದೊಡ್ಡನರಸಿಂಹಪ್ಪನವರು ಇವರೇ ಮೊದಲಾದ ಪದ್ಮಸಾಲೀಯ ಬಹುತ್ತಮ ಸಂಘದವರಿಗೆ ಸದ್ಗತಿಯಾಗುವದರಲ್ಲಿ ಸಂದೇಹವೇನಿದೆ? ಇಂಥ ಪವಿತ್ರಕಾರ್ಯವನ್ನು ನೆರವೇರಿಸಿದ ಇವರೇ ಧನ್ಯರಲ್ಲವೇ?

ಓರ್ವ ಪ್ರತ್ಯಕ್ಷದರ್ಶಿ.

ಧರ್ಮಸುಧಾರಣಸಭಾ.

ಚಿಪ್ಪಗಿರಿ.

ಬಳ್ಳಾರಿ ಜಿಲ್ಲಾ ಆಲೂರು ತಾಲೂಕ ಪೈಕಿ ಚಿಪ್ಪಗಿರಿ ಗ್ರಾಮಕ್ಕೆ ಶ್ರೀ ಜಗದ್ಗುರು ಪರ್ವತ ಮಹಾಸಂಸ್ಥಾನ ಪ್ರತಿನಿಧಿಗಳಾದ ಶ್ರೀ|| ಷ|| ಬ್ರ|| ಶ್ರೀ ರೇವಣಸಿದ್ಧಶಿವಾಚಾರ್ಯ ಪಟ್ಟದ ಮಹಸ್ವಾಮಿಗಳು ಬೃಹನ್ಮಠ ಚಿಕ್ಕಮಂಜೂರು ಇವರು, ಇಲ್ಲಿಗೆ ಆಗಮಿಸಿ ಆಜುಬಾಜು ಗ್ರಾಮಗಳ ಕಾಣಿಕೆಯಂ ವಸೂಲು ಮಾಡುತ್ತ ದರ್ಶನಕ್ಕೆ ಬಂದ ಯುವಕರು ಭಕ್ತಮಾಹೇಶ್ವರರಿಗೆ ಧರ್ಮಬೋಧೆಮಾಡುತ್ತ ಸಂಚರಿಸುತ್ತಿರುವದು, ಪ್ರಸಿದ್ಧವೇ ಆದೆ. ಇದೇ ತಾ|| ೧೮-೬-೩೧ ರಲ್ಲಿ ಶ್ರೀ ಭೋಗೇಶ್ವರ ದೇವಸ್ಥಾನದಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಧರ್ಮಸುಧಾರಣೆಯೆಂಬ ಸಭೆಯನ್ನೇರ್ಪಡಿಸಿದ್ದುದು ಸಂತೋಷದ ಸಂಗತಿಯಾಗಿದೆ. ಸಭೆಗೆ ಸ್ವಮತ ಪರಮತೀಯರು ವಿಶೇಷವಾಗಿ ಆಗಮಿಸಿದ್ದರು. ಪ್ರಥಮದಲ್ಲಿ ವೇ|| ಗಾಯಕ ಶಿರೋಮಣಿ ಹಿರೇಮಠದ ಚನ್ನಬಸಯ್ಯನವರು ಚಿಪ್ಪಗಿರಿ ಇವರ ಶಾಸ್ತ್ರೀಯಸಂಗೀತವು ನಡೆಯಿತು. ಆ ಮೇಲೆ ಅಧ್ಯಕ್ಷರು ಜಗತ್ಸೃಷ್ಟಿಕರ್ತನಾದ ಪರಮಾತ್ಮನು ಎಲ್ಲ ಪ್ರಾಣಿಗಳನ್ನೂ ಸೃಷ್ಟಿಸಿ [illegible] ಮಾಡಿದ್ದರೂ ಸದಾಕಾಲದಲ್ಲಿ ಸುಖವನ್ನು ಕೊಡದೆ, ಸುಖಸ್ಯಾನಂತರಂ ದುಃಖಂ | ದುಃಖಸ್ಯಾನಂತರಂ ಸುಖಂ || ಎಂಬಂತೆ ಪ್ರತಿಯೊಂದು ಪ್ರಾಣಿಗಳಿಗೂ ಆರು ತಿಂಗಳ ಸುಖವನ್ನು ಆರುತಿಂಗಳ ದುಃಖವನ್ನು ಕಲ್ಪಿಸಿದ್ದಾನೆ. ಜಗತ್ತಿನಲ್ಲಿ ಯಾರೂ ದುಃಖವನ್ನಪೇಕ್ಷಿಸುವುದಿಲ್ಲ. ಸರ್ವರೂ ಸುಖವನ್ನೇ ಅಪೇಕ್ಷಿಸುತ್ತಾರೆ. ಹ್ಯಾಗೆಂದರೆ ಎರಡು ಕುಂಡಗಳನ್ನಿಟ್ಟು ಒಂದು ಕುಂಡದಲ್ಲಿ ಬೆಂಕಿಯನ್ನು ಹತ್ತಿಸಿ ಮತ್ತೊಂದು ಕುಂಡದಲ್ಲಿ ಸಕ್ಕರೆಯನ್ನು ಹಾಕಿಟ್ಟರೆ ಇರುವೆ ಮೊದಲಾದ ಪ್ರಾಣಿಗಳು ಬೆಂಕಿಯಿರುವ ಕುಂಡದ ಕಡೆಗೆ ಹೋಗದೆ ಸಕ್ಕರೆಯಿರುವ ಕುಂಡದ ಕಡೆಗೆ ಹೋಗುತ್ತವೆ. ಎಲ್ಲಿ ಬೆಂಕಿಯಿರುತ್ತದೆಯೊ ಅಲ್ಲಿ ದುಃಖ ಇದ್ದೇ ಇರುತ್ತದೆ. ಆದಕಾರಣ ಪರಮಶಿವನು ಸದಾ ನಮ್ಮಗಳಿಗೆ ದುಃಖಸುಖಗಳೆರಡನ್ನು ಕೊಟ್ಟಿರುತ್ತಾನೆ. ಸದಾ ಸುಖವನ್ನೇ ಪ್ರಾಣಿಗಳಿಗೆ ಕೊಟ್ಟರೆ ಗುರುಭಕ್ತಿ ಶಿವಭಕ್ತಿಗಳಿಲ್ಲದೆ ಧರ್ಮಭ್ರಷ್ಟರಾಗುತ್ತಾರೆಂದು ಆಲೋಚಿಸಿ ನಮ್ಮಗಳನ್ನು ಸುಖದುಃಖಾದಿಗಳಿಗೆ ಭಾಗಿಗಳನ್ನಾಗಿ ಮಾಡಿದ್ದಾನೆ. ಆದಕಾರಣ ಪ್ರತಿಯೊಬ್ಬ ಭಕ್ತಮಹೇಶ್ವರರು ಗುರುಭಕ್ತಿಯಿಂದಲೂ ಶಿವಭಕ್ತಿಯಿಂದಲೂ ಇದ್ದು ಲೌಕಿಕ ಸುಖವನ್ನು ಅನುಭವಿಸುತ್ತ ಪಾರಮಾರ್ಥಿಕ ಸುಖವನ್ನೂ ಕೂಡ ಅನುಭವಿಸಿ ಕೃತಾರ್ಥರಾಗಬೇಕು. ಲೌಕಿಕ ಸುಖವು ಕ್ಷಣಿಕವಾಗಿರುವದು. ಪಾರಮಾರ್ಥಿಕಸುಖವು ನಿತ್ಯವಾದದ್ದು. ಪ್ರತಿಯೊಬ್ಬ ಮತೀಯರು ಗುರುಭಕ್ತಿ, ಶಿವಭಕ್ತಿ ಸಂಪನ್ನರಾಗಿ ಧರ್ಮದಿಂದ ನಡೆದು ಧನ್ಯರಾಗಬೇಕೆಂದು ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಈ ಸ್ಥಲೀಯ ಪುರಪ್ರಮುಖರಾದ ವೇ|| ಹಿರೇಮಠದ ಬೂದಯ್ಯನವರು, ವೇ|| ಹಿರೇಮಠದ ಚನ್ನಬಸಯ್ಯನವರು, ಗಣಕಿ ಮಠದ ವೇ|| ರೇವಯ್ಯನವರು, ಕಾಲೇದಬೋಗಯ್ಯನವರು, ಪಾಟೀಲ ವಿರೂಪಾಕ್ಷಗೌಡರು, ಟಾಣಾಗುಂಡಿ ಮಲ್ಲಪ್ಪನವರು, ಪಾಟೀಲ ವೀರನಗೌಡರು ಬಂಟನಹಾಳ, ಶ್ರೀಮಂತ ಕುಂದನಗುರ್ಕಿ ವೆಂಕಟರಡ್ಡಿ, ಮೆಟ್ಟುಹಳ್ಳಿ ನಾಗರಡ್ಡಿ ಇವರೇ ಮೊದಲಾದ ಪ್ರಮುಖರು ಸಭಾಕಾರ್ಯವನ್ನು ಅತ್ಯುತ್ಸಾಹದಿಂದ ನಡೆಯಿಸಿ ಮಹೋಪಕಾರಿಗಳಾದರು.

ಬಿ. ಹೇಮಾದ್ರಿಶಾಸ್ತ್ರಿ.

ರಂಭಾಪುರೀ ಶ್ರೀ ಜಗದ್ಗುರುಗಳವರ ಆಗಮನ.

ತಿಪಟೂರು.

ಈ ತಿಂಗಳು 18 ನೆಯ ತಾರೀಖಿನ ದಿವಸ ಪ್ರಾತಃಕಾಲ ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರರಾದ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಉತ್ಸವವು ತಿಪಟೂರಲ್ಲಿ ಅಭೂತಪೂರ್ವವಾಗಿ ನಡೆಯಿತು. ಮಹಾಸನ್ನಿಧಿಯು ಪರಿವಾರದೊಂದಿಗೆ ರೈಲ್ವೇನಾದಲ್ಲಿ ಒಂಭತ್ತು ಘಂಟೆ ಸಮಯಕ್ಕೆ ಮೋಟರ್‌ಸಿಟಿ ಆಸ್ಪತ್ರೆಯ ಬಳಿ ಹಾಕಿದ್ದ ಚಪ್ಪರಕ್ಕೆ ದಯಮಾಡಿಸಿತು. ಮ|| ರಾ|| ಗೆಳಾದ ಮರಿಯಪ್ಪನವರು ಚನ್ನವೀರಪ್ಪನವರು, ಶಿವಲಿಂಗಾರಾಧ್ಯರು, ಗುಬ್ಬಿ ಹುಚ್ಚಪ್ಪನವರು, ಬಸಪ್ಪನವರು, ಗಿರಿಯಪ್ಪನವರು, ಸಂಜೀವಪ್ಪನವರು ಮುಂತಾದ ನಾಗರಿಕರೆಲ್ಲರೂ ಗುರುಭಕ್ತಿಯುಕ್ತರಾಗಿ ಕಾದಿದ್ದು, ಸಾಷ್ಟಾಂಗವಂದನಾದಿಗಳನ್ನು ಮಾಡಿ ಆಶೀರ್ವಾದವಂ ಪಡೆದು ಪ್ರಾರ್ಥನೆಯನ್ನು ಮಾಡಿದರು. ಮಹಾಸನ್ನಿಧಿಯವರು ಭಕ್ತರ ಪ್ರಾರ್ಥನೆಯ ಮೇರೆ ಸುವರ್ಣರಜತಮಯವಾದ ಆಂದೋಳಿಕೆಯಲ್ಲಿ ಮೂ[illegible]ಡಿದರು. ಹಸ್ತಿ ಅಶ್ವ ರಥ ಪದಾತಿಸೈನ್ಯವೂ ಸಾಲ್ಗೊಂಡು ಮುಂದುವರೆಯಿತು. ಶ್ವೇತಛತ್ರಾದಿ ಸಕಲ ಬಿರುದಾವಳಿಯೊಡನೆ ಉತ್ಸವವು ಹೊರಟಿತು. ವೇದಪಾಠಕರ ಮತ್ತು ಸ್ತುತಿಪಾಠಕರ ಮತ್ತು ವಾದ್ಯಗಳ ಧ್ವನಿಯು ನಭೋಮಂಡಲವನ್ನು ವ್ಯಾಪಿಸಿತು. ಗೌರವಾರ್ಥವಾಗಿ ಹತ್ತು ತೋಪುಗಳು ಹಾರಿಸಲ್ಪಟ್ಟುವು. ಮಹಮ್ಮದೀಯ ಮುಖಂಡರುಗಳು ಉರ್ದುಭಾಷೆಯಲ್ಲಿ ಬಿನ್ನವತ್ತಳೆಯನ್ನರ್ಪಿಸಿದರು. ವೆಂಕಟೇಶ್ವರಸ್ವಾಮಿ ಕೃಪಾಪೋಷಿತ ನಾಟಕಸಭೆಯವರು ತಾವು ಹಾಕಿಸಿದ್ದ ಚಪ್ಪರದಲ್ಲಿ ಖಾದಿಯ ಉಡುಪುಗಳನ್ನು ಧರಿಸಿಕೊಂಡು ದೇಶಮಾತೆಯ ಮತ್ತು ಮಹಾತ್ಮರ ಜಯಜಯಕಾರವನ್ನು ಮಾಡಿ ಸನ್ನಿಧಿಯವರಿಗೆ ಫಲವನ್ನರ್ಪಿಸಿದರು. ಉತ್ಸವವು ಮುಂದುವರಿಯಲು ಮತ್ತೊಂದು ಮಹಮ್ಮದೀಯ ಸಂಘದವರು ಧನ್ಯವಾದಗಳನ್ನರ್ಪಿಸಿದರು. ಪೇಟೆಯ ಅಂಗಡಿಗಳನ್ನೆಲ್ಲಾ ಅಲಂಕಾರಮಾಡಿದ್ದರು. ಸ್ವಾರಿಯು ಸಂತೆಪೇಟೆಮಾರ್ಗವಾಗಿ ದೊಡ್ಡಪೇಟೆಯಲ್ಲಿ ಹಾದು ಬಿಡಾರಕ್ಕೆ ಬಿಜಯಮಾಡಿತು. ಈ ಉತ್ಸವವನ್ನು ನೋಡಲು ಭಕ್ತಿಯಿಂದ ಸಾವಿರಾರು ಜನಗಳು ಪರಸ್ಥಲದಿಂದ ಆಗಮಿಸಿದ್ದರು. ಪೋಲೀಸ್‌ರವರು ಸಮರ್ಪಕನಾಗಿ ತಮ್ಮ ಕಾರ್ಯದಲ್ಲಿ ಜಾಗರೂಕರಾಗಿದ್ದರು. ಹೀಗೆ ತಿಪಟೂರ ಟೌನಿನಲ್ಲಿಯ ಗುರುಭಕ್ತರು ಅಸಾಧಾರಣಭಕ್ತಿಯಿಂದ ಮಹಾಸನ್ನಿಧಿಯವರನ್ನು ಉತ್ಸವದಿಂದ ಬರಮಾಡಿಕೊಂಡು ಗುರುಸೇವೆಯನ್ನು ಮಾಡುತ್ತಿರುವುದು ಸರ್ವಶ್ಲಾಘನೀಯವಾಗಿದೆ. ಈ ಗುರುಭಕ್ತರಿಗೆ ಶ್ರೀ ರೇಣುಕನು ಆಯುರ್ಭಾಗ್ಯಾದಿಗಳನ್ನಿತ್ತು ರಕ್ಷಿಸಲಿ.

ಕೂಪಪ್ರತಿಷ್ಠಾ ಮಹೋತ್ಸವ, ಬಂಕಾಪೂರ.

ಧಾರವಾಡ ಜಿಲ್ಲಾ ಬಂಕಾಪೂರವೆಂಬುವದು ಪೂರ್ವದಲ್ಲಿ ಬಂಕಯ್ಯನೆಂಬುವನು ಯಾತ್ರಾರ್ಥಿಗಳಿಂದ ಸುಂಕವನ್ನು ವಸೂಲು ಮಾಡುತ್ತಾ ಬಂದಿದ್ದರಿಂದ ಸುಂಕದ ಬಂಕಯ್ಯನೆಂಬ ಹೆಸರಿನಿಂದ ಈ ಗ್ರಾಮದಲ್ಲಿ ನೆಲಸಿದ್ದನೆಂತಲೂ ಸುಂಕದಕೇರಿಯೆಂದು ಕೆಲವು ಭಾಗಕ್ಕೆ ಹೆಸರು ಈಗಲೂ ರೂಢಿಯಲ್ಲಿರುವದೆಂತಲೂ ಈ ಪಟ್ಟಣವು 5 ಮೈಲಿ ಪಾಸಲೆ ಪಸರಿಸಿಕೊಂಡಿತ್ತೆಂತಲೂ ಇವರ [illegible]ದನಂತರ ರಾಷ್ಟ್ರಕೂಟದ ಬಂಕಯ್ಯನೆಂಬ ಹೆಸರುಳ್ಳ ಅರಸಿನ ಸ್ವಾಧೀನವಾದ ಕಾಲದಲ್ಲಿ ಬಂಕನಾಥಾಲಯವು ಪಟ್ಟಣದ ಕೋಟೆ ಪಶ್ಚಿಮಭಾಗದಲ್ಲಿ ಪ್ರಸಿದ್ಧವಿರುತ್ತದೆ. ಸದರಿ ದೇವಾಲಯದ ಪಕ್ಕದಲ್ಲಿದ್ದ ಭಾವಿಯು ಶಿಥಿಲವಾಗಿ ಪ್ರಯೋಜಕರಿಗೆ ನೀರಿನ ತೊಂದರೆಯು ಉಂಟಾದ್ದರಿಂದ ಸದ್ಭಕ್ತಿ ಸಂಪನ್ನರೂ, ಗುರುಭಕ್ತರೂ, ಲಿಂಗಪೂಜಾನಿಷ್ಠರೂ, ಸುಶೀಲರೂ, ಆಚಾರವಂತರೂ ಆದ ಶ್ರೀಮಂತ ಮಲ್ಲಿಕಾರ್ಜುನಪ್ಪ ಬಸವಲಿಂಗಪ್ಪ ಮಾಮಲೆ ದೇಸಾಯಿ ವ ನಾಡಕರ್ಣಿ ಸಂಸ್ಥಾನ ಹಂದಿಗನೂರು ಸಾಕೀನ ಬಂಕಾಪುರ, ಇವರು ಸಾವಿರಾರು ರೂಪಾಯಿಗಳ ಖರ್ಚಿನಿಂದ ಮೇಲ್ಕಂಡ ಭಾವಿಯನ್ನು ಜೀರ್ಣೋದ್ಧಾರ ಮಾಡಿಸಿ ವಂಶಗುರುಗಳಾದ ಮಳಲಿ ಮಠಾಧ್ಯಕ್ಷರಾದ ಶ್ರೀ ಗುರು ನಾಗಾರ್ಜುನ ಶಿವಾಚಾರ್ಯರನ್ನು ಬರಮಾಡಿಕೊಂಡು ತಂಗಳೆ ಹಿರೇಮಠದ ವೇ|| ಕಲ್ಲಿನಾಥದೀಕ್ಷಿತರು ಶಿಗ್ಗಾವಿ ಹಿರೇಮಠದ ಚರಪಟ್ಟಾಧ್ಯಕ್ಷರು ಅನೇಕ ಭಕ್ತಮಾಹೇಶ್ವರ ಮೊದಲಾದವರೊಂದಿಗೆ ಗುರುವಾರ ದಿವಸ ಪ್ರಯಾಣ ಬೆಳೆಯಿಸಿ ಮಳಲಿಮಠದ ಶ್ರೀಗಳವರನ್ನು ಮೇನಾದಲ್ಲಿ ಮಂಡಿಸಿ ಅವುಮನೆ ಪದ್ಧತಿಪ್ರಕಾರ ವಾದ್ಯಘೋಷದೊಡನೆ ಪೇಟೆಯಲ್ಲಿ ಉತ್ಸವವು ಹೊರಟು ರಾತ್ರಿ 11 ಘಂಟೆ ಸಮಯಕ್ಕೆ ಬಂಕನಾಥಾಲಯಕ್ಕೆ ತಲ್ಪಿತು. ಜೇಷ್ಠ ಬಹುಳ ಶುಕ್ರವಾರ ವಿಧಿವತ್ತಾಗಿ ಕೂಪಪ್ರತಿಷ್ಠಾ ಕಾರ್ಯಗಳನ್ನು ಸಾಂಗಗೊಳಿಸಿ ಬಂಕನಾಥೇಶ್ವರನಿಗೆ ರುದ್ರಾಭಿಷೇಕವನ್ನು ಮಾಡಿಸಿ ಗುರುಗಳವರ ಸನ್ನಿಧಿಯಲ್ಲಿ ಒಂಬತ್ತು ವಟುಗಳಿಗೆ ಧರ್ಮಾರ್ಥವಾಗಿ ಶಿವದೀಕ್ಷಾ ಸಂಸ್ಕಾರವನ್ನು ಮಾಡಿಸಿದರು. ಈ ಕಾರ್ಯಕ್ಕಾಗಿ ಆಗಮಿಸಿದ ಸ್ಥಲ ಪರಸ್ಥಲ ಭಕ್ತಮಾಹೇಶ್ವರ ಮೊದಲಾದ ಸಾವಿರಾರು ಪ್ರಜೆಗಳಿಗೆ ಷಡ್ರಸೋಪೇತ ಭೋಜನದಿಂದ ತೃಪ್ತಿಪಡಿಸಿ ದಾನಧರ್ಮ ಭೂರಿದಕ್ಷಿಣೆಗಳನ್ನು ಕೊಟ್ಟು ಸರ್ವರನ್ನೂ ಆನಂದಗೊಳಿಸಿದರು. ಜೇಷ್ಠ ಬಹುಳ ೬ ಶನಿವಾರ ಗುರುಪೂಜೆಯನ್ನು ತೀರಿಸಿಕೊಂಡು ಮಧ್ಯಾಹ್ನ 4 ಘಂಟೆಯಿಂದ ಹೊರಟು ಕೊಟ್ಟಿಗೆರಿ ಮಾರ್ಗವಾಗಿ ಸಕಲ ಬಿರುದಾವಳಿ ಸಹಿತ ಮಳಲಿ ಶ್ರೀಗಳ ಉತ್ಸವವು ಹೊರಟಿತು. ಸಾವಿರಾರು ಪ್ರಜೆಗಳು ಕಿಕ್ಕಿರಿದು ಆನಂದಭರಿತರಾಗಿ ಭಕ್ತಿಯಿಂದ ದಾರಿಯುದ್ದಕ್ಕೂ ಫಲಾವಳಿಗಳನ್ನರ್ಪಿಸುತ್ತಿದ್ದರು. ಇದರೊಳಗಾಗಿ ಮೇಘರಾಜನು ತುಂತುರು ಹನಿಗಳಿಂದ ರಾಜಬೀದಿಯನ್ನು ಶುದ್ಧಗೊಳಿಸಿ ಆನಂದವನ್ನುಂಟುಮಾಡಿದನು. ಉತ್ಸವವು ರಾತ್ರಿ 12 ಘಂಟೆಗೆ ದೇಸಾಯಿಗಳವರ ಅರಮನೆ ತಲ್ಪಿತು. ಶ್ರೀಗಳವರು ಭದ್ರಪೀಠವನ್ನು ಅಲಂಕರಿಸಿದ ಮೇಲೆ ಶಿಗ್ಗಾವಿ ಚರಪಟ್ಟಾಧ್ಯಕ್ಷರವರು ಹಾವೇರಿ ಗೌರಿ ಹಿರೇಮಠದ ಸಂಗೀತ ವಿದ್ವಾನ್ ಜಯದೇವ ಗವಾಯಿಗಳವರು ಧರ್ಮಸಂಬಂಧಿಯಾದ ಭಾಷಣಮಾಡಿದರು. ಬಳಿಕ ಭಾವಿಯನ್ನು ಕಟ್ಟಿದ ಒಡ್ಡರಿಗೆ ದೊತ್ರ, ರುಮಾಲು, ಶಿರೆ, ಚೋಲಿ, ಕಡೇವುಗಳು ಯಥೋಚಿತವಾಗಿ ಇನಾಮು ಕೊಡಲ್ಪಟ್ಟವು. ಈ ಕಾರ್ಯಕ್ಕಾಗಿ ಆಗಮಿಸಿದ್ದ ಶಾಸ್ತ್ರಿಗಳೇ ಮೊದಲಾದವರಿಗೆ ಸಂಭಾವನೆಯನ್ನಿತ್ತರು. ಉದಾರಭಾವದಿಂದ ಈ ಮಹತ್ಕಾರ್ಯವನ್ನು ಮಾಡಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಪುಣ್ಯವನ್ನೂ ಸಂಪಾದಿಸಿದ ಮಲ್ಲಿಕಾರ್ಜುನಪ್ಪ ದೇಸಾಯಿಯವರಿಗೂ ಇವರ ಪುತ್ರಮಿತ್ರ ಮೊದಲಾದವರಿಗೂ ಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುತ್ತೇವೆ.

ಮಹದೇವಪ್ಪ, ಬಂಕಾಪೂರ.

ಆಸ್ಟ್ರಿಯಾದಲ್ಲಿ ಗಂಡಂದಿರು ಬೇಡವಾದ ಹೆಂಗಸರಿಗೆ ನೇರವಾದ ಒಂದೇ ಮಾರ್ಗವಿದೆ. ಈ ಮಾರ್ಗವನ್ನು ಕೆಲವು ಸೂಲಗಿತ್ತಿಯರು ಸೂಚಿಸಿದರು. ಗಂಡಂದರಿಗೆ ವಿಷಹಾಕುವುದೇ ಸುಲಭವಾದ ಮಾರ್ಗ. ಆಸ್ಟ್ರಿಯಾದ ಕೆಲವು ಹಳ್ಳಿಗಳಲ್ಲಿ ಅಕಸ್ಮಾತ್ 21 ಜನ ಗಂಡಸರು ಸತ್ತರು. ಇದೇನಿರಬಹುದೆಂದು ಸರ್ಕಾರದವರು ಕಣ್ಣು ತೆರೆದು ನೋಡಲಿಕ್ಕೆ ಹತ್ತಿದರು. ಈ ರಹಸ್ಯ ಮಾರ್ಗವು ಹೊರಬಿತ್ತು. ಇಬ್ಬರು ಸ್ತ್ರೀಯರಿಗೆ ಫಾಶಿ ಶಿಕ್ಷೆಯಾಯಿತಲ್ಲದೆ ಕೆಲವರಿಗೆ ಆಜನ್ಮ ಶಿಕ್ಷೆಯಾಯಿತು.

ಕಲ್ಕತ್ತೆಯಲ್ಲಿ ಮಿ|| ಪಿ. ಜಿ. ಪಾರ್ಕಿನ್ಸನ್ ಎಂಬೊಬ್ಬ ಪಾದ್ರಿಯು ಮಿ|| ವಿಲ್ಕಿನ್ಸನ್ ಎಂಬ ಗೃಹಸ್ಥನ ಧರ್ಮಗುರುವಾಗಿ ಅವನ ಮನೆಯಲ್ಲಿಯೇ ವಾಸವಾಗಿದ್ದನು. ಮಿ|| ವಿಲ್ಕಿನ್ಸನ್ನನು ಕೇವಲ ಸರಳಸ್ವಭಾವದವನು. ಅವನ ಪತ್ನಿಯೂ ಸಹ ಇವನ ಡಂಭಾಚಾರವನ್ನು ತಿಳಿಯದೆ ಕೇವಲ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಳು. ಒಂದು ದಿವಸ ಈ ಧರ್ಮಗುರುವು ಆ ಸ್ತ್ರೀಯಳನ್ನು ನಿರ್ಜನಪ್ರದೇಶಕ್ಕೆ ಕರೆದುಕೊಂಡುಹೋಗಿ ಆಕೆಯೊಡನೆ ತನ್ನ ಪತ್ನಿಯಸಂಗಡ ವರ್ತಿಸುವಂತೆ ವರ್ತಿಸಹತ್ತಿದನು. ಅನಂತರ ಇವನ ನಿಜಸ್ಥಿತಿಯು ಹೊರಬಿದ್ದು 9 ತಿಂಗಳ ಶಿಕ್ಷೆಗೆ ಗುರಿಯಾಗಿರುವನು.

ಗುಜರಾಥ ದೇಶದಲ್ಲಿ ಕಳೆದ ಸತ್ಯಾಗ್ರಹ ಚಳವಳಿಯಲ್ಲಿ ಭಾಗಿಗಳಾದ ವಿದ್ಯಾರ್ಥಿಗಳನ್ನು ಪುನಃ ಶಾಲೆಗೂ ಮತ್ತು ಕಾಲೇಜಿಗೂ ಸೇರಿಸಿಕೊಳ್ಳುವುದಿಲ್ಲವೆಂದೂ ಇನ್ನು ಮುಂದೆ ರಾಜಕೀಯ ಚಳವಳಿಯಲ್ಲಿ ಭಾಗವಹಿಸುವುದಿಲ್ಲವೆಂದು ವಿದ್ಯಾರ್ಥಿಗಳ ತಂದೆತಾಯಿಗಳು ಮುಚ್ಚಳಿಕೆ ಬರೆದುಕೊಟ್ಟರೆ ಶಾಲೆಗೆ ಸೇರಿಸಿಕೊಳ್ಳುತ್ತೇವೆಂದೂ ಶಾಲೆಗಳ ಮುಖ್ಯೋಪಾಧ್ಯಾಯರು ಹೇಳುತ್ತಿರುವರು. ಮಹಾತ್ಮಾ ಗಾಂಧಿಯವರು ಮುಚ್ಚಳಿಕೆ ಬರೆದುಕೊಡಬೇಡಿರಿ, ಮುಂದಿನ ವರ್ಷದ ಆದಿಯೊಳಗೆ ನಮ್ಮ ಕೇಳಿಕೆಗಳನ್ನು ಸರ್ಕಾರದವರು ನಡೆಯಿಸದಿದ್ದರೆ ನಾವು ಬೇರೆ ಕಾರ್ಯಕ್ರಮವನ್ನು ತಯಾರಿಸುತ್ತೇವೆಂದು ಹೇಳಿರುವರು.

ಕ್ವಿಲಾನಿನಲ್ಲಿ ಆರು ಕಾಲುಗಳಿರುವ ಒಂದು ಹಸುವೂ, ಒಂದು ಮೇಕೆಯೂ, ಐದು ಕಾಲುಗಳುಳ್ಳ ಒಂದು ಮೇಕೆಯೂ ಪ್ರದರ್ಶಿಸಲ್ಪಟ್ಟುವು. ಹಸುವಿನ ಹೊಟ್ಟೆಯು ಬಹು ದೊಡ್ಡದಾಗಿರುವುದಲ್ಲದೆ ಎರಡು ಮೂತ್ರದ್ವಾರಗಳೂ, ಎರಡು ಮಲದ್ವಾರಗಳೂ ಇವೆ. ಈ ನಾಲ್ಕು ದ್ವಾರಗಳಿಂದಲೂ ಮಲಮೂತ್ರ ವಿಸರ್ಜನೆಯಾಗುವುದು. ಹೆಚ್ಚಾದ ಎರಡು ಕಾಲುಗಳು ಹಿಂದಿನ ಕಾಲುಗಳಿಗಂಟಿಕೊಂಡು ನೇತಾಡುತ್ತಿವೆ. ಆರು ಕಾಲುಗಳುಳ್ಳ ಮೇಕೆಗೆ ಹೆಚ್ಚಾದ ಎರಡು ಕಾಲುಗಳು ಹಿಂಗಾಲುಗಳಿಗಂಟಿಕೊಂಡು ನೇತಾಡುತ್ತಿವೆ. ಮತ್ತು [illegible]ಂತದ ಪಂಜಾದಂತೆ ಪಂಜಾ ಇದೆ. ಐದು ಕಾಲುಗಳುಳ್ಳ ಮೇಕೆಯ ಐದನೆಯ ಕಾಲಿಗೆ ಹುಲಿಯ ಪಂಜಾದಂತೆ ಪಂಜಾಯಿದೆ. ಈ ಸೃಷ್ಟಿವೈಚಿತ್ರ್ಯವು ಪ್ರೇಕ್ಷಕರಿಗೆ ವಿಸ್ಮಯವನ್ನುಂಟುಮಾಡುತ್ತಿದೆ.

ಪಂಡಿತ ಜವಾಹರಲಾಲನೆಹರುರವರು ಪತ್ನೀಪುತ್ರಿಯರೊಡನೆ ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಸಂಚರಿಸಿ ತಮ್ಮ ಉಪದೇಶಾಮೃತದಿಂದ ಎಲ್ಲರನ್ನೂ ಸಂತುಷ್ಟಚಿತ್ತರನ್ನಾಗಿ ಮಾಡಿ ಅಲಹಾಬಾದಿಗೆ ಚಿತ್ತೈಸಿದರು. ಇವರನ್ನು ಇದಿರ್ಗೊಳ್ಳಲು ಲಕ್ಷಾಂತರ ಜನರು ಸ್ಟೇಷನ್ನಿಗೆ ಬಂದಿದ್ದರು. ಆಗ ಒಬ್ಬ ಮಹಮ್ಮದೀಯನು ಜವಾಹರಲಾಲರ ಪತ್ನಿಯವರನ್ನು ಇರಿದುಕೊಲ್ಲಬೇಕೆಂದು ಹೋದನು. ಸ್ವಯಂಸೇವಕರು ಮಧ್ಯದಲ್ಲಿ ಬಂದ ಘಾತಕ ಆಯುಧಕ್ಕೆ ಎದೆಗೊಟ್ಟು ತಾವು ಇರಿಸಿಕೊಂಡರು. ಇವರನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿದರು. ಈಗ [illegible]ಕೊಂಡುತ್ತಿರುವರು. ಕೂಡಲೇ ಆ ನರಾಧಮನು [illegible]ಗಿರಿ ಮಾಡಲ್ಪಟ್ಟು ಪೋಲೀಸರ ಸ್ವಾಧೀನದಲ್ಲಿರುವನು. ಇವನು ಹುಚ್ಚನೆಂದು ಕೆಲವರು ಹೇಳುವರು. [illegible]ನು ಹುಚ್ಚನೋ ಸುತಭ್ರಾಂತನೋ ತಿಳಿಯದಾಗಿದೆ. ಸ್ವಯಂಸೇವಕರ ಧೈರ್ಯವೇ ಧೈರ್ಯ! ಅವರ [illegible]ಭಕ್ತಿಯೇ ಭಕ್ತಿ!

ಅಮೇರಿಕೆಗೆ ಸೇರಿದ ಓಹಿಯೊ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಮಿ|| ಹರ್ಬರ್ಟ್ ಎ. ಮಿಲ್ಲರ್ ಎಂಬವರು ಸಂಚಾರಾರ್ಥವಾಗಿ ಕಳೆದ ವರ್ಷ ಹಿಂದುಸ್ಥಾನಕ್ಕೆ ಆಗಮಿಸಿದರು. ಆಗ ಸತ್ಯಾಗ್ರಹ ಚಳವಳಿಯು ಬಹು ಉಜ್ವಲಸ್ಥಿತಿಯಲ್ಲಿತ್ತು. ಬಿಸಿಲಿನ ಮುಖವನ್ನು ನೋಡದ ಸಾಧ್ವೀಮಣಿಯರೂ, ಆಡಿಕೊಂಡಿರುವ ಮಕ್ಕಳೂ ಸಹ ಜೈಲಿಗೆ ಹೋಗುತ್ತಿರುವುದನ್ನು ನೋಡಿ ಪ್ರೊಫೇಸರರ ಮನಸ್ಸು ಕರಗಿತು. ಭಾರತೀಯರ ಚಳವಳಿಯು ಜಯಪ್ರದವಾದರೆ, ಆ ಸತ್ಯಾಗ್ರಹವು ಜಗತ್ತಿಗೆ ಆದರ್ಶನೀಯವಾಗುವುದೆಂದು ಬೊಂಬಾಯಿಯಲ್ಲಿ ಪ್ರೊಫೇಸರರು ಭಾಷಣಮಾಡಿದರು. ಈ ಸುದ್ದಿಯು ಅಮೇರಿಕೆಯ ವಿಶ್ವವಿದ್ಯಾನಿಲಯದ ಅಧ್ಯಕ್ಷರಿಗೆ ತಿಳಿಯಿತು. ಆಗ ಅವರು "ನಾವು ಇಂಗ್ಲೆಂಡಿನೊಡನೆ ಮೈತ್ರಿಯಿಂದ ಇದ್ದೇವೆ; ಇಂಗ್ಲೀಷರ ಮೇಲೆ ಚಳವಳಿ ಮಾಡುತ್ತಿರುವ ಹಿಂದೂಗಳಿಗೆ ಪ್ರೋತ್ಸಾಹಕೊಟ್ಟುದು ಪ್ರೊಫೇಸರರ ತಪ್ಪು" ಎಂದು ಅವರನ್ನು ಕೆಲಸದಿಂದ ವಜಾಮಾಡಿದರಂತೆ!

ಅಲಹಾಬಾದ್ ಜಿಲ್ಲೆಗೆ ಸೇರಿದ ಭಕವಾಡಿ ಎಂಬ ಗ್ರಾಮದ ಜಮೀನ್ದಾರನಾದ ಜನಾದಮಸೇನ್ ಎಂಬವನು ತನ್ನ ಸಂಗಡ ಆಳುಗಳನ್ನು ಕರೆದುಕೊಂಡು ಕಂದಾಯ ವಸೂಲ್ಮಾಡುವುದಕ್ಕೆ ಹೋದನು. ರೈತರು ಈಗ ನಾವು ಕಂದಾಯಕೊಡಲಾರೆವು; ಮನ್ನಾಮಾಡಿರೆಂದು ಬೇಡಿಕೊಂಡರು. ಜಮೀನ್ದಾರನು ಕಂದಾಯವನ್ನು ಕೊಟ್ಟೇ ತೀರಬೇಕೆಂದು ಆಗ್ರಹಮಾಡಿದನು. ಆಗ ಜಗಳವು ಹುಟ್ಟಿತು. ರೈತರ ಸಹಾಯಕ್ಕೆ ಹಳ್ಳಿಯ ಜನರು ದೊಣ್ಣೆಗಳನ್ನು ತೆಗೆದುಕೊಂಡು ಬಂದರು. ಜಮೀನ್ದಾರನು ಬಂದೂಕ ಹಾರಿಸಿದನು. ಒಬ್ಬ ರೈತನು ಸತ್ತು ಅನೇಕರು ಗಾಯಗೊಂಡರು. ಜಮೀನ್ದಾರನ ಗುಂಡುಗಳೆಲ್ಲವೂ ತೀರಿದವು. ಆಗ ಅವನು ಕುದುರೆ ಹತ್ತಿ ಹೋಗಬೇಕೆಂದು ಹವಣಿಸಿದನು. ಆದರೆ ಅವನ ಕುದುರೆಯು ಗಲಭೆಯನ್ನು ನೋಡಿ ಹೆದರಿ ಮುಂದಕ್ಕೆ ಅಡಿಯಿಡಲಿಲ್ಲ. ಜಮೀನ್ದಾರನು ರೈತರ ಹೊಡೆತಕ್ಕೆ ಸಿಕ್ಕು ಮೃತಪಟ್ಟನು. ಅನಂತರ ರೈತರು ಅವನ ಆಳುಗಳನ್ನೂ ಕೊಂದುಹಾಕಿ ಜಮೀನ್ದಾರನ ಕಳೇಬರವನ್ನು ಒಂದು ಮೈಲುದೂರ ಎಳೆದುಕೊಂಡುಹೋಗಿ ಅಲ್ಲಿ ಬಿಸಾಡಿದರಂತೆ!

ಮಹಾತ್ಮ ಗಾಂಧಿಯವರ ಅಸ್ತ್ರಸಚಿವರಾದ ಶ್ರೀಯುತ ಮಹಾದೇವದೇಸಾಯಿಯವರು ಬೊರ್ಸಾದ ತಾಲ್ಲೂಕಿನ ದನಲ್ಪುರವೆಂಬ ಹಳ್ಳಿಗೆ ಹೋದರು. ಆ ಊರಿನಲ್ಲಿ ಎರಡು ವರ್ಷ ಕಂದಾಯಕೊಡದೆ ಹೋದ ಕಾರಣ 12 ಜನ ರೈತರ ಹೊಲಗಳನ್ನು ಸರ್ಕಾರದವರು ಹರಾಜುಮಾಡಿಸಿದರು. ಆ ಜಮೀನುಗಳನ್ನು ಪೆಟ್ಲೆಂಡ್ ಎಂಬ ಹಳ್ಳಿಯ ಕೆಲವು ಮಹಮ್ಮದೀಯರು ಕೊಂಡುಕೊಂಡಿದ್ದಾರೆ. ಅದೂ ಅಲ್ಲದೆ ಅವರ ಚರಾಸ್ತಿಗಳನ್ನೂ ಸರ್ಕಾರದವರು ಜಪ್ತುಮಾಡಿದ್ದಾರೆ. ರಾಷ್ಟ್ರದ ಸಲುವಾಗಿ ಇಂಥ ಅನಂತ ಕಷ್ಟಗಳಿಗೀಡಾದ ರೈತರಿಗೆ ಅಭಿನಂದನಮಾಡುವುದರ ಸಲುವಾಗಿ ಅಲ್ಲಿ ಒಂದು ಸಭೆಯು ಸೇರಿತ್ತು. ಆಗ ದೇಸಾಯಿಯವರು—"ಬೊರ್ಸಾದ ತಾಲ್ಲೂಕಿನ ರೈತರು ಮಾಡಿದ ಸ್ವಾರ್ಥತ್ಯಾಗದಿಂದ ಜಗದ್ವಿಖ್ಯಾತರಾಗಿದ್ದಾರೆ. ಅವರ ಮಕ್ಕಳುಮರಿಗಳಿಗೆ ಜಮೀನುಗಳಿಗಿಂತಲೂ ಈ ಅನುಪಮ ಕೀರ್ತಿಯು ಹೆಚ್ಚಿನ ಆಸ್ತಿಯಾಗಿದೆ. ಜಮೀನು ಕೊಂಡವರಿಗೆ ಅವರು ಸ್ವತಃ ಮಾಡುವ ಕೆಲಸಗಳಿಗೆ ತೊಂದರೆಮಾಡಬೇಡಿರಿ. ನೀವು ಯಾರೂ ಅವರ ಕೆಲಸಕ್ಕೆ ಹೋಗಬಾರದು. ಸರ್ಕಾರದವರೊಡನೆ ಮಾಡಿಕೊಂಡಿರುವ ಒಪ್ಪಂದವು ಶಾಶ್ವತವಾದರೆ ಎಲ್ಲ ಅನ್ಯಾಯಗಳು ನಿರ್ಮೂಲವಾಗುವುವು. ಒಪ್ಪಂದವು ಮುರಿದರೆ ಇದಕ್ಕಿಂತಲೂ ಹೆಚ್ಚಿನ ಸ್ವಾರ್ಥತ್ಯಾಗಮಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಬೇಕು." ಎಂದು ಭಾಷಣ ಮಾಡಿದರು.

ಅಮೇರಿಕೆಯ ಪೋಸ್ಟ್ ಮತ್ತು ಹೆರಾಲ್ಡ್ ಗ್ಯಾಟಿ ಎಂಬವರು ವಿನ್ನಿಮೇ ಎಂಬ ಆಕಾಶವಿಮಾನದಲ್ಲಿ ಏಳು ದಿವಸಗಳಲ್ಲಿ ಜಗತ್ತನ್ನೇ ಸುತ್ತಿಕೊಂಡು ಬರಬೇಕೆಂದು ಹೊರಟಿರುವರು. ಈ ತಿಂಗಳು 23 ನೆಯ ತಾರೀಖಿನ ದಿವಸ ಅಮೇರಿಕೆಯಿಂದ ಹಾರ್ಬರ್‌ಗ್ರೇಸ್ ಎಂಬಲ್ಲಿಗೆ ಹೋದರು. ಅಲ್ಲಿ ಹಾಲ್ರಿಸ್ ಮತ್ತು ಹಿಲ್ಲಾಗ್ ಎಂಬ ಹಜ್ಜದೇಶದ ವೈಮಾನಿಕರು ಇವರನ್ನು ಕಾಯುತ್ತಿದ್ದರು. ಅಲ್ಲಿಂದ ಅಮೇರಿಕೆಯ ಮತ್ತು ಹಜ್ಜಿನ ವೈಮಾನಿಕರು ಜಗತ್ತನ್ನು ಏಳು ದಿವಸಗಳಲ್ಲಿ ಸುತ್ತಿಬರುವುದಕ್ಕೆ ಜೂಜುಕಟ್ಟಿ ಹೊರಟರು. 24 ನೆಯ ತಾರೀಖಿನ ದಿವಸ ಅಮೇರಿಕೆಯ ವೈಮಾನಿಕರು ವೇಲ್ಸ್ ದಾಟಿಹೋಗಿದ್ದರು. ಅನಂತರ 14 ಗಂಟೆಗಳಲ್ಲಿ ಅಟ್ಲಾಂಟಿಕ್ ಸಾಗರದ 2200 ಮೈಲುಗಳನ್ನು ದಾಟಿದರು. ಅವರು ಜರ್ಮನಿಯ ಬರ್ಲಿನ್ನಿಗೆ ಹೋಗಬೇಕೆಂದು ನಿಶ್ಚಯಿಸಿದ್ದರು. ಆದರೆ ಐರ್ಲೆಂಡಿನ ಹತ್ತಿರ ಮಂಜಿನಿಂದ ದಾರಿಯು ಸಿಗದೇ ಹೋದ ಕಾರಣ ಅಲ್ಲಿ ಸ್ವಲ್ಪ ಹೊತ್ತು ಇಳಿದು ಮಧ್ಯಾಹ್ನ 2½ ಗಂಟೆಗೆ ಬರ್ಲಿನ್ನಿಗೆ ಹೋದರು. ಆಗ ಲಕ್ಷಾಂತರ ಜನರು ಇವರನ್ನು ನೋಡಲು ಬಂದಿದ್ದರು. ಇವರು ಬರ್ಲಿನ್, ಮಾಸ್ಕೋ, ಸೈಬೀರಿಯಾ, ಅಲಾಸ್ಕಾ, ಕನಡಾಮಾರ್ಗವಾಗಿ ಸಂಚಾರಮಾಡುವರು. ಹಜ್ಜಿನ ವೈಮಾನಿಕರು 24 ನೆಯ ಪ್ರಾತಃಕಾಲ ಅಟ್ಲಾಂಟಿಕ್ ಸಾಗರವನ್ನು ದಾಟಿದರು. ಈ ಮೊದಲು ಗ್ರಾಫ್‌ಜಪಲೀನ್ ಎಂಬವನು 20 ದಿವಸಗಳಲ್ಲಿ ಜಗತ್ತನ್ನು ಸುತ್ತಿ ಬಂದಿದ್ದನು.

ಹೊಟ್ಟೆಬೇನೆ.

ಈ ಮೇಲ್ಕಂಡ ರೋಗವು ಅತ್ಯಂತ ಕಷ್ಟದಾಯಕವಾದುದೆಂಬ ವಿಷಯವು ಸರ್ವರಿಗೂ ವೇದ್ಯವೇ ಇದೆ. ನಮ್ಮ ಇಂಡಿಯಾದೇಶದಲ್ಲಿ ಈ ರೋಗದಿಂದ ಪ್ರತಿವರ್ಷ ಸಾವಿರಾರು ಜನರು ಮರಣಹೊಂದುತ್ತಿದ್ದಾರೆ. ಈ ರೋಗದಬಾಧೆಯನ್ನು ತಡಯಲಾರದೆ ಎಷ್ಟೋ ಜನರು ಕೆರೆ, ಬಾವಿ, ನದಿಗಳಪಾಲಾಗುತ್ತಿರುವರು. ಸಕಲ ರೋಗಗಳನ್ನು ಗುಣಮಾಡುತ್ತೇವೆಂದು ಎದೆತಟ್ಟಿಕೊಂಡು ಹೇಳುವ ಪಾಶ್ಚಾತ್ಯವೈದ್ಯರೂ ಸಹ ಈವರೆಗೆ ಈ ರೋಗಕ್ಕೆ ಸರಿಯಾದ ಔಷಧವನ್ನು ಕಂಡುಹಿಡಿದಿರುವದಿಲ್ಲ. ಈ ಕಠಿಣರೋಗವು ನಮ್ಮ ಆಯುರ್ವೇದಗಳಾದ ಶಾಸ್ತ್ರೋಕ್ತದಿವ್ಯೌಷಧಿಗಳಿಂದಲೇ ಗುಣವಾಗಬೇಕಲ್ಲದೆ ಬೇರೆ ಮಾರ್ಗವಿಲ್ಲ. ಈ ರೋಗವನ್ನು ಗುಣಪಡಿಸುವುದರಲ್ಲಿ ಮೈಸೂರು ದಿವಾನ್ಸ್ ರೋಡು (ಗೊಲ್ಲಗೇರಿ) 227 ನೆಯ ನಂಬರಿನ ಮನೆಯಲ್ಲಿ ವಾಸವಾಗಿರುವ ಮ|| ರಾ|| ಗುಂಡ್ಲುಪೇಟೆ ಆರ್. ಎಸ್. ಪಂಡಿತರು ಬಹು ಸಮರ್ಥರಾಗಿದ್ದಾರೆ. ಇವರ ಔಷಧಪ್ರಯೋಗದಿಂದ ರಾಜಧಾನಿಯಲ್ಲಿ ಅನೇಕ ಜನರು ಈ ರೋಗದಿಂದ ಮುಕ್ತರಾಗಿ ಸುಖಿಗಳಾಗಿದ್ದಾರೆ. ಆದುದರಿಂದ ಈ ರೋಗವುಳ್ಳವರು ಸದರಿಯವರಲ್ಲಿ ಔಷಧನನ್ನು ತೆಗೆದುಕೊಂಡು ರೋಗದ ಮಹಾಬಾಧೆಯಿಂದ ದೂರರಾಗಿ ಸುಖಿಗಳಾಗಲೆಂಬುದೇ ನಮ್ಮ ಆಶೆ.

ಶಾಸ್ತ್ರಿಗಳು ಬೇಕು.

ಸದ್ಯ ಯಾದಗಿರಿಯಲ್ಲಿರುವ ಶಂಕರ ಸಂಸ್ಕೃತ ಕಾಲೇಜಿಗೆ ಒಬ್ಬ ಪ್ರಧಾನಾಧ್ಯಾಪಕರು (ಪ್ರಿನ್ಸಿಪಾಲರು) ಬೇಕಾಗಿರುತ್ತಾರೆ. ಅದ್ದರಿಂದ ವ್ಯಾಕರಣತೀರ್ಥ ಪರೀಕ್ಷೆಯಾಗಿರುವವರಲ್ಲದೆ ಮತ್ತು ಅದರ ಜೊತೆಯಲ್ಲಿ ಯಾವದಾದರೊಂದು ತೀರ್ಥ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪಂಡಿತರು ಇದೇ ಜುಲೈ ೭ ನೇ ತಾರೀಖಿನೊಳಗಾಗಿ ಸೆಕ್ರಟರಿಯವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದು. ಸದರಿ ತಾರೀಖಿನ ನಂತರ ಬಂದ ಅರ್ಜಿಗಳನ್ನು ವಿಚಾರಿಸಲಾಗುವುದಿಲ್ಲ.

ಹಂಪಣ್ಣ ಸೆಕ್ರಟರಿ,
ಶಂಕರ ಸಂಸ್ಕೃತ ಕಾಲೇಜು, ಯಾದಗಿರಿ.

[3ನೆಯ ಪುಟದಿಂದ ಮುಂದುವರಿದುದು.]

ನಗಳಲ್ಲಿಯೂ ಪ್ರಜೆಗಳಿಗೆ ಹೆಚ್ಚು ಹಕ್ಕುಬಾಧ್ಯತೆಗಳನ್ನು ಕೊಟ್ಟು ಪ್ರಾಂತಗಳ ಜೊತೆಯಲ್ಲಿ ತಾವೂ ಫೆಡರೇಷನ್ನಿಗೆ ಸೇರಬೇಕು. ಇಲ್ಲದಿದ್ದರೆ ಫೆಡರೇಷನ್ ಪ್ರಭುತ್ವವು ಸುರಕ್ಷಿತವಾಗಿ ನಡೆಯಲಾರದು. ಆದ್ದರಿಂದ ಪಾಟಿಯಾಲಮಹಾರಾಜ ಪ್ರಭೃತಿಗಳು ಫೆಡರೇಷನ್ ತತ್ವವನ್ನು ವಿರೋಧಿಸುತ್ತಿರುವರು. ಆದರೆ ಅವರ ಸಂಖ್ಯೆಯು ಬಹಳ ಕಡಿಮೆ. ಅವರ ಧ್ವನಿಯು ಅರಣ್ಯರೋದನವಾಗಿ ಪರಿಣಮಿಸುವುದೆಂದು ಧೈರ್ಯವಾಗಿ ಹೇಳಬಲ್ಲೆವು. ಬ್ರಿಟಿಷ್ ಹಿಂದುಸ್ಥಾನದಲ್ಲಿ ಕೆಲವರು ಫೆಡರೇಷನ್ನಿಗೆ ಆಶ್ರಿತ ಸಂಸ್ಥಾನಗಳನ್ನು ಸೇರಿಸಿಕೊಳ್ಳಬಾರದು. ಅವುಗಳ ಪ್ರಗತಿಯು ಬಹು ನಿಧಾನ; ಅವರ ಜೊತೆಯನ್ನು ಹಿಡಿದರೆ ಕೆಟ್ಟುಹೋದೇವು. ನಾವು ಪ್ರತ್ಯೇಕವಾಗಿ ಫೆಡರೇಷನ್ ಮಾಡಿಕೊಳ್ಳೋಣ; ಆಶ್ರಿತ ಸಂಸ್ಥಾನಗಳು ತಮ್ಮೊಳಗೆ ಬೇಕಾದರೆ ಫೆಡರೇಷನ್ ಮಾಡಿಕೊಳ್ಳಲಿ ಎಂದು ಹೇಳುತ್ತಿರುವರು. ಅಂಥವರ ಸಂಖ್ಯೆಯೂ ವಿರಳ.

ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಇರುವ ಅಖಂಡ ಭರತಖಂಡವು ಸ್ವತಂತ್ರವಾಗದ ವಿನಾ ಅದು ಸ್ವಾತಂತ್ರ್ಯವೆನಿಸಿಕೊಳ್ಳಲಾರದು. ಆದುದರಿಂದ ಫೆಡರೇಷನ್ ತತ್ವವು ಸರ್ವತ್ರ ಅಂಗೀಕೃತವಾಗಿ ನಮ್ಮ ಪವಿತ್ರಭಾರತಭೂಮಿಯು ಪಾರತಂತ್ರ್ಯದಿಂದ ದೂರವಾಗಲೆಂಬುದೇ ನಮ್ಮ ಹಾರೈಕೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ.

ಹಿಂದೂಮಹಮ್ಮದೀಯರ ಸಮಸ್ಯೆಯು ಹಿಂದುಸ್ಥಾನದಲ್ಲಿ ಬಹು ಕ್ಲಿಷ್ಟವಾದ ಸಮಸ್ಯೆಯಾಗಿದೆ. ಇದನ್ನು ಬಗೆಹರಿಸುವುದು ಯಾರಿಂದಲೂ ಸಾಧ್ಯವಾಗುವಂತಿಲ್ಲ. ಈ ಸಮಸ್ಯೆಯು ತೀರ್ಮಾನವಾಗದ ವಿನಾ ಭಾರತೀಯ ರಾಜಕೀಯ ರಥವು ಚಲಿಸುವಂತಿಲ್ಲ. ಇದನ್ನು ಸರಿಪಡಿಸಬೇಕೆಂದು ಲಂಡನ್ನಿಗೆ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿದ್ದ ಹಿಂದೂಮಹಮ್ಮದೀಯ ಮೆಂಬರರು ಬಹು ಶ್ರಮಪಟ್ಟರು. ಇಂಗ್ಲೆಂಡಿನ ಮುಖ್ಯಮಂತ್ರಿಗಳಾದ ರಾಂಸೆಮ್ಯಾಕ್ಡೊನಾಲ್ಡರೂ ಇವರಿಗೆ ನೆರವಾದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಈ ಮೆಂಬರರು ಮಾತೃಭೂಮಿಗೆ ಹಿಂದಿರುಗಿದ ಮೇಲೆ ದೈವಸಂಕಲ್ಪದಿಂದ ಗಾಂಧಿ ಇರ್ವಿನ್ ಒಪ್ಪಂದವಾಯಿತು. ಆಗ ಹಿಂದೂಗಳಲ್ಲಿ ಅಗ್ರೇಸರರಾದ ಮಹಾತ್ಮಗಾಂಧಿಯವರೂ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಯುತ ವಲ್ಲಭಭಾಯಿ ಪಟೇಲರೂ ಮಹಮ್ಮದೀಯರಿಗೆ ಸ್ಪಷ್ಟವಾಗಿ "ನಿಮಗೆ ಯಾವ ಯಾವ ರಾಜಕೀಯ ಹಕ್ಕುಗಳು ಬೇಕೋ ಹೇಳಿರಿ; ಅವುಗಳನ್ನೆಲ್ಲ ನಾವು ಒಪ್ಪುತ್ತೇವೆ. ನೀವು ಬಿಟ್ಟಿದ್ದು ನಮಗಿರಲಿ." ಎಂದು ಹೇಳಿದರು. ಅನಂತರ ಹಿಂದೂಗಳ ಸಂಗಡ ಹೇಗೆ ಕರಾರು ಮಾಡಿಕೊಳ್ಳಬೇಕು; ಯಾವ ಹಕ್ಕುಗಳನ್ನು ಕೇಳಬೇಕೆಂಬ ಪ್ರಶ್ನೆಯು ಮಹಮ್ಮದೀಯರಲ್ಲಿ ಹುಟ್ಟಿತು. ಮೌ|| ಷೌಕತಾಲಿಯವರು ಶಾಸನಸಭೆಗಳಲ್ಲಿ ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯಬೇಕೆಂದರು. ಡಾ|| ಅನ್ಸಾರಿಯವರು ಪ್ರತ್ಯೇಕಪ್ರಾತಿನಿಧ್ಯವು ದೇಶದ ಪ್ರಗತಿಗೆ ಕಂಟಕವಾದುದು. ಮಿಳಿತಪ್ರಾತಿನಿಧ್ಯವು ಬೇಕೆಂದರು. ಹೀಗೆ ಮಹಮ್ಮದೀಯರಲ್ಲಿಯೇ ಇಬ್ಬಗೆಯಾದುವು. ಆ ಮೇಲೆ ಉಭಯರಿಗೂ ಅಲ್ಲಲ್ಲಿ ಹಣಾಹಣಿ ಮುಷ್ಟಾಮುಷ್ಟಿ ಯುದ್ಧಗಳಾಗಲು ಪ್ರಾರಂಭವಾದುವು. ಆಗ ಭೋಪಾಲನವಾಬರವರು ಉಭಯ ಪಕ್ಷಗಳ ಮುಖಂಡರನ್ನು ಬರಮಾಡಿಕೊಂಡು ಒಂದು ತೀರ್ಮಾನವಮಾಡಿದರು. ಅದಕ್ಕೆ ಉಭಯಪಕ್ಷಗಳ ನಾಯಕರೂ ಸುಮ್ಮನಾಗಿದ್ದರು. ಅನಂತರ ಈ ವಿಷಯವನ್ನು ಸಿಮ್ಲಾದಲ್ಲಿ ಚರ್ಚಿಸಬೇಕೆಂದು ನಿರ್ಣಯಿಸಿ ಅಲ್ಲಿಗೆ ಹೋದರು. ಈ ತಿಂಗಳು 22 ನೆಯ ತಾರೀಖಿನವರೆಗೂ ಚರ್ಚೆಯು ನಡೆಯಿತು. ಅಂತ್ಯದಲ್ಲಿ ಉಭಯರೂ ರಾಜಿಗೆ ಬರಲಿಲ್ಲ. ಡಾ|| ಅನ್ಸಾರಿಯವರು ಒಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿ ಸಂಧಾನವು ವಿಫಲವಾಗುವುದಕ್ಕೆ ಇನ್ನೊಂದು ಪಕ್ಷದ ಮೇಲೆ ಅಪವಾದ ಹೊರಿಸುತ್ತಾರೆ. ಮೌಲ್ವಿ ಷಫಿದಾಡಿಯವರು ಒಂದು ಪ್ರಕಟನೆಯನ್ನು ಹೊರಡಿಸಿ ಡಾ|| ಅನ್ಸಾರಿಯವರ ಮೇಲೆ ಆಕ್ಷೇಪಣೆ ಹೊರಿಸುತ್ತಾರೆ. ಡಾ|| ಅನ್ಸಾರಿಯವರು ಸಿಮ್ಲಾದ ಸನ್ನಿವೇಶವೇ ಸಂಧಾನವು ವಿಫಲವಾಗಲು ಬಲವಾದ ಕಾರಣವೆನ್ನುತ್ತಾರೆ. ಏನೇ ಆಗಲಿ: ನೂತನದ್ದೆಲ್ಲ ಹಂಚಿಯಾಯಿತು. ಇದರಿಂದ ಭಾರತೀಯ ರಾಜಕೀಯಪ್ರಗತಿಗೆ ಬಲವಾದ ಪೆಟ್ಟು ಬಿದ್ದಿತು.

ಮೌಲಾನಾ ಷೌಕತಾಲಿಯವರು ಮಹಮ್ಮದೀಯರ ಒಳಜಗಳಕ್ಕೆ ಮಹಾತ್ಮಗಾಂಧಿಯವರೇ ಕಾರಣರೆಂದು ಹೇಳುತ್ತಿದ್ದರು. ಈಗ ಮೌಲಾನಾರವರು ಕಾರಣರ್‍ಯಾರೆಂಬುದಕ್ಕೆ ತಮ್ಮ ಆತ್ಮವನ್ನೇ ಕೇಳಬೇಕು. ಚಿಕ್ಕ ಸಮಾಜವಾದ ಮಹಮ್ಮದೀಯರಿಗೆ ಯಾವ ಹಕ್ಕುಬಾಧ್ಯತೆಗಳನ್ನು ಕೊಡದೆ ತಾವೇ ಅನುಭವಿಸಬೇಕೆನ್ನುವರೆಂದು ಹಿಂದೂಗಳನ್ನು ಯಾರೂ ಆಕ್ಷೇಪಿಸುವಂತಿಲ್ಲ. ಈ ವಿಷಯವು ಆಳರಸರಿಗೂ ಮನವರಿಕೆಯಾಯಿತು. ಆದರೆ ನಾವು ಹೇಳುವುದಿಷ್ಟೆ! ಹಿಂದೂಮಹಮ್ಮದೀಯರು ಭಾರತಮಾತೆಯ ಉಭಯನೇತ್ರಗಳು. ಒಂದು ನೇತ್ರಕ್ಕೆ ಬಾಧೆಯಾದರೆ ಇನ್ನೊಂದು ನೇತ್ರಕ್ಕೂ ಬಾಧೆಯಾದಂತೆಯೇ ಸರಿ. ಈ ಮನಸ್ತಾಪವು ಆತ್ಮವಿನಾಶಕಾರಿಯಾದುದು. ಹಿಂದೂ ಮಹಮ್ಮದೀಯರ ಐಕಮತ್ಯವಾಗುವವರೆಗೂ ನಮ್ಮ ದೇಶಕ್ಕೆ ಸ್ವರಾಜ್ಯವಿಲ್ಲ. ಸ್ವರಾಜ್ಯವಿಲ್ಲದೆ ದೇಶದ ದಾರಿದ್ರ್ಯ, ವ್ಯಾಧಿ ಮೊದಲಾದ ವ್ಯಾಧಿಗಳು ಗುಣವಾಗುವುದಿಲ್ಲ. ಈ ವಿಷಯವನ್ನು ಉಭಯರೂ ತಿಳಿದುಕೊಂಡು ವರ್ತಿಸುವುದು ಸರ್ವೋತ್ಕೃಷ್ಟವಾದ ಮಾರ್ಗ.

ದೀರ್ಘಾಯುರಾರೋಗ್ಯಗಳು.

ಅಮೇರಿಕಾಖಂಡಕ್ಕೆ ಸೇರಿದ ಸಂಯುಕ್ತಸಂಸ್ಥಾನಗಳ ಪ್ರಜೆಗಳು ಲೌಕಿಕ ವಿಷಯಗಳಲ್ಲಿ ಪ್ರಪಂಚದ ಎಲ್ಲಾ ಜನಗಳಿಗಿಂತಲೂ ಮುಂದಾಳುಗಳಾಗಿರುತ್ತಾರೆ. ಇದುವರೆಗೂ ಪ್ರಪಂಚದ ಚಕ್ರಾಧಿಪತ್ಯಗಳಲ್ಲಿ ಬ್ರಿಟಿಷ್ ಜನಗಳು ಅಗ್ರಗಣ್ಯರಾಗಿದ್ದರು. ಈಗ ಅಮೇರಿಕಾಖಂಡದವರು ಈ ಅಗ್ರಗಣ್ಯ ಪದವಿಯನ್ನು ಹೊಂದಿರುವರು. ಈ ಜನಗಳು ಬಾಲ್ಯಾರಭ್ಯ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಕೆಲಸಮಾಡಿ ಸ್ವಶಕ್ತಿಯಿಂದ ಬದುಕುವುದರಲ್ಲಿ ತಂದೆತಾಯಿಗಳಿಂದಲೂ ಗುರುಗಳಿಂದಲೂ ಶಿಕ್ಷಣವನ್ನು ಹೊಂದಿರುವರು. ಆಯುರಾರೋಗ್ಯ ಐಶ್ವರ್ಯಗಳನ್ನು ಹೊಂದುವುದಕ್ಕೆ ಬೇಕಾದ ಕೆಲಸಗಳನ್ನು ಸರ್ಕಾರದವರು ಮಾಡುವರು. ಸದರಿ ಕೆಲಸಗಳು ಸರಿಯಾಗಿ ನಡೆಯುವಂತೆ ಸರ್ಕಾರದವರೊಡನೆ ಸೇರಿ ಜನಗಳು ಕೆಲಸ ಮಾಡುವರು. ಸ್ತ್ರೀಯರು ಗರ್ಭಿಣಿಯರಾಗಿರುವಾಗಲೂ ಉದರದಲ್ಲಿರತಕ್ಕ ಪಿಂಡಕ್ಕೆ ಯಾವ ರೋಗಾದಿಗಳೂ ಬರದಂತೆ ನೋಡಿಕೊಳ್ಳುವರು. ಜನನವಾದ ಕೂಡಲೆ 10 ದಿವಸಗಳೊಳಗಾಗಿ ಬಾಣಂತಿಗೂ, ಮಗುವಿಗೂ ಅಂಟುರೋಗಗಳು ಬರುವುದುಂಟು. ಇದರಿಂದ ಶೇಕಡ 75 ಜನಗಳು ಸಾಯುವುದುಂಟು. ಅಂಥ ರೋಗಗಳು ಬರದಂತೆ ಆಗಬೇಕಾದ ಏರ್ಪಾಡುಗಳನ್ನು ಮಾಡುವುದರಲ್ಲಿ ಅವರು ನಿಪುಣರು. ಜನನವಾದ ಮೊದಲುಗೊಂಡು 18 ನೇ ವಯಸ್ಸಿನವರೆಗೂ ಸಿಡುಬು, ದಡಾರ, ಗೊಬ್ಬರ ಮೊದಲಾದ ಅನೇಕ ಅಂಟುರೋಗಗಳು ಬರುವುದುಂಟು. ಅಂಟುರೋಗಗಳು ಅಕಾಲಮರಣವು. 18 ನೇ ವಯಸ್ಸಿನವಳಗಾಗಿ ವಿಶೇಷವಾಗಿ ಬರುವುದರಿಂದ Life Insurance Companyಯವರು ಕೂಡ 18 ವರ್ಷದವಳಗಾಗಿ Life Insurance ಮಾಡುವುದಿಲ್ಲ. ಎಲ್ಲಾ ತಂದೆತಾಯಿಗಳು ಮತ್ತು ಪೋಷಕರು 18 ವರ್ಷಗಳವರಿಗೂ ಮಕ್ಕಳಿಗೆ ಅಂಟುರೋಗಗಳೇ ದಲಾದವುಗಳಿಂದ ಅಕಾಲಮರಣಗಳು ಆಗದಂತೆ ಗರೂಕತೆಯಿಂದ ನೋಡಿಕೊಳ್ಳಬೇಕು. ಈ ವಿ... ಕ್ಕೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಜ... ವಿಶೇಷ ನಿಗಾಕೊಡುತ್ತಾ ಇರುವುದರಿಂದ ಆ ದೇ... ನಿವಾರಣೀಯವಾದ ರೋಗಗಳು ಬಹಳ ಕಡಿಮೆ... ಗಿರುವದಲ್ಲದೆ ಜನಗಳು ಆರೋಗ್ಯದೃಢಕಾಯರಾಗಿ ಯುರಾರೋಗ್ಯ ಐಶ್ವರ್ಯಗಳನ್ನು ಹೊಂದಿ ಎಲ್ಲಾ ಯುಗಳಲ್ಲೂ ಮುಂದಾಳುಗಳಾಗಿರುತ್ತಾರೆ. ಇದ... ಲೌಕಿಕಸಂಪತ್ತುಗಳಿಗೆ ಧರ್ಮವೇ ಮೂಲವೆಂದು ... ದುಕೊಳ್ಳುತ್ತಲೂ ಇದ್ದಾರೆ. ಈ ಭರತಖಂಡದಲ್ಲಿ ... ಕಿಕಸಂಪತ್ತಿಗೆ ಸಾಧಕವಾದ ಧರ್ಮಗಳು ಪರಿಪೂರ್ಣವಾಗಿರುತ್ತವೆ. ಆದರೆ ಜಾತಿಭೇದ, ಮತಭೇದ ಮ... ಕೋಮಿನಭೇದ ಮೊದಲಾದವುಗಳಿಂದ ನಮ್ಮಲ್ಲಿ ... ಮತ್ಯವು ತಪ್ಪಿ ನೂರಾರು ಸಾವಿರಾರು ವರ್ಷಗಳಿಂದ ನಾವು ನಮ್ಮ ಭೇದಭಾವಗಳಿಂದ ಗುಲಾಮಗಿರಿಗೆ ... ದಿರುತ್ತೇವೆ. ಕಳೆದ 330 ವರ್ಷಗಳಿಂದ ಬ್ರಿಟಿಷ್ ... ಗಳ ಸಂಬಂಧವು. ಅವರ ಸಾಂಕುಶಪ್ರವರ್ತನದ ... ವರ್ಗಗಳೂ ಅವರ ಏಕಮತ್ಯವೂ ಅವರ ವಿದ್ಯಾಭ್ಯಾಸವೂ ನಮಗೆ ಲಭ್ಯವಾದುದರಿಂದ ಈಗ ನಮಗೆ ಪೂರ್ಣ ಸ್ವರಾಜ್ಯವು ಲಭಿಸುವ ಕಾಲವು ಬಂದಿರುವುದು. ಭಾರತಪುತ್ರರೂ ಮತ್ತು ಪುತ್ರಿಯರೂ ಪೂರ್ಣಸ್ವರಾಜ್ಯಕ್ಕೋಸ್ಕರ ಪ್ರಾಣವನ್ನು ಬಿಡುವುದಕ್ಕೂ ಸಿದ್ಧರಾಗಿರುವುದನ್ನು ನೋಡಿ ಬ್ರಿಟಿಷ್ ಮಹಾಜನಗಳು ಪೂರ್ಣಸ್ವರಾಜ್ಯವನ್ನು ಕೊಟ್ಟು, ಬ್ರಿಟಿಷ್ ಜನಗಳೂ ಭಾರತೀಯರೂ ಇಬ್ಬರೂ ಬ್ರಿಟಿಷ್ ಚಕ್ರಾಧಿಪತ್ಯದ ಸಂಪತ್ತಿನಲ್ಲಿ ಪಾಲುದಾರರಾಗಿರುವಂತೆ ಮಾಡಿಕೊಳ್ಳುತ್ತಿದ್ದಾರೆ. ಮಹಾತ್ಮಾ ಗಾಂಧಿಯವರ ಉಪದೇಶವು ಇದಕ್ಕೆ ಸಾಧಕವಾಯಿತೆಂದು ಪ್ರಪಂಚವೆಲ್ಲಾ ಸಂತೋಷಗೊಳ್ಳುತ್ತಲಿರುವುದು. ಇದೆಲ್ಲಾ ದೇವರ ಅನುಗ್ರಹವೆಂದು ತೋರುತ್ತದೆ. ಯಂ. ವೆಂಕಟಕೃಷ್ಣಯ್ಯ.

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಉಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.

ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.

ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಮಂಗಳಗೀತಾದರ್ಶ.

ಶುಭ-ಶೋಭನ ಕಾಲಗಳಲ್ಲಿ ಹೆಣ್ಣುಮಕ್ಕಳು ಹೇಳಿಕೊಳ್ಳಲನುಕೂಲವಾದ ಹಾಡುಗಳಲ್ಲದೆ, ಸ್ತ್ರೀಪುರುಷ ಭೇದವಿಲ್ಲದೆ ಸರ್ವರೂ ನಿತ್ಯವೂ ಪಠಿಸಬಹುದಾದ ಶ್ರೀ ಪಾರ್ವತೀಪರಮೇಶ್ವರ ಸಂಬಂಧವಾದ ಕೀರ್ತನೆಗಳೂ ಇವೆ. ಒಂದುನೂರು ಪ್ರತಿಗಳು ಮಾತ್ರವೇ ಉಳಿರುವುದರಿಂದ ಗ್ರಾಹಕರು ತ್ವರೆಮಾಡಬೇಕು.

ಬೆಲೆ ೧ಕ್ಕೆ ೦—೪—೦ ಮಾತ್ರ.

N. B.—ಒಂದು ರೂ. ಗಿಂತ ಕಡಿಮೆ ವಿ. ಪಿ. ಕಳುಹುವುದಿಲ್ಲ. ಒಂದೊಂದೇ ಪುಸ್ತಕಗಳನ್ನು ಅಪೇಕ್ಷಿಸುವವರು ಪುಸ್ತಕ ಒಂದಕ್ಕೆ ೪½ ಆಣೆಯಂತೆ ಪೋಸ್ಟಲ್ ಸ್ಟಾಂಪ್‌ಗಳನ್ನು ರವಾನಿಸಿದಲ್ಲಿ ಪುಸ್ತಕವು ಬುಕ್‌ಪೋಸ್ಟ್ ಮೂಲಕ ರವಾನಿಸಲ್ಪಡುವುದು.

ಸಚಿತ್ರ ಕನ್ನಡ ಮಕ್ಕಳ ಗಣಿತ.

ಮಕ್ಕಳಲ್ಲಿ ಕಲಿಯುವ ಬೆರಳೆಣಿಸುವ ಕೆಟ್ಟ ಪದ್ಧತಿಯು ಪರಿಹಾರವಾಗಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟು, ಮೈಸೂರು ಸರಕಾರದ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್ ಸಾಹೇಬರಿಂದ ಮಂಜೂರ್ ಮಾಡಲ್ಪಟ್ಟಿದೆ. ಪ್ರೈಮರಿ ೧ ಮತ್ತು ೨ ನೆಯ ತರಗತಿಗಳಿಗೆ ಉಪಯುಕ್ತವಾದುದು. ಬೆಲೆ ೦—೪—...

ಕರ್ಣಾಟಕ ಗುಣಿತಾಕ್ಷರಬೋಧೆ.

ಕಾ, ಗುಣಿಗಳನ್ನು ಕಲಿಸಲನುಕೂಲವಾದ ... ಪಟ ಬೆಲೆ ೦—೧—೦.

ಸಿಲಬಸ್ ಫಾರಂ.

ಉಪಾಧ್ಯಾಯರು ತಮ್ಮ ಸ್ಕೂಲಿನ ವಾ... ಪ್ರೋಗ್ರಾಂ ತಯಾರಿಸಿಕೊಳ್ಳಲನುಕೂಲ. ೦ ...

ಕನ್ನಡ

೨ ಮತ್ತು ೩ ನೆಯ ರೀ. ಗಳ ನೋಟ್ಸಿಗ...

ಪ್ರಶ್ನೋತ್ತರಗಳ ಸಹಿತವಾಗಿವೆ. ಬೆಲೆ ಪ್ರತಿಯೊಂದಕ್ಕೆ ೦—೪—೦.

N. B.—ಸಂಸ್ಥಾನದ ಸುಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತವೆ.

ಪ್ರಕಾಶಕರು :—**ಜಿ. ರೇವಣ್ಣ ಅಂಡ್ ಬ್ರದರ್**

ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಡಿ|| ಬೆಂಗಳೂರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ... ಮುಂತಾದ ಹಾಗೂ ಧನ್ವಂತರಿ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮ ... ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ಸರಾಸರಿ ಅರ್ಧತೊಲೆಯಿಂದ ಒಂದು ತೊಲೆಯ ... ಬೆಳಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ... ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡತಕ್ಕದ್ದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ... ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಯಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯನ ಪ್ರಖರತೆಯಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ... ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ... ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ... ಮೇಹ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ... ಮುಂತಾದ ಅನೇಕ ರೋಗಗಳನ್ನು ನಿವಾರಣೆಮಾಡುತ್ತದೆ. ... ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತ್ತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ.

ಗೃಹಮಾತೆಯು—೧ ಶೀಸೆಗೆ ೧೨ ಆಣೆ (ಸ್ತ್ರೀ) ರೋಗಗಳನ್ನು ಪರಿಹರಿಸುವದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ... ನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರೆಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ನೌಕರದಾರರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನ ... ದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ... ಹಾಕಿಕೊಳ್ಳುವದಕ್ಕೂ ಗಡಿಯಾರದ ಸರಪಣಿಯಲ್ಲಿ ... ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರು ... ಆಕಾರದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಮುರಿತೆಯೂ. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಮುರಿತೆಯೂ. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಮುರಿತೆಯೂ ಕಮಿಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ. **ಬೆಲೆ ೧೨ ಆಣೆ**

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ. **ಬೆಲೆ ೮ ಆಣೆ.**

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ
ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿವಸಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿವಸಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಜೀವಿತಶಾಸ್ತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪ್ಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಿಳ್ಳಲು, ರಕ್ತಛಾಯೆ ಕಾಣದೆ ಇರುವ ಶರೀರ, ರುಚಿ ಕೆಟ್ಟಿರುವ ನಾಲಿಗೆ, ಅರಿಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆನೋವು, ತಲೆತಿರುಗುವುದು, ಹಸಿವು ಇಲ್ಲದೆ ಸಂಕಟಬಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪ್ಪು ಕಾರ್ಡಸ್** ಎಂಬ ಔಷಧವು ಹಿಂಡಿಕ ಗುಣ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಶ್ವಾಸ, ಎದೆಗೂಡು ಕಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳುಪು, ಹೊಟ್ಟೆ ಹುಳಗಳ ಕಿರುಕುಳ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಹಿಂಡಿಕ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಷ್ಯು ಲವಣಗಳೂ, ಹೋಮಿಯೊಪತಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[47] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ,) **ಮಂಗಳೂರು.** ದ. ಕ.

ತಮ್ಮ ನೆರೆಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಬಿಡಾರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಇದ್ದರಿಂದ ದಯವಿಟ್ಟು ಈ ಕಾರ್ಡ್ ತಲ್ಪಿದ ಮರುಟಪಾಲಿಗೇನೆ ತಾಮಸಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,

ಪಟೇಲ್ ಮತ್ತು ಫೇರ್‌ಮನ್, ಬಾಸೂರು,

[10] ಪೋಸ್ಟ್ ಸಕ್ರೆಪಟ್ಣ, ಡಿಸ್ಟ್ರಿಕ್ಟ್ ಕಡೂರು.

[3ನೆಯ ಪುಟದಿಂದ ಮುಂದುವರಿದುದು.]

ನಗಳಲ್ಲಿಯೂ ಪ್ರಜೆಗಳಿಗೆ ಹೆಚ್ಚು ಹಕ್ಕು ಬಾಧ್ಯತೆಗಳನ್ನು ಕೊಟ್ಟು ಪ್ರಾಂತಗಳ ಜೊತೆಯಲ್ಲಿ ತಾವು ಫೆಡರೇಷನ್‌ಗೆ ಸೇರಬೇಕು. ಇಲ್ಲದಿದ್ದರೆ ಫೆಡರೇಷನ್ ಪ್ರಭುತ್ವವು ಸುರಕ್ಷಿತವಾಗಿ ನಡೆಯಲಾರದು. ಅದ್ದರಿಂದ ಪಾಟಿಯಾಲ ಮಹಾರಾಜ ಪ್ರಭೃತಿಗಳು ಫೆಡರೇಷನ್ ತತ್ವವನ್ನು ವಿರೋಧಿಸುತ್ತಿರುವರು. ಆದರೆ ಅವರ ಸಂಖ್ಯೆಯು ಬಹು ಕಡಿಮೆ. ಅವರ ಧ್ವನಿಯು ಅರಣ್ಯರೋದನವಾಗಿ ಪರಿಣಮಿಸುವುದೆಂದು ಧೈರ್ಯವಾಗಿ ಹೇಳಬಲ್ಲೆವು. ಬ್ರಿಟಿಷ್ ಹಿಂದುಸ್ಥಾನದಲ್ಲಿ ಕೆಲವರು ಫೆಡರೇಷನ್‌ಗೆ ಆಶ್ರಿತ ಸಂಸ್ಥಾನಗಳನ್ನು ಸೇರಿಸಿಕೊಳ್ಳಬಾರದು. ಅವುಗಳ ಪ್ರಗತಿಯು ಬಹು ವಿಧಾನ; ಅವರ ಜೊತೆಯನ್ನು ಹಿಡಿದರೆ ಕೆಟ್ಟೇಹೋದೇವು. ನಾವು ಪ್ರತ್ಯೇಕವಾಗಿ ಫೆಡರೇಷನ್ ಮಾಡಿಕೊಳ್ಳೋಣ; ಆಶ್ರಿತ ಸಂಸ್ಥಾನಗಳು ತಮ್ಮೊಳಗೆ ಬೇಕಾದರೆ ಫೆಡರೇಷನ್ ಮಾಡಿಕೊಳ್ಳಲಿ ಎಂದು ಹೇಳುತ್ತಿರುವರು. ಅಂಥವರ ಸಂಖ್ಯೆಯೂ ವಿರಳ.

ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಇರುವ ಅಖಂಡ ಭರತಖಂಡವು ಸ್ವತಂತ್ರವಾಗದ ವಿನಾ ಅದು ಸ್ವಾತಂತ್ರ್ಯವೆನಿಸಿಕೊಳ್ಳಲಾರದು. ಆದುದರಿಂದ ಫೆಡರೇಷನ್ ತತ್ವವು ಸರ್ವತ್ರ ಅಂಗೀಕೃತವಾಗಿ ನಮ್ಮ ಪವಿತ್ರಭಾರತಭೂಮಿಯು ಪಾರತಂತ್ರ್ಯದಿಂದ ದೂರವಾಗಲೆಂಬುದೇ ನಮ್ಮ ಹಾರೈಕೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ.

ಹಿಂದೂಮಹಮ್ಮದೀಯರ ಸಮಸ್ಯೆಯು ಹಿಂದುಸ್ಥಾನದಲ್ಲಿ ಬಹು ಕ್ಲಿಷ್ಟವಾದ ಸಮಸ್ಯೆಯಾಗಿದೆ. ಇದನ್ನು ಬಗೆಹರಿಸುವುದು ಯಾರಿಂದಲೂ ಸಾಧ್ಯವಾಗುವಂತಿಲ್ಲ. ಈ ಸಮಸ್ಯೆಯು ತೀರ್ಮಾನವಾಗದ ವಿನಾ ಭಾರತೀಯ ರಾಜಕೀಯ ರಥವು ಚಲಿಸುವಂತಿಲ್ಲ. ಇದನ್ನು ಸರಿಪಡಿಸಬೇಕೆಂದು ಲಂಡನ್ನಿಗೆ ರೌಂಡ್‌ಟೇಬಲ್ ಸಮ್ಮೇಳನಕ್ಕೆ ಹೋಗಿದ್ದ ಹಿಂದೂಮಹಮ್ಮದೀಯ ಮೆಂಬರರು ಬಹು ಶ್ರಮಪಟ್ಟರು. ಇಂಗ್ಲೆಂಡಿನ ಮುಖ್ಯಮಂತ್ರಿಗಳಾದ ರಾಂಸೆಮ್ಯಾಕ್ಡೋನಾಲ್ಡರೂ ಇವರಿಗೆ ನೆರವಾದರು. ಆದರೂ ಏನೂ ಪ್ರಯೋಜನವಾಗಲಿಲ್ಲ. ಈ ಮೆಂಬರರು ಮಾತೃಭೂಮಿಗೆ ಹಿಂದಿರುಗಿದ ಮೇಲೆ ದೈವಸಂಕಲ್ಪದಿಂದ ಗಾಂಧಿ ಇರ್ವಿನ್ ಒಪ್ಪಂದವಾಯಿತು. ಆಗ ಹಿಂದೂಗಳಲ್ಲಿ ಅಗ್ರೇಸರರಾದ ಮಹಾತ್ಮ ಗಾಂಧಿಯವರೂ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಯುತ ವಲ್ಲಭಭಾಯಿ ಪಟೇಲರೂ ಮಹಮ್ಮದೀಯರಿಗೆ ಸ್ಪಷ್ಟವಾಗಿ "ನಿಮಗೆ ಯಾವ ಯಾವ ರಾಜಕೀಯ ಹಕ್ಕುಗಳು ಬೇಕೋ ಹೇಳಿರಿ; ಅವುಗಳನ್ನೆಲ್ಲ ನಾವು ಒಪ್ಪುತ್ತೇವೆ. ನೀವು ಬಿಟ್ಟುದು ನಮಗಿರಲಿ." ಎಂದು ಹೇಳಿದರು. ಅನಂತರ ಹಿಂದೂಗಳ ಸಂಗಡ ಹೇಗೆ ಕರಾರು ಮಾಡಿಕೊಳ್ಳಬೇಕು; ಯಾವ ಹಕ್ಕುಗಳನ್ನು ಕೇಳಬೇಕೆಂಬ ಪ್ರಶ್ನೆಯು ಮಹಮ್ಮದೀಯರಲ್ಲಿ ಹುಟ್ಟಿತು. ಮೌ|| ಷೌಕತಾಲಿಯವರು ಕಾಯಿದೆ ಕೌನ್ಸಿಲ್‌ಗಳಲ್ಲಿ ಮಹಮ್ಮದೀಯರಿಗೆ ಪ್ರತ್ಯೇಕ ಪ್ರಾತಿನಿಧ್ಯಬೇಕೆಂದರು. ಡಾ|| ಅನ್ಸಾರಿಯವರು ಪ್ರತ್ಯೇಕಪ್ರಾತಿನಿಧ್ಯವು ದೇಶದ ಪ್ರಗತಿಗೆ ಕಂಟಕವಾದುದು. ಮಿಳಿತಪ್ರಾತಿನಿಧ್ಯವು ಬೇಕೆಂದರು. ಹೀಗೆ ಮಹಮ್ಮದೀಯರಲ್ಲಿಯೇ ಇಬ್ಬಗೆಯಾದುವು. ಆ ಮೇಲೆ ಉಭಯರಿಗೂ ಅಲ್ಲಲ್ಲಿ ಹಣಾಹಣಿ ಮುಷ್ಟಾಮುಷ್ಟಿ ಯುದ್ಧಗಳಾಗಲು ಪ್ರಾರಂಭವಾದುವು. ಆಗ ಭೋಪಾಲನವಾಬರವರು ಉಭಯ ಪಕ್ಷಗಳ ಮುಖಂಡರನ್ನು ಬರಮಾಡಿಕೊಂಡು ಒಂದು ತೀರ್ಮಾನಮಾಡಿದರು. ಅದಕ್ಕೆ ಉಭಯಪಕ್ಷಗಳ ನಾಯಕರೂ ಸುಮ್ಮನಾಗಿದ್ದರು. ಅನಂತರ ಈ ವಿಷಯವನ್ನು ಸಿಮ್ಲಾದಲ್ಲಿ ಚರ್ಚಿಸಬೇಕೆಂದು ನಿರ್ಣಯಿಸಿ ಅಲ್ಲಿಗೆ ಹೋದರು. ಈ ತಿಂಗಳು 22 ನೆಯ ತಾರೀಖಿನವರೆಗೂ ಚರ್ಚೆಯು ನಡೆಯಿತು. ಅಂತ್ಯದಲ್ಲಿ ಉಭಯರೂ ರಾಜಿಗೆ ಬರಲಿಲ್ಲ. ಡಾ|| ಅನ್ಸಾರಿಯವರು ಒಂದು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿ ಸಂಧಾನವು ವಿಫಲವಾಗುವುದಕ್ಕೆ ಇನ್ನೊಂದು ಪಕ್ಷದ ಮೇಲೆ ಅಪವಾದ ಕೊಡುತ್ತಾರೆ. ಮೌಲ್ವಿ ಷಫಿದಾದಿಯವರು ಒಂದು ಪ್ರಕಟನೆಯನ್ನು ಹೊರಡಿಸಿ ಡಾ|| ಅನ್ಸಾರಿಯವರ ಮೇಲೆ ಆಕ್ಷೇಪಣೆ ಹೊರಿಸುತ್ತಾರೆ. ಡಾ|| ಅನ್ಸಾರಿಯವರು ಸಿಮ್ಲಾದ ಸನ್ನಿವೇಶವೇ ಸಂಧಾನವುವಿಫಲವಾಗಲು ಬಲವಾದ ಕಾರಣವೆನ್ನುತ್ತಾರೆ. ಏನೇ ಆಗಲಿ: ನೂತನ್ನೆಲ್ಲ ಹಂಚಿಯಾಯಿತು. ಇದರಿಂದ ಭಾರತೀಯ ರಾಜಕೀಯಪ್ರಗತಿಗೆ ಬಲವಾದ ಪೆಟ್ಟು ಬಿದ್ದಿತು.

ಮೌಲಾನಾ ಷೌಕತಾಲಿಯವರು ಮಹಮ್ಮದೀಯರ ಒಳಜಗಳಕ್ಕೆ ಮಹಾತ್ಮ ಗಾಂಧಿಯವರೇ ಕಾರಣರೆಂದು ಹೇಳುತ್ತಿದ್ದರು. ಈಗ ಮೌಲಾನಾರವರು ಕಾರಣರ್‍ಯಾರೆಂಬುದಕ್ಕೆ ತಮ್ಮ ಆತ್ಮವನ್ನೇ ಕೇಳಬೇಕು. ಅಲ್ಪಸಮಾಜವಾದ ಮಹಮ್ಮದೀಯರಿಗೆ ಯಾವ ಹಕ್ಕುಬಾಧ್ಯತೆಗಳನ್ನು ಕೊಡದೆ ತಾವೇ ಅನುಭವಿಸಬೇಕೆನ್ನುವರೆಂದು ಹಿಂದೂಗಳನ್ನು ಯಾರೂ ಆಕ್ಷೇಪಿಸುವಂತಿಲ್ಲ. ಈ ವಿಷಯವು ಎಲ್ಲರಿಗೂ ಮನವರಿಕೆಯಾಯಿತು. ಅದಲ್ಲ ನಾವು ಹೇಳುವುದಿಷ್ಟೆ! ಹಿಂದೂಮಹಮ್ಮದೀಯರು ಭಾರತ ಮಾತೆಯ ಉಭಯನೇತ್ರಗಳು. ಒಂದು ನೇತ್ರಕ್ಕೆ ಬಾಧೆಯಾದರೆ ಇನ್ನೊಂದು ನೇತ್ರಕ್ಕೂ ಬಾಧೆಯಾದಂತೆಯೇ ಸರಿ. ಈ ಭಾವನೆ ಕೆಲವು ಅತ್ಯವಿಚಾರಿಗಳಿಗೆ ಬಾರದು. ಹಿಂದೂ ಮಹಮ್ಮದೀಯರ ಏಕಮತ್ಯವಾಗುವವರೆಗೂ ನಮ್ಮ ದೇಶಕ್ಕೆ ಸ್ವರಾಜ್ಯವಿಲ್ಲ. ಸ್ವರಾಜ್ಯವಿಲ್ಲದೆ ದೇಶದ ದಾರಿದ್ರ್ಯ, ಮೌಢ್ಯ ಮೊದಲಾದ ವ್ಯಾಧಿಗಳು ಗುಣವಾಗುವುದಿಲ್ಲ. ಈ ವಿಷಯವನ್ನು ಉಭಯರೂ ತಿಳಿದುಕೊಂಡು ವರ್ತಿಸುವುದು ಸರ್ವೋತ್ಕೃಷ್ಟವಾದ ಮಾರ್ಗ.

ದೀರ್ಘಾಯುರಾರೋಗ್ಯಗಳು.

ಅಮೇರಿಕಾಖಂಡಕ್ಕೆ ಸೇರಿದ ಸಂಯುಕ್ತಸಂಸ್ಥಾನಗಳ ಪ್ರಜೆಗಳು ಲೌಕಿಕ ವಿಷಯಗಳಲ್ಲಿ ಪ್ರಪಂಚದ ಎಲ್ಲಾ ಜನಗಳಿಗಿಂತಲೂ ಮುಂದಾಳುಗಳಾಗಿರುತ್ತಾರೆ. ಇದುವರೆಗೂ ಪ್ರಪಂಚದ ಚಕ್ರಾಧಿಪತ್ಯಗಳಲ್ಲಿ ಬ್ರಿಟಿಷ್ ಜನಗಳು ಅಗ್ರಗಣ್ಯರಾಗಿದ್ದರು. ಈಗ ಅಮೇರಿಕಾಖಂಡದವರು ಈ ಅಗ್ರಗಣ್ಯ ಪದವಿಯನ್ನು ಹೊಂದಿರುವರು. ಈ ಜನಗಳು ಬಾಲ್ಯಾರಭ್ಯ ಶ್ರದ್ಧೆಯಿಂದಲೂ, ಉತ್ಸಾಹದಿಂದಲೂ ಕೆಲಸಮಾಡಿ ಸ್ವಶಕ್ತಿಯಿಂದ ಬದುಕುವುದರಲ್ಲಿ ತಂದೆತಾಯಿಗಳಿಂದಲೂ ಗುರುಗಳಿಂದಲೂ ಶಿಕ್ಷಣವನ್ನು ಹೊಂದಿರುವರು. ಆಯುರಾರೋಗ್ಯ ಐಶ್ವರ್ಯಗಳನ್ನು ಹೊಂದುವುದಕ್ಕೆ ಬೇಕಾದ ಕೆಲಸಗಳನ್ನು ಸರ್ಕಾರದವರು ಮಾಡುವರು. ಸದರಿ ಕೆಲಸಗಳು ಸರಿಯಾಗಿ ನಡೆಯುವಂತೆ ಸರ್ಕಾರದವರೊಡನೆ ಸೇರಿ ಜನಗಳು ಕೆಲಸ ಮಾಡುವರು. ಸ್ತ್ರೀಯರು ಗರ್ಭಿಣಿಯರಾಗಿರುವಾಗಲೂ ಉದರದಲ್ಲಿರತಕ್ಕ ಪಿಂಡಕ್ಕೆ ಯಾವ ರೋಗಾದಿಗಳೂ ಬರದಂತೆ ನೋಡಿಕೊಳ್ಳುವರು. ಜನನವಾದ ಕೂಡಲೆ 10 ದಿವಸಗಳೊಳಗಾಗಿ ಬಾಣಂತಿಗೂ, ಮಗುವಿಗೂ ಅಂಟುರೋಗಗಳು ಬರುವುದುಂಟು. ಇದರಿಂದ ಶೇಕಡ 75 ಜನಗಳು ಸಾಯುವುದುಂಟು. ಅಂಥ ರೋಗಗಳು ಬರದಂತೆ ಆಗ ಬೇಕಾದ ಏರ್ಪಾಡುಗಳನ್ನು ಮಾಡುವುದರಲ್ಲಿ ಅವರು ನಿಪುಣರು. ಜನನವಾದ ಮೊದಲುಗೊಂಡು 18 ನೇ ವಯಸ್ಸಿನವರಿಗೂ ಸಿಡುಬು, ದಡಾರ, ಗೊಬ್ಬರ ಮೊದಲಾದ ಅನೇಕ ಅಂಟುರೋಗಗಳು ಬರುವುದುಂಟು. ಅಂಟುರೋಗಗಳು ಅಕಾಲಮರಣವು. 18 ನೇ ವಯಸ್ಸಿನವಳಗಾಗಿ ವಿಶೇಷವಾಗಿ ಬರುವುದರಿಂದ Life Insurance Companyಯವರು ಕೂಡ 18 ವರ್ಷದವಳಗಾಗಿ Life Insurance ಮಾಡುವುದಿಲ್ಲ ಎಲ್ಲಾ ತಂದೆತಾಯಿಗಳು ಮತ್ತು ಪೋಷಕರು 18 ವರ್ಷಗಳವರಿಗೂ ಮಕ್ಕಳಿಗೆ ಅಂಟುರೋಗಗಳೇ ದಲಾದವುಗಳಿಂದ ಅಕಾಲಮರಣಗಳು ಆಗದಂತೆ ಗರೂಕತೆಯಿಂದ ನೋಡಿಕೊಳ್ಳಬೇಕು. ಈ ವಿಷಯಕ್ಕೆ ಅಮೇರಿಕಾ ಸಂಯುಕ್ತ ಸಂಸ್ಥಾನದ ಜನ ವಿಶೇಷ ನಿಗಾಕೊಡುತ್ತಲಿರುವುದರಿಂದ ಆ ದೇಶದಲ್ಲಿ ನಿವಾರಣೀಯವಾದ ರೋಗಗಳು ಬಹಳ ಕಡಮೆಯಾಗಿರುವದಲ್ಲದೆ ಜನಗಳು ಆರೋಗ್ಯದೃಢಕಾಯರಾಗಿ ದೀರ್ಘಾಯುರಾರೋಗ್ಯ ಐಶ್ವರ್ಯಗಳನ್ನು ಹೊಂದಿ ಎಲ್ಲಾ ವಿಷಯಗಳಲ್ಲೂ ಮುಂದಾಳುಗಳಾಗಿರುತ್ತಾರೆ. ಇದರಿಂದ ಲೌಕಿಕಸಂಪತ್ತುಗಳಿಗೆ ಧರ್ಮವೇ ಮೂಲವೆಂದು ತಿಳಿದುಕೊಳ್ಳುತ್ತಲೂ ಇಧಾರೆ. ಈ ಭರತಖಂಡದಲ್ಲಿ ಲೌಕಿಕಸಂಪತ್ತಿಗೆ ಸಾಧಕವಾದ ಧರ್ಮಗಳು ಪರಿಪೂರ್ಣವಾಗಿರುತ್ತವೆ. ಆದರೆ ಜಾತಿಭೇದ, ಮತಭೇದ ಮತ್ತು ಕೋಮಿನಭೇದ ಮೊದಲಾದವುಗಳಿಂದ ನಮ್ಮಲ್ಲಿ ಐಕಮತ್ಯವು ತಪ್ಪಿ ಸುಮಾರು ಸಾವಿರಾರು ವರ್ಷಗಳಿಂದ ನಾವು ನಮ್ಮ ಭೇದಭಾವಗಳಿಂದ ಗುಲಾಮಗಿರಿಗೆ ಒಳಗಾಗಿದ್ದರುತ್ತೇವೆ. ಕಳೆದ 330 ವರ್ಷಗಳಿಂದ ಬ್ರಿಟಿಷ್ ಜನಗಳ ಸಂಬಂಧವು. ಅವರ ಸಾಂಕುಶಪ್ರವರ್ತನದ ಮಾರ್ಗಗಳೂ ಅವರ ಏಕಮತ್ಯವೂ ಅವರ ವಿದ್ಯಾಭ್ಯಾಸವೂ ನಮಗೆ ಲಭ್ಯವಾದುದರಿಂದ ಈಗ ನಮಗೆ ಪೂರ್ಣಸ್ವರಾಜ್ಯವು ಲಭಿಸುವ ಕಾಲವು ಬಂದಿರುವುದು. ಭಾರತಪುತ್ರರೂ ಮತ್ತು ಪುತ್ರಿಯರೂ ಪೂರ್ಣಸ್ವರಾಜ್ಯಕ್ಕೋಸ್ಕರ ಪ್ರಾಣವನ್ನು ಬಿಡುವುದಕ್ಕೂ ಸಿದ್ಧರಾಗಿರುವುದನ್ನು ನೋಡಿ ಬ್ರಿಟಿಷ್ ಮಹಾಜನಗಳು ಪೂರ್ಣಸ್ವರಾಜ್ಯವನ್ನು ಕೊಟ್ಟು, ಬ್ರಿಟಿಷ್ ಜನಗಳೂ ಭಾರತೀಯರೂ ಇಬ್ಬರೂ ಬ್ರಿಟಿಷ್ ಚಕ್ರಾಧಿಪತ್ಯದ ಸಂಪತ್ತಿನಲ್ಲಿ ಪಾಲುದಾರರಾಗಿರುವಂತೆ ಮಾಡಿಕೊಳ್ಳುತ್ತಲಿದ್ದಾರೆ. ಮಹಾತ್ಮಾ ಗಾಂಧಿಯವರ ಉಪದೇಶವು ಇದಕ್ಕೆ ಸಾಧಕವಾಯಿತೆಂದು ಪ್ರಪಂಚವೆಲ್ಲಾ ಸಂತೋಷಗೊಳ್ಳುತ್ತಲಿರುವುದು. ಇದೆಲ್ಲಾ ದೇವರ ಅನುಗ್ರಹವೆಂದು ತೋರುತ್ತದೆ.

ಯಂ. ವೆಂಕಟಕೃಷ್ಣಯ್ಯ.

ಶಿಷ್ಯರ ಮನೆಗಳ ರಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನೂ ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇದನ್ನು ದೂರಮಾಡುವದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಒಂದು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ.

ಎರಡು ಸಾವಿರದ ವರೆಗೆ ಶಿಷ್ಯರ ಹೆಸರುಗಳನ್ನು ಬರೆಯುವ ಬುಕ್ಕಿಗೆ ೧ ರೂ. ೮ ಆಣೆ.

ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್ ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ವೀರಶೈವ ಮಂಗಳಗೀತಾದರ್ಶ.

ಶುಭ-ಶೋಭನ ಕಾಲಗಳಲ್ಲಿ ಹೆಣ್ಣುಮಕ್ಕಳು ಹೇಳಿಕೊಳ್ಳಲನುಕೂಲವಾದ ಹಾಡುಗಳಲ್ಲದೆ, ಸ್ತ್ರೀಪುರುಷ ಬೇಧವಿಲ್ಲದೆ ಸರ್ವರೂ ನಿತ್ಯವೂ ಪಠಿಸಬಹುದಾದ ಶ್ರೀ ಪಾರ್ವತೀಪರಮೇಶ್ವರ ಸಂಬಂಧವಾದ ಕೀರ್ತನೆಗಳೂ ಇವೆ. ಒಂದುನೂರು ಪ್ರತಿಗಳು ಮಾತ್ರವೇ ಉಳಿರುವುದರಿಂದ ಗ್ರಾಹಕರು ತ್ವರೆಮಾಡಬೇಕು.

ಬೆಲೆ ೧ಕ್ಕೆ ೦—೪—೦ ಮಾತ್ರ.

N. B.—ಒಂದು ರೂ. ಗಿಂತ ಕಡಿಮೆ ವಿ. ಪಿ. ಕಳುಹುವುದಿಲ್ಲ. ಒಂದೊಂದೇ ಪುಸ್ತಕಗಳನ್ನು ಅಪೇಕ್ಷಿಸುವವರು ಪುಸ್ತಕ ಒಂದಕ್ಕೆ ೪½ ಆಣೆಯಂತ ಪೋಸ್ಟಲ್ ಸ್ಟಾಂಪ್‌ಗಳನ್ನು ರವಾನಿಸಿದಲ್ಲಿ ಪುಸ್ತಕವು ಬುಕ್‌ಪೋಸ್ಟ್ ಮೂಲಕ ರವಾನಿಸಲ್ಪಡುವುದು.

ಸಚಿತ್ರ ಕನ್ನಡ ಮಕ್ಕಳ ಗಣಿತ.

ಮಕ್ಕಳಲ್ಲಿ ಕಂಡುಬರುವ ಬೆರಳೆಣಿಸುವ ಕೆಟ್ಟ ಪದ್ಧತಿಯು ಪರಿಹಾರವಾಗಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟು, ಮೈಸೂರು ಸರಕಾರದ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರ್ ಸಾಹೇಬರಿಂದ ಮಂಜೂರ್ ಮಾಡಲ್ಪಟ್ಟಿದೆ. ಪ್ರೈಮರಿ ೧ ಮತ್ತು ೨ ನೆಯ ತರಗತಿಗಳಿಗೆ ಉಪಯುಕ್ತವಾದುದು. ಬೆಲೆ ೦—೪—೦.

ಕರ್ನಾಟಕ ಗುಣಿತಾಕ್ಷರಬೋಧೆ.

ಕಾ, ಗುಣಿತಗಳನ್ನು ಕಲಿಸಲನುಕೂಲವಾದ ಚಿತ್ರಪಟ ಬೆಲೆ ೦—೧—೦.

ಸಿಲಬಸ್ ಫಾರಂ.

ಉಪಾಧ್ಯಾಯರು ತಮ್ಮ ಸ್ಕೂಲಿನ ವಾರ್ಷಿಕ ಪ್ರೋಗ್ರಾಂ ತಯಾರಿಸಿಕೊಳ್ಳಲನುಕೂಲ. ೦ : ೦

ಕನ್ನಡ

೨ ಮತ್ತು ೩ ನೆಯ ರೀ. ಗಳ ನೋಟ್ಸುಗಳು ಪ್ರಶ್ನೋತ್ತರಗಳ ಸಹಿತವಾಗಿವೆ. ಬೆಲೆ ಪ್ರತಿಯೊಂದಕ್ಕೆ ೦—೪—೦.

N.B.—ಸಂಸ್ಥಾನದ ಸುಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲೆಲ್ಲಾ ದೊರೆಯುತ್ತವೆ.

ಪ್ರಕಾಶಕರು:—ಜಿ. ರೇವಣ್ಣ ಅಂಡ್ ಬ್ರದರ್

ಬುಕ್‌ಸೆಲ್ಲರ್ಸ್, ಪೋ|| ಬಿಡದಿ, ಡಿ|| ಬೆಂಗಳೂರು.

ಶುದ್ಧವನಸ್ಪತಿಗಳಿಂದ ಸಿದ್ಧವಾದ

ಮಹೌಷಧಗಳು.

ಶ್ರೀ ಕೇದಾರಪೀಠಾಧಿಪತಿ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರಿಂದ ಸನಾತನಧರ್ಮೋದ್ಧಾರಕ್ಕಾಗಿ ಶ್ರೀ ಸಂಸ್ಥಾನ ಓಖೀಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೇದಾರನಾಥ ಸನಾತನಧರ್ಮ ಸಂಸ್ಕೃತ ಮಹಾವಿದ್ಯಾಲಯ (ಕಾಲೇಜ) ಶಾಖೆಯಾದ ಆಯುರ್ವೇದ ಮಹೌಷಧಾಲಯದಲ್ಲಿ ಹಿಮಾಲಯದ ಸುಪ್ರಸಿದ್ಧ ಮೇಧಾ-ಮಹಾಮೇಧಾ-ಋದ್ಧಿ-ಸಿದ್ಧ್ಯಾದಿ ಅಷ್ಟವರ್ಗಮಿಶ್ರಿತ ಮಹೌಷಧಗಳು ಸಿದ್ಧವಾಗಿವೆ.

ಚ್ಯವನಪ್ರಾಶ—ಈ ಮಹೌಷಧವು ಹಿಮಾಲಯದ ಋಷಿಪ್ರತಿಷ್ಠಿತಾದಿ ಹಾಗೂ ಘೃತೋಕ್ತ ಅಷ್ಟವರ್ಗ ಪ್ರಭೃತಿ ವನಸ್ಪತಿಗಳಿಂದ ಸಿದ್ಧವಾಗಿದೆ. ಕಾಸ, ಶ್ವಾಸ, ಕ್ಷಯರೋಗಗಳನ್ನು ಮುಖ್ಯವಾಗಿ ಗುಣಪಡಿಸುತ್ತದೆ. ವೃದ್ಧರಿಗೂ ಬಾಲಕರಿಗೂ ಅಂಗವೃದ್ಧಿಯನ್ನುಂಟುಮಾಡುತ್ತದೆ. ಸ್ವರಕ್ಷಯ, ಉರೋರೋಗ, ವಾತ, ರಕ್ತ, ಪಿಪಾಸಾ, ಮೂತ್ರ, ಶುಕ್ರಸ್ಥ ದೋಷಾದಿಗಳನ್ನು ಪರಿಹರಿಸುತ್ತದೆ. ಈ ಚ್ಯವನಪ್ರಾಶಸೇವನೆಯಿಂದಲೇ ಚ್ಯವನಮಹರ್ಷಿಯು ಅತಿ ವೃದ್ಧನಾಗಿದ್ದರೂ ತರುಣನಾಗಿ ಜೀವಿಸಿದನು. ಬುದ್ಧಿ, ಸ್ಮೃತಿ, ಕಾಂತಿ, ಆರೋಗ್ಯ, ಇಂದ್ರಿಯಬಲ, ಅಗ್ನಿವೃದ್ಧಿ ಇತ್ಯಾದಿ ಅನೇಕ ಬಲವನ್ನುಂಟುಮಾಡುವ ಸರ್ವೋತ್ತಮವಾದುದು ಶಾಸ್ತ್ರೋಕ್ತರೀತ್ಯಾ ಸಿದ್ಧವಾಗಿದೆ. ಸಣ್ಣ ಹುಡುಗರು ಮೊದಲುಮಾಡಿಕೊಂಡು ವೃದ್ಧರವರೆಗೆ ಎಲ್ಲರೂ ಸೇವನೆ ಮಾಡಬಹುದು. ತರುಣರು ಅರ್ಧತೊಲೆಯಿಂದ ಒಂದು ತೊಲೆಯವರೆಗೂ ಬೆಳಗ್ಗೆ ಸಾಯಂಕಾಲ ಹಾಲಿನೊಡನೆ ಸೇವಿಸಬೇಕು. ಸೇವನಾನಂತರ ೩ ಘಂಟೆಯೊಳಗಾಗಿ ಭೋಜನಮಾಡಕೂಡದು. ೨೦ ತೊಲೆಗೆ ೧ ರೂ. ೧೨ ಆಣೆ. ೪೦ ತೊಲೆಗೆ ೩ ರೂ. ... ತೊಲೆಗೆ ೬ ರೂ.

ಶಿಲಾಜಿತ—ಇದು ಹಿಮಾಲಯದ ಉನ್ನತಶಿಖರಗಳ ಶಿಲೆಗಳಲ್ಲಿ ಪ್ರಾದುರ್ಭವಿಸುವ ಮಹೌಷಧರತ್ನವೆನಿಸಿದೆ. ಇದು ಸೂರ್ಯ ಕಿರಣದಿಂದ ಶಿಲೆಗಳಲ್ಲಿ ಸ್ರವಿಸುತ್ತಿರುವಾಗ್ಗೆ ಸಂಗ್ರಹಿಸಲ್ಪಟ್ಟು ಸಂಸ್ಕಾರವನ್ನು ಪಡೆದು ಸೂರ್ಯಕಿರಣಗಳಲ್ಲಿ ಕೆಲವು ದಿವಸಗಳು ಇರಿಸಿ ತಯಾರಿಸಲ್ಪಡುವದು. ಅನುಪಾನಭೇದದಿಂದ ಪ್ರಮೇಹ, ಮಧುಮೇಹ, ಪ್ರದರ ಗೊನೇರಿಯಾ, ವಾತರೋಗ, ಮುಂತಾದ ಅನೇಕ ರೋಗಗಳನ್ನು ನಿವಾರಣಮಾಡುತ್ತದೆ. ಗುಂಜಿಯಿಂದ ಅರ್ಧಮಾಸೆಯವರೆಗೆ ಹಾಲಿನೊಡನೆ ಪ್ರಾತಃಕಾಲ ಸಾಯಂಕಾಲಗಳಲ್ಲಿ ಸೇವಿಸಿದರೆ ಧಾತುವೃದ್ಧಿಯಾಗುವದು.

ಕಿಮ್ಮತು ೧ ತೊಲೆಗೆ ೧ ರೂ. ೮ ಆಣೆ.

ಕಸ್ತೂರಿ—೧ ತೊಲೆಗೆ ೪೦ ರೂಪಾಯಿಯಿಂದ ೬೦ ರೂಪಾಯಿಗಳವರೆಗೆ

ಗೃಹಮಾತೆಯು—೧ ಶೀಶೆಗೆ ೧೨ ಆಣೆ (ಸ್ತ್ರೀ.) ರೋಗಗಳನ್ನು ಪರಿಹರಿಸುವುದು.

ಹಿಮಾಲಯನ್ ಬಾಮ್—೧ ಡಬ್ಬಿಗೆ ೮ ಆಣೆ ಸಮಸ್ತ ವಾತರೋಗಗಳನ್ನು ನಾಶಮಾಡುವದು. ಇವುಗಳಲ್ಲದೆ ಇಲ್ಲಿ ಸರ್ವರೋಗೋಪಯುಕ್ತಗಳಾದ ಯಾವತ್ತು ಮಹೌಷಧಗಳು ಸಿಗುವವು.

ವಿಶೇಷ ವಿಷಯಗಳನ್ನು ತಿಳಿಯಲಿಚ್ಛಿಸುವವರು ೧ ಆಣೆಯ ಸ್ಟಾಂಪನ್ನು ಕಳುಹಿಸಿದಲ್ಲಿ ಮಹೌಷಧಾಲಯದ ಲಿಸ್ಟು ಕಳುಹಿಸಲ್ಪಡುವದು.

ನಮ್ಮ ಅಡ್ರಸ್ಸನ್ನು ಮಾತ್ರ ಇಂಗ್ಲೀಷಿನಿಂದ ಬರೆಯಬೇಕು.

ಆಯುರ್ವೇದ ಮಹೌಷಧಾಲಯ,

ಪೋಸ್ಟ್ ಓಖೀಮಠ, ಡಿ|| ಗಢವಾಲ ಯು. ಪಿ.

ಲಿಂಗೋತ್ಪತ್ತಿ ಲಾಕೆಟ್ಸ್.

ಗುರುಭಕ್ತಿಸಂಪನ್ನರಾದ ವಿದ್ಯಾರ್ಥಿಗಳೂ, ದೊಡ್ಡವರೂ ಹಾಗೂ ಭಜನಾಸಂಘದವರೂ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಸದಾ ತಮ್ಮ ದೇಹದಲ್ಲಿ ಧರಿಸಿಕೊಂಡು ದರ್ಶನಸ್ಪರ್ಶನಾದಿಗಳಿಂದ ಧನ್ಯರಾಗಲೆಂಬ ಉದ್ದೇಶದಿಂದ ಕೋಟಿನ ಮೇಲೆ ಹಾಕಿಕೊಳ್ಳುವದಕ್ಕೂ, ಗಡಿಯಾರದ ಸರಪಣಿಯಲ್ಲಿ ಹಾಕಿಕೊಳ್ಳುವದಕ್ಕೂ ಹಾಗೂ ಚಿಕ್ಕಬಾಲಕರು ಟೊಪ್ಪಿಗೆಯ ಮೇಲೆ ಹಾಕಿಕೊಳ್ಳಲಿಕ್ಕೂ ಅನುಕೂಲವಾಗುವಂತೆ ಮೂರು ತರಹದ ಲಿಂಗೋತ್ಪತ್ತಿ ಲಾಕೆಟ್ಟುಗಳನ್ನು ನೂತನ ಪದ್ಧತಿಯ ಮೇರೆಗೆ ಹೊಸದಾಗಿ ನಾನಾ ತರಹದ ಬಣ್ಣಗಳಿಂದ ಅತ್ಯಂತ ಮನೋಹರವಾಗಿ ತಯಾರಿಸಿ ತರಿಸಿರುತ್ತೇವೆ. ಆದುದರಿಂದ ಭರತಖಂಡದಲ್ಲಿರತಕ್ಕ ಸರ್ವಗುರುಭಕ್ತರೂ ಇವುಗಳನ್ನು ತರಿಸಿ ಧರಿಸಿಕೊಂಡು ಧನ್ಯರಾಗತಕ್ಕದ್ದು. ಲಾಕೆಟ್ ೧ ಕ್ಕೆ ೩ ಆಣೆ. ೨೫ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೧ ರೂಪಾಯಿಗೆ ೨ ಆಣೆ ಕಮೀಷನ್. ೫೦ ರ ಮೇಲ್ಪಟ್ಟು ತರಿಸುವವರಿಗೆ ೩ ಆಣೆ ಕಮೀಷನ್. ೧೦೦ ರ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ೪ ಆಣೆ ಕಮೀಷನ್ ಕೊಡಲಾಗುವದು. ವಿ. ಪಿ. ಚಾರ್ಜು ಪ್ರತ್ಯೇಕ. ೧ ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್,

ಮೈಸೂರು.

ಸಿದ್ಧಾಂತಸಾರಾವಳಿ

ಈ ಗ್ರಂಥವನ್ನು ಶ್ರೀ ತ್ರಿಲೋಚನಶಿವಾಚಾರ್ಯರೆಂಬ ಮಹನೀಯರು ರಚಿಸಿದ್ದಾರೆ. ಈ ಗ್ರಂಥಕರ್ತರು ಬಹು ಪ್ರಾಚೀನರು. ಇವರೀಗ್ರಂಥದ ಪ್ರಮಾಣಗಳನ್ನು ಲಿಂಗಧಾರಣಚಂದ್ರಿಕಾಕರ್ತರೇ ಮೊದಲಾದ ಅನೇಕ ಜನ ಪ್ರಾಚೀನ ಪಂಡಿತರು ತಮ್ಮ ತಮ್ಮ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ. ಈ ಗ್ರಂಥವು ಶೈವಸಾಮ್ರಾಜ್ಯಕ್ಕೆ ಕಿರೀಟಪ್ರಾಯವಾಗಿದೆ. ಅತ್ಯಂತ ಕ್ಲಿಷ್ಟವಾದ ಈ ಗ್ರಂಥದ ಮರ್ಮವು ಸರ್ವರಿಗೂ ತಿಳಿಯಲೆಂಬುದ್ದೇಶದಿಂದ ಸುಲಭವಾದ ಕನ್ನಡ ಟೀಕೆಯೊಡನೆ ಬಹು ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಶೈವಾಗಮಗಳ ಸಾರವು ಈ ಗ್ರಂಥದಲ್ಲಿ ಅಡಕವಾಗಿದೆ. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥರತ್ನವನ್ನು ತರಿಸಿಕೊಂಡು ಅದರ ಪ್ರಯೋಜನವನ್ನು ಹೊಂದಬೇಕೆಂದು ಆಶಿಸುತ್ತೇವೆ. ಗ್ರಂಥವು ದೊಡ್ಡದಾಗಿದ್ದರೂ ಬೆಲೆಯು ಬಹು ಕಡಿಮೆಯಾಗಿಡಲ್ಪಟ್ಟಿದೆ.

ಬೆಲೆ ೧೨ ಆಣೆ

ಆಗಮಪರಿಜ್ಞಾನ

ಈ ಗ್ರಂಥವನ್ನು ಶ್ರೀ ಶಂಭುಲಿಂಗ ಶಿವಾಚಾರ್ಯರು ಕನ್ನಡಭಾಷೆಯಿಂದ ರಚಿಸಿರುವರು. ವೇದಗಳಿಗೂ ಆಗಮಗಳಿಗೂ ಸಮಾನಪ್ರಾಮಾಣ್ಯವನ್ನು ಸ್ಥಿರಪಡಿಸುವುದೇ ಈ ಗ್ರಂಥದ ಮುಖ್ಯೋದ್ದೇಶವಾಗಿದೆ. ಇದರಲ್ಲಿ ಆಗಮಗಳ ಸ್ವರೂಪವು ಬಹು ವಿಶದವಾಗಿ ವರ್ಣಿಸಲ್ಪಟ್ಟಿದೆ. ಆಗಮಪ್ರಾಮಾಣ್ಯವಿಷಯದಲ್ಲಿ ಈ ತರಹದ ಗ್ರಂಥಗಳು ಈ ಹೊತ್ತಿನವರೆಗೂ ಎಲ್ಲಿಯೂ ಮುದ್ರಿಸಲ್ಪಟ್ಟಿಲ್ಲ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಅವಶ್ಯವಾಗಿ ತರಿಸಿಕೊಂಡು ಇದರಲ್ಲಿರುವ ಅನೇಕ ಮಹತ್ವವಿಷಯಗಳನ್ನು ತಿಳಿದುಕೊಳ್ಳಬೇಕು. ಸುಂದರವಾದ ಮುದ್ರಣ.

ಬೆಲೆ ೮ ಆಣೆ.

ಮ್ಯಾನೇಜರ್

ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು.

ರಾಜಮದ್ದು.

ಮಲೆಜ್ವರಕ್ಕೆ

ಮಲೇರಿಯಾನ

ಮಲೇಜ್ವರ, ಛಳಿಜ್ವರ, ಎರಡು ದಿನಕ್ಕೊಂದಾವರ್ತಿ ಬರುವ ಜ್ವರ, ನಾಲ್ಕು ದಿನಗಳ ಜ್ವರ, 8 ದಿನಗಳ ಜ್ವರ, ಬಿಟ್ಟು ಬಿಟ್ಟು ಬರುವ ಜ್ವರ, ಸರ್ವಸಾಧಾರಣ ಎಲ್ಲಾ ಜ್ವರಗಳನ್ನು ಮತ್ತು ಗಡ್ಡೆ ರೋಗವನ್ನೂ ಕರಗಿಸಿಬಿಟ್ಟು ಆರೋಗ್ಯ ಕೊಡುವುದು. ಕ್ರಯ 8 ಔನ್ಸಿಗೆ ರೂ. 1—8—0, ½ ಡಜನಿಗೆ ರೂ. 8—8—0, ಡಜನಿಗೆ 16—8—0.

ಆರೋಗ್ಯಭಾಗ್ಯದ ಜೀತಿಸೂತ್ರದ ಪುಸ್ತಕಕ್ಕೆ ಬರೆಯಿರಿ.

ಪಿತ್ತರೋಗಕ್ಕೆ ಕಂಪೌಂಡು ಸಿರಪ್ಪು ಕಾರ್ಡಸ್—ಪಿತ್ತ, ಜ್ವರ, ಉರಿಜ್ವರ, ಕೈಕಾಲು ಬಚ್ಚಲು, ರಕ್ತಭಾಮೆ ಕಾಣದೆ ಇರುವ ಶರೀರ, ರುಚಿಕೆಟ್ಟಿರುವ ನಾಲಿಗೆ, ಅರಸಿನ ಬಣ್ಣ ಕಾಣುವ ಕಣ್ಣು ಮತ್ತು ಶರೀರ, ತಲೆತಿರುಕ, ತಲೆತಿರುಗುವುದು, ನಿದ್ರೆ ಇಲ್ಲದೆ ಸಂಕಟಪಡುವುದು, ಅತೀದಾಹ, ಹೊಟ್ಟೆ ಬೆಂಕಿ, ಎದೆ ಉರಿ ಮತ್ತು ಸುಡುವುದು, ನಾಲಿಗೆ ಒಣಗುವುದು, ಮಲಮೂತ್ರಕ್ಕೆ ಭಂಗ, ಪಿತ್ತಕಾರುವುದು, ಇತ್ಯಾದಿ ಪಿತ್ತ ರೋಗಗಳನ್ನೆಲ್ಲಾ **ಕಂಪೌಂಡು ಸಿರಪು ಕಾರ್ಡಸ್** ಎಂಬ ಔಷಧವು ಖಂಡಿತ ಗುಣಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ 3—8—0.

ಮಕ್ಕಳ ದೇಹಪುಷ್ಟಿಗೆ ಬೇಬಿಟೋನ್—ಜೀರ್ಣದ ಬಲವಿಲ್ಲದ ಮಕ್ಕಳ ದೇಹವು ಪುಷ್ಟಿಯಾಗದೆ, ಅತೀ ಸೊರಗಿಹೋಗುವುದು, ಜುಲಾಬು, ಕೆಮ್ಮು, ಕಫ, ಅಸ್ಥಿಜ್ವರ, ಉಬ್ಬಸ ಸ್ವೇದ, ಎದೆಗೂಡು ಕೆಟ್ಟುವುದು ಕೈಕಾಲು ಸೊಂಟಕ್ಕೆ ಶಕ್ತಿ ಇಲ್ಲದೆ ಬಲಹೀನವಾಗಿರುವುದು, ಮೂತ್ರದಲ್ಲಿ ಬಿಳೀಪು, ಹೊಟ್ಟೆ ಹುಳ ಇತರ ಸಣ್ಣ ಮಕ್ಕಳ ವಿವಿಧ ರೋಗಗಳನ್ನೆಲ್ಲಾ **ಬೇಬಿಟೋನ್** ಎಂಬ ಬಾಲಾಮೃತವು ಖಂಡಿತ ಗುಣಪಡಿಸುತ್ತದೆ. ಕ್ರಯ ಬಾಟ್ಲಿಗೆ ರೂ. 1—4—0.

☞ ಟಿಕ್ಕ್ಯು ಲವಣಗಳೂ, ಹೋಮಿಯೋಪಥಿಕ್ ಮದ್ದುಗಳೂ, ಇತರ ರೋಗಗಳ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ.

[47] **ಮಲೇರಿಯಾನ ಕಂಪೆನಿ,** ನಂಬ್ರ 21 (ಹಂಪನಕಟ್ಟೆ.) **ಮಂಗಳೂರು.** ದ. ಕ.

ತಮ್ಮ ಸಿರಿಹೊರೆಯ ಕಾಲರಾ (ವಾಂತಿಭೇದಿ) ರೋಗಗಳಿಗೆ ಪ್ರಾಣದಾನವನ್ನು ಮಾಡಬೇಕೆಂಬಿಚ್ಛೆಯಿದ್ದರೆ ಈ ದಿನವೇ

ವೈಶ್ವಾನರಾಸವ

ದ ಒಂದು ಸೀಸೆಯನ್ನು ತರಿಸಿಕೊಡಿರಿ. ಇದರಲ್ಲಿ ಅಫೀಂ ಸೇರಿಲ್ಲ. ಮೂತ್ರವು ಕಟ್ಟದೆ, ಹೊಟ್ಟೆಯುಬ್ಬರಿಸದೆ—ಕೊಟ್ಟ ಮೊದಲನೇ ವೇಳೆಯಿಂದಲೇ ವ್ಯಾಧಿಯು ಗುಣವಾಗುತ್ತಾ ಬರುತ್ತದೆ. ಕೈಮೀರಿತೆಂದು ತೋರಿದಾಗಲೂ ಈ ವೈಶ್ವಾನರಾಸವವು ಅನೇಕ ಕಾಲರಾ ರೋಗಿಗಳನ್ನು ಉಳಿಸುತ್ತದೆ.

ಸೀಸೆ ಒಂದರ ಬೆಲೆ ರೂ. 1—0—0. ಪೋಸ್ಟೇಜು ಬೇರೆ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತ, ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಾಸೂರು, 9—3—31.

ಈ ಪ್ರಾಂತ ಕಾಲರಾ ರೋಗವು ವ್ಯಾಪಿಸಿರುವುದರಿಂದ ತಮ್ಮಲ್ಲಿಂದ ತರಿಸಿದ್ದ "ವೈಶ್ವಾನರಾಸವ"ವನ್ನು ಉಪಯೋಗಿಸಿದ್ದರಲ್ಲಿ ತುಂಬಾ ಗುಣ ಕಂಡುಬಂದಿತು. ಇದನ್ನು ಸೇವಿಸಿದ ರೋಗಿಗಳೆಲ್ಲರೂ ಬದುಕಿರುತ್ತಾರೆ. ಅದ್ದರಿಂದ ದಯವಿಟ್ಟು ಈ ಕಾರ್ಡು ತಲ್ಪಿದ ಮರುಟಪಾಲಿಗೇನೆ ಸಾವಕಾಶಮಾಡದೆ ಇನ್ನು 4 ಬಾಟಲಿ ವೈಶ್ವಾನರಾಸವವನ್ನು ವಿ. ಪಿ. ಮೂಲಕ ಕಳುಹಿಸಬೇಕಾಗಿ ಕೋರಿಕೆ.

(Sd.) ದೊಡ್ಡಬಸವೇಗೌಡರು,

ಪಟೇಲ್ ಮತ್ತು ಛೇರ್‌ಮನ್, ಬಾಸೂರು,

ಪೋಸ್ಟ್ ಸಖರಾಯಪಟ್ಣ, ಡಿಸ್ಟ್ರಿಕ್ಟ್ ಕಡೂರು.

[10]

ಸರ್ವೋತ್ತಮವಾದ ಮತಗ್ರಂಥಗಳು

ಶ್ರೀ ರೇಣುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ದಾರುಕಾಚಾರ್ಯರ ನಾಮಾವಳಿ (೪ನೆಯ ಆವೃತ್ತಿ)	೧ ಆಣೆ
ಶ್ರೀ ಏಕೋರಾಮಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ಪಂಡಿತಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಶ್ರೀ ವಿಶ್ವಾರಾಧ್ಯರ ನಾಮಾವಳಿ (೨ನೆಯ ಆವೃತ್ತಿ)	೧ ಆಣೆ
ಮರುಳಸಿದ್ಧೇಶ್ವರಸ್ತೋತ್ರ	೧ ಆಣೆ
ಗೋತ್ರಸೂತ್ರಪಟ (ಎರಡುಬಣ್ಣಗಳ ಮನೋಹರ ಮುದ್ರಣ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀ ಪಂಚಾಚಾರ್ಯ ಮಂಗಲಸ್ತೋತ್ರಾವಳಿ (೭ನೆಯ ಆ.)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೧ ಆಣೆ
ಬಸವಾದಿ ನಿಜತತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀ ರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾಕರ	೨ ಆಣೆ
ವೀರಶೈವಮತಮೀಮಾಂಸಾ	೨ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೩ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೩ ಆಣೆ
ಸನ್ಯಾಸಾಶ್ರಮ ವಿಮರ್ಶ ತತ್ವಸ್ಥಿರೀಕರಣ (೨ನೆಯ ಆವೃತ್ತಿ)	೪ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ (೩ನೆಯ ಆ.)	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶಿವಾಧಿಕ್ಯರತ್ನಾವಳಿ (ಷಡಕ್ಷರ ಕವಿಕೃತ)	೮ ಆಣೆ
ಶಿವಸ್ತವಶಿರೋಮಣಿ	೨॥ ಆ
ಬಸವಧ್ವಾಂತ ದಿವಾಕರ (೨ನೆಯ ಆವೃತ್ತಿ)	೮ ಆ
ಆಗಮಪರಿಜ್ಞಾನ (ಶಂಭುಲಿಂಗಶಿವಾಚಾರ್ಯಕೃತ)	೮ ಆ
ವೇದೋಕ್ತ ಶಿವಪೂಜಾವಿಧಿ (ದೊಡ್ಡದು)	೧೦ ಆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ	೧ ರೂ.
ಸಿದ್ಧಾಂತಶಿಖೋಪನಿಷತ್ (ವೀರಶೈವಭಾಷ್ಯ)	೧ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವು... ಗುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿ... ಪುಸ್ತಕವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡ... ಗುವುದು.

ಪಂಚಾಚಾರ್ಯಪ್ರಭಾ, ಆಫೀಸ್, ಮೈಸೂರು.

ಸ್ವದೇಶೀಪೇಟಾಮಾರ್ಟ್

ನಮ್ಮಲ್ಲಿ ತಯಾರಾಗುವ ರೇಶಿಮೆಯ ಪೇಟಾಗಳು ತಲೆಗೆ ಸುತ್ತಲಿಕ್ಕೆ ಅಂದವಾಗಿಯೂ ಆರೋಗ್ಯಕರವಾಗಿಯೂ ಬಾಳಿಕೆ ಬರತಕ್ಕವಾಗಿಯೂ ಇರುತ್ತವೆ. ಇವುಗಳನ್ನು ... ನೇಯ್ಗೆಯವರಿಂದ ಮನೋಹರವಾದ ಮತ್ತು ಸೂಕ್ತವಾದ ಕಾಶ್ಮೀರದೇಶದ ರೇಶಿಮೆ... ತಯಾರಿಸುತ್ತೇವೆ. ಇವು ಹಗುರಾಗಿಯೂ ಮತ್ತು ನಯವಾಗಿಯೂ ಇರುವದರಿಂದ ತೊಳೆದರೆ ... ಜಾಗ್ರತೆಯಾಗಿ ಸ್ವಚ್ಛವಾಗುವವು. ಅಲ್ಲದೆ ಯಾವಾಗಲೂ ಕೆಡದೆ ಹೊಸಪೇಟಾಗಳಂತೆಯೇ ... ಸುವವು. ಶಿರೋಭೂಷಣವಾದ ಈ ಪೇಟಾಗಳು ಎಲ್ಲರಿಂದಲೂ ಧರಿಸಲು ಯೋಗ್ಯಗಳಾಗಿರುವ... ರಿಂದ ಪ್ರತಿಯೊಬ್ಬರೂ ತರಿಸಿಕೊಂಡು ಅವುಗಳ ಅನುಭವವನ್ನು ಪಡೆಯಬೇಕೆಂದು ಕೋರುತ್ತೇವೆ.

ಬೆಲೆ 1 ಗಜ (ವಾರ) ಕ್ಕೆ 3 ರೂಪಾಯಿ ಮಾತ್ರ.

ಎಸ್. ಎಗ್. ಹೊಸಮನಿ, ಪೋ|| ಗುಳೇದಗುಡ್ಡ, ಡಿ|| ಬಿಜಾಪು...

ಮನೋಹರವಾದ ಫೋಟೋಗಳು.

	ರೂ. ಆ. ಪೈ.
ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೬×೪ ಬೆಲೆ ೧ಕ್ಕೆ	೦—೦—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇದ್ದ ಫೋಟೋ ಸೈಜು ೧೪-೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಶ್ರೀ ಜಗದ್ಗುರು ಕೇದಾರಮಹಾಸಂಸ್ಥಾನ ಧರ್ಮಪೀಠದ ಸುಂದರ ಫೋಟೋ	೦—೦—೯
ರಜತಗಿರಿಯಂತೆ ರಾರಾಜಿಸುತ್ತಿರುವ ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಅತ್ಯಂತ ಮನೋಹರವಾದ ಫೋಟೋ	೦—೦—೯

ಸೂಚನೆ:—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವದಕ್ಕಾಗುವದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೭ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಡಾಕ್ಟರ್ ಜೇ. ಬಿ. ಯವರ

ಸುಗಂಧ ನಸ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿ... ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದ... ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪ...

(Registered Trade Mark)

...ಗಳನ್ನು ಕೊಟ್ಟ... ರು. ಪ್ರಸಿದ್ಧವಾದ... ನಸ್ಯದ ಪುಡಿಯ... ಸ್ವಸ್ಥವಾಗುವ... ಧಿಗಳು ಯಾವವೆ... ರೆ:—ಪೀನಸಿ, ... ತಲೆನೋವು, ತಲೆ... ಳ್ಳಿನ ರೋಗಗ... ಕಣ್ಣುಗಳಲ್ಲಿ ಉಂ... ಗತಕ್ಕ ಸರ್ವವ್ಯಾಧಿಗಳೂ ಜಲದೋಷ ಮುಂತಾ... ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ... ಲ್ಪಟ್ಟ ೯೭ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶ... ಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆ... ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ... ಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎ... ಪರಿಮಳವಾಗುವುದು. ಇದನ್ನು ಅನೇಕ ಪ್ರಭು... ತಮ್ಮ ಗೃಹದಲ್ಲಿ ಕುಟುಂಬಔಷಧವಾಗಿ ಉಪಯೋ... ಸುತ್ತಾರೆ. ಮಾದರಿಸೀಸೆ ಪುಗಸಟ್ಟೆ ಕಳುಹಿಸಲಾಗು... ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦. ವಿ. ಪಿ. ೦-... ದರ್ಜ ಒಂದಕ್ಕೆ ಕ್ರಯ ರೂ. ೨-೮-೦. ವಿ. ಪಿ. ೮...

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್

[1] ಪೋ. ಬಾ. ೫೧೦, ಮದರಾ...

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಆಸ್ಥಾನವಿದ್ವಾನ್ ವೇ|| ಬ್ರಂ|| ಪಂಡಿತ ಶಿರಸಿ ಗುರುಶಾಂತಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪ...

REGISTERED No. M. 2266 ॥ श्री जगद्गुरु पंचाचार्याः प्रसीदन्तु ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕಮಂ ||

ಸಂಪಾದಕರು—ಆಸ್ಥಾನ ವಿದ್ವಾನ್ ವೇ|| ಶಿರಸಿ ಗುರುಶಾಂತಶಾಸ್ತ್ರಿಗಳು.

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧ಕ್ಕೆ ೯ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೫.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ ನೇ ಜುಲೈ ೧೯೩೧ [ಸಂಚಿಕೆ ೧೧

ನೂತನ ಭಾಷಣ ! ನೂತನ ಭಾಷಣ !!

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣ.

ಅಥವಾ

(ವೀರಶೈವರ ರತ್ನ)

ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮೈಸೂರು ರಾಜಧಾನಿಯಲ್ಲಿ ೨ ನೆಯ ಸಾರೆ ಮಾಡಿದ ಅಮೂಲ್ಯಭಾಷಣವು ಈಗ ಹೊಸದಾಗಿ ಮುದ್ರಿಸಲ್ಪಟ್ಟಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣದಲ್ಲಿರುವುದು. ಪರಮತೀಯರಂತೂ ಈ ಭಾಷಣವನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣದ ಮಹತ್ವವನ್ನು ಕಂಡು ಮತಾಭಿಮಾನಿಗಳು ಇದನ್ನು ಇಂಗ್ಲಿಷ, ಮರಾಠಿ, ತೆಲುಗು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸತೊಡಗಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಎಷ್ಟು ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ ಅದರಂತೆಯೇ ಈ ಭಾಷಣದ ವಿಷಯದಲ್ಲಿಯೂ ಭಕ್ತಿಯನ್ನಿಟ್ಟು ವರ್ತಿಸಿ ಧನ್ಯರಾಗಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತಿರದ್ದರೆ ಪರಮತೀಯರು ಯಾರೂ ಈ ಮತದ ವಿಷಯದಲ್ಲಿ ಹೆಚ್ಚಿಗೆ ಮಾತನಾಡಲು ಸಮರ್ಥರಾಗಲಾರರು. ಆದುದರಿಂದ ಪ್ರತಿಯೊಬ್ಬರೂ ಈ ಗ್ರಂಥವನ್ನು ತರಿಸಿಕೊಂಡು ಎಂದೂ ಕೇಳದ ಹಾಗೂ ನೋಡದ ಅನೇಕಾನೇಕ ಮಹತ್ವದ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರುತ್ತೇವೆ. **ಬೆಲೆ ೪ ಆಣೆ.**

ಮೂರು ಪುಸ್ತಕಗಳಿಗಿಂತಲೂ ಕಡಿಮೆಯಾಗಿ ವಿ. ಪಿ. ಕಳುಹಿಸಲಿಕ್ಕಾಗುವದಿಲ್ಲ. ಒಂದು ಪುಸ್ತಕವನ್ನು ಅಪೇಕ್ಷಿಸುವವರು ೫ ಆಣೆಯ ಸ್ಟಾಂಪನ್ನು ಕಳುಹಿಸಬೇಕು.

ಮ್ಯಾನೇಜರ,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶ್ರೀ ಗಣೇಶಾಯನಮಃ

ತೀರ್ಥಹಳ್ಳಿ ತಾ|| ಕಮ್ಮರಡಿಅಗ್ರಹಾರದಲ್ಲಿ ಸೇರಿದ ಸಾಧ್ವೀಮಣಿಯರ ಸಭಾಪ್ರೊಸಿಡಿಂಗ್ಸ್.

ಕಮ್ಮರಡಿ ಶ್ರೀ ಗಣಪತಿ ದೇವಸ್ಥಾನದಲ್ಲಿ ತೀರ್ಥಹಳ್ಳಿಪ್ರಾಂತ್ಯದ ಸಾಧ್ವೀಸ್ತ್ರೀಯರು ತಾ|| 15-5-31 ನೆಯ ಶುಕ್ರವಾರ ಸಾಯಂಕಾಲ 4 ಗಂಟೆಗೆ ಸುಮಾರು 60 ಜನರು ಸಭೆಸೇರಿದರು. ಅಗ್ರಹಾರದ ಬಾಲಕಿಯರು ಗಣಪತಿಯ ಸ್ತೋತ್ರಗಾನವನ್ನು ಮಾಡಿದನಂತರ ಶ್ರೀಮತಿ ಸೌ|| ಲಕ್ಷ್ಮಮ್ಮನವರು ಸೂಚಿಸಿದಂತೆ ಶ್ರೀಮತಿ ಸೌ|| ವಾ|| ಕಮ್ಮರಡಿ ಮಂಜಮ್ಮನವರ ಅಧ್ಯಕ್ಷತೆಯನ್ನು ಸರ್ವರೂ ಅನುಮೋದಿಸಿದರು. ಸಭಾಧ್ಯಕ್ಷೆಯರು ಹಿಂದೂಧರ್ಮದ ತತ್ವವು ಭಾರತಸಾಧ್ವೀಮಣಿಯರಿಗೆ ಶ್ರೇಯಸ್ಕರವಾದುದೆಂಬ ವಿಷಯದ ಮೇಲೆ ಭಾಷಣಮಾಡಿದರು. ಅನಂತರ ಈ ಕೆಳಗಿನ ತೀರ್ಮಾನಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

1. ಭಾರತಧರ್ಮದಲ್ಲಿ ವಿವಾಹಕಾರ್ಯವು ಸ್ತ್ರೀಯರಿಗೆ ಪವಿತ್ರ ಧರ್ಮವಾದುದರಿಂದ ಈ ವಿವಾಹವು ಅನಾದಿಯಿಂದ ಬಂದ ಶಾಸ್ತ್ರಪದ್ಧತಿಯಂತೆ ನಡೆಯುವುದು ಶ್ರೇಯಸ್ಕರವೆಂದು ಈ ಸ್ತ್ರೀ ಮಹಾಸಭೆಯು ನಿರ್ಣಯಿಸುತ್ತದೆ.

2. ನಮ್ಮ ಪೂರ್ವಿಕರು ಶ್ರೇಯೋವಂತರಾಗಿ ಬಾಳಿರುವುದರಿಂದ ಅವರ ಶಾಸ್ತ್ರಸಂಪ್ರದಾಯದಂತೆ ವಿವಾಹಾದಿಗಳು ನಡೆಯುವಲ್ಲಿ ದೇಶದವರಿಗೆಗೆ ಯಾವ ಕುಂದಕವೂ ಇಲ್ಲವೆಂದು ಈಗ ದೇಶದಲ್ಲಿ ನಡೆಯುವ ಬಾಲಮರಣ ಮುಂತಾದ ಅನರ್ಥಗಳಿಗೆ ಪ್ರಕೃತ ದೇಶದಲ್ಲಿ ಹರಡಿರುವ ದುರಾಚಾರಗಳೇ ಕಾರಣಗಳೆಂದೂ ಶಾಸ್ತ್ರಾಚಾರದಂತೆ ನಡೆಯುವುದರಿಂದ ಆಯುಷ್ಯವು ಹೆಚ್ಚುವುದೆಂದೂ ಈ ಸ್ತ್ರೀಸಭೆಯು ನಿರ್ಧರಿಸುತ್ತದೆ.

3. ಸರಕಾರದವರು ಈಗಿರುವ ವಿವಾಹವಯಸ್ಸನ್ನು ತಿದ್ದುಪಡಿಮಾಡುವ ಅಗತ್ಯವಿಲ್ಲವೆಂದೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ತಂದಿರುವ ವಿವಾಹದ ಮಸೂದೆಯನ್ನು ತಿರಸ್ಕರಿಸಬೇಕೆಂದೂ ಈ ಸ್ತ್ರೀಸಭೆಯು ಪ್ರಾರ್ಥಿಸುತ್ತದೆ.

4. ನಮ್ಮ ದೇಶದಲ್ಲಿ ಸಾಧ್ವೀಸ್ತ್ರೀಯರು ಯಾರೂ ಭಾರತ ಧರ್ಮವನ್ನು ಪರಿವರ್ತಿಸಲು ಒಪ್ಪದಿದ್ದರೂ ಕೆಲವು ಜನಸುಧಾರಕ ಸ್ತ್ರೀಯರು ತಮಗೆ ತಾವೇ ಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಾ ಸನಾತನಧರ್ಮವಿರುದ್ಧವಾದ ವಿಚಾರಗಳನ್ನು ತೀರ್ಮಾನಿಸಿ ಸರ್ಕಾರಕ್ಕೆ ಕಳುಹಿಸುತ್ತಿರುವುದಕ್ಕೆ ಈ ಸ್ತ್ರೀಮಹಾಸಭೆಯು ಖೇದಪಡುತ್ತದೆ. ಮತ್ತು ಈ ಜನರು ಸನಾತನಧರ್ಮಪರಾಯಣೆಯರಾದ ಸಾಧ್ವೀಮಣಿಯರ ಪ್ರತಿನಿಧಿಗಳಲ್ಲವೆಂದೂ ಇವರ ತೀರ್ಮಾನಗಳನ್ನು ಬಹುಮತವೆಂದು ಸರಕಾರದವರು ತಿಳಿಯಬಾರದಾಗಿಯೂ ಈ ಸ್ತ್ರೀಮಹಾಸಭೆಯು ಸರಕಾರದಲ್ಲಿ ವಿನಂತಿಮಾಡುತ್ತದೆ.

5. ನಮ್ಮ ಮತಾಚಾರಧರ್ಮದಲ್ಲಿ ಸರಕಾರದವರು ಕೈಹಾಕದಂತೆಯೂ ಪೂರ್ವಧರ್ಮಗಳ ಆಚರಣೆಗೆ ಯಾವ ಕುಂದಕವೂ ಬಾರದಂತೆ ಸರಕಾರಕ್ಕೆ ಬರೆಯಬೇಕಾಗಿಯೂ ಶೃಂಗೇರಿ ಶ್ರೀ ಶ್ರೀ ಮಹಾಸ್ವಾಮಿಗಳವರಲ್ಲಿ ವಿಷಯಭಕ್ತಿಯಿಂದ ಈ ಸ್ತ್ರೀಮಹಾಸಭೆಯು ವಿನಂತಿಮಾಡುತ್ತದೆ.

ಈ ಮೇಲ್ಕಂಡ ತೀರ್ಮಾನಗಳಾದನಂತರ ಗಣಪತಿಯ ಮಂಗಳವು ನಡೆದು ಸಭೆಯು ಪೂರೈಸಿತು.

ಕಮ್ಮರಡಿ ಮಂಜಮ್ಮ.

ಶ್ರೀ ಕೇದಾರನಾಥ ಸನಾತನಧರ್ಮ ಮಹಾ ವಿದ್ಯಾಲಯ ಉಖಾಮಠ.

ಆರನೆಯ ವಾರ್ಷಿಕಾಧಿವೇಶನ.

ಆಯುರ್ವೇದಸಮ್ಮೇಳನ ಮತ್ತು ಕವಿಸಮ್ಮೇಳನ.

ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ನೀಲಕಂಠಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ಹಿಮಾಲಯಪ್ರಾಂತದಲ್ಲಿ ಧರ್ಮೋದ್ಧಾರಕ್ಕೋಸ್ಕರ ಶ್ರೀ ಕೇದಾರನಾಥಸನಾತನ ಧರ್ಮ ಮಹಾವಿದ್ಯಾಲಯವನ್ನು ಸ್ಥಾಪಿಸಿರುವುದು ಸರಿಯಷ್ಟೆ! ಈ ವಿದ್ಯಾಲಯದ ೬ ನೆಯ ವಾರ್ಷಿಕಾಧಿವೇಶನವು ಇದೇ ಜುಲೈ ೧೧ ನೆಯ ತಾರೀಖಿನ ದಿವಸ ಡಾ|| ಗಜೇಂದ್ರಥಾಪಾ ಮೆಡಿಕಲ್‌ಆಫೀಸರ್ ಇವರ ಅಧ್ಯಕ್ಷತೆಯಲ್ಲಿ ವೈಭವದಿಂದ ನೆರವೇರುವುದು. ಅನೇಕ ಜನ ವಿದ್ವಾಂಸರ ಮತ್ತು ವಿದ್ಯಾರ್ಥಿಗಳ ವ್ಯಾಖ್ಯಾನಗಳಾಗುವುವು. ಇದೇ ದಿವಸ ಮಧ್ಯಾಹ್ನ ಪಂಡಿತ ಸುರೇಶಾನಂದ ಕವಿರಾಜರವರ ಅಧ್ಯಕ್ಷತೆಯಲ್ಲಿ ಆಯುರ್ವೇದ ಸಮ್ಮೇಳನವೂ, ಪಂಡಿತ ನಾರಾಯಣದತ್ತಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಕವಿಸಮ್ಮೇಳನವೂ ನೆರವೇರುವುದರಿಂದ ಸನಾತನಧರ್ಮಪ್ರೇಮಿಗಳು ಆಗಮಿಸಬೇಕೆಂದು ಕೋರಿಕೆ.

ಧ್ಯಾನಸಿಂಹ,
ಪ್ರಧಾನಸಭಾಪತಿ,
ಕೇ. ಸ. ಮಹಾವಿದ್ಯಾಲಯ, ಉಖಾಮಠ.

ಸ್ವೀಕಾರ.

ತುಮಕೂರು ನಿವಾಸಿಗಳಾದ ಮ|| ರಾ|| ಬಿ. ಎಸ್. ಸಂಜೀವಪ್ಪನವರು ತಮ್ಮ ಪುತ್ರಿ ಚಿ|| ಸರ್ವಮಂಗಳಮ್ಮನಿಗೆ ಉಂಟಾದ ಕಾಯಿಲೆಯು ಜಗದಾಚಾರ್ಯರ ಆಶೀರ್ವಾದಬಲದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಬಳ್ಳಾರಿ ಡಿ|| ಸಿರಗುಪ್ಪ ತಾಲ್ಲೂಕು ಹಳೆಕೋಟೆ ಗ್ರಾಮದ ಗೌಡರ ಮ|| ಶರಭನಗೌಡರು ಮತ್ತು ಮ|| ಅಯ್ಯನಗೌಡರು ತಮ್ಮ ಕುಟುಂಬದ ಆಸ್ತಿಯನ್ನು ವಿಭಾಗಮಾಡಿಕೊಂಡ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ದಸ್ತಿ ರುದ್ರಗೌಡರು ಮತ್ತು ಮ|| ರಾ|| ಮಿಂಚೇರಿ ಕರಿಗಂಗಶಿವಾರಪ್ಪ ಇವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿಲ್ಲಾ ಸಿಗ್ಗಾಂ ಕೂಡ್ಲಮಠದ ವೇ|| ಸಿದ್ಧಯ್ಯನವರ ಪುತ್ರ ಚಿ|| ಮುರಿಗಯ್ಯನಿಗೆ ಜಗದಾಚಾರ್ಯರ ಕೃಪಾಬಲದಿಂದ ಪುತ್ರಲಾಭವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಝಾನ್ಸಿಯ ಕಮಿಷನರ್ ಸಾಹೇಬರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದನೆಂದು ಲಕ್ಷ್ಮೀಕಾಂತನೆಂಬೊಬ್ಬ ಬ್ರಾಹ್ಮಣ ತರುಣನಿಗೆ ಝಾನ್ಸಿಯ ಸೆಷನ್ಸ್ ಜಡ್ಜರು ಜೀವದ್ವೀಪಾಂತರಶಿಕ್ಷೆಯನ್ನು ವಿಧಿಸಿದರು. ಇವನು ಅಲಹಾಬಾದ್ ಹೈಕೋರ್ಟಿಗೆ ಅಪೀಲ್ ಮಾಡಿದನು. ಹೈಕೋರ್ಟ ನ್ಯಾಯಾಧೀಶರು ಕೆಳಕೋರ್ಟಿನ ತೀರ್ಪನ್ನೇ ಕಾಯಂ ಮಾಡಿದರು. ಆ ಮೊಕದ್ದಮೆಯಲ್ಲಿ ಪ್ರಕಟವಾದ ಅಂಶವೇನಂದರೆ:—ಕ್ರಾಂತಿಪಕ್ಷದ ಕಡೆಯವರಿಂದ ಕಮಿಷನರಿಗೆ ಅವರನ್ನು ಕೊಲ್ಲುತ್ತೇನೆಂದು ಒಂದು ಪತ್ರ ಬಂದಿತು. ಕಳೆದ ಆಗಸ್ಟ್ 8 ನೆಯ ತಾರೀಖಿನ ದಿವಸ ಕ್ರಾಂತಿಪಕ್ಷದವರು ಕಮಿಷನರನ್ನು ಕೊಲ್ಲಲು ಯತ್ನಿಸುವರೆಂಬುದನ್ನು ಗುಪ್ತಪೋಲೀಸರು ತಿಳಿದು ಆ ಸಂಗತಿಯನ್ನು ಪೋಲೀಸು ಸೂಪರಿಂಟೆಂಡೆಂಟರಿಗೆ ತಿಳುಹಿಸಿದರು. ಆಗ ಪೋಲೀಸು ಸೂಪರಿಂಟೆಂಡೆಂಟರೂ ಇತರ ಅಧಿಕಾರಿಗಳೂ ಕಮಿಷನರ ಮನೆಯಲ್ಲಿ ಅವಿತುಕೊಂಡರು. ಆ ದಿವಸ 10½ ಗಂಟೆಯ ಸಮಯಕ್ಕೆ ಲಕ್ಷ್ಮೀಕಾಂತನು ಒಂದು ಸಣ್ಣಚೀಲವನ್ನು ತೆಗೆದುಕೊಂಡು ಕಮಿಷನರ ಬಂಗಲೆಗೆ ಬಂದು ಅವರನ್ನು ಕಾಣಲು ಅನುಮತಿಯನ್ನು ಬೇಡಿದನು. ಜವಾನನು ಆತನನ್ನು ಅಲ್ಲಿಯೇ ಕುಳ್ಳಿರಿಸಿ ಒಳಗಿದ್ದವರಿಗೆ ತಿಳುಹಿಸಿದನು. ಪೋಲೀಸರು ಬಂದು ಅವನನ್ನು ಹಿಡಿದುನೋಡುವಲ್ಲಿ ಒಂದು ಬಾಂಬು ಇತ್ತು.